# ಅ

**ಅಂಕಾರ :** ಟರ್ಕಿಯ ಹಾಗೂ ಅಂಕಾರ ಪ್ರಾಂತದ ರಾಜಧಾನಿ. ಸಮುದ್ರಮಟ್ಟಕ್ಕೆ 1030 ಮೀ ಎತ್ತರದಲ್ಲಿ, 151 ಮೀ ಎತ್ತರವಿರುವ ಕಲ್ಲುಬಂಡೆಗಳ ಬೆಟ್ಟದ ಮೇಲಿದೆ. ಜನಸಂಖ್ಯೆ 3,05,000 (2003). ಇಲ್ಲಿ ಖಂಡಾಂತರ ವಾಯುಗುಣವಿದೆ. ಸಮುದ್ರದಿಂದ ದೂರವಿರುವುದರಿಂದಲೇ ಈ ಪಟ್ಟಣವನ್ನು ಅಂದಿನ ರಾಷ್ಟ್ರಾಧ್ಯಕ್ಷ ಕೆಮಾಲ್ ಅಟಾಟರ್ಕ್ ಎಂಬುವನು ರಾಜಧಾನಿಯನ್ನಾಗಿ ಮಾಡಿಕೊಂಡ. ಹಿಂದೆ ಇದ್ದ ಅಂಗೊರಾ ಎಂಬ ಹೆಸರನ್ನು ಇವನು 1930 ರಲ್ಲಿ ಅಂಕಾರ ಎಂದು ಬದಲಾಯಿಸಿದ. ಆಧುನಿಕ ಟರ್ಕಿಯ ಪ್ರಭಾವ ಪಟ್ಟಣದ ಕೆಲವು ಕಡೆ ಕಂಡುಬರುತ್ತದೆ. ಪಟ್ಟಣದ ಹಳೆಯ ಭಾಗದಲ್ಲಿ ಒಂದು ಕೋಟೆಯಿದ್ದು ಅದರೊಳಗಡೆ ಒಂದು ಒಳಕೋಟೆ ಮತ್ತು ಒಂದು ಬಿಳಿಯ ಗೋಪುರವಿದೆ. ಕೋಟೆಯ ಹೊರಭಾಗ ಪಾಳು ಬಿದ್ದಿದೆ. ಈ ಭಾಗದಲ್ಲಿ ವಾಸಮಾಡುವ ಜನರ ಸಂಖ್ಯೆ ಅತ್ಯಲ್ಪ. ಇಲ್ಲಿನ ಚಿಕ್ಕಚಿಕ್ಕ ಹಾಗೂ ವಕ್ರವಕ್ರವಾಗಿರುವ ಬೀದಿಗಳ ಎಡಬಲಗಳಲ್ಲಿ ಮಣ್ಣಿನ ಇಟ್ಟಿಗೆ, ಮರ ಹಾಗೂ ಹೆಂಚುಗಳನ್ನು ಉಪಯೋಗಿಸಿ ರಚಿಸಲಾದ ಹಳೆಯ ಮನೆಗಳಿವೆ. ಇಲ್ಲಿ ಒಂದು ಪೇಟೆಯೂ ಮತ್ತು ರಾಷ್ಟ್ರೀಯ ಸಮಾರಂಭಗಳು ಜರುಗುವ ಉಲಸ್ ಎಂಬ ಹೆಸರಿನ ಚೌಕವೂ ಇವೆ. ಪಟ್ಟಣದ ಉತ್ತರ ಭಾಗದ ಪ್ರದೇಶಕ್ಕೆ ಆಧುನಿಕತೆಯ ಪ್ರಭಾವ ಹೆಚ್ಚಾಗಿ ಬಿದ್ದಿಲ್ಲ; ಅಲ್ಲಿ ಅನೇಕ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ. ಬೆಟ್ಟದ ಮೇಲಿನಿಂದ ನೋಡಿದರೆ (1953ರಲ್ಲಿ ಪೂರ್ಣಗೊಂಡ) ಅಟಾಟರ್ಕ್‌ನ ಸಮಾಧಿ ಪ್ರಧಾನವಾಗಿ ಕಾಣಿಸುತ್ತದೆ. ಇಲ್ಲಿನ ಇತರ ಸ್ಮಾರಕಗಳೆಂದರೆ–ವಿಕ್ಟೋರಿಯ ಸ್ಮಾರಕ, ಕಾನ್ಫಿಡೆನ್ಸ್ ಸ್ಮಾರಕ ಇತ್ಯಾದಿ. ಈಗಿನ ಅಧ್ಯಕ್ಷರ ನಿವಾಸದ ಮುಂಭಾಗದಲ್ಲಿರುವ ಅಟಾಟರ್ಕ್‌ನ ನಿವಾಸ ಈಗ ಒಂದು ವಸ್ತು ಸಂಗ್ರಹಾಲಯವಾಗಿದೆ. ಅಂಕಾರದಲ್ಲಿ ಒಂದು ವಿಶ್ವವಿದ್ಯಾಲಯ, ರಾಷ್ಟ್ರೀಯ ಪುಸ್ತಕ ಭಂಡಾರ, ರಾಜ್ಯದ ಆರ್ಥಿಕ ನೆರವಿನಿಂದ ನಡೆಯುತ್ತಿರುವ ಒಂದು ರಂಗಮಂಟಪ ಮತ್ತು ಆಧುನಿಕ ರೇಡಿಯೋ ಕೇಂದ್ರ ಇವೆ. ಇಲ್ಲಿರುವ ಕಾಲೇಜು ಬಹಳ ದೊಡ್ಡದು. ಜೆನ್‌ಕ್ಲಿಕ್  ಪಾರ್ಕ್ ಎಂಬ ಉದ್ಯಾನವನ ಬಹಳ ಸುಂದರವಾಗಿದೆ. ಕುದುರೆ ಜೂಜಿನ ಮೈದಾನ ಹಾಗೂ ಎರಡು ಕ್ರೀಡಾಂಗಣಗಳಿವೆ. ಪಟ್ಟಣದ ಉತ್ತರಕ್ಕೆ 13 ಕಿಮೀ ದೂರದಲ್ಲಿರುವ ಕ್ಯುಬೆಕ್ ಡ್ಯಾಂ ಎಂಬುದು ಒಂದು ಪ್ರವಾಸಿ ಕೇಂದ್ರವಾಗಿದೆ. ಅಂಕಾರದಿಂದ ಇಸ್ತಾನ್‌ಬುಲ್, ಇಜ಼್‌ಮೀರ್ ಮತ್ತು ಅದಾನ ಪಟ್ಟಣಗಳಿಗೆ ರೈಲಿನ ಸೌಲಭ್ಯವಿದೆ. ಇಲ್ಲಿಂದ 26 ಕಿಮೀ ದೂರದಲ್ಲಿ ಈಸೆನ್‌ಬೋಗ ಎಂಬ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಪಟ್ಟಣದ ಹೊರವಲಯದಲ್ಲಿ ಜಮಖಾನೆ, ಜೇನುತುಪ್ಪ ಮತ್ತು ಪೇರು ಜಾತಿಯ ಹಣ್ಣಿನ ಉತ್ಪನ್ನಗಳು ಮುಂತಾದ ಕೈಗಾರಿಕೆಗಳು ಕಂಡುಬರುತ್ತವೆ. **(ಎಂ.ಎಸ್.;ಎಸ್.ಆರ್.ಪಿ.)**

**ಅಂಕಿ ಅಂಶಗಳ ರೇಖಾಕೃತಿಗಳು:** ಭೂಗೋಳವಿಜ್ಞಾನ ಅಧ್ಯಯನದ ಸಲಕರಣೆಗಳಲ್ಲಿ ನಕ್ಷೆಗಳ ಜೊತೆಗೆ ರೇಖಾ ಆಲೇಖಗಳೂ ಮುಖ್ಯವಾದವು. ಸ್ಥಾನೀಯ ಹಂಚಿಕೆ ಹಾಗೂ ಕಾಲಮಾನಿಕ ಪ್ರವೃತ್ತಿಗಳನ್ನು ವಿಶ್ಲೇಷಿಸಲು ಇವುಗಳು ಉಪಯುಕ್ತ. ಇವುಗಳನ್ನು ಪ್ರತ್ಯೇಕವಾಗಿ ಹಾಗೂ ಕೆಲವು ವೇಳೆ ನಕ್ಷೆಗಳ ಜೊತೆಗೆ ಅಲ್ಲದೆ ನಕ್ಷೆಗಳ ಒಳಗೇ ಬಳಸಿ ಅವುಗಳ ಉಪಯುಕ್ತತೆಯನ್ನು ಹೆಚ್ಚಿಸಲಾಗುವುದು.

ಅಂಕಿ ಅಂಶಗಳನ್ನು ರೇಖಾಕೃತಿಗಳ ಸಹಾಯದಿಂದ ಯಾವುದೊಂದು ವಸ್ತುವಿನ ಉತ್ಪಾದನೆ, ಬೆಳೆವಣಿಗೆ ಮೊದಲಾದ ಪ್ರವೃತ್ತಿಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಭೂಗೋಳವಿಜ್ಞಾನದಲ್ಲಿ ಅಂಕಿ ಅಂಶಗಳನ್ನು ಸಾಮಾನ್ಯವಾಗಿ ರೇಖಾಕೃತಿಗಳಿಂದ ನಿರೂಪಿಸಲಾಗುತ್ತದೆ. ಪಟ್ಟಿಗಳ ರೂಪದಲ್ಲಿ ಕೊಡಲಾದ ಅಂಕಿ ಅಂಶಗಳನ್ನು ರೇಖಾಕೃತಿಗಳಿಂದ ತೋರಿಸಿದಾಗ ಅವುಗಳನ್ನು ಅರ್ಥಮಾಡಿಕೊಳುವುದು ಬಹಳ ಸುಲಭ.

ರೇಖಾಕೃತಿಗಳನ್ನು ರಚಿಸಿ, ಅವುಗಳನ್ನು ವಿವಿಧ ಬಣ್ಣ, ಚುಕ್ಕೆಗಳು, ರೇಖೆ, ಚಿಹ್ನೆ ಮೊದಲಾದವುಗಳಿಂದ ತೋರಿಸಲಾಗುತ್ತದೆ. **(ಎಸ್.ಕೆ.ಪಿ.)**

**ಅಂಕಿ–ಅಂಶ ಸಂಗ್ರಹಣ ವಿಧಾನ:** ವಿವಿಧ ಮೂಲಗಳಿಂದ ಮಾಹಿತಿಯನ್ನು ಪಡೆಯಲು ಅನುಸರಿಸುವ ಕ್ರಮ. ದತ್ತಾಂಶಗಳನ್ನು ಪ್ರಮುಖವಾಗಿ ಪ್ರಾಥಮಿಕ ಹಾಗೂ ದ್ವಿತೀಯ ಮೂಲಗಳಿಂದ ಸಂಗ್ರಹಿಸಬಹುದು. ಪ್ರಾಥಮಿಕ ಮೂಲಗಳಿಂದ ಅಂಕಿ ಅಂಶಗಳನ್ನು ಅನೇಕ ವಿಧಾನಗಳಲ್ಲಿ ಸಂಗ್ರಹಿಸುವರು. ಅವುಗಳಲ್ಲಿ ಅವಲೋಕನ ವಿಧಾನ, ವೈಯಕ್ತಿಕ ಸಮೀಕ್ಷೆ, ಸಂದರ್ಶನ, ಪ್ರಶ್ನಾವಳಿ ಇತರ ವಿಧಾನಗಳು – ಅಂದರೆ ವೈಮಾನಿಕ ಛಾಯಾಚಿತ್ರ ಮತ್ತು ದೂರಸಂವೇದಿ, ಭೌಗೋಳಿಕ ಮಾಹಿತಿ ವ್ಯವಸ್ಥೆ ಮತ್ತು ಜಾಗತಿಕ ಸ್ಥಾನ ನಿರ್ಧಾರ ಮುಂತಾದವುಗಳ ಮೂಲಕ ದತ್ತಾಂಶಗಳನ್ನು ಪಡೆಯಬಹುದು. ನೇರ ಅವಲೋಕನ ಪ್ರಾಥಮಿಕ ಮಾಹಿತಿ ಸಂಗ್ರಹಣೆಯ ಅತಿಮುಖ್ಯವಾದ ವಿಧಾನ. ಈ ವಿಧಾನದಲ್ಲಿ ಸಂಶೋಧಕರು ಪ್ರತ್ಯೇಕವಾಗಿ ಹಾಗೂ ವೈಯಕ್ತಿಕವಾಗಿ ಸ್ವತಃ ಕ್ಷೇತ್ರದಲ್ಲಿ ಸಂಚರಿಸಿ ಭೂಸ್ವರೂಪ, ಭೂರಚನೆ, ಶಿಲೆಗಳು, ಮಣ್ಣು, ಸಸ್ಯವರ್ಗ, ಪ್ರಾಣಿ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸುವರು. ಯಾವ ವಿಷಯವೂ ದೃಷ್ಟಿಯಿಂದ ದೂರ ಉಳಿಯಲಾರವು. ಅವುಗಳ ಅವಲೋಕನವನ್ನು ಕ್ಷೇತ್ರದಲ್ಲಿಯೇ ತೀರ್ಮಾನಿಸಬಹುದು. ನೇರ ಅವಲೋಕನದಲ್ಲಿ 2 ಬಗೆಗಳಿವೆ.

ಸಹಭಾಗಿತ್ವ ಅವಲೋಕನ : ಈ ವರ್ಗದಲ್ಲಿ ಸಂಶೋಧಕ ತಾನು ಸಂಶೋಧಿಸುತ್ತಿರುವ ಗುಂಪುಗಳಲ್ಲೇ ಉಪಸ್ಥಿತನಿದ್ದು ವಿಷಯಗಳ ಬಗ್ಗೆ ಮಾಹಿತಿ ಪಡೆಯುತ್ತಾನೆ.

ಅಸಹಭಾಗಿತ್ವ ಅವಲೋಕನ : ಸಂಶೋಧಕ ಈ ಅವಲೋಕನದಲ್ಲಿ ಸಹಭಾಗಿಯಾಗಿರದೆ ಪ್ರೇಕ್ಷಕನಾಗಿ ಅವಲೋಕಿಸುತ್ತಾನೆ. ಈ ವಿಧಾನದಲ್ಲಿ ತನಗೆ ಸರಿ ಕಂಡುಬಂದ ಪ್ರತಿಯೊಂದು ವಿಷಯವನ್ನು ಟಿಪ್ಪಣಿ ಮಾಡುತ್ತಾ ಮಾಹಿತಿ ಸಂಗ್ರಹಿಸುತ್ತಾನೆ. ಇದು ಉತ್ತಮವಾಗಿದ್ದು ಹೆಚ್ಚು ತಪ್ಪುಗಳು ನುಸುಳದಂತೆ ಎಚ್ಚರಿಕೆ ವಹಿಸಬಹುದು. ಆದರೆ ವಿಶಾಲವಾದ ಕ್ಷೇತ್ರದಲ್ಲಿ ಈ ಕಾರ್ಯ ತುಂಬಾ ವಿಳಂಬ ಹಾಗೂ ವೆಚ್ಚದಾಯಕವಾಗಿರುತ್ತದೆ. ಕೆಲವು ಬಾರಿ ಇವು ವಸ್ತುನಿಷ್ಠತೆಯಿಂದ ದೂರ ಉಳಿಯಬಲ್ಲವು.

ಸಂದರ್ಶನ ವಿಧಾನ: ಇದು ಪ್ರಾಥಮಿಕ ಮಾಹಿತಿ ಸಂಗ್ರಹಣೆಯ ಒಂದು ಮುಖ್ಯ ವಿಧಾನವಾಗಿದೆ. ಸಂಶೋಧಕ ತನ್ನ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ನೇರವಾಗಿ ಸಂಗ್ರಹಿಸುತ್ತಾನೆ. ಈ ಸಂದರ್ಶನ ವಿಧಾನದಲ್ಲಿ 2 ವಿಧಗಳಿವೆ: ವೈಯಕ್ತಿಕ ಸಂದರ್ಶನ ಮತ್ತು ದೂರವಾಣಿ ಮೂಲಕ ನಡೆಸುವ ಸಂದರ್ಶನ. ವೈಯಕ್ತಿಕ ಸಂದರ್ಶನ ವಿಧಾನದಲ್ಲಿ ಸಂಶೋಧಕ ಪ್ರತಿವರ್ತಿಗಳನ್ನು ಭೇಟಿಮಾಡಿ ಸಂದರ್ಶಿಸಿ ಅವರಿಂದ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೇರವಾಗಿ ಪಡೆಯುತ್ತಾನೆ. ಕೆಲವು ಸಲ ಪ್ರತಿವರ್ತಿಗಳು ತಮ್ಮ ಆದಾಯದ ಬಗ್ಗೆ ನಿಖರ ಉತ್ತರಗಳನ್ನು ಕೊಡಲು ಹಿಂಜರಿಯಬಹುದು ಅಥವಾ ತಪ್ಪು ಮಾಹಿತಿಯನ್ನು ನೀಡಬಹುದು. ಅಂತಹ ಸನ್ನಿವೇಶದಲ್ಲಿ ಸಂಶೋಧಕ ಪರೋಕ್ಷವಾಗಿ ಮಾಹಿತಿಯನ್ನು ಪಡೆಯುತ್ತಾನೆ. ಇದು ಸಂದರ್ಶಕನ ಜಾಣ್ಮೆಯನ್ನು ಅವಲಂಬಿಸಿರುತ್ತದೆ. ಈ ರೀತಿಯ ಲಘುವಿಧಾನದ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಹಿತಿಯನ್ನು ಸಂಗ್ರಹಿಸುತ್ತವೆ. ವೈಯುಕ್ತಿಕ ಸಂದರ್ಶನದಲ್ಲಿ ಎರಡು ಮಾದರಿಗಳಿವೆ: ರಚನಾ ಸಂದರ್ಶನ, ರಚನಾತ್ಮಕವಲ್ಲದ ಸಂದರ್ಶನ. ನೇರ ಸಂದರ್ಶನದ ಮೂಲಕ ಪೂರ್ವಯೋಜಿತ ಪ್ರಶ್ನೆಗಳ ಪಟ್ಟಿಯನ್ನು ತಯಾರಿಸಿಕೊಂಡು ಮಾಹಿತಿಯನ್ನು ಸಂಗ್ರಹಿಸಿದರೆ ಅದನ್ನು ರಚನಾತ್ಮಕ ಸಂದರ್ಶನ (ಸ್ಟ್ರಕ್ಚರ್ಡ್) ಎಂದು ಕರೆಯುವರು. ಕೆಲವು ಸಂದರ್ಭಗಳಲ್ಲಿ ಸಂದರ್ಶಕ ಯಾವುದೇ ಪೂರ್ವಸಿದ್ಧತೆಗಳಿಲ್ಲದೆ ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಇಲ್ಲವೇ ಸಂದರ್ಭಾನುಸಾರ ಯೋಚಿಸಿ ಪ್ರಶ್ನೆಗಳ ಮೂಲಕ ಮಾಹಿತಿ ಸಂಗ್ರಹಿಸಿದರೆ ಅವುಗಳನ್ನು ರಚನಾತ್ಮಕವಲ್ಲದ ಸಂದರ್ಶನವೆಂದು ಕರೆಯುವರು.

ಮುಂದುವರೆದ ರಾಷ್ಟ್ರಗಳಲ್ಲಿ ದೂರವಾಣಿ ಮೂಲಕ ನಡೆಸುವ ಸಂದರ್ಶನ ಬಳಕೆಯಲ್ಲಿದೆ. ಈ ವಿಧಾನ ಕೈಗಾರಿಕಾ ಸಮೀಕ್ಷೆಯಲ್ಲಿ ಕಂಡುಬರುತ್ತದೆ. ಸಂಶೋಧಕ ಆಯ್ಕೆ ಮಾಡಿಕೊಂಡ ವ್ಯಕ್ತಿಯ ಪ್ರತಿಯೊಂದು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ನೇರವಾಗಿ ಭೇಟಿಮಾಡದೆ ದೂರವಾಣಿಯ ಮೂಲಕ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸುತ್ತಾನೆ. ಇದು ದುಬಾರಿಯಾದರೂ ಅತ್ಯಂತ ಕಡಿಮೆ ಅವಧಿಯಲ್ಲಿ ಉಪಯುಕ್ತವಾದ ಕೆಲವು ಮಾಹಿತಿಯನ್ನು ಮಾತ್ರ ಪಡೆಯಬಹುದಾಗಿದೆ.

ಪ್ರಾಥಮಿಕ ಮಾಹಿತಿ ಸಂಗ್ರಹಣೆಯಲ್ಲಿ ಪ್ರಶ್ನಾವಳಿ ವಿಧಾನ ಮುಖ್ಯವಾಗಿದೆ. ಈ ವಿಧಾನದಲ್ಲಿ ಸಂಶೋಧಕ ಆಯ್ಕೆಮಾಡಿಕೊಂಡ ವಿಷಯಕ್ಕೆ ಅನುಗುಣವಾಗಿ ಪ್ರಶ್ನಾವಳಿಯನ್ನು ತಯಾರಿಸುವನು. ಪ್ರಶ್ನಾವಳಿ ಎಂದರೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳ ಪಟ್ಟಿ. ಪ್ರತಿಯೊಂದು ಪ್ರಶ್ನೆಯ ಮುಂದೆ ಹೌದು/ಇಲ್ಲ ಅಥವಾ ಸರಿ/ತಪ್ಪು ಉತ್ತರಗಳನ್ನು ಪಡೆಯಬಹುದು. ಪ್ರಶ್ನಾವಳಿಯನ್ನು ಸಂಶೋಧಕನು ತಾನೇ ಪ್ರತಿವರ್ತಿಯನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಬಹುದು ಅಥವಾ ಕೆಲವು ವ್ಯಕ್ತಿಗಳಿಗೆ ತರಬೇತಿ ನೀಡಿ ಅವರ ಮೂಲಕವೂ ಮಾಹಿತಿಯನ್ನು ಸಂಗ್ರಹಿಸಬಹುದು ಅಥವಾ ಅಂಚೆ ಮೂಲಕ ಪ್ರಶ್ನಾವಳಿಗಳನ್ನು ಕಳುಹಿಸಿ ಮಾಹಿತಿಯನ್ನು ಸಂಗ್ರಹಿಸಬಹುದು.

ಈ ಮೇಲ್ಕಂಡ ವಿಧಾನಗಳ ಮೂಲಕ ಮಾತ್ರವಲ್ಲದೆ ವೈಮಾನಿಕ ಛಾಯಚಿತ್ರ, ದೂರ ಸಂವೇದಿ ಮೂಲಕ ಪ್ರಾಥಮಿಕ ದತ್ತಾಂಶಗಳನ್ನು ಸಂಗ್ರಹಿಸುವ ವಿಧಾನವೂ ಬಳಕೆಯಲ್ಲಿದೆ. ಈ ವಿಧಾನದ ಮೂಲಕ ವಿಸ್ತಾರವಾದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಭೂಲಕ್ಷಣ, ಸಾಗರ ಸಂಪನ್ಮೂಲಗಳ ಬಗ್ಗೆ ಹಾಗೂ ಹವಾಮಾನದ ಬಗ್ಗೆ ವ್ಯಾಪಕವಾದ ಮಾಹಿತಿಯನ್ನು ಪಡೆಯಬಹುದಾಗಿದೆ. (ಎಸ್.ಕೆ.ಪಿ.)

**ಅಂಕಿ–ಅಂಶಗಳ ಅರ್ಥೈಸುವಿಕೆ:** ಸಂಗ್ರಹಿಸಿದ ದತ್ತಾಂಶಗಳ ಅಥವಾ ಅಂಕಿ ಅಂಶಗಳ ಮಾಹಿತಿಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದಾಗಿದೆ. ಇದು ಸಂಗ್ರಹಿಸಿದ ಅಂಕಿ ಅಂಶಗಳಲ್ಲಿನ ಪರಸ್ಪರ ಸಂಬಂಧಿತ ಹಾಗೂ ಒಂದರ ಮೇಲೊಂದರ ವಿಶ್ಲೇಷಣೆಯಾಗಿದೆ. ಈ ರೀತಿಯ ವ್ಯಾಖ್ಯಾನಿಸುವಿಕೆಯು ಎರಡು ಅಂಶಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ:

1. ಸಂಶೋಧನೆಯಲ್ಲಿನ ಫಲಿತಾಂಶ ಮತ್ತೊಂದರ ಫಲಿತಾಂಶಕ್ಕೆ ಸಂಬಂಧಿಸುವುದು.
2. ಇದಕ್ಕೆ ಕೆಲವು ವಿವರಣೆಯನ್ನು ನೀಡುವುದು.

ಇದು ಸಂಶೋಧಿಸಿದ ಫಲಿತಾಂಶ, ಸಿದ್ಧಾಂತ ಮತ್ತು ಆಧಾರ ಕಲ್ಪನೆಗಳಲ್ಲಿನ ಸಂಬಂಧಗಳನ್ನು ವಿವರಿಸುವುದಾಗಿದೆ. ಸಂಶೋಧಿಸಲ್ಪಟ್ಟ ವಿಷಯವನ್ನು ಸರಿಯಾಗಿ ಅರ್ಥೈಸಿ ಮತ್ತು ವ್ಯಾಖ್ಯಾನಿಸುವುದರಿಂದ, ಇತರರಿಗೂ ಉಪಯುಕ್ತವಾಗುತ್ತದೆ.

ಸಂಶೋಧಿಸಿದ ವಿಷಯ ಉಪಯುಕ್ತವಾಗಬೇಕಾದರೆ ಅದಕ್ಕೆ ಸೂಕ್ತವಾದ ವ್ಯಾಖ್ಯಾನ ತೀರಾ ಅವಶ್ಯಕ. ಇದು ಸಂಶೋಧನಾ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗ. ಸಂಶೋಧಿಸಿದ ವಿವಿಧ ವಿಷಯಗಳ ನಡುವಿನ ಸಾಮ್ಯತೆ, ಅಂತರ ಮತ್ತು ನಿರಂತರತೆಯನ್ನು ಪಡೆಯಬಹುದು. ಇದು ಸಂಶೋಧಕರಿಗೆ ಹಾಗೂ ಉಳಿದವರಿಗೆ ಉಪಯುಕ್ತವಾಗುತ್ತಿದೆಯೇ ಎಂಬುದನ್ನು ತಿಳಿಯಲು ಹಾಗೂ ಅವರ ಪೂರ್ವ ಸಿದ್ಧಾಂತಗಳು ಸರಿಯಾಗಿವೆಯೇ? ಎಂಬುದನ್ನು ತಿಳಿಯಲು ಸಹಾಯಕವಾಗಿದೆ.

ಅರ್ಥೈಸುವಿಕೆಯಲ್ಲಿನ ಕೌಶಲ್ಯಗಳು: ಸಂಶೋಧಕರಿಗೆ ತಾವು ಸಂಗ್ರಹಿಸಿದ ಅಂಕಿ–ಅಂಶಗಳನ್ನು ವಿಶ್ಲೇಷಿಸುವುದಕ್ಕೆ ಕೌಶಲ್ಯ ಇರುವುದು ಅತ್ಯವಶ್ಯಕ. ಇದೊಂದು ಕಲೆಯಾಗಿದ್ದು, ಅನುಭವದಿಂದ ಬರುವುದಾಗಿದೆ. ಅರ್ಥೈಸುವಿಕೆಯ ಕೌಶಲ್ಯಗಳು ಈ ಕೆಳಕಂಡ ಹಂತಗಳನ್ನು ಒಳಗೊಂಡಿರುತ್ತವೆ.

ಸಂಶೋಧಕ ಸಂಗ್ರಹಿಸಿದ ಅಂಕಿ–ಅಂಶಗಳ ಮತ್ತು ಮಾಹಿತಿಗಳ ಸಂಬಂಧಗಳನ್ನು ಅವುಗಳ ಸಾಮ್ಯತೆ–ಭಿನ್ನತೆಗಳಿಗೆ ಸರಿಯಾದ ವಿವರಣೆ ನೀಡಬೇಕಾಗುತ್ತದೆ. ಇದು ಸಾಮಾನ್ಯೀಕರಣ ಮತ್ತು ಪರಿಕಲ್ಪನೆಗಳನ್ನು ರಚಿಸಿಕೊಳ್ಳುವ ವಿಧಾನವನ್ನು ತಿಳಿಸುತ್ತದೆ. ಸಂಶೋಧಕ ತಮ್ಮ ಸಂಶೋಧನೆಯ ಫಲಿತಾಂಶವನ್ನು ಅರ್ಥೈಸುವಿಕೆಯಲ್ಲಿ ಬಾಹ್ಯ ಮಾಹಿತಿಗಳು ಇದ್ದಾಗ ಅವುಗಳನ್ನು ಸೂಕ್ತವಾಗಿ ಪರಿಗಣಿಸಬೇಕು. ಅಂತಿಮ ಹಂತದ ಅರ್ಥೈಸುವಿಕೆಯಲ್ಲಿ ಸೂಕ್ತವಾದ ವಿಷಯ ಅಳವಡಿಸಿಕೊಂಡು ಸಂಪನ್ಮೂಲ ವ್ಯಕ್ತಿಗಳ ಸಲಹೆಗಳನ್ನು ಪಡೆದು ಸರಿಯಾಗಿ ವ್ಯಾಖ್ಯಾನಿಸಬೇಕು. ಸಂಶೋಧಕ ವಿಷಯಗಳನ್ನು ಸಾರ್ವತ್ರೀಕರಣಗೊಳಿಸುವುದಕ್ಕೆ ಮುಂಚೆ ಸಮಸ್ಯೆಗೆ ಸಂಬಂಧಿಸಿದ ಪ್ರಧಾನ ಅಂಶಗಳನ್ನು ಪರಿಗಣಿಸಿ ನಿರ್ಧಾರಕ್ಕೆ ಬರಬೇಕಾಗುತ್ತದೆ. ಸಂಶೋಧಕ ಸರಿಯಾದ ಅಂಕಿಅಂಶಗಳನ್ನು ಸಂಗ್ರಹಿಸಿದ್ದರೂ ಕೆಲವೊಮ್ಮೆ ತಪ್ಪು ಅರ್ಥೈಸುವಿಕೆಯಿಂದ, ತಪ್ಪು ತೀರ್ಮಾನಗಳಿಗೆ ಎಡೆಮಾಡಿಕೊಡುತ್ತದೆ. ಆದ್ದರಿಂದ ಸಂಶೋಧಕ ತಾಳ್ಮೆಯಿಂದ ಅರ್ಥೈಸುವುದು ಅವಶ್ಯಕವಾಗುತ್ತದೆ. ಸರಿಯಾದ ಅರ್ಥೈಸುವಿಕೆಯಲ್ಲಿ ಸಂಶೋಧಕ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕಾಗುವುದು.

ಸಂಗ್ರಹಿಸಿದ ಅಂಕಿ ಅಂಶಗಳು ವಾಸ್ತವವಾಗಿದ್ದು ಸರಿಯಾದ ಮತ್ತು ಸೂಕ್ತವಾದ ವಿಷಯವನ್ನು ಪ್ರತಿನಿಧಿಸುವಂತಿರಬೇಕು. ಇದನ್ನು ಅನೇಕ ಸಂಖ್ಯಾ ಶಾಸ್ತ್ರದ ವಿಧಾನಗಳ ಮೂಲಕ ವಿಶ್ಲೇಷಿಸಬೇಕು. ಫಲಿತಾಂಶಗಳನ್ನು ಅರ್ಥೈಸುವಾಗ ತಪ್ಪುಗಳು ನುಸುಳದಂತೆ ಎಚ್ಚರಿಕೆ ವಹಿಸಬೇಕು. ಸಂಖ್ಯಾಶಾಸ್ತ್ರದ ವಿಧಾನಗಳನ್ನು ಸರಿಯಾಗಿ ಬಳಸುವುದನ್ನು ತಿಳಿದಿರಬೇಕು. ವಿಶ್ಲೇಷಣೆ ಮತ್ತು ಅರ್ಥೈಸುವಿಕೆಯು ಪರಸ್ಪರ ಹಾಸುಹೊಕ್ಕಾಗಿರುವುದನ್ನು ಸಂಶೋಧಕ ಮನಗಾಣಬೇಕು. ಅಂಕಿ ಅಂಶಗಳ ನಿಖರತೆ, ಕ್ರಮಬದ್ಧತೆ, ನ್ಯಾಯಬದ್ಧವಾದ ಮತ್ತು ಫಲಿತಾಂಶಗಳ ಹೋಲಿಕೆಯಲ್ಲಿ ಎಲ್ಲಾ ರೀತಿಯ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ ಕಣ್ಣಿಗೆ ನೇರವಾಗಿ ಗೋಚರಿಸದ ಅನೇಕ ಅಂಶಗಳ ಬಗ್ಗೆ ಸಂಶೋಧಕ ಗಮನ ನೀಡಬೇಕು. ಮೊದಲು ರೂಪಿಸಿದ ಸಿದ್ಧಾಂತಗಳು ಅಥವಾ ಆಧಾರ ಕಲ್ಪನೆಗಳು, ವಾಸ್ತವಿಕಾಂಶಗಳು ಮತ್ತು ಸೈದ್ಧಾಂತಿಕ ಪರಿಕಲ್ಪನೆಗಳ ನಡುವಿನ ಪರಸ್ಪರ ಅಧ್ಯಯನ ಅವಶ್ಯಕ. (ಎಸ್.ಕೆ.ಪಿ.)

**ಅಂಕೋಲ:** ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಕರಾವಳಿಗೆ ಸಮೀಪದಲ್ಲಿರುವ ಒಂದು ತಾಲ್ಲೂಕು ಹಾಗೂ ಅದರ ಕೇಂದ್ರ. ಕಾರವಾರ ಪಟ್ಟಣದ ಆಗ್ನೇಯಕ್ಕೆ 24 ಕಿಮೀ ದೂರದಲ್ಲಿಯೂ ಅರಬ್ಬಿ ಸಮುದ್ರತೀರದಿಂದ 3 ಕಿಮೀ ಅಂತರದಲ್ಲಿದೆ. ಇಲ್ಲಿ ಆಂಗ್ಲೋ ವರ್ನಾಕ್ಯುಲರ್ ಪಾಠಶಾಲೆ, ಪ್ರವಾಸಿ ಮಂದಿರ, ಪಾಳು

ಬಿದ್ದಿರುವ ಕೋಟೆ– ಇವೇ ಮೊದಲಾದವು ಇಲ್ಲಿವೆ. ಹಿಂದು, ಮುಸಲ್ಮಾನ ಹಾಗೂ ಕ್ರೈಸ್ತ ಸಮುದಾಯದ ಜನರು ಇಲ್ಲಿ ವಾಸಿಸುತ್ತಾರೆ. ಇವರ ಮುಖ್ಯ ಕಸಬು ಬೇಸಾಯ, ವ್ಯಾಪಾರ ಹಾಗೂ ಕೂಲಿ. ಇಲ್ಲಿ ಒಂದು ಚಿಕ್ಕ ಮಾರುಕಟ್ಟೆಯುಂಟು. ಮುಂಬಯಿ ಹಾಗೂ ಹುಬ್ಬಳ್ಳಿಯಿಂದ ಆಮದಾಗುವ ಅನೇಕ ಸಾಮಾಗ್ರಿಗಳ ಜೊತೆಗೆ ಅಕ್ಕಿ, ತೆಂಗು, ಅಡಕೆ, ಹೊಗೆಸೊಪ್ಪು, ಬಟ್ಟೆ ಹಾಗೂ ತರಕಾರಿಗಳು ಮಾರಾಟವಾಗುತ್ತವೆ.

ಅಂಕೋಲ ಕೋಟೆ ಪಟ್ಟಣದ ಪೂರ್ವ ಭಾಗಕ್ಕೆ 363 ಮೀ ದೂರದಲ್ಲಿದೆ. ಇದು ಸ್ವಲ್ಪ ಎತ್ತರವಾದ ಭಾಗದಲ್ಲಿದ್ದು ವೃತ್ತಾಕಾರವಾಗಿದೆ. ಇದನ್ನು ಸೊಂದಾ ದೊರೆ ಅಂಕೋಲದಲ್ಲಿ ವಾಸವಾಗಿದ್ದ ತನ್ನ ಪ್ರೇಯಸಿಯ ನಿವಾಸಕ್ಕಾಗಿ ಕಟ್ಟಿಸಿದ್ದನೆಂದು ಪ್ರತೀತಿ. ಹಿಂದೆ ಈ ಕೋಟೆಯೊಳಗೆ ಅನೇಕ ಯುದ್ಧಗಳು ನಡೆದಿದ್ದವು. ಅಳಿದುಳಿದಿರುವ ಸು. 4.5 ಮೀ ಎತ್ತರದ ಕಗ್ಗಲ್ಲು ಹಾಗೂ ಲ್ಯಾಟರೈಟ್ ಶಿಲೆಯ ಗೋಡೆಗಳನ್ನು ಇಂದಿಗೂ ಕಾಣಬಹುದು. ಕೋಟೆಯ ಒಳಗಡೆ ವಿವಿಧ ಜಾತಿಗೆ ಸೇರಿದ ಹಣ್ಣಿನ ಮರಗಳಿವೆ. ಕೆಲವು ಮನೆಗಳು ಕೂಡ ಉಂಟು. ಇಲ್ಲಿ ಕೋಟೇಶ್ವರ ಅಥವಾ ರುದ್ರೇಶ್ವರ ದೇವಾಲಯವಿದೆ. (ಎಂ.ಎಸ್.)

**ಅಂಗೋಲ:** ಪಶ್ಚಿಮ ಆಫ್ರಿಕದಲ್ಲಿ ಸಮಭಾಜಕ ವೃತ್ತದ ದಕ್ಷಿಣಕ್ಕೆ ಕಾಂಗೋ ಮತ್ತು ಕ್ಯೂನೀನ್ ನದಿಗಳ ನಡುವೆ ಇರುವ ಅಟ್ಲಾಂಟಿಕ್ ತೀರಪ್ರದೇಶ. ಹಿಂದಿನ ಹೆಸರು ಪೋರ್ಚುಗೀಸ್. ಪಶ್ಚಿಮ ಆಫ್ರಿಕ ($12^0$ ಮತ್ತು $18^0$ ದಕ್ಷಿಣ ಅಕ್ಷಾಂಶ. $12^0 30'$ ಮತ್ತು $25^0$ ಪೂರ್ವ ರೇಖಾಂಶ) ಆಗ್ನೇಯಕ್ಕೆ ಜ಼ಾಂಬಿಯ ದೇಶವಿದೆ, ದಕ್ಷಿಣಕ್ಕೆ ನೈಋತ್ಯ ಆಫ್ರಿಕವಿದೆ. ಸಮುದ್ರತೀರ 2080 ಕಿಮೀ ; ವಿಸ್ತೀರ್ಣ ಸು. 12,47,000 ಚ.ಕಿಮೀ. ಜನಸಂಖ್ಯೆ 14 ಮಿಲಿಯನ್ (2003); ಶ್ವೇತವರ್ಣೀಯರು 2,40,000, ಮಿಶ್ರಜನಾಂಗದವರು 40,000. ಪೋರ್ಚುಗೀಸ್ ಬಿಳಿಯರನ್ನು ಇಲ್ಲಿಗೆ ವಲಸೆ ಬರುವಂತೆ ಪ್ರೋತ್ಸಾಹಿಸಿ ಶ್ವೇತವರ್ಣೀಯರ ಪ್ರಜಾಸಂಖ್ಯೆಯನ್ನು ಹೆಚ್ಚಿಸಬೇಕೆಂದು ಪೋರ್ಚುಗಲ್ ಸರ್ಕಾರದ ಉದ್ದೇಶ. ರಾಜಧಾನಿ ಲುವಾಂಡ. ಜನಸಂಖ್ಯೆ 2,24,540(2003).




ಅಂಗೋಲವನ್ನು ಎರಡು ಮುಖ್ಯ ವಲಯಗಳನ್ನಾಗಿ ವಿಂಗಡಿಸಬಹುದು: 1. ಕಡಲತೀರ, 2. ಪ್ರಸ್ಥಭೂಮಿ. ತೀರಪ್ರದೇಶ ಹಿತಕರವಾದ ವಾಯುಗುಣವನ್ನು ಹೊಂದಿಲ್ಲ; ಆದರೆ 1212ಮೀ – 1818 ಮೀ ಎತ್ತರದ ಪ್ರಸ್ಥಭೂಮಿ ಶ್ವೇತವರ್ಣೀಯರ ವಾಸಕ್ಕೆ ಅನುಕೂಲವಾದ ವಾಯುಗುಣವನ್ನು ಹೊಂದಿದೆ. ತೀರಪ್ರದೇಶದಲ್ಲಿ ಸು. 37.5 ಸೆಂಮೀ ಮಳೆ ಬೀಳುತ್ತದೆ; ಆದರೆ ಒಳ್ಳೆಯ ವಾಯುಗುಣವನ್ನು ಹೊಂದಿರುವ ಪ್ರಸ್ಥಭೂಮಿಯಲ್ಲಿ ಸು. 150 ಸೆಂಮೀ ಮಳೆ. ಇಲ್ಲಿ ಅತ್ಯಂತ ಉಪಯುಕ್ತವಾದ ಮರಗಳಿರುವ ದಟ್ಟವಾದ ಕಾಡುಗಳಿವೆ ; ಆದರೆ ಇವುಗಳಿಂದ ಪ್ರಯೋಜನ ಪಡೆಯುವ ಪ್ರಯತ್ನಗಳು ಸಾಕಷ್ಟು ನಡೆದಿಲ್ಲ.

15ನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತಕ್ಕೆ ಸಮುದ್ರಮಾರ್ಗವನ್ನು ಹುಡುಕುತ್ತ ಹೊರಟ ಪೋರ್ಚುಗೀಸ್ ನಾವಿಕರು 1482 ರಲ್ಲಿ ಅಂಗೋಲ ತೀರಪ್ರದೇಶವನ್ನು ತಲುಪಿ ಕೊಂಚಕೊಂಚವಾಗಿ ದೇಶದ ಒಳಭಾಗದ ಪರಿಚಯ ಮಾಡಿಕೊಂಡರು. 1575 ರಲ್ಲಿ ಪಾವ್‌ಲೋ ಡಯಸ್‌ದ ನೋವೇ ಎಂಬ ಪೋರ್ಚುಗೀಸನು ಅಂಗೋಲಕ್ಕೆ ಹೋಗಿ ಲುವಾಂಡ ನಗರವನ್ನು ಸ್ಥಾಪಿಸಿದ. 1617ರಲ್ಲಿ ಬೆನ್‌ಗೂಲ ನಗರ ಸ್ಥಾಪಿತವಾಯಿತು. ಅಂಗೋಲದ ದೊಡ್ಡ ಕೈಗಾರಿಕೆ ಮತ್ತು ಇತರ ಉದ್ಯಮಗಳು ಪರಕೀಯರ ಸ್ವಾಧೀನದಲ್ಲಿವೆ. ಇತ್ತೀಚೆಗೆ ಹೆಚ್ಚಾಗಿ ಸಾಲ್‌ಸ್ಸಾರ್‌ನ ಆಡಳಿತದಲ್ಲಿ ಅಂಗೋಲದ ಆರ್ಥಿಕ ಪ್ರಗತಿಯನ್ನು ಕ್ರಮಗೊಳಿಸಿ ದೇಶದ ಪ್ರಗತಿಯನ್ನು ಸಾಧಿಸುವ ಕೆಲಸ ಭರದಿಂದ ಸಾಗಿದೆ.

ಅಂಗೋಲ ಕೃಷಿ ಪ್ರಧಾನವಾದ ದೇಶ ; ಪ್ರಸ್ಥಭೂಮಿ ಭಾಗದಲ್ಲಿ, ಉಷ್ಣವಲಯದ ಬೆಳೆಗಳಿಗೆ ಅವಕಾಶವಿದೆ. ಉಪಯುಕ್ತ ಮರಗಳು, ಕಾಫಿ, ಮುಸುಕಿನ ಜೋಳ, ಕತ್ತಾಳೆ ನಾರು, ಸಕ್ಕರೆ ಮುಂತಾದವು ರಫ್ತಾಗುತ್ತವೆ. ಹತ್ತಿಯನ್ನು ಬೆಳೆದು ಎಲ್ಲವನ್ನೂ ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಉತ್ತಮವಾದ ಹುಲ್ಲುಗಾವಲುಗಳಿರುವುದರಿಂದ ದನಕರುಗಳು, ಮೇಕೆ, ಕುದುರೆ, ಕುರಿ ಮುಂತಾದ ಪ್ರಾಣಿಗಳನ್ನು ಸಾಕುವರು. ಟ್ಸೆಟ್ಸೆ ಎಂಬ ನೊಣ ಕೆಲವು ಕಡೆ ಇರುವುದರಿಂದ ಅವುಗಳಿಂದ ಹಾನಿ ಹೆಚ್ಚು. ಕಬ್ಬಿಣ ಮತ್ತು ತಾಮ್ರ ಅಧಿಕ ಪ್ರಮಾಣದಲ್ಲಿ ದೊರಕುತ್ತವೆ. ಕಲ್ಲೆಣ್ಣೆ ದೊರಕುತ್ತದೆಂದು 1955ರಲ್ಲಿ ತಿಳಿಯಿತು. 1958ರಲ್ಲಿ ಉತ್ಪಾದನೆ ಪ್ರಾರಂಭವಾಗಿ, ವರ್ಷಕ್ಕೆ ಒಂದು ಲಕ್ಷ ಟನ್‌ಗಳಷ್ಟು ಶುದ್ಧಿ ಕರಿಸಿದ ಎಣ್ಣೆ ದೊರಕುತ್ತದೆ. ಚಿನ್ನ, ಸೀಸ, ಕಲ್ಲಿದ್ದಲು ಅಲ್ಲಲ್ಲೇ ದೊರಕುತ್ತವೆ. ಲುಂಡಾ ಎಂಬ ಜಿಲ್ಲೆಯಲ್ಲಿ ವಜ್ರದ ಗಣಿಗಳಿವೆ. ಕೈಗಾರಿಕೋದ್ಯಮಗಳಿಗೆ ಬೇಕಾದ ಅನುಕೂಲತೆಗೆ ಪ್ರಸ್ಥಭೂಮಿ ಪ್ರದೇಶದಲ್ಲಿ ವಿದ್ಯುತ್‌ಉತ್ಪಾದನೆ ಭರದಿಂದ ಸಾಗಿದೆ. ಇದು ಪ್ರಾರಂಭವಾದದ್ದು ಇತ್ತೀಚೆಗೆ. 5000 ಕಿಮೀ ರೈಲ್ವೆ, 10,000 ಕಿಮೀ ಉತ್ತಮ ಭೂಮಾರ್ಗಗಳು ಮತ್ತು 20,000 ಕಿಮೀ ಸಾಧಾರಣ ರಸ್ತೆಗಳಿದ್ದರೂ ದೇಶದ ಕೈಗಾರಿಕೆ ಬೆಳೆಯಬೇಕಾದರೆ ಇನ್ನೂ ಹೆಚ್ಚಿನ ಸಾರಿಗೆ ಸಂಪರ್ಕ ಅತ್ಯವಶ್ಯಕ. (ಪಿ.ಕೆ.ಎಸ್.;ಎ.ಎಂ.)

**ಅಂಟಾರ್ಕ್‌ಟಿಕ:** ದಕ್ಷಿಣ ಧ್ರುವದ ಸುತ್ತ ವ್ಯಾಪಿಸಿರುವ ಖಂಡ, $66^0 30'$ ದಕ್ಷಿಣ ಅಕ್ಷಾಂಶದೊಳಗಿರುವ ಹಿಮಾವೃತ ಖಂಡದ ಚಾಚು ಮತ್ತು ಸಾಗರ. ಉತ್ತರ ಧ್ರುವದ ಆರ್ಕ್‌ಟಿಕ್ ಸಾಗರಕ್ಕೆ ವಿರುದ್ಧವಾಗಿ ನೆಲೆಯಾಗಿರುವ ಭೂಖಂಡ. ಸಾಗರವನ್ನು ಸುತ್ತುವರಿದಂತೆ ದ್ವೀಪಗಳು, ಖಂಡಗಳ ತುದಿಗಳು ನೆಲೆಯಾಗಿರುವುದು ಆರ್ಕ್‌ಟಿಕ್ ಸಾಗರದ ವಿಶೇಷ. ಖಂಡವನ್ನು ಸುತ್ತುವರಿದಂತೆ ದ್ವೀಪ, ಸಾಗರಗಳಿರುವುದು ಅಂಟಾರ್ಕ್‌ಟಿಕ್ ಖಂಡದ ವೈಶಿಷ್ಟ್ಯ. ಈ ಖಂಡವನ್ನು ಆವರಿಸಿರುವ ಜಲರಾಶಿಯನ್ನು ದಕ್ಷಿಣ ಸಾಗರವೆಂದೇ ಗುರುತಿಸಲಾಗಿದೆ. ಇದು ಪ್ರತ್ಯೇಕ ಜಲರಾಶಿಯಲ್ಲ. ಹಿಂದೂ ಮಹಾಸಾಗರ, ಪೆಸಿಫಿಕ್ ಸಾಗರ ಹಾಗೂ ಅಂಟ್ಲಾಂಟಿಕ ಸಾಗರಗಳು ಒಂದುಗೂಡಿರುವ ಭಾಗ. ಸಾಗರದಲ್ಲಿ ಪಶ್ಚಿಮಾಭಿಮುಖವಾಗಿ ಬೀಸುವ ಮಾರುತ, ಪ್ರದಕ್ಷಿಣಾ ಪಥವನ್ನೂ ಖಂಡದ ಮೇಲೆ ಪೂರ್ವಾಭಿಮುಖವಾಗಿ ಬೀಸುವ ಮಾರುತ ಅಪ್ರದಕ್ಷಿಣಾ ಪಥವನ್ನೂ ಅನುಸರಿಸುವುದರಿಂದ ಇವುಗಳ ಸಂಗಮ ಭಾಗ ದಕ್ಷಿಣ ಸಾಗರದಲ್ಲಿ ಪ್ರಕ್ಷುಬ್ಧ ಅಲೆಗಳನ್ನು ಏಳಿಸುತ್ತದೆ.

ಅಂಟಾರ್ಕ್‌ಟಿಕ ಖಂಡವನ್ನು ಏಳನೆಯ ಖಂಡವೆಂದು, ಪ್ರಪಂಚದ ಐದನೆಯ ವಿಶಾಲವಾದ ಖಂಡವೆಂದು ಕರೆಯಲಾಗಿದೆ. ಈ ಖಂಡದ ಒಟ್ಟು ವಿಸ್ತೀರ್ಣ ಭಾರತ ಮತ್ತು ಚೀನ ದೇಶಗಳ ವಿಸ್ತೀರ್ಣಕ್ಕಿಂತ ದೊಡ್ಡದು (14,245,000 ಚ.ಕಿಮೀ). ಅಮೆರಿಕ ಸಂಯುಕ್ತ ಸಂಸ್ಥಾನದ ವಿಸ್ತೀರ್ಣದ ಒಂದೂವರೆಯಷ್ಟು. ಇದು ಭೂಗೋಳದ ಅತ್ಯಂತ ಎತ್ತರದ ಖಂಡ. ಸಾಗರಮಟ್ಟದಿಂದ ಸರಾಸರಿ ಎತ್ತರ 2,300 ಮೀ. ಪ್ರಸ್ಥಭೂಮಿ, ಪರ್ವತಸಾಲು, ಕಣಿವೆ, ಕಂದರ, ಹಿಮನದಿಗಳಿದ್ದರೂ ಖಂಡದ ಶೇ. 95 ಭಾಗ ಹಿಮಾವೃತವಾಗಿದೆ. ಶೀತಲ ಖಂಡ, ಹಿಮದ ಮರುಭೂಮಿ, ಶ್ವೇತಖಂಡ, ರೆಫ್ರಿಜಿರೇಟರ್ ಖಂಡ ಎಂಬ ವಿಶೇಷಣಗಳು ಇದಕ್ಕುಂಟು. ಲ್ಯಾಟಿನ್ ಅಮೆರಿಕದ ದಕ್ಷಿಣದ ತುತ್ತ ತುದಿಯ ಕೇಪ್‌ಹಾರನ್ ಈ ಖಂಡ ಸಮೀಪದ ಭೂಭಾಗ. ಇದು 990 ಕಿಮೀ ದೂರದಲ್ಲಿದೆ. ವಿನ್ಸನ್ ಮ್ಯಾಸಿಫ್ ಎಂಬ ಭಾಗವೇ ಖಂಡದ ಅತಿ ಎತ್ತರದ ಭಾಗ (5,140 ಮೀ). ಇದು ಪೆಸಿಫಿಕ್ ಸಾಗರದ ಕಡೆಗಿರುವ ಪಶ್ಚಿಮ ಅಂಟಾರ್ಕ್‌ಟಿಕದಲ್ಲಿ ನೆಲೆಯಾಗಿದೆ. ಟ್ರಾನ್ಸ್ ಅಂಟಾರ್ಕ್‌ಟಿಕ ಪರ್ವತ ಸಾಲು ಈ ಖಂಡವನ್ನು ಎರಡು ಪ್ರಮುಖ ಭೌಗೋಳಿಕ ಭಾಗಗಳಾಗಿ ವಿಭಜಿಸುತ್ತದೆ. ಈ ಪರ್ವತ ಸಾಲಿನಲ್ಲಿ ಜಲಜಶಿಲೆ ಹೆಚ್ಚು ಮೈದಳೆದಿದೆ. ಸರೀಸೃಪಗಳ ಪಳೆಯುಳಿಕೆಗಳು ಮತ್ತು ಸಸ್ಯ ಪಳೆಯುಳಿಕೆಗಳು ಇಲ್ಲಿ ಕಂಡುಬರುತ್ತವೆ. ಇದರ ಒಟ್ಟು ಉದ್ದ 3,000 ಕಿಮೀ. ಖಂಡದ ಪೂರ್ವ ಭಾಗ ವಿಸ್ತೀರ್ಣದಲ್ಲಿ ದೊಡ್ಡದು. ಪಶ್ಚಿಮ ಭಾಗಕ್ಕೆ ಹೋಲಿಸಿದಂತೆ ಇಲ್ಲಿಯ ಶಿಲೆಗಳು ಪ್ರಾಚೀನವಾದವು. ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಕಂಡುಬರುವ ನೈಸ್–ಗ್ರ್ಯಾನ್ಯುಲೈಟ್‌ಗಳಂತಹ ಶಿಲೆಗಳೇ ಇಲ್ಲೂ ದೊಡ್ಡ ಪ್ರಮಾಣದಲ್ಲಿ ಮೈದಳೆದಿವೆ. ಇವು 570 ದಶಲಕ್ಷ ವರ್ಷಗಳಿಗೂ ಹಿಂದಿನವು. ಪೂರ್ವ ಮತ್ತು ಪಶ್ಚಿಮ ಭಾಗಗಳ ನಡುವಿನ

ಪ್ರಸ್ಥಭೂಮಿಯ ಎತ್ತರ 4,000 ಮೀ. ಭೌಗೋಳಿಕ ಧ್ರುವ ಮತ್ತು ಕಾಂತಧ್ರುವ ಎರಡು ಪ್ರಸ್ಥಭೂಮಿಯಲ್ಲೇ ಇವೆ. ಪಶ್ಚಿಮ ಅಂಟಾರ್ಕ್‌ಟಿಕ ಭಾಗ ಬಹುತೇಕ ಸಾಗರಮಟ್ಟದಿಂದ ತಗ್ಗಿನಲ್ಲಿದೆ. ಹಲವು ದ್ವೀಪಗಳ ಸಮೂಹವಿದು. ಮೌಂಟ್ ಎರಬಸ್ ಇಲ್ಲಿನ ಜೀವಂತ ಜ್ವಾಲಾಮುಖಿ.

ಹಿಮದ ವ್ಯಾಪ್ತಿ: ಸು. 40 ದಶಲಕ್ಷ ವರ್ಷಗಳ ಹಿಂದಿನ ಹಿಮಯುಗದಲ್ಲಿ (20 ಲಕ್ಷ ವರ್ಷಗಳ ಹಿಂದೆ) ಹಿಮದ ಸ್ತರಗಳು ನಿರಂತರವಾಗಿ ಈ ಖಂಡದ ಮೇಲೆ ಬೆಳೆಯುತ್ತ ಹೋದುವು. ಹಿಮಯುಗದ ಕೊನೆಯ ಹಂತ ತಲುಪಿದಾಗಲೂ (10,000 ವರ್ಷಗಳ ಹಿಂದೆ) ಹಿಮ ಕರಗಲಿಲ್ಲ. ಇಂಥ ಶಾಶ್ವತ ಹಿಮರಾಶಿಯನ್ನು ಹಿಮದ ಟೋಪಿ ಎನ್ನಲಾಗಿದೆ. ಅಂಟಾರ್ಕ್‌ಟಿಕ ಖಂಡದಲ್ಲಿ 30 ದಶಲಕ್ಷ ಘನ ಕಿಮೀ ಹಿಮ ಸಂಚಯಿಸಿದೆ. ಇದೆಲ್ಲ ಕರಗಿದರೆ ಜಾಗತಿಕ ಸಾಗರದ ಮಟ್ಟ 50 ರಿಂದ 65 ಮೀ ಎತ್ತರಕ್ಕೆ ಏರುತ್ತದೆಂದು ಅಂದಾಜು. ಹಿಮದ ಭಾರಕ್ಕೆ ಧ್ರುವಪ್ರದೇಶ 540 ಮೀ ಆಳಕ್ಕೆ ಕುಸಿದಿದೆ. ಪ್ರಪಂಚದ ಶೇ. 90 ಭಾಗ ಸಿಹಿನೀರು ಹಿಮದ ಗಡ್ಡೆಯ ರೂಪದಲ್ಲಿದ್ದು ಅದು ಈ ಖಂಡದ ಮೇಲೆ ಕೂತಿದೆ. ಪೂರ್ವ ಅಂಟಾರ್ಕ್‌ಟಿಕದಲ್ಲಿ ಒಂದೆಡೆ ಹಿಮದ ಗರಿಷ್ಠ ಮಂದ 4.8 ಕಿಮೀ ಹಿಮದ ಹಾಳೆ ಖಂಡದಿಂದ ಮೆಲ್ಲನೆ ಸಾಗರದತ್ತ ಸರಿಯುತ್ತದೆ. ಅದರಲ್ಲೂ ಪೂರ್ವ ಅಂಟಾರ್ಕ್‌ಟಿಕದ 4000 ಮೀ ಎತ್ತರದಿಂದ ಕಡಿದಾದ ಭಾಗದಲ್ಲಿ ಇಳಿಯುವ ಹಿಮದ ಹಾಳೆಗಳು ದೊಡ್ಡ ದೊಡ್ಡ ಹಿಮನದಿಗಳಿಗೆ ಎಡೆಮಾಡಿಕೊಟ್ಟಿವೆ. ಟ್ರಾನ್ಸ್ ಅಂಟಾರ್ಕ್‌ಟಿಕ ಪರ್ವತ ಸಾಲು, ರಾಸ್ ಸಮುದ್ರ ಮತ್ತು ವೆಡೆಲ್ ಸಮುದ್ರದತ್ತ ಹಿಮನದಿಗಳು ಹಾಯುವುದನ್ನು ಅಡ್ಡಗಟ್ಟೆಯಂತೆ ತಡೆದು ನಿಲ್ಲಿಸಿದೆ. ಸರಿಯುವ ಹಿಮದ ಗಡ್ಡೆಗಳು ಹಿಮದ ಖಂಡಾಂತರ ಪ್ರದೇಶಕ್ಕೂ ತೇಲುವ ಬರ್ಫದ ಹೆಬ್ಬಂಡೆಗಳಿಗೂ ಕಾರಣವಾಗಿವೆ. ರಾಸ್ ಸಮುದ್ರಕ್ಕೆ ಚಾಚಿಕೊಂಡಿರುವಂತೆ ಇರುವ ಹಿಮದ ಚಾಚು ಸುಮಾರು ಫ್ರಾನ್ಸ್ ದೇಶದಷ್ಟು ದೊಡ್ಡದು. 1983ರಲ್ಲಿ ಈ ಭಾಗದಿಂದ ಕಳಚಿ ಸಮುದ್ರದ ಪಾಲಾದ ಹಿಮದ ಹೆಬ್ಬಂಡೆ 1760 ಕಿಮೀ ಉದ್ದವಿತ್ತು. 1976ರಲ್ಲಿ ಲಾಸನ್ ಹಿಮಚಾಚಿನಿಂದ ಕಿತ್ತುಬಂದ ಹಿಮಬಂಡೆ 3,600 ಚ.ಕಿಮೀ ವಿಸ್ತೀರ್ಣವಿತ್ತು. ಅಂಟಾರ್ಕ್‌ಟಿಕ ಖಂಡದ ನಿಜವಾದ ವಿಸ್ತೀರ್ಣ ಅಳೆಯುವುದೇ ದುಸ್ತರವೆನ್ನುವಷ್ಟು ಹಿಮದ ರಾಶಿ ಬೆಳೆಯುತ್ತದೆ. ಪ್ರತಿವರ್ಷ ಮಾರ್ಚ್ ತಿಂಗಳ ಹೊತ್ತಿಗೆ ಸು. 2.6 ದಶಲಕ್ಷ ಚ.ಕಿಮೀ ಬೆಳೆಯುವ ಹಿಮರಾಶಿ ಸೆಪ್ಟಂಬರ್ ಹೊತ್ತಿಗೆ 18.8 ದಶಲಕ್ಷ ಚ.ಕಿಮೀ ಹಿಗ್ಗುತ್ತದೆ. ಈ ಖಂಡದ ಮೇಲೆ ಬೇರೆ ಬೇರೆ ದಿಕ್ಕಿನಿಂದ ಬೀಸುವ ಬಿರುಗಾಳಿ ಹಾಗೂ ಸಾಗರದ ಪ್ರವಾಹ ತೇಲುವ ಹಿಮದ ಬಂಡೆಗಳು ಸಾಗುವ ದಿಕ್ಕನ್ನು ನಿಯಂತ್ರಿಸುತ್ತವೆ.

ವಾಯುಗುಣ: ಈ ಖಂಡ ವಾಯುಗುಣದ ವೈಪರೀತ್ಯಕ್ಕೆ ಹೆಸರುವಾಸಿಯಾಗಿದೆ. ದಕ್ಷಿಣ ಧ್ರುವದ ಸಮೀಪ ರಷ್ಯ ಸ್ಥಾಪಿಸಿರುವ ವೋಸ್ಟಾಕ್ ಎಂಬ ಕೇಂದ್ರದ ಬಳಿ 1983ರಲ್ಲಿ $-89^{0}$ಸೆ ಉಷ್ಣತೆಯನ್ನು ದಾಖಲಿಸಲಾಗಿದೆ. ಭೂಮಿಯ ಯಾವುದೇ ಭಾಗದಲ್ಲೂ ಉಷ್ಣತೆ ಇಷ್ಟು ಕೆಳಮಟ್ಟಕ್ಕೆ ಇಳಿದಿರುವುದು ಇದುವರೆಗೂ ದಾಖಲಾಗಿಲ್ಲ. ಬೇಸಗೆಯಲ್ಲೂ $-20^{0}$ಸೆ. ಉಷ್ಣತೆಯನ್ನು ಅನೇಕ ಭಾಗಗಳು ಅನುಭವಿಸುತ್ತವೆ. ಸಾಗರ ಭಾಗದಲ್ಲಿ ಅತ್ಯಂತ ಕಡಿಮೆ ಉಷ್ಣತೆ $-60^{0}$ಸೆ. ದಾಖಲಾಗಿದೆ. ಚಳಿಗಾಲದಲ್ಲಿ ಸಾಗರ ತೀರದಲ್ಲಿ $-20$ ರಿಂದ $-30^{0}$ಸೆ. ಉಷ್ಣತೆ ಇರುತ್ತದೆ. ಒಳನಾಡಿನಲ್ಲಿ ಇದೇ ಕಾಲದಲ್ಲಿ $-40$ ರಿಂದ $-70^{0}$ಸೆ. ಉಷ್ಣತೆ ದಾಖಲಾಗಿದೆ. ಬೇಸಗೆಯಲ್ಲಿ ತೀರ ಪ್ರದೇಶದಲ್ಲಿ ಉಷ್ಣತೆ $0^{0}$ಸೆ.ಗೆ ಇಳಿದರೆ, ಒಳನಾಡಿನಲ್ಲಿ $-20$ ರಿಂದ $-35^{0}$ಸೆ. ಗೆ ಇಳಿಯುವುದುಂಟು. ಗಂಟೆಗೆ 100 ಕಿಮೀ ವೇಗದಲ್ಲಿ ಬಿರುಗಾಳಿ ಬೀಸುತ್ತದೆ. ವಾಯುಮಂಡಲದಲ್ಲಿ ಆರ್ದ್ರತೆ ಕಡಿಮೆ. ಪ್ರಸ್ಥಭೂಮಿಯಲ್ಲಿ ಗರಿಷ್ಠವೆಂದರೆ ವಾರ್ಷಿಕ 50 ಮಿಮೀ. ಮಳೆ ಬೀಳುತ್ತದೆ. ಅಂಟಾರ್ಕ್‌ಟಿಕ ಹಿಮದ ಮರುಭೂಮಿ. ಸಮುದ್ರದ ಅಂಚಿನಿಂದ ಧ್ರುವದತ್ತ ಹೋದರೆ ಒತ್ತಡ ಹೆಚ್ಚುತ್ತದೆ. ಆದರೆ ಉಷ್ಣತೆ ಕಡಿಮೆಯಾಗುತ್ತದೆ.

ಸಸ್ಯ ಮತ್ತು ಪ್ರಾಣಿ ಸಂಪತ್ತು: ಖಂಡದಲ್ಲಿ ಸಂಪೂರ್ಣವಾಗಿ ಪ್ರತಿಕೂಲ ಹವಾಮಾನವಿದೆ. ಜೂನ್ 22ರಂದು ಭೂಮಿಯ ಉತ್ತರ ಗೋಳಾರ್ಧ ಅತ್ಯಧಿಕವಾಗಿ ಸೂರ್ಯನೆಡೆ ವಾಲುವುದರಿಂದ ಆಗ ಅಂಟಾರ್ಕ್‌ಟಿಕದಲ್ಲಿ ದಿನದ 24 ಗಂಟೆಯೂ ಕತ್ತಲು.

ಡಿಸೆಂಬರ್ 22ರಂದು ದಕ್ಷಿಣ ಗೋಳಾರ್ಧ ಅತ್ಯಧಿಕವಾಗಿ ಸೂರ್ಯನೆಡೆ ವಾಲುವುದರಿಂದ ದಿನದ 24 ಗಂಟೆಯೂ ಬೆಳಕು. ವರ್ಷದಲ್ಲಿ ಆರು ತಿಂಗಳು ಕತ್ತಲು, ಆರು ತಿಂಗಳು ಬೆಳಕು ಇರುವುದರಿಂದ ಈ ಖಂಡ ಜೈವಿಕ ವೈವಿಧ್ಯವನ್ನು ಪೋಷಿಸಿಲ್ಲ. ಇಲ್ಲಿರುವ ಜೀವಿಗಳೂ ಈ ಪ್ರತಿಕೂಲ ವಾಯುಗುಣಕ್ಕೆ ಹೊಂದಿಕೊಂಡು ಜೀವಿಸುತ್ತವೆ. ಪ್ರಧಾನ ಜೀವಿಗಳೆಂದರೆ ಪೆಂಗ್ವಿನ್. ಅದಿಲೆ, ಎಂಪರರ್ ಮತ್ತು ಚಿನ್ ಸ್ಟ್ರಾಪ್ ಇವು ಇಲ್ಲಿನ ಪೆಂಗ್ವಿನ್ ಪ್ರಭೇದಗಳು. ಬಹುತೇಕ ಪೆಂಗ್ವಿನ್‌ಗಳು ಕಲ್ಲು ಪೊಟರೆಗಳಲ್ಲಿ ಗೂಡುಮಾಡಿ ಸಂತಾನಾಭಿವೃದ್ಧಿ ಮಾಡುತ್ತವೆ. ಇಂಥ ಗೂಡುಗಳನ್ನು ರೂಕರಿ ಎನ್ನಲಾಗುವುದು. ಅದಿಲೆ ಪೆಂಗ್ವಿನ್‌ಗಳು 30 ರಿಂದ 68 ಸೆಂಮೀ ಎತ್ತರ. ಮೂರರಿಂದ ಆರು ಕಿಗ್ರಾಂ ತೂಕ. ವಸಂತ ಕಾಲದಲ್ಲಿ 3–4 ದಿನಗಳ ಅಂತರದಲ್ಲಿ ಎರಡು ಮೊಟ್ಟೆಗಳನ್ನಿಡುತ್ತವೆ. ಎಂಪೆರರ್ ಪೆಂಗ್ವಿನ್‌ಗಳು ಒಂದು ಮೀಟರ್ ಎತ್ತರದವರೆಗೂ ಬೆಳೆಯುತ್ತವೆ. ತೂಕ 27 ರಿಂದ 41 ಕಿಗ್ರಾಂ. ಇವು ವರ್ಷಕ್ಕೊಂದು ಮೊಟ್ಟೆ ಇಡುತ್ತವೆ.

ಉತ್ತರ ಅಟ್ಲಾಂಟಿಕ್ ದ್ವೀಪವನ್ನು ತೊರೆದು ಸ್ಕುವಾ ಎಂಬ ಹಕ್ಕಿಗಳು ಅಂಟಾರ್ಕ್‌ಟಿಕದವರೆಗೂ ಪ್ರಯಾಣ ಮಾಡುತ್ತವೆ. ಪೆಂಗ್ವಿನ್ ಮೊಟ್ಟೆಗಳನ್ನು ಇವು ಅಪಹರಿಸುತ್ತವೆ. ನೀರುಕೋಳಿ, ಟರ್ನ್ ಇವೂ ಕೂಡ ದೂರದಿಂದ ಈ ಖಂಡಕ್ಕೆ ವಲಸೆ

ಎಂಪರರ್ ಪೆಂಗ್ವಿನ್

ಬರುತ್ತವೆ. ಖಂಡದ ಸಮೀಪದ ದ್ವೀಪಗಳಲ್ಲಿ ಹಾಗೂ ತೀರ ಪ್ರದೇಶಗಳಲ್ಲಿ ಸೀಲ್ ಸಂತತಿ ಹೆಚ್ಚು. ಅವುಗಳ ತುಪ್ಪಳಕ್ಕಿರುವ ಅಪಾರ ಬೇಡಿಕೆಯಿಂದಾಗಿ ಬೇಟೆಗೆ ಸಿಕ್ಕಿ ಅಳಿವಿನಂಚಿಗೆ ತಲುಪಿವೆ. ಈಗ ಅವುಗಳ ಸಂತತಿಯನ್ನು ರಕ್ಷಿಸಲಾಗಿದೆ. ಖಂಡದ ಅಂಚಿನಲ್ಲಿ ಆರು ಬಗೆಯ ಸೀಲ್‌ಗಳನ್ನು ಗುರುತಿಸಲಾಗಿದೆ. ವೆಡೆಲ್ ಹಾಗೂ ರಾಸ್ ಸಮುದ್ರಗಳಲ್ಲಿ ಮತ್ತು ಅವುಗಳಿಗೆ ಹೊಂದಿಕೊಂಡಿರುವ ದ್ವೀಪಗಳಲ್ಲಿ ಇವುಗಳ ಸಂತತಿ ಹೆಚ್ಚು. 600 ಮೀ ಆಳದವರೆಗೆ ಇವು ಮುಳುಗಬಲ್ಲವು. ದಕ್ಷಿಣ ಸಾಗರದ ಬಹುತೇಕ ಜೀವಿಗಳಿಗೆ ಇಲ್ಲಿ ದೊರೆಯುವ ಕ್ರಿಲ್ ಎಂಬ ಸೀಗಡಿಯೇ ಆಧಾರ. ಈ ಸಾಗರದಲ್ಲಿ ಸು. 270 ದಶಲಕ್ಷ ಟನ್ ಕ್ರಿಲ್ ಸಂಪನ್ಮೂಲವಿದೆಯೆಂದು ಅಂದಾಜು. ನೀಲ ತಿಮಿಂಗಿಲಗಳು ಕೂಡ ಅಂಟಾರ್ಕ್‌ಟಿಕ ಖಂಡದ ಆಸುಪಾಸಿನ ದ್ವೀಪಗಳಿಗೆ ವಲಸೆ ಬರುತ್ತವೆ. 1994ರಲ್ಲಿ ಅಂತಾರಾಷ್ಟ್ರೀಯ ಕಾನೂನು ರಚಿಸಿ ತಿಮಿಂಗಿಲಗಳ ಬೇಟೆಯನ್ನು ಇಲ್ಲಿ ನಿಷೇಧಿಸಲಾಗಿದೆ. ಅಲ್ಲದೆ ಈ ಖಂಡಕ್ಕೆ ಸಂಶೋಧನೆಗೆ ಬರುವವರು ಯಾವುದೇ ಜೀವಿ ಪ್ರಭೇದವನ್ನು ಇಲ್ಲಿಗೆ ತರುವಂತಿಲ್ಲ.

ಅಂಟಾರ್ಕ್‌ಟಿಕ ಖಂಡಕ್ಕೇ ಸೀಮಿತವಾದ ಮೇಲ್ವರ್ಗದ ಸಸ್ಯಗಳಿಲ್ಲ. ಸಸ್ಯದ ಸಾಲು ಈ ಖಂಡದ ಪರ್ಯಾಯ ದ್ವೀಪದ ಕೊನೆಯ ಅಂಚಿನಿಂದ 1200 ಕಿಮೀ ಉತ್ತರಕ್ಕೆ ನಿಲ್ಲುತ್ತದೆ. ಟೆರಾ ಡೆಲ್ಫಿಗೋ ದ್ವೀಪದ ಬಳಿ ($54^{0}$ಪ. ರೇಖಾಂಶ) ವೃಕ್ಷರಾಶಿ ಕೊನೆಗೊಳ್ಳುತ್ತದೆ. ಪರ್ಯಾಯ ದ್ವೀಪದ ಪಶ್ಚಿಮದುದ್ದಕ್ಕೂ ಕೆಲವು ಜಾತಿಯ ಹುಲ್ಲು ಬೆಳೆದಿದೆ. ಸು. 300 ಜಾತಿಯ ಪಾಚಿ, 400 ಜಾತಿಯ ಶಿಲಾವಲ್ಕ, ಹಾವಸೆ ಅಂಟಾರ್ಕ್‌ಟಿಕ ಖಂಡದ ತೆರೆದ ಭಾಗದಲ್ಲಿ ಕಲ್ಲಿನ ಮೇಲೆ ಬೆಳೆಯುತ್ತವೆ. ಖಂಡದ ಒಳಭಾಗದಲ್ಲಿ ಸಿಹಿ ನೀರಿನ ಸರೋವರದಲ್ಲಿ ಕೆಲವು ಬಗೆಯ ಬ್ಯಾಕ್ಟೀರಿಯಗಳನ್ನು ಪತ್ತೆಹಚ್ಚಲಾಗಿದೆ.

ಖನಿಜ ಸಂಪತ್ತು: 20ನೆಯ ಶತಮಾನದ ಉತ್ತರಾರ್ಧದಲ್ಲಿ ಅಂಟಾರ್ಕ್‌ಟಿಕ ಖಂಡವನ್ನು ಅನೇಕ ದೇಶಗಳು ಕೇವಲ ತಮ್ಮ ಸಾಹಸದ ಪ್ರದರ್ಶನಕ್ಕೆ ಆಯ್ದುಕೊಳ್ಳಲಿಲ್ಲ. ವಿಸ್ತೀರ್ಣದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಒಂದೂವರೆಯಷ್ಟಿರುವ ಈ ಖಂಡದಲ್ಲಿ ದೊಡ್ಡ ಪ್ರಮಾಣದ ಖನಿಜ ಸಂಪತ್ತುಗಳಿರಬಹುದೆಂದು ಹಲವು ದೇಶಗಳು ಊಹಿಸಿದ್ದವು. ತಮ್ಮ ಒಡೆತನ ಸಾಧಿಸಲು ಈ ಖಂಡದಲ್ಲಿ ಹಲವು ದೇಶಗಳು ತಮ್ಮ ತಮ್ಮ ಗಡಿ ಗುರುತಿಸಿ ಸ್ವಾಮ್ಯವನ್ನು ಘೋಷಿಸಿದವು. ಭೌಗೋಳಿಕವಾಗಿ ಇದು ಆಂಡಿಸ್ ಪರ್ವತದ ಮುಂದುವರಿದ ಭಾಗ. ಹಿಂದೆ ಸ್ಕಾಟ್ ತನ್ನ ಯಾತ್ರೆಯಲ್ಲಿ ಈ ಭಾಗದಿಂದ ಶಿಲಾ ಮಾದರಿಗಳನ್ನು ಜೊತೆಗೆ ಕಲ್ಲಿದ್ದಲನ್ನೂ ಸಂಗ್ರಹಿಸಿ ತಂದಿದ್ದ. ಈ ಖಂಡ ಗೊಂಡ್ವಾನ ಮಹಾಖಂಡದ ಒಂದು ಭಾಗವೇ ಆದ್ದರಿಂದ ಶಿಲೆ ಮತ್ತು ಖನಿಜ ಸಂಪತ್ತುಗಳ

ದೃಷ್ಟಿಯಿಂದ ಆಸ್ಟ್ರೇಲಿಯ, ಭಾರತ, ದಕ್ಷಿಣ ಅಮೆರಿಕ, ಆಫ್ರಿಕ ಖಂಡಗಳಲ್ಲಿ ಇರುವ ಸಂಪತ್ತು ತಾತ್ವಿಕವಾಗಿ ಇಲ್ಲೂ ಇರಲೇಬೇಕೆಂಬುದು ಒಂದು ಊಹೆ. ದಕ್ಷಿಣ ಆಫ್ರಿಕದ ಚಿನ್ನ ದೊರೆಯುವ ವಿಟ್ ವಾಟರ್ಸ್ ರ‍್ಯಾಂಡ್‌ನ ಪಶ್ಚಿಮ ಭಾಗದ ಶಿಲೆಗಳು ಅಂಟಾರ್ಕ್‌ಟಿಕ ಖಂಡದ ಕ್ವೀನ್ಸ್ ಮೌಡ್ ಲೆಂಡ್‌ನ ಪಶ್ಚಿಮತೀರಕ್ಕೆ ಸಮಾನಾಂತರವಾಗಿ ಹಾಯುತ್ತದೆ. ದಕ್ಷಿಣ ಭಾರತದ ಶಿಲೆಗಳ ಮುಂದುವರಿದ ಭಾಗವೋ ಎಂಬಂತೆ ಆ ಖಂಡದಲ್ಲಿ ಸ್ಥಾಪಿಸಿರುವ ಭಾರತದ ಮೈತ್ರಿ ಕೇಂದ್ರದ ಸುತ್ತಮುತ್ತಲಿನ ಬೆಟ್ಟಗಳು ಕಂಡುಬರುತ್ತವೆ. ಈವರೆಗೆ ದೊಡ್ಡ ಪ್ರಮಾಣದ ನಿಕ್ಷೇಪಗಳು ಯಾವುದೂ ಕಂಡುಬಂದಿಲ್ಲ. ಇದ್ದರೂ ಅವು ಹಿಮದ ಸ್ತರದಡಿ ಬಹುತೇಕ ಮುಚ್ಚಿಹೋಗಿವೆ. ಅಂತಾರಾಷ್ಟ್ರೀಯ ಭೂಭೌತ ವರ್ಷದ ಕಾರ್ಯಾಚರಣೆಯ ಅನಂತರ ಈ ಖಂಡದ ಬಹು ಭಾಗವನ್ನು ಸಮೀಕ್ಷೆ ಮಾಡಲಾಗಿದೆ. ಪರ್ಯಾಯ ದ್ವೀಪದ ಭಾಗದಲ್ಲಿ ಸಣ್ಣ ಪ್ರಮಾಣದ ತಾಮ್ರದ ನಿಕ್ಷೇಪಗಳಿರುವುದನ್ನು ಪತ್ತೆ ಹಚ್ಚಲಾಗಿದೆ. ಪೂರ್ವ ಅಂಟಾರ್ಕ್‌ಟಿಕದ ಕೆಲವೆಡೆ ಕ್ರೋಮಿಯಂ, ಚಿನ್ನ, ಕಬ್ಬಿಣ, ಸೀಸ, ಮ್ಯಾಂಗನೀಸ್, ಮಾಲಿಬ್ಡಿನಂ ಮತ್ತು ಸತು ಅಲ್ಪ ಪ್ರಮಾಣದಲ್ಲಿ ಕಂಡುಬಂದಿವೆ. ರಾಸ್ ಸಮುದ್ರ ಮತ್ತು ಬ್ರಾನ್ಸ್ ಫೀಲ್ಡ್ ಜಲಸಂಧಿಯಲ್ಲಿ ನೆಲದಡಿ ತೈಲ ಇರುವ ಸಾಧ್ಯತೆಯನ್ನು ಅಲ್ಲಿ ಕೈಗೊಂಡಿರುವ ಬೈರಿಗೆ ಕಾರ್ಯಾಚರಣೆ ಸೂಚಿಸಿದೆ. ದೊಡ್ಡ ಪ್ರಮಾಣದ ನಿಕ್ಷೇಪಗಳು ಕಂಡುಬಂದರೂ ಅಲ್ಲಿ ಗಣಿ ಮಾಡುವಂತಿಲ್ಲ. ಹಲವು ರಾಷ್ಟ್ರಗಳು ತಮ್ಮ ಏಕ ಸ್ವಾಮ್ಯವನ್ನು ಹಿಂದೆ ಘೋಷಿಸಿದ್ದರೂ ಅವು ಊರ್ಜಿತವಾಗಿಲ್ಲ. ಈ ಖಂಡದಲ್ಲಿ ಮುಗಿಯದ ಸಂಪನ್ಮೂಲವೆಂದರೆ ಹಿಮದ ಗಡ್ಡೆಯ ರೂಪದಲ್ಲಿ ಘನೀಭವಿಸಿರುವ ಶುದ್ಧ ನೀರು.

ಖಂಡದ ಶೋಧ ಮತ್ತು ಸಾಹಸ ಯಾನಗಳು: ಹದಿನೆಂಟನೆಯ ಶತಮಾನದ ಉತ್ತರಾರ್ಧದಿಂದ ಪ್ರಾರಂಭಿಸಿ 1957–58ರಲ್ಲಿ ಅಂತಾರಾಷ್ಟ್ರೀಯ ಭೂಭೌತ ವರ್ಷದ ಆಚರಣೆಯವರೆಗೆ ಈ ಖಂಡವನ್ನು ಕುರಿತು ವ್ಯಾಪಕವಾಗಿ ಸಂಶೋಧಿಸಲಾಯಿತು. ಪ್ರತಿಕೂಲ ವಾತಾವರಣವಿರುವ ಹಾಗೂ ಸಾಹಸಿಗರಿಗೂ ಸವಾಲಾಗಿರುವ ಈ ಖಂಡದ ಬಗ್ಗೆ ವಿವರಗಳನ್ನು ಪಡೆಯಲು ಸಾಕಷ್ಟು ಕಾಲವೇ ಬೇಕಾಯಿತು.

ಗ್ರೀಕರು ಸಪ್ತರ್ಷಿ ಮಂಡಲದ ಕೆಳಗಿರುವ ಪ್ರದೇಶ ಎಂಬರ್ಥದಲ್ಲಿ ಉತ್ತರ ಧ್ರುವ ಪ್ರದೇಶವನ್ನು ಆರ್ಕ್‌ಟಿಕ್ ಎಂದು ಅದಕ್ಕೆ ವಿರುದ್ಧ ದಿಕ್ಕಿನಲ್ಲಿರುವ ದಕ್ಷಿಣ ಧ್ರುವ ಪ್ರದೇಶವನ್ನು ಅಂಟಾರ್ಕ್‌ಟಿಕ್ ಎಂದು ಕರೆದರು. ಗ್ರೀಕ್ ಭೂಗೋಳ ತಜ್ಞ ಟಾಲಮಿ ದಕ್ಷಿಣ ಧ್ರುವ ಪ್ರದೇಶ ನೆಲವಾಗಿರಬಹುದೆಂದು ಊಹಿಸಿ ಅದಕ್ಕೆ ಟೆರ್ರಾ ಆಸ್ಟ್ರೇಲಿಸ್ ಇನ್‌ಕಾಗ್ನೇಟಾ (ಅಜ್ಞಾತ ದಕ್ಷಿಣ ನೆಲ) ಎಂದು ಕರೆದ.

ಅಂಟಾರ್ಕ್‌ಟಿಕ ಖಂಡದ ವೃತ್ತದ ಸುತ್ತ ಗಸ್ತು ಹೊಡೆದ ಮೊದಲಿಗ ಕೊಲಂಬಸ್ (1768). ಇದು ಪ್ರಾಯಶಃ ಯುರೋಪಿನ ವಿಸ್ತೀರ್ಣಕ್ಕೆಂದು ಕೈಗೊಂಡ ಯಾನಗಳಲ್ಲೊಂದು. ಅಂಟಾರ್ಕ್‌ಟಿಕ ವೃತ್ತದ ಒಳಗೆ ಪ್ರವೇಶಿಸಿದ ಕೀರ್ತಿ ಕ್ಯಾಪ್ಟನ್ ಕುಕ್‌ಗೆ ಸಲ್ಲುತ್ತದೆ (1772–75). ಇವನು ಮೂರು ಬಾರಿ ಯಾನ ಕೈಗೊಂಡು ನೆಲವೆಲ್ಲ ಹಿಮಾವೃತವಾಗಿದೆ ಎಂದಷ್ಟೇ ವಿವರಣೆ ನೀಡಿದ. ಸ್ವಲ್ಪ ದೂರದಲ್ಲೇ ಅಂಟಾರ್ಕ್‌ಟಿಕ ಪರ್ಯಾಯ ದ್ವೀಪವಿದ್ದುದು ಅವನಿಗೆ ಗೋಚರಿಸಲಿಲ್ಲ. ಹತ್ತಿರದಲ್ಲಿದ್ದ ಜಾರ್ಜಿಯ ಎಂಬ ದ್ವೀಪವನ್ನು ಪತ್ತೆಮಾಡಿದ. ಈಗಲೂ ಅದೇ ಹೆಸರಿನಿಂದ ಆ ದ್ವೀಪವನ್ನು ಕರೆಯಲಾಗುತ್ತದೆ. ನಾನು ಕೆಚ್ಚಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಯಾರಾದರೂ ಧೈರ್ಯದಿಂದ ಮುನ್ನುಗ್ಗಿ ಖಂಡವಿದೆಯೆಂದು ಸಾಬೀತು ಪಡಿಸಿದರೆ ಅದರಿಂದ ಬಿಡಿಗಾಸಿನ ಪ್ರಯೋಜನವೂ ಇಲ್ಲ ಎಂದು ಬರೆದ. ಯುರೋಪು ಚೀನದೊಡನೆ ವ್ಯಾಪಾರ ಕುದುರಿಸಲು ಕುಕ್‌ನ ಸಾಹಸ ಯಾನದ ಹಿಂದೆಯೇ ಕೇಪ್ ಹಾರನ್ ಮೂಲಕ ಯಾನ ಮಾಡಿದ ನಾವಿಕರು ಸೀಲ್‌ಗಳನ್ನು ಬೇಟೆಯಾಡಿದರು. ಕೆಲವೊಮ್ಮೆ ಅವರ ನೌಕೆಗಳು ತೀರ ದಕ್ಷಿಣಕ್ಕೆ ಒಯ್ಯಲ್ಪಡುತ್ತಿದ್ದವು. ಈ ವಾಣಿಜ್ಯ ಯಾನದಿಂದಾಗಿ ಅಂಟಾರ್ಕ್‌ಟಿಕ ಖಂಡದ ಸುತ್ತ ನಾವಿಕರು ಸುತ್ತಬೇಕಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನ, ಅಂದಿನ ಸೋವಿಯತ್ ರಷ್ಯ, ಇಂಗ್ಲೆಂಡ್–ಈ ಮೂರೂ ರಾಷ್ಟ್ರಗಳು ಈ ಅಜ್ಞಾತ ಖಂಡವನ್ನು ಶೋಧಿಸಿದ ಖ್ಯಾತಿ ತಮ್ಮ ದೇಶಕ್ಕೆ ಸಲ್ಲಬೇಕೆಂದು ವಾದಿಸುತ್ತ ಬಂದಿವೆ. ಪಾಮರ್ ಎಂಬ 20 ವರ್ಷದ ಅಮೆರಿಕದ ತರುಣ ಸೀಲ್‌ಗಳ ಬೇಟೆಗೆಂದು ಹೀರೋ ಎಂಬ ಹೆಸರಿನ ಪುಟ್ಟ ನೌಕೆಯಲ್ಲಿ ಹೊರಟ. ಸೀಲ್ ಸಂತಾನಾಭಿವೃದ್ಧಿಯ ತಾಣವನ್ನು ಹುಡುಕುವಾಗ ಅವನು ಹಿಮಾಚ್ಛಾದಿತ ಕೋಡುಗಲ್ಲನ್ನು ಅಂಟಾರ್ಕ್‌ಟಿಕ ಖಂಡದಲ್ಲಿ ಕಂಡನೆಂದು (1820) ಅಮೆರಿಕ ವಾದಿಸಿದೆ.

ಇದೇ ಅವಧಿಯಲ್ಲಿ ರಷ್ಯದ ಬೆಲ್ಲಿಂಗ್ ಹ್ಯಾಸನ್ ಎಂಬ ನಾವಿಕ ವೋಸ್ಟೋಕ್ ಮತ್ತು ಮಿರ್ನಿ ಎಂಬ ಎರಡು ನೌಕೆಗಳೊಡನೆ ಪಾಮರ್‌ಗೆ ಎದುರಾಗಿದ್ದ. ಕೇವಲ 30 ಕಿಮೀ ದೂರ ಸಾಗಿದ್ದರೆ ಅಂಟಾರ್ಕ್‌ಟಿಕ ಖಂಡಕ್ಕೆ ಕಾಲಿಟ್ಟ ಮೊದಲಿಗ ಎನ್ನುವ ಖ್ಯಾತಿ ಅವನದಾಗುತ್ತಿತ್ತು. ಆದರೆ ಹಿಮಾಚ್ಛಾದಿತ ಖಂಡವನ್ನು ಕಂಡು ಹಿಂತಿರುಗಬೇಕಾಯಿತು. 1823ರಲ್ಲಿ ಬ್ರಿಟನ್ನಿನ ಸಾಗರಯಾನಿ ಜೇಮ್ಸ್ ವೆಡಲ್ ದಕ್ಷಿಣ ಸಾಗರದ $74^0$ ರೇಖಾಂಶ ತಲುಪಿ ಈಗಿನ ವೆಡಲ್ ಸಮುದ್ರದ ಬಗ್ಗೆ ಅನೇಕ ವಿವರಗಳನ್ನು ನೀಡಿದ. 1837ರಲ್ಲಿ ಫ್ರಾನ್ಸ್‌ನ ಲೆಫ್ಟಿನೆಂಟ್ ದುಮಾಂಟ್ ದರ್ವಿಲ್ ಅಂಟಾರ್ಕ್‌ಟಿಕ ಖಂಡದ ಪರ್ಯಾಯ ದ್ವೀಪಕ್ಕೆ ಹೊಂದಿಕೊಂಡಿರುವ ಕೆಲವು ದ್ವೀಪಗಳನ್ನು ಪತ್ತೆಮಾಡಿ ಅದನ್ನು ಅದಿಲೇ ಲ್ಯಾಂಡ್ ಎಂದು ತನ್ನ ಹೆಂಡತಿಯ ಹೆಸರಲ್ಲಿ ಕರೆದ (ಅದಿಲೆ ಪೆಂಗ್ವಿನ್‌ಗಳ ಹೆಸರಿನ ಮೂಲ ಇದೇ). 1838–41ರಲ್ಲಿ ಅಮೆರಿಕ ನೌಕಾಪಡೆಯ ಲೆಫ್ಟಿನೆಂಟ್ ವಿಲ್ಕ್‌ಸ್, ಪೂರ್ವ ಅಂಟಾರ್ಕ್‌ಟಿಕದ 2400 ಕಿಮೀ ಉದ್ದದ ತೀರವನ್ನು ಸಮೀಕ್ಷೆ ಮಾಡಿ ಗಡಿ ಮುಟ್ಟಿ ಪರ್ವತಗಳನ್ನು ಕಂಡ. ಹಿಂತಿರುಗಿದಾಗ ಯಥೋಚಿತ ಸ್ವಾಗತದ ಬದಲು ಸಂಗಡಿಗರನ್ನು ಹಿಂಸಿಸಿದ ಎನ್ನುವ ಕಾರಣಕ್ಕಾಗಿ ಅಮೆರಿಕ ಅವನಿಗೆ ಭಾರಿ ದಂಡ ವಿಧಿಸಿ ದಿವಾಳಿಗೆ ತಳ್ಳಿತು. ಬ್ರಿಟನ್ನಿನ ಪರಿಶೋಧಕ ಜೇಮ್ಸ್ ಕ್ಲಾರ್ಕ್ ರಾಸ್ 1839–43ರ ನಡುವೆ ಎರಬೆಸ್ ಮತ್ತು ಟೆರರ್ ಎಂಬ ಎರಡು ನೌಕೆಗಳೊಂದಿಗೆ ಅಂಟಾರ್ಕ್‌ಟಿಕ ಖಂಡದ ಪ್ರಕ್ಷುಬ್ಧ ಸಾಗರವನ್ನು ಹಾಯ್ದು ರಾಸ್ ಸಮುದ್ರವನ್ನು ಪತ್ತೆ ಹಚ್ಚಿದ. 1901–04ರ ನಡುವೆ ಇಂಗ್ಲೆಂಡಿನ ನೌಕಾಪಡೆಯ ರಾಬರ್ಟ್ ಫಾಲ್ಕನ್ ಸ್ಕಾಟ್ ಅಂಟಾರ್ಕ್‌ಟಿಕ ಖಂಡದ ಹಿಮನದಿಯನ್ನು ರಾಸ್ ಸಮುದ್ರ ಮಾರ್ಗವಾಗಿ ಹಾಯುವುದರಲ್ಲಿ ಯಶಸ್ವಿಯಾದನಾದರೂ ಬಿರುಗಾಳಿಯಿಂದಾಗಿ ಹಿಂತಿರುಗಬೇಕಾಯಿತು. 1909ರಲ್ಲಿ ಇಂಗ್ಲೆಂಡಿನ ಷಾಕಲ್ಟನ್ ದಕ್ಷಿಣದ ಕಾಂತಧ್ರುವವನ್ನು ಮೆಟ್ಟಿನಿಲ್ಲುವುದರಲ್ಲಿ ಸಫಲನಾದ. ಅದೇ ವರ್ಷ ಅಮೆರಿಕದ ರಾಬರ್ಟ್ ಪಿಯರಿ ಉತ್ತರ ಧ್ರುವ ಯಾತ್ರೆಯಲ್ಲಿ ಯಶಸ್ಸು ಸಾಧಿಸುತ್ತಲೇ ದಕ್ಷಿಣ ಧ್ರುವ ತಲುಪುವ ಸ್ಪರ್ಧೆ ಯುರೋಪಿನಲ್ಲಿ ಮೂಡಿತು. ನಾರ್ವೆಯ ಅಮುಂಡ್‌ಸನ್ (1912), ಬ್ರಿಟನ್ನಿನ ರಾಬರ್ಟ್ ಫಾಲ್ಕನ್ ಸ್ಕಾಟ್ (1912) ಈ ಸ್ಪರ್ಧೆಯಲ್ಲಿ ಸ್ಪರ್ಧಿಸಿದರು.

ಅಮುಂಡ್‌ಸನ್ 1911 ಡಿಸೆಂಬರ್ 4ರಂದು ಫ್ರಾಮ್ ಎಂಬ ನೌಕೆಯಲ್ಲಿ 43 ಮಂದಿ ಪಳಗಿದ ಎಸ್ಕಿಮೋಗಳು, 4 ಶ್ವಾನಬಂಡಿ, ಕುದುರೆಗಳೊಡನೆ ಕ್ವೀನ್ಸ್ ಮೌಡ್ ಪರ್ವತ ಸಾಲಿನ ಮೂಲಕ ಹಾದು ದಕ್ಷಿಣ ಧ್ರುವವನ್ನು ತಲುಪಿ ಇತಿಹಾಸ ನಿರ್ಮಿಸಿದ. 1912 ಜನವರಿ 17ರಂದು ಸ್ಕಾಟ್ ತನ್ನ ತಂಡದೊಂದಿಗೆ ಅದೇ ಧ್ರುವವನ್ನು ತಲುಪಿದಾಗ ಅಮುಂಡ್‌ಸನ್‌ನ ಹೆಜ್ಜೆ ಗುರುತು ನೋಡಿ ಹತಾಶನಾಗಿ ಹಿಂದಿರುಗುವಾಗ ಆಹಾರವೂ ಇಲ್ಲದೆ ಬಿರುಗಾಳಿಯ ಹೊಡೆತಕ್ಕೆ ಸಿಲುಕಿ ತನ್ನ ಸಂಗಡಿಗರೊಂದಿಗೆ ಕೊನೆಯುಸಿರೆಳೆದ. ಅವನ ದಿನಚರಿಯಲ್ಲಿ ಅಮೂಲ್ಯ ಮಾಹಿತಿಗಳು ದೊರೆತವು. ಧ್ರುವವನ್ನು ಮೆಟ್ಟಿ ನಿಲ್ಲುವ ಸ್ಪರ್ಧೆಗೆ ಇದು ತೆರೆ ಎಳೆಯಿತಾದರೂ ವೈಜ್ಞಾನಿಕ ಅನ್ವೇಷಣೆಗೆ ನವಚೈತನ್ಯವನ್ನು ತಂದಿತು. ಶ್ವಾನಪಡೆ, ಬಂಡಿ, ಪುಟ್ಟ ನೌಕೆಗಳನ್ನು ಅಂಟಾರ್ಕ್‌ಟಿಕ ತಂಡದ ಪರಿಶೋಧನೆಗೆ ಒಯ್ಯುತ್ತಿದ್ದ ಕಾಲ ಹಿಂದೆ ಸರಿಯಿತು. ಈ ಖಂಡದ ಪರಿಶೋಧನೆಗೆ 1929ರಲ್ಲಿ ಅಮೆರಿಕದ ನೌಕಾಪಡೆಯ ಅಡ್ಮಿರಲ್ ರಿಚರ್ಡ್ ಬೈರ್ಡ್ ದಕ್ಷಿಣ ಧ್ರುವವನ್ನು ಮೊತ್ತಮೊದಲಿಗೆ ವಿಮಾನಯಾನದ ಮೂಲಕ ತಲಪಿದ. ಅನಂತರ ಇವನ ನೇತೃತ್ವದಲ್ಲಿ ನಾಲ್ಕು ಸಾಹಸಯಾನಗಳಾದವು. ಅನಂತರ ಅಂಟಾರ್ಕ್‌ಟಿಕ ಖಂಡದ ವೈಜ್ಞಾನಿಕ ಅಧ್ಯಯನಕ್ಕೆ ಅನೇಕ ದೇಶಗಳು ಮುಂದಾದವು.

ಅಂತಾರಾಷ್ಟ್ರೀಯ ಭೂಭೌತ ವರ್ಷ: 1957 ಜುಲೈ 1ರಿಂದ ಪ್ರಾರಂಭವಾಗಿ 1958 ಡಿಸೆಂಬರ್ 31ರವರೆಗಿನ ಅವಧಿಯನ್ನು ಅಂತಾರಾಷ್ಟ್ರೀಯ ಭೂಭೌತ ವರ್ಷ ಎಂಬ ಹೆಸರಿನಲ್ಲಿ ಆಚರಿಸಲು ಪ್ರಪಂಚದ ಅನೇಕ ವಿಜ್ಞಾನಿಗಳು ಯೋಜನೆ ರೂಪಿಸಿದರು. ಅಂತಾರಾಷ್ಟ್ರೀಯ ವಿಜ್ಞಾನ ಒಕ್ಕೂಟಗಳ ಮಂಡಳಿಯನ್ನು (ಐ.ಸಿ.ಎಸ್.ಯು) ಸ್ಥಾಪಿಸಿ 40 ದೇಶಗಳನ್ನು ಈ ಅಧ್ಯಯನದಲ್ಲಿ ತೊಡಗಿಸಿಕೊಂಡಿತು. ಖಂಡದ ವ್ಯಾಪಕ ಸಂಶೋಧನ ಯೋಜನೆಗಳು ಮೈದಳೆದು ಅಲ್ಲಿ ಅನೇಕ ಶಿಬಿರಗಳನ್ನು ನಿರ್ಮಿಸಲು ಯೋಜಿಸಲಾಯಿತು. ಸಂಪರ್ಕ ಸಾಧನಗಳ ನೆರವು ಪಡೆಯುವುದು, ಹವಾಮಾನ ಕುರಿತು ಖಚಿತ ಮಾಹಿತಿಗಳನ್ನು ಪಡೆಯುವುದು, ಖಂಡದ ಬೆಟ್ಟಗುಡ್ಡಗಳನ್ನು ಸಮೀಕ್ಷೆ ಮಾಡುವುದು ಯೋಜನೆಯ ಮುಖ್ಯ ಗುರಿಯಾಗಿತ್ತು. ಇದಕ್ಕಾಗಿ 12 ದೇಶಗಳು ಮುಂದಾದವು. ಅಂಟಾರ್ಕ್‌ಟಿಕ ಹಾಗೂ ಅದರ ಸುತ್ತಮುತ್ತಲಿನ ಸಣ್ಣಪುಟ್ಟ ದ್ವೀಪಗಳಲ್ಲಿ ಒಟ್ಟು 60 ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನವೊಂದೇ ಆರು ಸಂಶೋಧನ ಕೇಂದ್ರಗಳನ್ನು ತೆರೆಯಿತು. ಮ್ಯಾಕ್ ಮುರ್ಡೋ ಸೌಂಡ್ ಎಂಬ ಕೇಂದ್ರ ಈಗಲೂ ಅಂಟಾರ್ಕ್‌ಟಿಕ ಖಂಡದಲ್ಲಿ, ಸರ್ವಋತುವಿನಲ್ಲೂ ಕೆಲಸ ಮಾಡುವ ಬಹುದೊಡ್ಡ ಕೇಂದ್ರವಾಗಿದೆ. ರಷ್ಯ, ಬ್ರಿಟನ್, ನ್ಯೂಜಿಲೆಂಡ್, ಆಸ್ಟ್ರೇಲಿಯ ಕೂಡ ನೆಲ, ಜಲ, ಬಾನಿಗೆ ಸಂಬಂಧಿಸಿದಂತೆ, ಅತ್ಯುಚ್ಚ ಉಪಕರಣಗಳನ್ನು ಬಳಸಿ ಮಾಹಿತಿಗಳನ್ನು ಸಂಗ್ರಹಿಸಲು ಪ್ರಾರಂಭಿಸಿದುವು. ಅಂತಾರಾಷ್ಟ್ರೀಯ ಭೂಭೌತ ವರ್ಷದ ಅತ್ಯುನ್ನತ ಸಾಧನೆ ಇಡೀ ಖಂಡವನ್ನು ಅಡ್ಡಹಾಯಲು ರೂಪಿಸಿದ ಕಾಮನ್‌ವೆಲ್ತ್ ಟ್ರಾನ್ಸ್ ಅಂಟಾರ್ಕ್‌ಟಿಕ ಯಾತ್ರೆ. ಇದರ ಮುಂದಾಳುಗಳು ಸರ್ ವಿವಿಯನ್ ಫುಟ್ ಮತ್ತು ಸರ್ ಎಡ್ಮಂಡ್ ಹಿಲೇರಿ. 1957ರಿಂದ ಪ್ರಾರಂಭಿಸಿ ಈ ಯಾತ್ರೆ ಮೂರು ತಿಂಗಳ ಅವಧಿಯಲ್ಲಿ ಮೊತ್ತಮೊದಲ ಬಾರಿಗೆ ಖಂಡವನ್ನು ಅಡ್ಡ ಹಾಯಿತು. 12 ರಾಷ್ಟ್ರಗಳ ಪ್ರತಿನಿಧಿಗಳು ವಾಷಿಂಗ್‌ಟನ್ ಡಿ.ಸಿ.ಯಲ್ಲಿ ಸಭೆ ಸೇರಿ 1959ರಲ್ಲಿ ಅಂಟಾರ್ಕ್‌ಟಿಕ ಖಂಡದ ಒಪ್ಪಂದಕ್ಕೆ ಸಂಬಂಧಿಸಿದಂತೆ ಕರಡು ಸಿದ್ಧಪಡಿಸಿದುವು. ಒಪ್ಪಂದದಂತೆ ಇಡೀ ಖಂಡವೇ ವೈಜ್ಞಾನಿಕ ಸಂಶೋಧನೆಗಷ್ಟೇ ಮೀಸಲಾಗಿರಬೇಕು. ಅಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸುವಂತಿಲ್ಲ. ಯಾವ

ದೇಶವೂ ನೆಲ, ಜಲದ ಮೇಲೆ ಸ್ವಾಮ್ಯ ಘೋಷಿಸುವಂತಿಲ್ಲ. ಅಂಟಾರ್ಕ್‌ಟಿಕದ ಪರಿಸರವನ್ನು ಕಲುಷಿತಗೊಳಿಸುವಂತಿಲ್ಲ. ಈ ಖಂಡದಲ್ಲಿ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದ್ದ ಹನ್ನೆರಡೂ ದೇಶಗಳು 1961ರಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದುವು. 1991ರಲ್ಲಿ ಸ್ಪೇನ್ ದೇಶದ ಮ್ಯಾಡ್ರಿಡ್ ಎಂಬಲ್ಲಿ 39 ದೇಶಗಳ ಪ್ರತಿನಿಧಿಗಳು ಅಂಟಾರ್ಕ್‌ಟಿಕ ಖಂಡದ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸಭೆ ಸೇರಿ ಕೆಲವೊಂದು ಷರತ್ತುಗಳಿಗೆ ಸಹಿ ಹಾಕಿದರು. ಈ ಷರತ್ತಿನಂತೆ ಮುಂದಿನ 50 ವರ್ಷಗಳ ತನಕ ಈ ಖಂಡದಲ್ಲಿ ಯಾವುದೇ ಗಣಿಗಾರಿಕೆಗೆ ಅವಕಾಶವಿಲ್ಲ. ಈ ಷರತ್ತನ್ನು 1998ರ ಏಪ್ರಿಲ್‌ನಿಂದ ಜಾರಿಗೆ ತರಲಾಗಿದೆ.

ಭಾರತ ಅಂಟಾರ್ಕ್‌ಟಿಕ ಕೂಟದ ಸದಸ್ಯತ್ವ ಹೊಂದಿದೆ. ಈಗ ಸ್ಕಾರ್ (ಸೈಂಟಿಫಿಕ್ ಕಮಿಟಿ ಆನ್ ಅಂಟಾರ್ಕ್‌ಟಿಕ್ ರಿಸರ್ಚ್) ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಈ ಸಮಿತಿ ಖಂಡದ ಪರಿಸರ ಸಂರಕ್ಷಣೆಗೆ ಕಟಿಬದ್ಧವಾಗಿ ನಿಂತಿದೆ. ಇಲ್ಲಿನ ಸೀಲ್ ಸಂತತಿಯನ್ನು ಸಂರಕ್ಷಿಸಲು ಕನ್ಸರ್ವೇಷನ್ ಆಫ್ ಅಂಟಾರ್ಕ್‌ಟಿಕ್ ಸೀಲ್ಸ್ ಹೆಸರಿನಲ್ಲಿ ಸಮಿತಿ ರಚನೆಯಾಗಿದೆ. ಅಲ್ಲಿನ ಜೀವ ಸಂಪನ್ಮೂಲವನ್ನು ರಕ್ಷಿಸಲು ಕನ್ಸರ್ವೇಷನ್ ಆಫ್ ಅಂಟಾರ್ಕ್‌ಟಿಕ್ ಮೆರೈನ್ ಲಿವಿಂಗ್ ರಿಸೋರ್ಸ್ ಎಂಬ ಸಮಿತಿಯೂ ಅಸ್ತಿತ್ವದಲ್ಲಿದೆ. ಅಂಟಾರ್ಕ್‌ಟಿಕ ಹಾಗೂ ಅದರ ಸುತ್ತಮುತ್ತಲ ದ್ವೀಪ, ಸಾಗರ, ತೀರದಲ್ಲಿರುವ ಜೈವಿಕ ವೈವಿಧ್ಯದ ಬಗ್ಗೆ ತಪಶೀಲು ಸಮೀಕ್ಷೆಯಾಗಿಲ್ಲ. ಇದನ್ನು ಕೇಂದ್ರ ಗುರಿಯನ್ನಾಗಿರಿಸಿಕೊಂಡು ಬಯೋಮಾಸ್ (ಬಯಾಲಾಜಿಕಲ್ ಇನ್ವೆಸ್ಟಿಗೇಷನ್ ಆಫ್ ಮೆರೈನ್ ಅಂಟಾರ್ಕ್‌ಟಿಕ್ ಸಿಸ್ಟಮ್) ಎಂಬ ಯೋಜನೆಯನ್ನು ಈಗಾಗಲೇ ಕೂಟದ ಸದಸ್ಯ ರಾಷ್ಟ್ರಗಳು ಅನುಷ್ಠಾನಕ್ಕೆ ತಂದಿವೆ. ಮುಂದಿನ ತಲೆಮಾರಿಗೆ ಅಂಟಾರ್ಕ್‌ಟಿಕ ಖಂಡವನ್ನು ಉಳಿಸಲೆಂದೇ ಮ್ಯಾಡ್ರಿಡ್ ಒಪ್ಪಂದದಲ್ಲಿ ಅನೇಕ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಅದರಲ್ಲಿ ಮುಖ್ಯವಾದವು ಈ ಖಂಡದ ಮೇಲೆ ಪರಿಸರ ಬೀರಿರುವ ಪ್ರಭಾವದ ಮೌಲ್ಯಮಾಪನ, ಅಲ್ಲಿನ ಜೀವಿ ವೈವಿಧ್ಯದ ಸಂರಕ್ಷಣೆ, ತ್ಯಾಜ್ಯ ಪದಾರ್ಥಗಳ ವಿಲೇವಾರಿ–ನಿರ್ವಹಣೆ, ಸಾಗರ ಮಾಲಿನ್ಯ ವಿಶೇಷವಾಗಿ ತೈಲ ಸೋರಿಕೆಯಿಂದುಂಟಾಗುವ ಅವಘಡಗಳನ್ನು ಕುರಿತು ತೆಗೆದುಕೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮಗಳು ಸೇರಿವೆ. ಸಂಶೋಧನೆಯ ಹೆಸರಿನಲ್ಲಿ ಅಲ್ಲಿ ಯಾವ ಹೊಸ ಜೀವಿಗಳನ್ನೂ ತರುವಂತಿಲ್ಲ. ಕೆಳಮಟ್ಟದಲ್ಲಿ ವಿಮಾನ ಹಾರಾಟ ಮಾಡಿ ಅಲ್ಲಿನ ಜೀವಿಗಳನ್ನು ಗಲಿಬಿಲಿಗೊಳಿಸುವಂತಿಲ್ಲ. 2000 ಏಪ್ರಿಲ್‌ನಲ್ಲಿ ಅಂಟಾರ್ಕ್‌ಟಿಕ ಒಪ್ಪಂದಕ್ಕೆ ಕೆಲವೊಂದು ತಿದ್ದುಪಡಿಗಳನ್ನು ತರಲಾಗಿದೆ. ಈ ತಿದ್ದುಪಡಿಯಲ್ಲಿ ಅಂಟಾರ್ಕ್‌ಟಿಕ ತೀರದಲ್ಲಿ ನೌಕೆಗಳ ಚಲನವಲನಗಳ ಮೇಲೆ ನಿಯಂತ್ರಣ ತರಲಾಗಿದೆ. ಹೆಚ್ಚುತ್ತಿರುವ ಪ್ರವಾಸೀ ಒತ್ತಡವನ್ನು ನಿರ್ವಹಿಸಲು ಮತ್ತು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮವನ್ನು ಜಾರಿಗೊಳಿಸಲಾಗಿದೆ.

**ಭಾರತ ಮತ್ತು ಅಂಟಾರ್ಕ್‌ಟಿಕ ಯಾನ:** 20ನೆಯ ಶತಮಾನದ 70ರ ದಶಕದಲ್ಲಿ ಭಾರತ ಎರಡು ಪ್ರಮುಖ ಮೈಲಿಗಲ್ಲುಗಳನ್ನು ಸ್ಥಾಪಿಸಿ ಅಂತಾರಾಷ್ಟ್ರೀಯ ವಲಯದಲ್ಲಿ ಹೆಸರುಗಳಿಸಿತು. ಆರ್ಯಭಟ ಉಪಗ್ರಹವನ್ನು ರೂಪಿಸಿ ಬಾಹ್ಯಾಕಾಶಕ್ಕೆ ಹಾರಿಸಿ ಒಂದು ಹೊಸ ಅಧ್ಯಾಯವನ್ನು ತೆರೆದಿದ್ದು ಒಂದಾದರೆ, ಇನ್ನೊಂದು ಪೋಕ್ರಾನಿನಲ್ಲಿ ಯಶಸ್ವಿಯಾಗಿ ಪರಮಾಣು ಬಾಂಬು ಸ್ಫೋಟಿಸಿದ್ದು ಈ ಸಾಧನೆ ಭಾರತದ ವಿಜ್ಞಾನಿಗಳ, ತಂತ್ರಜ್ಞರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಭಾರತ ತನ್ನ ಸಾಮರ್ಥ್ಯವನ್ನು ಅಂಟಾರ್ಕ್‌ಟಿಕ ಖಂಡದ ಪರಿಶೋಧನೆಯಲ್ಲೂ ತೋರುವಂತೆ ಈ ಸಾಧನೆಗಳು ಹೆಚ್ಚು ನೈತಿಕ ಸ್ಥೈರ್ಯ ಮೂಡಿಸಿದುವು. 1981ರಲ್ಲಿ 21 ಸದಸ್ಯರ ಮೊದಲ ತಂಡ ಅಂಟಾರ್ಕ್‌ಟಿಕ ಖಂಡದಲ್ಲಿ ಹೆಚ್ಚಿನ ಪರಿಶೋಧನೆ ಮಾಡಲು ನಾರ್ವೆ ದೇಶದ ಪೋಲಾರ್ ಸರ್ಕಲ್ ಎಂಬ ನೌಕೆಯಲ್ಲಿ ಹೊರಟಿತು. ಈ ಪರಿಶೋಧನೆಯ ಮುಖ್ಯ ಗುರಿಗಳೆಂದರೆ:

- ಸೂರ್ಯನಿಂದ ಹೊರಹೊಮ್ಮುವ ಆವಿಷ್ಟ ಕಣಗಳು ಭೂಕಾಂತಕ್ಷೇತ್ರದ ಮೇಲೆ ವರ್ತಿಸುವ ಬಗೆಯನ್ನು ಅರಿಯಲು, ಆ ಮೂಲಕ ವಾತಾವರಣದ ಭೌತ ವಿದ್ಯಮಾನವನ್ನು ದಾಖಲಿಸಲು ಅಂಟಾರ್ಕ್‌ಟಿಕ ಅತ್ಯಂತ ಪ್ರಶಸ್ತವಾದ ನೆಲೆ.

- ಇಡೀ ಭೂಗೋಳದ ಉಷ್ಣತೆಯ ಆಯವ್ಯಯವನ್ನು ನಿರ್ಧರಿಸುವುದು ಎರಡು ಧ್ರುವಗಳೇ. ವಾಯುಗೋಳದಲ್ಲಿ ಉಷ್ಣತೆಯ ಸಾಗಣೆಯಾಗುವುದರಿಂದ ಸಾಗರದಿಂದ ನೆಲಕ್ಕೆ, ನೆಲದಿಂದ ಸಾಗರಕ್ಕೆ ಹರಿಯುವಾಗ ವಾತಾವರಣದಲ್ಲಿ ಅದು ಉದ್ದ ತರಂಗಗಳಾಗಿ ಹರಿಯುತ್ತದೆ. ಇದರ ಅಧ್ಯಯನದಿಂದ ಭಾರತ ಉಪಖಂಡದ ವಾಯುಗೋಳದ ಮೇಲೆ ಅಂಟಾರ್ಕ್‌ಟಿಕದ ಪ್ರಭಾವವನ್ನು ಅರಿಯಲು ನೆರವಾಗುತ್ತದೆ.

- ಹಿಂದೂ ಮಹಾಸಾಗರ, ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳು ಅಂಟಾರ್ಕ್‌ಟಿಕದಲ್ಲಿ ಸಂಗಮವಾಗುತ್ತವೆ. ಆಗ ಅದು ದಕ್ಷಿಣ ಸಾಗರ ಎನ್ನಿಸಿಕೊಳ್ಳುತ್ತದೆ. ಇಲ್ಲಿ ಶೀತ ಜಲ ಮತ್ತು ಉಷ್ಣ ಜಲಗಳ ವಿನಿಮಯವಾಗುತ್ತದೆ. ಭಾರತದ ಮಾನ್ಸೂನ್ ಮೇಲೆ ಇದರ ಪ್ರಭಾವ ದಟ್ಟವಾಗಿದೆ.

- ಅಂಟಾರ್ಕ್‌ಟಿಕ ಇಡೀ ಭೂಗೋಳದಲ್ಲೇ ಅತ್ಯಂತ ಎತ್ತರವಾದ ಖಂಡ. ದಕ್ಷಿಣಾಕಾಶ ವೀಕ್ಷಿಸಲು, ಪರಿಸರದ ಕಲುಷಿತತೆಯನ್ನು ಅಧ್ಯಯನ ಮಾಡಲು ಇದನ್ನು ನಿಸರ್ಗವೇ ಒದಗಿಸಿರುವ ಅಮೂಲ್ಯ ಕೊಡುಗೆ.

- ಅಂಟಾರ್ಕ್‌ಟಿಕ ಖಂಡದಲ್ಲಿ ಪ್ರಪಂಚದ ಶೇ. 90 ಭಾಗದ ಸಿಹಿನೀರು ಮಂಜುಗಡ್ಡೆಯ ರೂಪದಲ್ಲಿದೆ. ವಾರ್ಷಿಕವಾಗಿ ಹಿಮಗಡ್ಡೆ ಎಷ್ಟು ಕರಗುತ್ತದೆ ಎನ್ನುವುದು ಹಿಂದೂ ಮಹಾಸಾಗರದ ಮೇಲೆ ನೇರ ಪ್ರಭಾವ ಬೀರುತ್ತದೆ. ಇದರ ಅಧ್ಯಯನವನ್ನು ಹಿಮಾಲಯದ ಹಿಮನದಿಗಳಿಗೂ ಅನ್ವಯಿಸಿ, ಏರುತ್ತಿರುವ ಜಾಗತಿಕ ಉಷ್ಣದ ಪ್ರಭಾವವನ್ನು ಅಳೆಯಬಹುದು.

ಈ ಖಂಡದಲ್ಲಿ ಜೈವಿಕ ವೈವಿಧ್ಯ ಹೇರಳವಾಗಿಲ್ಲದಿದ್ದರೂ ಕೆಲವೇ ಜೀವಿಗಳು ಸಮೃದ್ಧವಾಗಿ ಅಭಿವರ್ಧಿಸಿವೆ. ಇಲ್ಲಿನ ಜೀವ ಸಂಕುಲಕ್ಕೆ ಆಹಾರದ ಮೊದಲ ಕೊಂಡಿಯಾಗಿರುವ ಕ್ರಿಲ್ ಎಂಬ ಸೀಗಡಿ ಅಧ್ಯಯನ ಜೀವ ವಿಜ್ಞಾನದ ಅನೇಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ.

ಸು. 225 ಮಿ ವರ್ಷಗಳ ಹಿಂದೆ ಆಫ್ರಿಕ, ಅಂಟಾರ್ಕ್‌ಟಿಕ, ಆಸ್ಟ್ರೇಲಿಯ, ಇಂಡಿಯ ಗೊಂಡ್ವಾನ ಖಂಡವೆಂಬ ಒಂದೇ ಒಂದು ಖಂಡವಾಗಿ ಒಂದುಗೂಡಿದ್ದವು. ಅನಂತರ ಒಡೆದು ಖಂಡಗಳಾಗಿ ಚಲಿಸಿ ಈಗಿನ ನೆಲೆ ತಲಪಿದುವು. ಭಾರತ ಮತ್ತು ಅಂಟಾರ್ಕ್‌ಟಿಕದ ಭೂವಿಜ್ಞಾನದಲ್ಲಿ ಸರ್ವಸಾಮಾನ್ಯವಾದ ಅನೇಕ ಅಂಶಗಳಿವೆ. ಖಂಡಗಳ ಉಗಮ, ವಿಕಾಸವನ್ನರಿಯಲು ಈ ನಿಟ್ಟಿನ ಅಧ್ಯಯನ ಹೊಸ ಅಂಶಗಳನ್ನು ಬೆಳಕಿಗೆ ತರುತ್ತದೆ.

ಅಂಟಾರ್ಕ್‌ಟಿಕ ಖಂಡದ ಅನ್ವೇಷಣೆಗೆ ಹಿಂದೆ ತೊಡಗಿದ್ದ ಅನೇಕ ದೇಶಗಳು ಆ ಖಂಡದ ಖನಿಜ ಸಂಪತ್ತುಗಳ ಮೇಲೆ ಕಣ್ಣಿಟ್ಟಿದ್ದವು. ವಾಸ್ತವವಾಗಿ ದೊಡ್ಡ ಪ್ರಮಾಣದ ನಿಕ್ಷೇಪಗಳು ಈವರೆಗೆ ವರದಿಯಾಗಿಲ್ಲ. ಇದರ ಮೌಲ್ಯಮಾಪನೆ ಮಾಡಲು ಭಾರತ ಕೂಡ ಅಂಟಾರ್ಕ್‌ಟಿಕ ಯಾತ್ರೆಗೆ ತೊಡಗಿತು.

ಇಡೀ ಯೋಜನೆಯ ನಿರ್ವಹಣೆಯನ್ನು ಸಾಗರಾಭಿವೃದ್ಧಿ ಇಲಾಖೆ ಕೈಗೊಂಡಿತು. 1981ರ ಡಿಸೆಂಬರ್ 6ರಂದು ಎಸ್. ಜೆಡ್. ಕಾಸಿಂರ ನೇತೃತ್ವದಲ್ಲಿ 21 ಮಂದಿ ಸದಸ್ಯರ ತಂಡದಲ್ಲಿ ಸಾಗರ ವಿಜ್ಞಾನಿಗಳು, ಭೂವಿಜ್ಞಾನಿಗಳು, ಪವನವಿಜ್ಞಾನಿಗಳು, ಭೂಭೌತ ವಿಜ್ಞಾನಿಗಳು, ರೇಡಿಯೋ ಸಂವಹನ ತಜ್ಞರು ಮತ್ತು ನೌಕಾಪಡೆಯ ಸಿಬ್ಬಂದಿ ವರ್ಗ ಇತ್ತು. ಪೋಲಾರ್ ಸರ್ಕಲ್ ನೌಕೆಯಲ್ಲಿ ಗೋವಾ ಬಂದರಿನಿಂದ ಮಾರಿಷಸ್ ದ್ವೀಪದ ಮೂಲಕ ಅಂಟಾರ್ಕ್‌ಟಿಕದತ್ತ ಪಯಣ ಮಾಡಿತು. ಅಂಟಾರ್ಕ್‌ಟಿಕ ತಲಪಲು ಕ್ರಮಿಸಬೇಕಾಗಿದ್ದ ಒಟ್ಟು ದೂರ 11,000 ಕಿಮೀ. ಡಿಸೆಂಬರ್ 16ರಂದು ತಂಡ ಮಾರಿಷಸ್ ದ್ವೀಪ ತಲಪಿತು. ಡಿಸೆಂಬರ್ 22ರಂದು ಈ ದ್ವೀಪದಿಂದ ಹೊರಟು ಸಾಗರದ ಪ್ರಕ್ಷುಬ್ಧ ಅಕ್ಷಾಂಶಗಳಾದ $48^0$ ಮತ್ತು $60^0$ ದಾಟುವಾಗ 49 ಮೀ. ಉದ್ದದ 500 ಟನ್ನು ಭಾರದ ಪೋಲಾರ್ ಸರ್ಕಲ್ ನೌಕೆ ಅಲುಗಾಡತೊಡಗಿತು. ದೊಡ್ಡ ಬರ್ಫಗಳನ್ನು ತುಂಡರಿಸುವ ಹಲ್ಲುಗಳಿವೆ.

ಸಜ್ಜಾದ ಪೋಲಾರ್ ಸರ್ಕಲ್ ನೌಕೆ 1982 ಜನವರಿ 9 ರಂದು ಭಾರತೀಯ ಕಾಲಮಾನ 0030 ಗಂಟೆಗೆ ಅಂಟಾರ್ಕ್‌ಟಿಕ ಖಂಡವನ್ನು ತಲಪಿತು. ಈ ಭಾಗ ಕ್ವೀನ್ ಮೌಡ್ ಲ್ಯಾಂಡ್ ಎಂಬ ಹೆಸರನ್ನು ಪಡೆದಿದೆ. ಹಿಮ, ಹಿಮದಉಷ್ಣವಿತರಣೆ, ಸ್ಫಟಿಕ ವಿನ್ಯಾಸ ಮುಂತಾದವನ್ನು ಅರಿಯಲು ಹಿಮ ವಿಜ್ಞಾನಿಗಳು ಅಧ್ಯಯನ ಕೈಗೊಂಡರು. ಭೂವಿಜ್ಞಾನಿಗಳು ಅಲ್ಲಿನ ಶಿಲಾಮಾದರಿಗಳನ್ನು ಸಂಗ್ರಹಿಸಿದರು. ಪವನ ವಿಜ್ಞಾನಿಗಳು ಹವಾಮಾನ ಅಧ್ಯಯನ ಮಾಡಲು ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿದರು. ರೇಡಿಯೋ ತರಂಗಗಳನ್ನು ಅಲ್ಲಿನ ಬಾನು ಹೇಗೆ ಸಂವಹಿಸುತ್ತದೆ ಎಂಬುದನ್ನು ಅರಿಯಲು ಅನೇಕ ಪರೀಕ್ಷೆಗಳನ್ನು ಮಾಡಲಾಯಿತು. ಜೀವ ವಿಜ್ಞಾನಿಗಳು ಅಂಟಾರ್ಕ್‌ಟಿಕದ ಜೀವಿಗಳ ಆಹಾರ ಮತ್ತು ಪಚನ ಕ್ರಿಯೆ ಕುರಿತಂತೆ ಅನೇಕ ಶೋಧಗಳನ್ನು ಕೈಗೊಂಡರು. ಹೆಲಿಕಾಪ್ಟರ್ ಮತ್ತು ಹಿಮದ ಸ್ಕೂಟರುಗಳನ್ನು ಬಳಸಿ ತಂಡ ಸಜ್ಜಿತವಾಗಿ ಅಲ್ಲಿನ ಭೂಭಾಗವನ್ನು ಸಮೀಕ್ಷಿಸಿತು. ಎರಡು ಗುಡ್ಡಗಳ ನಡುವೆ ನೆಲೆಯಾಗಿದ್ದ ಸಿಹಿನೀರಿನ ಸರೋವರವನ್ನು ಅಧ್ಯಯನಮಾಡಿತು. ಮೊತ್ತಮೊದಲ ಬಾರಿಗೆ ಸ್ವಯಂಚಾಲಿತ ಹವಾಗುಣ ಅಧ್ಯಯನ ಕೇಂದ್ರವನ್ನು ತಂಡ ಸ್ಥಾಪಿಸಿತು. ಭಾರತೀಯ ತಂಡ ಸ್ಥಾಪಿಸಿದ ಮೊದಲ ಸಂಶೋಧನ ಕೇಂದ್ರದ ಹೆಸರು ದಕ್ಷಿಣ ಗಂಗೋತ್ರಿ. ಇದು ನಾರುಗಾಜಿನಿಂದ ಕಟ್ಟಿದ ಕೇಂದ್ರ. ಅಂಟಾರ್ಕ್‌ಟಿಕ ಖಂಡದಲ್ಲಿ ಭೌಗೋಳಿಕ ನೆಲೆಯನ್ನು ಗುರುತಿಸಲು ಯಾವುದೇ ನಿರ್ದೇಶನ ಬಿಂದುಗಳನ್ನು ಬಳಸಿಕೊಳ್ಳಲು ಸಾಧ್ಯವಿಲ್ಲದುದರಿಂದ ಉಪಗ್ರಹಗಳ ನೆರವು ಪಡೆದು ಸ್ಥಾನ ನಿರ್ದೇಶನಗಳ ನೆರವು ಪಡೆಯಬೇಕಾಗುತ್ತದೆ.

ಮೊದಲ ಯಾನದಲ್ಲೇ ಭಾರತದ ವಿಜ್ಞಾನಿಗಳು ಅಂಟಾರ್ಕ್‌ಟಿಕ ಖಂಡವನ್ನು ತಲಪುವ ಮೊದಲೇ ವ್ಯಾಪಕವಾದ ಸಾಗರಾಧ್ಯಯನವನ್ನು ಮಾಡಿ, ಸಾಗರ ತಳದಿಂದ ಎದ್ದಿರುವ ಒಂದು ಪರ್ವತ ಶಾಖೆಯನ್ನು ಪತ್ತೆಹಚ್ಚಿದ್ದರು. ಇದರ ನೆಲೆ $53^0$–$39^0$ 7′9″ ದ. ಮತ್ತು $47^0$55′82″ ಪೂ. ಸಾಗರ ತಳದ 4,500 ಮೀ ಆಳದಿಂದ ಇದು 1200 ಮೀ ಎತ್ತರಕ್ಕೆ ವಿಸ್ತರಿಸಿದೆ. ಇದಕ್ಕೆ ಅನೇಕ ಶೃಂಗಗಳಿವೆ. ಒಂದು ಶೃಂಗ ಸಾಗರದ ಮೇಲ್ಮೈನಿಂದ ಕೇವಲ 880 ಮೀ ಆಳದಲ್ಲು, 134 ಕಿಮೀ ಸುತ್ತಳತೆಯಲ್ಲೂ ಇದೆ. ಜ್ವಾಲಾಮುಖಿಯಿಂದ ಉಂಟಾದ ಪರ್ವತವೆಂದು ಭಾವಿಸಲಾಗಿದೆ. ಇದನ್ನು ಇಂದಿರಾಮೌಂಟ್ ಎಂದು ಕರೆಯಲಾಗಿದೆ.

ಮೊದಲನೆಯ ಅಂಟಾರ್ಕ್‌ಟಿಕ ಯಾತ್ರೆಯ ಯಶಸ್ಸಿನ ಅನಂತರ ಭಾರತ ಪ್ರತಿವರ್ಷವೂ ಸಂಶೋಧನ ತಂಡವನ್ನು ಅಲ್ಲಿಗೆ ಕಳಿಸುತ್ತಿದೆ. ಮೊದಲ ಯಾತ್ರೆಯಲ್ಲಿ ನಿರ್ಮಿಸಿದ ದಕ್ಷಿಣ ಗಂಗೋತ್ರಿ ಕೇಂದ್ರ ಈಗ ದಾಸ್ತಾನಿಗಷ್ಟೇ ಬಳಕೆಯಾಗುತ್ತಿದೆ. ಎರಡನೆಯ ಸಂಶೋಧನಾ ಕೇಂದ್ರ ಮೈತ್ರಿ. ಇದು ಶಿರ್ಮಾಚರ್ ಓಯಸಿಸ್ ಮೇಲೆ ನಿರ್ಮಾಣವಾಗಿದೆ. ಅಕ್ಷಾಂಶ $70^0 45' 53''$ ರೇಖಾಂಶ $11^0 44' 03''$. ಇಲ್ಲಿ ಹೆಚ್ಚು ಹಿಮ ಸಂಚಯವಾಗುವುದಿಲ್ಲ. ವರ್ಷವಿಡೀ ವೈಜ್ಞಾನಿಕ ಸಂಶೋಧನೆಗೆ ಬಳಸಿಕೊಳ್ಳಬಹುದು. ಈ ಕೇಂದ್ರವನ್ನು 1988–89ರಲ್ಲಿ ನಿರ್ಮಿಸಲಾಯಿತು. ಇದು ಸರ್ವಋತು ಕೇಂದ್ರ. 26 ಮಂದಿ ಒಟ್ಟಿಗೆ ಇರಲು ಅನುಕೂಲ ಕಲ್ಪಿಸಲಾಗಿದೆ. ಈ ಕೇಂದ್ರದಿಂದ 255 ಮೀ ದೂರವಿರುವ ಪ್ರಿಯದರ್ಶಿನಿ ಸರೋವರದಿಂದ ನೀರಿನ ಪೂರೈಕೆ ಮಾಡಿಕೊಳ್ಳುವ ವ್ಯವಸ್ಥೆ ಇದೆ. ಉಷ್ಣತೆ $-40^0$ ತಲುಪಿದರೂ ನೀರಿನ ಪೂರೈಕೆಗೆ ಬಾಧಕವಾಗದಂತೆ ಕಾಯಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಭಾರತದ ಮೊದಲನೆಯ ಅಂಟಾರ್ಕ್‌ಟಿಕ ಯಾತ್ರೆಯ ಅನಂತರ 23 ತಂಡಗಳು (2004) ಈ ಖಂಡದಲ್ಲಿ ಕೆಲಸಮಾಡಿವೆ. ಮೊದಲನೆಯ ತಂಡದ ಸಾಹಸ ಯಾತ್ರೆಯ ಯಶಸ್ಸು ಭಾರತಕ್ಕೆ ಅಂಟಾರ್ಕ್‌ಟಿಕ ಖಂಡದ ಸಲಹಾ ಮಂಡಳಿಯ ಸದಸ್ಯತ್ವವನ್ನು ಗಳಿಸಿಕೊಟ್ಟಿತು. ಈ ಖಂಡದಲ್ಲಿ ಗಳಿಸಿದ ಅನುಭವದ ಹಿನ್ನೆಲೆಯಲ್ಲಿ ಭಾರತದ ತಂಡ ವೆಡೆಲ್ ಸಮುದ್ರದ ಪರಿಶೋಧನೆಯಲ್ಲೂ ಯಶಸ್ಸು ಗಳಿಸಿತು. ಇದೊಂದು ಅತಿ ದುರ್ಗಮವಾದ ಭಾಗ. ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಇಂಗ್ಲೆಂಡಿನ ನಾವಿಕ ಜೇಮ್ಸ್ ವೆಡೆಲ್ 1823ರಲ್ಲಿ ಈ ಭಾಗವನ್ನು ತಲುಪಿದ.

ಭಾರತದ ಸಾಗರಾಧ್ಯಯನ ಸಂಸ್ಥೆ ನಿರಂತರ ಸಂಶೋಧನೆಗೆ ಅಂಟಾರ್ಕ್‌ಟಿಕದಲ್ಲಿ ಅಧ್ಯಯನ ಕೇಂದ್ರವೊಂದನ್ನು ತೆರೆದಿದೆ (ಅಂಟಾರ್ಕ್‌ಟಿಕ ಮತ್ತು ಸಾಗರ ಸಂಶೋಧನೆಯ ರಾಷ್ಟ್ರೀಯ ಕೇಂದ್ರ). ಮೈತ್ರಿ ಕೇಂದ್ರದ ಸುತ್ತಮುತ್ತ ಪ್ರತಿಕೂಲ ಪರಿಸ್ಥಿತಿಯಲ್ಲೂ ತಂತ್ರಜ್ಞಾನ ಅನ್ವಯಿಸಿ ಕೈಗೊಂಡ ಭಾರತದ ತಂಡದ ವಿಜ್ಞಾನಿಗಳ ಶೋಧನೆ ಹಿಮಾಲಯದ ಉನ್ನತ ಭಾಗಗಳಲ್ಲಿ ಹಿಮದ ಚಲನೆಯನ್ನು ಕುರಿತು ಮಾಡುವ ಅಧ್ಯಯನಕ್ಕೆ ಹೆಚ್ಚು ನೆರವಾಗಲಿದೆ. ಭಾರತದ ವಿಜ್ಞಾನಿಗಳು ದಕ್ಷಿಣ ಸಾಗರ ಕುಗ್ಗುವುದರ ಬದಲು ವ್ಯಾಕೋಚಿಸುತ್ತಿದೆ ಎಂಬ ಮಾಹಿತಿ ಒದಗಿಸಿದ್ದಾರೆ. 2007–08ರಲ್ಲಿ ಯೋಜಿಸಲಾಗಿರುವ ಅಂತಾರಾಷ್ಟ್ರೀಯ ಧ್ರುವ ವರ್ಷದ ಆಚರಣೆಗೆ ಸಂಬಂಧಿಸಿದಂತೆ ಮೂಲ ಸಂಶೋಧನೆ ಕೈಗೊಳ್ಳಲು ಭಾರತ ಅವಕಾಶವನ್ನು ಪಡೆದಿದೆ.

ಅಂಟಾರ್ಕ್‌ಟಿಕ ಪ್ರವಾಸ: ಸದ್ಯದಲ್ಲಿ ಅಂಟಾರ್ಕ್‌ಟಿಕ ಖಂಡಕ್ಕೆ ಪ್ರವಾಸಿಗಳಿಂದ ಒತ್ತಡ ಏರ್ಪಟ್ಟಿದೆ. ದಕ್ಷಿಣ ಧ್ರುವದ ನೆತ್ತಿಯ ಮೇಲೆ ವಿಮಾನ, ಹೆಲಿಕಾಪ್ಟರುಗಳಲ್ಲಿ ಪ್ರವಾಸಿಗರು ಬರುವರು. ಅಲ್ಲಿನ ಪರಿಸರವನ್ನು ಪ್ರವಾಸಿಗರು ಕಲುಷಿತಗೊಳಿಸಬಹುದೆಂಬ ಭಯ ಪರಿಸರ ಪ್ರೇಮಿಗಳಲ್ಲಿ ಮೂಡಿದೆ. ನ್ಯೂಜಿಲೆಂಡ್ ಮೊದಲಿನಿಂದಲೂ ಅಂಟಾರ್ಕ್‌ಟಿಕದ ಸಂಶೋಧನೆಯಲ್ಲಿ ತೊಡಗಿದ ದೇಶ. ಜೊತೆಗೆ ಹಿಂದೆ ಆ ಖಂಡದ ಕೆಲವು ಭಾಗಗಳ ಸ್ವಾಮ್ಯವನ್ನು ಘೋಷಿಸಿತ್ತು. ಈಗ ಅಂಥ ಘೋಷಣೆ ಊರ್ಜಿತವಾಗಿಲ್ಲ. ಆದರೂ ವಿಕ್ಟೋರಿಯ ಲ್ಯಾಂಡ್ ಎಂಬ ಜಾಗದಲ್ಲಿ ಆ ದೇಶ ಹಿಂದೆ ಸ್ಥಾಪಿಸಿದ್ದ ಸ್ಕಾಟ್ ಬೇಸ್ ಎಂಬ ಶಿಬಿರ ಕ್ರಿಯಾಶೀಲ ಕೇಂದ್ರಗಳಲ್ಲೊಂದಾಗಿದೆ. ಇದರ ಹತ್ತಿರವೇ ಅಮೆರಿಕದ ಅತ್ಯಂತ ದೊಡ್ಡ ಕೇಂದ್ರವಾದ ಮ್ಯಾಕ್ ಮುರ್ಡೋ ಸೌಂಡ್ ಎಂಬ ಕೇಂದ್ರವಿದೆ. ಪ್ರತಿ ಬೇಸಗೆಯಲ್ಲೂ ಸು. 1,000 ಮಂದಿ ಇಲ್ಲಿ ಸಂಶೋಧನೆಯಲ್ಲಿ ನಿರತರಾಗುವರು. ಚಳಿಗಾಲದ ಶಿಬಿರಕ್ಕೆಂದೇ 200 ಮಂದಿ ಉಳಿದುಕೊಳ್ಳುವರು. ಹತ್ತಿರದಲ್ಲೇ ಮೌಂಟ್ ಎರಬಸ್ ಎಂಬ ಜ್ವಾಲಾಮುಖಿ ಇದೆ. ಇದನ್ನು ಪ್ರವಾಸಿಗರಿಗೆ ತೋರಿಸಲೆಂದು ನ್ಯೂಜಿಲೆಂಡ್ ಪ್ರತಿವರ್ಷವೂ ಕ್ರೈಸ್ಟ್ ಚರ್ಚ್‌ನಿಂದ ವಿಮಾನಯಾನ ಕಲ್ಪಿಸಿದೆ. ಇಟಲಿ ಇಲ್ಲಿಗೆ ಸಮೀಪದ ಟೆರ್‍ರಾ ನೋವ ಕೊಲ್ಲಿ ಎಂಬಲ್ಲಿ ಅನೇಕ ವಸತಿಗೃಹಗಳನ್ನು ನಿರ್ಮಿಸಿ ಪ್ರವಾಸಿಗರನ್ನು ಆಕರ್ಷಿಸಿದೆ. ಇಲ್ಲಿಂದ ಮೌಂಟ್ ಮೆಲ್ಬೋರನ್ ಎಂಬ ಜ್ವಾಲಾಮುಖಿಯನ್ನು ನೋಡಬಹುದು. ದಕ್ಷಿಣ ಅಮೆರಿಕದ ಚಿಲಿಯ ದಕ್ಷಿಣ ತುದಿಯಿಂದ ಅಂಟಾರ್ಕ್‌ಟಿಕದ ಪರ್ಯಾಯ ದ್ವೀಪಕ್ಕೆ ಯಾತ್ರಿಕರನ್ನು ಒಯ್ಯುತ್ತದೆ. ಮುಂದಿನ ದಿನಗಳಲ್ಲಿ ದಕ್ಷಿಣ ಧ್ರುವಕ್ಕೆ ಯಾತ್ರಿಕರನ್ನು ಒಯ್ಯುವ ಯೋಜನೆ ರೂಪಿಸಿದೆ. ಸದ್ಯದಲ್ಲಿ ಈ ಯಾತ್ರೆಗೆ ತಗಲುವ ತಲಾ ವೆಚ್ಚ 33,000 ಅಮೆರಿಕನ್ ಡಾಲರ್. ಪ್ರತಿವರ್ಷ 21,000 ಮಂದಿ ಪ್ರವಾಸಿಗರು ಅಂಟಾರ್ಕ್‌ಟಿಕ ಖಂಡದ ಸುತ್ತಣ ದ್ವೀಪಗಳಿಗೆ ಭೇಟಿ ನೀಡುವರು. ಪೆಂಗ್ವಿನ್, ಸೀಲ್ ಮತ್ತು ತಿಮಿಂಗಿಲಗಳನ್ನು ನೋಡುವ ಅವಕಾಶಗಳನ್ನು ಪಡೆಯುವರು. ಈ ಹಿನ್ನೆಲೆಯಲ್ಲಿ ಯಾತ್ರಿಗಳನ್ನು ಪ್ರತಿಬಂಧಿಸಲು, ಅಲ್ಲಿನ ಪರಿಸರ ಹಾಳಾಗದಂತೆ ನೋಡಿಕೊಳ್ಳಲು ಗ್ರೀನ್‌ಪೀಸ್ ಸದಸ್ಯರು ಅಂಟಾರ್ಕ್‌ಟಿಕ ಕೂಟದ ಸದಸ್ಯ ದೇಶಗಳನ್ನು ಒತ್ತಾಯಿಸುತ್ತಿದ್ದಾರೆ.

ಜಾಗತಿಕ ಅಧ್ಯಯನ: ಸದ್ಯ 39 ದೇಶಗಳು ಅಂಟಾರ್ಕ್‌ಟಿಕ ಖಂಡದ ಅಧ್ಯಯನದಲ್ಲಿ ತೊಡಗಿವೆ. ಪ್ರತಿವರ್ಷವೂ ಈ ಖಂಡ ಕುರಿತು ಅನೇಕ ಹೊಸ ಅಂಶಗಳು ಬೆಳಕಿಗೆ ಬರುತ್ತಿವೆ. ಖಂಡದ ಹಿಮದ ಅಧ್ಯಯನ, ಪವನವಿಜ್ಞಾನ, ಭೂಕಾಂತತ್ವ, ಭೂಕಂಪನ ವಿಜ್ಞಾನ, ಅಯನೋಗೋಳದ ಭೌತವಿಜ್ಞಾನ ಮುಂತಾದವನ್ನು ಕುರಿತಂತೆ ಮಾಹಿತಿಗಳನ್ನು ಪಡೆಯಲು ಇಲ್ಲಿನ ಕಾಯಂ ಪರಿಶೋಧನಾ ಕೇಂದ್ರಗಳು ಸರ್ವಋತುವಿನಲ್ಲೂ ಕೆಲಸಮಾಡುತ್ತವೆ. ಹಾಗೆಯೇ ಮುಕ್ತವಾಗಿ ವೈಜ್ಞಾನಿಕ ಮಾಹಿತಿಗಳನ್ನೂ ಹಂಚಿಕೊಳ್ಳುತ್ತವೆ. ಅಂಟಾರ್ಕ್‌ಟಿಕ ಖಂಡದ ಸುತ್ತಣ ದಕ್ಷಿಣ ಸಾಗರದಲ್ಲಿರುವ ಸಮೃದ್ಧ ಪೋಷಕಗಳ ಬಗ್ಗೆ ಅನೇಕ ಕೇಂದ್ರಗಳು ಆಸಕ್ತಿ ತಳೆದಿವೆ. ಈ ನೀರಿನಲ್ಲಿರುವ ಮೀನುಗಳ ರಕ್ತದಲ್ಲಿ ಪ್ರತಿಶೀತಲ ಅಂಶವಿದ್ದು ಚಳಿಗಾಲದಲ್ಲಿ ಅತ್ಯಂತ ಶೈತ್ಯವನ್ನು ನಿಭಾಯಿಸುವುದರ ಗುಟ್ಟನ್ನು ಜೀವ ವಿಜ್ಞಾನಿಗಳು ಅರಿತಿದ್ದಾರೆ. ಪೆಂಗ್ವಿನ್, ಸೀಲ್, ಕ್ರಿಲ್ ಕುರಿತು ಈಗ ಮಾಡಿರುವ ಅಧ್ಯಯನ ಅವುಗಳ ಜೀವಿ ಪರಿಸ್ಥಿತಿಯ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ಒದಗಿಸಿದೆ. ದಕ್ಷಿಣ ಸಾಗರದ ಆಹಾರದ ಮೊದಲ ಕೊಂಡಿ ಎನಿಸಿರುವ ಕ್ರಿಲ್ ಎಂಬ ಸೀಗಡಿಗಳ ಸಂತಾನೋತ್ಪತ್ತಿಯನ್ನು ಕುರಿತು ಮಾಡಿರುವ ಅಧ್ಯಯನಗಳು ಅವುಗಳನ್ನು ಹೇಗೆ ಬೆಳೆಸಬೇಕೆಂಬುದರ ಬಗ್ಗೆ ಹೊಸ ಪರಿಕಲ್ಪನೆ ಮಾಡಲು ಅವಕಾಶ ನೀಡಿವೆ.

ಭೂವಿಜ್ಞಾನಿಗಳು ಈ ಖಂಡದ ಬಹುತೇಕ ಶಿಲೆಗಳ ಬಗ್ಗೆ ಅಧ್ಯಯನ ಮಾಡಿ ಹಿಂದೆ ಗೊಂಡ್ವಾನ ಖಂಡದ ಕೇಂದ್ರ ಭಾಗವಾಗಿದ್ದ ಅಂಟಾರ್ಕ್‌ಟಿಕದ ಭೂವಿಜ್ಞಾನ ಇತರ ಸದಸ್ಯ ಖಂಡಗಳ ಭೂವಿಜ್ಞಾನಕ್ಕೆ ಹೇಗೆ ತಾಳೆಯಾಗುತ್ತವೆ ಎನ್ನುವುದನ್ನು ಸಮೀಕ್ಷೆಗಳಿಂದ ದೃಢಪಡಿಸಿದ್ದಾರೆ. ಈ ಖಂಡ ಈಗಿನದಕ್ಕಿಂತ ಹೆಚ್ಚು ಹಿಮರಾಶಿಯಿಂದ ಕೂಡಿತ್ತೆಂದು ಪ್ರಾಗ್ವಾತಾವರಣ ಕುರಿತು ಹಿಮವಿಜ್ಞಾನಿಗಳು ಮಾಡಿರುವ ಸಂಶೋಧನೆಯಿಂದ ಬೆಳಕಿಗೆ ಬಂದಿದೆ. 1982ರಲ್ಲಿ ಅಂಟಾರ್ಕ್‌ಟಿಕ ಖಂಡದಿಂದ ದೊರೆತ ಸ್ತನಿಗಳ ಪಳೆಯುಳಿಕೆ, 1986ರಲ್ಲಿ ದೊರೆತ ಡೈನೋಸಾರ್‌ಗಳ ಪಳೆಯುಳಿಕೆ ಈ ಖಂಡ ಹಿಂದೆ ಉಷ್ಣವಲಯದಲ್ಲಿದ್ದುದಕ್ಕೆ ಸಾಕ್ಷ್ಯಾಧಾರಗಳನ್ನು ಒದಗಿಸುತ್ತವೆ. 1984ರಲ್ಲಿ ಅಂಟಾರ್ಕ್‌ಟಿಕ ಖಂಡದ ಅಲೆನ್ ಹಿಲ್ಸ್ ಎಂಬ ಭಾಗದ ಬಳಿ 1.9 ಕಿಗ್ರಾಂ. ತೂಕದ ಆಲೂಗಡ್ಡೆ ಗಾತ್ರದ ಉಲ್ಕೆಯ ತುಂಡು (ಎಎಲ್‌ಎಚ್-84001) ಸಿಕ್ಕಿತು. ಇದು ಮಂಗಳಗ್ರಹದಿಂದ ಸಿಡಿದು ಬಂದಿರುವ ತುಂಡೆಂದು ಖಚಿತವಾಗಿದೆ. ಅಂಟಾರ್ಕ್‌ಟಿಕದ ಹಿಮದ ಹಾಳೆಯ ಮೇಲೆ ಉಲ್ಕಾ ತುಂಡುಗಳನ್ನು ಸಂಗ್ರಹಿಸುವುದೇ ಒಂದು ದೊಡ್ಡ ಕಾರ್ಯಾಚಟುವಟಿಕೆಯಾಗಿದೆ. ಅಂತೆಯೇ ಚಂದ್ರ ಶಿಲೆಯ ತುಣುಕುಗಳನ್ನೂ ಇಲ್ಲಿನ ಹಿಮದ ಹಾಳೆಯಿಂದ ಸಂಗ್ರಹಿಸಲಾಗಿದೆ. ಇದುವರೆಗೆ ಅಂಟಾರ್ಕ್‌ಟಿಕ ಖಂಡದಿಂದ ಸು. 15,000 ಉಲ್ಕಾ ತುಂಡುಗಳನ್ನು ಹೆಕ್ಕಿ ತೆಗೆದಿದ್ದಾರೆ. ಇವು ಒಂದೊಂದೂ ಸೌರವ್ಯೂಹದ ಉಗಮ, ವಿಕಾಸ ಕುರಿತು ಹೆಚ್ಚಿನ ಮಾಹಿತಿಗಳನ್ನು ಒದಗಿಸುತ್ತವೆ. ರೇಡಿಯೋ ತರಂಗಗಳನ್ನು ಕಳಿಸಿ ಹಿಮದ ಸ್ತರಗಳ ಕೆಳಗೆ ಸಿಹಿನೀರಿನ ಸರೋವರವಿರುವುದನ್ನು ಪತ್ತೆಹಚ್ಚಲಾಗಿದೆ. ಉಪಗ್ರಹಗಳ ನೆರವಿನಿಂದ ಹಿಮದ ಹಾಳೆಗಳ ಚಲನೆಯನ್ನು ಕರಾರುವಾಕ್ಕಾಗಿ ವಿಜ್ಞಾನಿಗಳು ಅಳೆದಿದ್ದಾರೆ. 1985ರಲ್ಲಿ ಬ್ರಿಟಿಷ್ ಸಂಶೋಧನಾ ತಂಡವೊಂದು ಅಂಟಾರ್ಕ್‌ಟಿಕದ ನೆತ್ತಿಯ ಮೇಲೆ ಸ್ಟ್ರಾಟೋಗೋಳದಲ್ಲಿ ಓಜೋನ್ ಪದರ ತೆಳುವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದಷ್ಟು ವಿಸ್ತೀರ್ಣದ ರಂಧ್ರ ಉಂಟಾಗಿರುವುದಾಗಿ ವರದಿ ಮಾಡಿತು. ಅದರಿಂದ ತೂರಿಬರುವ ಅತಿನೇರಿಳೆ ಕಿರಣಗಳು ಭೂಜೀವಿಗಳಿಗೆ ಅತ್ಯಂತ ಮಾರಕ ಎಂದು ತಿಳಿದ ಮೇಲೆ ಓಜೋನ್ ವಲಯವನ್ನು ಛಿದ್ರಮಾಡುವ ಮಾನವ ನಿರ್ಮಿತ ಕ್ಲೋರೋಫ್ಲೂರೋ ಕಾರ್ಬನ್ ಪ್ರಮಾಣವನ್ನು ತಗ್ಗಿಸಲು ಅಂತಾರಾಷ್ಟ್ರೀಯ ಒಡಂಬಡಿಕೆಯಾಗಿದೆ. ಮಾನವ ಸ್ವಭಾವದ ಮೇಲೆ ಅಂಟಾರ್ಕ್‌ಟಿಕದ ಏಕಾಂತತೆ ಬೀರುವ ಪರಿಣಾಮವನ್ನು ಅನೇಕ ದಶಕಗಳಿಂದ ಮನೋವಿಜ್ಞಾನಿಗಳು ಅಧ್ಯಯನ ಮಾಡುತ್ತಿದ್ದಾರೆ. ಅಂಟಾರ್ಕ್‌ಟಿಕ ನಿಸರ್ಗವೇ ಒದಗಿಸಿರುವ ಜೀವಂತ ವಿಜ್ಞಾನ ಪ್ರಯೋಗಾಲಯ. (ಪಿ.ಡಿ.ಎಂ.)

**ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು:** ಸು. 223 ದ್ವೀಪಗಳನ್ನು ಒಳಗೊಂಡಿರುವ ಈ ಸ್ತೋಮ ಬಂಗಾಲಕೊಲ್ಲಿಯ ಪೂರ್ವಭಾಗದಲ್ಲಿದೆ (ಉ.ಅ. $7^0$–$13^0$ ಮತ್ತು ಪೂ.ರೇ $92^0$–$95^0$). ವಿಸ್ತೀರ್ಣ 8249 ಚ.ಕಿಮೀ. ಅಂಡಮಾನ್ ದ್ವೀಪ ಸ್ತೋಮದಲ್ಲಿ ಉತ್ತರ ಅಂಡಮಾನ್, ಮಧ್ಯ ಅಂಡಮಾನ್, ದಕ್ಷಿಣ ಅಂಡಮಾನ್ ಮತ್ತು ಪುಟ್ಟ ಅಂಡಮಾನ್‌ಗಳೆಂಬ ನಾಲ್ಕು ದೊಡ್ಡ ದ್ವೀಪಗಳಿವೆ. ನಿಕೋಬಾರ್ ಸ್ತೋಮದಲ್ಲಿ ಕಾರ್‌ನಿಕೋಬಾರ್, ಪುಟ್ಟ ನಿಕೋಬಾರ್ ಮತ್ತು ದೊಡ್ಡ ನಿಕೋಬಾರ್ ಎಂಬ ಮೂರು ದ್ವೀಪಗಳಿವೆ. ಈ ಎರಡು ಸ್ತೋಮಗಳನ್ನು 10 ಡಿಗ್ರಿಯ ಕಡಲುಗಾಲುವೆ ಬೇರ್ಪಡಿಸಿದೆ. ಈ ದ್ವೀಪಗಳಿಗೆ ಪ್ರಧಾನವಾದ ರೇವುಪಟ್ಟಣ ಪೋರ್ಟ್ ಬ್ಲೇರ್ (ಸ್ಥಾಪನೆ 1858). ಇದು ಚೆನ್ನೈನಿಂದ 1120 ಕಿಮೀ. ಯಂಗಸ್‌ಗೆ 600 ಕಿಮೀ. ಹಾಗೂ ಕೋಲ್ಕತಕ್ಕೆ 1150 ಕಿಮೀ ದೂರದಲ್ಲಿದೆ.

ಈ ದ್ವೀಪಸ್ತೋಮ ಬಹಳ ಹಿಂದಿನಿಂದಲೂ ಪ್ರಸಿದ್ಧವಾಗಿತ್ತು. ಚೀನದ ಇತ್ಸಿಂಗ್, ಇಟಲಿಯ ಮಾರ್ಕೊಪೋಲೊ, ನಿಕಾಲೊ ಕಾಂಟಿ ಮತ್ತು ಇತರ ಪ್ರವಾಸಿಗರು ಇವುಗಳ ವಿಷಯವಾಗಿ ಬರೆದಿದ್ದಾರೆ. 1780 ರಲ್ಲಿ ಕ್ಯಾಪ್ಟನ್ ಆರ್ಚಿಬಾಲ್ಡ್ ಬ್ಲೇರ್ ಎಂಬುವರು ಇಲ್ಲಿ ಬ್ರಿಟಿಷ್ ವಸಾಹತುವನ್ನು ಸ್ಥಾಪಿಸಿದ. ಬಹಳಕಾಲ ಈ ದ್ವೀಪಗಳು ದುಷ್ಕರ್ಮಿಗಳ, ಕೊಲೆಪಾತಕಿಗಳ ಮತ್ತು ರಾಜಕೀಯ ಬಂದಿಗಳ ನಿವಾಸವಾಗಿತ್ತು. 1858ರಲ್ಲಿ ಜಾರಿಗೆ

ಬಂದ ಬಂದಿಗಳ ರವಾನೆಯ ಕಾನೂನು 1945ರಲ್ಲಿ ರದ್ದಾಯಿತು. 1942ರಲ್ಲಿ ಜಪಾನಿಯರು ಈ ದ್ವೀಪವನ್ನು ಆಕ್ರಮಿಸಿದರು. 1956ರಿಂದ ಈಚೆಗೆ ಇದು ಭಾರತದ ಕೇಂದ್ರಾಡಳಿತಕ್ಕೆ ಒಳಪಟ್ಟಿದೆ.

ಈ ದ್ವೀಪಗಳು ಬೆಟ್ಟಗುಡ್ಡಗಳಿಂದ ತುಂಬಿವೆ; ಇವು ಹೆಚ್ಚಾಗಿ ಹವಳ ದ್ವೀಪಗಳು. ಇದರಿಂದಾಗಿ ಭೂಮಿಯ ಮೇಲ್ಮೈ ಲಕ್ಷಣ ಬಹಳ ವ್ಯತ್ಯಾಸಗೊಂಡಿದೆ. ಉತ್ತರ ದಕ್ಷಿಣಾಭಿಮುಖವಾಗಿ ಹಬ್ಬಿರುವ 300 ಮೀ – 760 ಮೀ ಎತ್ತರದ ಬೆಟ್ಟಗಳು ಮತ್ತು ಅವುಗಳ ಮಧ್ಯೆ ಉಂಟಾಗಿರುವ ಕಣಿವೆಗಳ ಮೇಲ್ಮೈ ಲಕ್ಷಣದ ವೈಶಿಷ್ಟ್ಯ. ಕರಾವಳಿಯಲ್ಲಿ ಅನೇಕ ಕೊಲ್ಲಿಗಳಿವೆ. ಅವುಗಳಲ್ಲಿ ಮುಖ್ಯವಾದುವು ಬ್ಲೇರ್, ಕಾಲ್‌ಪಾಂಗ್, ಕಾಲಾರ ಮತ್ತು ಕಾಂಗೊ. ನದಿಗಳೆಲ್ಲ ಸಣ್ಣವು, ಮಳೆಗಾಲದಲ್ಲಿ ಮಾತ್ರ ಪ್ರವಾಹವುಳ್ಳ ನುಗ್ಗು ಹೊನಲಿನವು.

ಇಲ್ಲಿನ ವಾಯುಗುಣ ಸಾಗರಿಕ ಉಷ್ಣವಲಯದ ಮಾದರಿಯದು. $24^0$ ಯಿಂದ $30^0$ ಸೆ ವರೆಗೆ ಉಷ್ಣಾಂಶವಿರುತ್ತದೆ. ಸರಾಸರಿ ಸಾಪೇಕ್ಷ ಆರ್ದ್ರತೆ ಶೇ. 80. ವಾರ್ಷಿಕ ಮಳೆ ಉತ್ತರ ಭಾಗದಲ್ಲಿ 200 ಸೆಂಮೀ. ದಕ್ಷಿಣ ಭಾಗದಲ್ಲಿ 300 ಸೆಂಮೀ.

ಇಲ್ಲಿನ ಸಸ್ಯವರ್ಗದಲ್ಲಿ ಉಷ್ಣವಲಯದ ಕಾಡುಗಳು ಪ್ರಧಾನವಾದವು ನಿತ್ಯ ಹರಿದ್ವರ್ಣದ, ಚಳಿಗಾಲದಲ್ಲಿ ಎಲೆ ಉದುರುವ ಮತ್ತು ಮ್ಯಾಂಗ್ರೋವ್ ಎಂಬ ಮರಗಳಿಂದ ತುಂಬಿದ ಆರಣ್ಯಗಳು ಎಲ್ಲೆಡೆ ಹಬ್ಬಿವೆ. ನಿತ್ಯಹರಿದ್ವರ್ಣದ ಕಾಡುಗಳು ನದಿ ಕಣಿವೆಗಳಲ್ಲಿಯೂ ಬೆಟ್ಟಗಳ ಮೇಲ್ಭಾಗದಲ್ಲಿಯೂ ಕಂಡುಬರುತ್ತದೆ. ಬೆಟ್ಟಗಳ ಇಳಿಜಾರುಗಳಲ್ಲಿ ಮತ್ತು ತಗ್ಗು ಪ್ರದೇಶಗಳಲ್ಲಿ ಅಗಲವಾದ ಎಲೆಯುಳ್ಳ ಮರಗಳು ಬೆಳೆಯುತ್ತವೆ. ಮ್ಯಾಂಗ್ರೋವ್ ಕಾಡುಗಳು ಕರಾವಳಿಯಲ್ಲಿ ಹೆಚ್ಚು.

ಈ ದ್ವೀಪಗಳ ಆರ್ಥಿಕ ಸಂಪತ್ತು ಅರಣ್ಯ, ಮೀನುಗಾರಿಕೆ ಮತ್ತು ವ್ಯವಸಾಯಗಳನ್ನವಲಂಬಿಸಿದೆ. ಬೆಲೆಬಾಳುವ ಕೆಲವು ಮರಗಳು ಇಲ್ಲಿಂದ ರಫ್ತಾಗುತ್ತಿವೆ. ಮೀನುಗಾರಿಕೆ ಹೆಚ್ಚಾಗಿ ಬೆಳೆಯಲು ಅವಕಾಶವಿದ್ದರೂ ಈಗ ಇಲ್ಲಿನ ಜನರ ಅವಶ್ಯಕತೆಯನ್ನು ಮಾತ್ರ ಪೂರೈಸುವಷ್ಟಿದೆ. ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗಳ ನೆಲೆಸುನಾಡಾದಾಗಲೇ ಇಲ್ಲಿ ವ್ಯವಸಾಯ ಪ್ರಾರಂಭವಾಯಿತು. ಈಗ ಶೇಕಡ ಒಂದರಷ್ಟು ಭೂಮಿಯನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಉಷ್ಣ ವಲಯದ ಬೆಳೆಗಳಾದ ಎಣ್ಣೆ ಕಾಳುಗಳು, ಕಬ್ಬು, ಬತ್ತ, ಸಿಹಿ ಗೆಣಸು, ಬಾಳೆ, ಪರಂಗಿ, ಮಾವು, ಸೇಬು, ತೆಂಗು, ರಬ್ಬರ್, ಚಹ–ಇವೆ ಮೊದಲಾದವುಗಳನ್ನು ಬೆಳೆಯಲಾಗುತ್ತದೆ. ಕೋಳಿ ಸಾಕಣೆ ಎಲ್ಲೆಡೆಯೂ ಕಂಡುಬರುತ್ತದೆ. ಮರ ಕೊಯ್ಯುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಜನರ ಮುಖ್ಯ ಉದ್ಯೋಗ. ಜಾತಂ ದ್ವೀಪದಲ್ಲಿರುವ ಮರ ಕೊಯ್ಯುವ ಕಾರ್ಖಾನೆ ಭಾರತದಲ್ಲಿಯೇ ದೊಡ್ಡದು. ಪೋರ್ಟ್‌ಬ್ಲೇರ್‌ನಲ್ಲಿ ಒಂದು ಬೆಂಕಿಪೊಟ್ಟಣದ ಕಾರ್ಖಾನೆ ಇದೆ. ವಿವಿಧ ಕೈಗಾರಿಕೆಗಳ ಬೆಳವಣಿಗೆಗೆ ಇಲ್ಲಿ ಸಾಕಷ್ಟು ಅನುಕೂಲಗಳಿವೆ.

ಈ ದ್ವೀಪ ಸ್ತೋಮದಲ್ಲಿನ ಜನಸಂಖ್ಯೆ 3,70,000 (2003). ಸು. 400 ಹಳ್ಳಿಗಳಿವೆ. ಪೋರ್ಟ್‌ಬ್ಲೇರ್ ಒಂದೇ ಜನನಿಬಿಡವಾದ ಪಟ್ಟಣ. ಜನಸಂಖ್ಯೆ 25,000. 1951–61ರ ಅವಧಿಯಲ್ಲಿ ಪೂರ್ವಬಂಗಾಳದಿಂದ ನಿರಾಶ್ರಿತರನ್ನು ಇಲ್ಲಿ ನೆಲೆಸುವಂತೆ ಮಾಡಿದುದರಿಂದ ಜನಸಂಖ್ಯೆ ಶೇ. 105 ಹೆಚ್ಚಿತು. ಸ್ಥಳೀಯ ಬುಡಕಟ್ಟಿನ ಒಟ್ಟು ಜನಸಂಖ್ಯೆ 20,000. ಇದು ಒಟ್ಟು ಜನಸಂಖ್ಯೆಯ ಶೇ. 22 ರಷ್ಟಿದೆ. ಇಲ್ಲಿನ ಜಾರಾವಾಸ್, ಓಂಗೇಸ್, ಅಂಡಮಾನೀಸ್ ಮತ್ತು ಸೆಂಟಿನಲೀಸ್ ಪಂಗಡದವರು ಪ್ರಪಂಚದ ಅತ್ಯಂತ ಪುರಾತನ ಜನಾಂಗಗಳಿಗೆ ಸೇರಿದವರು.

ದಟ್ಟವಾದ ಅರಣ್ಯ, ಕಾಡು ಜನರು, ಪ್ರವೇಶಿಸಲು ಅಸಾಧ್ಯವಾದ ಭೂಲಕ್ಷಣ ಇವುಗಳಿಂದ ಈ ದ್ವೀಪಗಳು ವಿಚಿತ್ರವಾದೊಂದು ಅಸ್ತಿತ್ವವನ್ನು ಪಡೆದಿವೆ. ಇತ್ತೀಚಿನವರೆಗೂ ಈ ದ್ವೀಪಗಳು ದಂಡನೆಗೊಳಗಾದ ಅಪರಾಧಿಗಳನ್ನಿಡುವ ಸ್ಥಳಗಳಾಗಿದ್ದವು.

ಈ ದ್ವೀಪ ಸ್ತೋಮ ಇಂದು ಭಾರತ ಒಕ್ಕೂಟದ ಒಂದು ಭಾಗವಾಗಿ ಉತ್ತಮ ಭವಿಷ್ಯವನ್ನು ಎದುರು ನೋಡುತ್ತಿದೆ. ಅರಣ್ಯ ಮತ್ತು ಮೀನುಗಾರಿಕೆಯ ಸಂಪತ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಂಡರೆ ಈ ದ್ವೀಪಗಳ ಭವಿಷ್ಯ ಉತ್ತಮವಾಗಲಿದೆ. (ಎ.ಬಿ.ಎಂ.;ಎಚ್.ಆರ್.)

**ಅಂತರ ಪ್ರಾದೇಶಿಕ ಯೋಜನೆ:** ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಯೋಜನಾ ಪ್ರದೇಶಗಳು ಆಯಾಯ ಪ್ರದೇಶಗಳಲ್ಲಿ ಕಂಡುಬರುವ ಸಂಪನ್ಮೂಲಗಳ ಆಧಾರದ ಮೇಲೆ ಅಭಿವೃದ್ಧಿ ಸಾಧಿಸುತ್ತವೆ. ಕೆಲವು ಪ್ರದೇಶಗಳು ವಿರಳವಾದ ಸಂಪತ್ತಿನಿಂದ ಕೂಡಿದ್ದು ಅಭಿವೃದ್ಧಿಯಲ್ಲಿ ಹಿಂದೆ ಬೀಳುತ್ತವೆ. ಈ ರೀತಿಯ ಅಸಮತೋಲನವನ್ನು ಹೋಗಲಾಡಿಸಿ ಸಂಪದ್ಭರಿತವಾದ ಪ್ರದೇಶದಿಂದ ಸಂಪನ್ಮೂಲಗಳ ಕೊರತೆ ಇರುವ ಪ್ರದೇಶಗಳಿಗೆ ಸಂಪತ್ತುಗಳನ್ನು ಸಾಗಿಸಿ ಅನಭಿವೃದ್ಧಿ ಪ್ರದೇಶವನ್ನು ಅಭಿವೃದ್ಧಿ ಪಡಿಸಿ ಪ್ರಾಂತೀಯ ಅಸಮತೋಲನವನ್ನು ನಿವಾರಿಸಲು ಈ ಯೋಜನೆ ಸಹಾಯಕವಾಗುತ್ತದೆ. (ಐ.ಕೆ.ವಿ.)

**ಅಂತರಕೋನಮಾಪಕ :** ದೂರದ ವಸ್ತುಗಳೆರಡರ ಲಂಬ ಹಾಗೂ ಕ್ಷಿತಿಜೀಯ ಕೋನಾಂತರಗಳನ್ನು ಅಳೆಯಲು ಮೋಜಣಿಯಲ್ಲಿ ಉಪಯೋಗಿಸುವ ಒಂದು ಉಪಕರಣ (ಥಿಯೊಡಲೈಟ್). ಇದು ಭೂ ನಕ್ಷೆ ತಯಾರಿಕೆಯಲ್ಲಿ ತುಂಬ ಸಹಾಯಕವಾಗಿದೆ. ಇದರಲ್ಲಿ ಪರಸ್ಪರ ಲಂಬವಾಗಿ ಎರಡು ವರ್ತುಲ ಅಳತೆಪಟ್ಟಿಗಳೂ ಊರ್ಧ್ವ ಮತ್ತು ಸಮತಲಗಳಲ್ಲಿ ಕೋನದ ಅಳತೆಗೆ ಸಹಾಯವಾಗುವಂತೆ ವರ್ತುಲಪಟ್ಟಿಗಳ ಕೇಂದ್ರ ನೇರದಲ್ಲೇ ತಿರುಗುವ ಒಂದು ದೂರ ದರ್ಶಕವೂ ಇವೆ. ಕೋನಗಳ ನಿಖರ ಅಳತೆಗೆ ಸಹಾಯವಾಗಲು ಪ್ರತಿ ವರ್ತುಲ ಪಟ್ಟಿಗಳಲ್ಲಿ ಎರಡು ಅಥವಾ ಹೆಚ್ಚು ವರ್ನಿಯರ್ ಪಟ್ಟಿಗಳಿರುವುವು. ಇವೆಲ್ಲವುಗಳನ್ನು ಮಟ್ಟ ತಿರುಪುಗಳ ಆಧಾರದ ಮೇಲೆ ನಿಂತಿರುವ ಭದ್ರವಾದ ಪೀಠದ ಮೇಲೆ ಅಳವಡಿಸಿದೆ.

ಅಂತರಕೋನಮಾಪಕಗಳನ್ನು ಊರ್ಧ್ವತಲದ ಕೋನಗಳಿಗಿಂತ ಕ್ಷಿತಿಜೀಯ ಕೋನಗಳನ್ನು ಹೆಚ್ಚು ನಿಖರವಾಗಿ ಅಳತೆ ಮಾಡುವಂತೆ ರಚಿಸುವರು. ಭೂಮಿಯ ಅಳತೆಯಲ್ಲಿ ಕ್ಷಿತಿಜೀಯ ಕೋನಗಳೇ ಮುಖ್ಯ. ಊರ್ಧ್ವತಲದಲ್ಲಿ ಅಳತೆ ಮಾಡಿದ ಕೋನಗಳು ಭೂಮಿಯ ವಾತಾವರಣದಿಂದುಂಟಾಗುವ ಬೆಳಕಿನ ವಕ್ರೀಭವನದಿಂದ ಅಷ್ಟು ನಿಖರವಾಗಿರುವುದಿಲ್ಲ. ಆದ್ದರಿಂದ ದೂರದಲ್ಲಿರುವ ಭೂಮಿಯ ಮೇಲಿನ ವಸ್ತುಗಳ ಎತ್ತರ ಅಳತೆ ಮಾಡಲು ಅಂತರಕೋನಮಾಪಕ ಅಷ್ಟು ಉಪಯೋಗಕಾರಿಯಲ್ಲ. ಈ ಮಾಪಕವನ್ನು ಉಪಯೋಗಿಸಿ ಭೂಮಿಯಮೇಲಿನ ವಸ್ತುಗಳೆರಡರ ಎತ್ತರ ಸಮತಲದಲ್ಲಿ ಅವುಗಳ ನಡುವಣ ಕೋನವನ್ನು ನಿಖರವಾಗಿ ಅಳತೆ ಮಾಡಬಹುದು. ಅಂತರಕೋನಮಾಪಕಗಳನ್ನು ರಾತ್ರಿ ವೇಳೆ ದೂರದ ಸ್ಥಳಗಳಿಂದ ಕಳುಹಿಸಿದ ಬೆಳಕಿನ ಕಿರಣಗಳ ನೇರಕ್ಕೆ ಅಳವಡಿಸಿ ಆ ಸ್ಥಳಗಳಿಗಿರುವ ಕೋನಾಂತರವನ್ನು ಕಂಡುಹಿಡಿಯಬಹುದು.

ಅಂತರ ಕೋನಮಾಪಕ

ಆಂಗ್ಲ ಭಾಷೆಯಲ್ಲಿ ಇದನ್ನು ಥಿಯೋಡೋಲೈಟ್ ಎಂದು ಕರೆಯಲಾಗುತ್ತದೆ. ಈ ಪದೋತ್ಪತ್ತಿ ಭಾಷಾವಿಜ್ಞಾನಿಗಳಿಗೆ ವಿಸ್ಮಯಕಾರಕ. ನೋಡುವುದು, ದಾರಿ, ನಯ ಮುಂತಾದ ಪದಗಳಿಗಿರುವ ಗ್ರೀಕ್ ಪರ್ಯಾಯ ಪದಗಳಿಂದ ಈ ಹೆಸರು ಉತ್ಪತ್ತಿಯಾಗಿದೆಯೆಂದೂ ಕೆಲವರು ಓದುವುದು, ದೂರ ಮುಂತಾದ ಪದಗಳಿಗಿರುವ ಗ್ರೀಕ್ ಪರ್ಯಾಯ ಪದಗಳಿಂದ ಈ ಹೆಸರು ಉತ್ಪತ್ತಿಯಾಗಿದೆಯೆಂದು ಮತ್ತೆ ಕೆಲವರೂ ವಾದಿಸುವರು. ಹಾಗೆಯೇ ಇನ್ನೂ ಅನೇಕ ವಿಚಿತ್ರ ವಿವರಣೆಗಳಿವೆ. ತಿಯೊಡಲಸ್ ಎಂಬ ಗಣಿತಶಾಸ್ತ್ರಜ್ಞನು ಬರೆದಿರುವ ಓ.ಎಫ್.ಆರ್ ಥಿಯೊಡೋಲೈಟ್ ಅಥವಾ ಥಿಯೊಡೆಲೆಟ್ ಎಂಬ ಗ್ರಂಥದಿಂದ ಉದ್ಭವವಾಗಿರಬಹುದೆಂದು ಕೆಲವರ ಅಭಿಪ್ರಾಯ. (ಪಿ.ವಿ.)

**ಅಂತರಗ್ನಿ ಶಿಲೆಗಳು:** ಅಗ್ನಿ ಶಿಲೆಗಳ ಒಂದು ವರ್ಗ. ಭೂ ಮೇಲ್ಮೈಯಿಂದ ಬಹಳ ಆಳದಲ್ಲಿ ಶಿಲಾಪಾಕ(ಮ್ಯಾಗ್ಮ) ನಿಧಾನವಾಗಿ ತಂಪಾಗಿ ಘನೀಕರಿಸುವುದರಿಂದ ರೂಪುಗೊಂಡ ಖನಿಜಗಳ ಹರಳುಗಳಿರುವ ಶಿಲೆಗಳಿವು(ಪ್ಲುಟಾನಿಕ್ ರಾಕ್ಸ್). ಈ ಶಿಲೆಗಳಲ್ಲಿ ನಿರ್ದಿಷ್ಟವಾದ ಖನಿಜ ಸಮೂಹವೂ ಇದೆ. ಇವು 400 ರಿಂದ 6000 ಮೀ ದಪ್ಪದ ಮೇಲ್ಪದರದ ಕೆಳಗೆ ಘನೀಕರಿಸಿದವೆಂದು ಡ್ಯಾಲಿ ಅಭಿಪ್ರಾಯಪಡುತ್ತಾನೆ. ಅಂತಗ್ನಿಶಿಲೆಗಳ ಘನೀಕರಣಕ್ಕೆ ಅಗತ್ಯವಾದ ಪರಿಸ್ಥಿತಿಗಳಲ್ಲಿ ವ್ಯತ್ಯಾಸವಿರುತ್ತದೆ. ಭೂಮಿಯ ಮೇಲ್ಭಾಗದಲ್ಲಿ ಹೊರಕಾಣುವ ಈ ಶಿಲೆಗಳೆಲ್ಲ ಭೂಮಿಯ ಹೊರಮೈಯಿಂದ ನೂರಾರು ಮೀಟರ್‌ನಿಂದ 20 ಕಿಮೀ ತಳದಲ್ಲಿ ಸ್ಫಟಿಕೀಕರಿಸಿದುವೆಂಬುದರಲ್ಲಿ ಸಂಶಯವಿಲ್ಲ.

ಅಂತರಗ್ನಿಶಿಲೆಗಳ ವಿಶೇಷವಾದ ಒಳರಚನೆಗೆ ಕಾರಣ ಅವು ಆಳದಲ್ಲಿ ನಿಧಾನವಾಗಿ ತಂಪಾಗಿ ಘನೀಕರಿಸುವುದೇ ಆಗಿದೆ. ಜೊತೆಗೆ ಅವುಗಳ ಅಂತಸ್ಸರಣದ ರೂಪ ಗಾತ್ರ ಮತ್ತು ಸ್ಥಳೀಯ ಉಷ್ಣಾಂಶವೂ ಮುಖ್ಯ ಕಾರಣಗಳಾಗಿವೆ.

ಅಂತರಗ್ನಿಶಿಲಾಕಾರ್ಯಗಳ ರೂಪ ಮತ್ತು ವ್ಯಾಪಕತೆಗಳಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಅತ್ಯಂತ ವಿಶಾಲವಾದುವು ಸಾವಿರಾರು ಚ.ಕಿಮೀಗಳವರೆಗೆ ಹರಡಿರುತ್ತವೆ: ಅತಿ ಚಿಕ್ಕವು ಕೆಲವು ಸೆಂಟಿಮೀಟರ್‌ಗಳಷ್ಟಿರುತ್ತವೆ. ಅಂತರಗ್ನಿಶಿಲಾಪ್ರಭೇದಗಳಲ್ಲಿ ಸಿಲ್, ಲ್ಯಾಕೊಲಿತ್, ಫೇಕೊಲಿತ್, ಡೈಕ್ (ಒಡ್ಡು), ಬ್ಯಾಥೊಲಿತ್, ಸ್ಟಾಕ್ಸ್(ಬಾಸಸ್) ಮತ್ತು ಪ್ಲುಟಾನುಗಳು

ಮುಖ್ಯವಾದುವು. ಅವುಗಳ ಸ್ವಭಾವಗಳನ್ನು ಸ್ಥೂಲವಾಗಿ ಇಲ್ಲಿ ತಿಳಿಸಿದೆ: ಸಿಲ್‌ಗಳು ಸ್ಥಳೀಯ ಶಿಲೆಗಳ ಹರವನ್ನನುಸರಿಸಿ ಅವುಗಳ ಪದರಗಳ ಮಧ್ಯದಲ್ಲಿ ಹರಿದು ಹರಡಿರುವ ಶಿಲಾಪಾಕದ ಘನೀಕೃತ ಪದರಗಳಾಗಿವೆ. ದೊಡ್ಡ ದೊಡ್ಡ ಸಿಲ್‌ಗಳು ಹಲವು ಮೀಟರ್‌ಗಳಷ್ಟು ದಪ್ಪ, ಹರವು ಅನೇಕ ಸಾವಿರ ಚ.ಕಿಮೀ. ಸಾಮಾನ್ಯವಾಗಿ ಅವುಗಳ ರಾಸಾಯನಿಕ ಸಂಯೋಜನೆಯಲ್ಲಿ ಸಿಲಿಕಾಂಶ ಅಲ್ಪವಾಗಿರುತ್ತದೆ. ಫೇಕೊಲಿತ್‌ಗಳು ಮಡಪುಗಳ ತಳ ಮತ್ತು ಶಿಖರಗಳಲ್ಲಿ ರೂಪುಗೊಂಡ ಮಸೂರಾಕಾರದ ಮತ್ತು ಬಾಗಿದ ಅಂತಸ್ಸರಣಗಳು. ಲೋಪೊಲಿತ್‌ಗಳು ಪದರವಾಗಿರುವ ಅಥವಾ ಬಾನೆಯಂತಿರುವ ಅಂತಸ್ಸರಣ ಕುಸಿದು ಉತ್ಪತ್ತಿಯಾದವು. ಅತ್ಯಂತ ದೊಡ್ಡದಾಗಿರುವ ಕೆಲವು ಅಂತಸ್ಸರಣಗಳು ಅಲ್ಪಸಿಲಿಕಾಂಶ ಶಿಲೆಗಳಿಂದಾಗಿರುತ್ತವೆ. ಒಡ್ಡುಗಳು ಇಕ್ಕಟ್ಟಾಗಿಯೂ ಬಹಳ ಉದ್ದವಾಗಿಯೂ ಸಮಾನಾಂತರವಾದ ಪಕ್ಕಗಳಿರುವ ರಚನೆಗಳು. ಇವು ನೇರವಾಗಿ ಅಥವಾ ಕಡಿದಾಗಿ ಇಳಿವೋರೆಯಾಗಿ ಸ್ಥಳೀಯ ಶಿಲಾಪದರಗಳನ್ನೂ ಇತರ ರಚನೆಗಳನ್ನೂ ಭೇದಿಸಿರುತ್ತವೆ. ಒಂದು ಪ್ರದೇಶದಲ್ಲಿ ಅನೇಕ ಒಡ್ಡುಗಳಿದ್ದರೆ ಅವುಗಳಿಗೆ ಒಡ್ಡುಗಳ ಸಮೂಹವೆಂದು, ಒಂದು ಕೇಂದ್ರದಿಂದ ಹೊರಹರಡಿದ್ದರೆ ಹೊರಗಾಮಿ ಒಡ್ಡುಗಳೆಂದು, ಚಕ್ರಾಕಾರವಾಗಿದ್ದರೆ ಒಡ್ಡುಗಳ ಚಕ್ರವೆಂದು ಹೆಸರು. ಬ್ಯಾಥೊಲಿತ್‌ಗಳು ಕಡಿದಾಗಿ ಇಳಿಜಾರಾಗಿರುವ ಗೋಡೆಗಳುಳ್ಳ ಮತ್ತು ಸಾಮಾನ್ಯವಾಗಿ ತಳ ಕಾಣದಂತಿರುವ ಬೃಹದಾಕಾರದ ಅಂತಸ್ಸರಣಗಳು. ಇವುಗಳಲ್ಲಿ ಅಧಿಕ ಸಿಲಿಕಾಂಶ ಶಿಲೆಗಳಾದ ಗ್ರಾನೈಟ್, ಗ್ರಾನೊಡಯೊರೈಟ್ ಮತ್ತು ಅವುಗಳಿಗೆ ಸಂಬಂಧಪಟ್ಟ ಶಿಲೆಗಳಿರುತ್ತವೆ. ಇವುಗಳಲ್ಲಿ ದೊಡ್ಡವು ಸಾವಿರಾರು ಚ.ಕಿಮೀ ಹರಡಿರುತ್ತವೆ. ಕೆಲವು ಬ್ಯಾಥೊಲಿತ್‌ಗಳು ಅಗ್ನಿಶಿಲೆಗಳೇ ಅಥವಾ ರೂಪಾಂತರ ಶಿಲೆಗಳೇ ಎಂಬ ಸಂಶಯವಿದೆ. ಖನಿಜ ಸಮೂಹದಲ್ಲಿಯೂ ರೂಪದಲ್ಲಿಯೂ ಬ್ಯಾಥೊಲಿತ್‌ಗಳನ್ನು ಹೋಲುವ, ಆದರೆ ಗಾತ್ರದಲ್ಲಿ ಚಿಕ್ಕದಾಗಿರುವ ಈ ರೀತಿಯ ಶಿಲಾರೂಪಕ್ಕೆ (40 ಚ.ಕಿಮೀಗಳಿಗಿಂತ ಕಡಿಮೆ) ಸ್ಟಾಕ್ಸ್ (ಬಾಸಸ್) ಎಂದು ಹೆಸರು. ಪ್ಲುಟಾನುಗಳು ಮೇಲೆ ತಿಳಿಸಿದ ಯಾವುದನ್ನೂ ಹೋಲದಿರುವ ಅಂತಸ್ಸರಣಗಳು.

ಒಳರಚನೆ : ಅಂತರಗ್ನಿಶಿಲೆಗಳ ಒಳರಚನೆಯ ವಿಶೇಷ ಲಕ್ಷಣವೆಂದರೆ ಪೂರ್ಣ ಸ್ಫಟಿಕತ್ವ ಮತ್ತು ಸಮಕಣವಿನ್ಯಾಸ. ಇದಕ್ಕೆ ಗ್ರಾನಿಟಿಕ್ ಒಳರಚನೆ ಎಂದು ಹೆಸರು. ಉದಾ: ಗ್ರಾನೈಟ್‌ಶಿಲೆ, ಇವೆರಡೂ ರಚನೆಗಳು ಶಿಲಾಪಾಕ ನಿಧಾನವಾಗಿ ಘನೀಕರಿಸುವುದರಿಂದ ಉಂಟಾದುವು. ಇದರಿಂದ ಒಂದಕ್ಕೊಂದು ಹೆಣೆದುಕೊಂಡಿರುವ ಮತ್ತು ಒಂದಕ್ಕೊಂದು ಮಿತಿ ಕಲ್ಪಿಸುವ ವಿನ್ಯಾಸ ಬೆಳೆದಿರುತ್ತದೆ. ಈ ಗುಂಪಿನ ಅಲ್ಪಸಿಲಿಕಾಂಶ ಶಿಲೆಗಳಲ್ಲಿ ಖನಿಜಕಣಗಳು ನಿರಾಕಾರವುಳ್ಳವಾಗಿಯೂ ಅಧಿಕ ಸಿಲಿಕಾಂಶ ಶಿಲೆಗಳಲ್ಲಿ ಅಪೂರ್ಣಾಕಾರವುಳ್ಳವಾಗಿಯೂ ಇವೆ.

ರಾಸಾಯನಿಕ ಸಂಯೋಜನೆ: ಅಂತರಗ್ನಿಶಿಲೆಗಳಲ್ಲಿ ಇತರ ಅಗ್ನಿಶಿಲೆಗಳಲ್ಲಿ ಇರುವಂತೆಯೇ ಸಿಲಿಕಾಂಶವು ಶೇ. 35 ರಿಂದ 75 ವರೆಗಿರುತ್ತದೆ. ಸಿಲಿಕಾಂಶದ ಆಧಾರದ ಮೇಲೆ ಈ ವರ್ಗದ ಶಿಲೆಗಳನ್ನು ಅಧಿಕಸಿಲಿಕಾಂಶ ಶಿಲೆಗಳು (ಶೇ. 65 ಕ್ಕಿಂತ ಹೆಚ್ಚು), ಸಮ ಸಿಲಿಕಾಂಶ ಶಿಲೆಗಳು ಅಥವಾ ಮಧ್ಯವರ್ತಿಶಿಲೆಗಳು (ಶೇ. 52 ರಿಂದ 65ರ ವರೆಗೆ) ಮತ್ತು ಅತ್ಯಲ್ಪಸಿಲಿಕಾಂಶ ಶಿಲೆಗಳು (ಶೇ. 45 ಕ್ಕಿಂತ ಕಡಿಮೆ) ಎಂದು ನಾಲ್ಕು ವಿಧಗಳಾಗಿ ವಿಭಾಗಿಸಲಾಗಿದೆ.

ವರ್ಗೀಕರಣ : ಸಿಲಿಕಾಂಶ ಕ್ರಮೇಣ ಹೆಚ್ಚುವ ಕ್ರಮವನ್ನು ಹೀಗೆ ವರ್ಗೀಕರಿಸಲಾಗಿದೆ:

1. ಗ್ರಾನೈಟ್ ಡಯೋರೈಟ್ ಸಮೂಹ : ಕ್ವಾರ್ಟ್ಜ್, ಪೊಟ್ಯಾಷ್ ಫೆಲ್‌ಸ್ಪಾರ್. ಸೋಡಿಕಪ್ಲೇಜಿಯೊಕ್ಲೇಸ್‌ಗಳೊಂದಿಗೆ ಬಯೋಟೈಟ್ ಅಥವಾ ಹಾರನ್‌ಬ್ಲೆಂಡ್ ಖನಿಜಗಳು ವಿವಿಧ ಪ್ರಮಾಣದಲ್ಲಿರುವ ಗ್ರಾನೈಟ್ ಸೋಡಾಗ್ರಾನೈಟ್ ಅಡಮೆಲೈಟ್.

2. ಸಯನೈಟ್ ಸಮೂಹ : ಫೆಲ್‌ಸ್ಪಾರ್‌ಗಳ ಮತ್ತು ಇತರ ಅಧಿಕ ಸಿಲಿಕಾಂಶ ಖನಿಜಗಳ ಜೊತೆಗೆ ಸಿಲಿಕಾಂಶ ಕಡಿಮೆಯಿರುವ ನೆಫೆಲೀನ್, ಲ್ಯೂಸೈಟ್, ಸೋಡಲೈಟ್ ಖನಿಜಗಳನ್ನು ಸೋಡ ಪ್ರಮಾಣ ಅಧಿಕವಾಗಿರುವ ಆಂಫಿಬೋಲ್ ಮತ್ತು ಪೈರಾಕ್ಸೀನ್‌ಗಳೂ ಇರುವ ಸಯನೈಟ್ ಶಿಲೆಗಳು.

3. ಡಯಾರೈಟ್ ಸಮೂಹ : ಬೆಣಚು, ಆಂಡಿಸೀನ್ ಪ್ಲೇಜಿಯೋಕ್ಲೇಸ್ ಬಯೋಟೈಟ್ ಹಾರನ್‌ಬ್ಲೆಂಡ್ ಮುಂತಾದ ಖನಿಜಗಳು ಸಾಮಾನ್ಯವಾಗಿರುವ ಕ್ವಾರ್ಟ್ಸ್‌ಡಯೋರೈಟ್ ಮತ್ತು ಅಗೈಟ್‌ಡಯೋರೈಟ್.

4. ಆಲ್ಕಲಿ ಗ್ಯಾಬ್ರೊ ಸಮೂಹ : ಆಲ್ಕಲಿ ಖನಿಜಗಳಿರುವ ಟೆಶ್ವನೈಟ್, ತೆರಲೈಟ್, ಎಸ್ಸೆಕ್ಸೈಟ್, ಪಿಕ್ರೈಟ್, ಶಾರನಕೈಟ್.

5. ಗ್ಯಾಬ್ರೊ ಸಮೂಹ : ಲ್ಯಾಬ್ರೊಡಾರೈಟ್ ಪ್ಲೇಜಿಯೋಕ್ಲೇಸ್, ಆಗೈಟ್ ಕೆಲವು ವಿಧಗಳಲ್ಲಿ ಸಾಮಾನ್ಯವಾಗಿ ಆಲಿವೀನ್ ಖನಿಜಗಳನ್ನು ಉಳ್ಳ ಆಲಿವೀನ್ ಗ್ಯಾಬ್ರೊ, ಅನಾರ್ಥೊಸೈಟ್, ಟ್ರಾಕ್ಟೊಲೈಟ್ ಮುಂತಾದ ಶಿಲೆಗಳು ಈ ಗುಂಪಿಗೆ ಸೇರಿದುವು.

6. ಪೆರಿಡೊಟೈಟ್ ಸಮೂಹ : ಪೈರಾಕ್ಸೀನ್, ಆಲಿವೀನ್ ಮತ್ತು ಅಧಿಕ ಕ್ಯಾಲ್ಸಿಯಂ ಇರುವ ಪ್ಲೇಜಿಯೊಕೇಸ್ ಮುಂತಾದ ಖನಿಜಗಳನ್ನು ಸಾಮಾನ್ಯವಾಗಿ ಉಳ್ಳ ಪೈರಾಕ್ಸಿನೈಟ್, ಪೆರಿಡೊಟೈಟ್ ಮತ್ತು ಡನೈಟ್ ಮುಂತಾದ ಶಿಲೆಗಳು. (ಎಸ್.ವಿ.)

**ಅಂತರಿಕ್ಷ ಮೋಜಣಿ:** ವಿಮಾನಗಳಲ್ಲಿ ಬಿಂಬಗ್ರಾಹಿಗಳನ್ನು (ಕ್ಯಾಮರ) ಕೊಂಡೊಯ್ದು ಅಂತರಿಕ್ಷದಿಂದ ಒಂದು ಭೂಪ್ರದೇಶದ ಛಾಯಾಚಿತ್ರಗಳನ್ನು ಪಡೆದು ಆ ಚಿತ್ರಗಳ ಆಧಾರದಮೇಲೆ ಆ ಪ್ರದೇಶದ ಮೇಲ್ಮೈಲಕ್ಷಣದ ನಕ್ಷೆಯನ್ನು (ಟಾಪೋಗ್ರಫಿಕ್ ಮ್ಯಾಪ್) ತಯಾರಿಸಬಹುದು. ಇಂಥ ಮೋಜಣಿಗೆ ಅಂತರಿಕ್ಷ ಮೋಜಣಿ (ಏರಿಯಲ್ ಸರ್ವೇಯಿಂಗ್) ಎಂದು ಹೆಸರು. ಬಿಂಬಗ್ರಾಹಿ ತಟ್ಟೆಯ (ಸೆನ್ಸಿಟಿವ್ ಪ್ಲೇಟ್) ಮೇಲೆ ಬೀಳುವ ಛಾಯೆಯ ಅಳತೆಗಳಿಗೂ ಮತ್ತು ಅದರ ಮೂಲ ವಸ್ತುವಿನ ಅಳತೆಗಳಿಗೂ ಇರುವ ಪ್ರಮಾಣ (ರೇಷಿಯೋ) ಬಿಂಬಗ್ರಾಹಿಯ ಮಸೂರ (ಲೆನ್ಸ್), ತಟ್ಟೆ ಮತ್ತು ಮೂಲವಸ್ತು ಇವುಗಳ ಅಂತರದ ಪ್ರಮಾಣದಷ್ಟೇ ಇರುತ್ತದೆ. ಈ ತತ್ತ್ವವನ್ನನುಸರಿಸಿ ವಿಮಾನದ ಮಟ್ಟವನ್ನು ವಾಯುಭಾರಮಾಪಕಯಂತ್ರದಿಂದ ನಿರ್ಧರಿಸುವುದರಿಂದಾಗಲೀ



ವೈಮಾನಿಕ ಛಾಯಾಚಿತ್ರ

ಛಾಯಾಚಿತ್ರದಲ್ಲಿ ಕಾಣುವ ಎರಡು ಸ್ಥಳಗಳ ವಾಸ್ತವ ದೂರಾಂತರವನ್ನು ಸೂಕ್ಷ್ಮವಾದ ಸಲಕರಣೆಗಳಿಂದ ಅಳೆಯುವುದರಿಂದಾಗಲೀ ವಿಷಯವನ್ನು ಸಂಗ್ರಹಿಸಿ ಒಂದು ನಕ್ಷೆಯನ್ನು ತಯಾರಿಸಬಹುದು. ನೀರಾವರಿ ಯೋಜನೆ, ಸಮುದ್ರತೀರದ ಮೋಜಣಿ, ದಟ್ಟವಾಗಿಯೂ ವಿಶಾಲವಾಗಿಯೂ ಬೆಳೆದಿರುವ ನಗರದ ಮೋಜಣಿ, ಖನಿಜ ಪ್ರದೇಶದ ಮೋಜಣಿ ಮುಂತಾದವುಗಳಿಗೆ ಅಂತರಿಕ್ಷ ಮೋಜಣಿಯ ಕ್ರಮವನ್ನು ಪ್ರಯೋಗಿಸುವುದರ ಮೂಲಕ ಅತ್ಯಲ್ಪ ಕಾಲಾವಧಿಯಲ್ಲಿ ಯೋಗ್ಯವಾದ ನಕ್ಷೆಯನ್ನು ತಯಾರಿಸಬಹುದು. ಅತಿ ವಿಶಾಲವಾದ ಪ್ರದೇಶದ ಮೋಜಣಿಯಲ್ಲಿ ಅನೇಕ ಛಾಯಾಚಿತ್ರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಈ ವಿಧವಾದ ಕ್ರಮ ಹೆಚ್ಚು ಬಳಕೆಯಲ್ಲಿದೆ. (ಕೆ.ಎಸ್.ಕೆ.)

**ಅಂತರ್ಜಲ:** ನೆಲಮಟ್ಟದ ಕೆಳಗೆ ಆಳದಲ್ಲಿನ ಮಣ್ಣು ಮತ್ತು ಶಿಲೆಗಳಲ್ಲಿನ ರಂಧ್ರಗಳಲ್ಲಿ ಹುದುಗಿರುತ್ತದೆ. ಭೂಮಿಯ ಮೇಲೆ ಬಿದ್ದ ಮಳೆಯನೀರಿನ ಬಹುಭಾಗ ಹರಿದುಹೋಗುತ್ತದೆ; ಕೊಂಚ ಭಾಗ ಆವಿಯಾಗಿ ವಾಯುಮಂಡಲವನ್ನು ಮತ್ತೆ ಸೇರುತ್ತದೆ. ಇನ್ನೂ ಕೊಂಚ ಭಾಗವನ್ನು ಸಸ್ಯವರ್ಗಗಳು ಹೀರಿಕೊಳ್ಳುತ್ತವೆ. ಹೀಗಾಗಿ ಉಳಿದ ನೀರು ಭೂಮಿಯ ಮೇಲ್ಪದರದಲ್ಲಿರುವ ಶಿಲೆ ಮತ್ತು ಮಣ್ಣಿನ ಮೂಲಕ ಜಿನುಗಿ ಅವುಗಳಲ್ಲಿನ ರಂಧ್ರಗಳಲ್ಲಿ ಶೇಖರವಾಗಿರುವುದೇ ಅಂತರ್ಜಲ. ಹೀಗೆ ಜಿನುಗಿ ಶೇಖರಗೊಳ್ಳುವ ನೀರಿನ ಪ್ರಮಾಣವನ್ನು ಹಲವಾರು ಅಂಶಗಳು ನಿರ್ಧರಿಸುತ್ತವೆ. ಉದಾಹರಣೆಗೆ ಹುಡಿಮಣ್ಣಿನ ನೆಲದಲ್ಲಿ ಬಿದ್ದ ಮಳೆಯ ನೀರು ಬಹುಬೇಗನೆ ಆವಿಯಾಗುತ್ತದೆ. ಅದೇ ನೀರು ಜೇಡಿಮಣ್ಣಿನ ಭೂ ಭಾಗದಲ್ಲಿ ಆವಿಯಾಗದೆ ನೆಲದ ಮೇಲಿನ ಕುಣಿಗಳಲ್ಲಿ ಶೇಖರವಾಗುತ್ತದೆ. ನೆಲ ಭಾಗ ಇಳಿಜಾರಾಗಿದ್ದಲ್ಲಿ ಬಹುಬೇಗನೆ ಹರಿದುಹೋಗುತ್ತದೆ. ಆವಿಯಾಗುವ ನೀರಿನ ದರಕ್ಕಿಂತ ಹರಿಯುವ ನೀರಿನ ಪ್ರಮಾಣವೇ ಹೆಚ್ಚು. ಅಂತೂ ಭೂಮಿಯ ಮೇಲ್ಗೊಗಟೆಯ ನಾನಾ ಭಾಗಗಳಲ್ಲಿ ಅಂತರ್ಜಲವಿರುತ್ತದೆ. ಇದು ಶೇಖರವಾಗುವ ಆಳ ನೆಲಮಟ್ಟದಿಂದ ಎರಡು ಕಿಮೀಗಿಂತ ಹೆಚ್ಚಾಗಿರುವುದಿಲ್ಲ. ಆದರೆ ಮರುಭೂಮಿಯ ಪ್ರದೇಶಗಳಲ್ಲಿ ಹೆಚ್ಚು ಆಳದಲ್ಲಿರುತ್ತದೆ.

ಶಿಲೆಯಲ್ಲಿನ ಅಂತರ್ಜಲದ ಪ್ರಮಾಣ ಒಂದೇ ಸಮನಾಗಿರದೆ 1–50ರಷ್ಟು ಏರುಪೇರುಗಳಾಗುತ್ತದೆ. ಇದು ಬಹುಮಟ್ಟಿಗೆ ಶಿಲೆಗಳ ರಂಧ್ರತ್ವವನ್ನು ಅವಲಂಬಿಸಿದೆ. ರಂಧ್ರತ್ವ ಅಧಿಕವಾಗಿರುವ ಶಿಲೆಗಳು ಉತ್ತಮ ಜಲವಾಹಕಗಳೂ ಆಗಿವೆ. ರಂಧ್ರಗಳ ಗಾತ್ರ ಮತ್ತು ಅವು ಹರಡಿರುವ ಪ್ರಮಾಣವೂ ಈ ದೃಷ್ಟಿಯಿಂದ ಮುಖ್ಯ. ಅಲ್ಲದೆ ಶಿಲೆಯ ಸೀಳುಗಳೂ ಬಿರುಕುಗಳು ನೀರು ವ್ಯಾಪಿಸುವುದಕ್ಕೆ ವಿಶೇಷ ಸಹಕಾರಿಗಳು. ಮರಳು ಶಿಲೆಯಲ್ಲಿ ಸಾಮಾನ್ಯವಾಗಿ ನೂರಕ್ಕೆ ಹತ್ತು ಹದಿನೈದರಷ್ಟು ರಂಧ್ರತ್ವವಿರುತ್ತವೆ. ನೊರಜುಗಲ್ಲಿನಲ್ಲಿ ನೂರಕ್ಕೆ ಮೂವತ್ತಾರರಷ್ಟು ರಂಧ್ರಗಳಿರುತ್ತವೆ. ಇಂತಹ ಶಿಲೆಗಳಲ್ಲಿ ರಂಧ್ರತ್ವ ಬಹು ಹೆಚ್ಚು. ಆದ್ದರಿಂದ ಅಂತರ್ಜಲ ತಡೆಯಿಲ್ಲದೆ ಪ್ರಸಾರವಾಗುತ್ತದೆ. ಆದರೆ ಜೇಡುಶಿಲೆಯಲ್ಲಿ

ನೂರಕ್ಕೆ ಐವತ್ತೆರಡು ಭಾಗ ರಂಧ್ರಗಳಿದ್ದರೂ ನೀರು ಸುಲಭವಾಗಿ ಪ್ರವಹಿಸಲಾರದು. ಅದೊಂದು ಅಪ್ರವೇಶ್ಯ ಶಿಲೆ (ಇಮ್ಪರ್ಮಿಯಬಲ್). ನೀರನ್ನು ಶೇಖರಿಸಿಟ್ಟುಕೊಳ್ಳಬಲ್ಲುದೇ ಹೊರತು ಅದರ ಪ್ರಸಾರಕ್ಕೆ ಸಹಾಯಕವಾಗಿಲ್ಲ.

ಭೂಮಿಯ ಮೇಲ್ಪೊಗಟೆಯಲ್ಲಿ ಶಿಲಾಸ್ತರ ಹೊಂದಿರುವ ಗರಿಷ್ಠ ಪ್ರಮಾಣದ ಅಂತರ್ಜಲವಿರುವ ಮಟ್ಟವನ್ನು ಸಂತೃಪ್ತವಲಯ(ಸ್ಯಾಚುರೇಟೆಡ್ ಜ಼ೋನ್) ಎನ್ನಲಾಗಿದೆ. ಇದರ ಮೇಲ್ಭಾಗವೇ ಜಲಮಟ್ಟ (ವಾಟರ್ ಟೇಬಲ್). ಇದಕ್ಕೂ ನೆಲಮಟ್ಟಕ್ಕೂ ನಡುವೆ ಇರುವ ಭೂಭಾಗವೇ ವಾಯು ಸಂಸರ್ಗಮಂಡಲ (ಜ಼ೋನ್ ಆಫ್ ಏರಿಯೇಷನ್). ಇದರ ಮೂಲಕವಾಗಿಯೇ ನೆಲದ ಮೇಲೆ ಬಿದ್ದ ಮಳೆಯ ನೀರು ಜಿನುಗಿ ಜಲಮಟ್ಟವನ್ನು ಮುಟ್ಟುವುದು. ಈ ನೀರನ್ನು ಜಿನುಗು ನೀರು(ವಡೋಸ್ ವಾಟರ್) ಎನ್ನುವರು. ಒಂದು ಪ್ರದೇಶದ ಜಲಮಟ್ಟ ವರ್ಷದುದ್ದಕ್ಕೂ ಒಂದೇ ಸಮನಾಗಿರದೆ ಏರುಪೇರುಗಳಾಗುತ್ತದೆ. ಇದು ಸಾಮಾನ್ಯವಾಗಿ ನೆಲಭಾಗದ ಏರುತಗ್ಗುಗಳನ್ನು ಅನುಸರಿಸುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ಬೀಳುವ ಮಳೆಯ ವಾರ್ಷಿಕ ಪ್ರಮಾಣ ಮತ್ತು ಹವಾಗುಣದ ಪರಿಸ್ಥಿತಿಯನ್ನು ಬೆಂಗಾಡು ಪ್ರದೇಶಗಳಲ್ಲಿ ನೂರಾರು ಮೀಟರ್‌ಗಳ ಆಳದಲ್ಲೂ ಮಲೆನಾಡು ಪ್ರದೇಶಗಳಲ್ಲಿ ಕೇವಲ ಕೆಲವು ಮೀಟರ್ ಆಳದಲ್ಲೂ ಸಾಧಾರಣ ಮಳೆಯಾಗುವ ಬಯಲುಸೀಮೆಯಲ್ಲಿ 15 ರಿಂದ 45 ಮೀ ಆಳದಲ್ಲೂ ಜಲಮಟ್ಟವಿರುತ್ತದೆ. ಅಲ್ಲದೆ ಭೂ ಪ್ರದೇಶದ ಶಿಲೆಗಳ ವಿನ್ಯಾಸವೂ ಗಮನಿಸಬೇಕಾದ ಅಂಶ.

ಅಂತರ್ಜಲ ಭೂಮಿಯ ಒಳಗೆ ಸಾಮಾನ್ಯವಾಗಿ ಒಂದೆಕಡೆ ಶೇಖರವಾಗಿರದೆ ಕೆಳಮಟ್ಟಕ್ಕೆ ಸದಾ ಪ್ರವಹಿಸುತ್ತಿರುತ್ತದೆ. ಇದಕ್ಕೆ ಮುಖ್ಯ ಕಾರಣ ಭೂಮಿಯ ಗುರುತ್ವಾಕರ್ಷಣ ಶಕ್ತಿ. ಮೇಯಿನ್‌ಜ಼ರ್ ಅವರ ಅಭಿಪ್ರಾಯದಂತೆ ಅತಿ ಹೆಚ್ಚಿನ ವೇಗವೆಂದರೆ ದಿನಕ್ಕೆ 130 ಮೀ ಆದರೆ ಪ್ರಯೋಗಶಾಲೆಯ ಅಧ್ಯಯನಗಳ ಪ್ರಕಾರ ಇದು ಬಹು ಹೆಚ್ಚು, ಅಧಿಕವೆಂದರೆ ದಿನಕ್ಕೆ 1.5 ಮೀಗೆ ಹೆಚ್ಚಾಗಬಾರದು: ಕನಿಷ್ಠವೆಂದರೆ ವರ್ಷಕ್ಕೆ 1.5 ಮೀಗೆ ಕಡಿಮೆ ಇರಬಾರದು.

ಭೂ ಪದರಗಳಲ್ಲಿ ಆಗಾಗ ಉಂಟಾಗುವ ಒತ್ತಡ ವ್ಯತ್ಯಾಸಗಳಿಂದ ಶಿಲೆಗಳಲ್ಲಿ ಸೀಳುಗಳು ಹಾಗೂ ಬಿರುಕುಗಳೂ ಉಂಟಾಗಿ ಅವುಗಳ ಮೂಲಕ ಅಂತರ್ಜಲ ಹೊರ ಚಿಮ್ಮುತ್ತದೆ. ಇವೇ ಚಿಲುಮೆಗಳು. ಒತ್ತಡದ ಪ್ರಮಾಣವನ್ನನುಸರಿಸಿ ಚಿಮ್ಮುವ ನೀರಿನ ಎತ್ತರ ನಿರ್ಧಾರವಾಗುತ್ತದೆ. ಬಹುಮಟ್ಟಿಗೆ ಚಿಲುಮೆಯ ನೀರು ತಣ್ಣಗಿರುತ್ತದೆ. ಆದರೆ ಹಲವು ಚಿಲುಮೆಗಳು ಬಿಸಿನೀರನ್ನು ಚಿಮ್ಮುತ್ತವೆ. ಅನೇಕ ಚಿಲುಮೆಗಳ ನೀರಿನಲ್ಲಿ ಖನಿಜ ಮತ್ತು ರಾಸಾಯನಿಕ ಅಂಶಗಳಿದ್ದು ಉತ್ತಮ ಔಷಧಿಯ ಗುಣಗಳು ಕಂಡುಬರುತ್ತದೆ. ಚಿಲುಮೆಗಳನ್ನು ಭಾರತದ ಪಶ್ಚಿಮ ಕರಾವಳಿ, ಹಿಮಾಲಯ ತಪ್ಪಲು ಪ್ರದೇಶಗಳು, ಬಿಹಾರ, ಮತ್ತು ಪಶ್ಚಿಮ ಬಂಗಾಲದಲ್ಲಿ ಗುರುತಿಸಲಾಗಿದೆ.

ಪ್ರವೇಶ್ಯ ಶಿಲೆಗಳ ಮೂಲಕ ಜಿನುಗುವಾಗ ಶಿಲೆಗಳಲ್ಲಿನ ಕೆಲವು ಪದಾರ್ಥಗಳನ್ನು ತನ್ನಲ್ಲಿ ಕರಗಿಸಿಕೊಂಡು ಅನೇಕ ಕೆಲಸಗಳನ್ನು ಮಾಡಲು ಶಕ್ತವಾಗುತ್ತದೆ. ಅದರಲ್ಲೂ ಸುಣ್ಣ ಶಿಲೆಯ ಭೂಮಿಯಲ್ಲಿ ಪ್ರವಹಿಸುವಾಗ ಆ ಶಿಲೆಯನ್ನು ಸವೆಸಿ ತನ್ನಲ್ಲಿ ಅರಗಿಸಿಕೊಂಡು ಗವಿ ಕಂದರಗಳನ್ನು ಕೊರೆಯಬಲ್ಲದು. ಈ ಗವಿಗಳಲ್ಲಿ ಚಿತ್ರವಿಚಿತ್ರಾಕಾರದ ಸುಣ್ಣಕಲ್ಲಿನ ಕಂಬಗಳನ್ನು ಮನೋಹರವಾದ ಇಳಿ ಗೊಂಚಲುಗಳನ್ನು ನಿರ್ಮಿಸಬಲ್ಲದು.

ಒಟ್ಟಿನಲ್ಲಿ ಅಂತರ್ಜಲ ಪ್ರಕೃತಿ ಮಾನವನಿಗಾಗಿ ಭೂಮಿಯಲ್ಲಿ ಹೂತಿಟ್ಟಿರುವ ಗುಪ್ತನಿಧಿ. ಇದನ್ನು ಸರಿಯಾಗಿ ಬಳಸಿಕೊಂಡಲ್ಲಿ ಮಾನವರಿಗಾಗುವ ಉಪಯೋಗಗಳು ಅಧಿಕ. ಬೇಸಾಯಕ್ಕಂತೂ ಇದು ವರ. ಇದರಿಂದ ಕುಡಿಯುವ ನೀರಿನ ಕೊರತೆಯ ನಿವಾರಣೆಯೂ ಸಾಧ್ಯ. ಭಾರತದ ಕೇಂದ್ರ ಅಂತರ್ಜಲ ಮಂಡಲಿ ಏರ್ಪಡಿಸಿದ ಜಲ ಭೂವಿಜ್ಞಾನ ಸಮೀಕ್ಷೆ, ಶೋಧನೆ, ಮೌಲ್ವೀಕರಣ ಮತ್ತು ಮುನ್ಸೂಚನೆಯ ಪ್ರಕಾರ ಭಾರತದಲ್ಲಿ ಸು. 431.9 ಬಿ.ಘ.ಮೀ ಪುನಃ ಭರ್ತಿ ಮಾಡಬಲ್ಲ ಅಂತರ್ಜಲ ಸಂಪತ್ತಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ 70.93 ಬಿ.ಘ.ಮೀ ಅಂತರ್ಜಲವನ್ನು ಗೃಹಬಳಕೆ ಮತ್ತು ಕೈಗಾರಿಕೆಗಳ ಬಳಕೆಗಾಗಿ ಕಾಯ್ದಿರಿಸಲಾಗಿದೆ. ಉಳಿದ 360.81 ಬಿ.ಘ.ಮೀ ಅಂತರ್ಜಲ ಸಂಪತ್ತು ನೀರಾವರಿಗಾಗಿ ಲಭ್ಯವಿದೆ. ಅಂದಾಜೊಂದರ ಪ್ರಕಾರ ಲಭ್ಯವಾಗುವ ಅಂತರ್ಜಲ ಸಂಪತ್ತಿನಲ್ಲಿ ಶೇ. 31.92ರಷ್ಟನ್ನು ಈಗಾಗಲೆ ಅಭಿವೃದ್ಧಿ ಪಡಿಸಿಕೊಳ್ಳಲಾಗಿದೆ.

ಅಂತರ್ಜಲದ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಕೇಂದ್ರ ಅಂತರ್ಜಲ ಪ್ರಾಧಿಕಾರವೊಂದನ್ನು ರಚಿಸಲಾಗಿದೆ. ಈ ಮಂಡಲಿಯು ಈಗಾಗಲೇ ದೇಶದಾದ್ಯಂತ 11 ಪ್ರದೇಶಗಳನ್ನು ಅಂತರ್ಜಲ ಬೆಳವಣಿಗೆ ಮತ್ತು ಕ್ರಮಬದ್ಧತೆಗಾಗಿ ಗುರ್ತಿಸಿದೆ.

ಕರ್ನಾಟಕದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಮೀಕ್ಷೆಯೊಂದರ ವರದಿ ಪ್ರಕಾರ ರಾಜ್ಯದಲ್ಲಿ ಸು. 11,416 ದಶಲಕ್ಷ ಘನ ಮೀಟರ್‌ಗಳಷ್ಟು ಅಂತರ್ಜಲ ಸಂಪತ್ತಿದೆ. ಇದರಲ್ಲಿ 8,812 ದಶಲಕ್ಷ ಘ.ಮೀ ನೀರಾವರಿಗೆ ಬಳಸಬಹುದಾಗಿದೆ. ಇದರಿಂದ ಸು. 10 ಲ.ಹೆ. ಭೂಮಿಗೆ ನೀರಾವರಿ ಕಲ್ಪಿಸುವ ಸಾಧ್ಯತೆಯಿದೆ. ಇತ್ತೀಚೆಗೆ ಕುಡಿಯುವ ನೀರಿಗಾಗಿ ಅಂತರ್ಜಲವನ್ನು ಬಳಸುವುದು ಹೆಚ್ಚಾಗಿದೆ. (ಬಿ.ವಿ.ಜ.)

**ಅಂತರ್ಜಲ ಮಟ್ಟ:** ಭೂಮಿಯ ಮೇಲ್ಪದರದ ತಳದ ಮಣ್ಣು ಮತ್ತು ಸರಂಧ್ರಶಿಲೆಗಳು ಹಾಗೂ ಬಿರುಕುಗಳಲ್ಲಿ ಸಂಗ್ರಹವಾಗಿರುವ ನೀರೇ ಅಂತರ್ಜಲ. ಭೂಮೇಲ್ಮೈಯ ವಿವಿಧ ಮೂಲಗಳಿಂದ ನೀರು ಭೂಮಿಯ ಒಳಸೇರಿ ಅಂತರ್ಜಲವಾಗಿ ಪರಿಣಮಿಸುವುದು. ಅಂತರ್ಜಲದ ಮೂಲಗಳಲ್ಲಿ ಮಳೆಯ ನೀರು ಮತ್ತು ಶಿಲಾಪಾಕ ಜಲ ಪ್ರಮುಖವಾದವು. ಭೂಮಿಯ ಒಳಸೇರುವ ನೀರು ಶಿಲೆಗಳ ಸರಂಧ್ರತೆಯಲ್ಲಿ ಗರಿಷ್ಠ ಮಟ್ಟದವರೆಗೆ ಸಂಗ್ರಹಗೊಳ್ಳುವುದು. ಸಂಪೂರ್ಣವಾಗಿ ನೀರು ಸಂಗ್ರಹವಾದ ಶಿಲಾ ಸರಂಧ್ರತೆಯನ್ನು ಸಂಪೂರಿತ ವಲಯ. ಸಂಪೂರಿತ ಮಟ್ಟದ ಮೇಲ್ಮಟ್ಟವನ್ನು ಅಂತರ್ಜಲಮಟ್ಟ ಎಂದು ಕರೆಯಲಾಗಿದೆ. ಅಂತರ್ಜಲ ಪ್ರಮಾಣ ಶಿಲೆಗಳ ಸರಂಧ್ರತೆಯ ಮೇಲೆ ಅವಲಂಬಿತವಾಗಿರುತ್ತದೆ. ಕೆಲವು ಶಿಲೆಗಳು ಹೆಚ್ಚು ಸರಂಧ್ರತೆಯಿಂದ ಕೂಡಿರುವುದು. ಇವುಗಳ ಮೂಲಕ ಸುಲಭವಾಗಿ ನೀರು ಒಳಸೇರುವುದು. ಉದಾ: ಡೋಲೋರೈಟ, ಮರಳು ನುರುಜುಗಲ್ಲು ಮತ್ತು ಸುಣ್ಣಕಲ್ಲುಗಳು. ಆದರೆ ಇದಕ್ಕೆ ಬದಲಾಗಿ ಕೆಲವು ಶಿಲೆಗಳಲ್ಲಿ ಕಣಗಳ ರಚನೆ ಒತ್ತೊತ್ತಾಗಿದ್ದು ನೀರು ಒಳಗೆ ಸೇರಲು ಸಾಧ್ಯವಾಗುವುದಿಲ್ಲ.




ಅಂತರ್ಜಲಮಟ್ಟ ಮತ್ತು ವಲಯಗಳು

ಉದಾ: ಬಸಾಲ್ಟ್ ಶಿಲೆ ಆದ್ದರಿಂದ ಅಂತರ್ಜಲ ಮಟ್ಟದ ಪ್ರಮಾಣ ಎಲ್ಲಾ ಪ್ರದೇಶಗಳಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಇದು ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುವುದು. ಆದ್ದರಿಂದ ಅಂತರ್ಜಲಮಟ್ಟವನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ಅವುಗಳೆಂದರೆ:

1) ಸಾರ್ವಕಾಲಿಕ ಮಟ್ಟ: ಇಲ್ಲಿ ಅಂತರ್ಜಲ ಮಟ್ಟ ಶಿಲಾಸ್ತರಗಳಲ್ಲಿ ಎಲ್ಲಾ ಕಾಲದಲ್ಲಿಯೂ ಸಂಪೂರಿತ ಮಟ್ಟದಲ್ಲಿಯೇ ಇರುತ್ತದೆ. ಸರ್ವಕಾಲಿಕ ಮಟ್ಟದಲ್ಲಿ ಅಂತರ್ಜಲ ಮಟ್ಟ ನಿರ್ದಿಷ್ಟ ಪ್ರಮಾಣದಲ್ಲಿದ್ದು ಕೆಳಗಿಳಿಯುವುದಿಲ್ಲ.

2) ತಾತ್ಕಾಲಿಕ ಮಟ್ಟ: ಅಂತರ್ಜಲ ಮಟ್ಟ ಒಂದೇ ಪ್ರಮಾಣದಲ್ಲಿರದೇ ಕಾಲದಿಂದ ಕಾಲಕ್ಕೆ ವ್ಯತ್ಯಾಸ ಹೊಂದುತ್ತದೆ. ಒಂದು ಋತುವಿನಲ್ಲಿ ಸಂಪೂರಿತ ಮಟ್ಟವನ್ನು ತಲುಪಿದ್ದರೆ ಮತ್ತೊಂದು ಋತುವಿನಲ್ಲಿ ಸಂಪೂರಿತ ಮಟ್ಟದಿಂದ ತುಂಬಾ ಕೆಳಗಿಳಿಯುತ್ತದೆ. ಉದಾ: ಹೆಚ್ಚು ಮಳೆ ಪಡೆಯುವ ಪ್ರದೇಶ ಮತ್ತು ನದಿ ಹರಿಯುವ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಅಂತರ್ಜಲ ಮಟ್ಟ ಮೇಲ್ಮಟ್ಟದಲ್ಲಿರುವುದು. ಆದರೆ ಬೇಸಗೆ ಕಾಲದಲ್ಲಿ ಅಂತರ್ಜಲ ತುಂಬಾ ಆಳದಲ್ಲಿರುವುದು. ಆದ್ದರಿಂದ ಇದನ್ನು ತತ್ಕಾಲಿಕ ಮಟ್ಟ ಎಂದು ಕರೆಯುವರು. ಅಂತರ್ಜಲದ ಮಟ್ಟ ತಾತ್ಕಾಲಿಕ ಅಥವ ಸರ್ವಕಾಲಿಕ ಎಂಬುದನ್ನು ಬಾವಿಯನ್ನು ತೆಗೆಯುವುದರಿಂದ ತಿಳಿಯಬಹುದು. ಮಳೆಗಾಲದಲ್ಲಿ ಬಾವಿ ತೋಡಿದಾಗ ಅಂತರ್ಜಲ ಮಟ್ಟ ಭೂಮೇಲ್ಮೈಗೆ ಸಮೀಪದಲಿರುತ್ತದೆ. ಆದರೆ ಬೇಸಗೆ ಕಾಲದಲ್ಲಿ ಅಂತರ್ಜಲ ಕೆಳಗಿಳಿಯುವುದರಿಂದ ಬಾವಿ ಬರಿದಾಗುತ್ತದೆ. ಇದು ತಾತ್ಕಾಲಿಕ ಮಟ್ಟದ್ದಾಗಿರುತ್ತದೆ. ಆದ್ದರಿಂದ ಬಾವಿಗಳನ್ನು ಬೇಸಗೆ ಕಾಲದಲ್ಲಿ ಸರ್ವಕಾಲಿಕ ಅಂತರ್ಜಲ ಮಟ್ಟದವರೆಗೂ ತೋಡಿದರೆ ವರ್ಷಪೂರ್ತಿ ನೀರು ದೊರೆಯುತ್ತದೆ. (ಕೆ.ಕೆ.)

**ಅಂತಾರಾಷ್ಟ್ರೀಯ ದಿನಾಂಕ ರೇಖೆ:** $180^0$ ರೇಖಾಂಶದ ಮಧ್ಯಾಹ್ನ ರೇಖೆಗೆ ಈ ಹೆಸರಿದೆ (ಇಂಟರ್ ನ್ಯಾಷನಲ್ ಡೇಟ್ ಲೈನ್). ಪೆಸಿಫಿಕ್ ಸಾಗರದ ನಿರ್ಜನ ಪ್ರದೇಶದ ಮೇಲೆ ಇದು ಹಾದುಹೋಗುತ್ತದೆ. ಹೀಗೆ ಸಾಗುವಾಗ ಎದುರಾಗುವ ಒಂದೆರಡು ದ್ವೀಪಗಳನ್ನು ಬಳಸಿಕೊಂಡು ಹೋಗುವಂತೆ ಈ ರೇಖೆಯನ್ನು ಎಳೆಯಲಾಗಿದೆ.

ಭೂಮಿ ತನ್ನ ಅಕ್ಷದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಸುತ್ತುತ್ತಿರುವುದರಿಂದ ಯಾವುದೇ ಒಂದು ಸ್ಥಾನದಲ್ಲಿ ಸೂರ್ಯನ ಉದಯಾಸ್ತಗಳು (ಆದ್ದರಿಂದ ಸಮಯ) ಅದಕ್ಕಿಂತ ಪೂರ್ವಕ್ಕೆ ಇರುವ ಸ್ಥಳದ ಉದಯಾಸ್ತಗಳಿಗಿಂತ (ಸಮಯಕ್ಕಿಂತ) ಹಿಂದೆಯೂ ಪಶ್ಚಿಮಕ್ಕೆ ಇರುವ ಸ್ಥಳದ ಉದಯಾಸ್ತಗಳಿಗಿಂತ (ಸಮಯಕ್ಕಿಂತ) ಮುಂದೆಯೂ ಇರುವುವು. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಇದರಿಂದ ಉಂಟಾಗುವ ತೊಡಕನ್ನು ನಿವಾರಿಸಲು ಭೂಮಿಯನ್ನು 24 ನಿರ್ದಿಷ್ಟ ಕಾಲವಲಯಗಳಾಗಿ ವಿಭಾಗಿಸಲಾಗಿದೆ. ಇದರ ಪ್ರಕಾರ ಗ್ರೀನ್ವಿಚ್ ಮಧ್ಯಾಹ್ನರೇಖೆ ($0^0$ ರೇಖಾಂಶ) ಪೂರ್ವ ಮತ್ತು ಪಶ್ಚಿಮಕ್ಕೆ $7\frac{1}{2}^{\circ}$ ರೇಖಾಂಶದ

ಮಧ್ಯಾಹ್ನ ರೇಖೆಗಳು ಒಳಗೊಂಡಿರುವ 15⁰ ಅಗಲದ ಪ್ರದೇಶ ಸೊನ್ನೆ ಗಂಟೆಯನ್ನು ತೋರಿಸುವ ಕಾಲ ವಲಯ. ಇವೆರಡೂ ರೇಖೆಗಳಿಂದ ಕ್ರಮವಾಗಿ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಕಡೆಗೆ 15⁰ ಅಂತರದಲ್ಲಿ ಮಧ್ಯಾಹ್ನ ರೇಖೆಗಳು ಗುರುತಿಸುತ್ತ ಸಾಗಿದರೆ 172 ½⁰ ಪೂರ್ವ ಮತ್ತು 172 ½⁰ ಪಶ್ಚಿಮ ರೇಖಾಂಶಗಳಿರುವ ಮಧ್ಯಾಹ್ನ ರೇಖೆಗಳನ್ನು ತಲುಪಬಹುದು. ಹೀಗೆ ಗುರುತಿಸಲಾದ ಕಾಲವಲಯಗಳಲ್ಲಿ ಸಮಯ, ಗ್ರೀನ್ವಿಚ್ ಸಮಯಕ್ಕಿಂತ ಕ್ರಮವಾಗಿ 1. 2, . . . .12 ಗಂಟೆ ಮುಂದೆಯೂ (ಪೂರ್ವದೆಡೆ) ಮತ್ತು ಹಿಂದೆಯೂ (ಪಶ್ಚಿಮದೆಡೆ) ಇರುತ್ತದೆ. ಇದರ ಪ್ರಕಾರ 172 ½⁰ ಪೂರ್ವದಿಂದ 180⁰ ವರೆಗಿನ 7½⁰ ಅಗಲದ ವಲಯ ಗ್ರೀನ್ವಿಚ್ 12 ಗಂಟೆ ಮುಂದೆ ಇದೆ; 172 ½⁰ ಪಶ್ಚಿಮದಿಂದ 180⁰ ವರೆಗಿನ 7½⁰ ಅಗಲದ ವಲಯ 12 ಗಂಟೆ ಹಿಂದೆಯಿದೆ. ಆದ್ದರಿಂದ ದಿನಾಂಕ ರೇಖೆಯ ಪೂರ್ವಕ್ಕೆ 12 ಗಂಟೆ ಆಗಿರುವಾಗ ಪಶ್ಚಿಮಕ್ಕೆ ಅದೇ ಗಳಿಗೆಯಲ್ಲಿ 12 ಗಂಟೆ ಆಗಿರುತ್ತದೆ. ಒಬ್ಬ ಪ್ರಯಾಣಿಕ ಗ್ರೀನ್ವಿಚ್‌ನಿಂದ (ಅಂದರೆ 0 ಕಾಲವಲಯದಿಂದ) ಪೂರ್ವಾಭಿಮುಖವಾಗಿ ಸಾಗಿದರೆ ಒಂದೊಂದು ಹೊಸ ಕಾಲವಲಯವನ್ನು (15⁰ ರೇಖಾಂಶಗಳನ್ನು) ಅನುಕ್ರಮವಾಗಿ ಪ್ರವೇಶಿಸಿದಂತೆಯೂ ಅವನು ತನ್ನ ಗಡಿಯಾರವನ್ನು ಒಂದೊಂದು ಗಂಟೆ ಮುಂದೆ ಇಡಬೇಕು; ಇದರ ಬದಲು ಪಶ್ಚಿಮಾಭಿಮುಖಿಯಾಗಿ ಸಾಗಿದರೆ ಗಡಿಯಾರವನ್ನು ಒಂದೊಂದು ಗಂಟೆ ಹಿಂದೆ ಇಡಬೇಕು. ದಿನಾಂಕ ರೇಖೆಯನ್ನು ಪೂರ್ವಾಭಿಮುಖಿಯಾಗಿ ತಲುಪಿದವನ



ಅಂತಾರಾಷ್ಟ್ರೀಯ ದಿನಾಂಕರೇಖೆ

ಗಡಿಯಾರ ಗ್ರೀನ್ವಿಚ್ ಸಮಯಕ್ಕಿಂತ 12 ಗಂಟೆ ಮುಂದೆಯೂ ಪಶ್ಚಿಮಾಭಿಮುಖಿಯಾಗಿ ತಲುಪಿದವನ ಗಡಿಯಾರ ಗ್ರೀನಿಚ್ ಸಮಯಕ್ಕಿಂತ 12 ಗಂಟೆ ಹಿಂದೆಯೂ ಇರುವುದು. ದಿನಾಂಕ ರೇಖೆಯನ್ನು ದಾಟದವನು ಸಮಯ, ದಿನಾಂಕ ಮತ್ತು ದಿನದ ಗೊಂದಲಕ್ಕೆ ಒಳಗಾಗುತ್ತಾನೆ. ವ್ಯವಹಾರದಲ್ಲಿ ಈ ವ್ಯತ್ಯಾಸದಿಂದ ಉಂಟಾಗುವ ಸಂದಿಗ್ಧತೆಯನ್ನು ಪರಿಹರಿಸಲು ವಾಷಿಂಗ್ಟನ್ನಿನಲ್ಲಿ ಒಂದು ಅಂತಾರಾಷ್ಟ್ರೀಯ ಮಧ್ಯಾಹ್ನ ರೇಖಾ ಸಮಾವೇಶ 1884ರಲ್ಲಿ ನೆರವೇರಿತು. ಅಲ್ಲಿ ಎಲ್ಲಾ ರಾಷ್ಟ್ರಗಳು ಸಾರ್ವತ್ರಿಕವಾಗಿ ಒಪ್ಪಿಕೊಂಡ ಸಂಪ್ರದಾಯದ ಪ್ರಕಾರ ದಿನಾಂಕ ರೇಖೆಯನ್ನು ಪೂರ್ವದಿಂದ ಪಶ್ಚಿಮಕ್ಕೆ ಅಡ್ಡ ಹಾಯ್ದಾಗ ತಾರೀಖು ಪಟ್ಟಿಗೆ ಹಿಂದಿನ ತಾರೀಖನ್ನು ಸೇರಿಸಿಕೊಳ್ಳಬೇಕೆಂದು ಪಶ್ಚಿಮದಿಂದ ಪೂರ್ವಕ್ಕೆ ಅಡ್ಡಹಾಯ್ದಾಗ ಒಂದು ತಾರೀಖನ್ನು ತೆಗೆದು ಹಾಕಬೇಕೆಂದು ತೀರ್ಮಾನವಾಯಿತು. ದಿನಾಂಕ ರೇಖೆ ಗ್ರೀನ್ವಿಚ್ ಮಧ್ಯಾಹ್ನರೇಖೆಯ ಮುಂದುವರಿಕೆ ಎಂಬುದು ಸ್ಪಷ್ಟ.

ಉದಾ: ಪೂರ್ವಾಭಿಮುಖವಾಗಿ ಸಂಚರಿಸಿದ ಹಡಗೊಂದು ಮಂಗಳವಾರ ಪ್ರಾತಃಕಾಲ 6 ಗಂಟೆಗೆ ಈ ರೇಖೆಯನ್ನು ತಲುಪಿದಾಗ ಅದರ ದಿನಾಂಕ ಮತ್ತು ಕಾಲವನ್ನು ಸೋಮವಾರ ಪ್ರಾತಃ ಕಾಲ 6 ಗಂಟೆಯೆಂದು ಬದಲಾಯಿಸಬೇಕು. ಅದೇ ರೀತಿ ಪಶ್ಚಿಮಾಭಿಮುಖವಾಗಿ ಚಲಿಸಿದ ಹಡಗೊಂದು ಮಂಗಳವಾರ ಪ್ರಾತಃಕಾಲ 6 ಗಂಟೆಗೆ ಈ ರೇಖೆಯನ್ನು ತಲುಪಿದಾಗ ದಿನಾಂಕ ಮತ್ತು ಕಾಲವನ್ನು ಬುಧವಾರ ಪ್ರಾತಃಕಾಲ 6 ಗಂಟೆಯೆಂದು ಬದಲಿಸಿಕೊಳ್ಳಬೇಕು. ಹೀಗಾಗಿ ಪೂರ್ವಾಭಿಮುಖವಾಗಿ ಪ್ರಯಾಣ ಮಾಡಿ ದಿನಾಂಕ ರೇಖೆ ದಾಟಿದಾಗ ಒಂದು ದಿನ ಲಾಭವಾಗುತ್ತದೆ. ಪಶ್ಚಿಮಾಭಿಮುಖವಾಗಿ ಪ್ರಯಾಣ ಮಾಡಿದರೆ ಒಂದು ದಿನ ನಷ್ಟವಾಗುತ್ತದೆ.

ಮತ್ತೊಂದು ನಿದರ್ಶನ ಕೊಡುವುದಾದರೆ ಸೋಮವಾರ, ಜನವರಿ 4 ರಂದು ಪಶ್ಚಿಮಕ್ಕೆ ಪ್ರಯಾಣ ಮಾಡಿದ ಹಡಗು ಈ ರೇಖೆಯನ್ನು ದಾಟಿದರೆ ಮಂಗಳವಾರ ಜನವರಿ 5ನ್ನು ಬಿಟ್ಟು, ಅನಂತರದ ದಿನ ಬುಧವಾರ, ಜನವರಿ 6ನ್ನು ಲಾಗ್ ಪುಸ್ತಕದಲ್ಲಿ ನಮೂದಿಸಬೇಕು. ಹೀಗಾಗಿ ಪಶ್ಚಿಮಾಭಿಮುಖವಾಗಿ ಪ್ರಯಾಣ ಮಾಡಿದ ಹಡಗಿಗೆ 6ವಾರದ ದಿನಗಳಾಗುತ್ತವೆ. ಪ್ರತಿಯಾಗಿ ಪೂರ್ವಾಭಿಮುಖವಾಗಿ ಪಯಣಿಸಿದ ಹಡಗು ಸೋಮವಾರ ಜನವರಿ 4ರಂದು ಈ ರೇಖೆಯನ್ನು ದಾಟಿದಾಗ, ಮತ್ತೆ ಅದೇ ದಿನ, ದಿನಾಂಕ ಮತ್ತು ಕಾಲವನ್ನು ಲಾಗ್ ಪುಸ್ತಕದಲ್ಲಿ, ಸೋಮವಾರ, ಜನವರಿ 4 ಮತ್ತು ಸೋಮವಾರ, ಜನವರಿ 4 ಎಂದು ನಮೂದಿಸಬೇಕು. ಇದರಿಂದ ಪೂರ್ವಾಭಿಮುಖವಾಗಿ ಪ್ರಯಾಣಮಾಡಿದ ಹಡಗಿಗೆ 8 ವಾರದ ದಿನಗಳು ದಾಖಲಾಗುತ್ತವೆ. (ಆರ್.ಆರ್.ಯು.)

**ಅಂತಾರಾಷ್ಟ್ರೀಯ ಭೂಪಟಶಾಸ್ತ್ರ ಸಂಘ:** ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟದಿಂದಲೇ ಉದ್ಭವಿಸಿದ ಈ ಸಂಘ ಇನ್ನೂ ಒಕ್ಕೂಟದ ಸಂಯೋಜಿತ ಸಂಘವಾಗಿಯೇ ಉಳಿದುಕೊಂಡಿದೆ. ಈ ಸಂಘದ ಪ್ರಮುಖ ಧ್ಯೇಯಗಳಿವು 1. ದಕ್ಷಿಣ ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಗಳಲ್ಲಿ ಆಕೃತಿ ವಿಸ್ತಾರಗಳನ್ನು ತ್ರಿಕೋಣಮಾನದಿಂದ ನಿರ್ಣಯಿಸುವುದು. 2. ಭೂಗೋಳವಿಜ್ಞಾನ ಅಧ್ಯಯನದ ವಿವಿಧಘಟ್ಟಗಳಲ್ಲಿ ಪ್ರದೇಶವಿವರಣೆಯ ಭೂಪಟಗಳಿಗೆ ಪ್ರಾಮುಖ್ಯ ಕೊಡುವುದು. 3. ಸಮುದ್ರ ಮಟ್ಟದಲ್ಲಿ ಆಗುವ ಬದಲಾವಣೆಗಳನ್ನು ನಿರ್ಧರಿಸಲು ಭೂಮಿಯ ಕೆಲವು ಮೇಲ್ಮೈ ಭಾಗಗಳನ್ನು ನಿಖರವಾಗಿ ಸಮಗೊಳಿಸಲು ಇರುವ ಅಗತ್ಯ. 4. ಭೂಗೋಳವೊಂದನ್ನು 1:1,000,000ರ ಪ್ರಮಾಣದಲ್ಲಿ ತಯಾರಿಸಲು ಒಂದು ಪ್ರಯೋಗತಂತ್ರವನ್ನು ರೂಪಿಸುವುದು.

ಮೇಲೆ ತಿಳಿಸಿದ ಪ್ರಮಾಣದ ರೀತ್ಯ ಭೂಪಟದ ರಚನೆಗೆ ಸಂಬಂಧಿಸಿದ ಕಾರ್ಯವನ್ನು ನಡೆಸಲು ಸಂಘ 1891ರಲ್ಲಿ ಬರ್ನ್‌ನಲ್ಲಿ ಸ್ಪೇನಿನ ಕರ್ನಲ್ ಕೋಎಲ್ಲೊ ಅವರ ನೇತೃತ್ವದಲ್ಲಿ ಒಂದು ಸಮರ್ಥ ನಕ್ಷಾಶಾಸ್ತ್ರ ಸಮಿತಿಯನ್ನು ರಚಿಸಿತು. ಸಂಘದ ಮೂರು ಅಧಿವೇಶನಗಳು ಸ್ಟಾಕ್‌ಹೋಂ (1960), ಲಂಡನ್ (1964) ಮತ್ತು ನವದೆಹಲಿಯಲ್ಲಿ (1968) ನಡೆದುವು. ಇದಕ್ಕೆ ಮೊದಲು 1925ರಲ್ಲಿ ಈಜಿಪ್ಟಿನ ದೊರೆ ಫೌದ್‌ನ ಆಶ್ರಯದಲ್ಲಿ 1908ರಲ್ಲಿ ಜಿನೀವ ಅಧಿವೇಶನದಲ್ಲಿ ಪ್ರಾರಂಭವಾದ ಪ್ರಪಂಚದ ಉಬ್ಬುಚಿತ್ರ ಭೂಪಟದ ಕಾರ್ಯವನ್ನು ಪೂರೈಸಲು ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಪ್ರಧಾನವಾಗಿ ಎದ್ದುಕಾಣುವ ಹಾಗೂ ಮೇಲ್ಮೈಲಕ್ಷಣಗಳನ್ನು ತೋರಿಸುವ ಭೂಪಟಗಳನ್ನು ಅಚ್ಚುಹಾಕಲು ಯುದ್ಧಾನಂತರ ಕಾಲಗಳಲ್ಲಿ ಹೊಸ ಹೊಸ ತಂತ್ರಗಳನ್ನು ರೂಪಿಸಲಾಗಿದೆ.

1968ರ ನವದೆಹಲಿಯ ಅಧಿವೇಶನದಲ್ಲಿ 1. ನಕ್ಷಾಶಾಸ್ತ್ರಜ್ಞರ ತರಬೇತಿ, 2. ತಾಂತ್ರಿಕ ಪದಗಳ ವ್ಯಾಖ್ಯೆ, ವರ್ಗೀಕರಣ ಹಾಗೂ ಅವುಗಳ ಪ್ರಮಾಣನಿಷ್ಕರ್ಷೆ, 3. ನಕ್ಷಾಶಾಸ್ತ್ರದಲ್ಲಿ ಸ್ವಯಂಚಾಲನ ವ್ಯವಸ್ಥೆ–ಈ ಅಂಶಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಲಾಯಿತು. ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟ ಮತ್ತು ಅಂತಾರಾಷ್ಟ್ರೀಯ ನಕ್ಷಾಶಾಸ್ತ್ರ ಸಂಘದ ಜಂಟಿ ಅಧಿವೇಶನ ಎರಡೂ ವಿಭಾಗಗಳಲ್ಲಿ ಪರಿಣಿತರ ಸಂಪೂರ್ಣ ಸಹಕಾರಕ್ಕೆ ಕರೆನೀಡಿತು. (ಇ.ಎ.ಎ.)

**ಅಂತಾರಾಷ್ಟ್ರೀಯ ಭೂಭೌತ ವರ್ಷ:** 1957 ಜುಲೈ 1ರಿಂದ 1958ರ ಡಿಸೆಂಬರ್ 31 ರವರೆಗಿನ 18 ತಿಂಗಳ ಅವಧಿಗೆ ಈ ಹೆಸರಿದೆ (ಇಂಟರ್ ನ್ಯಾಷನಲ್ ಜಿಯೋಫಿಸಿಕಲ್ ಇಯರ್–ಐ.ಜಿ.ವೈ.). ಈ ಅವಧಿಯಲ್ಲಿ ಭೂಗ್ರಹ ಹಾಗೂ ಅದರ ಸುತ್ತಲಿರುವ ವಾತಾವರಣದ ಬಗ್ಗೆ ಸಂಶೋಧನಾತ್ಮಕ ಅಧ್ಯಯನ ನಡೆಸುವುದರ ಮೂಲಕ ವಿಶ್ವದ ಬಗ್ಗೆ ಹೆಚ್ಚಿನ ಅರಿವನ್ನು ಪಡೆದುಕೊಳ್ಳಲಾಯಿತು. ಈ ಭೂಭೌತ ಸಂಶೋಧನ ಕಾರ್ಯಕ್ರಮದಲ್ಲಿ ಪ್ರಪಂಚದ ಸು. 70 ರಾಷ್ಟ್ರಗಳು ಪಾಲ್ಗೊಂಡಿದ್ದುವು. ಅವುಗಳಲ್ಲಿ ಭಾರತವೂ ಒಂದಾಗಿತ್ತು.

ಅಂತಾರಾಷ್ಟ್ರೀಯ ಭೂಭೌತ ವರ್ಷಕ್ಕೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ವಿಜ್ಞಾನ ಒಕ್ಕೂಟ ಒಂದು ವಿಶೇಷ ಸಮಿತಿಯನ್ನು ರಚಿಸಿತು. ಈ ಸಮಿತಿಯಲ್ಲಿ ಅಯೋನಾಮಂಡಲ (ಅಯೋನೋಸ್ಫಿಯರ್), ರೇಡಿಯೋ ಭೌತವಿಜ್ಞಾನ, ಖಗೋಳವಿಜ್ಞಾನ, ಭೂಭೌತವಿಜ್ಞಾನ, ಭೂಗೋಳವಿಜ್ಞಾನ ಹಾಗೂ ಪ್ರಪಂಚದ ಪವನವಿಜ್ಞಾನಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನೇಕ ರಾಷ್ಟ್ರಗಳ ವಿಜ್ಞಾನಿಗಳಿದ್ದರು.

ಈ ಅವಧಿಯಲ್ಲಿ ನಡೆದ ಚಟುವಟಿಕೆಗಳನ್ನು ಮುಖ್ಯವಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ :

1. ಬಾಹ್ಯ ವಾಯುಮಂಡಲದ ಭೌತವಿಜ್ಞಾನ : ಸೂರ್ಯನಲ್ಲಿ ನಡೆಯುವ ಘಟನೆಗಳು ಹಾಗೂ ಬಾಹ್ಯಾಕಾಶದ ಇತರ ನಕ್ಷತ್ರಗಳಿಂದ ಮತ್ತು ಬಾಹ್ಯಾಕಾಶದ ಮಾಧ್ಯಮದಿಂದ ಬರುತ್ತಿರುವ ಕಣಗಳ ಹಾಗೂ ರಶ್ಮಿಪ್ರಕಾಶದ ಅಧ್ಯಯನ ಇದರಲ್ಲಿ ಸೇರಿತ್ತು. ಈ ವಿಚಾರದಲ್ಲಿ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಪ್ರಮುಖವಾಗಿ ಅಮೆರಿಕ ಮತ್ತು ರಷ್ಯ ದೇಶಗಳು ಅನೇಕ ಪರೀಕ್ಷಾರ್ಥ ರಾಕೆಟ್ಟುಗಳನ್ನೂ ಕೃತಕ ಭೂ ಉಪಗ್ರಹಗಳನ್ನೂ ಕಳುಹಿಸಿ, ಗಮನಾರ್ಹ ಅಂಕಿ ಅಂಶಗಳನ್ನು ಸಂಗ್ರಹಿಸಿದುವು.

2. ಶಾಖ ಮತ್ತು ನೀರಿಗೆ ಸಂಬಂಧಿಸಿದಂತೆ ನಡೆದ ಕಾರ್ಯಕ್ರಮಗಳು : ಹವಾಮಾನಶಾಸ್ತ್ರ, ಸಾಗರಗಳ ವಿವರಣೆಗೆ ಸಂಬಂಧಿಸಿದ ಶಾಸ್ತ್ರ ಹಾಗೂ ನೀರ್ಗಲ್ಲು ನದಿಗಳಿಗೆ ಸಂಬಂಧಿಸಿದ ಶಾಸ್ತ್ರ ಇವುಗಳ ಅಧ್ಯಯನ ವ್ಯಾಪ್ತಿಗೆ ಸೇರಿತ್ತು.

3. ಭೂರಚನೆ ಮತ್ತು ಅದರ ಒಳಭಾಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು : ಭೂಕಂಪಗಳಿಗೆ, ಗುರುತ್ವಕ್ಕೆ ಸಂಬಂಧಿಸಿದ ಹಾಗೂ ಅಕ್ಷಾಂಶ, ರೇಖಾಂಶಗಳಿಗೆ ಸಂಬಂಧಪಟ್ಟ ಅಧ್ಯಯನವನ್ನು ನಡೆಸಲಾಯಿತು. ಇವುಗಳ ಜೊತೆಗೆ ಜೀವವಿಜ್ಞಾನ ಸಂಬಂಧಪಟ್ಟ ಅಧ್ಯಯನ, ವಿವರಣಾತ್ಮಕ ವೈದ್ಯಶಾಸ್ತ್ರ ಮತ್ತು ಭೂಶಾಸ್ತ್ರಗಳಿಗೆ ಸಂಬಂಧಿಸಿದಂತೆ ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ಪ್ರದೇಶಗಳಲ್ಲಿ ಸಂಶೋಧನೆಗಳನ್ನು ನಡೆಸಲಾಯಿತು.

ಸೂರ್ಯನ ಕಪ್ಪುಕಲೆಗಳಲ್ಲಿ ಕಂಡುಬರುವ ಏರುಪೇರುಗಳಿಗೆ ಅನುಗುಣವಾಗಿ ಸೂರ್ಯನಿಂದ ಹೊರಡುವ ತೇಜಾಣುಗಳ ಚಲನವಲನ, ಅಯೋನಾವರಣದಲ್ಲಿ ಆಗುವ ಬದಲಾವಣೆಗಳು, ವಿದ್ಯುದಯಸ್ಕಾಂತ ಕ್ಷೇತ್ರದಲ್ಲಿನ ಬದಲಾವಣೆ, ಭೂಕಾಂತ ಕ್ಷೇತ್ರದಲ್ಲಿನ ಬದಲಾವಣೆ ಹಾಗೂ ಭೂಮಿಯ ಮೇಲಿನ ನಿತ್ಯಜೀವನದಲ್ಲಿ ಆಗುವಂಥ ಪರಿಣಾಮಗಳ ಅಧ್ಯಯನ–ಇವುಗಳನ್ನು ನಡೆಸುವ ಸಲುವಾಗಿ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. (ಎಂ.ಎಸ್.ಎಂ.)

**ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟ:** ಇದನ್ನು 1922ರಲ್ಲಿ ಸ್ಥಾಪಿಸಲಾಯಿತು. ಪ್ರಪಂಚದ ನಾನಾ ಭಾಗಗಳಲ್ಲಿ ನೆಲೆಸಿರುವ ಭೂಗೋಳವಿಜ್ಞಾನಿಗಳ ಸಂಪರ್ಕವನ್ನು ಬೆಳೆಸುವುದೇ ಇದರ ಮುಖ್ಯ ಗುರಿ. ನಾಲ್ಕು ವರ್ಷಗಳಿಗೊಮ್ಮೆ ಸಭೆ ಸೇರಿ ಭೌಗೋಳಿಕ ಸಮಸ್ಯೆಗಳನ್ನು ಚರ್ಚಿಸಲಾಗುವುದು. ಅನಂತರ ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ಅಗತ್ಯವಾದ ತಿಳಿವಳಿಕೆಯನ್ನು ನೀಡಲಾಗುವುದು. ಈ ಒಕ್ಕೂಟ ಕಾರ್ಯಕಾರಿ ಸಮಿತಿ ಮತ್ತು ಕಚೇರಿಯನ್ನು ಹೊಂದಿದೆ. ನಾಲ್ಕು ವರ್ಷಗಳ ಅವಧಿಗೆ ಒಕ್ಕೂಟದಲ್ಲಿ ಸೇವೆಯನ್ನು ಸಲ್ಲಿಸಲು ನಾನಾ ರಾಷ್ಟ್ರಗಳ ಭೂಗೋಳವಿಜ್ಞಾನಿಗಳ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಏಳುಜನ ಉಪಾಧ್ಯಕ್ಷರುಗಳನ್ನೂ ಹಾಗೂ ಒಬ್ಬ ಖಜಾಂಚಿಯನ್ನೂ ನೇಮಿಸಲಾಗುವುದು. 50 ರಾಷ್ಟ್ರಗಳು ಇದರ ಸದಸ್ಯತ್ವವನ್ನು ಪಡೆದಿವೆ. ಸಂಸ್ಥೆಗೆ ಮಾರ್ಗದರ್ಶನವನ್ನು ನೀಡಲು ಒಬ್ಬ ನಿರ್ದೇಶಕ, ಐದು ಸದಸ್ಯರನ್ನೊಳಗೊಂಡಿರುವ ಒಂದು ಸಮಿತಿಯನ್ನೂ ನೇಮಕ ಮಾಡಲಾಗುವುದು. ಇದು ಪ್ರಪಂಚಕ್ಕೆ ಸಂಬಂಧಿಸಿದ ಹಾಗೂ ರಾಷ್ಟ್ರೀಯ ಸಂಸ್ಥೆಗಳ ವಿಚಾರದಲ್ಲಿ ಒಕ್ಕೂಟಕ್ಕೆ ಮಾಹಿತಿಯನ್ನು ನೀಡುವುದು.

ಏಷ್ಯ ಖಂಡದ ಭಾರತದಲ್ಲಿ ಪ್ರಥಮವಾಗಿ 21ನೆಯ ಅಂತಾರಾಷ್ಟ್ರೀಯ ಭೂ ಭೂಗೋಳವಿಜ್ಞಾನ ಕಾಂಗ್ರೆಸ್ಸಿನ ಅಧಿವೇಶನ 1968 ಡಿಸೆಂಬರ್‌ನಲ್ಲಿ ನಡೆಯಿತು. (ಎಂ.ಎಸ್.ಎಂ.)

**ಅಂತಾರಾಷ್ಟ್ರೀಯ ವ್ಯಾಪಾರ:** ಪ್ರಪಂಚದ ಯಾವುದೇ ರಾಷ್ಟ್ರ ತಾನು ಉತ್ಪಾದಿಸುವ ಸರಕು–ಸೇವೆಗಳನ್ನು ಇತರ ರಾಷ್ಟ್ರಗಳಿಗೆ ಕಳಿಸಿ, ತನಗೆ ಅವಶ್ಯವೆನಿಸದ ಸರಕು–ಸೇವೆಗಳನ್ನು ಹೊರದೇಶಗಳಿಂದ ಪಡೆದುಕೊಳ್ಳುವುದಕ್ಕೆ ವಿದೇಶಿ ವ್ಯಾಪಾರವೆಂದು ಕರೆಯಲಾಗುವುದು. ಪ್ರಪಂಚದ ರಾಷ್ಟ್ರಗಳ ನೈಸರ್ಗಿಕ ಸಂಪನ್ಮೂಲಗಳ ಅಸಮಾನ ಹಾಗೂ ಹಂಚಿಕೆ ವೈವಿಧ್ಯತೆಯಿಂದ ಕೂಡಿರುವುದರಿಂದ ರಾಷ್ಟ್ರಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ ಕ್ಷೇತ್ರಗಳು ಕೂಡ ವೈವಿಧ್ಯತೆ ಇರುವುದರಿಂದ ರಾಷ್ಟ್ರ–ರಾಷ್ಟ್ರಗಳ ನಡುವೆ ವ್ಯಾಪಾರ ನಡೆಯುವಂತಾಯಿತು. ವಸ್ತುಗಳನ್ನು ಉತ್ಪಾದನೆ ಮಾಡಿದ ರಾಷ್ಟ್ರಗಳಿಂದ ಉತ್ಪಾದನೆ ಮಾಡದಿರುವ ರಾಷ್ಟ್ರಗಳ ನಡುವೆ ಪರಸ್ಪರ ವ್ಯಾಪಾರ ನಡೆಯುತ್ತದೆ. ಒಂದು ರಾಷ್ಟ್ರ ತಾನು ಉತ್ಪಾದಿಸುವ ಸರಕು ಸೇವೆಗಳನ್ನು ಇತರ ದೇಶಗಳಿಗೆ ಮಾರಾಟ ಮಾಡುವುದನ್ನು ರಫ್ತು ಅಥವಾ ನಿರ್ಯಾತವೆಂದು ಕರೆಯುವರು. ಅವಶ್ಯವೆನಿಸಿದ ಸರಕು ಸೇವೆಗಳನ್ನು ಇತರ ದೇಶಗಳಿಂದ ಪಡೆದುಕೊಳ್ಳುವುದನ್ನು ಆಯಾತ ಅಥವಾ ಆಮದು ಎಂದು ಕರೆಯುವರು. ಒಟ್ಟಿನಲ್ಲಿ ವ್ಯಾಪಾರದಿಂದ ಕೇವಲ ರಾಷ್ಟ್ರ–ರಾಷ್ಟ್ರಗಳ ನಡುವೆ ಸರಕು–ಸೇವೆಗಳ ವಿನಿಮಯ ನಡೆಯದೇ ಸ್ನೇಹ, ಶಾಂತಿ, ಸೌಹಾರ್ದ ಹಾಗೂ ಆರ್ಥಿಕ ಅಭಿವೃದ್ಧಿ ಹೊಂದಲು ಸದಾವಕಾಶವಿದೆ.

ಅಂತಾರಾಷ್ಟ್ರೀಯ ವ್ಯಾಪಾರ ಅನೇಕ ನಿಯಂತ್ರಣಗಳಿಗೊಳಪಟ್ಟಿರುವುದರಿಂದ ಬೇಕಾದ ಸರಕುಗಳನ್ನು ಬೇಕಾದ ಪ್ರಮಾಣದಲ್ಲಿ ಬೇಕಾದ ರಾಷ್ಟ್ರದಿಂದ ಪಡೆಯುವ ಸ್ವಾತಂತ್ರ್ಯವಿರುವುದಿಲ್ಲ. ಹಾಗೇಯೆ ಸರಕುಗಳನ್ನು ಬೇಕಾದ ದೇಶಕ್ಕೆ ರವಾನಿಸುವ ಸ್ವಾತಂತ್ರ್ಯವೂ ಇರುವುದಿಲ್ಲ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಬೇರೆ ಬೇರೆ ರಾಷ್ಟ್ರಗಳಲ್ಲಿ ಬೇರೆ ಬೇರೆ ವ್ಯಾಪಾರ ಪದ್ಧತಿಗಳಿರುತ್ತವೆ. ತೂಕ ಅಳತೆ, ಸುಂಕದ ನಿಯಮ, ತೆರಿಗೆ ಪದ್ಧತಿ, ಆಮದು–ರಫ್ತು ನಿಯಮ ಮೊದಲಾದವು ಬೇರೆ ಬೇರೆಯಾಗಿರುತ್ತವೆ. ಪ್ರತಿಯೊಂದು ರಾಷ್ಟ್ರ ತನ್ನದೇ ಆದ ನಾಣ್ಯವನ್ನು ಹೊಂದಿರುವುದರಿಂದ ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ವಿವಿಧ ನಾಣ್ಯಗಳು ಚಲಾವಣೆಯಲ್ಲಿರುತ್ತವೆ. ಹೀಗಾಗಿ ಸರಕುಗಳನ್ನು ಕಳುಹಿಸುವಾಗ ಅಥವಾ ಪಡೆಯುವಾಗ ತಮ್ಮ ರಾಷ್ಟ್ರದ ನಾಣ್ಯಗಳನ್ನು ಬೇರೆ ರಾಷ್ಟ್ರದ ನಾಣ್ಯಗಳಿಗೆ ವಿನಿಮಯ ಮಾಡಬೇಕಾಗುತ್ತದೆ. (ಎಲ್.ಟಿ.ಎನ್.)

**ಅ) ಆಂತರಿಕ ವ್ಯಾಪಾರ:** ಒಂದು ರಾಷ್ಟ್ರ ತಾನು ಉತ್ಪಾದಿಸುವ ಸರಕು–ಸೇವೆಗಳನ್ನು ಇತರ ಯಾವುದೇ ರಾಷ್ಟ್ರಗಳಿಗೆ ಕಳಿಸದೆ, ತನ್ನ ಗಡಿಯೊಳಗೆ ನಿರ್ವಹಿಸುವ ವ್ಯಾಪಾರಕ್ಕೆ ಆಂತರಿಕ ವ್ಯಾಪಾರ ಅಥವಾ ಸ್ವದೇಶಿ ವ್ಯಾಪಾರವೆಂದು ಕರೆಯುವರು. ಆಂತರಿಕ ವ್ಯಾಪಾರದ ಗಾತ್ರ ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿದ್ದು, ದೇಶದವಿಸ್ತಾರ, ಅದರ ಸಂಪನ್ಮೂಲಗಳ ವೈವಿಧ್ಯತೆ, ಜನಸಂಖ್ಯೆ, ಜೀವನಮಟ್ಟ ಮತ್ತು ಸಾರಿಗೆ ಸಂಪರ್ಕಗಳನ್ನು ಅವಲಂಬಿಸಿದೆ. ಜರ್ಮನಿ, ಇಂಗ್ಲೆಂಡ್, ಅಮೆರಿಕ ಸಂಯುಕ್ತ ಸಂಸ್ಥಾನಗಳಂತಹ ದೇಶಗಳಲ್ಲಿ ಆಂತರಿಕ ವ್ಯಾಪಾರ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತದೆ. ಆಂತರಿಕ ವ್ಯಾಪಾರದಲ್ಲಿ ಸರಕುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ರವಾನಿಸುವಾಗ ಅವುಗಳಿಗೆ ವಿಮೆ ಮಾಡಬೇಕೆಂಬ ಕಡ್ಡಾಯವಾದ ನಿಯಮವಿರುವುದಿಲ್ಲ ಮತ್ತು ವ್ಯಾಪಾರ ದೇಶದೊಳಗೆ ನಡೆಯುವುದರಿಂದ ಸರಕುಗಳು ನಾಶವಾಗುವ ಸಾಧ್ಯತೆಗಳು ತುಂಬಾ ಕಡಿಮೆ. ಆಂತರಿಕ ವ್ಯಾಪಾರದಲ್ಲಿ ಸರಕುಗಳನ್ನು ಕೊಳ್ಳುವವರು ಮತ್ತು ಮಾರುವವರು ಯಾವುದೇ ನಿರ್ಬಂಧನೆಗೆ ಒಳಪಡದೆ ಸ್ವಾತಂತ್ರ್ಯವಾಗಿರುವರು. ಇಡೀ ರಾಷ್ಟ್ರದಲ್ಲಿ ಒಂದೇ ನಾಣ್ಯ ಚಲಾವಣೆಯಲ್ಲಿ ಇರುವುದರಿಂದ ನಾಣ್ಯದ ವಿನಿಮಯ ಸಮಸ್ಯೆಯೇ ಉದ್ಭವಿಸುವುದಿಲ್ಲ. ಒಂದೇ ವ್ಯಾಪಾರ ಪದ್ಧತಿ ರೂಢಿಯಲ್ಲಿರುವುದರಿಂದ ತೂಕ, ಅಳತೆ, ಸುಂಕದ ನಿಮಯ, ತೆರಿಗೆಯ ಪದ್ಧತಿ, ಆಮದು, ರಫ್ತುಗಳ ನಿಮಯ ಮೊದಲಾದವುಗಳ ತೊಂದರೆ ಉದ್ಭವಿಸುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಆಂತರಿಕ ವ್ಯಾಪಾರ ಒಂದೇ ರಾಷ್ಟ್ರದ ಒಳಗೆ ನಡೆಯುವುದರಿಂದ ವ್ಯಾಪಾರದ ನಿಯಮಾವಳಿಗಳಾಗಲೀ, ನಿರ್ಬಂದಗಳಾಗಲಿ ಜಟಿಲವಾಗಿರುವುದಿಲ್ಲ. (ಎ.ಪಿ.ಎಸ್.)

**ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು:** 1930ರ ದಶಕದಲ್ಲಿ ಗೋದಿ, ಸಕ್ಕರೆ, ತವರ ಮುಂತಾದ ವಸ್ತುಗಳಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ಜಾರಿಗೆ ಬಂದುವು. ಸರಕುಗಳ ನಿಯಂತ್ರಣ ಪ್ರಯತ್ನ ಈ ಮೊದಲೇ ಕಂಡು ಬಂದಿದ್ದರೂ ಇದು ಪ್ರಾಮುಖ್ಯತೆ ಗಳಿಸಿ ನಿರ್ದಿಷ್ಟ ರೂಪವನ್ನು ಪಡೆದದ್ದು ಇದೇ ಅವಧಿಯಲ್ಲಿ.

ಮುಖ್ಯವಾದ ಕಚ್ಚಾವಸ್ತುಗಳ ಮತ್ತು ಕೆಲವು ವಿಶೇಷ ಆಹಾರ ವಸ್ತುಗಳ ಬೆಲೆ ಹೆಚ್ಚು ಏರಿಳಿತಕ್ಕೊಳಗಾಗಿ ಉತ್ಪಾದಕರಿಗೆ ಮತ್ತು ಗ್ರಾಹಕರಿಗೆ ಕಷ್ಟ ಪರಿಸ್ಥಿತಿಯನ್ನುಂಟು ಮಾಡುತ್ತಿದ್ದುದನ್ನು ತಪ್ಪಿಸುವುದಕ್ಕಾಗಿ ಸರಕು ಒಪ್ಪಂದಗಳನ್ನು ರೂಪಿಸಲಾಯಿತು. ಬೇಡಿಕೆ ಮತ್ತು ನೀಡಿಕೆಗಳಲ್ಲಿ ಆಗುವ ಬದಲಾವಣೆಗಳು ಬೆಲೆಗಳ ಏರಿಳಿತಕ್ಕೆ ಕಾರಣವಾಗುವುದರಿಂದ ಸರಕುಗಳ ಉತ್ಪಾದನೆ ಮತ್ತು ವ್ಯಾಪಾರದ ಮೇಲೆ ಅಂತಾರಾಷ್ಟ್ರೀಯ ಹತೋಟಿ ಅವಶ್ಯಕವೆಂಬುದನ್ನು ಮನಗಂಡು ಒಪ್ಪಂದಗಳ ಮೂಲಕ ಮುಖ್ಯವಾದ ಕಚ್ಚಾವಸ್ತುಗಳು, ಆಹಾರ ವಸ್ತುಗಳ ಉತ್ಪಾದನೆ ಮತ್ತು ವ್ಯಾಪಾರದ ಮೇಲೆ ಹತೋಟಿ ಇಡಲು ಯತ್ನಿಸಲಾಯಿತು. ಉತ್ಪಾದನೆಯನ್ನು ನಿಗದಿ ಮಾಡಿ ಅಧಿಕ ಉತ್ಪಾದನೆಯಿಂದ ಉದ್ಭವಿಸುವ ಸಮಸ್ಯೆಗಳನ್ನು ತಡೆಯಲು ಮತ್ತು ನಿಗಧಿಯಾದ ಬೆಲೆಗೆ ಕೊಳ್ಳಲು ಮತ್ತು ಮಾರಲು ಒಪ್ಪಂದ ಮಾಡಿಕೊಂಡು ಉತ್ಪಾದಕರಿಗೆ ಒದಗಬಹುದಾದ ನಷ್ಟವನ್ನು ತಪ್ಪಿಸುವುದು–ಇವೇ ಅಂತಾರಾಷ್ಟ್ರೀಯ ಸರಕು ಒಪ್ಪಂದಗಳ ಮೂಲಭೂತ ಉದ್ದೇಶಗಳು.

ಅಂತಾರಾಷ್ಟ್ರೀಯ ಗೋದಿ ಒಪ್ಪಂದ: ಹಲವಾರು ವರ್ಷಗಳ ಪ್ರಯತ್ನದ ಫಲವಾಗಿ 1933ರಲ್ಲಿ ಪ್ರಥಮ ಬಾರಿಗೆ ಅಂತಾರಾಷ್ಟ್ರೀಯ ಗೋದಿ ಒಪ್ಪಂದ ಜಾರಿಗೆ ಬಂದಿತು. ಕೆಲವು ವರ್ಷಗಳಿಗೆ ಮಾತ್ರ ಅನ್ವಯಿಸುವಂತೆ ಒಪ್ಪಂದವನ್ನು ಮಾಡಿಕೊಂಡು ಅದರ ಅವಧಿ ಮುಗಿದ ಕೂಡಲೆ ಸೂಕ್ತ ಮಾರ್ಪಾಡುಗಳೊಂದಿಗೆ ಮುಂದಿನ ಕೆಲವು ವರ್ಷಗಳಿಗೆ ಅನ್ವಯಿಸುವಂತೆ ಮತ್ತೆ ಒಪ್ಪಂದ ಮಾಡಿಕೊಳ್ಳಲಾಗುತ್ತಿತ್ತು. 1949ರ ಒಪ್ಪಂದ 1953ರ ವರೆಗೆ ಜಾರಿಯಲ್ಲಿದ್ದು, 1953ರಲ್ಲಿ ಅದನ್ನು 1957ರ ವರೆಗೂ ಅನಂತರ 1962ರ ವರೆಗೂ ಮುಂದುವರಿಸಲಾಯಿತು. ಈ ಒಪ್ಪಂದಗಳ ಪ್ರಕಾರ, ಸ್ಥಿರವಾದ ಬೆಲೆಯಲ್ಲಿ ಆಮದು, ರಫ್ತು ವ್ಯಾಪಾರ ನಿರಾತಂಕವಾಗಿ ನಡೆಯುವಂತೆ ಭರವಸೆ ನೀಡಲಾಯಿತು. ಒಂದೊಂದು ಅವಧಿಯ ಒಪ್ಪಂದದಲ್ಲೂ ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬಂದರೂ ಎಲ್ಲದರ ಸಾಮಾನ್ಯ ನಿಬಂಧನೆಗಳು ಈ ರೀತಿ ಇದ್ದುವು: 1. ರಫ್ತು ರಾಷ್ಟ್ರಗಳು ನಿಗದಿಯಾದ ಪ್ರಮಾಣದ ಗೋದಿಯನ್ನು ನಿಗದಿಯಾದ ಅಧಿಕ ಬೆಲೆಯನ್ನು ಮೀರದಂತೆ ಖಾತರಿಯಾಗಿ ಒದಗಿಸಬೇಕು. 2. ಆಮದು ರಾಷ್ಟ್ರಗಳು ಗೊತ್ತಾದ ಪ್ರಮಾಣದ ಗೋದಿಯನ್ನು ನಿಗದಿಯಾದ ಕನಿಷ್ಠ ಬೆಲೆಗೆ ಕಡಿಮೆ ಇಲ್ಲದಂತೆ ರಫ್ತುರಾಷ್ಟ್ರಗಳಿಂದ ಖಾತರಿಯಾಗಿ ಕೊಳ್ಳಬೇಕು. 3. ಒಪ್ಪಂದಕ್ಕೆ ಸಹಿಹಾಕಿದ ರಾಷ್ಟ್ರಗಳು ಗೋದಿಯ ಅಂತಾರಾಷ್ಟ್ರೀಯ ಬೆಲೆಯ ಕನಿಷ್ಠತಮ ಮತ್ತು ಅಧಿಕ ಮಟ್ಟವನ್ನು ನಿಗದಿ ಮಾಡಬೇಕು. ಆಂತರಿಕ ಬೆಲೆಗೆ ಈ ನಿಯಂತ್ರಣ ಅನ್ವಯಿಸಕೂಡದು.

ಗೋದಿ ಒಪ್ಪಂದದ ಆಡಳಿತವನ್ನು ನಿರ್ವಹಿಸಲು ಒಂದು ಅಂತಾರಾಷ್ಟ್ರೀಯ ಗೋದಿ ಸಭೆಯನ್ನು ನಿಯಮಿಸಲಾಯಿತು. ಗೋದಿ ಬೆಲೆ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ ಸದಸ್ಯರಾಷ್ಟ್ರಗಳಿಗೆ ಒದಗಿಸುವುದು, ವಾರ್ಷಿಕ ವರದಿಗಳನ್ನು ಪ್ರಕಟಿಸುವುದು ಮತ್ತು ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸುವುದರಿಂದ ಸಂಭವಿಸುವ ವಿವಾದಗಳನ್ನು ಪರಿಹರಿಸುವುದು–ಮುಂತಾದುವು ಇದರ ಮುಖ್ಯ ಕರ್ತವ್ಯಗಳು. ಈ ಸಭೆಗೆ ಪ್ರತಿಸದಸ್ಯ ರಾಷ್ಟ್ರದಿಂದ ಒಬ್ಬೊಬ್ಬ ಪ್ರತಿನಿಧಿ ಇರಬೇಕೆಂದು ತೀರ್ಮಾನಿಸಲಾಯಿತು. ಸಭೆಯ ಕಾರ್ಯ ಚಟುವಟಿಕೆಗಳಲ್ಲಿ ನೆರವಾಗಲು ಒಂದು ಕಾರ್ಯಕಾರಿ ಸಮಿತಿ ಮತ್ತು ಒಂದು ಬೆಲೆ ಸಲಹಾ ಸಮಿತಿ ನೇಮಕವಾದುವು.

ಅಂತಾರಾಷ್ಟ್ರೀಯ ಸಕ್ಕರೆ ಒಪ್ಪಂದ : ಇದರ ಉದ್ದೇಶವೂ ಬೆಲೆಯ ಸ್ತಿಮಿತತೆಯನ್ನು ಕಾಪಾಡುವುದೇ ಆಗಿದೆ. ಈ ದಿಶೆಯಲ್ಲಿ 1920ರಲ್ಲಿ ಪ್ರಥಮ ಪ್ರಯತ್ನ ನಡೆಯಿತು. 1931ರಲ್ಲಿ ರೂಪುಗೊಂಡ ಚಾಡ್‌ಬೋರ್ನ್ ಯೋಜನೆ ಈ ದಿಶೆಯಲ್ಲಿ ಮತ್ತೊಂದು ಪ್ರಯತ್ನ. ಆದರೆ ಇವು ಅಷ್ಟೇನೂ ಫಲಕಾರಿಯಾಗಲಿಲ್ಲ. ಸಕ್ಕರೆಯ ಅಂತಾರಾಷ್ಟ್ರೀಯ ಬೆಲೆಯನ್ನು ಸ್ತಿಮಿತದಲ್ಲಿಡುವ ಪ್ರಯತ್ನಗಳಲ್ಲೆಲ್ಲ ಮಹತ್ತರವಾದುದು 1954ರಲ್ಲಿ ಜಾರಿಗೆ ಬಂದ ಅಂತಾರಾಷ್ಟ್ರೀಯ ಸಕ್ಕರೆ ಒಪ್ಪಂದ. 1953ರಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ

ಲಂಡನ್ನಿನಲ್ಲಿ 50 ರಾಷ್ಟ್ರಗಳ ಪ್ರತಿನಿಧಿಗಳು ಸೇರಿದ್ದ ಸಭೆಯಲ್ಲಿ ಆದ ತೀರ್ಮಾನಕ್ಕನುಗುಣವಾಗಿ ಈ ಒಪ್ಪಂದ ಜಾರಿಗೆ ಬಂದಿತು. 22 ರಫ್ತುರಾಷ್ಟ್ರಗಳು ಮತ್ತು 16 ಆಮದುರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿದುವು. ಈ ಒಪ್ಪಂದದ ಆಡಳಿತವನ್ನು ನಿರ್ವಹಿಸಲು ಅಂತಾರಾಷ್ಟ್ರೀಯ ಸಕ್ಕರೆ ಸಭೆಯೊಂದು ನಡೆಯಿತು. ಸಭೆಯಲ್ಲಿ ಪ್ರತಿ ಸದಸ್ಯರಾಷ್ಟ್ರದಿಂದ ಒಬ್ಬೊಬ್ಬ ಸದಸ್ಯ ಇರುವರು. ಐವರು ಸದಸ್ಯರನ್ನುಳ್ಳ ಕಾರ್ಯಕಾರಿ ಸಮಿತಿಯೊಂದು ಸಭೆಯ ಕರ್ತವ್ಯನಿರ್ವಹಣೆಗೆ ಸಹಾಯಕವಾಗಿದೆ.

ಅಂತಾರಾಷ್ಟ್ರೀಯ ತವರ ಒಪ್ಪಂದ : ಎರಡನೆಯ ಮಹಾಯುದ್ಧ ಪೂರ್ವದಲ್ಲಿಯೂ ಒಪ್ಪಂದಗಳ ಮೂಲಕ ತವರದ ಬೆಲೆಯ ಸ್ತಿಮಿತತೆಯನ್ನು ಕಾಪಾಡಲು ಪ್ರಯತ್ನಗಳು ನಡೆದುವು. 1921ರಲ್ಲಿ ಮಲಯ, ನೆದರ್‌ಲೆಂಡ್ಸ್ ಮತ್ತು ಈಸ್ಟ್ ಇಂಡೀಸ್‌ಗಳು ಸೇರಿ ಬಾಂಡೂಂಗ್ ಪೂಲ್ ಎಂಬ ವ್ಯವಸ್ಥೆಯನ್ನು ಮಾಡಿದ್ದುವು. 1929ರಲ್ಲಿ ತವರ ತಯಾರಿಕೆಗಾರರ ಸಂಘವೊಂದನ್ನು ಬ್ರಿಟನ್, ನೆದರ್‌ಲೆಂಡ್ಸ್ ಮತ್ತು ಬೊಲಿವಿಯಾಗಳು ಸ್ಥಾಪಿಸಿದುವು. 1931ರಲ್ಲಿ ಒಂದು ಅಂತಾರಾಷ್ಟ್ರೀಯ ತವರ ಒಪ್ಪಂದವೇ ಜಾರಿಗೆ ಬಂದಿತು. 1937ರಲ್ಲಿ ಈ ಒಪ್ಪಂದಕ್ಕೆ ಪ್ರತಿಯಾಗಿ ಹೊಸ ಒಪ್ಪಂದವೊಂದು ಜಾರಿಗೆ ಬಂದಿತು. ಎರಡನೆಯ ಮಹಾಯುದ್ಧದ ಅನಂತರ ತವರದ ಬೇಡಿಕೆ–ನೀಡಿಕೆಯ ಮೇಲೆ ಹತೋಟಿಯನ್ನಿಟ್ಟು ಬೆಲೆಯನ್ನು ಸ್ತಿಮಿತದಲ್ಲಿಡಲು ಹೆಚ್ಚು ವ್ಯಾಪಕವಾದ ಪ್ರಯತ್ನ ನಡೆಯಿತು. ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆದ ಸಮ್ಮೇಳನಗಳ ಫಲವಾಗಿ 1953ರಲ್ಲಿ ಅಂತಾರಾಷ್ಟ್ರೀಯ ತವರ ಒಪ್ಪಂದ ಜಾರಿಗೆ ಬಂದಿತು. ಇದರ ಆಡಳಿತ ನಿರ್ವಹಣೆಗಾಗಿ ಅಂತಾರಾಷ್ಟ್ರೀಯ ತವರ ಸಭೆಯೊಂದು ಲಂಡನ್‌ನಲ್ಲಿ ಸ್ಥಾಪಿತವಾಯಿತು.

ಯುದ್ಧಪೂರ್ವ ಮತ್ತು ಯುದ್ಧೋತ್ತರ ವ್ಯವಸ್ಥೆಗಳೆರಡರಲ್ಲೂ ಬೆಲೆಗಳ ಸ್ತಿಮಿತತೆಯನ್ನು ಕಾಪಾಡಲು ಅನುಸರಿಸಿದ ಮುಖ್ಯ ಕ್ರಮಗಳು ಮೂರು. 1. ಬಫರ್ ದಾಸ್ತಾನು; 2. ರಫ್ತುಪಾಲು ನಿಗದಿ ಮಾಡುವುದು; 3. ಬೆಲೆಯ ಮೇಲ್ಮಿತಿ ಮತ್ತು ಕೆಳಮಿತಿಯನ್ನು ನಿಗದಿ ಮಾಡುವುದು. ತವರದ ನೀಡಿಕೆ ಹೆಚ್ಚಿದಾಗ ಹೆಚ್ಚಳವನ್ನು ದಾಸ್ತಾನು ಮಾಡಿಕೊಂಡು ಬೆಲೆ ಇಳಿಯದಂತೆ ಮಾಡುವುದು ಬಫರ್ ದಾಸ್ತಾನುವ್ಯವಸ್ಥೆಯ ಉದ್ದೇಶ. ಪ್ರತಿ ಸದಸ್ಯ ರಾಷ್ಟ್ರದ ರಫ್ತು ಕೋಟಾವನ್ನು ನಿಗದಿ ಮಾಡಿ ಅದಕ್ಕೆ ಖಾತರಿಯಾದ ಮಾರುಕಟ್ಟೆ ದೊರಕುವಂತೆ ಮಾಡುವುದೇ ರಫ್ತುಪಾಲು ನಿಗದಿವ್ಯವಸ್ಥೆಯ ಉದ್ದೇಶ. ಬೆಲೆಯ ಮೇಲ್ಮಿತಿ ಮತ್ತು ಕೆಳಮಿತಿಯನ್ನು ನಿಗದಿ ಮಾಡುವ ವ್ಯವಸ್ಥೆಯೂ ಬೆಲೆಯ ಸ್ತಿಮಿತತೆಯನ್ನು ಕಾಪಾಡುವುದರಲ್ಲಿ ನೆರವು ನೀಡುತ್ತದೆ.

ಅಂತಾರಾಷ್ಟ್ರೀಯ ಸರಕುಒಪ್ಪಂದಗಳು ಮುಖ್ಯವಾದ ಸರಕುಗಳ ಉತ್ಪನ್ನ, ಬೇಡಿಕೆ, ನೀಡಿಕೆ, ಬೆಲೆ ಮುಂತಾದುವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಣೆ ಮಾಡುವ ಆದರ್ಶ ಧ್ಯೇಯಗಳನ್ನಿಟ್ಟುಕೊಂಡು ನಿಯೋಜಿಸಲ್ಪಟ್ಟವೆ. ಆದರೆ ಕೆಲವು ಸಮಸ್ಯೆಗಳಿಂದಾಗಿ ಇವು ಹೆಚ್ಚು ಜಯಪ್ರದವಾಗಿಲ್ಲ. ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ಸಾರ್ಥಕವಾಗಬೇಕಾದರೆ ಅವು ಹೆಚ್ಚು ವ್ಯಾಪಕವಾದ ಸದಸ್ಯತ್ವವನ್ನು ಹೊಂದಿರಬೇಕು. ಕೆಲವೇ ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಿ ಉಳಿದುವು ಒಪ್ಪಂದದ ವ್ಯಾಪ್ತಿಗೆ ಸೇರದಿದ್ದರೆ, ಇಂಥ ವ್ಯವಸ್ಥೆ ಪೂರ್ಣವಾಗಿ ಯಶಸ್ವಿಯಾಗುವುದಿಲ್ಲ. ಅಷ್ಟೇ ಅಲ್ಲದೆ ಇದುವರೆಗೆ ರೂಪಿತವಾಗಿರುವ ಒಪ್ಪಂದಗಳು ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಸರಕಿಗೆ ಸಂಬಂಧಿಸಿದಂತಿದ್ದು ಸಮಗ್ರವಾದ ಸರಕು ಒಪ್ಪಂದ ವ್ಯವಸ್ಥೆಯ ಪ್ರಯತ್ನ ಇನ್ನೂ ನಡೆದಿಲ್ಲ. ಇಂಥ ಕೆಲವು ಕುಂದು ಕೊರತೆಗಳಿಂದಾಗಿ ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ಅಷ್ಟಾಗಿ ಯಶಸ್ವಿಯಾಗಿಲ್ಲವೆಂಬ ಅಂಶ ಕಂಡುಬರುತ್ತಿದೆ. (ಬಿ.ಎಸ್.ಎಸ್.ಎ.)

**ಅಂಧಕಾರ ಯುಗ:** ರೋಮನ್ ಸಾಮ್ರಾಜ್ಯದ ಪತನದ ಅನಂತರ ರಾಜಕೀಯ ಅಶಾಂತಿಯಿಂದಾಗಿ ವೈಜ್ಞಾನಿಕ ಜ್ಞಾನದ ಅಭಿವೃದ್ಧಿ ಯುರೋಪಿನಲ್ಲಿ ಕುಂಠಿತವಾದುದ್ದನ್ನೇ ಅಂಧಕಾರಯುಗ ಎನ್ನಲಾಗಿದೆ. ಕ್ರೈಸ್ತ ಧರ್ಮ ವ್ಯಾಪಕವಾಗಿ ಬೆಳೆದು, ವೈಜ್ಞಾನಿಕ ಜ್ಞಾನದ ಬೆಳವಣಿಗೆಗೆ ಬದಲಾಗಿ ಸಂಪ್ರದಾಯ ನಂಬಿಕೆಗಳು, ಧಾರ್ಮಿಕ ಅಂಧಶ್ರದ್ಧೆ ಪ್ರಚುರಗೊಂಡವು. ಎರಟಾಸ್ತನಿಸ್, ಸ್ಟ್ರ್ಯಾಬೋ, ಅರಿಸ್ಟಾಟಲ್, ಟಾಲಮಿಯಂತವರ ಸಂಶೋಧನೆಗಳು ಮಸುಕಾದವು. ಭೂಮಿಯ ಗೋಳಾಕಾರ ಹಾಗೂ ಸೂರ್ಯ ಕೇಂದ್ರವಾದಗಳಿಗೆ ಬದಲಾಗಿ ಹುಸಿಗೊಳಿಸುವಂತಹ ವಿವರಣೆಗಳು ಪ್ರಚಲಿತಗೊಂಡವು. ವೈಜ್ಞಾನಿಕ ನಕ್ಷೆಗಳಿಗೆ ಬದಲಾಗಿ T-O ನಕ್ಷೆಗಳು ರಚನೆಗೊಂಡು ಮೂಢ ನಂಬಿಕೆಗಳನ್ನು ಪ್ರತಿಬಿಂಬಿಸುತ್ತಿದ್ದವು. (ಸಿ.ವೈ.ಪಿ.)

**ಅಂಬಾಲ:** ಹರಿಯಾಣ ರಾಜ್ಯದ ಒಂದು ಜಿಲ್ಲೆ ಮತ್ತು ಅದರ ಆಡಳಿತ ಕೇಂದ್ರ. ಜಿಲ್ಲೆಯ ವಿಸ್ತೀರ್ಣ ಸು 5420 ಚ.ಕಿಮೀ. ಅಂಬಾಲ ಪಟ್ಟಣ ($30^0 21'$ ಉ. ಅಕ್ಷಾಂಶ ಮತ್ತು $76^0 52'$ ಪೂ. ರೇಖಾಂಶ) ದಂಡು ಮತ್ತು ನಗರಭಾಗಗಳನ್ನು ಹೊಂದಿದೆ. ದಂಡಿನ ಭಾಗ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಸ್ಥಾಪಿತವಾಯಿತು. ಇದು ಅಂಬಾಲ ನಗರದ ಪೂರ್ವಕ್ಕಿದ್ದು ದಟ್ಟವಾದ ಜನಸಂಖ್ಯೆಯಿಂದ ಕೂಡಿದೆ. ನಗರದ ಜನಸಂಖ್ಯೆ 139222.

ಐತಿಹಾಸಿಕವಾಗಿ ಅಂಬಾಲ ವೇದಜನಾಂಗದ ಮೂಲಪುರುಷರಾದ ಆರ್ಯರ ಪುರಾತನ ಸ್ಥಳವಾಗಿತ್ತು. ಅಂಬಾಲ ಕ್ಷೇತ್ರ 14ನೆಯ ಶತಮಾನದಲ್ಲಿ ಅಂಬಾ ರಜಪೂತನಿಂದ ಸ್ಥಾಪಿತವಾಯಿತು. ಅನಂತರ ಪಟ್ಟಣವನ್ನು ಆತನ ಜ್ಞಾಪಕಾರ್ಥವಾಗಿ ಅಂಬಾಲವೆಂದು ಕರೆಯಲಾಯಿತು. ಈ ಹೆಸರು ಅಂಬಾಲದ ಸುತ್ತಮುತ್ತಲಿನ ಆವರಣದಲ್ಲಿ ಗೋಚರವಾಗುವ ಮಾವಿನತೋಪುಗಳಿಂದ ಬಂದಿರಲಿಕ್ಕೂ ಸಾಕು. ಅಂಬವಾಲ ಎಂಬುದಾಗಿ ಕರೆಯಲಾಗುತ್ತಿದ್ದುದು ಅನಂತರ ಅಶುದ್ಧವಾಗಿ ಅಂಬಾಲವಾಗಿರಬಹುದು. 1809ರಲ್ಲಿ ಒಡೆಯನಾಗಿದ್ದ ದಯಾಕಾರ್ ನಿಧನನಾದ ಅನಂತರ 1823ರಲ್ಲಿ ಅದು ಬ್ರಿಟಿಷರ ಕೈಸೇರಿತು; ಮುಂದೆ 1849ರಲ್ಲಿ ಜಿಲ್ಲೆಯ ಕೇಂದ್ರ ಕಚೇರಿ ಇಲ್ಲಿ ಸ್ಥಾಪಿತವಾಯಿತು.

ಭೌಗೋಳಿಕವಾಗಿ ಅಂಬಾಲ ಮೈದಾನ ಮತ್ತು ಬೆಟ್ಟಗುಡ್ಡಗಳು ಸೇರುವ ನೆಲೆಯಲ್ಲಿದೆ. ತನ್ನ ಹಿನ್ನೆಲೆಯ ಪ್ರಭಾವದಿಂದ ಒಂದು ಪ್ರಮುಖ ಕೈಗಾರಿಕಾ ಪಟ್ಟಣವಾಗಿ ಬೆಳೆದಿದೆ. ಕಾಗದ ತಯಾರಿಕೆ, ಹಣ್ಣುಗಳ ಸಂರಕ್ಷಣೆ, ರೇಷ್ಮೆ ಕೈಗಾರಿಕೆ, ಗಾಜು ಮತ್ತು ವೈಜ್ಞಾನಿಕ ಸಲಕರಣೆಗಳ ತಯಾರಿಕೆ ಮತ್ತು ಆಟದ ಸಾಮಾನುಗಳು ಅಂಬಾಲದ ಪ್ರಮುಖ ಕಾರ್ಯ ಚಟುವಟಿಗೆಗಳು. ಅಂಬಾಲ ಇಂದಿಗೂ ಧಾರ್ಮಿಕತೆಗೆ ಹೆಸರುವಾಸಿ. ಸಿಕ್ಕರ ಒಂದು ಪ್ರಮುಖ ದೇವಸ್ಥಾನವಾದ ಗುರುದ್ವಾರ ಮಂಜಿ ಸಾಹಿಬ್ ಇಲ್ಲಿದೆ, ಪ್ರತಿ ವರ್ಷ ಅನೇಕ ಯಾತ್ರಿಕರನ್ನು ಮತ್ತು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. (ಡಿ.ಸಿ.ಬಿ.)

**ಅಕರ್ ಮ್ಯಾನ್:** ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಸಿದ್ಧ ಭೂಗೋಳ ವಿಜ್ಞಾನಿ. ಅಮೆರಿಕದ ನಗರ ಭೂಗೋಳ ವಿಜ್ಞಾನದಲ್ಲಿ ಸಾಕಷ್ಟು ಸಂಶೋಧನೆಗಳನ್ನು ಮಾಡಿದವರು. ಇವರು ಪ್ರಪಂಚ ಮಹಾಯುದ್ಧದ ಅನಂತರದ ವರ್ಷಗಳಲ್ಲಿ ತನ್ನ ವಿದ್ಯಾರ್ಥಿಗಳ ಸಹಕಾರದೊಂದಿಗೆ ಸಾಂಸ್ಕೃತಿಕ ಕಾರ್ಯ ವಿಧಾನ ಹಾಗೂ ವ್ಯವಸ್ಥಾನುಸಾರ ಭೂಗೋಳ ಶಾಸ್ತ್ರದ ವಿಷಯಗಳ ಕುರಿತು ಪರಿಮಾಣಾತ್ಮಕ ವಿಧಾನದ ಅಧ್ಯಯನಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದರು. ಇವರ ಸಂಶೋಧನ ಲೇಖನ ಜಿಯೊಗ್ರಫಿ ಎ ಫಂಡಮೆಂಟಲ್ ರೀಸರ್ಚ್ ಡಿಸಿಪ್ಲೀನ್ ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ರಕಟಗೊಂಡಿತು (1958). (ಬಿ.ಪಿ.)

**ಅಕೋಲ:** ಮಹಾರಾಷ್ಟ್ರ ಪ್ರಾಂತ್ಯದ ಒಂದು ಮುಖ್ಯ ಪಟ್ಟಣ ಹಾಗೂ ತಾಲ್ಲೂಕು ಕೇಂದ್ರ ($20^0 42'$ ಉ. ಅಕ್ಷಾಂಶ, $77^0 2'$ ಪೂ. ರೇಖಾಂಶ). ಅಕೋಲ ಪೂರ್ಣಾನದಿಯ ಉಪನದಿಯಾದ ಮುರ್ನಾ ನದಿಯ ಪಶ್ಚಿಮದಡದ ಭಾಗವನ್ನು ಆಕ್ರಮಿಸಿಕೊಂಡಿದೆ. ಪೂರ್ವದಡದ ಭಾಗದಲ್ಲಿ ತಾಜ್ನಾಪೇಟೆ, ಸರ್ಕಾರಿ ಕಟ್ಟಡಗಳು ಮತ್ತು ಐರೋಪ್ಯರ ನಿವಾಸಗಳಿವೆ. ಜನಸಂಖ್ಯೆ ಸು. 1,50,000. ಪುರಸಭೆಯ ಆಡಳಿತಕ್ಕೆ ಒಳಪಟ್ಟಿದೆ.

ಪಟ್ಟಣದ ಸುತ್ತಲಿನ ಕೋಟೆ 19ನೆಯ ಶತಮಾನದ್ದು. ಈ ಪಟ್ಟಣ ಹತ್ತಿ ಮತ್ತು ಹೊಗೆಸೊಪ್ಪಿನ ವ್ಯಾಪಾರಕ್ಕೆ ಹೆಸರುವಾಸಿಯಾದ ಕೇಂದ್ರ. ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ ಅನೇಕ ಕಾರ್ಖಾನೆಗಳುಂಟು. ವಿದ್ಯಾಭ್ಯಾಸದ, ಕೈಗಾರಿಕಾ ಶಾಲೆಯ ಸೌಲಭ್ಯಗಳು ದೊರಕುತ್ತವೆ. ಊರಿನ ತುಂಬ ವಖಾರಗಳು ದಲಾಲಿ ಸಂಸ್ಥೆಗಳೇ ಕಂಡುಬರುತ್ತವೆ.

ಜಿಲ್ಲೆಯ ವಿಸ್ತೀರ್ಣ ಸು. 10,598 ಚ.ಕಿಮೀ. ಜನಸಂಖ್ಯೆ ಸು. 23 ಲಕ್ಷ. ಈ ಜಿಲ್ಲೆಯ ಭೂಭಾಗ ಚಪ್ಪಟೆಯಾಗಿದ್ದು ಕಣಿವೆಯ ಪ್ರದೇಶ ಸಾಕಷ್ಟಿದೆ. ಉತ್ತರ ಭಾಗದಲ್ಲಿ ಮೇಲ್‌ಘಟ್ ಬೆಟ್ಟಗಳಿವೆ. ಪೂರ್ವದಲ್ಲಿ ಅಜಂತಾ ಬೆಟ್ಟಗಳು ಜಿಲ್ಲೆಗೆ ಸೇರಿಕೊಂಡಂತಿವೆ. ಈ ಭಾಗ ಸಮುದ್ರಮಟ್ಟಕ್ಕಿಂತ 600 ಮೀ ಗಳಷ್ಟು ಎತ್ತರದಲ್ಲಿದ್ದು ಬಾಸಿಮ್ ಪ್ರಸ್ಥಭೂಮಿಯನ್ನು ಒಳಗೊಂಡಿದೆ.

ಅಜಂತ ಬೆಟ್ಟಗಳ ಉತ್ತರ ಭಾಗದಲ್ಲಿ ತಪತಿಗೆ ಉಪನದಿಯಾದ ಪೂರ್ಣಾ ಮತ್ತು ಅದರ ಉಪನದಿಗಳು ಹರಿಯುತ್ತವೆ. ಬೇಸಗೆಯಲ್ಲಿ ಶಾಖ ಹೆಚ್ಚು. ವಾರ್ಷಿಕ ಸರಾಸರಿ ಮಳೆ 85 ಸೆಂಮೀ. ಪೂರ್ಣಾ ಕಣಿವೆ ಮೆಕ್ಕಲುಮಣ್ಣಿನಿಂದ ಕೂಡಿದ ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದ್ದು ಹತ್ತಿ ಬೆಳೆಗೆ ಉತ್ಕೃಷ್ಟ ಪ್ರದೇಶವಾಗಿದೆ. ಈ ಭಾಗವೆಲ್ಲವನ್ನೂ ಕೃಷಿಗೆ ಅಳವಡಿಸಿಕೊಳ್ಳಲಾಗಿದೆ. (ಎಂ.ಎಸ್.;ಡಿ.ಕೆ.)

**ಅಕ್ಯಾಬ್:** ಮಯನ್ಮಾರ್‌ನ (ಬರ್ಮಾ) ಅರಕಾನ್ ಪ್ರಾಂತ್ಯದ ಪಶ್ಚಿಮ ತೀರದಲ್ಲಿ ಮಾಯಿಕಲಾಡನ್ ಮತ್ತು ಲೆಮ್ರೊ ನದಿಗಳ ಸಂಗಮದಲ್ಲಿರುವ ಮುಖ್ಯ ರೇವುಪಟ್ಟಣ ($20^0 14'$ ಉ ಅಕ್ಷಾಂಶ, $92^0 55'$ ಪೂ ರೇಖಾಂಶ). ಹಿಂದೆ ಮೀನುಗಾರಿಕೆಯ ಒಂದು ಹಳ್ಳಿಯಾಗಿದ್ದು ಇಂದು ಮಯನ್ಮಾರ್ ಒಂದು ಪ್ರಮುಖ ರೇವುಪಟ್ಟಣವಾಗಿ ಬೆಳೆದಿದೆ. ಜನಸಂಖ್ಯೆ ಸು. 3 ಲಕ್ಷ ಕ್ಕಿಂತಲೂ ಅಧಿಕ. ಬೌದ್ಧರೇ 1/3 ಭಾಗದಷ್ಟಿದ್ದಾರೆ. ಅಕ್ಕಿಯನ್ನು ಹೆಚ್ಚಾಗಿ ರಫ್ತು ಮಾಡುತ್ತಾರೆ. ಇಲ್ಲಿ ಅನೇಕ ಸಾರ್ವಜನಿಕ ಕಟ್ಟಡಗಳ ಜೊತೆಗೆ ದೊಡ್ಡ ಅಕ್ಕಿ ಗಿರಣಿಗಳೂ ಇವೆ. (ಎಂ.ಎಸ್.ಎಂ.)

**ಅಕ್ಷ:** ಭೂಮಿ ತನ್ನ ಅಕ್ಷದ ಮೇಲೆ ಬುಗುರಿಯಂತೆ ಆವರ್ತಿಸುತ್ತಿದೆ. ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಸೇರಿಸುವ ಹಾಗೂ ಭೂಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಾಯ್ದು ಹೋಗುವಂತೆ ಎಳೆಯುವ ಕಾಲ್ಪನಿಕ ರೇಖೆಗೆ 'ಭೂಅಕ್ಷ' ವೆನ್ನುವರು. ಅಕ್ಷ

ಎಂದರೆ ಒಂದು ಸರಳರೇಖೆ; ಇದು ಆವರ್ತಿಸುತ್ತಿರುವ ವಸ್ತುವಿನ ದೃಷ್ಟಿಯಿಂದ ಇರುವಲ್ಲಿಯೇ ಆವರ್ತಿಸುವುದರಿಂದ ಅಕ್ಷದ ಸ್ಥಾನ ಸ್ಥಿರ; ವಸ್ತುವಿನ ಇತರ ಬಿಂದುಗಳೂ ಅಕ್ಷದ ಸುತ್ತಲೂ ಸ್ಥಿರದೂರಗಳಲ್ಲಿ ವೃತ್ತಪಥಗಳಲ್ಲಿ ಚಲಿಸುತ್ತವೆ.

ಬೀಜ ರೇಖಾಗಣಿತದಲ್ಲಿ ಅಕ್ಷ ಪದದ ಅರ್ಥ ಬೇರೆ. ದತ್ತವಸ್ತುವಿನ (ಅಥವಾ ಘನದ ಅಥವಾ ವಕ್ರರೇಖೆಯ) ಮೇಲಿರುವ ಬಿಂದುಗಳನ್ನು ಗುರುತಿಸಲು ಸಹಾಯಕವಾಗುವಂತೆ ಅನುಕೂಲವಾದ ಒಂದು ಮೂಲರೇಖೆಯನ್ನು ಆರಿಸುತ್ತೇವೆ. ಇದು ಒಂದು ಅಕ್ಷ. ಇದರ ಮೇಲೆ ಒಂದು ಸ್ಥಿರಬಿಂದುವನ್ನು ಗುರುತಿಸುತ್ತೇವೆ. ಇದು ಮೂಲಬಿಂದು. ಇಲ್ಲಿಂದ ಮುಂದೆ ಆಯಾ ನಿರ್ದೇಶಕ ವ್ಯವಸ್ಥೆಯ ಕ್ರಮವನ್ನನುಸರಿಸಿ ಮೂಲಬಿಂದುವಿನ ಮೂಲಕ ಸಾಗುವ ಇತರ ಎಲ್ಲ ಅಕ್ಷಗಳನ್ನು ಆರಿಸಬಹುದು.

ಎರಡನೆಯ ಮಹಾಯುದ್ಧದ ಮೊದಲು ಇಟಲಿಯ ಮುಸೊಲೋನಿ ಜರ್ಮನಿಯ ಹಿಟ್ಲರನೊಡನೆ ಇದ್ದ ತನ್ನ ಅವಿಭಾಜ್ಯಮೈತ್ರಿಯನ್ನು ಕುರಿತು "......ಈಗ ನಾವು ಪರಿಶೀಲಿಸಬೇಕಾದ ಇನ್ನೊಂದು ವಾಸ್ತವಿಕಾಂಶ ರೋಮ್–ಬರ್ಲಿನ್ ಅಕ್ಷ ಎಂದು ಸಾಮಾನ್ಯವಾಗಿ ಪ್ರಚಲಿತವಾಗಿರುವ ಭಾವನೆ...." ಎಂದು ಹೇಳಿದ್ದ (1937). ಹಿಟ್ಲರ್ ಮತ್ತು ಆತನ ಅನುಯಾಯಿಗಳನ್ನು ಕುರಿತು ಅಂದಿನಿಂದ ಅಕ್ಷರಾಷ್ಟ್ರಗಳು ಎಂಬ ಪದ ರೂಢಿಗೆ ಬಂದಿತು. (ಸಿ.ಎನ್.ಎಸ್.)

**ಅಕ್ಷಾಂಶ ಮತ್ತು ರೇಖಾಂಶ:** ಭೂಮಿಯ ಮೇಲಿನ ಸ್ಥಳಗಳನ್ನು ಸೂಚಿಸುವ ಕೋನನಿರ್ದೇಶಕಗಳು (ಲ್ಯಾಟಿಟ್ಯೂಡ್ ಮತ್ತು ಲಾಂಜಿಟ್ಯೂಡ್). ಭೂಗೋಳದ ಮೇಲೆ ಪೂರ್ವ ಪಶ್ಚಿಮವಾಗಿ ಭೂಮಧ್ಯರೇಖೆಗೆ ಸಮಾನಾಂತರದಲ್ಲಿ ಎಳೆಯಬಹುದಾದ ಕಾಲ್ಪನಿಕ ರೇಖೆಗಳಿಗೆ ಅಕ್ಷಾಂಶಗಳೆನ್ನುವರು. ಭೂಕೇಂದ್ರದಿಂದ ಭೂಮಧ್ಯರೇಖೆಯ ಉತ್ತರ ಮತ್ತು ದಕ್ಷಿಣಕ್ಕಿರುವ ಭೂಮಿಯ ಮೇಲಿನ ಯಾವುದೇ ಸ್ಥಾನದ ಕೌನಿಕ ದೂರವೇ ಅಕ್ಷಾಂಶ. ಎಲ್ಲ ಅಕ್ಷಾಂಶಗಳೂ ಭೂಮಧ್ಯರೇಖೆಗೆ ಸಮಾನಾಂತರ ಆಗಿರುವುದರಿಂದ ಅವುಗಳನ್ನು ಸಮಾನಾಂತರ ರೇಖೆಗಳು ಎನ್ನುವರು. ಭೂಮಿಯ ಅಕ್ಷಕ್ಕೆ ಲಂಬವಾಗಿರುವಂತೆ, ಕೇಂದ್ರದ ಮೂಲಕ ರಚಿಸಿದ ಸಮತಲ, ಭೂಗೋಳವನ್ನು ಒಂದು ಮಹಾವೃತ್ತದಲ್ಲಿ ಛೇದಿಸುವುದು. ಇದು ಸಮಭಾಜಕ ವೃತ್ತ (ಭೂಮಧ್ಯ ರೇಖೆ: ಟೆರ್‍ಸ್ಟ್ರಿಯಲ್‌ಈಕ್ವೆಟರ್). ಅಕ್ಷಾಂಶ ವೃತ್ತಗಳಲ್ಲಿ ಅತ್ಯಂತ ಉದ್ದವಾದ ಮಹಾವೃತ್ತ. ಇದಕ್ಕೆ ಸಮಾನಾಂತರವಾಗಿ ಉತ್ತರಕ್ಕೂ ದಕ್ಷಿಣಕ್ಕೂ ಎಳೆದ ಅಲ್ಪವೃತ್ತಗಳು ಉತ್ತರ ಮತ್ತು ದಕ್ಷಿಣ ಅಕ್ಷಾಂಶ ವೃತ್ತಗಳು. ಆದ್ದರಿಂದ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವ ಅಕ್ಷಾಂಶಗಳು ಕ್ರಮವಾಗಿ $90^0$ ಉ. ಮತ್ತು $90^0$ ದ. ಯಾವುದೇ ಸ್ಥಳದ ಅಕ್ಷಾಂಶ ಇದಕ್ಕಿಂತ ಹೆಚ್ಚಾಗುವುದು ಅಸಾಧ್ಯ. ಆದ್ದರಿಂದ ಅಕ್ಷಾಂಶಗಳನ್ನು $0^0$ ಯಿಂದ (ಸಮಭಾಜಕವೃತ್ತದ ಮೇಲಿರುವ ಸ್ಥಳಗಳು) $90^0$ ಉ. ಅಥವಾ ದಕ್ಷಿಣದವರೆಗೆ ಸೂಚಿಸಲಾಗುವುದು.



ಅಕ್ಷಾಂಶಗಳು ಮತ್ತು ರೇಖಾಂಶಗಳು

ಅಕ್ಷದ ಮೂಲಕ ಸಾಗುವ ಸಮತಲಗಳು ಭೂಮಿಯನ್ನು ಮಹಾವೃತ್ತಗಳಲ್ಲಿ ಛೇದಿಸುವುವು ಮತ್ತು ಸಮಭಾಗಿಸುವುವು. ಇಂಥ ಮಹಾವೃತ್ತಗಳು ಅಸಂಖ್ಯಾತವಾಗಿವೆ. ಅವೆಲ್ಲವೂ ಸಮಭಾಜಕವೃತ್ತ ಮತ್ತು ಇತರ ಅಕ್ಷಾಂಶ ವೃತ್ತಗಳಿಗೆ ಲಂಬವಾಗಿವೆ. ಇವುಗಳ ಹೆಸರು ರೇಖಾಂಶವೃತ್ತಗಳು. ದಕ್ಷಿಣೋತ್ತರವಾಗಿ ಧ್ರುವಬಿಂದುಗಳಲ್ಲಿ ಸಂಧಿಸುವಂತೆ ಹಾಗೂ ಭೂಮಧ್ಯರೇಖೆಯನ್ನು ಸಮಕೋನದಲ್ಲಿ ಛೇದಿಸುವಂತೆ ಎಳೆಯಬಹುದಾದ ಕಾಲ್ಪನಿಕ ರೇಖೆಗಳಿಗೆ ರೇಖಾಂಶಗಳು ಎನ್ನುವರು.

ಭೂಗೋಳದಲ್ಲಿ ಒಟ್ಟು $360^0$ ರೇಖಾಂಶಗಳಿವೆ. ಇವುಗಳನ್ನು ಮಧ್ಯಾಹ್ನ ರೇಖೆಗಳೆಂತಲೂ ಕರೆಯುವುರು. ಇಂಗ್ಲೆಂಡಿನ ಗ್ರೀನಿಚ್ ಮೂಲಕ ಸಾಗುವ ರೇಖಾಂಶವನ್ನು ಆಧಾರವಾಗಿಟ್ಟುಕೊಂಡು ಅಲ್ಲಿಂದ ಪೂರ್ವಕ್ಕೆ $0^0$ ಯಿಂದ $180^0$ ಮತ್ತು ಪಶ್ಚಿಮಕ್ಕೆ $0^0$ ಯಿಂದ $180^0$ ಗಳಾಗಿ (ಒಟ್ಟು $360^0$) ಭೂಗೋಳವನ್ನು ವಿಭಜಿಸಲಾಗಿದೆ. ಗ್ರೀನಿಚ್‌ನಿಂದ ಪೂರ್ವಕ್ಕೆ ಇದ್ದರೆ ಆ ರೇಖಾಂಶವನ್ನು ಪೂರ್ವ ರೇಖಾಂಶವೆಂದೂ ಪಶ್ಚಿಮಕ್ಕೆ ಇದ್ದರೆ ಪಶ್ಚಿಮ ರೇಖಾಂಶವೆಂದೂ ಹೇಳುವರು.

ಅಕ್ಷಾಂಶ ಮತ್ತು ರೇಖಾಂಶಗಳನ್ನು ಡಿಗ್ರಿಗಳಲ್ಲಿ ಎಣಿಕೆ ಮಾಡಲಾಗುವುದು. ಗೋಳಾಕಾರದ ಭೂಮಿ $360^0$ ಗಳಿಗೆ ಸಮ. ಪ್ರತಿ $1^0$ ರೇಖಾಂಶ $60'$ ನಿಮಿಷ, ಪ್ರತಿ ನಿಮಿಷವನ್ನು 60 ಸೆ.ಗಳೆಂದು ಭಿನ್ನಾಂಶಗಳಾಗಿ ವಿಂಗಡಿಸಲಾಗಿದೆ.

ಋತುಭೇದಗಳನ್ನು ಅನುಸರಿಸಿ $23^0$ $27'$ ದಕ್ಷಿಣ ಮತ್ತು ಉತ್ತರ ಅಕ್ಷಾಂಶವೃತ್ತಗಳನ್ನು ಕ್ರಮವಾಗಿ ಮಕರಸಂಕ್ರಾಂತಿವೃತ್ತ (ಟ್ರಾಫಿಕ್ ಆಫ್ ಕ್ಯಾಪ್ರಿಕಾರನ್) ಮತ್ತು ಕರ್ಕಾಟಕಸಂಕ್ರಾಂತಿವೃತ್ತ (ಟ್ರಾಫಿಕ್ ಆಫ್ ಕ್ಯಾನ್ಸರ್) (ಒಟ್ಟಾಗಿ ಸಂಕ್ರಾಂತಿವೃತ್ತಗಳು) ಎಂದೂ $66^0$ $32'$ ಉತ್ತರ ಮತ್ತು ದಕ್ಷಿಣಅಕ್ಷಾಂಶವೃತ್ತಗಳನ್ನು ಉತ್ತರಮೇರುವೃತ್ತ (ಆರ್ಕ್‌ಟಿಕ್ ಸರ್ಕಲ್) ಮತ್ತು ದಕ್ಷಿಣಮೇರುವೃತ್ತ (ಅಂಟಾರ್ಕ್‌ಟಿಕ್ ಸರ್ಕಲ್) – ಒಟ್ಟಾಗಿ ಮೇರುವೃತ್ತಗಳು ಎಂದೂ ಕರೆಯಲಾಗಿದೆ. ಇವುಗಳನ್ನು ವಿಶೇಷ ಅಕ್ಷಾಂಶಗಳೆನ್ನುವರು.

$0^0$ ರೇಖಾಂಶವೃತ್ತದ ಮುಂದುವರಿಕೆಯೇ $180^0$ ಪೂರ್ವ ಅಥವಾ $180^0$ ಪಶ್ಚಿಮ ರೇಖಾಂಶವಾಗಿದೆ.

ಒಂದು ಸ್ಥಳದ ಕೋನನಿರ್ದೇಶಕಗಳನ್ನು ಕೊಡುವಾಗ ಅಕ್ಷಾಂಶವನ್ನು ಮೊದಲೂ ರೇಖಾಂಶವನ್ನು ಅನಂತರವೂ ಹೇಳುವುದು ವಾಡಿಕೆ. ಬೆಂಗಳೂರಿನ ನಿರ್ದೇಶಕಗಳು ($12^0 57'$ ಉತ್ತರ, $77^0 38'$ ಪೂರ್ವ) ಎಂದರೆ ಅದರ ಅಕ್ಷಾಂಶ $12^0 57'$ ಉತ್ತರ ಎಂದೂ ರೇಖಾಂಶ $77^0 38'$ ಪೂರ್ವ ಎಂದೂ ಅರ್ಥ. (ಸಿ.ಎನ್.ಎಸ್.;ಎಂ.ಎಸ್.)

**ಅಗರ್ತಲ:** ತ್ರಿಪುರ ರಾಜ್ಯದ ರಾಜಧಾನಿ ಹಾಗೂ ಮುಖ್ಯ ಪಟ್ಟಣ ($23^0 51'$ ಉ. ಅಕ್ಷಾಂಶ, $91^0 21'$ ಪೂ. ರೇಖಾಂಶ). ಜನಸಂಖ್ಯೆ, ಶಿಕ್ಷಣ, ವ್ಯಾಪಾರ ವಾಣಿಜ್ಯ ಮುಂತಾದುವುಗಳ ದೃಷ್ಟಿಯಿಂದ ಹಿಂದುಳಿದಿರುವ ಒಂದು ಚಿಕ್ಕ ಪಟ್ಟಣ. ಇಲ್ಲಿ ಹೋರಾ ನದಿ ಹರಿಯುತ್ತದೆ. ಕೋಲ್ಕೊತ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜೊಂದು ಇಲ್ಲಿದೆ.

ಇದೊಂದು ಪ್ರಮುಖ ರೈಲುನಿಲ್ದಾಣವುಳ್ಳ ಪಟ್ಟಣ. ಇಲ್ಲಿಂದ ಬ್ರಹ್ಮಪುತ್ರ ಪ್ರದೇಶದ ಕೆಲವು ಪಟ್ಟಣಗಳಿಗೆ ರೈಲು ಸಂಪರ್ಕವಿದೆ. ಭಾರತ ಮತ್ತು ಬಾಂಗ್ಲಾದೇಶ ಗಡಿಪ್ರದೇಶದಲ್ಲಿರುವ ಈ ಪಟ್ಟಣದಲ್ಲಿ ಸೇನಾಶಿಬಿರಗಳಿವೆ. ಇಲ್ಲಿನ ಅಲ್ಪ ಜನಸಂಖ್ಯೆ ಕಡಿಮೆ ಕಾರಣ. ಈ ಪ್ರದೇಶದಲ್ಲಿ ಅಧಿಕವಾಗಿ ಮಳೆಯಾಗುವುದರಿಂದ ಹವಾಗುಣ ಅಷ್ಟು ಹಿತಕರವಾಗಿಲ್ಲ. ಪ್ರವಾಹಗಳಿಂದಾಗಿ ಜನ ಆಗಾಗ ತೊಂದರೆಗೊಳಗಾಗುತ್ತಾರೆ. ಗುಡ್ಡಗಾಡಿನ ಪ್ರದೇಶದಲ್ಲಿರುವ ಈ ಪಟ್ಟಣದ ನಿವಾಸಿಗಳಿಗೆ ಇತ್ತೀಚೆಗೆ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರದ ನೆರವು ಹೆಚ್ಚಾಗಿ ದೊರೆಯುತ್ತದೆ. ಜನಸಂಖ್ಯೆ 3 ಮಿಲಿಯನ್. (ಡಿ.ಕೆ.)

**ಅಗ್ನಿಶಿಲಾಛಿದ್ರಗಳು:** ಅಗ್ನಿಪರ್ವತಗಳ ಸ್ಫೋಟನ ಕಾಲದಲ್ಲಿ ಅಧಿಕ ಶಾಖ ಮತ್ತು ಒತ್ತಡದಿಂದ ಹೊರಕ್ಕೆ ಎಸೆಯಲ್ಪಡುವ ಶಿಲೆಗಳ ಚೂರುಗಳು, ಗಾತ್ರಗಳಿಗನುಸಾರವಾಗಿ ಅಗ್ನಿಪರ್ವತದ ಬಾಯಿಂದ ಗಗನದತ್ತ ಬಹು ಎತ್ತರಕ್ಕೆ ಹೋಗಿ ಶಿಲಾವರ್ಷದಂತೆ ಮತ್ತೆ ಭೂಮಿಯ ಮೇಲೆ ಬೀಳುತ್ತವೆ. ಈ ಚೂರುಗಳಲ್ಲಿ ವಿವಿಧ ಶಿಲೆಗಳು, ಶಿಲಾರಸದ ತುಣುಕುಗಳು ಹಾಗೂ ಶಿಲೆಗಳ ಸಣ್ಣ ಕಣ, ಬೂದಿ ಇತ್ಯಾದಿ ಸೇರಿರುತ್ತದೆ. ಇವೇ ಅಗ್ನಿಶಿಲಾಛಿದ್ರಗಳು (ಪೈರೊಕ್ಲ್ಯಾಸ್ಟಿಕ್).

ಅಗ್ನಿಶಿಲಾಛಿದ್ರಗಳು ಹೊರಕ್ಕೆ ಎಸೆಯಲ್ಪಟ್ಟಾಗ ಅವು ಶಿಲಾರಸದೊಡನೆ ಸೇರಿ ಗಟ್ಟಿಯಾಗಬಹುದು ಅಥವಾ ಹಾಗೆಯೇ ಉಳಿಯಬಹುದು. ಕಣಗಳ ಗಾತ್ರಗಳನ್ನನುಸರಿಸಿ ಇವುಗಳನ್ನು ಸ್ಥೂಲವಾಗಿ ಮೂರು ಭಾಗವಾಗಿ ವಿಂಗಡಿಸಬಹುದು.

| ಕಣಗಳ ಗಾತ್ರ | ಗಟ್ಟಿಯಾಗದ್ದು | ಗಟ್ಟಿಯಾದದ್ದು |
|---|---|---|
| 4 ಮಿಮೀಗಿಂತ ಮೇಲೆ | ಬೂದಿ (ಧೂಳು) | ಟಫ್ |
| 4–32 ಮಿಮೀವರೆಗೆ | ಲಾಪಿಲ್ಲಿ | ಲಾಪಿಲ್ಲಿ ಟಫ್ |
| 32 ಮಿಮೀಗಿಂತ ಮೇಲೆ | ಬಂಡೆಗಳು (ಬ್ಲಾಕು) | ಬ್ರೆಷಿಯ |
| ಅಗ್ಲಾಮರೇಟ್ | ಗುಂಡುಗಳು (ಬಾಂಬು) | |

ಜ್ವಾಲಾಮುಖಿಗಳು ಸ್ಫೋಟಗೊಂಡಾಗ ಸಾಮಾನ್ಯವಾಗಿ ಮೊದಲು ಹೊರಕ್ಕೆ ಎಸೆಯಲ್ಪಡುವುದು ಬೂದಿ ಅಥವಾ ಮರಳು. ಇದು ಅತ್ಯಂತ ಸೂಕ್ಷ್ಮಕಣಗಳಿಂದ ಕೂಡಿದ್ದು ಗಟ್ಟಿಯಾಗದೆ ಹಾಗೆಯೇ ಉಳಿಯಬಹುದು. ಆದರೆ ಅನೇಕ ಸಂದರ್ಭಗಳಲ್ಲಿ ಬೂದಿ ಭೂಮಿಯ ಮೇಲೆ ಬಿದ್ದು ಮಿತವಾಗಿ ಗಟ್ಟಿಯಾಗುತ್ತದೆ. ಬೂದಿಯುಕ್ತವಾದ ಈ ವಸ್ತುವಿಗೆ ಟಫ್ ಎನ್ನುವರು. ಇದು ಅನೇಕ ವೇಳೆ ಪದರ ಪದರವಾಗಿರುವುದರಿಂದ ಪ್ರತಿಯೊಂದು ಪದರವೂ ನಿಯತಕಾಲವನ್ನು ಸೂಚಿಸುವ ಆಧಾರವಾಗುತ್ತದೆ. ಇದು ಅನೇಕ ವೇಳೆ ಸಮುದ್ರದ ತಳವನ್ನು ಸೇರಿ, ಮರಳು, ಜೇಡುಗಳ ಜೊತೆ ಶೇಖರವಾಗಿ ಟಫ್ ಮರಳುಶಿಲೆ ಮತ್ತು ಟಫ್ ಜೇಡುಶಿಲೆಗಳಾಗಿ ಮೈದೋರುತ್ತವೆ.

ಬೂದಿಯ ಜೊತೆ ಅತಿ ಸೂಕ್ಷ್ಮವಾದ ಸಣ್ಣ ಸಣ್ಣ ಮೊನಚಾದ ಗಾಜಿನ ಕಣಗಳು ಮಿಶ್ರವಾಗಿರುತ್ತವೆ. ಇವುಗಳನ್ನು ಬರಿಯ ಕಣ್ಣಿನಿಂದ ನೋಡಲು ಸಾಧ್ಯವಿಲ್ಲ. ಲಾವಾರಸದ ಸಣ್ಣ ದ್ರವಕಣಗಳೇ ಇವಕ್ಕೆ ಮೂಲ. ಬಹುಬೇಗ ವಾಯುವಿನಲ್ಲಿ ಇವು ಸಣ್ಣಗಾಗುವುದರಿಂದ ಗಾಜಾಗಿ ಪರಿವರ್ತನೆ ಹೊಂದುತ್ತವೆ. ಇನ್ನೂ ಹೆಚ್ಚಿನ ಗಾತ್ರದ ಅಂದರೆ ಬಟಾಣಿಯಿಂದ ಬಾದಾಮಿಯಷ್ಟು ಗಾತ್ರವಿದ್ದು ಗುಂಡು ಅಥವಾ ಮೊನಚಾಗಿರುವ ಆಕಾರವನ್ನುಳ್ಳ ಶಿಲಾಛಿದ್ರಗಳು ಒಂದುಗೂಡಿರುವ ಶಿಲೆಯೇ ಲಾಪಿಲ್ಲಿ. ಕೆಲವೊಮ್ಮೆ ಶಿಲಾರಸ ಹಾಗೂ ಬೂದಿಯೊಡನೆ ಮಿಶ್ರಿತವಾಗಿ ಗಟ್ಟಿಯಾಗಿರುವುದೇ ಲಾಪಿಲ್ಲಿ ಟಫ್.

ಆಸ್ಫೋಟನೆಗೊಂಡಾಗ ಆ ಪ್ರಚಂಡ ರಭಸಕ್ಕೆ ಭಾರಿ ಬಂಡೆಗಳೇ ಹೊರಕ್ಕೆ ಸಿಡಿಯುತ್ತವೆ. 32 ಮಿಮೀ ಗಳಿಗಿಂತ ಹೆಚ್ಚಿನ ಗಾತ್ರವಿದ್ದಲ್ಲಿ ಅವನ್ನು ಬಂಡೆಗಳು (ಬ್ಲಾಕುಗಳು) ಎನ್ನುವರು; ಬೂದಿ ಅಥವಾ ಮರಳಿನ ಜೊತೆ ಸೇರಿ ಗಟ್ಟಿಯಾಗಿದ್ದಲ್ಲಿ ಬ್ರೆಚಿಯ ಎನ್ನುವರು. ಹಾಗಲ್ಲದೆ ಗುಂಡು ಹಾಗೂ ಅಂಡಾಕಾರವಾಗಿದ್ದಲ್ಲಿ ಗುಂಡುಗಳು, ಮುದ್ದೆಗಳು (ಬಾಂಬು) ಎಂದೂ ಖಂಡಗಳು ಒಂದಕ್ಕೊಂದು ಸೇರಿ ಗಟ್ಟಿಯಾಗಿದ್ದಲ್ಲಿ ಅಗ್ಲಾಮರೇಟ್ ಶಿಲೆ ಎಂದೂ ಕರೆಯುತ್ತಾರೆ.

ಅಗ್ನಿಶಿಲಾಛಿದ್ರಗಳು ಸಾಮಾನ್ಯವಾಗಿ ಜ್ವಾಲಾಮುಖಿ ಬಾಯಿಯ ಸುತ್ತಮುತ್ತ ಬಹುಮಟ್ಟಿಗೆ ಶೇಖರವಾಗುತ್ತವೆ. ಹಲವು ಸಂದರ್ಭಗಳಲ್ಲಿ ಅವುಗಳ ಮಂದತೆ ಮುನ್ನೂರು ಮೀ ಮುಟ್ಟಬಹುದು. ಮೌಂಟ್ ಎಟ್ನಾ ಅಗ್ನಿಪರ್ವತ ಬಹುಮಟ್ಟಿಗೆ ಶಿಲಾಛಿದ್ರಗಳ ಸಂಗ್ರಹಣದಿಂದಾದುದು. ಆದರೆ ಧೂಳು, ಬೂದಿ ಮತ್ತು ಇತರ ಸೂಕ್ಷ್ಮಕಣಗಳು ಕುಂಡದ ಬಳಿ ಶೇಖರವಾಗದೆ ಬಹುದೂರಕ್ಕೆ ಒಯ್ಯಲ್ಪಡುತ್ತವೆ. ಉದಾ: ಕಟ್ಮಾಯಿ ಅಗ್ನಿಪರ್ವತದಿಂದ ಸು. 150 ಕಿಮೀ ದೂರದಲ್ಲಿ ಕೊಡಿಯಾರ್ ದ್ವೀಪದಲ್ಲಿ ಸು. ಮೂರು ಮೀ ಮಂದವಾಗಿರುವ ಅಗ್ನಿಪರ್ವತದ ಬೂದಿ ಶೇಖರವಾಗಿದೆ. 1883ರಲ್ಲಿ ಕ್ರಾಕಟೊವ ಅಗ್ನಿಪರ್ವತದಿಂದ ಎಸೆಯಲ್ಪಟ್ಟ ಬೂದಿ ಮತ್ತು ಧೂಳು ವಾಯುಮಂಡಲವನ್ನೆಲ್ಲ ವ್ಯಾಪಿಸಿ ಸುಮಾರು ಎರಡು ವರ್ಷಗಳವರೆಗೆ ಕಂಡುಬರುತ್ತಿತ್ತು. (ಎಂ.ಎನ್.ವಿ.)

**ಅಗ್ನಿಶಿಲೆಗಳು:** ಭೂಮಿಯ ಆಳದಲ್ಲಿರುವ ಮ್ಯಾಗ್ಮ ಅಥವಾ ಮಾತೃಶಿಲಾದ್ರವ ತಂಪಾಗುವಿಕೆಯಿಂದ ನೇರವಾಗಿ ಮೈದೋರಿದ ಶಿಲೆಗಳು (ಇಗ್ನಿಯಸ್ ರಾಕ್ಸ್). ಮ್ಯಾಗ್ಮ ಉಂಟಾಗಲು ಹೆಚ್ಚಿನ ಶಾಖ ಅಗತ್ಯ. ಇದಕ್ಕೆ ಅಗ್ನಿಯೇ ಮೂಲಭೂತವಾದುದರಿಂದ ಇವನ್ನು ಅಗ್ನಿಶಿಲೆಗಳೆಂದು ಕರೆಯುವರು.

ಶಿಲಾದ್ರವದಲ್ಲಿ ನಾನಾ ಬಗೆಯ ಸಿಲಿಕೇಟುಗಳು ಆವಿ ಮತ್ತು ಇತರ ಆಮ್ಲಗಳು ಅಲ್ಪ ಪ್ರಮಾಣದಲ್ಲಿ ಹುದುಗಿರುತ್ತವೆ. ಶಿಲಾದ್ರವ ಕ್ರಮೇಣ ಆರಿ ಹೆಪ್ಪುಗಟ್ಟುವಾಗ ಅನುಕ್ರಮವಾಗಿ ಸಿಲಿಕೇಟ್ ಖನಿಜಗಳು ರೂಪುಗೊಳ್ಳುತ್ತವೆ. ಈ ಕಾರ್ಯದಲ್ಲಿ ಆವಿ ಮತ್ತು ಆಮ್ಲಗಳು ಬಹು ಸಹಕಾರಿ. ಶಿಲಾದ್ರವ ಹೆಚ್ಚಿನ (ಶಿಲಾರಸ) ಆಳದಲ್ಲಿ ಹುದುಗಿದ್ದರೂ ಭೂಮಿಯ ಮೇಲ್ಪದರಗಳಿಗೆ ಆಗಾಗ ಉಂಟಾಗುವ ಜ್ವಾಲಾಮುಖಿ ಸ್ಫೋಟ ಮತ್ತು ಒಳ ಒತ್ತಡದ ವ್ಯತ್ಯಾಸಗಳಿಂದ ಮೇಲಕ್ಕೆ ಪ್ರವಹಿಸುತ್ತದೆ. ಮೇಲೆ ಬಂದಂತೆಲ್ಲ ಅದರ ಉಷ್ಣತೆ ಕುಗ್ಗುತ್ತ ಹೋಗುತ್ತದೆ. ತಂಪಾಗಿ ಅನಂತರ ಶಿಲೆಯಾಗಿ ಮಾರ್ಪಡುತ್ತದೆ. ಈ ತೆರನಾದ ಚಟುವಟಿಕೆ ಸ್ವಲ್ಪಕಾಲ ಮುಂದುವರಿದಲ್ಲಿ ಲಾವಾಪ್ರಸ್ತರಗಳು ಒಂದರ ಮೇಲೊಂದು ವರಸೆ ವರಸೆಯಾಗಿ ಅಡಕವಾಗುತ್ತ ಹೋಗಬಹುದು. ಭಾರತದ ದಕ್ಷಿಣ ಪ್ರಸ್ಥಭೂಮಿಯಲ್ಲಿನ ಡೆಕ್ಕನ್ ಬೆಸಾಲ್ಟ್ ಎಂಬ ಅಗ್ನಿಶಿಲೆ ಇದಕ್ಕೆ ಅತ್ಯಂತ ಉತ್ತಮವಾದ ಉದಾಹರಣೆ. ಕೆಲವು ವೇಳೆ ಈ ಬಗೆಯ ಶಿಲೆಗಳಲ್ಲಿ ಹುದುಗಿದ್ದ ಅನಿಲಗಳು ಹೊರಹೊಮ್ಮುವಾಗ ನಾನಾ ಗಾತ್ರದ, ಆಕಾರದ ರಂಧ್ರಗಳುಂಟಾಗುತ್ತವೆ. ಹಲವು ಸಂದರ್ಭಗಳಲ್ಲಿ ಮಾತೃಶಿಲಾದ್ರವದ ರಾಸಾಯನಿಕ ಸಂಯೋಜನೆಗೆ ಅನುಗುಣವಾಗಿ ಶಿಲೆಯ ಹೊರಮೈ ನುಣುಪಾಗಿದ್ದು ಹಗ್ಗದೋಪಾದಿಯಲ್ಲಿ ಕಂಡುಬರುತ್ತದೆ. ಲಾವಾ ಪ್ರವಾಹಕ್ಕೆ ನೀರಿನ ಅಥವಾ ಶೈತ್ಯದ ಸಂಪರ್ಕ ಉಂಟಾದಾಗ ದಿಂಬಿನಾಕಾರವನ್ನು ಪಡೆಯುವುದುಂಟು. ಚಿತ್ರದುರ್ಗ ಜಿಲ್ಲೆಯ ಮರಡಿಹಳ್ಳಿ, ಕುರುಬರ ಮರಡಿಕೆರೆ, ತುಮಕೂರಿನ ಬೆಳ್ಳಾರ, ಕೋಲಾರದ ಚಿನ್ನದ ಗಣಿ ಪ್ರದೇಶದ ಮಾರಿಕುಪ್ಪಂ–ಈ ಸ್ಥಳಗಳಲ್ಲಿ ದಿಂಬಿನಾಕಾರದ ಅಗ್ನಿಶಿಲಾಪ್ರವಾಹದ ರಚನೆಗಳಿವೆ. ದ್ರವ ರೂಪದಲ್ಲಿನ ಲಾವಾರಸ ತಂಪಾಗಿ ಶಿಲೆಯಾದಾಗ ಪ್ರಮಾಣದಲ್ಲಿ ಕುಗ್ಗುವುದರಿಂದ ಒತ್ತಡದ ವ್ಯತ್ಯಾಸಗಳುಂಟಾಗಿ ನಿರ್ದಿಷ್ಟ ರೀತಿಯ ಸೀಳುಗಳು ತಲೆದೋರುತ್ತವೆ. ಕ್ರಮೇಣ ಶಿಲಾ ಪ್ರವಾಹ ಒಂದೇ ಗಾತ್ರದ ಮುಮ್ಮೂಲೆಯ, ಚಚ್ಚೌಕನೆಯ ಐದು ಅಥವಾ ಆರು ಮುಖಗಳಿಂದ ಕೂಡಿದ ನೀಳ್ಗಂಬಗಳಾಗಿ ಮಾರ್ಪಡುತ್ತದೆ. ಐರ್ಲೆಂಡಿನ ಜಯಂಟ್ಸ್ ಕಾಸ್‌ವೇ ಮತ್ತು ಮುಂಬಯಿಯ ಗಿಲ್ಬರ್ಟ್ ಬೆಟ್ಟದ ಬಳಿ ಇದನ್ನು ನೋಡಬಹುದು. ಭೂಮಿಯ ಮೇಲಕ್ಕೆ ಕಾಣಿಸಿಕೊಳ್ಳುವುದರಿಂದ ಈ ಬಗೆಯ ಶಿಲಾರೂಪಗಳನ್ನು ಬಹಿಸ್ಸರಣ ಶಿಲೆಗಳೆಂದು ಕರೆಯುವರು.

ಆದರೆ ಕೆಲವು ಅಗ್ನಿಶಿಲೆಗಳು ಹೀಗೆ ಭೂಮಿಯ ಮೇಲೆ ಹರಿದು ಹೆಪ್ಪುಗಟ್ಟದೆ ಅಂತರಾಳದಲ್ಲೇ ನಿರ್ಮಾಣವಾಗುತ್ತವೆ. ಮೇಲೆ ಮುಚ್ಚಿರುವ ನೆಲದ ಭಾಗ ಕ್ರಮೇಣ ನಶಿಸಿ ಹೋದಾಗ ದೃಷ್ಟಿಗೆ ಗೋಚರವಾಗುತ್ತವೆ. ಅವುಗಳನ್ನು ಅಂತಸ್ಸರಣಶಿಲೆಗಳೆಂದು ಕರೆಯಲಾಗಿದೆ.

ಸಿಲ್, ಡೈಕ್, ರಿಂಗ್‌ಡೈಕ್, ಪ್ಲಗ್ ಮೊದಲಾದುವು ಸಣ್ಣ ಪ್ರಮಾಣದವುಗಳಾದ್ದರಿಂದ ಅವುಗಳನ್ನು ಲಘು ಅಂತಸ್ಸರಣಗಳೆಂದು ಕರೆಯುವರು. ಇವು ಸಾಮಾನ್ಯವಾಗಿ ಪ್ರಮುಖ ಬಹಿಸ್ಸರಣವೊಂದರ ಸುತ್ತಮುತ್ತ ಗುಂಪುಗುಂಪಾಗಿ ಹರಡಿರುತ್ತವೆ. ಶಿಲಾದ್ರವ ಭೂಪದರಗಳ ಮೂಲಕ ಹಾಯ್ದು ಬರುವಾಗ ಒತ್ತಡಕ್ಕೆ ಸೀಳುಗಳು ಉಂಟಾಗಿ ಅವುಗಳಲ್ಲಿ ಶಿಲಾದ್ರವ ಪ್ರವಹಿಸಿ ಆರಿ ತಣ್ಣಗಾಗುವುದರಿಂದ ಈ ಶಿಲಾರೂಪಗಳು ತಲೆದೋರುತ್ತವೆ.

ಲ್ಯಾಕೊಲಿತ್, ಲೋಪೊಲಿತ್, ಸ್ಟಾಕ್, ಬಾಸ್ ಮತ್ತು ಬ್ಯಾತೊಲಿತ್‌ಗಳನ್ನು ಪ್ರಮುಖ ಬಹಿಸ್ಸರಣಗಳೆಂದು ಪರಿಗಣಿಸಲಾಗಿದೆ.

ಶಿಲೆಯ ಹೊರರಚನೆಯಷ್ಟೇ ಮುಖ್ಯವಾದುದು ಒಳರಚನೆ ಅಥವಾ ವಿನ್ಯಾಸ. ಇದು ಶಿಲೆ ಉಂಟಾದ ರೀತಿಯನ್ನೂ ಆಗಿನ ಸನ್ನಿವೇಶವನ್ನೂ ಅರಿತುಕೊಳ್ಳಲು ಬಹುಸಹಾಯಕ. ವಿನ್ಯಾಸ ಶಿಲೆಯ ಖನಿಜ ಕಣಗಳ ಗಾತ್ರ, ಆಕಾರ, ಸ್ವರೂಪ ಮತ್ತು ವಿವಿಧ ಕಣಗಳಿಗಿರುವ ಪರಸ್ಪರ ಸಂಬಂಧವನ್ನು ಅವಲಂಬಿಸಿದೆ. ಖನಿಜಕಣಗಳು ಸಂಪೂರ್ಣವಾಗಿ ಸ್ಫುಟಗೊಂಡಲ್ಲಿ ಪೂರ್ಣಸ್ಫಟಿಕಾಕೃತಿಯುಳ್ಳ ರಚನೆ ಅಸ್ಫುಟಗೊಂಡಲ್ಲಿ ಅಪೂರ್ಣಸ್ಫಟಿಕಾಕೃತಿಯುಳ್ಳ ರಚನೆ ಮಧ್ಯವರ್ತಿಯಾಗಿದ್ದಲ್ಲಿ ಅರ್ಧಸ್ಫಟಿಕಾಕೃತಿಯುಳ್ಳ ರಚನೆ ಎಂದೂ ಹೇಳಲಾಗುತ್ತದೆ.

ಖನಿಜಗಳ ರಚನೆ ಅತಿಸೂಕ್ಷ್ಮವಾಗಿದ್ದಲ್ಲಿ ಅಥವಾ ಶಿಲೆ ಮುದ್ದೆಯಾಗಿದ್ದು ಅಸ್ಪಷ್ಟ ವಿನ್ಯಾಸವಿದ್ದಲ್ಲಿ ಮೂಲಭೂತವಾದ ಶಿಲಾದ್ರವ ಬಹುತೀವ್ರಗತಿಯಲ್ಲಿ ತಂಪಾಗಿ ಕಣಗಳು ದಪ್ಪನಾಗಿದ್ದು ರಚನೆ ಒರಟಾಗಿದ್ದಲ್ಲಿ ಶಿಲಾದ್ರವ ನಿಧಾನವಾಗಿ ಆರುತ್ತ ಬಂದಿತೆಂದೂ ಹೇಳಬಹುದು.

ಅಗ್ನಿಶಿಲೆಗಳ ವರ್ಗೀಕರಣ: ಭೂಮಿಯ ಮೇಲೆ ವಿವಿಧರೀತಿಯ ಶಿಲೆಗಳಿವೆಯಾದರೂ ಸಾಮಾನ್ಯವಾಗಿ ಒಂದರಂತೆ ಮತ್ತೊಂದು ಇಲ್ಲ. ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಅಗ್ನಿ ಶಿಲೆಗಳನ್ನು ನಾನಾ ಗುಂಪುಗಳಾಗಿ ವಿಂಗಡಿಸಲಾಗಿದೆ. ಆದರೆ ವರ್ಗೀಕರಣ ಅಷ್ಟು ಸುಲಭಸಾಧ್ಯವಲ್ಲ. ಭೂವಿಜ್ಞಾನದಲ್ಲಿ ಹತ್ತಾರು ಬಗೆಯ ಶಿಲಾವರ್ಗೀಕರಣಗಳನ್ನು ಕಾಣಬಹುದು. ಇವುಗಳಲ್ಲಿ ಮುಖ್ಯವಾದುವು; 1. ಶಿಲೆಗಳ ಖನಿಜಸಂಯೋಜನೆಯನ್ನನುಸರಿಸಿರುವ ವಿಧಾನಗಳು, 2. ರಾಸಾಯನಿಕ ಸಂಯೋಜನೆಯನ್ನು ಆಧಾರವಾಗಿ ಉಳ್ಳವು, 3. ಶಿಲೆಗಳ ಹೊರರಚನೆ, ವಿನ್ಯಾಸ ಮುಂತಾದುವುಗಳನ್ನು ಅವಲಂಬಿಸಿರುವ ವಿಧಾನಗಳು.

1. ಖನಿಜ ಸಂಯೋಜನ ವರ್ಗೀಕರಣ: ಇದು ವಿವರವಾದ ಶಿಲಾಧ್ಯಯನಕ್ಕೆ ಬಹು ಸಹಕಾರಿ. ಕಾರಣ ಸೂಕ್ಷ್ಮದರ್ಶಕ ಯಂತ್ರ ಮತ್ತು ಇತರ ಉಪಕರಣಗಳ ಸಹಾಯದಿಂದ ಶಿಲೆಯ ಖನಿಜಗಳನ್ನು ವಿವರವಾಗಿ ಅಭ್ಯಸಿಸಬಹುದು. ವಿವಿಧ ಖನಿಜಗಳ ಒಟ್ಟುಗೂಡುವಿಕೆಯಿಂದ ಆದುದೇ ಖನಿಜ ಶಿಲೆ. ಶಿಲೆಯ ಖನಿಜಗಳನ್ನು ಅವಶ್ಯಕ, ಸಹಾಯಕ ಮತ್ತು ಗೌಣಖನಿಜಗಳೆಂದು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಮೊದಲೆರಡು ಗುಂಪಿನವು ಶಿಲಾದ್ರವದ ನೇರ ಆರುವಿಕೆಯಿಂದ ಉಂಟಾದುವು. ಈ ಕಾರಣದಿಂದ ಇವಕ್ಕೆ ಮೂಲಖನಿಜಗಳೆಂದು ಹೆಸರಿಡಲಾಗಿದೆ. ಮೂರನೆಯ ಗುಂಪಿನವು ಮೂಲಖನಿಜಗಳು, ಶಿಥಿಲೀಕರಣಕ್ಕೋ ಅಥವಾ ರೂಪಾಂತರಕ್ಕೋ ಒಳಗಾದಾಗ ಉಂಟಾದವು. ಹಲವು ವೇಳೆ ಖನಿಜಪೂರಿತ ದ್ರವಗಳ ಚಟುವಟಿಕೆಯೂ ಇವುಗಳಿಗೆ ಕಾರಣವಾಗಬಹುದು. ಶಿಲೆಗಳ ವರ್ಗೀಕರಣದಲ್ಲಿ ಮೂಲಖನಿಜಗಳು ಬಹುಮುಖ್ಯ, ಇತರವು ಗೌಣ. ಮೂಲ ಖನಿಜಗಳನ್ನನುಸರಿಸಿಯೇ ಶಿಲೆಗಳನ್ನು ವಿವಿಧವರ್ಗಗಳಾಗಿ ವಿಂಗಡಿಸಲಾಗಿದೆ. ಉದಾಹರಣೆಗೆ: ಕ್ವಾರ್ಟ್ಸ್ ಫೆಲ್ಸ್‌ಫಾರ್‌ಗಳ ಜೊತೆಯಲ್ಲಿ ಕಾಗೆಬಂಗಾರ (ಮೈಕ) ಅಥವಾ ಹಾರ್ನ್‌ಬ್ಲೆಂಡ್ ಇದ್ದಲ್ಲಿ ಆ ಶಿಲೆ ಗ್ರಾನೈಟ್ ಎನಿಸುತ್ತದೆ. ಇವುಗಳೊಡನೆ ಸ್ಫೀನ್, ಅಪೆಟೈಟ್, ಜಿರ್‌ಕಾನ್ ಮುಂತಾದ ಸಹಾಯಕ ಖನಿಜಗಳೂ ಕ್ಲೋರೈಟ್, ಮ್ಯಾಗ್ನಟೈಟ್ ಮುಂತಾದ ಆನುಷಂಗಿಕ ಖನಿಜಗಳೂ ಇರಬಹುದು ಅಥವಾ ಇಲ್ಲದಿದ್ದರೂ ಇರಬಹುದು. ಅಂದರೆ ಶಿಲೆಯನ್ನು ಹೆಸರಿಸಲು ಇವುಗಳ ಪಾತ್ರ ಗೌಣ. ಅವಶ್ಯಕ ಖನಿಜಗಳಲ್ಲಿ ಯಾವುದಾದರೊಂದಿಲ್ಲದಿದ್ದರೂ ಅದು ಗ್ರಾನೈಟ್ ಆಗಲಾರದು. ಉದಾಹರಣೆಗೆ ಕ್ವಾರ್ಟ್ಸ್ ಇಲ್ಲದಿದ್ದರೆ ಅದೇ ಶಿಲೆ ಸಯನೈಟ್ ಶಿಲೆ ಎನಿಸುತ್ತದೆ.

2. ರಾಸಾಯನಿಕ ಸಂಯೋಜನ ವರ್ಗೀಕರಣ: ಶಿಲೆಗಳ ಉತ್ಪತ್ತಿಯನ್ನು ವಿವೇಚಿಸಲು ಈ ಬಗೆಯ ವರ್ಗೀಕರಣ ಉಪಯುಕ್ತ. ಒಂದೇ ತೆರನಾದ ಮಾತೃ ಶಿಲಾದ್ರವದಿಂದ ಮೈವೆತ್ತ ಶಿಲೆಗಳು ತಮ್ಮ ವಿನ್ಯಾಸದಲ್ಲಿ ಮತ್ತು ಖನಿಜಸಂಯೋಜನೆಯಲ್ಲಿ ಭಿನ್ನಭಿನ್ನವಾಗಿ ಕಂಡರೂ ಅವುಗಳ ರಾಸಾಯನಿಕ ಸಂಯೋಜನೆಯಲ್ಲಿ ಈ ಬಗೆಯ ಭೇದಭಾವಗಳು ಬರಲಾರವು.

ಅಗ್ನಿಶಿಲೆಯನ್ನು ರಾಸಾಯನಿಕವಾಗಿ ವಿಭಜಿಸಿ ಅದರ ಸಂಯೋಜನೆಯನ್ನು 13 ಅಥವಾ 14 ಮುಖ್ಯ ಆಕ್ಸೈಡುಗಳ ರೂಪದಲ್ಲಿ ನಿಯೋಜಿಸಲಾಗುವುದು. ಇವುಗಳ ಒಟ್ಟು ಮೊತ್ತ 100. ಹೀಗೆ ನಿರ್ಧರಿಸಿದ ಆಕ್ಸೈಡುಗಳನ್ನು ಮತ್ತೆ ವಿವಿಧ ಪ್ರಮಾಣದಲ್ಲಿ ಸಂಯೋಜಿಸಿ ಬಂದ ಅಂಕಿಅಂಶಗಳ ಆಧಾರದ ಮೇಲೆ ಅಗ್ನಿಶಿಲೆಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಲಾಗಿದೆ. ಇಂದಿಗೂ ಈ ಬಗೆಯ ವರ್ಗೀಕರಣ, ಶಿಲೆಗಳು ನಿರ್ಮಾಣವಾದ ರೀತಿಯನ್ನು ವಿವೇಚಿಸುವುದರಲ್ಲಿ ಬಹುಸಹಾಯಕವಾಗಿದೆ.

3. ಮೂರನೆಯ ವರ್ಗೀಕರಣ: ಇದು ಶಿಲೆಗಳ ಆಕಾರ, ರಚನೆ, ವಿನ್ಯಾಸ ಮತ್ತು ಅವು ತೋರಿಬರುವ ರೀತಿಯನ್ನನುಸರಿಸಿದೆ. ಶಿಲಾದ್ರವ ಆರಿ ಹೆಪ್ಪುಗಟ್ಟಿದ ವಿಧಾನಕ್ಕನುಸಾರವಾಗಿ ಶಿಲೆಗಳ ಆಕಾರ, ರಚನೆ ಬೇರೆ ಬೇರೆಯಾಗುತ್ತವೆ. ಹೆಚ್ಚು ಆಳದಲ್ಲಿರುವ ಶಿಲಾದ್ರವ ಬಹು ನಿಧಾನವಾಗಿ ತಂಪಾಗಿ ಹೆಪ್ಪುಗಟ್ಟುವ ಕಾರಣ ಅದರ ಹೊರಮೈ ರಚನಾ ವಿನ್ಯಾಸ ಒಂದು ತೆರನಾಗಿದ್ದರೆ ಅದೇ ಶಿಲಾದ್ರವ ಕೂಪ ಅಥವಾ ಬಿರುಕುಗಳ ಮೂಲಕ ನೆಲದ ಮೇಲೆ

ಶೀಘ್ರಗತಿಯಲ್ಲಿ ಆರಿ ಹೆಪ್ಪುಗಟ್ಟಿದಾಗ ತಲೆದೋರುವ ಲಕ್ಷಣ, ವಿನ್ಯಾಸಗಳೇ ಬೇರೆ ತೆರನಾಗಿರುತ್ತವೆ. ಒಂದಕ್ಕೊಂದು ಅಷ್ಟೂ ಅಷ್ಟು ಭಿನ್ನ. ಅಲ್ಲದೆ ಇವೆರಡರ ಮಧ್ಯೆ ಅಂತರಾಳದಲ್ಲಿ ಆರಿ ತಣ್ಣಗಾದಾಗ ಉಂಟಾಗುವ ಲಕ್ಷಣ, ವಿನ್ಯಾಸಗಳೇ ಬೇರೆ. ಇದನ್ನು ಉಪಯೋಗಿಸಿಕೊಂಡು ಪಾತಾಳದಲ್ಲಿ ಉಂಟಾದ ಶಿಲೆಗಳನ್ನು ಅಂತರಗ್ನಿಶಿಲೆ ಅಥವಾ ಪ್ಲುಟಾನಿಕ್ ಶಿಲೆ ಎಂದೂ ಅಂತರಾಳದಲ್ಲಿ ಉಂಟಾದುವನ್ನು ಮಧ್ಯಸ್ಥಶಿಲೆ ಅಥವಾ ಹೈಪಬಸಲ್ ಶಿಲೆ ಎಂದೂ ಮತ್ತು ಭೂಮೇಲ್ಭಾಗದಲ್ಲಿ ಉಂಟಾದುವನ್ನು ಜ್ವಾಲಾಮುಖಿಜನ್ಯ ಶಿಲೆ ಅಥವಾ ವಲ್ಕ್ಯಾನಿಕ್ ಶಿಲೆ ಎಂದೂ ಮೂರು ಗುಂಪುಗಳಾಗಿ ಗುರುತಿಸಲಾಗಿದೆ. ಅಂತರ್ಗತ ಶಿಲೆಗಳು ಸಮಕಣವಿನ್ಯಾಸವನ್ನೂ ಮಧ್ಯಸ್ಥಶಿಲೆಗಳು ಅಸಮಕಣವಿನ್ಯಾಸವನ್ನೂ ಜ್ವಾಲಾಮುಖಿಜನ್ಯ ಶಿಲೆ ಅಸ್ಪಷ್ಟ ಅಥವಾ ಪ್ರವಾಹವಿನ್ಯಾಸವನ್ನೂ ಸೂಚಿಸುತ್ತದೆ. ಹೀಗೆ ವಿನ್ಯಾಸವನ್ನೇ ಆಧಾರವಾಗಿಟ್ಟುಕೊಂಡು ಶಿಲೆಗಳನ್ನು ವರ್ಗೀಕರಿಸಲಾಗಿದೆ.

ಟರೆಲ್ ಅವರು ಮೇಲೆ ವಿವರಿಸಿರುವ ಮುಖ್ಯಗುಣಗಳ ಆಧಾರದ ಮೇಲೆ ಅಗ್ನಿಶಿಲೆಗಳನ್ನು ಹೀಗೆ ವರ್ಗೀಕರಿಸಿದ್ದಾರೆ:

ಅಗ್ನಿಶಿಲೆಗಳ ಉತ್ಪತ್ತಿ: ಒಂದು ಪ್ರದೇಶದಲ್ಲಿ ನಾನಾ ಬಗೆಯ ಅಗ್ನಿಶಿಲೆಗಳು ಕಂಡುಬಂದರೂ ವಿವರವಾಗಿ ಅವನ್ನು ಅಭ್ಯಾಸಮಾಡಿದಲ್ಲಿ ಎಲ್ಲವೂ ಪರಸ್ಪರ ಸಂಬಂಧವನ್ನು ಸೂಚಿಸುತ್ತ ಒಂದೇ ಮಾತೃಶಿಲಾದ್ರವದಿಂದ ವಿವಿಧ ಘಟ್ಟಗಳಲ್ಲಿ ಹೊರಬಂದುವೆಂದು ಸ್ಪಷ್ಟವಾಗುತ್ತದೆ. ಈ ಮಾತೃಶಿಲಾದ್ರವವನ್ನು ಮೂಲ ಬೆಸಾಲ್ಟ್ ಎಂದು ಅನೇಕ ಭೂವಿಜ್ಞಾನಿಗಳು ಪರಿಗಣಿಸಿದ್ದಾರೆ. ಆದರೆ ಹಲವರ ಅಭಿಮತದಂತೆ ಒಂದಕ್ಕೆ ಬದಲಾಗಿ ಎರಡು ಮಾತೃಶಿಲಾದ್ರವಗಳೇ ಇವೆಯೆಂದೂ ನಂಬಲಾಗಿದೆ. ಒಟ್ಟಿನಲ್ಲಿ ಮಾತೃಶಿಲಾದ್ರವ ಆರುವಾಗ ವಿವಿಧ ಘಟ್ಟಗಳಲ್ಲಿ ವಿಧವಿಧವಾದ ಶಿಲೆಗಳು ಉತ್ಪನ್ನವಾದುವೆಂದು ನಿರ್ಧರಿಸಲಾಗಿದೆ. ಹೀಗಾದಾಗ ಮೊದಲು ಕಾಣಿಸಿಕೊಂಡವು ಪ್ರತ್ಯಾಮ್ಲ (ಬೇಸಿಕ್)ಶಿಲೆಗಳು, ಕೊನೆಯಲ್ಲಿ ಬಂದವು ಆಮ್ಲಶಿಲೆಗಳು, ಇವೆರಡರ ಮಧ್ಯೆ ರೂಪತಾಳಿದವು ಬಗೆಬಗೆಯ ಮಧ್ಯವರ್ತಿಶಿಲೆಗಳು. ಈ ಪ್ರಕ್ರಿಯೆಯನ್ನೇ ವಿಭೇದೀಕರಣ ಎಂದು ಕರೆಯಲಾಗಿದೆ.

ಮತ್ತೆ ಕೆಲವರ ಅಭಿಪ್ರಾಯದಂತೆ ಮಾತೃಶಿಲಾದ್ರವ ಪ್ರವಹಿಸುವಾಗ ತನ್ನ ದಾರಿಗೆ ಅಡ್ಡಬಂದ ಸುಣ್ಣಶಿಲೆ, ಜೇಡುಶಿಲೆ ಮುಂತಾದ ಅನ್ಯಶಿಲೆಗಳನ್ನು ತನ್ನಲ್ಲಿ ಹೆಚ್ಚು ಶಾಖವಿರುವ ಕಾರಣ ಸಂಪೂರ್ಣವಾಗಿ ಜೀರ್ಣಿಸಿಕೊಳ್ಳುತ್ತದೆ. ಇದರಿಂದ ಅದರ ರಾಸಾಯನಿಕ ಸಂಯೋಜನೆಯಲ್ಲಿ ತೀವ್ರ ಬದಲಾವಣೆಗಳುಂಟಾಗಿ ಹೊಸಶಿಲೆಗಳು ತಲೆದೋರುತ್ತವೆ. ಸುಣ್ಣ ಶಿಲೆಯನ್ನು ಜೀರ್ಣಿಸಿಕೊಂಡಲ್ಲಿ ಆಲ್ಕಲೈನ್ ಶಿಲೆಯೂ ಜೇಡುಶಿಲೆಯನ್ನು ಅರಗಿಸಿಕೊಂಡಲ್ಲಿ ನೋರೈಟ್ ಶಿಲೆಯೂ ಉಂಟಾಗುವುದೆಂದು ಭಾವಿಸಲಾಗಿದೆ. ಇಂಥ ಪ್ರಕ್ರಿಯೆಯನ್ನು ಸಮೀಕರಣ (ಅಸ್ಸಿಮಿಲೇಷನ್) ಎನ್ನುವರು.

ಅಗ್ನಿಶಿಲೆಗಳ ಖನಿಜನಿಕ್ಷೇಪಗಳು: ಲೋಹಖನಿಜಗಳಿಗಂತೂ ಅಗ್ನಿಶಿಲೆಗಳೇ ತೌರೂರು. ಕಾರಣ ಖನಿಜಗಳಿಗೆ ಮೂಲಭೂತವಾದ ಅದುರು ಮಾತೃದ್ರವ ಮತ್ತು ಮಾತೃಶಿಲಾದ್ರವದ ಅವಿಭಾಜ್ಯ ಅಂಶ. ಅಗ್ನಿಶಿಲೆಗಳಲ್ಲಿ ದೊರೆಯುವ ಮುಖ್ಯವಾದ ಲೋಹಗಳು ಚಿನ್ನ, ತಾಮ್ರ, ತವರ, ಕ್ರೋಮಿಯಂ, ಟೈಟೇನಿಯಂ, ಕಬ್ಬಿಣ, ನಿಕ್ಕಲ್, ಇವೇ ಅಲ್ಲದೆ ಇತರ ಖನಿಜಗಳಾದ ಅಭ್ರಕ, ಕುರಂದದಕಲ್ಲು (ಕೋರಂಡಂ), ಜಿರ್‌ಕಾನ್, ವಜ್ರ, ಮಾನಜೈಟ್, ಕೊಲಂಬೈಟ್, ಸಾಮರ್‌ಸ್ಕೈಟ್, ಯುರೇನಿಯಂ ಮತ್ತು ಥೋರಿಯಂಗಳೂ ದೊರೆಯುತ್ತವೆ.

ಕರ್ನಾಟಕದ ಅಗ್ನಿಶಿಲೆಗಳು: ಇವು ಧಾರವಾಡ ಶಿಲಾಸಮೂಹದೊಡನೆ ಬೆರೆತಿರುವ ರಯೋಲೈಟ್, ಬೆಸಾಲ್ಟ್ ಮುಂತಾದ ಬಹಿಸ್ಸರಣ ಶಿಲೆಗಳು. ಇವು ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಹರಡಿರುವ ಧಾರವಾಡ ಶಿಲಾಸಮುದಾಯದಲ್ಲಿ ಕಂಡುಬರುತ್ತವೆ. ಇವಲ್ಲದೆ ಕ್ಲೋಸ್‌ಪೇಟೆ ಗ್ರಾನೈಟ್, ಚಾರ್ನ್‌ಕೈಟ್ ಮೊದಲಾದ ಅಂತಸ್ಸರಣಶಿಲೆಗಳೂ ಇವೆ. ಇವು ಬೆಟ್ಟ ಗುಡ್ಡಗಳೋಪಾದಿಯಲ್ಲಿ ಧಾರವಾಡ ಶಿಲಾಸಮುದಾಯ ಮತ್ತು ನೈಸ್‌ಶಿಲಾಸ್ತೋಮದಿಂದ ಹೊರಬಂದಂತೆ ಕಾಣುತ್ತವೆ. ಗ್ರಾನೈಟ್ ಬೆಟ್ಟ ಗುಡ್ಡಗಳು ಕ್ಲೋಸ್‌ಪೇಟೆ (ರಾಮನಗರ), ತುಮಕೂರು, ಮೊಳಕಾಲ್ಮೂರು, ಬಳ್ಳಾರಿ ಈ ಪ್ರಾಂತ್ಯಗಳಲ್ಲೆಲ್ಲ ಕಂಡುಬರುತ್ತವೆ. ಚಾರ್ನ್‌ಕೈಟ್ ಬೆಟ್ಟಗಳು ದಕ್ಷಿಣ ವಲಯದ ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಶಿವಸಮುದ್ರದ ಪ್ರದೇಶಗಳಲ್ಲಿ ಹರಡಿವೆ. ಇವೆಲ್ಲವೂ ಆರ್ಷೇಯಕಲ್ಪಕ್ಕೆ ಸೇರಿದವು. ಈ ಶಿಲಾಸಮೂಹವನ್ನು ಭೇದಿಸಿರುವ ನೂರಾರು ಒಡ್ಡುಗಳು (ಡೈಕ್ಸ್) ಕರ್ನಾಟಕದ ಅನೇಕ ಭಾಗಗಳಲ್ಲಿ ಕಾಣಬಂದಿವೆ. ಉತ್ತರ ಭಾಗದಲ್ಲಿ ಬಿಜಾಪುರ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿ ಮಧ್ಯಕಲ್ಪಕ್ಕೆ ಸೇರಿದ ಬೆಸಾಲ್ಟ್ ಎಂಬ ಬಹಿಸ್ಸರಣಶಿಲೆಯ ಬೆಟ್ಟಗುಡ್ಡಗಳನ್ನು ಗುರುತಿಸಬಹುದು. (ಎಂ.ಎಸ್.ಎಸ್.)

**ಅಜಂತ:** ಪ್ರಸಿದ್ಧ ಗುಹಾಂತರ ದೇವಾಲಯಗಳನ್ನೊಳಗೊಂಡ ಪ್ರೇಕ್ಷಣೀಯ ಸ್ಥಳ. ಈಗಿನ ಮಹಾರಾಷ್ಟ್ರದ (ಹಿಂದಿನ ಹೈದರಾಬಾದ್ ಸಂಸ್ಥಾನದ) ಔರಂಗಾಬಾದ್ ಜಿಲ್ಲೆಯಲ್ಲಿದೆ. ಇದರ ಸುತ್ತ ಮಲಸೀಮೆ, ಚಂದರ್, ಶತಮಾಲ, ವಿಂಧ್ಯಾದ್ರಿ, ಸಹ್ಯಾದ್ರಿ ಎಂದು ಕರೆಯಲ್ಪಡುವ ಪಶ್ಚಿಮಘಟ್ಟಗಳ ಬೆಟ್ಟಗಳು ಇವೆ. ಇವುಗಳ ಸರಾಸರಿ ಎತ್ತರ 1200 ಮೀ. ಇವು ಮನಮಾಡದಿಂದ ಬೀರಾರಿನವರೆಗೆ ವಿಸ್ತರಿಸಿವೆ. ಅಲ್ಲಲ್ಲಿ ವ್ಯಾಪಾರಿಗಳ, ಸೈನ್ಯದ ಓಡಾಟ ಸಾಗಣೆಗಳಿಗನುಕೂಲವಾದ ಕಣಿವೆ ದಾರಿಗಳಿವೆ. ದಕ್ಷಿಣ ಪ್ರಸ್ಥಭೂಮಿಯ ಉತ್ತರಗಡಿಯಾದ ಈ ಶ್ರೇಣಿ ಬೀರಾರಿನಲ್ಲಿ 600 ಮೀ ಎತ್ತರವಾಗಿದೆ. ಮಾರ್ಕಂಡ (1316 ಮೀ), ಸಪ್ತಶೃಂಗ (1400 ಮೀ), ಧೊಡಕ್ (1424 ಮೀ), ತುದ್ರೆ (1359 ಮೀ) – ಇವು ಇಲ್ಲಿನ ಮುಖ್ಯ ಶಿಖರಗಳು.

ಅಜಂತ ಕಣಿವೆ ಔರಂಗಾಬಾದ್ ಮತ್ತು ಎಲ್ಲೋರಗಳಿಂದ 152 ಕಿಮೀ ದೂರದಲ್ಲಿದೆ. ಪ್ರಪಂಚಪ್ರಸಿದ್ಧವಾದ ಅಜಂತ ಗುಹಾಂತರ್ದೇವಾಲಯಗಳು ವಾಘ್ ಕಣಿವೆಯ ಮನೋಹರವಾದ ನೈಸರ್ಗಿಕ ಸನ್ನಿವೇಶದಲ್ಲಿವೆ. ಕಲೆಯ ಪ್ರಭೇದಗಳಾದ ಶಿಲ್ಪ, ಕೆತ್ತನೆ ಹಾಗೂ ವರ್ಣಲೇಪನ ಇವುಗಳ ಕೇಂದ್ರವೆನಿಸಿರುವ ಅಜಂತ ಭಾರತೀಯ ಪರಮೋತ್ಕೃಷ್ಟ ಕಲಾನೈಪುಣ್ಯದ ಚಿರಂತನಸಾಕ್ಷಿಯಾಗಿದೆ. ಇಲ್ಲಿ ಬೆಟ್ಟವನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ ಚಿತ್ರಗಳನ್ನು ಬಿಡಿಸುವ ಕಾರ್ಯ ಪ್ರಶ.ಪೂ. 2ನೆಯ ಶತಮಾನದಲ್ಲಿ ಪ್ರಾರಂಭವಾಗಿ ಅವಿಚ್ಛಿನ್ನವಾಗಿ 7ನೆಯ ಶತಮಾನದವರೆಗೂ ಮುಂದುವರಿಯಿತು. ಸಾತವಾಹನ, ವಾಕಾಟಕ ಮತ್ತು ಬಾದಾಮಿ ಚಳುಕ್ಯ ಸಂತತಿಗಳ ಅರಸರು ಬೌದ್ಧಭಿಕ್ಷುಗಳಿಗಾಗಿ ಗುಹಾಂತರ್ದೇವಾಲಯಗಳನ್ನು ನಿರ್ಮಿಸಿದರು. ಶಿಲ್ಪಿಗಳು ಗುಹಾಲಯಗಳ ನಿರ್ಮಾಣ ಹಾಗೂ ಕಲಾವಿನ್ಯಾಸದಲ್ಲಿ ತಮ್ಮ ಕುಶಲತೆಯನ್ನು ಬಿಂಬಿಸಿರುವರು. ಮತನಿಷ್ಠೆ ಹಾಗೂ ಪರಂಪರಾನುಗತವಾಗಿ ಬೆಳೆಸಿಕೊಂಡು ಬಂದ ಕಲಾಪರಿಪೂರ್ಣತೆಯನ್ನು ವರ್ಣಲೇಪನದಲ್ಲಿ ಬೌದ್ಧಭಿಕ್ಷುಗಳು ಅತ್ಯುನ್ನತವಾಗಿ ಪ್ರದರ್ಶಿಸಿರುವರು.

ಅಜಂತದಲ್ಲಿ ಒಟ್ಟು 30 ಗುಹಾಂತರ್ದೇವಾಲಯಗಳಿವೆ. ಅನೇಕ ಗುಹಾಲಯಗಳಲ್ಲಿ ಕಾಲ ಮತ್ತು ಪ್ರಕೃತಿಯ ವೈಪರೀತ್ಯದಿಂದ ಚಿತ್ರಗಳು ನಾಶವಾಗಿದೆ. ಇತ್ತೀಚೆಗೆ ಇವುಗಳನ್ನು ಸಂರಕ್ಷಿಸಲಾಗಿದೆ. (ಎಸ್.ಡಿ.ಎಂ.)

**ಅಜರ್‌ಬೈಜಾನ್:** ಇದು ದಕ್ಷಿಣ ಕಾಕಸಸ್ ಭಾಗದಲ್ಲಿನ ದೇಶ. ಭೂಮಧ್ಯ ಸಮುದ್ರದ ಪಶ್ಚಿಮದಲ್ಲಿ ನೆಲೆಗೊಂಡಿರುವ ಈ ದೇಶ ಹಿಂದಿನ ಸೋವಿಯತ್ ರಷ್ಯದಿಂದ 1991 ಆಗಸ್ಟ್ 30 ರಂದು ಸ್ವಾತಂತ್ರ್ಯ ಪಡೆದುಕೊಂಡಿತು. ರಾಜಧಾನಿ ಬಾಕು. ಜನಸಂಖ್ಯೆ 1,713,300 (2002).




ಸನ್ನಿವೇಶ ಮತ್ತು ವಿಸ್ತೀರ್ಣ: ಅಜರ್‌ಬೈಜಾನ್ $37^0$ ಉ. ಅ. ದಿಂದ $41^0$ ಉ. ಅ. ಮತ್ತು $44^0$ ಪೂ. ರೇ. ದಿಂದ $51^0$ ಪೂ.ರೇ. ನಡುವೆ ನೆಲೆಸಿದೆ. ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರ, ಉತ್ತರದಲ್ಲಿ ರಷ್ಯ, ವಾಯವ್ಯದಲ್ಲಿ ಜಾರ್ಜಿಯ, ಪಶ್ಚಿಮದಲ್ಲಿ ಆರ್ಮೇನಿಯ ಮತ್ತು ದಕ್ಷಿಣದಲ್ಲಿ ಇರಾನ್ ರಾಷ್ಟ್ರಗಳು ಸುತ್ತುವರಿದಿವೆ. ಒಟ್ಟು ಭೌಗೋಳಿಕ ವಿಸ್ತೀರ್ಣ 86,600 ಚ.ಕಿಮೀ.

ಭೌಗೋಳಿಕ ಲಕ್ಷಣ ಮತ್ತು ವಾಯುಗುಣ: ಈ ದೇಶ ಹಲವು ಪರ್ವತಗಳಿಂದ ಆವೃತವಾಗಿದೆ. ಇದರ ಉತ್ತರ ಭಾಗದಲ್ಲಿ ಉನ್ನತವಾದ ಆರಾರಟ್ ಪರ್ವತಗಳು ಮತ್ತು ನೈರುತ್ಯ ಭಾಗದಲ್ಲಿ ಅರಾಕಬ್ ಪರ್ವತ ಶ್ರೇಣಿಯ ಪಾದಬೆಟ್ಟಗಳು ಕಂಡುಬರುತ್ತವೆ. ಇಲ್ಲಿನ ಅತ್ಯಂತ ಎತ್ತರವಾದ ಪರ್ವತ ಶಿಖರ 'ಬಜರ್ ಡ್ಯೂಜಿ'. (4480 ಮೀ). ಇದರ ಭೂ ಭಾಗ ವಾಯವ್ಯದಿಂದ ಆಗ್ನೇಯದ ಕಡೆಗೆ ಇಳಿಜಾರಾಗಿದೆ.

ಅಜರ್‌ಬೈಜಾನ್‌ನ ವಾಯುಗುಣ ವೈವಿಧ್ಯತೆಯಿಂದ ಕೂಡಿದೆ. ಉಷ್ಣಾಂಶ ಋತುಕಾಲಿಕವಾಗಿ ಮತ್ತು ಪ್ರಾದೇಶಿಕವಾಗಿ ಬದಲಾವಣೆ ಹೊಂದುತ್ತದೆ. ದೇಶದ ಮಧ್ಯ ಮತ್ತು ಪೂರ್ವ ಭಾಗದಲ್ಲಿ ಒಣಹವೆಯಿಂದ ಕೂಡಿದ ಉಪ ಉಷ್ಣವಲಯದ ವಾಯುಗುಣ ಕಂಡುಬರುತ್ತದೆ. ಚಳಿಗಾಲ ಶೀತವಾಗಿದ್ದು ಬೇಸಿಗೆಯು ದೀರ್ಘವಾಗಿರುತ್ತದೆ. ಚಳಿಗಾಲದಲ್ಲಿ ಆಗ್ನೇಯ ಮೈದಾನ ಪ್ರದೇಶದಲ್ಲಿ ಸರಾಸರಿ ವಾರ್ಷಿಕ ಉಷ್ಣಾಂಶ $6^0$ಸೆ. ಇದ್ದರೆ ಬೇಸಗೆಯಲ್ಲಿ $26^0$ಸೆ. ರಷ್ಟಿರುತ್ತದೆ. ಉತ್ತರ ಮತ್ತು ಪಶ್ಚಿಮ ಪರ್ವತ ಪ್ರದೇಶಗಳಲ್ಲಿ ಚಳಿಗಾಲದ ಸರಾಸರಿ ಉಷ್ಣಾಂಶ $9^0$ಸೆ. ಬೇಸಗೆಯಲ್ಲಿ $12^0$ಸೆ. ಇರುತ್ತದೆ. ವಾರ್ಷಿಕವಾಗಿ ಮಳೆ 20–40 ಸೆಂಮೀ. ಮಳೆಯ ಪ್ರಮಾಣ ದೇಶದ ಎಲ್ಲಾ ಭಾಗದಲ್ಲಿಯೂ ಒಂದೇ ಸಮನಾಗಿಲ್ಲ. ಆಗ್ನೇಯ ಭಾಗ ಹೆಚ್ಚು ಮಳೆಯನ್ನು ಪಡೆಯುವ ಪ್ರದೇಶವಾಗಿದ್ದು ಅಲ್ಲಿ 130 ಸೆಂಮೀ ಗಿಂತ ಅಧಿಕ.

ಆರ್ಥಿಕತೆ: ಅಜರ್‌ಬೈಜಾನ್‌ನ ಬಹುತೇಕ ಆರ್ಥಿಕತೆ ಕೈಗಾರಿಕೆಯನ್ನು ಅವಲಂಬಿಸಿದೆ. ಪ್ರಮುಖವಾಗಿ ಯಂತ್ರೋಪಕರಣಗಳ ತಯಾರಿಕೆ, ಕಚ್ಚಾ ತೈಲ ಮತ್ತು ಗಣಿ ಉದ್ಯಮಗಳು ಹೆಚ್ಚು ಬೆಳವಣಿಗೆ ಹೊಂದಿವೆ. ಇಲ್ಲಿನ ಮುಖ್ಯ ಖನಿಜಗಳೆಂದರೆ ಕಬ್ಬಿಣದ ಅದಿರು, ಅಲ್ಯೂಮಿನಿಯಂ ಮತ್ತು ತಾಮ್ರ. ಕೃಷಿ ಇಂದಿಗೂ ದೇಶದ ಪ್ರಮುಖ ಆದಾಯ ಮೂಲವಾಗಿದ್ದು ಅದು ದೇಶದ ಆರ್ಥಿಕತೆಯಲ್ಲಿ 1/3 ಭಾಗದಷ್ಟು ಪಾಲನ್ನು ಒಳಗೊಂಡಿದೆ. ಪ್ರಧಾನವಾಗಿ ಹತ್ತಿ, ರೇಷ್ಮೆ, ಹೊಗೆಸೊಪ್ಪು, ಬತ್ತ, ದ್ರಾಕ್ಷಿ, ಎಣ್ಣೆಕಾಳುಗಳು ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತದೆ. ಪರ್ವತ ಪ್ರದೇಶಗಳಲ್ಲಿ ಪಶುಪಾಲನೆ ರೂಢಿಯಲ್ಲಿದ್ದು ಅಲ್ಲಿ ಕುರಿ ಮತ್ತು ಮೇಕೆಗಳ ಸಾಕಾಣಿಕೆ ಕಂಡುಬರುತ್ತದೆ. ಕ್ಯಾಸ್ಪಿಯಿನ್ ಸಮುದ್ರದ ತೀರದಲ್ಲಿ ಸ್ವಲ್ಪ ಮೀನುಗಾರಿಕೆ ಕಂಡುಬರುತ್ತದೆ. ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ಹತ್ತಿ ಮತ್ತು ರೇಷ್ಮೆ ಬಟ್ಟೆ ಕೈಗಾರಿಕೆಗಳು ಬೆಳವಣಿಗೆ ಹೊಂದಿವೆ. ಅಜರ್‌ಬೈಜಾನ್‌ನ ತ್ವರಿತ ಆರ್ಥಿಕ ಬೆಳವಣಿಗೆಗೆ ಪ್ರಮುಖವಾಗಿ ಅಲ್ಲಿ ದೊರೆಯುವ ಕಚ್ಚಾ ತೈಲ ಕಾರಣವಾಗಿದೆ. ಜನಸಂಖ್ಯೆ 8,176,000 (2002). ಜನಸಾಂದ್ರತೆ 97 ಪ್ರತಿ ಚ.ಕಿಮೀಗೆ ಜನರು. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 93.4 ರಷ್ಟು ಮುಸ್ಲಿಮ್ಮರು ಇವರಲ್ಲಿ ಶೇ. 60–70 ರಷ್ಟು ಶಿಯಾ ಪಂಗಡಕ್ಕೆ ಸೇರಿದವರು.

ದೇಶದ ಆಡಳಿತ ಭಾಷೆ ಅಜೆರ್ ಬೈಜನಿ. ಈ ಭಾಷೆಯನ್ನು ದೇಶದ ಶೇ. 95 ಜನ ಮಾತನಾಡುವರು. ಉಳಿದವರು ಟರ್ಕಿಷ್, ತುರ್ಕಮೆನಿಷ್ ಮತ್ತು ರಷ್ಯನ್ ಭಾಷೆಯನ್ನು ಬಳಸುವರು. (ಎಸ್.ವಿ.)

**ಅಜ್ಮೀರ್:** ರಾಜಸ್ತಾನದಲ್ಲಿನ ಒಂದು ಜಿಲ್ಲೆ ಮತ್ತು ಜಿಲ್ಲಾಡಳಿತ ಕೇಂದ್ರ ಪಟ್ಟಣ. ಈ ನಗರ 11 ನೆಯ ಶತಮಾನದ ಕೊನೆಯಲ್ಲಿ ಚೌಹಾನ್ ವಂಶದ ರಾಜ ಅಜಯದೇವನಿಂದ ನಿರ್ಮಿತವಾಯಿತು. ಊರು ಅರಾವಳಿ ಬೆಟ್ಟಗಳ ಉತ್ತರದ ತುದಿಯ ಇಳಿಜಾರಿನಲ್ಲಿದೆ ($26^028'$ ಉ. ಅ–$74^041'$ ಪೂ.ರೇ). ಇದರ ಉತ್ತರಕ್ಕೆ ಆನಾಸಾಗರ, ಮೇಲುಭಾಗದಲ್ಲಿ ಫಾಯ್ ಸಾಗರಗಳೆಂಬ ಸರೋವರಗಳುಂಟು. ಫಾಯ ಸರೋವರದಿಂದ ಅಜ್ಮೀರ್ ಪಟ್ಟಣಕ್ಕೆ ನೀರನ್ನು ಸರಬರಾಜು ಮಾಡಲಾಗುತ್ತದೆ.

ಈ ಪಟ್ಟಣದಲ್ಲಿ ಖ್ಯಾತ ಮಹಮದೀಯ ಸಂತ ಮುಯಿನ್–ಉದ್–ದೀನ್ ಚಿಸ್ತಿ ಸಮಾಧಿಯಿದೆ. ಇಲ್ಲಿ ಬಿಳಿ ಅಮೃತಶಿಲೆಯ ಕಟ್ಟಡಗಳುಂಟು. ಅಕ್ಬರ್ ದೊರೆ ತನ್ನ ರಾಣಿಯ ಸಂಗಡ ಆಗ್ರಾದಿಂದ ಇಲ್ಲಿಗೆ ನಡೆದುಬಂದು ಮಗನನ್ನು ಪಡೆಯುವುದಕ್ಕಾಗಿ ಪ್ರಾರ್ಥಿಸಿದನೆಂದು ಪ್ರತೀತಿ. 1200 ರಲ್ಲಿ ಇಲ್ಲಿದ್ದ ಒಂದು ಜೈನ ದೇವಾಲಯವನ್ನು ಮಸೀದಿಯಾಗಿ ಪರಿವರ್ತಿಸಲಾಯಿತೆಂದು ತಿಳಿದುಬರುತ್ತದೆ. ಇದು ತಾರಗರ್ ಬೆಟ್ಟದ ಇಳಿಜಾರಿನಲ್ಲಿದೆ. ಇದರ ಕಲೆಯ ಸೌಂದರ್ಯ ಇಂದಿಗೂ ಅಲ್ಪಸ್ವಲ್ಪ ಉಳಿದಿದೆ. ಇಲ್ಲಿರುವ ಒಂದು ದೊಡ್ಡ ಛಾವಣಿಗೆ 40 ಆಧಾರಸ್ತಂಭಗಳಿವೆ. ಬೆಟ್ಟದ ತುದಿಯಲ್ಲಿರುವ ಕೋಟೆಯ ಗೋಡೆ ಸು. 3 ಕಿಮೀ ಉದ್ದವಿದೆ. ಈ ಕೋಟೆಗೆ ಕಾಲುದಾರಿಯಲ್ಲಿ ಹೋಗಬೇಕು.

ಜಿಲ್ಲಾಡಳಿತ ಕೇಂದ್ರವಾದ ಇಲ್ಲಿ ರೈಲ್ವೆನಿಲ್ದಾಣವಿದೆ. ನಗರ ನಿರ್ಮಾಣ ಉತ್ತಮ ಯೋಜನೆಯಿಂದ ಕೂಡಿದೆ. ಸಾಂಬಾರ್ ಸರೋವರ ಹಾಗೂ ರಾಮ್‌ಸುರ್‌ನಿಂದ ಬರುವ ಉಪ್ಪು ಇಲ್ಲಿ ವ್ಯಾಪಾರವಾಗುತ್ತದೆ. ಈ ನಗರ ಎಣ್ಣೆ ತಯಾರಿಕೆಗೆ, ಹತ್ತಿ ಬಟ್ಟೆಗಳಿಗೆ ಬಣ್ಣಹಾಕುವ ಕೈಗಾರಿಕೆಗೆ ಹೆಸರುವಾಸಿ. (ಎಂ.ಎಸ್.)

**ಅಝೋರ್ಸ್ ದ್ವೀಪಗಳು:** ಅಟ್ಲಾಂಟಿಕ್ ಮಹಾಸಾಗರದಲ್ಲಿ $30^0$–$40^0$ ಉ, ಅ; $25^0$–$31^0$ ಪ.ರೇ.ಗಳವರೆಗೆ ಹರಡಿವೆ. ಸಾವೋ ಮಿಗಲ್ ದೊಡ್ಡ ದ್ವೀಪ. ಇತರ ದ್ವೀಪಗಳು; ಸಾಂತಾ ಮೇರಿಯ, ಫಾರ್ಮಿಗಸ್, ರಾಕ್ಸ್, ಟೆರಿಸೀರ, ಗ್ರೇಷಿಯಸ, ಸಾವೊ, ಜೋರ್ಗಾ, ಪಿಕೊ, ಫಯಾಲ ಮತ್ತು ಫ್ಲೋರ್ಸ್ ಕಾರ್ವೋ. ಈ ದ್ವೀಪಗಳ ಒಟ್ಟು ವಿಸ್ತೀರ್ಣ 2,300 ಚ.ಕಿಮೀ. 1445ರಲ್ಲಿ ಈ ದ್ವೀಪಗಳನ್ನು ಪೋರ್ಚುಗೀಸರು ಕಂಡುಹಿಡಿದರು. 1580 ರಿಂದ 1640ರವರೆಗೆ ಈ ದ್ವೀಪಗಳು ಸ್ಪೇನಿನ ವಶದಲ್ಲಿದ್ದವು. 1823 ರಿಂದ 1833 ರವರೆಗೆ ಪೋರ್ಚುಗೀಸರಿಗೂ ಸ್ಪೇನಿನವರಿಗೂ ಹೋರಾಟ ನಡೆದು, ಪೋರ್ಚುಗೀಸರು ಪುನಃ ಈ ದ್ವೀಪಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈಗಲೂ ಇವು ಪೋರ್ಚುಗಲ್ ಸಾಮ್ರಾಜ್ಯಕ್ಕೆ ಸೇರಿವೆ. ಇಲ್ಲಿನ ಜನಸಂಖ್ಯೆಯಲ್ಲಿ ಅವರದೇ ಮೇಲುಗೈ. ಜನಸಂಖ್ಯೆ 2,42,073 (2001).

ಈ ದ್ವೀಪಗಳದು ಮಲೆನಾಡಿನ ಪರಿಸರ. ಇಲ್ಲಿ ಅನೇಕ ಜ್ವಾಲಾಮುಖಿಗಳಿವೆ. ಆದ್ದರಿಂದ ಇಲ್ಲಿ ಆಗಾಗ್ಗೆ ಭೂಕಂಪಗಳುಂಟಾಗುತ್ತವೆ. ಅನೇಕ ಬಿಸಿನೀರು ಬುಗ್ಗೆಗಳಿವೆ. ಹವಾಮಾನ ಸಮಶೀತೋಷ್ಣವಾಗಿದೆ. ಜನರ ಮುಖ್ಯ ಉದ್ಯೋಗ ಬೇಸಾಯ ಮತ್ತು ಪಶುಪಾಲನೆ. ಇಲ್ಲಿಯ ಮುಖ್ಯ ಬೆಳೆಗಳು ಗೋದಿ, ದ್ವಿದಳ ಧಾನ್ಯಗಳು, ತಂಬಾಕು, ಆಲೂಗಡ್ಡೆ, ಅನಾನಸ್, ಕಿತ್ತಳೆ ಮತ್ತು ಬಾಳೆ. ಮದ್ಯ, ಹಣ್ಣು ಹಂಪಲು, ಗಿಣ್ಣು, ಬೆಣ್ಣೆ, ದನ ಮತ್ತು ಹಂದಿಗಳ ಮಾಂಸ ರಫ್ತಾಗುತ್ತವೆ. ಫಯಾಲ ದ್ವೀಪದಲ್ಲಿ ಹೋರ್ಟಾ ಎಂಬುದು ಉತ್ತಮ ಬಂದರು. ಟರ್ಸೀರ ದ್ವೀಪಗಳಲ್ಲಿ ಆಂಗ್ರಾ ಎಂಬುದು ದೇಶದ ರಾಜಧಾನಿ. (ಬಿ.)

**ಅಟಕಾಮ:** ಚಿಲಿ ದೇಶದ ಮರುಭೂಮಿ ಪಶ್ಚಿಮ ಭಾಗದಲ್ಲಿ $30^0$ ದ. ಅ.ದಿಂದ ಉತ್ತರಕ್ಕೆ ಸುಮಾರು ಒಂದು ಸಾವಿರ ಕಿಮೀ ಹಬ್ಬಿದೆ. ಇಲ್ಲಿಯ ನಿವಾಸಿಗಳು ಅಮೆರಿಕನ್ ಇಂಡಿಯನ್ನರು ಮತ್ತು ಯುರೋಪಿಯನ್ನರು. ಇಲ್ಲಿ ಸಿಕ್ಕುವ ಪೆಟ್ಲುಪ್ಪು (ನೈಟ್ರೇಟ್) ಮತ್ತು ಖನಿಜ ಸಂಪತ್ತಿಗೆ ಆಕರ್ಷಿತರಾಗಿ ಯುರೋಪಿಯನ್ನರು ಇಲ್ಲಿಗೆ ಬಂದು ನೆಲಸಿದರು. ಮೊದಲು ಇದರ ಒಡೆತನಕ್ಕಾಗಿ ಚಿಲಿ, ಬೊಲಿವಿಯ ಮತ್ತು ಪೆರು ದೇಶಗಳ ನಡುವೆ ಯುದ್ಧಗಳಾದುವು. ಕೊನೆಗೆ ಚಿಲಿ ದೇಶ ಜಯಶಾಲಿಯಾಯಿತು. ಇದಕ್ಕೆ ಇಕ್ಕಟ್ಟಾದ ಸಮುದ್ರತೀರವಿದೆ. ಉಳಿದ ಭಾಗ ಎತ್ತರವಾದ ಪ್ರಸ್ಥಭೂಮಿಯಾಗಿದೆ. ಇಲ್ಲಿ ಐದು–ಆರು ವರ್ಷಗಳಿಗೊಮ್ಮೆ ಮಳೆಯಾಗುತ್ತದೆ. ಮಳೆಯ ಪ್ರಮಾಣ ಅತ್ಯಲ್ಪ 3 ಸೆಂಮೀ ನಷ್ಟು ಮಾತ್ರ ಇದ್ದು ವರ್ಷದ ಬಹುಕಾಲ ಶುಷ್ಕವಾಗಿರುತ್ತದೆ. ಕೇವಲ ಒಂದು ನದಿ ಹರಿಯುತ್ತದೆ. ಇಕ್ವಿಕ್ ಮತ್ತು ಆಂಟೊಫಗಸ್ತ ಇಲ್ಲಿಯ ಬಂದರುಗಳು. ಇಲ್ಲಿಂದ ಪೆಟ್ಲುಪ್ಪು ಮತ್ತು ಬೊಲಿವಿಯದ ಖನಿಜ ಯುರೋಪು, ಅಮೆರಿಕ ಸಂಯುಕ್ತಸಂಸ್ಥಾನಗಳಿಗೆ ರಫ್ತಾಗುತ್ತವೆ. ನೈಟ್ರೇಟ್ ತೆಗೆಯುವ ಯಾಂತ್ರಿಕ ವಿಧಾನವನ್ನು ಕಂಡುಹಿಡಿದಾಗಿನಿಂದ ಇದರ ಪ್ರಾಮುಖ್ಯತೆ ಕಡಿಮೆಯಾಗಿದೆ; ಈ ವಿಧಾನದಿಂದ ಅಯೊಡಿನ್ ಎಂಬ ಉಪವಸ್ತು ಸಿಗುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನದ ಶೇ. 30 ಆವಶ್ಯಕತೆಯನ್ನು ಚಿಲಿ ಒದಗಿಸುತ್ತದೆ. ಇದಲ್ಲದೆ ಅದರ ಮಧ್ಯಭಾಗಗಳಲ್ಲಿ ಬೆಳ್ಳಿ ಮತ್ತು ತಾಮ್ರ ದೊರೆಯುತ್ತವೆ. ತೀರಪ್ರದೇಶದಲ್ಲಿ ಸ್ವಲ್ಪ ಮಳೆ ಬೀಳುತ್ತದೆ. ಹವಾಮಾನ ಹಿತಕರ. ಓಯಸಿಸ್‌ಗಳಲ್ಲಿ ಕುರಿ, ಲಾಮಾ ಮತ್ತು ಮೇಕೆಗಳನ್ನು ಸಾಕುವರು. ಆಲ್ಫಾಲ್ಫಾ ಹುಲ್ಲು ಬೆಳೆಯುತ್ತದೆ. ಇವರ ಆಹಾರ ಮೆಕ್ಕೆಜೋಳ, ಕುರಿಯ ಮಾಂಸ, ಹಾಲು, ಬೆಣ್ಣೆ, ಗಿಣ್ಣು ಮುಂತಾದವು. ಹೆಣ್ಣುಮಕ್ಕಳು ಉಣ್ಣೆಬಟ್ಟೆ ಮತ್ತು ಮಣ್ಣಿನ ಮಡಕೆಗಳನ್ನು ತಯಾರಿಸುತ್ತಾರೆ. ಜನಸಂಖ್ಯೆ 1000 (2005). (ಬಿ.ಓ.)

**ಅಟ್ಲಾಂಟ:** ಅಮೆರಿಕ ಸಂಯುಕ್ತಸಂಸ್ಥಾನದ ಜಾರ್ಜಿಯ ಪ್ರಾಂತದ ರಾಜಧಾನಿ; ಚಟ್ಟಹೂಚಿ ನದಿಯಿಂದ 13 ಕಿಮೀ ದೂರದಲ್ಲಿದೆ. ಅನೇಕ ರಸ್ತೆಗಳೂ ರೈಲುಮಾರ್ಗಗಳೂ ವಿಮಾನಮಾರ್ಗಗಳೂ ಸಂಧಿಸುವ ಸ್ಥಳ ಆದ್ದರಿಂದ ಕೈಗಾರಿಕೆಗಳ ಮತ್ತು ವಿದ್ಯಾಕೇಂದ್ರವಾಗಿದೆ. ವಾಷಿಂಗ್‌ಟನ್ ಮತ್ತು ನ್ಯೂ ಆರ್ಲಿಯನ್ಸ್ ಪಟ್ಟಣಗಳ ಮಧ್ಯದಲ್ಲಿರುವುದರಿಂದಲೂ ಇಲ್ಲಿಂದ ಅಲಬಾಮ, ಟೆನ್ನೆಸಿ, ದಕ್ಷಿಣ ಕೆರೋಲಿನ ಮತ್ತು ಫ್ಲಾರಿಡಗಳ ನೈಸರ್ಗಿಕ ಉತ್ಪಾದನೆಗಳಿಗೆ ಸಂಪರ್ಕಸಾಧನಗಳಿರುವುದರಿಂದಲೂ ಇದರ ಪ್ರಾಮುಖ್ಯ ಹೆಚ್ಚಾಗಿದೆ. ಜನಸಂಖ್ಯೆ 4,112,198 (2000).

ಹಿಂದಿನ ಪಟ್ಟಣದ ಹೆಚ್ಚು ಭಾಗ 1866ರಲ್ಲಿ ಜರ್ಮನ್ ದಾಳಿಯಿಂದ ನಾಶವಾಯಿತು. ಈಗ ಅಲ್ಲಿ ಆಧುನಿಕ ಕಟ್ಟಡಗಳೂ ಉತ್ತಮ ರಸ್ತೆಗಳೂ ಕಂಡು ಬರುತ್ತವೆ. ಈ ಪಟ್ಟಣಕ್ಕೆ ಚಟ್ಟಹೂಚಿ ನದಿಯಿಂದ ನೀರನ್ನು ಪೂರೈಸಲಾಗಿದೆ. ದೇಶದ ಆಗ್ನೇಯ ಭಾಗ ವ್ಯಾಪಾರ ವಹಿವಾಟುಗಳಿಗೆ ಪ್ರಸಿದ್ಧಿಯಾಗಿದೆ. (ಎ.ಆರ್.)

**ಅಟ್ಲಾಂಟಿಕ್ ಮಹಾಸಾಗರದ ಪ್ರವಾಹಗಳು:** ಪ್ರಪಂಚದ ಸಾಗರ ಪ್ರವಾಹಗಳಲ್ಲಿ ಅಟ್ಲಾಂಟಿಕ್ ಸಾಗರದ ಪ್ರವಾಹಗಳನ್ನು ಹೆಚ್ಚು ಅಭ್ಯಸಿಸಲಾಗಿದೆ. ಈ ಸಾಗರದಲ್ಲಿನ ಪ್ರವಾಹಗಳ ಚಲನೆ ಹಾಗೂ ದಿಕ್ಕಿನಲ್ಲಿ ನಿಶ್ಚಿತವಾದ ರೂಪು ರೇಷೆಗಳನ್ನು ಸ್ಪಷ್ಟವಾಗಿ ಕಾಣಬಹುದು. ಇದರ ಪ್ರವಾಹವನ್ನು ಉತ್ತರ, ದಕ್ಷಿಣ ಹಾಗೂ ವಿಷುವದ್ವೃತ್ತ ಪ್ರವಾಹಗಳ ಮೂಲಕ ತಿಳಿದುಕೊಳ್ಳಬಹುದು.

ವಿಷುವದ್ವೃತ್ತ ಪ್ರವಾಹಗಳು: ಸಮಭಾಜಕ ವೃತ್ತದ ಎರಡೂ ಕಡೆ ವಾಣಿಜ್ಯ ಮಾರುತಗಳ ಪ್ರಭಾವದಿಂದ ಪಶ್ಚಿಮದಿಕ್ಕಿಗೆ ಪೂರ್ವದಿಂದ ಪ್ರವಾಹಗಳು ಪ್ರವಹಿಸುತ್ತವೆ. ಇವುಗಳನ್ನು ಉತ್ತರ ವಿಷುವದ್ ವೃತ್ತ ಪ್ರವಾಹ ಹಾಗೂ ದಕ್ಷಿಣ ವಿಷುವದ್ ವೃತ್ತ ಪ್ರವಾಹ ಎನ್ನಲಾಗುವುದು. ಇವೆರೆಡು ಉಷ್ಣಸಾಗರ ಪ್ರವಾಹಗಳಾಗಿವೆ. ಉತ್ತರ ಅಟ್ಲಾಂಟಿಕ್ ವಿಷುವದ್ ವೃತ್ತ ಪ್ರವಾಹ

ಆಫ್ರಿಕದ ಪಶ್ಚಿಮ ತೀರದ ಕೇಪ್‍ವರ್ಡೆಯಲ್ಲಿ ಆರಂಭಗೊಂಡು, ಪಶ್ಚಿಮದಲ್ಲಿ ಚಲಿಸಿ, ಅಮೆರಿಕದ ಪೂರ್ವ ತೀರದಿಂದ ತಡೆಯಲ್ಪಟ್ಟು, ಉತ್ತರಕ್ಕೆ ತಿರುಗುವುದು. ಟ್ರಿನಿಡಾಡ್ ಬಳಿ ಎರಡು ಕವಲುಗಳಾಗುವುದು. ಒಂದು ಶಾಖೆ ಅಂಟಿಲಿಸ್ ಪ್ರವಾಹ ಎಂಬ ಹೆಸರಿನಿಂದ ವೆಸ್ಟ್ ಇಂಡೀಸ್‍ನ ಪೂರ್ವದಲ್ಲಿ ಹಾಗೂ ಇನ್ನೊಂದು ಶಾಖೆ ಕೆರೆಬಿಯನ್ ಪ್ರವಾಹ ಎಂಬ ಹೆಸರಿನಿಂದ ಇದೇ ಸಮುದ್ರದ ಮೂಲಕ ಮೆಕ್ಸಿಕೊ ಖಾರಿ ತಲುಪುವುದು. ಇಲ್ಲಿಂದ ಫ್ಲೋರಿಡ ಜಲಸಂಧಿ ಮೂಲಕ ಗಲ್ಫ್ ಸ್ಟ್ರೀಂ ಎಂಬ ಹೆಸರಿನಿಂದ ಹರಿಯುವುದು. ದಕ್ಷಿಣ ವಿಷುವದ್ ವೃತ್ತ ಪ್ರವಾಹ ಆಫ್ರಿಕದ ಪಶ್ಚಿಮ ತೀರದಿಂದ ದಕ್ಷಿಣ ಅಮೆರಿಕದ ಪೂರ್ವ ತೀರಕ್ಕೆ ಹರಿಯುವುದು. ದಕ್ಷಿಣ ಅಮೆರಿಕದ ಬ್ರೆಜಿಲ್ಲಿನ ಕೇಪ್ ಸ್ಯಾನ್ ರೋಡ್ ಭೂಶಿರದ ಬಳಿ 2 ಶಾಖೆಯಾಗುವುದು. ಒಂದು ಶಾಖೆ ಉತ್ತರಕ್ಕೆ ಚಲಿಸಿ ಟ್ರಿನಿಡಾಡ್ ಬಳಿ ವಿಷುವದ್ ವೃತ್ತ ಪ್ರವಾಹ ಸೇರುವುದು. ಮತ್ತೊಂದು ಶಾಖೆ ದಕ್ಷಿಣಕ್ಕೆ ತಿರುಗಿ ಬ್ರೆಜಿಲ್ ಪ್ರವಾಹ ಎನಿಸಿಕೊಂಡು ಹರಿದು ಅಮೆರಿಕದ ಪೂರ್ವ ತೀರ ತಲುಪುವುದು. ಈ ವಿಷುವದ್ ವೃತ್ತ ಪ್ರವಾಹಗಳ ನಡುವೆ ಪಶ್ಚಿಮದಿಂದ ಪೂರ್ವಕ್ಕೆ ವಿಷುವದ್ ವೃತ್ತ ಪ್ರತಿ ಪ್ರವಾಹ ಹರಿಯುವುದು. ಇದು ಆರಂಭದಲ್ಲಿ ಅಸ್ತವ್ಯಸ್ತಗೊಂಡಿದ್ದು, ಪೂರ್ವದಲ್ಲಿ ಸ್ಪಷ್ಟವಾಗಿದೆ. ಆಫ್ರಿಕದ ಪಶ್ಚಿಮ ಕರಾವಳಿಗಳ ಮೂಲಕ ದಕ್ಷಿಣದ ಕಡೆಗೆ ಹರಿಯುವಾಗ, ಇದನ್ನು ಗಿನಿಯಾ ಪ್ರವಾಹ ಎನ್ನುವರು.

ಉತ್ತರ ಅಟ್ಲಾಂಟಿಕ್ ಸಾಗರದ ಪ್ರವಾಹಗಳು: ಉತ್ತರ ಅಟ್ಲಾಂಟಿಕ್ ಸಾಗರ ಪ್ರವಾಹಗಳು ಎಡದಿಂದ ಬಲಕ್ಕೆ ಅಂದರೆ ಗಡಿಯಾರದ ಮುಳ್ಳಿನ ದಿಕ್ಕಿಗೆ ಅನುಗುಣವಾಗಿ ಕೇಂದ್ರದ ತಟಸ್ಥ ಸಾಗರ ಭಾಗದ ಸುತ್ತ ಆವರ್ತವನ್ನು ಪೂರ್ಣಗೊಳಿಸುವುದು. ಉತ್ತರ ಅಟ್ಲಾಂಟಿಕ್ ಸಾಗರದ ಆರಂಭದ ಭಾಗವನ್ನು ಗಲ್ಫ್ ಸ್ಟ್ರೀಮ್ ಉಷ್ಣಸಾಗರ ಪ್ರವಾಹ ಎನ್ನುವರು. ಅನಂತರ ಹೆಟ್ಟರಾಸ್ ಭೂಶಿರದ ಸರಣಿಯನ್ನು ಫ್ಲೋರಿಡ ಪ್ರವಾಹ ಎನ್ನುವರು. ಇಲ್ಲಿಂದ ಗ್ರಾಂಡ್ ಬ್ಯಾಂಕ್ ವರೆಗಿನ ಪ್ರವಾಹವನ್ನು ಗಲ್ಫ್ ಸ್ಟ್ರೀಂ ಉಷ್ಣ ಪ್ರವಾಹ ಎನ್ನುವರು. ಇಲ್ಲಿಂದ ಮುಂದಕ್ಕೆ ಇದು ಹಲವು ಶಾಖೆಗಳಾಗುವುದು. ಇದರಲ್ಲಿ ಒಂದು




ಅಟ್ಲಾಂಟಿಕ್ ಮಹಾಸಾಗರದ ಪ್ರವಾಹಗಳು

ಶಾಖೆ ಪೂರ್ವಾಭಿಮುಖವಾಗಿ, ಮಂದಗತಿಯಲ್ಲಿ ಮುಂದುವರಿದು ಉತ್ತರ ಅಟ್ಲಾಂಟಿಕ್ ಸಾಗರ ಪ್ರವಾಹ ಎನಿಸಿಕೊಳ್ಳುವುದು. ಇದರದೇ ಆದ ಸರಣಿ ನಾರ್ವೇಜಿಯನ್ ಸಮುದ್ರದ ಮೂಲಕ ಇದೇ ಹೆಸರಿನಿಂದ ಹರಿಯುವುದು. ಇನ್ನೊಂದು ಶಾಖೆ ಐಸ್ಲೆಂಡ್‍ನ ದಕ್ಷಿಣದಲ್ಲಿ ಐರ್ ಮಿಂಗರ್ ಪ್ರವಾಹ ಎನಿಸಿಕೊಂಡರೆ, ಮತ್ತೊಂದು ಚಿಕ್ಕ ಸರಣಿಯು ಗ್ರೀನ್ಲೆಂಡ್ ಪ್ರವಾಹವನ್ನು ಪೂರ್ವ ದಿಕ್ಕಿನಿಂದ ಸೇರುವುದು. ಪೂರ್ವ ದಿಕ್ಕಿಗೆ ಹರಿಯುವ ಪ್ರವಾಹದ ಸರಣಿಗಳಲ್ಲಿ ಒಂದು ಮೆಡಿಟರೇನಿಯನ್ ಸಮುದ್ರವನ್ನು, ಎರಡನೆಯದು ಬಿಸ್ಕೆ ಅಖಾತವನ್ನು ರೆನ್ನೆಲ್ ಪ್ರವಾಹ ಎಂಬ ಹೆಸರಿನಿಂದ ಮತ್ತು ಮೂರನೆಯ ಶಾಖೆ ಕ್ಯಾನರಿ ಪ್ರವಾಹ ಸೇರುವುದು. ಕ್ಯಾನರಿ ಪ್ರವಾಹ ಶೀತ ಪ್ರವಾಹವಾಗಿದ್ದು, ಆಫ್ರಿಕದ ಪಶ್ಚಿಮ ತೀರ ಮಡೇರಿಯಾ ಹಾಗೂ ವರ್ಡೆ ಭೂಶಿರಗಳ ನಡುವೆ ಹರಿಯುವುದು. ಉತ್ತರ ಅಮೆರಿಕದ ಬೆಫಿನ್ ಅಖಾತ ಮತ್ತು ಡೇವಿಸ್ ಜಲಸಂಧಿಯ ಮೂಲಕ ಹರಿಯುವ ಪ್ರವಾಹವನ್ನು ಲ್ಯಾಬ್ರಡಾರ್ ಶೀತ ಸಾಗರ ಪ್ರವಾಹ ಎನ್ನುವರು. ಇದು ನ್ಯೂಫೌಂಡ್ ಲೆಂಡ್ ಬಳಿ ಎರಡು ಶಾಖೆಗಳಾಗುವುದು. ಒಂದು ಕೋಬಾಟ್ ಪ್ರವಾಹ. ಇದು ಸೇಂಟ್ ಲಾರೆನ್ಸ್ ಅಖಾತವನ್ನು ಮತ್ತು ಇನ್ನೊಂದು ಜಲಸಂಧಿ ಪ್ರವಾಹ ಇದು ನೈರುತ್ಯಾಭಿಮುಖವಾಗಿ ಪ್ರಧಾನ ಪ್ರವಾಹವನ್ನು ಸೇರುವುದು.

ದಕ್ಷಿಣ ಅಟ್ಲಾಂಟಿಕ್ ಪ್ರವಾಹ: ದಕ್ಷಿಣ ವಿಷುವದ್ ವೃತ್ತ ಪ್ರವಾಹ ಬ್ರಜಿಲ್‍ನ ಕೇಪ್‍ಕಾನ್‍ರೋಕ್‍ನಿಂದ ತಡೆಯಲ್ಪಟ್ಟು ಎರಡು ಶಾಖೆಗಳಾಗುವುದು. ಒಂದು ಉತ್ತರ ದಿಕ್ಕಿನಿಂದ ಉತ್ತರ ವಿಷುವದ್ ವೃತ್ತ ಪ್ರವಾಹ ಸೇರುವುದು. ಮತ್ತೊಂದು ಶಾಖೆ ಬ್ರೆಜಿಲ್ ಪ್ರವಾಹವಾಗಿ ದಕ್ಷಿಣಕ್ಕೆ ಹರಿಯುವುದು. ಅನಂತರ ಉತ್ತರ ಧ್ರುವ ವಲಯದ ಫಾಕ್ಲೆಂಡ್ ಶೀತ ಪ್ರವಾಹ ಸೇರುವುದು. ಸು. $40^0$ ದಕ್ಷಿಣ ಅಕ್ಷಾಂಶದಲ್ಲಿರುವ ಈ ಪ್ರವಾಹವನ್ನು 1839 ರಲ್ಲಿ ವಿಲ್ಕಸ್ ಎಂಬುವವನು ಶೋಧಿಸಿದ. ಬ್ರಜಿಲ್ ಮತ್ತು ಫಾಕ್ಲೆಂಡ್ ಪ್ರವಾಹಗಳು ಪಶ್ಚಿಮ ಮಾರುತಗಳ ಪ್ರಭಾವದಿಂದ ಪಶ್ಚಿಮ ಶೀತ ಪ್ರವಾಹವಾಗಿ ಹರಿಯುವುದು. ಆಫ್ರಿಕದ ಪಶ್ಚಿಮ ತೀರದಲ್ಲಿ ಹರಿಯುವ ಇದನ್ನು ಬೆಂಗ್ವೆಲಾ ಪ್ರವಾಹ ಎನ್ನುವರು. ಅನಂತರ ಇದು ಉತ್ತರಕ್ಕೆ ಚಲಿಸಿ ಕಾಂಗೋ ನದಿ ಅಳಿವೆಯ ಪಶ್ಚಿಮದಲ್ಲಿ ದಕ್ಷಿಣ ವಿಷುವದ್ ವೃತ್ತ ಪ್ರವಾಹ ಸೇರುವ ಮೂಲಕ ಒಂದು ಆವರ್ತವನ್ನು ಪೂರ್ಣಗೊಳಿಸುವುದು. (ಎನ್.ಎಲ್.)

**ಅಟ್ಲಾಂಟಿಕ್ ಸನ್ನದು:** ವಿಶ್ವಸಂಸ್ಥೆ ಸ್ಥಾಪಿಸಲು ಪ್ರಪಂಚದ ಅನೇಕ ರಾಷ್ಟ್ರಗಳೂ ಅವುಗಳ ನಾಯಕರೂ ನಡೆಸಿದ ಅನೇಕ ಪ್ರಯತ್ನಗಳಲ್ಲಿ ಈ ಸನ್ನದು ಮುಖ್ಯವಾದ ಒಂದು ಮೈಲಿಗಲ್ಲಾಗಿದೆ. ಅದು ಈಗಿನ ವಿಶ್ವಸಂಸ್ಥೆಯ ಅಡಿಗಲ್ಲೆಂದೇ ಹೇಳಬಹುದು. ಈ ಸನ್ನದು 1941 ಆಗಸ್ಟ್ 14ರಂದು ಪ್ರಪಂಚದ ಎರಡು ಮುಖ್ಯ ರಾಷ್ಟ್ರಗಳಾದ ಅಮೆರಿಕ ಸಂಯುಕ್ತಸಂಸ್ಥಾನಗಳು ಮತ್ತು ಇಂಗ್ಲೆಂಡ್ ದೇಶಗಳಿಂದ ಪ್ರಕಟಿಸಲಾಯಿತು. ಸಂಯುಕ್ತಸಂಸ್ಥಾನಗಳ ಪರವಾಗಿ ಆಗಿನ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ರೂಸ್‍ವೆಲ್ಟರು ಇಂಗ್ಲೆಂಡ್ ದೇಶದ ಪರವಾಗಿ ಆಗಿನ ಮಹಾ ಪ್ರಧಾನಿಗಳಾಗಿದ್ದ ವಿನ್‍ಸ್ಟನ್ ಚರ್ಚಿಲರು ಉತ್ತರ ಅಟ್ಲಾಂಟಿಕ್‍ನಲ್ಲಿ ಒಂದು ಯುದ್ಧದ ಹಡಗಿನಲ್ಲಿ ಸಂಧಿಸಿ ಒಂದು ತೀರ್ಮಾನಕ್ಕೆ ಬಂದ ಅನಂತರ ಅವರಿಬ್ಬರ ಹೆಸರಿನಲ್ಲಿ ಈ ಸನ್ನದನ್ನು ಪ್ರಕಟಿಸಲಾಯಿತು. ಪ್ರಪಂಚದಲ್ಲಿ ಶಾಂತಿ ಸ್ಥಾಪಿಸುವುದಕ್ಕೂ ಪ್ರಪಂಚದಲ್ಲಿ ಯುದ್ಧಗಳನ್ನು ತಡೆಗಟ್ಟುವುದಕ್ಕೂ ವಿಶ್ವಸಂಸ್ಥೆಯನ್ನು ಸ್ಥಾಪಿಸುವುದಕ್ಕೂ ಮತ್ತು ಪ್ರಪಂಚದ ಭವಿಷ್ಯದ ಏಳಿಗೆಗೂ ಪ್ರಯತ್ನಿಸಬೇಕೆಂದು ಎರಡು ರಾಷ್ಟ್ರಗಳೂ ಈ ಕೆಲವು ತತ್ತ್ವಗಳನ್ನು ಪಾಲಿಸಬೇಕೆಂದೂ ಒಪ್ಪಿಕೊಳ್ಳಲಾಯಿತು.

1. ಎರಡು ರಾಷ್ಟ್ರಗಳೂ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ತಮ್ಮ ಸ್ವಪ್ರತಿಷ್ಠೆಯಿಂದ ಪ್ರಾದೇಶಿಕ ವಿಸ್ತರಣೆಗೆ ಪ್ರಯತ್ನಿಸಬಾರದು. 2. ಯಾವುದೇ ಒಂದು ದೇಶದ ಜನಗಳ ಅಭಿಲಾಷೆಗೆ ವಿರುದ್ಧವಾಗಿ ಪ್ರಾದೇಶಿಕ ಬದಲಾವಣೆಗಳೂ ಆಗಕೂಡದು. ಅಂಥ ಬದಲಾವಣೆಗಳಿಗೆ ಎರಡು ದೇಶಗಳೂ ಉತ್ತೇಜನ ಕೊಡುವುದಿಲ್ಲ. 3. ಎಲ್ಲ ರಾಷ್ಟ್ರಗಳ ಜನರೂ ತಮಗೆ ಯಾವ ವಿಧವಾದ ಸರ್ಕಾರ ಬೇಕೊ ಅಂಥದನ್ನು ರಚಿಸಿಕೊಳ್ಳುವುದನ್ನು ಮತ್ತು ಅವರ ಹಕ್ಕುಗಳನ್ನು ಕಾಪಾಡಿಕೊಳ್ಳುವುದನ್ನು ಎರಡು ರಾಷ್ಟ್ರಗಳೂ ಗೌರವಿಸುತ್ತವೆ. 4. ಎಲ್ಲ ರಾಷ್ಟ್ರಗಳ ವಾಣಿಜ್ಯ ವ್ಯಾಪಾರಗಳ ಮತ್ತು ಆರ್ಥಿಕ ಅಭಿವೃದ್ಧಿಗೂ ಎರಡು ರಾಷ್ಟ್ರಗಳೂ ಪ್ರಯತ್ನಿಸುತ್ತವೆ. 5. ಎರಡು ರಾಷ್ಟ್ರಗಳು ಎಲ್ಲ ರಾಷ್ಟ್ರಗಳ ಸಾಮಾಜಿಕ ಭದ್ರತೆ, ಆರ್ಥಿಕ ಅಭಿವೃದ್ಧಿ ಮತ್ತು ಜನರ ಜೀವನಮಟ್ಟ ಹೆಚ್ಚಿಸಲು ಶ್ರಮಿಸುತ್ತವೆ. 6. ಪ್ರಪಂಚದಲ್ಲಿ ಶಾಂತಿ ಏರ್ಪಡಿಸಿ, ಜನರನ್ನು ಯುದ್ಧಭೀತಿಯಿಂದ ಮತ್ತು ಸಾಮಾನ್ಯ ಕೊರತೆಗಳಿಂದ ಪಾರುಮಾಡಲು ಎರಡು ರಾಷ್ಟ್ರಗಳೂ ಕೆಲಸ ಮಾಡುತ್ತವೆ. 7. ಸಮುದ್ರಯಾನದ ಹತೋಟಿ ಯಾವ ಒಂದು ರಾಷ್ಟ್ರದ ಹಕ್ಕಲ್ಲ. ಪ್ರಪಂಚದ ಎಲ್ಲ ರಾಷ್ಟ್ರಗಳ ಜನರೂ ಪ್ರಪಂಚದ ಯಾವ ಭಾಗಕ್ಕಾದರೂ ಹೋಗುವಂತೆ ಅವಕಾಶ ಕಲ್ಪಿಸಲು ಎರಡು ರಾಷ್ಟ್ರಗಳೂ ಸಹಾಯಮಾಡುತ್ತವೆ. 8. ಯುದ್ಧವನ್ನೂ ಆಕ್ರಮಣ ಭೀತಿಯನ್ನುಂಟುಮಾಡುವುದನ್ನೂ ಸಾರ್ವತ್ರಿಕವಾಗಿ ನಿಷೇಧಿಸುವುದಲ್ಲದೆ ಪ್ರಪಂಚದ ಯಾವ ರಾಷ್ಟ್ರವೂ ಬಲಪ್ರಯೋಗ ಮಾಡದಂತೆ ಎರಡು ರಾಷ್ಟ್ರಗಳೂ ನೋಡಿಕೊಳ್ಳುತ್ತವೆ.

ಈ ಮೇಲಿನ ಎಂಟು ತತ್ತ್ವಗಳು ಅಟ್ಲಾಂಟಿಕ್ ಸನ್ನದಿನಲ್ಲಿ ಸೇರಿವೆ. ಇವು ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ಬಹು ಮುಖ್ಯವಾಗಿವೆ. ಆದುದರಿಂದ ಅಂತಾರಾಷ್ಟ್ರೀಯ ರಾಜಕೀಯ ಕ್ಷೇತ್ರದಲ್ಲಿ ಅಟ್ಲಾಂಟಿಕ್ ಸನ್ನದಿಗೆ ಒಂದು ಮುಖ್ಯವಾದ ಸ್ಥಾನ ಏರ್ಪಟ್ಟಿದೆ. (ಎಂ.ಕೆ.ಆರ್.)

**ಅಟ್ಲಾಂಟಿಕ್ ಸಾಗರ:** ಭೂಮಿಯ ವಿಸ್ತೀರ್ಣದಲ್ಲಿ 20 ಭಾಗ ಪ್ರದೇಶವನ್ನು ಆವರಿಸಿರುವ. ದೊಡ್ಡ ಮಹಾಸಾಗರಗಳಲ್ಲಿ ಎರಡನೆಯದು. ಇದು ಉತ್ತರದಲ್ಲಿ ಗ್ರೀನ್‍ಲೆಂಡ್ ಐಸ್ಲೆಂಡ್ ಪ್ರದೇಶದಿಂದ ದಕ್ಷಿಣದಲ್ಲಿ ಬೋವೆಲ್ ದ್ವೀಪದವರೆಗೆ ವ್ಯಾಪಿಸಿದೆ. ಪೂರ್ವಕ್ಕೆ ಯುರೋಪು, ಆಫ್ರಿಕ ಖಂಡಗಳು, ಪಶ್ಚಿಮಕ್ಕೆ ಉತ್ತರ, ದಕ್ಷಿಣ ಅಮೆರಿಕ ಖಂಡಗಳೂ ಇವೆ.

ವಿಸ್ತೀರ್ಣ 8,24,63,802 ಚ.ಕಿಮೀ ಈ ಸಾಗರಕ್ಕೆ ಸೇರಿದ ಅನೇಕ ಸಮುದ್ರಗಳೊಡನೆ ಇದರ ಒಟ್ಟು ವಿಸ್ತೀರ್ಣ ಸು. 68 ದಶಲಕ್ಷ ಚ.ಕಿಮೀ. ಮೆಕ್ಸಿಕೋ ಆಖಾತ, ಉತ್ತರ ಸಮುದ್ರ, ಬಾಲ್ಟಿಕ್ ಸಮುದ್ರ, ಮೆಡಿಟರೇನಿಯನ್ ಸಮುದ್ರ, ಕೆರಿಬಿಯನ್ ಸಮುದ್ರ, ಕ್ಯಾಸ್ಪಿಯನ್ ಸಮುದ್ರ ಮುಂತಾದವು ಈ ಸಾಗರದ ಶಾಖೆಗಳು. ಇದಕ್ಕಲ್ಲದೆ ಬೇರಾವ ಸಾಗರಕ್ಕೂ ಅಷ್ಟೊಂದು ದೊಡ್ಡ ನದಿಗಳು ಬಂದು ಸೇರುವುದಿಲ್ಲ. ಈ ಸಾಗರದ ಮೂಲಕ ಸಮಭಾಜಕವೃತ್ತ ಹಾದು ಹೋಗುವುದರಿಂದ, ಇದನ್ನು ಉತ್ತರ ಅಟ್ಲಾಂಟಿಕ್ ಮತ್ತು ದಕ್ಷಿಣ ಅಟ್ಲಾಂಟಿಕ್ ಎಂದು ವಿಭಾಗಿಸಲಾಗಿದೆ.

ಅಟ್ಲಾಂಟಿಕ್ ಸಾಗರದ ಸರಾಸರಿ ಆಳ 3.2 ಕಿಮೀ. ದಕ್ಷಿಣ ಅಟ್ಲಾಂಟಿಕ್ ಸಾಗರ ಹೆಚ್ಚು ಆಳವಾಗಿದೆ. ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಖಂಡಾವರಣ ಪ್ರದೇಶ ಹೆಚ್ಚಾಗಿರುವುದರಿಂದ ಆಳ ಕಡಿಮೆ. ಅಟ್ಲಾಂಟಿಕ್ ಸಾಗರದ ಮಧ್ಯದಲ್ಲಿ ಐಸ್ಲೆಂಡ್‌ನಿಂದ ದಕ್ಷಿಣದಲ್ಲಿರುವ ಬೊವೆಟ್ ದ್ವೀಪದವರೆಗೆ ಹಾವಿನಾಕಾರದ ಮಧ್ಯ ಅಟ್ಲಾಂಟಿಕ್ ಶ್ರೇಣಿ ಎಂಬ ಜಲಾಂತರ್ಗತ ಪರ್ವತದ ಸಾಲು ಇದೆ. ಇದರ ಮೇಲೆ ಸು. 3000 ಮೀ ನೀರಿದೆ. ಸಮಭಾಜಕವೃತ್ತ ಹಾದುಹೋಗುವ ಭಾಗದಲ್ಲಿ ರೊಮಾಚ್ ಫೆರ್ರೊ ಎಂಬ ಕಣಿವೆಯುಂಟು. ಇದರ ಆಳ 5000 ಮೀ. ಉತ್ತರಕ್ಕಿರುವ ಶ್ರೇಣಿಯ ಭಾಗಕ್ಕೆ ಡಾಲ್ಫಿನ್ ಶ್ರೇಣಿ ಎಂದೂ ದಕ್ಷಿಣದ ಶ್ರೇಣಿಗೆ ಛಾಲೆಂಜರ್ ಶ್ರೇಣಿಯೆಂದೂ ಹೆಸರು. ಈ ಮಧ್ಯಶ್ರೇಣಿಯ ಮುಳುಗದಿರುವ ಭಾಗ ಅಜ಼ೋರ್ಸ್, ಸೇಂಟ್ ಪಾಲ್, ಅಸೆನ್ಷಿಯನ್, ಸೇಂಟ್ ಹೆಲಿನಾ, ಟ್ರಿಸ್ಟಾನ್ ಡ ಕೂನ್ಯಾ, ಗಾಫ್, ಬೋವೆಟ್ ಮುಂತಾದ ದ್ವೀಪಗಳಾಗಿವೆ. ಈ ಶ್ರೇಣಿಯಿಂದ ಪೂರ್ವ ಮತ್ತು ಪಶ್ಚಿಮಕ್ಕೆ ಕೆಲವು ಶ್ರೇಣಿಗಳ ಶಾಖೆಗಳಿವೆ. ವಾಲ್ವಿಸ್ ರಿಡ್ಜ್ ಎಂಬುದು ಪೂರ್ವದ ಕಡೆಗೆ $30^0$ ದ. ಅಕ್ಷಾಂಶದ ಭಾಗದಲ್ಲಿ ಆಫ್ರಿಕದತ್ತ ಹಬ್ಬಿದೆ. ರಯೋಗ್ರ್ಯಾಂಡ್ ರಿಡ್ಜ್ ಎಂಬುದು ಪಶ್ಚಿಮದಲ್ಲಿ ದಕ್ಷಿಣ ಅಮೆರಿಕದ ಕಡೆಗೆ $30^0$ ದ. ಅಕ್ಷಾಂಶದವರೆಗೆ ಹಬ್ಬಿದೆ. ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ವೈವಿಲೆ ಥಾಮ್ಸನ್ ರಿಡ್ಜ್ ಮತ್ತು ಸೇಂಟ್ ವಿನ್ಸೆಂಟ್ ರಿಡ್ಜ್ ಎಂಬ ಶ್ರೇಣಿಗಳು ಪೂರ್ವದ ಕಡೆಗೆ ಹಬ್ಬಿವೆ. ಈ ಎಲ್ಲ ಶ್ರೇಣಿಗಳೂ ಈ ಸಾಗರವನ್ನು ಬ್ರಜ಼ಿಲ್, ಅರ್ಜೆಂಟೀನ, ಅಂಗೋಲ, ಕೇಪ್ ಶ್ರೇಣಿಗಳೆಂದೂ ಉತ್ತರ ಅಮೆರಿಕದ ಹತ್ತಿರದ ಕೇಪ್ ವರ್ಡೆ ಶ್ರೇಣಿ, ಗಿನಿಯಾ ಶ್ರೇಣಿಗಳೆಂದೂ ವಿಭಾಗಿಸಿದ್ದಾರೆ. ವೆಸ್ಟ್‌ಇಂಡೀಸ್ ದ್ವೀಪಗಳಿರುವ ಕೆರಿಬಿಯನ್ ಸಮುದ್ರ ಅಟ್ಲಾಂಟಿಕ್ ಸಾಗರದ ಉಪಸಮುದ್ರ.

ಉತ್ತರ ಅಟ್ಲಾಂಟಿಕ್ ಸಾಗರದ ಆಳದಲ್ಲಿ 1,600 ಕಿಮೀ ಅಗಲವುಳ್ಳ ವಿಶಾಲವಾದ ಟೆಲಿಗ್ರಾಫ್ ಜಲಾಂತರ ಪ್ರಸ್ಥಭೂಮಿಯಿದೆ. ಇದು ಉತ್ತರ ಬ್ರಿಟನ್ನಿನಿಂದ ಗ್ರೀನ್‌ಲೆಂಡ್ ಮತ್ತು ಲ್ಯಾಬ್ರಡಾರ್ ಪ್ರದೇಶಗಳವರೆಗೆ ಹಬ್ಬಿದೆ. ಈ ಸಾಗರದಲ್ಲಿ ಪೋರ್ಟೋರಿಕೋ ದಕ್ಷಿಣ ಸ್ಯಾಂಡ್‌ವಿಚ್ ನಾರೆಪ್ ಎಂಬ ಆಳವಾದ ಕೂಪ ಭಾಗಗಳಿವೆ (ಡೀಪ್ಸ್).

ಈ ಸಾಗರದಲ್ಲಿ ಪಶ್ಚಿಮ ಯುರೋಪ್, ಉತ್ತರ ಅಮೆರಿಕದ ಈಶಾನ್ಯಭಾಗ, ಮೆಕ್ಸಿಕೊ ಕೊಲ್ಲಿ–ಈ ಭಾಗಗಳು ವಿಶಾಲವಾದ ಖಂಡಾವರಣ ಪ್ರದೇಶಗಳಾಗಿವೆ.

ಅಟ್ಲಾಂಟಿಕ್ ಸಾಗರದಲ್ಲಿ ಗಿನಿ ಆಖಾತದಿಂದ ಮೆಕ್ಸಿಕೊ ಆಖಾತದ ವರೆಗಿರುವ ಪ್ರದೇಶದಲ್ಲಿ ಅಧಿಕ ಉಷ್ಣತೆ ಇದೆ. ಉತ್ತರದಲ್ಲಿ ಗ್ರೀನ್‌ಲೆಂಡಿನ ಹತ್ತಿರವೂ $40^0$ ದ ಅಕ್ಷಾಂಶದ ದಕ್ಷಿಣ ಭಾಗದಲ್ಲೂ ಅತಿ ಶೀತಭಾಗಗಳಿವೆ. ಈ ಸಾಗರದಲ್ಲಿ ಸಮಭಾಜಕವೃತ್ತ ಪ್ರದೇಶದಲ್ಲಿರುವ ಸಾರ್ಗಾಸೋ ಸಮುದ್ರ ಭಾಗದಲ್ಲಿ ಸಮುದ್ರಪಾಚಿ ಸಸ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ವಾಯವ್ಯಭಾಗದಲ್ಲಿ ದಟ್ಟವಾದ ಮಂಜು ಕವಿದಿರುವುದು ಇನ್ನೊಂದು ವಿಶೇಷ ಅಂಶ.

ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಗಿನಿ ಪ್ರವಾಹ, ಗಯಾನಪ್ರವಾಹ, ಫ್ಲಾರಿಡ ಗಲ್ಫ್‌ಸ್ಟ್ರೀಮ್, ಉತ್ತರ ಅಟ್ಲಾಂಟಿಕ್ ಪ್ರವಾಹ, ಕ್ಯಾನರೀಸ್ ಪ್ರವಾಹಗಳೂ ಗ್ರೀನ್‌ಲೆಂಡ್ ಮತ್ತು ಲ್ಯಾಬ್ರಡಾರ್ ಪ್ರವಾಹಗಳೂ ಕಂಡುಬರುವುವು. ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿ ಬ್ರೆಜ಼ಿಲ್ ಪ್ರವಾಹ, ದಕ್ಷಿಣ ಪ್ರವಾಹ, ಬೆಂಗ್ವೆಲ್ಲಾ ಪ್ರವಾಹಗಳು ಅಪ್ರದಕ್ಷಿಣೆಯಾಗಿ ಹರಿಯುವುವು. ಸಮಭಾಜಕವೃತ್ತದ ಭಾಗದಲ್ಲಿ ಒಂದು ಪ್ರತಿ ಪ್ರವಾಹ ಪೂರ್ವದ ಕಡೆಗೆ ಚಲಿಸುತ್ತದೆ. ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಆಗಾಗ್ಗೆ ಆವರ್ತವಾರುತಗಳುಂಟಾಗಿ ಬಿರುಗಾಳಿಗಳುಂಟಾಗುತ್ತವೆ. ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿ $40^0$ ದ. ಅಕ್ಷಾಂಶದ ಭಾಗದಲ್ಲಿ ಮಾತ್ರ ಬಿರುಗಾಳಿಗಳು ಬೀಸುವುವು.

ಅಟ್ಲಾಂಟಿಕ್ ಸಾಗರದಲ್ಲಿರುವ ಗ್ರ್ಯಾಂಡ್ ಬ್ಯಾಂಕ್ಸ್, ಬಹಾಮಾ ಬ್ಯಾಂಕ್ಸ್, ಜಾರ್ಜ್ ಬ್ಯಾಂಕ್ಸ್, ಸ್ಕಾಷಿಯ ಪ್ರದೇಶ, ಐರಿಷ್ ಸಮುದ್ರ, ಉತ್ತರ ಸಮುದ್ರ, ದಕ್ಷಿಣ ಆಫ್ರಿಕದ ನೈರುತ್ಯಭಾಗ–ಇವು ಮೀನುಗಾರಿಕೆಯ ಮುಖ್ಯ ಜಲಪ್ರದೇಶಗಳು. ಈ ಸಾಗರ ಪ್ರಪಂಚದ ಮುಖ್ಯ ವಾಣಿಜ್ಯ ಹೆದ್ದಾರಿಯಾಗಿದೆ. (ಎ.ಕೆ.)

**ಅಟ್ಲಾಸ್:** ಚಿಕ್ಕ ಅಳತೆಯ ಹಲವಾರು ನಕ್ಷೆಗಳನ್ನು ಒಳಗೊಂಡ ಪುಸ್ತಕ ಅಥವಾ ಸಂಚಯನವನ್ನು ಅಟ್ಲಾಸ್ ಎಂದು ಕರೆಯುವರು. ವಿಸ್ತಾರವಾಗಿರುವ ಪ್ರದೇಶವನ್ನು ಚಿಕ್ಕ ಹಾಳೆಗಳಲ್ಲಿ ಪ್ರತಿನಿಧಿಸಲಾಗುವುದು. ಆದ್ದರಿಂದ ಇವುಗಳಲ್ಲಿ ಆ ಪ್ರದೇಶದ ಕೇವಲ ಮುಖ್ಯ ಲಕ್ಷಣಗಳನ್ನು ಮಾತ್ರ ತೋರಿಸಲಾಗುವುದು. ಈ ನಕ್ಷೆಗಳು ಆ ಪ್ರದೇಶದ ಸಾಮಾನ್ಯ ಪರಿಚಯವನ್ನು ಮಾತ್ರ ನೀಡಬಲ್ಲವು. ಇವುಗಳು ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಲು ಬಹು ಸೂಕ್ತವಾಗಿರುತ್ತವೆ. ಅಟ್ಲಾಸ್ ನಕ್ಷೆಗಳನ್ನು ವೀಕ್ಷಿಸಿ ಭೂಮಿಯ ವಿವಿಧ ಲಕ್ಷಣಗಳ ಹಂಚಿಕೆಯನ್ನು ಸುಲಭವಾಗಿ ತಿಳಿಯಬಹುದು.

ಅಟ್ಲಾಸ್ ಪುಸ್ತಕದಲ್ಲಿ ನಕ್ಷೆಗಳನ್ನು ಕ್ರಮಬದ್ಧವಾಗಿ ಜೋಡಿಸಲಾಗಿರುವುದು. ಸಾಮಾನ್ಯವಾಗಿ ಇವುಗಳು ಪ್ರಪಂಚದ ನಕ್ಷೆಗಳಿಂದ ತಯಾರಾಗಿರುವ ದೇಶಗಳ ನಕ್ಷೆಗಳನ್ನು ಒಳಗೊಂಡಿರುತ್ತದೆ. ಇವುಗಳಲ್ಲಿ ಬಣ್ಣ ಹಾಗೂ ಸಂಕೇತಗಳನ್ನು ಪರಿಣಾಮಕಾರಿಯಾಗಿ ಬಳಸಲಾಗಿರುವುದು. ಪ್ರತಿ ನಕ್ಷೆಯು ಸೂಚನೆ ಅಂದರೆ ಲೆಜೆಂಡ್‌ನ್ನು ಒಳಗೊಂಡಿರುತ್ತವೆ.

ಅಟ್ಲಾಸ್‌ಗಳನ್ನು ಸಹ ವಿವಿಧ ಉದ್ದೇಶಗಳಿಗಾಗಿ ತಯಾರಿಸಲಾಗುತ್ತಿದ್ದು, ಇವುಗಳು ಹೊಂದಿರುವ ಮಾಹಿತಿಯೂ ಸಹ ಭಿನ್ನವಾಗಿರುವುದು. ಶೈಕ್ಷಣಿಕ ಅಟ್ಲಾಸ್, ಸಾಮಾಜಿಕ – ಆರ್ಥಿಕ ಅಟ್ಲಾಸ್, ಸಂಪನ್ಮೂಲಗಳ ಅಟ್ಲಾಸ್, ಜನಗಣತಿಯ ಅಟ್ಲಾಸ್ ಇವುಗಳಲ್ಲಿ ಮುಖ್ಯವಾದವು. (ಆರ್.ಎನ್.)

**ಅಟ್ಲಾಸ್ ಪರ್ವತಗಳು:** ಆಫ್ರಿಕ ಖಂಡದ ವಾಯವ್ಯ ಭಾಗದಲ್ಲಿ ಕಂಡುಬರುತ್ತವೆ. ಈ ಪರ್ವತ ಶ್ರೇಣಿಗಳು ಆಫ್ರಿಕದ ವಾಯವ್ಯತೀರಕ್ಕೆ ಸಮಾನಾಂತರವಾಗಿ 2,400 ಕಿಮೀ ಉದ್ದವಾಗಿದ್ದು ಮೊರಾಕೊ, ಆಲ್ಜೀರಿಯ ಟ್ಯುನಿಸಿಯಗಳ ಮುಖಾಂತರ ಹಾದುಹೋಗುತ್ತವೆ. ಈಶಾನ್ಯಭಾಗದಿಂದ ನೈರುತ್ಯದವರೆಗೂ ವಿಸ್ತರಿಸಿವೆ. ದಕ್ಷಿಣ ಮತ್ತು ಉತ್ತರ ಪರ್ವತ ಶ್ರೇಣಿಗಳನ್ನು ಎತ್ತರವಾದ ಪ್ರಸ್ಥಭೂಮಿ ಬೇರ್ಪಡಿಸುತ್ತದೆ. ಇದರ ಉತ್ತರಕ್ಕೆ ಮೆಡಿಟರೇನಿಯನ್ ಸಮುದ್ರ ಹಾಗೂ ದಕ್ಷಿಣಕ್ಕೆ ಸಹರ ಮರುಭೂಮಿಯೂ ಇದೆ. ಉತ್ತರ ಅಟ್ಲಾಸ್ ಶ್ರೇಣಿ ಮೆಡಿಟರೇನಿಯನ್ ತೀರಕ್ಕೆ ಚಾಚಿಕೊಂಡಿದೆ. ಜೆಬೆಲ್ ಟೌಬ್‌ಕಲ್ (4165 ಮೀ) ಅತ್ಯಂತ ಎತ್ತರವಾದ ಪರ್ವತ. ಇರ್‌ಹಿಲ್ ಮೊಗಾನ್ (4071 ಮೀ) ಮೊರಾಕೊದ ಎತ್ತರವಾದ ಪರ್ವತವಾಗಿದೆ. ಈ ಶಿಖರಗಳು ವರ್ಷದ ಹೆಚ್ಚುಕಾಲ ಹಿಮದಿಂದ ಆವೃತವಾಗಿರುತ್ತವೆ. ಶಿಖರಗಳ ಇಳಿಜಾರಿನಲ್ಲಿ ಅಲ್ಪ ಜಾತಿಯ ಹುಲ್ಲು ಬೆಳೆಯುತ್ತದೆ. ಕಬ್ಬಿಣದ ಅದಿರು, ಫಾಸ್ಫೇಟುಗಳು ಮತ್ತು ಮ್ಯಾಂಗನೀಸ್ ಗಣಿಗಳು ಕಂಡುಬರುತ್ತವೆ. ಈ ಪರ್ವತಗಳನ್ನು ಎರಡು ಮುಖ್ಯ ಶ್ರೇಣಿಗಳನ್ನಾಗಿ ವಿಂಗಡಿಸಬಹುದು : ಸೆಂಟಾದಿಂದ ಟಾನ್ ಭೂಶಿರದವರೆಗೆ ಹರಡಿರುವ ಸಾಗರಿಕ ಶ್ರೇಣಿ. ಘಿರ್ ಭೂಶಿರದಿಂದ ದಕ್ಷಿಣ ತೀರಕ್ಕೆ ಹರಡಿರುವ ಒಳ ಹಾಗೂ ಹೆಚ್ಚು ಎತ್ತರದ ಶ್ರೇಣಿ. ಇಲ್ಲಿಯ ಗಣಿಗಳಲ್ಲಿ ಫಾಸ್ಫೇಟುಗಳು ಹೇರಳವಾಗಿ ಸಿಗುತ್ತದೆ. (ಎಂ.ಎಸ್.ಎಂ.)

**ಅಡಕಾಕಾರದ ರಾಷ್ಟ್ರ:** ಈ ಬಗೆಯ ರಾಷ್ಟ್ರಗಳು ಸಾಮಾನ್ಯವಾಗಿ ವೃತ್ತಾಕಾರ ಅಥವಾ ಆಯತಾಕಾರವನ್ನು ಹೊಂದಿರುತ್ತವೆ. ಪ್ರಪಂಚದ ನಕಾಶೆಯಲ್ಲಿ ಹಲವಾರು ರಾಷ್ಟ್ರಗಳು ಈ ಆಕಾರವನ್ನು ಹೊಂದಿವೆ. ಸೈದ್ಧಾಂತಿಕವಾಗಿ ವೃತ್ತಾಕಾರ ಅಥವಾ

ಆಯತಾಕಾರದಲ್ಲಿ ಇರುವ ರಾಷ್ಟ್ರಗಳಲ್ಲಿ ಎಲ್ಲ ವಸತಿಗಳು ಭೌಗೋಳಿಕ ಕೇಂದ್ರಕ್ಕೆ ಸಮಾನವಾದ ಅಂತರವನ್ನು ಒಳಗೊಂಡಿರುತ್ತವೆ. ಈ ಆಕಾರದ ರಾಷ್ಟ್ರಗಳು ಅನೇಕ ಅನುಕೂಲತೆಗಳನ್ನು ಹೊಂದಿರುತ್ತವೆ. ರಾಷ್ಟ್ರದ ಮೇರೆಗಳು ಹಲವಾರು ಕೇಂದ್ರಗಳಿಂದ ಅತ್ಯಂತ ಕಡಿಮೆ ಅಂತರವನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಈ ಆಕಾರದ ರಾಷ್ಟ್ರಗಳು ಪ್ರಸ್ಥಭೂಮಿ, ನಡುಗಡ್ಡೆಗಳು ಮತ್ತು ಯಾವುದೇ ಬಿಡಿ ಭಾಗದ ಪ್ರದೇಶವನ್ನು ಹೊಂದಿರುವುದಿಲ್ಲ. ಅಲ್ಲದೇ ಅಭಿವೃದ್ಧಿ, ಸಂಪರ್ಕ ಎಲ್ಲಾ ಭಾಗಗಳಿಗೆ ತಲುಪಲು ಯಾವುದೇ ರೀತಿಯ ಸಮಸ್ಯೆ ಇರುವುದಿಲ್ಲ. ಪರಿಣಾಮಕಾರಿಯಾದ ಆಡಳಿತದ ನಿಯಂತ್ರಣವನ್ನು ಹೊಂದಿರುತ್ತವೆ. ಈ ಆಕಾರದ ರಾಷ್ಟ್ರಗಳಲ್ಲಿ ಆಂತರಿಕ, ಸಾಮಾಜಿಕ ಮತ್ತು ಆರ್ಥಿಕ ಹೊಂದಾಣಿಕೆಗಳಿಂದಾಗಿ ಹೆಚ್ಚಿನ ಪ್ರಮಾಣದ ರಾಜಕೀಯ ಸ್ಥಿರತೆ ಕಂಡುಬರುತ್ತದೆ. ಇಂಥ ರಾಷ್ಟ್ರಗಳಲ್ಲಿ ವಿವಿಧ ಸಾಮಾಜಿಕ ಗುಂಪುಗಳು, ವೈವಿಧ್ಯಮಯ, ಭೌತಿಕ ಪರಿಸರ ಇದ್ದಾಗ್ಯೂ ಸಹ ಈ ವೈವಿಧ್ಯತೆಗಳನ್ನು ಸುಲಭವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸರಳವಾದ ಸಂಪರ್ಕ ಇರುವುದರಿಂದ ಅವುಗಳನ್ನು ನಿಭಾಯಿಸಬಹುದು. ಒಂದು ಆದರ್ಶಯುತವಾದ ವೃತ್ತಾಕಾರದ ರಾಷ್ಟ್ರದಲ್ಲಿ ರಾಜಧಾನಿ ಕೇಂದ್ರ ಪ್ರದೇಶದಲ್ಲಿರುತ್ತದೆ. ಕೆಲವೊಂದು ಈ ಆಕಾರದ ರಾಷ್ಟ್ರಗಳು ಸಾಂಸ್ಕೃತಿಕ ಅಥವಾ ಭೌಗೋಳಿಕ ಅಥವಾ ಎರಡರಿಂದಲೂ ಸ್ಥಿತ್ಯಂತರವಲಯದಲ್ಲಿ ಕಂಡುಬರುತ್ತವೆ. ಈ ಆಕೃತಿಯ ರಾಷ್ಟ್ರಗಳಿಗೆ ಉದಾ: ದಕ್ಷಿಣ ಅಮೆರಿಕದ ಉರಗ್ವೆ, ಯುರೋಪಿನ ಬೆಲ್ಜಿಯಂ, ಪೋಲೆಂಡ್ ಮತ್ತು ಆಫ್ರಿಕ ಖಂಡದ ಸೂಡಾನ್. (ಎಸ್.ಎಸ್.ಎಸ್.)

**ಅಡಿಲೇಡ್:** ದಕ್ಷಿಣ ಆಸ್ಟ್ರೇಲಿಯದ ರಾಜಧಾನಿ. ಈ ನಗರ ಟಾರೆನ್ಸ್ ನದೀಮುಖ ಪ್ರದೇಶದಲ್ಲಿದೆ (ದ. ಅಕ್ಷಾಂಶ $34^0 36'$ ಪೂ. ರೇಖಾಂಶ $138^0 36'$). ಆಸ್ಟ್ರೇಲಿಯದ ನಗರಗಳಲ್ಲಿ 4ನೆಯ ಸ್ಥಾನ ಪಡೆದಿದೆ. 4ನೆಯ ವಿಲಿಯಮ್‌ನ ರಾಣಿಯ ಸ್ಮರಣಾರ್ಥವಾಗಿ ಸ್ಥಾಪಿಸಲ್ಪಟ್ಟಿತು. ಜನಸಂಖ್ಯೆ 1,072,585 (2003).

ಮಳೆಗಾಲದ ಅವಧಿ 122 ದಿನಗಳು. ವಾರ್ಷಿಕ ಮಳೆ ಸರಾಸರಿ 100 ಸೆಂಮೀ ವಾಯುಗುಣ ಹಿತಕರ. ಗೋದಿ ಇಲ್ಲಿನ ಮುಖ್ಯ ಬೆಳೆ. ಈಗ ದೊಡ್ಡ ಉದ್ದಿಮೆಗಳು ತಲೆ ಎತ್ತಿವೆ. ಇಲ್ಲಿ ಅಡಿಲೇಡ್ ವಿಶ್ವವಿದ್ಯಾಲಯವಿದೆ (1874). (ಎಸ್.ಸಿ.ವಿ.)

**ಅಣ್ಣಾಮಲೈ:** ತಮಿಳುನಾಡು ರಾಜ್ಯದ ಕೊಯಮತ್ತೂರು ಜಿಲ್ಲೆಯಲ್ಲಿರುವ ಪರ್ವತ ಶ್ರೇಣಿಗಳು. ($10^0 13'$-$10^0 31'$ ಉ. ಅಕ್ಷಾಂಶ, $76^0 52'$-$77^0 23'$ ಪೂ. ರೇಖಾಂಶ). ಇವು ಪಶ್ಚಿಮಘಟ್ಟಗಳ ಭಾಗವಾಗಿದ್ದು, ಪಾಲ್ಘಾಟ್ ಕಣಿವೆಯ ದಕ್ಷಿಣಕ್ಕೆ ವಿಸ್ತರಿಸಿರುವ ಮೂರು ಶ್ರೇಣಿಗಳಲ್ಲಿ ಒಂದಾಗಿವೆ. ಇವುಗಳ ಗರಿಷ್ಠ ಎತ್ತರ 2425 ಮೀ. ಇವುಗಳ ಇಳಕಲು ಇಳಿಜಾರುಗಳು ದಟ್ಟವಾದ ಅರಣ್ಯಗಳಿಂದಲೂ ಚಿಕ್ಕ ಪ್ರಸ್ಥಭೂಮಿಗಳು ಹುಲ್ಲುಗಾವಲುಗಳಿಂದಲೂ ಕೂಡಿದೆ. ಅಣ್ಣಾಮಲೈ ಬೆಟ್ಟಗಳಲ್ಲಿರುವ ಆನೈಮುಡಿ ಶಿಖರ ದಕ್ಷಿಣ ಭಾರತದಲ್ಲಿ ಅತ್ಯಂತ ಎತ್ತರವಾದುದು (2680 ಮೀ).

ಈ ಶ್ರೇಣಿಗಳಲ್ಲಿ ನೀಸ್ ರೂಪಾಂತರಿತ ಶಿಲೆಗಳೊಂದಿಗೆ ಫೆಲ್ಸ್ಪಾರ್ ಮತ್ತು ಕ್ವಾರ್ಟ್ಜ್ ಎಳೆಗಳು ಮತ್ತು ಕೆಂಪು ಪಾರ್ಫೈರೈಟ್‌ಗಳು ಬೆರೆತಿರುವ ಶಿಲಾಭಾಗಗಳೂ ಇವೆ. ಈ ಬೆಟ್ಟಗಳ ಉನ್ನತ ಇಳಿಜಾರಿನಲ್ಲಿ 900 ಮೀ – 1370 ಮೀ ವರೆಗೆ ಕಾಫಿ ಮುಖ್ಯಬೆಳೆ. ಕೆಳಮಟ್ಟದ ಇಳಿಜಾರುಗಳಲ್ಲಿ ಹಾಗೂ ಅರಣ್ಯಗಳಲ್ಲಿ ಉತ್ತಮ ದರ್ಜೆಯ ತೇಗದ ಮರಗಳಿವೆ.

ಇಲ್ಲಿ ಕರಡಿ, ಕಾಡೆಮ್ಮೆ, ಕಾಡುಕೋಣ, ಸಾರಂಗ, ಹುಲಿ, ಚಿರತೆ, ಮುಂತಾದ ವನ್ಯಜೀವಿಗಳು ಹೆಚ್ಚಾಗಿ ಕಂಡುಬರುತ್ತವೆ. ಉತ್ತರ ಭಾಗಗಳಲ್ಲಿ ಕಂಡುಬರದ ನೀಲಗಿರಿ ಕಾಡುಟಗರು (ಐಬೆಕ್ಸ್) ಇಲ್ಲಿ ಕಂಡುಬರುತ್ತವೆ. (ಎಂ.ಎಸ್.ವಿ.ಡಿ.)

**ಅತ್ಯಲ್ಪ ಸಿಲಿಕಾಂಶಶಿಲೆಗಳು:** ಶೇ. 45 ಕ್ಕಿಂತ ಕಡಿಮೆ ಸಿಲಿಕಾಂಶವಿರುವ ಶಿಲೆಗಳು (ಅಲ್ಟ್ರಬೇಸಿಕ್ ರಾಕ್ಸ್). ಸಾಮಾನ್ಯವಾಗಿ ಈ ಶಿಲೆಗಳ ಬಣ್ಣ ಕಪ್ಪು. ಇವುಗಳಲ್ಲಿ ಫೆಲ್ಸ್ಪಾರ್ ಖನಿಜಗಳಿರುವುದಿಲ್ಲ; ಇದ್ದರೂ ಪ್ರಮಾಣ ಬಹಳ ಅಲ್ಪ. ಕ್ಯಾಲ್ಸಿಯಂ ಅಧಿಕವಿರುವ ವಿಧಗಳು ಮಾತ್ರ ಇರುತ್ತವೆ. ಈ ವರ್ಗದ ಶಿಲೆಗಳಲ್ಲಿ ಮುಖ್ಯವಾಗಿ ಆಲಿವೀನ್ ಪೈರಾಕ್ಸೀನ್ ಮತ್ತು ಅದಿರು ಖನಿಜಗಳಿವೆ. ಹಾರ್ನ್‌ಬ್ಲೆಂಡ್ ಮತ್ತು ಅಭ್ರಕಗಳು ಕೆಲವು ಬಗೆಯಲ್ಲಿರುತ್ತವೆ.

ಶಿಲಾವಿಧಗಳು: ಮೇಲೆ ತಿಳಿಸಿದ ಬೇರೆ ಬೇರೆ ಖನಿಜಗಳಿರುವ ಅಥವಾ ಖನಿಜಗಳು ವಿವಿಧ ಪ್ರಮಾಣದಲ್ಲಿರುವ ಶಿಲೆಗಳಿಗೆ ಬೇರೆ ಬೇರೆ ಹೆಸರಿದೆ. ಈ ಗುಂಪಿನ ಶಿಲೆಗಳಲ್ಲಿ ಸ್ಥೂಲಕಣಶಿಲೆಗಳು. ಸೂಕ್ಷ್ಮಕಣಶಿಲೆಗಳು ಎಂದು ಎರಡು ಗುಂಪು.

ಅತ್ಯಲ್ಪ ಸಿಲಿಕಾಂಶಶಿಲೆಗಳು ರೂಪುಗೊಳ್ಳುವಿಕೆ: ಅತ್ಯಲ್ಪ ಸಿಲಿಕಾಂಶಶಿಲೆಗಳು ಸಾಮಾನ್ಯವಾಗಿ ದಪ್ಪವಾದ ಸಿಲ್‌ಗಳ (ಉದಾ: ಗ್ರೀನ್‌ಲೆಂಡ್‌ನಲ್ಲಿರುವವು) ಮತ್ತು ಲ್ಯಾಕೊಲಿತ್‌ಗಳ ಹರವಿನ ತಳಭಾಗದಲ್ಲಿ (ಉದಾ: ದಕ್ಷಿಣ ಆಫ್ರಿಕ ಪ್ರದೇಶದಲ್ಲಿರುವ ಪ್ರಖ್ಯಾತವಾದ ಬುಷ್‌ವೆಲ್ಡ್ ಶಿಲಾತೊಡಕು, ಉತ್ತರ ಅಮೆರಿಕದಲ್ಲಿರುವ ಸ್ಟಿಲ್‌ವಾಟರ್ ತೊಡಕು ಮತ್ತು ಒರಿಸ್ಸದಲ್ಲಿರುವ ಕಿಯೊಂಜಹಾರ್ ಶಿಲಾತೊಡಕು ಮುಂತಾದುವು) ರೂಪುಗೊಳ್ಳುತ್ತವೆ. ಶಿಲಾರಸ ಸ್ಫಟಿಕೀಕರಿಸುವಾಗ ಮೊದಲು ರೂಪುಗೊಂಡ ಹರಳುಗಳು ತಳದಲ್ಲಿ ಶೇಖರವಾಗುವುದರಿಂದ ಇವು ಉಂಟಾಗಿವೆ. ಮೊದಲು ಸ್ಫಟಿಕೀಕರಿಸಿ ಶೇಖರವಾದ ಪದರುಗಳು ಪುನಃ ದ್ರವಿಸಿ ಬೇರೆ ಬೇರೆ ಕಡೆ ಡೈಕುಗಳ ರೂಪದಲ್ಲಿ ನಿಂತಾಗ ಇನ್ನೂ ಕೆಲವು ರೂಪುಗೊಂಡವು. ಉಳಿದ ಕೆಲವು ಮೊದಲೇ ರೂಪುಗೊಂಡಿದ್ದ ಮತ್ತು ಅಧಿಕ ಸಿಲಿಕಾಂಶಗಳಿರುವ ಶಿಲೆಗಳ ಮೆಟಸೊಮ್ಯಾಟಿಕ್ ರೂಪಾಂತರದಿಂದಾದುವು. (ಎಸ್.ವಿ.)

**ಅಥಣಿ:** ಬಿಜಾಪುರ ಜಿಲ್ಲೆಯ ದಕ್ಷಿಣದಲ್ಲಿರುವ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ ಬೆಳಗಾಂವಿಯಿಂದ ಬಿಜಾಪುರಕ್ಕೆ ಹೋಗುವ ರಸ್ತೆಯಲ್ಲಿದೆ. $16^0.27'$ – $16^0.58'$ ಉ. ಅ. ದವರೆಗೂ ಹಬ್ಬಿದೆ. ವಿಸ್ತೀರ್ಣ 2,113 ಚ.ಕಿಮೀ ಇಲ್ಲಿ ಹಬ್ಬಿರುವ ಒಂದು ಬೆಟ್ಟದ ಸಾಲು ಇದನ್ನು ಎರಡು ಭಾಗಗಳಾಗಿ ಮಾಡಿದೆ. ಇಲ್ಲಿ ಕೃಷ್ಣಾನದಿ ಹರಿಯುತ್ತದೆ. ಮಳೆ ಕಡಿಮೆ. ಸರಾಸರಿ ವಾರ್ಷಿಕ ಮಳೆ 58 ಸೆಂಮೀ. ಕಪ್ಪುಮಣ್ಣಿನಿಂದ ಕೂಡಿದೆಯಾದ್ದರಿಂದ ಹತ್ತಿ, ಕಡಲೆಕಾಯಿ, ಜೋಳ, ಕಡಲೆ, ಗೋದಿ, ದ್ವಿದಳಧಾನ್ಯಗಳು, ಸಜ್ಜೆ, ಮೆಣಸಿನಕಾಯಿ ಮುಂತಾದವುಗಳನ್ನು ಹೆಚ್ಚಾಗಿ ಬೆಳೆಯುವರು. ಕಬ್ಬನ್ನು ಬಾವಿ ನೀರಾವರಿಯಿಂದ ಬೆಳೆಯುತ್ತಾರೆ.

ಗೋದಿ, ಕಡಲೆಕಾಯಿ, ಹತ್ತಿ, ಅಡಕೆ, ತೆಂಗು, ಎಣ್ಣೆಬೀಜಗಳು ವಾಣಿಜ್ಯಬೆಳೆಗಳು. ಅಕ್ಕಿ, ತೆಂಗು, ಅಡಕೆ ಪಶ್ಚಿಮ ಕರಾವಳಿ ಪ್ರದೇಶದಿಂದ ಇಲ್ಲಿಯ ಮಾರುಕಟ್ಟೆಗೆ ಬರುತ್ತವೆ. ಇಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ಹತ್ತಿಗಿರಣಿ, ಎಣ್ಣೆ ಗಿರಣಿಗಳು ಮತ್ತು ಕೈಮಗ್ಗಗಳು ಇವೆ. (ಎ.ಕೆ.)

**ಅಥೆನ್ಸ್:** ಗ್ರೀಸ್ ದೇಶದ ರಾಜಧಾನಿ ಮೆಡಿಟೆರೇನಿಯನ್ ಸಮುದ್ರದ ಈಶಾನ್ಯ ತೀರದಲ್ಲಿದೆ. ಎರಡು ಸಾವಿರ ವರ್ಷಕ್ಕೂ ಹಿಂದಿನಿಂದ ಪ್ರಸಿದ್ಧಿ ಪಡೆದಿದ್ದು ಎಲ್ಲ ದೇಶಗಳ ವಿದ್ವಾಂಸರ ಕಣ್ಮನಗಳನ್ನು ಸೆಳೆದಿದೆ. ಐರೋಪ್ಯ ಜನಾಂಗಗಳ ನಾಗರಿಕತೆ ಬೆಳೆದದ್ದು ಇಲ್ಲಿಂದ. ಪ್ರಪಂಚದ ಸಂಸ್ಕೃತಿಯ ಬೆಳವಣಿಗೆಗೆ ಈ ನಗರ ನೀಡಿರುವ ಕಾಣಿಕೆ ಅಪಾರ.

ನಗರದ ಉತ್ತರಕ್ಕೆ, ಈಶಾನ್ಯ ಮತ್ತು ಆಗ್ನೇಯಕ್ಕೆ ಮ್ಯೂಸೆಸ್, ನಿಂಫ್ ಮತ್ತು ನಿಕ್ಸ್ ಪರ್ವತಶ್ರೇಣಿಗಳಿವೆ. ಇವುಗಳಿಗೆ ಏರೋಪೇಗಸ್ ವಿಭಾಗವೆಂದು ಹೆಸರು. ಇವುಗಳ ಮಧ್ಯದ 285 ಮೀ ಎತ್ತರವುಳ್ಳ ಪರ್ವತಶ್ರೇಣಿಗಳ ಬಯಲೇ ಪ್ರಸಿದ್ಧ ಅಟಿಕ ಮೈದಾನ. ಇದರ ಪಶ್ಚಿಮಭಾಗದಲ್ಲಿ ಸೀಫೈಸಸ್ ಮತ್ತು ಪೂರ್ವಭಾಗದಲ್ಲಿ ಇಲಿಸಾಸ್ ನದಿಗಳಿವೆ. 6 ಕಿಮೀ ದೂರದಲ್ಲಿರುವ ಸಮುದ್ರದವರೆಗೂ ಈ ನಗರ ಬೆಳೆಯಿತು. ಅಕ್ರೋಪೋಲಿಸ್ ಎಂಬುದು ಪ್ರಾಚೀನ ಅಥೆನ್ಸ್ ಪಟ್ಟಣ. ನಿಯೋಪೋಲಿಸ್ ಎಂಬ ಹೊಸನಗರ ಅಕ್ರೋಪೋಲೀಸ್‌ಗೆ ಪಶ್ಚಿಮದಲ್ಲಿದೆ. ಈ ಬೃಹತ್ ಅಥೆನ್ಸ್ ನಗರದ ಜನಸಂಖ್ಯೆ ಸು. 745,514 (2002). ಗ್ರೀಸ್ ದೇಶದ ಕೈಗಾರಿಕೋತ್ಪನ್ನದ ಅರ್ಧದಷ್ಟು ಅಥೆನ್ಸ್ ಬಯಲಿನಲ್ಲಿ ಕೇಂದ್ರೀಕೃತವಾಗಿದೆ. ಮುಖ್ಯ ಉತ್ಪನ್ನಗಳು– ರೇಷ್ಮೆ, ಉಣ್ಣೆ, ಹತ್ತಿಬಟ್ಟೆ, ಯಂತ್ರಸಾಧನಗಳು, ಮತ್ತಿತರ ಜೀವನಾವಶ್ಯಕ ಸಾಮಗ್ರಿಗಳು.

ಅಥೆನ್ಸ್ ನಗರದ ಖ್ಯಾತಿ ಉಳಿದಿರುವುದು ಗ್ರೀಕರು ಬೆಳೆಸಿ ಪೋಷಿಸಿರುವ ಸಂಸ್ಕೃತಿಯಿಂದ. ಒಂದು ದೊಡ್ಡ ವಿಶ್ವವಿದ್ಯಾಲಯ (1837), ವಿವಿಧ ಕಲಾಸಂಘಗಳು, ವೈಜ್ಞಾನಿಕ ವಿದ್ಯಾಶಾಲೆ, ಪ್ರಾಚ್ಯಶೋಧನ ಸಂಸ್ಥೆಗಳು, ವಿವಿಧ ವಸ್ತುಸಂಗ್ರಹಾಲಯಗಳು ಮತ್ತು ಅನೇಕ ಗ್ರಂಥಾಲಯಗಳು ಇಲ್ಲಿವೆ. ಗ್ರೀಕ್ ಕ್ರೈಸ್ತ ಧರ್ಮಾಧಿಕಾರಿಯ ಆಲೋಚನಾಸಭೆಯೂ ಇಲ್ಲಿದೆ. ಪ್ರಾಚೀನ ಗ್ರೀಕ್ ಸಂಸ್ಕೃತಿಗೆ ಹಾಗೂ ಅದರ ಚರಿತ್ರೆಗೆ ಸಂಬಂಧಪಟ್ಟ ಸ್ಮಾರಕಗಳು, ಅವಶೇಷಗಳು ಇಂದಿಗೂ ನಾನಾ ದೇಶಗಳ ಪ್ರವಾಸಿಗರನ್ನು ಇಲ್ಲಿಗೆ ಸೆಳೆಯುತ್ತಿವೆ. ಬಹುಮಟ್ಟಿಗೆ ಗ್ರೀಕ್ ಸಂಸ್ಕೃತಿ ಎಂದರೆ ಅಥೆನ್ಸ್ ಎಂದೇ ಹೇಳಬಹುದು.

ಅಮೆರಿಕದ ಸಂಯುಕ್ತ ಸಂಸ್ಥಾನದ ಅಲಬಾಮ, ಜಾರ್ಜಿಯ, ಓಹಿಯೊ, ಪೆನ್ಸಿಲ್ವೇನಿಯ, ಟೆನೆಸ್ಸಿ ಮತ್ತು ಟೆಕ್ಸಾಸ್ ರಾಜ್ಯಗಳಲ್ಲಿಯೂ ಅಥೆನ್ಸ್ ಎಂಬ ಹೆಸರಿನ ಪಟ್ಟಣಗಳಿವೆ.(ಎ.ಎಂ.)

**ಅದಿರು:** ಗಣಿಯಿಂದ ಹೊರತೆಗೆದ ವಸ್ತುವಿಗೆ ಸಾಮಾನ್ಯವಾಗಿ ಈ ಹೆಸರಿದೆ (ಓರ್). ವೈಜ್ಞಾನಿಕದೃಷ್ಟಿಯಿಂದ ಹೇಳುವುದಾದರೆ ಲಾಭದಾಯಕವಾದ ಮತ್ತು ಉಪಯುಕ್ತವಾದ ಒಂದು ಅಥವಾ ಹಲವಾರು ಖನಿಜಗಳನ್ನೊಳಗೊಂಡ ಶಿಲೆಯೇ ಅದಿರು. ಶಿಲೆಯಲ್ಲಿ ಹುದುಗಿರುವ ಖನಿಜಕ್ಕೆ ಲಾಭದಾಯಕ ಬೆಲೆ ದೊರೆಯದಿದ್ದಲ್ಲಿ ಅದು ಅದಿರೆನಿಸದೆ ಕೇವಲ ಖನಿಜವೆನಿಸುತ್ತದೆ (ಮಿನರಲ್).

ಅದಿರಿನ ಜೊತೆಯಲ್ಲಿ ಅನುಪಯುಕ್ತವಾದ ಹಲಕೆಲವು ಖನಿಜಗಳೂ ಇರುವುದುಂಟು. ಇವನ್ನು ಗ್ಯಾಂಗ್ ಎನ್ನುತ್ತಾರೆ. ಶಿಲೆಯಲ್ಲಿ ಅದಿರು ಮತ್ತು ಗ್ಯಾಂಗ್ ಖನಿಜಗಳ ಪ್ರಮಾಣದಲ್ಲಿ ಏರುಪೇರುಗಳನ್ನು ಕಾಣಬಹುದು. ಇದು ಸಾಮಾನ್ಯವಾಗಿ ಅಲೋಹ ಖನಿಜವಾದರೂ ಹಲವು ಸಂದರ್ಭಗಳಲ್ಲಿ ಲೋಹ ಖನಿಜವಾದರೂ ಆಗಬಹುದು. ಅನೇಕವೇಳೆ ಇವು ಸಹ ಉಪಯೋಗಕ್ಕೆ ಬರುತ್ತವೆ. ಅನೇಕ ಸಂದರ್ಭಗಳಲ್ಲಿ ಅದಿರು ಖನಿಜವನ್ನು ಗ್ಯಾಂಗ್ ಖನಿಜಗಳಿಂದ ಬೇರ್ಪಡಿಸುವುದೂ ಸಾಹಸದ ಕೆಲಸವಾದೀತು. ಈ ಬಗೆಯ ಲೋಹ ಸಂಶೋಧನೆಗೆ ಹೆಚ್ಚಿನ ವೆಚ್ಚವೂ ಆದೀತು. ಎಷ್ಟೋ ಗಣಿಗಳಲ್ಲಿ ಸು. 20–25 ಟನ್ ಶಿಲೆಯನ್ನು ಪರಿಷ್ಕರಿಸಿದಲ್ಲಿ ಕೇವಲ ಒಂದು ಟನ್ ಅದಿರು ಮಾತ್ರ ದೊರೆಯಬಹುದು.

ಅದಿರಿನಲ್ಲಿ ದೊರೆಯುವ ಲೋಹಾಂಶದ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ. ಅಲ್ಲದೆ ಒಂದೇ ಖನಿಜದ ವಿವಿಧ ಅದಿರುಗಳಲ್ಲಿ ವಿವಿಧ ಬಗೆಯ ಲೋಹಾಂಶವನ್ನು ಗುರುತಿಸಬಹುದು. ಉತ್ತಮ ಉದಾಹರಣೆ- ತಾಮ್ರದ ಅದಿರುಗಳು. ಇವುಗಳಲ್ಲಿ ಲೋಹಾಂಶ ನೂರಕ್ಕೆ ಒಂದರಿಂದ ಎಪ್ಪತ್ತೈದರವರೆಗೂ ಕಂಡುಬಂದಿದೆ. ಶೇಕಡ ಒಂದಂಶವನ್ನು ಪಡೆದಿರುವ ಅದಿರು ಕಡಿಮೆ ದರ್ಜೆಯದು. ಇದರಲ್ಲಿ ಅಡಗಿರುವ ತಾಮ್ರವನ್ನು ಪಡೆಯಲು ಒಪ್ಪಮಾಡುವ ಕಾರ್ಯಕ್ಕೆ ಹೆಚ್ಚು ವ್ಯಯವಾಗುತ್ತದೆ. ಆದರೆ ಶೇ. 75 ಲೋಹಾಂಶವನ್ನುಳ್ಳ ಅದಿರನ್ನು ಇಷ್ಟು ಕಷ್ಟವಿಲ್ಲದೆ ಸುಲಭವಾಗಿ, ಹೆಚ್ಚು ಖರ್ಚಿಲ್ಲದೆಯೂ ಶುದ್ಧೀಕರಿಸಬಹುದು.

ಕೆಲವು ಲೋಹಗಳಿಗೆ ಉತ್ತಮ ಬೆಲೆಯಿರುವ ಕಾರಣ ಅದಿರಿನಲ್ಲಿ ಅವು ಬಹುಕಡಿಮೆ ಪ್ರಮಾಣದಲ್ಲಿ ದೊರೆತರೂ ಅದಿರಿಗೆ ಬೆಲೆ ಇದೆ. ಅಲಾಸ್ಕಾದಲ್ಲಿರುವ ಜ್ಯೂನೂ ಚಿನ್ನದ ಗಣಿಯಲ್ಲಿ ದೊರೆಯುವ ಅದಿರಿನಲ್ಲಿ ಚಿನ್ನದ ಅಂಶ ನೂರಕ್ಕೆ ಕೇವಲ 0.00016ರಷ್ಟಿದ್ದರೂ ಚಿನ್ನಕ್ಕಿರುವ ಹೆಚ್ಚಿನ ಬೆಲೆಯ ಕಾರಣ ಅದು ಉತ್ತಮ ಅದಿರೆನಿಸಿದೆ. ಒಂದು ಟನ್ ಅದಿರಿನಲ್ಲಿ ಕೇವಲ 3-4 ಅಂಶಗಳಷ್ಟು ಚಿನ್ನವಿದ್ದರೆ ಅದನ್ನು ಉತ್ತಮ ಅದಿರೆಂದು ಭಾವಿಸಲಾಗಿದೆ.

ಅದಿರು ಒಂದೇ ಒಂದು ಲೋಹವನ್ನು ಹೊಂದಿರಬಹುದು ಅಥವಾ ಹಲವಾರು ಲೋಹಗಳನ್ನು ಹೊಂದಿರಬಹುದು. ಇವನ್ನು ಕ್ರಮವಾಗಿ ಸರಳ ಅದಿರು, ಸಂಯುಕ್ತ ಅದಿರು ಎಂದು ಕರೆಯಲಾಗಿದೆ. ಕಬ್ಬಿಣ, ಅಲ್ಯೂಮಿನಂ, ಕ್ರೋಮಿಯಂ, ತವರ, ಪಾದರಸ, ಮ್ಯಾಂಗನೀಸ್, ಟಂಗ್‌ಸ್ಟನ್- ಈ ಲೋಹಗಳ ಅದಿರುಗಳು ಸಾಮಾನ್ಯವಾಗಿ ಸರಳ ಅದಿರುಗಳು. ಆದರೆ ಚಿನ್ನ, ಬೆಳ್ಳಿ, ತಾಮ್ರ, ಸೀಸ, ಸತು, ನಿಕ್ಕಲ್, ಕೊಬಾಲ್ಟ್, ಆ್ಯಂಟಿಮನಿ- ಇವು ಸಂಯುಕ್ತ ಅದಿರುಗಳಲ್ಲಿ ದೊರೆಯುತ್ತವೆ. ಉದಾ: ಕೇವಲ ಒಂದು ಅದಿರಿನಲ್ಲಿ ತಾಮ್ರ ಚಿನ್ನ ಬೆಳ್ಳಿ ಸೀಸ ಹೀಗೆಯೇ ಬೆಳ್ಳಿ, ಸೀಸ, ಸತು, ತಾಮ್ರ, ಚಿನ್ನ; ತವರ, ಬೆಳ್ಳಿ, ಸೀಸ, ಸತು: ನಿಕ್ಕಲ್, ತಾಮ್ರ, ಚಿನ್ನ, ಪ್ಲಾಟಿನಂ- ಈ ಲೋಹಗಳ ಸಂಯುಕ್ತಅದಿರುಗಳು ನಿಸರ್ಗದಲ್ಲಿ ಸರ್ವೆ ಸಾಮಾನ್ಯ.

ಸಾಮಾನ್ಯವಾಗಿ ಅದಿರುಗಳಲ್ಲಿ ಚಿನ್ನ-ಬೆಳ್ಳಿ, ಬೆಳ್ಳಿ-ಸೀಸ, ಸೀಸ-ಸತು, ಸತು-ತಾಮ್ರ, ತಾಮ್ರ-ಚಿನ್ನ, ಕಬ್ಬಿಣ-ಮ್ಯಾಂಗನೀಸ್, ಕಬ್ಬಿಣ-ಟೈಟೇನಿಯಂ, ನಿಕ್ಕಲ್-ತಾಮ್ರ, ನಿಕ್ಕಲ್-ಕೊಬಾಲ್ಟ್, ಕ್ರೋಮಿಯಂ-ಪ್ಲಾಟಿನಂ, ತವರ-ಟಂಗ್‌ಸ್ಟನ್, ಮಾಲಿಬ್ಡಿನಂ-ತಾಮ್ರ, ಸತು-ಕ್ಯಾಡ್ಮಿಯಂ- ಇವುಗಳ ಪರಸ್ಪರ ನಂಟನ್ನು ಕಾಣುತ್ತೇವೆ.

ಅದಿರಿನಲ್ಲಿ ಹುದುಗಿರುವ ಲೋಹಾಂಶವೇ ಟೆನರ್. ಇದನ್ನು ಸಾಮಾನ್ಯವಾಗಿ ಶೇಕಡಾವಾರಾಗಿಯೋ ಅಥವಾ ಅಮೂಲ್ಯ ಲೋಹಗಳಾದಲ್ಲಿ ಟನ್ನಿಗೆ ಇಷ್ಟು ಗ್ರಾಂಗಳೆಂದೋ ವಿವರಿಸುತ್ತಾರೆ. ಲೋಹಕ್ಕೆ ಮಾರುಕಟ್ಟೆಯಲ್ಲಿ ದೊರೆಯುವ ಬೆಲೆಗನುಗುಣವಾಗಿ ಅದಿರಿನ ಟೆನರ್ ವ್ಯತ್ಯಾಸಗೊಳ್ಳುತ್ತದೆ. ಲೋಹದ ಬೆಲೆ ಹೆಚ್ಚಿದಷ್ಟೂ ಅದರ ಕೆಳದರ್ಜೆಯ ಅದಿರುಗಳಿಗೂ ಒಳ್ಳೆಯ ಬೆಲೆ ಸಿಗುತ್ತದೆ. ಉದಾ: ಕಬ್ಬಿಣದ ಅದಿರು ಲಾಭದಾಯಕವೆನಿಸಬೇಕಾದರೆ ಅದರಲ್ಲಿ ನೂರಕ್ಕೆ 35 ರಿಂದ 50ರಷ್ಟು ಲೋಹಾಂಶವಿದ್ದರೆ ಸಾಕು. ಆದರೆ ತಾಮ್ರದ ಅದಿರಿನಲ್ಲಿ ಕೇವಲ ಶೇ. 0.8% ರಷ್ಟೂ ಚಿನ್ನದ ಅದಿರಿನಲ್ಲಿ 1/1000ರಷ್ಟು ಲೋಹಾಂಶವಿದ್ದರೆ ಸಾಕು.

ಅನೇಕ ಅದಿರುಗಳು ಲೋಹ ಖನಿಜಗಳಾಗಿವೆ. ಆದರೆ ಕೆಲವು ಅಲೋಹ ಖನಿಜಗಳೂ ಹೌದು. ಇವನ್ನು ಒಪ್ಪಮಾಡಿದಾಗ ಲೋಹಗಳನ್ನು ಪಡೆಯುತ್ತೇವೆ. ಉದಾ: ಮ್ಯಾಲಕೈಟ್ ಎಂಬ ಅದಿರಿನಿಂದ ತಾಮ್ರ, ಬಾಕ್ಸೈಟ್ ಅದಿರಿನಿಂದ ಅಲ್ಯೂಮಿನಂ ಮತ್ತು ಸೆರುಸೈಟ್ ಅದಿರಿನಿಂದ ಸೀಸ ದೊರೆಯುತ್ತವೆ. ಅದಿರು ಖನಿಜಗಳು ಸಹಜ ಲೋಹಗಳಾಗಿಯೂ ದೊರೆಯಬಹುದು, ಇಲ್ಲವೆ ಇತರ ಖನಿಜ ಅಥವಾ ಧಾತುಗಳ ಸಂಯೋಗದೊಡನೆಯೂ ದೊರೆಯಬಹುದು. ಆದಾಗ್ಯೂ ಅನೇಕ ಅದಿರುಗಳು ಎರಡನೆಯ ದರ್ಜೆಯವು.

ಒಂದು ಲೋಹಕ್ಕೆ ಒಂದೇ ಅದಿರು ಎನ್ನುವಂತಿಲ್ಲ. ಒಂದೇ ಲೋಹಕ್ಕೆ ನಾನಾ ಬಗೆಯ ಅದಿರುಗಳೂ ಇರಬಹುದು. ಉದಾ: ಚಾಲ್ಕೊಸೈಟ್, ಬೋರ್ನೈಟ್, ಚಾಲ್ಕೊಪಿರೈಟ್, ಕ್ಯುಪ್ರೈಟ್, ಮ್ಯಾಲಕೈಟ್ ಇವೆಲ್ಲ ತಾಮ್ರದ ಅದಿರುಗಳು. ಇವು ಒಂದೇ ನಿಕ್ಷೇಪದಲ್ಲಿ ದೊರೆಯಬಹುದು. ಹೀಗೆಯೇ ಒಂದೇ ಅದಿರಿನಿಂದ ಹಲವಾರು ಲೋಹಗಳನ್ನು ಪಡೆಯಬಹುದು. ಉದಾ: ಸೈನೈಟ್ ಅದಿರಿನಿಂದ ತಾಮ್ರ ಮತ್ತು ಸತುವನ್ನು ಪಡೆಯಬಹುದು. (ಎಂ.ಎನ್.ವಿ.)

**ಅದಿಲಾಬಾದ್:** ಆಂಧ್ರ ಪ್ರದೇಶದ ಗೋದಾವರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ಕನ್ಯಾಕುಮಾರಿಯಿಂದ ಕಾಶಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ನಾಗಪುರ ಮತ್ತು ಹೈದರಾಬಾದ್ ಮಧ್ಯದಲ್ಲಿದೆ. ಮಧ್ಯರೈಲ್ವೆಯ ಮುದ್‌ಖೇಡ್ ಶಾಖೆಯ ಕೊನೆಯ ನಿಲ್ದಾಣ. ನಾಗಪುರದಿಂದ ನೈರುತ್ಯಕ್ಕೆ 180 ಕಿಮೀ ($19^0.4'$ ಉ. ಅಕ್ಷಾಂಶ ಮತ್ತು $78^0.33'$ ಪೂ. ರೇಖಾಂಶ) ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರ. ಜನಸಂಖ್ಯೆ 2,50,600. ಅನೇಕ ಸರ್ಕಾರಿ ಕಚೇರಿಗಳಿವೆ. ಇಲ್ಲಿ ಹಿಂದು ದೇವಾಲಯವಿದ್ದು ಪ್ರತಿವರ್ಷ ಜಾತ್ರೆ ನಡೆಯುತ್ತದೆ; ಅಲ್ಲದೆ ಇದು ಧಾನ್ಯಸರಕುಗಳ ಮಾರುಕಟ್ಟೆ ಮತ್ತು ವ್ಯಾಪಾರ ಸ್ಥಳ.

ಅದಿಲಾಬಾದಿನ ವಾಯವ್ಯದಿಕ್ಕಿಗೆ 60 ಕಿಮೀ ದೂರದಲ್ಲಿ ಮಹುರ್ ಎಂಬಲ್ಲಿ ಪ್ರಾಚೀನ ಕೋಟೆಯಿದೆ. 14-16ನೆಯ ಶತಮಾನದಲ್ಲಿ ಆಳಿದ ಬಹಮನಿ ಮತ್ತು ಇಮಾದ್‌ಷಾಹಿ ಸುಲ್ತಾನರ ಕಾಲದ ಅವಶೇಷಗಳು ಇಲ್ಲಿವೆ.

ಅದಿಲಾಬಾದ್ ತಾಲ್ಲೂಕು ಹಾಗೂ ಜಿಲ್ಲೆ: ಗೋದಾವರಿ ಮತ್ತು ಪೆನಗಂಗ ನದಿ ಕಣಿವೆಗಳ ಮಧ್ಯಭಾಗದಲ್ಲಿ ಸಮುದ್ರ ಮಟ್ಟಕ್ಕೆ 600 ಮೀ ಎತ್ತರವಾದ ಪ್ರಸ್ಥಭೂಮಿ ಪ್ರದೇಶದಲ್ಲಿದೆ. ವಿಸ್ತೀರ್ಣ 10,500 ಚ.ಕಿಮೀ. ಜನಸಂಖ್ಯೆ 12,50,850. ಮುಖ್ಯ ನದಿಗಳು- ಗೋದಾವರಿ ಮತ್ತು ಪೆನಗಂಗ.

ಸಹ್ಯಾದ್ರಿ ಅಥವಾ ಸತ್ಮಲಪರ್ವತ ಜಿಲ್ಲೆಯ ಆಗ್ನೇಯ-ವಾಯವ್ಯ ದಿಕ್ಕಿನಲ್ಲಿ ಹಬ್ಬಿದೆ. ವಾರ್ಷಿಕ ಮಳೆ 100 ಸೆಂಮೀ. ಈ ಜಿಲ್ಲೆ ಸಂಪದ್ಭರಿತ ಕಾಡುಗಳಿಂದ ಕೂಡಿದ್ದು ತೇಗ, ಎಬೊನಿ ಮುಂತಾದ ಮರಗಳನ್ನು ಇಲ್ಲಿಂದ ರಫ್ತು ಮಾಡಲಾಗುವುದು. ವನ್ಯಮೃಗ ಬೇಟೆ ಬಹಳವಾಗಿತ್ತು. ಜಿಲ್ಲೆಯ ಮುಖ್ಯ ಬೆಳೆ ಬತ್ತ, ಗೋದಿ, ಎಣ್ಣೆಬೀಜಗಳು ಮತ್ತು ಹತ್ತಿ.

ಕಣಿವೆ ಪ್ರದೇಶದಲ್ಲಿ ಕಲ್ಲಿದ್ದಲು, ಸುಣ್ಣಕಲ್ಲು, ಕಬ್ಬಿಣದ ಅದಿರು, ಗಂಧಕ ದೊರಕುವುದು. ಇತರ ಸಿದ್ಧವಸ್ತುಗಳಲ್ಲಿ ಮುಖ್ಯವಾದುವೆಂದರೆ ಕಾಗದ, ರೇಷ್ಮೆ, ರಾಸಾಯನಿಕ ಪದಾರ್ಥಗಳು ಮತ್ತು ಆಟದ ಸಾಮಾನುಗಳು. (ಎಸ್.ಎನ್.)

**ಅಧಿಕ ಜನಸಂಖ್ಯೆ:** ಯಾವ ಪ್ರದೇಶದಲ್ಲಿ ಸಂಪನ್ಮೂಲದ ಲಭ್ಯತೆಗಿಂತ ಅಧಿಕ ಅಥವಾ ಅತಿ ಹೆಚ್ಚಿನ ಜನಸಂಖ್ಯೆ ಇದೆಯೋ ಅಂತಹ ಪರಿಸ್ಥಿತಿಯನ್ನು ಅಧಿಕ ಜನಸಂಖ್ಯೆಯ ಪ್ರದೇಶವೆಂದು ಕರೆಯುತ್ತಾರೆ. ಇದು ಮುಖ್ಯವಾಗಿ ಎರಡು ರೀತಿಯಿಂದ ಉದ್ಭವವಾಗುತ್ತದೆ. ಮೊದಲನೆಯದಾಗಿ ಜನಸಂಖ್ಯೆ ಬೆಳವಣಿಗೆಯ ಪ್ರಮಾಣ ಹೆಚ್ಚಾಗಿರುವುದು. ಎರಡನೆಯದಾಗಿ ಸಂಪನ್ಮೂಲಗಳು ಮುಗಿದುಹೋಗಿ ಕೊರತೆಯುಂಟಾಗುವುದು. ಅಧಿಕ ಜನಸಂಖ್ಯೆಯಿಂದ ಹಲವು ಸಮಸ್ಯೆಗಳು ತಲೆದೋರುತ್ತವೆ. ಉದಾ: ನಿರುದ್ಯೋಗ, ಕಡಿಮೆ ತಲಾದಾಯ, ಬಡತನ, ಜೀವನಮಟ್ಟದಲ್ಲಿ ಕುಸಿತ, ಆಹಾರದ ಕೊರತೆ, ಬೇರೆ ಕಡೆಗೆ ವಲಸೆಹೋಗುವುದು ಇತ್ಯಾದಿ. (ಎಸ್.ಐ.ಬಿ.)

**ಅಧಿಕವರ್ಷ:** ಒಂದು ಅಧಿಕ ದಿನವುಳ್ಳ ಅಥವಾ 366 ದಿವಸಗಳುಳ್ಳ ವರ್ಷ. 4 ರಿಂದ ಭಾಗವಾಗುವ ಕ್ರಿ.ಶ.ದ ವರ್ಷಸಂಖ್ಯೆ (ಲೀಪ್ ಇಯರ್). ಶತಮಾನ ವರ್ಷಗಳಿಗೆ ಮಾತ್ರ ಇರುವ ನಿಯಮ ಬೇರೆ. ಅಧಿಕ ವರ್ಷದಲ್ಲಿ ಫೆಬ್ರವರಿ ಮಾಹೆ 28 ದಿನಗಳಿಗೆ ಬದಲಾಗಿ 29 ದಿನಗಳಾಗುತ್ತವೆ.

ಈ ಗಣನೆ ರೋಮ್‌ದೊರೆ ಜ್ಯೂಲಿಯಸ್ ಸೀಸರನ ಕಾಲದಿಂದ ಆರಂಭವಾಯಿತು. ಭೂಮಿ ಸೂರ್ಯನ ಸುತ್ತ ಪರಿಭ್ರಮಿಸುವ ವೇಳೆ 365.25636 ದಿನಗಳು; ಸ್ಥೂಲವಾಗಿ $365^1/_4$ ದಿನಗಳು. ಅನುಕೂಲದದೃಷ್ಟಿಯಿಂದ ವರ್ಷಕ್ಕೆ 365 ದಿವಸಗಳೆಂದು ತೆಗೆದುಕೊಂಡರೆ ಉಳಿದ $^1/_4$ ದಿನವನ್ನು ಕೂಡಿಸಿ ನಾಲ್ಕು ವರ್ಷಗಳಿಗೊಮ್ಮೆ ಈ ಲೆಕ್ಕದಂತೆ ಒಂದು ದಿನವನ್ನು ಆ ವರ್ಷದ ಫೆಬ್ರವರಿ ತಿಂಗಳಲ್ಲಿ ಹೆಚ್ಚಿಸಬೇಕಾಗುತ್ತದೆ. ಈ ಒಂದು ಹೆಚ್ಚಿನ ದಿನ ಬರುವ ವರ್ಷ ಅಧಿಕವರ್ಷ. ಇದರಿಂದ ವರ್ಷದ ಸರಾಸರಿ ಅವಧಿ 365.25 ದಿನಗಳು ಆಗುತ್ತವೆ. ಇದು ಋತುಗಳು ನಿರ್ಮಿಸುವ ವರ್ಷಕ್ಕಿಂತ ಸ್ವಲ್ಪ ಅಧಿಕವಾಗುತ್ತದೆ. ದೋಷಪ್ರಮಾಣ 400 ವರ್ಷಗಳಲ್ಲಿ ಮೂರು ಅಧಿಕ ದಿವಸಗಳು. ಆದ್ದರಿಂದ 400 ವರ್ಷಗಳಲ್ಲಿ ಮೂರು ದಿನಗಳಷ್ಟು ಕಳೆಯಬೇಕು. ಶತಮಾನದ ಸಂಖ್ಯೆ 4 ರಿಂದ ಭಾಗವಾದರೆ ಮಾತ್ರ (ಉದಾ: 2000, 2400 ಇತ್ಯಾದಿ; 1900, 2100, ಇತ್ಯಾದಿ ಅಲ್ಲ) ಆ ಶತಮಾನದ ಆರಂಭವರ್ಷ ಅಧಿಕವರ್ಷವೆಂದು ಪೋಪ್ ಗ್ರೆಗೊರಿ ತೀರ್ಮಾನಿಸಿದ. ಈ ತೀರ್ಮಾನದಂತೆ, ವರ್ಷದ ಸರಾಸರಿ ಅವಧಿ 365.2425 ದಿನಗಳು ಆಗುತ್ತವೆಯಲ್ಲದೆ 400 ವರ್ಷಗಳಲ್ಲಿ 97 ಅಧಿಕವರ್ಷಗಳಿರುತ್ತವೆ. ಗ್ರೆಗೊರಿಯ ವರ್ಷಮಾನ ಋತುಗಳ ದೃಷ್ಟಿಯಿಂದ ಕಿಂಚಿತ್ ಅಧಿಕವಾಗಿ, 4000 ವರ್ಷಗಳಲ್ಲಿ ಸು. ಒಂದು ದಿವಸದಷ್ಟು ದೋಷ ಪ್ರಮಾಣವುಂಟಾಗುತ್ತದೆ. (ಸಿ.ಎನ್.ಎಸ್.)

**ಅನಂತಪುರ:** ಆಂಧ್ರಪ್ರದೇಶದ ಒಂದು ಜಿಲ್ಲೆ ಹಾಗೂ ಅದರ ಆಡಳಿತ ಕೇಂದ್ರ ನಗರ. ಬೆಂಗಳೂರು-ಗುಂತಕಲ್ ರೈಲುಮಾರ್ಗದಲ್ಲಿದೆ. ಜನಸಂಖ್ಯೆ 3,50,000. ಇತಿಹಾಸದ ಪ್ರಕಾರ ಅನಂತಪುರವನ್ನು ವಿಜಯನಗರದ ಒಬ್ಬ ದಿವಾನ ತನ್ನ ಪತ್ನಿ ಆನಂದಳ ಜ್ಞಾಪಕಾರ್ಥವಾಗಿ ಸ್ಥಾಪಿಸಿದನೆಂದು ತಿಳಿದುಬರುತ್ತದೆ.

ಜಿಲ್ಲೆಯ ವಿಸ್ತೀರ್ಣ: 19,130 ಚ.ಕಿಮೀ. ಜನಸಂಖ್ಯೆ ಸು. 35,68,871. ಇದು ಕರ್ನಾಟಕ ಪ್ರಸ್ಥಭೂಮಿಯ ಉತ್ತರಭಾಗದಲ್ಲಿದೆ. ಜಿಲ್ಲೆಯ ಪೂರ್ವದಲ್ಲಿ ಎರ್ರಕೊಂಡ ಎಂಬ ಬೆಟ್ಟಗಳಿವೆ. ಅನಂತಪುರ ಜಿಲ್ಲೆ ಅತ್ಯಂತ ಶುಷ್ಕಪ್ರದೇಶ. ಬಹುಭಾಗ ಕೆಂಪುಮಣ್ಣಿನಿಂದಲೂ ಬಂಜರುಗುಡ್ಡಗಳಿಂದಲೂ ಕೂಡಿದೆ. ನವಣೆ, ಸಜ್ಜೆ, ಕಾಳು ಮತ್ತು ದ್ವಿದಳ ಧಾನ್ಯಗಳು ಮುಖ್ಯ ಬೆಳೆಗಳು. ಹತ್ತಿ ಮತ್ತು ಬತ್ತವನ್ನು ಸ್ವಲ್ಪಭಾಗದಲ್ಲಿ ಮಾತ್ರ ಬೆಳೆಯಲಾಗುವುದು. (ಎಂ.ಎಸ್.)

**ಅನಟೋಲಿಯ:** ತುರ್ಕಿಯ ಮಧ್ಯಭಾಗದಲ್ಲಿರುವ ಪ್ರಸ್ಥಭೂಮಿ. ವಿಸ್ತೀರ್ಣ 4,59,387 ಚಕಿಮೀ. ಜನಸಂಖ್ಯೆ ಸು. 25 ಮಿಲಿಯನ್, ಉತ್ತರದಲ್ಲಿ ಪಾಂಟಿಕ್ ಪರ್ವತ ಮತ್ತು ದಕ್ಷಿಣದಲ್ಲಿ ಟಾರಸ್ ಪರ್ವತ ಇವೆ. ಈ ಪ್ರಸ್ಥಭೂಮಿ ಪೂರ್ವದಲ್ಲಿ ಎತ್ತರವಾಗುತ್ತ ಅರ್ಮೀನಿಯ ಪ್ರದೇಶವನ್ನು ಸೇರುವುದು; ಆದರೆ ಪಶ್ಚಿಮದಲ್ಲಿ ಇಕ್ಕಟ್ಟಾದ ಕರಾವಳಿ ಮೈದಾನವನ್ನು ತಲುಪುವುದು. ಸರಾಸರಿ ಎತ್ತರ 760 ಮೀ ತುರ್ಕಿಯ ರಾಜಧಾನಿ ಅಂಕಾರ ಪಟ್ಟಣ ಈ ಪ್ರಸ್ಥಭೂಮಿಯ ಮಧ್ಯಭಾಗದಲ್ಲಿದೆ.

ಇದು ವಿಚಿತ್ರ ವಾಯುಗುಣವನ್ನು ಹೊಂದಿದೆ. ಚಳಿಗಾಲದಲ್ಲಿ ಅತಿಶೀತದಿಂದ ಕೂಡಿ ಕೆಲವು ಭಾಗಗಳು ಹಿಮಾಚ್ಛಾದಿತವಾಗುತ್ತವೆ. ಬೇಸಗೆಯಲ್ಲಿ ಶಾಖದಿಂದ ಕೂಡಿದ ಶುಷ್ಕ ವಾತಾವರಣವಿರುತ್ತದೆ. ಮಳೆ ಕಡಿಮೆ. ಸ್ವಾಭಾವಿಕ ಸಸ್ಯವರ್ಗ ರಷ್ಯದ ಸ್ಟೆಪ್ಪಿ ಮಾದರಿಯದು. ಫಲವತ್ತಾದ ಹುಲ್ಲುಗಾವಲುಗಳಿವೆ. ಪಶುಪಾಲನೆ ಜನರ ಮುಖ್ಯ ಕಸಬು. ಇದು ಅಂಗೋರ ಮೇಕೆಗಳಿಗೆ ಪ್ರಸಿದ್ಧ ಸ್ಥಳ. ಮಳೆ ಸಾಕಷ್ಟು ಬೀಳುವ ಪ್ರದೇಶಗಳಲ್ಲಿ ಬೇಸಾಯ ನಡೆಯುತ್ತದೆ. ಗೋದಿ ಮುಖ್ಯ ಬೆಳೆ. ದ್ರಾಕ್ಷಿ, ಸೇಬು ಮೊದಲಾದ ಹಣ್ಣುಗಳನ್ನೂ ಅಫೀಮನ್ನೂ ಬೆಳೆಯುವರು.

ಪ್ರಸ್ಥಭೂಮಿಯ ಉತ್ತರ ಸರಹದ್ದಿನ ಪರ್ವತಶ್ರೇಣಿಯಲ್ಲಿ ಕಲ್ಲಿದ್ದಲು ದೊರಕುವುದು. ಮಧ್ಯ ಅನಟೋಲಿಯದಲ್ಲಿ ಕಬ್ಬಿಣದ ಅದಿರು ಸಿಗುವುದು. ಇಲ್ಲಿನ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರನ್ನು ಕಾರಾಬುಕ್ ಉಕ್ಕಿನ ಕಾರ್ಖಾನೆ ಉಪಯೋಗಿಸುತ್ತದೆ. ತಾಮ್ರ, ಕ್ರೋಮೈಟ್, ಮ್ಯಾಂಗನೀಸ್ ಮತ್ತು ಪಾದರಸ ಇಲ್ಲಿ ಸಿಗುವ ಇತರ ಖನಿಜಗಳು. ಸಕ್ಕರೆ ಮತ್ತು ಹಿಟ್ಟಿನ ಗಿರಣಿಗಳಿವೆ. (ಎಂ.ಎಸ್.ಎಂ.)

**ಅನಾಕ್ಸಿಮ್ಯಾಂಡರ್:** ಪ್ರಶ.ಪೂ. 611–547 ಗ್ರೀಕ್‌ದೇಶದ ಭೂಗೋಳವಿಜ್ಞಾನಿ ಹಾಗೂ ತತ್ತ್ವಶಾಸ್ತ್ರಜ್ಞ, ಖಗೋಳವಿಜ್ಞಾನದಲ್ಲಿ ಕುತೂಹಲಕಾರಿ ಭಾವನೆಗಳನ್ನು ಹೊಂದಿದ್ದ. ಅಂದು ತಿಳಿದಿದ್ದ ಪ್ರದೇಶದ ಭೂಪಟವನ್ನು ಮೊಟ್ಟಮೊದಲು ರಚಿಸಿದ ಖ್ಯಾತಿ ಇವನದು. ಇಂದಿನ ಟರ್ಕಿಯಲ್ಲಿರುವ ಮಿಲೆಟಸ್‌ನಗರದಲ್ಲಿ ಜನಿಸಿದ ಈತ ಗ್ರೀಕರ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಥೇಲ್ಸ್ ನ ವಿದ್ಯಾರ್ಥಿ. ಅಯನಸಂಕ್ರಾಂತಿ ಮತ್ತು ವಿಷುವದ್ ಸಂಕ್ರಾಂತಿಯನ್ನು ನಿರ್ಧರಿಸಲು ನೆರಳುಗಡಿಯಾರದ ಸಮತಲಕಂಬಿ ಅಂದರೆ ಕಂಬವನ್ನು (ನೋಮನ್ ಉಪಕರಣ) ಬಳಸಿದವರಲ್ಲಿ ಈತ ಮೊದಲಿಗ. ಮೆಸಪೊಟೇಮಿಯದ ಜನರು ಆವಿಷ್ಕರಿಸಿದ್ದ ನೋಮನ್ ಉಪಕರಣವನ್ನು ಗ್ರೀಕರಿಗೆ ಪರಿಚಯಿಸಿದ. ಅಲ್ಲದೆ ಇದರ ಬಳಕೆಯಿಂದ ಸೂರ್ಯ ಬೆಳಗ್ಗೆ ಮೇಲೇರಿ ಮಧ್ಯಾಹ್ನದ ಅನಂತರ ಕೆಳಗಿಳಿದಂತೆ ಕಂಬದ ನೆರಳಿನ ಉದ್ದ ಏರು ಪೇರಾಗುವುದು. ಇದರ ಆಧಾರದಿಂದ ಕಾಲವನ್ನು ಲೆಕ್ಕಾಚಾರ ಮಾಡಲು ಸಹಾಯಕವಾಗುತ್ತಿದ್ದಿತು. ಇದನ್ನೇ ಮೆರೈಡ್ ಅಂದರೆ ಮಧ್ಯಾಹ್ನವೆಂದು ಕರೆಯಲಾಯಿತು. ಇದರಿಂದಲೇ ಮೆರಿಡಿಯನ್ ಪದ ಬಳಕೆಗೆ

ದ ದಿ ೦ ಬ

ಅನಾಕ್ಸಿಮ್ಯಾಂಡರನ ನಕ್ಷೆಯ ಕೇಂದ್ರದಲ್ಲಿ ಗ್ರೀಸ್ ದೇಶವಿರುವಂತೆ ತೋರಿಸಲಾಗಿದ್ದಿತು. ಈತನಿಗಿಂತ ಮೊದಲು ಚಿತ್ರಮಾದರಿಯಲ್ಲಿ ಭೂ ಪ್ರದೇಶಗಳನ್ನು ತೋರಿಸುತ್ತಿದ್ದು, ಅನಾಕ್ಸಿಮ್ಯಾಂಡರ್ ನಕ್ಷೆಯ ಮಾದರಿಯಲ್ಲಿ ಭೂಪ್ರದೇಶಗಳನ್ನು ಮೊದಲ ಬಾರಿಗೆ ನಿರೂಪಿಸಿ ನಕ್ಷಾಶಾಸ್ತ್ರದ ಬೆಳವಣಿಗೆಗೆ ಕಾರಣನಾದ. ಈ ನಕ್ಷೆ ವೃತ್ತಾಕಾರದಲ್ಲಿದ್ದು ನಡುವೆ ಭೂಭಾಗವಿದ್ದು ಅದರ ಸುತ್ತಲೂ ಸಾಗರವಿರುವುದೆಂದು ಭಾವಿಸಲಾಗಿದ್ದಿತು. (ಸಿ.ವೈ.ಪಿ.)

**ಅನಾಕ್ಸೊಗೊರಾಸ್ :** ಪ್ರಶ.ಪೂ. 500–428 ಗ್ರೀಕ್ ತತ್ತ್ವಶಾಸ್ತ್ರಜ್ಞ, ಐಯೋನಿಯನ್ ತತ್ತ್ವಶಾಸ್ತ್ರ ಪಂಥದ ಸದಸ್ಯ. ಈತ ಚಿಕ್ಕ ವಯಸ್ಸಿನಲ್ಲಿ ವಿದ್ಯಾಭ್ಯಾಸ ಹಾಗೂ ಶೈಕ್ಷಣಿಕ ವಿಕಾಸ ಪಡೆದು ಗ್ರೀಕ್ ಸಂಸ್ಕೃತಿಯ ಪ್ರತಿರೂಪವೆಂದೇ ಪ್ರಸಿದ್ಧನಾಗಿದ್ದಾನೆ. ಅಥೆನ್ಸ್‌ಗೆ ಬಂದು ಸು. 30 ವರ್ಷಗಳ ಕಾಲ ವಾಸ್ತವ್ಯ ಹೂಡಿದ. ವಿಜ್ಞಾನ ಮತ್ತು ಮಾನವಿಕ ವಿಷಯಗಳೆರಡರಲ್ಲೂ ಆಸಕ್ತಿಯಿದ್ದರೂ ತತ್ತ್ವಶಾಸ್ತ್ರವನ್ನು ಮೈಗೂಡಿಸಿಕೊಂಡ. ಈತ ಆಗಾಗ ಆಕಾಶಕಾಯಗಳನ್ನು ವೀಕ್ಷಿಸಿ, ಆ ಬಗ್ಗೆ ಸಿದ್ಧಾಂತ ಸೃಷ್ಟಿಸುವಷ್ಟರ ಮಟ್ಟಿಗೆ ಸ್ಫೂರ್ತಿಗೊಂಡಿದ್ದು ಉಂಟು. ಗ್ರಹಣಗಳು, ಉಲ್ಕೆಗಳು, ಕಾಮನ ಬಿಲ್ಲು ಮತ್ತು ಸೂರ್ಯ ಮೊದಲಾದ ವಿಚಾರಗಳನ್ನು ಕುರಿತು ವಿವರಿಸಲು ಪ್ರಯತ್ನ ಮಾಡಿದ.

ಆಕಾಶಕಾಯಗಳನ್ನು ಪ್ರಜ್ವಲಿಸುವ ಲೋಹದ ದ್ರವ್ಯರಾಶಿಗಳೆಂದು ವರ್ಣಿಸಿದ. ಆಕಾಶಕಾಯಗಳು ಪೃಥ್ವಿಯಿಂದ ಪ್ರತ್ಯೇಕಗೊಂಡ ಶಿಲೆಗಳ ರಾಶಿಯಾಗಿದ್ದು ಅವು ಅತ್ಯಂತ ವೇಗದ ಅಕ್ಷಭ್ರಮಣೆಯಿಂದ ಪ್ರಜ್ವಲಿಸುತ್ತವೆಂಬುದು ಈತನ ನಂಬಿಕೆಯಾಗಿತ್ತು. ಹೀಗಾಗಿ ಆಕಾಶಕಾಯಗಳು ಅಪಾಯಕಾರಿಗಳೆಂಬ ವಿಚಾರವೂ ಈತನಿಗೆ ತಿಳಿದಿತ್ತು. ಈತ ತತ್ತ್ವಶಾಸ್ತ್ರ ಕುರಿತು ಕೃತಿಯೊಂದನ್ನು ರಚಿಸಿದ್ದು ಅದರಲ್ಲಿ ಕೆಲವು ಭಾಗಗಳು ಮಾತ್ರ ಲಭ್ಯವಾಗಿದೆ. ಪರಿಕಲ್ಸ್ ರಾಜಕೀಯ ವಿರೋಧಿ ಮತ್ತು ಇವನ ಧರ್ಮ ಪ್ರಚಾರದಲ್ಲಾದ ವಿವಾದದಿಂದಾಗಿ ಇವನ ಜೀವಿತದ ಕೊನೆಯ ದಿನಗಳು ದುರಂತಮಯವಾದ್ದವೆಂದು ತಿಳಿದುಬರುತ್ತದೆ.

ಇವನ ವ್ಯಾಖ್ಯಾನಗಳು ಸಾಮಾನ್ಯ ಜನರನ್ನು ಕೆರಳಿಸುತ್ತಿದ್ದುವು. ಈತನೊಬ್ಬ ಅಪಾಯಕಾರಿ ಮನುಷ್ಯನೆಂದು ಪರಿಗಣಿಸುವ ಮಟ್ಟವನ್ನೂ ಮುಟ್ಟಿತ್ತು. ಇವನನ್ನು ಬಂಧಿಸಿ ಸೆರೆಮನೆಗೆ ಕಳುಹಿಸಲಾಯಿತು. ಪೆರಿಕ್ಲಿಸ್ ಬಹಳವಾಗಿ ಹೆಣಗಾಡಿ ಇವನನ್ನು ಬಂಧನದಿಂದ ವಿಮುಕ್ತಗೊಳಿಸಿದ. ಅನಂತರ ಈತ ಅಥೆನ್ಸಿನಿಂದ ಐಯೋನಿಯದ ಲ್ಯಾಂಪ್‌ಸಕಸ್‌ಗೆ ತೆರಳಿದ. ಪ್ರಶ.ಪೂ. 428ರಲ್ಲಿ ಮರಣ ಹೊಂದಿದ. ಅಲ್ಲಿನ ಜನರು ಇವನ ಸ್ಮರಣಾರ್ಥ ಒಂದು ಸ್ತಂಭವನ್ನು ನಿರ್ಮಿಸಿ ಅದನ್ನು ಮನಸ್ಸು ಮತ್ತು ನೈಜತೆ (ಮೈಂಡ್ ಎಂಡ್ ಟ್ರೂತ್) ಎಂಬುದಾಗಿ ಕರೆದರು. ಇವನ ಅನೇಕ ಬರೆವಣಿಗೆಗಳು ಸಿಸಿಲಿಯಲ್ಲಿ 6ನೆಯ ಶತಮಾನದವರೆಗೂ ರಕ್ಷಿಸಲ್ಪಟ್ಟಿದ್ದವು. (ಎಂ.ಪಿ.)

**ಅನುರಾಧಪುರ:** ಉತ್ತರ ಶ್ರೀಲಂಕದ ಮಧ್ಯಪ್ರಾಂತ್ಯದ ರಾಜಧಾನಿ (ಉತ್ತರ ಅಕ್ಷಾಂಶ $8^0.20'$, ಪೂರ್ವ ರೇಖಾಂಶ $88^0.30'$). ಕೊಲಂಬೊದಿಂದ ಸು. 205 ಕಿಮೀ ದೂರದಲ್ಲಿದೆ. ಕೊಲಂಬೊ ಮತ್ತು ಉತ್ತರ ತಮಿಳರ ಮುಖ್ಯ ನಗರವಾದ ಜಾಫ್ನದ ಮಧ್ಯದಲ್ಲಿದೆ. ಪ್ರಶ.ಪೂ. 5ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಹೆಸರಾಗಿದ್ದ ಶ್ರೀಲಂಕದ ಪ್ರಾಚೀನ ನಗರ. ಈಗಲೂ ಇದು ಬೌದ್ಧರ ಯಾತ್ರಾಸ್ಥಳ. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಸಿಲೋನ್–ಜಾಫ್ನ ರೈಲ್ವೆ ಸಂಪರ್ಕದಿಂದ ಅನುರಾಧಪುರ ಬೇಗನೆ ಅಭಿವೃದ್ಧಿ ಹೊಂದಿತು. ಸುತ್ತಣ ಕಾಡು ಕಡಿದು ಹೊಸ ಹಾಗೂ ದುರಸ್ತುಮಾಡಿದ ಕೆರೆಗಳ ಸಹಾಯದಿಂದ ಬತ್ತದ ಬೆಳೆಗೆ ಅನುಕೂಲ ಕಲ್ಪಿಸಲಾಗಿದೆ. ಟಾಲೆಮಿಯ ಭೂಪಟದಲ್ಲಿ ಇದನ್ನು ಅನುರಾಧಗ್ರಾಮನ್ ಎಂದು ಗುರುತಿಸಲಾಗಿದೆ. (ಕೆ.ಕೆ.ಆರ್.)

ಅಶೋಕ ಚಕ್ರವರ್ತಿಯ ಮಗ ಮಹೇಂದ್ರ ಪ್ರಶ.ಪೂ. 2ನೆಯ ಶತಮಾನದಲ್ಲಿ ಇಲ್ಲಿಂದ 12 ಕಿಮೀ ಅಂತರದಲ್ಲಿರುವ ಮಹಂತಲೆ ಎಂಬಲ್ಲಿಗೆ ಬೌದ್ಧಧರ್ಮವನ್ನು ತಂದನೆಂದು ನಂಬಲಾಗಿದೆ. ಬುದ್ಧನಿಗೆ ಬೆಳಕು ಕೊಟ್ಟ ಪವಿತ್ರ ಬೋಧಿವೃಕ್ಷದ ಒಂದು ಶಾಖೆಯನ್ನು ತಂದು ಈ ಪಟ್ಟಣದಲ್ಲಿ ನೆಟ್ಟಿದ್ದು ಈಗಲೂ ಇಲ್ಲಿದೆ. ಇದನ್ನು ಬುದ್ಧಗಯೆಯಿಂದ ತರಲಾಯಿತು ಎಂದು ಭಾವಿಸಿದುದರಿಂದ ಈ ನಗರ ಒಂದು ಪುಣ್ಯಸ್ಥಳ ಎನಿಸಿದೆ. ಇದನ್ನು ಯುನೆಸ್ಕೊ 1982 ರಲ್ಲಿ ವರ್ಲ್ಡ್ ಹೆರಿಟೇಜ್ ಸೈಟ್ ಎಂದು ಪರಿಗಣಿಸಿದೆ. ಜನಸಂಖ್ಯೆ 746466. (ಎ.ಎಂ.ಎ.)

**ಅನುರೂಪ ಪ್ರಕ್ಷೇಪ:** ಗೋಳದ ಮೇಲಿನ ಪ್ರದೇಶಗಳ ಆಕಾರ ಹಾಗೂ ಪ್ರಕ್ಷೇಪದ ಮೇಲಿನ ಪ್ರದೇಶಗಳ ಆಕಾರಗಳು ಏಕರೀತಿಯಲ್ಲಿರುವುದನ್ನು ಅನುರೂಪತೆ ಎಂದು ಕರೆಯುವರು. ಈ ವಿಧಾನದಲ್ಲಿ ರಚಿತವಾದ ಪ್ರಕ್ಷೇಪಗಳಿಗೆ ಅನುರೂಪ ಪ್ರಕ್ಷೇಪಗಳೆನ್ನುವರು. ಅನುರೂಪ ಪ್ರಕ್ಷೇಪದಲ್ಲಿ ಕ್ಷೇತ್ರವನ್ನು ಪ್ರತಿನಿಧಿಸುವ ರೀತಿಯು ಆಕಾರ ಹಾಗೂ ದಿಕ್ಕುಗಳನ್ನು ಅವಲಂಬಿಸಿರುತ್ತದೆ. ಗೋಳದಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳು ಒಂದನ್ನೊಂದು ಲಂಬವಾಗಿ ಛೇದಿಸುತ್ತವೆ. ಹಾಗೆಯೇ ಅನುರೂಪ ಪ್ರಕ್ಷೇಪದಲ್ಲಿಯೂ ಅವುಗಳು ಪರಸ್ಪರ ಲಂಬವಾಗಿದ್ದು ಅಕ್ಷಾಂಶ ಮತ್ತು ರೇಖಾಂಶಗಳಲ್ಲಿ ಒಂದೇ ಪ್ರಮಾಣವನ್ನು ಕಾಣಬಹುದು. ವಿಶಾಲವಾದ ಪ್ರದೇಶಗಳ ಆಕಾರಗಳನ್ನು ನೈಜವಾಗಿ ರೂಪಿಸುವುದು ಕಷ್ಟ. ಬದಲಾಗಿ ಚಿಕ್ಕ ಪ್ರದೇಶಗಳ ಆಕಾರಗಳನ್ನು ನಿರ್ದಿಷ್ಟವಾಗಿ ತೋರಿಸಬಹುದಾಗಿದೆ. (ಆರ್.ಎಸ್.)

**ಅನ್ನಪೂರ್ಣ:** ನೇಪಾಲದಲ್ಲಿನ ಹಿಮಾಲಯದ ಮಧ್ಯಭಾಗದಲ್ಲಿರುವ ಒಂದು ಉನ್ನತಪರ್ವತಶ್ರೇಣಿ. ಕಾಳಿ, ಗಂಡಕಿ ಮತ್ತು ಮರ್ಯ್ಯಾಂದಿ ನದೀಕಣಿವೆಗಳ ಮಧ್ಯಭಾಗದಲ್ಲಿದ್ದು, ಅನ್ನಪೂರ್ಣವೆಂಬ ನಾಲ್ಕು ಉನ್ನತ ಶಿಖರಗಳಿಂದ ಕೂಡಿದೆ. ಅನ್ನಪೂರ್ಣ–I: 8000

ಮೀ, ಅನ್ನಪೂರ್ಣ–II: 7890 ಮೀ: ಇವೆರಡು ಪಶ್ಚಿಮ ಮತ್ತು ಪೂರ್ವ ತುದಿಯಲ್ಲಿವೆ. ಅನ್ನಪೂರ್ಣ–III: 7532 ಮೀ, ಅನ್ನಪೂರ್ಣ–IV: 7,480 ಮೀ. ಇವೆರಡು ಮಧ್ಯಶ್ರೇಣಿಯಲ್ಲಿವೆ.

ಅನ್ನಪೂರ್ಣ ಶಿಖರ

ಅನ್ನಪೂರ್ಣ–I: ಜಗತ್ತಿನ ಉತ್ತುಂಗ ಶಿಖರಗಳಲ್ಲಿ ಹನ್ನೊಂದನೆಯದು. 1950ರವರೆಗೆ ಇದರ ಅಸ್ತಿತ್ವ ತಿಳಿದಿರಲಿಲ್ಲ. ಯುರೋಪಿಯನ್ ಪರ್ವತಾರೋಹಿಗಳು ಕಾಳಿ, ಗಂಡಕಿ ನದೀಕಣಿವೆಗಳ ವಾಯವ್ಯದಿಕ್ಕಿಗಿರುವ ಧವಳಗಿರಿಯನ್ನು ಏರಲು ಹೊರಟು ದಾರಿಕಾಣದೆ ಅನ್ನಪೂರ್ಣ ಶಿಖರದ ಕಡೆ ಹೊರಟರು. ಆಗ ಅದನ್ನೇ ಜಗತ್ತಿನ ಅತ್ಯುನ್ನತ ಶಿಖರವೆಂದು ಪರಿಗಣಿಸಲಾಗಿತ್ತು.

ಫ್ರಾನ್ಸಿನ ಮೊರಿಸ್ ಹರ್‌ಜಾಗ್ ಎಂಬುವನ ನೇತೃತ್ವದಲ್ಲಿ ಫ್ರೆಂಚ್ ಪರ್ವತಾರೋಹಿ ತಂಡ ಈ ಶಿಖರಾರೋಹಣದ ಹಾದಿಯಲ್ಲಿ ಐದು ಶಿಬಿರಗಳನ್ನು ನೋಡಿ (ಅತ್ಯಂತ ಎತ್ತರದ ಶಿಬಿರಸ್ಥಾನ 7450 ಮೀ) 1950ರ ಜೂನ್ 3ನೆಯ ತಾರೀಖು ಹರ್‌ಜಾಗ್ ಮತ್ತು ಲೂಯಿಸೆ ಲಾಚೆನೆಲ್ ಶಿಖರದ ಉತ್ತುಂಗಸ್ಥಾನವನ್ನು ತಲುಪಿದರು. ಆದರೆ ಅವರೋಹಣಾವಧಿಯಲ್ಲಿ ತಂಡದ ನಾಯಕರು ದುರದೃಷ್ಟಕರ ಘಟನೆಗಳನ್ನು ಎದುರಿಸಬೇಕಾಯಿತು. ಹಿಮಾಲಯದ ಉನ್ನತ ಶಿಖರಗಳಲ್ಲೆಲ್ಲ ಮೊಟ್ಟಮೊದಲಬಾರಿಗೆ ಹತ್ತಲ್ಪಟ್ಟ ಉತ್ತುಂಗಶಿಖರ. ಎಚ್.ಬಿಲ್ಲರ್, ಎಚ್. ಸ್ಟೆಯಿನ್‌ಮೆಟ್ಜ್ ಮತ್ತು ಜೆ. ವೆಲೆನ್‌ಕಾಂಪ್ ಎಂಬುವರು 1955 ಮೇ 30ರಂದು ಅನ್ನಪೂರ್ಣ–Iನ್ನು ಹತ್ತಿದರು. 1960 ಮೇ 17 ರಂದು ಜೆ.ಒ.ಎಮ್. ರಾಬರ್ಟ್ಸನ ನೇತೃತ್ವದಲ್ಲಿ ಆರ್. ಗ್ರಾಂಟ್ ಮತ್ತು ಸಿ.ಜೆ. ಗೊನಿಂಗ್‌ಟನ್ ಎಂಬುವರು ಅನ್ನಪೂರ್ಣ–IIನ್ನು ಯಶಸ್ವಿಯಾಗಿ ಹತ್ತಿದರು. (ಕೆ.ಆರ್.)

**ಅನ್ಯಶಿಲೆ:** ಅಗ್ನಿಶಿಲೆಯಲ್ಲಿ ಕಂಡುಬರುವ ಅನ್ಯ ಜಾತಿಯ ಶಿಲೆ (ಸ್ಸೆನೊಲಿತ್). ಇವು ಸಾಮಾನ್ಯವಾಗಿ ತಿಳಿಬಣ್ಣದ ಗ್ರಾನೈಟ್‌ಗಳಲ್ಲಿ ಕಪ್ಪನೆಯ ತೇಪೆಗಳಂತೆ ಕಂಡುಬರುತ್ತವೆ. ಇವು ಗಾತ್ರದಲ್ಲಿ ಬಹುಸೂಕ್ಷ್ಮವಾದ ಛಿದ್ರಗಳಿಂದ ಹಿಡಿದು ಹಲವಾರು ಅಡಿಗಳಷ್ಟು ದೊಡ್ಡದಾಗಿರುವುದೂ ಉಂಟು. ಭೂಗರ್ಭದಿಂದ ಮ್ಯಾಗ್ಮ ಮೇಲ್ಪದರಗಳಲ್ಲಿರುವ ಶಿಲೆಗಳ ಮೂಲಕ ತೂರಿ ಬರುವಾಗ, ಅಕ್ಕಪಕ್ಕದಲ್ಲಿರುವ ಶಿಲೆಗಳು ಹೆಚ್ಚಿನ ಒತ್ತಡಕ್ಕೆ ಒಳಗಾಗಿ ಒಡೆದುಚೂರಾಗುತ್ತವೆ. ಹಲ ಕೆಲವು ಚೂರುಗಳು ಹಾದು ಮೇಲಕ್ಕೆ ಹೋಗುತ್ತಿರುವ ಮ್ಯಾಗ್ಮದೊಡನೆ ಸೇರಿ ಅನ್ಯಶಿಲೆಯಾಗಿ ಕಾಣಿಸಿಕೊಳ್ಳುತ್ತವೆ. ಇವು ಅಗ್ನಿ, ಜಲಜ ಅಥವಾ ರೂಪಾಂತರ ಶಿಲಾವರ್ಗಕ್ಕೆ ಸೇರಿರಬಹುದು. ಅನೇಕ ಬಾರಿ ಅನ್ಯಶಿಲೆ ಮತ್ತು ಅದನ್ನು ಒಳಗೊಂಡಿರುವ ಅಗ್ನಿಶಿಲೆ ಇವುಗಳ ನಡುವೆ ಪರಸ್ಪರ ಬದಲಾವಣೆಗಳಾಗಿ ಕ್ರಮೇಣ ಅನ್ಯಶಿಲೆ ಅಗ್ನಿಶಿಲೆಯ ರೂಪರೇಷೆಗಳನ್ನೇ ಹೋಲುವುದೂ ಉಂಟು. (ಎಸ್.ಕೆ.ವಿ.)

**ಅಪಲೇಷಿಯನ್ ಪರ್ವತಗಳು:** ಅಮೇರಿಕ ಸಂಯುಕ್ತ ಸಂಸ್ಥಾನದ ಪೂರ್ವ ಭಾಗದಲ್ಲಿ ಬಹಳ ಸಂಕೀರ್ಣವಾಗಿ ಹೆಣೆದುಕೊಂಡಿರುವ ತಗ್ಗಾದ, ಗುಂಡು ಆಕೃತಿಯ ಪರ್ವತಶ್ರೇಣಿಗಳ ಮತ್ತು ವಿಚ್ಛೇದಿತ ಪ್ರಸ್ಥಭೂಮಿಗಳ ಪ್ರದೇಶ. ಇದು ಅಟ್ಲಾಂಟಿಕ್ ಸಮುದ್ರತೀರಕ್ಕೆ ಸಮಾನಾಂತರವಾಗಿ ಈಶಾನ್ಯದಲ್ಲಿ ಅಲಬಾಮದಿಂದ ನ್ಯೂ ಇಂಗ್ಲೆಂಡಿನವರೆಗೆ 2400 ಕಿಮೀ ಹಬ್ಬಿ ಕ್ವಿಬೆಕ್ಕಿನಲ್ಲಿ 160 ರಿಂದ 400 ಕಿಮೀ ಪ್ರವೇಶಿಸಿದೆ. ಪ್ರಾಚೀನಕಾಲದಲ್ಲಿ ಈ ಪ್ರದೇಶವನ್ನಾವರಿಸಿದ್ದ ಅರಣ್ಯ ಈಗ ವಿರಳವಾಗಿದೆ. ಪಶ್ಚಿಮದ ರಾಕಿ ಪರ್ವತಶ್ರೇಣಿಗಳಷ್ಟೇ ಇವು ಭವ್ಯವಾಗಿವೆ. ಪರ್ವತಗಳ ಎತ್ತರ 900 ರಿಂದ 1500 ಮೀ. ದಕ್ಷಿಣ ಅಪಲೇಷಿಯನ್ ಶ್ರೇಣಿಗಳಲ್ಲಿ ಮುಖ್ಯವಾದ ಅತ್ಯುನ್ನತ ಶ್ರೇಣಿಗಳೆಂದರೆ ಜಾರ್ಜಿಯ ಮತ್ತು ಉತ್ತರ ಕೆರೊಲಿನಾದ ಬ್ಲೂರಿಡ್ಜ್ ಪರ್ವತಗಳು, ಟೆನ್ನೆಸಿ ಮತ್ತು ಉತ್ತರ ಕೆರೊಲಿನಾದ ದಿ ಗ್ರೇಟ್ ಸ್ಮೋಕಿ ಪರ್ವತಗಳು ಮತ್ತು ಟೆನ್ನೆಸಿ ಮತ್ತು ಕೆಂಟಕಿಯಲ್ಲಿನ ಕಂಬರ್‌ಲೆಂಡ್ ಪರ್ವತಗಳು. ಮಧ್ಯದ ಅಪಲೇಷಿಯನ್ ಪರ್ವತಗಳಲ್ಲಿ ವರ್ಜೀನಿಯ ಬ್ಲೂರಿಡ್ಜ್ ಪರ್ವತಗಳು ಮತ್ತು ವರ್ಜೀನಿಯಗಳು ಮೇರಿಲೆಂಡ್ ಮತ್ತು ಪೆನ್ಸಿಲ್ವೇನಿಯಗಳ ಅಲೆಘನಿ ಪರ್ವತಗಳು ಸೇರಿವೆ. ಉತ್ತರದ ಅಪಲೇಷಿಯನ್ ಪರ್ವತಗಳಲ್ಲಿ ನ್ಯೂಯಾರ್ಕಿನಲ್ಲಿರುವ ಕ್ಯಾಟ್‌ಸ್ಕಿಲ್ ಮತ್ತು ಆಡಿರೊಂಡಾಕ್ ಪರ್ವತಗಳು, ವರ್ ಮಾಂಟ್‌ನಲ್ಲಿರುವ ಗ್ರೀನ್ ಪರ್ವತಗಳು ಮತ್ತು ನ್ಯೂ ಹ್ಯಾಂಪ್‌ಷೈರ್‌ನಲ್ಲಿರುವ ವೈಟ್ ಪರ್ವತಗಳು ಸೇರಿವೆ. ಅಪಲೇಷಿಯನ್ ಪರ್ವತಗಳಲ್ಲಿ ಅತ್ಯುನ್ನತ ಶಿಖರಗಳೆಂದರೆ ದಿ ಗ್ರೇಟ್ ಸ್ಮೋಕಿ ಪರ್ವತದ ಮೌಂಟ್ ಮಿಚ್ಚೆಲ್ (2030 ಮೀ), ಮತ್ತು ಬ್ಲೂರಿಡ್ಜ್ ಪರ್ವತದ ಕ್ಲಿಂಗ್‌ಮನ್ಸ್ ಡೋಮ್ (2024 ಮೀ). ಇವೆರಡೂ ಉತ್ತರ ಕೆರೊಲಿನಾದಲ್ಲಿವೆ. ಉತ್ತರದ ವೈಟ್ ಪರ್ವತದಲ್ಲಿರುವ ಮೌಂಟ್ ವಾಷಿಂಗ್‌ಟನ್ 1916 ಮೀ ಎತ್ತರವಿದೆ.

ಉತ್ತರ ಕೆರೋಲಿನದಲ್ಲಿ ಅಪಲೇಷಿಯನ್ ಪರ್ವತಗಳು

ನೈರುತ್ಯದಿಂದ ಈಶಾನ್ಯಕ್ಕೆ ಹಬ್ಬಿರುವ ಶ್ರೇಣಿಗಳ ಮಧ್ಯೆ ಮಧ್ಯೆ ಇರುವ ಕಣಿವೆಗಳಲ್ಲಿ ವರ್ಜೀನಿಯ ಕೆಂಟುಕಿ ಪ್ರದೇಶದ ಕಂಬರ್‌ಲೆಂಡ್ ಕಣಿವೆ, ಪೆನ್ಸಿಲ್ವೇನಿಯದ ಡಿಲಾವರ್ಡ್ ಕಣಿವೆ ಮತ್ತು ನ್ಯೂಯಾರ್ಕ್‌ನಲ್ಲಿನ ಮೋಹಕ್–ಹಡ್ಸನ್ ಕಣಿವೆಗಳು ಮುಖ್ಯವಾದುವು. ಮೊದಲು ಅಮೆರಿಕಕ್ಕೆ ವಲಸೆ ಬಂದು ಇಲ್ಲಿ ನೆಲೆಸಿದವರು ಪಶ್ಚಿಮಕ್ಕೆ ಹರಡದಂತೆ ಈ ಪರ್ವತ ಶ್ರೇಣಿಗಳು ತಡೆದಿದ್ದುವು. ಆದರೆ ಈಗಿನ ಸುಧಾರಿಸಿದ ಹಾಗೂ ತೀವ್ರಗತಿಯ ವಾಹನಗಳಲ್ಲಿ ಯಾವ ಯಾವ ಭಾಗಕ್ಕಾದರೂ ಪ್ರಯಾಣ ಮಾಡಬಹುದಾಗಿರುವುದರಿಂದ ಈ ಪರ್ವತಗಳಿಂದ ಪ್ರಯಾಣ ಹಾಗೂ ಸಾಗಾಣಿಕೆಗೆ ಯಾವ ಅಡಚಣೆಗಳೂ ಇಲ್ಲ. (ಸಿ.ಎಂ.)

**ಅಪೆನೈನ್ ಶ್ರೇಣಿ:** ಆಲ್ಪ್ಸ್ ಪರ್ವತಶ್ರೇಣಿಯ ಒಂದು ಭಾಗ. ಇಟಲಿಯ ಮಧ್ಯ ಮತ್ತು ಸಿಸಿಲಿ ದ್ವೀಪಗಳಲ್ಲಿ ವಿಸ್ತರಿಸಿವೆ. ಇಟಲಿಯ ವಾಯವ್ಯ ಭಾಗದಲ್ಲಿರುವ ಸಾವೋನದಿಂದ ದಕ್ಷಿಣದಲ್ಲಿ ರೆಗ್ಗಿಯೊಡಿ ಕ್ಯಾಲಾಬ್ರಿಯದವರೆಗೆ 1350 ಕಿಮೀ ಉದ್ದಕ್ಕೆ ಹಬ್ಬಿವೆ. ಅಗಲ 40 ರಿಂದ 130 ಕಿಮೀ. ಇದನ್ನು ಇಟಲಿಯ ಬೆನ್ನೆಲುಬು ಎನ್ನುವರು. ಇಟಲಿಯ ಪರ್ಯಾಯ ದ್ವೀಪದ ವಿಶಿಷ್ಟ ಭೌಗೋಳಿಕ ಸ್ವರೂಪಗಳು. ಇವು ಮಡಿಕೆ ಪರ್ವತಗಳು. ಅಧ್ಯಯನಕ್ಕಾಗಿ ಇವುಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು: 1) ಉತ್ತರ ಅಪೆನೈನ್. 2) ಮಧ್ಯ ಅಪೆನೈನ್ ಮತ್ತು 3) ದಕ್ಷಿಣ ಅಪೆನೈನ್.

1) ಉತ್ತರ ಅಪೆನೈನ್ ದೀರ್ಘವಾಗಿದ್ದು ಲೆಗೊರಿಯನ್, ಟಸ್ಕನ್ ಮತ್ತು ಲುಂಬ್ರಿಯ ಎಂಬ ಮೂರು ಪರ್ವತಗಳನ್ನೊಳಗೊಂಡಿದೆ. ಲೆಗೊರಿಯನ್ ಪರ್ವತ ಜಿನೀವ ಖಾರಿಯನ್ನು ಸುತ್ತುವರಿದಿದೆ. ಮೌಂಟ್ ಬ್ಯೂ ಎಂಬುದು ಇಲ್ಲಿನ ಅತ್ಯುನ್ನತ ಶಿಖರ (1803 ಮೀ). ಟಸ್ಕನ್ ಬೆಟ್ಟಗಳಲ್ಲಿ ಮೌಂಟ್ ಸಿಮೋನ್ (2140 ಮೀ) ಅತ್ಯುನ್ನತ ಶಿಖರ. ಇದಕ್ಕೆ ಸಮೀಪದಲ್ಲಿ ಅಮೃತಶಿಲೆ ದೊರೆಯುತ್ತದೆ. ವಾಯವ್ಯಭಾಗದಲ್ಲಿ ಲಿಗುರಿಯ ಪ್ರದೇಶವಿದೆ. ಲುಂಬ್ರಿಯನ್ ಬೆಟ್ಟಗಳಲ್ಲಿ ಟೈಬರ್ ಮತ್ತು ಮೆಟಾನಸ್ ನದಿಗಳು ಉಗಮವಾಗುತ್ತವೆ.

2) ಮಧ್ಯ ಅಪೆನೈನ್ ಪರ್ವತಗಳು ಉತ್ತರ ಅಪೆನೈನ್‌ಗಿಂತ ಎತ್ತರ ಹಾಗೂ ಅಗಲವಾಗಿ ವಿಸ್ತರಿಸಿವೆ. ಏಡ್ರಿಯಾಟಿಕ್ ಸಮುದ್ರ ತೀರದವರೆಗೂ ವಿಸ್ತರಿಸಿವೆ. ಮಧ್ಯದಲ್ಲಿ ಹೊರ ಉಬ್ಬಿದ ಶಿಲಾಸ್ತರಗಳಿವೆ. ಆಗ್ನೇಯದಲ್ಲಿ ಜ್ವಾಲಾಮುಖಿ ನಿರ್ಮಿತ ಶಿಲೆಗಳಿವೆ. ಹೀಗಾಗಿ ಶಂಕಾಕೃತಿ ಬೆಟ್ಟಗಳಿವೆ. ಜೊತೆಗೆ ಅಲ್ಲಲ್ಲಿ ಜ್ವಾಲಾಮುಖಿ ಕುಂಡಗಳಿವೆ. ಮೌಂಟ್ ಕಾರ್ನೊ ಎತ್ತರವಾದ ಶಿಖರ (2915ಮೀ); ಇಟಲಿಯಲ್ಲೇ ಎತ್ತರವಾದುದು.

3) ದಕ್ಷಿಣ ಅಪೆನೈನ್ ಪರ್ವತಗಳು ಸಾಂಗ್ರೊ ನದಿಯ ದಕ್ಷಿಣದಿಂದ ಪ್ರಾರಂಭಗೊಂಡು ಇಟಲಿಯ ದಕ್ಷಿಣದ ಭಾಗವನ್ನು ರೂಪಿಸಿವೆ. ಈ ಭಾಗ ಮಡಿಕೆ ಮತ್ತು ಸ್ತರಭಂಗಶಿಲೆಗಳಿಂದ ಕೂಡಿದೆ. ನಡುವೆ ತಗ್ಗುಗಳಿಂದ ಪ್ರತ್ಯೇಕಗೊಂಡಿದ್ದು, ಅಸ್ತವ್ಯಸ್ತವಾಗಿ ಹರಡಿದೆ. ಮೌಂಟ್ ಪಾಲಿನೊ (2250ಮೀ), ಮೌಂಟ್ ಸಿವೇಟ (1900ಮೀ) ಮತ್ತು ವಾಲುಟರ್ನೊ (1836ಮೀ) ಪ್ರಮುಖ ಶಿಖರಗಳು.

ಅಪೆನೈನ್ ಶ್ರೇಣಿಗಳ ಒಂದು ಭಾಗ ಸಿಸಿಲಿ ದ್ವೀಪದಲ್ಲಿದೆ. ಇದು ಜ್ವಾಲಾಮುಖಿ ಜನ್ಯ ಶ್ರೇಣಿ. ಇಲ್ಲಿ ಜಾಗೃತ ಜ್ವಾಲಾಮುಖಿಗಳಿವೆ. ಉದಾ: ಮೌಂಟ್ ಎಟ್ನ, ಸ್ಟ್ರಾಂಬೋಲಿ. (ಡಿ.ಕೆ.)

**ಅಬರ್‌ಡೀನ್:** ಪ್ರಪಂಚದಲ್ಲಿ ಈ ಹೆಸರಿನ ನಾಲ್ಕು ಪಟ್ಟಣಗಳಿವೆ. 1. ಸ್ಕಾಟ್ಲೆಂಡಿನ ಅಬರ್ ಡೀನ್ ಷೈರಿನ ಮುಖ್ಯಪಟ್ಟಣ. ಇದು ಡೀ ಮತ್ತು ಡಾನ್ ನದಿಗಳ ಮಧ್ಯೆ ಸ್ಕಾಟ್ಲೆಂಡಿನ ಪೂರ್ವ ತೀರದಲ್ಲಿ ಉತ್ತರಸಮುದ್ರಾಭಿಮುಖವಾಗಿ ಬೆಳೆದಿದೆ. ಉತ್ತರ ಮತ್ತು ದಕ್ಷಿಣಪ್ರದೇಶಗಳ ಮಧ್ಯೆ ರೈಲು ಹಾಗೂ ರಸ್ತೆ ಸಾರಿಗೆ ಗಳಿಗೆ ನಿಲ್ದಾಣವಾಗಿದೆ. ಸ್ಕಾಟ್ಲೆಂಡಿನ ಮುಖ್ಯರೇವುಪಟ್ಟಣವೂ ಆಗಿದೆಯಲ್ಲದೆ ವಿಹಾರಸ್ಥಳವೆಂದು ಹೆಸರುಪಡೆದಿದೆ. ವಿಸ್ತೀರ್ಣ 26 ಚ.ಕಿಮೀ. ಜನ ಸಂಖ್ಯೆ 8,60,000 (2003). ಸಮೀಪದಲ್ಲೇ ಕಟ್ಟಡಗಳಿಗೆ ಬಳಸಲಾಗುವ ಗ್ರ್ಯಾನೈಟ್ ಶಿಲೆ ಅಧಿಕವಾಗಿರುವುದರಿಂದ ಗ್ರ್ಯಾನೈಟ್ ನಗರವೆಂದು ಹೆಸರುಪಡೆದಿದೆ. ಇಲ್ಲಿನ ಪ್ರಸಿದ್ಧ ಸೇಂಟ್ ಮಚಾರ್ ಆರಾಧನ ಮಂದಿರವನ್ನು ಪೂರ್ಣವಾಗಿ ಈ ಶಿಲೆಯಲ್ಲೇ ಕಟ್ಟಿದ್ದಾರೆ. ಆಗ್ನೇಯ ಸ್ಕಾಟ್ಲೆಂಡಿನ ವಾಣಿಜ್ಯಕೇಂದ್ರವಾಗಿರವುದಲ್ಲದೆ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಹೊಂದಿದೆ. ದನಕರುಗಳ ವ್ಯಾಪಾರವೂ ಅಧಿಕಪ್ರಮಾಣದಲ್ಲಿ ನಡೆಯುತ್ತದೆ. ತೀರಪ್ರದೇಶದಲ್ಲಿ ಮೀನುಗಾರಿಕೆ ಜನರ ಪ್ರಧಾನ ಕಸಬು. ಬಟ್ಟೆ ಗಿರಣಿಗಳು, ಕಾಗದದ, ಮರಗೆಲಸದ, ಎಂಜಿನಿಯರಿಂಗ್ ಮತ್ತು ವ್ಯವಸಾಯ ಉಪಕರಣಗಳ ಕಾರ್ಖಾನೆಗಳಿವೆ. ಒಂದು ವಿಶ್ವವಿದ್ಯಾಲಯವಿದೆ. ಡೀ ನದಿಯ ಅಳಿವೆಯ ಅನುಕೂಲತೆಯಿಂದಾಗಿ ಇದು ಸ್ವಾಭಾವಿಕ ಬಂದರಾಗಿದೆ. ಗ್ರೇಟ್ ಬ್ರಿಟನ್, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯಗಳ ರೇವುಪಟ್ಟಣಗಳೊಂದಿಗೆ ವಾಣಿಜ್ಯಸಂಪರ್ಕವನ್ನು ಪಡೆದಿದೆ.

2. ಅಮೆರಿಕ ಸಂಯುಕ್ತಸಂಸ್ಥಾನದ ಮಿಸಿಸಿಪಿಯ ಈಶಾನ್ಯಭಾಗದಲ್ಲಿರುವ ಟಾಂಬಿಗ್ಬೀ ನದಿಯ ದಡದ ಮೇಲಿರುವ ಊರು. ಜನಸಂಖ್ಯೆ 80,000 (2003). ಅನೇಕ ಸಣ್ಣ ಕೈಗಾರಿಕೆಗಳಿವೆ.

3. ಅಮೆರಿಕ ಸಂಯುಕ್ತಸಂಸ್ಥಾನದ ದಕ್ಷಿಣದ ಕೋಟಾದ ಈಶಾನ್ಯಭಾಗದಲ್ಲಿರುವ ಪಟ್ಟಣ. ಜನಸಂಖ್ಯೆ 1,65,000 (2003). ಪ್ರಾಂತದ ಆರ್ಥಿಕ ಮತ್ತು ವಾಣಿಜ್ಯಕೇಂದ್ರ. ಆಹಾರಧಾನ್ಯ, ಆಲೂಗೆಡ್ಡೆ, ಹುಲ್ಲು ಮತ್ತು ಅಗಸೆನಾರು–ಇವು ಇಲ್ಲಿನ ವ್ಯವಸಾಯೋತ್ಪನ್ನಗಳು.

4. ಅಮೆರಿಕ ಸಂಯುಕ್ತಸಂಸ್ಥಾನದ ವಾಷಿಂಗ್‌ಟನ್ ಭಾಗದ ಗ್ರೇಸ್ ಹಾರ್ಬರ್ ಕೌಂಟಿಯ ದೊಡ್ಡ ಪಟ್ಟಣ ಮತ್ತು ರೇವು. ವಿಸ್ತೀರ್ಣ 24.9 ಚಕಿಮೀ. ಜನಸಂಖ್ಯೆ 1,60,650 (2003). ಪಲ್ಪೈವುಡ್, ಸೆಲ್ಫ್, ಕಾಗದ, ಮರಗಳು, ಮರದ ಸಾಮಾನುಗಳು, ಮೀನು ಹಾಗೂ ಇತರ ಸಾಮಗ್ರಿಗಳು ಇಲ್ಲಿಯ ಮುಖ್ಯ ಉತ್ಪನ್ನಗಳು. (ಎಂ.ಎಸ್.ಎಂ.)

**ಅಬು ಪರ್ವತ:** ದಕ್ಷಿಣ ರಾಜಸ್ತಾನದ ಅಂಚಿನಲ್ಲಿ ಅಡ್ಡಲಾಗಿ ಹಬ್ಬಿರುವ ಅರಾವಳೀ ಪರ್ವತಗಳಲ್ಲಿ ಅಬು ನಗರದ ಹತ್ತಿರ ಕಾಣಬರುವ ದೊಡ್ಡ ಪರ್ವತ. ಉತ್ತರ ಅಕ್ಷಾಂಶ $24^0$–40′, ಪೂರ್ವ ರೇಖಾಂಶ $72^0$–45′. ಈ ಪ್ರದೇಶ ಅಹಮದಾಬಾದಿಗೆ 176 ಕಿಮೀ ದೂರದಲ್ಲಿದೆ. 11 ಕಿಮೀ ಅಗಲವಾಗಿರುವ ಒಂದು ನದೀಕಣಿವೆ ಉಳಿದ ಬೆಟ್ಟಗಳ ಸಾಲಿನಿಂದ ಪರ್ವತವನ್ನು ಪ್ರತ್ಯೇಕಿಸಿದೆ. ಈ ಕಣಿವೆಯಲ್ಲಿ ಪಶ್ಚಿಮ ಬಾನಸ್ ಎಂಬ ನದಿ ಹರಿಯುವುದು. ಈ ಪರ್ವತ ಮೈದಾನದ ನಡುವೆ ಇರುವ ಕಡಿದಾದ ಗ್ರಾನೈಟ್ ಶಿಲಾದ್ವೀಪದಂತೆ ತೋರುವುದು. ಎತ್ತರ 1212 ಮೀ–1712ಮೀ.

ಜೈನ ದೇವಾಲಯ

ಪರ್ವತದ ನೆತ್ತಿಯಲ್ಲಿ ಮತ್ತು ಪೀಠಭೂಮಿಗಳಲ್ಲಿ ವಿಶೇಷ ರೀತಿಯಲ್ಲಿ ಕೊರೆದಿರುವ ಜೈನ ಬಸದಿಗಳೂ ದೇವಾಲಯಗಳೂ ಗೋಪುರಗಳೂ ಇವೆ. ಬಹಳ ಪ್ರಾಚೀನದಿಂದ ಇದೊಂದು ಯಾತ್ರಾಸ್ಥಳವಾಗಿವೆ. ಮಹಾಭಾರತದಲ್ಲಿ ಇದನ್ನು ಅರ್ಬುದ ಎಂದು ಉಲ್ಲೇಖಿಸಲಾಗಿದೆ. ಶಿಖರದ ಮೇಲುಭಾಗದಲ್ಲಿ ಒಂದು ವೃತ್ತಾಕಾರದ ಪೀಠಭೂಮಿಯಲ್ಲಿ ಗ್ರಾನೈಟ್ ಶಿಲೆಯ ಗುಹೆ ಇದೆ. ಇದರಲ್ಲಿ ಪುರಾಣಗಳಲ್ಲಿ ಹೇಳಿರುವಂತೆ ವಿಷ್ಣುವಿನ ಅವತಾರವೆನಿಸಿದ ದಾತ – ಭೃಗುವಿನ ಪಾದಗಳ ಹೆಜ್ಜೆ ಮೂಡಿದೆಯೆಂದು ನಂಬಲಾಗಿದೆ. ಈ ಶಿಖರದ ಮಧ್ಯದಲ್ಲಿ ದಿಲ್‌ವಾರಾ ಎಂಬ ಸ್ಥಳದಲ್ಲಿ ಅಮೃತಶಿಲೆಯಿಂದ ನಿರ್ಮಿಸಲಾದ ಎರಡು ಪ್ರಸಿದ್ಧ ದೇವಾಲಯಗಳಿವೆ. ಇವು ಗುಜರಾತಿನ ವಾಸ್ತುಶಿಲ್ಪವನ್ನು ತೋರಿಸುವ ಮಾದರಿಯಾಗಿವೆ. ಜೈನರ ಪ್ರಖ್ಯಾತವಾದ ಐದು ಪವಿತ್ರ ಕ್ಷೇತ್ರಗಳಲ್ಲಿ ಇದೂ ಒಂದು. ಇಲ್ಲಿ ಜೈನ ದೇವಾಲಯಗಳಲ್ಲದೆ ಜೈನ ಶಾಸನಗಳೂ ಇವೆ.

ಅಬು ಬಹುಮಟ್ಟಿಗೆ ಪರ್ವತ ಧಾಮವೆನಿಸಿದ್ದರೂ ಜೈನರ ಮುಖ್ಯ ಯಾತ್ರಾಸ್ಥಳ ಹಾಗೂ ರಾಜಸ್ತಾನದ ಬೇಸಗೆಯ ರಾಜಧಾನಿಯಾಗಿದೆ. ಸರಾಸರಿ ಉಷ್ಣಾಂಶ $21^0$ಸೆ. ಏಪ್ರಿಲ್ ತಿಂಗಳಿನಲ್ಲಿ $32^0$ಸೆ ವರೆಗೂ ಹೆಚ್ಚುತ್ತದೆ. ಇಲ್ಲಿನ ವಾರ್ಷಿಕ ಮಳೆ ಪ್ರಮಾಣ 170 ಸೆಂಮೀ. ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯ ಕೇಂದ್ರ ಇಲ್ಲಿದೆ.

(ಎಸ್.ಎಂ.ಎ.; ಎಸ್.ಎನ್.; ಪಿ.ಬಿ.ಡಿ.; ಬಿ.ಜಿ.)

**ಅಬ್‌ಖೇಝಿಯ:** ಜಾರ್ಜಿಯದ ಪಶ್ಚಿಮ ಅಂಚಿನಲ್ಲಿ ಸು. 8600 ಚ.ಕಿಮೀ ಪ್ರದೇಶದಲ್ಲಿ ವ್ಯಾಪಿಸಿರುವ ಪರ್ವತ ಪ್ರದೇಶ. ಜನಸಂಖ್ಯೆ 1,77,000 (2006). ಇದರ ಉತ್ತರ ಹಾಗೂ ಈಶಾನ್ಯದಲ್ಲಿ ಕಾಕಸಸ್ ಪರ್ವತಗಳಿಂದ ಕೂಡಿದ್ದು ಇದು ಅಬ್‌ಖೇಝಿಯವನ್ನು ರಷ್ಯ ಫೆಡರೇಷನ್‌ನಿಂದ ಬೇರ್ಪಡಿಸಿದೆ. ಇದರ ಪೂರ್ವ ಹಾಗೂ ಆಗ್ನೇಯ ಭಾಗದಲ್ಲಿ ಜಾರ್ಜಿಯದ ಭಾಗಗಳು ಹಾಗೂ ಕಪ್ಪು ಸಮುದ್ರದಿಂದ ಸುತ್ತುವರಿದಿದೆ. ಇದರ ಉತ್ತರದಲ್ಲಿ ಕಾಕಸಸ್ ಪರ್ವತ ಸರಣಿ ಹಾಯ್ದು ಹೋಗಿದೆ. ಈಶಾನ್ಯ ಮತ್ತು ಪೂರ್ವದ ಭಾಗಗಳಲ್ಲಿ ಎತ್ತರದ ಶಿಖರಗಳು (ಸು. 4000 ಮೀ) ಕಂಡುಬರುತ್ತವೆ. ಇದರ ರಾಜಧಾನಿ ಸುಖುಮಿ. ರಷ್ಯನ್ ಇಲ್ಲಿನ ಭಾಷೆ.

ಕಾಕಸಸ್ ಪರ್ವತಗಳಲ್ಲಿ ಉಗಮಹೊಂದುವ ಹಲವಾರು ನದಿಗಳು ಈ ಪ್ರದೇಶದ ನೀರಾವರಿಗೆ ವರದಾನವಾಗಿವೆ. ಕೊಡೊರಿ, ಘಲಿಡ್ಸ್‌ಗ ಮತ್ತು ಗುಮಿಸ್ತ ಅವುಗಳಲ್ಲಿ ಪ್ರಮುಖವಾದವು. ಈ ಪ್ರದೇಶ ಹಲವಾರು ಜ್ವಾಲಾಮುಖಿ ಸರೋವರಗಳನ್ನು ಹೊಂದಿದ್ದು ಅವುಗಳಲ್ಲಿ ರಿಟ್ಸ ಸರೋವರ ಪ್ರಮುಖವಾದುದು.

ಈ ಪ್ರದೇಶ ಕಪ್ಪುಸಮುದ್ರದ ಸನಿಹದಲ್ಲಿರುವುದರಿಂದ ಹಾಗೂ ಕಾಕಸಸ್ ಪರ್ವತಗಳ ಪ್ರಭಾವದಿಂದ ಇಲ್ಲಿನ ವಾಯುಗುಣ ಆಹ್ಲಾದಕರವಾಗಿದೆ. ಕರಾವಳಿ ಪ್ರದೇಶಗಳು ಉಪ ಉಷ್ಣವಲಯದ ವಾಯುಗುಣವನ್ನು ಹೊಂದಿದ್ದು ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ಸು. 110–150 ಸೆಮೀ. ಕರಾವಳಿಯ ಭಾಗದಲ್ಲಿನ ಮಳೆಯ ಪ್ರಮಾಣ 170–350 ಸೆಮೀ. ಎತ್ತರದ ಪರ್ವತ ಶಿಖರಾಗ್ರಗಳು ಹಿಮದಿಂದ ಆವೃತವಾಗಿರುತ್ತವೆ. ರೂಬಲ್ ಇಲ್ಲಿನ ಹಣ. (ಎ.ವಿ.ಎಸ್.)

**ಅಭಿವೃದ್ಧಿಯ ಅಳತೆ ಮಾನಗಳು:** ಒಂದು ದೇಶದ ಅಭಿವೃದ್ಧಿ ಆ ದೇಶದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡ ಒಂದು ಸರ್ವಾಂಗೀಣ ಬೆಳವಣಿಗೆಯ ಪ್ರಕ್ರಿಯೆ. ಪ್ರಪಂಚದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮತ್ತು ಅಭಿವೃದ್ಧಿ ಹಾದಿಯಲ್ಲಿರುವ ರಾಷ್ಟ್ರಗಳಿವೆ. ಅಂದರೆ ಇಲ್ಲಿ ಪ್ರಮುಖವಾಗಿ ಅವು ಹೊಂದಿರುವ ಆರ್ಥಿಕ ಮಟ್ಟ / ಪ್ರಗತಿಯನ್ನು ಬಹುವಾಗಿ ಅರ್ಥೈಸಿ ಅಭಿವೃದ್ಧಿಯನ್ನು ನೋಡಲಾಗುವುದು. ದೇಶದ ಅಭಿವೃದ್ಧಿಯಲ್ಲಿ, ಆರ್ಥಿಕ ಅಂಶಗಳಾದ ತಲಾವರಮಾನದ ಜೊತೆಗೆ ಸಾಮಾಜಿಕ ಅಂಶಗಳನ್ನು ಅಭಿವೃದ್ಧಿಯ ಅಳತೆಮಾನದಲ್ಲಿ ತೆಗೆದುಕೊಳ್ಳಲಾಗಿದೆ. ವಿದ್ಯಾಭ್ಯಾಸ, ಸಾಕ್ಷರತೆಯ ಮಟ್ಟ, ಆರೋಗ್ಯ ಹಾಗೂ ಸಾಮಾಜಿಕ ಭದ್ರತೆಗೆ ಸಂಬಂಧಿಸಿದ ಅಂಶಗಳು ಜನಸಂಖ್ಯಾ ಸ್ಥಿತಿ ವಿವರಣೆ ಅಂದರೆ ಜನಸಂಖ್ಯೆಯ ಬೆಳವಣಿಗೆಯ ದರ, ಜನನ ದರ, ಮರಣ ದರ ಅದರಲ್ಲೂ ಶಿಶುಮರಣ ದರ ಹಾಗೂ ಜನನ ಸಮಯದಲ್ಲಿ ಹೆಂಗಸರ ಮರಣ ದರ ಮುಂತಾದುವುಗಳನ್ನು ಪರಿಗಣಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ವಿಶ್ವಸಂಸ್ಥೆ ಹಾಗೂ ಇತರ ರಾಷ್ಟ್ರಗಳು ದೇಶದ ವಿವಿಧ ಭಾಗಗಳಲ್ಲಿನ ಅಭಿವೃದ್ಧಿಯ ಮಟ್ಟವನ್ನು ಅಳೆಯಲು ಮತ್ತು ಅಭಿವೃದ್ಧಿಯ ಅಸಮಾನತೆಯನ್ನು ಹೋಗಲಾಡಿಸಲು ಈ ಆರ್ಥಿಕ, ಸಾಮಾಜಿಕ ಮತ್ತು ಜನಸಂಖ್ಯಾ ಸ್ಥಿತಿಯ ಅಂಶಗಳನ್ನು ಪರಿಷ್ಕರಿಸಿ, ಅವುಗಳಲ್ಲಿ ಅತ್ಯುತ್ತಮವಾದವುಗಳನ್ನು ನಿರ್ಧರಿಸಿ ಬಳಕೆಗೆ ತರಲಾಗಿದೆ. ಅವುಗಳಿಂದ ದೇಶದ ಉತ್ಪಾದನಾ ಅಂಶ (ಜಿಎನ್‌ಪಿ), ದೂರವಾಣಿಗಳ ಸಂಖ್ಯೆ, ಸಾಕ್ಷರತೆ, ವೈದ್ಯರುಗಳ ಸಂಖ್ಯೆ, ಶಿಶುಮರಣ ದರ, ಸಾಮಾನ್ಯ ಜನನ ದರ, 15 ವರ್ಷಗಳಿಗಿಂತ ಕೆಳಗಿನ ಜನಸಂಖ್ಯೆ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಇವು ಒಂದು ಬಗೆಯ ಅಭಿವೃದ್ಧಿಯ ಅಳತೆಮಾನದಂಡಗಳಾದರೆ ನಿಜವಾದ ಜನರ ಅಭಿವೃದ್ಧಿಯನ್ನು ಅಳೆಯಲು ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ರೂಪಿಸಲಾಗಿದ್ದು ಅದರ ಆಧಾರದ ಮೇಲೆ ಅಭಿವೃದ್ಧಿಯನ್ನು ಅಳೆದು ಅಸಮಾನತೆಯನ್ನು ಹೋಗಲಾಡಿಸಲು ಬೇಕಾದ ಅಭಿವೃದ್ಧಿಯ ನೆರವನ್ನು ನೀಡಲಾಗುತ್ತಿದೆ. ಇಲ್ಲಿ ಇನ್ನೂ ಪರಿಷ್ಕರಿಸಲ್ಪಟ್ಟ ಅಳತೆ ಮಾನಗಳನ್ನು ಬಳಸಲಾಗುತ್ತಿದೆ. ದೇಶದ ತಲಾವರಮಾನವನ್ನು ಹಾಗೂ ಜನರ ಕೊಳ್ಳುವ ಸಾಮರ್ಥ್ಯವನ್ನು ಅಮೆರಿಕ ಡಾಲರ್‌ಗೆ ಸರಿಹೊಂದಿಸಿ ನೋಡುವುದು; ಜನರ ಆಯುಷ್ಯದ

ಮಟ್ಟ ಅದರಲ್ಲೂ ಶಿಶು ಹುಟ್ಟಿದಂದಿನ ಆಯಸ್ಸಿನ ದರ, ವಿದ್ಯಾಭ್ಯಾಸದಲ್ಲೂ ವಿವಿಧ ಹಂತದವರೆಗೆ ಮಕ್ಕಳದಾಖಲಾತಿ, ಇವುಗಳೊಂದಿಗೆ ಸ್ತ್ರೀಯರನ್ನು ಕುರಿತಂತೆ ಕೆಲವು ಅಳತೆಮಾನಗಳನ್ನು ರೂಪಿಸಲಾಗಿದೆ. ಗಂಡಸರು–ಹೆಂಗಸರ ನಡುವಿನ ಆಯಸ್ಸಿನ ಪರಿಮಾಣ, ವಿದ್ಯಾಭ್ಯಾಸಮಟ್ಟ ಮತ್ತು ಅವರ ನಿಜವಾದ ವರಮಾನ ಗಳಿಕೆ. ಇದನ್ನು ಒಟ್ಟಾರೆ ಮಾನವ ಅಭಿವೃದ್ಧಿ ಸೂಚ್ಯಾಂಕವೆಂದು ಕರೆಯುವರು. ಅಭಿವೃದ್ಧಿಯ ನಿಜವಾದ ಮುಖವನ್ನು ತಿಳಿಯಲು ಇತ್ತೀಚಿನ ಪರಿಷ್ಕೃತ ಮಾನವೆಂದರೆ ಸ್ತ್ರೀಸ್ವಶಕ್ತೀಕರಣಕ್ಕೆ ಸಂಬಂಧಿಸಿದ ಅಳತೆ ಮಾನ. ಇಲ್ಲಿ ಒಂದು ಪ್ರದೇಶದ ಸ್ತ್ರೀಜನಸಂಖ್ಯೆಯಲ್ಲಿ ಎಷ್ಟು ಜನ ಅಲ್ಲಿನ ಗಂಡಸರಿಗೆ ಹೋಲಿಸಿದಾಗ ಸಂಸತ್ತಿನಲ್ಲಿ ಆಡಳಿತದಲ್ಲಿ ಹಾಗೂ ಬ್ಯಾಂಕ್ ಮುಂತಾದ ನಿರ್ವಹಣಾ ಕಾರ್ಯಗಳಲ್ಲಿ ತೊಡಗಿದ್ದಾರೆ ಹಾಗೂ ಅವರು ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲಸಕಾರ್ಯಗಳಲ್ಲಿದ್ದಾರೆಯೇ ಇವೇ ಮುಂತಾದ ಅಳತೆ ಮಾನಗಳನ್ನು ರಚಿಸಿ ಅಳವಡಿಸಿಕೊಳ್ಳಲಾಗಿದೆ. (ಬಿ.ಇ.)

**ಅಭಿವೃದ್ಧಿಯ ಪರಿಕಲ್ಪನೆ:** ಅಭಿವೃದ್ಧಿಯ ಪರಿಕಲ್ಪನೆಯು ಆಯಾ ಸಮಾಜ ಹೊಂದಿರುವ ಆರ್ಥಿಕ ಮಟ್ಟವನ್ನು ಸೂಚಿಸುತ್ತದೆ. ಆರ್ಥಿಕ ಅಭಿವೃದ್ಧಿಯ ಮಟ್ಟವು ಸಾಮಾನ್ಯವಾಗಿ ಜನರು ತಮ್ಮ ವಿದ್ಯಾಭ್ಯಾಸ ಮತ್ತು ತಂತ್ರಜ್ಞಾನಗಳ ಬಳಕೆಯ ಸಹಾಯದಿಂದ ಹೊಂದಿರುವ ಐಹಿಕ ಭೋಗವಸ್ತುಗಳನ್ನು ಸೂಚಿಸುತ್ತದೆ. ಅದು ಒಂದು ದೇಶದ ಆರ್ಥಿಕ ಅಭಿವೃದ್ಧಿಯನ್ನು ತೋರಿಸುತ್ತದೆ ಎಂದಾದರೂ ಇತ್ತೀಚೆಗೆ ಅಭಿವೃದ್ಧಿಯ ಪರಿಕಲ್ಪನೆ ಜನರ ಆರ್ಥಿಕ ಮಟ್ಟದೊಂದಿಗೆ ಸಮಾಜದ ಸರ್ವಾಂಗೀಣ ಬೆಳವಣಿಗೆಯನ್ನು ಸೂಚಿಸುವ ಅಂಶವಾಗಿ ಪರಿವರ್ತನೆ ಹೊಂದಿದೆ. ವಿಶ್ವ ಸಂಸ್ಥೆ 1960 ರಿಂದೀಚೆಗೆ ಅನೇಕ ಸಮಾಜ ಶಾಸ್ತ್ರಜ್ಞರ ಸಹಾಯದಿಂದ ಅಭಿವೃದ್ಧಿಯು ಜನರ ಕೇವಲ ಆರ್ಥಿಕ ವರಮಾನವನ್ನು ಹೆಚ್ಚಿಸುವುದಷ್ಟೆಯಲ್ಲದೆ, ದೇಶದಲ್ಲಿ ಆರ್ಥಿಕ ವೈಪರೀತ್ಯಗಳು ಕಡಿಮೆಯಾಗಿ ವರಮಾನದ ಸಮಾನ ಹಂಚಿಕೆಯಾಗಬೇಕು ಎಂದು ಹೇಳುತ್ತಿದೆ. ಬಡವ ಮತ್ತು ಶ್ರೀಮಂತ ವರ್ಗಗಳ ನಡುವೆ ವಿಪರೀತ ಅಂತರವಿಲ್ಲದಂತೆ ಉತ್ಪಾದನೆ–ಅನುಭೋಗ ಅಂಶಗಳು ನಡೆಯಬೇಕು. ಆಗಲೇ ಅದು ನಿಜವಾದ ಆರ್ಥಿಕ ಅಭಿವೃದ್ಧಿ ಎಂದೆನಿಸಿಕೊಳ್ಳುತ್ತದೆ. ಯು.ಎನ್.ಡಿ.ಪಿ.ಯ ಒಂದು ಅಭಿವೃದ್ಧಿಯ ವ್ಯಾಖ್ಯೆಯ ಪ್ರಕಾರ ಇದು ಸ್ವಸ್ಥ ದೀರ್ಘ ಆಯಸ್ಸಿನ ಜನಾಂಗದ ನಿರ್ಮಾಣ; ಸಮಾಜದ ಎಲ್ಲಾ ಜನರಿಗೂ ವಿದ್ಯಾಭ್ಯಾಸ ಮತ್ತು ಜ್ಞಾನಾರ್ಜನೆಗೆ ಅವಕಾಶ ಒದಗಿಸಿ ಕೊಡುವುದು; ಜನರ ಸುಧಾರಿತ ಜೀವನ ಮಟ್ಟ ಹೊಂದಲು ಅವರಿಗೆ ಆರ್ಥಿಕ ಸಂಪನ್ಮೂಲಗಳಲ್ಲಿ ಪಾಲು ಹಾಗೂ ಅದರಲ್ಲಿ ಕ್ರಮೇಣ ಹಿಡಿತ ಹೊಂದಲು ಅವಕಾಶ ಕಲ್ಪಿಸುವುದೇ ಆಗಿದೆ.

ಪ್ರಪಂಚದ ತೃತೀಯ ಅಥವಾ ಬಡರಾಷ್ಟ್ರಗಳಲ್ಲಿ ಕ್ರಮೇಣ ಅಭಿವೃದ್ಧಿ ಹೊಂದಲು ಅದರ ಮಟ್ಟವನ್ನು ಅಳೆಯಲು ಮಾನವ ಅಭಿವೃದ್ಧಿ ಸೂಚ್ಯಾಂಕಗಳನ್ನು ನಿರೂಪಿಸಲಾಗಿದೆ. ಈ ದಿಶೆಯಲ್ಲಿ 1990ರ ದಶಕಗಳಲ್ಲಿ ಪ್ರತಿ ವರ್ಷವೂ ಮಾನವನ ಅಭಿವೃದ್ಧಿಯನ್ನು ಕುರಿತಂತೆ ಹೊಸ ಹೊಸ ಅಂಶಗಳನ್ನು ಅಭಿವೃದ್ಧಿಯ ಪ್ರಣಾಳಿಕೆಯಲ್ಲಿ ಸೇರಿಸಿ ವರದಿಗಳನ್ನು ಪ್ರತಿ ವರ್ಷ ಬಿಡುಗಡೆ ಮಾಡಲಾಗಿದೆ. ಉದಾ: 1990 (ಎಚ್.ಆರ್.ಡಿ.) ಪ್ರಕಾರ ಪ್ರಪಂಚದ ದೇಶಗಳಿಗೆ ಆರ್ಥಿಕ ನೆರವು ಕೊಡುವುದರೊಂದಿಗೆ ಬಡ ರಾಷ್ಟ್ರಗಳನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ವ್ಯಾಪಾರ ವಾಣಿಜ್ಯ ಪರಿವರ್ತನೆಯಾಗಬೇಕೆಂದು ಸೂಚಿಸಲಾಗಿದೆ. ಭಾರತ ದೇಶದಲ್ಲಿ ಈ ದಿಶೆಯಲ್ಲಿ ಜಾಗತೀಕರಣ ಮತ್ತು ಸಡಿಲ ಆರ್ಥಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ.

ತದನಂತರದ ವರ್ಷಗಳಲ್ಲಿ ಅಭಿವೃದ್ಧಿಯ ಪರಿಕಲ್ಪನೆಯನ್ನು ನೋಡುವ ದೃಷ್ಟಿ ಹಾಗೂ ಅದನ್ನು ಅಳೆಯುವ ವಿಧಾನಗಳಲ್ಲಿ ವಿಶಾಲತೆ ಮತ್ತು ನಿಖರತೆಗಳು ಬಂದಿವೆ. 1993ರ ಮಾನವ ಸಂಪನ್ಮೂಲ ಅಭಿವೃದ್ಧಿಯ ಪ್ರಕಾರ ದೇಶದ ಎಲ್ಲ ವರ್ಗಗಳು ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಪಾಲ್ಗೊಳ್ಳಬೇಕು ಎನ್ನಲಾಗಿದೆ. 1994 ಎಚ್.ಆರ್.ಡಿ. ಪ್ರಕಾರ ಎಲ್ಲ ಅಂಶಗಳೊಂದಿಗೆ ರಾಷ್ಟ್ರಗಳಲ್ಲಿ ಆರ್ಥಿಕ ಮಟ್ಟ ಹೆಚ್ಚಿಸಿ ಅಭಿವೃದ್ಧಿಯಾಗಲು ಉತ್ತರದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮತ್ತು ದಕ್ಷಿಣದ ಅಭಿವೃದ್ಧಿ ಹೊಂದುತ್ತಿರುವ ಬಡ ರಾಷ್ಟ್ರಗಳ ನಡುವೆ ಬೆಳವಣಿಗೆಯ ಸಂಬಂಧಗಳೇರ್ಪಡಬೇಕೆನ್ನಲಾಗಿದೆ. ಹಾಗೆಯೇ 1996ರ ಎಚ್.ಆರ್.ಡಿ. ಪ್ರಕಾರ ದೇಶಗಳಲ್ಲಿ ನಡೆಯುತ್ತಿರುವ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಗಳ ನಡುವಿನ ವ್ಯತ್ಯಾಸ ಕಡಿಮೆಮಾಡುವುದೇ ನಿಜವಾದ ಅಭಿವೃದ್ಧಿ ಎನ್ನಲಾಗಿದೆ ಹಾಗೂ ವಿಶ್ವ ಸಂಸ್ಥೆಯ ನೆರವನ್ನು ಎಚ್.ಆರ್.ಡಿ. ಆಧಾರದ ಮೇಲೆ ಹಂಚುವ ಪ್ರಯತ್ನ ಮಾಡಲಾಗಿದೆ. ಪ್ರಪಂಚದಲ್ಲಿ ಪ್ರಸ್ತುತ ಜನರ ಆರ್ಥಿಕ ಹಾಗೂ ಸಮಾಜದ ಸರ್ವಾಂಗೀಣ ಬೆಳವಣಿಗೆಯ ದಿಶೆಯಲ್ಲಿ 1998 ಎಚ್.ಆರ್.ಡಿ. ಬಹಳ ಪ್ರಾಮುಖ್ಯತೆ ಪಡೆದಿದೆ. ಅದರಲ್ಲಿ ಪಶ್ಚಿಮ ಹಾಗೂ ಪೂರ್ವ ರಾಷ್ಟ್ರಗಳಲ್ಲಿನ ಅನುಭೋಗ ವ್ಯತ್ಯಾಸಗಳನ್ನು ಕಡಿಮೆ ಮಾಡುವುದು, ಪಾಶ್ಚಾತ್ಯ ರಾಷ್ಟ್ರಗಳ ಅತಿ ಭೋಗದಿಂದುಟಾಗುವ ಪರಿಸರ ಮಾಲಿನ್ಯವನ್ನು ಕಡಿಮೆಮಾಡುವುದು ಹಾಗೂ ಜಾಗತೀಕರಣದಿಂದುಟಾಗುವ ದುಷ್ಪರಿಣಾಮಗಳನ್ನು ಕಡಿಮೆ ಮಾಡುವುದು ಇತ್ಯಾದಿ ಅಂಶಗಳನ್ನು ಸೇರಿಸಲಾಗಿದೆ. (ಎಚ್.ಆರ್.ಡಿ.)

**ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲನ:** ಪ್ರಪಂಚದ ಬಹುತೇಕ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲನ ಮತ್ತು ಪ್ರಾದೇಶಿಕ ವ್ಯತ್ಯಾಸಗಳನ್ನು ಕಾಣಬಹುದಾಗಿದ್ದು ಇದಕ್ಕೆ ಅಮೆರಿಕ ಕೂಡ ಹೊರತಾಗಿಲ್ಲ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಉತ್ತರ ರಾಜ್ಯ, ದಕ್ಷಿಣ ರಾಜ್ಯಗಳ ನಡುವೆ ಅಸಮತೋಲನ ಇರುವುದನ್ನು ಕಾಣಬಹುದು. ಪ್ರಾದೇಶಿಕ ಅಸಮಾನತೆಯನ್ನು ಮೊದಲ ಬಾರಿಗೆ ಗುರುತಿಸಿದ ರಷ್ಯದ ಸ್ಟಾಲಿನ್‌ನನ್ನು ಪ್ರಾದೇಶಿಕ ಅಸಮತೋಲನದ ಹರಿಕಾರ ಎನ್ನಬಹುದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ರಾಜಕೀಯ, ಆರ್ಥಿಕ ಅಸ್ಥಿರತೆಗಳಿಂದ ಅಸಮತೋಲನ ಕಾಣಬಹುದು. ಭಾರತದಲ್ಲಿ ಆಧುನಿಕತೆ ಮತ್ತು ಅಭಿವೃದ್ಧಿಯ ಜೊತೆಗೆ ಪ್ರಾದೇಶಿಕ ಅಸಮತೋಲನ ಕೂಡ ವಿಸ್ತಾರವಾಗಿದೆ. ವಾಸ್ತವವಾಗಿ ಪ್ರಾದೇಶಿಕ ಅಸಮಾನತೆ ಎಂಬುದು ಪ್ರದೇಶದಿಂದ ಪ್ರದೇಶಕ್ಕೆ ಅಭಿವೃದ್ಧಿಯಲ್ಲಿ ಕಂಡುಬರುವ ವ್ಯತ್ಯಾಸಗಳು. ಕೆಲವು ಪ್ರದೇಶಗಳು ತುಂಬಾ ಮುಂದುವರಿದ ಪ್ರದೇಶಗಳಾದರೆ ಮತ್ತೆ ಕೆಲವು ತೀರ ಹಿಂದುಳಿದ ಪ್ರದೇಶಗಳಾಗಿವೆ. ಹೀಗೆ ಅಭಿವೃದ್ಧಿಯಲ್ಲಿ ಪ್ರದೇಶ ಪ್ರದೇಶಗಳ ನಡುವಿನ ಬೆಳವಣಿಗೆಯ ವ್ಯತ್ಯಾಸವನ್ನು ಪ್ರಾದೇಶಿಕ ಅಸಮಾನತೆ ಎನ್ನುವರು.

ಪ್ರಾದೇಶಿಕ ಅಸಮತೋಲನಕ್ಕೆ ಹಲವು ಕಾರಣಗಳು ಕಂಡುಬರುತ್ತವೆ. ಅವುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ ಪ್ರಮುಖ ಅಂಶ. ಅಂದರೆ ಕೆಲವು ಪ್ರದೇಶಗಳಲ್ಲಿ ಸಂಪನ್ಮೂಲ ಯಥೇಚ್ಛವಾಗಿದ್ದರೆ, ಮತ್ತೆ ಕೆಲವು ಪ್ರದೇಶಗಳಲ್ಲಿ ತೀರ ಕಡಿಮೆ ಇರುತ್ತದೆ. ಮಿತಿಮೀರಿದ ಜನಸಂಖ್ಯೆ ಮತ್ತು ಹೆಚ್ಚು ಬಡತನ ಇರುವಲ್ಲಿನ ಪ್ರದೇಶಗಳು ಅಭಿವೃದ್ಧಿಯಲ್ಲಿ ಹಿಂದುಳಿದಿರುತ್ತವೆ. ಇದಲ್ಲದೆ ಬಂಡವಾಳದ ಕೊರತೆ, ಹಿಡಿತ ಸಾಧಿಸದ ಆರ್ಥಿಕ ಯೋಜನೆಗಳು, ಪ್ರಾದೇಶಿಕ ಅಸಮಾನತೆಯಲ್ಲಿನ ಪ್ರಮುಖ ಕಾರಣಗಳಾಗಿವೆ.

ತಲಾದಾಯ ಪ್ರಾದೇಶಿಕ ಅಸಮಾನತೆಯನ್ನು ಅಳೆಯುವ ಪ್ರಮುಖ ಅಂಶವಾಗಿದೆ. ಆದರೆ ಕೇವಲ ತಲಾದಾಯ ಒಂದೇ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯ ಮಾನದಂಡವಲ್ಲ. ಇದರ ಜೊತೆಗೆ ಕೈಗಾರಿಕಾ ಬೆಳವಣಿಗೆಯಲ್ಲಿನ ವೈವಿಧ್ಯತೆ, ಕೃಷಿ ಅಭಿವೃದ್ಧಿಯಲ್ಲಿನ ಅಸಮತೋಲನ, ಶಿಕ್ಷಣದ ವಿಭಿನ್ನ ಮಟ್ಟ, ಒಟ್ಟು ಜನಸಂಖ್ಯೆಯಲ್ಲಿ ಆಯಾ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಗರ ಪ್ರದೇಶದ ಜನಸಂಖ್ಯೆ, ಪ್ರದೇಶಗಳಲ್ಲಿ ಕಂಡು ಬರುವ ಸಾರಿಗೆ ಸಂಪರ್ಕಗಳ ಬೆಳವಣಿಗೆ, ಹೀಗೆ ಹಲವು ಅಂಶಗಳು ಪ್ರದೇಶಗಳ ಅಭಿವೃದ್ಧಿ ಮಟ್ಟವನ್ನು ತೋರಿಸುತ್ತವೆ. ಈ ಮೇಲಿನ ಅಂಶಗಳು ಪ್ರದೇಶಗಳ ನಡುವೆ ಕಂಡುಬರುವ ಬೆಳವಣಿಗೆಯ ವ್ಯತ್ಯಾಸಗಳು ಹಾಗೂ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಸೂಚಿಸುತ್ತವೆ. ತಲಾದಾಯವನ್ನು ತೆಗೆದುಕೊಂಡಾಗ ಪ್ರದೇಶ ಪ್ರದೇಶಗಳ ನಡುವೆ ಇರುವ ಭಿನ್ನ ಅಂತರವನ್ನು ತೋರಿಸುತ್ತದೆ. ಉದಾಹರಣೆಗೆ ಪಂಜಾಬ್, ಹರಿಯಾಣ, ಮಹಾರಾಷ್ಟ್ರಗಳಲ್ಲಿ ತಲಾದಾಯ ಹೆಚ್ಚಾಗಿದ್ದು ಮುಂದುವರೆದ ಪ್ರದೇಶಗಳೆಂದು ಗುರುತಿಸಲ್ಪಟ್ಟರೆ, ಉತ್ತರ ಪ್ರದೇಶ, ಬಿಹಾರ, ಒರಿಸ್ಸ, ಅಸ್ಸಾಂ ರಾಜ್ಯಗಳಲ್ಲಿ ತೀರ ಕಡಿಮೆ ಇದ್ದು ಅತಿ ಹೆಚ್ಚು ಹಿಂದುಳಿದ ಪ್ರದೇಶಗಳೆಂದು ಗುರುತಿಸಲ್ಪಟ್ಟಿವೆ.

ಪ್ರದೇಶ ಪ್ರದೇಶಗಳಲ್ಲಿನ ಕೈಗಾರಿಕಾ ಬೆಳವಣಿಗೆಯೂ ಕೂಡ ಪ್ರಾದೇಶಿಕ ಅಸಮಾನತೆಯನ್ನು ತೋರಿಸುವಂತಹ ಪ್ರಮುಖ ಮಾನದಂಡವಾಗಿದೆ. ವಿವಿಧ ರಾಜ್ಯಗಳಲ್ಲಿನ ಕೈಗಾರಿಕೋದ್ಯಮಗಳ ಸಂಖ್ಯೆಗಳು ಮತ್ತು ಅವುಗಳ ಉತ್ಪಾದನ ಮೌಲ್ಯಗಳ ನಡುವೆ ವಿವಿಧ ಪ್ರದೇಶಗಳಲ್ಲಿ ವ್ಯತ್ಯಾಸ ಕಂಡುಬರುತ್ತಿದ್ದು, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಗುಜರಾತ್‌ನಲ್ಲಿ ಹೆಚ್ಚು ಕೈಗಾರಿಕೆಗಳು ಕೇಂದ್ರೀಕೃತವಾಗಿದ್ದು, ಸಹಜವಾಗಿ ಇವುಗಳ ಉತ್ಪಾದನ ಮೌಲ್ಯ ಹೆಚ್ಚಾಗಿದೆ. ಇದಕ್ಕೆ ಬದಲಾಗಿ ಒರಿಸ್ಸ, ಮಧ್ಯಪ್ರದೇಶ, ಬಿಹಾರ, ರಾಜಸ್ಥಾನ, ಈಶಾನ್ಯ ರಾಜ್ಯಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕೈಗಾರಿಕೆಗಳು ಕೇಂದ್ರೀಕೃತಗೊಂಡಿದ್ದು ಇವುಗಳ ಉತ್ಪಾದನಾ ಮೌಲ್ಯ ಕಡಿಮೆ ಇದೆ. ಇದು ರಾಜ್ಯ ರಾಜ್ಯಗಳ ನಡುವಿನ ಕೈಗಾರಿಕಾ ಬೆಳವಣಿಗೆಯ ನಡುವಿನ ವ್ಯತ್ಯಾಸವನ್ನು ತೋರಿಸುತ್ತದೆ.

ಭಾರತದ ಕೃಷಿ ಬೆಳವಣಿಗೆಯಲ್ಲಿ ಪ್ರಾದೇಶಿಕ ಅಸಮತೋಲನ ಇರುವುದನ್ನು ಕಾಣಬಹುದು ಕೆಲವು ಪ್ರದೇಶಗಳಲ್ಲಿ ಉತ್ಪಾದನಾ ಇಳುವರಿ ಹೆಚ್ಚಾಗಿದ್ದರೆ, ಇನ್ನು ಕೆಲವು ಪ್ರದೇಶಗಳಲ್ಲಿ ಉತ್ಪಾದನಾ ಇಳುವರಿ ತೀರ ಕಡಿಮೆ ಇರುತ್ತದೆ. ಉದಾಹರಣೆಗೆ, ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ಅಧಿಕ ಉತ್ಪಾದನಾ ಇಳುವರಿ ಇದ್ದರೆ, ಕೇರಳ, ಮಧ್ಯಪ್ರದೇಶದಂತಹ ರಾಜ್ಯಗಳಲ್ಲಿ ಉತ್ಪಾದನಾ ಇಳುವರಿ ತೀರ ಕಡಿಮೆ ಇದೆ. ಇದಲ್ಲದೆ ರಸಗೊಬ್ಬರಗಳ ಬಳಕೆ ಪ್ರಮಾಣ, ನೀರಾವರಿಯನ್ನು ಅವಲಂಬಿಸಿರುವ ಬೆಳೆಗಳ ಪ್ರದೇಶ, ಇವುಗಳಲ್ಲೂ ಕೂಡ ಪ್ರದೇಶಗಳ ನಡುವೆ ಅಸಮತೋಲನ ಇರುವುದನ್ನು ಕಾಣಬಹುದು. ಈ ಅಸಮತೋಲನ ಬೆಳವಣಿಗೆ ಕೃಷಿಯಲ್ಲಿನ ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾಗಿದೆ.

ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲವನ್ನು ಅಳೆಯುವ ಮತ್ತೊಂದು ಮಾನದಂಡ ಬಡತನ. ಒರಿಸ್ಸ, ಬಿಹಾರ, ಉತ್ತರ ಪ್ರದೇಶಗಳಂತಹ ರಾಜ್ಯಗಳಲ್ಲಿ ಅತಿ ಹೆಚ್ಚಿನ ಬಡತನ ಕಾಣಬಹುದಾಗಿದೆ. ಈ ರಾಜ್ಯಗಳು ಅಭಿವೃದ್ಧಿಯಲ್ಲಿ ತೀರ ಹಿಂದುಳಿದಿವೆ. ಪಂಜಾಬ್, ಕೇರಳ, ಹರಿಯಾಣ, ತಮಿಳುನಾಡು ರಾಜ್ಯಗಳಲ್ಲಿ ಬಡತನ ಪ್ರಮಾಣ ಕಡಿಮೆ ಇದೆ. ಹಾಗಾಗಿ ಇವುಗಳನ್ನು ಅಭಿವೃದ್ಧಿಯಲ್ಲಿ ಮುಂದುವರೆದ ರಾಜ್ಯಗಳೆಂದು ಗುರುತಿಸಲಾಗಿದೆ.

ಭಾರತದಲ್ಲಿ ಐತಿಹಾಸಿಕ ಕಾಲದಿಂದಲೂ ಪ್ರಾದೇಶಿಕ ಅಸಮತೋಲನವನ್ನು ಕಾಣಬಹುದಾಗಿದ್ದು, ಬ್ರಿಟಿಷರ ಆಳ್ವಿಕೆ ಕಾಲದಲ್ಲೂ ಕೈಗಾರಿಕಾ ಬೆಳವಣಿಗೆಯಲ್ಲಿ ಅಸಮತೋಲನವಿದ್ದದ್ದನ್ನು ಕಾಣಬಹುದು. ಸಾಮಾನ್ಯವಾಗಿ ದೇಶದ ಬೆಳವಣಿಗೆ ಕೈಗಾರೀಕೀಕರಣ ಹಾಗೂ ನಗರೀಕರಣದಿಂದ ಎಂದಾಗುತ್ತದೆ. ಸ್ವತಂತ್ರ ಪೂರ್ವದಲ್ಲಿ ಕೈಗಾರಿಕೆಗೆ ಮಹತ್ವ ಕೊಡುವ ಉದ್ದೇಶದಿಂದ ಬಂದರುಗಳಿಗೂ ಸಾರಿಗೆ ಸಂಪರ್ಕಗಳ ಅಭಿವೃದ್ಧಿಗೆ ಉತ್ತೇಜನ ನೀಡಲಾಯಿತು. ಆದರೂ ಈ ಕಾಲದಲ್ಲಿ ಮುಂಬಯಿ, ಕೋಲ್ಕೊತ್ತ ಬಂದರುಗಳು ಮಾತ್ರ ಹೆಚ್ಚಿನ ಅಭಿವೃದ್ಧಿ ಹೊಂದವು. ಸ್ವಾತಂತ್ರ್ಯಾ ನಂತರ ಅಸಮತೋಲನ ನಿವಾರಣೆಗಾಗಿ ಸರಕಾರ ಹಲವಾರು ಮಹತ್ವದ ಯೋಜನೆಗಳನ್ನು ಕೈಗೊಂಡಿತ್ತು. 1950ರ ದಶಕದಲ್ಲಿ ಕೇಂದ್ರದ ಯೋಜನಾ ಆಯೋಗ ಕೆಲವು ಉದ್ದೇಶಗಳನ್ನಿಟ್ಟುಕೊಂಡು ಯೋಜನೆಗಳನ್ನು ರೂಪಿಸಿತು. ಉಳಿತಾಯ, ಹೂಡಿಕೆ, ಉದ್ಯೋಗ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಗಮನ ನೀಡಿತು. ನಗರಗಳ ಪ್ರಾದೇಶಿಕ ಬೆಳವಣಿಗೆಯ ಸಮಸ್ಯೆಗೆ ವಿಶೇಷ ಒತ್ತುಕೊಟ್ಟಿತು. ಭೂಸುಧಾರಣೆ, ಸಾಮಾಜಿಕ ಕಲ್ಯಾಣಾಭಿವೃದ್ಧಿಗೆ ಗಮನ ನೀಡಲಾಯಿತು. ಈ ಯೋಜನೆ ಕಾಲದಲ್ಲಿ ನಿರಾಶ್ರಿತರ ಸಮಸ್ಯೆ, ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡದಿರುವುದು ಪ್ರಾದೇಶಿಕ ಅಸಮತೋಲನ ಬೆಳೆಯಲು ಕಾರಣವಾಯಿತು.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಭಿವೃದ್ಧಿ ಸಮತೋಲನ ಸಾಧಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತು. ಸಮುದಾಯ ಅಭಿವೃದ್ಧಿ, ನೀರಾವರಿ ಮೂಲಕ ಸ್ಥಳೀಯ ಅಭಿವೃದ್ಧಿಗೆ ಹಾಗೂ ಕೈಗಾರಿಕಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಯಿತು. ಇದರ ಜೊತೆಗೆ ವಿದ್ಯುತ್, ನೀರಾವರಿ ಪೂರೈಕೆ, ಸಾರಿಗೆ ಸಂಪರ್ಕಗಳಿಗೆ ಗಮನಹರಿಸಲಾಯಿತು. ಇಷ್ಟಾದರೂ ಈ ಯೋಜನೆಯಲ್ಲಿ ಪ್ರಾದೇಶಿಕ ಅಸಮತೋಲನ ಹೆಚ್ಚಾಯಿತು. ಕೈಗಾರಿಕೆಗೆ ವಿಶೇಷ ಗಮನ ಹರಿಸಿದರೂ ಸಣ್ಣ ಕೈಗಾರಿಕೆಗಳನ್ನು ನಿರ್ಲಕ್ಷಿಸಲಾಯಿತು. ಸಣ್ಣ ಕೈಗಾರಿಕೆ ಮತ್ತು ಬೃಹತ್ ಕೈಗಾರಿಕೆಗಳ ನಡುವೆ ಅಸಮತೋಲನವೇರ್ಪಟ್ಟಿತು. 1956 ರಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವಿಷಯಗಳನ್ನು ಬಿಟ್ಟು ಭಾಷೆಯ ಆಧಾರದ ಮೇಲೆ ರಾಜ್ಯಗಳ ವಿಂಗಡಣೆಯು, ಯೋಜನೆಗಳ ವೈಫಲ್ಯತೆಗೆ ಕಾರಣವಾಯಿತು.

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಆದ್ಯ ಗಮನ ನೀಡಲಾಯಿತು. ಇದರ ಪರಿಣಾಮವಾಗಿ ಹಸುರು ಕ್ರಾಂತಿಯಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರಿಂದ ಉತ್ಪಾದನಾ ಇಳುವರಿ ಕೂಡ ಅಧಿಕವಾಯಿತು. ಆದರೆ ಇದು ಎಲ್ಲಾ ಪ್ರದೇಶಗಳಲ್ಲೂ ಕಂಡು ಬರದೆ, ಪಂಜಾಬ್, ಹರಿಯಾಣಗಳಂತಹ ರಾಜ್ಯಗಳಲ್ಲಿ ಮಾತ್ರ ಹೆಚ್ಚು ಇಳುವರಿ ಕಂಡು ಬಂದಿತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾದೇಶಿಕ ಅಸಮತೋಲನಯನ್ನು ನಿಜವಾಗಿ ಗುರುತಿಸಿ ಪಟ್ಟಣ ಹಾಗೂ ನಗರ ಪ್ರದೇಶಗಳ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸಲಾಯಿತು. ಇದಕ್ಕಾಗಿ ಸಣ್ಣ, ಅತಿ ಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಅಭಿವೃದ್ಧಿ ಯೋಜನೆ, ಬರಗಾಲ ಪ್ರದೇಶ ಯೋಜನೆ, ಗ್ರಾಮೀಣ ಉದ್ಯೋಗ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಐದನೆಯ ಯೋಜನೆಯಲ್ಲಿ ಈ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು, ಪ್ರದೇಶಗಳ ಅಭಿವೃದ್ಧಿಗಾಗಿ ಈಗಿರುವ ಯೋಜನೆಗಳನ್ನು ವರ್ಗೀಕರಿಸಲಾಯಿತು. ಬರಗಾಲ ಪ್ರದೇಶ ಯೋಜನೆ, ಗುಡ್ಡಗಾಡು ಪ್ರದೇಶ ಯೋಜನೆ, ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು ಸಂಪನ್ಮೂಲ ಅಥವಾ ಸಮಸ್ಯೆ ಆಧಾರಿತ ಪ್ರದೇಶ ಕಾರ್ಯಕ್ರಮದಡಿಯಲ್ಲಿ, ಸಣ್ಣ ರೈತರ ಅಭಿವೃದ್ಧಿ ಕಾರ್ಯಕ್ರಮ, ಬುಡಕಟ್ಟು ಪ್ರದೇಶ ಅಭಿವೃದ್ಧಿ ಯೋಜನೆಯನ್ನು – ಗುಂಪು ಯೋಜನೆ ಕಾರ್ಯಕ್ರಮದಡಿ, ಹಣಕಾಸು ಹೂಡಿಕೆ, ಸಾರಿಗೆ ಸಂಪರ್ಕಗಳನ್ನು ವಿಶೇಷ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದಡಿ, ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶ ಅಭಿವೃದ್ಧಿಗಾಗಿ ವಿಶೇಷ ಯೋಜನೆಯಲ್ಲಿ ಸಂಯೋಜನೆಗೊಳಿಸಿ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮದಡಿ ಯೋಜನೆಗಳನ್ನು ವರ್ಗೀಕರಿಸಲಾಯಿತು.

1991ರ ಸುಮಾರಿಗೆ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಲಾಯಿತು. ಇದು ಬೃಹತ್ ಕೈಗಾರಿಕೆಗಳಿಗೆ ವರದಾನವಾದರೂ ಸಣ್ಣ ಹಾಗೂ ಗೃಹ ಕೈಗಾರಿಕೆಗಳಿಗೆ ಹೆಚ್ಚು ಪ್ರಯೋಜನವಾಗಲಿಲ್ಲ. ಬೃಹತ್ ಕೈಗಾರಿಕೆಗಳು ನಗರ ಪ್ರದೇಶದಲ್ಲಿ ಅಭಿವೃದ್ಧಿ ಹೊಂದಿದರೆ, ಸಣ್ಣ ಹಾಗೂ ಗೃಹ ಕೈಗಾರಿಕೆಗಳು ಗ್ರಾಮೀಣ ಪ್ರದೇಶಗಳಲ್ಲಿ ಕುಂಠಿತಗೊಂಡವು. ಹೀಗೆ ಕೈಗಾರಿಕಾ ನೀತಿ ಗ್ರಾಮೀಣ, ನಗರ ಪ್ರದೇಶಗಳ ಅಸಮಾನತೆ ಹೆಚ್ಚಿಸುವಲ್ಲಿ ಕಾರಣವಾಯಿತು.

ಮೇಲ್ಕಂಡ ರೀತಿಯಲ್ಲಿ ಹಲವಾರು ಯೋಜನೆಗಳನ್ನು ಕೈಗೊಂಡರೂ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ ಹೆಚ್ಚಾದುದನ್ನು ಕಾಣಬಹುದು. ಇದರ ನಿವಾರಣೆಗಾಗಿ ಇನ್ನು ಹಲವಾರು ಕ್ರಮಗಳನ್ನು ಕೈಗೊಳ್ಳಬಹುದು. ಅವುಗಳಲ್ಲಿ ಮೂಲಭೂತ ಸೌಕರ್ಯಗಳ ವಿಸ್ತರಣೆ ಪ್ರಮುಖವಾದುದು. ನೀರಾವರಿ ಸೌಲಭ್ಯ, ಇಂಧನ ಉತ್ಪಾದನೆ, ಸಾರಿಗೆ ಸೌಲಭ್ಯ, ಮುಂತಾದವನ್ನು ಎಲ್ಲಾ ಪ್ರದೇಶಗಳಲ್ಲೂ ವಿಸ್ತರಣೆಯಾಗುವಂತೆ ಮಾಡುವುದು. ಹಲವು ಆರ್ಥಿಕ ಯೋಜನೆಗಳನ್ನು ವಿಕೇಂದ್ರೀಕರಣಗೊಳಿಸಿ ಅವುಗಳನ್ನು ಆಯಾ ರಾಜ್ಯದಲ್ಲಿ ತಯಾರಿಸಿ ಕಾರ್ಯಗತಗೊಳಿಸುವುದು. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಹಣಕಾಸಿನ ಯೋಜನೆ ಜಾರಿಗೊಳಿಸಿ ಅಂತಹ ಪ್ರದೇಶಗಳಲ್ಲಿ ಬಂಡವಾಳ ತೊಡಗಿಸಲು ಮುಂದೆ ಬರುವವರಿಗೆ ಸಹಾಯಧನ, ವಿದ್ಯುತ್ ಪೂರೈಕೆ, ಸಾರಿಗೆಸಂಪರ್ಕ ಒದಗಿಸುವುದು. ಕೃಷಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡುವುದು ಮುಂತಾದವು ಅಸಮಾನತೆ ನಿವಾರಿಸುವಂತಹ ಉತ್ತಮ ಪರಿಹಾರ ಕ್ರಮಗಳಾಗಿವೆ. (ಎಂ.ಎಸ್.ಕೆ.)

**ಅಮರಕಂಟಕ:** ಮಧ್ಯಪ್ರದೇಶದ ವಿಲಾಸಪುರ ಜಿಲ್ಲೆಯಲ್ಲಿನ ಒಂದು ಪರ್ವತ. ಮೇಕಲಾ ಎಂಬ ಹೆಸರೂ ಇರುವುದರಿಂದ ಇಲ್ಲಿ ಹುಟ್ಟುವ ನರ್ಮದಾ ನದಿಯನ್ನು ಮೇಕಲಕನ್ಯೆಯೆಂದು ಕರೆಯುವರು. ಕಾಳಿದಾಸ ಈ ಪರ್ವತವನ್ನು ಅಮರಕೂಟವೆಂದು ಕರೆದಿದ್ದಾನೆ (ಮೇಘದೂತ). ಇಲ್ಲಿ ಅಮರನಾಥ, ನರ್ಮದಾ ಮುಂತಾದ ಮಂದಿರಗಳಿವೆ. ಶಿವ ಸುಟ್ಟಂಥ ತ್ರಿಪುರಗಳಲ್ಲಿ ಒಂದು ಅಮರಕೂಟದಲ್ಲಿತೆಂದು ಮತ್ಸ್ಯಪುರಾಣದಲ್ಲಿ ಹೇಳಿದೆ. ಗ್ರಹಣಕಾಲದಲ್ಲಿ ಈ ಪರ್ವತಯಾತ್ರೆ ಮಾಡಿದರೆ ಹತ್ತು ಅಶ್ವಮೇಧಯಾಗ ಮಾಡಿದ ಪುಣ್ಯ ಬರುವುದೆಂದು ಪದ್ಮ ಪುರಾಣದಲ್ಲಿ ಹೇಳಿದೆ. ಇಲ್ಲಿರುವ ಭಗ್ನವಾದ ಕರ್ಣಮಂದಿರ ವಾಸ್ತುಶಿಲ್ಪದ ದೃಷ್ಟಿಯಿಂದ ಪರಿಶೀಲನಾರ್ಹವಾಗಿದೆ. (ಎಸ್.ಎನ್.)

**ಅಮರನಾಥ:** ಜಮ್ಮು ಮತ್ತು ಕಾಶ್ಮೀರ ಪರ್ವತ ಪ್ರದೇಶದಲ್ಲಿರುವ ಧಾರ್ಮಿಕ ಸ್ಥಳ. ಶ್ರೀನಗರದಿಂದ ಚಂದನವಾಡಿ, ಶೇಷನಾಗ ಮತ್ತು ಪಂಚತರಣಿಗಳನ್ನು ದಾಟಿ 8 ಕಿಮೀ ನಡೆದರೆ ಅಮರನಾಥ ಸಿಗುತ್ತದೆ. ಕೊನೆಯ 8 ಕಿಮೀ ದಾರಿಯಲ್ಲಿ 2.5 ಕಿಮೀ ಎತ್ತರದ ಬೆಟ್ಟವನ್ನು ಹತ್ತಿ ಇಳಿಯಬೇಕಾಗುವುದು. ಅನಂತರ ಹಿಮದಿಂದ ಆವರಿಸಿರುವ ಕಣಿವೆಯ ಒಳಗೆ ಸು. 3.2 ಕಿಮೀ ದೂರ ನಡೆದರೆ ಕ್ಷೇತ್ರ ಸನ್ನಿಹಿತವಾಗುತ್ತದೆ. ಹಿಮದ ಕಣಿವೆಯಲ್ಲಿ ಹಾದು ಹೋದರೆ ಬೆಟ್ಟದ ಮಧ್ಯೆ ಸು. 390 ಮೀ ಎತ್ತರದಲ್ಲಿ ಕಾಣುವುದೇ ಅಮರನಾಥ ಗುಹೆ. ಗುಹೆ 15 ಮೀ ಅಗಲ, 15 ಮೀ ಎತ್ತರವಾಗಿದೆ; ಈ ಆಯಕಟ್ಟಿನೊಳಗೆ ಸು. 20 ಮೀ ಉದ್ದವಿದೆ. ಗುಹೆಯ ಹೊರಭಾಗದ ಒಂದು ಪಕ್ಕದಲ್ಲಿ ಹರಿಯುತ್ತಿರುವ ಅಮರಗಂಗೆ ಎಂಬ ಸಣ್ಣ ಹಿಮಝರಿ ಯಾತ್ರಾರ್ಥಿಗಳ ಸ್ನಾನಪಾನಾದಿಗಳಿಗೆ ಪವಿತ್ರವೆನಿಸಿದೆ. ಗುಹೆಯ ಒಂದು ಮೂಲೆಯಲ್ಲಿ ದೊಡ್ಡ ಹಿಮರಾಶಿ ಶಿವಲಿಂಗಾಕಾರದಲ್ಲಿ ಕಾಣಿಸುವುದು. ಇದನ್ನು ಅಮರನಾಥಶಿವ ಎಂದು ಕರೆಯುವರು. ಈ ದೇವಾಲಯ ಅಲ್ಲಿನ ದೇವನಂತೆ ಕೇವಲ ಪ್ರಾಕೃತಿಕ, ಮಾನವನಿರ್ಮಿತವಲ್ಲ. ಪ್ರಕೃತಿಯ ನಗ್ನೀಕರಣಕಾರಕಗಳಾದ ಮಳೆ, ಗಾಳಿ ಬಿಸಿಲುಗಳು ಈ ಪವಾಡವನ್ನೆಸಗಿವೆ. ಇಲ್ಲಿ ಪ್ರಕೃತಿಯೇ ದೇವ, ದೇಗುಲ. ಯಾತ್ರಾರ್ಥಿಗಳೇ ಪೂಜಾರಿಗಳು. ಈ ವಿಶೇಷಗುಣದಿಂದಾಗಿ ಅಮರನಾಥ ಗುಹೆ ಬಹುಮುಖ್ಯ ಯಾತ್ರಾಸ್ಥಳಗಳಲ್ಲೊಂದಾಗಿದೆ. (ಎಂ.ಎಸ್.)

ಹಿಮಲಿಂಗ

ಅಮರನಾಥ ಗುಹೆಯ ಪ್ರವೇಶದ್ವಾರ

**ಅಮರಾವತಿ[1]:** ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ಸತ್ತೇನಪಲ್ಲಿ ತಾಲ್ಲೂಕಿಗೆ ಸೇರಿದಂತೆ ಕೃಷ್ಣಾ ನದಿಯ ದಂಡೆಯ ಮೇಲಿದೆ. ಧಾನ್ಯಕಟಕವೆಂಬುದು ಇದರ ಹಳೆಯ ಹೆಸರು. ಹಿಂದೆ ಇದು ಸಾತವಾಹನರ ರಾಜಧಾನಿಯಾಗಿತ್ತು. ಹತ್ತನೆಯ ಶತಮಾನದ ಸುಮಾರಿಗೆ ಇಲ್ಲಿನ ಅಮರೇಶ್ವರ ದೇವಾಲಯ ಪ್ರಸಿದ್ಧವಾಗಿತ್ತು. ಇಲ್ಲಿ ನಡೆಯುವ ಶಿವರಾತ್ರಿ ಉತ್ಸವ ತುಂಬ ವೈಭವಪೂರಿತವಾಗಿರುತ್ತದೆ. ಬೌದ್ಧಸ್ತೂಪದ ಕಲಾಕುಶಲತೆ ಈ ಸ್ಥಳ ಪ್ರಶಸ್ತಿಗೆ ಕಾರಣವಾಗಿದೆ. (ಎಸ್.ಕೆ.ಆರ್.)

**ಅಮರಾವತಿ²:** ತಮಿಳುನಾಡಿನ ಪ್ರಮುಖ ನದಿಗಳಲ್ಲಿ ಒಂದು ಹಾಗೂ ಕಾವೇರಿ ನದಿಯ ಉಪನದಿಗಳಲ್ಲಿ ಮುಖ್ಯವಾದುದು. ಕೊಂಗುನಾಡು ಎಂದು ಕರೆಯಲ್ಪಡುವ ಕೊಯಮತ್ತೂರಿನ ಪ್ರಸ್ಥಭೂಮಿಯಲ್ಲಿ ಹರಿಯುತ್ತದೆ. ಅಣ್ಣಾಮಲೈ ಮತ್ತು ಪಳನಿ ಬೆಟ್ಟಗಳ ಸಂಧಿಸ್ಥಾನದ ಬಳಿ ದಖನ್ನಿನ ಅತ್ಯುನ್ನತ ಶಿಖರವಾದ ಕೇರಳದ ಆನೈಮುಡಿಗೆ (2680 ಮೀ) ಪೂರ್ವದಲ್ಲಿ ಈ ನದಿ ಹುಟ್ಟುತ್ತದೆ. ಹೆಚ್ಚುಕಡಿಮೆ ಇದೇ ಸ್ಥಳದಲ್ಲಿ ಪಶ್ಚಿಮ ಅಮರಾವತಿ ಎಂಬ ನದಿ ಹುಟ್ಟಿ ವಿರುದ್ಧ ದಿಕ್ಕಿನಲ್ಲಿ ಹರಿದು ಕೇರಳದ ಪೆರಿಯಾರ್ ನದಿಯನ್ನು ಸೇರುತ್ತದೆ.

ಅಮರಾವತಿ ಪ್ರಾರಂಭದಲ್ಲಿ ಧಾರಾಪುರವನ್ನು ಹಾಯ್ದು ಅನಂತರ ಪೂರ್ವದಿಕ್ಕಿನಲ್ಲಿ ಮುಂದುವರಿದು ಕರೂರಿನಿಂದ ಸು. 15 ಕಿಮೀ ದೂರದಲ್ಲಿ ಕಾವೇರಿಯನ್ನು ಸೇರುತ್ತದೆ. ಪ್ರಾರಂಭದಲ್ಲಿ ಸು. 600 ಮೀ ಗಳಿಗಿಂತಲೂ ಎತ್ತರವಾದ ಬೆಣಚುಕಲ್ಲಿನ ಬೆಟ್ಟಗಳ ಮುಖಾಂತರ ಹರಿದು ಅನಂತರ ಸುಮಾರು ಸಮಮಟ್ಟವಾದ ಬಯಲಿನಲ್ಲಿ ಪ್ರವಹಿಸುತ್ತದೆ.

ಅಮರಾವತಿ–ಕಾವೇರಿ ಸಂಗಮಪ್ರದೇಶ ಇತಿಹಾಸ ಪ್ರಸಿದ್ಧವಾದುದು. ದಕ್ಷಿಣ ಭಾರತದ ಚೋಳ, ಚೇರ, ಪಾಂಡ್ಯ ಎಂಬ ಮೂರು ಮುಖ್ಯ ರಾಜವಂಶಗಳು ತಮ್ಮ ಭವಿಷ್ಯವನ್ನು ಇಲ್ಲಿ ನಿರ್ಧರಿಸಿದುವು. ಇದು ಮೈಸೂರು–ಇಂಗ್ಲಿಷರ ಕದನಗಳ ಕೇಂದ್ರವೂ ಆಗಿತ್ತು.

ಈ ನದಿ ವರ್ಷಪೂರ್ತಿ ತುಂಬಿ ಹರಿಯುತ್ತದೆ. ನಾಲ್ಕು ಉಪನದಿಗಳು ಇದನ್ನು ಸೇರುತ್ತವೆ. ಮೇಲ್ಕಣಿವೆ ಜನನಿವಾಸಕ್ಕೆ ಹೆಚ್ಚು ಅನುಕೂಲವಾಗಿಲ್ಲ. ಕೆಳಕಣಿವೆಯಲ್ಲಿ ನೀರಾವರಿ ವ್ಯವಸಾಯಕ್ಕೆ ಹೆಚ್ಚಿನ ಅನುಕೂಲವಿದೆ. ನದಿಗೆ ಹೊಂದಿಕೊಂಡಿರುವ ಪ್ರವಾಹ ಮೈದಾನದ ಅಂಚುಗಳಲ್ಲಿ ಜನಸಂಖ್ಯೆ ಹೆಚ್ಚಾಗಿದೆ. ನದಿಯ ಉದ್ದಕ್ಕೂ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಿ ಆಯಕಟ್ಟಿನ ಪ್ರದೇಶಗಳಲ್ಲಿ ಬತ್ತ, ಹತ್ತಿ, ಕಬ್ಬು ಮುಂತಾದ ಬೆಳೆಗಳಿಗೆ ನೀರಾವರಿ ಒದಗಿಸಲಾಗಿದೆ. ನದಿ ಹರಿಯುವ ಭೂಭಾಗ ಕೊಯಮತ್ತೂರು ಕೈಗಾರಿಕಾ ಕೇಂದ್ರದ ಉತ್ತಮ ಹಿನ್ನೀರು ಪ್ರದೇಶವಾಗಿದೆ. (ಕೆ.ಆರ್.ಆರ್.)

**ಅಮಾವಾಸ್ಯೆ ಮತ್ತು ಪೂರ್ಣಿಮೆ:** ಕೃಷ್ಣಪಕ್ಷದ ಕೊನೆಯದಿನ ಚಂದ್ರ ತನ್ನ ಅಕ್ಷದಲ್ಲಿ ಸುತ್ತುತ್ತಾ ಭೂಮಿಯನ್ನು 27 1/3 ದಿನಗಳಿಗೊಂದು ಬಾರಿ ಪ್ರದಕ್ಷಿಣೆ ಮಾಡುವನು. ಇದು ಚಂದ್ರನ ಆವರ್ತಕಾಲ. ಚಂದ್ರನು ದಿನಕ್ಕೆ $13^0 2'$ ಯಂತೆ ಪೂರ್ವಾಭಿಮುಖವಾಗಿ ಚಲಿಸುವನು. ಕ್ರಾಂತಿವೃತ್ತದ ಮೇಲೆ ಸೂರ್ಯ ಸಹ ತನ್ನ ದೃಷ್ಟಪಥದಲ್ಲಿ ದಿನಕ್ಕೆ ಸು. $1^0$ ಯಂತೆ, ಚಂದ್ರ ಚಲಿಸುವ ದಿಕ್ಕಿನಲ್ಲೇ ಚಲಿಸುವುದರಿಂದ ಸೂರ್ಯ ಮತ್ತು ಚಂದ್ರರಿಗೆ ಒಂದು ದಿನದಲ್ಲಿ $12^0 2'$ ಗಳಷ್ಟು ಕ್ರಾಂತಿವೃತ್ತದ ಮೇಲೆ ಅಂತರವುಂಟಾಗುತ್ತದೆ. ಸೂರ್ಯ ಮತ್ತು ಚಂದ್ರರ ಆಕಾಶಕಾಯ ರೇಖಾಂಶ (ಸೆಲಿಸ್ಟಿಯಲ್ ಲಾಂಗಿಟ್ಯುಡ್) ಒಂದೇ ಆದಾಗ ಅವರೀರ್ವರೂ ಒಂದೇ ದಿಕ್ಕಿನಲ್ಲಿ ಕಾಣುತ್ತಾರೆ. ಅಂದು ಇಬ್ಬರೂ ಒಟ್ಟಿಗೆ ಉದಯವಾಗಿ ಒಟ್ಟಿಗೆ ಮುಳುಗುವರು. ಆ ದಿನವೇ ಅಮಾವಾಸ್ಯೆ. ಆ ದಿನದ ಚಂದ್ರನನ್ನು ಹೊಸ ಚಂದ್ರ (ನ್ಯೂ ಮೂನ್) ಎನ್ನುವರು. ಆ ಸಮಯಕ್ಕೆ ಕತ್ತಲೆಯಲ್ಲಿರುವ ಚಂದ್ರನ ಭಾಗ ಪೂರ್ಣವಾಗಿ ಭೂಮಿಯ ಕಡೆಗೆ ತಿರುಗಿರುತ್ತದೆ. ಹೀಗಾಗಿ ಭೂಮಿಯಿಂದ ವೀಕ್ಷಿಸಿದಾಗ ಚಂದ್ರ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಈ ದಿನವನ್ನು ಚಂದ್ರನು ಯುತಿಯಲ್ಲಿರುವನೆಂದು ಹೇಳುತ್ತಾರೆ.

ಅಮಾವಾಸ್ಯೆ ದಿನದಿಂದ ಸೂರ್ಯನಿಗೆ ಸಂಬಂಧಿಸಿದಂತೆ ಚಂದ್ರನ ಅಂತರವು ದಿನಕ್ಕೆ $12^0 2'$ ರಂತೆ ಹೆಚ್ಚಾಗುತ್ತಾ, ಅಂದರೆ ಪ್ರತಿ ದಿನವೂ ಚಂದ್ರ ಸೂರ್ಯನಿಗಿಂತ $12^0 2'$ ನಷ್ಟು (ಪೂರ್ವಕ್ಕೆ) ಮುಂದಕ್ಕೆ ಚಲಿಸುತ್ತಾ $180^0$ ವ್ಯತ್ಯಾಸವಾದಾಗ ಸೂರ್ಯ–ಚಂದ್ರರು ಎದುರುಬದುರಿನ ದಿಕ್ಕುಗಳಲ್ಲಿ ಬರುವರು. ಅಂದು ಸೂರ್ಯಾಸ್ತ ಕಾಲಕ್ಕೆ ಚಂದ್ರೋದಯವಾಗುವುದು. ರಾತ್ರಿಯೆಲ್ಲಾ ಪೂರ್ಣ ಚಂದ್ರ ಬೆಳಗುವನು; ಅದೇ ಪೂರ್ಣಿಮೆ. ಅಂದು ಚಂದ್ರನು ವಿಯುತಿಯಲ್ಲಿರುವನು ಎನ್ನುವರು. (ಪಿ.ಎಂ.)

**ಅಮೂರ್ ನದಿ:** ಪೂರ್ವ ಸೈಬೀರಿಯದ ಮುಖ್ಯ ನದಿ. ಉದ್ದ 4800 ಕಿಮೀ. ಪಶ್ಚಿಮದಿಂದ ಪೂರ್ವಕ್ಕೆ ಹರಿದು ಪೆಸಿಫಿಕ್ ಸಾಗರವನ್ನು ಸೇರುತ್ತದೆ. ಷಿಲ್ ಮತ್ತು ಆರ್ಗನ್ ಉಪನದಿಗಳು. 17ನೆಯ ಶತಮಾನದಲ್ಲಿ ರಷ್ಯ ಪ್ರಬಲ ರಾಷ್ಟ್ರವಾಗಲು ಪ್ರಾರಂಭಿಸಿದಂದಿನಿಂದ ಈ ನದಿಯ ಪ್ರಾಮುಖ್ಯತೆ ಹೆಚ್ಚಿತ್ತು. ಬೇಸಗೆಯಲ್ಲಿ ಮಳೆಯಿಂದಾಗಿ ತುಂಬ ಪ್ರವಾಹವಿರುತ್ತದೆ. ಚಳಿಗಾಲದಲ್ಲಿ ನೀರು ಹೆಪ್ಪುಗಟ್ಟುತ್ತದೆ. ಚಿಕ್ಕ ದೋಣಿಗಳ ಸಂಚಾರ 3200 ಕಿಮೀ ವರೆಗೂ ನಡೆಯಬಹುದು. ಈಚೆಗೆ ವಿದ್ಯುತ್ ಉತ್ಪಾದನೆಗೆ ನದಿನೀರನ್ನು ಬಳಸಿಕೊಳ್ಳುವ ಪ್ರಯತ್ನ ನಡೆದಿದೆ. (ಎಂ.ಎಸ್.)

**ಅಮೃತಶಿಲೆ:** ಇದೊಂದು ರೂಪಾಂತರ ಶಿಲೆ (ಮಾರ್ಬಲ್). ಕ್ಯಾಲ್ಸಿಯಂ ಕಾರ್ಬೊನೇಟ್ ಅಥವಾ ಮೆಗ್ನೀಷಿಯಂ ಕಾರ್ಬೊನೇಟ್ ಇದರ ಮೂಲವಸ್ತು. ಹೆಚ್ಚು ಗಡುಸಲ್ಲದ ಈ ಶಿಲೆಯನ್ನು ಭೂಮಿಯಿಂದ ಹಲಗೆಗಳಾಗಿ ಅಥವಾ ದಿಮ್ಮಿಗಳಾಗಿ ಸೀಳಿ ಹೊರತೆಗೆದು, ಗರಗಸದಿಂದ ಕೊಯ್ದು ಬೇಕಾದ ಅಳತೆಗಳನ್ನು ಪಡೆಯಬಹುದು. ಸಾಣೆ ಹಿಡಿದು ನಯವಾಗಿ ಹೊಳೆಯುವಂತೆ ಮಾಡಬಹುದು. ಇದು ಒಳ್ಳೆ ಅಲಂಕಾರದ ಕೆತ್ತನೆ ಕೆಲಸಕ್ಕೆ ಉಪಯುಕ್ತವಾದುದು. ಶುದ್ಧ ಸುಣ್ಣಕಲ್ಲು ರೂಪಾಂತರಗೊಂಡು ಬಿಳಿಯ ಅಮೃತಶಿಲೆಯಾಗಿ ಮಾರ್ಪಡುತ್ತದೆ. ಅಶುದ್ಧ ಸುಣ್ಣಕಲ್ಲು ಮತ್ತು ಡಾಲೊಮೈಟ್‌ಗಳಿಂದ ಬಗೆಬಗೆಯ ಬಣ್ಣದ ಅಮೃತಶಿಲೆಗಳಾಗುತ್ತವೆ. ಬಣ್ಣದ ಹರಳು ಮತ್ತು ಸ್ವಭಾವ ಮೂಲ ಕಶ್ಮಲಗಳನ್ನು ಅನುಸರಿಸಿವೆ. ಬೂದು, ನೀಲಿಬೂದು, ಹಳದಿ, ಕಂದು ಬಣ್ಣ, ಕೆಂಪುಹಸಿರು, ಹಸಿರುಕಪ್ಪು ಮುಂತಾದ ಬಣ್ಣಗಳು ಬಗೆಬಗೆಯಾಗಿವೆ. ಅಮೃತಶಿಲಾಭೇದಗಳ ವಿಗ್ರಹಗಳನ್ನು ಕಡೆಯಲು ಯೋಗ್ಯವಾದ ಅಮೃತಶಿಲೆ ಮತ್ತು ಸೂಕ್ಷ್ಮವಾದ ಹೆಣಿಗೆಯುಳ್ಳ ಶುದ್ಧಬಿಳಿಯ ಶಿಲೆ ಪ್ರಮುಖ. ಕಟ್ಟಡಗಳಿಗೆ ಯೋಗ್ಯವಾದ ಬಣ್ಣ ಮತ್ತು ಬಲವನ್ನುಳ್ಳ ಅಮೃತಶಿಲೆಗಳು ಶಿಲ್ಪಾರ್ಹಶಿಲೆಗಳೆನಿಸಿಕೊಂಡಿವೆ. ಟರ್ಪಂಟೀನ್ ಯುಕ್ತ ಅಮೃತಶಿಲೆಗಳು ಹಳದಿ ಮತ್ತು ಕಪ್ಪು ಕಲೆಗಳಿಂದ ಕೂಡಿವೆ; ರೂಯಿನ್ ಎಂಬುದು ಅಸಮವಾಗಿರುವ ಮೂಲೆ ಮೂಲೆಯ ರೇಖಾವಿನ್ಯಾಸದಿಂದ ಕೂಡಿದೆ.

ಭಾರತದಲ್ಲಿ ಅಮೃತಶಿಲಾ ನಿಕ್ಷೇಪಗಳು ರಾಜಸ್ತಾನ ಮತ್ತು ಮಧ್ಯ ಪ್ರದೇಶಗಳಲ್ಲಿವೆ. ಹಿಂದಿನ ಕಾಲದ ಅನೇಕ ಅರಮನೆಗಳು, ದೇವಾಲಯಗಳು, ವಿಗ್ರಹಗಳು ಮತ್ತು ಸಮಾಧಿಭವನಗಳು ಅಮೃತಶಿಲೆಯಿಂದ ಕಟ್ಟಲ್ಪಟ್ಟಿವೆ. ತಾಜ್‌ಮಹಲ್ ಇಂಥ ಶಿಲ್ಪಕ್ಕೆ ಉತ್ತಮ ನಿದರ್ಶನ. ಈಗ ಎಲ್ಲ ವಿಧದ ಕಟ್ಟಡಗಳಿಗೆ ಅಮೃತ ಶಿಲೆಯನ್ನು ಬಳಸುವರು. ಯುರೋಪು ಮತ್ತು ಅಮೆರಿಕಗಳಲ್ಲೂ ಇದಕ್ಕೆ ಉತ್ತಮ ನಿದರ್ಶನಗಳಿವೆ. ಈ ಅಮೃತಶಿಲೆ ಶಿಲ್ಪಕಲೆ ಈಗಲೂ ಪ್ರಸಿದ್ಧವಾಗಿದೆ. (ಎಸ್.ಬಿ.ಎಲ್.; ಕೆ.ಎಸ್.ಕೆ.)

**ಅಮೃತಸರ:** ಪೂರ್ವ ಪಂಜಾಬ್ ಪ್ರಾಂತ್ಯದಲ್ಲಿನ ಒಂದು ಜಿಲ್ಲೆ ಮತ್ತು ಮುಖ್ಯ ಪಟ್ಟಣ. ನಾಲ್ಕನೆಯ ಗುರು ರಾಮದಾಸನಿಂದ ಸ್ಥಾಪನೆಯಾಯಿತು (1577). ಪ್ರಸಿದ್ಧ ವ್ಯಾಪಾರ ಕೇಂದ್ರ. ಪಟ್ಟಣದ ವಿಸ್ತೀರ್ಣ: 5075 ಚಕಿಮೀ. ಜನಸಂಖ್ಯೆ: ಸು. 34,04,680.

ಸ್ವರ್ಣ ಮಂದಿರ

ಸಿಖ್ಖರ ಯಾತ್ರಾಸ್ಥಳ ಮತ್ತು ಮತೀಯ ಕೇಂದ್ರಸ್ಥಾನ. ಇಲ್ಲಿ ಪ್ರಸಿದ್ಧವೆನಿಸಿದ ಸುವರ್ಣ ಮಂದಿರವಿದೆ. ಸಿಖ್ಖರ ವಿಶ್ವವಿದ್ಯಾಲಯ ಇಲ್ಲಿ ಸ್ಥಾಪನೆಯಾಗಿದೆ. ಇಲ್ಲಿ ತಯಾರಾಗುವ ಕಾಶ್ಮೀರಿ ಶಾಲುಗಳು ಮತ್ತು ಜಮಖಾನಗಳು ಪ್ರಖ್ಯಾತಿ ಪಡೆದಿವೆ. ಹಿಂದೆ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದುದು (1919) ಈ ನಗರದಲ್ಲಿಯೆ. (ಎಂ.ಎಸ್.)

**ಅಮೆಜ಼ಾನ್ ನದಿ:** ಪ್ರಪಂಚದ ಅತಿ ದೊಡ್ಡ ನದಿಗಳಲ್ಲೊಂದು. ಇದರಂತೆ ದೊಡ್ಡ ಪ್ರಮಾಣದಲ್ಲಿ ನೀರನ್ನು ತಂದು ಸಮುದ್ರಕ್ಕೆ ಸುರಿಯುವ ಬೇರೊಂದು ನದಿ ಪ್ರಪಂಚದಲ್ಲಿಲ್ಲ. ದಕ್ಷಿಣ ಅಮೆರಿಕದಲ್ಲಿ ಪೆರುವಿನ ಆಂಡೀಸ್ ಪರ್ವತದಲ್ಲಿ ಹುಟ್ಟಿ ಬ್ರೆಜ಼ಿಲ್ ಪ್ರಾಂತದಲ್ಲಿ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಉತ್ತರ ಬ್ರೆಜ಼ಿಲ್‌ನ ಎಲ್ಲ ಭಾಗ, ಬೊಲಿವಿಯ, ಪೆರು, ಈಕ್ವೆಡಾರ್, ಕೊಲಂಬಿಯ ಮತ್ತು ವೆನಿಜ಼ೂಲಗಳ ಬಹುಮಟ್ಟಿನ ಪ್ರದೇಶಗಳಿಂದ ನೀರನ್ನು ಪಡೆಯುತ್ತದೆ. ಅಂದರೆ ದಕ್ಷಿಣ ಅಮೆರಿಕದ 2/3 ನೀರನ್ನು ಬಸಿಯುತ್ತದೆ. ನದಿಯ ಉದ್ದ ಸು. 6240 ಕಿಮೀ. ಜಲಾನಯನ ಭೂಮಿಯ ವಿಸ್ತಾರ: ಸು. 7,050,000 ಚ.ಕಿಮೀ. ಉದ್ದಕ್ಕೂ ನೂರಾರು ಉಪನದಿಗಳು ಬಂದು ಸೇರುತ್ತವೆ. ಮಳೆಗಾಲದಲ್ಲಿ ಇದರ ಆಳ ಸು. 36 ಮೀ, 3680 ಕಿಮೀ ಗಳವರೆಗೆ ಹಡಗುಗಳು ಓಡಾಡುತ್ತವೆ. ಮಳೆಗಾಲದಲ್ಲಿ ಪ್ರವಾಹವಿದ್ದಾಗ ನೀರಿನ ವೇಗ ಗಂಟೆಗೆ 8 ಕಿಮೀ, ಉಳಿದ ಕಾಲದಲ್ಲಿ 5 ಕಿಮೀ. ಈ ಬೃಹನ್ನದಿಯಲ್ಲಿ ಹರಿಯುವ ನೀರಿನ ಪರಿಮಾಣದಿಂದ ಇದಕ್ಕೆ ಒಳನಾಡು ಕಡಲು (ಇನ್‌ಲ್ಯಾಂಡ್ ಸೀ) ಎಂಬ ಹೆಸರು ಬಂದಿದೆ. ಭೂಮಿಯ ಮೇಲೆ ಹರಿಯುವ ಎಲ್ಲಾ ನದಿಗಳ ಸು. 1/5 ಭಾಗದಷ್ಟು ನೀರನ್ನು ಅಮೆಜ಼ಾನ್ ನದಿ ಒಂದೇ ಹರಿಸುತ್ತದೆ.

ಇದರ ನೀರನ್ನಾಶ್ರಯಿಸಿ ಇಡೀ ಪ್ರದೇಶವನ್ನಾಕ್ರಮಿಸಿ ದಟ್ಟವಾದ ಉಷ್ಣವಲಯದ ಕಾಡು ಬೆಳೆದಿದೆ. ಯಥೇಚ್ಛವಾಗಿ ನೀರು, ಮೇಲೆ ಬಿಸಿಲು–ಇವುಗಳನ್ನು ಪಡೆದು ಬೆಳೆದು ನಿಂತಿರುವ ದೈತ್ಯಾಕಾರದ ಮರಗಳೂ ಅವುಗಳನ್ನು ಬಳಸಿಕೊಂಡು ಬೆಳೆದು ಬಿಸಿಲಿಗಾಗಿ



ಅಮೆಜಾನ್ ನದಿಯ ಮುಖಜಭೂಮಿ, ಉಪಗ್ರಹ ಚಿತ್ರ

ಅವುಗಳ ತುದಿಗೂ ಹೋಗಿ ಎಲೆಗಳನ್ನು ಹರಡಿಕೊಂಡಿರುವ ಅಷ್ಟೇ ಬೃಹದಾಕಾರದ ಬಳ್ಳಿಗಳೂ ಅಲ್ಲಿವೆ. ದಟ್ಟವಾಗಿ ಹರಡಿರುವ ಎಲೆಗಳಿಂದ ಎಷ್ಟೋ ಕಡೆ ಸೂರ್ಯರಶ್ಮಿ ಭೂಮಿಯನ್ನು ತಲುಪಲಾರದು. ಕೆಲವು ಕಡೆಗಳಲ್ಲಂತೂ ಕಪಿ ಮುಂತಾದ ವೃಕ್ಷವಾಸಿ ಪ್ರಾಣಿಗಳು ಮರಗಳ ಮೇಲೆಯೇ ಹುಟ್ಟಿ ಅಲ್ಲೇ ಬೆಳೆದು ನೆಲವನ್ನು ಕಾಣದೆಯೇ ಸಾಯುತ್ತವೆ. ಈ ನದಿ ಸಾಗರಕ್ಕೆ ಹೊತ್ತು ತರುವ ನೆರೆಮಣ್ಣು ದಿನಕ್ಕೆ ಮೂವತ್ತು ಲಕ್ಷ ಟನ್ನುಗಳಷ್ಟು ಎಂದು ಅಂದಾಜು. ಮಳೆ ಕಡಿಮೆ ಬೀಳುವ ಕೆಲವು ಕಡೆಗಳಲ್ಲಿ ಹುಲ್ಲುಗಾವಲುಗಳು ಹರಡಿವೆ. ಪ್ರಪಂಚದ ಎಲ್ಲ ಬಗೆಯ ಸಸ್ಯವರ್ಗಗಳೂ ಇಲ್ಲಿವೆ. ಕಣಿವೆಗಳ ಕೆಳಭಾಗದಲ್ಲಿ ಬಾಳೆಹಣ್ಣು, ಕಾಫಿ, ಕಿತ್ತಳೆ ಮತ್ತು ಎತ್ತರ ಪ್ರದೇಶದಲ್ಲಿ ಆಲೂಗೆಡ್ಡೆ, ಬಾರ್ಲಿ, ರಬ್ಬರ್, ಟಾಪಿಯೋಕವನ್ನು ಬೆಳೆಯಲಾಗುತ್ತದೆ ಕ್ವಿನೈನ್ ಮರಗಳಿವೆ.

ಅಮೆಜಾನ್ ನದಿ ಬಳಸು, ಬ್ರೆಜಿಲ್

ಇಲ್ಲಿ ಅನೇಕ ಬಗೆಯ ಮರ ಹತ್ತುವ ಮತ್ತು ಮರಗಳ ಮೇಲೆಯೇ ವಾಸಿಸುವ ಪ್ರಾಣಿಗಳೂ ಚಿರತೆ ಮುಂತಾದ ಕ್ರೂರ ಪ್ರಾಣಿಗಳೂ ಗಿಳಿ, ಹದ್ದು, ನೀರುಕೋಳಿ ಮೊದಲಾದ ಪಕ್ಷಿಗಳೂ ಅಸಂಖ್ಯಾತವಾಗಿವೆ. ಕಪ್ಪೆ, ಹಾವುಗಳು ಹೆಚ್ಚು. ನದಿ ದಂಡೆಯ ಮೇಲೆ ಕೆಲವು ಪ್ರಸಿದ್ಧ ಪಟ್ಟಣಗಳಿವೆ. ರಬ್ಬರ್ ಉತ್ಪಾದನೆ ಈಚೆಗೆ ಕಡಿಮೆಯಾಗಿದೆ. ನದಿಯ ಅನೇಕ ಭಾಗಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಪ್ರವಾಹವನ್ನು ತಡೆದು ಜನ ವಸತಿಗೆ ಅನುಕೂಲ ಮಾಡಿಕೊಟ್ಟರೆ ಈ ಪ್ರದೇಶ ಇಡೀ ಪ್ರಪಂಚದ ಆಹಾರ ಕಣಜವಾಗಬಲ್ಲದು. (ಬಿ.ಪಿ.)

**ಅಮೆರಿಕ ಸಂಯುಕ್ತ ಸಂಸ್ಥಾನಗಳು:** 50 ರಾಜ್ಯಗಳನ್ನು ಒಳಗೊಂಡಿರುವ ಪ್ರಪಂಚದಲ್ಲೇ ಅತ್ಯಂತ ಸಂಪದ್ಭರಿತವಾದ ರಾಷ್ಟ್ರ. ಉತ್ತರ ಅಮೆರಿಕದಲ್ಲಿ $25^0$ ಮತ್ತು $49^0$ ಉತ್ತರ ಅಕ್ಷಾಂಶ, $69^0$ ಮತ್ತು $125^0$ ಪಶ್ಚಿಮ ರೇಖಾಂಶಗಳ ನಡುವೆ ಇದೆ. ಇದನ್ನು ಅಮೆರಿಕವೆಂದೇ ಕರೆಯುವುದು ವಾಡಿಕೆ. ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ, ದಕ್ಷಿಣಕ್ಕೆ ಮೆಕ್ಸಿಕೊ ಕೊಲ್ಲಿ ಮತ್ತು ಮೆಕ್ಸಿಕೊ ದೇಶ, ಪಶ್ಚಿಮಕ್ಕೆ ಪೆಸಿಫಿಕ್ ಸಾಗರ, ಉತ್ತರಕ್ಕೆ ಕೆನಡ ದೇಶಗಳಿವೆ. ಖಂಡಾಂತರಪ್ರದೇಶದ ವಿಸ್ತೀರ್ಣ 9,809,155 ಚ.ಕಿಮೀ. ಗಡಿಯಾಚೆ ಈ ರಾಷ್ಟ್ರಕ್ಕೆ ಸೇರಿರುವ ಪ್ರದೇಶಗಳಲ್ಲಿ ಅಲಾಸ್ಕ, ಹವಾಯ್, ಪನಾಮಾ ಕಾಲುವೆಪ್ರಾಂತ್ಯ–ಇವು ಮುಖ್ಯವಾದುವು. ಅಲಾಸ್ಕ ಮತ್ತು ಹವಾಯ್ ದೇಶಗಳೂ ಸೇರಿ ಜನಸಂಖ್ಯೆ 300 ಮಿಲಿಯನ್ (2005).




ಶೇ 65 ರಷ್ಟು ಜನ ನಗರ ವಾಸಿಗಳು. 150 ನಗರಗಳು ಒಂದೂವರೆ ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ್ದುವು (2003).

ಭೂಮಿಯ ಮೇಲ್ಮೈರಚನೆಗೆ ಅನುಸಾರವಾಗಿ ಸಂಯುಕ್ತಸಂಸ್ಥಾನವನ್ನು ಐದು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು: 1. ಪೂರ್ವದ ಸಮುದ್ರತೀರ ಪ್ರದೇಶ, ತೃತೀಯ ಯುಗಕ್ಕೆ ಹಿಂದಿನ ಕಾಲದ ಅವಸಾದೀ ಶಿಲೆಗಳಿಂದ ಕೂಡಿದ ಈ ಭೂಮಿ ಅಟ್ಲಾಂಟಿಕ್ ಸಾಗರದ ಕಡೆಗೆ ಇಳಿಜಾರಾಗಿದೆ. ನ್ಯೂಯಾರ್ಕಿನ ಉತ್ತರಕ್ಕೆ ಮಾತ್ರ, ಇತ್ತೀಚೆಗೆ ಆದ ಭೂಕುಸಿತದಿಂದಾಗಿ ಬಹುಭಾಗವನ್ನು ಸಮುದ್ರ ಆವರಿಸಿದೆ. 2. ಈ ತೀರದ ಪಶ್ಚಿಮಕ್ಕಿರುವ ಅಪಲೇಷಿಯನ್ ಪರ್ವತಪ್ರಾಂತ್ಯ. ಇಲ್ಲಿ ಕಡಿದಾದ ಪರ್ವತಶ್ರೇಣಿಗಳು, ಕಣಿವೆಗಳು, ಪ್ರಸ್ಥಭೂಮಿಪ್ರದೇಶಗಳು ಇವೆ. ಇದು ಪ್ರಪಂಚದಲ್ಲೇ ಅತಿದೊಡ್ಡ ಕಲ್ಲಿದ್ದಲು ಗಣಿಪ್ರದೇಶ. 3. ಇದರ ಪಶ್ಚಿಮಕ್ಕೆ, ವಿಶಾಲವಾದ ಮಿಸಿಸಿಪ್ಪಿ ಜಲಾನಯನಭೂಮಿ ಅತ್ಯಂತ ಫಲವತ್ತಾದ ನದೀಬಯಲು. ಇಲ್ಲಿ ಆಗುವಷ್ಟು ಧಾನ್ಯಗಳ ಉತ್ಪಾದನೆ ಬೇರೆಲ್ಲೂ ಆಗುವುದಿಲ್ಲ. ಉತ್ತರಭಾಗದಲ್ಲಿ ಅಪಾರವಾಗಿ ಕಲ್ಲಿದ್ದಲು, ದಕ್ಷಿಣದಲ್ಲಿ ಕಲ್ಲೆಣ್ಣೆ ದೊರಕುತ್ತವೆ. ಪಶ್ಚಿಮಕ್ಕೆ ಹೋದಂತೆ ಈ ಬಯಲು ರಾಕಿಪರ್ವತಗಳ ಕಡೆಗೆ ಸ್ವಲ್ಪ ಎತ್ತರವಾಗುತ್ತದೆ. 4. ಈ ಬಯಲಿನ ಮಧ್ಯದಲ್ಲಿ ಕೊಂಚ ದಕ್ಷಿಣಕ್ಕೆ ಒಂದು ಬೆಟ್ಟಗುಡ್ಡಗಳಿಂದ ಆವರಿಸಿರುವ ಪ್ರದೇಶವಿದೆ. ಇದರ ಮುಖ್ಯಭಾಗವನ್ನು ಓಸ್ಟಾರ್ಕ್ ಪ್ರಸ್ಥಭೂಮಿ ಎಂದು ಕರೆಯುವರು. 5. ಇದಕ್ಕೆ ಪಶ್ಚಿಮದಲ್ಲಿ ವಿಶಾಲ ಪ್ರದೇಶವನ್ನಾಕ್ರಮಿಸಿರುವ ಪರ್ವತಶ್ರೇಣಿಗಳು ಮತ್ತು ಪ್ರಸ್ಥಭೂಮಿಗಳಿವೆ. ಉನ್ನತಪ್ರದೇಶದ ಪೂರ್ವ ಅಂಚು ರಾಕಿಪರ್ವತಶ್ರೇಣಿ. ಅದರ ಪಶ್ಚಿಮದ್ದೆ ಪ್ರಸ್ಥಭೂಮಿ. ಇನ್ನೂ ಪಶ್ಚಿಮಕ್ಕೆ ಇದಕ್ಕಿಂತ ತಗ್ಗಾದ ಜಲಾನಯನಭೂಮಿ. ಇದರ ಪಶ್ಚಿಮದ ಅಂಚಿನಲ್ಲಿ ಪರ್ವತ ಶ್ರೇಣಿಯಿದೆ. ಇದಕ್ಕೂ ಪೆಸಿಫಿಕ್ ಸಾಗರತೀರಕ್ಕೂ ಮಧ್ಯೆ ಸಮಾನಾಂತರ ಪರ್ವತಶ್ರೇಣಿಗಳೆರಡಿವೆ. ಈ ಶ್ರೇಣಿಗಳ ಮಧ್ಯೆ ಫಲವತ್ತಾದ ಕ್ಯಾಲಿಫೋರ್ನಿಯ ಕಣಿವೆ ಇದೆ. ಪೂರ್ವ ತೀರದಲ್ಲಿ ಆಳವಾದ ನದೀಮುಖಗಳಿರುವುದರಿಂದ ವ್ಯಾಪಾರಯೋಗ್ಯವಾದ ಬಂದರುಗಳಿವೆ. ಪಶ್ಚಿಮತೀರದಲ್ಲಿ ಸ್ಯಾನ್‌ಫ್ರಾನ್ಸಿಸ್ಕೊ, ಪ್ಯೂಜೆಟ್ ಸೌಂಡ್ ಎರಡೇ ಉಪಯುಕ್ತ ರೇವುಗಳು.

ವಾಯುಗುಣ : ಇಷ್ಟೊಂದು ವ್ಯಾಪಕವಾಗಿರುವ ಸಂಯುಕ್ತಸಂಸ್ಥಾನದ ವಾಯುಗುಣ ವೈವಿಧ್ಯತೆಯಿಂದ ಕೂಡಿದೆ. ಆಗ್ನೇಯಭಾಗದಲ್ಲಿ ಉಷ್ಣವಲಯದ ವಾಯುಗುಣವಿದೆ; ಶಾಖದಲ್ಲಿ ಬೇಸಗೆಗೂ ಚಳಿಗಾಲಕ್ಕೂ ಹೆಚ್ಚು ವ್ಯತ್ಯಾಸವಿಲ್ಲ. ಪೂರ್ವ ಮತ್ತು ಮಧ್ಯದ ಪ್ರದೇಶಗಳಲ್ಲಿ ಈ ವ್ಯತ್ಯಾಸ ಹೆಚ್ಚು. ಪಶ್ಚಿಮದ ತೀರ ಪ್ರದೇಶಗಳಲ್ಲಿ ಕಡಿಮೆ. ಮಳೆ ಅಟ್ಲಾಂಟಿಕ್ ತೀರದ ಪ್ರದೇಶಗಳಲ್ಲಿ, ಅಲಬಾಮ, ಮಿಸಿಸಿಪ್ಪಿ ಮತ್ತು ಮೆಕ್ಸಿಕೊ ಕೊಲ್ಲಿಯ ಸುತ್ತಣ ಪ್ರಾಂತಗಳಲ್ಲಿ ಹೆಚ್ಚು; ಪಶ್ಚಿಮಕ್ಕೆ ಹೋದಂತೆ ಕಡಿಮೆ. ಕೊಲರಾಡೊ, ಕ್ಯಾಲಿಫೋರ್ನಿಯಗಳಲ್ಲೂ ಕಡಿಮೆ. ಆದರೆ ಪೆಸಿಫಿಕ್ ತೀರದ ಉತ್ತರಭಾಗದಲ್ಲಿ ಮಳೆ ಸಮೃದ್ಧ. ಮಳೆ ತೀರ ಕಡಿಮೆಯಾಗಿರುವ ಪ್ರಾಂತಗಳು ನ್ಯೂಮೆಕ್ಸಿಕೊ, ನೆವಾಡ, ಮಾಂಟಾನ ಮತ್ತು ಅರಿಜೋನ. ಪೆಸಿಫಿಕ್ ಸಾಗರದ ಮೇಲಿಂದ ಬರುವ ಮಾರುತಗಳನ್ನು ಸಿಯಾರ ನೆವಾಡ ಪರ್ವತಗಳು ತಡೆಯುವುದರಿಂದ ಯೂಟ ಮತ್ತು ನೆವಾಡಗಳಲ್ಲಿ ವಾರ್ಷಿಕ ಮಳೆ 25 ಸೆಂಮೀಗಿಂತ ಕಡಿಮೆ. ಚಳಿಗಾಲದಲ್ಲಿ ಕೆನಡ ಕಡೆಯಿಂದ ಬೀಸುವ ಚಳಿಮಾರುತಗಳಿಗೆ ತಡೆಯಿಲ್ಲದಿರುವುದರಿಂದ ಮಿಸೌರಿ ಮಿಸಿಸಿಪ್ಪಿ ಬಯಲಿನ ಉತ್ತರ ಭಾಗದಲ್ಲಿ ತುಂಬ ಚಳಿ.

ಖನಿಜಸಂಪತ್ತು: ಸಂಯುಕ್ತಸಂಸ್ಥಾನದಲ್ಲಿ ಎಲ್ಲ ವಿಧದ ಖನಿಜಗಳೂ ಹೇರಳವಾಗಿ ದೊರೆಯುತ್ತವೆ. ಏಳು ಕಲ್ಲಿದ್ದಲಿನ ಭಾರಿ ಗಣಿಗಳಿವೆ. ಸುಪೀರಿಯರ್ ಸರೋವರದ ಹತ್ತಿರ ಕಬ್ಬಿಣದ ಅದಿರಿನ ಗಣಿಗಳಿವೆ. ಉತ್ತಮ ದರ್ಜೆಯ ತಾಮ್ರದನಿಕ್ಷೇಪ ಲಭ್ಯವಿದೆ. ಅನಿಲಗಳು ಟೆಕ್ಸಾಸ್, ಓಕ್ಲಹಾಮ, ಕ್ಯಾಲಿಫೋರ್ನಿಯ ಪ್ರಾಂತ್ಯಗಳಲ್ಲಿ ಹೇರಳವಾಗಿವೆ. ಪ್ರಶಸ್ತ ಲೋಹಗಳು ಕ್ಯಾಲಿಫೋರ್ನಿಯ, ಇಡಾಹೊ, ಮಾಂಟಾನ, ಯೂಟ, ಅರಿಜ಼ೋನ, ಅಲಾಸ್ಕಗಳಲ್ಲಿ ವಿಪುಲವಾಗಿವೆ. ದೇಶದ ಕೈಗಾರಿಕಾಪ್ರಗತಿಗೆ ಅವಶ್ಯಕವಾದ ಎಲ್ಲ ಸಂಪನ್ಮೂಲಗಳನ್ನೂ ನಿಸರ್ಗವೇ ಒದಗಿಸಿದೆ. ವ್ಯವಸಾಯೋತ್ಪನ್ನದಲ್ಲೂ ದೇಶ ಬೃಹತ್‌ಪ್ರಮಾಣದಲ್ಲಿ ಅನುಕೂಲತೆಯನ್ನು ಪಡೆದಿದೆ. ಭೂಮಿಯ ಶೇ 60 ಭಾಗದಲ್ಲಿ ಸು. 43 ಲಕ್ಷ ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಗೋದಿ, ಓಟ್ಸ್, ಜವೆ ಮತ್ತು ಇತರ ಧಾನ್ಯಗಳು ಮುಖ್ಯ ಬೆಳೆಗಳು. ಬತ್ತವನ್ನೂ ಕೆಲವು ಕಡೆ ಬೆಳೆಯುವರು. ಕೆಂಟುಕಿ, ದಕ್ಷಿಣ ಕೆರೊಲಿನ, ವರ್ಜೀನಿಯ, ಉತ್ತರ ಕೆರೊಲಿನ, ಟೆನೆಸ್ಸಿ, ಜಾರ್ಜಿಯ ಪ್ರಾಂತಗಳಲ್ಲಿ ಹೊಗೆಸೊಪ್ಪು ಮುಖ್ಯ ಬೆಳೆ. ಹತ್ತಿಯನ್ನು ಟೆಕ್ಸಾಸ್ ಹಾಗೂ ಅನೇಕ ಪ್ರಾಂತಗಳಲ್ಲಿ ಬೆಳೆಯುವರು. ಲೂಸಿಯಾನದಲ್ಲಿ ಸಕ್ಕರೆಯ ಉತ್ಪನ್ನ ಹೆಚ್ಚು; ಅನೇಕ ಕಡೆಗಳಲ್ಲಿ ಬೀಟ್ ಗೆಡ್ಡೆಯಿಂದ ಸಕ್ಕರೆ ಉತ್ಪಾದಿಸಲಾಗಿದೆ.

ಅಗಾಧ ಮೂಲಸಂಪತ್ತನ್ನು ಪಡೆದಿರುವ ಸಂಯುಕ್ತ ಸಂಸ್ಥಾನ ಬೃಹತ್ ಕೈಗಾರಿಕಾ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಿದೆ. ರಾಷ್ಟ್ರದ ಅತ್ಯಂತ ದೊಡ್ಡ ಕೈಗಾರಿಕಾಪ್ರದೇಶ ಬೃಹತ್ ಸರೋವರಗಳಿಂದ ಇಲ್ಲಿನಾಯ್ ಇಂಡಿಯಾನಗಳವರೆಗೂ ಹರಡಿದೆ. ಇತ್ತೀಚಿನ ಮೂವತ್ತು ವರ್ಷಗಳಲ್ಲಿ ದೇಶದ ಆಗ್ನೇಯ, ನೈಋತ್ಯಭಾಗಗಳಿಗೂ ಕೈಗಾರಿಕೆ ವ್ಯಾಪಿಸಿದೆ. ಯಾಂತ್ರೀಕರಣ ಎಲ್ಲ ರಂಗಗಳಲ್ಲೂ ಬೆಳೆದಿರುವುದರಿಂದ ಕೈಗಾರಿಕೆಯಲ್ಲಿ ಯಂತ್ರಕಲಾಪರಿಣತರ ಸಂಖ್ಯೆ ಕೊಂಚ ಹೆಚ್ಚಿದೆಯೇ ಹೊರತು ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದೆ. 1880 ರಿಂದಲೂ ರಾಷ್ಟ್ರದ ರಫ್ತು ಆಮದಿಗಿಂತಲೂ ಹೆಚ್ಚಾಗಿಯೇ ಇದೆ. ರಫ್ತಾಗುವ ವಸ್ತುಗಳು–ಕಲ್ಲಿದ್ದಲು ಮೊದಲಾದ ಅದಿರುಗಳು, ಕಚ್ಚಾ ಹತ್ತಿ, ಹೊಗೆಸೊಪ್ಪು ಮುಂತಾದವು, ಆಹಾರಪದಾರ್ಥಗಳು, ತಯಾರಾದ ಯಾಂತ್ರಿಕ ಸಲಕರಣೆಗಳು ಮತ್ತು ಇತರ ಸಿದ್ಧ ವಸ್ತುಗಳು.

ವಿಶಾಲವಾದ ನದಿಬಯಲುಗಳು, ವಾಯುಗುಣದ ವೈವಿಧ್ಯ, ವಾಣಿಜ್ಯ ಮಾರುತಗಳು ಸಮೃದ್ಧ ಮಳೆ –ಇವುಗಳಿಂದ ಸಂಯುಕ್ತಸಂಸ್ಥಾನ ಅತ್ಯಂತ ಸಂಪದ್ಭರಿತ ರಾಷ್ಟ್ರವಾಗಿದೆ. ಕೃಷಿ ಉತ್ಪನ್ನಗಳಲ್ಲಿ, ಕೈಗಾರಿಕೆಗೆ ಬೇಕಾದ ಸಂಪನ್ಮೂಲಗಳಲ್ಲಿ, ಮರಮಟ್ಟುಗಳಿಗೆ, ಕಾಗದ ತಯಾರಿಕೆಗೆ ಬೇಕಾದ ಅರಣ್ಯಸಂಪತ್ತು, ವ್ಯಾಪಾರಕ್ಕೆ ಅವಶ್ಯಕವಾದ ಸ್ವಾಭಾವಿಕ ಬಂದರುಗಳು ಹೀಗೆ ಯಾವುದರಲ್ಲೂ ಈ ರಾಷ್ಟ್ರಕ್ಕೆ ಕೊರತೆಯಿಲ್ಲ. ಅದರ ಐಹಿಕ ಪ್ರಗತಿಗೆ ಇದೇ ಮೂಲ. ಚಂದ್ರಲೋಕಕ್ಕೆ ಮಾನವನನ್ನು ಕಳುಹಿಸುವಂಥ ಸಾಹಸ ಅವರಿಗೆ ಸಾಧ್ಯವಾಗಿರುವುದು ಅಪಾರ ಸಂಪತ್ತಿನ ಸಹಾಯದಿಂದ. ಅವರು ಹೊಂದಿರುವ ವೈಜ್ಞಾನಿಕ ಪ್ರಗತಿಯಿಂದ. ಅಂತಾರಾಷ್ಟ್ರೀಯ ದೃಷ್ಟಿಯಿಂದ ನೋಡುವುದಾದರೆ ವಿಶ್ವಸಂಸ್ಥೆ ಹುಟ್ಟಿ ಬೆಳೆದಿರುವುದು ಇಲ್ಲಿಯೇ. (ಎಸ್.ಎನ್.ಎಸ್.ವಿ.)

**ಅಮೆರಿಕಗಳು:** ಪಶ್ಚಿಮಗೋಳಾರ್ಧದಲ್ಲಿರುವ ಉತ್ತರ ಅಮೆರಿಕ, ಮಧ್ಯ ಅಮೆರಿಕ, ದಕ್ಷಿಣ ಅಮೆರಿಕ ಪ್ರದೇಶಗಳನ್ನು ಒಟ್ಟಾಗಿ ಈ ಹೆಸರಿನಿಂದ ಕರೆಯಲಾಗಿದೆ. ಅಮೆರಿಗೊ ವೆಚ್‌ಪುಜಿಯಿಂದ ಅಮೆರಿಕ ಎಂಬ ಹೆಸರು ಬಂದಿದೆ. ಅಮೆರಿಕ ಮತ್ತು ಅಮೆರಿಕನ್ ಎಂಬ ಶಬ್ದಗಳನ್ನು ಕೇವಲ ಅಮೆರಿಕದ ಸಂಯುಕ್ತ ಸಂಸ್ಥಾನಗಳನ್ನು ಉದ್ದೇಶಿಸಿ ಪ್ರಯೋಗಿಸುವುದೂ ಉಂಟು. ಮಾರ್ಟನ್ ವಾಲ್ಡ್ ನೀ ಮುಲ್ಲರ್ ಈ ಶಬ್ದವನ್ನು ಮೊದಲ ಬಾರಿಗೆ ಬಳಸಿದ. ಕ್ರಿಸ್ಟೋಫರ್ ಕೊಲಂಬಸ್ 1492ರಲ್ಲಿ ಸಮುದ್ರಯಾನ ಮಾಡಿ ಭಾರತದೇಶಕ್ಕೆ ಹೊಸ ಹಾದಿ ಕಂಡುಹಿಡಿದನೆಂದು ತಪ್ಪಾಗಿ ತಿಳಿದ ದೇಶವೇ ಈಗಿನ ಅಮೆರಿಕ ಖಂಡಗಳು. ದಕ್ಷಿಣ ಅಮೆರಿಕದ ಉತ್ತರ ಭಾಗದ ಮೇಲೆ ಸಮಭಾಜಕವೃತ್ತ ಹಾದು ಹೋಗುತ್ತದೆ. ಅದರ ದಕ್ಷಿಣದ ಚೂಪಾದ ತುದಿ ಕೇಪ್ ಹಾರನ್ನನ್ನು ಮುಟ್ಟುತ್ತದೆ. ಆ ಪ್ರದೇಶ ಹೆಚ್ಚು ಶೈತ್ಯಭರಿತವಾಗಿ ಹಿಮಗಡ್ಡೆಯಿಂದ ಕೂಡಿದೆ. ಸಂಸ್ಕೃತಿ, ಭಾಷೆ, ಆಚಾರವಿಚಾರಗಳಲ್ಲಿ ದಕ್ಷಿಣ ಅಮೆರಿಕ ಮತ್ತು ಉತ್ತರ ಅಮೆರಿಕಗಳಿಗೆ ಹೆಚ್ಚಿನ ವ್ಯತ್ಯಾಸವಿದೆ. ಅಮೆರಿಕ ಖಂಡಗಳನ್ನು ಎರಡು ವಿಭಾಗಗಳಾಗಿ ಮಾಡಿ ಒಂದನ್ನು ಲ್ಯಾಟಿನ್ ಅಮೆರಿಕ ಎನ್ನುವರು. ಮೆಕ್ಸಿಕೊ, ಮಧ್ಯ ಅಮೆರಿಕ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಅಮೆರಿಕಗಳು ಇದಕ್ಕೆ ಸೇರುತ್ತವೆ. ಇನ್ನೊಂದನ್ನು ಆಂಗ್ಲೋ ಅಮೆರಿಕ ಎನ್ನುವರು. ಕೆನಡ, ಸಂಯುಕ್ತ ಸಂಸ್ಥಾನಗಳು ಇದಕ್ಕೆ ಸೇರುತ್ತವೆ. (ಎಚ್.ಎಂ.ಎಸ್.)

**ಅಮೆರಿಕದ ಆದಿವಾಸಿಗಳು:** ಅತ್ಯುನ್ನತ ಶ್ರೇಣಿಯ ಸಸ್ತನಿ ಪ್ರಾಣಿಗಳಿಲ್ಲದಿರುವುದರಿಂದಲೂ ಆದಿಮಾನವನ ಅವಶೇಷಗಳಿಲ್ಲದಿರುವುದರಿಂದಲೂ ಅಮೆರಿಕ ಖಂಡದಲ್ಲಿ ಮಾನವ ಸಂತತಿ ಉಗಮಿಸಲಿಲ್ಲವೆಂಬ ಅಭಿಪ್ರಾಯವನ್ನು ಎಲ್ಲರೂ ಸಮರ್ಥಿಸಿರುವರು. ಈಗ ದೊರೆತಿರುವ ಆಧಾರದ ಮೇಲೆ ಪುರಾತನ ಶಿಲಾಯುಗದ ನಾಗರಿಕತೆಯ ಚಿಹ್ನೆಗಳು ಅಲ್ಲೆಲ್ಲೂ ಕಂಡುಬರುವುದಿಲ್ಲ. ಆದುದರಿಂದ ಸೈಬೀರಿಯದಿಂದ ಬೇರಿಂಗ್ ಜಲಸಂಧಿಯ ಮಾರ್ಗದಲ್ಲಿ ಸು. 25,000–35,000 ಸಾವಿರ ವರ್ಷಗಳ ಹಿಂದೆ ಮಾನವ ಅಮೆರಿಕ ಖಂಡಕ್ಕೆ ವಲಸೆ ಹೋಗಿರುವವನೆಂದು ತೀರ್ಮಾನಿಸಲಾಗಿದೆ. ಇವರನ್ನೇ ಕೊಲಂಬಸ್ ಇಂಡಿಯನ್ ಎಂದು ತಪ್ಪಾಗಿ ಕರೆದ. ಅನಂತರ ಇವರನ್ನು ಅಮೆರಿಕನ್ ಇಂಡಿಯನ್ ಎಂದು ಹೆಸರಿಸಲಾಗಿದೆ. ಕಾಲಕ್ರಮೇಣ ಈ ಜನರು ಅಮೆರಿಕದ ಎಲ್ಲ ಪ್ರದೇಶಗಳಲ್ಲೂ ನೆಲೆಸಿದರು. ದಕ್ಷಿಣ ಅಮೆರಿಕ ಖಂಡದಲ್ಲಿ ಅವರು ನೆಲೆಸಲು ಪ್ರೇರೇಪಿಸಿದ್ದು 10,000 ವರ್ಷಗಳ ಹಿಂದೆ. ಎ.ಎಲ್. ಕ್ರೋಬರ್ ಮತ್ತು ಜೆ. ಎಚ್. ಸ್ಟೆವರ್ಡ್‌ರ ಪ್ರಕಾರ ಇವರಲ್ಲಿ ಬಹುಜನ ಆದಿವಾಸಿಗಳು ಮಧ್ಯ ಮತ್ತು ದಕ್ಷಿಣ ಅಮೆರಿಕಗಳಲ್ಲಿ ವಾಸವಾಗಿರುವವರು. 2001ರ ಅಂದಾಜಿನಂತೆ ಅಮೆರಿಕದ ಸಂಯುಕ್ತ ಸಂಸ್ಥಾನ ಹಾಗೂ ಕೆನಡದಲ್ಲಿ ಒಟ್ಟು 10 ದಶಲಕ್ಷ, ಮೆಕ್ಸಿಕೊದಲ್ಲಿ 30 ದಶಲಕ್ಷ, ಕೆರಿಬಿಯನ್ ವಲಯದಲ್ಲಿ 4,45,000, ದಕ್ಷಿಣ ಅಮೆರಿಕದ ಆಂಡೀಸ್ ಪ್ರದೇಶದಲ್ಲಿ 30 ದಶಲಕ್ಷ ಹಾಗೂ ದಕ್ಷಿಣ ಅಮೆರಿಕದ ಇತರ ಕಡೆಗಳಲ್ಲಿ ಸು. 10 ದಶಲಕ್ಷ ಅಮೆರಿಕದ ಮೂಲನಿವಾಸಿಗಳಿರುವರೆಂದು ಅಂದಾಜುಮಾಡಲಾಗಿದೆ.

ಅಮೆರಿಕದ ಆದಿವಾಸಿಗಳಾದ ಎಸ್ಕಿಮೊ ಮತ್ತು ರೆಡ್ ಇಂಡಿಯನ್ನರು ಮಂಗೋಲಾಯ್ಡ್ ಜನಾಂಗಕ್ಕೆ ಸೇರಿದವರೆಂದು ಪರಿಗಣಿಸಲಾಗಿದೆ. ರೆಡ್ ಇಂಡಿಯನ್ನರಲ್ಲಿ ಸು. 400 ಬುಡಕಟ್ಟುಗಳಿವೆಯಲ್ಲದೆ 160 ಭಾಷಾವರ್ಗಗಳಿವೆ. ಇವರು ಉತ್ತರ ಅಮೆರಿಕದಲ್ಲೆಲ್ಲ ಹರಡಿಕೊಂಡಿದ್ದಾರೆ. ಇವರ ಬುಡಕಟ್ಟುಗಳಲ್ಲಿ ಉತ್ತರ ಅಮೆರಿಕದ ಟ್ಲಿನ್ ಗಿಟ್, ಹೈಡ್, ಬೆಲ್ಲುಕೂಲ, ಕ್ರೊ, ಬ್ಲಾಕ್ ಫುಟ್, ಅರಪಾಹೊ, ಕಿಯೋವಿ, ಡಕೋಟ, ಹಿಡಟ್ಸ, ಜ಼ಪೋಟ ಆಜ್ಟೆಕ್, ದಕ್ಷಿಣ ಅಮೆರಿಕದ ಇಂಕ, ವಿಟೋಟೊ–ಈ ಕೆಲವರು ಮುಖ್ಯರು.

ಉತ್ತರ ಅಮೆರಿಕದ ಮೂಲನಿವಾಸಿಗಳು ಹಾಗೂ ಪ್ರದೇಶಗಳು.

| ಮೂಲ ಅಮೆರಿಕನ್ನರ ಗುಂಪು | ಪ್ರಸ್ತುತ ಅವರು ನೆಲೆಸಿರುವ ಸ್ಥಳ |
|---|---|
| ಅಪಾಚೆ | ನ್ಯೂಮೆಕ್ಸಿಕೊ |
| ಕಿರಿಕಾಹುವಾ | ಅರಿಜ಼ೋನ, ಓಕ್ಲಹಾಮ |
| ಜಿಕಾರಿಲ್ಲಾ | ನ್ಯೂಮೆಕ್ಸಿಕೊ |
| ಲಿಪನ್ | ನ್ಯೂಮೆಕ್ಸಿಕೊ |
| ಮೆಸ್‌ಕ್ಯಾರೆಲೊ | ನ್ಯೂಮೆಕ್ಸಿಕೊ |
| ಪಶ್ಚಿಮ ಅಪಾಚೆ | ಅರಿಜ಼ೋನ |
| ಕೋವಾಹುಯಿಟೆಕ್ | ಟೆಕ್ಸಾಸ್ ಮೆಕ್ಸಿಕೊ |
| ಕೋಕೋಪ್ಪಾ | ಅರಿಜ಼ೋನ ಮೆಕ್ಸಿಕೊ |
| ಹಲ್‌ಚಿಡೋಮ | ಅರಿಜ಼ೋನ |
| ಹವಾಸುಪೆ | ಅರಿಜ಼ೋನ |
| ಕರನ್‌ಕವಾ | ಟೆಕ್ಸಾಸ್ |
| ಮಾರಿಕೋಪ | ಅರಿಜ಼ೋನ |
| ಮೊಜಾವೆ | ಅರಿಜ಼ೋನ, ಕ್ಯಾಲಿಫೋರ್ನಿಯ |
| ನಜಾವೋ | ಅರಿಜ಼ೋನ, ನ್ಯೂಮೆಕ್ಸಿಕೊ, ಉತಾ |
| ಪಿಮ | ಅರಿಜ಼ೋನ, ಮೆಕ್ಸಿಕೊ |
| ಪಿರೋ | ನ್ಯೂಮೆಕ್ಸಿಕೋ |
| ಹೋಪಿ | ಅರಿಜ಼ೋನ, |
| ಕೆರೆಸ್, ಟೆವಾ, ಟಿವಾ, ಟೋವಾ, ಜೂನಿ | ನ್ಯೂಮೆಕ್ಸಿಕೊ |
| ಯಾಕ್ವಿ, ಯವಾ ಪಾಯ್, ಯಾಮ | ಅರಿಜ಼ೋನ |

ಭೌಗೋಳಿಕ ಪರಿಸರ ಆದಿವಾಸಿಗಳ ಜೀವನದ ಬಹುಭಾಗವನ್ನು ನಿರ್ಧರಿಸುತ್ತದೆ. ವಿವಿಧ ಪ್ರದೇಶಗಳಲ್ಲಿರುವ ಆದಿವಾಸಿಗಳ ಜೀವನದಿಂದ ಈ ವಿಷಯ ದೃಢಪಡುತ್ತದೆ. ರೆಡ್ ಇಂಡಿಯನ್ನರ ಕೆಲವು ಬುಡಕಟ್ಟುಗಳ ಅಧ್ಯಯನದಿಂದ ಅವರ ಜೀವನದ ರೀತಿಯನ್ನು ನೋಡಬಹುದು. ಹೈಡಗಳು ರೆಡ್ ಇಂಡಿಯನ್ನರಲ್ಲಿ ಬೆಸ್ತರ ಕೆಲಸ ಮಾಡುವವರು ಒಳ್ಳೆಯ ದೋಣಿಗಳನ್ನು ಕಟ್ಟಬಲ್ಲವರಾಗಿದ್ದು 25 ಮೀ ಉದ್ದ 3 ಮೀ ಅಗಲವಿರುವ ದೋಣಿಯನ್ನು ಒಂದೇ ಮರದ ತುಂಡಿನಿಂದ ಕೆತ್ತಿ ತಯಾರಿಸುತ್ತಿದ್ದರು. ಅವರಿಗೆ ಅಲಂಕಾರ ಕಲೆಯಲ್ಲಿ ಬಹಳ ಆಸಕ್ತಿ. ತಾವು ಉಪಯೋಗಿಸುವ ಪ್ರತಿಯೊಂದು ವಸ್ತುವಿನ ಮೇಲೂ ಸಾಧಾರಣವಾಗಿ ಒಂದು ಪ್ರಾಣಿಯ ಚಿತ್ರವನ್ನು ಕೊರೆಯುತ್ತಿದ್ದರು.

ಹೈಡಗಳ ಸಮಾಜ ಮಾತೃಪ್ರಧಾನ್ಯತೆಯಿಂದ ಕೂಡಿದೆ. ಇವರಲ್ಲಿ ಸ್ತ್ರೀಯರಿಗೆ ಗಣ್ಯವಾದ ಸ್ಥಾನವಿತ್ತು. ಇವರು ಹೆಚ್ಚಾಗಿ ಹೆಣ್ಣು ಮಕ್ಕಳಾಗಲೆಂದು ಆಸೆಪಡುತ್ತಿದ್ದರು.

ಮೈದಾನಗಳಲ್ಲಿ ವಾಸಿಸುವ ರೆಡ್ ಇಂಡಿಯನ್ನರಲ್ಲಿ ಕ್ರೊ ಗುಂಪಿನವರು ಪ್ರಮುಖರು. ಮೇಕೆ, ಜಿಂಕೆ, ಸಾರಂಗ, ಕಡವೆ, ಕಾಡುಕೋಣಗಳನ್ನು ಬೇಟೆಯಾಡಿ ಜೀವಿಸುತ್ತಿದ್ದರು. ಕಾಡುಕೋಣಗಳ ಬೇಟೆ ಸ್ವಾರಸ್ಯಕರವಾಗಿದೆ. ಮೂರು ಕಡೆಗಳಿಂದ ಕಾಡುಕೋಣಗಳ ಹಿಂಡನ್ನು ಅಟ್ಟಿಸಿಕೊಂಡು ಹೋಗಿ ನಾಲ್ಕನೆಯ ಕಡೆಯಿರುವ ಕಮರಿಗೆ ಇಳಿಸಿ ಅನಂತರ ಅಗತ್ಯವಾದಾಗ ತಮಗೆ ಬೇಕಾಗುವಷ್ಟನ್ನು ಮಾತ್ರ ಕೊಲ್ಲುತ್ತಿದ್ದರು. ಅವರು ನಾಯಿಯನ್ನು ಪಳಗಿಸಿ ಬೇಟೆಗೆ ಉಪಯೋಗಿಸುತ್ತಿದ್ದರು. 1650ರಿಂದ ಈಚೆಗೆ ಅವರು ಕುದುರೆಗಳನ್ನು ಉಪಯೋಗಿಸಲು ಪ್ರಾರಂಭಿಸಿದರು.

ಕ್ರೊಗಳು ಒಂದು ಸ್ಥಳದಲ್ಲಿ ನೆಲೆನಿಲ್ಲದೆ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದನ್ನು ರೂಢಿಸಿಕೊಂಡಿರುವರು. ಅವರ ಪೂಜೆಗೆ ಹೊಗೆಸೊಪ್ಪು ಅಗತ್ಯವಾದದ್ದರಿಂದ ಹೊಗೆಸೊಪ್ಪನ್ನು ಮಾತ್ರ ಬೆಳೆಯಾಗಿ ಬೆಳೆಯುತ್ತಿದ್ದರು.

ಆಧುನಿಕ ನಾಗರಿಕತೆಯ ಪ್ರಭಾವಕ್ಕೆ ಸ್ವಲ್ಪವೂ ಒಳಪಡದೆ, ದಟ್ಟವಾದ ಕಾಡುಗಳಲ್ಲಿ ಅವ್ಯಾಹತವಾಗಿ ನೈಸರ್ಗಿಕ ಶಕ್ತಿಗಳ ಕಾಠಿಣ್ಯವನ್ನು ಎದುರಿಸುತ್ತ ಜೀವಿಸುವುದರಲ್ಲಿ ಅಮೆಜಾನ್ ನದಿಯ ಕಾಡುಗಳಲ್ಲಿರುವ ವಿಟೋಟೋಗಳು ಅತಿ ಮುಖ್ಯರು. ಕಾಡುಗಳಲ್ಲಿ ವಿವಿಧ ಆಹಾರಗಳು ಯಥೇಚ್ಛವಾಗಿದ್ದರೂ ಅವರಿಗೆ ಆಹಾರ ದೊರಕುವುದು ಕಷ್ಟ. ಮರಗಳು ಹಾಗೂ ಬಳ್ಳಿಗಳಲ್ಲಿರುವ ಹಣ್ಣುಗಳು, ಇಲಿ, ಕಪ್ಪೆ, ಹಲ್ಲಿ, ಹಾವು ಮೊದಲಾದ ಪ್ರಾಣಿಗಳೇ ಇವರ ಆಹಾರ. ಹಲ್ಲಿ ಮತ್ತು ಹಾವು ಮೊಟ್ಟೆಗಳನ್ನೂ ತಿನ್ನುವರು. ಆದರೆ ಹಕ್ಕಿಗಳ ಮೊಟ್ಟೆಗಳನ್ನು ತಿನ್ನುವುದಿಲ್ಲ. ವಿಟೋಟೊಗಳ ವ್ಯವಸಾಯಕ್ರಮ ಪುರಾತನವಾದದ್ದು. ಸ್ಥಳಾಂತರ ಬೇಸಾಯ ಎಂದು ಇದನ್ನು ಹೆಸರಿಸಲಾಗಿದೆ. ಇವರಲ್ಲಿ ಒಂದು ಬಣದವರೆಲ್ಲರೂ ಒಂದೇ ದೊಡ್ಡ ಗುಡಿಸಿಲಿನಲ್ಲಿ ವಾಸಿಸುವರು. ಆ ಗುಡಿಸಲು 25 ಮೀ ಉದ್ದ 20 ಮೀ ಅಗಲ ಮತ್ತು ಸರಾಸರಿ 10 ಮೀ ಎತ್ತರವಿರುತ್ತದೆ. ಅದಕ್ಕೆ ಕಿಟಿಕಿಗಳಿಲ್ಲ. ಪ್ರತಿಯೊಂದು ಕುಟುಂಬಕ್ಕೆ ಪ್ರತ್ಯೇಕವಾದ ಒಲೆಯಿರುತ್ತದೆ. ಮಲಗಲು ಹಗ್ಗದಿಂದ ಮಾಡಿದ ಒರಟಾದ ಮಂಚ. ಗಂಡಸರು ಮರದ ತೊಗಟೆಯಿಂದ ಮಾಡಿದ ಉಡುಪನ್ನು ಧರಿಸುವರು. ತಮ್ಮ ಉಡುಪನ್ನು ಬೇರೆಯವರೆದುರಿಗೆ ಕಳಚುವುದಿಲ್ಲ. ಆದರೆ ಹೆಂಗಸರು ಮಾತ್ರ ಯಾವ ಉಡುಪುಗಳನ್ನೂ ಧರಿಸದೆ ಬೆತ್ತಲಾಗಿರುತ್ತಾರೆ.

ಪಾಶ್ಚಾತ್ಯ ನಾಗರಿಕತೆಯ ಸಂಪರ್ಕದಿಂದ ಆದಿವಾಸಿಗಳ ಜೀವನದಲ್ಲಿ ಅನೇಕ ಬದಲಾವಣೆಗಳಾಗಿವೆ. ಕ್ರೂರಪದ್ಧತಿಗಳು ನಶಿಸಿವೆ. ಅನೇಕ ಸರ್ಕಾರಗಳು ಆದಿವಾಸಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನೂ ಒದಗಿಸಿಕೊಟ್ಟಿವೆ. ಈಗಿನ ವಿಶ್ವವಿದ್ಯಾಲಯಗಳಲ್ಲಿ ಆದಿವಾಸಿಗಳ ಭಾಷಾಧ್ಯಯನ, ಅವರ ಜಾನಪದ ಸಂಗ್ರಹಣ ಕಾರ್ಯ ನಡೆಯುತ್ತಿದೆ. ಯುರೋಪಿನವರು ಅಮೆರಿಕದ ನೆಲದಲ್ಲಿ ಕಾಲಿಟ್ಟಂದಿನಿಂದ ಅವರಿಗೂ ಆದಿವಾಸಿಗಳಿಗೂ ಘರ್ಷಣೆ, ರಾಜಿಗಳು ನಡೆಯುತ್ತಿದ್ದು ಈ ಮುನ್ನೂರು ನಾನೂರು ವರ್ಷಗಳಲ್ಲಿ ಆದಿವಾಸಿಗಳನೇಕರು ಸತ್ತಿರುವರು. ಉಳಿದವರು ವಿದೇಶೀಯರೊಂದಿಗೆ ಬೆರೆತಿರುವರು. (ಎಚ್.ಎಂ.ಎಸ್.)

**ಅಮೆರಿಕನ್ ಸಮೋಅ:** ಅಮೆರಿಕ ಸಂಯುಕ್ತ ಸಂಸ್ಥಾನದ ಅಧೀನದಲ್ಲಿರುವ ದಕ್ಷಿಣ ಫೆಸಿಫಿಕ್ ಸಾಗರದಲ್ಲಿನ ಒಂದು ದ್ವೀಪ ಸಮೂಹ. ಸ್ವತಂತ್ರ ಸಾರ್ವಭೌಮ ಸಮೋಅವಿನ ಆಗ್ನೇಯ ಭಾಗದಲ್ಲಿದೆ. ಜನಸಂಖ್ಯೆ 57,291 (2000). ವಿಸ್ತೀರ್ಣ 200.22 ಚ.ಕಿಮೀ. ಟುಟುಯಿಲ ದ್ವೀಪದ ಪೂರ್ವದಲ್ಲಿ ಇರುವ ಪಗೋ ಪಗೋ ಇದರ ರಾಜಧಾನಿ. ಇದು ಒಟ್ಟು 5 ಜ್ವಾಲಾಮುಖಿ ದ್ವೀಪಗಳಿಂದ ಕೂಡಿದ್ದು ಎರಡು ಹವಳ ದ್ವೀಪಗಳನ್ನು ಕಾಣಬಹುದಾಗಿದೆ. ಈ ದ್ವೀಪಗಳು ಪದೇ ಪದೇ ಡಿಸೆಂಬರ್–ಮಾರ್ಚಿ ತಿಂಗಳಿನ ನಡುವೆ ಚಂಡಮಾರುತಗಳಿಗೆ ಈಡಾಗುತ್ತವೆ. (ಕೆ.ಎನ್.ಯು.)

**ಅಮೆರಿಕನ್ನರ ಕೊಡುಗೆ:** ಅಮೆರಿಕದಲ್ಲಿ 1795 ರ ಸುಮಾರಿಗೆ ಹಾರ್ವರ್ಡ್, ಕೊಲಂಬಿಯ ಪ್ರಿನ್ಸ್‌ಟನ್, ಡಾರ್ಟ್‌ಮಾತ್ ಯೇಲ್ ಹಾಗೂ ಪೆನ್ಸಿಲ್ವೇನಿಯ ಮೊದಲಾದ ವಿಶ್ವವಿದ್ಯಾಲಯಗಳಲ್ಲಿ ಗಣಿತ, ಭೌತಿಕ ಹಾಗೂ ಐತಿಹಾಸಿಕ ಭೂಗೋಳ ವಿಜ್ಞಾನಗಳನ್ನು ಪರಿಚಯಿಸಲಾಗಿತ್ತು. ಅಮೆರಿಕದ ಪ್ರಥಮ ಪ್ರೊಫೆಸರ್ ಆರ್ನಾಲ್ಡ್ ಗಾಯಟ್ 1870 ರಲ್ಲಿ ಪ್ರಾಕೃತಿಕ ಭೂಗೋಳ ವಿಜ್ಞಾನವನ್ನು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಆರಂಭಿಸಿದ. ಇದರ ಮೂಲಕ ಅಮೆರಿಕದಲ್ಲಿ ಭೂಗೋಳಶಾಸ್ತ್ರ ಅಭಿವೃದ್ಧಿಯತ್ತ ಸಾಗಿತು.

ವಿಲಿಯಂ ಮೋರಿಸ್ ಡೇವಿಸ್ ಅಮೆರಿಕದ ಭೂಗೋಳಶಾಸ್ತ್ರಜ್ಞರ ಅಸೋಸಿಯೇಷನ್‌ನ ಸಂಸ್ಥಾಪಕರಲ್ಲಿ ಒಬ್ಬ. ಇವನು ಸವೆತ ಚಕ್ರ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದ. ಇದನ್ನು 1899 ರಲ್ಲಿನ ಅಂತಾರಾಷ್ಟ್ರೀಯ ಭೂಗೋಳವಿಜ್ಞಾನ ಕಾಂಗ್ರೆಸ್ ಕಾರ್ಯಾಗಾರದಲ್ಲಿ ಮಂಡಿಸಿದ. ಅನಂತರ ಮಾರ್ಕ್ ಜೆಫ಼ರಸನ್ ಅಮೆರಿಕದಲ್ಲಿ ಮಾನವ ಭೂಗೋಳ ವಿಜ್ಞಾನವನ್ನು ಅಭಿವೃದ್ಧಿಪಡಿಸಿದ. ಇವನು ಕೇಂದ್ರೀಯ ಸ್ಥಳಗಳು ಪ್ರಧಾನ ನಗರ ಹಾಗೂ ಸಿವಿಲೈಜಿಂಗ್ ರೈಲ್ಸ್ ನಿಯಮಗಳನ್ನು ನೀಡಿದ. ಇವನ ಶಿಷ್ಯ ಐಸಾಯ್ ಬೌಮ್ಯಾನ್ ಮಾನವ ಭೂಗೋಳ ವಿಜ್ಞಾನವನ್ನು ಮುಂದುವರಿಸಿದ. 1903 ರಿಂದ 1919 ರವರೆಗೆ ಅ.ಸಂ.ಸಂದಲ್ಲಿ ಭೂಗೋಳವಿಜ್ಞಾನದ ಅಭಿವೃದ್ಧಿಗೆ ರೊಲ್ಲಿನ್.ಡಿ. ಸಾಲಿಸ್‌ಬರಿ ಕಾರಣನಾದ. ಮಿಸ್ ಎಲೆನ್ ಚರ್ಚಿಲ್ ಸಂಪೆಲ್ (1863–1932) ಅ.ಸಂ.ಸಂ.ದಲ್ಲಿ ಮಾನವ ಭೂಗೋಳವಿಜ್ಞಾನ ಮತ್ತು ಪರಿಸರ ಪ್ರಭುತ್ವವಾದವನ್ನು ಪ್ರಸಾರ ಮಾಡಿದರು. ಇವರು ತಮ್ಮ ಇನ್‌ಫ್ಲೂಯನ್ಸ್ ಆಫ್ ದಿ ಜಿಯೋಗ್ರಾಫಿಕಲ್ ಎನ್‌ವಿರಾನ್‌ಮೆಂಟ್ ಕೃತಿಯಲ್ಲಿ ಪರಿಸರ ಪ್ರಭುತ್ವವಾದವನ್ನು ಪ್ರತಿಪಾದಿಸಿದರು. ಎಲ್ಸ್‌ವರ್ತ ಹಂಟಿಂಗ್‌ಟನ್ ಮಾನವ ಭೂಗೋಳವಿಜ್ಞಾನಕ್ಕೆ ಭದ್ರ ಬುನಾದಿ ಹಾಕಿದರು. ಇವರು ಸಿವಿಲೈಜೇಷನ್ ಅಂಡ್ ಕ್ಲೈಮೇಟ್, ಮೈನ್ ಸ್ಪ್ರಿಂಗ್ ಆಫ್ ಸಿವಿಲೈಜೇಷನ್ ಹಾಗೂ ಪ್ರಿನ್ಸಿಪಲ್ಸ್ ಆಫ್ ಹ್ಯೂಮನ್ ಜಿಯೋಗ್ರಾಫಿ ಮೊದಲಾದ ಗ್ರಂಥಗಳನ್ನು ರಚಿಸಿದರು. ಇವರ ಅನಂತರ ಕಾರ್ಲ್ ಓಸೌರ್ ಸಾಂಸ್ಕೃತಿಕ ಭೂ ದೃಶ್ಯಾವಳಿಯ ಅಧ್ಯನವನ್ನು ಮೊಟ್ಟಮೊದಲಿಗೆ ಬರ್ಕ್‌ಲೀ ವಿ.ವಿ. ದಲ್ಲಿ ಆರಂಭಿಸಿದರು. ಇದೇ ಅವಧಿಯಲ್ಲಿ ಡರ್ವೆಂಟ್ ವೈಟಲ್‌ಸೇ ರವರು ಸೀಕ್ವೆಂಟ್ ಅಕ್ಯೂಪೇಷನ್ಸ್ ಎಂಬ ಹೊರ ಪರಿಭಾವನೆ ನೀಡಿದರು. ಪ್ರಪಂಚದ ಕೃಷಿ ಪ್ರದೇಶವನ್ನು ಮೊದಲಿಗೆ ವಿಂಗಡಿಸಿದರು. 1939 ರಲ್ಲಿ ರಿಚರ್ಡ್ ಹಾರ್ಟ್‌ಶೋರ್ನ್‌ರವರು ಪರ್‌ಸ್ಪೆಕ್ಟೀವ್ಸ್ ಆನ್ ದಿ ನೇಚರ್ ಆಫ್ ಜಿಯೋಗ್ರಫಿ ಗ್ರಂಥ ಬರೆದರು. ಇದು ಭೂಗೋಳವಿಜ್ಞಾನದ ತಾತ್ವಿಕ ನಿರೂಪಣೆಯಾಗಿ ಪರಿಣಮಿಸಿತು.

ಅಮೆರಿಕನ್ನರ ಕೊಡುಗೆಯನ್ನು ನಾಲ್ಕು ಪರಿಭಾವನೆಗಳ ಮೂಲಕ ಅಧ್ಯಯನ ಮಾಡಬಹುದು. ಅವುಗಳೆಂದರೆ:

1. ಮಾನವ ಜೀವಿಶಾಸ್ತ್ರ (ಹ್ಯೂಮನ್ ಇಕಾಲಜಿ)
2. ಜೀವಭೂವಿವರಣೆ (ಕರಾಲಜಿ)
3. ಐತಿಹಾಸಿಕ ಭೂಗೋಳ ವಿಜ್ಞಾನ (ಹಿಸ್ಟಾರಿಕಲ್ ಜಿಯೋಗ್ರಫಿ)
4. ಪ್ರದೇಶದ ಕ್ರಿಯಾತ್ಮಕ ವ್ಯವಸ್ಥೆ (ಫಂಕ್ಷನಲ್ ಆರ್ಗನೈಜೇಷನ್ ಆಫ್ ಸ್ಪೇಸ್)

ಮಾನವ ಭೂಗೋಳವಿಜ್ಞಾನದ ಸ್ಥಾಪಕ ಬರ್ರೋಸ್ ಪ್ರಕಾರ ಮಾನವ ಜೀವ ವಿಜ್ಞಾನವು ಭೂ ರಚನಾಶಾಸ್ತ್ರ, ವಾಯುಗುಣಶಾಸ್ತ್ರ ಮತ್ತು ಜೈವಿಕ ಭೂಗೋಳಶಾಸ್ತ್ರಗಳೊಡನೆ ಸಂಬಂಧಿಸಿದ ಮಾನವ ಮತ್ತು ಪರಿಸರದ ನಡುವಿನ ಅಧ್ಯಯನವಾಗಿದೆ. ಮಾನವ ನಿಸರ್ಗದ ಆಸ್ತಿ ಎಂದು ಹೇಳಿ ಪರಿಸರವಾದದ ಬಗ್ಗೆ ಹೆಚ್ಚಿನ ಒತ್ತು ನೀಡಿಲ್ಲ.

ಮಾರ್ಕ್ ಜೆಫರ್‌ಸನ್ ನಗರ ಭೂಗೋಳವಿಜ್ಞಾನವನ್ನು ಅಭಿವೃದ್ಧಿಪಡಿಸಿದರು. ಈ ಕೋರೋಲಜಿ ಎಂಬ ಪರಿಭಾವನೆಯನ್ನು ಕಾರ್ಲ್‌ಸೌರ್ ನೀಡಿದರು. ಒಂದು ಸ್ಥಳ ಮತ್ತು ಪ್ರದೇಶದ ಅಧ್ಯಯನವನ್ನು ಇದು ಒಳಗೊಂಡಿದೆ. ಪ್ರದೇಶವೊಂದರ ಜೈವಿಕ ಮತ್ತು ಭೌತಿಕ ಅಂಶಗಳು ಮಾನವರ ಸಂಸ್ಕೃತಿಯ ಭೂ ದೃಶ್ಯಾವಳಿಯನ್ನು ಹೇಗೆ ಪ್ರಭಾವಿಸುತ್ತವೆ ಎಂಬುದೇ ಇದರ ತಿರುಳು.

ಬ್ರೌನ್, ಮಿರರ್ ಆಫ್ ಅಮೆರಿಕನ್ಸ್ ಅಂಡ್ ಹಿಸ್ಟಾರಿಕಲ್ ಜಿಯೋಗ್ರಫಿ ಆಫ್ ದಿ ಯುನೈಟೆಡ್ ಸ್ಟೇಟ್ಸ್ ಎಂಬ ಗ್ರಂಥ ರಚಿಸಿದರು. ಕಾರ್ಲ್ ಸೌರ್‌ರವರು ಹಾರ್ಟ್‌ಶೋರ್ನ್‌ರವರೊಂದಿಗೆ ಸೇರಿ ರಾಜಕೀಯ ಭೂಗೋಳವಿಜ್ಞಾನಕ್ಕೆ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಿದರು. ಪ್ಲಾಟ್ ಎಂಬುವವರು ಹೈರಾರ್ಕಿ ಆಫ್ ಸೆಂಟ್ರಲ್ ಪ್ಲೇಸಸ್ ಎಂಬ ಪರಿಭಾವನೆಯನ್ನು ನೀಡಿದರು. ಹಾರ್ಟ್‌ಶೋರ್ನ್‌ರು ಪ್ರಾದೇಶಿಕ ವಿಭಿನ್ನತೆಯನ್ನು ಅಧ್ಯಯನ ಮಾಡುವುದೇ ಭೂಗೋಳಶಾಸ್ತ್ರ ಎಂದರು.

ಕ್ರಮಬದ್ಧ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಹಲವು ಕಾರ್ಯಗಳು ನಡೆದವು. ಪ್ರಾದೇಶಿಕ ವ್ಯವಸ್ಥೆ ವಿವರಣೆ ಪ್ರಾದೇಶಿಕ ಹಂಚಿಕೆ ಅಧ್ಯಯನ ಹಾಗೂ ಕ್ರಮಬದ್ಧ ವೈಶಿಷ್ಟ್ಯ ಅಧ್ಯಯನ ಇವೇ ಮೊದಲಾದ ಅಂಶಗಳಲ್ಲಿ ಅಮೆರಿಕನ್ನರು ಆಸಕ್ತಿಯನ್ನು ಹೊಂದಿದ್ದರು. ಅಂದಿನ ಅವಧಿಯಲ್ಲಿಯೇ ಅಮೆರಿಕನ್ನರು ದೂರ ಸಂವೇದಿ ತಾಂತ್ರಿಕತೆಯನ್ನು ಬಳಸಿಕೊಂಡು ಭೌಗೋಳಿಕ ಅಂಶಗಳನ್ನು (ಪರಿಸ್ಥಿತಿ) ನಿರೂಪಣೆ ಮಾಡಿದರು. (ಎನ್.ಎಲ್.)

**ಅಮ್ಮಾನ್:** ಅರಬ್ ದೇಶದ ಚಿಕ್ಕ ಭಾಗವಾದ ಜೋರ್ಡಾನಿನ ರಾಜಧಾನಿ. ಜನಸಂಖ್ಯೆ 9,69,598(2003). ಬಹು ಹಳೆಯ ಊರು. ಹಿಂದೆ ಇದಕ್ಕೆ ರಬ್ಬತ್ ಎಂಬ ಹೆಸರಿತ್ತು. ಚಾರಿತ್ರಿಕ ಕಟ್ಟಡಗಳಿರುವುದರಿಂದ ಇದು ಮುಖ್ಯ ಪ್ರವಾಸೀ ಕೇಂದ್ರವಾಗಿದೆ. ವಿಮಾನ ಮತ್ತು ರೈಲು ಕೇಂದ್ರವೂ ಹೌದು. ಕೈಗಾರಿಕೆಗಳು ಹೆಚ್ಚು. ಹೊಗೆಸೊಪ್ಪು, ಚರ್ಮ, ಬಟ್ಟೆ, ಹೆಂಚು, ಸಿಮೆಂಟ್ ಮೊದಲಾದವು ತಯಾರಾಗುತ್ತವೆ. (ಆರ್.ಡಿ.ಆರ್.)

**ಅಮ್ಲಾಂಡ್ ಪೋಷಕ ಪ್ರದೇಶ:** ನಗರದ ಸುತ್ತಲಿನ ಪ್ರದೇಶವನ್ನು ಸಾಮಾನ್ಯವಾಗಿ ಅಮ್ಲಾಂಡ್ ಅಥವಾ ನಗರ ಹಿನ್ನಾಡು ಎಂದು ಕರೆಯಲಾಗುತ್ತದೆ. ಈ ಭಾಗಗಳು ಕೇಂದ್ರದ ಜೊತೆ ಸಂಪರ್ಕವನ್ನು ಹೊಂದಿರುತ್ತವೆ. ನಗರದ ಕೇಂದ್ರ ಭಾಗ ಬೆಳವಣಿಗೆ ಹೊಂದಲು ಇದು ಸಹಾಯ ಮಾಡುತ್ತದೆ. ಕೇಂದ್ರದಲ್ಲಿ ವಾಸಿಸುವ ಜನರು ಕೇವಲ ಕೇಂದ್ರ ಪ್ರದೇಶವನ್ನು ನಂಬಿಕೊಳ್ಳುವಂತಿಲ್ಲ, ಬದಲಾಗಿ ಅವರು ನಗರದ ಸುತ್ತಲಿನ ಪ್ರದೇಶಗಳನ್ನು ಅವಲಂಬಿಸಬೇಕಾಗುತ್ತದೆ. ಈ ಅಮ್ಲಾಂಡ್ ಭಾಗಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರ ಲಕ್ಷಣಗಳನ್ನು ಒಳಗೊಂಡಿರುತ್ತವೆ. ಅಮ್ಲಾಂಡ್ ಎಂಬ ಪದವನ್ನು ಈ ವಾನ್‌ಕ್ಲಿಷ್ ಎಂಬ ವಿದ್ವಾಂಸ ಪ್ರಯೋಗಿಸಿದನು. ಅನಂತರ 1992 ಸ್ಟ್ಯಾನ್ಲಿ ದೊಡ್ಜ್ ಎಂಬುವವನು ಈ ಪದವನ್ನು ಪ್ರಚುರ ಪಡಿಸಿದ ಹಾಗೂ ಮಧ್ಯ ಮಿಡಿಸನ್ ಹಾವೆಲ್ ಎಂಬ ನಗರವನ್ನು ಅಮ್ಲಾಂಡ್ ಎಂದು ಗುರುತಿಸಿದ.

ಅಮ್ಲಾಂಡ್ ಪೂರ್ವ ಪ್ರದೇಶ ಸಾಮಾನ್ಯವಾಗಿ ಮುಂದಿನ ಲಕ್ಷಣಗಳನ್ನು ಒಳಗೊಂಡಿರುತ್ತದೆ.

ತರಕಾರಿ ಮತ್ತು ಹಾಲಿನ ಪದಾರ್ಥಗಳನ್ನು ಪೂರೈಸುವ ವಲಯವಾಗಿದೆ. ವ್ಯವಸಾಯೋತ್ಪನ್ನಗಳನ್ನು ಈ ಅಮ್ಲಾಂಡ್ ಮುಖಾಂತರ ನಗರಗಳಿಗೆ ಮಾರಾಟ ಮಾಡಲಾಗುತ್ತದೆ. ಇದೊಂದು ಸಗಟು ಮತ್ತು ಚಿಲ್ಲರೆ ವ್ಯಾಪಾರ ವಲಯ, ವಾಹನ

ನಿರ್ವಹಣಾವಲಯ, ಸುದ್ದಿ ಪತ್ರಿಕೆಗಳ ಸಂಪರ್ಕ ವಲಯ, ವೈದ್ಯಕೀಯ, ಸಾಮಾನು ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿರುವ ವಲಯವಾಗಿದೆ. ಇತರೇ ಅಂಶಗಳಾದ ವ್ಯಾಪಾರ, ಮನರಂಜನೆ, ಮತ್ತು ವ್ಯಕ್ತಿತ್ವ ನಿರ್ವಹಣೆಯ ವಲಯವಾಗಿದೆ.

ಈ ಅಮ್ಲಾಂಡ್ ನಗರದ ಕೇಂದ್ರೀಭಾಗವನ್ನು ಕೇವಲ ಒಂದು ಗಂಟೆಯ ಅವಧಿಯಲ್ಲಿ ತಲುಪುವಂತಹ ಪ್ರದೇಶಗಳಲ್ಲಿ ಹಂಚಿಕೆಯಾಗಿರುತ್ತದೆ. ಈ ಪ್ರದೇಶ ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಒಂದಕ್ಕೊಂದು ಸಂಬಂಧವನ್ನು ಹೊಂದಿರುತ್ತವೆ. (ಎಂ.ಡಿ.)

**ಅಯನ ಸಂಕ್ರಾಂತಿಗಳು:** ಆಕಾಶಗೋಳದಲ್ಲಿ ವಿಷುವದ್ವೃತ್ತದಿಂದ ಅತ್ಯಧಿಕ ಕೋನಾಂತರದಲ್ಲಿರುವ ಸೂರ್ಯನ ಎರಡು ಸ್ಥಾನಗಳು (ಸಾಲ್ಸ್‌ಟಿಸ್). ಅತಿ ಉತ್ತರದ ಬಿಂದುವನ್ನು ಜೂನ್ 21ರಂದೂ ಅತಿ ದಕ್ಷಿಣದ ಬಿಂದುವನ್ನು ಡಿಸೆಂಬರ್ 22 ರಂದೂ ಸೂರ್ಯ ತಲಪುವನು. ಅಲ್ಲಿಂದ ಮುಂದೆ ಕ್ರಮವಾಗಿ ದಕ್ಷಿಣ ಮತ್ತು ಉತ್ತರ ದಿಕ್ಕಿನ ಸೂರ್ಯಚಲನೆ ಪ್ರಾರಂಭವಾಗುತ್ತದೆ. ಆದ್ದರಿಂದ ಈ ಬಿಂದು ಅಥವಾ ತಾರೀಖುಗಳನ್ನು ದಕ್ಷಿಣಾಯನಾರಂಭ ಮತ್ತು ಉತ್ತರಾಯನಾರಂಭ ದಿನಗಳೆಂದು ಕರೆಯುವುದಿದೆ. ಕರ್ಕಾಟಕ ಸಂಕ್ರಾಂತಿ (ಸಮ್ಮರ್ ಸಾಲ್ಸ್‌ಟಿಸ್) ಮತ್ತು ಮಕರ ಸಂಕ್ರಾಂತಿ (ವಿಂಟರ್ ಸಾಲ್ಸ್‌ಟಿಸ್) ಎಂದು ಇವುಗಳ ಹೆಸರು. ಸೂರ್ಯನನ್ನು ಪರಿಭ್ರಮಿಸುತ್ತಿರುವ ಭೂಮಿಯ ಅಕ್ಷ ಕಕ್ಷಾತಲಕ್ಕೆ $23\ ^{1}/_{2}$ ಯಷ್ಟು ಬಾಗಿಕೊಂಡಿರುವುದೇ ಈ ದೃಗ್ಗೋಚರ ಸೂರ್ಯಚಲನೆಗೆ ಕಾರಣ. ವಾಸ್ತವಿಕವಾಗಿ ಜೂನ್ 21 ರಂದು (ಕರ್ಕಾಟಕ ಸಂಕ್ರಾಂತಿ) ಭೂಮಿಯ ಉತ್ತರ ಮೇರುವೂ ಡಿಸೆಂಬರ್ 22 ರಂದು (ಮಕರ ಸಂಕ್ರಾಂತಿ) ದಕ್ಷಿಣ ಮೇರುವೂ ಅತ್ಯಧಿಕವಾಗಿ ಸೂರ್ಯನೆಡೆಗೆ ವಾಲುವುವು. ಆದ್ದರಿಂದ ಮೊದಲಿನ ದಿನದಂದು ಉತ್ತರಾರ್ಧಗೋಲದವರಿಗೂ ಎರಡನೆಯ ದಿನದಂದು ದಕ್ಷಿಣಾರ್ಧ ಗೋಲದವರಿಗೂ ನಡುಬೇಸಗೆ. ಅಯನ ಸಂಕ್ರಾಂತಿಗಳು ಋತುಭೇದಗಳನ್ನು ಅರಿಯಲು ಉಪಯುಕ್ತವಾಗಿವೆ. (ಆರ್.ಆರ್.ಯು.)

**ಅಯೋವ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ರಾಜ್ಯ. ಮಿನಿಸೋಟ ಹಾಗೂ ಡಕೋಟಗಳ ಭಾಗಗಳನ್ನೊಳಗೊಂಡಂತೆ ಅಯೋವರಾಜ್ಯ 1832ರಲ್ಲಿ ರಚಿತವಾಯಿತು. 35 ವರ್ಷಗಳ ಮೊದಲೇ ಸಂಯುಕ್ತ ಸಂಸ್ಥಾನ ಸ್ವಾಧೀನಪಡಿಸಿಕೊಂಡ ಲೂಸಿಯಾನದ ಬೃಹತ್ ಪ್ರದೇಶದ ಒಂದು ಭಾಗವಿದು. ಈ ಪ್ರಾಂತ್ಯದ ಅಯೋವ ಭಾಗವನ್ನು ಒಂದು ರಾಜ್ಯವನ್ನಾಗಿ ಮಾಡಿ ಸಂಯುಕ್ತಸಂಸ್ಥಾನದ ಅಂಗವಾಗಿ 1846ರಲ್ಲಿ ಸೇರಿಸಿಕೊಳ್ಳಲಾಯಿತು. ಸಂಯುಕ್ತಸಂಸ್ಥಾನದ ವಿಸ್ತಾರವಾಗಿರುವ ಮಧ್ಯಪ್ರದೇಶದ ಕೇಂದ್ರಭಾಗದಲ್ಲಿರುವ ಅಯೋವ ಮಿಸಿಸಿಪಿ ಮತ್ತು ಮಿಸ್ಸೌರಿ ನದಿಗಳ ಸಂಗಮಕ್ಕೆ ಅನತಿದೂರದಲ್ಲಿ 160 ಕಿಮೀ ಗಳವರೆಗಿನ ಹುಲ್ಲುಗಾವಲಿನ ಪ್ರದೇಶವನ್ನು ಆವರಿಸಿಕೊಂಡಿದೆ. ಮೈದಾನದ ಮಧ್ಯಭಾಗ ಉತ್ತರಕ್ಕಿರುವುದರಿಂದ ಈ ಪ್ರದೇಶ ಖಂಡಾಂತರ ವಾಯುಗುಣವನ್ನು ಪಡೆದಿದೆ. ಈ ಪ್ರಾಂತ್ಯ ಸ್ಥಾಪಿತವಾದ ಕೆಲವೆ ವರ್ಷಗಳಲ್ಲಿ ಅಭಿವೃದ್ಧಿಕಾರ್ಯ ಪ್ರಾರಂಭವಾಗಿ, ವಿಸ್ತರಣಾಕಾರ್ಯ ಮುಂದುವರಿದಿದೆ. ವ್ಯವಸಾಯವೆ ಮುಖ್ಯ ಕಸಬಾಗಿದ್ದು, ರಾಜ್ಯದ ಆರ್ಥಿಕ ಉತ್ಪನ್ನದಲ್ಲಿ 2/3 ಭಾಗ ವ್ಯವಸಾಯದಿಂದಲೇ ಬರುವುದು. ಜೋಳ ಮುಖ್ಯ ಬೆಳೆ. ರಾಷ್ಟ್ರದ ಧಾನ್ಯದಲ್ಲಿ 1/6 ಭಾಗ ಇಲ್ಲಿ ದೊರೆಯುತ್ತದೆ. ಕೋಳಿ, ದನಕರುಗಳ ಸಾಗಣೆ ಮುಖ್ಯವಾಗಿದೆ. ಹಾಲಿನ ಹಾಗೂ ಮಾಂಸದ ಉದ್ಯಮ ಅಭಿವೃದ್ಧಿಗೊಂಡಿದ್ದು ರಾಷ್ಟ್ರದ 1/4 ಭಾಗ ಹಂದಿಮಾಂಸ ಇಲ್ಲಿ ದೊರಕುತ್ತದೆ. ಅಲ್ಪವಾಗಿ ಕಲ್ಲಿದ್ದಲು, ಜಿಪ್ಸಮ್ ಮತ್ತು ಸುಣ್ಣಕಲ್ಲು ದೊರೆಯುತ್ತವೆ. ಆದುದರಿಂದ ಮಾಂಸ ಮತ್ತು ಧಾನ್ಯಗಳಂಥ ಆಹಾರಪದಾರ್ಥಗಳ ಕೈಗಾರಿಕೆಗಳೇ ಹೆಚ್ಚು. ಕೃಷಿ ಯಂತ್ರೋಪಕರಣಗಳು, ವಿಮಾನಭಾಗಗಳ ತಯಾರಿಕೆ, ಅಲ್ಯೂಮಿನಿಯಂ ಉತ್ಪಾದನೆ ಮುಂತಾದವು ಇತರೆ ಉದ್ಯಮಗಳಾಗಿವೆ. ಶೇ. 50ರಷ್ಟು ಜನ ಡೆಮೊಯಿನ್ಸ್, ಸೀಡರ್ ರ್‍ಯಾಪಿಡ್ಸ್, ಡೆವನ್‌ಪೋರ್ಟ್, ಡುಬುಕ್, ಕೌನ್ಸೆಲ್ ಬ್ಲಫ್ಸ್ ಮತ್ತು ಸೂ ಪಟ್ಟಣಗಳಲ್ಲಿ ವಾಸ ಮಾಡುತ್ತಾರೆ. (ಸಿ.ಎಂ.)

**ಅರಕಲಗೂಡು:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಇದರ ಸುತ್ತಲೂ ಹಾಸನ, ಆಲೂರು, ಪಿರಿಯಾಪಟ್ಟಣ, ಹೊಳೆನರಸೀಪುರ ತಾಲ್ಲೂಕುಗಳೂ ಮತ್ತು ಕೊಡಗು ಜಿಲ್ಲೆ ಇದೆ. ಉತ್ತರಕ್ಕೆ ಹೇಮಾವತಿ, ದಕ್ಷಿಣಕ್ಕೆ ಕಾವೇರಿ ನದಿಗಳು ಹರಿಯುತ್ತವೆ. ಪಶ್ಚಿಮದಲ್ಲಿ ಕಾಡುಗಳಿಂದ ಕೂಡಿದ ಅನೇಕ ಬೆಟ್ಟಗಳಿವೆ. ಅಲ್ಲಲ್ಲಿ ವಿಶಾಲವಾದ ಕುರುಚಲು, ಹುಲ್ಲು ಮತ್ತು ಮರಗಳುಳ್ಳ ಕಾವಲುಗಳಿವೆ. ವರ್ಷಕ್ಕೆ 71 ಸೆಂಮೀವರೆಗೆ ಮಳೆಯಾಗುತ್ತದೆ. ಜೋಳ, ರಾಗಿ, ದ್ವಿದಳ ಧಾನ್ಯಗಳು, ಈರುಳ್ಳಿ, ಕಡಲೇಕಾಯಿ, ಹೊಗೆಸೊಪ್ಪು, ಮೆಣಸಿನಕಾಯಿ–ಇವುಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಕಾವೇರಿನದಿಗೆ ಕೃಷ್ಣರಾಜಕಟ್ಟೆ ಎಂಬ ಚಿಕ್ಕ ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ರಾಮನಾಥಪುರ ಮತ್ತು ಕಟ್ಟೆಪುರ ಎಂಬ ಕಾಲುವೆಗಳನ್ನು ನಿರ್ಮಿಸಿಕೊಂಡು ಸು. 6,000 ಹೆಕ್ಟೇರ್‌ಗಳಿಗೆ ನೀರನ್ನು ಒದಗಿಸಲಾಗಿದೆ. ದೊಡ್ಡಕೆರೆಗಳಿಂದ ಮತ್ತು ಕಾಲುವೆಗಳಿಂದ ಬತ್ತ, ತೋಟದ ಬೆಳೆಗಳು, ಅಡಕೆ, ಕಬ್ಬು, ತೆಂಗು ಮುಂತಾದವನ್ನು ಬೆಳೆಯುವರು. ಪಶ್ಚಿಮದ ಬೆಟ್ಟಗಳ ಮೇಲೆ ಅಲ್ಲಲ್ಲಿ ಚಿಕ್ಕ ಕಾಫಿ ತೋಟಗಳೂ ಇವೆ. ದನಕರುಗಳು ಹೆಚ್ಚಾಗಿವೆ. ಜನ ಸಾಂದ್ರತೆ ಚ.ಕಿಮೀಗೆ 290. ಜನಸಂಖ್ಯೆ 1,99,243.

ಅರಕಲಗೂಡು ಈ ತಾಲ್ಲೂಕಿನ ದೊಡ್ಡ ಊರು. ಬತ್ತ, ಅಡಿಕೆ, ತೆಂಗು, ಹೊಗೆಸೊಪ್ಪು ಇತ್ಯಾದಿಗಳ ವ್ಯಾಪಾರಕೇಂದ್ರ. ಇಲ್ಲಿ ವರ್ಷಕ್ಕೊಮ್ಮೆ ದನಗಳ ಜಾತ್ರೆ ನೆಡೆಯುತ್ತದೆ. (ಎ.ಕೆ.)

**ಅರಕಾನ್ ಕರಾವಳಿ:** ಬಂಗಾಲ ಕೊಲ್ಲಿಗೆ ಎದುರಾಗಿರುವ ಮಯನ್ಮಾರ್ ತೀರಪ್ರದೇಶ. ಇದು ಮುಳುಗಿರುವ ಅನೇಕ ಕಣಿವೆಗಳು, ಆಳವಾದ ಖಾರಿಗಳು, ಮೆಕ್ಕಲುಮಣ್ಣಿನ ನದೀಮುಖಗಳು, ತೀರಕ್ಕೆ ದೂರವಾಗಿರುವ ದ್ವೀಪಗಳು–ಇವನ್ನು ಒಳಗೊಂಡಿರುವ ಕಲ್ಲುಬಂಡೆಯ ಪ್ರದೇಶ. ಈ ದ್ವೀಪಗಳು ಒಂದಾನೊಂದು ಕಾಲದಲ್ಲಿ ಅಕ್ಯಾಬ್‌ನಿಂದ ಆಗ್ನೇಯ ದಿಕ್ಕಿನಲ್ಲಿ ವಿಸ್ತರಿಸಿದ್ದು ಅನಂತರ ಉಂಟಾದ ಭೂಪಲ್ಲಟದಿಂದ ಅಳಿದು ಉಳಿದಿರುವ ಅವಶೇಷಗಳು. ಅರಕಾನ್ ತೀರದ ಉದ್ದಕ್ಕೂ ಚಿಕ್ಕ ಚಿಕ್ಕ ಶಂಕುವಿನಾಕೃತಿಯ ಒಣಮಣ್ಣಿನ ದಿಣ್ಣೆಗಳು ಇವೆ ; ಇವು ಜಲಜನಕ ಮತ್ತು ಇಂಗಾಲ ಸಂಯುಕ್ತ ಅನಿಲವನ್ನು ಹೊರಬಿಡುತ್ತಿರುತ್ತವೆ. ಇವುಗಳನ್ನು ಮಣ್ಣಿನ ಅಗ್ನಿಪರ್ವತಗಳೆಂದು ಕರೆಯುವರು. ಇವು 100 ಮೀ ಎತ್ತರವಾಗಿವೆ ಹಾಗೂ ಸಾಮಾನ್ಯವಾಗಿ ಸಾಧಾರಣವಾದ ಜಲಪ್ರವಾಹ ಕಂಡುಬಂದು ಆಗಾಗ್ಗೆ ಸ್ಫೋಟಗಳಾಗುತ್ತಿರುತ್ತವೆ. ಈ ಮಣ್ಣಿನ ಅಗ್ನಿಪರ್ವತಗಳಿಂದ ಹೊರಬಂದ ಅನಿಲ ಪೆಟ್ರೋಲಿಯಂನ ಗುಣಲಕ್ಷಣಗಳನ್ನು ಹೊಂದಿದೆ. ಮಯನ್ಮಾರ್‌ಲ್ಲಿ ದೊರೆಯುವ ಅಲ್ಪಪ್ರಮಾಣದ ಪೆಟ್ರೋಲಿಯಂ ಇವುಗಳಿಂದ ದೊರೆಯುತ್ತದೆ. ಇದರ ತೀರಪ್ರದೇಶ ಒಳದೇಶದ ಸ್ವಾಭಾವಿಕ ಮೇಲ್ಮೈಲಕ್ಷಣಕ್ಕೆ ಪೂರಕವಾಗಿದೆ. ಈ ತೀರದಲ್ಲಿ ಅಕ್ಯಾಬ್ ಒಂದು ಮುಖ್ಯ ಪಟ್ಟಣ. (ಎನ್.ಎ.)

**ಅರಕಾನ್‌ಯೋಮ:** ಆಲ್ಪೈನ್ ಶ್ರೇಣಿಯಷ್ಟೇ ಹಳೆಯ ಪರ್ವತಪಂಕ್ತಿ. ಮಯನ್ಮಾರ್ ಭಾರತಗಳ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದೆ. ತಳದ ಕಿಬ್ಬೆಟ್ಟಗಳು ಬಂಗಾಲಕೊಲ್ಲಿಯವರೆಗೂ ಚಾಚಿವೆ. ಮಧ್ಯಭಾಗ ಸ್ಫಟಿಕಶಿಲೆಯಿಂದಾಗಿದೆ. ಎರಡೂ ಪಾರ್ಶ್ವಗಳಲ್ಲಿ ಮೂರನೆಯ ಭೂಯುಗದ ಪದರಪದರವಾಗಿರುವ ಬಂಡೆಗಳಿವೆ. ಕೆಲವು ಶಿಖರಗಳು 3,000 ಮೀ ಗಿಂತ ಹೆಚ್ಚು ಎತ್ತರವಾಗಿವೆ. ಸರಾಸರಿ ಎತ್ತರ 2,000 ಮೀ. ಕ್ರೋಮೈಟ್ ಮತ್ತು ಇತರ ಖನಿಜಗಳು ದೊರಕುತ್ತವೆಯಾದರೂ ಅವನ್ನು ತೆಗೆಯಲಾಗಿಲ್ಲ. ಮಳೆಯನ್ನು ಹೊತ್ತು ತರುವ ಮಾರುತಗಳಿಗೆ ಈ ಬೆಟ್ಟಗಳು ಅಡ್ಡಲಾಗಿರುವುದರಿಂದ ಒಂದು ಪಾರ್ಶ್ವದಲ್ಲಿ 203 ಸೆಂಮೀ ಮಳೆಯಾಗುತ್ತದೆ. ಅಲ್ಲಿ ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳಿವೆ. ವ್ಯವಸಾಯ ಜನರ ಮುಖ್ಯವೃತ್ತಿ. (ಎನ್.ಎ.)

**ಅರಕಾನ್ಸಸ್:** ಅಮೆರಿಕ ಸಂಯುಕ್ತ ಸಂಸ್ಥಾನದ ದಕ್ಷಿಣಭಾಗದ ರಾಜ್ಯಗಳಲ್ಲೊಂದು. ಇದನ್ನು ಸುಯೋಗದ ನಾಡು ಎಂದೂ ಕರೆಯುವರು. ವಿಸ್ತೀರ್ಣ; 1,37,741 ಚ.ಕಿಮೀ. 1836 ರಲ್ಲಿ 25 ನೆಯ ರಾಜ್ಯವಾಗಿ ಸಂಯುಕ್ತ ಸಂಸ್ಥಾನಗಳಲ್ಲಿ ಸೇರಿತು. ಲಿಟ್ಲ್ ರಾಕ್ ಇದರ ರಾಜಧಾನಿ. 1541–42 ರಲ್ಲಿ ಈ ಪ್ರದೇಶದೊಳಕ್ಕೆ ಮೊಟ್ಟ ಮೊದಲು ಬಿಳಿ ಜನರ ತಂಡವೊಂದು ಪ್ರವೇಶಿಸಿತು. 1686 ರಲ್ಲಿ ಫ್ರೆಂಚರ ವ್ಯಾಪಾರ ವಸಾಹತು ಆರಂಭವಾಯಿತು. 1819 ರಲ್ಲಿ ಇದು ಒಂದು ವಸಾಹತಾಯಿತು. ಇಲ್ಲಿನ ಜನಸಂಖ್ಯೆಯ ಶೇ 25 ಭಾಗ ಕಪ್ಪುಜನರು. ಇವರ ಹಕ್ಕು ಬಾಧ್ಯತಾಕಾನೂನಿಗೆ ಬಿಳಿಜನರು ವಿರೋಧವನ್ನು ವ್ಯಕ್ತಪಡಿಸಿದ ರಾಜ್ಯಗಳಲ್ಲಿ ಇದೂ ಒಂದು. ದಕ್ಷಿಣಭಾಗದಲ್ಲಿರುವುದರಿಂದ ಹಿತಕರ ವಾಯುಗುಣವಿದ್ದು ಬೇಸಾಯಕ್ಕೆ ಅವಶ್ಯಕವಾದ ಅನುಕೂಲತೆಗಳಿವೆ; ಭೂ ಪ್ರದೇಶದ ವೈವಿಧ್ಯದಿಂದ ನಾಡು ರಮಣೀಯವಾಗಿದೆ. ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ಅಗತ್ಯ ಖನಿಜ ಸಂಪತ್ತು ಹೇರಳವಾಗಿ ದೊರಕುತ್ತದೆ. ಜನಸಂಖ್ಯೆ. 26,73,400 (2000).

ಅರಕಾನ್ಸಸ್‌ನಲ್ಲಿ ಮುಖ್ಯವಾದ ಎರಡು ಭೌಗೋಳಿಕ ವಿಭಾಗಗಳಿವೆ; ದಕ್ಷಿಣ ಮತ್ತು ಪೂರ್ವಕ್ಕೆ ಮೈದಾನ, ತೀರದ ಖಾರಿ ಹಾಗೂ ಉತ್ತರ ಮತ್ತು ಪಶ್ಚಿಮಕ್ಕೆ ಒಳಭಾಗದ ಎತ್ತರ ಪ್ರದೇಶಗಳು. ಎತ್ತರದ ಪ್ರದೇಶ ಮಿಸಿಸಿಪಿ ನದಿಯ ಹತ್ತಿರ ಸಮುದ್ರಮಟ್ಟಕ್ಕಿಂತ 35 ಮೀ ಮಾತ್ರ ಎತ್ತರವಾಗಿದ್ದು ಕ್ರಮೇಣ ಹೆಚ್ಚುತ್ತ ಹೋಗಿ ವಾಯವ್ಯದ ಮ್ಯಾಗಜೀನ್ ಪರ್ವತದ ಬಳಿ 875 ಮೀ ಇದೆ.

ಓಜಾರ್ಕ್ ಪ್ರಸ್ಥಭೂಮಿ ಉತ್ತರದ ಮಧ್ಯಭಾಗ ಹಾಗೂ ವಾಯವ್ಯದ ಪ್ರದೇಶಗಳನ್ನಾವರಿಸಿ ಅಕ್ಕಪಕ್ಕದ ರಾಜ್ಯಗಳಲ್ಲಿ ಹರಡಿದೆ. ಈ ಪ್ರಸ್ಥಭೂಮಿಯ ಕೆಲವು ಭಾಗಗಳು ಅನೇಕ ತೊರೆ ಕಣಿವೆಗಳಿಂದ ಬೇರ್ಪಟ್ಟಿವೆ; ಕೆಲವು ಕಡೆಗಳಲ್ಲಿ ಕಾಡು ಹರಡಿದೆ. ಆದರೆ ಇದರ ಅಧಿಕ ಭಾಗ ಮೈದಾನ ಅಥವಾ ಕ್ರಮೇಣ ಎತ್ತರವಾಗುತ್ತ ಹೋಗುವ ಪ್ರದೇಶ. ಭೂ ವ್ಯವಸಾಯ, ಹಾಲಿನ ಮತ್ತು ಅದಕ್ಕೆ ಸಂಬಂಧಿಸಿದ ಪದಾರ್ಥಗಳ ಉತ್ಪಾದನೆ ಮತ್ತು ಹಣ್ಣು–ತರಕಾರಿಗಳ ಬೆಳೆ ಇಲ್ಲಿ ವಿಶೇಷವಾಗಿವೆ. ದಕ್ಷಿಣಭಾಗದಲ್ಲಿ ಬಾಸ್ಟನ್ ಪರ್ವತ ಶ್ರೇಣಿಗಳಿವೆ.

ಅರಕಾನ್ಸಸ್‌ನ ಪಶ್ಚಿಮದ ಮಧ್ಯಪ್ರದೇಶದಲ್ಲಿರುವ ಓಷಿಟೊ ಎಂಬ ಪರ್ವತ ಪ್ರದೇಶ ಕಣಿವೆ ಸಮುದ್ರಮಟ್ಟದಿಂದ 333–666 ಮೀ ಎತ್ತರಕ್ಕೆ ಸಮಾನಾಂತರವಾಗಿ ಹಬ್ಬಿರುವ ಬೆಟ್ಟಗಳ ಪ್ರದೇಶ. ಇತರ ಕಡೆಗಳಲ್ಲಿರುವಂತೆಯೆ ಈ ಪರ್ವತ ಪ್ರದೇಶವೂ ಅರಣ್ಯಮಯವಾಗಿದ್ದು ಇದರ ಅನೇಕ ಇಳಿಜಾರು ಪ್ರದೇಶ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಾಗಿದೆ.

ಇಳಿಜಾರು ಪ್ರದೇಶ 48–64 ಕಿಮೀ ವಿಸ್ತರಿಸುವ ಬಾಸ್ಟನ್ ಮತ್ತು ಓಷಿಟೊ ಪರ್ವತಗಳ ನಡುವೆ ಒಂದು ಮೊಗಸಾಲೆಯಂತಿರುವ ಸ್ಥಳ. ಓಷಿಟೊ ಪರ್ವತದ ಆಚೆ ಇರುವ ಬೇರೆ ಬೇರೆ ಪರ್ವತಗಳು ಇಳಿಜಾರು ಭೂಮಿಯಿಂದ 666ಮೀ ಎತ್ತರವಿದ್ದು ಬಹಳ ಒರಟಾಗಿವೆ. ಮೆಕ್ಕಲು ಮಣ್ಣಿನಿಂದ ನಿರ್ಮಿತವಾದ ಸಮ ಪ್ರದೇಶಕ್ಕೆ ಸೇರಿದಂತೆ, ಫಲವತ್ತಾದ ತಗ್ಗು ಪ್ರದೇಶಗಳು ಹೆಚ್ಚು ಕಡಿಮೆ ಎಲ್ಲಾ ಭಾಗವನ್ನು ಆವರಿಸಿಕೊಂಡಿವೆ.

ತೀರಪ್ರದೇಶಗಳ ಮರಳು ಮಿಶ್ರಿತ ಮಣ್ಣಿನಲ್ಲಿ ಬೆಳೆಯುವ ಬೆಲೆಬಾಳುವ ಪೈನ್ ಮರದ ಕಾಡುಗಳು ಹೆಚ್ಚಾಗಿವೆ. ಈ ಪ್ರದೇಶದ ಅಧಿಕ ಭಾಗದಲ್ಲಿ ಹತ್ತಿ, ಬತ್ತ, ಬಟಾಣಿ, ತರಕಾರಿಗಳು ಹಾಗೂ ಇತರ ಕೃಷಿ ಪದಾರ್ಥಗಳನ್ನು ಬೆಳೆಯುತ್ತಾರೆ. ಮಿಸಿಸಿಪ್ಪಿ ನದಿಯ ನೀರಿನ ಪ್ರವಾಹದಿಂದಾಗಿರುವ ಸಮಭೂಮಿಯ ತಗ್ಗು ಪ್ರದೇಶ ಹೆಚ್ಚು ಫಲವತ್ತಾಗಿದೆ. ಕೆಲವು ಸಮಭೂಪ್ರದೇಶಗಳು ಪ್ರವಾಹಕ್ಕೊಳಗಾಗಿವೆ. ಈ ಪ್ರದೇಶದಲ್ಲಿ ಸಾಕಷ್ಟು ನೀರ್ಗಾಲುವೆಗಳಿಲ್ಲ. ನದಿಗಡ್ಡಲಾಗಿ ಕಟ್ಟಿರುವ ಅಣೆಕಟ್ಟುಗಳು ಈ ಪ್ರದೇಶವನ್ನು ರಕ್ಷಿಸುತ್ತವೆ. ಅಲ್ಲದೆ ನೀರ್ಗಾಲುವೆಗಳಿಗೆ ಚರಂಡಿ ಹಾಗೂ ಕಾಲುವೆಯು ನೀರನ್ನು ಹಾಯಿಸಿಕೊಳ್ಳಲಾಗುತ್ತದೆ. ಮಾಂಸ ಮತ್ತು ಹಾಲಿಗಾಗಿ ದನಗಳನ್ನು ಸಾಕುವರು.

ಕಲ್ಲಿದ್ದಲು, ಪೆಟ್ರೋಲಿಯಂ, ಸ್ವಾಭಾವಿಕ ಅನಿಲ, ಬಾಕ್ಸೈಟ್, ಕಟ್ಟಡದ ಕಲ್ಲುಗಳು ಇಲ್ಲಿನ ಮುಖ್ಯ ಖನಿಜ ಸಂಪತ್ತು. ಅಲ್ಯೂಮಿನಿಯಂ ಲೋಹವನ್ನು ತೆಗೆಯುವ ಬಾಕ್ಸೈಟ್‌ನ ಗಣಿಗಳು ಸಂಯುಕ್ತ ಸಂಸ್ಥಾನದಲ್ಲಿ ಮಾತ್ರ ಇವೆ. ಇಲ್ಲಿನ ಖನಿಜೋತ್ಪನ್ನದ ವಾರ್ಷಿಕ ಮೊತ್ತ 140 ದ.ಲ. ಡಾಲರ್. (ಜೆ.ಇ.ಕೆ.)

**ಅರಣ್ಯಗಳು ಮತ್ತು ಅರಣ್ಯಶಾಸ್ತ್ರ:** ಮೂಲತಃ ಹಳ್ಳಿಯ ಹೊರಭಾಗದಲ್ಲಿ ಸಾಗುವಳಿ ಮಾಡದ ಮತ್ತು ಜನರು ವಾಸವಾಗಿರದ ಹಾಗೂ ನೈಸರ್ಗಿಕ ಸಸ್ಯಗಳನ್ನೊಳಗೊಂಡ ಭೂಭಾಗ. ವಿವಿಧ ವೃಕ್ಷ ಸಮೂಹಗಳಿಂದ ಆವೃತವಾದ ಭೂವಲಯ. ಅರಣ್ಯ ಎಂಬ ಶಬ್ದ ಲ್ಯಾಟಿನ್ ಪದ ಫೊರಿಸ್ ಎಂಬುದರಿಂದ ಬಂದದ್ದು. ಸಂಯುಕ್ತರಾಷ್ಟ್ರಗಳ (ಯು.ಎನ್.) ಆಹಾರ ಮತ್ತು ವ್ಯವಸಾಯ ವಿಭಾಗ (ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಸೇಷನ್, ಎಫ್.ಎ.ಓ.) ನೀಡಿರುವ ವ್ಯಾಖ್ಯೆಯ ಪ್ರಕಾರ ಸಸ್ಯಸಮುದಾಯ ವ್ಯಾಪಿಸಿರುವ ಎಲ್ಲ ಗಾತ್ರದ ಗಿಡಮರಗಳು ಪ್ರಧಾನವಾಗಿರುವ, ಕಡಿಯಲಿ ಬಿಡಲಿ ಮರಮುಟ್ಟು, ಸೌದೆ ಒದಗಿಸಲು ಸಮರ್ಥವಾಗಿರುವ ಅಥವಾ ಸ್ಥಳೀಯ ಹವೆಯ ಮೇಲೆ ಅಥವಾ ಜಲಸಂಪತ್ತಿನ ಮೇಲೆ ಪ್ರಭಾವ ಬೀರಲು ಶಕ್ತವಾಗಿರುವ, ಎಲ್ಲ ನೆಲೆಗಳಿಗೂ ಅರಣ್ಯ ಎಂಬ ಹೆಸರಿದೆ. ಕಾಡು, ಅಡವಿ ಪರ್ಯಾಯ ಪದಗಳು. ಕಾಡನ್ನು ಈಚೆಗೆ ಕಡಿದು ಉಳಿದಿರುವ, ಆದರೆ ಬೇಗನೆ ಹೊಸಕಾಡನ್ನು ಬೆಳೆಸಲು ಉದ್ದೇಶಿಸಿರುವ ನೆಲವೂ ಅರಣ್ಯವೇ. ಉದ್ಯಾನವನಗಳು, ರಸ್ತೆಬದಿಯ ಮರಸಾಲುಗಳು, ವ್ಯವಸಾಯೋತ್ಪನ್ನಕ್ಕಾಗಿ ನೆಟ್ಟು ಬೆಳೆಸಿದ ತೋಟಗಳು ಮುಂತಾದವು ಅರಣ್ಯ ಪದದ ವ್ಯಾಪ್ತಿಯಲ್ಲಿಲ್ಲ. ಕೇವಲ ಗಿಡಮರ ಮುಂತಾದ ಸಸ್ಯಸಮುದಾಯಕ್ಕೆ ಮಾತ್ರ ಈ ಪದ ಸೀಮಿತವಲ್ಲ; ಆ ಪ್ರದೇಶದಲ್ಲಿ ಇರುವ ಕ್ರಿಮಿಕೀಟಗಳು, ಪ್ರಾಣಿಗಳು, ಅರಣ್ಯೋತ್ಪತ್ತಿಗಳು ಇವೆಲ್ಲವನ್ನೂ ಅರಣ್ಯ ಪದ ಒಳಗೊಂಡಿದೆ. ಅರಣ್ಯಗಳು ನೈಸರ್ಗಿಕವಾದವು. ಇತ್ತೀಚೆಗೆ ಮಾನವನಿಂದಲೂ ಕಾಡು ಬೆಳೆಸುವ ಪ್ರಯತ್ನ ಸಾಗಿದೆ. ಮಾನವನಿಂದ ಬೆಳೆಸಿದ ನೆಡುತೋಪುಗಳು ನೈಸರ್ಗಿಕ ಅರಣ್ಯಗಳಷ್ಟು ಮೂಲಸ್ವರೂಪ ಮತ್ತು ವೈವಿಧ್ಯತೆಯನ್ನು ಹೊಂದಿರುವುದಿಲ್ಲ.

ನವೀಕರಿಸಬಹುದಾದ ಸಂಪನ್ಮೂಲಗಳಲ್ಲಿ ಅರಣ್ಯಗಳೂ ಒಂದು. ಅರಣ್ಯಗಳು ಬಹು ಉಪಯೋಗಿ. ಜೀವ ಪರಿಸರದ ಸಮತೋಲನವನ್ನು ಕಾಪಾಡಲು ನೆರವಾಗುತ್ತವೆ. ವನ್ಯಜೀವಿಗಳ ಆವಾಸವಾಗಿವೆ. ಅರಣ್ಯಗಳನ್ನು ಸ್ಥೂಲವಾಗಿ ಮರಗಳು ಮತ್ತು ಹುಲ್ಲುಗಳೆಂದು ವಿಂಗಡಿಸಬಹುದು. ಹಲವು ವರ್ಷಗಳವರೆಗೆ ಎತ್ತರವಾಗಿ ಬೆಳೆಯುವ ದಾರುಮಯ ಸಸ್ಯಗಳೇ ಮರಗಳು. ಇವು ಹಲವು ಟೊಂಗೆಗಳುಳ್ಳ ದೊಡ್ಡ ಕಾಂಡವುಳ್ಳವು. ದಾರು ರಹಿತ ಸಸ್ಯವೇ ಹುಲ್ಲು. ಪ್ರಾಣಿಗಳಿಗೆ ಮೇವು ನೀಡಿ ಆಸರೆ ನೀಡುತ್ತದೆ. ಮೂಲಿಕೆ, ಛಾವಣಿ, ಕಾಗದ ತಯಾರಿಕೆಗೂ ಉಪಯುಕ್ತ. ಬತ್ತ, ಗೋದಿಯಂತಹ ಹುಲ್ಲು ಆಹಾರ ಧಾನ್ಯ ನೀಡುತ್ತವೆ.

ಅರಣ್ಯ ಬೆಳೆವಣಿಗೆಗೆ ಅಗತ್ಯವಾದ ಸ್ಥಿತಿಗಳು: ಇವುಗಳ ಬೆಳೆವಣಿಗೆಯನ್ನು ಹಲವು ಭೌಗೋಳಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳು ನಿರ್ಧರಿಸುತ್ತವೆ. ಉದಾ: ವಾಯುಗುಣ, ಭೂಸ್ವರೂಪಗಳು, ಮಣ್ಣು, ಮಾನವ, ಕ್ರಿಮಿ–ಕೀಟ ಇತ್ಯಾದಿ.

ಅರಣ್ಯದ ಬೆಳೆವಣಿಗೆಯನ್ನು ನಿರ್ಧರಿಸುವ ಅಂಶಗಳಲ್ಲಿ ವಾಯುಗುಣದ ಮೂಲ ಘಟಕಗಳಾದ ಉಷ್ಣಾಂಶ, ಮಳೆ, ತೇವಾಂಶ ಮತ್ತು ಮಾರುತಗಳು ಪ್ರಮುಖ ಪಾತ್ರವಹಿಸುತ್ತವೆ. ಉಷ್ಣಾಂಶ ಅರಣ್ಯಗಳ ಬೆಳೆವಣಿಗೆ ಮತ್ತು ವಿಧಗಳನ್ನು ನಿರ್ಧರಿಸುತ್ತದೆ. ಉದಾ: ಉಷ್ಣವಲಯದ ಗಟ್ಟಿಮರಗಳ ಅರಣ್ಯ ಮತ್ತು ಸಮ ಶೀತೋಷ್ಣವಲಯದ ಮೃದುಮರದ ಅರಣ್ಯಗಳು. ಮಳೆಯ ಹಂಚಿಕೆ ಮರಗಳ ಬೆಳೆವಣಿಗೆಗೆ ಅಗತ್ಯ. ಸದಾ ಹಾಗೂ ಹೆಚ್ಚು ಮಳೆ ಬೀಳುವಲ್ಲಿ ನಿತ್ಯಹರಿದ್ವರ್ಣದ ಕಾಡುಗಳು, ಋತುಕಾಲಿಕ ಮಳೆಯಾಗುವಲ್ಲಿ ಎಲೆ ಉದುರು ಕಾಡು, ಕಡಿಮೆ ಮಳೆಯಾಗುವ ಸಮಶೀತೋಷ್ಣ ವಲಯದಲ್ಲಿ ಸೂಚಿಪರ್ಣ ಕಾಡುಗಳು ಬೆಳೆಯುತ್ತವೆ. ಅತಿ ಶಾಖವುಳ್ಳ ಪ್ರಬಲ ಮಾರುತಗಳ ವಲಯಗಳಿಗಿಂತ ಗಾಳಿಗೆ ಮರೆಯಾದ ಭಾಗಗಳಲ್ಲಿ ಅರಣ್ಯಗಳ ಬೆಳೆವಣಿಗೆ ಹೆಚ್ಚು.

ಪರ್ವತ ಮತ್ತು ಪ್ರಸ್ಥಭೂಮಿಗಳು ಅರಣ್ಯಗಳ ಬೆಳೆವಣಿಗೆಯ ಮೇಲೆ ಪ್ರಭಾವ ಬೀರುತ್ತವೆ. ಇವುಗಳ ಗಾಳಿಗಭಿಮುಖಭಾಗಗಳು ಹೆಚ್ಚು ಮಳೆಯನ್ನು ಪಡೆದು ಸಮೃದ್ಧವಾದ ಅರಣ್ಯಗಳ ಬೆಳೆವಣಿಗೆಗೆ ನೆರವಾಗುತ್ತದೆ. ಉದಾ: ಭಾರತದ ಪಶ್ಚಿಮ ಘಟ್ಟಗಳ ಪೂರ್ವಭಾಗದಲ್ಲಿ ಅರಣ್ಯಗಳ ಬೆಳೆವಣಿಗೆ ಕಡಿಮೆ. ಕಡಿದಾದ ಇಳಿಜಾರು, ತೀವ್ರ ಮಣ್ಣಿನ ಸವೆತ, ಮಣ್ಣಿನ ಫಲವತ್ತು ಕುಸಿತ, ಕಣಿವೆಯ ತಳಭಾಗ, ಜೌಗುಪ್ರದೇಶ ಮುಂತಾದ ಪರಿಸ್ಥಿತಿಗಳೂ ಅರಣ್ಯಗಳ ಬೆಳೆವಣಿಗೆ ಮತ್ತು ಹಂಚಿಕೆಯನ್ನು ನಿರ್ಧರಿಸುತ್ತವೆ.

ಮಣ್ಣು, ಗಿಡಮರಗಳು ಬೆಳೆಯಲು ಅಗತ್ಯವಾದ ನೀರು ಮತ್ತು ಆಹಾರಗಳನ್ನು ಪೂರೈಸುವ ಮಾಧ್ಯಮವಾಗಿ ಅರಣ್ಯಗಳ ಬೆಳೆವಣಿಗೆಯನ್ನು ನಿರ್ಧರಿಸುತ್ತದೆ. ಫಲವತ್ತಾದ ಹಾಗೂ ತೇವಾಂಶ ಸಂಗ್ರಹ ಸಾಮರ್ಥ್ಯವುಳ್ಳ ಮಣ್ಣು ಸಮೃದ್ಧವಾದ ಅರಣ್ಯಗಳ ಬೆಳೆವಣಿಗೆಗೆ ಪೂರಕ. ಕಡಿಮೆ ಫಲವತ್ತಾದ ಹಾಗೂ ತೇವಾಂಶ ಸಂಗ್ರಹ ಸಾಮರ್ಥ್ಯವಿಲ್ಲದ ಮಣ್ಣಿನಲ್ಲಿ ವಿರಳ ಹಾಗೂ ಕುರುಚಲು ಗಿಡಮರಗಳು ಬೆಳೆಯುತ್ತವೆ.

ಅರಣ್ಯಗಳ ಅಳಿವು ಉಳಿವು ಮಾನವರಿಂದ ನಿರ್ಧಾರವಾಗುತ್ತದೆ. ಕೃಷಿ ವಿಸ್ತರಣೆ, ಕೈಗಾರಿಕೀಕರಣ, ನೀರಾವರಿ ಅಭಿವೃದ್ಧಿ, ಸಾರಿಗೆಮಾರ್ಗಗಳ ನಿರ್ಮಾಣ ಮುಂತಾದ ಉದ್ದೇಶಗಳಿಗೆ ಮನುಷ್ಯ ಅರಣ್ಯಗಳನ್ನು ನಾಶಗೊಳಿಸುವದು ನಿರಂತರವಾಗಿ ಸಾಗಿದೆ. ಕೆಲವು ದೇಶಗಳಲ್ಲಿ ಜನಸಂಖ್ಯೆ ಹಾಗೂ ಮತ್ತಿತ್ತರ ಒತ್ತಡದಿಂದಾಗಿ ಅರಣ್ಯಕ್ಷೇತ್ರ ಕಡಿಮೆಯಾಗಿದೆ. ಎಲ್ಲಕ್ಕೂ ಮಿಗಿಲಾಗಿ ಮನುಷ್ಯನ ಸಂಸ್ಕೃತಿಯ ಪ್ರೌಢತೆ ಮತ್ತು ನಾಗರಿಕತೆ ಅರಣ್ಯಗಳ ಬೆಳೆವಣಿಗೆ, ಹಂಚಿಕೆ ಹಾಗೂ ಉಳಿವನ್ನು ನಿರ್ಣಯಿಸುತ್ತದೆ. ಅರಣ್ಯಗಳ ಮಹತ್ವ, ಮುಂದಿನ ಪೀಳಿಗೆಗೆ ಅವುಗಳನ್ನು ಸಂರಕ್ಷಿಸಲು ಯೋಜನೆಗಳನ್ನು ರೂಪಿಸುವುದು ಅನಿವಾರ್ಯವಾಗಿದೆ.

ಅರಣ್ಯದ ವಿಧಗಳು: ಪ್ರದೇಶ, ಎಲೆ, ಮರಗಳ ಆಕಾರ–ಗಾತ್ರಗಳನ್ನಾಧರಿಸಿ ಪ್ರಪಂಚದ ಅರಣ್ಯಗಳನ್ನು 5 ಪ್ರಮುಖ ವಿಧಗಳಾಗಿ ವಿಂಗಡಿಸಬಹುದು.

1. ಉಷ್ಣವಲಯದ ಅಗಲ ಎಲೆಗಳ ನಿತ್ಯಹರಿದ್ವರ್ಣದ ಅರಣ್ಯಗಳು: ಸಮಭಾಜಕ ಮತ್ತು ವರ್ಷವೆಲ್ಲ ಮಳೆಬೀಳುವ ಭಾಗಗಳಲ್ಲಿ ಇಂತಹ ಅರಣ್ಯಗಳು ಕಂಡುಬರುತ್ತವೆ. ಇಲ್ಲಿ ದಟ್ಟವಾದ, ಎತ್ತರ ಹಾಗೂ ಸದಾ ಹಸುರಾದ ಅಗಲ ಎಲೆಗಳುಳ್ಳ ಗಟ್ಟಿ ಮರಗಳು ಬೆಳೆಯುತ್ತವೆ. ಪರಸ್ಪರ ಕೂಡಿಕೊಂಡ ರೆಂಬೆಗಳಿಂದ ಮೇಲ್ಚಪ್ಪರ ನಿರ್ಮಾಣಗೊಂಡು ಸೂರ್ಯನ ಬೆಳಕು ನೆಲದ ಮೇಲೆ ಬೀಳುವುದು ಕಡಿಮೆ. ಅಭೇದ್ಯವಾದ ಈ ಅರಣ್ಯ ಮರಗಳ ಮೇಲೆ ಏರುಬಳ್ಳಿ ಮತ್ತು ಪರಾವಲಂಬಿ ಬಳ್ಳಿಗಳು ಬೆಳೆಯುತ್ತವೆ. ಎಬೋನಿ, ಮಹೋಗನಿ, ಸಾಗುವಾನಿ, ಬೀಟೆ, ಶ್ರೀಗಂಧ, ಸಿಂಕೋನ, ರಬ್ಬರ್ ಮುಂತಾದ ವಿವಿಧ ಮರಗಳು ಇಲ್ಲಿ ಬೆಳೆಯುತ್ತವೆ. ಈ ಅರಣ್ಯಗಳ ಕೆಲವು ಕಡೆ ಮರಕಡಿಯುವ–ಕೊಯ್ಯುವ ವೃತ್ತಿಸಾಗಿದೆ. ಮತ್ತೆ ಕೆಲವೆಡೆ ನೆಡುತೋಟದ ಬೇಸಾಯಕ್ಕೆ ಕಾಡನ್ನು ವಿಸ್ತರಿಸಲಾಗಿದೆ. ಅಲ್ಲಿ ಕಾಫಿ, ಕೋಕೋ, ರಬ್ಬರ್ ತೋಟಗಳು ಅಭಿವೃದ್ಧಿಗೊಂಡಿವೆ. ಅಮೆಜಾನ್ (ದ.ಅಮೆರಿಕ) ಮತ್ತು ಕಾಂಗೋ (ಆಫ್ರಿಕ) ನದಿ ಬಯಲು, ಇಂಡೋನೇಷ್ಯ, ಮಲೇಷ್ಯ, ಆಗ್ನೇಯ ಏಷ್ಯ, ಮಯಯನ್ಮಾರ್ ಹಾಗೂ ಭಾರತದ ಕೆಲವು ಭಾಗಗಳಲ್ಲಿ ಇಂತಹ ಅರಣ್ಯಗಳಿವೆ. ಬ್ರೆಜಿಲ್‌ನಲ್ಲಿ ಇಂಥ ಅರಣ್ಯಗಳನ್ನು 'ಸೆಲ್ವಾಸ್' ಎಂದು ಕರೆಯುವರು.

2. ಉಷ್ಣವಲಯದ ಉದುರುವ ಅಗಲ ಎಲೆಗಳ ಅರಣ್ಯಗಳು: ಇಂಥ ಅರಣ್ಯಗಳು ಮಾನ್ಸೂನ್ ಪ್ರದೇಶಗಳಲ್ಲಿ ವಿಶೇಷ. ಉದಾ: ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಮಯನ್ಮಾರ್, ಥೈಲೆಂಡ್, ಕಾಂಬೋಡಿಯ, ದ.ಚೀನ, ಆಫ್ರಿಕದ ಪೂರ್ವ ಭಾಗ ಮತ್ತು ಆಸ್ಟ್ರೇಲಿಯದ ಉತ್ತರ ಭಾಗ. ಋತುಕಾಲಿಕ ಉಷ್ಣಾಂಶ ಮತ್ತು ಮಳೆ ಹಂಚಿಕೆಯ ವ್ಯತ್ಯಾಸಗಳು ಈ ಅರಣ್ಯಗಳ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಆದರೂ ಮಳೆಯ ಪ್ರಭಾವ ಪ್ರಧಾನವಾದುದು. ಅತ್ಯಧಿಕ ಮಳೆ ಬೀಳುವಲ್ಲಿ ದಟ್ಟವಾದ ಸದಾ ಹಸುರು ಕಾಡುಗಳಿದ್ದರೆ, ಕಡಿಮೆ ಮಳೆಯಾಗುವಲ್ಲಿ ತೆರೆದ ವಿರಳ ಕಾಡುಗಳು ಬೆಳೆಯುತ್ತವೆ. ತೇವಾಂಶದ ಕೊರತೆಯಿಂದ ಬೇಸಗೆಯ ಪ್ರಾರಂಭದಲ್ಲಿ ಜಲಾಂಶ ವಿಸರ್ಜನೆಯನ್ನು ಮಿತಗೊಳಿಸಲು ಮರಗಳು ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಈ ಅರಣ್ಯಗಳಿಗೆ ಮಾನ್ಸೂನ್ ಎಲೆ ಉದುರುವ ಅರಣ್ಯಗಳೆಂದು ಕರೆಯುವರು. ಸಾಲ, ಸಾಗುವಾನಿ, ಬಿದಿರು, ಶ್ರೀಗಂಧ, ಮಾವು, ಹಲಸು, ಬೇವು, ಹೊನ್ನೆ, ನಂದಿ ಮುಂತಾದ ಬೆಲೆಬಾಳುವ ಮರಗಳು ಬೆಳೆಯುತ್ತವೆ. ಇತ್ತೀಚೆಗೆ ಜನಸಂಖ್ಯೆಯ ಒತ್ತಡ ಮತ್ತು ಕೃಷಿ ಭೂಮಿಯ ವಿಸ್ತರಣೆಗಾಗಿ ಈ ಅರಣ್ಯಗಳ ಕ್ಷೇತ್ರ ಕಡಿಮೆಯಾಗಿದೆ.

3. ಸಮಶೀತೋಷ್ಣವಲಯದ ಅಗಲಎಲೆಯುಳ್ಳ ಅರಣ್ಯಗಳು: ಸಾಧಾರಣ ಉಷ್ಣಾಂಶ ಮತ್ತು ಮಳೆ ಹಂಚಿಕೆ ಇಲ್ಲಿನ ವಿಶೇಷ. ಉದಾ: ಅಮೆರಿಕ ಸಂಯುಕ್ತ ಸಂಸ್ಥಾನದ ಈಶಾನ್ಯ ಭಾಗ, ಪಶ್ಚಿಮ ಮಧ್ಯ ಯುರೋಪ್, ಮಧ್ಯ ಏಷ್ಯದ ಜಪಾನ್, ಕೊರಿಯ,

ಈಶಾನ್ಯ ಚೀನ, ದಕ್ಷಿಣ ಚಿಲಿ, ಪಟಗೋನಿಯ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಇತ್ಯಾದಿ. ಓಕ್, ಎಲ್ಮ್, ಮ್ಯಾಪಲ್, ಬೀಚ್, ಬರ್ಚ್, ಚೆಸ್ಟ್‌ನಟ್, ಸ್ಪ್ರೂಸ್, ವಾಲ್‌ನಟ್ ಮತ್ತು ಆಲ್ಡರಂಗಳು ಇಲ್ಲಿ ಬೆಳೆಯುವ ಪ್ರಮುಖ ಮರಗಳು. ಇವು ಚಳಿಗಾಲದಲ್ಲಿ ತಮ್ಮ ಎಲೆಉದುರಿಸುತ್ತವೆ. ಇತ್ತೀಚೆಗೆ ಕೃಷಿ, ಕೈಗಾರಿಕೆ ಮತ್ತು ಗಣಿಗಾರಿಕೆ ಪ್ರಗತಿಯಿಂದ ಈ ಅರಣ್ಯಗಳ ಬಹುಪಾಲು ನಾಶವಾಗಿದೆ.

4. ಮೆಡಿಟರೇನಿಯನ್ ಅರಣ್ಯಗಳು: ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿನ ಭಾಗಗಳಲ್ಲಿ ಇಂತಹ ಅರಣ್ಯ ಕಂಡುಬರುತ್ತವೆ. ಈ ಅರಣ್ಯಗಳು ಸ್ಪೇನ್, ಪೋರ್ಚುಗಲ್, ಆಲ್ಜೀರಿಯ, ಟುನಿಷಿಯ, ಮೊರಾಕ್ಕೊ, ಇಟಲಿ, ಗ್ರೀಸ್, ದಕ್ಷಿಣ ಫ್ರಾನ್ಸ್, ಕ್ಯಾಲಿಫೋರ್ನಿಯ, ಮಧ್ಯ ಚಿಲಿ, ನೈಋತ್ಯ ಆಸ್ಟ್ರೇಲಿಯಗಳಲ್ಲಿ ಹಂಚಿಕೆಯಾಗಿವೆ. ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಓಕ್, ಚೆಸ್ಟ್‌ನಟ್, ಲಾರೆಲ್, ಆಲೀವ್ ಮತ್ತು ಮ್ಯಾಪಲ್. ಈ ಗಟ್ಟಿಮರಗಳು ಬರದ ಪರಿಸ್ಥಿತಿ ನಿಭಾಯಿಸಿಕೊಳ್ಳಲು ಆಳವಾದ ಬೇರು, ಮಂದವಾದ ತೊಗಟೆ ಮತ್ತು ಎಲೆ ಹಾಗೂ ಮುಳ್ಳುಗಳುಳ್ಳ ಟೊಂಗೆಗಳನ್ನು ಹೊಂದಿವೆ. ಈ ಅರಣ್ಯಗಳ ಕ್ಷೇತ್ರವೂ ಸಹ ಕೃಷಿ ಹಾಗೂ ಇತರ ಆರ್ಥಿಕ ಚಟುವಟಿಕೆಗಳಿಂದ ಕಡಿಮೆಯಾಗಿದೆ.

5. ಸೂಚಿಪರ್ಣದ ಮೃದು ಮರಗಳ ಅರಣ್ಯಗಳು: ಉತ್ತರ ಗೋಳಾರ್ಧದಲ್ಲಿ ತಂಡ್ರಾ ಪ್ರದೇಶದಿಂದ ದಕ್ಷಿಣಕ್ಕೆ ಹೆಚ್ಚು. ಉದಾ: ಅಲಾಸ್ಕ, ಕೆನಡ, ನಾರ್ವೆ, ಸ್ವೀಡನ್, ಫಿನ್‌ಲೆಂಡ್ ಮತ್ತು ಸೈಬೀರಿಯ ಹಾಗೂ ಇಟಲಿಯ ಕೆಲಭಾಗ, ಟಾಸ್ಮೇನಿಯ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಹರಡಿವೆ. ಇಂತಹದೇ ಅರಣ್ಯಗಳು ಉಷ್ಣ ಮತ್ತು ಉಪ ಉಷ್ಣವಲಯದ ಎತ್ತರದ ಭಾಗಗಳಲ್ಲಿ ಕಂಡುಬರುತ್ತವೆ. ಉದಾ: ಹಿಮಾಲಯ, ಸಿಯೆರ್ರಾ ನಿವೇಡ, ಕಾಸ್ಕೇಡ್, ರಾಕೀಸ್, ಕಾಕಸಸ್, ಚೀನ ಮತ್ತು ಜಪಾನಿನ ಪರ್ವತಭಾಗಗಳು. ಪೈನ್, ಫರ್, ಲಾರ್ಚ್, ಸ್ಪ್ರೂಸ್, ಹೆಮ್‌ಲಾಕ್, ಪಾಪ್ಲರ್, ಡಗ್ಲಾಸ್, ಬಿಳಿಪೈನ್, ಹಳದಿ ಪೈನ್ ಮತ್ತು ಬಾಲ್ಸಮ್‌ಫರ್‌ಗಳು ಇಲ್ಲಿ ಬೆಳೆಯುವ ಪ್ರಮುಖವಾದ ಮರಗಳು. ಇವುಗಳ ಎಲೆಗಳು ಮೊನಚಾಗಿರುವುದರಿಂದ ಸೂಚಿಪರ್ಣ (ಕೋನಿಫೆರಸ್) ಕಾಡುಗಳೆನ್ನುವರು. ಸೈಬೀರಿಯದಲ್ಲಿ 'ತೈಗಾ' ಎನ್ನುವರು. ಮರಗಳು ಎತ್ತರಕ್ಕೆ ನೇರವಾಗಿ ಬೆಳೆದು ಸದಾ ಹಸುರಾಗಿರುತ್ತವೆ. ಹಿಮವೃಷ್ಟಿ ಮತ್ತು ಶೀತವಾಯುಗುಣ ನಿಭಾಯಿಸುವ ಲಕ್ಷಣವುಳ್ಳವು. ಈ ಅರಣ್ಯಗಳು ವಾಣಿಜ್ಯದೃಷ್ಟಿಯಿಂದ ಪ್ರಮುಖವಾದವು.

ಅರಣ್ಯಗಳಿಂದ ದೊರೆಯುವ ಉಪಯೋಗಗಳನ್ನು ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಪ್ರಯೋಜನಗಳೆಂದು ವಿಂಗಡಿಸಬಹುದು.

ಪ್ರತ್ಯಕ್ಷ ಪ್ರಯೋಜನಗಳು: ಮರಮುಟ್ಟು ಪೂರೈಕೆ: ಗೃಹ ನಿರ್ಮಾಣ, ಪೀಠೋಪಕರಣ ತಯಾರಿಕೆ, ಹಡಗು ನಿರ್ಮಾಣ, ಕೃಷಿ ಉಪಕರಣ, ಎತ್ತಿನಗಾಡಿಗಳು, ಸಂಗೀತ ವಾದ್ಯಗಳು, ಆಟದವಸ್ತು, ಕರಕುಶಲವಸ್ತು ಮುಂತಾದವುಗಳ ತಯಾರಿಕೆಗೆ ಮರದ ದಾರು ಅತ್ಯಾವಶ್ಯಕ.

ಉರುವಲು: ಪ್ರಪಂಚದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ಅಡುಗೆ, ನೀರು ಕಾಯಿಸಲು ಮರವನ್ನು ಸೌದೆ ಮತ್ತು ಇದ್ದಿಲುಗಳ ರೂಪದಲ್ಲಿ ಬಳಸಲಾಗುತ್ತದೆ. ಕೈಗಾರಿಕಾ ಉದ್ದೇಶಗಳಿಗೂ ಸೌದೆ ಬಳಸಲಾಗುವುದು. ಪೆಟ್ರೋಲಿಯಂ ವಸ್ತು, ಸ್ವಾಭಾವಿಕ ಅನಿಲ ಹಾಗೂ ಸೌರ ಶಕ್ತಿಗಳ ಬಳಕೆಯಿಂದ ಇತ್ತೀಚೆಗೆ ಸೌದೆಯ ಬಳಕೆ ಕಡಿಮೆಯಾಗುತ್ತಿದೆ.

ಕಚ್ಚಾವಸ್ತುಗಳ ಪೂರೈಕೆ: ಹಲವು ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳು ಅರಣ್ಯಗಳಿಂದ ಲಭ್ಯ. ಉದಾ: ಕಾಗದ, ರಬ್ಬರ್, ಅರಗು ಬೆಂಕಿಕಡ್ಡಿ, ಕರ್ಪೂರ, ಪ್ಲೈವುಡ್, ಸಾಬೂನು, ಬಣ್ಣ, ಸುಗಂಧ ತೈಲಗಳು, ಶ್ರೀಗಂಧ, ನೀಲಗಿರಿ, ಬೇವಿನ ಎಣ್ಣೆಗಳು ಇತ್ಯಾದಿ.

ಆಹಾರ: ಮನುಷ್ಯ ಮತ್ತು ಪ್ರಾಣಿಗಳಿಗೆ ಕೆಲವು ಆಹಾರವಸ್ತುಗಳು ಅರಣ್ಯದಲ್ಲಿ ಲಭ್ಯವಾಗುತ್ತವೆ. ಉದಾ: ಹಣ್ಣು, ಗೆಡ್ಡೆ-ಗೆಣಸು, ಎಲೆಗಳು, ಹುಲ್ಲು, ಜೇನು ಹಾಗೂ ಬೇಟೆಯಾಡಿದ ಪ್ರಾಣಿಗಳ ಮಾಂಸ.

ಉಡುಪು: ಪೂರ್ವಿಕರಷ್ಟೇ ಅಲ್ಲದೇ ಈಗಲೂ ಉಡುಪಿಗಾಗಿ ಅರಣ್ಯಗಳನ್ನಾಧರಿಸಲಾಗಿದೆ. ಅತ್ಯಾಧುನಿಕ ಕೃತಕ ರೇಷ್ಮೆ ಬಟ್ಟೆಗಳ ತಯಾರಿಕೆಗೆ ನಾರುವಸ್ತುಗಳನ್ನು ಅರಣ್ಯಗಳ ಮರದ ತಿರುಳಿನಿಂದ ಪಡೆಯಬಹುದು. ಜೊತೆಗೆ ಧ್ರುವವಲಯಗಳಲ್ಲಿ ವಾಸಿಸುವ ತುಪ್ಪಳವುಳ್ಳ ಪ್ರಾಣಿಗಳ ಚರ್ಮ ಅಲ್ಲಿಯ ಶೀತವಾಯುಗುಣಕ್ಕೆ ತಕ್ಕ ಉಡುಪು ತಯಾರಿಕೆಗೆ ಪೂರಕವಾಗಿದೆ.

ಔಷಧಿಗಳು: ಹಲವು ಬಗೆಯ ಔಷಧಿಗಳ ತಯಾರಿಕೆಗೆ ಅಗತ್ಯವಾದ ವಿವಿಧ ಪ್ರಕಾರದ ಗಿಡಮೂಲಿಕೆಗಳನ್ನು ಅರಣ್ಯಗಳು ಪೂರೈಸುತ್ತವೆ. ಅವು ಹೆಚ್ಚಾಗಿ ಉಷ್ಣವಲಯದ ಅರಣ್ಯಗಳಲ್ಲಿ ಲಭ್ಯ.

ಅಪ್ರತ್ಯಕ್ಷ ಪ್ರಯೋಜನಗಳು: ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್ ಅನಿಲಗಳನ್ನು ಸಮತೋಲನಗೊಳಿಸುವ ಮೂಲಕ ಅರಣ್ಯಗಳು ಜೈವಿಕ ರಾಶಿಯ ಅಸ್ತಿತ್ವಕ್ಕೆ ನೆರವಾಗುತ್ತವೆ. ವಾಯುಗುಣದ ಮೇಲೆ ಹೆಚ್ಚು ಪರಿಣಾಮ ಉಂಟುಮಾಡುತ್ತವೆ. ತಾಪಮಾನವನ್ನು ನಿಯಂತ್ರಿಸಿ ತಂಪಾದ ಹವಾಮಾನ ಸೃಷ್ಟಿಸುತ್ತವೆ, ಮಳೆಮಾರುತ ತಡೆದು ಮಳೆ ಸುರಿಸುತ್ತವೆ, ಬಾಷ್ಪೋತ್ಸರ್ಜನೆಯಿಂದ ವಾಯುವಿನ ತೇವಾಂಶವನ್ನು ಹೆಚ್ಚಿಸುತ್ತವೆ. ನೈಸರ್ಗಿಕ ಕರ್ತೃಗಳ ಹಾವಳಿಯಿಂದಾಗುವ ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ. ಉದುರಿದ ಮರಗಳ ಎಲೆಗಳು ಕೊಳೆತು ಮಣ್ಣಿನಲ್ಲಿ ಜೈವಿಕಾಂಶವನ್ನು ಹೆಚ್ಚಿಸಿ ಮಣ್ಣಿನ ಫಲವತ್ತನ್ನು ವೃದ್ಧಿಸುತ್ತವೆ. ವನ್ಯಪ್ರಾಣಿ ಮತ್ತು ಪಕ್ಷಿ ಸಂಕುಲಗಳಿಗೆ ಆವಾಸವನ್ನು ಒದಗಿಸುತ್ತವೆ. ಜಲಪ್ರವಾಹವನ್ನು ತಡೆಗಟ್ಟುವುದರಿಂದ ಅಂತರ್ಜಲದ ಮಟ್ಟವನ್ನು ಸುಧಾರಿಸುತ್ತವೆ. ಬಾಷ್ಪೀಕರಣ ನಿಯಂತ್ರಿಸಿ ಮಣ್ಣಿನ ತೇವಾಂಶವನ್ನು ಕಾಪಾಡುತ್ತವೆ.

ಪರಿಸರ ಮಾಲಿನ್ಯವನ್ನು ನಿಯಂತ್ರಿಸುವುದರಲ್ಲಿ ಅರಣ್ಯಗಳ ಪಾತ್ರಮಹತ್ವದ್ದು. ನದಿಗಳ ಮೇಲ್ಕಣಿವೆ ಜಲಾನಯನ ಪ್ರದೇಶದಲ್ಲಿ ನೀರು ಸ್ವಚ್ಛವಾಗಿರಲು ನೆರವಾಗುತ್ತವೆ.

ಶುದ್ಧವಾದ ವಾಯು ಮತ್ತು ಆಕರ್ಷಣೀಯ ಹಸುರು ದೃಶ್ಯಾವಳಿಗಳನ್ನು ಹೊಂದಿದ ಅರಣ್ಯಗಳು ಪ್ರವಾಸಿ ಮತ್ತು ವಿಹಾರ ಕೇಂದ್ರಗಳ ತಾಣಗಳಾಗುತ್ತವೆ. ಅನೇಕ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.

ಅರಣ್ಯ ಒಂದು ಪುಟ್ಟ ಪ್ರಪಂಚ. ಅಲ್ಲಿ ನಿರಂತರ ಹುಟ್ಟು, ಬೆಳವಣಿಗೆ, ಸಾವು ಎಂಬ ಆವರ್ತನೆ ನಡೆದೇ ಇದೆ. ಸಾಮಾನ್ಯವಾಗಿ ಉಷ್ಣವಲಯದದಲ್ಲಿ ಮುಂಗಾರು ಮಳೆ ಪ್ರಾರಂಭವಾಗುತ್ತಲೇ ಬೀಜೋತ್ಪತ್ತಿ ತೊಡಗುವುದು, ಸಮಶೀತೋಷ್ಣ ವಲಯದಲ್ಲಿ ಮಾಗಿ ಕಾಲದಲ್ಲಿ ಬೀಜೋತ್ಪತ್ತಿ ಆಗುವುದು. ಫಲಗಳೂ ಬೀಜಗಳೂ ತಾಯಿಮರದಿಂದ ದೂರಪ್ರದೇಶಗಳಿಗೆ ಪ್ರಸಾರ ಹೊಂದಿ ಬೇರೂರಲು ತಕ್ಕ ಉಪಾಯಗಳನ್ನು ನಿಸರ್ಗವೇ ನಿರ್ಮಿಸಿದೆ. ಹಣ್ಣು ಬಿರಿದು ಬೀಜ ದೂರಕ್ಕೆ ಸಿಡಿಯಬಹುದು; ಗಾಳಿ, ನೀರು, ಹಕ್ಕಿ, ಮೃಗ, ಮನುಷ್ಯ ಎಂಬ ಕಾರಕಗಳ ಮೂಲಕ ಬೀಜಗಳು ಬಲುದೂರ ಒಯ್ಯಲ್ಪಡುವುವು. ಇಂಥ ಬೀಜಗಳು ಅನುಕೂಲ ಸನ್ನಿವೇಶದಲ್ಲಿ ಮೊಳೆತು ಗಿಡಗಳಾಗುತ್ತವೆ. ಹೊಸ ಪರಿಸರಕ್ಕೆ ಹೊಂದಿಕೊಂಡು ಮರುಹುಟ್ಟಿನಿಂದ ಒಂದು ನೂತನ ವನಸ್ಪತಿ ಕೇಂದ್ರವನ್ನೇ ಸ್ಥಾಪಿಸುತ್ತವೆ. ಇಂಥ ಬೆಳವಣಿಗೆಯಲ್ಲಿ ಬೆಳಕು, ಗೊಬ್ಬರ, ಗಾಳಿ, ನೀರು ಇವುಗಳಿಗಾಗಿ ಸ್ಪರ್ಧೆ ಇದ್ದೇ ಇದೆ.

ಪ್ರಪಂಚದ ಕಾಡುಗಳು: ಭೂಮಿಯ ಹೊರಮೈ ಲಕ್ಷಣದಲ್ಲಿ ಕಾಡುಗಳಿಗೆ ಒಂದು ಮುಖ್ಯಸ್ಥಾನವಿದೆ. ತೀವ್ರತೆ ಅತಿಯಾಗದ ಮತ್ತು ದೀರ್ಘಕಾಲ ವ್ಯಾಪಿಸಿದ ಚಳಿಗಾಲವಿರುವ ಪ್ರದೇಶಗಳಲ್ಲಿ ಅರಣ್ಯಗಳು ಸ್ವಾಭಾವಿಕವಾಗಿ ಬೆಳೆಯುತ್ತವೆ. 20ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಪ್ರಪಂಚದ ನೆಲದ ಶೇ 33 ಭಾಗ ಅರಣ್ಯಾವೃತವಾಗಿತ್ತು. ಇನ್ನೂ ಶೇ 25 ಭಾಗ ಒಂದು ಕಾಲದಲ್ಲಿ ಅರಣ್ಯವಾಗಿದ್ದರೂ ಇಂದು ಅದು ವ್ಯವಸಾಯಪ್ರದೇಶವಾಗಿದೆ. ಉಳಿದ ಶೇ 42 ಭಾಗ ಪೇಟೆ-ಪಟ್ಟಣಗಳು, ಬೋಳುಬೆಟ್ಟಗಳು, ರಸ್ತೆಗಳು, ಮರುಭೂಮಿಗಳು ಮುಂತಾದವುಗಳಿಂದ ಕೂಡಿದೆ. ಎಫ್. ಎ. ಓ. ವರದಿಯಂತೆ ಈ ಕೆಳಗಿನ ವಿವರ ನೋಡಬಹುದು:

**ಪ್ರಪಂಚದ ಖಂಡವಾರು ಅರಣ್ಯಗಳ ಹಂಚಿಕೆ (1997)**

| ಪ್ರದೇಶ | ಅರಣ್ಯಪ್ರದೇಶ (ಮಿಲಿಯನ್ ಹೆಕ್ಟೇರು) | ಭೂಪ್ರದೇಶದಲ್ಲಿ ಅರಣ್ಯ ಪ್ರದೇಶ ಶೇ. ಪ್ರಮಾಣ | ಪ್ರಪಂಚದ ಅರಣ್ಯದಲ್ಲಿ ಶೇ. ಪ್ರಮಾಣ |
|---|---|---|---|
| ದಕ್ಷಿಣ ಅಮೆರಿಕ | 956.6 | 53.89 | 21.7 |
| ಆಫ್ರಿಕ | 752.8 | 25.89 | 17.0 |
| ಉತ್ತರ ಅಮೆರಿಕ | 733.5 | 39.12 | 16.6 |
| ಏಷ್ಯ | 520.0 | 19.13 | 11.8 |
| ಯುರೋಪ್ | 141.0 | 29.80 | 3.2 |
| ಓಷಿಯಾನಿಯ | 96.0 | 11.33 | 2.2 |
| ಮಧ್ಯ ಅಮೆರಿಕ | 74.0 | 27.21 | 1.7 |
| ರಷ್ಯ | 1143.0 | 51.18 | 25.8 |
| **ಪ್ರಪಂಚ** | **4416.9** | **33.52** | **100.0** |

**ಅರಣ್ಯಶಾಸ್ತ್ರ:** ಇದರ ಬೆಳವಣಿಗೆ ಈಚಿನದು. ಜನಸಂಖ್ಯೆ ಏರಿದಂತೆ ನೈಸರ್ಗಿಕವಾಗಿಯೂ ಮನುಷ್ಯಕೃತವಾಗಿಯೂ ಅರಣ್ಯಗಳ ಅವ್ಯಾಹತ ನಾಶ ಮುಂದುವರಿದಿದೆ. ತತ್ಪರಿಣಾಮವಾಗಿ ಘೋರ ವಿಪತ್ತುಗಳು ತಲೆದೋರುತ್ತವೆ. ಅರಣ್ಯಗಳನ್ನು ಕುರಿತ ಶಾಸ್ತ್ರೀಯ ಅಧ್ಯಯನ ಅವಶ್ಯಕ ಮತ್ತು ಅನಿವಾರ್ಯವಾಗಿದೆ. ಆಧುನಿಕ ಅರಣ್ಯಶಾಸ್ತ್ರವನ್ನು ಕುರಿತು ಇರುವ ಹಲವಾರು ವ್ಯಾಖ್ಯೆಗಳ ಸಾರ ಹೀಗಿದೆ: ಆರ್ಥಿಕ ಮತ್ತು ಸಾಮಾಜಿಕ ಕಾರಣಗಳನ್ನು ಅವಲಂಬಿಸಿ ವೈಜ್ಞಾನಿಕ ವಿವರಗಳ ತಳಹದಿಯ ಮೇಲೆ ವಿವರಿಸುವ ಒಂದು ಕಲೆ ಅರಣ್ಯಶಾಸ್ತ್ರ. ಇಂಥ ಕಲೆಯ ಯಶಸ್ವಿ ಪ್ರಯೋಗದ ಮೇಲೆ ವಿಜ್ಞಾನದ ವಿವಿಧ ಅಂಗಗಳಾದ ರಾಸಾಯನ, ಪ್ರಾಣಿ, ಸಸ್ಯ, ಜೈವಿಕ, ಗಣಿತ, ಭೌತ ಮುಂತಾದ ಎಲ್ಲ ವಿಜ್ಞಾನಗಳನ್ನೂ ಅನ್ವಯಿಸುವುದು ಅವಶ್ಯಕವಾಗುತ್ತದೆ. ಅರಣ್ಯಶಾಸ್ತ್ರದಲ್ಲಿ ಅರಣ್ಯಗಳ ವೈಜ್ಞಾನಿಕ ಅಭ್ಯಾಸ, ವರ್ಧನೆ, ಪೋಷಣೆ, ಸಂರಕ್ಷಣೆ ಮತ್ತು ಅವುಗಳಿಂದ ಪರಮಾವಧಿ ಉಪಯೋಗಗಳನ್ನು ಇಂದೂ ಮುಂದೂ ಹೊಂದುವ ವಿಧಾನಗಳು

ಮತ್ತು ಅವುಗಳ ವೈಜ್ಞಾನಿಕ ಆಡಳಿತದ ಏರ್ಪಾಡು ಅಡಕವಾಗಿವೆ. ಮರಗಳು ಬೆಳೆದು ಉಪಯೋಗಕಾರಿಯಾಗಲು ಹಲವಾರು ವರ್ಷಗಳೇ ಬೇಕಾದುದರಿಂದ ಅರಣ್ಯಗಳ ಪ್ರಶ್ನೆ ದೀರ್ಘಕಾಲದ್ದು. ಆದ್ದರಿಂದ ಅರಣ್ಯಗಳನ್ನು ಕುರಿತು ದೀರ್ಘಕಾಲದ ಯೋಜನೆ ಅವಶ್ಯಕ. ಬೆಳೆಸಬೇಕಾದ ಮರಗಳ ಪ್ರಭೇದ, ಪರಿಸರದ ಸ್ಥಿತಿ, ವಾಯುಗುಣ, ಮಣ್ಣಿನ ಗುಣ, ಮರಗಳ ಪೋಷಣೆಗೆ ಮಾಡಬೇಕಾದ ಉಪಚಾರ ಇವೆಲ್ಲವನ್ನೂ ಕ್ರಮಬದ್ಧವಾಗಿ ಅಭ್ಯಸಿಸಿ, ಪ್ರಯೋಗಗಳಿಂದ ಪರೀಕ್ಷಿಸಿ ಮುಂದುವರಿಯಬೇಕು.

**ಅರಣ್ಯನಾಶ ಮತ್ತು ಸಂರಕ್ಷಣೆ:** ಕೃಷಿ ಹಾಗೂ ಇತರ ಉದ್ದೇಶಗಳಿಗಾಗಿ ಅರಣ್ಯದ ಮರ-ಗಿಡಗಳನ್ನು ಕಡಿದುಹಾಕುವುದರಿಂದ ಅರಣ್ಯ ನಾಶವಾಗುತ್ತದೆ. ನೈಸರ್ಗಿಕ ಕಾರಣಗಳಿಂದ, ಮನುಷ್ಯರಿಂದ ಅರಣ್ಯಗಳು ಹೆಚ್ಚು ಹಾಗೂ ಬೇಗ ನಾಶವಾಗುತ್ತವೆ. ಸಮಶೀತೋಷ್ಣವಲಯಗಳಿಗಿಂತ ಉಷ್ಣವಲಯದ ದೇಶಗಳಲ್ಲಿ ಅರಣ್ಯನಾಶದ ಪ್ರಮಾಣ ಹೆಚ್ಚು. ಪ್ರಸ್ತುತದರದಲ್ಲೆ ಅರಣ್ಯ ನಾಶವಾಗುತ್ತಾ ಹೋದರೆ ಮುಂದಿನ 60 ವರ್ಷಗಳಲ್ಲಿ ಉಷ್ಣವಲಯದ ಅರಣ್ಯ ಶೇ. 90 ನಾಶವಾಗುವುದೆಂದು ಅಂದಾಜು ಮಾಡಲಾಗಿದೆ. ಅರಣ್ಯ ನಾಶದ ಗತಿ ಭಾರತದಲ್ಲಿ ಇತರ ದೇಶಗಳಿಗಿಂತ ಕಡಿಮೆಯಾಗಿದ್ದರೂ ರಾಷ್ಟ್ರೀಯ ಅರಣ್ಯ ನೀತಿಯನ್ವಯ ಭೂಪ್ರದೇಶದ ಶೇ. 33 ಭಾಗ ಅರಣ್ಯದಿಂದಾವೃತವಾಗಿಲ್ಲ.

ಅರಣ್ಯಗಳು ಹಲವು ಕಾರಣಗಳಿಂದ ನಾಶವಾಗುತ್ತವೆ. ಮಾನವನ ಪ್ರವೇಶ, ಕೃಷಿವಿಸ್ತರಣೆ, ಕಾಡ್ಗಿಚ್ಚು, ಪ್ರಾಣಿಗಳು, ಕೀಟಗಳು ಮತ್ತು ರೋಗಗಳು, ವರ್ಗಾವಣೆ ಬೇಸಾಯ (ಕುಂಬ್ರಿ), ಸೌದೆಯ ಬೇಡಿಕೆ ಹೆಚ್ಚುತ್ತಿರುವುದು, ಕೈಗಾರಿಕಾ ಕಚ್ಚಾ ವಸ್ತುಗಳಿಗೆ ಹೆಚ್ಚುತ್ತಿರುವ ಬೇಡಿಕೆ, ಜಲವಿದ್ಯುಚ್ಛಕ್ತಿ ಹಾಗೂ ನೀರಾವರಿಯೋಜನೆಗಳ ನಿರ್ಮಾಣ ಹಾಗೂ ಜಾನುವಾರುಗಳು ಅತಿಯಾಗಿ ಮೇಯುವ (ಗ್ರೇಸಿಂಗ್) ಕ್ರಿಯೆ ಪ್ರಮುಖ ಕಾರಣಗಳು.

ಮನುಷ್ಯ ತನ್ನ ತಾತ್ಕಾಲಿಕ ಸೌಕರ್ಯ, ಲಾಭಗಳಿಗಾಗಿ ಉಂಟುಮಾಡುವ ಹಾನಿ ಅಪಾರವಾಗಿದೆ. ಇಂಥ ಹಾನಿಯಿಂದ ಅರಣ್ಯ ಸಂರಕ್ಷಣೆ ಮಾಡಲು ಸರ್ಕಾರ ಕಾನೂನು ಕಾಯಿದೆ ಮಾಡಿ ತಪ್ಪಿತಸ್ಥರನ್ನು ಹಿಡಿದು ಶಿಕ್ಷಿಸುವುದು. ಆದರೆ ಮನುಷ್ಯನಿಂದೊದಗುವ ಪ್ರತ್ಯಕ್ಷ, ಪರೋಕ್ಷ ಹಾನಿ ಪೂರ್ಣ ಅನಿವಾರ್ಯವಲ್ಲ. ಮನುಷ್ಯನ ಅಜಾಗರೂಕತೆಯಿಂದ ಅಥವಾ ವಿನಾಶಕಾರೀ ಭಾವನೆಯಿಂದ ಉಂಟಾಗಬಹುದು ಅಥವಾ ಕಾಡ್ಗಿಚ್ಚಾಗಿ ತೊಡಗಬಹುದು. ಕಾಡ್ಗಿಚ್ಚುಗಳಲ್ಲಿ ಎರಡು ವಿಧ-ತಳದ ಕಿಚ್ಚು, ತಲೆಯ ಕಿಚ್ಚು, ಮೊದಲಿನವೇ ಹೆಚ್ಚು. ನೆಲದಲ್ಲಿ ಹರಡಿದ ತರಗೆಲೆ, ಹುಲ್ಲು, ಹೊದರುಗಳನ್ನು ದಹಿಸಿ ಬೇಗನೆ ಹರಡಿದ ಈ ಕಿಚ್ಚು ಮರಗಳ ತಳಕ್ಕೆ ಗಾಸಿ ಉಂಟುಮಾಡುತ್ತದೆ. ಆದರೆ ಸ್ವಲ್ಪಕಾಲದಲ್ಲಿಯೇ ಶಮನವಾಗುವುದು. ತಳದ ಕಿಚ್ಚು ಸುಲಭವಾಗಿ ಹತೋಟಿಗೆ ಒಳಪಡುವುದು. ತಲೆಯ ಕಿಚ್ಚುಗಳು ಮರಗಳ ಮೇಲುಭಾಗವನ್ನೆಲ್ಲ ಉರಿಸಿ ಮರಗಳನ್ನು ನಾಶ ಮಾಡುತ್ತವೆ. ಗಾಳಿ ಬೀಸಿದಂತೆ ಸರ್ವವ್ಯಾಪಿಯಾಗುವ ಈ ಕಿಚ್ಚುಗಳನ್ನು ಹತೋಟಿಗೆ ತರುವುದು ಕಷ್ಟ. ಇಂಥ ಕಿಚ್ಚುಗಳಿಂದ ಅರಣ್ಯಕ್ಕೆ ತುಂಬ ಹಾನಿಯಾಗುವುದು. ಬೆಂಕಿ ಒಳ್ಳೆ ಸೇವಕ, ಆದರೆ ಕೆಟ್ಟ ಒಡೆಯ ಎನ್ನುವ ನಾಣ್ನುಡಿಗೆ ಕಾಡ್ಗಿಚ್ಚು ಉತ್ತಮ ನಿದರ್ಶನ. ಕಾಡ್ಗಿಚ್ಚುಗಳಿಂದ ಅರಣ್ಯ ಸಂರಕ್ಷಣೆ ಮಾಡಲು ಅನುಸರಿಸುವ ಕ್ರಮಗಳು-(1) ಶಿಕ್ಷಣದಿಂದ, ಶಿಕ್ಷೆಯಿಂದ ಮನುಷ್ಯಕೃತ ಅಪರಾಧಗಳನ್ನು ಕಡಿಮೆ ಮಾಡುವುದು; (2) ಕಾಡುಗಳ, ತೋಪುಗಳ ಸುತ್ತ ಒಳಗೆ ಹೊರಗೆ ಕಿಚ್ಚನ್ನು ತಡೆಯುವ ಅಪ್ಪಿಷ್ಟಗಲದ ಪಾಕುಸಾಲುಗಳನ್ನು (ಬೆಂಕ್ರೋಟು) ಮಾಡಿ ಅವು ಮುಚ್ಚಿಹೋಗದಂತೆ ಎಚ್ಚರ ವಹಿಸುವುದು. ಹೊರಗಿನಿಂದ ಹರಡಿಬಂದ ಬೆಂಕಿ ಈ ಸಾಲಿನಲ್ಲಿ ಗ್ರಾಸ ದೊರೆಯದೆ ನಂದಿಹೋಗುವುದು ಅಥವಾ ಅಲ್ಲಿ ಅದನ್ನು ಹತೋಟಿಗೆ ತರಬಹುದು. ಅಡವಿಯಲ್ಲಿನ ರಸ್ತೆಗಳ ಬದಿಗಳಲ್ಲಿ ಪಾಕುಮಾಡಿ ಅಲ್ಲಿ ಸಸ್ಯಗಳು ಇರದಂತೆ ನಿರ್ಮೂಲನ ಮಾಡುವುದು. ಇದರಿಂದ ಬೆಂಕಿಯ ಹರಡುವಿಕೆಗೆ ತಡೆ ಉಂಟಾಗುತ್ತದೆ. ಕಾಡ್ಗಿಚ್ಚನ್ನು ತಡೆಯಲು ಇನ್ನೊಂದು ವಿಧಾನವೂ ಇದೆ. ಬೆಂಕಿ ಹರಡಬಹುದಾದ ಪ್ರದೇಶಗಳನ್ನು ಮೊದಲೇ ಗುರುತಿಸಿ ಅಲ್ಲಿ ನಿಯಂತ್ರಿತವಾದ ಬೆಂಕಿ ಹಾಕುವುದು. ಇದರಿಂದ ನೈಸರ್ಗಿಕವಾಗಿ ಸಂಭವಿಸಬಹುದಾದ ಅಪಘಾತ ಇಲ್ಲದಾಗುತ್ತದೆ. ಅರಣ್ಯ ಸಿಬ್ಬಂದಿಯವರ ನಿರಂತರ ಜಾಗರೂಕತೆ ಅತ್ಯಾವಶ್ಯಕ. ಹೆಲಿಕಾಪ್ಟರ್ ಸಹಾಯದಿಂದ ರಾಸಾಯನಿಕಗಳನ್ನು ಕಾಡ್ಗಿಚ್ಚಿನಮೇಲೆ ಮಳೆಗರೆದು ಶಮನಗೊಳಿಸುವುದೂ ಸಾಧ್ಯವಿದೆ.

**ಪ್ರಾಣಿಗಳು, ಕೀಟಗಳು ಮತ್ತು ರೋಗಗಳು:** ಅಡವಿಯ ಉತ್ಪನ್ನಗಳಿಗೆ ಘಾಸಿಯುಂಟುಮಾಡುವ ಪ್ರಾಣಿಗಳು, ಕೀಟಗಳು, ರೋಗಗಳು ಯಾವುವು; ಅವುಗಳಿಂದಾಗುವ ಘಾತದ ಸ್ವರೂಪವೇನು ಎಂಬುದರ ತಿಳಿವಳಿಕೆಯ ಮೇಲೆ ರಕ್ಷಣೋಪಾಯ ಅವಲಂಬಿಸಿದೆ. ಅತಿಯಾಗಿ ಜಾನುವಾರುಗಳನ್ನು ಮೇಯಿಸುವುದರಿಂದ, ಕಾಡುಪ್ರಾಣಿಗಳಾದ ಆನೆ, ಕಾಡುಕೋಣ, ಕಾಡುಹಂದಿ ಮುಂತಾದವುಗಳಿಂದ ಸಾಕಷ್ಟು ನಾಶ ಉಂಟಾಗುವುದು. ಮಿಡತೆಗಳು ಮುಂತಾದ ಕೀಟಗಳು ಮಹಾರಣ್ಯಗಳನ್ನೇ ನಿರ್ಮೂಲ ಮಾಡಿದುದಕ್ಕೆ ನಿದರ್ಶನಗಳಿವೆ. ಸೂಕ್ಷ್ಮಾಣುಗಳಿಂದ, ಶಿಲೀಂಧ್ರಗಳಿಂದ ಹರಡುವ ರೋಗಗಳು-ಅರಣ್ಯಗಳಿಗೆ ಮಾರಕ. ಇವುಗಳಲ್ಲಿ ಪ್ರತಿಯೊಂದರಿಂದ ಆಗುವ ಹಾನಿಯನ್ನು ಪ್ರತ್ಯೇಕವಾಗಿ ಅಭ್ಯಸಿಸಿ ಅದಕ್ಕೆ ಪರಿಹಾರ ಹುಡುಕಬೇಕು. ಅರಣ್ಯಶಾಸ್ತ್ರ ಸಂಶೋಧನಾಗಾರದಲ್ಲಿ ನಿರಂತರವಾಗಿ ನಡೆಯುವ ಕೆಲಸವಿದು.

ಇತರ ನೈಸರ್ಗಿಕ ಕಾರಣಗಳು : ನದಿ ಪ್ರವಾಹ, ಬರಗಾಲ, ಭೂಕುಸಿತ, ಭೂಕಂಪ, ಜ್ವಾಲಾಮುಖಿ ಮೊದಲಾದ ನೈಸರ್ಗಿಕ ಕ್ಷೋಭೆಗಳಿಂದ ಕಾಡುಗಳು ಒಣಗಬಹುದು. ನೆಲ ಸವೆದು ಕುಸಿಯದಂತೆ ಕಾಪಾಡುವುದರ ಮೂಲಕ, ಗಾಳಿಯ ಸಂಚಾರ ಸರಾಗವಾಗಿರುವಂತೆ ಮರಗಳ ಇರವನ್ನು ನಿಯಂತ್ರಿಸುವುದರ ಮೂಲಕ ಕಾಡಿನ ಝರಿಗಳನ್ನು ಸಂರಕ್ಷಿಸಿಕೊಂಡು ಬರುವುದರ ಮೂಲಕ ಇಂಥ ಅಪಾಯಗಳಿಂದ ಅರಣ್ಯಗಳನ್ನು ರಕ್ಷಿಸಬಹುದು.

ಅರಣ್ಯ ಇಲಾಖೆಯಲ್ಲಿ ಜಾರಿಯಲ್ಲಿರುವ ಹತೋಟಿ ಕ್ರಮಗಳು: (1) ನೆಲದ ಸದುಪಯೋಗ (2) ಎಲ್ಲೆಕಟ್ಟನ್ನು ಹಾಕುವುದು (3) ಎಲ್ಲೆಯ ಸುತ್ತ ಅಗಳನ್ನು ತೋಡುವುದು (4) ವಾಟ್ ಕಟ್ಟೆಯನ್ನು ಹಾಕುವುದು (ಭೂಮಿಯ ಎಲ್ಲ ಕಡೆಗಳಲ್ಲೂ ಮಣ್ಣನ್ನು ಎಲ್ಲೆಗಳಲ್ಲಿ ರಾಶಿಹಾಕಿ ಯಾವ ರೂಪದಲ್ಲೇ ಆಗಲಿ ಕಟ್ಟೆಗಳನ್ನೋ ಏಣುಗಳನ್ನೋ ಕಟ್ಟುವ ವಿಧಾನ. ಕೊಚ್ಚಿ ಹೋಗುವ ನೀರನ್ನು ತಡೆದಿಡುವುದು ಇವುಗಳ ಉದ್ದೇಶ) 5 ಸೋಪಾನ ಪಂಕ್ತಿಗಳನ್ನು ಮಾಡುವುದು (6) ಕೊರಕಲುಗಳನ್ನು ಮುಚ್ಚುವುದು (7) ತಡೆಗಟ್ಟುಗಳನ್ನು ಹಾಕುವುದು (8) ಪ್ರವಾಹಗಳನ್ನೂ ಹುಚ್ಚು ಹೊಳೆಗಳನ್ನೂ ಸರಿಯಾದ ಕಡೆಗೆ ಹರಿಯುವಂತೆ ಮಾಡುವುದು (9) ಹುಲ್ಲುಗಾವಲುಗಳನ್ನು ವ್ಯವಸ್ಥೆಯಿಂದ ನೋಡಿಕೊಳ್ಳುವುದು (10) ಅಡವಿಗಳನ್ನು ಬೆಳೆಸುವುದು.

ಅರಣ್ಯನಾಶದಿಂದಾಗುವ ಪ್ರಮುಖ ದುಷ್ಪರಿಣಾಮಗಳು: ವನ್ಯ ಪ್ರಾಣಿಗಳ ಆವಾಸಗಳ ಹಾನಿ ಮತ್ತು ಅವುಗಳ ಪ್ರಭೇದಗಳ ಅವನತಿ, ಜೈವಿಕ ವೈವಿಧ್ಯತೆಗೆ ಹಾನಿ, ಜಲಾವರ್ತಕ್ಕೆ ಅಡಚಣೆ, ಮಳೆ ಹಂಚಿಕೆ ಕುಸಿತ, ಮಣ್ಣಿನ ಸವೆತ ಮತ್ತು ಮಣ್ಣು ನಿಸ್ಸಾರಗೊಳ್ಳುವುದು, ಪರ್ವತಗಳ ಇಳಿಜಾರುಗಳಲ್ಲಿ ಭೂಕುಸಿತಸಂಭವ ಇತ್ಯಾದಿ.

ಅರಣ್ಯದ ಲಘು ಫಸಲುಗಳು: ಅರಣ್ಯದ ಪ್ರಧಾನ ಫಸಲುಗಳು ಚೌಬೀನೆ (ನಾಟಾ), ಸೌದೆ (ಉರಿಸುವ ಕಟ್ಟಿಗೆ ಮತ್ತು ಇದ್ದಲು). ಅರಣ್ಯ ಸಂಪತ್ತಿನಲ್ಲಿರುವ ಸಸ್ಯ, ಪ್ರಾಣಿ ಸಂಬಂಧ ಉತ್ಪನ್ನಗಳೆಲ್ಲ ಲಘು ಫಸಲುಗಳೇ. ಇವುಗಳ ವಿಂಗಡಣೆ ಈ ಕೆಳಗಿನಂತಿದೆ.

1) ಸಸ್ಯ ಸಂಬಂಧ ಫಸಲುಗಳು: 1 ಕಾಡುಹುಲ್ಲು, ಬಿದಿರು, ಬೆತ್ತ, 2 ಮರದ ಎಲೆಗಳು (ಮೇವಿನ ಎಲೆ, ಗೊಬ್ಬರದ ಎಲೆ). 3 ನಾರುಗಳು ಮತ್ತು ಮಡ್ಡಿ ರೇಷ್ಮೆ. 4 ಎಣ್ಣೆ ಬೀಜಗಳು. 5 ಚರ್ಮ ಹದಮಾಡುವ ಟ್ಯಾನ್ ಮತ್ತು ಬಣ್ಣಗಳು. 6 ಅಂಟು, ರಾಳ, ತೈಲರಾಳ, 7 ಔಷಧಿ, ಸಾಂಬಾರ ಪದಾರ್ಥಗಳು, ತಿನಿಸು ಪದಾರ್ಥಗಳು ಮತ್ತು ವಿಷಪೂರಿತ ವಸ್ತುಗಳು. 8 ಬಟ್ಟಿ ಇಳಿಸಿ ಅಥವಾ ಕಷಾಯದಿಂದ ಬರುವ ಉತ್ಪನ್ನಗಳು. 9 ಇನ್ನುಳಿದ ವಿವಿಧ ಉತ್ಪನ್ನಗಳು.

2) ಪ್ರಾಣಿ ಸಂಬಂಧ ಫಸಲುಗಳು: 1 ಅರಗು 2 ಜೇನುತುಪ್ಪ, ಮೇಣ 3 ರೇಷ್ಮೆ 4 ಚರ್ಮ 5 ದಂತ 6 ಹಕ್ಕಿಗಳ ಗೂಡು 7 ಮೀನು 8 ಷಿಕ್ಕರಿಯ ಸಂಗ್ರಹಗಳು.

**ಅರಣ್ಯ ಕೈಗಾರಿಕೆಗಳು:** ಇವುಗಳ ವಿಭಾಗಗಳು ಈ ಕೆಳಗಿನಂತಿವೆ. 1 ಚೌಬೀನೆ ತಯಾರಿಕೆ (ಲಾಗ್ಗಿಂಗ್), ಹದಮಾಡುವಿಕೆ ಮತ್ತು ಮರ ಸಂಸ್ಕರಣ 2 ಮರಕೊಯ್ತ ಮತ್ತು ಪೀಠೋಪಕರಣ 3 ಪದರ ಹಲಗೆ (ಪ್ಲೈವುಡ್) ಮತ್ತು ಗಟ್ಟಿ (ಹಾರ್ಡ್) ಹಲಗೆ 4 ಕಾಗದದ ಪಲ್ಪ್ ಮತ್ತು ರೇಯಾನ್ 5 ಬೆಂಕಿಕಡ್ಡಿ, 6 ಸೌದೆ, ಇದ್ದಲು, 7 ಗಂಧದ ಎಣ್ಣೆ, ಕಚು. ಟರ್ಪೆಂಟೈನ್, ಅರಗು ಕರ್ಪೂರ, ಹುಲ್ಲು ಸರಬರಾಜು ಇತ್ಯಾದಿ.

ವನ್ಯಮೃಗ ಸಂರಕ್ಷಣೆ: ಜನಸಂಖ್ಯೆಯ ಬೆಳೆವಣಿಗೆ, ಕಾಡುಗಳ ನಿರ್ಮೂಲನ, ಮೃಗ ಪಕ್ಷಿಗಳ ನಿರಾಶ್ರಿತತ್ವ, ನಾಶ-ಈ ಸಮಸ್ಯೆಗಳು ಕ್ರಮೇಣ ಬೃಹತ್ಪ್ರಮಾಣ ತಾಳಿವೆ. ವನ್ಯಮೃಗಸಂರಕ್ಷಣೆ ಅರಣ್ಯ ಶಾಸ್ತ್ರದ ಒಂದು ಬಲು ಮುಖ್ಯ ಅಂಗ, ನಿಸರ್ಗದ ಸಮತೋಲನ ಕಾದಿಡುವುದರಲ್ಲಿ, ಮನುಷ್ಯ ಜೀವನ ಸುಗಮಗೊಳಿಸುವುದರಲ್ಲಿ ಇದರ ಪಾತ್ರ ಹಿರಿದು. ಇದಕ್ಕಾಗಿ ರಕ್ಷಿತ ಅರಣ್ಯಗಳು, ಬೇಟೆ ನಿಷೇಧಿಸಿರುವ ಪ್ರದೇಶಗಳು, ಮೃಗಪಕ್ಷಿಗಳಿಗೇ ಮೀಸಲಾಗಿರುವ ವನ್ಯಜೀವಿಧಾಮ, ಪಕ್ಷಿಧಾಮ ಹಾಗೂ ರಾಷ್ಟ್ರೀಯ ಉದ್ಯಾನಗಳು ಇವೆ.

ಕರ್ನಾಟಕದಲ್ಲಿ 1907ರಲ್ಲಿ ಬೇಟೆ ನಿಷೇಧ ಕಾನೂನು ಜಾರಿಗೆ ಬಂದಿತು. ಇದರ ಪ್ರಕಾರ ಆಗ ಪ್ರಚಾರವಾಗಿದ್ದ ಮೃಗನಿಯಮಗಳಿಗೆ ಅನುಸಾರವಾಗಿ ವನ್ಯಜೀವಿಗಳು ಹೇರಳವಾಗಿದ್ದ ಅನೇಕ ಕಾಡುಗಳಲ್ಲಿ ಬೇಟೆಯನ್ನು ನಿಷೇಧಿಸಲಾಗಿತ್ತು. 1941 ರಲ್ಲಿ ನೀಲಗಿರಿಗೂ ವೈನಾಡಿಗೂ ಹೊಂದಿಕೊಂಡಿರುವ ಸು. 831 ಚ.ಕಿಮೀ ಪ್ರದೇಶದ ವೇಣುಗೋಪಾಲ ವನ್ಯಮೃಗ ಕ್ಷೇಮಸ್ಥಾನ ಇದರಲ್ಲಿದೆ. ಬಂಡೀಪುರದ ವಿಸ್ತೀರ್ಣವನ್ನು ಹೆಚ್ಚಿಸಿ ಮತ್ತು ಇದನ್ನು ರಾಷ್ಟ್ರೀಯ ಮೃಗೋದ್ಯಾನವಾಗಿ ರೂಪಿಸಲಾಗಿದೆ. ಕರ್ನಾಟಕ ರಾಜ್ಯದ ಇತರ ಸುಪ್ರಸಿದ್ಧ ಉದ್ಯಾನಗಳು ನಾಗರಹೊಳೆ (285 ಚ.ಕಿಮೀ), ರಂಗನತಿಟ್ಟು, ದಾಂಡೇಲಿ (205-212 ಚ.ಕಿಮೀ) ಇತ್ಯಾದಿ. (ವೈ.ಎಂ.ಎಲ್.ಎಸ್.; ಎನ್.ಎಸ್.ಕೆ.; ಎ.ಕೆ.)

**ಅರಣ್ಯ ಕಾಯಿದೆಗಳು:** ಅರಣ್ಯ ಪದದ ವ್ಯಾಖ್ಯೆ ಆಯಾದೇಶದ ಸಂವಿಧಾನಕ್ಕೆ ಅನುಗುಣವಾಗಿದೆ. ಇಂಥ ವ್ಯಾಖ್ಯೆ ಕಾಲಾನುಸಾರ ಬದಲಾವಣೆಗೊಂಡಿದೆ. ಈಗ ಸರಕಾರ ಅರಣ್ಯ ಎಂದು ವಿಧಿಸುವ ಪ್ರದೇಶಗಳ ಆಡಳಿತಕ್ಕಾಗಿ ರೂಪಿಸುವ ನಿಯಮಗಳಿಗೆ ಅರಣ್ಯ ಕಾಯಿದೆಗಳೆಂದು ಹೆಸರು. ಅರಣ್ಯಕ್ಕೆ ಸೇರದ ಭೂಮಿಯ ಒಡೆತನ ಯಾರದ್ದಾಗಿದ್ದರೂ

ಕಾಯಿದೆಗಳಿಗೆ ಸರ್ವವ್ಯಾಪ್ತಿಯಿದ್ದೇ ಇದೆ. ಅರಣ್ಯ ರಾಷ್ಟ್ರದ ಸಂಪತ್ತು. ಅದರ ಏಳ್ಗೆ, ನಾಶಗಳೊಡನೆ ದೇಶ ನಿಕಟವಾಗಿ ಹೊಂದಿಕೊಂಡಿರುತ್ತದೆ. ಇದು ಒಂದು ರಾಷ್ಟ್ರದ ಅರಣ್ಯ ನೀತಿ. 1927ರಲ್ಲಿ ಭಾರತ ಸರ್ಕಾರ ಮೊದಲಿನಿಂದಲೂ ಇದ್ದ ಕಾಯಿದೆಗಳನ್ನು ಕ್ರೋಢೀಕರಿಸಿ ಹೊಸ ಕಾಯಿದೆ ಪ್ರಕಟಿಸಿತು. ಕರ್ನಾಟಕ 1900ರಲ್ಲಿ ಪ್ರಕಟಿಸಿದ ಕಾಯಿದೆ 1901 ಜನವರಿ 1 ರಂದು ಜಾರಿಗೆ ಬಂದಿತು. ಇಂಥ ಕಾಯಿದೆಗಳಿಗೆ ಕಾಲಕಾಲಕ್ಕೆ ತಿದ್ದುಪಡಿಗಳೂ ಬಂದಿವೆ.

ವನಮಹೋತ್ಸವ: ಭಾರತ ಜನತೆಗೆ ಅರಣ್ಯಗಳ ಅವಶ್ಯಕತೆ, ಉಪಯೋಗ ಇವುಗಳ ವಿಷಯದಲ್ಲಿ ಹೆಚ್ಚಿನ ಅರಿವು ಮೂಡುವಂತೆ ಮಾಡಲು ದೇಶದ ಅರಣ್ಯ ಸಂಪತ್ತನ್ನು ಕ್ರಮಬದ್ಧವಾಗಿ ವರ್ಧಿಸಲು ವನಮಹೋತ್ಸವ ಎಂಬ ರಾಷ್ಟ್ರೀಯ ಸಪ್ತಾಹವನ್ನು 1950ರಿಂದ ಆಚರಿಸಲಾಗುತ್ತಿದೆ. 1952ರಲ್ಲಿ ಕೆ.ಎಂ.ಮುನ್ಷಿಯವರಿಂದ ಇಂತಹ ಕಾರ್ಯಕ್ರಮ ಕರ್ನಾಟಕದಲ್ಲಿ ಆರಂಭವಾಯಿತು. ಗ್ರಾಮೀಣ ಮತ್ತು ನಗರ ಕೇಂದ್ರಗಳೆರಡರಲ್ಲೂ ಇದರ ಆಚರಣೆಯಿದ್ದಾಗ್ಯೂ ನಗರಗಳಲ್ಲಿ ಇದರ ಅವಶ್ಯಕತೆ ಹೆಚ್ಚು. ತೀವ್ರಗತಿಯ ನಗರೀಕರಣ ಮತ್ತು ಕೈಗಾರಿಕೀಕರಣದಿಂದಾಗಿ ವಾಯುಮಾಲಿನ್ಯ, ಜಲಮಾಲಿನ್ಯ ಮತ್ತು ಶಬ್ದ ಮಾಲಿನ್ಯಗಳು ನಗರಗಳಲ್ಲಿ ಹೆಚ್ಚು ಆದ್ದರಿಂದ ರಸ್ತೆಬದಿಗಳಲ್ಲಿ ಮರಗಳನ್ನು ಬೆಳೆಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಭಾರತದಲ್ಲಿ ಅರಣ್ಯ ಸಂಶೋಧನ ಸಂಸ್ಥೆಗಳು: ಡೆಹರಾಡೂನಿನಲ್ಲಿರುವ ಫಾರೆಸ್ಟ್ ರಿಸರ್ಚ್ ಇನ್ಸ್‌ಸ್ಟಿಟ್ಯೂಟ್ ಪ್ರಧಾನವಾದದ್ದು. ಇದು 1878ರಲ್ಲಿ ಅರಣ್ಯ ಇಲಾಖೆ ಎಂಬ ಹೆಸರಿನಿಂದ ರೂಪ ತಳೆಯಿತು. ಅರಣ್ಯಶಾಸ್ತ್ರದ ಅಭ್ಯಾಸ, ಅರಣ್ಯಾಧಿಕಾರಿಗಳ ತರಪೇತು ಗೊಳಿಸುವುದು ಇದರ ಮುಖ್ಯೋದ್ದೇಶಗಳು. 1906ರಲ್ಲಿ ಶಾಖೆಗಳು ವಿಸ್ತೃತವಾಗಿ ಬೆಳೆದವು. ಸು. 526.10 ಹೆ. ಪ್ರದೇಶದಲ್ಲಿ ಸಂಸ್ಥೆಯ ಆಡಳಿತ ಕಛೇರಿ, ಸಂಶೋಧನಾಲಯಗಳು, ವಸ್ತು ಸಂಗ್ರಹಾಲಯಗಳು ಮುಂತಾದುವುಗಳನ್ನು ಸ್ಥಾಪಿಸಲಾಗಿದೆ (1920). ಆಧುನಿಕ ವೈಜ್ಞಾನಿಕ ತಳಹದಿಯ ಮೇಲೆ ನಿಂತ ಅರಣ್ಯಶಾಸ್ತ್ರದ ವಿಶಿಷ್ಟ ವಿಭಾಗಗಳಲ್ಲೂ ಸಂಶೋಧನೆ ನಡೆಸುತ್ತಿರುವ, ಶಿಕ್ಷಣ ನೀಡುತ್ತಿರುವ ಈ ಸಂಸ್ಥೆ ದೇಶದ ಪ್ರಗತಿಯ ಒಂದು ಭವ್ಯ ಸಂಕೇತ.

ಭಾರತದಲ್ಲಿನ ಇತರ ಅರಣ್ಯ ಸಂಶೋಧನ ಸಂಸ್ಥೆಗಳು ಕೊಯಮತ್ತೂರು ಮತ್ತು ಬೆಂಗಳೂರುಗಳಲ್ಲಿವೆ. ಜಬ್ಬಲ್‌ಪುರದಲ್ಲಿ ಮತ್ತೊಂದು ಸಂಶೋಧನ ಸಂಸ್ಥೆ ಸ್ಥಾಪಿಸುವ ಪ್ರಯತ್ನ ನಡೆದಿದೆ.

ಬೆಂಗಳೂರಿನಲ್ಲಿರುವ ಅರಣ್ಯ ಸಂಶೋಧನ ಪ್ರಯೋಗಾಲಯ: ಇದು 1936ರ ಜನವರಿ 2ರಂದು ಅಸ್ತಿತ್ವಕ್ಕೆ ಬಂತು. ಮುಂದೆ (1938 ಅಕ್ಟೋಬರ್ 17) ಇದೊಂದು ಬೃಹತ್ ಅರಣ್ಯ ಸಂಶೋಧನ ಪ್ರಯೋಗಾಲಯವಾಗಿ ಮಾರ್ಪಟ್ಟಿತು. ಇದನ್ನು ಜರ್ಮನಿಯ ಮ್ಯೂನಿಚ್ ಅರಣ್ಯ ಸಂಶೋಧನಾ ಪ್ರಯೋಗಾಲಯದ ಮಾದರಿಯಲ್ಲಿ ಸ್ಥಾಪಿಸಲಾಗಿದೆ. 1940 ರಿಂದೀಚೆಗೆ ಅರಣ್ಯಾಧಿಕಾರಿಗಳ ಶಿಕ್ಷಣವೂ ಈ ಸಂಸ್ಥೆಯಲ್ಲಿ ನಡೆಯುತ್ತಿದೆ. ಬಿದಿರನ್ನು ರೇಯನ್ ಪಲ್ಪ್ ಆಗಿ ಉಪಯೋಗಿಸಲು ಮೊದಲು ಭಾರತಕ್ಕೆ ತೋರಿಸಿಕೊಟ್ಟ ಹಿರಿಮೆ ಈ ಸಂಸ್ಥೆಯದು. ಅರಗಿನ ಕೀಟ ಸಾಕಲು ವಿವಿಧ ವೃಕ್ಷಗಳ ಬಳಕೆಯನ್ನು (ಯಲಚಿ, ಜಾಲರಿ ಮುಂತಾದವು) ಜನಸಾಮಾನ್ಯರಿಗೆ ಪರಿಚಯಿಸಿ ಅರಗಿನ ತಯಾರಿಕೆ ಪ್ರೋತ್ಸಾಹಿಸಿದ ಹಿರಿಮೆ ಇದರದು. ಈ ಸಂಸ್ಥೆಯ ಮತ್ತೊಂದು ಸಾಧನೆ ಔಷಧಿ ಸಸ್ಯಗಳ ಕನ್ನಡದ ಹೆಸರುಗಳಿಗೆ ಲ್ಯಾಟಿನ್ ಹೆಸರುಗಳನ್ನಿಟ್ಟು ಆಯುರ್ವೇದದ ವೈದ್ಯರಿಗೆ ಸಹಾಯ ಮಾಡಿದೆ. ಸುಗಂಧದ ಎಣ್ಣೆ, ಗಂಧದ ಎಣ್ಣೆ, ಕಾಗದ, ಪ್ಲೈವುಡ್ ಮುಂತಾದ ಕೈಗಾರಿಕೆಗಳಿಗೆ ಈ ಸಂಸ್ಥೆ ಗಮನಾರ್ಹ ಸೇವೆ ಸಲ್ಲಿಸಿದೆ. ಗಂಧದ ಮರಕ್ಕೆ ತಗಲುವ ಸ್ಪೈಕ್ ರೋಗದ ಬಗ್ಗೆ 1938ರಿಂದಲೂ ಸಂಶೋಧನೆಗಳು ನಡೆಯುತ್ತಿವೆ. ಇದರ ನಿರ್ವಾಹಣೆಗೆ ಎಫ್.ಎ.ಓ. ಮತ್ತು ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡರೂ ಇನ್ನೂ ಸಂಪೂರ್ಣ ನಿರ್ವಾಹಣೆ ಸಾಧ್ಯವಾಗಿಲ್ಲ. ಈ ಸಂಸ್ಥೆಯನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡಲಾಯಿತು.

ಪ್ರಾಚೀನ ಭಾರತದಲ್ಲಿ ಅರಣ್ಯಶಾಸ್ತ್ರ: ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಅರಣ್ಯ, ವೃಕ್ಷ ಮತ್ತು ಮೂಲಿಕೆಗಳ ಪ್ರಸ್ತಾಪ ಅನೇಕ ಕಡೆ ಉಲ್ಲೇಖಗೊಂಡಿದೆ. ವೇದಗಳಲ್ಲಿ ಅರಣ್ಯವೃಕ್ಷಗಳ ಬಗ್ಗೆ ಪ್ರಸ್ತಾಪವಿದೆ. ಪಾಣಿನಿಯ (ಪ್ರ.ಶ.ಪೂ. 5ನೆಯ ಶತಮಾನ) ಸೂತ್ರಗಳಲ್ಲಂತೂ ವಿವಿಧ ಅರಣ್ಯ ವೃಕ್ಷಗಳು, ಅವುಗಳ ವರ್ಗೀಕರಣ, ಪ್ರಾಮುಖ್ಯತೆ ಇವುಗಳ ಬಗ್ಗೆ ಮಾಹಿತಿ ಇದೆ. ಪಾಣಿನಿ ಪ್ರಾಕೃತಿಕ ಅರಣ್ಯಗಳಾದ ಪುರಾಗವನ, ಮಿಸ್ರಕವನ ಮತ್ತು ಉದ್ಯಾನಗಳಾದ ಅಮರವನ, ಖದಿರವನ, ಇಕ್ಷುವನ ಇವುಗಳ ಬಗ್ಗೆ ವಿವರ ನೀಡಿದ್ದಾನೆ, ಅರಣ್ಯ ಶಾಸ್ತ್ರದ ಬಗ್ಗೆ ಪಾಣಿನಿಗಿಂತ ಹಿಂದೆ ಭಾರತೀಯರಿಗೆ ಸ್ಪಷ್ಟ ಜ್ಞಾನವಿತ್ತು ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ (ಮುಜುಂದಾರ್ 1946). ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಂತೂ ವೃಕ್ಷಗಳ ಮತ್ತು ಅರಣ್ಯಗಳ ವರ್ಣನೆ ಹೇರಳವಾಗಿ ಬರುತ್ತದೆ. ಪ್ರಾಚೀನ ಬೌದ್ಧ ಮತ್ತು ಜೈನಸಾಹಿತ್ಯಗಳಲ್ಲೂ ಪ್ರಸ್ತಾಪಗೊಂಡಿದೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಅಂದಿನ ಅರಣ್ಯಶಾಸ್ತ್ರದ ಬಗ್ಗೆ ಕೆಲವು ರೂಪರೇಖೆಗಳನ್ನು, ವಿವರಗಳನ್ನು ಕೊಟ್ಟಿದ್ದಾನೆ, ಆಗಿನ ಕಾಲದಲ್ಲಿ ಅರಣ್ಯಗಳಿಗೆ ಎಷ್ಟು ಪ್ರಾಮುಖ್ಯ ಕೊಡಲಾಗುತ್ತಿತ್ತು, ಅರಣ್ಯಗಳನ್ನು ಮತ್ತು ಅರಣ್ಯೋತ್ಪನ್ನಗಳನ್ನು ಹಾಳು ಮಾಡುವವರಿಗೆ ಯಾವ ಶಿಕ್ಷೆ ಕೊಡಲಾಗುತ್ತಿತ್ತು ಎಂಬುದನ್ನು ವಿವರಿಸಿದ್ದಾನೆ. ಅಂದು ಅರಣ್ಯಗಳ ರಕ್ಷಣೆಗೆಂದೇ ಒಬ್ಬ ರಕ್ಷಣಾಧಿಕಾರಿ ಇರುತ್ತಿದ್ದ. ಈತ ಅಂದಿನ ಅರಣ್ಯ ಇಲಾಖೆಯ ಮುಖ್ಯಸ್ಥನಾಗಿದ್ದ. ಅವನನ್ನು ಕುಪ್ಯಾದಕ್ಷ ಎಂದು ಕರೆಯಲಾಗುತ್ತಿತ್ತು. ಇವನ ಕೆಲಸ ಅರಣ್ಯಗಳಿಂದ ಬರುವ ಆದಾಯ ಮತ್ತು ಅರಣ್ಯಗಳ ರಕ್ಷಣೆಗೆ ಗಮನಕೊಡುವುದು, ಸಾರ್ವಜನಿಕರಿಗೆ ಅರಣ್ಯಗಳ ಬಗ್ಗೆ ತಿಳಿವಳಿಕೆ ನೀಡುವುದೂ ಆಗಿತ್ತು. ಕುಪ್ಯಾದಕ್ಷನಿಗೆ ಸಹಾಯಕವಾಗಿರಲು ಅನೇಕ ಕೆಳದರ್ಜೆಯ ಅರಣ್ಯ ಸಂರಕ್ಷಕರಿದ್ದರು. ಹಡಗುಗಳು, ಮನೆಗಳು, ರಥಗಳು, ವ್ಯವಸಾಯದ ಉಪಕರಣಗಳು ಮುಂತಾದ ತಯಾರಿಕೆಗಳಿಗೆ ಬಾಳಿಕೆ ಬರುವಂಥ ಮರಗಳು ಬಳಸುತ್ತಿದ್ದರು.

ಶುಕ್ರನೀತಿಸಾರದಲ್ಲೂ ಅರಣ್ಯಶಾಸ್ತ್ರದ ಪ್ರಸ್ತಾಪ ಬರುತ್ತದೆ. ಅರಣ್ಯಗಳ ಮೇಲ್ವಿಚಾರಣೆಗೆ ವನಸ್ಪತಿಶಾಸ್ತ್ರ ಕೋವಿದನಾದ ಒಬ್ಬ ಮುಖ್ಯಾಧಿಕಾರಿ ಇರುತ್ತಿದ್ದ. ಪ್ರತಿ ಆರು ಯೋಜನ ಸುತ್ತಳತೆಯುಳ್ಳ ಎಲ್ಲ ಅರಣ್ಯಗಳೂ ಒಂದೊಂದು ರಾಜಮಾರ್ಗವನ್ನು ಹೊಂದಿರಬೇಕು ಎಂಬ ನಿಯಮವಿತ್ತು. ಸುಮಂತ್ರ (ಅರ್ಥಸಚಿವ) ರಾಜನಿಗೆ ರಾಜ್ಯದ ಅರಣ್ಯಗಳ ಬಗ್ಗೆ, ರಾಜಮಾರ್ಗಗಳು, ವ್ಯವಸಾಯ ಯೋಗ್ಯ ಭೂಮಿ ಇವುಗಳ ವಿಷಯವಾಗಿ ವಿವರಗಳನ್ನು ಒದಗಿಸಬೇಕಾಗಿತ್ತು. ಉಪಯುಕ್ತ ಮರಗಳನ್ನೇ ಅರಣ್ಯಗಳಲ್ಲಿ ಹೆಚ್ಚಾಗಿ ರಕ್ಷಿಸಲು, ಬೆಳೆಸಲು ಪ್ರೋತ್ಸಾಹಿಸಲಾಗುತ್ತಿತ್ತು. ಶುಕ್ರಾಚಾರ್ಯರು ಈ ಕೆಲಸಕ್ಕೆ ಸಸ್ಯಜ್ಞಾನದಲ್ಲಿ ಚೆನ್ನಾಗಿ ಪರಿಜ್ಞಾನ, ಪರಿಶ್ರಮಗಳಿರುವ ವ್ಯಕ್ತಿಗಳನ್ನು ನೇಮಕಮಾಡಬೇಕು ಎಂದು ಹೇಳಿರುವುದು ಮೆಚ್ಚಬೇಕಾದ ವಿಷಯ. (ಎಸ್.ಎನ್.ಆರ್.)

**ಅರಬ್ ಒಕ್ಕೂಟ:** ಸಿರಿಯ, ಟ್ರಾನ್ಸ ಜೋರ್ಡಾನ್, ಇರಾಕ್, ಸೌದಿಅರೇಬಿಯ. ಲೆಬನಾನ್, ಯೆಮೆನ್ ಮತ್ತು ಈಜಿಪ್ಟ್ ಹೀಗೆ–ಏಳು ರಾಷ್ಟ್ರಗಳು ಸೇರಿ ರಚನೆಗೊಂಡ ಒಕ್ಕೂಟ. 1945 ಮಾರ್ಚ್ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಕೇಂದ್ರ ಕಛೇರಿ ಕೈರೋನಲ್ಲಿದೆ. ಇದರ ಸ್ಥಾಪನೆಗೆ ಇಂಗ್ಲೆಂಡ್ ದೇಶವೇ ಮುಖ್ಯ ಕಾರಣವಾಗಿದೆ. ಒಂದನೆಯ ಮಹಾಯುದ್ಧದ ಸಮಯದಲ್ಲಿ ಇದರ ಸ್ಥಾಪನೆಗೆ ಪ್ರಯತ್ನಗಳು ನಡೆದು ಎರಡನೆಯ ಮಹಾಯುದ್ಧ ಮುಗಿಯುವುದರೊಳಗೆ ಇದು ಕಾರ್ಯಗತವಾಯಿತು. ಈಜಿಪ್ಟ್ ದೇಶದ ಸಹಾಸ್ ಪಾಷ ಕೈರೊದಲ್ಲಿ ಒಗೂಡಿಸಿದ ಅರಬ್ ರಾಷ್ಟ್ರಗಳ ಸಭೆಯ ತೀರ್ಮಾನದಂತೆ ಒಕ್ಕೂಟ ಸ್ಥಾಪನೆಯಾಯಿತು. ಈ ಕೂಟದ ನಿಬಂಧನೆಗಳ ಪ್ರಕಾರ ಇವುಗಳ ಜೊತೆಗೆ ಬೇರೆ ರಾಷ್ಟ್ರಗಳು ಸೇರಿಕೊಳ್ಳಲು ಅವಕಾಶವಿದೆ. ತನ್ನ ಸದಸ್ಯರಾಷ್ಟ್ರಗಳ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗುವುದೇ ಈ ಒಕ್ಕೂಟದ ಧ್ಯೇಯ. ಈ ಒಕೂಟದ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕೆಂತಲೂ ಯಾವುದೇ ಅಪಾಯವನ್ನು ಎದುರಿಸಬೇಕಾಗಿ ಬಂದಾಗ ಪರಸ್ಪರ ಸಹಾಯ ನೀಡಬೇಕೆಂತಲೂ ಒಪ್ಪಿಕೊಂಡಿವೆ. ಹೆಚ್ಚಾಗಿ ಮುಸ್ಲಿಂ ರಾಷ್ಟ್ರಗಳೇ ಈ ಕೂಟದಲ್ಲಿ ಇದ್ದರೂ ಇದು ಇಸ್ಲಾಂ ಒಕ್ಕೂಟವಲ್ಲ. ಇದು ಅರಬ್ ರಾಷ್ಟ್ರಗಳ ಮತ್ತು ಜನಗಳ ಏಳಿಗೆಗಾಗಿ ಕೆಲಸಮಾಡುವ ಒಂದು ಸಂಸ್ಥೆ ಮಾತ್ರ. ಈಚೆಗೆ ಇದು ಆಲ್ಜೀರಿಯ, ಸೂಡಾನ್, ಲಿಬಿಯ, ಟುನೀಷಿಯ ಮತ್ತು ಮೊರಾಕೊ ರಾಷ್ಟ್ರಗಳ ಸೇರುವಿಕೆಯಿಂದ ಬಲಗೊಂಡಿದೆ. ಮಧ್ಯಪ್ರಾಚ್ಯದಲ್ಲಿ ಇದು ಒಂದು ವಿಶಿಷ್ಟ ಅರಬ್‌ಪ್ರಪಂಚವೆಂದು ಪರಿಗಣಿಸಲ್ಪಟ್ಟಿದೆ. ಈ ಕೂಟದ ರಾಷ್ಟ್ರಗಳು ತೈಲ ಮತ್ತು ಪೆಟ್ರೋಲಿಯಂನ ತೌರುಗಳಾಗಿರುವುದರಿಂದ ಕೂಟದ ಪ್ರಾಮುಖ್ಯತೆ ಹೆಚ್ಚಿದೆ. (ಎಂ.ಕೆ.ಆರ್.)

**ಅರಬ್ ಗಣರಾಜ್ಯ:** ಈಜಿಪ್ಟ್ ಮತ್ತು ಸಿರಿಯಗಳ ನಡುವಿನ ರಾಜಕೀಯ ಒಪ್ಪಂದದಂತೆ ಏರ್ಪಟ್ಟು 1958–61ರ ವರೆಗೆ ಅಸ್ತಿತ್ವದಲ್ಲಿತ್ತು. 1953 ಜನವರಿ 18ರಂದು ಈಜಿಪ್ಟ್ ಗಣರಾಜ್ಯವಾಯಿತು. ರಾಜ್ಯದ ಆದಾಯವನ್ನೆಲ್ಲ ತಮ್ಮ ಭೋಗವಿಲಾಸಗಳಿಗೆ ವಿನಿಯೋಗಿಸಿಕೊಂಡು ಪ್ರಜೆಗಳ ಅಭ್ಯುದಯವನ್ನು ಕಡೆಗಣಿಸಿದ ರಾಜಪ್ರಭುತ್ವವನ್ನು ಕೊನೆಗಾಣಿಸಿ, ಭೇ, ಪಾಷಾ ಮುಂತಾದ ಶ್ರೀಮಂತಿಕೆಯ ಬಿರುದುಗಳನ್ನು ರದ್ದುಗೊಳಿಸಿ, ಮೊಹಮ್ಮದ್ ನಗೀಬ್ಬ ನಾಯಕತ್ವದಲ್ಲಿ ಇದನ್ನು ಸಾಧಿಸಲಾಯಿತು.

ಆದರೆ ಈಜಿಪ್ಟಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ ತುಂಬ ಹದಗೆಟ್ಟಿತ್ತು. ಸುಯೆಜ್ ಕಾಲುವೆ ಪ್ರಶ್ನೆ ಮತ್ತು ಸೂಡಾನಿನ ಭವಿಷ್ಯ ಇವೆರಡೂ ಬಗೆಹರಿಯದೆ ಇಂಗ್ಲೆಂಡಿನೊಂದಿಗೆ ಸಂಬಂಧ ಸರಿಹೋಗುವಂತಿರಲಿಲ್ಲ. ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿತ್ತು. ಹೊಸ ಆಡಳಿತವರ್ಗ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೆ ತಂದಿತು. 1954ರಲ್ಲಿ ನಾಸೆರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಇಂಗ್ಲೆಂಡಿನೊಂದಿಗೆ ಸಂಬಂಧವನ್ನು ಸರಿಪಡಿಸಿಕೊಳ್ಳುವ ಪ್ರಯತ್ನ ನಡೆಯಿತು. ಇಂಗ್ಲೆಂಡ್ ಸೂಡಾನಿಗೆ ಸ್ವಾತಂತ್ರ್ಯವನ್ನು ಘೋಷಿಸಿತು. 1954ರ ಒಪ್ಪಂದದಂತೆ ಈಜಿಪ್ಟಿನಲ್ಲಿಟ್ಟಿದ್ದ ಬ್ರಿಟೀಷ್ ರಕ್ಷಣಾಪಡೆಯನ್ನು ಸ್ವಲ್ಪ ಸ್ವಲ್ಪವಾಗಿ 20 ತಿಂಗಳಲ್ಲಿ ಹಿಂದಕ್ಕೆ ಕರೆಸಿಕೊಳ್ಳುವ ಭರವಸೆ ಕೊಟ್ಟಿತು. ಒಪ್ಪಂದಕ್ಕನುಸಾರವಾಗಿ ರಕ್ಷಣಾಪಡೆ ಈಜಿಪ್ಟನ್ನು

ಬಿಟ್ಟು ಹೋಯಿತು. ಇಂಗ್ಲೆಂಡಿನೊಂದಿಗೆ ಸ್ನೇಹ ಸಂಬಂಧ ಮಾತ್ರ ಹೆಚ್ಚು ಕಾಲ ಉಳಿಯಲಿಲ್ಲ. ಬಾಗ್ದಾದ್ ಒಪ್ಪಂದದಿಂದ ಹುಟ್ಟಿದ ಇರಾನ್, ಇರಾಕ್, ಟರ್ಕಿ, ಪಾಕಿಸ್ತಾನ ಮತ್ತು ಇಂಗ್ಲೆಂಡ್ ರಾಜ್ಯಗಳನ್ನೊಳಗೊಂಡ ಸೆಂಟೋಕೂಟಕ್ಕೆ ಸೇರಿಸಲು ನಾಸೆರ್ ನಿರಾಕರಿಸಿದ. ಈ ಕೂಟಕ್ಕೆ ಅರಬ್ ಜನತೆಯಲ್ಲಿ ತೀವ್ರ ವಿರೋಧವಿತ್ತು. ಆದ್ದರಿಂದ ಇವರಿಗೆ ನಾಸೆರ್ ಒಬ್ಬನೆ ಅರಬ್ಬರ ಗೌರವ ಮತ್ತು ಹಿತರಕ್ಷಣೆಯಲ್ಲಿ ಆಸಕ್ತನಾದವನೆಂಬ ಭಾವನೆ ಬೆಳೆದು ಆತ ಅವರ ಮುಖಂಡನಾದ. ಬಾಗ್ದಾದ್ ಒಪ್ಪಂದಕ್ಕೆ ವಿರೋಧಿಯಾಗಿದ್ದ ಭಾರತ ಮತ್ತು ಯೂಗೋಸ್ಲಾವಿಯ ರಾಜ್ಯಗಳೊಡನೆ ಸ್ನೇಹವ್ಯವಹಾರ ಬೆಳೆಸಿ, ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಸ್ವತಂತ್ರ ಈಜಿಪ್ಟ್ ಪಾತ್ರವಹಿಸುವಂತೆ ಮಾಡಿದ. 1955ರಲ್ಲಿ ಜರುಗಿದ ಬಾಂಡುಂಗ್ ಸಮ್ಮೇಳನದಲ್ಲಿ ಭಾಗವಹಿಸಿ ಅಲಿಪ್ತನೀತಿಗೆ ಬೆಂಬಲ ನೀಡಿದ.

ನಾಸೆರ್ ಇಸ್ರೇಲಿನ ಅಸ್ತಿತ್ವವನ್ನು ಒಪ್ಪಿಕೊಂಡೇ ಇರಲಿಲ್ಲ. ಅರಬ್ಬರೇ ಬಹು ಸಂಖ್ಯಾತರಾಗಿದ್ದ ಪಶ್ಚಿಮ ಏಷ್ಯದಲ್ಲಿ ದೊಡ್ಡ ಪಾಶ್ಚಾತ್ಯರಾಷ್ಟ್ರಗಳ ಬೆಂಬಲ ಪಡೆದ ರಾಜ್ಯವೊಂದು ನಿರ್ಮಿತವಾದರೆ ಅದು ಅನೇಕ ಹೊಸ ರಾಜಕೀಯ ಸಮಸ್ಯೆಗಳನ್ನು ತಂದೊಡ್ಡಿ ತಮ್ಮ ರಾಷ್ಟ್ರಗಳ ಬೆಳೆವಣಿಗೆಗೆ ಅಡ್ಡಿಯಾಗಬಹುದೆಂಬುದು ಅರಬ್ಬರ ಅಭಿಪ್ರಾಯವಾಗಿತ್ತು. ಇಸ್ರೇಲಿನ ಬಹಿಷ್ಕಾರಕ್ಕೆ ಈಜಿಪ್ಟೇ ಮುಂದಾಳಾಗಿತ್ತು. 1955ರ ಫೆಬ್ರವರಿಯಲ್ಲಿ ಇಸ್ರೇಲ್ ಸೈನ್ಯ ಗಾಜ಼ಾದ ಸೈನ್ಯ ಠಾಣೆಯ ಮೇಲೆ ದಾಳಿ ನಡೆಸಿತು. ಮುಂದೆ ಗಂಡಾಂತರ ಕಾದಿದೆಯೆಂಬುದನ್ನರಿತು ಅರಬ್ಬೀ ಗೆರಿಲ್ಲಾ ಯೋಧರ ತಂಡಗಳನ್ನು ಈಜಿಪ್ಟ್ ಸಿದ್ಧಪಡಿಸಿತು. ಪಾಶ್ಚಾತ್ಯ ದೇಶಗಳೂ ಮುಖ್ಯವಾಗಿ ಅಮೆರಿಕದ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್ ಮತ್ತು ಫ್ರಾನ್ಸ್ ಈಜಿಪ್ಟಿಗೆ ವಿರೋಧವಾಗಿ ನಿಂತುವು. ಆಗ ಕಮ್ಯೂನಿಸ್ಟ್ ರಾಷ್ಟ್ರಗಳೊಂದಿಗೆ ಈಜಿಪ್ಟ್ ಹೆಚ್ಚಾಗಿ ಸಂಬಂಧ ಬೆಳೆಸಬೇಕಾಯಿತು. 1956–59ರಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಸ್ರೇಲ್‌ಗಳ ವಿರುದ್ಧ ನಿಂತು ಯುದ್ಧ ಮಾಡುವ ಪರಿಸ್ಥಿತಿ ಈಜಿಪ್ಟಿಗೆ ಬಂದಿತು. ಆದರೆ ವಿಶ್ವಸಂಸ್ಥೆ ಇದನ್ನು ತಡೆಗಟ್ಟಿತು.

ಈಜಿಪ್ಟಿನ ಮತ್ತು ಇತರ ಅರಬ್ ರಾಷ್ಟ್ರಗಳ ರಾಜಕೀಯದಲ್ಲಿ ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳ ಪ್ರಭಾವವನ್ನು ಮುರಿದು ಕಮ್ಯೂನಿಸ್ಟ್ ರಾಷ್ಟ್ರಗಳ ಒಕ್ಕೂಟವೊಂದನ್ನು ನಿರ್ಮಿಸುವುದೆ ಸರಿಯಾದ ಮಾರ್ಗವಾದ್ದರಿಂದ ಮೊದಲ ಹೆಜ್ಜೆಯೆಂಬಂತೆ ಈಜಿಪ್ಟ್ ಮತ್ತು ಸಿರಿಯ ದೇಶಗಳ ಅಧ್ಯಕ್ಷರು ತಮ್ಮ ಎರಡು ರಾಷ್ಟ್ರಗಳೂ ಒಂದಾಗಿ ಸಂಯುಕ್ತ ಅರಬ್ ಗಣರಾಜ್ಯವಾಗಿದೆಯೆಂದು ಘೋಷಿಸಿದರು. ಅನಂತರ ಯೆಮೆನ್ ಕೂಡ ಈ ಕೂಟಕ್ಕೆ ಸೇರಿತು. ನಾಸೆರ್ ಈ ಸಂಯುಕ್ತ ರಾಜ್ಯಗಳ ಅಧ್ಯಕ್ಷನಾಗಿ ಆರಿಸಲ್ಪಟ್ಟ. ಹೊರರಾಷ್ಟ್ರ ವ್ಯವಹಾರದಲ್ಲಿ, ಶಿಕ್ಷಣ ಮತ್ತಿತರ ಸಾಂಸ್ಕೃತಿಕ ವಿಷಯಗಳಲ್ಲಿ ಮಾತ್ರ ಏಕತೆಯಿರಬೇಕು, ಇತರ ವಿಷಯಗಳಲ್ಲಿ ಪ್ರತಿ ಸದಸ್ಯರಾಷ್ಟ್ರವೂ ಸ್ವತಂತ್ರವಾಗಿರಬೇಕು ಎಂಬ ನಿರ್ಣಯಕ್ಕೆ ಒಪ್ಪಿಗೆ ದೊರಕಿತು. ಹೊಸ ರಾಜ್ಯಾಂಗವ್ಯವಸ್ಥೆಯಲ್ಲಿ ಅಧ್ಯಕ್ಷ ಉಚ್ಚ ಸೇನಾಪತಿಯಾದ. ಉಪರಾಷ್ಟ್ರಪತಿಯನ್ನು ಮತ್ತು ಮಂತ್ರಿಗಳನ್ನು ನೇಮಿಸುವುದು, ವಜಾ ಮಾಡುವುದು ಅವನ ಅಧಿಕಾರಕ್ಕೊಳಪಟ್ಟಿತು. (ಎಂ.ಕೆ.ಆರ್.)

**ಅರಬ್ಬಿ ಸಮುದ್ರ:** ಹಿಂದೂ ಮಹಾಸಾಗರದ ಒಂದು ಭಾಗ. ಇದು ಭಾರತದ ವಾಯವ್ಯ ಭಾಗದಲ್ಲಿದೆ. ಎರಿಥ್ರಿಯನ್ ಸಮುದ್ರ ಎಂಬುದು ಇದರ ಹಳೆಯ ಹೆಸರು. ಅರಬ್ಬರ ವಾಣಿಜ್ಯ ಚಟುವಟಿಕೆಗಳು ಈ ಭಾಗದಲ್ಲಿ ಹೆಚ್ಚಾಗಿರುವುದರಿಂದ ಇದನ್ನು ಅರಬ್ಬಿ ಸಮುದ್ರವೆಂದು ಕರೆಯಲಾಯಿತು. ಪೂರ್ವಕ್ಕೆ ಭಾರತವೂ ಉತ್ತರಕ್ಕೆ ಪಾಕಿಸ್ತಾನ ಮತ್ತು ಇರಾನ್ ದೇಶಗಳ ಪಶ್ಚಿಮ ಭಾಗಗಳೂ ಪಶ್ಚಿಮಕ್ಕೆ ಅರೇಬಿಯ, ಆಫ್ರಿಕಗಳ ಪೂರ್ವಭಾಗಗಳೂ ಇವೆ. ಕೆಂಪು ಸಮುದ್ರವೂ ಪರ್ಷಿಯನ್ ಕೊಲ್ಲಿಯೂ ಅರಬ್ಬಿ ಸಮುದ್ರಕ್ಕೆ ಸೇರಿಕೊಂಡಿವೆ. ಸಿಂಧೂ, ನರ್ಮದ ಮತ್ತು ತಪತಿ ಇವು ಈ ಸಮುದ್ರವನ್ನು ಸೇರುವ ಮುಖ್ಯ ನದಿಗಳು. ಒಂದಾನೊಂದು ಕಾಲದಲ್ಲಿ ಈ ಸಮುದ್ರ ತೀರ ಹಡಗಿನ ಸಂಚಾರಕ್ಕೆ ಪ್ರಖ್ಯಾತಿ ಹೊಂದಿತ್ತು. ಈಗ ಯುರೋಪು ಮತ್ತು ಭಾರತಗಳ ಮಧ್ಯೆ ಪ್ರಮುಖ ನೌಕಾಮಾರ್ಗವಾಗಿದೆ. ಅಕ್ಟೋಬರ್‌ನಿಂದ ಮೇ ವರೆಗೆ ಈಶಾನ್ಯ ವಾಣಿಜ್ಯ ಮಾರುತವೂ ಬೀಸುತ್ತವೆ. ಅರಬ್ಬಿ ಸಮುದ್ರದ ಪ್ರಾಮುಖ್ಯ ಸುಯೆಜ಼್್ ಕಾಲುವೆಯನ್ನು ತೆರೆದ ಅನಂತರ (1869) ಹೆಚ್ಚಿತು. ಏಡನ್, ಮುಂಬಯಿ ಮತ್ತು ಕರಾಚಿ ಈ ಸಮುದ್ರ ತೀರದ ಪ್ರಖ್ಯಾತ ಬಂದರುಗಳು. ಇಲ್ಲಿನ ಕೆಲವು ದ್ವೀಪಗಳಲ್ಲಿ ಸೊಕೊಟ್ರಾ ಮತ್ತು ಲಕ್ಷದ್ವೀಪ ಮುಖ್ಯವಾದುವು. (ಎಂ.ಎಸ್.ಎಂ.)

**ಅರಸೀಕೆರೆ:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಮುಖ್ಯ ಪಟ್ಟಣ. ತಾಲ್ಲೂಕಿನ ವಿಸ್ತೀರ್ಣ 777 ಚ.ಕಿಮೀ. ಜನಸಂಖ್ಯೆ 3,03,000. ಸುತ್ತಲೂ ಕಡೂರು, ಚಿಕ್ಕನಾಯಕನಹಳ್ಳಿ, ಹಾಸನ, ಚನ್ನರಾಯಪಟ್ಟಣ, ತಿಪಟೂರು, ಚಿಕ್ಕಮಗಳೂರು ಮತ್ತು ಬೇಲೂರು ತಾಲ್ಲೂಕುಗಳಿವೆ. ಇದು ಬೆಟ್ಟಗುಡ್ಡಗಳ ಪ್ರದೇಶ. ಹಿರೇಕಲ್ಲುಬೆಟ್ಟ ಎಂಬುದು ಎತ್ತರವಾದ ಬೆಟ್ಟಗಳಲ್ಲೊಂದು. ಈ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಸಾಧಾರಣವಾದ ಅನೇಕ ಕಾಡುಗಳೂ ಕುರುಚಲು ಹುಲ್ಲು ಬೆಳೆವ ಪ್ರದೇಶಗಳೂ ಇವೆ. ಇಲ್ಲೆಲ್ಲ ಸಾಧಾರಣ ಫಲವತ್ತಾದ ಗಡುಸಾದ ಕೆಂಪು ಮತ್ತು ಬೂದುಬಣ್ಣದ ಮಣ್ಣಿದೆ. ಭೂಮಿ ದಕ್ಷಿಣದಿಂದ ಉತ್ತರದ ಕಡೆಗೆ ಇಳಿಜಾರಾಗಿದೆ. ವೇದಾವತಿ ನದಿ ಉತ್ತರಕ್ಕೆ ಹರಿಯುತ್ತದೆ. ಮಳೆ ಕಡಿಮೆ. ಆದ್ದರಿಂದ ಬೆಳೆಗಳಿಗೆ ಮೀಸಲಾದ ಪ್ರದೇಶದ ಪ್ರಮಾಣವೂ ಕಡಿಮೆ. ರಾಗಿ, ತೆಂಗು, ಮೆಣಸಿನಕಾಯಿ, ಎಣ್ಣೆಕಾಳುಗಳು, ಜೋಳ – ಇವು ಮುಖ್ಯ ಬೆಳೆಗಳು. ಕೆರೆಗಳ ಆಶ್ರಯದಿಂದ ಅಲ್ಪಸ್ವಲ್ಪಪ್ರಮಾಣದಲ್ಲಿ ಬತ್ತವನ್ನು ಬೆಳೆಯಲಾಗುತ್ತದೆ.

ಅರಸೀಕೆರೆಯನ್ನು ಹೊಯ್ಸಳ ಅರಸ ಕಟ್ಟಿಸಿದ್ದರಿಂದ ಊರಿಗೆ ಅದೇ ಹೆಸರು ಬಂದಿದೆ. ಈ ಪಟ್ಟಣದ ಜನಸಂಖ್ಯೆ 45,160. ಆ ಕೆರೆಯ ಹತ್ತಿರ ಒಂದು ಕೋಟೆ, ಕೆಲವು ದೇವಸ್ಥಾನ ಮತ್ತು ನಾಗರಕೆರೆ ಎಂಬ ಇನ್ನೊಂದು ಕೆರೆ ಇವೆ. ಇಲ್ಲಿರುವ ಈಶ್ವರ ದೇವಸ್ಥಾನ ಹೊಯ್ಸಳ ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾಗಿದೆ. ಪೂರ್ವದಲ್ಲಿ ಅರಸೀಕೆರೆ ವಿಜಯನಗರಸಾಮ್ರಾಜ್ಯದ ಒಂದು ಮುಖ್ಯ ಊರಾಗಿತ್ತು. ಆಮೇಲೆ ಮಹಾರಾಷ್ಟ್ರದ ಆಡಳಿತಕ್ಕೆ ಸೇರಿ ಅನಂತರ ಮೈಸೂರಿಗೆ ಸೇರಿತು. ಇತ್ತೀಚೆಗೆ ವ್ಯಾಪಾರಕೇಂದ್ರವಾಗಿ ಹೆಚ್ಚು ಅಭಿವೃದ್ಧಿ ಹೊಂದುತ್ತಲಿದೆ. ಗುಡಿಕೈಗಾರಿಕೆಗಳು, ನೇಯ್ಗೆ, ಬಿದರಿನ ಕೆಲಸ, ಮಣ್ಣಿನ ಕೆಲಸ ಇವು ಮುಖ್ಯ ಕಸಬುಗಳಾಗಿವೆ. (ಎ.ಕೆ.)

**ಅರಾವಳಿ ಸಮುದಾಯ:** ಭಾರತದ ಪರ್ಯಾಯದ್ವೀಪ ಭಾಗದ ಒಂದು ಮುಖ್ಯ ಪರ್ವತ ಶ್ರೇಣಿ. ಕೇಟ್ರಿಯಿಂದ ಭಕಾರ್‌ವರೆಗೆ ಹಬ್ಬಿದೆ. ರಾಜಸ್ತಾನದ ಮಧ್ಯೆ ಹಾದುಹೋಗಿದೆ. ಇಲ್ಲಿನ ಅಬುಪರ್ವತ ಒಂದು ಪುಣ್ಯಕ್ಷೇತ್ರ.

ಈ ಶ್ರೇಣಿಯ ಬಹುಭಾಗ ಹೆಚ್ಚಿನ ರೀತಿಯ ಶಿಥಿಲೀಕರಣಕ್ಕೊಳಗಾಗದಿರುವ ಕಾರಣ ನೆಲಭಾಗದಿಂದ ಆವೃತ್ತವಾಗಿದ್ದು ಪ್ರಸ್ಥಭೂಮಿಯಂತೆ ಮಾರ್ಪಟ್ಟಿದೆ. ಪರ್ಯಾಯದ್ವೀಪಭಾಗದ ಮೇಲ್ಮೈಲಕ್ಷಣವನ್ನು ರೂಪಿಸುವಲ್ಲಿ ಇದರ ಪಾತ್ರ ಹಿರಿದು. ಕ್ಷೋಭೆಗೆ ಕಾರಣವಾದ ಶಕ್ತಿಗಳ ಅಕ್ಷ ಸಮುದಾಯಕ್ಕೆ ಸಮಾಂತರವಾಗಿರುವುದೇ ಈ ಸಮುದಾಯದ ಲಕ್ಷಣ. ಸಮಾಂತರವಾಗಿ ರಾಜಸ್ತಾನದಲ್ಲಿ ಈ ಪರ್ವತಶ್ರೇಣಿ ಈಶಾನ್ಯ–ನೈಋತ್ಯ ದಿಕ್ಕಿನಲ್ಲಿ ಹಬ್ಬಿದೆ. ಅಜ್ಮೀರ್‌ನಿಂದ ಪ್ರಾರಂಭವಾಗಿ ನೈಋತ್ಯ ದಿಕ್ಕಿನಲ್ಲಿ ಮುಂದುವರಿದು ಅಬುಪರ್ವತದವರೆಗೂ ಬೆಟ್ಟದ ಸಾಲು ಉತ್ತರ ಹಿಮಾಚಲ ಮತ್ತು ದಕ್ಷಿಣ ನೀಲಗಿರಿಗಳ ಮಧ್ಯೆ ಕಂಡುಬರುವ ಅತ್ಯಂತ ಉನ್ನತ ಪ್ರದೇಶಗಳಲ್ಲಿ ಈ ಸ್ತೋಮ ಒಂದಾಗಿದೆ. ನೈಋತ್ಯದಲ್ಲಿ ಥಾರ್ ಮರುಭೂಮಿಯ ಮರಳಿನಿಂದಲೂ ನದಿಮೆಕ್ಕಲಿನಿಂದಲೂ ಆವೃತವಾಗಿದೆ. ಅಲ್ಲದೆ ಮರುಭೂಮಿಯ ಮರಳು ಇನ್ನಷ್ಟು ಹರಡದಂತೆ ಅಡ್ಡಗಟ್ಟುವ ಒಂದು ದೊಡ್ಡ ತಡೆಯಾಗಿದೆ. ದೆಹಲಿಯತ್ತ ಅರಾವಳಿ ಅಲ್ಲೊಂದು ಇಲ್ಲೊಂದರಂತೆ ಕಂಡುಬರುವ ಬೆಟ್ಟಗಳಂತೆ, ಕಡಿದಾದ ಬಂಡೆಗಳಂತೆ ಹಬ್ಬಿದೆ. ಅಲ್ಲದೆ ಕಾಥೇವಾಡ ಮತ್ತು ಕಚ್ ಪ್ರದೇಶಗಳಲ್ಲಿ ಅಳಿದುಳಿದ ಹಲವಾರು ಶಿಖರಗಳಿವೆ.

ಈ ಸಮುದಾಯದ ಶಿಲೆಗಳು ಭೂಚರಿತ್ರೆಯಲ್ಲಿ ಅತ್ಯಂತ ಪುರಾತನಯುಗವಾದ ಅರ್ಷೇಯಕಲ್ಪ ಮತ್ತು ಪ್ರಿ–ಕೇಂಬ್ರಿಯನ್ ಯುಗಕ್ಕೆ ಸೇರಿವೆ, ಪುರಾಣಯುಗದ ವಿಂಧ್ಯ ಶಿಲಾಸಮುದಾಯ ಅರಾವಳಿ ಶ್ರೇಣಿಯ ಇಕ್ಕೆಲದಲ್ಲೂ ಕಂಡುಬಂದಿರುವುದರಿಂದ ಇದು ಪುರಾಣಯುಗಕ್ಕಿಂತ ಹಿಂದಿನದೆಂದು ಹೇಳಬಹುದು, ಅಲ್ಲದೆ ವಿಂಧ್ಯ ಶಿಲಾ ಸಮುದಾಯಕ್ಕೆ ಸೇರಿದ ಪ್ರಸ್ತರಗಳು ಯಾವ ವಿಧವಾದ ಮಡಿಕೆ, ಸ್ತರಭಂಗ ಮುಂತಾದವನ್ನು ತೋರಿಸದೆ ಸಮತಲವಾಗಿ ಕಂಡುಬರುವುದು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ನಿರ್ಜೀವಯುಗದಲ್ಲಾದ ಖನಿಜಪರಿವರ್ತನೆ ಈ ಸಮುದಾಯದ ಹಲವಾರು ಭಾಗಗಳಲ್ಲಿ ಕಂಡು ಬರುತ್ತದೆ.

ಅರಾವಳಿ ಶಿಲಾಸ್ತೋಮದಲ್ಲಿ ಸೀಸ ಮತ್ತು ಸತುವಿನ ಸ್ತರಗಳು, ಶಿಲಾಸೀಳು, ಬಿರುಕು ಮತ್ತು ಸ್ತರಭಂಗಗಳ ಜಾಡಿನಲ್ಲಿ ಹರಡಿವೆ. ಜೈಪುರ ಮತ್ತು ಮೇವಾರ್‌ದಲ್ಲಿನ ಡಾಲೊಮೈಟ್, ಫಿಲೈಟ್ ಮತ್ತು ಕ್ವಾರ್ಟ್ಸೈಟ್ ಶಿಲಾಪ್ರಸ್ತರಗಳು ಈ ಖನಿಜಗಳಿಗೆ ತವರು. ರಾಷ್ಟ್ರದ ಏಕೈಕ ಸೀಸ ಮತ್ತು ಸತುವಿನ ಗಣಿ ಎನಿಸಿದ ಜಾವರ್ ಗಣಿ ಉದಯಪುರದ ಬಳಿ ಇದೆ. ಈ ಲೋಹ ಖನಿಜಗಳಲ್ಲದೆ ಅರಾವಳಿ ಸ್ತೋಮದಲ್ಲಿ ಉತ್ತಮ ದರ್ಜೆಯ ಸುಣ್ಣಶಿಲೆ ಮತ್ತು ಹಾಸುಗಲ್ಲುಗಳೂ ದೊರೆಯುತ್ತವೆ. ಕಟ್ಟಡದ ಕೆಲಸಗಳಿಗೆ ಇವು ಹೆಚ್ಚು ಉಪಯುಕ್ತವಾಗಿವೆ. ಬುಂಡಿ ಬಳಿಯ ಉಮ್ರೊರ್ ಸುತ್ತಲಿನ ಸುಣ್ಣ ಶಿಲೆಯೂ ಜೈಪುರದ ಬಳಿಯ ರಘುನಾಥ್ ಘರ್‌ನ ಹಾಸುಗಲ್ಲುಗಳೂ ಬಹು ಪ್ರಸಿದ್ಧವಾದುವು. (ಎಂ.ಎಸ್.ಎಸ್.)

**ಅರಿಝೋನ:** ಅಮೆರಿಕ ಸಂಯುಕ್ತಸಂಸ್ಥಾನಗಳ ಒಂದು ರಾಜ್ಯ. $31^{0}20'$ ಮತ್ತು $37^{0}$ ಉ. ಅಕ್ಷಾಂಶ, $109^{0}2'$– $114^{0}45'$ ಪ. ರೇಖಾಂಶಗಳಿಂದ ಸೀಮಿತವಾಗಿದೆ. ಫೀನಿಕ್ಸ್ ರಾಜಧಾನಿ. ಜನಸಂಖ್ಯೆ 1,325,045 (2001). ಟಸ್ಕಾನ್ ಮತ್ತು ಟೆಂಪೆ ಇತರ ಮುಖ್ಯ ನಗರಗಳು. ವಿಸ್ತೀರ್ಣ 2,95,000 ಚ.ಕಿಮೀ. ಜನಸಂಖ್ಯೆ 5,130,632 (2000). ಅಪಾಚೀ ಇಂಡಿಯನ್ ಜನರ ನೆಲೆಯಾದ್ದರಿಂದ ಪ್ರಾಂತ್ಯವೆಂದೂ ಪ್ರಪಂಚದ ಅತಿ ದೊಡ್ಡ ಗಣಿಗಳನ್ನು ಹೊಂದಿರುವುದರಿಂದ ತಾಮ್ರ ಪ್ರಾಂತ್ಯವೆಂದೂ ಹೆಸರು ಪಡೆದಿದೆ. ಶೇ. 87 ಬಿಳಿಯರು, ಉಳಿದವರು ಕಪ್ಪು ಜನಾಂಗ, ಆದಿವಾಸಿ ಇಂಡಿಯನ್ನರು ಇತ್ಯಾದಿ. ವಿಸ್ತೀರ್ಣದಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ 6ನೆಯ ಸ್ಥಾನ ಪಡೆದಿರುವ ಈ ರಾಜ್ಯ ಜನಸಂಖ್ಯೆಯಲ್ಲಿ 35ನೆಯ ಸ್ಥಾನಪಡೆದಿದೆ. ಇಲ್ಲಿ ಖನಿಜಸಂಪತ್ತು ಹೇರಳ, ಆದರೆ ಕೈಗಾರಿಕೆಯ ಪ್ರಗತಿ ಸಾಲದು. ಪ್ರಪಂಚ ಪ್ರಸಿದ್ಧ ಕೊಲರಾಡೊ ಮಹಾಕಮರಿ ಈ ಪ್ರಾಂತ್ಯದಲ್ಲಿದೆ. (ಕೆ.ಆರ್.)

**ಅರಿಸ್ಟಾಟಲ್:** ಪ್ರ.ಶ.ಪೂ.384–322. ಗ್ರೀಸ್ ದೇಶದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ. ಥ್ರೇಸಿನ ರೇವುಪಟ್ಟಣವಾದ ಸ್ಟಗಿರದಲ್ಲಿ ಜನಿಸಿದ, ತಂದೆ ನೈಕೊಮ್ಯಕಸ್ ಮ್ಯಸಿಡಾನಿನ ದೊರೆ ಎರಡನೆಯ ಅಮಿನ್‌ಟಾಸ್‌ನ ಆಸ್ಥಾನದ ವೈದ್ಯನಾಗಿದ್ದ.



17ನೆಯ ವಯಸ್ಸಿನಲ್ಲಿ ಉಚ್ಚ ಶಿಕ್ಷಣಕ್ಕಾಗಿ ಅಥೆನ್ಸ್ ಪಟ್ಟಣಕ್ಕೆ ಹೋಗಿ ಪ್ಲೇಟೊನ ಅಕಾಡೆಮಿಯನ್ನು ಸೇರಿ ಅಲ್ಲಿ 20 ವರ್ಷಗಳ ಕಾಲ ವ್ಯಾಸಂಗ ನಡೆಸಿದ. ಪ್ಲೇಟೊ ಇವನನ್ನು ತನ್ನ ವಿದ್ಯಾಪೀಠದ ವಿಚಾರಚೈತನ್ಯವೆಂದು ಕರೆದಿರುವನು. ಗುರು ಏನನ್ನು ಬೋಧಿಸಿದರೂ ಅರಿಸ್ಟಾಟಲ್ ಅದಕ್ಕೆ ಪ್ರತಿಯಾದ ವಿಚಾರವನ್ನು ಮಂಡಿಸದೆ ಬಿಡುತ್ತಿರಲಿಲ್ಲ.

ಪ್ಲೇಟೋನ ಮರಣಾನಂತರ ಅವನ ಸೋದರನ ಮಗನೇ ಸ್ಪಿಸಿಪಸ್ ಪ್ಲೇಟೊನ ಅಕಾಡೆಮಿಯ ಉತ್ತರಾಧಿಕಾರಿಯಾದನೇ ಹೊರತು ಪ್ಲೇಟೊನಂತೆ ಅದರ ಉತ್ತಮಾಧಿಕಾರಿಯಾಗಲಿಲ್ಲ. ಆದ್ದರಿಂದ ಅರಿಸ್ಟಾಟಲನಿಗೆ ಅಲ್ಲಿ ಇರಲು ಒಗ್ಗದೆ ತನ್ನ ಸಹಪಾಠಿಯಾದ ಜೆನೊಕ್ರೇಟೀಸ್‌ನೊಡನೆ ಅಕಾಡೆಮಿಯನ್ನು ಬಿಟ್ಟು ತನ್ನ ಸ್ನೇಹಿತ ಹರ್ಮೀಸ್ ತನಗೆ ಬಹುಮಾನವಾಗಿ ಕೊಟ್ಟಿದ್ದ ಅಪ್ಪಸ್ ಪಟ್ಟಣದಲ್ಲಿ ನೆಲಸಿ ಒಂದು ವಿದ್ಯಾಲಯವನ್ನು ಸ್ಥಾಪಿಸಿ ತನ್ನ ಸಹಪಾಠಿಯೊಡನೆ ಅದನ್ನು ಮೂರು ವರ್ಷಗಳ ಕಾಲ ನಡೆಸಿದ. ಭೂಗೋಳವಿಜ್ಞಾನ, ಖಗೋಳ ವಿಜ್ಞಾನ ಹಾಗೂ ಪ್ರಾಣಿವಿಜ್ಞಾನದಲ್ಲೂ ಆಸಕ್ತನಾಗಿದ್ದ.

(ಕೆ.ಎನ್.ಯು.)

**ಅರುಣಾಚಲ ಪ್ರದೇಶ:** ಭಾರತದ ಒಂದು ರಾಜ್ಯ. 1962 ಕ್ಕಿಂತ ಹಿಂದೆ ಅರುಣಾಚಲ ಪ್ರದೇಶ ರಾಜ್ಯವನ್ನು ಈಶಾನ್ಯ ಗಡಿನಾಡಿನ ಏಜೆನ್ಸಿ ಎಂದು ಕರೆಯಲಾಗುತ್ತಿತ್ತಲ್ಲದೇ ಅಸ್ಸಾಂ ರಾಜ್ಯದ ಒಂದು ಭಾಗವಾಗಿತ್ತು. 1972 ರಲ್ಲಿ ಕೇಂದ್ರಾಡಳಿತ ಪ್ರದೇಶವಾಗಿ ಪರಿಗಣಿಸಲ್ಪಡುವುದರ ಜೊತೆಗೆ ಅರುಣಾಚಲಪ್ರದೇಶವೆಂದು ಪುನರ್ ನಾಮಕರಣ ಮಾಡಲಾಯಿತು. 1987 ಫೆಬ್ರವರಿ 20 ರಂದು ಇದು ಭಾರತ ಒಕ್ಕೂಟದ 24ನೆಯ ರಾಜ್ಯವಾಗಿ ಜಾರಿಗೆ ಬಂದಿತು. ಸನ್ನಿವೇಶ ಮತ್ತು ವಿಸ್ತೀರ್ಣ: ಈ ರಾಜ್ಯ $26^0$–$28'$ ಉತ್ತರ ಅಕ್ಷಾಂಶದಿಂದ $29^0$–$30'$ ಉ.ಅಕ್ಷಾಂಶದ ವರೆಗೂ ರೇಖಾಂಶಿಕವಾಗಿ $91^030'$ ಪೂ.ರೇ. ದಿಂದ $96^030'$ ಪೂ.ರೇ. ದವರೆಗೂ ವಿಸ್ತರಿಸಿದೆ. ಈ ರಾಜ್ಯ ಪೂರ್ವದಲ್ಲಿ ಮಯನ್ಮಾರ್, ಪಶ್ಚಿಮದಲ್ಲಿ ಭೂತಾನ್, ಉತ್ತರದಲ್ಲಿ ಚೀನ ಮತ್ತು ಟಿಬೆಟ್‌ಗಳ ಅಂತಾರಾಷ್ಟ್ರೀಯ ಗಡಿಗಳನ್ನು ಹೊಂದಿದ್ದರೆ, ದಕ್ಷಿಣದಲ್ಲಿ ಅಸ್ಸಾಂ ಮತ್ತು ನಾಗಾಲ್ಯಾಂಡ್ ರಾಜ್ಯಗಳ ಗಡಿಗಳನ್ನು ಹೊಂದಿದೆ. ಈ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 83,743 ಚ.ಕಿಮೀ. ಇದು 16 ಜಿಲ್ಲೆಗಳನ್ನು ಹೊಂದಿದ್ದು, ಇಟಾನಗರ ಈ ರಾಜ್ಯದ ರಾಜಧಾನಿಯಾಗಿದ್ದು ಸಮುದ್ರ ಮಟ್ಟದಿಂದ 530 ಮೀ ಎತ್ತರದಲ್ಲಿದೆ. ಜನಸಂಖ್ಯೆ 1,091,117.

ಮೇಲ್ಮೈ ಲಕ್ಷಣ: ಅರುಣಾಚಲ ಪ್ರದೇಶ ಭಾರತದ ಈಶಾನ್ಯ ಗಡಿ ಭಾಗದ ಹಿಮಾಲಯ ಪರ್ವತಗಳ ಭಾಗದಲ್ಲಿರುವ ರಾಜ್ಯವಾಗಿದೆ. ಇದು ನಾಲ್ಕು ಮೇಲ್ಮೈ ಲಕ್ಷಣಗಳಿಂದ ಕೂಡಿದೆ. 1) ಪರ್ವತ ಶ್ರೇಣಿಗಳು 2) ಉಪ ಪರ್ವತ ಪ್ರದೇಶ 3) ನದಿ ಕಣಿವೆ ಪ್ರದೇಶಗಳು 4) ಪರ್ವತದ ಇಳಿಜಾರುಗಳು.

ಹಿಮಾಲಯದ ಶಿವಾಲಿಕ್ ಭಾಗ ಈ ರಾಜ್ಯದಲ್ಲಿ ಹಲವಾರು ಶ್ರೇಣಿಗಳನ್ನು ಹೊಂದಿದೆ. ಶಿವಾಲಿಕ್ ಪ್ರದೇಶಕ್ಕೆ ಹೊಂದಿಕೊಂಡಂತೆ ಹಬ್ಬಿರುವ ಹಲವಾರು ಬೆಟ್ಟ ಸರಣಿಗಳು ಈ ರಾಜ್ಯದಲ್ಲಿ ಉತ್ತರ ದಕ್ಷಿಣಾಭಿಮುಖವಾಗಿ ಹಬ್ಬಿವೆ. ಈ ರಾಜ್ಯದಲ್ಲಿ ಟಿಬೆಟ್‌ನಿಂದ ಭಾರತಕ್ಕೆ ಪ್ರವೇಶಿಸುವ ಬ್ರಹ್ಮಪುತ್ರಾ ನದಿ ಪ್ರಮುಖವಾದದ್ದು. ಇಲ್ಲಿನ ನದಿಗಳು ತಮ್ಮ ಪಾತ್ರವನ್ನು ಆಳವಾಗಿ ಕೊರೆದು ಕಣಿವೆ ಪ್ರದೇಶವನ್ನು ನಿರ್ಮಿಸುವುದರ ಜೊತೆಗೆ, ಅಸ್ಸಾಂ ರಾಜ್ಯದ ಮೈದಾನದಿಂದ ಇದನ್ನು ಪ್ರತ್ಯೇಕಿಸಿವೆ. ಎತ್ತರವಾದ ತಳ ಹಿಮಲಾಯದ (ಶಿವಾಲಿಕ್) ಭಾಗದಿಂದ ತಗ್ಗಾದ ನದಿ ಕಣಿವೆ ಪ್ರದೇಶದ ಕಡೆಗೆ ಈ ರಾಜ್ಯದುದ್ದಕ್ಕೂ ಇಳಿಜಾರು ಪ್ರದೇಶ ಕಂಡುಬರುತ್ತದೆ.

ಜಲವ್ಯವಸ್ಥೆ: ಈ ರಾಜ್ಯ ಎತ್ತರವಾದ ಪರ್ವತ ಭಾಗದಿಂದ ಕೂಡಿದ್ದು ಇಳಿಜಾರನ್ನು ಹೊಂದಿ ಹಾಗೂ ವಾರ್ಷಿಕವಾಗಿ 500 ಸೆಂಮೀ ಮಳೆಯನ್ನು ಪಡೆಯುವುದರಿಂದ ಇಲ್ಲಿ ಸರೋವರಗಳು ಮತ್ತು ನದಿಗಳು ಉಗಮ ಹೊಂದಿವೆ. ಹಲವಾರು ನದಿಗಳು ತಗ್ಗು ಪ್ರದೇಶದ ಕಡೆಗೆ ಹರಿಯುವುದರ ಜೊತೆಗೆ ಆಳವಾದ ಕಣಿವೆಗಳನ್ನು ನಿರ್ಮಿಸಿವೆ. ಇಲ್ಲಿ ಹರಿಯುವ ಪ್ರಮುಖ ನದಿ ಬ್ರಹ್ಮಪುತ್ರ. ಇದು ಭಾರತದ ಪ್ರಮುಖ ನದಿಗಳಲ್ಲೊಂದಾಗಿದ್ದು, ಟಿಬೆಟ್ಟಿನಿಂದ ಹರಿದು ಬಂದು ಅರುಣಾಚಲ ಪ್ರದೇಶ ಹಾಗೂ ಅಸ್ಸಾಂ ರಾಜ್ಯಗಳ ಮೂಲಕ ಹರಿದು ಬಂಗಾಲಕೊಲ್ಲಿಗೆ ಸೇರುವ ಮೊದಲು ಬಾಂಗ್ಲಾದೇಶದ ಮೂಲಕವೂ ಹರಿಯುತ್ತದೆ. ಇಲ್ಲಿ ಕಾಮೆಂಗ್, ಸುಬನ್ ಸಿರಿ, ಸಿಯಾಂಗ್, ಲೋಹಿತ್ ಮತ್ತು ಟಿರಾಪ್, ಕಾಮ್ಪು, ಶಿವೂಮ್, ದಿಬಾಂಗ್, ನೋಹಾ – ದಿಹಾಂಗ್, ಕಾಮ್ಪಾಂಗ್ ಮುಂತಾದವು ಪ್ರಮುಖ ನದಿಗಳು.

ಮಣ್ಣಿನ ಪ್ರಕಾರಗಳು: ಈ ರಾಜ್ಯದ ಪರ್ವತ ಪ್ರದೇಶಗಳು ದಟ್ಟ ಅರಣ್ಯಗಳನ್ನು ಹೊಂದಿದ್ದು, ಹೆಚ್ಚು ಮಳೆಯನ್ನು ಪಡೆಯುವುದರಿಂದ ವಿಭಿನ್ನ ರೀತಿಯ ಮಣ್ಣುಗಳನ್ನು ಹೊಂದಿದೆ. ಇಲ್ಲಿ ನಾಲ್ಕು ವಿಧದ ಮಣ್ಣುಗಳನ್ನು ಕಾಣಬಹುದು: 1) ಅರಣ್ಯ ಮಣ್ಣು: ಇದು ಎತ್ತರವಾದ ಬೆಟ್ಟ ಹಾಗೂ ಪರ್ವತ ಪ್ರದೇಶಗಳಲ್ಲಿ ಕಂಡು ಬರುತ್ತದೆ. ತೆಳು ಕಪ್ಪು ಬಣ್ಣದಿಂದ ಕೂಡಿದ್ದು, ಸಾಕಷ್ಟು ಸಾರಜನಕವನ್ನು ಹೊಂದಿದೆ. ಮರದ ಎಲೆಗಳು ಮಣ್ಣಿನಲ್ಲಿ ಕೊಳೆತು ಹ್ಯೂಮಸ್ ಅಥವಾ ಜೈವಿಕಾಂಶದ ಪ್ರಮಾಣ ಅಧಿಕವಾಗಿದೆ. 2) ಜೌಗು ಮಣ್ಣು: ಬೆಟ್ಟಗಳಿಂದ ಕೂಡಿದ ಇಳಿಜಾರಿನ ತಗ್ಗು ಪ್ರದೇಶಗಳಲ್ಲಿ ಕಂಡು ಬರುವ ಮಣ್ಣನ್ನು ಜೌಗು ಮಣ್ಣು ಎನ್ನಲಾಗುತ್ತದೆ. ಇಲ್ಲಿ ಸದಾ ನೀರಿನ ಜಿನುಗುವಿಕೆ ಅಧಿಕ ಪ್ರಮಾಣದಲ್ಲಿದ್ದು, ಜೈವಿಕಾಂಶ ಹೆಚ್ಚಾಗಿರುತ್ತದೆ. ಬತ್ತ ಹಾಗೂ ಅಧಿಕ ನೀರಿನ ಆಶ್ರಯದಲ್ಲಿ ಬೆಳೆಯುವ ಇತರೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. 3) ಜಂಬಿಟ್ಟಿಗೆ ಮಣ್ಣು: ಈ ರಾಜ್ಯದಲ್ಲಿ ಮಳೆ ಯಥೇಚ್ಛವಾಗಿ ಬೀಳುವುದರಿಂದ ಇಳಿಜಾರು ಪ್ರದೇಶಗಳಲ್ಲಿ ಕಂಡು ಬರುವ ಸಿಲಿಕ ಮತ್ತು ಲವಣಾಂಶಗಳೆಲ್ಲವೂ ಕರಗಿ ಮತ್ತು ತೊಳೆಸಲ್ಪಟ್ಟು ಕೇವಲ ಅಲ್ಯೂಮಿನಿಯಂ ಮತ್ತು ಕಬ್ಬಿಣಾಂಶಗಳು ಹಾಗೆಯೇ ಉಳಿದಿರುತ್ತವೆ. ಈ ಮಣ್ಣನ್ನೇ ಜಂಬಿಟ್ಟಿಗೆ ಮಣ್ಣು ಎನ್ನುವರು. ಇದರಲ್ಲಿ ತರಕಾರಿ ಹಾಗೂ ಇತರೆ ಕೆಲವು ತೋಟಗಾರಿಕಾ (ಹಣ್ಣು) ಬೆಳೆಗಳನ್ನು ಬೆಳೆಯಲಾಗುತ್ತಿದೆ. 4) ಮೆಕ್ಕಲು ಮಣ್ಣು: ಪರ್ವತದ ಎತ್ತರ ಪ್ರದೇಶ ಹಾಗೂ ಇಳಿಜಾರುಗಳಿಂದ ಅಧಿಕ ಮಳೆಯ ನೀರು ಹಾಗೂ ನದಿಗಳಿಂದ ಸಾಗಿಸಲ್ಪಟ್ಟು, ನದಿ ಕಣಿವೆಗಳ ತಗ್ಗುಪ್ರದೇಶಗಳಲ್ಲಿ



ಸಂಚಯಿಸಲ್ಪಟ್ಟಿರುವ ಮಣ್ಣನ್ನೇ ಮೆಕ್ಕಲು ಮಣ್ಣು ಎನ್ನುವರು. ಇದು ಹೆಚ್ಚು ಫಲವತ್ತಾಗಿದ್ದು ಬತ್ತ ಹಾಗೂ ಗೋದಿಗಳಂತಹ ಪ್ರಮುಖ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತಿದೆ.

ವಾಯುಗುಣ: ಎತ್ತರಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಈ ರಾಜ್ಯದ ದಕ್ಷಿಣ ಭಾಗ ಉಷ್ಣ ಮತ್ತು ತೇವಯುತ ಉಪ ಉಷ್ಣವಲಯ ವಾಯುಗುಣವನ್ನು ಹೊಂದಿದೆ. ಕೇಂದ್ರ ಭಾಗ ತಂಪಾದ ವಾಯುಗುಣವನ್ನು ಹೊಂದಿದ್ದರೆ, ಇದರ ಉತ್ತರ ಭಾಗ ಆಲ್ಪೈನ್ ವಾಯುಗುಣವನ್ನು ಹೊಂದಿದೆ. ಮಳೆ ಅಸಮಾನವಾಗಿ ಹಂಚಿಕೆಯಾಗಿದ್ದು, ವರ್ಷವಿಡೀ ಮಳೆ ಬೀಳುತ್ತದೆ. ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗಿನ ಅವಧಿ ಈ ರಾಜ್ಯದಲ್ಲಿನ ಅತಿ ತೇವಯುತ ಋತುವಾಗಿರುತ್ತದೆ. ಸೆಪ್ಟೆಂಬರ್ ತಿಂಗಳ ಮಧ್ಯ ಭಾಗದಿಂದ ಡಿಸೆಂಬರ್ ತಿಂಗಳ ಮಧ್ಯದವರೆಗೆ ಹಾಗೂ ಮಧ್ಯ ಮಾರ್ಚ್‌ನಿಂದ ಮಧ್ಯ ಜೂನ್‌ವರೆಗಿನ ಅವಧಿ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಲು ಒಳ್ಳೆಯ ಅವಧಿಯಾಗಿದ್ದು, ಆಗ ನಿರಭ್ರ ಆಕಾಶವಿರುವುದರ ಜೊತೆಗೆ ಉತ್ತಮ ಹವಾಗುಣವಿರುತ್ತದೆ. ಇಲ್ಲಿ ಮಳೆ 100 – 575 ಸೆಂಮೀವರೆಗೆ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ.

ಸಸ್ಯವರ್ಗ: ಇದು ಶ್ರೀಮಂತವಾದ ಸಸ್ಯ ಸಂಪತ್ತನ್ನು ಹೊಂದಿದ್ದು, ಸು. 5000 ಜಾತಿಯ ಮರಗಿಡಗಳಿವೆ. ಇದರಲ್ಲಿ ಸು. 500 ಅಪರೂಪದ ಸಸ್ಯ ಸಂಕುಲಗಳಿವೆ. ಇಲ್ಲಿನ ಸ್ವಾಭಾವಿಕ ಸಸ್ಯ ವರ್ಗ ಈ ರಾಜ್ಯದ ಮಳೆಯ ಹಂಚಿಕೆ, ಎತ್ತರ ಮತ್ತು ಮಣ್ಣಿನ ಲಕ್ಷಣಗಳನ್ನು ಆಧರಿಸಿದಂತೆ ಹಂಚಿಕೆಗೊಂಡಿದೆ. ಈ ರಾಜ್ಯದಲ್ಲಿ ಕಂಡು ಬರುವ ಸಸ್ಯವರ್ಗವನ್ನು ಅಗಲ ಎಲೆಯುಳ್ಳ ಐದು ವಿಧದ ಅರಣ್ಯಗಳಾಗಿ ವಿಂಗಡಿಸಲಾಗಿದೆ: 1) ಉಷ್ಣ ವಲಯದ ಅರಣ್ಯಗಳು 2) ಉಪ ಉಷ್ಣವಲಯದ ಅರಣ್ಯಗಳು 3) ಪೈನ್ ಅರಣ್ಯಗಳು 4) ಸಮಶೀತೋಷ್ಣ ವಲಯದ ಅರಣ್ಯಗಳು 5) ಆಲ್ಪೈನ್ ಅರಣ್ಯಗಳು. ಈ ಮೇಲಿನ ಎಲ್ಲಾ ವಿಧದ ಅರಣ್ಯಗಳಲ್ಲೂ ಬಿದಿರು ಮತ್ತು ಇತರೆ ಹುಲ್ಲುಜಾತಿಯ ಸಸ್ಯ ವರ್ಗಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಈ ರಾಜ್ಯದ ಕಣಿವೆಗಳ ತಗ್ಗು ಪ್ರದೇಶಗಳು ಉಷ್ಣವಲಯದ ಅರಣ್ಯವನ್ನು ಹೊಂದಿದ್ದು ದಟ್ಟವಾದ ಹಾಗೂ ಗಟ್ಟಿ ಜಾತಿಯ ಮರಗಳು ಕಂಡುಬರುತ್ತವೆ. ಪೈನ್ ಅರಣ್ಯಗಳು ಬೆಟ್ಟಮಯ ಪ್ರದೇಶಗಳಲ್ಲಿದ್ದು, ಮೊನಚಾದ ಎಲೆಗಳನ್ನು ಒಳಗೊಂಡಿರುವ ಮೃದು ಮರಗಳಿಂದ ಕೂಡಿವೆ. ಆಲ್ಪೈನ್ ಅರಣ್ಯಗಳು ಪರ್ವತದ ಅತಿ ಉನ್ನತ ಅಥವಾ ಎತ್ತರ ಪ್ರದೇಶಗಳಲ್ಲಿ ಕಂಡು ಬರುತ್ತಿದ್ದು, ಕೇವಲ ಹುಲ್ಲುಜಾತಿಗೆ ಸೇರಿದ ಸಸ್ಯವರ್ಗದಿಂದ ಕೂಡಿವೆ.

ಪ್ರಾಣಿವರ್ಗ: ಈ ರಾಜ್ಯ ವನ್ಯಪ್ರಾಣಿ ಸಂಕುಲ ಹೊಂದಿರುವ ಭಾರತದ ರಾಜ್ಯಗಳಲ್ಲಿ ಶ್ರೀಮಂತವಾದದ್ದು. ಇಲ್ಲಿ ವಿಶಿಷ್ಟ ಹಾಗೂ ವಿವಿಧ ಜಾತಿಯ 85 ಪ್ರಾಣಿ ಸಂಕುಲಗಳು ಕಂಡುಬರುತ್ತವೆ. ಇಲ್ಲಿನ ಶಿವಾಲಿಕ್ ಮತ್ತು ಮೈದಾನದ ಅಂಚುಗಳಲ್ಲಿ ಆನೆ, ಕಾಡೆಮ್ಮೆಗಳು ಕಂಡುಬರುತ್ತವೆ. ಮಿಥುನ್, ಹುಲಿ, ಚಿರತೆ, ಬಿಳಿಬಣ್ಣದ ಗಿಬ್ಬನ್, ಹಿಮಜಿಂಕೆ, ಕೆಂಪು ಬಣ್ಣದ ಚಿರತೆ, ಹಿಮಾಲಯದ ಕಪ್ಪು ಕರಡಿ ಮುಂತಾದ ಪ್ರಾಣಿಗಳು ಇಲ್ಲಿ ವಾಸಿಸುತ್ತಿವೆ. ಇದಲ್ಲದೇ 500 ವಿವಿಧ ಜಾತಿಯ ಪಕ್ಷಿಗಳು ಇಲ್ಲಿ ವಾಸಿಸುತ್ತಿದ್ದು, ಭಾರತೀಯ ಹಾರ್ನ್‌ಬಿಲ್ ಜಾತಿಯ ಪಕ್ಷಿಗಳಿಗೆ ಈ ರಾಜ್ಯ ತವರಿದ್ದಂತೆ. ಬಿಳಿ ರೆಕ್ಕೆಗಳಿರುವ ಮರದ ಬಾತುಕೋಳಿ, ಹಸುರು ಪಾರಿವಾಳ, ಬಂಗಾಲದ ಫ್ಲೋರಿಕಾನ್, ಟಿಮ್ಮಿನಿಕ್ಸ್, ಸ್ಕ್ಯಾಟರ್ ಮಾನಾರ್ ಟಿಗೋಡಾನ್‌ಗಳಂತಹ ಪಕ್ಷಿಗಳು ಇಲ್ಲಿವೆ. ಇವುಗಳ ಸಂರಕ್ಷಣೆಗಾಗಿ ಹಲವು ವನ್ಯಜೀವಿ ಸಂರಕ್ಷಣಾ ಹಾಗೂ ಪಕ್ಷಿಧಾಮಗಳು ಈ ರಾಜ್ಯದಲ್ಲಿ ಸ್ಥಾಪನೆಗೊಂಡಿವೆ; ಇಲ್ಲಿ ಎರಡು ರಾಷ್ಟ್ರೀಯ ಉದ್ಯಾನವನಗಳಾದ ನಾಮ್ ದಫ್ಪಾ ಮತ್ತು ಮೌಲಿಂಗ್‌ಗಳು ಹಾಗೂ ಈ ರಾಜ್ಯದ ಅರಣ್ಯ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ 8 ವನ್ಯಜೀವಿ ಸಂರಕ್ಷಣಾ ಧಾಮಗಳಾದ ಪಾಕಾಯ್, ಇಟಾನಗರ, ಡೇಯಿಂಗ್ ಇರಿಂಗ್, ಮೆಹಾಪೋಕಾನೆ, ಈಗಲ್ಸ್ ನೆಸ್ಟ್, ಕಮ್ಲಾಂಗ್ ಮತ್ತು ದಿಬಾಂಗ್‌ಗಳು ಇವೆ.

ಕೃಷಿ: ಈ ರಾಜ್ಯದಲ್ಲಿ ವರ್ಗಾವಣೆ ಬೇಸಾಯ ಕ್ರಮ (ಜೂಮಿಂಗ್) ಜಾರಿಯಲ್ಲಿದೆ. ಒಗ್ಗೂಡಿ ಕೃಷಿ ಮಾಡುವ ಪದ್ಧತಿ ಮುಖ್ಯಸ್ಥಾನವನ್ನು ಪಡೆದುಕೊಂಡಿದೆ. ಈ ರಾಜ್ಯದ ಬಹುತೇಕ ಜನ ಈ ಪದ್ಧತಿಯನ್ನು ಪ್ರಾಚೀನ ಕಾಲದಿಂದಲೂ ಅನುಸರಿಸುತ್ತಾ ಬಂದಿದ್ದಾರೆ. ಜೂಮಿಂಗ್ ಬೇಸಾಯ ಪದ್ಧತಿಯಲ್ಲಿ (ಕುಂಬ್ರಿ) ಅಲ್ಲಲ್ಲಿ ಅರಣ್ಯದಲ್ಲಿರುವ ಮರಗಳನ್ನು ಕಡಿದು ಕೆಲವು ವರ್ಷಗಳ ಅನಂತರ ಬೆಂಕಿಯಲ್ಲಿ ಸುಟ್ಟು ಹಾಕಿ ಆ ಪ್ರದೇಶವನ್ನು ನೇಗಿಲಿನಂತಹ ಉಪಕರಣದಿಂದ ಉಳುಮೆ ಮಾಡಿ ನೇಗಿಲ ಹಿಂದೆ ಬಿತ್ತನೆ ಬೀಜಗಳನ್ನು ಬಿತ್ತಿ, ಕನಿಷ್ಟ ಪಕ್ಷ ನಾಲ್ಕು ಭಾರಿ ಕಳೆ ತೆಗೆದು, ಬೆಳೆಯುತ್ತಿರುವ ಬೆಳೆಯನ್ನು ಕಾಡು ಪ್ರಾಣಿಗಳು ಮತ್ತು ಪಕ್ಷಿಗಳಿಂದ ಕಾಯುವ ಹಾಗೂ ಸಂರಕ್ಷಿಸುವುದರ ಮೂಲಕ ಅಳಿದುಳಿದ ಮಿಶ್ರ ಫಸಲನ್ನು ಪಡೆದುಕೊಳ್ಳುತ್ತಾರೆ. ಇಲ್ಲಿ ಕೆಲಸಗಾರರು ಪುರುಷ, ಮಹಿಳೆ ಹಾಗೂ ಮಕ್ಕಳು ಸು. 5–6 ತಿಂಗಳುಗಳ ಕಾಲ ಇದಕ್ಕಾಗಿ ಶ್ರಮವಹಿಸುವರು. ಬತ್ತ, ತೃಣ ಧಾನ್ಯಗಳು, ಗೋದಿ ಮತ್ತು ಮೆಕ್ಕೆಜೋಳ ಇಲ್ಲಿನ ಪ್ರಮುಖ ಬೆಳೆಗಳು. ಆಲೂಗಡ್ಡೆ, ಬದನೆ, ಶುಂಠಿ, ಮೆಣಸಿನಕಾಯಿ, ಕುಂಬಳ, ಸೌತೆ, ಅನಾನಸ್, ಕಿತ್ತಳೆ, ನಿಂಬೆ ಪರಂಗಿ, ಬಾಳೆ ಇತ್ಯಾದಿ ತರಕಾರಿ ಮತ್ತು ಹಣ್ಣುಗಳನ್ನು ಇಲ್ಲಿ ಬೆಳೆಯಲಾಗುತ್ತಿದೆ.

ನೈಸರ್ಗಿಕ ಸಂಪನ್ಮೂಲಗಳು: ಈ ರಾಜ್ಯ ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಹೊಂದಿದೆ. ಕಲ್ಲಿದ್ದಲು, ಸುಣ್ಣಕಲ್ಲು ಕಬ್ಬಿಣದ ಅದಿರು, ಗ್ರಾಫೈಟ್, ಬೆಣಚು ಶಿಲೆ, ಅಭ್ರಕ, ತಾಮ್ರ, ಡಾಲೋಮೈಟ್, ಕಚ್ಚಾ ತೈಲ, ಸ್ವಾಭಾವಿಕ ಅನಿಲ ಹಾಗೂ ಅಮೃತ ಶಿಲೆಗಳಂತಹ ಖನಿಜ ಸಂಪನ್ಮೂಲಗಳು ಈ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಹಂಚಿಕೆಯಾಗಿವೆ. ಇದರ ಜೊತೆಗೆ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಲ್ಲ ಸಂಭಾವ್ಯ ಪ್ರದೇಶವಾಗಿದೆ. ಇಲ್ಲಿ 1991 ರಲ್ಲಿ ಅರುಣಾಚಲ ಪ್ರದೇಶ ಖನಿಜ ಅಭಿವೃದ್ಧಿ ಮತ್ತು ವಾಣಿಜ್ಯ ಕಾರ್ಪೋರೇಷನ್ ಲಿಮಿಟೆಡ್ ಅರಂಭವಾಯಿತು. ನಾಮ್‌ಚಿಕ್ ನಾಮ್‌ಹುಕ್ ಪ್ರದೇಶಗಳಲ್ಲಿನ ಕಲ್ಲಿದ್ದಲು ಕ್ಷೇತ್ರಗಳು ಈ ಸಂಸ್ಥೆಯ ಅಧೀನದಲ್ಲಿವೆ.

ಕೈಗಾರಿಕೆಗಳು: ಈ ರಾಜ್ಯ ಹೊಂದಿರುವ ಅರಣ್ಯ ಸಂಪನ್ಮೂಲದ ಆಧಾರದ ಮೇಲೆ ಹಲವಾರು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಹೊಂದಿದೆ. ಇಲ್ಲಿ ಸಿಮೆಂಟ್ ಉತ್ಪಾದನ ಸ್ಥಾವರಗಳೂ ಹಣ್ಣು ಸಂರಕ್ಷಣಾ ಘಟಕಗಳೂ ತಲೆಯೆತ್ತಿವೆ. ಅಸಂಖ್ಯಾತ ಕರಕುಶಲ ಉತ್ಪನ್ನ ತರಬೇತಿ ಕೇಂದ್ರಗಳಿವೆ. ಇಲ್ಲಿನ ಕೈಮಗ್ಗ ಕೈಗಾರಿಕೆಗಳು ಅತ್ಯುತ್ತಮ ಪ್ರಗತಿಯನ್ನು ಸಾಧಿಸಿವೆ. ಇಲ್ಲಿನ ಜನ ಬೆತ್ತ ಮತ್ತು ಬಿದಿರಿನ ಬುಟ್ಟಿಗಳನ್ನು ಹೆಣೆಯುವುದರಲ್ಲಿ ಪ್ರಾವೀಣ್ಯತೆ ಪಡೆದಿದ್ದಾರೆ. ಮರದ ಕೆತ್ತನೆ, ಕಮ್ಮಾರಿಕೆಗಳಂತಹ ವೃತ್ತಿಗಳೂ ಕೆಲವು ಹಳ್ಳಿಗಳಲ್ಲಿ ಕಂಡು ಬರುತ್ತವೆ. ಗುದ್ದಲಿ, ಹಾರೆ ಇತ್ಯಾದಿ ಕೃಷಿ ಯೋಗ್ಯ ಹಾಗೂ ದೈನಂದಿನ ಚಟುವಟಿಕೆಗಳಿಗೆ ಅಗತ್ಯವೆನಿಸುವ ಉಪಕರಣಗಳನ್ನೂ ತಯಾರಿಸಲಾಗುತ್ತದೆ. ಇಲ್ಲಿ ಸಣ್ಣ ಪ್ರಮಾಣದ ಗುಡಿ ಕೈಗಾರಿಕೆಗಳು, ಪ್ಲೈವುಡ್ ಹಾಗೂ ಮೇಣದ ಬತ್ತಿ ತಯಾರಿಕಾ ಘಟಕಗಳೂ ಸ್ಥಾಪನೆಗೊಂಡಿವೆ.

ಸಾರಿಗೆ ಸಂಪರ್ಕ: ಈ ರಾಜ್ಯ ಉತ್ತಮ ರಸ್ತೆ ರೈಲ್ವೆ ಮತ್ತು ವಾಯುಸಾರಿಗೆ ಸಂಪರ್ಕಗಳನ್ನು ಹೊಂದಿದೆ. ರಾಜ್ಯ ಸಾರಿಗೆ ಸಂಸ್ಥೆ ಕ್ರಮಬದ್ಧವಾಗಿ ಹಾಗೂ ನಿರಂತರವಾಗಿ ರಾಜ್ಯದ ವಿವಿಧ ಪ್ರದೇಶಗಳ ನಡುವೆ ಸಂಪರ್ಕವನ್ನು ಕಲ್ಪಿಸುತ್ತಿರುವುದರ ಜೊತೆಗೆ ನೆರೆ ರಾಜ್ಯಗಳೊಡನೆ ಸಂಪರ್ಕವನ್ನು ಕಲ್ಪಿಸಿಕೊಟ್ಟಿದೆ. ನಾಹರ್‌ಲಗೂನ್ ಮಾರ್ಗವಾಗಿ ಉತ್ತರ ಲಖಿಂಪುರ ಮತ್ತು ಇಟಾನಗರಗಳ ನಡುವೆ ನೇರ ಸಾರಿಗೆ ಸೇವೆಯನ್ನು ಕಲ್ಪಿಸಲಾಗಿದೆ. ಪ್ರತಿ ನಿತ್ಯವೂ ಇಟಾನಗರದಿಂದ 429 ಕಿಮೀ ದೂರದಲ್ಲಿರುವ ಗುವಾಹಟಿಗೆ ಬಸ್ ಸಂಪರ್ಕವಿದೆ. ಇಟಾನಗರದಿಂದ 33 ಕಿಮೀ ಹಾಗೂ ನಹಾರ್ ಲಗೂನ್‌ನಿಂದ 23 ಕಿಮೀ ದೂರದಲ್ಲಿರುವ ಅಸ್ಸಾಮಿನ ಹಾರ್ಮುಟಿ ರೈಲ್ವೆ ನಿಲ್ದಾಣ ಈ ರಾಜ್ಯಕ್ಕೆ ಹತ್ತಿರದ ರೈಲು ನಿಲ್ದಾಣ. ಆದರೂ ಇಟಾನಗರದಿಂದ 60 ಕಿಮೀ, ನಹರ್ ಲಗೂನ್‌ನಿಂದ 50 ಕಿಮೀ ದೂರದಲ್ಲಿರುವ ಅಸ್ಸಾಂ ರಾಜ್ಯದ ಉತ್ತರ ಲಖಿಂಪುರ ರೈಲ್ವೆ ನಿಲ್ದಾಣ, ಆಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ನಿಲ್ದಾಣ. ಇಟಾನಗರದಿಂದ 67 ಕಿಮೀ ನಹರ್‌ಲಗೂನ್‌ನಿಂದ 57 ಕಿಮೀ ದೂರದಲ್ಲಿರುವ ಅಸ್ಸಾಂನ ಉತ್ತರ ಲಖಿಂಪುರದಲ್ಲಿರುವ ಲಿಲಾಬಾರಿಯಲ್ಲಿಯ ವಿಮಾನ ನಿಲ್ದಾಣ ಅತಿ ಸಮೀಪವಾದದ್ದಾಗಿದೆ. ಇಂಡಿಯನ್ ಏರ್‌ಲೈನ್ಸ್ ಸಂಸ್ಥೆ ಪ್ರತೀ ಬುಧವಾರ, ಶುಕ್ರವಾರ ಮತ್ತು ಭಾನುವಾರಗಳಂದು ಕೋಲ್ಕತ್ತದಿಂದ ತೇಜ್‌ಪುರಗಳ ನಡುವೆ (ಇಟಾನಗರದಿಂದ 216 ಕಿಮೀ ದೂರದಲ್ಲಿರುವ) ನೇರ ವಿಮಾನ ಸೇವೆಯನ್ನೂ ಕಲ್ಪಿಸುತ್ತಿದೆ. ಗುವಾಹಟಿಯಿಂದ ನಹರ್ ಲಗೂನ್‌ಗಳ ನಡುವೆ ಹೆಲಿಕಾಪ್ಟರ್ ಸೇವೆಯನ್ನು ಕಲ್ಪಿಸಲಾಗಿದೆ.

ವಾಣಿಜ್ಯ: ರಾಜ್ಯದಲ್ಲಿ ಹಲವು ಪಟ್ಟಣ, ನಗರ ಮತ್ತು ವಾಣಿಜ್ಯ ಕೇಂದ್ರಗಳಿವೆ. ಸಾಮಾನ್ಯವಾಗಿ ಪ್ರವಾಸಿ ಕೇಂದ್ರಗಳು ವಾಣಿಜ್ಯ ಕೇಂದ್ರಗಳಾಗಿಯೂ ಕಂಡುಬರುತ್ತವೆ. ತವಾಂಗ್, ಬಾಮ್ದಿಲಾ, ಟಿಪಿ, ಇಟಾನಗರ, ಝಿರೋ, ದಾಪೋರಿಜೋ, ಅಲಾಂಗ್, ಪರಶುರಾಮ್‌ರಾಯ್ ಕುಂಡ್, ಮಲಿನಿತನ್, ಲಿಕ್‌ಬಾಲಿ, ನಾಮ್‌ಸಾಯ್, ಮಾಯಾವೋ ಮತ್ತು ಛಾಂಗ್‌ಲಾಂಗ್ ಇಲ್ಲಿನ ಪ್ರವಾಸಿ ತಾಣಗಳು. ಇಲ್ಲಿನ ಮರದ ಕೆತ್ತನೆ, ಬಿದಿರು ಮತ್ತು ಬೆತ್ತದ ಬುಟ್ಟಿ ಮತ್ತು ಕರಕುಶಲ ಉತ್ಪನ್ನಗಳು ಈ ರಾಜ್ಯವನ್ನು ವಾಣಿಜ್ಯಾತ್ಮಕವಾಗಿ ಖ್ಯಾತಿಗೊಳಿಸಿದೆ.

ರಾಜ್ಯದ ಜನಸಂಖ್ಯೆ 10,91,117. ಅದರಲ್ಲಿ 5,73,951 ಪುರುಷರು, 5,17,166 ಸ್ತ್ರೀಯರು. ಇಲ್ಲಿನ ಲಿಂಗಾನುಪಾತ ಪ್ರಮಾಣ 1000 ಪುರುಷರಿಗೆ 901 ಸ್ತ್ರೀಯರು. ಈ ರಾಜ್ಯದ ಸಾಕ್ಷರತೆಯ ಪ್ರಮಾಣ ಶೇ. 54.74. ಇಲ್ಲಿನ ಜನಸಂಖ್ಯೆ ಮುಖ್ಯವಾಗಿ ಬುಡಕಟ್ಟು ಸಮುದಾಯದವರಿಂದ ಕೂಡಿದೆ. ಈ ರಾಜ್ಯ 20 ಮುಖ್ಯ ಬುಡಕಟ್ಟು ಹಾಗೂ ಅವುಗಳ ಅಸಂಖ್ಯಾತ ಉಪಬುಡಕಟ್ಟುಗಳನ್ನು ಹೊಂದಿದೆ. ಮುಖ್ಯವಾದ ಬುಡಕಟ್ಟುಗಳೆಂದರೆ ಆದೀಸ್, ನಿಶಿ, ಅಪತಾನಿ, ಟಾಗಿನ್, ವಿಸ್ಮಿ, ಖಾಮ್ಟಿ, ನಾಯ್ಬಿ, ವಾಂಛೋ, ಟಾಂಗ್‌ಕಾ, ಸಿಂಗ್‌ಪ್ಹೋ, ಮೊನ್ಪಾ, ಕೆರ್ಡೂಕ್‌ಪೆನ್ ಮತ್ತು ಅಕಾಗಳು. ಇವರು ತಮ್ಮದೇ ಆದ ಭಾಷೆಗಳನ್ನು ಮಾತನಾಡುತ್ತಾರೆ. ಇಲ್ಲಿನ ಪ್ರಮುಖ ಭಾಷೆಗಳು ಮೋದ್ವಾ, ಅಪತಾನಿ, ಹಿಲ್ ಮಿರಿ, ಇಡು, ಟಾಗಿನ್ ಆದಿ, ಕಾಮ್ಟಿ, ಸಿಂಗ್‌ಪ್ಹೋ ಟಾಂಗ್‌ಸಾ, ನೋಕ್ಟೆ, ವಾಂಛೋ, ದಿಗಾರೂ, ಮಿಜಿ.

ಪ್ರಮುಖ ನಗರ ಮತ್ತು ಪಟ್ಟಣಗಳು: ಇಟಾನಗರ, ನಹರ್‌ಲಗೂನ್, ಟವಾಂಗ್, ಬಾಮ್ದಿಲಾ, ರೂಪ, ಭಾಲುಕ್ ಪೊಂಗ್, ಸೆಪ್ಪಾ, ದಾಪೋರಿಜೋ, ಅಲಾಂಗ್, ಪಾಸಿಘಾಟ್, ಯಿಂಗ್ ಕಿಯಾಂಗ್ ರೋಯಿಂಗ್, ತೇಝು, ನಾಮ್‌ಸಾಯ್, ಖೋನ್ಸಾ, ಅದಿನಿ, ಛಾಂಗ್‌ಲಾಂಗ್ ಮುಂತಾದವು. (ಎಚ್.ಎಚ್.)

**ಅರುಬ:** ಕೆರೆಬಿಯನ್ ಸಮುದ್ರದಲ್ಲಿನ ಒಂದು ದ್ವೀಪ. ವೆನಿಜ಼ುವೆಲಾ ಫಾಲ್ಕನ್ ರಾಜ್ಯದ ಪರಾಗುವಾನ ಪ್ರಸ್ಥಭೂಮಿಯ ಉತ್ತರಕ್ಕೆ 27 ಕಿಮೀ ದೂರದಲ್ಲಿದೆ. ಇದರ ರಾಜಧಾನಿ ಒರೆಂಜೆಸ್ಟಾಡ್. ಇದು $12^{0}19'$ ಉ.ಅ. ಮತ್ತು $70^{0}1'$ ಪ. ರೇ. ಸ್ಥಾನದಲ್ಲಿದೆ.

ಇಲ್ಲಿನ ಭೂ ಮೇಲ್ಮೈಲಕ್ಷಣ ಹೆಚ್ಚಾಗಿ ಸಮತಟ್ಟಾದ ಪ್ರದೇಶವಾಗಿದ್ದು ಯಾವುದೇ ಪ್ರಧಾನ ನದಿವ್ಯವಸ್ಥೆ ಕಂಡುಬರುವುದಿಲ್ಲ. ಇಲ್ಲಿನ ಕರಾವಳಿ ಪ್ರದೇಶಗಳು ಬಿಳುಪಾದ ಮರಳಿನಿಂದ ಕೂಡಿದ ಆಕರ್ಷಕ ಬೀಚ್‌ಗಳಿಗೆ ಹೆಸರುವಾಸಿಯಾಗಿದೆ. ಈ ದ್ವೀಪದ ಒಳನಾಡು ಪ್ರದೇಶದಲ್ಲಿ ಸ್ವಲ್ಪ ಏರು ತಗ್ಗುಗಳುಳ್ಳ ಬೆಟ್ಟಗಳು ಕಂಡುಬರುತ್ತವೆ. ಅವುಗಳಲ್ಲಿ ಪ್ರಧಾನವಾಗಿ ಯೊಯಿಬರ್ಗ್ 165 ಮೀ ಮತ್ತು ಮೌಂಟ್ ಜಮನೋಟ 188 ಮೀ ಎತ್ತರವಾಗಿದ್ದು, ಇವು ಈ ದ್ವೀಪದ ಅತೀ ಎತ್ತರದ ಬೆಟ್ಟಗಳು ಪ್ರಸ್ತುತ ಅರುಬ ನೆದರ್ಲೆಂಡ್ಸ್‌ನ ಸದಸ್ಯ ರಾಜ್ಯವಾಗಿ ಆಡಳಿತಾತ್ಮಕವಾಗಿ (ರಾಜಕೀಯವಾಗಿ) ಗುರುತಿಸಿಕೊಂಡಿದೆ. ಇಲ್ಲಿನ ಸ್ಥಳೀಯ ವಾಯುಗುಣ ಹಿತಕರವಾದ ಉಷ್ಣವಲಯದ ಸಾಗರೀಯ ಮಾದರಿಯದ್ದಾಗಿರುತ್ತದೆ.

ಉಷ್ಣಾಂಶ ವಿವಿಧ ಋತುಮಾನಗಳಲ್ಲಿ ಅತ್ಯಲ್ಪ ಪ್ರಮಾಣದ ಏರಿಳಿತಗಳನ್ನು ಹೊಂದಿರುವುದು. ಇಲ್ಲಿ ಸಾಮಾನ್ಯವಾಗಿ ಉಷ್ಣಾಂಶದ ಪ್ರಮಾಣ $28^{0}$ಸೆ. ಆಗಿದ್ದು ಅಟ್ಲಾಂಟಿಕ್ ಸಾಗರಗಳ ವಾಣಿಜ್ಯ ಮಾರುತಗಳ ಪ್ರಭಾವಕ್ಕೊಳಗಾಗಿರುವುದು ಕಂಡು ಬರುತ್ತದೆ. ವಾರ್ಷಿಕ ಮಳೆಯ ಪ್ರಮಾಣ ಬಹಳ ಕಡಿಮೆ, ಸು. 50 ಸೆಮೀ ಈ ದೇಶ ತನ್ನ ಒಟ್ಟು ವಾರ್ಷಿಕ ಆದಾಯದ ಅರ್ಧದಷ್ಟು ಆದಾಯವನ್ನು ಪ್ರವಾಸೋದ್ಯಮದಿಂದ ಗಳಿಸುವುದು. ಈ ಉದ್ಯಮ ಇಲ್ಲಿಯ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. (ವಿ.ಎಲ್.ಆರ್.)

**ಅರೆ ಅಥವಾ ಕಲ್ಲುಗಣಿ:** ನೆಲದಲ್ಲಿ ಹುದುಗಿರುವ ನೆಲಶಿಲೆಗಳನ್ನು ಬೇರ್ಪಡಿಸಿ ಹೊರತೆಗೆಯುವ ಸ್ಥಳ (ಕ್ವಾರಿ). ಹೀಗೆ ಬೇರ್ಪಡಿಸಿದ ಶಿಲೆಗಳನ್ನು ಕಟ್ಟಡಗಳ ನಿರ್ಮಾಣದಲ್ಲಿ ಹಾಸುಗಲ್ಲು, ಪಾಯಗಲ್ಲು, ಚಪ್ಪಡಿ ಕಲ್ಲು ಮುಂತಾದ ರೀತಿಯಲ್ಲಿ ಉಪಯೋಗಿಸುವರು.

ಅರೆಗಳಲ್ಲಿ ಎರಡು ವಿಧ : ಬಯಲು ಅರೆಗಳು (ಓಪನ್ ಕ್ವಾರೀಸ್); ನೆಲದ ಅಡಿಯಲ್ಲಿರುವ ಅರೆಗಳು (ಅಂಡರ್‌ಗ್ರೌಂಡ್ ಕ್ವಾರೀಸ್).

ಬಯಲು ಅರೆಗಳು: ಇವು ಸಾಮಾನ್ಯವಾಗಿ ಭೂಮಿಯ ಮಟ್ಟದ ಮೇಲೆಯೇ ಇರುವುವು. ಇವನ್ನು ಅಂತಸ್ತು ಅರೆಗಳೂ (ಷೆಲ್ಫ್ ಕ್ವಾರೀಸ್) ಎನ್ನಲೂಬಹುದು. ಮೇಲುಹೊದಿಕೆ ಇಲ್ಲದ ಈ ಶಿಲೆಗಳನ್ನು ಭೂಮಿಯ ಹೊರಮೈಯಿಂದಲೇ ತೋಡಿ ತೆಗೆಯುವರು.

ನೆಲದಡಿಯಲ್ಲಿರುವ ಅರೆಗಳು: ಇಲ್ಲಿ ಭೂಮಿಯೊಳಗಿರುವ ಬಂಡೆಗಳಿಂದ ಶಿಲೆಗಳನ್ನು ಸೀಳಿ ಹೊರಕ್ಕೆ ತೆಗೆಯಲಾಗುತ್ತದೆ.

ಅರೆಗಳ ಉತ್ಪನ್ನಗಳು : ಪ್ರಮಾಣಕಲ್ಲು (ಡೈಮನ್‌ಷನಲ್ ಸೈಜ್ ಸ್ಟೋನ್); ಜಲ್ಲಿಕಲ್ಲು (ಕ್ರಶ್‌ಡ್‌ಸ್ಟೋನ್); ಮುರಿದಕಲ್ಲು (ಬ್ರೋಕನ್ ಸ್ಟೋನ್). (ಜಿ.ಎಸ್.ಎ.)

**ಅರೇಬಿಯ:** ಏಷ್ಯದ ನೈರುತ್ಯ ಭಾಗದಲ್ಲಿ ಕೆಂಪುಸಮುದ್ರ ಮತ್ತು ಪರ್ಷಿಯನ್ ಕೊಲ್ಲಿಗಳ ಮಧ್ಯದಲ್ಲಿರುವ ಪರ್ಯಾಯದ್ವೀಪ. ಉತ್ತರ ಅಕ್ಷಾಂಶ $12^{0}45'$–$34^{0}50'$ ಪೂರ್ವ ರೇಖಾಂಶ $30^{0}30'$–$60^{0}$. ವಿಸ್ತೀರ್ಣ ಸು. 2560000 ಚ.ಕಿಮೀ. ಜನಸಂಖ್ಯೆ ಸು. 21 ಮಿಲಿಯನ್. ಹೆಚ್ಚಿನ ಪ್ರದೇಶ ಮರಳುಗಾಡು. ಕೆಲವು ಪ್ರದೇಶಗಳಲ್ಲಿ ಎತ್ತರವಾದ ಪರ್ವತಗಳಿದ್ದು ಮಳೆಯಾಗಲು ಸಹಾಯಕವಾಗಿವೆ. ಇಂಥ ಕೆಲವುಕಡೆ ಬೇಸಾಯ ನಡೆಯುತ್ತದೆ. ಉತ್ತರ ಅರೇಬಿಯದಲ್ಲಿ ಅನೇಕ ಅಲೆಮಾರಿ ಸಮುದಾಯಗಳಿದ್ದು ಕುರಿಕಾಯುವ ಉದ್ಯೋಗದಲ್ಲಿವೆ. ಇಲ್ಲಿ ಶ್ರೀಮಂತ ತೈಲನಿಕ್ಷೇಪಗಳಿದ್ದು ಅಮೆರಿಕ ಮತ್ತು ಯುರೋಪಿಯನ್ನರು ಇವುಗಳನ್ನು ಉಪಯೋಗಿಸಿಕೊಂಡಿದ್ದಾರೆ. (ಜಿ.ಎಸ್.ಎ.)

**ಅರೋರಾ ಬೆಳಕು:** ಅರೋರಾ ಒಂದು ವರ್ಣಮಯ ಪ್ರಭೆ, ಸೂರ್ಯನಿಂದ ಪ್ರವಹಿಸಿ ಬರುವ ವಿದ್ಯುದಾವಿಷ್ಟ ಕಣಗಳ ಧಾರೆಗೆ ಸೌರಮಾರುತವೆಂದು ಹೆಸರು. ಭೂಮೇಲ್ಮೈಯಿಂದ ಭೂತ್ರಿಜ್ಯದ ಎಷ್ಟೋಪಟ್ಟು ದೂರದಲ್ಲಿರುವ ಕೆಲಬಿಂದುಗಳಲ್ಲಿ ಭೂಕಾಂತ ಕ್ಷೇತ್ರವನ್ನು ಸೌರಮಾರುತದಲ್ಲಿನ ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳ ಧಾರೆಗಳು ವಿಕೃತಗೊಳಿಸುತ್ತವೆ. ಇದರಿಂದ ವಾಯುಮಂಡಲದಲ್ಲಿರುವ ಪರಮಾಣುಗಳು ಉದ್ರೇಕಗೊಳ್ಳುತ್ತವೆ. ವಿವಿಧ ಅನಿಲಗಳ ಉದ್ರೇಕಿತ ಪರಮಾಣುಗಳು ವಿವಿಧ ಬಣ್ಣದ ಬೆಳಕನ್ನು ಉತ್ಸರ್ಜಿಸುತ್ತವೆ. ಅರೋರಾ ಪ್ರಭೆಯಲ್ಲಿರುವ ಹಸುರು ಬಣ್ಣಕ್ಕೆ ಕಾರಣ ಆಕ್ಸಿಜನ್ ಪರಮಾಣುಗಳು. ನೈಟ್ರೋಜನ್ ಮತ್ತು ಆಕ್ಸಿಜನ್‌ಗಳೆರಡೂ ಕೆಂಪು ಬೆಳಕನ್ನು ಉತ್ಸರ್ಜಿಸುತ್ತವೆ. ಭೂಮಿಯ ಉತ್ತರ ಧ್ರುವದ ಸಮೀಪದ ಅಕ್ಷಾಂಶಗಳಲ್ಲಿನ ಧ್ರುವ ಪ್ರಭೆಗೆ ಅರೋರಾ ಬೋರಿಯಾಲಿಸ್ ಎಂದು ಹೆಸರು. ದಕ್ಷಿಣ ಧ್ರುವದ ಸಮೀಪದಲ್ಲಿಯೂ ಇಂತಹದೇ ಪ್ರಭೆ ಗೋಚರಿಸುತ್ತದೆ. ಇದಕ್ಕೆ ಅರೋರಾ ಆಸ್ಟ್ರಾಲಿಸ್ ಎಂದು ಹೆಸರು. (ಎ.ಪಿ.)

**ಅರ್ಕಾವತಿ:** ಕರ್ನಾಟಕದ ಒಂದು ನದಿ. ಕಾವೇರಿಯ ಮುಖ್ಯ ಉಪನದಿಗಳಲ್ಲೊಂದು. ನಂದಿದುರ್ಗದಲ್ಲಿ ಹುಟ್ಟಿ ಬೆಂಗಳೂರು ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. 192 ಕಿಮೀ ಉದ್ದವಿದೆ. ನೆಲಮಂಗಲದ ದಕ್ಷಿಣದ ಕಡೆಯಿಂದ ಹರಿದುಬರುವ ಕುಮುದ್ವತಿ, ಬೆಂಗಳೂರಿನ ಕಡೆಯಿಂದ ಬರುವ ವೃಷಭಾವತಿಗಳು ಇದರ ಉಪನದಿಗಳು. ಸಾವನದುರ್ಗ, ರಾಮಗಿರಿ, ಶಿವಗಿರಿ ಮೊದಲಾದ ಬೆಟ್ಟಗುಡ್ಡ ಪ್ರದೇಶಗಳ ಮೂಲಕ ದಕ್ಷಿಣಕ್ಕೆ ಹರಿಯುವುದರಿಂದ ನೀರಾವರಿಗೆ ಹೆಚ್ಚು ಪ್ರಯೋಜನಕಾರಿಯಾಗಿಲ್ಲ. ಆದರೂ ಮೇಲ್ಗಣಿವೆಯಲ್ಲಿ ಹೆಸರುಘಟ್ಟ ಮೊದಲಾದ ದೊಡ್ಡ ಕೆರೆಗಳಿಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೊಡ್ಡಬಳ್ಳಾಪುರ, ಕಾಕೋಳು ಮುಂತಾದ ಕೆರೆಗಳಿಗೂ ನೀರನ್ನೊದಗಿಸುತ್ತದೆ. ಮುಂದುವರಿದು ನೆಲಮಂಗಲ, ಮಾಗಡಿ, ರಾಮನಗರ ಮತ್ತು ಕನಕಪುರ ತಾಲ್ಲೂಕುಗಳ ಮೂಲಕ ಹರಿದು ಕನಕಪುರದ ಹತ್ತಿರ ಸಂಗಮದ ಬಳಿ ಕಾವೇರಿಯನ್ನು ಸೇರುತ್ತದೆ. ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿರುವುದರಿಂದ ಬೇಸಗೆಯಲ್ಲಿ ಬಹುಮಟ್ಟಿಗೆ ಇದರ ಪಾತ್ರ ಒಣ ಮರಳಿನಿಂದ ತುಂಬಿರುತ್ತದೆ. ಆದರೂ ಸಂಪೂರ್ಣವಾಗಿ ಬತ್ತಿ ಹೋಗದೆ ನೀರು ಸಣ್ಣ ಪ್ರಮಾಣದಲ್ಲಿ ಹರಿಯುತ್ತಿರುತ್ತದೆ. ಮಳೆಗಾಲದಲ್ಲಿ ಅನೇಕ ಉಪನದಿಗಳ ನೀರು ಒದಗುವುದರಿಂದ ತುಂಬಿ ಹರಿಯುತ್ತದೆ. ಒಮ್ಮೊಮ್ಮೆ ಪ್ರವಾಹಗಳೂ ಕಾಣಿಸಿಕೊಳ್ಳುತ್ತವೆ. ಪ್ರವಾಹದ ಚಲನೆ 3500 ರಿಂದ 5000 ಕ್ಯೂಸೆಕ್ಸ್‌ವರೆಗಿರುವುದು. ನೆಲಮಂಗಲ, ಮಾಗಡಿ ಮತ್ತು ರಾಮನಗರಗಳಿಂದ ಬೆಂಗಳೂರಿಗೆ ಹೋಗುವ ಮಾರ್ಗಗಳಲ್ಲಿ ನದಿಗೆ ಅಡ್ಡಲಾಗಿ ದೊಡ್ಡ ಸೇತುವೆಗಳನ್ನು ನಿರ್ಮಿಸಲಾಗಿದೆ. ಈಚೆಗೆ ಇದರ ನೀರನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲು ಯೋಜನಾರೂಪವಾದ ಪ್ರಯತ್ನ ನಡೆಯುತ್ತಿದೆ. (ಎ.ಕೆ.)

**ಅರ್ಕೋಣಂ:** ತಮಿಳುನಾಡು ರಾಜ್ಯದ ಉತ್ತರ ಆರ್ಕಾಟ್ ಜಿಲ್ಲೆಯ ವಾಲಾಜಪೇಟೆ ತಾಲ್ಲೂಕಿನ ಒಂದು ವಾಣಿಜ್ಯ ಕೇಂದ್ರ. ಇದು $13^{0}5$ದಿ ಉ. ಅಕ್ಷಾಂಶ $79^{0}40'$ ಪೂ. ರೇಖಾಂಶದ ಮೇಲಿದೆ. ವಿಸ್ತೀರ್ಣ 6.48 ಚ.ಕಿಮೀ. ತಮಿಳುನಾಡಿನ ಮುಖ್ಯ ಕೇಂದ್ರವಾಗಿದೆ. ದಕ್ಷಿಣ ರೈಲ್ವೆಯ ವಾಯವ್ಯ ಮತ್ತು ನೈರುತ್ಯ ಶಾಖೆಗಳು ಅರ್ಕೋಣಂ ಜಂಕ್ಷನ್ನಿನಲ್ಲಿ ಸೇರುವುದರಿಂದ ತಮಿಳುನಾಡು ಮತ್ತು ಕರ್ನಾಟಕಕ್ಕೆ ಸಂಪರ್ಕವನ್ನು ಕಲ್ಪಿಸಲಾಗಿದೆ. (ಎ.ಆರ್.)

**ಅರ್ಜೆಂಟೈನ:** ದಕ್ಷಿಣ ಅಮೆರಿಕದ ಮುಖ್ಯ ರಾಷ್ಟ್ರಗಳಲ್ಲಿ ಒಂದು ($35^{0}$–$55^{0}$ ದಕ್ಷಿಣ ಅಕ್ಷಾಂಶ, $54^{0}.22'$–$73^{0}.30'$ ಪಶ್ಚಿಮ ರೇಖಾಂಶ). ವಿಸ್ತಾರ 2,780,000 ಚ.ಕಿಮೀ. ಉತ್ತರಕ್ಕೆ ಸ್ವಲ್ಪ ವಿಶಾಲವಾಗಿದ್ದು ದಕ್ಷಿಣಕ್ಕೆ ಹೋದಂತೆ ಇಕ್ಕಟ್ಟಾಗುತ್ತ ಹೋಗುತ್ತದೆ. ಜನಸಂಖ್ಯೆ 39,921,833 (2002). ಇದರ ರಾಜಧಾನಿ ಬ್ಯೂನೆಸ್ ಐರಸ್. ಜನಸಂಖ್ಯೆ 12,431,000 (2002). ಶೇ. 89 ಜನ ನಗರಗಳಲ್ಲಿ ವಾಸಿಸುತ್ತಾರೆ. ಸಾಕ್ಷರರ ಪ್ರಮಾಣ ಶೇ. 87. ಕೃಷಿಯಲ್ಲಿ ತೊಡಗಿದವರ ಸಂಖ್ಯೆ ಶೇ. 25. ಆದರೂ ಇದು ಕೃಷಿ ಪ್ರಧಾನ ರಾಷ್ಟ್ರ ಇಲ್ಲಿನ ನಾಣ್ಯ ಪೆಸೊ. ಮುಖ್ಯ ಬೆಳೆಗಳು ಗೋದಿ, ಮೆಕ್ಕೆಜೋಳ, ರೈ, ಓಟ್ಸ್ ಮತ್ತು ಅಗಸೆನಾರು.

ಈ ದೇಶದ ಪಶ್ಚಿಮಕ್ಕೆ ಆಂಡೀಸ್ ಪರ್ವತ ಉತ್ತರ ದಕ್ಷಿಣವಾಗಿ ಹಬ್ಬಿದೆ. ಬಹಳ ಎತ್ತರವಾಗಿರುವುದರಿಂದ ಹಿಮಾವೃತವಾಗಿರುತ್ತದೆ. ಉತ್ತರ ಭಾಗದಲ್ಲಿ ಅರಣ್ಯ ಪ್ರದೇಶ ಹಬ್ಬಿದೆ. ನೈಋತ್ಯಕ್ಕೆ ಫಲವತ್ತಾದ ಪಂಪಾಸ್ ಹುಲ್ಲುಗಾವಲು ಹಾಗೂ ದಕ್ಷಿಣಕ್ಕೆ ಮರುಭೂಮಿ ಇದೆ. 1580ರಲ್ಲಿ ಸ್ಪೇನ್ ದೇಶದವರು ಇದನ್ನು ಆಕ್ರಮಿಸಿಕೊಂಡರು. ಈ ವಸಾಹತುಗಾರರು ಇಲ್ಲಿಗೆ ಬಂದಕೂಡಲೆ ಇಲ್ಲಿಯ ಜನ ಬೆಳ್ಳಿಯ ಆಭರಣಗಳನ್ನು ಧರಿಸುವುದನ್ನು ಕಂಡು ಇಲ್ಲಿ ಬೆಳ್ಳಿ ಸಿಗಬಹುದೆಂದು ತಿಳಿದು ಇದನ್ನು ಬೆಳ್ಳಿಯ ನಾಡೆಂದು ಕರೆದರು.

ಈ ದೇಶವನ್ನು ಸ್ವಾಭಾವಿಕವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು: 1 ಉತ್ತರ ಚಾಕೊ ಪ್ರದೇಶ. 2 ಪಂಪಾಸ್ ಹುಲ್ಲುಗಾವಲು ಪ್ರದೇಶ. 3 ಚಾಕೊ, ಪಂಪಾಸ್ ಮತ್ತು ಪಶ್ಚಿಮದ ಆಂಡೀಸ್ ಪರ್ವತಗಳ ನಡುವಿನ ಸೀಮೆ. 4 ಪಟಗೋನಿಯ ತಪ್ಪಲು.

1. ಉತ್ತರದ ಚಾಕೊ ಪ್ರದೇಶ : ಪಶ್ಚಿಮಕ್ಕಿರುವ ಪರ್ವತಗಳ ತಪ್ಪಲಿನಿಂದ ಪೂರ್ವಕ್ಕಿರುವ ಪರಗ್ವೆ ನದಿಯ ಬಯಲಿನವರೆಗೆ ಹಬ್ಬಿ ಹೆಚ್ಚಾಗಿ ಅರಣ್ಯದಿಂದ ತುಂಬಿದೆ. ವಾಣಿಜ್ಯ ಮಾರುತಗಳ ಭಾಗದಲ್ಲಿ ಈ ಪ್ರದೇಶವಿರುವುದರಿಂದ ಮಳೆಯಾಗುತ್ತದೆ. ಮಳೆ ಪೂರ್ವಕ್ಕೆ ಹೆಚ್ಚಾಗಿ, ಪಶ್ಚಿಮಕ್ಕೆ ಹೋದಂತೆ ಕಡಿಮೆಯಾಗುತ್ತ ಹೋಗುತ್ತದೆ. ಆದುದರಿಂದ ಪೂರ್ವಕ್ಕೆ ಕಾಡುಗಳು ಹೆಚ್ಚು ದಟ್ಟವಾಗಿ ಬೆಳೆದಿವೆ. ಸಮುದ್ರ ಸಮೀಪವಾಗಿರುವುದರಿಂದ ಹವೆ ಹಿತಕಾರಿಯಾಗಿದೆ. ನದಿಗಳು ಸದಾ ತಮ್ಮ ದಿಕ್ಕನ್ನು ಬದಲಿಸುತ್ತಿರುತ್ತವೆ. ಆದ್ದರಿಂದ ವಿದ್ಯುತ್ತು ಮತ್ತು ನೀರಿನ ಸೌಕರ್ಯ ಪಡೆಯುವುದು ಕಷ್ಟ. ವಸಾಹತುಗಾರರಿಗೆ ಇಲ್ಲಿನ ಮೂಲ ನಿವಾಸಿಗಳ ಭಯ ಹೆಚ್ಚು. ದಕ್ಷಿಣ ಭಾಗದಲ್ಲಿ ಅರಣ್ಯ ಪ್ರದೇಶ ಕಡಿಮೆ. ಕುರಿಗಳನ್ನೂ ಪರ್ವತಗಳ ತಳಭಾಗಗಳಲ್ಲಿ ದನಗಳನ್ನೂ ಸಾಕುತ್ತಾರೆ. ಈ ಸ್ವಾಭಾವಿಕ ಪ್ರದೇಶ ಕೃಷಿ ಮತ್ತು ಔದ್ಯೋಗಿಕ ಬೆಳವಣಿಗೆಗೆ ಯೋಗ್ಯವಾಗಿಲ್ಲ. ಕ್ವೆಬ್ರೊಕೊ ಎಂಬ ಜಾತಿಯ ಗಿಡ ಇಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಮರ ಬಹಳ ಗಟ್ಟಿ. ಪರಗ್ವೆ ನದಿಯ ದಡದಲ್ಲಿ ಕಟ್ಟಿಗೆಯ ಉದ್ಯೋಗ ನಡೆಯುತ್ತದೆ. ಇಲ್ಲಿ ದಟ್ಟ ಜನಸಾಂದ್ರತೆ ಇರುವ ಪಟ್ಟಣಗಳು ಬಹಳ ಕಡಿಮೆ.

2. ಪಂಪಾಸ್ ಹುಲ್ಲುಗಾವಲು ಪ್ರದೇಶ : ಸಮಶೀತೋಷ್ಣವಲಯ ಭಾಗದ ಸಮುದ್ರ ತೀರದಲ್ಲಿದೆ. ಹವಾಗುಣ ಬಹಳ ಸೌಮ್ಯ, ಹಿತಕರ, ಮೇಲಾಗಿ ಭೂಮಿ ಬಹಳ ಫಲವತ್ತಾಗಿರುವುದರಿಂದ ಅರ್ಜೆಂಟಿನದ ಜನದಟ್ಟಣೆಯ ಅತಿ ಮುಖ್ಯ ಪ್ರದೇಶವಾಗಿದೆ.

ಬೇಸಗೆಯ ಸರಾಸರಿ ಉಷ್ಣಾಂಶ $26.6^0$ ಸೆ. ಮತ್ತು ಚಳಿಗಾಲದ ಸರಾಸರಿ ಉಷ್ಣಾಂಶ $15.55^0$ ಸೆ. ವಾಣಿಜ್ಯ ಮಾರುತಗಳಿಂದ ಬೇಸಗೆಯಲ್ಲಿ 50 ರಿಂದ 100 ಸೆಂಮೀ ಮಳೆಯಾಗುತ್ತದೆ. ಪಶ್ಚಿಮಕ್ಕೆ ಹೋದಂತೆ ಮಳೆಯ ಪ್ರಮಾಣ ಕಡಿಮೆ ಆಗುತ್ತ ಹೋಗುತ್ತದೆ. $40^0$ ಅಕ್ಷಾಂಶದಿಂದ ದಕ್ಷಿಣಕ್ಕೆ ಎಂದರೆ ರಿಯೊ ಕೊಲೊರಾಡೊ ಪ್ರಾಂತ್ಯದಿಂದ ದಕ್ಷಿಣಕ್ಕೆ ಮಳೆ ತೀರ ಕಡಿಮೆ. ಏಕೆಂದರೆ ಈ ಪ್ರದೇಶ ವಾಣಿಜ್ಯ ಪ್ರತಿ ಮಾರುತಗಳ ಪ್ರದೇಶದಲ್ಲಿದೆ. ಈ ಮಾರುತಗಳು ಆಂಡೀಸ್ ಪರ್ವತಗಳನ್ನು ದಾಟಿ ಬರುವಾಗ ತಮ್ಮ ತೇವಾಂಶವನ್ನು ಕಳೆದುಕೊಂಡಿರುತ್ತವೆ. ಇದನ್ನು ಪಂಪಾಸ್ ಪ್ರದೇಶವೆಂದು ಹೇಳಲಾಗುವುದಿಲ್ಲ. ನಿಜವಾದ ಪಂಪಾಸ್ ಪ್ರದೇಶವೆಂದರೆ ಬ್ಯೂನೆಸ್ ಐರಿಸ್ ಪ್ರಾಂತ್ಯ. ಇದು ಸಮುದ್ರಮಟ್ಟದಿಂದ ಸು. 150 ಮೀ ಎತ್ತರದಲ್ಲಿದೆ. ಭೂಮಿ ಬಹಳ ಫಲವತ್ತಾಗಿರುವುದರಿಂದ ಕೃಷಿಯೇ ಇಲ್ಲಿಯ ಮುಖ್ಯ ಉದ್ಯೋಗ.




ಇಲ್ಲಿಯ ಮಳೆ ಮತ್ತು ಫಲವತ್ತಾದ ಭೂಮಿ ಕೃಷಿ ಮತ್ತು ನಿವಾಸಕ್ಕೆ ಅನುಕೂಲವಾದುದರಿಂದ ಸ್ಪೇನಿನಿಂದ ಬಂದ ವಲಸೆಗಾರರು ಇಲ್ಲೇ ನೆಲಸಿದರು. ವಾಸಕ್ಕೆ ಅಡಚಣೆಗಳೇನೋ ಇದ್ದವು. ಅದು ಕೇವಲ ಹುಲ್ಲು ಗಾವಲು. ಚಿಗರೆ ಮುಂತಾದ ಕೆಲವು ಪ್ರಾಣಿಗಳ ಹೊರತು ಕೃಷಿಗೆ ಉಪಯುಕ್ತ ಪ್ರಾಣಿಗಳೇ ಇರಲಿಲ್ಲ. ಆದ್ದರಿಂದ ಬಿತ್ತಲು ಬೀಜಗಳನ್ನು, ವ್ಯವಸಾಯದ ಸಲುವಾಗಿ ಕುದುರೆಗಳನ್ನು, ದನಕರುಗಳನ್ನು ಇವರು ಮೊದಲು ತಮ್ಮ ದೇಶದಿಂದ ತರಬೇಕಾಯಿತು. ಅಲ್ಲದೆ ಇಲ್ಲಿಯ ಮೂಲ ನಿವಾಸಿಗಳ ಪ್ರತಿಭಟನೆ ಬಹಳವಾಗಿತ್ತು. ಕಾಲಕ್ರಮೇಣ ಇವರು ಪರಸ್ಪರ ಹೊಂದಿಕೊಂಡು ಬಾಳುವುದನ್ನು ಕಲಿತರು. ಕೃಷಿಯಲ್ಲಿ ಈ ಮೂಲ ನಿವಾಸಿಗಳನ್ನು ಕೂಲಿಗಳಂತೆ ದುಡಿಸಿಕೊಳ್ಳಲು ಪ್ರಾರಂಭಿಸಿದರು. ತಂಪು ಭಾಗಗಳಲ್ಲಿ ಗೋದಿಯನ್ನು, ಸ್ವಲ್ಪ ಬೆಚ್ಚಗಿರುವ ಕಡೆಗಳಲ್ಲಿ ಮೆಕ್ಕೆಜೋಳ ಮತ್ತು ತೀರ ತಂಪಾಗಿರುವ ಕಡೆ ತೋಕೆ ಗೋದಿ (ಓಟ್ಸ್) ಧಾನ್ಯಗಳನ್ನು ಬೆಳೆಯತೊಡಗಿದರು.

ಈಗ ಅರ್ಜೆಂಟೈನ ತನ್ನ ಒಟ್ಟು ಗೋದಿ ಉತ್ಪನ್ನದ 3/4 ಭಾಗವನ್ನು ರಫ್ತು ಮಾಡುತ್ತದೆ. 1870ರಿಂದ ಈ ಪ್ರದೇಶ ಭರದಿಂದ ಪ್ರಗತಿ ಹೊಂದುತ್ತಲಿದೆ. ಇದಕ್ಕೆ ಕಾರಣ ಪಶುಪಾಲನೆ, ಸಾಕುಪ್ರಾಣಿಗಳು. ಮೊದಲು ದನಗಳನ್ನು ತೊಗಲಿನ ಸಲುವಾಗಿ ಸಾಕುತ್ತಿದ್ದರು. ಆದರೆ ಈಗ ವೈಜ್ಞಾನಿಕ ಶೋಧನೆಗಳಿಂದ ಹಾಲು, ಬೆಣ್ಣೆ ಮತ್ತು ಮಾಂಸಗಳನ್ನು ತಯಾರಿಸಿ ಶೀತಲೀಕರಣ ಮಾಡಿ ಪರದೇಶಗಳಿಗೆ ರಫ್ತು ಮಾಡುತ್ತಾರೆ. ಕೃಷಿಗಿಂತ ಈ ಉದ್ಯೋಗದಲ್ಲಿ ಹೆಚ್ಚು ಜನರಿದ್ದಾರೆ. ಇಲ್ಲಿಯ ಜನ ಕುಟುಂಬ ಪ್ರಿಯರು. ಅವರದು ಅವಿಭಕ್ತಕುಟುಂಬಗಳು. ಒಂದೆ ಕುಟುಂಬದಲ್ಲಿ ಇನ್ನೂರು ಮುನ್ನೂರು ಜನ ವಾಸಿಸುತ್ತಾರೆ. ಇವರ ಮನೆಗಳು ದೊಡ್ಡ ರಾಜ ಮಹಲನ್ನು ಹೋಲುತ್ತವೆ. ಮನೆಯ ಸುತ್ತಲೂ ತೋಟಗಳು; ಅವುಗಳ ಆಚೆ ಸೇವಕರ ಮನೆಗಳು. ಇವರು ನಗರ ವಾಸಿಗಳು. ಮಹಿಳೆಯರು ಯುರೋಪಿನಲ್ಲಿ ಶಿಕ್ಷಣ ಪಡೆದು ಬರುತ್ತಾರೆ. ಆದರೂ ಹೆಚ್ಚಾಗಿ ಸಾರ್ವಜನಿಕ ರಂಗಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಮಧ್ಯಮ ವರ್ಗದ ಹೆಣ್ಣು ಮಕ್ಕಳು ಶಿಕ್ಷಕಿಯರಾಗಿ ಅಥವಾ ಕಾರಕೂನರಾಗಿ ಕೆಲಸ ಮಾಡುತ್ತಾರೆ. ಪ್ರತಿಯೊಂದು ದೃಷ್ಟಿಯಿಂದ ಈ ಪ್ರದೇಶ ಇಡೀ ದೇಶದಲ್ಲೇ ಅತಿ ಪ್ರಗತಿಪರಭಾಗವೆಂದು ಹೇಳಬಹುದು.

3. ಪೂರ್ವದ ಚಾಕೋ, ಪಂಪಾಸ್ ಮತ್ತು ಆಂಡೀಸ್ ಪರ್ವತಗಳ ಮಧ್ಯಭಾಗ: ಬೆಟ್ಟಗಳಿಂದ ಹಾಗೂ ಕೊಳ್ಳಗಳಿಂದ ಕೂಡಿದೆ. ಇದೊಂದು ಬರಡು ಪ್ರದೇಶ. ಕಾರಣ ಆಗ್ನೇಯದಿಂದ ಬೀಸುವ ವಾಣಿಜ್ಯ ಮಾರುತಗಳು ಇಲ್ಲಿಗೆ ಬರುವುದರೊಳಗಾಗಿ, ತಮ್ಮ ತೇವಾಂಶವನ್ನು ಕಳೆದುಕೊಂಡಿರುತ್ತವೆ. ಕೇವಲ 12 ರಿಂದ 15 ಸೆಂಮೀ ಮಾತ್ರ ಮಳೆಯಾಗುತ್ತದೆ. ಅದೂ ಕೇವಲ $30^0$ ಯಿಂದ $40^0$ ಅಕ್ಷಾಂಶದವರೆಗೆ ಮಾತ್ರ. $45^0$ ಅಕ್ಷಾಂಶದಿಂದ ದಕ್ಷಿಣಕ್ಕೆ ಮಳೆಯೇ ಇಲ್ಲ. $30^0$ ರಿಂದ $40^0$ ಅಕ್ಷಾಂಶದ ನಡುವೆ ಚಳಿಗಾಲದಲ್ಲಿ ಮಳೆಯಾಗುವುದರಿಂದ ಮೆಡಿಟರೇನಿಯನ್ ವಾಯುಗುಣವಿದೆ. ದ್ರಾಕ್ಷಿ, ಕಿತ್ತಳೆ ಮುಂತಾದ ಹಣ್ಣುಗಳು ಮತ್ತು ಗೋದಿ ಬೆಳೆಯುತ್ತದೆ. ಈ ಪ್ರದೇಶದ ಉತ್ತರಕ್ಕೆ ಉಷ್ಣವಲಯದಲ್ಲಿ ಕಬ್ಬು ಬೆಳೆಯುತ್ತಾರೆ. ಕಡಿಮೆ ಮಳೆಯಾಗುವ ಭಾಗಗಳಲ್ಲಿ ಮತ್ತು ಕೊಳ್ಳಗಳಲ್ಲಿ ಹುಲ್ಲು ಬೆಳೆಯುವುದರಿಂದ ದನಗಳನ್ನು ಸಾಕುತ್ತಾರೆ. ಮಾಂಸದ ಉತ್ಪಾದನೆಯೇ ಮುಖ್ಯ ಉದ್ಯೋಗ. ಈ ಪ್ರದೇಶದ ಮುಖ್ಯ ನಗರಗಳೆಂದರೆ ಮೆಂಡೋಸಾ, ಬ್ಯೂನೆಸ್ ಐರಿಸ್.

4. ಪಟಗೋನಿಯ ತಪ್ಪಲು: ರಿಯೋಕೊಲರಾಡೊ ಪ್ರಾಂತ್ಯದಿಂದ ಖಂಡದ ದಕ್ಷಿಣ ತುದಿಯವರೆಗೆ ಹಬ್ಬಿದೆ. ದಕ್ಷಿಣಕ್ಕೆ ಬಂದಂತೆ ಬಹಳ ಇಕ್ಕಟ್ಟಾಗುತ್ತ ಹೋಗುತ್ತದೆ. ಸಂಪೂರ್ಣ ಮರುಭೂಮಿ. ದಕ್ಷಿಣ ಅಮೆರಿಕದ ಸಮಶೀತೋಷ್ಣವಲಯದಲ್ಲಿದೆ. ಆಂಡೀಸ್ ಪರ್ವತಕ್ಕೆ ಹೊಂದಿಕೊಂಡಿರುವ ಪಶ್ಚಿಮ ಭಾಗದಲ್ಲಿ ಚಳಿಗಾಲದಲ್ಲಿ ಸ್ವಲ್ಪ ಮಳೆಯಾಗುವುದರಿಂದ ಕುರಿಗಳನ್ನು ಸಾಕುವರು. ಕೆಲವೆಡೆಗಳಲ್ಲಿ ನೀರಾವರಿಯ ಸಹಾಯದಿಂದ ಬೇಸಾಯ ಮಾಡುತ್ತಾರೆ. ಸಮುದ್ರ ಮಟ್ಟದಿಂದ 300 ರಿಂದ 900 ಮೀ ಎತ್ತರವಾಗಿದ್ದು ಅಲ್ಲಲ್ಲಿ ಗುಡ್ಡಗಳಿಂದ ಕೂಡಿದೆ. ಸಾಗುವಳಿಗೆ ಯೋಗ್ಯವಾದ ಪ್ರದೇಶ ಬಹಳ ಕಡಿಮೆ. ಅಭಿವೃದ್ಧಿ ಸಾಲದು.

ಪಂಪಾಸ್ ಪ್ರದೇಶವೇ ಮುಖ್ಯ ಪ್ರಾಂತ್ಯ. ವ್ಯವಸಾಯವೇ ಪ್ರಧಾನ ಕಸುಬು. ಬ್ಯೂನೆಸ್ ಐರಿಸ್ ಪ್ರಪಂಚದ ಪ್ರಮುಖ ನಗರದಲ್ಲಿ ಒಂದು. ರೋಜಾರಿಯೊದಲ್ಲಿ ಪ್ರಾಚೀನವಾದ ಒಂದು ವಿಶ್ವವಿದ್ಯಾಲಯವಿದೆ. ಈ ಪ್ರದೇಶದಲ್ಲಿ ಯುರೋಪ್ ಖಂಡದ ಎಲ್ಲ ಜನರೂ ಇದ್ದಾರೆ.

ನಾಗರಿಕರಾಗಬೇಕೆನ್ನುವ ಎಲ್ಲರಿಗೂ ಸರ್ಕಾರ ಅನೇಕ ಬಗೆಯ ಸೌಲಭ್ಯಗಳನ್ನು ಒದಗಿಸಿದೆ. ಹೆಚ್ಚು ಸೌಲಭ್ಯಗಳಿರುವುದು ವಿಶೇಷವಾಗಿ ಇಟಾಲಿಯನ್ ಮತ್ತು ಸ್ಪ್ಯಾನಿಷ್ ಜನರಿಗೆ. ಇಲ್ಲಿ 42,000 ಕಿಮೀ ಉದ್ದ ರೈಲುಮಾರ್ಗವಿದೆ. ಈ ದೇಶ ಶಿಕ್ಷಣರಂಗದಲ್ಲಿ ಬಹಳ ಪ್ರಗತಿಹೊಂದಿದೆ. ಅನೇಕ ವಿಶ್ವವಿದ್ಯಾಲಯಗಳು, ಸಾವಿರಾರು ಮಾಧ್ಯಮಿಕ ಶಾಲೆಗಳು ಮತ್ತು ಪ್ರಾಥಮಿಕ ಶಾಲೆಗಳು ಇವೆ.

ಇಲ್ಲಿಯ ನಿರ್ಯಾತಗಳು ದಕ್ಷಿಣ ಅಮೆರಿಕದ ಒಟ್ಟು ನಿರ್ಯಾತದ ಶೇ. 12. ಇಲ್ಲಿಂದ ಗೋದಿ, ಮೆಕ್ಕೆಜೋಳ, ಅಗಸೆ, ಮಾಂಸ ಮತ್ತು ಮಾಂಸದ ಪದಾರ್ಥಗಳು, ಉಣ್ಣೆ, ಚರ್ಮ, ಎಣ್ಣೆಕಾಳುಗಳು ರಫ್ತಾಗುತ್ತವೆ.

ಅರ್ಜೆಂಟೈನ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಇಲ್ಲಿಯ ಬಹುಸಂಖ್ಯಾತ ಜನ ರೋಮನ್ ಕ್ಯಾಥೊಲಿಕ್ ಪಂಥಕ್ಕೆ ಸೇರಿದವರು. ಸಂವಿಧಾನ ಸರ್ವರಿಗೂ ಧಾರ್ಮಿಕ ಸ್ವಾತಂತ್ರ್ಯ ಕೊಟ್ಟಿದೆ. (ಜಿ.ಎಸ್.ಎಚ್.)

**ಅಲ್ ಇದ್ರಿಸಿ:** ಸು. 1100–1166. ಪ್ರಸಿದ್ಧ ಅರಬ್ ಭೂಗೋಳ ಶಾಸ್ತ್ರಜ್ಞ. ಈತನ ಪೂರ್ಣ ಹೆಸರು ಅಬು ಅಬ್ದುಲ್ಲಾ ಮಹಮದ್ ಇಬ್ನ್ ಮಹಮದ್ ಅಷ್‌ರೀಷ್ ಅಲ್ ಇದ್ರಿಸಿ. ಈತ ಕಾರ್ಡೋಬದ ಕಲೀಫನಾಗಿದ್ದ ಇದ್ರಿಸಿಯ ವಂಶಕ್ಕೆ ಸೇರಿದವನು. ಈತ ಸೀಟಾ ಎಂಬಲ್ಲಿ ಜನಿಸಿದ. ಕಾರ್ಡೋಬದಲ್ಲಿ ವಿದ್ಯಾರ್ಜನೆ ಮುಗಿಸಿ ಸ್ಪೇನ್, ಉತ್ತರ ಆಫ್ರಿಕ, ಏಷ್ಯ ಮೈನರ್‌ಗಳಲ್ಲಿ ಪರ್ಯಟನೆ ಮಾಡಿದ. ಸಿಸಿಲಿಯ ಎರಡನೆಯ ರೋಜರ್ ಈತನನ್ನು ಗೌರವಿಸಿ ಆಗ ಗೊತ್ತಿದ್ದ ಪ್ರಪಂಚದ ಬಗ್ಗೆ ವಿವರಣ ಗ್ರಂಥವೊಂದನ್ನು ರಚಿಸುವ ಕೆಲಸವನ್ನು ಈತನಿಗೆ ವಹಿಸಿಕೊಟ್ಟ.. ಈ ಕೆಲಸವನ್ನು ಇದ್ರಿಸಿ ಸುಮಾರು ಹದಿನೈದು ವರ್ಷಗಳ ಅವಧಿಯಲ್ಲಿ ಮುಗಿಸಿದ. ಈ ಗ್ರಂಥದ ಹೆಸರು ನುಜಾಹತ್ ಲಾ ಮುಸ್ತಾಕಷ್ಕಿ ತೀಕಲಾ ಅಪ್ಕ. ಇದನ್ನು ಸಾಮಾನ್ಯವಾಗಿ ರೋಜರನ ಪುಸ್ತಕ (ಕಿತಾಬ್ ರೋಜರ್) ಎಂದು ಕರೆಯಲಾಗುತ್ತದೆ. ಈ ಪುಸ್ತಕದಲ್ಲಿ ಭೂಮಿಯನ್ನು ಗ್ರೀಕ್ ಭೂಗೋಳ ವಿಜ್ಞಾನಿಗಳು ವಿಂಗಡಿಸಿದ್ದ ಏಳು ವಾಯುಗುಣಗಳಿಗೆ ಅನುಗುಣವಾಗಿ ವಿಭಾಗಿಸಿದೆ.

ಸಮಭಾಜಕ ವೃತ್ತದಿಂದ ಪ್ರಾರಂಭವಾಗಿ ಶೀತಪ್ರದೇಶದವರೆಗೂ ಇರುವ ನೆಲ ಈ ವಿಭಾಗಕ್ಕೆ ಒಳಪಟ್ಟಿದೆ. ಇದರ ಪ್ರತಿಯೊಂದು ಭಾಗವನ್ನೂ ಸಮಾನಾಂತರ ಲಂಬರೇಖೆಗಳಿಂದ ಹತ್ತು ಉಪವಿಭಾಗಗಳನ್ನಾಗಿ ಮಾಡಿದೆ. ಈ ವಿಭಾಗಗಳನ್ನು ಪಶ್ಚಿಮದಿಂದ ಪೂರ್ವದ

ಕಡೆಗೆ ಎಣಿಸಲಾಗಿದೆ. ಒಂದಕ್ಕೊಂದು ಹೊಂದಾಣಿಕೆ ಇಲ್ಲದ ಅಂಶಗಳನ್ನೆಲ್ಲ ಈ ಪುಸ್ತಕದ ಜೋಡಣೆಯಲ್ಲಿ ನಿರ್ಲಕ್ಷಿಸಲಾಗಿದೆ. ಬೈಬಲ್ಲಿನಲ್ಲಿ ಹೆಸರಿಸಿರುವ ಗೋಗ್ (ಯಜೂಜ್), ಮಗೋಗ್ (ಮಜೂಜ್) ಭೂ ಪ್ರದೇಶ ರೋಮ್ ಹಾಗೂ ಸೇಂಟ್ ಬ್ರಾಂಡನ್ ದ್ವೀಪಗಳ ವಿವರಣೆಯನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ಇದರಲ್ಲಿರುವ ಭೂಪಟಗಳು ಚಿಕ್ಕವಾದರೂ ಲೇಖಕನಿಗೆ ಗೊತ್ತಿರುವ ಪ್ರದೇಶಗಳನ್ನು ಬಹು ಸ್ಪಷ್ಟವಾಗಿ ತೋರಿಸಲಾಗಿದೆ. ಪೀಠಿಕೆಯಲ್ಲಿ ಲೇಖಕನಿಗೆ ಉಪಯುಕ್ತವಾದ ಮೂಲ ಲೇಖನಗಳನ್ನು ನಮೂದಿಸಲಾಗಿದೆ. ಇಲ್ಲಿ ಟಾಲಮಿ ಮತ್ತು ಒರೊಸಿಯಸರನ್ನು ಬಿಟ್ಟು ಇನ್ನಾವ ಐರೋಪ್ಯ ಲೇಖಕರನ್ನೂ ನಮೂದಿಸಿಲ್ಲ. ಇವನು ತನ್ನ ಕೃತಿಯಲ್ಲಿ ಮಸೂದಿ ಮತ್ತು ಇಬ್ನ್ ಹ್ಯಾಕಲರು ಅರಬ್ಬೀದೇಶದ ಮುಖ್ಯ ಅಧಿಕಾರಿಗಳೆಂದು ತಿಳಿಸಿದ್ದಾನೆ. ಆದರೆ ಇವನಿಗೆ ಬಿರೂನಿ ಅಥವಾ ಮುಕ್ ದಿಸಿ ಬಹುಶಃ ಗೊತ್ತಿಲ್ಲವೆಂದು ಕಂಡುಬರುತ್ತದೆ. ಇದ್ರಿಸಿ ತನ್ನ ಪುಸ್ತಕಗಳಲ್ಲಿ ಕೊಟ್ಟಿರುವ ಹೆಚ್ಚು ವಿಷಯಗಳನ್ನು ಪ್ರಯಾಣಿಕರ ವರದಿ ಹಾಗೂ ರೋಜರನ ರಾಜ್ಯದ ಅಧಿಕಾರಿಗಳ ದಾಖಲೆಗಳಿಂದ ಆಧರಿಸಿದ್ದಾನೆ. ಇಟಲಿಯ ಸಿಸಿಲಿಯ ವರ್ಣನೆ ವಿವರವಾಗಿದ್ದರೂ ಅದರಲ್ಲಿ ಭೂಗೋಳದ ಅಂಶಕ್ಕಿಂತ ಇತಿಹಾಸದ ಅಂಶವೇ ಹೆಚ್ಚಾಗಿ ಕಂಡುಬಂದಿದೆ. ಇದನ್ನು ಸಮುದ್ರಯಾತ್ರಿಕರ ಬರೆಹದ ಆಧಾರದ ಮೇಲೆ ರಚಿಸಲಾಗಿದೆ. ಇದರಲ್ಲಿ ಭೌಗೋಳಿಕ ಭಾಗಗಳ ಲಕ್ಷಣ, ರೋಮ್, ಸಿಸಿಲಿ, ಇಟಲಿ, ಗ್ರೀಸ್, ಮಧ್ಯಪ್ರಾಚ್ಯ, ಬ್ರಿಟನ್ ದೇಶಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ವಿಲಿಯಂ ದಿ ಬ್ಯಾಡ್‌ನ ಬಗ್ಗೆ ಈತ ಬರೆದ ಕೆಲವು ಟೀಕೆಗಳು ನಾಶವಾಗಿವೆ. ಸಸ್ಯವಿಜ್ಞಾನ ಹಾಗೂ ವೈದ್ಯವಿಜ್ಞಾನದ ಬಗ್ಗೆ ಈತ ಬರೆದ ಕೆಲವು ಲಿಪಿಗಳನ್ನು ಇಸ್ತಾನ್ ಬುಲ್‌ನಲ್ಲಿ ಇಡಲಾಗಿದೆ. ಈತ ಬರೆದ ಪುಸ್ತಕದ ಕೆಲವು ಭಾಗಗಳನ್ನು ಆಕ್ಸ್‌ಫರ್ಡ್, ಪ್ಯಾರಿಸುಗಳಲ್ಲಿನ ಗ್ರಂಥಾಲಯಗಳಲ್ಲಿ ಇಡಲಾಗಿದೆ. ಈತನ ಭೂಪಟಶಾಸ್ತ್ರ ಯುರೋಪಿನ ಮೇಲೆ ಹೆಚ್ಚು ಪ್ರಭಾವಬೀರದಿದ್ದರೂ ಮಾರಿನೋ–ಸನುಡೊ ಮತ್ತು ಪಿಯೆತ್ರೊ ವೈಕಾಂಟಿ ರಚಿಸಿದ ಭೂಪಟದ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಮಡೀರ ಮತ್ತು ಕೆನರೀಗಳ ಸಮುದ್ರಯಾನ ಕುರಿತ ಈತನ ವಿವರಣೆಯಿಂದ ಅಟ್ಲಾಂಟಿಕ್ ಸಾಗರದ ಅನ್ವೇಷಣೆಗೆ ದಾರಿಯಾಯಿತೆಂದು ನಂಬಲಾಗಿದೆ. ಈತನು ಹಿಂದೂ ಮಹಾಸಾಗರ ಒಂದು ಒಳನಾಡಿನ ಸಾಗರವೆಂಬ ತಪ್ಪು ಕಲ್ಪನೆಯನ್ನು ಸರಿಪಡಿಸಿದ. ಅಲ್ಲದೆ ಕ್ಯಾಸ್ಪಿಯನ್ ಸಮುದ್ರ ಒಂದು ಒಳನಾಡಿನ ಸಮುದ್ರವೆಂದು ಸ್ಪಷ್ಟಪಡಿಸಿದ. ಡ್ಯಾನ್ಯೂಬ್ ಮತ್ತು ನೈಜರ್‌ನದಿಗಳ ಪಾತ್ರವನ್ನು ವಿವರವಾಗಿ ತಿಳಿಸಿದ. (ಎಂ.ಆರ್.ಎಚ್.)

ಅಲ್ ಇದ್ರಿಸಿ ರಚಿತ ಭೂನಕ್ಷೆ

**ಅಲ್ ಬರೂನಿ** : ಸು. 12ನೆಯ ಶತಮಾನದ ಅರಬ್ ಭೂಗೋಳಶಾಸ್ತ್ರಜ್ಞ. ಮಹಮದ್ ಘಸ್ನಿಯ ಕಾಲದಲ್ಲಿ ಭಾರತದಲ್ಲಿ ಬಂದು ನೆಲೆಸಿದ. ಸಂಸ್ಕೃತವನ್ನು ಕಲಿತು ಹಲವಾರು ಸಂಸ್ಕೃತದ ವ್ಯಾಖ್ಯೆಗಳನ್ನು ಅರೆಬಿಕ್ ಭಾಷೆಗೆ ಭಾಷಾಂತರಿಸಿದ. ಕಿತಾಬ್ – ಅಲ್– ಹಿಂದ್ ಎಂಬ ಗ್ರಂಥವನ್ನು 1030ರಲ್ಲಿ ಬರೆದ. ಇದು ಭಾರತ ಮತ್ತು ಶ್ರೀಲಂಕ ದೇಶಗಳ ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ವಿವರಣೆಯನ್ನೂ ಭಾರತದ ವ್ಯವಸಾಯ ಮಾನ್ಸೂನ ಮಾರುತಗಳ ಮೇಲೆ ಹೇಗೆ ಅವಲಂಬಿತವಾಗಿದೆ ಎಂಬುದನ್ನೂ ವಿವರಿಸಿದ್ದಾನೆ. ಗುಂಡಸಿಯ ಬೆಟ್ಟಗಳು, ಹಿಮಾಲಯದ ತಪ್ಪಲಿನ ಶಿಲಾ ಮತ್ತು ಮಣ್ಣಿನ ಸಂಚಯಗಳನ್ನು ವಿವರಿಸಿದ್ದಾನೆ. (ಎಂ.ಆರ್.ಎಚ್.)

**ಅಲ್ ಮಸೂದಿ:** ಸು. 9ನೆಯ ಶತಮಾನ. ಪ್ರಸಿದ್ಧ ಅರಬ್ ಭೂಗೋಳ ಶಾಸ್ತ್ರಜ್ಞ; ಇತಿಹಾಸಕಾರ ಪ್ರವಾಸಿ. ಬಾಗ್ದಾದಿನಲ್ಲಿ ಜನಿಸಿದ. 915ರಲ್ಲಿ ಪರ್ಶಿಯ, ಕರ್ಮನ್‌ಗಳಿಗೆ ಭೇಟಿಯಿತ್ತು ಮುಲ್ತಾನ್ ಅನಂತರ ಕ್ಯಾಂಬೆ, ಶ್ರೀಲಂಕ, ಮಡಗಾಸ್ಕರ್‌ಗಳಲ್ಲಿ ಸಂಚರಿಸಿ ಓಮನ್‌ಗೆ ಹಿಂದಿರುಗಿದ. ಅನಂತರ ಪ್ಯಾಲಸ್ತೀನ್, ಡಮಾಸ್ಕಸ್‌ಗಳಿಗೆ ತೆರಳಿ ತನ್ನ ಜೀವನದ ಕೊನೆಯ ಹತ್ತು ವರ್ಷಗಳನ್ನು ಸಿರಿಯ ಹಾಗೂ ಈಜಿಪ್ಟ್‌ಗಳಲ್ಲಿ ಕಳೆದ.

ಈತ ಉತ್ತಮ ಬರೆಹಗಾರನಾಗಿದ್ದ. ಈತನ ಗ್ರಂಥಗಳಲ್ಲಿ ಕಿತಾಬ್ ಅಕ್ಬರ್ ಉಲ್ ಜಮಾನ್ ಹಾಗೂ ಕಿತಾಬ್ ಉಲ್ ಆಸತ್ ಅತಿಮುಖ್ಯವಾದವು. ಇವೆರಡೂ ಬೃಹತ್ ಗ್ರಂಥಗಳು. ಇವುಗಳ ಸಾರಾಂಶವನ್ನು ಮುರೂಜ್ ಉದ್ ದಹಾಬ್ ವಾ ಮಾದಿನ್ ಉಲ್ ಜವಾಹಿರ್ ಎಂಬ ಗ್ರಂಥದಲ್ಲಿ ನೀಡಿರುವನು. ಇದನ್ನು ಮೀಡೋಸ್ ಆಫ್‌ಗೋಲ್ಡ್ ಆ್ಯಂಡ್ ಮೈನ್ಸ್ ಆಫ್ ಪ್ರೆಷಿಯಸ್ ಸ್ಟೋನ್ಸ್ ಎಂದು ಭಾಷಾಂತರಿಸಲಾಗಿದೆ. ಇದರ ಎರಡನೆಯ ಸಂಪುಟ ಕಿತಾಬ್ ಉತ್ ತನ್‌ಬ್ಹವಾಲ್ ಇಶ್ರಫ್ ಈತನ ಎಲ್ಲಾ ಬರೆಹಗಳ ಸಾರಾಂಶವಾಗಿದೆ.

ಭೌಗೋಳಿಕ ಜ್ಞಾನ'ದ ಬೆಳವಣಿಗೆಯಲ್ಲಿ ಈತನ ಕೊಡುಗೆ ಮಹತ್ತರವಾದುದು. ಕ್ಯಾಸ್ಪಿಯನ್ ಸಮುದ್ರದಲ್ಲಿ ಸಂಚರಿಸಿ ಅದು ಒಳನಾಡಿನ ಸಮುದ್ರವೆಂದು ಉತ್ತರದ ಸಾಗರದೊಡನೆ ಸಂಪರ್ಕ ಹೊಂದಿಲ್ಲವೆಂದೂ ನಿರೂಪಿಸಿದ. ನೈಲ್‌ನದಿಯ ಮೂಲ ಅಬಿಸೀನಿಯದ ಪರ್ವತಗಳ ಬಳಿ ಇರುವುದೆಂದು ತಿಳಿಸಿದ. ಅರಬ್ಬಿ ಸಮುದ್ರದಲ್ಲಿ ಬೀಸುತ್ತಿದ್ದ ಕ್ಲುಪ್ತ ಮಾರುತಗಳ ವಿವರಣೆಯನ್ನು ನೀಡಿದ. ಮಾನವನ ಜೀವನ ವಿಧಾನ ಮತ್ತು ಮನುಷ್ಯನ ವರ್ತನೆಗಳ ಮೇಲೆ ಪರಿಸರದ ಪ್ರಭಾವವನ್ನು ಕುರಿತು ವಿವರಿಸಿದ. ಭಾಷೆಯನ್ನು ಆಧರಿಸಿ ಅಂದು ತಿಳಿದಿದ್ದ ಜನವಸತಿಯ ಭೂಭಾಗಗಳನ್ನು ಏಳು ರಾಷ್ಟ್ರಗಳಾಗಿ ವಿಂಗಡಿಸಿ ವಿವರಿಸಿದ. ಈತ ಪರಿಸರವಾದದ ಮೂಲ ಪ್ರತಿಪಾದಕರಲ್ಲಿ ಪ್ರಮುಖನಾದವನೂ ಹೌದು. (ಸಿ.ವೈ.ಪಿ.)

**ಅಲಕಾನಂದ:** ಹಿಮಾಲಯ ಪರ್ವತದಲ್ಲಿ ಹುಟ್ಟಿ ಗಂಗಾನದಿಯನ್ನು ಸೇರುವ ಉಪನದಿಗಳಲ್ಲಿ ಮುಖ್ಯವಾದುದು. ಕಾಮೆಟ್ ಶಿಖರದ 7711ಮೀ ಹತ್ತಿರ ಹುಟ್ಟಿ ಪೂರ್ವ ದಿಕ್ಕಿಗೆ ಹರಿದು ಭಾಗೀರಥಿಯನ್ನು ಸೇರುತ್ತದೆ. ಸರಸ್ವತೀ ನದಿಯಲ್ಲದೆ ಇದಕ್ಕೆ ಅನೇಕ ಉಪನದಿಗಳಿವೆ. ನಂದಾಕಿನಿ ನಂದಪ್ರಯಾಗದಲ್ಲೂ ಪಿಂದಾರ ಕರ್ಣಪ್ರಯಾಗದಲ್ಲೂ ಮಂದಾಕಿನಿ ರುದ್ರಪ್ರಯಾಗದಲ್ಲೂ ಈ ನದಿಗೆ ಸೇರಿ ಆಯಾ ಸ್ಥಳಗಳನ್ನು ಪವಿತ್ರ ಸಂಗಮಕ್ಷೇತ್ರಗಳಾಗಿ ಮಾಡಿವೆ. (ಎಸ್.ಕೆ.ಆರ್.)

**ಅಲಘನಿ ಪರ್ವತಗಳು:** ಪೆನ್ಸಿಲ್ವೇನಿಯ, ವರ್ಜಿನಿಯ ಸಂಸ್ಥಾನಗಳಲ್ಲಿ ಮತ್ತು ನ್ಯೂಯಾರ್ಕ್ ಸಂಸ್ಥಾನದ ಕೆಲವು ಭಾಗಗಳಲ್ಲಿ ಹಬ್ಬಿವೆ. ಹಡ್ಸನ್ ನದಿಯ ದಕ್ಷಿಣ ಮತ್ತು ಪಶ್ಚಿಮಕ್ಕೆ ಬರುತ್ತವೆ. ಸರಾಸರಿ ಎತ್ತರ 1455 ಮೀ. ಪ್ರಮುಖವಾಗಿ ಅಪಲೇಷಿಯನ್ ಪರ್ವತಗಳ ಭಾಗ. ಹಿಮಯುಗದಲ್ಲಿ ಹಿಮಭರಿತವಾಗಿದ್ದುವು. ಹಿಮನದಿಗಳ ಪ್ರವಾಹ ತಂದ ಮೆಕ್ಕಲು ಮಣ್ಣಿನಿಂದಾಗಿ ಅನೇಕ ಆಳವಾದ ಕಣಿವೆಗಳು ಫಲವತ್ತಾಗಿವೆ. ಪ್ರಸ್ಥಭೂಮಿ ಪ್ರದೇಶ ಬಹು ಒರಟಾಗಿದೆ. ಆದ್ದರಿಂದ ಈ ಭಾಗದಲ್ಲಿನ ಅಲಘನಿ ಮುಂತಾದ ಅನೇಕ ಕಡೆಗಳಲ್ಲಿ ವ್ಯವಸಾಯಕ್ಕೆ ಅನುಕೂಲವಾಗಿದೆ. ತರಕಾರಿಗಳನ್ನು ಬೆಳೆಯುವುದು ಇಲ್ಲಿನ ಅತಿ ಮುಖ್ಯ ಲಾಭದಾಯಕ ಉದ್ಯಮ. (ಜಿ.ಕೆ.ಜಿ.)

**ಅಲಬಾಮ:** ಸಂಯುಕ್ತಸಂಸ್ಥಾನಕ್ಕೆ ಸ್ಪೇನ್ ದೇಶದಿಂದ 1795 ಮತ್ತು 1813 ರಲ್ಲಿ ಒಪ್ಪಿಸಲ್ಪಟ್ಟು , 1817 ರಲ್ಲಿ ಒಂದು ಸೀಮೆಯಾಗಿ 1819 ರಲ್ಲಿ ಪ್ರಾಂತ್ಯವಾಗಿ ಕೇಂದ್ರಕ್ಕೆ ಸೇರಿಸಲ್ಪಟ್ಟಿತು. ಅಂತರ್‌ಯುದ್ಧದ ಕಾಲದಲ್ಲಿ (1861) ದಕ್ಷಿಣದ ಪಕ್ಷಕ್ಕೆ ಸೇರಿ ಪ್ರತ್ಯೇಕಗೊಂಡು, ಯುದ್ಧ ಮುಗಿದ ಅನಂತರ 1865ರಲ್ಲಿ ಮತ್ತೆ ಕೇಂದ್ರಕ್ಕೆ ಸೇರಿತು. ಮೆಕ್ಸಿಕೊ ಖಾರಿಯ 80 ಕಿಮೀ ಉದ್ದನೆಯ ತೀರ ಪ್ರದೇಶವಲ್ಲದೆ ಅಪಲೇಷಿಯನ್ ಪರ್ವತಗಳ ದಕ್ಷಿಣದ ತುದಿಯ ವರೆಗಿರುವ ತೀರದ ಮೈದಾನದವರೆಗೂ 560 ಕಿಮೀ ವಿಸ್ತರಿಸಿದೆ. ಈ ರಾಜ್ಯದ ವಿಸ್ತೀರ್ಣ 1,33,950 ಚ.ಕಿಮೀ. ದಕ್ಷಿಣಭಾಗದಲ್ಲಿ ಇರುವುದರಿಂದ ಮೇಲ್ಮೈ ಲಕ್ಷಣದ ಪರಿಣಾಮವಾಗಿ ಹಿತಕರವಾದ ಉಷ್ಣವಲಯದ ವಾಯುಗುಣವನ್ನು ಹೊಂದಿದೆ; ಬೇಸಗೆ ದೀರ್ಘವಾದರೂ ಉಷ್ಣ ಹೆಚ್ಚಿರುವುದಿಲ್ಲ. ಗಾಳಿ ತೇವವಾಗಿರುತ್ತದೆ. ಚಳಿಗಾಲ ಹ್ರಸ್ವವಲ್ಲದೆ ಹಿತಕರವಾಗಿರುತ್ತದೆ. ಉತ್ತರದ ಪರ್ವತ ಪ್ರದೇಶದಲ್ಲಿ ಸ್ವಲ್ಪ ಹಿಮ ಬೀಳುತ್ತದೆ. ಜನವಸತಿ ಪ್ರಾರಂಭವಾದುದು ಬಹು ಹಿಂದೆಯೇ; ಚಾರಿತ್ರಿಕ ಮತ್ತು ಆರ್ಥಿಕ ತೊಂದರೆಗಳು ಆಗಾಗ್ಗೆ ಬಂದರೂ ಬೆಳವಣಿಗೆ ಒಂದೇ ಸಮನಾಗಿ ಮುಂದುವರಿದಿದೆ. 19ನೆಯ ಶತಮಾನ ಕಳೆಯುವವರೆಗೂ ಇದರ ಪ್ರಗತಿ ವಿಶೇಷವಾಗಿ ಕೃಷಿರಂಗದಲ್ಲಿತ್ತು; ಹತ್ತಿ ಇದರ ಸಂಪತ್ತಿನ ಬಹುಭಾಗವನ್ನೊದಗಿಸಿತು. ಈಗ ಧಾನ್ಯ, ನೆಲಗಡಲೆ, ಹಣ್ಣುಗಳು, ಕಾಯಿಪಲ್ಯಗಳಲ್ಲದೆ ಹತ್ತಿಯನ್ನೂ ಬೆಳೆಸುತ್ತಾರೆ; ಪಶುಪಾಲನೆಯೂ ಬಹಳ ಹೆಚ್ಚಿದೆ. ಇತ್ತೀಚಿನ ದಶಕಗಳಲ್ಲಿ

ಕಲ್ಲಿದ್ದಲು, ಕಬ್ಬಿಣಗಳ ಉತ್ಪಾದನೆ ಹೆಚ್ಚಿದೆ. ಕೈಗಾರಿಕಾ ಪ್ರಗತಿ, ಅದರ ಖನಿಜೋತ್ಪನ್ನಗಳ ಪ್ರಮಾಣಕ್ಕನುಸಾರವಾಗಿ ಮುಂದುವರಿದಿದೆ; ಈ ಉತ್ಪನ್ನವೇ ಇಡೀ ದೇಶದ ಉತ್ಪನ್ನದ ಮೂರನೆಯ ಎರಡರಷ್ಟಿದೆ; ಕಬ್ಬಿಣ, ಉಕ್ಕು, ನೇಯ್ಗೆ ಪದಾರ್ಥಗಳು, ಕಲ್ಲೆಣ್ಣೆ, ರಾಸಾಯನಿಕಗಳು, ಮರಮುಟ್ಟುಗಳು, ಕಾಗದ, ಸಂಸ್ಕರಿಸಿದ ಮಾಂಸ ಮತ್ತು ಯಂತ್ರೋಪಕರಣಗಳು ಇವು ಮುಖ್ಯವಾದುವು. ಜನಸಂಖ್ಯೆ 44,47,000 (2000). ಶೇ. 30 ಜನ ನೀಗ್ರೋಗಳು. ಬರ್ಮಿಂಗ್ ಹ್ಯಾಂ, ಮೊಬೈಲ್ ಮತ್ತು ಮಾಂಟ್ಗೋಮರಿ ಮುಖ್ಯ ಪಟ್ಟಣಗಳು. ದಕ್ಷಿಣ ಪ್ರದೇಶದಲ್ಲಿನ ಗತವೈಭವವನ್ನು ಜ್ಞಾಪಕಕ್ಕೆ ತರುವಂಥ ರಾಜ್ಯದ ಚರಿತ್ರಾರ್ಹವಾದ ಹಿಂದಿನ ಯುದ್ಧಪೂರ್ವ ಸ್ಥಳಗಳು ಮತ್ತು ಹಳೆಯ ದೊಡ್ಡ ಮರದ ತೋಪುಗಳನ್ನು ನೋಡಲು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. (ಸಿ.ಎಂ.)

**ಅಲಹಾಬಾದ್:** ಉತ್ತರ ಪ್ರದೇಶ ರಾಜ್ಯದ ಒಂದು ಜಿಲ್ಲೆ ಹಾಗೂ ಮುಖ್ಯ ಪಟ್ಟಣ. ಗಂಗ ಮತ್ತು ಯಮುನ ನದಿಗಳ ಸಂಗಮಕ್ಷೇತ್ರ (ಉತ್ತರ ಅಕ್ಷಾಂಶ $25^0 25'$, ಪೂರ್ವರೇಖಾಂಶ $82^0$). ಪ್ರಯಾಗವೆಂದೂ ಕರೆಯುತ್ತಾರೆ. ತ್ರಿವೇಣಿ ಸಂಗಮವೆಂದು ಧಾರ್ಮಿಕ ಪ್ರಸಿದ್ಧಿ ಗಳಿಸಿದೆ. ಪವಿತ್ರವಾದ ಮೂರು ನದಿಗಳು ಅಂದರೆ ಗಂಗ, ಯಮುನ ಮತ್ತು ಗುಪ್ತಗಾಮಿನಿಯಾದ ಸರಸ್ವತಿ ನದಿಗಳು ಇಲ್ಲಿ ಸೇರುತ್ತವೆ ಎಂಬುದು ಪುರಾಣದಿಂದ ಗೊತ್ತಾಗುತ್ತದೆ. ಪ್ರತಿವರ್ಷವೂ ನಡೆಯುವ ಮಾಘಮೇಳಕ್ಕೂ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳಕ್ಕೂ ಭಾರತದ ನಾನಾ ಭಾಗಗಳಿಂದ ಜನರನ್ನು ಆಕರ್ಷಿಸುತ್ತಿರುವ ತೀರ್ಥಕ್ಷೇತ್ರ. ಅಕ್ಬರನ ಆಳ್ವಿಕೆಯಲ್ಲಿ ಉತ್ತರ ಭಾರತದ ಮೂರನೆಯ ಪ್ರಮುಖ ಸೈನ್ಯಕೇಂದ್ರವಾಗಿತ್ತು. ರಸ್ತೆ ಜಲ ಮತ್ತು ರೈಲುಮಾರ್ಗಗಳು ಅಲಹಾಬಾದನ್ನು ಕೇಂದ್ರಸ್ಥಳವಾಗಿ ಮಾರ್ಪಡಿಸಿವೆ. ಗಂಗ ಮೈದಾನದ ಮಧ್ಯದಲ್ಲಿ ನೆಲೆಸಿರುವುದರಿಂದ ಸಾಮಗ್ರಿಗಳ ಶೇಖರಣೆಗೆ, ಹಂಚಿಕೆಗೆ ಪ್ರಸಿದ್ಧಿ ಪಡೆದಿದೆ. ದಕ್ಷಿಣ, ಪಶ್ಚಿಮ ಮತ್ತು ಪೂರ್ವಭಾರತದಿಂದ ಬರುವ ರೈಲುಗಳು ಇಲ್ಲಿ ಸಂಧಿಸುತ್ತವೆ. ಹಿಂದಿನಿಂದಲೂ ಬೆಳೆದು ಬಂದಿರುವ ಅನೇಕ ಕೈಗಾರಿಕೆಗಳಿವೆ. ವಿಶ್ವವಿದ್ಯಾಲಯದ ಕ್ಷೇತ್ರವಾಗಿರುವುದಲ್ಲದೆ ಉತ್ತರ ಪ್ರದೇಶದ ಮುಖ್ಯ ನ್ಯಾಯಲಯವನ್ನು ಹೊಂದಿದೆ. ಪುರಾತನ ಪಟ್ಟಣವಾದರೂ ಇತ್ತೀಚಿನ ಅನೇಕ ಮಾಪಾರ್ಡುಗಳಿಂದ ಆಧುನಿಕವಾಗುತ್ತಿದೆ. ಜನಸಂಖ್ಯೆ 4,30,730. (ಆರ್.ಪಿ.ಎಸ್.)

**ಅಲಾಸ್ಕ:** ಉತ್ತರ ಅಮೆರಿಕದ ವಾಯವ್ಯದಲ್ಲಿನ ಒಂದು ರಾಜ್ಯ. ಅಮೆರಿಕ ಸಂಯುಕ್ತಸಂಸ್ಥಾನ 1867 ರಲ್ಲಿ ರಷ್ಯದಿಂದ ಈ ಭಾಗವನ್ನು ಕೊಂಡು 1884 ರಲ್ಲಿ ಓರೆಗಾನ್ ಸಂಸ್ಥಾನದ ಒಂದು ಜಿಲ್ಲೆಯಾಗಿ ಪರಿಗಣಿಸಿತು. 1912 ರಲ್ಲಿ ಒಂದು ಸೀಮೆಯಾಗಿ ರೂಪಗೊಂಡು 1959 ರಲ್ಲಿ 49 ನೆಯ ಪ್ರಾಂತ್ಯವಾಗಿ ಸಂಯುಕ್ತಸಂಸ್ಥಾನದಲ್ಲಿ ವಿಲೀನ ಹೊಂದಿತು. 1912 ರಿಂದ ಈಚೆಗೆ ಸಂಯುಕ್ತಸಂಸ್ಥಾನಕ್ಕೆ ಸೇರಿದ ರಾಜ್ಯಗಳಲ್ಲಿ ಇದು ಮೊದಲನೆಯದು. ಬಹು ದೊಡ್ಡ ರಾಜ್ಯ. ಖಂಡದ ಇತರ ರಾಜ್ಯಗಳಿಗಿಂತ ಪ್ರತ್ಯೇಕವಾಗಿ ವಾಯವ್ಯದ ಅಂಚಿನಲ್ಲಿದ್ದು, ಪರ್ವತಮಯವಾಗಿದೆ. ಅಮೆರಿಕದ ಬಹು ದೊಡ್ಡ ಪರ್ವತಶ್ರೇಣಿಯ ವಾಯವ್ಯದ ಬಾಗಿದ ವಿಸ್ತೃತಭಾಗ ಇರುವುದು ಇಲ್ಲಿಯೇ. ದಕ್ಷಿಣದ ಸಾಧಾರಣ ಎತ್ತರದ ತೀರಪ್ರದೇಶದ ಶ್ರೇಣಿಯ ಜೊತೆಗೆ ಒಳಭಾಗದಲ್ಲಿ ಸ್ವಲ್ಪ ಎತ್ತರವಾದ ಸಮಾನಾಂತರ ಶ್ರೇಣಿ ಇದೆ. ಉತ್ತರ ಅಮೆರಿಕದ ಅತ್ಯಂತ ಎತ್ತರದ ಮೆಕಿನ್ಲೆ ಶಿಖರ (6158 ಮೀ) ಈ ಒಳಭಾಗದ ಶ್ರೇಣಿಯಲ್ಲಿದೆ. ತಗ್ಗಾದ ಉತ್ತರದ ಶ್ರೇಣಿ ಕಮಾನಿನಂತೆ ಬಾಗಿದೆ. ವಿಸ್ತೀರ್ಣ 1,522,595 ಚ.ಕಿಮೀ.

ಅಲಾಸ್ಕದ ಎತ್ತರಭಾಗ ಉತ್ತರಧ್ರುವದ ಆಚೆಗೆ ವ್ಯಾಪಿಸಿ ವಿಲಕ್ಷಣವಾದ ಖಂಡಾಂತರ ವಾಯುಗುಣವನ್ನು ಹೊಂದಿದೆ. ದಕ್ಷಿಣತೀರ ಜಪಾನ್ ಪ್ರವಾಹದ ಮಾರುತಗಳಿಂದ ಉಷ್ಣತೆಯನ್ನು ಪಡೆದು ಆಹ್ಲಾದಕರ ವಾಯುಗುಣವನ್ನು ಪಡೆದಿದೆ. 1898ರ ಸುವರ್ಣ ಶೋಧದ (ಗೋಲ್ಡ್ ರಷ್) ದಿನಗಳಲ್ಲಿ ಅಲಾಸ್ಕದ ಖನಿಜಗಳಲ್ಲಿ ಚಿನ್ನ ಅಗ್ರಸ್ಥಾನ ಪಡೆಯಿತು. ಇಂದು ಕಲ್ಲಿದ್ದಲು ಆ ಸ್ಥಾನಕ್ಕೇರಿದೆ. ಪೆಟ್ರೋಲಿಯಮ್, ಸ್ವಾಭಾವಿಕ ಅನಿಲ, ತವರ, ಕ್ರೋಮೈಟ್, ಪಾದರಸ, ತಾಮ್ರ, ಆಂಟಿಮೊನಿ, ಟಂಗ್ಸ್ಟನ್ ಮುಂತಾದ ಖನಿಜಗಳೂ ಅಲ್ಪ ಸ್ವಲ್ಪ ದೊರೆಯುತ್ತವೆ. ಮಧ್ಯ ಅಕ್ಷಾಂಶ ಪ್ರದೇಶದ ಬೆಳೆಗಳ ಜೊತೆಗೆ ಪಶುಪಾಲನೆಯ ಉತ್ಪನ್ನವೂ ಸೇರುತ್ತದೆ. ಆಂಕೊರೇಜಿನ ಬಳಿಯ ಮಟನುಸ್ಕ ಕಣಿವೆಯ ಬೆಳೆ ರಾಜ್ಯದ ಅರ್ಧ ಉತ್ಪತ್ತಿಯಷ್ಟಾದರೂ ವ್ಯವಸಾಯ ಅಲ್ಲಿ ಅಷ್ಟಾಗಿ ಮುಂದುವರಿದಿಲ್ಲ; ಮೀನುಗಾರಿಕೆ ಮತ್ತು ಅದರ ರಫ್ತು ಅಲಾಸ್ಕದ ಮುಖ್ಯ ಕೈಗಾರಿಕೆ. ಇದರಲ್ಲಿ ಸಾಲ್ಮನ್ ಜಾತಿಯ ಮೀನುಗಳೇ ಹೆಚ್ಚು. ಈ ಕೈಗಾರಿಕೆ ರಾಜ್ಯದ ಬಹುಪಾಲು ಕಾರ್ಮಿಕವರ್ಗಕ್ಕೆ ಉದ್ಯೋಗಾವಕಾಶವನ್ನು ಕಲ್ಪಿಸಿದೆ.

ಅಲಾಸ್ಕದ ಜನಸಂಖ್ಯೆ 8,60,370 (2003). ಸಣ್ಣ ಕಣಿವೆಗಳಲ್ಲಿ ದಕ್ಷಿಣದ ತೀರಪ್ರದೇಶಗಳಲ್ಲಿ ಬಹುಪಾಲು ಪ್ರಜೆಗಳು ವಾಸಿಸಿದರೆ, 20,000 ದಷ್ಟು ಅಲ್ಪ ಸಂಖ್ಯೆಯ ಎಸ್ಕಿಮೋಜನರು ರಾಜ್ಯದ ಉತ್ತರ ಹಾಗೂ ಪಶ್ಚಿಮ ಭಾಗದಲ್ಲಿ ವಾಸಿಸುವರು. ಆಂಕೊರೇಜ್, ಫೇರ್‌ಬ್ಯಾಂಕ್ಸ್, ಜೂನೆ ಮತ್ತು ಕೆಚಿಕನ್–ಇವು ಮುಖ್ಯ ನಗರಗಳು. (ಸಿ.ಎಂ.)

**ಅಲಿಘರ್:** ಉತ್ತರ ಪ್ರದೇಶದ ಅಲಿಘರ್ ಜಿಲ್ಲೆಯ ಮುಖ್ಯಪಟ್ಟಣ; ದೆಹಲಿಯಿಂದ 128 ಕಿಮೀ ದೂರದಲ್ಲಿದೆ. ಇದರ ಹಿಂದಿನ ಹೆಸರು ಕೊಯಿಲ್ ಅಥವಾ ಕೋಲ್. ಮುಸ್ಲಿಂ ಸಂತರ ಅನೇಕ ಗೋರಿಗಳಿವೆ. 1889ರಲ್ಲಿ ಸ್ಥಾಪಿತವಾದ ದೊಡ್ಡ ಲಯಾಲ್ ಗ್ರಂಥಭಂಡಾರವನ್ನು ಈಗ ಮಾಳವೀಯ ಗ್ರಂಥ ಭಂಡಾರ ಎಂದು ಕರೆಯುತ್ತಾರೆ. ಬೀಗಗಳು ಮುಂತಾದ ಲೋಹಪದಾರ್ಥಗಳು, ಜಂಖಾನಗಳು, ರತ್ನಗಂಬಳಿಗಳು ಇಲ್ಲಿ ಹೆಚ್ಚಾಗಿ ತಯಾರಾಗುತ್ತವೆ. ಇದು ಮುಸ್ಲಿಂರ ಪ್ರಸಿದ್ಧ ವಿದ್ಯಾಕೇಂದ್ರ . 1875 ರಲ್ಲಿ ಮುಸ್ಲಿಮರ ಅಭ್ಯುದಯಕ್ಕಾಗಿ ಸರ್ ಸೈಯದ್ ಅಹಮದ್ ಸ್ಥಾಪಿಸಿದ ವಿದ್ಯಾಶಾಲೆ ಪ್ರೌಢವಿದ್ಯಾಶಾಲೆಯಾಗಿ ಬೆಳೆದು ಈಗ ಅಲಿಘರ್ ವಿಶ್ವವಿದ್ಯಾಲಯವಾಗಿದೆ. ಇದಕ್ಕೆ ಸಂಬಂಧಿಸಿದ ಕಾಲೇಜುಗಳು, ವೃತ್ತಿಶಿಕ್ಷಣ ಶಾಲೆಗಳು, ವಿವಿಧ ಕಲಾಶಾಲೆಗಳು ಇವೆ. ಇಲ್ಲಿನ ನೇತ್ರವಿದ್ಯಾಕೇಂದ್ರ ತುಂಬ ಪ್ರಸಿದ್ಧಿ ಪಡೆದಿದೆ. ಜನಸಂಖ್ಯೆ 6,69,087. (ಜಿ.ಕೆ.ಜಿ.)

**ಅಲಿಪ್ತ ನೀತಿ ಚಳವಳಿ:** ಪ್ರಪಂಚದ ಅಭಿವೃದ್ಧಿಹೊಂದುತ್ತಿರುವ 114 ರಾಷ್ಟ್ರಗಳ ಒಂದು ಗುಂಪು. ಇದರ ಮೂಲತತ್ವಗಳು 1955ರಲ್ಲಿ ಇಂಡೋನೇಷ್ಯದ ಬಾಂಡುಂಗ್‌ನಲ್ಲಿ ರೂಪಿಸಲ್ಪಟ್ಟವು. ಭಾರತದ ಪ್ರಥಮ ಪ್ರಧಾನಿಯಾದ ಪಂಡಿತ್ ಜವಾಹರಲಾಲ್ ನೆಹರೂ 1955ರಲ್ಲಿ ಪ್ರಥಮ ಬಾರಿಗೆ ಈ ವಿದೇಶಾಂಗ ನೀತಿಯನ್ನು ಜಾರಿಗೆ ತಂದರು. 1961ರಲ್ಲಿ ಬೆಲ್‌ಗ್ರೇಡ್‌ನಲ್ಲಿ ಪ್ರಪಂಚದ ಅಲಿಪ್ತ ರಾಷ್ಟ್ರಗಳ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಭಾರತವೂ ಸೇರಿದಂತೆ ಪ್ರಪಂಚದ 25 ರಾಷ್ಟ್ರಗಳು ಭಾಗವಹಿಸಿದ್ದವು. ಈ ಅಲಿಪ್ತ ರಾಷ್ಟ್ರ ಚಳವಳಿಯ ಮುಖ್ಯ ಉದ್ದೇಶ ರಾಷ್ಟ್ರ ರಾಷ್ಟ್ರಗಳ ನಡುವೆ ಅಭಿವೃದ್ಧಿ, ಸ್ವಾತಂತ್ರ್ಯ, ಅನಕ್ಷರತೆ ಹಾಗೂ ಬಡತನ ನಿರ್ಮೂಲನೆ. ಅಲಿಪ್ತ ನೀತಿಯನ್ನು ತಟಸ್ಥ ನೀತಿ ಎಂದು ವಿವರಿಸಲಾಗಿದೆ. ಈಗ ಭಾರತ ಅಲಿಪ್ತ ನೀತಿಯನ್ನು ತನ್ನ ವಿದೇಶಾಂಗ ನೀತಿಯಲ್ಲಿ ಪಾಲಿಸುತ್ತಿದೆ. ಭಾರತ ಪ್ರತಿಯೊಂದು ಅಂತಾರಾಷ್ಟ್ರೀಯ ಘಟನೆಯನ್ನು ನ್ಯಾಯದ ತಕ್ಕಡಿಯಲ್ಲಿ ತೂಗಿ ಯಾವ ರಾಷ್ಟ್ರಕ್ಕೆ ಅನ್ಯಾಯವಾಗಿರುತ್ತದೆಯೋ ಆ ರಾಷ್ಟ್ರದ ಪರವಾಗಿ ಬೆಂಬಲ ನೀಡುತ್ತಿದೆ. ಅದರಲ್ಲಿಯೂ ಬಲಿಷ್ಠ ರಾಷ್ಟ್ರಗಳು ಅಶಕ್ತ ರಾಷ್ಟ್ರಗಳಿಗೆ ಮಾಡುವ ಅನ್ಯಾಯದ ವಿರುದ್ಧ ಹೋರಾಡುತ್ತಿದೆ. ಅಲಿಪ್ತ ನೀತಿ ಇಂದು ಅತಿ ಜನಪ್ರಿಯವಾಗಿದೆ. ವಿಶ್ವಸಂಸ್ಥೆಯನ್ನು ಬಿಟ್ಟರೆ ಅತ್ಯಂತ ಹೆಚ್ಚಿನ ಸದಸ್ಯ ರಾಷ್ಟ್ರಗಳನ್ನು ಹೊಂದಿರುವ ಅಂತಾರಾಷ್ಟ್ರೀಯ ಕೂಟ ಇದಾಗಿದೆ. (ಎಸ್.ಎಸ್.ಎಸ್.)

**ಅಲೆಂಡ್:** ಬಾಲ್ಟಿಕ್ ಸಮುದ್ರದಲ್ಲಿರುವ ಒಂದು ದ್ವೀಪ ಸಮೂಹ. $60^0$ ಉ. ಮತ್ತು $20^0$ ಪೂ. ರೇ. ಇದು ಬೊತ್ನಿಯಾ ಖಾರಿಯಲ್ಲಿದ್ದು, ಆಡಳಿತಾತ್ಮಕವಾಗಿ ಫಿನ್ಲೆಂಡಿನ ಅಧೀನಕ್ಕೊಳಪಟ್ಟ ಸ್ವತಂತ್ರ ಪ್ರದೇಶವಾಗಿದೆ. ಇದು ವ್ಯೂಹಾತ್ಮಕವಾಗಿ ಅತ್ಯಂತ ಪ್ರಮುಖವಾದ ಸ್ಥಾನದಲ್ಲಿ ನೆಲೆಸಿದೆ. ಇಲ್ಲಿ ಸ್ವೀಡಿಷ್ ಭಾಷೆ ಬಳಕೆಯಲ್ಲಿದೆ. ಸು. 300 ಜನವಸತಿಯುಳ್ಳ ದ್ವೀಪಗಳನ್ನು ಒಳಗೊಂಡಿದ್ದು, ದ್ವೀಪ ಸಮೂಹದಲ್ಲಿ ಅತ್ಯಂತ ದೊಡ್ಡ ದ್ವೀಪ ಫಾಸ್ಟ್ ಒಲೆಂಡ್. ಶೇ. 50ಕ್ಕಿಂತ ಹೆಚ್ಚಿನ ಜನ ಕಂಡುಬರುತ್ತಾರೆ. ಒಲೆಂಡ್‌ನ ರಾಜಧಾನಿ ಮಾರಿಹ್ಯಾಮ್ನ್ ಅಲೆಂಡ್ ದ್ವೀಪದಲ್ಲಿದೆ. ಇದು ಇಲ್ಲಿನ ಅತ್ಯಂತ ದೊಡ್ಡ ನಗರ. ಅಲೆಂಡ್‌ನ ಭೌಗೋಳಿಕ ವಿಸ್ತೀರ್ಣ ಸು. 13,517 ಚ.ಕಿಮೀ. ಜನಸಂಖ್ಯೆ 26,711 (2005). ಜನಸಾಂದ್ರತೆ ಚ.ಕಿಮೀ ಗೆ 17.5. ಇಲ್ಲಿನ ಹಣ ಯುರೊ. (ಬಿ.ಪಿ.)

**ಅಲೆಕ್ಸಾಂಡರ್ ದ್ವೀಪಗಳು:** ದಕ್ಷಿಣ ಅಂಟಾರ್ಕ್‌ಟಿಕ್ ಸಾಗರದಲ್ಲಿರುವ ಈ ದ್ವೀಪಗಳಲ್ಲಿನ ಮುಖ್ಯ ಭೂಭಾಗ ಗ್ರಹ್ಯಾಮ್‌ಲೆಂಡ್ ಪರ್ಯಾಯ ದ್ವೀಪದ ಪಶ್ಚಿಮಕ್ಕಿದೆ. ಬೆಲ್ಲಿಂಗ್‌ಹೌಸೆನ್ ಇವನ್ನು ಕಂಡುಹಿಡಿದು (1821) ಅಲೆಕ್ಸಾಂಡರ್ ಭೂ ಪ್ರದೇಶ ಎಂಬುದಾಗಿ ಹೆಸರಿಟ್ಟ (ಈ ದ್ವೀಪಗಳ ಭೌಗೋಳಿಕ ಮೊದಲಾದ ಲಕ್ಷಣವನ್ನು 1940ರಲ್ಲಿ ತಿಳಿಯಲಾಯಿತು). ಫಾಕ್‌ಲೆಂಡ್ ದ್ವೀಪಗಳ ವಿಸ್ತೃತ ಭಾಗವಾಗಿರುವ ಈ ದ್ವೀಪಗಳಲ್ಲಿ ಮೀನುಗಾರಿಕೆ ವಿಶೇಷ. ತಿಮಿಂಗಿಲಗಳನ್ನು ಹಿಡಿವ ತಂಡಗಳು ಈ ದ್ವೀಪಗಳಿಗೆ ಆಗಾಗ್ಗೆ ಭೇಟಿಕೊಡುತ್ತವೆ. (ಜಿ.ಕೆ.ಜಿ.)

**ಅಲೆಕ್ಸಾಂಡ್ರಿಯ:** ಉತ್ತರ ಈಜಿಪ್ಟಿನ ಮುಖ್ಯ ರೇವುಪಟ್ಟಣ. ಪ್ರ.ಶ.ಪೂ. 332ರಲ್ಲಿ ಮ್ಯಾಸಿಡೋನಿಯದ ದೊರೆ ಅಲೆಕ್ಸಾಂಡರ್ ಮಹಾಶಯನಿಂದ ನಿರ್ಮಿಸಲ್ಪಟ್ಟಿತೆಂದು ಪ್ರತೀತಿ.

ಈಜಿಪ್ಟಿನ ಪ್ರಾಚೀನ ಮತ್ತು ಐತಿಹಾಸಿಕ ಪಟ್ಟಣವಾದರೂ ಈಗ ಇದೊಂದು ಆಧುನಿಕ ಮಹಾನಗರವಾಗಿದೆ. ಇದು ಕೆಳ ಈಜಿಪ್ಟಿನ ನೈಲ್‌ನದಿ ಹಾಗೂ ಮೆಡಿಟರೇನಿಯನ್ ಸಮುದ್ರಕ್ಕೆ ಸಮೀಪದಲ್ಲಿದೆ. ಇಲ್ಲಿಂದ ಕೈರೋಗೆ 206 ಕಿಮೀ. ಈಜಿಪ್ಟಿನ ದೊಡ್ಡ ಪಟ್ಟಣಗಳ ರೈಲು ಸಂಪರ್ಕವಿದೆ. ಜನಸಂಖ್ಯೆ 33,28,196 (2003). ಅರಬ್ಬರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಮೆಡಿಟರೇನಿಯನ್ ವಾಯುಗುಣವಿದ್ದು ಮಳೆ ಅತಿ ಕಡಿಮೆ. ಬೇಸಗೆಯಲ್ಲಿ ಆಲಿಕಲ್ಲಿನ ಮಳೆಯಾಗುತ್ತದೆ. ಡಿಸೆಂಬರ್‌ನಿಂದ ಮಾರ್ಚ್‌ತಿಂಗಳವರೆಗೆ ಬಿಸಿಲಿನಿಂದ ಕೂಡಿದ ಹಿತಕರ ಹವೆ ಇರುತ್ತದೆ. ಅಗಲವಾದ ಕಾಲುವೆಗಳಿಂದ ನೀರು ಹಾಯಿಸಿ ಎರಡು ಬಂದರುಗಳನ್ನು ಈ ನಗರದ ಸಮೀಪದಲ್ಲಿ ನಿರ್ಮಿಸಲಾಗಿದೆ. ದೊಡ್ಡ

ಕೈಗಾರಿಕೆ ಮತ್ತು ವ್ಯಾಪಾರಕೇಂದ್ರ. ಈಜಿಪ್ಟಿನ ಆಮದು ರಫ್ತುಗಳ ಬಹುಭಾಗ ಈ ರೇವುಪಟ್ಟಣದ ಮುಖಾಂತರವೇ ನಡೆಯುತ್ತಿವೆ. ಅಲೆಕ್ಸಾಂಡ್ರಿಯ ವಿಶ್ವವಿದ್ಯಾಲಯದ ಕೇಂದ್ರ ಇಲ್ಲಿದೆ. (ಜಿ.ಕೆ.ಜಿ.)

ಅಲೆಕ್ಸಾಂಡರನ ಮರಣಾನಂತರ ಟಾಲಮಿ ಸಂತತಿಯ ಅರಸರು ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಈ ಅರಸರ ಆಳ್ವಿಕೆಯ ಕಾಲದಲ್ಲಿ ಈ ನಗರ ಸರ್ವತೋಮುಖವಾದ ಅಭಿವೃದ್ಧಿ ಹೊಂದಿತು. ಕಲೆ, ಧರ್ಮ, ವಿಜ್ಞಾನ ಹಾಗೂ ವ್ಯಾಪಾರ ಮುಂತಾದುವುಗಳಿಗೆ ಕೇಂದ್ರವಾಯಿತು. ಆ ಕಾಲದಲ್ಲಿ ಅಲೆಕ್ಸಾಂಡ್ರಿಯ ಮತ್ತು ಭಾರತದ ಮೌರ್ಯರ ರಾಜಧಾನಿಯಾದ ಪಾಟಲೀಪುತ್ರದ ಮಧ್ಯೆ ವಾಣಿಜ್ಯ, ರಾಜತಾಂತ್ರಿಕ ಹಾಗೂ ಧಾರ್ಮಿಕ ಸಂಪರ್ಕವೇರ್ಪಟ್ಟಿತ್ತು. ವಿಶಾಲವಾದ ಮತ್ತು ಸುಂದರವಾದ ಅರಮನೆಗಳಿಂದಲೂ ಸುಸಜ್ಜಿತವಾದ ರಂಗ ಮಂಟಪಗಳಿಂದಲೂ ವಾಣಿಜ್ಯೋದ್ಯಮಗಳಿಂದಲೂ ಅಲೆಕ್ಸಾಂಡ್ರಿಯ ಶೋಭಿಸುತ್ತಿತ್ತು. ಜ್ಞಾನಪ್ರಿಯರೂ ಕಲಾಸಂಪನ್ನರೂ ಆದ ಟಾಲಮಿ ಅರಸರು ಸಹಸ್ರಾರು ಗ್ರಂಥಗಳಿಂದ ಕೂಡಿದ್ದ ಭವ್ಯ ಪುಸ್ತಕ ಭಂಡಾರವನ್ನು ಸ್ಥಾಪಿಸಿದ್ದರು. ಈ ಗ್ರಂಥಭಂಡಾರದಲ್ಲಿ ರೋಮ್, ಗ್ರೀಸ್, ಭಾರತ ಮತ್ತು ಈಜಿಪ್ಟಿಗೆ ಸಂಬಂಧಿಸಿದ ಗ್ರಂಥಗಳಿದ್ದವು. ಪ್ರಶಕ್ತ ಶಕ ಒಂದನೆಯ ಶತಮಾನದಲ್ಲಿ ಕ್ರೈಸ್ತಧರ್ಮ ಇಲ್ಲಿ ಪ್ರಸಾರವಾಯಿತು.

ಈಜಿಪ್ಟ್‌ರಾಜ್ಯ ರೊಮನ್‌ಸಾಮ್ರಾಜ್ಯಕ್ಕೆ ಸೇರಿದ ಅನಂತರ ಈ ನಗರದ ಪ್ರಾಮುಖ್ಯತೆ ಇನ್ನೂ ಹೆಚ್ಚಿತು. ಇಡೀ ರೋಮನ್ ಸಾಮ್ರಾಜ್ಯದಲ್ಲಿ ಇದು ಎರಡನೆಯ ದೊಡ್ಡ ಮುಖ್ಯ ಪಟ್ಟಣವಾಗಿದ್ದು ವ್ಯಾಪಾರ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು. ಜೊತೆಗೆ ರೋಮನ್ ಸಾಮ್ರಾಜ್ಯದ ದಾಸ್ತಾನು ಸಂಗ್ರಹನಗರಗಳಲ್ಲೊಂದಾಗಿತ್ತು. ಇದೇ ಹೆಸರಿನ ಅನೇಕ ಪಟ್ಟಣಗಳು ಯುರೋಪ್ ಮತ್ತು ಅಮೆರಿಕ ಖಂಡಗಳಲ್ಲಿವೆ. (ಎಸ್.ಎನ್.)

**ಅಲೆಗಳ ಉಬ್ಬರವಿಳಿತದ ಶಕ್ತಿ:** ಸಮುದ್ರದ ಅಲೆಗಳು ನಿರಂತರವಾಗಿ ಏರುವುದು ಮತ್ತು ಇಳಿಮುಖವಾಗುವುದರಿಂದ ಉತ್ಪಾದನೆಯಾಗುವ ಶಕ್ತಿ. ಇದು ನವೀಕರಿಸಬಲ್ಲ ಶಕ್ತಿ. ಸಮುದ್ರದ ಅಲೆಗಳಲ್ಲಿ ಮೂರು ವಿಧಗಳಿವೆ: 1 ಗಾಳಿಯ ಅಲೆಗಳು; 2 ತೆರೆನೊರೆ (ಸರ್ಫ್); 3 ಅಲೆಗಳ ಉಬ್ಬರವಿಳಿತ ಅಥವಾ ಭರತವಿಳಿತ. ಗಾಳಿಯ ಅಲೆಗಳು ಹತ್ತು ಸಾವಿರ ಟನ್ ತೂಕದ ಜಹಜುಗಳನ್ನು ಹತ್ತಾರು ಅಡಿಗಳ ಎತ್ತರಕ್ಕೆ ಎತ್ತಬೇಕಾಗಿದ್ದರೆ ಅವುಗಳಲ್ಲಿ ಅಪಾರ ಶಕ್ತಿಯಿರಬೇಕು. ಆದರೆ ಈ ಶಕ್ತಿ ನಿರಂತರವಾಗಿ ದೊರಕುವುದಿಲ್ಲ. ತೆರೆನೊರೆಯಿಂದ ಶಕ್ತಿಕೇಂದ್ರಗಳನ್ನು ಸ್ಥಾಪಿಸಲು ಎಲ್ಲ ಸಮುದ್ರ ತೀರಗಳಲ್ಲೂ ಒಂದೇ ಕ್ರಮದಲ್ಲಿ ನಡೆಯುವ ಖಗೋಳ ಘಟನೆಯಾದ್ದರಿಂದ ಅದು ಯಾವಾಗ ಬರುವುದೆಂದು ಮುಂಚೆಯೇ ಹೇಳಬಹುದು.

ಉಬ್ಬರದ ಶಕ್ತಿಯನ್ನು ಬಳಸಲು ಹಲವು ಮಾರ್ಗಗಳಿವೆ. ನದಿಯ ಅಳಿವೆಯಲ್ಲಿ 6 ಮೀ ಎತ್ತರದ ಭರತವಿದ್ದು ಕಟ್ಟೆಯನ್ನು ಕಟ್ಟಬಹುದಾದ ಹಳ್ಳವಿದ್ದರೆ ಕಟ್ಟೆಯಲ್ಲಿ ಬಾಗಿಲುಗಳನ್ನಿಟ್ಟು ಉಬ್ಬರದ ಕಾಲದಲ್ಲಿ ಎಲ್ಲ ಬಾಗಿಲುಗಳನ್ನೂ ತೆರೆದು ಹಳ್ಳವನ್ನು ತುಂಬಬಹುದು. ಉಬ್ಬರ ಎತ್ತರಕ್ಕೆ ಹೋದಾಗ ಬಾಗಿಲುಗಳನ್ನು ಮುಚ್ಚಿ ಕೂಡಿಟ್ಟ ನೀರನ್ನು ತಿರುಬಾನಿಗಳ ಮೂಲಕ ಬಿಡಬಹುದು. ಕಟ್ಟೆಯ ಎರಡು ಮುಖಗಳಲ್ಲಿಯೂ ನೀರು ಒಂದೇ ಮಟ್ಟಕ್ಕೆ ಬರುವವರೆಗೂ ಕೆಲವು ಗಂಟೆಗಳ ಕಾಲ ಈ ನೀರು ಒದಗುತ್ತದೆ.

ಎತ್ತರದ ಉಬ್ಬರದ ಮಟ್ಟದಲ್ಲಿ ಒಂದು, ತಗ್ಗಿನ ಮಟ್ಟದಲ್ಲಿ ಇನ್ನೊಂದು–ಹೀಗೆ ಎರಡು ಕೊಳಗಳಿದ್ದರೆ ಒಂದೇ ಸಮನಾಗಿ ವಿದ್ಯುತ್ತಿನ ಉತ್ಪಾದನೆಯಾಗುತ್ತದೆ. ಟರ್ಬೋ–ಜನರೇಟುಗಳನ್ನು ಕೂರಿಸಿದ ಕಟ್ಟೆ ಈ ಕೊಳಗಳನ್ನು ಪ್ರತ್ಯೇಕಿಸುತ್ತದೆ. ಟರ್ಬೈನುಗಳಿಂದ ನೀರು ತಗ್ಗಿನ ಕೊಳಕ್ಕಾದರೂ ಬೀಳಬಹುದು. ಇಲ್ಲವೆ ನೇರವಾಗಿ ಸಮುದ್ರವನ್ನಾದರೂ ಸೇರಬಹುದು. ಸಮುದ್ರದಿಂದ ಕೊಳಗಳಿಗೂ ಕೊಳದಿಂದ ಕೊಳಕ್ಕೂ ಬಾಗಿಲುಗಳನ್ನು ಸರಿಯಾದ ಕಾಲದಲ್ಲಿ ತೆರೆದರೆ ದಿನವೆಲ್ಲ ತಿರುಬಾನಿಗಳನ್ನು ನಡೆಸುವುದು ಸಾಧ್ಯ. ಇದರಲ್ಲಿ ಒಂದು ಕೊಳದ ಯೋಜನೆಯಿಂದ ಬರುವಷ್ಟು ಪರಮಾವಧಿಯ ವಿದ್ಯುತ್ ಉತ್ಪಾದನೆಯಾಗಲಾರದು. ಆದರೆ ಒಂದೇ ಕೊಳವಿದ್ದರೆ ದಿನಕ್ಕೆ ಎರಡು ಸಾರಿ ವಿದ್ಯುತ್ತಿನ ಉತ್ಪತ್ತಿಯೇ ಇರುವುದಿಲ್ಲ. ಪ್ರತಿಯಾಗಿ ಮತ್ತೆರಡು ಸಾರಿ ಪರಮಾವಧಿಯ ವಿದ್ಯುತ್ತೂ ಬರುತ್ತದೆ. ಅದು ನಮಗೆ ಆವಶ್ಯಕವಾದದ್ದಕ್ಕಿಂತ ಹೆಚ್ಚಾಗಬಹುದು.ಆಗ ಮತ್ತೊಂದು ಎರಡು ಕೊಳಗಳ ಯೋಜನೆಯನ್ನೂ ಇಡಬಹುದು. ಪರಮಾವಧಿಯ ಎತ್ತರದ ಉಬ್ಬರ ಬಂದಾಗ ನೀರನ್ನು ಎತ್ತರದಲ್ಲಿರುವ ಎರಡನೆಯ ಕೊಳಕ್ಕೆ ಪಂಪುಮಾಡಿ ಶೇಖರಿಸಿ ಬೇಕಾದಾಗ ಬಳಸಿಕೊಳ್ಳಬಹುದು.

ಇಂಗ್ಲೆಂಡಿನ ಸೆವರ್ನ್ ನದೀಮುಖದಲ್ಲಿಯೂ ಫ್ರಾನ್ಸ್‌ನಲ್ಲಿ ರ್‍ಯಾನ್ ನದಿಯಲ್ಲಿಯೂ ಕೆನಡದಲ್ಲಿ ಫಂಡಿ ಕೊಲ್ಲಿಯಲ್ಲಿಯೂ ಈ ಯೋಜನೆಗೆ ಸನ್ನಿವೇಶಗಳು ಅನುಕೂಲವಾಗಿವೆ. ಬೇರೆ ವಿಧಾನಗಳಲ್ಲಿ ತಗಲುವ ವೆಚ್ಚಕ್ಕಿಂತ ಈ ಕ್ರಮದಲ್ಲಿ ಉತ್ಪಾದನಾ ವೆಚ್ಚ ಕೊಂಚ ಹೆಚ್ಚಾಗಿರುವುದರಿಂದ ದೊಡ್ಡ ಯೋಜನೆಗಳಿಗೆ ಅವಕಾಶವಾಗಿಲ್ಲ. ಆದರೆ ಭೂಗರ್ಭದಲ್ಲಿ ಇಂಧನಗಳು ತೀರಿದಂತೆ ಇಂಗ್ಲೆಂಡಿನಲ್ಲಂತೂ ಈ ಯೋಜನೆ ಸಾಧ್ಯವಾಗುತ್ತದೆ. ಸೆವರ್ನ್ ನದಿಗೆ ಅಡ್ಡಲಾಗಿ 4 ಕಿಮೀ ಉದ್ದದ ಕಟ್ಟೆಯನ್ನು ಕಟ್ಟಿ ಒಂದು ಕೊಳದ ಯೋಜನೆಯನ್ನು ಪ್ರಾರಂಭಿಸಬಹುದು. ಸು. 10 ಕೋಟಿ ಪೌಂಡು ಖರ್ಚಿನಿಂದ ವರ್ಷಕ್ಕೆ 200 ಕೋಟಿ ಕಿಲೋವಾಟ್ ಗಂಟೆಗಳ (ಕೆ.ಡಬ್ಲ್ಯು.ಎಚ್.) ವಿದ್ಯುತ್ತನ್ನು ಉತ್ಪತ್ತಿಮಾಡಿ 10 ಲಕ್ಷ ಟನ್ ಕಲ್ಲಿದ್ದಲನ್ನು ಪ್ರತಿ ವರ್ಷವೂ ಉಳಿಸಬಹುದು.

ನೋವಸ್ಕೋಷಿಯವನ್ನು ಕೆನಡದಿಂದ ಪ್ರತ್ಯೇಕಿಸುವ ಫಂಡಿಕೊಲ್ಲಿಯಲ್ಲಿ ಇಂಥ ಎರಡು ಯೋಜನೆಗಳು ಸಾಧ್ಯ. ಪೆಟಕೋಡಿಯಾಕ್ ನದಿಯ ಮೇಲಿನ ಯೋಜನೆಯಿಂದ ವರ್ಷಕ್ಕೆ 130 ಕೋಟಿ ಕಿಲೋವಾಟ್ ಗಂಟೆಗಳಷ್ಟು ವಿದ್ಯುತ್ತು ಬರಬಹುದು. ಪಾಸಮಕ್ವಾಡಿ ಯೋಜನೆಯಲ್ಲಿ ನಡುವೆ ದ್ವೀಪಗಳಿರುವುದರಿಂದ ಕಟ್ಟೆಯ ಖರ್ಚು ಕಡಿಮೆಯಾಗುತ್ತದೆ. ಇಲ್ಲಿ 60 ಕೋಟಿ ಕಿಲೋವಾಟ್ ಗಂಟೆಗಳ ಶಕ್ತಿಯನ್ನು ಒಂದೇ ಸಮವಾಗಿ ತೆಗೆಯುವುದು ಸಾಧ್ಯ. ಖರ್ಚು ಕಲ್ಲಿದ್ದಲಿನ ಯೋಜನೆಯ ಎರಡರಷ್ಟು ಆಗುತ್ತದೆ.

ಭಾರತದಲ್ಲಿಯೂ ನದಿ ಮುಖಜ ಭೂಮಿಯಲ್ಲಿ ಇಂತಹುದೇ ಯೋಜನೆಗಳು ಸಾಧ್ಯ. ಸಾಗರ ವಿಜ್ಞಾನ ರಾಷ್ಟ್ರೀಯ ಸಂಸ್ಥೆಯೊಂದು ಗೋವದಲ್ಲಿ ಸ್ಥಾಪನೆಯಾಗಿದೆ. ಇದರ ಪ್ರಕಾರ ಭಾರತದಲ್ಲಿ 8000 ದಿಂದ 9000 ಮೆ.ವಾ. ಉಬ್ಬರವಿಳಿತ ಶಕ್ತಿ ಸಾಮರ್ಥ್ಯವಿದೆಯೆಂದು ತಿಳಿದಿದೆ. ಗುಜರಾತಿನ ಕಚ್ ಮತ್ತು ಖಂಬಾತಖಾರಿಗಳು, ಪೂರ್ವಕರಾವಳಿಯಲ್ಲಿರುವ ಪಶ್ಚಿಮ ಬಂಗಾಲದ ಸುಂದರ ಬನ, ಲಕ್ಷದ್ವೀಪ ಮತ್ತು ನಿಕೋಬಾರ್ ದ್ವೀಪಗಳ ತೀರಗಳು ಉಬ್ಬರವಿಳಿತ ಶಕ್ತಿ ಅಭಿವೃದ್ಧಿ ಪಡಿಸಲು ಸೂಕ್ತವಾದ ಪ್ರದೇಶವೆಂದು ಗುರುತಿಸಲಾಗಿದೆ. ಕಚ್‌ಖಾರಿಯಲ್ಲಿ ಒಂದು ಉಬ್ಬರವಿಳಿತ ಶಕ್ತಿ ಉತ್ಪಾದನ ಕೇಂದ್ರವನ್ನು ಸ್ಥಾಪಿಸಲು ಯೋಚಿಸಲಾಗಿದೆ. (ಎಚ್.ಸಿ.ಕೆ.)

**ಅಲೆಗ್ಸಾಂಡರ್ ಫ್ರೈಯರ್‌ವಾನ್ ಹಂಬೋಲ್ಟ್** : 1769–1859. ಜರ್ಮನ್ ಭೂವಿಜ್ಞಾನಿ ಇವನು ಫ್ರಾಂಕ್‌ಫರ್ಟ್, ಬರ್ಲಿನ್ ಮತ್ತು ಗಾಟಿನ್‌ನಲ್ಲಿ ಅಧ್ಯಯನ ಮಾಡಿದ. ಪಶ್ಚಿಮ ಯುರೋಪನ್ನು 1790 ರಲ್ಲಿ ಪ್ರವಾಸ ಮಾಡಿ, ಅನಂತರ 1799 – 1804 ರವರೆಗೆ ಮಧ್ಯ ಮತ್ತು ದಕ್ಷಿಣ ಅಮೆರಿಕದಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿದ. 1880 ರಲ್ಲಿ ಪ್ಯಾರಿಸಿಗೆ ರಾಜತಾಂತ್ರಿಕ ನಿಯೋಗಿಯಾಗಿ ಹೋದ. ಅಲ್ಲಿ ಇವನು ನರೇಟೀವ್‌ಸ್ ಎಂಬ ಪ್ರಖ್ಯಾತ ಕೃತಿಯನ್ನು ರಚಿಸಿದ. ಇದನ್ನು ಎಚ್.ಎಮ್. ವಿಲಿಯಂಸ್ (1814–29) ಮತ್ತು ಥಾಮಾಸಿನ್ ರೋಸ್ (1852–53) ಇಂಗ್ಲಿಷಿಗೆ ಭಾಷಾಂತರಿಸಿದರು. 1829 ರಲ್ಲಿ ಮಧ್ಯ ಏಷ್ಯದಲ್ಲಿ ಪ್ರವಾಸ ಮಾಡಿ ತರುವಾಯ ಬರ್ಲಿನ್‌ನಲ್ಲಿ ನೆಲೆಸಿದ. ಆಗ ಕಾಸ್ಮೋಸ್ ಎಂಬ ಕೃತಿಯನ್ನು ರಚಿಸಿದ. ಈ ಕೃತಿಯಲ್ಲಿ ಸೃಷ್ಟಿ (ಬ್ರಹ್ಮಾಂಡ) ಯಲ್ಲಿ ಭೂಮಿಯ ಸ್ಥಾನವನ್ನು ಮತ್ತು ಅದರ ಭೌತಿಕ ಸ್ವರೂಪವನ್ನು ವಿವರಿಸಲು ಪ್ರಯತ್ನಿಸಿದ್ದಾನೆ. ಇದಕ್ಕೆ ಸಂಬಂಧಿಸಿದಂತೆ 1845 ರಿಂದ 1862 ರಡರ ನಡುವೆ ಈ ಸಿ.ಒಟ್ಟೆ ಲಂಡನ್ ಅವರು ಹಂಬೋಲ್ಟನ ಬರೆವಣಿಗೆಗಳನ್ನು 5 ಸಂಪುಟಗಳಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಿದನು.



ಈತ ದಕ್ಷಿಣ ಅಮೆರಿಕದ ಪ್ರವಾಸಕ್ಕೆ ಸಂಬಂಧಿಸಿದಂತೆ 30 ಸಂಪುಟಗಳನ್ನು ರಚಿಸಿದ್ದಾನೆ. ದಕ್ಷಿಣ ಅಮೆರಿಕದ ಮಧ್ಯಭಾಗ, ಅಮೆಜ಼ಾನ್, ಓರಿನೋಕೊ ನದಿಗಳ ಪ್ರದೇಶ ಮತ್ತು ಆಂಡೀಸ್ ಪರ್ವತಗಳಲ್ಲಿ ವ್ಯಾಪಕವಾಗಿ ಸಂಚರಿಸಿ ಅಧ್ಯಯನ ನಡಸಿದ. ಸಾಗರಿಕ ಪ್ರವಾಹಗಳನ್ನು ಅಭ್ಯಾಸಿಸಿದ. ಪೆರುವಿನ ಪ್ರವಾಹವನ್ನು ಹಂಬೋಲ್ಟ ಪ್ರವಾಹವೆಂದೂ ಕರೆಯುತ್ತಾರೆ. 1804ಕ್ಕೆ ಯುರೋಪಿಗೆ ಹಿಂತಿರುಗಿ ಭೂಗೋಳವಿಜ್ಞಾನ ಹಾಗೂ ವಾಯುಗುಣ ಶಾಸ್ತ್ರಗಳ ಅಧ್ಯಯನಕ್ಕೆ ಬುನಾದಿ ಹಾಕಿದ. ರಷ್ಯ, ಸೈಬೀರಿಯ ಮತ್ತು ಮಧ್ಯ ಏಷ್ಯಗಳಲ್ಲಿ ಸಂಚರಿಸಿ ಮಹತ್ವದ ಮಾಹಿತಿಗಳನ್ನು ಕಲೆಹಾಕಿದ. ಇವನು ತನ್ನ ವಿವರಣೆಯಲ್ಲಿ ವಿವಿಧ ಪ್ರದೇಶಗಳ ಭೂ ಮೇಲ್ಮೈಗಳನ್ನು ಹೋಲಿಕೆ ಮಾಡಿ ವಿವರಿಸಿದ್ದಾನೆ. ಈ ಪದ್ಧತಿಯೇ ಅನಂತರ ತೌಲನಿಕ ಭೌಗೋಳಿಕ ಅಧ್ಯಯನದ ಆರಂಭಕ್ಕೆ ಕಾರಣವಾಯಿತು ಇವನಿಂದ ಪ್ರಾಕೃತಿಕ ಹಾಗೂ ಪ್ರಾದೇಶಿಕ ಅಧ್ಯಯನಕ್ಕೂ ಹೆಚ್ಚು ಮಹತ್ವ ಬಂದಿತು. (ಎಂ.ಆರ್.ಎಚ್.)

**ಅಲೆತಡೆ:** ಸಮುದ್ರದ ಅಲೆಗಳ ರಭಸ ತಡೆಯಲು ನಿರ್ಮಿಸಿದ ಕೃತಕ ಕಟ್ಟಡ (ಬ್ರೇಕ್ ವಾಟರ್). ಕೃತಕ ಬಂದರುಗಳಿಗೆ ಇದು ಅಲೆಗಳ ಹೊಡೆತಗಳಿಂದ ರಕ್ಷಣೆ ಒದಗಿಸುತ್ತದೆ. ನೈಸರ್ಗಿಕ ಬಂದರುಗಳಲ್ಲಿ ಪೂರ್ತಿ ರಕ್ಷಣೆ ನೀಡುತ್ತದೆ. ಅಲೆತಡೆಗಳನ್ನು

ಸಾಮಾನ್ಯವಾಗಿ ದಡಕ್ಕೆ ಭದ್ರವಾಗಿ ಬಿಗಿಯುತ್ತಾರೆ. ಒಂದೇ ಕಟ್ಟಡವನ್ನು ದೋಣಿಗಳನ್ನು ನಿಲ್ಲಿಸುವುದಕ್ಕೂ ಅಲೆಗಳನ್ನೂ ಎದುರಿಸುವುದಕ್ಕೂ ಉಪಯೋಗವಾಗುವ ಹಾಗೆ ಕಟ್ಟಬಹುದಾದರೂ ರಕ್ಷಣೆಯ ಭಾಗವೇ ಇದರಲ್ಲಿ ಮುಖ್ಯ. ಅಲೆತಡೆಗಳನ್ನು ಕಟ್ಟುವುದಕ್ಕೆ ಖರ್ಚು ವಿಶೇಷವಾಗುವುದರಿಂದ ಅವುಗಳ ಸ್ಥಾನ ನಿರ್ದೇಶನವನ್ನು ಜಾಗರೂಕತೆಯಿಂದ ಮಾಡಬೇಕು. ಕಟ್ಟಡದ ಮೇಲೆ ಅಲೆಗಳು ನೇರವಾಗಿ ಬಡಿದರೆ ಆಘಾತ ಹೆಚ್ಚು. ಆದರೆ ಓರೆಯಾಗಿ ಹೊಡೆದಾಗ ಕಟ್ಟಡದ ಮೇಲಿನ ಹೊಡೆತ ಕಡಿಮೆಯಾದರೂ ಬಂದರಿನ ಪ್ರವೇಶಮಾರ್ಗಕ್ಕೆ ಅಡ್ಡಲಾಗಿ ಅಲೆಗಳು ಹರಿದು ಸಮುದ್ರ ಪ್ರಕ್ಷುಬ್ಧವಾಗಿದ್ದಾಗ ಹಡಗುಗಳು ಒಳಗೆ ಬರುವುದೇ ಅಪಾಯವಾಗಬಹುದು. ಅದಕ್ಕಾಗಿ ಅಲೆತಡೆಗಳನ್ನು ಯಾವ ದಿಕ್ಕಿನಲ್ಲಿ ಕಟ್ಟಿದರೆ ಅಲೆಗಳು ಬೇರೆ ದಿಕ್ಕಿಗೆ ತಿರುಗಿ ಬಂದರಿನ ಹೊರಗಡೆಯ ತೀರಕ್ಕೆ ಬಡಿಯುವುವೋ ಆ ದಿಕ್ಕಿನಲ್ಲಿ ಕಟ್ಟಬೇಕು. ನದಿಗಳ ಅಳಿವೆಗಳಲ್ಲಿ ಬಂದರುಗಳಿರುವಾಗ ಅಲೆಗಳನ್ನು ಎಲ್ಲ ಕಾಲದಲ್ಲಿಯೂ ತಡೆಯುವುದು ಸಾಧ್ಯವಾಗಲಾರದು. ಅಂಥ ಕಡೆಗಳಲ್ಲಿ ಅಲೆಬಲೆಗಳನ್ನು (ವೇವ್–ಟ್ರ್ಯಾಪ್ಸ್) ಕಟ್ಟಬೇಕಾಗುತ್ತದೆ. ಪ್ರವೇಶನಾಲೆಯ ಪಕ್ಕಗಳಲ್ಲಿ ಸಮುದ್ರದ ಕಡೆಗೆ ಮುಖವನ್ನು ತಿರುಗಿಸಿರುವ ಈ ಆಳವಾದ ಬಾಯಿಗಳು ಅಲೆಗಳನ್ನು ಹೀರುತ್ತವೆ. ಸಮುದ್ರತೀರದಲ್ಲಿರುವ ಒಳಚಾಚುಗಳು, ಭೂಶಿರಗಳು, ತೀರಕ್ಕೆ ದೂರವಾದ ದ್ವೀಪಗಳು, ನೀರೊಳಗಣ ಬಂಡೆಗಳು–ಇವನ್ನೆಲ್ಲ ಸರಿಯಾಗಿ ಬಳಸಿಕೊಳ್ಳಬೇಕು. ಬಂದರಿನ ಪ್ರವೇಶ ಮಾರ್ಗದಲ್ಲಿ ಯಾವ ಅಡಚಣೆಗಳೂ ಇಲ್ಲದೆ ದೊಡ್ಡ ಹಡಗುಗಳೂ ಸರಾಗವಾಗಿ ಒಳಕ್ಕೆ ಸಂಚರಿಸುವಂತಿರಬೇಕು.

ಬಂದರಿನಲ್ಲಿರಬೇಕಾದ ನೀರಿನ ಕನಿಷ್ಠ ಆಳಕ್ಕೆ ಅನುಸಾರವಾಗಿ ಅಲೆತಡೆಯ ಕನಿಷ್ಠ ಎತ್ತರವನ್ನು ನಿರ್ಣಯಿಸಬೇಕು. ನೀರಿನ ಆಳ 23 ಮೀ ಗಿಂತಲೂ ಹೆಚ್ಚಾದರೆ ಅಲೆತಡೆಯ ಬಾಹುಗಳ ಉದ್ದವೂ ಹೆಚ್ಚಾಗುತ್ತದೆ. ಕಟ್ಟಡದ ಖರ್ಚೂ ವಿಪರೀತವಾಗುತ್ತದೆ. ಹೂಳನ್ನೆತ್ತುವುದು (ಡ್ರೆಡ್ಜಿಂಗ್) ಹೆಚ್ಚಾಗದ ಹಾಗೂ ಆವಶ್ಯಕವಾದ ಬಂದರಿನ ವಿಸ್ತೀರ್ಣ ದೊರಕುವ ಹಾಗೂ ಅಲೆತಡೆಯ ಜಾಗವನ್ನು ಆಖೈರಾಗಿ ನಿಶ್ಚಯಿಸಬೇಕಾಗುತ್ತದೆ.

ಅಲೆತಡೆಯ ಪರಿಣಾಮವಾಗಿ ಸಮುದ್ರತೀರದಲ್ಲಿ ಮಣ್ಣು ಕೊರೆದು ಹೋಗಬಹುದು; ಇಲ್ಲವೆ ತುಂಬಿಕೊಳ್ಳಬಹುದು. ಅಲೆಗಳು ಸಮುದ್ರತೀರವನ್ನು ಓರೆಯಾಗಿ ಬಡಿದರೆ ಉತ್ಪನ್ನವಾಗುವ ಪ್ರವಾಹಗಳು ತೀರದ ಮಣ್ಣನ್ನು ಕೊರೆದು ಬೇರೆ ಕಡೆಗೆ ಸಾಗಿಸಬಹುದು. ಇದರಿಂದ ಅಲೆತಡೆಯ ಪಕ್ಕದಲ್ಲಿ ಕೆಲವು ಕಿಮೀಗಳವರೆಗೂ ಸಮುದ್ರತೀರದ ಆಸ್ತಿಗಳಿಗೆ ನಷ್ಟವಾಗಬಹುದು.

ಭರತದ ಉಬ್ಬರವಿಳಿತಗಳ ವ್ಯಾಪ್ತಿಯೂ ಅಲೆತಡೆಯ ಜಾಗದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಉಬ್ಬರದ ನೀರಿನ ಇಳಿತದ ಪ್ರವಾಹ ಕಡಿಮೆಯಾಗಿದ್ದರೆ ಬಂದರಿನ ದಾರಿಯಲ್ಲಿ ಆಳ ಕಡಿಮೆಯಾಗುವುದಿಲ್ಲ. ಸಮುದ್ರವನ್ನು ಸೇರುವ ನದಿಗಳ ಪ್ರವಾಹವನ್ನೂ ಅಲೆತಡೆಯ ಜಾಗವನ್ನು ನಿರ್ಣಯಿಸುವಾಗ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ನದಿಯಲ್ಲಿ ಬರುವ ನೀರಿನ ಪ್ರಮಾಣ, ಅದರ ವೇಗ, ಮೇಲಿನಿಂದ ಬರುವ ಮೆಕ್ಕಲುಮಣ್ಣು–ಇವುಗಳಿಂದ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕು.

ಸಮುದ್ರ ವರ್ಷದ ಯಾವ ಕಾಲದಲ್ಲಿ ಪ್ರಬಲ ಮಾರುತ ಮತ್ತು ಅಲೆಗಳಿಂದ ಹೊರತಾಗಿದ್ದು ಶಾಂತವಾಗಿರುವುದೆಂದು ನೋಡಿ ಅಲೆತಡೆಗಳ ದುರಸ್ತಿಯನ್ನು ತೆಗೆದುಕೊಳ್ಳಬೇಕು. ಭಾರತದಲ್ಲಿರುವ ಹಾಗೆ ಮಾನ್ಸೂನ್ ಮಾರುತಗಳು ಬೀಸುವ ಕಡೆ ಋತುಗಳಿಗೆ ಅನುಸಾರವಾಗಿ ಗಾಳಿಯ ದಿಕ್ಕೂ ಬಲವೂ ನಿಯತಕ್ರಮದಲ್ಲಿ ಬದಲಾಗುತ್ತವೆ. ಚಂಡಮಾರುತಗಳೂ ಸುಂಟರಗಾಳಿಗಳೂ ಕ್ಲುಪ್ತಕಾಲದಲ್ಲಿ ಬೀಸುತ್ತವೆ. (ಎಚ್.ಸಿ.ಕೆ.)

**ಅಲೆಪ್ಪಿ:** ಕೇರಳ ರಾಜ್ಯದ ಪಶ್ಚಿಮ ಕರಾವಳಿಯಲ್ಲಿರುವ ಒಂದು ಜಿಲ್ಲೆ ಮತ್ತು ವ್ಯಾಪಾರ ಕೇಂದ್ರ. ಅಲಪುಲ್ಯೆ, ಔಲಪುಲ್ಯೆ ಎಂದೂ ಕರೆಯುತ್ತಾರೆ. 1958ರಲ್ಲಿ ಕ್ವಿಲಾನಿನ ಆರು ತಾಲ್ಲೂಕುಗಳ ಜೊತೆ ಕೊಟ್ಟಾಯಮ್‌ನ ಒಂದು ತಾಲ್ಲೂಕನ್ನು ಸೇರಿಸಿ ಈ ಜಿಲ್ಲೆಯನ್ನು ನಿರ್ಮಿಸಲಾಯಿತು (ಉತ್ತರ ಅಕ್ಷಾಂಶ $9^0$–$10^0$ ಮತ್ತು ಪೂರ್ವರೇಖಾಂಶ $76^0$–$77^0$). ವಿಸ್ತೀರ್ಣ ಸು. 1138 ಚ.ಕಿಮೀ. ಅಲೆಪ್ಪಿ ಪಟ್ಟಣ ಕೇರಳ ರಾಜ್ಯದ ಸುರಕ್ಷಿತವಾದ ಪ್ರಮುಖ ರೇವುಪಟ್ಟಣಗಳಲ್ಲೊಂದು. ಕೊಚ್ಚಿನ್ ಪಟ್ಟಣದಿಂದ 56 ಕಿಮೀ ದೂರದಲ್ಲಿದೆ. ವಿಸ್ತೀರ್ಣ 20.5 ಚ.ಕಿಮೀ. ಜನಸಂಖ್ಯೆ 5,67,850. 18ನೆಯ ಶತಮಾನದಿಂದಲೂ ಪ್ರಸಿದ್ಧಿ ಪಡೆದಿದೆ. ಇಂಗ್ಲಿಷರು 18ನೆಯ ಶತಮಾನದ ಕೊನೆಯವರೆಗೂ ಈ ರೇವಿನ ಮೂಲಕ ವ್ಯಾಪಾರ ನಡೆಸುತ್ತಿದ್ದರು. ರೈಲು ಅಥವಾ ಒಳ್ಳೆಯ ರಸ್ತೆ ಮಾರ್ಗಗಳಿಲ್ಲ. ಒಳನಾಡಿನ ಹೆಚ್ಚು ಸಂಚಾರಸೌಕರ್ಯ ಮತ್ತು ಸರಕುಗಳ ಸಾಗಾಣಿಕೆ ಕಾಲುವೆಗಳ ಮೂಲಕವೇ. ಜಿಲ್ಲೆಯ ಮುಖ್ಯ ಬೆಳೆ ತೆಂಗು. ಜನರ ಮುಖ್ಯ ಕಸಬು ತೆಂಗಿನ ಎಣ್ಣೆ ತೆಗೆಯುವುದು, ತೆಂಗಿನ ನಾರು ಬಿಡಿಸುವುದು, ಚಾಪೆ ನೇಯುವುದು ಇತ್ಯಾದಿ. ರೇವುಪಟ್ಟಣದಿಂದ ಮುಖ್ಯವಾಗಿ ತೆಂಗು, ಜಮಖಾನಗಳು ಏಲಕ್ಕಿ, ಮೆಣಸು ರಫ್ತಾಗುವುವು. ಇಲ್ಲಿ ಸನಾತನಧರ್ಮದ ಕಾಲೇಜಿದೆ; ಇದು ತಿರುವಾಂಕೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸೇರಿದೆ. (ಎಸ್.ಎನ್.)

**ಅಲೆಮಾರಿ ಜನಜೀವನ:** ಒಂದು ಕಡೆ ಬಹುಕಾಲ ನೆಲೆಯಾಗಿ ನಿಲ್ಲದೆ, ಜೀವನೋಪಾಯಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಅಲೆಯುವ ಜನಕ್ಕೆ ಅಲೆಮಾರಿಗಳೆನ್ನುತ್ತಾರೆ (ನೊಮ್ಯಾಡ್ಸ್). ಪ್ರಾಚೀನ ಮಾನವನ ಇತಿಹಾಸವನ್ನು ಪರಿಶೀಲಿಸಿದಾಗ, ಆತ ತನ್ನ ಜೀವನೋಪಾಯಕ್ಕಾಗಿ ಬೇಟೆಯಾಡುವುದು, ಮೀನು ಹಿಡಿಯುವುದು, ವ್ಯವಸಾಯ, ಪಶುಪಾಲನೆ–ಮುಂತಾದವನ್ನು ಅವಲಂಬಿಸಿಕೊಂಡಿರುವುದು ಕಂಡುಬರುತ್ತದೆ. ವ್ಯವಸಾಯ ಮತ್ತು ಪಶುಪಾಲನೆಗೆ ಜಲವಸತಿ ಅತ್ಯಗತ್ಯ. ಮೀನು ಹಿಡಿಯುವುದಕ್ಕೂ ಬೇಟೆಗೂ ತಕ್ಕ ಸನ್ನಿವೇಶ ಸದಾಕಾಲವೂ ಒಂದೇ ಸ್ಥಳದಲ್ಲಿ ದೊರೆಯದಿದ್ದಾಗ, ಜಲದ ಅಭಾವ ತಲೆದೋರಿದಾಗ ಅವನ್ನರಿಸಿಕೊಂಡು ಮನುಷ್ಯ ಅಲೆದಾಡುವುದು ಸ್ವಾಭಾವಿಕ. ಈ ದೃಷ್ಟಿಯಿಂದ ಆದಿಮಾನವ ಅಲೆಮಾರಿಯಾಗಿ ತನ್ನ ಜೀವನವನ್ನು ಪ್ರಾರಂಭಿಸಿದನೆನ್ನಬಹುದು.

ಹಳೆ ಮತ್ತು ಹೊಸ ಶಿಲಾಯುಗದ ಜನ ಚೂಪಾದ ಕಲ್ಲಿನ ಆಯುಧಗಳಿಂದ ಮೃಗಗಳನ್ನು ಬೇಟೆಯಾಡಿ, ಗೆಡ್ಡೆಗೆಣಸುಗಳನ್ನು ಅಗೆದು ತಿಂದು ಜೀವನ ನಡೆಸುತ್ತಿದ್ದರಾದ ಕಾರಣ ಅಲೆಮಾರಿತನ ಅವರಿಗೆ ಸ್ವಾಭಾವಿಕವಾಗಿತ್ತು. ನಂತರ ನಾಗರಿಕತೆ ಹಾಗೂ ಸಂಸ್ಕೃತಿ ಹುಟ್ಟಿ ಬೆಳೆದಂತೆ ಅವರಲ್ಲಿ ಕೆಲವು ಜನ ಸ್ಥಿರ ವಸತಿಗಳನ್ನು ಕಲ್ಪಿಸಿಕೊಂಡು ವಾಸಿಸತೊಡಗಿದರೂ ಮತ್ತೆ ಕೆಲವರು ಅಲೆಮಾರಿ ಜೀವನವನ್ನೇ ಮುಂದುವರಿಸಿದರು.

ನಾಗರಿಕ ಮಾನವನು ಹಳ್ಳಿ, ಊರು, ಪಟ್ಟಣಗಳನ್ನು ನಿರ್ಮಿಸಿಕೊಂಡು ನೆಲೆನಿಲ್ಲಲು ಪ್ರಾರಂಭಿಸಿದಂತೆ ಸುತ್ತಲಿನ ಅರಣ್ಯಗಳು ಹಾಳಾದುವಲ್ಲದೆ ಅವನ್ನೇ ಆಶ್ರಯಿಸಿದ್ದ ಅಲೆಮಾರಿಗಳು, ಪ್ರಾಣಿಗಳೂ ಇಲ್ಲವಾದುವು ಅಥವಾ ಕಾಡಿನೊಂದಿಗೆ ಹಿಂದೆ ಹಿಂದೆ ಸರಿದು ದೂರದ ಅರಣ್ಯಗಳನ್ನು ಸೇರಿದುವು. ನಾಗರಿಕ ಜೀವನದ ಬಗ್ಗೆ ಅವರಿಗಿದ್ದ ಸಹಜ ಭಯ ಮತ್ತು ತಮ್ಮ ಜೀವನಕ್ರಮದಲ್ಲಿ ಅವರಿಗಿದ್ದ ಆಸ್ಥೆ–ಈ ಕಾರಣಗಳಿಂದಾಗಿ ಅವರು ಹಾಗೆ ಮಾಡಿರಬಹುದು. ಪ್ರಪಂಚದ ಎಲ್ಲ ಭಾಗಗಳಲ್ಲೂ ಅಲೆಮಾರಿ ಜೀವನ ನಡೆಸುವ ಜನಾಂಗಗಳು ಇವತ್ತಿಗೂ ಕಂಡು ಬರಲು ಇದೇ ಕಾರಣವಿರಬೇಕು. ಉತ್ತರ ಅಮೆರಿಕದ ಎಸ್ಕಿಮೋಗಳು, ಆಸ್ಟ್ರೇಲಿಯದ ಮೂಲನಿವಾಸಿಗಳು, ಆಫ್ರಿಕದ ಬುಷ್‌ಮನ್ ಜನ, ಅಂಡಮಾನಿನ ಮೂಲ ನಿವಾಸಿಗಳು ಮುಂತಾದವರು ಉತ್ತಮ ನಿದರ್ಶನ. ನಿಂತ ಕಡೆ ನಿಲ್ಲದೆ ಸದಾಕಾಲ ಅಲೆಯುವುದರಲ್ಲಿ ಅಗ್ರಗಣ್ಯರೆಂದರೆ ಜಿಪ್ಸಿಗಳು. ಇವರು ಪ್ರಪಂಚದ ಎಲ್ಲ ಭಾಗಗಳಲ್ಲೂ ಕಂಡುಬರುವರು.

ಚರಜೀವನದ ದೃಷ್ಟಾಂತವಾಗಿ ಬೇಟೆಯಾಡುವ, ಗೆಡ್ಡೆಗೆಣಸು ಕೂಡಿಡುವ, ಪಶುಪಾಲನೆಯಿಂದ ಜೀವಿಸುವ ಜನರನ್ನು ಪರಿಶೀಲಿಸಬಹುದು. ಚರ ಜೀವನದ ಜೀವಾಳವೆಂದರೆ ಪಶುಪಾಲನಾವೃತ್ತಿ. ದ್ರಾವಿಡರು ಭಾರತಕ್ಕೆ ವಲಸೆಬಂದವರೆಂದು ಹೇಳುತ್ತಾರೆ. ಅವರಿಗಿಂತ ಹಿಂದಿನವರಾದ ಕೋಲರೂ ಅಲೆಮಾರಿಗಳೇ. ಅನಂತರ ಮಧ್ಯ ಏಷ್ಯದಿಂದ ಆರ್ಯರು ವಲಸೆ ಬಂದರು. ಅವರ ಮುಖ್ಯ ವೃತ್ತಿ ಪಶುಪಾಲನೆಯಾಗಿತ್ತು. ದನಗಳ ಆಹಾರಕ್ಕಾಗಿ ಅವರು ದೇಶದಿಂದ ದೇಶಕ್ಕೆ ಅಲೆಯುತ್ತ ಬಂದರು.

ಆಂಧ್ರಪ್ರದೇಶದ ಇರ್ಕುಳ ಮತ್ತು ಎನ್ನಡಿಗಳು ಹಕ್ಕಿ ಪಕ್ಷಿಗಳನ್ನು ಬೇಟೆಯಾಡಿ ಜೀವನ ನಡೆಸುತ್ತಾರೆ. ಬಿರ್‌ಹರ್, ಕ್ಹರಿಯಾ, ಚೆಂಚು, ಮಲಪನ್‌ತರಂ, ಕಾಡರರು, ಪಾಳಿಯನ್, ಪನಿಯನ್, ಕುರುಂಬ ಮುಂತಾದವರು ಗೆಡ್ಡೆಗೆಣಸನ್ನು ಅಗೆದು ಶೇಖರಿಸಲು ಸುತ್ತಮುತ್ತಲ ಕಾಡುಮೇಡುಗಳಲ್ಲಿ ಅಲೆಯುತ್ತಾರೆ. ನೀಲಗಿರಿಯ ತೋಡರು, ಉತ್ತರಭಾರತದ ಗಾದ್ದಿಗಳು ಪಶುಪಾಲನೆಯಿಂದ ಜೀವನ ನಡೆಸುತ್ತಾರೆ. ಗಾದ್ದಿಗಳು ತಮ್ಮ ಕುರಿಮಂದೆಯೊಡನೆ ಹಿಮಾಲಯದ ದಟ್ಟ ಪ್ರದೇಶಗಳಲ್ಲಿ ಹವಾಮಾನಕ್ಕನುಗುಣವಾಗಿ ಸಂಚರಿಸುತ್ತಾರೆ. ತೋಡರು ತಮ್ಮ ಎಮ್ಮೆ ಹಿಂಡಿನೊಡನೆ ಮೇವಿಗಾಗಿ ನೀಲಗಿರಿಯ ದಟ್ಟ ಮೈದಾನದಲ್ಲೆಲ್ಲ ಸಂಚರಿಸುತ್ತಾರೆ. ಗೊತ್ತಾದ ನೆಲೆಯಿಲ್ಲದೆ, ಚಿರಕಾಲ ಅಲೆಮಾರಿಯಾಗಿ ಅಥವಾ ಒಂದು ಸ್ಥಳಕ್ಕೆ ಎರಡನೆಯ ಸಲ ಹಿಂತಿರುಗಿ ಬರದೆ ಅಲೆಯುವ ಪಂಗಡ ಯಾವುದೂ ಇಲ್ಲ.

ಕರ್ನಾಟಕ : ಈ ರಾಜ್ಯದಲ್ಲಿ ಅಲೆಮಾರಿ ಜೀವನ ನಡೆಸುವ ಕೆಲವು ಪಂಗಡಗಳಿವೆ. ಅನೇಕ ದಶಕಗಳ ಹಿಂದೆ ಲಂಬಾಣಿ, ಮಣ್ಣು ಒಡ್ಡರು, ಕೊರಚ, ಕೊರಮ, ಬುಡಬುಡಿಕೆ, ಮೊಂಡರು, ಡೊಂಬರು, ಹಾವಾಡಿಗರು, ಶಿಳ್ಳೆಕ್ಯಾತ, ಹಂದಿಜೋಗಿ, ಸೋಲಿಗರು, ಇರುಳಿಗರು, ಎರವರು ಮುಂತಾದವರೆಲ್ಲ ಅಲೆಮಾರಿ ಜೀವನವನ್ನೇ ಅವಲಂಬಿಸಿದ್ದರು. ಇತ್ತೀಚೆಗೆ ಈ ಜನರಲ್ಲಿ ಅನೇಕರು ಸ್ಥಿರಜೀವನ ನಡೆಸಲು ಸರ್ಕಾರ ವಸತಿ ಮತ್ತು ಸಣ್ಣಪುಟ್ಟ ಕೈಗಾರಿಕೆ ಮೊದಲಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದೆ. ಆದರೂ ಈ ಜನಾಂಗದವರೆಲ್ಲ ಅಲೆಯುವುದನ್ನು ಸಂಪೂರ್ಣ ಬಿಟ್ಟಿಲ್ಲ. ಜೀವನೋಪಾಯಕ್ಕಾಗಿ ಅಲೆಯುವ ಈ ಜನ ಏನಾದರೊಂದು ಕಸುಬನ್ನು ಅವಲಂಬಿಸಿಯೇ ಇರುತ್ತಾರೆ. ಉದಾಹರಣೆಗಾಗಿ, ಲಂಬಾಣಿಗಳು ಮೊದಲಿಗೆ ಉಪ್ಪು ಮುಂತಾದ್ದನ್ನು ಎತ್ತುಗಳ ಮೇಲೆ ಸಾಗಿಸಿ ಮಾರಾಟ ಮಾಡಲು ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದರು. ಈಗಲಾದರೂ ಅವರು ಬೇರೆ ಜನರೊಂದಿಗೆ ಸೇರದೆ, ಪ್ರತ್ಯೇಕ ತಾಂಡಗಳನ್ನು ನಿರ್ಮಿಸಿಕೊಂಡು ವ್ಯವಸಾಯ ಮಾಡುತ್ತಾರೆ. ಲಂಬಾಣಿ ಹೆಂಗಸರು ಗುಡ್ಡಗಾಡಿನಲ್ಲಿ ಸೌದೆ, ಹಣ್ಣುಹಂಪಲನ್ನು

ಕೂಡಿಟ್ಟು, ಹಳ್ಳಿಗಳಲ್ಲಿ ಮಾರಿ, ಹಣ, ಧಾನ್ಯ ಸಂಪಾದಿಸುತ್ತಾರೆ. ಡೊಂಬರು ಅನೇಕ ತರದ ತಮಾಷೆ ಆಟಗಳನ್ನು ಜನರಿಗೆ ತೋರಿಸುತ್ತ ಊರಿಂದೂರಿಗೆ ಗುಂಪುಗಳಲ್ಲಿ ಅಲೆಯುತ್ತ ಅನ್ನ ಬಟ್ಟೆ ಸಂಪಾದಿಸುತ್ತಾರೆ.

ಹಾವಾಡಿಗರೂ, ಕಿಳ್ಳಿಕ್ಯಾತರೂ (ಶಿಳ್ಳೆಕ್ಯಾತ), ಮಣ್ಣು ಒಡ್ಡರು, ಹಂದಿಜೋಗಿಗಳು, ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ತಮಿಳುನಾಡಿನ ನೀಲಗಿರಿ, ಕೇರಳದ ವೈನಾಡು, ಕೆಲವೆಡೆಗಳಲ್ಲಿ ಕಾಡು ಕುರುಬರು, ಕುರುಂಬರು, ಹಕ್ಕಿಪಿಕ್ಕಿ ಜನಾಂಗದವರು ಅಲೆಮಾರಿಜೀವನ ನಡೆಸುವರು. ಹಕ್ಕಿಪಿಕ್ಕಿಯವರಿಗೆ ಹಕ್ಕಿಪಕ್ಷಿಗಳನ್ನು ಬೇಟೆಯಾಡುವುದೇ ಮುಖ್ಯ ಕಸಬು.

ಕಾಡುಕುರುಬರು ಬೇಟೆ ಹಾಗೂ ಅರಣ್ಯ ವಸ್ತುಗಳ ಸಂಗ್ರಹಣೆಯನ್ನು ಅವಲಂಬಿಸಿರುವರು. ಕೆಲವೊಮ್ಮೆ ಇವರು ವಾಸಿಸುವ ಗುಡಿಸಲಿನ ಸುತ್ತಮುತ್ತಲ ನೆಲ ಅಗೆದು, ರಾಗಿ ಮುಂತಾದವುಗಳನ್ನು ಅಲ್ಪ ಪ್ರಮಾಣದಲ್ಲಿ ಬೆಳೆದುಕೊಳ್ಳುತ್ತಾರೆ. ಜೇನು, ಮರದ ಅಂಟು, ಕಾಡಿನಲ್ಲಿ ಸಿಕ್ಕುವ ಮತ್ತಿತರ ಪದಾರ್ಥಗಳನ್ನು ಶೇಖರಿಸಿ, ಹಳ್ಳಿಗರಿಗೆ ಮಾರಿ ಆಹಾರ ಧಾನ್ಯ, ಬಟ್ಟೆಬರೆ ಮುಂತಾದುವುಗಳನ್ನು ಕೊಂಡುಕೊಳ್ಳುತ್ತಾರೆ. ಇಷ್ಟೇ ಅಲ್ಲದೆ ಕಾಡು ಪ್ರಾಣಿಗಳ ಜಾಡು ಹಿಡಿದು ಪತ್ತೆಹಚ್ಚಿ ಬೇಟೆಯಾಡುವುದರಲ್ಲೂ ಇವರು ನಿಪುಣರು. ಇವರ ಬೇಟೆಯ ಕ್ರಮಗಳು, ಬೇಟೆಯಲ್ಲಿ ಇವರಿಗಿರುವ ಜಾಣ್ಮೆ ಎಂಥವರನ್ನಾದರೂ ಬೆರಗುಗೊಳಿಸುತ್ತದೆ. ಇವರು ಕಾಡೆಮ್ಮೆಯ ಮಾಂಸ ಒಂದನ್ನು ಬಿಟ್ಟರೆ ಉಳಿದ ಎಲ್ಲ ಪ್ರಾಣಿಗಳ ಮಾಂಸವನ್ನೂ ತಿನ್ನುತ್ತಾರೆ. ಬಿದಿರ ಕಳಿಲೆ, ಗೆಡ್ಡೆಗೆಣಸುಗಳನ್ನು ಅನೇಕ ಸಲ ಜೇನುತುಪ್ಪದೊಡನೆ ಬೆರೆಸಿಕೊಂಡು ತಿನ್ನುತ್ತಾರೆ. ಕಾಡಿನಲ್ಲಿರುವ ಜೇನಿನಿಂದ ಯಥೇಚ್ಛವಾಗಿ ತುಪ್ಪ, ಮೇಣ ಮುಂತಾದುವನ್ನು ಶೇಖರಿಸುತ್ತಾರೆ.

ಬುಡಕಟ್ಟಿನವರು ಎಲ್ಲಾ ಭೂಖಂಡಗಳಲ್ಲಿ ಹಂಚಿಕೆಯಾಗಿದ್ದಾರೆ. ಏಷ್ಯ ಮತ್ತು ಆಫ್ರಿಕಖಂಡಗಳು ಹಲವಾರು ಬುಡಕಟ್ಟುಗಳನ್ನು ಹೊಂದಿವೆ. ಇವರುಗಳಲ್ಲಿ ಮುಖ್ಯರಾದವರು:

ಏಷ್ಯದ ಬುಡಕಟ್ಟುಗಳು: ಉತ್ತರ ಅರೇಬಿಯದ ರುವಾಲ, ಬಿದೂಯಿನ್ ಜನಾಂಗದವರು ಒಂಟೆ, ಕುರಿ, ಮೇಕೆ ಮತ್ತು ಕುದುರೆಗಳನ್ನು ಸಾಕುತ್ತಾರೆ. ಇವರಿಗೆ ಒಂಟೆಯೇ ಬಹು ಮುಖ್ಯ ಪ್ರಾಣಿ. ಒಂಟೆಯ ಹಾಲೇ ವರ್ಷದಲ್ಲಿ ಅನೇಕ ತಿಂಗಳು ಅತಿ ಮುಖ್ಯವಾದ ಆಹಾರ. ಹಸಿ ಹಾಲು ಮತ್ತು ಹುಳಿ ಹಾಲನ್ನು (ಮೊಸರು) ಕುಡಿಯುತ್ತಾರೆ. ಒಂಟೆಹಾಲಿನಲ್ಲಿ ಬೆಣ್ಣೆ ಮುಂತಾದ ಯಾವ ಪದಾರ್ಥವನ್ನೂ ಮಾಡಲಾಗುವುದಿಲ್ಲ. ಚರ್ಮ ಮತ್ತು ಕೂದಲುಗಳಿಂದ ಚೀಲ, ಹಗ್ಗ ಮುಂತಾದ ನಿತ್ಯ ಬಳಕೆಯ ವಸ್ತುಗಳನ್ನು ತಯಾರಿಸುತ್ತಾರೆ. ಒಂಟೆಗಳನ್ನು ಸವಾರಿ ಮಾಡಲೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬಿಡಾರ ಬದಲಾಯಿಸಿದಾಗ ತಮ್ಮ ಸರಕುಗಳನ್ನು ಸಾಗಿಸಲೂ ಉಪಯೋಗಿಸುತ್ತಾರೆ.

ಮಧ್ಯ ಏಷ್ಯದ ಕಝಾಕ್ ಜನಾಂಗದವರು ಕುದುರೆ, ಕುರಿ, ಮೇಕೆ, ದನ ಮತ್ತು ಒಂಟೆಗಳನ್ನು ಸಾಕುತ್ತಾರೆ. ಕುದುರೆ, ಅದರಲ್ಲೂ ಹೆಣ್ಣು ಕುದುರೆ ಇವರಿಗೆ ಅತಿ ಮುಖ್ಯವಾದ ಪ್ರಾಣಿ. ಕುದುರೆ ಹಾಲಿನಿಂದ ಕುಮಿಸ್ ಎಂಬ ಮಾದಕ ಪಾನೀಯವನ್ನು ತಯಾರಿಸುತ್ತಾರೆ. ಇವರು ಒಳ್ಳೆಯ ಕುದುರೆ ಸವಾರರು. ಆದರೆ ಹೆಣ್ಣು ಕುದುರೆ ಮೇಲೆ ಸವಾರಿ ಮಾಡುವುದಿಲ್ಲ. ಕೆಲವು ಕುದುರೆಗಳನ್ನು ಪವಿತ್ರವಾದವುಗಳೆಂದು ಯಾವ ಕೆಲಸಕ್ಕೂ ಉಪಯೋಗಿಸುವುದಿಲ್ಲ. ಕುದುರೆಯ ಮಾಂಸಕ್ಕೆ ಬಹಳ ಬೆಲೆ ಕೊಡುತ್ತಾರೆ. ಕುದುರೆಯ ಚರ್ಮದಿಂದ ಜೀನನ್ನೂ ಕೂದಲಿನಿಂದ ಹಗ್ಗವನ್ನೂ ತಯಾರಿಸುತ್ತಾರೆ. ವರ್ಷದಲ್ಲಿ ಸುಮಾರು ಆರು ಸಲ ವಸತಿ ಬದಲಾಯಿಸುತ್ತಾರೆ. ಇವರು ಇಸ್ಲಾಂ ಮತಾವಲಂಬಿಗಳು. ಸ್ತ್ರೀಯರು ಬುರುಕಾ ಧರಿಸುವುದಿಲ್ಲ.

ಖಿರ್‌ಘೀಜ಼್ ಜನಾಂಗದವರು ಕಝಾಕರನ್ನೇ ಹೋಲುತ್ತಾರೆ. ಕುದುರೆ ಮತ್ತು ಚಮರೀ ಮೃಗಗಳನ್ನು ಸಾಕುತ್ತಾರೆ. ಆಹಾರ ಮತ್ತು ಹುಲ್ಲನ್ನು ಹುಡುಕುತ್ತ ಸ್ಥಳ ಬದಲಾಯಿಸುತ್ತಿರುತ್ತಾರೆ. ಅವರಲ್ಲಿ ಬಡವ ಬಲ್ಲಿದರೆಂಬ ವರ್ಗಗಳಿಲ್ಲ. ಗುಂಪಿಗೊಬ್ಬ ಮುಖ್ಯಸ್ಥನಿರುತ್ತಾನೆ.

ಮಂಗೋಲಿಯದ ವಾಯವ್ಯ ಪ್ರಸ್ಥಭೂಮಿಯಲ್ಲಿ ಕಾಲ್‌ಮಕ್ ಎಂಬ ತುರ್ಕಿ ಮಾತನಾಡುವ ಮಂಗೋಲಿಯನ್ ಬುಡಕಟ್ಟಿಗೆ ಸೇರಿದ ಜನರಿದ್ದಾರೆ. ಇವರು ಕುರಿ, ಮೇಕೆ, ದನ ಮತ್ತು ಕುದುರೆಗಳನ್ನು ಸಾಕುತ್ತಾರೆ. ಇವರಿಗೆ ಈ ಪ್ರಾಣಿಗಳ ಹಾಲು, ಮಾಂಸ, ಚರ್ಮ ಮತ್ತು ಉಣ್ಣೆ ಎಲ್ಲವೂ ಜೀವನಾಧಾರ ವಸ್ತುಗಳು. ಕಝಾಕರ ಹಾಗಲ್ಲದಿದ್ದರೂ ಇವರೂ ಪ್ರಾಣಿಗಳ ಹಿಂಡಿನೊಡನೆ ಮೇವನ್ನು ಹುಡುಕಿಕೊಂಡು ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಾರೆ. ಹೆಂಗಸರು ಮನೆಯ ಕೆಲಸಗಳನ್ನೂ ಗಂಡಸರೂ ಮಂದೆ ಕಾಯುವ ಕೆಲಸವನ್ನೂ ಮಾಡುತ್ತಾರೆ. ಏಷ್ಯದಲ್ಲೇ ಅತಿ ಚುರುಕಾದ ಮತ್ತು ಬಾಳಿಕೆಯುಳ್ಳ ಕುದುರೆಗಳನ್ನು ಸಾಕುತ್ತಾರೆ. ಕುದುರೆಯೇ ಇವರ ಸರ್ವಸ್ವ.

ಏಷ್ಯದ ಉತ್ತರ ಭಾಗದಲ್ಲಿ ಕುದುರೆ ಮತ್ತು ದನಗಳು ಜೀವಿಸಲಾರದ ಕಡೆ ಹಿಮಸಾರಂಗಗಳನ್ನು ಸಾಕುತ್ತಾರೆ. ಇವರಲ್ಲದೆ ಬೇಟೆಯಾಡಿ ಮತ್ತು ಮೀನು ಹಿಡಿದು ಜೀವಿಸುವ ತುಂಗು ಜನಾಂಗದವರು ಚಳಿಗಾಲದಲ್ಲಿ ಹಿಮಸಾರಂಗಗಳ ತುಳಿತದಿಂದ ನೆಲ ಗಟ್ಟಿಯಾಗಿ ಹುಲ್ಲು ಬೆಳೆಯದಿರುವುದರಿಂದ, ಮೇವಿಗಾಗಿ ವಸತಿಗಳನ್ನು ಹುಡುಕಿಕೊಂಡು ಅಲೆಯುತ್ತಾರೆ. ಹಿಮಸಾರಂಗ ಇವರಿಗೆ ಅತಿ ಮುಖ್ಯವಾದ ಪ್ರಾಣಿ. ಅದನ್ನು ಸವಾರಿಗೂ ಸಾಮಾನು ಸಾಗಿಸಲೂ ಚಿಕ್ಕ ಬಂಡಿಯನ್ನು ಎಳೆಯಲೂ ಉಪಯೋಗಿಸುತ್ತಾರೆ. ಅದರ ಹಾಲನ್ನು ಕುಡಿಯುತ್ತಾರೆ. ಚರ್ಮವನ್ನು ಉಡುಪಿಗಾಗಿ ಬಳಸುತ್ತಾರೆ. ಹಿಮಸಾರಂಗ ಇವರ ಧರ್ಮ ಮತ್ತು ನಂಬಿಕೆಗಳಲ್ಲಿ ಮುಖ್ಯ ಸ್ಥಾನ ಗಳಿಸಿದೆ. ಹಿಮಸಾರಂಗಗಳನ್ನು ಅತ್ಯಂತ ಪವಿತ್ರವೆಂದು ಯಾವುದಕ್ಕೂ ಉಪಯೋಗಿಸುವುದಿಲ್ಲ. ಈ ಪ್ರಾಣಿ ಮಾನವರಿಗೂ ದೇವತೆಗಳಿಗೂ ಸಂಬಂಧ ಕಲ್ಪಿಸುವ ದಿವ್ಯ ಸಾಧನವಾಗಿದ್ದು, ಆತ್ಮವನ್ನು ಸ್ವರ್ಗಕ್ಕೆ ಕರೆದೊಯ್ಯುವುದೆಂಬ ವಿಶಿಷ್ಟ ನಂಬಿಕೆಯೂ ಇದೆ. ವಿವಾಹಾದಿ ಮಂಗಳ ಕಾರ್ಯಗಳಲ್ಲೂ ಸಾವು ಮೊದಲಾದ ದುಃಖಸಮಯಗಳಲ್ಲೂ ಹಿಮಸಾರಂಗವನ್ನು ಆಹುತಿ ಕೊಟ್ಟು ಅದರ ಮಾಂಸ ಭಕ್ಷಣೆ ಮಾಡುತ್ತಾರೆ.

ತುಂಗುಸ್ ಜನರಲ್ಲಿ ಜನಾಂಗದ ಮುಖ್ಯಸ್ಥನಿಲ್ಲ. ಆದರೆ ಬಣಗಳಿಗೆ ಮುಖ್ಯಸ್ಥನಿದ್ದಾನೆ. ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಬಡವ ಬಲ್ಲಿದರೆಂಬ ವರ್ಗಗಳಿಲ್ಲ. ಜನಾಂಗದ ಪ್ರತಿಯೊಬ್ಬನೂ ಸಮಾನಾಧಿಕಾರವುಳ್ಳವನಾಗಿರುತ್ತಾನೆ. ಬೇಟೆ ಮತ್ತು ಪಶುಪಾಲನೆಗಳಿಂದ ಜೀವಿಸುತ್ತಾರೆ. ಗಂಡಸು ಬೇಟೆಯಾಡಿ ಆಹಾರ ಸಂಪಾದನೆ ಮಾಡುತ್ತಾನೆ. ಪ್ರಾಣಿಗಳನ್ನು ಮೇಯಿಸಲು ಮೊದಲೇ ನಿರ್ಧರಿಸಲ್ಪಟ್ಟ ಪ್ರದೇಶಕ್ಕೆ ಬಿಡಾರವನ್ನು ಸಾಗಿಸುವ ಕಾರ್ಯವನ್ನು ಹೆಂಗಸು ಮಾಡುತ್ತಾಳೆ. ಗಂಡಸು ಬೇಟೆಯನ್ನು ಮುಗಿಸಿಕೊಂಡು ಬದಲಾಯಿಸಿದ ಹೊಸ ಬಿಡಾರಕ್ಕೆ ಬಂದು ಸೇರುತ್ತಾನೆ.

ತಂಡ್ರ ಪ್ರದೇಶದಲ್ಲಿರುವ ಸಮೋಯೆದ್, ಚುಕ್‌ಚಿ ಮತ್ತು ಕೊರ್‌ಯಾಕ್ ಜನಾಂಗಗಳ ಮುಖ್ಯ ಕಸಬು ಬೇಟೆಯಾಡುವುದು, ಜಿಂಕೆ ಹಿಮಸಾರಂಗಗಳನ್ನು ಸಾಕುವುದು. ಯಕುಟ್ ಮತ್ತು ಯುಕಾಘಿರ್ ಜನಾಂಗದವರು ಸ್ಕಾಂಡಿನೇವಿಯದ ಲ್ಯಾಪ್ ಜನರಂತೆ ಹಾಲಿಗಾಗಿ ಹಿಮಸಾರಂಗಗಳನ್ನು ಸಾಕುತ್ತಾರೆ. ಪಶುಪಾಲನೆ ಮಾಡಿಕೊಂಡು ನೆಲೆಯಿಲ್ಲದೆ ಅಲೆಯುವುದೇ ಈ ಜನಾಂಗಗಳ ವೈಶಿಷ್ಟ್ಯ.

ಆಫ್ರಿಕದ ಬುಡಕಟ್ಟು ಜನರು : ಆಫ್ರಿಕದ ಎಲ್ಲ ಭಾಗಗಳಲ್ಲೂ ಪಶುಪಾಲನೆಗಾಗಿ ಅಲೆಮಾರಿ ಜೀವನ ನಡೆಸುವ ಜನಾಂಗಗಳಿವೆ. ಪ್ರಸ್ಥಭೂಮಿಯ ಮೇಲಿರುವ ಟೊಂಗ, ಝೂಲು, ಲೋಜ಼ಿ ಮುಂತಾದವರು ಪಶುಪಾಲನೆ, ತೋಟಗಾರಿಕೆ, ವ್ಯವಸಾಯ ಮಾಡಿಕೊಂಡು ಹಳ್ಳಿಗಳನ್ನು ಕಟ್ಟಿಕೊಂಡು ಸ್ಥಿರಜೀವನ ನಡೆಸುತ್ತಾರೆ. ಇನ್ನು ಕೆಲವರು ಮುಖ್ಯವಾಗಿ ಪಶುಪಾಲನೆಯಿಂದಲೇ ಜೀವನ ಮಾಡುತ್ತಾರೆ. ಅವರಲ್ಲಿ ಬೇಜ, ಅಫರ್, ಸೋಮಾಲಿ, ನ್ಯೂಅರ್, ಡಿಂಕ, ನೈಜೀರಿಯದ ಫುಲಾನಿ, ಪೂರ್ವ ಆಫ್ರಿಕದ ಮಸೈ ಮತ್ತು ಉಗಾಂಡದ ಬಹಿಮ ಮುಖ್ಯರಾದವರು. ಉಗಾಂಡದಲ್ಲಿ ಸಾಗುವಳಿ ಮಾಡುವ ಬೈರು ಜನಾಂಗದವರು ಬಹಿಮರಿಗೆ ಅಡಿಯಾಳಾಗಿ ನಿಕೃಷ್ಟಜೀವನ ನಡೆಸುತ್ತಾರೆ.

ಫುಲಾನಿಗಳ ಮುಖ್ಯ ಸಂಪತ್ತು ದನ. ಸ್ವಲ್ಪ ಮಟ್ಟಿಗೆ ಕುರಿ ಮೇಕೆಗಳನ್ನು ಸಾಕುತ್ತಾರೆ. ಭೌಗೋಳಿಕ ವಾತಾವರಣದಲ್ಲುಂಟಾಗುವ ಬದಲಾವಣೆಗಳು ವಸಾಹತುಗಳ ಬದಲಾವಣೆಗೆ ಪ್ರೇರಕ ಶಕ್ತಿಗಳಾಗುತ್ತವೆ. ಜನರ ಮತ್ತು ಪ್ರಾಣಿಗಳ ಸಂಖ್ಯೆ, ಮೇವು ನೀರಿನ ಸೌಕರ್ಯ, ವ್ಯಾಪಾರದ ಅನುಕೂಲತೆ–ಇವು ಅಲೆಮಾರಿ ಜೀವನಕ್ಕೆ ಮುಖ್ಯವಾದ ಅಂಶಗಳು.

ಇವರು ಬೇಸಗೆ ಮತ್ತು ಚಳಿಗಾಲಕ್ಕೆ ಬೇರೆ ಬೇರೆ ವಸತಿಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಸನ್ನಿವೇಶ ಮತ್ತು ಆಯಾ ಜನರ ಪದ್ಧತಿಯ ಅನುಕೂಲಕ್ಕೆ ಅನುಗುಣವಾಗಿ ಈ ವಸತಿಗಳ ಅಂತರವಿರುತ್ತದೆ. ಈ ಜನ ಬೇಸಗೆಯಲ್ಲಿ ಸಣ್ಣ ಸಣ್ಣ ಗುಂಪುಗಳಲ್ಲಿ ವಾಸಿಸುತ್ತಾರೆ. ಮಳೆಗಾಲದಲ್ಲಿ ಒಟ್ಟಿಗೆ ಸೇರುತ್ತಾರೆ. ಮದುವೆ ಮುಂಜಿ ಮುಂತಾದ ವಿಶೇಷ ಕಾರ್ಯಗಳೆಲ್ಲ ಮಳೆಗಾಲದಲ್ಲಿಯೇ ನಡೆಯುವುವು.

ಪೂರ್ವ ಆಫ್ರಿಕದ ಮಸೈ ಜನಾಂಗದವರೂ ಪಶುಪಾಲನೆಯಿಂದಲೇ ಜೀವನ ಸಾಗಿಸುತ್ತಾರೆ. ಕುರಿ, ಕತ್ತೆ ಮತ್ತು ಒಂಟೆಗಳನ್ನು ಸಾಕುತ್ತಾರೆ. ಬೇಸಗೆಯಲ್ಲಿ ದನಗಳ ಮೇವಿಗಾಗಿ ಅಲೆಯುತ್ತಾರೆ. ಒಂದು ಗುಂಪಿನ ಯುವಕ ಯೋಧರು ದನ ಕಾಯುವುದಲ್ಲದೆ ಬೇರೆ ನಾಡಿನ ದನಗಳನ್ನು ಕದಿಯುವುದರಲ್ಲೂ ತೊಡಗುತ್ತಾರೆ.

ಮಸೈ ಜನರು ಪಶುಪಾಲನೆಯಿಂದಾಗಿ ಬೇಟೆಯನ್ನೂ ಭೂಮಿ ಉಳುವುದನ್ನೂ ಕಡೆಗಣಿಸಿದ್ದಾರೆ. ಎಷ್ಟೋ ಜನ ವ್ಯವಸಾಯಗಾರರನ್ನು ದನಗಳ ಮೇವಿಗಾಗಿ ಜಮೀನು ಬಿಡಿಸಿ ಓಡಿಸಿದ್ದಾರೆ. ಇವರು ಸವಾರಿ ಮಾಡಲು ಅಥವಾ ಸಾಮಾನು ಸಾಗಿಸಲು ದನಗಳನ್ನು ಉಪಯೋಗಿಸುವುದಿಲ್ಲ. ಹಾಲು, ಬೆಣ್ಣೆ, ಚರ್ಮಕ್ಕಾಗಿ ಅವನ್ನು ಸಾಕುತ್ತಾರೆ; ತಾವು ಬಳಸಿ ಮಿಕ್ಕಿದ್ದನ್ನು ನೆರೆಯವರಿಗೆ ಧಾನ್ಯಕ್ಕಾಗಿ ಮಾರುತ್ತಾರೆ. ಸಮಾರಂಭಗಳಲ್ಲಿ ಮತಾಚರಣೆಗಳಲ್ಲಿ ಮಾತ್ರ ದನಗಳನ್ನು ಕೊಂದು ಮಾಂಸವನ್ನು ತಿನ್ನುತ್ತಾರೆ. ಇವರು ಮಾಂಸ ಮತ್ತು ಹಾಲನ್ನು ಒಂದೇ ದಿನ ಸೇವಿಸುವುದಿಲ್ಲ. ಅಲ್ಲದೆ ಮಾಂಸದ ಅಡುಗೆಯನ್ನು ವಸತಿಯಲ್ಲಿ ತಯಾರಿಸುವುದಿಲ್ಲ. ಪ್ರಾಣಿಗಳನ್ನು ಕೊಲ್ಲದೆಯೇ ಅವುಗಳ ರಕ್ತನಾಳಗಳಿಂದ ರಕ್ತ ಶೇಖರಿಸುವ ವಿಶಿಷ್ಟ ವಿಧಾನಗಳಿಂದ, ದನ ಮತ್ತು ಕುರಿಗಳ ರಕ್ತವನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

(ಪಿ.ಪಿ.)

**ಅಲೆಮಾರಿ ಪಶುಪಾಲನಾ ಕೃಷಿ:** ಇದು ಜೀವನಾಧಾರ ಬೇಸಾಯ ಪದ್ಧತಿಯ ಒಂದು ಭಾಗ (ಹುಲ್ಲುಗಾವಲಿನ ಅಲೆಮಾರಿ ಕೃಷಿ). ಆದರೂ ಪ್ರಾಣಿಗಳನ್ನು ಸಾಕುವುದೇ ಮುಖ್ಯ. ಇದಕ್ಕೆ ಹುಲ್ಲುಗಾವಲು ಕಾರಣ. ಹೀಗಾಗಿ ಇದನ್ನು ಹುಲ್ಲುಗಾವಲಿನ ಅಲೆಮಾರಿ ಪಶುಸಾಕಾಣಿಕೆ ಎನ್ನುವರು. ಇದು ಶುಷ್ಕ ವಾಯುಗುಣವಿರುವ ಪ್ರದೇಶಗಳಲ್ಲಿ ಕಂಡು ಬರುವುದು. ಇಲ್ಲಿ ಸ್ಥಿರ ಬೇಸಾಯವನ್ನು ಅನುಸರಿಸುವುದು ಕಷ್ಟ. ಪ್ರಪಂಚದ ಕೆಲವೇ ಜನರು ಈ ವೃತ್ತಿಯಲ್ಲಿ ನಿರತರಾಗಿದ್ದಾರೆ. ಪ್ರಪಂಚದ ಒಣಭೂಮಿ ಪ್ರದೇಶಗಳಲ್ಲಿ ಮೊದಲು ಇದು ನೆಲೆಸಿತು. ಇದು ಹೆಚ್ಚಾಗಿ ಉತ್ತರ ಆಫ್ರಿಕ ಮಧ್ಯಪೂರ್ವ ಹಾಗೂ ಮಧ್ಯ ಏಷ್ಯಾದ ಶುಷ್ಕ ಭೂ ಪ್ರದೇಶವನ್ನು ಒಳಗೊಂಡಿದೆ. ಉದಾಹರಣೆಗೆ ಸೌದಿ ಅರೇಬಿಯದ ಬೆಡೋಯಿನ್ಸ್ ಮತ್ತು ಪೂರ್ವ ಆಫ್ರಿಕದ ಮಸಾಯ್ ಪ್ರದೇಶ. ಈ ವೃತ್ತಿಯಲ್ಲಿ ನಿರತರಾಗಿರುವವರು ಪ್ರಪಂಚದಲ್ಲಿ ಸು. 15 ಮಿ. ಜನರಿರಬಹುದೆಂದು ಅಂದಾಜು ಮಾಡಲಾಗಿದೆ. ಆದರೆ ಇವರು ಒಳಗೊಂಡಿರುವ ಭೂ ಪ್ರದೇಶದ ವಿಸ್ತೀರ್ಣ ಸು. 30 ಮಿ. ಚ.ಕಿಮೀ.

ಐತಿಹಾಸಿಕವಾಗಿ ನೋಡುವುದಾದರೆ ವ್ಯವಸಾಯದ ಉಗಮದ ಹಂತದಲ್ಲಿ ಕಂಡು ಬರುವ ಬೇಟೆಗಾರರು ಮತ್ತು ಸಂಗ್ರಹಣಕಾರರ ನಂತರ ಇವರು ಕಂಡು ಬರುತ್ತಾರೆ. ಇವರು ಬೇಟೆಗಾರರು ಮತ್ತು ಸಂಗ್ರಹಕಾರರಿಗಿಂತ ಮುಂದುವರೆದಿದ್ದಾರೆ. ಏಕೆಂದರೆ ಇವರು ಸಾಕು ಪ್ರಾಣಿಗಳನ್ನು ಹೊಂದಿದ್ದಾರೆ. ಆದರೆ ಇವರು ಸ್ಥಿರ ಬೇಸಾಯಗಾರರಿಗಿಂತ ಹಿಂದುಳಿದಿದೆ. ಇವರಿಗೆ ವ್ಯವಸಾಯವು ಸಹ ತಿಳಿದಿದೆ. ವಾಯುಗುಣ ಪರಿಸ್ಥಿತಿಗೆ ತಕ್ಕಂತೆ ಅಲೆಮಾರಿ ಪಶುಸಾಕಾಣಿಕೆಯನ್ನು ಕಾಣಬಹುದು. ಬೇಸಾಯಕ್ಕೆ ಯೋಗ್ಯವಲ್ಲದ ಭೂಮಿಯಲ್ಲಿ ಇದು ಅಭಿವೃದ್ಧಿಗೊಂಡಿದೆ. ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಇವರು ನೆಲೆ ನಿಂತು ವ್ಯವಸಾಯ ಕೈಗೊಳ್ಳುತ್ತಾರೆ. ಆದರೆ ಒಣ ಅವಧಿಯಲ್ಲಿ ಇವರು ತಮ್ಮ ಪ್ರಾಣಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಆಹಾರ ಮತ್ತು ನೀರನ್ನು ಹುಡುಕುತ್ತಾ ಅಲೆಯುತ್ತಾರೆ.

ಇವರು ಗೊತ್ತಿಲ್ಲದ ಭಾಗಗಳಿಗೆ ಹೋಗುವುದಿಲ್ಲ. ಬದಲಾಗಿ ಆ ಪ್ರದೇಶದ ಭೌಗೋಳಿಕ ಲಕ್ಷಣ, ಅಲ್ಲಿನ ವಾಯುಗುಣ, ನೀರಿನ ವ್ಯವಸ್ಥೆ, ಪ್ರಾಣಿಗಳ ಸ್ಥಿತಿಗತಿ, ರಾಜಕೀಯ ಅಸ್ಥಿರತೆ ಮೊದಲಾದ ವಿಷಯಗಳನ್ನು ತಿಳಿದುಕೊಂಡು ಆ ಪ್ರದೇಶಗಳಿಗೆ ತಮ್ಮ ಸಾಕು ಪ್ರಾಣಿಗಳೊಂದಿಗೆ ಹೋಗುತ್ತಾರೆ. ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಹಾಗೂ ವಾಯುಗುಣ ಪರಿಸ್ಥಿತಿ ಮತ್ತು ಸಸ್ಯಗಳ ಪ್ರಕಾರಗಳಿಂದ ಇವರು ಯಾವ ಪ್ರಾಣಿಗಳನ್ನು ತಮ್ಮ ಗುಂಪಿನಲ್ಲಿ ಸೇರಿಸಿಕೊಳ್ಳುವುದು ಎಂಬುದನ್ನು ನಿರ್ಧರಿಸುವರು. ಉತ್ತರ ಆಫ್ರಿಕ ಮತ್ತು ಮಧ್ಯಪೂರ್ವ ಏಷ್ಯದಲ್ಲಿ ಒಂಟೆಯನ್ನು ಸಾಕುತ್ತಾರೆ. ಇದು ಹೆಚ್ಚು ಹೊತ್ತು ನೀರಿನ ಅವಶ್ಯಕತೆ ಇಲ್ಲದೆ ಬಹುದೂರದ ಪ್ರದೇಶಗಳಿಗೆ ಭಾರವಸ್ತುಗಳನ್ನು ಸಾಗಿಸುವುದು. ಇವುಗಳ ಜೊತೆಗೆ ಕುರಿ ಮತ್ತು ಆಡುಗಳನ್ನು ಸಹ ಸಾಕುತ್ತಾರೆ. ಮಧ್ಯ ಏಷ್ಯಾದಲ್ಲಿ ಕುದುರೆಯನ್ನು ಸಾಕುತ್ತಾರೆ. ಆಡುಗಳಿಗೆ ಆಗಾಗ ನೀರು ಬೇಕಾಗುತ್ತದೆ. ಇವು ಯಾವುದೇ ರೀತಿಯ ಸಸ್ಯಗಳನ್ನು ತಿಂದು ಜೀವಿಸಬಲ್ಲವು. ಕುರಿಗಳಿಗೆ ವಾಯುಗುಣದ ಪ್ರಭಾವ ಹೆಚ್ಚು ಹಾಗೂ ಇವು ನಿಧಾನಗತಿಯಲ್ಲಿ ಚಲಿಸುತ್ತವೆ. ಅಲ್ಲದೆ ಇವುಗಳಿಗೆ ಹೆಚ್ಚು ನೀರು ಮತ್ತು ಆಹಾರದ ಅವಶ್ಯಕತೆ ಇದೆ.

ಇವರು ಪ್ರಾಣಿಗಳನ್ನು ಸಂಪೂರ್ಣವಾಗಿ ಅವಲಂಬಿಸಿದ್ದಾರೆ. ಪ್ರಾಣಿಗಳಿಂದ ಹಾಲು, ಚರ್ಮ ಮತ್ತು ತುಪ್ಪಳಗಳನ್ನು ವಿವಿಧ ಉದ್ದೇಶಗಳಿಗೆ ಬಳಕೆ ಮಾಡುವರು. ತುಪ್ಪಳದಿಂದ ಬಟ್ಟೆ ಮತ್ತು ಟೆಂಟು ನಿರ್ಮಿಸುವರು. ಇವರು ಪ್ರಾಣಿಗಳನ್ನು ಮಾಂಸಕ್ಕಾಗಿ ಉಪಯೋಗಿಸುತ್ತಿಲ್ಲವಾದರೂ ಸತ್ತ ಪ್ರಾಣಿಗಳನ್ನು ಮಾತ್ರ ಮಾಂಸಕ್ಕಾಗಿ ಉಪಯೋಗಿಸುವರು. ಅವರ ಕುಟುಂಬದಲ್ಲಿದ್ದ ಪ್ರಾಣಿಗಳ ಸಂಖ್ಯೆಯಿಂದ ಸಮಾಜದಲ್ಲಿ ಗೌರವ ನಿರ್ಧರಿಸಲ್ಪಡುತ್ತಿತ್ತು. ಇದರಿಂದ ಅವರು ಸಾಮಾನ್ಯವಾಗಿ ತಮ್ಮ ಪ್ರಾಣಿಗಳನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಪ್ರತಿಯೊಂದು ಕುಟುಂಬವು ಸು. 25–60 ರಷ್ಟು ಕುರಿ, ಆಡುಗಳನ್ನು ಮತ್ತು 10–25 ಒಂಟೆಗಳನ್ನು ಹೊಂದಿರುತ್ತವೆ ಎಂದು ಅಂದಾಜು ಮಾಡಲಾಗಿದೆ. ಅವರು ತಮ್ಮ ಪ್ರಾಣಿಗಳನ್ನು ಜೀವನಾಧಾರ ಬೇಸಾಯಗಾರರಿಗೆ ವಿನಿಮಯದ ಮೂಲಕ ಅಹಾರ, ಕಾಳುಗಳನ್ನು ಪಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಕುಟುಂಬದ ಹೆಂಗಸರು ಮತ್ತು ಮಕ್ಕಳು ಒಂದು ಕಡೆ ನೆಲಸಿ ಸಸ್ಯಗಳನ್ನು ನೋಡಿಕೊಳ್ಳುತ್ತಾರೆ. ಗಂಡಸರು ಸಾಕುಪ್ರಾಣಿಗಳ ಹಿಂಡುಗಳೊಡನೆ ಅಲೆದಾಡಲು ಹೋಗುತ್ತಾರೆ.

ಈಗ ಇದೊಂದು ಇಳಿಮುಖಗೊಂಡ ಪ್ರವೃತ್ತಿಯಾಗಿದೆ. ಇದಕ್ಕೆ ತಂತ್ರಜ್ಞಾನದ ಬದಲಾವಣೆ, ಸರ್ಕಾರಗಳ ನೆರವು, ಆಧುನಿಕ ಉಪಕರಣ ಬಳಕೆ, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯಲ್ಲಿ ಸುಧಾರಣೆ ಇತ್ಯಾದಿ ಕಾರಣ. ಸರ್ಕಾರದ ಪ್ರೋತ್ಸಾಹದ ನೀತಿಯಿಂದಾಗಿ ಇವರು ಒಂದು ಕಡೆ ನೆಲಸಿ ವ್ಯವಸಾಯವನ್ನು ಕೈಗೊಳ್ಳಲು ಸಹಾಯವಾಯಿತು. ರಷ್ಯ, ಚೀನ, ಈಜಿಪ್ಟ್, ಇಸ್ರೇಲ್, ಸೌದಿ ಅರೇಬಿಯ, ಸಿರಿಯ, ಮೊದಲಾದ ದೇಶಗಳಲ್ಲಿ ಇವರನ್ನು ಒಂದು ಕಡೆ ನೆಲೆಸಿರುವಂತೆ ಮಾಡಲು ಹಲವಾರು ಬಿಗಿ ಕ್ರಮಗಳನ್ನು ಕೈಗೊಂಡಿದ್ದರೂ ಸಹ ಅವರ ಜೀವನ ಸ್ಥಿತಿ ಸಂಪೂರ್ಣವಾಗಿ ಸುಧಾರಿಸಿಲ್ಲ. ಇವರಿಗೆ ನಿರ್ದಿಷ್ಟ ಗಡಿಯೊಳಗೆ ಹೈನುಗಾರಿಕೆಯನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಯಿತು. ಅಲ್ಲದೆ ಇವರು ಗಣಿಗಳು, ಪೆಟ್ರೋಲಿಯಂ ಉತ್ಪಾದನಾ ಕೇಂದ್ರಗಳಲ್ಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. (ಡಿ.ಆರ್.)

**ಅಲ್ಪ ಸಿಲಿಕಾಂಶ ಶಿಲೆಗಳು:** ಇವುಗಳ ರಾಸಾಯನಿಕ ಸಂಯೋಜನೆಯಲ್ಲಿ ಸಿಲಿಕಾಂಶ ಶೇ. 55ಕ್ಕೂ ಕಡಿಮೆ ಇರುತ್ತದೆ (ಬೇಸಿಕ್ ಅಥವಾ ಮ್ಯಾಫಿಕ್ ಶಿಲೆಗಳು). ಸಿಲಿಕ ಪ್ರತ್ಯೇಕ ಖನಿಜವಾಗಿ ಕಂಡುಬರುವುದೇ ಅಪೂರ್ವ. ಅಲ್ಲದೆ ಇತರ ಖನಿಜಗಳೊಡನೆ ರಾಸಾಯನಿಕವಾಗಿ ಸಂಯೋಜಿತವಾಗಿದ್ದರೂ ಅದರ ಪ್ರಮಾಣ ಅಷ್ಟು ಹೆಚ್ಚಲ್ಲ. ಒಟ್ಟಿನಲ್ಲಿ ಶಿಲೆಯ ಸಂಯೋಜನೆಯಲ್ಲಿ ಅದರ ಪಾತ್ರ ಗೌಣ. ಈ ಶಿಲೆಗಳಲ್ಲಿ ಕಪ್ಪು ಛಾಯೆಯ ಅಭ್ರಕ, ಹಾರ್ನ್‌ಬ್ಲೆಂಡ್ ಮತ್ತು ಪೈರಾಕ್ಸೀನ್ ಖನಿಜಗಳೇ ಅಧಿಕ ಪ್ರಮಾಣದಲ್ಲಿರುವುದರಿಂದ ಅವುಗಳ ಬಣ್ಣವೂ ಕಪ್ಪು.

ಇವು ಅಂತಸ್ಸರಣ (ಇನ್‌ಟ್ರೂಷನ್) ಮತ್ತು ಬಹಿಸ್ಸರಣ (ಎಕ್ಸ್‌ಟ್ರೂಷನ್) ಈ ಎರಡೂ ವರ್ಗದ ಶಿಲೆಗಳಲ್ಲಿ ಕಂಡುಬರುತ್ತವೆ. ಮೊದಲನೆಯ ವರ್ಗದ ಮುಖ್ಯ ಶಿಲೆಗಳು ಗ್ಯಾಬ್ರೊ ಗುಂಪಿನವು. ಇವು ಬಹುಮಟ್ಟಿಗೆ ಲ್ಯಾಕೊಲಿತ್, ಲೋಪೊಲಿತ್, ಬ್ಯಾಕೊಲಿತ್ ಮತ್ತು ಶಿಲಾಹಾಳೆಗಳು. ಬಹಿಸ್ಸರಣವರ್ಗದ ಪ್ರಮುಖ ಶಿಲೆಗಳು ಬೆಸಾಲ್ಟ್ ಗುಂಪಿನವು. ಇವು ಭೂಮಿಯ ಮೇಲೆ ಲಾವಾಪ್ರಸ್ತರಗಳಾಗಿ ಕಂಡುಬರುತ್ತವೆ.

ಗ್ಯಾಬ್ರೊ ಗುಂಪಿನ ಶಿಲೆಗಳು ಬಣ್ಣದಲ್ಲಿ ಕಪ್ಪು. ಸಮಕಣರಚನೆಯನ್ನು ತಳೆದಿವೆ. ಖನಿಜಕಣಗಳು ಸಾಮಾನ್ಯವಾಗಿ ದಪ್ಪನಾಗಿದ್ದು ಒಂದೇ ಗಾತ್ರವನ್ನು ಹೊಂದಿರುತ್ತವೆ. ಇವುಗಳಲ್ಲಿ ಮುಖ್ಯವಾದುವು ಗ್ಯಾಬ್ರೊ, ಆಲಿವೀನ್ ಗ್ಯಾಬ್ರೊ ನೋರೈಟ್, ಟ್ರಾಕ್ಟೊಲೈಟ್ ಮತ್ತು ಅನಾರ್ಥಸೈಟ್. ಈ ಪ್ರಭೇದಗಳು ಖನಿಜ ಸಂಯೋಜನೆಯನ್ನು ಅನುಸರಿಸಿವೆ. ಅವುಗಳ ವಿನ್ಯಾಸ ಮತ್ತು ರಾಸಾಯನಿಕ ಸಂಯೋಜನೆಯಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಗ್ಯಾಬ್ರೊ ಮುಖ್ಯವಾಗಿ ಪ್ಲೇಜಿಯೊಕ್ಲೇಸ್ ಮತ್ತು ಅಗೇಟ್ ಖನಿಜಗಳಿಂದ ಕೂಡಿದೆ. ಆಲಿವೀನ್ ಗ್ಯಾಬ್ರೊವಿನಲ್ಲಿ ಈ ಖನಿಜಗಳೇ ಪ್ರಧಾನವಾಗಿದ್ದು ಅಲ್ಪಸ್ವಲ್ಪ ಪ್ರಮಾಣದಲ್ಲಿ ಆಲಿವೀನ್ ಸಹ ಇರುತ್ತದೆ. ಗ್ಯಾಬ್ರೋ, ಆಲಿವೀನ್ ಗ್ಯಾಬ್ರೊ, ನೋರೈಟ್ ಮತ್ತು ಟ್ರಾಕ್ಟೊಲೈಟ್‌ಗಳು ಬಹುಮಟ್ಟಿಗೆ ಬ್ರಿಟನ್ನಿನ ಕಾರ್ನ್‌ವಾಲ್, ಅಬರ್ಡೀನ್‌ಷೈರ್ ಮತ್ತು ಸ್ಕಾಟ್ಲೆಂಡಿನ ಪಶ್ಚಿಮ ದ್ವೀಪಗಳಲ್ಲಿ ಹರಡಿವೆ. ಕ್ವಾರ್ಟ್ಸ್‌ಗ್ಯಾಬ್ರೊಡೈಕ್ ಮತ್ತು ಸಿಲ್ಲುಗಳೋಪಾದಿಯಲ್ಲಿ ಬ್ರಿಟನ್, ಪೂರ್ವ ಅಮೆರಿಕ, ಗಯಾನ, ದಕ್ಷಿಣ ಆಫ್ರಿಕ ಮತ್ತು ಪಶ್ಚಿಮ ಆಸ್ಟ್ರೇಲಿಯಗಳಲ್ಲಿ ಕಂಡುಬಂದಿವೆ. ಅನಾರ್ಥಸೈಟ್ ಕೆನಡ, ನ್ಯೂಯಾರ್ಕ್ ಬಳಿಯ ಅಡಿರೋಂಡಾಕ್ಸ್ ಮತ್ತು ಸ್ಕಾಂಡಿನೇವಿಯಗಳಲ್ಲಿ ಬ್ಯಾತೊಲಿತ್‌ಗಳಾಗಿ ಕಂಡುಬರುತ್ತವೆ. ನಮ್ಮ ದೇಶದ ತಮಿಳುನಾಡಿನ ಸಿತ್ತಂಪುಂಡಿ, ಬಿಹಾರ್, ಒರಿಸ್ಸ ಮತ್ತು ಪಶ್ಚಿಮ ಬಂಗಾಲದ ಹಲವಾರು ಪ್ರದೇಶಗಳಲ್ಲಿ ಈ ಶಿಲೆಯನ್ನು ಕಾಣಬಹುದು.

ಡಾಲರೈಟ್‌ಗಳು ಪ್ರಪಂಚದ ಅನೇಕ ಕಡೆ ಡೈಕ್ ಸಮೂಹಗಳಾಗಿ ಕಂಡುಬಂದಿವೆ. ಪ್ರತಿ ಸಮೂಹದಲ್ಲಿ ಒಂದೇ ಹರವುಳ್ಳ ನೂರಾರು ಡೈಕುಗಳನ್ನು ಗುರುತಿಸಲು ಸಾಧ್ಯ. ಒಂಟಿ ಡೈಕುಗಳು ಅಪೂರ್ವ. ಹಲವು ಪ್ರದೇಶಗಳಲ್ಲಿ ಈ ಶಿಲೆ ಸಿಲ್ ಆಕಾರವನ್ನು ತಳೆದಿದೆ. ಇವು ಸಹ ಬಣ್ಣದಲ್ಲಿ ಕಪ್ಪು. ಹಲವು ವೇಳೆ ಆಲಿವೀನ್ ಹೈಪರ್‌ಸ್ತೀನ್ ಮತ್ತು ಕ್ವಾರ್ಟ್ಸ್‌ಗಳನ್ನು ಅಲ್ಪಪ್ರಮಾಣದಲ್ಲಿ ಗುರುತಿಸಬಹುದು. ಇವುಗಳ ಖನಿಜ ಮತ್ತು ರಾಸಾಯನಿಕ ಸಂಯೋಜನೆಯಲ್ಲಿ ಇವುಗಳಿಗೂ ಗ್ಯಾಬ್ರೊಗಳಿಗೂ ಹೆಚ್ಚಿನ ವ್ಯತ್ಯಾಸಗಳಿರುವುದಿಲ್ಲ. ಆದರೆ ರಚನೆ ಅಥವಾ ವಿನ್ಯಾಸದಲ್ಲಿ ಪರಸ್ಪರ ಹೋಲಿಕೆಯಿಲ್ಲ. ಇದು ಒಂದು ವಿಶೇಷ ರೀತಿಯ ಹೆಣಿಗೆ ರಚನೆಯನ್ನು ತೋರಿಸುತ್ತದೆ, ಮೈಸೂರು ಜಿಲ್ಲೆಯಲ್ಲಿ ನೂರಾರು ಡಾಲರೈಟ್ ಡೈಕುಗಳನ್ನು ಗುರುತಿಸಲಾಗಿದೆ.

ಬಹಿಸ್ಸರಣವರ್ಗದ ಬೆಸಾಲ್ಟ್ ಶಿಲಾಗುಂಪಿನಲ್ಲಿಯೂ ಖನಿಜ ಸಂಯೋಜನೆಯನ್ನನುಸರಿಸಿ ಹಲವಾರು ಪ್ರಭೇದಗಳಿವೆ. ಇವು ಬಣ್ಣದಲ್ಲಿ ಕಪ್ಪು ಅಥವಾ ಬೂದುಮಿಶ್ರಿತಕಪ್ಪು. ಜ್ವಾಲಾಮುಖಿಜನ್ಯ ಶಿಲೆಯಾದ ಕಾರಣ ರಚನೆ ಅಸ್ಪಷ್ಟ. ಇವು ಸಾಮಾನ್ಯವಾಗಿ ಸಿಲಿಕ, ಜಿಯೊಲೈಟ್, ಎಪಿಡೋಟ್, ಕ್ಯಾಲ್ಸೈಟ್ ಮುಂತಾಗಿ ವಿವಿಧ ಆನುಷಂಗಿಕ ಖನಿಜಗಳಿಂದ ತುಂಬಿರುತ್ತವೆ. ಆದರೆ ಸೂಕ್ಷ್ಮದರ್ಶಕದ ಮೂಲಕ ಶಿಲೆಯನ್ನು ಪರೀಕ್ಷಿಸಿದಾಗ ಒಂದು ಬಗೆಯ ವಿಶೇಷ ರಚನೆಯನ್ನು ಕಾಣಬಹುದು. ಇದನ್ನು ಬೆಸಾಲ್ಟಿಕ್ ವಿನ್ಯಾಸವೆಂದೂ ಕರೆಯುತ್ತಾರೆ. (ಬಿ.ವಿ.ಜಿ.)

**ಅಲ್ಪವೃಷ್ಟಿ ವ್ಯವಸಾಯ:** ಅಲ್ಪವೃಷ್ಟಿ, ಅನಿಶ್ಚಿತ ವೃಷ್ಟಿ ಪ್ರದೇಶಗಳಲ್ಲಿ ಬೆಳೆ ತೆಗೆಯುವ ಸಾಗುವಳಿ ಪದ್ಧತಿ (ಡ್ರೈ ಫಾರ್ಮಿಂಗ್). ಪಂಜಾಬ್, ರಾಜಸ್ತಾನ, ಉತ್ತರಪ್ರದೇಶ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ಮಳೆಕೊರತೆಯ ಪ್ರದೇಶಗಳಲ್ಲಿ ಈ ಪದ್ಧತಿ ರೂಢಿಯಲ್ಲಿದೆ. ಭಾರತದ ಒಟ್ಟು ಸಾಗುವಳಿ ಕ್ಷೇತ್ರದ ಶೇ. 22 ಒಣ ಬೇಸಾಯಕ್ಕೊಳಪಟ್ಟಿದೆ. ಈ ಪ್ರದೇಶಗಳಲ್ಲಿ ಮಳೆ 15–35 ಸೆಂಮೀ ಬೀಳುವುದು.

ದೇಶದ ವಾಯವ್ಯ ಭಾಗದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿ ಬೇಸಗೆ ಕಾಲದಲ್ಲಿ ಆಗುವುದು. ಕರ್ನಾಟಕ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳ ಕೆಲ ಭಾಗಗಳಲ್ಲಿ ಹಿಂಗಾರು ಮಳೆ ಚಳಿಗಾಲದಲ್ಲಿ ಬೀಳುವುದು. ಇಲ್ಲೆಲ್ಲ ಅಲ್ಪ ಪ್ರಮಾಣದಲ್ಲಿ ಮಳೆಯಾಗುವುದಲ್ಲದೆ ಮಳೆಗಾಲದಲ್ಲಿಯೂ ಮಳೆ ಬೀಳದ ದಿನಗಳು ಹೆಚ್ಚು. ಹೀಗಾಗಿ ಮೇಲಿಂದ ಮೇಲೆ ತೀವ್ರ ಅನಾವೃಷ್ಟಿ ದಕ್ಷಿಣದ ತಪ್ಪಲಿನ ಎರೆಭೂಮಿಗಳಲ್ಲಿ ನೀರು ಅಲ್ಪ ಪ್ರಮಾಣದಲ್ಲಿ ಇಂಗುವುದರಿಂದ ಬೆಳೆಗಳಿಗೆ ಮಳೆ ನೀರು ಸಾಕಾಗುವುದಿಲ್ಲ.

ಅಲ್ಪವೃಷ್ಟಿ ಪ್ರದೇಶಗಳಲ್ಲಿ ಮುಖ್ಯವಾಗಿ ಸಜ್ಜೆ, ನವಣೆ, ರಾಗಿ, ಜೋಳ, ಸಾಸುವೆ ಮುಂತಾದುವುಗಳನ್ನು ಬೆಳೆಯುತ್ತಾರೆ. ಉತ್ತರ ಭಾರತದಲ್ಲಿ ಸಂಗ್ರಹಿಸಿಟ್ಟ ನೀರಿರುವ ಪ್ರದೇಶಗಳಲ್ಲಿ ಚಳಿಗಾಲದ ಉಪಬೆಳೆಗಾಗಿ ಕಡಲೆ, ಬಾರ್ಲಿ, ಸಾಸುವೆ, ಎಣ್ಣೆಕಾಳು ಮತ್ತು ಗೋದಿಯನ್ನು ಬೆಳೆಸುತ್ತಾರೆ. ಉದ್ದು, ಹೆಸರು ಮುಂತಾದ ದ್ವಿದಳಧಾನ್ಯಗಳನ್ನು ಸಜ್ಜೆಯ ಜೊತೆ ಮಿಶ್ರ ಬೆಳೆಯಾಗಿ ಬೆಳೆಸುವುದು ಸಾಮಾನ್ಯ. ಗುಜರಾತ್, ಮಹಾರಾಷ್ಟ್ರ ಮತ್ತು ದಖನ್ನಿನ ತಪ್ಪಲಿನ ಕೆಲಭಾಗಗಳಲ್ಲಿ ಸಜ್ಜೆ, ದ್ವಿದಳ ಧಾನ್ಯಗಳು ಮತ್ತು ಎಳ್ಳನ್ನು ಬೆಳೆಸುವ ಕ್ರಮವಿದೆ. ಕೆಲವು ಮಜ್ಜೆರೆ (ಹೆವಿ ಬ್ಲ್ಯಾಕ್ ಸಾಯ್ಲ್) ಭೂಮಿಗಳಲ್ಲಿ ಅಗಸೆ, ಗೋದಿ ಬೆಳೆಗಳನ್ನು ಚಳಿಗಾಲದ ಬೆಳೆಗಳಾಗಿ ತೆಗೆಯುತ್ತಾರೆ. ದಖ್ಖನ್ನಿನ ತಪ್ಪಲಿನ ಮಧ್ಯೆ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಜೋಳ, ಶೇಂಗ (ಕಡಲೆಕಾಯಿ) ಮತ್ತು ಹತ್ತಿ ಪ್ರಮುಖ ಬೆಳೆಗಳಾಗಿವೆ.

ದಕ್ಷಿಣ ಕರ್ನಾಟಕದ ಅಲ್ಪವೃಷ್ಟಿ ಪ್ರದೇಶಗಳಲ್ಲಿ ರಾಗಿ ಪ್ರಧಾನ ಬೆಳೆ. ತೊಗರಿ, ಉದ್ದುಗಳನ್ನು ರಾಗಿಯಂಥ ಬೆಳೆಯ ಜೊತೆಗೆ ಮಿಶ್ರ ಬೆಳೆಯಾಗಿ ಬೆಳೆಸುವರು.

ಅಲ್ಪವೃಷ್ಟಿ ವ್ಯವಸಾಯದಲ್ಲಿ ನಾಲ್ಕು ಹಂತಗಳಿವೆ: 1. ಭೂಮಿಯಲ್ಲಿ ನೀರನ್ನು ಹಿಂಗಿಸಲು ನೇಗಿಲು ಹೊಡೆಯುವುದು; 2. ಮಳೆ ನೀರನ್ನು ಭೂಮಿಯಲ್ಲಿ ಹಿಂಗಿಸಿ ಸಂಗ್ರಹಿಸುವುದು; 3. ನೆಲದ ಮೇಲೆ ಸಣ್ಣಹುಡಿಮಣ್ಣಿನ ಪದರು ರಚಿಸುವುದು; 4. ಬಿತ್ತನೆಗೆ ಮೊದಲು ಮತ್ತು ಬಿತ್ತನೆಯ ನಂತರದ ಸಾಗುವಳಿ ಕ್ರಮಗಳು.

ಮೇಲಿನ ನಾಲ್ಕು ಹಂತಗಳು ಬೆಳೆಗಳಿಗೆ ಮಳೆನೀರನ್ನು ಹೆಚ್ಚು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಮತ್ತು ಉತ್ಪಾದನೆ ಹೆಚ್ಚಿಸಲು ನೆರವಾಗುತ್ತವೆ. ಸೋಲಾಪುರ (ಮಹಾರಾಷ್ಟ್ರ), ರೋಹಟಕ (ಪಂಜಾಬ್), ಕರ್ನಾಟಕ ರಾಜ್ಯದ ಬಿಜಾಪುರ, ರಾಯಚೂರು, ಹಗರಿ ಈ ಸ್ಥಳಗಳಲ್ಲಿ ಸ್ಥಾಪಿತವಾದ ಭಾರತೀಯ ಕೃಷಿಸಂಶೋಧನಕೇಂದ್ರದ ವೃಷ್ಟಿವ್ಯವಸಾಯಕೇಂದ್ರಗಳಲ್ಲಿ ಈ ನಾಲ್ಕು ಹಂತಗಳ ಮೇಲೆ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ.

ಕ್ಷೇತ್ರ ಸಾಗುವಳಿ ಕ್ರಮಗಳು: ಅಲ್ಪವೃಷ್ಟಿ ವ್ಯವಸಾಯ ಪದ್ಧತಿಗಳು ಭೂಮಿಯ ಗುಣಾನುಸಾರ ಭಿನ್ನವಾಗಿದೆ. ದಖನ್ನಿನ ತಪ್ಪಲಿನ ಕಪ್ಪುಭೂಮಿಯಲ್ಲಿ ಅನುಸರಿಸಲಾದ ವಿವಿಧ ಕ್ರಮಗಳು ಹೀಗಿವೆ:

1. ಸಮಪಾತಳಿಯ, ಒಡ್ಡು ಹಾಕುವುದು ಮತ್ತು ಭೂಮಿಯನ್ನು ಸಣ್ಣ ಭಾಗಗಳನ್ನಾಗಿ ವಿಂಗಡಿಸುವುದು 2. ಭೂಮಿಯ 20 ಸೆಂಮೀ ಮೇಲ್ಮೈಯನ್ನು ತಿರುವಿಹಾಕುವುದು 3. ಮಳೆಗಾಲದಲ್ಲಿ ಹಿಂಗಾರು ಪೈರಿಗಾಗಿ ಮೀಸಲಿಟ್ಟ ಭೂಮಿಯನ್ನು ಹರಗುವುದು 4. ದನದ ಗೊಬ್ಬರವನ್ನು ತೆಳುವಾಗಿ ಭೂಮಿಯ ಮೇಲೆ ಹರಡುವುದು 5. ಬೀಜದ ಪ್ರಮಾಣ ತಗ್ಗಿಸಲು ಎರಡು ಸಾಲುಗಳ ಮಧ್ಯೆ ಸ್ವಲ್ಪ ಅಗಲಕ್ಕೆ ಕೂರಿಗೆಯಿಂದ ಬಿತ್ತುವುದು 6. ಎಡೆ ಹೊಡೆಯುವುದು 7. ಸುಧಾರಿಸಿದ ಮತ್ತು ತಜ್ಞರು ಶಿಫಾರಸು ಮಾಡಿದ ತಳಿ ಬೀಜಗಳನ್ನು ಬಿತ್ತುವುದು 8. ಎರಡು ವರ್ಷಕೊಮ್ಮೆ ಭೂಮಿಯನ್ನು ಪಡ ಬೀಳಿಸುವುದು. ಈ ಪದ್ಧತಿಯನ್ನು ಅಲ್ಪ ಸ್ವಲ್ಪ ಬದಲಾಯಿಸಿ ಕೆಂಪು ಭೂಮಿಗಳಲ್ಲೂ ಉಪಯೋಗಿಸಬಹುದು. ಈ ಸಾಗುವಳಿ ಪದ್ಧತಿಗಳಿಂದ ಮಳೆಯ ನೀರಿನ ಸಮರ್ಪಕ ಉಪಯೋಗ, ಭೂಮಿಯ ಸಾರದ ರಕ್ಷಣೆ ಮತ್ತು ಲಾಭದಾಯಕ ಉತ್ಪನ್ನ ಸಾಧ್ಯ.

ಇತ್ತೀಚೆಗೆ ಭೂಜಲ ಸಂರಕ್ಷಣಾ ಕ್ರಮಗಳ ಜೊತೆಗೆ ಅಲ್ಪ ಪ್ರಮಾಣದ ಕೃತಕ ಗೊಬ್ಬರಗಳ ಬಳಕೆಯಿಂದ ಬೆಳೆಗಳ ಉತ್ಪನ್ನವನ್ನು ಹೆಚ್ಚಿಸಲಾಗುತ್ತಿದೆ. ಕೃತಕ ಗೊಬ್ಬರ ಮತ್ತು ಬೀಜಗಳನ್ನು ಕ್ರಮವಾಗಿ ನಿರ್ದಿಷ್ಟ ಆಳಕ್ಕೆ ಹಾಕಲು ಉಪಯುಕ್ತ ಕೂರಿಗೆಗಳನ್ನು ರೂಪಿಸಲಾಗಿದೆ. ಕೃತಕ ಗೊಬ್ಬರವನ್ನು ಬೀಜದ ಪಕ್ಕಕ್ಕೆ ಅದೇ ಮಟ್ಟದಲ್ಲಿ ಹಾಕಿದರೆ ಸೂಕ್ಷ್ಮ ಸ್ವಭಾವದ ಹತ್ತಿ, ಶೇಂಗ (ಕಡಲೆಕಾಯಿ) ಮತ್ತು ಬಿರುಸು ಸ್ವಭಾವದ ಸಜ್ಜೆ, ರಾಗಿ, ನವಣೆ, ಜೋಳ ಮುಂತಾದುವು ಗೊಬ್ಬರ ಮತ್ತು ಲಭ್ಯವಿರುವ ತೇವ ಸರಿಯಾಗಿ ಉಪಯೋಗಿಸಿಕೊಂಡು ಉತ್ತಮವಾಗಿ ಬೆಳೆಯುತ್ತದೆ. ಪಡಭೂಮಿಗಳಲ್ಲಿ ಮಳೆ ನೀರನ್ನು ಸಂಗ್ರಹಿಸಲು ತೋಡುಗ (ಭೂಮಿಯಲ್ಲಿ ಸಣ್ಣ ಸಣ್ಣ ಬಟ್ಟಲಾಕಾರದ ತಗ್ಗುಗಳನ್ನು ತೋಡುವುದು) ಯಂತ್ರ ಉಪಯುಕ್ತ. ಅಲ್ಪವೃಷ್ಟಿಯ ಪ್ರದೇಶಗಳ ಹೊಲಗಳಲ್ಲಿ ಸಮಪಾತಳಿಯ ಒಡ್ಡುಗಳನ್ನು ಹಾಕಲು ಬಂಡ್ ಫಾರ್ಮರ್ (ಒಡ್ಡು ರಚಿಸುವ ಉಪಕರಣ)ಗಳನ್ನು ಉಪಯೋಗಿಸಲಾಗಿದೆ. (ಪಿ.ಸಿ.ಆರ್.)

**ಅಲ್ಬ್ರೆಕ್ಟ್ ಪೆಂಕ್ :** 1858–1945. ಜರ್ಮನಿಯ ಭೂಗೋಳಶಾಸ್ತ್ರಜ್ಞ. ಇವರು 1880ರಲ್ಲಿ ಜರ್ಮನಿಯ ಲೀಪ್ಜಿಗ್ ವಿಶ್ವವಿದ್ಯಾನಿಲಯದಲ್ಲಿ ಭೂವಿಜ್ಞಾನಿ ಕಾರ್ಲ್ ಜಿಟ್ಟೆಲ್‍ರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದರು. ಅನಂತರ 1885ರಲ್ಲಿ ವಿಯನ್ನ ವಿಶ್ವವಿದ್ಯಾನಿಲಯವನ್ನು ಸೇರಿದರು. ಅಲ್ಲಿ ಸು. 20 ವರ್ಷಗಳ ಕಾಲ (1906ರವರೆಗೆ) ಸೇವೆ ಸಲ್ಲಿಸಿ ಸುಸಜ್ಜಿತವಾದ ಭೌಗೋಳಿಕ ಸಂಸ್ಥೆಯನ್ನು ಸ್ಥಾಪಿಸಿದರು. 1906ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಫರ್ಡಿನಾಂಡ್ ವಾನ್ ರಿಚ್‍ಥೋಫೆನ್‍ನ ಅನಂತರ ಭೂಗೋಳಿಕ ಶಾಸ್ತ್ರದ ಅಧ್ಯಕ್ಷರಾಗಿ ನೇಮಕಗೊಂಡರು. ಇವರು ರಿಚ್‍ಥೋಫೆನ್‍ನ ವಿದ್ಯಾರ್ಥಿ ಹಾಗೂ ಎಡ್ವರ್ಡ್‍ಸ್ಯೂಯೆಸ್ ಮತ್ತು ಅಲ್ಫ್ರೆಡ್ ಹೆಟ್ನರ್ ಅವರ ಸಮಕಾಲೀನರು. ಮಾರ್ಫೊಲಾಜಿಡರ್ ಎರ್ಡೊಬೆರ್ಫ್ಲಾಜೆ ಎಂಬುದು ಇವರ ಪ್ರಸಿದ್ಧ ಗ್ರಂಥ. ಪೆಂಕ್‍ರು ಅದರ ವ್ಯಾಪ್ತಿಯನ್ನು ಕುರಿತು ಚರ್ಚಿಸುವಾಗ ಜಿಯೊಮಾರ್ಫೊಲಜಿ ಎಂಬ ಹೊಸ ಪದವನ್ನು ಮೊಟ್ಟಮೊದಲು ಪ್ರಯೋಗಿಸಿದರು. ಹೀಗೆ ಇವರು ಭೂಸ್ವರೂಪ ವಿಜ್ಞಾನದ ಪರಿಕಲ್ಪನೆಯನ್ನು ಕ್ರಮಬದ್ಧವಾಗಿ ಪ್ರತಿಪಾದಿಸಿದರು ಮತ್ತು ಭೂಸ್ವರೂಪದ ವಿಕಾಸದ ಮೂಲತತ್ವಗಳನ್ನು ಪ್ರತಿಷ್ಠಾಪಿಸಿದರು.

ಇವರು 1910ರಲ್ಲಿ ವಾಯುವೈಜ್ಞಾನಿಕ (ಹವಾಮಾನದ) ಅಂಕಿಅಂಶಗಳ ಅನುಪಸ್ಥಿತಿಯಲ್ಲಿ ಭೂಸ್ವರೂಪಗಳ ಅಧ್ಯಯನದ ಸಹಾಯದಿಂದ ವಾಯುಗುಣಗಳ ವಿಂಗಡಣೆ ಮಾಡಬಹುದೆಂಬ ಸಿದ್ಧಾಂತದ ಕಲ್ಪನೆ ನೀಡಿದರು. ಅಧಿಕ ಉಷ್ಣಾಂಶದೊಂದಿಗೆ ಬಾಷ್ಪೀಭವನ ಹೆಚ್ಚುವುದೆಂದು ಹೇಳಿದವರಲ್ಲಿ ಇವರು ಮೊದಲಿಗರು. ಅದರಂತೆ ಪರಿಣಾಮಕಾರಿ ಮಳೆ ನೇರವಾಗಿ ಪ್ರಚಲಿತ ಉಷ್ಣಾಂಶವನ್ನು ಅವಲಂಬಿಸಿರುತ್ತದೆಂದು ಸೂಚಿಸಿದರು. ಅಲ್ಲದೆ ಮಾನವನು ಪೃಥ್ವಿಯ ಮೇಲ್ಮೈಯನ್ನು ಸವೆಸಿ ರೂಪಿಸುವ ಒಂದು ಮಹತ್ವದ ಕರ್ತೃವಾಗಿದ್ದಾನೆಂದು ಪರಿಗಣಿಸಿದರು.



ಇವರು ಎಡ್ವರ್ಡ್ ಸೂಯೆಸ್ ಜೊತೆಗೂಡಿ ಪ್ರಪಂಚದ ಪ್ರಮುಖ ಭೂವೈಜ್ಞಾನಿಕ ಪ್ರದೇಶಗಳ ನಕ್ಷೆಗಳನ್ನು ತಯಾರಿಸಿದರು. ಭೂಗೋಳಶಾಸ್ತ್ರದ ವ್ಯವಸ್ಥಿತವಾದ ಅಧ್ಯಯನಕ್ಕೆ ಭೂಸ್ವರೂಪದ ಲಕ್ಷಣಗಳನ್ನು ತೋರಿಸುವ ನಿಖರವಾದ ನಕ್ಷೆಗಳ ಮಹತ್ವವನ್ನು ಒತ್ತಿ ಹೇಳಿದರು. ಆದ್ದರಿಂದ ದೊಡ್ಡ ಪ್ರಮಾಣದ (ಒಂದಂಗುಲ) ನಕ್ಷೆಗಳು ಬಳಕೆಗೆ ಬಂದವು. ಇವರ ಮೂಲ ವಿಚಾರಗಳು ಅನೇಕ ಯುವ ವಿಜ್ಞಾನಿಗಳಿಗೆ ಭೂಸ್ವರೂಪವಿಜ್ಞಾನ ಮತ್ತು ವಾಯುಗುಣವಿಜ್ಞಾನಗಳಲ್ಲಿ ಸಂಶೋಧನೆ ಕೈಗೊಳ್ಳಲು ಪ್ರೇರಣೆಯನ್ನಿತ್ತವು. ಪೆಂಕ್‍ರವರು ವ್ಲಾಡಿಮಿರ್ ಕೋಪೆನ್ ವಿಚಾರಗಳನ್ನನುಸರಿಸಿ ಪ್ರಪಂಚದ ವಾಯುಗುಣ ವಿಂಗಡನೆ ಮಾಡಿದರು. (ಎಸ್.ಎಸ್.ಎನ್.)

**ಅಲ್ಯೂಮಿನಿಯಂ:** ಒಂದು ಹಗುರ ಲೋಹ. ಅನೇಕ ಉತ್ಕರ್ಷ ಗುಣಗಳನ್ನು ಹೊಂದಿದೆ. ಇದು ವಾತಾವರಣಕ್ಕೆ ತೆರೆದರೂ ಹೊಳಪು ಮಾಸದು. ಆಟೋಮೊಬೈಲ್, ರೈಲು ಕೋಚು ಹಾಗೂ ವಿಶೇಷವಾಗಿ ವೈಮಾನಿಕ ಕೈಗಾರಿಕೆಯಲ್ಲಿ ಈ ಲೋಹ ಬಳಕೆಯಾಗುತ್ತದೆ. ಇದನ್ನು ಬಡವರ ಬೆಳ್ಳಿಯೆಂದೇ ಕರೆಯಲಾಗುತ್ತದೆ. ಇದನ್ನು ಪಾತ್ರೆಗಳು, ಕಟ್ಟಡ ನಿರ್ಮಾಣ, ಕಿಟಕಿ, ಬಾಗಿಲು ತಯಾರಿಕೆಯಲ್ಲಿ ಬಳಸಲಾಗುವುದು.

ಅಲ್ಯೂಮಿನಿಯಂ ಪ್ರಕೃತಿಯಲ್ಲಿ ಅದಿರಿನ ರೂಪದಲ್ಲಿ ದೊರೆಯುತ್ತದೆ. ಬಾಕ್ಸೈಟ್, ಕಯೋಲಿನ್, ಕಯೋಲೈಟ್ ಮತ್ತು ಕಾರಂಡಂ. ಇವುಗಳಲ್ಲಿ ಬಾಕ್ಸೈಟ್ ಪ್ರಮುಖವಾದುದು. ಆಸ್ಟ್ರೇಲಿಯ, ಗಿನಿ, ಜಮೈಕ, ಬ್ರೆಜಿಲ್, ಚೀನ, ಭಾರತ, ರಷ್ಯಗಳು ಪ್ರಮುಖ ಉತ್ಪಾದನ ದೇಶಗಳು. (ಬಿ.ಸಿ.ಕೆ.)

**ಅಲ್ಯೂಷಿಯನ್ ದ್ವೀಪಗಳು:** ಉತ್ತರ ಪೆಸಿಫಿಕ್ ಸಾಗರದಲ್ಲಿರುವ ದ್ವೀಪಸ್ತೋಮ. ಸು. 150 ದ್ವೀಪಗಳಿವೆ. ಅಲಾಸ್ಕದಿಂದ ಪಶ್ಚಿಮಕ್ಕೆ ಕಾಮ್‍ಚಟ್ಕಾ ಪರ್ಯಾಯದ್ವೀಪದವರೆಗೆ ಸು. 1932 ಕಿಮೀ ಉದ್ದ ಹಬ್ಬಿವೆ. $52^0$–$55^0$ ಉತ್ತರ ರೇಖಾಂಶ, $163^0$–$170^0$ ಪಶ್ಚಿಮ ರೇಖಾಂಶ. ಜನಸಂಖ್ಯೆ ಸು. 10,500. ಇವು ಜ್ವಾಲಾಮುಖಿ ಕಾರ್ಯದಿಂದ ಆದುವು. ಅನೇಕ ಸುಪ್ತ ಹಾಗೂ ಸಜೀವ ಜ್ವಾಲಾಮುಖಿಗಳಿವೆ. ಸಾಗರಿಕ ವಾಯುಗುಣವಿದ್ದು ವರ್ಷವೆಲ್ಲ ಮಳೆ ಬೀಳುತ್ತದೆ. ವರ್ಷದ ಬಹುಕಾಲ ವಾತಾವರಣ ದಟ್ಟ ಮಂಜಿನಿಂದ ಕೂಡಿದ್ದು ಸರಾಸರಿ $3.4^0$ ಸೆ ಉಷ್ಣತೆಯಿರುತ್ತದೆ. ಪೈರು ಬೆಳೆಯುವ ಅವಧಿ ಸು. 135 ದಿವಸಗಳು. ಇಲ್ಲಿಯ ಕೋನಿಫೆರಸ್ ಕಾಡುಗಳಲ್ಲಿ ಮೃದು ಮರ ದೊರೆತರೂ ಆ ಬಗ್ಗೆ ಕೈಗಾರಿಕೆ ಬೆಳೆದಿಲ್ಲ. ಮೀನುಗಾರಿಕೆ, ಬೇಟೆ ಜನರ ಮುಖ್ಯ ಉದ್ಯೋಗಗಳು. ಪ್ರಮುಖ

ರೇವು ಹಾಗೂ ವ್ಯಾಪಾರ ಕೇಂದ್ರವಾದ ಯುನಲಾಸ್ಕ ಅತಿ ದೊಡ್ಡ ಪಟ್ಟಣ. ಇಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ನೌಕಾ ನೆಲೆ ಇದೆ. (ಜಿ.ಕೆ.ಜಿ.)

**ಅಷ್ಟದಿಕ್ಕುಗಳು:** ಪೂರ್ವ (ಈಸ್ಟ್), ಆಗ್ನೇಯ (ಸೌತ್‌ಈಸ್ಟ್), ದಕ್ಷಿಣ (ಸೌತ್), ನೈರುತ್ಯ (ಸೌತ್‌ವೆಸ್ಟ್), ಪಶ್ಚಿಮ (ವೆಸ್ಟ್), ವಾಯವ್ಯ (ನಾರ್ತ್‌ವೆಸ್ಟ್), ಉತ್ತರ (ನಾರ್ತ್) ಮತ್ತು ಈಶಾನ್ಯ (ನಾರ್ತ್‌ಈಸ್ಟ್) ಇವು ಅಷ್ಟ ದಿಕ್ಕುಗಳು. ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ ಮತ್ತು ಈಶ್ವರ ಕ್ರಮವಾಗಿ ಈ ದಿಕ್ಕುಗಳ ಒಡೆಯರೆಂದು ಪುರಾಣ ಹೇಳುತ್ತದೆ. ಆದ್ದರಿಂದ ಇವರನ್ನು ಒಟ್ಟಾಗಿ ಅಷ್ಟದಿಕ್ಪಾಲಕರೆಂದು ಕರೆಯುವುದಿದೆ. (ಕೆ.ಎನ್.ಯು.)

ದಿಕ್ಸೂಚಿ

**ಅಸಂಪ್ರದಾಯ ಆರ್ಥಿಕತೆ:** ಇದು ಅಸಂಘಟಿತ ವಲಯವಾಗಿದ್ದು, ಇಲ್ಲಿ ಯಾವುದೇ ವಿಧವಾದ ಸಂಘಟನೆಗಳು ಕಂಡುಬರುವುದಿಲ್ಲ. ಇಲ್ಲಿ ಸಂಘಟಿತ ವಲಯದಲ್ಲಿರುವಂತೆ ಯಾವುದೇ ನೀತಿ, ನಿಯಮಗಳು ನೇರವಾಗಿ ಕಂಡು ಬರುವುದಿಲ್ಲ. ಇಲ್ಲಿಯು ಉತ್ಪಾದನೆ ಉಂಟಾದರೂ ಯಾವುದೇ ವಿಧವಾದ ಅಧಿಕೃತ ಸಂಘಟನೆಗಳಿರುವುದಿಲ್ಲ. ಇದು ದ್ವಿ ಆರ್ಥಿಕತೆಯ ಒಂದು ಭಾಗವಾಗಿದೆ. ಒಂದು ಭಾಗ ಸಂಘಟಿತ ವಲಯವಾಗಿದ್ದರೆ ಮತ್ತೊಂದು ಭಾಗ ಅಸಂಘಟಿತ ವಲಯವಾಗಿದೆ. ಸಂಘಟಿತ ಆರ್ಥಿಕತೆಯನ್ನು ಅಪ್ಪರ್ ಸರ್ಕ್ಯೂಟ್ ಎಂದೂ ಅಸಂಪ್ರದಾಯ ಆರ್ಥಿಕತೆಯನ್ನು ಲೋಯರ್ ಸರ್ಕ್ಯೂಟ್ ಎಂದೂ ಕರೆಯಲಾಗಿದೆ. ಇವುಗಳಲ್ಲಿನ ಭಿನ್ನತೆಗಳನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

| ಚರಗಳು | ಸಂಪ್ರದಾಯ ಆರ್ಥಿಕತೆ | ಅಸಂಪ್ರದಾಯ ಆರ್ಥಿಕತೆ |
|---|---|---|
| ತಂತ್ರಜ್ಞಾನ | ಬಂಡವಾಳ ಪ್ರಧಾನ | ಶ್ರಮ ಪ್ರಧಾನ |
| ಸಂಘಟನೆ | ಅಧಿಕಾರ ಶಾಹಿ | ಪುರಾತನ |
| ಶ್ರಮ | ನಿಯಮಿತ | ನಿಯಮಿತ |
| ಬೆಲೆ | ನಿಗದಿತ | ಚೌಕಾಸಿ |
| ಸಾಲ | ಹಣಕಾಸು ಸಂಸ್ಥೆಗಳು | ವೈಯಕ್ತಿಕ |
| ಬೇರೆ ದೇಶಗಳ ಅವಲಂಬನೆ | ಹೆಚ್ಚು | ಅತ್ಯಲ್ಪ ಅಥವಾ ಇಲ್ಲ |

ಅಸಂಪ್ರದಾಯ ಆರ್ಥಿಕತೆಯು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಹೆಚ್ಚು ಕಂಡುಬರುವುದು. ಇಲ್ಲಿ ಸಂಪ್ರದಾಯ ಮತ್ತು ಅಸಂಪ್ರದಾಯ ಆರ್ಥಿಕತೆಗಳೆರಡೂ ಒಟ್ಟೊಟ್ಟಾಗಿ ಕಂಡುಬರುತ್ತವೆ. ಅಸಂಪ್ರದಾಯಕ ಆರ್ಥಿಕ ವ್ಯವಸ್ಥೆಯಲ್ಲಿ ವಿವಿಧ ಅಂಶಗಳು ಸಂಘಟಿತವಾಗಿರುವುದಿಲ್ಲ. ಇಂತಹ ಆರ್ಥಿಕತೆಯಲ್ಲಿ ನಿಖರವಾದ ಅಂಕಿ ಅಂಶಗಳು ಸಹ ಲಭ್ಯವಾಗುವುದಿಲ್ಲ. (ಎಸ್.ಕೆ.ಪಿ.)

**ಅಸನ್ಸಾಲ್:** ಪಶ್ಚಿಮಬಂಗಾಲದ ಬರ್ದವಾನ್ ಜಿಲ್ಲೆಯ ದಾಮೋದರ ನದೀಕಣಿವೆಯಲ್ಲಿರುವ ಒಂದು ನಗರ. ರಾಣಿಗಂಜ್ ಕಲ್ಲಿದ್ದಲು ಗಣಿಗಳ ಹತ್ತಿರ, ಪೂರ್ವರೈಲ್ವೆಯಲ್ಲಿ, ಕೋಲ್ಕೊತದಿಂದ 210 ಕಿಮೀ ದೂರದಲ್ಲಿದೆ. ವಿಸ್ತೀರ್ಣ 6.4 ಚ.ಕಿಮೀ. ಗ್ರಾಂಡ್ ಟ್ರಂಕ್ ರಸ್ತೆ ನಗರದ ಪೂರ್ವದಿಂದ ಪಶ್ಚಿಮಕ್ಕೆ ಹಾದು ಹೋಗುತ್ತದೆ. ಕೈಗಾರಿಕಾನಗರ, ಕಲ್ಲಿದ್ದಲ್ಲಿನ ಮಾರಾಟ ಕೇಂದ್ರ, ಮುಖ್ಯರೈಲ್ವೆ ನಿಲ್ದಾಣ. ಇಲ್ಲಿ ಒಂದು ರೈಲ್ವೆ ಕಾಲೋನಿ ಮತ್ತು ಕಾರ್ಯಾಗಾರಗಳಿವೆ. ಉಪನಗರವಾದ ಜಿಕೆ ನಗರದಲ್ಲಿ ದೊಡ್ಡ ಅಲ್ಯೂಮಿನಿಯಂ ಕಾರ್ಖಾನೆ ಇದೆ. ದೊಡ್ಡ ದೊಡ್ಡ ಕಬ್ಬಿಣದ ಕುಲುಮೆಗಳಿವೆ. ರಾಸಾಯನಿಕ ಹಾಗೂ ತಾಂತ್ರಿಕ ವಸ್ತುಗಳನ್ನು ಉತ್ಪಾದಿಸುತ್ತಾರೆ. ಜನಸಂಖ್ಯೆ 10,90,171. (ಕೆ.ಎನ್.ಪಿ.)

**ಅಸೆನ್‌ಸಿಯಾನ್ ದ್ವೀಪ:** ಆಫ್ರಿಕದ ಪಶ್ಚಿಮ ಕರಾವಳಿಯಲ್ಲಿ ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿದೆ. ಸು. 1600 ಕಿಮೀ ದೂರದಲ್ಲಿದೆ. ಈ ದ್ವೀಪ ಬ್ರಿಟಿಷ್ ಸಾಗರೋತ್ತರ ಅಧೀನದಲ್ಲಿರುವುದು ಇದರ ಒಂದು ಭಾಗವಾದ ಸೇಂಟ್ ಹೆಲಿನ ದ್ವೀಪ ಸು. 1287 ಕಿಮೀ ಆಗ್ನೇದಲ್ಲಿದೆ. ಈ ದ್ವೀಪ ರಾಯಲ್ ಏರ್‌ಫೋರ್ಸ್ ಮತ್ತು ಯು.ಎಸ್. ಏರ್‌ಫೋರ್ಸ್ ಜಂಟೀ ಕಾರ್ಯಾಚರಣೆಗೆ ವಾಯುನೆಲೆಯಾಗಿದೆ. ಈ ದ್ವೀಪದ ವಾಯು ನೆಲೆಯನ್ನು ಫಾಕ್‌ಲೆಂಡ್ ಯುದ್ಧಕಾಲದಲ್ಲಿ ಬ್ರಿಟಿಷ್ ಸೈನ್ಯವು ಹೆಚ್ಚಾಗಿ ಬಳಸಿಕೊಂಡಿತ್ತು. ಈ ದ್ವೀಪ ಜಾಗತಿಕ ಸ್ಥಾನ ನಿರ್ದೇಶನ ವ್ಯವಸ್ಥೆಗೆ ಭೂತರಂಗ ಸಾಧನ ಸಂಪರ್ಕ ಸಾಧವನ್ನು ಹೊಂದಿದೆ. ಈ ದ್ವೀಪದ ವಿಸ್ತೀರ್ಣ 91 ಚ.ಕಿಮೀ. ಜನಸಂಖ್ಯೆ 1100 (2005). ಜನಸಾಂದ್ರತೆ 22 ಚ.ಕಿಮೀ ಗೆ ಅಧಿಕೃತ ಭಾಷೆ ಇಂಗ್ಲೀಷ್. ರಾಜಧಾನಿ ಜಾರ್ಜ್‌ಟೌನ್ ಇಲ್ಲಿನ ನಾಣ್ಯ. ಸೆಂಟ್ ಹೆಲಿನ ಪೌಂಡ್. ಸರ್ಕಾರ ಸೆಂಟ್ ಹೆಲಿನ–ಅಧೀನದಲ್ಲಿದೆ.

ಅಸೆನ್‌ಸಿಯಾನ್ ದ್ವೀಪ ಜ್ವಾಲಾಮುಖಿ ಶಿಖರ, ಮಧ್ಯ ಅಟ್ಲಾಂಟಿಕ್ ಪರ್ವತ ಶ್ರೇಣಿಯ ಒಂದು ಭಾಗ. ಈ ದ್ವೀಪದ ಹೆಚ್ಚಿನ ಭಾಗ ಯೋಗ್ಯವಲ್ಲದ ಭೂಮಿ, ಲಾವಾ ಹರಿವಿನಿಂದ ಮತ್ತು ಶಂಕಾಕೃತಿಯ ಗುಡ್ಡಗಳಿಂದ ತುಂಬಿದೆ. ಸು. 40ಕ್ಕೂ ಅಧಿಕ ಜ್ವಾಲಾಮುಖಿಯ ಬಟ್ಟಲಾಕಾರದ ಭೂ ಸಾದೃಶ್ಯಗಳು ಕಂಡುಬರುತ್ತವೆ. 1843ರ ವರೆಗೂ ಈ ದ್ವೀಪ ವೃಕ್ಷರಹಿತವಾಗಿತ್ತು. ಆದರೆ ಈಗ ಹಚ್ಚ ಹಸುರಾದ ಪರ್ವತಗಳು ಕೃತಕ ಅರಣ್ಯಗಳಿಂದ ಅಲಂಕೃತವಾಗಿವೆ. ಇಲ್ಲಿನ ಎತ್ತರದ ಭಾಗ 859 ಮೀ ಪೂರ್ವಕರಾವಳಿಯಲ್ಲಿ ಬೋಟ್ಸಾವಾನೆ ಸಣ್ಣ ದ್ವೀಪ ಸಮೂಹ ಪಕ್ಷಿಗಳ ಸ್ವರ್ಗ. ಅಸೆನ್‌ಸಿಯಾನ್‌ಗೆ ಆಗಮಿಸಿದ ಯೂರೋಪಿಯನ್ನರು ಇಲಿ, ಬೆಕ್ಕು ನಾಯಿಗಳನ್ನು ದ್ವೀಪಕ್ಕೆ ತಂದರೆ, ಅವುಗಳ ಉಪಟಳದಿಂದ ಸಮುದ್ರ ಪಕ್ಷಿಗಳು ಬೋಟ್ಸವಾನ ದ್ವೀಪವನ್ನು ಆಶ್ರಯಿಸಿವೆ.

ಅಸೆನ್‌ಸಿಯಾನ್ ದ್ವೀಪದ ವಾಯುಗುಣ ಉಪಷ್ಣವಲಯದ್ದು. ತೀರ ಪ್ರದೇಶಗಳಲ್ಲಿ ಉಷ್ಣತೆ $20^0$ಯಿಂದ $31^0$ಸೆ. ಎತ್ತರದ ಪ್ರದೇಶಗಳಲ್ಲಿ $10^0$ ಸೆ. ಇರುತ್ತದೆ. ಮಳೆ ವರ್ಷದ ಯಾವ ಋತುವಿನಲ್ಲಾದರೂ ಆಗಬಹುದು, ಆದರೆ ಅಧಿಕ ಮಳೆ ಜನವರಿ ಮತ್ತು ಏಪ್ರಿಲ್ ತಿಂಗಳಲ್ಲಿ ಮಾತ್ರ.

ಜನಸಂಖ್ಯೆ: ಈ ದ್ವೀಪ ವಾಯುನೆಲೆಯಾಗಿರುವುದರಿಂದ, ಸೈನಿಕ ಮತ್ತು ನಾಗರಿಕ ಗುತ್ತಿಗೆದಾರರು ಅಮೆರಿಕ ಮತ್ತು ಇಂಗ್ಲೆಂಡಿನವರು, ಸಾಮಾನ್ಯ ಕಾರ್ಮಿಕರನ್ನು ಸೇಂಟ್ ಹೆಲಿನ ದ್ವೀಪದಿಂದ ಕರೆಸಿಕೊಂಡಿರುವರು ಮುಖ್ಯ ಜನಸಂಖ್ಯಾವಾಹಿನಿಯಲ್ಲಿ ಸೇರಿದ್ದಾರೆ. ಜನಸಂಖ್ಯೆ 1100. ಅಮೆರಿಕ ವಾಯುನೆಲೆಯ ವೈಮಾನಿಕ ವರ್ಗದ ಸಂಖ್ಯೆ 150, ರಾಯಲ್ ಏರ್‌ಫೋರ್ಸ್ ಅಧಿಕಾರಿ ವರ್ಗ 200, ಇತರರೆಂದರೆ ಬ್ರಿಟಿಷ್ ಸರ್ಕಾರಿ ಕಾರ್ಮಿಕರು, ಆಡಳಿತ ಅಧಿಕಾರಿಗಳು. ಈ ದ್ವೀಪದಲ್ಲಿ ನೆಲೆಸಲು ಈ ದ್ವೀಪದಲ್ಲಿ ಉದ್ಯೋಗಿಯಾಗಿರಲೇಬೇಕು. ಯು.ಕೆ. ಸರ್ಕಾರ ಕಟ್ಟುನಿಟ್ಟಾದ ಕಾನೂನನ್ನು ವಿಧಿಸಿದೆ ಈ ದ್ವೀಪದಲ್ಲಿ ವಾಸಿಸಲು ಹಕ್ಕು ಪತ್ರವನ್ನು ಪಡೆದಿರಬೇಕು.

ಆರ್ಥಿಕ ವ್ಯವಸ್ಥೆ: ಇಲ್ಲಿನ ಆರ್ಥಿಕ ಚಟುವಟಿಕೆಗಳು ವೈಡಿಯಾವೇಕ್ ವಾಯುನೆಲೆಯ ಸುತ್ತ ಕೇಂದ್ರೀಕೃತವಾಗಿದೆ. ವಾಯುಯಾನಕ್ಕೆ ಅಗತ್ಯವಾದ ಇಂಧನವನ್ನು ಸಾಗರೋತ್ತರದಿಂದ ಆಮದು ಮಾಡಿಕೊಳ್ಳುವುದು ಪ್ರಮುಖ ಚಟುವಟಿಕೆ. ವಾರ್ಷಿಕ 70,000 ಟನ್ ಇಂಧನ ಆಮದಾಗುತ್ತದೆ. ಯುದ್ಧ ವಿಮಾನಗಳಿಗೆ ಇಂಧನ ಪೂರೈಕೆ ಮಾಡಲಾಗುತ್ತದೆ.

ಈ ದ್ವೀಪ ಹಲವು ಸಂಪರ್ಕ ಸಾದನವಾಗಿ ಕಾರ್ಯ ನಿರ್ವಹಿಸುತ್ತಿದೆ. ಬಾನುಲಿ ಮರುಪ್ರಸಾರಕೇಂದ್ರ, ಬಿ.ಬಿ.ಸಿ ಮತ್ತು ಕೇಬಲ್ ವಯರ್‌ಲೆಸ್ ಜಾಲಸಂಪರ್ಕಗಳನ್ನು ಪೂರೈಸುತ್ತಿದೆ. ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆ ಇಲ್ಲಿ ಭೂಕೇಂದ್ರವನ್ನು ಸ್ಥಾಪಿಸಿದೆ. ಫ್ರೆಂಚ್‌ಗಯಾನದಿಂದ ಉಡಾವಣೆ ಮಾಡುವ ಬಾಹ್ಯಾಕಾಶ ನೌಕೆಗಳು ಕಳಿಸುವ ಸಂದೇಶಗಳನ್ನು ಸ್ವೀಕರಿಸಲು ಇಲ್ಲಿ 5 ಕೇಂದ್ರಗಳು ಸುಸಜ್ಜಿತವಾಗಿವೆ.

ಈ ದ್ವೀಪದಿಂದ ರಫ್ತುಮಾಡುವ ವಸ್ತುಗಳೆಂದರೆ ಅಂಚೆ ಚೀಟಿಗಳು. ಪ್ರತಿವರ್ಷ 5–6 ಮಾದರಿಗಳಲ್ಲಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಗುತ್ತದೆ. ಪ್ರವಾಸೋದ್ಯಮ ನಿರ್ಬಂಧವಾಗಿದೆ. ಪ್ರವಾಸಿಮಂದಿರವಾಗಲಿ, ಪರವಾನಗಿಯಾಗಲಿ ಲಭಿಸುವುದು ಕಷ್ಟ. ಇತ್ತೀಚಿನ ವರ್ಷಗಳಲಿ ಅಲ್ಪಪ್ರಮಾಣದ ವಾಯುಯಾನ ಸೌಲಭ್ಯವನ್ನು ಒದಗಿಸಲಾಗಿದೆ. ಜಾರ್ಜ್‌ಟೌನ್‌ನಲ್ಲಿ ಕೆಲವು ಹೊಟೇಲ್‌ಗಳನ್ನು ತೆರೆಯಲಾಗಿದೆ. ಅಲ್ಲಿಗೆ ಭೇಟಿ ನೀಡಲು ಆಸಕ್ತಿ ಉಳ್ಳವರು ಆಡಳಿತಾಧಿಕಾರಿಗಳಿಂದ ಲಿಖಿತ ಅಪ್ಪಣೆ ಪಡೆಯಬೇಕಾಗಿರುತ್ತದೆ. ಇಲ್ಲಿಗೆ ಭೇಟಿ ಕೊಡುವವರಿಗೆ ಮೀನು ಹಿಡಿಯುವುದು ಒಂದು ಮೋಜು. (ವಿ.ಎಸ್.ಎ.)

**ಅಸ್ಟ್ರಲೋಪಿತಿಕಸ್:** ಸು. 4–20 ಲಕ್ಷ ವರ್ಷಗಳ ಹಿಂದೆ ಪ್ಲಿಸ್ಟೋಸೀನ್ ಮೊದಲ ಭಾಗದಲ್ಲಿ ದಕ್ಷಿಣ ಮತ್ತು ಪೂರ್ವ ಆಫ್ರಿಕದ ಬಯಲುಗಳಲ್ಲಿ ಹರಡಿದ್ದ ಒಂದು ವಾನರ ಜಾತಿ. ಈ ಪ್ರದೇಶದ ಹಲವಾರು ಸುಣ್ಣಕಲ್ಲು ಗುಹೆಗಳಲ್ಲಿ ಇದರ ಪಳೆಯುಳಿಕೆಗಳು ದೊರೆತಿವೆ. ಇತರ ಕಪಿಗಳಂತಲ್ಲದೆ, ಇದು ಮನುಷ್ಯನ ರೀತಿಯ ದ್ವಿಪಾದಚಾರಿ. ತಲೆಬುರುಡೆಯ ಮಾಟ, ಹಲ್ಲಿನ ಜೋಡಣೆ ಮುಂತಾದ ಇತರ ವಿಷಯಗಳಲ್ಲೂ ಇದು ನರಜಾತಿಗೆ ಸಮೀಪದಲ್ಲಿರುವುದರಿಂದ ಇದನ್ನು ಸಮೀಪನರನೆಂದೂ ಪ್ರಾಕ್ತನ ಶಾಸ್ತ್ರಜ್ಞರು ಕರೆಯುತ್ತಾರೆ. ಈ ಸಂತತಿಯ ಕಪಿಗಳು ಬಹುಸಾಮಾನ್ಯತರದ ಒರಟು ಶಿಲಾಯುಧಗಳನ್ನು ಉಪಯೋಗಿಸುತ್ತಿದ್ದಿರಬಹುದೆಂದು ವಿದ್ವಾಂಸರಾದ ಲೀಕಿಯವರ ಸಂಶೋಧನೆಗಳಿಂದ ಗೊತ್ತಾಗಿದೆ. ನಿಜಮಾನವನ ವಿಕಾಸದಲ್ಲಿ ಈ ಜಾತಿ ಒಂದು ಮಧ್ಯಘಟ್ಟವೋ ಅಥವಾ ವಿಕಾಸ ಕಾಂಡದಿಂದ ಒಡೆದು ಮಧ್ಯದಲ್ಲೇ ಅಳಿದು–ಹೋದ ಒಂದು ಕವಲೋ ಎಂಬುದು ಇನ್ನೂ ಅನಿರ್ದಿಷ್ಟ.

ಮೊಟ್ಟ-ಮೊದಲು ಡಾರ್ಟ್ 1924ರಲ್ಲಿ ಬೆಕುವಾನ ಪ್ರದೇಶದಲ್ಲಿನ (ಆಫ್ರಿಕ) ಟಾಂಗ್ಸ್ ಸುಣ್ಣಕಲ್ಲಿನಲ್ಲಿ ಈ ಗುಂಪಿಗೆ ಸೇರಿದ ತಲೆ ಬುರುಡೆಯ ಪಳೆಯುಳಿಕೆಯನ್ನು ಕಂಡುಹಿಡಿದರು. ಅದಕ್ಕೆ ಅವರು ಅಸ್ಟ್ರಲೋಪಿತಿಕಸ್ ಎಂದು ನಾಮಕರಣ ಮಾಡಿದರು. 1936–51ರಲ್ಲಿ ರಾಬರ್ಟ್ ಬ್ರೂಂ ಟ್ರಾನ್ಸವಾಲ್‌ನಲ್ಲಿ ಕೆಲವು ತಲೆಬುರುಡೆಗಳನ್ನು ಕಂಡುಹಿಡಿದರು. ಲೀಕಿ ಮತ್ತು ಶ್ರೀಮತಿ ಲೀಕಿಯವರು ಟಾಂಗನೀಕದ ಓಲ್ಡುವೈ ಕಣಿವೆಯಲ್ಲಿ 1956ರಲ್ಲಿ ಕಂಡುಹಿಡಿದ ಝಿಂಜ಼ಾಂತ್ರಪಸ್ ತಲೆಬುರುಡೆಯೂ ಇದೇ ಗುಂಪಿಗೆ ಸೇರಿದುದೆಂದು ಅನೇಕ ವಿಜ್ಞಾನಿಗಳ ಅಭಿಪ್ರಾಯ.

ತಲೆಬುರುಡೆ 600–700 ಕ್ಯೂಬಿಕ್ ಸೆಂಮೀ ಇದ್ದಾಗ್ಯೂ (ಬಾಲವಿಲ್ಲದ ಮಂಗಗಳಿಗೆ ಇಷ್ಟೇ ಇದೆ) ಝಿಂಜ಼ಾಂತ್ರಪಸ್ ಕಲ್ಲಿನ ಆಯುಧಗಳನ್ನು ಮಾಡುವ ಶಕ್ತಿಯನ್ನು ಹೊಂದಿತ್ತು. ಲೀಕಿಯವರು ಇದರ ತಲೆಬುರುಡೆಯ ಪಳೆಯುಳಿಕೆಯ ಜೊತೆಯಲ್ಲಿ ಸಿಕ್ಕಿದ ಕಲ್ಲಿನ ಆಯುಧಗಳನ್ನು ಶೇಖರಿಸಿದರು. ಅಸ್ಟ್ರಲೋಪಿತಿಕಸ್ ಗುಂಪು ಮೈದಾನದಲ್ಲಿ ಮರವನ್ನು ತ್ಯಜಿಸಿ ಮಾನವನಂತೆ ಎರಡು ಕಾಲುಗಳ ಮೇಲೆ ನೆಟ್ಟಗೆ ನಡೆಯುತ್ತಿದ್ದುದರಿಂದ ಅವು ತಮ್ಮ ಆಹಾರಕ್ಕಾಗಿ ಬ್ಯಾಬೂನ್, ಮೊಲ ಮೊದಲಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದುವು. (ಎಸ್.ಎಂ.)

**ಅಸ್ತಿತ್ವವಾದ:** ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಎರಡು ಮಹಾಯುದ್ಧಗಳ ಕಾಲದಲ್ಲಿ ಉಗಮವಾದ ಪಂಥ (ಎಕ್ಸಿಸ್ಟೆಂನ್ಷಿಯಲಿಸಂ) ಸಾಂಪ್ರದಾಯಿಕ ತತ್ತ್ವಶಾಸ್ತ್ರ, ಮತಧರ್ಮ ಮತ್ತು ವಿಜ್ಞಾನಗಳಿಗೆ ಪ್ರತಿರೋಧವನ್ನು ವ್ಯಕ್ತಪಡಿಸುವ ಮೂಲಕ ಅಸ್ತಿತ್ವಕ್ಕೆ ಬಂದ ಈ ಪಂಥದ ಪ್ರಮುಖರು ಸೊರೆನ್ ಕಿರ್ಕ್‌ಗಾರ್ಡ್ (1813–55) ಎಂಬ ಡ್ಯಾನಿಷ್ ತಾತ್ತ್ವಿಕ, ಜರ್ಮನಿಯ ಮರ್ಲಿನ್ ಹೈಡ್‌ಗರ್ (1889–1976) ಮತ್ತು ಫ್ರಾನ್ಸ್ ನ ಜೀನ್ ಪಾಲ್‌ಸಾತ್ರೆ (1905–80). ಅಸ್ತಿತ್ವವೇ ಸತ್ವಕ್ಕೆ ಮೊದಲು ಎಂಬುದು ಅಸ್ತಿತ್ವವಾದದ ಪ್ರಮುಖ ಉಕ್ತಿ ಎಂದರೆ ಅಸ್ತಿತ್ವವಾದವು ವಸ್ತುಗಳನ್ನು ಕುರಿತ ಚರ್ಚೆಯಲ್ಲ. ಅದು ಮಾನವನ ಸಂದರ್ಭವನ್ನು ಕುರಿತ ಈ ಚರ್ಚೆ, ಎಂದರೆ ಮಾನವನ ಸ್ವಭಾವ ಅವನ ಬದುಕಿನ ಸಂದರ್ಭಗಳಿಂದ ನಿರ್ಧಾರಿತವಾಗಿದೆಯೇ ಹೊರತು ಅದು ಬದುಕೇ ಅವನ ಸ್ವಭಾವದಿಂದ ನಿರ್ಧರಿತವಲ್ಲ. ಮನುಷ್ಯನಿಗೆ ಉಂಟಾಗುವ ಸಾವಿನ ಭಯ, ತನ್ಮೂಲಕ ತನ್ನ ಭವಿಷ್ಯವನ್ನು ಕುರಿತ ಅವನ ಆತಂಕ, ಈ ಆತಂಕವನ್ನು ಸ್ವೀಕರಿಸಿ ಎದುರಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ–ಇವೆಲ್ಲವೂ ಅವನನ್ನು ಬದುಕು ಸಾವುಗಳ ನಡುವಣ ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭಕ್ಕೆ ದೂಡುತ್ತವೆ. ಈ ಆಯ್ಕೆಯಲ್ಲೇ ಮನುಷ್ಯನು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದು. ಎಂದರೆ ಈ ಅಸ್ತಿತ್ವವು ಮನುಷ್ಯನ ಹಿನ್ನೆಲೆಯಲ್ಲಿ ಮಾತ್ರ ಅರ್ಥಪೂರ್ಣ. ಅಸ್ತಿತ್ವವಾದಿಯ ಪ್ರಕಾರ ಮನುಷ್ಯನಿಗೆ ಮಾತ್ರ ಅನ್ವಯಿಸಿದರೆ ಮನುಷ್ಯನು ಮಾತ್ರವೇ ಅಸ್ತಿತ್ವದಲ್ಲಿ ಇರುವುದು. ಉಳಿದೆಲ್ಲ ವಸ್ತುಗಳೂ ಕೇವಲ ಇರಬಲ್ಲವಾಗಿವೆ. ಇದಕ್ಕೆ ಕಾರಣ ಆ ವಸ್ತುಗಳಿಗೆ ಮನುಷ್ಯನಿಗೆ ಇರುವಂತೆ ಜಗತ್ತಿನ ಬಗ್ಗೆ ಕಳಕಳಿಯು ಸಂಬಂಧವಿಲ್ಲ. ಅವುಗಳಿಗೆ ಮನುಷ್ಯನ ಬದುಕಿಗೆ ಇರುವಂತೆ ಉದ್ದೇಶವಿಲ್ಲ ಈ ಉದ್ದೇಶವೇನೇ ಇರಬಹುದು. ಅದು ಕಾಲದಿಂದ ಕಾಲಕ್ಕೆ ಮತ್ತು ಮನುಷ್ಯನಿಂದ ಮನುಷ್ಯನಿಗೆ ಬದಲಾಗುತ್ತಿರಬಹುದು. ಈ ಉದ್ದೇಶದಲ್ಲಿ ಮನುಷ್ಯನು ಸಫಲನಾಗಬಹುದು ಅಥವಾ ವಿಫಲವಾಗಬಹುದು. ಒಟ್ಟಾರೆ ಮನುಷ್ಯನ ಬದುಕಿಗೆ ಒಂದು ಉದ್ದೇಶವಿದೆ. ಈ ಉದ್ದೇಶದಲ್ಲಿ ಅವನು ವಿಫಲನಾದಾಗ ಅವನಿಗೆ ನಿರಾಶೆಯಾಗುತ್ತದೆ. ಈ ಉದ್ದೇಶ ನಿರಾಶೆಗಳನ್ನು ಮಾನವನಲ್ಲದೇ ಬೇರೆ ವಸ್ತುಗಳಿಗೆ ಅನ್ವಯಿಸಲು ಸಾಧ್ಯವಿಲ್ಲ.

ಮೂರನೆಯದಾಗಿ ವಸ್ತುಗಳ ನಡುವಣ ಸಂಪರ್ಕವಿಲ್ಲ. ಸಂಪರ್ಕವು ಮನುಷ್ಯ ಮತ್ತು ಮನುಷ್ಯರಲ್ಲಿ ಸಾಧ್ಯವೇ ಹೊರತು ಮನುಷ್ಯ ಮತ್ತು ವಸ್ತುಗಳ ನಡುವಣ ಅಲ್ಲ. ಹೇಳುವವ ಮತ್ತು ಕೇಳುವವರ ನಡುವಣ ಇರುವ ಸಂಬಂಧವನ್ನು ಸಂಪರ್ಕವೆನ್ನುತ್ತೇವೆ.

ಈ ವಸ್ತುಗಳಲ್ಲಿ ಸ್ವಾತಂತ್ರ್ಯ ಎಂಬುವುದಿಲ್ಲ. ಮನುಷ್ಯನೊಬ್ಬನಲ್ಲೇ ಸ್ವಾತಂತ್ರ್ಯವಿರುವುದು. ಮನುಷ್ಯನೆಂದರೆ ಅವನು ಸ್ವತಂತ್ರನೆಂದರ್ಥ. ಅವನ ಜೀವನದಲ್ಲಿ ಅನೇಕ ಅಡಚಣೆಗಳಿರಬಹುದು. ಅವೆಷ್ಟೇ ಸಂಖ್ಯೆಯಲ್ಲಿದ್ದರೂ ಎಷ್ಟೇ ತೀವ್ರವಾಗಿದ್ದರೂ ಅವು ಅವನಲ್ಲಿ ಅಂತರ್ಗತವಾಗಿರುವ ಸ್ವಾತಂತ್ರ್ಯವನ್ನು ದಮನಗೊಳಿಸಲಾರವು. ಸಾವಿನ ಸಂದರ್ಭವೊಂದನ್ನು ಬಿಟ್ಟರೆ ಯಾರೂ ಯಾವ ಸಂದರ್ಭದಲ್ಲೂ ಸ್ವಾತಂತ್ರ್ಯವನ್ನು ಮನುಷ್ಯನಿಂದ ಕಸಿದುಕೊಳ್ಳಲು ಸಾಧ್ಯವಿಲ್ಲ. ಈ ಸ್ವಾತಂತ್ರ್ಯವಿರುವುದರಿಂದಲೇ ಮನುಷ್ಯ ಒಂದು ಸನ್ನಿವೇಶವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯ. (ಎಚ್.ಎಂ.ಪಿ.)

**ಅಸ್ಸಾಂ:** ಭಾರತದ ಈಶಾನ್ಯದಲ್ಲಿರುವ ಒಂದು ರಾಜ್ಯ. (ಉ.ಅ. $22^0$–$28^0$. ಪೂ.ರೇ $89^045'$ – $96^0$. ) ವಿಸ್ತೀರ್ಣ 1.22.000. ಚ.ಕಿಮೀ. ಜನಸಂಖ್ಯೆ 26,638,407 (2001). ಉತ್ತರದಲ್ಲಿ ಟಿಬೆಟ್, ಪೂರ್ವಕ್ಕೆ ಮಯನ್ಮಾರ್, ದಕ್ಷಿಣ ಮತ್ತು ಪಶ್ಚಿಮದಲ್ಲಿ ಬಾಂಗ್ಲಾದೇಶ ಮೇರೆಗಳನ್ನೊಳಗೊಂಡಿದೆ. ನೇಪಾಲ ಮತ್ತು ಪಾಕಿಸ್ತಾನಗಳ ನಡುವಿರುವ, ಹಿಮಾಲಯ ಪರ್ವತಗಳ ತಪ್ಪಲು ಪ್ರದೇಶದಲ್ಲಿರುವ ಈ ಪ್ರದೇಶ ಭಾರತದ ಇತರ ಭಾಗದೊಡನೆ ಸಂಪರ್ಕ ಹೊಂದಿದೆ. ರಾಜ್ಯದ ರಾಜಧಾನಿ ದಿಸ್ಪುರ್. ಇದರ ಜನಸಂಖ್ಯೆ 492,996.

ಪ್ರಾಕೃತಿಕ ವಿಭಾಗಗಳು: ರಾಜ್ಯ ಅನೇಕ ಪರ್ವತಗಳಿಂದಲೂ ಬೆಟ್ಟಗಳಿಂದಲೂ ಕೂಡಿದೆ. ಹಿಮಾಲಯ ಪರ್ವತಗಳ ತಪ್ಪಲುಗಳು ಉತ್ತರದಲ್ಲೂ ಗಾರೋ. ಖಾಸಿ, ಜೈಂತಿಯ, ಮಿಕಿರ್ ಮತ್ತು ನಾಗಾ ಬೆಟ್ಟಗಳು ದಕ್ಷಿಣದಲ್ಲೂ ಮೇರೆಯಾಗಿರುವ ಕಿರಿದಾದ ಉದ್ದವಾದ ಬ್ರಹ್ಮಪುತ್ರಾ ನದೀಕಣಿವೆಯಲ್ಲಿ ರಾಜ್ಯದ ಬಹುಪಾಲು ಜನರು ವಾಸಿಸುತ್ತಾರೆ. ರಾಜ್ಯದ ವಾಯುಗುಣ ತಂಪಾಗಿದ್ದು, ಹೆಚ್ಚು ತೇವಾಂಶದಿಂದ ಕೂಡಿದೆ. ನೈರುತ್ಯ ಮಾರುತಗಳಿಂದ ಅಸ್ಸಾಂ ರಾಜ್ಯ ಭಾರತದಲ್ಲೇ ಅತ್ಯಧಿಕ ಮಳೆಯನ್ನು ಪಡೆಯುವ ಭಾಗವಾಗಿದೆ. (ಸರಾಸರಿ 230 ಸೆಂಮೀ). ನವಗಾಂಗ್‌ನಲ್ಲಿ 130 ಸೆಂಮೀ, ಚಿರಾಪುಂಜಿಯಲ್ಲಿ 1200 ಸೆಂಮೀ ಮಳೆಯಾಗುತ್ತದೆ. ಸೆಪ್ಟೆಂಬರ್ ಮಧ್ಯದಿಂದ ಮಾರ್ಚವರೆಗೆ ವಾಯುಗುಣ ಹಿತಕರವಾಗಿ ತಂಪಾಗಿರುತ್ತದೆ.

ರಾಜ್ಯದಲ್ಲಿ ಅನೇಕ ದೊಡ್ಡ ಮತ್ತು ಚಿಕ್ಕ ಸರ್ವಕಾಲಿಕ ನದಿಗಳಿವೆ. ಪ್ರಪಂಚದ ದೊಡ್ಡ ನದಿಗಳಲ್ಲೊಂದಾದ ಬ್ರಹ್ಮಪುತ್ರಾ ನದಿಗೆ ಇಕ್ಕೆಲಗಳಿಂದ ಅನೇಕ ಉಪನದಿಗಳು ಬಂದು ಸೇರುತ್ತವೆ. ಸುಬಾನ್ಸಿರಿ, ಭಾರಾರಿ, ಪಾಗ್ಲಾಡಿಯಾ, ಮಾನಹ್ ಮತ್ತು ಸಂತೋಷ್



ಎಂಬುವು ಉತ್ತರ ದಂಡೆಯಿಂದಲೂ ಬುರ್ಹಿದಿಹಿಂಗ್, ಧಾನ್ಸಿಖಿ, ಕೋಪಿಲಿ, ದೀಗಾರು, ದೂಧ್ನೊಯ್ ಮತ್ತು ಕೃಷ್ಣಾಯಿ ಎಂಬುವು ದಕ್ಷಿಣ ದಂಡೆಯಿಂದಲೂ ಹರಿದು ಬರುವ ಕೆಲವು ಮುಖ್ಯ ಉಪನದಿಗಳು. ಇವುಗಳಲ್ಲಿ ಅನೇಕ ನದಿಗಳು ಅನೇಕ ಜಲಪಾತಗಳ ಮತ್ತು ಚಿಕ್ಕ ಜಲಪಾತಸರಣಿಗಳನ್ನುಳ್ಳ, ವರ್ಷವೆಲ್ಲ ಪ್ರವಾಹದಿಂದ ಹರಿಯುವ ನದಿಗಳು. ಆದ್ದರಿಂದ ಅಸ್ಸಾಂ ರಾಜ್ಯ ಅಧಿಕ ಜಲವಿದ್ಯುಚ್ಛಕ್ತಿಯ ಸಂಪತ್ತನ್ನು ಪಡೆದಿದೆ.

ಜನರು : ವಿವಿಧ ಬುಡಕಟ್ಟಿಗೆ ಸೇರಿದ ಜನರುಳ್ಳ ಅಸ್ಸಾಂ ಭಾರತದ ಪ್ರತೀಕವಾಗಿದೆ. ಆಸ್ಟ್ರೋ– ಏಷ್ಯಾಟಿಕ್, ದ್ರಾವಿಡ ಮತ್ತು ಮಂಗೋಲ್ ಬುಡಕಟ್ಟಿಗೆ ಸೇರಿದ ಜನರು ಈ ರಾಜ್ಯದ ಮೂಲನಿವಾಸಿಗಳು. ಕಡಿಮೆ ಸಂಖ್ಯೆಯಲ್ಲಿ ಬಂದ ಆರ್ಯರು, ಸ್ಥಳೀಯ ಜನರೊಂದಿಗೆ ಬೆರೆತು ನೆಲೆಸಿದರು. ಅನಂತರ ಮೊಗಲರ ಕಾಲದಲ್ಲಿ ಸು. 18 ಸಲ ದಂಡೆತ್ತಿ ಬಂದ ಮುಸಲ್ಮಾನರಿಂದ, ಈ ಜನತೆಯಲ್ಲಿ ತುರ್ಕಿ, ಇರಾನಿ ಮತ್ತು ಅರಬ್ಬಿ ಬುಡಕಟ್ಟಿನ ಗುಣಲಕ್ಷಣಗಳು ಬೆಳೆದುವು. ಇಸ್ಲಾಂ ಧರ್ಮ ಹರಡಿತು. ಹೀಗೆ ಪ್ರಸ್ತುತ ಅಸ್ಸಾಮಿ ಜನ ಈ ಎಲ್ಲ ಬಗೆಯ ಸಾಮಾಜಿಕ, ಸಾಂಸ್ಕೃತಿಕ, ಬುಡಕಟ್ಟುಗಳ ಮಿಶ್ರ ಜನಾಂಗದವರಾಗಿದ್ದಾರೆ. ಇತ್ತೀಚೆಗೆ ಛೋಟಾ ನಾಗಪುರದ ಆದಿವಾಸಿಗಳು ಟೀ ತೋಟಗಳಲ್ಲಿ ಕೆಲಸಗಾರರಾಗಿಯೂ ನೇಪಾಲದ ಪಶುಪಾಲಕರು, ಕೂಲಿಗಾರರಾಗಿಯೂ ಸೈನಿಕರಾಗಿಯೂ ಬಂದು ಇಲ್ಲಿ ನೆಲೆಸಿರುವರು. ಬ್ರಹ್ಮಪುತ್ರಾ ನದಿಯ ಕಣಿವೆಯಲ್ಲಿರುವ ಜನ ಪ್ರಾಂತ್ಯ ಭಾಷೆಯಾದ ಅಸ್ಸಾಮಿಯನ್ನು ಮಾತನಾಡುವರು. ಕಚಾರ್ ಕಣಿವೆಯಲ್ಲಿ ಬಂಗಾಲಿ ಹೆಚ್ಚಾಗಿದೆ. ಬೆಟ್ಟಪ್ರದೇಶದ ನಾಲ್ಕು ಜಿಲ್ಲೆಯ ಜನ ಟಿಬೆಟ್, ಬರ್ಮೀ ಭಾಷೆಗಳಿಗೆ ಸೇರಿದ ಸ್ಥಳೀಯ ಉಪಭಾಷೆಗಳನ್ನಾಡುತ್ತಾರೆ. ಬಹುಪಾಲು ಜನರು ಹಿಂದಿ, ಮುಂಡಾರಿ, ನೇಪಾಲಿ ಭಾಷೆಗಳನ್ನು ಬಳಸುವರು.

ಅಸ್ಸಾಂ ರಾಜ್ಯದಲ್ಲಿ ಶೀಘ್ರ ಜನಸಂಖ್ಯೆ ಬೆಳವಣಿಗೆ ಆಶ್ಚರ್ಯಕರವಾಗಿದೆ. ಇದಕ್ಕೆ ಪಾಕಿಸ್ತಾನದಿಂದ ಅಧಿಕ ಸಂಖ್ಯೆಯಲ್ಲಿ ಬಂದ ನಿರಾಶ್ರಿತರೂ ಸ್ವಾತಂತ್ರ್ಯಾನಂತರ ದೇಶದ ಇತರ ಭಾಗಗಳಿಂದ ಹೆಚ್ಚು ಸಂಖ್ಯೆಯಲ್ಲಿ ಬಂದ ವಲಸೆಗಾರರೂ ಕಾರಣವೆಂದು ತಿಳಿಯಲಾಗಿದೆ.

ಈಗ ಅಸ್ಸಾಂ ರಾಜ್ಯದ ಜನಸಂಖ್ಯೆಯಲ್ಲಿ ಶೇ 7.7ರಷ್ಟು ಜನ ಪಟ್ಟಣಗಳಲ್ಲಿ ವಾಸಿಸುವರು. ಇತರರು ಗ್ರಾಮವಾಸಿಗಳು. ರಾಜ್ಯದ ಜನಸಂಖ್ಯೆಯಲ್ಲಿ ಶೇ 2/3 ರಷ್ಟು ಹಿಂದುಮತೀಯರೂ ಶೇ 23.29 ರಷ್ಟು ಮುಸಲ್ಮಾನರೂ ಶೇ 6.44 ಕ್ರೈಸ್ತರೂ ಶೇ 0.31 ಬೌದ್ಧರೂ ಇದ್ದಾರೆ. ಉಳಿದವರು ಇತರ ಧರ್ಮೀಯರೋ ಅನ್ಯಧರ್ಮೀಯರೋ ಆಗಿದ್ದಾರೆ.

ಸಸ್ಯವರ್ಗ ಮತ್ತು ಪ್ರಾಣಿವರ್ಗ : ರಾಜ್ಯದ ಸು. ಶೇ 40 ಪ್ರದೇಶ (4–5 ದಶಲಕ್ಷ ಹೆಕ್ಟೇರುಗಳು) ಕಾಡುಗಳಿಂದ ಕೂಡಿದ್ದರೂ ಕೇವಲ ಶೇ 12 ಮಾತ್ರ ಸಂರಕ್ಷಣೆಪಡೆದ ಭಾಗವಾಗಿದೆ. ಉಳಿದ ಪ್ರದೇಶದಲ್ಲಿ, ಅನಿರ್ಬಂಧವಾಗಿ ಕಡಿಯುವುದರಿಂದಲೂ ಹೆಚ್ಚಾಗಿ ದನಕರುಗಳನ್ನು ಮೇಯಿಸುವುದರಿಂದಲೂ ಪರಿವರ್ತನ ರೀತಿಯ ವ್ಯವಸಾಯದಿಂದಲೂ ಅರಣ್ಯಭಾಗಗಳು ಹಾಳಾಗಿವೆ.

ವ್ಯವಸಾಯ: ಜನರ ಮುಖ್ಯ ಕಸಬು, ಒಟ್ಟುಜನಸಂಖ್ಯೆಯ ಸುಮಾರು ಶೇ 72 ವ್ಯವಸಾಯಾವಲಂಬಿಗಳು, ಬತ್ತ, ಸಾಸಿವೆ, ಕಬ್ಬು, ಆಲೂಗಡ್ಡೆ, ಮೆಕ್ಕೆ, ಜೋಳ, ಉರುಟು ಧಾನ್ಯಗಳು, ಕಿತ್ತಲೆ–ಇವು ಮುಖ್ಯ ವ್ಯವಸಾಯೋತ್ಪನ್ನಗಳು: ಟೀ, ಸೆಣಬು, ಹತ್ತಿ, ಹೊಗೆಸೊಪ್ಪು–ಇವು ಮುಖ್ಯ ವಾಣಿಜ್ಯಬೆಳೆಗಳು. ಈ ರಾಜ್ಯ ಸು. 2 ದಶಲಕ್ಷ ಟನ್ನುಗಳಷ್ಟು ಬತ್ತವನ್ನು ಉತ್ಪಾದಿಸುವುದು. ಭಾರತದ ವಿಭಜನೆಯ ನಂತರ ಸೆಣಬಿನ ಉತ್ಪಾದನೆ ತೀವ್ರವಾಗಿ ಹೆಚ್ಚುತ್ತಿದೆ. ವರ್ಗಾವಣೆ ಬೇಸಾಯವನ್ನು (ಜೂಮ್) ಸರ್ಕಾರ ನಿಷೇಧಿಸಿದ್ದರೂ ಬೆಟ್ಟಗಳಲ್ಲಿ ಇನ್ನೂ ಅದು ವ್ಯಾಪಕವಾಗಿ ಕಂಡುಬರುವುದು. ಪ್ರತಿವರ್ಷ ನಿಗದಿಮಾಡಿದ ಪರ್ವತಗಳ ಇಳಿಜಾರುಗಳ ಮೇಲಿನ ಕಾಡುಗಳನ್ನು ಕತ್ತರಿಸಿ, ಕುರುಚಲನ್ನು ಸುಟ್ಟು, ವ್ಯವಸಾಯ ಮಾಡುವರು. ಅನಂತರ ಆ ಭಾಗಗಳಲ್ಲಿ ಪುನಃ ಕಾಡು ಬೆಳೆಯುವಂತೆ ಹಾಗೂ ಸಾರವತ್ತಾಗುವಂತೆ ಬೀಳುಬಿಡುವರು. ಆದರೆ ಈ ಕ್ರಮದಿಂದ ಸ್ವಾಭಾವಿಕ ಸಸ್ಯವರ್ಗ ಕ್ಷೀಣಿಸುವುದಲ್ಲದೆ ಭೂಮಿಯ ಸಾರ ನಶಿಸುವುದು.

ಕೈಗಾರಿಕೆಗಳು: ಅಸ್ಸಾಂ ರಾಜ್ಯ ಕೈಗಾರಿಕೆಗಳಲ್ಲಿ ಹಿಂದುಳಿದಿದೆ. ಅನೇಕ ಸಂಪನ್ಮೂಲಗಳ ಅನುಕೂಲತೆಗಳಿದ್ದರೂ ಕೈಗಾರಿಕೆಗಳು ಅಭಿವೃದ್ಧಿಗೊಂಡಿಲ್ಲ. ಸಾರಿಗೆ ಸಂಪರ್ಕಗಳ ಕೊರತೆ, ಮಾರಾಟದ ಸೌಲಭ್ಯಗಳಿಲ್ಲದಿರುವುದು ಮತ್ತು ಅಸ್ಸಾಮಿನ ಸರಹದ್ದಿನ ಸನ್ನಿವೇಶ – ಇವು ಕೆಲವು ಕಾರಣಗಳು. ತೋಟಗಳಲ್ಲಿ ಟೀಯನ್ನು ಬೆಳೆಯುವುದು ಮತ್ತು ಅದನ್ನು ಮಾರಾಟಕ್ಕಾಗಿ ಸಿದ್ಧಪಡಿಸುವುದು ಬಹು ದೊಡ್ಡ ಕೈಗಾರಿಕೆ. ಇದು ರಾಜ್ಯದಲ್ಲಿ ಮಹತ್ತರ ಸ್ಥಾನ ಪಡೆದಿದ್ದು ಅಮೂಲ್ಯ ವಿದೇಶೀ ವಿನಿಮಯ ಹಣವನ್ನು ಸಂಪಾದಿಸುವ ಉದ್ಯಮವಾಗಿದೆ. ರಾಜ್ಯದಲ್ಲಿರುವ ಸು. 965 ತೋಟಗಳು 170 ದಶಲಕ್ಷ ಕಿಗ್ರಾಂ ಟೀಯನ್ನು ಉತ್ಪಾದಿಸುವುವು. ಪೆಟ್ರೋಲಿಯಂ ಉತ್ಪಾದನೆ, ಶುದ್ಧೀಕರಣ ಕಾರ್ಯಾಗಾರಗಳು ದಿಗ್ಬಾಯ್ ಮತ್ತು ಗುಹಾವಟಿಯಲ್ಲಿವೆ. ಬಿಹಾರ ರಾಜ್ಯದಲ್ಲಿರುವ ಇನ್ನೊಂದು ಶುದ್ಧೀಕರಣ ಕಾರ್ಯಾಗಾರ ಬ್ರಹ್ಮಪುತ್ರ ನದಿಯ ಮೇಲ್ಕಣಿವೆಯಲ್ಲಿ ಉತ್ಪಾದಿಸಲಾಗುವ ತೈಲವನ್ನು ಕೊಳವೆಗಳ ಮೂಲಕ ಪಡೆಯುತ್ತದೆ. ಪರ್ವತಗಳಿಂದ ಕೂಡಿದ ಗಾರೋ, ಖಾಸಿ, ಮತ್ತು ಜೈಂತಿಯ ಜಿಲ್ಲೆಗಳಲ್ಲೂ ಸೀಬ್‌ಸಾಗರ ಮತ್ತು ಲಾಖಿಮ್‌ಪುರ ಜಿಲ್ಲೆಗಳಲ್ಲೂ ಕಲ್ಲಿದ್ದಲು ಸಿಕ್ಕುತ್ತದೆ. ಕಲ್ಲಿದ್ದಲಿನ ಒಟ್ಟು ಉತ್ಪಾದನೆ 7,60,000 ಟನ್ನುಗಳು, ಟೀ ಮತ್ತು ಪೆಟ್ರೋಲಿಯಂ ಉದ್ಯಮಗಳಲ್ಲದೆ, ಚಿರಾಪುಂಜಿಯ ಒಂದು ಸಿಮೆಂಟ್ ಕಾರ್ಖಾನೆ, ದೇರ್‌ಗಾಂನ (ಸಿಬ್ ಸಾಗರ್) ಒಂದು ಸಕ್ಕರೆ ಕಾರ್ಖಾನೆ, ನಾಮರೂಪದ (ಲಾಖಿಂಪುರ) ಒಂದು ಗೊಬ್ಬರ ಕಾರ್ಖಾನೆ ಮತ್ತು ಸಿಲ್‌ಘಾಟ್‌ನ (ನವಗಾಂಗ್) ಒಂದು ಸೆಣಬಿನ ಕಾರ್ಖಾನೆ ಇವು ಅಸ್ಸಾಮಿನ ಇತರ ಕೈಗಾರಿಕೆಗಳು.

ಅಸ್ಸಾಂ ರಾಜ್ಯದಲ್ಲಿ ಅನೇಕ ಗೃಹಕೈಗಾರಿಕೆಗಳೂ ಇವೆ. ಅವುಗಳಲ್ಲಿ ನೆಯ್ಯುವುದು ಮತ್ತು ರೇಷ್ಮೆ ಹುಳುಗಳನ್ನು ಸಾಕುವುದು ಬಹು ಮುಖ್ಯ ಸಹಾಯಕ ಕೈಗಾರಿಕೆಗಳು. ಹಿಪ್ಪುನೇರಿಳೆಯನ್ನು ಉಪಯೋಗಿಸದ ಎಂಡಿ ಮತ್ತು ಮುಗ ರೇಷ್ಮೆಗಳು ಈ ರಾಜ್ಯದ ವಿಶೇಷ ಉತ್ಪನ್ನಗಳು. ಬಂಗಾರದ ಬಣ್ಣದ ಮುಗ ರೇಷ್ಮೆಯನ್ನು ಬಟ್ಟೆಗಳಿಗೆ ಮಾತ್ರವಲ್ಲದೆ, ಕುಸುರಿ ಕೆಲಸದ ಹೊಲಿಗೆಗೂ ಉಪಯೋಗಿಸಲಾಗುತ್ತದೆ. ಆಕರ್ಷಕವಾದ ತೆಳುಹಳದಿಬಣ್ಣದ ಎಂಡಿ ರೇಷ್ಮೆಯನ್ನು ಮೇಲಿನ ಹೊದಿಕೆಗಾಗಿಯೂ ಅಂಗಿ ಮುಂತಾದ ಬಟ್ಟೆಗಳಿಗಾಗಿಯೂ ಉಪಯೋಗಿಸುವರು. ದಂತದ ಕೆಲಸ ಬಿದಿರಿನ ಕೆಲಸ, ಬೆತ್ತದ ಸಾಮಾನುಗಳು, ಕಂಚಿನ ಸಾಮಾನುಗಳ ತಯಾರಿಕೆ–ಇವು ಇತರ ಗೃಹಕೈಗಾರಿಕೆಗಳು.

ಕಾಜಿರಂಗ ಮತ್ತು ಮಾನಸ ವನ್ಯಮೃಗ ಸಂರಕ್ಷಣಾಪ್ರದೇಶಗಳಲ್ಲಿರುವ ಏಕ ಖಡ್ಗಮೃಗ ಮೊದಲಾದ ಪ್ರಾಣಿಗಳೂ ದಟ್ಟವಾದ ಅರಣ್ಯಗಳೂ ಪ್ರಪಂಚದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಷಿಲ್ಲಾಂಗ್ ಭಾರತದಲ್ಲಿ ಪರ್ವತಧಾಮಗಳ ರಾಣಿ ಎಂದು ಹೆಸರಾಗಿದೆ. ಇದು ಪ್ರಪಂಚದಲ್ಲೇ ಅತ್ಯಧಿಕ ಮಳೆ ಪಡೆಯುವ ಚಿರಾಪುಂಜಿಯಿಂದ 48 ಕಿಮೀ ದಕ್ಷಿಣಕ್ಕಿದೆ. ಇವುಗಳಲ್ಲದೆ, ತೋಕ್ಲಾಯ್ಯಲ್ಲಿರುವ ಪ್ರಾದೇಶಿಕ ಸಂಶೋಧನ ವೇಧಶಾಲೆ, ಜೋರ್ಹಾತ್‌ನಲ್ಲಿರುವ ಚಹ ಸಂಶೋಧನ ಕೇಂದ್ರ, ಪೆಟ್ರೋಲಿಯಂ ಎಣ್ಣೆಯ ಬಾವಿಗಳು, ಶುದ್ಧೀಕರಣ ಕಾರ್ಯಾಗಾರಗಳು ಅನೇಕ ಪ್ರವಾಸಿಗರನ್ನು ಆಕರ್ಷಿಸುವ ಇತರ ಸ್ಥಳಗಳು.

ವಿದ್ಯಾಭ್ಯಾಸದಲ್ಲಿ ಅಸ್ಸಾಂರಾಜ್ಯ ಭಾರತದ ಇತರ ರಾಜ್ಯಗಳಿಗಿಂತ ಹಿಂದುಳಿದಿಲ್ಲ. ಗುಹಾವತಿ ಮತ್ತು ದಿಬ್ರೂಗರ್ ನಗರಗಳಲ್ಲಿ ಎರಡು ವಿಶ್ವ ವಿದ್ಯಾನಿಲಯಗಳಿವೆ. ಎರಡು ವೈದ್ಯಶಾಸ್ತ್ರದ ಕಾಲೇಜುಗಳು, ಎರಡು ಎಂಜಿನಿಯರಿಂಗ್ ಕಾಲೇಜುಗಳು, ಒಂದು ಪಶುವೈದ್ಯಶಾಸ್ತ್ರ ಮತ್ತು ವ್ಯವಸಾಯದ ಕಾಲೇಜುಗಳಿವೆ. ಈ ರಾಜ್ಯದಲ್ಲಿ ಸಾರ್ವಜನಿಕ ವಿದ್ಯೆಗಾಗಿ 75 ಕಾಲೇಜುಗಳಿವೆ. (ಎಚ್.ಪಿ.ಡಿ.)

**ಅಸ್ಸಾಂ ಖನಿಜತೈಲ ಕ್ಷೇತ್ರಗಳು:** ಅಸ್ಸಾಂಪ್ರಾಂತ್ಯದ (ಭಾರತ) ನಾಗಾ ಬೆಟ್ಟಗಳ ಮತ್ತು ಸುರ್ಮಾಕಣಿವೆಯ ಕೆಲವು ಸ್ಥಳಗಳಲ್ಲಿ ಖನಿಜತೈಲ ದೊರೆಯುತ್ತದೆ. 1866ರಲ್ಲಿ ಮಾಕುಂನಾಮ್‌ಡಂಗ್ ಬಳಿ ತೈಲ ದೊರೆಯುವ ಸ್ಥಳದಲ್ಲಿ ಬಾವಿಕೊರೆಯಲು ಪ್ರಾರಂಭವಾಯಿತು (ಖನಿಜ ತೈಲವನ್ನು ಪಡೆಯಲು ಬಾವಿಗಳನ್ನು ಬೋರ್‌ವೆಲ್‌ಗಳಂತೆ ಯಂತ್ರದಿಂದ ಕೊರೆಯುತ್ತಾರೆ.) ಇಲ್ಲಿ ಒಂದೆರಡು ಬಾವಿಗಳಲ್ಲಿ ಸ್ವಲ್ಪಮಟ್ಟಿಗೆ ತೈಲಸಿಕ್ಕಿದರೂ ಉತ್ಪತ್ತಿ ಅಷ್ಟು ಆಶಾದಾಯಕವಾಗಿರಲಿಲ್ಲ. ಅನಂತರ ದಿಗ್ಬಾಯಿ ಬಳಿ 1889ರಲ್ಲಿ ಬಾವಿ ಕೊರೆಯಲು ಪ್ರಾರಂಭವಾಗಿ, 1890ರಲ್ಲಿ ಮೊತ್ತಮೊದಲಿಗೆ ತೈಲ ಸಿಕ್ಕಿತು. ಇಲ್ಲಿಯೂ ಮೊದಲು ಉತ್ಪತ್ತಿ ಆಶಾದಾಯಕವಾಗದಿದ್ದರೂ, ಕ್ರಮೇಣ ಈ ಕ್ಷೇತ್ರದ ಭೂರಚನೆಯನ್ನು ಚೆನ್ನಾಗಿ ಪರಿಶೀಲಿಸಿ ಅನೇಕ ಹೊಸ ಬಾವಿಗಳನ್ನು ತೆಗೆದಮೇಲೆ ತೈಲ ದೊರೆವ ಪ್ರಮಾಣ ಹೆಚ್ಚಾಗುತ್ತ ಬಂತು. ಅನಂತರ ಈ ಕ್ಷೇತ್ರದ ಅಭಿವೃದ್ಧಿಯಾಗಿ ದಿಗ್ಬಾಯಿನಲ್ಲಿ ಒಂದು ತೈಲಶುದ್ಧೀಕರಣ ಸ್ಥಾಪನೆಯಾಗಿ ಸು. 60 ವರ್ಷಗಳಿಂದಲೂ ಲಾಭದಾಯಕವಾಗಿ ಕಾರ್ಯ ನಡೆದು ಬರುತ್ತಿದೆ.

ನಾಗಾಬೆಟ್ಟಗಳ ಮತ್ತು ಸುರ್ಮಾಕಣಿವೆಯ ಇತರಭಾಗಗಳಲ್ಲೆಲ್ಲ ಅನೇಕ ವರ್ಷ ನಿರಂತರವಾಗಿ ಸಮೀಕ್ಷೆಮಾಡಿ ಅನೇಕ ತೈಲ ಬಾವಿಗಳನ್ನು ತೋಡಿದರೂ ಸರಿಯಾದ ಪ್ರತಿಫಲ ದೊರೆಯಲಿಲ್ಲ. 1915ರಲ್ಲಿ ಬಾದರ್ಪುರ ಬಳಿ ತೋಡಿದ ಬಾವಿಯಲ್ಲಿ ತೈಲವಿರುವ ಸೂಚನೆಗಳು ಕಂಡುಬಂದು ಈ ಕ್ಷೇತ್ರದಲ್ಲಿ 60 ಬಾವಿಗಳನ್ನು ಕೊರೆಯಲಾಯಿತು. ಆದರೆ ಬಾವಿಗಳಲ್ಲಿ ತೈಲ ಕ್ರಮೇಣ ಬತ್ತಿಹೋಗಿ, 1933ರಲ್ಲಿ ಈ ಕ್ಷೇತ್ರವನ್ನು ತ್ಯಜಿಸಬೇಕಾಯಿತು. ಈ ಕ್ಷೇತ್ರದ 18 ವರ್ಷಗಳ ಅವಧಿಯಲ್ಲಿ ಒಟ್ಟು 3,20,000 ಟನ್ ಮಾತ್ರ ತೈಲ ಉತ್ಪತ್ತಿಯಾಗಿ, ಈ ಯೋಜನೆ ಅಷ್ಟಾಗಿ ಲಾಭದಾಯಕವಾಗಿರಲಿಲ್ಲ.

ಅನಂತರ ನಾಗಾಬೆಟ್ಟಗಳ ಉತ್ತರದಲ್ಲಿರುವ ಬ್ರಹ್ಮಪುತ್ರಾನದಿಯ ಬಯಲು ಪ್ರದೇಶದಲ್ಲಿ ಭೂಭೌತಶಾಸ್ತ್ರ ರೀತ್ಯಾ (ಜಿಯೊಫಿಸಿಕಲ್) ಪರಿಶೀಲನೆ ನಡೆಸಲಾಯಿತು. ಈ ಪ್ರದೇಶದಲ್ಲಿ ಮೆಕ್ಕಲುಮಣ್ಣು ಬಹಳ ಮಂದವಾಗಿದ್ದು ತೈಲ ಸಂಯೋಜಿತ ಶಿಲೆಗಳು ಬಹು ಆಳದಲ್ಲಿ ಅಡಕವಾಗಿದ್ದುವು. ಆದುದರಿಂದ ಇಲ್ಲಿಯೂ ನಾಗಾಬೆಟ್ಟ ಪ್ರದೇಶಗಳಂತೆ ಭೂಮೇಲ್ಮಟ್ಟದ ಶಿಲೆಗಳಲ್ಲಿ, ತೈಲದ ಸೂಚನೆಗಳು ಕಂಡುಬರಲಿಲ್ಲ. ಆಳದಲ್ಲಿ ಗುಪ್ತವಾಗಿರುವ ಶಿಲಾಪ್ರಸ್ತರ ರಚನೆಯನ್ನು ಕಂಡುಹಿಡಿಯಲು ಮತ್ತೆ ಭೂಭೌತಶಾಸ್ತ್ರ ರೀತ್ಯಾ ಪರಿಶೀಲನೆ ಮಾಡಲಾಗಿ,

ಅದರಲ್ಲಿ ಕಂಡುಬಂದ ಸೂಚನೆಗಳನ್ನನುಸರಿಸಿ ಬಾವಿಗಳನ್ನು ಕೊರೆದುದರ ಫಲವಾಗಿ ನಾಹರ್‌ಕಟಿಯಾ, ಮೊರಾನ್, ರುದ್ರಸಾಗರ್ ಮತ್ತು ಲಾಕ್ವಾ ಎಂಬ ಸ್ಥಳಗಳಲ್ಲಿ ತೈಲ ಸಿಕ್ಕಿ, ಈ ಕ್ಷೇತ್ರಗಳು ಈಗ ಹೆಸರುವಾಸಿಯಾಗಿವೆ.

ಅಸ್ಸಾಂ ಪ್ರಾಂತ್ಯದಲ್ಲಿ ತೈಲ ಮುಖ್ಯವಾಗಿ ಮಯೋಸೀನ್ ಕಾಲದ ಟಿಪಂ ಶ್ರೇಣಿಯ ಮರಳುಶಿಲಾಪ್ರಸ್ತರಗಳಲ್ಲೂ ಮತ್ತು ಒಲಿಗೋಸೀನ್ ಕಾಲದ ಬರೈಲ್ ಶ್ರೇಣಿಯ ಮರಳು ಶಿಲೆಗಳಲ್ಲೂ ಸಿಕ್ಕುತ್ತದೆ. ಈ ಶಿಲಾಪದರಗಳು ಮಡಿಕೆಯಾಗಿ, ಎರಡು ಪಾರ್ಶ್ವಗಳಲ್ಲೂ ಪರಸ್ಪರ ವ್ಯತಿರಿಕ್ತವಾದ ಇಳಿಜಾರು ಹೊಂದಿರುವ ಶಿಲಾ ರಚನೆಯಲ್ಲಿ ತೈಲ ಸಂಗ್ರಹವಾಗಿರುತ್ತದೆ. ಈ ಶಿಲಾರಚನೆಯಿರುವ ಪ್ರದೇಶಗಳಲ್ಲಿ ಬಾವಿಯನ್ನು ಕೊರೆದಾಗ ತೈಲ ಇದ್ದಲ್ಲಿ ತನ್ನಷ್ಟಕ್ಕೆ ತಾನೇ ಮೇಲಕ್ಕೆ ಹರಿದು ಬರುತ್ತದೆ; ಕೆಲವು ಸ್ಥಳಗಳಲ್ಲಿ ಒತ್ತಡ ಕಡಿಮೆಯಾಗಿದ್ದು ತೈಲವನ್ನು ಪಂಪುಮಾಡಿ ಮೇಲಕ್ಕೆ ಎತ್ತಬೇಕು. ತೈಲದ ಜತೆ ಅನಿಲವೂ ಸಾಮಾನ್ಯವಾಗಿ ಸೇರಿರುತ್ತದೆ. ಇದನ್ನು ಅನಂತರ ಯಂತ್ರೋಪಕರಣದಿಂದ ಬೇರ್ಪಡಿಸುತ್ತಾರೆ.

ತೈಲಕ್ಷೇತ್ರಗಳ ವಿವರ : ದಿಗ್ಬಾಯಿ ಭಾರತದ ಅತ್ಯಂತ ಈಶಾನ್ಯ ಮೂಲೆಯಲ್ಲಿ ನಾಗಾಬೆಟ್ಟಗಳ ಬುಡದಲ್ಲಿರುವ ಟಿಪಂ ಗುಡ್ಡಸಾಲಿನ ಕೊನೆಯಲ್ಲಿದೆ. ಪ್ರಪಂಚದ ಅತ್ಯಂತ ಹಳೇ ತೈಲಕ್ಷೇತ್ರಗಳ ಪೈಕಿ ದಿಗ್ಬಾಯಿ ಕ್ಷೇತ್ರವೂ ಒಂದು. ಇದು ಅಸ್ಸಾಂ ಆಯಿಲ್ ಕಂಪನಿ ಲಿಮಿಟೆಡ್‌ಗೆ ಸೇರಿದೆ. ಭೂವಿಜ್ಞಾನ ರೀತ್ಯಾ ಈ ಕ್ಷೇತ್ರ ಒಂದು ಉದ್ದವಾದ ಹೊರಮಡಿಕೆ (ಆಂಟಿಕ್ಲೈನ್) ಮೇಲಿದೆ. ಈ ಹೊರಮಡಿಕೆ ಸು. 13 ಕಿಮೀ ಉದ್ದ ಪ್ರಸರಿಸಿ ಗುಂಭದಂತಿದೆ. ಇಲ್ಲಿ ತೈಲ ಸು. 1,000 ಮೀ ಮಂದವಾದ ಮರಳುಶಿಲೆಗಳಲ್ಲಿ ಅಡಕವಾಗಿದೆ. ಇಲ್ಲಿನ ಶಿಲೆಗಳು ಟಿಪಂಶ್ರೇಣಿಗೆ ಸೇರಿದವು. ಈ ಕ್ಷೇತ್ರದಲ್ಲಿ 1890ರಲ್ಲೇ ತೈಲ ಸಿಕ್ಕಿದರೂ ಮೊದಲು 30 ವರ್ಷಗಳಲ್ಲಿ ಉತ್ಪತ್ತಿ ಕಡಿಮೆ ಪ್ರಮಾಣದಲ್ಲಿತ್ತು. 1917ರಲ್ಲಿ ವಾರ್ಷಿಕ ಉತ್ಪತ್ತಿ ಹೆಚ್ಚಾಗಿತ್ತು (2400 ಟನ್ನು) ಆಗಿನ ಬಾವಿಗಳು ಹೆಚ್ಚು ಆಳವಿರಲಿಲ್ಲ. ಹೊರಮಡಿಕೆಯ ಶಿಖರದ ಮೇಲೆ ಎದ್ದು ಕಾಣುವ ಶಿಲಾಪ್ರಸ್ತರಗಳಲ್ಲಿ ಬಾವಿಗಳು ಕೊರೆಯಲ್ಪಟ್ಟಿದ್ದವು. ಅನಂತರ ಭೂರಚನೆಯನ್ನು ಚೆನ್ನಾಗಿ ತಿಳಿದು ಆಳವಾಗಿ ಕೊರೆದಾಗ ತೈಲವುಳ್ಳ ಇತರ ಮರಳು ಶಿಲೆಗಳು ಕಂಡುಬಂದುವು. ಅನಂತರ ನೂರಾರು ಬಾವಿಗಳನ್ನು ತೋಡಲಾಯಿತು. ಸು. 40 ವರ್ಷಗಳಿಂದಲೂ ತೈಲ ಉತ್ಪತ್ತಿಯಾಗುತ್ತಿದೆ. ಇದುವರೆಗೂ ಹೆಚ್ಚುಕಡಿಮೆ 1,000 ಬಾವಿಗಳು ಕೊರೆಯಲ್ಪಟ್ಟಿವೆ. ಆದರೆ ಬಹುಸಂಖ್ಯಾತ ಬಾವಿಗಳಲ್ಲಿ ತೈಲ ಮುಗಿದು, ಈಗ ಸು. 400 ಬಾವಿಗಳಲ್ಲಿ ಮಾತ್ರ ತೈಲ ಉತ್ಪಾದನೆಯಾಗುತ್ತಿದೆ; ಅವುಗಳ ಪೈಕಿ 30 ಬಾವಿಗಳಲ್ಲೇ ಈಚಿನ ಉತ್ಪತ್ತಿಯ ಬಹುಭಾಗ ದೊರೆಯುತ್ತಿದೆ. ಶಿಲಾ ಪ್ರಸ್ತರಗಳಲ್ಲಿನ ಅನಿಲಗಳ ಒತ್ತಡದಿಂದ ತೈಲ ಬಾವಿಗಳಲ್ಲಿ ನೆಲದಮೇಲಕ್ಕೆ ತಾನಾಗಿ ಉಕ್ಕಿಬರುತ್ತದೆ. ಹಾಗೆ ತಾನಾಗಿ ಉಕ್ಕಿಬರದಿರುವ ಬಾವಿಗಳಿಗೆ ಹೊರಗಿನಿಂದ ಅನಿಲವನ್ನು ಯಂತ್ರಗಳ ಮೂಲಕ ಅಧಿಕ ಒತ್ತಡದಲ್ಲಿ ಶಿಲಾಪ್ರಸ್ತರದೊಳಕ್ಕೆ ಕಳುಹಿಸಿದಾಗ ತೈಲ ಮೇಲೆ ಬರುತ್ತದೆ. ಕೆಲವು ಬಾವಿಗಳಲ್ಲಿ ಪಂಪ್ ಮಾಡಿಯೇ ತೈಲವನ್ನು ಮೇಲಕ್ಕೆ ಎತ್ತಬೇಕು. ಒಳ್ಳೆ ಬಾವಿಗಳಲ್ಲಿ ದಿನಕ್ಕೆ 100–150 ಕಿಲೋಲೀಟರ್‌ಗಳಷ್ಟು ತೈಲ ಬರುತ್ತದೆ; ಆದರೆ ಬಹುಸಂಖ್ಯಾತ ಬಾವಿಗಳಲ್ಲಿ ದೈನಿಕ ಉತ್ಪತ್ತಿ 40 ಕಿಲೋ ಲೀಟರ್‌ನಷ್ಟು ಇರುತ್ತದೆ.

ಬಾವಿಗಳಿಂದ ಬರುವ ಅಶುದ್ಧ ತೈಲವನ್ನು ಸ್ವಚ್ಛಮಾಡಲು ಅಸ್ಸಾಂ ಆಯಿಲ್ ಕಂಪೆನಿಯವರು ದಿಗ್ಬಾಯಿಯಲ್ಲೇ ಒಂದು ರಿಫೈನರಿಯನ್ನು ಸ್ಥಾಪಿಸಿದ್ದಾರೆ. ಮೊದಲು ಈ ರಿಫೈನರಿಯಲ್ಲಿ ವರ್ಷಕ್ಕೆ 28,000 ಟನ್‌ಗಳಷ್ಟು ತೈಲವನ್ನು ಶುದ್ಧಿ ಮಾಡುವುದಕ್ಕಾಗುತ್ತಿತ್ತು. ಆಗ ಇಷ್ಟು ಪ್ರಮಾಣದಲ್ಲಿ ಸಹ ತೈಲ ಸಿಕ್ಕುತ್ತಿರಲಿಲ್ಲ. ಅನಂತರ ತೈಲ ಹೆಚ್ಚು ಹೆಚ್ಚಾಗಿ ಉತ್ಪತ್ತಿಯಾದಂತೆ ರಿಫೈನರಿಯ ಪರಿಮಾಣವನ್ನು ಹೆಚ್ಚಿಸಲಾಯಿತು. ಮತ್ತು ಸು. 10 ವರ್ಷಗಳಿಂದ ನಾಹರ್‌ಕಟಿಯಾ ಕ್ಷೇತ್ರದಲ್ಲಿ ಉತ್ಪತ್ತಿಯಾಗುವ ತೈಲದಲ್ಲಿ ಸ್ವಲ್ಪಭಾಗವನ್ನು ಕೊಳವೆ ಮೂಲಕ ಸಾಗಿಸಿ ದಿಗ್ಬಾಯಿ ತೈಲಶುದ್ಧೀಕರಣದಲ್ಲಿ ಶುದ್ಧಿಕರಣ ಮಾಡಲಾಗುತ್ತಿದೆ. ಈ ಶುದ್ಧೀಕರಣದಲ್ಲಿ ವರ್ಷಕ್ಕೆ 500,000 ಟನ್‌ಗಳಷ್ಟು ತೈಲ ಶುದ್ಧಿ ಮಾಡಲಾಗುತ್ತಿದೆ.

ದಿಗ್ಬಾಯಿ ಕ್ಷೇತ್ರದ ಕಚ್ಚಾ ತೈಲದ ಸಾಪೇಕ್ಷಸಾಂದ್ರತೆ ಸು. 0.85 ಇದೆ. ರಿಫೈನರಿಯಲ್ಲಿ ಈ ಕಚ್ಚಾ ತೈಲದಿಂದ 23% ಮೋಟಾರ್ ಸ್ಪಿರಿಟ್, 22% ಸೀಮೆಎಣ್ಣೆ, 13% ಡೀಸಲ್ ಆಯಿಲ್, 11% ಫ್ಯೂಯಲ್ ಆಯಿಲ್ ಮತ್ತು 10% ಮೇಣ, 19% ಇತರ ವಿವಿಧ ಸಾಮಾಗ್ರಿಗಳು ತೆಗೆಯಲ್ಪಡುತ್ತವೆ; ಉಳಿದ 2% ಮಾತ್ರ ನಷ್ಟವಾಗುತ್ತದೆ. ಈಗ ಸು. 60 ವರ್ಷಗಳಿಂದಲೂ ದಿಗ್ಬಾಯಿ ಕ್ಷೇತ್ರ ಮತ್ತು ರಿಫೈನರಿಯಲ್ಲಿ ಅವಿರತವಾಗಿ ಕಾರ್ಯಕ್ರಮ ನಡೆದು ಬಂದು ದಿಗ್ಬಾಯಿ ಒಂದು ಪ್ರಸಿದ್ಧ ಪಟ್ಟಣವಾಗಿದೆ. ಅನೇಕ ಬಾವಿಗಳಲ್ಲಿ ಹಿಂದೆ ತೈಲಬತ್ತಿದಂತೆ ಕಂಡುಬಂದಿದ್ದರೂ ಇತ್ತೀಚೆಗೆ ಶಿಲೆಗಳಲ್ಲಿ ಬಿರುಕುಬಿಡಿಸುವುದು (ಫಾರ್‌ಮೇಷನ್ ಫ್ರ್ಯಾಕ್‌ಚರಿಂಗ್) ಅಥವಾ ಅಗ್ನಿಪ್ರವಹಿಸುವುದು (ಫೈರ್‌ಫ್ಲಡಿಂಗ್) ಮುಂತಾದ ನೂತನವಿಧಾನಗಳನ್ನು ಪ್ರಯೋಗಿಸಿ ಕೆಲವು ಬಾವಿಗಳನ್ನು ಸಜೀವಗೊಳಿಸಿ ತೈಲಪಡೆಯುವ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಈ ಕ್ಷೇತ್ರದಲ್ಲಿ ಉತ್ಪತ್ತಿ ಇನ್ನೂ ಅನೇಕ ವರ್ಷಗಳು ಲಾಭದಾಯಕವಾಗಿ ನಡೆದು ಬರುವ ನಿರೀಕ್ಷಣೆಯಿದೆ.

ನಾಹರ್‌ಕಟಿಯ : ಇದು ದಿಗ್ಬಾಯಿಗೆ 40 ಕಿಮೀ ನೈಋತ್ಯಕ್ಕೆ ಬ್ರಹ್ಮಪುತ್ರಾ ಬಯಲಿನಲ್ಲಿ ದಿಹಿಂಗ್‌ನದಿ ದಡದಲ್ಲಿದೆ. ಈ ಕ್ಷೇತ್ರ ಅಸ್ಸಾಂ ಆಯಿಲ್ ಕಂಪನಿ ಮತ್ತು ಭಾರತ ಸರ್ಕಾರಗಳ ಸಮಭಾಗವುಳ್ಳ ಆಯಿಲ್ ಇಂಡಿಯ ಲಿಮಿಟೆಡ್ ಕಂಪನಿಗೆ ಸೇರಿದೆ.

ಹಿಮಾಲಯಪರ್ವತ ಮತ್ತು ನಾಗಾಬೆಟ್ಟಗಳ ಮಧ್ಯೆ ಇರುವ ಬ್ರಹ್ಮಪುತ್ರಾ ಬಯಲಿನಲ್ಲಿ ಮೆಕ್ಕಲುಮಣ್ಣು ಸು. 1,000–1,500 ಮೀ ಗಳಷ್ಟು ಮಂದವಾಗಿದೆ. ಶಿಲೆಗಳೆಲ್ಲಾ ಈ ಮೆಕ್ಕಲುಮಣ್ಣಿನಿಂದ ಮುಚ್ಚಿಹೋಗಿ ಆಳದಲ್ಲಿ ಗುಪ್ತವಾಗಿವೆ. ಅಸ್ಸಾಂ ಆಯಿಲ್ ಕಂಪನಿಯವರು 1925ರಲ್ಲಿ ಭೂಮ್ಯಾಕರ್ಷಣ ವಿಧಾನ(ಗ್ರ್ಯಾವಿಟೇಷನಲ್ ಸರ್ವೆ) ಪರಿಶೀಲನೆ ನಡೆಸಿದಾಗ ನಾಹರ್‌ಕಟಿಯ ಬಳಿ ಶಿಲಾ ರಚನೆ ಉಬ್ಬಾಗಿರುವ ಸೂಚನೆ ಕಂಡುಬಂದಿತು. ಆಗ ಇನ್ನೂ ಭೂಭೌತಶಾಸ್ತ್ರದ ಪರಿಶೋಧನೆಗಳು ಬಾಲ್ಯಾವಸ್ಥೆಯಲ್ಲಿದ್ದವು. ಅನಂತರ 1937ರಲ್ಲಿ ಭೂಕಂಪನವಿಧಾನ ಸಮೀಕ್ಷೆ (ಸೀಸ್ಮಿಕ್ ಸರ್ವೆ) ನಡೆಸಿದಾಗ ನಾಹರ್‌ಕಟಿಯ ಬಳಿ ಶಿಲಾರಚನೆ ಆಂಟಿಕ್ಲೈನ್‌ನಂತೆ ಇರುವ ಸೂಚನೆ ದೊರಕಿತು. ಈ ರಚನೆ ಸು. 3,000 ಮೀ ಆಳದಲ್ಲಿದೆಯೆಂದು ಅಂದಾಜಾಗಿತ್ತು. ಇಷ್ಟು ಆಳದ ಬಾವಿಯನ್ನು ಕೊರೆಯಲು ಯೋಜನೆ ತಯಾರಿಸುವ ವೇಳೆಗೆ, 1939ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಗಿ, ಕಾರ್ಯ ಕೈಗೊಳ್ಳಲಾಗಲಿಲ್ಲ. ಅನಂತರ 1952ರಲ್ಲಿ ನಾಹರ್‌ಕಟಿಯದಲ್ಲಿ ಮೊದಲನೆಯ ಬಾವಿಯನ್ನು ಕೊರೆಯಲು ಪ್ರಾರಂಭವಾಯಿತು; 1953ರಲ್ಲಿ ಈ ಬಾವಿಯಲ್ಲಿ ಸುಮಾರು 2740ಮೀ ಆಳದಲ್ಲಿ ತೈಲಸಿಕ್ಕಿತು. ತೈಲ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗಿ ಲಾಭದಾಯಕವಾಗಿ ಕಂಡುಬಂದು ಈ ಕ್ಷೇತ್ರದಲ್ಲಿ ಕಾರ್ಯಕ್ರಮ ವಿಸ್ತಾರಗೊಂಡಿತ್ತು. ಇದುವರೆಗೂ 140 ಬಾವಿಗಳನ್ನು ಕೊರೆಯಲಾಗಿದೆ. 8–10 ಬಾವಿಗಳ ವಿನಾ ಬಾಕಿಯವುಗಳಲ್ಲೆಲ್ಲ ತೈಲ ಸಿಕ್ಕಿದೆ; ಕೆಲವು ಬಾವಿಗಳಲ್ಲಿ ಅನಿಲಮಾತ್ರ ಸಿಕ್ಕಿದೆ. ಎಲ್ಲ ಬಾವಿಗಳ ತೈಲ ಮತ್ತು ಅನಿಲ ತಾನಾಗಿಯೇ ಮೇಲಕ್ಕೆ ಹರಿದುಬರುತ್ತದೆ.

ನಾಹರ್‌ಕಟಿಯ ಕ್ಷೇತ್ರದಲ್ಲಿ ಸಾಲಿಯಾನ 25 ರಿಂದ 30ಲಕ್ಷ ಟನ್‌ನಷ್ಟು ತೈಲವನ್ನು, ಕನಿಷ್ಠಪಕ್ಷ 20 ವರ್ಷ ಪರ್ಯಂತರ ಪಡೆಯಬಹುದೆಂದು ಅಂದಾಜಾಗಿದೆ. ಇದರ ಜೊತೆಗೆ ದಿನವಹಿ 15 ಲಕ್ಷ ಘ.ಮೀ.ಗಳು ಅನಿಲವನ್ನೂ ಪಡೆಯಬಹುದು. ಈ ಕ್ಷೇತ್ರದ ಆಡಳಿತವನ್ನು ನಿರ್ವಹಿಸಲು ಸಮೀಪದಲ್ಲಿರುವ ದೂಲಿಯಜಾನ್ ರೈಲು ನಿಲ್ದಾಣದ ಬಳಿ ಒಂದು ಶಿಬಿರ (ಕಾಲೊನಿ) ಸ್ಥಾಪಿತವಾಗಿ ದೂಲಿಯಜಾನ್ ಈಗ ಒಂದು ನವೀನಪಟ್ಟಣವಾಗಿದೆ.

ಮೊರಾನ್ : ಈ ಕ್ಷೇತ್ರ ನಾಹರ್‌ಕಟಿಯಕ್ಕೆ 40 ಕಿಮೀ ಪಶ್ಚಿಮ–ನೈಋತ್ಯ ಮಧ್ಯಕೋನದಲ್ಲಿದೆ. ಇಲ್ಲಿ 1956ರಲ್ಲಿ ತೈಲಸಿಕ್ಕಿತು. ಇಲ್ಲಿನ ಆಂಟಿಕ್ಲೈನ್ ನಾಹರ್‌ಕಟಿಯಾದ್ದಕ್ಕಿಂತ 500 ಮೀ ಹೆಚ್ಚು ಆಳದಲ್ಲಿದೆ. ತೈಲ ನಾಮಸಾಂಗ್ ಶ್ರೇಣಿಯ— ಅಂದರೆ ಟಿಪಂ ಶಿಲೆಗಳ ಕಾಲದ ಅನಂತರ ಸಂಗ್ರಹವಾದ ಮರಳುಶಿಲೆಗಳಲ್ಲಿದೆ. ಇಲ್ಲಿಯೂ ಪ್ರಸ್ತರಭಂಗಗಳು ಹೆಚ್ಚಾಗಿದ್ದು ಶಿಲಾರಚನೆ ಕ್ಲಿಷ್ಟತರವಾಗಿದೆ. ಇದುವರೆಗೆ 29 ಬಾವಿಗಳನ್ನು ತೋಡಲಾಗಿದೆ. ಅವುಗಳ ಪೈಕಿ 7 ಖಾಲಿ; ಬಾಕಿಯವುಗಳಲ್ಲೂ ತೈಲ ಉತ್ಪತ್ತಿ ನಾಹರ್‌ಕಟಿಯಕ್ಕಿಂತ ಕಡಿಮೆ ಪರಿಮಾಣ. ಇಲ್ಲಿಯೂ ತೈಲ ಎಲ್ಲ ಬಾವಿಗಳಲ್ಲೂ ಮೇಲಕ್ಕೆ ತಾನಾಗಿಯೆ ಉಕ್ಕಿ ಬರುತ್ತಿದೆ. ತೈಲದ ವಸ್ತುರಚನೆ ಹೆಚ್ಚುಕಡಿಮೆ ನಾಹರ್‌ಕಟಿಯ ತೈಲದಂತೇ ಇದೆ. ಸಾಪೇಕ್ಷಸಾಂದ್ರತೆ 0.85.

ನಾಹರ್‌ಕಟಿಯ ಮತ್ತು ಮೊರಾನ್ ಕ್ಷೇತ್ರಗಳಲ್ಲಿ ಉತ್ಪತ್ತಿಯಾದ ತೈಲವನ್ನು ಕೊಳವೆಗಳ ಮೂಲಕ ಗೌಹಾತಿ ಬಳಿ ಸ್ಥಾಪಿಸಿರುವ ನೂನಮತಿ ಶುದ್ಧೀಕರಣಕ್ಕೂ ಬಿಹಾರ್‌ಪ್ರಾಂತ್ಯದಲ್ಲಿ ಸ್ಥಾಪಿಸಿರುವ ಶುದ್ಧೀಕರಣಕ್ಕೂ ರವಾನಿಸಲ್ಪಟ್ಟು ಪರಿಶುದ್ಧಗೊಳಿಸಿಸಲ್ಪಡುತ್ತದೆ. ನಾಹರ್‌ಕಟಿಯದಿಂದ ಮೊರಾನ್ ಮತ್ತು ನೂನಮತಿ ಮಾರ್ಗವಾಗಿ ಬ್ರಹ್ಮಪುತ್ರಾನದಿ ದಾಟಿ ಬರೌನಿವರೆಗೂ ಸು. 1200 ಕಿಮೀ. ಉದ್ದದ ಕೊಳವೆಗಳನ್ನು 45 ಕೋಟಿ ರೂಪಾಯಿ ಖರ್ಚಿನಲ್ಲಿ ಹಾಕಲಾಗಿದೆ. ಬಾವಿಗಳಿಂದ ಬಂದ ತೈಲಗಳನ್ನು ಬೆರೆಸಿ ಅವುಗಳಲ್ಲಿ ಸಮ್ಮಿಳಿತವಾಗಿರುವ ಅನಿಲವನ್ನು ಬೇರ್ಪಡಿಸಿ, ಅನಂತರ ಸ್ವಲ್ಪ ಮಟ್ಟಿಗೆ ಶಾಖಮಾಡಿ ಕೊಳವೆಯಲ್ಲಿ ಸುಲಭವಾಗಿ ಪ್ರವಹಿಸುವಂತೆ ದ್ರವರೂಪಮಾಡಲು ಯಂತ್ರಗಳನ್ನು ನಾಹರ್‌ಕಟಿಯ ಮತ್ತು ಮೊರಾನ್ ಕ್ಷೇತ್ರಗಳಲ್ಲಿ ಸ್ಥಾಪಿಸಿದ್ದಾರೆ. ಇದಲ್ಲದೆ ಈ ಕೊಳವೆಗಳಲ್ಲಿ ಕೆಲವುಕಡೆ ಯಂತ್ರೋಪಕರಣಗಳಿಂದ ಒತ್ತಡಮಾಡಿ ತೈಲ ಅಷ್ಟು ಅಪಾರದೂರ ಸುಸೂತ್ರವಾಗಿ ಸಾಗಿಬರುವಂತೆ ಏರ್ಪಾಡು ಮಾಡಿದ್ದಾರೆ. ಈ ಕ್ಷೇತ್ರಗಳಲ್ಲಿ ಕೆಲವು ಬಾವಿಗಳಲ್ಲಿ ಉತ್ಪತ್ತಿಯಾಗುವ ಅನಿಲ ಮತ್ತು ತೈಲಗಳಲ್ಲಿ ಸಮ್ಮಿಳಿತವಾಗಿದ್ದು ಬೇರ್ಪಡಿಸಿದ ಅನಿಲವನ್ನು ಅಸ್ಸಾಮ್ ಪ್ರಾಂತ್ಯದಲ್ಲೇ ಉಪಯೋಗಿಸುವ ಏರ್ಪಾಡು ಮಾಡಿದ್ದಾರೆ. ಇದರಿಂದ ನಾಮ್‌ರೂಪ್ ಬಳಿ ವಿದ್ಯುಚ್ಛಕ್ತಿ ಪಡೆಯುವ ಕಾರ್ಯಾಗಾರ ಹಾಗೂ ರಾಸಾಯನಿಕ ಗೊಬ್ಬರ ಮತ್ತಿತರ ಸಾಮಗ್ರಿಗಳ ತಯಾರಿಕೆಯಲ್ಲಿ ಕಾರ್ಖಾನೆಗಳು ಸ್ಥಾಪಿತವಾಗಿವೆ.

ರುದ್ರಸಾಗರ್ : ಈ ಕ್ಷೇತ್ರ ಮತ್ತು ಲಾಕ್ವಾಕ್ಷೇತ್ರ ಭಾರತೀಯ ತೈಲ ಮತ್ತು ನೈಸರ್ಗಿಕ ಅನಿಲ ಮಂಡಲಿ (ಒ.ಎನ್.ಜಿ.ಸಿ)ಗೆ ಸೇರಿವೆ. ರುದ್ರಸಾಗರ್ ಮೊರಾನ್ ಕ್ಷೇತ್ರಕ್ಕೆ 40

ಕಿಮೀ. ನೈಋತ್ಯದಲ್ಲಿ, ಶಿಬ್‌ಸಾಗರ್ ಸಮೀಪದಲ್ಲಿದೆ. ಇಲ್ಲಿ ಹಾಕಿದ ಮೊದಲನೆಯ ಬಾವಿಯಲ್ಲಿ 1961ರಲ್ಲಿ ತೈಲ ಸಿಕ್ಕಿತು. ತೈಲ ಮುಖ್ಯವಾಗಿ ಬರೈಲ್‌ಶ್ರೇಣಿ ಶಿಲೆಗಳಲ್ಲೂ ಕೊಂಚ ಭಾಗ ಟಿಪಂಶ್ರೇಣಿಯ ಶಿಲೆಗಳಲ್ಲೂ ಸಿಕ್ಕುತ್ತದೆ. ಇಲ್ಲಿನ ಶಿಲಾರಚನೆ ಹೆಚ್ಚು ಇಳಿಜಾರುಗಳಿಲ್ಲದ ಗುಂಭಾಕಾರವಾಗಿದೆ. ಬಾವಿಗಳು ಸು. 3,500 ಮೀ. ಆಳದವರೆಗೂ ಕೊರೆಯಲ್ಪಟ್ಟಿವೆ. ಇದುವರೆವಿಗೂ 8 ಬಾವಿಗಳನ್ನು ತೋಡಲಾಗಿದೆ; ಅವುಗಳಲ್ಲಿ ನಾಲ್ಕರಲ್ಲಿ ತೈಲ ಉತ್ಪತ್ತಿ ನಿಗದಿಯಾಗಿದೆ. ತೈಲ ಸಾಮಾನ್ಯವಾಗಿ ಮೊರಾನ್ ಕ್ಷೇತ್ರದಂತೆ ಇದೆ.

ಭಾರತೀಯ ತೈಲ ಮತ್ತು ನೈಸರ್ಗಿಕ ಅನಿಲ ಮಂಡಲಿ ಭೂಭೌತಶಾಸ್ತ್ರ ರೀತ್ಯಾ ಪರಿಶೀಲನೆ ನಡೆಸಿ ರುದ್ರಸಾಗರ್ ಅಲ್ಲದೆ ಇತರ ಕೆಲವು ಸ್ಥಳಗಳಲ್ಲಿ ಆಂಟಿಕ್ಲೈನ್ ಶಿಲಾರಚನೆಗಳನ್ನು ಕಂಡುಹಿಡಿದಿದ್ದಾರೆ. ಈ ರಚನೆಗಳ ಪೈಕಿ ಲಾಕ್ವಾ ಎಂಬ ಸ್ಥಳದಲ್ಲಿ ತೈಲ ಸಿಕ್ಕಿದೆ.

ಲಾಕ್ವಾ : ಇದು ಮೊರಾನ್‌ಗೆ 20 ಕಿಮೀ. ದಕ್ಷಿಣ ನೈಋತ್ಯ ಮೂಲೆಯಲ್ಲಿದೆ. ಇಲ್ಲಿನ ಆಂಟಿಕ್ಲೈನ್ ಮೊರಾನ್ ಮತ್ತು ರುದ್ರಸಾಗರ್‌ಗಳ ಶಿಲಾರಚನೆಗಿಂತ ವಿಸ್ತಾರವಾಗಿಯೂ ಹೆಚ್ಚು ಎತ್ತರವುಳ್ಳದ್ದಾಗಿಯೂ ಇದೆ. 1963ರಲ್ಲಿ ತೋಡಿದ ಮೊದಲನೇ ಬಾವಿಯಲ್ಲಿ ತೈಲ ಸಿಕ್ಕಿದೆ. ಟಿಪಂಶ್ರೇಣಿಯ ಹಾಗೂ ಬರೈಲ್‌ಶ್ರೇಣಿಯ ಅನೇಕ ಮರಳು ಶಿಲಾಪ್ರಸ್ತರಗಳಿಂದಲೂ ತೈಲ ಪಡೆಯಬಹುದೆಂದು ಗೊತ್ತಾಗಿದೆ.

ರುದ್ರಸಾಗರ್ ಮತ್ತು ಲಾಕ್ವಾ ಕ್ಷೇತ್ರಗಳಲ್ಲಿ ಅಭಿವೃದ್ಧಿಕಾರ್ಯ ಇನ್ನೂ ನಡೆಯುತ್ತಿದೆ. ಈ ಕ್ಷೇತ್ರಗಳಲ್ಲಿ ತೈಲ ಉತ್ಪತ್ತಿ ಪ್ರಮಾಣ ನಿಗದಿಮಾಡಲು ಕಾರ್ಯಕ್ರಮಗಳು ಮುಂದುವರಿಯುತ್ತಿವೆ. ಈ ಕ್ಷೇತ್ರಗಳಲ್ಲೆಲ್ಲ ಬ್ರಹ್ಮಪುತ್ರಾ ನದಿಯ ಎಡಪಾರ್ಶ್ವದಲ್ಲಿವೆ. ಬಲಭಾಗದ ಮೆಕ್ಕಲು ಬಯಲಿನಲ್ಲಿ ತೈಲಾನ್ವೇಷಣಕಾರ್ಯ ಇನ್ನೂ ನಡೆದಿಲ್ಲ.

ಆಯಿಲ್‌ಏಷ್ಯಾ 1993ರಲ್ಲಿ ವರದಿಮಾಡಿದಂತೆ ಲಕ್ವಾದಲ್ಲಿ 670 ಮಿ. ಬ್ಯಾರೆಲ್ ತೈಲ, ರುದ್ರಸಾಗರ 335 ಮಿ. ಬ್ಯಾರೆಲ್ ತೈಲ, ನಹರ್‌ಕಾಟಿಯಾ 200 ಮಿ. ಬ್ಯಾರೆಲ್ ತೈಲ ಜೋರಜನ್ 100 ಮಿ. ಬ್ಯಾರೆಲ್ ತೈಲ ನಿಕ್ಷೇಪ ಪ್ರಮಾಣವನ್ನು ಹೊಂದಿವೆ. (ಎಂ.ಬಿ.ಆರ್.)

**ಅಸ್ಸೀರಿಯ:** ಮೆಸಪೊಟೇಮಿಯ ಟೈಗ್ರಿಸ್ ನದಿ ತೀರದ ಒಂದು ಪುರಾತನ ದೇಶ. ಈಗಿನ ಇರಾನ್ ದೇಶದ ಉತ್ತರ ಭಾಗದಲ್ಲಿದೆ. ಇದರ ನಾಗರಿಕತೆ ದಕ್ಷಿಣದಲ್ಲಿರುವ ಬ್ಯಾಬಿಲಾನಿಯರ ನಾಗರಿಕತೆಗೆ ಅನುರೂಪವಾಗಿದೆ. ಇಲ್ಲಿಯ ಜನರನ್ನು ಏಷ್ಯಖಂಡದ ರೋಮನ್ನರು ಎಂದು ಕರೆಯುತ್ತಾರೆ. ರೋಮನ್ನರಂತೆ ಇವರೂ ಕೂಡ ಸಾಹಸಿಗರು, ಆಕ್ರಮಣಕಾರಿ ಪ್ರವೃತ್ತಿಯವರು. ಇವರು ಸಂಘಟನಾ ಸಾಮರ್ಥ್ಯಕ್ಕೆ ಹೆಸರಾದವರು. ಅಸ್ಸೀರಿಯ ಬೆಟ್ಟಗುಡ್ಡಗಳಿಂದ ಕೂಡಿದ ದೇಶ. ಟೈಗ್ರಿಸ್ ನದಿಯ ಮೆಕ್ಕಲು ಮಣ್ಣಿನಿಂದ ಈ ಕಣಿವೆ ಪ್ರದೇಶ ಫಲವತ್ತಾಗಿದೆ. ಉತ್ತರದಲ್ಲಿ ಆರ್ಮೇನಿಯನ್ ಪರ್ವತ ಶ್ರೇಣಿಗಳು ಮತ್ತು ಪೂರ್ವಕ್ಕೆ ಇರಾನಿನ ಎತ್ತರವಾದ ಪರ್ವತ ಸ್ತೋಮಗಳು ಹಾಗೂ ಜ್ಯಾಗ್ರೋಸ್ ಪರ್ವತ ಶ್ರೇಣಿಗಳಿವೆ. ಅಸ್ಸೀರಿಯ ಒಂದು ಕೃಷಿಪ್ರಧಾನವಾದ ದೇಶ. ಅಸ್ಸೀರಿಯನ್ ಜನರು ಮೊದಲು ಬ್ಯಾಬಿಲಾನಿಯದಲ್ಲಿ ನೆಲಸಿದ್ದರೆಂಬುದಕ್ಕೆ ಪುರಾವೆಗಳಿವೆ. ಈ ಜನರು ಚಿಕ್ಕಪುಟ್ಟ ಹಳ್ಳಿಗಳಲ್ಲಿ ನೆಲೆಸಿದ್ದರೆಂದೂ ಇವರು ಗುಡ್ಡಗಾಡು ಜನಾಂಗದವರೆಂದೂ ತಿಳಿದುಬರುತ್ತದೆ. ಮಣ್ಣಿನ ಮಡಿಕೆಯ ಚೂರುಗಳು, ಕಲ್ಲಿನ ಆಯುಧಗಳು ಮತ್ತು ಮನೆಯ ತಳಪಾಯಗಳು ಅಸ್ಸೀರಿಯದಲ್ಲಿ ನವಶಿಲಾಯುಗದಲ್ಲಿ ಜನರು ಇಲ್ಲಿ ನೆಲೆಸಿರಬಹುದೆಂಬುದಕ್ಕೆ ಆಧಾರವಿದೆ. ಅಸ್ಸೀಯದಲ್ಲಿ ಕೆಲವೇ ಕೆಲವು ಪಟ್ಟಣಗಳಿವೆ. ಅವುಗಳಲ್ಲಿ ಅಸ್ಸೂರ್, ನೈನಿವಿ, ಕಲಾ (ನಿಮ್‌ರುದ್) ಮುಖ್ಯವಾಗಿವೆ. ಅಸ್ಸೀರಿಯದಲ್ಲಿ ಇನ್ನೂ ಗುಲಾಮಗಿರಿಯಿದೆ. ಬಹುಪಾಲು ಗುಲಾಮರು ಯುದ್ಧ ಖೈದಿಗಳಾಗಿ ಬಂದೀಖಾನೆಯಲ್ಲಿದ್ದಾರೆ. ಅನೇಕರು ತಮ್ಮ ಸಾಲತೀರಿಸಲು ಹೆಂಡತಿಮಕ್ಕಳನ್ನು ಮಾರಿಕೊಂಡಿದ್ದಾರೆ. ಇಲ್ಲಿ ಅನೇಕ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಇಲ್ಲಿಯ ಭಾಷೆ ಸೆಮಿಟಿಕ್ ವರ್ಗಕ್ಕೆ ಸೇರಿದ್ದು ಹೀಬ್ರೂ ಹಾಗೂ ಅರಾಬಿಕ್ ಭಾಷೆಗಳೊಡನೆ ಸಂಬಂಧವಿದೆ. ಸಿರಿಯನ್ ಧರ್ಮ ಸುಮೇರಿಯನ್ ಮತ್ತು ಬ್ಯಾಬಿಲಾನಿಯನ್ ಧರ್ಮಕ್ಕೆ ಹತ್ತಿರವಾಗಿದೆ. (ಬಿ.ಕೆ.ಜಿ.)

**ಅಹಮದ್ ನಗರ:** ಮಹಾರಾಷ್ಟ್ರದ ಒಂದು ಪ್ರಮುಖ ಜಿಲ್ಲೆ ಹಾಗೂ ನಗರ. ಈ ನಗರ ಸೀನಾ ನದಿಯ ದಂಡೆಯ ಮೇಲಿದೆ ($19^{0}5'$ ಉತ್ತರ ಅಕ್ಷಾಂಶ $74^{0}55'$ ಪೂರ್ವ ರೇಖಾಂಶ). ಜನಸಂಖ್ಯೆ 5,80,376. ಮುಂಬಯಿಗೆ 350 ಕಿಮೀ ದೂರದಲ್ಲಿದೆ. ಪುಣೆ ವಿಭಾಗದ ಮಿಲಿಟರಿ ಠಾಣ್ಯವಾಗಿದೆ.

ಹತ್ತಿ ಹಾಗೂ ರೇಷ್ಮೆ ವ್ಯಾಪಾರಕ್ಕೆ ಕೇಂದ್ರವೆನಿಸಿದೆ. ಹತ್ತಿಯನ್ನು ನೇಯುವ ಮತ್ತು ಬಣ್ಣ ಹಾಕುವ ಗಿರಣಿಗಳುಂಟು.

ಜಿಲ್ಲೆಯಲ್ಲಿ ಮಳೆ ಕಡಿಮೆ. ಪ್ರದೇಶ ಬಂಜರು. ವಿಸ್ತೀರ್ಣ 10,355 ಚಕಿಮೀ. ಜಿಲ್ಲೆಯ ಉತ್ತರ ಭಾಗದಲ್ಲಿ ಗೋದಾವರಿ ಹಾಗೂ ಉಪನದಿಗಳಾದ ಪಾರವಾರ ಮತ್ತು ಮೂಲಾ ಹರಿಯುತ್ತವೆ. ಇತರ ನದಿಗಳೆಂದರೆ ಡಾರ್, ಸೇಫಾನಿ, ಭೀಮ, ಹಾಗೂ ಗೋರ್. ಹತ್ತಿ, ಗೋದಿ, ದ್ವಿದಳ ಧಾನ್ಯಗಳು ಇಲ್ಲಿಯ ಪ್ರಮುಖ ಬೆಳೆಗಳು.

ನಿಜಾಮ್‌ಶಾಹಿ ವಂಶದ ಸಂಸ್ಥಾಪಕ ಅಹಮದ್ ನಿಜಾಮ್ ಷಾ ಬಹಮನಿ ಸೈನ್ಯವನ್ನು ಸೋಲಿಸಿ ಪಡೆದ ವಿಜಯದ ಸ್ಮಾರಕವಾಗಿ 1494 ರಲ್ಲಿ ಅದೇ ಸ್ಥಳದಲ್ಲಿ ಒಂದು ನಗರ ಸ್ಥಾಪನೆಮಾಡಿ ಅದಕ್ಕೆ ಅಹಮದ್ ನಗರ ಎಂದು ಹೆಸರಿಟ್ಟು ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. (ಎಸ್.ಎನ್.)

**ಅಹಮದಾಬಾದ್:** ಗುಜರಾತಿನ ಒಂದು ಪ್ರಮುಖ ನಗರ, ಸಬರಮತಿ ನದಿಯ ಎಡದಂಡೆಯಲ್ಲಿದೆ. ಜನಸಂಖ್ಯೆ 20,56,680. 1411 ರಲ್ಲಿ ಗುಜರಾತಿನ ಸುಲ್ತಾನ್ ಅಹಮ್ಮದ್ ಷಾ ತನ್ನ ರಾಜಧಾನಿಯಾಗಿ ಮಾಡಿಕೊಂಡಮೇಲೆ ಬಹಳ ಪ್ರಸಿದ್ಧವಾಯಿತು. 15 ನೆಯ ಶತಮಾನದ ಆರಂಭದಲ್ಲಿ ಈತ ಅನೇಕ ಕಟ್ಟಡಗಳನ್ನು ಕಟ್ಟಿಸಿದ.

ಇವುಗಳಲ್ಲಿ ಕೋಟೆಯ ಒಳಗಿರುವ ಮಸೀದಿ, ಸಯೀದ್ ಅಲಮ್‌ನ ಗೋರಿ, ಹೈಬತ್‌ಖಾನನ ಗೋರಿ ಮತ್ತು ಜಾಮಿಮಸೀದಿ ಮುಖ್ಯವಾದವು. ಇಲ್ಲಿನ ಮೊದಲ ಕಟ್ಟಡಗಳ ಶೈಲಿಯಲ್ಲಿ ದೆಹಲಿಯ ಫಿರೋಜ್ ಷಾ ತುಘಲಕ್‌ನ ಕಾಲದ ವಾಸ್ತುಶೈಲಿಯ ಪ್ರಭಾವ ಬಹಳವಾಗಿದೆ. ವಿಶಾಲವಾದ ಪ್ರಾಂಗಣದ ಮಧ್ಯೆ ಅನೇಕ ಕಂಬಗಳು, ಕಮಾನುಗಳು ಮತ್ತು ಗುಮ್ಮಟಗಳನ್ನೊಳಗೊಂಡಿರುವ ಜಾಮೀಮಸೀದಿ (1423) ಗುಜರಾತ್ ಪ್ರಾಂತೀಯ ಶೈಲಿಗೇ ಮುಕುಟಪ್ರಾಯವಾದ ಕೃತಿಯೆಂದು ಪ್ರಸಿದ್ಧವಾಗಿದೆ. ಇದರ ಬಳಿಯೇ ಇರುವ ತೀನ್‌ದರ್ವಾಜಾ ಸಹ ಒಂದು ಉತ್ತಮ ಕಟ್ಟಡ. ಅಹಮದ್ ಷಾನ ಅನಂತರ ಆಳಿದ ಮಹಮದ್ ಷಾನ (1442–51) ಕಾಲದಲ್ಲಿ ಕಟ್ಟಿರುವ ಅಹಮದ್ ಷಾನ ಗೋರಿ, ರಾಣಿ–ಕಾ–ಹುಜ್ರಾ ಎಂಬ ರಾಣಿಯರ ಗೋರಿಗಳು ಸಹಾ ಇದೇ ವಾಸ್ತುಸಂಪ್ರದಾಯದಲ್ಲಿಯೇ ಇವೆ.

ಇಲ್ಲಿ ಒಂದು ವಿಶ್ವವಿದ್ಯಾಲಯವಿದೆ, ಅದಕ್ಕೆ ಸೇರಿದ ಕಾಲೇಜುಗಳೂ ಇವೆ. ನದಿಯ ಪಶ್ಚಿಮ ದಡದ ಮೇಲಿರುವ ಸಾಬರಮತಿ ಬಡಾವಣೆ ಮಹಾತ್ಮ ಗಾಂಧಿಯವರ ಆಶ್ರಮವಿದ್ದ ಪ್ರಸಿದ್ಧ ಸ್ಥಳ. (ಎಸ್.ಎನ್.)

**ಅಳಂದ:** ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು. ಅದರ ಆಡಳಿತ ಕೇಂದ್ರ. ಹಿಂದೆ ಅಲಂದೆಸಾಸಿರವೆಂಬ ಪ್ರಾಂತ್ಯದ ಮುಖ್ಯಸ್ಥಳವಾಗಿತ್ತು. ಈ ತಾಲ್ಲೂಕಿನ ಜನಸಂಖ್ಯೆ 2,94,445 ಹಾಗೂ ಪಟ್ಟಣದ ಜನಸಂಖ್ಯೆ 35,308. ಚಾಳುಕ್ಯರ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಒಂದು ಶಾಸನವೂ ಸುಮಾರು ಅದೇ ಕಾಲಕ್ಕೆ ಸೇರಿದ ಕೆಲವು ಜೈನವಿಗ್ರಹಗಳೂ ಇಲ್ಲಿವೆ. ಇಲ್ಲಿನ ಲಾಡ್ಲೆ ಮುಶ್ಸೆಕ್ ಎಂಬ ಒಂದು ಗೋರಿಯ ಕೆಲವು ಭಾಗಗಳು ಬಹಮನಿ ವಾಸ್ತುಶೈಲಿಯಲ್ಲಿವೆ. ಬಳಿಯಲ್ಲೇ ತುಕಾರಾಮರ ಪರಮಗುರುವಾದ ರಾಘವಚೈತನ್ಯರ ಸಮಾಧಿಯಿದೆ. ಇಲ್ಲಿಂದ ಸುಮಾರು 3 ಕಿಮೀ ಉತ್ತರದಲ್ಲಿರುವ ಒಂದು ಜಾಗ ಶಂಕರಾಚಾರ್ಯರ ಶಿಷ್ಯರಾದ ಹಸ್ತಾಮಲಕರು ತಂಗಿದ್ದ ಸ್ಥಳವೆಂದು ಪ್ರಸಿದ್ಧವಾಗಿದೆ. (ಎಸ್.ಎನ್.)

**ಅಳಿವೆ:** ನದೀಮುಖಜಭೂಮಿಯಲ್ಲಿ ನೆಲ ತಗ್ಗಾಗಿರುವುದರಿಂದಲೋ ಅಥವಾ ಸಮುದ್ರ ಮಟ್ಟ ಎತ್ತರವಾಗಿರುವುದರಿಂದಲೋ ಸಮುದ್ರದ ನೀರು ನದೀಮುಖದ ಒಳಕ್ಕೆ ನುಗ್ಗಿ ಬರುತ್ತಿದ್ದರೆ ಅಂಥ ಪ್ರದೇಶವನ್ನು ಅಳಿವೆಯೆಂದು (ಎಸ್ಚ್ಯುಅರಿ) ಕರೆಯುತ್ತಾರೆ. ನದಿಯ ಸಿಹಿ ನೀರು ಮತ್ತು ಸಮುದ್ರದ ಉಪ್ಪು ನೀರು ಸಮ್ಮಿಲನವಾಗುವ ಭಾಗ. ನದಿಯ ನೀರಿನ ಮಿಶ್ರಣದಿಂದಾಗಿ ನೀರಿನ ಲವಣತೆಯ ಪ್ರಮಾಣ ಕಡಿಮೆ. ಅಳಿವೆಗಳಲ್ಲಿ ನಾಲ್ಕು ವಿಧಗಳಿವೆ: 1) ಮುಳುಗಿದ ನದಿ ಕಣಿವೆ ಅಳಿವೆಗಳು: ಸಮುದ್ರ ತೀರ ಮುಳುಗುವುದರಿಂದ ನಿರ್ಮಾಣವಾದವು. ಉದಾ: ಚೆಸಪೀಕ್ ಕೊಲ್ಲಿ. 2) ಫಿಯೋರ್ಡ್ ಅಳಿವೆಗಳು: ಹಿಮನದಿ ಕಣಿವೆಗಳು ಸಮುದ್ರ ಪ್ರವಾಹದಿಂದ ಆಳವಾಗುವುದರಿಂದ ನಿರ್ಮಾಣವಾದವು. ಹಿಮೀಕರಣ ತೀರಗಳಲ್ಲಿ ಕಂಡುಬರುತ್ತವೆ. ಉದಾ: ಬ್ರಿಟಿಷ್ ಕೊಲಂಬಿಯ, ದಕ್ಷಿಣ ಚಿಲಿ, ಸ್ಕಾಟ್ಲೆಂಡ್, ನಾರ್ವೆ, ನ್ಯೂಜಿಲೆಂಡ್‌ನ ದಕ್ಷಿಣ ದ್ವೀಪ. 3) ಭೂರಚನಾ ಅಳಿವೆಗಳು: ಇವು ಭೂಚಿಪ್ಪಿನ ಚಿಕ್ಕ ಭಾಗ ಸ್ತರಭಂಗದಿಂದ ಕುಸಿದು ನಿರ್ಮಾಣವಾದವು. ಉದಾ: ಸ್ಯಾನ್‌ಫ್ರಾನ್ಸಿಸ್ಕೊ ಕೊಲ್ಲಿ. 4) ಅಡ್ಡದಿಣ್ಣೆ ನಿರ್ಮಿತ ಅಳಿವೆಗಳು: ಇವು ಕೊಲ್ಲಿ ಮುಖ ಮರಳು ದಿಣ್ಣೆಗಳಿಂದ (ಬೇ ಮೌತ್ ಬಾರ್ಸ್) ನಿರ್ಮಿತವಾಗುತ್ತವೆ. ಉದಾ: ಅಮೆರಿಕದ ಟೆಕ್ಸಸ್ ಕೊಲ್ಲಿ ಕರಾವಳಿ. ಭಾರತದ ತಪತಿ ನದಿ ಮುಖಭಾಗದಲ್ಲಿ ಸೊಗಸಾದ ಅಳಿವೆ ನಿರ್ಮಾಣವಾಗಿದೆ. ಇದೇ ರೀತಿ ಥೇಮ್ಸ್, ಎಲ್ಬ್‌ನದಿ ಮುಖಗಳು, ಮರ್ಷಿಸೈಡ್ ಮತ್ತು ಕ್ಲೈಸೈಡ್‌ಗಳಲ್ಲಿ ಕಂಡುಬರುತ್ತವೆ. ಅಳಿವೆಗಳು ಉತ್ತಮ ರೇವುಪಟ್ಟಣಗಳಿಗೆ ಸೂಕ್ತ. (ಎಂ.ಎಸ್.ಎಂ.)

# ಆ

**ಆಂಗ್ವಿಲ್ಲ:** ಸಮತಟ್ಟಾದ ಹವಳ ಮತ್ತು ಸುಣ್ಣದ ಕಲ್ಲಿನಿಂದ ನಿರ್ಮಾಣಗೊಂಡಿರುವ ಕೆರೆಬಿಯನ್ ಸಮುದ್ರದಲ್ಲಿನ ದ್ವೀಪ ಇದು ಪ್ರಸ್ತುತ ಬ್ರಿಟಿಷ್ ರಾಜ್ಯದ ಸಾಗರೀಯ ಭೂಪ್ರದೇಶವಾಗಿದೆ.

ಉಷ್ಣವಲಯದ ಒಣ ವಾಯುಗುಣ ಹೊಂದಿದ್ದರೂ ಈಶಾನ್ಯ ವಾಣಿಜ್ಯ ಮಾರುತಗಳ ಪ್ರಭಾವದಿಂದ ಈ ಒಣವಾಯುಗುಣ ಸುಧಾರಿಸಲ್ಪಟ್ಟು ವಿವಿಧ ಋತುಮಾನಗಳಲ್ಲಿನ ಉಷ್ಣಾಂಶದ ವ್ಯತ್ಯಾಸ ಅತ್ಯಲ್ಪ ಮಟ್ಟದಲ್ಲಿರುತ್ತದೆ. ಸರಾಸರಿ ದೈನಂದಿನ ಗರಿಷ್ಠ ಉಷ್ಣಾಂಶ ಡಿಸೆಂಬರ್‌ನಲ್ಲಿ $27^0$ಸೆ ನಿಂದ ಜುಲೈ ತಿಂಗಳಿನಲ್ಲಿ $30^0$ಸೆ.ಗೆ ಏರುತ್ತದೆ. ಮಳೆಯ ಪ್ರಮಾಣ ಸರಾಸರಿ 90 ಸೆಮೀ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳು ಗರಿಷ್ಠ ಮಳೆ ಬೀಳುವುದು. ಫೆಬ್ರವರಿ ಮತ್ತು ಮಾರ್ಚ್ ತಿಂಗಳು ಅತ್ಯಂತ ಕಡಿಮೆ ಅಥವಾ ಒಣಹವೆಯಿಂದ ಕೂಡಿರುತ್ತವೆ. ಸಾಮಾನ್ಯವಾಗಿ ಜೂನ್‌ನಿಂದ ನವೆಂಬರ್ ನಡುವೆ ಹರಿಕೇನ್ ಚಂಡಮಾರುತಗಳ ಹಾವಳಿಯನ್ನು ಇಲ್ಲಿ ಕಾಣಬಹುದು.

ಆಂಗ್ವಿಲ್ಲದ ಅಧೀನದಲ್ಲಿ ಇತರೆ ಸಣ್ಣ ಪುಟ್ಟ ಹಲವು ದ್ವೀಪಗಳಿವೆ. ಇವುಗಳ ಒಟ್ಟು ವಿಸ್ತೀರ್ಣ ಸು. 102 ಚ.ಕಿಮೀ. ಜನವಸತಿ ಕೆಲವೇ ದ್ವೀಪಗಳಿಗೆ ಸೀಮಿತಗೊಂಡಿದೆ. ಅದು ಸು. 13,477 (2006). (ಎಚ್.ಎನ್.)

**ಆಂಟಿಗುವ ಮತ್ತು ಬಾರ್ಬುಡ:** ಇವೆರಡು ಕೆರಿಬಿಯನ್ ದ್ವೀಪ ರಾಷ್ಟ್ರಗಳು ಇವುಗಳ ಭೌಗೋಳಿಕ ಎಲ್ಲೆಗಳು ಅಟ್ಲಾಂಟಿಕ್ ಸಾಗರದ ಜೊತೆ ಹಂಚಿಕೊಂಡಿವೆ. ಈ ಎರಡೂ ದ್ವೀಪಗಳೂ ಕೆರಿಬಿಯನ್ ಸಮುದ್ರದ ಪೂರ್ವ ಭಾಗದಲ್ಲಿರುವ ದ್ವೀಪ ಸಮೂಹದ ಕೇಂದ್ರಭಾಗದಲ್ಲಿವೆ. ಇವು ಸಮಭಾಜಕ ವೃತ್ತದಿಂದ $17^0$ ಉತ್ತರದಲ್ಲಿ ಹಾಗೂ $61^0$ ಪ. ರೇ. ದಲ್ಲಿ ಕಂಡುಬರುತ್ತವೆ. ಈ ಎರಡೂ ದ್ವೀಪಗಳು ಆಂಟಿಲಿ ಎಂಬ ಚಿಕ್ಕ ದ್ವೀಪ ಸಮೂಹದ ಭಾಗಗಳಾಗಿವೆ. ಈ ದ್ವೀಪ ಸಮೂಹದ ಉತ್ತರದ ಭಾಗದಲ್ಲಿ ಗುಡಿಲೋಪ್ ದ್ವೀಪ ಸಮೂಹ, ಈಶಾನ್ಯದಲ್ಲಿ ಮಾಂಟ್‌ಸಿರಟ್ ದ್ವೀಪಗಳು, ಪಶ್ಚಿಮದಲ್ಲಿ ಸೈಂಟ್‌ಕಿಟ್ಸ್ ಮತ್ತು ನೆವಿಸ್, ಆಗ್ನೇಯದಲ್ಲಿ ಸೈಂಟ್ ಬರ್ತೆಲಿಮೆ ಮತ್ತು ಸೈಂಟ್ ಮಾರ್ಟಿನ್ ದ್ವೀಪ ಸಮೂಹಗಳು ಹಂಚಿಕೆಯಾಗಿವೆ.




ಹಿಂದೆ ಅಮೆರಿಕನ್ ಇಂಡಿಯನ್ನರು ವಾಸಿಸುತ್ತಿದ್ದರು. ಇವರೇ ಅಲ್ಲಿನ ಮೂಲ ನಿವಾಸಿಗಳು. ಆನಂತರ ಅರವಾಕ್ ಮತ್ತು ಕೆರಿಬ್ ಅಮೇರಿ ಇಂಡಿಯನ್ಸ್ ಆದಿವಾಸಿಗಳು ಕೆಲವು ದ್ವೀಪಗಳಲ್ಲಿ ವಾಸಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಆಂಟಿಗುವ ದ್ವೀಪವನ್ನು ಈ ಆದಿವಾಸಿಗಳು ವಡಾಡ್ಲಿ ಎಂದು ಕರೆಯುತ್ತಿದ್ದರು. 1493 ರಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಎರಡನೆಯ ಬಾರಿಗೆ ಈ ದ್ವೀಪಕ್ಕೆ ಕಾಲಿಟ್ಟಾಗ ಈ ದ್ವೀಪವನ್ನು ಆಂಟಿಗುವ ಎಂದು ಕರೆದನು.

ಆಂಟಿಗುವ ಮತ್ತು ಬಾರ್ಬುಡವು ಹಲವಾರು ದ್ವೀಪಗಳನ್ನು ಒಳಗೊಂಡಿದೆ. ಆಂಟಿಗುವ ಅತಿದೊಡ್ಡ ದ್ವೀಪ ಹಾಗೂ ಜನಭರಿತವಾಗಿದೆ. ಬಾರ್ಬುಡ ಆಂಟಿಗುವದ ಉತ್ತರ ಭಾಗದಲ್ಲಿರುವ ಮತ್ತೊಂದು ಮುಖ್ಯ ದ್ವೀಪ. ಆಂಟಿಗುವ ಮತ್ತು ಬಾರ್ಬುಡ ದ್ವೀಪ ಸಮೂಹವು ಸಮುದ್ರ ಮಟ್ಟದಿಂದ 250 ಮೀ. ಎತ್ತರದಲ್ಲಿದೆ. ಈ ಭಾಗದ ಅತ್ಯಂತ ಎತ್ತರವಾದ ಪರ್ವತ ಬೊಗಿ ಶಿಖರವು 402 ಮೀ. ಎತ್ತರವಾಗಿದೆ. ವಿಸ್ತೀರ್ಣ 442 ಚ.ಕಿಮೀ. ಜನಸಂಖ್ಯೆ 82,786 (2005).

ಈ ದ್ವೀಪಗಳು ಉಷ್ಣವಲಯದ ವಾಯುಗುಣವನ್ನು ಹೊಂದಿವೆ. ತೇವ ಹಾಗೂ ಶುಷ್ಕ ಹವಾಮಾನವು ವರ್ಷಪೂರ್ತಿ ಇರುತ್ತದೆ.

ಈ ರಾಷ್ಟ್ರದ ಪ್ರಮುಖ ನಗರ ಹಾಗೂ ರಾಜಧಾನಿ ಸೇಂಟ್‌ಜಾನ್ಸ್ ಆಂಟಿಗುವ ದ್ವೀಪದಲ್ಲಿದೆ. ಬಾರ್ಬುಡ ದ್ವೀಪದ ಅತಿದೊಡ್ಡ ನಗರ ಕಾರ್ಡಿಂಗ್‌ಟನ್. ರಿಡೊಂಡ ದ್ವೀಪವನ್ನು 1860ರಲ್ಲಿ ಆಂಟಿಗುವ ಮತ್ತು ಬಾರ್ಬುಡಗಳಿಗೆ ಸೇರಿಸಲಾಗಿತ್ತಾದರೂ, ಆ ದ್ವೀಪವನ್ನು ಸ್ವಾಧೀನಕ್ಕೆ ತೆಗೆದುಕೊಂಡಿರಲಿಲ್ಲ – ಈ ದ್ವೀಪವು ಒಳ್ಳೆಯ ಗುಣಮಟ್ಟದ ಪಾಸ್ಫೇಟ್ ನಿಕ್ಷೇಪವನ್ನು ಹೊಂದಿದೆ. ಈ ದ್ವೀಪಗಳು 1981 ರ ನವೆಂಬರ್‌ನಲ್ಲಿ ಸ್ವಾತಂತ್ರ್ಯವನ್ನು ಪಡೆದವು.

ಆರ್ಥಿಕತೆ: ರಾಷ್ಟ್ರದ ಶೇ. 50 ರಷ್ಟು ರಾಷ್ಟ್ರೀಯ ಆದಾಯವು ಪ್ರವಾಸೋದ್ಯಮದಿಂದ ಬರುತ್ತಿದೆ. 2000ದ ನಂತರ ಪ್ರವಾಸಿಗರ ಸಂಖ್ಯೆ ಇಳಿಮುಖವಾಗುತ್ತಿರುವುದರಿಂದ ಪ್ರವಾಸೋದ್ಯಮ ಇಲಾಖೆಯು ತೀವ್ರ ನಷ್ಟವನ್ನು ಅನುಭವಿಸುವಂತಾಗಿದೆ.

ಇಲ್ಲಿನ ಕೃಷಿಯು ರಾಷ್ಟ್ರದ ಆಂತರಿಕ ಮಾರುಕಟ್ಟೆಯ ಬೇಡಿಕೆಯನ್ನು ಅವಲಂಬಿಸಿದೆ. ಕೃಷಿ ಉತ್ಪನ್ನಗಳು ಅಲ್ಲಿ ಲಭ್ಯವಿರುವ ಅಲ್ಪ ನೀರಾವರಿಯನ್ನು ಆಧರಿಸಿರುವುದರ ಜೊತೆಗೆ ಕೃಷಿ ಕಾರ್ಮಿಕರ ಅಭಾವವೂ ಹೆಚ್ಚಾಗಿದೆ.

ಕೂಲಿ ಕಾರ್ಮಿಕರಿಗೆ ಪ್ರವಾಸೋದ್ಯಮ ಇಲಾಖೆಯಲ್ಲಿ ಹೆಚ್ಚಿನ ಹಣ ಲಭ್ಯವಾಗುವುದರಿಂದ ಕೃಷಿಯು ಅವಸಾನಗೊಳ್ಳುತ್ತಿದೆ. ಕಾರ್ಮಿಕರಿಗೆ ಹಣಕಾಸಿನ ವ್ಯವಸ್ಥೆ ಹಾಗೂ ಭದ್ರತೆಯನ್ನು ಪ್ರವಾಸೋದ್ಯಮ ಇಲಾಖೆ ನೀಡುತ್ತಿದೆ. ಸಕ್ಕರೆ ಮತ್ತು ಹತ್ತಿ ಪ್ರಮುಖ ಅಂತಾರಾಷ್ಟ್ರೀಯ ರಫ್ತು ಪದಾರ್ಥಗಳು.

ಜನ–ಸಮಾಜ–ಭಾಷೆ: ಈ ರಾಷ್ಟ್ರದ ಜನರು ಹಿಂದಿನ ಗುಲಾಮ ಸಂತತಿಗೆ ಸೇರಿದವರು, ಇವರೊಂದಿಗೆ ಯುರೋಪಿಯನ್, ಐರಿಷ್, ಬ್ರಿಟಿಷ್ ಮತ್ತು ಪೋರ್ಚುಗೀಸರು ಸೇರಿದ್ದಾರೆ.

ಈ ದ್ವೀಪ ರಾಷ್ಟ್ರದ ಆಡಳಿತ ಭಾಷೆ ಇಂಗ್ಲಿಷ್ ಸ್ಥಳೀಯವಾಗಿ ಜನ ಪಟೊಯಿಸ್ ಎಂಬ ಕ್ರಿಯೋಲಿ ಮೂಲದ ಇಂಗ್ಲಿಷ್ ಮಾತನಾಡುತ್ತಾರೆ.

ಕ್ರೀಡೆ: ಕ್ರಿಕೆಟ್ ಬಹು ಜನಪ್ರಿಯವಾದ ಕ್ರೀಡೆ. 2007ರಲ್ಲಿ ವೆಸ್ಟ್‌ಇಂಡೀಸ್‌ನಲ್ಲಿ (ಪ್ರಾಯೋಜಕತ್ವ) ನಡೆದ ವಿಶ್ವಕಪ್ ಕ್ರಿಕೆಟ್ (11 ಮಾರ್ಚ್ – 28 ಏಪ್ರಿಲ್ 2007) ನ ಕೆಲವು ಪಂದ್ಯಗಳು ಆಂಟಿಗುವದಲ್ಲಿ ನಿರ್ಮಿಸಿರುವ ಸರ್ ವಿವಿಯನ್ ರಿಚರ್ಡ್ಸ್ ಆಟದ ಮೈದಾನದಲ್ಲಿ ನಡೆಸಲಾಯಿತು. ಈ ಮೈದಾನದಲ್ಲಿ 20,000 ವೀಕ್ಷಕರಿಗೆ ಸ್ಥಳಾವಕಾಶ ವಿದೆ. ಫುಟ್‌ಬಾಲ್ ಜನಪ್ರಿಯ ಕ್ರೀಡೆ, ರಾಷ್ಟ್ರೀಯ ಪಂದ್ಯಗಳನ್ನು ಆಡಿಸಲಾಗುತ್ತಿದೆ.

ಅಂತಾರಾಷ್ಟ್ರೀಯ ಸಂಬಂಧಗಳು: ಆಂಟಿಗುವ ಮತ್ತು ಬಾರ್ಬುಡ ಕೆರಿಬಿಯನ್ ಕಾಮನ್‌ವೆಲ್ತ್, ಯುನೈಟೆಡ್ ನೇಷನ್ಸ್, ಡಬ್ಲ್ಯೂ.ಟಿ.ಸಿ, ಕಾಮನ್‌ವೆಲ್ತ್ ಆಫ್ ನೇಷನ್ಸ್, ಆರ್ಗನೈಸೇಶನ್ ಆಫ್ ಅಮೇರಿಕನ್ ಸ್ಟೇಟ್ಸ್, ಆರ್ಗನೈಸೇಷನ್ ಆಫ್ ಈಸ್ಟರ್ನ್ ಕೆರಬಿಯನ್ ಸ್ಟೇಟ್ಸ್ ಮತ್ತು ಕೆರಬಿಯನ್ ರೀಜಿನಲ್ ಸೆಕ್ಯೂರಿಟಿ ಸಿಸ್ಟಮ್ ಮೊದಲಾದ ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿದೆ. (ವಿ.ಎಸ್.ಎ.)

**ಆಂಟಿಮನಿ:** ಇದು ಲೋಹ ಖನಿಜ. ಇದರ ಬಣ್ಣ ಬಿಳಿ ಹಾಗೂ ಪ್ರಕಾಶಿತವಾಗಿರುತ್ತದೆ. ಕಠಿಣ, ಹರಳು ರಚನೆ, ಗುಣವುಳ್ಳದ್ದು, ಇದನ್ನು ಉರಿ ಬರದಂತಿರಲು ಬಳಸಲಾಗುವುದು. ರಾಸಾಯನಿಕ ಸಿರಾಮಿಕ್, ಮೆರಗು ಕೂಡಲು, ಸಿಡಿಮದ್ದು ತಯಾರಿಕೆ, ಔಷಧ, ಲೋಹಗಳನ್ನು ಗಟ್ಟಿಯಾಗಿಸಲು ಬಳಸಲಾಗುವುದು ಆದ್ದರಿಂದ ಇದನ್ನು ರಬ್ಬರ್ ಕೈಗಾರಿಕೆಯಲ್ಲಿ ವಲ್ಕನೈಸ ಮಾಡಲು, ಜವಳಿ ಕೈಗಾರಿಕೆಯಲ್ಲಿ ಬಟ್ಟೆಗಳಿಗೆ ಬಣ್ಣ ಹಾಕಲು ಮತ್ತು ಗಾಜು ಕೈಗಾರಿಕೆಯಲ್ಲಿ ಬಳಸಲಾಗುವುದು. ಇದು ವಿಶೇಷವಾಗಿ ಅ.ಸಂ.ಸ ಮೆಕ್ಸಿಕೊ, ಬೊಲಿವಿಯ, ಸರ್ಬಿಯ, ಮೆಸಿಡೊನಿಯ, ಟರ್ಕಿ, ಆಲ್ಜೀರಿಯ, ಮೊರಾಕ್ಕೊ, ದಕ್ಷಿಣ ಆಫ್ರಿಕ ಮತ್ತು ಚೀನ ದೇಶಗಳಲ್ಲಿ ದೊರೆಯುತ್ತದೆ. (ಬಿ.ಸಿ.ಕೆ.)

**ಆಂಟೇರಿಯೊ[1]:** ಇದು ಉತ್ತರ ಅಮೆರಿಕ ಖಂಡದಲ್ಲಿರುವ ಸಿಹಿ ನೀರಿನ ಸರೋವರ. ಇದನ್ನು ಮೊದಲು ನೋಡಿದವನು ಎಟಿನೆ ಬ್ರೂಲ್ (1615). ಇದು ಪಂಚಮಹಾ ಸರೋವರಗಳಲ್ಲೊಂದು. ಅತ್ಯಂತ ಚಿಕ್ಕದಾದರೂ ಆಳದಲ್ಲಿ ಪ್ರಪಂಚದ 3 ನೆಯ ಸ್ಥಾನ ಪಡೆದಿದೆ. 309 ಕಿಮೀ ಉದ್ದ ಮತ್ತು 85 ಕಿಮೀ ಅಗಲವಾಗಿದೆ. ವಿಸ್ತೀರ್ಣ 19477 ಚ.ಕಿಮೀ. ಸಮುದ್ರಮಟ್ಟದಿಂದ 73.87 ಮೀ ಎತ್ತರದಲ್ಲಿದೆ. ಅತ್ಯಂತ ಆಳವಾದ ಭಾಗ

233.6 ಮೀ ಅಂದರೆ ಸಮುದ್ರಮಟ್ಟಕ್ಕಿಂತ 159.75 ಮೀ ಆಳ. ಜಲಾನಯನ ಕ್ಷೇತ್ರ ಸು. 90,132 ಚ.ಕಿಮೀ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸರಾಸರಿ 75 ಸೆಂಮೀ ಮಳೆಯಾಗುವುದು.

ಇದು ನ್ಯೂಯಾರ್ಕ್ ಮತ್ತು ಆಂಟೆರಿಯೊ ಪ್ರಾಂತ್ಯಗಳ ಮಧ್ಯೆ ಇದೆ. ಉತ್ತರಕ್ಕೆ ಹೋದಂತೆಲ್ಲ ಎತ್ತರ ಹೆಚ್ಚಾಗಿ ಮೈದಾನ ವಿಶಾಲವಾಗುತ್ತದೆ. ದಕ್ಷಿಣದಲ್ಲಿ ಸು. 13 ಕಿಮೀ ದೂರದಲ್ಲಿ ನಯಾಗರ ಗುಡ್ಡವಿದೆ. ಈ ಭಾಗದಲ್ಲಿ ವಿಶೇಷವಾಗಿ ಹಣ್ಣು ಬೆಳೆಯುತ್ತಾರೆ. ಈ ಸರೋವರಕ್ಕೆ ನಯಾಗರ, ಜಿನಿಸೀ, ಅಸ್‌ವಿಗೊ, ಬ್ಲಾಕ್ ಮತ್ತು ಟ್ರೆಂಟ್ ಎಂಬ ನದಿಗಳು ಬಂದು ಸೇರುತ್ತವೆ. ಈರಿ ಮತ್ತು ಆಂಟೆರಿಯೊ ಸರೋವರಗಳನ್ನು 43 ಕಿಮೀ ಉದ್ದವಿರುವ ವೆಲ್ಲ್ಯಂಡ್ ಕಾಲುವೆ ಸೇರಿಸಿದೆ. ಸರೋವರಕ್ಕೂ ಸೇಂಟ್ ಲಾರೆನ್ಸ್ ನದಿಗೂ ಸಂಪರ್ಕವಿರುವುದರಿಂದ ಹೆಚ್ಚಾಗಿ ಬಂದ ನೀರು ಆ ನದಿಯ ಮೂಲಕ ಹಾದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ.

ಈ ಸರೋವರದಲ್ಲಿ ದ್ವೀಪಗಳಿಲ್ಲ. ಸರೋವರದ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟುವುದಿಲ್ಲವಾದರೂ ದಡದಲ್ಲಿರುವ ರೇವುಪಟ್ಟಣಗಳಲ್ಲಿ ಹೆಪ್ಪುಗಟ್ಟುತ್ತದೆ. ಇದರ ದಡದಲ್ಲಿರುವ ಮುಖ್ಯವಾದ ರೇವುಪಟ್ಟಣಗಳು : ಕಿಂಗ್‌ಸ್ಟನ್, ಟೊರಾಂಟೊ, ಹ್ಯಾಮಿಲ್ಟನ್. ಜಲಮಾರ್ಗದಿಂದ ವಸ್ತುಸಾಗಾಣಿಕೆ ಅಷ್ಟು ಹೆಚ್ಚಾಗಿಲ್ಲ. ಕಲ್ಲಿದ್ದಲನ್ನು ಹೆಚ್ಚಾಗಿ ಸಾಗಿಸುವರು. (ಎಸ್.ಎನ್.)

**ಆಂಟೆರಿಯೊ$^{2}$:** ಕೆನಡದ ಒಂದು ಮುಖ್ಯ ಪ್ರಾಂತ್ಯ. ವಿಸ್ತೀರ್ಣದಲ್ಲಿ ಎರಡನೆಯದು. ಪೂರ್ವದಲ್ಲಿ ಕ್ವಿಬೆಕ್, ಪಶ್ಚಿಮದಲ್ಲಿ ಮಾನಿಟೊಬ, ದಕ್ಷಿಣದಲ್ಲಿ ನ್ಯೂಯಾರ್ಕ್, ಓಹಿಯೋ ಮತ್ತು ಮಿಷಿಗನ್, ಉತ್ತರದಲ್ಲಿ ಹಡ್ಸನ್ ಮತ್ತು ಜೇಮ್ಸ್ ಕೊಲ್ಲಿಗಳಿವೆ. $42^{0}$ –$57^{0}$ ಉತ್ತರ ಅಕ್ಷಾಂಶ $70^{0}30'$ ಯಿಂದ $95^{0}$ ಪಶ್ಚಿಮ ರೇಖಾಂಶ. ವಿಸ್ತೀರ್ಣ 10,68,587 ಚ.ಕಿಮೀ. ದಕ್ಷಿಣೋತ್ತರದ ಉದ್ದ ಸು. 1680 ಕಿಮೀ. ಪೂರ್ವ ಪಶ್ಚಿಮದ ಅಗಲ ಸು. 1600 ಕಿಮೀ. ಸ್ವಾಭಾವಿಕ ಸಸ್ಯವರ್ಗ ಚೆನ್ನಾಗಿದ್ದು ವನ್ಯಸಂಪತ್ತು ಹೇರಳವಾಗಿದೆ. ವ್ಯವಸಾಯ ತುಂಬ ಪ್ರಗತಿ ಹೊಂದಿದೆ. ಜನಸಂಖ್ಯೆ 1,28,61,840 (2007).

ಚಿನ್ನ, ನಿಕ್ಕಲ್, ತಾಮ್ರ, ಕಬ್ಬಿಣ, ಕೊಬಾಲ್ಟ್, ಯುರೇನಿಯಂ, ಬೆಳ್ಳಿ, ಪೆಟ್ರೋಲಿಯಂ, ಗಂಧಕ ಮುಂತಾದ ಖನಿಜಗಳು ಹೇರಳವಾಗಿ ದೊರೆಯುವುದರಿಂದ ಈ ಪ್ರಾಂತ್ಯ ಕೈಗಾರಿಕೆಯಲ್ಲಿ ತುಂಬ ಪ್ರಗತಿಯನ್ನು ಹೊಂದಿದೆ. ಇಲ್ಲಿನ ಸಂಚಾರ ಮಾರ್ಗದ ವ್ಯವಸ್ಥೆ ಉತ್ತಮವಾಗಿದೆ. (ಪಿ.ಜಿ.)

**ಆಂಟ್‌ವರ್ಪ್:** ಬೆಲ್ಜಿಯಮ್ಮಿನ ಎರಡನೆಯ ದೊಡ್ಡ ನಗರ. ಉತ್ತರ ಸಮುದ್ರದಿಂದ 88 ಕಿಮೀ ದೂರದಲ್ಲಿ ದೊಡ್ಡ ಮೆಕ್ಕಲು ಮಣ್ಣಿನ ಸಮತಲ ಪ್ರದೇಶದಲ್ಲಿದೆ. ಜನಸಂಖ್ಯೆ 446500 (2000) ಶೆಲ್ಡ್ ನದಿಯ ಇಕ್ಕೆಲಗಳಲ್ಲೂ ವ್ಯಾಪಿಸಿದ್ದು ಬೆಲ್ಜಿಯಮ್ ಮುಖ್ಯ ಬಂದರು ಹಾಗೂ ಮುಖ್ಯ ವಾಣಿಜ್ಯ ಕೇಂದ್ರವಾಗಿದೆ. ಪಟ್ಟಣದ ಎರಡು ಭಾಗಗಳಿಗೂ ಸುರಂಗಸಂಪರ್ಕವಿದೆ. ವ್ಯಾಪಕವಾದ ಇಲ್ಲಿನ ರೈಲು ಮತ್ತು ಜಲಮಾರ್ಗಗಳು ಫ್ರಾನ್ಸ್, ರೈನ್‌ಲ್ಯಂಡ್, ಮತ್ತು ಬೆಲ್ಜಿಯಮ್‌ಗಳ ವ್ಯಾಪಾರಕ್ಕೆ ಅನುಕೂಲವಾಗಿವೆ. ರಾಸಾಯನಿಕ ವಸ್ತುಗಳು, ಕಾರುಗಳು, ಹಡಗು ಕಟ್ಟುವಿಕೆ, ಸಕ್ಕರೆ, ಎಣ್ಣೆ ಶುದ್ಧೀಕರಣ ಇವೇ ಮುಂತಾದವು ಇಲ್ಲಿನ ಮುಖ್ಯ ಕೈಗಾರಿಕೆಗಳು. ವಜ್ರ ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಇದು ಪ್ರಪಂಚದ ಪ್ರಮುಖ ಕೇಂದ್ರವಾಗಿದೆ. ಇಲ್ಲಿನ ಪ್ರಾಚೀನ ಕಲೆ ಮತ್ತು ವಸ್ತುಸಂಗ್ರಹಾಲಯಗಳು ಬಹುಕಾಲದಿಂದ ಪ್ರಸಿದ್ಧವಾಗಿವೆ. (ಪಿ.ಡಿ.ಎಂ.)

**ಆಂಡೀಸ್:** ಈ ಬೃಹತ್ ಪರ್ವತವನ್ನು ಸ್ಪ್ಯಾನಿಷ್ ಭಾಷೆಯಲ್ಲಿ ಕಾರ್ಡಿಲ್ಲೆರಾ ಡಿ ಲಾಸ್ ಆಂಡೀಸ್ ಎಂದು ಕರೆಯುತ್ತಾರೆ. ಪನಾಮಾ ಜಲಸಂಧಿಯಿಂದ ಟೆರಾ ಡೆಲ್ ಫ್ಯೂಗೊವರೆಗೆ ದಕ್ಷಿಣ ಅಮೆರಿಕದ ಪಶ್ಚಿಮತೀರದಲ್ಲಿ ಸು. 6400 ಕಿಮೀ ಹಬ್ಬಿದೆ. ಎತ್ತರದಲ್ಲಿ ಇದು ಹಿಮಾಲಯಕ್ಕೆ ಎರಡನೆಯದು. ಅಕಾಂಕಾಗ್ವ ಶಿಖರ (6857 ಮೀ) ಪಶ್ಚಿಮಾರ್ಧಗೋಳದಲ್ಲೇ ಅತಿ ದೊಡ್ಡ ಶಿಖರವೆನಿಸಿಕೊಂಡಿದ್ದು ಈಚಿನ ಶೋಧನೆಗಳಿಂದ ಆ ಕೀರ್ತಿ ಓಜೋಸ್ ಡಿ ಸಲ್ಯಾಡೊ ಶಿಖರಕ್ಕೆ ಸಂದಿದೆ. ಈ ಪರ್ವತದಲ್ಲಿ ಚಿಂಬೊರೋಸೊ, ಇಲ್ಲಾಂಪು, ಈಯೇಮಾನೀ ಮುಂತಾದ ಅಗ್ನಿ ಪರ್ವತಗಳಿವೆ. ಇವೆಲ್ಲವೂ ಸಮುದ್ರಮಟ್ಟದಿಂದ 6000 ಮೀಗೂ ಹೆಚ್ಚು ಎತ್ತರದಲ್ಲಿವೆ. ಪರ್ವತಶ್ರೇಣಿಗಳ ಮಧ್ಯೆ ಬೊಲಿವಿಯದಲ್ಲಿ ಆಲ್ಟಿಪ್ಲಾನೊ ಪ್ರಸ್ಥಭೂಮಿಯಿದೆ. ಪೆರು, ಈಕ್ವೆಡಾರ್ ಮತ್ತು ಕೊಲಂಬಿಯಗಳಲ್ಲಿ ಆಂಡೀಸ್‌ನ ಎರಡು ಮೂರು ಸಮಾನಾಂತರ ಶ್ರೇಣಿಗಳು ಆಳವಾದ ನದೀ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿವೆ. ಈ ಪರ್ವತದ ಅಗಾಧವಾದ ಮೇಲ್ಮೈಲಕ್ಷಣದಿಂದ ಪೂರ್ವ–ಪಶ್ಚಿಮ ಪ್ರದೇಶಗಳ ಸಂಪರ್ಕ ಕಷ್ಟಕರವಾಗಿದೆ. ದಕ್ಷಿಣದಲ್ಲಿ ಮಾತ್ರ ಅರ್ಜೆಂಟೈನದಿಂದ ಚಿಲಿಗೆ ಪರ್ವತದ ಮುಖಾಂತರ ಒಂದು ರೈಲುಮಾರ್ಗ ಹಾದುಹೋಗುವುದು. 16ನೆಯ ಶತಮಾನದಲ್ಲಿ ಆಂಡೀಸ್ ಪರ್ವತದ ಖನಿಜ ಸಂಪತ್ತು ಸ್ಪೇನಿನವರನ್ನು ಆಕರ್ಷಿಸಿತು. ಇಂದು ಈ ಪರ್ವತಭಾಗದಿಂದ ತಾಮ್ರ, ಸೀಸ, ತವರ, ಪ್ಲಾಟಿನಂ ಮತ್ತು ಬೆಳ್ಳಿ ಅಧಿಕ ಪ್ರಮಾಣದಲ್ಲಿ ರಫ್ತಾಗುತ್ತವೆ. ಆಂಡೀಸ್ ಗಣರಾಜ್ಯಗಳಲ್ಲಿ ಸೀರಾಡಿವಾಸ್ಕೊ, ಪೊಟೋಸಿ, ಚುಕ್ವಿಕಾಮಟಾ ಗಣಿಗಳು ಮುಖ್ಯವಾದುವು. ಲಾಪಾಚ್ (3600 ಮೀ), ಕ್ವಿಟೊ (2823 ಮೀ) ಮುಖ್ಯಪಟ್ಟಣಗಳು. ಟಿಟಿಕಾಕ ಸರೋವರ (3750 ಮೀ) ನೌಕಾಯಾನಕ್ಕೆ ಉಪಯುಕ್ತವಾಗಿದೆ. ಇಂಕ ನಾಗರಿಕತೆಗೆ ಪ್ರಸಿದ್ಧಿ ಪಡೆದ ಪೆರುವಿನ ಆಂಡೀಸ್, ಅರ್ಜೆಂಟೈನ, ಚಿಲಿಗಳ ಆಂಡೀಸ್

ಆಂಡೀಸ್ ಪರ್ವತಗಳು, ಪುಂಟಾ, ಚಿಲಿ

ಪರ್ವತ ಪ್ರದೇಶದ ಸುಂದರ ಪ್ರಕೃತಿ ದೃಶ್ಯಗಳು ಅಧಿಕ ಸಂಖ್ಯೆಯ ಪ್ರವಾಸಿಗರನ್ನು ಆಕರ್ಷಿಸುತ್ತವೆ. (ಎಂ.ಎಸ್.)

**ಆಂಡೊರ:** ಯುರೋಪಿನ ಈಶಾನ್ಯದ ಪೂರ್ವ ಪಿರನೀಸ್ ಪರ್ವತ ಕಣಿವೆಯಲ್ಲಿ 464 ಚ.ಕಿಮೀ ಭೌಗೋಳಿಕ ಸುತ್ತಳತೆಯನ್ನು ಹೊಂದಿರುವ ಸಣ್ಣ ರಾಷ್ಟ್ರ. ಇದು 1278 ರಲ್ಲಿ ಅಸ್ತಿತ್ವದಲ್ಲಿತ್ತು ಎಂದು ಪುರಾತತ್ತ್ವ ದಾಖಲೆಗಳಿಂದ ತಿಳಿದು ಬರುತ್ತದೆ. ಇದರ ರಾಜಧಾನಿ ಆಂಡೊರ ಲಾ ವೆಲ್ಲ. ಜನಸಂಖ್ಯೆ 22390 (2000). ಫ್ರಾನ್ಸ್ ಹಾಗೂ ಸ್ಪೇನ್ ದೇಶಗಳ ಜೊತೆ ಆಂಡೊರ ತನ್ನ ಗಡಿಗಳನ್ನು ಹಂಚಿಕೊಂಡಿದೆ. ಬಾರ್ಸಿಲೋನ ಮತ್ತು ಟೊಲೋಸ್ ನಡುವಿನ ಪ್ರದೇಶವೆ ಆಂಡೊರ.

ಇದು $42^{0}30'$ ಉತ್ತರ ಅಕ್ಷಾಂಶ ಹಾಗೂ $1^{0}31'$ ಪೂರ್ವ ರೇಖಾಂಶದಲ್ಲಿ ಇದೆ. ಗಿರಿಕಣಿವೆಗಳಿಂದ ಕೂಡಿರುವ ಈ ಪುಟ್ಟರಾಷ್ಟ್ರದ ಮೇಲ್ಮೈ ಲಕ್ಷಣ, ಸರಾಸರಿ 1996 ಮೀ ಎತ್ತರವನ್ನು ಹೊಂದಿದೆ. ಅತ್ಯಂತ ಎತ್ತರ ಶಿಖರ ಕೋಮಾ ಪಿಡ್ರಸ್ 2946 ಮೀ. ಆಂಡೊರ ಪರ್ವತ 3 ಕಣಿವೆಗಳಾಗಿ – ಆಂಗ್ಲ ಅಕ್ಷರದ ವೈ ಆಕಾರದಲ್ಲಿ ಕಾಣುತ್ತದೆ. ಇಲ್ಲಿನ ಪ್ರಮುಖ ನದಿ ವಲೀರ. ಈ ಪ್ರದೇಶದಲ್ಲಿ ಉಗಮವಾಗಿ ಫ್ರಾನ್ಸ್ ದೇಶದ ಕಡೆಗೆ ಹರಿಯುತ್ತದೆ. ಈ ನದಿಯ ಕಣಿವೆಯ ಭಾಗ 870 ಮೀ, ಇದು ಆಂಡೊರದ ಅತಿ ತಗ್ಗಾದ ಪ್ರದೇಶವಾಗಿದೆ.




ವಾಯುಗುಣ: ಸಮಶೀತೋಷ್ಣ ವಾಯುಗುಣವನ್ನು ಹೊಂದಿರುವ, ಈ ದೇಶದ ವಾಯುಗುಣದ ಮೇಲೆ ಮೇಲ್ಮೈ ಲಕ್ಷಣಗಳ ಪ್ರಭಾವ ಸ್ವಲ್ಪಮಟ್ಟಿಗೆ ಕಂಡುಬರುತ್ತದೆ. ಪರ್ವತಗಳು ಸದಾ ಹಿಮದಿಂದ ಆವೃತವಾಗಿದ್ದು, ಬೇಸಗೆಯಲ್ಲಿ ತಂಪಾದ ಹವಾಮಾನವನ್ನು ಹೊಂದಿರುತ್ತವೆ.

ಆರ್ಥಿಕತೆ: ಆಂಡೊರ ಅರ್ಥಿಕವಾಗಿ ತೀರಾ ಹಿಂದುಳಿದ ರಾಷ್ಟ್ರವಾಗಿತ್ತು. ಇತ್ತೀಚಿನ ದಿನಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸಿಕೊಂಡ ಪರಿಣಾಮವಾಗಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುತ್ತಿದೆ. ಈ ರಾಷ್ಟ್ರವು ಟ್ಯಾಕ್ಸ್ ಹೆವೆನ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ರಾಷ್ಟ್ರದ ಶೇ. 80 ಭಾಗ ಆದಾಯ ಪ್ರವಾಸೋದ್ಯಮದಿಂದ ಪೂರೈಕೆಯಾಗುತ್ತಿದೆ. ಪ್ರತಿ ವರ್ಷ 9 ಮಿ. ಪ್ರವಾಸಿಗಳು ಈ ರಾಷ್ಟ್ರದಲ್ಲಿ ಪ್ರವಾಸ ಕೈಗೊಳ್ಳುತ್ತಾರೆ.

ಆಂಡೊರದ ತೆರಿಗೆ ಮುಕ್ತ ಧೋರಣೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿನ ಪ್ರವಾಸೋದ್ಯಮ ಇಲಾಖೆಯು ಪ್ರವಾಸಿಗರಿಗೆ ಬೇಸಗೆ ಮತ್ತು ಚಳಿಗಾಲಕ್ಕೆ ಹೊಂದಿಕೆಯಾಗುವ ವಸತಿಗಳನ್ನು (ರೆಸಾರ್ಟ್) ಸ್ಥಾಪಿಸಿದೆ.

ಬ್ಯಾಂಕಿಂಗ್ ಕ್ಷೇತ್ರವು ಹಲವಾರು ಸುಧಾರಣೆಗಳನ್ನು ತಂದಿದೆ. ತೆರಿಗೆ ಮುಕ್ತಧೋರಣೆಯಿಂದ ಆಂಡೊರ ಆರ್ಥಿಕ ಅಭಿವೃದ್ಧಿಯ ಕಡೆ ಸಾಗುತ್ತಿದೆ. ಕೃಷಿಗೆ ಲಭ್ಯವಿರುವ ಭೂಮಿ ಶೇ. 2 ರಷ್ಟು ಮಾತ್ರ. ಆಹಾರ ಪದಾರ್ಥಗಳನ್ನು ಆಮದು ಮೂಲಕ ಪೂರೈಸಿಕೊಳ್ಳುತ್ತದೆ. ಇಲ್ಲಿನ ಪ್ರಮುಖ ಉತ್ಪನ್ನಗಳೆಂದರೆ – ಸಿಗರೇಟ್, ಸಿಗಾರ್ ಮತ್ತು ಪಿಠೋಪಕರಣಗಳು.

ಆಂಡೊರ ಯೂರೋಪಿಯನ್ ಒಕ್ಕೂಟದ ಸಂಪೂರ್ಣ ಸದಸ್ಯ ರಾಷ್ಟ್ರವಾಗಿಲ್ಲ. ಆದರೂ ಸದಸ್ಯ ರಾಷ್ಟ್ರಗಳ ಜೊತೆ ಆಂಡೊರ ಹೊಂದಿರುವ ವಿಶೇಷ ಸಂಬಂಧಗಳಿಂದ ಈ ರಾಷ್ಟ್ರಕ್ಕೆ ಸಂಪೂರ್ಣ ಸದಸ್ಯ ರಾಷ್ಟ್ರದಂತಹ ಸ್ಥಾನಮಾನಗಳನ್ನು ನೀಡಲಾಗಿದೆ. ಒಕ್ಕೂಟ ರಾಷ್ಟ್ರಗಳ ಜೊತೆ ವಾಣಿಜ್ಯ ವ್ಯಾಪಾರಗಳಲ್ಲಿ ಯಾವುದೇ ಸುಂಕದ ಗಣನೆಯಿರುವುದಿಲ್ಲ. ಆದರೆ ಕೃಷಿ ಉತ್ಪನ್ನಗಳಿಗೆ ತೆರಿಗೆಯನ್ನು ನೀಡಬೇಕಾಗುತ್ತದೆ.

ಆಂಡೊರ ತನ್ನದೇ ಆದ ಹಣ (ಕರೆನ್ಸಿ) ಹೊಂದಿಲ್ಲ, ಬದಲಿಗೆ ಫ್ರಾನ್ಸನ (ಫ್ರಾಂಕ್) ಮತ್ತು ಸ್ಪೇನ್‌ನ (ಪೆಸಿಟ) ಕರೆನ್ಸಿಯನ್ನು 1999 ವರೆಗೂ ಬಳಸುತ್ತಿತ್ತು. 1999 ರಲ್ಲಿ ಎರಡೂ ಕರೆನ್ಸಿಗಳನ್ನು ಒಟ್ಟುಗೂಡಿಸಿ ಯೂರೊ ಕರೆನ್ಸಿಯನ್ನು ಚಲಾವಣೆಗೆ ತಂದಿತು.

ಸಮಾಜ – ಜನಸಂಖ್ಯೆ – ಭಾಷೆ – ಸಂಸ್ಕೃತಿ: ವಿಶ್ವದಲ್ಲಿಯೇ ಆಂಡೊರ ಜನರು ದೀರ್ಘಾಯುಶಿಗಳು (83.52 ವರ್ಷ ಸರಾಸರಿ) ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿನ ಮೂಲ ನಿವಾಸಿಗಳ ಸಂಖ್ಯೆ ಶೇ. 33. ಈ ದೇಶದ ನಿವಾಸಿಗಳು ಅನ್ಯರಾಷ್ಟ್ರೀಯರು. ಇವರಲ್ಲಿ ಸ್ಪೇನ್ ಮೂಲದವರು ಶೇ. 43, ಪೋರ್ಚುಗೀಸ್ ಶೇ. 11 ಮತ್ತು ಫ್ರೆಂಚ್ ಮೂಲದವರು ಶೇ. 7 ರಷ್ಟು. ಉಳಿದ ಶೇ. 6 ಇತರೆ ರಾಷ್ಟ್ರಗಳಿಂದ ಬಂದು ನೆಲಸಿದವರಾಗಿರುತ್ತಾರೆ. ಇದರ ಒಟ್ಟು ಜನಸಂಖ್ಯೆ 71,211 (2002). ಆಂಡೊರ ಭಾಷೆ ಕೆಟಲನ್. ಈ ಭಾಷೆ ನೆರೆ ರಾಷ್ಟ್ರ ಸ್ಪೇನ್ ಭಾಷೆಯೂ ಹೌದು. ಜೊತೆಗೆ– ತ್ರಿವಳಿ ಭಾಷೆಗಳಾದ ಸ್ಪ್ಯಾನಿಷ್, ಪೋರ್ಚುಗೀಸ್ ಮತ್ತು ಫ್ರೆಂಚ್ ಭಾಷೆಗಳು ಸಹ ಚಾಲ್ತಿಯಲ್ಲಿವೆ. ಇಲ್ಲಿನ ಪ್ರಮುಖ ಧರ್ಮ ಕ್ಯಾಥೋಲಿಕ್.

ಆಂಡೊರ ಸಂಸ್ಕೃತಿಯು ಕೆಟಲನ್ ಸಂಸ್ಕೃತಿಯನ್ನು ಹೋಲುತ್ತದೆ. ಕಾರಣ, ಇಲ್ಲಿನ ಜನರು, ಸ್ಪೇನ್‌ನಲ್ಲಿ ಜನಿಸಿದವರು ಹಾಗೂ ಕೆಟಲನ್ ಮೂಲದವರು. ಪರಸ್ಪರ ಸ್ಪೇನ್ ಮೂಲವನ್ನು ತಿಳಿಯಲು ಈ ಭಾಷೆ ಆಂಡೊರ ಜನರಿಗೆ ತುಂಬ ಸಹಕಾರಿಯಾಗಿದೆ.

ಆಂಡೊರ ದೇಶಕ್ಕೆ ವ್ಯವಸ್ಥಿತವಾದ ಸಂವಿಧಾನವಿಲ್ಲ, ಆದಕಾರಣ ಅಂತಾರಾಷ್ಟ್ರೀಯ ಮಾನ್ಯತೆಯನ್ನು ಪಡೆದಿಲ್ಲ. ಫ್ರಾನ್ಸನ ಸಾವರ್ನಿಟಿ ಹಾಗೂ ಸ್ಪೇನ್‌ನ ವುರ್ಗಲ್ ಬಿಷಪ್ ಆಡಳಿತದಲ್ಲಿ ಆಯ್ಕೆಯಾದ 28 ಸದಸ್ಯರನ್ನೊಳಗೊಂಡ ಸರ್ಕಾರ ಹೊಂದಿದೆ.

ಆಂಡೊರ ಕೃಷಿಪ್ರಧಾನ ರಾಷ್ಟ್ರ. ದ್ವಿದಳ ಧಾನ್ಯ, ಆಲೂಗೆಡ್ಡೆ ಮತ್ತು ತಂಬಾಕು ಪ್ರಮುಖ ಬೆಳೆಗಳು.

ಕಬ್ಬಿಣ, ಸತು, ಲವಣ ಮತ್ತು ಕಟ್ಟಡಕಲ್ಲು ಪ್ರಮುಖ ಉತ್ಪಾದನಾ ವಸ್ತುಗಳು. (ವಿ.ಎಸ್.ಎ.)

**ಆಂಡ್ರೊಮಿಡ:** ಆಕಾಶದಲ್ಲಿ ಒಂದು ನಕ್ಷತ್ರಪುಂಜದ (ಕಾನ್‌ಸ್ಟಲೇಷನ್) ಮತ್ತು ಅದೇ ವಲಯದಲ್ಲಿರುವ ಸುಪ್ರಸಿದ್ಧ ನೆಬ್ಯುಲದ ಹೆಸರು. ಆಂಡ್ರೊಮಿಡ ನಕ್ಷತ್ರಪುಂಜ ಉತ್ತರಾಕಾಶದಲ್ಲಿ ಪರ್ಸಿಯಸ್ ಮತ್ತು ಕೆಶ್ಮಿಯೋಪಿಯ ಪುಂಜಗಳ ನಡುವೆ ಇದೆ. ಇದರಲ್ಲಿ ಹೆಸರಿಸುವಂಥ ಪ್ರಕಾಶಮಾನ ಬಿಡಿ ನಕ್ಷತ್ರಗಳಿಲ್ಲ. ಆದರೆ ಇದೇ ವಲಯದಲ್ಲಿ ಅತಿ ದೂರದಲ್ಲಿರುವ ನೆಬ್ಯುಲಕ್ಕೆ ಆಂಡ್ರೊಮಿಡ ನೆಬ್ಯುಲವೆಂದೇ ಹೆಸರು. ಆಕಾಶದಲ್ಲಿ ಬರಿಗಣ್ಣಿಗೆ ಕಾಣಿಸುವ ಪರಮಾವಧಿ ದೂರದ ಮಿತಿ ಈ ನೆಬ್ಯುಲ. ಮಸಕುಬೆಳಕಿನ ಮಚ್ಚೆಯಂತೆ ತೋರುವ ಇದರ ದೂರ ಸುಮಾರು 2,000,000 ಜ್ಯೋತಿರ್ವರ್ಷಗಳು. ಚಾರ್ಲ್ಸ್ ಮೆಸ್ಸಿಯರ್‌ನ ಆಕಾಶಕಾಯಗಳ ಪಟ್ಟಿಯಲ್ಲಿ ಆಂಡ್ರೊಮಿಡ ನೆಬ್ಯುಲದ ಸ್ಥಾನ ಸೂಚ್ಯಂಕ 31 ಆಗಿದ್ದುದರಿಂದ ಈ ನೆಬ್ಯುಲವನ್ನು ಒ 31 ಎಂದೇ ಕರೆಯುವುದು ರೂಢಿಯಾಗಿದೆ. ಒ 31 ಆವರ್ತಿಸುತ್ತಿದೆ. ಇದರ ಆಕಾರ ಸುರುಳಿಯಂತಿದೆ. ಇದರಲ್ಲಿ ಸುಮಾರು 100 ಬಿಲಿಯನ್ (1 ಬಿ=1 ಮಿಲಿಯನ್ ಮಿಲಿಯನ್) ನಕ್ಷತ್ರಗಳಿರಬಹುದೆಂದು ಅಂದಾಜು. ಒಂದರಿಂದ ಇನ್ನೊಂದು ದೂರವಾಗಿ ಧಾವಿಸುತ್ತಿರುವ ಆಕಾಶದಲ್ಲಿ ಇತರ ಎಲ್ಲ ಬ್ರಹ್ಮಾಂಡಗಳಿಗಿಂತ (ನಕ್ಷತ್ರ, ನೆಬ್ಯುಲ ಮುಂತಾದ ಆಕಾಶಕಾಯಗಳ ಮಹಾಸಮುದಾಯ ಬ್ರಹ್ಮಾಂಡ–ಗ್ಯಾಲಕ್ಸಿ) ಭಿನ್ನವಾಗಿ ಒ 31 ಮಾತ್ರ ಸೌರವ್ಯೂಹದೆಡೆಗೆ ಚಲಿಸುತ್ತಿದೆ. 100ಕ್ಕಿಂತಲೂ ಹೆಚ್ಚು ನೋವಾಗಳನ್ನು ಒ 31 ರಲ್ಲಿ ಗುರುತಿಸಲಾಗಿದೆ. ಈ ನೆಬ್ಯುಲ ರೇಡಿಯೊ ತರಂಗೋತ್ಪಾದನ ಕೇಂದ್ರವೂ ಹೌದು. (ಕೆ.ಎಸ್.ಯು.)

**ಆಂತರಿಕ ಪ್ರಾದೇಶಿಕ ಯೋಜನೆ:** ಅಭಿವೃದ್ಧಿಗಾಗಿ ಪ್ರದೇಶಗಳನ್ನು ಗುರುತಿಸಿದಾಗ ಆ ಪ್ರದೇಶಗಳು ತಮ್ಮ ಪ್ರಮುಖವಾದ ಗುಣಲಕ್ಷಣಗಳ ಆಧಾರದ ಮೇಲೆ ವಿಂಗಡನೆಯಾಗಿರುತ್ತವೆ. ಹೀಗೆ ವಿಂಗಡನೆಯಾದ ಪ್ರದೇಶಗಳಲ್ಲಿಯೇ ಹಲವಾರು ವಿಭಿನ್ನತೆಗಳು ಸೂಕ್ಷ್ಮವಾಗಿ ಕಂಡುಬರುತ್ತವೆ. ಈ ರೀತಿಯ ಸೂಕ್ಷ್ಮವಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯಾಯ ಪ್ರದೇಶಗಳಲ್ಲಿ ಕಂಡುಬರುವ ಸಮಸ್ಯೆಗಳ ಪರಿಹಾರಕ್ಕಾಗಿ ಸ್ಥಳೀಯವಾಗಿ ಲಭ್ಯವಾಗುವ ಸಂಪನ್ಮೂಲಗಳ ಸದ್ಬಳಕೆಗಾಗಿ ರೂಪಿಸುವ ಯೋಜನೆಯನ್ನು ಆಂತರಿಕ ಪ್ರಾದೇಶಿಕ ಯೋಜನೆ ಎನ್ನಬಹುದು. ಭಾರತದಲ್ಲಿ ಆಡಳಿತ ವಿಕೇಂದ್ರೀಕರಣದ ದೃಷ್ಟಿಯಿಂದ ಅಸ್ತಿತ್ವಕ್ಕೆ ಬಂದಿರುವ ಸ್ಥಳೀಯ ಸರ್ಕಾರಗಳಾದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳು ಈ ಯೋಜನೆಗೆ ಉದಾಹರಣೆಯಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಸ್ಥಳೀಯ ಮಟ್ಟದ ಯೋಜನೆಗಳು ಅಭಿವೃದ್ಧಿಯ ದೃಷ್ಟಿಯಿಂದ ಪರಿಣಾಮಕಾರಿಯಾಗಿ ಕಂಡುಬರುತ್ತವೆ. (ಕೆ.ವಿ.ಐ.)

**ಆಂತರಿಕ ಶಕ್ತಿಗಳು:** ಭೂಮಿಯ ಹೊರಚಿಪ್ಪಿನ ಒಳಗಡೆ ಕೆಲವೊಂದು ಆಳದಲ್ಲಿ ವಿಶಿಷ್ಟ ಶಕ್ತಿಗಳು ಉತ್ಪನ್ನವಾಗಿ ಭೂವಿರೂಪಣ (ಡಯೊಸ್ಟ್ರೊಪಿಸಂ) ಮತ್ತು ಜ್ವಾಲಾಮುಖಿ ಕ್ರಿಯೆ (ವಾಲ್ಕನಿಸಂ)ಗಳನ್ನುಂಟು ಮಾಡುತ್ತವೆ. ಅವುಗಳನ್ನು ಆಂತರಿಕ ಶಕ್ತಿಗಳೆಂದು ಕರೆಯುವರು. ಅವು ಭೂಕಂಪ ಮತ್ತು ಜ್ವಾಲಾಮುಖಿಗಳ ರೂಪದಲ್ಲಿ ಉದ್ಭವಿಸಿ ಭೂಮೇಲ್ಮೈ ಮೇಲೆ ಉಬ್ಬು (ಪರ್ವತ) ಮತ್ತು ತಗ್ಗು (ಕಣಿವೆ)ಗಳನ್ನುಂಟು ಮಾಡುತ್ತವೆ. ಆಂತರಿಕ ಶಕ್ತಿಗಳಲ್ಲಿ ಭೂಖಂಡ ನಿರ್ಮಾಣ ಶಕ್ತಿ (ಎಪಿರೊಜೆನಿಟಿಕ್ ಫೋರ್ಸ್) ಮತ್ತು ಪರ್ವತ ನಿರ್ಮಾಣ ಶಕ್ತಿ (ಓರೋಜನಿನೆಟಿಕ್ ಫೋರ್ಸ್)ಗಳೆಂದು ಎರಡು ವಿಧಗಳಿವೆ. ಅವು ಅನುಕ್ರಮವಾಗಿ ಊರ್ಧ್ವಮುಖವಾಗಿ ಮತ್ತು ಸಮತಲವಾಗಿ ಚಲಿಸುತ್ತವೆ.

ಭೂಗರ್ಭದಲ್ಲಿ ನಡೆಯುವ ಊರ್ಧ್ವಮುಖ ಚಲನೆಯಿಂದ ಹೊರಮೈಯಲ್ಲಿ ಏರಿಳಿತಗಳುಂಟಾಗುತ್ತವೆ. ಈ ಪ್ರಕಾರದ ಚಲನೆಯಿಂದ ಮುಖ್ಯವಾಗಿ ಖಂಡಗಳು ನಿರ್ಮಾಣವಾಗುವುದರಿಂದ ಇದನ್ನು ಖಂಡ ನಿರ್ಮಾಣ ಶಕ್ತಿ ಎಂದು ಕರೆಯುವರು. ಭೂಚಿಪ್ಪಿನ ಒಂದು ಭಾಗವು ಮೇಲೇಳುವುದರಿಂದ ಖಂಡ (ಕಾಂಟಿನೆಂಟ್ಸ್) ಗಳುಂಟಾಗುತ್ತವೆ. ಸಮುದ್ರ ತಳದಲ್ಲಿ ತಗ್ಗುಗಳುಂಟಾದರೆ ಸಮುದ್ರ ಮಟ್ಟವು ಕೆಳಗಿಳಿಯುತ್ತದೆ. ಉದಾಹರಣೆಗೆ ಫ್ಲೋರಿಡ ಪರ್ಯಾಯದ್ವೀಪ, ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿ ಭಾಗಗಳು, ಹಿಮಾಲಯ ಪರ್ವತ, ಏಡ್ರಿಯಾಟಿಕ್ ಸಮುದ್ರದಲ್ಲಿ ಪಲ್ಮರೊರ ದ್ವೀಪ ಮೊದಲಾದವು ನಿಧಾನವಾಗಿ ಮೇಲೇಳುತ್ತಲಿವೆ. ಹಾಗೂ ಉತ್ತರ ಸಮುದ್ರ, ಅಲಾಸ್ಕಾ, ಕ್ಯಾಲಿಫೋರ್ನಿಯಾ ಮತ್ತು ಪಾಂಡಿಚೆರಿ ಕರಾವಳಿಗಳು ನಿಧಾನವಾಗಿ ಕುಸಿಯುತ್ತಲಿವೆ. ಕಪ್ಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರಗಳು ಭೂಖಂಡ ನಿರ್ಮಾಣ ಶಕ್ತಿಯ ಮೂಲಕ ಉಂಟಾದ ತಗ್ಗುಗಳ ಉದಾಹರಣೆಗಳಾಗಿವೆ.

ಭೂಗರ್ಭದಲ್ಲಿ ನಡೆಯುವ ಸಮಯ ಚಲನೆಯಿಂದ ಭೂಚಿಪ್ಪಿನಲ್ಲಿ ಸಂಕೋಚ (ಕಾಂಪ್ರೆಷನ್) ಮತ್ತು ಕರ್ಷಣೆ (ಟೆನ್‌ಷನ್) ಗಳುಂಟಾಗುತ್ತವೆ. ಇವು ಭೂಮೇಲ್ಮೈಗೆ ಸಮತಲವಾಗಿ ಚಲಿಸುವುದರಿಂದ ಭೂಚಿಪ್ಪಿನಲ್ಲಿ ಏರಿಳಿತಗಳುಂಟಾಗುತ್ತವೆ. ಸಮತಲ ಚಲನೆಯಿಂದ ಪ್ರಮುಖವಾಗಿ ಪರ್ವತಗಳುಂಟಾಗುವುದರಿಂದ ಇದನ್ನು 'ಪರ್ವತ ನಿರ್ಮಾಣ ಶಕ್ತಿ ಎಂದು ಕರೆಯುವರು.

ಸಂಕೋಚ ಮತ್ತು ಕರ್ಷಣೆ ಶಕ್ತಿಯು ಏಕಕಾಲಕ್ಕೆ ಸಂಭವಿಸುತ್ತವೆ. ಒಂದು ಸ್ಥಳದಲ್ಲಿ ಕರ್ಷಣೆ ಉಂಟಾದಾಗ ಮತ್ತೊಂದು ಸ್ಥಳದಲ್ಲಿ ಸಂಕೋಚ ಉಂಟಾಗುತ್ತದೆ. ಈ ಶಕ್ತಿಗಳ ಪರಿಣಾಮದಿಂದ ಸ್ತರಭಂಗ, ಬಿರುಕು (ಸೀಳು) ಮತ್ತು ಮಡಿಕೆಗಳುಂಟಾಗುತ್ತವೆ. ಎರಡು ಸಮಾನಾಂತರ ಸ್ತರಭಂಗಗಳ ನಡುವಣ ಭಾಗ ಕುಸಿದು ಸೀಳು ಕಣಿವೆ (ರಿಫ್ಟ್ ವ್ಯಾಲಿ) ಉಂಟಾಗುತ್ತದೆ. ಪೂರ್ವ ಆಫ್ರಿಕದ ಸೀಳು ಕಣಿವೆ, ಜರ್ಮನಿಯ ರೈನ್ ಕಣಿವೆ ಮತ್ತು ಸ್ಕಾಟ್ಲಂಡಿನ ಮಿಡ್‌ಲ್ಯಾಂಡ್ ಕಣಿವೆಗಳು ಸೀಳು ಕಣಿವೆಗಳ ಉತ್ತಮ ಉದಾಹರಣೆಗಳಾಗಿವೆ. ಅದರಂತೆ ಎರಡು ಸಮಾನಾಂತರ ಸ್ತರಭಂಗಗಳ ನಡುವಣ ಭೂಭಾಗ ಮೇಲೇಳುವುದರಿಂದ ಅಥವಾ ಸ್ತರಭಂಗಗಳ ಹೊರಗಿನ ಎರಡೂ ಭಾಗಗಳು ಕೆಳಗಡೆ ಚಾಚುವುದರಿಂದ ಖಂಡ ಪರ್ವತ (ಬ್ಲಾಕ್ ಮೌಂಟನ್ಸ್) ನಿರ್ಮಾಣವಾಗುತ್ತವೆ. ಮಧ್ಯ ಯುರೋಪಿನಲ್ಲಿನ ವೊಸ್ಜೆಸ್, ಬ್ಲ್ಯಾಕ್ ಫಾರೆಸ್ಟ್, ಹಾರ್ಲ್ಸ್ ಪರ್ವತಗಳು, ಸೂಯೆಜ್ ಮತ್ತು ಅಕ್ವಾಬ್ ಖಾರಿಗಳ ನಡುವಣ ಸಿನಾಯಿ ಪರ್ವತ ಹಾಗೂ ಹಳದಿ ಸಮುದ್ರ ಮತ್ತು ಜಪಾನ್ ಸಮುದ್ರಗಳ ನಡುವಣ ಕೊರಿಯಾ ಪರ್ವತಗಳು ಭೂಖಂಡ ಪರ್ವತಗಳ ಉದಾಹರಣೆಗಳಾಗಿವೆ.

ಶಿಲಾಪದರುಗಳ ಎರಡೂ ಬದಿಗಳಲ್ಲಿ ಸಂಕೋಚ ಶಕ್ತಿಯ ಪರಿಣಾಮದಿಂದ ಬೃಹತ್ ಮಡಿಕೆಗಳುಂಟಾಗುತ್ತವೆ. ಹೀಗೆ ಭೂ ಚಿಪ್ಪಿನಲ್ಲಿ ಉಂಟಾದ ಬೃಹತ್ ಮಡಿಕೆಗಳನ್ನು ಮಡಿಕೆ ಪರ್ವತ (ಫೋಲ್ಡ್ ಮೌಂಟನ್ಸ್) ಗಳೆಂದು ಕರೆಯುವರು. ಆಲ್ಪ್ಸ್, ಹಿಮಾಲಯ, ರಾಕೀಸ್ ಮತ್ತು ಆಂಡೀಸ್ ಪರ್ವತಗಳು ಮಡಿಕೆ ಪರ್ವತಗಳ ಉತ್ತಮ ಉದಾಹರಣೆಗಳಾಗಿವೆ. (ಎಸ್.ಎಸ್.ಎನ್.)

**ಆಂಥ್ರಪೋ ಜಿಯೋಗ್ರಫಿ:** ಇದೊಂದು ಜರ್ಮನ್ ಭಾಷೆಯ ಪದ. ಭೂಗೋಳವಿಜ್ಞಾನದಲ್ಲಿ ಮಾನವನ ಭೌಗೋಳಿಕ ಅಧ್ಯಯನವನ್ನು ಆರಂಭಿಸಿದವರು ಫ್ರೆಡ್ರಿಚ್ ರ್‍ಯಾಟ್ಜೆಲ್. ಆಂಥ್ರಪೋ ಎಂದರೆ ಮಾನವ ಎಂದರ್ಥ. ಆಂಥ್ರಪೋ ಜಿಯೋಗ್ರಫಿ ಎಂಬ ಪದಕ್ಕೆ ಸಂವಾದಿಯಾಗಿ ಆಂಗ್ಲ ಭಾಷೆಯ ಹ್ಯೂಮನ್ ಜಿಯೋಗ್ರಫಿ ಎಂಬ ಪದವನ್ನು ಬಳಸಲಾಗುವುದು. ರ್‍ಯಾಟ್ಜೆಲ್‌ನು ಆಂಥ್ರಪೋ ಜಿಯೋಗ್ರಫಿ ಎಂಬ ಶಬ್ದವನ್ನು ಮೊಟ್ಟಮೊದಲ ಬಾರಿಗೆ ಬಳಸಿದರು. ಹರ್ಬರ್ಟ್ ಸ್ಪೆನ್ಸರ್ ಬರೆದ ಸಾಮಾಜಿಕ ಡಾರ್ವಿನ್ ವಾದ ಎಂಬ ಕೃತಿಯಲ್ಲಿ ಜೀವಿ ಸಮುದಾಯಗಳಂತೆಯೇ, ಮಾನವ ಸಮುದಾಯಗಳೂ ಸಹ ತಮ್ಮ ಅಸ್ತಿತ್ವಕ್ಕಾಗಿ ನಿರಂತರ ಹೋರಾಟ ಮುಂದುವರೆಸಿವೆ ಎಂದು ಮಂಡಿಸಿದರು. ಇದರಿಂದ ಪ್ರಭಾವಗೊಂಡಿದ್ದ ರ್‍ಯಾಟ್ಜೆಲ್‌ರು 1882 ರಲ್ಲಿ ಆಂಥ್ರಪೋ ಜಿಯೋಗ್ರಫಿ. ಆರ್, ಔಟ್ ಲೈನ್ಸ್ ಆಫ್ ದಿ ಇನ್‌ಫ್ಲುಯೆನ್ಸ್ ಆಫ್ ದಿ ಜಿಯೋಗ್ರಾಫಿಕಲ್ ಎನ್‌ವಿರಾನ್‌ಮೆಂಟ್ ಆಫ್ ಆನ್ ಹಿಸ್ಟರಿ ಎಂಬ ಗ್ರಂಥದ ಮೊದಲ ಸಂಪುಟ ಪ್ರಕಟಿಸಿದರು. ಇದರ ಎರಡನೇ ಸಂಪುಟವನ್ನು 1891 ರಲ್ಲಿ ಆಂಥ್ರಪೋ ಜಿಯೋಗ್ರಫಿ; ದಿ ಜಿಯೋಗ್ರಫಿಕಲ್ ಡಿಸ್ಟ್ರಿಬ್ಯೂಷನ್ ಆಫ್ ಮ್ಯಾನ್‌ಕೈಂಡ್ ಎಂಬ ಕೃತಿಯನ್ನು ಪ್ರಕಟಿಸಿದರು. ರ್‍ಯಾಟ್ಜೆಲ್‌ರ ಅನಂತರ ಜರ್ಮನಿಯಲ್ಲಿ ಆಂಥ್ರಪೋ ಜಿಯೋಗ್ರಫಿ ಪಂಥವನ್ನು ರಿಚ್‌ಕೊಫೆನ್, ಹೆಟ್ನರ್ ಮೊದಲಾದವರು ಮುಂದುವರೆಸಿದರು. (ಎನ್.ಎಲ್.)

**ಆಂಥ್ರಸೈಟ್:** ಕಲ್ಲಿದ್ದಲಿನಲ್ಲಿ ಒಂದು ವಿಧ. ಕಲ್ಲಿದ್ದಲಿನ ಇತರ ವಿಧಗಳು ಪೀಟ್, ಲಿಗ್ನೈಟ್ ಮತ್ತು ಬಿಟುಮಿನಸ್. ಆಂಥ್ರಸೈಟ್ ಇವುಗಳಲ್ಲೆಲ್ಲ ಅತ್ಯಂತ ಶ್ರೇಷ್ಠ ದರ್ಜೆಯದು. ಇದರ ದಹನ ಪ್ರಮಾಣ (ಫ್ಯುಯೆಲ್ ರೇಷಿಯೊ) 12 ಕ್ಕೂ ಹೆಚ್ಚು ; ಕ್ಯಾಲೊರಿಫಿಕ್ ಗುಣ 14,500–15,000 ಬಿ.ಟಿ.ಯು ; ಕಾರ್ಬನ್ ಅಂಶ ಶೇ. 93 –95 ರಷ್ಟು; ಮತ್ತು ಅನಿಲರೂಪದ ದಹನ ವಸ್ತುಗಳು ಶೇ. 3 – 5 ರಷ್ಟು, ಈ ವಿಶೇಷಗುಣಗಳನ್ನು ಹೊಂದಿರುವ ಕಾರಣ ಇದನ್ನು ಅತ್ಯಂತ ಉತ್ತಮ ದರ್ಜೆಯ ಕಲ್ಲಿದ್ದಲೆಂದು ಪರಿಗಣಿಸಲಾಗಿದೆ.

ಬಣ್ಣದಲ್ಲಿ ಅಚ್ಚಗಪ್ಪು ಅಥವಾ ನಶ್ಯದ ಛಾಯೆಯುಳ್ಳ ಕಪ್ಪು. ಹಲವು ಬಾರಿ ಬೆಳಕಿಗೆ ಹಿಡಿದಾಗ ಬಣ್ಣ ಬಣ್ಣಗಳಿಂದ ಮಿನುಗುವುದೂ ಉಂಟು. ಮುಟ್ಟಿದಾಗ ಬೆರಳಿಗೆ ಅಂಟುವುದಿಲ್ಲ, ಫಳಫಳನೆ ಹೊಳೆಯುತ್ತದೆ. ಛಿದ್ರವಾದ ಭಾಗಗಳಲ್ಲಿ ಕಪ್ಪೆಚಿಪ್ಪಿನಂಥ ಗುರುತುಗಳು, ಹಲವು ವೇಳೆ ಅಸ್ಪಷ್ಟ ಗುರುತುಗಳು ಕಾಣುತ್ತವೆ. ಕಾಠಿಣ್ಯ 0.5–2.5. ಅಂದರೆ ಉಗುರಿನಿಂದ ಅಥವಾ ಸೂಜಿಯಿಂದ ಸುಲಭವಾಗಿ ಗೀರಿ ಗುರುತಿಸಬಹುದು. ಸಾಪೇಕ್ಷ ಸಾಂದ್ರತೆ 1.32–1.7.

ಇದರ ರಾಸಾಯನಿಕ ಸಂಯೋಜನೆ ಬಹುಮಟ್ಟಿಗೆ ಕಾರ್ಬನ್ ಶೇ. 95. ಇದರೊಡನೆ ಇತರ ಧಾತುಗಳಾದ ಜಲಜನಕ, ಆಮ್ಲಜನಕ ಮತ್ತು ಸಾರಜನಕ ಬಹು ಅಲ್ಪ ಪ್ರಮಾಣದಲ್ಲಿರುತ್ತವೆ. ಇದನ್ನು ಉರಿಸಬೇಕಾದರೆ ಕೊಂಚ ಕಷ್ಟ. ಜ್ವಾಲೆ ಅಷ್ಟು ದೊಡ್ಡದಾಗಿರದೆ ಸಣ್ಣದಾಗಿದ್ದು ಬಹುಕಾಲ ಉರಿಯುತ್ತದೆ. ಹೆಚ್ಚು ಶಾಖವನ್ನೂ ಒದಗಿಸುತ್ತದೆ.

ಕಲ್ಲಿದ್ದಲು ಗಣಿಗಳಲ್ಲಿ ಇತರ ಕಡಿಮೆ ದರ್ಜೆಯವು ಕ್ರಮೇಣ ಈ ಉತ್ತಮ ಬಗೆಯ ಕಲ್ಲಿದ್ದಲಾಗಿ ಮಾರ್ಪಟ್ಟಿರುವುದನ್ನು ಅನೇಕ ವೇಳೆ ಗುರುತಿಸಬಹುದು. ಕಲ್ಲಿದ್ದಲನ್ನು ಹೊಂದಿರುವ ಶಿಲಾಪದರ ಹೆಚ್ಚಿನ ಉಷ್ಣ ಮತ್ತು ಒತ್ತಡಗಳಿಗೆ ಒಳಗಾದ ಭಾಗಗಳಲ್ಲಿ ಈ ಮಾರ್ಪಾಡನ್ನು ಕಾಣಬಹುದು. ಹಲವು ಬಾರಿ ಹೀಗಾಗದೆ ಭೂಮಿಯ ಆಳದಲ್ಲಿ ಹುದುಗುವ ಮೊದಲೇ ಸಸ್ಯಸಂಬಂಧವಾದ ವಸ್ತುಗಳು ಕಲ್ಲಿದ್ದಲಾಗಿ ಮಾರ್ಪಟ್ಟಿರಬಹುದು.

ಆಂಥ್ರಸೈಟನ್ನು ಹೆಚ್ಚು ಉಷ್ಣೋತ್ಪತ್ತಿಮಾಡಲು ಬಳಸುತ್ತಾರೆ. ಹೊಗೆ ಬೇಡವಾದ ಯಂತ್ರೋಪಕರಣಗಳಲ್ಲಿಯೂ ಇದರ ಉಪಯೋಗವಿದೆ.

ಇದು ಮುಖ್ಯವಾಗಿ ಅಮೆರಿಕದ ಪೆನ್ಸಿಲ್‌ವೇನಿಯ, ಇಂಗ್ಲೆಂಡಿನ ದಕ್ಷಿಣ ವೇಲ್ಸ್, ಫ್ರಾನ್ಸ್, ಜರ್ಮನಿಯ ಸ್ಯಾಕ್ಸನಿ ಮತ್ತು ರಷ್ಯದ ಕಲ್ಲಿದ್ದಲಿನ ಗಣಿಗಳಲ್ಲಿ ದೊರೆಯುತ್ತದೆ. ಪೆನ್ಸಿಲ್‌ವೇನಿಯದ ಆಂಥ್ರಸೈಟ್‌ನಲ್ಲಿ ಶೇ. 85–95 ರಷ್ಟು, ರಷ್ಯದಲ್ಲಿ ದೊರೆಯುವ ಈ ವರ್ಗದ ಕಲ್ಲಿದ್ದಲಿನಲ್ಲಿ ಶೇ. 94 ರಷ್ಟು ಇಂಗಾಲವಿರುವುದರಿಂದ ಅದನ್ನು ಅತ್ಯಂತ ಉತ್ತಮ ದರ್ಜೆಯ ಕಲ್ಲಿದ್ದಲೆಂದು ಪರಿಗಣಿಸಲಾಗಿದೆ.

ಭಾರತದಲ್ಲಿ ಈ ದರ್ಜೆಯ ಕಲ್ಲಿದ್ದಲು ಹಂಚಿಕೆ ಬಹಳ ಕಡಿಮೆ. ಅತ್ಯಲ್ಪ ಪ್ರಮಾಣದಲ್ಲಿ ಅದು ಜಮ್ಮು–ಕಾಶ್ಮೀರದಲ್ಲಿ ಕಂಡುಬರುತ್ತದೆ. (ಬಿ.ವಿ.ಜಿ.)

**ಆಂಧ್ರ ಪ್ರದೇಶ:** ಭಾರತದ ಒಂದು ರಾಜ್ಯ. ದಕ್ಷಿಣಭಾರತದಲ್ಲಿ ದಖನ್ ಪ್ರಸ್ಥಭೂಮಿಯ ಉತ್ತರ ಪ್ರದೇಶಗಳನ್ನೊಳಗೊಂಡಿದೆ. ವಿಸ್ತೀರ್ಣ 274674 ಚ.ಕಿಮೀ. ಜನಸಂಖ್ಯೆ 7,57,27,541. ಉತ್ತರಕ್ಕೆ ಛತ್ತಿಸಗಡ ಮತ್ತು ಒರಿಸ್ಸ, ಪಶ್ಚಿಮದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ, ದಕ್ಷಿಣಕ್ಕೆ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳು ಇವೆ. ಪೂರ್ವಕ್ಕೆ ಬಂಗಾಲಕೊಲ್ಲಿ ಇದೆ. ರಾಜ್ಯಕ್ಕೆ ಸು. 1550 ಕಿಮೀ ಸಮುದ್ರ ತೀರವಿದೆ.

ಮೇಲ್ಮೈ ಲಕ್ಷಣಗಳು : ಇದನ್ನು ಮೂರು ಭಾಗವಾಗಿ ವಿಂಗಡಿಸಬಹುದು: 1 ದಖನ್ ಪ್ರಸ್ಥಭೂಮಿ: ಮಧ್ಯಭಾಗವನ್ನೊಳಗೊಂಡಿದೆ. ಇದನ್ನು ತೆಲಂಗಾಣ ಪ್ರಸ್ಥಭೂಮಿ ಎನ್ನುತ್ತಾರೆ. ಇದು ದಕ್ಷಿಣದಲ್ಲಿ ಚಿತ್ತೂರಿನಿಂದ ಉತ್ತರದಲ್ಲಿ ಅದಿಲಾಬಾದ್‌ವರೆಗೆ ಹಬ್ಬಿದೆ. ದಕ್ಷಿಣಭಾಗದಲ್ಲಿ ಕಿರಿದಾಗಿದ್ದು ಉತ್ತರಕ್ಕೆ ಹೋದಂತೆಲ್ಲ ಅಗಲವಾಗುತ್ತದೆ. 2 ಪೂರ್ವಘಟ್ಟಗಳ ಪ್ರದೇಶ : ಇದು ದಕ್ಷಿಣದಲ್ಲಿ ಶೇಷಾಚಲ (ತಿರುಪತಿ) ಮತ್ತು ಪಾಲ್‌ಕೊಂಡ ಬೆಟ್ಟಗಳಿಂದ ಉತ್ತರದಲ್ಲಿ ಶ್ರೀಕಾಕುಳಂ ಜಿಲ್ಲೆಯ ಉತ್ತರಭಾಗದವರೆಗೆ ಹಬ್ಬಿದೆ. ನಲ್ಲಮಲ ಎಂಬ ಹೆಸರಿನ ಈ ಪೂರ್ವ ಘಟ್ಟಗಳು 430 ಕಿಮೀ ಉದ್ದವಾಗಿ ಸರಾಸರಿ 30 ಕಿಮೀ ಅಗಲವಾಗಿವೆ. ಇವು ಸಾಧಾರಣವಾಗಿ 900 ರಿಂದ 1,100 ಮೀ ಎತ್ತರವಾಗಿವೆ. ಈ ಘಟ್ಟಗಳು ದಕ್ಷಿಣದಲ್ಲಿ ನೆಲ್ಲೂರು, ಗುಂಟೂರು ಜಿಲ್ಲೆಗಳಲ್ಲಿ ಒಂದೇ ಸಮನಾಗಿ ಹಬ್ಬಿವೆ. ಉತ್ತರದ ಕಡೆ ಹೋದಂತೆಲ್ಲ ಅಲ್ಲಲ್ಲಿ ಒಡೆದು ಹೋಗಿ ನದಿಗಳ ಪಾತ್ರಕ್ಕೆ ಅವಕಾಶ ಮಾಡಿಕೊಟ್ಟಿವೆ. ದಕ್ಷಿಣದಲ್ಲಿ ಪೆನ್ನಾರ್ ನದಿಯ ಮಧ್ಯಭಾಗದಲ್ಲಿ ಕೃಷ್ಣಾ ಮತ್ತು ಗೋದಾವರಿ ನದಿಗಳು ಪರ್ವತ ಪಂಕ್ತಿಗಳನ್ನು ಒಡೆದು ಪೂರ್ವಾಭಿಮುಖವಾಗಿ ಹರಿಯುತ್ತವೆ. 3. ಪೂರ್ವತೀರ ಪ್ರದೇಶ : ಪೂರ್ವ ಘಟ್ಟಗಳು ಮತ್ತು ಬಂಗಾಲಕೊಲ್ಲಿಯ ತೀರದ ನಡುವೆ ಸಮುದ್ರ ತೀರ ಮೈದಾನವಿದೆ. ಇದು 100 ರಿಂದ 150 ಕಿಮೀ ಅಗಲವಾಗಿದೆ. ಗೋದಾವರಿಯ ಈ ತೀರ ಮೈದಾನದಲ್ಲಿ ಎರಡು ಕವಲಾಗಿ ಹರಿದು ಗೌತಮೀ ಗೋದಾವರಿ, ವಸಿಷ್ಠ ಗೋದಾವರಿ ಎಂದು ಹೆಸರು ಪಡೆದು ಏಳು ಪ್ರವಾಹಗಳಾಗಿ



ಸಮುದ್ರವನ್ನು ಸೇರುವ ಸ್ವಲ್ಪ ಮುನ್ನ ಮೂರು ಉಪ ಪ್ರವಾಹಗಳಾಗಿ ಹರಿಯುತ್ತದೆ. ಗೋದಾವರಿ ಮತ್ತು ಕೃಷ್ಣಾ ನದಿಗಳ ಮುಖಜ ಭೂಮಿಯಲ್ಲಿ ನೂರಾರು ನೀರಾವರಿ ಕಾಲುವೆ ಉಪ ಕಾಲುವೆಗಳಿವೆ.

ವಾಯುಗುಣ : ಬೇಸಗೆ ಕಾಲದಲ್ಲಿ ರಾಯಲುಸೀಮೆ ಪ್ರದೇಶಗಳು, ತೀರ ಪ್ರದೇಶಗಳಲ್ಲಿ ಬಹಳ ಸೆಕೆಯಾಗಿದ್ದು $35^0$ ಸೆ. ನಿಂದ $43.3^0$ ಸೆ. ವರೆಗೆ ಉಷ್ಣತೆ ಇರುತ್ತವೆ. ತೆಲಂಗಾಣ ಪ್ರದೇಶದ ಉತ್ತರ ಭಾಗ ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಅಲ್ಲಿ ಸೆಕೆ ಕಡಿಮೆ. ತೀರ ಪ್ರದೇಶಗಳು 200 ರಿಂದ 250 ಸೆಂಮೀ ಮಳೆ ಪಡೆಯುತ್ತವೆ. ರಾಯಲಸೀಮೆ ಜಿಲ್ಲೆಗಳಲ್ಲಿ 50 ರಿಂದ 75 ಸೆಂಮೀ ಮಳೆಯಾದರೆ ಹೆಚ್ಚು, ಉತ್ತರದ ಜಿಲ್ಲೆಗಳಲ್ಲಿ 88 ರಿಂದ 125 ಸೆಂಮೀ ಮಳೆಯಾಗುತ್ತದೆ.

ಕಾಡುಗಳು : ರಾಜ್ಯದ ಸು. ಐದನೆಯ ಒಂದು ಭಾಗ ಕಾಡು ಪ್ರದೇಶ. ಪೂರ್ವ ಘಟ್ಟಗಳನ್ನೊಳಗೊಂಡಿರುವ ಈಶಾನ್ಯ ಜಿಲ್ಲೆಗಳಾದ ಶ್ರೀಕಾಕುಳಂ, ವಿಶಾಖಪಟ್ಟಣ, ಗೋದಾವರಿ ಮತ್ತು ಕರ್ನೂಲ ಜಿಲ್ಲೆಗಳಲ್ಲಿ ಹೆಚ್ಚು ಕಾಡು ಪ್ರದೇಶಗಳಿವೆ.

ಖನಿಜಗಳು : ತೆಲಂಗಾಣ ಭಾಗದ ಉತ್ತರ ಜಿಲ್ಲೆಗಳಲ್ಲಿ ಕಲ್ಲಿದ್ದಲು ಗಣಿಗಳಿವೆ. ಈಶಾನ್ಯದ ಜಿಲ್ಲೆಗಳಾದ ಶ್ರೀಕಾಕುಳಂ ಮತ್ತು ವಿಶಾಖಪಟ್ಟಣ ಜಿಲ್ಲೆಗಳಲ್ಲಿ ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ನೆಲ್ಲೂರು ಜಿಲ್ಲೆಯಲ್ಲಿ ಅಭ್ರಕ, ಹೈದರಾಬಾದ್, ಗುಂಟೂರು, ಅದಿಲಾಬಾದ್ ಜಿಲ್ಲೆಗಳಲ್ಲಿ ಸುಣ್ಣಕಲ್ಲು, ಕರ್ನೂಲು ಜಿಲ್ಲೆಯಲ್ಲಿ ಬ್ಯಾರೈಟ್, ಕಡಪ ಜಿಲ್ಲೆಯಲ್ಲಿ ಕಲ್ನಾರು ಅದಿರುಗಳು ಹೇರಳವಾಗಿವೆ. ಕಡಪ ಜಿಲ್ಲೆಯ ಕರಿಹಾಸುಕಲ್ಲು ದಕ್ಷಿಣಭಾರತದ ಅನೇಕ ಊರುಗಳಲ್ಲಿ ಉಪಯೋಗದಲ್ಲಿದೆ.

ನೀರಾವರಿ : ಗೋದಾವರಿ, ಕೃಷ್ಣ ಮತ್ತು ಪೆನ್ನಾರ್ ನದಿಗಳ ಮುಖಜ ಭೂಮಿಗಳಲ್ಲಿ ನೀರಾವರಿ ಕಾಲುವೆಗಳು ನೂರಾರು ವರ್ಷಗಳಿಂದ ಬಳಕೆಯಲ್ಲಿವೆ. ಗೋದಾವರಿ ಮುಖಜಭೂಮಿಯ ಕಾಲುವೆಗಳಿಂದ 4.4 ಲಕ್ಷ ಹೆ. ಜಮೀನು, ಕೃಷ್ಣ ಮುಖಜಭೂಮಿಯ ಪ್ರಕಾಶಂ ಬ್ಯಾರೇಜ್‌ನಿಂದ 4.6 ಲಕ್ಷ ಹೆ. ಜಮೀನು, ನಿಜಾಮಸಾಗರದಿಂದ (ಗೋದಾವರಿ ನದಿಯ ಉಪನದಿ ಮಂಜೀರಾ ನದಿಗೆ ಅಣೆಕಟ್ಟು) 1.1 ಲಕ್ಷ ಹೆ. ಜಮೀನು ಸಾಗುವಳಿಯಲ್ಲಿದೆ. ತುಂಗಭದ್ರ ನದಿಯಿಂದ ಹೊರಡುವ ಕಡಪ ಕರ್ನೂಲು ಕಾಲುವೆಯಿಂದ 1.1 ಲಕ್ಷ ಹೆ.ಗೆ ನೀರು ಒದಗಿದೆ. ತುಂಗಭದ್ರ ಅಣೆಕಟ್ಟಿನ ಕೆಳಭಾಗದ ಕಾಲುವೆಗಳ ಮತ್ತು ಮೇಲ್ದಾಲುವೆ ಕಾಲುವೆಗಳಿಂದ 0.8 ಲಕ್ಷ ಹೆ ಜಮೀನಿಗೆ ನೀರಾವರಿ ಸೌಕರ್ಯ ಒದಗುತ್ತದೆ. ಕೃಷ್ಣ ನದಿಗೆ ಅಡ್ಡಲಾಗಿ ಸು. 140 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾಗಿರುವ ಅಣೆಕಟ್ಟು ನಾಗಾರ್ಜುನ ಸಾಗರವನ್ನು ನಿರ್ಮಿಸಿ 14.4 ಲಕ್ಷ ಹೆ. ಗೆ ನೀರೊದಗಿಸುತ್ತದೆ. ರಾಜ್ಯದ ಒಟ್ಟು ಸಾಗುವಳಿ ಭೂಮಿಯ ಬಹಳಷ್ಟು ಭಾಗಕ್ಕೆ ನೀರಾವರಿ ಸೌಲಭ್ಯವಿದೆ. ಈಶಾನ್ಯ ಭಾಗದಲ್ಲಿ ಮಚಕುಂಡ ವಿದ್ಯುಚ್ಛಕ್ತಿ ಯೋಜನೆ ಮತ್ತು ದಕ್ಷಿಣದಲ್ಲಿ ತುಂಗಭದ್ರ ವಿದ್ಯುತ್ ಯೋಜನೆಗಳಿಂದ ರಾಜ್ಯಕ್ಕೆ ಧಾರಾಳವಾಗಿ ವಿದ್ಯುತ್ ಒದಗುತ್ತದೆ.

ವ್ಯವಸಾಯ : ಬತ್ತ, ಜೋಳ, ಕಬ್ಬು, ದ್ವಿದಳ ಧಾನ್ಯಗಳು, ನೆಲಗಡಲೆ, ತೆಂಗುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮೆಣಸಿನಕಾಯಿ, ಹರಳು ಬೀಜ, ಹೊಗೆಸೊಪ್ಪು, ಹುಣಸೆ ಹಣ್ಣು, ಮಾವಿನ ಹಣ್ಣು, ಬೆಳೆಗಳಿಗೆ ಆಂಧ್ರ ರಾಜ್ಯ ಪ್ರಖ್ಯಾತವಾಗಿದೆ. ಗುಂಟೂರು ಜಿಲ್ಲೆಯಲ್ಲಿ ಹೊಗೆಸೊಪ್ಪನ್ನು ಹೆಚ್ಚಾಗಿ ಬೆಳೆಸುತ್ತಾರೆ.

ಕೈಗಾರಿಕೆಗಳು: ವಿಶಾಖಪಟ್ಟಣದಲ್ಲಿ ಭಾರಿ ಹಡಗುಗಳನ್ನು ನಿರ್ಮಿಸುತ್ತಾರೆ. ಅಲ್ಲಲ್ಲಿ ಭಾರಿ ಹತ್ತಿ ಗಿರಣಿಗಳು ಇವೆ. ಹೈದರಾಬಾದ್ ನಗರದಲ್ಲಿ ಹತ್ತಿ ಗಿರಣಿಗಳು, ಉಕ್ಕಿನ ಫರ್ನಿಚರ್ ಕಾರ್ಖಾನೆ, ಸಿಗರೇಟು ಬೀಡಿ ಕಾರ್ಖಾನೆಗಳು ಇವೆ. ಮತ್ತು ಇತ್ತೀಚೆಗೆ ಈ ನಗರದಲ್ಲಿ ಸಾಫ್ಟ್‌ವೇರ್ ಉದ್ಯಮಗಳು ಭಾರಿ ಪ್ರಮಾಣದಲ್ಲಿ ತಲೆಯೆತ್ತಿವೆ. ರಾಜಮಹೇಂದ್ರಿ, ಸಿರ್‌ಪೂರ್‌ಗಳಲ್ಲಿ ಕಾಗದ ತಯಾರಿಸುವ ಭಾರಿ ಕಾರ್ಖಾನೆಗಳಿವೆ. ನಿಜಾಮಸಾಗರ ಸಕ್ಕರೆ ಕಾರ್ಖಾನೆ ಭಾರತದಲ್ಲೇ ಬಹು ದೊಡ್ಡ ಕಾರ್ಖಾನೆ. ಗೂಡೂರಿನಲ್ಲಿ ಗಾಜು ಮತ್ತು ಗಾಜಿನ ಪದಾರ್ಥ ತಯಾರಿಸುವ ಭಾರಿ ಉದ್ಯಮವಿದೆ. ಸಣ್ಣ ಕೈಗಾರಿಕೆಗಳಲ್ಲಿ ವಾರಂಗಲ್ ಮತ್ತು ಎಲ್ಲೂರಿನ ರತ್ನಗಂಬಳಿ ಜಮಖಾನುಗಳು; ಧರ್ಮಾವರಂ, ನಾರಾಯಣ ಪೇಟೆಗಳ ರೇಷ್ಮೆ ಮತ್ತು ಜರೀ ಸೀರೆಗಳು; ಗಡ್ವಾಲ್, ಸಿದ್ದಿಪೇಟೆಗಳ ನೂಲಿನ ಸೀರೆಗಳು, ಬಿದ್ರಿ ಕೆಲಸ, ನಾಜೂಕಿನ ಬಗೆಗಳು; ನರಸಾಪುರದ ಅರಗುಮೆರಗಿನ ವಸ್ತುಗಳು; ಕರೀಂ ನಗರದ ಬೆಳ್ಳಿ ಎಲೆಗಳಿಂದ ಮಾಡಿದ ನಾಜುಕಿನ ಕೆಲಸ; ನಿರ್ಮಲ, ಕೊಂಡಪಲ್ಲಿ, ನಕ್ಕಪಲ್ಲಿ ಮತ್ತು ತಿರುಪತಿಯ ಬಣ್ಣ ಬಣ್ಣದ ಆಟದ ಸಾಮಾನುಗಳಿಗೆ ಭಾರತದಲ್ಲೂ ಪರದೇಶಗಳಲ್ಲೂ ಒಳ್ಳೆಯ ಬೇಡಿಕೆ ಇದೆ. ತೆಂಗಿನ ಹುರಿ ಮಾಡುವುದು, ಚರ್ಮದ ಕೆಲಸಗಳು ಸಾವಿರಾರು ಜನಗಳಿಗೆ ಉದ್ಯೋಗ ಕಲ್ಪಿಸಿವೆ.

ಸಂಚಾರ ಸೌಲಭ್ಯಗಳು: ರಾಜ್ಯದಲ್ಲಿ 4,544 ಕಿಮೀ ರೈಲು ಮಾರ್ಗವಿದೆ. ಸಿಕಂದರಾಬಾದ್ ನಗರ ದಕ್ಷಿಣ ಮಧ್ಯ ವಲಯದ ಆಡಳಿತಕೇಂದ್ರ. ರಾಜ್ಯದಲ್ಲಿ 13,053 ಕಿಮೀ ರಸ್ತೆ ಮಾರ್ಗವಿದೆ. ಹೈದರಾಬಾದಿನ ಬಳಿ ಇರುವ ಬೇಗಂಪೇಟ್ ವಿಮಾನ ನಿಲ್ದಾಣ ವಿಮಾನ ಸಂಚಾರ ಕೇಂದ್ರ. ಅತ್ಯಾಧುನಿಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿದೆ. ರಾಜ್ಯದ ಪೂರ್ವ ತೀರದಲ್ಲಿರುವ ವಿಶಾಖಪಟ್ಟಣ, ಕಾಕಿನಾಡ, ಮಚಲಿಪಟ್ಟಣಗಳಲ್ಲಿ ಹಡಗು ನಿಲ್ದಾಣಗಳಿವೆ.

ಪ್ರೇಕ್ಷಣೀಯ ಸ್ಥಳಗಳು: ಮುಖ್ಯವಾದುದು ಹೈದರಾಬಾದ್: ಹೈದರಾಬಾದ್ ಸಂಸ್ಥಾನದ ನಿಜಾಮಶಾಹಿ ಆಡಳಿತ ಕೇಂದ್ರವಾಗಿದ್ದ ಇಲ್ಲಿ ಇಂಡೊ–ಮುಸ್ಲಿಂ ಮತ್ತು ಪಾಶ್ಚಾತ್ಯ ಪರಂಪರೆಯ ಸಮ್ಮಿಳಿತ ಮಾದರಿಯ ಅನೇಕ ಭವ್ಯ ಕಟ್ಟಡಗಳಿವೆ. ಇವುಗಳಲ್ಲಿ ಚಾರ್‌ಮಿನಾರ್, ಚಾರಕಮಾನ್, ಬಾದಶಾಹಿ ಅಷೂರಖಾನಾ, ಮುಷೀರಾಬಾದ್ ಮಸೀದಿ, ಫಲಕ್‌ನುಮಾ ಅರಮನೆಗಳು ಪ್ರಖ್ಯಾತವಾಗಿವೆ. ಈಗಿನ ಕಟ್ಟಡಗಳಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯ ಕಟ್ಟಡಗಳು, ಹೈಕೋರ್ಟ್ ಕಟ್ಟಡಗಳು ಭವ್ಯವಾಗಿವೆ. ಹೆಲ್ತ್ ಮ್ಯೂಸಿಯಂ, ಅಜಂತಾ ಪೆವಿಲಿಯನ್, ಸಾಲಾರ್‌ಜಂಗ್ ಮ್ಯೂಸಿಯಂಗಳು ಆಕರ್ಷಕ ಸ್ಥಳಗಳು. ಗೋಲ್ಕೊಂಡ ಕೋಟೆ (ಕುತುಬ್ ಷಾಹಿ ಅರಸರ ಕೋಟೆ, ಅರಮನೆಗಳು), ವಾರಂಗಲ್ (ಕಾಕತೀಯ ರಾಜರು ಕಟ್ಟಿಸಿದ ಪ್ರಸಿದ್ಧ ದೇವಾಲಯಗಳು), ಶ್ರೀಶೈಲ (ಮಲ್ಲಿಕಾರ್ಜುನ ಲಿಂಗ ದೇವಸ್ಥಾನ), ತಿರುಪತಿ (ವೆಂಕಟೇಶ್ವರ, ಬಾಲಾಜಿ ದೇವಸ್ಥಾನ), ಕಾಳಹಸ್ತಿ, ಸಿಂಹಾಚಲ, ಭದ್ರಾಚಲ, ಲೇಪಾಕ್ಷಿಗಳು ಪ್ರಸಿದ್ಧ ಯಾತ್ರಾಸ್ಥಳಗಳಲ್ಲದೆ ಉತ್ತಮ ಕಲಾಕೃತಿಗಳನ್ನು ಹೊಂದಿವೆ. ಲಕ್ಷಾಂತರ ಯಾತ್ರಾರ್ಥಿಗಳು ಇವನ್ನು ಸಂದರ್ಶಿಸುತ್ತಾರೆ.

ಸಂಸ್ಕೃತಿ: ಆಂಧ್ರದ ಭಾಷೆ ತೆಲುಗು ದಾಕ್ಷಿಣಾತ್ಯ ಸಂಗೀತದ ಶ್ರೀ ತ್ಯಾಗರಾಜರ ಕೀರ್ತನೆಗಳು ತೆಲುಗು ಭಾಷೆಯಲ್ಲಿವೆ. ಆಂಧ್ರದ ಪ್ರತಿ ಊರಿನಲ್ಲೂ ದೇವಸ್ಥಾನದ ರಥೋತ್ಸವಗಳು, ಜಾತ್ರೆಗಳು, ಬಹಳ ವಿಜೃಂಭಣೆಯಿಂದ ಜರಗುತ್ತವೆ. ರೈತಕೋಟಿ ಏರುವಾಕ ಸುಗ್ಗಿಯ ಸಂಭ್ರಮವನ್ನು ಜನಪದ ನೃತ್ಯಗೀತೆಗಳಿಂದಲೂ ಉತ್ಸಾಹ ಭರಿತ ಸಂಪ್ರದಾಯಗಳಿಂದಲೂ ಆಚರಿಸುತ್ತಾರೆ. ಕೂಚುಪುಡಿ ನೃತ್ಯ, ಭಾಗವತ ಸಂಗೀತ–ಸಾಹಿತ್ಯ ಹರಿಕಥೆಗಳು ಆಂಧ್ರದ ವೈಶಿಷ್ಟ್ಯ. (ಆರ್.ಎಂ.ಆರ್.)

**ಆಂಸ್ಟರ್‌ಡ್ಯಾಮ್[1]:** ನೆದರ್ಲೆಂಡಿನ ಅತಿ ದೊಡ್ಡ ನಗರ. ಇದರ ಜನಸಂಖ್ಯೆ 1002868 (2001). ರಾಜಧಾನಿಯಾಗಿದ್ದರೂ 48 ಕಿಮೀ ದೂರದಲ್ಲಿರುವ ಹೇಗ್ ನಗರದಲ್ಲಿ ಸರ್ಕಾರದ ಕಚೇರಿಗಳಿವೆ. ಪ್ರಪಂಚದ ನಾನಾ ದೇಶಗಳೊಡನೆ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡು ಯುರೋಪಿನ ಮುಖ್ಯ ವಾಣಿಜ್ಯ ಕೇಂದ್ರಗಳಲ್ಲೊಂದಾಗಿದೆ. ಉತ್ತರ ಸಮುದ್ರದ ಕಾಲುವೆಯ ಮೂಲಕ ನಾವೆಯ ಅನುಕೂಲತೆ ಹೊಂದಿರುವ ರೇವುಪಟ್ಟಣ. ಕಾಫಿ, ಹೊಗೆಸೊಪ್ಪು, ರಬ್ಬರ್, ಕೋಕೊ, ಗಟ್ಟಿಮರದ ಸಾಮಾನುಗಳು ಇಲ್ಲಿಂದ ರಫ್ತಾಗುತ್ತವೆ. ವಜ್ರ ಕಲ್ಲುಗಳನ್ನು ಕತ್ತರಿಸುವುದಕ್ಕೆ ಮತ್ತು ಹೊಳಪು ಕೊಡುವುದಕ್ಕೆ ಪ್ರಪಂಚದಲ್ಲಿ ಒಂದು ಪ್ರಮುಖ ಕೇಂದ್ರವಾಗಿದೆ. ಜೈಡರ್ ಜೀ ಸಮುದ್ರಮಟ್ಟಕ್ಕಿಂತ ತಗ್ಗಾಗಿರುವುದರಿಂದ ನಗರವನ್ನು ಗುಡ್ಡಗಳ ಮೇಲೆ ಕಟ್ಟಲಾಗಿದೆ. ಅದರ ನಾನಾ ಭಾಗಗಳಲ್ಲಿ ಅನೇಕ ಸೇತುವೆಗಳೂ 17 ಮತ್ತು 18ನೆಯ ಶತಮಾನದ ಪ್ರಮುಖ ಕಟ್ಟಡಗಳೂ ಇವೆ. ಈ ನಗರ 1370ರಲ್ಲಿ ಹ್ಯಾನ್ಸಿಯಾಟಿಕ್ ಒಕ್ಕೂಟವನ್ನು ಸೇರಿತು. ಇದು ಸ್ಪಿನೋಜನ ಜನ್ಮಸ್ಥಳ. ರೆಂಬ್ರಾನ್‌ನ ವಾಸಸ್ಥಾನ. ಇಲ್ಲಿ ಒಂದು ವಿಶ್ವವಿದ್ಯಾನಿಲಯವಿದೆ. (ಎಂ.ಎಸ್.)

**ಆಂಸ್ಟರ್‌ಡ್ಯಾಮ್[2]:** ಅಮೆರಿಕ ಸಂಯುಕ್ತಸಂಸ್ಥಾನದ ನ್ಯೂಯಾರ್ಕ್ ಪ್ರಾಂತ್ಯದ ಒಂದು ಪಟ್ಟಣ. ಈರಿ ಮತ್ತು ಆಂಟೇರಿಯೊ ಸರೋವರಗಳ ಕಡೆ ರೈಲು, ರಸ್ತೆಗಳ ಸಂಪರ್ಕವಿದೆ. ಸಮೀಪದಲ್ಲಿ ಮೊಕಾವ್ಕ್ ನದಿ ಹರಿಯುವುದು. ಹೆಚ್ಚಾಗಿ ಹಾಲೆಂಡಿನಿಂದ ವಲಸೆ ಬಂದ ಜನ ವಾಸಿಸುತ್ತಾರೆ. (ಎಂ.ಎಸ್.)

**ಆಂಸ್ಟರ್‌ಡ್ಯಾಮ್[3]:** ಹಿಂದೂ ಮಹಾಸಾಗರದ ದಕ್ಷಿಣ ಭಾಗದಲ್ಲಿ ಸೇಂಟ್ ಪಾಲ್ ದ್ವೀಪಕ್ಕೆ ಸಮೀಪದಲ್ಲಿರುವ ಒಂದು ದ್ವೀಪದ ಹೆಸರು. ಫ್ರಾನ್ಸಿಗೆ ಸೇರಿದೆ. (ಎಂ.ಎಸ್.)

**ಆಕರ್ಷಕ ಮತ್ತು ವಿಕರ್ಷಕ ಅಂಶಗಳು:** ಆರ್ಥಿಕ ಭೂಗೋಳವಿಜ್ಞಾನದಲ್ಲಿ ಮತ್ತು ಜನಸಂಖ್ಯಾ ಭೂಗೋಳ ವಿಜ್ಞಾನದಲ್ಲಿ ಆಕರ್ಷಕ ಮತ್ತು ವಿಕರ್ಷಕ ಪದಗಳನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿನ ಅಪಾರ ಜನಸಂಖ್ಯೆಯು ನಗರಗಳಿಗೆ ವಲಸೆ ಹೋಗುವುದನ್ನು ಕಾಣಬಹುದು. ಮಾನವನ ವಲಸೆಗೆ ಪ್ರಮುಖವಾಗಿ ಆಕರ್ಷಕ ಮತ್ತು ವಿಕರ್ಷಕ ಅಂಶಗಳೇ ಪ್ರಮುಖ ಕಾರಣವೆಂದು ಜನಸಂಖ್ಯಾ ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಅದೇ ರೀತಿಯಲ್ಲಿ ಅರ್ಥವ್ಯವಸ್ಥೆಯಲ್ಲಿ ಉಂಟಾಗುವ ಏರಿಳಿತಗಳಿಗೆ ಹಾಗೂ ಅಭಿವೃದ್ಧಿಯಲ್ಲಿ ಉಂಟಾಗುವ ತೊಂದರೆಗಳಿಗೆ ಆಕರ್ಷಕ ಮತ್ತು ವಿಕರ್ಷಕ ಅಂಶಗಳು ಕಾರಣ ಎಂದು ಅರ್ಥಶಾಸ್ತ್ರಜ್ಞರೂ ಮನಗಂಡಿದ್ದಾರೆ. ಪ್ರಮುಖ ವಿಕರ್ಷಕ ಅಂಶಗಳೆಂದರೆ ಬಡತನ, ನಿರುದ್ಯೋಗ, ಕಡಿಮೆ ಕೂಲಿ, ಸಣ್ಣ ಭೂಹಿಡುವಳಿ, ಜಾತಿಪದ್ಧತಿ, ಅಸ್ಪೃಶ್ಯತೆಯ ಆಚರಣೆ, ಮೂಢನಂಬಿಕೆ, ಅನಕ್ಷರತೆ, ಮಹಿಳೆ ಮತ್ತು ಪುರುಷರ ನಡುವಿನ ಅಸಮಾನತೆ, ಉನ್ನತ ವ್ಯಾಸಂಗಕ್ಕೆ ಸೌಲಭ್ಯವಿಲ್ಲದಿರುವುದು ಮತ್ತು ಮನರಂಜನೆಗೆ ಹೆಚ್ಚು ಅವಕಾಶ ಇಲ್ಲದಿರುವುದು, ಈ ಅಂಶಗಳನ್ನು ಸಾಮಾನ್ಯ ಭಾಷೆಯಲ್ಲಿ 'ತಳ್ಳುವ' ಅಥವಾ ಪ್ರಚೋದಿಸುವ (ಪುಶ್) ಅಂಶಗಳೆಂದು ಕರೆಯಾಲಾಗುತ್ತದೆ.

ಇದಕ್ಕೆ ವಿರುದ್ಧವಾಗಿ ಕ್ರಿಯಾಶೀಲ ಅಂಶಗಳನ್ನು ಆಕರ್ಷಕ ಅಂಶಗಳೆಂದು ಪರಿಗಣಿಸಲಾಗಿದೆ. ಉತ್ತಮ ಉದ್ಯೋಗ ಅವಕಾಶಗಳು, ಹೆಚ್ಚು ಕೂಲಿ ಮತ್ತು ವೇತನ, ಕೈಗಾರಿಕೀಕರಣ, ನಗರೀಕರಣ, ಸಮಾನತೆ ತತ್ತ್ವ, ವಿದ್ಯಾಭ್ಯಾಸಕ್ಕಿರುವ ವಿಪುಲ ಅವಕಾಶಗಳು, ಪಾಶ್ಚಿಮಾತ್ಯ ರಾಷ್ಟ್ರಗಳ ಜೀವನ ಶೈಲಿ, ಉತ್ತಮ ಸಾರಿಗೆ–ಸಂಪರ್ಕ ಮತ್ತು ಮನರಂಜನೆ ಅತಿ ಮುಖ್ಯ ವಿಕರ್ಷಕ ಅಂಶಗಳಾಗಿವೆ. ಈ ಅಂಶಗಳು 'ಎಳೆಯುವ' ಅಥವಾ ಆಕರ್ಷಿಸುವ (ಪುಲ್) ಕಾರಣಗಳೆಂದು ಸಾಮಾನ್ಯ ಭಾಷೆಯಲ್ಲಿ ಕರೆಯಲ್ಪಡುತ್ತವೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಗರಗಳು ವೇಗವಾಗಿ ಬೆಳೆಯಲು ಮತ್ತು ಕೇಂದ್ರೀಕೃತ ಜನಸಂಖ್ಯೆ ಹಂಚಿಕೆಯಾಗಲು ಆಕರ್ಷಕ ಮತ್ತು ವಿಕರ್ಷಕ ಅಂಶಗಳು ಪ್ರಮುಖವಾಗಿ ಕಾರಣವಾಗಿವೆ ಎಂದು ವಿಶ್ಲೇಷಿಸಲಾಗುತ್ತದೆ. (ಪಿ.ಎನ್.ಎಚ್.)

**ಆಕಾಶ:** ಭೂಮಿಯ ಮೇಲೆ ಕವಿಚಿಟ್ಟಂತೆ ಕಾಣುವ ನೀಲವರ್ಣದ ಅರ್ಧಗೋಳ; ಗಗನ, ಬಾನು, ವ್ಯೋಮ, ಖಗೋಳ–ಇವು ಪರ್ಯಾಯ ಪದಗಳು (ಸ್ಕೈ, ಹೆವೆನ್, ಫರ್ಮಮೆಂಟ್, ಸೆಲೆಸ್ಟಿಯಲ್ ಸ್ಫಿಯರ್). ಆಕಾಶಕಾಯಗಳ ಹಂಚಿಕೆ ಮತ್ತು ಅವುಗಳನ್ನೊಳಗೊಂಡ ಸಮಗ್ರ ಪ್ರದೇಶಕ್ಕೆ ವಿಶ್ವ ಅಥವಾ ಬ್ರಹ್ಮಾಂಡವೆನ್ನುವರು. ಇದರಿಂದ ಸಕಲ ಕಾರ್ಯಗಳನ್ನು ತೆಗೆದರೆ ದೊರೆಯುವ ಪ್ರದೇಶವೇ ಆಕಾಶ (ಸ್ಪೇಸ್). ಅಂತರಿಕ್ಷವೆಂದೂ ಕರೆಯುತ್ತಾರೆ. ಇದೊಂದು ಶೂನ್ಯ ಪ್ರದೇಶ. ಭೌತಿಕ ಆಕಾಶವೆಂಬ ರೂಢಿಯಲ್ಲಿರುವ ಶಬ್ದವು ಶೂನ್ಯಾಕಾಶದ ಒಂದು ಅಂಶವನ್ನು ಸೂಚಿಸುತ್ತದೆ– ಎರಡು ಬಿಂದುಗಳ ನಡುವಣ ಆಕಾಶ. ಪ್ರತಿಯೊಬ್ಬ ಮನುಷ್ಯನಿಗೂ ಎಲ್ಲಿಯೇ ಯಾವ ಹೊತ್ತಿನಲ್ಲಿಯೇ ನಿಂತು ನೋಡಿದರೂ ತಾನೇ ಈ ಗೋಳದ ಕೇಂದ್ರ ಎಂಬ ಭಾವನೆ ಮೂಡುತ್ತದೆ. ಆಕಾಶದ ಆಳ ಊಹೆಗೆ ನಿಲುಕದು. ವಸ್ತುಗಳ ದೂರಗಳು ಒಂದು ಮಿತಿಯಲ್ಲಿ ಇರುವವರೆಗೆ ಅಂತರಗಳನ್ನು ಕಣ್ಣು ಗುರುತಿಸಬಲ್ಲುದು. ಅಲ್ಲಿಂದ ಸೂರ್ಯ, ನಕ್ಷತ್ರಗಳು ಇತ್ಯಾದಿ (ಒಟ್ಟಾಗಿ ಆಕಾಶಕಾಯಗಳು) ಆಕಾಶದ ಮೈಗೆ ಅಂಟಿರುವಂತೆ ಕಾಣುವುದು ಈ ಕಾರಣದಿಂದ. ಸರಿಸುಮಾರು ಗೋಳಾಕಾರದಲ್ಲಿರುವ ಭೂಮಿಯನ್ನು ಆವರಿಸಿದ ವಾಯುಮಂಡಲವಿದೆ. ಇದರಲ್ಲಿ ಬೇರೆ ಬೇರೆ ಎತ್ತರಗಳಲ್ಲಿ ಮೋಡಗಳು ತೇಲುತ್ತಿವೆ; ಅಸಂಖ್ಯಾತ ದೂಳಿನ ಕಣಗಳು, ನೀರಾವಿ, ಸೂಕ್ಷ್ಮಕಣಗಳು ಲೀನಗೊಂಡು ನಿರಂತರ ಕ್ಷೋಭೆಯಲ್ಲಿವೆ. ಪ್ರತಿಯೊಂದು ಆಕಾಶಕಾಯದ ಬೆಳಕೂ ವಾಯುಮಂಡಲದ ಕವಚವನ್ನು ದಾಟಿ ವೀಕ್ಷಕನೆಡೆಗೆ ಬರಬೇಕು. ಸೂರ್ಯಕಿರಣಗಳು ಹೀಗೆ ಬರುವಾಗ ಅವುಗಳಿಗೂ ವಾಯುಕಣಗಳಿಗೂ ಭೌತಿಕ ಪ್ರಕ್ರಿಯೆ ಉಂಟಾಗಿ ಕಣಗಳು ನೀಲವರ್ಣವನ್ನು ಚದರಿಸುವುದರಿಂದ ಆಕಾಶಕ್ಕೆ ಅಥವಾ ವಾಯುಮಂಡಲಕ್ಕೆ ಈ ಬಣ್ಣ ಬಂದಿದೆ. ವಾಯುಮಂಡಲದ ಮೂಲಕ ಆಕಾಶಕಾಯಗಳನ್ನು ನಾವು ನೋಡುವುದರಿಂದ ಅವೆಲ್ಲವೂ ನೀಲಗೋಳದ ಮೈಗೆ ಅಂಟಿಕೊಂಡಿರುವಂತೆ ಅಸ್ತಿತ್ವದಿಂದಲೂ ಬೆಳಕು ಮತ್ತು ನಮ್ಮ ಕಣ್ಣುಗಳ ರಚನೆಯಿಂದಲೂ ಅದೊಂದು ನೀಲ ಅರ್ಧಗೋಳವಾಗಿ ಭಾಸವಾಗುತ್ತವೆ.

ಆಕಾಶ–ಭೂಮಿ ಅತಿ ದೂರದಲ್ಲಿ ಒಂದು ಮಹಾವೃತ್ತದಲ್ಲಿ ಸಂಧಿಸಿದಂತೆ ಭಾಸವಾಗುವುದು. ಇದರ ಕೇಂದ್ರ ವೀಕ್ಷಕ. ಈ ವೃತ್ತದಿಂದ ಕೆಳಗೆ ಅವನಿಗೇನೂ ಕಾಣಿಸದು. ವೃತ್ತದ ಹೆಸರು ಕ್ಷಿತಿಜ (ದಿಗಂತ). ವೀಕ್ಷಕನ ಸ್ಥಾನವನ್ನು ಅನುಸರಿಸಿ ಕ್ಷಿತಿಜ ವ್ಯತ್ಯಾಸಗೊಳ್ಳುತ್ತದೆ. ಪ್ರತಿಯೊಂದು ಆಕಾಶಕಾಯವೂ ಕ್ಷಿತಿಜದ ಪೂರ್ವವಲಯದಲ್ಲಿ ಮೂಡಿ, ಮೇಲೇರಿ, ಪಶ್ಚಿಮವಲಯದಲ್ಲಿ ಮುಳುಗಿದಂತೆ ನಮಗೆ ಭಾಸವಾಗುವುದು. ಆಕಾಶಕಾಯವೂ ಒಂದೊಂದು ಕಾಯದ ಪಥವೂ ಒಂದೊಂದು ವೃತ್ತ. ಉತ್ತರ ದಿಕ್ಕಿನೆಡೆಗೆ ಸರಿದಂತೆ ಅಲ್ಲಿರುವ ನಕ್ಷತ್ರ ಪಥಗಳು ಕ್ರಮೇಣ ಸಂಕೋಚಗೊಂಡು ಒಂದು ಸ್ಥಾನದಲ್ಲಿರುವ ನಕ್ಷತ್ರ ಪೂರ್ಣ ನಿಶ್ಚಲವಾಗಿರುವಂತೆಯೇ ತೋರುವುದು. ಇದು ಧ್ರುವನಕ್ಷತ್ರ. ಆಕಾಶದಲ್ಲಿ ಪ್ರತಿ ಕಾಯದ ದೈನಂದಿನ ಪಥ ಧ್ರುವನಕ್ಷತ್ರ ಕೇಂದ್ರವಾಗಿ ಅದರಿಂದ ಆಯಾ ನಕ್ಷತ್ರದ ದೂರ ತ್ರಿಜ್ಯವಾಗಿರುವ ವೃತ್ತ. ಉತ್ತರದಲ್ಲಿರುವಂತೆಯೇ ದಕ್ಷಿಣದಲ್ಲಿಯೂ (ಭೂಮಿಯ ಉತ್ತರಾರ್ಧವಲಯದಲ್ಲಿರುವ ನಮಗೆ ಕಾಣಿಸದ) ಒಂದು ನಿಶ್ಚಲ ಬಿಂದುವಿದೆ. ಅದು ದಕ್ಷಿಣಧ್ರುವ. ಆಕಾಶಗೋಳ ಈ ಎರಡು ಧ್ರುವಬಿಂದುಗಳನ್ನು ಜೋಡಿಸುವ ವ್ಯಾಸದ (ಇದರ ಕೇಂದ್ರ ವೀಕ್ಷಕ) ಸುತ್ತಲೂ ದಿವಸಕ್ಕೊಂದು ಸಲ ಆವರ್ತಿಸುವುದು. ಭೂಮಿ ಪಶ್ಚಿಮದಿಂದ ಪೂರ್ವಕ್ಕೆ ದಿವಸಕ್ಕೊಂದು ಸಲ ಆವರ್ತಿಸಿದಂತೆ ನಮಗೆ ಭಾಸವಾಗುತ್ತದೆ. *

**ಆಕಾಶಗಂಗೆ:** ವಿಶ್ವದಲ್ಲಿರುವ ಹಲವಾರು ಬ್ರಹ್ಮಾಂಡಗಳಲ್ಲಿ (ಗ್ಯಾಲಕ್ಸೀಸ್) ಸೂರ್ಯ ಇರುವ ಬ್ರಹ್ಮಾಂಡ (ಮಿಲ್ಕಿ ವೇ). ಸ್ಥಳೀಯ ಬ್ರಹ್ಮಾಂಡ, ಕ್ಷೀರಪಥ, ಬಾಂದೊರೆ ಪರ್ಯಾಯ ಪದಗಳು.

ಬರಿಗಣ್ಣಿನಿಂದ ಆಕಾಶಗಂಗೆಯನ್ನು ನೋಡಬಹುದು. ಆಕಾಶದ ದಕ್ಷಿಣದಿಂದ ಉತ್ತರದ ಕಡೆಗೆ ಪಸರಿಸಿರುವ ಈ ಮಂದ ಪ್ರಕಾಶದ ಬೆಳಕಿನ ಪಟ್ಟಿಯಲ್ಲಿ ಸಾವಿರಾರು ನಕ್ಷತ್ರಗಳು ಇರಬಹುದೆಂದು ಅಂದಾಜು. ಲಘುಶ್ವಾನ (ಕೆನಿಸ್‌ಮೈನರ್), ಮಹಾವ್ಯಾಧ (ಒರೈಯನ್), ಮಿಥುನ (ಜೆಮಿನಿ), ವೃಷಭ (ಟಾರಸ್), ಆರಿಗಾ, ಪರ್ಸಿಯಸ್, ಕೆಸಿಯೋಪಿಯ, ಆಂಡ್ರೊಮಿಡ, ಸಿಫಿಯುಸ್, ಸಿಗ್ನಸ್, ಅಕ್ವಿಲಾ, ಧನು (ಸಜಿಟೇರಿಯಸ್), ವೃಶ್ಚಿಕ (ಸ್ಕಾರ್ಪಿಯೋ), ಸೆಂಟಾರಸ್, ಕ್ರಕ್ಸ್, ಕರಿನಾ, ವೇಲಾ ಪಪ್ಪಿಸ್, ಮಹಾಶ್ವಾನ (ಕೆನಿಸ್ ಮೇಜರ್) ಮುಂತಾದ ನಕ್ಷತ್ರಪುಂಜಗಳನ್ನು ಆಕಾಶಗಂಗೆ ಒಳಗೊಂಡಿದೆ. ಸಿಗ್ನಸ್ ನಕ್ಷತ್ರಪುಂಜದ ಬಳಿ ಆಕಾಶಗಂಗೆಯ ಪ್ರಕಾಶ ಸ್ವಲ್ಪ ಹೆಚ್ಚು. ಅಲ್ಲಿ ಈ ಬೆಳಕಿನ ಹೊನಲು ಎರಡು ಕವಲಾಗಿ ಒಡೆದು ಸ್ಕೂಟಂ ಮತ್ತು ಓಫಿಯೂಕಸ್ ಪುಂಜಗಳನ್ನು ದಾಟಿ ವೃಶ್ಚಿಕ – ಧನು ರಾಶಿಗಳ ಮೂಲಕ ಒಂದೊಂದು ಕವಲೂ ದಕ್ಷಿಣಕ್ಕೆ ಸಾಗುವುದು. ಆರ್ಗೋ ಮತ್ತು ಸೆಂಟಾರಸ್ (ದಕ್ಷಿಣಾಕಾಶ) ಪುಂಜಗಳ ವಲಯದಲ್ಲಿ ಆಕಾಶಗಂಗೆಯ ಪ್ರಕಾಶ ಅಧಿಕತಮ. ವೃಶ್ಚಿಕ ಮತ್ತು ಧನು ರಾಶಿಗಳ ಸಮೀಪ ಇದರ ಅಗಲ ಪರಮಾವಧಿ, ಸುಮಾರು $40^0$.

ದೂರದರ್ಶಕಗಳ ಮೂಲಕ ನೋಡುವಾಗ ಅಥವಾ ಛಾಯಾಚಿತ್ರ ತೆಗೆದು ಪರೀಶಿಲಿಸುವಾಗ ಆಕಾಶಗಂಗೆ ಅಸಂಖ್ಯಾತ ಸ್ಪಷ್ಟವಾದ ಆದರೆ ಕ್ಷೀಣವಾದ ನಕ್ಷತ್ರಗಳಿಂದಲೂ ನೆಬ್ಯುಲಗಳಿಂದಲೂ ಅಂತರ ನಾಕ್ಷತ್ರಿಕ ದೂಳು, ಅನಿಲಗಳಿಂದಲೂ ಕೂಡಿದೆ ಎಂದು ತಿಳಿಯಿತು. ದೂಳಿನ ರಾಶಿ ಕೆಲವೆಡೆ ದಟ್ಟವಾಗಿ ಮಳೆ ಮೋಡದಂತೆ ಕಪ್ಪಾಗಿ ವ್ಯಾಪಿಸಿದೆ. ಸಮೀಪದ ನಕ್ಷತ್ರಗಳ ಪ್ರಕಾಶದಿಂದ ಇವುಗಳ ಅಸ್ತಿತ್ವ ತಿಳಿಯಬಹುದು. ಕೆಲವು ನೆಬ್ಯುಲಾಗಳ ನಡುವೆ ಬೂದಿಯ ನಡುವಿನ ಕೆಂಡದಂತೆ ನಕ್ಷತ್ರಗಳು ಹುದುಗಿವೆ. ಅಚ್ಚ ಕಪ್ಪುಬಣ್ಣದ ನೆಬ್ಯುಲಾಗಳು ನಮ್ಮ ಸಮೀಪ ಇವೆ. (300–1500 ಜ್ಯೋತಿರ್ವರ್ಷಗಳು). ಸುಮಾರು 5000 ಜ್ಯೋತಿರ್ವರ್ಷ ದೂರದಲ್ಲಿರುವ ಕಪ್ಪು ನೆಬ್ಯುಲಾ ಮಹಾವ್ಯಾಧ ಪುಂಜದ ಖಡ್ಗದ ಹಿಂದೆ ಇದೆ. ದೂರದರ್ಶಕ ವೀಕ್ಷಣೆಗೆ ಇದು ಹಸಿರು ಬಣ್ಣದ ಮೋಡದಂತೆ ಕಾಣುವುದು (ಆಂಡ್ರೊಮಿಡ ನೆಬ್ಯುಲಾ ಆಕಾಶಗಂಗೆಯ ಅಂಶವಲ್ಲ).

ಆಕಾರ : ಖಗೋಳವನ್ನು ಪೂರ್ಣ ಸುತ್ತುವರಿದಿರುವ ಆಕಾಶಗಂಗೆಯಲ್ಲಿ ಒಂದು ಕಾಲ್ಪನಿಕ ಮಹಾವೃತ್ತವಿದೆಯೆಂದು ಭಾವಿಸಬಹುದು. ಈ ಮಹಾವೃತ್ತದ ಹೆಸರು ಬ್ರಹ್ಮಾಂಡವಿಷುವದ್ವೃತ್ತ (ಗ್ಯಾಲಾಕ್ಟಿಕ್ ಈಕ್ವೇಟರ್). ಇದರ ಉತ್ತರ ಧ್ರುವದ ನಿರ್ದೇಶಕಗಳು: ವಿಷುವದಂಶ (ರೈಟ್ ಅಸೆನ್ಷನ್) 12 ಗಂ. 40 ಮಿ. ಮತ್ತು ಘಂಟಾವೃತ್ತಾಂಶ (ಡೆಕ್ಲಿನೇಷನ್) $28^0$ ಉ. ಖಗೋಳೀಯ (ಸೆಲೆಸ್ಟಿಯಲ್) ಮತ್ತು ಬ್ರಹ್ಮಾಂಡವಿಷುವದ್ವೃತ್ತಗಳು ಅಕ್ವಿಲಾ ಪುಂಜದ ಬಳಿ ಸಂಧಿಸುತ್ತವೆ. ಆಕಾಶಗಂಗೆಯ ಆಕಾರವನ್ನು ಯಾವುದೇ ವಿಧದ ಪ್ರತ್ಯಕ್ಷ ಕ್ರಮದಿಂದ ನಿರ್ಧರಿಸುವುದು ಸಾಧ್ಯವಿಲ್ಲ. ಈ ಮಹಾ ವೈಶಾಲ್ಯದ ಅತ್ಯಲ್ಪಾಂಶ ಸೂರ್ಯ; ಅದರ ಅತ್ಯಲ್ಪಾಂಶ ಭೂಮಿಯ ಮೇಲಿನ ಮಾನವ; ಸಮುದ್ರದೊಳಗಿನ ಕ್ರಿಮಿ ಸಮುದ್ರದ ಆಕಾರ ತಿಳಿಯಲು ಮಾಡಿದ ಯತ್ನದಂತೆ. ಅಪ್ರತ್ಯಕ್ಷ ವಿಧಾನಗಳಿಂದ ಇದನ್ನು ನಿರ್ಧರಿಸಿದ್ದಾರೆ. ವಿಲಿಯಂ ಹರ್ಷೆಲ್ (18ನೆಯ ಶತಮಾನ) ಈ ದಾರಿಯಲ್ಲಿ ಮೊದಲ ಹೆಜ್ಜೆ ಇಟ್ಟ ಖಗೋಳಶಾಸ್ತ್ರಜ್ಞ. ದೂರದರ್ಶಕದಿಂದ ಆಕಾಶದ ವಿವಿಧ ವಲಯದಲ್ಲಿ ಕಾಣುವ ಬಿಡಿ ನಕ್ಷತ್ರಗಳ ಸಂಖ್ಯೆಯನ್ನು ಆತ ಎಣಿಸಿದ. ವಲಯ–ನಕ್ಷತ್ರಸಂಖ್ಯೆ ಕೋಷ್ಟಕ ಸಿದ್ಧಪಡಿಸಿ ಪರಿಶೀಲಿಸಿದಾಗ ನಕ್ಷತ್ರಗಳ ಹಂಚಿಕೆಯಲ್ಲಿ (ಡಿಸ್ಟ್ರಿಬ್ಯೂಷನ್) ಒಂದು ವಿಶೇಷತೆ ಕಂಡ. ಬ್ರಹ್ಮಾಂಡ ವಿಷುವದ್ವೃತ್ತದ ಧ್ರುವಗಳಿಂದ ಆಕಾಶಗಂಗೆಯೆಡೆಗೆ ಸರಿದಂತೆ ನಕ್ಷತ್ರಗಳ ಸಂಖ್ಯೆ ವಿಪರೀತವಾಗಿ ವೃದ್ಧಿಸುತ್ತದೆ; ಮತ್ತು ಇಂಥ ವೃದ್ಧಿ ಉಜ್ವಲ ನಕ್ಷತ್ರಗಳಿಗಿಂತಲೂ ವಿಶೇಷವಾಗಿ ಕ್ಷೀಣ ನಕ್ಷತ್ರಗಳನ್ನು ಕುರಿತು ಗಮನಾರ್ಹವಾಗಿದೆ. ಬರಿಗಣ್ಣಿನಿಂದ ನೋಡುವಾಗ ಸಮಗ್ರ ಆಕಾಶದಲ್ಲಿ ಯಾದೃಚ್ಛಿಕವಾಗಿ ನಕ್ಷತ್ರಗಳನ್ನು ಚೆಲ್ಲಿದಂತೆ ಕಂಡರೂ ದೂರದರ್ಶಕ ವೀಕ್ಷಣೆಯಲ್ಲಿ ಇದರಲ್ಲೂ ಒಂದು ಕ್ರಮಬದ್ಧತೆ ಇದೆ; ಬ್ರಹ್ಮಾಂಡವಿಷುವದ್ವೃತ್ತದೆಡೆಗೆ ನಕ್ಷತ್ರ ಸಾಂದ್ರತೆಯ ಪ್ರಮಾಣ ನಕ್ಷತ್ರಗಳ ಕಾಂತಿಯ ವಿಲೋಮಾನುಪಾತದಲ್ಲಿ ಎಂದು ತಿಳಿದುಬಂದದ್ದು ಹೊಸ ಅನ್ವೇಷಣೆಗೆ ಪ್ರಚೋದನೆ ನೀಡಿತು.

ಅಮೆರಿಕದ ಖಗೋಳ ವಿಜ್ಞಾನಿ ಸಿಯರ್ನ್, ಬ್ರಹ್ಮಾಂಡ ಅಕ್ಷಾಂಶದ (ಗ್ಯಾಲಾಕ್ಟಿಕ್ ಲ್ಯಾಟಿಟ್ಯೂಡ್) ಬೇರೆ ಬೇರೆ ಬೆಲೆಗಳಲ್ಲಿ ಹೆಚ್ಚು ಹೆಚ್ಚು ಶಕ್ತಿಯುತ ಕ್ಯಾಮರಾಗಳಿಂದ ನಕ್ಷತ್ರಗಳ ಛಾಯಾಚಿತ್ರ ತೆಗೆದು ಒಂದು ಕೋಷ್ಟಕ ತಯಾರಿಸಿದ. ಈ ಕೋಷ್ಟಕ ಮೇಲೆ ವಿವರಿಸಿದ ಆಕಾಶಗಂಗೆಯ ವೈಶಿಷ್ಟ್ಯಕ್ಕೆ ತಾತ್ತ್ವಿಕ ಹಿನ್ನಲೆ ಒದಗಿಸಿತು. ಆಕಾಶಗಂಗೆ ನಕ್ಷತ್ರಗಳ ನಿಬಿಡಸಮೂಹ; ಇದರ ಆಕಾರ ಚಪ್ಪಟೆ ತಟ್ಟೆಯಂತಿದೆ; ಸೂರ್ಯ ಇದರಲ್ಲಿ ಒಂದು ಅಂಶ ಎಂದು ದೃಢಪಟ್ಟಿತು.

ಸೂರ್ಯನ ಸ್ಥಾನ : ಆಕಾಶಗಂಗೆಯ ಕೇಂದ್ರದಲ್ಲಿ ಸೂರ್ಯ ಇರಬಹುದೆಂದು ಹರ್ಷೆಲ್ ಮೊದಲು ಭಾವಿಸಿದ್ದ. ಆದರೆ ಮುಂದಿನ ವೀಕ್ಷಣೆಗಳು ಸೂರ್ಯನಿಗೆ ಇಂಥ ಅಗ್ರಸ್ಥಾನವೀಯಲು ಯಾವ ಸಮರ್ಥನೆಯನ್ನೂ ಒದಗಿಸಲಿಲ್ಲ. ಧನೂರಾಶಿಯ ಕಡೆಗೆ ವೀಕ್ಷಿಸಿದಾಗ ಆಕಾಶಗಂಗೆಯ ನಕ್ಷತ್ರಗಳು ನಿಬಿಡವಾಗಿವೆ; ವಿರುದ್ಧ ದಿಕ್ಕಿನಲ್ಲಿ (ಅರಿಗಾ ಪುಂಜದೆಡೆಗೆ) ನೋಡಿದಾಗ ಅವು ವಿರಳವಾಗಿವೆ.

ಎರಡು ತಟ್ಟೆಗಳನ್ನು ಒಂದರಮೇಲೆ ಇನ್ನೊಂದನ್ನು ಕವುಚಿಟ್ಟರೆ ದೊರೆಯುವಂಥ ಘನಾಕೃತಿ ಆಕಾಶಗಂಗೆಯದು –ಮಧ್ಯೆ ಉಬ್ಬಿಕೊಂಡಿದೆ, ಅಂಚುಗಳಲ್ಲಿ ತೆಳುವಾಗುತ್ತ ಹೋಗುವುದು, ಇದನ್ನು ಆವರಿಸಿ ಸುರಳಿ ಕೈಗಳಿವೆ. ಆಕಾಶಗಂಗೆಯ ಕೇಂದ್ರ ಧನೂರಾಶಿಯ

ದಿಕ್ಕಿನಲ್ಲಿ ಇದೆ, ವ್ಯಾಸ ಸುಮಾರು 1,00,000 ಜ್ಯೋತಿರ್ವರ್ಷಗಳು; ನಡುವಿನ ಉಬ್ಬಿದ ಭಾಗದ ದಪ್ಪ 3,000–4,000 ಜ್ಯೋತಿರ್ವರ್ಷಗಳು; ಆಕಾಶಗಂಗೆಯ ಕೇಂದ್ರೀಯ ನಿಬಿಡ ನಕ್ಷತ್ರವಲಯದ ದಪ್ಪ 8,000–10,000 ಜ್ಯೋತಿರ್ವರ್ಷಗಳು; ಅಲ್ಲಿಂದ ಮುಂದೆ ನಕ್ಷತ್ರಗಳ ಹಂಚಿಕೆ ವಿರಳವಾಗುತ್ತ, ಅಂಚಿನೆಡೆಗೆ ಸಾಗಿದವಂತೆ ತೀರ ತೆಳುವಾಗುತ್ತದೆ. ಕೇಂದ್ರದಿಂದ ಸೂರ್ಯನ ದೂರ 30,000 ಜ್ಯೋತಿರ್ವರ್ಷಗಳು. ಸೂರ್ಯ ಆಕಾಶಗಂಗೆಯ ಸಮತಲದಿಂದ ಉತ್ತರಕ್ಕೆ ಕೋಮ್ ಪುಂಜದೆಡೆಗೆ 100 ಜ್ಯೋತಿರ್ವರ್ಷಗಳ ದೂರದಲ್ಲಿದೆ.

ಆವರ್ತನೆ : ಆಕಾಶಗಂಗೆ (ಅಂದರೆ ಇದರೊಳಗೆ ಅಡಕವಾಗಿರುವ ಸಕಲ ನಕ್ಷತ್ರ, ನೆಬ್ಯುಲ ಮುಂತಾದವು) ತನ್ನ ಕೇಂದ್ರದ ಸುತ್ತಲೂ ನಿರಂತರವಾಗಿ ಆವರ್ತಿಸುತ್ತಿದೆ. ಒಂದು ಉಬ್ಬಿದ ತಟ್ಟೆ ತನ್ನ ಕೇಂದ್ರದ ಸುತ್ತಲೂ ಆವರ್ತಿಸುವಾಗ ತಟ್ಟೆಯ ಮೇಲಿನ ವಿವಿಧ ಬಿಂದುಗಳ ಸಾಪೇಕ್ಷ ಸ್ಥಾನಗಳು ಬದಲಾಗುವುದಿಲ್ಲ. ತಟ್ಟೆ ದೃಢವಸ್ತು ಆಗಿರುವುದು ಇದರ ಕಾರಣ. ಆದರೆ ಆಕಾಶಗಂಗೆ ದೃಢವಸ್ತುವಲ್ಲ. ಅಸಂಖ್ಯಾತ ಆಕಾಶಕಾಯಗಳು ಪರಸ್ಪರ ಗುರುತ್ವಾಕರ್ಷಣೆಗಳಿಂದ ಬಂಧಿತವಾಗಿ ಸಡಿಲವಾಗಿ ಜೋಡಣೆಗೊಂಡು ಒಂದೆಡೆ ಕಲೆತಿರುವ ವ್ಯವಸ್ಥೆ. ಇಂಥ ವ್ಯವಸ್ಥೆಯ ಆವರ್ತನೆಯ ನಿಯಮದ ಪ್ರಕಾರ ಎಲ್ಲ ಆಕಾಶಕಾಯಗಳ ಪರಿಭ್ರಮಣೆಯ ದಿಕ್ಕು ಒಂದೇ ಆಗಿದೆ; ಕೇಂದ್ರಸಮೀಪ ಕಾಯಗಳ ಪರಿಭ್ರಮಣವೇಗ ದೂರದವುಗಳಿಗಿಂತ ಅಧಿಕ. ಪ್ರತ್ಯಕ್ಷ ವೀಕ್ಷಣೆಗಳಿಂದ ಮೊದಲನೆಯದು ದೃಢಪಟ್ಟಿದೆ; ನಕ್ಷತ್ರಗಳ ಚಲನೆಯ ದಿಕ್ಕುಗಳು ಧನೂರಾಶಿಯೆಡೆಗೆ (ಆಕಾಶಗಂಗೆಯ ಪ್ರತಿಕೇಂದ್ರ) ಒಲವು ತೋರಿಸಿವೆ ಎಂದು ತಿಳಿದಿದೆ. ಸೂರ್ಯನಿಗೆ ಈ ಚಲನೆಯ ವೇಗ ಸೆಕೆಂಡಿಗೆ 64 ಕಿಮೀಗಳ ವೇಗದಲ್ಲಿ ಆಕಾಶದಲ್ಲಿ ಪರಿಭ್ರಮಿಸುತ್ತಿದೆ. ಒಂದು ಪರಿಭ್ರಮಣೆ ಮುಗಿಸಲು ಸೂರ್ಯನಿಗೆ ಬೇಕಾಗುವ ಅವಧಿ ಸು. $2x10^8$ ವರ್ಷಗಳು. ಈ ಅವಧಿಯನ್ನು ಒಂದು ವಿಶ್ವವರ್ಷ (ಕಾಸ್ಮಿಕ್ ಇಯರ್) ಎಂದು ಕರೆಯುವುದಿದೆ. ಆಕಾಶಗಂಗೆಯ ವಿವಿಧ ಕಾಯಗಳ ಪರಿಭ್ರಮಣ ವೇಗದಲ್ಲಿ ಗಮನಾರ್ಹವಾದ ಅಸಮಾಂಗತ್ವವಿದೆ. ಕೇಂದ್ರ ಸಮೀಪ ಕಾಯಗಳ ಪರಿಭ್ರಮಣವೇಗ ಕೇಂದ್ರ ದೂರ ಕಾಯವಾದ ಸೂರ್ಯನ ವೇಗಕ್ಕಿಂತ ಹೆಚ್ಚೇನೂ ಇಲ್ಲ. ಇದರ ಕಾರಣ ಪ್ರಾಯಶಃ ಆಕಾಶಗಂಗೆಯ ಸಡಿಲವಾದ ಜೋಡಣೆಗೆ ಮತ್ತು ಅದರಿಂದ ಉಂಟಾಗುವ ದುರ್ಬಲ ಗುರುತ್ವಾಕರ್ಷಣ ವಲಯ. ಇಂಥ ವಲಯದಲ್ಲಿ ಸೆಕೆಂಡಿಗೆ 322–483 ಕಿಮೀ ವೇಗದಲ್ಲಿ ಪರಿಭ್ರಮಿಸುವ ನಕ್ಷತ್ರಗಳಿದ್ದರೆ ಅವು ಆಕಾಶಗಂಗೆಯ ವಲಯದಿಂದ ಬಿಡುಗಡೆ ಹೊಂದಿ ವಿಶಾಲ ವಿಶ್ವದಲ್ಲಿ ಮರೆಯಾಗಬಹುದು.

ದ್ರವ್ಯರಾಶಿ : ಕೇಂದ್ರದಿಂದ ಸೂರ್ಯನ ಕಕ್ಷೆಯವರೆಗೆ ವ್ಯಾಪಿಸಿರುವ ಆಕಾಶಗಂಗೆಯ ದ್ರವ್ಯರಾಶಿ $1.6x10^{11}$ ಸೂರ್ಯದ್ರವ್ಯರಾಶಿಯಷ್ಟು. ಇದರಿಂದ ಹೊರಗಿನ ವಲಯದ ದ್ರವ್ಯರಾಶಿ ಇದಕ್ಕಿಂತ ಕಡಿಮೆ. ಆದ್ದರಿಂದ ಆಕಾಶಗಂಗೆಯ ಒಟ್ಟು ದ್ರವ್ಯರಾಶಿ $2x10^{11}$ ಸೂರ್ಯದ್ರವ್ಯರಾಶಿಯಷ್ಟು ಎಂದು ಅಂದಾಜು ಮಾಡಲಾಗಿದೆ.

ಇತ್ತೀಚಿನ ದಿನಗಳಲ್ಲಿ ಆಕಾಶಗಂಗೆಯ ಹೊರಭಾಗದಲ್ಲಿ ಅದೃಶ್ಯವಸ್ತು ಹೇರಳವಾಗಿರಬಹುದೆಂಬ ವಾದ ಕೇಳಿಬರುತ್ತಿದೆ. ಗ್ಯಾಲಕ್ಸಿಯ ಆವರ್ತನೆಯನ್ನು ಸಾಧಾರಣ ಭೌತನಿಯಮಗಳಿಂದ ವಿವರಿಸಲಾಗಿರುವುದೇ ಈ ಪರಿಕಲ್ಪನೆಗೆ ಕಾರಣವಾಯಿತು. ಡಾರ್ಕ್ ಮ್ಯಾಟರ್ ಎನ್ನುವ ಈ ವಸ್ತು ಗ್ರಹಗಳು, ನ್ಯೂಟ್ರಾನ್ ನಕ್ಷತ್ರಗಳು, ಕಂದು ಕುಬ್ಜಗ್ರಹಗಳಿಂದಾಗಿರಬಹುದೆಂಬ ಊಹೆಯೂ ಇದೆ. (ಡಿ.ಆರ್.ಎ.)

**ಆಕ್ರಾ:** ಆಫ್ರಿಕದ ಪಶ್ಚಿಮ ಭಾಗದಲ್ಲಿ ಕಾಮನ್‌ವೆಲ್ತ್ ಗಣರಾಜ್ಯವೆನಿಸಿಕೊಂಡಿರುವ ಘಾನಾದ ರಾಜಧಾನಿ, ರೇವು. ಅತಿ ದೊಡ್ಡ ಪಟ್ಟಣ. ಜನಸಂಖ್ಯೆ ಸು. 1,904,000 (2000). ಹಿಂದೆ ಇದು ಬ್ರಿಟಿಷರ ವಸಾಹತಾಗಿದ್ದ ಗೋಲ್ಡ್ ಕೋಸ್ಟ್‌ಗೆ ಸೇರಿತ್ತು. ಬ್ರಿಟಿಷ್, ಫ್ರೆಂಚ್ ಮತ್ತು ಡಚ್ಚರ ಕೋಟೆಗಳು ಇಲ್ಲಿವೆ. ಇತ್ತೀಚೆಗೆ ರಸ್ತೆ ಮತ್ತು ರೈಲು ಮಾರ್ಗಗಳು ಉತ್ತಮ ಸ್ಥಿತಿಯಲ್ಲಿ ಬೆಳೆದಿರುವುದರಿಂದ ಸಾರಿಗೆ ಅನುಕೂಲತೆ ಈ ಪಟ್ಟಣಕ್ಕೆ ಹೆಚ್ಚಾಗಿ ದೊರೆತಿದೆ. ಸಾಬೂನು ಮತ್ತು ಕೀಟನಾಶಕ ರಾಸಾಯನಿಕ ವಸ್ತುಗಳ ತಯಾರಿಕೆ ಹೆಚ್ಚಾಗಿ ಬೆಳೆದಿದೆ. ಬಹುವಾಗಿ ಇಲ್ಲಿಂದ ಕೊಕೊ ರಫ್ತಾಗುತ್ತದೆ. (ಎಂ.ಎಸ್.)

**ಆಕ್ಲೆಂಡ್:** ನ್ಯೂಜಿಲೆಂಡಿನ ಅತಿ ದೊಡ್ಡ ನಗರ. ಉತ್ತರ ದ್ವೀಪದ ಪೂರ್ವ ಕರಾವಳಿಯಲ್ಲಿರುವ ರೇವು ಪಟ್ಟಣ. ಇದರ ಜನಸಂಖ್ಯೆ 1223200 (2004). ಇದು ಆಧುನಿಕ ಅನುಕೂಲತೆಗಳಿಂದ ಕೂಡಿದ್ದು ನೌಕಾ ಚಟುವಟಿಕೆಗಳ ಮೂಲ ಕ್ಷೇತ್ರವಾಗಿದೆ. ಉತ್ತರ ದಕ್ಷಿಣ ಭಾಗಗಳಲ್ಲಿ ಹುಲ್ಲುಗಾವಲುಗಳಿರುವುದರಿಂದ ಹೈನು ಕೈಗಾರಿಕಾ ಕೇಂದ್ರವೂ ಆಗಿದೆ. 1865ರಲ್ಲಿ ವೆಲ್ಲಿಂಗ್‌ಟನ್ ನ್ಯೂಜೀಲೆಂಡಿನ ರಾಜಧಾನಿಯಾಗುವವರೆಗೆ ಇದೇ ದೇಶದ ರಾಜಧಾನಿಯಾಗಿತ್ತು. ವೆಲ್ಲಿಂಗ್‌ಟನ್ ಮತ್ತು ಉತ್ತರ ದ್ವೀಪದ ಇತರ ಕೇಂದ್ರಗಳೊಡನೆ ರೈಲು ಮತ್ತು ವಿಮಾನ ಸಂಪರ್ಕಗಳೂ ಇವೆ. ಆಸ್ಟ್ರೇಲಿಯ, ಬ್ರಿಟನ್ ಮತ್ತು ಉತ್ತರ ಅಮೆರಿಕಗಳ ಪೆಸಿಫಿಕ್ ತೀರದೊಡನೆ ಹಡಗು ಹಾಗೂ ವಿಮಾನಗಳೂ ಇವೆ. (ಎಂ.ಎಸ್.ಎಂ.)

**ಆಕ್ಷಿಕ ಪ್ರದೇಶ:** ಈ ಪ್ರದೇಶವು ಒಂದೇ ಅಕ್ಷೆಯಲ್ಲಿ ಅಭಿವೃದ್ಧಿಗೊಂಡಿರುತ್ತದೆ. ರಸ್ತೆ ಸಾರಿಗೆ ಅಥವಾ ರೈಲು ಕಕ್ಷೆಯಾಗಿರಬಹುದು. ಈ ಕಕ್ಷೆಯಲ್ಲಿ ಮೂಲಭೂತ ಸೌಕರ್ಯವನ್ನು ಉತ್ತಮ ರೀತಿಯಲ್ಲಿ ಒದಗಿಸಿದರೆ, ಹೊಸ ಚಟುವಟಿಕೆ ಮತ್ತು ಕಾರ್ಯಗಳು ಚುರುಕಾಗಿದ್ದು, ಆಕ್ಷಿಕ ಪ್ರದೇಶದ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಒಂದು ಹೆದ್ದಾರಿಯನ್ನು ಗುರುತಿಸಿ, ವ್ಯವಸ್ಥಿತವಾಗಿ ಅಭಿವೃದ್ಧಿಯನ್ನು ಕೈಗೊಂಡರೆ, ಅದು ಒಂದು ಯೋಜನಾ ಆಕ್ಷಿಕ ಪ್ರದೇಶವಾಗಿ ಬೆಳೆಯುತ್ತದೆ. ಯಾವ ಆಕ್ಷಿಕ ಪ್ರದೇಶದಲ್ಲಿ ಯೋಜನೆ ಇಲ್ಲದಿದ್ದಲ್ಲಿ ಆ ಪ್ರದೇಶವು ಅವ್ಯವಸ್ಥಿತವಾಗಿ ಅಥವಾ ಅಡ್ಡಾದಿಡ್ಡಿಯಾಗಿ ಬೆಳೆದು ಮುಂದೆ ಸುಗಮ ಸಂಚಾರಕ್ಕಾಗಲಿ ಅಥವಾ ಒಂದು ಕಾರ್ಯ ರೂಪಣೆಯಲ್ಲಿಯಾಗಲಿ ಸಮಸ್ಯೆಗಳನ್ನು ಒಡ್ಡಬಹುದು. ಆಕ್ಷಿಕ ಪ್ರದೇಶವನ್ನು ಮೊದಲು ಗುರುತಿಸಿ, ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸಿದಲ್ಲಿ, ಆಕ್ಷಿಕ ಪ್ರದೇಶವು ಪ್ರಾದೇಶಿಕ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಮುಂಬೈ ಪುಣೆ ಆಕ್ಷಿಕ ಪ್ರದೇಶ, ಮೈಸೂರು–ಬೆಂಗಳೂರು ಆಕ್ಷಿಕ ಪ್ರದೇಶಗಳು, ಇತ್ತೀಚಿನ ವರ್ಷಗಳಲ್ಲಿ ವೇಗವಾಗಿ ಅಭಿವೃದ್ಧಿಗೊಳ್ಳುತ್ತಿರುವ ಆಕ್ಷಿಕ ಪ್ರದೇಶದ ಉದಾಹರಣೆಗಳು. ಈಗ ಯೋಜನಾ ಹಂತದಲ್ಲಿರುವ ಬಿಎಂಐಸಿ ಮತ್ತು ಜೋಡಿ ರೈಲು ಹಳಿ ಯೋಜನೆಗಳು ಕಾರ್ಯಗತವಾದ ಮೇಲೆ ಮೈಸೂರು–ಬೆಂಗಳೂರು ಆಕ್ಷಿಕ ಪ್ರದೇಶವು ಕರ್ನಾಟಕ ರಾಜ್ಯದಲ್ಲಿ ಒಂದು ಮುಖ್ಯ ಪ್ರದೇಶವಾಗಿ ಗುರುತಿಸಲ್ಪಡುವುದು. (ಎನ್.ಎಸ್.)

**ಆಗಸ್ಟ್ ಲೋಷ್:** 1940ರಲ್ಲಿ ಕೈಗಾರಿಕಾ ಸ್ಥಾನೀಕರಣ ಸಿದ್ಧಾಂತವನ್ನು ಮಂಡಿಸಿದವರು. ಇದರಲ್ಲಿ ಆದಾಯಕ್ಕೆ ಸಂಬಂಧಿಸಿದಂತೆ ಮಾರುಕಟ್ಟೆ ಅಂಶಗಳು ಮತ್ತು ಗರಿಷ್ಠ ಲಾಭವನ್ನು ಕೈಗಾರಿಕೆಗಳು ಹೇಗೆ ಗಳಿಸಿಕೊಳ್ಳುತ್ತವೆ ಎಂಬುದನ್ನು ವಿವರಿಸಿದ್ದಾರೆ. ಅಲ್ಲದೆ ಕೈಗಾರಿಕೆಯ ಸ್ಥಾನೀಕರಣದಲ್ಲಿ ಮಾರುಕಟ್ಟೆ ಪ್ರದೇಶಗಳ ಆಕಾರ ಹಾಗೂ ಗಾತ್ರ ಹೇಗೆ ಗರಿಷ್ಠ ಆದಾಯದ ಮೇಲೆ ಪ್ರಭಾವ ಬೀರುತ್ತವೆ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.




ಲೋಷ್ ಸಿದ್ಧಾಂತದ ಮಾರುಕಟ್ಟೆಯ ವ್ಯಾಪ್ತಿ

ಸಿದ್ಧಾಂತದ ಪರಿಕಲ್ಪನೆಗಳು: ಎಲ್ಲ ಪ್ರದೇಶಗಳು ಸಮಸಾರಿಗೆ ವೆಚ್ಚವನ್ನು ಹೊಂದಿದ್ದು ಸರಕು ಸೇವೆಗಳ ಪೂರೈಕೆ ಸ್ಥಿರವಾಗುತ್ತದೆ. ಜನಸಂಖ್ಯೆಯ ಹಂಚಿಕೆ ಸಮಾನವಾಗಿದ್ದು ಬೆಲೆ ಜಾಸ್ತಿಯಾದಾಗ ಬೇಡಿಕೆಯು ಕುಸಿಯುತ್ತದೆ. ಬೆಲೆ ಹೆಚ್ಚಾದಾಗ ಸಾರಿಗೆ ವೆಚ್ಚ ಹೆಚ್ಚಾಗುವುದು. ಉದ್ಯಮಗಳು ಗರಿಷ್ಠ ಪ್ರಮಾಣದ ಲಾಭಗಳಿಸುವ ಉದ್ದೇಶವನ್ನು ಹೊಂದಿರುತ್ತವೆ.

ಸಮತಟ್ಟಾದ ಮೇಲ್ಮೈಯಲ್ಲಿ ಹಲವಾರು ಉತ್ಪಾದಕರು ತಮ್ಮ ವಸ್ತುಗಳನ್ನು ಉತ್ಪಾದಿಸುತ್ತಿದ್ದು, ಇಬ್ಬರ ನಡುವೆ ಸಮಾನ ದೂರವಿರುತ್ತದೆ. ಮತ್ತು ಮಾರುಕಟ್ಟೆ ಪ್ರದೇಶಗಳೆಲ್ಲವೂ ವೃತ್ತಾಕಾರದಲ್ಲಿದೆ. ಮಾರುಕಟ್ಟೆ ಪ್ರದೇಶದ ಗಾತ್ರವು ಆ ಪ್ರದೇಶದ ಉತ್ಪಾದಕರು ಅಥವಾ ಉದ್ಯಮಗಳ ಸಂಖ್ಯೆಯ ಮೇಲೆ ನಿರ್ಧರಿತವಾಗುತ್ತದೆ. ಉತ್ಪಾದಕರ ಸಂಖ್ಯೆ ಹೆಚ್ಚಾದಂತೆ ಮಾರುಕಟ್ಟೆ ಪ್ರದೇಶವು ಕಡಿಮೆಯಾಗುತ್ತಾ ಬರುತ್ತದೆ ಮತ್ತು ಲಾಭಗಳಿಕೆಯಲ್ಲಿ ಪೈಪೋಟಿ ಏರ್ಪಡುತ್ತದೆ.

ವೃತ್ತಾಕಾರದ ಮಾರುಕಟ್ಟೆಯ ಪ್ರದೇಶದಿಂದಾಗಿ ಕೆಲವು ಪ್ರದೇಶಗಳು ಸೇವೆಯಿಂದ ವಂಚಿತವಾಗುತ್ತವೆ. ಇದರಿಂದ ಉತ್ಪಾದಕರು ಬಹಳ ಹತ್ತಿರಕ್ಕೆ ಚಲಿಸಬೇಕಾಗುತ್ತದೆ. ಈ ರೀತಿಯಾಗಿ ಷಡ್ಭುಜಾಕೃತಿಗಳು ಅಭಿವೃದ್ಧಿಯಾಗುತ್ತವೆ. ಅಂತಿಮವಾಗಿ ಪ್ರದೇಶವು ಹಲವಾರು ಉತ್ಪಾದಕರಿಂದ ತುಂಬಿಕೊಂಡು ಷಡ್ಭುಜಾಕೃತಿಯ ಮಾರುಕಟ್ಟೆ ಪ್ರದೇಶಗಳೂ ನಿರ್ಮಾಣಗೊಳ್ಳುತ್ತವೆ. ಪ್ರತಿಯೊಬ್ಬ ಉತ್ಪಾದಕನು ಬೇರೆ ಬೇರೆ ಗಾತ್ರದ ಮಾರುಕಟ್ಟೆ ಪ್ರದೇಶವನ್ನು ಪ್ರತಿನಿಧಿಸುತ್ತಾನೆ. ಇದರಿಂದ ಷಡ್ಭುಜಾಕೃತಿಯ ಗಾತ್ರವು ವ್ಯತ್ಯಾಸಗೊಳ್ಳುತ್ತದೆ.

ಲೋಷ್ ಮುಖ್ಯವಾಗಿ ಅನುಭೋಗಿಗಳು ಹಾಗೂ ಉತ್ಪಾದಕರುಗಳಿಗೆ ಅನುಕೂಲಕರವಾದ ಪ್ರಾದೇಶಿಕ ರಚನೆಯ ಬಗ್ಗೆ ತಮ್ಮ ಸಿದ್ಧಾಂತದಲ್ಲಿ ಚರ್ಚಿಸಿದ್ದಾರೆ. ಇದರಲ್ಲಿ ಸು. 150 ಬೇರೆ ಬೇರೆ ಗಾತ್ರದ ಷಡ್ಭುಜಾಕೃತಿಯ ಕೇಂದ್ರಗಳಲ್ಲಿ ಒಂದು ಉತ್ಪಾದನಾ ಘಟಕವನ್ನು ಆಯ್ಕೆಮಾಡಿಕೊಂಡಿದ್ದಾರೆ. ಈ ಎಲ್ಲಾ ಷಡ್ಭುಜಾಕೃತಿಯ ಮಾರುಕಟ್ಟೆಯ ಪ್ರದೇಶವು ಒಂದು ಬಿಂದುವನ್ನು ಕೇಂದ್ರವಾಗಿಟ್ಟುಕೊಳ್ಳುವಂತೆ

ಜೋಡಿಸಿದ್ದಾರೆ. ಇದರಿಂದ 12 ವಲಯಗಳು ಉದ್ಭವಿಸುತ್ತವೆ. ಇವುಗಳಲ್ಲಿ ಆರು ವಲಯಗಳು ಅನೇಕ ಆರ್ಥಿಕ ಚಟುವಟಿಕೆಗಳನ್ನು ಹೊಂದಿದ್ದು ಅವುಗಳಲ್ಲಿ ಅತ್ಯಧಿಕ ಬೇಡಿಕೆಗಳು ಕಂಡುಬರುತ್ತದೆ. ಇದರಿಂದಾಗಿ ಕೈಗಾರಿಕೆಗಳು ಅಲ್ಲಿ ಕೇಂದ್ರೀಕೃತವಾಗುತ್ತವೆ.

ಈ ಸಿದ್ಧಾಂತವು ಅನೇಕ ಟೀಕೆಗಳಿಗೆ ಗುರಿಯಾಗಿದ್ದು, ಅಮೂರ್ತ ಹಾಗೂ ಅಗೋಚರವಾಗಿದೆ. ಪ್ರದೇಶಗಳ ಪರಸ್ಪರ ಹೊಂದಾಣಿಕೆಯಿಂದ ಉಂಟಾಗುವ ಸಮಸ್ಯೆಗಳನ್ನು ಬಗೆಹರಿಸಲು ಇದು ವಿಫಲವಾಗಿದೆ. ಬೇಡಿಕೆಗೆ ಹೆಚ್ಚು ಮಹತ್ವ ಕೊಡಲಾಗಿದೆ. ಮಾರುಕಟ್ಟೆಯ ಅತಿಕ್ರಮಣದಿಂದಾಗಿ ವಸ್ತುಗಳಿಗೆ ಬೇಡಿಕೆಯು ಸಹಜವಾಗಿ ಉದ್ಭವಿಸುವುದಿಲ್ಲ. ಘಟಕಗಳು ಮತ್ತು ಮಾರುಕಟ್ಟೆಗಳ ನಡುವೆ ಪ್ರಾದೇಶಿಕ ಅಸಮತೋಲನವೇರ್ಪಡುತ್ತದೆ. ಅಲ್ಲದೆ ಅನೇಕ ಕೈಗಾರಿಕೆಗಳು ಹೆಚ್ಚಿನ ಲಾಭ ಪಡೆಯುವ ತಾತ್ವಿಕ ಅಂಶಗಳನ್ನು ಹೊಂದಿದ್ದರೂ ಲಾಭದ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತದೆ. ಅಲ್ಲದೆ ವಸ್ತುಗಳಿಗೆ ಬೇಡಿಕೆಯನ್ನು ನಿರ್ಧರಿಸುವಲ್ಲಿ ಸಹಜವಾದ ವಿಧಾನವನ್ನು ಅನುಸರಿಸಿದ್ದಾರೆ. ಬೇಡಿಕೆಯನ್ನೇ ಆಧಾರವಾಗಿಟ್ಟುಕೊಂಡು ರಚಿಸಿದ ಈ ಸಿದ್ಧಾಂತಕ್ಕೆ ಇದೊಂದು ಸವಾಲಾಗಿದೆ. (ಪಿ.ಜಿ.)

**ಆಗುಂಬೆ:** ಶಿವಮೊಗ್ಗದಿಂದ ಸು. 80 ಕಿಮೀ ಪಶ್ಚಿಮಕ್ಕೂ ಅರಬ್ಬೀ ಸಮುದ್ರದ ದಕ್ಷಿಣ ಕನ್ನಡ ಜಿಲ್ಲೆಯ ದಡದಿಂದ ಸು. 48 ಕಿಮೀ ಪೂರ್ವಕ್ಕೂ ಇರುವ ಸಹ್ಯಾದ್ರಿಯ ಅತ್ಯುನ್ನತ ಶ್ರೇಣಿಗಳಲ್ಲೊಂದು ($13^0 35'$ ಉ.ಅ. $75^0 05'$ ಪೂ. ರೇ.). ಎತ್ತರ 695 ಮೀ. ಪಶ್ಚಿಮದ ತಳದಲ್ಲಿ ಸೋಮೇಶ್ವರ ಎಂಬ ಊರಿದೆ. ಪೂರ್ವದಲ್ಲಿ ಆಗುಂಬೆಯ ಪೇಟೆ ಇದೆ. ಸುತ್ತುಮುತ್ತ ದಟ್ಟವಾದ ಅರಣ್ಯವಿದೆ. ಇಲ್ಲಿ ಮಳೆಗಾಲದಲ್ಲಿ ಮೂರು ತಿಂಗಳು ಸದಾ ಜಡಿಮಳೆ ಬೀಳುತ್ತಿರುತ್ತದೆ (570 ಸೆಂಮೀ ಗೂ ಹೆಚ್ಚು). ಭಾರತದಲ್ಲಿ ಅಧಿಕ ಮಳೆಬೀಳುವ ಪ್ರದೇಶಗಳಲ್ಲಿ ಇದೂ ಒಂದು. ದಕ್ಷಿಣ ಕನ್ನಡ ಜಿಲ್ಲೆಗೂ ಮೈಸೂರಿಗೂ ಸಂಪರ್ಕ ಕಲ್ಪಿಸುವ ರಸ್ತೆ ಹತ್ತಾರು ಇಕ್ಕಟ್ಟಾದ ತಿರುವುಗಳಿಂದ (ಹೇರ್‌ಪಿನ್ ಕರ್ವ್ಸ್) ಕೂಡಿದೆ. ಇಲ್ಲಿನ ದಟ್ಟವಾದ ಕಾಡುಗಳಲ್ಲಿ ಕಡವೆ, ಕಾಡುಕೋಣಗಳು ಹೇರಳವಾಗಿವೆ. ಉಪಯುಕ್ತ ಗಿಡಮರಗಳಲ್ಲದೆ ಬಿದಿರು ದಟ್ಟವಾಗಿದೆ. ಸ್ವಲ್ಪ ಏಲಕ್ಕಿಯನ್ನೂ ಬೆಳೆಯುತ್ತಾರೆ.

ಮಳೆಗಾಲದಲ್ಲಿ ಸಿಡಿಲು, ಗುಡುಗು, ಮಿಂಚು ಮಳೆಯಿಂದ ಆಗುಂಬೆ ಭಯಂಕರವೆನಿಸುತ್ತದೆ. ದಟ್ಟಕಾಡಿನಿಂದಲೂ ಮಳೆಮೋಡಗಳಿಂದಲೂ ಮಳೆಗಾಲದಲ್ಲಿ ಮೂರು ತಿಂಗಳು ಇಲ್ಲಿ ಸೂರ್ಯನ ಬಿಸಿಲು ಬೀಳುವುದು ತುಂಬ ಅಪರೂಪ. ಬಿರುಗಾಳಿಗೋ ಜಡಿಮಳೆಗೋ ದಿನವೂ ಒಂದಲ್ಲ ಒಂದು ಬೃಹದಾಕಾರದ ಮರ ರಸ್ತೆಗೆ ಅಡ್ಡವಾಗಿ ಬಿದ್ದು ಸಂಚಾರ ಅಸ್ತವ್ಯಸ್ತವಾಗುತ್ತದೆ. ಇಲ್ಲಿ ಸಂಚರಿಸುವ ಬಸ್ಸು, ಲಾರಿಗಳು ಸಾಮಾನ್ಯವಾಗಿ ಕೊಡಲಿ ಗರಗಸಗಳನ್ನು ಇಟ್ಟುಕೊಂಡಿರುತ್ತಾರೆ. ಕರ್ನಾಟಕದ ಅತ್ಯಂತ ದಟ್ಟವಾದ ಅರಣ್ಯ ಸಿರಿಯನ್ನು ಇಲ್ಲಿ ನೋಡಬಹುದು. ಘಟ್ಟದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ ಇಲ್ಲಿಯ 60–90 ಮೀ ಎತ್ತರದ ಬಗೆ ಬಗೆಯ ಬೃಹತ್‌ವೃಕ್ಷಗಳು ಯಾವುದೋ ಪಾತಾಳದಿಂದೆದ್ದು ಬಂದವುಗಳಂತೆ ತಮ್ಮ ತಲೆಯನ್ನೆತ್ತಿ ಇಣುಕುತ್ತವೆ. ಇಲ್ಲಿಯ ಪ್ರದೇಶವೆಲ್ಲ ಜಿಗಣೆ ಜಾತಿಯ ಇಂಬುಳ ಎಂಬ ರಕ್ತಹೀರುವ ಕೀಟಗಳಿಂದ ತುಂಬಿದೆ. ತಮ್ಮ ತಾರಸ್ವರದಿಂದ ಕಿವಿಯನ್ನು ಕೊರೆಯುವ ಮರಚಾರಟೆಗಳ ಸಂಗೀತ ಇಲ್ಲಿ ಸರ್ವಸಾಮಾನ್ಯ. ಸಹ್ಯಾದ್ರಿ ಶ್ರೇಣಿಗಳಿಂದ ಮೇಲಿಂದ ಕೆಳಕ್ಕೆ ದುಮುಕುವ ಚಿಕ್ಕಚಿಕ್ಕ ಜಲಪಾತಗಳಿಗೆ ಇಲ್ಲಿ ಲೆಕ್ಕವಿಲ್ಲ. ಅರಣ್ಯದ ಸುಮನೋಹರ ಭಯಂಕರತೆಯನ್ನು ಇಲ್ಲಿ ಅನುಭವಿಸಬಹುದು.

ಸೂರ್ಯಾಸ್ತಮಾನ: ಆಗುಂಬೆಯ ಪೇಟೆಯಿಂದ ಸು. 1.6 ಕಿಮೀ ಪಶ್ಚಿಮದಲ್ಲಿ ಪ್ರಪಂಚ ಪ್ರಸಿದ್ಧ ಸೂರ್ಯಾಸ್ತಮಾನ ದೃಶ್ಯವನ್ನು ಕಾಣಲು ಬೆಟ್ಟದ ನೆತ್ತಿಯಲ್ಲಿ ಒಂದು ರಂಗಸ್ಥಳವನ್ನು ಮಾಡಿದ್ದಾರೆ. ವರ್ಷವಿಡೀ–ಮಳೆಗಾಲ ಹೊರತು–ಈ ದೃಶ್ಯವನ್ನು ನೋಡಲು ದೇಶೀಯ, ವಿದೇಶೀಯ ಪ್ರವಾಸಿಗಳು ಇಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಮೋಡವಿಲ್ಲದ ಶುಭ್ರ ಸಂಜೆಗಳಲ್ಲಿ ಸೂರ್ಯಾಸ್ತವನ್ನು ನೋಡಲು ಚೆನ್ನ. ಈ ರಂಗಸ್ಥಳದಿಂದ ಇದ್ದಕ್ಕಿದ್ದಂತೆ ಸು. 900 ಮೀ ಪಾತಾಳ ದರ್ಶನ ಮೈನವಿರೇಳಿಸುವಂಥದು. ಕೇವಲ ಆಳ ಮಾತ್ರವಲ್ಲ, ಪಡುಗಡಲ ತಡಿಯವರೆಗಿನ, ಅಲ್ಲಿಂದ ದಿಗಂತದ ಅಂಚಿನವರೆಗಿನ ಸು. 48 ಕಿಮೀ ವಿಸ್ತಾರ ಒಮ್ಮೆಗೇ ಕಣ್ಣುಗಳನ್ನು ತುಂಬುತ್ತದೆ. ಆ ಕ್ಷಣದಲ್ಲಿ ಆಗುವ ಅನುಭವ ಮಾತಿಗೆ ಮೀರಿದುದು; ಮೌನವಾಗಿ ಅನುಭವಿಸುವಂಥದು.

ಸೂರ್ಯಾಸ್ತಮಾನದ ಸುಂದರದೃಶ್ಯವನ್ನು ನೋಡಲು ರಂಗಸ್ಥಳದಲ್ಲಿ ಸಂಜೆಯ ಹೊತ್ತು ಕುಳಿತು ಪ್ರಕೃತಿ ತೋರುವ ವಿವಿಧವೇಷಗಳನ್ನು ಕಾಣಬೇಕು. ನಿಸರ್ಗ ತನ್ನ ನೂರಾರು ಸೀರೆಗಳನ್ನು ಉಟ್ಟು ಕಳಚುತ್ತಿರುತ್ತದೆ. ಅರಬ್ಬೀಸಮುದ್ರದಿಂದ ಹುಟ್ಟಿ ಸಾವಿರಾರು ಬೆಳ್ಳಿಮೋಡಗಳು ಬೆಳ್ಳಿಯ ವಿಮಾನಗಳಂತೆ ತೇಲಿ ಬರುತ್ತಿರುತ್ತವೆ. ಸೂರ್ಯನ ಬಿಸಿಲು ಪ್ರಖರವಾಗಿರುವ ಮಧ್ಯಾಹ್ನದ ಹೊತ್ತು ಸಮುದ್ರದ ಕಡೆಗೆ ನೋಡಬೇಕು. ಸಾವಿರಾರು ಮೈಲು ಅಗಲದ ಪಡುಗಡಲು ಕೇವಲ 5–8 ಸೆಂಮೀ ಅಗಲವಾಗಿ ದಿಗಂತರೇಖೆಯಲ್ಲಿ ಒಂದಾಗುವ ಅದ್ಭುತವನ್ನು ಕಾಣಬಹುದು. ಅಲೆಗಳಿಂದ ಸಂಚಲಿತವಾದ ಸಮುದ್ರ ಏನೋ ಜೀವಂತವಸ್ತು ಅತ್ತಿತ್ತ ಅಲುಗಾಡಿದಂತೆ ಕಾಣುವ ದೃಶ್ಯ ವಿಸ್ಮಯಕರವಾದುದು. ಸಮುದ್ರದಲ್ಲಿ ಓಡಾಡುವ ಬಿಳಿಯ ಹಾಯಿ ಬಿಚ್ಚಿದ ದೊಡ್ಡ ದೊಡ್ಡ ದೋಣಿಗಳನ್ನೂ ಹಡಗುಗಳನ್ನೂ ಕಾಣಬಹುದು.

ಸಂಜೆಯ ಹೊತ್ತು, ಸೌಂದರ್ಯದ ಸಾಗರವೇ ನಮ್ಮೆದುರು ನಿಲ್ಲುತ್ತದೆ. ಸೂರ್ಯ ತನ್ನ ಪ್ರಖರತೆಯನ್ನು ಕಳೆದುಕೊಂಡು ಇಳಿಯುತ್ತಿರುವಾಗ ಕ್ಷಣಕ್ಷಣವೂ ಸಮುದ್ರ ಸುತ್ತಮುತ್ತಲಿನ ಮೇಘಮಾಲೆ ಬಗೆಬಗೆಯ ಬಣ್ಣವನ್ನು ತಳೆಯುತ್ತದೆ. ಸೂರ್ಯಾಸ್ತಮಾನದ ನಾಟಕವನ್ನಾಡಲು ಪ್ರಕೃತಿ ನಿರ್ಮಿಸಿದ ಮಹಾಪಟವಾಗಿ ಪಶ್ಚಿಮಾಕಾಶ ಚಿತ್ರ ವೈಚಿತ್ರ್ಯಗಳಿಂದ ತುಂಬಿರುತ್ತದೆ. ಸೂರ್ಯ ಇಳಿಯುತ್ತಿರುವಂತೆ ಕಡಲು ಮೊದಮೊದಲು ಹೊಂಬಣ್ಣದ ಹಾಳೆಯಾಗಿದ್ದು, ದಿಗಂತರೇಖೆಗೆ ಹತ್ತಿರವಾದಾಗ ಸಮಸ್ತ ಸಮುದ್ರವಿಸ್ತಾರ ರಕ್ತಾರುಣರೇಖೆಯಾಗುತ್ತದೆ. ಪ್ರಕೃತಿಯ ಸುಂದರದೃಶ್ಯಗಳಲ್ಲಿ ಒಂದಾದ ಸೂರ್ಯಾಸ್ತಮಾನ ಭಾರತದಲ್ಲಿ ಮತ್ತೆಲ್ಲಿಯೂ ಇಷ್ಟು ಸುಂದರವಾಗಿ ಕಾಣಿಸುವುದಿಲ್ಲವಂತೆ. ಸಾವಿರಾರು ಕಿ.ಮೀ. ದೂರದಿಂದ ಆ ಒಂದು ಅಮೃತಗಳಿಗೆಯನ್ನು ಸವಿಯಲಿಕ್ಕಾಗಿ ಪ್ರವಾಸಿಗಳು ಬರುತ್ತಾರೆ. ಬಣ್ಣಬಣ್ಣದ ಮೋಡಗಳು ಕಲ್ಪನೆಗನುಸಾರವಾಗಿ, ಆನೆಯ, ಸಿಂಹದ, ವಿವಿಧ ಪ್ರಾಣಿಗಳ, ಬಗೆಬಗೆಯ ರೂಪಗಳನ್ನು ತಾಳಿ ತಮ್ಮ ಪಾತ್ರಗಳನ್ನು ಅಭಿನಯಿಸಿ ಮರೆಯಾಗುತ್ತವೆ. ಯಾವ ಚಿತ್ರಕಾರನ ಚಿತ್ರವೂ ಈ ನಿಸರ್ಗ ನಿರ್ಮಿತ ಕಲಾಕೃತಿಗೆ ಸರಿದೂಗದು ಎಂದೆನಿಸುತ್ತದೆ. ಸೂರ್ಯ ಮುಳುಗುವ ಕೊನೆಯ ಒಂದು ನಿಮಿಷದ ಹೊತ್ತಂತೂ ಅಪೂರ್ವ ರಸಗಳಿಗೆ ಎನ್ನಬೇಕು. ಆಗುಂಬೆಯ ಸೂರ್ಯಾಸ್ತದ ಸಮಯ ಸೂರ್ಯ ಕವುಚಿಟ್ಟ ಸ್ವರ್ಣ ಕುಂಭಾಕೃತಿಯಾಗಿ, ಅರ್ಧಚಂದ್ರಾಕೃತಿಯಾಗಿ, ಕಟ್ಟಕಡೆಗೆ ಬಿದಿಗೆಯ ಚಂದ್ರಲೇಖೆಯಾಗಿ ತನ್ನ ಕೊನೆಯ ರೂಪದಲ್ಲಿ ಮರೆಯಾಗುವ ಸೌಂದರ್ಯ ನಾಟಕ ದೃಶ್ಯ ಆನಂದದ ಹುಚ್ಚು ಹಿಡಿಸುತ್ತದೆ. ಸಾಯುವುದರೊಳಗೆ ಈ ಒಂದು ಅಮೃತಗಳಿಗೆಯನ್ನು ಕಾಣದೆ ಹೋಗುವವನು ಮನುಷ್ಯನಲ್ಲ ಎಂದೆನಿಸುತ್ತದೆ. (ಎ.ಆರ್.;ಜಿ.ಸಿ.ಎ.)

**ಆಗ್ನೇಯ ಏಷ್ಯ:** ಈಸ್ಟ್ ಇಂಡಿಯ ದ್ವೀಪಗಳು, ಏಷ್ಯ ಖಂಡದಲ್ಲಿನ ಇಂಡೋಚೀನ ಪರ್ಯಾಯದ್ವೀಪ–ಇವುಗಳನ್ನೊಳಗೊಂಡ ಭೂಪ್ರದೇಶ. ಇಂಡೋನೇಷ್ಯ, ಫಿಲಿಪೈನ್ಸ್ ದ್ವೀಪಗಳು, ಬೋರ್ನಿಯದ ಬ್ರಿಟಿಷ್ ಭಾಗಗಳು ಮತ್ತು ಪೋರ್ಚುಗೀಸರ ಟಿಮೋರ್– ಇವು ಮೊದಲ ಭಾಗದ ರಾಜಕೀಯ ವಿಭಾಗಗಳು. ಮಯನ್ಮಾರ್, ಥೈಲೆಂಡ್, ಕಾಂಬೋಡಿಯ, ಲಾವೋಸ್, ವಿಯಟ್ನಾಂ, ಮಲೇಷ್ಯ, ಸಿಂಗಪುರ–ಇವು ಎರಡನೆಯ ಭಾಗದ ರಾಜಕೀಯ ವಿಭಾಗಗಳು.

ಆಗ್ನೇಯ ಏಷ್ಯದ ಭೂಭಾಗದಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿರುವ ಅನೇಕ ಪರ್ವತಶ್ರೇಣಿಗಳಿವೆ. ಕಣಿವೆಗಳಲ್ಲಿ ಮಿಕಾಂಗ್ ಮತ್ತು ಇರವಾಡಿಗಳಂಥ ದೊಡ್ಡ ನದಿಗಳು ಹರಿಯುತ್ತವೆ. ದ್ವೀಪಭಾಗಗಳಲ್ಲಿ ಜೀವಂತ ಜ್ವಾಲಾಮುಖಿಗಳಿವೆ. ವಾಯುಗುಣ ಸಾಮಾನ್ಯವಾಗಿ ಉಷ್ಣವಲಯದಾಗಿದ್ದು ವಾರ್ಷಿಕ ಮಳೆ 40 ಸೆಂಮೀ. ಬಹುಮಟ್ಟಿಗೆ ಇದು ಅರಣ್ಯ ಪ್ರದೇಶ.

ಮಲೇಷ್ಯದಲ್ಲಿ ಕಂಡುಬರುವ ಭಾಷೆ ಹಾಗೂ ಸಾಂಸ್ಕೃತಿಕ ಐಕ್ಯ ಉಳಿದೆಡೆಗಳಲ್ಲಿ ಕಾಣದು. ಬತ್ತ ಮತ್ತು ಜೋಳ ಇಲ್ಲಿನ ಪ್ರಧಾನ ಬೆಳೆಗಳು. ಅಲ್ಲಿಂದ ರಬ್ಬರ್, ಅಕ್ಕಿ, ತೆಂಗಿನೆಣ್ಣೆ, ಸಕ್ಕರೆ, ತೇಗ, ಮನಿಲ ಹೆಂಪ್, ಚಹ, ಕಾಫಿ, ತಂಬಾಕು, ಮೆಣಸು, ತವರ, ಪೆಟ್ರೋಲಿಯಂ, ಬಾಕ್ಸೈಟ್– ಇವು ರಫ್ತಾಗುತ್ತವೆ. ಅಷ್ಟಾಗಿ ಕೈಗಾರಿಕೋದ್ಯಮಗಳು ಬೆಳೆದಿಲ್ಲ. 16ನೆಯ ಶತಮಾನಕ್ಕೆ ಹಿಂದೆ ಭಾರತ, ಚೀನ ಮತ್ತು ಇತರ ದೇಶಗಳೊಂದಿಗೆ ಆಗ್ನೇಯ ಏಷ್ಯ ಸಾಕಷ್ಟು ವಾಣಿಜ್ಯ ವ್ಯಾಪಾರ ಸಂಬಂಧಗಳನ್ನಿಟ್ಟುಕೊಂಡಿತ್ತು. ಅಲ್ಲಿಂದೀಚೆಗೆ 20ನೆಯ ಶತಮಾನದ ವೇಳೆಗೆ ದೇಶದ ಎಲ್ಲ ಭಾಗಗಳೂ ಪಶ್ಚಿಮದ ಪ್ರಭಾವಕ್ಕೊಳಗಾದುವಲ್ಲದೆ ಥೈಲೆಂಡ್ ಒಂದನ್ನುಳಿದು ಉಳಿದ ಎಲ್ಲ ಭಾಗಗಳೂ ಪಶ್ಚಿಮ ರಾಷ್ಟ್ರಗಳ ವಸಾಹತುಗಳಾದವು. 1961ರ ವೇಳೆಗೆ ಬ್ರಿಟಿಷ್ ಬೋರ್ನಿಯೊ ಮತ್ತು ಪೋರ್ಚುಗೀಸ್ ಟಿಮೋರ್‌ಗಳನ್ನುಳಿದು ಎಲ್ಲ ಭಾಗಗಳೂ ಸ್ವಾತಂತ್ರ್ಯಗಳಿಸಿದುವು.

ಭಾಷೆಗಳು: ಆಗ್ನೇಯ ಏಷ್ಯ ಬಹು ಭಾಷೆಗಳ ಸಂಗ್ರಹಾಲಯವಾಗಿದೆ. ಅವುಗಳ ಪರಸ್ಪರ ಸಂಬಂಧಗಳಂತೂ ಬೆರಗುಗೊಳಿಸುವಂತಿದೆ. ಮಯನ್ಮಾರ್ ಒಂದರಲ್ಲೇ 125–140 ಭಾಷೆಗಳಿವೆ. ಇವುಗಳಲ್ಲಿ ವಿಯೆಟ್ನಾಂ, ಕಾಂಬೋಡಿಯ, ಥೈಲೆಂಡ್, ಮಲೇಷ್ಯ, ಮಯನ್ಮಾರ್ ಭಾಷೆಗಳು ಅನೇಕ ಶತಮಾನಗಳಷ್ಟು ಪ್ರಾಚೀನವಾಗಿದ್ದು ಶಿಷ್ಟ ಸಾಹಿತ್ಯಕ ಭಾಷೆಗಳಾಗಿವೆ. ಕಾರೆನ್ ಮತ್ತು ಷಾನ್‌ಗಳಂಥ ಕೆಲವು ಬರೆವಣಿಗೆಗಳು ಬಂದು ಕೇವಲ ಒಂದು ಶತಮಾನ ಮಾತ್ರ ಆಗಿದೆ. ಉಳಿದ ಭಾಷೆಗಳ ವಿಷಯದಲ್ಲಿ ತಿಳಿದಿರುವುದು ಬಹು ಸ್ವಲ್ಪ. ಪಾದ್ರಿಗಳಲ್ಲಿ ಕೆಲವರು ಅವಕ್ಕೆ ನಿಘಂಟುಗಳನ್ನು ರಚಿಸಿದ್ದಾರೆ. ಪ್ರವಾಸಿಗರು, ಅಧಿಕಾರಿಗಳು ಕೆಲವಕ್ಕೆ ಶಬ್ದಭಂಡಾರವನ್ನು ಪಟ್ಟಿ ಮಾಡಿದ್ದಾರೆ. ಉಳಿದವಕ್ಕೆ ಯಾವ ದಾಖಲೆಯೂ ಇಲ್ಲ.

ಇಲ್ಲಿ ಆಸ್ಟ್ರೋನೀಸಿಯನ್ ಅಥವಾ ಮಲೆಯೊ–ಪಾಲಿನೀಸಿಯನ್, ಮಾನ್–ಖ್ಮೆರ್, ಸಿನೋ–ಟಿಬೆಟನ್ ಎಂಬ ಮೂರು ಭಾಷಾ ಕುಟುಂಬಗಳಿವೆ. (ಎಂ.ಎಸ್.)

**ಆಗ್ನೇಯ ಏಷ್ಯ ರಾಷ್ಟ್ರಗಳ ಸಂಘ:** ಆಗ್ನೇಯ ಏಷ್ಯನ್ ರಾಷ್ಟ್ರಗಳ ಸಂಘ ಪ್ರಾರಂಭವಾಗಲು ಮುಖ್ಯ ಕಾರಣ ಈ ಭಾಗದಲ್ಲಿ ಸೀಟೊ ವಿಫಲತೆ ಅದರಲ್ಲೂ, ದಕ್ಷಿಣ ವಿಯಟ್ನಾಂ ದೇಶದ ಪ್ರಕರಣದಲ್ಲಿ ಅಮೆರಿಕದ ವಿಫಲತೆ ಕಾರಣವಾಗಿದೆ. ಅನಂತರ 1967ರಲ್ಲಿ ಮಲೇಷ್ಯ, ಸಿಂಗಪುರ, ಇಂಡೊನೇಷ್ಯ, ಥೈಲೆಂಡ್ ಹಾಗೂ ಫಿಲಿಪೈನ್ಸ್ ರಾಷ್ಟ್ರಗಳು ಸೇರಿಕೊಂಡು ಆಗ್ನೇಯ ಏಷ್ಯನ್ ರಾಷ್ಟ್ರಗಳ ಸಂಘ ಸ್ಥಾಪನೆಗೊಂಡವು. ಅನಂತರ 80ರ ದಶಕದಲ್ಲಿ ವಿಯಟ್ನಾಂ, ಕಾಂಪೂಚಿಯಾ ದೇಶಗಳು ಸಹ ಈ ಸಂಘಕ್ಕೆ ಸೇರಿಕೊಂಡವು. ಈಗ ಎಎಸ್‌ಈಎಎನ್ (ಅಸಿಯಾನ್) ಸಂಘ ಹತ್ತು ಸದಸ್ಯರನ್ನೊಳಗೊಂಡ ಅತ್ಯಂತ ಪ್ರಬಲ ರಾಜಕೀಯ ಶಕ್ತಿಯಾಗಿ ಪರಿಣಮಿಸಿದೆ. ಈ ಸಂಘದ ಸದಸ್ಯ ರಾಷ್ಟ್ರಗಳು ಒಂದು ದೇಶದ ಮೇಲೆ ಮತ್ತೊಂದು ದೇಶದ ಆತ್ಮವಿಶ್ವಾಸ ಸದಸ್ಯ ರಾಷ್ಟ್ರಗಳಲ್ಲಿ ಬಂದಿತು. ಈಗ ಈ ಸಂಸ್ಥೆ ಒಂದು ಸ್ಥಿರವಾದ ರಾಜಕೀಯ ಮತ್ತು ಆರ್ಥಿಕ ಸಂಸ್ಥೆಯಾಗಿ ಬೆಳೆದಿದೆ. ಅಲ್ಲದೆ ಪ್ರಮುಖ ರಾಷ್ಟ್ರಗಳಿಂದ ಹೂಡಿಕೆದಾರರ ಆಕರ್ಷಣೆಯನ್ನು ಮಾಡುತ್ತಿದೆ. ಯುರೋಪಿಯನ್ ಒಕ್ಕೂಟವು ಸಹ ಆರ್ಥಿಕ ಸಹಕಾರವನ್ನು ಸಂಸ್ಥೆಯೊಡನೆ ಇಟ್ಟುಕೊಂಡಿದೆ. ಅಮೆರಿಕ ಸಂಯುಕ್ತ ಸಂಸ್ಥಾನವು ಸಹ ಎಎಸ್‌ಈಎಎನ್(ಅಸಿಯಾನ್)ದ ಸದಸ್ಯ ರಾಷ್ಟ್ರಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಂಡಿದೆ. ಇತ್ತೀಚಿನ 1944ರ ಏಷ್ಯನ್ ಅಭಿವೃದ್ಧಿ ಪಕ್ಷಿನೋಟ ಹಾಗೂ 1992ರ ಪ್ರಪಂಚದ ಅಭಿವೃದ್ಧಿ ವರದಿಗಳ ಪ್ರಕಾರ ಆಸಿಯಾನ್‌ದ ಸದಸ್ಯ ರಾಷ್ಟ್ರಗಳಾದ ಸಿಂಗಪುರ, ಮಲೇಷ್ಯ, ಥೈಲೆಂಡ್ ಮತ್ತು ಇಂಡೊನೇಷ್ಯಗಳ ತಲಾವಾರು ನಿವ್ವಳ ಉತ್ಪಾದನೆ 1000ರಿಂದ 17000 ಡಾಲರ್‌ಗಳವರೆಗೆ ಏರಿದೆ. ಅಲ್ಲದೆ ಈ ರಾಷ್ಟ್ರಗಳ ವಾರ್ಷಿಕ ಬೆಳವಣಿಗೆ ದರವೂ ಸಹ ಶೇ. 4.5 ರಿಂದ ಶೇ. 6.5 ಹೆಚ್ಚಿಸಲ್ಪಟ್ಟಿವೆ. ಈ ರೀತಿಯ ಬೆಳವಣಿಗೆಯಿಂದಾಗಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಜೊತೆಗೆ ಸ್ಪರ್ಧೆಯನ್ನು ಈ ರಾಷ್ಟ್ರಗಳು ಮಾಡಲು ಪ್ರಾರಂಭಿಸಿವೆ. (ಎಸ್.ಎಸ್.ಎಸ್.)

**ಆಗ್ನೇಯ ಏಷ್ಯ ರಾಷ್ಟ್ರಗಳ ಸೇನಾ ಕೂಟ:** ಈ ಸೇನಾ ಕೂಟವು ಕಮ್ಯುನಿಸ್ಟರ ಭೀತಿಯಿಂದ ಜನ್ಮ ತಾಳಿದ ಸಂಸ್ಥೆಯಾಗಿದೆ. ಕೆಂಪು ಚೀನ ಸ್ಥಾಪನೆಯೊಡನೆ ಆಗ್ನೇಯ ಏಷ್ಯದಲ್ಲಿ ಸಮತಾವಾದದ ಹಬ್ಬುವಿಕೆಯ ಭಯ ಹೆಚ್ಚಾಯಿತು. ಆದ್ದರಿಂದ ಅಮೆರಿಕ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರದೇಶಕ್ಕೆ ಸಂಬಂಧಿಸಿದ ಒಂದು ಪ್ರಾದೇಶಿಕ ಸಾಮಾಜಿಕ ರಕ್ಷಣಾ ವ್ಯವಸ್ಥೆಯನ್ನು ಸ್ಥಾಪಿಸಲು ಮುಂದಾದವು. ಪ್ರಥಮವಾಗಿ 1954ರಲ್ಲಿ ಪಾಕಿಸ್ತಾನ, ಮತ್ತು ಅಮೆರಿಕಗಳ ನಡುವೆ ಸೈನಿಕ ಸಂದಾಯದ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ವಿಯಟ್ನಾಂನಲ್ಲಿ ಫ್ರೆಂಚರ ಪ್ರಭಾವ ಇಳಿಮುಖವಾದಂತೆ ಆಗ್ನೇಯ ಏಷ್ಯಕ್ಕೆ ಸಂಬಂಧಿಸಿ ಸೈನಿಕ ಒಪ್ಪಂದವನ್ನು ಮಾಡಿಕೊಳ್ಳುವಂತೆ ಅಮೆರಿಕ ಸಲಹೆ ನೀಡಿತು. ಭಾರತ, ಮಯನ್ಮಾರ್, ಶ್ರೀಲಂಕ ಮತ್ತು ಇಂಡೊನೇಷ್ಯ ಇದಕ್ಕೆ ಸಮ್ಮತಿಸಲಿಲ್ಲ. ಆದರೆ ಇತರೆ ಏಷ್ಯನ್ ರಾಷ್ಟ್ರಗಳು ಈ ಸಲಹೆಯನ್ನು ಸ್ವಾಗತಿಸಿದವು. ಫಿಲಿಪೈನ್ಸ್ ರಾಜಧಾನಿಯಾದ ಮನಿಲಾದಲ್ಲಿ ಹಲವಾರು ರಾಷ್ಟ್ರಗಳು ಸಭೆ ಸೇರಿ ಆಗ್ನೇಯ ಏಷ್ಯ ರಾಷ್ಟ್ರಗಳ ಸೇನಾ ಕೂಟ ರಚಿಸಿಕೊಂಡವು. ಇದಕ್ಕೆ ಸಹಿ ಮಾಡಿದ ರಾಷ್ಟ್ರಗಳೆಂದರೆ ಅಮೆರಿಕ, ಬ್ರಿಟನ್, ಫ್ರಾನ್ಸ್, ಆಸ್ಟ್ರೇಲಿಯ, ನ್ಯೂಜೀಲೆಂಡ್, ಪಾಕಿಸ್ತಾನ, ಥೈಲೆಂಡ್ ಮತ್ತು ಫಿಲಿಪೈನ್ಸ್. ಈ ಒಪ್ಪಂದದ ಪ್ರಮುಖ ಉದ್ದೇಶವೆಂದರೆ ಆಗ್ನೇಯ ಏಷ್ಯದಲ್ಲಿ ಕಮ್ಯುನಿಸ್ಟ್ ಸರಕಾರಗಳ ಹಬ್ಬುವಿಕೆಯನ್ನು ತಡೆಯುವುದಾಗಿದೆ. 1960–61ರ ಲಾವೋಸ್ ಬಿಕ್ಕಟ್ಟಿನೊಡನೆ ಸೀಟೋ ಸೇನಾಕೂಟದ ಪತನವು ಪ್ರಾರಂಭವಾಯಿತು. ಫ್ರಾನ್ಸ್ ಹಾಗೂ ಪಾಕಿಸ್ತಾನ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಈ ಸಂಸ್ಥೆಯಿಂದ ದೂರ ಉಳಿದವು. ವಿಯಟ್ನಾಂನಲ್ಲಿ ಕಮ್ಯುನಿಸ್ಟ್ ಸರ್ಕಾರದ ಸ್ಥಾಪನೆ ಹಾಗೂ ಕಮ್ಯುನಿಸ್ಟ್ ಪ್ರಭಾವ ಆಗ್ನೇಯ ಏಷ್ಯ ರಾಷ್ಟ್ರಗಳಲ್ಲಿ ಹೆಚ್ಚಾಗಲು ಪ್ರಾರಂಭಿಸಿದವು. ಈ ಭಾಗದ ಸಣ್ಣಸಣ್ಣ ರಾಷ್ಟ್ರಗಳಲ್ಲಿ ಪ್ರಪಂಚದ ಪರಮಶ್ರೇಷ್ಠ ರಾಷ್ಟ್ರಗಳಾಗಿದ್ದ ಅಮೆರಿಕ ಹಾಗೂ ರಷ್ಯಗಳ ಪ್ರಭಾವದಿಂದ ರಾಜಕೀಯ ಅಸ್ಥಿರತೆ ಪ್ರಾರಂಭವಾಯಿತು. (ಎಸ್.ಎಸ್.ಎಸ್.)

**ಆಗ್ರ:** ಉತ್ತರ ಪ್ರದೇಶ ರಾಜ್ಯದ ಒಂದು ಜಿಲ್ಲೆ, ಪಟ್ಟಣ. ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾಗಿರುವ ತಾಜ್‌ಮಹಲ್ ಇರುವ ನಗರ. ಉತ್ತರ ಪ್ರದೇಶದ ಯಮುನಾ ನದಿಯ ದಡದಲ್ಲಿ ದೆಹಲಿಗೆ 320 ಕಿಮೀ. ದೂರದಲ್ಲಿದೆ. ಜನಸಂಖ್ಯೆ 36,11,301. ಅಕ್ಬರ್ ಇದನ್ನು ಊರ್ಜಿತಗೊಳಿಸಿ (1566) ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಇಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಿದೆ. ಇದು ಒಂದು ದೊಡ್ಡ ರೈಲು ನಿಲ್ದಾಣ, ವಾಣಿಜ್ಯಕೇಂದ್ರ, ಹತ್ತಿ ಮತ್ತು ಹಿಟ್ಟಿನ ಗಿರಣಿಗಳಿವೆ. ಕಲಾತ್ಮಕವಾದ ಉಣ್ಣೆಯ ಜಮಖಾನಗಳು ಇಲ್ಲಿಂದ ದೇಶ ವಿದೇಶಗಳಿಗೆ ರಫ್ತಾಗುತ್ತವೆ. ಚರ್ಮದ ಸಾಮಾನುಗಳಿಗೂ ಇದು ಪ್ರಸಿದ್ಧ. ಅಮೃತಶಿಲೆಯ ಕೆತ್ತನೆ ಕೆಲಸ, ಬೆಳ್ಳಿಯ ಎಳೆಗಳ ನೆಯ್ಗೆಗಳಿಗೆ ಇದು ಹೆಸರುವಾಸಿ.

ಆಗ್ರ ನಗರ ಐತಿಹಾಸಿಕವಾಗಿ ಪ್ರಸಿದ್ಧವಾದ ಸ್ಥಳ. ಸಿಕಂದರ್ ಲೋದಿ 1504ರಲ್ಲಿ ಈ ನಗರವನ್ನು ಕಟ್ಟಿಸಿ ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿದ. ಅದಕ್ಕೆ ಒಂದು ಕೋಟೆಯನ್ನೂ ಕಟ್ಟಿಸಿದ. ಮುಂದೆ ಮೊಗಲ ಬಾದಶಹನಾದ ಬಾಬರ್ ಇದನ್ನು ಗೆದ್ದು ಹಳೆಯ ಕೋಟೆಯಲ್ಲಿ ಜಾಮೀ ಮಸೀದಿಯನ್ನು ಕಟ್ಟಿಸಿದ. ತರುವಾಯ ಇದು ಅಕ್ಬರ್, ಜಹಂಗೀರ್, ಷಹಜಹಾನ್ ಮೊದಲಾದ ಮೊಗಲ ಬಾದಶಹರ ರಾಜಧಾನಿಯಾಗಿತ್ತು. ಅಕ್ಬರ್ ಈ ನಗರದ ಸಮೀಪದಲ್ಲಿ ಸಿಕ್ರಿ ಎಂಬಲ್ಲಿ ಸುಂದರ ಕಲ್ಲಿನ ಕಟ್ಟಡಗಳನ್ನು ಕಟ್ಟಿಸಿದ. ಈ ಕಟ್ಟಡಗಳ ರಚನೆ ಇತಿಹಾಸಪ್ರಸಿದ್ಧವಾದದ್ದು.

ತಾಜಮಹಲ್

ಈತ ಕಟ್ಟಿಸಿದ ಮೋತಿಮಸೀದಿ ಒಂದು ಉತ್ಕೃಷ್ಟ ಕಲಾಕೃತಿ. ಷಹಜಹಾನ ತನ್ನ ಹೆಂಡತಿ ಮಮತಾಜಳ ಸ್ಮರಣೆಗಾಗಿ ನಿರ್ಮಿಸಿದ ತಾಜಮಹಲ್ ಎಂಬ ಶಿಲಾಕೃತಿ ಪ್ರಪಂಚದಲ್ಲೇ ಶ್ರೇಷ್ಠ, ಅದ್ಭುತ ಕಲಾಕೃತಿಯಾಗಿದೆ. ಬಾಬರ್ ಮತ್ತು ಹುಮಾಯೂನರ ಕಾಲದ ಮಸೀದಿಗಳು ಈಗ ಹಾಳಾಗಿವೆ. (ಎ.ವಿ.ಎನ್.;ಎಸ್.ಎಂ.ಎಚ್.)

**ಆಜಿಮ್‌ಘರ್:** ಉತ್ತರ ಪ್ರದೇಶದ ಒಂದು ಜಿಲ್ಲೆ ಮತ್ತು ಮುಖ್ಯ ಪಟ್ಟಣ ಉ.ಅ. $20^0$–$26^0$, ಪೂ.ರೇ. $80^0$–$82^0$. ವಾರಣಾಸಿಯಿಂದ 85 ಕಿಮೀ ದೂರದಲ್ಲಿದೆ. ಟೋನ್ಸ್ ಉಪನದಿಯ ದಡದಲ್ಲಿರುವುದರಿಂದ ಆಗಾಗ್ಗೆ ಪ್ರವಾಹಕ್ಕೆ ತುತ್ತಾಗುತ್ತದೆ. ಜನಸಾಂದ್ರತೆ ಹೆಚ್ಚು. ಬಹುಜನ ವ್ಯವಸಾಯದಿಂದ ಜೀವಿಸುತ್ತಾರೆ. 1665ರಲ್ಲಿ ಮೊಗಲರ ಸಾಮಂತ ಆಜಂಖಾನ್ ಈ ನಗರ ಸ್ಥಾಪಿಸಿದ. ಅದಕ್ಕೂ ಪೂರ್ವದಲ್ಲಿ ಈ ಪ್ರದೇಶ ರಜಪೂತರ ವಶದಲ್ಲಿತ್ತು. ಈಗ ಇಲ್ಲಿ ಒಂದು ಪುರಾತನ ಕೋಟೆಯೂ ಒಂದು ಕಲಾಭವನವೂ ಎರಡು ಕಾಲೇಜುಗಳೂ ಇವೆ. (ಎಸ್.ಎನ್.)

**ಆಡಮ್ ಶಿಖರ:** ಶ್ರೀಲಂಕದಲ್ಲಿ ಕೊಲಂಬೊದಿಂದ 72 ಕಿಮೀ ಪೂರ್ವದಲ್ಲಿದೆ, (ಉ.ಅ. $6^0.55'$–ಪೂ.ರೇ. $80^0.30'$) ಹಟ್ಟನ್ ಮತ್ತು ರತ್ನಪುರಿ ಮಾರ್ಗವಾಗಿ ತಲುಪಬಹುದು. ಸಮುದ್ರ ಮಟ್ಟದಿಂದ ಎತ್ತರ 2280 ಮೀ. ಅಗಲ 22.2 ಮೀ. ಉದ್ದ 7.2 ಮೀ. ಇಲ್ಲಿ 1.6 ಮೀ ಉದ್ದ 0.75 ಮೀ ಅಗಲವಿರುವ ಪಾದಮುದ್ರೆ ಇದೆ. ಇದನ್ನು ಬೌದ್ಧರು, ಮುಸ್ಲಿಮರು, ಹಿಂದೂಗಳು ಕ್ರಮವಾಗಿ ಬುದ್ಧ, ಆಡಮ್, ಶಿವ–ಇವರ ಪಾದವೆಂದು ಪೂಜಿಸುತ್ತಾರೆ. ಇದು ಬೌದ್ಧರ ವಶದಲ್ಲಿದ್ದು ಪವಿತ್ರ ಯಾತ್ರಸ್ಥಳವೆನಿಸಿದೆ. (ಪಿ.ಜಿ.)

**ಆಡಿಸ್ ಅಬಾಬಾ:** ಇಥಿಯೋಪಿಯದ ರಾಜಧಾನಿ. ಜನಸಂಖ್ಯೆ 2,200,186 (2002). ಮಧ್ಯ ಇಥಿಯೋಪಿಯದ ಎನ್‌ಲೊಟೊ ಪರ್ವತಶ್ರೇಣಿಯ ಇಳಿಜಾರಿನಲ್ಲಿದೆ. (ಉ.ಅ. $9^01'$, ಪೂ.ರೇ. $38^056'$). ಆಡಿಸ್ ಅಬಾಬಾ ಎಂದರೆ ಹೊಸ ಹೂ ಎಂದರ್ಥ. ಚಕ್ರವರ್ತಿ ಎರಡನೆಯ ಮೆನಲಿಕ್ ಈ ನಗರವನ್ನು 1887 ರಲ್ಲಿ ಸ್ಥಾಪಿಸಿದ. 1889 ರಲ್ಲಿ ಇದು ರಾಜಧಾನಿಯಾಯಿತು. ಆತ ನೆಡಿಸಿದ 2,000 ನೀಲಗಿರಿ ವೃಕ್ಷಗಳು ಇಂದಿಗೂ ಇವೆ. ಇಲ್ಲಿನ ಬಹುಜನರ ಭಾಷೆ ಇಂಗ್ಲಿಷ್. ಇಟಲಿ ಸೈನ್ಯ 1936 ರಲ್ಲಿ ಈ ಪಟ್ಟಣವನ್ನು ವಶಪಡಿಸಿಕೊಂಡಿತು. 1941ರಲ್ಲಿ ಬ್ರಿಟಿಷ್ ಮತ್ತು ಇಥಿಯೋಪಿಯ ಪಡೆಗಳು ವಾಪಸ್ಸು ಪಡೆದುವು. ಇಲ್ಲಿಂದ ಜಿಬೂತಿಗೆ ರೈಲು ಸಂಪರ್ಕವಿದೆ. 19 ಕಿಮೀ ದೂರದ ಅತೇಕಿ ಸರೋವರದಿಂದ ವಿದ್ಯುಚ್ಛಕ್ತಿ ಸರಬರಾಜಾಗುತ್ತದೆ. ಕಾಫಿ, ತಂಬಾಕು, ಚರ್ಮ ಮುಂತಾದುವು ರಫ್ತಾಗುತ್ತವೆ. ಅನೇಕ ಲಘು ಉದ್ದಿಮೆಗಳೂ ಕೈಗಾರಿಕೆಗಳೂ ಇವೆ. ಅನೇಕ ಅಂತಾರಾಷ್ಟ್ರೀಯ ಸಂಘಟನೆಗಳ ಕೇಂದ್ರಸ್ಥಾನವಾಗಿದೆ. ಆಫ್ರಿಕ ರಾಷ್ಟ್ರಗಳ ಏಕತೆಯ ಸಂಘಟನೆಯ ಕೇಂದ್ರ ಇಲ್ಲಿದೆ. (ಎಸ್.ಸಿ.ವಿ.)

**ಆದರ್ಶ ಜನಸಂಖ್ಯಾ ಸಿದ್ಧಾಂತ:** ಆದರ್ಶ ಜನಸಂಖ್ಯಾ ಸಿದ್ಧಾಂತವು ಒಂದು ರಾಷ್ಟ್ರಕ್ಕೆ ಅತ್ಯಂತ ಅನುಕೂಲವಾದ ಜನಸಂಖ್ಯಾ ಗಾತ್ರಕ್ಕೆ ಸಂಬಂಧಿಸಿದೆ. ಈ ಸಿದ್ಧಾಂತದ ಪ್ರಕಾರ ಒಂದು ರಾಷ್ಟ್ರದ ಜನಸಂಖ್ಯೆ ಅಲ್ಲಿನ ಆರ್ಥಿಕ ಮತ್ತು ತಾಂತ್ರಿಕ ಸ್ಥಿತಿಗಳಿಗೊಳಪಟ್ಟು, ಅತ್ಯಧಿಕ ತಲಾ ಹುಟ್ಟುವಳಿಯನ್ನು ಹೊಂದಿರುತ್ತದೆ ಹಾಗೂ ಅದರಿಂದ ಅತ್ಯಂತ ಉನ್ನತ ಮಟ್ಟದ ಜೀವನ ನಡೆಸಲು ಸಾಧ್ಯವಾಗುತ್ತದೆ. ಉದಾಹರಣೆಗೆ, ಸು. 60 ಮಿ. ಜನಸಂಖ್ಯೆ ಹೊಂದಿರುವ ರಾಷ್ಟ್ರದ ಜನಸಂಖ್ಯೆಯು 30 ಮಿ.ಗೆ ಇಳಿದರೆ ಅನೇಕ ಸಂಪನ್ಮೂಲಗಳನ್ನು ಪರಿತ್ಯಾಗಮಾಡಬೇಕಾಗುತ್ತದೆಯಲ್ಲದೆ, ಸಾರ್ವಜನಿಕ ಸೇವಾ ಸೌಲಭ್ಯಗಳಲ್ಲಿ ಕಡಿತ ಮಾಡಬೇಕಾಗುತ್ತದೆ. ಇದರಿಂದ ಜೀವನಮಟ್ಟವು ಕಡಿಮೆಯಾಗುತ್ತದೆ. ಅದೇ ರೀತಿ

ಜನಸಂಖ್ಯೆಯು 60 ಮಿ.ದಿಂದ 90 ಮಿ.ಗೆ ಏರಿದರೆ ಪ್ರಚಲಿತ ಸಂಪನ್ಮೂಲ ಅಭಿವೃದ್ಧಿಗನುಗುಣವಾಗಿ ನಡೆಸುವ ಜೀವನಮಟ್ಟವನ್ನು ನಡೆಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆದರ್ಶ ಜನಸಂಖ್ಯಾ ಗಾತ್ರವು ಈ ಎರಡೂ ಮಿತಿಗಳ ನಡುವೆ ಅಡಗಿರುತ್ತದೆ. ಇದು ಸಂಪನ್ಮೂಲಗಳ ಅಭಿವೃದ್ಧಿಗೆ ತಕ್ಕಂತೆ ಉನ್ನತ ಮಟ್ಟದ ಜೀವನ ನಡೆಸಲು ಸಹಾಯಕಾರಿಯಾಗಿರುತ್ತದೆ. ಇಲ್ಲಿ ಕೊಟ್ಟಿರುವ ಉದಾಹರಣೆಯಲ್ಲಿ ಅದು 55 ಮಿ. ಆಗಿರಬಹುದು ಅಥವಾ 65 ಮಿ. ಅಥವಾ ಇನ್ನಾವುದೋ ಒಂದು ಸಂಖ್ಯೆಯಾಗಿರಬಹುದು. (ಎಸ್.ಐ.ಬಿ.)

**ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆ:** ಆದಾನ ಮತ್ತು ಉತ್ಪತ್ತಿ ತಂತ್ರವನ್ನು ವೆಸ್ಸಿಲಿ ಎಂ. ಲೀಯಾಂಟೀಫ್‌ರವರು 1951ರಲ್ಲಿ ಪರಿಚಯಿಸಿದರು. ಇವರು ಆದಾನ ಮತ್ತು ಉತ್ಪತ್ತಿ ತಂತ್ರವನ್ನು ಕೈಗಾರಿಕೆಗಳ ಅಂತರ ಸಂಬಂಧ, ಆರ್ಥಿಕ ಸಂಕೀರ್ಣತೆ ಹಾಗೂ ಬೇಡಿಕೆ ಮತ್ತು ನೀಡಿಕೆಗಳ ಸ್ಥಿರತೆ ಕಾಯ್ದುಕೊಳ್ಳಲು ಬೇಕಾಗುವ ಅಗತ್ಯ ಪರಿಸ್ಥಿತಿಯನ್ನು ಅರಿಯಲು ಈ ತಂತ್ರವನ್ನು ಮೊದಲ ಬಾರಿಗೆ ಅಳವಡಿಸಿ ಪ್ರಸ್ತುತಪಡಿಸಿದರು. ಅಲ್ಲದೆ ಆದಾನ ಮತ್ತು ಉತ್ಪತ್ತಿ ತಂತ್ರ ಅಥವಾ ವಿಶ್ಲೇಷಣೆಯನ್ನು ಅಂತರ ಕೈಗಾರಿಕಾ ವಿಶ್ಲೇಷಣೆ ಎಂದು ಸಹ ಕರೆಯಲಾಗಿದೆ. ವೆಸ್ಸಿಲಿ ಲೀಯೊಂಟೀಫ್‌ರವರು ಆದಾನ ಮತ್ತು ಉತ್ಪತ್ತಿ ಸಿದ್ಧಾಂತದ ಪ್ರಶ್ನಾತೀತ ಕರ್ತೃ ಆಗಿದ್ದಾರೆ.

ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆ ಅಥವಾ ಅಂತರಿಕ ಕೈಗಾರಿಕಾ ವಿಶ್ಲೇಷಣೆಯನ್ನು ಆರ್ಥಿಕತೆಯ ವಿವಿಧ ಕ್ಷೇತ್ರಗಳ ನಡುವಿನ ಅಂತರ ಅವಲಂಬನೆಯನ್ನು ಕುರಿತ ಅಧ್ಯಯನ ಮಾಡಲು ಬಳಸಲಾಗುತ್ತಿದೆ. ಗುಣಾತ್ಮಕ ಅಂತರ ಅವಲಂಬನೆ ಮತ್ತು ಅಂತರ ಸಂಬಂಧ ಹೊಂದಿರುವ ಯಾವುದೇ ಆರ್ಥಿಕ ಚಟುವಟಿಕೆಗಳ ನಡುವಿನ ಪ್ರಾಯೋಗಿಕ ಅಧ್ಯಯನದ ಸಾಧನವಾಗಿದೆ. ಇದು ಯಾವುದೇ ಆರ್ಥಿಕ ವ್ಯವಸ್ಥೆಯ ವಿವಿಧ ಕ್ಷೇತ್ರಗಳ ನಡುವಿನ ಸಂಬಂಧವನ್ನು ಸಮೀಕರಣದ ಮೂಲಕ ಸಾದರಪಡಿಸುತ್ತದೆ. ಸೈಮನ್ ಕುಜ್ನೆಟ್ಸ್‌ರವರ ಪ್ರಕಾರ ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆಯು ಆರ್ಥಿಕ ರಚನೆ ಕುರಿತ ಅಧ್ಯಯನದಲ್ಲಿ ತೀರ ಅವಶ್ಯವಾಗಿರುತ್ತದೆ. ಇದು ಆರ್ಥಿಕ ರಚನೆಗೆ ಒತ್ತುಕೊಟ್ಟಿರುವ ಒಳನೋಟವನ್ನು ತಿಳಿಸುತ್ತದೆ. ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆಯೂ ಆರ್ಥಿಕ ಅಂತರ ಅವಲಂಬನೆಗಳು ಮತ್ತು ಅವುಗಳ ಸಂಕೀರ್ಣತೆಗಳನ್ನು ತಿಳಿಸುವುದರ ಮೂಲಕ ನೀಡಿಕೆ ಮತ್ತು ಬೇಡಿಕೆಗಳ ಸ್ಥಿರತೆಯನ್ನು ನಿರ್ವಹಿಸಲು ಸಹಕಾರಿಯಾಗಿರುತ್ತದೆ. ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆಯಿಂದ ಕೈಗಾರಿಕೆಗಳ ಅಂತರ ಅವಲಂಬನೆ ಮತ್ತು ಅಂತರ ಸಂಬಂಧಗಳ ಇಡೀ ವ್ಯವಸ್ಥೆಯನ್ನು ತಿಳಿದುಕೊಳ್ಳಬಹುದು. ಆದಾನಗಳ ನಡುವಿನ ಸಂಬಂಧಗಳು ಸಾಮಾನ್ಯವಾಗಿ ಯಾವುದೇ ಅರ್ಥಿಕತೆಯನ್ನು ಸ್ಥಿರತೆಗೊಳಿಸುತ್ತವೆ. ಉದಾ: ಕಲ್ಲಿದ್ದಲು ಕೈಗಾರಿಕೆಗೆ ಕಬ್ಬಿಣ ಆದಾನವಾದರೆ, ಕಲ್ಲಿದ್ದಲು ಕಬ್ಬಿಣ ಕೈಗಾರಿಕೆಗೆ ಆದಾರವಾಗುತ್ತದೆ. ಹೀಗೆ ಒಂದು ಕನಿಷ್ಠ ಪ್ರಮಾಣ ಕಲ್ಲಿದ್ದಲು ಉತ್ಪಾದಿಸಲು ಎಷ್ಟು ಪ್ರಮಾಣದ ಕಬ್ಬಿಣ ಬೇಕಾಗುತ್ತದೆ. ಹಾಗೆ ಕಬ್ಬಿಣದ ಉತ್ಪಾದನೆಯಲ್ಲಿ ಎಷ್ಟು ಪ್ರಮಾಣದ ಕಲ್ಲಿದ್ದಲುಬೇಕಾಗುತ್ತದೆ ಎಂಬುದರ ಬಗ್ಗೆ ನಿರಂತರವಾಗಿ ತಿಳಿಯಲು ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆಯು ಸಹಾಯ ಮಾಡುತ್ತದೆ.

ಆದಾನ ಉತ್ಪತ್ತಿ ವಿಶ್ಲೇಷಣೆಯ ಸಾಮಾನ್ಯ ಗುಣಲಕ್ಷಣಗಳೆಂದರೆ–

1) ಆದಾನ ಉತ್ಪತ್ತಿ ವಿಶ್ಲೇಷಣೆ ನೇರವಾಗಿ ಉತ್ಪಾದನೆ ಕಾರ್ಯವನ್ನು ತಿಳಿಸುತ್ತದೆ.

2) ಇದು ಪ್ರಾಯೋಗಿಕ ಸಂಶೋಧನೆಯಾಗಿದ್ದು, ವೇಲ್‌ರಸ್ ಮತ್ತು ಪ್ಯಾರೇಟೋರವರುಗಳ ಸಾಮಾನ್ಯ ಸ್ಥಿರತೆಯ ಸೈದ್ಧಾಂತಿಕ ವಿಶ್ಲೇಷಣೆಗೆ ಭಿನ್ನವಾದುದಾಗಿದೆ.

3) ಇದು ಸಾಮಾನ್ಯ ಸ್ಥಿರತೆಯ ಸಂಗತಿಗೆ ಹೆಚ್ಚು ಒತ್ತು ನಿಡಿದೆ. ಅಲ್ಲದೆ ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆಯನ್ನು ಭಾಗಶಃ ಸ್ಥಿರತೆಯನ್ನು ಯಾವುದೇ ಆರ್ಥಿಕತೆಯಲ್ಲಿ ಕಾಯ್ದುಕೊಳ್ಳಲು ಅನ್ವಯಿಸಲಾಗುವುದು.

ಆದಾನ ಉತ್ಪತ್ತಿ ವಿಶ್ಲೇಷಣೆಯು ಈ ಕೆಳಕಂಡ ಪರಿಕಲ್ಪನೆಯ ಮೇಲೆ ಆಧಾರಿತವಾಗಿದೆ.

1) ಸಮಗ್ರ ಆರ್ಥಿಕತೆಯನ್ನು ಅಂತರಿಕ ಕೈಗಾರಿಕಾ ವಿಭಾಗ ಮತ್ತು ಸಿದ್ಧ ವಸ್ತುಗಳ ವಿಭಾಗ ಎಂಬುದಾಗಿ ಎರಡು ಪ್ರಮುಖ ಭಾಗಗಳಾಗಿ ವಿಂಗಡಿಸಲಾಗಿದೆ.

2) ಯಾವುದೇ ಕೈಗಾರಿಕೆಯ ಒಟ್ಟು ಉತ್ಪನ್ನ ಅದೇ ಕೈಗಾರಿಕೆಯ ಆದಾನವಾಗಿ ಇಲ್ಲವೆ ಇತರೆ ಕೈಗಾರಿಕೆಗಳ ಆದಾನವಾಗಿಯೂ ಮತ್ತು ಬೇಡಿಕೆ ವಿಭಾಗದಲ್ಲಿ ಆದಾನ ರೂಪದಲ್ಲಿ ಬಳಸಲ್ಪಡುವುವು.

3) ಯಾವುದೇ ಕೈಗಾರಿಕೆಗಳಲ್ಲಿ ಎರಡು ವಸ್ತುಗಳನ್ನು ಉತ್ಪಾದಿಸಲಾಗುವುದಿಲ್ಲ. ಪ್ರತಿಯೊಂದು ಕೈಗಾರಿಕೆಯು ತನ್ನದೇ ಆದ ಒಂದೇ ತೆರನಾದ ಉತ್ಪನ್ನವನ್ನು ಉತ್ಪಾದಿಸುತ್ತದೆ.

4) ಉತ್ಪಾದನಾ ಪ್ರಮಾಣಗಳಿಗನುಸಾರವಾಗಿ ಸ್ಥಿರ ಪ್ರತಿಫಲಗಳಿರುತ್ತವೆ.

5) ಯಾವುದೇ ಉತ್ಪಾದನಾ ಕಾರ್ಯವಿಧಾನದಲ್ಲಿ ಎಲ್ಲಾ ಆದಾನಗಳನ್ನು ಸರಿಯಾದ ಪ್ರಮಾಣಗಳಲ್ಲಿ ಬಳಸುವುದರ ಮೂಲಕ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲಾಗುವುದು. ಆದಾನಗಳ ಬಳಕೆಯ ಪ್ರಮಾಣವು ಉತ್ಪನ್ನದ ಮಟ್ಟಕ್ಕೆ ಅನುಗುಣವಾಗಿ ವಿಸ್ತಾರಗೊಳ್ಳುತ್ತದೆ. ಹೀಗೆ ಪ್ರತಿ ವಿಭಾಗದ ಅಥವಾ ಕೈಗಾರಿಕೆಯ ಆದಾನ ಉತ್ಪಾದನೆಯ ಗುಣಕಗಳು ಸ್ಥಿರವಾಗಿರುತ್ತವೆ.

ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆಯ ಮಿತಿಗಳು

1) ಆದಾನ ಉತ್ಪತ್ತಿ ವಿಶ್ಲೇಷಣೆಯು ಅಸಹಜ ಪರಿಕಲ್ಪನೆಯಿಂದ ಕೂಡಿದ್ದು ಪ್ರಮಾಣಕ್ಕನುಗುಣವಾಗಿ ಪ್ರತಿಫಲಗಳು ಮತ್ತು ಉತ್ಪಾದಾನ ತಂತ್ರಗಳು ಸ್ಥಿರವಾಗಿರುತ್ತವೆ. ಆದರೆ ಪ್ರಮಾಣಕ್ಕಾನುಗುಣವಾಗಿ ಪ್ರತಿಫಲಗಳು ಮತ್ತು ಉತ್ಪಾದನಾ ತಂತ್ರಗಳು ಚಲನಾತ್ಮಕ ಆರ್ಥಿಕತೆಯಲ್ಲಿ ಬದಲಾವಣೆಹೊಂದುತ್ತಿರುತ್ತವೆ.

2) ಇದು ಆರ್ಥಿಕ ದಕ್ಷತೆಯನ್ನು ಪೂರ್ಣವಾಗಿ ಉಪೇಕ್ಷೆಮಾಡಿದೆ.

3) ಈ ವಿಶ್ಲೇಷಣೆ ತುಂಬ ತಾಂತ್ರಿಕವಾಗಿದ್ದು ಅಂಕಿ ಅಂಶಗಳ ಕೊರತೆ ಕಂಡುಬರುವ ಹಿಂದುಳಿದ ರಾಷ್ಟ್ರಗಳಲ್ಲಿ ಉಪಯೋಗಿಸಲು ಸಾಧ್ಯವಾಗುವುದಿಲ್ಲ.

4) ಆದಾನ ಮತ್ತು ಉತ್ಪತ್ತಿ ವಿಶ್ಲೇಷಣೆ ಮಾದರಿಯು ಉತ್ಪಾದನ ಪ್ರಕ್ರಿಯೆಯಲ್ಲಿನ ಅಡತಡೆಗಳು ಮತ್ತು ಪ್ರತಿಫಲಗಳಲ್ಲಿನ ವ್ಯತ್ಯಾಸವನ್ನು ಸರಿಯಾಗಿ ಪ್ರತಿಬಿಂಬಿಸುವುದಿಲ್ಲ.

ಉಪಯೋಗಗಳು: 1) ಅಭಿವೃದ್ಧಿಯೋಜನೆಯನ್ನು ರೂಪಿಸುವಲ್ಲಿ ಬೇಕಾಗುವ ಅಗತ್ಯ ಮಾಹಿತಿಯನ್ನು ಅಂದರೆ ಆದಾನ ಉತ್ಪತ್ತಿಯ ಪಟ್ಟಿಯು ಪ್ರತಿಯೊಂದು ಆರ್ಥಿಕ ಕ್ಷೇತ್ರಗಳ ಒಳರಚನಾ ಸಂಬಂಧಗಳ ಬಗ್ಗೆ ತಿಳಿಸುವುದರ ಮೂಲಕ ಪ್ರಯೋಜನಕಾರಿಯಾಗಿದೆ.

2) ಇದು ಅಂತರ ಆರ್ಥಿಕ ಕ್ಷೇತ್ರಗಳು ಮತ್ತು ಅಂತರ ಕೈಗಾರಿಕೆಗಳ ಸಮನ್ವಯ ಹಾಗೂ ಸಮತೋಲನವನ್ನು ಕಾಯ್ದುಕೊಳ್ಳಲು ಪ್ರಯೋಜನವಾಗುತ್ತದೆ.

3) ಇದನ್ನು ರಾಷ್ಟ್ರೀಯ ಯೋಜನೆಗಳನ್ನು ತಯಾರಿಸಲು ಸಾಧನವಾಗಿ ಬಳಸಲಾಗುತ್ತದೆ.

4) ಇದನ್ನು ರಾಷ್ಟ್ರೀಯ ಆದಾಯವನ್ನು ಅಂದಾಜು ಮಾಡಲು ಸಹ ಬಳಸಬಹುದಾಗಿದೆ.

5) ಆರ್ಥಿಕತೆಯ ಪ್ರತಿಯೊಂದು ಕ್ಷೇತ್ರದ ಉತ್ಪಾದನೆ ಮತ್ತು ಆಮದು ಮಟ್ಟ ಹಾಗೂ ಅಂತಿಮ ಬೇಡಿಕೆಯನ್ನು ಅಂದಾಜು ಮಾಡಲು ಆದಾನ ಉತ್ಪತ್ತಿ ತಂತ್ರವನ್ನು ಬಳಸಬಹುದಾಗಿದೆ.

6) ಯಾವುದೇ ಆರ್ಥಿಕತೆಯು ಒಂದು ನಿರ್ದಿಷ್ಟ ಉತ್ಪಾದನ ಮಟ್ಟವನ್ನು ತಲಪಲು ವಿವಿಧ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಲು ಸಮರ್ಪಕ ರೀತಿಯಲ್ಲಿ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆಯಲ್ಲಿ ಆದಾನ ಉತ್ಪತ್ತಿ ವಿಶ್ಲೇಷಣ ತಂತ್ರವನ್ನು ಪರಿಣಾಮಕಾರಿಯಾಗಿ ಬಳಸಬಹುದಾಗಿದೆ.

7) ಇದನ್ನು ಅಗತ್ಯವಿರುವ ಪರಿಣತಶ್ರಮದ ಪ್ರಮಾಣವನ್ನು ಮೌಲ್ಯೀಕರಿಸಲು ಸಹ ಉಪಯೋಗಿಸಬಹುದು.

8) ಯಾವುದೇ ಆರ್ಥಿಕತೆಯಲ್ಲಿ ನೇರ ಬಂಡವಾಳ ಹೂಡಿಕೆ ಮತ್ತು ಶ್ರಮದ ಆಮದಿನ ಅಗತ್ಯ ಹಾಗೂ ವಿವಿಧ ಕ್ಷೇತ್ರಗಳ ಅಗತ್ಯದ ಅಂದಾಜು ಮಾಡಲು ಸಹ ಉಪಯೋಗಿಸಬಹುದು.

9) ಪ್ರಾದೇಶಿಕ ಆದಾನ ಉತ್ಪತ್ತಿ ಮಾದರಿಗಳನ್ನು ಯೋಜನೆಗಳ ಉದ್ದೇಶಗಳಿಗನುಗುಣವಾಗಿ ರಚಿಸಿ ಅಭಿವೃದ್ಧಿಯೋಜನೆಗಳ ತಯಾರಿಕೆಯಲ್ಲಿ ಉಪಯೋಗಿಸಬಹುದಾಗಿದೆ. (ಟಿ.ಎಂ.ಎಂ.)

**ಆದಿಚುಂಚನಗಿರಿ:** ಕರ್ನಾಟಕದ ಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಒಂದು. ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿಗೆ ಸಮೀಪದಲ್ಲಿದೆ. ಸಮುದ್ರಮಟ್ಟದಿಂದ 967 ಮೀ ಎತ್ತರದಲ್ಲಿರುವ ಗಿರಿ ಪ್ರಕೃತಿಸೌಂದರ್ಯಕ್ಕೆ ತವರು. ದಟ್ಟವಾಗಿ ಹಬ್ಬಿನಿಂತಿರುವ ಕಾನನವನ್ನು ಹಾದು ಬೆಟ್ಟವನ್ನು ಏರಿದರೆ ಅನ್ನದಾನಿ ಮಠ ಸಿಕ್ಕುತ್ತದೆ.

ಚುಂಚನಗಿರಿ ಒಂದು ಉತ್ತಮ ಪ್ರವಾಸಿಕ್ಷೇತ್ರ. ಇಲ್ಲಿನ ಗವಿಸಿದ್ದೇಶ್ವರ ದೇವಾಲಯಕ್ಕೆ ಬಂಡೆಗಳನ್ನೇರಿ ಹೋಗುವುದೊಂದು ಸಾಹಸ. ಅಲ್ಲಿಗೆ ಸಮೀಪದ ಕೂಡುಬಂಡೆ ಮೂರುಬಾರಿ ಪ್ರತಿಧ್ವನಿಸುತ್ತದೆ. ಮೇದರಗುಡ್ಡದ ಬಳಿಯಲ್ಲಿ ಹಾಕಿದ ಕೂಗು ಸ್ವಚ್ಛವಾಗಿ ಬೆಟ್ಟದ ನೆತ್ತಿಯಿಂದಲ್ಲೋ ಕೇಳಿಬರುತ್ತದೆ. ಉತ್ತರಭಾಗದ ಹನುಮಾನ ಕಣಿವೆ ಗಿರಿಯ ಮತ್ತೊಂದು ಪಾರ್ಶ್ವದ ರಮ್ಯನೋಟವನ್ನು ಒದಗಿಸುತ್ತದೆ.

ಆದಿಚುಂಚನಗಿರಿ ಪವಿತ್ರಕ್ಷೇತ್ರವೆಂತೋ ಅಂತೆಯೇ ಮಠ, ದೇವಾಲಯ, ನಾಗ ಚಾವಡಿ, ಭೈರವನ ಗುಡಿ ಮತ್ತು ನಾನಾರೀತಿಯ ನಿಸರ್ಗದ ಅದ್ಭುತಗಳಿಂದ ಕೂಡಿ ಪ್ರೇಕ್ಷಣೀಯ ಸ್ಥಳವೂ ಆಗಿದೆ. ಇದೊಂದು ನವಿಲುಧಾಮವಾಗಿ ಅಭಿವೃದ್ಧಿಗೊಳ್ಳುತ್ತಿದೆ. (ಜಿ.ಎಸ್.ಪಿ.)

**ಆದಿಜೀವಯುಗ:** ಭೂವಿಜ್ಞಾನದಲ್ಲಿ ಸು. 600 ದಶಲಕ್ಷ ವರ್ಷಗಳಿಂದ 1850 ದಶಲಕ್ಷ ವರ್ಷಗಳವರೆಗಿನ ಹಿಂದಿನಕಾಲ. (ಪ್ರೊಟೆರೊಜೋಯಿಕ್ ಈರ); ಆರ್ಷೇಯ (ಆರ್ಕಿಯನ್) ಮತ್ತು ಪುರಾತನ ಜೀವ ಯುಗಗಳ (ಪೇಲಿಯೊಜೋಯಿಕ್ ಈರ) ನಡುವಿನ ಯುಗ. ಆದಿಜೀವಯುಗ ಕೊನೆಗೊಂಡೊಡನೆ (ಅಂದರೆ ಸುಮಾರು 600

ದಶಲಕ್ಷ ವರ್ಷಗಳ ಹಿಂದೆ) ಪುರಾತನ ಜೀವಯುಗದ ಕೇಂಬ್ರಿಯನ್ ಕಲ್ಪ (ಇಪಾಕ್) ಪ್ರಾರಂಭವಾಯಿತು. ಆಗ ರೂಪುಗೊಂಡ ಶಿಲಾಶ್ರೇಣಿಗಳ ತಳದಲ್ಲಿರುವ ಅಗಾಧ ಶಿಲಾಸಮುದಾಯಕ್ಕೆ ಪ್ರೀಕೇಂಬ್ರಿಯನ್ ಶಿಲಾಸಮುದಾಯವೆಂದು ಹೆಸರು. ಇದು ಭೂಮಿಯ ಇತಿಹಾಸ ಕಾಲದ ಸುಮಾರು ಮುಕ್ಕಾಲು ಭಾಗವನ್ನು ನಿರೂಪಿಸುತ್ತದೆ. ಈ ಶಿಲಾಸಮುದಾಯ ಸಂಪೂರ್ಣವಾಗಿ ಜೀವಾವಶೇಷರಹಿತವಾಗಿದೆ. ಇವುಗಳ ಮೇಲೆ ಸಂಚಯನಗೊಂಡಿರುವ ಶಿಲಾರಾಶಿಗಳಿಂದ ಕಾಲವನ್ನು ಸುಲಭವಾಗಿ ಗುರುತಿಸಬಹುದು. ಪ್ರೀ ಕೇಂಬ್ರಿಯನ್ ಶಿಲಾರಾಶಿಯನ್ನು ಕೆಳಭಾಗ ಮತ್ತು ಮೇಲ್ಭಾಗ ಎಂದು ಎರಡು ಭಾಗಗಳನ್ನಾಗಿ ವಿಭಜಿಸಬಹುದು. ಕೆಳಭಾಗ ಮುಖ್ಯವಾಗಿ ಗ್ರ್ಯಾನೈಟ್ ಮತ್ತು ನೈಸ್ ಮುಂತಾದ ಅಗ್ನಿಶಿಲೆಗಳಿಂದಲೂ, ರೂಪಾಂತರಪಡೆದ ಜಲಜಶಿಲೆಗಳಿಂದಲೂ ಕೂಡಿದೆ. ಮೇಲ್ಭಾಗ ಬಹುಭಾಗ ಜಲಜಶಿಲೆಗಳಿಂದ ಆಗಿದೆ. ಈ ಜಲಜಶಿಲೆಗಳು ನೊರಜುಶಿಲೆ, ಪೆಂಟೆ ಶಿಲೆ, ಮರಳ ಶಿಲೆ, ಜೇಡು ಶಿಲೆ ಮತ್ತು ಸುಣ್ಣ ಶಿಲೆಗಳಾಗಿವೆ. ಇವುಗಳಲ್ಲಿ ಪ್ರವಾಹ ಪದರ, ನಕಲ ಪದರ ಮುಂತಾದ ಸಾಗರ ಶಿಲಾ ರಚನೆಗಳನ್ನು ಕಾಣಬಹುದು. ಈ ಶಿಲಾಸಮುದಾಯಗಳಲ್ಲಿ ಕೆಳಭಾಗಕ್ಕೆ ಆರ್ಷೇಯ ಶಿಲಾಸಮುದಾಯವೆಂದೂ, ಮೇಲ್ಭಾಗಕ್ಕೆ ಪ್ರೀಕೇಂಬ್ರಿಯನ್ ಶಿಲಾಸಮುದಾಯವೆಂದೂ ಹೆಸರು. ಇದು ಅಮೆರಿಕ ದೇಶದ ಅಲ್ಗಾಂಕಿಯನ್ ಸಮುದಾಯಕ್ಕೆ ಸಮವಾದುದು. ಕಡಪ ಮತ್ತು ವಿಂಧ್ಯ ಶಿಲಾವರ್ಗಗಳು ಈ ಸಮುದಾಯದ ಭಾಗಗಳು. ಇದು ಆದಿ ಜೀವಯುಗದ ಶಿಲಾಸಮುದಾಯ. ಆದಿ ಜೀವಯುಗದ ಶಿಲಾಸ್ತೋಮ ಆದರ್ಶ ಜಲಜ ಶಿಲೆಗಳಿಂದ ಕೂಡಿ ಸಾವಿರಾರು ಅಡಿಗಳಷ್ಟು ಎತ್ತರವಿರುವ ಶಿಲಾಪದರಗಳ ಗುಂಪು. ಇವಕ್ಕೂ ಮತ್ತು ಆರ್ಷೇಯ ಯುಗದ ಶಿಲಾಸಮುದಾಯಗಳಿಗೂ ಮಧ್ಯದಲ್ಲಿ ದೊಡ್ಡ ಅನನುರೂಪತೆ ಇದೆ. ಇದಕ್ಕೆ ಈಪಾರ್ಕೀಯನ್ ಅನನುರೂಪತೆಯೆಂದು ಹೆಸರು. ಈ ಕಾಲದ ಶಿಲಾರಾಶಿಯಲ್ಲಿ ಅನೇಕ ದೊಡ್ಡ ಮತ್ತು ಚಿಕ್ಕ ಅನನುರೂಪತೆಗಳಿವೆ. ಶಿಲಾನಿಕ್ಷೇಪದ ಕಾರ್ಯಗಳು ಅನೇಕ ಬಾರಿ ಪುನರಾವರ್ತಿಸಿರುವುದು ತಿಳಿಯುತ್ತದೆ. ಈ ಯುಗದ ಶಿಲೆಗಳು ವರ್ತಮಾನ ಕಾಲದಲ್ಲಿ ನಡೆಯುತ್ತಿರುವ ಶಿಥಿಲೀಕರಣ ಮತ್ತು ಶಿಲಾಸಂಚಯನ ಕಾರ್ಯಗಳಿಂದಲೇ ರೂಪುಗೊಂಡುವು. ಆದರೆ ಇವು ಜೀವಾವಶೇಷ ರಹಿತ. ಈ ಕಾಲದಲ್ಲಿ ಜೀವಿಗಳು ಇದ್ದುವು ಎಂಬುದಕ್ಕೆ ಸಹಜವಾದ ಸಾಕ್ಷ್ಯಗಳಿಲ್ಲ. ಆದರೆ ಅಪ್ರತ್ಯಕ್ಷ ಸಾಕ್ಷ್ಯಗಳಿಂದ ಇಂಥ ಜೀವಿಗಳಿದ್ದುವೆಂದು ಪುಷ್ಟೀಕರಿಸಬಹುದು.

ಶಿಲಾನಿಕ್ಷೇಪರಾಶಿಯನ್ನು ವರ್ತಮಾನಕಾಲದ ಭೂ ಇತಿಹಾಸದ ಆದಿಯವರೆಗೆ ಸ್ಥೂಲವಾಗಿ ಅವಲೋಕಿಸಿದರೆ ಜೀವವೃಕ್ಷ ಕೇಂಬ್ರಿಯನ್ ಕಾಲದ ಆದಿಯವರೆಗೆ ನಿರಾತಂಕವಾಗಿ ಬೆಳೆದಿರುವುದನ್ನು ಕಾಣಬಹುದು. ಆದರೆ ಇದಕ್ಕೆ ಹಿಂದಿನ ಕಾಲದಲ್ಲಿ ರೂಪುಗೊಂಡ ಶಿಲೆಗಳಲ್ಲಿ ಜೀವಾವಶೇಷದ ಕುರುಹೇ ಇಲ್ಲ. ಕೇಂಬ್ರಿಯನ್ ಯುಗದ ಪ್ರಾರಂಭದಲ್ಲಿ ಸಿಕ್ಕಿರುವ ಜೀವಾವಶೇಷಗಳು ಜೀವವೃಕ್ಷದ ಪ್ರಾರಂಭ ಕಾಲದವಲ್ಲ ಎಂಬುದು ನಮಗೆ ವ್ಯಕ್ತವಾಗುತ್ತದೆ. ಏಕೆಂದರೆ ಕೇಂಬ್ರಿಯನ್ ಕಾಲದ ಜೀವರಾಶಿ ಬಹು ಮುಂದುವರಿದಿದ್ದು ಬೆನ್ನೆಲುಬಿಲ್ಲದ ಎಲ್ಲ ಪ್ರಾಣಿಗಳಿಂದಲೂ ಪ್ರತಿನಿಧಿಸಲ್ಪಟ್ಟಿದೆ. ಆ ಮಟ್ಟವನ್ನು ಮುಟ್ಟಲು ಜೀವಿ ಬಹುಕಾಲದವರೆಗೆ ಸತತವಾಗಿ ವಿಕಾಸಹೊಂದಿದ ಅನಂತರವೇ ಸಾಧ್ಯ. ಅಂದರೆ ಕೇಂಬ್ರಿಯನ್ ಯುಗದಿಂದ ಈಗಿನವರೆಗೆ ಕಾಲಾವಧಿಯ ಪ್ರಮಾಣ ಎಷ್ಟೇ ಆದರೂ ಜೀವರಾಶಿ ಕೇಂಬ್ರಿಯನ್ ಕಾಲಕ್ಕಿಂತ ಬಹಳ ಮುಂಚಿತವಾಗಿ ಇದ್ದು ಅಧಿಕ ವಿಕಾಸ ಹೊಂದಿರಬೇಕು ಎಂಬುದನ್ನು ಶಾಸ್ತ್ರಜ್ಞರು ನಿರ್ಧರಿಸುವರು.

ಆದಿಜೀವಯುಗದಲ್ಲಿ ಜೀವಿಗಳು ಇದ್ದುವೆಂಬುದನ್ನು ಸ್ಥಿರಪಡಿಸುವುದಕ್ಕೆ ನಮಗೆ ಸಾಕಷ್ಟು ಆಧಾರ ದೊರಕಿದೆ. ಅತ್ಯಧಿಕ ಪ್ರಮಾಣದಲ್ಲಿ ಸುಣ್ಣಶಿಲೆ ನಿಕ್ಷೇಪ, ಗ್ರಾಫೈಟ್, ಇಂಗಾಲಾಂಶ, ಗ್ಲಾಕೊನೈಟ್ ಪಟ್ಟಿಯಿರುವ ಕಬ್ಬಿಣದ ಅದಿರು ನಿಕ್ಷೇಪ ಮತ್ತು ಲ್ಯಾಟರೈಟ್ ಮುಂತಾದ ನಿಕ್ಷೇಪಗಳು ಜೀವಿಗಳು ಇರುವುದನ್ನು ಸಾರುತ್ತವೆ. ಇವೆಲ್ಲ ಅಪ್ರತ್ಯಕ್ಷ ಪ್ರಮಾಣಗಳು. ಈ ಕಾಲದ ಸುಣ್ಣ ಶಿಲೆಯಲ್ಲಿ ಕೆಲವು ಭಾಗವಾದರೂ, ಜೀವಿಗಳ ಅದರಲ್ಲೂ ಆಲ್ಗೇ ಎಂಬ ಸಸ್ಯಗಳ ಬೆಳೆಯಣಿಗೆಯಿಂದ ಆದಂಥವು ಎಂದು ಕೆಲವರ ವಾದ. ಆದರೆ ಈ ಸುಣ್ಣಶಿಲೆಗಳಲ್ಲಿ ಆಲ್ಗೇಗಳ ಅವಶೇಷಗಳಿಲ್ಲ. ಆದ್ದರಿಂದ ಅವು ಜೀವಿಗಳ ಕಾರ್ಯಾಚರಣೆಯಿಂದ ಆದಂಥವೋ ಅಥವಾ ರಾಸಾಯನಿಕ ಕ್ರಿಯೆಯಿಂದ ಆದಂಥವೋ ಎಂಬ ಶಂಕೆ ಇನ್ನೂ ವಿಜ್ಞಾನಿಗಳನ್ನು ಕಾಡುತ್ತಿದೆ.

ಗ್ರ್ಯಾಫೈಟ್ ಶಿಲೆ ಬಳ್ಳಿ ಬಳ್ಳಿಯಾಗಿಯೂ ಕಣವಾಗಿಯೂ ದೊರೆಯುತ್ತದೆ. ಕೆನಡ ದೇಶದ ಭೂವಿಜ್ಞಾನಿ ಜೆ. ಡಬ್ಲ್ಯು. ಡಾಸನ್ ಗ್ರ್ಯಾಫೈಟ್ ಪದರವನ್ನು ಕಾರ್ಬನಿಫೆರಸ್ ಕಾಲದ (ಇಂಗಾಲಯುಗ) ಕಲ್ಲಿದ್ದಲು ಪದರಗಳಿಗೆ ಹೋಲಿಸಿ ಇಷ್ಟು ಪ್ರಮಾಣದ ಇಂಗಾಲಾಂಶ ಜೀವಿಗಳ ಮೂಲಕ ಮಾತ್ರ ಸಾಧ್ಯವೆಂದು ಅಭಿಪ್ರಾಯಪಟ್ಟಿರುವನು. ಆದರೆ ಯಾವುದೇ ಗ್ರಾಫೈಟ್ ಶಿಲೆಯನ್ನು ತೆಗೆದುಕೊಂಡರೂ ಅದು ಜೀವಿ ಜನಿತವೆಂದು ನಿಖರವಾಗಿ ಪ್ರತಿಪಾದಿಸಲಾಗುವುದಿಲ್ಲ. ಹಾಗೆಯೇ ಪದರವಿರುವ ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು ಮತ್ತು ಲ್ಯಾಟರೈಟ್‌ಗಳೂ ಬ್ಯಾಕ್ಟೀರಿಯ ಜೀವಿಗಳ ಕಾರ್ಯಾಚರಣೆಯಿಂದ ನಿಕ್ಷೇಪಗೊಂಡವೆಂದು ಕೆಲವರ ಅಭಿಪ್ರಾಯ. ಆದರೆ ಯಾವ ನಿಕ್ಷೇಪವೂ ನಿರ್ದಿಷ್ಟವಾಗಿ ಹೀಗೆಯೇ ಆದುದು ಎಂದು ಸಮರ್ಥಿಸಲು ಸಾಧ್ಯವಿಲ್ಲ. ಅವು ರಾಸಾಯನಿಕವಾಗಿಯೂ ರೂಪುಗೊಳ್ಳಲು ಸಾಧ್ಯ.

ಆದಿಜೀವಯುಗದ ಶಿಲಾಸಮೂಹಗಳಲ್ಲಿ ಜೀವಾವಶೇಷಗಳನ್ನು ಹುಡುಕಲು ಕೆಲವು ಭೂವಿಜ್ಞಾನಿಗಳಿಂದ ಬಹಳ ಪ್ರಯತ್ನ ನಡೆದಿದೆ. 1858ರಲ್ಲಿ ಲೋಗಾನ್, ಕೆನಡದ ಲಾರೆನ್ಷಿಯನ್ ನೈಸ್ ಶಿಲೆಯಲ್ಲಿ ಒಂದು ಕುತೂಹಲಕರ ಖನಿಜ ಶೇಖರಣೆಯನ್ನು ಕಂಡುಹಿಡಿದ. ಅದರಲ್ಲಿ ಕ್ಯಾಲಸೈಟ್ ಮತ್ತು ಸರ್ಪೆಂಟೈನ್ ಎಂಬ ಖನಿಜಗಳು ಒಂದರಮೇಲೊಂದರಂತೆ ಅನೇಕ ಸ್ತರಗಳಾಗಿ ನಿಕ್ಷೇಪಗೊಂಡಿದ್ದವು. ಕ್ಯಾಲಸೈಟ್ ಪ್ರಧಾನವಾಗಿಯೂ ಸರ್ಪೆಂಟೈನ್ ಗೂಡುಗಳನ್ನು ತುಂಬಿದಂತಿದ್ದುವು. ಇಂಥ ರಚನೆ ಖನಿಜದಲ್ಲಿರುವುದು ಬಹಳ ವಿರಳ. ಆದುದರಿಂದ ಇದಕ್ಕೆ ಜೀವಿ ಸಂಬಂಧವಿರಬೇಕೆಂದು ಲೋಗನ್ ನಿರ್ಧರಿಸಿದ. ಇದರ ವಿಚಾರವಾಗಿ ಇನ್ನೂ ಹೆಚ್ಚು ವಿವರಗಳನ್ನು ಡಬ್ಲ್ಯು. ಬಿ. ಕಾರ್ಪೆಂಟ್ ವರದಿ ಮಾಡಿದ.

1885ರಲ್ಲಿ ಜೇಮ್ಸ್ ಹಾಲ್ ಆದಿಜೀವಯುಗದ ಶಿಲೆಗಳಲ್ಲಿ ಎಲೆಕೋಸಿನಂಥ ರಚನೆಯನ್ನು ಪ್ರಾಣಿಯ ಅವಶೇಷವೆಂದು ಅಭಿಪ್ರಾಯಪಟ್ಟು ಅದನ್ನು ಕ್ರಿಪ್ಟೋಜೋವಸ್ ಎಂದು ಹೆಸರಿಸಿದ. ಇದೇ ರೀತಿಯ ರಚನೆ ಗ್ರೀನ್‌ಲೆಂಡ್ ಮತ್ತು ಗೋಬಿ ಮರುಭೂಮಿ ಪ್ರದೇಶಗಳಲ್ಲಿ ಇರುವುದು ವರದಿಯಾಗಿದೆ. ಈ ರಚನೆಗಳು ಆಲ್ಗೇ ಎಂಬ ಸಸ್ಯದ ಅವಶೇಷವೆಂದು ಹೇಳಲಾಗಿದೆ. ಇತ್ತೀಚೆಗೆ ಭಾರತದ ಕಡಪ ಶಿಲೆಗಳಲ್ಲಿರುವ ಸುಣ್ಣ ಶಿಲೆಗಳಲ್ಲಿ ಈ ರೀತಿಯ ರಚನೆಯನ್ನು ಗುರುತಿಸಲಾಗಿದೆ. ಆದರೆ ಜೀವಕಣ ರಚನೆಗಳು ಇಲ್ಲದಿರುವುದರಿಂದ ಇವುಗಳನ್ನು ಜೀವಾವಶೇಷಗಳೆಂದು ಪರಿಗಣಿಸುವುದು ಬಹಳ ಕಷ್ಟ. ಅಲ್ಲದೆ ಪ್ರಯೋಗಶಾಲೆಗಳಲ್ಲಿ ಇದೇ ರೀತಿಯ ರಚನೆಗಳನ್ನು ರಾಸಾಯನಿಕ ವಿಧಾನಗಳಿಂದ ಉತ್ಪತ್ತಿ ಮಾಡಬಹುದೆಂದು ತಿಳಿಯಲಾಗಿದೆ. (ಎಂ.ಆರ್.ಎಸ್.)

**ಆದಿಮಾನವ:** ಮಾನವನ ಉಗಮ ಹತ್ತು ಲಕ್ಷ ವರ್ಷಗಳ ಹಿಂದೆಯೇ ಆಗಿರಬೇಕೆಂದು ಊಹಿಸಿರುತ್ತಾರೆ. ಆದರೆ ಮಾನವ ಈಗಿನ ರೂಪಿನಲ್ಲೇ ಹುಟ್ಟಿರಲಿಲ್ಲ. ಆತ ಹಲವು ಅವಸ್ಥಾಂತರಗಳನ್ನು ಪಡೆದಿರಬೇಕು. ಅವನ ಪೂರ್ವಜರು ಯಾರು, ಅವನ ಮೂಲಸ್ವರೂಪ ಹೇಗಿತ್ತು ಎಂಬುವು ಜಟಿಲ ಪ್ರಶ್ನೆಗಳಾಗಿವೆ. ಡಾರ್ವಿನ್ನನ ವಿಕಾಸವಾದದ ಫಲವಾಗಿ ಕಾಲಕಾಲಕ್ಕೆ ಜೀವಿಗಳು ಬದಲಾವಣೆ ಹೊಂದುತ್ತಾ ಹೋಗುತ್ತವೆ ಎಂಬುದನ್ನು ಒಪ್ಪಿಕೊಂಡಮೇಲೆ ಮಾನವನ ಪೂರ್ವಜರು ವಾನರಕುಲದವರಾಗಿರಬೇಕೆಂದು ಒಂದು ವಾದವಿತ್ತು. ಕಾರಣ ವಾನರ ಮಾನವನ ತೀರ ಸಮೀಪ ಬಂಧುವಾಗಿರುವುದು. ಆದರೆ ಮಾನವ ನೇರವಾಗಿ ವಾನರಕುಲದಿಂದ ಅವಸ್ಥಾಂತರ ಹೊಂದಲಿಲ್ಲವೆಂದೂ ಮಾನವನಿಗೂ ವಾನರಗೂ ಮೂಲ ಈಗ ಅಳಿದು ಹೋಗಿರುವ ಬೇರೆ ಒಂದು ಪ್ರಾಣಿಯಾಗಿರಬೇಕೆಂದೂ ತಜ್ಞರ ಮತವಾಗಿದೆ. ಪ್ರಾಣಿ ಮಾಲೆಯಲ್ಲಿ ಮಾನವನನ್ನು ಸೇರ್ಪಡಿಸಿರುವ ಆ ಕೊಂಡಿಯನ್ನು (ಮಿಸ್ಸಿಂಗ್ ಲಿಂಕ್) ಅರಸುವುದರಲ್ಲಿ ವಿಜ್ಞಾನಿಗಳು ಪೂರ್ಣಪ್ರಯತ್ನ ನಡೆಸಿದ್ದಾರೆ.

ಆದಿಮಾನವ ಮೊದಲು ಕಾಣಿಸಿಕೊಂಡಿದ್ದು ಎಲ್ಲಿ ಎಂಬ ಬಗ್ಗೆ ಅಭಿಪ್ರಾಯ ಭೇದವಿದೆ. ಅವನು ಹುಟ್ಟಿದುದು ಮಧ್ಯ ಏಷ್ಯದಲ್ಲಿ ಎಂದು ಊಹಿಸಲಾಗಿತ್ತು. ಆದರೆ ಕೆಲವು ವಿಜ್ಞಾನಿಗಳು ಈ ಉಗಮ ಆಫ್ರಿಕದಲ್ಲಾಗಿರಬೇಕೆಂದೂ (ಮಿಯೋಸೀನ್ ಕಾಲದಲ್ಲಿ ಪೂರ್ವ ಮತ್ತು ಮಧ್ಯ ಆಫ್ರಿಕದಲ್ಲಿ ಪ್ರೋಕನ್‌ಸಲ್ ಎಂಬ ಜೀವಿಯೊಂದಿತ್ತು; ಇದು 0.6 ಮೀ ಎತ್ತರವಿದ್ದು, ಕಾಲುಗಳಿಂದ ಮಾತ್ರ ನಡೆದು ಕೈಗಳನ್ನು ಕೆಲಸಕ್ಕೆ ಮಾತ್ರ ಉಪಯೋಗಿಸಿತ್ತು; ತೋಳುಗಳು ತುಂಡಾಗಿದ್ದವು; ಮಿದುಳು ಕೋತಿಗಳ ಮಿದುಳಿಗಿಂತ ಉತ್ತಮಗೊಂಡಿತ್ತು) ಮತ್ತೆ ಕೆಲವರು ಯುರೋಪಿನಲ್ಲಾಗಿರಬೇಕೆಂದೂ ವಾದಿಸಿದ್ದಾರೆ. ಆದರೆ ಮಾನವನ ಉಗಮ ಒಂದೇ ಕಡೆಯಲ್ಲಾಯಿತೇ ಅಥವಾ ಬೇರೆ ಕಡೆ ಸ್ವತಂತ್ರವಾಗಿ, ಏಕಕಾಲದಲ್ಲಿ ನಡೆಯಿತೇ ಎಂದು ನಿರ್ಧರಿಸುವುದು ಕಷ್ಟ. ಅದು ಹೇಗಿದ್ದರೂ ಮಾನವ ಜನಿಸಿದುದು ಪೂರ್ವಾರ್ಧಗೋಳದಲ್ಲಿಯೇ ಹೊರತು ಪಶ್ಚಿಮಾರ್ಧಗೋಳದಲ್ಲಲ್ಲ ಎಂಬುದು ನಿರ್ಧಾರವಾಗಿದೆ.

ಮಾನವ ನೇರವಾಗಿ ನಿಂತು ತನ್ನ ಎರಡು ಪಾದಗಳಿಂದಲೇ ನಡೆಯಬಲ್ಲ ಮತ್ತು ಓಡಬಲ್ಲ–ಇದೇ ವಾನರಗೂ ಮಾನವನಿಗೂ ಇರುವ ಮೂಲ ವ್ಯತ್ಯಾಸ. ಕಾಲಿನ ಹೆಬ್ಬೆರಳುಗಳು ಇತರ ಬೆರಳುಗಳನ್ನು ಮುಟ್ಟಲಾರವು. ಪಾದ ಸಂಪೂರ್ಣವಾಗಿ ನೆಲಕ್ಕೂರುತ್ತದೆ. ದವಡೆಗಳು ಹಗುರವಾಗಿ ದುಂಡಗಿವೆ. ಹಲ್ಲುಗಳು ವಿಶಾಲವಾದ ಕಮಾನಿನಲ್ಲಿ ಜೋಡಿಸಿಕೊಂಡಿವೆ. ನೆಟ್ಟಗೆ ಎದೆ ಚಾಚಿ ನಡೆಯುವ ಅವನ ನಿಲುವಿಗೆ ತಕ್ಕಂತೆ ತಲೆಯ ಬುರುಡೆಯ ಕಾಂಡೈಲ್ ಮತ್ತು ಬೆನ್ನುಮೂಳೆ ಮಾರ್ಪಟ್ಟಿವೆ. ಬೆನ್ನುಮೂಳೆ 8ರ ಆಕಾರದಲ್ಲಿರುವುದರಿಂದ ಶರೀರದ ಪೂರ್ಣಭಾರ ನೇರವಾಗಿ ಕಾಲುಗಳ ಮೇಲೆ ಬೀಳುತ್ತದೆ. ಇದೆಲ್ಲಕ್ಕಿಂತ ಮಿಗಿಲಾಗಿ ಮಿದುಳಿನ ಬೆಳವಣಿಗೆ, ವಾನರನ ಮಿದುಳು ಪೆಟ್ಟಿಗೆ ಸು. 350–

500 ಘನ ಸೆಂಮೀ ದೊಡ್ಡದು. ಮಾನವನದಾದರೊ ಸರಾಸರಿ 1,350 ಮತ್ತು 1,500 ಘನ ಸೆಂಮೀ ದೊಡ್ಡದು. ಹಣೆ ಮತ್ತು ಗಲ್ಲದ ಬೆಳವಣಿಗೆ ಮಾನವನಲ್ಲಾಗಿದೆ. ವಾನರಗಳಲ್ಲಿ ಹಣೆ ಮತ್ತು ಗಲ್ಲಗಳ ಬೆಳವಣಿಗೆ ಅಷ್ಟಾಗಿಲ್ಲ. ಕಪಿಯು ಕೆಲವು ವೇಳೆ ಹಿಂದಿನ ಕಾಲಿನಮೇಲೆ ನಿಲ್ಲಬಲ್ಲುದಾದರೂ ಅದು ಮೇಲಿನ ಅರ್ಥದಲ್ಲಿ ನೇಟ್ಟಗೆ ನಿಲ್ಲುವಲ್ಲಿ ಮತ್ತು ಓಡುವಾಗ ಮುಂದಿನ ಪಾದಗಳ ಸಹಾಯವನ್ನು ಪಡೆದೇ ಪಡೆಯುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಮಾನವನ ಪೂರ್ವಜರಿಗೂ ನೇರ ನಿಲುವು ಇದ್ದಿರಬೇಕು. ಅವರು ಎರಡು ಕಾಲುಗಳಿಂದಲೇ ನಡೆಯುತ್ತಿದ್ದಿರಬೇಕು ಎಂದು ಸ್ಪಷ್ಟವಾಗುತ್ತದೆ. ಇದರೊಂದಿಗೆ ತಲೆ ಬುರುಡೆಯಲ್ಲಿನ ಮಿದುಳುಕೋಶ, ಆತ ಉಪಯೋಗಿಸಿರಬಹುದಾದ ಉಪಕರಣಗಳು ಆದಿಮಾನವನನ್ನು ಕಂಡುಕೊಳ್ಳಲು ಸಹಕಾರಿ. ಪ್ರಾಚೀನ ಕಾಲದ ಅವಶೇಷಗಳನ್ನು ಶೋಧಿಸುವಾಗ ಲಕ್ಷಾಂತರ ವರ್ಷಗಳ ಹಿಂದೆಯೇ ಇದ್ದಿರಬಹುದಾದ ಪ್ರಾಣಿಗಳ ಪಳೆಯುಳಿಕೆಗಳು ಅನೇಕ ಕಡೆ ದೊರೆತಿವೆ. ಇವುಗಳ ಕಾಲವನ್ನೂ ಬೇರೆ ಬೇರೆ ಆಧಾರಗಳಿಂದ ನಿರ್ಧರಿಸಲಾಗಿದೆ. ಇಂಥ ಪಳೆಯುಳಿಕೆಗಳಲ್ಲಿ ಮೇಲೆ ತಿಳಿಸಿದ ಲಕ್ಷಣಗಳುಳ್ಳ ತಲೆಬುರುಡೆಗಳೂ ಇತರ ಅಸ್ಥಿಗಳೂ ಅಲ್ಲಲ್ಲಿ ದೊರೆತಿವೆ.

ಇದುವರೆಗೆ ದೊರೆತಿರುವ ಇಂಥ ಅಸ್ಥಿಗಳಲ್ಲಿ ಅತ್ಯಂತ ಪ್ರಾಚೀನವಾದುವು ದಕ್ಷಿಣ ಮತ್ತು ಪೂರ್ವ ಆಫ್ರಿಕದ ಕೆಲವು ಗವಿಗಳಿಂದ ಬಂದಂಥವು. ಮಾನವನದೆಂಬಂತೆ ಕಾಣುವ ಇಲ್ಲಿನ ಕಲ್ಲಾದ (ಫಾಸಿಲೈಸ್ಡ್) ಮೂಳೆಗಳು ಈ ಪ್ರಾಣಿ ನೇರವಾಗಿ ನಿಲ್ಲಬಲ್ಲದಾಗಿತ್ತು ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಅವು ನೇರವಾಗಿ ನಡೆಯಬಲ್ಲುವಾಗಿದ್ದುವು ಎಂದೂ ಊಹಿಸಬಹುದು. ಆಕಾರದಲ್ಲಿ ಕಿರಿದಾಗಿದ್ದ ಈ ಪ್ರಾಣಿಗಳು ಹತ್ತು ಲಕ್ಷ ವರ್ಷಗಳಿಗೂ ಹಿಂದೆಯೇ ಇದ್ದುವೆಂದು ನಿರ್ಧರಿಸಿದ್ದಾರೆ. ಇವುಗಳ ಮಿದುಳು ಮಾತ್ರ ವಾನರ ಮಿದುಳಿಗಿಂತ ದೊಡ್ಡದಾಗಿರಲಿಲ್ಲ. ಇವುಗಳನ್ನು ಆಸ್ಟ್ರಲೋಪಿತಿಕಸ್ (ಮಂಗ–ಮಾನವ) ಎಂದು ಕರೆದಿದ್ದಾರೆ. ಪ್ಲೀಸ್ಟೊಸೀನ್ ಕಾಲದ ಆದಿಭಾಗದಲ್ಲಿ ಆಸ್ಟ್ರಲೋಪಿತಿಕಸ್ ಜೀವಿಗಳ ಉದಯವಾಯಿತು. ಇದರ ತಲೆ ಬುರುಡೆಯ ಕಾಂಡೈಲ್ ಮುಂದೆ ಸರಿದಿದೆ. ಸೊಂಟ ಅಗಲವಾಗಿದೆ. ಬೆನ್ನೆಲುಬು S ಬಾಗುಗಳನ್ನು ಹೊಂದಿದೆ. ಇದು 1.2 ಮೀ ಎತ್ತರವಿತ್ತು. ಭೂಮಿಯ ಮೇಲೆ ನೆಟ್ಟಗೆ ನಡೆಯಿತು.

ಆಸ್ಟ್ರಲೋಪಿತಿಕಸ್ ಮಂಗನ ದವಡೆಗಳು ಬಹಳ ಗಾತ್ರವಿದ್ದು ಶಕ್ತಿಯುತವಾಗಿದ್ದವು. ಹಲ್ಲುಗಳು ಮನುಷ್ಯನ ಹಲ್ಲಿನಂತೆಯೇ ಇದ್ದವು. ಕೋರೆ ಹಲ್ಲು ಚಿಕ್ಕದಾಗಿತ್ತು. ಗೋರಿಲ್ಲಾದ ಹಲ್ಲಿನಂತೆ ಉದ್ದವಾಗಿ ಬಾಗಿರಲಿಲ್ಲ. ಹಲ್ಲುಗಳು ವಿಸ್ತಾರವಾದ ಕಮಾನಿನಲ್ಲಿ ಜೋಡಿಸಿಕೊಂಡಿದ್ದವು. ಇಷ್ಟಾದರೂ ಇದರ ಮಿದುಳುಪೆಟ್ಟಿಗೆ ಬಹಳ ಚಿಕ್ಕದು. ಕಣ್ಣಿನ ಮೇಲುಭಾಗದಲ್ಲಿ ಹಾಗು ತಲೆಯ ಬುರುಡೆಯ ಹಿಂಭಾಗದಲ್ಲಿ ಅಡ್ಡವಾದ ಅತಿ ಮಂದವಾದ ಏಣುಗಳಿದ್ದವು. ಇದರಿಂದಾಗಿ ತಲೆಯ ಚಿಪ್ಪು ಮಂದವಾಗಿ ಭಾರವಾಗಿತ್ತು. ಇದರ ಮಿದುಳುಪೆಟ್ಟಿಗೆ 600 ಘನ ಸೆಂಮೀನಷ್ಟಿತ್ತು. ಅಂದರೆ ಗೋರಿಲ್ಲಾ ಮಿದುಳುಪೆಟ್ಟಿಗೆಗಿಂತ ಸ್ವಲ್ಪ ದೊಡ್ಡದಾಗಿತ್ತು. ಓಲ್ಡುವಯ್ ಮುಂತಾದ ಕಡೆ ಈ ಮೂಳೆಗಳ ಜೊತೆಯಲ್ಲಿಯೇ ಕೆಲವು ಅತಿ ಪ್ರಾಚೀನ ಉಪಕರಣಗಳು ದೊರೆತಿದ್ದರೂ ಆಸ್ಟ್ರಲೋಪಿತಿಕಸ್ ಪ್ರಾಣಿಯೇ ಅವುಗಳನ್ನು ತಯಾರಿಸಿ ಉಪಯೋಗಿಸುತ್ತಿತ್ತೆ ಎನ್ನುವುದು ಸಂದೇಹ. ಆದರೂ ಇವು ಮಂಗಕುಲಕ್ಕಿಂತ ಮಾನವ ವರ್ಗಕ್ಕೆ ಹೆಚ್ಚು ಹತ್ತಿರ ಬರುವುದರಿಂದ ಮಾನವನ ಪೂರ್ವಜರ ಸ್ವರೂಪ ಹೇಗಿದ್ದಿರಬಹುದೆಂಬುದನ್ನು ಇವುಗಳಿಂದ ಊಹಿಸಬಹುದು.

ಇದರಂತೆಯೇ ಚೀನದಲ್ಲಿ ದೊರೆತ ಕೆಲವು ದೊಡ್ಡ ಹಲ್ಲುಗಳು ಬೃಹದಾಕಾರದ ಮಂಗಮಾನವನಕುಲಕ್ಕೆ ಸೇರಿದ್ದವುಗಳಾಗಿರಬಹುದೆಂದು ಊಹಿಸಿದ್ದಾರೆ. ಇದೇ ರೀತಿಯ ದೊಡ್ಡ ಹಲ್ಲುಗಳುಳ್ಳ ದವಡೆಗಳು ಜಾವದಲ್ಲೂ ದೊರೆತಿವೆ. ಇವು ರೂಪ, ಗುಣ, ಆಕಾರಗಳಲ್ಲಿ ಮಾನವ ಕುಲದ ಕಡೆಗೆ ವಾಲಿವೆಯೇ ಅಥವಾ ವಾನರಕುಲದ ಕಡೆಗೇ ಎನ್ನುವುದು ನಿರ್ಧಾರವಾಗಿಲ್ಲ.

ಜಾವದಲ್ಲಿ ಪ್ರಾಚೀನ ಮಾನವನ ಬೇರೆ ಬೇರೆ ಜಾತಿಯ ಮೂಳೆಗಳೂ ದೊರೆತಿವೆ. ಇವುಗಳಲ್ಲಿ ತುಂಬ ಪ್ರಾಚೀನವಾದುವು ದೊಡ್ಡ ಗೊರಿಲ್ಲಾ ಗಾತ್ರದ ಮಾನವನಿಗೆ ಸೇರಿದುವು. ಇದರ ಮೂಳೆಗಳು ಹಾಂಕಾಂಗ್‌ನಲ್ಲಿ ಸಿಕ್ಕಿದವು. ಇದನ್ನು ಜೈಗಾಂಡೊಪಿಥಿಕಸ್ ಎಂಬ ಜಾತಿಗೆ ಸೇರಿಸಲಾಗಿದೆ. ವೈಡನ್ ರಿಚ್ ಎಂಬುವನು ಇದನ್ನು ಪಿತಿಕ್ಯಾಂತ್ರೊಪಸ್‌ಗಳ ಜನಕನೆಂದು ತೀರ್ಮಾನಿಸುತ್ತಾನೆ. ಇದು ಬಹಳ ಕೆಳದರ್ಜೆಯ ಜೀವಿಯೆಂದು ತೀರ್ಮಾನಿಸಲಾಗಿದೆ. ಏಕೆಂದರೆ ಇದರ ದವಡೆ ಗೊರಿಲ್ಲಾ ದವಡೆಗಿಂತಲೂ ದೊಡ್ಡದು; ಹಲ್ಲುಗಳು ಗೊರಿಲ್ಲಾ ಹಲ್ಲುಗಳನ್ನೇ ಹೆಚ್ಚು ಹೋಲುತ್ತವೆ.

ಪಿತಿಕ್ಯಾಂಥ್ರೊಪಸ್ ಅಥವಾ ಜಾವ ಮಾನವ ಎಂದು ಕರೆಯಲ್ಪಡುವ ಮಂಗ ಮಾನವನ (ಪ್ಲೀಸ್ಟೊಸೀನ್ ಅಂತ್ಯದಲ್ಲಿದ್ದವ) ಮೂಳೆಗಳನ್ನು ಡುಬಾಯಿಸ್ ಡಚ್ ಡಾಕ್ಟರ್ ಜಾವದಲ್ಲಿ ಮೊದಲು ಕಂಡುಹಿಡಿದ. ಇವುಗಳ ಪರೀಕ್ಷೆಯಿಂದ ಈ ವಿಷಯಗಳು ತಿಳಿದುಬಂದಿವೆ. ಜಾವ ಮಾನವ ಸು. 1.7 ಮೀ ಎತ್ತರವಿದ್ದ. ನೇರವಾಗಿ ನಡೆಯಬಲ್ಲವನಾಗಿದ್ದರೂ ತಲೆ ಅಷ್ಟು ನೇರವಾಗಿ ಎತ್ತಲಾಗುತ್ತಿರಲಿಲ್ಲ. ತಲೆಯ ಚಿಪ್ಪು ತುಂಬ ದಪ್ಪವಾಗಿಯೂ ಭಾರವಾಗಿಯೂ ಇತ್ತು. ಕಪಿಯ ಮಿದುಳಿಗೂ ಈಗಿನ ಮಾನವನ ಮಿದುಳಿಗೂ ನಡುವಿನ ಗಾತ್ರದ ಮಿದುಳಿತ್ತು (778–1,100 ಘನ ಸೆಂಮೀ). ದಪ್ಪ ಹಲ್ಲು, ದೊಡ್ಡ ದವಡೆ, ಕಿರುಹಣೆ, ಅತಿಯಾಗಿ ಮುಂಚಾಚಿದ ಹುಬ್ಬುಮೂಳೆ, ಕಿರುಕದಪು– ಇದು ಅವನ ಮುಖದ ಆಕಾರ. ಈ ಜಾವ ಮಾನವ ಉಪಯೋಗಿಸಿರಬಹುದಾದ ಉಪಕರಣಗಳು ಅವನ ಮೂಳೆಗಳೊಂದಿಗೆ ದೊರೆತಿಲ್ಲ.

ಸುಮಾರು ಇವನ ಕಾಲಕ್ಕೇ ಸೇರಿದ್ದು ಇವನನ್ನೇ ಕೆಲಮಟ್ಟಿಗೆ ಹೋಲುವ ಚೀನ ಮಾನವ (ಸಿನಾನ್‌ತ್ರೋಪಸ್ ಪಿಕಿನೆನ್ಸಿಸ್) ಪೀಕಿಂಗ್ ಬಳಿಯ ಚುಕೋಟಿನ್ ಗವಿಗಳಲ್ಲಿ ವಾಸಮಾಡುತ್ತಿದ್ದ. ಇವನು ಜಾವ ಮಾನವನಷ್ಟು ಎತ್ತರವಾಗಿಲ್ಲದಿದ್ದರೂ ಧಡೂತಿಯಾಗಿದ್ದ. ಅವನಿಗಿಂತ ನೇರವಾಗಿ ನಿಲ್ಲುತ್ತಿದ್ದನೆಂದು ತೋರುತ್ತದೆ. ತಲೆಬುರುಡೆ ಜಾವ ಮಾನವನ ತಲೆಬುರುಡೆಯನ್ನೇ ಹೋಲುತ್ತಿದ್ದರೂ ಮಿದುಳುಕೋಶ ಸ್ವಲ್ಪ ದೊಡ್ಡದಾಗಿತ್ತು (1,300 ಘನ ಸೆಂಮೀ). ಮುಖವು ಜಾವ ಮಾನವನಷ್ಟು ರೂಕ್ಷವಾಗಿರಲಿಲ್ಲ. ಮೊದಲಬಾರಿಗೆ ಆದಿಮಾನವ ವಾಸ ಮಾಡುತ್ತಿದ್ದ ನೆಲೆಯಲ್ಲಿಯೇ ಅವನ ಮೂಳೆಗಳು, ಉಪಯೋಗಿಸುತ್ತಿದ್ದ ಉಪಕರಣಗಳು, ಇತರ ಸಲಕರಣೆಗಳು ದೊರೆತಿರುವುದರಿಂದ ಅವನ ಜೀವನ ವಿಧಾನ, ಆಹಾರ ಮುಂತಾದುವು ಬೆಳಕಿಗೆ ಬಂದಿವೆ. ಆತ ಬೆಂಕಿಯ ಉಪಯೋಗವನ್ನು ಕಂಡುಕೊಂಡಿದ್ದ. ಆಹಾರ ಬೇಯಿಸುವುದನ್ನೂ ತಿಳಿದಿದ್ದ. ಕಲ್ಲನ್ನು ಚಕ್ಕೆ ಎಬ್ಬಿಸಿ ಆಯುಧಗಳನ್ನು ಮಾಡಿಕೊಳ್ಳುತ್ತಿದ್ದ. ಗವಿಗಳಲ್ಲಿ ತೋಳ, ಕಾಡುನಾಯಿ, ನರಿ, ಕರಡಿಗಳ ಮೂಳೆಗಳೂ ದೊರೆತಿವೆ. ಅವುಗಳು ಆಗಾಗ ಅವನ ಮೇಲೆ ದಾಳಿ ಮಾಡುತ್ತಿದ್ದುವೊ ಅಥವಾ ಆಹಾರಕ್ಕಾಗಿ ಅವನ್ನು ಬೇಟೆಯಾಡುತ್ತಿದ್ದನೊ ತಿಳಿಯದು. ಜಿಂಕೆ, ಕುರಿ, ಎಮ್ಮೆ, ಕಾಡುಕೋಣ, ಒಂಟೆ, ರೈನೋ, ಉಷ್ಟ್ರಪಕ್ಷಿ, ಆನೆ ಮುಂತಾದುವುಗಳ ಮೂಳೆಗಳನ್ನು ಸೀಳಿ ಹಾಕಿರುವುದರಿಂದ ಆತ ಅವುಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದುದು ಖಚಿತ. ಮನುಷ್ಯನ ಮೂಳೆಗಳೂ ಸೀಳಿ ಬಿದ್ದಿರುವುದನ್ನು ನೋಡಿದರೆ ಆತ ನರಭಕ್ಷಕನೂ ಆಗಿದ್ದನೆ ಎಂಬ ಸಂದೇಹ ಬರುತ್ತದೆ. ಆತನಂಥವರೆ ಮುಂದೆ ವಿಕಾಸಗೊಂಡು ಆಧುನಿಕ ಮಂಗೋಲ್ ಬುಡಕಟ್ಟಿಗೆ ಸೇರಿದ ಚೀನ ಮಾನವರಾದರೇ? ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ.

ಇವರೆಲ್ಲ ಸುಮಾರು ನಾಲ್ಕೈದು ಲಕ್ಷ ವರ್ಷಗಳಷ್ಟು ಹಿಂದೆ ಇದ್ದ ಆದಿಮಾನವರು. ಯುರೋಪಿನಲ್ಲೂ ಸರಿ ಸುಮಾರು ಈ ಕಾಲದಲ್ಲಿದ್ದ ಆದಿಮಾನವರ ಎಲುಬುಗಳು ದೊರೆತಿವೆ. ಜರ್ಮನಿಯ ಹೈಡೆಲ್‌ಬರ್ಗ್‌ನಲ್ಲಿ ದೊರೆತ ಬೃಹದ್ಗಾತ್ರದ ದವಡೆಯೇ ಯುರೋಪಿನಲ್ಲಿದ್ದ ಮಾನವನ ಅತ್ಯಂತ ಪ್ರಾಚೀನ ಕುರುಹು. ಇದು ಪೀಕಿಂಗ್ ಮಾನವನಿಗಿಂತಲೂ ಸ್ವಲ್ಪ ಪ್ರಾಚೀನವಿದ್ದರೂ ಇರಬಹುದು. ಇದಕ್ಕಿಂತ ಈಚಿನದಾದ ಬಹುಶಃ ಪೀಕಿಂಗ್ ಮಾನವನ ಸಮಕಾಲಕ್ಕೆ ಬರಬಹುದಾದ ಮತ್ತೊಂದು ತಲೆ ಬುರುಡೆ ಹಂಗರಿಯ ವರ್ಟೆಸ್ಜೊಲೋಸ್‌ನಲ್ಲಿ ದೊರೆತಿದೆ. ಇದು ಕಪಿಮಾನವನದೇ ಇಲ್ಲವೆ ಪೂರ್ಣ ಮಾನವನದೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಆಫ್ರಿಕದಲ್ಲಿ ಓಲ್ಡುವಾಯ್‌ನಲ್ಲಿ ವಲೀಕಿಯವರು ಕಂಡುಹಿಡಿದ ಚೆಲಿಯನ್ ತಲೆ ಬುರುಡೆಯೂ ಪೀಕಿಂಗ್ ಮಾನವನ ಕಾಲಕ್ಕೇ ಸೇರಿರಬಹುದು. ಆಫ್ರಿಕದ ವಾಯವ್ಯ ಭಾಗದಲ್ಲಿ ಟರ್ನಿಫೈನ್‌ನಲ್ಲಿ ದೊರೆತ ಟರ್ನಿಫೈನ್ ಮಾನವನ ದವಡೆಯ ಕೆಲಭಾಗಗಳೊಂದಿಗೆ ಚಿಕ್ಕ ಮಗುವೊಂದರ ಬುರುಡೆಯ ಪಳೆಯುಳಿಕೆಗಳು, ಆಶೂಲಿಯನ್ ಶಿಲಾಯುಧಗಳೂ ಸಿಕ್ಕಿವೆ. ಇವುಗಳ ಕಾಲ ಪ್ಲೀಸ್ಟೊಸೀನ್ ಮಧ್ಯಭಾಗವಿರಬಹುದೆಂದು ಊಹಿಸಲಾಗಿದೆ.

ಜರ್ಮನಿಯ ಸ್ಟೈನ್‌ಹೀಮ್‌ನಲ್ಲಿ ಸಿಕ್ಕಿರುವ ತಲೆಬುರುಡೆಯ ಚೂರು ದಪ್ಪ ಚಿಪ್ಪುಳ್ಳದ್ದು; ಹಿಂಭಾಗ ತೀರ ತಗ್ಗಾಗಿಲ್ಲ. ಹಣೆ ಹುಬ್ಬಿನ ಭಾಗದಲ್ಲಿ ಹೆಚ್ಚು ಮುಂಚಾಚಿದ್ದರೂ ಮುಖದ ರಚನೆ ತೀರ ಪ್ರಾಚೀನವೆನ್ನಲಾಗದು. ಇಂಗ್ಲೆಂಡಿನ ಸ್ವಾನ್ಸ್‌ಕೂಂಬ್‌ನಲ್ಲಿ ದೊರೆತ ತಲೆಬುರುಡೆಯ ಭಾಗವೂ ಹೆಚ್ಚು ಪರಿವರ್ತಿತವಾದುದೆಂದು ಊಹಿಸುತ್ತಾರೆ ಈತನ ಮಿದುಳಿನ ಪ್ರಮಾಣ 1,325 ಘನ ಸೆಂಮೀ. ಈತ ಕಲ್ಲು ಕೊಡಲಿಗಳನ್ನು ಉಪಯೋಗಿಸುತ್ತಿದ್ದ. ಈ ಕೊಡಲಿಗಳು ಗಟ್ಟಿಯಾಗಿ ಚೂಪಾಗಿದ್ದುವು. ಹಾಗೆಯೇ ಫ್ರಾನ್ಸಿನ ಫಾನ್ಟೆಷೆವಾಡೆ ಬಳಿಯ ಗವಿಯಲ್ಲಿ ಎರಡು ತಲೆಬುರುಡೆಗಳು ದೊರೆತಿವೆ. ಇವುಗಳ ಮೇಲ್ಭಾಗ ಬೆಳವಣಿಗೆ ಹೊಂದಿದೆ. ಹುಬ್ಬು ಮೂಳೆ ಅಷ್ಟು ದಪ್ಪನಾಗಿಲ್ಲ. ಪೂರ್ಣ ಮಾನವರೆಂದು ಕರೆಸಿಕೊಳ್ಳಲು ಇವರೆಲ್ಲ ಅರ್ಹರಾಗಿದ್ದರೇ ಎಂಬುದು ಇನ್ನೂ ನಿರ್ಧಾರವಾಗಬೇಕಾಗಿದೆ. ಈ ಮೇಲೆ ತಿಳಿಸಿರುವ ಪಂಗಡಗಳೆಲ್ಲ ಸುಮಾರು ಐದು ಲಕ್ಷ ವರ್ಷಗಳಿಂದ ಒಂದು ಲಕ್ಷ ವರ್ಷಗಳಷ್ಟು ಹಿಂದಿನವೆಂದು ಸ್ಥೂಲವಾಗಿ ಹೇಳಬಹುದು. 1911ರಲ್ಲಿ ಇಂಗ್ಲೆಂಡಿನ ಪಿಲ್ಟ್ ಡೌನ್ ಬಳಿ ಪ್ರಥಮ ಹಿಮಯುಗದ ಶಿಲಾ ಸಂಪುಟಗಳಲ್ಲಿ ಮಾನವನ ಒಂದು ಪ್ರಾಚೀನ ಅವಶೇಷವನ್ನು ಕಂಡುಹಿಡಿಯಲಾಯಿತು. ಇದನ್ನು ಪಿಲ್ಟ್ ಡೌನ್ ಮಾನವನೆಂದು ಕರೆದರೂ ವೈಜ್ಞಾನಿಕ ಸಂಶೋಧನೆಗಳಿಂದಾಗಿ ಇದೊಂದು ಮೋಸವೆಂದು ಸ್ಪಷ್ಟವಾಗಿದೆ.

ಇನ್ನೂ ಮುಂದೆ ಬಂದರೆ ನಮಗೆ ಕಾಣಸಿಗುವ ಮುಖ್ಯವಾದ ಪಂಗಡ ನಿಯಾಂಡರ್‌ತಾಲ್ ಮಾನವರದು. ಜರ್ಮನಿಯ ನಿಯಾಂಡರ್ ಕಣಿವೆಯಲ್ಲಿ ಇವರ ಮೂಳೆಗಳು ದೊರೆತುದರಿಂದ ಇವರಿಗೆ ಈ ಹೆಸರು ಬಂದಿದೆ. ಸ್ಪೇನ್, ಫ್ರಾನ್ಸ್, ಬೆಲ್ಜಿಯಂ, ರಷ್ಯ, ಚೆಕೊಸ್ಲೊವಾಕಿಯ, ಯೂಗೋಸ್ಲಾವಿಯ, ಇಟಲಿಗಳಲ್ಲೂ ಇವರ ಅವಶೇಷಗಳು

ದೊರೆತಿವೆ. ಒರಟು ಮುಖದ ಈ ಪ್ರಾಣಿಗೆ ಇಳಿಜಾರು ಹಣೆ, ಉದ್ದ ಮತ್ತು ಅಗಲವಾಗಿ ಹರಡಿದ ಮೂಗು, ದೊಡ್ಡ ದವಡೆ, ಅತಿ ಕಿರಿದಾದ ಗಲ್ಲ ಇತ್ತು. ಸ್ವಲ್ಪ ಬಗ್ಗಿ ನಡೆಯುತ್ತಿದ್ದ ಈ ಕುಳ್ಳ ವ್ಯಕ್ತಿಗೆ ಭುಜ ವಿಸ್ತಾರ, ಎದೆ ದಪ್ಪ, ಕಾಲುಗಳು ಗಿಡ್ಡ. ಸುಮಾರು ಎಪ್ಪತ್ತೈದು ಸಾವಿರ ವರ್ಷಗಳ ಹಿಂದೆ ಹಿಮಯುಗದಲ್ಲಿ ಯುರೋಪಿನ ಈ ಭಾಗಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಈ ವ್ಯಕ್ತಿ ರೂಕ್ಷನಾಗಿದ್ದುದರಲ್ಲಿ ಆಶ್ಚರ್ಯವಿಲ್ಲ. ಇವನ ಮಿದುಳು ಕೋಶ 1,450 ಘನ ಸೆಂಮೀ. ಆಧುನಿಕ ಮಾನವನ ಮಿದುಳುಕೋಶದಷ್ಟೇ ಇದೆ. ಹಿಮಯುಗದ ಅತಿ ಶೀತವನ್ನೆದುರಿಸಲು ಈತ ಗವಿಗಳನ್ನಾಶ್ರಯಿಸಿದ್ದ. ಆದರೆ ಇದೇ ಆಶ್ರಯಕ್ಕಾಗಿಯೇ ಧಾವಿಸುತ್ತಿದ್ದ ಬೃಹತ್ಕರಡಿಗಳನ್ನೂ ಉದ್ದ ಕೋರೆಯ ಹುಲಿಗಳನ್ನೂ ಅವನು ಎದುರಿಸಬೇಕಾಗಿತ್ತು. ಆಹಾರಕ್ಕಾಗಿ ಬೇಟೆಯಾಡಬೇಕಾಗಿತ್ತು.

ಹಿಮಪ್ರಪಾತದ ನೀರ್ಗಲ್ಲುಗಳ ಕೊರೆತ ಕಷ್ಟಗಳ ನಡುವೆ ಸಿಕ್ಕಿಹಾಕಿಕೊಂಡು ಅದರಲ್ಲಿಯೇ ಈಜಿ ಜಯಿಸಿದ. ಈ ಒರಟು ಮಾನವ ಯುರೋಪಿನ ಭಾಗಗಳಲ್ಲಿದ್ದ ಕಾಲದಲ್ಲಿಯೇ ಬೇರೆಡೆಗಳ ಆದಿಮಾನವ ವ್ಯತ್ಯಾಸವಾಗುತ್ತ ಬೆಳೆದು ಹೆಚ್ಚು ಹೆಚ್ಚು ಆಧುನಿಕನಾಗುತ್ತಿದ್ದ. ಈ ಬೆಳೆವಣಿಗೆಯನ್ನೇ ಜಾವ, ಆಸ್ಟ್ರೇಲಿಯ ಪ್ರದೇಶಗಳಲ್ಲಿ ಕಂಡುಬಂದಿರುವ ಸೋಲೋ ಮಾನವನಲ್ಲೂ ಆಫ್ರಿಕದ ರೊಡೀಷಿಯ (ಜಿಂಬಾಬ್ವೆ) ಮಾನವನಲ್ಲೂ ಗುರುತಿಸಬಹುದು. ಇವರೂ ಸರಿಸುಮಾರು ನಿಯಾಂಡರ್‌ತಾಲ್ ಮಾನವನ ಕಾಲಕ್ಕೇ ಇದ್ದವರಾದರೂ ಅವರಿಗಿಂತ ವಿಭಿನ್ನರೀತಿಯ ವ್ಯಕ್ತಿಗಳಾಗಿದ್ದರು.

ಹಿಮಯುಗದ ಹಿಂಜರಿತದಿಂದ ಯುರೋಪಿನಲ್ಲಿ ಶಾಖ ಹರಡುತ್ತಿದ್ದಂತೆ ಪ್ರಪಂಚದ ಬೇರೆ ಭಾಗಗಳಿಂದ ನಿಯಾಂಡರ್‌ತಾಲ್ ಮಾನವನಿಗಿಂತಲೂ ಮುಂದುವರಿದ ಮಾನವಪಂಗಡ ಇಲ್ಲಿಗೆ ವಲಸೆಬಂದು ನಿಯಾಂಡರ್‌ತಾಲ್ ಮಾನವರನ್ನು ಕೊಂದು ನಾಶ ಮಾಡಿರಬೇಕೆಂದು ಒಂದು ವಾದ. ಆದರೆ ಅದು ಹಾಗಾಗದೆ ಕಾಲಕ್ರಮೇಣ ಇವರು ಹೊಸ ಜನಾಂಗದೊಂದಿಗೆ ಬೆರೆತು ಒಂದಾಗಿ ಹೋಗಿರುವ ಸಂಭವವೇ ಹೆಚ್ಚು. ಪ್ಯಾಲಸ್ತೀನಿನ ಮೌಂಟ್ ಕಾರ್ಮೆಲ್ ಗವಿಗಳಲ್ಲಿ ದೊರೆತ ಮೂಳೆಗಳು ಇದಕ್ಕೆ ಪುಷ್ಟಿ ಕೊಡುತ್ತವೆ.

ಯುರೋಪಿನಲ್ಲಿ ಹಿಮಯುಗ ಕಳೆದು ನೀರ್ಗಲ್ಲುಗಳು ಕರಗಿದ ಕಾಲಕ್ಕೆ ಅಲ್ಲಿ ಬೇರೆ ಜನಾಂಗ ವಾಸ ಮಾಡುತ್ತಿದ್ದುದಕ್ಕೆ ಹಲವೆಡೆ ಆಧಾರಗಳು ದೊರೆತಿವೆ. ಫ್ರಾನ್ಸಿನ ಕ್ರೋಮ್ಯಾಗ್ನನ್ ಗವಿಗಳಲ್ಲಿ ಇವರ ಅವಶೇಷಗಳು ಹೆಚ್ಚಾಗಿ ದೊರೆತು ಈ ಮಾನವನಿಗೆ ಕ್ರೋಮ್ಯಾಗ್ನನ್ ಮಾನವನೆಂಬ ಹೆಸರು ಬಂದಿದೆ. ಇವರು ಪೂರ್ಣವಾಗಿ ಬೆಳೆವಣಿಗೆ ಹೊಂದಿ ಹೋಲಿಕೆಯಲ್ಲಿ ಆಧುನಿಕ ಮಾನವನಿಗೆ ಹತ್ತಿರವಾಗಿದ್ದಾರೆ. ದೀರ್ಘದೇಹಿಗಳಾಗಿದ್ದ ಇವರಿಗೆ ದೊಡ್ಡದಾದ ಉದ್ದುದ್ದ ತಲೆಯಿದ್ದು ಆಧುನಿಕ ಮಾನವನಿಗಿಂತ ದಪ್ಪ ಮಿದುಳಿತ್ತು. ತೆಳುಮೂಗು, ತುಂಬುಗಲ್ಲಗಳಿದ್ದುವು. ಕಲ್ಲಿನ ಹಲವು ರೀತಿಯ ಆಯುಧಗಳನ್ನು ತಯಾರಿಸುವುದರಲ್ಲಿ ಇವರು ನಿಷ್ಣಾತರಾಗಿದ್ದರು. ಮೂಳೆ, ಪ್ರಾಣಿಗಳ ಚರ್ಮಗಳನ್ನು ಉಪಯೋಗಿಸಿ ಬೀಸಿ ಹೊಡೆಯಬಲ್ಲ ಆಯುಧಗಳು ಇವರಿಗೆ ಗೊತ್ತಿದ್ದುವು. ಚಿಕ್ಕ ಕಲ್ಲಿನ ಚಕ್ಕೆಗಳನ್ನೆಬ್ಬಿಸಿ ಬಾಣದ ತುದಿಗೆ ಸೇರಿಸುತ್ತಿದ್ದರು. ಕೊಕ್ಕೆಯಾಕಾರದಲ್ಲಿ ಮೂಳೆಗಳನ್ನು ಕೊರೆದು ಪ್ರಾಣಿಗಳ ಮಾಂಸಖಂಡವನ್ನು ಚುಚ್ಚಿ ಹಿಡಿಯಬಲ್ಲಂತೆ ಮಾಡಿಕೊಂಡಿದ್ದರು. ಪ್ರಾಣಿಗಳನ್ನು ಹಿಡಿಯಲು ಮಂತ್ರ ಮಾಟಗಳನ್ನೂ ಮಾಡುತ್ತಿದ್ದಂತೆ ತಿಳಿದುಬರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಇವರು ಚತುರ ಕಲಾವಿದರಾಗಿದ್ದರು. ಗವಿಗಳ ಗೋಡೆಗಳಮೇಲೆ ಚಿತ್ರಿಸಿರುವ ಆ ಕಾಲದ ಪ್ರಾಣಿಗಳ ಚಿತ್ರಗಳು ಅದ್ಭುತವಾಗಿವೆ. ಯುರೋಪಿನಲ್ಲಿ ಇವರು ಕಾಣಿಸಿಕೊಂಡ ಕಾಲ ಸುಮಾರು ನಲವತ್ತು ಸಾವಿರ ವರ್ಷಗಳ ಹಿಂದೆ. ಇವರ ಕಾಲದಲ್ಲಿಯೇ ಪ್ರಪಂಚದ ಇತರ ಕಡೆಗಳಲ್ಲೂ ಆಧುನಿಕ ಮಾನವ ಕಾಣಿಸಿಕೊಳ್ಳುತ್ತಾನೆ. ಒಟ್ಟಿನಲ್ಲಿ ಸುಮಾರು ಹತ್ತು ಲಕ್ಷ ವರ್ಷಗಳ ಹಿಂದೆ ಕಾಣಿಸಿಕೊಂಡ ವಾನರ ವಿಕಾಸ ಹೊಂದುತ್ತ ಐದು ಲಕ್ಷ ವರ್ಷಗಳ ಹಿಂದೆ ಆದಿಮಾನವನಾಗಿ ಬೆಳೆದು ಸುಮಾರು ನಲವತ್ತು ಸಾವಿರ ವರ್ಷಗಳ ಹಿಂದೆ ಆಧುನಿಕ ಮಾನವನಾಗಿ ಪೂರ್ಣವಾಗಿ ಬೆಳೆದನೆಂದು ಹೇಳಬಹುದು.

(ಎಲ್.ಎಸ್.ಜಿ.;ಎಂ.ಎಚ್.)

**ಆದಿವಾಸಿಗಳು:** ಹೆಸರೇ ಸೂಚಿಸುವಂತೆ ಒಂದು ದೇಶದ ಮೂಲವಾಸಿಗಳು (ಅಬೊರಿಜಿನ್ಸ್). ಇಂಥವರೇ ಮೂಲವಾಸಿಗಳೆಂದು ಹೇಳುವುದು ಕೆಲವು ಕಡೆ ಕಷ್ಟದ ಕೆಲಸ. ಈ ಪದವನ್ನು ಗ್ರೀಕ್ ಮತ್ತು ರೋಮಿನ ಲೇಖಕರು ಲ್ಯಾಟಿಯಂ ಜಿಲ್ಲೆಯಲ್ಲಿ ನೆಲೆಸಿದ ಮೂಲವಾಸಿಗಳ ಬಗ್ಗೆ ಮೊಟ್ಟಮೊದಲಿಗೆ ಬಳಸಿದರು. ಈಗ ಯುರೋಪಿಯನ್ನರು ಕಾಲಿಡುವ ಮೊದಲು ಆಯಾ ದೇಶದಲ್ಲಿದ್ದ ಮೂಲವಾಸಿಗಳಿಗೆ ಈ ಹೆಸರಿದೆ. ಜೊತೆಗೆ ಬಹುಸಂಖ್ಯಾತ ಜನರಿಂದ ಪ್ರತ್ಯೇಕಗೊಂಡು ಮೂಲ ಜೀವನ ಪದ್ಧತಿಯನ್ನೇ ಇಂದಿಗೂ ಹೊಂದಿರುವ ಜನರನ್ನು ಈ ಹೆಸರಿನಿಂದ ಕರೆಯಲಾಗುವುದು. ಅಮೆರಿಕದ ರೆಡ್ ಇಂಡಿಯನ್ನರು ಮತ್ತು ಅವರಿಗೂ ಹಿಂದಿನ ಅನೇಕ ಬುಡಕಟ್ಟುಗಳು, ಆಸ್ಟ್ರೇಲಿಯದ ಮಾವೋರಿಗಳು, ಆಫ್ರಿಕದ ಬುಷ್‌ಮನ್‌ಗಳು ಮೊದಲಾದವರು ಆಯಾ ಖಂಡಗಳ ಆದಿವಾಸಿಗಳಾಗುತ್ತಾರೆ. ಭಾರತದಲ್ಲಿಯೂ ನೀಗ್ರಾಯ್ಡ್, ಪ್ರೋಟೋ ಆಸ್ಟ್ರಾಲಾಯ್ಡ್, ಮಂಗೋಲಾಯ್ಡ್, ದ್ರಾವಿಡ ಮೊದಲಾದ ಆದಿವಾಸಿ ಪಂಗಡಗಳಿವೆ. ಇವರು ಸಾಮಾನ್ಯವಾಗಿ ಅಲೆಮಾರಿಗಳು. ಪುರಾತನ ಆರ್ಥಿಕ ವೃತ್ತಿಗಳನ್ನು ಅವಲಂಬಿಸಿದ್ದು ಗುಂಪು ಅಥವಾ ಪಂಗಡಗಳಲ್ಲಿ ವಾಸಮಾಡುವವರು. ಬೇಟೆಗಾರಿಕೆ, ಬೇಸಾಯ ಹಾಗೂ ಪಶುಪಾಲನೆಯನ್ನೂ ಇತರ ಗೃಹ ಕೈಗಾರಿಕೆಗಳನ್ನೂ ಕಲಿತು ತಮಗೆ ಸರಿದೋರುವ ಸ್ಥಳಗಳಲ್ಲಿ ನೆಲೆಸಿರುವರು. ಮೊದಮೊದಲು ಹೊರದೇಶದಿಂದ ಬಂದವರೊಡನೆ ಆದಿವಾಸಿಗಳು ಸೆಣಸಿ, ನಂತರ ದುರ್ಗಮ ಪ್ರದೇಶಗಳಿಗೆ ಹೋಗಿ ನೆಲೆಸಿರುವರು.

ಮೂಲ ಜನರು ಭಾರತದ ವಿವಿಧ ಭಾಗಗಳಲ್ಲಿ, ಬೆಟ್ಟಗಳಲ್ಲಿ ಹಾಗೂ ಮೈದಾನ ಪ್ರದೇಶಗಳಲ್ಲಿ ಚದರಿ ಹೋಗಿರುವರು. ಅವರು ಮುಖ್ಯವಾಗಿ ಕೇಂದ್ರೀಕರಿಸಿರುವುದು ಬಹಳ ದೂರದ, ದುರ್ಗಮವಾದ, ತುಂಬ ಹಿಂದುಳಿದಿರುವ ಪ್ರದೇಶಗಳಲ್ಲಿ. ಈಶಾನ್ಯ ದಿಕ್ಕಿನ ಹಿಮಾಲಯ ಪ್ರದೇಶಗಳು ಪೂರ್ವಾಚಲ ಪ್ರದೇಶದ ಪರ್ವತ ಪ್ರದೇಶಗಳಲ್ಲಿ ವಾಸವಾಗಿರುವ ಗುರುಂಗ್, ಲಿಂಬು, ಲೆಪ್‌ಚ, ಅಕ, ದಾಫ್ಲ, ಅಬೋರ್, ಮಿರಿ, ಮಿಷ್ಮಿ, ಸಿಂಗ್‌ಫೊ, ಮಿಕಿರ್, ಕಚಾರಿ, ಗಾರೋ, ಖಾಸಿ, ನಾಗ, ಲುಷಾಯ್ ಮತ್ತಿತರ ಪಂಗಡಗಳೂ ಇದಕ್ಕೆ ಸೇರುತ್ತವೆ. ಜಾರ್ಖಂಡ್, ಮಧ್ಯಪ್ರದೇಶ, ಚತ್ತೀಸ್‌ಗರ್ ಮತ್ತು ಒರಿಸ್ಸಗಳ ಪರ್ವತ ಪ್ರದೇಶಗಳನ್ನು ಒಳಗೊಂಡ ಮಧ್ಯವಲಯ ಸಂತಾಲ, ಮುಂಡ, ಒರಾಯನರು, ಹೊ, ಗೊಂಡ್, ಜುವಾಂಗ್, ಭಿಲ್ ಮತ್ತು ಇತರ ಹಲವು ಬುಡಕಟ್ಟುಗಳಿಗೆ ವಸತಿಯನ್ನೊದಗಿಸಿದೆ. ದಕ್ಷಿಣ ವಲಯದಲ್ಲಿ ಚೆಂಚು, ತೋಡ, ಕದರ್, ಕುರುಂಬ, ಇರುಳ, ಮುಥುವನ್, ಕಾನಿಕ್ಕಾರ್ ಮುಂತಾದ ಜನರು ವಾಸವಾಗಿದ್ದಾರೆ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಜಾರವ ಓಂಗೆ ಮೊದಲಾದ ಹಲವಾರು ಬುಡಕಟ್ಟಿನ ಜನರು ವಾಸಿಸುವರು.

ಮಾನವಕುಲಶಾಸ್ತ್ರಜ್ಞರು ಬಳಸುವಂತೆ ಆದಿವಾಸಿ ಎಂಬ ಶಬ್ದ ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಗುರುತಿಸಬಹುದಾದ ಜನಾಂಗವನ್ನು ನಿರ್ದೇಶಿಸುತ್ತದೆ. ಕೆಲವು ಹಿಂದೂ ಜನಾಂಗಗಳೊಂದಿಗೆ ಸಂಪರ್ಕ ಹೊಂದಿದ್ದು, ಅದರಿಂದ ಪ್ರಭಾವಿತವಾಗಿವೆ. ಅವುಗಳ ಸಾಂಸ್ಕೃತಿಕ ವೈಶಿಷ್ಟ್ಯ ಇರುವುದು ಭಾಗಶಃ ಮಾತ್ರ. ಆದರೆ, ಈಶಾನ್ಯ ಮೇರೆಯಲ್ಲಿರುವ ಜನಾಂಗಗಳಿಗೂ ಅಂಡಮಾನ್ ದ್ವೀಪಗಳಲ್ಲಿರುವ ಬುಡಕಟ್ಟುಗಳಿಗೂ ಈ ಮಾತು ಅನ್ವಯಿಸುವುದಿಲ್ಲ. ವಾಸ್ತವವಾಗಿ ಅವು ಸ್ವಭಾವತಃ ಆದಿಜನಾಂಗಗಳು. ರಾಜ್‌ಗೊಂಡ್ ಮುಂತಾದ ಕೆಲವು ಹಿಂದುತ್ವ ಹೊಂದಿದ ಬುಡಕಟ್ಟುಗಳಿಗೂ ನಡುವೆ ಇರುವ ವಿಭಾಗರೇಖೆ ಬಹಳ ತೆಳು. ಆಡಳಿತ ಉದ್ದೇಶಗಳಿಗಾಗಿ, ಪ್ರತ್ಯೇಕತೆ ಮತ್ತು ಆರ್ಥಿಕ ಹಿಂದುಳಿಕೆಗಳ ಆಧಾರದಿಂದ ಕೆಲವು ಹಿಂದು ಜನಾಂಗಗಳನ್ನು ಆದಿವಾಸಿ ಬುಡಕಟ್ಟುಗಳೆಂದು ವರ್ಗೀಕರಿಸಿರುವುದಕ್ಕೆ ಹಲವು ಉದಾಹರಣೆಗಳಿವೆ.

ಈಶಾನ್ಯ ಪ್ರದೇಶದ ಬುಡಕಟ್ಟುಗಳ ಜನ ಟಿಬೆಟೊ–ಬರ್ಮನ್ ಭಾಷಾಕುಟುಂಬಕ್ಕೆ ಸೇರಿದ ವಿವಿಧ ಉಪಭಾಷೆಗಳನ್ನು ಆಡುತ್ತಾರೆ. ಬಂಗಾಳ, ಬಿಹಾರ, ಒರಿಸ್ಸಗಳ ಹಲವು ಜನಾಂಗಗಳು ಆಸ್ಟ್ರಿಕ್ ಭಾಷಾಕುಟುಂಬದ ಭಾಷೆಗಳನ್ನಾಡುತ್ತಾರೆ. ಈ ಗುಂಪಿನ ಮುಖ್ಯ ಆದಿವಾಸಿ ಭಾಷೆಗಳೆಂದರೆ ಸಂತಾಲಿ, ಸವಾರ, ಮುಂಟಾರಿ ಮತ್ತು ಗಡಬ. ಉಳಿದ ಬುಡಕಟ್ಟುಗಳು ತಾವು ವಾಸಿಸುವ ಪ್ರದೇಶಕ್ಕೆ ಸಂಬಂಧಿಸಿದ ಇಂಡೊ ಆರ್ಯನ್ ದ್ರಾವಿಡ ಭಾಷೆಗಳನ್ನಾಡುತ್ತಾರೆ.

(ಎ.ವಿ.ಎನ್.)

**ಆಧಾರ ಮಟ್ಟ:** ಸರ್ವೇಕ್ಷಣೆಯಲ್ಲಿ ಭೂಭಾಗಗಳ ಎತ್ತರವನ್ನು ಅಳತೆ ಮಾಡಲು ಪರಿಗಣಿಸುವ ಮಟ್ಟ (ಬೇಸ್‌ಲೆವಲ್). ಇದು ಇಳಿಯುಬ್ಬರ ಅಥವಾ ಏರುಬ್ಬರಗಳ ನಡುವೆ ಇರುವುದು ಸಾಮಾನ್ಯ. ಭಾರತದಲ್ಲಿ ಹಿಂದೆ ಇಂದಿನ ಚೆನ್ನೈ ಬಳಿಯಲ್ಲಿನ ಏರುಬ್ಬರದ ನೀರಿನ ಮಟ್ಟವನ್ನು ಆಧಾರಮಟ್ಟವೆಂದು ಪರಿಗಣಿಸಲಾಗಿದ್ದಿತು. ಇಂದು ವಿವಿಧ ಕಡೆಗಳಲ್ಲಿ ಏರುಬ್ಬರವನ್ನು ಲೆಕ್ಕಾಚಾರ ಮಾಡಿ ಸರಾಸರಿಯನ್ನು ಕಂಡು ಹಿಡಿದು ಆಧಾರ ಮಟ್ಟವನ್ನು ಲೆಕ್ಕಾಚಾರ ಮಾಡಲಾಗಿದೆ. ಯಾವುದೇ ಸ್ಥಳದ ಎತ್ತರವನ್ನು ಮೀಟರು ಅಥವಾ ಅಡಿಗಳಲ್ಲಿ ತಿಳಿಸಿ ಅದರ ಪಕ್ಕ ಎಂ.ಎಸ್.ಎಲ್ ಎಂದು ಬರೆದಿರುವರು. ಅದರ ಅರ್ಥ ಸಮುದ್ರ ಮಟ್ಟದಿಂದ ಆಧಾರ ಮಟ್ಟ ಆ ಸ್ಥಳವು ಹೊಂದಿರುವ ಎತ್ತರವನ್ನು ಅದು ಸೂಚಿಸುವುದು ಉದಾಹರಣೆಗೆ ಮೈಸೂರು ನಗರದ ಎತ್ತರ 770 ಮೀ. (ಆರ್.ಎನ್.)

**ಆಧುನಿಕ ಜೀವಯುಗ:** ಭೂ ವಿಜ್ಞಾನದಲ್ಲಿ 63 ದಶಲಕ್ಷ ವರ್ಷಗಳಿಂದ ಈಚೆಗಿನ ಕಾಲ (ಸೀನೋಜ಼ೋಯಿಕ್ ಈರ). ಅದರ ಹಿಂದಿನ ಉರಗ ಯುಗದ (ಮೀಸೊಜ಼ೋಯಿಕ್ ಈರ) ಕೊನೆಯ ಭಾಗವಾದ ಕ್ರಿಟೇಷಿಯಸ್ ಕಲ್ಪದ (ಈಪಾಕ್) ಅನಂತರ ಮಹಾಪ್ರಳಯವಾಗಿ ಮಹತ್ತರ ಬದಲಾವಣೆಗಳಾದವು. ಅದರ ಪ್ರಭಾವ ಜೀವಕೋಟಿಯಲ್ಲಿ ಅತಿಶಯವಾಗಿ ಎದ್ದು ಕಾಣುತ್ತದೆ. ಉರಗ ಯುಗದಲ್ಲಿ (ಮಧ್ಯಜೀವ ಯುಗ) ಭೂಸ್ವಾಮ್ಯ ಹೊಂದಿದ್ದ ಏಕೈಕ ಪ್ರಾಣಿವರ್ಗವಾದ ಸರೀಸೃಪಗಳ ಅನೇಕ ಶಾಖೆಗಳು ಸಂಪೂರ್ಣ ನಿರ್ವಂಶವಾದುವು. ಬೆನ್ನೆಲುಬಿಲ್ಲದ ಪ್ರಾಣಿವರ್ಗಗಳಲ್ಲಿ ಆ್ಯಮೊನೈಟ್ ಮತ್ತು ಬೆಲಿಮ್ನೈಟ್ ಎಂಬ ಪ್ರಾಣಿಗಳು ಅಂದಿನ ಸಾಗರಗಳಲ್ಲಿ ಅಸಂಖ್ಯಾತವಾಗಿದ್ದವು. ಅವೆಲ್ಲ ಗತಕಾಲದ ಕುರುಹಾದವು. ಸಸ್ಯವರ್ಗಗಳಲ್ಲಿ ಎಲ್ಲೆಲ್ಲಿಯೂ ತಾನೇತಾನಾಗಿ ಬೀಡು

ಬಿಟ್ಟಿದ್ದ ಸೈಕಾಡ್ ಮತ್ತು ಕೋನಿಫರ್ ಎಂಬ ಹೂಬಿಡದ ಆದರೆ ಬೀಜಗಳಿಂದ ಕೂಡಿದ್ದ ಜಿಮ್ನೊಸ್ಪರ್ಮ್ ಜಾತಿಯ ಸಸ್ಯವರ್ಗ ಅನೇಕ ಅತಿ ಮುಖ್ಯವಾದ ವಂಶ ಶಾಖೆಗಳನ್ನು ಕಳೆದುಕೊಂಡು ಹೇಗೋ ಉಳಿದುಕೊಂಡವು. ಮೇಲೆ ಹೇಳಿದ ಸರೀಸೃಪಗಳ ಸ್ಥಾನವನ್ನು ಸಸ್ತನಿಗಳು ಆಕ್ರಮಿಸಿದವು. ಅವು ಆಧುನಿಕ ಜೀವಕಲ್ಪದ ಆದಿಯಲ್ಲಿ ಸಾಮಾನ್ಯ ಜಾತಿಯವು. ಆದರೆ ಅವು ವಿವಿಧ ವಾತಾವರಣಕ್ಕನುಸಾರವಾಗಿ ಸಿಕ್ಕಿದ ಆಹಾರ ಮತ್ತು ಅನುಕೂಲಗತಿಗಳ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಬಹು ಬೇಗನೆ ವೃದ್ಧಿಹೊಂದಿ ಅನೇಕ ವಿಧದ ಸಸ್ತನಿಗಳಾದವು. ಸಾಗರದಲ್ಲಿ ಶಂಖುಗಳು, ಕಪ್ಪೆಚಿಪ್ಪು ಮತ್ತು ಮುತ್ತಿನ ಚಿಪ್ಪಿನ ಪ್ರಾಣಿಗಳು ಆ್ಯಮೊನೈಟ್ ಸ್ಥಾನವನ್ನು ಪಡೆದವು. ಹೂ ಬಿಡುವ ಸಸ್ಯವರ್ಗ ಮಧ್ಯ ಜೀವಕಲ್ಪದ ಅಂತ್ಯದಲ್ಲಿಯೇ ಕಾಣಿಸಿಕೊಂಡಿತಾದರೂ ಅದು ವೃದ್ಧಿಹೊಂದಿದುದು ಆಧುನಿಕ ಜೀವಯುಗದಲ್ಲಿ. ಆದ್ದರಿಂದ ಈ ಭೂತಕಾಲವನ್ನು ಆಧುನಿಕ ಜೀವಯುಗ ಎಂದು ಕರೆದಿರುವುದು ಸಮಂಜಸವಾಗಿದೆ.

ಪ್ರಳಯಕಾಲದಲ್ಲಿ ಪ್ರಾರಂಭವಾದ ಅಗಾಧವಾದ ಭೂಚಲನೆಯ ಪರಿಣಾಮವಾಗಿ ಹೊಸ ಪರ್ವತಸ್ತೋಮಗಳ ಉದಯವಾಯಿತು. ಮೊದಲೇ ಇದ್ದ ಪರ್ವತಸ್ತೋಮಗಳು ಹೊಸ ರೂಪ ತಾಳಿದವು. ಈಗಿನ ಮೇಲ್ಮೈಲಕ್ಷಣಗಳೆಲ್ಲ ಬಹುತೇಕ ಆಗ ಆದವುಗಳೇ. ಅದುವರೆಗೂ ಒಂದಾಗಿದ್ದ ಗೊಂಡ್ವಾನ ಭೂಭಾಗ ಈಗಿನ ಭಾರತ ಪರ್ಯಾಯ ದ್ವೀಪಭಾಗ. ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್‌ಟಿಕ ಎಂಬ ಖಂಡಗಳಾಗಿ ಬೇರ್ಪಟ್ಟಿತು. ಬೇರ್ಪಟ್ಟ ಭೂಭಾಗಗಳಲ್ಲೆಲ್ಲ ಹಿಂದೆಂದೂ ಕಂಡರಿಯದಷ್ಟು (ಆರ್ಷೇಯ ಯುಗವನ್ನುಳಿದು) ಶಿಲಾರಸ ಹೊರಹೊಮ್ಮಿತು. ಭಾರತದ ಡೆಕನ್ ಟ್ರ್ಯಾಪ್ ಶಿಲಾವರ್ಗ, ಆಫ್ರಿಕದ ಸ್ಟ್ರಾಂಬರ್ಗ್ ಮತ್ತು ದಕ್ಷಿಣ ಅಮೆರಿಕದ ಸೆರ್‍ರಾಗೆರಾಲ್ ಜ್ವಾಲಾಮುಖಜಶಿಲೆಗಳು ಆ ಕಾಲದಲ್ಲಿ ಹೊರಹೊಮ್ಮಿದ ಶಿಲಾರಸದಿಂದ ಆದುವು. ಈ ಖಂಡಗಳ ಮಧ್ಯೆ ಇದ್ದ ಅಲ್ಪಸ್ವಲ್ಪ ಭೂಭಾಗಗಳು ಸಮುದ್ರಗಳ ಅಡಿಯಲ್ಲಿ ಮುಳುಗಿರಲೂ ಸಾಧ್ಯ. ಮಡಗಾಸ್ಕರ್ ಮತ್ತು ಭಾರತಗಳ ನಡುವೆ ಸೇತುವೆಯಂತಿದ್ದ ಲೆಮೂರಿಯ ಮುಳುಗಿಹೋಗಿ ಈಗಿನ ಅರಬ್ಬೀ ಸಮುದ್ರ ರೂಪುಗೊಂಡಿತು. ಭಾರತ ಪರ್ಯಾಯದ್ವೀಪದ ತೀರಗಳು ಆ ಕಾಲದಲ್ಲಿಯೇ ರೂಪುಗೊಂಡವು. ಹೀಗೆ ಬೇರ್ಪಟ್ಟ ಖಂಡಗಳ ಚಲನೆಯಿಂದ, ಆ ಕಾಲದ ಭೂಮಧ್ಯ ಪ್ರದೇಶದಲ್ಲಿ ಬಹುಕಾಲದಿಂದಲೂ ಇದ್ದ ಟೆತಿಸ್ ಎಂಬ ಸಾಗರ ಪ್ರದೇಶ ಮಾಯವಾಗಿ ಅದರಡಿಯಲ್ಲಿ ನಿಕ್ಷೇಪಗೊಂಡಿದ್ದ ಜಲಜಶಿಲಾರಾಶಿ ಭೂಚಲನೆಗಳ ಒತ್ತಡಕ್ಕೆ ಸಿಕ್ಕಿ ಅಟ್ಲಾಸ್, ಪಿರನೀಸ್, ಆಲ್ಪ್ಸ್ ಮತ್ತು ಹಿಮಾಲಯ ಪರ್ವತಸ್ತೋಮಗಳಾಗಿ ಮೇಲೊಗೆಯಲ್ಪಟ್ಟವು. ಮಾರುತಗಳ ಬಡಿತಕ್ಕೆ ಸಿಕ್ಕಿ ಸವೆದಿದ್ದ ರಾಕೀಸ್ ಮತ್ತು ಆಂಡೀಸ್ ಪರ್ವತಸ್ತೋಮಗಳು ಸಹ ಈಗಿನ ಎತ್ತರಕ್ಕೆ ಮೇಲೊಗೆಯಲ್ಪಟ್ಟವು.

ಟಿಬೆಟ್ಟಿಗೂ ಭಾರತದ ಪರ್ಯಾಯದ್ವೀಪಕ್ಕೂ ಮಧ್ಯೆ ಇದ್ದ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡ ಜಲಜಶಿಲೆಗಳು ಭೂಚಲನೆಗೊಳಪಟ್ಟು ಮೇಲೊಗೆಯಲ್ಪಟ್ಟುದು ಸರಿಯಷ್ಟೆ. ಈ ಕಾರ್ಯ ಕ್ರಿಟೇಷಿಯಸ್ ಕಾಲದಲ್ಲೇ ಪ್ರಾರಂಭವಾಗಿ ಸಾಗರಪ್ರದೇಶಗಳಲ್ಲೆಲ್ಲ ಆಳ ಕಡಿಮೆಯಾಗಿ ಅಲ್ಲಿ ಶಿಲಾಚೂರುಗಳ ನಿಕ್ಷೇಪವಾಯಿತು. ಈ ಕಾಲದ ನಿಜವಾದ ಆರಂಭ ಇಯೊಸೀನ್ ಕಾಲದ ಅಂತ್ಯಭಾಗದಲ್ಲಿ ಆಯಿತು. ಇದೇ ಹಿಮಾಲಯ ಪರ್ವತಗಳ ಉದಯದ ಮೊದಲನೆಯ ಹಂತ. ಇದರ ಪರಿಣಾಮವಾಗಿ ಟೆತಿಸ್ ಸಾಗರದ ನೀರು ಮುಕ್ಕಾಲುಭಾಗ ಪ್ರದೇಶದಿಂದ ನಿರ್ಗಮಿಸಿ ಪಶ್ಚಿಮದಲ್ಲಿ ಸಿಂಧ್ ಮತ್ತು ಬಲೂಚಿಸ್ತಾನ್ ಕೊಲ್ಲಿಗಳ, ಪೂರ್ವದಲ್ಲಿ ಅಸ್ಸಾಂ ಮತ್ತು ಬರ್ಮ ಕೊಲ್ಲಿಗಳ ರೂಪದಲ್ಲಿಯೂ ಹಿಮಾಲಯ ಪ್ರದೇಶದಲ್ಲಿ ಕ್ಯಾಸ್ಪಿಯನ್ ಸಮುದ್ರದ ಹಾಗೆ ದೊಡ್ಡ ಸರೋವರಗಳಾಗಿಯೂ ಉಳಿದುಕೊಂಡಿತು. ಈ ಪ್ರದೇಶದ ಜಲಜಶಿಲಾನಿಕ್ಷೇಪ ಮೇಲ್ಭಾಗಕ್ಕೆ ಒಗೆಯಲ್ಪಟ್ಟಿತು. ಅನಂತರ ಪರಿಸ್ಥಿತಿ ಶಾಂತವಾಗಿತ್ತು. ಮತ್ತೆ ಮಿಯೊಸೀನ್ ಕಾಲದ ಮಧ್ಯಭಾಗದಲ್ಲಿ ಈ ಚಲನೆ ಅತಿ ತೀವ್ರಗೊಂಡಿತು. ಹಿಮಾಲಯ ಪರ್ವತಗಳು ಹೆಚ್ಚು ಕಡಿಮೆ ಈಗಿನ ರೂಪಕ್ಕೆ ಬಂದುದು ಈ ಚಲನೆಯ ಅನಂತರವೇ. ಆಗಲೇ ಟೆತಿಸ್ ಸಾಗರದ ಪೂರ್ಣನಿರ್ಗಮನವೂ ಆಯಿತು. ಅದರ ಜಾಗದಲ್ಲಿ ಮಧ್ಯೆ ಮಧ್ಯೆ ನದೀಕಣಿವೆ ಮತ್ತು ಕೆಸರು ಪ್ರದೇಶಗಳಿಂದ ಕೂಡಿದ ಪರ್ವತಗಳ ಉದಯವಾಯಿತು. ಅಷ್ಟೇ ಅಲ್ಲದೆ, ಮೇಲೇಳುತ್ತಿರುವ ಹಿಮಾಲಯ ಪರ್ವತಗಳಿಗೂ ಪರ್ಯಾಯದ್ವೀಪಕ್ಕೂ ಮಧ್ಯೆ ಬಹು ಆಳವಾದ, ಅಗಲದಲ್ಲಿ ಕಿರಿದಾದ ತಗ್ಗು ಪ್ರದೇಶ ಉಂಟಾಯಿತು. ಇಂಥ ಪ್ರದೇಶ ಹಿಮಾಲಯ ಪರ್ವತಸ್ತೋಮದ ಉದ್ದಕ್ಕೂ ಇದೆ. ಈ ತಗ್ಗು ಪ್ರದೇಶದಲ್ಲಿ ಮುಖ್ಯವಾಗಿ, ಹಿಮಾಲಯ ಪರ್ವತದಿಂದ ಹರಿದು ಬರುವ ನದಿಗಳು ತಂದ ಮೆಕ್ಕಲು ಮಣ್ಣು ನಿಕ್ಷೇಪಗೊಳ್ಳುತ್ತ ಬಂತು. ಪರ್ಯಾಯದ್ವೀಪದ ಕಡೆಯಿಂದಲೂ ನದಿಗಳು ಮೆಕ್ಕಲು ಮಣ್ಣನ್ನು ತಂದು ಈ ತಗ್ಗನ್ನು ತುಂಬಿದುವು. ಪ್ಲಿಯೊಸೀನ್ ಕಾಲದ ಅಂತ್ಯ ಅಥವಾ ಪ್ಲಿಸ್ಟೊಸೀನ್ ಕಾಲದ ಆದಿಯಲ್ಲಿ ಮತ್ತೆ ಈ ಪ್ರದೇಶದಲ್ಲಿ ಭೂಚಲನೆ ಆಯಿತು. ಇದರ ಪರಿಣಾಮವಾಗಿ, ಹಿಮಾಲಯ ಪರ್ವತಗಳು ತಗ್ಗು ಪ್ರದೇಶದಲ್ಲಿ ನಿಕ್ಷೇಪಗೊಂಡ ನದಿ ಮೆಕ್ಕಲು ನಿಕ್ಷೇಪಕ್ಕೂ ತಗುಲಿತು. ಅವೂ ಮೇಲೊಗೆಯಲ್ಪಟ್ಟವು. ಅಲ್ಲದೆ ಮಡಿಕೆ ಮಡಿಕೆಗಳಾಗಿ ಮಾರ್ಪಟ್ಟು ಸ್ತರಭಂಗಗಳನ್ನು ಹೊಂದಿ ಹಲವಾರು ಕಡೆ ಶಿಲಾಸ್ತರಗಳ ಕ್ರಮ ತಲೆಕೆಳಗಾಗಿ ಅದಲುಬದಲಾಯಿತು. ಈ ಶಿಲಾರಾಶಿಯನ್ನೇ ನಾವು ಶಿವಾಲಿಕ್ ಶಿಲಾಸಮುದಾಯವೆಂದು ಕರೆಯುವುದು. ಇವು ಖಂಡಾಂತರ ಜಲಜ ಮತ್ತು ಭೂನಿಕ್ಷೇಪಗಳು. ಇವಕ್ಕೂ ಮತ್ತು ಈಗಿನ ಸಿಂಧೂ ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಬಯಲುಗಳಲ್ಲಿರುವ ಮೆಕ್ಕಲು ನಿಕ್ಷೇಪಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಶಿವಾಲಿಕ್‌ಶಿಲೆಗಳು ವಯಸ್ಸಿನಲ್ಲಿ ಹಿರಿದಾಗಿ, ಭೂ ಚಲನೆಯ ಪರಿಣಾಮವಾಗಿ ಮಡಿಕೆಯಾಗಿ ಅನೇಕ ರೀತಿಯಬದಲಾವಣೆಗಳನ್ನು ಹೊಂದಿ, ತಾವು ನಿಕ್ಷೇಪಗೊಂಡ ಮಟ್ಟಕ್ಕಿಂತ ಮೇಲ್ಮಟ್ಟಕ್ಕೆ ತಳ್ಳಲ್ಪಟ್ಟಿವೆ. ಆದರೆ ಗಂಗಾ ಬ್ರಹ್ಮಪುತ್ರ ನದಿಗಳ ಮೆಕ್ಕಲು ನಿಕ್ಷೇಪ ಹಾಗಾಗಿಲ್ಲ.

ಈ ಬದಲಾವಣೆಯಾದ ಸ್ವಲ್ಪ ಕಾಲದಲ್ಲಿಯೇ ವಾಯುಗುಣದಲ್ಲಿ ಮಹತ್ತರ ವ್ಯತ್ಯಾಸ ಕಂಡುಬಂದಿತು. ತೀವ್ರ ಶೀತವಾಯುಗುಣ ಎಲ್ಲೆಲ್ಲಿಯೂ ಅದರಲ್ಲಿಯೂ, ಉತ್ತರಾರ್ಧ ಗೋಳದಲ್ಲಿ ಆವರಿಸಿಕೊಂಡಿತು. ಶಿವಾಲಿಕ್ ಕಾಲದಲ್ಲಿ ಹಿಮಾಲಯ ಪರ್ವತಗಳ ಕಾಡಿನಲ್ಲಿ ವಾಸವಾಗಿದ್ದ ಅಸಂಖ್ಯಾತ ಸಸ್ತನಿಗಳು ಈ ಶೀತ ವಾಯುಗುಣದ ಅತಿ ಶೈತ್ಯವನ್ನು ತಾಳಲಾರದೆ ಗತವಂಶಿಗಳಾದುವು. ಹಿಮಾಲಯ ಪರ್ವತಗಳ ಕೊನೆಯ ಮೇಲೇರಿಕೆಯನ್ನೂ ಶೀತವಾಯುಗುಣವನ್ನೂ ಮಾನವ ಅವಲೋಕಿಸಿರುವುದು ಸಾಧ್ಯ. ಹೀಗೆ ಹಿಮಾಲಯ ಪರ್ವತಗಳೂ ದೀರ್ಘ ಪ್ರಶಾಂತ ಕಾಲಗಳಿಂದ ಬೇರ್ಪಡಿಸಲ್ಪಟ್ಟ ಮೂರು ಅಥವಾ ನಾಲ್ಕು ಹಂತಗಳಲ್ಲಿ ಮೇಲೆ ಬಂದಿವೆ.

ಆಧುನಿಕ ಜೀವಯುಗವನ್ನು ಆರು ಭಾಗಗಳಾಗಿ ವಿಭಜಿಸುತ್ತಾರೆ. ವರ್ತಮಾನ ಕಾಲದಿಂದ ಭೂತಕಾಲದೆಡೆಗೆ (ಆವರಣದಲ್ಲಿರುವ ಸಂಖ್ಯೆ ದಶಲಕ್ಷ ವರ್ಷಗಳ ಕಾಲ ಸೂಚಿಸುವುದು): ಪ್ಲಿಸ್ಟೊಸೀನ್ (1.0±0.5); ಪ್ಲಿಯೊಸೀನ್ (13 ± 1); ಮಯೊಸೀನ್ (25 ± 1); ಆಲಿಗೊಸೀನ್ (36 ± 2); ಇಯೊಸೀನ್ (58 ± 2); ಪೆಲಿಯೊಸೀನ್ (63 ± 2). (ಡಿ.ಆರ್.)

**ಆಧುನಿಕೋತ್ತರ ಬೆಳೆವಣಿಗೆಗಳು :** ಆಧುನಿಕೋತ್ತರ ವಿಷಯವು ಅಂತರ್ ಅಧ್ಯಯನ ವಸ್ತುವಾಗಿದೆ. ಇದು ಸಾಹಿತ್ಯ, ಸಾಮಾಜಿಕ ವಿಜ್ಞಾನಗಳಲ್ಲಿ ವ್ಯಾಪಕವಾಗಿ ರೂಢಿಯಲ್ಲಿರುವ ಕ್ರಿಯಾಮಾಲೆ ಅಂದರೆ ಪ್ಯಾರಡೈಮ್ ಆಗಿರುವುದು. ಇದು ಆಧುನಿಕ ವಿಧಾನಗಳಿಗಿಂತ ಭಿನ್ನವಾದ ಪಂಥವಾಗಿದೆ. ಡೆಸ್‌ಕಾರ್ಟಿಸ್ ಆಧುನಿಕತೆಯ ಪ್ರತಿಪಾದಕ. ಈತನ ಪ್ರತಿಪಾದನೆಗೆ ವಿರುದ್ಧವಾಗಿ ಆಧುನಿಕೋತ್ತರ ಪಂಥವು ಬೆಳೆವಣಿಗೆಯನ್ನು ಹೊಂದಿತು. ಇದು ಇತ್ತೀಚಿನ ಆಲೋಚನಾ ಲಹರಿಯಾಗಿದ್ದು ಇಂದಿಗೂ ಮುಂದುವರಿಯುತ್ತಿದೆ. ಈ ವಾದದ ಪ್ರಕಾರ ಸಾಮಾಜಿಕ ರಚನೆ ಹಾಗೂ ಚಾರಿತ್ರಿಕ ಘಟನೆಗಳನ್ನು ಕುರಿತು ಸರಳವಾದ ಹೇಳಿಕೆಯನ್ನು ನೀಡುವುದು ಅಸಾಧ್ಯ. ಇದಕ್ಕೆ ಕಾರಣ ನಾವು ಯಾವುದೇ ವಿಷಯಗಳನ್ನು ಮನಗಾಣುವ, ಪ್ರತಿಕ್ರಿಯಿಸುವ ಹಾಗೂ ನಿರೂಪಿಸುವ ವಿಧಾನವು ನಮ್ಮ ಲಿಂಗ, ಸಾಮಾಜಿಕ ವರ್ಗ ಹಾಗೂ ಸಂಸ್ಕೃತಿಗಳಿಂದ ಪ್ರಭಾವಿತವಾಗುವುದು. ಅಂದರೆ ಪ್ರತಿಯೊಂದು ಮಾಹಿತಿಯೂ ಅಪೂರ್ಣ: ಒಂದರ ನಿರೂಪಣೆ ಮತ್ತೊಂದಕ್ಕಿಂತ ಭಿನ್ನ. ಕೆಲವು ವಿದ್ವಾಂಸರು ಪರಿಭಾವಿಸಿರುವಂತೆ ಈ ಬೆಳೆವಣಿಗೆಗೆ ಬಂಡವಾಳಶಾಹಿ, ಗ್ರಾಹಕ ವರ್ಗದ ಬೆಳೆವಣಿಗೆ, ಜಾಗತೀಕರಣ ಮೊದಲಾದವುಗಳ ಪರಿಣಾಮವಾಗಿದೆ.

ಆಧುನಿಕೋತ್ತರ ಭೂಗೋಳವಿಜ್ಞಾನದಲ್ಲಿ ಸ್ಥಾನಿಯ ಸ್ಥಳ ಹಾಗೂ ಅವುಗಳ ಅಳತೆಗಳು ಸಾಮಾಜಿಕ ನಿರ್ಮಾಣವೇ ಹೊರತು ಹೊರಗಿನಿಂದ ನೀಡಲ್ಪಟ್ಟವುಗಳಲ್ಲ. ಕಾಲ ಹಾಗೂ ಸ್ಥಾನೀಯಗಳು ಸಾರಿಗೆ–ಸಂಪರ್ಕಗಳಿಂದಾಗಿ ಒತ್ತರಿಸಲ್ಪಟ್ಟಿವೆ. ಈ ವಾದವು ಪ್ರಾದೇಶಿಕ ಮಿತಿಗಳನ್ನು ಹೊಂದಿರದಿದ್ದು ಆಧುನಿಕವಾದಕ್ಕಿಂತ ಭಿನ್ನವಾಗಿದೆ. ಇದರಿಂದಾಗಿಯೇ ಸಂಸ್ಕೃತಿಗಳು ನಿರಂತರವಾಗಿ ಮಾರ್ಪಾಡು ಹೊಂದುತ್ತವೆ. ಕೆಲವು ಭೂಗೋಳಶಾಸ್ತ್ರಜ್ಞರು ವಿವರಿಸಿರುವಂತೆ ಆಧುನಿಕೋತ್ತರ ಪಂಥವು ಸಾಮಾಜಿಕ ವಿಜ್ಞಾನಗಳು ಬಹುತೇಕ ಆಧರಿಸಿರುವ ಕಾಲ ಮತ್ತು ಇತಿಹಾಸಗಳನ್ನು ಪ್ರಶ್ನಿಸುವುದು ಇದಕ್ಕೆ ಬದಲಾಗಿ ಭೌಗೋಳಶಾಸ್ತ್ರಜ್ಞರಿಂದ ಹೆಚ್ಚು ಸ್ವೀಕೃತವಾಗಿದೆ. ಇದು ಭೌಗೋಳಿಕ ಹಾಗೂ ಸ್ಥಾನೀಯತೆಯನ್ನು ಪ್ರತಿಪಾದಿಸುವುದು. (ಆರ್.ಎನ್.)

**ಆನೇಕಲ್ಲು:** ಬೆಂಗಳೂರು ನಗರ ಜಿಲ್ಲೆಯ ಈಶಾನ್ಯದಲ್ಲಿರುವ ಒಂದು ತಾಲ್ಲೂಕು ಮತ್ತು ಮುಖ್ಯ ಪಟ್ಟಣ. ಇಲ್ಲಿನ ಪಶ್ಚಿಮ ಕಣಿವೆ ಬೆಟ್ಟಗುಡ್ಡಗಳಿಂದಲೂ ಕಾಡಿನಿಂದಲೂ ಕೂಡಿದ್ದು, ಅರ್ಕಾವತಿ ನದಿಯ ಜಲಾನಯನ ಪ್ರದೇಶಕ್ಕೆ ಸೇರಿದೆ. ಪೂರ್ವದ ಕಣಿವೆ ಪೆನ್ನಾರ್ ನದಿಯ ಜಲಾನಯನ ಭೂಮಿಗೆ ಸೇರಿದೆ. ಈ ತಾಲ್ಲೂಕಿನ ಜನಸಂಖ್ಯೆ 2,98,961.

ಬೆಂಗಳೂರು ನಗರದ ಆಗ್ನೇಯಕ್ಕೆ 35 ಕಿಮೀ ದೂರದಲ್ಲಿ $12^0 43'$ ಉತ್ತರ ಅಕ್ಷಾಂಶ ಮತ್ತು $77^0 42'$ ಪೂರ್ವರೇಖಾಂಶಗಳು ಸಂಧಿಸುವ ಭಾಗದಲ್ಲಿ ತಾಲ್ಲೂಕಿನ ಕೇಂದ್ರವಾದ ಆನೇಕಲ್ಲು ಪಟ್ಟಣವಿದೆ. ಜನಸಂಖ್ಯೆ 33,160. ಇತ್ತೀಚಿನ ಜನಜಾಗೃತಿಯ ಚಟುವಟಿಕೆಗಳಿಂದ ಪಟ್ಟಣ ಅನೇಕ ಕಾರ್ಯಕ್ಷೇತ್ರಗಳಲ್ಲಿ ಮುನ್ನಡೆಯುತ್ತಿರುವುದಲ್ಲದೆ ತಾಲ್ಲೂಕಿನ ಅಭಿವೃದ್ಧಿಗೂ ಸಹಾಯಕವಾಗಿದೆ. (ಎಂ.ಎಸ್.)

**ಆಫ್ಘಾನಿಸ್ತಾನ:** ಮಧ್ಯ ಏಷ್ಯದಲ್ಲಿನ ಸ್ವತಂತ್ರ ರಾಷ್ಟ್ರ. ($29^0$–$38^0$.35′ ಉ.ಅ; $60^0$.50′–$71^0$35′ ಪೂ.ರೇ.) ಉತ್ತರದಿಂದ ದಕ್ಷಿಣಕ್ಕೆ 560 ಕಿಮೀ ಅಗಲವಾಗಿಯೂ ಪೂರ್ವದಿಂದ ಪಶ್ಚಿಮಕ್ಕೆ 1,232 ಕಿಮೀ ಉದ್ದವಾಗಿಯೂ ವ್ಯಾಪಿಸಿದೆ. ಇದರ ವಿಸ್ತೀರ್ಣ 6,47,500 ಚ.ಕಿಮೀ. ಜನಸಂಖ್ಯೆ 3,18,56,957 (2002). ಶೇ 99 ಜನ ಮುಸಲ್ಮಾನರು. ಪಶ್ತೊ ಮತ್ತು ಪರ್ಷಿಯನ್ ಭಾಷೆಗಳನ್ನಾಡುತ್ತಾರೆ. ಕಾಬೂಲ್ ನಗರ (ಜನಸಂಖ್ಯೆ 3 ಮಿಲಿಯನ್) ರಾಜಧಾನಿ ಮತ್ತು ವಾಣಿಜ್ಯಕೇಂದ್ರ.




ನೆಲ ಸರಾಸರಿ 1200 ಮೀ ಎತ್ತರವುಳ್ಳ ಪ್ರಸ್ಥಭೂಮಿ. ಉತ್ತರ ಭಾಗದಲ್ಲಿ 450 ಮೀ ಎತ್ತರದ ಸಾಧಾರಣ ಮೈದಾನವಿದೆ. ಮಧ್ಯಭಾಗದಲ್ಲಿ 960 ಕಿಮೀ ಗಳವರೆಗೆ, 6000 ಮೀ ಎತ್ತರವುಳ್ಳ ಹಿಂದೂಕುಷ್ ಪರ್ವತಶ್ರೇಣಿ ಈಶಾನ್ಯದಿಂದ ನೈಋುತ್ಯದ ಕಡೆಗೆ ಹಬ್ಬಿದೆ. ದಕ್ಷಿಣ ಭಾಗ 1800 ಮೀ ಎತ್ತರವುಳ್ಳ ವಿಶಾಲವಾದ ಪ್ರಸ್ಥಭೂಮಿಯಾಗಿದೆ.

ಈ ದೇಶದ ಮೂಲಕ ಆಮೂದಾರ್ಯ ನದಿ ಉತ್ತರಕ್ಕೂ ಹರಿರುದ್ ಮತ್ತು ಮುರ್ಘಾಬ್ ನದಿಗಳು ಪಶ್ಚಿಮಕ್ಕೂ, ಹೆಲ್ಮಂಡ್ ನದಿ ನೈಋುತ್ಯಕ್ಕೂ ಕಾಬೂಲ್ ನದಿ ಪೂರ್ವದ ಕಡೆಗೂ ಹರಿಯುತ್ತವೆ. ನದಿಗಳ ಕಣಿವೆಗಳು ಫಲವತ್ತಾಗಿದ್ದು ಹೆಚ್ಚು ಜನಸಂಖ್ಯೆಯುಳ್ಳ ಭಾಗಗಳಾಗಿವೆ. ಕೆಲವು ಸರೋವರಗಳೂ ಉಂಟು.

ಇದು ಒಳನಾಡಿನ ಪ್ರಸ್ಥಭೂಮಿಯಾಗಿರುವುದರಿಂದ, ಬೇಸಗೆಯಲ್ಲಿ $21^0$ಸೆ. ಉಷ್ಣಾಂಶವೂ ಚಳಿಗಾಲದಲ್ಲಿ 6–$10^0$ಸೆ. ಉಷ್ಣಾಂಶವೂ ಇರುತ್ತವೆ. ಚಳಿಗಾಲದಲ್ಲಿ 25–30 ಸೆಂಮೀ ಮಳೆಯಾಗುತ್ತದೆಯಲ್ಲದೆ ಹಿಮವೃಷ್ಟಿಯಾಗುವುದೂ ಉಂಟು. ದೇಶದ ಬಹುಪಾಲು ಸಮಶೀತೋಷ್ಣ ವಲಯದ ಶುಷ್ಕ ಭೂಮಿಯಾದ್ದರಿಂದ ಅಲ್ಲಲ್ಲಿ ಒರಟು ಹುಲ್ಲು, ಕುರುಚಲು, ಹಲಕೆಲವು ಬಳ್ಳಿಗಳು, ಅಂಟಿನ ಗಿಡಗಳು ಮಾತ್ರ ಇವೆ. ತೋಳ, ಮೊಲ, ಕಾಡು ಟಗರು, ನರಿ, ಮುಳ್ಳುಹಂದಿಗಳು ಈ ದೇಶದ ಕೆಲವು ವನ್ಯಪ್ರಾಣಿಗಳು.

ಈ ದೇಶದಲ್ಲಿ ಕೇವಲ ಶೇ 15 ಪ್ರದೇಶ ವ್ಯವಸಾಯಯೋಗ್ಯವಾಗಿದ್ದು, ಸು. ಶೇ 50 ವ್ಯವಸಾಯದ ಪ್ರದೇಶದಲ್ಲಿ ನೀರಾವರಿ ಸಹಾಯದಿಂದ ಬೇಸಾಯ ನಡೆಯುತ್ತದೆ. ಆಮೂದಾರ್ಯ, ಹೆಲ್ಮಂಡ್, ಕಾಬೂಲ್ ನದಿಗಳ ಫಲವತ್ತಾದ ಕಣಿವೆಗಳಲ್ಲಿ ಗೋದಿ, ಬಾರ್ಲಿ, ಮೆಕ್ಕೆಜೋಳ, ದ್ವಿದಳಧಾನ್ಯ, ಜೋಳ, ಬೀಟ್ ರೂಟ್, ಕಬ್ಬು, ಹೊಗೆಸೊಪ್ಪು, ಹತ್ತಿ, ಹರಳು ಬೆಳೆಯುತ್ತವೆ. ಸೇಬು, ದ್ರಾಕ್ಷಿ, ದಾಳಿಂಬೆ, ಕಲ್ಲಂಗಡಿ, ಏಪ್ರಿಕಾಟ್, ಪೀಚ್, ಪೇರಲ, ಪ್ಲಮ್ ಮುಂತಾದ ಹಣ್ಣುಗಳು ಹೆಚ್ಚಾಗಿ ಬೆಳೆಯುತ್ತವೆ. ಕೆಲವು ಹಣ್ಣುಗಳನ್ನು ಒಣಗಿಸಿ ರಫ್ತು ಮಾಡುತ್ತಾರೆ.

ಈ ದೇಶದಲ್ಲಿ ಕುರಿ, ದನಕರು, ಮೇಕೆಗಳನ್ನು ಮಾಂಸ, ಹಾಲು, ತುಪ್ಪಟ, ಚರ್ಮ, ಗಿಣ್ಣುಗಳಿಗಾಗಿ ಹೆಚ್ಚು ಸಂಖ್ಯೆಯಲ್ಲಿ ಸಾಕುತ್ತಾರೆ. ಸ್ವಲ್ಪ ಮೀನುಗಾರಿಕೆ ಇದೆ.

ಕ್ರೋಮ್, ಕಲ್ಲಿದ್ದಲು, ತಾಮ್ರ, ಕಬ್ಬಿಣ, ಅಭ್ರಕ, ಉಪ್ಪು, ಸತು, ಸೀಸ, ಗಂಧಕ, ಸುಣ್ಣಕಲ್ಲು, ಪೆಟ್ರೋಲಿಯಂ ತೈಲ ಮತ್ತು ನೈಸರ್ಗಿಕ ಅನಿಲಗಳು ಸ್ವಲ್ಪಮಟ್ಟಿಗೆ ಸಿಕ್ಕುತ್ತವೆ. ಖನಿಜೋದ್ಯಮ ಅಭಿವೃದ್ಧಿಗೊಂಡಿಲ್ಲ. ಮಹಿಪಾರ್, ಸಾರೋಬಿ, ಮತ್ತು ನಂಗಾಹರ್ – ಇವು ಜಲವಿದ್ಯುಚ್ಛಕ್ತಿಯ ಕೇಂದ್ರಗಳು.

ಈ ದೇಶದಲ್ಲಿ ಬಟ್ಟೆ ತಯಾರಿಕೆ, ಉಣ್ಣೆ ಹಸನುಮಾಡುವುದು, ಜಮಖಾನ, ಕಂಬಳಿ, ಸಾಬೂನು, ಸಿಮೆಂಟ್, ಸಕ್ಕರೆ ತಯಾರಿಕೆ, ಚರ್ಮ ಹದ ಮಾಡುವುದು, ಹತ್ತಿಗಿರಣಿ, ಹಿಟ್ಟಿನಗಿರಣಿ, ಬೆಂಕಿಪೆಟ್ಟಿಗೆ ತಯಾರಿಕೆ, ಚಿಕ್ಕ ಯಂತ್ರೋಪಕರಣಗಳ ತಯಾರಿಕೆ ಮುಂತಾದ ಕೈಗಾರಿಕೋದ್ಯಮಗಳು ಕಂಡುಬರುತ್ತವೆ. ಇವು ಕಾಬೂಲ್, ಕಂದಹಾರ್, ಹೀರತ್, ಸೆರಾಜ್, ಗುಲ್‌ಬಹಾರ್, ಗಾರದೆ, ಖುಮ್ರಿ ಮುಂತಾದ ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿವೆ.

ದೇಶ ಪರ್ವತಮಯವಾಗಿರುವುದರಿಂದ ಸಾರಿಗೆ ಸಂಪರ್ಕಗಳು ಹೆಚ್ಚಾಗಿಲ್ಲ. ಖೈಬರ್, ಕೋಜಾಕ್, ಗೋಮಲ್, ಕುರ್‍ರಂ, ಟೋಚಿ ಕಣಿವೆಗಳ ಮೂಲಕ ದೇಶದ ನಾನಾಕಡೆಗಳಿಂದ ಪಾಕಿಸ್ತಾನ, ಇರಾನ್, ರಷ್ಯ ದೇಶಗಳ ಕಡೆಗೆ ರಸ್ತೆ ಮಾರ್ಗಗಳಿವೆ. ಇತ್ತೀಚೆಗೆ ಸಾಲಾಂಗ್ ಸುರಂಗದ ಮೂಲದ ಕಾಬೂಲಿನಿಂದ ಉತ್ತರ ಆಫ್ಘಾನಿಸ್ತಾನಕ್ಕೆ ಹತ್ತಿರದ ಮಾರ್ಗವನ್ನು ನಿರ್ಮಿಸಲಾಗಿದೆ. ರೈಲುಮಾರ್ಗಗಳು ಅಭಿವೃದ್ಧಿಗೊಂಡಿಲ್ಲ. ವಿಮಾನ ಮಾರ್ಗಗಳು ಹೆಚ್ಚು ಉಪಯುಕ್ತವಾಗಿವೆ. ತುಪ್ಪಟ, ಜಮಖಾನಗಳು, ಹತ್ತಿ, ಹಣ್ಣು, ಚರ್ಮಗಳು, ಇಂಗು, ಹೆಚ್ಚಾಗಿ ರಫ್ತಾಗುತ್ತವೆ. ಬಟ್ಟೆ, ಪೆಟ್ರೋಲಿಯಂ ವಾಹನಗಳು, ಟೀ, ಯಂತ್ರೋಪಕರಣಗಳು, ವಿವಿಧ ಸಿದ್ಧವಸ್ತುಗಳು, ಆಹಾರ ಪದಾರ್ಥಗಳು ಆಮದಾಗುತ್ತವೆ. (ಎ.ಕೆ.)

**ಆಫ್ರಿಕ:** ಪೂರ್ವಾರ್ಧ ಗೋಳದಲ್ಲಿನ ಒಂದು ಖಂಡ. ವಿಸ್ತೀರ್ಣದಲ್ಲಿ ಏಷ್ಯ ಖಂಡದ ಅನಂತರ ಎರಡನೆಯದು. ಭೂವಿಜ್ಞಾನದ ಪ್ರಕಾರ ಇದು ಬೃಹದಾಕಾರದ ಯುರೇಷಿಯ ಭೂಭಾಗದ ಒಂದು ವಿಸ್ತರಣೆಯಾಗಿತ್ತು. ಇಂದು ಜಿಬ್ರಾಲ್ಟರ್ ಜಲಸಂಧಿ ಮತ್ತು ಸೂಯೆಜ್ ಕಾಲುವೆಗಳಿಂದಾಗಿ ಯುರೋಪ್ ಖಂಡದಿಂದ ಪ್ರತ್ಯೇಕಿಸಲ್ಪಟ್ಟಿದೆ. ಅಂಕುಡೊಂಕಾದ ಪರ್ವತ ಶ್ರೇಣಿಗಳು, ಭವ್ಯ ಜಲಪಾತಗಳು, ದಟ್ಟವಾದ ಉಷ್ಣವಲಯದ ಕಾಡುಗಳಿಂದಾಗಿ ಇಲ್ಲಿನ ನೆಲ ರಮ್ಯವಾಗಿದೆ. ಕಾಡು ಮತ್ತು ಹುಲ್ಲುಗಾವಲುಗಳಲ್ಲಿ ಈ ಪ್ರದೇಶಕ್ಕೆ ವಿಶಿಷ್ಟವಾದ ಜಿರಾಫೆ, ಒಕಾಪಿ, ಆರ್ಡ್‌ವಾಕ್, ನೀರಾನೆ ಮೊದಲಾದ ಪ್ರಾಣಿಗಳು ವಾಸಿಸುತ್ತವೆ. ಕಾಂಗೊ ಪ್ರದೇಶದ ಪಿಗ್ಮಿಗಳು, ಕಲಹರಿ ಮರುಭೂಮಿಯ ಬುಶ್ಮನ್ ಶಿಲಾಯುಗದೊಂದಿಗಿನ ಸಂಬಂಧಕ್ಕೆ ಜೀವಂತ ಸಾಕ್ಷಿಗಳಾಗಿದ್ದಾರೆ. ಈಜಿಪ್ಷನವರು ನಿರ್ಮಿಸಿದ ಪುರಾತನ ಪಿರಮಿಡ್ಡುಗಳು ಮತ್ತು ದೇವಾಲಯಗಳು ಪ್ರಾಚೀನ ನಾಗರಿಕತೆಯ ಮೂಕ ಸಾಕ್ಷಿಗಳಾಗಿವೆ. ಹಿಂದಿನಿಂದಲೂ ಉತ್ತರ ಆಫ್ರಿಕಕ್ಕೂ ಏಷ್ಯ ಯುರೋಪುಗಳಿಗೂ ಸಂಬಂಧವಿತ್ತು. ಮಧ್ಯ ಮತ್ತು ದಕ್ಷಿಣ ಆಫ್ರಿಕಗಳು 19ನೆಯ ಶತಮಾನದವರೆಗೂ ಅಂಥ ಸಂಪರ್ಕಗಳಿಂದ ದೂರ ಉಳಿದುವು. ಅಂಟುಜಾಡ್ಯಗಳಿಗೆ ಯುಕ್ತ ಮದ್ದು ಬಳಕೆಗೆ ಬಂದಮೇಲೆ ಖಂಡಾನ್ವೇಷಣೆ ಬಿರುಸಿನಿಂದ ನಡೆದು ಇಲ್ಲಿನ ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆಯ ಉದ್ದೇಶದಿಂದ ಬಂದ ಯುರೋಪಿಯನ್ನರ ದಾಳಿಗೆ ಆಫ್ರಿಕ ತುತ್ತಾಯಿತು. ಫ್ರಾನ್ಸ್ ಬಹಳಕಾಲ ಖಂಡದ ಬಹುಭಾಗವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿತ್ತು. ಆರ್ಥಿಕವಾಗಿ ಲಾಭದಾಯಕವಾದ ಭಾಗಗಳು ಬ್ರಿಟನ್ನಿನ ವಶದಲ್ಲಿದ್ದವು. ಉಳಿದ ಭಾಗಗಳು ಬೆಲ್ಜಿಯಂ, ಪೋರ್ಚುಗಲ್ ಮತ್ತು ಸ್ಪೇನಿನ ವಶದಲ್ಲಿದ್ದವು. ಪ್ರಸ್ತುತ ಈ ಖಂಡದಲ್ಲಿ 57 ಸ್ವತಂತ್ರ ರಾಷ್ಟ್ರಗಳಿವೆ. ಈ ಖಂಡದ ಜನಸಂಖ್ಯೆ ಸು. 816,524,000 (2001).

ಸನ್ನಿವೇಶ ಮತ್ತು ವಿಸ್ತೀರ್ಣ : ಸಮಭಾಜಕ ವೃತ್ತ ಈ ಖಂಡದ ಮಧ್ಯಭಾಗದಲ್ಲಿ ಹಾದುಹೋಗಿದ್ದು ಖಂಡವನ್ನು ಸುಮಾರು ಸಮವಾದ ಎರಡು ಭಾಗಗಳನ್ನಾಗಿ ಮಾಡಿದೆ. ಕರ್ಕಾಟಕ ಸಂಕ್ರಾಂತಿ ವೃತ್ತ ಮತ್ತು ಮಕರ ಸಂಕ್ರಾಂತಿ ವೃತ್ತಗಳು ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಕ್ರಮವಾಗಿ ಹಾದುಹೋಗಿರುವುದರಿಂದ ಈ ಖಂಡವನ್ನು ಉಷ್ಣವಲಯದ ಖಂಡವೆಂದೇ ಹೇಳಬಹುದು. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವೂ ಪೂರ್ವದಲ್ಲಿ ಹಿಂದೂ ಮಹಾಸಾಗರವೂ ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರವೂ ಇದನ್ನು ಸುತ್ತುವರಿದಿವೆಯಾಗಿ ಇಡೀ ಖಂಡವೇ ಒಂದು ದ್ವೀಪದಂತಿದೆ. $35^0$ ದ.ಅ.–$37^0$ ಉ.ಅ. ಹಾಗು $18^0$ ಪ.ರೇ. $54^0$ ಪೂ. ರೇ. ಗಳ ನಡುವೆ ಹರಡಿದೆ.

ಆಫ್ರಿಕ ಪ್ರಪಂಚದ ಒಟ್ಟು ಭೂಭಾಗದ $^1/_5$ ಭಾಗವನ್ನು ಆಕ್ರಮಿಸಿದೆ. ವಿಸ್ತೀರ್ಣ 30,348,110 ಚ.ಕಿಮೀ. ಅಂದರೆ ಯುರೋಪಿನ ಮೂರರಷ್ಟು. ಉತ್ತರದಿಂದ ದಕ್ಷಿಣಕ್ಕೆ ಸು. 8,000 ಕಿಮೀ ಉದ್ದವಾಗಿಯೂ ಹೆಚ್ಚು ವಿಸ್ತಾರವಾಗಿರುವ ಸಹರ ಮರುಭೂಮಿಯ ಪ್ರದೇಶದಲ್ಲಿ ಪೂರ್ವ ಪಶ್ಚಿಮವಾಗಿ 7,200 ಕಿಮೀ ಅಗಲವಾಗಿಯೂ ಇದೆ.

ಮೇಲ್ಮೈಲಕ್ಷಣ: ಆಫ್ರಿಕ ಖಂಡ ವಿಸ್ತಾರವಾದ ಮತ್ತು ಅವಿಚ್ಛಿನ್ನವಾದ ಪ್ರಸ್ಥಭೂಮಿ. ಇದ್ದಕ್ಕಿದ್ದಂತೆ ಕಡಿದಾದ ತೀರಪ್ರದೇಶದಿಂದ ಭೂಮಿ ಸ್ತರಸ್ತರವಾಗಿ ಎತ್ತರವಾಗುತ್ತ ಬಂದು ಡ್ರಾಕೆನ್ಸ್‌ಬರ್ಗ್ ಪರ್ವತಗಳಲ್ಲಿ ಲೀನವಾಗುತ್ತದೆ. ದಕ್ಷಿಣದಲ್ಲಿ ಇಳಿಜಾರು ಕ್ರಮವಾಗಿದೆ. ಪ್ರಸ್ಥಭೂಮಿಯ ಅಂಚು ಕಡಿದಾಗಿದ್ದು ಹರಿವ ನದಿಗಳೆಲ್ಲ ಜಲಪಾತಗಳಾಗಿ ಧುಮುಕುವುದರಿಂದ ಸಾರಿಗೆ ಸೌಲಭ್ಯಗಳು ಬೆಳೆಯಲು ಅವಕಾಶ ಕಡಿಮೆ. ಪಶ್ಚಿಮದಲ್ಲಿ ಈಜಿಪ್ಟ್, ಇಟಲಿಯ ಸೋಮಾಲಿ ಲ್ಯಾಂಡ್, ನೈಜೀರಿಯ, ಫ್ರೆಂಚ್ ಪಶ್ಚಿಮ ಆಫ್ರಿಕ ಭಾಗಗಳಲ್ಲಿ ದೊಡ್ಡ ಮೈದಾನಗಳಿವೆ. ಗಿನಿ ಖಾರಿಯ ಭಾಗದಲ್ಲಿ ವ್ಯಾಪಾರಕೇಂದ್ರಗಳಾದ ಕೋಟೆ–ಡಿ–ವೋರೆ, ಸ್ಲೇವ್ಸ್ ಕೋಸ್ಟ್, ಗೋಲ್ಡ್ ಕೋಸ್ಟ್‌ಗಳಿವೆ. ಖಂಡದ ಬಹುಭಾಗಗಳು ಪುರಾತನ ಶಿಲೆಗಳಿಂದ ನಿರ್ಮಿತವಾಗಿವೆ. ಆದುದರಿಂದಲೇ ಇಲ್ಲಿ ಅನೇಕ ರೀತಿಯ ಬೆಲೆ ಬಾಳುವ ಖನಿಜಗಳು ದೊರೆಯುತ್ತವೆ.

ದಕ್ಷಿಣದಲ್ಲಿರುವ ಕೇಪ್ ಪರ್ವತಶ್ರೇಣಿಗಳೂ ಉತ್ತರದಲ್ಲಿರುವ ಅಟ್ಲಾಸ್ ಪರ್ವತಗಳೂ ಗುಣ ಲಕ್ಷಣಗಳಲ್ಲಿ ಯುರೋಪಿನ ದಕ್ಷಿಣದಲ್ಲಿರುವ ಆಲ್ಫ಼ೈನ್ ಮತ್ತು ಹಿಮಾಲಯ ಪರ್ವತಗಳ ಗುಂಪಿಗೆ ಸೇರಿದ ವರ್ಗೀಕೃತ ಪರ್ವತಗಳು. ಈ ಪರ್ವತಗಳಲ್ಲಿ ಬಹು ಎತ್ತರದ ಶಿಖರಗಳೆಂದರೆ ಮೌಂಟ್ ಕಿಲಿಮಾಂಜರೋ (5801 ಮೀ), ಮೌಂಟ್ ಕೆನ್ಯ (5117 ಮೀ), ಮೌಂಟ್ ಎಲ್ಗಿನ್ (4245 ಮೀ).

ಸಾಮಾನ್ಯವಾಗಿ ಭೂಮಿಯ ಎತ್ತರ ದಕ್ಷಿಣದಲ್ಲಿ ಹೆಚ್ಚಾಗಿದೆ (1500–3000 ಮೀ) ಉತ್ತರದ ಕಡೆ ಹೋದಂತೆ ಭೂಮಿಯ ಎತ್ತರ ಕಡಿಮೆಯಾಗುತ್ತ ಹೋಗುವುದು (300–1200 ಮೀ). ಅತ್ಯಂತ ಉನ್ನತವಾದ ಪ್ರದೇಶವೆಂದರೆ ಇಥಿಯೋಪಿಯದ ಪ್ರಸ್ಥಭೂಮಿ. ಅಲ್ಲಿಯ ಭೂಮಿಯ ಮಟ್ಟ 4500 ಮೀಗೂ ಹೆಚ್ಚು. ದಕ್ಷಿಣದ ಕಡೆ ಪೂರ್ವ ಆಫ್ರಿಕದ ಪ್ರಸ್ಥಭೂಮಿ ಸು. 2400 ಮೀ ಎತ್ತರ.

ಆಫ್ರಿಕದ ತಗ್ಗುಪ್ರದೇಶಗಳು ಅಪಾರ ವಿಸ್ತಾರವನ್ನಾಕ್ರಮಿಸಿವೆ. ಅವುಗಳಲ್ಲೊಂದಾದ ಖಂಡದ ಪೂರ್ವ ಭಾಗದಲ್ಲಿರುವ ಸೀಳು ಕಣಿವೆಗಳು ಗಮನಾರ್ಹವಾದ ಮತ್ತು ವೈಶಿಷ್ಟ್ಯಪೂರ್ಣವಾದ ಪ್ರಾಕೃತಿಕ ಲಕ್ಷಣವನ್ನು ಹೊಂದಿವೆ. ಇದು ಸು. 48 ಕಿಮೀ ಅಗಲವಾಗಿಯೂ 4,800 ಕಿಮೀ ಉದ್ದವಾಗಿಯೂ ಇದೆ. ಕಣಿವೆಯ ತಗ್ಗು ಪ್ರದೇಶಗಳಲ್ಲಿ ಖಂಡದ ಮುಖ್ಯ ಸರೋವರಗಳಿವೆ. ಆಲ್ಬರ್ಟ್, ಟಾಂಗನೀಕ, ನಯಾಸ ಮತ್ತು ರುಡಾಲ್ಫ್ –ಇವು ಇಲ್ಲಿನ ಮುಖ್ಯ ಸರೋವರಗಳು. ಎರಡನೆಯ ನಿಮ್ನ ಭೂಮಿಯೇ ಸಹರ ಮರುಭೂಮಿ. ಇದು ದಕ್ಷಿಣ ಆಲ್ಜೀರಿಯ, ಲಿಬಿಯ, ಪಶ್ಚಿಮ ಆಫ್ರಿಕ ಉಷ್ಣವಲಯದ ಭಾಗಗಳನ್ನೊಳಗೊಂಡು ಈಜಿಪ್ಟ್ ಮತ್ತು ಸೂಡಾನ್‌ಗಳನ್ನು ಮುಟ್ಟಿದೆ. ಸಹರ ಮರುಭೂಮಿಯ ದಕ್ಷಿಣದಲ್ಲಿ ಚಾಡ್ ಎಂಬ ಮತ್ತೊಂದು ಸರೋವರವಿದೆ. ವಿಕ್ಟೋರಿಯ ಸಹ ಸೀಳು ಕಣಿವೆಯಲ್ಲಿರುವ ಅತ್ಯಂತ ದೊಡ್ಡ ಸರೋವರ. ಇದು ಪ್ರಪಂಚದ ದೊಡ್ಡ ಸರೋವರಗಳಲ್ಲಿ ಮೂರನೆಯದು. ವಿಸ್ತೀರ್ಣ 69,464 ಚ.ಕಿಮೀ. ನಿಮ್ನಭೂಮಿಯ ಮೂರನೆಯ ಭಾಗವೆಂದರೆ ಕ್ವಟ್ಟಾರ ಪ್ರದೇಶ. ಸಮುದ್ರಮಟ್ಟಕ್ಕೆ 132 ಮೀ ತಗ್ಗಿನಲ್ಲಿದೆ. ಕಲಹರಿ ಮತ್ತು ದಕ್ಷಿಣದ ಇತರ ಮರುಭೂಮಿಗಳೂ ಸೇರಿದರೆ ದೇಶದ ಶೇ. 25 ರಷ್ಟು ಶುಷ್ಕ ಪ್ರದೇಶಗಳಾಗಿವೆ.

ಆಫ್ರಿಕದ ನದಿಗಳು : ಮರುಭೂಮಿ ಪ್ರದೇಶದಲ್ಲಿ ನದಿಗಳೇ ಇಲ್ಲದಿರುವುದು, ಹೆಚ್ಚು ಮಳೆ ಬೀಳುವ ಸಮಭಾಜಕ ವೃತ್ತ ಪ್ರದೇಶದಲ್ಲಿ ಅನೇಕ ನದಿಗಳು ಹರಿಯುವುದು ಈ ಖಂಡದ ಒಂದು ವೈಶಿಷ್ಟ್ಯ. ನದಿಗಳೆಲ್ಲ ಪ್ರಸ್ಥಭೂಮಿಯ ನಡುವಣ ಜೌಗು ಪ್ರದೇಶ ಮತ್ತು ಸರೋವರ ಪ್ರದೇಶಗಳಲ್ಲಿ ಹುಟ್ಟಿ ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ಸಮುದ್ರಗಳನ್ನು ಸೇರುತ್ತವೆ. ಜ಼ಾಂಬೆಜಿ ಮಾತ್ರ ಹಿಂದೂ ಮಹಾಸಾಗರಕ್ಕೆ ಸೇರುತ್ತದೆ.

ಆಫ್ರಿಕದ ಅತಿಮುಖ್ಯ ನದಿಯಾದ ನೈಲ್ ವಿಕ್ಟೋರಿಯ ಸರೋವರದ ಬಳಿ ಹುಟ್ಟಿ ಉತ್ತರಾಭಿಮುಖವಾಗಿ ಹರಿದು, ಉಪನದಿಯಾದ ನೀಲಿನೈಲ್ ಜೊತೆಗೂಡಿ ಮೆಡಿಟರೇನಿಯನ್ ಸಮುದ್ರಕ್ಕೆ ಸೇರುವುದು. ಪ್ರಪಂಚದ ಅತಿ ಉದ್ದವಾದ ನದಿಗಳ ಗುಂಪಿನಲ್ಲಿ ನೈಲ್ ಪ್ರಥಮ ಸ್ಥಾನವನ್ನೂ (6459 ಕಿಮೀ) ಕಾಂಗೊ ಆರನೆಯ ಸ್ಥಾನವನ್ನೂ (4,800 ಕಿಮೀ) ನೈಜರ್ ಹತ್ತನೆಯ ಸ್ಥಾನವನ್ನೂ (4,160 ಕಿಮೀ) ಪಡೆದಿವೆ.

ಉಗಾಂಡ, ಸೂಡಾನ್ ಗಣರಾಜ್ಯ ಮತ್ತು ಈಜಿಪ್ಟ್‌ಗಳ ಮೂಲಕ ನೈಲ್‌ನದಿ ಹರಿಯುತ್ತದೆ. ನೈಜರ್ ನದಿಯು ತನ್ನದೇ ಆದ ಮೆಕ್ಕಲು ಮಣ್ಣಿನ ಮೈದಾನವನ್ನೂ ಮುಖಜಭೂಮಿಯನ್ನೂ ಸೃಷ್ಟಿಸಿದೆ. ಕಾಂಗೊ ನದಿಯ ಅಳಿವೆಯನ್ನು ನೋಡಿದರೆ ದೇಶದ ಅಂತರಾಳದಲ್ಲಿ ಒಂದು ಒಳ ಸಮುದ್ರವಿತ್ತೆಂಬ ಊಹೆಗೆ ಅವಕಾಶವಾಗುತ್ತದೆ. ಜ಼ಾಂಬೆಜಿ ವಿಕ್ಟೋರಿಯ ಜಲಪಾತಕ್ಕೂ ಆರೆಂಜ್ ನದಿ ತುಗೇಲ್ ಜಲಪಾತಕ್ಕೂ ಪ್ರಸಿದ್ಧವಾಗಿವೆ. ಜಲಪಾತಗಳಿಂದ ವಿದ್ಯುಚ್ಛಕ್ತಿ ನಿರ್ಮಾಣದ ಯೋಜನೆಗಳಿಗೆ ಒಳ್ಳೆಯ ಭವಿಷ್ಯವಿದೆ.

ವಾಯುಗುಣ : $35^{\circ}$ ದಕ್ಷಿಣ ಅಕ್ಷಾಂಶದಿಂದ $37^{\circ}$ ಉತ್ತರ ಅಕ್ಷಾಂಶದವರೆಗೆ ಆಫ್ರಿಕ ಆವರಿಸಿರುವುದರಿಂದ ಮುಖ್ಯವಾಗಿ ಉಷ್ಣವಲಯದ ವಾಯುಗುಣವನ್ನು ಹೊಂದಿದೆ. ವಿಶಾಲವಾದ ಈ ಖಂಡದ ವಾಯುಗುಣದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೆಚ್ಚಿನ ವ್ಯತ್ಯಾಸವಿದೆ. ಉತ್ತರ ಮತ್ತು ದಕ್ಷಿಣದ ತುದಿಗಳಲ್ಲಿ ಮೆಡಿಟರೇನಿಯನ್ ವಾಯುಗುಣವಿದೆ. ಮಧ್ಯ ಆಫ್ರಿಕದಲ್ಲಿ ಸಾಮಾನ್ಯವಾಗಿ ತೇವದಿಂದ ಕೂಡಿದ ಉಷ್ಣ ವಾತಾವರಣವಿದೆ. ಸವನ್ನ ಹುಲ್ಲುಗಾವಲುಗಳಲ್ಲಿ ಅಷ್ಟು ಉಷ್ಣತೆ ಇಲ್ಲ. ಸ್ಥಳ ಎತ್ತರವಾಗಿರುವುದರಿಂದ ಪೂರ್ವ ಭಾಗದಲ್ಲಿ ವಾಯುಗುಣ ಹಿತಕರವಾಗಿದೆ.

ಸಹರ ಮರುಭೂಮಿಯಲ್ಲಿ ಸರಾಸರಿ ವಾರ್ಷಿಕ ಮಳೆ ಕೇವಲ 12 ಸೆಂಮೀ ಗಳಿಗಿಂತಲೂ ಕಡಿಮೆಯಾಗಿ ಕೆಲವು ವರ್ಷಗಳಲ್ಲಿ ಅನಾವೃಷ್ಟಿಯುಂಟಾಗುವುದು. ಬೇಸಗೆಯಲ್ಲಿ ಉಷ್ಣಾಂಶ ಸು. $49^{\circ}$ಸೆ ಗೂ ಹೆಚ್ಚಾಗಿರುತ್ತದೆ. ಕಾಂಗೊ ನದಿಯ ಬಯಲುಗಳಲ್ಲಿ, ಪಶ್ಚಿಮ ಆಫ್ರಿಕದ ಕೆಲವು ಭಾಗಗಳಲ್ಲಿ ಸರಾಸರಿ 200 ಸೆಂಮೀ ಮಳೆ ಬೀಳುವುದು. ಕ್ಯಾಮರೂನ್ ಪ್ರದೇಶದಲ್ಲಿ 1000 ಸೆಂಮೀ ಮಳೆ ಬೀಳುತ್ತದೆ. ಉನ್ನತವಾದ ಪ್ರಸ್ಥಭೂಮಿಗಳಲ್ಲಿ ಸಮಶೀತೋಷ್ಣ ಮಾದರಿಯ ವಾಯುಗುಣವನ್ನು ಕಾಣಬಹುದು. ಹಾಗೆಯೆ ಅಗ್ನಿಪರ್ವತದ ಶಿಲಾರಸದಿಂದ ಉಂಟಾದ ಕಿಲಿಮಾಂಜಾರೋ, ಕೀನ್ಯ ಮತ್ತು ಎಲ್ಗಿನ್ ಶಿಖರಗಳು ವರ್ಷದ ಎಲ್ಲ ಋತುಗಳಲ್ಲೂ ಮಂಜಿನಿಂದ ಮುಚ್ಚಿರುತ್ತವೆ.

ಆಫ್ರಿಕದ ವಾಯುಗುಣದಲ್ಲಿ ಒಂದು ರೀತಿಯ ವೈಶಿಷ್ಟ್ಯವಿದೆ. ಉತ್ತರಾರ್ಧಗೋಳದಲ್ಲಿರುವಂಥ ವಾಯುಗುಣ ವಲಯಗಳೇ ದಕ್ಷಿಣಾರ್ಧಗೋಳದಲ್ಲಿವೆ. ಸಮಭಾಜಕವೃತ್ತ ಖಂಡದ ನಡುವೆ ಹಾದುಹೋಗುವುದರಿಂದ ಉತ್ತರಾರ್ಧ ಗೋಳದಲ್ಲಿ ಬೇಸಗೆ ಕಾಲವಾಗಿದ್ದರೆ ದಕ್ಷಿಣಾರ್ಧಗೋಳದಲ್ಲಿ ಚಳಿಗಾಲ.

ಸಮಭಾಜಕ ವೃತ್ತದ ಎರಡು ಕಡೆಗಳಲ್ಲೂ ಉತ್ತರ ಮತ್ತು ದಕ್ಷಿಣದ $5^{\circ}$ ಅಕ್ಷಾಂಶಗಳ ಮಧ್ಯೆ ಅಧಿಕ ಶಾಖ, ಅಧಿಕ ಮಳೆಯಿಂದ ಕೂಡಿದ ಸಮಭಾಜಕವೃತ್ತ ಮಾದರಿಯ ವಾಯುಗುಣವಿದೆ. $5^{\circ}$–$15^{\circ}$ ಅಕ್ಷಾಂಶಗಳ ಮಧ್ಯೆ ಬೆಚ್ಚನೆಯ ವಾಯುಗುಣವಿದ್ದರೂ ಬೇಸಗೆಯಲ್ಲಿ ಮಳೆ ಬೀಳುತ್ತದೆ. ಇದು ಉಷ್ಣವಲಯದ ವಾಯುಗುಣ. ಈ ವಲಯದಿಂದ ಉತ್ತರ ಮತ್ತು ದಕ್ಷಿಣಕ್ಕೆ ತೇವಾಂಶ ಕಡಿಮೆಯಾಗುತ್ತ ಶುಷ್ಕ ವಾತಾವರಣದಿಂದ ಕೂಡಿದ ಮರುಭೂಮಿ ಪ್ರದೇಶ ಪ್ರಾರಂಭವಾಗುತ್ತದೆ.

ಪಶ್ಚಿಮ ತೀರದಲ್ಲಿ ಸಮಭಾಜಕವೃತ್ತದ ಕಡೆ ಹರಿಯುವ ಬೆಂಗ್ವೆಲಾ ಶೀತ ಸಾಗರ ಪ್ರವಾಹವೂ ಪೂರ್ವಭಾಗದಲ್ಲಿ ಹರಿಯುವ ಮೊಜಾಂಬಿಕ್ ಉಷ್ಣಸಾಗರ ಪ್ರವಾಹವೂ ತೀರಪ್ರದೇಶಗಳ ವಾಯುಗುಣದ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತವೆ.

ವಾಯುಗುಣದ ರೀತ್ಯಾ ಇಲ್ಲಿ ಅತಿ ಮುಖ್ಯವಾದ ನಾಲ್ಕು ವಲಯಗಳನ್ನು ಕಾಣಬಹುದು. ಕಾಂಗೊ ನದಿಯ ಬಯಲು, ಮಧ್ಯ ಆಫ್ರಿಕದ ಚಾಡ್ ಗಣರಾಜ್ಯ ಗಿನಿ ತೀರ ಪ್ರದೇಶಗಳು, ದಕ್ಷಿಣ ನೈಜೀರಿಯ, ಕೋಟ್–ಡಿ–ಐವೋರೆ ಮತ್ತು ಘಾನದ ಸ್ವಲ್ಪ ಭಾಗಗಳಲ್ಲಿ ಸಮಭಾಜಕವೃತ್ತ ಮಾದರಿಯ ವಾಯುಗುಣ ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ ವರ್ಷವೆಲ್ಲ ಉಷ್ಣತೆ ಮತ್ತು ಮಳೆ ಅಧಿಕ. ಮಧ್ಯಾಹ್ನದ ಅನಂತರ ಶಾಖದ ಪ್ರಚಲನ ಪ್ರವಾಹದಿಂದಾಗಿ ಮಳೆ ಬೀಳುತ್ತದೆ. ಉಷ್ಣವಲಯದ ವಾಯುಗುಣ ಸಮಭಾಜಕ ವೃತ್ತ ವಲಯದ ಇಕ್ಕೆಲಗಳಲ್ಲೂ ಕಂಡುಬರುವುದು. ಸವನ್ನ ಪ್ರದೇಶಗಳಿಂದ, ಪಶ್ಚಿಮದಲ್ಲಿ ಚಾಡ್ ಸರೋವರದವರೆಗೂ ದಕ್ಷಿಣದಲ್ಲಿ ಟ್ಯಾಂಗನೀಕ, ಜ಼ಾಂಬಿಯ ಮತ್ತು ಅಂಗೋಲಗಳಲ್ಲೂ ಈ ವಾಯುಗುಣವಿದೆ. ಸಮಭಾಜಕವೃತ್ತದ ವಾಯುಗುಣದ ಪ್ರದೇಶಕ್ಕಿಂತ ಇಲ್ಲಿ ಮಳೆ ಕಡಿಮೆ. ಬೆಚ್ಚನೆಯ ಬೇಸಗೆಯೂ ಶೀತವಾದ ಚಳಿಗಾಲವೂ ಇಲ್ಲಿಯ ವಾಯುಗುಣದ ವೈಶಿಷ್ಟ್ಯ. ಇದನ್ನು ಸೂಡಾನ್ ಮಾದರಿಯ ವಾಯುಗುಣವೆಂದು ಕರೆಯುತ್ತಾರೆ. ಮರುಭೂಮಿಯ ವಾಯುಗುಣವೆಂದರೆ ಅಧಿಕ ಶಾಖದಿಂದ ಕೂಡಿ ಮಳೆಯೇ ಇಲ್ಲದಿರುವುದು. ಇಂಥದ್ದು ಉತ್ತರದ ಸಹರ ಮರುಭೂಮಿ ಪ್ರದೇಶದಲ್ಲೂ ದಕ್ಷಿಣದಲ್ಲಿ ಕಲಹರಿ ಮರುಭೂಮಿ ವಲಯದಲ್ಲೂ ಕಂಡುಬರುತ್ತವೆ. ಮೆಡಿಟರೇನಿಯನ್ ವಾಯುಗುಣ ಉತ್ತರದಲ್ಲಿ ಮೊರಾಕೊ, ಆಲ್ಜೀರಿಯ, ಟ್ಯುನೀಸಿಯ, ಲಿಬಿಯ ಮತ್ತು ಈಜಿಪ್ಟ್ ದೇಶಗಳ ಉತ್ತರ ತೀರಗಳಲ್ಲೂ ದಕ್ಷಿಣದ ತುದಿಯಲ್ಲೂ ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಮಳೆ ಬೀಳುತ್ತದೆ ಮತ್ತು ಬೇಸಗೆಯಲ್ಲಿ ಮಳೆಯಿಲ್ಲ, ಸೆಕೆ ಹೆಚ್ಚು. ಇಲ್ಲಿಯ ವಾಯುಗುಣ ಹಿತಕರವೂ ಉತ್ತೇಜನಕಾರಿಯೂ ಆಗಿರುವುದು.

ಸ್ವಾಭಾವಿಕ ಸಸ್ಯವರ್ಗ: ಇದು ಹೆಚ್ಚಾಗಿ ಅಲ್ಲಿಯ ವಾಯುಗುಣವನ್ನು ಅವಲಂಬಿಸಿರುತ್ತದೆ. ಒಂದಾನೊಂದು ಕಾಲದಲ್ಲಿ ದಟ್ಟಡವಿಗಳು ಮತ್ತು ಮನುಷ್ಯನ ಎತ್ತರದ ಹುಲ್ಲುಗಾವಲುಗಳಿಂದ ಇಡೀ ಪ್ರದೇಶವೇ ತುಂಬಿಹೋಗಿತ್ತು. ಈಗ ಅನೇಕ ಕಡೆಗಳಲ್ಲಿ ಕಾಡುಗಳನ್ನೂ ಹುಲ್ಲುಗಾವಲುಗಳನ್ನೂ ಸುಟ್ಟು ವ್ಯವಸಾಯಕ್ಕೆ ಅಳವಡಿಸಿಕೊಂಡಿದ್ದಾರೆ. ವಾಯುಗುಣಕ್ಕೆ ಅನುಸಾರವಾಗಿ ಇಲ್ಲಿ ವಿವಿಧ ರೀತಿಯ ಸ್ವಾಭಾವಿಕ ಸಸ್ಯ ವಲಯಗಳಿವೆ.

ಸಮಭಾಜಕ ವೃತ್ತ ಪ್ರದೇಶದ ಸಸ್ಯವರ್ಗ ಕಾಂಗೊ ಮತ್ತು ಗಿನಿ ಭಾಗಗಳಲ್ಲಿ ಹೇರಳವಾಗಿದೆ. ಮಡಗಾಸ್ಕರ್ ದ್ವೀಪದಲ್ಲೂ ಇದೇ ಸಸ್ಯವರ್ಗವುಂಟು. ನಿತ್ಯಹರಿದ್ವರ್ಣದ ಅನೇಕ ಕಾಡುಗಳು ಇಲ್ಲಿ ಹೆಚ್ಚಾಗಿವೆ. ಎಲ್ಲೆಲ್ಲೂ ದಟ್ಟವಾಗಿ ಬೆಳೆದು ನಿಂತಿರುವ ದೈತ್ಯಾಕಾರದ ಮರಗಳಿವೆ. ಮಹಾಗನಿ, ಐರನ್‌ವುಡ್, ಕೋಕೊ ಮತ್ತು ರಬ್ಬರ್ ಮುಂತಾದ ನಾನಾ ಜಾತಿಯ ಉಪಯುಕ್ತ ಸಸ್ಯಗಳಿವೆ. ತೆಂಗು ಮತ್ತು ಕಾಡುಬಾಳೆ ಹೆಚ್ಚಾಗಿ ಬೆಳೆಯುತ್ತಾರೆ.

ಸವನ್ನ ಹುಲ್ಲುಗಾವಲುಗಳು : ಸಮಭಾಜಕವೃತ್ತದ ಕಾಡುಗಳ ಎರಡು ಕಡೆಗಳಲ್ಲೂ ವಿಸ್ತಾರವಾಗಿ ಹಬ್ಬಿವೆ. ಅಂಚಿನಲ್ಲಿ ಅಲ್ಲಲ್ಲಿ ಕುರುಚಲು ಗಿಡಗಳಿವೆ. ಇವು ಉಷ್ಣವಲಯದ ಹುಲ್ಲುಗಾವಲುಗಳು. ಪಶ್ಚಿಮದಲ್ಲಿ ಅಟ್ಲಾಂಟಿಕ್ ತೀರಪ್ರದೇಶದಿಂದ ಪೂರ್ವದಲ್ಲಿ ಉಗಾಂಡದವರೆಗೂ ದಕ್ಷಿಣದಲ್ಲಿ ಪೂರ್ವ ಆಫ್ರಿಕದ ಬೆಟ್ಟದ ಸೀಮೆಯಿಂದ ಅಟ್ಲಾಂಟಿಕ್ ಸಾಗರದವರೆಗೂ ವಿಶಾಲವಾದ ಈ ಹುಲ್ಲುಗಾವಲುಗಳು ಹಬ್ಬಿವೆ. ಇತ್ತೀಚೆಗೆ ಉಗಾಂಡ, ಸೂಡಾನ್, ಜಿಂಬಾಬ್ವೆ, ಜಾಂಬಿಯ ಮತ್ತು ಅಂಗೋಲಗಳಲ್ಲಿ ಹುಲ್ಲುಗಾವಲುಗಳನ್ನು ವ್ಯವಸಾಯಕ್ಕೆ ಪರಿವರ್ತಿಸಿಕೊಂಡಿದ್ದಾರೆ.

ವನ್ಯಮೃಗ ಸಂಪತ್ತು : ಆಫ್ರಿಕ ತನ್ನ ಪ್ರಾಣಿ ವಿಶೇಷಗಳಿಗೆ ಪ್ರಸಿದ್ಧವಾಗಿದೆ. ನಡುವಣ ದೊಡ್ಡ ಕಾಡುಗಳಲ್ಲಿ ಗೊರಿಲ್ಲ, ಚಿಂಪಾಂಜಿ, ಲೌವ್ ಬರ್ಡ್, ಕೆಂಪು ಎದೆಯ ಗಿಣಿ, ಹೆಬ್ಬಾವು, ನಾಗರ ಹಾವು, ಮೊಸಳೆ ಮೊದಲಾದ ಮೃಗಗಳಿವೆ. ಸವನ್ನ ಮತ್ತು ವೆಲ್ಡ್ ಪ್ರದೇಶಗಳಲ್ಲಿ ಸಿಂಹ, ಹೇಸರುಕತ್ತೆ, ಹರಿಣ, ಘೇಂಡಾಮೃಗ, ಕಾಡು ಎಮ್ಮೆ, ಅರ್ಡ್‌ವುಲ್ಫ್, ಮುಳ್ಳುಹಂದಿ, ಅನೇಕ ಬಗೆಯ ಜಿಂಕೆಗಳು, ಆನೆಗಳು ಮುಂತಾದ ಪ್ರಾಣಿಗಳು ಸಾವಿರಾರು ಸಂಖ್ಯೆಯಲ್ಲಿವೆ. ಈಚೆಗೆ ಮಾನವನ ಅತಿಕ್ರಮ ಪ್ರವೇಶದಿಂದಾಗಿ, ವಿವೇಚನೆಯಿಲ್ಲದ ಬೇಟೆಯಿಂದಾಗಿ ಅವುಗಳ ಸಂಖ್ಯೆ ಬಹು ಕಡಿಮೆಯಾಗಿದೆ. ಮೆಡಿಟರೇನಿಯನ್ ಪ್ರದೇಶಗಳಲ್ಲಿ ಒಂಟೆ, ಕಂಕನರಿ, ಕಾಡುಹಂದಿ, ನುಬಿಯದ ಕಾಡು ಕತ್ತೆಗಳು, ಕಪಿಗಳು ಹೇರಳವಾಗಿವೆ. ಆಫ್ರಿಕದ ಮೃಗಗಳಲ್ಲಿ ಸೆಕ್ರೆಟರಿ ಹಕ್ಕಿ, ಐಬಿಸ್, ಹಾರ್‌ನ್ಬಿಲ್, ಮರಾಬು, ಗಿನಿ ಹಕ್ಕಿಗಳು

ಪ್ರಸಿದ್ಧ. ಇಡೀ ಖಂಡದಲ್ಲಿ ಹುಳುಹುಪ್ಪಟೆಗಳು ಲಕ್ಷಗಟ್ಟಲೆ ಇವೆ; ಅನೇಕ ಬಗೆಯ ಚಿಟ್ಟೆಗಳಿವೆ. ಸೈನಿಕ ಇರುವೆಗಳಿಗೆ ಮಿಡಿತೆಗಳಿಗೆ ಆಫ್ರಿಕ ತವರೂರು. ಮಲೇರಿಯ ಹರಡುವ ಸೊಳ್ಳೆ ಮತ್ತು ಟ್ಸೆಟ್ಸೆ ನೊಣಗಳು ಇಲ್ಲಿಯವೇ. ಉಷ್ಟ್ರಪಕ್ಷಿ ಇಲ್ಲಿನ ಮರುಭೂಮಿಯ ಮೂಲವಾಸಿ. ಈಚೆಗೆ ವನ್ಯಮೃಗ ಸಂರಕ್ಷಣೆಗಾಗಿ ಅಂತಾರಾಷ್ಟ್ರೀಯ ಚಳವಳಿ ಪ್ರಾರಂಭವಾದ ವೇಳೆ ಆಫ್ರಿಕದಲ್ಲಿ ಬಹು ದೊಡ್ಡ ವನ್ಯಮೃಗ ಸಂರಕ್ಷಣಾಲಯಗಳು ಏರ್ಪಟ್ಟಿವೆ.

ಖನಿಜ ಸಂಪತ್ತು : ಅತಿ ಪ್ರಾಚೀನ ಕಾಲದಿಂದಲೂ ಆಫ್ರಿಕ ಖನಿಜಗಳ ತವರೂರೆಂದು ಪ್ರಸಿದ್ಧವಾಗಿದ್ದರೂ 19 ನೆಯ ಶತಮಾನದಲ್ಲಿ ಖನಿಜೋತ್ಪನ್ನ ಪ್ರಾರಂಭವಾಯಿತೆನ್ನಬಹುದು. ದಕ್ಷಿಣ ಆಫ್ರಿಕ, ಜಿಂಬಾಬ್ವೆ, ಟಾಂಗನೀಕ, ಗೋಲ್ಡ್‌ಕೋಸ್ಟ್, ಕಾಂಗೊ ಪ್ರದೇಶಗಳಲ್ಲಿ ಚಿನ್ನದ ಗಣಿಗಳಿವೆ. ಪ್ರಪಂಚದ ಉತ್ಪನ್ನದಲ್ಲಿ ಶೇ. 5 ಚಿನ್ನ ಆಫ್ರಿಕದಿಂದ ಬರುತ್ತದೆ. 1870ರಲ್ಲಿ ದಕ್ಷಿಣ ಆಫ್ರಿಕದಲ್ಲಿ ವಜ್ರ ಪತ್ತೆಯಾದ ಮೇಲೆ ಟಾಂಗನೀಕ, ಅಂಗೋಲ, ಕಾಂಗೊ, ಬ್ರಿಟಿಷ್, ಪಶ್ಚಿಮ ಆಫ್ರಿಕಗಳಲ್ಲಿ ಆ ಅಮೂಲ್ಯ ಪದಾರ್ಥವನ್ನು ತೆಗೆಯಲಾಗುತ್ತಿದೆ. ಉತ್ತಮ ಮತ್ತು ವ್ಯಾಪಾರೀ ದರ್ಜೆಯ ವಜ್ರ (ಪ್ರಪಂಚದ ಶೇ. 98 ಭಾಗ) ಸಿಗುತ್ತಿದೆ. ಖಂಡದ ಬಹು ಮುಖ್ಯ ಕೈಗಾರಿಕಾ ಪ್ರದೇಶವೆಂದರೆ ದಕ್ಷಿಣ ಆಫ್ರಿಕ. ಕಲ್ಲಿದ್ದಲು, ಕಬ್ಬಿಣ ಮತ್ತು ಟಂಗ್‌ಸ್ಟನ್‌ಗಳು ದೊರೆಯುವುದರಿಂದ ಸಿಯಾರ ಲಿಯೋನ್ನಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿವೆ.

ಯುರೇನಿಯಂ, ವಜ್ರ, ತಾಮ್ರ, ಬಾಕ್ಸೈಟ್, ಮ್ಯಾಂಗನೀಸ್, ಕ್ರೋಮಿಯಂ ಇವು ಆಫ್ರಿಕದ ಅತಿ ಮುಖ್ಯ ಇತರ ಖನಿಜ ಸಂಪತ್ತುಗಳು.

ಪೆಟ್ರೋಲಿಯಂ ಮತ್ತು ಕಲ್ಲಿದ್ದಲು ಈ ಖಂಡದಲ್ಲಿ ಅಲ್ಪ ಪ್ರಮಾಣದಲ್ಲಿ ದೊರೆಯುವುರಿಂದ ಅವುಗಳ ಕೊರತೆ ಹೆಚ್ಚು. ಈಜಿಪ್ಟ್, ಅಲ್ಜೀರಿಯ, ಗ್ಯಾಬನ್, ನೈಜೀರಿಯ ಅಂಗೋಲ ಮತ್ತು ಮೊರಾಕೊಗಳಲ್ಲಿ ಅಲ್ಪ ಪ್ರಮಾಣದಲ್ಲಿ ಪೆಟ್ರೋಲಿಯಂ ದೊರೆಯುತ್ತದೆ. ಕಾಂಗೊ ಮತ್ತು ಜಿಂಬಾಬ್ವೆ ಜಗತ್ತಿನಲ್ಲೇ ಹೆಚ್ಚಿನ ಪ್ರಮಾಣದಲ್ಲಿ ತಾಮ್ರವನ್ನು ಉತ್ಪಾದಿಸುವ ರಾಜ್ಯಗಳಾಗಿವೆ. ಕಾಂಗೊದ ಕಟಾಂಗ ಪ್ರದೇಶದಲ್ಲಿ ಅತ್ಯಂತ ಬೆಲೆ ಬಾಳುವ ತಾಮ್ರದ ಗಣಿಗಳಿವೆ. ತಾಮ್ರದ ಜೊತೆಗೆ ಇಲ್ಲಿ ಮ್ಯಾಂಗನೀಸ್, ಸತು, ಕಬ್ಬಿಣ, ತವರ, ಟಂಗ್‌ಸ್ಟನ್, ಪ್ಲಾಟಿನಂ, ಬೆಳ್ಳಿ, ಮತ್ತು ಬಿಸ್ಮತ್ ಲೋಹಗಳು ದೊರೆಯುತ್ತವೆ. ಮ್ಯಾಂಗನೀಸ್ ಅದಿರು ಹೆಚ್ಚಿನ ಪ್ರಮಾಣದಲ್ಲಿ ದಕ್ಷಿಣ ಆಫ್ರಿಕದ ಮೊರಾಕೊ, ಘಾನಗಳಲ್ಲಿ ದೊರೆಯುತ್ತದೆ. ಕಾಂಗೊ, ಜಿಂಬಾಬ್ವೆಗಳಲ್ಲಿ ಕೋಬಾಲ್ಟ್ ಕೂಡ ದೊರೆಯುತ್ತದೆ.

ಬಾಕ್ಸೈಟ್ ಅದಿರಿಗೆ ಗಿನಿ ಮತ್ತು ಘಾನ ದೇಶಗಳು ಹೆಸರುವಾಸಿಯಾಗಿವೆ. ಟ್ಯೂನೀಸಿಯ ಮತ್ತು ಮೊರಾಕೊ ಫಾಸ್ಫೇಟನ್ನು ಒದಗಿಸುವ ರಾಜ್ಯಗಳು. ಸೀಸ ಮತ್ತು ತವರ ಜಿಂಬಾಬ್ವೆ, ನೈಋತ್ಯ ಆಫ್ರಿಕ, ಮೊರಾಕೊ ಮತ್ತು ಕಾಂಗೊ ರಾಜ್ಯಗಳ ಮುಖ್ಯ ಖನಿಜಗಳು.

ವ್ಯವಸಾಯ : ಆಫ್ರಿಕದ ಜನರ ಅತ್ಯಂತ ಮುಖ್ಯ ಉದ್ಯೋಗ ವ್ಯವಸಾಯ. ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ವ್ಯವಸಾಯ, ಅಲ್ಪ ಪ್ರಮಾಣದ ಮಳೆ ಬೀಳುವ ರಾಜ್ಯಗಳಲ್ಲಿ ದನಕರು ಮತ್ತು ಕುರಿಗಳನ್ನು ಸಾಕುವುದು ಇವರ ಮುಖ್ಯ ಜೀವನೋಪಾಯಗಳು.

ಸಂಪ್ರದಾಯಬದ್ಧವಾದ ವ್ಯವಸಾಯ ಉಷ್ಣವಲಯದ ಭಾಗದಲ್ಲಿ ಸಾಮಾನ್ಯವಾಗಿದೆ. ಇಲ್ಲಿಯ ಬೆಳೆಗಳು ಜೀವನಾಧಾರದವು. ವ್ಯವಸಾಯ ಪದ್ಧತಿಯೂ ವಿಚಿತ್ರವಾದುದು. ಹೊಲದ ಪಕ್ಕದಲ್ಲಿಯೇ ಹಳ್ಳಿ ಇರುತ್ತದೆ. ಮರ ಗಿಡಗಳನ್ನು ಸವರಿ ವ್ಯವಸಾಯಕ್ಕೆ ಅಳವಡಿಸಿಕೊಳ್ಳುತ್ತಾರೆ. ನೆಲಗಡಲೆ, ಗೆಣಸು, ಕೆಲವು ರೀತಿಯ ಕಾಳುಗಳು ಮಾಮ್ ಮತ್ತು ಕೆಸ್ಸವ್ ಎಂಬ ಗೆಣಸಿನ ಜಾತಿಯ ಗೆಡ್ಡೆಗಳು ಮುಂತಾದುವನ್ನು ಬೆಳೆಯುತ್ತಾರೆ. ನೀರಿನ ಸೌಲಭ್ಯವಿದ್ದಲ್ಲಿ ಜೋಳ ಮತ್ತು ಬತ್ತವನ್ನು ಸಹ ಬೆಳೆಯುತ್ತಾರೆ. ಈ ರೀತಿ ಇಲ್ಲಿ ಒಂದು ಅಥವಾ ಎರಡು ಬೆಳೆಗಳನ್ನು ತೆಗೆದು ಆ ಭೂಮಿ ನಿಸ್ಸತ್ತ್ವವಾದಾಗ ಅದನ್ನು ಬಿಟ್ಟು ಮತ್ತೊಂದು ಜಾಗಕ್ಕೆ ಹೋಗುವರು. ಇದು ಇಲ್ಲಿನ ವ್ಯವಸಾಯದ ವೈಶಿಷ್ಟ್ಯ. ಈ ಪ್ರದೇಶದ ಇತರ ಉತ್ಪನ್ನಗಳು – ತಾಳೆ (ಇದರಿಂದ ಎಣ್ಣೆ ಮತ್ತು ಕೊಬ್ಬರಿಯ ಹಾಗಿರುವ ತಿರುಳನ್ನು ತಯಾರಿಸಿ ಅನೇಕ ರೀತಿಯಲ್ಲಿ ಬಳಸುತ್ತಾರೆ), ಕೋಕೊ, ಕಾಫಿ, ಬಾಳೆ ಮತ್ತು ರಬ್ಬರ್.

ಪಶ್ಚಿಮ ಆಫ್ರಿಕ ತೀರ ಪ್ರದೇಶದಲ್ಲಿ ಝಾಂಬಿಯದ ದಕ್ಷಿಣದ ಭಾಗ ಕಾಂಗೊ, ಸಿಯಾರ ಲಿಯೋನ್ ಮತ್ತು ನೈಜೀರಿಯಗಳಲ್ಲಿ ತಾಳೆಎಣ್ಣೆ ಮತ್ತು ತಾಳೆ ತಿರುಳು ಹೆಸರುವಾಸಿಯಾಗಿವೆ. ಗಿನಿ ತೀರ ಪ್ರದೇಶದಲ್ಲಿರುವ ಅನೇಕ ದ್ವೀಪಗಳು, ಘಾನ, ಪಶ್ಚಿಮ ನೈಜೀರಿಯಗಳು ಕೋಕೊ ಬೆಳೆಗೆ ಹೆಸರುಗಳಿಸಿವೆ. ಇಥಿಯೋಪಿಯ ಪ್ರಸಿದ್ಧ ಅರಾಬಿಕ್ ಕಾಫಿಗೆ ತವರುಮನೆ. ಕಾಫಿಯನ್ನು ಸಿಯಾರ, ಲಿಯೋನ್, ಲೈಬೀರಿಯ, ಕಾಂಗೊ, ಅಂಗೋಲ ಮತ್ತು ಪೂರ್ವದ ಬೆಟ್ಟದ ಸೀಮೆಯಲ್ಲಿ ಹೇರಳವಾಗಿ ಬೆಳೆಯುತ್ತಾರೆ. ಮಳೆ ಹೇರಳವಾಗಿ ಬೀಳುವ ಸಮಭಾಜಕ ವೃತ್ತ ಪ್ರದೇಶದಲ್ಲಿ ಉಷ್ಣವಲಯದ ಕೆಲವು ಭಾಗಗಳಲ್ಲಿ ಬಾಳೇ ಹಣ್ಣನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ. ಕಾಂಗೊ ಮತ್ತು ಪಶ್ಚಿಮ ಆಫ್ರಿಕದಲ್ಲಿ ರಬ್ಬರಿನ ಗಿಡಗಳು ಹೆಚ್ಚಾಗಿವೆ.

ನದೀ ಕೊಳ್ಳಗಳಲ್ಲಿ ಉತ್ತಮ ರೀತಿಯ ಸುಧಾರಿಸಿದ ವ್ಯವಸಾಯ ಪದ್ಧತಿ ರೂಢಿಯಲ್ಲಿದೆ. ಹತ್ತಿ, ಹೊಗೆಸೊಪ್ಪು, ಗೋದಿ, ಬಾರ್ಲಿ ಮತ್ತು ಅನೇಕ ರೀತಿಯ ಆಹಾರ ಧಾನ್ಯಗಳನ್ನು ನದಿಯ ಬಯಲುಗಳಲ್ಲಿ ಬೆಳೆಯುತ್ತಾರೆ.

ಆಫ್ರಿಕದ ಹತ್ತಿಯ ಬೆಳೆ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದೆ. ಸೂಡಾನ್ ಮತ್ತು ಈಜಿಪ್ಟ್ ದೇಶಗಳು ಹತ್ತಿಯನ್ನು ಹೇರಳವಾಗಿ ಬೆಳೆಯುತ್ತವೆ. ಶ್ಯಾಕಲ್ ಎಂಬ ಪ್ರಪಂಚ ಪ್ರಸಿದ್ಧವಾದ ಹತ್ತಿಗೆ ಈಜಿಪ್ಟ್ ಹೆಸರಾದ ರಾಷ್ಟ್ರ. ಕಾಂಗೊ, ಉಗಾಂಡ ಮತ್ತು ಗಿನಿ ತೀರದ ರಾಷ್ಟ್ರಗಳಲ್ಲೂ ಹತ್ತಿಯನ್ನು ಬೆಳೆಯುತ್ತಾರೆ.

ಸನೆಗಾಲ್, ಗ್ಯಾಂಬಿಯ, ಉತ್ತರ ನೈಜೀರಿಯ ಮತ್ತು ಕಾಂಗೊ ರಾಷ್ಟ್ರಗಳ ಬೆಳೆಗಳಲ್ಲಿ ನೆಲಗಡಲೆಯೂ ಒಂದಾಗಿದೆ. ಈಜಿಪ್ಟ್ ಮತ್ತು ದಕ್ಷಿಣ ಆಫ್ರಿಕದಲ್ಲಿ ಜೋಳವನ್ನು ಮೇವಿಗಾಗಿಯೇ ಉಪಯೋಗಿಸುತ್ತಾರೆ. ಹೈವೆಲ್ಡ್ ಪ್ರದೇಶ ದಕ್ಷಿಣ ಆಫ್ರಿಕದಲ್ಲಿ ಜೋಳದ ಬೆಳೆಗೆ ಹೆಸರು ಪಡೆದಿದೆ. ಉಷ್ಣವಲಯದ ವಾಯುಗುಣವಿರುವ ಪ್ರದೇಶಗಳಲ್ಲಿ ಹೊಗೆಸೊಪ್ಪು ಅತಿ ಮುಖ್ಯ ಬೆಳೆ. ಸವನ್ನದ ನಾಡುಗಳಾದ ಸೂಡಾನ್ ಕಾಂಗೊ ಮತ್ತು ಮಡಗಾಸ್ಕರ್, ಜಿಂಬಾಬ್ವೆ ಮತ್ತು ದಕ್ಷಿಣ ಆಫ್ರಿಕಗಳಲ್ಲೂ ಹೊಗೆಸೊಪ್ಪನ್ನು ಬೆಳೆಯುತ್ತಾರೆ.

ಉತ್ತರ ಆಫ್ರಿಕದ ಆಲ್ಜೀರಿಯ, ಟ್ಯೂನಿಷಿಯ ಮತ್ತು ಮೊರಾಕೊ ರಾಜ್ಯಗಳು ಗೋದಿ ಮತ್ತು ಬಾರ್ಲಿ ಉತ್ಪಾದನೆಯಲ್ಲಿ ಪ್ರಥಮಸ್ಥಾನ ಪಡೆದಿವೆ. ಮೆಡಿಟರೇನಿಯನ್ ತೀರಪ್ರದೇಶದಲ್ಲಿ ಹಣ್ಣಿನ ತೋಟಗಳು ಬಹುಸಂಖ್ಯೆಯಲ್ಲಿವೆ. ದ್ರಾಕ್ಷಿ ಮುಂತಾದ ಹಣ್ಣುಗಳನ್ನು ಇಲ್ಲಿ ಬೆಳೆಯುತ್ತಾರೆ. ಆಲೀವ್ ಮತ್ತು ದ್ರಾಕ್ಷಿ ತೋಟಗಳಿಗೆ ಈ ಪ್ರದೇಶ ಹೆಸರುವಾಸಿ. ಮೆಡಿಟರೇನಿಯನ್ ಹಣ್ಣುಗಳನ್ನು ಕೇಪ್ ಪ್ರಾಂತ್ಯ, ಟ್ರಾನ್ಸ್‌ವಾಲ್, ನೇಟಾಲ್ ಮತ್ತು ದಕ್ಷಿಣ ಜಿಂಬಾಬ್ವೆಯಲ್ಲೂ ಬೆಳೆಯುವರು.

ದನಕರು ಮತ್ತು ಕುರಿ ಸಾಕುವುದು ಆಫ್ರಿಕದಲ್ಲಿ ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಗಿನಿ ತೀರ, ಸೂಡಾನ್, ಪೂರ್ವ ರಾಜ್ಯಗಳು ಮತ್ತು ದಕ್ಷಿಣ ಆಫ್ರಿಕದ ರಾಜ್ಯಗಳು ದನಕರುಗಳು ಮತ್ತು ಕುರಿ ಸಾಕಣೆಗೆ ಪ್ರಸಿದ್ಧವಾಗಿವೆ. ಬರ್‌ಬರಿ ರಾಜ್ಯಗಳು (ಮೆಡಿಟರೇನಿಯನ್) ಮತ್ತು ಪೂರ್ವ, ದಕ್ಷಿಣ ಆಫ್ರಿಕದ ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುರಿಗಳನ್ನು ಸಾಕುತ್ತಾರೆ. ಜಿಂಬಾಬ್ವೆ, ಅಂಗೋಲಗಳಲ್ಲಿ ಸಹ ಕುರಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಕೈಗಾರಿಕೆಗಳು : ದೊಡ್ಡ ಪ್ರಮಾಣದ, ಬೃಹತ್ ಕೈಗಾರಿಕೆಗಳು, ಆಫ್ರಿಕದ ಯಾವ ರಾಜ್ಯದಲ್ಲೂ ಇಲ್ಲವೆಂದು ಹೇಳಬಹುದು. ಆದುದರಿಂದ ಅಲ್ಲಿ ಕೈಗಾರಿಕೆ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಈಗ ಇರುವ ಕೆಲವೇ ಕೈಗಾರಿಕೆಗಳು ಹೆಚ್ಚಾಗಿ ವ್ಯವಸಾಯ ಅಥವಾ ಖನಿಜಗಳ ಉತ್ಪಾದನೆಗೆ ಸಂಬಂಧಿಸಿದುವು. ರಫ್ತು ಮಾಡುವ ಕಚ್ಚಾ ಪದಾರ್ಥಗಳನ್ನು ಸಿದ್ಧಪಡಿಸುವ ಅನೇಕ ಕೈಗಾರಿಕೆಗಳು ಇಲ್ಲಿವೆ. ಕೈಗಾರಿಕೆಯ ಪ್ರಗತಿ ದ್ವಿತೀಯ ಯುದ್ಧಾನಂತರ ಹೆಚ್ಚಾಗಿ ನಡೆದಿದೆ ಎಂದು ಹೇಳಬಹುದು.

ಬೃಹತ್ ಕೈಗಾರಿಕೆಗಳು ಅಲ್ಲೊಂದು ಇಲ್ಲೊಂದು ಇತ್ತೀಚೆಗೆ ಸ್ಥಾಪಿಸಲ್ಪಟ್ಟಿವೆ. ಭಾರಿ ಪ್ರಮಾಣದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ದಕ್ಷಿಣ ಆಫ್ರಿಕ ಗಣರಾಜ್ಯದಲ್ಲಿ ಸ್ಥಾಪಿಸಿದ್ದಾರೆ. ಇಲ್ಲಿ ರಫ್ತು ಪದಾರ್ಥಗಳನ್ನು ಅಣಿಗೊಳಿಸುವ ಮತ್ತು ಆಹಾರ ಪದಾರ್ಥಗಳನ್ನು ಸಿದ್ಧಗೊಳಿಸುವ ಅನೇಕ ಕಾರ್ಖಾನೆಗಳಿವೆ.

ಇಲ್ಲಿಯ ಕೈಗಾರಿಕೆಯಲ್ಲಿ ಚರ್ಮವನ್ನು ಹದ ಮಾಡುವುದು, ಮರದ ದಿಮ್ಮಿಗಳನ್ನು ಸಿದ್ಧಪಡಿಸುವುದು, ಹತ್ತಿ ಬಟ್ಟೆ ಕೈಗಾರಿಕೆ, ತಾಮ್ರವನ್ನು ಕರಗಿಸುವುದು ಮತ್ತು ಯಂತ್ರೋಪಕರಣಗಳನ್ನು ತಯಾರಿಸುವುದು ಮುಖ್ಯವಾಗಿವೆ. ಈ ಕೈಗಾರಿಕೆಗಳು, ಕೀನ್ಯ, ಜಿಂಬಾಬ್ವೆ, ಈಜಿಪ್ಟ್, ಕಾಂಗೊ ಮತ್ತು ಪಶ್ಚಿಮ ಆಫ್ರಿಕದಲ್ಲಿ ಹೆಚ್ಚಾಗಿವೆ. ತಾಮ್ರವನ್ನು ಕರಗಿಸುವ ಕೈಗಾರಿಕೆ ಕಾಂಗೊದಲ್ಲೂ, ಹತ್ತಿಬಟ್ಟೆಯ ಉದ್ಯಮ ಸೂಡಾನ್ ಮತ್ತು ಈಜಿಪ್ಟ್‌ಗಳಲ್ಲೂ ತಾಳೆ ಕಾಯಿಯಿಂದ ಎಣ್ಣೆಯನ್ನು ತೆಗೆಯುವ ಕೈಗಾರಿಕೆ ನೈಜೀರಿಯದಲ್ಲಿಯೂ ಹೆಚ್ಚಾಗಿ ಬೆಳೆದಿವೆ.

ಇತ್ತೀಚೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಬದಲಾವಣೆಗಳಾಗಿವೆ. ಉತ್ತರ ಆಫ್ರಿಕ ಮತ್ತು ಲಿಬಿಯಗಳಲ್ಲಿ ಪೆಟ್ರೋಲಿಯಂ ಉದ್ಯಮ ತೀವ್ರಗತಿಯಲ್ಲಿ ಸಾಗಿದೆ. ಈಜಿಪ್ಟ್, ಉಗಾಂಡ ಮತ್ತು ಜಿಂಬಾಬ್ವೆಗಳಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿ ನಡೆದಿದೆ. ಈಜಿಪ್ಟಿನಲ್ಲಿ ಕಬ್ಬಿಣ, ಉಕ್ಕಿನ ಕೈಗಾರಿಕೆ ಮತ್ತು ಕಾರು ಮುಂತಾದ ವಾಹನಗಳನ್ನು ಜೋಡಿಸುವ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿವೆ. ಉಗಾಂಡದಲ್ಲಿ ಸಕ್ಕರೆಯ ಕಾರ್ಖಾನೆಗಳು ಸ್ಥಾಪಿತವಾಗಿವೆ. ದಕ್ಷಿಣ ಆಫ್ರಿಕದ ರಾಜ್ಯಗಳಲ್ಲಿ ಉಣ್ಣೆ ಬಟ್ಟೆ, ಸಿಮೆಂಟ್, ಸೋಪು, ರಬ್ಬರ್ ಟೈರುಗಳು, ಬೆಣ್ಣೆ ಮತ್ತು ಗಿಣ್ಣುಗಳನ್ನು ತಯಾರಿಸುವ ಮುಖ್ಯ ಕೈಗಾರಿಕೆಗಳಿವೆ.

ಸಂಚಾರ ವ್ಯವಸ್ಥೆ : ಆಫ್ರಿಕದಲ್ಲಿನ ಸಂಚಾರ ಸಂಪರ್ಕವನ್ನು ಬೇರೆ ಖಂಡಗಳೊಡನೆ ಹೋಲಿಸಿದರೆ ಖಂಡ ಇನ್ನೂ ಬಹಳ ಹಿಂದುಳಿದಿದೆ ಎಂದು ಹೇಳಬೇಕು. ಇಲ್ಲಿ ಸು. 72000 ಕಿಮೀ ಉದ್ದದ ರೈಲು ಮಾರ್ಗವಿದೆ. ಇದರಲ್ಲಿ ಹೆಚ್ಚಿನ ಭಾಗ ದಕ್ಷಿಣ ಯೂನಿಯನ್ ಆಫ್ ಸೌತ್ ಆಫ್ರಿಕ ಮತ್ತು ಮೆಡಿಟರೇನಿಯನ್ ರಾಜ್ಯಗಳಲ್ಲಿ ಕಂಡುಬರುತ್ತದೆ. ಸಾಧಾರಣ ರಸ್ತೆ ಸಂಪರ್ಕವೂ ಬಹಳ ಕಡಿಮೆ. ಹೆಚ್ಚು ದೂರವಿರುವ ಪ್ರಮುಖ ಪಟ್ಟಣಗಳ ಮಧ್ಯೆ

ವಾಯುಮಾರ್ಗ ಸಂಪರ್ಕಗಳಿವೆ. ಮಧ್ಯ ಆಫ್ರಿಕದ ಕೆಲವು ಕಡೆಗಳಲ್ಲೂ ಮರುಭೂಮಿ ವಲಯಗಳಲ್ಲೂ ಸಂಪರ್ಕ ಸಾಧನಗಳ ಕೊರತೆ ಇದೆ. ಸಹರದಲ್ಲೂ ಮಧ್ಯ ಆಫ್ರಿಕದಲ್ಲೂ ಸರಕು ಸಾಗಾಣಿಕೆಗೆ ಒಂಟೆಗಳನ್ನು ಉಪಯೋಗಿಸುತ್ತಾರೆ. ಅನೇಕ ಕಡೆಗಳಲ್ಲಿ ದೋಣಿ ಮುಖ್ಯ ಸಾಗಾಣಿಕೆಯ ಸಾಧನವಾಗಿದೆ. ನೈಲ್ ಮತ್ತು ಕಾಂಗೊ ಮುಂತಾದ ನದಿಗಳಲ್ಲಿ ಕೆಲವು ಕಡೆ ದೋಣಿಯ ಸಂಚಾರಕ್ಕೆ ಅನುಕೂಲತೆಯಿದೆ.

ಆಫ್ರಿಕದ ನಾಗರಿಕತೆ : 20ನೆಯ ಶತಮಾನದ ಆರ್ಥಿಕಾಭಿವೃದ್ಧಿ, ಎರಡು ಮಹಾಯುದ್ಧಗಳ ಪರಿಣಾಮ ಮತ್ತು ಮಹತ್ತರ ರಾಜಕೀಯ ಬದಲಾವಣೆಗಳಿಂದ ಆಫ್ರಿಕದ ನಾಗರಿಕತೆ ಬದಲಾಗಿದೆ. ಅನೇಕ ಮಹಾನಗರಗಳು ಆಧುನಿಕ ರೀತಿಯಲ್ಲಿ ಬೆಳೆಯುತ್ತಿವೆ. ಗ್ರಾಮಾಂತರ ಪ್ರದೇಶವನ್ನು ಕಡೆಗಣಿಸಿ ಅನೇಕ ಹಳ್ಳಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣದ ಕಡೆಗೆ ಧಾವಿಸುತ್ತಿದ್ದಾರೆ. ಈ ಖಂಡದಲ್ಲಿ ಈಚೆಗೆ ರಾಷ್ಟ್ರೀಯ ಮನೋಭಾವ ಎಲ್ಲೆಡೆಗಳಲ್ಲೂ ಉಕ್ಕೇರುತ್ತಿದೆ. ಪರಿಣಾಮವಾಗಿ ಎಲ್ಲ ರಾಜ್ಯಗಳೂ ಸ್ವಯಮಾಧಿಕಾರ ಪಡೆದಿವೆ.

ಖಂಡದ ನಾಗರಿಕತೆಯಲ್ಲಿ ಮಹತ್ತರ ಏರುಪೇರುಗಳನ್ನು ಗುರುತಿಸಬಹುದು. ಈಜಿಪ್ಟ್ ಭವ್ಯ ಸಂಸ್ಕೃತಿಗೆ ಹೆಸರಾಗಿದ್ದು, ನವ ನಾಗರಿಕತೆಯಲ್ಲೂ ಹಿಂದುಳಿದಿಲ್ಲ. ಆದರೆ ಪೂರ್ವ ಆಫ್ರಿಕದ ಕೆಲವು ರಾಷ್ಟ್ರಗಳಲ್ಲಿ ಏನೂ ಬದಲಾವಣೆಗಳಾಗಿಲ್ಲ. ಬಡತನ, ಅನಾರೋಗ್ಯ, ಅನಕ್ಷರತೆ, ಎಲ್ಲೆಡೆ ಮನೆಮಾಡಿಕೊಂಡಿವೆ. ಮಂತ್ರ, ಮಾಟ, ಬಹುಪತ್ನಿತ್ವ ಮುಂತಾದ ಪದ್ಧತಿಗಳು ಇಂದಿಗೂ ಬಳಕೆಯಲ್ಲಿವೆ.

ಇತ್ತೀಚೆಗೆ ಪಾಶ್ಚಾತ್ಯ ಸಂಸ್ಕೃತಿಯ ಪರಿಣಾಮವಾಗಿ ಆದ ಮಹತ್ತರ ಬದಲಾವಣೆಗಳು ಇಲ್ಲೂ ಕಂಡುಬರುತ್ತಿವೆ. ಆಫ್ರಿಕ, ಅನೇಕ ಅಪೂರ್ವ ಅವಶ್ಯ ವಸ್ತುಗಳ ಕಚ್ಚಾಪದಾರ್ಥಗಳ ಕೋಟೆಯಾಗಿದೆ. ಅನೇಕ ಪಾಶ್ಚಾತ್ಯರು ಈ ಹಿಂದುಳಿದ ಜನಾಂಗ ಮತ್ತು ರಾಷ್ಟ್ರಗಳಿಗೆ ಸಹಾಯ ಮಾಡಲು ತವಕಿಸುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಗಣನೀಯವಾದ ಬದಲಾವಣೆಗಳಾಗಿವೆ. (ಎಸ್.ಎಲ್.ಎಂ.)

**ಆಫ್ರಿಕದ ಜನಾಂಗಗಳು:** ಆಫ್ರಿಕದ ಮೂಲವಾಸಿಗಳು. ಜನಾಂಗಗಳ ಅಧ್ಯಯನ ದೃಷ್ಟಿಯಿಂದ ಆಫ್ರಿಕವನ್ನು ಸಹರ ಮರುಭೂಮಿಯ ಉತ್ತರ ಮತ್ತು ದಕ್ಷಿಣ ಎಂಬ ಎರಡು ವಲಯಗಳಾಗಿ ವಿಂಗಡಿಸಬಹುದು. ಇಲ್ಲಿರುವ ಜನಾಂಗಗಳಲ್ಲಿ ಅತಿ ಮುಖ್ಯವಾದುವು ಎರಡು: ನೀಗ್ರೊ ಮತ್ತು ಕಾಕಸಾಯಿಡ್. ಈ ಎರಡು ಜನಾಂಗಗಳನ್ನು ಸಹರ ಮರುಭೂಮಿ ಪ್ರತ್ಯೇಕಿಸಿದ್ದರೂ ಎರಡು ಜನಾಂಗಗಳೂ ಅನೇಕ ವಿಧವಾದ ಸಂಪರ್ಕಗಳಿಂದ ಒಂದರ ಮೇಲೊಂದು ಪ್ರಭಾವ ಬೀರಿವೆ.

ಮರುಭೂಮಿಯ ದಕ್ಷಿಣದಲ್ಲಿ ವಾಸಿಸುವ ನೀಗ್ರೊಗಳ ಚರ್ಮ ಮತ್ತು ಕಣ್ಣು ಕಪ್ಪು. ಗುಂಗುರು ಕೂದಲು, ಗೆಡ್ಡೆಮೂಗು, ಉದ್ದನೆಯ ತಲೆ, ಚಾಚುದವಡೆ, ಮಧ್ಯಮ ವರ್ಗದ ಎತ್ತರ ಮುಂತಾದವು ಅವರ ಇತರ ಲಕ್ಷಣಗಳು. ಭಾಷಾ ದೃಷ್ಟಿಯಿಂದ ನಿಗ್ರೋಗಳನ್ನು ಬಂಟು ಮತ್ತು ಸೂಡಾನಿಗಳು ಎಂದು ವಿಭಾಗಿಸಬಹುದು. ಬಂಟು ಭಾಷೆಯಾಡುವವರು ನೀಗ್ರೊ ಆಫ್ರಿಕದ ಮೂರನೇ ಎರಡು ಭಾಗ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ. ಇವರನ್ನು ಉಗಾಂಡ, ಟ್ಯಾಂಗನೀಕ, ಜಿಂಬಾಬ್ವೆ, ಉತ್ತರ ಮೊಜಾಂಬಿಕ್ ಪ್ರದೇಶಗಳ ಪೂರ್ವಬಂಟು ಜನ ಎಂದೂ ಅಂಗೋಲ, ಬೆಲ್ಜಿಯನ್ ಕಾಂಗೊ, ಫ್ರೆಂಚ್ ಈಕ್ವೆಟೋರಿಯಲ್ ಆಫ್ರಿಕ ಪ್ರದೇಶಗಳ ಪಶ್ಚಿಮ ಬಂಟು ಜನ ಎಂದು, ಜಾಂಬೆಸಿ ನದಿಯ ಕೆಳ ತೀರ ಪ್ರದೇಶಗಳ ದಕ್ಷಿಣ ಬಂಟು ಜನ ಎಂದೂ ಮೂರು ಭಾಗಗಳಾಗಿ ವಿಂಗಡಿಸಬಹುದು. ಸಂಸ್ಕೃತಿಯ ದೃಷ್ಟಿಯಿಂದ ನಿಗ್ರೋಗಳನ್ನು ಐದು ಭಾಗಗಳಾಗಿ ವಿಂಗಡಿಸಬಹುದು. ಪೂರ್ವದ ಪಶುಪಾಲನಾ ಕ್ಷೇತ್ರ, ಕಾಂಗೊ, ಗಿನಿತೀರ ಪ್ರದೇಶ, ಪಶ್ಚಿಮ ಸೂಡಾನ್ ಮತ್ತು ಪೂರ್ವ ಸೂಡಾನ್ ಪೂರ್ವದ ಪಶುಪಾಲನಾ ಕ್ಷೇತ್ರದಲ್ಲಿ ವಿಶೇಷವಾಗಿ ಪಶುಪಾಲನೆಯೇ ಮುಖ್ಯ ವೃತ್ತಿ. ಅಲ್ಲಿ ವ್ಯವಸ್ಥಿತ ಸಣ್ಣ ರಾಜ್ಯಗಳು ಕಡಿಮೆ. ಕಾಂಗೊ ಮತ್ತು ಗಿನಿ ತೀರ ಪ್ರದೇಶಗಳ ಸಂಸ್ಕೃತಿಯಲ್ಲಿ ಸುವ್ಯವಸ್ಥಿತವಾದ ಮತ್ತು ಬಲಯುತವಾದ ರಾಜ್ಯಗಳು ವಿಶೇಷವಾಗಿವೆ. ಅದರ ಜೊತೆಗೆ ನಗರೀಕರಣ, ಸಂಸ್ಕೃತಿ, ಧಾರ್ಮಿಕ ಮತ್ತು ಮತೀಯ ಆಡಳಿತ ವ್ಯವಸ್ಥೆ, ಗುಪ್ತ ಧಾರ್ಮಿಕ ಸಂಘಗಳು, ಶಿಲ್ಪ ವರ್ಣಚಿತ್ರ ಕಲೆಗಳು ಮುಂತಾದವನ್ನು ನೋಡಬಹುದು. ಸೂಡಾನಿನಲ್ಲಿ ಮುಸ್ಲಿಮರ ಪ್ರಭಾವವನ್ನು ವಿಶೇಷವಾಗಿ ಕಾಣಬಹುದು. ಆದರೆ ಇದು ಕೆಲವು ಮುಖ್ಯ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದು, ಹಳ್ಳಿಗಳಲ್ಲಿ ಅವರ ಮುಂಚಿನ ಸಂಸ್ಕೃತಿಯೇ ಉಳಿದುಬಂದಿದೆ. ಪಿತೃ ದೇವತಾಪೂಜೆ, ಮಡಕೆಗಳನ್ನು ಮಾಡುವುದು, ಕಬ್ಬಿಣದ ಕೆಲಸ, ವ್ಯವಸಾಯ ಇವರ ಮುಖ್ಯ ಲಕ್ಷಣಗಳು. ಇಲ್ಲಿ ಪಶುಪಾಲನೆ ಬಹಳ ಕಡಿಮೆ. ನಾಯಿ, ಕುರಿ, ಹಂದಿ, ಕೋಳಿಗಳೇ ಇವರ ಸಾಕು ಪ್ರಾಣಿಗಳು. ಸೂಡಾನಿನ ಸ್ಟೆಪ್ಪಿಸ್ ಪ್ರದೇಶಗಳಲ್ಲಿ ಪಶುಪಾಲನೆಯೇ ಮುಖ್ಯ ವೃತ್ತಿ.

ಸಹರ ಮರುಭೂಮಿಯ ದಕ್ಷಿಣದಲ್ಲಿ ನೀಗ್ರೊಗಳಿಗಿಂತ ಸ್ವಲ್ಪ ಭಿನ್ನವಾದ ಹಾಟೆನ್‌ಟೊ, ಪಿಗ್ಮಿ ಮತ್ತು ಬುಶ್ಮೆನ್ ಜನಾಂಗದವರು ವಾಸಿಸುತ್ತಾರೆ. ಇವರು ನೀಗ್ರೊಗಳಂತೆಯೇ ಕಂಡರೂ ಅವರಿಗಿಂತ ಭಿನ್ನವಾದ ಭಾಷೆ ಮತ್ತು ಲಕ್ಷಣಗಳನ್ನು ಹೊಂದಿದ್ದಾರೆ. ಇವರನ್ನು ನೀಗ್ರಾಯಿಡ್ ಎಂದು ಕರೆಯುತ್ತಾರೆ. ಕಲಹರಿ ಮರುಭೂಮಿ ಮತ್ತು ಕಾಂಗೊ ಪ್ರದೇಶಗಳ ದುರ್ಗಮವಾದ ಒಳನಾಡಿನಲ್ಲಿ ಇವರು ವಾಸಿಸುತ್ತಾರೆ. ಬಹುಶಃ ಇವರು ಆಫ್ರಿಕದ ಮೂಲನಿವಾಸಿಗಳಾಗಿದ್ದು, ನೀಗ್ರೊಗಳ ದಾಳಿಯಿಂದ ಒಳನಾಡಿನಲ್ಲಿ ಹೋಗಿ ನೆಲೆಸಿದವರಿರಬೇಕೆಂದು ಹೇಳಬಹುದು.

ಪಿಗ್ಮಿಗಳು

ಆಫ್ರಿಕದಲ್ಲಿ ವಾಸಮಾಡುವ ನೀಗ್ರೊ ಅಥವಾ ನೀಗ್ರಾಯಿಡ್ ಜನಾಂಗದಲ್ಲಿ ಅನೇಕ ಪ್ರಭೇದಗಳಿವೆ. ನೀಗ್ರೊಗಳಿಗಿರುವ ಮುಖ್ಯ ಲಕ್ಷಣಗಳೇ ಇವರಲ್ಲೂ ಇದ್ದರೂ ಸಾಂಸ್ಕೃತಿಕ ಮತ್ತು ಭಾಷಾಭೇದಗಳನ್ನು ಈ ವಿವಿಧ ಜನಾಂಗಗಳಲ್ಲಿ ಕಾಣಬಹುದು.

ಹೋಟೆಂಟೋ ಎಂಬ ಜನಾಂಗದವರು ನೈಋತ್ಯ ಆಫ್ರಿಕದಲ್ಲಿ ವಿಶೇಷವಾಗಿ ವಾಸಿಸುತ್ತಾರೆ. ಇವರಿಗೂ ಬುಷ್‌ಮನ್ ಜನಗಳಿಗೂ ವಿಶೇಷ ಹೋಲಿಕೆಗಳಿದ್ದರೂ, ಸಾಂಸ್ಕೃತಿಕ ಭೇದಗಳು ಬೇಕಾದಷ್ಟಿವೆ. ಪಶುಪಾಲನೆ, ಬೇಟೆ, ಮೀನುಗಾರಿಕೆ ಇವರ ಮುಖ್ಯ ಕಸಬುಗಳು.

ನೀಗ್ರಿಟೋ ಅಥವಾ ನೆಗ್ರಿಲ್ಲಾ ಎಂದು ಕರೆಯಲ್ಪಡುವ ಕುಳ್ಳರು ಬೆಲ್ಜಿಯಮ್, ಕಾಂಗೊ ಮತ್ತು ಈಕ್ವೆಟೋರಿಯಲ್ ಆಫ್ರಿಕದ ಕೆಲವು ಭಾಗಗಳಲ್ಲಿ ವಿಶೇಷವಾಗಿದ್ದಾರೆ. ಸಾಮಾನ್ಯವಾಗಿ ಇವರು ನೀಗ್ರೊ ಬಂಟುಗಳ ಗುಲಾಮರು. ಬಂಟು ಭಾಷೆಯನ್ನೇ ಆಡುತ್ತಾರೆ. ಮೀನುಗಾರಿಕೆ, ಮತ್ತು ಬೇಟೆಯಾಡುವುದು ಇವರ ಮುಖ್ಯ ಕಸಬು. ಒಟ್ಟಿನಲ್ಲಿ ಬಹಳ ಹಿಂದುಳಿದವರು.

ಬುಷ್‌ಮನ್ ಎಂದು ಪ್ರಸಿದ್ಧರಾಗಿರುವ ಜನಾಂಗದವರು ಕಲಹರಿ ಮರುಭೂಮಿ, ಬಿಚುವಾನ ಲ್ಯಾಂಡ್, ದಕ್ಷಿಣ ಅಂಗೋಲಗಳಲ್ಲಿ ವಿಶೇಷವಾಗಿದ್ದಾರೆ. ಈ ಭಾಗದ ಅತ್ಯಂತ ಪುರಾತನ ಜನಾಂಗದವರೇ ಇವರು. ಇವರು ಬಂಟುಗಳಿಗಿಂತ ಭಾಷೆ, ರೂಪ, ಸಂಸ್ಕೃತಿಯಲ್ಲಿ ಭಿನ್ನರು. ಹಳದಿಯ ಬಣ್ಣದ ಸುಕ್ಕುಗಟ್ಟಿದ ಚರ್ಮದ, ಸುಮಾರಾಗಿ ಕುಳ್ಳರಾಗಿರುವ ಇವರು ಮುಖ್ಯವಾಗಿ ಬೇಟೆಯಿಂದ ಜೀವಿಸುತ್ತಾರೆ. ಅಸಂಸ್ಕೃತರಾದರೂ ಇವರು ಗುಹೆಗಳ ಕಲ್ಲಿನಲ್ಲಿ ಮಾಡಿರುವ ವರ್ಣಚಿತ್ರಗಳು ಪ್ರಪಂಚದಲ್ಲೇ ಖ್ಯಾತಿ ಪಡೆದಿವೆ.

ನೀಗ್ರೊಗಳಿಗಿಂತ ಪೂರ್ಣವಾಗಿ ಭಿನ್ನರಾದ ಜನರು ಉತ್ತರ ಆಫ್ರಿಕದಲ್ಲಿ ವಾಸಿಸುತ್ತಾರೆ. ಉತ್ತರ ಆಫ್ರಿಕದ ಈ ಜನಗಳು ಸಂಸ್ಕೃತಿ, ಭಾಷೆ ಮತ್ತು ಶರೀರ ಲಕ್ಷಣಗಳಲ್ಲಿ ಯುರೋಪ್ ಮತ್ತು ಮಧ್ಯಪ್ರಾಚ್ಯದ ಜನಗಳನ್ನು ಹೋಲುತ್ತಾರೆ. ಮೆಡಿಟರೇನಿಯನ್ ಕಾಕಸಾಯಿಡ್ ಎಂದು ಕರೆಯಲ್ಪಡುವ ಈ ಜನರು ಕುಳ್ಳರು. ಕರಿಯ ಕೂದಲುಳ್ಳವರು ಕಪ್ಪುಬಣ್ಣದ ಕಣ್ಣುಗಳುಳ್ಳವರು ಮತ್ತು ತಿಳಿಯ ಬಣ್ಣದವರು. ಸ್ಥಳೀಯ ಆದಿವಾಸಿಗಳೊಡನೆ ಮತ್ತು ಅರಬ್ಬರೊಡನೆ ಉಂಟಾದ ಸಂಪರ್ಕಗಳಿಂದ, ಉತ್ತರ ಆಫ್ರಿಕ ಜನರನ್ನು ಹೆಮೈಟ್ ಮತ್ತು ಸೈಮೈಟ್ ಎಂದು ವಿಭಾಗಿಸಿದ್ದಾರೆ. ಹೇಮೈಟಿಕ್ ಜನಾಂಗದವರು ಉತ್ತರ ಆಫ್ರಿಕ ಪಶ್ಚಿಮ ಸಹರಾದಿಂದ ಇಥಿಯೋಪಿಯದವರೆಗೂ ವಾಸಿಸುತ್ತಾರೆ. ಅವರನ್ನು ಭಾಷಾದೃಷ್ಟಿಯಿಂದ ಬರ್ಬರರು ಮತ್ತು ಕುಷಿಟಗಳು ಎಂದು ವಿಭಾಗಿಸಬಹುದು. ಬರ್ಬರರು ನೀಗ್ರೊ ಮಿಶ್ರಣ ಹೊಂದಿದ ಕಾಕಸಾಯಿಡ್ ಜನಗಳು. ಇಸ್ಲಾಂ, ಯುರೋಪ್ ಮತ್ತು ಆದಿವಾಸಿಗಳಿಂದ ಪ್ರಭಾವಿತರಾದ ಇವರಲ್ಲಿ ಎಲ್ಲ ಬಗೆಯ ಸಂಸ್ಕೃತಿಯ ಲಕ್ಷಣಗಳೂ ಕಾಣಬರುತ್ತವೆ. ಬರ್ಬರರಲ್ಲಿ ಮುಖ್ಯರಾದವರು ಕಬೈಲ್, ಸಿವಾನ್, ಟೆಬು ಮತ್ತು ಟುವಾರೆ.

ಕುಷಿಟಿಕ್ ಭಾಷೆಯನ್ನಾಡುವ ಜನಾಂಗಗಳಲ್ಲಿ ಬೇಜ, ಡಂಕಿಲ್, ಗಲ್ಲ, ಸೊಮಾಲಿ ಮುಖ್ಯರಾದವರು. ಇವರು ಇಥಿಯೋಪಿಯ, ಸೊಮಾಲಿ ಲ್ಯಾಂಡ್, ಉತ್ತರ ಕೆನ್ಯ, ಆಗ್ನೇಯ ಈಜಿಪ್ಟ್ ಮತ್ತು ಆಗ್ನೇಯ ಆಂಗ್ಲೊ ಈಜಿಪ್ಷಿಯನ್ ಸೂಡಾನ್‍ಗಳಲ್ಲಿ ವಾಸಿಸುತ್ತಾರೆ.

ಸೆಮಿಟಿಕ್ ಭಾಷೆಯನ್ನಾಡುವ ಆಫ್ರಿಕದ ಜನರು ಇಥಿಯೋಪಿಯನ್ನರು ಮತ್ತು ಅರಬ್ಬೀ ವಲಸೆಗಾರರು. ಈ ವಲಸೆಗಾರರಿಗೆ ಕಲಾಬಿಷ್ ಎಂದೂ ಹೆಸರು. ಇವರು ಸೂಡಾನಿನಲ್ಲಿ ಅತ್ಯಂತ ಪ್ರಭಾವಿತ ಜನಾಂಗ. ಇವರು ಇಸ್ಲಾಂ ಮತಾವಲಂಬಿಗಳು. (ಎ.ವಿ.ಎನ್.)

**ಆಫ್ರಿಕದ ಭಾಷೆಗಳು:** ಪ್ರಪಂಚದ ಸುಮಾರು ಎರಡು ಸಾವಿರದ ಎಂಟುನೂರು ಭಾಷೆಗಳಲ್ಲಿ ಆಫ್ರಿಕ ಖಂಡವೊಂದರಲ್ಲೆ ಬಳಕೆಯಲ್ಲಿರುವ ಭಾಷೆಗಳ ಸಂಖ್ಯೆ ಸಾವಿರಕ್ಕೂ ಹೆಚ್ಚು. ಇದರಿಂದ ಅಲ್ಲಿಯ ಭಾಷಾ ವೈವಿಧ್ಯ ಎದ್ದು ಕಾಣುತ್ತದೆ. ನೈಜೀರಿಯದ ಸ್ವಾಜಿ ಪ್ರಸ್ಥಭೂಮಿಯಂಥ ಕೆಲವು ಚಿಕ್ಕ ಪ್ರದೇಶಗಳಲ್ಲಿ ಅನೇಕ ಬಗೆಯ ಭಾಷೆಗಳು ಇವೆ. ಅನೇಕ ಲಕ್ಷ ಸಂಖ್ಯೆಯ ಜನ ಆಡುವ ದೊಡ್ಡ ಭಾಷೆಗಳೂ ಆಫ್ರಿಕದಲ್ಲುಂಟು. ಉದಾಹರಣೆಗೆ ಪೂರ್ವ ಆಫ್ರಿಕದ ಸ್ವಾಹಿಲಿ (40 ದಶಲಕ್ಷ), ಪಶ್ಚಿಮ ಆಫ್ರಿಕದ ಹೌಸ (50 ದಶಲಕ್ಷಕ್ಕೂ ಹೆಚ್ಚು), ಉತ್ತರ ಆಫ್ರಿಕದ ಅರಬ್ಬೀ (ಅರೇಬಿಯ, ಇರಾಕ್, ಪ್ಯಾಲಸ್ಟೀನ್ ಮತ್ತು ಸಿರಿಯಗಳನ್ನು ಸೇರಿಸಿಕೊಂಡರೆ 100 ದಶಲಕ್ಷಕ್ಕೂ ಹೆಚ್ಚು).

ಇಲ್ಲಿನ ಭಾಷೆಗಳ ಸಂಖ್ಯೆಯೂ ನಿರ್ಧಾರವಾಗಿಲ್ಲ. ಆ ಭಾಷೆಗಳ ವರ್ಗೀಕರಣವೂ ಸಮರ್ಪಕವಾಗಿಲ್ಲ. ಸ್ಥೂಲವಾಗಿ ನೋಡುವುದಾದರೆ ಆಫ್ರಿಕದ ಭಾಷೆಗಳನ್ನು ಐದು ವಂಶಗಳಾಗಿ ವಿಂಗಡಿಸಬಹುದು: 1. ಹೆಮಿಟೊ-ಸೆಮಿಟಿಕ್ : ಹೆಚ್ಚು ಕಡಿಮೆ ಆಫ್ರಿಕದ ಉತ್ತರದ ಉದ್ದಗಲದಲ್ಲಿ; 2. ಮಧ್ಯ ಸಹರನ್ : ಮಧ್ಯ ಆಫ್ರಿಕದ ಚಾಡ್ ಪ್ರದೇಶದಲ್ಲಿ; 3. ನೈಜರ್ ಕಾಂಗೊ : ಸಹರ ಮರುಭೂಮಿ ಹಾಗೂ ಇಡೀ ದಕ್ಷಿಣ ಆಫ್ರಿಕ ಪ್ರದೇಶದಲ್ಲಿ; 4. ಮ್ಯಾಕ್ರೊ ಸುಡಾನಿಕ್ : ಸೂಡಾನ್ ಪ್ರದೇಶದಲ್ಲಿ; 5. ಕ್ಲಿಕ್ : ದಕ್ಷಿಣ ಆಫ್ರಿಕದ ಪಶ್ಚಿಮ ತೀರದಲ್ಲಿ.

ಈ ಒಂದೊಂದು ವಂಶದಲ್ಲೂ ಉಪವರ್ಗಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಆಫ್ರಿಕದ ಭಾಷೆಗಳ ಜೊತೆಗೆ ವಸಾಹತು ಭಾಷೆಗಳನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ದಕ್ಷಿಣ ಆಫ್ರಿಕದಲ್ಲಿ ಇಂಗ್ಲಿಷಿನ ಸ್ಥಾನ ಬಹಳ ಭದ್ರವಾದುದು. ಇಲ್ಲಿ ಇದು ಮತ್ತು ಆಫ್ರಿಕಾನ್ಸ್ ಭಾಷೆ (ಡಚ್ ಭಾಷೆಯ ರೂಪಾಂತರ) ರಾಷ್ಟ್ರ ಭಾಷೆಗಳಾಗಿವೆ. ಜೊತೆಗೆ ಇಂಗ್ಲಿಷ್ ಘಾನ, ಕೀನ್ಯ, ಲಿಬೀರಿಯ, ನ್ಯಾಸಾಲ್ಯಾಂಡ್, ಟಾಂಗನೀಕ ಮುಂತಾದ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆಲ್ಜೀರಿಯ, ಕ್ಯಾಮರೂನ್ಸ್, ಟ್ಯುನೀಷಿಯ ಮುಂತಾದ ದೇಶಗಳಲ್ಲಿ ಫ್ರೆಂಚ್ ಬಳಕೆಯಲ್ಲಿದೆ. ಲಿಬಿಯ, ಇಥಿಯೋಪಿಯ ಮುಂತಾದ ಕಡೆಗಳಲ್ಲಿ ಇಟಾಲಿಯನ್ ಭಾಷೆ ಬಳಕೆಯಲ್ಲಿದೆ. ಅಂಗೋಲ, ಮೊಸಾಂಬಿಕ್‍ಗಳಲ್ಲಿ ಪೋರ್ಚುಗೀಸ್ ಕಾಣಿಸಿಕೊಳ್ಳುತ್ತದೆ. ಮೊರಾಕೊ, ಸ್ಪ್ಯಾನಿಷ್ ಸಹರ, ಗಿನಿಗಳಲ್ಲಿ ಸ್ಪ್ಯಾನಿಷ್ ಭಾಷೆಯನ್ನಾಡುವವರಿದ್ದಾರೆ. ಒಂದನೆಯ ಮಹಾಯುದ್ಧಕ್ಕಿಂತ ಮುಂಚೆ ಜರ್ಮನಿಯ ವಸಾಹತುಗಳಾಗಿದ್ದ ಕ್ಯಾಮರೂನ್ಸ್, ಟೋಗೋ, ನ್ಯಾಸಾಲ್ಯಾಂಡ್ ಮುಂತಾದ ಕಡೆಗಳಲ್ಲಿ ವಿರಳವಾಗಿ ಜರ್ಮನ್ ಭಾಷೆ ಕಂಡುಬರುತ್ತದೆ. (ಎಂ.ಸಿ.)

**ಆಫ್ರಿಕದ ಭೂ ಇತಿಹಾಸ:** ಖಂಡದ ಉತ್ತರ ತಗ್ಗುಪ್ರದೇಶವನ್ನು ಗಣನೆಗೆ ತೆಗೆದು ಕೊಳ್ಳದಿದ್ದರೆ ಇಡೀ ಖಂಡವನ್ನೇ ಬೃಹತ್ ಪ್ರಸ್ಥಭೂಮಿ ಎನ್ನಬಹುದು. ಇದು ಭೂಚರಿತ್ರೆಯಲ್ಲಿ-ಪ್ರೀಕೇಂಬ್ರಿಯನ್ ಯುಗದಿಂದ ಇಂದಿನವರೆಗೂ ಸಮುದ್ರಗಳಿಂದ ಆವೃತವಾಗಿದ್ದು ಶಾಶ್ವತ ಖಂಡವೆನಿಸಿದೆ. ಈ ಭೂಖಂಡದಲ್ಲಿ ಅತಿ ಪ್ರಾಚೀನ ಆರ್ಕೀಯನ್ ಶಿಲೆಗಳಿಂದ ಹಿಡಿದು ನವೀನ ಯುಗದವರೆಗಿನ ಶಿಲಾಪ್ರಸ್ತರಗಳನ್ನು ನೋಡಬಹುದು. ಅನೇಕ ಭಾಗಗಳಲ್ಲಿ ಆರ್ಕೀಯನ್ ಅಥವಾ ಪ್ರೀಕೇಂಬ್ರಿಯನ್ ಯುಗದ ಶಿಲೆಗಳ ಮೇಲೆ ತೀವ್ರಗತಿಯ ರೂಪಾಂತರಕ್ಕೊಳಗಾದ ಶಿಲಾ ಸಮುದಾಯಗಳನ್ನೂ ಅವುಗಳ ನಡುವೆ ಅಲ್ಲಲ್ಲೇ ಭೂಕಲ್ಪಗಳ ವಿವಿಧ ಯುಗಗಳಲ್ಲಿ ತಲೆದೋರಿದ ಗ್ರಾನೈಟ್ ಅಂತಸ್ಸರಣಗಳನ್ನೂ ಗುರುತಿಸಬಹುದು. ಅಲ್ಲದೆ ಇವುಗಳ ಒತ್ತಟ್ಟಿಗೆ ಸಮುದ್ರಸಂಪರ್ಕವಿಲ್ಲದ ಅಸಂಖ್ಯಾತ ಜಲಜಶಿಲಾಶ್ರೇಣಿಗಳೂ ಕಂಡುಬಂದಿವೆ. ಈ ಶ್ರೇಣಿಗಳ ಹಲಕೆಲವು ಶಿಲಾಪ್ರಸ್ತರಗಳ ಸಂಯೋಜನೆ, ತೀರಪ್ರದೇಶದ ವಿನ್ಯಾಸ ಮತ್ತು ಈ ಶಿಲಾಪ್ರಸ್ತರಗಳಿಗೂ ಅಕ್ಕಪಕ್ಕದ ಭೂಖಂಡಗಳಾದ ದಕ್ಷಿಣ ಅಮೆರಿಕ, ಭಾರತ, ಆಸ್ಟ್ರೇಲಿಯ ಮತ್ತು ಅಂಟಾರ್ಕ್ಟಿಕಗಳಲ್ಲಿ ಹರಡಿರುವ ಪೇಲಿಯೊಜೋಯಿಕ್ ಮತ್ತು ಮೀಸೊಜೋಯಿಕ್ ಯುಗಗಳ ಶಿಲಾ ಸಮುದಾಯಗಳಿಗಿರುವ ಪರಸ್ಪರ ಹೋಲಿಕೆ - ಇವುಗಳ ಆಧಾರದ ಮೇಲೆ ಈಗ ದೂರ ದೂರ ಹರಡಿ ಬೇರೆಯಾಗಿರುವ ಈ ಭೂಖಂಡಗಳೆಲ್ಲವೂ ಕೂಡಿಕೊಂಡು ಭೂ ಇತಿಹಾಸದ ಪರ್ಮೊ-ಕಾರ್ಬಾನಿಫೆರಸ್ ಯುಗದ ತನಕ ಗೊಂಡ್ವಾನಲ್ಯಾಂಡ್ ಎಂಬ ಏಕ ಬೃಹತ್ ಭೂಖಂಡವಾಗಿತ್ತೆಂದು ವಿಜ್ಞಾನಿಗಳು ಊಹಿಸಿದ್ದಾರೆ. ಖಂಡದ ಇಂದಿನ ರೂಪುರೇಷೆ ಬಹುಶಃ ಕ್ರಿಟೇಷಯಸ್ ಆದಿಭಾಗದಲ್ಲಿ ಉಂಟಾಯಿತೆಂದು ನಿರ್ಧರಿಸಲಾಗಿದೆ.

ಖಂಡದ ಭೂ ಇತಿಹಾಸದಲ್ಲಿ ಹಲವಾರು ತೀವ್ರಗತಿಯ ಪರ್ವತಜನ್ಯ ಆಂದೋಳನಗಳೂ ಉಂಟಾಗಿವೆ. ಉತ್ತರದಲ್ಲಿನ ಅಟ್ಲಾಸ್ ಪರ್ವತ ಯುರೋಪಿನ ಪರ್ವತಗಳೊಡನೆ ಹೆಚ್ಚಿನ ಬಾಂಧವ್ಯವನ್ನು ಹೊಂದಿದ್ದು ಟರ್ಷಿಯರಿ ಯುಗದಲ್ಲಿ ಉದ್ಭವಿಸಿತು. ಆದರೆ ದಕ್ಷಿಣದ ಕೇಪ್ ಪರ್ವತಶ್ರೇಣಿ ಟ್ರಯಾಸಿಕ್ ಯುಗದಲ್ಲಿ ಮೈವೆತ್ತಿತು. ಸಹರ ಮರುಭೂಮಿಯ ಶಿಲೆಗಳಲ್ಲಿ ಪೇಲಿಯೊಜೋಯಿಕ್ ಯುಗದ ಮಡಿಕೆಗಳಿವೆ. ಅಲ್ಲದೆ ಹಲವು ಕಡೆ ಪ್ರೀಕೇಂಬ್ರಿಯನ್ ಯುಗದ ವಿವಿಧ ಹಂತಗಳಲ್ಲಿ ತಲೆದೋರಿದ ಶಿಲಾವಿನ್ಯಾಸಗಳನ್ನು ಗುರುತಿಸಬಹುದು.

ಅನೇಕ ಭಾಗಗಳಲ್ಲಿ ಬೃಹದಾಕಾರದ ತಗ್ಗುಗಳೂ, ಅವುಗಳ ನಡುವೆ ಅಷ್ಟೇ ದೊಡ್ಡದಾದ ಉಬ್ಬುಗಳೂ ಇವೆ. ಇವುಗಳ ರಚನೆ ಪ್ರೀಕೇಂಬ್ರಿಯನ್ ಯುಗದಲ್ಲಿ ಮೊದಲಾಗಿ ಇತ್ತೀಚಿನವರೆಗೂ ನಡೆದ ಆಧಾರಗಳಿವೆ. ಇವುಗಳಲ್ಲಿನ ಉತ್ತಮ ಉದಾಹರಣೆಗಳು- ಕಾಂಗೊ ತಗ್ಗು, ಕಲಹರಿ ತಗ್ಗು ಮತ್ತು ಚಾಡ್ ತಗ್ಗು, ಈ ತಗ್ಗು ಪ್ರದೇಶಗಳಲ್ಲಿ ಬಹುಮಟ್ಟಿಗೆ ಜಲಜ ಶಿಲಾಶ್ರೇಣಿಗಳನ್ನು ನೋಡಬಹುದು. ಆಫ್ರಿಕ ಖಂಡದ ಮತ್ತೊಂದು ವಿಶಿಷ್ಟ ರೀತಿಯ ಭೂವಿನ್ಯಾಸವೆಂದರೆ - ಭೂಕುಸಿತದಿಂದಾದ ಕಮರಿಗಳು. ಇವು ಉತ್ತರದಲ್ಲಿ ಜೋರ್ಡಾನಿನಲ್ಲಿ ಪ್ರಾರಂಭವಾಗಿ ದಕ್ಷಿಣದಲ್ಲಿ ಮೊಸಾಂಬಿಕ್‍ವರೆಗೂ ಹಬ್ಬಿವೆ. ಇವು ವಿವಿಧ ಭೂಯುಗಗಳಲ್ಲಿ ಉಂಟಾಗಿದ್ದರೂ ಇವುಗಳ ಮೇಲೆ ಮಧ್ಯ ಪ್ಲಿಸ್ಟೋಸೀನ್ ಭೂಯುಗದ ಮುದ್ರೆ ಅಚ್ಚಳಿಯದಂತಿದೆ. ಕೆಲವು ಕಮರಿಗಳ ಅಕ್ಕಪಕ್ಕದ ಭೂಪ್ರದೇಶ 3033.33 ಮೀ ಮೀರಿ ಎತ್ತರವಾಗಿದ್ದು, ಆಳವೂ ಅಷ್ಟೇ ತೀವ್ರಗತಿಯಲ್ಲಿ ಕಂಡುಬಂದಿವೆ. ಕಮರಿಗಳು ಬಹುಮಟ್ಟಿಗೆ ಭೂಭಾಗಗಳ ತುಯ್ತದಿಂದಾದುವೆಂದು ಊಹಿಸಲಾಗಿದೆ.

ಭೂಚರಿತ್ರೆಯುದ್ದಕ್ಕೂ ಖಂಡದಲ್ಲಿ ಅಗ್ನಿ ಪರ್ವತಗಳ ಚಟುವಟಿಕೆಯನ್ನು ಕಾಣಬಹುದು. ಇವುಗಳಿಂದ ಹೊರಬಂದ ಅಗ್ನಿಶಿಲಾ ಶ್ರೇಣಿಗಳಲ್ಲಿ ಕಾರೂ ಶಿಲಾಶ್ರೇಣಿ ಬಹು ಮುಖ್ಯವಾದದ್ದು. ಇದರ ಒಟ್ಟು ಮಂದ 8797 ಮೀ, ವಿಸ್ತೀರ್ಣ 8,000-1,50,000 ಘನ (ಕ್ಯೂಬಿಕ್) ಕಿಮೀ ಎಂದು ಅಂದಾಜು ಮಾಡಲಾಗಿದೆ. ಹೀಗೆಯೇ ಕಲ್ಬಿನಿಯ ಮತ್ತು ಹೋಪ್ ಟೌನ್ ಪ್ರದೇಶಗಳಲ್ಲಿ 12900 ಚ.ಕಿ.ಮೀ ವಿಸ್ತಾರವಾದ ಡಾಲರೈಟ್ ಹಾಳೆಗಳಿವೆ. ಅಲ್ಲದೆ ಕೀನ್ಯ ರಾಜ್ಯದ ಮಧ್ಯ ಟರ್ಷಿಯರಿ ಯುಗದ ಫೊನೊಲೈಟ್ ಲಾವಾ ಪ್ರಸ್ತರಗಳೂ ಬಹುಪ್ರಸಿದ್ಧಿ. ಇಷ್ಟೇ ಅಲ್ಲದೆ ಭೂಕಮರಿಗಳ ಅಕ್ಕಪಕ್ಕದ ಪ್ರದೇಶಗಳಲ್ಲೂ ಅಗ್ನಿಪರ್ವತಗಳ ಕಾರ್ಯಾಚರಣೆ ವ್ಯಕ್ತವಾಗಿದೆ. ಕೀನ್ಯ ಶಿಖರ, ಕಿಲಿಮಾಂಜಿರೊ ಶಿಖರ ಇತ್ಯಾದಿಗಳೆಲ್ಲವೂ ಲುಪ್ತ ಜ್ವಾಲಾಮುಖಿಗಳು. ಹೀಗೆಯೆ ಈಚಿನ ವರ್ಷಗಳಲ್ಲಿ (1931-40) ಟಾಂಜ಼ಾನಿಯದ ಲೆಂಗೈ, ಕಾಂಗೊನ ನ್ಯಾಮ್ಲಾಗಿರ ಮತ್ತು ನಿರಗೊಂಗೊ ಅಗ್ನಿಪರ್ವತಗಳನ್ನೂ ಉದಾಹರಿಸಬಹುದು. ಇವುಗಳ ಮೂಲಕ ಅಗಾಧ ಪ್ರಮಾಣದಲ್ಲಿ ಬೆಸಾಲ್ಟ್ ಲಾವಾ ಪ್ರವಾಹಗಳು ಹೊರಬಂದವು. ಉತ್ತರ ಆಫ್ರಿಕದ ಕ್ಯಾಮರೂನ್ ಎಮಿಕೌಸಿ ಮತ್ತು ಟಿಬೆಸ್ಟಿಗಳಲ್ಲೂ ಅಗ್ನಿಪರ್ವತಗಳ ಚಟುವಟಿಕೆಗಳಿಗೆ ಸಂಬಂಧಿಸಿದ ಕುರುಹುಗಳಿವೆ.

ಖಂಡದ ಪ್ರೀಕೇಂಬ್ರಿಯನ್ ಯುಗದ ಶಿಲೆಗಳಲ್ಲಿ ಜೀವ್ಯವಶೇಷಗಳಿಲ್ಲ. ಆದರೆ ವಿದ್ಯುತ್ ವಿಕಿರಣ ವಿಧಾನಗಳಿಂದ ಆ ಶಿಲೆಗಳ ಕೆಲವು ಖನಿಜಗಳ ವಯಸ್ಸನ್ನು ಅಳೆದು ನಿರ್ಧರಿಸಲಾಗಿದೆ. ಅಲ್ಲದೆ ಯುಗದಲ್ಲಿ ಏಳು ವಿವಿಧ ಹಂತಗಳನ್ನೂ ಗುರುತಿಸಲಾಗಿದೆ. ಶಿಲೆಗಳ ಅತ್ಯಂತ ಹೆಚ್ಚಿನ ವಯಸ್ಸು 3,000,000,000 ವರ್ಷಗಳು ಮತ್ತು ಕನಿಷ್ಠ ವಯಸ್ಸು 630,000,000 ವರ್ಷಗಳು.

ಆಫ್ರಿಕದ ಸುಮಾರು ಮೂರನೆಯ ಒಂದು ಭೂಪ್ರದೇಶ ಆರ್ಕೀಯನ್ ಯುಗದ ಪದರುಶಿಲೆಗಳಿಂದಲೂ ಗೀರುಶಿಲೆಗಳಿಂದಲೂ ಆವೃತವಾಗಿದೆ. ಇವುಗಳನ್ನು ಅನೇಕ ಕಡೆ ತೂರಿಕೊಂಡು ಭೂಯುಗದ ವಿವಿಧಕಾಲಗಳಲ್ಲಿ ಗ್ರಾನೈಟ್ ಹೊರಬಂದಿದೆ. ಶಿಲಾಸಮೂಹ ಅನೇಕ ಕಡೆ ವಿವಿಧ ರೀತಿಯಲ್ಲಿ ಸವೆದುಹೋಗಿದೆ. ಅಲ್ಲದೆ ಉತ್ತಮ ದರ್ಜೆಯ ಖನಿಜ ನಿಕ್ಷೇಪಗಳಿಗೆ ತವರೆನಿಸಿದೆ. ಉದಾ. 9100 ಮೀ ಮಂದವಾದ ಬುಲವಾಯನ್ ಶಿಲಾಶ್ರೇಣಿ ಚಿನ್ನದ ನಿಕ್ಷೇಪಗಳಿಗೆ ಹೆಸರುವಾಸಿ. ಅಲ್ಲದೆ ಈಜಿಪ್ಟ್, ಸೂಡಾನ್, ಘಾನ, ನೈಜೀರಿಯ, ಕ್ಯಾಮರೂನ್ ಪ್ರಾಂತ್ಯಗಳಲ್ಲಿ ಹರಡಿರುವ ಆರ್ಕೀಯನ್ ಶಿಲೆಗಳಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಸತು, ಕ್ರೋಮೈಟ್, ಬೆರಿಲ್, ಕಲ್ನಾರು, ಅಭ್ರಕ ಮತ್ತು ಇತರ ಅಪೂರ್ವ ಖನಿಜಗಳಿವೆ.

ಉತ್ತಮ ಶಿಲಾಶ್ರೇಣಿಗಳಿರುವ ಕಡೆ ಅದನ್ನು ವಿಶೇಷವಾಗಿ ಅಧ್ಯಯನಮಾಡಿ ವಯೋಗುಣಕ್ಕನುಸಾರವಾಗಿ ವರ್ಗೀಕರಿಸಲಾಗಿದೆ. ಉದಾ. ಪೂರ್ವ ಆಫ್ರಿಕದ ಆರ್ಕೀಯನ್ ಶಿಲಾಸಮೂಹವನ್ನು ಬೇಸ್‍ಮೆಂಟ್, ನ್ಯಾನ್‍ಜಿಯನ್ ಮತ್ತು ಕವಿರಾಂಡಿಯನ್ ಎಂದು ವಿಭಜಿಸಲಾಗಿದೆ. ಹೀಗೆಯೇ ದಕ್ಷಿಣ ಆಫ್ರಿಕದ ವಿಟ್‍ವಾಟರ್ಸ್ ರ್‍ಯಾಂಡ್ ಮತ್ತು ಟ್ರಾನ್ಸ್‍ವಾಲ್ ಪ್ರದೇಶಗಳ ಆದಿ ಪ್ರೀಕೇಂಬ್ರಿಯನ್ ಶಿಲೆಗಳನ್ನು ಹಿರಿಯ ಮತ್ತು ಕಿರಿಯ ಉಪವರ್ಗಗಳಾಗಿ ವಿಂಗಡಿಸಲಾಗಿದೆ. ಹಿರಿಯ ಶ್ರೇಣಿಯಲ್ಲಿ ಪ್ರಪಂಚದಲ್ಲೇ ಅತಿ ಶ್ರೇಷ್ಠ ದರ್ಜೆಯ ಚಿನ್ನದ ಅದುರಿನ ನಿಕ್ಷೇಪಗಳೂ ಕಿರಿಯ ಶ್ರೇಣಿಯಲ್ಲಿ ಬುಷ್‍ವೆಲ್ಡ್ ಶಿಲಾಸಮೂಹವೂ ಇವೆ. ಈ ಶಿಲಾಸಮೂಹದಲ್ಲಿ ದೊರೆವ ಕ್ರೋಮೈಟ್, ನಿಕ್ಕಲ್ ಮತ್ತು ಪ್ಲಾಟಿನಂ ಅದಿರುಗಳು ಲೋಕ ಪ್ರಸಿದ್ಧ.

ಆದಿ ಪೇಲಿಯೊಜೋಯಿಕ್ ಕಲ್ಪದ ಶಿಲೆಗಳು ಇಡೀ ಆಫ್ರಿಕದಲ್ಲೆ ಅಪೂರ್ವ. ಉತ್ತರದ ಮೊರಾಕೊದಲ್ಲಿ ಕೇಂಬ್ರಿಯನ್ ಶಿಲಾ ಪ್ರಸ್ತರಗಳೂ ಸಹರ ಪ್ರದೇಶದಲ್ಲಿ ಆರ್ಡೊವೀಶಿಯನ್ ಪ್ರಸ್ತರಗಳೂ ಇವೆ. ಅಲ್ಲದೆ ಅಲ್ಲಲ್ಲಿ ಸೈಲೂರಿಯನ್ ಯುಗದ

ಶಿಲೆಗಳೂ ಹರಡಿವೆ. ಇವುಗಳಲ್ಲಿ ಬ್ರೇಕಿಯೋಪಾಡ್‌ನ ಚಿಪ್ಪುಗಳೂ ಮತ್ತು ಕ್ರೈನಾಡ್ ಅವಶೇಷಗಳು ಹುದುಗಿವೆ. ಇದೇ ಯುಗದ ಕೆಂಪು ಮರಳು ಶಿಲೆ ಮತ್ತು ಪೆಂಟೆಶಿಲೆ ದಕ್ಷಿಣ ಆಫ್ರಿಕ, ಕಾಂಗೊ ಮತ್ತು ಟಾಂಜಾನಿಯ ಪ್ರಾಂತ್ಯಗಳುದ್ದಕ್ಕೂ ಹರಡಿವೆ. ಟಾಂಜೇನಿಯದ ಜಲಜ ಶಿಲೆಗಳಲ್ಲಿ ಮೀನು, ಶಲ್ಕಗಳು, ಏಡಿ, ಸ್ಪಂಜು ಮತ್ತು ರೇಡಿಯೋಲೇರಿಯ ಮುಂತಾದ ಅಸಂಖ್ಯಾತ ಜೀವ್ಯವಶೇಷಗಳಿವೆ. ಈ ಶಿಲಾ ಪ್ರಸ್ತರಗಳೂ ಕಾಂಗೊ ಮತ್ತು ಕೇಪ್ ಪ್ರಾಂತ್ಯಗಳಲ್ಲಿ ತೀವ್ರಗತಿಯಲ್ಲಿ ಉಂಟಾದ ಭೂಚಟುವಟಿಕೆಗಳಿಗೆ ಒಳಗಾಗಿ ಮಡಿಕೆ ಬಿದ್ದಿವೆ.

ಡಿವೋನಿಯನ್ ಶಿಲಾಪ್ರಸ್ತರಗಳಲ್ಲೂ ಅಸಂಖ್ಯಾತ ಅವಶೇಷಗಳನ್ನು ಕಾಣಬಹುದು. ಈ ಯುಗದ ಬೊಕೆವಾಲ್ಡ್ ಶಿಲಾಶ್ರೇಣಿ ದಕ್ಷಿಣ ಕೇಪ್ ಸಹರ ಲಿಬಿಯ ಮತ್ತು ಪಶ್ಚಿಮ ಸೂಡಾನ್‌ಗಳಲ್ಲಿ ಹಬ್ಬಿದೆ. ಘಾನ ತೀರಪ್ರದೇಶದಲ್ಲಿ ಇದೇ ಯುಗದ ಕೆಳ, ಮಧ್ಯಮ ಮತ್ತು ಮೇಲಿನ ಉಪವರ್ಗಗಳನ್ನು ನೋಡಬಹುದು.

ಉತ್ತರ ಆಫ್ರಿಕದಲ್ಲಿ ಕಾರ್ಬಾನಿಫೆರಸ್ ಯುಗದ ಶಿಲಾಪ್ರಸ್ತರಗಳು ಹೇರಳವಾಗಿವೆ. ಇವು ಬಹುಮಟ್ಟಿಗೆ ನೆಲ ಭಾಗಗಳಿಗೆ ಸಂಬಂಧಿಸಿದುವು (ಕಾಂಟಿನೆಂಟಲ್). ಚಾಡ್ ಮತ್ತು ಲಿಬಿಯ – ಈಜಿಪ್ಟ್ – ಸೂಡಾನ್ ಗಡಿ ಪ್ರದೇಶದ ಮಧ್ಯೆಯಿರುವ ಈ ಯುಗದ ಶಿಲೆಗಳಲ್ಲಿ ಸಸ್ಯಾವಶೇಷಗಳೂ ಇತರ ಜೀವ್ಯವಶೇಷಗಳೂ ಇವೆ.

ಮಧ್ಯ ಮತ್ತು ದಕ್ಷಿಣ ಆಫ್ರಿಕದಲ್ಲಿ ಕಾರೂ ಶಿಲಾ ಶ್ರೇಣಿಯನ್ನು ಅನೇಕ ಕಡೆ ನೋಡಬಹುದು. ಶ್ರೇಣಿಯ ಅತಿ ಕೆಳಗಿನ ಪ್ರಸ್ತರಗಳೆಂದರೆ ಕಾರ್ಬಾನಿಫೆರಸ್ ಯುಗದ ಹಿಮ ನದಿಯ ಡ್ವೈಕಾ ಟಿಲ್ಲೈಟ್ ಶಿಲಾ ಪ್ರಸ್ತರಗಳು. ಇವು ಕೇಪ್ ಪ್ರಾಂತ್ಯದಲ್ಲಿ 607 ಮೀ. ಮಂದವಾಗಿದ್ದು ಬಹು ಪ್ರಖ್ಯಾತವಾಗಿವೆ. ಉತ್ತರಕ್ಕೆ ಸರಿದಂತೆಲ್ಲ ತೆಳುವಾಗುತ್ತ ಕಡೆಕಡೆಗೆ ಕಾಂಗೊ ಮತ್ತು ಮಡಗಾಸ್ಕರ್‌ಗಳಲ್ಲಿ ಚದುರಿಹೋಗಿವೆ.

ಪರ್ಮಿಯನ್ ಯುಗದ ಎಕ್ಕಾ ಶಿಲಾ ಪ್ರಸ್ತರಗಳನ್ನು ದಕ್ಷಿಣ ಆಫ್ರಿಕ, ಜಿಂಬಾಬ್ವೆ ಮತ್ತು ಟಾಂಗನೀಕಗಳಲ್ಲಿ ನೋಡಬಹುದು. ಉತ್ತಮ ದರ್ಜೆಯ ಕಲ್ಲಿದ್ದಲಿನ ನಿಕ್ಷೇಪಗಳಿಗೆ ಇವು ಹೆಸರುವಾಸಿ. ಇವುಗಳಲ್ಲಿ ಗ್ಲಾಸಾಪ್ಟೆರಸ್ ಎಂಬ ಸಸ್ಯಾವಶೇಷವನ್ನು ನೋಡಬಹುದು. ಕೇಪ್ ಪ್ರಾಂತ್ಯದ ಟ್ರಯಾಸಿಕ್ ಯುಗದ ಬ್ಯೂಫರ್ಟ್ ಶಿಲಾ ಪ್ರಸ್ತರಗಳಲ್ಲಿ ಸರೀಸೃಪಗಳ ಪಳೆಯುಳಿಕೆಗಳಿವೆ. ಇದಾದ ಅನಂತರ ಬೆಸಾಲ್ಟ್ ಲಾವಾಗಳ ಹೊರ ಹೊಮ್ಮುವಿಕೆ ಪ್ರಾರಂಭವಾಯಿತು. ಈ ಲಾವಾ ಪ್ರಸ್ತರಗಳು ಡ್ರೇಕನ್ಸ್‌ಬರ್ಗ್‌ನಲ್ಲಿ 1365 ಮೀ. ಮೀರಿ ಮಂದವಾಗಿವೆ. ಇವುಗಳ ನಿಕಟವರ್ತಿಯಾದ ಶಿಲಾ ಒಡ್ಡುಗಳೂ ಮತ್ತು ಸಿಲ್‌ಗಳೂ ಅಸಂಖ್ಯಾತವಾಗಿವೆ.

ಜುರಾಸಿಕ್ ಯುಗದ ಶಿಲಾಪ್ರಸ್ತರಗಳು ಈ ಖಂಡದಲ್ಲಿ ಅಷ್ಟಾಗಿ ಕಂಡುಬಂದಿಲ್ಲ. ಅವು ಕಾಂಗೋ ರಾಜ್ಯಕ್ಕೆ ಮಾತ್ರ ಸೀಮಿತಗೊಂಡಿವೆ. ಈ ಭೂಯುಗದಲ್ಲಿ ಖಂಡದ ಬಹುತೇಕ ಭಾಗ ಮೈದಾನ ಪ್ರದೇಶವಾಗಿ ಪರಿವರ್ತಿತವಾಯಿತು. ಬಹುಶಃ ಏಕ ಖಂಡವಾದ ಗೊಂಡ್ವಾನ ಸಹ ಒಡೆದು ಛಿದ್ರವಾಗಲು ಪ್ರಾರಂಭವಾಯಿತೆನ್ನಬಹುದು. ಈ ಕಾಲದಲ್ಲಿ ಮಡಗಾಸ್ಕರ್ ಮೂಲ ಖಂಡದಿಂದ ದೂರ ಸರಿಯಿತು. ಮುಂದೆ ಕ್ರಿಟೇಷಿಯಸ್ ಯುಗದ ವೇಳೆಗೆ ಖಂಡಕ್ಕೆ ಈಚೆಗಿನ ರೂಪುರೇಷೆ ಬಂದಿತೆನ್ನಬಹುದು. ಈ ಯುಗದ ಪ್ರಾಣಿಗಳ ಅವಶೇಷಗಳನ್ನು ಖಂಡದ ಪೂರ್ವತೀರ ಪ್ರದೇಶಗಳಲ್ಲಿನ ಶಿಲಾಪ್ರಸ್ತರಗಳಲ್ಲಿ ನೋಡಬಹುದು. ಉತ್ತಮ ಸುಣ್ಣಶಿಲಾ ನಿಕ್ಷೇಪಗಳೂ ರೂಪುಗೊಂಡುವು.

ಕ್ರಿಟೇಷಸ್ ಯುಗವಾದ ಮೇಲೆ ಸಮುದ್ರ ಕ್ರಮೇಣ ತನ್ನ ವಿಸ್ತೀರ್ಣದಲ್ಲಿ ಕುಗ್ಗುತ್ತ ಇಯೊಸೀನ್ ಕಾಲದಲ್ಲಿ ಸಣ್ಣಪುಟ್ಟ ಜಲಾಶಯಗಳಂತೆ ಪರಿವರ್ತಿತವಾಯಿತು. ಉದಾ : ನೈಲ್‌ಕಣಿವೆ ಕೇಂದ್ರ ಲಿಬಿಯ, ನೈಜರ್‌ಕಣಿವೆ – ಇಲ್ಲೆಲ್ಲ ಜಲಜ ಶಿಲೆಗಳು ಶೇಖರವಾಗಲು ಮೊದಲಾಯಿತು. ಮುಂದೆ ಈ ಪ್ರದೇಶಗಳಲ್ಲೆ ಟರ್ಷಿಯರಿ ಮತ್ತು ಕ್ವಾಟರ್ನರಿ ಶಿಲಾಪ್ರಸ್ತರಗಳೂ ನಿಕ್ಷೇಪವಾದುವು. ಚಾಡ್ ಮುಂತಾದ ಕಡೆ ಉಂಟಾದ ಇಳುಕುಗಳಲ್ಲಿ ನಿಕ್ಷೇಪವಾದ ಶಿಲಾಪ್ರಸ್ತರಗಳಲ್ಲಿ ಆಯಾ ಭೂಕಾಲದ ಜೀವ್ಯವಶೇಷಗಳು ಹುದುಗಿವೆ. ಅದರಲ್ಲೂ ಬಹು ಮುಖ್ಯವಾದುದು ಈಜಿಪ್ಟಿನ ಫಯ್ಯಾಂಶ್ರೇಣಿಗೆ ಸೇರಿದ ಪ್ರಸ್ತರಗಳು. ಇವುಗಳಲ್ಲಿ ಗತಕಾಲದ ಆನೆ ಮತ್ತು ಕಪಿಗಳ ಅವಶೇಷಗಳಿವೆ.

ಪಶ್ಚಿಮ ಸಹರದಲ್ಲಿ ಇಯೊಸೀನ್ ಕಾಲದ ಸಮುದ್ರವಿರಲಿಲ್ಲ. ಈ ಕಾಲದಲ್ಲೇ ಟೆಥಿಯನ್ ಬೃಹತ್ ಇಳಕಲಿನ (ಜಿಯೊಸಿಂಕ್ಲೈನ್) ಜಲಜಶಿಲೆಗಳಿಂದ ಉದ್ಭವಗೊಂಡ ಅಟ್ಲಾಸ್ ಪರ್ವತಗಳ ಮೊದಲ ಹಂತವೂ ಪ್ರಾರಂಭವಾಯಿತು. ಮಯೊಸೀನ್ ಸಮುದ್ರ ಆಲ್ಜೀರಿಯಕ್ಕೆ ಮಾತ್ರ ಸೀಮಿತವಾಗಿತ್ತು. ಪ್ಲಿಯೊಸೀನ್ ಕಾಲದ ಸಮುದ್ರವಂತೂ ಇನ್ನೂ ಚಿಕ್ಕದು. ಹೀಗಾಗಿ ಉತ್ತರ ಆಫ್ರಿಕದ ಬಹುಭಾಗ ಭೂಖಂಡವಾಗಿಯೇ ಉಳಿಯಿತು.

ಟರ್ಷಿಯರಿ ಯುಗದ ಪ್ರಸ್ತರಗಳು ಬಹುಮಟ್ಟಿಗೆ ಖಂಡದ ಪೂರ್ವ ದಕ್ಷಿಣ ಮತ್ತು ಪಶ್ಚಿಮ ತೀರಪ್ರದೇಶಗಳಲ್ಲಿ ಕಂಡುಬಂದಿವೆ. ದಕ್ಷಿಣ ಆಫ್ರಿಕದ ಪ್ಲಿಯೊಸೀನ್ ಕಾಲದ ಗುಹಾನಿಕ್ಷೇಪಗಳು ಮಾನವ ಪೂರ್ವಜರ ಗುಂಪಿನ ಆಸ್ಟ್ರಲೋಪಿಥಿಕಸ್ ಎಂಬ ನರವಾನರ ಅವಶೇಷಗಳನ್ನು ಹೊಂದಿದ್ದು ಜೀವ ವಿಕಾಸದ ಅಧ್ಯಯನದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಅದರಲ್ಲೂ ಟಾಂಜೇನಿಯದ ಓಲ್ಡುವೈ ಇಳುಕಲಿನ ಮೆಕ್ಕಲು ಪ್ರದೇಶ ಈ ಅವಶೇಷಗಳಿಗೆ ಬಹು ಹೆಸರುವಾಸಿ. ಅಲ್ಲದೆ ಖಂಡದುದ್ದಕ್ಕೂ ಕಂಡುಬರುವ ಪ್ಲಿಸ್ಟೊಸೀನ್ ನಿಕ್ಷೇಪಗಳಲ್ಲಿ ಶಿಲಾಯುಗದ ಉಪಕರಣಗಳನ್ನು ಮತ್ತು ಆದಿಮಾನವನಿಗೆ ಸಂಬಂಧಿಸಿದ ಇತರ ಕುರುಹುಗಳನ್ನೂ ಗುರುತಿಸಬಹುದು. (ಬಿ.ವಿ.ಜಿ.)

**ಆಫ್ರಿಕನ್ ಐಕ್ಯತಾ ಸಂಘ:** ಆಫ್ರಿಕ ಖಂಡದ ರಾಷ್ಟ್ರಗಳ ಏಕತೆಯ ಸಲುವಾಗಿ ಸ್ಥಾಪಿಸಲ್ಪಟ್ಟ ಒಂದು ಪ್ರಾದೇಶಿಕ ಸಂಘವಾಗಿದೆ. ಈ ಸಂಘದ ಉದ್ದೇಶ ತ್ವರಿತ ಆರ್ಥಿಕ ಅಭಿವೃದ್ಧಿ ಮತ್ತು ಆಫ್ರಿಕನ್ ರಾಷ್ಟ್ರಗಳಿಗೆ ರಕ್ಷಣೆ ಒದಗಿಸುವುದು ಆಗಿದೆ. ಆಫ್ರಿಕನ್ ಐಕ್ಯತಾ ಸಂಘಕ್ಕೆ ದಕ್ಷಿಣ ಆಫ್ರಿಕವನ್ನು ಬಿಟ್ಟು ಉಳಿದೆಲ್ಲ ಆಫ್ರಿಕ ಖಂಡದ 50 ರಾಷ್ಟ್ರಗಳು ಸದಸ್ಯ ರಾಷ್ಟ್ರಗಳಾಗಿವೆ. ಈ ಸಂಘವು ಇತರ ಸಂಘಗಳಾದ ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್, ಪ್ಯಾನ್ ಆಫ್ರಿಕನ್ ಕಾಂಗ್ರೆಸ್ ಪೊಲಿಸಾರಿಯೋ (ಸ್ಪಾನಿಷ್ ಮತ್ತು ಸಹರ) ಮತ್ತು ನೈರುತ್ಯ ಆಫ್ರಿಕನ್ ಪ್ರಜಾ ಸಂಸ್ಥೆ (ಎಸ್.ಡಬ್ಲ್ಯು.ಎ.ಪಿ.ಓ. ನಮೀಬಿಯ) ಇವುಗಳ ಸಹಯೋಗದೊಂದಿಗೆ, ತನ್ನ ಕಾರ್ಯನಿರ್ವಹಿಸುತ್ತವೆ. ಈ ಸಂಸ್ಥೆಗೆ ಸದಸ್ಯ ರಾಷ್ಟ್ರಗಳ ಮುಖ್ಯಸ್ಥರು ಸದಸ್ಯರಾಗಿರುತ್ತಾರೆ. ಅವು ಪ್ರತಿ ವರ್ಷ ಮುಖ್ಯ ಕಛೇರಿಯಾದ ಆಡಿಸ್ ಅಬಾಬಾದಲ್ಲಿ ಸಭೆ ಸೇರುತ್ತವೆ.

ಆಫ್ರಿಕ ಐಕ್ಯತಾ ಸಂಘದ ವಿಶಾಲವಾದ ಉದ್ದೇಶವೆಂದರೆ ಸದಸ್ಯ ರಾಷ್ಟ್ರಗಳೊಂದಿಗೆ ಏಕತೆ ಸಾಧಿಸುವುದಾಗಿದೆ. ಆದರೆ ಈ ಸಂಘ ಇತ್ತೀಚೆಗೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಏಕೆಂದರೆ, ಪಾನ್ ಆಫ್ರಿಕನ್ ಸಂಸ್ಥೆಯ ಚಟುವಟಿಕೆಯಿಂದಾಗಿ ರಾಷ್ಟ್ರ ರಾಷ್ಟ್ರಗಳ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ತಲೆದೋರಿವೆ. ಶಕ್ತಿ ಶಾಲಿ ರಾಷ್ಟ್ರಗಳೊಂದಿಗೆ ದ್ವಂದ್ವ ಸಂಬಂಧವನ್ನು ಇಟ್ಟುಕೊಳ್ಳುವುದು, ವೈಯಕ್ತಿಕ ಶಕ್ತಿ ರಕ್ಷಣೆ ಹಾಗೂ ರಾಷ್ಟ್ರ ಸಾರ್ವಭೌಮತ್ವವನ್ನು ಕಾಪಾಡುವುದು. ಈ ಆಫ್ರಿಕನ್ ಐಕ್ಯತಾ ಸಂಘವು ದಕ್ಷಿಣ ಆಫ್ರಿಕದ ಜನಾಂಗೀಯ ಆಳ್ವಿಕೆಯನ್ನು ಹೋಗಲಾಡಿಸಲು, ಸದಸ್ಯ ರಾಷ್ಟ್ರಗಳಲ್ಲಿ ಒಗ್ಗಟ್ಟಿನ ಅಭಿಪ್ರಾಯ ಮೂಡಿಸಲು ಮಾಡಿದ ಪ್ರಯತ್ನಗಳು ವಿಫಲವಾದವು ಮತ್ತು ಸಹಕಾರ ಕಾರ್ಯಕ್ರಮಗಳ ಮೂಲಕ ಸದಸ್ಯ ರಾಷ್ಟ್ರಗಳಲ್ಲಿ ಬಂಡವಾಳದ ಕೊರತೆಯನ್ನು ಅನುಭವಿಸುವ ರಾಷ್ಟ್ರಗಳಿಗೆ ಸಹಾಯಧನ ಪೂರೈಸಿಕೊಡುವುದು, ಅಲ್ಲದೆ ದೊಡ್ಡ ಪ್ರಮಾಣದಲ್ಲಿ ಅಪೌಷ್ಟಿಕತೆ, ಬರಗಾಲ, ಅಧಿಕ ಜನನ ಪ್ರಮಾಣ, ಇವೆಲ್ಲವುಗಳನ್ನು ತೊಡೆದು ಹಾಕುವಲ್ಲಿ ಆಫ್ರಿಕನ್ ಐಕ್ಯತಾ ಸಂಘ ವಿಫಲವಾಗಿದೆ. ಆದರೂ ಈ ಸಂಘ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಸಾಮಾನ್ಯ ಒಳಿತಿಗೋಸ್ಕರ ಹೋರಾಡುವ ಒಂದು ಸಂಸ್ಥೆಯಾಗಿದೆ. (ಎಸ್.ಎಸ್.ಎಸ್.)

**ಆಬಾದಾನ್:** ಇರಾನಿಗೆ ಸೇರಿದ, ನೈರುತ್ಯದಲ್ಲಿ ಪರ್ಷಿಯ ಕೊಲ್ಲಿಗೆ 48 ಕಿಮೀ ದೂರದಲ್ಲಿರುವ ಮುಖ್ಯ ಬಂದರು. ಪ್ರಪಂಚದ ಮುಖ್ಯ ತೈಲಶುದ್ಧೀಕರಣ ಕೇಂದ್ರಗಳಲ್ಲೊಂದು. ಜನಸಂಖ್ಯೆ 4,15,139 (2005). (ಆರ್.ಡಿ.ಆರ್.)

**ಆಮದು:** ಬಳಕೆಗಾಗಲಿ, ಬೇರೆ ಪದಾರ್ಥಗಳ ತಯಾರಿಕೆಗಾಗಲಿ ಅಗತ್ಯವಾದ ವಸ್ತುಗಳನ್ನು ಹೊರ ದೇಶದಿಂದ ತರಿಸಿಕೊಳ್ಳುವುದಕ್ಕೆ ಆಮದು ವ್ಯಾಪಾರವೆಂದು ಹೆಸರು (ಇಂಪೋರ್ಟ್). ಹೀಗೆ ತರಿಸಿದ ಪದಾರ್ಥಗಳನ್ನು ಆಮದು ಪದಾರ್ಥಗಳು ಎನ್ನುತ್ತಾರೆ. ರಫ್ತು ವ್ಯಾಪಾರ, ರಫ್ತು ಪದಾರ್ಥಗಳು ಇದಕ್ಕೆ ತದ್ವಿರುದ್ಧವಾದವು. ಆಮದಿನಿಂದ ದೇಶದ ಸಂಪನ್ಮೂಲಗಳ ಬೆಳವಣಿಗೆಯಾಗುತ್ತದೆ. ಇದಲ್ಲದೆ ಬೇರೆ ಕಾರಣಗಳಿಂದ ದೇಶದೊಳಕ್ಕೆ ಬರುವ ವಸ್ತುಗಳನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ, ವ್ಯಕ್ತಿಗಳ ಉಪಯೋಗಕ್ಕಾಗಿ, ಪ್ರದರ್ಶನಕ್ಕಾಗಿ, ನಿಯೋಗಿಗಳ ಮತ್ತು ವಿದೇಶೀ ಸೇನಾತಾಣ್ಯಗಳ ಬಳಕೆಗಾಗಿ ತರಿಸಿಕೊಳ್ಳುವ ಪದಾರ್ಥಗಳು. ಆದರೆ ಸಂಪನ್ಮೂಲಗಳನ್ನು ಹೆಚ್ಚಿಸಲು ಹೊರದೇಶಗಳಿಂದ ಆಮದು ಮಾಡಿಕೊಳ್ಳುವ ಯಂತ್ರೋಪಕರಣಾದಿಗಳು, ಅಗತ್ಯವಸ್ತುಗಳು, ರಾಸಾಯನಿಕಾದಿಗಳು, ತಜ್ಞರ ಸೇವೆ ಮೊದಲಾದವು ಆಮದು ಎನಿಸಿಕೊಳ್ಳುತ್ತವೆ.

ಪ್ರತಿ ರಾಷ್ಟ್ರವೂ ಸ್ವಾವಲಂಬಿಯಾಗಿರುವುದು ಸಾಧ್ಯವಿಲ್ಲದ ಮಾತು. ಒಂದಲ್ಲೊಂದು ಸರಕು ಅಥವಾ ಸೇವೆ ಅಥವಾ ಬಂಡವಾಳಕ್ಕೆ ಒಂದು ರಾಷ್ಟ್ರ ಮತ್ತೊಂದನ್ನು ಅವಲಂಬಿಸಲೇಬೇಕು. ಇದಕ್ಕೆ ನೈಸರ್ಗಿಕ ಕಾರಣಗಳಿರಬಹುದು. ಅಥವಾ ಬೇರೆ ಯಾವುದಾದರೂ ಕಾರಣಗಳಿರಬಹುದು. ಪಾಶ್ಚಾತ್ಯ ರಾಷ್ಟ್ರಗಳು ಅರಬ್ ರಾಷ್ಟ್ರಗಳನ್ನು ತೈಲಕ್ಕಾಗಿ ಅವಲಂಬಿಸಬೇಕು. ಇಲ್ಲದಿದ್ದರೆ ಅವರ ಕೈಗಾರಿಕೆಗೆ ಪೆಟ್ಟು ಬೀಳುತ್ತದೆ. ಹಿಂದುಳಿದ ರಾಷ್ಟ್ರಗಳು ನವೀನ ಯಂತ್ರೋಪಕರಣಗಳನ್ನು ಮುಂದುವರಿದ ರಾಷ್ಟ್ರಗಳಿಂದ ಕೊಳ್ಳದಿದ್ದರೆ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲ. ಹಾಗೆಯೇ ಆಹಾರ ವಸ್ತುಗಳ ಕೊರತೆ ಇರುವುದರಿಂದ ಮುಂದುವರೆದ ರಾಷ್ಟ್ರಗಳಿಂದ ಅವುಗಳನ್ನು ಕೊಂಡುಕೊಳ್ಳದಿದ್ದರೆ ಆಹಾರ ಸಮಸ್ಯೆ ಭೀಕರ ಸ್ವರೂಪವನ್ನು ತಾಳುತ್ತದೆ.

ಅಂತಾರಾಷ್ಟ್ರೀಯ ವ್ಯಾಪಾರದ ಮುಖ್ಯ ಸಿದ್ಧಾಂತವಾದ ತಾರತಮ್ಯ ವೆಚ್ಚ ಸಿದ್ಧಾಂತ (ಥಿಯರಿ ಆಫ್ ಕಂಪ್ಯಾರಿಟಿವ್ ಕಾಸ್ಟ್ಸ್) ತಿಳಿಸುವಂತೆ ಪ್ರತಿ ರಾಷ್ಟ್ರವೂ ಯಾವ ವಸ್ತುಗಳ ತಯಾರಿಕೆಗೆ ಹೆಚ್ಚು ಅನುಕೂಲ ಹೊಂದಿದೆಯೋ ಅಥವಾ ಯಾವ ವಸ್ತುಗಳನ್ನು ಬೇರೆಯವರಿಗಿಂತ ಕಡಿಮೆ ವೆಚ್ಚದಲ್ಲಿ ತಯಾರಿಸಲು ಶಕ್ಯವಾಗಿದೆಯೋ ಅಂಥ ವಸ್ತುಗಳನ್ನು

ತಯಾರಿಸುವುದರಲ್ಲಿ ಮಾತ್ರ ವೈಶಿಷ್ಟ್ಯಗಳಿಸಿಕೊಳ್ಳಬೇಕು. ಉಳಿದವುಗಳನ್ನು ಯಾವ ರಾಷ್ಟ್ರಗಳು ತಮಗಿಂತ ಕಡಿಮೆ ವೆಚ್ಚದಲ್ಲಿ ತಯಾರಿಸಲು ಶಕ್ಯವಾಗಿದೆಯೋ ಅವುಗಳಿಂದ ಕೊಳ್ಳಬೇಕು. ಉದಾಹರಣೆಗೆ, ಕಾಫಿ ಬೆಳೆಗೆ ಅನುಕೂಲವಾದ ಹವೆ ಇಲ್ಲದಿರುವ ದೇಶಗಳಲ್ಲಿ ಕೃತಕವಾಗಿ ಅದಕ್ಕೆ ತಗಲುವ ವೆಚ್ಚ ಅತಿಯಾಗುವುದರಿಂದ ಅದಕ್ಕೆ ಬದಲು ಎಲ್ಲಿ ಕಡಿಮೆ ವೆಚ್ಚದಲ್ಲಿ ಬೆಳೆಯಲು ಸಾಧ್ಯವೋ ಅಲ್ಲಿಂದ ಕೊಳ್ಳುವುದೇ ಲೇಸು. ಈ ಕಾರಣಗಳಿಂದ ಸರಕುಗಳ ಆಮದು ಅನಿವಾರ್ಯ. ಅಂತೆಯೇ ಸೇವೆಗಳ ಆಮದೂ ಎಷ್ಟೋ ವೇಳೆ ಅನಿವಾರ್ಯ. ಇತರ ದೇಶಗಳ ಜನರ ತಾಂತ್ರಿಕ ಸೇವೆಯನ್ನು ಇಲ್ಲವೇ ಇತರ ದೇಶಗಳ ಸಾರಿಗೆ ಸಂಸ್ಥೆಗಳ ಸೇವೆಯನ್ನು ಪಡೆದುಕೊಳ್ಳಬೇಕಾಗಬಹುದು.

ಆಮದು ಒಂದು ರಾಷ್ಟ್ರದ ಲೇಣಿ ದೇಣಿ ಪಟ್ಟಿಯ (ಬ್ಯಾಲನ್ಸ್ ಆಫ್ ಪೇಮೆಂಟ್) ಮೇಲೆ ತನ್ನದೇ ಆದ ಪರಿಣಾಮವನ್ನು ಬೀರುತ್ತದೆ. ಪಟ್ಟಿಯು ಸರಿದೂಗುವಂತೆ ಆಮದು ಮತ್ತು ರಫ್ತುಗಳು ಸಮನಾಗಿರಬೇಕು. ರಫ್ತಿಗಿಂತ ಆಮದು ಹೆಚ್ಚಾಗಿದ್ದರೆ ಪಟ್ಟಿಯಲ್ಲಿ ಉಳಿತಾಯ ಉಂಟಾಗುತ್ತದೆ. ಇವುಗಳಲ್ಲಿ ಯಾವ ಒಂದೂ ಅಪೇಕ್ಷಣೀಯವಲ್ಲ. ಖೋತವನ್ನು ಮಾತ್ರ ಸಮಸ್ಯೆ ಎಂದು ಪರಿಗಣಿಸಿ ಉಳಿತಾಯ ಅಪೇಕ್ಷಣೀಯ ಸ್ಥಿತಿ ಎಂದು ಭಾವಿಸುವುದುಂಟು. ಆದರೆ ಸಮಸ್ಥಿತಿ ಅತ್ಯುತ್ತಮವಾದುದೆಂದು ತಿಳಿಯುವುದು ಆವಶ್ಯಕ. ಒಂದು ರಾಷ್ಟ್ರದ ಲೇಣಿ ದೇಣಿ ಪಟ್ಟಿಯಲ್ಲಿ ಉಳಿತಾಯವಿದ್ದರೆ ಬೇರೆ ಯಾವುದೋ ದೇಶ ಖೋತ ಸಮಸ್ಯೆಯನ್ನು ಎದುರಿಸುತ್ತಿದೆ ಎಂದು ಅರ್ಥ. ಆದ್ದರಿಂದ ಸಮಸ್ಯೆಗೆ ಲೇಣಿ ದೇಣಿ ಪಟ್ಟಿಯಲ್ಲಿ ಖೋತ ಎಷ್ಟರ ಮಟ್ಟಿಗೆ ಕಾರಣವೋ ಉಳಿತಾಯವೂ ಅಷ್ಟರ ಮಟ್ಟಿಗೆ ಕಾರಣ. (ಬಿ.ಎಸ್.ಎಸ್.ಎ.)

**ಆಮ್ಲ ಮಳೆ:** ಕೈಗಾರಿಕೆಗಳಿಂದ, ಸ್ವಯಂಚಾಲಿತ ವಾಹನಗಳಿಂದ ಮತ್ತು ರಾಸಾಯನಿಕ ರಸಗೊಬ್ಬರದ ಕೈಗಾರಿಕೆಗಳಿಂದ ಬಿಡುಗಡೆಯಾಗುವ ವಿಷಕಾರಿ ಅನಿಲಗಳಾದ ಗಂಧಕದ




ಆಮ್ಲವೃಷ್ಟಿ ಮತ್ತು ಅದರಿಂದಾಗುವ ಹಾನಿಗಳು

ಡೈಆಕ್ಸೈಡ್ ಮತ್ತು ಸಾರಜನಕದ ಆಕ್ಸೈಡ್‌ಗಳು ವಾಯುಮಂಡಲದ ನೀರಾವಿಯೊಂದಿಗೆ ಸಂಯೋಜನೆಯಾಗಿ ಗಂಧಕಾಮ್ಲ ಮತ್ತು ನೈಟ್ರಿಕ್ ಆಮ್ಲಗಳಾಗಿ ಪರಿವರ್ತನೆ ಹೊಂದಿ ಮಳೆಯ ನೀರಿನಲ್ಲಿ ಅಧಿಕ ಪ್ರಮಾಣದಲ್ಲಿ ವಿಲೀನವಾಗಿದ್ದು ಇದನ್ನು ಆಮ್ಲೀಯ ಮಳೆ ಎಂದು ಕರೆಯುತ್ತಾರೆ. ಆಮ್ಲ ಮಳೆಯಿಂದಾಗಿ ಅನೇಕ ದುಷ್ಪರಿಣಾಮಗಳು ಸಂಭವಿಸುತ್ತವೆ. 2003 ರ ಅಂಕಿ ಅಂಶಗಳ ಪ್ರಕಾರ ಚೀನದಲ್ಲಿ ಇತ್ತೀಚಿನ ದಿನಗಳಲ್ಲಿ ಆಗುತ್ತಿರುವ ಆಮ್ಲ ಮಳೆಯಿಂದಾಗಿ ಸು. 133 ಕೋಟಿ ಡಾಲರ್ ಆರ್ಥಿಕ ನಷ್ಟ ಉಂಟಾಗಿದೆ. ಅದರಲ್ಲಿ ವಿಶೇಷವಾಗಿ ಚೀನದ ದಕ್ಷಿಣ ಮತ್ತು ನೈಋತ್ಯ ಭಾಗ ವಿಶ್ವದಲ್ಲಿಯೇ ಅತಿ ಹೆಚ್ಚು ಆಮ್ಲ ಮಳೆಯಾಗುವ ಸ್ಥಳಗಳಲ್ಲಿ ಮೂರನೆಯ ಸ್ಥಾನದಲ್ಲಿದೆ. ಆಮ್ಲೀಯ ಮಳೆಯ ಪರಿಣಾಮದಿಂದ ಸರೋವರ ಮತ್ತು ಜಲಾಶಯಗಳಲ್ಲಿನ ಜಲಚರ ಜೀವಿಗಳು ಸಾವನ್ನಪ್ಪುತ್ತವೆ. ಸಸ್ಯಗಳ ಬೆಳವಣಿಗೆಗೆ ಆವಶ್ಯಕವಾಗಿರುವ ಪೋಷಕಾಂಶಗಳಲ್ಲಿ ಹೆಚ್ಚಿನ ಪ್ರಮಾಣದ ಆಮ್ಲ ಮಿಶ್ರಿತವಾಗುವುದರಿಂದ ಬೆಳವಣಿಗೆ ಕುಂಠಿತವಾಗಿ ಕೊನೆಗೆ ನಶಿಸಿ ಹೋಗುತ್ತವೆ. ಮಣ್ಣಿನಲ್ಲಿರುವ ಫಲವತ್ತತೆ ಕ್ರಮೇಣ ಕಡಿಮೆಯಾಗುತ್ತದೆ. ಮಾನವನ ಆರೋಗ್ಯದ ಮೇಲೂ ಕೆಟ್ಟ ಪರಿಣಾಮವುಂಟಾಗಿ ಶ್ವಾಸಕೋಶಕ್ಕೆ ಸಂಬಂಧಿಸಿದಂತಹ ಕಾಯಿಲೆಗಳು ಉಂಟಾಗುತ್ತವೆ, ಪ್ರಪಂಚ ಪ್ರಸಿದ್ಧವಾದ ಸುಂದರ ಕಟ್ಟಡಗಳು ಮತ್ತು ಸ್ಮಾರಕಗಳೂ ಸವಕಳಿ ಹೊಂದುತ್ತವೆ. ಉದಾ: ಭಾರತದ ತಾಜಮಹಲ್, ಅಥೆನ್ಸ್‌ನ ಪಾರ್ಥೆನಾಂ ಕಟ್ಟಡಗಳು. ಆಮ್ಲೀಯ ಮಳೆಯಿಂದಾಗುವ ಪರಿಣಾಮವನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ವಾಯುಮಂಡಲಕ್ಕೆ ಸೇರುವ ಅನಿಲಗಳಾದ ನೈಟ್ರೋಜನ್ ಆಕ್ಸೈಡ್, ಕಾರ್ಬನ್ ಮಾನಾಕ್ಸೈಡ್ ಮತ್ತು ಸಲ್ಫರ್ ಡೈ ಆಕ್ಸೈಡ್‌ಗಳ ಪ್ರಮಾಣವನ್ನು ಕಡಿಮೆ ಮಾಡುವುದು ಅತ್ಯಾವಶ್ಯಕ. ಆಮ್ಲ ಮಳೆ ಸಮಸ್ಯೆ ಯಾವುದೇ ಒಂದು ದೇಶದ ಸಮಸ್ಯೆಯಲ್ಲ. ಅದೊಂದು ಜಾಗತಿಕ ಸಮಸ್ಯೆ. ಹೀಗಾಗಿ ಇದಕ್ಕೆ ಸೂಕ್ತ ಪರಿಹಾರವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೈಗೊಳ್ಳುವುದು ಸೂಕ್ತ. (ಜಿ.ಡಿ.)

**ಆಂಗ್ಲೋಸ್ಯಾಕ್ಸನರು:** ಬ್ರಿಟನ್ನಿನಲ್ಲಿ ರೋಮನರ ಆಧಿಪತ್ಯ ಕಳೆದ ಮೇಲೆ, ಜರ್ಮನಿಯಿಂದ ಬಂದು ನೆಲಸಿದ ಜನ. ಆಂಗ್ಲರು ಮತ್ತು ಸ್ಯಾಕ್ಸನರು ಎಂಬ ಎರಡು ಜನಾಂಗದವರ ಮಿಲನದಿಂದ ಆದ ಜನಾಂಗವಿದು. ಇಂಗ್ಲೆಂಡಿನ ಪೂರ್ವ, ಮಧ್ಯ ಮತ್ತು ಉತ್ತರದ ಭಾಗಗಳಲ್ಲಿ ನೆಲೆಸಿದ ಆಂಗ್ಲರು ಪೂರ್ವಆಂಗ್ಲಿಯ, ಮರ್ಸಿಯ, ನಾರ್ದಂಬ್ರಿಯ ಮುಂತಾದ ರಾಜ್ಯಗಳನ್ನು ಕಟ್ಟಿಕೊಂಡರು. ಜರ್ಮನಿಯಲ್ಲಿ ಆಂಗ್ಲರ ನೆರೆಯಲ್ಲೆ ಇದ್ದ ಸ್ಯಾಕ್ಸನರು ಕ್ರಿ.ಶ. 5ನೆಯ ಶತಮಾನದಲ್ಲಿ ಇಂಗ್ಲೆಂಡಿಗೆ ಬಂದು ನೆಲೆಸಿ ಸಸೆಕ್ಸ್, ವೆಸೆಕ್ಸ್ ಮತ್ತು ಎಸೆಕ್ಸ್ ಎಂಬ ರಾಜ್ಯಗಳನ್ನು ಕಟ್ಟಿದರು. ಜ್ಯೂಟರು ಬಂದು ಕೆಂಟ್ ಪ್ರಾಂತ್ಯದಲ್ಲಿ ನೆಲಸಿದರು. ಮುಂದೆ ಡೇನರು, ನಾರ್ಮನ್ನರು ಮುಂತಾದವರೂ ಬಂದರು. ಇವರೆಲ್ಲ ಪೂರ್ವದಿಂದಲೂ ಇಂಗ್ಲೆಂಡಿನಲ್ಲಿ ನೆಲಸಿದ್ದ ಕೆಲ್ಟ್‌ಜನರೊಂದಿಗೆ ಬೆರೆತುಹೋದರು. ಮುಂದೆ ಆ್ಯಂಗ್ಲೋಸ್ಯಾಕ್ಸನ್ ಎಂಬ ಹೆಸರು ಹನ್ನೊಂದನೆಯ ಶತಮಾನದಲ್ಲಿ ಇಂಗ್ಲೆಂಡಿಗೆ ಬಂದು ರಾಜ್ಯ ಸ್ಥಾಪಿಸಿದ ನಾರ್ಮನರಿಗೇ ಅಲ್ಲದೆ ಹಿಂದೆ ಇಂಗ್ಲೆಂಡಿನಲ್ಲಿದ್ದ ಎಲ್ಲ ಜನರಿಗೂ ಅನ್ವಯಿಸುವಂತಾಯಿತು. *

**ಆಡಮ್ ಸೇತುವೆ:** ಭಾರತಕ್ಕೂ ಶ್ರೀಲಂಕಕ್ಕೂ ಮಧ್ಯೆ ಸು. 36 ಕಿಮೀ ಉದ್ದದ, ಆಳವಿಲ್ಲದ ಸಮುದ್ರದಿಂದ ಸುತ್ತುವರಿಯಲ್ಪಟ್ಟ ಚಿಪ್ಪಿನಂಥ ಮರಳುಗಲ್ಲುಗಳನ್ನೊಳಗೊಂಡಿರುವ ಕಿರಿದಾದ, ಅರ್ಧ ಮುಳುಗಿರುವ ಒಡ್ಡು. ಈ ಪ್ರದೇಶದ ಕೆಲವು ಕಡೆಗಳಲ್ಲಿ ನೀರಿನ ಆಳ 10 ಮೀ ಅಲ್ಲಲ್ಲೇ ಅನೇಕ ಸಣ್ಣ ಸಣ್ಣ ದ್ವೀಪಗಳೂ ಕಾಣಿಸಿಕೊಂಡಿವೆ. ಇವುಗಳಲ್ಲಿ ಒಂದಾಗಿರುವ ಕ್ರುಸಡೈ ದ್ವೀಪ ಪಾಂಬನ್ ದ್ವೀಪದ ಕೊಟ್ಟಿಕಲ್ ತುದಿಯಿಂದ ದಕ್ಷಿಣದಲ್ಲಿದ್ದು ಉಪಯುಕ್ತ ವೈಜ್ಞಾನಿಕ ವೀಕ್ಷಣಾಕೇಂದ್ರವಾಗಿದೆ. ನೀರಿನಿಂದ ಸುತ್ತುವರಿಯಲ್ಪಟ್ಟಿದ್ದರೂ ಯಾವುದೇ ದೊಡ್ಡ ದೋಣಿ ಸಂಚಾರಕ್ಕೂ ಯೋಗ್ಯವಲ್ಲ. ಆದ್ದರಿಂದ ಕೊಲಂಬೋದಿಂದ ಚೆನ್ನೈಗೆ ಹೋಗುವ ಹಡಗುಗಳು ಶ್ರೀಲಂಕ ದ್ವೀಪದ ಪೂರ್ವ ತೀರವನ್ನು ಬಳಸಬೇಕಾಗುತ್ತದೆ.

ಧನುಷ್ಕೋಟಿಯಲ್ಲಿನ ಭಾರತದ ರೈಲು ಮಾರ್ಗದ ಅಂತಿಮ ನಿಲ್ದಾಣ ಮತ್ತು ತಲೈಮನ್ನಾರಿನಲ್ಲಿನ ಶ್ರೀಲಂಕ ಸರ್ಕಾರದ ರೈಲು ಅಂತಿಮ ನಿಲ್ದಾಣಗಳ ನಡುವೆ ರೈಲು ವಿಭಾಗದ ದೋಣಿ ಸಂಚಾರದ ವ್ಯವಸ್ಥೆ ಇದೆ. ತಲೈಮನ್ನಾರ್ ಜಲವಿಭಾಗದ ಒಂದು ಭಾಗವಾಗಿರುವ ಮನ್ನಾರ್ ದ್ವೀಪದಲ್ಲಿದೆ. ಮನ್ನಾರ್ ದ್ವೀಪ ಮತ್ತು ಶ್ರೀಲಂಕ ಮುಖ್ಯ ಭೂಭಾಗದ ನಡುವೆ ಒಂದು ಕಿರಿದಾದ ಕಾಲುವೆ ಇದೆ. ಇದಕ್ಕೆ ಅಡ್ಡಲಾಗಿ ಒಂದು ರಸ್ತೆ ಮತ್ತು ರೈಲು ಸೇತುವೆಗಳನ್ನು ನಿರ್ಮಿಸಲಾಗಿದೆ. ಈ ಸೇತುವೆಯ ನಿರ್ಮಾಣದಿಂದಾಗಿ ಮನ್ನಾರ್ ಪಟ್ಟಣ ಬೆಳೆಯಲು ಅವಕಾಶವಿದೆ. ಮುಖ್ಯ ದ್ವೀಪದಲ್ಲಿ ರೋಮನ್ನರ ಕಾಲದಲ್ಲಿ ಬಹಳ ಮುಖ್ಯವೆನಿಸಿದ್ದ ಮನ್‌ತೈ (ಈಗ ಇದನ್ನು ಮನ್‌ಟೊಟಾ ಎನ್ನುತ್ತಾರೆ) ಎಂಬ ಒಂದು ಪುರಾತನ ಬಂದರು ಮತ್ತು ವ್ಯಾಪಾರಸ್ಥಳವಿದೆ. ಪ್ರಸಿದ್ಧ ಹಣ್ಣಿನ ತೀರಪ್ರದೇಶ ಮನ್ನಾರಿನ ದಕ್ಷಿಣ ಭಾಗದಲ್ಲಿದೆ.

ರಾಮನ ಸೈನ್ಯವೆಲ್ಲವೂ ಸಮುದ್ರವನ್ನು ದಾಟಿ, ರಾವಣನೊಡನೆ ಯುದ್ಧಮಾಡಿ ಸೀತೆಯನ್ನು ಅವನಿಂದ ಬಿಡಿಸಿಕೊಂಡು ಬರಲು ಸಹಾಯವಾಗುವಂತೆ ಹನುಮಂತ ಈ ಸೇತುವೆಯನ್ನು ಕಟ್ಟಿಸಿದನೆಂದು ನಂಬಿಕೆ. ಆದ್ದರಿಂದ ಇದಕ್ಕೆ ರಾಮನ ಸೇತುವೆ ಎಂಬ ಹೆಸರಿದೆ. ಇದರ ಐತಿಹಾಸಿಕ ಅಸ್ತಿತ್ವದ ವಿಚಾರವಾಗಿ ಸಾಕಷ್ಟು ಚರ್ಚೆ ನಡೆದಿದೆ. (ಕೆ.ಕೆ.;ಪಿ.ಜಿ.)

**ಆಯ್ಕೆ ಕಡಿಯುವಿಕೆ:** ಅರಣ್ಯ ನಿರ್ವಹಣೆಯ ದೃಷ್ಟಿಯಿಂದ ಮರಗಳನ್ನು ಕಡಿಯುವುದಕ್ಕೆ ಮುಂಚೆ ಹಲವು ಕ್ರಮಗಳನ್ನು ಅನುಸರಿಸಲಾಗುತ್ತದೆ. ಅರಣ್ಯಗಳಲ್ಲಿ ಎಲ್ಲಾ ವಯಸ್ಸಿನ ಮರಗಳಿರುತ್ತವೆ. ಕೆಲವೊಂದು ಮರಗಳಿಗೆ ಹೆಚ್ಚು ವಯಸ್ಸಾಗಿರುತ್ತದೆ. ಅಂತಹ ಮರಗಳನ್ನು ಗುರುತಿಸಿ ಕಡಿದು ಆ ಸ್ಥಳಗಳಲ್ಲಿ ಬೇರೆ ಸಸಿಗಳನ್ನು ನೆಡಲು ಅನುವು ಮಾಡಲಾಗುತ್ತದೆ. ಈ ರೀತಿಯ ಆಯ್ಕೆ ಕಡಿಯುವಿಕೆಯಲ್ಲಿ ಎಲ್ಲಾ ಮರಗಳನ್ನು ಪ್ರೌಢಾವಸ್ಥೆಯಲ್ಲಿ ಅಥವಾ ಬಲಿತ ಮರಗಳನ್ನು ಮಾತ್ರ ಕಡಿಯಲಾಗುತ್ತದೆ. ಈ ವ್ಯವಸ್ಥೆಯ ಹಂತ ಹಂತವಾಗಿ ಕಡಿಯುವಿಕೆಯನ್ನು ಅನುಸರಿಸಲಾಗುತ್ತದೆ. ಮುಂದುವರೆದ ದೇಶಗಳಲ್ಲಿ ಕೆಲವು ತಂತ್ರಜ್ಞಾನ ಅಳವಡಿಸಿ ಮರಗಳನ್ನು ಮಾತ್ರ ಆಯ್ಕೆ ಮಾಡಿ ಕಡಿಯಲಾಗುತ್ತದೆ. ವಿವಿಧ ವಯಸ್ಸಿನ ಮರಗಳನ್ನೊಳಗೊಂಡ ಮಿಶ್ರಣಕಾಡುಗಳಲ್ಲಿ ಈ ವಿಧಾನವು ಬಹಳ ಪ್ರಸ್ತುತವಾದುದು.

ವಿಭಾಗೀಯ ಕತ್ತರಿಸುವಿಕೆ (ಬ್ಲಾಕ್‌ಕಟ್ಟಿಂಗ್) : ಮರಕಡಿಯುವ ಮತ್ತೊಂದು ಆಧುನಿಕ ವಿಧಾನ. ಇದು ವಿಭಾಗವೊಂದರ ನೆಡುತೋಟ ಕಾಡುಗಳಲ್ಲಿ ರೂಢಿಯಲ್ಲಿದೆ. ಬಹಳಷ್ಟು ಮರಗಳು ಒಂದೇ ವಯಸ್ಸಿಗೆ ಸೇರಿರುತ್ತವೆ. ಒಂದು ನಿರ್ದಿಷ್ಟ ಅರಣ್ಯಪ್ರದೇಶವನ್ನು 25–50 ವಿಭಾಗಗಳಾಗಿ ವಿಂಗಡಿಸಲಾಗಿರುತ್ತದೆ. ಒಂದೊಂದು ವಿಭಾಗದಲ್ಲಿ ಬೇರೆ ಬೇರೆ ಅವಧಿಯಲ್ಲಿ ನೆಟ್ಟು ಬೆಳೆಸಿರುವುದರಿಂದ ಮರಗಳು ಬಲಿತ ಮೇಲೆ ಎಲ್ಲವನ್ನೂ ಒಮ್ಮೆ

ಕಟಾವು ಮಾಡಿ, ವಿಸ್ತರಿಸಲ್ಪಟ್ಟ ಸ್ಥಳದಲ್ಲಿ ಪುನಃ ಸಸಿಗಳನ್ನು ನೆಟ್ಟು ಪೋಷಿಸಬಹುದು. ಮತ್ತೊಂದು ಅವಧಿ ಅಥವಾ ವರ್ಷದಲ್ಲಿ ಬೇರೆ ವಿಭಾಗದ ಮರಗಳನ್ನು ಕಡಿಯಲಾಗುವುದು. ಈ ಪ್ರಕ್ರಿಯೆಯು ನಿರಂತರವಾಗಿ ವರ್ಷದಿಂದ ವರ್ಷಕ್ಕೆ ಮುಂದುವರಿಯುತ್ತಾ ಹೋದಂತೆ ಒಂದು ವಿಭಾಗವು ಕಟಾವಾದರೆ ಮತ್ತೊಂದು ಕಟಾವಿಗೆ ಸಿದ್ಧಗೊಳ್ಳುವುದು. (ವಿ.ಎಸ್.ಎ.)

**ಆರೆಂಜ್ ಫ್ರೀಸ್ಟೇಟ್:** ದಕ್ಷಿಣ ಆಫ್ರಿಕ ಗಣರಾಜ್ಯದ ಒಂದು ಪ್ರಾಂತ್ಯ. ಹಿಂದೆ ಬೋಯರ್ ಜನಾಂಗದವರಿಗೆ ಸೇರಿದ ಗಣರಾಜ್ಯವಾಗಿತ್ತು. ದಕ್ಷಿಣಕ್ಕೆ ಆರೆಂಜ್ ನದಿ, ಉತ್ತರಕ್ಕೆ ವಾಲ್ ನದಿ ಇದರ ಎಲ್ಲೆಗಳು. ಇಡೀ ಪ್ರಾಂತ ಒಂದು ಪ್ರಸ್ಥಭೂಮಿ. ಸರಾಸರಿ ಎತ್ತರ 1200 ಮೀ. ವಾಯುಗುಣ ಹಿತಕರ. ಮಳೆ ವಿಶೇಷವಾಗಿಲ್ಲ. ಅರೇಬಿಯನ್ ಸಮುದ್ರದಿಂದ ಬರುವ ಮಾರುತವನ್ನು ಡ್ರೇಕನ್ಸ್ ಬರ್ಗ್ ಪರ್ವತಗಳು ತಡೆಯುವುದರಿಂದ, ಪಶ್ಚಿಮದಿಂದ ಬೀಸುವ ಮಾರುತಗಳಿಂದ ಬೇಸಗೆಯಲ್ಲಿ ಮಾತ್ರ ಸ್ವಲ್ಪ ಮಳೆ. ಆರೆಂಜ್ ನದಿಯ ಜಲಾನಯನ ಪ್ರದೇಶ 849520 ಚ.ಕಿಮೀ. ಪಶುಪಾಲನೆ ಜನರ ಮುಖ್ಯ ಉದ್ಯೋಗ. ಗೋದಿ, ಬತ್ತ ಮುಂತಾದ ಆಹಾರಧಾನ್ಯಗಳು, ಹೊಗೆಸೊಪ್ಪು, ಹಣ್ಣುಗಳು ಮುಖ್ಯ ಬೆಳೆಗಳು. ಕಲ್ಲಿದ್ದಲು, ಚಿನ್ನ, ವಜ್ರ, ಯುರೇನಿಯಂ ಮುಖ್ಯ ಖನಿಜಗಳು. ಬೋಯರ್ ಜನ (ಡಚ್ ಸಂತತಿಗೆ ಸೇರಿದ ಆಫ್ರಿಕನ್ನರು) 1835–48 ರ ಅವಧಿಯಲ್ಲಿ ಇಲ್ಲಿ ಬಂದು ನೆಲಸಿದರು. 1848 ರಲ್ಲಿ ಈ ಪ್ರಾಂತ್ಯವನ್ನು ಕೇಪ್ ಕಾಲೊನಿಗೆ ಸೇರಿಸಿಕೊಳ್ಳಲಾಯಿತು. ಬೋಯರರು ಇದಕ್ಕೊಪ್ಪದೆ 1854 ರಲ್ಲಿ ಸ್ವತಂತ್ರರಾದರು. ಈ ದೇಶ ಆರೆಂಜ್ ಫ್ರೀಸ್ಟೇಟ್ ಎಂಬ ಗಣರಾಜ್ಯವಾಯಿತು. 1907ರಲ್ಲಿ ಸ್ವರಾಜ್ಯಾಧಿಕಾರವನ್ನು ಪಡೆಯಿತು. ಕೊನೆಗೆ 1910ರಲ್ಲಿ ದಕ್ಷಿಣ ಆಫ್ರಿಕ ಒಕ್ಕೂಟಕ್ಕೆ ಸೇರಿಹೋಯಿತು. ಇತ್ತೀಚೆಗೆ ಫ್ರೀಸ್ಟೇಟ್ ಎಂದು ಕರೆಯಲಾಗಿದೆ. (ಎಸ್.ಎಸ್.ಐ.)

**ಆರೋಹಿಗಾಳಿ:** ಎರಡು ಸ್ಥಳಗಳ ನಡುವೆ ಉಂಟಾಗುವ ಉಷ್ಣಾಂಶದ ವ್ಯತ್ಯಾಸದಿಂದ ಆಗಾಗ್ಗೆ ಸಂಭವಿಸುವ ಸ್ಥಳೀಯ ಮಾರುತಗಳು. ಇವು ಕಣಿವೆಯ ಇಳಿಜಾರುಗಳಲ್ಲಿ ಊರ್ಧ್ವಮುಖವಾಗಿ ಬೀಸುವುವು. ಹಗಲಿನ ವೇಳೆಯಲ್ಲಿ ಸೂರ್ಯನ ಶಾಖಕ್ಕೆ ಪರ್ವತಗಳ ಇಳಿಜಾರು ಬೇಗ ಕಾಯುತ್ತದೆ. ಅದೇ ಸಂದರ್ಭದಲ್ಲಿ ಪರ್ವತಪಾದ ಅಥವಾ ಕಣಿವೆಯ ತಳಭಾಗವು ಪರ್ವತಗಳ ಇಳಿಜಾರಿನಷ್ಟು ಕಾಯುವುದಿಲ್ಲ. ಪರಿಣಾಮವಾಗಿ ಕಾಯ್ದ ಹಗುರವಾದ ವಾಯು ಇಳಿಜಾರನ್ನು ಅನುಸರಿಸಿ ಮೇಲೇರುತ್ತದೆ. ಇದನ್ನು ಆರೋಹಿಗಾಳಿ ಅಥವಾ ಕಣಿವೆ ಮಂದಮಾರುತಗಳೆಂದು ಕರೆಯುವರು. ಕೆಲವೊಮ್ಮೆ ಇಂಥ ಮಾರುತಗಳು ಪರ್ವತಗಳ ಶಿಖರಭಾಗ, ಕಡಿದಾದ ಇಳಿಜಾರು (ಎಸ್ಕಾರ್ಪ್‌ಮೆಂಟ್) ಮತ್ತು ಎತ್ತರ ಭೂಭಾಗಗಳ ಇಳಿಜಾರುಗಳಲ್ಲಿ ರಾಶಿ ಮೋಡಗಳನ್ನು ನಿರ್ಮಿಸುತ್ತವೆ. ಪರಿಣಾಮವಾಗಿ ಅತಿಶಾಖ ಮತ್ತು ಆರ್ದ್ರದಿನಗಳಲ್ಲಿ ಪರ್ವತ ಪ್ರದೇಶಗಳಿಗೆ ಅಪರಾಹ್ನ ವೇಳೆಗೆ ಗುಡುಗು ಮಿಂಚಿನಿಂದ ಕೂಡಿದ ಆರೋಹ ಮಳೆ ಸುರಿಯುವುದುಂಟು. ರಾತ್ರಿಯವೇಳೆ ಪರಿಸ್ಥಿತಿಯು ವಿರುದ್ಧವಾಗುವುದರಿಂದ ಪರ್ವತಗಳಿಂದ ಕಣಿವೆಯಕಡೆಗೆ ವಾಯು ಚಲಿಸುವುದು. ಇದನ್ನು ಪರ್ವತ ಮಂದಮಾರುತ ಅಥವಾ ಅವರೋಹಿಗಾಳಿ (ಕ್ಯಾಟಬ್ಯಾಟಿಕ್ ಮಾರುತ) ಎನ್ನುವರು.

ಆರೋಹಿಗಾಳಿ ಬೇಸಗೆಯಲ್ಲಿ ಸರ್ವೇಸಾಮಾನ್ಯ, ನಿರಂತರ ಹಾಗೂ ಪ್ರಬಲವಾಗಿರುತ್ತವೆ. ಬೇಸಗೆಯಲ್ಲಿ ಸೌರಜನ್ಯ ಶಾಖವು ತೀವ್ರವಾಗಿರುವುದರಿಂದ ಇಂಥ ಮಾರುತಗಳು ಸೂರ್ಯಾಸ್ತದ ಅನಂತರವೂ ಬೀಸುತ್ತವೆ. ಕೆಲವೊಮ್ಮೆ ರಾತ್ರಿಯೆಲ್ಲಾ ಬೀಸುವುದುಂಟು. ಹಿಮಾಲಯಗಳಲ್ಲಿ ಇಂಥ ವ್ಯವಸ್ಥೆ ಸರ್ವೇಸಾಮಾನ್ಯ. ಆಗಾಗ್ಗೆ ಅಧಿಕ ಮಳೆಯನ್ನು ಸುರಿಸುವುದುಂಟು. ಗಾಳಿಗಭಿಮುಖ ಭಾಗಗಳಿಗೆ ಮಳೆ ಹೆಚ್ಚು. (ಪಿ.ಎಂ.)

**ಆರ್ಕನಿ ದ್ವೀಪಗಳು:** ಈ ದ್ವೀಪ ಸ್ತೋಮಗಳು ಸ್ಕಾಟ್‌ಲೆಂಡಿನ ಉತ್ತರ ಕರಾವಳಿಗೆ 102 ಕಿಮೀ ದೂರದಲ್ಲಿವೆ. ಇದು 90ಕ್ಕಿಂತಲೂ ಹೆಚ್ಚು ದ್ವೀಪಗಳಿಂದ ಕೂಡಿದ ದ್ವೀಪಸ್ತೋಮ. ಇವುಗಳಲ್ಲಿ 24 ದ್ವೀಪಗಳಲ್ಲಿ ಮಾತ್ರ ಜನ ವಾಸಿಸುತ್ತಾರೆ. ಜನಸಂಖ್ಯೆ 19,245 (2001). ಕೆಲವು ದ್ವೀಪಗಳಲ್ಲಿ ಏಕಸ್ವಾಮ್ಯಕೃಷಿಯನ್ನು ಕಾಣಬಹುದು. ಭೂಮಿ ತಗ್ಗು, ನೆಲ ಕಲ್ಲು. ಏನೂ ಬೆಳೆಯದಷ್ಟು ಬಂಜರು. ಮೀನುಗಾರಿಕೆ ಒಂದು ಉದ್ಯೋಗವಾಗಿದೆ. ಇವುಗಳಲ್ಲಿ ಪೊಮೋನ ದ್ವೀಪ (ಮೇನ್ ಲ್ಯಾಂಡ್) ಅತಿ ದೊಡ್ಡದು.

ಕಿರ್‌ಕ್ವಾಲ್ ಹಾಗೂ ಸ್ಟ್ರಾಮ್ನೆಸ್ ಮುಖ್ಯ ಪಟ್ಟಣಗಳು. ಕಿರ್‌ಕ್ವಾಲ್‌ನಲ್ಲಿ ಹಿಂದಿನ ಕಾಲದ (11–12ನೆಯ ಶತಮಾನದ) ಚರ್ಚುಗಳನ್ನೂ ಶ್ರೀಮಂತರ ನಿವಾಸಗಳನ್ನೂ ಕಾಣಬಹುದು. ಇವುಗಳಲ್ಲಿ ಅನೇಕ ಕಟ್ಟಡಗಳು ಅವಶೇಷಗಳಾಗಿ ಉಳಿದಿವೆ. ಚರಿತ್ರಪೂರ್ವಕಾಲದ ಶಿಲಾ ಮತ್ತು ಕಂಚುಯುಗಗಳ ಅವಶೇಷಗಳೂ ಹೇರಳವಾಗಿವೆ.

ಇಲ್ಲಿಯ ವಾಯುಗುಣ ಶೀತವಲಯದ್ದಾದರೂ ಚಳಿಗಾಲದಲ್ಲಿ ಇಲ್ಲಿಗೆ ಸಮೀಪದಲ್ಲಿ ಹರಿಯುವ ಉತ್ತರ ಅಟ್ಲಾಂಟಿಕ್ ಡ್ರಿಫ್ಟ್ ಎಂಬ ಉಷ್ಣೋದಕ ಪ್ರವಾಹ ಮತ್ತು ಪಶ್ಚಿಮ ಮಾರುತಗಳು ಚಳಿಯನ್ನು ಬಹುಮಟ್ಟಿಗೆ ಕಡಿಮೆಮಾಡುತ್ತವೆ. ಬೇಸಗೆಯ ಅವಧಿ ಕೆಲವೇ ವಾರಗಳು ; ಆದರೂ ವಾಯುಗುಣ ಹಿತಕರವಾಗಿರುತ್ತದೆ.

ಆರ್ಕನಿ ದ್ವೀಪಗಳಲ್ಲಿ ದೊರಕುವ ಹಸುರು ಮತ್ತು ಕೆಂಪು ಮರಳು ಕಲ್ಲುಗಳು ಕಟ್ಟಡಗಳ ಕೆಲಸಕ್ಕೆ ಅನುಕೂಲವಾಗಿವೆ. ಕೆಲವೇ ಕಡೆಗಳಲ್ಲಿ ಕಾಣಸಿಗುವ ಮರಳು ಮಿಶ್ರಿತ ಮೆಕ್ಕಲು ಮಣ್ಣು ಫಲವತ್ತಾದ್ದು ; ಓಟ್ಸ್, ಬಾರ್ಲಿ, ಆಲೂಗಡ್ಡೆ ಮುಖ್ಯ ಕೃಷಿ ಉತ್ಪಾದನೆಗಳು. ಪಶುಪಾಲನೆಯಿಂದ ಹಾಲು, ಮಾಂಸ, ಮೊಟ್ಟೆ ಮುಂತಾದ ಆಹಾರ ಪದಾರ್ಥಗಳು ದೊರಕುತ್ತವೆ. ಅಗಾಧಪ್ರಮಾಣದಲ್ಲಿ ಪ್ರಾಣಿಗಳ ಆಹಾರವನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. (ಎಂ.ಎಸ್.ಎಂ.)

**ಆರ್ಕ್‌ಟಿಕ್ ವೃತ್ತ:** $66^{\circ}33'$ ಉತ್ತರ ಅಕ್ಷಾಂಶ; ಅಥವಾ ಉತ್ತರ ಮೇರು ಕೇಂದ್ರವಾಗಿ $23^{\circ}27'$ ತ್ರಿಜ್ಯವಾಗಿ ಎಳೆದ ವೃತ್ತ (ಉತ್ತರ ಮೇರುವೃತ್ತ). ಇದೇ ರೀತಿ ದಕ್ಷಿಣದಲ್ಲಿ ಮೇರು ಕೇಂದ್ರವಾಗಿ ಅಂಟಾರ್ಕ್‌ಟಿಕ್ ವೃತ್ತವಿದೆ.

ಭೂಮಿಯ ಅಕ್ಷ ಮತ್ತು ಕಕ್ಷಾತಲಗಳ (ಭೂಮಿ ಸೂರ್ಯನ ಸುತ್ತ ಪರಿಭ್ರಮಿಸುವ ಪಥದ ಹೆಸರು ಭೂಮಿಯ ಕಕ್ಷೆ) ನಡುವೆ $66^{\circ}33'$ ಬಾಗು ಇದೆ. ಈ ಕಾರಣದಿಂದ ಭೂವಾಸಿಗಳಿಗೆ ಒಂದು ವರ್ಷದಲ್ಲಿ (ಭೂಮಿಗೆ ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ) ಸೂರ್ಯ $23^{\circ}27'$ ($90^{\circ}-66^{\circ}\ 33' = 23^{\circ}27'$) ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳ (ಇವುಗಳಿಗೆ ಸಂಕ್ರಾತಿ ವೃತ್ತಗಳೆಂದು ಹೆಸರು) ನಡುವೆ ಆಂದೋಲಿಸಿದಂತೆ ಭಾಸವಾಗುವುದು. ಅಂದರೆ, ಸೂರ್ಯ ಸಂಕ್ರಾಂತಿವೃತ್ತಗಳ ಗಡಿಯನ್ನು ದಾಟಿ ಎಂದೂ ಸಾಗುವುದಿಲ್ಲ. ಇದರ ಪರಿಣಾಮವಾಗಿ ಈ ಗಡಿಗಳ ಒಳಗಿರುವವರಿಗೆ ಉದಾ: ಮೈಸೂರಿನವರಿಗೆ ವರ್ಷದಲ್ಲಿ ಎರಡು ಸಲ ಸೂರ್ಯ ನೆತ್ತಿಯ ಮೇಲೆ ಬರುವುದು. ಗಡಿ ವೃತ್ತಗಳ ಮೇಲೆ ಇರುವುವವರಿಗೆ ಒಂದೇ ಸಲ ಬರುವುದು; ಗಡಿಗಳಿಂದ ಹೊರಗೆ ಇರುವವರಿಗೆ ಎಂದೂ ಬರುವುದಿಲ್ಲ–ಇಷ್ಟು ಮಾತ್ರವಲ್ಲ, ಇವರ ರಾತ್ರಿ ಹಗಲುಗಳ ಏರಿಳಿತಗಳ ವ್ಯತ್ಯಾಸ ತೀವ್ರವಾಗಿರುವುದು. ಆರ್ಕ್‌ಟಿಕ್ ವೃತ್ತದಂತೆ ಅಂಟಾರ್ಕ್‌ಟಿಕ್ ವೃತ್ತ ಇನ್ನೊಂದು ಗಡಿ. ಅಲ್ಲಿರುವವರಿಗೆ ವರ್ಷದಲ್ಲಿ ಒಂದು ದಿವಸ (24 ಗಂಟೆ ಕಾಲ) ಸೂರ್ಯ ಮುಳುಗುವುದೇ ಇಲ್ಲ–ಸಂಪೂರ್ಣ ಹಗಲು; ಮುಂದೆ ಒಂದು ದಿವಸ (24 ಗಂಟೆ ಕಾಲ) ಸೂರ್ಯ ಮೂಡುವುದೇ ಇಲ್ಲ–ಪೂರ್ಣ ರಾತ್ರಿ. ಈ ಕಾರಣದಿಂದ ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ವೃತ್ತಗಳಿಗೆ ಪ್ರಾಧಾನ್ಯ ಬಂದಿದೆ. ಈ ವೃತ್ತಗಳಿಂದ ($66^{\circ}33'$) ಆಯಾ ಧ್ರುವಗಳವರೆಗೆ ($90^{\circ}$) ಇರುವವರಿಗೆ ಹಗಲು, ರಾತ್ರಿಗಳ ವ್ಯತ್ಯಾಸ ಅತಿ ತೀವ್ರ ಮಾತ್ರವಲ್ಲ, ವರ್ಷದಲ್ಲಿ ಹಲವಾರು ದಿವಸ ನಿರಂತರ ಹಗಲು ನಿರಂತರ ರಾತ್ರಿಯೂ ಇರುತ್ತವೆ. ಧ್ರುವ ಬಿಂದುಗಳಲ್ಲಿ ($90^{\circ}$ ಉ. ಮತ್ತು ದ.) 6 ತಿಂಗಳು ನಿರಂತರ ಹಗಲೂ 6 ತಿಂಗಳು ನಿರಂತರ ರಾತ್ರಿಯೂ ಇರುತ್ತವೆ.

ಭೂಮಧ್ಯರೇಖೆಯಿಂದ ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ವೃತ್ತಗಳ ದೂರ ಸು. 11120 ಕಿಮೀ; ಆರ್ಕ್‌ಟಿಕ್ ವೃತ್ತ ಉತ್ತರ ಅಮೆರಿಕ, ಯುರೋಪ್ ಮತ್ತು ಏಷ್ಯ ಖಂಡಗಳ ಮೂಲಕ ಹಾದುಹೋಗುತ್ತದೆ. ಆದ್ದರಿಂದ ಈ ಎಲ್ಲ ಖಂಡಗಳ ವಾಯುಗುಣ, ಸಸ್ಯಜೀವನ ಜನಜೀವನಕ್ರಮ ಈ ವೃತ್ತದ ಭಾಗದಲ್ಲಿ ಸಾಮಾನ್ಯವಾಗಿ ಒಂದೇ ರೀತಿ ಇದೆ. ಅತಿ ಶೀತ ಪ್ರದೇಶಗಳಾದ್ದರಿಂದ ಇಲ್ಲಿನ ಜನ ಬೆಚ್ಚಗಿರಲು ವಿಶಿಷ್ಟ ನಮೂನೆಯ ಉಡುಪುಗಳನ್ನು ಧರಿಸುತ್ತಾರೆ. (ಎಂ.ಎಸ್.)

**ಆರ್ಕ್‌ಟಿಕ್ ಸಾಗರ:** ಪ್ರಪಂಚದ ಮಹಾ ಸಾಗರಗಳಲ್ಲಿ ಇದು ನಾಲ್ಕನೆಯದು. ಉತ್ತರ ಧ್ರುವದ ಸುತ್ತಲಿನ (ಉ. ಅ. ಸು. $70^{0}$ ವರೆಗಿನ) ಜಲಭಾಗವನ್ನು ಆರ್ಕ್‌ಟಿಕ್ ಸಾಗರವೆಂದು ಕರೆಯಲಾಗಿದೆ. ಇದು ಅತ್ಯಂತ ಶೀತ ವಾಯುಗುಣ ಇರುವ ಜಲಪ್ರದೇಶ. ಆರ್ಕ್‌ಟಿಕ್ ಸಾಗರದ ವಿಸ್ತಾರ 13.7 ದ.ಲ. ಚ.ಕಿಮೀ. ಇದು ವೃತ್ತಾಕಾರವಾಗಿದ್ದು ಬೇರಿಂಗ್ ಜಲಸಂಧಿಯ ಮೂಲಕ ಪೆಸಿಫಿಕ್ ಸಾಗರದೊಡನೆ ಹಾಗೂ ಬ್ಯಾಫಿನ್ ಕೊಲ್ಲಿ ನಾರ್ವೆಜಿಯನ್ ಸಮುದ್ರ ಮೊದಲಾದವುಗಳ ಮೂಲಕ ಅಟ್ಲಾಂಟಿಕ್ ಸಾಗರದೊಡನೆ ಸಂಪರ್ಕವನ್ನು ಹೊಂದಿದೆ. ಇದರ ತೀರದ ಖಂಡಾವರಣ ಪ್ರದೇಶವು ವಿಸ್ತಾರವಾಗಿದೆ. ಬ್ಯಾಫಿನ್ ಕೊಲ್ಲಿ, ಗ್ರೀನ್‌ಲೆಂಡ್ ಸಮುದ್ರ ಮುಂತಾದ ಕಡೆಗಳಲ್ಲಿ ಇಂಥ ತಗ್ಗುಗಳ ಆಳ 2000 ಮೀ ಗಳಿಗಿಂತಲೂ ಹೆಚ್ಚು. ಈ ಸಮುದ್ರದಲ್ಲಿ ಅತ್ಯಂತ ಆಳವಾದ ಪ್ರದೇಶಗಳನ್ನು $77^{\circ}.44'$ ಉ. ಅ., $175^{\circ}$ ಪೂ.ರೇ. ಗುರುತಿಸಿದ್ದಾರೆ. ಆರ್ಕ್‌ಟಿಕ್ ಸಾಗರವನ್ನೂ ಅಟ್ಲಾಂಟಿಕ್ ಸಾಗರವನ್ನೂ ಪ್ರತ್ಯೇಕಿಸುವ ಅಂತರ್ಗತ ಶ್ರೇಣಿ ವೈವಿಲ್ ಥಾಂಪ್ಸನ್–ರಿಡ್ಜ್ ಕೇವಲ 600 ಮೀ ಆಳದಲ್ಲಿದೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ಮಧ್ಯೆ ಇರುವ ಇಂಥ ಜಲವಿಭಾಗದ ಆಳ 50 ಮೀ ಮಾತ್ರ.

ಸಮುದ್ರದ ತಳದಲ್ಲಿ ನಿಂತಿರುವ ಪದಾರ್ಥಗಳಲ್ಲಿ ಪ್ರಾಣಿ ಅಥವಾ ಸಸ್ಯಗಳಿಗೆ ಸಂಬಂಧಿಸಿದ ಪದಾರ್ಥಗಳು ಯಾವುವೂ ಇಲ್ಲ ; ಶೇ. 1 – ಶೇ. 4 ಕ್ಯಾಲ್ಸಿಯಂ ಕಾರ್ಬೊನೇಟ್ ಅವುಗಳಲ್ಲಿರುವುದು ತಿಳಿದುಬಂದಿದೆ. ಗ್ರೀನ್‌ಲೆಂಡ್ ಮತ್ತು ಸ್ಪಿಟ್ಸಬರ್ಗನ್ ಪ್ರಾಂತ್ಯಗಳಲ್ಲಿ ಇದರ ಪ್ರಮಾಣ ಇನ್ನೂ ಹೆಚ್ಚು. ನೀರಿನ ಮೇಲೆ ಸಮುದ್ರಪಾಚಿ (ಅಥವಾ ಶೈವಲ) ಹೆಚ್ಚಾಗಿ ಹರಡಿದೆ. ಅತ್ಯಂತ ಶೀತಪ್ರದೇಶವಾದ್ದರಿಂದ ಇಲ್ಲಿ ನೀರಿನ ಸಾಂದ್ರತೆ ಹೆಚ್ಚಾಗಿಲ್ಲ; ಇದಕ್ಕೆ

ಕಾರಣ, ಅದರ ಅತಿ ಕಡಿಮೆ ಲವಣತ್ವ. ಈ ಸಾಗರಕ್ಕೆ ಬಂದುಸೇರುವ ನದಿಗಳು ಸಿಹಿ ನೀರನ್ನು ತರುತ್ತವೆ; ನೀರು ಆವಿಯಾಗಿ ಲವಣತ್ವ ಹೆಚ್ಚಲು ಅವಕಾಶವೇ ಇಲ್ಲ. ಈ ಕಾರಣದಿಂದ ಆಯಾ ನಿಯತಕಾಲಿಕ ಮಾರುತಗಳ ಹೊಡೆತದಿಂದ ಮೇಲಿನ ನೀರು ಚಲಿಸುತ್ತದೆ; ಲವಣತೆಯು ಚಳಿಗಾಲದಲ್ಲಿ ಬೇಸಗೆಗಿಂತ ಹೆಚ್ಚು. ಇದಕ್ಕೆ ಕಾರಣ ಸಾಗರದ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟಿ ಲವಣ ನೀರಿನಲ್ಲಿ ಉಳಿಯುವುದು. ಇದಕ್ಕೆ ಬದಲಾಗಿ ಬೇಸಗೆಯಲ್ಲಿ ಅಗಾಧ ಪ್ರಮಾಣದ ಹಿಮಕರಗಿ ನೀರು ಸಾಗರವನ್ನು ಸೇರುವುದು. ಉತ್ತರ ಮೇರು ವೃತ್ತದ ಹತ್ತಿರ ಸೈಬೀರಿಯ ಮತ್ತು ಅಲಾಸ್ಕ ಕಡೆಯಿಂದ ಗ್ರೀನ್‌ಲೆಂಡ್ ಕಡೆಗೆ ಒಂದು ಪ್ರವಾಹವೇರ್ಪಟ್ಟು ಮೇರು ಪ್ರಾಂತ್ಯದ ಹಿಮಗಡ್ಡೆಗಳೂ ಇದರೊಂದಿಗೆ ತೇಲಿಹೋಗಿ, ದಕ್ಷಿಣಕ್ಕೆ ಹೋದಂತೆ ಕರಗಿ ಲ್ಯಾಬ್ರಡಾರ್ ಪ್ರವಾಹಕ್ಕೆ ಸೇರಿಕೊಳ್ಳುತ್ತದೆ. ಬೇರಿಂಗ್ ಜಲಸಂಧಿಯ ಮೂಲಕ ಒಯಾಶಿವೋ ಪ್ರವಾಹ ಪೆಸಿಫಿಕ್ ಸಾಗರವನ್ನು ಸೇರುವುದು.




ಮೇರು ಪ್ರದೇಶದ ಸಮುದ್ರಜಲದಲ್ಲಿ ಹೆಚ್ಚು ಆಳಕ್ಕೆ ಹೋದಂತೆಲ್ಲ ಉಷ್ಣತೆಯಲ್ಲಾಗಲಿ, ಲವಣತೆಯಲ್ಲಾಗಲಿ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ. ಸಮುದ್ರದ ಮೇಲ್ಭಾಗದಿಂದ ಸು. 200 ಮೀ ಆಳದವರೆಗೂ ನೀರು ಘನೀಭವಿಸಲು ಬೇಕಾಗುವ ಉಷ್ಣತೆಗಿಂತಲೂ (ಫ್ರೀಸಿಂಗ್ ಪಾಯಿಂಟ್) ಕಡಿಮೆಯಿರುತ್ತದೆ. ಸು. 60ಮೀ ಆಳದಲ್ಲಿ ಕನಿಷ್ಠ ಉಷ್ಣತೆಯ ಪ್ರಮಾಣ $19^0$ ಸೆ. ಇರುತ್ತದೆ. ಸು. 330 ರಿಂದ 400 ಮೀ ಆಳದಲ್ಲಿ ಉಷ್ಣತೆ ಸ್ವಲ್ಪ ಹೆಚ್ಚಾಗುತ್ತದೆ. ಬೇಸಿಗೆ, ಚಳಿಗಾಲಗಳಲ್ಲಿನ ವ್ಯತ್ಯಾಸ (ಮೇಲಿನ 2–3 ಮೀ ತಳದ ನೀರಿನಲ್ಲಿ ಹೊರತು) ಬಹಳ ಸ್ವಲ್ಪ. ಪೂರ್ವಭಾಗದಲ್ಲಿ ಶೈತ್ಯ ಕೊಂಚ ಹೆಚ್ಚು.

ಲವಣತೆ ಮೇಲ್ಭಾಗದಲ್ಲಿ ಸಾವಿರಕ್ಕೆ 29 ಅಥವಾ 30 ರಷ್ಟಿದ್ದು ಆಳ ಹೆಚ್ಚಿದಂತೆಲ್ಲ 200ಮೀ ಆಳದಲ್ಲಿ ಸಾವಿರಕ್ಕೆ 35 ರಷ್ಟಾಗುತ್ತದೆ. ಇನ್ನೂ ಹೆಚ್ಚಿನ ಆಳದಲ್ಲಿ ಯಾವ ಬದಲಾವಣೆಯೂ ಕಂಡುಬರುವುದಿಲ್ಲ.

ಆರ್ಕ್‌ಟಿಕ್ ಸಾಗರದ 2/3 ಭಾಗ ಚಳಿಗಾಲದಲ್ಲಿ ನೀರ್ಗಲ್ಲು ಅಥವಾ ಹಿಮಗಡ್ಡೆಗಳಿಂದ ಕೂಡಿದೆ. ಗ್ರೀನ್‌ಲೆಂಡಿನ ಹಿಮ ಪ್ರವಾಹಗಳಿಂದಲೂ ನೀರ್ಗಲ್ಲುಗಳು ಬಂದು ಸೇರುತ್ತವೆ. ಬೇಸಗೆಯಲ್ಲಿ ಈ ಹಿಮಗಡ್ಡೆಗಳು ಕರಗುವುವಾದರೂ ಹೆಚ್ಚುಭಾಗ ಉಷ್ಣೋದಕಪ್ರವಾಹಕ್ಕೆ ಸಿಕ್ಕಿ ಕರಗುತ್ತವೆ. ಅಲೆಗಳ ಹೊಡೆತದಿಂದಲೂ ನೀರ್ಗಲ್ಲು ಕರಗುವುದುಂಟು.

ಹಿಮಗಡ್ಡೆಯಿರುವ ಪ್ರದೇಶಗಳಲ್ಲಿ ಸಸ್ಯಗಳಾಗಲಿ, ಪ್ರಾಣಿಗಳಾಗಲಿ ಅತಿ ಕಡಿಮೆ; ತೀರ ಪ್ರದೇಶಗಳಲ್ಲಿ ಸಸ್ಯಗಳೂ ಪ್ರಾಣಿಗಳೂ ಇರುತ್ತವೆ. ಕಾಡ್, ಹ್ಯಾಲಿಬಟ್, ಸಾಲ್ಮನ್ ಮುಂತಾದ ಮೀನುಗಳು ಹೇರಳವಾಗಿ ದೊರಕುತ್ತವೆ. ಚಲಿಸುವ ಹಿಮಗಡ್ಡೆಗಳೊಂದಿಗೆ ಸೀಲ್ ಎಂಬ ಪ್ರಾಣಿಗಳು ಕೂಡ ಬರುತ್ತವೆ. ತಿಮಿಂಗಿಲಗಳು ವಿಶೇಷವಾಗಿಲ್ಲ. (ಪಿ.ಡಿ.ಎಂ.)

**ಆರ್ಟೀಸಿಯನ್ ಬಾವಿ:** ಶಾಶ್ವತ ಜಲಮಟ್ಟಕ್ಕಿಂತ ಮೇಲ್ಭಾಗದಲ್ಲಿ ನೀರು ದೊರೆಯುವ ಬಾವಿ. ಆರ್ಟೀಸಿಯನ್ ಚಿಲುಮೆ ಎಂದೂ ಕರೆಯಲ್ಪಡುವ ಆರ್ಟೀಸಿಯನ್ ಬಾವಿಗಳು ಪ್ರಪಂಚದ ಅನೇಕ ಕಡೆ ಜನರಿಗೆ ಮತ್ತು ಬೇಸಾಯಕ್ಕೆ ವರ್ಷದುದ್ದಕ್ಕೂ ನೀರನ್ನು ಒದಗಿಸುತ್ತಿದ್ದು ಪ್ರಕೃತಿ ನಮಗೆ ದಯಪಾಲಿಸಿದ ಅಕ್ಷಯಪಾತ್ರೆಗಳೆನಿಸಿವೆ. ಪ್ರಖ್ಯಾತ ಅಂತರ್ಜಲ ವಿಜ್ಞಾನಿ ಮೆಯಿನ್‌ಜರ್ ಈ ಬಾವಿಗಳ ಸ್ವರೂಪ ವ್ಯಾಖಾನ ನೀಡಿದ.

ಆಳದಲ್ಲಿ ಹುದುಗಿರುವ ನೀರು ಈ ಬಾವಿಗಳ ಮೂಲಕ ನಮಗೆ ಒದಗುತ್ತದೆ. ಇವು ಉಂಟಾಗಲು ಭೂಭಾಗದಲ್ಲಿ ಅಡಕವಾಗಿರುವ ಶಿಲೆಗಳ ಒಂದು ವಿಶೇಷ ವಿನ್ಯಾಸವು ಮುಖ್ಯ ಕಾರಣ. ಹೀಗಾಗಿ ಎಲ್ಲೆಂದರಲ್ಲಿ ಆರ್ಟೀಸಿಯನ್ ಬಾವಿಯನ್ನು ತೋಡಲು ಸಾಧ್ಯವಾಗಲಾರದು. ಒಂದು ನಿರ್ದಿಷ್ಟವಾದ ಶಿಲಾವಿನ್ಯಾಸವಿದ್ದ ಕಡೆ ಮಾತ್ರ ಇವು ಸಾಧ್ಯ. ಶಿಲೆಗಳು ಪ್ರಸ್ತರೀ ಸ್ವರೂಪವನ್ನು ಹೊಂದಿದ್ದು ಅಷ್ಟು ಅಡಕವಲ್ಲದ ರಚನೆಯುಳ್ಳ ಜಲಜ ಶಿಲೆಗಳಾಗಿರಬೇಕು. ಮರಳು ಶಿಲೆ ಇದಕ್ಕೆ ಉತ್ತಮ ಉದಾಹರಣೆ. ಇದು ವಿವಿಧ ಗಾತ್ರದ ಮರಳಿನ ಕಣಗಳಿಂದ ಕೂಡಿ ಕಣಗಳ ಮಧ್ಯೆ ನೀರು ಸುಲಭವಾಗಿ ಜಿನಗಲು ಅಥವಾ ಪ್ರವೇಶಿಸಲು ಅವಕಾಶವಿದೆ. ಈ ಬಗೆಯ ಸರಂಧ್ರ ಮತ್ತು ವ್ಯಾಪ್ಯಶಿಲೆಗಳು ಉತ್ತಮ ಜಲವಾಹಕವೂ ಹೌದು. ಇವುಗಳ ಇಕ್ಕೆಲಗಳಲ್ಲೂ ಅವ್ಯಾಪ್ಯ ಶಿಲೆಗಳು ಹರಡಿದ್ದಲ್ಲಿ ಇವುಗಳಲ್ಲಿ ಜಿನುಗುವ ನೀರು ಪೋಲಾಗದೆ ಶೇಖರವಾಗುತ್ತ ಹೋಗುತ್ತದೆ. ಸುಣ್ಣಶಿಲೆ, ಜೇಡು ಶಿಲೆ ಇತ್ಯಾದಿ ಜಲಜ ಶಿಲೆಗಳು ಅವ್ಯಾಪ್ಯ ಶಿಲೆಗಳು. ಆದರೆ ಕೇವಲ ಇಷ್ಟಾದರೆ ಸಾಲದು. ನೀರು ಜಿನುಗಿ ಶೇಖರವಾಗಬೇಕಾದರೆ ಈ ಶಿಲಾಪ್ರಸ್ತರಗಳು ಮಡಿಕೆ ಬಿದ್ದು ಬಾಣಲೆಯಂತಾದರೆ ಬಹು ಉತ್ತಮ. ಆಗ ನೆಲದ ಮೇಲಿನ ನೀರು ಮರಳು ಶಿಲಾಪ್ರಸ್ತರದ ಇಕ್ಕೆಲಗಳಲ್ಲೂ ಜಿನುಗಿ ತಗ್ಗು ಪ್ರದೇಶದಲ್ಲಿ ಶೇಖರವಾಗುತ್ತ ಹೋಗುತ್ತದೆ. ನೀರಿನ ಶೇಖರಣೆ ಹೆಚ್ಚಿದಂತೆಲ್ಲ ದ್ರವ ಒತ್ತಡವೂ ಅಧಿಕವಾಗುತ್ತ ಹೋಗುತ್ತದೆ. ಅಂಥ ಸ್ಥಳದಲ್ಲಿ ಬಾವಿಯನ್ನು ತೋಡಿದಲ್ಲಿ ಶೇಖರವಾಗಿರುವ ನೀರು ಒತ್ತಡ ಕಡಿಮೆಯಾಗುವ ಕಾರಣ ಮೇಲಕ್ಕೆ ಚಿಮ್ಮಿ ಬರುತ್ತದೆ. ಈ ಬಗೆಯ ಆರ್ಟೀಸಿಯನ್ ಬಾವಿಗಳನ್ನು ಅಧಿಕ ಒತ್ತಡ ಬಾವಿಗಳೆಂದು ಕರೆಯುತ್ತಾರೆ.




ಆರ್ಟೀಸಿಯನ್ ಬಾವಿ

ಕೆಲವು ಪ್ರದೇಶಗಳಲ್ಲಿ ಇಂಥ ಶಿಲಾಪ್ರಸ್ತರಗಳು ಬಾಣಲೆಯಂತಿರುವ ತಗ್ಗನ್ನು ತೋರ್ಪಡಿಸದೆ ಕೇವಲ ಒಂದೇ ದಿಕ್ಕಿಗೆ ನೆಲಮಟ್ಟದಿಂದ ವಾಲಿರುವದೂ ಉಂಟು. ಈ ಬಗೆಯ ಶಿಲಾವಿನ್ಯಾಸವೂ ಆರ್ಟೀಸಿಯನ್ ಬಾವಿಗೆ ಉತ್ತಮವಾದದ್ದೆ. ಒತ್ತಡ ಅಧಿಕವಾಗಿದ್ದಲ್ಲಿನ ಸನ್ನಿವೇಶದಲ್ಲೂ ನೀರು ಮೇಲಕ್ಕೆ ಚಿಮ್ಮುತ್ತದೆ.

ಅಮೆರಿಕ ಸಂಯುಕ್ತಸಂಸ್ಥಾನದ ಡಕೋಟ ಪ್ರಾಂತ್ಯದಲ್ಲಿ ಕೆಲವು ಚಿಲುಮೆಗಳ ನೀರು 65 ಮೀ ಎತ್ತರಕ್ಕೆ ಚಿಮ್ಮುತ್ತದೆ. ಇದೇ ಪ್ರಾಂತ್ಯದ ವೂನ್‌ಸಾಕೆಟ್ ಎಂಬಲ್ಲಿನ ಆರ್ಟೀಸಿಯನ್ ಬಾವಿಯ ಮೂಲಕ ಚಿಮ್ಮುವ ನೀರು ಬಹು ರಭಸದಿಂದ ಹೊರಬರುತ್ತದೆ. ರಭಸದಲ್ಲಿನ ದ್ರವ ಒತ್ತಡವನ್ನು ರೂಢಿಸಿಕೊಂಡು ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಯಿತು. ಅಲ್ಲದೆ ಒಂದು ಹಿಟ್ಟಿನ ಗಿರಣಿಯನ್ನೂ ಈ ವಿದ್ಯುಚ್ಛಕ್ತಿಯ ಮೂಲಕ ನಡೆಸುತ್ತಿದ್ದರು. ಆದರೆ ಈ ತೆರನಾದ ಬಾವಿಗಳ ವಿಸ್ತೀರ್ಣ ಅಷ್ಟಾಗಿರುವುದಿಲ್ಲ.

ದ್ರವ ಒತ್ತಡ ಕಡಿಮೆ ಇರುವ ಆರ್ಟೀಸಿಯನ್ ಬಾವಿಗಳನ್ನು ಕಡಿಮೆ ಒತ್ತಡದ ಆರ್ಟೀಸಿಯನ್ ಪ್ರವಾಹಗಳೆಂದೂ ಕರೆಯುತ್ತಾರೆ. ಇವುಗಳ ನೀರು ಎತ್ತರಕ್ಕೆ ಚಿಮ್ಮಲಾರದು; ಆದರೆ ವಿಸ್ತಾರವಾದ ಪ್ರದೇಶಗಳನ್ನು ಆಕ್ರಮಿಸುತ್ತದೆ. ಇವು ಹೆಚ್ಚು ನೀರನ್ನೂ ಒದಗಿಸುತ್ತವೆ. ಅಮೆರಿಕದ ನ್ಯೂ ಮೆಕ್ಸಿಕೊ ಪ್ರಾಂತ್ಯದ ಈ ಬಗೆಯ ಆರ್ಟೀಸಿಯನ್ ಬಾವಿಯಲ್ಲಿ ತಿಂಗಳಿಗೆ 6,000 ಗ್ಯಾಲನ್‌ಗಳಷ್ಟು ಹೆಚ್ಚಿನ ಪ್ರಮಾಣದಲ್ಲಿ ನೀರು ದೊರೆತ ದಾಖಲೆಗಳಿವೆ.

ಆರ್ಟೀಸಿಯನ್ ಬಾವಿಗಳನ್ನು ತೋಡುವ ಕ್ರಮ ಮತ್ತು ಅವುಗಳ ಬಳಕೆ ಪ್ರಾಚೀನ ಕಾಲದ (ಪ್ರ.ಶ.ಪೂ 2000 ವರ್ಷಕ್ಕೂ ಮುಂಚೆ) ಈಜಿಪ್ಟಿನವರಿಗೆ ತಿಳಿದಿತ್ತು. ಕ್ರೈಸ್ತಧರ್ಮದ ಇತಿಹಾಸದಲ್ಲಿ ಕೇಳಿಬರುವ ಮೋಸೆಸ್ ಇವರಿಂದಲೇ ಬಂಡೆಗಳಲ್ಲಿ ನೀರನ್ನು ಪಡೆಯುವ ವಿದ್ಯೆಯನ್ನು ಕಲಿತನೆಂದು ಪ್ರತೀತಿ. ಅದೇ ಕಾಲದ ಥೀಬನ್, ಷಾಬ್ ಮತ್ತು ಡಾಷೆಲ್ ಓಯಸಿಸ್‌ಗಳಿಗೆ ಅಸಂಖ್ಯಾತ ಆರ್ಟೀಸಿಯನ್ ಬಾವಿಗಳಿಂದ ನೀರು ಒದಗುತ್ತಿತ್ತೆಂಬ ಅಂಶವನ್ನೂ ಪತ್ತೆ ಹಚ್ಚಲಾಗಿದೆ. ಅಲ್ಲದೆ ಆ ಕಾಲದಲ್ಲೇ ಕೆಲವು ಆರ್ಟೀಸಿಯನ್ ಬಾವಿಗಳನ್ನು 150 ಮೀಗಿಂತ ಆಳಕ್ಕೆ ತೋಡಲಾಗಿತ್ತು.

ಯುರೋಪಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಆರ್ಟೀಸಿಯನ್ ಬಾವಿಗಳನ್ನು ತೋಡುವುದು ಮೊದಲಾಯಿತು. ಮೊತ್ತಮೊದಲನೆಯ ಬಾವಿಯನ್ನು ದಕ್ಷಿಣ ಫ್ರಾನ್ಸಿನ ಆರ್ಟಾಯ್ಸ್ ಪ್ರಾಂತ್ಯದ ಲಿಲಿಯರ್ಸ್ ಬಳಿ 1126ರಲ್ಲಿ ತೋಡಲಾಯಿತು. ಹೀಗಾಗಿ ಆ ಪ್ರಾಂತ್ಯದ ಹೆಸರಿನ ನಂಟು ಈ ಬಗೆಯ ಬಾವಿಗಳಿಗೆ ಅಂಟಿ ಮುಂದೆ ಆರ್ಟೀಸಿಯನ್

ಬಾವಿ ಎಂದು ಕರೆಯಲ್ಪಟ್ಟವು. ಮುಂದೆ 17ನೆಯ ಶತಮಾನದಲ್ಲಿ ಇಟಲಿ ಮತ್ತು ಆಸ್ಟ್ರಿಯ ದೇಶಗಳಲ್ಲಿ ಅಸಂಖ್ಯಾತ ಬಾವಿಗಳನ್ನು ತೋಡಿದರು. ಇಂದಿಗೂ ಈ ಬಾವಿಗಳಿಂದ ಅಲ್ಲಿನ ಜನರಿಗೆ ಮಹೋಪಕಾರವಾಗುತ್ತಿದೆ.

ಈಚಿನ ವರ್ಷಗಳಲ್ಲಿ ಆಧುನಿಕ ವೈಜ್ಞಾನಿಕ ವಿಧಾನಗಳನ್ನನುಸರಿಸಿ ಹೊಸ ಹೊಸ ಭೂಭೌತ ಯಂತ್ರೋಪಕರಣಗಳ ಸಹಾಯದಿಂದ ಆಧುನಿಕ ಭಗೀರಥರು ಪಾತಾಳ ಗಂಗೆಯನ್ನು ಹೊರತಂದಿದ್ದಾರೆ. ಈ ಮೂಲಕ ಪ್ರಪಂಚದ ಅನೇಕ ಭಾಗಗಳಲ್ಲಿ ಸಹಸ್ರಾರು ಆರ್ಟೀಸಿಯನ್ ಬಾವಿಗಳ ಜನಕರಾಗಿದ್ದಾರೆ. ಇದು ಸಾಲದೆ ಹಲವಾರು ಆರ್ಟೀಸಿಯನ್ ಪ್ರವಾಹಗಳನ್ನೇ (ಗುಪ್ತನದಿ) ಪತ್ತೆ ಹಚ್ಚಿದ್ದಾರೆ. ಉತ್ತರ ಅಮೆರಿಕ ಮತ್ತು ಕೆನಡ ದೇಶಗಳಲ್ಲಿ ಕಂಡುಬರುವ ಡಕೋಟ ಮರಳು ಶಿಲಾಸ್ತರ ಈ ದಿಸೆಯಲ್ಲಿ ಮಹತ್ತ್ವಪೂರ್ಣವಾದುದು. ಇದು ಮಧ್ಯ ಅಮೆರಿಕ, ಪಶ್ಚಿಮ ಅಮೆರಿಕ ಮತ್ತು ಕೆನಡಗಳಲ್ಲೂ ಸಹಸ್ರಾರು ಕಿಮೀ ವಿಸ್ತೀರ್ಣವಾದ ಪ್ರದೇಶಗಳಲ್ಲಿ ವ್ಯಾಪಿಸಿದೆ. ಇದು ಎತ್ತರದ ರಾಕಿ ಪರ್ವತಶ್ರೇಣಿಗಳಲ್ಲಿ ಮೊದಲಾಗಿ ಪೂರ್ವದ ಕಡೆಗೆ ಇಳಿವೋರೆಯನ್ನು ತೋರಿಸುತ್ತ ಸಾಸ್ಕಚವಾನ್, ಮಾಂಟಾನ, ಡಕೋಟ, ವ್ಯೋಮಿಂಗ್, ನೆಬ್ರಾಸ್ಕ ಮತ್ತು ಕಾನ್ಸಾಸ್ ಪ್ರಾಂತ್ಯಗಳಲ್ಲೆಲ್ಲ ನೆಲಮಟ್ಟದಿಂದ ಆಳಕ್ಕೆ ಹುದುಗಿದೆ. ಪರ್ವತ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ಮರಳು ಶಿಲೆಯಲ್ಲಿ ಸುಲಭವಾಗಿ ವ್ಯಾಪಿಸಿ ಆ ಮೂಲಕ ನಾನಾಕಡೆ ತೋಡಿರುವ ಸಹಸ್ರಾರು ಆರ್ಟೀಸಿಯನ್ ಬಾವಿಗಳ ಮೂಲವಾಗಿದೆ. ಇದಲ್ಲದೆ ಅರ್ಜೆಂಟೈನ ಮತ್ತು ಆಸ್ಟ್ರೇಲಿಯದ ಅನೇಕ ಪ್ರಾಂತ್ಯಗಳಲ್ಲಿ ಇಂದಿಗೂ ಆರ್ಟೀಸಿಯನ್ ಬಾವಿಗಳೇ ಜನರಿಗೆ ಮತ್ತು ಬೇಸಾಯಕ್ಕೆ ಮುಖ್ಯ ಆಸರೆ. ಭಾರತದ ಪಾಂಡಿಚೆರಿಯ ಸುತ್ತುಮುತ್ತ ಹಲವಾರು ಆರ್ಟೀಸಿಯನ್ ಬಾವಿಗಳಿವೆ. (ಬಿ.ವಿ.ಜಿ.)

**ಆರ್ಡೊವಿಶಿಯನ್ ಸ್ತೋಮ:** ಪುರಾತನ ಜೀವಿಯುಗದ (ಪೆಲಿಯೊಜೋಯಿಕ್) (ಸು. 600–230 ದಶಲಕ್ಷ ವರ್ಷಗಳವರೆಗೆ ಹಿಂದಿನ ಕಾಲ) ಎರಡನೆಯ ವ್ಯವಸ್ಥೆಯ ಕಲ್ಲುಗಳಿಗೆ ಭೂವಿಜ್ಞಾನದಲ್ಲಿ ಇರುವ ಹೆಸರು. ಕೇಂಬ್ರಿಯನ್ ಅನಂತರ ಆರ್ಡೊವಿಶಿಯನ್ ಮತ್ತು ಇದರ ಅನಂತರ ಸೈಲೂರಿಯನ್ ಬರುತ್ತದೆ. ಆರ್ಡೊವಿಶಿಯನ್ ಯುಗದ ಕಾಲ ಸು. 500–425 ದಶಲಕ್ಷ ವರ್ಷಗಳಷ್ಟು ಹಿಂದೆ.

**ಆರ್ಥಿಕ ಆಸರೆ ಮತ್ತು ಆರ್ಥಿಕೇತರ ಆಸರೆ:** ಇದನ್ನು ವಿವಿಧ ಆರ್ಥಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಶ್ರಮ ಬಲದ ಪ್ರಮಾಣಾನುಗುಣ ಹಂಚಿಕೆಯ ಆಧಾರದ ಮೇಲೆ ಅಧ್ಯಯನ ಮಾಡಲಾಗುತ್ತದೆ. ಆರ್ಥಿಕ ಆಸರೆ ಮತ್ತು ಆರ್ಥಿಕೇತರ ಆಸರೆಗಳ ಭಿನ್ನತೆಯು ಮೂಲ ಅಥವಾ ರಫ್ತು ಆಧಾರಿತ ಆರ್ಥಿಕ ಚಟುವಟಿಕೆಗಳು ಮತ್ತು ಅಮೂಲ ಅಥವಾ ಸ್ಥಳೀಯ ಆರ್ಥಿಕ ಚಟುವಟಿಕೆಗಳು ಎಂಬುದಾಗಿ ಪ್ರತ್ಯೇಕಿಸಲಾಗುವುದು. ಮೂಲ ಮತ್ತು ಅಮೂಲ ಆರ್ಥಿಕ ಚಟುವಟಿಕೆಗಳ ವ್ಯತ್ಯಾಸವು ಯಾವುದೇ ನಗರದಲ್ಲಿನ ನಿರ್ದಿಷ್ಟ ಆರ್ಥಿಕ ಚಟುವಟಿಕೆಗಳ ಉತ್ಪತ್ತಿಯು ಆ ನಗರಕ್ಕೆ ಆದಾಯವು ಪ್ರವಹಿಸುವಂತೆ ಮಾಡುವುದರ ಮೂಲಕ ನಗರವು ಸಮೃದ್ಧಿಯಾಗಿರುವಂತೆ ಮಾಡುತ್ತದೆ. ಮೂಲ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾರುಕಟ್ಟೆಗಳು ಸಾಮಾನ್ಯವಾಗಿ ನಗರದ ಹೊರಗೆ ಕಂಡುಬರುತ್ತವೆ. ಅಂದರೆ ಈ ರೀತಿಯ ಆರ್ಥಿಕ ಚಟುವಟಿಕೆಗಳು ರಫ್ತು ಆಧಾರಿತ ಚಟುವಟಿಕೆಗಳಾಗಿರುತ್ತವೆ

ಆರ್ಥಿಕ ಆಸರೆ ಪರಿಕಲ್ಪನೆಯಲ್ಲಿ ಸಮುದಾಯದ ಆರ್ಥಿಕ ಚಟುವಟಿಕೆಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು ಅವುಗಳೆಂದರೆ, ಆರ್ಥಿಕ ಆಸರೆ ಮತ್ತು ಆರ್ಥಿಕೇತರ ಆಸರೆ. ಆರ್ಥಿಕ ಆಸರೆ ಚಟುವಟಿಕೆಯು ರಾಷ್ಟ್ರೀಯ ಆರ್ಥಿಕತೆಗೆ ತನ್ನದೇ ಆದ ಕೊಡುಗೆ ಕೊಡವುದರ ಜೊತೆಗೆ ಕೇಂದ್ರಗಾಮಿ ಸಂಪನ್ಮೂಲ ಪ್ರವಹಿಸುವಿಕೆಯನ್ನು ಸೃಷ್ಟಿಸುತ್ತದೆ. ಅಲ್ಲದೆ ನಗರದ ಬೆಳವಣಿಗೆ ಪ್ರೋತ್ಸಾಹಿಸುತ್ತದೆ.

ಆರ್ಥಿಕೇತರ ಆಸರೆಯು ನಗರದ ಅಗತ್ಯ ಸೇವೆಗಳನ್ನು ಒದಗಿಸಿ ಕೊಡುವುದರ ಮೂಲಕ ನಗರದ ಸ್ಥಳೀಯ ಜನತೆಗೆ ಸೇವೆ ಸಲ್ಲಿಸುತ್ತದೆ. ಆರ್ಥಿಕ ಆಸರೆ ಕ್ಷೇತ್ರವು ನಗರ ಚಟುವಟಿಕೆಗೆ ಸಂಬಂಧಿಸಿದಂತೆ ರಫ್ತು ಮಾಡಲು ಅಗತ್ಯ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತದೆ. ಆರ್ಥಿಕೇತರ ಕ್ಷೇತ್ರವು ಸ್ಥಳೀಯ ಅಗತ್ಯದ ಅನುಕೂಲತೆಗನುಗುಣವಾಗಿ ಹೋಲಿಕೆ ವೆಚ್ಚ ಸಾಮಾನ್ಯವಾಗಿ ಕಂಡುಬರುವ ಸರಕು ಮತ್ತು ಸಾಮಗ್ರಿಗಳನ್ನು ಉತ್ಪಾದಿಸುವಲ್ಲಿ ತೊಡಗಿಸಿಕೊಂಡಿರುತ್ತದೆ.

ರಫ್ತು ಆಧಾರಿತ ಆರ್ಥಿಕ ಚಟುವಟಿಕೆಯು ಅಲ್ಪಾವಧಿಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿರುವುದು ಹಾಗೂ ನಗರದ ರಫ್ತು ಆಧಾರಿತ ಚಟುವಟಿಕೆಗೆ ಆದ್ಯತೆ ಕೊಡಲಾಗಿರುತ್ತದೆ. ಇದು ತನ್ನದೇ ಆದ ಮಿತಿಯನ್ನು ಹೊಂದಿದ್ದು ನಗರದ ಆರ್ಥಿಕತೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಅದು ನಗರದ ಆರ್ಥಿಕ ಸ್ವರೂಪವನ್ನು ಬದಲಾಯಿಸಬಹುದು.

ಆರ್ಥಿಕ ಆಸರೆಯ ಚಟುವಟಿಕೆಯು ರಫ್ತು ಆಧಾರಿತವಾಗಿದ್ದರೆ ಆರ್ಥಿಕೇತರ ಆಸರೆಯು ಸ್ಥಳೀಯ ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಆರ್ಥಿಕ ಆಸರೆ ಚಟುವಟಿಕೆಗಳು ನಗರದಿಂದಾಚೆ ತನ್ನ ಉತ್ಪನ್ನಗಳಿಗೆ ಅಗತ್ಯ ಮಾರುಕಟ್ಟೆಗಳನ್ನು ಹೊಂದಿದ್ದು, ಆದಾಯವು ನಗರಕ್ಕೆ ಪ್ರವಹಿಸುವಂತೆ ಮಾಡುವುದು. ಆದರೆ ಆರ್ಥಿಕೇತರ ಆಸರೆ ಚಟುವಟಿಕೆಗಳು ಸ್ಥಳೀಯವಾಗಿದ್ದು ತನ್ನ ಉತ್ಪನ್ನಗಳಿಗೆ ಸ್ಥಳೀಯ ಮಾರುಕಟ್ಟೆಗಳನ್ನು ಅವಲಂಬಿಸಿದ್ದು ನಗರ ಬೆಳವಣಿಗೆ ಮತ್ತು ನಿರ್ವಹಣೆಗೆ ಹೆಚ್ಚಿನ ಪ್ರೇರಣೆ ನೀಡುತ್ತದೆ. ಉದಾಹರಣೆ: ಅಮೆರಿಕದ ಡೆಟ್ರಾಯಿಟ್ ಪ್ರಾಂತ್ಯದಲ್ಲಿರುವ ಮೋಟಾರು ವಾಹನ ತಯಾರಿಕೆಯ ಕೈಗಾರಿಕೆಗಳು, ವಾಹನಗಳನ್ನು ಉತ್ಪಾದಿಸಿ ಬೇರೆ ದೇಶಗಳಿಗೆ ರಫ್ತು ಮಾಡುತ್ತವೆ. ಹೊರ ರಾಷ್ಟ್ರಗಳಿಂದ ಆದಾಯವು ಹರಿದು ಬರುತ್ತವೆ. ಆದರೆ ಆರ್ಥಿಕೇತರ ಚಟುವಟಿಕೆಗಳಾದ ಬ್ಯಾಂಕು, ಲಾಂಡ್ರಿ, ಸಲೂನ್ ಮುಂತಾದವುಗಳು ನಗರದ ಜನತೆಗೆ ಅಗತ್ಯ ಸೇವೆಗಳನ್ನು ಒದಗಿಸಿಕೊಡುತ್ತವೆ. ಆದ್ದರಿಂದ ಇವುಗಳನ್ನು ಆರ್ಥಿಕೇತರ ಆಸರೆ ಚಟುವಟಿಕೆಗಳೆಂದು ಕರೆಯಲಾಗಿದೆ. ದೀರ್ಘಾವಧಿಯಲ್ಲಿ ಈ ಸೇವೆಗಳು ಸಹ ನಗರದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಬಹುದು. (ಡಿ.ಆರ್.)

**ಆರ್ಥರ್ ಎಚ್. ರಾಬಿನ್‌ಸನ್:** 1915–2004. ಅಮೆರಿಕದ ಭೂಗೋಳವಿಜ್ಞಾನಿ ಮತ್ತು ನಕ್ಷಾಶಾಸ್ತ್ರಜ್ಞ. ಇವರು ಕೆನಡದ ಕ್ವಿಬೆಕ್ ಪ್ರಾಂತ್ಯದ ಮಾಂಟ್ರಿಯಲ್ ನಗರದಲ್ಲಿ ಜನಿಸಿದರು. ಇವರ ವ್ಯಾಸಂಗ ಮತ್ತು ಸಂಶೋಧನೆಗಳು ಹೆಚ್ಚಾಗಿ ಅಮೆರಿಕದ ವಿಸ್ಕಾನ್‌ಸಿನ್–ಮೆಡಿಸನ್ ವಿಶ್ವವಿದ್ಯಾಲಯದಲ್ಲಿ ನಡೆಯಿತು.

ಎರಡನೆಯ ಮಹಾಯುದ್ಧದಲ್ಲಿ ಯುದ್ಧತಂತ್ರ ವಿಭಾಗದ ಭೂಪಟ ರಚನೆಯಲ್ಲಿ ನಿರ್ದೇಶಕರಾಗಿ ಕೆಲಸಮಾಡಿದರು. 1941ರಲ್ಲಿ ಇವರು ಯುದ್ಧತಂತ್ರ ಸೇವೆ ಕಛೇರಿಗೆ ಸೇರಿದಾಗ ಯಾವ ನಕ್ಷಾಶಾಸ್ತ್ರಜ್ಞರೂ ಇರಲಿಲ್ಲ. ಈ ಸಂದರ್ಭಲ್ಲಿ ಇವರು ಕೆಲವು ಭೂಗೋಳ ವಿಜ್ಞಾನಿಗಳನ್ನು ಭೂಪಟ ರಚನೆಯ ಈ ಕೆಲಸದಲ್ಲಿ ತೊಡಗಿಸಿಕೊಂಡು ಅವರ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿದರು.



ಇವರು ತಮ್ಮ ಸಹೋದ್ಯೋಗಿಗಳೊಡನೆ ಸೇರಿ ಸು. 5000 ಭೂಪಟಗಳನ್ನು ಕೈಯಲ್ಲಿ ರಚಿಸಿದರು. 1943–44ರಲ್ಲಿ ಕ್ವಿಬೆಕ್ ಮತ್ತು ಕೈರೋ ಪಟ್ಟಣಗಳಲ್ಲಿ ನಡೆದ ಯುದ್ಧದ ಒಕ್ಕೂಟ ರಾಷ್ಟ್ರಗಳ ಸಮ್ಮೇಳನದ ಭೂಪಟ ರಚನೆಯಲ್ಲಿ ಅಮೆರಿಕ ದೇಶದ ಮುಖ್ಯಸ್ಥರಾಗಿ ಭಾಗವಹಿಸಿದ್ದರು. ಇವರು ತಮ್ಮ ಕ್ಷೇತ್ರದಲ್ಲಿನ ಸಾಧನೆಗಾಗಿ 1946ರಲ್ಲಿ ಸೈನ್ಯದಳದ ಪಾರಿತೋಷಿಕವನ್ನು ಅಮೆರಿಕ ಸೈನ್ಯದಿಂದ ಪಡೆದರು.

ರಾಬಿನ್‌ಸನ್‌ರ ಕೃತಿ ಇವರ ಹೆಸರಿನಲ್ಲಿಯೇ ರಚಿತವಾದ ರಾಬಿನ್‌ಸನ್ ನಕ್ಷಾ ಪ್ರಕ್ಷೇಪವಾಗಿದೆ. 1961ರಲ್ಲಿ ರ‍್ಯಾಂಡ್ ಮ್ಯಾಕ್‌ನ್ಯಾಲಿ ಕಂಪನಿಯವರು ಪ್ರಪಂಚದ ಭೂಪಟವನ್ನು ರಚಿಸಲು ಹೊಸದೊಂದು ಪ್ರಕ್ಷೇಪವನ್ನು ಆಯ್ಕೆ ಮಾಡಲು ರಾಬಿನ್‌ಸನ್ ಅವರಿಗೆ ಸೂಚಿಸಿದ್ದರು. ಇವರು ಜನಸಾಮಾನ್ಯರಿಗೆ ಭೂಪಟವನ್ನು ರಚಿಸಿದರು. ಇವರು ಉತ್ತಮ ಬರಹಗಾರ ಮತ್ತು ನಕ್ಷಾಶಾಸ್ತ್ರರಚನೆಯ ಪ್ರಭಾವಶಾಲಿ ತಂತ್ರಜ್ಞರಾಗಿದ್ದರು. 60ಕ್ಕೂ ಹೆಚ್ಚು ಪ್ರಬುದ್ಧ ಲೇಖನಗಳನ್ನೂ ನಕ್ಷಾಶಾಸ್ತ್ರದ ತಂತ್ರಗಳ ಬಗ್ಗೆ ಅನೇಕ ಗ್ರಂಥಗಳನ್ನೂ ರಚಿಸಿದ್ದಾರೆ. (ಡಿ.ವೈ.)

**ಆರ್ಥಿಕ ಭೂಗೋಳವಿಜ್ಞಾನ:** ಆರ್ಥಿಕ ಭೂಗೋಳಶಾಸ್ತ್ರ ಪದವನ್ನು ಮೊದಲು 1882ರಲ್ಲಿ ಜರ್ಮನಿಯ ಗೋಟ್ಜ್ ಬಳಸಿದ. ಉತ್ಪಾದನೆ, ಹಂಚಿಕೆ ಹಾಗೂ ಅನುಭೋಗ ಮುಂತಾದ ಆರ್ಥಿಕ ಚಟುವಟಿಕೆಗಳ ಪ್ರಾದೇಶಿಕ ವ್ಯವಸ್ಥೆಯನ್ನು ಅಭ್ಯಸಿಸುವುದು ಇದರ ಕ್ಷೇತ್ರವಾಗಿದೆ. ಅರ್ಥಶಾಸ್ತ್ರದ ಪ್ರಭಾವವನ್ನು ಈ ವಿಭಾಗ ಹೆಚ್ಚು ಒಳಗೊಂಡಿದೆ. ವಸ್ತುಗಳು, ಸೇವೆಗಳ ಉತ್ಪಾದನೆಯಲ್ಲಿ ನಿರತವಾಗಿರುವ ಮಾನವ ಚಟುವಟಿಕೆಗಳ ಹಂಚಿಕೆಯಲ್ಲಿ ಕಂಡುಬರುವ ಸ್ಥಾನೀಯ ವ್ಯವಸ್ಥೆಯನ್ನು ಇದು ವಿವರಿಸುವುದು. ಪ್ರಾರಂಭದಲ್ಲಿ ವ್ಯವಸ್ಥಿತ ವಿಧಾನವನ್ನು ಅನುಸರಿಸಿ ಪ್ರತಿಯೊಂದು ವಸ್ತುಗಳು ಪ್ರಪಂಚದಲ್ಲಿ ಹಂಚಿಕೆಯಾಗಿರುವ ವಿಧಾನವನ್ನು ಪರಿಶೀಲಿಸಲಾಗುತ್ತಿತ್ತು. ಉದಾ: ಪ್ರಪಂಚದಲ್ಲಿ ಗೋಧಿ, ಬತ್ತ, ಕಬ್ಬಿಣದ ಅದಿರು, ಪೆಟ್ರೋಲಿಯಂ, ಕಲ್ಲಿದ್ದಲು ಮುಂತಾದ ವಸ್ತುಗಳ ಉತ್ಪಾದನೆಯ ಹಂಚಿಕೆಯನ್ನು ಪ್ರಾಕೃತಿಕ ಪರಿಸರಕ್ಕೆ ಒತ್ತು ನೀಡಿ ವಿವರಿಸಲಾಗುತ್ತಿತ್ತು. ಈ ಹಂಚಿಕೆಯ ಆಧಾರದ ಮೇಲೆ ಪ್ರಪಂಚವನ್ನು ಹಲವಾರು ವಲಯಗಳನ್ನಾಗಿ ವಿಂಗಡಿಸಲಾಗುತ್ತಿತ್ತು. ಇಂದಿಗೂ ಈ ವಿಧಾನವು ಭೂಗೋಳಶಾಸ್ತ್ರದ ಆರಂಭಿಕ ಹಂತಗಳಲ್ಲಿ ರೂಢಿಯಲ್ಲಿದೆ.

ಇಂದು ಇದರ ವಿಶ್ಲೇಷಣೆಯಲ್ಲಿ ಅಪಾರ ಬದಲಾವಣೆಗಳನ್ನು ಕಾಣಬಹುದು. ಸರ್ಕಾರದ ನೀತಿ–ನಿಯಮಗಳು ಹಾಗೂ ವಿವಿಧ ಸಂಚಾರ ಮಾಧ್ಯಮಗಳಿಂದಾಗಿ ವಸ್ತುಗಳು ಹಾಗೂ ಸೇವೆಗಳ ಉತ್ಪಾದನೆ, ಹಂಚಿಕೆ ಹಾಗೂ ಬೆಲೆಯಲ್ಲಿ ಉಂಟಾಗುವ ಬದಲಾವಣೆಗಳ ಅಧ್ಯಯನವನ್ನು ಇದು ಒಳಗೊಂಡಿರುವುದು. ಈ ಬೆಳವಣಿಗೆಗಳಿಂದ ಆರ್ಥಿಕ ಚಟುವಟಿಕೆಗಳು, ಲಾಭದಾಯಕವಾದ ಕೆಲವೇ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುತ್ತವೆ. ಹೀಗಾಗಿ ಆರ್ಥಿಕವಾಗಿ ಲಾಭದಾಯಕ ಸಿದ್ಧಾಂತಗಳನ್ನು ಆರ್ಥಿಕ ಚಟುವಟಿಕೆಗಳ ಹಂಚಿಕೆಯನ್ನು ನಿರೂಪಿಸಲು ರೂಪಿಸಲಾಯಿತು. ಭೂಗೋಳಶಾಸ್ತ್ರದ ಮೊದಲ ಸಿದ್ಧಾಂತಗಳು ಪ್ರತಿಪಾದಿತವಾದುದು ಈ ವಿಭಾಗದಲ್ಲಿ. ಕ್ರಿಸ್ಟಾಲರನ ಕೇಂದ್ರಸ್ಥಳ ಸಿದ್ಧಾಂತ ಅರ್ಥಶಾಸ್ತ್ರದ ಪ್ರಭಾವದಿಂದಾಗಿ ಪ್ರತಿಪಾದಿತಗೊಂಡಿತು. ಅಲ್ಲದೆ ಅರ್ಥಶಾಸ್ತ್ರದಲ್ಲಿ ಪ್ರತಿಪಾದಿತವಾದ ಹಲವಾರು ಸಿದ್ಧಾಂತಗಳನ್ನು ಇದರಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ವಾನ್‌ಥ್ಯೂನನ್‌ನ ವ್ಯವಸಾಯಸ್ಥಾನ ಸಿದ್ಧಾಂತವನ್ನು ಪ್ರತಿಪಾದಿಸುವ ದಿ ಐಸೊಲೇಟೆಡ್ ಸ್ಟೇಟ್(1933), ವೆಬ್ಬರ್, ಲೋಶ್, ಸ್ಮಿತ್ ಅವರುಗಳ ಕೈಗಾರಿಕಾ ಸ್ಥಾನ ಸಿದ್ಧಾಂತಗಳು ಈ ಬಗೆಯ ಸಿದ್ಧಾಂತಗಳ ಬಳಕೆಗೆ ಅಡಿಪಾಯವನ್ನು ಹಾಕಿದವು. ಇಂದು ರೂಪಿತಗೊಳ್ಳುತ್ತಿರುವ ಸಿದ್ಧಾಂತಗಳು ನಗರ–ಕೈಗಾರಿಕಾ ಸಂಕೀರ್ಣತೆಗಳ ವಿಶ್ಲೇಷಣೆಯನ್ನು ಒಳಗೊಂಡಿರುವವು. (ಆರ್.ಎನ್.)

**ಆರ್ಥಿಕ ಮಿತವ್ಯಯ ಪರಿಮಾಣ:** ಕೈಗಾರಿಕೆಗಳ ಸ್ಥಾನೀಕರಣವನ್ನು ಕುರಿತು ಅಧ್ಯಯನ ಮಾಡುವಾಗ ಐಸಾರ್ಡ್‌ರವರು ಈ ರೀತಿಯ ಆರ್ಥಿಕ ಪರಿಕಲ್ಪನೆಯನ್ನು ಹೇಳಿದ್ದಾರೆ. ಅಂದರೆ, ಒಂದು ಪ್ರದೇಶದಲ್ಲಿ ವಿಶೇಷವಾಗಿ ಸ್ಥಾನೀಕರಣ ಹೊಂದ ಬಯಸುವ ಕೈಗಾರಿಕೆಗಳು ಅನೇಕ ಸ್ಥಾನೀಕರಣದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸ್ಥಾನೀಕರಣ ಹೊಂದುತ್ತವೆ. ಸ್ಮಿತ್‌ರವರ ಕೈಗಾರಿಕಾ ಸ್ಥಾನೀಕರಣ ಸಿದ್ಧಾಂತದ ಪ್ರಕಾರ, ಬೆಂಗಳೂರಿನಂಥ ಒಂದು ದೊಡ್ಡ ನಗರದಲ್ಲಿ ಅನೇಕ ಕೈಗಾರಿಕೆಗಳು ಒಟ್ಟುಗೂಡಿ ನೆಲೆಗೊಂಡಾಗ ಕೆಲವು ಅನುಕೂಲಗಳನ್ನು ಪಡೆಯುತ್ತವೆ. ಅಂದರೆ ಅಲ್ಲಿರುವ ವಿಶೇಷ ತಂತ್ರಜ್ಞಾನದ ವಿದ್ಯಾ ಸಂಸ್ಥೆಗಳು, ಸಗಟು ಮಾರಾಟದ ಸೌಲಭ್ಯಗಳು, ಸಂಶೋಧನೆಯ ಅಂಗಸಂಸ್ಥೆಗಳ ಸಾಮೀಪ್ಯ ಇತ್ಯಾದಿ. ಅಂದರೆ ಒಂದು ಕೈಗಾರಿಕೆ ಹೊಸ ಜಾಗದಲ್ಲಿ ನೆಲೆಗೊಂಡಾಗ ರಸ್ತೆಯಿಂದ ಹಿಡಿದು ನೌಕರರ ಮನೆಗಳು, ಶಾಲಾ ಸಂಸ್ಥೆಗಳು ಮತ್ತು ಇತರೆ ಅನೇಕ ಕೈಗಾರಿಕೆಗಳಿಗೆ ಸಂಬಂಧ ಪಟ್ಟ ಬ್ಯಾಂಕ್, ಪೋಸ್ಟ್ ಆಫೀಸ್, ಸಾರಿಗೆ ವ್ಯವಸ್ಥೆಗೆ ಅದು ಖರ್ಚುಮಾಡಬೇಕಾಗುತ್ತದೆ. ಆದರೆ ಬೆಂಗಳೂರಿನಂತಹ ನಗರಗಳಲ್ಲಿ ಆಗಲೇ ಕೆಲವು ಕೈಗಾರಿಕೆಗಳು ನೆಲೆಗೊಂಡು, ಇತರೆ ಆವಶ್ಯಕವಾದ ಸೇವಾ ಸೌಲಭ್ಯಗಳು ಇರುವುದರಿಂದ, ಒಂದು ಹೊಸದಾಗಿ ನಿರ್ಮಿಸಲ್ಪಡುವ ಅಥವಾ ನೆಲೆಗೊಳ್ಳುವ ಕೈಗಾರಿಕೆ–ಇಂತಹವುಗಳಿಗೆ ಹೊಸದಾಗಿ ವೆಚ್ಚಮಾಡಬೇಕಾಗುವುದಿಲ್ಲ. ಇದು ಒಂದು ರೀತಿಯ ಆರ್ಥಿಕ ಮಿತವ್ಯಯ ಮತ್ತು ಇದು ಈಗಾಗಲೆ ಕೈಗಾರಿಕೆಗಳಲ್ಲಿ ಸಾಕಷ್ಟು ಬೆಳೆದಿರುವ ನಗರಗಳಲ್ಲಿ ಕೈಗಾರಿಕಾ ವ್ಯವಸ್ಥಾಪಕರಿಗೆ ಆಗುವ ಹಣದ ಲಾಭವೆಂದು ಹೇಳಬಹುದು. ಐಸಾರ್ಡ್‌ರವರ ಪ್ರಕಾರ ಈ ರೀತಿ ಕೈಗಾರಿಕಾ ಸ್ಥಾಪಕರಿಗೆ ಆಗುವ ಆರ್ಥಿಕ ಮಿತವ್ಯಯ ಪರಿಮಾಣವನ್ನು ಒಂದು ನಗರದಲ್ಲಿ ಎಷ್ಟಿದೆ ಅಥವಾ ಒಬ್ಬ ಕೈಗಾರಿಕಾ ಸ್ಥಾಪಕ ಆ ನಗರವನ್ನು ಗಣನೆಗೆ ತೆಗೆದುಕೊಂಡಾಗ ಪಡೆದಿದ್ದೆಷ್ಟು ಎಂಬುದನ್ನು ತಿಳಿಯುವುದು ಕಷ್ಟಸಾಧ್ಯ. ಆದರೆ ಒಂದು ಕೈಗಾರಿಕೆಯನ್ನು ಒಂದು ಸಂಶೋಧನೆಯ ಮಟ್ಟದಲ್ಲಿ ಅಧ್ಯಯನ ಮಾಡಿದರೆ ಅಂತಹ ಆರ್ಥಿಕ ಮಿತವ್ಯಯ ಪರಿಮಾಣಗಳನ್ನು ನೋಡಬಹುದು. ಕೈಗಾರಿಕೆಯ ಸ್ಥಾನೀಕರಣವಾಗುವಾಗ ಅನೇಕ ಕೈಗಾರಿಕೋದ್ಯಮಿಗಳು ಇತರೇ ಸ್ಥಾನೀಕರಣ ಅಂಶಗಳೊಂದಿಗೆ ಆ ಪ್ರದೇಶದ ಪ್ರಮುಖ ನಗರಗಳನ್ನು ಆಯ್ಕೆ ಮಾಡುತ್ತಾರೆ. ಅಲ್ಲಿ ಕೈಗಾರಿಕೆಗೆ ಸಂಬಂಧಿಸಿದ ಹಾಗೂ ಕಾರ್ಮಿಕರ ಸಾಮಾನ್ಯ ಜೀವನಕ್ಕೆ ಸಂಬಂಧಿಸಿದ ಸೌಲಭ್ಯಗಳು ಆಗಲೇ ಇರುವುದರಿಂದ ಅವುಗಳ ಮೇಲಿನ ಮೂಲತಃ ಸ್ಥಾಪನೆಯ ವೆಚ್ಚಗಳಲ್ಲಿ ಸ್ವಲ್ಪವಾದರೂ ಉಳಿತಾಯ ಮಾಡುತ್ತಾರೆ. ಇವೇ ಆರ್ಥಿಕ ಮಿತವ್ಯಯ ಪರಿಮಾಣ. (ಬಿ.ಇ.)

**ಆರ್ದ್ರತೆ:** ಗಾಳಿಯಲ್ಲಿ ಲೀನವಾಗಿರುವ ನೀರಾವಿಯ ಅಂಶ (ಹ್ಯುಮಿಡಿಟಿ). ಈ ಅಂಶ ಹೆಚ್ಚಾದಂತೆ ಹವೆ ಆರ್ದ್ರವಾಗಿದೆಯೆಂದೂ (ತೇವ) ಕಡಿಮೆ ಆದಂತೆ ಶುಷ್ಕವಾಗಿದೆಯೆಂದೂ (ಒಣ) ಹೇಳುತ್ತೇವೆ. ನೈಸರ್ಗಿಕ ಮತ್ತು ಮನುಷ್ಯ ಕಾರಣಗಳಿಂದ ನೀರು ಕಾದು ಆವಿಯಾಗಿ ವಾಯುಮಂಡಲದಲ್ಲಿ ಲೀನವಾಗುವುದು. ತಾತ್ತ್ವಿಕವಾಗಿ ಹೇಳುವುದಾದರೆ ಗಾಳಿಗೆ ಒಡ್ಡಿದ ನೀರು ಸಾಮಾನ್ಯವಾಗಿ ಆರಿಹೋಗುವುದು, ಅಂದರೆ (ಆವಿ) ಬಾಷ್ಪವಾಗುವುದು. ಇಂಥ ಕ್ರಿಯೆಯ ನಿಯಮ ತಿಳಿಯಲು ಡಾಲ್ಟನ್ ಒಂದು ಪ್ರಯೋಗ ನಡೆಸಿದ: ವಾಯುಭಾರಮಾಪಕದ ಪಾದರಸದ ಮೇಲುಭಾಗದ ನಿರ್ವಾತ ಪ್ರದೇಶದಲ್ಲಿ ನೀರನ್ನು ಆವಿಯಾಗಲು ಬಿಟ್ಟ; ಒಂದೊಂದೇ ಹನಿ ನೀರನ್ನು ಪಾದರಸ ಸ್ತಂಭದ ಮೇಲುಭಾಗಕ್ಕೆ ಏರುವಂತೆ ಮಾಡಿದಾಗ ಮೊದಲಿನ ಕೆಲವು ಹನಿಗಳು ಬೇಗನೆ ಆರಿ, ಬಾಷ್ಪ (ನೀರಾವಿ) ನಿರ್ವಾತ ಪ್ರದೇಶದಲ್ಲಿ ಲೀನವಾಯಿತು; ಜೊತೆಯಲ್ಲಿಯೇ ನೀರಾವಿಯ ಸಂಮರ್ದದಿಂದ ಸ್ತಂಭದ ಮಟ್ಟ ತಗ್ಗಿತು; ಒಂದು ಮಿತಿಗೆ ಬರುವಾಗ ಹನಿ ಆರಲಿಲ್ಲ; ಸ್ತಂಭದ ಮೇಲುಭಾಗದಲ್ಲಿ ತೆಳುಪದರವಾಗಿ ಹರಡಿತು; ಮಟ್ಟ ಮತ್ತೆ ತಗ್ಗಲಿಲ್ಲ. ಮುಂದಿನ ಹನಿಗಳು ಪದರದ ದಪ್ಪವನ್ನು ವರ್ಧಿಸಿದುವೇ ವಿನಾ ಬೇರೆ ಯಾವ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಪ್ರಯೋಗ ನಡೆದದ್ದು ಸ್ಥಿರ ಉಷ್ಣತೆಯಲ್ಲಿ. ಸ್ವಾಭಾವಿಕವಾಗಿ ಡಾಲ್ಟನ್ ತರ್ಕಿಸಿದ: ನೀರ ಪದರ ಮೊದಲು ತೋರಿದಾಗ ನಿರ್ವಾತ ಪ್ರದೇಶದ ಬಾಷ್ಪ ಪರ್ಯಾಪ್ತ ಅಥವಾ ಜಲಸಂತೃಪ್ತ (ಸ್ಯಾಚುರೇಟೆಡ್) ಸ್ಥಿತಿ ಮುಟ್ಟಿತ್ತು; ಮುಂದೆ (ಆ ಉಷ್ಣತೆಯಲ್ಲಿ) ಅದು ಹೆಚ್ಚು ಬಾಷ್ಪವನ್ನು ಸ್ವೀಕರಿಸದು. ಇಂಥ ಸಂತೃಪ್ತ ಸ್ಥಿತಿಯನ್ನು ಪರಮಾವಧಿ ಬಾಷ್ಪ ಸಂಮರ್ದ (ಮ್ಯಾಕ್ಸಿಮಂ ವೇಪರ್ ಪ್ರೆಷರ್) ಎನ್ನುತ್ತಾರೆ. ಇದರ ಬೆಲೆ ಉಷ್ಣತೆಯ ಏರಿಕೆಯೊಡನೆ ಏರುತ್ತದೆ. ಒಂದು ನಿರ್ದಿಷ್ಟ ಉಷ್ಣತೆಯಲ್ಲಿನ ಬಾಷ್ಪಸಂಮರ್ದ ಅಥವಾ ನೀರಾವಿಯ ಒತ್ತಡ (ವೇಪರ್ ಪ್ರೆಷರ್) ಅದೇ ಉಷ್ಣತೆಗೆ ಅನ್ವಯಿಸುವಂಥ ಪರಮಾವಧಿ ಬಾಷ್ಪ ಸಂಮರ್ದಕ್ಕಿಂತ ಕಡಿಮೆಯಾಗಿದ್ದರೆ ಆ ಬಾಷ್ಪ ಅಪರ್ಯಾಪ್ತವಾಗಿದೆ (ಅನ್‌ಸ್ಯಾಚುರೇಟೆಡ್) ಎನ್ನುತ್ತೇವೆ. ವಿವಿಧ ಉಷ್ಣತೆಗಳಲ್ಲಿ ನೀರಿನ ಪರಮಾವಧಿ ಬಾಷ್ಪ ಸಂಮರ್ದಗಳನ್ನು ಮೇಲೆ ವಿವರಿಸಿದ ವಾಯುಭಾರಮಾಪಕ ಪ್ರಯೋಗದಿಂದ ರೀನಾಲ್ಟ್ ಅಳೆದ. ಒಂದು ನಿರ್ದಿಷ್ಟ ಪ್ರದೇಶವನ್ನು ಪರ್ಯಾಪ್ತಗೊಳಿಸಲು ಬೇಕಾಗುವ ಆವಿಯ ಪ್ರಮಾಣ ಉಷ್ಣತೆಯನ್ನು ಮಾತ್ರ ಅವಲಂಬಿಸಿದೆ.

ವಾಯುವಿನ ಆರ್ದ್ರತೆ ಅಳೆಯುವುದು ಮುಂದಿನ ಘಟ್ಟ. ವಾಯುವಿನಲ್ಲಿ ಲೀನವಾಗಿರುವ ನೀರಾವಿಯ ಪ್ರಮಾಣ ಕಾಲಕಾಲಕ್ಕೂ ದೇಶದೇಶಕ್ಕೂ ವ್ಯತ್ಯಾಸ ಹೊಂದುತ್ತದೆ. ಆದ್ದರಿಂದ ವಾಯುವಿನ ಆರ್ದ್ರತೆಯ ಖಚಿತ ನಿರ್ಧಾರ ಅಸಾಧ್ಯ. ಇಂಥಲ್ಲೆಲ್ಲ ಅಪ್ರತ್ಯಕ್ಷ ವಿಧಾನಗಳು ಮತ್ತು ಸಂಖ್ಯಾಶಾಸ್ತ್ರದ ನೆರವು ಪಡೆಯಲೇಬೇಕು. ವಾಯುವಿನಲ್ಲಿರುವ ವಾಸ್ತವ ನೀರಾವಿಯ ಪ್ರಮಾಣವನ್ನು ಸಮಗ್ರ ಆರ್ದ್ರತೆ ಎಂದು ಕರೆಯುತ್ತಾರೆ (ಆಬ್ಸ್ಯೊಲ್ಯೂಟ್ ಹ್ಯುಮಿಡಿಟಿ). ವಾಯುವಿನಲ್ಲಿ ವಾಸ್ತವಿಕವಾಗಿ (ಆಬ್ಸ್ಯೊಲ್ಯೂಟ್) ಇರುವ ನೀರಾವಿಯ ಪ್ರಮಾಣ ಮತ್ತು ಅದೇ ಉಷ್ಣತೆಯಲ್ಲಿ ವಾಯು ಹೊಂದಬಹುದಾದ ಪರಮಾವಧಿ ನೀರಾವಿಯ ಅನುಪಾತಕ್ಕೆ ಸಾಪೇಕ್ಷ (ರಿಲೇಟಿವ್) ಆರ್ದ್ರತೆ ಎಂದು ಹೆಸರು. ವಾಯುವನ್ನು ತಂಪುಗೊಳಿಸಿದಂತೆ ಪರಮಾವಧಿ ನೀರಾವಿಯ ಮತ್ತು ನೀರಾವಿಯ ಸಂಮರ್ದಗಳು ಸಮಾನವಾಗಿರುವ ಸ್ಥಿತಿ ತಲುಪುತ್ತವೆ. ಇಲ್ಲಿಂದ ಮುಂದೆ ದ್ರವೀಕರಣ ಅಥವಾ ಘನೀಕರಣ ಪ್ರಾರಂಭವಾಗುವುದು. ಇದು ಇಬ್ಬನಿ ಬಿಂದು (ಡ್ಯೂ ಪಾಯಿಂಟ್). ಅಂದರೆ ನೀರಾವಿಯ ಘನೀಕರಣ ಆರಂಭವಾಗುವ ಉಷ್ಣತೆ, ಇಲ್ಲಿಂದ ಮುಂದೆ ತೇವ ಸಾಂದ್ರೀಕರಿಸಿ ಹನಿಹನಿಯಾಗಿ ನೆಲಕ್ಕೆ ಬೀಳುತ್ತದೆ. ಇಬ್ಬನಿ ಬಿಂದು ವಾಯುಮಂಡಲದ ಆರ್ದ್ರತೆಯ ಮಾನವೂ ಹೌದು. (ಎಂ.ಆರ್.ಕೆ.;ಎಂ.ಸಿ.ಜೆ.;ಎ.ಆರ್.ಸಿ.)

**ಆರ್ನಾಲ್ಡ್ ಹೆನ್ರಿ ಗೈಯಟ್:** 1807–54. ಸ್ವಿಸ್ ಮತ್ತು ಅಮೆರಿಕದ ಭೂವಿಜ್ಞಾನಿ ಮತ್ತು ಭೂಗೋಳ ಶಾಸ್ತ್ರಜ್ಞ. 1807 ಸೆಪ್ಟೆಂಬರ್ 28 ರಲ್ಲಿ ಸ್ವಿಟ್ಸರ್‌ಲೆಂಡಿನ ಚೌಡ್ ವಿಲ್ಲರ್ಸ್ ಎಂಬಲ್ಲಿ ಜನಿಸಿದ. ವಿದ್ಯಾಭ್ಯಾಸ ಜರ್ಮನಿಯಲ್ಲಿ. 1839ರಿಂದ 1848 ಅವಧಿಯಲ್ಲಿ ನ್ಯೂಚಾಟಲ್ ಅಕಾಡೆಮಿಯಲ್ಲಿ ಇತಿಹಾಸ ಮತ್ತು ಪ್ರಾಕೃತಿಕ ಭೂಗೋಳ ವಿಜ್ಞಾನದ ಪ್ರಾಧ್ಯಾಪಕನಾಗಿ ಸೇವೆಸಲ್ಲಿಸಿದ. ಅನಂತರ ಕೇಂಬ್ರಿಜ್ ಮತ್ತು ಮೆಸ್ಯಾಚುಸೆಟ್ಸ್‌ಗಳಲ್ಲಿ ಉಪನ್ಯಾಸಕನಾಗಿಯೂ ಪ್ರಿನ್ಸ್‌ಟನ್‌ನಲ್ಲಿ ಭೂವಿಜ್ಞಾನ ಮತ್ತು ಪ್ರಾಕೃತಿಕ ಭೂಗೋಳವಿಜ್ಞಾನ ಪ್ರಾಧ್ಯಾಪಕನಾಗಿಯೂ ತನ್ನ ಕೊನೆಗಾಲದ (1854) ವರೆಗೆ ಸೇವೆಸಲ್ಲಿಸಿದ. ಪ್ರಿನ್ಸ್‌ಟನ್ನಿನ ಭೂ ವಿಜ್ಞಾನ ವಿಭಾಗದ ಭವನದ ಮೇಲೆ ಇವನ ಜ್ಞಾಪಕಾರ್ಥ ಗೈಯಟ್ ಭವನ ಎಂದು ಹೆಸರಿಸಲಾಗಿದೆ.

ಭೂವಿಜ್ಞಾನಿಯಾಗಿ ಹಾಗೂ ವಾತಾವರಣ ಶಾಸ್ತ್ರಜ್ಞನಾಗಿ ಖ್ಯಾತಿಯನ್ನು ಗಳಿಸಿದ. 1838ರಲ್ಲಿ ಇವನ ಆಪ್ತಮಿತ್ರರಾದ ಅಗಸ್ಸಿಜ಼್‌ರ ಸೂಚನೆಯಂತೆ ಹಿಮನದಿ ಕಾರ್ಯದ ಬಗ್ಗೆ ಸಂಶೋಧನ ಪತ್ರಿಕೆಯನ್ನು ಫ್ರಾನ್ಸ್‌ನ ಭೂ ವಿಜ್ಞಾನ ಸಂಸ್ಥೆಗೆ ಅರ್ಪಿಸಿದ–ಅದರಲ್ಲಿ ಹಿಮಗಡ್ಡೆಯ ಚಲನೆ ಮತ್ತು ವಿನ್ಯಾಸಗಳ ಬಗ್ಗೆ ಅಧ್ಯಯನ ಮಾಡಲಾಗಿತ್ತು. ಹಿಮಗಡ್ಡೆ ಜಾರುವಿಕೆಯಲ್ಲಿ ಅಂಚುಗಳಿಗಿಂತ ಮಧ್ಯಭಾಗದಲ್ಲಿ ವೇಗ ಹೆಚ್ಚಾಗಿರುತ್ತದೆ ಎಂದು ಈತ ಶೋಧನೆಯಲ್ಲಿ ತಿಳಿಸಿದ. ಹಾಗೆಯೇ ಹಿಮಗಡ್ಡೆಯ ಮೇಲ್ಭಾಗದ ವೇಗ ಕೆಳಭಾಗದ ವೇಗಕ್ಕಿಂತ ಅಧಿಕ ಎಂದು ಪ್ರತಿಪಾದಿಸಿದ. ಈತನ ಪ್ರಕಾರ ಮಂಜಿನ ಕಣಗಳು ಒಂದಕ್ಕೊಂದು

ಅಂಟಿಕೊಂಡು ಅಥವಾ ಪಟ್ಟಿಯಾಕಾರದಲ್ಲಿ ರೂಪುಗೊಳ್ಳುತ್ತವೆ. ಹಿಮಗಡ್ಡೆಯ ಚಲನೆ ಮಂಜಿನ ಕಣಗಳ ವರ್ಗಾವಣೆಯಿಂದ ಅಥವಾ ಸ್ಥಾನಪಲ್ಲಟ ಕ್ರಿಯೆಯಿಂದ ಮಾತ್ರ ಆಗುತ್ತದೆ ಬದಲಿಗೆ ಮಂಜಿನ ಜಾರುವಿಕೆಯಿಂದಲ್ಲ ಎಂದು ತಿಳಿಸಿದ.

ಈತ ನಡೆಸಿದ ಅಪಾರವಾದ ವಾತಾವರಣ ವೀಕ್ಷಣೆಗಳಿಂದ ಹಾಗೂ ಸಂಶೋಧನೆಗಳಿಂದ ಅಮೆರಿಕದಲ್ಲಿ ಪ್ರಕಟಿಸಿದ ವಾತಾವರಣ ಮತ್ತು ಭೌತಕೋಷ್ಟಕಗಳು (1852, ಪುನರ್ ಮುದ್ರಣ 1884) ಉನ್ನತ ಮಟ್ಟದ್ದು. ಈತ ರೂಪಿಸಿದ ಪಠ್ಯಪುಸ್ತಕ ಸಂಪುಟಗಳು, ಗೋಡೆ ಭೂ ಪಟಗಳು ಅಮೆರಿಕದಾದ್ಯಂತ ಭೂ ವಿಜ್ಞಾನದ ಅಧ್ಯಯನವನ್ನು ಪ್ರಖ್ಯಾತಿಗೊಳಿಸಿದವು. (ಕೆ.ಎನ್.ಯು.)

**ಆರ್ಮೇನಿಯ:** ಸೋವಿಯತ್ ಗಣರಾಜ್ಯಗಳಲ್ಲೊಂದಾಗಿದ್ದು ಸೋವಿಯತ್ ಒಕ್ಕೂಟದ ಪತನದ ಅನಂತರ ಆರ್ಮೇನಿಯ ಒಂದು ಸ್ವಾತಂತ್ರ್ಯ ರಾಷ್ಟ್ರವಾಗಿದೆ. $38^0$–$40^0$ ಉ. ಅ. ಹಾಗೂ $45^0$–$55^0$ ಪೂ. ರೇ. ದಲ್ಲಿ ಹಬ್ಬಿದೆ. ಉತ್ತರದಲ್ಲಿ ಜಾರ್ಜಿಯ, ಪೂರ್ವದಲ್ಲಿ ಅಜರ್‌ಬೈಜಾನ್, ದಕ್ಷಿಣದಲ್ಲಿ ಇರಾನ್, ನೈರುತ್ಯ ಮತ್ತು ಪಶ್ಚಿಮದಲ್ಲಿ ತುರ್ಕಿ ದೇಶಗಳಿವೆ. ವಿಸ್ತೀರ್ಣ 30,000 ಚ.ಕಿಮೀ. ಜನಸಂಖ್ಯೆ 38ಲಕ್ಷ (2002). ಶೇ. 88 ಆರ್ಮೇನಿಯರು, ಉಳಿದವರು ಅಜರ್‌ಬೈಜಾನಿಗಳು. ಅನೇಕ ಪರ್ವತ ಪಂಕ್ತಿ ಹಾಗೂ ಅಗ್ನಿ ಪರ್ವತಗಳಿಂದ ಕೂಡಿ 1500–2400 ಮೀ ಎತ್ತರವಿರುವ ಪ್ರಸ್ಥಭೂಮಿ ಪ್ರದೇಶವಾಗಿದೆ. ಮಧ್ಯದಲ್ಲಿ ಸೆವಾನ್(ಗೋಕ್ಚ) ಸರೋವರವಿದೆ. ಇದು 1417ಚ.ಕಿಮೀ ವಿಸ್ತಾರವಾಗಿ 1884 ಮೀ ಎತ್ತರದಲ್ಲಿದ್ದು ಅಗ್ನಿಪರ್ವತಗಳಿಂದ ಸುತ್ತುವರಿಯಲ್ಪಟ್ಟಿದೆ. ಎತ್ತರಕ್ಕೆ ತಕ್ಕಂತೆ ವಾಯುಗುಣ ಬದಲಾವಣೆಗೊಂಡರೂ ಚಳಿಗಾಲದಲ್ಲಿ ಚಳಿ, ಬೇಸಗೆಯಲ್ಲಿ ಶಾಖ ಹೆಚ್ಚು. ವಾರ್ಷಿಕ ಮಳೆ 40 ಸೆಂಮೀ. ಜ್ಯಾಂಗ್ ಉಪನದಿಯಿಂದ ಕೂಡಿದ ಅರಾಕ್ಸ್ ನದಿ ಕ್ಯಾಸ್ಪಿಯನ್ ಸಮುದ್ರವನ್ನು ಸೇರುತ್ತದೆ. ಇಲ್ಲಿನ ವಿಶಾಲವಾದ ಬಂಜರು ಮತ್ತು ಜೌಗು ಭೂಮಿಯನ್ನು ಸೆವಾನ್ ಸರೋವರ, ಅರ್ಪ, ಅರಾಕ್ಸ್ ನದಿಗಳ ನೀರಾವರಿ ವ್ಯವಸ್ಥೆಯಿಂದ ವ್ಯವಸಾಯಕ್ಕೆ ಅಳವಡಿಸಿದ್ದಾರೆ. ಎರಡನೆಯ ಮಹಾಯುದ್ಧದ ಅನಂತರ ನೀರಾವರಿಗೆ ಒಳಪಟ್ಟ ಭೂಮಿ 2 ಲಕ್ಷ ಹೆ. ಮತ್ತು ವ್ಯಾವಸಾಯಿಕ




ಭೂಮಿ 4,60,777 ಹೆ. ಇಲ್ಲಿನ ಮುಖ್ಯ ಬೆಳೆಗಳು ಗೋದಿ, ಬಾರ್ಲಿ, ಬೀಟ್‌ರೂಟ್, ಹೊಗೆಸೊಪ್ಪು ಮತ್ತು ಹತ್ತಿ. ಆರ್ಮೇನಿಯದ ಮುಖ್ಯ ಕೈಗಾರಿಕೆ ದ್ರಾಕ್ಷಾರಸ ತಯಾರಿಕೆ ಮತ್ತು ತಾಮ್ರದ ಗಣಿಕೆಲಸ. ಎರೆವನ್ ರಾಜಧಾನಿ. ಜನಸಂಖ್ಯೆ 1,226,000 (2002). ಬಟ್ಟೆ, ರಾಸಾಯನಿಕ ವಸ್ತುಗಳು, ಕೃತಕ ರಬ್ಬರ್, ಟೈರುಗಳು, ಕೇಬಲ್ಲುಗಳು, ವಿದ್ಯುಚ್ಛಕ್ತಿ ತಿರುಬಾನಿಗಳು ತಯಾರಾಗುತ್ತವೆ. ಲೆನಿನಾಕನ್ ಎರಡನೆಯ ದೊಡ್ಡಪಟ್ಟಣ. ಅರಾರತ್‌ನಲ್ಲಿ ಸಿಮೆಂಟ್, ಕಿರೊವಾಕನ್‌ನಲ್ಲಿ ರಾಸಾಯನಿಕ ವಸ್ತುಗಳ ಕೈಗಾರಿಕೆಗಳಿವೆ. ಸೆವಾನ್ ಸರೋವರ ಹಾಗೂ ಜಾಂಗಾ ನದಿಯ ನೀರನ್ನು ಉಪಯೋಗಿಸಿಕೊಂಡು ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿಯನ್ನು ತಯಾರಿಸಲಾಗುತ್ತಿದೆ. ಆರ್ಮೇನಿಯನ್ ಭಾಷೆಯ ಮುಖಾಂತರ ವಿದ್ಯಾಭ್ಯಾಸ ಮುಂದುವರಿಯುತ್ತದೆ.

ಆರ್ಮೇನಿಯ ಗಣರಾಜ್ಯ 1918ರಲ್ಲಿ ತಲೆಯೆತ್ತಿತು. ಯುರೋಪಿನ ಶಕ್ತಿಕೂಟದವರು ಇದನ್ನು 1920ರಲ್ಲಿ ಮನ್ನಿಸಿದರು. ಆದರೆ ಇದರ ಬಾಳ್ವೆ ನಾನಾ ಬಗೆಯಾಗಿ ಕೆಲವೇ ವರ್ಷಗಳಲ್ಲಿ ಕೊನೆಗೊಂಡಿತು. ಆಗ ಇಲ್ಲಿ ಬೋಲ್ಷೆವಿಸರ ಪ್ರಭಾವ ಬೆಳೆಯುತ್ತಿದ್ದುದರಿಂದ 1921ರಲ್ಲಿ ಸೋವಿಯತ್ ಮಾದರಿಯ ಗಣರಾಜ್ಯ ರೂಪುಗೊಂಡಿತು. 1984ರಲ್ಲಿ ಸೋವಿಯತ್ ಗಣರಾಜ್ಯ ಪತನದ ನಂತರ ಇದು ಒಂದು ಸ್ವತಂತ್ರ ದೇಶವಾಗಿ ರೂಪಗೊಂಡು ಈಗ ಸಿ.ಐ.ಎಸ್. ರಾಷ್ಟ್ರಗಳ ಪೈಕಿ ಒಂದಾಗಿದೆ. (ಎಚ್.ಎಂ.ಎನ್.)

**ಆರ್ಯರು:** ಆರ್ಯ ಎಂಬ ಪದದ ಅರ್ಥ ಪೂಜ್ಯ ಎಂದೂ ಈ ಪದ ಉರ್ ಎಂಬ ಮೂಲದಿಂದ ಬಂದುದೆಂದೂ ವಿದ್ವಾಂಸರ ಅಭಿಪ್ರಾಯ. 16ನೆಯ ಶತಮಾನದ ಕೊನೆಯಲ್ಲಿ ಭಾರತಕ್ಕೆ ಬಂದು ಗೋವದಲ್ಲಿ ಹಲವು ವರ್ಷಗಳ ಕಾಲ ತಂಗಿದ್ದ ಫಿಲಿಪೋ ಸಸೆಟ್ಟಿ ಎಂಬ ಫ್ಲಾರೆಂಟೀನಿನ ವ್ಯಾಪಾರಿ ಸಂಸ್ಕೃತ ಮತ್ತು ಯುರೋಪಿನ ಕೆಲವು ಭಾಷೆಗಳಿಗೆ ನಿಕಟವಾದ ಸಂಬಂಧವಿದೆಯೆಂದು ಅಭಿಪ್ರಾಯಪಟ್ಟ. 1784ರಲ್ಲಿ ವಿಲಿಯಂ ಜೋನ್ಸ್ ಎಂಬ ವಿದ್ವಾಂಸ ಗ್ರೀಕ್ ಮತ್ತು ಲ್ಯಾಟಿನ್, ಗಾಥಿಕ್ ಮತ್ತು ಕೆಲ್ಟಿಕ್, ಸಂಸ್ಕೃತ ಮತ್ತು ಪುರಾತನ ಪಾರಸಿ ಭಾಷೆಗಳು ಒಂದೇ ಮೂಲದಿಂದ ಉತ್ಪನ್ನವಾದವುಗಳೆಂದು ಪ್ರತಿಪಾದಿಸಿದ. ಈ ತತ್ತ್ವದ ಆಧಾರದಮೇಲೆ ಒಂದೇ ಮೂಲಪ್ರದೇಶದಲ್ಲಿ ವಾಸವಾಗಿದ್ದು, ಕಾಲಕ್ರಮೇಣ ಯುರೋಪು ಮತ್ತು ಏಷ್ಯ ಖಂಡಗಳಲ್ಲಿ ಪ್ರಸರಿಸಿಕೊಂಡ ಕೆಲವು ಪಂಗಡಗಳಲ್ಲಿ ಒಂದರ ಭಾಷೆ ಇಂಡೋ–ಯುರೋಪಿಯನ್ ಭಾಷೆಯೆಂದೂ ಆ ಪಂಗಡದವರು ನೆಲೆ ನಿಂತ ಭಾಗಗಳಿಗನುಗುಣವಾಗಿ ಅವರ ಜೀವನ ಮತ್ತು ಭಾಷೆಯಲ್ಲಿ ವ್ಯತ್ಯಾಸಗಳಾದುವೆಂದೂ ವಿದ್ವಾಂಸರು ಅನುಮಾನಿಸಿದರು.

ಮ್ಯಾಕ್ಸ್‌ಮುಲ್ಲರ್ ಮತ್ತು ಇನ್ನೂ ಅನೇಕ ವಿದ್ವಾಂಸರ ಪ್ರಕಾರ ಆರ್ಯರು ಮೂಲತಃ ಆಸ್ಟ್ರಿಯ, ಹಂಗರಿ ಮತ್ತು ಬೊಹೀಮಿಯ ಪ್ರದೇಶಗಳಲ್ಲಿ ವಾಸವಾಗಿದ್ದು ಕ್ರಮೇಣ ವಲಸೆ ಹೊರಟು, ಅವರಲ್ಲಿ ಒಂದು ಗುಂಪು ಜರ್ಮನಿ, ಇಟಲಿ ಮತ್ತು ಗ್ರೀಸ್ ದೇಶಗಳಲ್ಲಿ ಪ್ರಸರಿಸಿತು. ಮತ್ತೊಂದು ಗುಂಪು ಪೂರ್ವಾಭಿಮುಖವಾಗಿ ಬಂದು ತುರ್ಕಿ, ಇರಾನ್ ಮತ್ತು ಭಾರತ ದೇಶಗಳಲ್ಲಿ ನೆಲೆಸಿತು. ಏಷ್ಯಮೈನರ್ ಪ್ರದೇಶದಲ್ಲಿ ಸಿಕ್ಕಿರುವ ಅತಿ ಪ್ರಾಚೀನವಾದ ಭೋಗಸ್‌ಕಾಯ್ ಶಾಸನದ ವಿವರಗಳು ಆರ್ಯರು ವಲಸೆ ಬಂದುದಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನೊದಗಿಸುತ್ತವೆ ಎಂದು ನಂಬಲಾಗಿದೆ. ಆರ್ಯರ ಮೂಲನಿವಾಸ ಕಪ್ಪು ಸಮುದ್ರ ತೀರಪ್ರದೇಶ ಮತ್ತು ಉಕ್ರೇನ್ ಪರ್ಯಾಯ ದ್ವೀಪವಾಗಿರಬೇಕೆಂದು ಹಲವು ವಿದ್ವಾಂಸರ ಅಭಿಪ್ರಾಯ.

ಲೋಕಮಾನ್ಯ ಬಾಲಗಂಗಾಧರ ಟಿಳಕ್ ಮತ್ತು ಜಾಕೊಬಿ ಇವರು ಖಗೋಳಶಾಸ್ತ್ರಾಧ್ಯಯನದ ಆಧಾರದ ಮೇಲೆ ಆರ್ಯರು ಆರ್ಕ್‌ಟಿಕ್ ಪ್ರದೇಶದಲ್ಲಿ ವಾಸವಾಗಿದ್ದರೆಂದು ಹೇಳಿರುವರು. ಆದರೆ ಅನೇಕ ವಿದ್ವಾಂಸರು ಖಗೋಳಶಾಸ್ತ್ರಾಧಾರ ಮತ್ತು ಅದಕ್ಕೆ ಸಂಬಂಧಿಸಿದ ಹೇಳಿಕೆಯನ್ನು ಒಪ್ಪುವುದಿಲ್ಲ. ಆರ್ಯರು ಹೊರಗಿನಿಂದ ಬಂದವರಲ್ಲ. ಅವರು ಭಾರತದ ಮೂಲನಿವಾಸಿಗಳು, ಪ್ರಾರಂಭದಲ್ಲಿ ಸರಸ್ವತಿ ಮತ್ತು ದೃಷದ್ವತೀ ನದಿಗಳ ಮಧ್ಯಪ್ರದೇಶವಾದ ಆರ್ಯಾವರ್ತದಲ್ಲಿ ವಾಸವಾಗಿದ್ದು ಕ್ರಮೇಣ ಭಾರತದ ಎಲ್ಲ ಭಾಗಗಳಲ್ಲೂ ಪ್ರಸರಿಸಿದುದಲ್ಲದೆ ಪಶ್ಚಿಮ ದೇಶಗಳಿಗೂ ಹೋಗಿ ನೆಲೆಸಿದರು ಎಂಬುದಾಗಿ ಹಲವು ವಿದ್ವಾಂಸರು ವಾದಿಸಿದ್ದಾರೆ. ವೇದವಾಙ್ಮಯದಲ್ಲಿ ಒಂದು ಸಾರಿಯಾದರೂ ಆರ್ಯರು ತಮ್ಮ ಪರಕೀಯ ಮೂಲವನ್ನು ಹೇಳಿಲ್ಲವೆಂಬುದು ಈ ವಿದ್ವಾಂಸರ ವಾದದ ಮುಖ್ಯ ಆಧಾರ. ಆದರೆ ಈ ವಾದವನ್ನು ಬಹುಮಂದಿ ವಿದ್ವಾಂಸರು ತಿರಸ್ಕರಿಸಿದ್ದಾರೆ. ವೇದಗಳ ರಚನೆಯ ಕಾಲವನ್ನು ಪ್ರ.ಶ.ಪೂ. 2000 ವರ್ಷಗಳ ಹಿಂದಕ್ಕೆ ಹಾಕಲು ಆಧಾರಗಳಿಲ್ಲ. ಅಲ್ಲದೆ ಸಿಂಧೂ ಕಣಿವೆಯ ನಾಗರಿಕತೆ ಪ್ರ.ಶ.ಪೂ. 2500 ವರ್ಷಗಳಿಗಿಂತ ಹಿಂದೆಯೇ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬ ಅಂಶವನ್ನು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಸಿಂಧೂ ಮತ್ತು ಆರ್ಯರ ನಾಗರಿಕತೆಗಳು ಭಿನ್ನ ಎಂಬುದು ಸರ್ವವಿದಿತ. ಇವುಗಳಲ್ಲಿ ಹೋಲಿಕೆಗಳಿಗಿಂತಲೂ ವ್ಯತ್ಯಾಸಗಳೇ ಹೆಚ್ಚು. ಮೂರ್ತಿಪೂಜೆ, ಬರೆವಣಿಗೆ, ನಗರೀಕರಣ, ವೈವಿಧ್ಯಮಯ ಮಾತೃದೇವತಾ ಮತ್ತು ಪಶುಪತಿಯ ಆರಾಧನೆ, ಪರದೇಶಗಳೊಡನಿದ್ದ ನಿಕಟ ವಾಣಿಜ್ಯಸಂಪರ್ಕ, ಕೈಗಾರಿಕೆ ಮತ್ತು ಕಲಾಸಂಪನ್ನತೆ– ಇವುಗಳು ಸಿಂಧೂನದಿ ಬಯಲಿನ ಸಂಸ್ಕೃತಿಯ ಮುಖ್ಯ ಲಕ್ಷಣಗಳು. ವೈದಿಕ ನಾಗರಿಕತೆಯಲ್ಲಿ ಈ ಅಂಶಗಳು ಕಾಣಬರುವುದಿಲ್ಲ. ಅಲ್ಲದೆ ಇಲ್ಲಿನ ಮೂಲನಿವಾಸಿಗಳು ಚಪ್ಪಟೆಯಾದ ಮೂಗುಳ್ಳ ಕಪ್ಪುಬಣ್ಣದ ದಸ್ಯುಗಳೆಂದೂ (ದ್ರಾವಿಡ) ಅವರನ್ನು ಸೋಲಿಸಿ ದಕ್ಷಿಣಾಪಥದ ಕಡೆಗೆ ಓಡಿಸಿದುದಾಗಿಯೂ ತಮ್ಮ ಗ್ರಂಥಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಆರ್ಯರು

ಪ್ರಪಂಚದ ಯಾವ ಭಾಗದಲ್ಲಿ ಮೂಲತಃ ವಾಸಿಸುತ್ತಿದ್ದರೆಂಬ ವಿಷಯವಾಗಿ ಭಿನ್ನಾಭಿಪ್ರಾಯಗಳಿದ್ದರೂ ಅವರು ಭಾರತಕ್ಕೆ ವಲಸೆ ಬಂದರೆಂಬ ಅಭಿಪ್ರಾಯವನ್ನು ಬಹುಮಂದಿ ವಿದ್ವಾಂಸರು ಅನುಮೋದಿಸಿದ್ದಾರೆ.

ಆರ್ಯರು ವಲಸೆ ಬಂದು ಸಿಂಧೂ ಮತ್ತು ಗಂಗಾ ನದಿಗಳ ಬಯಲಿನಲ್ಲಿ ನೆಲೆಸಿದ ಪ್ರಾರಂಭದಲ್ಲಿ ಅವರು ಬೆಳೆಸಿದ ಸಂಸ್ಕೃತಿಯನ್ನು ತಿಳಿಯಲು ವೇದಗಳೂ ಅವಕ್ಕೆ ಸಂಬಂಧಿಸಿದ ಬ್ರಾಹ್ಮಣಗಳೂ ಆರಣ್ಯಕಗಳೂ ಉಪನಿಷತ್ತುಗಳೂ ಮತ್ತು ವೇದಾಂಗಗಳೇ ಮುಂತಾದವು ಆಧಾರಗಳು. ವೇದ ಎಂದರೆ ಪರಮಜ್ಞಾನ. ವೇದಗಳಲ್ಲಿ ಆರ್ಯರ ರಾಜಕೀಯ, ಸಾಮಾಜಿಕ ಮತ್ತು ಮತೀಯ ಜೀವನದ ಮುಖ್ಯಾಂಶಗಳ ಚಿತ್ರ ಅಡಕವಾಗಿದೆ. ಕಂದುಮಿಶ್ರಿತ ಬಣ್ಣ, ದೃಢಕಾಯ ಹಾಗೂ ನೀಳವಾದ ಮೂಗು–ಇವು ಅವರ ಮುಖ್ಯ ಲಕ್ಷಣಗಳು. ಅವರು ಸಣ್ಣಪುಟ್ಟ ಹಳ್ಳಿಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ಕುಟುಂಬವ್ಯವಸ್ಥೆ ಆರ್ಯರ ರಾಜಕೀಯ ಮತ್ತು ಸಾಮಾಜಿಕ ಜೀವನದ ಅಡಿಗಲ್ಲು. ರಕ್ತಸಂಬಂಧವನ್ನು ಹೊಂದಿದ್ದ ಅನೇಕ ಕುಟುಂಬಗಳ ಗುಂಪಿಗೆ ಒಬ್ಬ ಯಜಮಾನನಿರುತ್ತಿದ್ದ. ಅವರು ದಸ್ಯುಗಳೊಡನೆ ಹೋರಾಡಬೇಕಾಗಿತ್ತು. ಅನೇಕ ಸಲ ಅವರವರಲ್ಲೇ ಕಲಹಗಳಾಗುತ್ತಿದ್ದವು. ಯುದ್ಧದಲ್ಲಿ ಮುಖಂಡನ ಆವಶ್ಯಕತೆಯಿತ್ತು. ಆದ್ದರಿಂದ ಕೆಲವು ಹಳ್ಳಿಗಳ ಗುಂಪಿಗೆ ಒಬ್ಬೊಬ್ಬ ಮುಖಂಡನಿರುತ್ತಿದ್ದ. ಕಾಲಕ್ರಮೇಣ ಮುಖಂಡರ ಪ್ರಭಾವ ಬೆಳೆದು ಅವರು ರಾಜರಾದರು. ಪ್ರಾರಂಭದಲ್ಲಿ ರಾಜ ಅಥವಾ ಮುಖಂಡನನ್ನು ಚುನಾಯಿಸುತ್ತಿದ್ದರು. ಈ ಪದ್ಧತಿ ಕೊನೆಗೊಂಡ ಮೇಲೆ ರಾಜತ್ವ ವಂಶಪಾರಂಪರ್ಯ ಪದ್ಧತಿಯಾಯಿತು. ಸಿಂಧೂ ಮತ್ತು ಗಂಗಾನದಿಗಳ ಫಲವತ್ತಾದ ಬಯಲಿನಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳುದಯಿಸಿದವು. ರಾಜ್ಯದಲ್ಲಿ ಶಾಂತಿ ಸ್ಥಾಪಿಸುವುದು ಮತ್ತು ಹೊರಗಿನವರ ದಾಳಿಗಳಿಂದ ರಾಜ್ಯವನ್ನು ರಕ್ಷಿಸುವುದು ರಾಜನ ಮುಖ್ಯಕರ್ತವ್ಯಗಳಾದುವು. ಆಡಳಿತದಲ್ಲಿ ರಾಜನ ಸಹಾಯಕ್ಕೆ ಪುರೋಹಿತ, ಸೇನಾನಿ ಮತ್ತು ಗ್ರಾಮವೃದ್ಧರಿರುತ್ತಿದ್ದರು. ಯುದ್ಧಕಾಲದಲ್ಲಿ ಯೋಧರು ಕತ್ತಿ, ಗುರಾಣಿ, ಶಿರಸ್ತ್ರಾಣ ಮತ್ತು ಬಿಲ್ಲುಬಾಣಗಳನ್ನುಪಯೋಗಿಸುತ್ತಿದ್ದರು. ಪ್ರಜೆಗಳು ತಮ್ಮ ಉತ್ಪತ್ತಿಯ ಒಂದು ಭಾಗವನ್ನು ರಾಜನಿಗೆ ಸಲ್ಲಿಸುತ್ತಿದ್ದರು. ರಾಜ ನಿರಂಕುಶ ಪ್ರಭುವಾಗಿರಲಿಲ್ಲ. ಸಭಾ ಮತ್ತು ಸಮಿತಿ ಎಂಬ ಪ್ರಜಾಮುಖ್ಯರ ಎರಡು ಸಭೆಗಳಿರುತ್ತಿದ್ದುವು. ರಾಜ್ಯದ ಮುಖ್ಯ ಸಮಸ್ಯೆಗಳನ್ನು ಈ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುತ್ತಿತ್ತು. ಪ್ರ.ಶ.ಪೂ. 1500ರ ಅನಂತರ ರಾಜರು ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳುತ್ತ ಬಂದರು. ಸಣ್ಣ ಪುಟ್ಟ ರಾಜ್ಯಗಳಿಗೆ ಬದಲಾಗಿ ಕ್ರಮೇಣ ಸಾಮ್ರಾಜ್ಯಗಳು ತಲೆಯೆತ್ತತೊಡಗಿದ್ದುವು. ರಾಜರು ಅಶ್ವಮೇಧ, ರಾಜಸೂಯ ಮುಂತಾದ ಯಾಗಗಳನ್ನು ಆಚರಿಸುತ್ತಿದ್ದರು.

ಆರ್ಯಪಂಗಡ ಕುಟುಂಬಗಳಿಂದೊಡಗೂಡಿತ್ತು. ತಂದೆಗೆ ಕುಂಟುಂಬದ ಯಜಮಾನ ಸ್ಥಾನವೂ ತಾಯಿಗೆ ಗೌರವದ ಆದರೆ ಗೌಣಸ್ಥಾನವೂ ಇದ್ದುವು. ವ್ಯವಸಾಯ ಮತ್ತು ಪಶುಪಾಲನೆ ಮುಖ್ಯ ಕಸುಬಾಗಿತ್ತು. ಅವರಿಗೆ ನೇಗಿಲಿನ ಉಪಯೋಗ ತಿಳಿದಿತ್ತು. ಗೋಧಿ, ಬಾರ್ಲಿ, ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುತ್ತಿದ್ದರು. ದನಕರುಗಳೇ ಅವರ ಅತಿ ಮಹತ್ತ್ವದ ಪ್ರಾಣಿಗಳು. ಅವುಗಳೇ ಅವರ ಸಂಪತ್ತು. ಎಮ್ಮೆ, ಕುರಿ, ಮೇಕೆ, ಕುದುರೆ ಮತ್ತು ನಾಯಿ ಇವುಗಳು ಅವರ ಇತರ ಸಾಕುಪ್ರಾಣಿಗಳು. ಸಸ್ಯಾಹಾರ ಹಾಗೂ ಮಾಂಸಾಹಾರ ರೂಢಿಯಲ್ಲಿದ್ದುವು. ಅವರು ಹತ್ತಿ ಮತ್ತು ಉಣ್ಣೆಯ ಬಟ್ಟೆಗಳನ್ನೂ ನಯ ಮಾಡಿದ ಚರ್ಮಗಳನ್ನೂ ತೊಡುತ್ತಿದ್ದರೆಂದು ತಿಳಿಯುತ್ತದೆ. ಚಿನ್ನ ಬೆಳ್ಳಿಯ ಒಡವೆಗಳನ್ನೂ ಧರಿಸುತ್ತಿದ್ದರು. ಸಂಭ್ರಮದ ದಿನಗಳಲ್ಲಿ ಸುರೆ ಹಾಗೂ ಸೋಮ ಎಂಬ ಮಾದಕ ಪಾನೀಯಗಳನ್ನು ಸೇವಿಸುತ್ತಿದ್ದರು. ನೂಲುವುದು, ನೇಯುವುದು, ನಗನಾಣ್ಯ ತಯಾರಿಕೆ, ಮನೆಕಟ್ಟುವುದು ಮತ್ತು ಲೋಹಗಳ ಕೆಲಸ–ಇವು ಇತರ ಉಪಕಸುಬುಗಳಾಗಿದ್ದುವು. ಕ್ರಮೇಣ ವ್ಯಾಪಾರ ಬೆಳೆಯಿತು. ಪ್ರಾರಂಭದಲ್ಲಿ ಹಸು ವಸ್ತುವಿನಿಮಯದ ಮಾನದಂಡವಾಗಿತ್ತು. ಅನಂತರ ನಿಷ್ಕ, ಕಾರ್ಷಪಣ ಮುಂತಾದ ಚಿನ್ನ ಬೆಳ್ಳಿಯ ನಾಣ್ಯಗಳು ಬಳಕೆಗೆ ಬಂದುವು. ಕುದುರೆ ಜೂಜು, ರಥ ಪಂದ್ಯ ಮತ್ತು ಬೇಟೆಯಾಡುವುದು–ಇವು ಆರ್ಯರ ಮುಖ್ಯ ವಿನೋದ ಮತ್ತು ಜೂಜಾಟದ ಮಾರ್ಗಗಳಾಗಿದ್ದುವು.

ವೈದಿಕಯುಗದ ಅಂತ್ಯದ ವೇಳೆಗೆ ಜಾತಿಪದ್ಧತಿ ಆಚರಣೆಗೆ ಬಂತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಾದುವು. ಕಸಬು ಜಾತಿಗೆ ಅನುಗುಣವಾಗಿತ್ತು. ಕ್ರಮೇಣ ಜಾತಿಪದ್ಧತಿ ವಂಶಪರಂಪರಾನುಗತವಾಗುತ್ತ ಬಂತು.

ಆರ್ಯರು ಸಚೇತನವೆಂದೆಣಿಸಿದ್ದ ಪ್ರಕೃತಿಯ ಅದ್ಭುತ ಶಕ್ತಿಗಳಾದ ಆಕಾಶ, ಸೂರ್ಯ, ಸಿಡಿಲು, ಮಿಂಚು, ಅಗ್ನಿ ಮುಂತಾದ ದೇವತೆಗಳನ್ನು ಆರಾಧಿಸುತ್ತಿದ್ದರು. ಆ ಶಕ್ತಿಗಳು ದಯಾಪೂರ್ಣವೆಂಬ ಭಾವನೆಯಿದ್ದು, ಯಜ್ಞಯಾಗಾದಿಗಳಿಂದ ಅವುಗಳ ಕೃಪೆಯನ್ನು ಗಳಿಸಬಹುದೆಂಬ ನಂಬಿಕೆಯಿತ್ತು. ಮೂರ್ತಿಪೂಜೆ ಆಚರಣೆಯಲ್ಲಿರಲಿಲ್ಲ. ದೇವತೆಗಳಿಗೆ ಬಲಿಯನ್ನು ಅಗ್ನಿಯ ಮುಖಾಂತರ ಅರ್ಪಿಸುತ್ತಿದ್ದರು. ಯಜ್ಞ ಯಾಗಾದಿಗಳಿಗೆ ಸಂಬಂಧಿಸಿದ ವಿಧಿಗಳು ವಿಶದವಾಗಿ ರೂಪಿತವಾಗಿದ್ದುವು. ಕಾಲಕ್ರಮೇಣ ಅನೇಕ ದೇವ ದೇವತೆಗಳನ್ನು ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ಆದರೂ ಸರ್ವಾಂತರ್ಯಾಮಿಯೂ ಸರ್ವಶಕ್ತನೂ ಆದ ಜಗನ್ನಿಯಾಮಕನೊಬ್ಬನೇ ಎಂಬ ಭಾವನೆ ಅವರಲ್ಲಿತ್ತು. ಶವಗಳನ್ನು ಸುಡುವ ಪದ್ಧತಿಯಿತ್ತು. ಸ್ವರ್ಗ ನರಕಗಳ ಕಲ್ಪನೆ ಪೂರ್ಣವಾಗಿ ಬೆಳೆದಿರಲಿಲ್ಲ.

ವೇದಯುಗವು ಇತಿಹಾಸಯುಗಕ್ಕೆ ಮುಂದುವರಿದಂತೆ ಅನೇಕ ಮಾರ್ಪಾಟುಗಳಾದುವು. ಆರ್ಯರು ದಕ್ಷಿಣದಲ್ಲೂ ನೆಲೆಸಿದರು. ವರ್ಣಾಶ್ರಮ ಧರ್ಮಪದ್ಧತಿ ಅನೂಚಾನವಾಗಿ ಬೇರೂರಿತು. ಜನಸಂಖ್ಯೆ ವೃದ್ಧಿಸಿತು. ಸಂಪದ್ಭರಿತವಾದ ಪಟ್ಟಣಗಳೂ ಸಾಮ್ರಾಜ್ಯಗಳೂ ಬೆಳೆದುವು. ಸಾಹಿತ್ಯ, ವಿಜ್ಞಾನ ಮತ್ತು ಧಾರ್ಮಿಕ ಗ್ರಂಥಗಳ ನಿರ್ಮಾಣ ಮುಂದುವರಿಯಿತು. ಮೂರ್ತಿಪೂಜೆ ಆಚರಣೆಗೆ ಬಂತು. ಆರ್ಯ ದ್ರಾವಿಡ ಪದ್ಧತಿಗಳ ಸಮ್ಮಿಲನದಿಂದ ಹಿಂದೂ ಸಂಸ್ಕೃತಿ ಅಖಂಡವಾಗಿ ಬೆಳೆಯಲು ಪ್ರಾರಂಭಿಸಿತು. (ಜಿ.ಆರ್.ಆರ್.)

ಆರ್ಯರ ಧರ್ಮ ಪ್ರಪಂಚದ ಅತಿ ಪ್ರಾಚೀನ ಧರ್ಮಗಳ ಪೈಕಿ ಪ್ರಸಿದ್ಧವೆನಿಸಿದೆ. ಆರ್ಯರ ಧರ್ಮವನ್ನು ತಿಳಿಯಲು ಋಗ್ವೇದ, ಜೆಂಡವೆಸ್ತ, ಜನಪದ ಸಾಹಿತ್ಯ, ಪೌರಾಣಿಕ ಪರಂಪರೆ, ಪ್ರಾಚೀನ ಸಂಪ್ರದಾಯಗಳು, ಪ್ರಾಚೀನ ಭಾಷೆಗಳು–ಇತ್ಯಾದಿ ಮುಖ್ಯ ಸಾಧನಗಳಾಗಿವೆ. ಆರ್ಯರು ನಾಗರಿಕರೂ ಸುಸಂಸ್ಕೃತರೂ ಆದ ಜನಾಂಗವಾಗಿದ್ದರು. ಅವರಿಗೆ ಜೀವ–ಆತ್ಮ, ಜನ್ಮಾಂತರ, ಸ್ವರ್ಗ–ನರಕ, ಪುಣ್ಯ–ಪಾಪ, ಅದೃಷ್ಟ–ವಿಧಿ ಇವುಗಳ ಬಗೆಗೆ ನಿರ್ದಿಷ್ಟವಾದ ಕಲ್ಪನೆ ಮತ್ತು ನಂಬಿಕೆಗಳಿದ್ದುವು. ಸತ್ತವರನ್ನು ಹೂಳುವ ಇಲ್ಲವೇ ಸುಡುವ ಪದ್ಧತಿ ಇತ್ತು. ಆತ್ಮ ಅವಿನಾಶಿ ಎಂದು ನಂಬಿದ್ದರಿಂದ ಆತ್ಮನ ಮುಂದಿನ ಜೀವನಕ್ಕೆ ಸಹಾಯಕವಾಗಲಿ ಎಂಬ ನಂಬಿಕೆ ಅವರಿಗಿದ್ದಿರಬೇಕು. ಆದ್ದರಿಂದ ಸತ್ತವನನ್ನು ಹೂಳುವಾಗ ಆತನೊಂದಿಗೆ ಆತನಿಗೆ ಪ್ರಿಯವಾಗಿದ್ದ ವಸ್ತುಗಳನ್ನು ಇಡುತ್ತಿದ್ದರು. ದಹನ ಮಾಡಿದರೆ ಚಿತೆಯೊಂದಿಗೆ ಅವನ್ನು ಸೇರಿಸುತ್ತಿದ್ದರು ಅಥವಾ ಚಿತಾಭಸ್ಮದೊಂದಿಗೆ ಇರಿಸುತ್ತಿದ್ದರು. ಅನೇಕ ಬಗೆಯ ವ್ರತ, ಹಬ್ಬಗಳನ್ನು ಆಚರಿಸುತ್ತಿದ್ದರು. ಸೂರ್ಯಚಂದ್ರರ ಆಧಾರದ ಮೇಲೆ ಕಾಲಗಣನೆ ಮಾಡುತ್ತಿದ್ದರು. ಅಗ್ನಿ ಮತ್ತು ವರುಣ ದೇವನ ಆರಾಧನೆಯನ್ನು ಮದುವೆ, ಅಗ್ನಿಷ್ಟೋಮಯಾಗ ಇತ್ಯಾದಿ ಅನೇಕ ಸಂದರ್ಭಗಳಲ್ಲಿ ಕಾಣಬಹುದಿತ್ತು. ಯಾವುದೇ ವ್ಯಕ್ತಿಯ ಅಪರಾಧಕ್ಕೆ ಸಮಾಜ ಹೊಣೆ ಹೊರುತ್ತಿರಲಿಲ್ಲ. ಅಕೃತ್ಯಕ್ಕೆ ಒಳಗಾದವನ ಕುಟುಂಬವೇ ಸೇಡು ತೀರಿಸುತ್ತಿತ್ತು. ಪಾಪಕೃತ್ಯ ಮಾಡಿದವರನ್ನು ಕಲ್ಲೇಟಿನಿಂದ ಶಿಕ್ಷಿಸುತ್ತಿದ್ದುದೂ ಉಂಟು. ಹಂದಿ, ಮೇಕೆ, ಹಸು, ಕುದುರೆ ಮೊದಲಾದ ಪ್ರಾಣಿಗಳ ಬಲಿ ಬಳಕೆಯಲ್ಲಿತ್ತು. ಪ್ರಾಣಿಬಲಿ ಜೊತೆಗೆ ನರಬಲಿಯೂ ನಡೆಯುತ್ತಿದ್ದುದು ಉಂಟು. ಆಣೆ ಇಡುವ, ಶಪಥ ಮಾಡುವ, ಕಣಿ ಕೇಳುವ, ಕನಸು, ಶುಭ ಶಕುನ–ಅಪಶಕುನಗಳ ಬಗ್ಗೆ ಅವರದೇ ಆದ ಪದ್ಧತಿ–ಪರಂಪರೆಗಳಿದ್ದುವು. ಆರ್ಯರು ಪಿತೃವರ್ಗದ ಆರಾಧಕರೂ ಪ್ರಕೃತಿಯ ಆರಾಧಕರೂ ಆಗಿದ್ದರು. ಮಂತ್ರ–ಮಾಟ, ಆರಾಧನೆ–ಪೂಜೆ, ಜಪ–ತಪ ಮೊದಲಾದ ಕಾರ್ಯಗಳಿಗೆ ಪ್ರತ್ಯೇಕ ಪುರೋಹಿತವರ್ಗವಿತ್ತು. ಮದ್ಯಪಾನ, ಮಾಂಸಾಹಾರ ಮೊದಲಾದ ಆಹಾರ ಪದ್ಧತಿಗಳೂ ಬಳಕೆಯಲ್ಲಿದ್ದುವು. ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳ ಬಗ್ಗೆ ಪುರಾಣ ಕಲ್ಪನೆಗಳು ಬೆಳೆದಿದ್ದುವು. ಸಾಕಷ್ಟು ಲೈಂಗಿಕ ಸ್ವಾತಂತ್ರ್ಯ ಇರುತ್ತಿತ್ತು. ಸರ್ಪಪೂಜೆ, ಅಗ್ನಿಪೂಜೆ, ಆಕಾಶಪೂಜೆ, ವೃಕ್ಷಪೂಜೆಗಳೂ ಕಲ್ಲು, ಮರ, ಮಣ್ಣುಗಳಲ್ಲಿ ನಿರ್ಮಿಸಿದ ಮೂರ್ತಿಪೂಜೆಯೂ ಆರ್ಯರಲ್ಲಿತ್ತು. ಪೂಜಾಕಾಲದಲ್ಲಿ ನೃತ್ಯ ಸಂಗೀತಗಳು ಜರುಗುತ್ತಿದ್ದುವು. ಪ್ರಪಂಚದ ಅತಿ ಪ್ರಾಚೀನ ಧರ್ಮಗಳಲ್ಲಿ ಒಂದಾದ ಆರ್ಯಧರ್ಮ ಶುದ್ಧರೂಪದಲ್ಲಿ ಅಲ್ಲವಾದರೂ ಮಿಶ್ರರೂಪದಲ್ಲಿ ಉಳಿದುಬಂದಿದೆ. ಆರ್ಯಧರ್ಮವನ್ನು ವಿಶೇಷವಾಗಿ ಹಿಂದೂ ಧರ್ಮದಲ್ಲಿ ಕಾಣಬಹುದು. (ಜಿ.ಎ.)

**ಆರ್ಲಿಂಗ್‌ಟನ್:** ಅಮೆರಿಕ ಸಂಯುಕ್ತ ಸಂಸ್ಥಾನದ ವರ್ಜೀನಿಯ ಪ್ರಾಂತ್ಯದ ಒಂದು ಪಟ್ಟಣ. ವಾಷಿಂಗ್‌ಟನ್ ಡಿ.ಸಿ.ಯ ಎದುರು ಪೊಟೋಮ್ಯಾಕ್ ನದಿಯ ದಡದಲ್ಲಿದೆ. ಬಾಸ್ಟನ್ ನಗರದ ವಾಯವ್ಯಕ್ಕೆ ಸು. 13 ಕಿಮೀ ದೂರದಲ್ಲಿದೆ. ದೇಶದ ಹಲವಾರು ರಕ್ಷಣಾ ಇಲಾಖೆಯ ಕಛೇರಿಗಳನ್ನು ಒಳಗೊಂಡಿದೆ. ಜನಸಂಖ್ಯೆ 1,70,936 (2004). ಬಾಸ್ಟನ್ ಹಾಗೂ ಮೇನ್ ರೈಲು ಮಾರ್ಗ ಇದಕ್ಕೆ ಸಂಪರ್ಕವನ್ನು ಕಲ್ಪಿಸುವುದು. ತೋಟಗಾರಿಕೆ ಮುಖ್ಯ ಕಸುಬು. ಪಿಯಾನೊ, ದಿನಬಳಕೆ ಯಂತ್ರದ ಸಾಮಾನುಗಳು ಹಾಗೂ ಚಿತ್ರಪಟ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳಿವೆ. 1807ರಲ್ಲಿ ವೆಸ್ಟ್ ಕೇಂಬ್ರಿಡ್ಜ್ ಎಂಬ ಹೆಸರಿನಿಂದ ಆರ್ಲಿಂಗ್‌ಟನ್ ಪಟ್ಟಣ ಮಾರ್ಪಾಡಾಯಿತು. ಆದರೆ 1807ರಲ್ಲಿ ಆರ್ಲಿಂಗ್‌ಟನ್ ಎಂಬ ಹೆಸರನ್ನೇ ಮತ್ತೆ ಸ್ವೀಕರಿಸಲಾಯಿತು.

ಆರ್ಲಿಂಗ್‌ಟನ್ ಎಂಬ ಮತ್ತೊಂದು ನಗರ ಅಮೆರಿಕ ಸಂಯುಕ್ತ ಸಂಸ್ಥಾನದ ಟೆಕ್ಸಾಸ್ ಪ್ರಾಂತ್ಯದಲ್ಲಿ ಟ್ರಿನಿಟಿ ನದಿ ದಡದಲ್ಲಿದೆ. ಜನಸಂಖ್ಯೆ: 2,61,721. ಇದು ಮೋಟಾರು ವಾಹನ, ವಿಮಾನ, ವ್ಯವಸಾಯ ಉಪಕರಣ, ಎಲೆಕ್ಟ್ರಾನಿಕ್ ಮೊದಲಾದ ಕೈಗಾರಿಕೆಗಳನ್ನು ಒಳಗೊಂಡಿದೆ. ಈ ನಗರದಲ್ಲಿಯೇ ಟೆಕ್ಸಾಸ್ ವಿಶ್ವವಿದ್ಯಾಲಯವಿದೆ. (ಎಂ.ಎಸ್.)

**ಆರ್ಷೇಯ ಯುಗ:** ಸು. 600 ದಶಲಕ್ಷ ವರ್ಷಗಳಿಗಿಂತ ಹಿಂದಿನ ಕಾಲಕ್ಕೆ ಭೂ ವಿಜ್ಞಾನದ ಕಾಲಪಟ್ಟಿಯಲ್ಲಿ ಇರುವ ಹೆಸರು (ಆರ್ಷೇಯನ್ ಈರ). ಆರ್ಷೇಯನ್ ಪದ ಶಿಲಾಸಮುದಾಯದ ಅತಿ ಪ್ರಾಚೀನಕಾಲಕ್ಕೆ ಅನ್ವಯಿಸುತ್ತದೆ. ಅಲ್ಲದೆ ಇದು

ಬಹುವಚನದಲ್ಲಿ (ಆರ್ಷೇಯನ್ಸ್) ಆ ಕಾಲದ ಶಿಲಾಸಮೂಹಗಳಿಗೂ ರೂಢಿಯಿಂದ ಅನ್ವಯವಾಗುತ್ತದೆ. ಈ ಪದ ಗ್ರೀಕ್ ಭಾಷೆಯ ಆರ್ಕೇಯ್ಸ್ (ಪುರಾತನ) ಮತ್ತು ಆರ್ಕಿ (ಆರಂಭ) ಎಂಬ ಮೂಲಶಬ್ದಗಳಿಂದ ನಿಷ್ಪನ್ನವಾಗಿದೆ. ಉತ್ತರ ಅಮೆರಿಕದ ಸುಪೀರಿಯರ್ ಸರೋವರದ ಸುತ್ತಮುತ್ತಲ ಅಥವಾ ಕೆನೇಡಿಯನ್ ಶೀಲ್ಡ್ ಪ್ರದೇಶದ ಕೇಂಬ್ರಿಯನ್ ಶಿಲಾಸ್ತೋಮಗಳಿಗಿಂತ ಹಿಂದಿನ ಶಿಲಾಸಮೂಹಗಳನ್ನು ಗುರುತಿಸಲು ಈ ಪದವನ್ನು ಮೊತ್ತಮೊದಲು ಬಳಸಿದರು (ಜೆ. ಡಿ. ಡಾನಾ, 1872). ಈ ಸಮುದಾಯದಲ್ಲಿ ಶೀಣಿ ಕಲ್ಲುಗಳು (ಗ್ರಾನೈಟಿಕ್ ನೀಸಸ್) ಸ್ಫಟಿಕೀಕರಿಸಿದ ಪದರುಶಿಲೆಗಳು (ಕ್ರಿಸ್ಟಲೈನ್‌ಷಿಸ್ಟ್) ಮಾರ್ಪಟ್ಟ ಪ್ರಸ್ತರೀ ಶಿಲೆಗಳು (ಮೆಟ-ಸೆಡಿಮೆಂಟ್ಸ್) ರೂಪಾಂತರಗೊಳ್ಳದ ಜೀವಾವಶೇಷವಿಲ್ಲದ ಶಿಲೆಗಳು; ಮತ್ತು ಭೂಗರ್ಭದಿಂದ ಹೊರಬಂದ ಕಣಶಿಲೆ (ಎರಪ್ಟಿವ್ ಗ್ರಾನೈಟ್) ಇವು ಸೇರಿದ್ದುವು. ಮುಂದೆ 1875ರಲ್ಲಿ, ಆರ್ಕೀಯನ್ ಪದವನ್ನು ಅತಿ ಮಡಿಕೆ ಬಿದ್ದು ಹೆಚ್ಚು ರೂಪಾಂತರಗೊಂಡ ಪದರ ಶಿಲೆಗಳು ಮತ್ತು ಶೀಣಿಕಲ್ಲುಗಳ ಸಮೂಹಕ್ಕೆ ಮಾತ್ರ ಡಾನಾ ಅನ್ವಯಿಸಿದ. ಅವುಗಳ ಮೇಲ್ಪದರವಾಗಿ ಅವಸಾದನ ವಿಳಂಬನದಿಂದ (ಸ್ಟ್ರ್ಯಾಟಿಗ್ರಾಫಿಕ್ ಬ್ರೇಕ್) ಕೂಡಿದ್ದು ಜೀವಾವಶೇಷಗಳಿಲ್ಲದ ಮತ್ತು ಅಷ್ಟು ರೂಪಾಂತರ ಹೊಂದದೆ ಇರುವ ಶಿಲಾಪದರಗಳನ್ನು ಪ್ರತ್ಯೇಕಿಸಿದೆ. ಅಲ್ಲಿಂದೀಚೆಗೆ ಆರ್ಕೀಯನ್ ಪದದ ನಿರೂಪಣೆ ಮತ್ತೆ ಕೆಲವು ಬದಲಾವಣೆಗಳನ್ನು ಹೊಂದುತ್ತ ಬಂದಿದೆ. ಅಮೆರಿಕ ಸಂಯುಕ್ತಸಂಸ್ಥಾನಗಳ ಮತ್ತು ಕೆನಡದ ಭೂಶಾಸ್ತ್ರಜ್ಞರಲ್ಲಿ ಯಾವ ಸ್ತೋಮಗಳಿಗೆ ಆರ್ಕೀಯನ್ ಅಥವಾ ಆರ್ಷೇಯ ಪದ ನಿಖರವಾಗಿ ಅನ್ವಯಿಸುವುದೆಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

ಭಾರತದಲ್ಲಿ ಆರ್ಷೇಯ ಶಿಲಾವರ್ಗಗಳು : ಕೆನೆಡಿಯನ್ ಶೀಲ್ಡಿನ ಆರ್ಷೇಯ ಶಿಲೆಗಳನ್ನು ಹೋಲುವ ಪದರುಶಿಲೆಗಳು, ಶೀಣಿಕಲ್ಲುಗಳು ಮತ್ತು ಕಣಶಿಲೆಗಳು ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ಪ್ರಮಾಣಗಳ ತುಕಡಿಗಳಾಗಿ ಹರಡಿರುತ್ತವೆ. ಆರ್ಷೇಯ ಶಿಲಾಸ್ತೋಮಗಳು ದಕ್ಷಿಣ ಭಾರತದ ಹೆಚ್ಚುಭಾಗ ರಾಜಸ್ತಾನ, ಮಧ್ಯಪ್ರದೇಶ, ಬಿಹಾರ್ ಮತ್ತು ಒರಿಸ್ಸ ಪೂರ್ವಘಟ್ಟಗಳು ಮತ್ತು ಆಂಧ್ರಪ್ರದೇಶದ ಕೆಲವು ಭಾಗ ಇಲ್ಲೆಲ್ಲ ಹರಡಿವೆ. ಭಾರತ ಭೂಶೋಧನಾ ಶಾಖೆ 1857ರಲ್ಲಿ ಸ್ಥಾಪಿತವಾದ ಅನಂತರ ಕೆಲವು ವರ್ಷಗಳವರೆಗೂ ದಕ್ಷಿಣ ಭಾರತದ ಆರ್ಷೇಯ ಶಿಲೆಗಳನ್ನು ವಿಭಾಗಿಸದೆ ಎಲ್ಲವನ್ನೂ ಒಟ್ಟುಗೂಡಿಸಿ ಪ್ರಾಚೀನ ಶಿಲಾಜಾಲವೆಂದು ಮೂಲಭೂತ ನಕಾಸೆಗಳಲ್ಲಿ ತೋರಿಸುತ್ತಿದ್ದರು. 1875ರಲ್ಲಿ ರಾಬರ್ಟ ಬ್ರೂಸ್ ಫೂಟ್ ಆಗಿನ ದಕ್ಷಿಣ ಮಹಾರಾಷ್ಟ್ರ ಪ್ರದೇಶದಲ್ಲಿ ಶಿಲಾಸ್ತೋಮ ಪರಿಶೋಧನೆ ನಡೆಸಿ ನಕ್ಷೆಯನ್ನು ತಯಾರಿಸುತ್ತಿದ್ದಾಗ ಅಲ್ಲಿನ ಆರ್ಷೇಯ ಶಿಲಾಸ್ತೋಮಜಾಲದಿಂದ ವಿವಿಧ ಪದರುಶಿಲೆಗಳ ಸಮೂಹವನ್ನು ಬೇರ್ಪಡಿಸಿ ಅವುಗಳನ್ನು ಪ್ರತ್ಯೇಕ ವರ್ಗವಾಗಿ ವಿಂಗಡಿಸಿದ. ಈ ಪದರು ಶಿಲೆಗಳು ಧಾರವಾಡ ಪ್ರದೇಶದಲ್ಲಿ ಹರಡಿರುವುದು ಕಂಡುಬಂದಿರುವುದರಿಂದ, ಆ ಶಿಲಾಸ್ತೋಮಕ್ಕೆ ಧಾರವಾಡ ವರ್ಗ ಎಂದು ಹೆಸರುಕೊಟ್ಟ. ಧಾರವಾಡ ಪದರು ಶಿಲೆಗಳು ಎಂದೂ ಕರೆಯುವುದಿದೆ. 1895ರಲ್ಲಿ ಪದರುಶಿಲೆಗಳ ಜೊತೆಯಲ್ಲಿರುವ ಕಣಶಿಲೆಯಂಥ ಶೀಣಿಕಲ್ಲುಗಳನ್ನೂ ಕಣಶಿಲೆಗಳನ್ನೂ ಒಟ್ಟುಗೂಡಿಸಿ ಆ ವರ್ಗಕ್ಕೆ ಆರ್ಷೇಯ ಪದವನ್ನು ಫೂಟ್ ಉಪಯೋಗಿಸಿದ. ಫೂಟ್ ಪ್ರಯೋಗಿಸಿದ ಆರ್ಷೇಯ ಪದ ಕಣಶಿಲೆಯಂಥ ಶೀಣಿಕಲ್ಲುಗಳಿಗೆ ಮತ್ತು ಕಣಶಿಲೆಗಳಿಗೆ ಮಾತ್ರ ಅನ್ವಯಿಸಿದ್ದಿತು. 1906ರಲ್ಲಿ ಹಾಲೆಂಡನ್ನು ಉತ್ತರ ಅಮೆರಿಕದಲ್ಲಿರುವ ಸುಪೀರಿಯರ್ ಸರೋವರ ಪ್ರದೇಶದ ಹ್ಯುರೋನಿಯನ್ ಶಿಲಾವರ್ಗಕ್ಕೆ ಹೋಲಬಹುದಾದ ಧಾರವಾಡದ ವರ್ಗಕ್ಕೂ ಜೀವಾವಶೇಷವಿಲ್ಲದ, ರೂಪಾಂತರ ಹೊಂದದ, ದ್ವೀಪಕಲ್ಪ ಭಾಗದಲ್ಲಿರುವ ಕಡಪ, ಕರ್ನೂಲ್, ವಿಂಧ್ಯ ಮುಂತಾದ ಪ್ರಸ್ತರೀ ಶಿಲಾವರ್ಗಗಳಿಗೂ ಅಗಾಧ ಅವಸಾಧನ ವಿಳಂಬನವಿರುವುದನ್ನು ಗಮನಕ್ಕೆ ತಂದು ಆರ್ಷೇಯ ಪದವನ್ನು ಧಾರವಾಡ ವರ್ಗಕ್ಕೂ ಅನ್ವಯಿಸಬೇಕೆಂದು ವಾದಿಸಿದ. ಈ ಅಭಿಪ್ರಾಯವನ್ನು ಫರ್ಮರ್ ಮುಂತಾದ ಭೂ ವಿಜ್ಞಾನಿಗಳೂ ಅಂಗೀಕರಿಸಿದರು. ಆದುದರಿಂದ ಈಗ ಆರ್ಷೇಯ ಗುಂಪಿನಲ್ಲಿ ಕಣಶಿಲೆಗಳು ಮತ್ತು ಕಣಶಿಲೆಯೆಂಥ ಶೀಣಿಕಲ್ಲುಗಳೂ ಅಲ್ಲದೆ, ಧಾರವಾಡ ಶಿಲಾಸ್ತೋಮಗಳೂ ಸೇರಿವೆ. ಆರ್ಷೇಯ ಶಿಲಾಸ್ತೋಮಗಳು ಕರ್ನಾಟಕದಲ್ಲಿಯೂ ಅಧಿಕವಾಗಿವೆ.

ಖನಿಜ ಸಂಪತ್ತು : ಆರ್ಥಿಕದೃಷ್ಟಿಯಿಂದ ಉಪಯುಕ್ತವಾದ ಅನೇಕ ಖನಿಜಗಳು ಆರ್ಷೇಯ ಶಿಲಾಸ್ತೋಮಗಳಲ್ಲಿವೆ. ಭಾರತದಲ್ಲಿ ಪದರು ಶಿಲಾಸ್ತೋಮ ಚಿನ್ನ, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಕ್ರೋಮೈಟ್, ತಾಮ್ರ, ಸೀಸ, ಸತು, ಪಾಷಾಣ ಮತ್ತು ಸುರಮ (ಆಂಟಿಮೊನಿ) ಅದಿರುಗಳನ್ನೂ ಲೋಹೇತರ ಖನಿಜಗಳಲ್ಲಿ ಕಲ್ನಾರು, ಕುರಂದ (ಕೊರ್‍ಯಾಂಡಮ್), ಗಾರ್ನೆಟ್ಸ್ ಅಥವಾ ಕೆಂಪು ಹರಳು, ಕಯನೈಟ್ ಮತ್ತು ಸಿಲಿಮನೈಟ್, ಸುಣ್ಣಕಲ್ಲು ಮತ್ತು ಅಮೃತಶಿಲೆ, ಶ್ವೇತ ಸುಧಾಶಿಲೆ (ಮ್ಯಾಗ್ನಸೈಟ್), ಖನಿಜವರ್ಣಗಳು (ಮಿನರಲ್ ಪಿಗ್‌ಮೆಂಟ್ಸ್), ಹೇಮಾಕ್ಷಿ (ಪೈರೈಟ್), ಬಳಪದ ಕಲ್ಲುಗಳು, ವರ್ಮಿಕ್ಯುಲೈಟ್ ಮುಂತಾದ ಅನೇಕ ಖನಿಜ ನಿಕ್ಷೇಪಗಳನ್ನು ಒಳಗೊಂಡಿದೆ. ಕಣಶಿಲೆ ಮತ್ತು ಶೀಣಿಕಲ್ಲುಗಳ ಪೆಗ್ಮಟೈಟ್ ಸಿರಗಳಲ್ಲಿ ಬೆಣಚು ಫೆಲ್‌ಸ್ಪಾರ್ ಅಭ್ರಕ, ಬಿಳೀ ಜೇಚು, ಪಚ್ಚೆಕಲ್ಲು, ಮಾನಜೈಟ್, ಸಾಮರಸ್ಕೈಟ್, ಕೊಲಂಬೈಟ್ ಮತ್ತು ಇತರ ವಿಕಿರಣಶಕ್ತಿ ತೋರುವ ಅಪೂರ್ವ ಮೂಲಧಾತು ಖನಿಜಗಳಿರುತ್ತವೆ. (ಬಿ.ಆರ್.ಆರ್.)

**ಆರ್ಸೆನಿಕ್:** ಕೀಟನಾಶಕ ಔಷಧಿಯಾಗಿ ಬಳಕೆಯಲ್ಲಿರುವ ವಿಷವಸ್ತು. ಗಾಜು ತಯಾರಿಕೆ, ಲವಣ ತಯಾರಿಸಲು ಮತ್ತು ಕ್ಯಾಲಿಕೋ ಮುದ್ರಣದಲ್ಲಿ ಬಿಳಿ ಆರ್ಸೆನಿಕ್ ಬಳಕೆಯಾಗುತ್ತದೆ. ಅದಿರಿನ ಪುಡಿಯು ಹಿತ್ತಾಳೆ ಹಾಗೂ ಮರದ ಸಾಮಾನುಗಳಿಗೆ ಮೆರಗು ಕೊಡಲು, ತಾಮ್ರದೊಂದಿಗೆ ಮಿಶ್ರಣ ಮಾಡಿ ಆರ್ಸೀನಿಯಲ್ ತಾಮ್ರ ತಯಾರಿಸಲು ಉಪಯುಕ್ತವಾಗಿದೆ. ಆರ್ಸೆನಿಕ್ ಬೂದು, ಹಳದಿ ಮತ್ತು ಕಿತ್ತಳೆ ಕೆಂಪು ಬಣ್ಣ ಹೊಂದಿರುತ್ತದೆ. ಆರ್ಸೆನಿಕ್ ವಿಶೇಷವಾಗಿ ಅ.ಸಂ.ಸಂ ಮತ್ತು ಸ್ವೀಡನ್‌ನಲ್ಲಿ ದೊರೆಯುತ್ತದೆ. ಇದು ದೊರೆಯುವ ಇತರ ದೇಶಗಳೆಂದರೆ ಮೆಕ್ಸಿಕೊ, ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಜಪಾನ್. (ಬಿ.ಸಿ.ಕೆ.)

**ಆಲಿಕಲ್ಲು:** ರಾಶಿಮಳೆ ಮೋಡಗಳಿಂದ (ಕ್ಯೊಮುಲೋ ನಿಂಬಸ್ ಕ್ಲೌಡ್ಸ್) ಕೆಳಗೆ ಬೀಳುವ ಹಿಮಗಡ್ಡೆಯ ಸಣ್ಣ ಉಂಡೆಗಳು (ಹೇಲ್). ಹವಾಮಾನಶಾಸ್ತ್ರದ ಪ್ರಕಾರ ಆಲಿಕಲ್ಲು ಉತ್ಪನ್ನವಾಗುವ ಸನ್ನಿವೇಶಗಳು ಮೂರು : 1. ಕೆಳಮಟ್ಟದಲ್ಲಿ ತೇವಪೂರಿತ ಬಿಸಿಗಾಳಿ : 2. ಉನ್ನತ ಎತ್ತರಗಳವರೆಗೆ (15250 ಮೀ ಗಳನ್ನೂ ಮೀರಿ) ವ್ಯಾಪಿಸಿರುವ ಸಿಡಿಲಿನಿಂದ ಕೂಡಿದ ಬಿರುಗಾಳಿ : 3. ನೆಲದಿಂದ 3050 ರಿಂದ 3650 ಮೀ ಎತ್ತರದಲ್ಲಿ ಹೆಪ್ಪುಗಟ್ಟುವ ಬಿಂದು (ಫ್ರೀಸಿಂಗ್ ಪಾಯಿಂಟ್). ಹಿಮ ಮತ್ತು ನೀರು ಇವುಗಳ ಪರ್ಯಾಯ ಮಿಶ್ರಣದಿಂದ ಆಲಿಕಲ್ಲು ಬೆಳೆದು ವೃದ್ಧಿಯಾಗಿ ಹರಳುಗಟ್ಟುವುದು. ಗುಡುಗು, ಬಿರುಗಾಳಿಯಿಂದ ಕೂಡಿದ ಮಳೆಯಲ್ಲಿ ಒಮ್ಮೊಮ್ಮೆ ಆಲಿಕಲ್ಲುಗಳು ಬೀಳುತ್ತವೆ. ರೂಢಿಯಲ್ಲಿ ಇಂಥ ಮಳೆಯನ್ನು ಕಲ್ಮಳೆ ಎನ್ನುತ್ತಾರೆ. ಆಲಿಕಲ್ಲಿನ ಆಕಾರ ವಿವಿಧ. ಎರಡು ಪೌಂಡ್ ತೂಕದವನ್ನೂ ಕಂಡವರಿದ್ದಾರೆ. ತೇವಾಂಶವುಳ್ಳ ವಾಯು ಶೀಘ್ರವಾಗಿ ಮೇಲಕ್ಕೇರುವುದರಿಂದ ಆಲಿಕಲ್ಲುಗಳು ಉತ್ಪತ್ತಿಯಾಗುತ್ತವೆ. ನೀರಿನ ಹನಿಗಳು ಹೆಪ್ಪುಗಟ್ಟಿ ನೀರಿನಲ್ಲಿ ತೇವಾಂಶ ಹೆಚ್ಚಿದಂತೆಲ್ಲ ಇವುಗಳ ಗಾತ್ರ ಮತ್ತು ತೂಕ ಹೆಚ್ಚುತ್ತವೆ. ತೂಕ ಹೆಚ್ಚಿದಾಗ ಮೇಲಕ್ಕೆ ಏರಿ ಹೋಗಲು ಸಾಧ್ಯವಿಲ್ಲದೆ ಕೆಳಕ್ಕೆ ಬೀಳುತ್ತವೆ.

ಕೆಳಕ್ಕೆ ಬೀಳುವಾಗ ಗಾಳಿಯಲ್ಲಿನ ತೇವಾಂಶವನ್ನು ಹೀರಿ ಇವುಗಳ ಗಾತ್ರ ಇನ್ನೂ ಹೆಚ್ಚಬಹುದು. ಆಲಿಕಲ್ಲಿನಿಂದ ಕೂಡಿದ ಬಿರುಗಾಳಿಯ ಮಳೆ ಬೆಳೆಗಳಿಗೆ ವಿಪರೀತ ನಷ್ಟವನ್ನುಂಟುಮಾಡುತ್ತದೆ. ಮಾವು ಮುಂತಾದ ಹಣ್ಣುಗಳು, ಕಾಯಿಗಳು ಉದುರಿಹೋಗುತ್ತವೆ. ಕುಂಬಳ ಮೊದಲಾದುವು ಕೆಡುತ್ತವೆ. ಕೆಲವು ವೇಳೆ ಈ ಮಳೆಗೆ ಸಿಕ್ಕಿಹಾಕಿಕೊಂಡ ಪ್ರಾಣಿಗಳು ಮತ್ತು ಜನರು ಸಾಯುವುದೂ ಉಂಟು. ಸಾಮಾನ್ಯವಾಗಿ ಆಲಿಕಲ್ಲು ಹೆಸರಿಗೆ ತಕ್ಕಂತೆ ಕಲ್ಲಿನಂತಿರುತ್ತಾದರೂ ಹಿಮದ ಹರಳುಗಳಿಂದ ಕೂಡಿದ ಮೃದು ಆಲಿಕಲ್ಲು ಅನೇಕವೇಳೆ ಹಿಮವನ್ನು ಹೋಲುತ್ತದೆ. ಆಲಿಕಲ್ಲಿನ ಗಾತ್ರ ಬಟಾಣಿ, ದ್ರಾಕ್ಷಿ ಹಣ್ಣುಗಳಷ್ಟು ಅಥವಾ 6–13 ಸೆಂಮೀ. ಇವುಗಳ ಆಕಾರ ಗೋಳಾಕಾರ, ಶಂಕುವಿನ ಆಕಾರವೋ, ನಿರ್ದಿಷ್ಟ ಆಕಾರ ರಹಿತವೋ ಆಗಿರುತ್ತವೆ. ಭಾರತದಲ್ಲಿ ಬೇಸಗೆಯ ಅಂತ್ಯಭಾಗ ಅಥವಾ ಮುಂಗಾರಿನ ಪರಿಸರಣ ಮಳೆಯ ಸಂದರ್ಭದಲ್ಲಿ ಬೀಳುವುದುಂಟು. (ಎಂ.ಎಸ್.)

**ಆಲಿಗೊಸೀನ್:** ಭೂ ವಿಜ್ಞಾನದಲ್ಲಿ ಟರ್ಷಿಯರಿ ಯುಗದ (ಈರ) ಮೂರನೆಯ ಕಲ್ಪ (ಇಪಾಕ್); 40 ದಶಲಕ್ಷ ವರ್ಷ ಪ್ರಾಚೀನದಿಂದ 25 ದ.ಲ. ವರ್ಷ ಪ್ರಾಚೀನದ ವರೆಗಿನ ಅವಧಿ. ಈ ಗ್ರೀಕ್ ಪದದ ಅರ್ಥ ಅಲ್ಪ (ಓಲಿಗೋಸ್) ಈಚಿನದು (ಕಾನೋಸ್); ಈ ಅವಧಿಯ ಚಿಪ್ಪುಮೀನುಗಳ ಅತ್ಯಲ್ಪ ಪಳೆಯುಳಿಕೆಗಳು ಮಾತ್ರ (ಸು. ಶೇ. 10) ಲಭ್ಯವಾಗಿವೆ. ಉತ್ತರ ಜರ್ಮನಿಯ ಶಿಲಾಸಮುದಾಯಗಳನ್ನೂ ಜೀವಾವಶೇಷಗಳನ್ನೂ ಅಧ್ಯಯಿಸಿದ ಎಚ್.ಇ.ಬೆರಿಕ್ ಎಂಬಾತ ಆಲಿಗೊಸೀನ್ ಪದವನ್ನು ಅರ್ಥಪೂರ್ಣವಾಗಿ ಮೊದಲಿಗೆ ಬಳಸಿದ (1854).

ಆಲಿಗೊಸೀನ್ ಸ್ತೋಮಗಳು ಎಂದರೆ ಆ ಕಲ್ಪದಲ್ಲಿ ರೂಪುಗೊಂಡ ಎಲ್ಲ ಶಿಲೆಗಳ ಸಮುದಾಯ ಎಂದು ಸಾಮಾನ್ಯ ಅರ್ಥ; ನಿರ್ದಿಷ್ಟ ಅರ್ಥ ಟರ್ಷಿಯರಿ ಯುಗದ ಆಲಿಗೊಸೀನ್ ಕಲ್ಪದಲ್ಲಿ ಉಂಟಾದ ಅವಸಾದನ ಶಿಲೆಗಳೆಂದಿದೆ. (ಡಿ.ಆರ್.)

**ಆಲಿಡೇಡ್:** ಮೋಜಣಿ ಕಾರ್ಯದಲ್ಲಿ ಬಳಸುವ ಒಂದು ಉಪಕರಣ. ಇದನ್ನು ದರ್ಶಕಪಟ್ಟಿ ಎಂದೂ ಕರೆಯುವುದಿದೆ. ಯಾವುದೇ ದಿಕ್ಕಿನಲ್ಲಿ ನೇರನೋಟದಲ್ಲಿ ಬರುವ ವಸ್ತುವನ್ನು ಸಮತಟ್ಟಿನ ಮೇಜಿನ ಹಾಳೆಯ ಮೇಲೆ ಬಿಂಬಿಸಲು ಇದು ಸಹಾಯಕಾರಿ. ಆದಕಾರಣ ಮೋಜಣಿದಾರರಿಗೆ, ಭೂಮಿತಿ ವಿಜ್ಞಾನಿಗಳಿಗೆ, ಕ್ಷೇತ್ರಸ್ವರೂಪ (ಟೋಪೊಗ್ರಫಿ) ತಿಳಿಯ ಬಯಸುವವರಿಗೆ ಇದು ಅತ್ಯುಪಯುಕ್ತ ಉಪಕರಣ.

ಇದನ್ನು ಒಂದು ಚಪ್ಪಟೆ ಮತ್ತು ನೇರವಾದ ಕಬ್ಬಿಣ ಅಥವಾ ಮರದ ಪಟ್ಟಿಯಿಂದ ತಯಾರುಮಾಡಲಾಗಿದೆ. ಈ ಪಟ್ಟಿಯ ಎರಡು ತುದಿಗಳಲ್ಲಿ ಚಿಕ್ಕ ನಿಲುವಿನ ಲೋಹದ ಭಾಗಗಳಿವೆ. ಇವು ನೇರ ಗೆರೆಯ ಮೇಲಿರಲು ಸಾಧ್ಯವಾಗುವಂತೆ ಬಿರುಕುಗಳನ್ನು

ಹೊಂದಿದೆ. ಆಲಿಡೇಡನ್ನು ಸಮತಟ್ಟು ಮೋಜಣಿಯ ಅಂಗವಾಗಿ ಮೆಲ್ಮೈಯ ವಿಸ್ತೀರ್ಣವನ್ನು ಅಳೆಯಲು ಮತ್ತು ಭೂಪಟವನ್ನು ತಯಾರಿಸಲು ಉಪ ಯೋಗಿಸುತ್ತಾರೆ. ಕೆಲವು ವೇಳೆ ಕೋನಗಳನ್ನು ಅಳೆಯಬಲ್ಲ ಸಾಧನಕ್ಕೂ ಆಲಿಡೇಡ್ ಎಂಬ ಹೆಸರಿದೆ. ಆಲಿಡೇಡ್‌ನಲ್ಲಿ ಎರಡು ಬಗೆಯುಂಟು. ಒಂದು ಸಾಮಾನ್ಯ ಆಲಿಡೇಡ್, ಮತ್ತೊಂದು ದುರ್ಬೀನು ಆಲಿಡೇಡ್. ಸಾಮಾನ್ಯ ಆಲಿಡೇಡನ್ನು ಕ್ಷೇತ್ರಕಾರ್ಯದಲ್ಲಿ ಅದರಲ್ಲಿಯೂ ಪ್ರಾಯೋಗಿಕ ಕೆಲಸದಲ್ಲಿ ವಿದ್ಯಾರ್ಥಿಗಳು ಬಹಳವಾಗಿ ಬಳಸುತ್ತಾರೆ. ದುರ್ಬೀನು ಆಲಿಡೇಡಿನ ಉಪಯೋಗ ವಿಶೇಷವಾಗಿ ಮೋಜಣಿದಾರರಿಗೆ. ಇದರಲ್ಲಿ ಸಾಮಾನ್ಯ ಆಲಿಡೇಡಿನ ಜೊತೆಗೆ ಒಂದು ದುರ್ಬೀನು ಮತ್ತು ಅಳತೆ ಮಾಡುವ ಗೋಳಾಂಶ ಇವೆ. ಇವುಗಳ ಮೂಲಕ ಎತ್ತರ ಮತ್ತು ಉದ್ದವನ್ನು ಸುಲಭವಾಗಿ ಅಳೆಯಬಹುದು.


ದುರ್ಬೀನು ಆಲಿಡೇಡ್

(ಬಿ.ಎಲ್.ಸಿ.ಆರ್.)

**ಆಲಿವ್ಸ್ ಬೆಟ್ಟಸಾಲು:** ಜೆರುಸಲೆಂನ ಪೂರ್ವಕ್ಕೆ ಸಮುದ್ರಮಟ್ಟಕ್ಕೆ 806 ಮೀ ಎತ್ತರದಲ್ಲಿದೆ. ಇದಕ್ಕೂ ಜರುಸಲೆಂಗೂ ಮಧ್ಯೆ ಕಿಡ್ರಾನ್ ಕಣಿವೆ ಇದೆ. ಈ ಮಾರ್ಗವಾಗಿಯೇ ಡೇವಿಡ್ ಜರುಸಲೆಂನಿಂದ ಓಡಿಹೋದನೆಂದು ಬೈಬಲ್ಲಿನ ಹಳೆ ಒಡಂಬಡಿಕೆಯಲ್ಲೂ ಯೇಸು ಆಗಾಗ್ಗೆ ಇಲ್ಲಿಗೆ ಬರುತ್ತಿದ್ದನೆಂದು ಹೊಸ ಒಡಂಬಡಿಕೆಯಲ್ಲೂ ಹೇಳಿದೆ. ಕ್ರೈಸ್ತಧರ್ಮಾವಲಂಬಿಗಳಿಗಾಗಿ ಇಲ್ಲಿ ಒಂದು ಆರಾಧನ ಮಂದಿರವನ್ನು ಕಟ್ಟಿಸಲಾಗಿತ್ತು. ಕಾಲಕ್ರಮೇಣ ಇದನ್ನು ಮಹಮದೀಯರು ಮಸೀದಿಯನ್ನಾಗಿ ಮಾರ್ಪಡಿಸಿದರಂತೆ. ಬೆಟ್ಟದ ತಳಭಾಗದಲ್ಲಿ ಸ್ವಲ್ಪವೇ ದೂರದಲ್ಲಿರುವ ಶಿಲೆಯಿಂದ ನಿರ್ಮಿತವಾಗಿರುವ ಗುಹೆಯನ್ನು ಧರ್ಮೋಪದೇಶಕರ ಸಮಾಧಿ ಎಂದು ಕರೆಯುತ್ತಾರೆ.

ಸ್ಕೋಪಿಸ್ ಶಿಖರ ಆಲಿವ್ಸ್ ಬೆಟ್ಟಗಳ ಒಂದು ಭಾಗ. 1925ರಲ್ಲಿ ಇಲ್ಲಿ ಹೀಬ್ರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. 1927ರ ಜುಲೈನಲ್ಲಾದ ಭೂಕಂಪದಿಂದ ಈ ಪ್ರದೇಶಕ್ಕೆ ಅಪಾರ ಹಾನಿಯುಂಟಾಗಿತ್ತು. (ಎಂ.ಎಸ್.ಎಂ.)

**ಆಲೆನ್ ಫ್ರೆಡ್:** ಮಾನವ ನಡವಳಿಕೆಗೆ ಸಂಬಂಧಿಸಿದಂತೆ 1967ರಲ್ಲಿ ಆಲೆನ್ ಫ್ರೆಡ್ ತಮ್ಮ ಸಿದ್ಧಾಂತವನ್ನು ಪ್ರಕಟಿಸಿದ್ದಾರೆ. ಇವರು ಸ್ಥಾನೀಕರಣ ಸಿದ್ಧಾಂತಗಳ ವಿಶ್ಲೇಷಣೆಯನ್ನು ವಿವರಿಸುವಲ್ಲಿ ನಡವಳಿಕೆಯ ರೂಪುಗೊಳ್ಳುವ ಕಲ್ಪನೆಯನ್ನು ಮಾಡಿಕೊಂಡಿದ್ದಾರೆ.

ಸಿದ್ಧಾಂತದ ಹೇಳಿಕೆ: ಆಲೆನ್ ಫ್ರೆಡ್ ಮಾಹಿತಿ ದೊರೆಯುವಿಕೆ ಮತ್ತು ಉಪಯೋಗದ ಸಾಧ್ಯತೆಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಭಾವಿಸಿದ್ದಾರೆ. ಈ ಅಂಶಗಳು ಮಾನವನ ಸ್ವಭಾವ ಮತ್ತು ಆತನಿಂದ ನಿರ್ಮಾಣವಾಗುವ ಮಾತೃಕೆಗಳನ್ನು ವಿವರಿಸುವ ಕಾರ್ಯ ಪ್ರವೃತ್ತಿಯಾಗಿದೆ. ಈ ಮಾತೃಕೆಯು ಒಂದು ದ್ವಿಚರ ನಕ್ಷೆಯನ್ನು ನೀಡಿದೆ. ಮಾಹಿತಿಯ ಗುಣ ಮತ್ತು ಪ್ರಮಾಣಗಳು ಬದಲಾವಣೆಯಾಗುತ್ತಿರುತ್ತದೆ. ಉದಾ: ಒಂದು ಘಟಕವು ತನ್ನ ಕಾರ್ಯವನ್ನು ತೀವ್ರಗೊಳಿಸಿದಾಗ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಬಹುದು. ಹಾಗೆಯೇ ವಿಷಯ ಸಂಗ್ರಹಣೆಯನ್ನು ಹೆಚ್ಚಿಸಿದಷ್ಟೂ ಅವುಗಳನ್ನು ಉಪಯೋಗಿಸುವ ಸಾಮರ್ಥ್ಯವೂ ಉತ್ತಮವಾಗುತ್ತದೆ. ಮಾತೃಕೆಯ ಸದಿಶಗಳು ವ್ಯತ್ಯಾಸಾತ್ಮಕ ಅಂಶಗಳಿಗಿಂತ ದಿಕ್‌ಮಾನ ರೇಖೆಯು ಹೆಚ್ಚಾಗಿರುತ್ತದೆಂದು ವಿವರಿಸುತ್ತದೆ. ನಡವಳಿಕೆಯ ಮಾತೃಕೆಯನ್ನು ಉಪಯೋಗಿಸುತ್ತಾ ಒಂದು ಪ್ರಾದೇಶಿಕ ಎಲ್ಲೆಯೊಳಗೆ ಸ್ಥಾನೀಕರಣವನ್ನು ವಿಶ್ಲೇಷಿಸಲಾಗಿದೆ.

ಗುಣಗಳು: ಮಾಹಿತಿಯನ್ನು ಏನು ಮತ್ತು ಏತಕ್ಕೆ ಎಂಬುದಾಗಿ ಆಯ್ಕೆಮಾಡಿಕೊಳ್ಳಲಾಗುತ್ತದೆ. ಹಾಗೂ ಇವುಗಳ ಉಪಯೋಗದ ಮಹತ್ವದ ಕಡೆಗೆ ಪರೋಕ್ಷವಾಗಿ ಗಮನಹರಿಸಲಾಗುತ್ತದೆ. ಅಳತೆಗೆ ಸಂಬಂಧಿಸಿದಂತೆ ಕಾರ್ಯಪ್ರವೃತ್ತಿಯ ಪರಿಭಾವನೆಗಳ ನಡುವೆ ವ್ಯತ್ಯಾಸ ಕಂಡುಬರುತ್ತದೆ– ಮನುಷ್ಯನ ಆರ್ಥಿಕ ಚಟುವಟಿಕೆಯ ಕೇಂದ್ರ–ಸ್ಥಾನೀಕರಣದ ಚಿತ್ರಣ ಮತ್ತು ಸ್ಥಿತಿಗಳು ಯಾವುದೇ ಒಬ್ಬ ವ್ಯಕ್ತಿಯ ಮಾನಸಿಕ ಚಿತ್ರಣವಾಗಿರುತ್ತದೆ.

ಮಿತಿಗಳು: ಮಾಹಿತಿಯಲ್ಲಿನ ಬದಲಾವಣೆಗಳು ಯಾಂತ್ರಿಕವಾಗಿ ಪ್ರತಿಕ್ರಿಯಿಸುತ್ತವೆ. ಮಾಹಿತಿ ಮತ್ತು ಮಾಹಿತಿಯ ಉಪಯೋಗ ನೈಜ ಹಾಗೂ ಪ್ರತ್ಯೇಕವಾಗಿ ಪರಸ್ಪರ ಪೂರಕವಾಗಿದೆ. ಆದರೆ ಅವು ಕಾರಣ–ಪರಿಣಾಮಗಳಾಗಿಲ್ಲ. ಸ್ಥಾನೀಕರಣ ನಿರ್ಧಾರಕಗಳಲ್ಲಿ ಪ್ರೇರಣೆಯ ಅಂಶವು ಸೇರಿಕೊಂಡಿಲ್ಲ. ಮಾನವನ ನಡವಳಿಕೆಯ ಗುಣಾತ್ಮಕವು ಕ್ಲಿಷ್ಟಕರವಾಗಿದೆ. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ರಾಜಕೀಯ ಮತ್ತು ಸಾಮಾಜಿಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. (ಪಿ.ಜಿ.)

**ಆಲ್ಜಿಯರ್ಸ್:** ಆಲ್ಜೀರಿಯದ ಮುಖ್ಯ ರೇವು ಪಟ್ಟಣ, ರಾಜಧಾನಿ. ಹಳೆಯ ಹೆಸರು ಆಲ್ ಜೆಜೈರ್. ಆಲ್ಜಿಯರ್ಸ್ ಕೊಲ್ಲಿಯ ಪಶ್ಚಿಮ ಅಂಚಿನ 16 ಕಿಮೀ ವಿಸ್ತಾರದಲ್ಲಿದೆ. ಎತ್ತರವಾದ ಸಹೆಲ್ ಬೆಟ್ಟಗಳ ಇಳಿಜಾರಿನ ಮೇಲೆ ಕಟ್ಟಲಾಗಿದೆ. ಈ ಬೆಟ್ಟಗಳು ತೀರಕ್ಕೆ ಸಮಾನಾಂತರವಾಗಿ ಹರಡಿ ಪಟ್ಟಣದ ಹಿಂಭಾಗದಲ್ಲಿ 372 ಮೀ ಗಳವರೆಗೂ ಏರಿವೆ. ಈ ಪಟ್ಟಣವನ್ನು ಪೂರ್ವ ಹಾಗೂ ಉತ್ತರಾಭಿಮುಖವಾಗಿರುವಂತೆ ದಕ್ಷಿಣ ಯುರೋಪಿನ ಮಾದರಿಯಲ್ಲಿ ನಿರ್ಮಿಸಲಾಗಿದೆ. ನಗರದ ಬಡಾವಣೆಯೂ ಸೇರಿ ಜನಸಂಖ್ಯೆ 44,47,000 (2002).

ಹಳೆಯ ತುರ್ಕಿಯ ಈ ರೇವುಪಟ್ಟಣ 10ನೆಯ ಶತಮಾನದಲ್ಲಿ ರೂಪುಗೊಂಡು ತುರ್ಕಿಯ ಕುಪ್ರಸಿದ್ಧ ಕಡಲುಗಳ್ಳ ಖೈರ್–ಎದ್–ದಿನ್ ಅಲ್ಲಿನ ಸ್ಪೇನಿನವರನ್ನು ಹೊರ ದೂಡಿದಂದಿನಿಂದ (1530) ಫ್ರೆಂಚರು ಆಕ್ರಮಿಸುವವರೆಗೆ (1830) ಹಲವು ಬಗೆಯ ಕೊಲೆ ಸುಲಿಗೆಗಳಿಗೆ ಖ್ಯಾತವಾಗಿತ್ತು.

ಈ ರೇವಿನ ಮುಖಾಂತರ 1955ರಲ್ಲಿ ಹಡಗುಗಳು 36,24,000 ಟನ್ನು ಸಾಮಗ್ರಿಯನ್ನು ರವಾನಿಸಿದುವು. ವಾಹನಗಳು, ಪೆಟ್ರೋಲಿಯಂ ಸಾಮಗ್ರಿಗಳು, ಗೋದಿ, ಸಿಮೆಂಟ್, ಲೋಹಗಳು, ಹತ್ತಿ ಬಟ್ಟೆ, ಸಕ್ಕರೆ ಹಾಗೂ ಕಾಫಿ ಇಲ್ಲಿಗೆ ಆಮದಾಗುತ್ತವೆ. ದ್ರಾಕ್ಷಾರಸ, ತರಕಾರಿ, ಹಣ್ಣುಗಳು, ಕಬ್ಬಿಣ ಹಾಗೂ ರಂಜಕಗಳನ್ನು ಇಲ್ಲಿಂದ ರಫ್ತು ಮಾಡಲಾಗುವುದು. ಇಲಿಂದ ಮಾರ್ಸೇಲ್ಸ್‌ಗೆ ಹಡಗಿನ ಸಂಚಾರವಿದೆ.

1942 ನವೆಂಬರ್‌ನಿಂದ ಆಗಸ್ಟ್ 1944 ರವರೆಗೆ ಉತ್ತರ ಆಫ್ರಿಕದ ಸ್ನೇಹಪರ ರಾಷ್ಟ್ರಗಳ ಸೇವೆಗಳಿಗೆ ಕೇಂದ್ರವಾಗಿತ್ತು. (ಎಂ.ಎಸ್.ಎಂ.)

**ಆಲ್ಜೀರಿಯ:** ಆಫ್ರಿಕದ ಉತ್ತರ ಭಾಗದಲ್ಲಿರುವ ಗಣರಾಜ್ಯ. $18^0$–$38^0$ ಉ. ಅ. $9^0$ ಪ. ರೇ. – $12^0$ ಪೂ. ರೇ. ದಲ್ಲಿ ಹಬ್ಬಿದೆ. ಪಶ್ಚಿಮದಲ್ಲಿ ಮೊರಾಕೊ ಮತ್ತು ಸ್ಪಾನಿಷ್ ಸಹರ, ದಕ್ಷಿಣದಲ್ಲಿ ಫ್ರೆಂಚರ ಪಶ್ಚಿಮ ಆಫ್ರಿಕ, ಪೂರ್ವದಲ್ಲಿ ಲಿಬಿಯ ಮತ್ತು ಟ್ಯುನೀಷಿಯ,




ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರಗಳಿಂದ ಆವೃತವಾಗಿದೆ. ಓರಾನ್, ಆಲ್ಜಿಯರ್ಸ್ ಮತ್ತು ಕಾನ್ಸ್‌ಟೈನ್ ಪ್ರಾಂತ್ಯಗಳನ್ನೊಳಗೊಂಡಂತೆ ಇದರ ವಿಸ್ತೀರ್ಣ 2,381,741 ಚ.ಕಿಮೀ. ಜನಸಂಖ್ಯೆ 31,261,000 (2000). ಬಹುಪಾಲು ಮುಸ್ಲಿಮರು.

ಇಲ್ಲಿ ಹಿತಕರವಾದ ವಾಯುಗುಣವಿದೆ. ಬೇಸಗೆಯಲ್ಲಿ ಹೆಚ್ಚು ಬಿಸಿಲಿನತಾಪವಿದ್ದರೂ ರಾತ್ರಿವೇಳೆ ತಂಪಾಗಿರುತ್ತದೆ. ಮಳೆಯೂ ಸಾಕಷ್ಟು ಆಗುವುದರಿಂದ ಉತ್ತಮ ವ್ಯವಸಾಯಕ್ಕೆ ಅನುಕೂಲವಾಗಿದೆ.

ಆಲ್ಜೀರಿಯ ಭೌತಿಕವಾಗಿ ಟೆಲ್ ಅಟ್ಲಾಸ್ ಮತ್ತು ಸಹರದ ಅಟ್ಲಾಸ್ ಎಂಬ ಎರಡು ಸಮಾನಾಂತರ ಶ್ರೇಣಿಯಿಂದ ಕೂಡಿದೆ. ಇವುಗಳ ನಡುವೆ ಇರುವುದು ಷಾಟ್ಸ್ ಪ್ರಸ್ಥಭೂಮಿ; ಇದರಲ್ಲಿ ಭೂಕುಸಿತದಿಂದಾದ ಕೆಲವು ಪ್ರದೇಶಗಳು ನೀರು ಬಸಿಯುವ ಕಾಲುವೆಗಳಾಗಿವೆ. ದಕ್ಷಿಣದಲ್ಲಿ 450 ಮೀ ಗಳಿಗಿಂತ ಕಡಿಮೆ ಎತ್ತರದ ಸಹರ ಪ್ರದೇಶವಿದೆ.

ಮೆಡಿಟರೇನಿಯನ್ ವಾಯುಗುಣವಿರುವ ಉತ್ತರದ ಇಕ್ಕಟ್ಟಾದ ತೀರಪ್ರದೇಶದಲ್ಲಿ ವ್ಯವಸಾಯವೇ ಜನರ ಮುಖ್ಯ ಕಸಬು ; ಇಲ್ಲಿ ದೇಶೀಯ ರೈತರು ಆಹಾರಧಾನ್ಯಗಳು, ಆಲಿವ್ ಗಿಡಗಳು, ಎಸ್ಪಾರ್ಟೊ ಹುಲ್ಲು ಮತ್ತು ಕಾರ್ಕ್ ಮರಗಳನ್ನು ಬೆಳೆಸುತ್ತಾರೆ; ದನಕರುಗಳನ್ನು ಸಾಕುತ್ತಾರೆ. ಐರೋಪ್ಯ ನಿವಾಸಿಗಳು ಮದ್ಯ, ತರಕಾರಿ, ಹಣ್ಣು, ಹೊಗೆಸೊಪ್ಪು ಮತ್ತು ಹತ್ತಿಯನ್ನು ಉತ್ಪಾದಿಸುತ್ತಾರೆ. ರಫ್ತಾಗುವ ಪದಾರ್ಥಗಳಲ್ಲಿ ಅರ್ಧಭಾಗ ದ್ರಾಕ್ಷಾರಸ; ಉಳಿದ ವಸ್ತುಗಳು ಕಬ್ಬಿಣದ ಅದಿರು, ಹಣ್ಣು ಮತ್ತು ತರಕಾರಿಗಳು.

ಧಾನ್ಯವನ್ನು ಹಿಟ್ಟು ಮಾಡುವುದು, ಶೋಧಿಸುವುದು, ಹಣ್ಣುಪಾಕ ಮತ್ತು ಹೊಗೆಸೊಪ್ಪು ತಯಾರಿಕೆ ಇಲ್ಲಿನ ಮುಖ್ಯ ಕೈಗಾರಿಕೆಗಳು. ಇವುಗಳೆಲ್ಲ ಹೆಚ್ಚಾಗಿ ಸಮುದ್ರತೀರಪ್ರದೇಶದಲ್ಲೇ ಇವೆ. ಬೃಹತ್ ಕೈಗಾರಿಕೆಗಳು ಕಡಿಮೆ. ರಾಸಾಯನಿಕ ವಸ್ತುಗಳು, ಸಿಮೆಂಟು, ಬಟ್ಟೆಬರೆಗಳು, ಸಕ್ಕರೆ ಮುಂತಾದುವು ತಯಾರಾಗುತ್ತವೆ. (ಪಿ.ಕೆ.ಎಸ್.)

ಸ್ವಾತಂತ್ರ್ಯ ಪೂರ್ವದಲ್ಲಿ ಆಲ್ಜೀರಿಯದಲ್ಲಿ ಬಂದು ನೆಲೆಸಿದ್ದ ಯುರೋಪೀಯನ್ನರ ಸಂಖ್ಯೆ ಸು. 10 ಲಕ್ಷದಷ್ಟಿತ್ತು. ಇದರಲ್ಲಿ ಅರ್ಧದಷ್ಟು ಜನ ಫ್ರೆಂಚರು. ಸ್ವಾತಂತ್ರ್ಯ ಬಂದಾಗಿನಿಂದ ಸಹಸ್ರಾರು ಯುರೋಪಿಯನ್ನರು ಈ ದೇಶವನ್ನು ಬಿಟ್ಟು ಹೋದರು. ಉಳಿದವರು ಸ್ಥಳೀಯ ರೈತರುಗಳಿಗಿಂತ ಹೆಚ್ಚಿನ ಪ್ರದೇಶವನ್ನು ಆಕ್ರಮಿಸಿದರು. ನಿರುದ್ಯೋಗ ನಿವಾರಣೆಯಾಗುವಂತೆ ದೇಶದ ಆರ್ಥಿಕ ಜೀವನವನ್ನು ರೂಪಿಸುವುದೇ ಆಲ್ಜೀರಿಯದ ಮುಖ್ಯ ಉದ್ದೇಶವಾಗಿದೆ.

ಓರಾನ್ ಪಶ್ಚಿಮ ಆಲ್ಜೀರಿಯದ ಮುಖ್ಯ ಬಂದರು. ಜನಸಂಖ್ಯೆ 3,93,000 (2002). ಇಲ್ಲಿಂದ ರಫ್ತು ಮಾಡಲಾಗುವ ವಸ್ತುಗಳಲ್ಲಿ ಮುಖ್ಯವಾದುವು ದ್ರಾಕ್ಷಾರಸ, ಕಾಳು, ಎಸ್ಪಾರ್ಟೊ ಹುಲ್ಲು ಮತ್ತು ಕುರಿ. (ಕೆ.ಎಲ್.)

**ಆಲ್ಟಾಯ್:** ಸೈಬೀರಿಯದ ನೈರುತ್ಯ ಭಾಗದಲ್ಲಿರುವ ಉನ್ನತ ಪರ್ವತ ಪ್ರಾಂತ್ಯ. ಇರ್ಟಿಷ್ ಮತ್ತು ಯೆನೆಸಿ ನದಿಗಳ ಮಧ್ಯ ಪ್ರದೇಶದಲ್ಲಿದ್ದು ಸ್ವಲ್ಪದೂರ ಮಂಗೋಲಿಯದ ಉತ್ತರಗಡಿಯವರೆಗೂ ಚಾಚಿದೆ. ಪಶ್ಚಿಮದ ಕಾಲಿವಾನ್ ಪರ್ವತಶ್ರೇಣಿ, ಆಗ್ನೇಯದ ಸೈಲ್ಯುಜಂ ಶ್ರೇಣಿ, ಕಟೂನ್ ಮತ್ತು ಚೂಯ ಆಲ್ಪ್ಸ್ ಶ್ರೇಣಿಗಳ ಮಧ್ಯಭಾಗಗಳೂ ಇದಕ್ಕೆ ಸೇರಿವೆ. 4580 ಮೀ ಎತ್ತರವಿರುವ ಅತ್ಯುನ್ನತ ಶಿಖರ ಬೆಲೂಖ ಕಟೂನ್ ಆಲ್ಪ್ಸ್‌ನಲ್ಲಿದೆ. ಇರ್ಟಿಷ್, ಓಬ್ ಮುಂತಾದ ನದಿಗಳಿಗೆ ನೀರನ್ನೊದಗಿಸುವ ಹಿಮ ನದಿಗಳು ಇಲ್ಲಿವೆ. ಉತ್ತರದ ಸಲೈರ್ ಮತ್ತು ಆಲಾ–ಟಾ ಬೆಟ್ಟಸಾಲುಗಳು, ಈಶಾನ್ಯದ ಸಯಾನ್ ಪರ್ವತಶ್ರೇಣಿ, ಪೂರ್ವದ ಟೆನ್ನು–ಉಲಾ ಬೆಟ್ಟಗಳು ಮತ್ತು ಆಗ್ನೇಯದ ಮಂಗೋಲಿಯನ್ ಆಲ್ಟೈನ್ ಬೆಟ್ಟಗಳು ಇದರ ಶಾಖೆಗಳು. ಈ ಪ್ರದೇಶವೆಲ್ಲ ಪ್ರಾಚೀನ ಭೂಯುಗದ ಸ್ತರಗಳಿಂದ ಕೂಡಿ, ಸವೆತದಿಂದ ಪ್ರಸ್ಥಭೂಮಿಯಂತಾಗಿ, ಪುನಃ ನೆಲದುಬ್ಬರಕ್ಕೊಳಗಾಗಿದೆ. ಇಲ್ಲಿ ಖಂಡಾಂತರ ವಾಯುಗುಣವಿದೆ. 1820 ಮೀ ಎತ್ತರದವರೆಗೂ ತಪ್ಪಲಿನಲ್ಲಿ ದಟ್ಟವಾದ ಕಾಡುಗಳಿವೆ. ಅಲ್ಲಿಂದ ಮೇಲೆ 2450 ಮೀ ಎತ್ತರದವರೆಗೆ ಹುಲ್ಲುಗಾವಲು ; ಅದಕ್ಕೂ ಮೇಲೆ ಹಿಮಾಚ್ಛಾದಿತ ಶಿಖರಗಳು. ಸವೆದ ಪರ್ವತಭಾಗಗಳನ್ನು ಒಳಗೊಂಡ ಈ ಪ್ರದೇಶದಲ್ಲಿ ಬೆಳ್ಳಿ, ತಾಮ್ರ, ಪಾದರಸ, ಚಿನ್ನ, ಸೀಸ ಮುಂತಾದ ಲೋಹಗಳು ವಿಪುಲವಾಗಿ ದೊರಕುತ್ತವೆ. ಲೆನಿನೊಗಾರ್ಸ್ಕ್ ಪ್ರಧಾನ ಗಣಿಕೇಂದ್ರ, ಟಂಗ್‌ಸ್ಟನ್ನಿನ ಅದಿರು ಕೋಲಿವನ್ ಎಂಬಲ್ಲಿ ವಿಶೇಷವಾಗಿದೆ. ಇಲ್ಲಿನ ನಿವಾಸಿಗಳ ಮುಖ್ಯ ಕಸಬು ಬೇಟೆ, ಪಶುಪಾಲನೆ ಮತ್ತು ಕೃಷಿ. ರಾಜಧಾನಿ ಬರ್ನೌಲ್. (ಎಂ.ಎಸ್.ಎಂ.)

**ಆಲ್ಪ್ಸ್:** ಯುರೋಪ್ ಖಂಡದಲ್ಲಿಯೇ ಅತಿ ಎತ್ತರವಾಗಿದ್ದು ಬಿಲ್ಲಿನಾಕಾರದಲ್ಲಿ ಸು. 1120 ಕಿಮೀ ಹರಡಿರುವ ಮುಖ್ಯ ಪರ್ವತಸ್ತೋಮ. ನೈರುತ್ಯದಿಂದ ಈಶಾನ್ಯದ ಕಡೆ ಹಬ್ಬಿರುವ ಅನೇಕ ಸಮಾನಾಂತರ ಶ್ರೇಣಿಗಳನ್ನೊಳಗೊಂಡಿದೆ. ಜಿನೋವ ಖಾರಿಯಿಂದ ಫ್ರಾನ್ಸ್, ಸ್ವಿಟ್ಜರ್‌ಲೆಂಡ್, ಜರ್ಮನಿ, ಆಸ್ಟ್ರಿಯ, ಇಟಲಿ ಮತ್ತು ಯೂಗೋಸ್ಲಾವಿಯ ಭಾಗಗಳಲ್ಲಿ ಪ್ರಸರಿಸಿದೆ. ಈ ಪರ್ವತ ಆಕ್ರಮಿಸಿರುವ ಭಾಗದಲ್ಲಿ ರೈನ್, ರ್ಹೋನ್, ಪೋ ಮತ್ತು ಡ್ಯಾನ್ಯೂಬ್ ನದಿಗಳ ಜಲಾನಯನ ಪ್ರದೇಶಗಳಿವೆ. ಈ ಬೃಹದ್ ಪ್ರದೇಶವನ್ನು ಭೌಗೋಳಿಕವಾಗಿ ಮೂರು ಮುಖ್ಯ ಪಂಗಡಗಳಾಗಿ ವಿಂಗಡಿಸಬಹುದು; ಪಶ್ಚಿಮ ಆಲ್ಪ್ಸ್, ಮಧ್ಯ ಆಲ್ಪ್ಸ್ ಮತ್ತು ಪೂರ್ವ ಆಲ್ಪ್ಸ್.

ಪಶ್ಚಿಮ ಆಲ್ಪ್ಸ್ ಪ್ರದೇಶ ಮ್ಯಾರಿಟೈಮ್, ಕೊಟ್ಟಿಯನ್, ಡೌಫೈನ್ ಮತ್ತು ಗ್ರೈಯಾನ್ ಆಲ್ಪ್ಸ್‌ಗಳನ್ನೊಳಗೊಂಡಿದೆ. ಎತ್ತರದ ಶಿಖರ ಪಿಕ್‌ದೇಸ್ ಎಕ್ರಿನ್ಸ್ (4072 ಮೀ) ಮಧ್ಯ ಆಲ್ಪ್ಸ್ ಪರ್ವತಪ್ರದೇಶ ಉತ್ತರದಲ್ಲಿರುವ ಬರ್ನೀಸ್ ಆಲ್ಪ್ಸ್ ಶ್ರೇಣಿ, ಪೆನ್ನೈಲ್ ಮಧ್ಯಶ್ರೇಣಿ, ಲೆಪೊಂಟೈನ್ ಮತ್ತು ಹೆಲ್‌ವೀಸಿಯನ್ ಶ್ರೇಣಿಗಳನ್ನೂ ದಕ್ಷಿಣದಲ್ಲಿರುವ ಆರ್ಟಲರ್ ಮತ್ತು ಡೊಲೊಮೈಟ್ ಆಲ್ಪ್ಸ್ ಶ್ರೇಣಿಗಳನ್ನೂ ಹೊಂದಿದೆ. ಅತಿ ಎತ್ತರ ಶಿಖರ ಮೌಂಟ್ ಬ್ಲ್ಯಾಂಕ್ (4739 ಮೀ). ಇದು ಆಲ್ಪ್ಸ್ ಪರ್ವತ ಪ್ರದೇಶದಲ್ಲಿಯೇ ಅತಿ ಎತ್ತರವಾದುದು. ಪೂರ್ವ ಆಲ್ಪ್ಸ್ ಪ್ರದೇಶ ನೊರಿಕ್, ಕಾರ್ಮಿಯನ್ ಮತ್ತು ಜೂಲಿಯಸ್ ಆಲ್ಪ್ಸ್‌ಗಳನ್ನೊಳಗೊಂಡಿದೆ. ಇಲ್ಲಿಗೆ ಮೌಂಟ್ ಸೆನಿಸ್, ಸಿಂಪ್ಲನ್, ಲಾಶ್ಟ್‌ಬರ್ಗ್, ಸೆಂಟ್ ಗೊಥಾರ್ಡ್, ಬ್ರೆನ್ನಾರ್, ಲಿಟ್ಲ್ ಮತ್ತು ಗ್ರೇಟ್ ಸೇಂಟ್ ಬರ್ನಾರ್ಡ್, ಜೆಮ್ಮಿ, ಸ್ಪ್ಲೂಜನ್ ಮತ್ತು ಮಲೋಜ ಕಣಿವೆಗಳ ಮೂಲಕ ಹಾದುಹೋಗಬಹುದು. ಕೆಳ ಕಣಿವೆಯ ಮತ್ತು ಇಳಿಜಾರು ಭಾಗಗಳಲ್ಲಿ ದ್ರಾಕ್ಷಿಬಳ್ಳಿ ಮತ್ತು ಧಾನ್ಯಗಳನ್ನು ಬೆಳೆಯುತ್ತಾರೆ. 1800–2100 ಮೀ ವರೆಗಿನ ಪರ್ವತಪ್ರದೇಶಗಳನ್ನು ಕಾಡುಗಳು ಆಕ್ರಮಿಸಿವೆ. ಇದಕ್ಕಿಂತಲೂ ಹೆಚ್ಚು ಎತ್ತರದ ಭಾಗಗಳಲ್ಲಿ ಆಲ್ಪೈನ್ ಹುಲ್ಲುಗಾವಲುಗಳಿವೆ. ಇವುಗಳನ್ನು ಪಶುಪಾಲನೆಗೆ ಬಳಸಲಾಗಿದೆ. ಈ ಪ್ರದೇಶದಲ್ಲಿ ಹಿಮರೇಖೆ ಉತ್ತರದಲ್ಲಿ 2492 ಮೀ ಮತ್ತು ದಕ್ಷಿಣದಲ್ಲಿ 3000 ಮೀ ಎತ್ತರದಲ್ಲಿ ಗೋಚರಿಸುವುದು. ಬೇಸಗೆ ಮತ್ತು ಚಳಿಗಾಲದಲ್ಲಿ ಅಸಂಖ್ಯಾತ ಪ್ರವಾಸಿಗರು ಈ ಪ್ರದೇಶಗಳಿಗೆ ಭೇಟಿ ಕೊಡುತ್ತಾರೆ. ಈ ಪ್ರದೇಶ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಅನುಕೂಲವಾಗಿದೆ.



ಸ್ವಿಸ್ ಆಲ್ಪ್ಸ್‌ನ ಭಾಗ

ಆಲ್ಪ್ಸ್ ಪರ್ವತ ಉತ್ತರ ಯುರೋಪಿನ ಮೈದಾನ ಪ್ರದೇಶಗಳು ಮತ್ತು ದಕ್ಷಿಣ ಯುರೋಪಿನ ಮೆಡಿಟರೇನಿಯನ್ ಪ್ರದೇಶಗಳ ಮಧ್ಯೆ ಸಮರ್ಥನೀಯವಾದ ಒಂದು ಸ್ವಾಭಾವಿಕ ಎಲ್ಲೆಯಾಗಿದೆ. ಈ ಭಾಗಗಳಲ್ಲಿ ಜೆನೀವ, ಲೂಸರ್ನ್, ಕಾನ್ಸ್ಟೆನ್ಸ್, ಜೂರಿಚ್, ಲುಗಾನೊ, ಕೊಮೊ, ಗರ್ಡ ಮೊದಲಾದ ಉಪಯುಕ್ತ ಹಾಗೂ ಸುಂದರ ಸರೋವರಗಳಿವೆ. ಸುತ್ತಣ ಪೈನ್ ಕಾಡುಗಳಲ್ಲಿ ಷಮಾಯ್, ಮಾರ್ಮಟ್, ಐಬೆಕ್ಸ್ ಮೊದಲಾದ ವನ್ಯಪ್ರಾಣಿಗಳಿವೆ. ಮತ್ತೆಲ್ಲೂ ಕಂಡುಬರದಂಥ ಪ್ರಕೃತಿ ಸೌಂದರ್ಯವುಳ್ಳ ಈ ಪರ್ವತತಾಣ ಸಂತೋಷಕೂಟ ಮತ್ತು ಕ್ರೀಡೆಗಳಿಗೆ ಪ್ರಸಿದ್ಧ. ಪ್ರಪಂಚದ ನಾನಾ ಭಾಗಗಳಿಂದ ಜನ ತಂಡೋಪತಂಡವಾಗಿ ಬಂದು ಕೆಲಕಾಲ ಇಲ್ಲಿನ ಪ್ರವಾಸಿ ಶಿಬಿರಗಳಲ್ಲಿ ನೆಲಸಿ ಪರ್ವತಗಳ ರಮ್ಯ ವಾತಾವರಣದಲ್ಲಿ ವಿಶ್ರಾಂತಿಪಡೆದು ಮಂಜುಗೆಡ್ಡೆಯ ಮೇಲೆ ಜಾರುವ ಸ್ಕೀಯಿಂಗ್ ಮತ್ತು ಸ್ಕೇಟಿಂಗ್ ಆಟಗಳಲ್ಲಿ ಭಾಗವಹಿಸುತ್ತಾರೆ. ಹಚ್ಚ ಹಸುರಿನ ಹುಲ್ಲುಗಾವಲುಗಳು ಅಲ್ಲಲ್ಲಿ ಹರಡಿರುವ ಹಳ್ಳಿಗಳಿಗೆ ಮೆರಗು ಕೊಟ್ಟಿವೆ. ವರ್ಷವೆಲ್ಲ ಪ್ರವಾಸಿಗರು ಇಲ್ಲಿಗೆ ಬಂದು ಹೋಗುವುದರಿಂದ ಹೆಚ್ಚಿನ ಆದಾಯವಿದೆ. (ಎಂ.ಎಸ್.)

**ಆಲ್ಫಾಲ್ಫ:** ಮೂಲತಃ ಪೂರ್ವ ಮೆಡಿಟರೇನಿಯನ್ ಪ್ರದೇಶಮೂಲವಾಸಿಯಾದ ಈ ಗಿಡ ರಷ್ಯ ದೇಶದ ದಕ್ಷಿಣದಲ್ಲಿರುವ ಕಾಕಸಸ್ ಪರ್ವತಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಬಹಳ ಹಿಂದಿನ ಕಾಲದಿಂದಲೂ ಇದರ ಕೃಷಿ ರೂಢಿಯಲ್ಲಿದೆ. ಪ್ರ.ಶ.ಪೂ. 400ರ ಸುಮಾರಿನಲ್ಲಿಯೇ ಇದನ್ನು ಗ್ರೀಸ್ ದೇಶದಲ್ಲಿ ಬೆಳೆಸುತ್ತಿದ್ದರೆಂದು ದಾಖಲೆಯಿದೆ. ಇದರ ಸೊಪ್ಪಿನ ಉತ್ಕೃಷ್ಟಗುಣದಿಂದಾಗಿ ಈ ಗಿಡವನ್ನು ಪ್ರಪಂಚದ ಎಲ್ಲ ದೇಶಗಳಲ್ಲೂ ಬೆಳೆಸುತ್ತಿದ್ದಾರೆ. ಮುಖ್ಯವಾಗಿ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ದಕ್ಷಿಣ ಅಮೆರಿಕ, ಕೆನಡ, ಯುರೋಪ್ ದೇಶಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಸುತ್ತಿದ್ದಾರೆ.

ಆಲ್ಫಾಲ್ಫ ಮುಖ್ಯವಾಗಿ ಹಸುರು ಮೇವಾಗಿ ಉಪಯೋಗವಾಗುವುದಾದರೂ ಇದರ ಸೊಪ್ಪನ್ನು ಕೋಳಿ, ಹಂದಿ ಮುಂತಾದ ಪ್ರಾಣಿಗಳ ಮಿಶ್ರ ಆಹಾರ ತಯಾರಿಕೆಯಲ್ಲಿಯೂ ಉಪಯೋಗಿಸುತ್ತಾರೆ. ಅಲ್ಲದೆ ಇದರ ವ್ಯವಸಾಯದಿಂದ ಭೂಮಿಯಲ್ಲಿನ ನೈಟ್ರೊಜನ್

ಪ್ರಮಾಣ ಹೆಚ್ಚುವುದೆಂದು ಕಂಡುಬಂದಿದೆ. ಇದರ ಬೇರುಗಂಟುಗಳಲ್ಲಿ ಕೆಲವು ವಿಶಿಷ್ಟ ಜಾತಿಯ ಬ್ಯಾಕ್ಟೀರಿಯವಿದ್ದು ಅವು ವಾತಾವರಣದಲ್ಲಿನ ನೈಟ್ರೊಜನ್ನನ್ನೇ ಭೂಮಿಯಲ್ಲಿ ಸ್ಥಿರೀಕರಣಗೊಳಿಸುವುದರಲ್ಲಿ ಸಹಾಯಮಾಡುವುದರಿಂದ ಭೂಮಿಯ ಸಾರ ಹೆಚ್ಚುತ್ತದೆ.

ಈ ಗಿಡಕ್ಕೆ ಹಲವಾರು ಬಗೆಯ ಬೂಷ್ಟು, ಬ್ಯಾಕ್ಟೀರಿಯ ವೈರಸ್ ರೋಗಗಳು ತಗಲುತ್ತವೆ. ಕೆಲವು ಬಾರಿ ಗಣನೀಯ ನಷ್ಟವನ್ನುಂಟುಮಾಡುವುದೂ ಉಂಟು. ಈ ರೋಗಗಳನ್ನು ರಾಸಾಯನಿಕ ಔಷಧಿಗಳ ಬಳಕೆಯಿಂದ ತಡೆಯಬಹುದು. ಅಲ್ಲದೆ ರೋಗನಿರೋಧಕ ಶಕ್ತಿಯನ್ನುಳ್ಳ ತಳಿಗಳನ್ನು ಅಭಿವೃದ್ಧಿಪಡಿಸುವುದರಿಂದ ರೋಗಗಳಾಗಲಿ, ಕೀಟಗಳಾಗಲಿ ಸೋಂಕದಂತೆ ತಡೆಯಬಹುದು. (ಕೆ.ಬಿ.ಎಸ್.)

**ಆಲ್‌ಫ್ರೆಡ್ ವಾನ್ ವೆಗನರ್:** 1880–1931. ಜರ್ಮನಿಯ ಭೂಭೌತಶಾಸ್ತ್ರಜ್ಞ ಮತ್ತು ಹವಾಮಾನ ಶಾಸ್ತ್ರಜ್ಞ. ಬರ್ಲಿನ್‌ನಲ್ಲಿ 1880 ನವೆಂಬರ್ 1 ರಂದು ಜನನ. ಅಂತರ ವಿಷಯ ವಿಜ್ಞಾನಿ. ಭೂಖಂಡಗಳ ಅಲೆತ ಎಂಬ ಸಿದ್ಧಾಂತದಿಂದ ಪ್ರಖ್ಯಾತಿಗಳಿಸಿದರು. ಆರಂಭದಲ್ಲಿ ಖಗೋಳ ವಿಜ್ಞಾನಿಯಾಗಿದ್ದು 1904 ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಪಡೆದರು. ಅನಂತರ ಇವರಿಗೆ ಹವಾಮಾನ ಶಾಸ್ತ್ರದಲ್ಲಿ ಆಸಕ್ತಿ ಮೂಡಿತು. ಪ್ರಸಿದ್ಧ ಹವಾಮಾನ ಶಾಸ್ತ್ರಜ್ಞ ಕೂಪ್ಪೆನ್‌ನ ಮಗಳನ್ನು ಈತ ಮದುವೆಯಾದರು. ಹವಾಮಾನ ವಿಷಯದಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿದರು, ಥರ್ಮೊ ಡೈನಮಿಕ್ಸ್ ಆಫ್ ದಿ ಅಟ್‌ಮೋಸ್ಫಿಯರ್ ಎಂಬ ಪುಸ್ತಕವನ್ನು ರಚಿಸಿದರು.

ಇವರು ಗ್ರೀನ್ಲೆಂಡಿಗೆ ಅನೇಕ ಬಾರಿ ಅನ್ವೇಷಣೆ ಕೈಗೊಂಡಿದ್ದರು. ಕಡೆಯ ಅನ್ವೇಷಣಾ ಯಾತ್ರೆಯಲ್ಲಿ ಅಲ್ಲಿಯೆ ಕಣ್ಮರೆಯಾದರು (1930). ಇವರ ಮೃತ ದೇಹ 1931 ಮೇ 12ರಂದು ದೊರಕಿತು.

ಖಂಡಗಳು ಮತ್ತು ಸಾಗರಗಳ ಉಗಮ ಎಂಬ ಲೇಖನದಲ್ಲಿ ಖಂಡಗಳ ಅಲೆತದ ಬಗ್ಗೆ ವಿವರಿಸಿದ್ದಾರೆ. 1930 ರಲ್ಲಿ ಭೂಗರ್ಭಶಾಸ್ತ್ರಜ್ಞರು ಈ ಸಿದ್ಧಾಂತವನ್ನು ನಿರಾಕರಿಸಿದರು. 1960ರಲ್ಲಿ ಮತ್ತೇ ಪ್ಲೆಟ್ ಟೆಕ್‌ಟಾನಿಕ್ಸ್ ಸಿದ್ಧಾಂತದ ಭಾಗವಾಗಿ ಜನಪ್ರಿಯವಾಯಿತು. ಈತನ ಪ್ರಕಾರ ಮೆಸೋಜೊಯಿಕ್ ಯುಗದಲ್ಲಿ ಎಲ್ಲಾ ಖಂಡಗಳು ಒಂದೇ ಆಗಿದ್ದು ಅದನ್ನು ಪ್ಯಾಂಜಿಯಾ ಎಂದು ಕರೆಯಲಾಗಿತ್ತು. ಅನಂತರ ಭೂಫಲಕಗಳ ಚಲನೆಯಿಂದ ಬಿರುಕುಗಳು ಉಂಟಾಗಿ 200 ದ.ಲ. ವರ್ಷಗಳ ಹಿಂದೆ ಖಂಡಗಳು ಚಲಿಸಿದವು. ದಕ್ಷಿಣ ಅಮೆರಿಕ ಮತ್ತು ಆಫ್ರಿಕ ಬೇರ್ಪಟ್ಟವು. ಇಯೋಸಿನ್ ಯುಗದಲ್ಲಿ ಆಸ್ಟ್ರೇಲಿಯ ಮತ್ತು ಅಂಟಾರ್ಟಿಕ ಬೇರ್ಪಟ್ಟವು. ಈ ಸಿದ್ಧಾಂತವನ್ನು ವೆಗನರ್ ಪಳೆಯುಳಿಕೆ, ಪ್ರಾಣಿಗಳ ವಲಸೆ ಮುಂತಾದ ಆಧಾರದ ಮೇಲೆ ಮಂಡಿಸಿದ್ದಾರೆ.

1960ರಲ್ಲಿ ಕೆನಡದ ಭೂವಿಜ್ಞಾನಿಯಾದ ಜಾನ್ ಟುಜ್ಹೊ ವಿಲ್ಸನ್ ಸ್ಥರಭಂಗ ಸಿದ್ಧಾಂತವನ್ನು ಮಂಡಿಸಿದಾಗ ಅದು ವೆಗನರ್ ಅವರ ಸಿದ್ಧಾಂತಕ್ಕೆ ಒತ್ತು ನೀಡಿತು. 1980 ರಲ್ಲಿ ಬ್ರಮೆರ್‌ಹವೆನ್‌ನಲ್ಲಿ ಇವರ ಹೆಸರಿನ ದ ಆಲ್‌ಫ್ರೆಡ್ ವೆಗನರ್ ಇನ್‌ಸ್ಟಿಟ್ಯೂಟ್ ಫಾರ್ ಪೋಲಾರ್ ಮತ್ತು ಮೆರೈನ್ ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಯಿತು. ಇವರ ಖಗೋಳಶಾಸ್ತ್ರದ ಕಾಣಿಕೆಗಾಗಿ 'ಅಸ್ಟರಾಯಿಡ್ 29227' ಕ್ಕೆ ವೆಗನರ್ ಎಂದು ಹೆಸರಿಡಲಾಯಿತು. (ಕೆ.ಎನ್.ಯು.)

**ಆಲ್‌ಫ್ರೆಡ್ ಹೆಟ್ನರ್ :** 1859–1914. ಜರ್ಮನಿಯ ಪ್ರಸಿದ್ಧ ಭೂಗೋಳಶಾಸ್ತ್ರಜ್ಞ, ರ‍್ಯಾಟ್ಜೆಲ್ ಹಾಗೂ ರಿಚ್‌ಥೋಫೆನ್‌ರ ಶಿಷ್ಯನಾಗಿದ್ದ. ಈತ ಪ್ರಾಥಮಿಕವಾಗಿ ಚಿಲಿಯ ವಾಯುಗುಣದ ಬಗ್ಗೆ ಅಧ್ಯಯನ ನಡೆಸಿ, ಅದನ್ನು ಮುಂದುವರೆಸುತ್ತಾ ಪಟಗೋನಿಯದ ಬಗ್ಗೆ ಪ್ರೌಢ ಪ್ರಬಂಧ ಬರೆದ. ಈ ಪ್ರಬಂಧಕ್ಕೆ 1881 ರಲ್ಲಿ ಡಾಕ್ಟರೇಟ್ ಪದವಿ ಪಡೆದ. ಅನಂತರ ಭೂಗರ್ಭ ವಿಜ್ಞಾನದಲ್ಲಿ ಆಸಕ್ತಿವಹಿಸಿ ಅಧ್ಯಯನ ನಡೆಸಿದ. ಮುಂದೆ ರಿಚ್‌ಥೋಫೆನ್ನನ ವಿದ್ಯಾರ್ಥಿಯಾಗಿ ಕಾರ್ಯನಿರ್ವಹಿಸಿದ.

ಈತ ಭೂಗೋಳವಿಜ್ಞಾನವನ್ನು ಐಡಿಯೋಗ್ರಫಿಕ್ ಹಾಗೂ ಮೊನೊಥೆಟಿಕ್ ಎಂದು ವಿಭಾಗಿಸಿದ್ದಾನೆ. ಭೂಗೋಳ ವಿಜ್ಞಾನವು ಪ್ರಾದೇಶಿಕ ಅಧ್ಯಯನ, ಅವುಗಳ ನಡುವಿನ ವ್ಯತ್ಯಾಸ, ಕಾರಣ ಮತ್ತು ಮನುಷ್ಯ ಇವುಗಳ ನಡುವೆ ಹೇಗೆ ಪ್ರಕೃತಿಯ ವಸ್ತುವಾಗಿ ಜೀವನ ನಡೆಸುತ್ತಿದ್ದಾನೆ ಎಂಬುದನ್ನು ತಿಳಿಸುತ್ತದೆ ಎಂದಿದ್ದಾನೆ. ಈತ ಪ್ರಾದೇಶಿಕ ಅಧ್ಯಯನವನ್ನು ಹಲವಾರು ವಿಭಾಗಗಳಾಗಿ ವಿಂಗಡಿಸಿದ್ದಾನೆ. ಅವುಗಳೆಂದರೆ: ಸ್ಥಳ ನಿರ್ದೇಶನ, ಭೂಗರ್ಭ ಅಧ್ಯಯನ, ಭೂಸ್ವರೂಪ, ಹವಾಮಾನ,ವನಸ್ಪತಿ, ಜನವಸತಿ ಮತ್ತು ಹಂಚಿಕೆ, ಆರ್ಥಿಕತೆ, ಸಾರಿಗೆ ಸಂಪರ್ಕ ಹಾಗೂ ರಾಜಕೀಯ ವಿಭಾಗಗಳು ಹೀಗೆ ಈ ವಿಭಾಗಗಳ ಮೂಲಕವಾಗಿ ಅಧ್ಯಯನ ಮಾಡಬಹುದು ಎಂದಿದ್ದಾನೆ. ಹೆಟ್ನರನ ಈ ವಾದಗಳಲ್ಲಿಯೇ ಪ್ರತಿವಾದಗಳು ಇರುವುದನ್ನು ಗಮನಿಸಬಹುದು.

ಭೌತಿಕ ಪರಿಸರಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಅಂಶಗಳನ್ನೇ ಈತ ಎತ್ತಿಹಿಡಿದ. ಉದಾ: 'ಜನಸಾಂದ್ರತೆ' 'ಆರ್ಥಿಕತೆಗೆ, ಸಾಮಾಜಿಕ ಸಂಸ್ಥೆಗಳಿಗೆ, ಧಾರ್ಮಿಕ ನಂಬಿಕೆಗಳಿಗೆ, ಸಾಂಸ್ಕೃತಿಕ ಅಂಶಗಳಿಗೆ, ರಾಜಕೀಯ ನೀತಿ ನಿಯಮಗಳಿಗೆ ಭೌತಿಕ ಪರಿಸರವೊಂದೇ ಕಾರಣವಲ್ಲ, ಇತರೆ ಕಾರಣಗಳೂ ಇವೆ' ಎಂದು ಈತ ಪ್ರತಿಪಾದಿಸಿದ. (ಎನ್.ಎಲ್.)

**ಆಲ್ಬರ್ಟ್ ಸರೋವರ:** ಆಫ್ರಿಕದ ಕಾಂಗೊ ಗಣರಾಜ್ಯದ ಪೂರ್ವ ಗಡಿಯಲ್ಲಿ ಕಾಂಗೋ ಮತ್ತು ಉಗಾಂಡ ದೇಶಗಳ ನಡುವೆ ಇರುವ ಪೂರ್ವ ಮಧ್ಯ ಆಫ್ರಿಕದ ಮುಖ್ಯ ಸರೋವರಗಳಲ್ಲಿ ಒಂದು. ಇದು ಪೂರ್ವ ಆಫ್ರಿಕದುದ್ದಕ್ಕೂ ಇರುವ ಸೀಳು ಕಣಿವೆಯಲ್ಲಿರುವ ಹಲವಾರು ಸರೋವರಗಳಲ್ಲಿ ಒಂದಾಗಿದೆ. ಇದು ಅಂಡಾಕಾರವಾಗಿದ್ದು ದಕ್ಷಿಣೋತ್ತರವಾಗಿ 160 ಕಿಮೀ ಉದ್ದ ಹಾಗೂ ಪೂರ್ವಪಶ್ಚಿಮವಾಗಿ 35 ಕಿಮೀ ಅಗಲವಾಗಿದ್ದು ಗರಿಷ್ಠ ಆಳ 17 ಮೀ. ವಿಸ್ತೀರ್ಣ 5350 ಚ.ಕಿಮೀ. ಇದು ಸಮುದ್ರಮಟ್ಟಕ್ಕಿಂತ ಸು. 700 ಮೀ ಎತ್ತರದಲ್ಲಿದೆ. ಸರ್ ಸ್ಯಾಮ್ಯುಯಲ್ ಬೇಕರ್ ಎಂಬ ಆಂಗ್ಲೇಯ ಇದನ್ನು 1864ರಲ್ಲಿ ಕಂಡುಹಿಡಿದು ವಿಕ್ಟೋರಿಯ ರಾಣಿಯ ಪತಿ ಆಲ್ಬರ್ಟ್‌ನ ಹೆಸರನ್ನು ಈ ಸರೋವವರಕ್ಕೆ ಇಟ್ಟ. ಇದಕ್ಕೆ ಆಲ್ಬರ್ಟ್ ನ್ಯಾನ್ಜ ಎಂದೂ ಹೆಸರಿದೆ. ಸೆಂಲಿಕಿ ಮತ್ತು ವಿಕ್ಟೋರಿಯ ನೈಲ್ ನದಿಗಳು ಆಲ್ಬರ್ಟ್ ಸರೋರವನ್ನು ಸೇರುತ್ತವೆ. ಬೆಹ್ರ್ ಎಲ್ ಜೆಬೆಲ್ ಎಂಬ ನದಿ ಈ ಸರೋವರದಿಂದ ಹೊರಟು ಉತ್ತರಕ್ಕೆ ಹರಿದು ಬೆಹ್ರ್ ಎಲ್ ಘಸಲ್ ಎಂಬ ನದಿಯನ್ನು ಸೇರುತ್ತವೆ. ಈ ಸಂಗಮವೇ ವೈಟ್ ನೈಲ್ ನದಿಯ ಮೂಲ. ಬೆಹ್ರ್ ಎಲ್ ಜೆಬೆಲ್ ನದಿಯನ್ನು ಆಲ್ಬರ್ಟ್‌ನೈಲ್ ಎಂದೂ ಕರೆಯುವರು. ಸರೋವರದ ದಕ್ಷಿಣಕ್ಕೆ ನಯಾನ್ ಜಾ ಎಂಬ ದೊಡ್ಡ ಮೈದಾನ ಸೆಂಲಿಕಿ ನದಿಯಿಂದ ಸುತ್ತುವರಿದಿದೆ. ಈ ಸರೋವರದಿಂದ ವಿಕ್ಟೋರಿಯ ನೈಲ್ ನದಿಯ ಮರ್ಚಸನ್ ಜಲಪಾತದವರೆಗೊ ಹಡಗು ಸಂಚಾರ ವ್ಯವಸ್ಥೆಯಿದೆ. ಈ ಸರೋವರ 1894 ರಿಂದಲೂ ಉಗಾಂಡ ಮತ್ತು ಕಾಂಗೋ ಗಣರಾಜ್ಯಗಳ ಗಡಿರೇಖೆಯಾಗಿದೆ. (ಪಿ.ಜಿ.)

**ಆಲ್ಬೇನಿಯ:** ದಕ್ಷಿಣ ಯುರೋಪಿನ ಏಡ್ರಿಯಾಟಿಕ್ ಸಮುದ್ರ ತೀರದಲ್ಲಿ ಹಿಂದಿನ ಯೂಗೋಸ್ಲಾವಿಯ ಮತ್ತು ಗ್ರೀಸ್ ದೇಶಗಳ ಮಧ್ಯೆ ಇರುವ ಒಂದು ಪರ್ವತಮಯ ಬಾಲ್ಕನ್ ದೇಶ, ಉತ್ತರ ಅಜರ್‌ಬೈಜಾನಿನ ಹಳೆಯ ಹೆಸರು. ವಿಸ್ತೀರ್ಣ ಸು. 28478 ಚ.ಕಿಮೀ. ಜನಸಂಖ್ಯೆ 35,63,112 (2005). ಇವರಲ್ಲಿ ಹೆಚ್ಚು ಭಾಗ ಮುಸ್ಲಿಮರು. ಉತ್ತರ–ದಕ್ಷಿಣವಾಗಿ ಸು. 320 ಕಿಮೀ. ಉದ್ದ ಪೂರ್ವ–ಪಶ್ಚಿಮವಾಗಿ 80 ಕಿಮೀ. ಅಗಲ ಹಬ್ಬಿದೆ. ಉ.ಅ.$38^0$–$43^0$ ಮತ್ತು ಪೂ.ರೇ. $18^0$–$22^0$ಗಳಲ್ಲಿ ನೆಲಸಿದೆ. ಕರಾವಳಿ ಮೈದಾನ, ಜೌಗು ಪ್ರದೇಶವಾದರೂ ಫಲವತ್ತಾಗಿದೆ. ತಗ್ಗಾದ ಮೈದಾನ ಮತ್ತು ಕಣಿವೆಗಳಲ್ಲಿ ಮುಸುಕಿನ ಜೋಳ, ಹತ್ತಿ, ಹೊಗೆಸೊಪ್ಪು, ಸಕ್ಕರೆಗೆಡ್ಡೆಗಳನ್ನು ಬೆಳೆಯುತ್ತಾರೆ. ಶೇ. 13 ರಷ್ಟು ಭೂಮಿ ಮಾತ್ರ ವ್ಯವಸಾಯ ಯೋಗ್ಯವಾಗಿದೆ. ಪರ್ವತ ಹಾಗೂ ಗುಡ್ಡಪ್ರದೇಶಗಳ ಜನರಿಗೆ ಕುರಿ ಮತ್ತು ಮೇಕೆಗಳನ್ನು ಸಾಕುವುದೇ ಮುಖ್ಯ ಕಸಬು. ಕಲ್ಲೆಣ್ಣೆ, ತಾಮ್ರ, ಉತ್ಪಾದಿಸಲಾಗುವುದು.

ರಾಜಧಾನಿ ಟಿರಾನ. ಜನಸಂಖ್ಯೆ 3,43,078 (2005). ಮುಖ್ಯ ರೇವುಪಟ್ಟಣ ಡೂರಸ್. ಟಿರಾನ ಮತ್ತು ಡೂರಸ್ ಪಟ್ಟಣಗಳಿಗೆ ರೈಲುಮಾರ್ಗದ ಸಂಪರ್ಕವಿದೆ.

ಕಮ್ಯೂನಿಸ್ಟ್ ಗಣರಾಜ್ಯವಾದ ಆಲ್ಬೇನಿಯದಲ್ಲಿ ಶಾಸನಾಧಿಕಾರ ಒಂದೇ ಸದನವುಳ್ಳ ಪ್ರತಿನಿಧಿಸಭೆಗೆ ಸೇರಿದೆ. ಸಾಮಾನ್ಯವಾಗಿ ಹತ್ತು ಸಾವಿರ ಜನಕ್ಕೊಬ್ಬ ಪ್ರತಿನಿಧಿಯಿರುತ್ತಾನೆ. ಅಧಿವೇಶನವಿಲ್ಲದ ಕಾಲದಲ್ಲಿ ಕಾರ್ಯಾಂಗವೇ ಅವಶ್ಯ ಶಾಸನಾಧಿಕಾರವನ್ನೂ ಹೊಂದಿರುವುದು. ಈ ಕಾರ್ಯಾಂಗದ ಅಧ್ಯಕ್ಷನೇ ರಾಷ್ಟ್ರಾಧ್ಯಕ್ಷನೂ ಆಗಿರುತ್ತಾನೆ. ವಿಧಿನಿರ್ವಾಹಕ ಕಾರ್ಯ ಸಚಿವಸಂಪುಟಕ್ಕೆ ಸೇರಿದ್ದು, ಈ ಸಚಿವಸಂಪುಟದಲ್ಲಿ ಪ್ರಧಾನಿ, ಕೆಲವರು ಉಪಪ್ರಧಾನಿಗಳು, ಮಂತ್ರಿಗಳು ಮತ್ತು ಕೆಲವು ಇಲಾಖಾ ಮುಖ್ಯಾಧಿಕಾರಿಗಳು ಇರುತ್ತಾರೆ. 18 ವಯಸ್ಸು ಕಳೆದ ಸ್ತ್ರೀಪುರುಷರೆಲ್ಲರಿಗೂ ಮತದಾನದ ಹಕ್ಕಿದೆ. ಕಮ್ಯೂನಿಸ್ಟ್ ಪಕ್ಷವೊಂದೇ ಆಲ್ಬೇನಿಯದ ರಾಜಕೀಯಪಕ್ಷ. ಆಡಳಿತ ಸೌಕರ್ಯಕ್ಕಾಗಿ ದೇಶವನ್ನು 16 ಜಿಲ್ಲೆಗಳಾಗಿಯೂ 30 ನಗರಗಳಾಗಿಯೂ 2600 ಗ್ರಾಮಗಳಾಗಿಯೂ ವಿಭಾಗಿಸಲಾಗಿದೆ. ಪ್ರತಿಯೊಂದರಲ್ಲೂ ಮೂರು ವರ್ಷಕ್ಕೊಮ್ಮೆ ಚುನಾಯಿತರಾದ ಸದಸ್ಯರನ್ನುಳ್ಳ ಮಂಡಲಿಗಳು ಆಡಳಿತ ನಡೆಸುತ್ತವೆ.

ಒಂದು ಉಚ್ಚತಮ ನ್ಯಾಯಾಲಯ, ಸೈನಿಕ ನ್ಯಾಯಾಲಯಗಳು, ಮತ್ತು ಪ್ರಜಾನ್ಯಾಯಾಲಯಗಳನ್ನು ನ್ಯಾಯಾಂಗ ಹೊಂದಿದೆ. ಪ್ರಜಾನ್ಯಾಯಾಲಯಗಳ ಅಧಿಕಾರ ಕ್ಷೇತ್ರವನ್ನು ನಿಗದಿ ಪಡಿಸಲಾಗಿದೆ. ಉಚ್ಚತಮ ನ್ಯಾಯಾಲಯ ಮತ್ತು ಸೈನಿಕ ನ್ಯಾಯಾಲಯಗಳ ನ್ಯಾಯಾಧೀಶರನ್ನು ಪ್ರತಿನಿಧಿಸಭೆ ನಾಲ್ಕು ವರ್ಷಕ್ಕೊಮ್ಮೆ ನಿಯಮಿಸುತ್ತದೆ. (ಬಿ.ಎಸ್.ಎ.)




**ಆಲ್ಮೋರ:** ಭಾರತ ಗಣರಾಜ್ಯದ ಉತ್ತರಾಂಚಲ ರಾಜ್ಯದ ಕುಮಾನ್ ಭಾಗದಲ್ಲಿರುವ ಒಂದು ಪ್ರಮುಖ ಜಿಲ್ಲೆ. ಇದು ಕಾಳಿ ಎಂದು ಹೆಸರಾಗಿರುವ ಗಂಗಾನದಿಯ ಮೇಲ್ಕಣಿವೆ ಹಾಗು ಘಾಘ್ರನದಿಗಳ ಮಧ್ಯಭಾಗದಲ್ಲಿದೆ. ವಿಸ್ತೀರ್ಣ 14082 ಚ.ಕಿಮೀ. ಜನಸಂಖ್ಯೆ 6,30,446. ಸಮುದ್ರಮಟ್ಟಕ್ಕಿಂತ ಸು. 1659 ಮೀ ಎತ್ತರದಲ್ಲಿದ್ದು, ಹಿಮಾಲಯ ಪರ್ವತಶ್ರೇಣಿಗಳಲ್ಲಿ ಒಂದಾಗಿದೆ. 1790ರಲ್ಲಿ ಗೂರ್ಖಾ ಜನರು ಇದನ್ನು ವಶಪಡಿಸಿಕೊಂಡು ಒಂದು ಕೋಟೆಯನ್ನು ನಿರ್ಮಿಸಿದ್ದಾರೆ. 1891ರಲ್ಲಿ ಈ ಪಟ್ಟಣ ನೈನಿತಾಲ್‌ನೊಡನೆ ಸೇರಿ ಜಿಲ್ಲೆಯಾಯಿತು. ಇಲ್ಲಿ ಒಂದು ಉಚ್ಚ ಶಿಕ್ಷಣ ವಿದ್ಯಾಲಯವಿದೆ. ಭಾರತ ಸರ್ಕಾರದ ಸೈನಿಕ ಕೇಂದ್ರವಿದೆ. ಇಲ್ಲಿನ ಉತ್ತಮ ನೀರು ಮತ್ತು ಹವೆಯಿಂದಾಗಿ ಆರೋಗ್ಯಧಾಮವೆನಿಸಿದೆ.

ಇಲ್ಲಿ ರಾಮಕೃಷ್ಣಾಶ್ರಮಕ್ಕೆ ಸೇರಿದ ಪುರಾತನ ಮಠವೊಂದಿದೆ. ಒಮ್ಮೆ ಸ್ವಾಮಿ ವಿವೇಕಾನಂದರು ಆಲ್ಮೋರಕ್ಕೆ ಭೇಟಿಯಿತ್ತು ತಮ್ಮ ಧರ್ಮೋಪನ್ಯಾಸದಿಂದ ಜನರನ್ನು ಧರ್ಮಜಾಗೃತರನ್ನಾಗಿ ಮಾಡಿದರೆಂದು ಪ್ರತೀತಿ. ಸ್ವಾಮಿ ವಿವೇಕಾನಂದರ ಕೊಲಂಬೋದಿಂದ ಆಲ್ಮೋರದ ವರೆಗೆ ಎಂಬ ಉಪನ್ಯಾಸ ಪುಸ್ತಕ ಪ್ರಸಿದ್ಧವಾದುದು. (ಎಂ.ಎಸ್.)

**ಆಲ್ಸೇಸ್ ಲೊರೇನ್:** ಫ್ರಾನ್ಸ್ ದೇಶದ ಬಾಗಗಳು. ಮೊದಲಿಗೆ ಇವು ಪ್ರತ್ಯೇಕ ಪ್ರಾಂತ್ಯಗಳಾಗಿದ್ದು ಈಗ ಇವೆರಡೂ ಪ್ರಾಂತ್ಯಗಳು ಸೇರಿ ಆಲ್ಸೇಸ್ ಲೊರೇನ್ ಎನ್ನಿಸಿಕೊಂಡಿದೆ. ಪಶ್ಚಿಮ ಯುರೋಪಿನ ಫ್ರಾನ್ಸ್ ಮತ್ತು ಜರ್ಮನಿ ದೇಶಗಳ ಗಡಿಭಾಗಗಳಾದ ಈ ಪ್ರದೇಶಗಳು ಮೊದಲಿನಿಂದಲೂ ಫ್ರೆಂಚ್ ಮತ್ತು ಜರ್ಮನರ ಕಲಹಕ್ಕೆ ಕಾರಣವಾಗಿ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಇವುಗಳ ಸ್ವಾಮ್ಯವನ್ನು ಪಡೆಯಲು ಎರಡೂ ರಾಷ್ಟ್ರಗಳ ನಡುವೆ ಉಂಟಾದ ಯುದ್ಧ ಭಯಂಕರ ಮತ್ತು ದೀರ್ಘಕಾಲಿಕವಾದುದು. 1870ರಲ್ಲಿ ಜರ್ಮನರು ಈ ಪ್ರಾಂತ್ಯಗಳನ್ನು ಪಡೆದಾಗ ಆಲ್ಸೇಸ್ ಲೊರೇನ್ ಎಂದು ಕರೆದರು. ಈಗ ಈ ಪ್ರದೇಶ ಫ್ರೆಂಚರ ಆಧೀನದಲ್ಲಿದೆ.

ಆಲ್ಸೇಸ್ : ಈ ಪ್ರಾಂತ್ಯದ ವಿಸ್ತೀರ್ಣ ಸು. 8288 ಚ.ಕಿಮೀ. ಇದರ ಮುಖ್ಯನಗರ ಸ್ಟ್ರಾಸ್‌ಬರ್ಗ್. ಹಾಟ್–ರಿಹನ್ ಮತ್ತು ಬಾಸ್ ರಿಹನ್‌ಗಳನ್ನೊಳಗೊಂಡು ಫ್ರಾನ್ಸ್ ದೇಶದ ಪ್ರಮುಖ ಭಾಗವಾಗಿದೆ. ಅಲ್ಯೂಮಿನಿಯಂ ಖನಿಜ ನಿಕ್ಷೇಪಗಳನ್ನೊಳಗೊಂಡ ಪರ್ವತ ಶ್ರೇಣಿಗಳಿವೆ. ಮುಲ್‌ಹೌಸನ ಉತ್ತರಕ್ಕೆ ಪೊಟ್ಯಾಷ್‌ನ ನಿಕ್ಷೇಪಗಳುಂಟು. ಬೆಲ್‌ಪೋರ್ಟ್ ಮತ್ತು ಕಾಲ್‌ಮಾರಿನ ಸುತ್ತುಮುತ್ತಲಲ್ಲಿ ಹತ್ತಿಗಿರಣಿಗಳು ಮತ್ತು ಸಾವೆರಿನ್ನಲ್ಲಿ ಉಣ್ಣೆಗಿರಣಿಗಳು ಇವೆ. ದ್ರಾಕ್ಷಿ ಬೆಳೆ ಹೆಚ್ಚಾಗಿದೆ. ಲ್ಯೊಟರ್, ಮೊಡರ್, ಥೌರ್ ನದಿಗಳು ಈ ಪ್ರದೇಶದಲ್ಲಿ ಹರಿಯುತ್ತವೆ. 1870ರಲ್ಲಿ ಇದು ಫ್ರೆಂಚರಿಂದ ಜರ್ಮನಿಯವರ ಆಡಳಿತಕ್ಕೆ ಬಂತು. 1798ರಲ್ಲಿ ಮತ್ತೆ ಫ್ರೆಂಚರ ಆಡಳಿತಕ್ಕೆ ಬಂತು. 1871–1919 ಮತ್ತು 1940–45ರ ಅವಧಿಯಲ್ಲೂ ಜರ್ಮನರ ಆಡಳಿತದಲ್ಲಿದ್ದು, ಇದೀಗ ಫ್ರಾನ್ಸಿನ ಬಹು ಮುಖ್ಯಭಾಗವಾಗಿದೆ.

ಲೊರೇನ್ : ಇದು 1789 ರಲ್ಲಿ ಫ್ರೆಂಚರ ಆಡಳಿತಕ್ಕೆ ಒಳಪಟ್ಟಿತು. ಇದರ ರಾಜಧಾನಿ ನ್ಯಾನ್ಸಿ. ಮ್ಯೂಸೆ ಮತ್ತು ಮೊಸಲ್ಲೆ ನದಿಗಳು ಹರಿಯುತ್ತವೆ. ಇದು ಸಾಮಾನ್ಯವಾಗಿ ಪರ್ವತ ಪ್ರದೇಶಗಳಿಂದ ಕೂಡಿದ್ದು ವ್ಯವಸಾಯ ಮುಖ್ಯ ಕಸಬಾಗಿದೆ. ಇಲ್ಲಿ ಸಿಗುವ ಕಬ್ಬಿಣದ ಅದಿರು ಯುರೋಪು ಖಂಡದಲ್ಲೇ ಹೆಚ್ಚಿನದಾಗಿದೆ. ಕಲ್ಲಿದ್ದಲಿನ ಗಣಿಗಳು ಹೇರಳವಾಗಿವೆ. ಇಲ್ಲಿ ಹೆಚ್ಚಾಗಿ ಫ್ರೆಂಚ್ ಭಾಷೆಯನ್ನಾಡುವ ಜನರಿದ್ದಾರೆ. (ಜಿ.ಆರ್.ಕೆ.;ಎಂ.ಎಸ್.)

**ಆವರ್ತ ಮತ್ತು ಪ್ರತ್ಯಾವರ್ತ ಮಾರುತಗಳು:** ವಿಶೇಷವಾದ ಸಂದರ್ಭಗಳಲ್ಲಿ ನಿತ್ಯಮಾರುತಗಳು ಹಾಗೂ ಋತುಕಾಲಿಕ ಮಾರುತಗಳು ಬದಲಾವಣೆ ಹೊಂದಿ ಅವು ಸುಳಿಯಾಕಾರದಲ್ಲಿ ಅತ್ಯಂತ ವೇಗವಾಗಿ ಬೀಸುವುವು. ಇದ್ದಕ್ಕಿದ್ದ ಹಾಗೆ ಉತ್ಪತ್ತಿಯಾಗುವುದರಿಂದ ಸಂಬಂಧಪಟ್ಟ ಪ್ರದೇಶದ ಹವಾಮಾನದ ಅನಿಶ್ಚಿತತೆಗೆ ಕಾರಣವಾಗುವುವು. ಇವುಗಳ ಉತ್ಪತ್ತಿ, ಬೀಸುವ ದಿಕ್ಕು, ವೇಗ ಹಾಗೂ ಹವಾಮಾನದ ಮೇಲಾಗುವ ಪರಿಣಾಮಗಳೆಲ್ಲಾ ಅನಿಶ್ಚಿತ. ಹೀಗಾಗಿ ಇವುಗಳಿಗೆ ಅನಿಶ್ಚಿತ ಮಾರುತಗಳು (ವೇರಿಯಬಲ್ ವಿಂಡ್ಸ್) ಎಂದು ಕರೆಯುವರು.

ಆವರ್ತ ಮಾರುತಗಳು: ಇಂಗ್ಲಿಷ್‌ನ ಸೈಕ್ಲೋನ್ ಎಂಬ ಪದ ಗ್ರೀಕ್ ಭಾಷೆಯ ಕೈಕ್ಲೋಸ್ ಎಂಬ ಶಬ್ದದಿಂದ ಬಂದದ್ದು. ಕೈಕ್ಲೋಸ್ ಎಂದರೆ ಹಾವಿನಾಕೃತಿಯ ಸುರುಳಿ ಎಂದರ್ಥ. ಅರಬ್ಬಿ ಸಮುದ್ರ ಮತ್ತು ಬಂಗಾಲಕೊಲ್ಲಿಗಳಲ್ಲಿ ಸುರುಳಿಯಂತೆ ಬೀಸುತ್ತಿದ್ದ ಮಾರುತಗಳನ್ನು ಗಮನದಲ್ಲಿಟ್ಟುಕೊಂಡು ಹೆನ್ರಿ ಪಿಡ್ಡಿಂಗ್‌ಟನ್ ಎಂಬ ಹವಾಮಾನ ಶಾಸ್ತ್ರಜ್ಞ ಸೈಕ್ಲೋನ್ ಪದವನ್ನು ಮೊದಲಿಗೆ 1848 ರಲ್ಲಿ ಬಳಸಿದ.




ಆವರ್ತತ ಮಳೆ



ಆವರ್ತತ ಮಾರುತಗಳ ಪಥಗಳನ್ನು ನಿರೂಪಿಸುವ ನಕ್ಷೆ

ಸುತ್ತಲಿನ ಅಧಿಕ ಒತ್ತಡ ಪ್ರದೇಶಗಳಿಂದ ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ವೃತ್ತಾಕಾರವಾಗಿ ಬೀಸುವ ಮಾರುತಗಳೇ ಆವರ್ತ ಮಾರುತಗಳು. ಕಡಿಮೆ ಒತ್ತಡವುಳ್ಳ ಕೇಂದ್ರವು ಸುತ್ತಲೂ ಅಧಿಕ ಒತ್ತಡದಿಂದಾವರಿಸಿದ್ದು, ಕೇಂದ್ರದಿಂದ ಹೊರ ಹೋದಂತೆ ಒತ್ತಡವು ಹೆಚ್ಚುತ್ತಾ ಹೋಗುವಂತಹ ಪರಿಸ್ಥಿತಿಯಲ್ಲಿ ವಾಯು, ಕೇಂದ್ರದ ಕಡೆಗೆ ಧಾವಿಸುವುದು. ಕಡಿಮೆ ಒತ್ತಡವುಳ್ಳ ಕೇಂದ್ರವನ್ನು ವಾಯುವಿನ ಒತ್ತಡದ ತಗ್ಗು ಅಥವಾ ವಾಯುಭಾರಕುಸಿತಕ್ಷೇತ್ರ (ಡಿಪ್ರೆಷನ್) ಎನ್ನುವರು. ಇಂತಹ ಪರಿಸ್ಥಿತಿಯನ್ನು ನಿರೂಪಿಸುವಲ್ಲಿ ಸಮ ಭಾರ ರೇಖೆಗಳು ಒತ್ತಡದ ತಗ್ಗಿನ ಸುತ್ತಲೂ ವೃತ್ತಾಕಾರವೂ ಹಾಗೂ ಕೇಂದ್ರದಿಂದ ಹೊರ ಹೋದಂತೆ ಪರಸ್ಪರ ಹತ್ತಿರವಾಗಿ ರಚನೆಯಾಗಿರುತ್ತವೆ. ಅವು ಕೇಂದ್ರದ ಕಡೆಗೆ ಒತ್ತಡದ ಕಡಿದಿಳಿತವನ್ನು ನಿರೂಪಿಸುತ್ತವೆ. ಪರಿಣಾಮವಾಗಿ ವಾಯು ಸುತ್ತಲಿನಿಂದ ಕೇಂದ್ರದ ಕಡೆಗೆ ವೇಗವಾಗಿ ಒಮ್ಮೆಲೆ ಮುನ್ನುಗ್ಗುವುದು ಸ್ಪಷ್ಟವಾಗುವುದು. ಚಲನಾವೇಗವು

ತೀವ್ರವಾಗಿದ್ದು ಬಿರುಗಾಳಿಯ ಸ್ವರೂಪವನ್ನು ಹೊಂದಿರುತ್ತದೆ. ಹೀಗಾಗಿ ಇವುಗಳಿಗೆ ಆವರ್ತ ಚಂಡಮಾರುತ (ಸೈಕ್ಲೋನ್ ಸ್ಟಾರ್ಮ್) ಎಂಬುದು ಅನ್ವರ್ಥವಾಗಿದೆ. ಇವುಗಳಿಂದ ಆಗಾಗ್ಗೆ ಹಾನಿಯೂ ಸಂಭವಿಸುವುದು. ಆದ್ದರಿಂದ ಇವುಗಳಿಗೆ ವಾಯುಮಂಡಲದ ಕ್ಷೋಭೆ ಎಂದು ಸಂಬೋಧಿಸುವುದುಂಟು.

ಆವರ್ತ ಮಾರುತಗಳು ಸಾಮಾನ್ಯವಾಗಿ ಉತ್ತರ ಗೋಳಾರ್ಧದಲ್ಲಿ ಅಪ್ರದಕ್ಷಿಣೆ ದಿಕ್ಕಿಗೂ ಮತ್ತು ದಕ್ಷಿಣಗೋಳಾರ್ಧದಲ್ಲಿ ಪ್ರದಕ್ಷಿಣೆ ದಿಕ್ಕಿಗೂ ಬೀಸುತ್ತವೆ.

ವಿಧಗಳು: ಉತ್ಪತ್ತಿ ಮತ್ತು ಬೆಳವಣಿಗೆಯ ವಲಯಗಳನ್ನಾಧರಿಸಿ ಆವರ್ತ ಮಾರುತಗಳನ್ನು ಎರಡು ಪ್ರಮುಖ ವಿಧಗಳಾಗಿ ವಿಂಗಡಿಸಬಹುದು: 1. ಉಷ್ಣವಲಯದ ಆವರ್ತಮಾರುತಗಳು. 2. ಸಮಶೀತೋಷ್ಣವಲಯದ ಆವರ್ತಮಾರುತಗಳು.

1. ಉಷ್ಣವಲಯದ ಆವರ್ತಮಾರುತಗಳು : ಕರ್ಕಾಟಕ ಸಂಕ್ರಾಂತಿ ವೃತ್ತ ಮತ್ತು ಮಕರ ಸಂಕ್ರಾಂತಿ ವೃತ್ತಗಳ ನಡುವಣ ವಲಯದಲ್ಲಿ ಸಂಭವಿಸುವ ಆವರ್ತಮಾರುತಗಳು. ಇವು ಸಮಶೀತೋಷ್ಣವಲಯದ ಆವರ್ತ ಮಾರುತಗಳಿಗಿಂತ ಭಿನ್ನವಾಗಿದ್ದು, ಋತುಮಾನಗಳ ಪರಿಸ್ಥಿತಿಗಳನ್ನಾಧರಿಸಿರುತ್ತವೆ. ಪ್ರತಿವರ್ಷವೂ ಉಂಟಾಗುವ ಸಾಧ್ಯತೆಯಿಲ್ಲ. ಇವುಗಳ ಉತ್ಪತ್ತಿ, ಗಾತ್ರ, ಆಕಾರ, ವೇಗ ಮತ್ತು ರೂಪಿಸುವ ಹವಾಮಾನದ ಪರಿಸ್ಥಿತಿಗಳೂ ಸಹ ವೈವಿಧ್ಯಮಯ. ಇವುಗಳನ್ನು ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುವರು. ಉದಾ : ಉತ್ತರ ಅಮೆರಿಕ ಮತ್ತು ಕೆರೀಬಿಯನ್ ಸಮುದ್ರಗಳ ಸುತ್ತಮುತ್ತ ಹರಿಕೇನ್, ಉತ್ತರ ಪೆಸಿಫಿಕ್ ಸಾಗರದ ಪಶ್ಚಿಮ ಭಾಗ (ಚೀನ ಮತ್ತು ಜಪಾನ್) ದಲ್ಲಿ ಟೈಫೂನ್, ಫಿಲಿಪ್ಪೀನ್ಸ್ ದ್ವೀಪಗಳಲ್ಲಿ ಬಗೋಯಿಸ್, ಆಸ್ಟ್ರೇಲಿಯದಲ್ಲಿ ವಿಲ್ಲಿವಿಲ್ಲಿಸ್ ಮತ್ತು ಭಾರತದಲ್ಲಿ ಸೈಕ್ಲೋನ್ ಎಂದು ಕರೆಯುವರು.

ಉಗಮ: ಉಷ್ಣವಲಯದ ಆವರ್ತ ಮಾರುತಗಳ ಉತ್ಪತ್ತಿಗೂ ಉಷ್ಣಾಂಶಕ್ಕೂ ನೇರವಾದ ಸಂಬಂಧವಿದೆ. ಅವು ಸಾಮಾನ್ಯವಾಗಿ ಅತಿ ಉಷ್ಣಾಂಶವುಳ್ಳ ಸಾಗರಗಳ ಪಶ್ಚಿಮ ಭಾಗಗಳಲ್ಲಿ ಉತ್ಪತ್ತಿಯಾಗುವುವು. ಔಷ್ಣೀಯ ಒತ್ತಡದ ತಗ್ಗು ಕೇಂದ್ರವು ನಿರ್ಮಾಣಗೊಳ್ಳುವುದರ ಪರಿಣಾಮವಾಗಿ ಈ ಆವರ್ತ ಮಾರುತಗಳು ಉಗಮ ಹೊಂದುವುವು. ಇವುಗಳ ಉತ್ಪತ್ತಿ ಮತ್ತು ಬೆಳವಣಿಗೆಗೆ ಕೆಲವು ಪರಿಸ್ಥಿತಿಗಳು ಪೂರಕವಾಗಿರಬೇಕು. ಉದಾ : ಅತಿಶಾಖ ಮತ್ತು ತೇವಾಂಶವುಳ್ಳ ವಾಯುವಿನ ಪೂರೈಕೆ, ಪ್ರಬಲವಾದ ಕೊರಿಯಾಲಿಸ್ ಶಕ್ತಿ, ಅಂತರ ಉಷ್ಣವಲಯದ ಅಪಸರಣದೊಡನೆ ಸಾಗರಗಳ ಪಶ್ಚಿಮ ಭಾಗಗಳ ಸಂಬಂಧ ಹಾಗೂ ದುರ್ಬಲವಾದ ನಿತ್ಯಮಾರುತಗಳು. ಇಂತಹ ಭೌಗೋಳಿಕಾಂಶಗಳು ಸಮಭಾಜಕ ವೃತ್ತದ ಶಾಂತ ವಲಯದಲ್ಲಿ, ಅದರಲ್ಲೂ ಸಮುದ್ರಗಳ ಮೇಲೆ ಲಭ್ಯ.

ಉಷ್ಣವಲಯದ ಜಲರಾಶಿಗಳ ಮೇಲಿನ ಅತ್ಯಧಿಕ ಪ್ರಮಾಣದ ತೇವಾಂಶವುಳ್ಳ ಉಷ್ಣವಾಯು ಕಡಿಮೆ ಪ್ರಮಾಣದ ತೇವಾಂಶವುಳ್ಳ ಉಷ್ಣವಾಯುಗಿಂತ ಬಹು ಹಗುರವಾದುದು. ಆದ್ದರಿಂದ ಇಂತಹ ಔಷ್ಣೀಯ ತೇವಾಂಶ ಭರಿತ ವಾಯು ಕಡಿಮೆ ಒತ್ತಡಕೋಶ ಹಾಗೂ ನಿರಾತಂಕವಾದ ಪ್ರಚಲನ ಪ್ರವಾಹದ ಪ್ರಕ್ರಿಯೆಗೆ ಪೂರಕ. ವಾಯುವಿನ ಊರ್ಧ್ವಮುಖ ಚಲನೆಯಿಂದ ಕಡಿಮೆ ಒತ್ತಡದ ತಗ್ಗುಗಳೇರ್ಪಡುವುದು. ಒತ್ತಡದಲ್ಲಿ ಲಘು ತಗ್ಗು ಉಂಟಾದರೂ ಸಹ ವಾಯು ಸುರುಳಿಯ ಕ್ರಮದಲ್ಲಿ ಬೀಸಲು ಪ್ರಾರಂಭಿಸುವುದು. ಪರಿಣಾಮವಾಗಿ ವೃತ್ತಾಕಾರದ ವಾಯುಚಲನೆ ಏರ್ಪಡುವುದು. ಪ್ರಚಲನಾ ಪ್ರವಾಹದಿಂದ ಘನೀಕರಣವೇನಾದರೂ ಏರ್ಪಟ್ಟರೆ, ವಾಯುವಿನ ಊರ್ಧ್ವಮುಖ ಚಲನಾವೇಗ ಹೆಚ್ಚಾಗುವುದು. ಜೊತೆಗೆ ವಾಯುವಿನ ವೃತ್ತಾಕಾರದ ಚಲನಾವೇಗವೂ ಹೆಚ್ಚುವುದು.

ಆಕಾರ ಮತ್ತು ಗಾತ್ರ : ಆಕಾರ ಮತ್ತು ಗಾತ್ರಗಳೆರಡರಲ್ಲೂ ಚಿಕ್ಕವು. ವ್ಯಾಸ ಸಾಕಷ್ಟು ವ್ಯತ್ಯಾಸಗೊಳ್ಳುವುದು. ಅಂದರೆ 80 ರಿಂದ 300 ಕಿಮೀ ಇರುವುದು. ಪ್ರಾರಂಭದಲ್ಲಿ ವ್ಯಾಸ ಕಡಿಮೆಯಿದ್ದು, ಪ್ರೌಢಾವಸ್ಥೆಯನ್ನು ತಲುಪಿದಾಗ ಅದು 300 ರಿಂದ 1500 ಕಿಮೀ ವಿಸ್ತರಿಸುವುದು. ಮೋಡಗಳಿಂದಾವೃತವಾದ ಪ್ರದೇಶದಲ್ಲಿ ಇನ್ನೂ ವಿಸ್ತಾರವಾಗಿರುತ್ತದೆ. ಇವು ವೃತ್ತಾಕಾರ ಹಾಗೂ ಅಂಡಾಕಾರವನ್ನು ಹೋಲುವುವು.

ವೇಗ : ಚಲನಾವೇಗ ಏಕಪ್ರಕಾರವಾಗಿರುವುದಿಲ್ಲ. ಪ್ರತಿಗಂಟೆಗೆ 120 ರಿಂದ 200 ಕಿಮೀ ವೇಗದಲ್ಲಿ ಚಲಿಸುವುವು. ಒಂದು ಆವರ್ತ ಮಾರುತಕ್ಕೂ ಮತ್ತೊಂದಕ್ಕೂ ಹಾಗೂ ದಿನದಿಂದ ದಿನಕ್ಕೂ ವೇಗವು ವ್ಯತ್ಯಾಸಗೊಳ್ಳುವುದು. ಕೆಲವೊಮ್ಮೆ ಒಂದೇ ಆವರ್ತಮಾರುತದ ವೇಗವೂ ಸಹ ಅದು ಸಾಗುವ ಪಥದುದ್ದಕ್ಕೂ ಏಕರೀತಿಯಾಗಿರುವುದಿಲ್ಲ. ದುರ್ಬಲವಾದ ಆವರ್ತಮಾರುತಗಳು ಪ್ರತಿಗಂಟೆಗೆ 32 ಕಿಮೀ ವೇಗದಲ್ಲಿ ಬೀಸಿದರೆ ಹರಿಕೇನ್‌ನಂತಹ ಚಂಡಮಾರುತಗಳು ಪ್ರತಿ ಗಂಟೆಗೆ 180 ಕಿಮೀ. ಅದಕ್ಕೂ ಹೆಚ್ಚಿನ ವೇಗದಲ್ಲಿ ಬೀಸುವುವು. ಸಾಗರಗಳ ಮೇಲೆ ಪ್ರಬಲವಾಗಿಯೂ ಅತಿವೇಗದಿಂದಲೂ ಬೀಸುವುವು. ಆದರೆ ನೆಲದ ಮೇಲೆ ಅವು ದುರ್ಬಲ ಮತ್ತು ಮಂದಗತಿಯಿಂದ ಸಾಗುವುವು. ಭೂಮೇಲ್ಮೈನ ಅಡೆತಡೆಗಳಿಂದಾಗಿ ವೇಗವು ಕುಂದುವುದು. ಕರಾವಳಿ ಪ್ರದೇಶಗಳಿಗೆ ಹಾನಿ ಹೆಚ್ಚು. ಕಡಿಮೆ ಒತ್ತಡವುಳ್ಳ ಕೇಂದ್ರ ಭಾಗದಲ್ಲಿ ವಾಯುವಿನ ಚಲನೆ ಲಘುವಾಗಿದ್ದು ಹೊರಹೋದಂತೆ ತೀವ್ರಗೊಳ್ಳುವುದು.

ಇವು ಸಾಗುವ ಪಥವು ವಿಭಿನ್ನವಾಗಿರುತ್ತದೆ. ಪ್ರಾರಂಭದಲ್ಲಿ ಅವು ವಾಣಿಜ್ಯ ಮಾರುತಗಳ ಪ್ರಭಾವಕ್ಕೊಳಪಟ್ಟು ಪೂರ್ವದಿಂದ ಪಶ್ಚಿಮಕ್ಕೆ ಬೀಸುತ್ತಾ ಉಪ ಉಷ್ಣವಲಯವನ್ನು ಪ್ರವೇಶಿಸುವುದರೊಂದಿಗೆ ದುರ್ಬಲಗೊಳ್ಳುವುವು. ಈ ಪಥದ ಮುಖ್ಯ ಗುಣಲಕ್ಷಣಗಳೆಂದರೆ ಸಮಭಾಜಕ ವೃತ್ತದಿಂದ $15^0$ ಮತ್ತು $30^0$ ಅಕ್ಷಾಂಶಗಳ ನಡುವೆ ಈ ಮಾರುತಗಳ ಚಲನಾಪಥವು ಅಸ್ಪಷ್ಟ-ಅನಿಶ್ಚಿತವಾದರೂ ಅವು ಕ್ರಮೇಣ ಧ್ರುವಗಳ ಕಡೆಗೆ ಸಾಗುವುವು. ಆದರೆ ಅವು $30^0$ ಅಕ್ಷಾಂಶವನ್ನು ದಾಟಿದ ಮೇಲೆ ಪ್ರತಿವಾಣಿಜ್ಯ ಮಾರುತಗಳ ಪ್ರಭಾವದಿಂದ ಪೂರ್ವ ದಿಕ್ಕಿಗೆ ತಿರುಗಿ ದುರ್ಬಲಗೊಳ್ಳುವುವು.

ರಚನೆ : ಉಷ್ಣವಲಯದ ಆವರ್ತಮಾರುತಗಳು ಪರಸ್ಪರ ಹತ್ತಿರವಾಗಿರುವುವು ಮತ್ತು ವೃತ್ತಾಕಾರದ ಸಮಭಾರ ರೇಖೆಗಳಿಂದ ನಿರೂಪಿಸಲ್ಪಡುವುವು. ಲಘು ವಾಯು ಚಲನೆ ಹಾಗು ನಿರ್ಮಲವಾದ ನೀಲಿ ಆಕಾಶವುಳ್ಳ ಕೇಂದ್ರವನ್ನು 'ಆವರ್ತ ಮಾರುತದ ನೇತ್ರ, ಅಥವಾ ಕಣ್ಣು' ಎಂದು ಕರೆಯುವರು. ಇದರ ವ್ಯಾಸ 5 ರಿಂದ 50 ಕಿಮೀ. ಅತ್ಯಧಿಕ ಶಾಖ ಮತ್ತು ಸಾಪೇಕ್ಷ ಆರ್ದ್ರತೆಯಿಂದ ಕೂಡಿರುತ್ತದೆ. ಇದರ ಸುತ್ತಲೂ ಒತ್ತಡ ಹೆಚ್ಚಾಗಿರುತ್ತದೆ. ಇಲ್ಲಿಂದ ಕೇಂದ್ರದ ಕಡೆಗೆ ಒತ್ತಡದ ಏರಿಳಿತವು ಬಹು ಕಡಿದಾಗಿರುತ್ತದೆ. ಪರಿಣಾಮವಾಗಿ ಮಾರುತಗಳ ನೇತ್ರದ ಕಡೆಗೆ ಕೆಳಮುಖವಾಗಿ ಧಾವಿಸುವುವು. ಇದರಿಂದ ವಾಯು ಸಂಕೋಚವೇರ್ಪಟ್ಟು ಉಷ್ಣಾಂಶ ಮತ್ತಷ್ಟು ಹೆಚ್ಚಾಗುವುದು. ಜೊತೆಗೆ ಮೇಲ್ಮಟ್ಟದಲ್ಲಿ ಘನೀಭವನ ಕ್ರಿಯೆಯಿಂದ ಬಿಡುಗಡೆಯಾದ ಗುಪ್ತೋಷ್ಣ (ಲೇಟೆಂಟ್ ಹೀಟ್) ಬಾಷ್ಪೀಕರಣಕ್ಕೆ ಪೂರಕವಾಗುವುದು. ಹೀಗಾಗಿ ನೇತ್ರಭಾಗದಲ್ಲಿ ಆಕಾಶ ಪ್ರಶಾಂತ. ಆದರೆ ನೇತ್ರದ ಸುತ್ತಲೂ ಪ್ರಬಲವಾದ ವಾಯುಚಲನೆಯು ಸುರುಳಿಯಾಕಾರದಲ್ಲಿ ಮೇಲೇರುವುದು. ಇದರಿಂದ ನೇತ್ರಭಾಗದ ಸುತ್ತಲೂ ಗೋಡೆಯಂತೆ ರಾಶಿ ವೃಷ್ಟಿ ಮೋಡಗಳು ನಿರ್ಮಾಣಗೊಳ್ಳುವುವು. ಇವು ಮಿಂಚು, ಗುಡುಗು-ಸಿಡಿಲುಗಳನ್ನೊಳಗೊಂಡ ಧಾರಾಕಾರವಾದ ಮಳೆಯನ್ನು ಸುರಿಸುತ್ತವೆ. ಈ ಸಂದರ್ಭದಲ್ಲಿ ಮಾರುತಗಳ ಚಲನಾವೇಗವೂ ಸಹ ತೀವ್ರವಾಗಿರುತ್ತದೆ.

ಹವಾಮಾನ : ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಉಷ್ಣವಲಯದ ಆವರ್ತ ಮಾರುತಗಳ ಆಗಮನಕ್ಕೆ ಮುಂಚೆ ಕೆಲವು ಮುನ್ಸೂಚನೆಗಳು ಗೋಚರಿಸುತ್ತವೆ. ಉದಾ: ಒಮ್ಮೆಲೆ ವಾಯುವಿನ ಉಷ್ಣತೆ ತೀಕ್ಷ್ಣಗೊಳ್ಳುವುದು ಮತ್ತು ಮಾರುತಗಳ ಚಲನಾವೇಗ ಹೆಚ್ಚಾಗುವುದು, ಗಣನೀಯವಾಗಿ ಒತ್ತಡದ ಇಳಿತ, ಆಕಾಶದಲ್ಲಿ ಕುಂತಲ ಅಥವಾ ಕುಂತಲಪದರು ಮೋಡಗಳ ಬೆಳವಣಿಗೆ ಮತ್ತು ಸಾಗರಗಳಲ್ಲಿನ ಅಲೆಗಳ ಎತ್ತರವು ಹೆಚ್ಚುವುದು ಮತ್ತು ಆಕಾಶವು ದಟ್ಟವಾದ ಮೋಡಗಳಿಂದಾವರಿಸಿರುತ್ತದೆ. ಕ್ರಮೇಣ ಮೋಡಗಳ ದಟ್ಟಣೆಯು ವೃದ್ಧಿಸುತ್ತಾ ಅವು ರಾಶಿ ವೃಷ್ಟಿ ಮೋಡಗಳಾಗಿ ಪರಿಣಮಿಸಿ ಗುಡುಗು ಮತ್ತು ಮಿಂಚುಗಳನ್ನೊಳಗೊಂಡ ಧಾರಾಕಾರವಾದ ಮಳೆಯನ್ನು ಸುರಿಸುವುವು. ನೇತ್ರ ಭಾಗವು ನಿಶ್ಚಲವಾದ ನೀಲಿ ಆಕಾಶ, ಕಡಿಮೆ ಒತ್ತಡವುಳ್ಳ ಕೇಂದ್ರ, ವಾಯು ಚಲನಾರಹಿತವಾದ ಪ್ರಶಾಂತತೆ, ಮಳೆ ರಹಿತವಾದ ಹಾಗೂ ಸ್ಥಿರವಾದ ಹವಾಮಾನದ ಪರಿಸ್ಥಿತಿಯಿಂದ ಕೂಡಿರುತ್ತದೆ. ವಿಶೇಷವಾದ ಸಂಗತಿಯೆಂದರೆ ಆವರ್ತ ಮಾರುತಗಳಿಂದ ಸೃಷ್ಟಿಯಾದಂತಹ ಹವಾಮಾನದ ಪರಿಸ್ಥಿತಿಯು ಅಲ್ಪಾವಧಿಯವರೆಗೆ ಮಾತ್ರ ಪ್ರಚಲಿತವಾಗಿರುತ್ತದೆ. ಆವರ್ತ ಮಾರುತಗಳು ದೂರ ಸರಿದ ನಂತರ ಅಥವಾ ದುರ್ಬಲಗೊಂಡ ಮೇಲೆ ಆ ಸ್ಥಳದ ಹವಾಮಾನದ ಪರಿಸ್ಥಿತಿ ಪ್ರಶಾಂತಗೊಳ್ಳುವುದು. ಸಾಗರಗಳ ಮೇಲೂ ಇದೇ ಪರಿಸ್ಥಿತಿ ಉಂಟಾಗುವುದು.

ಹಂಚಿಕೆ : ಇವು ಬಹುವಾಗಿ ಎರಡೂ ಗೋಳಾರ್ಧಗಳ $5^0$ ರಿಂದ $15^0$ ಅಕ್ಷಾಂಶಗಳ ನಡುವಣ ಪ್ರದೇಶದ ಸಾಗರಗಳ ಮೇಲೆ ಸಂಭವಿಸುತ್ತವೆ ಹಾಗೂ ಕರಾವಳಿ ಪ್ರದೇಶದ ಹವಾಮಾನದ ಮೇಲೆ ಪ್ರಭಾವ ಬೀರುವುವು. ಇವು ಮುಖ್ಯವಾಗಿ 6 ಪ್ರದೇಶಗಳಲ್ಲಿ ಪ್ರಚಲಿತ : 1. ವೆಸ್ಟ್ ಇಂಡೀಸ್, ಮೆಕ್ಸಿಕೊ ಖಾರಿ ಮತ್ತು ಕೆರೀಬಿಯನ್ ಸಮುದ್ರ. 2. ಉತ್ತರ ಪೆಸಿಫಿಕ್ ಸಾಗರದ ಪಶ್ಚಿಮ ಭಾಗ. ಇದರಲ್ಲಿ ಜಪಾನ್ ದ್ವೀಪಗಳು, ಚೀನ ಸಮುದ್ರ ಮತ್ತು ಫಿಲಿಫೀನ್ಸ್ ದ್ವೀಪಗಳು ಸೇರುತ್ತವೆ. 3. ಅರಬ್ಬಿ ಸಮುದ್ರ ಮತ್ತು ಬಂಗಾಲ ಕೊಲ್ಲಿಗಳು. 4. ಪೆಸಿಫಿಕ್ ಸಾಗರದ ಪೂರ್ವಭಾಗ: ಇದರಲ್ಲಿ ಮಧ್ಯ ಅಮೆರಿಕದ ಪಶ್ಚಿಮ ತೀರವು ಸೇರುವುದು. 5. ದಕ್ಷಿಣ ಹಿಂದೂ ಮಹಾಸಾಗರ. ಉದಾ : ಮಲಗಾಸಿಯ ಪೂರ್ವಭಾಗ. 6. ದಕ್ಷಿಣ ಪೆಸಿಫಿಕ್ ಸಾಗರದ ಪಶ್ಚಿಮ ಭಾಗ. ಉದಾ : ಆಸ್ಟ್ರೇಲಿಯದ ಪೂರ್ವ ಮತ್ತು ಉತ್ತರದ ಸಮುದ್ರ ತೀರಗಳು, ಸಮಾವೋ ಮತ್ತು ಫಿಜಿ ದ್ವೀಪಗಳು.

ಎರಡನೆಯದು ಪ್ರಮುಖವಾದುದು. ಈ ವಲಯದಲ್ಲಿ ಪ್ರತಿ ವರ್ಷವೂ ಸುಮಾರು 22 ಆವರ್ತ ಮಾರುತಗಳು ಸಂಭವಿಸುವುವು. ಅವು ಪ್ರಪಂಚದ ಒಟ್ಟು ಉಷ್ಣ ವಲಯದ ಆವರ್ತ ಮಾರುತಗಳಲ್ಲಿ ಶೇ. 36 ರಷ್ಟಾಗಿರುತ್ತವೆ.

2. ಸಮಶೀತೋಷ್ಣವಲಯದ ಆವರ್ತ ಮಾರುತಗಳು : ಮಧ್ಯ ಅಕ್ಷಾಂಶವಲಯದ ಹವಾಮಾನದ ವಿಪ್ಲವತೆಗೆ ಈ ಮಾರುತಗಳು ಆಗಾಗ್ಗೆ ಕಾರಣವಾಗುವುವು. ಆದರೂ ಉಷ್ಣವಲಯದ ಆವರ್ತ ಮಾರುತಗಳಷ್ಟು ತೀವ್ರ ಮಟ್ಟದ ಕ್ಷೋಭೆಯನ್ನುಂಟುಮಾಡುವುದಿಲ್ಲ.

ಇವುಗಳನ್ನು ಅಲೆಯ ಆವರ್ತ ಮಾರುತಗಳು ಅಥವಾ ಒತ್ತಡದ ತಗ್ಗು ಎಂದೂ ಕರೆಯುವರು. ಉತ್ಪತ್ತಿ, ಸಮಭಾರರೇಖೆಗಳ ರಚನೆ, ಒತ್ತಡದ ಏರಿಳಿತ, ಹಂಚಿಕೆ, ಚಲನೆ ಮುಂತಾದ ಗುಣಲಕ್ಷಣಗಳಲ್ಲಿ ಈ ಆವರ್ತ ಮಾರುತಗಳು ಉಷ್ಣವಲಯದ ಆವರ್ತ ಮಾರುತಗಳಿಗಿಂತ ಭಿನ್ನವಾಗಿರುತ್ತವೆ.

ಉಗಮ : ವಿಭಿನ್ನ ಗುಣಲಕ್ಷಣಗಳನ್ನುಳ್ಳ ಎರಡು ವಾಯುರಾಶಿಗಳು ಸಂಧಿಸುವುದರಿಂದ ಸಂಭವಿಸುವುವು. ಶಾಖವೂ, ತೇವಾಂಶವುಳ್ಳವೂ ಮತ್ತು ಹಗುರವೂ ಆದ ಉಷ್ಣವಲಯದ ವಾಯುರಾಶಿ ಹಾಗೂ ಶೀತವೂ ಮತ್ತು ಸಾಂದ್ರವುಳ್ಳ ಧ್ರುವೀಯ ವಾಯುರಾಶಿಗಳು ವಿರುದ್ಧ ದಿಕ್ಕಿನಿಂದ ಬೀಸುತ್ತ ಸಮಶೀತೋಷ್ಣವಲಯದಲ್ಲಿ ಸಂಧಿಸುವುದರಿಂದ ಇವು ಉತ್ಪತ್ತಿಯಾಗುವುವು.

2. ಧ್ರುವೀಯ ವಾಯುಮುಖ ಸಿದ್ಧಾಂತ (ಪೋಲಾರ್ ಫ್ರಂಟ್‌ಥಿಯರಿ): ಸಮಶೀತೋಷ್ಣವಲಯದ ಆವರ್ತ ಮಾರುತಗಳ ಉತ್ಪತ್ತಿಯನ್ನು ಕುರಿತ ಮತ್ತೊಂದು ಪ್ರಮುಖ ಹಾಗೂ ವಿಶ್ವಾಸಾರ್ಹವಾದ ಸಿದ್ಧಾಂತ. ಇದನ್ನು ವಾಯು ಮುಖ ಅಥವಾ ಅಲೆಯ ಸಿದ್ಧಾಂತ ಎಂದೂ ಕರೆಯುವರು. ನಾರ್ವೆ ದೇಶದ ಹವಾಮಾನ ಶಾಸ್ತ್ರಜ್ಞರಾದ ವಿ. ಜೆರ್ಕಿನೆಸ್ ಮತ್ತು ಜೆ. ಜೆರ್ಕಿನೆಸ್‌ರವರಿಂದ 1918ರಲ್ಲಿ ಈ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟಿತು. ವಿಭಿನ್ನ ಭೌತಿಕ ಗುಣಲಕ್ಷಣಗಳನ್ನುಳ್ಳ ಶೀತ ಮತ್ತು ಉಷ್ಣ ವಾಯುರಾಶಿಗಳೆರಡೂ ವಿರುದ್ಧ ದಿಕ್ಕಿನಿಂದ ಬೀಸಿ ಬಂದು ಸಂಧಿಸುವುದರಿಂದ ವಾಯುಮುಖಗಳು ನಿರ್ಮಾಣಗೊಳ್ಳುವುವು. ಇದರಿಂದ ಸಮಶೀತೋಷ್ಣ ವಲಯದ ಆವರ್ತ ಮಾರುತಗಳು ಸಂಭವಿಸುವುವೆಂದು ಈ ಸಿದ್ಧಾಂತ ತಿಳಿಸುತ್ತದೆ.




**ಸಮಶೀತೋಷ್ಣವಲಯದ ಆವರ್ತ ಮಾರುತಗಳ ಬೆಳವಣಿಗೆ**

ಸಮಶೀತೋಷ್ಣವಲಯದ ಆವರ್ತ ಮಾರುತಗಳ ಉತ್ಪತ್ತಿಯ ಬಗ್ಗೆ ಹವಾಮಾನ ಶಾಸ್ತ್ರಜ್ಞರು ಸಿದ್ಧಾಂತಗಳನ್ನು ಪ್ರತಿಪಾದಿಸಿರುವರು. ಅವುಗಳಲ್ಲಿ ಚಲನಾತ್ಮಕ ಸಿದ್ಧಾಂತ ಮತ್ತು ಧ್ರುವೀಯ ವಾಯು ಮುಖ ಸಿದ್ಧಾಂತಗಳು ಪ್ರಮುಖವಾದವು.

1. ಚಲನಾತ್ಮಕ ಸಿದ್ಧಾಂತ (ಡೈನಾಮಿಕ್ ಥಿಯರಿ): ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಆಗಾಗ್ಗೆ ಸಂಭವಿಸುತ್ತಿದ್ದ ಆವರ್ತ ಮಾರುತಗಳನ್ನು ಮತ್ತು ಅವುಗಳಿಂದಾಗುತ್ತಿದ್ದ ಹವಾಮಾನದ ಪರಿಸ್ಥಿತಿಯನ್ನು ಸಮೀಕ್ಷೆ ಮಾಡಿದ ಲ್ಯಾಂಫರ್ಟ್ ಮತ್ತು ಷಾ ರವರು 1911ರಲ್ಲಿ ಈ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇದರ ಪ್ರಕಾರ ಶೀತ ವಾಯುರಾಶಿಯು ಉಷ್ಣವಾಯು ರಾಶಿಯನ್ನು ಸಂಧಿಸಿದಾಗ ಉಷ್ಣವಾಯು ಸು. 2300 ಮೀ ಎತ್ತರದವರೆಗೂ ಮೇಲ್ಮುಖವಾಗಿ ಚಲಿಸುವುದು. ಅನಂತರ ಕೆಳಗಿಳಿಯಲು ಪ್ರಾರಂಭಿಸಿದಾಗ ಸುಳಿಗಾಳಿಗಳು ಸಂಭವಿಸುವುದರಿಂದ ಆವರ್ತ ಮಾರುತಗಳು ಉತ್ಪತ್ತಿಯಾಗುವುವು. ಹೀಗಾಗಿ ಈ ಸಿದ್ಧಾಂತವನ್ನು ಸುಳಿಗಾಳಿ ಸಿದ್ಧಾಂತ ಎಂದೂ ಕರೆಯುವರು. ಉಷ್ಣವಲಯ ಮೇಲೇರುವ ಮತ್ತು ಕೆಳಗಿಳಿಯುವ ಮಧ್ಯೆ ಶೀತ ವಾಯುರಾಶಿಯು ಶಂಕುವಿನಾಕೃತಿ (V) ಯಲ್ಲಿ ಬೆಣೆಯಂತೆ ಮುನ್ನುಗ್ಗುವುದು. ಆದ್ದರಿಂದ ಆವರ್ತ ಮಾರುತಗಳು ಶಂಕಾಕೃತಿಯನ್ನು ಹೋಲುವುವು. ಇವುಗಳ ಉತ್ಪತ್ತಿ ಎರಡು ವಿಭಿನ್ನ ವಾಯುರಾಶಿಗಳು ಸಂಧಿಸುವದರ ಫಲವೆಂಬುದು ಈ ಸಿದ್ಧಾಂತದ ಸಾರಾಂಶ. ಒಂದು ಪ್ರದೇಶವನ್ನು ದಾಟಿದ ಅನಂತರ ಮತ್ತೊಂದು ಪ್ರದೇಶದ ವಿರುದ್ಧಗುಣಲಕ್ಷಣವುಳ್ಳ ಮತ್ತೊಂದು ವಾಯುರಾಶಿಗಳು ಸಂಧಿಸುವುದರಿಂದ ಮತ್ತು ಮುನ್ನುಗ್ಗುವುದರಿಂದ ಆವರ್ತ ಮಾರುತಗಳು ಸಂಭವಿಸುವುವು. ಆದ್ದರಿಂದ ಇವು ಕ್ರಿಯಾತ್ಮಕ ಅಥವಾ ಗತಿಶೀಲವಾದವು.

ಶೀತವೂ ಸಾಂದ್ರವೂ ಮತ್ತು ಅತ್ಯಲ್ಪ ತೇವಾಂಶವುಳ್ಳ ಧ್ರುವೀಯ ವಾಯುರಾಶಿಯು ಉಷ್ಣವಲಯದ ಕಡೆಗೂ ಮತ್ತು ಅತಿ ಉಷ್ಣವೂ ತೇವಾಂಶಭರಿತವೂ ಹಾಗೂ ಹಗುರವೂ ಆದ ವಾಯುರಾಶಿಯು ಧ್ರುವದ ಕಡೆಗೂ ಬೀಸುತ್ತವೆ. ಈ ಎರಡೂ ವಿಭಿನ್ನ ಗುಣಲಕ್ಷಣವುಳ್ಳ ವಾಯುರಾಶಿಗಳು ಮಧ್ಯ ಅಕ್ಷಾಂಶಗಳಲ್ಲಿ ಸಂಧಿಸುವುವು. ಅವುಗಳು ತಮ್ಮ ವಿಭಿನ್ನವಾದ ಭೌತಿಕ ಗುಣಲಕ್ಷಣಗಳಲ್ಲಿ ಒಂದನ್ನೊಂದು ಹೊಂದಿಕೊಳ್ಳದಿದ್ದಾಗ ಪರಸ್ಪರ ಸಮಾನಾಂತರವಾಗಿ ಸಾಗುವುವು. ಇವುಗಳ ನಡುವೆ ಸ್ಥಿರ ವಾಯುಮುಖ ನಿರ್ಮಾಣವಾಗುವುದು. ಇಂತಹ ಪರಿಸ್ಥಿತಿಯು ಆವರ್ತ ಮಾರುತಗಳ ಉತ್ಪತ್ತಿಗೆ ನೆರವಾಗುವುದಿಲ್ಲ. ಬದಲಾಗಿ ವಿರುದ್ಧ ದಿಕ್ಕಿನಿಂದ ಧಾವಿಸಿ ಬರುವ ಶೀತ ಮತ್ತು ಉಷ್ಣ ವಾಯುರಾಶಿಗಳು ಪರಸ್ಪರ ಸಂಧಿಸುವುದರಿಂದ ಅಸ್ಥಿರವಾದ ವಾಯು ಅಲೆಗಳೇರ್ಪಟ್ಟು ಅವು ಸಮಶೀತೋಷ್ಣವಲಯದ ಆವರ್ತ ಮಾರುತಗಳ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾಗುವುವು. ಅಸ್ಥಿರ ಅಲೆಯ ರೂಪದ ಮುಖಭಾಗಕ್ಕೆ ಧ್ರುವೀಯ ವಾಯುಮುಖವೆನ್ನುವರು.

ಶೀತ ಮತ್ತು ಉಷ್ಣವಾಯು ರಾಶಿಗಳು ಒಂದರ ಕ್ಷೇತ್ರದಲ್ಲಿ ಮತ್ತೊಂದು ಮುನ್ನುಗ್ಗಲು ಪ್ರಯತ್ನಿಸುವುವು. ಮುಂದೆ ಧಾವಿಸುವ ವಾಯುಮುಖಭಾಗವು ಸಮುದ್ರದ ಅಲೆಯರೂಪದಲ್ಲಿರುತ್ತದೆ. ಅದನ್ನು ವಾಯುಮುಖ (ಫ್ರಂಟ್) ಎನ್ನುವರು. ನಾರ್ವೆ ಭಾಷೆಯಲ್ಲಿ ಫ್ರಂಟ್ ಎಂದರೆ ಅಲೆ ಎಂದರ್ಥ. ಅಲೆಯಾಕಾರದ ವಾಯುವಿನ ಮುಖಭಾಗವನ್ನು ನಾರ್ವೆ ದೇಶದ ಹವಾಮಾನ ಶಾಸ್ತ್ರಜ್ಞರು ಹೀಗೆಂದು ಕರೆದಿರುವರು. ಉಷ್ಣ ವಾಯುರಾಶಿಯ ಕ್ಷೇತ್ರದಲ್ಲಿ ಶೀತವಾಯುರಾಶಿಯು ಧಾವಿಸುವುದನ್ನು

ಶೀತವಾಯುಮುಖ (ಕೋಲ್ಡ್ ಫ್ರಂಟ್) ಎಂದೂ ಮತ್ತು ಉಷ್ಣವಾಯುರಾಶಿಯು ಶೀತವಾಯು ರಾಶಿಯ ಮೇಲೇರಿ ಧಾವಿಸುವುದನ್ನು ಉಷ್ಣವಾಯುಮುಖ ಎಂದು ಹೇಳುವರು. (ವಾರ್ಮ್ ಫ್ರಂಟ್) ಶೀತವಾಯುರಾಶಿಯಿಂದ ಉಷ್ಣವಾಯು ರಾಶಿಯು ಕ್ರಮೇಣ ಪೂರ್ಣವಾಗಿ ಆವರಿಸಲ್ಪಡುವುದು. ಇದನ್ನು ಆಕ್ರಮಿತ ಕ್ಷೇತ್ರ ವಾಯುಮುಖ (ಆಕ್ಲೂಡೆಡ್ ಫ್ರಂಟ್) ಎಂದು ಕರೆಯುವರು. ಇದರಿಂದ ಕಡಿಮೆ ಒತ್ತಡವುಳ್ಳ ಕೇಂದ್ರ ನಿರ್ಮಾಣಗೊಳ್ಳುವುದು. ಸುತ್ತಲೂ ಅಧಿಕ ಒತ್ತಡವೇರ್ಪಡುವುದು. ಪರಿಣಾಮವಾಗಿ ಸುತ್ತಲಿನ ಅಧಿಕ ಒತ್ತಡ ಪ್ರದೇಶದಿಂದ ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ವಾಯು ಮುನ್ನುಗ್ಗುವುದರಿಂದ ಆವರ್ತ ಮಾರುತಗಳು ಉಂಟಾಗುವುವು.

ಆಕಾರ ಮತ್ತು ಗಾತ್ರ : ಈ ಆವರ್ತ ಮಾರುತಗಳು ವಿವಿಧಾಕಾರವುಳ್ಳವು. ಉದಾ: ಶಂಕಾಕಾರ, ವೃತ್ತಾಕಾರ, ಅರ್ಧವೃತ್ತಾಕಾರ, ಅಂಡಾಕಾರ. ಆದಾಗ್ಯೂ ಅವು ಸಾಮಾನ್ಯವಾಗಿ ತಲೆಕೆಳಗಾದ 'ವಿ' (Λ) ಅಕ್ಷರದಾಕಾರದಲ್ಲಿರುತ್ತವೆ. ಸಂಪೂರ್ಣವಾಗಿ ಅಭಿವೃದ್ಧಿಗೊಂಡಾಗ ಈ ಆವರ್ತಮಾರುತಗಳು ವೃತ್ತಾಕಾರ ಅಥವಾ ದೀರ್ಘವೃತ್ತಾಕಾರವಾದ ಸಮಭಾರರೇಖೆಗಳಿಂದ ನಿರೂಪಿಸಲ್ಪಡುವುವು. ಇವು ಬಹು ವಿಸ್ತಾರವಾದವು ಅವುಗಳ ವ್ಯಾಸ 1000 ದಿಂದ 1900 ಕಿಮೀ. ಆದರೆ ಸಮಶೀತೋಷ್ಣವಲಯದ ಎಲ್ಲಾ ಆವರ್ತಮಾರುತಗಳು ಒಂದೇ ಗಾತ್ರವನ್ನು ಹೊಂದಿರುವುದಿಲ್ಲ. ಅವುಗಳಲ್ಲಿ ಕೆಲವು 150 ಕಿಮೀ ವ್ಯಾಸವುಳ್ಳವಾಗಿದ್ದರೆ, ಮತ್ತೆ ಕೆಲವುಗಳ ವ್ಯಾಸ 3000 ಕಿಮೀ ಗಳಿಗಿಂತಲೂ ಹೆಚ್ಚಾಗಿರುತ್ತದೆ. ಊರ್ಧ್ವಮುಖವಾಗಿ 10 ರಿಂದ 12 ಕಿಮೀ ಎತ್ತರಕ್ಕೆ ವಿಸ್ತರಿಸಿರುತ್ತವೆ.

ವೇಗ ಮತ್ತು ಪಥ: ಇವು ಜಲರಾಶಿ ಮತ್ತು ಭೂರಾಶಿಗಳೆರಡರ ಮೇಲೂ ಸಂಭವಿಸುವುವು. ಅವು ಚಳಿಗಾಲ ಹಾಗೂ ಸಾಗರಗಳ ಮೇಲೆ ಪ್ರಬಲವಾಗಿ ಬೀಸುವುವು. ಚಳಿಗಾಲದಲ್ಲಿ ಇವುಗಳ ಸರಾಸರಿ ವೇಗ ಪ್ರತಿ ಗಂಟೆಗೆ 48 ಕಿಮೀ. ಬೇಸಗೆಯಲ್ಲಿ 32 ಕಿಮೀ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ಮೇಲೆ ಚಳಿಗಾಲದಲ್ಲಿ ಈ ಮಾರುತಗಳ ವೇಗ ಬಹು ತೀವ್ರವಾಗಿರುತ್ತದೆ. ಈ ಮಾರುತಗಳ ಪಥವು ಬಹುವಾಗಿ ಪ್ರತಿವಾಣಿಜ್ಯ ಮಾರುತಗಳ ಪ್ರಭಾವಕ್ಕೊಳಪಟ್ಟಿದ್ದು ಅವು ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಚಲಿಸುವುವು.

ಹವಾಮಾನ ಪರಿಸ್ಥಿತಿ : ಈ ಮಾರುತಗಳ ಪ್ರದೇಶಗಳಲ್ಲಿ ಹವಾಮಾನವೂ ವ್ಯತ್ಯಾಸಗೊಳ್ಳುವುದು. ಅದರಲ್ಲೂ ಈ ಆವರ್ತಮಾರುತಗಳ ಆಗಮನ ಉಷ್ಣ ಮತ್ತು ಶೀತವಾಯು ಮುಖ ಹಾಗೂ ವಿಭಾಗಗಳಲ್ಲಿ ಹವಾಮಾನದ ಪರಿಸ್ಥಿತಿಯು ಹೆಚ್ಚು ವ್ಯತ್ಯಾಸಗೊಳ್ಳುವುದು. ಈ ಆವರ್ತ ಮಾರುತಗಳು ಪಶ್ಚಿಮದ ಕಡೆಯಿಂದ ಆಗಮಿಸಿದಂತೆ ಅವುಗಳ ಚಲನಾ ವೇಗವು ಗಣನೀಯವಾಗಿ ಕಡಿಮೆಯಾಗುವುದು, ಒತ್ತಡವೂ ಇಳಿಯುವುದು, ಸೂರ್ಯ ಮತ್ತು ಚಂದ್ರರ ಸುತ್ತಲೂ ಪ್ರಭಾವಳಿ ಉಂಟಾಗುವುದು. ಆವರ್ತ ಮಾರುತಗಳು ಕ್ರಮೇಣ ಪೂರ್ವದಿಂದ ಆಗ್ನೇಯದ ಕಡೆಗೆ ದಿಕ್ಕು ಬದಲಿಸಿ ಬೀಳುವುವು. ಉಷ್ಣ ವಾಯುರಾಶಿಮುಖಭಾಗದಲ್ಲಿ ದಟ್ಟವಾದ ವೃಷ್ಟಿ ಪದರು ಮೋಡಗಳು ನಿರ್ಮಾಣಗೊಂಡು ಆಕಾಶವು ಮೋಡಗಳಿಂದ ಕವಿದಿರುತ್ತದೆ. ಈ ಮೋಡಗಳಿಂದ ಜಡಿ ಮಳೆ ಸುರಿಯಲಾರಂಭಿಸುವುದು. ಮಳೆಯ ಪ್ರಮಾಣ ಮತ್ತು ಅವಧಿ ವಾಯುವಿನಲ್ಲಿರುವ ತೇವಾಂಶದ ಪ್ರಮಾಣವನ್ನವಲಂಬಿಸಿರುತ್ತದೆ. ಮಾರುತಗಳು ದಕ್ಷಿಣಕ್ಕೆ ದಿಕ್ಕು ಬದಲಿಸಿದ ನಂತರ ಉಷ್ಣ ವಾಯು ವಿಭಾಗದಲ್ಲಿ ಮೋಡ ರಹಿತ ಆಕಾಶವೇರ್ಪಟ್ಟು ಒಮ್ಮೆಲೆ ಉಷ್ಣಾಂಶ ಹೆಚ್ಚಾಗುವುದು, ವಿಶಿಷ್ಟ ಆರ್ದ್ರತೆಯು ಹೆಚ್ಚಾಗುವುದು. ಅಲ್ಲಲ್ಲಿ ಸ್ವಲ್ಪ ತುಂತುರು ಮಳೆಯಾದರೂ ಹವಾಮಾನದಲ್ಲಿ ಪ್ರಶಾಂತತೆ ಮತ್ತು ಸೌಮ್ಯ ವಾತಾವರಣವೇರ್ಪಡುವುದು.

ಶೀತವಾಯುವಿನ ಆಗಮನದಿಂದ ಮುಖಭಾಗದಲ್ಲಿ ಉಷ್ಣಾಂಶವು ಸಾಕಷ್ಟು ಕಡಿಮೆಯಾಗಿ ಶೀತದ ಪರಿಸ್ಥಿತಿ ಏರ್ಪಡುವುದು. ಶೀತ ವಾಯು ಉಷ್ಣ ವಾಯುವನ್ನು ಮೇಲೇರಿಸುವುದು. ಮಾರುತಗಳ ದಿಕ್ಕು ನೈರುತ್ಯದ ಕಡೆಗೆ ಬದಲಾಗುವುದು. ಆಕಾಶ ರಾಶಿವೃಷ್ಟಿಮೋಡಗಳಿಂದಾವೃತವಾಗುವುದು. ಅವು ಗುಡುಗು–ಮಿಂಚುಗಳನ್ನೊಳಗೊಂಡ ಅಧಿಕ ಮಳೆಯನ್ನು ಸುರಿಸುವುವು. ಆದರೆ ಮಳೆಯ ಅವಧಿ ಅಲ್ಪ, ನಂತರ ನಿರ್ಮಲವಾದ ಆಕಾಶವು ನಿರ್ಮಾಣವಾಗುವುದು. ವಾಯುವಿನ ಉಷ್ಣಾಂಶ ಸ್ವಲ್ಪ ಕಡಿಮೆಯಾಗುವುದು, ಒತ್ತಡ ಸ್ವಲ್ಪ ಹೆಚ್ಚುವುದು ಮತ್ತು ವಿಶಿಷ್ಟ ಆರ್ದ್ರತೆಯು ಕಡಿಮೆಯಾಗುವುದು.

ಹಂಚಿಕೆ : ಈ ಆವರ್ತ ಮಾರುತಗಳ ಹಂಚಿಕೆ ಸೀಮಿತ. ಅವು ವಿಶೇಷವಾಗಿ ಉಪಧ್ರುವ ಕಡಿಮೆ ಒತ್ತಡವುಳ್ಳ ವಲಯಗಳಲ್ಲಿ ಆಗಾಗ್ಗೆ ಸಂಭವಿಸುವವು. ಉತ್ತರಗೋಳಾರ್ಧದಲ್ಲಿ ಎರಡು ಸರಣಿಗಳಿವೆ. ಮೊದಲನೆಯದು ಉತ್ತರ ಅಮೆರಿಕೆಯ ಪೂರ್ವಭಾಗದಿಂದ ಪ್ರಾರಂಭಗೊಂಡು ಉತ್ತರ ಅಟ್ಲಾಂಟಿಕ್ ಸಾಗರದ ಮೂಲಕ ಹಾಯ್ದು ಯುರೋಪ್ ಖಂಡ ವ್ಯಾಪಿಸುವುದು. ಎರಡನೆಯದು ಏಷ್ಯಖಂಡದ ಪೂರ್ವತೀರ, ಅಂದರೆ ಜಪಾನ್ ದ್ವೀಪಗಳ ಬಳಿ ಪ್ರಾರಂಭಗೊಂಡು ಉತ್ತರ ಪೆಸಿಫಿಕ್ ಸಾಗರದ ಮೂಲಕ ಹಾಯ್ದು ಅಲಾಸ್ಕ ಮತ್ತು ಉತ್ತರ ಅಮೆರಿಕೆಯ ವಾಯವ್ಯ ತೀರದವರೆಗೆ ವ್ಯಾಪಿಸುವುದು. ಇವುಗಳನ್ನು ಅನುಕ್ರಮವಾಗಿ ಅಟ್ಲಾಂಟಿಕ್ ಸರಣಿ ಮತ್ತು ಪೆಸಿಫಿಕ್ ಸರಣಿ ಎನ್ನುವರು.

ದಕ್ಷಿಣಗೋಳಾರ್ಧದಲ್ಲಿ ದಕ್ಷಿಣ ಅಮೆರಿಕದ ದಕ್ಷಿಣ ತುದಿಯಿಂದ ಪ್ರಾರಂಭಗೊಂಡು ದಕ್ಷಿಣ ಅಟ್ಲಾಂಟಿಕ್, ಹಿಂದೂ ಮಹಾಸಾಗರಗಳ ದಕ್ಷಿಣ ಭಾಗಗಳನ್ನು ದಾಟಿ ಆಸ್ಟ್ರೇಲಿಯದ ದಕ್ಷಿಣ ತೀರದವರೆಗೂ ಈ ಆವರ್ತ ಮಾರುತಗಳು ಸಂಭವಿಸುವುವು.




ಆವರ್ತ ಮಾರುತಗಳು




ಪ್ರತ್ಯಾವರ್ತ ಮಾರುತಗಳು

ಪ್ರತ್ಯಾವರ್ತಮಾರುತಗಳು (ಆ್ಯಂಟಿ ಸೈಕ್ಲೋನ್): ಅಧಿಕ ಒತ್ತಡವುಳ್ಳ ಕೇಂದ್ರದಿಂದ ಸುತ್ತಲಿನ ಕಡಿಮೆ ಒತ್ತಡವುಳ್ಳ ಪ್ರದೇಶದ ಕಡೆಗೆ ವೃತ್ತಾಕಾರವಾಗಿ ಬೀಸುವ ಮಾರುತಗಳಿಗೆ 'ಪ್ರತ್ಯಾವರ್ತ ಮಾರುತ' ಗಳೆಂದು ಹೆಸರು. ಇವುಗಳನ್ನು ಆವರ್ತ ಪ್ರತಿ ಮಾರುತವೆಂದೂ ಕರೆಯುವರು. ಇವುಗಳನ್ನು ನಿರೂಪಿಸುವಂತಹ ಸಮಭಾರರೇಖೆಗಳು ವೃತ್ತಾಕಾರದ ಅಥವಾ ಅಂಡಾಕಾರವಾಗಿದ್ದು ಕೇಂದ್ರದಲ್ಲಿ ಅಧಿಕ ಒತ್ತಡವಿದ್ದು ಹೊರಹೋದಂತೆ ಅದು ಕಡಿಮೆಯಾಗುವುದನ್ನು ಸೂಚಿಸುತ್ತವೆ.

ಉತ್ಪತ್ತಿ : ಪ್ರತ್ಯಾವರ್ತ ಮಾರುತಗಳು ಸಾಮಾನ್ಯವಾಗಿ ಸಮಶೀತೋಷ್ಣವಲಯದಲ್ಲಿ ಉತ್ಪತ್ತಿಯಾಗುತ್ತವೆ. ಪ್ರತಿಯಾಗಿ ಸಮಭಾಜಕ ವೃತ್ತ ಪ್ರದೇಶದಲ್ಲಿ ಪ್ರಾಯಶಃ ಇರುವುದಿಲ್ಲ. ಇವುಗಳ ಉಗಮವು ಮೇಲ್ಮಟ್ಟದ ವಾಯುಚಲನೆಯ ಆಂದೋಲನ ಮತ್ತು ಕೆಳಮುಖವಾಗಿ ಇಳಿಯುವಿಕೆಯನ್ನಾಧರಿಸಿದೆ. ವಾಯುಮಂಡಲದ ಮೇಲುಸ್ತರದಲ್ಲಿ ವಾಯು ತಂಪಾಗುವುದರಿಂದ ಭಾರವು ಹೆಚ್ಚಾಗುವುದು; ಸಾಂದ್ರವಾಯು ಕೆಳಗಿಳಿಯುವುದು. ಇದರಿಂದ ಅಧಿಕ ಒತ್ತಡವೇರ್ಪಟ್ಟು, ಅಲ್ಲಿಂದ ಸುತ್ತಲೂ ವರ್ತುಲಾಕಾರವಾಗಿ ಮಾರುತಗಳು ಬೀಸುವುವು. ಹೀಗಾಗಿ ಪ್ರತ್ಯಾವರ್ತ ಮಾರುತಗಳು ವಿಶೇಷವಾಗಿ ಉಪ ಉಷ್ಣವಲಯದ ಅಧಿಕ ಒತ್ತಡ ವಲಯದಲ್ಲಿ ಸಂಭವಿಸುವುವು.

ಗುಣಲಕ್ಷಣಗಳು : 1. ಪ್ರತ್ಯಾವರ್ತಮಾರುತಗಳು ಬೃಹದಾಕಾರವಾಗಿರುತ್ತವೆ. 2. ಅವು ವರ್ತುಲಾಕಾರವಾಗಿರುತ್ತವೆ. 3. ಕೇಂದ್ರಭಾಗದಲ್ಲಿ ಒತ್ತಡ ಗರಿಷ್ಠ ಮಟ್ಟದಲ್ಲಿದ್ದು ಹೊರಕ್ಕೆ ಹೋದಂತೆ ಕಡಿಮೆಯಾಗುವುದು. ಆದರೂ ಕೇಂದ್ರ ಮತ್ತು ಸುತ್ತಲಿನ ಪ್ರದೇಶಗಳ ನಡುವೆ ಒತ್ತಡದಲ್ಲಿ ಹೆಚ್ಚು ವ್ಯತ್ಯಾಸವಿರುವುದಿಲ್ಲ. 4. ಈ ಮಾರುತಗಳ ಪಥ ಅನಿಶ್ಚಿತವಾದುದು. 5. ಇವುಗಳ ಚಲನಾವೇಗ ಕಡಿಮೆ. 6. ಉತ್ತರಗೋಳಾರ್ಧದಲ್ಲಿ ಪ್ರದಕ್ಷಿಣವಾಗಿಯೂ ಮತ್ತು ದಕ್ಷಿಣಗೋಳಾರ್ಧದಲ್ಲಿ ಅಪ್ರದಕ್ಷಿಣವಾಗಿಯೂ ಬೀಸುವುವು. 7. ಇವುಗಳಿಗೆ ವಾಯುಮುಖಗಳ ಬೆಳವಣಿಗೆಯಿರುವುದಿಲ್ಲ. 8. ಚಳಿಗಾಲಕ್ಕಿಂತ ಬೇಸಗೆಯಲ್ಲಿ ಹೆಚ್ಚು ಉಷ್ಣಾಂಶವನ್ನು ಹೊಂದಿರುತ್ತವೆ.

ಕೆಲವು ಸಂದರ್ಭಗಳಲ್ಲಿ V ಆಕಾರವನ್ನು ತಾಳುವವು. ಅವುಗಳ ಗಾತ್ರ ಮತ್ತು ವಿಸ್ತೀರ್ಣ ಸಮಶೀತೋಷ್ಣವಲಯದ ಆವರ್ತ ಮಾರುತಗಳಿಗಿಂತ ಮೂರು ಪಟ್ಟು (ಶೇ. 75) ದೊಡ್ಡದಾಗಿರುತ್ತವೆ. ಅವುಗಳ ವ್ಯಾಸ 9000 ಕಿಮೀ ವ್ಯಾಪಿಸಿರುತ್ತದೆ. ಉದ್ದಗಲಗಳಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ. ಸಮಶೀತೋಷ್ಣವಲಯದ ಪ್ರತ್ಯಾವರ್ತ ಮಾರುತಗಳು ಬಹುವಿಸ್ತಾರವಾಗಿರುತ್ತವೆ.

ಪಥ ಮತ್ತು ವೇಗ : ಈ ಮಾರುತಗಳ ಪಥ ಅನಿರೀಕ್ಷಿತ ಮತ್ತು ಅನಿಶ್ಚಿತವಾದುದು. ಅದು ಆಗಾಗ್ಗೆ ವ್ಯತ್ಯಾಸಗೊಳ್ಳುವುದು. ಪ್ರತ್ಯಾವರ್ತ ಮಾರುತಗಳು ಮಂದಗಾಮಿಗಳು ಕೆಲವೊಮ್ಮೆ ನಿರ್ದಿಷ್ಟ ಸ್ಥಳದಲ್ಲಿ ಕೆಲಕಾಲ ಸ್ಥಗಿತಗೊಳ್ಳುವುವು. ಇವುಗಳ ಸರಾಸರಿ ಚಲನಾವೇಗ ಪ್ರತಿಗಂಟೆಗೆ 30 ರಿಂದ 50 ಕಿಮೀ.

ಹವಾಮಾನದ ಪರಿಸ್ಥಿತಿ : ಪ್ರತ್ಯಾವರ್ತ ಮಾರುತಗಳು ಅಧಿಕ ಒತ್ತಡವುಳ್ಳ ಕೇಂದ್ರದಿಂದ ಹೊರಕ್ಕೆ ಬೀಸುವುದರಿಂದ ಕೆಳಗಿಳಿದಂತೆಲ್ಲಾ ಉಷ್ಣಾಂಶವನ್ನು ಪಡೆದುಕೊಂಡು ಒಣಗಾಳಿಗಳಾಗಿ ಪರಿಣಮಿಸುವುವು. ಸಾಮಾನ್ಯ ಉಷ್ಣಾಂಶದ ಪ್ರವಣತೆಯು ಕಡಿಮೆಯಾಗಿ ವಾಯುವಿನ ಸಮಸ್ಥಿತಿಯು ಹೆಚ್ಚಾಗುವುದು. ಪರಿಣಾಮವಾಗಿ ಒಣಹವೆಯುಳ್ಳ ಹವಾಮಾನವೇರ್ಪಡುವುದು. ಕೇಂದ್ರದಲ್ಲಿ ಮೋಡರಹಿತ ಶುಭ್ರವಾದ ಆಕಾಶವು ನಿರ್ಮಾಣಗೊಳ್ಳುವುದು. ಮಳೆ ರಹಿತ ಪರಿಸ್ಥಿತಿಯು ಎಲ್ಲಾ ಕಾಲದಲ್ಲಿಯೂ ಇರಲಾರದು. ಪ್ರತ್ಯಾವರ್ತ ಮಾರುತಗಳು ಸಾಗರಗಳ ಮೇಲೆ ಬೀಸಿ ಬರುವಾಗ ಪಡೆದುಕೊಂಡ ಸಾಧಾರಣ ಪ್ರಮಾಣದ ತೇವಾಂಶದಿಂದ ಅಲ್ಪಪ್ರಮಾಣದ ಮೋಡಗಳ ನಿರ್ಮಾಣ ಮತ್ತು ಮಳೆಗೆ ಕಾರಣವಾಗುವುವು.

ಹವಾಮಾನದ ಪರಿಸ್ಥಿತಿಯು ಋತುಕಾಲಗಳಿಗನುಗುಣವಾಗಿ ವ್ಯತ್ಯಾಸಗೊಳ್ಳುವುದು. ವಸಂತ ಕಾಲದ ಪ್ರಾತಃಕಾಲಕ್ಕೆ ದಟ್ಟವಾದ ಮಂಜು ಕವಿದ ವಾತಾವರಣವಿರುತ್ತದೆ. ಬೇಸಗೆಯಲ್ಲಿ ಅದು ಬಹಳ ಕಡಿಮೆಯಿರುತ್ತದೆ. ಹಾಗೆಯೇ ಚಳಿಗಾಲಕ್ಕಿಂತ ಬೇಸಗೆಯ ಹಗಲಿನ ತಾಪಮಾನವು ಹೆಚ್ಚು. ಇದು ವಾಯುರಾಶಿಗಳ ಸ್ವರೂಪ, ಹವಾಮಾನದ ಸ್ಥಿತಿ, ವಾಯುವಿನಲ್ಲಿರುವ ತೇವಾಂಶದ ಪ್ರಮಾಣವನ್ನಾಧರಿಸಿರುತ್ತದೆ.

ಪ್ರಕಾರಗಳು : ವಾಯುಗುಣ ಶಾಸ್ತ್ರಜ್ಞರು ಪ್ರತ್ಯಾವರ್ತ ಮಾರುತಗಳನ್ನು ವಿವಿಧ ಪ್ರಕಾರಗಳಾಗಿ ವಿಂಗಡಿಸಿರುವರು. ಆದರೂ, ಸಾಮಾನ್ಯವಾಗಿ ಅವುಗಳನ್ನು ಎರಡು ಪ್ರಮುಖ ವಿಧಗಳಾಗಿ ವಿಂಗಡಿಸಬಹುದಾಗಿದೆ: 1) ಶೀತ ಪ್ರತ್ಯಾವರ್ತ ಮಾರುತಗಳು, 2) ಉಷ್ಣಪ್ರತ್ಯಾವರ್ತ ಮಾರುತಗಳು.

1) ಶೀತಪ್ರತ್ಯಾವರ್ತ ಮಾರುತಗಳು : ಇವು ಶೀತವಲಯಗಳಲ್ಲಿ ಉಂಟಾಗುತ್ತವೆ. ಶೀತವಲಯಗಳ ಭೂಭಾಗಗಳು ಚಳಿಗಾಲದಲ್ಲಿ ಅತಿ ಕಡಿಮೆ ಉಷ್ಣಾಂಶವೂ, ಭಾರವೂ ಆಗಿದ್ದೂ, ಅಧಿಕ ಒತ್ತಡವನ್ನುಂಟುಮಾಡುವುದರಿಂದ ಪ್ರತ್ಯಾವರ್ತ ಮಾರುತಗಳೇರ್ಪಡುವುವು. ಅಂದರೆ, ಒಂದು ನಿರ್ದಿಷ್ಟವಾದ ಎತ್ತರದಲ್ಲಿ ವಾಯು ಸುತ್ತಲಿನ ಪ್ರದೇಶಕ್ಕಿಂತ ಸಾಂದ್ರವಾಗಿರುತ್ತದೆ. ಅಂತಹ ಸಾಂದ್ರವುಳ್ಳ ಕೇಂದ್ರದಿಂದ ಶೀತ ಮಾರುತಗಳು ಸುತ್ತಲಿನ ಪ್ರದೇಶಕ್ಕೆ ವರ್ತುಲವಾಗಿ ಬೀಸುವುದು. ಇವು ಸಾಮಾನ್ಯವಾಗಿ ಭೂಖಂಡಗಳ ಶೀತವಾದ ಒಳನಾಡುಗಳಿಂದ ಉತ್ಪತ್ತಿಯಾಗುವುವು. ಉದಾ : ಸೈಬೀರಿಯ, ಗ್ರೀನ್‌ಲ್ಯಾಂಡ್ ಮತ್ತು ಉತ್ತರ ಕೆನಡ. ಆದ್ದರಿಂದ ಇವುಗಳನ್ನು 'ಭೂ ಪ್ರತ್ಯಾವರ್ತ ಮಾರುತ' ಗಳೆಂದು ಕರೆಯುವರು. ಇಲ್ಲಿ ಇವು ಚಳಿಗಾಲದಲ್ಲಿ ಮಾತ್ರ ಪ್ರಬಲವಾಗಿದ್ದರೆ ಧ್ರುವಪ್ರದೇಶಗಳಲ್ಲಿ ವರ್ಷವೆಲ್ಲಾ ಸಂಭವಿಸುವುವು.

2) ಉಷ್ಣಪ್ರತ್ಯಾವರ್ತ ಮಾರುತಗಳು : ಇವು ಅಧಿಕ ಒತ್ತಡವುಳ್ಳ ಉಪ ಉಷ್ಣವಲಯದಲ್ಲಿ ಉಂಟಾಗುವುವು. ಈ ವಲಯದಲ್ಲಿ ಎತ್ತರದಿಂದ ವಾಯು ಕೆಳಗಿಳಿಯುವುದರಿಂದ ಒತ್ತಡವು ಹೆಚ್ಚಾಗುವುದು. ಅಲ್ಲಿಂದ ಸುತ್ತಲೂ ಮಾರುತಗಳು ಬೀಸುವುವು. ವಿಶಾಲವಾದ ಕ್ಷೇತ್ರವುಳ್ಳವಾದರೂ ಮಂದಗಾಮಿಗಳಾಗಿರುತ್ತವೆ. ಕೆಲವೊಮ್ಮೆ ಕೆಲಕಾಲ ಸ್ಥಗಿತಗೊಳ್ಳುವುವು. ಹೀಗಾಗಿ ನಿರಂತರವೂ ಕಾರ್ಯ ನಿರ್ವಹಿಸುವುದಿಲ್ಲ. ಇವು ವಿಶೇಷವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದ ಆಗ್ನೇಯ ಭಾಗ ಮತ್ತು ಪಶ್ಚಿಮ ಯುರೋಪಿನ ಹವಾಮಾನದ ಮೇಲೆ ಪ್ರಭಾವ ಬೀರುವುವು. (ಪಿ.ಎಂ.)

**ಆವರ್ತನ ಮಾಪಕಗಳು:** ಭೂಮೇಲ್ಮೈ ಮಟ್ಟಸವಾಗಿದ್ದಲ್ಲಿ, ದೂರವನ್ನು ಸೈಕಲ್ಲಿನ ಚಕ್ರದ ಸಹಾಯದಿಂದ ಸುಲಭವಾಗಿ ಅಳೆಯಬಹುದು. ಸೈಕಲ್ ಚಕ್ರದ ಲೋಹದ ಪಟ್ಟಿಗೆ, ಒಂದು ಅಳತೆ ಪಟ್ಟಿಯನ್ನು ಅಂಟಿಸಿ, ಯಾವುದೇ ಎರಡು ಸ್ಥಳಗಳ ನಡುವೆ ಅದನ್ನು ಚಲಿಸಿದಾಗ ಅದು ಎಷ್ಟು ಸುತ್ತು ತಿರುಗಿದೆ ಎಂದು ತಿಳಿದುಕೊಂಡರೆ ಸಾಕು. ಆ ಎರಡು ಸ್ಥಳಗಳ ನಡುವಿನ ದೂರವನ್ನು $2\pi r$ ಸೂತ್ರದ ಮೂಲಕ ಕಂಡು ಹಿಡಿಯಬಹುದು. ಇಲ್ಲಿ $r$ = ಸೈಕಲ್ ಚಕ್ರದ ತ್ರಿಜ್ಯ. ಈ ಸೂತ್ರದಿಂದ ಸೈಕಲ್ ಚಕ್ರದ ಸುತ್ತಳತೆಯನ್ನು ಲೆಕ್ಕಾಚಾರ ಮಾಡಿ ಅದನ್ನು ಚಕ್ರವು ತಿರುಗಿರುವ ಸುತ್ತುಗಳಿಂದ ಗುಣಿಸಿದರೆ, ಆ ಸ್ಥಳಗಳ ನಡುವಿನ ದೂರ ದೊರೆಯುವುದು. ಇದನ್ನು ನಿರೂಪಿಸುವ ಮಾಪಕವನ್ನು ರಚಿಸಬಹುದು. (ಆರ್.ಎನ್.)

**ಆವಾಸ ಸ್ಥಾನ:** ಜೀವಿಸ್ಥಳ ಅಥವಾ ಜೀವಿಗಳ ನೆಲೆ ಅಥವಾ ಜೀವಿಯು ವಾಸಿಸುವ ಭೌಗೋಳಿಕ ಸ್ಥಳ. ಪರಿಸರದಲ್ಲಿ ಹಲವು ವೈವಿಧ್ಯಮಯ ಜೀವಿಗಳ ಹಂಚಿಕೆಯನ್ನು ಕಾಣಬಹುದು. ಇವುಗಳ ಹಂಚಿಕೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ಕೆಲವೊಂದು ಪ್ರದೇಶದಲ್ಲಿ ಕೆಲವೇ ಜೀವಿಗಳ ಅಸ್ತಿತ್ವವನ್ನು ಕಾಣುತ್ತೇವೆ, ಆ ಭೌಗೋಳಿಕ ಪ್ರದೇಶಕ್ಕೆ ಆವಾಸಸ್ಥಾನ ಎಂದು ಕರೆಯುವರು. ಆವಾಸಸ್ಥಾನವನ್ನು ಜೀವಿಗಳು ವಾಸವಾಗಿರುವ ಭೌಗೋಳಿಕ ಪ್ರದೇಶದ ಆಧಾರದ ಮೇಲೆ ಜಲಭಾಗ, ಭೂಭಾಗ, ವಾಯುಮಂಡಲ ಹಾಗೂ ವೃಕ್ಷದ ಮೇಲಿನ ಜೀವಿಸ್ಥಳ ಎಂದು ವಿಂಗಡಿಸಬಹುದು. ಪ್ರತಿಯೊಂದು ಜೀವಿಯ ಆವಾಸಸ್ಥಾನವೂ ವೈವಿಧ್ಯತೆದಿಂದ ಕೂಡಿರುತ್ತದೆ. (ಎಚ್.ಎಸ್.ಡಿ.)

**ಆವೃತ್ತಿ ಸಂಖ್ಯಾ ಚಿತ್ರ:** ಆವೃತ್ತಿ ಸಂಖ್ಯಾ ವಿತರಣೆಯನ್ನು ಲೇಖಾ ಚಿತ್ರದ ಮೂಲಕ ತೋರಿಸುವ ವಿಧಾನವೇ ಆವೃತ್ತಿ ಸಂಖ್ಯಾ ಚಿತ್ರ ಇದರಲ್ಲಿ ವರ್ಗಾವೃತ್ತಿಯನ್ನು ಲಂಬ ಸ್ತಂಬಗಳ ಮೂಲಕ ತೋರಿಸಲಾಗುತ್ತದೆ. ಈ ಲೇಖಾ ಚಿತ್ರವನ್ನು ರಚಿಸುವಾಗ ಯಾವಾಗಲೂ $0x$ ಅಕ್ಷದ ಮೇಲೆ ವರ್ಗಾಂತರಗಳನ್ನು ಮತ್ತು $0y$ ಅಕ್ಷದ ಮೇಲೆ ಆವೃತ್ತಿ ಸಂಖ್ಯೆಗಳನ್ನು ಅಳತೆ ಮಾಡಲಾಗುತ್ತದೆ. ಇದರಲ್ಲಿ ಎಷ್ಟು ವರ್ಗಗಳಿರುತ್ತವೆಯೋ ಅಷ್ಟು ದೀರ್ಘ ಚೌಕಾಕೃತಿಗಳು (ಲಂಬ ಸ್ತಂಭಗಳು) ಇರುತ್ತವೆ. ಪ್ರತಿ ಚೌಕಾಕೃತಿಯ ಎತ್ತರ ಅದರ ವರ್ಗಾವೃತ್ತಿಯ ಸಂಖ್ಯೆಯನ್ನು ಸೂಚಿಸುತ್ತದೆ. (?)

**ಆಸ್ಕರ್ ಪಾಶ್ಚೆಲ್:** 1826–75. ಪ್ರಸಿದ್ಧ ಜರ್ಮನ್ ಭೂಗೋಳ ವಿಜ್ಞಾನಿ. ಇವರು 1849ರಲ್ಲಿ ಪತ್ರಕರ್ತರಾಗಿ ತನ್ನ ವೃತ್ತಿಯನ್ನು ಪ್ರಾರಂಭಿಸಿದರು ಮತ್ತು 1854ರಿಂದ 1870ರವರೆಗೆ ಔಸ್‌ಲ್ಯಾಂಡ್ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಆ ಪತ್ರಿಕೆಯಲ್ಲಿ ವಿದೇಶಗಳ ಭೂಗೋಳ ವಿಜ್ಞಾನದ ಬಗ್ಗೆ ಲೇಖನಗಳು ಪ್ರಕಟವಾಗುತ್ತಿದ್ದವು. ಇವರು



ಪ್ರಾಚೀನ ಭೂಗೋಳವಿಜ್ಞಾನದ ಬಗ್ಗೆ ವ್ಯಾಪಕವಾಗಿ ಬರೆದರು ಮತ್ತು ಈ ಅನುಭವದ ಆಧಾರದ ಮೇಲಿಂದ ಇವರನ್ನು ರಾಯಲ್ ಅಕಾಡೆಮಿ ಆಫ್ ಸೈನ್ಸ್ ಜರ್ಮನಿಯ ಭೂಗೋಳಶಾಸ್ತ್ರದ ಇತಿಹಾಸವನ್ನು ಬರೆಯಲು ಆಹ್ವಾನಿಸಿತು. 1865ರಲ್ಲಿ ಶೆಷಿಷ್ಟೆಡರ್ ಎರ್ಡಕುಂಡೆ ಎಂಬ ಇವರ ಗ್ರಂಥ ಪ್ರಕಟವಾಯಿತು. ಅನಂತರ ಇವರು ಹಂಬೋಲ್ಟ್ ಮತ್ತು ರಿಟ್ಟರ್ ಅವರನ್ನು ಒಳಗೊಂಡು ಅನೇಕ ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸಿದರು. ಅವುಗಳನ್ನು ಸಂಕಲನ ಮಾಡಿ 1870ರಲ್ಲಿ ನ್ಯೂ ಪ್ರಾಬ್ಲೆಮೆಡರ್ ವರ್ಗ್ಲೈಟೆಂಡೆನ್ ಎರ್ಡಕುಂಡೆ ಎಂಬ ಗ್ರಂಥವನ್ನು ಪ್ರಕಟಿಸಿದರು. ಇದರಲ್ಲಿ ರಿಟ್ಟರ್‌ನ ತುಲನಾತ್ಮಕ ಭೂಗೋಳವಿಜ್ಞಾನದ ವಿಧಾನವನ್ನು ಹಾಗೂ ಸಾಮಾನ್ಯ ಭೂಗೋಳವಿಜ್ಞಾನವು ನೈಸರ್ಗಿಕ ವಿಜ್ಞಾನದೊಂದಿಗೆ ಸಮಾನವೆಂದು ಪರಿಗಣಿಸಬೇಕೆಂಬ ಹಂಬೋಲ್ಟ್‌ನ ವಿಚಾರವನ್ನು ಕಟುವಾಗಿ ಟೀಕಿಸಿದರು. ತುಲನಾತ್ಮಕ ಭೂಗೋಳವಿಜ್ಞಾನ ತುಲನಾತ್ಮಕ ಸ್ವರೂಪ ವಿಜ್ಞಾನದಂತೆ ನಿಶ್ಚಿತ ವಿಧಾನ ಮತ್ತು ಗುರಿ ಹೊಂದಿರಬೇಕೆಂದು ವಾದಿಸಿದರು. ಭೂಗೋಳಶಾಸ್ತ್ರಜ್ಞರು ದೊಡ್ಡ ಪ್ರಮಾಣದ ನಕ್ಷೆಗಳ ಸಹಾಯದಿಂದ ಪೃಥ್ವಿಯ ವಿವಿಧ ಭಾಗಗಳಲ್ಲಿ ಕಂಡುಬರುವ ಒಂದೇ ಬಗೆಯ ಮೇಲ್ಮೈ ಲಕ್ಷಣಗಳನ್ನು ಹೋಲಿಸಿ ಅವುಗಳ ನಿರ್ಮಾಣ ಪ್ರಕ್ರಿಯೆಗಳನ್ನು ಗುರುತಿಸಬೇಕೆಂದು ಇವರು ಸೂಚಿಸಿದರು. ಆಧುನಿಕ ಭೂಗೋಳಶಾಸ್ತ್ರದ ಅಸ್ತಿಭಾರ ಹಾಕಿದ ಶ್ರೇಯಸ್ಸು

ಆಸ್ಕರ್ ಪಾಶ್ಚೆಲ್‌ರಿಗೆ ಸಲ್ಲುತ್ತದೆ. 1871ರಲ್ಲಿ ಇವರು ಲೀಪ್ಜಿಗ್ ವಿಶ್ವವಿದ್ಯಾಲಯದಲ್ಲಿ ಭೂಗೋಳವಿಜ್ಞಾನದ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅವರು ಪ್ರಾಕೃತಿಕ ಭೂಗೋಳ ವಿಜ್ಞಾನವನ್ನು ವಿಜ್ಞಾನವಾಗಿ ನೆಲೆಗೊಳಿಸಿದರು.

ಪ್ರಾಕೃತಿಕ ಮತ್ತು ಮಾನವ ಭೂಗೋಳವಿಜ್ಞಾನಗಳು ಜ್ಞಾನದ ಎರಡು ಪ್ರತ್ಯೇಕ ಕ್ಷೇತ್ರಗಳೆಂದು ವಾದಿಸಿದರು. ಆದ್ದರಿಂದ ಅವೆರಡೂ ಕ್ಷೇತ್ರಗಳು ಸೇರಿ ಒಂದೇ ವಿಜ್ಞಾನದ ಭಾಗವಾಗಬಾರದೆಂದು ಅಭಿಪ್ರಾಯಪಟ್ಟರು. ಹೀಗೆ ಇವರು ಪ್ರಾಕೃತಿಕ ಮತ್ತು ಮಾನವ ಭೂಗೋಳವಿಜ್ಞಾನಗಳ ನಡುವೆ ದ್ವಂದ್ವವಾದದ ಜನಕರಾಗಿ ಪರಿಣಮಿಸಿದರು. ಪಾಶ್ಚೆಲ್‌ರು ಮಾನವ ಕುಲಗಳ ಮತ್ತು ಸಂಸ್ಕೃತಿಗಳ ಭೌಗೋಳಿಕ ಹಂಚಿಕೆ ಕುರಿತು ಆಳವಾಗಿ ಅಧ್ಯಯನ ಮಾಡಿದರು. ಪಾಶ್ಚೆಲ್‌ನ ದಿ ರೇಸಸ್ ಆಫ್ ಮ್ಯಾನ್‌ಕೈಂಡ್: ದೇರ್‌ಡಿಸ್ಟ್ರಿಬ್ಯೂಷನ್ (1876) ಎಂಬುದು ಈಗ ಇಂಗ್ಲಿಷ್ ಮಾಧ್ಯಮದಲ್ಲಿ ಲಭ್ಯವಿರುವ ಇವರ ಏಕಮಾತ್ರ ಗ್ರಂಥ. ಇವರು ತಮ್ಮ 49ನೆಯ ವಯಸ್ಸಿನಲ್ಲಿ ನಿಧನಹೊಂದಿದರು ಮತ್ತು ಇವರ ಫಿಜಿಷೆ ಎರ್ಡ್‌ಕುಂಡೆ ಎಂಬ ಗ್ರಂಥವನ್ನು ಇವರ ಮರಣಾನಂತರ 1879 ರಲ್ಲಿ ಪ್ರಕಟಿಸಲಾಯಿತು. (ಎಸ್.ಎಸ್.ಎನ್.)

**ಆಸ್ಕರ್ ಸ್ಪೇಟ್:** 1911–2000. ಆಸ್ಟ್ರೇಲಿಯ ಮತ್ತು ಪೆಸಿಫಿಕ್ ವಲಯದಲ್ಲಿ ಭೂಗೋಳ ವಿಜ್ಞಾನವೊಂದು ಶಿಕ್ಷಣಾತ್ಮಕ ವಿಷಯವಾಗಿ ಸಮೃದ್ಧಗೊಳಿಸಿದ ಕೀರ್ತಿಗೆ ಪಾತ್ರರಾದವರು. ಇವರ ಪೂರ್ಣ ಹೆಸರು ಓಸ್ಕಾರ್ ಹರ್ಮನ್ ಕ್ರಿಶ್ಚಿಯನ್ ಸ್ಪೇಟ್. ಓ.ಎಚ್.ಕೆ. ಸ್ಪೇಟ್ ಎಂದೇ ಪ್ರಸಿದ್ಧಿ. ಹುಟ್ಟಿದ್ದು ಇಂಗ್ಲೆಂಡಿನ ಬ್ಲೂಮ್ಸ್‌ಬರಿಯಲ್ಲಿ (1911). ತಂದೆ ಜರ್ಮನ್, ತಾಯಿ ಇಂಗ್ಲಿಷ್. ವ್ಯಾಸಂಗ ಪ್ರತಿಷ್ಠಿತ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ, ಆಯ್ಕೆಮಾಡಿಕೊಂಡ ಅಧ್ಯಯನ ಕ್ಷೇತ್ರ ಇಂಗ್ಲಿಷ್ ಮತ್ತು ಭೂಗೋಳವಿಜ್ಞಾನ. ಡಾಕ್ಟರೇಟ್ ಪದವಿಗಾಗಿ ಆಯ್ಕೆ ಮಾಡಿಕೊಂಡ ವಿಷಯ ಇತಿಹಾಸ ಭೂಗೋಳವಿಜ್ಞಾನ.



ಇವರ ವೃತ್ತಿ ಪ್ರಾರಂಭಕ್ಕೂ ಕಾರ್ಯಕ್ಷೇತ್ರಕ್ಕೂ ಭಾರತಕ್ಕೂ ಅವಿನಾಭಾವ ಸಂಬಂಧವಿದೆ. ಒಂದು ವರ್ಷ ಶಿಕ್ಷಕನಾಗಿ ಸೇವೆಸಲ್ಲಿಸಿದ ಅನಂತರ ಮಯನ್ಮಾರ್‌ನ (ಬರ್ಮ) ರಂಗೂನ್ ವಿಶ್ವವಿದ್ಯಾಲಯದಲ್ಲಿ ಒಂದು ಉತ್ತಮ ಸ್ಥಾನ ಲಭ್ಯವಾಯಿತು (1937). ಬ್ರಿಟಿಷರ ವಸಾಹತುಗಳಲ್ಲಿ ಒಂದಾದ ಭಾರತದಲ್ಲಿ ಸ್ವಾತಂತ್ರ್ಯ ಸಮರದ ಸಂದರ್ಭದಲ್ಲಿ ಮಯನ್ಮಾರ್‌ನ ಭೂಗೋಳವಿಜ್ಞಾನದ ಪ್ರಗತಿಗಾಗಿ ಗಮನ ಹರಿಸಿದರು. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ರಂಗೂನ್ ವಿಮಾನ ನಿಲ್ದಾಣದಲ್ಲಿ ಜಪಾನಿಯರ ದಾಳಿಯಿಂದ ತೀವ್ರಗಾಯಗೊಂಡರು. ಈ ಸಂದರ್ಭದಲ್ಲಿ ಚೇತರಿಸಿಕೊಳ್ಳುವುದಕ್ಕಾಗಿ ಇವರನ್ನು ಭಾರತಕ್ಕೆ ಕಳುಹಿಸಿ ಕೊಡಲಾಯಿತು. 1944ರಲ್ಲಿ ನವದೆಹಲಿ ಇಂಟರ್‌ಸರ್ವಿಸ್ ಟೋಪೊಗ್ರಫಿಕಲ್ ಇಲಾಖೆಯಲ್ಲಿ ಸೇವೆಗೆ ಪಾದಾರ್ಪಣ ಮಾಡಿ ಮುಂದೆ ಶ್ರೀಲಂಕದ ಕ್ಯಾಂಡಿಯಲ್ಲೂ ಸೇವೆ ಸಲ್ಲಿಸಿದರು. 1947ರಲ್ಲಿ ಇಂಗ್ಲೆಂಡ್‌ನ ಬೆಡ್‌ಫೋರ್ಡ್ ಮಹಿಳಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆಸಲ್ಲಿಸಲು ತೆರಳಿದರು. ದಕ್ಷಿಣೇಷ್ಯ ಭೂಗೋಳ ವಿಜ್ಞಾನ ಅಧ್ಯಯನದಲ್ಲಿ ಇವರು ಪಾಂಡಿತ್ಯಪಡೆದವರಾಗಿದ್ದರು. ಲಂಡನ್ ವಿಶ್ವವಿದ್ಯಾನಿಲಯದ ಸೇವಾವಧಿಯಲ್ಲೇ ಇವರು ಬರೆದ ದಿ ಚೇಂಜಿಂಗ್ ಫೇಸ್ ಆಫ್ ಏಷ್ಯ ಎಂಬ ಕೃತಿ ಬಿಡುಗಡೆಯಾಯಿತು. ಭಾರತ–ಪಾಕಿಸ್ತಾನ ವಿಭಜನೆ ಸಂದರ್ಭದಲ್ಲಿ ಪಂಜಾಬ್ ಬೌಂಡರಿ ಕಮಿಷನ್ ನಲ್ಲಿ ಸೇವೆಸಲ್ಲಿಸಿದರು. 1951ರಲ್ಲಿ ಇಂಡಿಯ ಮತ್ತು ಪಾಕಿಸ್ತಾನ ಎಂಬ ಸಾಮಾನ್ಯ ಪ್ರಾದೇಶಿಕ ಭೂಗೋಳ ವಿಜ್ಞಾನ ಕುರಿತ ಕೃತಿಯನ್ನು ರಚಿಸಿ ಪ್ರಕಟಿಸಿದರು. ಇದರಿಂದ ಇವರ ಪ್ರಶಂಸೆಗೆ ಪಾತ್ರರಾಗುವುದರ ಜೊತೆಗೆ ಭಾರತದ ಭೂಗೋಳ ವಿಜ್ಞಾನದ ತನ್ಮೂಲಕ ದಕ್ಷಿಣ ಏಷ್ಯ ಭೂಗೋಳ ವಿಜ್ಞಾನಕ್ಕೆ ಇವರ ಕೊಡುಗೆ ಸ್ಮರಣೀಯ. (ಪಿ.ಎಂ.)

**ಆಸ್ಟ್ರಿಯ:** ಇಟಲಿಗೆ ಈಶಾನ್ಯ ದಿಕ್ಕಿನಲ್ಲಿರುವ ಮಧ್ಯ ಯುರೋಪಿನ ಒಂದು ಖಂಡಾಂತರ ಸ್ಥಾನವನ್ನು ಹೊಂದಿರುವ ರಾಷ್ಟ್ರ. ಇದರ ವಿಸ್ತೀರ್ಣ 83,858 ಚ.ಕಿಮೀ. ಜನಸಂಖ್ಯೆ 8.1 ದಲ.ಗಳು (2005). ಪ್ರತಿ ಚ.ಕಿಮೀ.ಗೆ 99 ರಷ್ಟು ಜನಸಾಂದ್ರತೆಯಿರುವುದು. ಇದು ಉ.ಅ. $46^0.22'$ ದಿಂದ $49^0.1'$ ದವರೆಗೆ ಸು. 292 ಕಿಮೀ. ಉದ್ದ ಹಾಗೂ ಪೂ.ರೇ. $9^0.22'$ ರಿಂದ $17^0.10'$ ವರೆಗೆ ಪೂರ್ವ ಪಶ್ಚಿಮವಾಗಿ 80 ಕಿಮೀ ಅಗಲವಾಗಿದೆ. ದೇಶದ ಗಡಿ ಸು. 2621 ಕಿಮೀ ಉದ್ದವಾಗಿದೆ. ಈ ದೇಶದ ಉತ್ತರಕ್ಕೆ ಜರ್ಮನಿ, ಜ಼ೆಕ್ ಮತ್ತು ಸ್ಲೋವೇಕಿಯ ಗಣರಾಜ್ಯಗಳಿವೆ, ಇದರ ದಕ್ಷಿಣಕ್ಕೆ ಇಟಲಿ ಹಾಗೂ ಸರ್ಬಿಯ ಮಾಂಟೆನೀಗ್ರೊ ಪೂರ್ವ ಮತ್ತು ಪಶ್ಚಿಮಕ್ಕೆ ಹಂಗರಿ ಮತ್ತು ಸ್ವಿಟ್ಜರ್‌ಲೆಂಡ್‌ಗಳಿವೆ.

ಭೂಸ್ವರೂಪ: ಆಸ್ಟ್ರಿಯದ ಬಹುಭಾಗ ಪರ್ವತಗಳಿಂದ ಕೂಡಿದೆ. ಆಲ್ಪ್ಸ್ ಪರ್ವತಗಳ ಪೂರ್ವ ಭಾಗ ಸಂಪೂರ್ಣವಾಗಿ ಆಸ್ಟ್ರಿಯದಲ್ಲಿದೆ. ಈ ಪರ್ವತ $13^0$ ಪೂರ್ವ ರೇಖಾಂಶದ ಪೂರ್ವಭಾಗದಲ್ಲಿ ಎತ್ತರ ಕಡಿಮೆಯಾಗುತ್ತ ಬಂದು ಡ್ಯಾನ್ಯೂಬ್ ಕಣಿವೆಯನ್ನು ಸೇರಿಕೊಳ್ಳುತ್ತದೆ. ಆಲ್ಪ್ಸ್ ನಲ್ಲಿಯ ಗ್ರೊಸ್ಸಿಲಾಕ್ನರ ಶಿಖರ 3797 ಮೀ ಎತ್ತರವಾಗಿದೆ. ಆಲ್ಪ್ಸ್ ಪರ್ವತಗಳಲ್ಲಿ ಅಲ್ಲಲ್ಲಿ ಕಣಿವೆ ಮಾರ್ಗಗಳಿವೆ. ಇವುಗಳಲ್ಲಿ ಬ್ರೆನ್ನರ್ ಹಾಗೂ ಜಮ್ಮರಿಂಗ್ ಕಣಿವೆ ಮಾರ್ಗಗಳು ಮುಖ್ಯವಾದವು. ಈ ದೇಶದ ಮುಖ್ಯನದಿ ಡ್ಯಾನ್ಯೂಬ್. ಇದು ಸು. 377 ಕಿಮೀ ನೌಕಾಯಾನಕ್ಕೆ ಯೋಗ್ಯವಾಗಿದೆ. ಇನ್ನ್, ಡ್ರಾವ ಮತ್ತು ಮೂರ್ ಇತರ ಮುಖ್ಯ ನದಿಗಳು. ಅಲ್ಲದೆ ಅನೇಕ ದೊಡ್ಡ ಸರೋವರಗಳೂ ಇವೆ. ಉತ್ತರ ಹಾಗೂ ಈಶಾನ್ಯದ ಕಡೆಗೆ ಇಳಿಜಾರಾಗಿದ್ದು ವಿಯನ್ನ ಮೈದಾನವನ್ನು ಸೇರುವುದು. ಪರ್ವತಗಳ ತಪ್ಪಲುಗಳು ಸಸ್ಯವರ್ಗದಿಂದ ಕೂಡಿವೆ. ಅನೇಕ ಕಣಿವೆಗಳಿಂದ ಛಿದ್ರವಾಗಿರುವ ಎತ್ತರದ ಪ್ರದೇಶಗಳಲ್ಲಿ ಸುಣ್ಣಕಲ್ಲು ಹೇರಳವಾಗಿದೆ.

ವಾಯುಗುಣ: ಮೇಲ್ಮೈಲಕ್ಷಣದ ವೈವಿಧ್ಯ ಹಾಗೂ ಸನ್ನಿವೇಶ ಇವು ಆಸ್ಟ್ರಿಯದಲ್ಲಿ ವಿವಿಧರೀತಿಯ ವಾಯುಗುಣಕ್ಕೆ ಕಾರಣವಾಗಿವೆ. ದಕ್ಷಿಣಭಾಗದಲ್ಲಿ ಮೆಡಿಟರೇನಿಯನ್ ವಾಯುಗುಣವಿದ್ದು, ಪೂರ್ವಭಾಗದಲ್ಲಿ ಖಂಡಾಂತರ ವಾಯುಗುಣ ಕಂಡುಬರುವುದು. ಸರಾಸರಿ ಉಷ್ಣತೆ ಅತಿಕನಿಷ್ಠವಾಗಿದ್ದು ಮತ್ತು ಗರಿಷ್ಠ ಜುಲೈನಲ್ಲಿ ಇರುತ್ತದೆ. ಮಳೆಯ ಪ್ರಮಾಣ 90 – 210 ಸೆಂಮೀ. ಚಳಿಗಾಲದಲ್ಲಿ ಅಪಾರ ಹಿಮವೃಷ್ಟಿಯಾಗುವುದು.




ಸಸ್ಯವರ್ಗ: ದೇಶದ ಶೇ. 47 ಭಾಗ ಅರಣ್ಯಗಳಿಂದ ಕೂಡಿದೆ. ಪೂರ್ವದ ಇಳಿಜಾರುಗಳಲ್ಲಿ ಅಗಲವಾದ ಎಲೆಯುಳ್ಳ ಮರಗಳು ಅತಿ ಎತ್ತರಕ್ಕೆ ಬೆಳೆಯುತ್ತವೆ. ಎತ್ತರ ಪ್ರದೇಶಗಳಲ್ಲಿ ಮೊನಚಾದ ಹಾಗೊ ಆಲ್ಪೈನ್ ಹುಲ್ಲುಗಾವಲಿನ ಸಸ್ಯವರ್ಗವಿದೆ. ಬೀಚ್, ಬರ್ಚ್ ಮತ್ತು ಓಕ್ ಮುಂತಾದ ಎಲೆ ಉದುರುವ ಮರಗಳು ಮತ್ತು ಇತರೆ ಕೋನಿಫೆರಸ್ ಮರಗಳು ಬೆಳೆಯುತ್ತವೆ. ಅನೇಕ ಬಗೆಯ ವನ್ಯಮೃಗಗಳಿವೆ. ಕಾಡುಜಿಂಕೆಗಳು ವಿರಳ. ಚಿಗರಿ, ಮೊಲ, ಗ್ರೌಸ್, ಕವಜುಗ ಮತ್ತು ಫೆಸೆಂಟ್ ಹಕ್ಕಿಗಳು ಹೇರಳವಾಗಿವೆ.

ದೇಶದ ಅರ್ಧಭಾಗದಷ್ಟು ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ಸು. 1/3 ಭಾಗ ಅರಣ್ಯ ಪ್ರದೇಶಗಳಿಂದ ಕೂಡಿರುವುದು. ಪಶುಪಾಲನೆ ಜನರ ಮುಖ್ಯ ಕಸಬು. ಆಲ್ಪ್ಸ್ ಹಾಗು ಡ್ಯಾನ್ಯೂಬ್‌ಗಳ ನಡುವಿನ ಫಲವತ್ತಾದ ಭೂಮಿಯಲ್ಲಿ ಶೇ. 30 ಜನರು ಆಧುನಿಕ ಕೃಷಿಯಲ್ಲಿ ತೊಡಗಿರುವರು. ಮುಖ್ಯ ಬೆಳೆಗಳಾದ ಗೋದಿ, ರೈ, ಓಟ್ಸ್, ಬಾರ್ಲಿ, ಆಲೂಗೆಡ್ಡೆ, ಮೆಕ್ಕೆಜೋಳ, ಸಕ್ಕರೆ ಗೆಡ್ಡೆಗಳು ಮತ್ತು ಹೈನು ಉತ್ಪನ್ನಗಳಾದ ಹಾಲು, ಬೆಣ್ಣೆ, ತುಪ್ಪಗಳನ್ನು ಹೆಚ್ಚಾಗಿ ಉತ್ಪಾದಿಸಿ ರಫ್ತು ಮಾಡುತ್ತಾರೆ.

ಆಸ್ಟ್ರಿಯದಲ್ಲಿ ಮುಖ್ಯವಾಗಿ ಡೈನಾರಿಕರು, ನಾರ್ಡಿಕರು, ಆಲ್ಪೈನರು ಮತ್ತು ಪೂರ್ವ ಬಾಲ್ಟಿಕರು ಎಂಬ ನಾಲ್ಕು ಪಂಗಡಗಳಿವೆ. ಡೈನಾರಿಕರು ಎತ್ತರ ಹಾಗೂ ಕಪ್ಪಾಗಿಯೂ ನಾರ್ಡಿಕರು ತೆಳ್ಳಗೆ ಎತ್ತರವಾಗಿ ಸುಂದರವಾಗಿಯೂ ಆಲ್ಪೈನರು ಗಟ್ಟಿಮುಟ್ಟಾಗಿ ಕುಳ್ಳಾಗಿಯೂ ಪೂರ್ವಬಾಲ್ಟಿಕರು ಮಧ್ಯಮ ಎತ್ತರದವರಾಗಿಯೂ ಇದ್ದಾರೆ. ಹಂಗೆರಿ ಗಡಿಯ ಬರ್ಗನ್‌ಲೆಂಡಿನಲ್ಲಿ ಕ್ರೋಚ್ ಮತ್ತು ಮಾಗ್ಯಾರರು, ಯುಗೊಸ್ಲಾವ್ ಗಡಿಯ ಸ್ಟೀರಿಯ ಮತ್ತು ಕಾರಿಂಥಿಯ ಪ್ರದೇಶಗಳಲ್ಲಿ ಸ್ಲೋವನ್ನರೂ ಇದ್ದಾರೆ. ಚೆಕೊಸ್ಲೊವಾಕ್‌ನಲ್ಲಿ ರುಥೇನಿಯನ್ನರು, ರೊಮೇನಿಯನ್ನರು, ಸರ್ಬಿಯನ್ನರು ಮತ್ತು ಇಟಾಲಿಯನ್ನರು ಸ್ವಲ್ಪ ಪ್ರಮಾಣದಲ್ಲಿದ್ದಾರೆ.

ಚಿನ್ನ, ಬೆಳ್ಳಿ, ಕಬ್ಬಿಣ, ಸೀಸ, ಸತು ಹಾಗೂ ತಾಮ್ರ ಇಲ್ಲಿ ದೊರಕುವ ಮುಖ್ಯ ಖನಿಜಗಳು. ಕಲ್ಲಿದ್ದಲು ಅಲ್ಪ ಪ್ರಮಾಣದಲ್ಲಿ ದೊರಕುತ್ತದೆ. ವಿದ್ಯುಚ್ಛಕ್ತಿ ಹೇರಳವಾಗಿರುವುದರಿಂದ ಕಲ್ಲಿದ್ದಲಿನ ಕೊರತೆ ಕಾಣದು.

ಮುಖ್ಯವಾದ ಕೈಗಾರಿಕೆಗಳೆಂದರೆ ಮರದ ಸಾಮಾನುಗಳನ್ನು ತಯಾರಿಸುವುದು. ಕಾಗದ, ಕಬ್ಬಿಣ ಹಾಗೂ ಉಕ್ಕಿನ ತಯಾರಿಕೆ, ಪೆಟ್ರೋಲಿಯಂ ಶುದ್ಧೀಕರಣ, ರಾಸಾಯನಿಕ ಉತ್ಪನ್ನಗಳು, ಗಿರಣಿಗಳು, ಚರ್ಮ ಹದಮಾಡುವುದು.

ಆಸ್ಟ್ರಿಯ ಕಚ್ಚಾ ಪದಾರ್ಥಗಳನ್ನು ಹೆಚ್ಚಾಗಿ ರವಾನಿಸುವುದು. ಆಮದು ವಸ್ತುಗಳಲ್ಲಿ ಆಹಾರ, ಪಾನೀಯ ಹಾಗೂ ಯಂತ್ರೋಪಕರಣಗಳು ಮುಖ್ಯ.

ರಾಜಧಾನಿ ವಿಯನ್ನ. ರೈಲು ಹಾಗೂ ಇತರ ಸಂಚಾರಮಾರ್ಗಗಳ ಕೇಂದ್ರ, ಜರ್ಮನ್ ಮುಖ್ಯ ಭಾಷೆ (ಶೇ. 99). ಸ್ಲೋವೇನಿಯನ್, ಹಂಗೆರಿಯನ್ ಕ್ರೋವೆಷಿಯನ್ ಮತ್ತು ಬವೇರಿಯನ್‌ಗಳನ್ನಾಡುವವರು ಇದ್ದಾರೆ. ಇವರ ಸಂಖ್ಯೆ ಅಲ್ಪ.

ರೋಮನ್ ಕೆಥೊಲಿಕರೇ ಹೆಚ್ಚು (90%), ಉಳಿದವರು ಪ್ರಾಟೆಸ್ಟಂಟ್, ಯಹೂದಿ, ಗ್ರೀಕ್ ಮುಂತಾದವರು.

ರೈಲ್ವೆ ಕೇಂದ್ರ ಹಾಗೂ ಪ್ರಾಂತೀಯ ಹೆದ್ದಾರಿಗಳು ಸರ್ಕಾರದ ಆಡಳಿತಕ್ಕೆ ಒಳಪಟ್ಟಿವೆ. ಯೆನ್ನ-ಸಾಲ್ಜ್‌ಬರ್ಗ್ ಹೆದ್ದಾರಿ (418 ಕಿಮೀ) ಪಶ್ಚಿಮ ಜರ್ಮನಿಗೆ ಸಂಪರ್ಕ ಒದಗಿಸುತ್ತದೆ. ಡ್ಯಾನ್ಯೂಬ್ ನದಿ ಜಲಸಾರಿಗೆಗೆ ಮುಖ್ಯವಾಗಿದೆ. ರಷ್ಯದೊಡನೆ ಮಾಡಿಕೊಂಡ 1956ರ ಒಪ್ಪಂದದ ಪ್ರಕಾರ ಆಸ್ಟ್ರಿಯದ ಹಡಗುಗಳು ಕಪ್ಪು ಸಮುದ್ರದವರೆಗೂ ಪ್ರಯಾಣಮಾಡುತ್ತವೆ. ಗ್ರಾಜ್, ಇನ್ಸ್‌ಬ್ರುಕ್, ಕ್ಲಾಗೆನ್‌ಫರ್ಟ್, ಲಿಂಚ್, ಸಾಲ್ಜ್‌ಬರ್ಗ್ ಮತ್ತು ಸ್ಕ್ವೆಚಾದ್‌ಗಳಲ್ಲಿ (ವಿಯನ್ನದ ಹತ್ತಿರ)ವಿಮಾನ ನಿಲ್ದಾಣಗಳಿವೆ. ಆಸ್ಟ್ರಿಯ ದೇಶದ ಸಾರಿಗೆ ಹೆಚ್ಚಾಗಿ ಇಟಲಿಯ ಟ್ರೇಸ್ಟ್ ಬಂದರಿನ ಮುಖಾಂತರವೂ ಪಶ್ಚಿಮ ಜರ್ಮನಿಯ ಹ್ಯಾಂಬರ್ಗ್ ಮತ್ತು ಬ್ರೆಮನ್ ಬಂದರುಗಳ ಮುಖಾಂತರವೂ ನಡೆಯುವುದು. (ಎಂ.ಎಸ್.ಎಂ.)

**ಆಸ್ಟ್ರೇಲಿಯ:** ದಕ್ಷಿಣಾರ್ಧಗೋಳದಲ್ಲಿರುವ ಪ್ರಪಂಚದ ಅತ್ಯಂತ ಚಿಕ್ಕ ಭೂ ಖಂಡ. ಸುತ್ತಲೂ ಸಾಗರದಿಂದ ಆವೃತವಾಗಿದ್ದು ಇಡೀ ಖಂಡವೇ ಒಂದು ಬೃಹತ್‌ದ್ವೀಪ. ಆಸ್ಟ್ರೇಲಿಯ ಎಂಬ ಪದ ದಕ್ಷಿಣ ಎಂದು ಅರ್ಥ ಕೊಡುವ ಆಸ್ಟ್ರಿಲ್ ಎಂಬುದರಿಂದ ಬಳಕೆಗೆ ಬಂದಿದೆ. ಅಂದರೆ ಇದು ದಕ್ಷಿಣದ ಭೂಖಂಡವೆಂದರ್ಥ. ಈ ಖಂಡ $10^0.41'$ ದ. ಅಕ್ಷಾಂಶದಿಂದ $43^0.39'$ ದಕ್ಷಿಣ ಅಕ್ಷಾಂಶದ ವರೆಗೆ ಹಾಗೂ ರೇಖಾಂಶಿಕವಾಗಿ $113^0.9'$ ಪೂರ್ವದಿಂದ $153^0.39'$ ಪೂ. ದವರೆಗೆ ವಿಸ್ತರಿಸಿದೆ. ವಿಸ್ತೀರ್ಣ 76.82 ಲಕ್ಷ ಚ.ಕಿಮೀ. ಇದು ಹಿಂದೂ ಮಹಾಸಾಗರ ಹಾಗು ಪೆಸಿಫಿಕ್ ಸಾಗರಗಳ ನಡುವೆ ಇದೆ. ಅಂದರೆ ಇದರ ವಿಸ್ತಾರ ಅಮೆರಿಕ ಸಂಯುಕ್ತ ಸಂಸ್ಥಾನದಷ್ಟಾಗುತ್ತದೆ. ಸಮುದ್ರತೀರ 19530 ಕಿಮೀ. ನಿಸ್ಸಂದೇಹವಾಗಿ ಇದೊಂದು ಅಡಕವಾದ ಭೂಭಾಗ. ಇದು ಇದರ ವೈಶಿಷ್ಟ್ಯ, ಮೇಲ್ಮೈಲಕ್ಷಣ ಮತ್ತು ಅಕ್ಷಾಂಶರೀತ್ಯಾ ಇದರ ಸ್ಥಾನ, ಇವೆಲ್ಲ ಇದರ ವಾಯುಗುಣವನ್ನು ನಿಯಂತ್ರಿಸುತ್ತವೆ. ಈ ಖಂಡದ ಭೌಗೋಳಿಕ ಲಕ್ಷಣ ನಿರ್ಣಯವಾಗಿರುವುದು ಈ ಅಂಶಗಳಿಂದ.

ಬ್ಲೂ ಮೌಂಟನ್

ರಾಜಕೀಯ ವಿಭಾಗಗಳು : ಆಡಳಿತದ ದೃಷ್ಟಿಯಿಂದ ಆಸ್ಟ್ರೇಲಿಯ ದೇಶವನ್ನು 7 ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ. ಇವುಗಳೆಂದರೆ : 1 ಪಶ್ಚಿಮ ಆಸ್ಟ್ರೇಲಿಯ, 2. ಉತ್ತರ ಆಸ್ಟ್ರೇಲಿಯ, 3. ದಕ್ಷಿಣ ಆಸ್ಟ್ರೇಲಿಯ, 4. ಕ್ವೀನ್ಸ್‌ಲೆಂಡ್, 5. ನ್ಯೂ ಸೌತ್ ವೇಲ್ಸ್, 6. ವಿಕ್ಟೋರಿಯ, 7. ಟಾಸ್ಮೇನಿಯ ದ್ವೀಪ. ಆಸ್ಟ್ರೇಲಿಯ ದೇಶಕ್ಕೆ ಸೇರಿರದ ಈ ಖಂಡದ ಇತರ ಭಾಗಗಳೆಂದರೆ ಈ ಖಂಡದ ಹೊರಗಡೆ ಇರುವ ಪಾಪುವನ್ಯೂಗಿನಿ, ಪೆಸಿಫಿಕ್ ಮಹಾಸಾಗರದಲ್ಲಿರುವ ನಾರ್‌ಫೋಕ್ ದ್ವೀಪ, ಹಿಂದೂಮಹಾಸಾಗರದ ಕೋಕೋಸ್ (ಕೀಲಿಂಗ್) ದ್ವೀಪಗಳು ಮತ್ತು ಕ್ರಿಸ್ಮಸ್ ದ್ವೀಪ ಮತ್ತು ಆಸ್ಟ್ರೇಲಿಯದ ಅಂಟಾರ್ಕ್‌ಟಿಕ್ ಭಾಗ ಮೊದಲಾದವು.

ಭೂಸ್ವರೂಪ : ಆಸ್ಟ್ರೇಲಿಯ ಮೂಲತಃ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದ್ದು ಅತ್ಯಂತ ಪುರಾತನವಾದುದು. ಇದನ್ನು ಭೂಸ್ವರೂಪದ ಆಧಾರದಿಂದ ಮೂರು ಭಾಗಗಳಾಗಿ ವಿಂಗಡಿಸಬಹುದು. ಇವುಗಳೆಂದರೆ: 1. ಪೂರ್ವದ ಉನ್ನತ ಪ್ರದೇಶಗಳು, 2. ಮಧ್ಯದ ತಗ್ಗು ಮೈದಾನ 3. ಪಶ್ಚಿಮದ ಪ್ರಸ್ಥಭೂಮಿ.

1. ಪೂರ್ವದ ಉನ್ನತ ಪ್ರದೇಶ: ಈ ಖಂಡದ ಪೂರ್ವದಲ್ಲಿ ಉತ್ತರದ ಯಾರ್ಕ್ ಭೂಶಿರದಿಂದ ದಕ್ಷಿಣದಲ್ಲಿನ ಮರ್ರೆ ನದಿಯ ಉಗಮಸ್ಥಾನದವರೆಗೂ ಹರಡಿವೆ. ಈ ಪರ್ವತ ಭಾಗವೇ ಗ್ರೇಟ್ ಡಿವೈಡಿಂಗ್ ರೇಂಜ್. ಇದರಲ್ಲಿ ಕೊಸಿಯುಸ್ಕೊ (2230 ಮೀ) ಅತ್ಯಂತ ಎತ್ತರ ಶಿಖರ. ಇದು ಆಸ್ಟ್ರೇಲಿಯ ದೇಶದ ಅತ್ಯುನ್ನತ ಶಿಖರ. ಭೂವಿಜ್ಞಾನದ ದೃಷ್ಟಿಯಿಂದ ಈ ಪರ್ವತಗಳು ಪ್ರಿ-ಕೇಂಬ್ರಿಯನ್‌ನಿಂದ ಕಾರ್ಬೋನಿಫೆರಸ್‌ವರೆಗಿನ ಕಾಲದ ವಿವಿಧ ಶಿಲೆಗಳಿಂದ ಉಂಟಾಗಿವೆ; ಅವುಗಳ ಪಕ್ಕದಲ್ಲಿ ಈಚಿನ ಭೂನಿಕ್ಷೇಪಗಳಿವೆ. ಮರ್ರೆ-ಡಾರ್ಲಿಂಗ್ ನದಿಗಳ ಉಪನದಿಗಳ ಉಗಮ ಗ್ರೇಟ್ ಡಿವೈಡಿಂಗ್ ರೇಂಜ್‌ನಲ್ಲಿ. ಅವು ಪ್ರಧಾನ ನದಿಯನ್ನು ಸಮಕೋನದಲ್ಲಿ ಸೇರಿಕೊಳ್ಳುತ್ತವೆ. ಮರ್ರೆ ನದಿ ಮೆಲ್ಬೋರ್ನ್ ತಗ್ಗು ಬಯಲಿನ ಮುಖಾಂತರ ಹರಿದು, ಟಾಸ್ಮೇನಿಯ ಜಲಸಂಧಿಯನ್ನು ತಲಪುತ್ತದೆ. ಪೂರ್ವದ ತೀರಪ್ರದೇಶದ ಆಚೆ ದಕ್ಷಿಣೋತ್ತರವಾಗಿ ಹಬ್ಬಿದ ಹವಳದ್ವೀಪ ಸಮುದಾಯಗಳಿವೆ. ಇವನ್ನು ದಿ ಗ್ರೇಟ್ ಬ್ಯಾರಿಯರ್ ರೀಫ್ ಎಂದು ಕರೆಯುತ್ತಾರೆ. ಇವು ಸಮುದ್ರತೀರಕ್ಕೆ 16 ಕಿಮೀ- 241 ಕಿಮೀ ಸಮಾನಾಂತರದಲ್ಲಿ 2011 ಕಿಮೀ ಉದ್ದ ಹರಡಿವೆ.




2. ಮಧ್ಯದ ತಗ್ಗು ಬಯಲುಗಳು: ಉತ್ತರದ ಕಾರ್ಪೆಂಟೇರಿಯ ಕೊಲ್ಲಿಯಿಂದ ದಕ್ಷಿಣದ ತೀರದವರೆಗೂ ಈ ಮೈದಾನ ಕಂಡುಬರುವುದು. ಉತ್ತರದ ಬರ್ಕ್‌ಲಿ ಡೌನ್ಸ್, ಗ್ರೇ ಮತ್ತು ಫ್ಲ್ಯಾಂಡರ್ ಬೆಟ್ಟ ಸಾಲುಗಳ ವಿನಾ ಉಳಿದ ತಗ್ಗು ಬಯಲು ಪರ್ಮಿಯನ್ ಶಿಲಾಸ್ತರಗಳಿಂದ ಕೂಡಿದೆ. ಈ ರೀತಿಯ ವೈವಿಧ್ಯಪೂರ್ಣ ಸಂಚಯನಗಳು ಗ್ರೇಟ್ ಡಿವೈಡಿಂಗ್ ರೇಂಜ್‌ನ ಪೂರ್ವ ಪಾರ್ಶ್ವದಲ್ಲಿರುವ ಮರಳುಶಿಲೆ, ಜೇಡಿಪದರಗಲ್ಲು ಮತ್ತು ಕಲ್ಲಿದ್ದಲಿನ ಸ್ತರಪದರಗಳನ್ನು ನಿರ್ಮಿಸಿವೆ. ಭೂರಚನಾಶಾಸ್ತ್ರ ದೃಷ್ಟಿಯಿಂದ ಇಲ್ಲಿನ ಭೂರಚನೆ ಏಕ ರೀತಿಯ ಭೂಲಕ್ಷಣಗಳನ್ನು ಹೊಂದಿದೆ.

ಈ ಮೈದಾನ ಆಂತರಿಕ ಜಲವ್ಯವಸ್ಥೆಯಿಂದ ಕೂಡಿದೆ. ಮೈದಾನದ ನಡುವೆ ಇರುವ ಐರ್ ಸರೋವರದ ಕಡೆಗೆ ಈ ಮೈದಾನದ ಎಲ್ಲ ನದಿಗಳೂ ಹರಿಯುತ್ತವೆ. ಗಾರ್ಡ್‌ನರ್ ಸರೋವರ ದಕ್ಷಿಣದಲ್ಲಿದ್ದು ಮರುಭೂಮಿ ಪ್ರಧಾನ ಪ್ರದೇಶದಲ್ಲಿ ಜೌಗು ಭಾಗಗಳನ್ನು ನಿರ್ಮಿಸಿದೆ. ಈ ಭಾಗಗಳನ್ನು 1. ಮರ್ರೆ-ಡಾರ್ಲಿಂಗ್ ಮೈದಾನ; 2. ಐರ್ ಸರೋವರದ ಮೈದಾನ; 3. ಕಾರ್ಪೆಂಟೇರಿಯ ಪ್ರದೇಶ ಎಂದು ಮೂರು ಭಾಗ ಮಾಡಬಹುದು.

3. ಪಶ್ಚಿಮದ ಪ್ರಸ್ಥಭೂಮಿ: ಇದು ಮಧ್ಯ ಆಸ್ಟ್ರೇಲಿಯದಲ್ಲಿನ ಕಾರ್ಪೆಂಟೇರಿಯ ಕೊಲ್ಲಿಯಿಂದ ಆನ್‌ಸ್ಲೊ, ಪರ್ಥ್ ಮತ್ತು ಆಲ್ಬೆನಿಗಳವರೆಗೆ ಹರಡಿರುವ ತಗ್ಗಿನ, ಇಕ್ಕಟ್ಟಾದ ತೀರಪ್ರದೇಶ ಪೂರ್ವಕ್ಕೆ ಇರುವ ಪೀಠಭೂಮಿ. ಗ್ರೇಟ್ ಸ್ಯಾಂಡಿ ಡೆಸರ್ಟ್, ಗಿಬ್ಸನ್ ಮತ್ತು ವಿಕ್ಟೋರಿಯ ಮರುಭೂಮಿಗಳನ್ನು ಹೊಂದಿದೆ. ಈ ಭೂಮಿಯು ಭಾರತ ಮತ್ತು ಆಫ್ರಿಕಗಳ ಪೀಠಭೂಮಿಗಳಷ್ಟೇ ಹಳೆಯದು. ಇದು ಮತ್ತು ಆಫ್ರಿಕದಲ್ಲಿನ ಸಹರ

ಮರುಭೂಮಿ ಅವಳಿಜವಳಿಗಳಂತಿವೆ. ಕಾರ್ಬಾನಿಫೆರಸ್ ಯುಗಕ್ಕಿಂತ ಹಿಂದೆ, ಆಸ್ಟ್ರೇಲಿಯದ ಭೂಭಾಗ ದಕ್ಷಿಣದ ಅಂಟಾರ್ಟಿಕದ ಭೂಭಾಗದೊಂದಿಗೂ ವಾಯವ್ಯದಲ್ಲಿ ಭಾರತದ ದಖನ್ ಪೀಠಭೂಮಿಯೊಂದಿಗೂ ಭೂಸಂಪರ್ಕ ಹೊಂದಿತ್ತು. ಈ ಯುಗದ ಅಂತ್ಯಕಾಲದಲ್ಲಿ ಈ ಅಖಂಡ ಭೂಭಾಗ ಒಡೆದು ಬೇರ್ಪಟ್ಟಿತು. ಕೆಲವು ಭಾಗಗಳು ಸಮುದ್ರದಲ್ಲಿ ಮುಳುಗಿ ಈಗಿರುವಂತೆ ದ್ವೀಪಗಳು ನಿರ್ಮಿತವಾದುವು. ಮೊತ್ತಮೊದಲು ಆಸ್ಟ್ರೇಲಿಯ ಪ್ರತ್ಯೇಕ ದ್ವೀಪವಾಯಿತು. ಈ ಪ್ರತ್ಯೇಕತೆಯ ಪರಿಣಾಮವಾಗಿ ಆಸ್ಟ್ರೇಲಿಯದ ಪ್ರಾಣಿ ಮತ್ತು ಸಸ್ಯವರ್ಗಗಳು ತಮ್ಮವೇ ಆದ ವೈಶಿಷ್ಟ್ಯವನ್ನು ಹೊಂದಿವೆ. ತೃತೀಯ ಭೂಯುಗದಲ್ಲಿ ಆದ ಬದಲಾವಣೆಗಳನ್ನು ಯೂಕ್ಲ ಜಲಾನಯನ ಪ್ರದೇಶದಲ್ಲಿ ಕಾಣಬಹುದು. ಅಲ್ಲಿನ ನೆಲ ಸುಣ್ಣಕಲ್ಲುಮಯವಾಗಿರುವುದರಿಂದ ಸರಂಧ್ರವಾಗಿದೆ ; ಮಳೆ ಬಿದ್ದ ಕೂಡಲೆ ನೀರನ್ನು ಹೀರಿಬಿಡುತ್ತದೆ. ತಗ್ಗುಪ್ರದೇಶಗಳಲ್ಲಿ ನೆಲದೊಳಗೆ ನೀರು ನಿಂತಿರುತ್ತದೆ. ಇಂಥ ಭೂಮ್ಯಂತರ್ಗತ ಜಲಪ್ರದೇಶಗಳನ್ನು ವಾಯವ್ಯದ ಮರುಭೂಮಿಯಲ್ಲೂ ದಕ್ಷಿಣದ ಯೂಕ್ಲ ತಗ್ಗುಭೂಭಾಗದಲ್ಲೂ ಕಾಣಬಹುದು.

ಗ್ರೇಟ್ ಬ್ಯಾರಿಯರ್ ರೀಫ್

ನದಿಗಳು ಮತ್ತು ಸರೋವರಗಳು: ಇಲ್ಲಿನ ಅನೇಕ ನದಿಗಳು ವೇಗವಾಗಿ ಹರಿಯುವ ಚಿಕ್ಕ ನದಿಗಳು. ಹಾಕ್ಸ್‌ಬರಿ, ಫಿಟ್ಜ್ ರಾಯ್, ಬರ್ಡೆಕಿನ್ ನದಿಗಳು ಪೂರ್ವದ ಪರ್ವತಪ್ರಾಂತ್ಯದಿಂದ ಪೂರ್ವದ ಕಡೆಗೆ ಹರಿದು, ಪೆಸಿಫಿಕ್ ಸಾಗರವನ್ನು ಸೇರುತ್ತವೆ. ಫ್ಲಿಂಡರ್ಸ್ ಮತ್ತು ರೋವರ್ ನದಿಗಳು ಉತ್ತರಕ್ಕೆ ಹರಿದು ಕಾರ್ಪೆಂಟೇರಿಯ ಕೊಲ್ಲಿಯನ್ನು ಸೇರುತ್ತವೆ. ಪಶ್ಚಿಮದ ಕಡೆ ಹರಿದು, ಹಿಂದೂ ಮಹಾಸಾಗರವನ್ನು ಸೇರುವ ನದಿಗಳಲ್ಲಿ ಮರ್ಚಿಸನ್, ಫಿಟ್ಜ್‌ರಾಯ್ ಮತ್ತು ವಿಕ್ಟೋರಿಯಗಳು ಮುಖ್ಯವಾದುವು.

ಈ ಖಂಡದ ಮುಖ್ಯನದಿ ಮರ್ರೆ ಇದು ಅಲೆಗ್ಸಾಂಡ್ರಿನ್ ಸರೋವರ ಎನ್ನುವ ಆಳವಿಲ್ಲದ ಜೌಗುತಗ್ಗಿನ ಮುಖಾಂತರ ಹರಿದು, ಎನ್‌ಕೌಂಟರ್ ಕೊಲ್ಲಿಯನ್ನು ಸೇರುತ್ತದೆ. ಡಾರ್ಲಿಂಗ್ ಮತ್ತು ಮರ್ರುಂಬಿಡ್ಜೀ– ಈ ನದಿಯ ಮುಖ್ಯ ಉಪನದಿಗಳು. ವರ್ಷದಲ್ಲಿ ಕೆಲವು ಋತುಗಳಲ್ಲಿ ಮಾತ್ರ ಈ ನದಿಗಳಲ್ಲಿ ನಾವೆಯ ಸಂಚಾರ ಸಾಧ್ಯ.

ಇಲ್ಲಿನ ಸರೋವರಗಳು ಬಹಳ ಚಿಕ್ಕವು. ಎಲ್ಲ ಉಪ್ಪುನೀರಿನವು. ಐರ್, ಟಾರೆನ್ಸ್, ಗೇರ್ಡ್‌ನರ್ ಸರೋವರಗಳು ಮುಖ್ಯವಾದುವು. ಐರ್ ಈ ಸರೋವರಗಳಲ್ಲಿ ಅತಿದೊಡ್ಡದು. ಐರ್‌ಈ ಖಂಡದ ನಡುವೆ ಅತಿತಗ್ಗಿನಲ್ಲಿದೆ. ಇದರ ಪಶ್ಚಿಮದಲ್ಲಿ ಉಲೂರು ಅಥವಾ ಆಯರ್ ಶಿಲೆಯಿರುವುದು. ಇದರ ಸುತ್ತಳತೆ 6 ಕಿಮೀ. ಎತ್ತರ 348 ಮೀ. ಇದನ್ನು ಪ್ರಪಂಚದ ಅತಿದೊಡ್ಡ ಏಕ ಶಿಲೆಯೆಂದು ಕರೆಯಲಾಗಿದೆ.

ವಾಯುಗುಣ: ಖಂಡದ ಮಧ್ಯಭಾಗದಲ್ಲಿ ಪೂರ್ವ ಪಶ್ಚಿಮವಾಗಿ ಮಕರ ಸಂಕ್ರಾಂತಿವೃತ್ತ ಹಾದುಹೋಗುತ್ತದೆ. ಇದರ ಉತ್ತರಕ್ಕಿರುವ ಪ್ರದೇಶ ಉಷ್ಣವಲಯದ ವಾಯುಗುಣವನ್ನೂ ಇದರ ಎರಡರಷ್ಟು ವಿಸ್ತಾರವಾಗಿರುವ ದಕ್ಷಿಣ ಪ್ರದೇಶ ಸಮಶೀತೋಷ್ಣ ವಾಯುಗುಣವನ್ನೂ ಹೊಂದಿವೆ.

ಮೆಡಿಟರೇನಿಯನ್ ವಾಯುಗುಣ ಹೊಂದಿದ ವಿಕ್ಟೋರಿಯ, ಮೆಲ್ಬರ್ನ್‌ಗಳಿಂದ ಅತ್ಯುಷ್ಣ ಪ್ರದೇಶವಾದ ಕ್ವೀನ್ಸ್‌ಲೆಂಡ್‌ನವರೆಗೂ ಇಲ್ಲಿನ ವಾಯುಗುಣ ಬದಲಾಗುತ್ತ ಹೋಗುತ್ತದೆ. ಶೀತೋಷ್ಣಗಳ ವೈಪರೀತ್ಯ ಕಂಡುಬರುವುದು ಆಲಿಸ್ ಸ್ಪ್ರಿಂಗ್ಸ್ ಪ್ರದೇಶದಲ್ಲಿ: ಬೇಸಗೆಯಲ್ಲಿ $36^0$ ಸೆ ನಷ್ಟು ಅಧಿಕ ಮತ್ತು ಚಳಿಗಾಲದಲ್ಲಿ $-6^0$ ಸೆ ನಷ್ಟು ಕಡಿಮೆ ಉಷ್ಣತೆ ಇರುತ್ತದೆ. ಉತ್ತರದ ಕೆಲವು ಕಡೆಗಳಲ್ಲಿ ಬೇಸಗೆಯಲ್ಲಿ ಹಾಗೂ ದಕ್ಷಿಣತೀರದ ಕೆಲವು ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಮಳೆ ಬೀಳುತ್ತದೆ. ದಕ್ಷಿಣ ತೀರಪ್ರದೇಶದ ವಾಯುಗುಣ ಆಲ್ಜೀರಿಯ, ಸ್ಪೇನ್, ಕ್ಯಾಲಿಫೋರ್ನಿಯಗಳ ವಾಯುಗುಣದಂತೆ; ಅಂದರೆ ಹೆಚ್ಚು ಶಾಖವಿರುವ ಮಳೆಯಿಲ್ಲದ ಬೇಸಗೆ, ಚಳಿ ಕಡಿಮೆಯಾದ ಮಳೆ ಬೀಳುವ ಚಳಿಗಾಲ.

ಟಾಸ್ಮೇನಿಯದ ವಾಯುಗುಣ: ಪ್ರಧಾನವಾಗಿ ವರ್ಷಪೂರ್ತಿ ಪಶ್ಚಿಮದಿಂದ ಬೀಸುವ ವಾಣಿಜ್ಯ ಪ್ರತಿಮಾರುತಗಳನ್ನವಲಂಬಿಸಿದೆ. ಮೆಲ್ಬರ್ನ್ ಸುತ್ತಮುತ್ತಣ ಪ್ರದೇಶ ಪೂರ್ತಿ ಈ ಮಾರುತದ ಪ್ರಭಾವಕ್ಕೊಳಪಟ್ಟಿದೆ. ಸಿಡ್ನಿ ಬಳಿಯ ತೀರದಲ್ಲಿ ಸಾಕಷ್ಟು ಮಳೆ ಬೀಳುತ್ತದೆ. ಪಶ್ಚಿಮ ಆಸ್ಟ್ರೇಲಿಯದ ಮಧ್ಯಭಾಗದ ಮರುಭೂಮಿಯನ್ನು ತಲಪುವ ಮಾರುತಗಳು ಅರೆ ಉಷ್ಣವಲಯದ ಹೆಚ್ಚು ಒತ್ತಡವಿರುವ ಕಡೆಗೆ ಬರುವುದರಿಂದ ಆಗಾಗ್ಗೆ ಬಿರುಸಾಗುತ್ತವೆ. ಆದರೆ ಅವುಗಳಲ್ಲಿ ಜಲಾಂಶವಿರುವುದಿಲ್ಲ.

ಸ್ವಾಭಾವಿಕ ಸಸ್ಯವರ್ಗ: ಆಸ್ಟ್ರೇಲಿಯದ ಶೇ. 1 ಭಾಗಕ್ಕಿಂತಲೂ ಕಡಿಮೆ ಪ್ರದೇಶದಲ್ಲಿ, ಅದರಲ್ಲೂ ಮರುಭೂಮಿಯ ಅಂಚುಗಳಲ್ಲಿ ಎತ್ತರವಾದ ಹುಲ್ಲುಗಾವಲುಗಳಿವೆ. ಈ ಹುಲ್ಲನ್ನು ಕಾಂಗರೂ ಹುಲ್ಲು ಎಂದು ಕರೆಯುತ್ತಾರೆ. ತೀರಪ್ರದೇಶಗಳಲ್ಲಿ ದಟ್ಟವಾದ ಕಾಡುಗಳಿವೆ. ಕ್ವೀನ್ಸ್‌ಲೆಂಡ್‌ನ ಸದಾ ಹಸುರಾಗಿರುವ ಮರಗಳು ಲಿಯಾನಾಸ್ ಮತ್ತು ಜರ್ರಿ ಮರಗಳನ್ನು ಒಳಗೊಂಡಿವೆ. ದಕ್ಷಿಣದ ಕಡೆಗೆ ಹೋದ ಹಾಗೆಲ್ಲ ಇವು ಸಮಶೀತೋಷ್ಣವಲಯದ ಕಾಡುಗಳಾಗಿ ಪರಿವರ್ತಿತವಾಗುತ್ತವೆ. ಈ ಕಾಡುಗಳಲ್ಲಿ ಮರಗಳ ಮಧ್ಯೆ ಬೆಳೆಯುವ ಕುರುಚಲು ಮುಂತಾದ ಸಸ್ಯಗಳಿಲ್ಲ.

ಇಲ್ಲೆಲ್ಲ ನೀಲಗಿರಿ ಮರಗಳು ಭವ್ಯವಾದುವು. ಇವುಗಳಲ್ಲಿ 600 ವಿಧಗಳಿವೆ ಕೆಲವು ಸ್ಥಳಗಳಲ್ಲಿ ಇವು 90 ಮೀ ಎತ್ತರವಾಗಿ ಬೆಳೆದಿದೆ. ಇದಕ್ಕಿಂತಲೂ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಅಕೇಸಿಯ, ಮುಲ್ಗ್, ಮಲ್ಲೀ ಎನ್ನುವ, ಹೆಚ್ಚು ಬೆಳವಣಿಗೆಯಿಲ್ಲದ ನೀಲಗಿರಿ ಮರಗಳು ಕಾಣುತ್ತವೆ. ಮರುಭೂಮಿಯ ಅಂಚುಗಳಲ್ಲಿನ ಶುಷ್ಕಭೂಮಿಯಲ್ಲಿ ಬೆಳೆಯುವ ಸಸ್ಯಗಳು ಅಂತರ್ಜಲವನ್ನು ಹೀರಿ ಜೀವಿಸುತ್ತವೆ.

ಪ್ರಾಣಿವರ್ಗ : ಈ ಖಂಡದಲ್ಲಿ ಬೇರೆಲ್ಲೂ ಇಲ್ಲದ ವಿಚಿತ್ರ ಪ್ರಾಣಿಗಳನ್ನು ಕಾಣಬಹುದು. ಸರೀಸೃಪಗಳು ಮತ್ತು ವಿಷಪೂರಿತ ಹಾವುಗಳು ಸಾಮಾನ್ಯವಾಗಿವೆ. ಪ್ಲಾಟಿಪಸ್ ಎನ್ನುವ ಸ್ತನಿ ಮೊಟ್ಟೆಗಳನ್ನಿಡುತ್ತದೆ ಮತ್ತು ಮರಿಗಳಿಗೆ ಮೊಲೆಯೂಣಿಸುತ್ತದೆ. ಇದರ ಮೂತಿ ಬಾತಿನ ಕೊಕ್ಕಿನಂತಿದೆ. ಮೈತುಂಬ ತುಪ್ಪಳ ಚರ್ಮದ ಹೊದಿಕೆ ಇದೆ. ಮಾರ್ಸ್ಯೂಪಿಯಲ್ ವರ್ಗದ ಸ್ತನಿಗಳ ಅರೆಬೆಳೆದ ಮರಿಗಳನ್ನು ಹಡೆದು ಅನಂತರ ಅವನ್ನು ತನ್ನ ಹೊಟ್ಟೆಯ ಹೊರ ಚೀಲದಲ್ಲಿಟ್ಟುಕೊಂಡು ಬೆಳೆಸುತ್ತದೆ. ಕಾಂಗರೂ, ಒಪ್ಪೋಸಂ ಇದೇ ರೀತಿಯ ಪ್ರಾಣಿಗಳು. ಕಾಂಗರೂ ಗಂಟೆಗೆ 36 ಕಿಮೀ ವೇಗದಲ್ಲಿ ಓಡುತ್ತದೆ. ಎಮೂ ಎಂಬುದು ಇಲ್ಲಿನ ಪಕ್ಷಿಗಳಲ್ಲೆಲ್ಲ ದೊಡ್ಡದಾದುದು. ಲೈರ್ ಎಂಬ ನವಿಲಿನಂತಿರುವ ಸೊಗಸಾದ ಪಕ್ಷಿ ವಿವಿಧ ಧ್ವನಿಗಳನ್ನು ಬಹಳ ಚೆನ್ನಾಗಿ ಅನುಕರಿಸುತ್ತದೆ. ಡಿಂಗೊ ಎಂಬ ಕಾಡು ನಾಯಿ ನೋಡಲು ತೋಳದಂತಿದೆ. ವಾಲ್ಲಬಿ, ನೋಣಗಳನ್ನು ತಿನ್ನುವ ಎಕಿಡ್ನ, ಮರ ಹತ್ತುವ ಸಣ್ಣ ಆಕಾರದ ಕರಡಿ ಕೋಲ– ಇತ್ಯಾದಿ ಪ್ರಾಣಿಗಳು ಆಸ್ಟ್ರೇಲಿಯದ ರಕ್ಷಿತ ಕಾಡುಗಳಲ್ಲಿ ವಾಸಿಸುತ್ತವೆ. ಗಿಣಿಗಳು, ಉಷ್ಟ್ರಪಕ್ಷಿ, ಕ್ಯಾಸ್ಸೋವರಿ ಮತ್ತು ಇತರ ಬಗೆಯ ಪಕ್ಷಿಗಳೂ ಇಲ್ಲಿವೆ.

ವ್ಯವಸಾಯ: ಆಸ್ಟ್ರೇಲಿಯದಲ್ಲಿ ವ್ಯವಸಾಯಯೋಗ್ಯವಾದ ಭೂಮಿ ಬಹಳ ಕಡಿಮೆ. ಸಮುದ್ರತೀರ ಮತ್ತು ನದಿ ಮೈದಾನಗಳಲ್ಲಿ ಮಾತ್ರ ವ್ಯವಸಾಯವಿದೆ. ಖಂಡದಲ್ಲಿ ಬಿಳಿಯ ಜನ ಹೆಚ್ಚಾಗಿ ಇರುವುದರಿಂದ ಸಮಶೀತೋಷ್ಣವಲಯದ ಬೆಳೆಗಳು ಹೆಚ್ಚಾಗಿ ಅಭಿವೃದ್ಧಿ ಹೊಂದಿವೆ. ಮುಖ್ಯಬೆಳೆಗಳೆಂದರೆ ಗೋದಿ, ಓಟ್ಸ್, ಕಬ್ಬು, ಬಾರ್ಲಿ, ಜೋಳ, ಆಲೂಗೆಡ್ಡೆ, ದ್ರಾಕ್ಷಿ, ಬಾಳೆ, ಕಿತ್ತಳೆ ಮೊದಲಾದ ಹಣ್ಣುಗಳು.

ಆರ್ಟೀಸಿಯನ್ ಬಾವಿ ಪ್ರದೇಶ : ಇವನ್ನು ಬೇರೆ ಬೇರೆ ಗುಂಪುಗಳಾಗಿ ವಿಭಾಗಿಸಿದ್ದಾರೆ. ಮಧ್ಯದ ತಗ್ಗುಬಯಲುಗಳಲ್ಲಿರುವ ಗ್ರೇಟ್ ಆರ್ಟೀಸಿಯನ್ ಬಯಲು; ಮರ್ರೆ ಬಯಲು: ದಕ್ಷಿಣದಲ್ಲಿ ಯೂಕ್ಲ ಬಯಲು; ಪಶ್ಚಿಮದ ಪೀಠಭೂಮಿಯಲ್ಲಿ ಪರ್ತ್ ಬಯಲು, ವಾಯವ್ಯ ಬಯಲು, ಮರುಭೂಮಿ ಬಯಲುಗಳು–ಇವು ಮುಖ್ಯವಾದ ಆರ್ಟೀಸಿಯನ್ ಬಾವಿ ಗುಂಪುಗಳು. ಈ ಬಾವಿಗಳು ನೀರಿಲ್ಲದ ಪ್ರದೇಶಗಳನ್ನು ಫಲವತ್ತಾದ ಭೂಮಿಯನ್ನಾಗಿ ಮಾಡಿ, ದನಕರುಗಳಿಗೆ ಮತ್ತು ವ್ಯವಸಾಯಕ್ಕೆ ನೀರನ್ನು ಒದಗಿಸುತ್ತವೆ.

ಪಶುಪಾಲನೆ: ಆಸ್ಟ್ರೇಲಿಯದಲ್ಲಿ ಪಶುಪಾಲನೆಯೇ ಜನರ ಮುಖ್ಯ ಕಸುಬು. ಸಾಮಾನ್ಯ ಮಳೆ, ಅತಿಯಲ್ಲದ ಉಷ್ಣಾಂಶ, ವಿಶಾಲವಾದ ಹುಲ್ಲುಗಾವಲು–ಇಲ್ಲಿನ ಪಶುಪಾಲನೆಗೆ ಸಹಾಯಕವಾದ ಮುಖ್ಯ ಅನುಕೂಲಗಳು. ಮುಖ್ಯವಾಗಿ ಕುರಿ, ದನ ಸಾಕುತ್ತಾರೆ. ಕುರಿ ಸಾಕುವಿಕೆಗೆ ಈ ಖಂಡದಲ್ಲಿರವಷ್ಟು ವಾಯುಗುಣದ ಅನುಕೂಲ ಮತ್ತೆಲ್ಲಿಯೂ ಇಲ್ಲ. ಗ್ರೇಟ್ ಡಿವೈಡಿಂಗ್ ರೇಂಜ್‌ನ ಪಶ್ಚಿಮದುದ್ದಕ್ಕೂ ವಿಶಾಲ ಬಯಲುಗಳಲ್ಲಿ ಅಸಂಖ್ಯಾತ ಕುರಿಗಳನ್ನು ಉಣ್ಣೆ ಮತ್ತು ಮಾಂಸಕ್ಕಾಗಿ ಸಾಕುತ್ತಾರೆ. ಉತ್ತಮವಾದ ಉಣ್ಣೆ ಕೊಡುವ ಮೆರಿನೊ ಕುರಿ ಈ ಖಂಡದ ವಿಶೇಷ.

ಉತ್ತರದ ಮಳೆ ಪ್ರದೇಶಗಳು, ಪೂರ್ವದ ತೀರಪ್ರದೇಶಗಳಲ್ಲಿ ದನಕರುಗಳನ್ನು ಹೆಚ್ಚಾಗಿ ಸಾಕುತ್ತಾರೆ. ಇವನ್ನು ಹೆಚ್ಚಾಗಿ ಮಾಂಸಕ್ಕಾಗಿ ಸಾಕಿದರೂ ಹಾಲು, ಬೆಣ್ಣೆ, ಗಿಣ್ಣನ್ನೂ ತಯಾರಿಸುತ್ತಾರೆ. ಈ ಉತ್ಪನ್ನಗಳನ್ನು ಅಪಾರ ಪ್ರಮಾಣದಲ್ಲಿ ರಫ್ತು ಮಾಡುವರು.

ಖನಿಜಸಂಪತ್ತು: ಆಸ್ಟ್ರೇಲಿಯದ ಭೂರಚನೆಗೂ ಅದರ ಖನಿಜ ಸಂಪತ್ತಿಗೂ ಬಹು ಹತ್ತಿರದ ಸಂಬಂಧವಿದೆ. ಲೋಹ ಖನಿಜಗಳು ಅಂತರಾಗ್ನಿ ಶಿಲೆಗಳೊಂದಿಗೆ ಸಂಯೋಜಿತವಾಗಿ ಘನಾಕೃತಿಯಲ್ಲಿವೆ–ತವರ, ಟಂಗ್‌ಸ್ಟನ್, ಚಿನ್ನ, ತಾಮ್ರ, ಸೀಸ, ಸತು, ಬೆಳ್ಳಿ, ಆಂಟಿಮೊನಿ ಮತ್ತು ಪಾದರಸ ಇವುಗಳಲ್ಲಿ ಮುಖ್ಯವಾದುವು. ಶಿಲಾಪದರಗಳು ಶಿಥಿಲೀಕರಣ ಪ್ರಕ್ರಿಯೆಯ ಸಮಯದಲ್ಲಿ ಸ್ಫಟಿಕಾಕೃತಿ ಶಿಲೆಗಳಾಗಿ ನಿರ್ಮಾಣವಾದಾಗ ಶಿಲಾಹಂಚಿಕೆಯ ವ್ಯವಸ್ಥೆ ಏರುಪೇರಾಯಿತು. ಇದರಿಂದ ಅದಿರುನಿಕ್ಷೇಪಗಳ ವ್ಯಾಪ್ತಿಯನ್ನು ನಿಷ್ಕರ್ಷಿಸುವುದು ಕಷ್ಟವಾಯಿತು. ಆದಾಗ್ಯೂ ಗ್ರೇಟ್ ಆಸ್ಟ್ರೇಲಿಯನ್ ಷೀಲ್ಡ್ (ಪೀಠಭೂಮಿ ಪ್ರದೇಶ)ಲೋಹದ ಖನಿಜಗಳಿಂದ ಕೊಡಿದ್ದು ಸಂಪದ್ಭರಿತವಾಗಿದೆ. ಗ್ರೇಟ್ ಡಿವೈಡಿಂಗ್ ರೇಂಜ್ ಪ್ರದೇಶಕ್ಕೂ ಇದು ಅನ್ವಯಿಸುತ್ತದೆ.

ಪಶ್ಚಿಮ ಆಸ್ಟ್ರೇಲಿಯದಲ್ಲಿ ಅನೇಕ ಖನಿಜಗಳು ದೊರೆಯುತ್ತವೆ. ಇಲ್ಲಿ ಆರು ಸಮಾನಾಂತರ ವಲಯಗಳನ್ನು ಸುಲಭವಾಗಿ ಕಾಣಬಹುದು :

1. ಸಮುದ್ರತೀರದ ಬಳಿ ಇರುವ ಬೆಣಚುಗಲ್ಲಿನ ಪದರ ಶಿಲೆ, ನುಣುಪು ಶಿಲೆ, ಭಿನ್ನಸ್ತರ ಶಿಲೆಯ ವಲಯ. 2. ಗ್ರಾಫೈಟ್, ಕಲ್ನಾರು ಮತ್ತು ತವರಗಳನ್ನು ಹೊಂದಿರುವ ನುಣುಪುಶಿಲೆ ಮತ್ತು ನೈಸ್ ಶಿಲೆಗಳ ವಲಯ. 3. ಶುಷ್ಕ ಸ್ಫಟಿಕಾಕೃತಿಗಳು. 4. ಹೇರಳವಾಗಿ ಚಿನ್ನ ದೊರೆಯುವ ಸ್ಫಟಿಕಾಕೃತಿ ಶಿಲೆಗಳು. 5. ಅದುರಿನಿಂದ ಕೂಡಿರದ ಸ್ಫಟಿಕಾಕೃತಿ ಶಿಲೆಗಳ– ನೈಸ್. 6. ಚಿನ್ನದ ಅದಿರುಗಳಿರುವ ಸ್ಫಟಿಕಾಕೃತಿ ಶಿಲೆಗಳು.

ಆರನೆಯ ವಲಯ ಎಸ್ಪೆರಾನ್ಸಿನ ದಕ್ಷಿಣ ತೀರದಲ್ಲಿ ಪ್ರಾರಂಭವಾಗಿ ನಾರ್ಸ್‌ಮನ್ ಮತ್ತು ಕಾಲ್ಗೂರ್ಲಿ ಮುಖಾಂತರ ಲಿಯೋನಾರವನ್ನು ಹಾಯ್ದು ಉತ್ತರ ತೀರದ ಪಿಲ್‌ಬರವನ್ನು ತಲಪುತ್ತದೆ. ರೈಲುಮಾರ್ಗ ಇದರ ಪ್ರಾಮುಖ್ಯವನ್ನು ಒತ್ತಿ ಹೇಳುತ್ತದೆ. ನಾಲ್ಕನೆಯ ಚಿನ್ನದ ವಲಯ ಫಿಲಿಪ್ಸ್ ನದಿಯ ಹತ್ತಿರ ಪ್ರಾರಂಭವಾಗಿ ಸದರ್ನ್ ಕ್ರಾಸ್ ಮತ್ತು ಆಸ್ಟಿನ್ ಸರೋವರ ಪ್ರದೇಶವನ್ನೊಳಗೊಂಡು 240 ಕಿಮೀ ದೂರದಲ್ಲಿರುವ ಗ್ಯಾಸ್ಕಾಯಿನ್ ಮತ್ತು ಆಫ್ಷರ್ಟನ್ ನದಿಗಳವರೆಗೂ ವ್ಯಾಪಿಸಿದೆ.

ನ್ಯೂ ಸೌತ್‌ವೇಲ್ಸ್ ಮತ್ತು ಕ್ವೀನ್ಸ್‌ಲೆಂಡ್ ತಾಮ್ರಕ್ಕೆ ಪ್ರಸಿದ್ಧಿ ಪಡೆದಿವೆ. ಈ ಪ್ರದೇಶದಲ್ಲಿ ಮರಳುದಿಣ್ಣೆಗಳಿಲ್ಲ ; ಆದುದರಿಂದ ಗಣಿಗಳನ್ನು ಸುಲಭವಾಗಿ ತಲುಪಬಹುದು.

ಪೂರ್ವದ ಎತ್ತರ ಪ್ರದೇಶಗಳಲ್ಲಿ ತಾಮ್ರ ಮತ್ತು ತವರದ ನಿಕ್ಷೇಪಗಳು ಹೇರಳವಾಗಿವೆ. ಚಿಲ್ಲಾಂಗೊ, ಗೊಟಾಟ್, ಚಾರ್ಟರ್ಸ್ ಟವರ್ಸ್, ಮೌಂಟ್ ಮಾರ್ಗನ್ ಮತ್ತು ಜಿಪಿಕ್ ಇವೆಲ್ಲ ಕ್ವೀನ್ಸ್‌ಲೆಂಡಿನಲ್ಲಿವೆ. ನ್ಯೂ ಸೌತ್‌ವೇಲ್ಸ್‌ನಲ್ಲಿ ಗ್ರೇಟ್ ಡಿವೈಡಿಂಗ್ ರೇಂಜ್‌ನ ಪಶ್ಚಿಮಕ್ಕೆ ಅನೇಕ ಕಡೆಗಳಲ್ಲಿ ಚಿನ್ನ ದೊರೆಯುತ್ತದೆ. ವಿಕ್ಟೋರಿಯದಲ್ಲಿ ಬೆಲ್ಲಾರಟ್ ಮತ್ತು ಬೆಂಡಿಗೊಗಳಲ್ಲಿ ಚಿನ್ನದ ಗಣಿಗಳಿವೆ. ಟಾಸ್ಮೇನಿಯದಲ್ಲಿ ತವರ, ತಾಮ್ರ, ಮತ್ತು ಸತುವಿನ ಗಣಿಗಳಿವೆ.

ಆಸ್ಟ್ರೇಲಿಯದಲ್ಲಿ ದೊರೆಯುವ ಖನಿಜಗಳು:–ಕಲ್ಲಿದ್ದಲು, ಕಬ್ಬಿಣದ ಅದಿರು, ಸೀಸ, ಸತು, ತಾಮ್ರ, ಟೈಟೇನಿಯಂ, ತವರ, ಟಂಗ್‌ಸ್ಟನ್, ಚಿನ್ನ.

ಸಂಚಾರಮಾರ್ಗಗಳು : ಸಂಚಾರ ಮಾರ್ಗಗಳ ಹಂಚಿಕೆ ಖಂಡದ ಆಗ್ನೇಯ, ನೈರುತ್ಯ ಮತ್ತು ಈಶಾನ್ಯ ದಿಕ್ಕಿನಲ್ಲಿ ಒತ್ತಾಗಿರುವುದನ್ನು ಕಾಣಬಹುದು. ವಿಶಾಲ ಮರುಭೂಮಿ ಪ್ರದೇಶಗಳಲ್ಲಿ ಸಾಗಾಣಿಕೆ ಬಹಳ ಕಡಿಮೆ. ವಾಯುಸಂಚಾರ ಮಾತ್ರ ಹೆಚ್ಚಾಗಿದೆ.

ಆಸ್ಟ್ರೇಲಿಯ ಭೌಗೋಳಿಕವಾಗಿ ಹೆಚ್ಚು ವಿಸ್ತಾರವಾಗಿದ್ದು, ರೈಲು ಮಾರ್ಗಗಳು ಇದರ ಸಾರಿಗೆಯಲ್ಲಿ ಮುಖ್ಯವಾದವು. ಇದು ಸು. 40478 ಕಿಮೀ ಉದ್ದವಾದ ರೈಲುಮಾರ್ಗವನ್ನು ಹೊಂದಿದೆ. ದೇಶದ ಪೂರ್ವ – ಪಶ್ಚಿಮ ತೀರಗಳನ್ನು ಸಂಪರ್ಕಿಸುವ ಟ್ರಾನ್ಸ್ ಆಸ್ಟ್ರೇಲಿಯನ್ ರೈಲುಮಾರ್ಗ ಇದರಲ್ಲಿ ಮುಖ್ಯವಾದುದು.

ವಿದೇಶೀ ವ್ಯಾಪಾರದಲ್ಲಿ ಹಾಲಿನ ವಸ್ತುಗಳು –ಮುಖ್ಯವಾಗಿ ಬೆಣ್ಣೆ, ಗೋ ಮಾಂಸ, ಗೋದಿ, ಕಬ್ಬಿಣದ ಅದಿರು, ಕಲ್ಲಿದ್ದಲು, ಬಾಕ್ಸೈಟ್ ಹಾಗೂ ಉಣ್ಣೆ ಮೊದಲಾದವು.

ಆಮದು ವಸ್ತುಗಳು : ವಿಮಾನ, ಹಡಗು ಮತ್ತು ರೈಲ್ವೆ ಉಪಕರಣಗಳು, ಮೋಟಾರು ವಾಹನಗಳು, ಗ್ರಾಮೀಣ ಕೈಗಾರಿಕಾ ಉಪಕರಣಗಳು, ಕಟ್ಟಡ ನಿರ್ಮಾಣ ಉಪಕರಣಗಳು ಮೊದಲಾದವು.

ಬ್ರಿಟನ್ ಆಸ್ಟ್ರೇಲಿಯದ ಮುಖ್ಯ ವ್ಯಾಪಾರದ ಪಾಲುದಾರ ರಾಷ್ಟ್ರ ಅದು ಆಸ್ಟ್ರೇಲಿಯದ ಶೇ. 17 ಭಾಗ ರಫ್ತನ್ನು ಪಡೆದು, ಶೇ. 26 ಭಾಗ ಆಮದನ್ನು ಒದಗಿಸುತ್ತದೆ. ಆಸ್ಟ್ರೇಲಿಯ ಬ್ರಿಟನ್ನಿಗೆ ರಫ್ತುಮಾಡುವ ವಸ್ತುಗಳು, ಆಹಾರ, ಉಣ್ಣೆ, ಖನಿಜಗಳನ್ನು ಒಳಗೊಂಡಿವೆ. ಲೋಹಗಳಿಗೆ ಬದಲಾಗಿ ಯಂತ್ರಗಳು ಮತ್ತು ಮರಮುಟ್ಟುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಜಪಾನ್ ಮತ್ತು ಪಶ್ಚಿಮ ಜರ್ಮನಿಗಳೊಡನೆ ಆಸ್ಟ್ರೇಲಿಯದ ವ್ಯಾಪಾರ ಇತ್ತೀಚೆಗೆ ಹೆಚ್ಚಾಗುತ್ತಿದೆ. ಯುರೋಪ್ ವಾಣಿಜ್ಯಮಾರುಕಟ್ಟೆ ಆಸ್ಟ್ರೇಲಿಯವನ್ನು ದೂರವಿರಿಸಿದರೂ ಕಾಮನ್‌ವೆಲ್ತ್ ಸಂಬಂಧದಿಂದ ಹೆಚ್ಚಿನ ಅನುಕೂಲಗಳನ್ನು ಪಡೆದಿದೆ.

ಆಸ್ಟ್ರೇಲಿಯದ ಒಟ್ಟು ಜನಸಂಖ್ಯೆ 20,900,437 (2005) ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀಗೆ ಕೇವಲ 2.6 ಮಾತ್ರ. ದೇಶದ ಹೆಚ್ಚುಭಾಗ ಮರುಭೂಮಿ. ಇದರಿಂದ ಒಟ್ಟು ಜನಸಂಖ್ಯೆಯ ಶೇ. 90 ಭಾಗವು ಶೇ. 3 ಭೂಭಾಗದಲ್ಲಿ ಕೇಂದ್ರೀಕೃತವಾಗಿದೆ. ಆಸ್ಟ್ರೇಲಿಯದ ದೊಡ್ಡ ನಗರಗಳಲ್ಲಿ ಮುಖ್ಯವಾದುವು : ಕ್ಯಾನ್ಬೆರ ದೇಶದ ರಾಜಧಾನಿ. ಜನಸಂಖ್ಯೆ 3,32,798 (2000). ಸಿಡ್ನಿ 42,97,100 ಮೆಲ್ಬರ್ನ್, ಬ್ರಿಸ್ಬೇನ್, ಅಡಿಲೇಡ್, ಪರ್ತ್, ನ್ಯೂಕ್ಯಾಸಲ್, ವೊಲ್ಲೋನ್‌ಗಾಂಗ್, ಹೋಬರ್ಟ್ ಮತ್ತು ಗೀಲಾಂಗ್ ಇತರ ಮುಖ್ಯನಗರಗಳು.

ಆದಿವಾಸಿಗಳು : ಇವರು ಆಸ್ಟ್ರೇಲಿಯದ ಮೂಲನಿವಾಸಿಗಳಲ್ಲ. ಏಷ್ಯದವರಾಗಿದ್ದು ನೀರ್ಗಲ್ಲ ಯುಗ ಬಂದು ಭೂಮಿಯ ಉತ್ತರ ಭಾಗದ ನೀರೆಲ್ಲ ಘನೀಭವಿಸಿದ ಮೇಲೆ ದಕ್ಷಿಣ ಪ್ರದೇಶಗಳಿಗೆ ವಲಸೆ ಬಂದರು. ಆಗ ಏಷ್ಯದ ಆಗ್ನೇಯ ಭಾಗ ಆಸ್ಟ್ರೇಲಿಯದೊಂದಿಗೆ ಭೂಸಂಪರ್ಕ ಹೊಂದಿತ್ತು. ಈ ಯುಗ ಮುಗಿದ ಮೇಲೆ, ಭೂಮಿಯ ಮೇಲೆ ಹರಡಿದ್ದ ನೀರ್ಗಲ್ಲು ಕರಗಿ ಸಮುದ್ರಕ್ಕೆ ಹರಿಯಿತು ; ತಗ್ಗು ಪ್ರದೇಶಗಳೆಲ್ಲ ನೀರಿನಿಂದಾವರಿಸಲ್ಪಟ್ಟು ಎತ್ತರ ಪ್ರದೇಶಗಳೆಲ್ಲ ದ್ವೀಪಗಳಾಗಿ ನಿಂತವು.

ಈ ಕಾಲದಲ್ಲೇ ಆಸ್ಟ್ರೇಲಿಯ ಆಗ್ನೇಯ ಏಷ್ಯದ ಭೂಭಾಗದಿಂದ ಪ್ರತ್ಯೇಕಿಸಲ್ಪಟ್ಟು ಅಲ್ಲಿಗೆ ಬಂದು ನೆಲೆಸಿದ್ದ ಜನರು ಏಷ್ಯದ ಇತರ ಜನರೊಂದಿಗೆ ಸಂಪರ್ಕವನ್ನು ಕಳೆದುಕೊಂಡರು. ಇವರಲ್ಲಿ ಮುಖ್ಯ ಪಂಗಡಗಳೆಂದರೆ ಈಶಾನ್ಯದ ಒರೀನಿಯನ್ ನಿಗ್ರಿಟೊಗಳು, ಉತ್ತರದ ಕಾರ್ಪೆಂಟೇರಿಯನ್ ಜನ, ಪಶ್ಚಿಮದ ಮರಳು ಕಾಡಿನ ಬುಡಕಟ್ಟುಗಳು. ಆಗ್ನೇಯದ ಮರ್ರೆ ಬಯಲಿನ ಆದಿವಾಸಿಗಳು. ಇವರುಗಳನ್ನು ಅಬಾರಿಜಿನಲ್ಸ್ ಎಂದು ಕರೆಯುವುದು ರೂಢಿಯಲ್ಲಿದೆ. ಇವರು ಆಸ್ಟ್ರೇಲಿಯದ ಒಟ್ಟು ಜನಸಂಖ್ಯೆಯ ಶೇ. 1.5 ರಷ್ಟಿರುವರು. ಈ ಆದಿವಾಸಿಗಳಲ್ಲಿ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ಇವರ ಜೀವನ ಕ್ರಮ, ಇವರ ಸಂಪ್ರದಾಯಗಳು, ಕೊಂಚಮಟ್ಟಿಗೆ ಭಾಷೆಯಲ್ಲೂ ಕೂಡ ಏಷ್ಯದರೊಡನೆ ಕಂಡುಬರುವ ಸಾಮ್ಯ. ಈ ಹೋಲಿಕೆ ಬೇರೆ ಯಾವ ದೇಶದಲ್ಲೂ ಕಂಡುಬಂದಿಲ್ಲ. ಆಸ್ಟ್ರೇಲಿಯ ಒಂದು ದೊಡ್ಡ ದ್ವೀಪವಾದ ಅನಂತರ ಇವರು ಆಗ್ನೇಯ ಏಷ್ಯದ ಇತರ ಜನರ ಸಂಪರ್ಕವನ್ನು ಕಳೆದುಕೊಂಡರು; ಅಲ್ಲದೆ ಇವರಲ್ಲನೇಕರು ಆಹಾರ ಸೌಕರ್ಯಕ್ಕಾಗಿ ಅಲೆಮಾರಿ ಜೀವನ ನಡೆಸಬೇಕಾಗಿದ್ದುದರಿಂದ ಇವರಲ್ಲೇ ಪರಸ್ಪರ ಸಂಪರ್ಕವೇರ್ಪಡುವಂತಾಗಿ ಅನೇಕರು ತಮ್ಮ ಪ್ರತ್ಯೇಕತೆಯನ್ನು ಕಾಲಕ್ರಮೇಣ ಕಳೆದುಕೊಂಡರು. ಎತ್ತರದಲ್ಲಿ ಇವರು ಮಧ್ಯಮ ಮಟ್ಟದವರೆನ್ನಬಹುದು; ಇವರ ಅಂಗಾಂಗಗಳಲ್ಲಿ ತಕ್ಕ ಮಟ್ಟಿನ ಹೊಂದಿಕೆಯಿದೆ. ಆದರೆ ಸರಿಯಾದ ಪೋಷಣೆಯಿಲ್ಲದೆ ಕೃಶಾಂಗರಾಗಿದ್ದಾರೆ. ಇವರದು ಕಂದು ಬಣ್ಣ, ಕೂದಲು ತೀರ ಕಪ್ಪು. 1788ರಲ್ಲಿ, ಅಂದರೆ ಬಿಳಿಯರು ಆಸ್ಟ್ರೇಲಿಯದಲ್ಲಿ ನೆಲೆಸಲು ಪ್ರಾರಂಭಿಸಿದಾಗ, ಅಲ್ಲಿನ ಆದಿವಾಸಿಗಳ ಸಂಖ್ಯೆ ಸುಮಾರು ಮೂರು ಲಕ್ಷದಷ್ಟಿತ್ತೆಂದು ಅಂದಾಜು. ಬಿಳಿಯರಿಂದ ಗೊತ್ತುಗುರಿಯಿಲ್ಲದ ಸಾಮೂಹಿಕ ಕೊಲೆ ಕೆಲವು ಕಡೆ ವಿಷಪ್ರಯೋಗ, ಸಿಡುಬು, ಕ್ಷಯ ಮುಂತಾದ ಸಾಂಕ್ರಾಮಿಕ ರೋಗಗಳು ಇವುಗಳ ಪರಿಣಾಮವಾಗಿ ಆ ಸಂಖ್ಯೆ ಬಹುಬೇಗ ಕುಗ್ಗಿತು. ಟಾಸ್ಮೇನಿಯದ ಆದಿವಾಸಿಗಳು ಮಲೇಷ್ಯ, ಪಾಲಿನೇಷ್ಯಗಳಿಂದ ವಲಸೆಬಂದ ಪುಟ್ಟ ನೀಗ್ರೊಕಲ್ಪ ಜಾತಿಯವರು. ಇವರು 1888ರ ಕಾಲಕ್ಕೆ ನಿರ್ನಾಮವಾದರು. ಈ ಆದಿವಾಸಿಗಳು ಹೀಗೆ ಅಳಿಯುವುದನ್ನು ತಡೆಗಟ್ಟುವುದಕ್ಕಾಗಿ ಆಸ್ಟ್ರೇಲಿಯ ಸರ್ಕಾರ ವ್ಯಾಪಕವಾದ ಕಾರ್ಯಕ್ರಮವನ್ನು ಕೈಗೊಂಡಿದೆ.

ಈ ಆದಿವಾಸಿಗಳು ಕೃಷಿಜೀವನ ನಡೆಸುವ ಮಟ್ಟಕ್ಕೆ ಏರಲೇ ಇಲ್ಲ, ಉತ್ತರ ಪ್ರಾಂತ್ಯದ ಕೆಲವೇ ಜನರ ಹೊರತು ಬೇಟೆಯಾಡುವುದು, ದೊರಕಿದ ಆಹಾರ ವಸ್ತುಗಳನ್ನು ಸಂಗ್ರಹಿಸುವುದು, ಇವೇ ಇವರ ಮುಖ್ಯ ಕಸಬುಗಳು. ತಾವು ನೆಲೆಸಿದ ಪ್ರದೇಶದ ಜೀವನೋಪಾಯ ಸಾಧನೆಗಳನ್ನು ಇವರು ಚೆನ್ನಾಗಿ ಅರಿತಿರುತ್ತಾರೆ. ಈ ಸಾಧನಗಳು ಕಡಿಮೆಯಾದಾಗಲೆಲ್ಲ ಬೇರೆ ಪ್ರಾಂತ್ಯಗಳಿಗೆ ವಲಸೆಹೋಗುತ್ತಾರೆ. ಇವರಿಗೆ ಜೀವನಾವಶ್ಯಕ ವಸ್ತುಗಳೇ ಅತ್ಯಲ್ಪ. ಬಹುಪಾಲು ಜನರು ನಗ್ನರಾಗಿಯೇ ಇರುತ್ತಾರೆ. ಇವರು ಧರಿಸುವುದು ಕೆಲವು ಆಭರಣಗಳನ್ನು ಮಾತ್ರ. ಮರಳುಗಾಡಿನಲ್ಲಿ ಚಳಿಗಾಲದ ಕೊರೆತದಿಂದ ತಪ್ಪಿಸಿಕೊಳ್ಳಲಾರರು. ಗಾಳಿಬರುವ ದಿಕ್ಕಿಗೆದುರಾಗಿ ಸಣ್ಣ ದಿಬ್ಬವನ್ನೇರ್ಪಡಿಸಿಕೊಳ್ಳುತ್ತಾರೆ.

ಪಕ್ಕದಲ್ಲೇ ಬೆಂಕಿಯನ್ನುರಿಸುತ್ತಾರೆ. ಮನೆಗಳನ್ನು ಕಾಣರು. ಇವರಿಗಿರುವುದು, ಕಡ್ಡಿಗಳು ಎಲೆಗಳಿಂದ ಮಾಡಿದ ಗೂಡಿನಂಥ ಗುಡಿಸಲು. ರಾತ್ರಿಯ ಚಳಿಯನ್ನು ತಡೆಯುವುದಕ್ಕಾಗಿ ಅನೇಕ ಪಂಗಡಗಳ ಜನರು ತಾವು ಆಹಾರಕ್ಕಾಗಿ ಕೊಂದ ಪ್ರಾಣಿಗಳ ಕೊಬ್ಬನ್ನು ಸಾಯಂಕಾಲವೇ ಮೈಗೆಲ್ಲ ಬಳಿದುಕೊಳ್ಳುತ್ತಾರೆ. ಹೆಚ್ಚು ಶಾಖಕ್ಕಾಗಿ ಅದರಮೇಲೆ ಬೂದಿಯನ್ನು ಸವರುತ್ತಾರೆ. ರಾತ್ರಿಯೆಲ್ಲ ಆಗಾಗ್ಗೆ ಮಲಗುವ ಪಕ್ಕ ಉರಿಯನ್ನು ಸರಿಮಾಡುತ್ತಾರೆ. ಇವರು ವಾಸಿಸುವ ಪ್ರದೇಶ ಬಹುಪಾಲು ಮರಳುಗಾಡಾದ್ದರಿಂದ ನೀರು ದೊರಕುವುದು ಬಹುಕಷ್ಟ. ಅದನ್ನು ದೊರಕಿಸಿಕೊಳ್ಳುವುದಕ್ಕಾಗಿ ಚಮತ್ಕಾರವಾದ ವಿಧಾನಗಳನ್ನು ತಿಳಿದುಕೊಂಡಿದ್ದಾರೆ. ಡಿಂಗೋ, ಕಾಂಗರೂ ಮುಂತಾದ ಪ್ರಾಣಿಗಳು ಒಂದೆರಡು ಅಡಿ ಆಳದಲ್ಲೇ ನೀರು ಇರುವ ಸ್ಥಳಗಳನ್ನು ವಾಸನೆಯಿಂದ ತಿಳಿದು ಅಲ್ಲಿ ಬಗೆದು ನೀರು ಕುಡಿಯುತ್ತವೆ. ಈ ಪ್ರಾಣಿಗಳನ್ನು ಹಿಂಬಾಲಿಸಿ ಹೋಗಿ ಈ ಜನರೂ ನೀರನ್ನು ದೊರಕಿಸಿಕೊಳ್ಳುತ್ತಾರೆ. ಕೆಲವು ಮರಗಳು ಕೊಳವೆಯಂತಿರುವ ತಮ್ಮ ಬೇರುಗಳಲ್ಲಿ ನೀರನ್ನು ಶೇಖರಿಸುತ್ತವೆ ; ಇವುಗಳನ್ನು ಅಗೆದು ಆ ನೀರನ್ನು ಉಪಯೋಗಿಸುತ್ತಾರೆ. ಕೆಲವು ವೇಳೆ ಕಪ್ಪೆಗಳು ತಮ್ಮ ಹೊಟ್ಟೆಯಲ್ಲಿ ಶೇಖರಿಸುವ ನೀರನ್ನೂ ತೆಗೆದು ಕುಡಿಯುತ್ತಾರೆ. ಕೆಲವು ಕಡೆ ಬೆಳಗ್ಗೆ ಮುಂಚೆಯೇ ಎದ್ದು ಗಿಡಗಳ ಎಲೆಗಳ ಮೇಲಿರುವ ಇಬ್ಬನಿಯನ್ನು ಶೇಖರಿಸುತ್ತಾರೆ.

ಪ್ರಾಣಿಗಳನ್ನು ಬೇಟೆಯಾಡಿಯೇ ಆಹಾರವನ್ನೊದಗಿಸಿಕೊಳ್ಳಬೇಕಾದ ಇವರು ಬೇಟೆಯಲ್ಲಿ ಬಲು ಚತುರರು ; ಸುಳಿವು ಕೊಡದೆ ಬೇಟೆಯನ್ನು ಬೆನ್ನಟ್ಟಿ ಹೋಗುವ ನಿಪುಣರು. ಕಲ್ಲಿನ ಮತ್ತು ಮರದ ಆಯುಧಗಳು ಹೆಚ್ಚು ಕಡಿಮೆ ಇತರ ದೇಶಗಳ ಆದಿವಾಸಿಗಳ ಆಯುಧಗಳಂತೆಯೇ ಇದ್ದರೂ ಬೂಮರ್‍ಯಾಂಗ್ ಇವರ ವಿಶಿಷ್ಟ ಆಯುಧ. ಇದು ಗುರಿಗೆ ತಗಲಿದ ಮೇಲೆ ಎಸೆದವನ ಬಳಿಗೇ ಬಂದು ಬೀಳುತ್ತದೆ. ಇದನ್ನು ಪ್ರಾಚೀನ ಈಜಿಪ್ಟ್, ಭಾರತ ಮುಂತಾದ ಕೆಲವು ದೇಶಗಳಲ್ಲೂ ಉಪಯೋಗಿಸುತ್ತಿದ್ದರೆಂದು ತಿಳಿದುಬಂದಿದೆ. ಆದರೆ ಆಸ್ಟ್ರೇಲಿಯದ ಆದಿವಾಸಿಗಳು ಇದನ್ನು ಪ್ರಯೋಗಿಸಿದಷ್ಟು ಬೇರೆ ಯಾವ ದೇಶದವರೂ ಪ್ರಯೋಗಿಸಲಿಲ್ಲ. ಸದ್ದಿಲ್ಲದೆ ಬೇಟೆಯನ್ನು ಬೆನ್ನಟ್ಟುವುದನ್ನು ಇವರು ಮಕ್ಕಳಿಗೆ ಬಾಲ್ಯದಿಂದಲೂ ಕಲಿಸುತ್ತಾರೆ.

ಹಗಲೆಲ್ಲ ಬೇಟೆ, ಆಹಾರ ಶೇಖರಣೆಯಲ್ಲಿ ಕಾಲಕಳೆಯುತ್ತ ರಾತ್ರಿ ಬರಿಮೈಯಲ್ಲಿ ನೆಲದಮೇಲೆ ಮಲಗುವ ಈ ಆದಿವಾಸಿಗಳಿಗೆ ಕಲೆಯಲ್ಲಿ ಆಸಕ್ತಿ ಇದ್ದರೂ ಅದನ್ನು ಬೆಳೆಸಲು ಅವಕಾಶವೇ ಇಲ್ಲ. ಆದರೆ ನೀರು ಆಹಾರ ಹೆಚ್ಚು ಕಷ್ಟವಿಲ್ಲದೆ ದೊರಕುವ ಕಡೆಗಳಲ್ಲಿ ಆದಿವಾಸಿಗಳ ಕಲಾಪ್ರಜ್ಞೆ ಕೊಂಚವಾದರೂ ವಿಕಸಿಸಿರುವುದನ್ನು ಕಾಣಬಹುದು. ಅಲಂಕರಣಕ್ಕಾಗಿ ಆಯುಧಗಳ ಮೇಲೆ ಚಿತ್ರಗಳನ್ನು ಕೊರೆಯುವುದು, ಬಂಡೆಗಳ ಮೇಲೆ ಕೆತ್ತಿ ಚಿತ್ರಗಳನ್ನು ಮಾಡುವುದು, ಗುಹೆಗಳಲ್ಲಿ ಬೇಟೆಯ ದೃಶ್ಯ ಮುಂತಾದವುಗಳನ್ನು ಬಣ್ಣಗಳಲ್ಲಿ ತೋರಿಸುವುದು, ಮೊದಲಾದ ಕಲಾಭಿರುಚಿ ಆದಿಕಾಲದಿಂದಲೂ ಮಾನವನಲ್ಲಿ ಬೆಳೆದುಬಂದಿದೆ ಎಂಬುದಕ್ಕೆ ನಿದರ್ಶನಗಳು. ಇಲ್ಲಿನ ಜನ ತೀರ ಅನಾಗರಿಕರಾದ್ದರಿಂದ ಅವರ ಚಿತ್ರಗಳು ತುಂಬ ಒರಟಾಗಿವೆ, ಚಿಕ್ಕಮಕ್ಕಳು ಬರೆಯಲೆತ್ನಿಸುವ ಚಿತ್ರಗಳಂತೆ. ಆದರೆ ಮಾನವ ನಾಗರಿಕತೆಯ ವಿಕಾಸವನ್ನು ತಿಳಿಯಬೇಕೆನ್ನುವವರಿಗೆ ಈ ಚಿತ್ರಗಳು ಸ್ವಾರಸ್ಯಪೂರ್ಣವೂ ಬೋಧಪ್ರದವೂ ಆಗಿವೆ.

ಮೂಲನಿವಾಸಿಗಳಲ್ಲಿ ಟಾಸ್ಮೇನಿಯನ್ ಬುಡಕಟ್ಟಿಗೆ ಸೇರಿದ ಜನ ಸಹಸ್ರಾರು ವರ್ಷಗಳ ಹಿಂದೆಯೇ ಆ ನೆಲದ ಮಕ್ಕಳಾಗಿ ಬಾಳಿದವರು. 1876ರವರೆಗೂ ಅವರ ಬುಡಕಟ್ಟಿಗೆ ಸೇರಿದವರು ಇದ್ದರು ಎಂದು ಗುರುತಿಸಲಾಗಿದೆ. ಈ ಜನಾಂಗ ಆಸ್ಟ್ರೇಲಿಯಕ್ಕೆ ಕಾಲಿಟ್ಟ ಎಷ್ಟೋ ವರ್ಷಗಳ ತರುವಾಯ ಕಪ್ಪುಜನ ಆಗಮಿಸಿದರು. ಕಪ್ಪು ಮಿಶ್ರಿತ ಚಾಕೊಲೇಟ್ ಬಣ್ಣದ, ವಂಕಿವಂಕಿಯಾದ ಗುಂಗುರು ಗೂದಲಿನ ಈ ಜನರ ಸಂಖ್ಯೆ 1788ರಲ್ಲಿ 35,000 ಎಂದು ಅಂದಾಜು ಮಾಡಲಾಗಿತ್ತು. ಐರೋಪ್ಯರ ಪ್ರಾಬಲ್ಯದಿಂದ ಕ್ರಮೇಣ ಈ ಜನಸಂಖ್ಯೆ ಕುಗ್ಗುತ್ತಾಬಂತು. ಪಶ್ಚಿಮ ಆಸ್ಟ್ರೇಲಿಯ, ಉತ್ತರ ಪ್ರಾಂತ್ಯ, ಉತ್ತರ ಕ್ವೀನ್ಸ್‌ಲೆಂಡ್, ದಕ್ಷಿಣ ಆಸ್ಟ್ರೇಲಿಯಗಳಲ್ಲಿ ವಿಶೇಷವಾಗಿ ನೆಲೆಸಿರುವ ಇವರಲ್ಲಿ ನೂರಾರು ಒಳಪಂಗಡಗಳು ಇವೆ. ಗೊತ್ತಾದ ಪ್ರದೇಶವೊಂದನ್ನು ತನ್ನದು ಎಂಬಂತೆ ಭಾವಿಸಿ ಬೇಟೆಯನ್ನೇ ಅವಲಂಬಿಸಿ ಜೀವಿಸುವ ಜನ. ಇವರು, ಉಳುವುದನ್ನರಿಯರು. ಇವರಿಗೆ ಸಾಕುಪ್ರಾಣಿಗಳ ಅಗತ್ಯವಿಲ್ಲ. ಎಲ್ಲದಕ್ಕೂ ಪ್ರಕೃತಿಯನ್ನೇ ಅವಲಂಬಿಸಿ ನಿಂತವರು. ಜೀವಜಂತುಗಳನ್ನೂ, ಗೆಡ್ಡೆಗೆಣಸುಗಳನ್ನೂ, ಹಣ್ಣುಸೊಪ್ಪುಗಳನ್ನೂ ತಿಂದೇ ಕಾಲ ಹಾಕುವವರು. ಇವರು ಗಿಡದಿಂದ ಬಿಡಿಸಿಕೊಳ್ಳುವುದನ್ನು ಬಲ್ಲರೇ ಹೊರತು ನೆಲದಿಂದ ಏನನ್ನೋ ಬೆಳೆಯವ ಗೋಜಿಗೆ ಹೋದವರಲ್ಲ. ಆಸ್ಟ್ರೇಲಿಯದ ಮೂಲನಿವಾಸಿಗಳ ಪೂರ್ವಿಕರು ನೀರಿನ ಅನುಕೂಲವಿರುವ ಸ್ಥಳಗಳಲ್ಲಿ ನೆಲೆಸಿದ್ದರು. ಆ ಎಡೆಗಳೇ ಇವರಿಗೆ ಅತ್ಯಂತ ಪವಿತ್ರವಾದುವು. ಅವರ ಆತ್ಮಗಳು ಇಂದಿಗೂ ಆ ಎಡೆಗಳಲ್ಲೆ ಇವೆ–ಎಂಬ ನಂಬಿಕೆಯಿರುವುದರಿಂದ ತಮ್ಮ ಪ್ರದೇಶಗಳನ್ನು ಬಿಟ್ಟು ಇವರು ದೂರ ಹೋಗುವುದಿಲ್ಲ. ಒಳ್ಳೆಯ ನಡತೆಗೆ, ವಿನಯಕ್ಕೆ, ಪ್ರಾಮಾಣಿಕತೆಗೆ ಹೆಸರಾದ ಈ ಜನ ವಿನೋದಪ್ರಿಯರೂ ಹೌದು. ತುಂಬ ಉಲ್ಲಾಸದಿಂದ ತಮ್ಮ ಬದುಕನ್ನು ಹೊರೆಯುತ್ತಾರೆ. ಈ ಜನ ತಾಳ್ಮೆಗೆ ಹೆಸರಾದವರು. ನೈತಿಕತೆ ಇವರ ಬದುಕಿನ ಉಸಿರು. ಪ್ರಕೃತಿಯ ಮಡಿಲಲ್ಲಿ ಬೆಳೆಯುವ ಇವರು ಹೆಚ್ಚು ಸಾಹಸಿಗಳು. ಐದರಿಂದ ಆರು ಅಡಿಗಳಷ್ಟು ಎತ್ತರವಾಗಿರುವ, ದೃಢಕಾಯರಾದ ಈ ಮೂಲ ನಿವಾಸಿಗಳು ನಡುವಿಗೆ ಸುತ್ತಿರುವ ಮಾನವ ಕೂದಲಿನ ಪಟ್ಟಿಗೆ ಅನೇಕ ಬಗೆಯ ಆಯುಧಗಳನ್ನು ಸಿಕ್ಕಿಸಿಕೊಂಡಿರುತ್ತಾರೆ. ಮುಖದ ಅಂಚಿನಲ್ಲಿ ಒಂದು ಬಗೆಯ ವರ್ಣವನ್ನು ಬಳಿದುಕೊಂಡಿರುತ್ತಾರೆ. ಆಹಾರವನ್ನು ಸೇವಿಸಿದ ಮೇಲೆ ಚೆನ್ನಾಗಿ ಬಾಯಿ ಮುಕ್ಕಳಿಸದೇ ಇರುವುದಿಲ್ಲ. ಇದ್ದಲಿನಿಂದ ಶುದ್ಧಿಗೊಳಿಸುವುದೂ ಉಂಟು. ಬಿಸಿಯಾದದ್ದೇನನ್ನೂ ಕುಡಿಯರು. ಹೀಗಾಗಿ ಇವರ ಹಲ್ಲುಗಳು ಹೆಚ್ಚು ಭದ್ರ, ಆಕರ್ಷಕ. ಇತ್ತೀಚೆಗೆ ಇಂಥ ಉತ್ತಮ ಅಭ್ಯಾಸಗಳು ಇವರಲ್ಲಿಯೂ ತಪ್ಪಿ ಹೋಗುತ್ತಿವೆ. (ಇ.ಎ.ಆರ್.)

**ಆಸ್ಟ್ರೇಲಿಯನ್ ನ್ಯೂಗಿನಿ:** ಆಸ್ಟ್ರೇಲಿಯದ ಆಡಳಿತಕ್ಕೊಳಪಟ್ಟಿರುವ ಪಾಪುಅ ಪ್ರದೇಶವನ್ನೂ ಬ್ರಿಟಿಷರ ನ್ಯೂಗಿನಿ ಎಂದು ಹಿಂದೆ ತಿಳಿಯಲಾಗಿದ್ದು ಮತ್ತು ವಿಶ್ವಸಂಸ್ಥೆಯ ಪರವಾಗಿ ಆಸ್ಟ್ರೇಲಿಯದ ಆಡಳಿತಕ್ಕೊಳಪಟ್ಟಿರುವ ನ್ಯೂಗಿನಿಯ ಟ್ರಸ್ಟ್ ಪ್ರದೇಶವನ್ನು ಒಳಗೊಂಡಿದೆ. ಪಶ್ಚಿಮದಲ್ಲಿರುವ ನ್ಯೂಗಿನಿ ಇಂಡೊನೇಷ್ಯಕ್ಕೆ ಸೇರಿದ್ದು, ಸಮಭಾಜಕ ವೃತ್ತದಿಂದ $12^0$ ದಕ್ಷಿಣ ಅಕ್ಷಾಂಶ ಮತ್ತು $16^0$ ಪೂರ್ವ ರೇಖಾಂಶಗಳ ಮಧ್ಯದಲ್ಲಿದೆ. ಪ್ರದೇಶದ ಒಳಭಾಗ ಹೆಚ್ಚಾಗಿ ಪರ್ವತಮಯವಾಗಿದೆ ಅಥವಾ ತೀರದ ಜೌಗು ಪ್ರದೇಶವಾಗಿದೆ. ತೋಟಗಾರಿಕೆ ವ್ಯವಸಾಯದಿಂದ ಕೊಬ್ಬರಿ ಮತ್ತು ರಬ್ಬರನ್ನು ಉತ್ಪಾದಿಸುವರು. ಕಾಫಿ ಬೆಳೆ ಮಧ್ಯದ ಎತ್ತರದ ಪ್ರದೇಶಗಳಲ್ಲಿ ಹೆಚ್ಚು. ಜನಸಂಖ್ಯೆ : 6.4 ಮಿಲಿಯನ್ (2000). *

**ಆಸ್ವಾನ್:** ಈಜಿಪ್ಟ್ ದೇಶದ ಆಸ್ವಾನ್ ಪ್ರಾಂತ್ಯದ ಮುಖ್ಯಪಟ್ಟಣ. ಕೈರೋದ ಉತ್ತರಕ್ಕೆ 893 ಕಿಮೀ ದೂರದಲ್ಲಿದೆ. ನೈಲ್ ನದಿಯ ಪೂರ್ವದಂಡೆಯ ಮೇಲಿದೆ. ಜನಸಂಖ್ಯೆ 249,017 (1999), ಸರಹದ್ದಿನ ಆಯಕಟ್ಟಿನ ಸ್ಥಳವಾದುದರಿಂದ ಇತಿಹಾಸ ಪ್ರಸಿದ್ಧ. ಗಡಿಸೇನೆಯ ಠಾಣೆ, ನೆರೆಯ ಸೂಡಾನ್, ಅಬಿಸೀನಿಯಗಳೊಂದಿಗೆ ವ್ಯಾಪಾರಕ್ಕೆ ಮುಖ್ಯದ್ವಾರ. ಆಸ್ವಾನಿನ ದಕ್ಷಿಣಕ್ಕೆ ಕೆಲವು ಕಿಮೀ ದೂರದಲ್ಲಿರುವ ಜಲಪಾತದ ಶಿರೋಭಾಗದಲ್ಲಿರುವ ಷೆಲ್ಲಾಲ್‌ವರೆಗೂ ರೈಲುಮಾರ್ಗ ಮುಂದುವರಿಯುತ್ತದೆ. ಅಲ್ಲಿಂದಾಚೆಗೆ ಸೂಡಾನಿನೊಂದಿಗೆ ಜಲಮಾರ್ಗ ಸಂಪರ್ಕ, ಪೂರ್ವಕ್ಕೆ 48 ಕಿಮೀ. ದೂರದಲ್ಲಿ ದೊರಕುವ ಕಬ್ಬಿಣದ ನಿಕ್ಷೇಪ ಕೈರೋ ವಿಭಾಗದ ಕಬ್ಬಿಣ–ಉಕ್ಕಿನ ಕಾರ್ಖಾನೆಗೆ ಸಾಗುತ್ತದೆ. ಆಸ್ವಾನ್ ಒಂದು ಆರೋಗ್ಯಧಾಮ, ಪ್ರವಾಸಿಕೇಂದ್ರ; ಆಫ್ರಿಕದಲ್ಲೇ ಸುಂದರವಾದ ನಗರ. ತಂಪಾದ ಹವೆ ಇಲ್ಲಿ ಇದೆ.

ನಗರದ ಮುಖಭಾಗದಲ್ಲಿರುವ ಎಲಿಫಂಟೈನ್ ನಡುಗಡ್ಡೆಯ ಮೇಲೆ ಪ್ರಾಚೀನದಿಂದಲೂ ಜನ ವಸತಿ ಇತ್ತು. ನೈಲ್ ನದಿಯ ಪ್ರವಾಹವನ್ನಳೆಯಲು ಆಗ ನಿಲ್ಲಿಸಿದ ಸ್ತಂಭವೊಂದು ಈಗಲೂ ಇದೆ. ಮುಂದೆ ನಗರ ಬೆಳೆಯಿತು. ಪುರಾತನ ಈಜಿಪ್ಟಿನ ದೇವಮಂದಿರಗಳನ್ನು ಕಟ್ಟಲು ಬೇಕಾದ ಕಲ್ಲುಗಳನ್ನು ಸಮೀಪದ ಬಂಡೆಗಳಿಂದ ಎಬ್ಬಿ ತೆಗೆಯಲಾರಂಭಿಸಿದ ಮೇಲೆ ನಗರದ ಪ್ರಾಮುಖ್ಯ ಹೆಚ್ಚಿತು.

ನೈಲ್ ನದಿಯ ಪಶ್ಚಿಮಕ್ಕಿರುವ ಕಡಿದಾದ ದಂಡೆಯ ಮೇಲೆ ಬಂಡೆಗಳಲ್ಲೇ ಕೊರೆದ ಅನೇಕ ಗೋರಿಗಳಿವೆ. ನಗರದ ಬಳಿಯಲ್ಲೇ ಆಸ್ವಾನ್ ಅಣೆಕಟ್ಟೆಯಿದೆ. (ಎಂ.ಎಸ್.;ಡಿ.ಕೆ.)

**ಆಸ್ವಾನ್ ಅಣೆಕಟ್ಟೆ:** ಈಜಿಪ್ಟಿನ ಆಸ್ವಾನ್ ಪಟ್ಟಣದ ಬಳಿಯಲ್ಲಿ ಅದರ ದಕ್ಷಿಣಕ್ಕೆ ನೈಲ್ ನದಿಗೆ ಅಡ್ಡಲಾಗಿ ಕಟ್ಟಿರುವ ಪ್ರಸಿದ್ಧವಾದ ಅಣೆಕಟ್ಟೆ. ಈಜಿಪ್ಟಿನಲ್ಲಿ ಮಳೆ ಕಡಿಮೆ. ಇದು ಸಹಾರಾ ಮರುಭೂಮಿಯ ಪೂರ್ವ ಭಾಗದಲ್ಲಿದ್ದು ಉಷ್ಣಾಂಶ ಅತಿ ಹೆಚ್ಚು. ಪ್ರಾಚೀನ ಕಾಲದಿಂದಲೂ ಆ ದೇಶದ ಜೀವನಕ್ಕೆ ನೈಲ್ ನದಿಯ ನೀರೇ ಆಧಾರ. ಪ್ರಪಂಚದ ಅತಿ ಉದ್ದವಾದ (5,760 ಕಿಮೀ) ನೈಲ್ ನದಿಯ ಕೊನೆಯ ಮಜಲಿನಲ್ಲಿ ಈಜಿಪ್ಟ್ ಇರುವುದರಿಂದ ಇಲ್ಲಿ ಪ್ರವಾಹಗಳು ಪ್ರತಿ ವರ್ಷವೂ ಸಾಮಾನ್ಯ. ಆಗ ವರ್ಷದಲ್ಲಿ ಸು. 50 ದಿನ ಈ ನದಿ ಈಜಿಪ್ಟಿನ ಬೆಂಗಾಡಿನಲ್ಲಿ ದಡಮೀರಿ ಹರಿದು ಇಕ್ಕೆಲಗಳ ಮೈದಾನದಲ್ಲಿ ವಿಶಾಲವಾಗಿ ಹರಡಿ ಫಲವತ್ತಾದ ಮೆಕ್ಕಲುಮಣ್ಣನ್ನು ಸಂಚಯಿಸುವುದು. ಪ್ರ.ಶ.ಪೂ. 4,500 ರಿಂದಲೂ ಗದ್ದೆಗಳ ಸುತ್ತ ಅಡ್ಡಗಟ್ಟೆಗಳನ್ನು ಹಾಕಿ ಪ್ರವಾಹ ಇಳಿದ ಮೇಲೆ ಮಣ್ಣು, ನೀರನ್ನು ಶೇಖರಿಸಿ ಈಜಿಪ್ಟಿಯನ್ನರು ಹುಲುಸಾದ ಬೆಳೆಯನ್ನು ತೆಗೆಯುತ್ತಿದ್ದರು. ಇದು ನೈಸರ್ಗಿಕವಾದ ನೀರಾವರಿಯ ಕ್ರಮ. ಈಗ ಆಸ್ವಾನ್ ಕಟ್ಟೆಯ ನಿರ್ಮಾಣವಾದ ಮೇಲೆ ಜುಲೈ ತಿಂಗಳಿನ ಆದಿಯಲ್ಲಿ ಬರಿದಾಗಿರುವ ಜಲಾಶಯಕ್ಕೆ ಪ್ರವಾಹ ಬಂದು ಸೆಪ್ಟೆಂಬರಿನಲ್ಲಿ ಪರಮಾವಧಿ ಮುಟ್ಟುತ್ತದೆ. ನವಂಬರಿನಲ್ಲಿ ಇಳಿಯುತ್ತಿರುವ ಪ್ರವಾಹದ ನೀರನ್ನು ಶೇಖರಿಸಿ ಫೆಬ್ರವರಿಯಿಂದ ಜುಲೈ ತಿಂಗಳವರೆಗೆ ನಾಲೆಗಳ ಮೂಲಕ ಗದ್ದೆಗಳಿಗೆ ಹರಿಸುತ್ತಾರೆ.

ಆಸ್ವಾನ್ ಎತ್ತರ ಕಟ್ಟೆ : ಆಸ್ವಾನ್ ಅಣೆಕಟ್ಟೆಯ ಮೇಲುಗಡೆಗೆ 6 ಕಿಮೀ ಅಂತರದಲ್ಲಿ ನಿರ್ಮಿತವಾಗಿರುವುದೇ ಪ್ರಮುಖ ಕಟ್ಟೆ, 1960ರಲ್ಲಿ ಇದರ ನಿರ್ಮಾಣ ಆರಂಭವಾಯಿತು. ಈಜಿಪ್ಟಿನಲ್ಲಿ ಇನ್ನೂ ನೀರಾವರಿಗೆ ಒಳಪಡದ ವಿಸ್ತಾರ ಭೂಪ್ರದೇಶದಲ್ಲಿ ಹಸುರು ಕೊನರಿಸಿ,

ಗೋದಿ, ಹತ್ತಿ ಮುಂತಾದ ಬೆಳೆಸು ತೆಗೆಯುವ ಕನಸೇ ಈ ಯೋಜನೆಯ ಹಿಂದಿದ್ದ ಪ್ರೇರಕಶಕ್ತಿ. ಒಮ್ಮೆ ಮಹಾಪ್ರವಾಹ, ಮತ್ತೊಮ್ಮೆ ಶಾಂತವಾಗಿ ಹರಿಯುವಿಕೆ ಹೀಗೆ ಸುತ್ತಣ ಜನರನ್ನು ಸರ್ವದಾ ಅನಿಶ್ಚಿತತೆಯಲ್ಲಿ ತಳ್ಳಿ ತಬ್ಬಿಬ್ಬು ಮಾಡುವ ನೈಲ್ ನದಿಯನ್ನು ಅಂಕೆಗೆ ಒಳಪಡಿಸಿ, ಪ್ರವಾಹಕಾಲದಲ್ಲಿ ಹೆಚ್ಚು ನೀರನ್ನು ಶೇಖರಿಸುವುದು ಇದರಿಂದ ಸಾಧ್ಯವಾಯಿತು. ಈ ಜಲಾಶಯದಲ್ಲಿ 12,56,00,000 ಘ.ಅ. ನೀರನ್ನು ಶೇಖರಿಸಬಹುದೆಂದು ನಿರೀಕ್ಷಿಸಲಾಯಿತು. ತಲಾ 1,75,000 ಕಿ.ವಾ. ಗಳಂತೆ ಒಟ್ಟು 2,100 ಸಾವಿರ ಕಿ.ವಾ. ವಿದ್ಯುದುತ್ಪಾದನ ಸಾಮರ್ಥ್ಯವುಳ್ಳ ಜಲವಿದ್ಯುದಾಗಾರದ ನಿರ್ಮಾಣವೂ ಈ ಯೋಜನೆಯ ಅಂಗವಾಗಿದೆ.



ಈ ಕಟ್ಟೆಯ ನಿರ್ಮಾಣಕಾರ್ಯ ಎರಡು ಹಂತಗಳಲ್ಲಿ ನಡೆದಿದೆ. ಮೊದಲನೆಯ ಹಂತ 1964ರಲ್ಲಿ ಮುಗಿಯಿತು. ಆ ವರ್ಷದ ನವೆಂಬರಿನಲ್ಲಿ ಎರಡನೆಯ ಹಂತದ ಕಾರ್ಯಾರಂಭವಾಯಿತು. ರಷ್ಯದ ತಾಂತ್ರಿಕ ಸಹಕಾರದೊಂದಿಗೆ, 30,000 ಈಜಿಪ್ಷಿಯನ್ ಕೆಲಸಗಾರರಿಂದ 2,000 ಮಂದಿ ರಷ್ಯ ತಜ್ಞರಿಂದಲೂ ಈ ಕಾರ್ಯ ಮುಂದುವರಿಯಿತು. ಇದರಿಂದ ನಿರ್ಮಿತಗೊಂಡಿರುವ ವಿಸ್ತಾರವಾದ ಜಲಾಶಯವನ್ನು ನಾಸ್ಸೆರ್ ಸರೋವರ ಎಂದು ಕರೆಯಲಾಗಿದೆ. ವಿದ್ಯುದಾಗಾರದ ನಿರ್ಮಾಣದೊಂದಿಗೆ ವಿದ್ಯುತ್ತಿನ ಸಾಗಣೆ ಸರಬರಾಜು ವ್ಯವಸ್ಥೆಯ ನಿರ್ಮಾಣದ ಕೆಲಸವೂ ಸಾಗಿತು. ಅಖಿಲ ಈಜಿಪ್ಟ್ ವಿದ್ಯುತ್‌ಜಾಲ (ಗ್ರಿಡ್ ಸಿಸ್ಟಂ) ನಿಯಂತ್ರಣ ಕೇಂದ್ರವನ್ನು ಕೈರೊ ನಗರದ ಬಳಿಯಲ್ಲಿ ನಿರ್ಮಿಸಲಾಗಿದೆ. ನೀರಾವರಿಯ ಜೊತೆಗೆ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಸರಬರಾಜೂ ಸಾಧ್ಯವಾಗಿ, ಇದರಿಂದ ಈಜಿಪ್ಟಿನ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯವಾಗಿದೆ.

ಜಲಾನಯನ ಪ್ರದೇಶ ಅತ್ಯಂತ ವಿಶಾಲ. 628 ಕಿಮೀ ನೀರು ಒದ್ದು ನಿಲ್ಲುತ್ತದೆ. ಇದು ಸೂಡಾನ್ ಪ್ರದೇಶದೊಳಕ್ಕೂ ಚಾಚುತ್ತದೆ. ಇದರಿಂದ ಈಜಿಪ್ಟ್ ಹಾಗೂ ಸೂಡಾನಿನ ಸು. 90,000 ರೈತರು ನೆಲೆಯಿಲ್ಲದವರಾಗುತ್ತಾರೆಂದು ಅಂದಾಜು ಮಾಡಲಾಗಿತ್ತು. ಇವರಿಗೆ ಈಜಿಪ್ಟ್, ಸೂಡಾನ್‌ಗಳಲ್ಲಿ ಬೇರೆ ಕಡೆಗಳಲ್ಲಿ ವಸತಿಯನ್ನೂ ಬೇಸಾಯದ ನೆಲವನ್ನೂ ಒದಗಿಸಿಕೊಡುವುದು ಅಗತ್ಯವಾಯಿತು.

ಈ ಎತ್ತರ ಕಟ್ಟೆಯನ್ನೊತ್ತಿ ನೀರು ಶೇಖರವಾದಾಗ ಅಮೂಲ್ಯವಾದ ಪ್ರಾಚೀನ ದೇವಾಲಯಗಳೂ ವಸ್ತುಗಳೂ ಮುಳುಗಿ ನಾಶವಾಗುವುದನ್ನು ತಪ್ಪಿಸಿ ಅವನ್ನೆಲ್ಲ ಬೇರೆಡೆಗೆ ಸ್ಥಳಾಂತರಿಸಲು ವ್ಯವಸ್ಥೆ ಮಾಡಲಾಯಿತು. ವಿಶ್ವಸಂಸ್ಥೆಯ ನೆರವಿನಿಂದ ಇದು ಸಾಧ್ಯವಾಗಿದೆ.

(ಎಚ್.ಸಿ.ಕೆ.)

**ಆಹಾರ ಜಾಲ:** ಭೂ ಮೇಲ್ಮೈ ಪರಿಸರದಲ್ಲಿ ಆಹಾರ ಸರಪಳಿ ಪ್ರತ್ಯೇಕವಾಗಿರದೆ ಇತರ ಆಹಾರ ಸರಪಳಿಗಳೊಂದಿಗೆ ಸಂಬಂಧವನ್ನು ಹೊಂದಿರುವುದು. ಹೀಗೆ ಈ ಆಹಾರ ಸರಪಳಿಗಳು ಒಂದಕ್ಕೊಂದು ಹೆಣೆದುಕೊಂಡು ಪರಸ್ಪರ ಸಂಬಂಧವನ್ನು ಹೊಂದಿರುವುದನ್ನೇ ಆಹಾರ ಜಾಲ ಎಂದು ಕರೆಯುತ್ತಾರೆ. ಪರಿಸರದಲ್ಲಿ ವಿವಿಧ ಹಂತಗಳಲ್ಲಿ ಅನೇಕ ಪ್ರಕಾರದ ಜೀವಿಗಳನ್ನೊಳಗೊಂಡು ರಚನೆಯಾಗುವ ಆಹಾರ ಸರಪಳಿಯಲ್ಲಿ ಬದಲಾವಣೆಗಳಾಗುತ್ತವೆ. ಉದಾ:ಹುಲ್ಲುಗಾವಲು ಪ್ರದೇಶದಲ್ಲಿ ಮೇಯುವ ಆಹಾರ ಸರಪಳಿಯಲ್ಲಿ ಮೊಲದ ಸಂತತಿ ಇಲ್ಲದಿದ್ದಾಗ ಹುಲ್ಲನ್ನು ಇಲಿಗಳು ತಿನ್ನುವ, ಇಲಿಯನ್ನು ಹಾವು ತಿಂದರೆ ಹಾವನ್ನು ಗಿಡುಗ ತಿನ್ನುತ್ತದೆ. ಹೀಗೆ ನಿಸರ್ಗದಲ್ಲಿ ಎಲ್ಲವೂ ಒಂದಕ್ಕೊಂದು ಕೊಂಡಿಯಂತೆ ಹೆಣೆದುಕೊಂಡಿರುವ ಮಾದರಿಯಲ್ಲಿರುತ್ತವೆ.

ಇಂತಹ ಹುಲ್ಲುಗಾವಲು ಪ್ರದೇಶದ ಆಹಾರ ಜಾಲದಲ್ಲಿ ಈ ಮುಂದಿನ ಐದು ಪ್ರಕಾರದ ಆಹಾರ ಜಾಲ ಕಂಡುಬರುತ್ತವೆ. ಅವುಗಳೆಂದರೆ

ಅ) ಹುಲ್ಲು ➔ ಮಿಡತೆ ➔ ಗಿಡುಗ

ಆ) ಹುಲ್ಲು ➔ ಮಿಡತೆ ➔ ಹಲ್ಲಿ ➔ ಗಿಡುಗ

ಇ) ಹುಲ್ಲು ➔ ಮೊಲ ➔ ಗಿಡುಗ

ಈ) ಹುಲ್ಲು ➔ ಇಲಿ ➔ ಗಿಡುಗ

ಉ) ಹುಲ್ಲು ➔ ಇಲಿ ➔ ಹಾವು ➔ ಗಿಡುಗ

ಈ ಮೇಲೆ ವಿವರಿಸಿದ ಐದು ಆಹಾರ ಸರಪಳಿಗಳು ವಿವಿಧ ಹಂತಗಳಲ್ಲಿ ಪರಸ್ಪರ ಸಂಪರ್ಕವನ್ನು ಹೊಂದಿದ್ದು, ಇವುಗಳು ಆಹಾರ ಜಾಲವನ್ನು ನಿರ್ಮಿಸುತ್ತವೆ. ಹೀಗೆ ನಿಸರ್ಗದಲ್ಲಿರುವ ಪರಿಸರ ವ್ಯವಸ್ಥೆಯ ಸಮತೋಲನ ಕಾಯ್ದುಕೊಳ್ಳಲು ಆಹಾರ ಜಾಲವು ಪ್ರಮುಖ ಪಾತ್ರ ವಹಿಸುತ್ತದೆ. ಆಹಾರ ಸರಪಳಿಯಲ್ಲಿ ಸಮತೋಲನ ಉಂಟಾದರೆ ಆಹಾರ ಜಾಲದ ಜೀವಿಗಳ ಸಂಖ್ಯೆಯಲ್ಲಿ ಏರಿಳಿತ ಉಂಟಾಗುತ್ತದೆ. ಇದರಿಂದ ಹಲವು ಬಗೆಯ ಪ್ರತಿಕೂಲಗಳುಂಟಾಗುತ್ತವೆ. ಉದಾ: ಹುಲ್ಲುಗಾವಲು ಪ್ರದೇಶದ ಆಹಾರ ಸರಪಳಿಯಲ್ಲಿ ಬರುವ ಮೊಲದ ಸಂಖ್ಯೆ ಕಡಿಮೆಯಾದರೆ ಇತರ ಸಸ್ಯಾಹಾರಿ, ಬದಲಿ ಉಪಭೋಗಿ ಇವುಗಳ ಸಂಖ್ಯೆ ಹೆಚ್ಚಾಗುವುದು. ಇದೇ ರೀತಿ ಮೊಲಗಳನ್ನು ತಿಂದು ಬದುಕುವ ಮಾಂಸಾಹಾರಿಗಳ ಸಂಖ್ಯೆ ಸ್ಥಿರವಾಗಿರದೆ ಕಡಿಮೆಯಾಗುವುದು. ಹೀಗೆ ಜೀವ ಪರಿಸರ ವ್ಯವಸ್ಥೆಯಲ್ಲಿ ಬದಲಿ ಉಪಭೋಗಿಗಳಿಂದ ವ್ಯವಸ್ಥೆಯು ಮುಂದುವರೆಯುವುದು. ಆದರೆ ಎಲ್ಲಾ ಬಗೆಯ ಜೀವಿಗಳ ಉಳಿವಿಗೆ ಸಮತೋಲನವಾದ ಜೀವ ಪರಿಸರ ವ್ಯವಸ್ಥೆ ಹೆಚ್ಚು ಅಗತ್ಯ. ಕೇವಲ ಸಸ್ಯಾಹಾರಿಗಳಿದ್ದಲ್ಲಿ ಅವುಗಳ ಸಂಖ್ಯೆ ಅಧಿಕಗೊಂಡು ಸಂಘರ್ಷ ಏರ್ಪಟ್ಟು ನಾಶವಾಗುತ್ತವೆ.




*ಆಹಾರ ಜಾಲ*

ಹೀಗೆ ಆಹಾರ ಜಾಲ ವ್ಯವಸ್ಥೆಯಲ್ಲಿ ಪ್ರತಿಯೊಂದು ಜೀವಿ ಪ್ರಭೇದವೂ ಸಹ ಪ್ರಾಕೃತಿಕವಾಗಿ ನಿರ್ಬಂಧವನ್ನು ಹೊಂದಿದ್ದು, ಅವುಗಳ ಸಂಖ್ಯೆ ನಿಯಮಿತವಾಗಿದ್ದು, ಜೀವಿ ಪರಿಸರ ವ್ಯವಸ್ಥೆಯಲ್ಲಿ ಸಮತೋಲನವನ್ನು ಕಾಣಬಹುದು. (ಜ.ಡಿ.)

**ಆಹಾರ ಸರಪಳಿ:** ಒಂದು ಜೀವಿ ಮತ್ತೊಂದು ಜೀವಿಯನ್ನು ಆಹಾರಕ್ಕಾಗಿ ಅವಲಂಬಿಸಿರುವುದು, ಆಹಾರ ಶಕ್ತಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆಯಾಗುವುದನ್ನು ಆಹಾರ ಸರಪಳಿ ಎಂದು ಕರೆಯಲಾಗುತ್ತದೆ. ಇಲ್ಲಿ ಸಸ್ಯಗಳು

ಮೊದಲ ಪೋಷಣಾ ಸ್ತರ. ಇವು ಸೂರ್ಯನ ಶಕ್ತಿ, ನೀರು ಮತ್ತು ವಾಯುಮಂಡಲದಲ್ಲಿರುವ ಇಂಗಾಲವನ್ನು ಬಳಸಿಕೊಂಡು ತಮಗೆ ಬೇಕಾದ ಆಹಾರವನ್ನು ತಯಾರಿಸಿಕೊಳ್ಳುತ್ತವೆ.

ಕೆಲವು ಸಸ್ಯಾಹಾರಿ ಜೀವಿಗಳಾದ ಮೊಲ, ಜಿಂಕೆ, ಕುರಿ, ದನಕರು ಮುಂತಾದವು ಸಸ್ಯಗಳನ್ನು ತಿಂದು ಬದುಕುತ್ತವೆ. ಈ ಸಸ್ಯಾಹಾರಿ ಜೀವಿಗಳನ್ನು ಮಾಂಸಾಹಾರಿ ಜೀವಿಗಳಾದ ಹುಲಿ, ಸಿಂಹ, ಚಿರತೆ, ತೋಳ ಮುಂತಾದವು ತಿಂದು ಬದುಕುತ್ತವೆ. ಈ ಮಾಂಸಾಹಾರಿ ಪ್ರಾಣಿಗಳು ಅಳಿದ ಅನಂತರ ಅವುಗಳ ಅವಶೇಷಗಳು ಕೊಳೆಯಿಸುವ ಬ್ಯಾಕ್ಟೀರಿಯಗಳಿಂದ ಉಪಯೋಗಿಸಲ್ಪಡುತ್ತವೆ.




*ಆಹಾರ ಸರಪಳಿ*

ಆಹಾರ ಸರಪಳಿಯಲ್ಲಿ ಸಸ್ಯಗಳ ಸ್ಥಾನವನ್ನು ಪ್ರಾಥಮಿಕ ಉತ್ಪಾದಕಗಳೆಂದು ಕರೆಯುತ್ತಾರೆ. ಈ ಜೀವಿಗಳು ದ್ಯುತಿ ಸಂಶ್ಲೇಷಣಾ ಕ್ರಿಯೆಯ ಮೂಲಕ ಆಹಾರವನ್ನು ತಯಾರಿಸಿಕೊಳ್ಳುತ್ತವೆ. ಸಸ್ಯಗಳು ತಯಾರಿಸುವ ಆಹಾರವನ್ನು ಸಸ್ಯಾಹಾರಿ ಜೀವಿಗಳು ಸೇವಿಸುವುದರಿಂದ ಇವುಗಳನ್ನು ಪ್ರಾಥಮಿಕ ಉಪಭೋಗಿ ಎಂದು ಕರೆಯುತ್ತಾರೆ. ಈ ಸಸ್ಯಾಹಾರಿ ಜೀವಿಗಳನ್ನು ಮಾಂಸಾಹಾರಿ ಜೀವಿಗಳು ತಿಂದು ಆಹಾರವನ್ನು ಪಡೆದುಕೊಳ್ಳುವುದರಿಂದ ಇವುಗಳನ್ನು ದ್ವಿತೀಯ ಉಪಭೋಗಿಗಳೆನ್ನುತ್ತಾರೆ. ಮಾಂಸಾಹಾರಿ ಜೀವಿಗಳನ್ನು ಮತ್ತೆ ಇನ್ನೂ ಕೆಲವು ಮಾಂಸಾಹಾರಿ ಜೀವಿಗಳು ತಿನ್ನುವುದರಿಂದ ಅವುಗಳನ್ನು ತೃತೀಯ ಉಪಭೋಗಿಗಳೆಂದು ಕರೆಯುವರು.

ಜೀವಿ ಪರಿಸರ ವ್ಯವಸ್ಥೆಯಲ್ಲಿ ಎರಡು ಬಗೆಯ ಆಹಾರ ಸರಪಳಿಯನ್ನು ಕಾಣಬಹುದು. ಅವುಗಳೆಂದರೆ, ಮೇಯುವ ಆಹಾರ ಸರಪಳಿ, ಕೊಳೆಯಿಸುವ ಆಹಾರ ಸರಪಳಿ.

ಮೇಯುವ ಆಹಾರ ಸರಪಳಿಯು ಹಸುರು ಸಸ್ಯಗಳಿಂದ ಪ್ರಾರಂಭವಾಗಿ ದೊಡ್ಡ ಪ್ರಾಣಿಗಳಲ್ಲಿ ಅಂತ್ಯಗೊಳ್ಳುತ್ತದೆ. ಈ ಸರಪಳಿಯಲ್ಲಿ ಅತಿ ಸೂಕ್ಷ್ಮ ಜೀವಿಗಳು, ಪ್ರಾಣಿಗಳು, ಮೀನು ಒಳಗೊಂಡಿರುತ್ತವೆ. ಅದೇ ರೀತಿ ಹುಲ್ಲು ➔ ಇಲಿ ➔ ಹಾವು ➔ ಗಿಡುಗಗಳನ್ನು ಒಳಗೊಂಡಿರುತ್ತವೆ.

ಕೊಳೆತ ಪದಾರ್ಥಗಳ ಆಹಾರ ಸರಪಳಿಯಲ್ಲಿ ಮೃತ ಸಸ್ಯ ಹಾಗೂ ಪ್ರಾಣಿಗಳ ಅವಶೇಷಗಳನ್ನು ಸೂಕ್ಷ್ಮ ಜೀವಿಗಳು ಕೊಳೆಯಿಸುವುದರಿಂದಲೂ ಆಹಾರ ಸರಪಳಿ ಆರಂಭಗೊಂಡು ಮುಂದುವರೆಯುವುದು. ಹೀಗೆ ಆಹಾರ ಸರಪಳಿಯು ಸಸ್ಯಗಳಿಂದ ಸಸ್ಯಾಹಾರಿಗಳಿಗೂ ಸಸ್ಯಾಹಾರಿಗಳಿಂದ ಮಾಂಸಾಹಾರಿಗಳಿಗೂ ಮಾಂಸಾಹಾರಿಗಳಿಂದ ಸಸ್ಯಗಳಿಗೂ ಕ್ರಮಬದ್ಧವಾಗಿ ಮುಂದುವರಿಯುತ್ತ ಹೋಗುತ್ತದೆ. (ಜಿ.ಡಿ.)

# ಇ

**ಇಂಗ್ಲಿಷ್ ಕಡಲ್ಗಾಲುವೆ:** ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ನಡುವೆ ಹಬ್ಬಿ ಎರಡು ದೇಶಗಳನ್ನು ಬೇರ್ಪಡಿಸುತ್ತ, ಅಟ್ಲಾಂಟಿಕ್ ಸಾಗರ ಮತ್ತು ಉತ್ತರ ಸಮುದ್ರಗಳನ್ನು ಸೇರಿಸುತ್ತ ಯುರೋಪಿನ ಉತ್ತರಭಾಗದ ನೌಕಯಾನಕ್ಕೆ ಅತ್ಯುಪಯುಕ್ತವಾಗಿರುವ ಕಡಲ್ಗಾಲುವೆ. ಇದು ಸು. 562 ಕಿಮೀ ಉದ್ದ ಮತ್ತು 25 ರಿಂದ 160 ಕಿಮೀ ಅಗಲವಿದೆ. ಇದರ ಅತ್ಯಂತ ಕಿರಿದಾದ ಭಾಗ ಇಂಗ್ಲೆಂಡಿನ ಡೋವರ್‌ನಿಂದ ಫ್ರಾನ್ಸ್ ದೇಶದ ಕಾಲ್ಮೆಸ್ ನಗರದವರೆಗೆ ಡೋವರ್ ಜಲಸಂಧಿಯಾಗಿದೆ. ಅತ್ಯಂತ ಆಳವಾದ ಭಾಗ 175 ಮೀ ಆಳವಿರುವ ಹಡ್ ಎಂಬ ಕೂಪ.

ಇಂಗ್ಲಿಷ್ ಕಾಲುವೆಯ ಮೂಲಕ ಅನೇಕ ಹಡಗುಗಳು ಸಂಚರಿಸುತ್ತವೆ. ಡೋವರ್ ಜಲಸಂಧಿಯಲ್ಲಿ ಪ್ರತಿ ನಿತ್ಯ 600 ಹಡಗುಗಳು ಸಂಚರಿಸುತ್ತವೆ. ಇದರ ಮೂಲಕ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತಾರೆ. ಇಂಗ್ಲೆಂಡ್ ತೀರದ ಕಡೆಗಿನ ಬಂದರುಗಳೆಂದರೆ ಡೋವರ್, ವೆಮೌತ್, ಪೋರ್ಟ್‌ಮೌತ್ ಮತ್ತು ಸೌತಾಂಪ್ಟನ್. ಫ್ರಾನ್ಸ್ ತೀರದ ಕಡೆಗಿನ ಬಂದರುಗಳೆಂದರೆ ಚಾಲೋಗ್ನೆ–ಸುಲ್–ಮೆರ್, ಕಾಲೈಸ್, ಚೆರ್‌ಭೂರ್ಗ್, ಡಿಯಾಪ್ಪೆ ಮತ್ತು ಲಿ–ಹಾವ್ರೆ ಫ್ರೆಂಚ್ ತೀರದ ಕಡೆಗೆ ವೆಟ್ಟ್ ದ್ವೀಪವಿದೆ.

ಉತ್ತರ ಸಮುದ್ರದಿಂದ ಹಾಗೂ ಅಟ್ಲಾಂಟಿಕ್ ಸಾಗರದಿಂದ ಬರುವ ಸಾಗರ ಪ್ರವಾಹಗಳು ಈ ಕಾಲುವೆಯ ಬಳಿ ಸಂಧಿಸಿ ಸಾಗರದ ತಳದಲ್ಲಿ ಅಸಮ ಭೂಸ್ವರೂಪ ಉಂಟಾಗಿ ಅಲ್ಲಿ ಹಾದು ಹೋಗುವ ಹಡಗು ಮತ್ತು ದೋಣಿಗಳಿಗೆ ಕಷ್ಟಕರವಾಗಿರುತ್ತದೆ. ಸು. 10000 ವರ್ಷಗಳ ಹಿಂದೆ ಫ್ರಾನ್ಸ್ ನಡುವಿನ ತಗ್ಗು ಪ್ರದೇಶದಲ್ಲಿ ನೀರು ಹರಿದು ಇಂಗ್ಲಿಷ್ ಕಾಲುವೆ ರೂಪುಗೊಂಡಿತು. ಮುಂಚೆ ಜನರು ಇಂಗ್ಲೆಂಡ್‌ನಿಂದ ಫ್ರಾನ್ಸ್‌ಗೆ ನಡೆದು ಹೋಗಬಹುದಿತ್ತು ಎಂದು ಭೂಗರ್ಭಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಫ್ರಾನ್ಸ್ ಗಣಿಗಾರಿಕೆ ಎಂಜಿನಿಯರ್ ಆಲ್ಬರ್ಟ್ ಮ್ಯಾಥಿವ್ 1802ರಲ್ಲಿ ಮೊದಲ ಬಾರಿಗೆ ಇಂಗ್ಲಿಷ್ ಕಾಲುವೆಯ ಟನಲ್‌ಗೆ ಯೋಜನೆಯನ್ನು ಮಂಡಿಸಿದ. 1986ರಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಡೋವರ್ ಜಲಸಂಧಿ ಸುರಂಗ ರೈಲು ಮಾರ್ಗವನ್ನು ರಚಿಸಲು ಸಮ್ಮತಿಯನ್ನು ಘೋಷಿಸಿದವು. ಟನಲ್‌ಅನ್ನು ಕಟ್ಟಲು 1986ರಲ್ಲಿ ಆರಂಭಿಸಿ ಮೇ 1994ರಲ್ಲಿ ಪೂರ್ಣಗೊಳಿಸಿದವು.

ಸಾಹಸಿಗಳಿಗೆ ಇಂಗ್ಲಿಷ್ ಕಾಲುವೆಯನ್ನು ಈಜಿ ದಾಟುವುದು ರೋಮಾಂಚಕ ಕಾರ್ಯ. 1875ರಲ್ಲಿ ಮ್ಯಾಥ್ಯೂ ವೆಬ್ ಆಫ್ ಡಾಲಿ ಶ್ರೂಪ್‌ಷ್ಟರ್, ಮೊಟ್ಟ ಮೊದಲು ಕಾಲುವೆಯನ್ನು ದಾಟಿದ. ಇಂಗ್ಲೆಂಡಿನಿಂದ ಫ್ರಾನ್ಸ್ ನಡುವಿನ ದೂರವನ್ನು 21 ಗಂಟೆ, 45 ನಿಮಿಷದಲ್ಲಿ ದಾಟಲಾಯಿತು. 1926ರಲ್ಲಿ ಸಂಯುಕ್ತ ರಾಷ್ಟ್ರದ ಗರ್ಟ್ರುಥ್ ಎಡೆರೆಲ್ ಇಂಗ್ಲಿಷ್ ಕಾಲುವೆಯನ್ನು ದಾಟಿದ ಪ್ರಥಮ ಮಹಿಳೆ. 1978ರಲ್ಲಿ ಅಮೆರಿಕದ ಪೆನ್ನಿಲಿ. ಡಿನ್ ಇಂಗ್ಲೆಂಡ್‌ನಿಂದ ಫ್ರಾನ್ಸ್‌ಗೆ ಈಜುವುದರಲ್ಲಿ ದಾಖಲೆ ಮುರಿಯಲಾಯಿತು (7 ಗಂಟೆ 40 ನಿಮಿಷ). 1994ರಲ್ಲಿ ಅಮೆರಿಕದ ಚಡ್ ಹಂಡ್ ಬೈ 7 ಗಂಟೆ, 17 ನಿಮಿಷಗಳಲ್ಲಿ ಈಜಿ ವಿಶ್ವ ದಾಖಲೆ ಮಾಡಿದ. (ಎಸ್.ಎನ್.ಎ.ಆರ್.)

**ಇಂಗ್ಲಿಷ್ ಕಡಲ್ಗಾಲುವೆಯ ಸುರಂಗ:** ಇಂಗ್ಲೆಂಡಿಗೂ ಫ್ರಾನ್ಸಿಗೂ ನಡುವೆ ಇರುವ ಉತ್ತರಸಮುದ್ರದಲ್ಲಿ ಡೋವರಿಗೂ ಕಲಾಯಿಸ್‌ಗೂ ಮಧ್ಯೆ ಇಂಗ್ಲಿಷ್ ಕಡಲ್ಗಾಲುವೆ ಇದೆ. ಅದರ ಅಗಲ 33.6 ಕಿಮೀ. ಆಳ ಹೆಚ್ಚಾಗಿಲ್ಲ. ಸಮುದ್ರದ ತಳದಲ್ಲಿ ಒಂದು ಸುರಂಗವನ್ನು ಕೊರೆದು ಎರಡೂ ದೇಶಗಳ ನಡುವೆ ಭೂಸಂಚಾರವನ್ನು ಏರ್ಪಡಿಸುವ ಯೋಜನೆಯೊಂದನ್ನು ಫ್ರಾನ್ಸಿನ ಶಿಲ್ಪಿ ಮಾಥ್ಯೂ ಫೆವಿಯರ್ 1802ರಲ್ಲಿ ನೆಪೋಲಿಯನ್ನನಿಗೆ ಒಪ್ಪಿಸಿದ. ಅದಾದ ಕೆಲವೇ ವರ್ಷಗಳಲ್ಲಿ ಇಂಗ್ಲೆಂಡಿಗೂ ಫ್ರಾನ್ಸಿಗೂ ಯುದ್ಧ ಪ್ರಾರಂಭವಾದ್ದರಿಂದ ಆ ಯೋಜನೆ ಮೂಲೆಗೆ ಬಿತ್ತು.

ಅನಂತರ ಸಮುದ್ರದ ತಳದ ಮೇಲೆ ಒಂದು ಉಕ್ಕಿನ ಕೊಳಾಯಿಗಳನ್ನಿಡುವ ಸೂಚನೆಯೂ ಒಂದು ಸೇತುವೆಯನ್ನು ಕಟ್ಟುವ ಸೂಚನೆಯೂ ಬಂದುವು. ಕೊನೆಗೆ ಸೂಯೆಜ್‌ಕಾಲುವೆಯಲ್ಲಿ ಲೆಸೆಪ್ಸನ ಜೊತೆಯಲ್ಲಿ ಅನುಭವವನ್ನು ಪಡೆದಿದ್ದ ಗ್ಯಾಮೆಂಡ್ ಮತ್ತೊಂದು ಸುರಂಗದ ಯೋಜನೆಯನ್ನು ತಯಾರಿಸಿ ಇಂಗ್ಲೆಂಡಿನ ಮಿತ್ರನಾಗಿದ್ದ ಚಕ್ರವರ್ತಿ ಮೂರನೆಯ ನೆಪೋಲಿಯನ್ನಿಗೆ ಒಪ್ಪಿಸಿದ. ಈಗಲೇ ಎರಡು ರಾಷ್ಟ್ರಗಳಿಗೂ ನಡುವಿನ ಅಂತರ ಕಡಿಮೆ. ಅದನ್ನು ಇನ್ನೂ ಕಡಿಮೆ ಮಾಡುವುದೇ ಎಂದು ಬ್ರಿಟನ್ನಿನ ಅಂದಿನ ಪ್ರಧಾನಿ ಪಾಮರ್‌ಸ್ಟನ್ ಕೇಳಿದ. ಆದರೆ ಗ್ಲ್ಯಾಡ್‌ಸ್ಟನ್ ಪ್ರಧಾನಿಯಾದ ಮೇಲೆ ಈ ಯೋಜನೆಗೆ ಬೆಂಬಲ ದೊರಕಿತು. 1868ರಲ್ಲಿ ಆಂಗ್ಲೊ ಫ್ರೆಂಚ್ ಸುರಂಗಸಮಿತಿ ಸ್ಥಾಪಿತವಾಯಿತು. ಅದರಲ್ಲಿ ಪ್ರಖ್ಯಾತ ಶಿಲ್ಪಿ ರಾಬರ್ಟ್ ಸ್ಟೀವನ್ಸನ್ ಮತ್ತು ಬ್ರುಸೆಲ್

ಇದ್ದರು. ಎರಡು ಕಡೆಗಳಿಂದಲೂ ಕೆಲಸವನ್ನು ಆರಂಭಿಸಲು ಸಿದ್ಧತೆಗಳಾದವು. ವಿಕ್ಟೋರಿಯ ರಾಣಿ ಬಕಿಂಗ್‌ಹ್ಯಾಮ್ ಅರಮನೆಯಲ್ಲಿ ಗ್ಯಾಮಂಡ್‌ನನ್ನು ಆದರಿಸಿದಳು. ಈ ಕಡೆ ಫ್ರಾನ್ಸಿನ ದೊರೆ ಸುರಂಗ ಸಮಿತಿಗೆ ಔತಣವನ್ನು ಏರ್ಪಡಿಸಿದ.

ಏತನ್ಮಧ್ಯೆ 1870ರಲ್ಲಿ ಪ್ರಾರಂಭವಾದ ಫ್ಯಾಂಕೋ-ಪ್ರಷ್ಯನ್ ಯುದ್ಧ ಬೇಗ ಮುಗಿದರೂ ನೆಪೋಲಿಯನ್ ಸಿಂಹಾಸನವನ್ನು ಕಳೆದುಕೊಂಡ. ಫ್ರಾನ್ಸ್ ಪ್ರಜಾ ರಾಜ್ಯವಾಯಿತು. 1875ರಲ್ಲಿ ವಿಕ್ಟೋರಿಯ ರಾಣಿಗೂ ಫ್ರಾನ್ಸಿನ ಗಣರಾಜ್ಯಕ್ಕೂ ಒಪ್ಪಂದವಾಗಿ ಸುರಂಗದ ಸಮಸ್ಯೆಗಳನ್ನು ಕಟ್ಟುವ ಕಾಲದಲ್ಲಿ ಪರಿಹರಿಸಬಹುದೆಂದು ಒಪ್ಪಲಾಯಿತು. 1877ರಲ್ಲಿ ತಯಾರಾದ ಯೋಜನೆಯಲ್ಲಿ ವರ್ತುಲಾಕಾರದ 6.30 ಮೀ ವ್ಯಾಸದ ಎರಡು ಸುರಂಗಗಳನ್ನು ರಚಿಸಿ 105 ಮೀ ಅಂತರದಲ್ಲಿ ಎರಡಕ್ಕೂ ಸಂಬಂಧ ಕಲ್ಪಿಸಲಾಗಿತ್ತು. ಒಂದೊಂದು ಕಡೆಯೂ 7 ಕಿಮೀ ಉದ್ದದ ತೋಡುದಾರಿಯಾಯಿತು. ಬ್ರಿಟನ್ನಿನ ಕಡೆ ಡೋವರ್ ಬೆಟ್ಟಗಳ ಹಿಂದಿನಿಂದ ಹೊರ ಸಮುದ್ರಮಟ್ಟಕ್ಕೆ 75 ಮೀ ತಗ್ಗಿಗೆ ಸುರಂಗ ಮುಟ್ಟಿ ಅಲ್ಲಿಂದ ನಿಧಾನವಾಗಿ ಇಳಿದು ಆಚೆಯ ದಡದಿಂದ 8 ಕಿಮೀ ದೂರದಲ್ಲಿ ಸಮುದ್ರಮಟ್ಟಕ್ಕೆ 60 ಮೀ ಕೆಳಕ್ಕೆ ಇಳಿದು ಕಲಾಯಿಸ್‌ಗೂ ಯೋಲಾನಿಗೂ ನಡುವೆ ಮಾರ್ಕ್ವೆ ಪಟ್ಟಣದ ಹತ್ತಿರ ಮುಗಿದಿತ್ತು. ಇಂಗ್ಲೆಂಡಿನ ಕಡೆ 1880ರಲ್ಲಿ ಎರಡು ಸುರಂಗಗಳನ್ನು ತೋಡಿ ಕೆಲಸವನ್ನು ಆರಂಭಿಸಿದರು. ಮೊದಲು ಕೊರೆದ 1950 ಮೀ ಉದ್ದದ ಪರೀಕ್ಷಾ ಸುರಂಗದೊಳಗೆ ವಿದ್ಯುದ್ದೀಪದ ಬೆಳಕಿನಲ್ಲಿ ಟ್ರಾಲಿಗಳ ಮೇಲೆ ಕುಳಿತು ರಾಣಿ ವಿಕ್ಟೋರಿಯ, ಎಡ್ವರ್ಡ್ ರಾಜಕುಮಾರ ಗ್ಲ್ಯಾಡ್‌ಸ್ಟನ್, ಡಿಸ್ರೇಲಿ-ಇವರು ಭೇಟಿಕೊಟ್ಟರು. ಕೆಲಸ ಏಳೆಂಟು ವರ್ಷಗಳಲ್ಲಿ ಮುಗಿಯುವ ನಿರೀಕ್ಷೆಯಿತ್ತು.

ಆದರೆ ಬ್ರಿಟನ್ನಿನ ಸೇನಾನಾಯಕ ಲಾರ್ಡ್ ವುಲ್ಸ್ಲಿ ಈ ಸುರಂಗದಿಂದ ಇಂಗ್ಲೆಂಡಿನ ಭದ್ರತೆಗೆ ಊನವೆಂದು ವಾದಿಸಿದ (1882). ಇಂಗ್ಲೆಂಡಿನ ಜನತೆಗೆ ಸುರಂಗ ಬೇಕಾಗಿತ್ತು. ನೈನ್‌ಟೀನ್ತ್ ಸೆಂಚುರಿ ಮತ್ತು ಟೈಮ್ಸ್ ಪತ್ರಿಕೆಗಳ ಮೂಲಕ ಪ್ರತಿಭಟನೆ ವ್ಯಕ್ತಪಟ್ಟಿತು. ಇಂಗ್ಲೆಂಡ್ ಮೇಲಿನ ಆಕ್ರಮಣವನ್ನು ಸುರಂಗವಿದ್ದಾಗ ಹೇಗೆ ತಪ್ಪಸಬಹುದೆಂದೂ ನೋಡಿದ್ದಾಯಿತು. ಆದರೂ ಸೇನಾನಾಯಕರು ಹಟ ಹಿಡಿದರು. 1884ರಲ್ಲಿ ಬ್ರಿಟನ್ನಿನ ಕಡೆಯ ಕೆಲಸ ನಿಂತಿತು. ಅನಂತರ ಫ್ರೆಂಚರೂ ನಿಲ್ಲಿಸಬೇಕಾಯಿತು.

1909ರಲ್ಲಿ ಫ್ರಾನ್ಸಿನ ಬ್ಲೆರಿಯವ್ ಇಂಗ್ಲಿಷ್ ಕಡಲ್ಗಾಲುವೆಯ ಮೇಲೆ ಹಾರಿದಾಗ ಇಂಗ್ಲೆಂಡ್ ದ್ವೀಪವಾಗಿ ಉಳಿಯಲಿಲ್ಲ. 1913ರಲ್ಲಿ ಇನ್ನೂ ಆಳವಾದ ಉದ್ದವಾದ ಸುರಂಗವನ್ನು ಕೊರೆಯುವುದಕ್ಕೆ ಕಾಮನ್ಸರ ಸಭೆ ಒಪ್ಪಿತು. ಪ್ರಧಾನಿ ಅಸ್ಕ್ವಿತ್ ಒಪ್ಪಲಿಲ್ಲ. ಆದರೆ ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ ಹಿಂದೆ ಸುರಂಗವನ್ನು ವಿರೋಧಿಸಿದ್ದು ತಪ್ಪು ಎಂದು ಎಲ್ಲರಿಗೂ ತಿಳಿಯಿತು. ಆರ್ಮೆನಿಯ ಜೆಪ್ಲಿನ್ನ್‌ಗಳಿಂದ ಲಂಡನ್ನಿನ ಮೇಲೆ ಬಾಂಬುಗಳು ಬಿದ್ದುವು. ಯುದ್ಧ ಮುಗಿದ ಮೇಲಾದರೂ ಅದನ್ನು ಪ್ರಾರಂಭಿಸಬೇಕೆಂಬ ಬುದ್ಧಿ ಬಂತು. ಏತನ್ಮಧ್ಯೆ ಎಂಜಿನಿಯರುಗಳು ಇನ್ನು ಕೆಲವು ಭದ್ರತೆಯ ದಾರಿಗಳನ್ನು ಸೂಚಿಸಿದರು. ಫ್ರೆಂಚರು ಒಪ್ಪಿದರು. ಆದರೆ ಯುದ್ಧ ಮುಗಿದ ಮೇಲೆ 1920ರಲ್ಲಿ ಒಂದು ಸಾರಿ, 1924ರಲ್ಲಿ ಇನ್ನೊಂದು ಸಾರಿ, ಬ್ರಿಟಿಷ್ ಸರ್ಕಾರ ಸುರಂಗ ನಿರ್ಮಾಣಕ್ಕೆ ಒಪ್ಪಲಿಲ್ಲ; ಮತ್ತೆ ರ್‍ಯಾಮ್ಸೆ ಮ್ಯಾಕ್ಡೊನಾಲ್ಡನ ಕಾಲದಲ್ಲೂ ವಿರೋಧ ವ್ಯಕ್ತಪಟ್ಟಿತು. ಫರುಗಿ ಬಾಲ್ಡ್ವಿನ್ ಸುರಂಗ ಬೇಕು ಎಂದಾಗ ಯುದ್ಧ ಕಚೇರಿ ಪ್ರತಿಭಟಿಸಿತು. ಬೇಡ ಎನ್ನುವುದು ಮುಖ್ಯವಾಯಿತು. ಕಾರಣಗಳು ಗೌಣವಾದುವು. ಸುರಂಗವಿದ್ದರೆ ಇಂಗ್ಲೆಂಡಿನಲ್ಲಿ ವಿಮಾನಸಂಚಾರಕ್ಕೆ ಧಕ್ಕೆ ತಗಲುತ್ತದೆಂಬ ವಾದವೂ ಹುಟ್ಟಿತು.

ಅಷ್ಟರಲ್ಲಿ ಎರಡನೆಯ ಮಹಾಯುದ್ಧ ಆರಂಭವಾಯಿತು. 1939ನೆಯ ಡಿಸೆಂಬರಿನಲ್ಲಿ ಯುದ್ಧಸಮಿತಿ ಸುರಂಗ ತೋಡಲು ಎಷ್ಟು ಕಾಲ ಹಿಡಿದೀತು ಎಂದು ಅವಸರವಸರವಾಗಿ ಪ್ರಶ್ನಿಸಿತು. ಮೊದಲ ಪ್ರಶ್ನೆಗೆ ಉತ್ತರವನ್ನು ಹೇಳುವುದು ಎಂಜಿನಿಯರುಗಳಿಗೆ ಅಷ್ಟು ಸುಲಭವಾಗಿರಲಿಲ್ಲ. ತಗಲುವ ವೆಚ್ಚದ ಅಂದಾಜು ಕೋಟಿ ಪೌಂಡು ಎಂದು ಹೇಳಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಆಗ ದಿನಕ್ಕೆ ಲಕ್ಷ ಪೌಂಡುಗಳನ್ನು ಯುದ್ಧಕ್ಕಾಗಿ ಖರ್ಚು ಮಾಡುತ್ತಿದ್ದುದರಿಂದ ಆ ಹಣವನ್ನು ಒದಗಿಸುವುದು ಕಷ್ಟವಾಗಿರಲಿಲ್ಲ. ಈ ಯುದ್ಧದ ಕೊನೆಯ ಭಾಗದಲ್ಲಿ ಇಂಗ್ಲೆಂಡಿನ ವೈಟ್ ದ್ವೀಪದಿಂದ ಫ್ರಾನ್ಸಿನ ಚೆರ್‌ಭೋರ್ಗ್‌ರವರೆಗೆ 7.5 ಸೆಂಮೀ ನಾಲ್ಕು ಕೊಳಾಯಿ ಸಾಲುಗಳನ್ನು ಡನ್ ಜೆನೆಸ್ಸಿನಿಂದ ಬೋಲಾನಿನವರೆಗೆ 16 ಕೊಳಾಯಿ ಸಾಲುಗಳನ್ನು ಕಷ್ಟಪಟ್ಟು ಹಾಕಿ 1944ನೆಯ ಆಗಸ್ಟ್‌ನಿಂದ 1955ನೆಯ ಮೇ ವರೆಗೆ 12 ಕೋಟಿ ಗ್ಯಾಲನ್ ಪೆಟ್ರೋಲನ್ನು ಇಂಗ್ಲೆಂಡಿನಿಂದ ಯುರೋಪಿನಲ್ಲಿದ್ದ ಮಿತ್ರಸೇನೆಯ ಉಪಯೋಗಕ್ಕಾಗಿ ಸಾಗಿಸಲಾಯಿತು. 1994 ರಲ್ಲಿ ಈ ಸುರಂಗವನ್ನು ಪೂರ್ಣಗೊಳಿಸಲಾಯಿತು. (ಎಚ್.ಸಿ.ಕೆ.)

**ಇಂಗ್ಲೆಂಡ್:** ಗ್ರೇಟ್ ಬ್ರಿಟನ್ನಿನ ಸಂಯುಕ್ತ ರಾಜ್ಯದ ನಾಲ್ಕು ರಾಜಕೀಯ ವಿಭಾಗಗಳಲ್ಲಿ ಇಂಗ್ಲೆಂಡ್ ಅತಿ ದೊಡ್ಡದಾದುದು. ಇಂಗ್ಲೆಂಡ್ $50^0$ ಉ. ದಿಂದ $56^030'$ ಉ.ಅ. ದವರೆಗೂ $1^0$ ಪೂ. ರೇ. ದಿಂದ $5^0$ ಪ.ರೇ. ದವರೆಗೂ ಹರಡಿದೆ. ಇದು ಹೆಚ್ಚೂ ಕಡಿಮೆ ತ್ರಿಕೋನಕಾರದಲ್ಲಿದ್ದು ಅದರ ತುದಿಯು ಈಶಾನ್ಯದಲ್ಲಿ ಟ್ವೀಡ್ ನದಿಯ ಮುಖಭಾಗದಲ್ಲಿದೆ. ತಳವು ದಕ್ಷಿಣಭಾಗದಲ್ಲಿದೆ. ದಕ್ಷಿಣಕ್ಕೆ ಇಂಗ್ಲಿಷ್ ಕಡಲ್ಗಾಲುವೆ ಮತ್ತು ಡೋವರ್ ಜಲಸಂಧಿ, ಪೂರ್ವಕ್ಕೆ ಉತ್ತರ ಸಮುದ್ರ, ಉತ್ತರಕ್ಕೆ ಸ್ಕಾಟ್ಲೆಂಡ್, ಪಶ್ಚಿಮಕ್ಕೆ ಐರಿಷ್ ಸಮುದ್ರ ಹಾಗೂ ವೇಲ್ಸ್ ಸಂಸ್ಥಾನ, ಬ್ರಿಸ್ಟಲ್ ಕಡಲ್ಗಾಲುವೆ ಮತ್ತು ಅಟ್ಲಾಂಟಿಕ್ ಕಡಲು. ಇದರ ವಿಸ್ತೀರ್ಣ 1,30410 ಚ.ಕಿಮೀ. ಜನಸಂಖ್ಯೆ 4,97,52,900 (2001). ಇದು ಪ್ರಮುಖ ಕೈಗಾರಿಕಾ ಹಾಗೂ ವಾಣಿಜ್ಯ ಕೇಂದ್ರವಾಗಿದೆ. ರಾಜಧಾನಿ ಲಂಡನ್. ಇದರ ಜನಸಂಖ್ಯೆ 7,007,091.

ಸಾಮಾನ್ಯವಾಗಿ ಇಂಗ್ಲೆಂಡ್‌ನಲ್ಲಿ ಉತ್ತರ ಮತ್ತು ಪಶ್ಚಿಮ ಭಾಗದಿಂದ ಇಳಿಜಾರು ದಕ್ಷಿಣ ಮತ್ತು ಪೂರ್ವದ ಕಡೆಗೆ ಇರುವುದು ಕಂಡುಬರುತ್ತದೆ. ಇಲ್ಲಿನ ಪ್ರಮುಖ ಪರ್ವತ ಸರಣಿ ಪೆನ್ನೈನ್. ಇದು ಉತ್ತರದಲ್ಲಿ ಸ್ಕಾಟ್ಲೆಂಡಿನಿಂದ ದಕ್ಷಿಣಕ್ಕೆ ಮಧ್ಯ ಇಂಗ್ಲೆಂಡ್‌ವರೆಗೂ ಹಬ್ಬಿದೆ. ಈ ಕಾರಣದಿಂದ ಪೆನ್ನೈನ್‌ನನ್ನು ಇಂಗ್ಲೆಂಡ್‌ನ ಬೆನ್ನೆಲುಬು ಎಂದು ಕರೆಯುತ್ತಾರೆ. ಇದರ ಪೂರ್ವಕ್ಕೆ ಯಾರ್ಕ್‌ಶೈರ್ ಮತ್ತು ಪಶ್ಚಿಮಕ್ಕೆ ಲಂಕಾಶೈರ್ ಮೈದಾನಗಳಿವೆ. ಇಂಗ್ಲೆಂಡ್‌ನ ವಾಯವ್ಯ ಭಾಗದಲ್ಲಿರುವ ಲೇಖ್ ಜಿಲ್ಲೆ ಅನೇಕ ಸರೋವರ ಮತ್ತು ಪರ್ವತಗಳನ್ನೊಳಗೊಂಡು ಸುಂದರ ತಾಣವಾಗಿದೆ. ಇಲ್ಲಿ 15 ಸರೋವರಗಳಿವೆ. ಇವುಗಳಲ್ಲಿ ವುಲ್ಸ್‌ವಾಟರ್ ಮತ್ತು ವಿಂಡರ್‌ಮಿಯರ್ ದೊಡ್ಡವು. ಇಲ್ಲಿ ಕೆಲವು ಪರ್ವತಗಳು 900 ಮೀ ಎತ್ತರ. ಇಂಗ್ಲೆಂಡ್‌ನ ಅತ್ಯಂತ ಎತ್ತರವಾದ ಶಿಖರ ಸ್ಕಾಫೆಲ್ ಪೈಕ್ (978 ಮೀ) ಈ ಪ್ರದೇಶದಲ್ಲಿದೆ. ಇಂಗ್ಲೆಂಡ್‌ನ ವಿಸ್ತಾರವಾದ ಮಿಡ್‌ಲ್ಯಾಂಡ್ ಪೀಠಭೂಮಿ ಮಧ್ಯಪೂರ್ವ ಭಾಗದಲ್ಲಿದೆ. ಇದರ ದಕ್ಷಿಣಕ್ಕೆ ಥೇಮ್ಸ್ ನದಿ, ಪಶ್ಚಿಮಕ್ಕೆ ಸೆವನ್ ನದಿ, ಉತ್ತರಕ್ಕೆ ಟ್ರೆಂಟನದಿ ಮತ್ತು ಪೂರ್ವಕ್ಕೆ ಔಸ್‌ನದಿಗಳಿವೆ. ಈ ಪೀಠಭೂಮಿ ಬೆಟ್ಟಗಳು ಮತ್ತು ಫಲವತ್ತಾದ ಕಣಿವೆಗಳಿಂದ ವಿಚ್ಛಿನ್ನವಾಗಿದೆ. ಉತ್ತರ ಸಮುದ್ರದುದ್ದಕ್ಕೂ ಮಿಡ್‌ಲ್ಯಾಂಡ್ ತಗ್ಗಾಗಿ ಸಮತಟ್ಟವಾಗಿದೆ. ಉತ್ತರ ಸಮುದ್ರದ ಕೊಲ್ಲಿಯ ಬಳಿ ತೀರವು ಅತ್ಯಂತ ಸಮತಟ್ಟಾಗಿದ್ದು ಅದನ್ನು ವಾಶ್ ಎಂದು ಕರೆಯುತ್ತಾರೆ. ಆಗ್ನೇಯ ಭಾಗದಲ್ಲಿ ಎತ್ತರದ ಬೆಟ್ಟಗಳಿದ್ದು ಅದನ್ನು ಸ್ಕಾರ್ಪಲ್ಯಾಂಡ್ ಎಂದು ಕರೆಯುತ್ತಾರೆ. ಇದು ಸುಣ್ಣಕಲ್ಲು ಪ್ರದೇಶವಾಗಿವೆ. ಈ ಬೆಟ್ಟಗಳು ಇಂಗ್ಲಿಷ್ ಕಾಲುವೆಯ ಕಡೆಗೆ ಕಡಿದಾದ ಇಳಿಜಾರನ್ನು ಹೊಂದಿವೆ. ಡೋವರ್ ಕ್ಲಿಫ್ (ಪ್ರಪಾತ) ಇಂಗ್ಲೆಂಡ್‌ನ ಮುಖ್ಯ ಇಳಿಜಾರಾಗಿದೆ. ನೈರುತ್ಯ ಭಾಗ ಏರಿಳಿತ ಪ್ರದೇಶದಿಂದ ಕೂಡಿದೆ. ಇದು ಇಂಗ್ಲೆಂಡ್‌ನ ತೇವಭರಿತ ಪ್ರದೇಶ.

ನದಿಗಳು ಮತ್ತು ಸರೋವರಗಳು: ನದಿಗಳು ದೇಶದ ಮಧ್ಯ ಭಾಗದ ಎತ್ತರದ ಪ್ರದೇಶಗಳಿಂದ ಸಮುದ್ರದ ಕಡೆಗೆ ಹರಿಯುತ್ತವೆ. ಟೀಸ್, ಥೇಮ್ಸ್ ಮತ್ತು ಟೈನೆ ನದಿಗಳು ಪೂರ್ವಕ್ಕೆ ಹರಿದು ಉತ್ತರದ ಸಮುದ್ರಕ್ಕೆ (ನಾರ್ತ್‌ಸಿ) ಹರಿಯುತ್ತವೆ. ಮರ್ಸ್ಸೆ, ಡೀ, ಸವರೆನ್ ಮತ್ತು ಎವನ್ ನದಿಗಳು ಪಶ್ಚಿಮಕ್ಕೆ ಹರಿದು ಐರಿಷ್ ಸಮುದ್ರಕ್ಕೆ ಸೇರುತ್ತವೆ. ಹಲವಾರು ಸಣ್ಣ ನದಿಗಳು ದಕ್ಷಿಣಕ್ಕೆ ಹರಿದು ಇಂಗ್ಲಿಷ್ ಕಾಲುವೆಯನ್ನು ಸೇರುತ್ತವೆ. ಇಂಗ್ಲೆಂಡ್‌ನ ಅತಿ ಉದ್ದವಾದ ನದಿ ಥೇಮ್ಸ್ (338 ಕಿಮೀ) ಎರಡನೆಯ ದೊಡ್ಡ ನದಿ ಸವರೆನ್ (336 ಕಿಮೀ). ಇದು ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಹರಿಯುತ್ತದೆ. ಮೂರನೆಯ ಉದ್ದವಾದ ನದಿ ಟ್ರೆಂಡ್ (274 ಕಿಮೀ). ಮೇಲ್ಕಂಡ ನದಿಗಳು ಒಳನಾಡ ಜಲಸಾರಿಗೆಗೆ ಉಪಯುಕ್ತವಾಗಿದ್ದು ಅನೇಕ ಬಂದರುಗಳನ್ನು ಹೊಂದಿವೆ. ಲಂಡನ್ ನಗರ ಥೇಮ್ಸ್ ನದಿ ದಂಡೆಯ ಮೇಲಿದೆ.

ವಾಯುಗುಣ: ಇಲ್ಲಿನ ಯಾವುದೇ ಪ್ರದೇಶ ಸಮುದ್ರದಿಂದ ತುಂಬ ದೂರದಲ್ಲಿಲ್ಲ. ಪಶ್ಚಿಮ ತೀರದ ಹತ್ತಿರ ಗಲ್ಫ್ ಸ್ಟ್ರೀಂ ಉಷ್ಣಸಾಗರ ಪ್ರವಾಹ ಹರಿಯುತ್ತದೆ. ಈ ಕಾರಣದಿಂದ ವಾಯುಗುಣ ಹಿತಕರವಾಗಿದೆ. ಚಳಿಗಾಲದಲ್ಲಿ ನೈರುತ್ಯದಿಂದಲೂ ಬೇಸಗೆಯಲ್ಲಿ ಪಶ್ಚಿಮದಿಂದಲೂ ಬೀಸುವ ಮಾರುತಗಳು ಬೇಸಗೆಯ ಉಷ್ಣಾಂಶವನ್ನು ಚಳಿಗಾಲದ ಚಳಿಯನ್ನು ತಗ್ಗಿಸುತ್ತವೆ. ಪಶ್ಚಿಮದ ಮಾರುತಗಳು ವಾಯುಗುಣವನ್ನು ಸಮಧಾತುವಾಗಿ ಇಡುತ್ತವೆ. ಹಾಗೂ ಪಶ್ಚಿಮದ ತೀರಕ್ಕೆ ಹೆಚ್ಚು ಮಳೆ ಉಂಟುಮಾಡುತ್ತವೆ. ದಕ್ಷಿಣ ಇಂಗ್ಲೆಂಡ್‌ನಲ್ಲಿ ಸರಾಸರಿ ವಾರ್ಷಿಕ ಉಷ್ಣಾಂಶ $11^0$ ಸೆ. ಈಶಾನ್ಯದಲ್ಲಿ $9^0$ಸೆ. ಇಂಗ್ಲೆಂಡ್‌ನ ಬೇಸಗೆಯ ಸರಾಸರಿ ಉಷ್ಣಾಂಶ $16^0$ಸೆ. (ಜುಲೈ) ಮತ್ತು ಚಳಿಗಾಲದಲ್ಲಿ $4.4^0$ಸೆ. (ಜನವರಿ) ಇರುತ್ತದೆ. ಮಳೆ ಅಕ್ಟೋಬರ್ ತಿಂಗಳಿನಲ್ಲಿ ಹೆಚ್ಚು ಬೀಳುತ್ತದೆ. ವಾರ್ಷಿಕ ಸರಾಸರಿ ಮಳೆ 76 ಸೆಂಮೀ. ಪೂರ್ವ ಕರಾವಳಿಗಿಂತ ಪಶ್ಚಿಮ ಕರಾವಳಿಯಲ್ಲಿ ಮಳೆ ಹೆಚ್ಚು.

ಇಂಗ್ಲೆಂಡ್ ಹಿಂದೆ ದಟ್ಟವಾದ ಅರಣ್ಯ ಹೊಂದಿತ್ತು. ತಗ್ಗು ಪ್ರದೇಶಗಳಲ್ಲಿ ಓಕ್ ಮತ್ತು ಬಿಚ್ ಮರಗಳಿದ್ದವು. ಉನ್ನತ ಪ್ರದೇಶಗಳಲ್ಲಿ ಪೈನ್ ಮತ್ತು ಬರ್ಚ್ ಸೂಚಿಪರ್ಣ ಮರಗಳ ಅರಣ್ಯವಿತ್ತು. ಆದರೆ ಜನವಸತಿ ಹೆಚ್ಚಿದಂತೆ ವ್ಯವಸಾಯ ಮತ್ತು ಕೈಗಾರಿಕೆ ಬೆಳವಣಿಗೆಯಿಂದ ಅರಣ್ಯಗಳು ಕಣ್ಮರೆಯಾಗುತ್ತ ಬಂದು ಇಂದು ಕೇವಲ ರಾಷ್ಟ್ರದ ಶೇ. 7 ರಷ್ಟು ಭಾಗ ಮಾತ್ರ ಅರಣ್ಯಗಳಿವೆ. ಮಿಡ್‌ಲ್ಯಾಂಡ್, ಈಶಾನ್ಯಭಾಗ ಮತ್ತು ಲಂಡನ್‌ಗಳಲ್ಲಿ ಸಾಮಾಜಿಕ ಕಾಡುಗಳನ್ನು ಬೆಳಸಲಾಗುತ್ತಿದೆ. ಅವುಗಳಲ್ಲಿ ಚೆರ್ರಿ, ಸೇಬು ಮತ್ತು ಪ್ಲಮ್ ಜಾತಿ ಹಣ್ಣಿನ ಮರಗಳು ಹೆಚ್ಚು. ಇಲ್ಲಿನ ಮುಖ್ಯ ಪ್ರಾಣಿಗಳೆಂದರೆ ಜಿಂಕೆ, ನರಿ, ಮೊಲ, ಕುದುರೆ, ನೀರುನಾಯಿ ಮತ್ತು ಕರಡಿ.

ಆರ್ಥಿಕತೆ: ಇಂಗ್ಲೆಂಡ್‌ನ ಆರ್ಥಿಕತೆ ಹೆಚ್ಚು ಕೈಗಾರಿಕೆ ಮತ್ತು ವ್ಯಾಪಾರವನ್ನು ಅವಲಂಬಿಸಿದೆ. ಇಂಗ್ಲೆಂಡ್‌ನ ಸ್ಥಾನ ಮತ್ತು ಅದರಲ್ಲಿನ ಸ್ವಾಭಾವಿಕ ಬಂದರುಗಳಿಂದಾಗಿ ಇದು ಪ್ರಪಂಚದ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದೆ.

ಇಂಗ್ಲೆಂಡ್‌ನ ಪ್ರಮುಖ ಸ್ವಾಭಾವಿಕ ಸಂಪನ್ಮೂಲಗಳೆಂದರೆ ಸುಣ್ಣಕಲ್ಲು, ಕಲ್ಲಿದ್ದಲು, ಕಬ್ಬಿಣದ ಅದಿರು, ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲಗಳು. ಕಲ್ಲಿದ್ದಲು ಪೆನ್ನೈನ್ ಶ್ರೇಣಿಗಳಲ್ಲೂ ಕಬ್ಬಿಣದ ಅದಿರು ಪೂರ್ವ ಮಿಡ್‌ಲ್ಯಾಂಡ್ ಪ್ರದೇಶದಲ್ಲೂ ಪೆಟ್ರೋಲಿಯಂ ದಕ್ಷಿಣ ಇಂಗ್ಲೀಷ್ ಕಾಲುವೆಯ ತೀರ ಪ್ರದೇಶದಲ್ಲೂ ಮತ್ತು ಸ್ವಾಭಾವಿಕ ಅನಿಲ ಉತ್ತರ ಸಮುದ್ರದ ದಕ್ಷಿಣ ಭಾಗದಲ್ಲೂ ಕಂಡುಬರುತ್ತವೆ.

ಕೈಗಾರಿಕಾ ಕ್ರಾಂತಿಯ ಪ್ರಯುಕ್ತ ಇಂಗ್ಲೆಂಡ್‌ನಲ್ಲಿ ಕೈಗಾರಿಕೆಗಳು ವಿಫುಲವಾಗಿ ಅಭಿವೃದ್ಧಿ ಹೊಂದಿವೆ. ಇಲ್ಲಿನ ಕೈಗಾರಿಕೆಗಳು ಲಂಡನ್ ಹಾಗೂ ಅದರ ಸುತ್ತ ಮುತ್ತ ಮತ್ತು ಇಂಗ್ಲೆಂಡಿನ ಆಗ್ನೇಯ ಭಾಗದಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಇಲ್ಲಿನ ಕೈಗಾರಿಕಾ ಉತ್ಪನ್ನಗಳೆಂದರೆ ಪಾನೀಯಗಳು, ರಾಸಾಯನಿಕ ವಸ್ತುಗಳು, ಜವಳಿ, ಎಲೆಕ್ಟ್ರಾನಿಕ್ಸ್ ಉಪಕರಣಗಳು, ಉಕ್ಕಿನ ಉತ್ಪನ್ನಗಳು, ಪಾದರಕ್ಷೆಗಳು ಚರ್ಮೋತ್ಪನ್ನಗಳು ಸಂಸ್ಕರಿಸಿದ ಆಹಾರ ಪದಾರ್ಥಗಳು ಮತ್ತು ಉಣ್ಣೆ ಪದಾರ್ಥಗಳು.

ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯ ಕೊರತೆಯಿಂದ ಇಲ್ಲಿ ವ್ಯವಸಾಯ ಹೆಚ್ಚು ಕಂಡುಬರುವುದಿಲ್ಲ. ಇಲ್ಲಿನ ಬೆಳೆಗಳೆಂದರೆ ಗೋದಿ, ಸಕ್ಕರೆ ಗೆಡ್ಡೆ, ಹಣ್ಣು ಮತ್ತು ಆಲೂಗೆಡ್ಡೆ. ಇವುಗಳ ಜೊತೆ ಪಶುಪಾಲನೆ, ಕೋಳಿಸಾಕಣಿ, ಮೀನುಗಾರಿಕೆ ಪ್ರಮುಖ ಆರ್ಥಿಕ ಚಟುವಟಿಕೆಗಳಾಗಿವೆ. ಇಲ್ಲಿ ಕಾಡ್, ಹೆಡಾಕ್ ಮತ್ತು ಮ್ಯಾಕರಲ್ ಮೊದಲಾದ ಜಾತಿಯ ಮೀನುಗಳು ದೊರೆಯುತ್ತವೆ.

ಇಂಗ್ಲೆಂಡ್ ಉತ್ತಮ ಸಾರಿಗೆ ವ್ಯವಸ್ಥೆ ಹೊಂದಿದ್ದು, ವ್ಯಾಪಕವಾದ ರೈಲು, ರಸ್ತೆ ಮತ್ತು ಒಳನಾಡು ಜಲಸಾರಿಗೆಯನ್ನು ಹೊಂದಿದೆ.

ಇಂಗ್ಲೆಂಡಿನ ಭೌಗೋಳಿಕ ಸ್ಥಾನ ವ್ಯಾಪಾರಕ್ಕೆ ಅತ್ಯಂತ ಅನುಕೂಲಕರವಾಗಿದೆ. ಇದರ ವ್ಯಾಪಾರ ಯುರೋಪಿನ ಇತರ ರಾಷ್ಟ್ರಗಳು, ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಕೆನಡದೊಂದಿಗೆ ಏರ್ಪಡುತ್ತದೆ. ಇದು ರಫ್ತು ಮಾಡುವ ಸರಕುಗಳೆಂದರೆ ರಾಸಾಯನಿಕ ವಸ್ತುಗಳು, ಯಂತ್ರೋಪಕರಣಗಳು ಮತ್ತು ಸಾರಿಗೆ ಸಲಕರಣೆಗಳು. ಇದು ಮೋಟಾರು ಕಾರು, ಆಹಾರ ವಸ್ತುಗಳು, ಹಣ್ಣು ಮತ್ತು ತರಕಾರಿಗಳು, ಲೋಹ ಮತ್ತು ಖನಿಜ ಅದಿರುಗಳು ಮತ್ತು ಮರದ ದಿಮ್ಮಿಗಳನ್ನು ಆಮದು ಮಾಡಿಕೊಳ್ಳುತ್ತದೆ. (ಬಿ.ವಿ.ಜಿ.)

**ಇಂಡಿ:** ಬಿಜಾಪುರ ಜಿಲ್ಲೆಯ ಉತ್ತರಭಾಗದಲ್ಲಿರುವ ಒಂದು ತಾಲ್ಲೂಕು. ವಿಸ್ತೀರ್ಣ 2186 ಚ.ಕಿಮೀ. ಪಶ್ಚಿಮಘಟ್ಟಗಳ ಮಳೆನೆರಳಿನ ಪ್ರದೇಶದಲ್ಲಿರುವುದರಿಂದ ಮಳೆ ಕಡಿಮೆ. ಸರಾಸರಿ ವಾರ್ಷಿಕ ಮಳೆ ಪ್ರಮಾಣ ಸು. 160 ಸೆಂಮೀ. ಬೇಸಗೆಯಲ್ಲಿ ಸೆಕೆ ಹೆಚ್ಚು. ಉಷ್ಣತೆ ಕೆಲವು ಸಲ $46^0$ ಸೆ. ಮುಟ್ಟುವುದೂ ಉಂಟು. ತಾಲ್ಲೂಕಿನಲ್ಲಿ ಭೀಮಾನದಿ ಹರಿಯುತ್ತದೆ. ಪ್ರಮುಖ ವೃತ್ತಿ ವ್ಯವಸಾಯ. ಗೋದಿ, ಹತ್ತಿ ಮತ್ತು ಶೇಂಗ ಪ್ರಮುಖ ವ್ಯವಸಾಯೋತ್ಪನ್ನಗಳು. ಈ ತಾಲ್ಲೂಕಿನ ಜನಸಂಖ್ಯೆ 3,56,768. ಆಡಳಿತ ಕೇಂದ್ರ ಇಂಡಿ. ಶೇ. 21 ಜನ ಅಕ್ಷರಸ್ಥರು. (ಎಂ.ಜಿ.ಕೆ.)

**ಇಂಡಿಯದ ಹೆಬ್ಬಾಗಿಲು:** ಬ್ರಿಟಿಷ್ ದೊರೆ ಐದನೆಯ ಜಾರ್ಜ್ ಮತ್ತು ರಾಣಿ ಮೇರಿ ಇವರು ಭಾರತಕ್ಕೆ 1921 ಡಿಸೆಂಬರ್‌ನಲ್ಲಿ ಭೇಟಿ ಕೊಟ್ಟಿದ್ದರ ಜ್ಞಾಪಕಾರ್ಥವಾಗಿ ಮುಂಬಯಿ ನಗರದ ಸಮುದ್ರತೀರದಲ್ಲಿ ಭವ್ಯವಾಗಿ ಕಟ್ಟಿರುವ ಕಟ್ಟಡ (ಗೇಟ್ ವೇ ಆಫ್

ಇಂಡಿಯ). ಈ ಕಟ್ಟಡ ಇರುವ ಸ್ಥಳ ಮೊದಲಿನಿಂದಲೂ ನಾವಿಕರಿಗೆ ಬಂದರಾಗಿಯೂ ಗುರುತಿನ ಸ್ಥಳವಾಗಿಯೂ ಇದ್ದಿತ್ತು. ಇಲ್ಲಿ ಪ್ರಯಾಣಿಕರ ಉಪಯೋಗಕ್ಕಾಗಿ ಮುಗಲ್ ರೀತಿಯ ಒಂದು ಸಣ್ಣ ಕಟ್ಟಡವನ್ನು ಕಟ್ಟಿದ್ದರು. ಅನಂತರ ಬ್ರಿಟಿಷ್ ರಾಜರಾಣಿಯರನ್ನು ಸ್ವಾಗತಿಸುವ ಸಲುವಾಗಿ ಅದನ್ನು ತೆಗೆದು ತಾತ್ಕಾಲಿಕವಾದ ಮಂಟಪವನ್ನೂ ಸಭಾಂಗಣವನ್ನೂ ಕಟ್ಟಿಸಿದರು. ಅನಂತರ ಬ್ರಿಟಿಷ್ ಶಿಲ್ಪಿ ಜಿ. ವಿಟೆಟ್ ಎಂಬುವನು ಈಗಿರುವ ಕಟ್ಟಡ ನಿರ್ಮಿಸಿದ. ಇದು ಹದಿನಾರನೆಯ ಶತಮಾನದ ಗುಜರಾತೀ ವಾಸ್ತುಶೈಲಿಯಲ್ಲಿದ್ದು ಹಿಂದೂ ಮತ್ತು ಮುಸ್ಲಿಂ ಮಾರ್ಗಗಳ ಸಮ್ಮಿಳನಕ್ಕೊಂದು ಸಾಕ್ಷಿಯಾಗಿದೆ. ಮುಂಬಯಿಯ ಹತ್ತಿರ ಸಿಗುವ ಹಳದಿ ಅಗ್ನಿಶಿಲೆಗಳನ್ನು (ಎಲ್ಲೊ ಬೆಸಾಲ್ಟ್) ಕಟ್ಟಡಕ್ಕೆ ಬಳಸಲಾಗಿದೆ. ಕಮಾನುಗಳಿಗೆ ಉಪಯೋಗಿಸಿರುವ ಕಲ್ಲುಗಳು ಗ್ವಾಲಿಯರ್‌ನಿಂದ ತಂದವು. ಈ ಸ್ಮಾರಕದ ಆರಂಭೋತ್ಸವವನ್ನು 1924 ಡಿಸೆಂಬರ್ 24ರಂದು ಆಗಿನ ವೈಸ್‌ರಾಯ್ ಅರ್ಲ್ ರೀಡಿಂಗ್ ನೆರವೇರಿಸಿದ. ಇದು ಮುಂಬಯಿನ ಜನರಿಗೂ ಪ್ರವಾಸಿಗಳಿಗೂ ಪ್ರಿಯವಾದ ವಿಹಾರಸ್ಥಳ. (ಎಚ್.ಎಸ್.ಆರ್.)

**ಇಂಡಿಯನ್ ರಬ್ಬರ್ ಮರ:** ಮೊರೇಸಿ ಕುಟುಂಬದ ಫೈಕಸ್ ಇಲಾಸ್ಟಿಕ ಎಂಬ ಹೆಸರಿನ ದೊಡ್ಡ ಪ್ರಮಾಣದ ನಿತ್ಯಹರಿದ್ವರ್ಣದ ಮರ. 45 ಮೀ ಎತ್ತರ ಬೆಳೆದ ದಾಖಲೆಗಳಿವೆ. ಸಸ್ಯಕ್ಷೀರದಿಂದ (ಲ್ಯಾಟೆಕ್ಸ್) ರಬ್ಬರ್ ಉತ್ಪನ್ನವಾಗುತ್ತದೆ. ಮರಕ್ಕೆ ಬಿಳಲುಗಳು, ಬೇರುಗಳು ವಿಪುಲವಾಗಿವೆ. ಎಲೆಗಳ ಉದ್ದ 15 ಸೆಂಮೀ. ಒರಟು, ತೊಗಟೆಯ ಬಣ್ಣ ಬೂದು ಅಥವಾ ಕೆಂಪು ಮಿಶ್ರಿತ ಕಂದು. ಈ ಮರದ ವ್ಯಾಪ್ತಿ ಹಿಮಾಲಯದ ತಪ್ಪಲಿನಲ್ಲಿ, ನೇಪಾಳದಿಂದ ಮಯನ್ಮಾರ್‌ವರೆಗಿನ ತೇವಪೂರಿತ ಕಣಿವೆಗಳಲ್ಲಿ ಮತ್ತು ಇಳಿಜಾರುಗಳಲ್ಲಿದೆ.

ಮರದ ಮೂಲಸ್ಥಾನ ಭಾರತ. ಅಸ್ಸಾಮಿನಲ್ಲಿ 1874ರಲ್ಲಿಯೇ ಇದರ ತೋಟಗಳಿದ್ದವು. ಮುಂದೆ ಕರ್ನಾಟಕ, ತಮಿಳುನಾಡುಗಳಲ್ಲೂ ಇದರ ಕೃಷಿ ಮಾಡಿದರು. ಆದರೆ ಆರ್ಥಿಕವಾಗಿ ಹೆಚ್ಚು ಲಾಭದಾಯಕವಾದ ಪ್ಯಾರಾ ರಬ್ಬರ್ ಮರ (ಹಿವಿಯ ಬ್ರೆಜಿಲಿಯನ್ಸಿಸ್) ಇಂಡಿಯ ರಬ್ಬರ್ ಮರದ ಸ್ಥಾನವನ್ನೂ ಆಕ್ರಮಿಸಿತು. ಆದರೂ ಅಸ್ಸಾಂ ಮತ್ತು ಮಯನ್ಮಾರ್‌ಗಳಲ್ಲಿ ಕೊಂಚಮಟ್ಟಿಗೆ ಇದರಿಂದ ರಬ್ಬರ್ ಪಡೆಯುವುದುಂಟು.

ಬೀಜಗಳಿಂದ ಅಥವಾ ಕೊಂಬೆಗಳಿಂದ ಇದನ್ನು ಬೆಳೆಸಬಹುದು. ಸಸಿಗಳಿಂದ ಬೆಳೆಸಿದ ಮರಗಳು ಉತ್ತಮ ಎಂದು ಕಂಡುಬಂದಿದೆ. ಅಸ್ಸಾಮಿನಲ್ಲಿ ಮಳೆಗಾಲದಲ್ಲಿ ಬೀಜ ನೆಡುತ್ತಾರೆ. ಒಂದೆರಡು ವಾರಗಳಲ್ಲಿ ಮೊಳಕೆಯೊಡೆಯುತ್ತವೆ. ಸಸಿಗಳು 35 ಸೆಂಮೀ. ಎತ್ತರಕ್ಕೆ ಬೆಳೆದಾಗ ನರ್ಸರಿಗಳಿಗೆ ವರ್ಗಾಯಿಸುತ್ತಾರೆ. ಸು. 3 ವರ್ಷಗಳಾದ ಮೇಲೆ, ಗಿಡಗಳು 3 ಮೀ ಎತ್ತರಕ್ಕೆ ಬೆಳೆದಾಗ, 9 ಮೀ ಅಂತರಕ್ಕೊಂದರಂತೆ ತೋಟದಲ್ಲಿ ನೆಡುತ್ತಾರೆ.

ಕಾಂಡ ಮತ್ತು ದೊಡ್ಡ ದೊಡ್ಡ ಕೊಂಬೆಗಳಿಂದ ಸಸ್ಯಕ್ಷೀರವನ್ನು ಪಡೆಯಬಹುದು. ಕಾಂಡದ ಮೇಲೆ ಕೊಂಬೆಗಳ ಮೇಲೆ ಅಡ್ಡವಾಗಿ ಕತ್ತಿಯಿಂದ ಕೊಯ್ದು ಗಾಯಮಾಡಿ ಅಲ್ಲಿಂದ ಸೋರುವ ಕ್ಷೀರವನ್ನು ಎಲೆ ಅಥವಾ ಚಾಪೆಗಳಲ್ಲಿ ಶೇಖರಿಸುತ್ತಾರೆ. ಕೊಂಚಭಾಗ ಕೊಯ್ದಿರುವ ಜಾಗದಲ್ಲೇ ಗಟ್ಟಿಯಾಗುತ್ತದೆ. ಗಟ್ಟಿಯಾಗಿರುವುದನ್ನೂ ಚಾಪೆಗಳಲ್ಲಿ ಶೇಖರವಾಗಿರುವುದನ್ನೂ ತೆಗೆದು ಶುಚಿಮಾಡಿ ಒಣಗಿಸಿ ಉಂಡೆ ಕಟ್ಟುತ್ತಾರೆ.

ಬಿಸಿಲಿನಲ್ಲಿ ಒಣಗಿದಾಗ ಕ್ಷೀರ ರಬ್ಬರ್ ಆಗುತ್ತದೆ. ಟ್ಯಾನಿಕ್ ಆಮ್ಲ ಮತ್ತು ಆಲಂ ಸೇರಿಸಿ ಇದನ್ನು ಹೆಪ್ಪುಗಟ್ಟಿಸಬಹುದು. ರಬ್ಬರಿನ ಉತ್ಪನ್ನ ಪ್ರಮಾಣದ ದೃಷ್ಟಿಯಿಂದ ಇಂಡಿಯ ರಬ್ಬರ್ ಲಾಭದಾಯಕವಲ್ಲ. ಇದರ ಉತ್ಪನ್ನ ಒಂದು ಹೆ.ಗೆ ಸರಾಸರಿ 2.5 ಕೆ.ಜಿ. ಅಲ್ಲದೆ ಇದರ ಸಸ್ಯಕ್ಷೀರದಲ್ಲಿ ರಾಳಪದಾರ್ಥ ಹೆಚ್ಚಾಗಿರುವುದು ಇದರಿಂದ ಬಂದ ರಬ್ಬರ್ ಕೆಲಕಾಲಾನಂತರ ಬಹಳ ಗಟ್ಟಿಯಾಗಿ ಬಿರುಸಾಗಿಬಿಡುತ್ತದೆ. (ಎ.ಕೆ.ಎಸ್.;ಕೆ.ಬಿ.ಎಸ್.)

**ಇಂಡಿಯನ್ ರೋಡ್ಸ್ ಕಾಂಗ್ರೆಸ್:** ಭಾರತೀಯ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ರಸ್ತೆ ಸಾರಿಗೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ತಾಂತ್ರಿಕ ಪರಿಹಾರ ಸೂಚಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಸ್ಥಾಪನೆ 1934. ಕೇಂದ್ರ ಕಾರ್ಯಾಲಯ ನವದೆಹಲಿಯಲ್ಲಿದೆ. ಇದು ಪ್ರತಿವರ್ಷ ಒಂದು ಮಹಾ ಅಧಿವೇಶನ ನಡೆಸುವುದು. ಇದರಲ್ಲಿ ರಾಷ್ಟ್ರಾದ್ಯಂತ 150ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವರು. ಇದರ ಸಾಮಾನ್ಯ ಅಧಿವೇಶನಗಳಲ್ಲಿ ತಾಂತ್ರಿಕ ವಿಷಯಗಳನ್ನು ಕುರಿತ ಚರ್ಚೆ ನಡೆಯುತ್ತದೆ. ಅಧ್ಯಯನ ನಡೆಸಿ ಸಿದ್ಧಪಡಿಸಲಾದ ಪ್ರಬಂಧಗಳನ್ನು ಸಮ್ಮೇಳನದಲ್ಲಿ ಮಂಡಿಸಲಾಗುತ್ತದೆ. ಇದರ ಪ್ರಮುಖ ಕಾರ್ಯಗಳನ್ನು ಸಂಬಂಧಿಸಿದ ಸಮಿತಿ, ಉಪಸಮಿತಿ ನಿರ್ವಹಿಸುವುವು. ಇವು ಮುಖ್ಯವಾಗಿ ಭೂಗೋಳ ವಿಜ್ಞಾನಿಗಳು, ಎಂಜನಿಯರುಗಳ ಶಿಕ್ಷಣ, ವ್ಯಾಪಾರ, ಕಲೆಯ ದೃಷ್ಟಿಯಿಂದ ರಸ್ತೆಗಳ ನಿರ್ಮಾಣ ಮೊದಲಾದವುಗಳನ್ನು ಒಳಗೊಂಡಿವೆ. ಜರ್ನಲ್ ಎಂಬ ತ್ರೈಮಾಸಿಕವನ್ನು ಟ್ರಾನ್ಸ್‌ಪೋರ್ಟ್ ಕಮ್ಯುನಿಕೇಷನ್ ಮಂತ್ಲಿ ರಿವ್ಯೂ ಎಂಬ ಮಾಸಿಕವನ್ನು ಇದು ಪ್ರಕಟಿಸುತ್ತಿದೆ. ರಸ್ತೆಗಳ ನಿಯಮ ಕುರಿತು ಲಘುಹೊತ್ತಿಗೆಗಳನ್ನು (ಬುಲೆಟಿನ್) ಪ್ರಕಟಿಸುತ್ತಿದೆ. ಸಂಸ್ಥೆಗೆ ಒಂದು ಸುಸಜ್ಜಿತ ಗ್ರಂಥಭಂಡಾರ ಇದೆ. ರಸ್ತೆ ನಿರ್ಮಾಣ ಕುರಿತು ಸಾರ್ವಜನಿಕರಿಂದ, ವಿಜ್ಞಾನಿಗಳಿಂದ ತಂತ್ರಜ್ಞರಿಂದ ಬಂದ ಪ್ರಶ್ನೆಗಳಿಗೆ ಈ ಸಂಸ್ಥೆ ಉತ್ತರಿಸುತ್ತದೆ. (ಎಸ್.ಎನ್.)

**ಇಂಡಿಯನ್ನರು (ಉತ್ತರ ಅಮೆರಿಕದ ರೆಡ್ ಇಂಡಿಯನ್ನರು):** ಉತ್ತರ ಅಮೆರಿಕದ ಮೂಲ ನಿವಾಸಿಗಳು. ಯುರೋಪಿಯನ್ನರು ಉತ್ತರ ಅಮೆರಿಕಕ್ಕೆ ವಲಸೆ ಬರುವುದಕ್ಕೆ ಮುಂಚಿನಿಂದಲೂ ಇವರು ಅಲ್ಲಿ ವಾಸಿಸುತ್ತಿದ್ದಾರೆ. ಅಮೆರಿಕವನ್ನು ಮೊದಲ

ಬಾರಿ ಕಂಡ ಕೊಲಂಬಸ್ ತಾನು ಇಂಡಿಯದ ಪೂರ್ವತೀರವನ್ನು ತಲಪಿದ್ದೇನೆಂದು ಭಾವಿಸಿದ್ದರಿಂದ ಅಲ್ಲಿ ವಾಸಿಸುತ್ತಿದ್ದ ಜನರನ್ನು ಇಂಡಿಯನ್ನರೆಂದು ಕರೆದ. ಇವರು ಅಮೆರಿಕದವರಾದ್ದರಿಂದ ಇವರಿಗೆ ಈ ಹೆಸರು ಬಂತು. ಇವರ ಪೂರ್ವಿಕರು ಏಷ್ಯದ ಈಶಾನ್ಯಭಾಗದಿಂದ ಬೇರಿಂಗ್ ಜಲಸಂಧಿಯ ಮೂಲಕ ವಲಸೆ ಬಂದವರು ಎಂಬುದು ಈಗ ಬಹಳ ಮಟ್ಟಿಗೆ ಖಚಿತವಾಗಿದೆ. ಇವರು ಅಲೆ ಅಲೆಯಾಗಿ ಬಂದು ಬೇರೆ ಬೇರೆಡೆಗಳಲ್ಲಿ ನೆಲೆಸಿದ್ದರಿಂದ ಇವರಲ್ಲಿ ಅನೇಕ ಭಾಷಾವರ್ಗಗಳಿವೆ. ನೆಲೆಸಿದ ಪ್ರದೇಶದ ಭೂಸ್ಥಿತಿ, ವಾಯುಗುಣ ಮುಂತಾದವುಗಳಿಗೆ ಅನುಗುಣವಾಗಿ ಇವರ ನಾಗರಿಕತೆಯಲ್ಲೂ ವೈವಿಧ್ಯವುಂಟಾಯಿತು. ಇವರು ಮಂಗೋಲಾಯಿಡ್ ಬುಡಕಟ್ಟಿಗೆ ಸೇರಿದ್ದು, ಇವರೆಲ್ಲ ಒಂದೇ ಕಡೆಯಿಂದ ವಲಸೆ ಬಂದವರಾದ್ದರಿಂದ ಇವರ ದೈಹಿಕ ಲಕ್ಷಣಗಳು ಸಾಮಾನ್ಯವಾಗಿ ಒಂದೇ ರೀತಿಯಾಗಿವೆ. ಇವರ ತಲೆಗೂದಲು ಕಪ್ಪು, ಒರಟು; ಕಣ್ಣುಗಳು ಕಪ್ಪು ; ಮೈ ಮೇಲೆ ಕೂದಲು ವಿರಳ; ಚರ್ಮದ್ದು ಕಂದುಬಣ್ಣ. ನವಶಿಲಾಯುಗದ ಸಂಸ್ಕೃತಿಯನ್ನೇ ಇವರು ತಮ್ಮೊಡನೆ ತಂದರು. ತಿರುಗಣೆಯನ್ನು ತಿರುಗಿಸಿ ಇವರು ಬೆಂಕಿ ಮಾಡುತ್ತಿದ್ದರು; ನಾಯಿ ಸಾಕುತ್ತಿದ್ದರು ; ಕುಕ್ಕೆ ಮಾಡುತ್ತಿದ್ದರು; ಕಲ್ಲಿನ ಸಲಕರಣೆ ಉಪಯೋಗಿಸುತ್ತಿದ್ದರು.

ರೆಡ್ ಇಂಡಿಯನ್ನರ ಒಂದು ನೃತ್ಯ

ಯುರೋಪಿಯನ್ನರು ಬರುವುದಕ್ಕೆ ಮುಂಚೆಯೇ ಇಂಡಿಯನ್ನರು ಭೂವ್ಯವಸಾಯದಲ್ಲಿ ಮುಂದುವರಿದಿದ್ದರು. ಹತ್ತಿ, ಹೊಗೆಸೊಪ್ಪು, ಆಲೂಗಡ್ಡೆ, ಮುಸುಕಿನ ಜೋಳ, ಹುರುಳಿ, ಪರಂಗಿಹಣ್ಣು ಮುಂತಾದುವನ್ನು ಬೆಳೆಯುತ್ತಿದ್ದರು. ಬಾಣ, ಈಟಿ, ಭರ್ಜಿಗಳಿಂದ ಬೇಟೆಯಾಡುತ್ತಿದ್ದರು. ಸ್ಲೆಡ್ಜ್ ಅಥವಾ ಜಾರು ಬಂಡಿಗಳಲ್ಲಿ, ಹರಿಗೋಲುಗಳಲ್ಲಿ ಪ್ರಯಾಣ ಮಾಡುತ್ತಿದ್ದರು. ಕುಶಲ ಕಲೆಗಳಲ್ಲಿ ಬಹಳ ಮುಂದುವರಿದಿದ್ದರು; ಕೊಳಲು, ಮದ್ದಲೆ ಮುಂತಾದುವನ್ನು ಗಾಯನಕ್ಕೆ ಉಪಯೋಗಿಸುತ್ತಿದ್ದರು; ಚರ್ಮ, ಮಡಕೆ, ಮೂಳೆಗಳ ಮೇಲೆ ಅಂದವಾದ ಚಿತ್ರಗಳನ್ನು ಬರೆಯುತ್ತಿದ್ದರು. ಅನೇಕ ದೇವತೆಗಳನ್ನು ಆರಾಧಿಸುತ್ತಿದ್ದರು. ಪ್ರಕೃತಿಯ ಪ್ರತಿಯೊಂದು ಕ್ರಿಯೆಯಲ್ಲೂ ದೇವತಾಶಕ್ತಿಯೊಂದು ವ್ಯಕ್ತಪಡುತ್ತದೆಯೆಂದು ನಂಬಿ ಈ ಶಕ್ತಿಗಳನ್ನು ಪೂಜಿಸುತ್ತಿದ್ದರು. ಮಾನವನ ಆತ್ಮ ಈ ಶಕ್ತಿಯ ಒಂದು ಅಂಶವಾದ್ದರಿಂದ ಅದೂ ಅಮರವೆಂದು ಇವರ ನಂಬಿಕೆ. ಒಂದೊಂದು ಬಣಕ್ಕೂ ಒಂದೊಂದು ಬುಡಕಟ್ಟಿಗೂ ಪ್ರತ್ಯೇಕ ದೇವತೆಯುಂಟು. ಈ ಗುಂಪಿನ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಈ ದೇವತೆಯ ಕೆಲಸ. ಈ ಸ್ಥಾನಿಕ ದೇವತೆಗಳೆಲ್ಲ ಸಾಮಾನ್ಯವಾಗಿ ಉಪಕಾರಿಗಳು, ಧರ್ಮಶೀಲರು. ಇದು ಈ ಜನರ ಸಾಮಾನ್ಯ ನಂಬಿಕೆ. ಸಮಾಜ ರಚನೆಯಲ್ಲಿ ಮಾತ್ರ ಇವರಲ್ಲಿ ವೈವಿಧ್ಯವನ್ನು ಕಾಣಬಹುದು. ಇರಕ್ವಾಯ್ಸ್, ನಚೀಸ್, ಪ್ಯುಬ್ಲೊ ಇಂಡಿಯನ್ನರು ಹೆಚ್ಚು ನಾಗರಿಕರಾಗಿ ವ್ಯವಸ್ಥಿತ ಸಮಾಜ ಜೀವನ ನಡೆಸುತ್ತಿದ್ದರು.

ಕೊಲಂಬಸ್ ಅಮೆರಿಕಕ್ಕೆ ಬಂದ ಕಾಲದಲ್ಲಿ 12 ಲಕ್ಷಕ್ಕೂ ಹೆಚ್ಚು ಇಂಡಿಯನ್ನರು ಅಲ್ಲಿ ವಾಸಿಸುತ್ತಿದ್ದರೆಂದು ತಿಳಿದುಬಂದಿದೆ. 20ನೆಯ ಶತಮಾನದ ಮೊದಲ ವರ್ಷಗಳಲ್ಲಿ ಇವರ ಸಂಖ್ಯೆ ಸು. 4 ಲಕ್ಷಕ್ಕೆ ಕುಗ್ಗಿತ್ತು. ಈ ದೇಶಕ್ಕೆ ಬಂದ ಐರೋಪ್ಯ ವಲಸೆಗಾರರೊಂದಿಗೆ ನಡೆದ ಯುದ್ಧಗಳಲ್ಲಿ ಇವರು ಪದೇ ಪದೇ ಅನುಭವಿಸಿದ ಸೋಲುಗಳೂ ಬಿಳಿಯರಿಂದ ಇವರು ಕಲಿತ ಕುಡಿತವೇ ಮುಂತಾದ ದುಶ್ಚಟಗಳೂ ಹಳೆಯ ಜಗತ್ತಿನಿಂದ ಬಂದ ಬಿಳಿಯರು ತಮ್ಮೊಂದಿಗೆ ತಂದು ಹರಡಿದ ರೋಗಗಳೂ ಬಂದೂಕಿನ ಆಗಮನವೂ ಇವರ ಜನಸಂಖ್ಯೆ ತೀವ್ರವಾಗಿ ಕುಗ್ಗಲು ಕಾರಣ. 19ನೆಯ ಶತಮಾನದ ಮಧ್ಯಕಾಲದಿಂದ ಇವರು ಪ್ರತ್ಯೇಕ ಭೂ ಪ್ರದೇಶದಲ್ಲಿ ವಾಸಿಸುವಂತೆ ಕಡ್ಡಾಯ ಮಾಡಲಾಯಿತು. ಒಂದು ಸ್ಥಳದಲ್ಲಿ ನೆಲೆನಿಂತು ಬೇಸಾಯದಲ್ಲಿ ತೊಡಗುವ ಅಭ್ಯಾಸ ಇವರಲ್ಲಿರಲಿಲ್ಲವಾದ್ದರಿಂದ ಮೊದಮೊದಲು ಇವರಿಗೆ ಹಿಂಸೆಯಾಯಿತು. ಕ್ರಿಯಾಹೀನತೆಯೂ ಅಭಿಮಾನ ಶೂನ್ಯತೆಯೂ ಇವರ ಕ್ಷೀಣದೆಸೆಗೆ ಕಾರಣಗಳಾದುವು.

ಅಮೆರಿಕದಲ್ಲಿ ಬೆಳೆಯುತ್ತಿದ್ದ ಕೈಗಾರಿಕೆಗಳಿಗೆ ಸ್ಥಳೀಯ ಕಾರ್ಮಿಕರ ಬೇಡಿಕೆ ಅಧಿಕವಾದಾಗ ಇವರು ಮತ್ತೆ ಉಪಯುಕ್ತ ಜೀವನದಲ್ಲಿ ಹೆಚ್ಚು ಹೆಚ್ಚಾಗಿ ತೊಡಗುವುದು ಸಾಧ್ಯವಾಯಿತು. ಹಿಂದಿನ ತಲೆಮಾರುಗಳ ಗಾಯದ ಗುರುತುಗಳನ್ನು ಮರೆತು ಇವರು ಹೊಸ ಪರಿಸ್ಥಿತಿಗೆ ಹೊಂದಿಕೊಂಡರು. ಜನಸಂಖ್ಯೆಯ ಇಳಿತಕ್ಕೆ ತಡೆಯುಂಟಾಯಿತು. ಇವರ ಸಂಖ್ಯೆ ನಿಧಾನವಾಗಿ ಬೆಳೆಯಲಾರಂಭಿಸಿತು. ಒಂದು ಶತಮಾನದಿಂದೀಚೆಗೆ ಸಂಯುಕ್ತ ಸಂಸ್ಥಾನದ ಸರ್ಕಾರ ಈ ಇಂಡಿಯನ್ನರ ಕ್ಷೇಮಾಭ್ಯುದಯಗಳ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಿ ಅವರ ವಿದ್ಯಾಭ್ಯಾಸಕ್ಕಾಗಿ ಸುವ್ಯವಸ್ಥೆ ಕಲ್ಪಿಸಿದೆ. ಮಸಚೂಸೆಟ್ಸ್‌ನಲ್ಲಿರುವ ಸ್ಟಾಕ್ ಬ್ರಿಜ್ ನಗರದ ಇಂಡಿಯನ್ ಪ್ರೌಢ ವಿದ್ಯಾಶಾಲೆಯಂಥ ಶಿಕ್ಷಣ ಕೇಂದ್ರಗಳಲ್ಲಿ ಉನ್ನತ ಶಿಕ್ಷಣವೂ ಇವರಿಗೆ ದೊರಕುತ್ತದೆ. 1924ರಲ್ಲಿ ಇವರಿಗೆ ಪೌರತ್ವ ಮಾನ್ಯತೆ ನೀಡಲಾಯಿತು. ಸುಮಾರು ನಾಲ್ಕು ಲಕ್ಷ ಇಂಡಿಯನ್ನರು ಸಂಯುಕ್ತ ಸಂಸ್ಥಾನದಲ್ಲಿದ್ದಾರೆ. ಕೆನಡದಲ್ಲಿ ಇವರ ಸಂಖ್ಯೆ ಒಂದೂಕಾಲು ಲಕ್ಷ. ಅಲ್ಲಿ ಇವರು ಅಲ್ಪ ಸಂಖ್ಯಾತರೆಂದು ಪರಿಗಣಿತರಾಗಿದ್ದು ಸರ್ಕಾರದ ರಕ್ಷಣೆ ಪಡೆದಿದ್ದಾರೆ. ಅಲ್ಲೂ ಇವರಿಗೆ ಪೌರತ್ವ ನೀಡಲಾಗಿದೆ. (ಬಿ.ಕೆ.ಜಿ.)

**ಇಂಡಿಯನ್ನರು (ಲ್ಯಾಟಿನ್ ಮತ್ತು ಮಧ್ಯ ಅಮೆರಿಕ):** ಲ್ಯಾಟಿನ್ ಮತ್ತು ಮಧ್ಯ ಅಮೆರಿಕದ ಮೂಲವಾಸಿಗಳು. ಯುರೋಪಿಯನ್ನರು ವಲಸೆ ಬರುವ ಮೊದಲು ಇಲ್ಲಿ ಇವರ ಸಂಖ್ಯೆ 20 ಲಕ್ಷಕ್ಕೂ ಹೆಚ್ಚಾಗಿತ್ತೆಂಬ ಅಭಿಪ್ರಾಯವಿದೆ. ಮೆಕ್ಸಿಕೊ ಮತ್ತು ನೆರೆಹೊರೆಯ ಪ್ರದೇಶಗಳಲ್ಲೂ ಆಂಡೀಸ್ ಪರ್ವತ ಪ್ರದೇಶದಲ್ಲೂ ಇವರು ಹೆಚ್ಚು ಸಂಖ್ಯೆಯಲ್ಲಿದ್ದರು. ಮೆಕ್ಸಿಕೊ, ಗ್ವಾಟೆಮಾಲ, ಈಕ್ವೆಡಾರ್, ಬೊಲಿವಿಯ ಮತ್ತು ಪೆರು ಪ್ರಾಂತ್ಯಗಳಲ್ಲಿ ಈಗಲೂ ಸುಮಾರು ಅರ್ಧ ಭಾಗದಷ್ಟು ಜನ ಇಂಡಿಯನ್ನರು. ಒಂದು ಕಾಲದಲ್ಲಿ ಕ್ರಮೇಣ ನಶಿಸುತ್ತಿದ್ದ ಈ ಜನಾಂಗ ಇತ್ತೀಚೆಗೆ ಬೆಳೆಯುತ್ತಿರುವುದಲ್ಲದೆ ಆಧುನಿಕ ನಾಗರಿಕತೆಗೆ ಹೊಂದಿಕೊಳ್ಳುತ್ತಿದೆ.

ಪ್ರ.ಶ.ಪೂ ಸು. 35,000 ವರ್ಷಗಳಷ್ಟು ಹಿಂದಿನಿಂದ ಮೂರನೆಯ ಸಹಸ್ರಮಾನದವರೆಗೂ ಬೇರಿಂಗ್ ಜಲಸಂಧಿಯ ಮಾರ್ಗವಾಗಿ ಅಲೆ ಅಲೆಯಾಗಿ ವಲಸೆ ಬಂದ ಈ ಜನರು ಇಡೀ ಅಮೆರಿಕ ಖಂಡಗಳಲ್ಲಿ ಹಬ್ಬಿ ಬೇಟೆ, ಮೀನುಗಾರಿಕೆಗಳಿಂದ ಜೀವಿಸುತ್ತಿದ್ದರು. ಪ್ರ.ಶ.ಪೂ. 2ನೆಯ ಸಹಸ್ರಮಾನದಲ್ಲಿ ವ್ಯವಸಾಯವನ್ನು ಪ್ರಾರಂಭಿಸಿ ಗ್ರಾಮೀಣ ಮತ್ತು ನಗರ ಸಂಸ್ಕೃತಿಗಳನ್ನು ಬೆಳೆಸಿಕೊಂಡರು. ಪ್ರಾದೇಶಿಕ ವೈವಿಧ್ಯಗಳ ಪ್ರಭಾವದಿಂದ ಹಲವು ವಿಧದ ಸಂಸ್ಕೃತಿಗಳು ಹುಟ್ಟಿಕೊಂಡವು. ಈ ಜನರಲ್ಲಿ ಸು. 1,700 ಭಾಷೆಗಳು ಬಳಕೆಯಲ್ಲಿದ್ದುವು. ಪ್ರತಿಯೊಂದು ಗುಂಪಿನವರೂ ತಮ್ಮದೇ ಆದ ಭಾಷೆ ಬಳಸುತ್ತಿದ್ದರು.

ಮಧ್ಯ ಅಮೆರಿಕ ಅಥವಾ ಮೆಕ್ಸಿಕೊ ಮತ್ತು ಅಕ್ಕಪಕ್ಕದ ಪ್ರದೇಶಗಳಲ್ಲಿ, ಅಮೆರಿಕ ಸಂಯುಕ್ತ ಸಂಸ್ಥಾನ ಆ ಪ್ರದೇಶಗಳನ್ನು ಗೆಲ್ಲುವ ಮೊದಲು, ಅನೇಕ ಗುಂಪುಗಳ ಇಂಡಿಯನ್ನರು ವಾಸಿಸುತ್ತಿದ್ದರು. ಅವರಲ್ಲಿ ನವಹೋ, ಪ್ಯುಬ್ಲೊ, ಹುಯಿಚೊಲ್ ಮುಂತಾದ ಪಂಗಡಗಳು ಮುಖ್ಯವಾದುವು. ಪ್ರ.ಶ. 2ನೆಯ ಶತಮಾನದ ಅನಂತರ ಮೆಕ್ಸಿಕೊದಲ್ಲಿ ಆಜ್ಟೆಕರೂ ಮಧ್ಯ ಅಮೆರಿಕದಲ್ಲಿ ಮಾಯ ಪಂಗಡದವರೂ ಉನ್ನತಮಟ್ಟದ ಸಂಸ್ಕೃತಿಗಳನ್ನು ಬೆಳೆಸಿಕೊಂಡರು. ಹೈರೊಗ್ಲಿಫಿಕ್ ಬರೆವಣಿಗೆಯನ್ನೂ ಉನ್ನತಮಟ್ಟದ ರಾಜಕೀಯ ಮತ್ತು ಮತೀಯ ಪದ್ಧತಿಗಳನ್ನೂ ಕಲೆ ವಿಜ್ಞಾನಗಳನ್ನೂ ಬೆಳೆಸಿಕೊಂಡಿದ್ದರು.

ಆಜ್ಟೆಕ್ ಜನ ಉತ್ತರದಿಂದ ವಲಸೆ ಬಂದ ಯುದ್ಧಪ್ರಿಯರು. ಅಲೆಮಾರಿ ವರ್ಗಕ್ಕೆ ಸೇರಿದವರು. ಇವರಲ್ಲಿ ನರಬಲಿ ರೂಢಿಯಲ್ಲಿತ್ತು. ಇವರು ಉತ್ತಮ ಲೋಹದ ವಸ್ತು ಮತ್ತು ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದರು. ವ್ಯವಸಾಯದಲ್ಲಿ ಪ್ರಗತಿಪರರಾಗಿದ್ದರು. ಇವರು ಹೆಚ್ಚಾಗಿ ಜೋಳ ಬೆಳೆಯುತ್ತಿದ್ದರು. ಎತ್ತರದ ಕಂಬಗಳಿಂದಲೂ ರೆಕ್ಕೆಯುಳ್ಳ ಸರ್ಪಗಳಿಂದಲೂ ಅಲಂಕೃತವಾದ ವಾಸ್ತುಶಿಲ್ಪಗಳನ್ನು ನಿರ್ಮಿಸಿದ್ದರು. ಈ ಸಂಸ್ಕೃತಿಯಲ್ಲಿ ಮತಸಂಬಂಧವಾದ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯವಿತ್ತು. ಪ್ರಪಂಚದ ಪುರಾತನ ಸಾಂಸ್ಕೃತಿಕ ಕೇಂದ್ರಗಳಲ್ಲಿ ಆಜ್ಟೆಕ್ ಮತ್ತು ಮಾಯ ಸಾಂಸ್ಕೃತಿಕ ಕೇಂದ್ರಗಳೂ ಸಹ ಪ್ರಮುಖವಾಗಿವೆ.

ಮಧ್ಯ ಅಮೆರಿಕದ ಮಾಯ ಜನರ ನಗರಗಳು 1511ರಲ್ಲಿ ಸ್ಪ್ಯಾನಿಷ್ ಜನರಿಂದ ನಾಶಗೊಂಡವು. ಇವರು ಕಾಡು ಕಡಿದು ಬೇಸಾಯ ಮಾಡುತ್ತಿದ್ದರು. ಒಂದೆಡೆಯಲ್ಲಿ ಭೂಮಿಯ ಸಾರ ಮುಗಿದಾಗ ಆ ಸ್ಥಳ ಬಿಟ್ಟು ಬೇರೆಡೆಗೆ ಹೋಗುತ್ತಿದ್ದರು. ಅಲ್ಲಿ ಮತ್ತೆ ಇದೇ ರೀತಿ ವ್ಯವಸಾಯ ಮುಂದುವರಿಸುತ್ತಿದ್ದರು. ಅಡಿಗಡಿಗೆ ವ್ಯವಸಾಯ ಕ್ಷೇತ್ರ ಬದಲಾಗುತ್ತಿದ್ದುದರ ಫಲವಾಗಿ ಗ್ರಾಮಗಳು ಸ್ಥಳಾಂತರಗೊಳ್ಳುತ್ತಿದ್ದುದರಿಂದ ಇವರ ನಾಗರಿಕ ಜೀವನ ಬೆಳೆಯಲು ಅವಕಾಶವಿರಲಿಲ್ಲ. ಆದರೆ ಮತನಾಯಕರ ನಿವಾಸಕ್ಕಾಗಿ ಇವರು ದೇವಾಲಯಕೇಂದ್ರಸ್ಥಳಗಳಾದ ದೊಡ್ಡ ನಗರಗಳನ್ನು ನಿರ್ಮಿಸಿದ್ದರು.

ಶಾಂತಿಪ್ರಿಯರಾದ ಈ ಜನರಲ್ಲಿ ಮತೀಯ ಜೀವನಕ್ಕೆ ಪ್ರಾಧಾನ್ಯವಿತ್ತು. ವಾಸ್ತುಶಿಲ್ಪವೂ ಶಿಲ್ಪಕಲೆಯೂ ಪಂಚಾಂಗ ಪದ್ಧತಿಯೂ ಉನ್ನತಮಟ್ಟಕ್ಕೇರಿದ್ದುವು. ದೇವಾಲಯಗಳನ್ನು ಇವರು ಕೃತಕ ದಿಬ್ಬದ ಮೇಲೋ ಪಿರಮಿಡ್ಡುಗಳ ಮೇಲೋ ನಿರ್ಮಿಸುತ್ತಿದ್ದರು. ಲೋಹದ ಬಳಕೆ ವಿರಳವಾಗಿತ್ತು. ಮರದಲ್ಲೂ ಅಮೂಲ್ಯವಾದ ಶಿಲೆಯಲ್ಲೂ ಜೇಡಿಯ ಮಣ್ಣಿನಲ್ಲೂ ಬಣ್ಣ ಬಣ್ಣದ ಶಿಲ್ಪಗಳನ್ನು ನಿರ್ಮಿಸುತ್ತಿದ್ದರು.

ಆಂಡೀಸ್ ಪರ್ವತಗಳ ದಕ್ಷಿಣದಲ್ಲಿ ಬಹುಸಂಖ್ಯೆಯ ಇಂಡಿಯನ್ನರು ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಬೇಟೆಯೂ ಮೀನುಗಾರಿಕೆಯೂ ರೂಢಿಯಲ್ಲಿದ್ದುವು. ಸ್ವಯಂಪೂರ್ಣವಾಗಿದ್ದ ಈ ಗ್ರಾಮಗಳಲ್ಲಿ ಅನುವಂಶಿಕ ನಾಯಕರಿರುತ್ತಿದ್ದರು. ಮತೀಯ ಕಲಾಪಗಳು ವೈದ್ಯ, ಮಂತ್ರ, ತಂತ್ರ–ಎಲ್ಲವೂ ನಾಯಕರ ನಿರ್ದೇಶನದಲ್ಲಿ ನಡೆಯುತ್ತಿದ್ದುವು. ನರಬಲಿಗಾಗಿ ಜನರನ್ನೊದಗಿಸಿಕೊಳ್ಳುವುದಕ್ಕೂ ತಮ್ಮ ವಿಜಯ ಸಂಕೇತಗಳಾಗಿ ಮಾನವರ ತಲೆಗಳನ್ನು ಸಂಗ್ರಹಿಸುವುದಕ್ಕೂ ಈ ಜನ ಆಗಿಂದಾಗ್ಗೆ ಯುದ್ಧಗಳಲ್ಲಿ ತೊಡಗುತ್ತಿದ್ದರು.

ಕೆರಿಬಿಯನ್ ಸಮುದ್ರ ಮತ್ತು ಆಂಡೀಸ್ ಪರ್ವತಗಳ ನೆರೆಹೊರೆಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಇಂಡಿಯನ್ನರು ಗ್ರಾಮೀಣ ಸಂಸ್ಕೃತಿ ವರ್ಗಕ್ಕೆ ಸೇರಿದ್ದರು. ವ್ಯವಸಾಯ ಇವರ ಮುಖ್ಯ ಕಸಬು. ಮಣ್ಣಿನ ಪಾತ್ರೆ, ನೇಯ್ದ ಬುಟ್ಟಿ, ತೂಗುಮಂಚ, ಹುಲ್ಲುಹಾವಣಿಯ ಮನೆ–ಇವು ಇದರ ಜೀವನ ಸಾಧನ. ಇವರು ನಿತ್ಯಬಳಕೆಯ ವಸ್ತುಗಳನ್ನು ಹೆಚ್ಚಾಗಿ ತಯಾರಿಸುತ್ತಿದ್ದರು ; ವ್ಯಾಪಾರ ವ್ಯವಹಾರಗಳಲ್ಲೂ ನಿರತರಾಗಿದ್ದರು. ಅನುವಂಶಿಕ ನಾಯಕರು ಸಮಾಜದ ಮೇಲೆ ಬಿಗಿಯಾದ ನಿಯಮಗಳನ್ನು ಹೊರಿಸಿದ್ದರು. ಯೋಧರಿಗೂ ಪುರೋಹಿತವರ್ಗಕ್ಕೂ ಪ್ರಾಧಾನ್ಯವಿತ್ತು. ಇವರ ಗುಂಪುಗಳು ರಾಜಕೀಯವಾಗಿ ಆಗಾಗ ಒಂದಾದರೂ ತಮ್ಮ ಪ್ರತ್ಯೇಕತೆಯನ್ನುಳಿಸಿಕೊಂಡಿರುತ್ತಿದ್ದುವು; ಮಧ್ಯ ಆಂಡೀಸ್ ಪ್ರದೇಶಗಳು ಸಾಂದ್ರ ವ್ಯವಸಾಯ ಪಶುಪಾಲನೆಗಳಿಂದ ಜನನಿಬಿಡವಾಗಿದ್ದು, ದಕ್ಷ ಮತ್ತು ಸುವ್ಯವಸ್ಥಿತ ಆಡಳಿತಕ್ಕೊಳಪಟ್ಟಿದ್ದುದರಿಂದ ಬಹಳ ಮುಂದುವರಿದಿದ್ದು, ನಾಗರಿಕ ಸಂಸ್ಕೃತಿ ಹೊಂದಿದ್ದುವು. ದೇವಾಲಯವೇ ಸಮಾಜಜೀವನದ ಕೇಂದ್ರವಾಗಿ ಕ್ರಮೇಣ ಜಾತಿಪದ್ಧತಿಗಳು ಬೆಳೆದುವು. ಉತ್ತಮ ವರ್ಗದವರು ರಾಜಕೀಯ ಮತ್ತು ಮತೀಯ ಚಟುವಟಿಕೆಗಳಲ್ಲೂ ಕೆಳವರ್ಗದವರು ವ್ಯವಸಾಯ ಕೈಗಾರಿಕೆಗಳಲ್ಲೂ ತೊಡಗಿದ್ದರು.

ಚಾಕೋ, ಬ್ರೆಜಿಲ್, ಚಿಲಿ, ಪೆಟಗೋನಿಯ ಮುಂತಾದ ಹೊರವಲಯದ ಕಾಡುಪ್ರದೇಶಗಳ ಜನ ಸರಳಜೀವನ ನಡೆಸುತ್ತಿದ್ದರು. ಇವರ ಸಾಮಾಜಿಕ ಜೀವನ ಹಿಂದುಳಿದಿತ್ತು. ಬೇಟೆ, ಆಹಾರ ಸಂಗ್ರಹಣೆ ಅಥವಾ ಕೀಳ್ಮಟ್ಟದ ವ್ಯವಸಾಯಗಳಲ್ಲಿ ತೊಡಗಿರುತ್ತಿದ್ದ ಇವರು ಅಲೆಮಾರಿ ಜೀವನ ನಡೆಸುತ್ತಿದ್ದರು. ವ್ಯವಸ್ಥಿತ ಆಡಳಿತ ಪದ್ಧತಿ ಇವರಿಗೆ ಗೊತ್ತಿರಲಿಲ್ಲ. ದೇಹದ ಶೃಂಗಾರವೂ ನೃತ್ಯ ಸಂಗೀತಗಳೂ ವಿವಿಧ ರೀತಿಯ ಆಟಗಳೂ ಬಳಕೆಯಲ್ಲಿದ್ದುವು. ಮಂತ್ರ ಮಾಟಗಳು ಇವರ ಮತೀಯ ಚಟುವಟಿಕೆಗಳು. ಇವರು ಯುದ್ಧ ವಿದ್ಯೆಯಲ್ಲಿ ಹಿಂದುಳಿದಿದ್ದರು, ಇವರು ಹೋರಾಡುತ್ತಿದ್ದದ್ದು ಕೇವಲ ಆತ್ಮ ರಕ್ಷಣೆಗಾಗಿ ಮಾತ್ರ.

ಲ್ಯಾಟಿನ್ ಅಮೆರಿಕದ ಎಲ್ಲೆಡೆಗಳಲ್ಲೂ ಈ ಜನರ ಚರಿತ್ರೆಯಲ್ಲಿ ಬಹಳ ಸಾಮ್ಯಗಳು ಕಂಡುಬರುತ್ತವೆ. ಇಂಥ ನಾಗರಿಕತೆಯ ಅವಶೇಷಗಳು ಎಲ್ಲ ಭಾಗಗಳಲ್ಲಿ ಕಂಡು ಬಂದರೂ ಪ್ರತಿಯೊಂದು ಪ್ರದೇಶದಲ್ಲೂ ಪ್ರತ್ಯೇಕವಾದ ಕಲೆ ಕೈಗಾರಿಕೆಗಳೂ ಬೆಳೆದು ಬಂದುವು. ಈಕ್ವೆಡಾರಿನಲ್ಲಿ ಚಿತ್ರಗಳಿಂದ ಅಲಂಕೃತವಾದ ದೊಡ್ಡ ಪ್ರತಿರೂಪದ ಶವದ ಜಾಡಿಗಳೂ ಬಹಳ ಹಳೆಯವಾದ ಕಲ್ಲಿನ ಕುರ್ಚಿಗಳೂ ಅಲ್ಲಲ್ಲಿ ಕಂಡುಬರುತ್ತದೆ. ಕೊಲಂಬಿಯದಲ್ಲಿ ಚಿನ್ನದ ಕುಶಲ ಕೆಲಸಗಾರಿಕೆ, ದೊಡ್ಡ ಶವದ ಜಾಡಿಗಳು, ಚಿನ್ನ ಮತ್ತು ತಾಮ್ರದ ಚಪ್ಪಟೆಯಾದ ಶಿಲ್ಪಗಳು, ಕಲ್ಲಿನ ಪ್ರತಿಮೆಗಳು ಗಮನಾರ್ಹ. ದಕ್ಷಿಣಕ್ಕೆ ಹೋದ ಹೋದಂತೆ ದುರ್ಗಮವಾದ ಬೆಟ್ಟಕಾಡುಗಳಿರುವುದರಿಂದ ಮುಂದುವರಿದ ನಾಗರಿಕತೆಯ ಕುರುಹುಗಳು ಕಂಡು ಬರುವುದಿಲ್ಲ. ಎಲ್ಲೆಡೆಗಳಲ್ಲೂ ಹಳೆಯ ಕಾಲದ ಮಡಿಕೆಗಳೂ ಆಭರಣಗಳೂ ಲೋಹದ ವಸ್ತುಗಳೂ ಕಾಣಬರುತ್ತವೆ. ವಾಸ್ತುಶಿಲ್ಪದ, ಶವಸಂಸ್ಕಾರ ಪದ್ಧತಿಯೇ ಮುಂತಾದ, ಜನಜೀವನ ರೀತಿಗಳ ಮೇಲೆ ಬೆಳಕು ಬೀರುವಂಥ, ಅನೇಕ ಮಾಹಿತಿಗಳು ದೊರಕಿವೆ. ಇವುಗಳೆಲ್ಲವೂ ಲ್ಯಾಟಿನ್ ಅಮೆರಿಕದ ಇಂದಿನ ಸಂಸ್ಕೃತಿಯ ಮೇಲೆ ಅಪಾರವಾದ ಪ್ರಭಾವವನ್ನು ಬೀರಿವೆ. (ಬಿ.ಕೆ.ಜಿ.)

**ಇಂಡಿಯಾನ:** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ಮೂಲನಿವಾಸಿಗಳಿಂದ ಇಂಡಿಯನ್ನರ ಹೆಸರನ್ನು ಈ ಪ್ರಾಂತ್ಯ ಹೊಂದಿದೆ. ಇದನ್ನು ಹೂಸಿಯೆರ್ ಸ್ಟೇಟ್ ಎಂದೂ ಕರೆಯುವರು. ವಿಸ್ತೀರ್ಣ 94328 ಚ.ಕಿಮೀ. ಜನಸಂಖ್ಯೆ 6.23 ದಶಲಕ್ಷಗಳು. ರಾಜಧಾನಿ ಇಂಡಿಯಾನ ಪೊಲಿಸ್. ಜನಸಂಖ್ಯೆ 7,81,870 (2000). 1800ರಲ್ಲಿ ರಚಿತವಾದ ಈ ರಾಜ್ಯದಲ್ಲಿ 92 ಕೌಂಟಿಗಳಿವೆ. ವಾಯವ್ಯದಲ್ಲಿ ಮಿಷಿಗನ್ ಸರೋವರವಿದೆ. ದಕ್ಷಿಣದಲ್ಲಿ ಓಹಾಯೊ ನದಿಯೂ ಪಶ್ಚಿಮದಲ್ಲಿ ಭಾಗಶಃ ವಬಾಷ್ ನದಿಯೂ ಇದರ ಎಲ್ಲೆಗಳು. ಉಳಿದ ಭಾಗದ ಎಲ್ಲೆಕಟ್ಟು ಮಾನವ ನಿರ್ಮಿತ. ಒಳನಾಡಿನ ರಾಜ್ಯವಾದರೂ ಉತ್ತರಕ್ಕಿರುವ ಮಹಾ ಸರೋವರಗಳೂ ಓಹಾಯೊ ಮಿಸಿಸಿಪ್ಪಿ ನದಿಗಳೂ ಇದಕ್ಕೆ ಉತ್ತಮ ಜಲಮಾರ್ಗ ಸಂಪರ್ಕ ಕಲ್ಪಿಸಿವೆ. ಭೌಗೋಳಿಕವಾಗಿ ಈ ಪ್ರಾಂತ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಇವುಗಳೆಂದರೆ ಉತ್ತರದ ಮಹಾಸರೋವರದ ಅಂಚಿನ ತಗ್ಗಾದ ಮೈದಾನ ಮಧ್ಯದಲ್ಲಿರುವ ಹಿಮನದಿ ಸಂಚಯನದ 'ಟಿಲ್' ಮೈದಾನ ಹಾಗೂ ದಕ್ಷಿಣದಲ್ಲಿ ಸ್ವಲ್ಪ ಎತ್ತರವಾದ ಪ್ರಸ್ಥಭೂಮಿ. ವಬಾಷ್ ಹಾಗೂ ಅದರ ಉಪನದಿಗಳು ಇಲ್ಲಿಯ ಮುಖ್ಯನದಿಗಳು. ಖಂಡಾಂತರ ಆರ್ದ್ರ ವಾಯುಗುಣವನ್ನು ಈ ರಾಜ್ಯ ಹೊಂದಿದೆ.

ಇಂಡಿಯಾನದಲ್ಲಿ ಮೊದಲು ಓಕ್ ಮತ್ತು ದಾರು ಜಾತಿಯ ಮರಗಳಿಂದ ಕೂಡಿದ ಕಾಡುಗಳು ವಿಶೇಷವಾಗಿದ್ದುವು. ಮಧ್ಯ ಪಶ್ಚಿಮದಲ್ಲಿ ಹುಲ್ಲುಗಾವಲಿತ್ತು.

ರಾಜ್ಯದ ಆರ್ಥಿಕ ಆದಾಯದಲ್ಲಿ ವ್ಯವಸಾಯದ ಪಾತ್ರವೇ ಹೆಚ್ಚು. ಮೆಕ್ಕೆಜೋಳ, ಓಟ್ಸ್, ಗೋದಿ, ಆಲೂಗಡ್ಡೆ, ಸೋಯಬೀನ್ಸ್, ಹಣ್ಣು, ತರಕಾರಿ ಮುಂತಾದುವು ಮುಖ್ಯ ಬೆಳೆಗಳು. ಹಂದಿಗಳನ್ನೂ ದನಕರುಗಳನ್ನೂ ಅಧಿಕ ಸಂಖ್ಯೆಯಲ್ಲಿ ಸಾಕುತ್ತಾರೆ. ಸುಣ್ಣಕಲ್ಲೂ ಕಲ್ಲಿದ್ದಲೂ ಹೆಚ್ಚಾಗಿ ಸಿಕ್ಕುತ್ತವೆ. ಪೆಟ್ರೋಲಿಯಂ ಅಲ್ಪಸ್ವಲ್ಪ. ರಾಜ್ಯದ ಕೈಗಾರಿಕೆಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಅತ್ಯಂತ ದೊಡ್ಡದು. ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಕಬ್ಬಿಣ ಮತ್ತು ಉಕ್ಕಿನ ಕಾರ್ಯಾಗಾರಗಳಿರುವ ಗ್ಯಾರಿ ಪಟ್ಟಣದಲ್ಲಿ ಈ ಕೈಗಾರಿಕೆ ಕೇಂದ್ರೀಕೃತವಾಗಿದೆ. ಮಿಷಿಗನ್ ಸರೋವರದ ದಕ್ಷಿಣದ ಅಂಚಿನಲ್ಲಿ ಈ ಪಟ್ಟಣವಿದೆ. ವಾಹನಗಳ ಬಿಡಿ ಭಾಗಗಳು, ವಿಮಾನದ ಎಂಜಿನ್ನುಗಳು, ರೈಲ್ವೆಗೆ ಅವಶ್ಯಕವಾದ ವಸ್ತುಗಳು, ವಿದ್ಯುತ್ ಯಂತ್ರಗಳು, ವ್ಯವಸಾಯದ ಯಂತ್ರೋಪಕರಣಗಳು, ಪೆಟ್ರೋಲಿಯಂ, ರಾಸಾಯನಿಕ ವಸ್ತುಗಳು, ಸೋಪು, ಸಿಮೆಂಟು, ಇಟ್ಟಿಗೆ, ಆಹಾರವಸ್ತುಗಳು ಮುಂತಾದ ಕೈಗಾರಿಕೆಗಳು ಇಲ್ಲಿನ ನಾನಾ ನಗರಗಳಲ್ಲಿ ಬೆಳೆದಿವೆ. ಇಂಡಿಯಾನಪೊಲಿಸ್, ಗ್ಯಾರಿ, ಪೋರ್ಟ್‌ವೇನ್, ಸೌತ್ ಬೆಂಡ್, ಇವಾನ್ಸ್ ವಿಲ್ ಮತ್ತು ಹ್ಯಾಮಂಡ್ ದೊಡ್ಡ ನಗರ ಹಾಗೂ ಕೈಗಾರಿಕಾ ಕೇಂದ್ರಗಳು. (ಸಿ.ಎಂ.)

**ಇಂಡೋನೇಷ್ಯ:** ಆಗ್ನೇಯ ಏಷ್ಯದಲ್ಲಿ 1300 ದ್ವೀಪಗಳನ್ನೊಳಗೊಂಡಿರುವ ದ್ವೀಪಸ್ತೋಮ ರಾಷ್ಟ್ರ. ಉ.ಅ. $6^0$– ದ.ಅ. $11^0$ ಹಾಗೂ ಪೂ.ರೇ. $95^0$ – $141^0$ ವರೆಗೆ ಹಬ್ಬಿದೆ. ಇಂಡೋನೇಷ್ಯ ಗಣರಾಜ್ಯವೆಂದು ಇದರ ಪೂರ್ಣ ಹೆಸರು. ಈ ಗಣರಾಜ್ಯಕ್ಕೆ ಸೇರಿದುದಲ್ಲದ ಪ್ರದೇಶಗಳನ್ನೂ ಒಳಗೊಂಡು ಈ ವಲಯದಲ್ಲಿರುವ ಎಲ್ಲ ದ್ವೀಪ ಸ್ತೋಮವನ್ನು ಇಂಡೋನೇಷ್ಯವೆಂದು ಕರೆಯುವುದೂ ಉಂಟು. ಸುಮಾತ್ರ, ಜಾವ, ಮಧುರ, ಕಾಲಿಮಾಂಟನ್ (ಇದರ ಮೊದಲಿನ ಹೆಸರು ಬೋರ್ನಿಯೋ), ಸುಲವೇಶಿ ನೂಸಾತೆಂಗರ, ಮಲುಕು (ಮಲಕ್ಕ), ನ್ಯೂಗಿನಿಯ ಪಶ್ಚಿಮಭಾಗ ಹಾಗೂ ಮೂರು ಸಾವಿರ ಸಣ್ಣಪುಟ್ಟ ದ್ವೀಪಗಳು ಇಂಡೋನೇಷ್ಯ ಗಣರಾಜ್ಯಕ್ಕೆ ಸೇರಿವೆ. ವಿಸ್ತೀರ್ಣ 1919,400 ಚ.ಕಿಮೀ. ಜನಸಂಖ್ಯೆ 241,973,900 (2005). ಇದರಲ್ಲಿ ಶೇ. 66 ಭಾಗ ಜಾವ ದ್ವೀಪವೊಂದರಲ್ಲೇ ಕೇಂದ್ರಿಕೃತವಾಗಿದೆ. ರಾಜಧಾನಿ ಜಕಾರ್ತ. ಇದರ ಜನಸಂಖ್ಯೆ ಸು. 11,500,000.




ಮೇಲ್ಮೈ ಲಕ್ಷಣ : ಇಂಡೋನೇಷ್ಯ ದ್ವೀಪಗಳು ಮತ್ತು ಪಟ್ಟಣಗಳ ಉತ್ಪನ್ನಗಳು ಆ ದೇಶಗಳ ಪ್ರಾಕೃತಿಕ ಸಂಪತ್ತನ್ನು ಪ್ರತಿಬಿಂಬಿಸುತ್ತವೆ. ಸಮುದ್ರ ತೀರ ಮತ್ತು ಹತ್ತಿರದ ತಗ್ಗು ಪ್ರದೇಶಗಳಿಂದ ಪರ್ವತಶ್ರೇಣಿಗೆ ಎತ್ತರ ಕ್ರಮೇಣ ಹೆಚ್ಚುತ್ತ ಹೋಗಿದೆ. ಇಂಡೋನೇಷ್ಯದ ಅಗ್ನಿ ಪರ್ವತಗಳು, ಅದರಲ್ಲೂ ಮುಖ್ಯವಾಗಿ ಬಾಲಿ ಅಗ್ನಿಪರ್ವತ ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ. ಈ ಅಗ್ನಿಪರ್ವತಗಳಲ್ಲಿ ಗುನಂಗ್ ಅಗಂಗ್ (5900 ಮೀ)

ಗುನಂಗ್ ಬಟುಕ್ (1734 ಮೀ), ಗುನಂಗ್ ಕೌ (2392 ಮೀ), ಗುನಂಗ್ ಬಕುಂಗನ್ (1515 ಮೀ) ಮುಂತಾದ ಹೆಸರಾಂತ ಶಿಖರಗಳಿವೆ. ಅಲ್ಲದೆ ಜಾವ ಮತ್ತು ಲೊಂಬೋಕ್‌ನಲ್ಲಿ ಸಮೇರು ಶಿಖರದಂಥ (3723 ಮೀ) ಅನೇಕ ಶಿಖರಗಳಿವೆ. ಜಾವ, ಬಾಲಿ ಮತ್ತು ಲೊಂಬೋಕ್‌ಗಳಲ್ಲಿ ದಟ್ಟವಾದ ಜೌಗು ಅರಣ್ಯಗಳೂ ವ್ಯವಸಾಯಕ್ಕೆ ಯೋಗ್ಯವಾದ ಪರ್ವತದ ಇಳಿಜಾರು ಪ್ರದೇಶಗಳೂ ಕಂಡುಬರುತ್ತವೆ. ಕಾಲಿಮಾಂಟನಿನಲ್ಲಿ ದಟ್ಟವಾದ ಜೌಗು ಅರಣ್ಯಗಳು ಅಧಿಕ. ಸುಮಾತ್ರದ ಮೇಲ್ಮೈಲಕ್ಷಣದ ಆಧಾರದ ಮೇಲೆ ಅದನ್ನು ಪೂರ್ವ, ಪಶ್ಚಿಮ ಮತ್ತು ಮಧ್ಯ ಸುಮಾತ್ರವೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಇವು ಸಂಪರ್ಕ ವ್ಯವಸ್ಥೆಗೆ ಅಸಂಖ್ಯಾತ ಸಮಸ್ಯೆಗಳನ್ನು ತಂದೊಡ್ಡಿವೆ. ಇದರಿಂದ ಸುಮಾತ್ರದ ಈ ಮೂರು ಭಾಗಗಳಲ್ಲೂ ರೈಲು ಸಂಚಾರ ಸೌಕರ್ಯವಿದ್ದರೂ ಪರ್ವತಗಳು ಮತ್ತು ಕಮರಿಗಳಿರುವುದರಿಂದ ಈ ಭಾಗಗಳ ಪರಸ್ಪರ ಸಂಪರ್ಕವ್ಯವಸ್ಥೆ ಆರ್ಥಿಕ ದೃಷ್ಟಿಯಿಂದ ಸಾಧ್ಯವಾಗಿಲ್ಲ. ಸುಮಾತ್ರದ ಸಮುದ್ರತೀರ ಪ್ರದೇಶದ ಸುತ್ತ ಉಸುಬು ನೆಲ ಮತ್ತು ಪ್ರವಾಹದಿಂದಾದ ಭೂಮಿಯಿದೆ. ಒಳನಾಡಿನಲ್ಲಿ ಮೆಟ್ಟಲು ದಿಬ್ಬಗಳನ್ನೊಳಗೊಂಡ ಫಲವತ್ತಾದ ಪ್ರದೇಶವಿದೆ. ಸುಲವೇಶಿಯಲ್ಲಿ ಪರ್ವತಗಳು ಹೆಚ್ಚು.

ವಾಯುಗುಣ : ಇಂಡೊನೇಷ್ಯದ್ದು ಅಧಿಕ ಮಳೆ, ಆರ್ದ್ರತೆ ಮತ್ತು ಉಷ್ಣತೆ ಇರುವ ಉಷ್ಣವಲಯದ ವಾಯುಗುಣ. ನವೆಂಬರ್‌ನಿಂದ ಮಾರ್ಚ್ ತಿಂಗಳಿನವರೆಗೆ ಮಳೆಗಾಲ, ಮುಂದೆ ಮಳೆ ಕ್ರಮೇಣ ಕಡಿಮೆಯಾಗಿ ಜೂನ್‌ನಿಂದ ಅಕ್ಟೋಬರ್ ವರೆಗೆ ಒಣಹವೆ ಇರುತ್ತದೆ. ತಗ್ಗು ಪ್ರದೇಶಗಳಲ್ಲಿ ಬರುವ ಮಳೆಯ ವಾರ್ಷಿಕ ಪ್ರಮಾಣ ಸರಾಸರಿ 243 ಸೆಂಮೀ. ಕೆಲವು ಪರ್ವತ ಪ್ರದೇಶಗಳಲ್ಲಿ 600 ಸೆಂಮೀ ಮಳೆಯಾಗುತ್ತದೆ.

ಬೆಳೆ, ಖನಿಜ, ಕೈಗಾರಿಕೆ : ಇಂಡೊನೇಷ್ಯದ ಪ್ರತಿಯೊಂದು ದ್ವೀಪವೂ ಯಾವುದಾದರೊಂದು ವಿಷಯದಲ್ಲಿ ಪ್ರಸಿದ್ಧಿ ಪಡೆದಿದೆ ; ದೇಶದ ಸಂಪತ್‌ಸಮೃದ್ಧಿಗೆ ನೆರವು ನೀಡಿದೆ. ದಕ್ಷಿಣ ಸುಮಾತ್ರ ಚಿನ್ನಕ್ಕೆ ಹೆಸರಾಗಿದೆ. ರೆಡ್‌ಜಂಗಲ್‌ಬಾಂಗ್‌ನ ಸುತ್ತಲೂ ಸೀಸದ ಅದಿರುಗಳಿವೆ. ಪಂಕಂಬಾರು ಮತ್ತು ಪಲೆಂಬಾಂಗ್‌ನಲ್ಲಿ ಪೆಟ್ರೋಲ್ ಸಿಗುತ್ತದೆ. ಬಂಕಾ ದ್ವೀಪಗಳಲ್ಲಿ ಸಂಪದ್ಯುಕ್ತವಾದ ಅರಣ್ಯವಿದೆ. ಇಲ್ಲಿ ರಬ್ಬರು, ಕೋಕೊ, ಕಾಫಿ ಅಧಿಕ ಪ್ರಮಾಣದಲ್ಲಿ ಬೆಳೆಯುತ್ತವೆ. ಪಲೆಂಬಾಂಗ್ ಪ್ರದೇಶದಲ್ಲಿ ಅನಾನಸ್ ಬೆಳೆಯಲಾಗುತ್ತದೆ. ಜಾವ ದ್ವೀಪದಲ್ಲಿರುವ ಜಕಾರ್ತ ನೂಲಿನ ಬಟ್ಟೆಗಳಿಗೂ ಮೋಟಾರು ಸೈಕಲ್ಲುಗಳಿಗೂ ಹೆಸರುವಾಸಿ. ಬೊಗೋರ್ ಟೈರು ಕಾರ್ಖಾನೆಯನ್ನಲ್ಲದೆ ವಿಜ್ಞಾನ ಸಸ್ಯೋದ್ಯಾನವೊಂದನ್ನು ಹೊಂದಿದೆ. ಜಿಲಟ್ಟಜಾಪ್ ಎಂಬುದು ಮೀನಿನ ಉತ್ಪನ್ನಗಳಿಗೂ ಕೈಕಸುಬುಗಳಿಗೂ ಕೈಮಗ್ಗ ಹಾಗೂ ಹತ್ತಿ ಕೈಗಾರಿಕೆಗೂ ಪ್ರಸಿದ್ಧ. ಇಂಡೊನೇಷ್ಯದ ಸ್ತ್ರೀಯರ ರಾಷ್ಟ್ರೀಯ ಉಡುಗೆ ಬಾಟುಕ್, ಎಂಬುದರ ತಯಾರಿಕೆಗೆ ಇದು ಹೆಸರು ಪಡೆದಿದೆ. ಈ ಉಡುಪು ಭಾರತದ ಸೀರೆಯನ್ನೇ ಬಹುಮಟ್ಟಿಗೆ ಹೋಲುತ್ತದೆ. ಇಲ್ಲಿ ಹಣ್ಣು ತರಕಾರಿಗಳನ್ನೂ ಹೆಚ್ಚಾಗಿ ಬೆಳೆಯುತ್ತಾರೆ. ಗಾಜಿನ ಕಾರ್ಖಾನೆಯೂ ಇದೆ. ಮಧುರದಲ್ಲಿರುವ ಪಾಮೆಕಾಸನ್ ಧಾನ್ಯ ಹೆಸರು ಪಡೆದಿದೆ. ಮಧ್ಯಜಾವದಲ್ಲಿ ಬಾಳೆಯ ಬೆಳೆ ಹೆಚ್ಚು. ಜಕಾರ್ತ (ಜೋಗ್ಯಕಾರ್ತ)ದಲ್ಲಿ ನಡೆಯುವ ಬೆಳ್ಳಿಯ ಕರಕುಶಲ ಕೆಲಸ ಬಹಳ ಪ್ರಸಿದ್ಧ.

ನುಸಾತೆಂಗರ ದ್ವೀಪಸ್ತೋಮಕ್ಕೆ ಸೇರಿದ ಬಾಲಿದ್ವೀಪದ ಸಿಂಗರಡ್ಜ ಕುಶಲ ಕೈಗಾರಿಕೆಗೆ ಹೆಸರುವಾಸಿಯಾಗಿದ್ದು ಇಂಡೊನೇಷ್ಯಕ್ಕೆ ವಿದೇಶಿ ವಿನಿಮಯವನ್ನು ಹೆಚ್ಚಾಗಿ ಒದಗಿಸುತ್ತದೆ. ಬಾಲಿಯ ದೊಡ್ಡನಗರವಾದ ಡೆಪಸರ್‌ನಲ್ಲಿ ಹಿತಕರ ವಾಯುಗುಣ, ಮನಮೋಹಕ ನೈಸರ್ಗಿಕ ಸೌಂದರ್ಯ ಇರುವುದರಿಂದ ಇದು ಅಸಂಖ್ಯಾತ ಪ್ರವಾಸಿಗರನ್ನು ಸೆಳೆಯುತ್ತಿದೆ. ಲೊಂಬೋಕಿನ ರಾಜಧಾನಿಯಾದ ಮಟರಾಮ್ ಗೋಮಾಂಸ ಮತ್ತು ದನಕರುಗಳಿಗೆ ಪ್ರಸಿದ್ಧ. ಬೀಮ, ಎಂಡೆಹ್, ಸುಂಬ ಮತ್ತು ಇತರ ದ್ವೀಪಗಳು ಗೋಮಾಂಸವನ್ನು ಉತ್ಪಾದಿಸುತ್ತವೆ. ಇದನ್ನು ಹಾಂಗ್‌ಕಾಂಗ್ ಮತ್ತು ಆಗ್ನೇಯ ಏಷ್ಯ ದೇಶಗಳಿಗೆ ರಫ್ತು ಮಾಡುತ್ತಾರೆ. ತಿಮೂರ್ ಒಣಹವೆಯ ಪಟ್ಟಣ. ಮೆದುಬಂಡೆಗಳಿಂದ ಕೂಡಿದ ಇಲ್ಲಿ ಉಷ್ಣವಲಯದ ಮಳೆಯ ಕಾಡುಗಳು ಯಥೇಚ್ಛ. ಸುಂಬದಲ್ಲಿ ಕಮೊಡೊ ಡ್ರಾಗನ್ ಎಂಬ ಕಶೇರುಕ ಪ್ರಾಣಿ ಕಂಡುಬರುತ್ತದೆ. ಹಲ್ಲಿಯಂತಿರುವ ಈ ಪ್ರಾಣಿ ಪ್ರಪಂಚದ ಉಳಿದೆಡೆಗಳಲ್ಲಿ ವಿರಳ.

ಕಾಲಿಮಾಂಟನ್ ಮತ್ತು ಸಿಂಗಪುರಗಳ ನಡುವೆ ಇರುವ ಆಳವಾದ ಕರಿಮಾಟ ಜಲಸಂಧಿ ಮೀನುಗಾರಿಕೆಗೆ ಯೋಗ್ಯ. ಪಾಂಟಿಯನಾಕಿ ರಬ್ಬರ್ ಮತ್ತು ಅರಣ್ಯಗಳಿಗೂ ಬಾಲಿಕ್ ಪಾಪನ್ ಪೆಟ್ರೋಲಿಗೂ ಸಮವಿಂಡ ಹತ್ತಿ ಜವಳಿಗೂ ತಾರಕನ್ ಪೆಟ್ರೋಲಿಗೂ ಬಂಜಾರ್ ಮಾಸಿನ್ ಮೀನಿಗೂ ಮತ್ತು ಮಾರ್ತಾಪುರ ಆಭರಣಗಳಿಗೂ ಪ್ರಸಿದ್ಧ. ಕಾಲಿಮಾಂಟನ್ ಮತ್ತು ಸುಲವೇಶಿಗಳ ನಡುವೆ ಇರುವ ಆಳವಾದ ಜಲಸಂಧಿ ಮೀನು ಹಿಡಿಯಲು ಯೋಗ್ಯ; ಕಾಲಿಮಾಂಟನ್ ಅರಣ್ಯದ ಮರದ ದಿಮ್ಮಿಗಳನ್ನು ಜಪಾನಿಗೆ ರಫ್ತು ಮಾಡುತ್ತಾರೆ.

ಸುಲವೇಶಿ ದ್ವೀಪದಲ್ಲಿರುವ ಗೊರೊಂಟಲೊ ರಬ್ಬರಿಗೂ ಪೊಸೊ ಆಳ ಸಮುದ್ರದ ಮೀನುಗಾರಿಕೆಗೂ ಮತ್ತು ಕೆಂಡಲ್ ಉಪ್ಪುಮೀನಿಗೂ ಪ್ರಸಿದ್ಧ. ಪಿಂಡಾಂಗ್‌ನಲ್ಲಿ ಉಪ್ಪು ಮೀನು ಹಾಗೂ ಸಂಸ್ಕರಣಾ ಕೇಂದ್ರವಿದೆ. ಮಕಾಸರ್ ಕೈಮಗ್ಗ ಮತ್ತು ಗೃಹ ಕೈಗಾರಿಕೆಗಳಿಗೂ ಕೊಬ್ಬರಿಯ ಉತ್ಪನ್ನಕ್ಕೂ ಪ್ರಸಿದ್ಧಿ ಪಡೆದಿದೆ. ಸುಲವೇಶಿಯಲ್ಲಿರುವ ಪಲೋಪೊ ಶುಷ್ಕಪ್ರದೇಶ. ಮಲುಕು, ಬುರು, ಸೆರಾನ್, ಅಂಬನ್ ಮತ್ತು ಬಂಡ ದ್ವೀಪಗಳು ಸಮುದ್ರದ ಮುತ್ತುಗಳಿಗೆ ಪ್ರಸಿದ್ಧ. ಇಂಡೊನೇಷ್ಯದ ವ್ಯವಸಾಯ ಉತ್ತಮ ರೀತಿಯದಾಗಿದೆ ಹಾಗೂ ಪ್ರಮುಖ ಚಟುವಟಿಕೆಯಾಗಿದೆ. ಒಟ್ಟು ಭೂಮಿಯ ಶೇ. 17 ರಷ್ಟು ವ್ಯವಸಾಯಕ್ಕೆ ಒಳಪಟ್ಟಿದೆ. ಮುಖ್ಯ ಬೆಳೆಗಳೆಂದರೆ ಬತ್ತ, ತಾಳೆ, ಕಾಫಿ, ಚಹ, ಕೊಕೊ, ರಬ್ಬರ್.

ಇಂಡೊನೇಷ್ಯದ ಅರಣ್ಯೋತ್ಪಾದನೆ ಮತ್ತು ಮೀನಿನ ಉತ್ಪಾದನೆ ಗಮನಾರ್ಹವಾಗಿದೆ. ತವರ, ಬಾಕ್ಸೈಟ್ ಮತ್ತು ಪೆಟ್ರೋಲಿಯಂನ ಉತ್ಪಾದನೆಯಲ್ಲೂ ಇಂಡೊನೇಷ್ಯ ಹೆಚ್ಚಿನ ಪ್ರಗತಿ ಸಾಧಿಸಿದೆ.

ಸಾರಿಗೆ : ಸರಪಣಿಯ ಕೊಂಡಿಗಳಂತೆ ಹಬ್ಬಿರುವ ಇಂಡೊನೇಷ್ಯ ದ್ವೀಪಗಳ ವಿವಿಧ ಪ್ರದೇಶಗಳಿಗೆ ಹಡಗು ಮತ್ತು ವಿಮಾನಗಳೆ ಮುಖ್ಯ ಸಂಪರ್ಕ ಸಾಧನಗಳು. ದೊಡ್ಡ ದೊಡ್ಡ ದ್ವೀಪಗಳಲ್ಲಿ ರಸ್ತೆ ಮತ್ತು ರೈಲು ಸೌಕರ್ಯಗಳನ್ನು ಒದಗಿಸಲಾಗಿದೆ. 3,46,863 ಕಿಮೀ ರಸ್ತೆಗಳೂ 6640 ಕಿಮೀ ರೈಲು ಮಾರ್ಗಗಳೂ ಇವೆ (1998).

ರುಪ್ಯೆಯ ಎಂಬುದು ಇಂಡೊನೇಷ್ಯದ ನಾಣ್ಯ. ಇದನ್ನು 100 ಸೆನ್‌ಗಳಾಗಿ ವಿಭಾಗಿಸಲಾಗಿದೆ. ಇಂಡೊನೇಷ್ಯದ ಬಾಲಿ ದ್ವೀಪಗಳಲ್ಲಿ ಹಿಂದುಗಳು ಹೆಚ್ಚಾಗಿದ್ದಾರೆ. ಇಂಡೊನೇಷ್ಯದಲ್ಲಿ ಮುಸ್ಲಿಮರು ಬಹುಸಂಖ್ಯಾತರು. ಪಾಶ್ಚಾತ್ಯ ಪ್ರಭಾವದಿಂದ ಕ್ರಿಶ್ಚಿಯನ್ನರೂ ತಕ್ಕಮಟ್ಟಿನ ಸಂಖ್ಯೆಯಲ್ಲಿದ್ದಾರೆ. ನುಸಾತೆಂಗರ ದ್ವೀಪಗಳು ಮತ್ತು ಕಾಲಿಮಾಂಟನ್‌ನಲ್ಲಿ ಚೀನಿಯರು ಹಾಗು ಬಹುಸಂಖ್ಯಾತ ಪ್ರದೇಶಗಳಲ್ಲಿ ಬೌದ್ಧರಿದ್ದಾರೆ. ಜಾವ ಮತ್ತು ಸುಮಾತ್ರದಲ್ಲೂ ಮುಸ್ಲಿಮರು ಹೆಚ್ಚು. (ಇ.ಎ.ಎ.)

**ಇಂಡೋ-ಆರ್ಯನ್ ಭಾಷೆಗಳು:** ಪ್ರಪಂಚದ ಪ್ರಮುಖ ಭಾಷಾವರ್ಗಗಳಲ್ಲೊಂದು. ಇಂಡೋ-ಯುರೋಪಿಯನ್ ಭಾಷಾವರ್ಗದ ಅತಿಮಹತ್ತ್ವದ ಒಂದು ಶಾಖೆ. ಕೆಂಟುಮ್ ಇನ್ನೊಂದು ಗುಂಪು. ಇನ್ನು ಕೆಲವರ ಪ್ರಕಾರ ಇದಕ್ಕೂ ಹಿಂದಿನದು ಇಂಡೋಹಿಟ್ಟೈಟ್ ಶಾಖೆ. ವಿವಾದಾಸ್ಪದವಾದ ಈ ಇಂಡೊಹಿಟ್ಟೈಟ್ ಗುಂಪಿನ ಸ್ಥಾನದ ಉಲ್ಲೇಖವನ್ನು ಕಡೆಗಣಿಸಿ, ಇಂಡೋ-ಯುರೋಪಿಯನ್ ಗುಂಪಿನಿಂದ ವಂಶವೃಕ್ಷವನ್ನು ಪ್ರಾರಂಭಿಸಿದರೆ ಅದರಲ್ಲಿ ಇಂಡೋ-ಇರಾನಿಯನ್, ಗ್ರೀಕ್, ಲ್ಯಾಟಿನ್ ಮುಂತಾದ ಶಾಖೆಗಳಾಗುತ್ತವೆ. ಆಮೇಲೆ ಈ ಇಂಡೋ-ಇರಾನಿಯನ್ ಶಾಖೆಯಲ್ಲಿ ಇರಾನಿಯನ್ ಮತ್ತು ಇಂಡೋ-ಆರ್ಯನ್ ಎಂಬ ಶಾಖೆಗಳೊಡೆಯುತ್ತವೆ. ಇಂಡೋ-ಇರಾನಿಯನ್ ಶಾಖೆ ಆರ್ಯರು ಇನ್ನೂ ಭಾರತವನ್ನು ಪ್ರವೇಶಿಸುವುದಕ್ಕಿಂತ ಮುಂಚಿನ ಘಟ್ಟ. ಇದು ಪ್ರ.ಶ.ಪೂ. 2000 ವರ್ಷಗಳಷ್ಟು ಪೂರ್ವದಲ್ಲಿಯೇ ಮೆಸಪೊಟೇಮಿಯ ಪ್ರದೇಶದಲ್ಲಿ ಬಳಕೆಯಲ್ಲಿತ್ತು. ಇಲ್ಲಿ ಇಂದ್ರ, ಅಗ್ನಿ, ವರುಣ, ಸೂರ್ಯ ಮುಂತಾದ ಆರ್ಯದೇವತೆಗಳು ಪ್ರಚಾರದಲ್ಲಿದ್ದುದು, ಈ ಮಾತಿಗೆ ಪುಷ್ಟಿಯನ್ನೊದಗಿಸುತ್ತವೆ. ಈ ಆರ್ಯರಲ್ಲಿಯ ಒಂದು ಗುಂಪು ಈಗಿನ ಇರಾನ್ ಮತ್ತು ಅದರ ಸುತ್ತುಮುತ್ತಲಿನ ಪ್ರದೇಶದಲ್ಲಿ ನೆಲೆನಿಂತು ಇರಾನಿ ಶಾಖೆಗೆ ಕಾರಣವಾಯಿತು. ಇನ್ನೊಂದು ಗುಂಪು ಹಾಗೇ ಮುಂದುವರಿದು ಭಾರತವನ್ನು ಪ್ರವೇಶಿಸಿದ ಮೇಲೆ ಇಂಡೋ-ಆರ್ಯನ್ ಶಾಖೆ ಉಂಟಾಯಿತು. ಇಂಡೋ-ಆರ್ಯನ್ ಭಾಷೆಗಳ ಇತಿಹಾಸ ಪ್ರಾರಂಭವಾಗುವುದು ಆರ್ಯರು ಭಾರತದಲ್ಲಿ ಕಾಲಿಟ್ಟಂದಿನಿಂದ.

ಭಾರತದ ನೆಲದಲ್ಲಿ ಕಾಲಿಟ್ಟವರಲ್ಲಿ ಆರ್ಯರೇ ಪ್ರಥಮರೇನಲ್ಲ. ಇವರಿಗಿಂತಲೂ ಹಿಂದೆ ನಿಗ್ರಿಟೊ, ಆಸ್ಟ್ರಿಕ್ ಮತ್ತು ದ್ರಾವಿಡ ಜನಾಂಗಗಳು ಇಲ್ಲಿದ್ದುವು. ಅವೆಲ್ಲ ಭಾಷೆಗಳ ಅವಶೇಷಗಳನ್ನು ವೇದ ಮತ್ತು ಸಂಸ್ಕೃತ ಭಾಷೆ ಉಳಿಸಿಕೊಂಡಿವೆ.

ಇಂಡೋ-ಆರ್ಯನ್ ಶಾಖೆಯ ಅತಿ ಪ್ರಾಚೀನ ಉಲ್ಲೇಖವೆಂದರೆ ಋಗ್ವೇದ. ವೇದಗಳ ಕಾಲದ ಬಗೆಗಿನ ಅನೇಕ ಸಿದ್ಧಾಂತಗಳನ್ನು ತೂಗಿನೋಡಿ ಭಾಷಾಶಾಸ್ತ್ರದ ಆಧಾರದಿಂದ ಪರಿಶೀಲಿಸಿದರೆ ಅದು ಪ್ರಶ.ಪೂ.ಸು. 1500-1300 ಎಂದು ಹೇಳಬಹುದು. ವೇದಗಳಿಂದ ಪ್ರಾರಂಭವಾಗಿ ಈಗ ಎಲ್ಲೆಡೆಗೂ ಪ್ರಚಾರದಲ್ಲಿರುವ ಆ ಶಾಖೆಯ ಅನೇಕ ಭಾಷೆಗಳಿಗೆ ಸು. 3000 ವರ್ಷಗಳ ಅವ್ಯಾಹತ ಇತಿಹಾಸವಿದೆ. ಭಾಷೆಗಳು ಯಾವಾಗಲೂ ಬದಲಾಗುತ್ತಿರುವುದು ಅನಿವಾರ್ಯ. ಇಂಥ ಸುದೀರ್ಘ ಇತಿಹಾಸವನ್ನುಳ್ಳ ಇಂಡೋ-ಆರ್ಯನ್ ಭಾಷೆಗಳು ಬದಲಾವಣೆಯ ಅನೇಕ ಘಟ್ಟಗಳನ್ನು ಕಾಣಬಹುದು. 1 ಪೂರ್ವ ಇಂಡೋ-ಆರ್ಯನ್ : ವೇದದ ಸಂಸ್ಕೃತ ಮತ್ತು ಅಭಿಜಾತ ಸಂಸ್ಕೃತ ; 2 ಮಧ್ಯ ಇಂಡೋ-ಆರ್ಯನ್ : ಪಾಲಿ, ಪ್ರಾಕೃತ, ಅಪಭ್ರಂಶ ; 3 ನವ ಇಂಡೋ-ಆರ್ಯನ್; ಹಿಂದಿ, ಬಂಗಾಲಿ, ಗುಜರಾತಿ, ಲಹಂದ, ಪಂಜಾಬಿ, ಪಹಾಡಿ, ಬಿಹಾರಿ, ಮರಾಠಿ, ಸಿಂಧಿ, ರಾಜಸ್ಥಾನಿ, ಒರಿಯ, ಅಸ್ಸಾಮೀ.

ಪೂರ್ವ ಇಂಡೋ-ಆರ್ಯನ್ : ಈ ಘಟ್ಟದ ಪ್ರಮುಖ ಅಂಗಗಳಾದ ವೈದಿಕ ಸಂಸ್ಕೃತಿ ಮತ್ತು ಅಭಿಜಾತ ಸಂಸ್ಕೃತಿ ಭಾಷೆಗಳಲ್ಲೇ ಬೇಕಾದಷ್ಟು ಭಿನ್ನತೆ ಕಂಡುಬರುತ್ತದೆ. ವೇದದಿಂದ ಪ್ರಾರಂಭವಾಗಿ ಪಾಣಿನಿಯವರೆಗೆ (ಪ್ರಶ.ಪೂ 4ನೆಯ ಶತಮಾನ) ಪೂರ್ವ ಇಂಡೋ-ಆರ್ಯನ್ ಯುಗ, ವೇದಗಳು ಆಡುನುಡಿಗೆ ಬಹಳ ಸಮೀಪವಿದ್ದುವು. ಅಂತೆಯೆ ಆ ಪ್ರಯೋಗಗಳಲ್ಲಿ ಸ್ವಚ್ಛಂದತೆ ಇತ್ತು. ವೈವಿಧ್ಯವಿತ್ತು.

ಮಧ್ಯ ಇಂಡೋ-ಆರ್ಯನ್ : ಸಂಸ್ಕೃತ ಬಳಕೆಯಲ್ಲಿದ್ದಾಗಲೇ ಮಧ್ಯ ಇಂಡೋ-ಆರ್ಯನ್ ಭಾಷೆಗಳು ಅದರ ಸ್ಪರ್ಧಿಗಳೆಂಬಂತೆ ಅನೇಕ ರೂಪದಲ್ಲಿ ಬೆಳೆದಿದ್ದವು. ಅವು ಹೆಚ್ಚಾಗಿ ಆಡುಮಾತುಗಳಾಗಿದ್ದರೂ ಗ್ರಂಥಸ್ಥವಾಗಿಯೂ ಇದ್ದುವು. ಈ ಸ್ಪರ್ಧೆ ಮೊದಮೊದಲು ಅತಿಯಾಗಿತ್ತು. ವಿಚಿತ್ರವೆಂದರೆ, ಸಂಸ್ಕೃತಭಾಷೆ ಸಂಸ್ಕೃತಿ ಮತ್ತು ಆಡಳಿತಗಳ ಭಾಷೆಯಾಗಿ ಪೂರ್ಣ ಬೆಳವಣಿಗೆ ಹೊಂದಿದ್ದು ಅದು ತಾಯಿನುಡಿಯ ಸ್ಥಾನದಿಂದ ದೂರವಾದ ಮೇಲೆ, ಪ್ರಶ.ಪೂ. 500 ರ ಸುಮಾರಿಗೆ ಬೌದ್ಧ ಮತ್ತು ಜೈನ ಧರ್ಮಗಳ ಉದಯದೊಂದಿಗೆ ಮಧ್ಯ ಇಂಡೋ-ಆರ್ಯನ್ ಭಾಷೆಗಳೂ ಪ್ರಾಮುಖ್ಯ ಪಡೆದುವು. ಈ ಮತಸ್ಥಾಪಕರು ಪ್ರಜ್ಞಾಪೂರ್ವಕವಾಗಿ ಆಡುನುಡಿಯನ್ನೇ ತಮ್ಮ ಧರ್ಮ ಪ್ರಚಾರಕ್ಕೆ ಉಪಯೋಗಿಸಿದ್ದೇ ಇದಕ್ಕೆ ಕಾರಣ. ಅಶೋಕನ ಶಾಸನಗಳೆಲ್ಲ ಪ್ರಾಕೃತದಲ್ಲೇ ಇರುವುದು ಈ ಮಾತಿಗೆ ನಿದರ್ಶನ. ಶಾಸನಗಳಲ್ಲಿ ಸಂಸ್ಕೃತಕ್ಕಿಂತ ಮೊದಲು ಪ್ರಾಕೃತ ಬಳಕೆಯಾದದ್ದನ್ನು ಗಮನಿಸಬೇಕು. ಜೈನ, ಬೌದ್ಧಧರ್ಮಗಳ ಪ್ರಾರಂಭದ ಗ್ರಂಥಗಳೆಲ್ಲ ಮಧ್ಯ ಇಂಡೋ-ಆರ್ಯನ್ ಭಾಷೆಗಳಲ್ಲೇ ಇವೆ. ಬರಬರುತ್ತ ಸಂಸ್ಕೃತದ ಕೈಮೇಲಾಗಿ ಬೌದ್ಧ, ಜೈನಧರ್ಮಗ್ರಂಥಗಳಿಗೂ (ಸ್ವಲ್ಪ ತಡವಾಗಿಯಾದರೂ) ಸಂಸ್ಕೃತವೇ ಮಾಧ್ಯಮವಾಯಿತು. ಸಂಸ್ಕೃತ ಮತ್ತು ಪ್ರಾಕೃತಗಳ ಏರು ಪೇರು ವೈದಿಕ ಧರ್ಮ ಮತ್ತು ಜೈನಧರ್ಮಗಳ ಏರುಪೇರುಗಳೊಡನೆ ಹೆಣೆದುಕೊಂಡಿದೆ. ಕೊನೆಗೆ ಬ್ರಾಹ್ಮಣಧರ್ಮ ಮತ್ತೆ ಪ್ರಬಲವಾಗಿ ಸಂಸ್ಕೃತವೇ ಭರತಖಂಡಕ್ಕೆಲ್ಲ ಏಕಮುಖ ಭಾಷಾಸಾಧನವಾಯಿತು. ಸಂಸ್ಕೃತ ನಾಟಕಗಳಿಂದ ಬೇಕಾದಷ್ಟು ನಿದರ್ಶನಗಳು ಸಿಕ್ಕುತ್ತವೆ. ನಾಟಕಗಳಲ್ಲಿ ಕೆಲವು ಪಾತ್ರಗಳು ಸಂಸ್ಕೃತದಲ್ಲೂ ಇನ್ನೂ ಕೆಲವು ಪಾತ್ರಗಳು ಪ್ರಾಕೃತದಲ್ಲೂ ಮಾತನಾಡುವುದು ಪದ್ಧತಿ. ರಾಜರು, ಮಂತ್ರಿಗಳು, ಬ್ರಾಹ್ಮಣರು ಮುಂತಾದ ಉಚ್ಚವರ್ಗದವರು ಸಂಸ್ಕೃತವನ್ನೂ ಸ್ತ್ರೀಯರು, ಮಕ್ಕಳು, ವಿದೂಷಕ (ಇವನು ಬ್ರಾಹ್ಮಣನಾಗಿದ್ದರೂ) ಪ್ರಾಕೃತವನ್ನೂ ಮಾತನಾಡಬೇಕು. ಪ್ರಾಕೃತಗಳು ಆಡುನುಡಿಗಳಾಗಿದ್ದುವು. ಸಾಮಾನ್ಯ ಜನರೇಕೆ, ಸಾಮಾನ್ಯ ಬ್ರಾಹ್ಮಣರು ಕೂಡ ಅವುಗಳನ್ನೇ ಬಳಸುತ್ತಿದ್ದರು. ಸಂಸ್ಕೃತ ಗ್ರಂಥಭಾಷೆಯಾಗಿತ್ತು. ಧರ್ಮಚರ್ಚೆ, ಆಡಳಿತ ಮುಂತಾದವುಗಳಿಗಾಗಿ ಮಾತ್ರ ಅದರ ಉಪಯೋಗವಾಗುತ್ತಿತ್ತು.

ನವ ಇಂಡೋ-ಆರ್ಯನ್ : ಪ್ರ.ಶ. 1000ದ ಸುಮಾರಿಗೆ ಆರ್ಯನ್ ಭಾಷೆ ತನ್ನ ಮುಂದಿನ ಹಂತದಲ್ಲಿ ಕಾಲಿಟ್ಟಿತು. ಪ್ರಾಕೃತ ಭಾಷೆಗಳು ಪ್ರಾದೇಶಿಕ ಅಪಭ್ರಂಶಗಳ ಮುಂಖಾಂತರ ನವ ಇಂಡೋ-ಆರ್ಯನ್ ಭಾಷೆಗಳಾಗಿ ಪರಿವರ್ತಿತವಾದುವು. ಸಂಸ್ಕೃತವಂತೂ ಇದ್ದೇ ಇತ್ತು. ಹೆಚ್ಚಾಗಿ ಬರೆಹದ ಭಾಷೆಯಾಗಿ. ಈ ಪ್ರಾದೇಶಿಕ ಭಾಷೆಗಳೆಲ್ಲ ಆಡುನುಡಿಗಳಾದುದುರಿಂದ (ಮುಂದೆ ಒಂದೆರಡು ಶತಮಾನಗಳಲ್ಲಿ ಗ್ರಂಥಸ್ಥ ಭಾಷೆಗಳೂ ಆದುವು) ಮೂಲಕ್ಕಿಂತ ಭಿನ್ನ ಭಿನ್ನ ರೀತಿಯಲ್ಲಿಯೇ ಬೆಳೆಯಲಾರಂಭಿಸಿದುವು. ಸಂಸ್ಕೃತ ತನ್ನ ಗತವೈಭವದೊಂದಿಗೆ ನಿಂತಿದ್ದರೂ ಪ್ರಾದೇಶಿಕ ಭಾಷೆಗಳು ವರ್ತಮಾನವನ್ನು ರೂಪಿಸುವಲ್ಲಿ ಮುಖ್ಯ ಪಾತ್ರವಹಿಸಬೇಕಾಗಿತ್ತು.

ನವ ಇಂಡೋ-ಆರ್ಯನ್ ಭಾಷೆಗಳಲ್ಲಿ ಕಾವ್ಯ, ಸಾಹಿತ್ಯ ಬಂದದ್ದು ಸಂಸ್ಕೃತ, ಪಾಲಿ, ಪ್ರಾಕೃತಗಳ ಬಳುವಳಿಯಾಗಿ. ಗದ್ಯಸಾಹಿತ್ಯ ಹಿಂದೆಯೂ ಅಪೂರ್ವವಾಗಿದ್ದಿತಾದರೂ ಇದ್ದಷ್ಟು ಪ್ರಮಾಣದಲ್ಲೂ ಅದು ನವ ಇಂಡೋ-ಆರ್ಯನ್ ಭಾಷೆಗಳಲ್ಲಿ ಮುಂದುವರಿಯಲಿಲ್ಲ. ಎಲ್ಲ ನವ ಇಂಡೋ-ಆರ್ಯನ್ ಭಾಷೆಗಳಲ್ಲಿ ಸಾಹಿತ್ಯರಚನೆ ಸಾಮಾನ್ಯವಾಗಿ ಸಮಕಾಲೀನವಾಗಿದ್ದುದು ಕಂಡುಬರುತ್ತದೆ. ಮರಾಠಿಯಲ್ಲಿ 10ನೆಯ ಶತಮಾನ, ಗುಜರಾತಿಯಲ್ಲಿ 12ನೆಯ ಶತಮಾನ, ಪಂಜಾಬಿಯಲ್ಲಿ 11ನೆಯ ಶತಮಾನ, ಅಸ್ಸಾಮಿಯಲ್ಲಿ 13ನೆಯ ಶತಮಾನ, ಹಿಂದಿಯಲ್ಲಿ 13ನೆಯ ಶತಮಾನಗಳಲ್ಲಿ ಕೃತಿಗಳ ರಚನೆ ಮೊದಲಾಯಿತೆಂದು ತಿಳಿಯುತ್ತದೆ.

ಹಿಂದಿನ ಘಟ್ಟಗಳಿಂದ ನವ ಇಂಡೋ-ಆರ್ಯನ್ ಭಾಷೆಗಳ ಭಿನ್ನತೆ ಅವಲೋಕಿಸುವಾಗ, ಧ್ವನಿ ವಿಭಾಗದಲ್ಲಿ ವ್ಯತ್ಯಾಸವಾಗಿದ್ದರೂ ಅದು ನಿಚ್ಚಳವಾಗಿಲ್ಲ. ಭಾಷೆಗಳಲ್ಲಿ ಪ್ರಾದೇಶಿಕ ಭಿನ್ನತೆಯಿಂದ ವೈಯಕ್ತಿಕತೆ ಹೆಚ್ಚಿ, ಒಂದೊಂದು ಭಾಷೆಯಲ್ಲಿ ಒಂದೊಂದು ರೀತಿಯ ಬದಲಾವಣೆಯಾಗಿರುವುದು ಕಂಡುಬರುತ್ತದೆ.

ನವ ಇಂಡೋ-ಆರ್ಯನ್ ಭಾಷೆಗಳು, ಸಂಸ್ಕೃತದ ವಾತಾವರಣದಲ್ಲಿಯೇ ಬೆಳೆದವೆನ್ನಬಹುದು. ಸಂಸ್ಕೃತದಿಂದ ನೇರ ಸ್ವೀಕರಣ ಇಲ್ಲಿ ಅತಿಯಾಗಿ ಕಂಡುಬರುತ್ತದೆ. ಅನೇಕ ಭಾಷೆಗಳನ್ನು – ಕೆಲ ಆರ್ಯೇತರ ಭಾಷೆಗಳನ್ನು ಕೂಡ-ಸಂಸ್ಕೃತವಿಲ್ಲದೆ ಕಲ್ಪಿಸಲು ಕೂಡ ಸಾಧ್ಯವಿಲ್ಲ. ತತ್ಸಮ, ತದ್ಭವ ಹೀಗೆ ನಾನಾ ರೂಪಗಳಲ್ಲಿ ಭಾರತದ ಎಲ್ಲಾ ಭಾಷೆಗಳೂ ಸಂಸ್ಕೃತದಿಂದ ಎರವಲು ಪಡೆದಿವೆ. (ಜಿ.ಎಸ್.ಕೆ.)

**ಇಂಡೋ – ಬ್ರಹ್ಮ ನದಿ:** ಸುಮಾರು ಎರಡು ಕೋಟಿ ವರ್ಷಗಳ ಹಿಂದೆ (ಮಯೋಸೀನ್ ಯುಗ) ಹಿಮಾಲಯ ತಪ್ಪಲಿನಲ್ಲಿ ಹುಟ್ಟಿ ಹರಿಯುತ್ತಿತ್ತೆಂದು ನಂಬಲಾದ ಒಂದು ಮಹಾನದಿ. ಭಾರತ ದೇಶದ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯಲ್ಲಿ ಅಧಿಕಾರಿಯಾಗಿದ್ದ ಇ.ಎಚ್. ಪ್ಯಾಸ್ಕೊ ಇದರ ಗತಿ, ಪಥಗಳನ್ನು ಸಂಶೋಧಿಸಿ ಈ ಹೆಸರು ಕೊಟ್ಟರು. ಈಗಿನ ಬ್ರಹ್ಮಪುತ್ರ ನದಿ ಭಾರತ ದೇಶವನ್ನು ಅಸ್ಸಾಮಿನಲ್ಲಿ ಪ್ರವೇಶಿಸುವ ಪ್ರಾಂತ್ಯದಲ್ಲಿ ಇಂಡೋ-ಬ್ರಹ್ಮ ನದಿ ಹುಟ್ಟಿತೆಂದು ಆತನ ಅಭಿಪ್ರಾಯ. ಅದರ ಸಮರ್ಥನೆ ಹೀಗಿದೆ: ಆ ಕಾಲದಲ್ಲಿ ಹಿಮಾಲಯ ಪರ್ವತ ಶ್ರೇಣಿಗಳ ದಕ್ಷಿಣ ಭಾಗದ ಅಂಚಿನಲ್ಲಿ 4000 ಕಿಮೀ ಉದ್ದವಾದ ಒಂದು ಆಳವಾದ ಕಣಿವೆ ಇತ್ತು. ಇಂಡೋ-ಬ್ರಹ್ಮ ನದಿ ಈ ಕಣಿವೆಯಲ್ಲಿ ಪಶ್ಚಿಮಾಭಿಮುಖವಾಗಿ ಡೆಹರಾಡೂನ್‌ವರೆಗೆ 1,600 ಕಿಮೀ ಪ್ರವಹಿಸಿ ಅಲ್ಲಿಂದ ವಾಯವ್ಯಕ್ಕೆ ತಿರುಗಿ ಪಾಕಿಸ್ತಾನದಲ್ಲಿರುವ ಮರ್ರೀಯ ಮಾರ್ಗವಾಗಿ ಅಟಾಕನ್ನು ಸೇರಿ ಅಲ್ಲಿ ಸಿಂಧೂನದಿಯನ್ನು ಉಪನದಿಯಾಗಿ ಪಡೆದು ದಕ್ಷಿಣಕ್ಕೆ ತಿರುಗಿ ಸಿಂಧ್ ಪ್ರಾಂತದ ಹತ್ತಿರ ಅರಬ್ಬೀ ಸಮುದ್ರವನ್ನು ಸೇರುತ್ತಿತ್ತು. ಗಂಗಾ, ಯಮುನಾ, ಸರಸ್ವತೀ ಹಾಗೂ ಪಂಜಾಬಿನ ಪಂಚನದಿಗಳು ಮತ್ತು ಸಿಂಧೂ ಇದರ ಇತರ ಉಪನದಿಗಳು. ಭಾರತದ ಉತ್ತರ ಪ್ರದೇಶದಲ್ಲಿ ಇಂಡೋ-ಬ್ರಹ್ಮನದಿ ಸು. 15 ಲಕ್ಷ ವರ್ಷಗಳ ಕಾಲ ಬಹಳ ಪ್ರಬಲವಾದ ನದಿಯಾಗಿತ್ತು. ಆದರೆ ಪರಿಸ್ಥಿತಿ ಹೀಗೆಯೆ ಉಳಿಯಲಿಲ್ಲ. ಸು. 5 ಲಕ್ಷ ವರ್ಷಗಳ ಹಿಂದೆ ಹಿಮಾಲಯ ಪ್ರದೇಶದಲ್ಲಿ ತಲೆದೋರಿದ ಭೂಕಂಪಗಳ ಪರಿಣಾಮವಾಗಿ ಇಂಡೋ-ಬ್ರಹ್ಮ ನದಿಯ ಕಣಿವೆಯ ಒಂದು ಭಾಗ ಉಬ್ಬಿ ಎತ್ತರವಾಯಿತು. ನದಿಯ ಗತಿ, ಚಲನೆ, ಉಪನದಿಗಳ ಅಸ್ತಿತ್ವ-ಇವು ಕುಂಠಿತಗೊಂಡುವು. ಗಂಗಾ ಮತ್ತು ಯಮುನಾ ನದಿಗಳು ಮೂಲ ನದಿಯನ್ನು ಸೇರದೆ ಅದನ್ನು ಭೇದಿಸಿಕೊಂಡು ಪೂರ್ವಾಭಿಮುಖವಾಗಿ ಇಳಿಜಾರಾಗಿರುವ ಪೂರ್ವ ಪ್ರದೇಶವನ್ನು ಹೊಕ್ಕು ಬಂಗಾಲ ಕೊಲ್ಲಿಯನ್ನು ಸೇರಿದುವು. ಸರಸ್ವತೀ ನದಿ ರಾಜಸ್ತಾನದ ಮೂಲಕ ಪ್ರವಹಿಸಿ, ಕಚ್ ಪ್ರದೇಶದ ಹತ್ತಿರ ಅರಬ್ಬೀ ಸಮುದ್ರವನ್ನು ಸೇರಿತು. ಸಿಂಧೂ ನದಿ ಪ್ರಬಲವಾಗಿ ಇಂಡೋ-ಬ್ರಹ್ಮದ ಮಾರ್ಗವಾಗಿ ಹರಿಯುವ ಮೂಲನದಿಯಾಯಿತು. ಪಂಚನದಿಗಳು ಸಿಂಧೂವಿನ ಉಪನದಿಗಳಾದುವು. ಇದರಿಂದ ಇಂಡೋ-ಬ್ರಹ್ಮನದಿಯ ಪಶ್ಚಿಮ ಭಾಗ ನೀರಿಲ್ಲದೆ ಸಿಂಧೂನದಿಗೆ ಉಪನದಿಯಾಗಬೇಕಾಯಿತು. ಈಗ ಆ ಇಂಡೋ-ಬ್ರಹ್ಮದ ಭಾಗ ಪಾಕಿಸ್ತಾನದಲ್ಲಿ ಸೋಹನ್ ಎಂಬ ಹೆಸರಿನಿಂದ ಸಿಂಧೂವಿನ ಉಪನದಿಯಾಗಿದೆ. ಕೆಲವು ಸಾವಿರ ವರ್ಷಗಳ ಹಿಂದೆ ಯಮುನಾ ನದಿ ಪಕ್ಕದಲ್ಲಿದ್ದ ಸರಸ್ವತೀ ನದಿಯು ಕೆಲವು ನೀರಾವರಿ ಭಾಗಗಳನ್ನು ಆಕ್ರಮಿಸಿಕೊಂಡಿತು. ಇದರಿಂದ ಚಲನಶಕ್ತಿ ಕಡಿಮೆಯಾದ ಸರಸ್ವತೀ ನದಿ ಸಮುದ್ರವನ್ನು ಸೇರದೆ ರಾಜಸ್ತಾನದಲ್ಲಿರುವ ಪುಷ್ಕರವೆಂಬ ಸರೋವರದವರೆಗೂ ಪ್ರವಹಿಸಿ ಭೂಮಿಯಲ್ಲಿ ಇಂಗಿಹೋಯಿತು. ಇದರ ಮೂಲ ಭಾಗ ಈಗ ದೆಹಲಿಯ ಉತ್ತರ ಭಾಗದಲ್ಲಿ ಘಗ್ಗರ್ ಎಂಬ ಹೆಸರಿನಿಂದ ಚಿಕ್ಕನದಿಯಾಗಿದೆ. ಯಮುನಾ ನದಿ ಸರಸ್ವತಿಯ ಒಂದು ಭಾಗವನ್ನು ಮೂಲದಲ್ಲಿ ಆಕ್ರಮಿಸಿದ್ದರಿಂದ ಜನ ಅಲಹಾಬಾದಿನ ತ್ರಿವೇಣಿ ಸಂಗಮದಲ್ಲಿ ಸರಸ್ವತೀ ನದಿಯೂ ಇದೆಯೆಂದು ನಂಬಿದ್ದಾರೆ. ಈಗಲೂ ಇಂಡೋ-ಬ್ರಹ್ಮನದಿಯ ಅಸ್ತಿತ್ವವನ್ನು ಕುರಿತಂತೆ ವಿದ್ವಾಂಸರಲ್ಲಿ ಅಭಿಪ್ರಾಯಭೇದವಿದೆ. (ಎನ್.ಕೆ.ಎನ್.ಐ.)

**ಇಂಡೋ-ಯುರೋಪಿಯನ್ ಭಾಷೆಗಳು:** ಪ್ರಪಂಚದ ಪ್ರಮುಖ ಭಾಷಾ ವರ್ಗಗಳಲ್ಲೊಂದು. ಈ ಭಾಷೆಗಳ ಸಂಖ್ಯೆಯೂ ಅಧಿಕವಿದ್ದು ಮಿಕ್ಕೆಲ್ಲ ಭಾಷೆಗಳಿಗಿಂತ ಹೆಚ್ಚು ವಿಸ್ತಾರವಾಗಿ ಪುನರ್‌ವಿಂಗಡಣೆಗೊಂಡಿದೆ. ಇವುಗಳು ಪುರಾತನ ಕಾಲದ ಜನರ ವಲಸೆಯ ಮಾರ್ಗವನ್ನು ಸೂಚಿಸುವ ಮುಖ್ಯವಾದ ನಿದರ್ಶನಗಳಾಗಿವೆ. ಈ ಭಾಷಾವಂಶಾವಳಿ ಯುರೋಪಿನ ಹಾಗೂ ಯುರೋಪಿಯನ್ನರಿಂದ ವಸಾಹತುಗಳಾಗಿ ಪರಿಣಮಿಸಿದ ಭೂಭಾಗಗಳು, ನೈರುತ್ಯ ಹಾಗೂ ದಕ್ಷಿಣ ಏಷ್ಯಗಳ ಭಾಷೆಗಳನ್ನು ಒಳಗೊಂಡಿವೆ.

ಯುರೋಪಿನ ಭಾಷೆಗಳು : ಯುರೋಪಿನಲ್ಲಿ ಕಂಡುಬರುವ ಇಂಡೋ-ಯುರೋಪಿಯನ್ ಭಾಷೆಗಳನ್ನು ನಾಲ್ಕು ಉಪವಿಭಾಗಗಳಾಗಿ ವಿಂಗಡಿಸಲಾಗಿದೆ: ಜರ್ಮನಿಕ್, ಗ್ರೀಕೋರೋಮನ್, ಸೆಲ್ಟಿಕ್-ಬಾಲ್ಟಿಕ್ ಮತ್ತು ಸ್ಲಾವಿಕ್ ಮತ್ತು ಐಲಿರಿಯಸ್.

(1) ಗ್ರೀಕೋ-ರೋಮನ್ ಭಾಷೆಗಳು : ಈ ಭಾಷೆಗಳು ದಕ್ಷಿಣ ಯುರೋಪಿನಲ್ಲಿ ಕಂಡುಬರುತ್ತವೆ. ಲ್ಯಾಟಿನ್, ಗ್ರೀಕ್, ಇಟಾಲಿಯನ್, ಫ್ರೆಂಚ್, ಸ್ಪಾನಿಷ್, ಕಟಾಲಿನ್, ಪೋರ್ಚುಗೀಸ್, ರೊಮೇನಿಯನ್ ಭಾಷೆಗಳು ಈ ವಂಶಕ್ಕೆ ಸೇರಿದ ಪ್ರಮುಖ ಭಾಷೆಗಳಾಗಿವೆ. ಜರ್ಮನಿ ಸ್ಕಾಂಡಿನೇವಿಯನ್ – ರೋಮನ್ ಭಾಷೆಗಳು: ಜರ್ಮನಿಕ್ ವಂಶಕ್ಕೆ ಸೇರಿದ ಭಾಷೆಗಳು ಕೇಂದ್ರ ಹಾಗೂ ಪಶ್ಚಿಮ ಯುರೋಪಿನ ದೇಶಗಳಲ್ಲಿ ಕಂಡುಬರುತ್ತವೆ. ಈ ಗುಂಪಿಗೆ ಸೇರಿದ ಪ್ರಮುಖ ಭಾಷೆಗಳಿವು; ಇಂಗ್ಲಿಷ್, ಜರ್ಮನ್, ಡೇನಿಷ್, ಸ್ವೀಡಿಷ್, ನಾರ್ವೆಜಿಯನ್, ಐಸ್‌ಲೆಂಡಿಕ್, ಫ್ರಿಸಿಯನ್, ಫ್ಲೆಮಿಷ್. ಬಾಲ್ಟೋ-ಸ್ಲಾವಿಕ್ ಭಾಷೆಗಳು : ಸ್ಲಾವೋಯಿಕ ಭಾಷೆಗಳು ಸ್ಲಾವಿಕ್ ದೇಶಗಳಲ್ಲಿ ಕಂಡುಬರುತ್ತವೆ. ಯೂಗೋಸ್ಲಾವಿಯ, ರೊಮೇನಿಯ, ಬಲ್ಗೇರಿಯ, ಹಂಗೆರಿ, ಪೋಲೆಂಡ್ ಮತ್ತು ರಷ್ಯಗಳಲ್ಲಿ ಈ ಭಾಷೆಗಳಿವೆ. ಪೊಲಿಷ್, ಚೆಕ್, ಸ್ಲೊವಾಕ್, ಸ್ಲೊವಿನ್, ಸರ್ಬೋಕ್ರೋಟ್, ಮ್ಯಾಸಿಡೋನಿಯನ್, ಬಲ್ಗೇರಿಯನ್, ರಷ್ಯನ್, ಉಕ್ರೇನಿಯನ್, ಬೈಲ್‌ರಷ್ಯನ್ ಮತ್ತು ರುಥೇನಿಯನ್ ಭಾಷೆಗಳು ಈ ವಿಭಾಗಕ್ಕೆ ಸೇರಿವೆ. ಬಾಲ್ಟಿಕ್ ಭಾಷೆಗಳು ಬಾಲ್ಟಿಕ್ ಸಮುದ್ರತೀರದ ಲಾತ್ವಿಯ ಮತ್ತು ಲಿಥುವೇನಿಯನ್ ದೇಶಗಳಲ್ಲಿ ಕಂಡುಬರುತ್ತವೆ. ಸೆಲ್ಟಿಕ್ ಭಾಷೆಗಳು : ಇಂದು ಇತರ ಭಾಷೆಗಳಿಂದ ಆಕ್ರಮಿಸಲ್ಪಟ್ಟ ಕೆಲವು ಮೂಲ

ಭಾಷೆಗಳು ತಮ್ಮ ಪ್ರಾಬಲ್ಯತೆಯನ್ನು ಕಳೆದುಕೊಂಡಿವೆ. ಇವುಗಳಲ್ಲಿ ಸೆಲ್ಟಿಕ್ ಭಾಷೆಗಳು ಯುರೋಪಿನಲ್ಲಿ ಮುಖ್ಯವಾದವು. ಇವುಗಳು ಅವಶೇಷ ಭಾಷೆಗಳಂತೆ ಅಲ್ಲಲ್ಲಿ ಕಂಡುಬರುತ್ತವೆ. ಅವುಗಳೆಂದರೆ – ಕೋರ್ನಿಷ್, ಗಾಲಿಕ್, ವೆಲ್ಷ್, ವಿರ್ಸ್ ಹಾಗೂ ಬ್ರಿಟನ್‌ನ ಇಂಗ್ಲಿಷ್‌ಭಾಷೆಗಳು.

ಯುರೋಪಿನ ಭಾಷೆಗಳಲ್ಲಿ ಇಂಗ್ಲಿಷ್ ಎಲ್ಲಾ ಭಾಷೆಗಳಿಗಿಂತಲೂ ಭೌಗೋಳಿಕವಾಗಿ ಪ್ರಪಂಚದಾದ್ಯಂತ ಹರಡಿರುವುದು. ಇದು ಭೌಗೋಳಿಕ, ರಾಜಕೀಯ ಹಾಗೂ ಜನಾಂಗೀಯ ಗಡಿಗಳನ್ನು ದಾಟಿ ಪ್ರಪಂಚದ ಅನೇಕ ದೇಶಗಳಲ್ಲಿ ಹರಡಿದೆ. ಈಗಲೂ ಇಂಡೋ–ಯುರೋಪಿಯನ್ ಭಾಷಾ ವರ್ಗದ ಮೂಲಸ್ಥಾನ ಯಾವುದು ಎಂಬುದರ ಬಗ್ಗೆ ವಿಪುಲವಾಗಿ ಚರ್ಚೆ ನಡೆದಿದೆ. ಮೂಲಸ್ಥಾನ ಯುರೋಪ್ ಎಂಬ ಭಾವನೆ ಖಚಿತವಾಗಿ ಅದು ಮಧ್ಯ ಏಷ್ಯ ಎಂಬ ಹಳೆಯ ಕಲ್ಪನೆಯನ್ನು ಈಗ ಕೈಬಿಡಲಾಗಿದೆ. ಮಧ್ಯ ಯುರೋಪ್ ಮತ್ತು ಡ್ಯಾನ್ಯೂಬ್ ಕಣಿವೆಗಳು ಈ ಭಾಷೆಗಳ ಮೂಲಸ್ಥಾನವಾಗಿರಬೇಕೆಂದು ಭಾವಿಸಲಾಗಿದೆ. ಇಂಡೋ–ಯುರೋಪಿಯನ್ ಭಾಷೆಗಳನ್ನು ಭಾರತಕ್ಕೆ ತಂದ ಇಂಡೋ–ಆರ್ಯನ್ನರ ವಲಸೆಯ ಕೊನೆಯ ಹಂತ ಪ್ರ.ಶ.ಪೂ.ಸು. 1500 ದಲ್ಲಿ ಆಗಿರಬಹುದು ಎಂದು ಊಹಿಸಲಾಗಿದೆ. ಭಾರತದ ಜನಸಂಖ್ಯೆಯಲ್ಲಿಯ ಅಧಿಕಪಾಲು ಜನ ಈ ಮೂಲದ ಭಾಷೆಗಳನ್ನೇ ಆಡುತ್ತಾರೆ. ಈ ಭಾಷೆಗಳಲ್ಲಿ ಹಿಂದಿ, ಉರ್ದು, ಬಂಗಾಲಿ, ಅಸ್ಸಾಮಿ, ಒರಿಯ, ಮರಾಠಿ, ಪಂಜಾಬಿ, ಮತ್ತು ಕಾಶ್ಮೀರಿ – ಇವು ಮುಖ್ಯವಾದವು. ಇವುಗಳೊಂದಿಗೆ ಸಿಂಹಳಿ ಭಾಷೆಯನ್ನೂ ಸೇರಿಸಬಹುದು. (ಟಿ.ಬಿ.)

**ಇಂಡೋ–ಚೀನ:** ಕಾಂಬೋಡಿಯ, ಲಾವೋಸ್ ಮತ್ತು ವಿಯೆಟ್ನಾಂ ದೇಶಗಳನ್ನು ಒಳಗೊಂಡ ಫ್ರೆಂಚ್ ಅಧೀನದಲ್ಲಿದ್ದ ಆಗ್ನೇಯ ಏಷ್ಯದ ಒಂದು ರಾಷ್ಟ್ರವಾಗಿತ್ತು. 1893ರಿಂದ ಫ್ರೆಂಚರ ಅಧೀನದಲಿದ್ದ ಈ ರಾಷ್ಟ್ರವನ್ನು 1945ರಲ್ಲಿ ಜಪಾನ್ ಅಲ್ಪಕಾಲದವರೆಗೆ ತನ್ನ ಅಧೀನಕ್ಕೆ ತೆಗೆದುಕೊಂಡಿತ್ತು. ಪುನಃ ಫ್ರೆಂಚರು ಇದನ್ನು ತಮ್ಮ ಅಧಿಪತ್ಯಕ್ಕೆ ತೆಗೆದುಕೊಂಡರು. 1949–50ರಲ್ಲಿ ನಡೆದ ಮೊದಲ ಇಂಡೋ–ಚೀನ ಯುದ್ಧ ನಂತರ ಕಾಂಬೊಡಿಯ, ಲಾವೋಸ್, ಮತ್ತು ವಿಯಾಟ್ನಾಂಗಳು ಫ್ರೆಂಚ್ ಒಕ್ಕೂಟದ ಸ್ವತಂತ್ರ ರಾಷ್ಟ್ರಗಳಾದವು. 1954ರಲ್ಲಿ ಜಿನೀವ ಸಮ್ಮೇಳನದ ಅನಂತರ ಇವು ಸಂಪೂರ್ಣ ಸ್ವತಂತ್ರ ರಾಷ್ಟ್ರಗಳಾಗಿ ರೂಪುಗೊಂಡವು. ಈಗ ಇಂಡೋ–ಚೀನ ರಾಷ್ಟ್ರ ತನ್ನ ಮೂಲ ರೂಪದಲ್ಲಿಲ್ಲ. (ಜೆ.ಎಸ್.ಡಿ.)

**ಇಂದೋರ್:** ಮಧ್ಯಪ್ರದೇಶ ರಾಜ್ಯದ ಒಂದು ಜಿಲ್ಲೆ ಹಾಗೂ ರಾಜ್ಯದ ದೊಡ್ಡ ಪಟ್ಟಣ. ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಇಂದೋರ್ ಸಂಸ್ಥಾನದ ರಾಜಧಾನಿಯಾಗಿತ್ತು. ಇದು $22^0 43'$ ಉ. ಅ. ಮತ್ತು $75^0 54'$ ಪೂ. ರೇ. ದಲ್ಲಿದೆ. ಇದು ಖಾನ ಮತ್ತು ಸರಸ್ವತಿ ನದಿಗಳ ಸಂಗಮದಲ್ಲಿದ್ದು, ಸಮುದ್ರಮಟ್ಟದಿಂದ 521 ಮೀ ಎತ್ತರದಲ್ಲಿದೆ. ರಾಜ್ಯದ ಪಶ್ಚಿಮ ಭಾಗದಲ್ಲಿದ್ದು ಬೇಸಗೆಯ ರಾಜಧಾನಿಯಾಗಿದೆ. ಇಲ್ಲಿ ಅನೇಕ ಹತ್ತಿ ಗಿರಣಿಗಳಿವೆ. ಇದು ಪ್ರಮುಖ ವಾಣಿಜ್ಯ ಕೇಂದ್ರ. ವಿಸ್ತೀರ್ಣ 829,327 ಚ.ಕಿಮೀ. ಜನಸಂಖ್ಯೆ 16,39,044.

1715ರಲ್ಲಿ ಸ್ಥಳೀಯ ಜಮೀನುದಾರರು ಇದನ್ನು ವ್ಯಾಪಾರ ಪಟ್ಟಣವಾಗಿ ಸ್ಥಾಪಿಸಿದರು. 1741ರಲ್ಲಿ ಇಂದ್ರೇಶ್ವರ ದೇವಸ್ಥಾನ ಕಟ್ಟಲಾಯಿತು. ಆದ್ದರಿಂದಲೇ ಪಟ್ಟಣಕ್ಕೆ ಇಂದೂರ್ ಎಂಬ ಹೆಸರು ಬಂದಿತು. 1964ರಲ್ಲಿ ಇಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು. ರಾಜಕುಮಾರರಿಗಾಗಿಯೆ ಎಂದು ಪ್ರಾರಂಭದಲ್ಲಿ ಮೀಸಲಾಗಿದ್ದ ಡೇಲಿ ಕಾಲೇಜು ಇಲ್ಲಿರುವ ಅಮೃತಶಿಲೆಯ ಸುಂದರ ಕಟ್ಟಡಗಳಲ್ಲೊಂದು. (ಎಂ.ಎಸ್.)

**ಇಂಫಾಲ್:** ಭಾರತದ ಮಣಿಪುರ ರಾಜ್ಯದ ಆಡಳಿತ ಕೇಂದ್ರ. ಪ್ರ.ಶ.ಪೂ. 3ನೆಯ ಶತಮಾನದಲ್ಲಿಯೇ ಸ್ಥಾಪಿತವಾಗಿರುವ ಈ ನಗರ ಕೋಲ್ಕತದ ಈಶಾನ್ಯ ದಿಕ್ಕಿಗೆ 640 ಕಿಮೀ ದೂರದಲ್ಲಿ ಮಣಿಪುರ ನದಿಯ ದಡದಲ್ಲಿದೆ. ಇದು ಸಮುದ್ರಮಟ್ಟಕ್ಕಿಂತ 76 ಮೀ ಎತ್ತರದಲ್ಲಿದೆ. ಜನಸಂಖ್ಯೆ: 245,967. ಇಲ್ಲಿ ಟಿಬೆಟನ್ನರು ಮತ್ತು ಬರ್ಮೀಯರನ್ನೊಳಗೊಂಡ ಮಿಶ್ರ ಜನಾಂಗವಿದೆ. ಇವರೆಲ್ಲ ವೈಷ್ಣವ ಪಂಥಕ್ಕೆ ಸೇರಿದ ಹಿಂದೂಗಳು. ಇವರು ಪ್ರಾಚೀನ ಸಂಗೀತ ನೃತ್ಯಗಳಲ್ಲಿ ತಮ್ಮದೇ ಆದ ಸಂಸ್ಕೃತಿ ಹಾಗೂ ಶೈಲಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಇಂಫಾಲ ಕಾಲೇಜು, ಇಂಫಾಲ ಬೋಧಶಿಕ್ಷಣ ಪ್ರೌಢಶಾಲೆ, ಧನಮಂಜರಿ ಪ್ರೌಢಶಾಲೆ–ಅಸ್ಸಾಮಿನ ಗುವಾಹತಿ ವಿಶ್ವವಿದ್ಯಾಲಯದ ಆಡಳಿತಕ್ಕೆ ಸೇರಿವೆ. ನೆಯ್ಗೆ, ಹಿತ್ತಾಳೆ ಮತ್ತು ಕಂಚಿನ ಪದಾರ್ಥಗಳ ತಯಾರಿಕೆ ಮುಂತಾದ ಗ್ರಾಮೋದ್ಯೋಗಗಳಿಗೆ ಈ ಸ್ಥಳ ಪ್ರಸಿದ್ಧಿ ಪಡೆದಿದೆ. *

**ಇಕ್ವೆಟೋರಿಯಲ್ ಗಿನಿ:** ಮಧ್ಯ ಆಫ್ರಿಕದ ಸಣ್ಣರಾಷ್ಟ್ರ. ಇದನ್ನು ರಿಪಬ್ಲಿಕ್ ಆಫ್ ಇಕ್ವೆಟೋರಿಯಲ್ ಗಿನಿ ಎಂದೂ ಕರೆಯುವರು. ಈ ರಾಷ್ಟ್ರವನ್ನು ಸುತ್ತುವರಿದಿರುವ ರಾಷ್ಟ್ರಗಳೆಂದರೆ ಉತ್ತರದಲ್ಲಿ ಕ್ಯಾಮರೂನ್, ದಕ್ಷಿಣ ಹಾಗು ಪೂರ್ವದಲ್ಲಿ ಗ್ಯಾಬನ್, ಪಶ್ಚಿಮದಲ್ಲಿ ಗಿನಿ ಕೊಲ್ಲಿ, ಈಶಾನ್ಯದಲ್ಲಿ ಸಾವೋಟಾಮಿ ಹಾಗೂ ಪ್ರಿನ್ಸಿಪೆ.

ಇಕ್ವೆಟೋರಿಯಲ್ ಗಿನಿ 28,501 ಚ.ಕಿಮೀ ಭೂಪ್ರದೇಶವನ್ನು ಒಳಗೊಂಡಿದೆ. ಇದರ ಗಡಿ ಫರ್ನಾಂಡೊ ಪೊ, ಕಾರ್ಸಿಕ್ಕೊ ಗ್ರೇಟ್, ಇಲೊಬೇ ಅನ್ನಾಬಾನ್ ಮತ್ತು ರಿಯೋ ಮುನಿ ಜೊತೆ ಹಂಚಿಕೊಂಡಿದೆ. ಆಫ್ರಿಕದ ಪಶ್ಚಿಮ ಕರಾವಳಿಯನ್ನು ಗಡಿಭಾಗವಾಗಿ ಹೊಂದಿದೆ. ಉ.ಅ. $1^0–3^0$ ಹಾಗೂ ಪೂ.ರೇ. $9^0–10^0$ ನಡುವೆ ವಿಸ್ತರಿಸಿದೆ.




ಹಿಂದೆ ಈ ದೇಶ ಸ್ಪೇನ್‌ನ ವಸಾಹತ್ತಾಗಿದ್ದು ಇದನ್ನು ಸ್ಪಾನಿಷ್ ಗಿನಿ ಎಂದು ಕರೆಯುತ್ತಿದ್ದರು. ಇದು ಅನೇಕ ದ್ವೀಪಭಾಗಗಳನ್ನು ಒಳಗೊಂಡು ಖಂಡಾವರಣದ ಗಡಿಯನ್ನು ಸಹ ಹೊಂದಿದೆ. ರಿಯೋಮುನಿ ಎಂಬ ಹೆಸರನ್ನು ಹೊಂದಿದೆ. ಜನಸಂಖ್ಯೆ 5,35,881, (2000).

ಬೈಯಾಕೊ ದೊಡ್ಡಗಾತ್ರದ ದ್ವೀಪ, ರಾಷ್ಟ್ರದ ರಾಜಧಾನಿ ಮಲಾಬೊ ಇರುವುದು ಈ ದ್ವೀಪದಲ್ಲೇ. ಜನಸಂಖ್ಯೆ 30,418 (2001). (ಹಿಂದಿನ ಹೆಸರು ಸಂತ ಇಸೆಬೆಲ್) ಇದಕ್ಕೆ ಸಂಬಂಧಿಸಿದ ಇತರೆ ದ್ವೀಪಗಳೆಂದರೆ ಕೊರಿಸ್ಕೊ, ಇಲೊಬೇ, ಗ್ರ್ಯಾಂಚಿ ಹಾಗೂ ಇಲೊಬೇ ಚಿಕೊ.

ಸ್ವಾತಂತ್ರ್ಯದ ಅನಂತರ (1975) ಹಿಂದಿನ ಅಧ್ಯಕ್ಷ ಮಸಿಯಸ್ ನ್ಯೊಮ ಬಹುತೇಕ ಪ್ರಾದೇಶಿಕ ಹೆಸರುಗಳನ್ನು ಹೊಸದಾಗಿ ನಾಮಕರಣ ಮಾಡಿದ.

ಈ ದೇಶದ ಯಾವುದೇ ಭಾಗವು ಸಮಭಾಜಕ ವೃತ್ತದ ಮೇಲೆ ಇಲ್ಲ, ಆದರೆ ಈ ರಾಷ್ಟ್ರವು ಸಮಭಾಜಕವೃತ್ತದ ಸಮೀಪವಿರುವುದೇ, ಈ ಹೆಸರು ಬರಲು ಒಂದು ಕಾರಣ, ಎರಡನೆಯದಾಗಿ, ಗಿನಿ ಕೊಲ್ಲಿಯ ಹತ್ತಿರ ಭೌಗೋಳಿಕ ಸ್ಥಾನ ಹೊಂದಿರುವುದರಿಂದ ಇಕ್ವೆಟೋರಿಯಲ್ ಗಿನಿ ಎಂಬ ಹೆಸರು ಬಂದಿದೆ. ಪ್ರಪಂಚದ ಎರಡೇ ರಾಷ್ಟ್ರಗಳಾದ ಡೆನ್ಮಾರ್ಕ್ ಹಾಗು ಇಕ್ವೆಟೋರಿಯಲ್ ಗಿನಿ ದೇಶಗಳ ಪ್ರಧಾನ ಭೂಭಾಗಗಳು ಖಂಡಾವರಣದಲ್ಲಿದ್ದು ಅದರ ರಾಜಧಾನಿಯನ್ನು ದ್ವೀಪದಲ್ಲಿ (ಕಲ್ಪ) ಹೊಂದಿರುವುದು.

ಸಮಾಜ–ಜನ–ಭಾಷೆ: ಬಂಟು ಮೂಲದ ಜನ ಈ ರಾಷ್ಟ್ರದ ಪ್ರಧಾನ ಜನಸಂಖ್ಯೆ. ಫಂಗ್ ಬುಡಕಟ್ಟು ಇಲ್ಲಿನ ಮೂಲನಿವಾಸಿಗಳು, ನಿರಂತರ ಒಳ ವಲಸೆಯ ಪರಿಣಾಮವಾಗಿ ಭಯಾಕೊ ದ್ವೀಪದ ಫಂಗ್ ಬುಡಕಟ್ಟು ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ.

ಫಂಗ್ ಬುಡಕಟ್ಟು ಶೇ. 8 ಜನಸಂಖ್ಯೆಯನ್ನು ಹೊಂದಿದೆ. ಈ ಬುಡಕಟ್ಟಿನಲ್ಲಿ 67 ಒಳ ಪಂಗಡಗಳು ಕಂಡುಬರುತ್ತವೆ. ರಿಯೋ ಮುನಿಯ ಉತ್ತರ ಭಾಗದಲ್ಲಿ ನೆಲೆಸಿರುವ ಬುಡಕಟ್ಟಿನ ಜನ ಫಂಗ್–ತುಮು ಭಾಷಿಗರು, ದಕ್ಷಿಣ ಭಾಗದಲ್ಲಿನ ಬುಡಕಟ್ಟು ಜನ ಫಂಗ್–ಒಕಾ ಭಾಷಿಗರು. ಎರಡೂ ಭಾಷೆಗಳ ಮಧ್ಯ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ.

ಬುಬಿ ಜನಾಂಗ ಶೇ. 15 ರಷ್ಟು ಬೆಯಾಕೊ ದ್ವೀಪ ಮೂಲವಾಸಿಗಳು.

ಕರಾವಳಿ ಬುಡಕಟ್ಟು ಜನರಾದ ಪ್ಲೇಯರೋಸ್–ಇವರನ್ನು ಬೀಚ್ ಪೀಪಲ್ ಎಂದು ಕರೆಯುತ್ತಾರೆ. ಖಂಡಾವರಣ ಹಾಗೂ ಉಳಿದ ದ್ವೀಪ ಬುಡಕಟ್ಟುಗಳೆಂದರೆ; ಡೆವಿಸ್, ಬುಜಿಬಾಸ್, ಬಾಲಿಂಗೂಸ್ ಹಾಗೂ ಬೆಂಗಾಸ್.

ಫರ್ನಾಂಡಿನೊಸ್ ಜನರು ಕ್ರಿಯೋಲಿ ಮೂಲದವರು ಇವರು ಬಯಾಕೊ ದ್ವೀಪ ವಾಸಿಗಳು. ಇವರು ರಾಷ್ಟ್ರದ ಒಟ್ಟು ಜನಸಂಖ್ಯೆ ಶೇ. 5 ರಷ್ಟಿದ್ದಾರೆ.

ಆಫ್ರಿಕ ಜನಾಂಗದೊಂದಿಗೆ ಬೆರೆತಿರುವ ಯುರೋಪಿಯನ್ (ಸ್ಪಾನಿಷ್ ಹಾಗೂ ಪೋರ್ಚುಗೀಸ್) ಜನರು ಇಲ್ಲಿ ಕಂಡುಬರುತ್ತಾರೆ. ನೆರೆರಾಷ್ಟ್ರಗಳಾದ ಕ್ಯಾಮರೂನ್, ನೈಜೀರಿಯ ಹಾಗೂ ಗ್ಯಾಬನ್ ಮೂಲದವರು ಇಕ್ವೆಟೋರಿಯಲ್ ಗಿನಿಯಲ್ಲಿ ನೆಲೆಸಿದ್ದಾರೆ.

ಈ ರಾಷ್ಟ್ರವು ಏಷ್ಯ ಹಾಗೂ ಆಫ್ರಿಕದ ಕಪ್ಪು ಜನರನ್ನು ಕೊಕೋ ಮತ್ತು ಕಾಫಿ ತೋಟಗಳಲ್ಲಿ ಕೆಲಸಮಾಡಲು ಕರೆಸಿಕೊಂಡಿದೆ. ಹೀಗೆ ಬಂದ ಜನರು ಲೈಬೀರಿಯ, ಅಂಗೋಲ, ಮೊಜಾಂಬಿಕ್ ಹಾಗೂ ಏಷ್ಯದಿಂದ ಬಂದ ಚೀನಿಯರು. ಈ ರಾಷ್ಟ್ರವು ಇತರೇ ದೇಶದ ಜನರಿಗೂ ಇಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟಿದೆ. ಬ್ರಿಟಿಷ್, ಫ್ರೆಂಚ್ ಮತ್ತು ಜರ್ಮನ್ನರು ಇಲ್ಲಿದ್ದಾರೆ.

ರಾಷ್ಟ್ರಕ್ಕೆ ಸ್ವಾತಂತ್ರ ಬಂದ ಮೇಲೆ ಸಾವಿರಾರು ಇಕ್ವೆಟೋರಿಯಲ್ ಗಿನಿ ಪ್ರಜೆಗಳು ಸ್ಪೇನ್ ದೇಶಕ್ಕೆ ವಲಸೆ ಹೋದರು. ಒಂದು ಲಕ್ಷಜನ ಕ್ಯಾಮರೂನ್, ಗ್ಯಾಬನ್ ಹಾಗೂ ನೈಜೀರಿಯಕ್ಕೆ ಹೋದರು. ಫ್ರಾನ್ಸಿಸ್‍ಕೊ ಮೆಸ್ಸಿಯಸ್ ನ್ಯೋಮರ (ಅಧ್ಯಕ್ಷ) ಸರ್ವಾಧಿಕಾರ ಧೋರಣೆಯೆ ಇದಕ್ಕೆ ಕಾರಣ.

ಫರ್ನಾಂಡೊ ದ್ವೀಪ ಎತ್ತರವಾದ ಪರ್ವತಗಳನ್ನು ಹೊಂದಿದೆ. ಈ ದ್ವೀಪದಲ್ಲಿ ಕಾಫಿ ಬೆಳೆಯನ್ನು 900 ಮೀ ಎತ್ತರದೂಲ್ಲಿಯೂ ಬೆಳೆಯುತ್ತಾರೆ. ಕೊಕೋ ಬೆಳೆಯನ್ನು 600 ಮೀ ಎತ್ತರದಲ್ಲಿ ಬೆಳೆಯಲಾಗುತ್ತದೆ. ಅರಣ್ಯಗಳಲ್ಲಿ ಎಬೋನಿ, ಮಹಾಗನಿ, ಒಕ್ ವೃಕ್ಷಗಳು ಕಂಡುಬರುತ್ತವೆ. (ಎ.ಎಸ್.ಎ.)

**ಇಜ್ಮೀರ್:** ಟರ್ಕಿಯ ಪ್ರಮುಖ ಪಟ್ಟಣಗಳಲ್ಲಿ ಒಂದು ಹಾಗೂ ರೇವು ಪಟ್ಟಣ. ಇದಕ್ಕೆ ಸ್ಮರ್ನ ಎಂಬ ಹೆಸರೂ ಇದೆ. 24 ಕಿಮೀ ಉದ್ದವಿರುವ ಇಜ್ಮೀರ್ ಖಾರಿಯ ಕೊನೆಯಲ್ಲಿ, ಏಜಿಯನ್ ಸಮುದ್ರ ತೀರದ ಪಶ್ಚಿಮ ಭಾಗದ ಮಧ್ಯದಲ್ಲಿದೆ. ಈ ಖಾರಿ ಹಾಗೂ ಪಟ್ಟಣ ದೊಡ್ಡ ದೊಡ್ಡ ಬೆಟ್ಟಗಳ ಸಾಲುಗಳಿಂದ ಆವೃತವಾಗಿವೆ. ಪೂರ್ವದಿಂದ ಹರಿದು ಬರುವ ಮೂರು ಪ್ರವಾಹಗಳು ಈ ಖಾರಿಗೆ ಬೀಳುತ್ತವೆ. ಇಲ್ಲಿ ಸ್ವಾಭಾವಿಕ ಮೆಡಿಟರೇನಿಯನ್ ಸಸ್ಯವರ್ಗವಿದೆ. ಜನಸಂಖ್ಯೆ 26,49,582 (2007).

ಇದು ವ್ಯವಸಾಯ, ಗಣಿಗಾರಿಕೆ, ಕೈಗಾರಿಕೆ, ಹಡಗಿನ ಉದ್ಯಮಗಳಿಗೆ ಪ್ರಸಿದ್ಧಿ ಪಡೆದಿದೆ. ಆಲಿವ್ ಮರಗಳು, ದ್ರಾಕ್ಷಿ, ಖರ್ಜೂರ, ಬಾದಾಮಿ, ಹೊಗೆಸೊಪ್ಪು, ಗೋದಿ, ಬಾರ್ಲಿ, ಹತ್ತಿ ಪ್ರಮುಖ ಬೆಳೆಗಳು. ಜೇನುಸಾಕಣೆಗೂ ಇದು ಪ್ರಸಿದ್ಧ. ಹಂದಿಮಾಂಸದ ರಫ್ತಿಗೂ ಹಡಗು ನಿರ್ಮಾಣಕಾರ್ಯಕ್ಕೂ ಹೆಸರು ಪಡೆದಿದೆ. ಇಲ್ಲಿನ ಜಮಖಾನೆಗಳಿಗೆ ಪ್ರಪಂಚ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ.

ನ್ಯಾಟೋ ಒಪ್ಪಂದದಂತೆ ಆಗ್ನೇಯ ಯುರೋಪಿನ ಸೈನಿಕ ಠಾಣೆ ಇಲ್ಲಿದೆ. ಅನೇಕ ವಿಮಾನಮಾರ್ಗ ಕೇಂದ್ರಗಳಿದ್ದು ಉತ್ತಮವಾದ ರೈಲ್ವೆ ಸಂಪರ್ಕವಿದೆ. ಈ ಪಟ್ಟಣಕ್ಕೆ ಸ್ವಾಭಾವಿಕ ಬಂದರಿನ ಉತ್ತಮ ಅನುಕೂಲತೆಯಿದ್ದರೂ ಇಸ್ತಾನ್‍ಬುಲ್‍ನಂಥ ರೇವು ಸೌಲಭ್ಯಗಳಿಲ್ಲ. (ಎಂ.ಎಸ್.)

**ಇಟಲಿ:** ಪ್ರಸಿದ್ಧ ರೋಮನ್ ಸಾಮ್ರಾಜ್ಯದ ಮಾತೃಸ್ಥಾನವಾಗಿದ್ದ, ಮೆಡಿಟರೇನಿಯನ್ ಸಮುದ್ರದಲ್ಲಿ ಚಾಚಿ ನಿಂತಿರುವ ಬಹು ಸಣ್ಣ ಪರ್ಯಾಯದ್ವೀಪ. ಗಾತ್ರದಲ್ಲಿ ಚಿಕ್ಕದಾದರೂ ಪ್ರಾಚೀನದಲ್ಲಿ ಇದು ಹೊಂದಿದ್ದ ವ್ಯಾಪ್ತಿ ಅಚ್ಚರಿಗೊಳಿಸುವಂಥದು. ರೋಮನ್ ಸಾಮ್ರಾಜ್ಯಕ್ಕಿದ್ದ ವಿಸ್ತಾರ ಮತ್ತು ಅಚ್ಚುಗಟ್ಟು ಅದ್ವಿತೀಯವಾದುದು.

ಇಟಲಿ ದಕ್ಷಿಣ ಯುರೋಪಿನ ಒಂದು ಗಣರಾಜ್ಯ (ರಿಪಬ್ಲಿಕಾ ಇಟಾಲಿಯಾನ ಅಥವಾ ಇಟಾಲಿಯ). ಯುರೋಪಿನಿಂದ ದಕ್ಷಿಣಾಭಿಮುಖವಾಗಿ ಮೆಡಿಟರೇನಿಯನ್ ಸಮುದ್ರದೊಳಕ್ಕೆ ಚಾಚಿರುವ ಮೂರು ಪರ್ಯಾಯದ್ವೀಪಗಳಲ್ಲಿ ಮಧ್ಯದ್ದು; ಸಾನ್ ಮರೀನೊ ಮತ್ತು ವ್ಯಾಟಿಕನ್ ನಗರಸೀಮೆಗಳನ್ನು ಬಿಟ್ಟು ಉಳಿದ ಭಾಗವೂ ಈ ಭೂಶಿರದ ಮುಂದಿನ ಭಾಗದಂತಿರುವ ಸಿಸಿಲಿ ದ್ವೀಪವೂ ಸಾರ್ಡಿನಿಯ, ಎಲ್ಬ ಮತ್ತು ಸುಮಾರು ಎಪ್ಪತ್ತು ಸಣ್ಣ ದ್ವೀಪಗಳೂ ಸೇರಿರುವ ಪ್ರದೇಶ. ಈ ಪರ್ಯಾಯದ್ವೀಪ ವಾಯವ್ಯ ದಿಕ್ಕಿನಿಂದ ಆಗ್ನೇಯಕ್ಕೆ ರೈಲುದಾರಿಯ ಕೈಮರದಂತೆ ಚಾಚಿಕೊಂಡಿದೆ. ಉ.ಅ. $35^0.39'$ ನಿಂದ $47^0.5'$ ರವರೆಗೆ 1168 ಕಿಮೀ ಉದ್ದವಿರುವ ಈ ದೇಶ ಎಲ್ಲೂ 240 ಕಿಮೀಗಿಂತ ಅಗಲವಾಗಿಲ್ಲ. ಇದು ಪೂರ್ವಾರ್ಧಗೋಳದಲ್ಲಿ ಪೂ.ರೇ. $6^0.55'$ ನಿಂದ $18^0.30'$ ವರೆಗೆ ಹಬ್ಬಿದೆ. ಇಟಲಿಗೆ ಉತ್ತರದಲ್ಲಿ ಬಿಲ್ಲಿನಂತೆ ಬಾಗಿ ಹಬ್ಬಿರುವ ಆಲ್ಪ್ಸ್ ಪರ್ವತಶ್ರೇಣಿಯಿಂದ ಫ್ರಾನ್ಸ್, ಸ್ವಿಟ್ಜರ್ಲೆಂಡ್, ಆಸ್ಟ್ರಿಯ, ಯೂಗೋಸ್ಲಾವಿಯ ದೇಶಗಳೂ ಇಟಲಿಯೂ ಪ್ರತ್ಯೇಕಗೊಂಡಿದೆ. ಆಲ್ಪ್ಸ್ ಪರ್ವತಶ್ರೇಣಿಯ ನೆತ್ತಿಯ ಗೆರೆಯೇ ಬಹಳಮಟ್ಟಿಗೆ ಇಟಲಿಗೂ ಈ ದೇಶಗಳಿಗೂ ನಡುವಣ ಗಡಿರೇಖೆ. ಇಟಲಿ ಪರ್ಯಾಯದ್ವೀಪದ ವಾಯವ್ಯದಲ್ಲಿ ಲಿಗುರಿಯನ್ ಸಮುದ್ರವೂ ಪಶ್ಚಿಮದಲ್ಲಿ ಟಿರಿನಿಯನ್ ಸಮುದ್ರವೂ ಆಗ್ನೇಯದಲ್ಲಿ ಐಯೊನಿಯನ್ ಸಮುದ್ರವೂ ಪೂರ್ವದಲ್ಲಿ ಏಡ್ರಿಯಾಟಿಕ್ ಸಮುದ್ರವೂ ಇವೆ. ಸಿಸಿಲಿ ದ್ವೀಪಕ್ಕೂ ಆಫ್ರಿಕಕ್ಕೂ ನಡುವೆ ಇರುವ ಸಿಸಿಲಿಯನ್ ಜಲಸಂಧಿಯ ಅಗಲ ಕೇವಲ 144 ಕಿಮೀ. ಹೀಗಾಗಿ ಇಟಲಿಯೂ ಸಿಸಿಲಿಯೂ ಮೇಡಿಟರೇನಿಯನ್ ಸಮುದ್ರವನ್ನೇ ಸ್ಥೂಲವಾಗಿ ಇಬ್ಭಾಗಿಸಿವೆ. ಸಿಸಿಲಿ, ಸಾರ್ಡಿನಿಯಗಳು ಕೂಡಿದ ಇಟಲಿಯ ಒಟ್ಟು ವಿಸ್ತೀರ್ಣ 3,01,323 ಚ.ಕಿಮೀ. ಆಡಳಿತ ಸೌಕರ್ಯಕ್ಕಾಗಿ ಇದನ್ನು ಹತ್ತೊಂಬತ್ತು ಭಾಗಗಳಾಗಿ ವಿಂಗಡಿಸಲಾಗಿದೆ. ಜನಸಂಖ್ಯೆ 58103033 (2005). ರಾಜಧಾನಿ ರೋಂ. ಪೀಸಾ ಮಿಲಾನ್, ಟ್ಯೂರಿನ್, ಪಾಲೆರ್ಮೋ, ಜಿನೋವ, ಫ್ಲಾರೆನ್ಸ್, ಬೊಲೋಗ್ನ, ವೆನಿಸ್ ಮುಖ್ಯನಗರಗಳು.

ಮೇಲ್ಮೈಲಕ್ಷಣ: ಇಟಲಿಯ ಮುಖ್ಯ ಭೂಭಾಗವನ್ನು ಖಂಡಾಂತರ ಪ್ರದೇಶವೆಂದೂ ಪರ್ಯಾಯದ್ವೀಪಪ್ರದೇಶವೆಂದೂ ಎರಡು ಭಾಗಗಳಾಗಿ ವಿಂಗಡಿಸಬಹುದು. ಉತ್ತರದಲ್ಲಿ ಆಲ್ಪ್ಸ್‍ಪರ್ವತದ ದಕ್ಷಿಣದ ಇಳುಕಲೂ ದಕ್ಷಿಣಭಾಗದಲ್ಲಿ ಅಪೆನೈನ್ ಪರ್ವತಗಳ ಉತ್ತರದ ಇಳಿಜಾರು ಇಟಲಿಯ ಖಂಡಾಂತರ ಪ್ರದೇಶವನ್ನು ಅಡಕತ್ತರಿಯಂತೆ ಹಿಡಿದುಕೊಂಡಿವೆ. ಉತ್ತರ ಆಲ್ಪ್ಸ್ ಹಾಗೂ ದಕ್ಷಿಣದ ಅಪೆನೈನ್ ಪರ್ವತಗಳ ನಡುವೆ ಲೊಂಬಾರ್ಡಿ ಮೈದಾನವಿದೆ. ಇಟಲಿಯ ಉತ್ತರ ಭಾಗ ಆಲ್ಪ್ಸ್ (4478 ಮೀ) ಮಾಂಟೆರೋಸ್ (4634 ಮೀ) ಶಿಖರಗಳಿವೆ. ಪರ್ವತದ ಅತ್ಯುನ್ನತ ಶಿಖರ ಮೌಂಟ್ ಬ್ಲಾಂಕ್. ಇದು ಫ್ರಾನ್ಸ್, ಇಟಲಿ ಹಾಗು ಸ್ವಿಟ್ಜರ್ಲೆಂಡ್‍ಗಳ ನಡುವೆ ಇರುವುದು.

ಇಟಲಿಯ ಪರ್ಯಾಯದ್ವೀಪ ಭಾಗವನ್ನು ಕಬ್ಬಿನ ಗಿಣ್ಣುಗಳಂತೆ ಮೂರು ಭಾಗಗಳಾಗಿ ವಿಂಗಡಿಸಬಹುದು. ಈ ಪರ್ಯಾಯ ದ್ವೀಪದ ನಡುವೆ ಅಪೆನೈನ್ ಪರ್ವತಗಳು ಬೆನ್ನೆಲುಬಿನಂತೆ ಹಬ್ಬಿವೆ. ಕಂಪ ನದಿಯ ಮೈದಾನದಲ್ಲಿ ಫ್ಲೆಗ್ರೀನ್ ಫೀಲ್ಡ್ಸ್ ಮತ್ತು ವೆಸೂವಿಯಸ್ ಅಗ್ನಿಪರ್ವತಗಳಿವೆ. ಇವು ಇನ್ನೂ ಜೀವಂತವಾಗಿವೆ; ನೇಪಲ್ಸ್ ಪಟ್ಟಣಕ್ಕೆ ಹತ್ತಿರದಲ್ಲೇ ಇವೆ. ಅಪೆನೈನ್ ಪರ್ವತಶ್ರೇಣಿಯಲ್ಲಿ ಅನೇಕ ಬಗೆಯ ಬಂಡೆಗಳಿವೆ. ಅಪೆನೈನ್ ಶ್ರೇಣಿಗಳು ಉತ್ತರದಲ್ಲಿ ಕಿರಿದಾಗಿಯೂ ಮಧ್ಯದಲ್ಲಿ ದಪ್ಪಗೂ ಎತ್ತರವಾಗಿಯೂ ಮುಂದೆ ತಗ್ಗಿಯೂ ಇವೆ.

ಮೌಂಟ್ ಬ್ಲಾಂಕ್

ನದಿಗಳು: ಇಲ್ಲಿ ಹಲವಾರು ನದಿಗಳು ಹರಿಯುತ್ತವೆ. ಇವುಗಳಲ್ಲಿ ಪೋ, ಟೈಬರ್ ಹಾಗು ಆರ್ನೋ ಮುಖ್ಯವಾದವು. ಇಲ್ಲಿನ ನದಿಗಳ ಪ್ರವಾಹಗಳು ವರ್ಷಾದ್ಯಂತ ಒಂದೇ ಸಮನಾಗಿರುವುದಿಲ್ಲ. ಉತ್ತರದ ನದಿಗಳಲ್ಲಿ ಈ ಏರುಪೇರು ದಕ್ಷಿಣದ ನದಿಗಳಷ್ಟು ಅಧಿಕವಲ್ಲ.

ಆಲ್ಪ್ಸ್ ಮೇಲ್ಭಾಗದಲ್ಲಿ ಹುಟ್ಟಿ ಹರಿಯುವ ನದಿಗಳು ಮುಂಬೇಸಗೆಯಲ್ಲಿ ಕರಗಿದ ಹಿಮನೀರಿನಿಂದ ಕೂಡಿ ಉಕ್ಕಿ ಹರಿಯುತ್ತವೆ. ಆಲ್ಪ್ಸ್ ಪರ್ವತಗಳ ಕೆಳಪ್ರದೇಶದಲ್ಲಿ ಹುಟ್ಟುವ ನದಿಗಳಲ್ಲಿ ವರ್ಷಕ್ಕೆ ಎರಡು ಬಾರಿ ಪ್ರವಾಹ. ಮುಂಬೇಸಗೆಯಲ್ಲಿ ಹಿಮ ಕರಗಿ ನೀರು ಹರಿದರೆ ಬೇಸಗೆಯ ಕೊನೆಭಾಗದಲ್ಲೂ ಶರತ್ಕಾಲದ ಆದಿಭಾಗದಲ್ಲೂ ಬೀಳುವ ಮಳೆಯಿಂದ ತುಂಬು ಹರಿವಿರುತ್ತದೆ. ಉತ್ತರದ ಮೈದಾನದ ದಕ್ಷಿಣದಲ್ಲಿ ಹುಟ್ಟಿ ಪೋ ನದಿಯಲ್ಲಿ ಸಂಗಮವಾಗುವ ನದಿಗಳಲ್ಲಿ ಮಾರ್ಚಿಯಲ್ಲೂ ಸೆಪ್ಟೆಂಬರಿನಲ್ಲೂ ಪ್ರವಾಹ. ಜುಲೈ ತಿಂಗಳಿಂದ ಸೆಪ್ಟೆಂಬರ್‌ವರೆಗೆ ಅವುಗಳ ನೀರಿನ ಮಟ್ಟ ಕಡಿಮೆ. ಮಧ್ಯ ಇಟಲಿಯ ನದಿಗಳಿಗೆ ವಸಂತಋತುವೇ ಪ್ರವಾಹಕಾಲ. ಜುಲೈಯಿಂದ ಸೆಪ್ಟೆಂಬರ್‌ವರೆಗೆ ತಗ್ಗಿದ ಮಟ್ಟ. ನವೆಂಬರಿನಲ್ಲಿ ಸ್ವಲ್ಪ ಪ್ರವಾಹ. ದಕ್ಷಿಣ ಇಟಲಿಯ ನದಿಗಳಲ್ಲಿ ಫೆಬ್ರವರಿ ತಿಂಗಳಲ್ಲಿ ಪ್ರವಾಹದ ಭೋರ್ಗರೆತ. ಬೇಸಗೆಯಲ್ಲಿ ಇವು ಬಹುತೇಕ ಶುಷ್ಕ. ಸ್ಥೂಲವಾಗಿ ಇದು ಇಟಲಿಯ ನದಿಗಳ ಪ್ರವಾಹದ ಚಿತ್ರ.

ಪೀಸಾ ಓಲುಗೋಪುರ

ವಾಯುಗುಣ: ಉತ್ತರದಿಂದ ದಕ್ಷಿಣಕ್ಕೆ ಅಕ್ಷಾಂಶದಲ್ಲಿ ಸುಮಾರು ಹತ್ತು ಡಿಗ್ರಿಗಳ ಅಂತರವಿರುವುದರಿಂದಲೂ ಭೂಸ್ವರೂಪಗಳ ವ್ಯತ್ಯಾಸದಿಂದಲೂ ಇಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ವಾಯುಗುಣದಲ್ಲಿ ಬಹಳ ವ್ಯತ್ಯಾಸಗಳಿವೆ. ಸಮುದ್ರಕ್ಕಿರುವ ದೂರವೂ ಈ ವ್ಯತ್ಯಾಸಗಳಿಗೆ ಒಂದು ಕಾರಣ. ಸಮುದ್ರಪ್ರಭಾವಕ್ಕೆ ಒಳಗಾದ ಪ್ರದೇಶದಲ್ಲಿ ಮಳೆ ಹೆಚ್ಚು; ಹವೆ ಹಿತಕರ. ಎತ್ತರ ಪ್ರದೇಶ ಹೆಚ್ಚು ತಂಪು; ಅಲ್ಲಿ ಮಳೆಯೂ ಹೆಚ್ಚು. ಪರ್ವತಗಳ ಪೂರ್ವ ಬದಿಯಲ್ಲಿ ಮಳೆ ಕಡಿಮೆ. ಇದು ಮಳೆನೆರಳು ಪ್ರದೇಶ. ಉತ್ತರ ಮೈದಾನ ಅಂದರೆ ಪೋ ಕಣಿವೆಯಲ್ಲಿ ವರ್ಷದ ಸರಾಸರಿ ಉಷ್ಣಾಂಶ $13^{0}$ಸೆ. ದಕ್ಷಿಣದ ಸಿಸಿಲಿಯಲ್ಲಿ $18^{0}$ಸೆ. ಉಷ್ಣತೆಯಿರುತ್ತದೆ.

ಉತ್ತರದ ಆಲ್ಪ್ಸ್ ಪ್ರದೇಶದಲ್ಲಿ ಪರಮಾವಧಿ ಮಳೆ ಅಧಿಕ; ತಗ್ಗು ಪ್ರದೇಶದಲ್ಲಿ ತೀರಕಡಿಮೆ. ಪಶ್ಚಿಮ ಮಾರುತಗಳೇ ಮೋಡ ವಾಹಕಗಳಾಗಿದ್ದರಿಂದ ಪಶ್ಚಿಮದಲ್ಲಿ ಮಳೆ ಹೆಚ್ಚು. ಪೂರ್ವಭಾಗ ಶುಷ್ಕ. ಇಟಲಿಯ ದಕ್ಷಿಣಾರ್ಧದಲ್ಲಿ ಮೆಡಿಟರೇನಿಯನ್ ವಾಯುಗುಣಕ್ಕೆ ಅನುಗುಣವಾಗಿ ಮಳೆ ಬೀಳುತ್ತದೆ. ಎಂದರೆ ಚಳಿಗಾಲದಲ್ಲಿ ಮಳೆ; ಬೇಸಗೆಯಲ್ಲಿ ತೇವವಿರುವುದಿಲ್ಲ. ಉತ್ತರಕ್ಕೆ ಹೋದಂತೆಲ್ಲ ವರ್ಷಕ್ಕೆ ಎರಡು ಮಳೆಗಾಲ; ಶರತ್ ಹಾಗೂ ವಸಂತಋತುಗಳಲ್ಲಿ ಮಳೆ ಅಧಿಕ. ಆದಾಗ್ಯೂ ಚಳಿಗಾಲದಲ್ಲೇ ಮಳೆಯ ಪ್ರಮಾಣ ಹೆಚ್ಚು. ಆದರೆ ಬೇಸಗೆಯ ಒಣಹವೆಯ ಅವಧಿ ಉತ್ತರಕ್ಕೆ ಹೋದಂತೆಲ್ಲ ಕಿರಿದಾಗುತ್ತದೆ. ಪೋ ನದಿಯ ಉತ್ತರಕ್ಕೆ ಚಳಿಗಾಲದಲ್ಲೇ ಮಳೆಯ ಕನಿಷ್ಠ ಪ್ರಮಾಣ. ಈ ಮೈದಾನದಲ್ಲಿ ಚಳಿಗಾಲ, ಬೇಸಗೆಕಾಲಗಳೆರಡರಲ್ಲೂ ಸಾಮಾನ್ಯವಾಗಿ ಒಣ ಹವೆ ಇರುವುದು ಸ್ವಾರಸ್ಯದ ಸಂಗತಿಯಾಗಿದೆ. ಆಲ್ಪ್ಸ್ ಪರ್ವತದ ಶೃಂಗ ಪ್ರದೇಶಗಳಾಗಿ ಸದಾ ದಟ್ಟವಾದ ಹಿಮಕವಚವನ್ನು ಹೊದ್ದಿರುತ್ತವೆ. ಅಷ್ಟು ಎತ್ತರವಲ್ಲದ ಅಪೆನೈನ್ ಪರ್ವತ ಶ್ರೇಣಿಗಳ ವಿಶಾಲ ಪ್ರದೇಶಗಳಲ್ಲಿ ವರ್ಷದಲ್ಲಿ ಮೂರು ನಾಲ್ಕು ತಿಂಗಳುಗಳ ಕಾಲ ಹಿಮ ಇರುತ್ತದೆ. ಅದೇ ಉತ್ತರ ಭಾಗದ ಬಯಲು ಭೂಮಿಯಲ್ಲಿ ವರ್ಷದ ಕೇವಲ ಹತ್ತುದಿನ ಹಿಮ ಕಂಡರೆ ಹೆಚ್ಚು. ವಾಯುಗುಣದ ಹಿತಾಹಿತಗಳನ್ನೂ ಜೀವನ ಸೌಲಭ್ಯಗಳನ್ನೂ ವ್ಯವಸಾಯ, ಕೈಗಾರಿಕೆಗಳ ಸೌಕರ್ಯಗಳನ್ನೂ ಗಮನಿಸಿ ಜನ ನೆಲೆನಿಲ್ಲುತ್ತ ಹೋಗಿರುವುದನ್ನು ಇಲ್ಲಿ ಕಾಣಬಹುದು.

ಸಸ್ಯವರ್ಗ: ಮಧ್ಯ ಐರೋಪ್ಯ ಹಾಗೂ ಮೆಡಿಟರೇನಿಯನ್ ಪ್ರದೇಶಗಳೆರಡೂ ಇಟಲಿಯಲ್ಲಿ ಒಂದರ ಮೇಲೊಂದು ಪ್ರಸರಿಸಿವೆ. ಶಂಕುವಿನಾಕಾರದ (ಕೊನಿಫೆರಸ್) ಮರಗಳಿಂದಲೂ ಅಗಲೆಲೆಯ ಪರ್ಣಪಾತೀ ವೃಕ್ಷಗಳಿಂದಲೂ ಕೂಡಿದ ಕಾಡುಗಳು, ಕುರುಚಲು ಕಾಡುಗಳು, ಹಸುರು ಹುಲ್ಲುಗಾವಲುಗಳು ಮಧ್ಯ ಐರೋಪ್ಯ ಪ್ರದೇಶದ ಲಕ್ಷಣ. ಶರತ್ಕಾಲದಲ್ಲಿ ಬಾಡಿಹೋಗಿ ಮತ್ತೆ ಬೆಳೆಯುವ ಸಸ್ಯಗಳು ಇಲ್ಲಿ ಅಧಿಕ. ಶಂಕುವಿನಾಕಾರದ ಮರಗಳೂ ದಪ್ಪನಾದ ಅಗಲೆಲೆಯ ನಿತ್ಯ ಹಸುರು ವೃಕ್ಷಗಳೂ ವಾರ್ಷಿಕ ಸಸ್ಯಗಳೂ ಗೆಡ್ಡೆಯಿಂದ ಬೆಳೆಯುವ ಗಿಡಗಳೂ ಬೇಸಗೆಯಲ್ಲಿ ಒಣಗುವ ಹುಲ್ಲುಗಾವಲುಗಳೂ ಮೆಡಿಟರೇನಿಯನ್ ಪ್ರದೇಶದಲ್ಲಿ ಸಾಮಾನ್ಯ. ಇವೆರಡು ಸ್ವಾಭಾವಿಕ ವಿಭಾಗಗಳನ್ನೂ ಪ್ರತ್ಯೇಕಿಸುವ ಖಚಿತ ಗೆರೆ ಎಳೆಯುವುದು ಅಸಾಧ್ಯವಾದರೂ ಇಟಲಿಯ ಆಲ್ಪ್ಸ್ ಪ್ರದೇಶವನ್ನೂ ಉತ್ತರ ಮೈದಾನದ ಹೆಚ್ಚಿನ ಭಾಗವನ್ನೂ ಮಧ್ಯೆ ಐರೋಪ್ಯ ಪ್ರದೇಶಕ್ಕೂ ಪರ್ಯಾಯದ್ವೀಪ ಭಾಗವನ್ನು ಮೆಡಿಟರೇನಿಯನ್ ಪ್ರದೇಶಕ್ಕೂ ಸೇರಿಸಬಹುದು. ಇಟಲಿಯ ಪೂರ್ವ ಕರಾವಳಿ ಭಾಗವನ್ನು ಮೆಡಿಟರೇನಿಯನ್ ಪ್ರದೇಶದಲ್ಲೇ ವಿಶಿಷ್ಟವಾದದ್ದೆಂದು ಪರಿಗಣಿಸಬೇಕು. ಅಪೆನೈನ್ ಪರ್ವತಶ್ರೇಣಿಗಳ ಮೇಲೂ ಸಿಸಿಲಿಯ ಎಟ್ನ ಪರ್ವತದ ಮೇಲೂ ಪರ್ಣಪಾತೀ ವೃಕ್ಷಗಳ ಕಾಡುಗಳು ಅಧಿಕ. ಇಟಲಿಯ ಅನೇಕ ಭಾಗಗಳಲ್ಲಿ ಕುರುಚಲು ಗಿಡಗಳು ಸಾಮಾನ್ಯ.

ಮೌಂಟ್ ವೆಸೂವಿಯಸ್, ಹಾಳುಬಿದ್ದ ಪಾಂಪೆ ನಗರದಿಂದ

ಪ್ರಾಣಿವರ್ಗ: ಇಟಲಿಯ ಪ್ರಾಣಿಗಳಿಗೂ ಮಧ್ಯ ಯುರೋಪ್ ಬಾಲ್ಕನ್ ಹಾಗೂ ಆಫ್ರಿಕಾ ಪ್ರದೇಶಗಳ ಪ್ರಾಣಿಗಳಿಗೂ ರೂಪಸಾಮ್ಯವುಂಟು. ಪ್ರಾಣಿಗಳ ಬಗ್ಗೆ ದಯಾದೃಷ್ಟಿ ಕಡಿಮೆ. ಹೀಗಾಗಿ ಇಲ್ಲಿ ಅವು ವಿರಳ. ಬೇಟೆಯಾಡಲು ಎಲ್ಲರಿಗೂ ಹಕ್ಕುಂಟು. ಜಮೀನಿನ ಒಡೆಯನಿಗೆ ಪ್ರಾಣಿಗಳ ಮೇಲೆ ಯಾವ ಸ್ವಾಮ್ಯವೂ ಇಲ್ಲ. ಆಹಾರದ ಕೊರತೆಯನ್ನು ತುಂಬಿಕೊಳ್ಳುವ ಸಲುವಾಗಿ ಪ್ರಾಣಿಗಳನ್ನು ಬೇಟೆಯಾಡುವುದು ಸಾಮಾನ್ಯ. ಕರಡಿಗಳು ಅಬ್ರುಜಿ ಎಂಬಲ್ಲಿ ಕಾಣಸಿಗುತ್ತವೆ. ತೋಳಗಳು ಅಪೆನ್ನೈನ್ ಶ್ರೇಣಿಗಳಲ್ಲಿ ಹೆಚ್ಚಾಗಿವೆ. ಸಣ್ಣಜಾತಿಯ ಜಿಂಕೆಗಳು (ರೋ) ಕಾಡುಗಳಲ್ಲಿವೆ. ವೆನಿಸ್ ಬಳಿಯ ಆಲ್ಪ್ಸ್ ಪ್ರದೇಶದಲ್ಲಿ ಸಾರಂಗಗಳೂ ಆಲ್ಪ್ಸ್ ಪ್ರದೇಶದ ಎಲ್ಲೆಡೆಗಳಲ್ಲೂ ಷಾಮಾಯ್ ಮೃಗಗಳೂ ಅಲ್ಲಲ್ಲಿ ಕಾಡುಹಂದಿಗಳೂ ಇವೆ.

ವ್ಯವಸಾಯ, ಖನಿಜ, ಕೈಗಾರಿಕೆ : ಇಟಲಿ ಕೃಷಿಪ್ರಧಾನ ರಾಷ್ಟ್ರ. ಇಲ್ಲಿಯ ಆರ್ಥಿಕ ವ್ಯವಸ್ಥೆಗೆ ವ್ಯವಸಾಯವೇ ತಳಹದಿ. ದೇಶದ ಶೇ. 90 ಭಾಗ ಬೇಸಾಯದ ನೆಲದಿಂದಲೂ ಅರಣ್ಯಗಳಿಂದಲೂ ಕೂಡಿದೆ. ದೇಶದ ದುಡಿಯುವ ಜನರಲ್ಲಿ 2/5 ಭಾಗ ವ್ಯವಸಾಯದಲ್ಲೂ ಅರಣ್ಯೋದ್ಯಮದಲ್ಲೂ ನಿರತರಾಗಿದ್ದಾರೆ. ದೇಶದ ನಾನಾ ಕಡೆಗಳಲ್ಲಿ ದ್ರಾಕ್ಷಿ ಬೆಳೆಯುತ್ತಾರೆ. ಆಲ್ಪೈನ್ ಜಿಲ್ಲೆಗಳು ಅರಣ್ಯ, ಹಣ್ಣಿನ ತೋಟ ಹಾಗೂ ಗೋಮಾಳಗಳಿಗೆ ಪ್ರಸಿದ್ಧ. ಪೋ

ಕಣಿವೆ ಪ್ರದೇಶಗಳಲ್ಲಿ ಧಾನ್ಯ ಹಾಗೂ ಹುಲ್ಲು ಬೆಳೆಯುತ್ತಾರೆ. ಬೆಟ್ಟಗಳ ಮಧ್ಯ ಹಾಗೂ ದಕ್ಷಿಣ ಭಾಗದಲ್ಲಿ ದವಸ ಧಾನ್ಯಗಳನ್ನು, ಆಲಿವ್ ಮತ್ತು ಹಣ್ಣುಗಳನ್ನು ಬೆಳೆಯುತ್ತಾರೆ. ನೀರಾವರಿ ವ್ಯವಸ್ಥೆ ಸಮರ್ಪಕವಾಗಿದೆ.

ಗೋದಿ, ಬೀಟ್‌ರೂಟ್, ಆಲೂಗೆಡ್ಡೆ, ಜೋಳ, ಟೊಮ್ಯಾಟೊ, ಬತ್ತ, ಓಟ್ಸ್, ಬಾರ್ಲಿ, ಸಣ್ಣಗೋದಿ, ಹೊಗೆಸೊಪ್ಪು, ಸೆಣಬು–ಇವು ಮುಖ್ಯವಾದ ಬೆಳೆಗಳು. ಕಿತ್ತಲೆ ಹಾಗೂ ನಿಂಬೆಹಣ್ಣುಗಳನ್ನು ಹೇರಳವಾಗಿ ಬೆಳೆಯುತ್ತಾರೆ. ದ್ರಾಕ್ಷಾರಸ ಹಾಗೂ ಆಲಿವ್ ಎಣ್ಣೆಗಳ ಉತ್ಪಾದನೆಯಲ್ಲಿ ಪ್ರಸಿದ್ಧವಾದ ರಾಷ್ಟ್ರಗಳ ಪೈಕಿ ಇಟಲಿಗೆ ಎರಡನೆಯ ಸ್ಥಾನ.

ಕುರಿ, ಮೇಕೆ, ಹಂದಿ, ಕತ್ತೆ, ಕುದುರೆ, ಹೇಸರಗತ್ತೆ, ಈ ಪ್ರಾಣಿಗಳ ಸಾಕಣೆ ಇದೆ. ಇಟಲಿಯಲ್ಲಿ ದೊರಕುವ ಖನಿಜಸಂಪತ್ತು ಅಷ್ಟೇನೂ ಆಶಾದಾಯಕವಾದುದಲ್ಲ. ಗಂಧಕ ಹಾಗೂ ಪಾದರಸ ಹೇರಳವಾಗಿ ದೊರಕುತ್ತದೆ. ಇಟಲಿ ಇದನ್ನು ಹೇರಳವಾಗಿ ರಫ್ತು ಮಾಡುತ್ತದೆ. ಪ್ರಪಂಚದ 1/3 ಭಾಗದಷ್ಟು ಪಾದರಸ ಇಲ್ಲಿ ಉತ್ಪಾದನೆಯಾಗುತ್ತದೆ. ಕಬ್ಬಿಣ, ಸತು, ಸೀಸ, ಮ್ಯಾಂಗನೀಸ್ ಮತ್ತು ಅಲ್ಯೂಮಿನಿಯಂ ಅದಿರುಗಳ ಉತ್ಪಾದನೆಯೂ ಇದೆ. ಆದರೆ ಕೈಗಾರಿಕೆಗೆ ಬೇಕಾದ ಕಬ್ಬಿಣದ ಅದಿರು ಹಾಗೂ ಕಲ್ಲಿದ್ದಲು ಸಾಕಷ್ಟು ದೊರಕದಿರುವುದು ದೇಶದ ಕೈಗಾರಿಕೋದ್ಯಮಕ್ಕೆ ಭಾರಿ ಪೆಟ್ಟು. ಕೆಲವು ಮುಖ್ಯ ಗಣಿಗಳು ಸಿಸಿಲಿ, ಸಾರ್ಡಿನಿಯ, ಟಸ್ಕನಿ, ಲೂಂಬಾರ್ಡಿಗಳಲ್ಲಿವೆ. ಸಿಸಿಲಿಯಲ್ಲಿ ಅನೇಕ ಎಣ್ಣೆ ಬಾವಿಗಳು ದೊರಕಿವೆ. ಆ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಯುರೋಪಿನಲ್ಲೇ ಅತಿ ಪ್ರಮುಖವಾದ ಎಣ್ಣೆ ದೊರಕುವ ಪ್ರದೇಶಗಳನ್ನಾಗಿ ಮಾಡುವ ಯೋಜನೆಯಂತೆ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಜಲವಿದ್ಯುಚ್ಛಕ್ತಿಯನ್ನು ಅಧಿಕವಾಗಿ ಉತ್ಪಾದಿಸಲಾಗುತ್ತಿದೆ.

ಇಟಲಿಯ ಉತ್ತರಭಾಗದಲ್ಲಿ ಕೈಗಾರಿಕೋದ್ಯಮಗಳು ಹೆಚ್ಚಾಗಿವೆ. ಆದರೆ ಇತ್ತೀಚೆಗೆ ದಕ್ಷಿಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಉತ್ಪಾದನೆ ಹೆಚ್ಚಿಸಬೇಕೆಂದು ನಿಯೋಜಿತ ಯೋಜನೆಯನ್ನು ಹಾಕಿಕೊಂಡು ದೇಶ ಮುಂದುವರಿಯುತ್ತಿದೆ. ಬಟ್ಟೆ ಉತ್ಪಾದನೆ ಇಟಲಿಯ ಪ್ರಮುಖ ಕೈಗಾರಿಕೆ. ಈ ಕೈಗಾರಿಕೆ ದೇಶದಲ್ಲಿ ಬಹುತೇಕ ಜನರಿಗೆ ಉದ್ಯೋಗ ನೀಡಿದೆ. ಈ ಕೈಗಾರಿಕೋದ್ಯಮದಲ್ಲಿ ಮುಖ್ಯವಾಗಿ ರೇಷ್ಮೆ, ಉಣ್ಣೆ ಮತ್ತು ಹತ್ತಿ ಹಾಗೂ ಕೃತಕನೂಲಿನ ಬಟ್ಟೆಗಳ ಉತ್ಪಾದನೆ ಹೆಚ್ಚಾಗಿದೆ. ದ್ರಾಕ್ಷಾರಸ ತಯಾರಿಕೆ, ರಾಸಾಯನಿಕ ವಸ್ತು, ಸಕ್ಕರೆ ಹಾಗೂ ಮೋಟಾರು ಕಾರು, ಕೈಗಾರಿಕೆಗಳು ಪ್ರಮುಖವಾದ ಉದ್ಯಮಗಳಾಗಿವೆ. (ಬಿ.ಎನ್.ಎಸ್.)

**ಇಟಾರ್ಸಿ:** ಮಧ್ಯಪ್ರದೇಶದ ಹೊಷಂಗಾಬಾದ್ ತಾಲ್ಲೂಕಿನ ಮುಖ್ಯ ಪಟ್ಟಣ. ಮುಂಬಯಿನಿಂದ 742 ಕಿಮೀ, ಕೋಲ್ಕತದಿಂದ 1498 ಕಿಮೀ ದೂರದಲ್ಲಿ ಮುಂಬಯಿ–ಕೋಲ್ಕತ ರೈಲುಮಾರ್ಗದಲ್ಲಿದೆ. ಕಾನ್ಪುರ, ಆಗ್ರ ನಗರಗಳೊಂದಿಗೂ ರೈಲುಸಂಪರ್ಕ ಹೊಂದಿದೆ. ಇದೊಂದು ಸಂಧಿ ಸ್ಥಳ. ಹೊಷಂಗಾಬಾದ್ ಜಿಲ್ಲೆಯ ರಫ್ತು ವ್ಯಾಪಾರದ ಬಹುಭಾಗ ಈ ಊರಿನ ಮೂಲಕ ನಡೆಯುತ್ತದೆ. ಪ್ರತಿವಾರವೂ ದನಗಳ ಭಾರಿ ಸಂತೆ ನಡೆಯುತ್ತದೆ. ಇಲ್ಲಿ ಫ್ರೆಂಡ್ಸ್ ಫಾರಿನ್ ಮಿಷನ್ ಎಂಬ ಕ್ರೈಸ್ತ ಸಂಸ್ಥೆ ನಡೆಸುತ್ತಿರುವ ಒಂದು ದೊಡ್ಡ ಪಾಠಶಾಲೆಯಿದೆ. ಜನಸಂಖ್ಯೆ 93,783. *

**ಇಟಾವ:** ಉತ್ತರಪ್ರದೇಶದ ದಕ್ಷಿಣದ ಅಂಚಿನಲ್ಲಿರುವ ಒಂದು ಜಿಲ್ಲೆ ಮತ್ತು ಅದರ ಮುಖ್ಯ ನಗರ. ನೈಋತ್ಯಕ್ಕೆ ಮಧ್ಯ ಪ್ರದೇಶದ ಭಿಂಡ್ ಜಿಲ್ಲೆಯಿದೆ. ಮಿಕ್ಕ ಕಡೆಗಳಲ್ಲಿ ಆಗ್ರ, ಮಣಿಪುರ, ಫರೂಕಾಬಾದ್, ಕಾನ್ಪುರ ಮತ್ತು ಜಲೌನ ಜಿಲ್ಲೆಗಳಿವೆ. ವಿಸ್ತೀರ್ಣ 2287 ಚ.ಕಿಮೀ. ಇದರ ಮಧ್ಯದಲ್ಲಿ ಯಮುನಾನದಿಯೂ ಸಂಗರ್ ಮುಂತಾದ ಉಪನದಿಗಳು ಹರಿಯುತ್ತವೆ. ಇಡೀ ಜಿಲ್ಲೆ ಏರುತಗ್ಗುಗಳ ಪ್ರದೇಶ. ಭೂಮಿ ಫಲವತ್ತಾದ ಎರೆಮಣ್ಣಿನಿಂದ ಕೂಡಿದೆ. ವ್ಯವಸಾಯ ಮೂಲ ಕಸಬು. ಬೇಸಗೆಯ ಕ್ಲುಪ್ತಮಾರುತಗಳಿಂದ ಸರಾಸರಿ 55 ಸೆಂಮೀ ಮಳೆ ಬೀಳುತ್ತದೆ. ಗೋದಿ, ದ್ವಿದಳ ಧಾನ್ಯಗಳು, ಬತ್ತ ಮುಂತಾದವು ಕೃಷಿ ಉತ್ಪನ್ನಗಳು. ಕೆಲವು ಕಡೆ ಕಬ್ಬು, ಸಾಸಿವೆ ಬೆಳೆಯುತ್ತಾರೆ. ದಕ್ಷಿಣಕ್ಕೆ ಹೋದಂತೆ ನೆಲ ಕೊಂಚ ಎತ್ತರವಾಗುವುದರಿಂದ ನದಿಯಿಂದಾದ ಕಮರಿಗಳೂ ಕೊರಕಲುಗಳೂ ಹೆಚ್ಚು. ಸಾರಿಗೆ ಸಂಪರ್ಕಗಳಿಗೆ ಹೆಚ್ಚು ಅಡಚಣೆ ಇರುವುದರಿಂದ ಈ ಭಾಗ ಅಷ್ಟು ಮುಂದುವರಿದಿಲ್ಲ.

ಇದು ಆಡಳಿತ ಮತ್ತು ವ್ಯಾಪಾರ ಕೇಂದ್ರ. ಆಗ್ರಕ್ಕೆ 112 ಕಿಮೀ ದೂರದಲ್ಲಿ ಯಮುನಾನದಿಯ ಉತ್ತರದಂಡೆಯ ಮೇಲಿದೆ. ಜನಸಂಖ್ಯೆ 1,340,031. ಆಗ್ರದಿಂದ ಕಾನ್ಪುರಕ್ಕೆ ಹೋಗುವ ರೈಲುಮಾರ್ಗ ಈ ಊರಿನ ಮೂಲಕ ಹೋಗುತ್ತದೆ. ಹತ್ತಿ, ರೇಷ್ಮೆ ಕೈಗಾರಿಕೆಗಳು ಬೆಳೆದಿವೆ. 15 ನೆಯ ಶತಮಾನದಲ್ಲಿ ಕಟ್ಟಿದ ಒಂದು ಕೋಟೆಯ ಅವಶೇಷಗಳು, ಅನೇಕ ಹಿಂದು ದೇವಾಲಯಗಳು ಇವೆ. ಇವು ಪ್ರವಾಸಿಗರನ್ನು ಆಕರ್ಷಿಸುತ್ತವೆ. *

**ಇಡ್ರಿಯ:** ಗಣಿ ಮತ್ತು ಇತರ ಕೈಗಾರಿಕೆಗಳನ್ನುಳ್ಳ ಯೂಗೋಸ್ಲಾವಿಯದ ಚಿಕ್ಕ ಪಟ್ಟಣ. ಯೂಗೋಸ್ಲಾವಿಯದ ವಾಯವ್ಯಮೂಲೆಯಲ್ಲಿ ಅದೇ ಹೆಸರಿನ ನದಿ ತೀರದಲ್ಲಿದೆ. ಟ್ರೀಸ್ಟ್ ಪಟ್ಟಣಕ್ಕೆ 50 ಕಿಮೀ ದೂರದಲ್ಲಿದೆ. ಇಲ್ಲಿರುವ ಪಾದರಸದ ಅದಿರಿನ ಗಣಿ ಸಿನ್ನಬಾರ್ ಪ್ರಪಂಚ ಪ್ರಸಿದ್ಧವಾದವುಗಳಲ್ಲೊಂದು. ಹದಿನೈದನೆಯ ಶತಮಾನದಿಂದಲೂ ಈ ಅದಿರನ್ನು ಉತ್ಖನನ ಮಾಡುತ್ತಿದ್ದಾರೆ. ಹದಿನಾರನೆಯ ಶತಮಾನದಿಂದೀಚೆಗೆ ಉತ್ಪನ್ನವನ್ನು ಸರ್ಕಾರ ನಿಯಂತ್ರಿಸಿದೆ. ಚಾರಿತ್ರಿಕವಾಗಿ ಇಡ್ರಿಯ ಮೊದಲು ಇಟಲಿಗೆ ಸೇರಿದ್ದು ಎರಡನೆಯ ಮಹಾಯುದ್ಧಾನಂತರ ಯೂಗೋಸ್ಲಾವಿಯದ ವಶವಾಯಿತು. *

**ಇಥಾಕ[1]:** ಅಯೋನಿಯದ ಸಪ್ತದ್ವೀಪಗಳಲ್ಲಿ ಒಂದು. ವಿಸ್ತೀರ್ಣ 118 ಚ.ಕಿಮೀ. ಜನಸಂಖ್ಯೆ 7000ಕ್ಕಿಂತ ಹೆಚ್ಚು. ಪರ್ವತಮಯ ದೇಶ. ಪಶ್ಚಿಮಭಾಗದಲ್ಲಿ ಮಲೋ ಕೊಲ್ಲಿಯಿದೆ. ವಥಿ, ಅಯೆಟೊ, ಅನಾಯ್, ಎಕ್ಸಾಯ್ ಎಂಬ ನಾಲ್ಕು ಜಿಲ್ಲೆಗಳಿವೆ. ಜನ ಧೈರ್ಯಶಾಲಿಗಳೆಂದು ಹೆಸರು ಪಡೆದಿದ್ದಾರೆ. ನಗರದ ಜನಸಂಖ್ಯೆ 3210. ಪುರಾಣ ಪ್ರಸಿದ್ಧನಾದ ಒಡೀಸಿಯಸ್ಸಿನ ಸ್ಥಳವೆಂದೂ ಇದರ ಖ್ಯಾತಿಯಿದೆ. (ಎಂ.ಎಸ್.)

**ಇಥಾಕ[2]:** ನ್ಯೂಯಾರ್ಕ್ ಪ್ರಾಂತ್ಯದ ಕೇಯುಗ ಸರೋವರದ ದಕ್ಷಿಣ ತುದಿಯಲ್ಲಿದೆ. ಫಿಂಗರ್ ಸರೋವರದ ಸಮೀಪದಲ್ಲಿ ಕಣಿವೆ, ಪ್ರಪಾತಗಳು ಮತ್ತು ಜಲಪಾತಗಳಿರುವುದರಿಂದ ಇಲ್ಲಿಯ ಪ್ರದೇಶ ಸೌಂದರ್ಯದ ಬೀಡಾಗಿದೆ. ಜಲಪಾತಗಳಲ್ಲಿ ಬಟರ್ ಮಿಲ್ಕ್ ಹಾಗೂ ಟೌಘಾನಾಕ್ ಮುಖ್ಯವಾದುವು. ಇಲ್ಲಿ ಕಾರ್ನೆಲ್ ವಿಶ್ವವಿದ್ಯಾನಿಲಯವಿದೆ. ಸಂಗೀತ, ನಾಟಕ ಹಾಗೂ ವ್ಯಾಯಾಮ ಮತ್ತು ಶಿಕ್ಷಣಗಳ ಕೇಂದ್ರವಾಗಿದೆ. ಜನಸಂಖ್ಯೆ 29,541. ಕಾಗದ, ಸಿಮೆಂಟ್, ಗೊಬ್ಬರ, ಚರ್ಮ, ಬಂದೂಕು ಮತ್ತು ಯಂತ್ರಸಾಮಗ್ರಿಗಳ ಉತ್ಪಾದನೆಗೆ ಹೆಸರುವಾಸಿಯಾಗಿದೆ. (ಎಂ.ಎಸ್.)

**ಇಥಿಯೋಪಿಯ:** ಪೂರ್ವ ಆಫ್ರಿಕದ ಸ್ವತಂತ್ರ ಸಾಮ್ರಾಜ್ಯ. $4^0$ ಮತ್ತು $18^0$ ಉತ್ತರ ಅಕ್ಷಾಂಶಗಳ ಮತ್ತು $33^0$ ಮತ್ತು $48^0$ ಪೂರ್ವ ರೇಖಾಂಶಗಳ ನಡುವಿನಲ್ಲಿದೆ. ಸಹಜ ಕೋಟೆಯಂತಿದ್ದು ದಕ್ಷಿಣದಲ್ಲಿ ಪ್ರವೇಶಾನುಕೂಲವಿದೆ. ಹಿಂದಿನ ಹೆಸರು ಅಬಿಸೀನಿಯ. ವಿಸ್ತೀರ್ಣ 11,05,000 ಚ.ಕಿಮೀ. ಜನಸಂಖ್ಯೆ 75 ಮಿಲಿಯನ್. 1952ರವರೆಗೂ ಇದೊಂದು ಒಳನಾಡು ರಾಜ್ಯವಾಗಿತ್ತು. ಸಮುದ್ರತೀರವನ್ನು ಹೊಂದಿರುವ ಎರಿಟ್ರಿಯದೊಡನೆ ಸಂಯುಕ್ತ ರಾಜ್ಯವ್ಯವಸ್ಥೆಯಾದ ಮೇಲೆ, 960 ಕಿಮೀ ಉದ್ದದ ಕೆಂಪುಸಮುದ್ರತೀರ ಸೇರ್ಪಡೆಗೊಂಡಿತು.




ಆಫ್ರಿಕದ ಮಧ್ಯಪೂರ್ವ ಭಾಗದಲ್ಲಿ ಆಫ್ರಿಕದ ಕೋಡು (ಹಾರ್ನ್ ಆಫ್ ಆಫ್ರಿಕ) ಎಂದು ಕರೆಯಲ್ಪಡುತ್ತಿರುವ ಪ್ರದೇಶದ ಒಂದು ಭಾಗವಿದು. ಪ್ರಾಚೀನಜೀವಿಯುಗದ ಕಾಲದಿಂದಲೂ ನಾನಾರೀತಿಯಲ್ಲಿ ಬದಲಾವಣೆ ಹೊಂದುತ್ತ ಬಂದು, ಜ್ವಾಲಾಮುಖಿಗಳಿಂದ ಹೊರಚಿಮ್ಮಿದ ಶಿಲೆಗಳೊಡನೆ ಬೆರೆತು ಪದರಪದರವಾಗಿರುವ ಶಿಲೆಗಳನ್ನು ಹೊಂದಿರುವ ಪ್ರಸ್ಥಭೂಮಿಯ ಪ್ರದೇಶವಾಗಿತ್ತು. ಇಲ್ಲಿ 3636–4545 ಮೀ ಎತ್ತರವಾಗಿರುವ ಪರ್ವತ ಶ್ರೇಣಿಗಳಿವೆ. ಇಳಿಜಾರು ಪಶ್ಚಿಮದ ಕಡೆಗೆ. ಇಲ್ಲಿ ಹರಿಯುವ ನದಿಗಳೆಲ್ಲ ಪರ್ವತಪ್ರಾಂತದಲ್ಲಿರುವುದರಿಂದ ಜಲಪಾತಗಳು ಹೆಚ್ಚು. ವಿದ್ಯುಚ್ಛಕ್ತಿ ಉತ್ಪಾದನೆಗೆ ಯೋಗ್ಯವಾಗಿವೆ. ಅತ್ಯಂತ ಮುಖ್ಯವಾದ ನದಿ ತಾಣ ಸರೋವರದಿಂದ ಹರಿದುಬರುವ ನೀಲಿ ನೈಲ್. ಇಥಿಯೋಪಿಯದ ವಾಯುಗುಣ ಎತ್ತರಕ್ಕೆ ಅನುಸಾರವಾಗಿದೆ. ಪ್ರಸ್ಥಭೂಮಿ ಪ್ರದೇಶವೆಲ್ಲ ಒಟ್ಟಿನಲ್ಲಿ ಸಮಶೀತೋಷ್ಣ ವಾಯುಗುಣವನ್ನು ಹೊಂದಿದೆಯೆನ್ನಬಹುದು. ಪರ್ವತಪ್ರದೇಶವಾದ್ದರಿಂದ ಮಳೆ ಅಧಿಕ; ಜುಲೈ, ಆಗಸ್ಟ್, ಸೆಪ್ಟಂಬರುಗಳಲ್ಲಿ ಮಳೆ ಹೆಚ್ಚು. ಎತ್ತರದಲ್ಲಿ ಕಡಿಮೆ ಇರುವ ಪ್ರಾಂತ್ಯಗಳು ಬಂಜರುಭೂಮಿ; ಡಂಕಿಲ್ ಪ್ರಾಂತ್ಯ ಹೆಚ್ಚಾಗಿ ಮರುಭೂಮಿ. ಸ್ವಾಭಾವಿಕ ಸಸ್ಯವರ್ಗವನ್ನೂ ವಾಯುಗುಣ ಹಾಗೂ ಮಳೆಗೆ ಅನುಸಾರವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು, ಹವೆ ತಂಪಾಗಿದ್ದು ಹೆಚ್ಚು ಮಳೆ ಬೀಳುವ ಪರ್ವತ ಮತ್ತು ಪ್ರಸ್ಥಭೂಮಿ ಪ್ರದೇಶ; ಇಲ್ಲಿ ಎತ್ತರ

ಮತ್ತು ಮಳೆಯ ಪ್ರಮಾಣಕ್ಕನುಸಾರವಾಗಿ ಕಾಡುಗಳಿವೆ. ಕಾಫಾಪ್ರಾಂತ್ಯ ಕಾಫಿಗಿಡದ ಮೂಲನೆಲೆ. ಆದ್ದರಿಂದಲೇ ಕಾಫಿ ಎಂಬ ಹೆಸರು ಬಂದಿರುವುದು. ಎರಡನೆಯದಾಗಿ ನಿಶ್ಚಿತವಾದ ಮಳೆಯಿಲ್ಲದೆ ಉಷ್ಣತೆ ಹೆಚ್ಚಿರುವ ತಗ್ಗುಭೂಮಿ ಪ್ರದೇಶ; ಇಲ್ಲಿ ಅಕೇಷಿಯ ಜಾತಿಯ ಮರಹೆಚ್ಚು, ಕೆಲವು ಕಡೆ ಹುಲ್ಲುಗಾವಲುಗಳಿವೆ. ಉತ್ಕೃಷ್ಟ ಚೌಬೀನ ನೀಡುವ ಮರಗಳಿವೆ. ತಾಳೆ, ಸೈಕಮೋರ್ ಎಂಬ ಅಂಜೂರದ ಮರ, ಗೋಂದು ಕೊಡುವ ಮರ, ಕಿತ್ತಲೆ, ನಿಂಬೆ, ದಾಳಿಂಬೆ, ಪೀಚ್, ಬಾಳೆ, ದ್ರಾಕ್ಷಿ, ಹತ್ತಿ, ಕಬ್ಬು ಇವು ಇತರ ಮುಖ್ಯ ಬೆಳೆಗಳು. ನೀಲಗಿರಿ ಮರಗಳನ್ನು ಇತ್ತೀಚೆಗೆ ಹೆಚ್ಚಾಗಿ ಬೆಳೆಸುತ್ತಿದ್ದಾರೆ.

ರಾಜಧಾನಿ ಆಡಿಸ್ ಅಬಾಬ. ಜನಸಂಖ್ಯೆ 2,200,186 (2002). ಮಸಾವ ಮತ್ತು ಅಸಾಬು ಮುಖ್ಯ ಬಂದರುಗಳು. ಖನಿಜೋತ್ಪನ್ನಗಳಾದ ಬಂಗಾರ, ಕಬ್ಬಿಣ, ಪ್ಲಾಟಿನಂ ಮುಂತಾದವು ಈ ಬಂದರುಗಳಿಂದ ರಫ್ತಾಗುತ್ತವೆ. ಪರ್ವತ ಪ್ರದೇಶವಾದ್ದರಿಂದ ಸಂಚಾರ ಸೌಲಭ್ಯ ಕಡಿಮೆ, ಒಂದು ಪ್ರಮುಖ ರೈಲುಮಾರ್ಗವಿದೆ. (ಬಿ.ಎಸ್.ಕೆ.)

**ಇದಾಹೊ:** ಅಮೆರಿಕ ಸಂಯುಕ್ತ ಸಂಸ್ಥಾನದ ಪರ್ವತಮಯ ರಾಜ್ಯ. ಅಮೆರಿಕದ ಇಂಡಿಯನ್ನರ ರೀತ್ಯಾ ಇದಾಹೊ ಎಂದರೆ ಪರ್ವತವಜ್ರ. ವಜ್ರರಾಜ್ಯವೆಂದು ಇದನ್ನು ಕರೆಯುವುದು ರೂಢಿ. ಹೆಚ್ಚಾಗಿ ಕೊಲಂಬಿಯ ನದಿಯ ಜಲಾನಯನ ಭೂಪ್ರದೇಶದಿಂದಲೇ ಕೂಡಿರುವ ಈ ರಾಜ್ಯದ ಉತ್ತರಕ್ಕೆ ಬ್ರಿಟಿಷ್ ಕೊಲಂಬಿಯ, ಪೂರ್ವಕ್ಕೆ ಮಾಂಟಾನ ಮತ್ತು ವ್ಯೋಮಿಂಗ್, ದಕ್ಷಿಣಕ್ಕೆ ಯೂಟ ಮತ್ತು ನೆವಾಡ, ಪಶ್ಚಿಮಕ್ಕೆ ಒರೆಗಾನ್ ಮತ್ತು ವಾಷಿಂಗ್ಟನ್ ಇವೆ. ಇದರ ವಿಸ್ತೀರ್ಣ 216456 ಚ.ಕಿಮೀ. ಈ ರಾಜ್ಯದ ದಕ್ಷಿಣದಲ್ಲಿರುವ ಸ್ನೇಕ್ ನದಿಯ ಕಣಿವೆಯಲ್ಲಿ ಆಳವಾದ ಕಮರಿಗಳೂ, ಅಬ್ಬಿಗಳೂ ಹೇರಳ. ಉತ್ತರದಲ್ಲಿ ಸೆಲ್‌ಕರ್ಕ್ ಪರ್ವತವೂ ಕೋರ್ ಡಿ'ಅಲಿನ ಪರ್ವತವೂ ಇದೇ ಹೆಸರಿನ ಸರೋವರವೂ ಇವೆ. ಉತ್ತರ ದಕ್ಷಿಣ ಪ್ರದೇಶಗಳನ್ನು ಪ್ರತ್ಯೇಕಿಸುವಂತೆ ಮಧ್ಯದಲ್ಲಿ ಕ್ಲಿಯರ್‌ವಾಟರ್ ಪರ್ವತವೂ, ಪಶ್ಚಿಮದಲ್ಲಿ ಸೆವೆನ್ ಡೆವಿಲ್ಸ್ ಪರ್ವತವೂ, ಪೂರ್ವದ ಎಲ್ಲೆಯ ಬಳಿಯಲ್ಲಿ ಬಿಟ್ಟರ್‌ರೂಟ್ ಪರ್ವತಶ್ರೇಣಿಯೂ ಇದೆ. ಇದು ಮರುಭೂಮಿಗಳಿಂದಲೂ, ಮೈದಾನಗಳಿಂದಲೂ, ಅಗ್ನಿಶಿಲೆಯ ನೆಲದಿಂದಲೂ ಕೂಡಿದ ಪ್ರದೇಶ. ಸೈಲೂರಿಯನ್‌ನಿಂದ ಪ್ಲಿಯೊಸೀನ್ ವರೆಗೆ ಭೂ ಇತಿಹಾಸದ ಎಲ್ಲ ಯುಗಗಳಿಗೆ ಸಂಬಂಧಿಸಿದ ಭೂರಚನೆಯನ್ನೂ ಇಲ್ಲಿ ಕಾಣಬಹುದು.

ವಾಯುಗುಣ, ಸಸ್ಯವರ್ಗ: ಬೇಸಗೆಯಲ್ಲಿ ಆಗ್ನೇಯ ಭಾಗದ ಸ್ನೇಕ್ ಕಣಿವೆ ಪ್ರದೇಶದಲ್ಲಿ ಅತಿ ಹೆಚ್ಚಿನ ಸರಾಸರಿ ಉಷ್ಣತೆಯಿರುತ್ತದೆ. $28^0$ಸೆ ಗಿಂತಲೂ ಅಧಿಕ. ಇತರ ತಗ್ಗು ಪ್ರದೇಶಗಳಲ್ಲಿ $15^0$ಸೆ ಸರಾಸರಿ. ಪರ್ವತ ಪ್ರದೇಶದ ಸರಾಸರಿ ಉಷ್ಣತೆ $13^0$ಸೆ ಕಡಿಮೆ. ಚಳಿಗಾಲದಲ್ಲಿ ಪರ್ವತಪ್ರದೇಶದ $20^0$ಸೆ ಉಷ್ಣತೆ ಗಿಂತ ಕಡಿಮೆ. ತಗ್ಗಿನ ನೆಲದಲ್ಲಿ $-6^0$ ಯಿಂದ $-1^0$ ಸೆ ಕೊರೆಯುವ ಹಿಮ ಬೀಳದಿರುವ ದಿನಗಳ ಸಂಖ್ಯೆ ವರ್ಷಕ್ಕೆ ಸರಾಸರಿಯಲ್ಲಿ 150ಕ್ಕಿಂತ ಕಡಿಮೆ. ಪರ್ವತಪ್ರದೇಶದಲ್ಲಿ ಇದು ತೊಂಬತ್ತಕ್ಕಿಂತ ಕಡಿಮೆ.

ರಾಕಿ ಪರ್ವತಶ್ರೇಣಿಯ ಪ್ರದೇಶದ ಬಹುಭಾಗದಲ್ಲಿ 75 ಸೆಂಮೀ ಮಳೆಯಾಗುತ್ತದೆ. ಕೆಲವು ಪ್ರದೇಶದಲ್ಲಿ 100 ಸೆಂಮೀ ಮಳೆಯಾಗುವುದು. ಪಶ್ಚಿಮಕ್ಕೂ ದಕ್ಷಿಣಕ್ಕೂ ಹೋದಂತೆಲ್ಲ ಮಳೆ ಕಡಿಮೆ. ತೀರ ಪಶ್ಚಿಮದಲ್ಲಿ ಕನಿಷ್ಠ ಮಳೆಯ ಪ್ರಮಾಣ 100 ಸೆಂಮೀ. ತೀರ ದಕ್ಷಿಣದಲ್ಲಿ 25 ಸೆಂಮೀ. ಹಿಮಾವೃತ ದಿನಗಳ ಸಂಖ್ಯೆ ವರ್ಷಕ್ಕೆ 90 ರಿಂದ 30ರ ವರೆಗೆ ಪ್ರದೇಶಾನುಗುಣವಾಗಿ ವ್ಯತ್ಯಾಸವಾಗುತ್ತ ಹೋಗುತ್ತದೆ. ವರ್ಷದ ಎಲ್ಲ ಋತುಗಳಲ್ಲೂ ಮಳೆಯಾಗುತ್ತದೆ. ಆದರೆ ಪಶ್ಚಿಮ ಭಾಗದಲ್ಲಿ ಬೇಸಗೆಯಲ್ಲಿ ಕನಿಷ್ಠ ಪರಿಮಾಣ.

ಉಷ್ಣತೆ ಹಾಗೂ ನೆಲದೆತ್ತರಕ್ಕೆ ಅನುಗುಣವಾಗಿ ಇದಾಹೊ ರಾಜ್ಯದ ಸ್ವಾಭಾವಿಕ ಸಸ್ಯವರ್ಗ ವ್ಯತ್ಯಾಸವಾಗುತ್ತದೆ. ಸ್ನೇಕ್ ನದಿಯ ಮೈದಾನದಲ್ಲೂ ಅದರ ದಕ್ಷಿಣಕ್ಕೂ ಮರುಭೂಮಿಯ ಕುರುಚಲು ಕಾಡು ಸಾಮಾನ್ಯ. ಉತ್ತರದ ಪರ್ವತ ಪ್ರದೇಶದ ಮೇಲೆ ಗುತ್ತಿಹುಲ್ಲಿನ ಪಶ್ಚಿಮ ಸೆರಗೂ ದಾರುವೃಕ್ಷಗಳ ಒಡಲೂ ಲಾರ್ಚ್, ಫರ್, ಸ್ಪ್ರೂಸ್ ಮರಗಳ ಬೊಟ್ಟುಗಳೂ ಇವೆ. ಕೆಲವು ಕಾಡುಗಳು ವಾಣಿಜ್ಯದೃಷ್ಟಿಯಿಂದ ಮುಖ್ಯ.

ವ್ಯವಸಾಯ, ಖನಿಜ, ಕೈಗಾರಿಕೆ: ಸಾಂದ್ರಬೇಸಾಯ, ಪಶುಪಾಲನೆ ಇದೆ. ಸ್ನೇಕ್ ನದಿಯ ಕಣಿವೆಯಲ್ಲಿ, ಮುಖ್ಯವಾಗಿ ರಾಜ್ಯದ ಆಗ್ನೇಯ ದಕ್ಷಿಣ–ಮಧ್ಯ ಹಾಗೂ ಪಶ್ಚಿಮ ಕಣಿವೆಯಲ್ಲಿ, ಹಾಗೂ ಉತ್ತರದ ಪಶ್ಚಿಮ ಬದಿಯ ಪ್ರದೇಶದಲ್ಲಿ ಬೇಸಾಯದ ಜಮೀನುಗಳು ಅಧಿಕ. ರಾಜ್ಯದ ದಕ್ಷಿಣದಲ್ಲಿ ನೀರಾವಿಯೂ ಸಾಮಾನ್ಯ. ನೀರಾವರಿ ವ್ಯವಸ್ಥೆಗೆ ಒಳಪಡದ ಜಮೀನುಗಳಲ್ಲಿ ಗೋದಿಯ ಬೆಳೆಯೇ ಹೆಚ್ಚು; ಓಟ್ಸ್, ಬಾರ್ಲಿಗಳೂ ಬೆಳೆಯುತ್ತವೆ. ನೀರಾವರಿಯ ನೆಲಗಳಲ್ಲಿ ಕುದುರೆ ಮಸಾಲೆಯ ಸೊಪ್ಪಿನ (ಆಲ್ಫಾಲ್ಫ) ಬೆಳೆ ಅಧಿಕ. ದಕ್ಷಿಣ–ಮಧ್ಯ ಹಾಗೂ ದಕ್ಷಿಣ–ಪೂರ್ವ ಜಿಲ್ಲೆಗಳಲ್ಲಿ ಸಕ್ಕರೆಯ ಬೀಟ್, ಚೀಸ್, ಉಣ್ಣೆ– ಇವು ಮುಖ್ಯ ಉತ್ಪನ್ನಗಳು.

ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಗಣಿಗಾರಿಕೆ ಪ್ರಧಾನವಾಗಿದೆ. ಕೋರ್ ಡಿ'ಅಲಿನ್‌ನಲ್ಲಿ ಸೀಸ ಬೆಳ್ಳಿಗಳು ಸ್ವಲ್ಪಮಟ್ಟಿಗೆ ಸತುವೂ ಸಿಗುತ್ತವೆ. ಚಿನ್ನ ತಾಮ್ರಗಳೂ ತಕ್ಕಮಟ್ಟಿಗೆ ದೊರೆಯುತ್ತವೆ. (ಕೆ.ಎನ್.ಯು.)

**ಇದ್ರಿಸ್:** ಪಶ್ಚಿಮ ಏಷ್ಯ ಪ್ರದೇಶದಲ್ಲಿದ್ದನೆಂದು ನಂಬಲಾದ ಒಬ್ಬ ಪ್ರಾಚೀನ ಪ್ರವಾದಿ. ಇವನು ಯಹೂದಿಯೆಂದೂ ಈತನಿಗೆ ಇಲ್ಯಾಸ್ ಎಂಬ ಇನ್ನೊಂದು ಹೆಸರಿತ್ತೆಂದೂ ಹೇಳಲಾಗಿದೆ. ಈತ 72 ಭಾಷೆಗಳಲ್ಲಿ ಪ್ರವೀಣನಾಗಿದ್ದನೆಂದು ಪ್ರತೀತಿ. ಈತ ಖಗೋಳವಿಜ್ಞಾನ ತತ್ತ್ವಶಾಸ್ತ್ರಗಳೆರಡನ್ನೂ ತಿಳಿದಿದ್ದ ಮೊದಲಿಗರಲ್ಲೊಬ್ಬನೆಂದೂ ವಿಶ್ವದ ಸ್ವರೂಪವನ್ನು ಕುರಿತು ಇತರರಿಗೆ ಬೋಧಿಸುತ್ತಿದ್ದನೆಂದೂ ಪ್ರತೀತಿ. (ಎಸ್.ಎ.ಬಿ.ಕೆ.)

**ಇನ್ಸ್‌ಬ್ರುಕ್:** ಆಸ್ಟ್ರಿಯದ ಟೈರೋಲ್ ಪ್ರಾಂತ್ಯದ ರಾಜಧಾನಿ. ಮ್ಯೂನಿಚ್‌ನಿಂದ 96 ಕಿಮೀ ದೂರದಲ್ಲಿದೆ. ಜನಸಂಖ್ಯೆ ಸು. 1,13,392 (2001). ಮಧ್ಯಕಾಲದಲ್ಲಿ ಸಾಮ್ರಾಜ್ಯದ ಕೇಂದ್ರವಾಗಿತ್ತು. ಐತಿಹಾಸಿಕ ಕಟ್ಟಡಗಳು, ಸುಂದರ ಚರ್ಚುಗಳು, ಅರಮನೆ–ಮೊದಲಾದುವು ಇವೆ. ಒಂದು ಪ್ರಾಚೀನ ವಿಶ್ವವಿದ್ಯಾನಿಲಯವೂ ಇದೆ. ಇನ್ಸ್ ನದಿಯ ಕಣಿವೆಯಲ್ಲಿದ್ದು ಗಿರಿ ಕಂದರಗಳಿಂದ ಸುತ್ತುವರಿದಿರುವುದರಿಂದ ಪ್ರವಾಸಿಗರಿಗೆ ವಿಶೇಷ ಆಕರ್ಷಣೀಯ ತಾಣವಾಗಿದೆ. ವ್ಯಾಪಾರ ಮತ್ತು ಔದ್ಯೋಗಿಕ ಕೇಂದ್ರವಾಗಿವೆ. ಇದು ಚಳಿಗಾಲದ ಕ್ರೀಡಾಕೇಂದ್ರವೂ ಹೌದು. 1964 ಮತ್ತು 1976ರಲ್ಲಿ ಚಳಿಗಾಲದ ಒಲಂಪಿಕ್ ಕ್ರೀಡೆಗಳು ಇಲ್ಲ ನಡೆದಿದ್ದವು. *

**ಇಬಾದಾನ್:** ಆಫ್ರಿಕ ಖಂಡದ ನೈಜೀರಿಯ ದೇಶದ ನೈಋತ್ಯ ಭಾಗದಲ್ಲಿರುವ ಓಯೋ ಪ್ರಾಂತ್ಯದ ಮುಖ್ಯಪಟ್ಟಣ ಹಾಗೂ ಅದರ ರಾಜಧಾನಿ. ಇದು ಏಳು ಗುಡ್ಡಗಳ ಮೇಲೆ ನೆಲೆಸಿದೆ. ಜನಸಂಖ್ಯೆ 17,31,000 (2000). ನೀಗ್ರೊ ಜನರು ಹೆಚ್ಚು ; ಅವರಲ್ಲಿ ಬಹುಮಂದಿ ಮುಸಲ್ಮಾನರು. 1948ರಲ್ಲಿ ಇಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ವಿದ್ಯಾಕ್ಷೇತ್ರದಲ್ಲಿ ಕ್ರೈಸ್ತರ ಪ್ರಭಾವ ಹೆಚ್ಚು. ಸುತ್ತಮುತ್ತ ಕೋಕೋ, ಹತ್ತಿ, ಜೋಳ, ನಿಂಬೆ, ನೇರಳೆ ಮುಂತಾದುವನ್ನು ಬೆಳೆಯುತ್ತಾರೆ. ಮುಖ್ಯ ಕಸುಬು ವ್ಯವಸಾಯ ಮತ್ತು ವ್ಯಾಪಾರ. ಇದು ನೈಜೀರಿಯದ ಒಂದು ಮುಖ್ಯ ವ್ಯಾಪಾರ ಮತ್ತು ಕೈಗಾರಿಕಾಕೇಂದ್ರ. ಈ ಪಟ್ಟಣಕ್ಕೆ ಲಾಗೋಸ್‌ನಿಂದ ರೈಲುಮಾರ್ಗವಿದೆ. (ಎಸ್.ಎನ್.ಎ.ಆರ್.)

**ಇಬ್ನ್ ಖಾಲ್ದೂನ್:** ಸು. 1332–1406. ಅರಬ್ ಭೂಗೋಳವಿಜ್ಞಾನದ ಬೆಳವಣಿಗೆಗೆ ಕೊಡುಗೆಯನ್ನು ನೀಡಿದ ಅರಬ್ಬರಲ್ಲಿ ಈತ ಕೊನೆಯವನು. ತನ್ನ ಜೀವನದ ಹೆಚ್ಚುಕಾಲವನ್ನು ಈತ ಆಲ್ಜೀರಿಯ, ಟುನಿಷಿಯ, ಸ್ಪೈನ್ ಹಾಗೂ ಈಜಿಪ್ಟಿನಲ್ಲಿ ಕಳೆದ. ಈತನ ಪ್ರಸಿದ್ಧ ಗ್ರಂಥ ಮುಖದ್ದಿಮ್ಮಾ. ಈ ಗ್ರಂಥ ಮಾನವ ಸಮಾಜದ ವ್ಯವಸ್ಥೆಯನ್ನು ಕುರಿತು ವಿಶದವಾಗಿ ಚರ್ಚಿಸುವುದು. ಮಾನವನ ನಾಗರಿಕತೆ, ಅಲೆಮಾರಿ ಹಾಗೂ ಸ್ಥಿರವಾಗಿ ನೆಲೆಸಿರುವ ಸಮಾಜಗಳ ವ್ಯತ್ಯಾಸ, ಸಾಮ್ರಾಜ್ಯಗಳು, ನಗರ ಹಾಗೂ ಗ್ರಾಮೀಣ ಜನ ಜೀವನ, ಜೀವನ ನಿರ್ವಹಣೆಯ ವಿಧಾನಗಳು ಮೊದಲಾದವುಗಳ ವಿವರಣೆಗಳನ್ನು ಈ ಗ್ರಂಥ ಒಳಗೊಂಡಿದೆ.

ಸಾಮಾಜಿಕ ಸಂಘಟನೆಯ ವಿವಿಧ ಹಂತಗಳನ್ನು ಕುರಿತು ಖಾಲ್ದೂನ್ ಹೆಚ್ಚು ವಿವರಣೆಯನ್ನು ನೀಡಿದ್ದಾನೆ. ಮರುಭೂಮಿಯ ಅಲೆಮಾರಿಗಳು ಅತಿ ಪುರಾತನವಾದ ನೈಜ ಸಂಘಟನೆಯಾಗಿರುವುದು. ಸ್ಥಿರವಾಗಿ ನೆಲೆಸಿರುವ ಜನರು ವೈಭವಗಳಿಗೆ ಹೆಸರಾಗಿದ್ದು ಮೃದು ಧೋರಣೆಯಿಂದ ಕೂಡಿರುವರು. ಇದರಿಂದಾಗಿಯೇ ಸಾಮ್ರಾಜ್ಯಗಳು ನಾಶವಾಗುತ್ತವೆ ಎಂದು ವಿವರಿಸಿದ. ಮುಂದುವರಿದು ಉತ್ತರಾರ್ಧಗೋಳ ಹೆಚ್ಚು ಜನರಿಂದ ಕೂಡಿರುವುದು. ಹೆಚ್ಚು ಉಷ್ಣಾಂಶದಿಂದ ಸಮಭಾಜಕ ವೃತ್ತ ಪ್ರದೇಶ ಕಡಿಮೆ ಜನಸಂಖ್ಯೆಯಿಂದ ಕೂಡಿರುವುದು. ಸಮಶೀತೋಷ್ಣವಲಯ ಹೆಚ್ಚು ಜನರಿಂದ ಕೂಡಿರಲು ಅದರ ವಾಯುಗುಣ ಕಾರಣ. ಇದಕ್ಕೆ ಬದಲಾಗಿ ಶೀತವಲಯ ಉಷ್ಣಾಂಶ ಅತಿ ಕಡಿಮೆಯಿದ್ದು ಮಾನವನಿಗೆ ಅಹಿತಕರವಾಗಿರುವುದು. ಹೀಗೆ ಪರಿಸರ, ಮಾನವ ಜೀವನ, ಜನರ ವರ್ತನೆ, ಸಂಸ್ಕೃತಿಗಳ ಮೇಲೆ ಪ್ರಭಾವ ಬೀರಿರುವುದನ್ನು ಕುರಿತು ವಿವರಿಸಿದ. ಈ ದೃಷ್ಟಿಯಿಂದಾಗಿಯೇ ಈತನನ್ನ ವೈಜ್ಞಾನಿಕವಾಗಿ ಪರಿಸರ ಪ್ರಭುತ್ವವಾದವನ್ನು ಮಂಡಿಸಿದವರಲ್ಲಿ ಮೊದಲಿಗನೆಂದು ಪರಿಗಣಿಸಲಾಗಿದೆ. (ವೈ.ಪಿ.ಸಿ.)

**ಇಬ್ನ್ ಬತೂತ:** ಸು. 1304–68. ಪ್ರಸಿದ್ಧ ಪ್ರವಾಸಿ. ಇತಿಹಾಸಕಾರ, ಭೂಗೋಳ ಶಾಸ್ತ್ರಜ್ಞ, ಮುಸ್ಲಿಂ ಮೂಲ ಹೆಸರು ಅಬ್ದುಲ್ಲಾ ಮೊಹಮ್ಮದ್. ಮೆಡಿಟರೇನಿಯನ್ ಸಮುದ್ರ ತೀರದ ಟ್ಯಾಂಜೀರ್ ಪಟ್ಟಣದಲ್ಲಿ ಜನಿಸಿದ ಈತ ಮೂಲತಃ ನೀಗ್ರೋ ಜನಾಂಗಕ್ಕೆ

ಸೇರಿದವನು, ಅರಬ್ಬನಲ್ಲ. ಸು. 1325ರಲ್ಲಿ 21ರ ಹರಯದಲ್ಲಿ ಮೆಕ್ಕಾ ಯಾತ್ರೆಗೆ ಹೊರಟ ಈತ, ಅನಂತರ ಈಜಿಪ್ಟ್, ಸಿರಿಯ, ಪರ್ಷಿಯ, ಸೌದಿ ಅರೇಬಿಯ, ಕ್ಯಾಸ್ಪಿಯನ್ ಸಮುದ್ರತೀರ, ಅಲ್ಲಿಂದ ಭಾರತ, ಶ್ರೀಲಂಕ, ಸುಮಾತ್ರ, ಚೀನ ಹಾಗೂ ಮಾಲ್ಡಿವ್‌ಗಳಲ್ಲಿ ಸಂಚರಿಸಿದ. ಪೂರ್ವ ಆಫ್ರಿಕದ ಮೊಜಾಂಬಿಕ್ ಹಾಗೂ ಇಥಿಯೋಪಿಯಗಳನ್ನೂ ಸಂದರ್ಶಿಸಿದ. ಪೂರ್ವ ಆಫ್ರಿಕದ ತೀರದಲ್ಲಿ ಸಮಭಾಜಕ ವೃತ್ತದಿಂದ ದಕ್ಷಿಣದ ಕಡೆಗೆ $10^0$ದ ಅಕ್ಷಾಂಶದಲ್ಲಿರುವ ಕಿಲ್ವದವರೆಗೂ ಮುಂದುವರಿದ. ಅನಂತರ ಆಫ್ರಿಕದ ದಕ್ಷಿಣಭಾಗ ಹೆಚ್ಚು ಉಷ್ಣಾಂಶದಿಂದ ಕೂಡಿರದೆ, ಹಲವಾರು ಬುಡಕಟ್ಟು ಜನರು ಇಲ್ಲಿ ನೆಲೆಸಿರುವುದನ್ನು ಸ್ಪಷ್ಟಪಡಿಸಿದ. ಇಬ್ನ್ ಹಾಕಾಲ್ ನೀಡಿದ ವಿವರಣೆಗಳು ಸರಿಯಾದವುಗಳೆಂದು ತಿಳಿಯಪಡಿಸಿದ.

ಪರ್ಷಿಯದ ಮೂಲಕ ಭಾರತಕ್ಕೆ ಬಂದ ಈತ ದೆಹಲಿಯಲ್ಲಿ ಸುಲ್ತಾನನಾಗಿದ್ದ ಮಹಮ್ಮದ್‌ಬಿನ್ ತುಘಲಕ್‌ನ ಆಸ್ಥಾನದಲ್ಲಿ ಸೇವೆ ಸಲ್ಲಿಸಿದ. ಇಲ್ಲಿದ್ದಾಗ ಭಾರತದಲ್ಲಿ ವ್ಯಾಪಕವಾಗಿ ಸಂಚರಿಸಿ ವಿವರಣೆಗಳನ್ನು ನೀಡಿದ. ದೆಹಲಿಯ ಸುಲ್ತಾನ ಈತನನ್ನು ಚೀನಕ್ಕೆ ತನ್ನ ರಾಯಭಾರಿಯಾಗಿ ನೇಮಿಸಿದ. ಭಾರತದಿಂದ ಹೊರಟ ಈತ ಮೊರಾಕ್ಕೊ ದೇಶಕ್ಕೆ ಭೇಟಿನೀಡಿದ. ಸಹಾರ ಮರುಭೂಮಿಯನ್ನು ದಾಟಿ ಟಿಟಂಬಕ್ಟು ನಗರವನ್ನು ತಲುಪಿ ಅಲ್ಲಿಂದ ನೈಜರ್ ನದಿಯಲ್ಲಿ ಸಂಚರಿಸಿ ಅದರ ವಿವರಣೆಯನ್ನು ನೀಡಿದ. ಅಲ್ಲಿದ್ದ ನೀಗ್ರೋ ಮುಸ್ಲಿಂ ಬುಡಕಟ್ಟುಗಳ ವಿವರಣೆಯನ್ನು ನೀಡಿದ. ಹೀಗೆ 25 ವರ್ಷಗಳ ಅವಧಿಯಲ್ಲಿ ಸು. 1,20,000 ಕಿಮೀ ಸಂಚರಿಸಿದನೆಂದು ಅಂದಾಜು ಮಾಡಲಾಗಿದೆ. ಭಾರತದ ಇತಿಹಾಸ ಮತ್ತು ಅಂದಿನ ಪರಿಸ್ಥಿತಿಗಳನ್ನು ತಿಳಿಯಲು ಇರುವ ಆಧಾರಗಳಲ್ಲಿ ಈತನ ಬರೆವಣಿಗೆಗಳು ಪ್ರಮುಖವಾದವು. (ವೈ.ಪಿ.ಪಿ.)

**ಇಬ್ನ್ ಹಾಕಲ್:** ಅರಬ್ ಪ್ರವಾಸಿ. ಇರಾನಿನ ಬಾಗ್ದಾದ್ ನಿವಾಸಿ. ಮೆಸಪೊಟೇಮಿಯ (ಇರಾಕ್)ದ ಮೇಲ್ಭಾಗದಲ್ಲಿನ ನಸಿಬಿಸ್ ನಗರದಲ್ಲಿ ಜನಿಸಿದ. ಇವನ ಪೂರ್ಣ ಹೆಸರು ಅಬು ಅಲ್–ಖಾಸಿಂ ಇಬ್ನ್ ಅಲಿ ಅಲ್–ನಸಿಬ್ ಇಬ್ನ್ ಹಾಕಲ್ ಅಥವಾ ಮಹಮ್ಮದ ಅಬ್ದುಲ್ ಖಾಸಿರಿ. ತನ್ನ ಬಾಲ್ಯದಲ್ಲೇ ಜಲಯಾನ, ಪರಿಶೋಧನೆ ಮತ್ತು ಪ್ರವಾಸಗಳಲ್ಲಿ ಆಸಕ್ತಿ ಹೊಂದಿದ್ದ. 943ನೇ ಮೇ 15ರಂದು ಬಾಗ್ದಾದಿನಿಂದ ತನ್ನ ಪ್ರವಾಸವನ್ನು ಪ್ರಾರಂಭಿಸಿದ. ಆಗ ಬಾಗ್ದಾದ್ ಇಸ್ಲಾಂ ಪ್ರಪಂಚದ ಪ್ರಮುಖ ನಗರವಾಗಿತ್ತು. ಈತ 30 ವರ್ಷಗಳ ಕಾಲ (973ರ ವರೆಗೆ) ಸಂಚರಿಸಿ ಪ್ರಪಂಚದ ವಿವಿಧ ದೇಶಗಳಿಗೆ ಭೇಟಿಯನ್ನಿತ್ತ. ಇವನು ಸ್ಪೇನ್, ಮಧ್ಯ ಏಷ್ಯ ಹಾಗೂ ಆಫ್ಘಾನಿಸ್ತಾನದ ತಂಪು ಪರ್ವತಗಳಿಂದ ಪಶ್ಚಿಮ ಆಫ್ರಿಕದ ಉಷ್ಣಮರುಭೂಮಿಯವರೆಗೆ ಬಹುತೇಕ ಇಡೀ ಮುಸ್ಲಿಂ ಪ್ರಪಂಚವನ್ನು ನೋಡಿದ. ಇವನು ಭೇಟಿಯನ್ನಿತ್ತ ದೇಶಗಳು ಮತ್ತು ಪ್ರದೇಶಗಳಿವು: ಉತ್ತರ ಆಫ್ರಿಕ (ಟ್ಯುನಿಷಿಯ, ಮೊರಾಕ್ಕೊ, ಈಜಿಪ್ಟ್ ), ಸಹರದ ದಕ್ಷಿಣ ಸೀಮೆ, ಸಿರಿಯ, ಆರ್ಮೇನಿಯ, ಇರಾನ್, ಇರಾಕ್, ಅಜರ್‌ಬೈಜಾನ್, ಅಲ್–ಜಜೀರ, ಖುಜಿಸ್ತಾನ್, ಖವಾರಿಜ್ಮ್, ಟ್ರಾನ್ಸೊಕ್ಸನಿಯ, ಘಾನ ಮತ್ತು ಸಿಸಿಲಿ. ಈತ ಬರೆದ ಎ ಬುಕ್ ಆಫ್ ರೂಟ್ಸ್ ಅಂಡ್ ರೆಲ್ಮ್ಸ್ ಎಂಬ ಗ್ರಂಥದಲ್ಲಿ ಭೂಮಿಯ ಹಾಗೂ ಮುಸ್ಲಿಂ ದೇಶಗಳ ವಿವರಗಳನ್ನು ನೀಡಿದ್ದಾನೆ. ಐರೋಪ್ಯ ದೇಶಗಳ ವೃತ್ತಾಂತವನ್ನೂ ಹೇಳಿದ್ದಾನೆ. ಕ್ಯಾಸ್ಪಿಯನ್ ಸಮುದ್ರ ಉತ್ತರ ಮಹಾಸಾಗರದೊಡನೆ ಯಾವ ಸಂಪರ್ಕವನ್ನು ಹೊಂದಿರಲಿಲ್ಲ. ಕಪ್ಪುಸಮುದ್ರ ಉತ್ತರ ಸಮುದ್ರದೊಡನೆ ಒಂದು ಕಾಲುವೆಯ ಮೂಲಕ ಸಂಪರ್ಕ ಹೊಂದಿತ್ತು. ಇವನ ಪ್ರಕಾರ ಯುರೋಪ್ ಒಂದು ದ್ವೀಪವಾಗಿತ್ತು. ಆಫ್ರಿಕದ ಬಗ್ಗೆ ಬರೆಯುತ್ತ ಕೆಂಪುಸಮುದ್ರದ ಪಕ್ಕದ ಆಫ್ರಿಕದ ಪೂರ್ವ ಕರಾವಳಿ ಪೂರ್ವಕ್ಕೆ ಹೊರಳುತ್ತದೆ. ಇಸ್ಲಾಂ ದೇಶಗಳ ಸುತ್ತಲಿನ ದೇಶಗಳನ್ನೂ ಜನರನ್ನೂ ವರ್ಣಿಸಿದ್ದಾನೆ. ವಿವಿಧ ಪ್ರದೇಶಗಳ ಪ್ರಮುಖ ಬೆಳೆಗಳು ಮತ್ತು ಕೃಷಿ ತಂತ್ರಗಳನ್ನು ವಿವರಿಸಿದ್ದಾನೆ. ಅದರಂತೆ ತನ್ನ ಪ್ರವಾಸಗಳ ವಿವರಗಳನ್ನು ಕುರಿತು ಆನ್ ದಿ ಶೇಪ್ ಆಫ್ ದಿ ವರ್ಲ್ಡ್ ಎಂಬ ಗ್ರಂಥವನ್ನು ಬರೆದ. ಇದು ತನ್ನ ನಿಖರತೆ ಮತ್ತು ವೈಜ್ಞಾನಿಕ ವಿಧಾನಕ್ಕೆ ಪ್ರಸಿದ್ಧವಾದ ಪ್ರವಾಸ ಕಥನವಾಗಿದೆ. (ಎಸ್.ಎಸ್.ಎನ್.)

**ಇಬ್ಬನಿ:** ವಾಯುವಿನಲ್ಲಿರುವ ನೀರಿನ ಆವಿ ರಾತ್ರಿ ವೇಳೆಯಲ್ಲಿ ಸಾಂದ್ರೀಕರಿಸಿ ನೆಲಕ್ಕೆ ಬೀಳುವಾಗ ಉಂಟಾಗುವ ನೀರಹನಿ (ಡ್ಯೂ). ಪ್ರಾತಃಕಾಲದಲ್ಲಿ ಗಿಡಮರಗಳ ಹುಲ್ಲುಗಾವಲುಗಳ ಮೇಲೆ ಬೀಳುವ ಸೂರ್ಯಕಿರಣಗಳನ್ನು ಪ್ರತಿಫಲಿಸಿ ವಕ್ರೀಭವಿಸಿ ವರ್ಣರಂಜಿತ ದೃಶ್ಯ ಬೀರುವ ಇಬ್ಬನಿಗಳ ಹಾಸು ನೋಡಲು ಬಲು ಸುಂದರ. ನಿರಭ್ರ ಆಕಾಶ ಮತ್ತು ಸ್ತಬ್ಧ ಇಲ್ಲವೇ ಮಂದಚಲನೆಯ ವಾಯುಮಂಡಲ ಇವು ಇಬ್ಬನಿಯ ಬೆಳೆವಣಿಗೆಗೆ ಸಹಕಾರಿಗಳು.

ನಿರಾತಂಕವಾಗಿ ಆಗಸಕ್ಕೆ ಒಡ್ಡಿರುವ ಹೊರಮೈಯಿಂದ ವಸ್ತುಗಳು ಉಷ್ಣವನ್ನು (ವಿಕಿರಣದಿಂದ–ರೇಡಿಯೇಷನ್) ಕಳೆದುಕೊಳ್ಳುವುವು. ಹೀಗೆ ಸಂಭವಿಸುವ ನಷ್ಟ ಆಯಾ ವಸ್ತುವಿನ ಆಂತರಿಕ ರಚನೆಯಿಂದ ಅಥವಾ ಬಾಹ್ಯಾವರಣದಿಂದ ಭರ್ತಿಯಾಗಬೇಕು. ಹೀಗಾಗದಿದ್ದಾಗ ವಸ್ತುವಿನ ಹೊರಮೈ ಉಷ್ಣತೆ ತಗ್ಗುತ್ತದೆ. ಎಲೆ, ಹೂದಳ ಮತ್ತು ಹುಲ್ಲಿನ ಗರಿ ಇವು ಉಷ್ಣವನ್ನು ಕಳೆದುಕೊಂಡು ಸುತ್ತಲಿನ ವಾಯುವನ್ನು ತಂಪುಗೊಳಿಸುತ್ತವೆ. ಇಂಥ ತಂಪಾದ ವಾಯುವಿನ ಉಷ್ಣತೆ ಇಬ್ಬನಿಬಿಂದುವಿಗಿಂತ ಕಡಿಮೆಯಾಗಿದ್ದರೆ ನೀರಿನ ಆವಿ ಸಾಂದ್ರೀಕರಿಸಿ ಎಲೆ ದಳ ಮತ್ತು ಗರಿಗಳ ಮೇಲೆ ಹನಿ ಹನಿಯಾಗಿ ಮೂಡುತ್ತದೆ. ಆಕಾಶದಲ್ಲಿ ಮೋಡಗಳಿದ್ದರೆ ಅಥವಾ ಮಾರುತ ವೇಗವಾಗಿ ಬೀಸುತ್ತಿದ್ದರೆ ಇಬ್ಬನಿ ಉಂಟಾಗುವುದಿಲ್ಲ. ವಿಕಿರಣತೆಯಿಂದ ಉಂಟಾಗುವ ಉಷ್ಣನಷ್ಟವನ್ನು ಮೋಡಗಳು ತಡೆದು ಭೂಮಿಯ ಮೇಲಣ ಉಷ್ಣತೆಯನ್ನು ಕಾದಿಡುತ್ತವೆ; ಬೀಸುವ ಗಾಳಿ ಉಷ್ಣತೆಯನ್ನು ಎಲ್ಲೂ ಇಬ್ಬನಿ ಬಿಂದುವಿಗಿಂತ ತಗ್ಗಿಗೆ ಇಳಿಯಲು ಬಿಡುವುದಿಲ್ಲ.

ಹಿಂದಿನಕಾಲದ ಜನ ಇಬ್ಬನಿ ಆಕಾಶದಿಂದ ಬೀಳುತ್ತದೆಂದು ತಿಳಿದಿದ್ದರು. ಅರಿಸ್ಟಾಟಲ್ ಕೂಡ (ಮೀಟಿಯರೊಲಾಜಿಕದಲ್ಲಿ ವಿವರಿಸಿದ್ದಾನೆ) ಬೆಳಗಿನ ವೇಳೆಯಲ್ಲಿ ಕಾದು ಆವಿಯಾದ ನೀರು ರಾತ್ರಿ ವೇಳೆಯಲ್ಲಿ ಸಾಂದ್ರೀಕರಿಸಿ ಇಬ್ಬನಿ ಇಲ್ಲವೆ ಮುಂಜಾನೆ ಬೀಳುತ್ತದೆಂದು ನಂಬಿದ್ದ. ಪ್ರಾಯಶಃ ಲೂಯಿಕಾನಸ್ಟಂಟ್ ಪ್ರಿವಾಸ್ಟ್ (1792) ಎಂಬ ವಿಜ್ಞಾನಿಯೇ ಇಬ್ಬನಿಗೂ ವಸ್ತುಗಳ ತೆರೆದ ಹೊರಮೈಗಳ ವಿಸರಣೆಗೂ ಇರುವ ಸಂಬಂಧವನ್ನು ಗುರುತಿಸುವವರಲ್ಲಿ ಮೊದಲಿಗ. ಇಬ್ಬನಿಯ ಸೃಷ್ಟಿಯ ಬಗ್ಗೆ ಆಮೂಲಾಗ್ರವಾಗಿ ಪ್ರಯೋಗಗಳನ್ನು ನಡೆಸಿದವರಲ್ಲಿ ಮೊದಲಿಗೆ ಲಂಡನ್ನಿನ ಸೇಂಟ್ ಥಾಮಸ್ ಆಸ್ಪತ್ರೆಯ ವೈದ್ಯ ಚಾರಲ್ಸ್ ವೆಲ್ಸ್ (1814). ಗಾಳಿ ಮೆಲ್ಲನೆ ಬೀಸುತ್ತಿದ್ದರೆ ಇಬ್ಬನಿಯ ಬೆಳವಣಿಗೆ ತ್ವರಿತಗತಿಯಿಂದ ಆಗುತ್ತದೆಂಬುದನ್ನು ಈತ ಚೆನ್ನಾಗಿ ತೋರಿಸಿದ. ಜಾನ್ ಅಟ್ಕಿನ್ (1885) ಎಂಬ ವಿಜ್ಞಾನಿ ಇಬ್ಬನಿಯಂತೆ ಬೇರಿನ ಒತ್ತಡದಿಂದ ಎಲೆಗಳ ಮೇಲೆ ಒಮ್ಮೊಮ್ಮೆ ನೀರಿನಹನಿಗಳು ಮೂಡುವುದನ್ನು ಗುರುತಿಸಿದ.

ಇಬ್ಬನಿಯ ಬೆಳೆವಣಿಗೆಗೆ ನೀರಿನ ಆವಿಯ ವಿಸರಣವೇ ಕಾರಣ. ವಾಯುಮಂಡಲದ ಮೇಲ್ಭಾಗದಲ್ಲಿ ಅದರ ಒತ್ತಡ ಹೆಚ್ಚಾಗಿದ್ದರೆ ನೀರಿನ ಆವಿ ಅಧೋಮುಖವಾಗಿ ವಿಸರಣವಾಗಿ ಇಬ್ಬನಿಯ ಬೆಳೆವಣಿಗೆಗೆ ಪೂರಕವಾಗುತ್ತದೆ. ಇಲ್ಲವೆ ತೇವವಾಗಿರುವ ನೆಲದ ಉಷ್ಣತೆ ಎಲೆಗಳ ಮೇಲ್ಮೈಯ ಉಷ್ಣತೆಗಿಂತ ಹೆಚ್ಚಾಗಿದ್ದರೆ ನೀರಿನ ಆವಿ ಊರ್ಧ್ವಮುಖವಾಗಿ ವಿಸರಣವಾಗಿ ಇಬ್ಬನಿಯ ಬೆಳೆವಣಿಗೆಗೆ ಪೂರಕವಾಗುತ್ತದೆ. ಅಧೋಮುಖವಾಗಿ ವಿಸರಣವಾದ ನೀರಿನ ಆವಿಯಿಂದ ಬೆಳೆದ ಇಬ್ಬನಿಯನ್ನು ಇಬ್ಬನಿಪಾತ (ಡ್ಯೂಫಾಲ್) ಎಂದೂ ಊರ್ಧ್ವಮುಖವಾಗಿ ವಿಸರಣವಾದ ನೀರಿನ ಆವಿಯಿಂದ ಬೆಳೆದ ಇಬ್ಬನಿಯನ್ನು ಬಟ್ಟಿಇಬ್ಬನಿ (ಡಿಸ್ಟಿಲೇಷನ್) ಎಂದೂ ಕರೆಯುವುದಿದೆ.

ಸಮಶೀತೋಷ್ಣ ಮತ್ತು ಉಷ್ಣವಲಯಗಳ ಹವಾಗುಣ ಇಬ್ಬನಿಯ ಸೃಷ್ಟಿಗೆ ಪ್ರೇರಕವಾಗಿದೆ. ಯಾವುದೇ ಪ್ರದೇಶದಲ್ಲಿ ಬೀಳುವ ಸಾಲಿಯಾನ ಇಬ್ಬನಿಯ ಮೊತ್ತ ಆ ಪ್ರದೇಶದ ಸರಾಸರಿ ಉಷ್ಣತೆ ಮತ್ತು ಗಾಳಿಯ ಆರ್ದ್ರತೆಗಳನ್ನವಲಂಬಿಸಿದೆ. ಚಳಿ ಇಲ್ಲವೆ ನಿರಾರ್ದ್ರತೆ ಬಿಸಿ ಹವಾಗುಣವಿರುವ ಪ್ರದೇಶಗಳಲ್ಲಿ ಸು. 1.3 ಸೆಂಮೀ ಮತ್ತು ಸಾಮಾನ್ಯ ಆರ್ದ್ರತೆ ಇದ್ದು ಬಿಸಿ ಹವಾಗುಣವಿರುವ ಪ್ರದೇಶಗಳಲ್ಲಿ ಸು. 8 ಸೆಂಮೀ ಇಬ್ಬನಿ ಬೀಳುತ್ತದೆ. ಇಸ್ರೇಲಿನಂಥ ಪ್ರದೇಶಗಳಲ್ಲಿ ಇಬ್ಬನಿಯಿಂದಲೇ ಬೇಸಗೆ ಬೆಳೆ ಬೆಳೆಯುತ್ತಾರೆ. ಮರುಭೂಮಿಯ ಮರಗಳು ಬದುಕಿರುವುದೂ ಇಬ್ಬನಿಯಿಂದಲೇ. ಇಬ್ಬನಿಯಿಂದ ಅನುಕೂಲದಂತೆ ಪ್ರತಿಕೂಲವೂ ಇದೆ. ಬಹಳ ಕಡೆ ಇದನ್ನುಂಡು ಬೆಳೆಯುವ ಅಣಬೆ ಮತ್ತು ಕಳೆ ಉಪಯುಕ್ತ ಗಿಡಮರಗಳಿಗೆ ಹಾನಿ ಉಂಟುಮಾಡುತ್ತವೆ.

ಇಬ್ಬನಿಬಿಂದು : ಗಾಳಿ ತಂಪುಗೊಂಡಂತೆ ಸಂತೃಪ್ತ ನೀರಾವಿಯ ಮತ್ತು ನೀರಾವಿಯ ಸಂಮರ್ದಗಳು ಸಮಾನವಾಗಿರುವ ಸ್ಥಿತಿಯನ್ನು ತಲಪುತ್ತವೆ. ಎಂದರೆ ಅಲ್ಲಿಂದ ಮುಂದೆ ಗಾಳಿ ಉಷ್ಣವಿಸರಣೆಯಿಂದ ಲಭ್ಯವಾಗುವ ನೀರಾವಿಯನ್ನು ಸ್ವೀಕರಿಸಲು ಅಸಮರ್ಥವಾಗುವುದು. ಇಂಥ ಅವಧಿಕ ಉಷ್ಣತೆಯ ಹೆಸರು ಇಬ್ಬನಿಬಿಂದು. ಸಮುದ್ರ, ನದಿ ಮತ್ತು ಸರೋವರಗಳಲ್ಲಿ ನೀರು ಸದಾ ಬಾಷ್ಪೀಕರಣಗೊಂಡು (ಇವಾಪರೇಷನ್) ವಾಯುಮಂಡಲವನ್ನು ಸೇರುವುದರಿಂದ ವಾಯು ಸದಾ ನೀರಾವಿಯಿಂದ ಕೂಡಿರುತ್ತದೆ. ಇದರ ಪ್ರಮಾಣ ಬೆಳಗಿನ ವೇಳೆಯ ಸರಾಸರಿ ಉಷ್ಣತೆಯನ್ನೂ ಪರಿಸರದ ಪ್ರಕೃತಿಯ ಸ್ವಭಾವವನ್ನೂ ಅವಲಂಬಿಸಿದೆ.

ರಾತ್ರಿ ವೇಳೆಯಲ್ಲಿ ಎಲೆ, ದಳ ಮತ್ತು ಗರಿಗಳಿಂದ ಉಷ್ಣವಿಸರಣಗೊಂಡು ತತ್ಫಲವಾಗಿ ವಾಯುವಿನ ಉಷ್ಣತೆ ಇಬ್ಬನಿಬಿಂದುವಿಗಿಂತ ಕೆಳಗೆ ಇಳಿದರೆ ಹೆಚ್ಚಾದ ಆವಿ ಸಾಂದ್ರೀಕರಿಸಿ ಇಬ್ಬನಿಯಾಗುತ್ತದೆ. ಉಷ್ಣತೆ ಹೆಪ್ಪುಗಟ್ಟುವ ಬಿಂದುವಿಗಿಂತ (ಫ್ರೀಸಿಂಗ್ ಪಾಯಿಂಟ್) ತಗ್ಗಿನಲ್ಲಿದ್ದರೆ ಇಬ್ಬನಿ ಹೆಪ್ಪುಗಟ್ಟಿ ಬಿಳಿ ಮಂಜು ಆಗಿ ರೂಪಾಂತರಗೊಳ್ಳುತ್ತದೆ.

ಸಾಮಾನ್ಯವಾಗಿ ವಾಯು ನೀರಾವಿಯಿಂದ ಸಂತೃಪ್ತವಾಗಿರುವುದಿಲ್ಲ. ಇರುವ ನೀರಿನ ಆವಿಯಿಂದಲೇ ಅದನ್ನು ಸಂತೃಪ್ತಗೊಳಿಸಬೇಕಾದರೆ ಅದರ ಉಷ್ಣತೆಯನ್ನು ತಗ್ಗಿಸಬೇಕು. ವಾಯುವನ್ನು ಸಂತೃಪ್ತಗೊಳಿಸುವ ನೀರಿನ ಆವಿಯ ಪ್ರಮಾಣ ಉಷ್ಣತೆಯನ್ನು ಅವಲಂಬಿಸಿದೆ.

ಗಾಜಿನ ಲೋಟದಲ್ಲಿರುವ ನೀರಿಗೆ ಮಂಜುಗಡ್ಡೆಯನ್ನು ಹಾಕಿ ಕಲಕಿದರೆ ಸ್ವಲ್ಪ ಕಾಲದಲ್ಲೇ ಲೋಟದ ಹೊರಮೈಮೇಲೆ ಇಬ್ಬನಿ ಮೂಡುತ್ತದೆ. ರೀನೋನ ಆರ್ದ್ರತಾಮಾಪಿಯನ್ನು ಉಪಯೋಗಿಸಿ ಮಾಡುವ ಪ್ರಯೋಗವೂ ಇಂಥದೆ. (ಎಸ್.ಎ.ಎಚ್.)

**ಇಮ್ಯಾನುಯೆಲ್ ಡಿ ಮಾರ್ಟೋನ್ನೆ:** 1873–1955. ಫ್ರೆಂಚ್ ಭೂಗೋಳವಿಜ್ಞಾನಿ. ಈತ 1873ರಲ್ಲಿ ಬ್ರಿಟಾನಿಯದಲ್ಲಿ ಜನಿಸಿದರು. ವೈಡಾಲ್ ಡಿ ಬ್ಲಾಷ್‌ನ ಮಾರ್ಗದರ್ಶನದಲ್ಲಿ ಪದವಿ ಪಡೆದರು. ಈತ ಪ್ರಾರಂಭದಿಂದ ಪ್ರಾಕೃತಿಕ ಭೂಗೋಳಶಾಸ್ತ್ರದಲ್ಲಿ ಆಸಕ್ತಿ ಹೊಂದಿದ್ದರು. ಮಧ್ಯ ಯುರೋಪ್ ಇವರ ಅಧ್ಯಯನದ ವಿಶೇಷ ಕ್ಷೇತ್ರವಾಗಿತ್ತು. ಇವರು ಭೂವಿಜ್ಞಾನ, ಭೂಭೌತವಿಜ್ಞಾನ ಮತ್ತು ಜೀವವಿಜ್ಞಾನಗಳಲ್ಲಿ ತರಬೇತಿ ಪಡೆದರು. ಕಾರ್ಪೆಥಿಯನ್ ಪರ್ವತಗಳ ಪ್ರಾಕೃತಿಕ ಭೂಗೋಳಶಾಸ್ತ್ರದ ಅಧ್ಯಯನ ಮಾಡಿದರು. ಅಲ್ಲದೆ ಆಲ್ಪ್ಸ್ ಪರ್ವತಗಳ ಹಿಮ ಸವೆತದ ಸಮಸ್ಯೆಯ ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದರು. 1904ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಜರುಗಿದ ಎಂಟನೆಯ ಅಂತಾರಾಷ್ಟ್ರೀಯ ಭೌಗೋಳಿಕ ಸಮ್ಮೇಳನದಲ್ಲಿ ವಿಲಿಯಂ ಮೋರಿಸ್ ಡೇವಿಸ್ ಅವರನ್ನು ಭೇಟಿಯಾದರು. ಭೂ ಸ್ವರೂಪ ವಿಜ್ಞಾನ ಕ್ಷೇತ್ರದಲ್ಲಿ ಮಾಡಿದ ಅವರ ಕಾರ್ಯದಿಂದ ಪ್ರಭಾವಿತರಾದರು. ಟ್ರೇಟೆ ಡಿ ಜಿಯಾಗ್ರಫಿ ಪಿಜಿಕ್ ಮತ್ತು ಲಾ ಫ್ರಾನ್ಸ್ ಫಿಜಿಕ್ ಇವರ ಅತ್ಯಂತ ಜನಪ್ರಿಯ ಕೃತಿಗಳು. ಇವರು ಅನೇಕ ಫ್ರೆಂಚ್ ಭೂಗೋಳಶಾಸ್ತ್ರಜ್ಞರಿಗೆ ಪ್ರಾಕೃತಿಕ ಭೂಗೋಳ ಶಾಸ್ತ್ರದ ಕ್ಷೇತ್ರದಲ್ಲಿ ಕಾರ್ಯಮಾಡಲು ಸ್ಫೂರ್ತಿ ನೀಡಿದರು. (ಎಸ್.ಎಸ್.ಎನ್.)

**ಇಯೊಸೀನ್:** ಭೂವಿಜ್ಞಾನದಲ್ಲಿ ಟರ್ಷಿಯರಿ ಯುಗದ ಎರಡನೆಯ ಕಲ್ಪ. 60 ದಶಲಕ್ಷವರ್ಷ ಪ್ರಾಚೀನದಿಂದ 40 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ. ಈ ಗ್ರೀಕ್ ಪದದ ಅರ್ಥ ಪ್ರಾರಂಭದ (ಇಯೊ) ಈಚಿನದು (ಕ್ಯಾಯನೋಸ್); ಎಂದರೆ ವಿಕಾಸಶ್ರೇಣಿಯಲ್ಲಿ ಈಚಿನ ಜೀವಿಗಳ ಪ್ರಾರಂಭಕಾಲವನ್ನು ಇಯೊಸೀನ್ ಪದ ಸೂಚಿಸುತ್ತದೆ.

ಇಯೊಸೀನ್ ಸ್ತೋಮ: ಇಯೊಸೀನ್ ಕಲ್ಪದಲ್ಲಿ ರೂಪುಗೊಂಡ ಶಿಲಾಸ್ತೋಮಗಳಿಗೆ ಈ ಹೆಸರಿದೆ. ಭೂಮಿಯ ಬೇರೆ ಬೇರೆ ಖಂಡಗಳಲ್ಲಿ ಇವನ್ನು ಗುರುತಿಸಲಾಗಿದೆ. (ಡಿ.ಆರ್.)

**ಇರಾಕ್:** ಏಷ್ಯದ ನೈಋತ್ಯ ಭಾಗದಲ್ಲಿರುವ ಸ್ವತಂತ್ರ ಅರಬ್ಬೀ ಗಣರಾಜ್ಯ. $23^0$–$37^0$ ಉ.ಅ. ಮತ್ತು $35^0$–$50^0$ ಪೂ.ರೇ. ನಡುವೆಯಿದೆ. ಇದು ಪ್ರಾಚೀನ ಮೆಸಪೊಟೇಮಿಯ. ಉತ್ತರದಲ್ಲಿ ಟರ್ಕಿ, ಪಶ್ಚಿಮದಲ್ಲಿ ಸಿರಿಯ, ಜೋರ್ಡಾನ್, ದಕ್ಷಿಣದಲ್ಲಿ ಸೌದಿ ಅರೇಬಿಯ, ಕುವೈತ್, ಪರ್ಷಿಯನ್ ಖಾರಿ, ಪೂರ್ವದಲ್ಲಿ ಇರಾನ್ ದೇಶಗಳಿವೆ. ವಿಸ್ತೀರ್ಣ 438,317 ಚ.ಕಿಮೀ. ಜನಸಂಖ್ಯೆ 26,074,906 (2004); ರಾಜಧಾನಿ ಬಾಗ್‌ದಾದ್. ಪರ್ಷಿಯನ್ ಖಾರಿಯ ತೀರದಲ್ಲಿ 40 ಕಿಮೀ ಉದ್ದದ ಕರಾವಳಿಯಿದೆ. ಜನಸಂಖ್ಯೆ 5.6 ಮಿಲಿಯನ್.

ಭೌಗೋಳಿಕವಾಗಿ ಈ ದೇಶವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಉತ್ತರದ ಅಲ್ ಜ಼ಸೀರಿಯ ಪ್ರದೇಶ, ಟೈಗ್ರಿಸ್ ಮತ್ತು ಯೂಫ್ರಟೀಸ್ ಯಮಳ ನದೀಪ್ರದೇಶ ಮತ್ತು ಪಶ್ಚಿಮದ ಮರುಭೂಮಿ. ಜಾಗ್ರೊಸ್ ಪರ್ವತ ಮತ್ತು ಅರೇಬಿಯದ ದಿಣ್ಣೆ ನೆಲದ ಮಧ್ಯ ಈ ನದಿಗಳ ಜಲಾನಯನ ಪ್ರದೇಶವಿದೆ. 1840 ಕಿಮೀ ಉದ್ದವುಳ್ಳ ಟೈಗ್ರಿಸ್ ಅತಿಮುಖ್ಯ ನದಿ. 2720 ಕಿಮೀ ಉದ್ದವಾದ ಯೂಫ್ರಟೀಸ್ ನಿಧಾನವಾಗಿ, ಬಳಸುಗಳಲ್ಲಿ ಹರಿಯುತ್ತಿದ್ದರೂ ಇದರಿಂದ ಪರ್ಷಿಯನ್ ಖಾರಿ ಮತ್ತು ಮೆಡಿಟರೇನಿಯನ್ ಸಮುದ್ರಗಳ ನಡುವೆ ವ್ಯಾಪಾರ ಮಾರ್ಗ ಏರ್ಪಟ್ಟಿದೆ. ಟೈಗ್ರಿಸ್ ಮತ್ತು ಯೂಫ್ರಟೀಸ್ ನದಿಗಳೆರಡೂ ಪ್ರವಾಹ ಕಾಲದಲ್ಲಿ ಮಣ್ಣನ್ನು ದಂಡೆಗೆ ತಂದು ಹಾಕುತ್ತವೆ. ಈ ಎರಡೂ ನದಿಗಳ ಮುಖಜ ಭೂಮಿ ಬಹಳ ಫಲವತ್ತಾಗಿವೆ. ಈ ಯಮಳ ನದಿಪ್ರದೇಶ ಪುರಾತನ ನಾಗರಿಕತೆಯ ತೊಟ್ಟಿಲಾಗಿತ್ತು. ಜಬಲ್ ಇಲ್ಲಿನ ಅತ್ಯಂತ ಎತ್ತರವಾದ ಶಿಖರ.

ಅತಿ ಉತ್ತರದ ಗಡಿಪ್ರದೇಶ ಸಮುದ್ರಮಟ್ಟಕ್ಕಿಂತ 3030 ಮೀ ಎತ್ತರದಲ್ಲಿದೆ. ಉತ್ತರ ಇರಾಕಿನಲ್ಲಿರುವ ಅಡಿಗುಡ್ಡದ ಪ್ರದೇಶ 606 ಮೀ ಎತ್ತರದಲ್ಲಿದೆ. ಉತ್ತರದ ಪರ್ವತ ಪ್ರದೇಶದ ಹುಲ್ಲುಗಾವಲುಗಳು ಅಲೆಮಾರಿಗಳಾದ ಕುರ್ದ್ಸ್ ಜನರ ನೆಲೆ.

ವಾಯುಗುಣ: ಇಲ್ಲಿ ಸಾಮಾನ್ಯವಾಗಿ ಉಷ್ಣವೇ ಇರುತ್ತದೆ. ಇಲ್ಲಿಯದು ಮರಳುಗಾಡಿನ ವಾಯುಗುಣ. ಬಾಗ್ದಾದಿನಲ್ಲಿ ಮಳೆ ವರ್ಷಕ್ಕೆ ಸು. 15 ಸೆಂಮೀ. ಸಾಮಾನ್ಯವಾಗಿ ಚಳಿಗಾಲದಲ್ಲಿ (ನವೆಂಬರಿನಿಂದ ಜೂನ್ ಅವಧಿಯಲ್ಲಿ) ಮಳೆಯಾಗುವುದು. ಜನವರಿ ಅತ್ಯಂತ ಚಳಿಯಾಗುವ ತಿಂಗಳು. ಆಗ ಉಷ್ಣತೆ $10^0$ಸೆ. ಇರುವುದು. ಆಗಸ್ಟ್‌ನಲ್ಲಿ ಸರಾಸರಿ ಉಷ್ಣತೆ $36^0$ಸೆ. ಮಧ್ಯಾಹ್ನದಲ್ಲಿ $45^0$–$50^0$ಸೆ. ಇರುವುದು ಸಾಮಾನ್ಯ. ಈಶಾನ್ಯಭಾಗ ತಂಪಾಗಿದೆ. ಇಲ್ಲಿ ಸ್ವಲ್ಪ ಹೆಚ್ಚು ಮಳೆಯಾಗುವುದು. ಆದರೆ ಪಶ್ಚಿಮದಲ್ಲಿರುವ ಸಿರಿಯನ್ ಮರುಭೂಮಿಯಲ್ಲಿ 3 ಸೆಂಮೀ ಗಳಿಗಿಂತಲೂ ಕಡಿಮೆ ಮಳೆಯಾಗುತ್ತದೆ. ಆರ್ದ್ರತೆ ಪ್ರಮಾಣ ತುಂಬ ಕಡಿಮೆ.

ಟೈಗ್ರಿಸ್–ಯೂಫ್ರಟೀಸ್ ನದಿಗಳ ಪ್ರದೇಶ ಫಲವತ್ತಾದದ್ದು. ವ್ಯವಸಾಯಕ್ಕೆ ನೀರಾವರಿ ಯೋಜನೆ ಅನಿವಾರ್ಯ. ಸಿರಿಯನ್ ಮರುಭೂಮಿ ಪ್ರದೇಶದಲ್ಲಿ ಜನವಸತಿಯಿಲ್ಲ. ಈ ಪ್ರದೇಶದಲ್ಲಿ ವಿರಳವಾಗಿ ಗಿಡಗಂಟಿ ಮುಳ್ಳು ಮತ್ತು ಮರುಭೂಮಿ ಗಿಡಗಳಿವೆ. ನದೀ ತಟದಲ್ಲಿ ಖರ್ಜೂರ ಬೆಳೆಯುತ್ತಾರೆ. ಕಿರುಬ, ತೋಳ, ನರಿ, ಮೊಲ, ಜಿಗರೆ ಮುಖ್ಯ ಪ್ರಾಣಿಗಳು. ರಣಹದ್ದು, ಡೇಗೆ ಮುಂತಾದ ಪಕ್ಷಿಗಳು ಸಾಮಾನ್ಯ.

ಭೂ ಇತಿಹಾಸ: ಪೂರ್ವ, ಪಶ್ಚಿಮ ಮತ್ತು ಉತ್ತರ ಪ್ರಾಂತ್ಯಗಳಲ್ಲಿರುವ ಗುಡ್ಡ ಪ್ರದೇಶಗಳಿಂದ ಸುತ್ತುವರಿದಿರುವ ತಗ್ಗು ಪ್ರದೇಶವೇ ಇರಾಕ್. ಆಗ್ನೇಯ ದಿಕ್ಕಿನತ್ತ ಇದು ಮುಂದುವರಿದು ಪರ್ಷಿಯನ್ ಕೊಲ್ಲಿ ಎನಿಸಿಕೊಳ್ಳುತ್ತದೆ. ಇರಾಕ್ ಅಸ್ಥಿರ ಭೂಭಾಗವಾಗಿದ್ದು ಕೊಂಚಮಟ್ಟಿಗೆ ಭೂ ಕುಸಿತಕ್ಕೂ ಒಳಗಾಗಿದೆ. ಇಲ್ಲಿ ವಯಸ್ಸಿನಲ್ಲಿ ಕಿರಿಯದಾದ ಜಲಜಶಿಲಾಪ್ರಸ್ತರಗಳಿವೆ. ಪಶ್ಚಿಮದತ್ತ ಅತಿ ಪುರಾತನ ಮತ್ತು ಗಡುಸಾದ ಶಿಲೆಗಳಿಂದ ಕೂಡಿದ ಸಿರಿಯ–ಅರೇಬಿಯ ಭೂಪ್ರದೇಶವೂ ಪೂರ್ವ ಮತ್ತು ಉತ್ತರದ ಕಡೆಗೆ ತೀವ್ರ ಮಡಿಕೆ ಬಿದ್ದಿರುವ ಮತ್ತು ಉನ್ನತವಾಗಿರುವ ಝಾಗ್ರೋಸ್ ಮತ್ತು ಅನಟೋಲಿಯನ್ ಪರ್ವತ ಪಂಕ್ತಿಗಳೂ ಇವೆ. ಈ ಪರ್ವತಗಳೂ ಕಿರಿಯ ವಯಸ್ಸಿನ ಶಿಲಾಶ್ರೇಣಿಗಳಿಂದಾದುವು. ಝಾಗ್ರೋಸಿನವು ಬಹು ವಿಸ್ತಾರವಾದ ಮೇಲ್ಮಡಿಕೆಗಳು. ಇವು ಕಡಿದಾದ ಬೆಟ್ಟಗಳೋಪಾದಿಯಲ್ಲಿದ್ದು ವಾಯವ್ಯ–ಆಗ್ನೇಯ ಜಾಡಿನಲ್ಲಿ ಹಬ್ಬಿವೆ. ಅಲ್ಲದೆ ಮಟ್ಟಸವಾದ ನದೀ ಮೆಕ್ಕಲಿನ ಬಯಲುಪ್ರದೇಶದಿಂದ ಧಿಡೀರನೆ ಎದ್ದುನಿಂತು ಗಂಭೀರವಾಗಿ ತೋರುತ್ತವೆ. ಇರಾಕ್–ಇರಾನ್ ಗಡಿ ಈ ಜಾಡನ್ನನುಸರಿಸಿ ಸು. 400 ಕಿಮೀ ಉದ್ದಕ್ಕೂ ಹಬ್ಬಿದೆ. ಇನ್ನೂ ದಕ್ಷಿಣಕ್ಕೆ ಕಡಿದಾದ ಬೆಟ್ಟಗಳಿಂದ ಕೂಡಿದ ಪ್ರದೇಶವಿದೆ. ವಾಯವ್ಯ–ಪಶ್ಚಿಮ ದಿಕ್ಕುಗಳಲ್ಲಿ ನೆಲಭಾಗ ಕ್ರಮೇಣ ಸಮುದ್ರಮಟ್ಟದಿಂದ ಎತ್ತರವಾಗುತ್ತ ಸಿರಿಯ–ಅರೇಬಿಯ ಪ್ರಸ್ಥಭೂಮಿಯಲ್ಲಿ ಪರ್ಯವಸಾನಗೊಳ್ಳುತ್ತದೆ. ಇಲ್ಲಿ ಮುಖ್ಯವಾಗಿ ಆರ್ಕೀಯನ್ (ಆರ್ಷೇಯ) ಯುಗದ ಗ್ರಾನೈಟುಗಳಿವೆ. ಇವುಗಳ ಮೇಲೆ ಜುರಾಸಿಕ್, ಕ್ರಿಟೇಷಸ್, ಇಯೊಸೀನ್ ಮತ್ತು ಮಯೊಸೀನ್ ಯುಗಗಳ ಜಲಜ ಶಿಲಾಪ್ರಸ್ತರಗಳು ನಿಕ್ಷೇಪಗೊಂಡಿವೆ. ಈ ಪ್ರಸ್ತರಗಳು ಮಟ್ಟಸವಾಗಿರದೆ ಕೊಂಚಮಟ್ಟಿಗೆ ವಾಲಿವೆ. ಅನೇಕಕಡೆ ಭೂಸವೆತಕ್ಕೊಳಗಾಗಿ ಸಣ್ಣಪುಟ್ಟ ವೈಲಕ್ಷಣ್ಯಗಳು ಮೈದೋರಿವೆ. ಯೂಫ್ರೆಟೀಸ್ ಕಣಿವೆಯ ಪಶ್ಚಿಮದ ಅಂಚಿನಲ್ಲಿ ಎದ್ದು ಕಾಣುವ ಕಡಿದಾದ ಬೆಟ್ಟವಿದೆ. ದೇಶ ಭಾಷೆಯಲ್ಲಿ ಇದಕ್ಕೆ ಇರಾಕ್ ಎಂದು ಹೆಸರು. ಬಹುಶ: ಈ ಹೆಸರೇ ಇಡೀ ದೇಶಕ್ಕೆ ಅನ್ವಯವಾಗಿದೆ. ವಾಯವ್ಯ ದಿಕ್ಕಿನಲ್ಲಿರುವ ಶಿಲಾ ಪ್ರಸ್ತರಗಳಲ್ಲಿ ಅನೇಕ ಸಣ್ಣಪುಟ್ಟ ಮಡಿಕೆಗಳಿದ್ದು ಅವು ಬಹುಮಟ್ಟಿಗೆ ಪೂರ್ವ–ಪಶ್ಚಿಮ ಜಾಡಿನಲ್ಲಿ ಬೆಟ್ಟದ ಸಾಲುಗಳಂತೆ ತೋರಿಬರುತ್ತವೆ. ಈ ಸಾಲುಗಳಲ್ಲಿ ಮುಖ್ಯವಾದುದು ಮೊಸುಲ್ ಬಳಿ ಇರುವ ಜಿಬಲ್ ಸಿಂಜಾರ್.

ಆರ್ಥಿಕ ವ್ಯವಸ್ಥೆ: ಇರಾಕ್ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ. ಕೃಷಿ ಈ ರಾಷ್ಟ್ರದ ಪ್ರಮುಖ ಆರ್ಥಿಕ ಚಟುವಟಿಕೆ. ತೈಲ ಉತ್ಪಾದನೆ ಪ್ರಮುಖವಾಗಿದ್ದರೂ ಕೃಷಿಯ ಮೇಲೆ ಅವಲಂಬಿತರಾಗಿರುವವರ ಸಂಖ್ಯೆಯೇ ಅಧಿಕ. ಕೈಗಾರಿಕೆ ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯ ಪಡೆಯುತ್ತಿದೆ.

ಕೃಷಿ: ಇರಾಕಿನ ಕೃಷಿ ಪ್ರದೇಶವನ್ನು 2 ಭಾಗಗಳಾಗಿ ವಿಂಗಡಿಸಬಹುದು. ಒಂದು, ಮಳೆಯ ಆಧಾರದ ಮೇಲೆ ಬೆಳೆ ತೆಗೆಯುವ ಪ್ರದೇಶ. ಎರಡು, ನೀರಾವರಿಯಿಂದ ಸಾಗುವಳಿಯಾಗುವ ಪ್ರದೇಶ. ಮಳೆಯ ಆಧಾರದಿಂದ ಬೆಳೆ ತೆಗೆಯುವ ಪ್ರದೇಶಗಳ ಪ್ರಮುಖ ಬೆಳೆಗಳೆಂದರೆ ಬಾರ್ಲಿ, ಗೋದಿ, ಹೊಗೆಸೊಪ್ಪು, ಅಂಜೂರ ಮತ್ತು ಬತ್ತ. ನೀರಾವರಿ ಅವಶ್ಯವಿರುವ ಪ್ರದೇಶಗಳಲ್ಲಿ ಬೆಳೆಯಲಾಗುವ ಪ್ರಮುಖ ಬೆಳೆಗಳೆಂದರೆ, ಬಾರ್ಲಿ, ಅಂಜೂರ ಮತ್ತು ಬತ್ತ. ಬಾರ್ಲಿ ಇರಾನಿನ ಅತ್ಯಂತ ಪ್ರಮುಖ ಬೆಳೆ. ಲೆಂಟಿಲ್ಸ್ (ಚನ್ನಂಗಿ ಮೊದಲಾದ ಜಾತಿಯ ಬೆಳೆಗಳು), ನಾರಗಸೆ (ಲಿನ್ಸೀಡ್)–ಇವು ಚಳಿಗಾಲದ ಪ್ರಮುಖ ಬೆಳೆಗಳು. ಸಾಮಾನ್ಯವಾಗಿ ಬಾರ್ಲಿಯನ್ನು ಅಧಿಕ ಪ್ರಮಾಣದಲ್ಲಿ ಬೆಳೆದು ರಫ್ತು ಮಾಡುತ್ತಾರೆ. ಒಮ್ಮೊಮ್ಮೆ ಮಳೆ ಕಡಿಮೆಯಾದಾಗ ರಫ್ತು ಅಸಾಧ್ಯವಾಗುತ್ತದೆ. ಹೊಗೆಸೊಪ್ಪು, ಬತ್ತ, ಎಳ್ಳು ಬೇಸಗೆಯ ಬೆಳೆಗಳು. ಮರದ ಬೆಳೆಗಳಲ್ಲಿ ಅಂಜೂರ ಅತ್ಯಂತ ಪ್ರಮುಖವಾದುದು. ಇರಾಕ್ ಅತ್ಯಂತ ಹೆಚ್ಚು ಅಂಜೂರ ಬೆಳೆಯುವ ರಾಷ್ಟ್ರವೆನಿಸಿಕೊಂಡಿದೆ; ಸೋವಿಯತ್ ಒಕ್ಕೂಟಕ್ಕೇ ಮೀಸಲಾಗಿದ್ದ ಪ್ರಥಮ ಸ್ಥಾನವನ್ನು ಇದು ಅನೇಕ ಸಾರಿ ಪಡೆದುಕೊಂಡಿದೆ. ಉತ್ಪಾದನೆಯ 2/3 ರಷ್ಟು ಅಂಜೂರವನ್ನು ರಫ್ತು ಮಾಡಲಾಗುತ್ತಿದೆ. ತೈಲವನ್ನು ಬಿಟ್ಟರೆ, ವಿದೇಶೀ ವಿನಿಮಯದ ಗಳಿಕೆಯಲ್ಲಿ ಅಂಜೂರಕ್ಕೆ ಪ್ರಥಮ ಸ್ಥಾನ.

ಖನಿಜ: ತೈಲವೊಂದನ್ನು ಬಿಟ್ಟರೆ ಇರಾಕಿನಲ್ಲಿ ಉಳಿದ ಯಾವ ಖನಿಜ ಸಂಪತ್ತೂ ಹೆಚ್ಚಿನ ಪ್ರಮಾಣದಲ್ಲಿಲ್ಲ. ಉತ್ತರದಲ್ಲಿ ತೈಲ ನಿಕ್ಷೇಪವಿದೆ. ಈಶಾನ್ಯದಲ್ಲಿ ಚಿನ್ನ, ಕಬ್ಬಿಣ, ಪ್ಲಾಟಿನಂ, ಸತು ದೊರೆತಿವೆ. ಮಾಸಲು ಹಳದಿಬಣ್ಣದ ಕಲ್ಲಿದ್ದಲು ಆಗ್ನೇಯದಲ್ಲಿ ದೊರೆಯುತ್ತದೆ. ಜಿಪ್ಸಂ ಮತ್ತು ಲವಣ ಎಲ್ಲೆಡೆ ದೊರೆಯುತ್ತವೆ.

ಕೈಗಾರಿಕೆ: ಇರಾಕಿನಲ್ಲಿ ಬೃಹತ್ ಕೈಗಾರಿಕೆಗಳು ಕಡಿಮೆ. ಬಾಗ್ದಾದಿನಲ್ಲಿ ಮಾತ್ರ ವಿದ್ಯುತ್, ಇಟ್ಟಿಗೆ ಮತ್ತು ಸಿಮೆಂಟಿನ ಬೃಹತ್ ಕೈಗಾರಿಕೆಗಳಿವೆ. ಇದರ ಜೊತೆಗೆ ಅಸಂಖ್ಯಾತ ಸಣ್ಣ ಉದ್ಯಮಗಳಿವೆ. ಅಂಜೂರ ಹದಮಾಡಿ ರಫ್ತು ಮಾಡುವುದು, ಆಹಾರವಸ್ತು ಸಂಶೋಧನಾಲಯ, ನೇಯ್ಗೆ, ಸಿಗರೇಟ್–ಇವು ಮುಖ್ಯ.

1959ರಲ್ಲಿ ಸೋಮಿಯತ್ ಸಹಕಾರದೊಂದಿಗೆ 11 ಕಾರ್ಖಾನೆಗಳ ನಿರ್ಮಾಣ ಆರಂಭವಾಯಿತು. ಉಕ್ಕಿನ ಕಾರ್ಖಾನೆ (ಬಾಗ್ದಾದ್), ವಿದ್ಯುತ್ ಸಲಕರಣೆಗಳು (ಬಾಗ್ದಾದ್), ಔಷಧ ತಯಾರಿಕೆ (ಸಮಾರ) ಮತ್ತು ವ್ಯವಸಾಯೋಪಕರಣ (ಮುಸಾಯಿಬ್)–ಇವು ಮುಖ್ಯವಾದುವು. 1961ರ ಕೈಗಾರಿಕಾಭಿವೃದ್ಧಿ ನೀತಿಯಿಂದ ಹೊಸ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರಕುತ್ತಿದೆ. 1949ರಲ್ಲಿ ಸ್ಥಾಪಿತವಾದ ಕೈಗಾರಿಕಾ ಬ್ಯಾಂಕು ಕೈಗಾರಿಕೆಯ ಅಭಿವೃದ್ಧಿಗೆ ಬಹಳ ಮಟ್ಟಿಗೆ ಸಹಾಯಕ.

ಆರ್ಥಿಕ ಯೋಜನೆ: 1959ರಲ್ಲಿ ನಾಲ್ಕು ವರ್ಷಗಳ ಅವಧಿಯ ಒಂದು ತಾತ್ಕಾಲಿಕ ಯೋಜನೆ ಇರಾಕಿನಲ್ಲಿ ಜಾರಿಗೆ ಬಂತು. 1961 ರಲ್ಲಿ ವಿಸ್ತೃತವಾದ ಪಂಚವಾರ್ಷಿಕ ಯೋಜನೆಯಲ್ಲಿ ಇದು ಲೀನಗೊಂಡಿತು. ಈ ಯೋಜನೆಯ ಒಟ್ಟು ವೆಚ್ಚ 56.634 ಕೋಟಿ ಇರಾಕಿ ದೀನಾರ. ಈ ಯೋಜನೆಯಲ್ಲಿ ಕೈಗಾರಿಕೆಗೆ ಸಾಕಷ್ಟು ಪ್ರಾಧಾನ್ಯ ದೊರೆತಿದೆ. ಆದರೆ ಯೋಜನೆಯ ವಾಸ್ತವ ವೆಚ್ಚ, ಉದ್ದೇಶಿಸಿದ್ದಕ್ಕಿಂತ ಕಡಿಮೆಯಿತ್ತು. ಯೋಜನೆಗೆ ಹಣವನ್ನು ತೈಲ ಉತ್ಪಾದನೆಯ ಲಾಭದಿಂದಲೂ ಸೋವಿಯತ್ ಒಕ್ಕೂಟದ ನೆರವಿನಿಂದಲೂ ಸರ್ಕಾರದ ಉದ್ಯಮಗಳ ಲಾಭದಿಂದಲೂ ಒದಗಿಸಲಾಯಿತು. (ಬಿ.ವಿ.ಜಿ.)

**ಇರಾನ್ :** ನೈಋತ್ಯ ಏಷ್ಯದ ಕೇಂದ್ರದಲ್ಲಿರುವ, ಒಂದು ರಾಷ್ಟ್ರ. ಇರಾನ್ ಎಂದರೆ ಆರ್ಯನ್ನರ ಭೂಪ್ರದೇಶ ಎಂದರ್ಥ. ಆರಿಯನ್ ಎಂಬ ಪದ ಕ್ರಮೇಣ ಅಪಭ್ರಂಶಗೊಂಡು ಇರಿಯನ್ ಹಾಗೂ ಇರಾನ್ ಎಂದು ಕರೆಯಲ್ಪಟ್ಟಿದೆ. ಇದನ್ನು ಪರ್ಷಿಯವೆಂದೂ ಕರೆಯಲಾಗಿದೆ. ಮಧ್ಯ ಏಷ್ಯದಿಂದ ಪ್ರ.ಶ.ಪೂ. 3000 ಹಾಗೂ ಪ್ರ.ಶ.ಪೂ. 1500ರಲ್ಲಿ ವಲಸೆ ಬಂದ ಆರ್ಯನ್ನರ ಎರಡು ಸಮೂಹಗಳು ಕ್ರಮವಾಗಿ ಇಂದಿನ ವಾಯವ್ಯ ಹಾಗೂ ಇರಾನಿನ ದಕ್ಷಿಣದಲ್ಲಿ ನೆಲೆಸಿದವು. ಗ್ರೀಕರು ಇವರನ್ನು ಕ್ರಮವಾಗಿ ಮೀಡರು ಮತ್ತು ಪರ್ಸಿನ್ ಎಂದು ಕರೆದರು. ಮಧ್ಯ ಯುಗದಲ್ಲಿ ಇದನ್ನು ಮೀಡಿಯ ಎಂದು ಕರೆಯಲಾಗುತ್ತಿತ್ತು. ಪರ್ಸಿನ್ ಎಂಬ ಹೆಸರಿನಿಂದಲೇ ಪರ್ಷಿಯ ಎಂಬ ಹೆಸರು ಬಳಕೆಗೆ ಬಂದಿದೆ.

ಸ್ಥಾನ: ಇರಾನ್ ದಕ್ಷಿಣದಲ್ಲಿ ಪರ್ಷಿಯನ್ ಖಾರಿಯ ಮಕ್‌ರಾನ್ ತೀರದಿಂದ ಉತ್ತರದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೆ ಹಾಗೂ ವಾಯವ್ಯದಲ್ಲಿ ಟರ್ಕಿ ಇರಾಕಿನಿಂದ ಆಗ್ನೇಯದಲ್ಲಿ ಪಾಕಿಸ್ತಾನದ ನಡುವೆ ನೆಲೆಸಿದೆ. ಇದು ಸು. $25^0$ ಉ. ದಿಂದ $40^0$ ಉತ್ತರ ಅ. ವರೆಗೆ ವಿಸ್ತರಿಸಿದೆ ಹಾಗೂ $43^0 30'$ ಪೂ. ರೇ.ದಿಂದ $63^0 30'$ ಪೂ.ರೇ.ದವರೆಗೆ ಹರಡಿದೆ.

ಪಶ್ಚಿಮ ಏಷ್ಯ ಪ್ರದೇಶದ ಅತಿ ವಿಸ್ತಾರವಾದ ರಾಷ್ಟ್ರಗಳಲ್ಲಿ ಇರಾನ್ ಸಹ ಒಂದು. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ 16,48,000 ಚ.ಕಿಮೀ. ಇರಾನ್ ಭಾರತದ ಸುಮಾರು ಅರ್ಧದಷ್ಟು ವಿಸ್ತೀರ್ಣವನ್ನು ಹೊಂದಿದೆ. ಇದು ಈಶಾನ್ಯದ ಸರ್‌ಖಾನ್ ನಿಂದ ನೈಋತ್ಯದ ಶಟಲ್–ಅಲ್–ಅರಬ್‌ವರೆಗೆ 1370 ಕಿಮೀ ಉದ್ದವಾಗಿದೆ. ಇದೇ ರೀತಿಯಲ್ಲಿ ಪೂರ್ವದ ಗ್ವಾಟರ್‌ನಿಂದ ಪಶ್ಚಿಮದ ಮೌಂಟ್ ಅರಾರತ್‌ವರೆಗೆ 2198 ಕಿಮೀ ಅಗಲವಾಗಿದೆ. ಇರಾನ್ ಉತ್ತರದಲ್ಲಿ ಕ್ಯಾಸ್ಪಿಯನ್ ಸಮುದ್ರ ಹಾಗೂ ದಕ್ಷಿಣದಲ್ಲಿ ಪರ್ಷಿಯನ್‌ಖಾರಿ ಹಾಗೂ ಓಮನ್ ಕೊಲ್ಲಿಗಳ ತೀರವನ್ನು ಒಳಗೊಂಡಿದೆ. ಇದರ ತೀರಪ್ರದೇಶದ ಒಟ್ಟು ಉದ್ದ 2655 ಕಿಮೀ. ಇರಾನ್ ದಕ್ಷಿಣ ಹಾಗೂ ಉತ್ತರದಲ್ಲಿ ಮಾತ್ರ ತೀರ ಪ್ರದೇಶವನ್ನು ಹೊಂದಿದ್ದು, ಉಳಿದ ಕಡೆಗಳಲ್ಲಿ ಭೂಗಡಿಗಳನ್ನು ಹೊಂದಿದೆ. ಇದು ಪೂರ್ವದಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ, ಈಶಾನ್ಯದಲ್ಲಿ ತುರ್ಕ್‌ಮೆನಿಸ್ತಾನ, ಉತ್ತರದಲ್ಲಿ ಆರ್ಮೇನಿಯ ಮತ್ತು ಅಜರ್‌ಬೈಜಾನ್, ವಾಯವ್ಯದಲ್ಲಿ ಟರ್ಕಿ, ಪಶ್ಚಿಮದಲ್ಲಿ ಇರಾಕ್ ದೇಶಗಳೊಡನೆ ಭೂಗಡಿರೇಖೆಯನ್ನು ಹೊಂದಿದೆ. ದಕ್ಷಿಣದಲ್ಲಿ ಹಾರ್ಮುಜ್ ಜಲಸಂಧಿ ಓಮನ್ ಮತ್ತು ಇರಾನ್‌ಗಳನ್ನು ಬೇರ್ಪಡಿಸಿದೆ. ಈ ಜಲಸಂಧಿಯಲ್ಲಿರುವ ಓಷ್ಮ್ ದ್ವೀಪ ಇರಾನ್‌ನ ಅತಿದೊಡ್ಡ ದ್ವೀಪವಾಗಿದೆ. ಅಲ್ಲದೆ ಪರ್ಷಿಯನ್ ಕೊಲ್ಲಿಯಲ್ಲಿರುವ ಖಾರ್ಗ್ ದ್ವೀಪ ಇರಾನಿನ ಮುಖ್ಯ ತೈಲರಫ್ತಿನ ಕೇಂದ್ರವಾಗಿದೆ.




ಭೂಸ್ವರೂಪಗಳು: ಇರಾನ್ ವಿಸ್ತಾರವಾದ ಅಂತರ್ ಪರ್ವತ ಪ್ರಸ್ಥಭೂಮಿಯಾಗಿದೆ. ಇದು ಸುತ್ತಲೂ ಪರ್ವತಗಳು ಹಾಗೂ ಉನ್ನತ ಭೂಭಾಗಗಳಿಂದ ಸುತ್ತುವರಿಯಲ್ಪಟ್ಟಿದೆ. ಆದರೆ ಕೇಂದ್ರಭಾಗ ಸಾಕಷ್ಟು ತಗ್ಗಾಗಿದೆ. ಈ ಪ್ರಸ್ಥಭೂಮಿ ಉತ್ತರದಲ್ಲಿ ಕ್ಯಾಸ್ಪಿಯನ್ ಸಮುದ್ರ ಹಾಗೂ ದಕ್ಷಿಣದಲ್ಲಿ ಪರ್ಷಿಯನ್ ಖಾರಿಗಳ ನಡುವೆ ನೆಲೆಸಿದೆ. ಕ್ಯಾಸ್ಪಿಯನ್ ಸಮುದ್ರ ಮತ್ತು ಕಪ್ಪು ಸಮುದ್ರಗಳು ಭೂ ಇತಿಹಾಸದ ಪುರಾತನ ಕಾಲದಲ್ಲಿ ಮೆಡಿಟರೇನಿಯನ್ ಸಮುದ್ರದಲ್ಲಿ ವಿಲೀನವಾಗಿದ್ದು, ಇದನ್ನೇ ವೆಗೆನರ್ ತೆಥಿಸ್ ಸಮುದ್ರವೆಂದು ಕರೆದಿರುವನು. ತೆಥಿಸ್ ಸಮುದ್ರದ ಭಾಗ ಮೇಲೆತ್ತಲ್ಪಟ್ಟು ಉನ್ನತವಾದ ಆಲ್ಪ್ಸ್, ಕಾಕಸಸ್, ಎಲ್‌ಬ್ರೂಜ್, ಹಿಂದೂಕುಷ್ ಮತ್ತು ಹಿಮಾಲಯ ಪರ್ವತಗಳು ನಿರ್ಮಿತವಾಗಿವೆ. ಇದರ ಪರಿಣಾಮವಾಗಿ ಕೆಂಪು ಸಮುದ್ರ, ಕ್ಯಾಸ್ಪಿಯನ್ ಸಮುದ್ರ ಹಾಗೂ ಪರ್ಷಿಯನ್ ಖಾರಿಗಳ ನಡುವೆ ಭೂಪ್ರದೇಶಗಳು ನಿರ್ಮಿತಗೊಂಡು, ಅವುಗಳು ಪ್ರತ್ಯೇಕಗೊಂಡಿವೆಯೆಂದು ಭೂ ಇತಿಹಾಸಕಾರರ ಅಭಿಪ್ರಾಯ. ಕ್ಯಾಸ್ಪಿಯನ್ ಸಮುದ್ರ ಹಾಗೂ ಪರ್ಷಿಯನ್ ಖಾರಿಗಳು ಹಿಂದೆ ಒಂದುಗೂಡಿದ್ದವೆಂದು ನಿರೂಪಿಸುವ ಹಲವಾರು ನಿದರ್ಶನಗಳಿವೆ.

ಇರಾನ್ ಭೂ ಇತಿಹಾಸದ ವೈವಿಧ್ಯತೆಯಿಂದ ಹಾಗೂ ವಿವಿಧ ಬಗೆಯ ಭೂಸ್ವರೂಪಗಳಿಂದ ಕೂಡಿದೆ. ಸಮುದ್ರಮಟ್ಟದಿಂದ 27 ಮೀ ತಗ್ಗಾಗಿರುವ ಕ್ಯಾಸ್ಪಿಯನ್ ಸಮುದ್ರತೀರದಿಂದ ಎಲ್‌ಬ್ರೂಜ್ ಪರ್ವತಗಳಲ್ಲಿರುವ ಮೌಂಟ್ ರಾಮವಂಡ್ (5604

ಮೀ) ಗಳವರೆಗೆ ಎತ್ತರದ ವ್ಯಾಪ್ತಿಯನ್ನು ಹೊಂದಿರುವ ಭೂಸ್ವರೂಪಗಳನ್ನು ಒಳಗೊಂಡಿದೆ. ಇರಾನ್ ಉತ್ತರದಿಂದ ದಕ್ಷಿಣದ ಕಡೆಗೆ ಬಂದಂತೆ ಐದು ಭೂಸ್ವರೂಪ ವಿಭಾಗಗಳಾಗಿ ವಿಂಗಡಿಸಬಹುದು.

ಕ್ಯಾಸ್ಪಿಯನ್ ತೀರಪ್ರದೇಶ, ಎಲ್‌ಬ್ರೂಜ್ ಪರ್ವತ ಪ್ರದೇಶ, ದಕ್ಷಿಣದ ಜಾಗ್ರೋಸ್ ಪರ್ವತ ಪ್ರದೇಶ, ಕೇಂದ್ರದ ಪ್ರಸ್ಥಭೂಮಿ ಪ್ರದೇಶ, ದಕ್ಷಿಣದ ಕರಾವಳಿ ಮೈದಾನ.

ವಾಯುಗುಣ: ಪಶ್ಚಿಮದಲ್ಲಿ ಅರೇಬಿಯ ಮತ್ತು ಪೂರ್ವದಲ್ಲಿ ಥಾರ್‌ಮರುಭೂಮಿಗಳ ನಡುವೆ ಇರುವ ಇರಾನ್, ಬೇಸಗೆಯಲ್ಲಿ ಅತಿಹೆಚ್ಚು ಉಷ್ಣಾಂಶವನ್ನು ಹೊಂದಿದೆ. ಬೇಸಗೆಯ ಉಷ್ಣಾಂಶ ಮರುಭೂಮಿಯ ಕೆಲವು ಕಡೆ 45$^0$ಸೆ. ಗಿಂತ ಅಧಿಕವಾಗಿದ್ದು, ಪ್ರಪಂಚದ ಅತಿಹೆಚ್ಚು ಉಷ್ಣಾಂಶವನ್ನು ಹೊಂದಿರುವ ಪ್ರದೇಶಗಳಲ್ಲಿ ಒಂದಾಗಿದೆ. ಚಳಿಗಾಲದಲ್ಲಿ ಉಷ್ಣಾಂಶದ ಹಂಚಿಕೆ ಬೇಸಗೆಯ ಸ್ಥಿತಿಗಿಂತ ವಿರುದ್ಧವಾಗಿರುವುದು. ವಾಯವ್ಯದ ಜಾಗ್ರೋಸ್ ಪರ್ವತಗಳಲ್ಲಿ –30$^0$ಸೆ. ಅತಿಕಡಿಮೆ ಉಷ್ಣಾಂಶ ದಾಖಲಿಸಲ್ಪಡುವುದು. ಅಲ್ಲದೆ ಖಂಡಾಂತರತೆಯಿಂದಾಗಿ ತಗ್ಗು ವಲಯದ ಪ್ರಸ್ಥಭೂಮಿಯಲ್ಲಿಯೂ –20$^0$ಸೆ. ಕಡಿಮೆ ಉಷ್ಣಾಂಶವನ್ನು ಹೊಂದಿದೆ.

ಇರಾನಿನ ಕೇಂದ್ರಭಾಗದ (ಅಂತರ್ ಪರ್ವತ ಪ್ರಸ್ಥಭೂಮಿ), ಸುತ್ತಲೂ ಪರ್ವತಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ, ಜಲಾಂಶವನ್ನು ಹೊಂದಿರುವ ಸಾಗರಿಕ ಮಾರುತಗಳು ಈ ವಲಯವನ್ನು ಪ್ರವೇಶಿಸುವುದಿಲ್ಲ. ಇದರಿಂದ ಈ ಪ್ರದೇಶ ಅತಿಹೆಚ್ಚು ಶುಷ್ಕ ವಾಯುಗುಣವನ್ನು ಹೊಂದಿದೆ. ಎಲ್‌ಬ್ರೂಜ್ ಪರ್ವತಗಳ ಒಳನಾಡಿನ ಕಡೆಯ ಇಳಿಜಾರಿನಲ್ಲಿರುವ ತೆಹರಾನ್ 23 ಸೆಂಮೀ ಸರಾಸರಿ ವಾರ್ಷಿಕ ಮಳೆಯನ್ನು ಪಡೆಯುವುದು. ದಸ್ತ–ಎ–ಕವಿರ್ ಮತ್ತು ದಸ್ತ್ ಎ ಲೂಟ್ ಮರುಭೂಮಿಗಳಲ್ಲಿ ಸರಾಸರಿ ವಾರ್ಷಿಕ ಮಳೆಯು 5 ಸೆಂಮೀ ಮಾತ್ರ. ಇದಕ್ಕೆ ಬದಲಾಗಿ ಕ್ಯಾಸ್ಪಿಯನ್ ಸಮುದ್ರದ ತೀರ 100 ಸೆಂಮೀ ಸರಾಸರಿ ಮಳೆಯನ್ನು ಪಡೆಯುವುದು. ಚಳಿಗಾಲದಲ್ಲಿ ಪರ್ವತವಲಯಗಳಲ್ಲಿ ಅಪಾರ ಹಿಮವೃಷ್ಟಿ ಸಾಮಾನ್ಯ.

ಪಶ್ಚಿಮ ಏಷ್ಯದ ರಾಷ್ಟ್ರಗಳಲ್ಲಿ ಟರ್ಕಿಯ ಅನಂತರ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಎರಡನೆಯ ರಾಷ್ಟ್ರ. ಜನಸಂಖ್ಯೆ 6,80,17,900.

ಇರಾಕ್‌ನೊಡನೆ ನಡೆದ ದೀರ್ಘ ಯುದ್ಧದ ಅವಧಿಯಲ್ಲಿ ಜನಸಂಖ್ಯೆಯ ಬೆಳವಣಿಗೆ ಕುಂಠಿತಗೊಂಡಿತು. ಇಂದು ಅದರ ಬೆಳವಣಿಗೆಯು ಇಸ್ಲಾಂ ಧರ್ಮದ ಆಚರಣೆಗಳಿಗನುಗುಣವಾಗಿ ತೀವ್ರವಾಗಿ ಅಧಿಕಗೊಳ್ಳುತ್ತಿದೆ.

ಧರ್ಮಗಳು: ಇರಾನ್ ಇಸ್ಲಾಮಿಕ್ ಗಣರಾಜ್ಯದ ಶೇ. 98ರಷ್ಟು ಜನ ಇಸ್ಲಾಂ ಧರ್ಮಕ್ಕೆ ಸೇರಿದವರು. ಇವರಲ್ಲಿ ಶೇ. 90ರಷ್ಟು ಜನ ಶಿಯಾ ಪಂಥಕ್ಕೆ ಸೇರಿರುವರು. ಶಿಯಾ ಪಂಥ ರಾಷ್ಟ್ರೀಯ ಧಾರ್ಮಿಕ ಪಂಥವಾಗಿದೆ. ಇರಾನ್ ದೇಶದಲ್ಲಿ ಸು. 3.5 ಲಕ್ಷ ಬಹಾಯಿ ಧರ್ಮೀಯರು ಕಂಡುಬರುವರು. ಇವರು ಇರಾನಿನ ಅತಿಮುಖ್ಯ ಅಲ್ಪಸಂಖ್ಯಾತರು. ಕ್ರಿಶ್ಚಿಯನ್ನರು, ಯಹೂದಿಗಳು, ಪಾರ್ಸಿಗಳನ್ನು ಇರಾನ್ ಒಳಗೊಂಡಿದೆ. ಇಂದಿನ ಇಸ್ಲಾಮಿಕ್ ಗಣರಾಜ್ಯ ಇತರ ಧರ್ಮೀಯರ ಧಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸಿದೆ.

ನಗರಗಳು: ಇರಾನ್ ಹೊಂದಿರುವ ಭೌಗೋಳಿಕ ವೈಪರೀತ್ಯಗಳಿಂದಾಗಿ ನಗರಗಳು ಹೆಚ್ಚು ಅಭಿವೃದ್ಧಿ ಹೊಂದಿವೆ. ವ್ಯವಸಾಯ ಹಾಗೂ ಇತರ ಪ್ರಾಥಮಿಕ ಉದ್ಯೋಗಗಳು ಅಭಿವೃದ್ಧಿಹೊಂದಲು ಇರಾನ್ ಭೌಗೋಳಿಕ ಅನುಕೂಲತೆಗಳನ್ನು ಹೊಂದಿಲ್ಲ. ಮರುಭೂಮಿ ಹಾಗೂ ಪರ್ವತಗಳಿಂದ ಕೂಡಿರುವ ಇರಾನಿನ ಆರ್ಥಿಕಾಭಿವೃದ್ಧಿಯೊಡನೆ ಗ್ರಾಮೀಣ ಪ್ರದೇಶದಿಂದ ವಲಸೆಯೂ ಸಹ ಹೆಚ್ಚಾಗಿದೆ. ಇದರಿಂದ ನಗರಗಳು ತ್ವರಿತವಾಗಿ ಅಭಿವೃದ್ಧಿ ಹೊಂದುತ್ತಿವೆ. ಶೇ. 61 ರಷ್ಟು ಜನರು ಇರಾನಿನ 24 ನಗರಗಳಲ್ಲಿ ಕೇಂದ್ರೀಕೃತಗೊಂಡಿರುವರು. ರಾಜಧಾನಿ ಟೆಹರಾನ್. ಜನಸಂಖ್ಯೆ 73,80,000 (2002).

ಇರಾನಿನ ಆರ್ಥಿಕತೆಯ ಮುಖ್ಯ ಕ್ಷೇತ್ರಗಳು ವ್ಯವಸಾಯ, ಗಣಿಗಾರಿಕೆ, ಕೈಗಾರಿಕೆ ಹಾಗೂ ಇತರ ಸೇವಾಕ್ಷೇತ್ರಗಳು. ವ್ಯವಸಾಯದಲ್ಲಿ ಒಟ್ಟು ಕೆಲಸಗಾರರ ಶೇ. 36ರಷ್ಟು ಜನ ನಿರತವಾಗಿದ್ದು, ಇದು ಸಮಗ್ರ ರಾಷ್ಟ್ರೀಯ ಆದಾಯದ ಶೇ. 12 ರಷ್ಟನ್ನು ಪೂರೈಸುತ್ತಿದೆ. ಗಣಿಗಾರಿಕೆ ಕೇವಲ ಶೇ. 1ರಷ್ಟು ಕಾರ್ಮಿಕರನ್ನು ಒಳಗೊಂಡಿದ್ದರೂ ಇದು ಸಮಗ್ರ ರಾಷ್ಟ್ರೀಯ ಆದಾಯದ ಶೇ. 25ರಷ್ಟನ್ನು ನೀಡುತ್ತಿದೆ. ಇದು ಇತರ ಎಲ್ಲಾ ಕ್ಷೇತ್ರಗಳಿಗಿಂತಲೂ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಕೈಗಾರಿಕೆಗಳಲ್ಲಿ ಒಟ್ಟು ಕಾರ್ಮಿಕರಲ್ಲಿ ಶೇ. 32 ಭಾಗದಷ್ಟು ಜನ ಕಾರ್ಯ ನಿರತರಾಗಿದ್ದು ಇದು ನೀಡುತ್ತಿರುವ ಸಮಗ್ರ ರಾಷ್ಟ್ರೀಯ ಆದಾಯದ ಪಾಲು ಶೇ. 17 ರಷ್ಟು. ಉಳಿದ ಕಾರ್ಮಿಕರು ಇತರ ಸೇವಾಕ್ಷೇತ್ರಗಳಲ್ಲಿ ನಿರತವಾಗಿರುವರು.

ವ್ಯವಸಾಯ: ಇಲ್ಲಿನ ಪ್ರಾಕೃತಿಕ ಪರಿಸರ ವ್ಯವಸಾಯಕ್ಕೆ ಹೆಚ್ಚು ಸೂಕ್ತವಾಗಿಲ್ಲ. ದೇಶ ವಿಸ್ತಾರವಾದ ಭೂಭಾಗಗಳು ಪರ್ವತಗಳು ಹಾಗೂ ಮರುಭೂಮಿಗಳಿಂದ ಕೂಡಿವೆ. ಮಳೆಯ ಪ್ರಮಾಣ ಕಡಿಮೆ. ನೀರಾವರಿಗೆ ದೊರೆಯುವ ಜಲಸಂಪನ್ಮೂಲಗಳು ಪರಿಮಿತವಾಗಿವೆ. ಆದರೂ ವ್ಯವಸಾಯ ಕ್ಷೇತ್ರ ಉಳಿದ ಆರ್ಥಿಕ ಕ್ಷೇತ್ರಗಳಿಗಿಂತ ಹೆಚ್ಚು ಜನರಿಗೆ ಉದ್ಯೋಗವನ್ನು ನೀಡಿದೆ. ಅಲ್ಲದೆ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ಸರಕಾರ ಈ ಕ್ಷೇತ್ರವನ್ನು ಪ್ರೋತ್ಸಾಹಿಸುತ್ತಿದೆ. ನೀರಾವರಿ ಕ್ಷೇತ್ರವನ್ನು ಸಹ ವಿಸ್ತರಿಸಲಾಗಿದೆ. ಹೊಸತಳಿಗಳ ಬಳಕೆ ಹಾಗೂ ಬೆಲೆ ಸಂರಕ್ಷಣೆಯ ವಿಧಾನಗಳಿಂದ ಇಳುವರಿಯನ್ನು ಹೆಚ್ಚಿಸಲು ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಯಾಂತ್ರೀಕೃತ ಬೇಸಾಯಕ್ಕೆ ಒತ್ತು ನೀಡಲಾಗಿದೆ. ಇದರಿಂದ 1991ರಿಂದ 1996ರ ಅವಧಿಯಲ್ಲಿ ಸಮಗ್ರ ರಾಷ್ಟ್ರೀಯ ಉತ್ಪನ್ನದಲ್ಲಿ ವ್ಯವಸಾಯದ ಪಾಲು ಶೇ. 12ರಿಂದ ಶೇ. 26ಕ್ಕೆ ಏರಿಕೆಯಾಗಿರುವುದೆಂದು ಇರಾನಿನ ಆರ್ಥಿಕ ವರದಿಗಳಲ್ಲಿ ವಿವರಿಸಲಾಗಿದೆ.

ಗೋದಿ, ಬಾರ್ಲಿ ಮತ್ತು ಬತ್ತ ಇಲ್ಲಿನ ಮುಖ್ಯ ಬೆಳೆಗಳು. ಸೇಬು, ದ್ರಾಕ್ಷಿ, ಖರ್ಜೂರ, ಕಿತ್ತಳೆ, ನಿಂಬೆ, ಕಲ್ಲಂಗಡಿ ಮುಖ್ಯ ಹಣ್ಣಿನ ಬೆಳೆಗಳು. ಆಲೂಗೆಡ್ಡೆಯನ್ನು ಬೆಳೆಯುತ್ತಾರೆ. ಇರಾನ್ ಒಣಗಿಸಿದ ದ್ರಾಕ್ಷಿ ಹಾಗೂ ಖರ್ಜೂರವನ್ನು ರಫ್ತು ಮಾಡಲಾಗುವುದು.

ಖನಿಜಗಳು ಮತ್ತು ಗಣಿಗಾರಿಕೆ: ಮಧ್ಯ ಏಷ್ಯ ವಲಯದಲ್ಲಿ ಅಪಾರ ಖನಿಜ ಸಂಪತ್ತನ್ನು ಹೊಂದಿರುವ ರಾಷ್ಟ್ರಗಳಲ್ಲಿ ಇರಾನ್ ಪ್ರಮುಖವಾಗಿದೆ. ಪೆಟ್ರೋಲಿಯಂ ಇರಾನಿನ ಖನಿಜ ನಿಕ್ಷೇಪಗಳಲ್ಲಿ ಅತಿಮುಖ್ಯವಾದುದು. ಇದಲ್ಲದೆ ಕಲ್ಲಿದ್ದಲು, ತಾಮ್ರ, ಮ್ಯಾಂಗನೀಸ್, ಬಾಕ್ಸೈಟ್, ಸತು, ಗಂಧಕ, ನಿಕ್ಕಲ್, ಗ್ರಾಫೈಟ್, ಸೋಡಿಯಂ ಸಲ್ಫೇಟ್, ಕಲ್ಲುಪ್ಪು ಮೊದಲಾದ ಇತರ ಹಲವು ಬಗೆಯ ಖನಿಜಗಳನ್ನು ಇರಾನ್ ಒಳಗೊಂಡಿದೆ. ಏಷ್ಯದ ಒಟ್ಟು ತೈಲ ನಿಕ್ಷೇಪದ ಶೇ. 13.3ರಷ್ಟನ್ನು ಇರಾನ್ ಒಳಗೊಂಡಿರುವುದೆಂದು ಪ್ರಪಂಚದ ತೈಲ ಕ್ಷೇತ್ರಗಳ 1993ರ ವರದಿ ಅಂದಾಜುಮಾಡಿದೆ. ಮಧ್ಯ ಏಷ್ಯದ ರಾಷ್ಟ್ರಗಳಲ್ಲಿ ಕಚ್ಚಾತೈಲದ ಉತ್ಪಾದನೆ ಮೊದಲು ಆರಂಭವಾದುದು ಇರಾನಿನಲ್ಲಿ. ಇರಾನ್ ಪ್ರಪಂಚದ ಮುಖ್ಯ ತೈಲ ಉತ್ಪಾದನೆ ಹಾಗೂ ರಫ್ತಿನ ರಾಷ್ಟ್ರಗಳಲ್ಲಿ ಒಂದಾಗಿದೆ. ಇದು ಕಚ್ಚಾತೈಲದ ಉತ್ಪಾದನೆಯಲ್ಲಿ ಸೌದಿ ಅರೇಬಿಯ, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ರಷ್ಯದ ಅನಂತರ ಪ್ರಪಂಚದ ತೈಲ ಉತ್ಪಾದನೆಯ ರಾಷ್ಟ್ರಗಳಲ್ಲಿ ನಾಲ್ಕನೆಯ ಸ್ಥಾನವನ್ನು ಹೊಂದಿದೆ. ಇಂದು ತೈಲ ಉತ್ಪಾದನೆಯನ್ನು ರಾಷ್ಟ್ರೀಕರಣಗೊಳಿಸಿ, ನ್ಯಾಷನಲ್ ಇರಾನಿಯನ್ ಆಯಿಲ್ ಕಂಪನಿಗೆ ನೀಡಲಾಗಿದೆ. ಹಿಂದೆ ಶೋಧಿಸಲಾಗಿರುವ ಕ್ಷೇತ್ರಗಳಲ್ಲದೆ ಇಂದು ಹೊಸ ತೈಲ ಕ್ಷೇತ್ರಗಳನ್ನು ಈ ಕಂಪನಿ ಶೋಧಿಸಿದೆ. ಇರಾನ್ ಪೆಟ್ರೋಲಿಯಂ ರಫ್ತಿನ ರಾಷ್ಟ್ರಗಳ ಸಂಘಟನೆಯ ಸದಸ್ಯ ರಾಷ್ಟ್ರಗಳಲ್ಲಿ ಒಂದಾಗಿದೆ.

ಇರಾನಿನ ಎರಡು ವಲಯಗಳಲ್ಲಿ ತೈಲನಿಕ್ಷೇಪ ಕೇಂದ್ರೀಕೃತವಾಗಿದೆ. ನೈರುತ್ಯದ ಪರ್ಷಿಯನ್ ಖಾರಿಯ ಪ್ರದೇಶ ಹಾಗೂ ಪಶ್ಚಿಮದ ವಲಯ. ಪರ್ಷಿಯನ್ ಖಾರಿಯ ತೀರ ಹಾಗೂ ಖಂಡಾವರಣ ವಲಯಗಳೆರಡೂ ಅಪಾರ ಪ್ರಮಾಣದ ನಿಕ್ಷೇಪವನ್ನು ಹೊಂದಿವೆ. ಗಾಚ್‌ಸರನ್ ಮತ್ತು ಅಘಜರಿ ಈ ವಲಯದ ಮುಖ್ಯ ತೈಲ ಉತ್ಪಾದನ ಪ್ರದೇಶಗಳು. ಪಶ್ಚಿಮದಲ್ಲಿ ಜಾಗ್ರೋಸ್ ಪರ್ವತಗಳಿಂದ ಕೂಡಿರುವ ಪ್ರದೇಶ ಕೆರ್‌ಮನ್‌ಶಾ ಮಸ್ಜಿದ್–ಎ–ಸುಲೇಮನ್, ಹಾಫ್‌ಕೆಲ್ ಹಾಗೂ ಲಾಲಿ ತೈಲ ಉತ್ಪಾದನ ಕೇಂದ್ರಗಳನ್ನು ಒಳಗೊಂಡಿದೆ.

ಇವಲ್ಲದೆ ಪರ್ಷಿಯನ್ ಖಾರಿಯ ಖಂಡಾವರಣ ಪ್ರದೇಶ ಸಹ ಇಂದು ಕಚ್ಚಾತೈಲವನ್ನು ಉತ್ಪಾದಿಸುವುದು. ಖಂಡಾವರಣ ವಲಯದಲ್ಲಿ ತೈಲವನ್ನು ಉತ್ಪಾದಿಸುವ ಮೂರು ಕೇಂದ್ರಗಳಿವೆ. ಅವುಗಳೆಂದರೆ ದೋರೌಡ್, ಸಾಲ್ಮನ್–ರೊಸ್ತಾಮ್. ಅಘಜರಿ ಕ್ಷೇತ್ರ ಇರಾನಿನಲ್ಲಿ ಅತಿ ಹೆಚ್ಚು ತೈಲವನ್ನು ಉತ್ಪಾದಿಸುವ ಕೇಂದ್ರವಾಗಿದೆ. ಉತ್ಪಾದಿಸಿದ ಕಚ್ಚಾತೈಲವನ್ನು ಪರ್ಷಿಯನ್ ಖಾರಿಯಲ್ಲಿರುವ ಖಾರ್ಗ್ ದ್ವೀಪಕ್ಕೆ ಸಾಗಿಸಿ ರಫ್ತು ಮಾಡಲಾಗುವುದು. ಇರಾನಿನ ವಾರ್ಷಿಕ ತೈಲ ಉತ್ಪಾದನೆಯು 270 ದ.ಲ. ಟನ್ನು. ಹಲವಾರು ಶುದ್ಧೀಕರಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ತೈಲ ಕ್ಷೇತ್ರಗಳಿಂದ ಕೊಳವೆಗಳ ಮೂಲಕ ಕಚ್ಚಾತೈಲವನ್ನು ಸಾಗಿಸಿ ಶುದ್ಧೀಕರಿಸಲಾಗುವುದು. ಇರಾನ್ ಬೃಹತ್ ಪ್ರಮಾಣದ ಶುದ್ಧೀಕರಣ ಕೇಂದ್ರಗಳನ್ನು ನಿರ್ಮಿಸಿದೆ. ಪರ್ಷಿಯನ್ ಖಾರಿಯಲ್ಲಿರುವ ಅಬಡಾನ್ ಪ್ರಪಂಚದ ಅತಿದೊಡ್ಡ ತೈಲ ಶುದ್ಧೀಕರಣ ಕೇಂದ್ರ. ಇರಾನ್–ಇರಾಕ್ ಯುದ್ಧದಲ್ಲಿ ಈ ಕೇಂದ್ರ ಸಂಪೂರ್ಣವಾಗಿ ನಾಶಗೊಂಡಿತ್ತಾದರೂ ಇಂದು ಈ ಕೇಂದ್ರವನ್ನು ಮರುನಿರ್ಮಿಸಲಾಗಿದೆ. ತೆಹರಾನ್, ತಾಬ್ರಿಜ್, ಕೆರ್‌ಮನ್‌ಶಾ, ಅರಾಕ್, ಇಸ್‌ಫಹಾನ್, ಬಂದರ್‌ತಾಹೇರಿ, ಶಿರಾಜ್ ಮತ್ತು ಬಂದರ್–ಎ–ಅಬ್ಬಾಸ್ ಇತರ ಪ್ರಮುಖ ತೈಲ ಶುದ್ಧೀಕರಣ ಕೇಂದ್ರಗಳು.

ಇರಾನ್ ಆಂತರಿಕ ಬಳಕೆಯ ತೈಲ ಹಾಗೂ ರಫ್ತಿನ ಸ್ವಲ್ಪ ಪ್ರಮಾಣದ ತೈಲ ಸಾಗಾಣಿಕೆಗಾಗಿ ಕೊಳವೆ ಮಾರ್ಗಗಳನ್ನು ನಿರ್ಮಿಸಿದೆ. ಇರಾನಿನ ತೈಲ ಮತ್ತು ಸ್ವಾಭಾವಿಕ ಅನಿಲ ಸಾಗಾಣಿಕೆ ಕೊಳವೆ ಮಾರ್ಗಗಳಿಂದಲೇ ನಿರ್ವಹಿಸಲ್ಪಡುವುದು. ತೆಹರಾನ್ ಮತ್ತು ತಾಬ್ರಿಜ್ ನಗರಗಳ ನಡುವೆ ತೈಲ ಸಾಗಾಣಿಕೆಯ ಕೊಳವೆಯನ್ನು ನಿರ್ಮಿಸಲಾಗಿದೆ. ಇದೇ ರೀತಿಯಲ್ಲಿ ಬಂದರ್ ಅಬ್ಬಾಸ್ ಶುದ್ಧೀಕರಣ ಕೇಂದ್ರದಿಂದ ಸುತ್ತಲಿನ ರಫಸಂಜನ್, ಕರ್ಮನ್ ಮತ್ತು ಯಜ್ದ್ ನಗರಗಳಿಗೆ ಕೊಳವೆಗಳನ್ನು ನಿರ್ಮಿಸಲಾಗಿದೆ. ರಫ್ತಿನ ಉದ್ದೇಶದಿಂದ ತೈಲಕ್ಷೇತ್ರದಿಂದ ಖಾರ್ಗ್ ದ್ವೀಪದವರೆಗೆ ಇತ್ತೀಚೆಗೆ ಕೊಳವೆ ಮಾರ್ಗವನ್ನು ನಿರ್ಮಿಸಲಾಗಿದೆ.

ಸ್ವಾಭಾವಿಕ ಅನಿಲ: ಇರಾನ್ ಸ್ವಾಭಾವಿಕ ಅನಿಲವನ್ನು ಹೊಂದಿರುವ ಪ್ರಪಂಚದ ರಾಷ್ಟ್ರಗಳಲ್ಲಿ ರಷ್ಯದ ಅನಂತರ ಎರಡನೆಯ ಸ್ಥಾನದಲ್ಲಿದೆ. ಇದು 20 ದಶಲಕ್ಷ ಘನ ಮೀ ಅಗಾಧ ಪ್ರಮಾಣದ ಸ್ವಾಭಾವಿಕ ಅನಿಲದ ನಿಕ್ಷೇಪವನ್ನು ಹೊಂದಿದೆಯೆಂದು ಅಂದಾಜು ಮಾಡಲಾಗಿದೆ. ಇದು ಪ್ರಪಂಚದ ಒಟ್ಟು ಅನಿಲ ನಿಕ್ಷೇಪದ ಶೇ. 12.6 ರಷ್ಟು. ಪರ್ಷಿಯನ್ ಖಾರಿಯಲ್ಲಿರುವ ಕಂಗನ್‌ನಿಂದ 70 ಕಿಮೀ ದೂರದಲ್ಲಿರುವ ಅಸಾಲುಯ್ಯೆ ಅನಿಲ ನಿಕ್ಷೇಪದ ಕೇಂದ್ರಗಳಲ್ಲಿ ಅತಿಮುಖ್ಯವಾದುದು. ಇದಲ್ಲದೆ ನಾರ್ ಕಂಗನ್ ಹಾಗೂ ಕ್ಯಾಸ್ಪಿಯನ್ ಸಮುದ್ರ ತೀರಗಳಲ್ಲಿಯೂ ಅನಿಲ ನಿಕ್ಷೇಪದ ಉತ್ಪಾದನೆಯನ್ನು ಆರಂಭಿಸಲಾಗಿದೆ. ಉತ್ಪಾದಿಸಿದ ಸ್ವಾಭಾವಿಕ ಅನಿಲವನ್ನು ಸಂಸ್ಕರಿಸುವ ಹಲವಾರು ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸ್ವಾಭಾವಿಕ ಅನಿಲವನ್ನು ರಫ್ತುಮಾಡಲು ಅನುಕೂಲವಾಗುವಂತೆ ಇದನ್ನು ತೀರಪ್ರದೇಶಗಳಿಗೆ ಸಾಗಿಸಲು ಟರ್ಕಿ ಹಾಗೂ ಪರ್ಷಿಯನ್ ಖಾರಿಯವರೆಗೆ ಕೊಳವೆ ಮಾರ್ಗವನ್ನು ನಿರ್ಮಿಸಲಾಗಿದೆ.

ಇರಾನ್ ಪಶ್ಚಿಮ ಏಷ್ಯದ ವಲಯದಲ್ಲಿ ಅಪಾರ ಖನಿಜ ನಿಕ್ಷೇಪಗಳನ್ನು ಹೊಂದಿರುವ ರಾಷ್ಟ್ರವಾಗಿದೆ. ಸೀಸ, ಸತು, ಕಬ್ಬಿಣದ ಅದಿರು, ಕಲ್ಲಿದ್ದಲು, ತಾಮ್ರ, ಯುರೇನಿಯಂ, ಕ್ರೋಮಿಯಂ ಮತ್ತು ಫಾಸ್ಫೇಟ್ ಇರಾನಿನ ಇತರೆ ಮುಖ್ಯ ಖನಿಜಗಳು.

ಕೈಗಾರಿಕೆ: ಇರಾನಿನ ಆಧುನಿಕ ಕೈಗಾರಿಕೆಗಳ ಅಭಿವೃದ್ಧಿ 1930ರ ದಶಕದಲ್ಲಿ ಸ್ಥಾಪನೆಗೊಳ್ಳಲಾರಂಭಿಸಿದವು. ದೇಶಕ್ಕೆ ಅಗತ್ಯವಾದ ಉತ್ಪನ್ನಗಳ ಉತ್ಪಾದನೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಯಿತು. ಸಕ್ಕರೆಗೆಡ್ಡೆಯಿಂದ ಸಕ್ಕರೆ ತಯಾರಿಕೆ, ಬಟ್ಟೆ, ಬೆಂಕಿಪೊಟ್ಟಣ, ಸಿಗರೇಟ್, ಸಿಮೆಂಟ್ ಮತ್ತು ಗಾಜಿನ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದವು. ಎರಡನೆಯ ಮಹಾಯುದ್ಧದ ವೇಳೆಗೆ ಇರಾನ್ ಸರಕಾರಿ ಸ್ವಾಮ್ಯದ 30 ಕೈಗಾರಿಕೆಗಳು ಹಾಗೂ ಖಾಸಗಿ ಒಡೆತನದ ಸು. 200 ಕೈಗಾರಿಕೆಗಳನ್ನು ಒಳಗೊಂಡಿದ್ದಿತು. ಅನಂತರದ ರಾಜಕೀಯ ಸ್ಥಿರತೆ, ತೈಲ ರಫ್ತಿನಿಂದ ದೊರೆತ ಅಪಾರ ಬಂಡವಾಳ, ಯೋಜಿತ ಅಭಿವೃದ್ಧಿ ಕಾರ್ಯಕ್ರಮಗಳಿಂದ ಇರಾನ್ ವಿವಿಧ ಬಗೆಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಯಿತು.

ಕಬ್ಬಿಣ ಮತ್ತು ಉಕ್ಕಿನ ತಯಾರಿಕೆ, ಪೆಟ್ರೋ ರಾಸಾಯನಿಕಗಳು, ತಾಮ್ರದ ಉತ್ಪಾದನೆ, ಹತ್ತಿ ಮತ್ತು ಉಣ್ಣೆಬಟ್ಟೆ, ವಾಹನ ಕೈಗಾರಿಕೆ, ಔಷದಿ ತಯಾರಿಕೆ ಮತ್ತು ಸಿಮೆಂಟ್ ಕೈಗಾರಿಕೆ. ಇರಾನಿನ ಮುಖ್ಯ ಕೈಗಾರಿಕೆಗಳು.

ಇರಾನ್ ಪರ್ವತಗಳಿಂದ ಕೂಡಿದ ಭೂಸ್ವರೂಪಗಳನ್ನು ಹೊಂದಿದೆ. ಅಲ್ಲದೆ ಇದರ ವಿಸ್ತಾರವಾದ ಪ್ರದೇಶ ಮರುಭೂಮಿಯಾಗಿದೆ. ಇದರಿಂದ ಸಂಚಾರ ಮಾರ್ಗಗಳ ನಿರ್ಮಾಣಕ್ಕೆ ಹೆಚ್ಚು ವೆಚ್ಚವಾಗುವುದು. ಹೀಗಿದ್ದರೂ ಆರ್ಥಿಕ ಪ್ರಗತಿ ದೃಷ್ಟಿಯಿಂದ ಹೆಚ್ಚು ರಸ್ತೆಗಳು, ರೈಲು ಮಾರ್ಗಗಳು ಹಾಗೂ ವಿಮಾನ ಸಂಚಾರದ ವ್ಯವಸ್ಥೆ ಮಾಡಲಾಗಿದೆ. ಕೊಳವೆ ಮಾರ್ಗಗಳು ಕಚ್ಚಾತೈಲ ಹಾಗೂ ನೈಸರ್ಗಿಕ ಅನಿಲದ ಸಾಗಾಣಿಕೆಯಲ್ಲಿ ಅತಿ ಮುಖ್ಯವಾದವು. ರಸ್ತೆಗಳು ಎಲ್ಲ ಪ್ರಮುಖ ನಗರಗಳು, ಬಂದರುಗಳು ಹಾಗೂ ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸಿವೆ. ಇರಾನ್ 51485 ಕಿಮೀ ಉದ್ದದ ರಸ್ತೆ ಮಾರ್ಗವನ್ನು ಹೊಂದಿದ್ದು, ಇದರಲ್ಲಿ ಹೆದ್ದಾರಿ ಮಾರ್ಗದ ಉದ್ದ 21,577 ಕಿಮೀ.

ರೈಲು ಸಾರಿಗೆ ಇರಾನಿನ ಸಾರಿಗೆ ವ್ಯವಸ್ಥೆಯಲ್ಲಿ ಅತಿ ಮುಖ್ಯವಾದದು. ಇರಾನ್ ಹೊಂದಿರುವ ರೈಲು ಮಾರ್ಗದ ಉದ್ದ 6422 ಕಿಮೀ ರೈಲು ಮಾರ್ಗಗಳನ್ನು ಪೂರ್ಣವಾಗಿ ರಾಷ್ಟ್ರೀಕರಣಗೊಳಿಸಲಾಗಿದೆ. ಅಜರ್‌ಬೈಜಾನಿನ ಜುಲ್ಫದಿಂದ ತಾಬ್ರಿಜ್‌ವರೆಗಿನ 147 ಕಿಮೀ ಉದ್ದದ ಮಾರ್ಗ ವಿದ್ಯುದೀಕರಣಗೊಂಡಿದೆ. ಬಂದರ್, ಅಬ್ಬಾಸ್–ಬಾಫ್ಕ್ ನಗರಗಳನ್ನು ಸಂಪರ್ಕಿಸುವ 730 ಕಿಮೀ ಉದ್ದದ ಮಾರ್ಗ, 560 ಕಿಮೀ ಉದ್ದದ ಕೆರ್‌ಮನ್–ಬಾಹೆಡಾನ್ ಮಾರ್ಗ, ಮಶಾದ್–ಸಾರಾಖ್ ತೆಹರಾನಿನ ಮೂಲಕ ಪರ್ಷಿಯನ್ ಖಾರಿಯ ಬೂಲ್‌ಶೆಹರ್‌ವರೆಗೆ ಸಂಪರ್ಕವನ್ನು ಕಲ್ಪಿಸಿದೆ.

ಇರಾನ್ ಪರ್ಷಿಯನ್ ಖಾರಿ ಹಾಗೂ ಕ್ಯಾಸ್ಪಿಯನ್ ತೀರಗಳಲ್ಲಿ ಬಂದರುಗಳನ್ನು ಅಭಿವೃದ್ಧಿಪಡಿಸಿದೆ. ವಿದೇಶಿ ವ್ಯಾಪಾರವನ್ನು ಆಧರಿಸಿದ ಇದರ ಆರ್ಥಿಕತೆಗೆ ಬಂದರುಗಳು ಅತಿ ಹೆಚ್ಚು ಅವಶ್ಯಕ. ಅಬ್ಬಾಸ್, ಖೊಮೇನಿ, ಖೊರ್ರಂಶಹರ್, ಶಾಹಿದ್‌ರಾಜ್ಯೆ, ಚ್ಛಾಬಹಾರ್, ಬ್ಯೂಶಹರ್, ಗಾನಾವ್ವೆ, ಅಬಡಾನ್ ಇರಾನಿನ ಪ್ರಮುಖ ಬಂದರುಗಳು. ಖಾರ್ಗ್ ದ್ವೀಪ ಇರಾನಿನ ಅತಿಮುಖ್ಯ ತೈಲ ರಫ್ತಿನ ಕೇಂದ್ರ. ಅಲ್ಲದೆ ತೈಲ ರಫ್ತಿಗಾಗಿಯೇ ಗಾನಾವ್ವೆ ಬಂದರನ್ನು ಅಭಿವೃದ್ಧಿಪಡಿಸಲಾಗಿದೆ. ಕ್ಯಾಸ್ಪಿಯನ್ ತೀರದ ಮುಖ್ಯ ಬಂದರು. ಪಹ್ಲವಿ, ನವಶಹರ್ ಮತ್ತು ಶಾ. ಇರಾನಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತೆಹರಾನ್‌ಲ್ಲಿದೆ.

ಅಂತಾರಾಷ್ಟ್ರೀಯ ವ್ಯಾಪಾರ: ಇರಾನಿನ ಇಂದಿನ ಮುಖ್ಯ ರಫ್ತಿನ ವಸ್ತುಗಳೆಂದರೆ ಕಚ್ಚಾತೈಲ, ಸ್ವಾಭಾವಿಕ ಅನಿಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳು. ಇವು ಇರಾನಿನ ಒಟ್ಟು ರಫ್ತಿನ ಶೇ. 75 ಕ್ಕಿಂತಲೂ ಹೆಚ್ಚು ಮೌಲ್ಯವನ್ನು ಹೊಂದಿದ್ದು ಇರಾನಿನ ವಿದೇಶಿ ವ್ಯಾಪಾರದ ಮುಖ್ಯ ಲಕ್ಷಣವಾಗಿದೆ. ಇದರ ಜೊತೆಗೆ ಸಾಂಪ್ರದಾಯಕ ಉತ್ಪನ್ನಗಳಾದ ರತ್ನಗಂಬಳಿ, ಒಣಗಿಸಿದ ಹಣ್ಣುಗಳು, ಹದ ಮಾಡಿದ ಚರ್ಮ, ಅದಿರುಗಳು, ರಾಸಾಯನಿಕ ಹಾಗೂ ತಾಮ್ರದ ವಸ್ತುಗಳು, ಕಬ್ಬಿಣ ಮತ್ತು ಉಕ್ಕನ್ನು ರಫ್ತುಮಾಡುತ್ತಿದೆ.

ಇರಾನಿನ ಆಮದು ವಸ್ತುಗಳಲ್ಲಿ ಆಹಾರ ಧಾನ್ಯಗಳು ಹೈನುಗಾರಿಕೆಯ ವಸ್ತುಗಳು, ಹತ್ತಿ ಬಟ್ಟೆ ಹಾಗೂ ದಾರ, ಯಂತ್ರೋಪಕರಣಗಳು, ವಿದ್ಯುನ್ಮಾನ ವಸ್ತುಗಳು, ವಿದ್ಯುತ್ ಉಪಕರಣಗಳು, ತಾಂತ್ರಿಕ ವಸ್ತುಗಳು ಮೊದಲಾದವುಗಳಿವೆ. ಇರಾನಿನ ಮುಖ್ಯ ವಿದೇಶಿ ವ್ಯಾಪಾರದ ರಾಷ್ಟ್ರಗಳೆಂದರೆ ಜರ್ಮನಿ, ಜಪಾನ್, ಇಟಲಿ, ಯುನೈಟೆಡ್ ಅರಬ್ ಎಮಿರೇಟ್ಸ್, ದಕ್ಷಿಣ ಕೊರಿಯ ಮತ್ತು ಬ್ರಿಟನ್. (ಎಸ್.ಎನ್.ಎ.ಆರ್.;ಎಂ.ಎಸ್.)

**ಇರಾವಾಡಿ:** ಮಯನ್ಮಾರ್‌ನ ಪ್ರಮುಖ ನದಿ. ಅಸ್ಸಾಮಿನ ಈಶಾನ್ಯ ತುದಿಯಲ್ಲಿ, ಟಿಬೆಟ್ಟಿನ ಗಡಿಯಲ್ಲಿ, 4500–5700 ಮೀ ಎತ್ತರದ ಪರ್ವತ ಪ್ರದೇಶದಲ್ಲಿ ಇದರ ಉಗಮ. ಸರಿಸುಮಾರಾಗಿ ಉತ್ತರ–ದಕ್ಷಿಣ ಮಾರ್ಗವಾಗಿ ಮಯನ್ಮಾರಿನ ಉದ್ದಕ್ಕೂ ಸು. 3470 ಕಿಮೀ ಹರಿದು ಬಂಗಾಲ ಕೊಲ್ಲಿಯನ್ನು ಸೇರುತ್ತದೆ. ಸಮುದ್ರವನ್ನು ಸೇರುವಾಗ ಸು. 12 ಕವಲುಗಳಾಗಿ ಒಡೆಯುತ್ತದೆ. ನದಿಮುಖಜಭೂಮಿ ಬಹು ಫಲವತ್ತಾದ ಪ್ರದೇಶ. ಸು. 4 ಲಕ್ಷ ಚ.ಕಿಮೀ ಹರಡಿರುವ ಈ ಪ್ರದೇಶದಲ್ಲಿ ಉತ್ಕೃಷ್ಟವಾಗಿ ಬತ್ತ ಬೆಳೆಯಲಾಗುತ್ತದೆ. ಮಿಟ್ ಕೈನದಿಂದ ಕೆಲವು ಕಿಮೀ ಮುಂದೆ ನದಿ ಸು. 0.4 ಕಿಮೀ ಅಗಲ ಹಾಗೂ 9 ಮೀ ಆಳವಾಗಿದ್ದು, ನೌಕಾಸಂಚಾರಕ್ಕೆ ಅನುಕೂಲವಾಗಿದೆ. ಬಸ್ಸೇನ್ ಮತ್ತು ರಂಗೂನ್ ನದಿಗಳನ್ನು ಇರಾವಾಡಿ ನದಿಗೆ 1883ರಲ್ಲಿ ಕಾಲುವೆಯ ಮೂಲಕ ಜೋಡಿಸಲಾಯಿತು. ಚಿಂದ್ವಿನ್ ಇರಾವಾಡಿಯ ಪ್ರಮುಖ ಉಪನದಿ. ದೊಡ್ಡ ಹಡಗುಗಳ ಸಂಚಾರಕ್ಕೆ ಇದನ್ನು 1933–35ರಲ್ಲಿ ವಿಸ್ತರಿಸಲಾಯಿತು. ಇಂದು ಇರಾವಾಡಿ ನದಿ ಮಯನ್ಮಾರಿನ ಪ್ರಮುಖ ವಾಣಿಜ್ಯಮಾರ್ಗ ಮತ್ತು ಆರ್ಥಿಕ ಪ್ರಗತಿಯ ಬೆನ್ನೆಲುಬಾಗಿದೆ. ಬಸ್ಸೇನ್, ಯಾಂಗೂನ್, ಹೆಂಜಾದ, ಮಗ್ವೆ, ಪಕೊಕೊ, ಭಾಮೊ ಮುಂತಾದುವು ಇದರ ದಡದಲ್ಲಿರುವ ಪ್ರಮುಖ ಪಟ್ಟಣಗಳು. (ಎಂ.ಎಸ್.)

**ಇಲಿನಾಯ್:** ಅಮೆರಿಕ ಸಂಯುಕ್ತಸಂಸ್ಥಾನದ ಒಂದು ರಾಜ್ಯ. ಮಧ್ಯ ಭಾಗದಲ್ಲಿ ಉತ್ತರಕ್ಕಿದೆ. ಇದು ಮಹಾಸರೋವರಗಳ ದಡದಲ್ಲಿರುವ ಮುಖ್ಯಪ್ರಾಂತ್ಯ. 1673ರಲ್ಲಿ ಫ್ರೆಂಚ್ ಅನ್ವೇಷಕರಾದ ಜೋಲಿಯಟ್ ಮತ್ತು ಮಾರ್ಕ್ವೆಟ್ಟೆ ಅವರಿಂದ ಗುರುತಿಸಲ್ಪಟ್ಟಿತು. 1763ರಲ್ಲಿ ಫ್ರೆಂಚರಿಂದ ಬ್ರಿಟಿಷರ ಅಧೀನಕ್ಕೆ ಬಂತು. ಬಹುಕಾಲ ಇಂಡಿಯಾನದ ಒಂದು ಭಾಗವಾಗಿದ್ದು 1809ರಲ್ಲಿ ಪ್ರತ್ಯೇಕ ಪ್ರಾಂತ್ಯವಾಗಿ 1818ರಲ್ಲಿ ಒಕ್ಕೂಟಕ್ಕೆ ಸೇರಿತು. ಮಿಸಿಸಿಪಿ ನದಿಯ ಬಯಲಿನ ಉತ್ತರದಲ್ಲಿ ಒಹಾಯೊ ನದಿಯಿಂದ ದಕ್ಷಿಣಕ್ಕೆ ಮಿಚಿಗನ್ ಸರೋವರದವರೆಗೂ ಹಬ್ಬಿದೆ. ವಿಸ್ತೀರ್ಣ 146,076 ಚ.ಕಿಮೀ. ಜನಸಂಖ್ಯೆ 127,13,634 (2004). ಇದು ಒಳನಾಡು ರಾಜ್ಯವಾದರೂ ಉತ್ತಮವಾದ ಜಲಮಾರ್ಗಗಳ ಸೌಕರ್ಯವಿದೆ. ಭೌಗೋಳಿಕ ಸನ್ನಿವೇಶದಿಂದಾಗಿ ಖಂಡಾಂತರ ವಾಯುಗುಣವನ್ನು ಹೊಂದಿದೆ. ಹೆಚ್ಚು ಉಷ್ಣತೆಯುಳ್ಳ ಮತ್ತು ಮಳೆ ಬೀಳುವ ಬೇಸಗೆ, ಅತ್ಯಧಿಕ ಶೀತವುಳ್ಳ ಚಳಿಗಾಲ ಹೆಚ್ಚು ದಕ್ಷಿಣದಲ್ಲಿ ಹಿತಕರವಾದ ವಾಯುಗುಣವಿದೆ. ಸು. 1809ರ ವೇಳೆಗೆ ಈ ಪ್ರದೇಶದಲ್ಲಿ ಜನವಸತಿ ಪ್ರಾರಂಭವಾಯಿತು. ಫಲವತ್ತಾದ ಮಣ್ಣು ಮತ್ತು ಬೆಲೆಯುಳ್ಳ ಖನಿಜಗಳಿರುವುದರಿಂದ ಈ ಪ್ರದೇಶಕ್ಕೆ ಹೆಚ್ಚು ಜನ ವಲಸೆ ಬಂದು ನೆಲೆಸಿದರು. ವ್ಯವಸಾಯ ಈ ರಾಜ್ಯದ ಆರ್ಥಿಕ ಆದಾಯದ ಮೂಲಾಧಾರ. ಶೇ. 90 ಭಾಗದಲ್ಲಿ ವ್ಯವಸಾಯ ಹರಡಿದೆ. ಮೆಕ್ಕೆಜೋಳ, ಸೋಯಬೀನ್ಸ್, ಓಟ್ಸ್, ಬಟಾಣಿ, ಅವರೆ, ಆಲೂಗಡ್ಡೆ, ಆಲ್ಫಾಲ್ಫ ಹುಲ್ಲು, ಹಣ್ಣು, ತರಕಾರಿಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ. ಪಶುಪಾಲನೆ ಇದೆ. 1858ರಲ್ಲಿ ಅಬ್ರಹಾಂ ಲಿಂಕನ್ ಮತ್ತು ಸ್ಟೀಫನ್ ಡಗ್ಲಾಸರು ಇಲ್ಲಿ ನಡೆಸಿದ ಗುಲಾಮೀ ವಿಷಯಕವಾದ ಚರ್ಚೆಯಿಂದ ಅವರ ಹೆಸರು ರಾಷ್ಟ್ರೀಯ ಪ್ರಾಮುಖ್ಯತೆ ಪಡೆಯಿತು. ಅಂತರ್ಯುದ್ಧ ಮುಗಿಯುತ್ತಿದ್ದಂತೆ ಕೈಗಾರಿಕೆಗಳು ಬೆಳೆಯತೊಡಗಿದವು. ರೈತರು ಗ್ರ್ಯಾಂಜರ್ ಆಂದೋಲನಕ್ಕೆ ಸೇರಿ ರೈಲು ವಿಸ್ತರಣೆಯನ್ನು ವಿರೋಧಿಸಿದರು. ಎರಡನೆಯ ಮಹಾಯುದ್ಧವಾದ ಮೇಲೆ ದೇಶದ ಪ್ರಗತಿ ಇಮ್ಮಡಿಸಿತು. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. ಈ ಖನಿಜಗಳು ರಾಜ್ಯವನ್ನು ದೇಶದ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲೊಂದಾಗಿ ಮಾಡಿವೆ. ಭಾರಿ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೋದ್ಯಮಗಳು ಇಲ್ಲಿ ಹೇರಳವಾಗಿ ಬೆಳೆದಿವೆ. ಶಿಕಾಗೊ ನಗರದಲ್ಲಿ ರಾಜ್ಯದ ಒಟ್ಟು ಕೈಗಾರಿಕೋತ್ಪಾದನೆಯಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ಕೇಂದ್ರಿಕೃತವಾಗಿದ್ದು, ನ್ಯೂಯಾರ್ಕ್ ನಗರವನ್ನು ಬಿಟ್ಟರೆ ಪ್ರಾಮುಖ್ಯದಲ್ಲಿ ಇದು ರಾಷ್ಟ್ರದ ಎರಡನೆಯ ನಗರವಾಗಿದೆ. ಕಬ್ಬಿಣ ಮತ್ತು ಉಕ್ಕು, ಭಾರಿ ಯಂತ್ರಗಳು, ವ್ಯವಸಾಯೋಪಕರಣಗಳು, ಆಹಾರ ವಸ್ತುಗಳು, ಪೆಟ್ರೋಕೆಮಿಕಲ್ಸ್, ವಿದ್ಯುದುಪಕರಣಗಳು, ರೈಲ್ವೆಗೆ ಅವಶ್ಯಕವಾದ ವಸ್ತುಗಳು, ಮರದ ಸಾಮಾನುಗಳು, ಗಡಿಯಾರಗಳು, ಗಾಜಿನ ಸಾಮಾನುಗಳು, ಡೀಸೆಲ್ ಯಂತ್ರಗಳು, ಬಟ್ಟೆ, ಪಾದರಕ್ಷೆಗಳು–ಮುಂತಾದುವು ರಾಜ್ಯದ ಪ್ರಮುಖ ಕೈಗಾರಿಕೋತ್ಪನ್ನಗಳಾಗಿವೆ.

ಶೇ. 80 ಜನ ನಗರವಾಸಿಗಳು. ಶಿಕಾಗೊ ನಗರ 28,69,121 (2003). ಪಿಯೋರಿಯ, ರಾಕ್‌ಫೋರ್ಡ್, ಷಾಂಪೇನ್, ಅರ್ಬಾನ, ಸ್ಪ್ರಿಂಗ್‌ಫೀಲ್ಡ್, ಡಿಕೇಟರ್, ಈಸ್ಟ್ ಸೇಂಟ್ ಲೂಯಿ, ರಾಕ್ ಐಲೆಂಡ್ ಮತ್ತು ಮೋಲೀನ್ ಇತರ ದೊಡ್ಡ ಕೈಗಾರಿಕಾ ನಗರಗಳು. ರಾಜಧಾನಿ ಸ್ಪ್ರಿಂಗ್‌ಫೀಲ್ಡ್. ಜನಸಂಖ್ಯೆ: 113,586 (2003). (ಸಿ.ಎಂ.)

**ಇಸ್ತಾನ್‌ಬುಲ್:** ತುರ್ಕಿದೇಶದ ಒಂದು ಮುಖ್ಯ ನಗರ ಹಾಗೂ ಪ್ರಮುಖ ರೇವುಪಟ್ಟಣ. ಮಾರ್ಮರಾ ಸಮುದ್ರತೀರದ ಬಾಸ ಪೊರಸ್ ಜಲಸಂಧಿಯ ದಕ್ಷಿಣ ತುದಿಯಲ್ಲಿದೆ. ಸ್ವಲ್ಪಭಾಗ ಯುರೋಪಿನಲ್ಲೂ, ಸ್ವಲ್ಪಭಾಗ ಏಷ್ಯದಲ್ಲಿಯೂ ಇದೆ.ರೋಮನ್ ಚಕ್ರಾಧಿಪತ್ಯದ ಕಾಲದಲ್ಲಿ ಪ್ರ.ಶ. 330ರಲ್ಲಿ, ಕಾನ್‌ಸ್ಟಾಂಟೈನ್ ಚಕ್ರವರ್ತಿಯಿಂದ ಹಿಂದೆ ಗ್ರೀಕ್ ಪ್ರದೇಶವಾಗಿದ್ದ ಬಿಜ಼ಾಂಟಿಯಂನ ಈ ಭಾಗ ಕಾನ್‌ಸ್ಟ್ಯಾಂಟಿನೋಪಲ್ ಎಂಬ ಹೆಸರನ್ನು ಪಡೆದಿತು. 1453ರಲ್ಲಿ ತುರ್ಕಿಯ ಅಧೀನಕ್ಕೆ ಒಳಗಾದ ಮೇಲೆ ಆಟೋಮನ್ ಚಕ್ರಾಧಿಪತ್ಯದ ರಾಜಧಾನಿಯಾಗಿ ಇಸ್ತಾನ್‌ಬುಲ್ ಎಂದಾಯಿತು. 1922ರಲ್ಲಿ ಈ ಪಟ್ಟಣದಿಂದ ರಾಜಧಾನಿಯನ್ನು ಅಂಕಾರಕ್ಕೆ ವರ್ಗಾಯಿಸಲಾಯಿತು. ಜನಸಂಖ್ಯೆ 10,018,735 (2001). ಇಂದಿಗೂ ಇದು ಮುಖ್ಯ ವ್ಯಾಪಾರ ಕೇಂದ್ರವಾಗಿ ಉಪಯುಕ್ತ ರೇವುಪಟ್ಟಣವಾಗಿ ಉಳಿದಿದೆ. ಇಲ್ಲೊಂದು ವಿಶ್ವವಿದ್ಯಾಲಯವಿದೆ. (ಸ್ಥಾಪನೆ 1453. ಪುನರ್ ವ್ಯವಸ್ಥೆ 1933). ಊರಿನ ಐರೋಪ್ಯಭಾಗ ಗೋಲ್ಡನ್ ಹಾರನ್ನಿನ ಏಳು ಬೆಟ್ಟಗಳ ಮೇಲಿದೆ. ಮಧ್ಯ ಯುಗದ ಕೋಟೆ ಕೊತ್ತಳಗಳ ಅವಶೇಷಗಳನ್ನು ಅಲ್ಲಿ ಈಗಲೂ ಕಾಣಬಹುದು. ಇದಲ್ಲದೆ ಊರಿನ ಕೆಲಭಾಗಗಳು ಗ್ರೀಸ್ ಮತ್ತು ಏಷ್ಯಗಳ ಸಂಪರ್ಕವನ್ನು ಈಗಲೂ ಪ್ರದರ್ಶಿಸುತ್ತಿದೆ. ಬಿಜ಼ಾಂಟೀನ್ ಸಂಸ್ಕೃತಿಯ ಪ್ರಸಿದ್ಧ ಸ್ಮಾರಕವಾಗಿ ಈಗ ಉಳಿದಿರುವುದೆಂದರೆ ಹಾಜಿಯ ಸೋಫಿಯ. ಹಿಂದೆ ಚರ್ಚಾಗಿದ್ದ ಈ ಭವ್ಯಮಂದಿರ ಈಗ ಕಲಾವಸ್ತುಗಳ ಪ್ರದರ್ಶನಶಾಲೆಯಾಗಿದೆ. ತುರ್ಕಿ ಕಲೆಗೆ ನಿದರ್ಶನಗಳಾಗಿ ಈಗ 16ನೆಯ ಶತಮಾನದ ಅನೇಕ ಮಸೀದಿಗಳು ಉಳಿದು ಬಂದಿವೆ. ಜೊತೆಗೆ 19 ಮತ್ತು 20ನೆಯ ಶತಮಾನದ ಸುಲ್ತಾನರ ಅರಮನೆಗಳು ರಮಣೀಯವಾಗಿವೆ. (ಎಂ.ಎಸ್.)

**ಇಸ್ಫಹಾನ್:** ಮಧ್ಯ ಇರಾನಿನಲ್ಲಿ ಟೆಹರಾನಿಗೆ 32 ಕಿಮೀ ದಕ್ಷಿಣಕ್ಕೂ ಷಿರಾಜ್ ನಗರಕ್ಕೆ 347 ಕಿಮೀ ಉತ್ತರಕ್ಕೂ ಇರುವ ಸುಂದರ ನಗರ. ಸಮುದ್ರಮಟ್ಟಕ್ಕೆ 1050 ಮೀ ಎತ್ತರವಾಗಿರುವುದರಿಂದ ಬಹಳ ಹಿತಕರವಾದ ವಾಯುಗುಣವನ್ನು ಹೊಂದಿದೆ. ಜನಸಂಖ್ಯೆ 12,66,072 (1996). ಧಾರಾಳವಾಗಿ ನೀರು ಸರಬರಾಜು ಇರುವುದರಿಂದ ರಮ್ಯವಾದ ಉದ್ಯಾನಗಳನ್ನೂ ಫಲವತ್ತಾದ ಹೊಲಗದ್ದೆಗಳನ್ನೂ ಕಾಣಬಹುದು. ಜೈನ್‌ದೇಹ್ (ಜೀವನದಿ) ನದಿ ನಗರದ ಸಮೀಪ ಹರಿಯುತ್ತದೆ. ಹಿಂದೆ 1051 ರಿಂದ 1063 ರ ವರೆಗೆ, 1072 ರಿಂದ 1092ರ ವರೆಗೆ 1590 ರಿಂದ 1722ರ ವರೆಗೆ ಪರ್ಷಿಯದ ರಾಜಧಾನಿಯಾಗಿತ್ತು. ನಗರದ ಮಧ್ಯದಲ್ಲಿ ಸುಲ್ತಾನ ಒಂದನೆಯ ಅಬ್ಬಾಸನ ಭವ್ಯ ಅರಮನೆ ಮತ್ತು ಸುಂದರವಾದ ಮಸೀದಿ ಇವೆ. ಇವು ಪಾರಸಿ ಅತ್ಯುತ್ತಮ ಕಲಾಕೌಶಲಕ್ಕೂ ವಾಸ್ತುಶಿಲ್ಪಕ್ಕೂ ನಿದರ್ಶನಗಳು. ಇಂಥ ಅನೇಕ ಸುಂದರ ಮಸೀದಿಗಳು ನಗರದ ಬೇರೆ ಕಡೆಗಳಲ್ಲಿವೆ. ನಾನಾ ಬಣ್ಣಗಳಿಂದ ರಮ್ಯವಾಗಿ ಅಲಂಕೃತವಾದ ಮನೆಗಳು, ವಿಶಾಲವಾದ ಉಪ್ಪರಿಗೆ ಮೊಗಸಾಲೆಗಳು, ಸಾಲು ಮರಗಳು, ಹೂದೋಟಗಳು ಸುಂದರ ಕಮಾನು ಸೇತುವೆಗಳು (ಈಗ ಅಲ್ಲಲ್ಲೇ ಶಿಥಿಲವಾಗಿದ್ದರೂ)– ನಗರಕ್ಕೆ ಆಕರ್ಷಕ ಮೆರುಗು ಕೊಟ್ಟಿವೆ. ಅನೇಕ ನೆಯ್ಗೆ ಕಾರ್ಖಾನೆಗಳಿವೆ. ಚಿನ್ನ, ಬೆಳ್ಳಿಯ ಸೂಕ್ಷ್ಮತಂತಿಯಿಂದ ಮಾಡುವ ತೆರೆಪುಚಿತ್ರ ಕೆಲಸಕ್ಕೂ ಲೋಹ ಪದಾರ್ಥಗಳ ತಯಾರಿಕೆಗೂ ಈ ನಗರ ಪ್ರಸಿದ್ಧಿ ಪಡೆದಿದೆ. ತೈಲ ಶುದ್ಧಿಕರಣ ಕೇಂದ್ರಗಳು, ಹತ್ತಿ ಬಟ್ಟೆ ಕೈಗಾರಿಕೆಗಳು ಮತ್ತು ಉಕ್ಕಿನ ಕೈಗಾರಿಕೆಗಳು ಸಹ ಕಂಡುಬರುತ್ತವೆ. *

**ಇಸ್ರೇಲ್:** ಬೈಬಲ್ಲಿನ ಕಾಲದಲ್ಲಿ ಯಹೂದಿ ಜನಸಮುದಾಯದ ಹೆಸರಾಗಿದ್ದು ಮುಂದೆ ಹೀಬ್ರು ರಾಜ್ಯಕ್ಕೂ ಇದೇ ಅಂಕಿತವಾಯಿತು. ಈಗ ನೈರುತ್ಯ ಏಷ್ಯದಲ್ಲಿರುವ ಒಂದು ಗಣರಾಜ್ಯ. 1948ರ ಮೇ 15 ರಂದು ಅಸ್ತಿತ್ವಕ್ಕೆ ಬಂದಿತು. ಉತ್ತರದಲ್ಲಿ ಲೆಬನಾನ್, ಪೂರ್ವಕ್ಕೆ ಸಿರಿಯ ಮತ್ತು ಜೋರ್ಡನ್, ದಕ್ಷಿಣಕ್ಕೆ ಸೌದಿ ಅರೇಬಿಯ, ಪಶ್ಚಿಮಕ್ಕೆ ಈಜಿಪ್ಟ್ ಮತ್ತು ಮೆಡಟರೇನಿಯನ್ ಸಮುದ್ರಗಳಿವೆ. $29^0.30'$ ದಿಂದ $33^0.15'$ ಉತ್ತರ ಅಕ್ಷಾಂಶದವರೆಗೂ ಮತ್ತು $34^0.15'$ ಪೂರ್ವ ರೇಖಾಂಶದಿಂದ $35^0.41'$ ಪೂರ್ವ ರೇಖಾಂಶದವರೆಗೂ ಹರಡಿದೆ. ವಿಸ್ತೀರ್ಣ 20770 ಚ.ಕಿಮೀ. ಜನಸಂಖ್ಯೆ 7.2 ಮಿಲಿಯನ್ (2002). ಇದರಲ್ಲಿ 4/5 ಜನರು ಯಹೂದಿಯರು, 1/4 ಅರಬ್ಬಿಯನ್ನರು. ಭಾಷೆ ಹೀಬ್ರು ಮತ್ತು ಅರೇಬಿಕ್. ಇಲ್ಲಿ ಯಹೂದಿ, ಇಸ್ಲಾಂ, ಮತ್ತು ಕ್ರಿಶ್ಚಿಯನ್ ಧರ್ಮದ ಜನರಿದ್ದಾರೆ. ರಾಜಧಾನಿ ಜೆರೂಸಲೆಂ. ಜನಸಂಖ್ಯೆ 7,32,100 (2006).

ಮೇಲ್ಮೈ ಲಕ್ಷಣ: ಇಲ್ಲಿ ನಾಲ್ಕು ಪ್ರಮುಖ ಭೂ ಮೇಲ್ಮೈ ಸ್ವರೂಪಗಳು ಕಂಡುಬರುತ್ತವೆ. ಅವುಗಳೆಂದರೆ ಪಶ್ಚಿಮದಲ್ಲಿರುವ ಮೆಡಿಟರೇನಿಯನ್ ಕರಾವಳಿ ಮೈದಾನ, ಉತ್ತರದ ಅಂಚಿನಿಂದ ಮಧ್ಯ ಭಾಗದವರೆಗೆ ಇರುವ ಬೆಟ್ಟಗಳ ಪ್ರದೇಶ, ಪೂರ್ವಕ್ಕಿರುವ ಜೋರ್ಡಾನ್ ನದಿಯ ಸೀಳು ಕಣಿವೆ ಪ್ರದೇಶ ಮತ್ತು ದಕ್ಷಿಣದಲ್ಲಿ ನೆಗೆವ್. ಇದು ಶುಷ್ಕ ಪ್ರದೇಶ. ಇದರ ವಾಯವ್ಯ ಭಾಗದಲ್ಲಿ ಮರಳುಕಲ್ಲು ಭೂಮಿಯಿದೆ. ಉತ್ತರದ ಗ್ಯಾಲಿಲೀ ಬೆಟ್ಟಗಳೇ ಇಸ್ರೇಲಿನಲ್ಲಿ ಅತ್ಯುನ್ನತ ಪ್ರದೇಶ. ಶಿಖರಗಳ ಪೈಕಿ ಅತ್ಯಂತ ಎತ್ತರವಾದುದ್ದು ಮೆರಾನ್ (1208 ಮೀ). ಜೋರ್ಡಾನ್ ಕಣಿವೆ ಉತ್ತರ ಭಾಗ ಸಮುದ್ರಮಟ್ಟಕ್ಕಿಂತ 1210 ಮೀ ಎತ್ತರ. ಆದರೆ ಗ್ಯಾಲಿಲೀ ಕಣಿವೆಯು ಸಮುದ್ರದ ಬಳಿ 304 ಮೀ ತಗ್ಗಾಗಿದೆ. ಮೃತ್ಯ ಸಮುದ್ರದ ಮಟ್ಟ ಮೆಡಿಟರೇನಿಯನ್ ಸಮುದ್ರಮಟ್ಟಕ್ಕಿಂತ 399 ಮೀ ತಗ್ಗಾಗಿದೆ. ಅಕಾಬ ಖಾರಿಯವರೆಗೂ ಸೀಳು ಕಣಿವೆ ಹಬ್ಬಿದೆ. ಜೋರ್ಡಾನ್ ನದಿ ಇಸ್ರೇಲ್‌ನ ಅತ್ಯಂತ ಪ್ರಮುಖ ನದಿಯಾಗಿದ್ದು ಸು. 200 ಕಿಮೀ ಉದ್ದವಾಗಿದೆ. ಇದರ ಪ್ರಮುಖ ಉಪನದಿ ಯಾರ್ಮುಕ್ ಇತರ ನದಿ ಕಣಿವೆಗಳು ಮಳೆ ಹೊರತು ಉಳಿದ ಕಾಲದಲ್ಲಿ ಶುಷ್ಕವಾಗಿರುತ್ತವೆ. ಗ್ಯಾಲಿಲೀ ಸಮುದ್ರದ ನೀರು ತಿಳಿಯಾಗಿದ್ದು, ಮೃತ್ಯು ಸಮುದ್ರದ ನೀರು ಸಾಗರದ ನೀರಿಗಿಂತಲೂ ಉಪ್ಪಾಗಿರುತ್ತದೆ. ಇದಕ್ಕೆ ಅಲ್ಲಿನ ನೀರು ಹೆಚ್ಚು ಆವಿಯಾಗುವುದೆ ಕಾರಣ. ಆದ್ದರಿಂದ ಆ ಸಮುದ್ರದ ನೀರಿನ ಲವಣ ಸಾಂದ್ರೀಕರಣ ಸಾಗರದ ಸರಾಸರಿಗಿಂತ ಎಂಟು ಪಟು ಹೆಚು.




ಇಸ್ರೇಲ್‌ನ ಉತ್ತರಭಾಗದಲ್ಲಿ ಮೆಡಿಟರೇನಿಯನ್ ಮತ್ತು ದಕ್ಷಿಣದಲ್ಲಿ ಮರುಭೂಮಿ ವಾಯುಗುಣ ಕಂಡುಬರುತ್ತದೆ. ಬೇಸಗೆಯಲ್ಲಿ ನಿರಭ್ರ ಆಕಾಶವಿದ್ದು ಮಳೆ ರಹಿತವಾಗಿರುತ್ತದೆ. ಚಳಿಗಾಲದಲ್ಲಿ ಉತ್ತರ ಭಾಗಕ್ಕೆ ಸಾಧಾರಣ ಸರಾಸರಿ 70 ಸೆಂಮೀ ಮಳೆಯಾಗುತ್ತದೆ. ಅಕ್ಟೋಬರ್‌ನಿಂದ ಮಾರ್ಚಿಯವರೆಗೆ ಮಳೆಗಾಲ. ಮಳೆಯು ದಕ್ಷಿಣದ ಕಡೆಗೆ ತೀವ್ರವಾಗಿ ಕಡಿಮೆಯಾಗುತ್ತದೆ. ಬಿರ್‌ಶಿಬಾ ಮತ್ತು ಗಾಜ಼ಾದಿಂದಾಚೆಗೆ ಮರುಭೂಮಿ ಪರಿಸ್ಥಿತಿ ವಿಶೇಷವಾಗಿ ಕಂಡುಬರುತ್ತದೆ. ಜುಲೈನಲ್ಲಿ ಸರಾಸರಿ ಉಷ್ಣಾಂಶ $20^0$ಸೆ. ಚಳಿಗಾಲ ತಂಪಾಗಿದ್ದು ತೀರ ಪ್ರದೇಶದಲ್ಲಿ $14^0$ಸೆ. ಮತ್ತು ಪರ್ವತಗಳಲ್ಲಿ $9^0$ಸೆ. ಇರುತ್ತದೆ. ಮೃತ್ಯು ಸಮುದ್ರ ಪ್ರದೇಶ ನೈಋತ್ಯ ಏಷ್ಯದಲ್ಲೇ ಅತಿ ಹೆಚ್ಚು ಉಷ್ಣಾಂಶಭರಿತ ($49^0$ಸೆ.) ಪ್ರದೇಶವಾಗಿದೆ. ಖಮ್‌ಸಿನ್ ಉಷ್ಣಭರಿತ, ಶುಷ್ಕ ಹಾಗೂ ಧೂಳಿನಿಂದ ಕೂಡಿದ ಮಾರುತ ವಸಂತ ಮತ್ತು ಶರತ್ ಕಾಲದಲ್ಲಿ ಮರುಭೂಮಿಯಿಂದ ಪೂರ್ವದ ಕಡೆಗೆ ಬೀಸುತ್ತದೆ.

ಇಲ್ಲಿನ ಸ್ವಾಭಾವಿಕ ಸಸ್ಯವರ್ಗಗಳೆಲ್ಲ ಅದೃಶ್ಯವಾಗಿವೆ. ಗ್ಯಾಲಿಲೀ ಮತ್ತು ಷರಾನ್‌ಗಳಲ್ಲಿ ಅಲ್ಲಲ್ಲಿ ಒಂಟೊಂಟಿಯಾಗಿ ಓಕ್ ಮರಗಳಿವೆ. ಇತ್ತೀಚೆಗೆ ಎತ್ತರದ ಭಾಗಗಳಲ್ಲಿ ಮಣ್ಣು ಮತ್ತು ಅಂತರ್ಜಲವನ್ನು ಸಂರಕ್ಷಿಸುವುದಕ್ಕಾಗಿ ಹೊಸದಾಗಿ ಪೈನ್ ಮರಗಳ ಅರಣ್ಯವನ್ನು ಬೆಳೆಸಲಾಗಿದೆ. ಪ್ರಾಣಿ ಸಂರಕ್ಷಣೆ ಮತ್ತು ಸಂರಕ್ಷಣಾ ಕಾನೂನುಗಳಿಂದ ಪ್ರಾಣಿಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಲ್ಲಿ ಸು. 100 ಜಾತಿಯ ಪ್ರಾಣಿಗಳು, 400 ರೀತಿಯ ಪಕ್ಷಿಗಳು ಕಂಡುಬರುತ್ತವೆ. ಮುಖ್ಯ ಪ್ರಾಣಿಗಳೆಂದರೆ ತೋಳ, ಮುಂಗುಸಿ, ನರಿ, ನೀರುನಾಯಿ, ಕತ್ತೆಕಿರುಬ ಮತ್ತು ಮುಳ್ಳುಹಂದಿ.

ಆರ್ಥಿಕ ವ್ಯವಸ್ಥೆ: ಇಸ್ರೇಲಿನ ಆರ್ಥಿಕ ಚಟುವಟಿಕೆ ಪ್ರಾರಂಭದಿಂದಲೂ ಎರಡು ಸಮಸ್ಯೆಗಳನ್ನು ಎದುರಿಸುತ್ತ ಬಂದಿದೆ. ಮೊದಲನೆಯದು ಸತತವಾದ ಯುದ್ಧಭಯ. ಎರಡನೆಯದು ಹೆಚ್ಚುತ್ತಿರುವ ವಲಸೆಗಾರರು. ಇಂತಹ ಕಠಿಣ ಪರಿಸ್ಥಿತಿಯಲ್ಲೂ ಈ ಸಣ್ಣ ರಾಷ್ಟ್ರ ಸಾಧಿಸುತ್ತಿರುವ ಆರ್ಥಿಕ ಪ್ರಗತಿ ಗಮನಾರ್ಹ. ಕೃಷಿ, ಗಣಿಗಾರಿಕೆ ಹಾಗೂ ಕೈಗಾರಿಕೆಗಳು ಇಲ್ಲಿನ ಆರ್ಥಿಕ ಚಟುವಟಿಕೆಗಳು. ದೇಶದ ವಿಸ್ತೀರ್ಣದ ಶೇ. 20 ಭಾಗ ಭೂಮಿಯಲ್ಲಿ ಬೇಸಾಯ ಕಂಡುಬರುತ್ತದೆ. ಇಲ್ಲಿನ ಮುಖ್ಯ ಬೆಳೆಗಳೆಂದರೆ ಗೋದಿ, ಬಾರ್ಲಿ, ಹತ್ತಿ, ಹೊಗೆಸೊಪ್ಪು, ಬಿಟ್‌ರೂಟ್, ನೆಲಗಡಲೆ ಮತ್ತು ಹಣ್ಣುಗಳು. ಇಲ್ಲಿ ಬೆಳೆಯುವ ಪ್ರಮುಖ ಹಣ್ಣುಗಳೆಂದರೆ ಆಲಿವ್, ದ್ರಾಕ್ಷಿ, ಗೋಡಂಬಿ ಮತ್ತು ಕಿತ್ತಳೆ ವಿವಿಧ ತರಕಾರಿ ಮತ್ತು ಹೂವು. ಜಫ್ಫ್ ಕಿತ್ತಳೆ ಮತ್ತು ತರಕಾರಿಗಳು ಇಲ್ಲಿನ ರಫ್ತಾಗುವ ಪ್ರಮುಖ ಸರಕಾಗಿದೆ. ಕಬ್ಬಿಣ, ಪೊಟಾಷ್, ಬ್ರೊಮೈನ್, ಅಭ್ರಕ, ಗಂಧಕ, ಕಾಸ್ಟಿಕ್ ಸೋಡ, ತಾಮ್ರ, ಜಿಪ್ಸಮ್ ಮತ್ತು ಪೆಟ್ರೋಲ್ ಇಲ್ಲಿನ ಮುಖ್ಯ ಖನಿಜಗಳು. ಇಲ್ಲಿ ದೊರೆಯುವ ಪೆಟ್ರೋಲ್ ಸ್ಥಳೀಯ ಬಳಕೆಗೆ ಸಾಲದೆ ಆಮದು ಮಾಡಿಕೊಳ್ಳಲಾಗುವುದು.

ಇಸ್ರೇಲ್ ನೈಋತ್ಯ ಏಷ್ಯದಲ್ಲಿ ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿರುವ ಒಂದು ರಾಷ್ಟ್ರವಾಗಿದೆ. ಟೆಲ್‌ಅವಿವ್ ಮತ್ತು ಹೈಫ ಇಸ್ರೇಲ್‌ನ ಪ್ರಮುಖ ಕೈಗಾರಿಕಾ ಕೇಂದ್ರಗಳು. ಪ್ರಮುಖ ಕೈಗಾರಿಕೆಗಳೆಂದರೆ ಜವಳಿ, ಆಹಾರ ಸಂಸ್ಕರಣೆ, ರಾಸಾಯನಿಕ, ರಸಗೊಬ್ಬರ, ಯಂತ್ರೋಪಕರಣಗಳು, ವಿದ್ಯುತ್ ಉಪಕರಣಗಳು, ಆಭರಣಗಳು ಮತ್ತು ವಜ್ರದ ಕತ್ತರಿ ಸಾಣೆ.

ಉತ್ತಮ ಸಾರಿಗೆ ವ್ಯವಸ್ಥೆ ಹೊಂದಿದೆ. ರೈಲು ಮತ್ತು ರಸ್ತೆ ಸಾರಿಗೆ ಸಾಕಷ್ಟು ಕಂಡುಬರುತ್ತವೆ. ರೈಲು ಮಾರ್ಗಗಳು ಕರಾವಳಿ ಪ್ರದೇಶವನ್ನು ಒಳನಾಡು ಪ್ರದೇಶಗಳ ಜೊತೆಗೆ ಸಂಪರ್ಕಿಸುತ್ತವೆ. ಪ್ರಮುಖ ರೈಲು ನಿಲ್ದಾಣಗಳೆಂದರೆ ಜೆರುಸಲೆಮ್, ಹೈಫ ಮತ್ತು ಟೆಲ್‌ಅವಿವ್. ಜೆರುಸಲೆಂ ಪ್ರಮುಖ ರಸ್ತೆ ಮಾರ್ಗದ ಕೇಂದ್ರ. ಇಸ್ರೇಲ್‌ನಲ್ಲಿ ಒಳನಾಡು ಜಲ ಸಾರಿಗೆ ಕಂಡುಬರುವುದಿಲ್ಲ. ಆದರೆ ವಿದೇಶಿ ಜಲಮಾರ್ಗದ ಸಂಪರ್ಕ ಹೊಂದಿದೆ. ಮುಖ್ಯ ಬಂದರುಗಳೆಂದರೆ ಹೈಫ, ಟೆಲ್‌ಅವಿವ್, ಜಾಫಾ ಮತ್ತು ಯಾಲೆಟ್. ಟೆಲ್‌ಅವಿವ್‌ನ ಸಮೀಪದ ಬೆನ್–ಗುರಿಯನ್ ರಾಷ್ಟ್ರದ ಪ್ರಮುಖ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ.

ಜೆರೂಸಲೇಂ ನಗರ

ಇಸ್ರೇಲ್‌ನಲ್ಲಿ ರಫ್ತಿಗಿಂತ ಆಮದು ಮೊತ್ತ ಹೆಚ್ಚು ಇರುತ್ತದೆ. ಇದು ರಫ್ತು ಮಾಡುವ ಪ್ರಮುಖ ಸರಕುಗಳೆಂದರೆ ಕತ್ತರಿಸಿದ ವಜ್ರ, ಯಂತ್ರೋಪಕರಣಗಳು, ಹುಳಿ ಹಣ್ಣುಗಳು ಮತ್ತು ಜವಳಿ. ಇದರ ಪ್ರಮುಖ ಆಮದುಗಳೆಂದರೆ ಕಚ್ಚವಜ್ರ, ಕಬ್ಬಿಣ, ಸಿಮೆಂಟ್, ಉಕ್ಕು, ಚರ್ಮ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಸೈನಿಕ ಸಾಮಗ್ರಿಗಳು. ಇದು ಹೆಚ್ಚು ಐರೋಪ್ಯ ಆರ್ಥಿಕ ಸಮುದಾಯ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೊಡನೆ ವಿಶೇಷ ವ್ಯಾಪಾರ ಸಂಪರ್ಕ ಹೊಂದಿದೆ.

ಇಲ್ಲಿ ಜನಸಂಖ್ಯೆ ಅಸಮವಾಗಿ ಹಂಚಿಕೆಯಾಗಿದೆ. ಶೇ. 90 ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಮೆಡಿಟರೇನಿಯನ್ ತೀರ ಪ್ರದೇಶದಲ್ಲಿ ಹೆಚ್ಚು ಜನಸಂಖ್ಯೆ ಕಂಡುಬರುತ್ತದೆ. ನೆಗೆವ್ ಮರುಭೂಮಿ ಅತಿ ಕಡಿಮೆ ಜನಸಂಖ್ಯೆ ಹೊಂದಿದೆ. ಇಲ್ಲಿನ ಜನಸಂಖ್ಯೆಯ ಶೇ. 83 ಭಾಗ ಯಹೂದಿ ಜನಾಂಗದವರು. (ಆರ್.ಟಿ.ಎಸ್.)

**ಇಸ್ಲಾಂ ಧರ್ಮ:** ಪ್ರಪಂಚದ ಮುಖ್ಯ ಧರ್ಮಗಳಲ್ಲೊಂದು. ಮಹಮ್ಮದೀಯರ ಧರ್ಮಕ್ಕೆ ಇರುವ ಅರಬ್ಬೀ ಹೆಸರು. ಇಸ್ಲಾಂ ಧರ್ಮಿಯರನ್ನು ಮುಸ್ಲಿಮರೆಂತಲೂ ಕರೆಯುವರು. ಇಸ್ಲಾಂ ಎಂದರೆ ದೇವರಿಗೆ ಶರಣಾಗು ಎಂದರ್ಥ. ಸೌದಿ ಅರೇಬಿಯದ ಮಹಮದ್ ಪೈಗಂಬರ್‌ನಿಂದ (570–632) ಈ ಧರ್ಮ ಸ್ಥಾಪಿತಗೊಂಡಿದ್ದು ಒಂದೇ ದೇವರ ಅಸ್ತಿತ್ವವನ್ನು ಸಾರುವುದು. ದೇವರನ್ನು ಅರೇಬಿಕ್ ಭಾಷೆಯಲ್ಲಿ ಅಲ್ಲಾ ಎಂದು ಕರೆಯಲಾಗಿದೆ. ತನ್ನನ್ನು ದೇವರ ಪ್ರವಾದಿ ಎಂದು ಮಹಮದ್ ಕರೆದುಕೊಂಡಿದ್ದು ಈತನ ಬೋಧನೆಗಳನ್ನು ಕುರಾನ್ ಒಳಗೊಂಡಿದೆ.

ಕಾರವಾನ್ ಮಾರ್ಗದ ಮೆಕ್ಕದಲ್ಲಿ ಹಲವಾರು ಬುಡಕಟ್ಟುಗಳಿದ್ದವು. ಮಹಮ್ಮದನ ಪ್ರವರ್ತಕರ ಬೋಧನೆ, ಅರಬ್ಬರ ಹಲವಾರು ನಂಬಿಕೆಗಳನ್ನು ಆಧರಿಸಿ ಈ ಧರ್ಮ ಉಗಮ ಹೊಂದಿತು. ಕುರಾನ್ ಧಾರ್ಮಿಕ ತತ್ವಗಳನ್ನು ಮಾತ್ರವಲ್ಲದೆ. ದಿನನಿತ್ಯದ ಜೀವನದ ವಿಧಾನ, ದಿನದಲ್ಲಿ ಐದು ಬಾರಿ ಪ್ರಾರ್ಥನೆ, ವರ್ಷದಲ್ಲಿ ಒಂದು ತಿಂಗಳು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಉಪವಾಸ, ಸಾಧ್ಯವಾದರೆ ಜೀವನದಲ್ಲಿ ಒಂದು ಬಾರಿ ಮೆಕ್ಕ ಯಾತ್ರೆ ಮೊದಲಾದವುಗಳನ್ನು ಕುರಿತ ಬೋಧನೆಯನ್ನು ಕುರಾನಿನಲ್ಲಿ ವಿವರಿಸಲಾಗಿದೆ. ವಿಗ್ರಹಾರಾಧನೆ, ಮದ್ಯ ಸೇವನೆ, ಜೂಜು, ಹಂದಿಮಾಂಸ ಸೇವನೆ, ಬಡ್ಡಿ ತೆಗೆದುಕೊಳ್ಳುವುದು ಮೊದಲಾದವುಗಳನ್ನು ಕುರಾನ್ ಸ್ಪಷ್ಟವಾಗಿ ನಿಷೇಧಿಸಿದೆ.

ಈ ಧರ್ಮ ಅತ್ಯಲ್ಪ ಅವಧಿಯಲ್ಲಿ ವಿಸ್ತಾರವಾದ ಪ್ರದೇಶಗಳಲ್ಲಿ ಇತರ ಧರ್ಮಗಳಿಗಿಂತ ವೇಗವಾಗಿ ಹರಡಿದೆ. ಮಹಮ್ಮದನ ಮರಣಾನಂತರ ಕೇವಲ ಎರಡು ಶತಮಾನಗಳ ಅವಧಿಯಲ್ಲಿ ಇದು ಬಹು ಶೀಘ್ರವಾಗಿ ಬೆಳವಣಿಗೆ ಹೊಂದಿ ವ್ಯಾಪಕವಾಗಿ ಹರಡಿತು. ಈ ಅವಧಿಯಲ್ಲಿ ಉತ್ತರ ಆಫ್ರಿಕ ಹಾಗೂ ಮಧ್ಯ ಏಷ್ಯಗಳಲ್ಲದೆ ಪಶ್ಚಿಮದಲ್ಲಿ ಸ್ಪೇನಿನಿಂದ ಪೂರ್ವದಲ್ಲಿ ಸಿಂಧ್ ಪ್ರಾಂತ್ಯದವರೆಗೂ (ಭಾರತ) ವಿಸ್ತರಿಸಿತು. ಆಕ್ರಮಣ ಮತ್ತು ವಿಶೇಷ ಕಂದಾಯ ಹೇರಿಕೆಯನ್ನು ತಪ್ಪಿಸಿಕೊಳ್ಳಲು ಹಲವಾರು ಬುಡಕಟ್ಟುಗಳ ಜನ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಪೂರ್ವ ಆಫ್ರಿಕದಿಂದ ಇಂಡೋನೇಷ್ಯ ಹಾಗೂ ಮಲೇಷ್ಯಗಳಿಗೂ ಹರಡಿತು. ಆದಾಗ್ಯೂ ಪಶ್ಚಿಮ ಏಷ್ಯ ಇದರ ಕೇಂದ್ರ. ಇದರ ಸುತ್ತಲೂ ಇಸ್ಲಾಮಿನ ವಲಯ ವಿಸ್ತರಿಸಿದೆ.

ಪ್ರಪಂಚದಲ್ಲಿ ಸು. 95 ಕೋಟಿ (ಶೇ. 17.7) ಅನುಯಾಯಿಗಳನ್ನು ಹೊಂದಿರುವ ಈ ಧರ್ಮ ಎರಡು ಮುಖ್ಯ ಕವಲುಗಳಾಗಿ ವಿಂಗಡಿಸಲ್ಪಟ್ಟಿರುವುದು. ಅವುಗಳೆಂದರೆ ಷಿಯಾ ಮತ್ತು ಸುನ್ನಿ ಪಂಥಗಳು. ಸುನ್ನಿ ಪಂಥ ಷಿಯಾಗಿಂತಲೂ ಅಧಿಕ ಜನಸಂಖ್ಯೆಯ ಅನುಯಾಯಿಗಳನ್ನು ಹೊಂದಿದೆ. ಷಿಯಾ ಪಂಥದ ಸಂಖ್ಯೆ ಕಡಿಮೆ. ಈ ಪಂಥ ಇರಾನಿನಲ್ಲಿ ಕೇಂದ್ರೀಕೃತವಾಗಿದ್ದು, ಇರಾಕ್, ಸಿರಿಯ, ಲೆಬನಾನ್ ಹಾಗೂ ಭಾರತದಲ್ಲಿಯೂ ಅನುಯಾಯಿಗಳನ್ನು ಹೊಂದಿದೆ.

ಇಸ್ಲಾಂ ಧರ್ಮದ ಒಳತಿರುಳನ್ನು ಪರಿಶೀಲಿಸಿದರೆ ಪ್ರಪಂಚದ ಎಲ್ಲಾ ಪ್ರಮುಖ ಧರ್ಮಗಳ ತಾತ್ಪರ್ಯವೂ ಒಂದೇ ಎಂಬ ಭಾವನೆ ಮೂಡಿಗೊಳ್ಳುತ್ತದೆ. ಪ್ರಾರ್ಥನೆ, ಸರಳ ಜೀವನಕ್ರಮ, ದಾನಧರ್ಮ, ಪರೋಪಕಾರ, ಆತ್ಮೋದ್ಧಾರ ಮುಂತಾದ ಎಲ್ಲ ಧರ್ಮಗಳ ಸಾರವನ್ನೇ ಇಸ್ಲಾಂನಲ್ಲೂ ಕಾಣಬಹುದು. ಇಸ್ಲಾಂ ಒಂದು ಸರಳ ಸುಲಭವಾದ ಧರ್ಮ. (ಎಸ್.ಜಿ.ಎಂ.)

**ಇಸ್ಲಾಮಾಬಾದ್ (ಪಾಕಿಸ್ತಾನ):** ಪಾಕಿಸ್ತಾನದ ರಾಜಧಾನಿ. ಇದು ರಾವಲ್ಪಿಂಡಿಯ ಈಶಾನ್ಯ ಭಾಗದಲ್ಲಿದೆ. ಜನಸಂಖ್ಯೆ 2,01,000 (2002). 1959ರಲ್ಲಿ ಕರಾಚಿಯ ಬದಲು ಇದನ್ನು ರಾಜಧಾನಿಯನ್ನಾಗಿ ಮಾಡಲಾಯಿತು. ಇಲ್ಲಿ ಇಸ್ಲಾಮಿಯರ ಪಾರಂಪರಿಕ ಹಾಗೂ ಆಧುನಿಕ ವಾಸ್ತುಶಿಲ್ಪಗಳಿವೆ. ನಗರ ಚಿಕ್ಕದಾಗಿದ್ದು 65 ಚ.ಕಿಮೀ ವಿಸ್ತೀರ್ಣ ಹೊಂದಿದೆ. ಆದರೆ ಇದರ ಯೋಜಿತ ವಿಸ್ತೀರ್ಣ 90 ಚ.ಕಿಮೀ. 1965ರಲ್ಲಿ ಇಸ್ಲಾಮಬಾದ್ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿತು. *

**ಇಸ್ಲಾಮಾಬಾದ್ (ಭಾರತ):** ಜಮ್ಮು ಮತ್ತು ಕಾಶ್ಮೀರದಲ್ಲಿ ಶ್ರೀನಗರದ ಆಗ್ನೇಯಕ್ಕೆ 56 ಕಿಮೀ ದೂರದಲ್ಲಿ ಝೀಲಂ ನದೀದಡದ ಮೇಲಿರುವ ಪಟ್ಟಣ. ಇಂದಿನ ಹೆಸರು ಅನಂತನಾಗ್. ಇದು ಪ್ರಸ್ಥಭೂಮಿಯ ಬುಡದಲ್ಲಿದೆ. ಇದರ ಅಂಚಿನಲ್ಲಿ ಸೂಚ್ಯಗ್ರ ಪರ್ವತವಿದೆ. ಪಟ್ಟಣದ ಹತ್ತಿರ ಅನೇಕ ಚಿಲುಮೆಗಳಿವೆ; ಅತಿ ದೊಡ್ಡದು ಅನಂತನಾಗ್. ಈ ಹೆಸರೇ ಪಟ್ಟಣಕ್ಕೂ ಬಂದಿದೆ. ಮಲ್ಲಿಕನಾಗ್ ಎಂಬ ಇನ್ನೊಂದು ಚಿಲುಮೆ ಗಂಧಕಾಂಶವನ್ನೊಳಗೊಂಡಿರುವುದರಿಂದ ತೋಟಗಳ ವ್ಯವಸಾಯಕ್ಕೆ ಉಪಯುಕ್ತವಾಗಿದೆ. ಕಾಶ್ಮೀರದ ದೊಡ್ಡ ಕಣಿವೆಯಲ್ಲಿ ಇದೊಂದು ಅತಿರಮ್ಯ ಸ್ಥಳ. ಹಿಂದೆ ಕಾಶ್ಮೀರದ ರಾಜಧಾನಿ. ಬೇಸಗೆಯಲ್ಲಿ ಉಪಯೋಗಿಸುತ್ತಿದ್ದ ಒಂದು ಅರಮನೆ, ಸುಂದರ ಮಸೀದಿ, ದೇವಸ್ಥಾನಗಳು ಇಂದಿಗೂ ಇವೆ. ಜನರ ಮುಖ್ಯ ಕಸಬು ಕೃಷಿ, ನೆಯ್ಗೆ (ಶಾಲುನೇಯುವುದು). *

**ಇಳಕಲ್ಲು:** ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಒಂದು ಮುಖ್ಯ ಊರು. ಹುನಗುಂದದ ದಕ್ಷಿಣಕ್ಕೆ 14 ಕಿಮೀ ದೂರದಲ್ಲಿದೆ. ಸನ್ನಿವೇಶ : $15^0.35'$ ಉ. ಅ. $76^0.7'$ ಪೂರೇ. ಇಳಕಲ್ಲು ಖಣ, ಸೀರೆ ಹೆಸರುವಾಸಿ. ನೇಯ್ಗೆಯ ಹಾಗೂ ಬಣ್ಣಹಾಕುವ ಕೈಗಾರಿಕೆಗಳಿಗೆ ಈ ಊರು ಪ್ರಸಿದ್ಧವಾಗಿದೆ. ಈ ಊರಿನಲ್ಲಿ ಬನಶಂಕರಿ, ಬಸವಣ್ಣ ಮತ್ತು ವೆಂಕೋಬ ದೇವಸ್ಥಾನಗಳಿವೆ. (ಕೆ.ಎನ್.ಪಿ.)

**ಇಳಿಜಾರು:** ಸಮಾನಾಂತರ ವಿಸ್ತರಣೆಗೆ ಅನುಗುಣವಾಗಿ ಒಂದು ಪ್ರದೇಶ ಹೊಂದಿರುವ ಎತ್ತರ (ಗ್ರೇಡಿಯಂಟ್). ಭೌಗೋಳಿಕ ವಿವರಣೆಗಳಿಗೆ ಇಳಿಜಾರಿನ ವಿಶ್ಲೇಷಣೆ ಅತ್ಯಗತ್ಯ. ಏಕೆಂದರೆ ಇಳಿಜಾರು ಜಲವ್ಯವಸ್ಥೆ, ಸಸ್ಯ ಮತ್ತು ಪ್ರಾಣಿ ಸಮೂಹ, ಮಣ್ಣಿನ

ಸವೆತ, ವಸತಿಗಳ ಹಂಚಿಕೆ, ಸಂಚಾರ ಮತ್ತು ಸಂಪರ್ಕ ಮಾಧ್ಯಮಗಳ ಹಂಚಿಕೆಯ ಮೇಲೆ ಪರಿಣಾಮವನ್ನು ಬೀರುವುದು. ಇಳಿಜಾರನ್ನು ಅನೇಕ ವಿಧಗಳಿಂದ ಅಳೆಯಬಹುದು:

1. ಕೋನಗಳಿಂದ: ಈ ವಿಧಾನದಲ್ಲಿ ಊರ್ಧ್ವ ಅಂತರ ಹಾಗೂ ಸಮಾನಾಂತರ ಅಂತರದ ಅನುಪಾತವನ್ನು ಕೋನಗಳಲ್ಲಿ ಸೂಚಿಸಲಾಗುವುದು.

2. ಭಿನ್ನರಾಶಿಯಿಂದ: ಇಳಿಜಾರಿನ ಪ್ರಮಾಣವನ್ನು ಭಿನ್ನರಾಶಿಯ ರೂಪದಲ್ಲಿಯೂ ಸೂಚಿಸಬಹುದು. ಇದರಲ್ಲಿ ಅಂಶ ಮತ್ತು ಛೇದಗಳು ಕ್ರಮವಾಗಿ ಊರ್ಧ್ವ ಹಾಗೂ ಸಮಾನಾಂತರ ಅಂತರ 50 ಮತ್ತು 1000 ಮೀಟರ್ ಆಗಿದ್ದಾಗ ಇಳಿಜಾರು:

$$\text{ಇಳಿಜಾರು} = \frac{\text{ಊರ್ಧ್ವ ಅಂತರ (VI)}}{\text{ಸಮಾನಾಂತರ ಅಂತರ (HI)}} = \frac{50}{1000} = \frac{1}{20}$$

ಇದು 20 ಮೀ. ದೂರಕ್ಕೆ 1 ಮೀ. ಇಳಿಜಾರು ಇರುವುದನ್ನು ಸೂಚಿಸುವುದು.

3. ಶೇಕಡ ಪ್ರಮಾಣದಿಂದ: ಈ ವಿಧಾನದಲ್ಲಿ ಊರ್ಧ್ವ ಅಂತರಗಳನ್ನು ಶೇಕಡ ಪ್ರಮಾಣದಲ್ಲಿ ಸೂಚಿಸಲಾಗುವುದು. ಉದಾ: ಊರ್ಧ್ವ ಅಂತರ 50 ಅಡಿ ಹಾಗೂ ಸಮಾನಾಂತರ ಅಂತರ 1000 ಅಡಿ ಆಗಿದ್ದಾಗ

$$\text{ಇಳಿಜಾರು} = \frac{\text{ಊರ್ಧ್ವ ಅಂತರ(VI)}}{\text{ಸಮಾನಾಂತರ ಅಂತರ(HI)}} \times \frac{50}{100} = \times 100 = \text{ಶೇ.}5$$

4. ಮಿಲ್‌ಗಳ ಮೂಲಕ: ರಕ್ಷಣಾತ್ಮಕ ಭೂಪಟಗಳಲ್ಲಿ ಮಿಲ್ ಅಳತೆಯನ್ನು ಸಾಮಾನ್ಯವಾಗಿ ಬಳಸುವರು. ಇದು ಇಳಿಜಾರಿನ ಶೇಕಡಾ ಪ್ರಮಾಣದ ಹತ್ತು ಪಟ್ಟಾಗಿರುವುದು.

$$\text{ಉದಾ: ಇಳಿಜಾರು} = \frac{\text{ಊರ್ಧ್ವ ಅಂತರ (VI)}}{\text{ಸಮಾನಾಂತರ ಅಂತರ(HI)}} \times 1000$$

$$= \frac{50}{1000} \times 1000 = 50 \text{ ಮಿಲ್‌ಗಳು}$$

(ಆರ್.ಎಸ್.)

# ಈ

**ಈಕ್ವೆಡಾರ್:** ದಕ್ಷಿಣ ಅಮೆರಿಕದ ಒಂದು ಗಣರಾಜ್ಯ. ಈ ಖಂಡದ ಸ್ವತಂತ್ರ ರಾಜ್ಯಗಳ ಪೈಕಿ ಉರಗ್ವೆಯನ್ನು ಬಿಟ್ಟರೆ ಇದೇ ಅತ್ಯಂತ ಚಿಕ್ಕದು. ಈ ರಾಜ್ಯದ ಉತ್ತರದಲ್ಲಿ ಕೊಲಂಬಿಯವೂ ಪಶ್ಚಿಮದಲ್ಲಿ ಪೆಸಿಫಿಕ್ ಸಾಗರವೂ ದಕ್ಷಿಣ-ಪೂರ್ವಗಳಲ್ಲಿ ಪೆರುವೂ ಇವೆ. ಈ ರಾಜ್ಯದ ಮೇಲೆ ಭೂಮಧ್ಯರೇಖೆ (ಇಕ್ವೇಟರ್) ಹಾದು ಹೋಗುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಈ ದೇಶ ದ.ಅ. $5^0$–ಉ.ಅ.$2^0$ ಮತ್ತು ಪ.ರೇ.$75^0$–$81^0$ ರವರೆಗೆ ಹಬ್ಬಿದೆ. ವಿಸ್ತೀರ್ಣ 2,70,670 ಚ.ಕಿಮೀ. ಜನಸಂಖ್ಯೆ 13,547,51 (2002).

ಮೇಲ್ಮೈ ಲಕ್ಷಣ: ಆಂಡೀಸ್ ಪರ್ವತ ಶ್ರೇಣಿ ಈ ರಾಜ್ಯದಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿರುವುದರಿಂದ ಈ ರಾಜ್ಯದಲ್ಲಿ ತಾರತಮ್ಯತೆಗಳು ವಿಪರೀತ. ಇಲ್ಲಿ ಒಂದು ಕಡೆ ಅರೆಮರುಭೂಮಿಯೂ ಇನ್ನೊಂದು ಕಡೆ ಗಂಭೀರ ಕಾನನವೂ ಮತ್ತೊಂದು ಕಡೆ ಸಮುದ್ರದಲ್ಲಿ ಕಾಲ್ತೊಳೆಯುವ ತಗ್ಗುನೆಲವೂ ಮಗುದೊಂದು ಕಡೆ ಅಮೆಜ಼ಾನ್ ನದಿಯ ಶಿರೋಭಾಗವೂ ಇವೆ. ಇವುಗಳ ನಡುವೆ ಆಂಡೀಸ್ ಪರ್ವತ ನಿಂತಿದೆ. ಈಕ್ವೆಡಾರನ್ನು ಮೂರು ಸ್ವಾಭಾವಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು.

ಪಶ್ಚಿಮ ಕರಾವಳಿ: ಪೆಸಿಫಿಕ್ ಸಾಗರಕ್ಕೂ ಆಂಡೀಸ್ ಪರ್ವತ ಶ್ರೇಣಿಗೂ ನಡುವೆ ಇರುವ ಈ ಪ್ರದೇಶದ ಅಗಲ 32–185 ಕಿಮೀ. ದೇಶದ ಒಟ್ಟು ವಿಸ್ತೀರ್ಣದಲ್ಲಿ ಇದು ಕಾಲುಭಾಗದ ಪ್ರದೇಶವನ್ನೊಳಗೊಂಡಿದ್ದು 440 ಮೀ ಎತ್ತರದಿಂದ ಸಮುದ್ರಮಟ್ಟದವರೆಗೆ ಇಳಿಜಾರಾಗಿದೆ. ಈ ಭಾಗ ಮೆಕ್ಕಲುಮಣ್ಣಿನಿಂದ ಕೂಡಿದ ಫಲವತ್ತಾದ ಪ್ರದೇಶವಾದ್ದರಿಂದ ವ್ಯವಸಾಯ ಯೋಗ್ಯ ನೆಲ. ಗ್ವಾಯಾಸ್ ಮತ್ತು ಎಸ್ಮರಾಲ್ಡಾಸ್ ಇಲ್ಲಿನ ಮುಖ್ಯನದಿಗಳು.

ಸಿಯೆರ ಅಥವಾ ಪರ್ವತಪ್ರದೇಶ: ಇದು ದೇಶದ ವಿಸ್ತೀರ್ಣದಲ್ಲಿ 1/2 ಭಾಗವನ್ನೊಳಗೊಂಡಿದೆ. ಇಲ್ಲಿ ಹಬ್ಬಿರುವ ಆಂಡೀಸ್ ಪರ್ವತದಿಂದ ದಕ್ಷಿಣೋತ್ತರವಾಗಿ ದೇಶ ಇಬ್ಭಾಗವಾಗಿದೆ. ಆಂಡೀಸ್ ಪರ್ವತಪಂಕ್ತಿಗಳ ಅಗಲ 113–161 ಕಿಮೀ ಉದ್ದ ಸು. 644 ಕಿಮೀ. ಈ ಪರ್ವತ ಪ್ರದೇಶ ದೇಶದ ಜಲ ವಿಭಾಜಕ ಕ್ಷೇತ್ರವಾದ್ದರಿಂದ ನದಿಗಳು ಪೂರ್ವಪಶ್ಚಿಮಾಭಿಮುಖವಾಗಿ ಹರಿಯುತ್ತವೆ. ಇಲ್ಲಿ ಅನೇಕ ಶಿಖರಗಳು 5454 ಮೀ ಗಳಿಗಿಂತ ಎತ್ತರ. ಇವು ಹಿಮಾಚ್ಛಾದಿತ. ಶಿಖರಗಳು ಪೈಕಿ ಚಿಂಬರಾಸೋ 6050 ಮೀ ಅತ್ಯುನ್ನತ. ಇದು ಲುಪ್ತ ಜ್ವಾಲಾಮುಖಿಯೊಂದರ ಟೊಪ್ಪಿಗೆ. ಆಂಡೀಸ್ ಪ್ರದೇಶವೇ ಪ್ರಪಂಚದ ಜ್ವಾಲಾಮುಖಿಗಳ ಕ್ರಿಯೆಯ ಒಂದು ಮುಖ್ಯಕೇಂದ್ರ. ಇಲ್ಲಿ ಸುಮಾರು 20 ಜೀವಂತ ಜ್ವಾಲಾಮುಖಿಗಳಿವೆ. ಕೋಟೊಪಾಕ್ಸಿ 5690 ಮೀ. ಪ್ರಪಂಚದ ಅತ್ಯುನ್ನತ ಜೀವಂತ ಅಗ್ನಿಪರ್ವತ. ಆಂಟಿಸಾನ, ಕಾಯಾಂಬೆ ತುಂಗುರಾವ, ಪಿಚಿಂದ ಇತರ ಅಗ್ನಿಪರ್ವತಗಳು. ಈ ರಾಜ್ಯದಲ್ಲಿ ಭೀಕರ ಭೂಕಂಪಗಳು ಪದೇ ಪದೇ ಸಂಭವಿಸುತ್ತಿರುತ್ತವೆ.




ಅರಣ್ಯ ಪ್ರದೇಶ: ಇದು ದೇಶದ ಪೂರ್ವಭಾಗ. ಸಮುದ್ರ ಮಟ್ಟದಿಂದ 1176 ಮೀ ಎತ್ತರದಲ್ಲಿದೆ. ಅಮೆಜ಼ಾನ್ ನದಿಯ ಉಪನದಿಗಳ ಪಾತ್ರವನ್ನೊಳಗೊಂಡಿರುವ ಈ ಪ್ರದೇಶ ದಟ್ಟವಾದ ಕಾಡುಗಳಿಂದ ಆವೃತ. ದೇಶದ ಒಟ್ಟು ವಿಸ್ತೀರ್ಣದಲ್ಲಿ ಅರ್ಧಭಾಗವನ್ನು ಕ್ರಮಿಸಿಕೊಂಡಿರುವ ಈ ಪ್ರದೇಶ ಬಹಳ ಹಿಂದುಳಿದಿದೆ.

ವಾಯುಗುಣ, ಸಸ್ಯ ವರ್ಗ ಮತ್ತು ಜನಜೀವನ: ಈ ದೇಶದ ಮೇಲೆ ಸಮಭಾಜಕ ವೃತ್ತ ಹಾದುಹೋದರೂ ಇಲ್ಲಿ ಒಂದೇ ಮಾದರಿಯ ವಾಯುಗುಣ ಕಂಡುಬರುವುದಿಲ್ಲ. ಇದು ಎತ್ತರಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಪಶ್ಚಿಮತೀರ ಪ್ರದೇಶದಲ್ಲಿ ಉಷ್ಣತೆಯೂ ಮಳೆಯೂ ಹೆಚ್ಚು. ಆದರೆ ಪ್ರಸ್ಥಭೂಮಿ ಹೆಚ್ಚು ತಂಪು. ಮಳೆ ಸು. 125 ಸೆಂಮೀ. ಎತ್ತರವಾದ ಶಿಖರಗಳನ್ನು ಹಿಮ ಕವಿದಿದೆ. ಇಲ್ಲಿನ ಸ್ವಾಭಾವಿಕ ಸಸ್ಯವರ್ಗ ಆಯಾಪ್ರದೇಶದ ಎತ್ತರ ಮತ್ತು ಮಳೆಯ ಪ್ರಮಾಣಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಮಳೆ ಹೆಚ್ಚಾಗಿ ಬೀಳುವ ತೀರಪ್ರದೇಶದಲ್ಲೂ ಪರ್ವತಪ್ರದೇಶದಲ್ಲೂ ಪೂರ್ವದ ಇನ್ನು ಕೆಲವು ಭಾಗಗಳಲ್ಲೂ ದಟ್ಟವಾದ ಕಾಡುಗಳಿವೆ. ಮಳೆ ಕಡಿಮೆ ಬೀಳುವ ಎತ್ತರ ಪ್ರದೇಶಗಳಲ್ಲಿ ಹುಲ್ಲುಗಾವಲುಗಳು ಹರಡಿವೆ. ಈ ದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇ. 74 ಭಾಗ ಬೆಲೆ ಬಾಳುವ ಮರಗಳ ಕಾಡು. ಒಳ್ಳೆಯ ಮಾರ್ಗಗಳಿಲ್ಲದ್ದರಿಂದ ಕಾಡಿನ ಉತ್ಪನ್ನಗಳನ್ನು ಹೆಚ್ಚು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಲಾಗುತ್ತಿಲ್ಲ. ವ್ಯವಸಾಯ, ಪಶುಪಾಲನೆ ಜನರ ಮುಖ್ಯ ಕಸಬು. ಶೇ. 50 ಜನ ವ್ಯವಸಾಯದಿಂದ ಜೀವಿಸುತ್ತಾರೆ. ಒಟ್ಟು ವಿಸ್ತೀರ್ಣದಲ್ಲಿ ಕೇವಲ ಶೇ. 10 ಭಾಗದಲ್ಲಿ ವ್ಯವಸಾಯ ಮಾಡಲಾಗುತ್ತಿದೆ. ಶೇ. 5 ಭಾಗದಲ್ಲಿ ದನ ಕುರಿ ಸಾಕುತ್ತಾರೆ. ಈ ದೇಶದ ಮುಖ್ಯ ಬೆಳೆಗಳು ಗೋದಿ, ಬಾರ್ಲಿ, ಕಾಫಿ, ಬತ್ತ, ಬಾಳೆ, ಕೋಕೋ. ತೀರಪ್ರದೇಶದಲ್ಲಿ ಮೀನು ಹಿಡಿಯುವುದು ಮುಖ್ಯ ಕಸಬು.

ಇಲ್ಲಿನ ಮುಖ್ಯ ಖನಿಜಗಳು ಚಿನ್ನ, ತಾಮ್ರ, ಕಬ್ಬಿಣ, ಜಿಪ್ಸಂ, ಗಂಧಕ, ಪೆಟ್ರೋಲ್, ಉಪ್ಪು. ಆದರೆ ಇವನ್ನು ಹೆಚ್ಚಾಗಿ ಉತ್ಪಾದಿಸಲಾಗುತ್ತಿಲ್ಲ. ದೇಶದ ಒಟ್ಟು ರಾಷ್ಟ್ರೀಯ ವರಮಾನದಲ್ಲಿ ಶೇ. 2 ರಷ್ಟು ಮಾತ್ರ ಗಣಿಗಳಿಂದ ಬರುತ್ತದೆ. ಈ ದೇಶದ ನದಿಗಳು 9,69,150 ಕಿವಾ ವಿದ್ಯುಚ್ಛಕ್ತಿ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆಯಾದರೂ ಕೇವಲ 33,000 ಕಿವಾ ಮಾತ್ರ ಉತ್ಪಾದಿಸಲಾಗುತ್ತಿದೆ. ಇಲ್ಲಿನ ಮುಖ್ಯ ಕೈಗಾರಿಕೆಗಳೆಂದರೆ ಹತ್ತಿ ಮತ್ತು ಉಣ್ಣೆಯ ಗಿರಣಿಗಳು. ರಬ್ಬರ್, ಕಾಗದ ಮತ್ತು ಚರ್ಮದ ಕಾರ್ಖಾನೆಗಳೂ ಇವೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 23 ರಷ್ಟು ಜನ ಕೈಗಾರಿಕೆಯಿಂದ ಜೀವಿಸುತ್ತಾರೆ. ರಾಷ್ಟ್ರೀಯ ವರಮಾನದಲ್ಲಿ ಶೇ. 16 ಭಾಗ ಕೈಗಾರಿಕೆಯದು. ಇಲ್ಲಿಂದ ರಫ್ತಾಗುವ ವಸ್ತುಗಳು ಮುಖ್ಯವಾಗಿ ಬಾಳೆ, ಕಾಫಿ, ಕೋಕೋ ಮತ್ತು ಇತರ ವ್ಯವಸಾಯೋತ್ಪನ್ನಗಳು. ಯಂತ್ರೋಪಕರಣ, ವಾಹನ, ಔಷಧಿ, ಗೋದಿ ಮುಂತಾದವು ಮುಖ್ಯ ಆಮದು ವಸ್ತುಗಳು.

ಈಕ್ವೆಡಾರಿನ ಜನಸಂಖ್ಯೆಯಲ್ಲಿ ಶೇ. 29 ಜನ ಪಟ್ಟಣಗಳಲ್ಲಿ ವಾಸ ಮಾಡುತ್ತಾರೆ. ಶೇ. 41 ಮಂದಿ ಮೆಸ್ಟಿಜೋಗಳು (ಐರೋಪ್ಯ ಹಾಗೂ ಕಪ್ಪು ಬಣ್ಣದ ಜನಗಳ ಬೆರಿಕೆ), ಶೇ. 39 ಮಂದಿ ಇಂಡಿಯನ್ನರು, ಶೇ. 10 ಬಿಳಿಯರು, ಶೇ. 5 ನೀಗ್ರೋಗಳು. ನೂರರಲ್ಲಿ ತೊಂಬತ್ನಾಲ್ಕು ಮಂದಿ ರೋಮನ್ ಕೆಥೊಲಿಕರು. ಸ್ಪಾನಿಷ್ ಇಲ್ಲಿನ ಸರ್ಕಾರಿ ಭಾಷೆ. ಶೇ. 93 ಜನ ಈ ಭಾಷೆ ಆಡುತ್ತಾರೆ.

ಈ ದೇಶದಲ್ಲಿ ಸು. 1127 ಕಿಮೀ ಕಿರು ಅಂತರ (ನ್ಯಾರೋ ಗೇಜ್) ರೈಲುಮಾರ್ಗಗಳಿವೆ. ಗ್ವಾಯಾಕಿಲ್–ಕೀಟೊ ಮಾರ್ಗ ಮುಖ್ಯವಾದುದ್ದು. ಇಲ್ಲಿನ ರೈಲ್ವೆಯನ್ನು 1944ರಲ್ಲಿ ರಾಷ್ಟ್ರೀಕರಣಗೊಳಿಸಲಾಯಿತು. ಇಲ್ಲಿ ಸು. 12880 ಕಿಮೀ ರಸ್ತೆಗಳಿವೆ. ಪ್ಯಾನ್–ಅಮೆರಿಕನ್ ಹೆದ್ದಾರಿ ಮುಖ್ಯವಾದುದ್ದು. ಇದು ಕೊಲಂಬಿಯದಿಂದ ಪೆರುವಿಗೆ ಈ ದೇಶದ ಮೂಲಕ ಹಾದುಹೋಗುತ್ತದೆ.

ಈಕ್ವೆಡಾರಿನ ರಾಜಧಾನಿ ಕ್ವಿಟೊ. ಇದು ಸು. 2647 ಮೀ ಎತ್ತರದಲ್ಲಿ, ಹೆಚ್ಚು ಕಡಿಮೆ ಭೂಮಧ್ಯರೇಖೆಯ ಮೇಲೆ ಇದೆ. ಜನಸಂಖ್ಯೆ 1,500,000 (2002). ಗ್ವಾಯಾಕೀಲ್ ದೇಶದ ದೊಡ್ಡ ಪಟ್ಟಣ, ಮುಖ್ಯ ವ್ಯಾಪಾರ ಮತ್ತು ಕೈಗಾರಿಕಾಕೇಂದ್ರ. ಇದರ ಜನಸಂಖ್ಯೆ 1,72,000. ಕ್ವೆಂಗ್ಕ, ಮಾಂಟ, ಪ್ವೆರ್ಟೋ ಬೊಲೀವಾರ್ ಇತರ ಪಟ್ಟಣಗಳು.

ಪಶ್ಚಿಮತೀರದ ಹಾಗೂ ಪೂರ್ವ ನಾಡಿನ ಜನ ಇನ್ನೂ ಹಿಂದುಳಿದವರು. ತೀರ ವಾಸಿಗಳಿಗೆ ಮೀನುಗಾರಿಕೆ, ಬೇಟೆ ಮುಖ್ಯ ಉದ್ಯಮ. ಮೇಲ್ನಾಡುಗಳ ಬಟ್ಟೆ, ಚಿನ್ನ ಬೆಳ್ಳಿಗಳಿಗೆ ಇವರು ಇವನ್ನು ಮಾರುತ್ತಿದ್ದರು. ತೀರದ್ವೀಪಗಳು ಇವರ ದೃಷ್ಟಿಯಲ್ಲಿ ಪವಿತ್ರ. ತಮ್ಮ ನಾಯಕರು ಸತ್ತರೆ ಅವರ ಸಮಾಧಿಗೆ ಈ ದ್ವೀಪಗಳು ಮೀಸಲಾಗಿದ್ದುವು. ತೀರಪ್ರದೇಶದ ಮೂಲವಾಸಿಗಳು ಕ್ರಮೇಣ ಕಣ್ಮರೆಯಾದರು. ಅಳಿದುಳಿದವರು ನೀಗ್ರೊಗಳೊಂದಿಗೂ ಇತರರೊಂದಿಗೂ ಬೆರೆತುಹೋದರು. ಪೂರ್ವದ ಜನ ತಮ್ಮ ಪ್ರತ್ಯೇಕತೆಯ ಕಾರಣದಿಂದ ತಮ್ಮತನವನ್ನು ಉಳಿಸಿಕೊಂಡರು.

ಮುಂದೆಯೂ ಈಕ್ವೆಡಾರಿನ ಇತಿಹಾಸ ಸುಸೂತ್ರವಾಗಿ ನಡೆಯಲಿಲ್ಲ. ಆ ವೇಳೆಗೆ ಕರಾವಳಿಯ ಆರ್ಥಿಕ ಪ್ರಾಬಲ್ಯ ಹೆಚ್ಚಿ ರಾಜಕೀಯದಲ್ಲೂ ಅಲ್ಲಿನವರ ಪ್ರಭಾವ ಬೆಳೆಯಿತು. ಆದರೂ ಸರ್ಕಾರ ಮಾತ್ರ ಉದ್ದಕ್ಕೂ ಅಭದ್ರವಾಗಿಯೇ ಸಾಗಿತ್ತು. ಈಕ್ವೆಡಾರಿನಲ್ಲಿ ಅನೇಕ ಬಾರಿ ಕ್ಷಿಪ್ರಕ್ರಾಂತಿಗಳು ಸಂಭವಿಸಿವೆ. ಒಬ್ಬರಾದ ಮೇಲೆ ಒಬ್ಬರಂತೆ ಸೇನಾಧಿಕಾರಿಗಳು ಆಡಳಿತಸೂತ್ರ ವಹಿಸಿಕೊಂಡಿದ್ದಾರೆ. ಅಲ್ಲಿನ ಭೂಕಂಪಗಳಂತೆ ಆಡಳಿತದಲ್ಲೂ ಕಂಪನಗಳು ಸಾಮಾನ್ಯ. (ಕೆ.ಎನ್.ಯು.)

**ಈಜಿಪ್ಟ್:** ಆಫ್ರಿಕ ಖಂಡದ ಈಶಾನ್ಯದಲ್ಲಿರುವ ಒಂದು ಗಣರಾಜ್ಯ. ಇದಕ್ಕೆ ಸೇರಿದ ಸಿನಾಯ್ ಪರ್ಯಾಯ ದ್ವೀಪ ಪ್ರದೇಶ ಮಧ್ಯ ಏಷ್ಯಕ್ಕೆ ಸಂಪರ್ಕಿಸಿದೆ. ಅರಬ್ ಗಣರಾಜ್ಯವೆಂದು ಇದರ ಅಧಿಕೃತ ಹೆಸರು. ಪುರಾತನ ನಾಗರಿಕತೆಯ ಅತಿಮುಖ್ಯ ಕೇಂದ್ರಗಳಲ್ಲಿ ಒಂದು.

ಆಫ್ರಿಕದ ಸುಮಾರು ಮೂವತ್ತನೆಯ ಒಂದು ಭಾಗದಷ್ಟಿರುವ ಈ ದೇಶದ ವಿಸ್ತೀರ್ಣ 9,97,739 ಚ.ಕಿಮೀ. ಸ್ಥೂಲವಾಗಿ ಇದು ಚಚ್ಚೌಕಾಕಾರವಾಗಿದೆ. ಉತ್ತರ ಅಕ್ಷಾಂಶ $22^0$ ಯಿಂದ $32^0$ಯ ವರೆಗೂ ಪೂರ್ವರೇಖಾಂಶ $25^0$ ಯಿಂದ $36^0$ಯ ವರೆಗೂ ಇರುವ ಈ ದೇಶದ ದಕ್ಷಿಣೋತ್ತರ ಪರಮಾವಧಿ ದೂರ 1085 ಕಿಮೀ. ಪೂರ್ವ–ಪಶ್ಚಿಮ 1255 ಕಿಮೀ. ಇಸ್ರೇಲ್, ಸೂಡಾನ್, ಲಿಬಿಯ, ಮೆಡಿಟರೇನಿಯನ್ ಸಮುದ್ರ, ಕೆಂಪು ಸಮುದ್ರ – ಇವು ಮೇರೆಗಳು.

ಈಜಿಪ್ಟಿನ ಮುಖ್ಯಭಾಗಗಳೆಂದರೆ ನೈಲ್ ನದಿಯ ಕೆಳಭಾಗ ಮತ್ತು ಅದರ ಮುಖಜಭೂಮಿ. ಮೇಲಣ ಈಜಿಪ್ಟ್, ಕೆಳಗಣ ಈಜಿಪ್ಟುಗಳೆಂದೂ ಕರೆಯುತ್ತಾರೆ. ನೈಲ್ ನದಿ ಕಣಿವೆಯ ಹೊರಗೆ ಇರುವ ಪ್ರದೇಶಗಳೆಂದರೆ ಪಶ್ಚಿಮದ ದಕ್ಷಿಣ ಮರುಭೂಮಿಗಳು. ಸಿನಾಯ್ ಮತ್ತು ಕೆಂಪು ಸಮುದ್ರದ ಜಿಲ್ಲಾಪ್ರಾಂತ್ಯಗಳು. ಸೂಯೆಜ್ ಖಾರಿಯಲ್ಲೂ ಕೆಂಪು ಸಮುದ್ರದಲ್ಲೂ ಇರುವ ಕೆಲವು ಸಣ್ಣಪುಟ್ಟ ಬಂಜರು ದ್ವೀಪಗಳು ಈಜಿಪ್ಟಿಗೆ ಸೇರಿವೆ. ಇವುಗಳ ಪೈಕಿ ಜಂಬಲ್, ಷಡ್ವಾನ್, ಗೇಫಾಟಿನ್ ಮತ್ತು ಜೆಬರ್‌ಗಡ್ ಮುಖ್ಯ. 1949ರಲ್ಲಿ ಇಸ್ರೇಲಿನೊಂದಿಗೆ ಮಾಡಿಕೊಂಡ ಯುದ್ಧವಿರಾಮ ಒಪ್ಪಂದದ ಪ್ರಕಾರ ಪ್ಯಾಲಸ್ತೀನಿನ ನೈಋತ್ಯಕ್ಕಿರುವ ಗಾಜಾ ಎಂಬ ಕರಾವಳಿಪ್ರದೇಶದ ಭೂಭಾಗ ಈಜಿಪ್ಟಿಗೆ ಸೇರಿತ್ತು. ಅನಂತರ 1967ರ ಅರಬ್–ಇಸ್ರೇಲ್ ಯುದ್ಧದಲ್ಲಿ ಇಸ್ರೇಲ್ ಈ ತುಂಡನ್ನೂ ಸಿನಾಯ್ ಪರ್ಯಾಯದ್ವೀಪವನ್ನೂ ಆಕ್ರಮಿಸಿಕೊಂಡಿತು. ಅನಂತರದ ಒಪ್ಪಂದದಂತೆ ಇಸ್ರೇಲ್ ಸಿನಾಯ್ ಪರ್ಯಾಯ ದ್ವೀಪವನ್ನು ಈಜಿಪ್ಟಿಗೆ ಹಿಂದಿರುಗಿಸಿತು.

ಮೇಲ್ಮೈ ಲಕ್ಷಣ: ಈಜಿಪ್ಟನ್ನು ಭೂಸ್ವರೂಪದ ಆಧಾರದಿಂದ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು ಇವುಗಳೆಂದರೆ ನೈಲ್‌ನದಿ ಕಣಿವೆ ಮತ್ತು ಮುಖಜಭೂಮಿ. ಪಶ್ಚಿಮದ ಮರುಭೂಮಿ, ಪೂರ್ವದ ಮರುಭೂಮಿ ಮತ್ತು ಸಿನಾಯ್ ಪರ್ಯಾಯದ್ವೀಪ. ಈಜಿಪ್ಟಿನಲ್ಲಿ




ಹರಿಯುವ ಮುಖ್ಯ ನದಿ ನೈಲ್ ಒಂದೇ. ಈ ನದಿ ಉತ್ತರದಲ್ಲಿ ಈಜಿಪ್ಟನ್ನು ಹೊಕ್ಕು ಬೆಣಚುಕಲ್ಲು–ಮರಳುಗಲ್ಲು ಬಂಡೆಗಳ ನಡುವೆ ನುಸುಳಿ ಆಸ್ವಾನ್‌ಗೆ 8 ಕಿಮೀ ದೂರದಲ್ಲಿ ಧುಮುಕಿ ಮುಂದೆ ಕ್ರಮೇಣ ವಿಸ್ತಾರವಾಗುವ ಕಣಿವೆಯಲ್ಲಿ ಹರಿಯುತ್ತದೆ. ಈ ಕಣಿವೆಯ ಸರಾಸರಿ ಅಗಲ 9 ಕಿಮೀ. ಕೈರೋವಿನ ಈಶಾನ್ಯಕ್ಕೆ 19 ಕಿಮೀ ದೂರದಲ್ಲಿ ಈ ನದಿ

ಎರಡಾಗಿ ಕವಲೊಡೆಯುತ್ತದೆ. ಮುಖಜಭೂಮಿಯಲ್ಲಿ ಅಂಕುಡೊಂಕಾಗಿ ಪ್ರವಹಿಸಿ ರಾಸೆಟ್ಟ ಮತ್ತು ಡಾಮಿಯೆಟ್ಟಗಳ ಸಮುದ್ರದಲ್ಲಿ ಈ ಕವಲುಗಳು ಐಕ್ಯವಾಗುತ್ತವೆ. ಈ ಮುಖಜಭೂಮಿಯ ಉತ್ತರದಲ್ಲಿ ಕಡಿಮೆ ಆಳದ ಅನೇಕ ಸರೋವರಗಳಿವೆ. ನೆಲ ಜವುಗು, ಬಂಜರು. ಉಪ್ಪು ಮಿಶ್ರಿತ. ಈಜಿಪ್ಟಿನ ದಕ್ಷಿಣೋತ್ತರವಾಗಿ ಹರಿಯುವ ನೈಲ್‌ನದಿಗೆ ಈ ದೇಶದಲ್ಲಿ ಒಂದಾದರೂ ಉಪನದಿಯಿಲ್ಲ. ನೈಲ್‌ನದಿಯ ಪ್ರವಾಹದಲ್ಲಿ ತೀವ್ರ ಏರಿಳಿತಗಳಿರುತ್ತವೆ.

ಪಿರಮಿಡ್

ಈಜಿಪ್ಟಿನ ಪಶ್ಚಿಮ ಮರುಭೂಮಿಯಲ್ಲಿ ಬಂಡೆ ತುಂಬಿದ ದಿಣ್ಣೆ ನೆಲಗಳೂ ಕಲ್ಲು ಮರಳು ಬಯಲುಗಳೂ ಸಾಮಾನ್ಯ. ಸಮಾನಾಂತರವಾಗಿ ದಕ್ಷಿಣೋತ್ತರವಾಗಿ ಹಬ್ಬಿದ ಮರಳು ರಾಶಿಗಳ ರೇಖೆಗಳೂ ಅಲ್ಲಲ್ಲಿ ಉಂಟು. ಇಲ್ಲಿ ನೀರಿನ ವಸತಿ ಅಪರೂಪವಾದ್ದರಿಂದ ಒಟ್ಟಿನಲ್ಲಿ ಇದು ಮನುಷ್ಯ ಸಂಚಾರಕ್ಕೂ ವಾಸಕ್ಕೂ ಅಪ್ರಯೋಜಕ. ಆದರೆ ಓಯಿಸಿಸ್ಸುಗಳಿರುವಲ್ಲಿ ವಸತಿ ಸಾಧ್ಯ. ಮರುಭೂಮಿಯಲ್ಲಿ ಹಲವಾರು ವಿಸ್ತಾರವಾದ ತಗ್ಗುಗಳ ಪೈಕಿ ಕಟ್ಟಾರ ಎಂಬುದು ಅತ್ಯಂತ ದೊಡ್ಡದು. ಉಳಿದವು ಸಿವ, ಬಹಾರಿಯ, ಫರಾಫ್ರ, ದಖ್ಲ ಮತ್ತು ಖರ್ಗ.

ಸ್ಫಿಂಕ್ಸ್

ಪೂರ್ವದಲ್ಲಿ ಅರೇಬಿಯನ್ ಮರುಭೂಮಿಯಿದ್ದು ಇದನ್ನು ಈಸ್ಟರ್ನ್ ಡೆಸರ್ಟ್ ಎಂದೂ ಕರೆಯುವರು. ಇದರ ಉತ್ತರಕ್ಕೂ ಪಶ್ಚಿಮಕ್ಕೂ ತಗ್ಗುದಿಣ್ಣೆಯಿದೆ. ವಿರಳವಾಗಿ ಹಬ್ಬಿರುವ ಬಾವಿಗಳಿಂದಲೂ ಊಟೆಗಳಿಂದಲೂ ಅಲ್ಪಸ್ವಲ್ಪ ಜಲ ಲಭಿಸುತ್ತದೆ.

ದೇಶದ ಪೂರ್ವಭಾಗವಾದ ಸಿನಾಯ್ ಪರ್ಯಾಯದ್ವೀಪ ಭಿನ್ನವಾದದ್ದು. ಇದರ ನಡುವಿನಲ್ಲಿ ಸುಣ್ಣಕಲ್ಲಿನ ಎತ್ತರ ನೆಲವೂ ದಕ್ಷಿಣದಲ್ಲಿ ಗ್ರಾನೈಟ್ ಪರ್ವತವೂ ಇದರ ನಡುನಡುವೆ ಕಮರಿ, ಒಣಕಲು ತೊರೆಗಳೂ ಇವೆ.

ವಾಯುಗುಣ: ಇಲ್ಲಿನದು ಮರುಭೂಮಿಯ ವಾಯುಗುಣ. ಹಗಲು ಉಷ್ಣಾಂಶ 30 ರಿಂದ $35^0$ ಸೆ. ಆದರೆ ರಾತ್ರಿ ಉಷ್ಣಾಂಶ ಬಹಳ ಕಡಿಮೆ. ಉತ್ತರದ ಮೆಡಿಟರೇನಿಯನ್ ತೀರಪ್ರದೇಶದಲ್ಲಿ ಹವಾಮಾನ ಹಿತಕರ. ಮಳೆ ಬಹಳ ಕಡಿಮೆ, ವರ್ಷಕ್ಕೆ ಸರಾಸರಿ 15 ರಿಂದ 30 ಸೆಂಮೀ. ಆದರೆ ಕೆಲವು ವೇಳೆ ಭಾರಿ ಮಳೆಯಾಗುವುದುಂಟು. ಸ್ವಾಭಾವಿಕ ಸಸ್ಯವರ್ಗಗಳು ಬಹಳ ಕಡಿಮೆ. ಓಯಿಸಿಸ್ಸುಗಳ ಸಮೀಪದಲ್ಲಿ ಖರ್ಜೂರ ಬೆಳೆಯುತ್ತಾರೆ. ಒಂಟೆ, ಕತ್ತೆ, ಕುರಿ, ಮೇಕೆ, ಹಲವು ಜಾತಿಯ ಪಕ್ಷಿ ಇಲ್ಲಿನ ಪ್ರಾಣಿಸಂಕುಲ.

ಸೂಯೆಜ಼್ ಕಾಲುವೆ

ಈ ದೇಶದಲ್ಲಿ ವ್ಯವಸಾಯವೇ ಜನರ ಮುಖ್ಯ ಕಸುಬು. ಆದರೆ ಇದಕ್ಕೆ ಯೋಗ್ಯವಾದ ಭೂಮಿ ಬಲು ಸ್ವಲ್ಪ. ನೈಲ್ ನದಿ ಮೈದಾನವನ್ನು ಬಿಟ್ಟರೆ ಇನ್ನಾವ ಉಪಯುಕ್ತ ಭೂಮಿಯೂ ಇಲ್ಲ. ನೈಲ್ ನದಿ ಇಲ್ಲದಿದ್ದರೆ ಇಡೀ ದೇಶವೇ ಮರಳುಗಾಡಾಗಿರುತ್ತಿತ್ತು. ಈ ನದಿಯ ಮೈದಾನ ಪ್ರದೇಶ ಒಟ್ಟು ವಿಸ್ತೀರ್ಣದಲ್ಲಿ ಶೇ. 9 ಮಾತ್ರ. ಇದರಿಂದ ವ್ಯವಸಾಯೋಪಯುಕ್ತ ಭೂಮಿಯ ಬೆಲೆ ಬಹಳ ಹೆಚ್ಚು. ನೈಲ್ ನದಿಯ ನೀರಾವರಿ ವ್ಯವಸ್ಥೆಯೇ ಜನಜೀವನ ಧಮನಿ. ಇದರಿಂದಾಗಿಯೇ ಈಜಿಪ್ಟನ್ನು ನೈಲ್‌ನದಿಯ ವರವೆಂದು ಕರೆಯಲಾಗಿದೆ. ಇಲ್ಲಿ ಸು. 24,000 ಕಿಮೀ ಉದ್ದದ ಕಾಲುವೆಗಳಿವೆ. ಆಸ್ವಾನ್ ಪಟ್ಟಣದ ಬಳಿ ನೈಲ್‌ನದಿಗೆ ಅಡ್ಡಲಾಗಿ ಆಸ್ವಾನ್ ಜಲಾಶಯ ನಿರ್ಮಿಸಲಾಗಿದೆ. ಈ ಜಲಾಶಯದ ನೀರನ್ನು ನೀರಾವರಿಗೆ ಬಳಸಲಾಗುತ್ತಿದೆ. ಹಿಂದೆ ಈಜಿಪ್ಟ್ ವ್ಯವಸಾಯದಲ್ಲಿ ಹಿಂದುಳಿದಿತ್ತು. ಆದರೆ ಇತ್ತೀಚೆಗೆ ಕೃಷಿ ವಿಧಾನದಲ್ಲಿ ಕ್ರಾಂತಿಯುಂಟಾಗಿದೆ. ಆಧುನಿಕ ಉಪಕರಣಗಳೂ ಬಳಕೆಗೆ ಬಂದಿವೆ.

ಜನ ಜೀವನ: ಈಜಿಪ್ಟಿನ ಒಟ್ಟು ಜನಸಂಖ್ಯೆ 78 ದಶಲಕ್ಷ (2003). ಶೇ. 99 ಭಾಗ ನೈಲ್ ಕಣಿವೆಯಲ್ಲಿ ವಾಸಿಸುತ್ತಾರೆ. ಈ ಪ್ರದೇಶದಲ್ಲಿ ಸರಾಸರಿ ಜನಸಾಂದ್ರತೆ ಚ.ಕಿಮೀಗೆ

600 ಕ್ಕಿಂತಲೂ ಹೆಚ್ಚು. ನದಿ ಮುಖಜಭೂಮಿಯ ಬಳಿಯಲ್ಲೂ ಗಿರ್ಗ ಪ್ರಾಂತ್ಯದಲ್ಲೂ ಸಾಂದ್ರತೆ ಅತಿಹೆಚ್ಚು: ಆದರೆ ಮುಖಜಭೂಮಿಯ ಪೂರ್ವೋತ್ತರ ಜವುಗು ನೆಲಗಳಲ್ಲಿ ಕಡಿಮೆ. ನೈಲ್ ನದೀ ಕಣಿವೆಯಾಚೆಗಿನ ಪ್ರದೇಶದಲ್ಲಿ ಸರಾಸರಿಯಲ್ಲಿ ಚ.ಕಿಮೀಗೆ ಒಬ್ಬ ಮನುಷ್ಯ.

ಈಜಿಪ್ಟ್ ಇದರ ಪುರಾತನ ಅವಶೇಷಗಳಿಗೆ ಅತ್ಯಂತ ಹೆಸರುವಾಸಿ. ಇದರಿಂದಾಗಿ ಪ್ರವಾಸೋದ್ಯಮ ಸಹ ಆದಾಯ ಮೂಲವಾಗಿದೆ. ಅನೇಕ ಪಿರಮಿಡ್ಡುಗಳು, ಸ್ಫಿಂಕ್ಸ್ ಪ್ರವಾಸಿಗಳನ್ನು ಆಕರ್ಷಿಸುತ್ತವೆ.

ಈಜಿಪ್ಟಿನ ಜನಸಾಮಾನ್ಯರಲ್ಲಿ ಮೂರು ವರ್ಗಗಳುಂಟು: ನೈಲ್ ಕಣಿವೆಯ ರೈತರು (ಫೆಲ್ಲಾ) ಮತ್ತು ಪಟ್ಟಣಿಗರು; ಮರಳುಗಾಡಿನ ಗ್ರಾಮಕರು; ನೈಲ್ ನದಿಯ ಮೊದಲನೆಯ ಜಲಪಾತದ ದಕ್ಷಿಣದಲ್ಲಿ ವಾಸಿಸುವ ನುಬಿಯನ್ನರು ಅಥವಾ ಬರ್ಬರಿನ್ನರು.

ಅನೇಕ ಸಹಸ್ರಮಾನಗಳಿಂದಲೂ ನೈಲ್‌ನದಿಯ ದೃಢಾಂಗ ರೈತನಿಗೂ ಮರುಭೂಮಿಯ ತೆಳುದೇಹಿಗೂ ನಡುವಣ ವ್ಯತ್ಯಾಸ ಖಚಿತವಾಗಿ ಉಳಿದುಕೊಂಡು ಬಂದಿದೆ.

ನೂರಕ್ಕೆ ತೊಂಬತ್ತರಷ್ಟು ಮಂದಿ ಮುಸ್ಲಿಮರು. ಬಹುತೇಕ ಸುನ್ನಿ ಪಂಗಡ. ಇಸ್ಲಾಂ ಧರ್ಮಕ್ಕೆ ಮೊದಲಿದ್ದ ಹಳೆಯ ಸಂಪ್ರದಾಯಾನುಯಾಯಿಗಳು ಈಗ ವಿರಳವಾಗಿದ್ದಾರೆ. 4ನೆಯ ಶತಮಾನದಲ್ಲಿ ಹಳ್ಳಿಗಳಲ್ಲಿ ಕ್ರೈಸ್ತಧರ್ಮ ಮತಾವಲಂಬಿಗಳು, ತಮ್ಮವೇ ಆದ ಚರ್ಚ್, ಪಂಚಾಂಗ ಮತ್ತು ಭಾಷೆಗಳನ್ನುಳ್ಳ ಕಾಪ್ಟಿಕ್ ಧರ್ಮೀಯರೂ ರೋಮನ್‌ಕೆಥೊಲಿಕ್, ಪ್ರಾಟೆಸ್ಟಂಟ್ ಮುಂತಾದ ಕ್ರೈಸ್ತರೂ ಇಲ್ಲಿದ್ದಾರೆ.

ಈಜಿಪ್ಟಿನ ರಾಜಧಾನಿ ಕೈರೊ. ಜನಸಂಖ್ಯೆ: 68,00,992 (2004). ಅಲೆಗ್ಸಾಂಡ್ರಿಯ, ಪೋರ್ಟ್‌ಸೆಡ್, ಟಾಂಟ, ಮೆಹಲ್ಲ ಎಲ್ ಕುಬ್ರ, ಸೂಯೆಝ್ ಮನ್ಸುರ ಇವು ಮುಖ್ಯ ಪಟ್ಟಣಗಳು. ಈಜಿಪ್ಷಿಯನ್ ಪೌಂಡು ಇಲ್ಲಿನ ನಾಣ್ಯ. (ಎಸ್.ಎನ್.ಎ.ಆರ್.)

**ಈಜಿಪ್ಟಿನ ಭೂ ಇತಿಹಾಸ:** ಗೊಂಡ್ವಾನ ಭೂಖಂಡದ ಮುಂಚೂಣಿಯ ಪ್ರದೇಶಕ್ಕೆ ಸೇರಿದ ಭಾಗವೇ ಈಗಿನ ಈಜಿಪ್ಟ್. ಇಡೀ ದೇಶದುದ್ದಕ್ಕೂ ಅತಿ ಪ್ರಾಚೀನ ಆರ್ಷೇಯನ್ ಶಿಲೆಗಳ ಸಮೂಹ ಹರಡಿದೆ. ಈ ಸಮೂಹದ ಬಹುಭಾಗ ಮುಚ್ಚಿಹೋಗಿದ್ದು ಕೆಲವು ಕಡೆ ಅಲ್ಪಸ್ವಲ್ಪ ದೃಷ್ಟಿಗೆ ಗೋಚರವಾಗುತ್ತದೆ. ದೇಶದ ಉತ್ತರ ಭಾಗದಲ್ಲಿ ಈ ಪುರಾತನ ಶಿಲೆಗಳ ಮೇಲೆ ಇತರ ಭೂಯುಗಗಳ ಶಿಲಾಪ್ರಸ್ತರಗಳು ಶೇಖರವಾಗಿವೆ. ಇವುಗಳೆಲ್ಲ ನೂಬಿಯನ್ ಮರಳು ಶಿಲಾಪ್ರಸ್ತರಗಳೇ ಅಧಿಕ. ಇದನ್ನು ಬಿಟ್ಟರೆ ಇಯೋಸೀನ್ ಯುಗದ ಸುಣ್ಣಶಿಲಾಪ್ರಸ್ತರಗಳು ಮತ್ತು ಪ್ಲಿಸ್ಟೊಸೀನ್ ಯುಗದ ಜಲಜ ಶಿಲಾಪ್ರಸ್ತರಗಳನ್ನು ಹೆಸರಿಸಬಹುದು. ಆರ್ಷೇಯನ್ ಶಿಲಾಸಮೂಹದ ಅತ್ಯಂತ ಪ್ರಾಚೀನ ಶಿಲೆಯಾದ ಮೂಲನೀಸ್ ಶಿಲೆ (ಒಂದು ಬಗೆಯ ಗೀರು ಶಿಲೆ) ದೇಶದ ಆಗ್ನೇಯ ಮತ್ತು ನೈಋತ್ಯ ಭಾಗಗಳಲ್ಲಿ ಹರಡಿದೆ. ಈ ಗೀರು ಶಿಲೆಯ ಮೇಲೆ ಇತರ ಕಣಶಿಲೆಗಳು ಮತ್ತು ರೂಪಾಂತರಗೊಂಡಿರುವ ಜಲಜಶಿಲಾಪ್ರಸ್ತರಗಳನ್ನು ಗುರುತಿಸಲು ಸಾಧ್ಯ. ಇದೇ ಗುಂಪಿನ ಗ್ರಾನೈಟ್, ಸರ್ಪೆಂಟಿನೈಟ್ ಮತ್ತು ಪದರು ಶಿಲೆಗಳನ್ನು ಆಸ್ವಾನ್, ಪಶ್ಚಿಮ ಮರುಭೂಮಿ, ಪೂರ್ವ ಮರುಭೂಮಿ ಮತ್ತು ಸಿನಾಯ್ ಪ್ರಾಂತ್ಯಗಳಲ್ಲಿ ನೋಡಬಹುದು. ಪೂರ್ವ ಮರುಭೂಮಿ ಮತ್ತು ಸಿನಾಯ್‌ಗಳಲ್ಲಿ ಇಡೀ ಭೂಭಾಗವೇ ಮೇಲಕ್ಕೆದ್ದುದಕ್ಕೆ ಆಧಾರಗಳಿವೆ. ನೈಲ್ ಕಣಿವೆಯ ಹಲವಾರು ಜಲಪಾತಗಳಿಗೂ ಈ ಭೂಚಟುವಟಿಕೆಯೇ ಕಾರಣ. ಒಟ್ಟಿನಲ್ಲಿ ಸದ್ಯದ ಭೂಭಾಗದ ಹತ್ತನೆಯ ಒಂದು ಭಾಗ ಆರ್ಷೇಯನ್ ಶಿಲೆಗಳಿಂದ ಕೂಡಿದೆ. ಇವುಗಳಲ್ಲಿ ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ ಮತ್ತು ಇತರ ಖನಿಜ ನಿಕ್ಷೇಪಗಳೂ ಅಮೃತಶಿಲೆ, ಸರ್ಪೆಂಟಿನೈಟ್, ಅಬ್ಸಿಡಿಯಾನ್, ಪಾರ್‌ಫಿರಿ ಮುಂತಾದ ಕಟ್ಟಡಶಿಲೆಗಳೂ ದೊರೆಯುತ್ತವೆ.

ಪೇಲಿಯೋಜೋಯಿಕ್ ಭೂಕಲ್ಪದ ಶಿಲಾಶ್ರೇಣಿಗಳು ಬಹು ಅಲ್ಪ ಪ್ರಮಾಣದಲ್ಲಿವೆ. ಸೂಯೆಝ್ ಕಾಲುವೆಯ ಅಕ್ಕಪಕ್ಕದಲ್ಲಿ ತೋರಿಬರುವ ಮರಳುಶಿಲೆಗಳು ಮತ್ತು ಸುಣ್ಣಶಿಲೆಗಳು ಈ ವರ್ಗದವು. ಈ ಕಲ್ಪದುದ್ದಕ್ಕೂ ಆರ್ಷೇಯನ್ ಶಿಲೆಗಳ ಸವೆತದಿಂದ ದೊರೆತ ಕಣಗಳ ಶೇಖರಣೆಯಿಂದ ವಿಸ್ತಾರವಾದ ಮರಳುಶಿಲಾನಿಕ್ಷೇಪಗಳುಂಟಾದುವು. ಕೆಲವೆಡೆ ಇವು 4850 ಮೀ ಮೀರಿ ಮಂದವಾಗಿವೆ. ಇವುಗಳ ರಚನೆ ಮತ್ತು ಸಂಯೋಜನೆ ವೈವಿಧ್ಯಮಯ. ಇಲ್ಲಿ ಜೀವಾವಶೇಷಗಳ ಸುಳಿವೇ ಇಲ್ಲ. ವಯಸ್ಸಿನಲ್ಲಿ ಕಾರ್ಬಾನಿಫೆರಸ್ ಯುಗದಿಂದ ಕ್ರಿಟೇಷಿಯಸ್ ಯುಗದ ತನಕ ಹರಡಿವೆ. ದೇಶದ ಮೂರನೆಯ ಒಂದು ಭೂಭಾಗ ಇವುಗಳಿಂದ ಆವೃತವಾಗಿದೆ. ದಕ್ಷಿಣ ಈಜಿಪ್ಟಿನ ಬಹುಭಾಗ ಇವುಗಳಿಂದಾಗಿದೆ. ಅಲ್ಲದೆ ಗಡಿಯಾಚೆ ದಕ್ಷಿಣ ಮತ್ತು ಪಶ್ಚಿಮದಲ್ಲೂ ಇವನ್ನು ಗುರುತಿಸಬಹುದು. ಇವೇ ನೂಬಿಯನ್ ಮರಳು ಶಿಲೆಗಳು.

ಕ್ರಿಟೇಷಿಯಸ್ ಯುಗದ ಅಂತ್ಯಭಾಗದಲ್ಲಿ ದೇಶದ ಉತ್ತರಭಾಗ ಸಮುದ್ರದಿಂದ ಆವೃತವಾಗಿತ್ತು. ಅದು ಮೊದಲಿಗೆ ಪ್ಲಿಯೊಸೀನ್ ಯುಗ ಮುಗಿಯುವ ತನಕ ಭೂಭಾಗಗಳನ್ನು ಹಲವಾರು ಬಾರಿ ಮೇಲಕ್ಕೆ ಒಯ್ದು, ಕೆಳಕ್ಕೆ ತುಯ್ದು ದಾಖಲೆಗಳಿವೆ. ಹೀಗಾಗಿ ಭೂಭಾಗಗಳನ್ನು ಪಕ್ಕದ ಸಮುದ್ರ ಪದೇ ಪದೇ ಆವರಿಸುತ್ತಿತ್ತು. ಇವುಗಳೆಲ್ಲ ಕ್ರಿಟೇಷಿಯಸ್ ಯುಗದ ಸಮುದ್ರಾಕ್ರಮಣ ಬಹು ವಿಸ್ತಾರವಾದುದು. ಈಗಿನ ಕರಾವಳಿಯಿಂದ 960 ಕಿಮೀ ಭೂಭಾಗ ನೀರಿನಲ್ಲಿ ಮುಳುಗಿತ್ತು. ಈ ಮುಳುಗಡೆಯ ಪ್ರದೇಶದಲ್ಲಿ 180 ಮೀ ಮಂದದ ಸುಣ್ಣ ಶಿಲಾಪ್ರಸ್ತರಗಳು ನಿಕ್ಷೇಪಗೊಂಡುವು. ಆದರೆ ಈಗ ಇದರ ಬಹುಭಾಗ ಇತರ ಕಿರಿಯ ಸಮುದ್ರಾಕ್ರಮಣ ಶಿಲಾಪ್ರಸ್ತರಗಳಿಂದ ಮುಚ್ಚಿಹೋಗಿ ಗೋಚರವಾಗುತ್ತಿಲ್ಲ.

ಈಜಿಪ್ಟಿನ ಸಮುದ್ರನಿಕ್ಷೇಪದಲ್ಲಿ ಅತ್ಯಂತ ವಿಸ್ತಾರವಾದವು, ಇಯೊಸೀನ್ ಯುಗದ ಸುಣ್ಣಶಿಲಾಪ್ರಸ್ತರಗಳು. ಇವು ಟರ್ಷಿಯರಿ ಕಲ್ಪದ ಆದಿಭಾಗದಲ್ಲಿ (ಅಂದರೆ ಕ್ರಿಟೇಷಿಯಸ್ ಯುಗ) ಭೂಭಾಗ ಸಮುದ್ರಗತವಾದುದನ್ನು ಸೂಚಿಸುತ್ತವೆ. ಪಶ್ಚಿಮ ಮರುಭೂಮಿಯ ಮಧ್ಯಭಾಗದುದ್ದಕ್ಕೂ ಇವು ಹರಡಿವೆ. ಈ ಭೂಭಾಗ ಸುಣ್ಣಶಿಲಾಪ್ರಸ್ತರಗಳಿಂದ ಕೂಡಿ ಮೇಲೆದ್ದು ತೋರುವ ಪ್ರಸ್ಥಭೂಮಿ. ಇದನ್ನು ನೈಲ್ ಕಣಿವೆ ಛೇದಿಸಿ ಮುಂದುವರಿಯುತ್ತದೆ. ಈ ಶಿಲೆಯನ್ನು ನೈಲ್ ಕಣಿವೆ ಮತ್ತು ನದೀಮುಖಜಭೂಮಿಯ ಪ್ರಾಂತ್ಯಗಳಲ್ಲಿ ಕಟ್ಟಡಶಿಲೆಯಾಗಿ ಬಳಸಿದ್ದಾರೆ. ಆಲಿಗೊಸೀನ್ ಯುಗದಲ್ಲಿ ಸಮುದ್ರ ಮತ್ತೆ ಹಿಂಜರಿಯಿತು. ಅಲ್ಲಲ್ಲೆ ಸಣ್ಣಪುಟ್ಟ ಪ್ರಮಾಣದಲ್ಲಿ ನದೀಯ ಶಿಲಾನಿಕ್ಷೇಪಗಳು ಕಂಡುಬಂದುವು. ಇವು ಜೀವ್ಯವಶೇಷಗಳಿಲ್ಲದ ಮರಳುಶಿಲೆ ಮತ್ತು ನುರುಜುಶಿಲಾಪ್ರಸ್ತರಗಳು, ಹಲವೆಡೆ ಮರಳುಗಲ್ಲಾಗಿರುವ ಪುರಾತನ ವೃಕ್ಷಗಳ ಕಾಂಡಗಳ ಅವಶೇಷಗಳು ದೊರೆತಿವೆ.

ಆಲ್ ಫಯೂಂ ತಗ್ಗಿನ ಉತ್ತರಕ್ಕಿರುವ ಪ್ರದೇಶದ ಜಲಜಶಿಲೆಗಳಲ್ಲಿ ಕೊಂಬುಳ್ಳ ಅಂಗುಲೇಟ ವರ್ಗದ ಪ್ರಾಣಿಗಳ ಪೂರ್ವಜ, ಆರ್ಸಿನಾಥೀರಿಯಂ ಮತ್ತು ಆನೆಯ ಪೂರ್ವಜ ಮೋರಿಥೀರಿಯಂ ಮತ್ತು ಪೇಲಿಯೊಮ್ಯಾಸ್ಟಡಾನ್‌ಗಳ ಅವಶೇಷಗಳಿವೆ. ಇವು ಬಾಹ್ರಿಯಾ ಓಯಸಿಸ್ ಬಳಿಯೂ ಪೂರ್ವ ಮರುಭೂಮಿಯಲ್ಲಿ ಕೈರೊ ಮತ್ತು ಸೂಯೆಝ್ ನಡುವಿನ ಕಿರಿದಾದ ಶಿಲಾಶ್ರೇಣಿಯಲ್ಲೂ ಕಂಡುಬಂದಿವೆ. ಆಲಿಗೋಸೀನ್ ಯುಗದ ಅಂತ್ಯದಲ್ಲಿ ತಲೆದೋರಿದ ಆಲ್ಪೈನ್ ಪರ್ವತಜನ್ಯ ಶಕ್ತಿಗಳ ಪ್ರಭಾವದಿಂದ ಕೆಂಪುಸಮುದ್ರದ ತಗ್ಗು ಅದರ ಇಕ್ಕೆಲಗಳಲ್ಲಿನ ಪರ್ವತಶ್ರೇಣಿಗಳೂ ಉಂಟಾದುವು. ಮಯೋಸೀನ್ ಯುಗದ ಪ್ರಾರಂಭದಲ್ಲಿ ಕೊಂಚ ಮಟ್ಟಿಗೆ ಭೂಪ್ರದೇಶ ಕುಗ್ಗಿತು. ಹೀಗಾದ ತಗ್ಗಿನಲ್ಲಿ ಸುಣ್ಣ ಶಿಲಾಪ್ರಸ್ತರಗಳು ನಿಕ್ಷೇಪವಾದುವು. ಇವನ್ನು ಮೆಡಿಟರೇನಿಯನ್ ಮತ್ತು ಸಿವಾ–ಕ್ವಾಟ್ರಾ–ಮಘಾರ ತಗ್ಗುಗಳ ಮಧ್ಯೆ, ಕೈರೋ–ಸೂಯೆಝ್ ನಡುವೆ ಮತ್ತು ಪಶ್ಚಿಮ ಸಿನಾಯ್‌ಗಳಲ್ಲಿ ನೋಡಬಹುದು. ಮಯೋಸೀನ್ ಯುಗದ ಸಮುದ್ರದ ಶಾಖೆಯೊಂದು ಕೆಂಪುಸಮುದ್ರದ ತಗ್ಗನ್ನು ಆವರಿಸಿ ಅಲ್ಲಿ ಜಿಪ್ಸಂ ಮತ್ತು ಡಾಲೊಮಿಟಿಕ್ ಸುಣ್ಣಶಿಲಾಪ್ರಸ್ತರಗಳ ನಿಕ್ಷೇಪಕ್ಕೆ ಕಾರಣವಾಯಿತು. ಈ ಯುಗದ ಅಂತ್ಯದಲ್ಲಿ ಮತ್ತೆ ಸಂಭವಿಸಿದ ಆಲ್ಪೈನ್ ಭೂಚಟುವಟಿಕೆಗಳ ದೆಸೆಯಿಂದ ಈ ಶಿಲಾಪ್ರಸ್ತರಗಳು ಅನೇಕ ಕಡೆ ತೀವ್ರವಾಗಿ ಮಡಿಕೆ ಬಿದ್ದು ಸ್ತರಭಂಗಗಳೂ ಉಂಟಾಗಿವೆ. ಹಲವು ಕಡೆ ಭೂಭಾಗಗಳು ಮೇಲಕ್ಕೆ ಒಯ್ಯಲ್ಪಟ್ಟಿವೆ. ಕ್ರಮೇಣ ನೈಲ್ ಕಣಿವೆಯ ಕಂದರವೂ ಕಾಣಿಸಿಕೊಂಡಿತು. ಈ ಎಲ್ಲ ಭೂ ಬದಲಾವಣೆಗಳು ಪ್ಲಿಯೊಸೀನ್ ಯುಗದಲ್ಲೇ ಕೊನೆಗೊಂಡುವು.

ಆದರೆ ನೈಲ್ ತಗ್ಗು ಮತ್ತು ಕೆಂಪುಸಮುದ್ರದ ಹಲಕೆಲವು ಅಂಚಿನ ಪ್ರದೇಶಗಳನ್ನು ಸಮುದ್ರ ಆಕ್ರಮಿಸಿತು. ಇದರಿಂದ ವಾಡಿ–ಆನ್‌ನಾಟ್ರುಕ್ ಶಿಲಾಸಮೂಹದ ಮರಳು ಶಿಲಾಪ್ರಸ್ತರಗಳೂ ಜಿಪ್ಸಂನಿಂದ ಕೂಡಿದ ಜೇಡು ಶಿಲಾಪ್ರಸ್ತರಗಳೂ ಉಂಟಾದುವು. ಇವುಗಳಲ್ಲಿ ಮೊಸಳೆ, ನೀರುಕುದುರೆ, ಆನೆ, ಜಿರಾಫೆ ಇತ್ಯಾದಿ ಪ್ರಾಣಿಗಳ ಅವಶೇಷಗಳು ಹುದುಗಿವೆ. ಅಲ್ಲದೆ ಕೆಂಪುಸಮುದ್ರ ತೀರ ಮತ್ತು ನೈಲ್ ನದಿಯ ತೀರಪ್ರದೇಶಗಳಲ್ಲಿ 180 ಮೀ ಮಂದವಾಗಿರುವ ನದೀ ನಿಕ್ಷೇಪಗಳಾದ ಪೆಂಟೆಶಿಲೆ, ನುರುಜುಶಿಲೆ ಮತ್ತು ಮರಳುಶಿಲೆಗಳ ಪ್ರಸ್ತರಗಳಿವೆ.

ಪ್ಲಿಸ್ಟೊಸೀನ್ ಮತ್ತು ಈಚಿನ ಯುಗಗಳ ನಿಕ್ಷೇಪಗಳನ್ನು–ಮುಖ್ಯವಾಗಿ ಊಲೈಟ್ ಸುಣ್ಣಶಿಲಾಪ್ರಸ್ತರಗಳನ್ನು–ಅಲೆಕ್ಸಾಂಡ್ರಿಯದ ಪಶ್ಚಿಮ ಕರಾವಳಿಯಲ್ಲೂ ನುರುಜುಶಿಲೆ. ಮರಳು ಮತ್ತು ಜೇಡನ್ನು ನೈಲ್ ಕಣಿವೆಯಲ್ಲೂ ಕಾಣಬಹುದು. ಈ ಯುಗದಲ್ಲಿ ಯುರೋಪಿನ ಬಹು ಭಾಗ ಹಿಮದ ಹಾಳೆಗಳಿಂದ ಮುಚ್ಚಿಹೋಗಿತ್ತು. ಬಹುಶಃ ಈ ವಿಪರೀತ ಶೈತ್ಯಹವೆಯ ಕಾರಣ ಈಜಿಪ್ಟ್‌ನಲ್ಲಿ ಅಧಿಕ ಮಳೆ ಮತ್ತು ಪ್ರವಾಹಗಳ ಹಾವಳಿಯುಂಟಾಯಿತು. ಇದರಿಂದ ಅಧಿಕ ಪ್ರಮಾಣದಲ್ಲಿ ಮರಳು, ನುರುಜುಶಿಲೆ ಮತ್ತು ಶಿಲಾಪೆಂಟೆಗಳು ಶೇಖರವಾಗಿ ಮತ್ತೆ ಅವುಗಳ ಮೇಲೆ ಈಗಿನ ನದೀ ಮೆಕ್ಕಲು ಶೇಖರವಾಯಿತು. ಈ ಮೆಕ್ಕಲು ಬಹುಮಟ್ಟಿಗೆ ಇಥಿಯೋಪಿಯ ಪ್ರಸ್ಥಭೂಮಿಯ ಅಗ್ನಿಶಿಲೆಗಳ ಸವೆತದಿಂದಾದುದು. (ಬಿ.ವಿ.ಜಿ.)

**ಈಡನ್:** ಬೈಬಲ್ಲಿನ ಹಳೆಯ ಒಡಂಬಡಿಕೆಯ (ಓಲ್ಡ್ ಟೆಸ್ಟಮೆಂಟ್) ಪ್ರಕಾರ ಯೂಫ್ರೆಟೀಸ್ ನದಿ ಕಣಿವೆಯಲ್ಲಿನ ಒಂದು ಸ್ಥಳದ ಹೆಸರು. ದೈವನಿರ್ಮಿತವಾದ ಇಲ್ಲಿನ ತೋಟದಲ್ಲಿ ಆದಂ ಮತ್ತು ಈವ್ ವಾಸಿಸಿದ್ದರು ಎಂದು ತಿಳಿಯಲಾಗಿದೆ. ದೇವರ ಆಜ್ಞೆಯನ್ನು ಉಲ್ಲಂಘಿಸಿ ಜ್ಞಾನವೃಕ್ಷದ ನಿಷಿದ್ಧ ಹಣ್ಣನ್ನು ತಿನ್ನಲಾಗಿ ಅವರನ್ನು ತೋಟದಿಂದ

ಹೊರಹಾಕಲಾಯಿತು. ಈಡನ್ ಎಂದರೆ ಹೀಬ್ರು ಭಾಷೆಯಲ್ಲಿ ಸಂತೋಷ ಎಂದರ್ಥವಿದೆ. ಈಡನ್ನಿನಿಂದ ನದಿಯೊಂದು ದೇವರ ತೋಟಕ್ಕೆ ನೀರು ಒದಗಿಸಲು ಹರಿದುಹೋಯಿತೆಂದು ಜೆನಿಸಿಸ್‌ನಲ್ಲಿ ವರ್ಣಿಸಲಾಗಿದೆ. ಈ ನದಿಗೆ ನಾಲ್ಕು ಉಪನದಿಗಳು ಹುಟ್ಟಿಕೊಂಡವೆಂದೂ ಯೂಫ್ರಟೀಸ್ ಮತ್ತು ಟೈಗ್ರಿಸ್ ಅವುಗಳಲ್ಲಿ ಎರಡೆಂದೂ ಪೀಸನ್, ಗಿಹೊನ್ ಎಂಬ ಉಳಿದೆರಡು ನದಿಗಳು ಇಂದಿನ ಆರಾಖ್ಸೊ ಮತ್ತು ಜಕ್ಸಾಗಳೆಂದೂ ಹೇಳಲಾಗಿದೆ. ಬೈಬಲ್ಲಿನ ಅನಂತರ ಬಂದ ಸಾಹಿತ್ಯಗಳಲ್ಲಿ ಈಡನ್ನಿನ ತೋಟವನ್ನು ಸ್ವರ್ಗವೆನ್ನಲಾಯಿತು. ಅಲ್ಲಿ ಸತ್ಯಧರ್ಮದಿಂದಿರುವವರ ಸಂತಾನ ಚಿರಂಜೀವಿಗಳಾಗಿ ವಾಸಿಸುತ್ತಾರೆಂಬ ಕಲ್ಪನೆಯೂ ಬೆಳೆಯಿತು.

ಯಹೂದಿಗಳ ಈ ಧಾರ್ಮಿಕ ಭಾವನೆ ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳಲ್ಲಿನ ಸ್ವರ್ಗಕಲ್ಪನೆಯಲ್ಲಿಯೂ ಮುಂದುವರಿಯಿತು. *

**ಈರೋಡು:** ತಮಿಳುನಾಡು ರಾಜ್ಯದ ಕೊಯಮತ್ತೂರು ಜಿಲ್ಲೆಯಲ್ಲಿರುವ ಒಂದು ಪಟ್ಟಣ. ರೈಲುಗಳ ಕೂಡು ನಿಲ್ದಾಣ. ಅದೇ ಹೆಸರಿನ ತಾಲ್ಲೂಕಿನ ಆಡಳಿತ ಕೇಂದ್ರ. ಕೊಯಮತ್ತೂರಿನಿಂದ ಈಶಾನ್ಯಕ್ಕೆ 101 ಕಿಮೀ ದೂರದಲ್ಲಿ ಕಾವೇರಿ ನದಿಯ ದಂಡೆಯ ಮೇಲಿದೆ. ಜನಸಂಖ್ಯೆ 4.5 ಲಕ್ಷ. ಇದು ವ್ಯಾಪಾರ ಹಾಗೂ ಕೈಗಾರಿಕಾ ಕೇಂದ್ರ. ನಗರದ ಸುತ್ತಣ ಪ್ರದೇಶದಲ್ಲಿ ಬೆಳೆಯುವ ಹತ್ತಿಯನ್ನು ಹಿಂಜಿ ಬೇಲುಗಳಾಗಿ ಮಾಡುವ ಕೈಗಾರಿಕೆ ಇಲ್ಲಿ ಬಲು ಹಿಂದಿನಿಂದ ಬೆಳೆದುಬಂದಿದೆ. *

**ಈಸ್ಟ್ ಇಂಡೀಸ್:** ಏಷ್ಯಖಂಡದ ಆಗ್ನೇಯ ಭೂಭಾಗ ಅಂದರೆ ಪ್ರಧಾನ ಭೂಭಾಗ ಹಾಗೂ ಉತ್ತರ ಆಸ್ಟ್ರೇಲಿಯದ ನಡುವೆ ಭೂಮಧ್ಯರೇಖೆಯ ಎರಡೂಕಡೆಗಳ ವಿಸ್ತಾರ ಪ್ರದೇಶದಲ್ಲಿರುವ ದ್ವೀಪಗಳ ಸ್ತೋಮವನ್ನು ಈ ಹೆಸರಿನಿಂದ ಕರೆಯುವರು.

ಈ ದ್ವೀಪಸ್ತೋಮಕ್ಕೆ ಈಸ್ಟ್ ಇಂಡೀಸ್ ಅಥವಾ ಪೂರ್ವ ಇಂಡಿಯ ದ್ವೀಪಗಳು ಎಂದು ಹೆಸರಿರುವುದಾದರೂ ಇಲ್ಲಿ ಭಾರತದ ಬುಡಕಟ್ಟಿನ ಜನರಿಲ್ಲ. ಇಲ್ಲಿನ ಜನರ ಸಂಸ್ಕೃತಿಯ ಮೇಲೆ ಭಾರತದ ಪ್ರಭಾವ ಬಹಳ ಮಟ್ಟಿಗೆ ಬಿದ್ದಿರುವುದರಿಂದ ಇದಕ್ಕೆ ಈ ಹೆಸರು ಸಾರ್ಥಕ. ಈ ದ್ವೀಪಗಳ ಪೈಕಿ ಜಾವದಲ್ಲಿ ಈ ಪ್ರಭಾವ ಅತ್ಯಂತ ಹೆಚ್ಚು. ಗಾತ್ರದಲ್ಲೂ ಆರ್ಥಿಕದೃಷ್ಟಿಯಿಂದಲೂ ಇದು ಈಸ್ಟ್ ಇಂಡೀಸಿನ ಪ್ರಮುಖ ದ್ವೀಪ. ಜನಸಂಖ್ಯೆಯೂ ಹೆಚ್ಚು. ಈ ದ್ವೀಪಸ್ತೋಮದ ಅತಿಪೂರ್ವ ಭಾಗದಲ್ಲಿ ಇರುವ ನ್ಯೂಗಿನಿಯ ಜನರದು ಪ್ರತ್ಯೇಕ ಬುಡಕಟ್ಟು. ಇವರ ಸಂಸ್ಕೃತಿ ಭಾರತದಿಂದ ಪ್ರಭಾವಿತವಾಗಿಲ್ಲ. ಇವರು ಬಹಳ ಹಿಂದುಳಿದಿದ್ದಾರೆ. ಈ ಪ್ರದೇಶದ ಆಗ್ನೇಯ ದಿಕ್ಕಿನಲ್ಲಿರುವ ಪ್ರದೇಶದ ಜನರು ಆಸ್ಟ್ರೇಲಿಯದ ಆದಿವಾಸಿಗಳನ್ನು ಇವರು ಹೆಚ್ಚು ಹೋಲುತ್ತಾರೆ.

ಈ ದ್ವೀಪಸ್ತೋಮದ ವಿಸ್ತಾರ ಪೂರ್ವ ಪಶ್ಚಿಮವಾಗಿ 6,000 ಕಿಮೀ ದಕ್ಷಿಣೋತ್ತರವಾಗಿ 2100 ಕಿಮೀ. ಇಲ್ಲಿ ಚಿಕ್ಕ ದೊಡ್ಡ ಗಾತ್ರಗಳ ದ್ವೀಪಗಳು ಸು. 4,000ಕ್ಕಿಂತ ಹೆಚ್ಚು. ಜನಸಂಖ್ಯೆ, ನಾಗರಿಕತೆ, ಸಂಸ್ಕೃತಿ, ಆರ್ಥಿಕ ಬೆಳವಣಿಗೆ–ಇವು ದ್ವೀಪದಿಂದ ದ್ವೀಪಕ್ಕೆ ವ್ಯತ್ಯಾಸಗೊಳ್ಳುತ್ತವೆ. ಈ ಹಿಂದೆ ಇಂಡೋಚೀನ ಪರ್ಯಾಯ ದ್ವೀಪ ಹಾಗೂ ಮಲಯ ದ್ವೀಪಸ್ತೋಮಗಳನ್ನು ಒಟ್ಟಾಗಿ ಈಸ್ಟ್ ಇಂಡೀಸ್ ಎಂದು ಕರೆಯಲಾಗುತ್ತಿದ್ದಿತು. ಇಂದು ಇದು ಇಂಡೊನೇಷ್ಯ, ಮಲೇಷ್ಯ, ಈಸ್ಟ್ ಟೈಮೂರ್, ಫಿಲಿಪೈನ್ಸ್, ಬ್ರುನೈ, ಸಿಂಗಪುರ, ನ್ಯೂಗಿನಿ ದೇಶಗಳನ್ನು ಒಳಗೊಂಡಿದೆ.

ಈಸ್ಟ್ ಇಂಡಿಸಿನಲ್ಲಿ 95 ಜಾಗೃತ ಜ್ವಾಲಾಮುಖಿಗಳಿವೆ. ಇದು ಪೆಸಿಫಿಕ್ ಸಾಗರದ ಸುತ್ತಲಿನ ಜ್ವಾಲಾಮುಖಿ ವೃತ್ತದ ಭಾಗವಾಗಿದೆ. ಜ್ವಾಲಾಮುಖಿಗಳ ಸಾಲು ಉತ್ತರ ಸುಮಾತ್ರದಿಂದ ಜಾವ ಕೆಳಸುಂಡಾ ದ್ವೀಪಗಳನ್ನು ಹಾದು ಬಂಡಾ ದ್ವೀಪಸ್ತೋಮದವರೆಗೂ ಹಬ್ಬಿದೆ. ಈ ಜಾಡಿನಲ್ಲಿ ಜ್ವಾಲಾಮುಖಿಗಳು ಸಮದೂರದಲ್ಲಿ ಒಂದಾದಮೇಲೊಂದು ಕಂಡುಬರುತ್ತವೆ. ಮತ್ತೊಂದು ಸಾಲು ಉತ್ತರ ಸೆಲೆಬೆಸಿನಿಂದ ಸಾಂಘಿಹೆ ದ್ವೀಪಗಳ ಮೇಲೆ ಹಾದು ಮಿಂಡನೋವವರೆಗೆ ಹಬ್ಬಿದೆ. ಈ ಜ್ವಾಲಾಮುಖಿಗಳ ಕಾರ್ಯಾಚರಣೆ ಸ್ಫೋಟಕ ರೀತಿಯದಾಗಿದ್ದು ಅಲ್ಪಸ್ವಲ್ಪ ಶಿಲಾರಸ ಹೊರಹೊಮ್ಮುತ್ತದೆ. ಇದರಲ್ಲಿನ ಮುಖ್ಯ ಕ್ರಿಯೆ ಎಂದರೆ ನಿಧಾನವಾಗಿ ತಲೆದೋರುವ ಜಿಗುಟು ಶಿಲಾರಸದ ಗುಮ್ಮಟಾಕಾರಗಳು. ಜಾವ ಮತ್ತು ಸುಮಾತ್ರಗಳ ಭೂಸಂಧಿಯಲ್ಲಿರುವ ಕ್ರಕಟೋವ ಜ್ವಾಲಾಮುಖಿಯ 1893ರ ಸ್ಫೋಟನೆ ಅತಿ ಭಯಂಕರವಾದುದು. ಈ ಸ್ಫೋಟನೆಯಲ್ಲಿ 30,000 ಜನರ ಪ್ರಾಣಹಾನಿಯಾಯಿತು ಮತ್ತು ಸಮುದ್ರ ತಳದಲ್ಲಿ ಕಾಲ್‌ಡೆರಾ (ಜ್ವಾಲಾಮುಖಿ ಕಮರಿ) ಏರ್ಪಟ್ಟಿತು. ಇತ್ತೀಚೆಗೆ ಆದ ಸ್ಫೋಟನೆಯಿಂದ ಅನಕ್ ಕ್ರಕಟೋವ ದ್ವೀಪದಲ್ಲಿ ಒಂದು ಹೊಸ ಬೆಟ್ಟವೇ ಉಂಟಾಯಿತು. ಈ ಸ್ಫೋಟನೆಯಿಂದ ಬಂದ ಉರಿಯುವ ಬಿಸಿ ಬೂದಿ ಮಧ್ಯ ಜಾವದಲ್ಲಿರುವ ಮೆರಾಪಿ ಜ್ವಾಲಾಮುಖಿಯ ಮೇಲೆ ಶೇಖರವಾಗಿದೆ. *

**ಈಸ್ಟ್ ಟೈಮೂರ್:** ಇಂಡೊನೇಷ್ಯ ದ್ವೀಪ ಸಮುದಾಯದಲ್ಲಿ ದಕ್ಷಿಣ ಚೀನ ಸಮುದ್ರ ಮತ್ತು ಹಿಂದೂ ಮಹಾಸಾಗರಗಳ ನಡುವೆ ಇರುವ ಸ್ವತಂತ್ರ ದ್ವೀಪ. ಟೈಮೂರ್‌ನ ಪೂರ್ವ ಭಾಗಕ್ಕಿದೆ. ದ.ಅ. $8^0$–$10^0$ ಹಾಗೂ ಪೂರೇ. $124^0$–$127^0$ಗಳ ನಡುವೆ ಇದೆ. ಇಂಡೊನೇಷ್ಯವನ್ನು ಬಿಟ್ಟರೆ ಆಸ್ಟ್ರೇಲಿಯ ಇದಕ್ಕೆ ಅತ್ಯಂತ ಸಮೀಪದಲ್ಲಿದೆ. ಈ ಸ್ವತಂತ್ರ್ಯ ಗಣರಾಜ್ಯದ ಒಟ್ಟು ವಿಸ್ತೀರ್ಣ 14,874 ಚ.ಕಿಮೀ. ಜನಸಂಖ್ಯೆ 1,062,777 (2006). ರಾಜಧಾನಿ ಡಿಲಿ. ಜನಸಂಖ್ಯೆ 50800. ಈಸ್ಟ್ ಟೈಮೂರ್ 1520ರಲ್ಲಿ ಪೋರ್ಚುಗೀಸರ ವಸಾಹುತು. 1860ರಲ್ಲಿ ಡಚ್ಚರ ವಶವಾಯಿತು. 1949ರಲ್ಲಿ ಪುನಃ ಪೋರ್ಚುಗೀಸರ ವಶಕ್ಕೆ ಬಂತು. ಜುಲೈ 1976ರಲ್ಲಿ ಪ್ರಜಾತಂತ್ರ ಗಣರಾಜ್ಯವಾಗಿ ಸ್ವತಂತ್ರವಾಯಿತು. ಅನಂತರ ಇಂಡೊನೇಷ್ಯ ಇದರ ಹತೋಟಿಗಾಗಿ ಆಕ್ರಮಣ ನಡೆಸಿತು. 2002ರ ಮೇನಲ್ಲಿ ಸ್ವತಂತ್ರ ರಾಷ್ಟ್ರದ ಮಾನ್ಯತೆ ಪಡೆಯಿತು.




ಸುಂಡಾ ದ್ವೀಪಸ್ತೋಮಗಳಲ್ಲಿ ದೊಡ್ಡದಾದ ಈಸ್ಟ್ ಟೈಮೂರ್‌ನ ಮೇಲ್ಮೈ ಲಕ್ಷಣಗಳು ವೈವಿಧ್ಯಮಯ. ಕರಾವಳಿ ಮೈದಾನಗಳು ಸಮತಟ್ಟಾಗಿದ್ದು ಜನವಸತಿಗೆ ಅನುಕೂಲಕರ ಅಲ್ಲಲ್ಲಿ ಬೆಟ್ಟಗುಡ್ಡಗಳಿದ್ದು ದಟ್ಟವಾದ ಅರಣ್ಯಗಳಿಂದಾವೃತವಾಗಿವೆ. ಇಲ್ಲಿನ ಸಣ್ಣ ಸಣ್ಣ ತೊರೆಗಳು ಬೇಸಾಯಕ್ಕೆ ಅನುಕೂಲಕರ. ಮಾರ್ಪಾಡು ಹೊಂದಿದ ಉಷ್ಣವಲಯದ ವಾಯುಗುಣ ಹೆಚ್ಚು ತಾಪದಾಯಕವಲ್ಲ. ಮಳೆ ಸಾಕಷ್ಟು ಪ್ರಮಾಣದಲ್ಲಿದೆ.

ದೇಶದ ಆರ್ಥಿಕತೆ ಕೃಷಿಯನ್ನು ಅವಲಂಬಿಸಿದೆ. ಒಟ್ಟು ಜನಸಂಖ್ಯೆಯ ಶೇ. 75ಭಾಗ ಬೇಸಾಯ ಕಾರ್ಯಗಳಲ್ಲಿ ತೊಡಗಿದ್ದಾರೆ. ಕಾಫಿ, ಬತ್ತ, ಸಿಹಿಗೆಣಸುಗಳು, ಮೆಕ್ಕೆಜೋಳ ಸೋಯಾಬೀನ್ಸ್, ತರಕಾರಿಗಳು, ಹಣ್ಣುಗಳಾದ ಮಾವು, ಬಾಳೆ ಮೊದಲಾದವುಗಳ ಉತ್ಪಾದನೆಯಿದೆ. ರಬ್ಬರ್, ತಂಬಾಕು, ತೆಂಗುಗಳ ಉತ್ಪಾದನೆಯಿದೆ. ಗಂದದ ಮರ, ಚೌಬೀನೆ ಮರಗಳು ಇಲ್ಲಿನ ಪ್ರಮುಖ ಅರಣ್ಯ ಉತ್ಪಾದನೆಗಳು. ಉತ್ಪಾದನೆಯ ಸ್ವಲ್ಪಭಾಗ ರಫ್ತಾಗುತ್ತದೆ. ಚಿನ್ನ, ಕಚ್ಚಾತೈಲ, ನೈಸರ್ಗಿಕ ಅನಿಲ, ಮ್ಯಾಂಗನೀಸ್ ಹಾಗೂ ಅಮೃತಶಿಲೆ ಇಲ್ಲಿನ ಪ್ರಮುಖ ನೈಸರ್ಗಿಕ ಸಂಪತ್ತುಗಳು. ಹೆಚ್ಚಿನ ಕೈಗಾರಿಕಾ ಬೆಳವಣಿಗೆಯಿಲ್ಲ. ಮುದ್ರಣ, ಸಾಬೂನು ತಯಾರಿಕೆ, ಕರಕುಶಲ ವಸ್ತುಗಳು ಮತ್ತು ಜವಳಿ ಉದ್ಯಮ ಸ್ವಲ್ಪಮಟ್ಟಿಗೆ ಬೆಳೆದಿವೆ. ಕಚ್ಚಾತೈಲ, ಕಾಫಿ, ಗಂಧದ ಮರ ಮತ್ತು ಶಿಲೆಗಳ ರಫ್ತು ವ್ಯಾಪಾರವಿದೆ. ಆಹಾರ ಪದಾರ್ಥಗಳು, ಸೀಮೆ ಎಣ್ಣೆ ಮತ್ತು ಯಂತ್ರೋಪಕರಣಗಳು ಆಮದಾಗುತ್ತವೆ. ಇದರ ಹೆಚ್ಚಿನ ಅಂತಾರಾಷ್ಟ್ರೀಯ ವ್ಯಾಪಾರ ಇಂಡೊನೇಷ್ಯದೊಡನೆ. ಪೋರ್ಚುಗೀಸ್ ಆಡಳಿತಭಾಷೆ ಇಂಗ್ಲಿಷ್ ಮತ್ತು ಬಹಾಸ ಭಾಷೆ ಬಳಕೆಯಲ್ಲಿವೆ. ಶೇ. 90 ಜನ ಕೆಥೊಲಿಕ್ ಕ್ರಿಶ್ಚಿಯನ್ನರು. ಉಳಿದವರಲ್ಲಿ ಮುಸ್ಲಿಮರು, ಬೌದ್ಧರು ಮತ್ತು ಹಿಂದುಗಳಿದ್ದಾರೆ. ಹಣ, ಇಂಡೊನೇಷ್ಯನ್ ರುಪಿಯ ಅಮೆರಿಕದ ಡಾಲರ್ ಕೂಡ ಬಳಕೆಯಲ್ಲಿದೆ. ಸಾರಿಗೆ ಸಂಚಾರ ಮತ್ತು ಸಂಪರ್ಕ ಮಾಧ್ಯಮಗಳು ಉತ್ತಮವಾಗಿವೆ. ಸಾಕ್ಷರತೆ ಶೇ. 59ರಷ್ಟಿದೆ. (ಪಿ.ಎಂ.)

**ಈಸ್ಟರ್ ದ್ವೀಪ:** ಚಿಲಿಯ ಆಡಳಿತಕ್ಕೆ ಸೇರಿರುವ, ದಕ್ಷಿಣ ಪೆಸಿಫಿಕ್ ಸಾಗರದಲ್ಲಿ $27^0.10'$ ದ. ಅಕ್ಷಾಂಶ ಹಾಗೂ $109^0.20'$ ಪಶ್ಚಿಮ ರೇಖಾಂಶಗಳಲ್ಲಿರುವ ಪುಟ್ಟ ಒಂಟಿ ದ್ವೀಪ. ವಿಸ್ತೀರ್ಣ 163 ಚ.ಕಿಮೀ. ಅದರಿಂದ ಸು. 3220 ಕಿಮೀ ದೂರದಲ್ಲಿದೆ. ಇದಕ್ಕೆ ಅತ್ಯಂತ ಹತ್ತಿರವಿರುವ ಜನವಸತಿಯ ಪ್ರದೇಶವೆಂದರೆ ಪಿಟ್ಕೇರ್ನ್ ದ್ವೀಪ. ಇದು ಈಸ್ಟರ್ ದ್ವೀಪಕ್ಕೆ ಸು. 1760 ಕಿಮೀ ದೂರದಲ್ಲಿದೆ. ಈಸ್ಟರ್ ದ್ವೀಪ ಟಿರೆವಾಕ, ರಾನೊಕಾವೂ ಮತ್ತು ಪೊಯಿಕೆ ಎಂಬ ಮೂರು ಸುಪ್ತ ಜ್ವಾಲಾಮುಖಿಗಳು ಕೂಡಿ ಈ ದ್ವೀಪ ನಿರ್ಮಾಣವಾಗಿವುದರಿಂದ ಇದು ತ್ರಿಭುಜಾಕಾರದಲ್ಲಿದೆ. ಸು. 17 ಕಿಮೀ ಉದ್ದ ಹಾಗೂ 24 ಕಿಮೀ ಅಗಲವಾಗಿದ್ದು ಜ್ವಾಲಾಮುಖಿ ಶಿಲೆಗಳಿಂದ ಕೂಡಿದ ಭೂಮೇಲ್ಮೈಯನ್ನು ಈ ದ್ವೀಪ ಒಳಗೊಂಡಿದೆ.

ಡಚ್ ಅಡ್ಮಿರಲ್ ಜೇಕಬ್ ರಾಗೆವೀನ್ 1722ರಲ್ಲಿ ಈಸ್ಟರ್ ಭಾನುವಾರದಂದು ಈ ದ್ವೀಪವನ್ನು ಕಂಡುಹಿಡಿದದ್ದರಿಂದ ಇದಕ್ಕೆ ಈ ಹೆಸರು ಬಂತೆಂದು ಪ್ರತೀತಿ. ಈತನೇ ಈ ದ್ವೀಪಕ್ಕೆ ಕಾಲಿರಿಸಿದ ಯುರೋಪಿಯನ್ನರಲ್ಲಿ ಮೊದಲಿಗ. ಅದಕ್ಕೆ ಮುಂಚೆ ಈ ದ್ವೀಪದ ಜನಸಂಖ್ಯೆ ಎಷ್ಟಿತ್ತೆಂಬುದು ಗೊತ್ತಿಲ್ಲ. ಆದರೆ ಯಾವಾಗಲು ಜನಸಂಖ್ಯೆ 4,000 ಕ್ಕಿಂತ ಹೆಚ್ಚಾಗಿರಲಿಲ್ಲ. ಹೊರಗಿನವರು ತಂದ ರೋಗಗಳು ಹಾಗೂ ಗುಲಾಮ ವ್ಯಾಪಾರಿಗಳ ಕೈಗೆ ಇಲ್ಲಿನ ಜನ ಸಿಕ್ಕಿದ್ದರಿಂದ ಆಂತರಿಕ ಹೋರಾಟಗಳಿಂದಾಗಿ, ಕೆಲವರು ಬೇರೆ ಕಡೆಗೆ ವಲಸೆ ಹೋದದ್ದರಿಂದಲೂ ಈ ದ್ವೀಪದ ಜನಸಂಖ್ಯೆ 1872ರ ವೇಳೆಗೆ 175ಕ್ಕೆ ಇಳಿಯಿತು. ಅನಂತರ 1864ರಲ್ಲಿ ಇಲ್ಲಿಗೆ ಬಂದ ಪಾದ್ರಿಗಳು ಈ ಜನರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಿದರು. 1888ರಲ್ಲಿ ಇದು ಚಿಲಿಗೆ ಸೇರಿತು. ಚಿಲಿಯನರ ಆಡಳಿತದಲ್ಲಿ ಇಲ್ಲಿನ ಸ್ಥಳೀಯ ಜನರೆಲ್ಲ ದ್ವೀಪದ ಪಶ್ಚಿಮ ಭಾಗದಲ್ಲಿರುವ ಹಂಗ-ರೋವ ಹಳ್ಳಿಯಲ್ಲಿ ನೆಲೆಸಿದರು. ಜನಸಂಖ್ಯೆ: 3,618 (2000).

ಈ ದ್ವೀಪದ ಮೂಲ ನಿವಾಸಿಗಳು ಯಾರೆಂಬುದು ಖಚಿತವಾಗಿಲ್ಲ. ಇಲ್ಲಿನವರ ಮೂಲ ಪುರುಷರು ಹೋಟುಮಾಟುವ ಎಂಬುವವನ ನಾಯಕತ್ವದಲ್ಲಿ ಪಶ್ಚಿಮದಿಂದ ಎರಡು ದೋಣಿಗಳಲ್ಲಿ ಬಂದರೆಂದು ಪ್ರತೀತಿ. ಭಾಷೆ ಬುಡಕಟ್ಟುಗಳ ದೃಷ್ಟಿಯಿಂದ ಈ ದ್ವೀಪವಾಸಿಗಳು ಪಾಲಿನೇಷಿಯನ್ನರು. ಆದರೆ ಇವರ ತಲೆ ಹೆಚ್ಚು ಉದ್ದ. ಮೆಲನೀಜ಼ನರ ಮಿಶ್ರಣದ ಫಲವೇ ಈ ವ್ಯತ್ಯಾಸ. ಇತರ ಪಾಲಿನೀಜ಼ನ್ ದ್ವೀಪಗಳಲ್ಲಿರುವವರಿಗಿಂತ ಇಲ್ಲಿನವರಲ್ಲಿ ನೀಗ್ರೋ ಮಾದರಿಯ ಲಕ್ಷಣಗಳು ಕಡಿಮೆ. ಮೂಲನಿವಾಸಿಗಳ ಸಂಸ್ಕೃತಿಯ ಪಳೆಯುಳಿಕೆಗಳಾಗಿ ಭೂತಾಕಾರದ ನೂರಾರು ಶಿಲಾಪ್ರತಿಮೆಗಳೂ ಕಲ್ಲಿನ ಮನೆಗಳೂ ಬಂಡೆಗಳ ಮೇಲೆ ಕೊರೆದಿರುವ ಚಿತ್ರಗಳೂ ಮರದ ವಿಗ್ರಹಗಳೂ ಇನ್ನೂ ಓದಲು ಸಾಧ್ಯವಾಗದಿರುವ ಲಿಪಿಯುಕ್ತ ಮರದ ಹಲಗೆಗಳೂ ಕಾಣಸಿಗುತ್ತವೆ. ಈ ಲಿಪಿಗಳು ಮನುಷ್ಯರ ಹಾಗೂ ಹಕ್ಕಿ, ಮೀನು, ಗಿಡವೇ ಮುಂತಾದವುಗಳ ಪ್ರತೀಕ. ಎಲ್ಲವೂ ಒಂದೇ ಎತ್ತರ. ಹಲಗೆಗಳ ಎರಡು ಬದಿಯಲ್ಲೂ ಕೆತ್ತಿರುವ ಈ ಲಿಪಿಗಳ ಒಂದೊಂದು ಸಾಲು ಮುಗಿದಮೇಲೂ ಅದರ ಮುಂದಿನ ಸಾಲು ಆ ಕೊನೆಯಿಂದ ಹಿಂದಕ್ಕೆ ಸಾಗುತ್ತದೆ. ಆದ್ದರಿಂದ ಒಂದು ಸಾಲು ಮುಗಿದ ಮೇಲೆ ಮುಂದಿನ ಸಾಲನ್ನು ಸರಿಯಾಗಿ ಅನುಸರಿಸಬೇಕಾದರೆ ಹಲಗೆಯನ್ನು ಸಂಪೂರ್ಣವಾಗಿ ತಿರುಗಿಸಬೇಕು. ಈ ಹಲಗೆಗಳಲ್ಲಿರುವ ಹಾಡುಗಳನ್ನೂ ಕತೆಗಳನ್ನೂ ಅಲ್ಲಿನ ಮೂಲವಾಸಿಗಳು ಹೇಳುತ್ತಾರೆ. ಆದರೆ ಅವುಗಳ ನೆರವಿನಿಂದ ಈ ಲಿಪಿಗಳನ್ನು ಅರ್ಥೈಸುವುದು ಇದುವರೆಗೂ ಅಸಾಧ್ಯವಾಗಿದೆ. ಇವು ಕೇವಲ ನೆನಪಿನ ಗುರುತುಗಳಾಗಿರಬಹುದು. ಆದರೆ ಇದು ಒಂದು ಸುಸಂಬದ್ಧ ಲಿಪಿ ವ್ಯವಸ್ಥೆಯೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಜನರಿಗೆ ಇತ್ತೀಚಿನವರೆಗೂ ಲೋಹದ ಉಪಯೋಗ ತಿಳಿದಿರಲಿಲ್ಲ.

*

# ಉ

**ಉಕ್ರೇನ್:** ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟದ 15 ರಾಜ್ಯಗಳಲ್ಲೊಂದಾಗಿದ್ದು 1991 ರಂದು ಸ್ವತಂತ್ರ ಗಣರಾಜ್ಯವಾಯಿತು. ಉಕ್ರೇನಿಯನ್ ಸೋವಿಯತ್ ಸಮಾಜವಾದಿ ಗಣರಾಜ್ಯವೆಂಬುದು ಪೂರ್ಣನಾಮ. 1922ರ ಡಿಸೆಂಬರ್ 30ರಂದು ಸೋವಿಯತ್ ಒಕ್ಕೂಟ ರಾಷ್ಟ್ರ ಸ್ಥಾಪಿಸಿದ ನಾಲ್ಕು ರಾಜ್ಯಗಳಲ್ಲೊಂದು. ಉ.ಅ. $48^0$–54′ ಹಾಗೂ ಪೂ.ರೇ. $25^0$–41′ ನಡುವೆ ಇದೆ. ವಿಸ್ತೀರ್ಣ 603,700 ಚ.ಕಿಮೀ. ಜನಸಂಖ್ಯೆ 48,396,470 (2002). ಒಕ್ಕೂಟದ ರಾಜ್ಯಗಳ ಪೈಕಿ ವಿಸ್ತೀರ್ಣದಲ್ಲಿ ಇದಕ್ಕೆ ಮೂರನೆಯ ಸ್ಥಾನ. ಜನಸಂಖ್ಯೆಯಲ್ಲಿ ಇದು ಎರಡನೆಯದು. ಸೋವಿಯತ್ ಒಕ್ಕೂಟದ ಐರೋಪ್ಯ ವಿಭಾಗದ ದಕ್ಷಿಣ ಪ್ರದೇಶವೆಲ್ಲ ಬಹುತೇಕ ಈ ರಾಜ್ಯಕ್ಕೆ ಸೇರಿದೆ. ಇದರ ಉತ್ತರ ಪೂರ್ವಗಳಲ್ಲಿ ಬೈಲೊರಷ್ಯನ್ ಸೋವಿಯತ್ ಗಣರಾಜ್ಯ ಹಾಗೂ ರಷ್ಯನ್ ಗಣರಾಜ್ಯ, ಪಶ್ಚಿಮದಲ್ಲಿ ಪೋಲೆಂಡ್, ನೈಋತ್ಯದಲ್ಲಿ ಚೆಕೊಸ್ಲೋವಾಕಿಯ, ಹಂಗೆರಿ, ರೊಮೇನಿಯ, ಮಾಲ್ಡೇವಿಯನ್ ಸೋವಿಯತ್ ಗಣರಾಜ್ಯ ಮತ್ತು ದಕ್ಷಿಣದಲ್ಲಿ ಕಪ್ಪುಸಮುದ್ರ ಹಾಗೂ ಅಜೋವ್ ಸಮುದ್ರ ಇವೆ. ರಾಜಧಾನಿ ಕೀವ್. ಇದರ ಜನಸಂಖ್ಯೆ 2,637000 (2002).

ಮೇಲ್ಮೈ ಲಕ್ಷಣ: ಈ ರಾಜ್ಯವನ್ನು ಆರು ಭಾಗಗಳಾಗಿ ವಿಂಗಡಿಸಬಹುದು: ಉತ್ತರಭಾಗದ ನೀಪರ್ ನದಿಯ ತಗ್ಗು ನೆಲ. ಈಶಾನ್ಯದ ಎತ್ತರದ ನೆಲ. ಮಧ್ಯನೀಪರ್ ತಗ್ಗುನೆಲ. ಕಪ್ಪುಸಮುದ್ರ ಹಾಗೂ ಆಜೋವ್ ಸಮುದ್ರಗಳ ಕಡೆಗಿರುವ ವಿಶಾಲ ಬಯಲು. ನೈಋತ್ಯ ಭಾಗದಲ್ಲಿರುವ ಕಾರ್ಪೇಥಿಯನ್ ಪರ್ವತಶ್ರೇಣಿ, ಕ್ರಿಮಿಯನ್ ಪರ್ವತ ಶ್ರೇಣಿ.

ವಾಯುಗುಣ: ಇಲ್ಲಿನದು ಖಂಡಾಂತರ ವಾಯುಗುಣ. ಆದರೆ ಕಪ್ಪು ಸಮುದ್ರದ ಸನಿಹದಿಂದಾಗಿ ಇದು ತೀವ್ರವಲ್ಲ. ಜನವರಿಯಲ್ಲಿನ ಉಷ್ಣತೆ $7^0$ ಸೆಂ. ನಿಂದ $3^0$ಸೆಂ. ವರೆಗಿದ್ದು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಉತ್ತರದಲ್ಲಿ ಬೀಸುವ ಗಾಳಿಯಿಂದ ಉಷ್ಣತೆ ಥಟ್ಟನೆ ಕಡಿಮೆಯಾಗುವುದು ಸಾಮಾನ್ಯ. ಆದರೆ ಚಳಿಗಾಲದಲ್ಲೂ ದಕ್ಷಿಣದ ಸಮುದ್ರದ ಕಡೆಯಿಂದ ಬೀಸುವ ಬಿಸಿಗಾಳಿ

ಹಿಮಗಡ್ಡೆಗಳನ್ನು ಕರಗಿಸುತ್ತದೆ. ಮಳೆ ಕಡಿಮೆ. ಕಾರ್ಪೇಥಿಯನ್ ಮತ್ತು ಕ್ರಿಮಿಯನ್ ಪರ್ವತ ಪ್ರದೇಶಗಳಲ್ಲಿ ವರ್ಷಕ್ಕೆ 100–116ಸೆಂಮೀ ಮಳೆ ಬೀಳುತ್ತದೆ. ಉಳಿದ ಕಡೆಗಳಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಂದಂತೆ ಮಳೆ ಕಡಿಮೆಯಾಗುತ್ತದೆ. ಬೇಸಗೆಯಲ್ಲಿ ಗುಡುಗು ಮಿಂಚಿನಿಂದ ಮಳೆಯಾಗುತ್ತದೆ.

ಸಸ್ಯಸಂಪತ್ತು: ಉಕ್ರೇನಿನ ಉತ್ತರದ ತಗ್ಗುಭೂಮಿಯಲ್ಲಿ ಓಕ್, ಹಾರ್ನ್‌ಬೀಮ್, ಪೈನ್ ಮರಗಳಿವೆ. ಆಷ್, ಮೇಪಲ್ ಸಾಮಾನ್ಯ. ಮರಳುಮಿಶ್ರಿತ ನೆಲವಿದ್ದಲ್ಲಿ ಪೀತದಾರು ಬೆಳೆಯುತ್ತದೆ. ಜವುಗುನೆಲದಲ್ಲಿ ಆಲ್ಡರ್, ವಿಲ್ಲೊ ಪ್ರಧಾನ.

ಪರ್ವತಗಳ ಮೇಲೆ ಅವುಗಳದೇ ಆದ ಸಸ್ಯವಲಯಗಳಿವೆ. ಕಾರ್ಪೇಥಿಯನ್ನುಗಳ ಕೆಳಭಾಗ ಬೀಚ್ ಕಾಡುಗಳಿಂದ ಆಚ್ಛಾದಿತವಾಗಿದೆ. ಮೇಲೇರಿದಂತೆ ಶಂಕುಧಾರಿ ಮರಗಳ ಕಾಡು ಹಾಗೂ ಆಲ್ಪ್ಸ್ ನಲ್ಲಿರುವಂಥ ಹುಲ್ಲುಗಾವಲುಗಳು ಕಂಡುಬರುತ್ತವೆ. ಕಾರ್ಪೇಥಿಯನ್ ಪರ್ವತಗಳಲ್ಲಿ ಮೆಡಿಟರೇನಿಯನ್ ಮಾದರಿಯ ಸಸ್ಯಗಳನ್ನೂ ಕಾಣಬಹುದು.

ಆರ್ಥಿಕತೆ: ಉಕ್ರೇನಿನಲ್ಲಿ ಬೇಸಾಯ ಚೆನ್ನಾಗಿ ಅಭಿವೃದ್ಧಿ ಹೊಂದಿದೆ. ಶೇ. 60 ಭೂಭಾಗ ವ್ಯವಸಾಯಕ್ಕೆ ಯೋಗ್ಯವಾಗಿದೆ. ಮುಖ್ಯಬೆಳೆ ಚಳಿಗಾಲದ ಗೋದಿ. ಕಪ್ಪು ಸಮುದ್ರದ ತಗ್ಗುನೆಲದಲ್ಲೂ ಉತ್ತರ ಕ್ರಿಮಿಯದಲ್ಲೂ ಇದು ಪ್ರಧಾನವಾಗಿದೆ, ಎರಡನೆಯದು ಮೆಕ್ಕೆಜೋಳ. ಸೋವಿಯತ್ ರಾಜ್ಯದಲ್ಲಿ ಚೆನ್ನಾಗಿ ಮಾಗಿದ ಮೆಕ್ಕೆಜೋಳ ಬೆಳೆಯುವ ಕೆಲವೆ ಪ್ರದೇಶಗಳಲ್ಲಿ ಉಕ್ರೇನ್ ಒಂದು. ಚಳಿಗಾಲದ ರೈ, ವಸಂತದ ಬಾರ್ಲಿ, ಮಿಲೆಟ್, ಕಪ್ಪುಗೋದಿ ಇತರ ಬೆಳೆಗಳು. ಎತ್ತರ ಪ್ರದೇಶಗಳಲ್ಲಿ ಬೀಟ್ ಸಕ್ಕರೆ ಮುಖ್ಯ. ಇದು ಸೋವಿಯತ್ ಒಕ್ಕೂಟದ ಪ್ರಧಾನ ಸಕ್ಕರೆ ಉತ್ಪಾದಕ ರಾಜ್ಯ. ಸೂರ್ಯಕಾಂತಿ, ರೇಪ್, ಅಗಸೆ, ಹೊಗೆಸೊಪ್ಪು, ಆಲೂಗೆಡ್ಡೆ, ಕಲ್ಲಂಗಡಿ, ಕರಬೂಜ ಇವೂ ಬೆಳೆಯುತ್ತವೆ. ವ್ಯವಸಾಯದ ಉಪಚಟುವಟಿಕೆಯಾಗಿರುವ ಪಶುಪಾಲನೆಯೂ ಮುಖ್ಯ. ದನ, ಹಂದಿ, ಕುರಿ, ಕೋಳಿ ಮುಂತಾದುವನ್ನು ಸಾಕಲಾಗುತ್ತಿದೆ.

ಎರಡನೆಯ ಮಹಾಯುದ್ಧಕ್ಕೆ ಹಿಂದಿನಿಂದಲೂ ಸೋವಿಯತ್ ಒಕ್ಕೂಟದ ಅರ್ಥ ವ್ಯವಸ್ಥೆಯಲ್ಲಿ ಉಕ್ರೇನಿನ ಕೈಗಾರಿಕೆಗಳೂ ವ್ಯವಸಾಯದಂತೆಯೇ ಪ್ರಮುಖವಾಗಿವೆ. ಕಬ್ಬಿಣ, ಮ್ಯಾಂಗನೀಸ್, ಕಲ್ಲಿದ್ದಲು, ಆಂಥ್ರಸೈಟ್, ಸುಣ್ಣಕಲ್ಲು, ಲವಣ, ಫಾಸ್ಫೇಟುಗಳು, ಪಾದರಸ ಇಲ್ಲಿನ ಖನಿಜಗಳು. ಇವುಗಳ ತಳಹದಿಯ ಮೇಲೆ ಕೈಗಾರಿಕೆಗಳು ಬೆಳೆದಿವೆ. ವಿದ್ಯುತ್ ರೈಲು, ಜಲಮಾರ್ಗಗಳೂ ಈ ಬೆಳೆವಣಿಗೆಗೆ ಸಹಾಯಕವಾಗಿವೆ. ಬೃಹತ್ ರಾಸಾಯನಿಕ ಕೈಗಾರಿಕೆ, ಸೂಪರ್ ಫಾಸ್ಫೇಟುಗಳು, ಬಣ್ಣಗಳು, ಹಡಗು ನಿರ್ಮಾಣ–ಇವು ಮುಖ್ಯವಾಗಿದೆ.

ರೈಲ್ವೆ ವ್ಯವಸ್ಥೆ ಅಭಿವೃದ್ಧಿ ಹೊಂದಿದೆ. ಒಡೆಸ, ನಿಕಲೈಯೆಫ್, ಟಗನ್‌ರಾಕ್, ಮಾರಿಯೂಪಾಲ್ ಈ ರಾಜ್ಯದ ಸುಸಜ್ಜಿತ ಬಂದರುಗಳು. ಪುರಾತನ ನಗರ ಕೀವ್ ರಾಜಧಾನಿ. ಖಾರ್ಕಾಫ್ ಪ್ರಮುಖ ಕೈಗಾರಿಕಾ ಕೇಂದ್ರ. (ಬಿ.ಸಿ.ಪಿ.)

**ಉಗಾಂಡ:** ಪೂರ್ವ ಆಫ್ರಿಕದಲ್ಲಿರುವ ಒಂದು ಗಣರಾಜ್ಯ. ದಕ್ಷಿಣ ಅಕ್ಷಾಂಶ $1^0$ ಯಿಂದ ಉತ್ತರ ಅಕ್ಷಾಂಶ $4^0$ ಮತ್ತು ಪೂ.ರೇ. $29^0$–$35^0$ಗಳ ನಡುವೆ ಇದೆ. ಉತ್ತರದಲ್ಲಿ ಸೂಡಾನ್, ಪೂರ್ವದಲ್ಲಿ ಕೀನ್ಯ, ದಕ್ಷಿಣದಲ್ಲಿ ಟಾಂಜಾನಿಯ ಮತ್ತು ರುವಾಂಡ, ಪಶ್ಚಿಮದಲ್ಲಿ ಕಾಂಗೋ ಗಣರಾಜ್ಯ ಇವುಗಳ ನಡುವೆ ಇರುವ ಈ ದೇಶದ ಒಟ್ಟು ವಿಸ್ತೀರ್ಣ 2,36,037 ಚ.ಕಿಮೀ. ಜನಸಂಖ್ಯೆ: 22,824,000 (2002). ಈ ರಾಷ್ಟ್ರದ ಮಧ್ಯದಲ್ಲಿನ ಆಧಿಪತ್ಯದ ಹೆಸರಾದ ಬುಗಾಂಡವೇ 19ನೆಯ ಶತಮಾನದಲ್ಲಿ ಸ್ವಾಹಿಲಿ ಭಾಷೆ ಆಡುವವರ ಬಾಯಲ್ಲಿ ಉಗಾಂಡ ಆಯಿತು. ರಾಜಧಾನಿ ಕಂಪಾಲ.

ಮೇಲ್ಮೈ ಲಕ್ಷಣ: ಪೂರ್ವ ಪಶ್ಚಿಮ ಅಂಚುಗಳಲ್ಲಿ ಪರ್ವತ ನಡುವೆ 1,300 ಮೀ ಎತ್ತರದ ಪ್ರಸ್ಥಭೂಮಿ. ದಕ್ಷಿಣದ ವಿಕ್ಟೋರಿಯ ಸರೋವರ ಈ ವಿಶಾಲ ಪ್ರಸ್ಥಭೂಮಿಯ ಅಂಚಿಗೆ ತಾಕಿ, ಈ ದೇಶದ ಗಡಿಯನ್ನೂ ದಾಟಿ ದಕ್ಷಿಣಕ್ಕೆ ವಿಸ್ತರಿಸಿದೆ. ಇಲ್ಲಿ ಇನ್ನೂ ಅನೇಕ ಸರೋವರಗಳಿವೆ. ಪರ್ವತಶಿಖರಗಳ ಪೈಕಿ ಎಲ್ಗನ್ ಪೂರ್ವದಲ್ಲೂ ರೂವಂಜೋರಿ ಪಶ್ಚಿಮದಲ್ಲೂ ಇವೆ. ರೂವಂಜೋರಿ ಹಿಮಾಚ್ಛಾದಿತವಾದದ್ದು, ನೈಲ್ ನದಿಯ ಉಗಮ ಈ ದೇಶದಲ್ಲೆ.

ವಾಯುಗುಣ, ಸಸ್ಯವರ್ಗ: ಸಮಭಾಜಕವೃತ್ತದ ಆಚೀಚೆ ಹಬ್ಬಿರುವ ಈ ದೇಶದ ಬಹು ಭಾಗ ಎತ್ತರವಾಗಿದೆ. ಆದ್ದರಿಂದ ಒಟ್ಟಿನಲ್ಲಿ ವಾಯುಗುಣ ಹಿತಕರ. ವಿಕ್ಟೋರಿಯ ಸರೋವರದ ಬಳಿಯಲ್ಲಿ ಮಳೆ ವರ್ಷವಿಡೀ ಧಾರಾಳ ಬೀಳುತ್ತದೆ. ವಾರ್ಷಿಕವಾಗಿ 116 ಸೆಂಮೀ. ಉಳಿದ ಕಡೆಗಳಲ್ಲಿ ಮಳೆ ವರ್ಷಕ್ಕೆ 100 ಸೆಂಮೀಗಿಂತ ಕಡಿಮೆ. ಇಲ್ಲಿನ ಉಷ್ಣತೆ. ಸರಾಸರಿ $23^0$ ಸೆ.

ಹೆಚ್ಚು ನೀರು ಸರಬರಾಜಿರುವ ಉಗಾಂಡ ಪ್ರಸ್ಥಭೂಮಿಯಲ್ಲಿ ಸವನ್ನ ಮಾದರಿಯ ಹುಲ್ಲುಗಾವಲಿದೆ. ಈಗ ಇಲ್ಲಿ ಮಾನವನಿರ್ಮಿತ ಬಾಳೆತೋಟ ಹಬ್ಬುತ್ತಿದೆ. ಪಶ್ಚಿಮದ ಘಟ್ಟಪ್ರದೇಶಗಳಲ್ಲಿ ಹುಲ್ಲು ಒತ್ತಾಗಿ ಬೆಳೆಯುತ್ತದೆ. ಪರ್ವತದ ಇಳಿಜಾರಿನಲ್ಲಿ ಕಾಡುಗಳಿವೆ.

ಜನಸಾಂದ್ರತೆ, ಉದ್ಯೋಗ: ಉತ್ತರದ ಪ್ರಾಂತ್ಯ ಬಹಳ ಹಿಂದುಳಿದಿದೆ. ಸಂಚಾರ ಸಂಪರ್ಕವಿಲ್ಲದೆ ಮರುಭೂಮಿಯ ವಾತಾವರಣದಿಂದ ಕೂಡಿರುವ ಈ ಭಾಗದ ಜನ ದನಕರು ಮತ್ತು ಕುರಿಗಳನ್ನು ಸಾಕುತ್ತಾರೆ. ಪೂರ್ವ ಪ್ರಾಂತ್ಯ ಜನಭರಿತ. ಜನಸಾಂದ್ರತೆ ಚ.ಕಿಮೀಗೆ 200ಕ್ಕೂ ಹೆಚ್ಚು. ಬುಗಾಂಡ ಪ್ರಾಂತ್ಯ ಹೆಚ್ಚು ಮುಂದುವರಿದಿದೆ. ವ್ಯವಸಾಯ ಹಾಗೂ ಪಶುಪಾಲನೆ ಇಲ್ಲಿನ ಜನರ ಮುಖ್ಯ ಕಸುಬು. ಬಾಳೆಹಣ್ಣು, ನೆಲಗಡಲೆ ಮತ್ತು ಜೋಳ ಮುಖ್ಯ ಆಹಾರ ಬೆಳೆಗಳು.




ಕಾಫಿ, ಹತ್ತಿ ಮತ್ತು ಹೊಗೆಸೊಪ್ಪು ಉಗಾಂಡದ ವಾಣಿಜ್ಯ ಬೆಳೆಗಳು. ಹತ್ತಿ, ಕಾಫಿ ಇವು ಮುಖ್ಯವಾದ ವಿದೇಶೀ ವಿನಿಮಯ ಸಂಪಾದಿಸುವ ವಸ್ತುಗಳು. ಕಾಫಿ ತೋಟಗಳು ಎಲ್ಗನ್ ಪರ್ವತಗಳ ಇಳಿಜಾರುಗಳಲ್ಲಿವೆ. ದಕ್ಷಿಣ ಮತ್ತು ಪೂರ್ವಭಾಗಗಳಲ್ಲಿ ಉತ್ತಮ ದರ್ಜೆಯ ಉದ್ದ ಎಳೆಯ ಹತ್ತಿ ಬೆಳೆಯುತ್ತದೆ. ರೂವಂಜೋರಿಯ ತಪ್ಪಲು ಪ್ರದೇಶದಲ್ಲಿ ಚಹ ತೋಟಗಳಿವೆ. ಹೆಚ್ಚಾಗಿ ಮಳೆ ಬೀಳುವ ವಿಕ್ಟೋರಿಯ ಸರೋವರದ ಸುತ್ತಮುತ್ತ ಕಬ್ಬು, ಗೆಣಸು, ಅವರೆ ಮತ್ತು ಬಟಾಣಿ ಬೆಳೆಯುತ್ತಾರೆ. ಸಿಮ್ ಸಿಮ್ ಎಂಬುದು ಮತ್ತೊಂದು ಪ್ರಮುಖ ಬೆಳೆ. ಮೀನುಗಾರಿಕೆಯೂ ಒಂದು ಮುಖ್ಯ ಉದ್ಯೋಗ. ರೂವಂಜೋರಿ ಪ್ರದೇಶದಲ್ಲಿ ತಾಮ್ರ, ಕೋಬಾಲ್ಟ್, ಯುರೇನಿಯಂಗಳೂ ರೆಲೆಂಬಿಯ ಮತ್ತು ಟೋರೋರೋದಲ್ಲಿ ಕಬ್ಬಿಣದ ಅದಿರೂ ಫಾಸ್ಫೇಟುಗಳೂ ದೊರಕುತ್ತವೆ.

ಜಿಂಜ ಉಗಾಂಡದ ಪ್ರಮುಖ ಕೈಗಾರಿಕಾಕೇಂದ್ರ. ಕೀನ್ಯ–ಉಗಾಂಡ ರೈಲುಮಾರ್ಗಗಳು ಇಲ್ಲಿ ಕೂಡುತ್ತವೆ. ಹತ್ತಿರದಲ್ಲಿರುವ ಓವೆನ್ ಜಲಪಾತದಿಂದ ಹೇರಳವಾದ ವಿದ್ಯುತ್ತನ್ನು ತಯಾರಿಸುವುದರಿಂದ ಇಲ್ಲಿ ಈಚೆಗೆ ಕೈಗಾರಿಕೆ ಬೆಳೆದಿದೆ. ಸಿಮೆಂಟ್, ಹತ್ತಿ, ಜವಳಿ, ಸಕ್ಕರೆ, ತಾಮ್ರ ಕೈಗಾರಿಕೆಗಳು ಮುಖ್ಯ. ಅನುಭೋಗ ವಸ್ತುಗಳ ಕೈಗಾರಿಕೆಗಳೂ ಅಲ್ಪ ಪ್ರಮಾಣದಲ್ಲಿ ಸ್ಥಾಪಿತವಾಗಿವೆ. ಪೋರ್ಟ್‌ಬೆಲ್, ಟರವಾರೋ ಮತ್ತು ಬಾಲೆ ಈ ಕಾರ್ಖಾನೆಗಳ ಕೇಂದ್ರಗಳು.

ವಿಕ್ಟೋರಿಯ ಸರೋವರದ ದಡದಲ್ಲಿರುವ ಎನ್‌ಟೆಬ್ಬೆ ಉಗಾಂಡದ ಪ್ರಮುಖ ನಗರ ಮತ್ತು ವಿಮಾನ ನಿಲ್ದಾಣ; ಪಾಶ್ಚಾತ್ಯ ರಾಷ್ಟ್ರಗಳೊಂದಿಗೆ ವಾಯುಮಾರ್ಗ ಸಂಪರ್ಕ ಕಲ್ಪಿಸಿದೆ.

ರಾಜಧಾನಿ ಕಂಪಾಲ ಮುಖ್ಯ ವಾಣಿಜ್ಯ ಕೇಂದ್ರ. ಮೊಂಬಾಸದೊಂದಿಗೆ ಇದಕ್ಕೆ ರೈಲ್ವೆ ಸಂಪರ್ಕವುಂಟು. ಕಂಪಾಲದ ಬಳಿ ಇರುವ ಮಕಾರೆರೆ ಎಂಬುದು ಪೂರ್ವ ಆಫ್ರಿಕ ವಿಶ್ವವಿದ್ಯಾಲಯ ಕೇಂದ್ರವಾಗಿದೆ. ಜನಸಂಖ್ಯೆ: 773,463 (2002).

(ಎಸ್.ಎಲ್.ಎಂ.;ಎಚ್.ಆರ್.ಡಿ.)

**ಉಜ್ಜಯಿನಿ:** ಮಧ್ಯ ಪ್ರದೇಶದ ಒಂದು ಜಿಲ್ಲೆ ಹಾಗೂ ಜಿಲ್ಲಾ ಆಡಳಿತ ಕೇಂದ್ರ ನಗರ. ಅವಂತೀ ಎಂದೂ ಕರೆಯುವ ಈ ನಗರ ಚಂಬಲ್ ನದಿಯ ಉಪನದಿಯಾದ ಕ್ಷಿಪ್ರಾ ನದಿ (ಉತ್ತರ ವಾಹಿನಿ) ದಂಡೆಯಲ್ಲಿದೆ. ಇದರ ಉತ್ತರದಲ್ಲಿ ಚಂಬಲ್ (ಚರ್ಮಣವತೀ) ನದಿ ಮತ್ತು ಆರಾವಳಿ (ಪಾರಿಯಾತ್ರ) ಪರ್ವತ ಶ್ರೇಣಿ, ದಕ್ಷಿಣದಲ್ಲಿ ನರ್ಮದಾ ನದಿ, ಪೂರ್ವದಲ್ಲಿ ವಿಂಧ್ಯಾಚಲ ಮತ್ತು ಪಶ್ಚಿಮದಲ್ಲಿ ಸೌರಾಷ್ಟ್ರ ಇವೆ. ಈ ನಗರ ಇಂದೋರಿನಿಂದ ಸು. 55 ಕಿಮೀ, ಭೋಪಾಲಿನಿಂದ 180 ಕಿಮೀ ದೂರದಲ್ಲಿದೆ. ಸಮುದ್ರಮಟ್ಟದಿಂದ ಸು. 1698 ಅಡಿಗಳ ಎತ್ತರದಲ್ಲಿದೆ. ಜನಸಂಖ್ಯೆ 4,29,933.

ಇದು ಭಾರತದ ಮುಖ್ಯ ಪೌರಾಣಿಕ ಹಾಗೂ ಐತಿಹಾಸಿಕ ನಗರಗಳಲ್ಲಿ ಒಂದು. ಉಜ್ಜಯಿನಿಗೆ ಇತಿಹಾಸದ ಒಂದೊಂದು ಕಾಲದಲ್ಲೂ ಬೇರೆ ಬೇರೆ ಹೆಸರುಗಳಿದ್ದವೆಂದು ತಿಳಿದುಬರುತ್ತದೆ. ಮೊದಲು ಸ್ವರ್ಣಶೃಂಗಾ (ಕನಕಶೃಂಗಾ), ಎರಡನೆಯದು ಕುಶಸ್ಥಲೀ, ಮೂರನೆಯದು ಅವಂತಿಕಾ, ನಾಲ್ಕನೆಯದು ಅಮರಾವತೀ, ಐದನೆಯದು ಚೂಡಾಮಣಿ ಮತ್ತು ಆರನೆಯದು ಪದ್ಮಾವತೀ ಎಂದಿತ್ತು. ಸೋಮದೇವ ತನ್ನ ಕಥಾಸರಿತ್ಸಾಗರದಲ್ಲಿ

ಈ ನಗರವನ್ನು ಭೋಗವತಿ, ಹಿರಣ್ಯಾವತಿ ಎಂದು ಕರೆದಿದ್ದಾನೆ. ಕವಿ ಕಾಳಿದಾಸನಂತೂ ಉಜ್ಜಯಿನಿಯನ್ನು ವಿಶಾಲಾ ಎಂದೇ ಕರೆದು ಇದರ ಸಮೃದ್ಧಿಯನ್ನು ಸೂಚಿಸಿದ್ದಾನೆ. ಅಲ್ಲದೆ ಪ್ರತಿಕಲ್ಪ, ಕುಮುದ್ವತಿ ಮತ್ತು ಶಿವಪುರಿ ಎಂಬವೂ ಉಜ್ಜಯಿನಿಯ ಇತರ ಹೆಸರುಗಳು.

ಪ್ರಸಿದ್ಧವಾದ ಪುರಾತನ ಸಪ್ತ ಪುರಿಗಳಲ್ಲಿ ಉಜ್ಜಯಿನಿ ಒಂದು ಮುಖ್ಯ ನಗರವಾಗಿದ್ದು ಇಂದಿಗೂ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದೆ. ಇದಕ್ಕೆ ಹಲವು ಧಾರ್ಮಿಕ ಹಾಗೂ ಪೌರಾಣಿಕ ಹಿನ್ನೆಲೆಗಳಿವೆ. ಸ್ಕಂದಪುರಾಣದ ಪ್ರಕಾರ ಅವಂತಿ ರಾಜ್ಯದ ರಾಜಧಾನಿ ಅವಂತೀಪುರವಾಗಿತ್ತು. ಇಲ್ಲಿ ತ್ರಿಪುರಾಸುರನ ಸಂಹಾರವಾದ ಮೇಲೆ ಶಿವನ ವಿಜಯದಿಂದ ಇದಕ್ಕೆ ಉಜ್ಜಯಿನಿ (ಉತ್+ಜಯಿನಿ, ಶ್ರೇಷ್ಠ ರೀತಿಯಲ್ಲಿ ಜಯ ಗಳಿಸುವ) ಎಂಬ ಹೆಸರು ಬಂದಿತು.

ಸಂಸ್ಕೃತದ ಕವಿಗಳಾದ ಭಾಸ, ಶೂದ್ರಕ, ಭವಭೂತಿ, ಬಿಲ್ಹಣ, ಕಲ್ಹಣ, ಅಮರಸಿಂಹ, ಪದ್ಮಗುಪ್ತ, ಸೋಮದತ್ತ, ಕಾಳಿದಾಸ, ಬಾಣ ಮುಂತಾದವರು ತಮ್ಮ ಕೃತಿಗಳಲ್ಲಿ ಅವಂತಿಯ ವರ್ಣನೆಯನ್ನು ವಿಪುಲವಾಗಿ ಮಾಡಿದ್ದಾರೆ. ವಿದೇಶಿ ಪ್ರವಾಸಿಗಳಾದ ಯುವಾನ್‌ಚಾಂಗ್, ಟಾಲಮಿ, ಪೆರಿಪ್ಲಸ್, ಬರ್ನಿಯರ್, ಅಲ್ಬೆರುನಿ ಮೊದಲಾದವರು ಉಜ್ಜಯಿನಿಯ ಬಗ್ಗೆ ಬರೆದಿದ್ದಾರೆ.

ಭಾರತೀಯ ಜ್ಯೋತಿಶ್ಶಾಸ್ತ್ರದ ಪ್ರಕಾರವೂ ಉಜ್ಜಯಿನಿಗೆ ಮಹತ್ವವಿದೆ. ಇದು ಕರ್ಕಾಟಕ ವೃತ್ತದ ಮೇಲೆಯೇ ಇದೆ. ಇದು ಉತ್ತರ ಅಕ್ಷಾಂಶ $23^0$–11′ ಇದ್ದು ಪೂರ್ವ ರೇಖಾಂಶ $75^0$45′ದಲ್ಲಿ ಇದೆ. ಪುರಾತನ ಭಾರತೀಯ ಖಗೋಳಶಾಸ್ತ್ರಜ್ಞರು ಉಜ್ಜಯಿನಿಯ ಮೇಲೆ ಹಾದುಹೋಗುವ ರೇಖಾಂಶವನ್ನು ಪ್ರಧಾನ ರೇಖಾಂಶವೆಂದು ಪರಿಗಣಿಸಿದರು. ಇದು ಲಂಕಾ, ಉಜ್ಜಯಿನಿಯಿಂದ ಮೇಲೆ ಹಾದು ಕುರುಕ್ಷೇತ್ರ ಮತ್ತು ಮೇರು ಪರ್ವತಕ್ಕೆ ಹೋಗುತ್ತದೆ. ಕಾಲಗಣನೆಯನ್ನು ಉಜ್ಜಯಿನಿಯಿಂದ ಶುರುಮಾಡಿದರೇ ಅದು ಸಮರ್ಪಕವಾಗಿರುವುದೆಂದು ಅಭಿಮತ. ಇದನ್ನು ಪೂರ್ವ ಗ್ರೀನಿಚ್ ಎಂದೂ ಕರೆಯುತ್ತಾರೆ. ಕಾಲಜ್ಞಾನದ ಈ ಅದ್ಭುತ ವಿಶೇಷತೆಯಿಂದಾಗಿ ಇಲ್ಲಿಯ ಪ್ರಧಾನ ದೇವತೆ ಕಾಲವನ್ನೇ ಮೀರಿನಿಂತ ಮಹಾಕಾಲ. ಉಜ್ಜಯಿನಿ ಚಂದ್ರ ಮತ್ತು ಅಂಗಾರಕರ ಜನ್ಮಭೂಮಿ ಎಂಬ ನಂಬಿಕೆ ಇರುವುದರಿಂದ, ಭಾರತದ ತೀರ್ಥಯಾತ್ರೆಯೂ ಇಲ್ಲಿಂದಲೇ ಆರಂಭ. ಜಯಪುರದ ಜಯಸಿಂಹ (1728–34) ಇಲ್ಲಿ ಜಂತರ್ ಮಂತರ್ ಅಥವಾ ವೇದಶಾಲಾ ಎಂಬ ಖಗೋಳ ವೀಕ್ಷಣಾಲಯ ಕಟ್ಟಿಸಿದ.

ಸಾಂಸ್ಕೃತಿಕವಾಗಿ ಉಜ್ಜಯಿನಿ ಎಂದಿನಿಂದಲೂ ಉಚ್ಛ್ರಾಯ ಸ್ಥಿತಿಯಲ್ಲೇ ಇದ್ದಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕಾಶಿ ಮತ್ತು ಉಜ್ಜಯಿನಿ ನಾಗರಿಕತೆಯ ತೊಟ್ಟಿಲಾಗಿದ್ದುವು ಎನ್ನಬಹುದು.

ಉಜ್ಜಯಿನಿಯಲ್ಲಿ ನೋಡಬೇಕಾದ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಇವುಗಳಲ್ಲಿ ಮುಖ್ಯವಾದವು– ಮಹಾಕಾಲೇಶ್ವರ, ಅದರ ಮೇಲಿನ ಅಂತಸ್ತಿನಲ್ಲಿರುವ ಓಂಕಾರೇಶ್ವರ, ಅದಕ್ಕೂ ಮೇಲಿರುವ ನಾಗಸಂಧ್ಯೇಶ್ವರ (ವರ್ಷಕ್ಕೊಮ್ಮೆ ಮಾತ್ರ), ಜೂನಾ ಮಹಾಕಾಲ, ಹರಸಿದ್ಧಿ ಮಾತಾ, ಬಡೇ ಗಣೇಶ್, ಶಿಪ್ರಾ ತಟ, ದತ್ತ ಅಖಾಡಾ, ಗೋಪಾಲ ಮಂದಿರ, ಗಢಕಾಳಿಕಾ, ಭರ್ತಹರಿ ಗುಹೆ, ಕಾಲಭೈರವ, ಸಿದ್ಧವಟ್, ಮಂಗಲನಾಥ್, ಚೌಬೀಸ್‌ಖಂಬಾ ದ್ವಾರ್, ಕಾಲಿಯಾದಹ್, ಅಂಕಪಾತ್ ಮತ್ತು ವೇದಶಾಲಾ. ಇಲ್ಲಿಯ ಕೆಲವು ಪ್ರಮುಖ ಸಾಂಸ್ಕೃತಿಕ ವಿದ್ಯಾ ಸಂಸ್ಥೆಗಳಲ್ಲಿ ವಿಕ್ರಮ ವಿಶ್ವವಿದ್ಯಾಲಯ, ಸಿಂಧಿಯ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಕಾಳಿದಾಸ ಅಕಾಡೆಮಿ, ರಾಷ್ಟ್ರೀಯ ವೇದವಿದ್ಯಾ ಪ್ರತಿಷ್ಠಾನ, ಕಾವೇರಿ ಶೋಧ ಸಂಸ್ಥಾನ್ ಮುಂತಾದವನ್ನು ಹೆಸರಿಸಬಹುದು. (ಆರ್.ಎಸ್.ಟಿ.)

**ಉಜ್ಬೆಕಿಸ್ತಾನ:** ಹಿಂದಿನ ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟದ ಒಂದು ರಾಜ್ಯ. ಇಂದಿನ ಅಧಿಕೃತ ಹೆಸರು ಉಜ್ಬೆಕ್ ಸೋವಿಯತ್ ಸಮಾಜವಾದಿ ಗಣರಾಜ್ಯ. ದಕ್ಷಿಣದಲ್ಲಿ ಆಫ್ಘಾನಿಸ್ತಾನವೂ ಉಳಿದ ಮೂರು ದಿಕ್ಕುಗಳಲ್ಲಿ ಕಾಜಾಕ್‌ಸ್ತಾನ್, ಕಿರ್ಗಿಷ ತಾಜಿಕಿಸ್ತಾನ್, ತುರ್ಕ್‌ಮೆನಿಸ್ತಾನ್‌ಗಳೂ ಸುತ್ತುವರಿದಿರುವ ಈ ರಾಜ್ಯ $38^0$ ಉ.–$45^0$ ಉ.ಅ. ಹಾಗೂ $36^0$ ಪೂ–$72^0$ ಪೂ.ರೇ. ನಡುವೆ, ಸೋವಿಯತ್ ಮಧ್ಯ ಏಷ್ಯದ ಆಗ್ನೇಯ ಭಾಗದಲ್ಲಿ ಹಬ್ಬಿದೆ. ಉಜ್ಬೆಕ್ ಜನರಿರುವ ಭಾಗಗಳನ್ನೆಲ್ಲ ಒಳಗೊಂಡಿರುವ ಈ ರಾಜ್ಯದ ಎಲ್ಲೆ ಅಂಕುಡೊಂಕು. 1924ರಲ್ಲಿ ಸ್ಥಾಪಿತವಾದ ಈ ಒಕ್ಕೂಟ ಗಣರಾಜ್ಯದ ವಿಸ್ತೀರ್ಣ 4,47,000 ಚ.ಕಿಮೀ. ಜನಸಂಖ್ಯೆ: 25,484,000 (2002) ರಾಜಧಾನಿ ತಾಷ್ಕೆಂಟ್.

1991ರಲ್ಲಿ ಸೋವಿಯತ್ ಗಣರಾಜ್ಯದಿಂದ ಬೇರ್ಪಟ್ಟು ಸ್ವತಂತ್ರ್ಯ ರಾಷ್ಟ್ರವಾಯಿತು.

ಭೂವಿವರಣೆ: ಈ ಪ್ರದೇಶದ ಪೂರ್ವಭಾಗದಲ್ಲಿ ಟಯೆನ್‌ಷಾನ್ ಪರ್ವತದ ಕವಲುಗಳು ಒಳನುಗ್ಗಿವೆ. ಈ ರಾಜ್ಯದ ಬಹುಭಾಗ ಬೆಟ್ಟಗುಡ್ಡಗಳಿಂದ ಕೂಡಿದ ಮೈದಾನ; ನೆಲದ ಬಹುಭಾಗ ಮರುಭೂಮಿಮಯ. ನಡುನಡುವೆ ಇರುವ ಓಯಸಿಸ್ಸುಗಳ ಪೈಕಿ ಫರ್ಗನ್ ಕಣಿವೆಯದು ಅತಿ ದೊಡ್ಡದು. ಇದರ ಸುತ್ತ ಎತ್ತರ ಪರ್ವತಗಳಿವೆ. ಅನೇಕ ಸಣ್ಣ ನದಿ ತೊರೆಗಳು ಇಲ್ಲಿನ ಪರ್ವತ ಪ್ರದೇಶಗಳನ್ನು ಸುತ್ತುವರಿದು ಹರಿಯುತ್ತವೆ. ಉತ್ತರದಲ್ಲಿರುವ ಆರಲ್ ಸಮುದ್ರದ ಪಶ್ಚಿಮ ತೀರದ ಉದ್ದಕ್ಕೂ ಹಬ್ಬಿರುವ ಊಸ್ಟ್‌ಯರ್ಟ್ ಪ್ರಸ್ಥಭೂಮಿ ಸಮುದ್ರಮಟ್ಟಕ್ಕಿಂತ 180–273 ಮೀ ಎತ್ತರವಾಗಿದೆ. ಸಮುದ್ರದ ಕಡೆಗೆ ಇದು ಹೆಚ್ಚು ಇಳಿಜಾರಾಗಿದೆ. ಖನಿಜ ಸಂಬಂಧಿ ಲವಣಗಳಿರುವ ಆರಲ್ ಸಮುದ್ರ ಎಲ್ಲೂ 18 ಮೀ ಗಿಂತ ಹೆಚ್ಚು ಆಳವಿಲ್ಲ.




ಅರಲ್ ಸಮುದ್ರಕ್ಕೂ ಪರ್ವತ ತಪ್ಪಲುಗಳಿಗೂ ಮಧ್ಯ 480 ಕಿಮೀ ವಿಸ್ತಾರದ ಪ್ರದೇಶ ಕಿಜ಼ಿಲ್‌ಕುಂ. ಮರಳು ತುಂಬಿದ ಈ ಪ್ರದೇಶದಲ್ಲಿ ಸಣ್ಣ ಸಣ್ಣ ಹುಲ್ಲುಜಾತಿಯ ಸಸ್ಯಗಳಿವೆ. ಅಲ್ಲಲ್ಲಿ ಎತ್ತರದ ಮರಳುದಿಣ್ಣೆಗಳಿವೆ. ಈ ಪ್ರದೇಶದ ಎತ್ತರ ಸಾಮಾನ್ಯವಾಗಿ 181 ಮೀ ಗಳಿಗಿಂತ ಕಡಿಮೆ, ಅಮೂದಾರ್ಯ ಈ ಪ್ರದೇಶದ ಪ್ರಮುಖ ನದಿ. ಇದು ಕಸಕಡ್ಡಿ ಶೇಖರಿಸುತ್ತಿದ್ದು ವರ್ಷವರ್ಷವೂ ತನ್ನ ಪಾತ್ರವನ್ನು ಬದಲಾಯಿಸುತ್ತಿರುತ್ತದೆ. ಈ ನದಿಯಲ್ಲಿನ ಪ್ರವಾಹ ಋತುಮಾನಾನುಸಾರವಾದದ್ದು.

ಕಿಜ಼ಿಲ್‌ಕುಂ ದಕ್ಷಿಣಕ್ಕೆ ಫಲವತ್ತಾದ ಮೆಕ್ಕಲುಮಣ್ಣಿನಿಂದ ಕೂಡಿದ ಒಂದು ಮೈದಾನ ಪ್ರದೇಶವಿದೆ. ಟಾಷ್ಕೆಂಟಿನ ಆಗ್ನೇಯಭಾಗಕ್ಕಿರುವ ಚಟ್‌ಕಲ್ ಶ್ರೇಣಿಯಲ್ಲಿ ಹುಟ್ಟಿ ಈ ನಗರದ ಸುತ್ತಣ ಓಯಸಿಸ್ಸುಗಳಿಗೆ ನೀರುಣಿಸುವ ಚಿರ್‌ಚಿಕ್, ಆಂಗ್ರೆನ್‌ಗಳು ಸೀರ್ ಧಾರ್ಯಾ ನದಿಯ ಉಪನದಿಗಳು. ಫರ್ಗನ್ ಕಣಿವೆಯನ್ನು ಸುತ್ತುವರಿದಿರುವ ಇತರ ಪರ್ವತಶ್ರೇಣಿಗಳಲ್ಲೂ ಅನೇಕ ಸಣ್ಣಪುಟ್ಟ ನದಿಗಳು ಹರಿದು ಬಂದು ಮುಖ್ಯ ನದಿಯಾದ ಅಮೂದಾರ್ಯವನ್ನು ಸೇರುತ್ತವೆ.

ಉಜ್ಬೆಕಿಸ್ತಾನದ ಮೇಲ್ಮೈ ಒಂದೇ ಸಮನಾಗಿಲ್ಲವಾದ್ದರಿಂದ ಈ ರಾಜ್ಯದ ವಾಯುಗುಣದಲ್ಲಿ ಪ್ರಾದೇಶಿಕ ಭಿನ್ನತೆ ಬಹಳ. ಚಳಿಗಾಲದಲ್ಲಿ ಉಷ್ಣತೆಯ ವ್ಯತ್ಯಾಸದ ಗತಿ ತೀವ್ರ. ಫೆಬ್ರವರಿಯಲ್ಲಿ ಒಂದು ದಿನ ಹಿಮಪಾತವಾದರೆ ಇನ್ನೊಂದು ದಿನವಿಡೀ ಮಳೆ, ಮತ್ತೊಂದು ದಿನ ಹಿತಕರ ಹವಾಗುಣ, ಶಾಖ ಹೆಚ್ಚು, ಇರಾನ್ ಮತ್ತು ಆಫ್ಘಾನಿಸ್ತಾನದ ಕಡೆಯಿಂದ ಬೀಸುವ ಅವರ್ತಮಾರುತಗಳು ಇದಕ್ಕೆ ಕಾರಣ. ಉತ್ತರ ಧ್ರುವಪ್ರದೇಶದಿಂದ ಕುಳಿರ್ಗಾಳಿ ಬೀಸಿದಾಗ ಚಳಿಗಾಲದಲ್ಲಿ ಟಾಷ್ಕೆಂಟಿನ ಉಷ್ಣಾಂಶ $-10^0$ ಸೆ. ಗೆ ಇಳಿಯುತ್ತದೆ. ಆದರೆ ಆಫ್ಘಾನಿಸ್ತಾನದಿಂದ ಉಷ್ಣಮಾರುತ ಬೀಸಿದಾಗ $20^0$ ಸೆ. ಇರುತ್ತದೆ. ಚಳಿಗಾಲ ಮೋಡರಹಿತ. ಹಿಮ ಬೀಳುವುದು ಚಳಿಗಾಲದಲ್ಲಿ ಐದು ದಿನ ಮಾತ್ರ..

ವಸಂತಋತುವಿನಲ್ಲಿ ಆಕಾಶ ಸ್ವಚ್ಛ. ದಿನಗಳು ಹೆಚ್ಚು ಪ್ರಕಾಶಮಾನ. ವಾಯುಶುಷ್ಕ, ಶಾಖ ಹೆಚ್ಚು. ಏಪ್ರಿಲ್ ತಿಂಗಳಿನಲ್ಲಿ ವಾಯುವಿನ ತೇವಾಂಶ ಶೇ. 30. ಜುಲೈ ತಿಂಗಳಿನ ಸಾಧಾರಣ ಬೇಸಗೆಯಲ್ಲಿ ಉಜ್ಬೆಕಿಸ್ತಾನದಲ್ಲಿ ಹೆಚ್ಚು ಶಾಖ. ಆಗ ಇದರ ಉಷ್ಣತೆಯ ವ್ಯಾಪ್ತಿ $31^0$–$45^0$ ಸೆಂ ಟಾಷ್ಕೆಂಟಿನ ಉಷ್ಣತೆ $40.5^0$ ಸೆ., ಮರುಭೂಮಿಯಲ್ಲಿ ಜುಲೈ ಉಷ್ಣತೆ $26^0$ – $40^0$ ಸೆ. ದೂಳಿನಿಂದ ಕೂಡಿದ ಸುಂಟರಗಾಳಿ ಏಳುವುದುಂಟು. ಆದರೆ ಈ ಗಾಳಿ ಶುಷ್ಕವಾದ್ದರಿಂದ ಮಳೆ ಇಲ್ಲ. ವರ್ಷಕ್ಕೆ 5 ಸೆಂಮೀಗೂ ಕಡಿಮೆ ಮಳೆ. ಶರತ್ ಋತುವಿನಲ್ಲಿ ಉಷ್ಣತೆ ಕಡಿಮೆಯಾಗಿ ಮಳೆ ಬೀಳಲುಪಕ್ರಮಿಸುತ್ತದೆ. ಅವರ್ತಮಾರುತಗಳು ಮಳೆ ತರುತ್ತವೆ. ಈ ಪರ್ವತ ಪ್ರದೇಶಗಳಲ್ಲಿ ಮಳೆ ಹೆಚ್ಚು (50–60ಸೆಂಮೀ).

ಇಲ್ಲಿ ತಂಡ್ರ ಸಸ್ಯದಿಂದ ಮರುಭೂಮಿ ಸಸ್ಯದವರೆಗೆ ವಿವಿಧ ಜಾತಿಯ ವನಸ್ಪತಿಯುಂಟು. ಊಸ್ಟ್‌ಯುರ್ಟ್ ಮತ್ತು ಕೈಜ಼ಿಲ್‌ಕುಂನಲ್ಲಿ ಅರೆ ಮರುಭೂಮಿ ಸಸ್ಯವಿದೆ. ಕೈಜ಼ಿಲ್‌ಕುಂಗೂ ಅಮೂದಾರ್ಯಾಕ್ಕೂ ನಡುನೆಲದಲ್ಲೂ ಇತರ ತಗ್ಗು ಪ್ರದೇಶಗಳಲ್ಲೂ ಹುಲ್ಲುಗಾವಲು ಧಾರಾಳವಾಗಿದೆ. ದಕ್ಷಿಣದ ಹುಲ್ಲು ಪೊದೆಗಳ ನಡುವೆ ಬಗೆ ಬಗೆ ಹೂ ಬಿಡುವ

ಗಿಡಮೂಲಿಕೆಗಳಿವೆ. ಪೂರ್ವ ಉತ್ತರಗಳಲ್ಲಿರುವ ಪರ್ವತ ಸಾನುಪ್ರದೇಶದಲ್ಲಿ ಪಾಪ್ಲರ್, ಆಲಿವ್, ವಿಲ್ಲೊ ಮರಗಿಡಗಳು ಕಾಣಬರುತ್ತವೆ. ನೆಲದ ಎತ್ತರ ಹೆಚ್ಚಿದಂತೆ ಮರ ಕಡಿಮೆ, ಹುಲ್ಲು ಹೆಚ್ಚು; ತುತ್ತತುದಿಯಲ್ಲಿ ತಂಡ್ರ.

ಹಲ್ಲಿ, ಜೆರ್ಬೋವ (ದಂಶಕ ಜಾತಿ), ಕಿರುಬ ಮತ್ತು ಗುಳ್ಳೆ ನರಿಗಳೂ ವಿರಳವಾಗಿ ಸಿಕ್ಕುವ ಕಾಡುಕತ್ತೆ, ಚಿಗರೆ ಮತ್ತು ಹುಲಿಗಳೂ ಪರ್ವತ ಪ್ರದೇಶಗಳಲ್ಲಿ ಕಾಡುಮೇಕೆ, ಕುರಿ ಮತ್ತು ಚಿರತೆಗಳೂ ಇಲ್ಲಿನ ಪ್ರಾಣಿಗಳು.

ಪೆಟ್ರೋಲಿಯಂ, ಸ್ವಾಭಾವಿಕ ಅನಿಲ, ತವರ, ಕಲ್ಲಿದ್ದಲು, ಲಿಗ್ನೈಟ್, ತಾಮ್ರ, ಲವಣ, ಗಂಧಕ, ಟಂಗ್ಸ್ಟನ್, ಮಾಲಿಬ್ಡಿನಂ–ಇವು ಮುಖ್ಯ ಖನಿಜಗಳು.

ವ್ಯವಸಾಯ, ಕೈಗಾರಿಕೆ, ಜನವಸತಿ: ಕೃಷಿಗೆ ನೀರಾವರಿ ಸೌಲಭ್ಯ ಎಲ್ಲೆಲ್ಲಿ ಸಾಧ್ಯವೊ ಅಲ್ಲೆಲ್ಲ ಅದನ್ನೊದಗಿಸಲಾಗಿದೆ. ಹೆಚ್ಚು ಮಳೆಯಾಗುವ ಎತ್ತರ ಪ್ರದೇಶದಲ್ಲಿ ಒಣ ಬೇಸಾಯ. ಕಾಳು, ಮೆಕ್ಕೆಜೋಳ, ಆಲೂಗೆಡ್ಡೆ ಇವು ಇಲ್ಲಿನ ಉತ್ಪನ್ನ. ವ್ಯವಸಾಯದ ಜೊತೆಗೆ ಪಶುಪಾಲನೆಯೊ ಮುಖ್ಯ ಕಸಬು. ದನಕರು, ಕುರಿ, ಕುದುರೆ ಸಾಕುಪ್ರಾಣಿಗಳು. ನದೀಬಯಲುಗಳ ನೀರಾವರಿ ಪ್ರದೇಶದಲ್ಲಿ ಗೋದಿ, ಬತ್ತ, ಬಾರ್ಲಿ, ಹೊಗೆಸೊಪ್ಪು, ಹಣ್ಣು, ದ್ರಾಕ್ಷಿ, ಹತ್ತಿ, ತರಕಾರಿ, ಬೀಟ್ರೂಟ್ ಮುಖ್ಯ ಬೆಳೆ. 1930ರಿಂದೀಚೆಗೆ ಇಲ್ಲಿ ನೀರಾವರಿ ಹೆಚ್ಚು ವಿಸ್ತರಿಸಿದೆ.

ಟಾಷ್ಕೆಂಟ್–ಸೈಬೀರಿಯ ರೈಲುಮಾರ್ಗದ ನಿರ್ಮಾಣದಿಂದ ಕೈಗಾರಿಕೆಯ ಬೆಳವಣಿಗೆಯಾಗಿದೆ. ಸೈಬೀರಿಯದಿಂದ ಗೋದಿ, ಮರ, ಅರಣ್ಯವಸ್ತುಗಳು ಮತ್ತು ಇತರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲು ಈಗ ಹೆಚ್ಚು ಅನುಕೂಲಗಳನ್ನು ಕಲ್ಪಿಸಲಾಗಿದೆ. ಆಹಾರ ಕೈಗಾರಿಕೆ ಮತ್ತ ಜವಳಿ ಕೈಗಾರಿಕೆಗಳಿಗೆ ಪ್ರಥಮ ಸ್ಥಾನ ದೊರಕಿದೆ. ಕಬ್ಬಿಣ, ಉಕ್ಕು, ತೈಲ ಮತ್ತು ತಾಮ್ರ ಶುದ್ಧೀಕರಣ, ರಾಸಾಯನಿಕ ಗೊಬ್ಬರ ಹಾಗೂ ವ್ಯವಸಾಯೋಪಕರಣ ತಯಾರಿಕೆಗಳೂ ಮುಖ್ಯವಾಗುತ್ತಿವೆ. ಕೈಗಾರಿಕೆಗೆ ಅಗತ್ಯವಾದ ಶಕ್ತಿಯಲ್ಲಿ ಹೆಚ್ಚಿನ ಭಾಗ ವಿದ್ಯುತ್. ಇತ್ತೀಚೆಗೆ ಕೆಲವು ಕೈಗಾರಿಕೆಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲಗಳ ಉಪಯೋಗವೂ ಆಗುತ್ತಿದೆ.

ಜನಸಂಖ್ಯೆ 26 ದ.ಲ (2002). ಉಜ್ಬೆಕ್ ಜನರೇ ಹೆಚ್ಚು (ಶೇ. 62.2). ಉಳಿದವರಲ್ಲಿ ರಷ್ಯನರು (ಶೇ. 13.5), ಟಾರ್ಟರರು (ಶೇ. 5.5), ಕಾಜಾಕರು (ಶೇ. 4.1). ಕಾಲಿಕರು (ಶೇ. 3.8) ಮತ್ತು ಕಾರಕಲ್ಪಾಕರು (ಶೇ. 2.1). ಒಟ್ಟು ಜನಸಂಖ್ಯೆಯಲ್ಲಿ 40ರಷ್ಟು ಮಂದಿ ನಗರ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಉಳಿದವರು ಕೃಷಿ, ಪಶುಪಾಲನೆ ಮುಂತಾದ ಕಸಬುಗಳಲ್ಲಿ ತೊಡಗಿ ಹಳ್ಳಿಗಳಲ್ಲಿ ಜೀವಿಸುತ್ತಾರೆ. 1914ಕ್ಕೆ ಮೊದಲು ಶೇ. 97 ಜನ ಅನಕ್ಷರಸ್ಥರಾಗಿದ್ದರು. 1965ರ ವೇಳೆಗೆ ಅನಕ್ಷರಸ್ಥರ ಪ್ರಮಾಣ ಶೇ. 22ಕ್ಕೆ ಇಳಿಯಿತು. ಶಾಲಾ ಕಾಲೇಜುಗಳಲ್ಲಿ ರಷ್ಯನ್ ಮತ್ತು ಉಜ್ಬೆಕ್ ಭಾಷೆಗಳು ಟಾಷ್ಕೆಂಟ್, ಸಮರ್‌ಕಂಡ್‌ಗಳಲ್ಲಿ ವಿಶ್ವವಿದ್ಯಾಲಯಗಳಿವೆ. ಇತ್ತೀಚಿನ ವರ್ಷಗಳಲ್ಲಿ ಸಾಕ್ಷರತೆ ಶೇ. 90 ಕ್ಕಿಂತಲೂ ಹೆಚ್ಚಾಗಿದೆ.

ಟಾಷ್ಕೆಂಟ್ ರಾಜಧಾನಿ, ಅತಿ ದೊಡ್ಡ ನಗರ, ಕೈಗಾರಿಗೆ ಮತ್ತು ವಾಣಿಜ್ಯ ಕೇಂದ್ರ. ಚಿರ್‌ಚಿಕ್ ನದಿಯ ದಡದಲ್ಲಿರುವ ಈ ನಗರ ಸಮುದ್ರಮಟ್ಟದಿಂದ 333 ಮೀ ಎತ್ತರದಲ್ಲಿದೆ. ಇದೊಂದು ಪ್ರಮುಖ ರೈಲ್ವೆ ಜಂಕ್ಷನ್. ಜನಸಂಖ್ಯೆ, 2,124,000 (2002).

ಸಮರ್‌ಕಂಡ್ ಉಜ್ಬೆಕಿಸ್ತಾನದ ಹಳೆಯ ರಾಜಧಾನಿ. ಈ ಐತಿಹಾಸಿಕ ನಗರ ಈಗ ಹೊಸ ರೂಪು ತಳೆದಿದೆ. ಹತ್ತಿ, ಉಣ್ಣೆ ಮತ್ತು ಯಂತ್ರೋಪಕರಣ ಕೈಗಾರಿಕೆಗಳ ಜೊತೆಜೊತೆಗೆ ಮುಸ್ಲಿಮರ ಪುರಾತನ ಮಸೀದಿಗಳೂ ಪ್ರ.ಶ.ಪೂ. 5ನೆಯ ಶತಮಾನಕ್ಕೆ ಸೇರಿದ ವೀಕ್ಷಣಾಲಯವೂ ಇವೆ.

ಬುಖಾರ ಪುರಾತನ ನಾಗರಿಕತೆಯ ಕೇಂದ್ರ. ಹಳೆಯ ನಗರದ ಸುತ್ತಲೂ ಇಟ್ಟಿಗೆಗಳಿಂದ ಕಟ್ಟಿದ ಕೋಟೆಯೂ ಹತ್ತಿ, ಉಣ್ಣೆ ಮತ್ತ ರೇಷ್ಮೆ ಗಿರಣಿಗಳೂ ಇವೆ. ಸ್ವಾಭಾವಿಕ ಅನಿಲಗಳ ದೊಡ್ಡ ನಿಕ್ಷೇಪವಿರುವುದು ಈ ನಗರದ ಸಮೀಪದಲ್ಲೇ. (ಕೆ.ಎನ್.ಯು.)

**ಉಡುಪಿ:** ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಗಳಲ್ಲೊಂದು ಹಾಗೂ ಜಿಲ್ಲಾ ಆಡಳಿತ ಕೇಂದ್ರ ಪಟ್ಟಣ. ಜಿಲ್ಲೆಯ ಉತ್ತರದಲ್ಲಿ ಉತ್ತರಕನ್ನಡ ಜಿಲ್ಲೆ, ಪೂರ್ವದಲ್ಲಿ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳನ್ನು, ದಕ್ಷಿಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಪಶ್ಚಿಮದಲ್ಲಿ ಅರಬ್ಬಿ ಸಮುದ್ರವನ್ನು ಹೊಂದಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 3575 ಚ.ಕಿಮೀ. ಮೇಲ್ಮೈ ಲಕ್ಷಣ: ಜಿಲ್ಲೆಯನ್ನು ಕುಂದಾಪುರ, ಕಾರ್ಕಳ ಮತ್ತು ಉಡುಪಿ ಎಂದು 3 ತಾಲ್ಲೂಕುಗಳನ್ನಾಗಿ ವಿಂಗಡಿಸಲಾಗಿದೆ.

ಜಿಲ್ಲೆಯನ್ನು ಪ್ರಾಕೃತಿಕವಾಗಿ ಕರಾವಳಿ ಪ್ರದೇಶ, ಒಳನಾಡು ಪ್ರದೇಶ ಹಾಗೂ ಪಶ್ಚಿಮ ಘಟ್ಟಗಳ ಪ್ರದೇಶ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಕರಾವಳಿ ಪ್ರದೇಶದಲ್ಲಿ ಸಾರಿಗೆ ಸೌಲಭ್ಯ, ಉದ್ಯೋಗಾವಕಾಶ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಜನಸಾಂದ್ರತೆ ಹೆಚ್ಚಾಗಿರುತ್ತದೆ. ಇಲ್ಲಿ ಬತ್ತ, ದ್ವಿದಳಧಾನ್ಯ, ಕಬ್ಬು, ನೆಲಗಡಲೆ ತೆಂಗು ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳ ಕೆಲವು ಭಾಗಗಳು ಕರಾವಳಿ ಪ್ರದೇಶದಲ್ಲಿವೆ. ಒಳನಾಡು ಪ್ರದೇಶ ತಗ್ಗುಗಳಿಂದ ಕೂಡಿದ ಪ್ರದೇಶವಾಗಿದೆ. ಉಡುಪಿ ಹಾಗೂ ಕಾರ್ಕಳ ತಾಲ್ಲೂಕುಗಳ ಕೆಲವು ಭಾಗಗಳು ಈ ಪ್ರದೇಶದಲ್ಲಿದೆ. ಇಲ್ಲಿ ತೆಂಗು ಮತ್ತು ಅಡಕೆಗಳನ್ನು ಬೆಳೆಯಲಾಗುತ್ತಿದೆ, ಪಶ್ಚಿಮ ಘಟ್ಟ ಪ್ರದೇಶ ನಿತ್ಯ ಹರಿದ್ವರ್ಣ ಕಾಡು ಪ್ರದೇಶಗಳಿಂದ ಆವೃತವಾಗಿದ್ದು ಸದಾ ಹಸುರಾಗಿ ಕಂಗೊಳಿಸುತ್ತಿದ್ದು, ಕುಂದಾಪುರ ಹಾಗೂ ಕಾರ್ಕಳ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಹಂಚಿಕೆಯಾಗಿವೆ.




ಜಿಲ್ಲೆಯಲ್ಲಿನ ಹಲವಾರು ನದಿಗಳು ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ಸೀತಾ, ಸ್ವರ್ಣ, ವರಾಹಿ ಹಾಗೂ ಗಂಗೊಳ್ಳಿ ನದಿಗಳು ಪ್ರಮುಖವಾಗಿದೆ.

ಜಿಲ್ಲೆಯು ವಾರ್ಷಿಕವಾಗಿ ಸು. 400 ಸೆಂಮೀ ಹೆಚ್ಚು ಮಳೆಯಾಗುವ ಪ್ರದೇಶವಾದ್ದರಿಂದ, ಜಂಬಿಟ್ಟಿಗೆ ಮಣ್ಣುಗಳು ಪ್ರಮುಖವಾಗಿ ಹಂಚಿಕೆಯಾಗಿವೆ. ಈ ಮಣ್ಣು ಮರಗೆಣಸು ಮತ್ತು ಗೋಡಂಬಿ ಬೆಳೆಗಳಿಗೆ ಉಪಯುಕ್ತವಾಗಿರುವುದು. ಈ ಪ್ರದೇಶದಲ್ಲಿ ವಾರ್ಷಿಕವಾಗಿ 60 ರಿಂದ 90 ದಿನಗಳವರೆಗೆ ನಿರಂತರವಾಗಿ ಮಳೆ ಬೀಳುತ್ತದೆ ಮತ್ತು ವಾರ್ಷಿಕ ಸರಾಸರಿ ಉಷ್ಣಾಂಶ $30^0$ಸೆ.

ಸಸ್ಯವರ್ಗ: ಈ ಜಿಲ್ಲೆಯ ಪಶ್ಚಿಮ ಭಾಗ ಪಶ್ಚಿಮ ಘಟ್ಟದ ಪ್ರಮುಖ ಭಾಗವನ್ನು ಆವರಿಸಿದ್ದು ವಿಸ್ತಾರವಾದ ನಿತ್ಯಹರಿದ್ವರ್ಣ ಸಸ್ಯವರ್ಗವನ್ನು ಒಳಗೊಂಡಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದ ಶೇ. 28 ರಷ್ಟು ಅರಣ್ಯದಿಂದ ಆವೃತವಾಗಿದೆ. ಇಲ್ಲಿ ಕಂಡುಬರುವ ಪ್ರಮುಖ ಜಾತಿಯ ಸಸ್ಯಗಳೆಂದರೆ ತೇಗ, ಹೊನ್ನೆ, ಬೀಟೆ, ಹಲಸು, ಮಾವು, ಸೀಗೆ, ಎಬೋನಿ, ಗೇರು, ಬಿದಿರು ಇತ್ಯಾದಿ. ಜಿಲ್ಲೆಯ ಅರಣ್ಯಗಳಲ್ಲಿ ಕಾಡು ಪ್ರಾಣಿಗಳು ಯಥೇಚ್ಛವಾಗಿ ಕಂಡುಬರುತ್ತವೆ. ಕಾಡುಕೋಣ, ಸಾಂಬಾರ್, ಚುಕ್ಕೆ ಜಿಂಕೆ, ಕಾಡು ಕುರಿ, ಹುಲಿ, ಚಿರತೆ, ಮತ್ತು ಜಲಚರಗಳಾದ ಮೊಸಳೆ, ಮೀನು ಹಾವು ಸಾಮಾನ್ಯವಾಗಿವೆ.

ಕೃಷಿ: ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. 34ರಷ್ಟು ಭೂಮಿ ಕೃಷಿಗೆ ಯೋಗ್ಯವಾಗಿದೆ. ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಬತ್ತ, ದ್ವಿದಳ ಧಾನ್ಯಗಳು, ನೆಲಗಡಲೆ, ಎಳ್ಳು, ಅಡಕೆ, ತೆಂಗು, ಗೇರು, ರಬ್ಬರ್, ಕೋಕೋ, ಬಾಳೆ, ಮಾವು, ಹಲಸು, ಸಿಹಿಗೆಣಸು, ಮರಗೆಣಸು, ಅನಾನಸ್, ವೀಳ್ಯದೆಲೆ, ಕರಿಮೆಣಸು, ಕಬ್ಬು ಮತ್ತು ಹಿಪ್ಪನೇರಳೆ.

ಮೀನುಗಾರಿಕೆ: ಉಡುಪಿ ಜಿಲ್ಲೆಯು ಮೀನುಗಾರಿಕೆಗೆ ಪ್ರಸಿದ್ಧಿಯಾಗಿದೆ. ಸಾಗರೋತ್ಪನ್ನ ಮತ್ತು ಸಿಹಿನೀರಿನ ಮೀನುಗಾರಿಕೆ ಪ್ರಮುಖವಾದವು. ಒಟ್ಟು 9 ಶಿಥಲೀಕರಣ ಕೇಂದ್ರಗಳು ಮತ್ತು 57 ಮಂಜುಗೆಡ್ಡೆ ತಯಾರಿಕಾ ಕಾರ್ಖಾನೆಗಳು ಮೀನುಗಾರಿಕೆಗೆ ಸಹಾಯಕವಾಗಿವೆ.

ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ನೈಸರ್ಗಿಕ ಸಂಪನ್ಮೂಲಗಳೆಂದರೆ ಅರಣ್ಯ ಸಂಪತ್ತು, ಖನಿಜಸಂಪತ್ತು ಮತ್ತು ವನ್ಯಮೃಗಗಳು. ಈ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. 30ರಷ್ಟು ಪ್ರದೇಶ ನಿತ್ಯಹರಿದ್ವರ್ಣ ಕಾಡುಗಳಿಂದ ಆವೃತವಾಗಿದೆ. ಈ ಅರಣ್ಯದಲ್ಲಿ ಹಲವಾರು ಬಗೆಯ ಮರಗಳು ಹಲವು ಉತ್ಪನ್ನಗಳನ್ನು ನೀಡುವುದಲ್ಲದೆ ಅನೇಕ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನೂ ಪೂರೈಸುತ್ತವೆ. ಜಿಲ್ಲೆಯಲ್ಲಿ ಕಂಡು ಬರುವ ಪ್ರಮುಖ ಖನಿಜಗಳೆಂದರೆ ಗ್ರಾನೈಟ್, ಮುಕಲ್ಲು, ಸುಣ್ಣಕಲ್ಲು, ಸಿಲಿಕ–ಮರಳು ಮತ್ತು ಬಾಕ್ಸೈಟ್.

ಕೈಗಾರಿಕೆ: ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಕೈಗಾರಿಕೆಗಳೆಂದರೆ ಬಟ್ಟೆ, ರಾಸಾಯನಿಕ, ಎಂಜಿನಿಯರಿಂಗ್ ಮತ್ತು ಇತರೆ. ಮಣಿಪಾಲ ಕೈಗಾರಿಕೆಗಳ ಪ್ರಮುಖ ಕೇಂದ್ರವಾಗಿದೆ.

ಸಾರಿಗೆ: ಈ ಜಿಲ್ಲೆಯಲ್ಲಿ ಕಂಡು ಬರುವ ಪ್ರಮುಖ ಸಾರಿಗೆಯ ಮಾಧ್ಯಮಗಳೆಂದರೆ ರಸ್ತೆಸಾರಿಗೆ ಮತ್ತು ರೈಲ್ವೆಸಾರಿಗೆ. ಜಿಲ್ಲೆಯಲ್ಲಿ ಸು. 139 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ (ಎನ್.ಎಚ್ 17) ಹಾದು ಹೋಗುತ್ತದೆ. 353 ಕಿಮೀ ಉದ್ದದ ರಾಜ್ಯ ಹೆದ್ದಾರಿ ಮತ್ತು 740 ಕಿಮೀ ಉದ್ದದ ಜಿಲ್ಲಾ ರಸ್ತೆಗಳು ಕಾರ್ಯ ನಿರತವಾಗಿದ್ದು ಅಂತಾರಾಜ್ಯ ಮತ್ತು ರಾಜ್ಯದ ಪ್ರಮುಖ ನಗರಗಳೊಂದಿಗೆ ಸಂಪರ್ಕ ಮತ್ತು ಅಭಿವೃದ್ಧಿಗೆ ಸಹಾಯಕವಾಗಿವೆ. ಇದಲ್ಲದೆ ಭಾರಿ ಸೇತುವೆಗಳು, ಅಂಚೆ. ತಂತಿಕಛೇರಿಗಳು ಮತ್ತು ದೂರವಾಣಿ ಕೇಂದ್ರಗಳು ಪ್ರಮುಖ ಸಂಪರ್ಕ ಮಾಧ್ಯಮಗಳಾಗಿ ಕಾರ್ಯನಿರ್ವಹಿಸುತ್ತವೆ.

ಜನಸಂಖ್ಯೆ: ಜಿಲ್ಲೆಯಲ್ಲಿ 11,12,243 ಜನಸಂಖ್ಯೆ ಇದ್ದು ಇದರಲ್ಲಿ 5.22 ಲಕ್ಷ ಗಂಡಸರು, 5.90 ಲಕ್ಷ ಹೆಂಗಸರು. ಉಡುಪಿ ತಾಲ್ಲೂಕು ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಕಾರ್ಕಳ ತಾಲ್ಲೂಕು ಅತಿ ಕಡಿಮೆ ಜನಸಂಖ್ಯೆ ಹೊಂದಿದ ತಾಲ್ಲೂಕಾಗಿವೆ, ಈ ಜಿಲ್ಲೆಯ ಜನಸಾಂದ್ರತೆ ಪ್ರತಿ ಚ.ಕಿಮೀಗೆ 311.

ಜಿಲ್ಲಾ ಕೇಂದ್ರ ಉಡುಪಿ. ಜನಸಂಖ್ಯೆ 1,27,060. ಪ್ರಮುಖ ಧಾರ್ಮಿಕ ಕ್ಷೇತ್ರ ಮತ್ತು ಅಷ್ಟಮಠಗಳ ಕೇಂದ್ರ. ದೇಶಾದ್ಯಾಂತ ಪ್ರಸಿದ್ಧ ಪಡೆದ ಉಡುಪಿಯ ಹೋಟೆಲ್ ಉದ್ಯಮದ ಉಗಮ ಸ್ಥಾನ.

ಮಲ್ಪೆ ಪ್ರಸಿದ್ಧ ಮೀನುಗಾರಿಕೆ ಬಂದರು. ಉಡುಪಿಯಿಂದ ಪಶ್ಚಿಮಕ್ಕೆ 7 ಕಿಮೀ ದೂರದಲ್ಲಿದೆ. ಸೇಂಟ್ ಮೇರಿದ್ವೀಪ ಪಶ್ಚಿಮ ಕರಾವಳಿಯಲ್ಲಿಯೇ ಸುಂದರ ಮತ್ತು ಮೋಹಕವಾದ ದ್ವೀಪ. ಇದು ಮಲ್ಪೆ ಬಂದರಿನಿಂದ 5 ಕಿಮೀ ದೂರದಲ್ಲಿದೆ. ಇಲ್ಲಿನ ಪ್ರಮುಖ ಆಕರ್ಷಣೆಯೆಂದರೆ ನಿಸರ್ಗ ನಿರ್ಮಿತ ವಿವಿಧ ವಿನ್ಯಾಸದ ಕಲ್ಲುಕಂಬಗಳು.

ಮಣಿಪಾಲ ಉಡುಪಿಯಿಂದ ಸು. 5 ಕಿಮೀ ದೂರದಲ್ಲಿದೆ. ಜನಸಂಖ್ಯೆ 5,76,104. ಆಧುನಿಕ ವೈದ್ಯಕೀಯ, ತಂತ್ರಜ್ಞಾನ ಹಾಗೂ ವಾಣಿಜ್ಯ ಕೇಂದ್ರ, ಅನಾಟಮಿ ಮ್ಯೂಸಿಯಂ, ಹಸ್ತ ಶಿಲ್ಪ, ಸೂರ್ಯಾಸ್ತ ವೀಕ್ಷಣೆಯ ಎಂಡ್ ಪಾಯಿಂಟ್ ಇಲ್ಲಿನ ಪ್ರಮುಖ ಆಕರ್ಷಣೆಗಳು. ಉಡುಪಿಯ ದಕ್ಷಿಣಕ್ಕೆ 12 ಕಿಮೀ ದೂರದಲ್ಲಿರುವ ಕಾಪು ಸುಂದರ ಕಡಲತೀರ, ಸುಮಾರು 30 ಮೀ ಎತ್ತರದ ಲೈಟ್ ಹೌಸ್ ಇಲ್ಲಿಯ ಪ್ರಮುಖ ಆಕರ್ಷಣೆ. ಉಡುಪಿಯ ದಕ್ಷಿಣಕ್ಕೆ 12 ಕಿಮೀ ದೂರದಲ್ಲಿರುವ ಪಾಜಕ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮತ್ತು ದ್ವೈತ ಸಿದ್ಧಾಂತ ಪ್ರತಿಪಾದಕ ಮಧ್ವಚಾರ್ಯರು ಜನಿಸಿದ ಸ್ಥಳ. ಮರವಂತೆ ಪಶ್ಚಿಮ ಕರಾವಳಿಯಲ್ಲಿಯೇ ಪ್ರಸಿದ್ಧವಾದ ಕಡಲತೀರ. ಕುಂದಾಪುರದ ಈಶಾನ್ಯಕ್ಕೆ 42 ಕಿಮೀ ದೂರದಲ್ಲಿರುವ ಕೊಲ್ಲೂರು ದೇಶದಲ್ಲಿಯೇ ಪ್ರಸಿದ್ಧವಾದ ಶಕ್ತಿ ಪೀಠ. ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಮೂಕಾಂಬಿಕ ದೇವಾಲಯ ಕೊಡಚಾದ್ರಿಯು ದಟ್ಟ ಪರ್ವತ ಸಾಲಿನ ನಡುವೆ ಕಂಗೊಳಿಸುತ್ತಿದೆ. ಕಾರ್ಕಳ ಪ್ರಸಿದ್ಧ ಜೈನಕೇಂದ್ರ. (ಎಚ್.ಸಿ.ಎಲ್.)

**ಉತ್ತರ ಅಟ್ಲಾಂಟಿಕ್ ಸೇನಾ ಕೂಟ:** ಒಂದು ರಕ್ಷಣಾತ್ಮಕ ಒಕ್ಕೂಟ (ನ್ಯಾಟೋ). ಈ ಸೇನಾ ಕೂಟವನ್ನು ಸಮಾಜವಾದಿ ರಾಷ್ಟ್ರಗಳ ವಿರುದ್ಧ ಸಂಸ್ಥೆ ಎಂದು ಭಾವಿಸಲಾಗಿದೆ. ಮಾರ್ಚ್ 1947ರ ಬ್ರೆಸೆಲ್ಸ್ ಒಪ್ಪಂದದ ಮೂಲಕ ಬ್ರಿಟನ್, ಬೆಲ್ಜಿಯಂ, ಫ್ರಾನ್ಸ್, ಲಕ್ಸಂಬರ್ಗ್ ಮತ್ತು ನೆದರ್‌ಲೆಂಡ್ ಇದನ್ನು ಸ್ಥಾಪಿಸಿವೆ. ಸಮಾಜವಾದಿಗಳ ಭಯಕ್ಕಿಂತ ಹೆಚ್ಚಾಗಿ ಮತ್ತೆ ಜರ್ಮನಿ ಪ್ರಬಲವಾದರೆ ಎಂಬ ಭಯದಿಂದ ಒಂದು ಸೇನಾಕೂಟವಾಗಿ ಕೂಡಲ್ಪಟ್ಟವು. ಆದರೆ ಪೂರ್ವಯುರೋಪಿಯನ್ ರಾಷ್ಟ್ರಗಳೆ ಸಮತಾವಾದದ ಸೆಳೆತಕ್ಕೆ ಸಿಕ್ಕಿಕೊಂಡು ಪೂರ್ವ ಮತ್ತು ಪಶ್ಚಿಮ ಯುರೋಪಿಯನ್ ರಾಷ್ಟ್ರಗಳ ನಡುವೆ ಬಿಕ್ಕಟ್ಟು ತೀವ್ರವಾದಾಗ, ಪಶ್ಚಿಮ ಯುರೋಪಿಯನ್ ರಾಷ್ಟ್ರಗಳೊಡನೆ ಪರಸ್ಪರ ಸೈನಿಕ ಸಹಾಯ ಒಕ್ಕೂಟವನ್ನು ಸ್ಥಾಪಿಸಲು ಅಮೆರಿಕ ಮುಂದೆ ಬಂದಿತು. ಅದರ ಫಲವಾಗಿ 1949 ಏಪ್ರಿಲ್ 4 ರಂದು 12 ಸದಸ್ಯ ರಾಷ್ಟ್ರಗಳನ್ನೊಳಗೊಂಡ ನ್ಯಾಟೊ ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯ ಸದಸ್ಯ ರಾಷ್ಟ್ರಗಳಿವು: ಅಮೆರಿಕ, ಬ್ರಿಟನ್, ಫ್ರಾನ್ಸ್, ಇಟಲಿ, ಕೆನಡ, ಬೆಲ್ಜಿಯಂ, ಡೆನ್ಮಾರ್ಕ್, ಲಕ್ಸೆಂಬರ್ಗ್, ನಾರ್ವೆ, ಪೋರ್ಚುಗಲ್, ಐಸ್ಲೆಂಡ್ ಹಾಗೂ ನೆದರ್‌ಲೆಂಡ್. ಅನಂತರ ಮತ್ತೆ ಮೂರು ರಾಷ್ಟ್ರಗಳು ನ್ಯಾಟೋ ಸೇರಿಕೊಂಡವು. ಅವುಗಳೆಂದರೆ ಗ್ರೀಸ್, ಟರ್ಕಿ ಮತ್ತು ಜರ್ಮನಿ. ಅಮೆರಿಕದ ಹೆಚ್ಚಿನ ಪ್ರಭಾವಕ್ಕೆ ಒಳಗಾಗಿರುವ ನ್ಯಾಟೋ ಬಗ್ಗೆ ಅಸಮಾಧಾನ ಹೊಂದಿದ ಫ್ರಾನ್ಸ್ ಈ ಒಕ್ಕೂಟದಿಂದ ದೂರವಿರಲು ಪ್ರಯತ್ನಿಸಿತು. ಆದರೆ ಈ ಸಂಸ್ಥೆಯನ್ನು ಬಿಟ್ಟಿಲ್ಲ. ನ್ಯಾಟೋ ಒಪ್ಪಂದದ ಪ್ರಕಾರ ಅದರ ಸದಸ್ಯ ರಾಷ್ಟ್ರಗಳಿಗೆ ವಿಶ್ವಸಂಸ್ಥೆಯ ಪ್ರಣಾಳಿಕೆಯ ಬಗ್ಗೆ ಸಂಪೂರ್ಣ ಗೌರವ ಇರಬೇಕು. ಅಂತಾರಾಷ್ಟ್ರೀಯ ಶಾಂತಿಗೆ ಸಂಬಂಧಿಸಿದಂತೆ, ಅವರುಗಳ ನಡುವಿನ ವಿವಾದಗಳನ್ನು ಶಾಂತಿಯುತವಾಗಿ ತಾವೇ ಬಗೆಹರಿಸಿಕೊಳ್ಳಬೇಕು. ತಮ್ಮಗಳ ನಡುವೆ ಆರ್ಥಿಕ ಹೊಂದಾಣಿಕೆ ಸಾಧಿಸುವುದು, ವಿದೇಶಿ ಆಕ್ರಮಣದ ವಿರುದ್ಧ ಒಗ್ಗಟ್ಟಾಗಿ ಕ್ರಮಕೈಗೊಳ್ಳುವುದು, ಅಲ್ಲದೇ ಈ ಸಂಸ್ಥೆಯ ಪ್ರಮುಖ ಉದ್ದೇಶ ಸಮತಾವಾದಿ ಸರ್ಕಾರಗಳು ಯುರೋಪಿನಲ್ಲಿ ಮುಂದೆ ಉದಯಿಸದಂತೆ ತಡೆಯುವುದು ಹಾಗೂ ಸದಸ್ಯರ ನಡುವೆ ಹೆಚ್ಚಿನ ಆರ್ಥಿಕಾಭಿವೃದ್ಧಿಗೆ ಶ್ರಮಿಸುವುದು ಆಗಿದೆ. ನ್ಯಾಟೋ ಸ್ಥಾಪನೆಯಾದ ಮೇಲೆ ಯಾವ ರಾಷ್ಟ್ರವೂ ಸಮತಾವಾದಿ ಸರ್ಕಾರದ ಸ್ಥಾಪನೆಯ ಆಮಿಷ ಹಾಗೂ ಪಿತೂರಿಗೆ ಒಳಗಾಗಿಲ್ಲ. ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ನ್ಯಾಟೋ ಅದರ ಉಪಯುಕ್ತತೆಯನ್ನು ಸಾರಿದೆ. ಆದರೆ ಯುರೋಪಿಯನ್ ಸದಸ್ಯ ರಾಷ್ಟ್ರಗಳು ಇಂದು ಈ ಸೇನಾ ಕೂಟಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿಲ್ಲ ಎಂಬ ಭಾವನೆ ಇದೆ. (ಎಸ್.ಎಸ್.ಎಸ್.)

**ಉತ್ತರ ಅಮೆರಿಕ:** ಪಶ್ಚಿಮಾರ್ಧಗೋಳದಲ್ಲಿ ಉತ್ತರದಕ್ಷಿಣವಾಗಿ ಉ.ಅ.$19^0$–$71^0$ ಪ.ರೇ. $50^0$–$150^0$ ವರೆಗೆ ಚಾಚಿ, ಪನಾಮದ ಸಣ್ಣ ನಡುವಿನಿಂದ ಪರಸ್ಪರ ಕೂಡಿಕೊಂಡಿದ್ದು ಈಚೆಗೆ (1904–14) ಪನಾಮಾ ಕಾಲುವೆಯಿಂದ ಬೇರ್ಪಟ್ಟಿರುವ ಜೋಡಿ ಖಂಡಗಳಲ್ಲಿ ಉತ್ತರದ ಭಾಗ. ಕೆನಡ, ಅಲಾಸ್ಕವು ಸೇರಿದ ಅಮೆರಿಕ ಸಂಯುಕ್ತ ಸಂಸ್ಥಾನ, ಮೆಕ್ಸಿಕೊಗಳನ್ನು ಈ ಖಂಡ ಒಳಗೊಂಡಿದೆ. ಭೌಗೋಳಿಕವಾಗಿ ಗ್ರೀನ್ಲೆಂಡ್, ಉತ್ತರ ಅಮೆರಿಕಕ್ಕೆ ಸೇರಿದೆಯೆನ್ನಬಹುದಾದರೂ ಅದು ಡೆನ್ಮಾರ್ಕಿನ ಅಧೀನರಾಜ್ಯ. ವಿಸ್ತೀರ್ಣದಲ್ಲಿ ಪ್ರಪಂಚದ ಮೂರನೆಯ ಖಂಡವಾಗಿರುವ ಉತ್ತರ ಅಮೆರಿಕ ಸ್ಥೂಲವಾಗಿ ತಲೆಮೇಲಾದ ತ್ರಿಕೋನದ ಹಾಗೆ ಕಾಣುತ್ತದೆ. ವಿಸ್ತೀರ್ಣ 24,247,039 ಚ.ಕಿಮೀ. ಭೂಮಿಯ ಶೇ. 16ರಷ್ಟು ಇದರ ವಿಸ್ತೀರ್ಣ. ಜನಸಂಖ್ಯೆ 454,225,000 (2001). ಈ ಖಂಡದ ಪೂರ್ವದಲ್ಲಿ ಉತ್ತರ ಅಟ್ಲಾಂಟಿಕ್ ಸಾಗರ, ಆಗ್ನೇಯದಲ್ಲಿ ಮೆಕ್ಸಿಕೊ ಖಾರಿ ಮತ್ತ ಕೆರಿಬಿಯನ್ ಸಮುದ್ರ, ಪಶ್ಚಿಮದಲ್ಲಿ ಉತ್ತರ ಪೆಸಿಫಿಕ್ ಸಾಗರ ಮತ್ತು ಬೇರಿಂಗ್ ಸಮುದ್ರ, ಉತ್ತರದಲ್ಲಿ ಆರ್ಕ್‌ಟಿಕ್ ಸಾಗರಗಳಿವೆ. ಈ ಖಂಡವನ್ನು ಏಷ್ಯಖಂಡದಿಂದ ಬೇರಿಂಗ್ ಜಲಸಂಧಿ ಬೇರ್ಪಡಿಸುತ್ತದೆ.

ಮೇಲ್ಮೈಲಕ್ಷಣ: ಉತ್ತರ ಅಮೆರಿಕವನ್ನು ಪೂರ್ವದ ಎತ್ತರದ ಪ್ರದೇಶಗಳು, ಪಶ್ಚಿಮದ ಸಮಾನಾಂತರ ಪರ್ವತಶ್ರೇಣಿಗಳು, ಮಧ್ಯದ ತಗ್ಗು ಬಯಲು ಮತ್ತು ಮಧ್ಯ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳ ಎತ್ತರ ಪ್ರದೇಶಗಳು ಎಂದು ವಿಭಾಗಿಸಬಹುದು.

ಮೊದಲ ಮೂರು ವಿಭಾಗಗಳೂ ಖಂಡ ಪೂರ್ತಿ ಉತ್ತರ ದಕ್ಷಿಣವಾಗಿ, ಸಮಾನಾಂತರವಾಗಿ ಹರಡಿವೆ. ನಾಲ್ಕನೆಯದು ಮೊದಲ ರೂಪಕ್ಕೆ ಲಂಬವಾಗಿ ಪೂರ್ವದಿಂದ ಪಶ್ಚಿಮಕ್ಕೆ ಹರಡಿದೆ.

ಪೂರ್ವದ ಎತ್ತರ ಪ್ರದೇಶಗಳು: ಅಪಲೇಷಿಯನ್ ಪರ್ವತಗಳು, ಲ್ಯಾಬ್ರಡಾರ್ ಮತ್ತು ನ್ಯೂಫೌಂಡ್‌ಲೆಂಡ್ ಪ್ರಸ್ಥಭೂಮಿಗಳು ಇದರಲ್ಲಿದೆ. ಪಶ್ಚಿಮದ ಪರ್ವತ ಶ್ರೇಣಿಗಳು ಸಮುದ್ರತಳದಲ್ಲಿದ್ದಾಗಲೇ ಈ ಪ್ರದೇಶ ಪರ್ವತಮಯವಾಗಿತ್ತು. ಜಲಪ್ರವಾಹಗಳಿಂದ ಭೂಮಿ ಸವೆದು ಅನೇಕ ಆಳವಾದ ಕಣಿವೆಗಳು ನಿರ್ಮಾಣವಾದುವು. ನದಿ, ಹಿಮನದಿ ವಾಯುಗಳ ನಗ್ನೀಕರಣದ ಪರಿಣಾಮವಾಗಿ ಎತ್ತರದ ಪ್ರದೇಶಗಳು ಮಟ್ಟಸವಾದವು. ಇವು 2058 ಮೀ ಗಳಿಗಿಂತಲೂ ಎತ್ತರವಾಗಿಲ್ಲವಾದರೂ ಮಧ್ಯದ ತಗ್ಗು ಬಯಲಿಗೂ ಮತ್ತು ಅಟ್ಲಾಂಟಿಕ್ ಸಾಗರಕ್ಕೂ ಹಿಂದೆ ಅಡ್ಡಿಯಾಗಿ ನಿಂತಿದ್ದುವು. ಇವುಗಳಲ್ಲೂ ಕಣಿವೆ ಮಾರ್ಗಗಳಿವೆ. ಇವು ತೀರಪ್ರದೇಶಕ್ಕೂ ಒಳನಾಡಿಗೂ ಸಂಬಂಧ ಕಲ್ಪಿಸುತ್ತವೆ. ಪರ್ವತಗಳ ಪಶ್ಚಿಮಭಾಗದಲ್ಲಿ ಹುಟ್ಟುವ ಸಸ್ಕ್ವಿಹನ, ಪೊಟೊಮೆಕ್, ಜೇಮ್ಸ್ ಮುಂತಾದ ನದಿಗಳು ಬೆಟ್ಟಗಳನ್ನು ಭೇದಿಸಿ, ಕಣಿವೆಗಳನ್ನು ನಿರ್ಮಿಸಿ ಪೂರ್ವದ ಕಡೆ ಹರಿಯುತ್ತವೆ.

ಅಪಲೇಷಿಯನ್ ಪರ್ವತಗಳ ಪೂರ್ವಕ್ಕೆ ಸಮಾನಾಂತರವಾಗಿ ಪುರಾತನ ಶಿಲೆಗಳಿಂದ ಕೂಡಿದ ಪ್ರಸ್ಥಭೂಮಿ ಇದೆ. ಇದಕ್ಕೂ ಸಮುದ್ರತೀರಕ್ಕೂ ಮಧ್ಯೆ ಇಳಿಜಾರು ಪ್ರದೇಶವಿದೆ. ಇಲ್ಲಿ ಹರಿಯುವ ನದಿಗಳಲ್ಲಿ ಅನೇಕ ಜಲಪಾತಗಳಿವೆ. ಅಲ್ಲಿಂದ ಮುಂದೆ ತೀರದಲ್ಲಿ ಎಲ್ಲ ನದಿಗಳೂ ಆಳವಾಗಿ ಹರಿಯುತ್ತವೆ. ಆದ್ದರಿಂದ ಸಮುದ್ರದಿಂದ ಬರುವ ಹಡಗುಗಳು ಇವುಗಳಲ್ಲಿ ಸಂಚರಿಸಬಹುದು.

ಪಶ್ಚಿಮದ ಸಮಾನಾಂತರ ಪರ್ವತಶ್ರೇಣಿಗಳು: ಈ ಪರ್ವತ ಸಾಲುಗಳು ಇತ್ತೀಚೆಗೆ ನಿರ್ಮಿತವಾದುವು. ಆದ್ದರಿಂದ ಇವು ಎತ್ತರವಾಗಿಯೂ ವಿಶಾಲವಾಗಿಯೂ ಇವೆ. ಶ್ರೇಣಿಗಳ ಮಧ್ಯದಲ್ಲಿ ಪ್ರಸ್ಥಭೂಮಿಗಳು ನದೀಬಯಲುಗಳೂ ಇವೆ. ಪೂರ್ವದಲ್ಲಿ ರಾಕಿ ಪರ್ವತಗಳು ಮತ್ತು ಪೂರ್ವ ಸಿಯೆರ್ರ ಮಾದ್ರೆ ಪರ್ವತಶ್ರೇಣಿಗಳಿವೆ. ಪಶ್ಚಿಮದಲ್ಲಿ ತೀರಪರ್ವತಗಳು, ಸಿಯೆರ್ರ ನೆವಾಡ, ಪಶ್ಚಿಮ ಸಿಯೆರ್ರ ನೆವಾಡ, ಪಶ್ಚಿಮ ಮಾದ್ರೆ ಶ್ರೇಣಿಗಳಿವೆ. ಈ ಹೊಸ ಶ್ರೇಣಿಗಳಲ್ಲಿ ಅನೇಕ ಜೀವಂತ ಜ್ವಾಲಾಮುಖಿಗಳು ಲಾವಾರಸವನ್ನು ಸುತ್ತ ಹರಡಿವೆ. ಈಗಲೂ ಅಲ್ಲಲ್ಲಿ ಸುಪ್ತ ಜ್ವಾಲಾಮುಖಿಗಳನ್ನು ಕಾಣಬಹುದು. ಚಿನ್ನ, ಬೆಳ್ಳಿ, ತಾಮ್ರ ಇತ್ಯಾದಿ ಅಮೂಲ್ಯ ಖನಿಜಗಳು ಇಲ್ಲಿ ದೊರಕುವಂತೆ ಆದದ್ದು ಈ ಜ್ವಾಲಾಮುಖಿಗಳ ಕಾರ್ಯದಿಂದ.

ಮಧ್ಯದ ಪ್ರಸ್ಥಭೂಮಿಗಳಲ್ಲಿ ಕೊಲರಾಡೊ ಪ್ರಸ್ಥಭೂಮಿ 1820 ಮೀ ಎತ್ತರವಾಗಿದೆ; ಬ್ರಿಟಿಷ್ ಕೊಲಂಬಿಯ ಮತ್ತ ಅಲಾಸ್ಕ ಪ್ರಸ್ಥಭೂಮಿಗಳ ಎತ್ತರ ಕಡಿಮೆ. ಮಧ್ಯದ ಪ್ರದೇಶ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ವಿಶಾಲವಾಗಿದೆ. ಅವುಗಳ ನಿರ್ಮಾಣದ ಶಿಲಾಪದರಗಳು ಅನೇಕ ಅಚ್ಚುಗಳಾಗಿ ವಿಭಾಗವಾಗಿವೆ. ಅವುಗಳಲ್ಲಿ ಅತ್ಯಂತ ವಿಶಾಲವಾದದ್ದು 5.4 ಲಕ್ಷ

ಚ.ಕಿಮೀ ವಿಸ್ತಾರದ ಗ್ರೇಟ್ ಬೇಸಿನ್ ಎಂಬುದು. ಇದರ ದಕ್ಷಿಣದಲ್ಲಿನ ಕೊಲರಾಡೊ ನದಿ ಕೆಲವು ಕಡೆ 150 – 1760 ಮೀ ಆಳದ ಭವ್ಯವಾದ ಪಾತ್ರವನ್ನು ಕೊರೆದುಕೊಂಡು ಹರಿಯುತ್ತದೆ (ಗ್ರಾಂಡ್ ಕ್ಯಾನಯನ್).

ಮಧ್ಯದ ತಗ್ಗು ಬಯಲುಗಳು: ಧ್ರುವಪ್ರದೇಶದಿಂದ ದಕ್ಷಿಣದ ಮೆಕ್ಸಿಕೊವರೆಗೂ ಈ ವಿಶಾಲಪ್ರದೇಶ ಹಬ್ಬಿದೆ. ಉತ್ತರ ಅಮೆರಿಕದ 3/5 ಭಾಗವನ್ನು ಈ ಪ್ರದೇಶ ಆಕ್ರಮಿಸಿದೆ. ಇದರ ನಿರ್ಮಾಣ ಈಚಿನದು. ಆದರೆ ಇದರ ಭಾಗವಾಗಿರುವ ಕೆನಡಿಯನ್ ಶಿಲಾಫಲಕದ (ಷೀಲ್ಡ್) ಭಾಗ ಅಮೆರಿಕದಲ್ಲೇ ಅತ್ಯಂತ ಪ್ರಾಚೀನವಾದ, ಗಟ್ಟಿ ಶಿಲೆಗಳಿಂದ ಕೂಡಿದ ಪ್ರದೇಶ. ಇದು ಅನೇಕ ಶತಮಾನಗಳಿಂದ ನಗ್ನೀಕರಣಕ್ಕೆ ತುತ್ತಾಗಿರುವುದರಿಂದ ಸಮಮಟ್ಟ ಮೈದಾನವಾಗಿ ಉತ್ತರ ಧ್ರುವಪ್ರದೇಶದ ಕಡೆಗೆ ಇಳಿಜಾರಾಗಿದೆ. ಅನೇಕ ಸರೋವರಗಳೂ ಉತ್ತರದ ಕಡೆಗೆ ಹರಿಯುವ ಸಣ್ಣ ನದಿಗಳೂ ಇಲ್ಲಿವೆ. ಇಲ್ಲಿಂದ ದಕ್ಷಿಣದ ಕಡೆಗೆ ಹರಿದು ಸೇಂಟ್ ಲಾರೆನ್ಸನ್ನು ಸೇರುವ ನದಿಗಳಲ್ಲಿ ಅನೇಕ ಜಲಪಾತಗಳಿವೆ. ಕೆನಡಿಯನ್ ಶಿಲಾಫಲಕಕ್ಕೆ ಪಶ್ಚಿಮ ಮತ್ತು ದಕ್ಷಿಣದಲ್ಲಿ, ಕಣಜಶಿಲೆಗಳನ್ನೊಳಗೊಂಡ ಸಮಾನಾಂತರ ಪದರಗಳಿಂದ ಕೂಡಿದ ವಿಶಾಲ ಬಯಲುಗಳಿವೆ. ಅದರೆ ಅಲ್ಲಲ್ಲಿ ಪುರಾತನ ಶಿಲೆಗಳಿಂದಾದ ದ್ವೀಪಗಳೂ ಇವೆ. ಆರ್ಕ್‌ಟಿಕ್ ಮಹಾಸಾಗರದಿಂದ ಮೆಕ್ಸಿಕೊ ಕೊಲ್ಲಿಯವರೆಗೆ ಪ್ರಯಾಣ ಮಾಡಿದರೆ 290 ಮೀ ಹೆಚ್ಚು ಎತ್ತರದ ಪ್ರದೇಶವನ್ನು ಕಾಣಲಾಗದು. ಅಲ್ಲಲ್ಲಿ ಕಂಡು ಬರುವ ಎತ್ತರದ ಪ್ರದೇಶಗಳು ಡಕೋಟ ಸಂಸ್ಥಾನದ ಬ್ಲ್ಯಾಕ್‌ಹಿಲ್ಸ್, ಮಿಸ್ಸೂರಿ ಮತ್ತು ಅರಕಾನ್‌ಸಾಸ್ ನದಿಗಳ ಮಧ್ಯ ಭಾಗದ ಓಝಾರ್ಕ್ ಬೆಟ್ಟಗಳು. ಈ ಬಯಲನ್ನು ಹೀಗೆ ವಿಂಗಡಿಸಬಹುದು: ಮೆಕೆಂಜಿ ನದಿಯ ಉತ್ತರದ ತಗ್ಗು ಬಯಲು, ಸೇಂಟ್ ಲಾರೆನ್ಸ್ ಪಂಚಮಹಾಸರೋವರಗಳ ತಗ್ಗುಬಯಲು, ಮಿಸಿಸಿಪಿ ನದಿಯ ತಗ್ಗು ಬಯಲು, ಆಗ್ನೇಯದ ತಗ್ಗು ಬಯಲು, ರಾಕಿ ಪರ್ವತಗಳ ಕಡೆ ಹೋದಂತೆಲ್ಲ ಏರುವ ಎತ್ತರದ ಬಯಲುಗಳು.

ಮಧ್ಯ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಲ್ಲಿನ ಎತ್ತರ ಪ್ರದೇಶಗಳು: ಇಲ್ಲಿ ತೀರದ ಮೈದಾನಗಳಿಂದ ಆವೃತವಾದ ಮಡಿಕೆ ಪರ್ವತಗಳಿಂದ ಕೂಡಿದ ಎತ್ತರ ಪ್ರದೇಶಗಳಿವೆ.

ಉತ್ತರ ಅಮೆರಿಕದಲ್ಲಿ ಹಿಮಶಿಲೆಯ ಪ್ರಭಾವ: ಪ್ಲೀಸ್ಟೋಸೀನ್ ಯುಗದಲ್ಲಿ ಉ. ಅಕ್ಷಾಂಶ $40^0$ ಯಿಂದ ಉತ್ತರಕ್ಕಿರುವ ಗ್ರೀನ್‌ಲೆಂಡ್‌ನ್ನೊಳಗೊಂಡ ಖಂಡಭಾಗವೆಲ್ಲ ನೀರ್ಗಲ್ಲು ಪದರಗಳಿಂದ ಮುಚ್ಚಿತ್ತು. ಇಂದಿಗೂ ಈ ಪದರಗಳು ಪೂರ್ತಿಯಾಗಿ ಕಣ್ಮರೆಯಾಗಿಲ್ಲ. ಗ್ರೀನ್‌ಲೆಂಡಿನ ಹೆಚ್ಚು ಭಾಗ, ಬ್ಯಾಫಿನ್, ಡೆವಾನ್ ಮತ್ತು ವಿಲ್ಲೆಸ್ ಮೆರೆ ದ್ವೀಪಗಳು ಹಿಮಾವೃತವಾಗಿವೆ. ಮಧ್ಯದ ತಗ್ಗು ಬಯಲಿನ ಉತ್ತರಾರ್ಧ ಭಾಗದ ಭೂಲಕ್ಷಣಗಳು ಹಿಮಶಿಲೆಯ ಪ್ರಭಾವದಿಂದ ರೂಪುಗೊಂಡಿವೆ. ಹಿಮಕರಗಿದ ಮೇಲೆ ಮರಳು, ಗಡುಸುಶಿಲೆ ಮತ್ತು ಕಲ್ಲುಗುಂಡುಗಳು ಅಧಿಕ ಪ್ರಮಾಣದಲ್ಲಿ ದೇಶದ ಎಲ್ಲ ಕಡೆಗಳಲ್ಲೂ ಸಂಚಿತವಾಗಿವೆ. ಹೆಚ್ಚು ಮರಳೂ ಕಲ್ಲೂ ಇಲ್ಲದ ಕಡೆಗಳಲ್ಲಿ ಇವುಗಳ ಸಂಚಯನದಿಂದ ಫಲವತ್ತಾದ ವ್ಯವಸಾಯ ಪ್ರದೇಶಗಳು ಏರ್ಪಟ್ಟಿವೆ. ಪರ್ವತಪ್ರದೇಶಗಳಲ್ಲಿ ಹಿಮನದಿಗಳು U ಆಕಾರದ ಕಣಿವೆಗಳನ್ನು ನಿರ್ಮಿಸಿವೆ, ಮತ್ತು ಪೆಸಿಫಿಕ್ ತೀರದಲ್ಲಿ ಕಡಲತೋಳುಗಳನ್ನು ಕತ್ತರಿಸಿವೆ. ಕೆನಡದ ಅಟ್ಲಾಂಟಿಕ್ ಪ್ರಾಂತ್ಯಗಳಲ್ಲಿ ಮತ್ತು ನ್ಯೂ ಇಂಗ್ಲೆಂಡಿನಲ್ಲಿ ಇರುವ ದೊಡ್ಡ ದೊಡ್ಡ ಕಲ್ಲುಗುಂಡುಗಳು ವ್ಯವಸಾಯಕ್ಕೆ ತುಂಬ ಅಡ್ಡಿಯಾಗಿವೆ. ಹಿಮದ ಕಾರ್ಯದಿಂದ, ಭೂರಚನೆಯಲ್ಲಿ ಅನೇಕ ಏರುಪೇರುಗಳಾಗಿ, ಜಲ ಪ್ರವಾಹಕ್ಕೆ ಅನೇಕ ಕಡೆ ಅಡ್ಡಿಯುಂಟಾಗಿ, ಇಂದಿನ ಅನೇಕ ಸರೋವರ ಮತ್ತು ನದಿಗಳು ನಿರ್ಮಿತವಾದುವು. ಮೊದಲು ಸೇಂಟ್ ಲಾರೆನ್ಸ್ ನದಿಗೆ ಅಡ್ಡವಾಗಿ ಹಿಮಬಂಡೆಗಳು ಇದ್ದದ್ದರಿಂದ ಮಹಾಸರೋವರಗಳ ನೀರು ಮೊದಲು ಮಿಸಿಸಿಪ್ಪಿಯ ಮುಖಾಂತರವೂ ಅನಂತರ ಮೂಹಾಕ್, ಹಡ್ಸನ್‌ಗಳ ಮುಖಾಂತರವೂ ಪ್ಲೀಸ್ಟೋಸೀನ್ ಯುಗದ ಅಂತ್ಯದಲ್ಲಿ ಸೇಂಟ್‌ಲಾರೆನ್ಸ್‌ನ ಮೂಲಕವೂ ಹರಿಯತೊಡಗಿತು.

ನದಿಗಳು: ಏಕರೀತಿಯ ಒಳಪದರದ ಚಲನೆಗಳು ಉತ್ತರ ಅಮೆರಿಕದ ನದೀವ್ಯವಸ್ಥೆಯನ್ನು ರೂಪಿಸಿವೆ. ನದಿಗಳ ಚಲನೆಯಲ್ಲೂ ವ್ಯತ್ಯಾಸವಾಗಿದೆ. ಮಿಸಿಸಿಪ್ಪಿ ನದೀವ್ಯೂಹ ಮೀಸೊಝೋಯಿಕ್ ಕಾಲದಲ್ಲಿ ಪೂರ್ವದಿಂದ ಹರಿದು ಬರುವ ಉಪನದಿಗಳನ್ನು ಹೊಂದಿದ್ದರು, ಟರ್ಷಿಯರಿ ಕಾಲದಲ್ಲಿ ಪಶ್ಚಿಮದಿಂದ ಹರಿದು ಬರುವ ಉಪನದಿಗಳಿಂದ ಪ್ರಭಾವಿತವಾಯಿತು. ಉತ್ತರ ಮಿನ್ನೆಸೋಟದ ಹಿಮನದಿಯ ಸಂಚಯನಗಳಿಂದ ಈ ನದೀವ್ಯೂಹ ತನ್ನ ಪಥವನ್ನೇ ಬದಲಾಯಿಸಿದೆ.

ಮೆಕೆಂಜಿ ನದಿಯೂ ಇದೇ ರೀತಿ ವಿಕಾಸಗೊಂಡಿದೆ. ಹಿಮನದಿಯ ಸವೆತ ಮತ್ತು ಸಂಚಯನಗಳ ಪರಿಣಾಮವಾಗಿ ಸೇಂಟ್ ಲಾರೆನ್ಸ್ ನದಿಯಂತೆ ಇದರ ಪಾತ್ರದಲ್ಲೂ ಅನೇಕ ಸರೋವರಗಳುಂಟಾಗಿವೆ.

ಬೇಸಗೆಯಲ್ಲಿ ಹಿಮ ಕರಗುವುದರಿಂದ ಉತ್ತರ ಹಾಗೂ ದಕ್ಷಿಣದ ಕಡೆಗಳಿಗೆ ಹರಿಯುವ ನದಿಗಳಲ್ಲಿ ಪ್ರವಾಹಗಳಿರುತ್ತವೆ. ಅಟ್ಲಾಂಟಿಕ್ ಸಾಗರಕ್ಕೆ ಹರಿಯುವ ಒಟ್ಟು ಜಲಪ್ರವಾಹಕ್ಕಿಂತ ಪೆಸಿಫಿಕ್ ಸಾಗರಕ್ಕೆ ಹರಿಯುವ ಜಲಪ್ರವಾಹ ಹೆಚ್ಚು.

ಪೆಸಿಫಿಕ್ ಸಾಗರವನ್ನು ಸೇರುವ ನದಿಗಳ ಪೈಕಿ ಉತ್ತರ ಕೆನಡ ಮತ್ತು ಅಲಾಸ್ಕಗಳಲ್ಲಿ ಹರಿಯುವ 3,220 ಕಿಮೀ ಉದ್ದದ ಯೂಕಾನ್ ನದಿ ಪ್ರಪಂಚದ ದೊಡ್ಡ ನದಿಗಳಲ್ಲೊಂದು; ಅಷ್ಟು ದೊಡ್ಡದಾದರೂ ಅದಕ್ಕೆ ಪ್ರಾಮುಖ್ಯ ಕಡಿಮೆ. ವರ್ಷದಲ್ಲಿ ಎಂಟು ತಿಂಗಳು ಹೆಪ್ಪುಗಟ್ಟಿರುವುದೂ ಮುಕ್ಕಾಲುಪಾಲು ಜನರಹಿತ ಪ್ರದೇಶಗಳಲ್ಲಿ ಹರಿಯುವುದೂ ಇದಕ್ಕೆ ಕಾರಣ. ಇನ್ನೂ ದಕ್ಷಿಣಕ್ಕೆ ಸ್ಕೀನಾ, ಫ್ರೇಸರ್, ಕೊಲಂಬಿಯ ಮತ್ತು ಅದರ ಉಪನದಿ ಸ್ನೇಕ್ ನದಿಗಳೂ ಪ್ರಪಂಚಪ್ರಸಿದ್ಧ ಕಂದರಗಳನ್ನು (ಕ್ಯಾನಿಯನ್‌ನ್ಯಾನ್) ಹೊಂದಿರುವ ಕೊಲರಾಡೊ ನದಿಯೂ ಇವೆ.

ಆರ್ಕ್‌ಟಿಕ್ ಮತ್ತು ಹಡ್ಸನ್ ಕೊಲ್ಲಿಯನ್ನು ಸೇರುವ ನದಿಗಳಲ್ಲಿ ಮೆಕೆಂಜಿ ಮತ್ತು ಸಸ್ಕ್ಯಾಚವನ್, ನೆಲ್ಸನ್‌ಗಳು ಮುಖ್ಯವಾದುವು. ಅಥಬಾಸ್ಕ ಮತ್ತು ಗ್ರೇಟ್‌ಸ್ಲೇವ್ ಸರೋವರಗಳ ಮುಖಾಂತರ 1610 ಕಿಮೀ ದೂರ ಮೆಕೆಂಜಿ ನದಿ ಹರಿಯುತ್ತದೆ. ಇಲ್ಲಿ ನಾವೆ ಪ್ರಯಾಣ ವರ್ಷದಲ್ಲಿ ನಾಲ್ಕು ತಿಂಗಳು ಮಾತ್ರ. ಸಸ್ಕ್ಯಾಚವನ್ ನದಿ ವಿನಿಪೆಗ್ ಸರೋವರ ಸೇರುತ್ತದೆ. ನೆಲ್ಸನ್ ನದಿಯ ಮುಖಾಂತರ ಅದರ ನೀರು ಹಡ್ಸನ್ ಕೊಲ್ಲಿ ಸೇರುತ್ತದೆ.

ಅಟ್ಲಾಂಟಿಕ್ ಸಾಗರವನ್ನು ಸೇರುವ ನದಿಗಳಲ್ಲಿ ಸೇಂಟ್ ಲಾರೆನ್ಸ್ ಬಹು ಮುಖ್ಯವಾದದ್ದು. ಐದು ಮಹಾಸರೋವರಗಳೊಡನೆ ಸಂಪರ್ಕ ಹೊಂದಿರುವ ಈ ನದಿ ಖಂಡದ ಒಳಭಾಗಕ್ಕೆ 400 ಕಿಮೀ ಜಲಮಾರ್ಗವನ್ನೊದಗಿಸಿದೆ. ಇನ್ನೂ ದಕ್ಷಿಣದ ಕಡೆ ಇರುವ ನದಿಗಳು ಚಿಕ್ಕವಾದರೂ ಒಳನಾಡಿಗೆ ಜಲಮಾರ್ಗಗಳನ್ನು ನಿರ್ಮಿಸಿವೆ, ಅವುಗಳ ಅಳಿವೆಗಳಲ್ಲಿ ಪ್ರಮುಖ ಬಂದರುಗಳನ್ನು ಹೊಂದಿವೆ. ಹಡ್ಸನ್, ಡೆಲೆವೇರ್, ಸಸ್ಕೆಹಾನ್ ಮುಂತಾದ ನದಿಗಳೂ ಮುಖ್ಯವಾದುವು.

ಮೆಕ್ಸಿಕೊ ಕೊಲ್ಲಿಯನ್ನು ಸೇರುವ ನದಿಗಳಲ್ಲಿ 4000 ಕಿಮೀಗೂ ಹೆಚ್ಚು ಉದ್ದದ ಮಿಸಿಸಿಪ್ಪಿ ಮುಖ್ಯವಾದದ್ದು. ಇದರ ಜಲಾನಯನ ಪ್ರದೇಶ ಅಮೆರಿಕ ಸಂಯುಕ್ತ ಸಂಸ್ಥಾನದ 1/3 ಭಾಗವನ್ನು ಆಕ್ರಮಿಸಿದೆ. ಪ್ರಾರಂಭದಲ್ಲಿ ಇದು ಅನೇಕ ಜಲಪಾತಗಳನ್ನು ಹೊಂದಿದ್ದು, ಸರೋವರಗಳ ಮುಖಾಂತರ ಹಾದು ಹೋಗುತ್ತದೆ. ಸೇಂಟ್ ಲೂಯಿಸ್ ಬಳಿಯಲ್ಲಿ ರಾಕೀ ಪರ್ವತಗಳಿಂದ ಹರಿದು ಬರುವ 4000 ಕಿಮೀ ಉದ್ದದ ಮಿಸ್ಸೂರಿ ನದಿ ಸೇರುತ್ತದೆ. ಇಲ್ಲಿಂದ ಮುಂದಿನ ಉಪನದಿಗಳು–ರೆಡ್ ರಿವರ್, ಒಹಾಯೊ, ಅರಕಾನ್ಸಾಸ್.

ಸೇಂಟ್ ಲೂಯಿಸ್ ಬಳಿ ಮಿಸಿಸಿಪಿಯು ಪ್ರವಾಹ ಮೈದಾನವನ್ನು ತಲಪುತ್ತದೆ. ಇದು ಸು. 40 ರಿಂದ 130 ಕಿಮೀ ಅಗಲವಾಗಿದೆ. ಅನೇಕ ಕಡೆ ಇದರ ಎರಡು ಪಾರ್ಶ್ವಗಳಲ್ಲೂ 60 ರಿಂದ 90 ಮೀ ಎತ್ತರದ ಕಡಿದಾದ ದಂಡೆಗಳಿವೆ. ಮೆಕ್ಕಲುಮಣ್ಣು ತಳದಲ್ಲಿ ಸಂಚಿತವಾದಂತೆ ಅದರ ಆಳ ಕಡಿಮೆಯಾಗುತ್ತ ಹೋಗುತ್ತದೆ; ಇದರಿಂದ ನೀರು ಎರಡು ಕಡೆಗಳಲ್ಲೂ ಹರಡಲಾರಂಭಿಸುತ್ತದೆ. ಇಕ್ಕೆಡೆಯ ಫಲವತ್ತಾದ ಮಣ್ಣನ್ನು ಹೊಂದಿರುವ ಭೂಮಿಯನ್ನು ಪ್ರವಾಹದಿಂದ ರಕ್ಷಿಸುವುದಕ್ಕೆ ನದಿಯ ಎರಡು ಪಾರ್ಶ್ವಗಳಲ್ಲೂ ಏರಿಗಳನ್ನು ಕಟ್ಟಿದ್ದಾರೆ. ಪ್ರವಾಹದ ಹೆಚ್ಚು ನೀರನ್ನು ತಡೆಗಟ್ಟುವ ಸರೋವರಗಳಿಲ್ಲದಿರುವುದೇ ಈ ಏರ್ಪಾಡಿಗೆ ಕಾರಣ: ಮಿಸ್ಸೂರಿ, ಮಿಸಿಸಿಪಿ ನದಿಗಳಲ್ಲಿ ಪ್ರವಾಹಗಳ ಹಾವಳಿ ಹೆಚ್ಚು, 3220 ಕಿಮೀ ಉದ್ದದ ರಿಯೋ ಗ್ರ್ಯಾಂಡಿ ಎಂಬುದು ಮೆಕ್ಸಿಕೋ ಕೊಲ್ಲಿಯನ್ನು ಸೇರುವ ಮತ್ತೊಂದು ದೊಡ್ಡ ನದಿ.

ವಾಯುಗುಣ: ಉತ್ತರ, ದಕ್ಷಿಣವಾಗಿ ಹರಡಿರುವ ಪಶ್ಚಿಮದ ರಾಕೀ ಪರ್ವತಗಳು ಮತ್ತು ಪೂರ್ವದ ಅಪಲೇಷಿಯನ್ ಪರ್ವತಗಳು, ಮಧ್ಯದ ತಗ್ಗುಬಯಲನ್ನು ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳ ಪ್ರಭಾವದಿಂದ ದೂರಮಾಡಿವೆ. ಇದೊಂದು ಮೊಗಸಾಲೆಯಂತಿದೆ. ಉತ್ತರದ ಅಂಚಿನಲ್ಲಿ ಪರ್ವತಗಳು ಇಲ್ಲದಿರುವುದರಿಂದ ಉತ್ತರದ ಶೀತ ಮಾರುತಗಳು ಚಳಿಗಾಲದಲ್ಲಿ ದಕ್ಷಿಣಕ್ಕೆ ನ್ಯೂ ಆರ್ಲಿಯನ್ಸ್ ವರೆಗೂ ಬೀಸುತ್ತವೆ. ಇದನ್ನು ಸರಿದೂಗಿಸಲೆಂಬಂತೆ, ದಕ್ಷಿಣದಲ್ಲಿ ಪರ್ವತಗಳು ಇಲ್ಲದಿರುವುದರಿಂದ, ಬೇಸಗೆಯಲ್ಲಿ ಗಲ್ಫ್‌ಸ್ಟ್ರೀಂ ಎಂಬ ಉಷ್ಣ ಪ್ರವಾಹದ ಮೇಲಿಂದ ಬೀಸುವ ಉಷ್ಣಮಾರುತಗಳು ಮೆಕ್ಸಿಕೊ ಕೊಲ್ಲಿಯಿಂದ ಮಧ್ಯ ಮಿಸಿಸಿಪಿಯ ವರೆಗೂ ಬೀಸುತ್ತವೆ. ಈ ಖಂಡ ವಿಶಾಲವಾಗಿದ್ದು ಆರ್ಕ್‌ಟಿಕ್ ಸಾಗರದಿಂದ ಉಷ್ಣವಲಯದವರೆಗೂ ಹರಡಿರುವುದರಿಂದ, ವಾಯುಗುಣದಲ್ಲಿ ಅನೇಕ ವ್ಯತ್ಯಾಸಗಳಿವೆ. ಉತ್ತರ ದಕ್ಷಿಣಗಳಿಗೆ ಉಷ್ಣಾಂಶದ ವ್ಯತ್ಯಾಸವೂ ಇದೆ. ಸಾಗರ ಪ್ರವಾಹಗಳು ಮತ್ತು ಬೀಸುವ ಮಾರುತಗಳು ಕೂಡ ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ.

ಉಷ್ಣಾಂಶ : ಚಳಿಗಾಲದ ಸಮತಾಪರೇಖೆಗಳು ಪೂರ್ವ ಪಶ್ಚಿಮವಾಗಿದ್ದರೂ ಮಧ್ಯದಲ್ಲಿ ದಕ್ಷಿಣದ ಕಡೆಗೆ ಬಾಗಿವೆ: ಅಂದರೆ ತೀರ ಪ್ರದೇಶಗಳು ಬೆಚ್ಚಗಿದ್ದು, ಒಳಭಾಗ ಚಳಿಯಿಂದ ಕೂಡಿದೆ. $0^0$ ಸೆ ಸಮತಾಪರೇಖೆ ಮಹಾಸರೋವರಗಳ ದಕ್ಷಿಣಕ್ಕೂ ಹಬ್ಬಿದೆ. ಅಂದರೆ ಉತ್ತರಾರ್ಧ ಖಂಡ ಘನೀಭವನ ಉಷ್ಣತೆಗಿಂತಲೂ ಕಡಿಮೆ ಉಷ್ಣತೆ ಹೊಂದಿದೆ. ಪೆಸಿಫಿಕ್ ಉಷ್ಣೋದಕ ಪ್ರವಾಹ ಪಶ್ಚಿಮ ಕೆನಡ ತೀರದ ಬಳಿ ಹರಿಯುವುದರಿಂದ ಅದು ಪೂರ್ವ ತೀರಕ್ಕಿಂತಲೂ ಬೆಚ್ಚಗಿದೆ. ಪೂರ್ವ ತೀರದಲ್ಲಿ ಲ್ಯಾಬ್ರಡಾರ್ ಶೀತೋದಕ ಪ್ರವಾಹ ಹರಿಯುವುದರಿಂದ, ಆರ್ಕ್‌ಟಿಕ್ ಸಾಗರದ ತೀರಗಳು $-8^0$ಸೆ ಯಿಂದ $-20^0$ಸೆ ಉಷ್ಣಾಂಶ ಹೊಂದಿವೆ. ಅಂದರೆ ಹಿಮಾಚ್ಛಾದಿತವಾಗಿರುತ್ತದೆ. ಕ್ಯಾಲಿಫೋರ್ನಿಯ

ಶೀತೋದಕ ಪ್ರವಾಹ ಪಶ್ಚಿಮ ತೀರದುದ್ದಕ್ಕೂ ಹರಿದು ಉಷ್ಣಾಂಶವನ್ನು ಕಡಿಮೆ ಮಾಡುತ್ತದೆ. ಚಿನೂಕ್ ಎಂಬ ಬಿಸಿಗಾಳಿ ಆಲ್ಬರ್ಟ ಪ್ರಾಂತ್ಯದಲ್ಲಿ ಬೀಸುತ್ತದೆ. ಮಹಾಸರೋವರಗಳು ಪೂರ್ವತೀರಗಳನ್ನು ಬೆಚ್ಚಗಿಟ್ಟಿರುತ್ತವೆ.

ಬೇಸಗೆಯಲ್ಲಿ ಖಂಡಾಂತರ ಪ್ರದೇಶ ಹೆಚ್ಚು ಉಷ್ಣತೆಯಿಂದ ಕೂಡಿರುತ್ತದೆ. ಪಶ್ಚಿಮದ ಪರ್ವತಾವಳಿ ಸಾಗರ ಪ್ರಭಾವದಿಂದ ಈ ಪ್ರದೇಶವನ್ನು ದೂರಮಾಡಿದೆ. ತೀರಪ್ರದೇಶಗಳು ಒಳಭಾಗಕ್ಕಿಂತ ತಂಪಾಗಿವೆ. ಮಹಾಸರೋವರಗಳು ಸ್ವಲ್ಪಮಟ್ಟಿಗೆ ತಂಪು ಬೀರುತ್ತವೆ. ದಕ್ಷಿಣಾರ್ಧ ಖಂಡ ಹಾಗೂ ವೆಸ್ಟ್ ಇಂಡೀಸ್ ದ್ವೀಪಗಳು $27^0$ ಸೆ. ಗಿಂತ ಹೆಚ್ಚು ಜುಲೈ ಉಷ್ಣಾಂಶ ಹೊಂದಿರುತ್ತವೆ. ನೈಋತ್ಯದ ಒಳನಾಡಿನಲ್ಲಿ $32^0$ ಸೆ. ಗಿಂತಲೂ ಹೆಚ್ಚು ಉಷ್ಣಾಂಶವಿರುತ್ತದೆ.

ಮಾರುತಗಳು ಮತ್ತು ಮಳೆ: ಕೊಲಂಬಿಯ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಆಗ್ನೇಯ ಪ್ರದೇಶದಲ್ಲಿ ಉಷ್ಣೋದಕ ಪ್ರವಾಹದಿಂದುಂಟಾದ ಮಾರುತಗಳಿಂದ ಮಳೆಯಾಗುತ್ತದೆ. ಪರ್ವತಗಳ ಇನ್ನೊಂದು ಕಡೆಯಲ್ಲಿ ಮಳೆ ಇಲ್ಲದೆ, ಮಳೆ ನೆರಳಿನ ಪ್ರದೇಶ ನಿರ್ಮಾಣವಾಗುತ್ತದೆ. ಉತ್ತರ ಅಮೆರಿಕದ ಪರ್ವತಮಯ ಪ್ರಸ್ಥಭೂಮಿಯ ದಕ್ಷಿಣಕ್ಕಿರುವ ಪ್ರದೇಶ ಇಂಥ ಮಳೆನೆರಳುನಾಡು. ಪೂರ್ವ ಕೆನಡ ಮತ್ತು ನ್ಯೂಫೌಂಡ್‌ಲೆಂಡ್‌ಗಳಲ್ಲಿ ಸಾಮಾನ್ಯ ಮಳೆ ಮತ್ತು ಹಿಮ ಬೀಳುತ್ತದೆ. ಇದು ಆವರ್ತಮಾರುತಗಳ ಪ್ರಭಾವ. ಮಿಸಿಸಿಪ್ಪಿ ಕಣಿವೆಯ ವಿನಾಶಕರ ಬಿರುಗಾಳಿಗಳು ವೆಸ್ಟ್ ಇಂಡೀಸ್ ದ್ವೀಪಗಳು ಮತ್ತು ಗಲ್ಫ್ ಕೋಸ್ಟ್ ಗಳಲ್ಲಿ ಹೆಚ್ಚು ಹಾನಿಯನ್ನು ಉಂಟುಮಾಡುತ್ತವೆ.

ಸ್ವಾಭಾವಿಕ ಸಸ್ಯವರ್ಗ: ವಾಯುಗುಣ ಮತ್ತು ಭೂಸ್ಥಿತಿಯನ್ನವಲಂಬಿಸಿರುತ್ತದಾದರೂ ಉತ್ತರ ಅಮೆರಿಕದ ಸಸ್ಯವರ್ಗ ಮನುಷ್ಯ ಪ್ರಯತ್ನದಿಂದ ಬದಲಾವಣೆ ಹೊಂದಿದೆ. ಎತ್ತರ ಮತ್ತು ವಾಯುಗುಣಕ್ಕೆ ಅನುಸಾರವಾಗಿ ವಿವಿಧರೀತಿಯ ಸಸ್ಯವರ್ಗಗಳನ್ನು ಈ ಖಂಡದಲ್ಲಿ ಕಾಣಬಹುದು.

ಕಾಡುಗಳು: ಉಷ್ಣತೆ ಮತ್ತು ಮಳೆ ಹೆಚ್ಚಾಗಿರುವ ಮೆಕ್ಸಿಕೊ, ಮಧ್ಯ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ನಿತ್ಯಹರಿದ್ವರ್ಣದ ಕಾಡುಗಳಿವೆ. ಹೆಚ್ಚು ಸೆಕೆ ಮತ್ತು ತೇವದಿಂದ ಕೂಡಿರುವ ತೀರಪ್ರದೇಶಗಳಲ್ಲಿ ಈ ಕಾಡುಗಳು ಒತ್ತಾಗಿವೆ. ತಾಳೆಯ ಜಾತಿಯ ಮರ, ಮಹೋಗನಿ, ಲಾಗ್‌ವುಡ್ ಇತ್ಯಾದಿ ಮರಗಳು ಇಲ್ಲಿ ಬೆಳೆಯುತ್ತವೆ. ತಗ್ಗು ಬಯಲು ಮತ್ತು ಇಳಿಜಾರು ಪ್ರದೇಶಗಳಲ್ಲಿ ತೀವ್ರತರ ವ್ಯವಸಾಯ ರೂಢಿಯಲ್ಲಿದೆ. ಬಾಳೆಹಣ್ಣು, ಕಿತ್ತಲೆ, ಕಬ್ಬು, ಹೊಗೆಸೊಪ್ಪು, ಕಾಫಿ ಮತ್ತು ಕೋಕೋ ಬೆಳೆಸುತ್ತಾರೆ.

ಆಗ್ನೇಯ ಅಮೆರಿಕ ಸಂಸ್ಥಾನಗಳಾದ ಫ್ಲಾರಿಡ ಮತ್ತು ಗಲ್ಫ್ ತೀರಗಳಲ್ಲಿ ತೇವಯುತ ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳಿವೆ. ಕಡಿಮೆ ಉಷ್ಣಾಂಶದ ಚಳಿಗಾಲ ಮತ್ತು ಹೆಚ್ಚು ಬೇಸಗೆ ಕಾಲ ಇರುವುದಲ್ಲದೆ ವರ್ಷಪೂರ್ತಿ ಮಳೆಯಾಗುವುದರಿಂದ ಉದ್ದನೆಯ ಎಲೆಗಳ ಪೀತದಾರು ಮತ್ತು ತಾಳೆ ಮರಗಳು ಹೆಚ್ಚಾಗಿವೆ. ಜೌಗು ಪ್ರದೇಶದಲ್ಲಿ ಸೈಪ್ರಸ್‌ಗಳಿವೆ. ಪೀತದಾರುವನ್ನು ಹಲಗೆ, ಬಾಗಿಲು ಮತ್ತು ಅಣೆಕಟ್ಟು ತಯಾರಿಕೆಗೆ ಉಪಯೋಗಿಸುತ್ತಾರೆ.

ಪೂರ್ವ ಅಮೆರಿಕ ಸಂಸ್ಥಾನಗಳು ಮತ್ತು ಆಗ್ನೇಯ ಕೆನಡದಲ್ಲಿ ಚಳಿಗಾಲದಲ್ಲಿ ಎಲೆಗಳುದುರುವ ಮತ್ತು ಎಲೆ ಮೊನಚಾದ ಕಾಡುಗಳಿಂದ ಕೂಡಿದ ಮಿಶ್ರ ಕಾಡುಗಳಿವೆ. ದಕ್ಷಿಣಾರ್ಧ ಭಾಗದಲ್ಲಿ ಓಕ್, ಗಟ್ಟಿದಾರು ಮರ, ಸಂಪಿಗೆ ಜಾತಿಯ ಎಲೆಯುದುರುವ ಮರಗಳ ಕಾಡುಗಳಿವೆ. ಅಪಲೇಷಿಯನ್ ಪರ್ವತಗಳ ವಿನಾ ಉಳಿದೆಲ್ಲವೂ ವ್ಯವಸಾಯ ಪ್ರದೇಶ. ಚಳಿಗಾಲದ ಗೋಧಿ, ಹೊಗೆಸೊಪ್ಪು, ಜೋಳ ಮತ್ತು ಹತ್ತಿ–ಇಲ್ಲಿನ ಮುಖ್ಯ ಬೆಳೆಗಳು. ಮೇಪಲ್ ಮತ್ತು ಮೊನಚು ಎಲೆಯ ಕಾಡುಗಳು ಇಲ್ಲಿವೆ. ಮರಗಳ ತಿರುಳಿನಿಂದ ಕಾಗದದ ತಯಾರಿಕೆಯಾಗುತ್ತದೆ. ಮಿಶ್ರ ವ್ಯವಸಾಯ, ಪಶುಪಾಲನೆ ಮತ್ತು ತೋಟಗಾರಿಕೆ – ಇಲ್ಲಿನ ಜನರ ಮುಖ್ಯ ಕಸುಬುಗಳು.

ಕೆನಡದ ಹೆಚ್ಚು ಭಾಗ ಮೊನಚು ಎಲೆಯ ಕಾಡುಗಳಿಂದ ತುಂಬಿದೆ. ಈ ಕಾಡು ಅಟ್ಲಾಂಟಿಕ್‌ನಿಂದ ಪೆಸಿಫಿಕ್ ಸಾಗರದವರೆಗೆ 4800 ಕಿಮೀ ಉದ್ದ ಹರಡಿದೆ. ಸರಾಸರಿ ಅಗಲ 960 ಕಿಮೀ. ಪೀತದಾರು, ಸ್ಪ್ರೂಸ್, ಭೂರ್ಜ, ಗುಗ್ಗುಲ ಮರಗಳು ದಟ್ಟವಾಗಿ ಹರಡಿವೆ. ಕೊಲಂಬಿಯದ ಕಾಡುಗಳಲ್ಲಿ ಭವ್ಯವಾದ ಡಗ್ಲಾಸ್ ಫರ್ ಮರಗಳಿವೆ. ಇದು ತಂಡ್ರದ ದಕ್ಷಿಣದಲ್ಲಿದೆ.

ಹುಲ್ಲುಗಾವಲು: ಉತ್ತರ ಅಮೆರಿಕದ ಮಧ್ಯಭಾಗದಲ್ಲಿ ಪ್ರೈರಿ ಹುಲ್ಲುಗಾವಲಿದೆ. ಇದು ಮಧ್ಯಮ ಬಯಲಿನಿಂದ ಮೆಕ್ಸಿಕೋ ಕೊಲ್ಲಿಯವರೆಗೂ ಹರಡಿದೆ. ಪ್ರೈರಿಯ ಹೆಚ್ಚು ಭಾಗವನ್ನು ವ್ಯವಸಾಯ ಪ್ರದೇಶಗಳನ್ನಾಗಿ ಪರಿವರ್ತಿಸಿದ್ದಾರೆ. ಒಣ ಹವೆ ಇರುವ ಪ್ರದೇಶಗಳಲ್ಲಿ ನೀರಾವರಿ ಆವಶ್ಯಕ. ಮಣ್ಣಿನ ಸವೆತದಿಂದ ಅನೇಕ ಪ್ರದೇಶಗಳು ಬಂಜರುಬಿದ್ದಿವೆ.

ಮರುಭೂಮಿ ಮತ್ತು ಅರೆ ಮರುಭೂಮಿ ಪ್ರದೇಶಗಳು: ಇವು ಕ್ಯಾಲಿಫೋರ್ನಿಯ ಕೊಲ್ಲಿಯಿಂದ ಉತ್ತರದ ಕಡೆಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಪ್ರಸ್ಥಭೂಮಿಗಳ ಮುಖಾಂತರ ಮಧ್ಯ ಹಾಗೂ ಮುಖ್ಯ ರಾಕೀ ಪರ್ವತಶ್ರೇಣಿಗಳ ಮಧ್ಯದಲ್ಲಿ ದಕ್ಷಿಣಕ್ಕೆ ಮೆಕ್ಸಿಕೊವರೆಗೆ ಹರಡಿ ಪಶ್ಚಿಮ ಸಮಾನಾಂತರ ಶ್ರೇಣಿಗಳ ಮಧ್ಯದಲ್ಲಿರುವ ಬಯಲುಗಳನ್ನೂ ಒಳಗೊಂಡಿದೆ. ಮಳೆ ಅಪರೂಪವಾಗಿ ಬಿದ್ದರೂ ಬಿದ್ದ ಮಳೆ ಭಾರಿ ಸುಂಟರಗಾಳಿಗಳಲ್ಲಿ ಪರ್ಯವಸಾನವಾಗುತ್ತದೆ. ಪಾಪಾಸುಕಳ್ಳಿ ಮತ್ತು ಜೋಷುವಾ ಮರಗಳು ಇಲ್ಲಿ ಬೆಳೆಯುತ್ತವೆ. ನೀರಾವರಿ ಅನುಕೂಲ ಒದಗಿದರೆ ಇಲ್ಲಿ ಹಣ್ಣುಗಳನ್ನು ಬೆಳೆಯಬಹುದು.

ತಂಡ್ರ: ಖಂಡದ ಉತ್ತರದ ಅಂಚಿನಲ್ಲಿ ಉದ್ದಕ್ಕೂ ಚಳಿ ಬಹಳ ಹೆಚ್ಚು. ಇದು ಬಂಜರುಭೂಮಿ. ತೀಕ್ಷ್ಣವಾದ ಹಿಮದ ಬಿರುಗಾಳಿ ಬೀಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಕೇವಲ ಗಿಡ್ಡವಾಗಿ ಬೆಳೆಯುವ ಸಸ್ಯಗಳು ಬದುಕಿ ಉಳಿಯುತ್ತವೆ. ಪಾಚಿ, ಶಿಲಾವಲ್ಕ ಮತ್ತು ನೀರು ಹಬ್ಬೆ ಗಿಡಗಳು ಅನುಕೂಲವಾದ ಸ್ಥಳದಲ್ಲಿ ಬೆಳೆಯುತ್ತವೆ. ಕಿರುಬೇಸಿಗೆಯಲ್ಲಿ ಸಸಿ, ಪೊದೆಗಳಲ್ಲೆಲ್ಲ ಆಕರ್ಷಕ ಹೂಗಳು ಮತ್ತು ವಲಸೆಗಾರ ಹಕ್ಕಿಗಳು ತುಂಬಿಕೊಂಡಿರುತ್ತವೆ. ಕೆಲವು ಕಡೆ ಜಿಂಕೆ ಮತ್ತು ಹಿಮಸಾರಂಗಗಳು ಇರುತ್ತವೆ.

ಮೆಡಿಟರೇನಿಯನ್ ವಾಯುಗುಣದ ಸಸ್ಯವರ್ಗ: ನಿತ್ಯ ಹರಿದ್ವರ್ಣದ ಕಾಡುಗಳು ಮತ್ತು ಕುರುಚಲು ಗಿಡಗಳು ಬೇಸಗೆ ಕಾಲದ ಹೆಚ್ಚು ಉಷ್ಣತೆಯನ್ನು ಸಹಿಸಿಕೊಳ್ಳುವ ಶಕ್ತಿ ಪಡೆದಿವೆ. ಈ ರೀತಿಯ ಸಸ್ಯವರ್ಗ ಮಧ್ಯ ಕ್ಯಾಲಿಫೋರ್ನಿಯದಲ್ಲಿದೆ.

ಪ್ರಕೃತಿ ಸಂಪತ್ತು: ಐರೋಪ್ಯರು ಈ ಖಂಡವನ್ನು ಆಕ್ರಮಿಸಿದಾಗ ಪ್ರಕೃತಿ ಸಂಪತ್ತು ಹೇರಳವಾಗಿತ್ತು. ನೆಲಸಿಗರು ಇದರ ಶೋಷಣೆಗೆ ಕೈಹಾಕಿದರು. ಇದನ್ನು ತಡೆಗಟ್ಟಲು ಯಾವ ಕ್ರಮವನ್ನು ಕೈಗೊಳ್ಳಲಿಲ್ಲ. ತೋಪುಗಳು, ಕಾಡುಗಳ ವಿಶಾಲ ಭಾಗಗಳು ಕ್ರಮೇಣ ನಾಶವಾದುವು. ಕಾಡು ಪ್ರಾಣಿಗಳ ಬೇಟೆ ಮತ್ತು ಮಣ್ಣು ಸವೆತಕ್ಕೆ ಒಳಗಾಗಿ ನಾಡಿಗೆ ಹೀನಸ್ಥಿತಿ ಉಂಟಾಯಿತು. 1930ರಲ್ಲಿ ಉಂಟಾದ ತೀಕ್ಷ್ಣಕ್ಷಾಮಗಳಿಂದ ಪರಿಸ್ಥಿತಿ ಇನ್ನೂ ಉಲ್ಬಣಗೊಂಡಿತು. 20ನೆಯ ಶತಮಾನದ ಮೊದಲಲ್ಲಿ ಮೃಗಸಸ್ಯಸಂರಕ್ಷಣೆಯ ಕಾರ್ಯಗಳನ್ನು ಕೈಗೊಳ್ಳುವ ಪ್ರಯತ್ನಗಳು ನಡೆದು, ಈಗ ಪರಿಸ್ಥಿತಿ ಹತೋಟಿಗೆ ಬಂದಿದೆ.

ಜಲಶಕ್ತಿ: ಗೃಹೋಪಯೋಗ, ನೀರಾವರಿ, ಕೈಗಾರಿಕೆ, ವಾಹನ ಸೌಕರ್ಯ, ಜಲವಿದ್ಯುತ್ ಶಕ್ತಿ, ವ್ಯರ್ಥ ಬಿಡುಗಡೆ–ಹೀಗೆ ಅಮೆರಿಕದ ಜಲಸಂಪತ್ತಿನದು ಆರು ದಾರಿ. ಜನಸಂಖ್ಯೆ ಮತ್ತು ಕೈಗಾರಿಕೆಗಳು ಹೆಚ್ಚಿದಂತೆ ಜಲಶಕ್ತಿಯ ಉಪಯೋಗವೂ ಹೆಚ್ಚಿದೆ. ಇದರ ಪರಿಣಾಮವಾಗಿ ಕಡಿಮೆ ಮಳೆ ಬಿದ್ದು ಒತ್ತಾದ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ನೀರಿನ ಕೊರತೆ ಇದ್ದೇ ಇರುತ್ತದೆ. ಉತ್ತರ ಅಮೆರಿಕದ ಜಲಮೂಲಗಳು ಮೂರು: ಮಳೆ ಅಥವಾ ಹಿಮಪಾತ: ನದಿ, ಸರೋವರ ಮತ್ತು ಸಮುದ್ರಗಳಿಂದ ಕೂಡಿದ ಭೂಮಿಯ ಮೇಲಿನ ನೀರು: ಚಿಲುಮೆ ಮತ್ತು ಬಾವಿಗಳಿಂದ ಮೇಲಕ್ಕೆ ಬರುವ ಭೂಮ್ಯಂತರ್ಗತ ಜಲ, ಮೊದಲನೆಯ ಜಲಮೂಲದ ಹತೋಟಿ ಅಸಾಧ್ಯ. ಆದರೆ ಎರಡನೆಯ ರೀತಿಯ ಜಲವನ್ನು ಅಣೆಕಟ್ಟು ಮತ್ತಿತರ ವಿಧಾನಗಳಿಂದ ಸಂಗ್ರಹಿಸಲಾಗುತ್ತಿದೆ. ಸರೋವರ ನದಿ ಮತ್ತಿತರ ಸ್ವಾಭಾವಿಕ ಜಲಾಶಯಗಳ ನೀರನ್ನು ಜನತೆಗೆ ಒದಗಿಸಲಾಗುತ್ತಿದೆ. ಸೂಕ್ತ ವಾಯುಗುಣ ಮತ್ತು ಇತರ ಅನುಕೂಲ ಪರಿಸ್ಥಿತಿಗಳು ಇರುವ ಕಡೆ ಭೂಮ್ಯಂತರ್ಗತ ಜಲವನ್ನು ಬಾವಿ ಮತ್ತು ಚಿಲುಮೆಗಳ ಮುಖಾಂತರ ಒದಗಿಸಲಾಗುತ್ತಿದೆ.

ಹೆಚ್ಚು ಜನಸಾಂದ್ರತೆಯಿಂದ ತುಂಬಿರುವ ಈಶಾನ್ಯ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಆಗ್ನೇಯ ಕೆನಡ ಮತ್ತು ಮೆಕ್ಸಿಕೊದ ಮಧ್ಯದ ಪ್ರಸ್ಥಭೂಮಿಗಳಲ್ಲಿ ನಗರ ನೈರ್ಮಲ್ಯ ಮತ್ತು ಕೈಗಾರಿಕೆಗಳಿಗಾಗಿ ಬಹಳ ನೀರನ್ನು ವ್ಯರ್ಥ ಮಾಡುವುದರಿಂದ ಅಗತ್ಯದಷ್ಟೇ ಜಲಸಂಗ್ರಹಣೆ ಅಸಾಧ್ಯ. ಹೆಚ್ಚು ಮಳೆ ಇದ್ದರೂ ಗೃಹೋಪಯೋಗಕ್ಕಾಗಿ ನೀರು ಒದಗಿಸುವುದೂ ಕಷ್ಟಸಾಧ್ಯವಾಗುತ್ತಿದೆ. ಅನೇಕ ಕಡೆಗಳಲ್ಲಿ ಗಡುಸು ನೀರೇ (ಹಾರ್ಡ್ ವಾಟರ್) ದೊರೆಯುತ್ತದೆ. ನಗರಗಳು ಬೆಳೆದಿರುವ ಶುಷ್ಕಪ್ರದೇಶಗಳಲ್ಲಿನ ನೀರಿನ ಕೊರತೆ ಒಂದು ದೊಡ್ಡ ಸಮಸ್ಯೆ. ದಕ್ಷಿಣ ಕ್ಯಾಲಿಫೋರ್ನಿಯ ಇದಕ್ಕೊಂದು ನಿದರ್ಶನ. ಇಲ್ಲಿ ವ್ಯವಸಾಯಕ್ಕೂ ನಗರ ಕೆಲಸಗಳಿಗೂ ನೀರು ಒದಗಿಸಬೇಕಾಗಿದೆ. ಆದ್ದರಿಂದ ಕೊಲರಾಡೊ ನದಿಯಿಂದ, ಕಲ್ಲಿನಿಂದ ಎತ್ತರದಲ್ಲಿ ಕಟ್ಟಿರುವ ಕಾಲುವೆಗಳ ಮುಖಾಂತರ ನೀರನ್ನು ಸಾಗಿಸುವುದಲ್ಲದೆ, ಸಮುದ್ರಜಲವನ್ನು ಶುದ್ಧಿಮಾಡಿ ಒದಗಿಸುತ್ತಾರೆ. ಕೈಗಾರಿಕಾ ಕೇಂದ್ರಗಳಿಗೆ ಜಲಸಾರಿಗೆ ವ್ಯವಸ್ಥೆ ಇದೆ. ಇದೇ ರೀತಿ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳ ಹೆಚ್ಚುವರಿ ನೀರನ್ನು ನೀರಿನ ಅನುಕೂಲವಿಲ್ಲದ ರಾಜಧಾನಿಗಳಿಗೆ ಒದಗಿಸುತ್ತಾರೆ. ಉತ್ತರ ಮೆಕ್ಸಿಕೋ, ಅಮೆರಿಕ ಸಂಯುಕ್ತ ಸಂಸ್ಥಾನಗಳ ಪಶ್ಚಿಮ ಭಾಗ ಮತ್ತು ಪಶ್ಚಿಮ ಕೆನಡಗಳಂಥ ಶುಷ್ಕ ಪ್ರದೇಶಗಳಲ್ಲಿ ನೀರಾವರಿ ಕಾರ್ಯ ಬಹು ಮುಖ್ಯ. ಆದ್ದರಿಂದ ಚಳಿಗಾಲದ ಮಳೆಯನ್ನು ಹಿಡಿದಿಟ್ಟಿರುವ ಜಲಾಶಯಗಳ ನೀರನ್ನು ಬೇಸಗೆ ಬೆಳೆಗಳಿಗಾಗಿ ಉಪಯೋಗಿಸುತ್ತಾರೆ. ನದಿಗಳ ನೀರು ತಡೆದು ನಿರ್ಮಿಸಿದ ಅನೇಕ ಜಲಾಶಯಗಳು ಎತ್ತರದ ಪ್ರದೇಶಗಳಲ್ಲಿವೆ. ಆದ್ದರಿಂದ ವಿದ್ಯುತ್ ಉತ್ಪಾದನೆ ಕಡಿಮೆ ಖರ್ಚಿನಲ್ಲಿ ಸಾಕಾಗುವಷ್ಟು ಉತ್ಪಾದನೆ ಸಾಧ್ಯವಾಗಿದೆ.

ಖನಿಜಗಳು: ಪ್ರಾಚೀನ ಭೂ ಯುಗದ ಕಾಲದಲ್ಲಿ ಉತ್ತರ ಅಮೆರಿಕದ ವಿಶಾಲ ಪ್ರದೇಶಗಳನ್ನು ಸಮುದ್ರ ಮುಚ್ಚಿತ್ತು. ಕಣಶಿಲೆಗಳಲ್ಲಿ ಆಗ ಖನಿಜಾತ್ಮಕ ಇಂಧನಗಳು ಉಂಟಾದುವು. ಇದು ಉತ್ತರ ಅಮೆರಿಕದ ಹೆಚ್ಚು ಕಡಿಮೆ ಎಲ್ಲ ಪ್ರದೇಶಗಳನ್ನೂ ಆಕ್ರಮಿಸಿದೆ. ಪಶ್ಚಿಮದಲ್ಲಿ ರಾಕೀ ಪರ್ವತಗಳು ಮೇಲೆದ್ದು ಭೂಪದರಗಳಲ್ಲಿ ಅನೇಕ ಬದಲಾವಣೆಗಳಾದುವು.

ಕಣಶಿಲೆಗಳಲ್ಲಿದ್ದ ದೊಡ್ಡ ಪ್ರಮಾಣದ ಇಂಧನಗಳನ್ನು ಅಗ್ನಿಪರ್ವತಗಳ ಬೆಂಕಿ ನಾಶಗೊಳಿಸಿತಾದರೂ ಆಗ ಉಂಟಾದ ಮಹತ್ತರ ಒತ್ತಡದ ಪರಿಣಾಮವಾಗಿ ಭೂ ಮತ್ತಿತರ ಶಿಲಾಪ್ರಸ್ತರಗಳಲ್ಲಿ ಲೋಹ ಖನಿಜಗಳು ಸೇರಿದುವು. ನೂತನವಾಗಿ ನಿರ್ಮಿತವಾದ ಶಿಲೆಗಳ ಮುಖಾಂತರ ನೀರು ಜಿನುಗಿ ಈ ಕಾರ್ಯಗತಿ ತೀವ್ರವಾಯಿತು. ಈ ಬದಲಾವಣೆಗಳಿಂದಲೇ ಉತ್ತರ ಅಮೆರಿಕದ ಪಶ್ಚಿಮ ಭಾಗಗಳಲ್ಲಿ ಶ್ರೇಷ್ಠ ಖನಿಜಗಳು ದೊರೆಯುವಂತಾಯಿತು. ಕೈಗಾರಿಕೆಗಳ ಮೂಲಖನಿಜಗಳಾದ ಕಲ್ಲಿದ್ದಲು, ಪೆಟ್ರೋಲಿಯಂ, ಕಬ್ಬಿಣದ ಅದಿರುಗಳು ಉತ್ತರ ಅಮೆರಿಕದಲ್ಲಿ ಹೇರಳವಾಗಿ ದೊರೆಯುತ್ತವೆ. 1900 ರಿಂದ 1959ರ ವರೆಗೆ ಅಮೆರಿಕ ಸಂಯುಕ್ತ ಸಂಸ್ಥಾನ ಪ್ರಪಂಚದ ಪ್ರಮುಖ ಕಲ್ಲಿದ್ದಲು ಉತ್ಪಾದನೆಯ ದೇಶವಾಗಿತ್ತು. ಶ್ರೇಷ್ಠಮಟ್ಟದ ಕಲ್ಲಿದ್ದಲು, ಆಂಥ್ರಸೈಟ್‍ಗಳು ಪ್ರಪಂಚದಲ್ಲಿ ಪೆನ್ಸಿಲ್ವೇನಿಯದಲ್ಲಿ ಮಾತ್ರ ದೊರೆಯುತ್ತವೆ. ಬಿಟುಮಿನಸ್ ಕಲ್ಲಿದ್ದಲು ಕಂಬರ್‍ಲೆಂಡ್, ಅಲಿಘನಿ ಪ್ರಸ್ಥಭೂಮಿಗಳಿರುವ ಅಪಲೇಷಿಯನ್ ಪ್ರದೇಶಗಳು, ಪೂರ್ವ ಒಳನಾಡು, ಪಶ್ಚಿಮ ಒಳನಾಡು ಮತ್ತು ಟೆಕ್ಸಾಸ್ ಮಿಶಿಗನ್‍ಗಳ ಒಳನಾಡು ಪ್ರದೇಶಗಳಲ್ಲಿ ದೊರೆಯುತ್ತವೆ.

ಕೆನಡದ ಕಲ್ಲಿದ್ದಲು ನಿಕ್ಷೇಪಗಳು ಮುಖ್ಯವಾಗಿ ನೋವಾಸ್ಕೋಷಿಯ, ಆಲ್‍ಬರ್ಟಾ, ಬ್ರಿಟಿಷ್ ಕೊಲಂಬಿಯಗಳಲ್ಲಿವೆ. ನೋವಾದಲ್ಲಿನ ಕಲ್ಲಿದ್ದಲು ಉತ್ತಮ ಮಟ್ಟದ್ದು.

ಪೆಟ್ರೋಲಿಯಂನ ನಿಕ್ಷೇಪಗಳು ಸಂಯುಕ್ತ ಸಂಸ್ಥಾನದಲ್ಲಿ ಹಂಚಿಕೆಯಾಗಿವೆ. ಇದು ಪ್ರಮುಖ ತೈಲ ಉತ್ಪಾದನಾ ದೇಶ; ಪ್ರಪಂಚದ ಶೇ. 40 ಭಾಗವನ್ನು ಉತ್ಪಾದಿಸುತ್ತಾರೆ. ಪೆನ್ಸಿಲ್ವೇನಿಯ, ಕೆಂಟಕಿ, ಇಂಡಿಯಾನ, ಇಲಿನಾಯ್‍ಗಳಿಂದ ಕೂಡಿದ ಪೂರ್ವ ಪ್ರದೇಶ ಪ್ರಮುಖ ಎಣ್ಣೆ ಉತ್ಪಾದನಾ ವಿಭಾಗ. ಕಾನ್ಸಾಸ್, ಟೆಕ್ಸಾಸ್‍ಗಳ ಖಂಡಾಂತರ ಪ್ರದೇಶ ಪ್ರಪಂಚದಲ್ಲಿ ತೈಲ ಉತ್ಪಾದನೆಗೆ ಪ್ರಸಿದ್ಧ ಸ್ಥಳವಾಗಿದೆ. ಕ್ಯಾಲಿಫೋರ್ನಿಯ ಮತ್ತು ಗಲ್ಫ್‍ಕೋಸ್ಟ್ 2ನೆಯ ಹಾಗೂ 3ನೆಯ ಸ್ಥಾನ ಪಡೆದಿವೆ. ಎರಡನೆಯ ಮಹಾಯುದ್ಧದ ಅನಂತರ ಕೆನಡ ಮತ್ತು ಅಲಾಸ್ಕಗಳು ಪೆಟ್ರೋಲಿಯಂನ್ನು ಉತ್ಪಾದಿಸಲಾರಂಭಿಸಿವೆ. 1910ರಿಂದ 1919ರ ವರೆಗೆ ಮೆಕ್ಸಿಕೊ ಪ್ರಪಂಚದ ಪೆಟ್ರೋಲಿಯಂ ತಯಾರಿಕೆಯಲ್ಲಿ ಎರಡನೆಯ ಸ್ಥಾನ ಪಡೆದಿತ್ತು. ಗಲ್ಫ್‍ಕೋಸ್ಟ್‍ನಲ್ಲಿ ಕೆಲವು ಮುಖ್ಯ ಎಣ್ಣೆ ಮೂಲಗಳಿವೆ.

ಪ್ರಪಂಚದ ಕಬ್ಬಿಣದ ಅದಿರಿನ ನಿಕ್ಷೇಪಗಳಲ್ಲಿ ಶೇ. 12 ಭಾಗ ಉತ್ತರ ಅಮೆರಿಕದಲ್ಲಿದೆ. ಸುಪೀರಿಯರ್ ಸರೋವರ ಪ್ರದೇಶ ಪ್ರಪಂಚದ ¼ ಭಾಗದ ಕಬ್ಬಿಣದ ಅದಿರು ಒದಗಿಸುತ್ತದೆ. ಇದು ಉತ್ತಮ ಅದಿರು. ಪಂಚ ಮಹಾಸರೋವರಗಳು ಈ ಪ್ರದೇಶವನ್ನು ಅಪಲೇಶಿಯನ್ ಪ್ರದೇಶಗಳೊಂದಿಗೆ ಸೇರಿಸಿವೆ. ಪ್ರಪಂಚದ ಉತ್ತಮ ಮಟ್ಟದ ನಿಕ್ಷೇಪಗಳು ನ್ಯೂಫೌಂಡ್‍ಲೆಂಡ್ ಬಳಿಯ ಬೆಲ್ ದ್ವೀಪ, ಬರ್ನ್ಯುಟ್ ಕ್ರೀಕ್ ಮತ್ತು ಸುಪೀರಿಯರ್ ಸರೋವರಕ್ಕೆ ವಾಯವ್ಯದ ಪ್ರದೇಶಗಳಲ್ಲಿವೆ. ಕೊಬಾಲ್ಟ್, ಮಾಲಿಬ್ಡಿನಮ್, ನಿಕ್ಕಲ್, ಟಂಗ್‍ಸ್ಟನ್‍ಗಳು ಸಂಯುಕ್ತ ಸಂಸ್ಥಾನ ಮತ್ತು ಮೆಕ್ಸಿಕೊಗಳಲ್ಲಿ ದೊರೆಯುತ್ತವೆ. ಗ್ರೇಟ್ ಬೇರ್ ಸರೋವರದ ತೀರಗಳಲ್ಲಿ ಪ್ರಪಂಚದ ಶ್ರೇಷ್ಠ ಯುರೇನಿಯಂ ನಿಕ್ಷೇಪಗಳು ಹೇರಳವಾಗಿವೆ.

ವ್ಯವಸಾಯ ಮತ್ತು ಪಶುಪಾಲನೆ: ವಸಂತ ಋತುವಿನ ಗೋದಿಯನ್ನು ಮಧ್ಯ ಕೆನಡದಿಂದ ಮಧ್ಯ ಮಿಸಿಸಿಪ್ಪಿ ವರೆಗೂ ಬೆಳೆಯುತ್ತಾರೆ. ಇದರ ದಕ್ಷಿಣಕ್ಕೆ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದರ ದಕ್ಷಿಣದ ಪ್ರದೇಶಗಳಲ್ಲಿ ಜೋಳ ಮತ್ತು ಚಳಿಗಾಲದ ಗೋದಿ ಬೆಳೆಯಲು ಅನುಕೂಲವಿದೆ. ಇನ್ನೂ ದಕ್ಷಿಣಕ್ಕೆ ವಿಶಾಲವಾದ ಹತ್ತಿ ಬೆಳೆಯುವ ಪ್ರದೇಶವಿದೆ. ಆರ್ದ್ರಉಷ್ಣವಲಯ ಪ್ರದೇಶ ಮೆಕ್ಸಿಕೊ ಕೊಲ್ಲಿಯ ಉದ್ದಕ್ಕೂ ಇದೆ; ಫ್ಲಾರಿಡಾ ಇದಕ್ಕೆ ಸೇರಿದೆ. ಇಲ್ಲಿ ಕಬ್ಬು, ಬತ್ತ, ಹಣ್ಣುಗಳನ್ನು ಬೆಳೆಯುತ್ತಾರೆ. $100^0$ ಪಶ್ಚಿಮ ರೇಖಾಂಶದ ಪಶ್ಚಿಮಕ್ಕೆ ರಾಕೀ ಪರ್ವತಗಳ ವರೆಗೆ ಕುದುರೆ ಸಾಕುವುದೂ ಶುಷ್ಕ ವ್ಯವಸಾಯವೂ ಹೆಚ್ಚು. ಪಶುಪಾಲನೆ ಮಹಾಸರೋವರಗಳ ಸುತ್ತಮುತ್ತಣ ಪ್ರದೇಶ ಮತ್ತು ಸೇಂಟ್‍ಲಾರೆನ್ಸ್ ತಗ್ಗು ಬಯಲುಗಳಲ್ಲಿ ವಿಶೇಷವಾಗಿದೆ. ಮಧ್ಯ ಕ್ಯಾಲಿಫೋರ್ನಿಯದಲ್ಲಿ ಬೆಚ್ಚಗಿರುವ ಸಮಶೀತೋಷ್ಣವಲಯದ ಹಣ್ಣು ತರಕಾರಿಗಳನ್ನು ಬೆಳೆಯುತ್ತಾರೆ.

ಜನಸಂಖ್ಯೆ : ಈ ಖಂಡದಲ್ಲಿ ಪ್ರಪಂಚದ ಶೇ. 8 ರಷ್ಟು ಜನಸಂಖ್ಯೆ ಇದೆ. ಜನಸಂಖ್ಯೆಯ ಒತ್ತಡ ಯುರೋಪ್ ಮತ್ತು ಪೂರ್ವ ಏಷ್ಯಗಳಿಗಿಂತಲೂ ಕಡಿಮೆ. ಆದರೂ ಉತ್ತರ ಅಮೆರಿಕದ ಈಶಾನ್ಯ ಭಾಗ ಜಗತ್ತಿನ ನಾಲ್ಕು ಹೆಚ್ಚು ಜನಸಾಂದ್ರ ಪ್ರದೇಶಗಳಲ್ಲಿ ಒಂದು.

ಸಂಯುಕ್ತ ಸಂಸ್ಥಾನದ ಈಶಾನ್ಯದಲ್ಲೂ ಕೆನಡದ ಆಗ್ನೇಯ ಭಾಗಗಳಲ್ಲೂ ಜನಸಾಂದ್ರತೆ ಹೆಚ್ಚು. ಇಲ್ಲಿಂದ ಒಳಗಡೆಗೆ ಮಹಾ ಮೈದಾನಗಳಲ್ಲಿ ದಕ್ಷಿಣದಲ್ಲಿ ಗಲ್ಫ್‍ಕೋಸ್ಟ್‍ವರೆಗೂ ಉತ್ತರದ ಆಂಟೇರಿಯೋದವರೆಗೂ ಇದು ಸಾಮಾನ್ಯ. ಮೆಕ್ಸಿಕೊ ನಗರದ ಸುತ್ತಣ ಪ್ರದೇಶದಲ್ಲೂ ತಕ್ಕಮಟ್ಟಿಗೆ ಜನಸಾಂದ್ರತೆಯಿದೆ. ವಾಷಿಂಗ್‍ಟನ್, ಓರೆಗಾನ್ ಸುತ್ತಣಪ್ರದೇಶ, ಸ್ಯಾನ್‍ಫ್ರಾನ್ಸಿಸ್ಕೊ ಕೊಲ್ಲಿಯ ಸುತ್ತಣ ಪ್ರದೇಶ ಹಾಗೂ ಲಾಸ್ ಏಂಜಲ್ಸ್ ಸುತ್ತಣ ಪ್ರದೇಶಗಳಲ್ಲಿ ಜನಸಾಂದ್ರತೆ ಹೆಚ್ಚು. ಈ ಪ್ರದೇಶಗಳನ್ನು ಬಿಟ್ಟರೆ ಉಳಿದಿರುವ ಖಂಡವೆಲ್ಲ ಜನರಹಿತ ಪ್ರದೇಶವೆಂದೇ ಹೇಳಬೇಕು.

ಮೂಲನಿವಾಸಿಗಳು ಕೆನಡ ಮತ್ತು ಸಂಯುಕ್ತ ಸಂಸ್ಥಾನಗಳಲ್ಲಿ ಇದ್ದಾರೆ. ಉಳಿದವರೆಲ್ಲ ಪಶ್ಚಿಮ ಮತ್ತು ಉತ್ತರ ಐರೋಪ್ಯರು. ಸಂಯುಕ್ತ ಸಂಸ್ಥಾನದಲ್ಲಿ ಶೇ. 10 ರಷ್ಟು ನೀಗ್ರೋಗಳು. ಇಲ್ಲಿ ಜನರಲ್ಲಿ ಶೇ. 63 ರಷ್ಟು ಮಂದಿ ನಗರಗಳಲ್ಲೂ ಶೇ. 20 ಮಂದಿ ಗ್ರಾಮೀಣ ಕೈಗಾರಿಕೆಗಳಲ್ಲೂ ನಿರತರಾಗಿದ್ದಾರೆ. ಉತ್ತರ ಅಮೆರಿಕದಲ್ಲಿ ಈಗ ಮೂಲನಿವಾಸಿಗಳು ಅಲ್ಪಸಂಖ್ಯಾತರು; ಅಲ್ಲಿ ವಾಸಿಸುತ್ತಿರುವವರಲ್ಲಿ ಐರೋಪ್ಯ ಮೂಲದವರೇ ಅಧಿಕ; ನೀಗ್ರೋಗಳೂ ಯಥೇಚ್ಛ.

ಉತ್ತರ ಅಮೆರಿಕವನ್ನು ಮೊಟ್ಟ ಮೊದಲಿಗೆ ಕಂಡ ಐರೋಪ್ಯರೆಂದರೆ ಬಹುಶಃ ಸ್ಕಾಂಡಿನೇವಿಯದ ನಾರ್ಸ್ ಜನ. ಆ ದೇಶದಲ್ಲಿ ಒಮ್ಮೆ ಜನಸಂಖ್ಯೆಯ ಸ್ಫೋಟವಾದಾಗ, ಅಲ್ಲಿನ ಒಂದನೆಯ ಹ್ಯಾರೋಲ್ಡ್ ದೊರೆ ತನ್ನ ನಾಡಿನ ಶ್ರೀಮಂತರ ಮೇಲೆ ದಬ್ಬಾಳಿಕೆ ನಡೆಸಿದಾಗ ಆ ಜನ ಹೊರಬಿದ್ದರು. ನೆರೆದೇಶಗಳ ತೀರಪ್ರದೇಶಗಳ ಮೇಲೆ ದಾಳಿ ಮಾಡಿದರು. 9–10ನೆಯ ಶತಮಾನಗಳಲ್ಲಿ ಇಂಗ್ಲೆಂಡಿಗೆ ನುಗ್ಗಿದ ಡೇನರೂ ಫ್ರೆಂಚ್ ನದಿಗಳಲ್ಲಿ ಯಾನ ಮಾಡಿ ಫ್ರೆಂಚರನ್ನು ಥಳಿಸಿ ಅವರನ್ನು ಮತ್ತೆ ಅನಾಗರಿಕ ಸ್ಥಿತಿಗೆ ತಳ್ಳಿದವರೂ ರಷ್ಯಕ್ಕೂ ಏರಿ ಹೋಗಿ ಹಾವಳಿ ಮಾಡಿದ ವೆರಾಗಿಯನ್ನರೂ ಇವರೇ. 700–1100ರ ಅವಧಿಯಲ್ಲಿ ಇವರು ಉತ್ತರ ಅಮೆರಿಕದಲ್ಲೂ ಕಾಲಿಕ್ಕಿದ್ದಿರಬೇಕು. ಐಸ್‍ಲೆಂಡಿನ ಇತಿವೃತ್ತಗಳಲ್ಲಿ ಇವರ ಈ ಪ್ರವಾಸಗಳ ಉಲ್ಲೇಖವಿದೆ. ಜಾರ್ನಿ ಹೆರ್‍ಜಾಫ್‍ಸನ್ ಐಸ್‍ಲೆಂಡಿನಿಂದ ಗ್ರೀನ್‍ಲೆಂಡಿನ ಯಾನ ಮಾಡುತ್ತಿದ್ದಾಗ ಗಾಳಿ ಅವನ ನೌಕೆಯನ್ನು ಅಮೆರಿಕದ ತೀರಕ್ಕೆ ಹೊಡೆದುಕೊಂಡು ಹೋಗಿರಬೇಕು (985–6). ಮುಂದೆ (1002–3ರಲ್ಲಿ) ಲೀಫ್‍ಎರಿಕ್ಸನ್ ಗ್ರೀನ್‍ಲೆಂಡಿನಿಂದ ಅಲ್ಲಿಗೆ ಹೋದ; ಸಮುದ್ರ ಕರೆಯ ಬಳಿಯಲ್ಲೇ ದಕ್ಷಿಣಾಭಿಮುಖವಾಗಿ ಸಾಗಿದ. ತಾರ್ಫಿನ್ ಕಾರ್ಲ್‍ಸೆವ್ನಿ ಮೂರು ಹಡಗುಗಳಲ್ಲಿ ಸಾಮಗ್ರಿಯನ್ನೂ ಪ್ರಾಣಿಗಳನ್ನೂ ತುಂಬಿಕೊಂಡು ಅಲ್ಲಿಗೆ ಹೋಗಿದ್ದ. ಅವನೊಂದಿಗೆ ಹೆಂಗಸರೂ ಹೋಗಿದ್ದರೆಂದು ಹೇಳಲಾಗಿದೆ.

ನಾರ್ಸ್ ಜನ ಎಲ್ಲೆಲ್ಲಿ ಸಂಚರಿಸಿದರೆಂಬ ಬಗ್ಗೆ ನಿರ್ದಿಷ್ಟವಾದ ದಾಖಲೆಗಳು ಹೆಚ್ಚಾಗಿ ದೊರಕಿಲ್ಲ. 15ನೆಯ ಶತಮಾನದಲ್ಲಿ ರಚಿತವಾದುದೆನ್ನಲಾದ ಈ ಪ್ರದೇಶದ ಭೂಪಟವೊಂದು ಸಿಕ್ಕಿದೆ. ಅಂತೂ ಕೊಲಂಬಸನ ಪೀಳಿಗೆಯ ಜನ ಇಲ್ಲಿಗೆ ಬರುವುದಕ್ಕೂ ಎಷ್ಟೋ ಮುಂಚೆಯೇ ಐರೋಪ್ಯರು ಇಲ್ಲಿ ಕಾಲಿಟ್ಟಿದ್ದರೆಂಬುದು ನಿಜ. ಆದ್ದರಿಂದ ವಾಸ್ತವವಾಗಿ ಹೇಳುವುದಾದರೆ 15ನೆಯ ಶತಮಾನದ ಪರಿಶೋಧಕರು ಉತ್ತರ ಅಮೆರಿಕವನ್ನು ತಲುಪಿದಾಗ ಅವರು ಮಾಡಿದ್ದು ಅಮೆರಿಕದ ದರ್ಶನವಲ್ಲ, ಪುನರ್ದರ್ಶನವನ್ನು ಮಾತ್ರ.

15ನೆಯ ಶತಮಾನದಲ್ಲಿ ಐರೋಪ್ಯರು ಹೊಸ ಹೊಸ ಪ್ರದೇಶಗಳ ಆವಿಷ್ಕಾರ, ಪರಿಶೋಧನೆ ಹಾಗೂ ನೆಲಸಿಕೆಯಲ್ಲಿ ತೊಡಗಿದರು. ಹಿಂದಿನ ಕೆಲವು ಶತಮಾನಗಳಲ್ಲಿ ಐರೋಪ್ಯ ದೇಶಗಳಲ್ಲಿ ಸಂಭವಿಸಿದ್ದ ಆರ್ಥಿಕ ಬೆಳವಣಿಗೆಗಳಿಂದಾಗಿ ಅಲ್ಲಿ ಸಾಹಸ ಪ್ರವೃತ್ತಿ ಬೆಳೆದುಬಂದಿತ್ತು. ರಾಷ್ಟ್ರೀಯತ್ವದ ಜಾಗೃತಿಯೊಂದಿಗೆ ಆಕಾಂಕ್ಷೆ ಹೆಚ್ಚಿತ್ತು, ಹೊಸ ನೆಲ, ಹೆಚ್ಚು ಸಂಪತ್ತು ದೊರಕೀತೆಂಬ ಆಸೆಯಿಂದ ಆ ದೇಶಗಳು ಜನರನ್ನು ಪರಿಶೋಧನೆಯಲ್ಲಿ ಪ್ರೋತ್ಸಾಹಿಸಿದರು. ಇದರ ಜೊತೆಗೆ ಕ್ರೈಸ್ತಧರ್ಮ ಪ್ರಚಾರದ ಹುಮ್ಮಸ್ಸೂ ಸೇರಿತು. ಪ್ರಾಟೆಸ್ಟಂಟ್ ಮತ್ತು ರೋಮನ್ ಕೆಥೊಲಿಕ್ ರಾಷ್ಟ್ರಗಳಲ್ಲೆ ಈ ವಿಚಾರದಲ್ಲಿ ಸ್ಪರ್ಧೆ ಹೆಚ್ಚಿತು.

ಇಟಲಿಯ ಕ್ರಿಸ್ಟೋಫರ್ ಕೊಲಂಬಸ್ ಸ್ಪೇನಿನಿಂದ ಯಾತ್ರೆ ಹೊರಟು ಉತ್ತರ ಅಮೆರಿಕದ ಪೂರ್ವ ದ್ವೀಪಗಳನ್ನು ತಲಪಿದಾಗ ಈ ಖಂಡದ ಹೊಸ ಯುಗದ ಬಾಗಿಲು ದೊಡ್ಡದಾಗಿ ತೆರೆಯಿತು. ಸ್ಪ್ಯಾನಿಷ್ ಸಾಹಸಿಗಳು ಕೆರಿಬಿಯನ್, ಮೆಕ್ಸಿಕೊ ಖಾರಿ ಮತ್ತು ಸುತ್ತಣಮುತ್ತಣ ಪ್ರದೇಶಗಳ ಒಳಹೊಕ್ಕರು. ಅಲ್ಲಲ್ಲಿ ವಲಸೆಗಳು ಏರ್ಪಟ್ಟವು. ಮೊದಮೊದಲು ವಲಸೆಗಾರರು ರೋಗದ ಉಪದ್ರವವನ್ನೂ ಮೂಲನಿವಾಸಿಗಳ ವಿರೋಧವನ್ನು ಎದುರಿಸಬೇಕಾಯಿತು. 1513ರಲ್ಲಿ ಬಾಲ್ಬೋವ ಯೋಧರ ಪಡೆಯೊಂದಿಗೆ ಪನಾಮ ಭೂಕಂಠವನ್ನು ತಲಪಿ ಪೆಸಿಫಿಕ್ ದಂಡೆಯ ಮೇಲೆ ಉತ್ತರಾಭಿಮುಖವಾಗಿ ನಡೆದ. 1516ರಲ್ಲಿ ಡೈಗೋ ಎಂಬಾತನಿಗೆ ಕ್ಯೂಬ ಮಣಿಯಿತು. 1519ರಲ್ಲಿ ಎರ್ನಾಸ್ ಕೋರ್ಟೇಸ್ ಮೆಕ್ಸಿಕೊದ ಒಳಹೊಕ್ಕ. ಮುಂದೆ ಅನೇಕ ಸ್ಪ್ಯಾನಿಷ್ ಸಾಹಸಿಗಳು ತಮ್ಮ ಹಿಂದಿನ ಪರಿಶೋಧಕರು ಹೋದ ದಿಕ್ಕುಗಳಲ್ಲೇ ನಡೆದು ಈ ಖಂಡದ ಒಳಭಾಗದಲ್ಲಿ ಸಂಚರಿಸಿದರು. ಇಂಕದ ಚಿನ್ನದ ಅಸೆಯೂ ಸಿಬೋಲದ ಸಪ್ತ ಸುವರ್ಣದ ನಗರಗಳ ಬಗ್ಗೆ ಅಲ್ಲಿನ ಇಂಡಿಯನ್ನರು ಹೇಳುತ್ತಿದ್ದ ಮೋಹಕ ಕಥೆಗಳೂ ಈ ಸಾಹಸಿಗಳನ್ನು ಹುರಿದುಂಬಿಸಿದುವು.

ಸ್ಪೇನಿನ ಜನ ಉತ್ತರ ಅಮೆರಿಕದ ದಕ್ಷಿಣಭಾಗದ ಪರಿಶೋಧನೆಯಲ್ಲಿ ತೊಡಗಿದ್ದಾಗ ಫ್ರೆಂಚರು, ಡಚ್ಚರು, ಇಂಗ್ಲಿಷರು ಮುಂತಾದವರು ಉತ್ತರದ ಭಾಗಗಳಲ್ಲಿ ಕಾರ್ಯನಿರತರಾಗಿದ್ದರು. ಜಾನ್ ಕ್ಯಾಬಟ್ (ಇಂಗ್ಲಿಷ್), ಕಾರ್ಟೈ (ಫ್ರೆಂಚ್) ಸರ್ ಫ್ರಾನ್ಸಿಸ್ ಡ್ರೇಕ್ (ಇಂಗ್ಲಿಷ್) ಇವರು ಮುಖ್ಯರು. ಪೆಸಿಫಿಕ್ ತೀರ, ಸೇಂಟ್ ಲಾರೆನ್ಸ್ ಪ್ರದೇಶ ಇವುಗಳಲ್ಲಿ ಕ್ರಮೇಣ ತಮ್ಮ ದೀರ್ಘಕಾಲದ ಮುಸುಕು ತೆರೆದು ಮೊಗ ತೋರಿಸಿದುವು.

ಫ್ರೆಂಚ್ ವ್ಯಾಪಾರಿಗಳು ಪೋರ್ಟ್ ರಾಯಲನ್ನು ಕಂಡುಹಿಡಿದದ್ದು 1605ರಲ್ಲಿ. ಮೂರು ವರ್ಷಗಳ ಅನಂತರ ಕ್ವಿಬೆಕ್ ಪ್ರಾಮುಖ್ಯಕ್ಕೆ ಬಂತು. ಫ್ರೆಂಚ್ ಕೆನಡ ಬೆಳೆಯಿತು. ತುಪ್ಪಳು ವ್ಯಾಪಾರ ಪ್ರಧಾನವಾಗಿತ್ತು. ಮೂಲನಿವಾಸಿಗಳನ್ನು ಕ್ರೈಸ್ತಧರ್ಮಕ್ಕೆ ಪರಿವರ್ತನೆ

ಮಾಡುವ ಉದ್ದೇಶದಿಂದ ಬಂದವರೂ ದೇಶ ಪರ್ಯಟನೆಯಲ್ಲಿ ತೊಡಗಿದರು. ಆದರೆ ಇವರಿಗೆ ಪರಿವರ್ತನೆ ಕಾರ್ಯದಲ್ಲಿ ಅನೇಕ ಬಗೆಯ ವಿರೋಧಗಳು ಒದಗಿ ಬಂದುವು.

ಫ್ರೆಂಚರು ತಮ್ಮ ವ್ಯಾಪಾರ ಬೆಳವಣಿಗೆಗಾಗಿ ಇಂಗ್ಲಿಷರ ಸಹಕಾರ ಕೋರಿದರು. ಇಂಗ್ಲಿಷರಿಂದ ಹಡ್ಸನ್ ಬೇ ಕಂಪನಿ ಎಂಬ ಸಂಸ್ಥೆಯ ಸ್ಥಾಪನೆಯಾಯಿತು. ಈ ಪ್ರದೇಶದಲ್ಲಿ ಇಂಗ್ಲಿಷರು ಕ್ರಮೇಣ ತಮ್ಮ ಪ್ರಭಾವ ಬೆಳೆಸಿಕೊಂಡರು.

ಫ್ರೆಂಚರ ಆಸೆಯೂ ಬೆಳೆಯಿತು. ಉತ್ತರ ಅಮೆರಿಕದಲ್ಲಿ ತಮ್ಮ ಪ್ರಭುತ್ವ ಬೆಳೆಯಬೇಕೆಂಬ ಉದ್ದೇಶದಿಂದ ಅವರು ಮಿನ್ನೆಸೋಟಕ್ಕೆ ಬಂದು ಅಲ್ಲಿಂದ ಮಿಸಿಸಿಪ್ಪಿಯ ಮಾರ್ಗವಾಗಿ ವಿಸ್ಕಾನ್ಸಿನ್‌ಗೆ ಪ್ರಯಾಣಮಾಡಿದರು. ದಕ್ಷಿಣದಲ್ಲಿಂದ ಸ್ಪ್ಯಾನಿಷ್ ಪ್ರದೇಶದವರೆಗೂ ಮುಂದುವರಿದು ಇಂಗ್ಲಿಷರನ್ನು ಅಟ್ಲಾಂಟಿಕ್ ಕಡಲ ತೀರದ ಪ್ರದೇಶಕ್ಕೆ ಒತ್ತಿಸಬೇಕೆಂಬುದು ಅವರ ಉದ್ದೇಶವಾಗಿತ್ತು. ಅವರು ಸ್ಪೇನ್ ವಸಾಹತುಗಳೊಂದಿಗೆ ವ್ಯಾಪಾರ ಬಲಗೊಳಿಸಲು ಯತ್ನಿಸಿದರು.

ಇಂಗ್ಲಿಷರ ಹಡ್ಸನ್ ಬೇ ಕಂಪನಿ ಮೊದಮೊದಲು ಅಷ್ಟೇನೂ ಚುರುಕಾಗಿರಲಿಲ್ಲ. ಆದರೆ ಫ್ರೆಂಚರ ಚಟುವಟಿಕೆಗಳನ್ನು ನೋಡಿದ ಮೇಲೆ ಅದಕ್ಕೂ ಹುರುಪು ಬಂತು. ರಷ್ಯನ್ ವರ್ತಕರೂ ಹದಿನೆಂಟನೆಯ ಶತಮಾನದ ವೇಳೆಗೆ ಉತ್ತರ ಅಮೆರಿಕದ ಪಶ್ಚಿಮ ಕರಾವಳಿಯಲ್ಲಿ ವ್ಯಾಪಾರದಲ್ಲಿ ತೊಡಗಿದ್ದರು.

ಬಹುತೇಕ ಐರೋಪ್ಯರಿಂದಲೇ ಕೂಡಿರುವ ಉತ್ತರ ಅಮೆರಿಕದ ಹಿರಿಯ ದೇಶಗಳ ಜೀವನ ವಿಧಾನ ಹಾಗೂ ಸಂಸ್ಕೃತಿಗಳು ಐರೋಪ್ಯರ ವಿಧಾನ ಹಾಗೂ ಸಂಸ್ಕೃತಿಗಳಿಂದಲೇ ಬಂದಿದ್ದರೂ ಈಗ ಅವು ವಿಶಿಷ್ಟರೀತಿಯಲ್ಲಿ ಬೆಳೆಯುತ್ತಿವೆ. (ಎಚ್.ಎಸ್.)

**ಉತ್ತರ ಅಮೆರಿಕದ ಭೂವಿನ್ಯಾಸ:** ಶಿಲೆಗಳ ರಚನೆ, ಸಂಯೋಜನೆ, ಅವಿರುವ ಭೂಭಾಗದ ಇತಿಹಾಸ ಮತ್ತು ಅವುಗಳ ಪ್ರಸಕ್ತಸ್ಥಿತಿ ಈ ಅಂಶಗಳನ್ನನುಸರಿಸಿ ಉತ್ತರ ಅಮೆರಿಕವನ್ನು ಐದು ವಿಭಾಗಗಳಾಗಿ ವಿಂಗಡಿಸಬಹುದು.

ಕೆನಡಿಯನ್ ಶಾಶ್ವತ ಭೂಖಂಡ: ಈ ಭಾಗದಲ್ಲಿ ಪ್ರಪಂಚದಲ್ಲೇ ಅತ್ಯಂತ ಹಳೆಯವೆನಿಸಿದ ಶಿಲೆಗಳನ್ನು ಕಾಣಬಹುದು. ಇವುಗಳಲ್ಲಿ ಬಹುಪಾಲು ಕಣ ಶಿಲೆಗಳ ಸಮುದಾಯ, ರಚನೆಯೂ ಬಹುಕ್ಲಿಷ್ಟ. ಈ ಆಧಾರದ ಮೇಲೆ ಈ ಭೂಭಾಗ ಹಲವಾರು ಬಾರಿ ತೀವ್ರ ತೆರನಾದ ಭೂ ಚಟುವಟಿಕೆಗಳಿಗೆ ಒಳಗಾಗಿತ್ತೆಂದು ಊಹಿಸಬಹುದು. ಪ್ರಸ್ತುತ ಮೇಲ್ಮೈಲಕ್ಷಣ ಭೂಚರಿತ್ರೆಯ ಆದಿಯುಗಗಳಲ್ಲಿ ಉಂಟಾದ ಪರ್ವತಜನ್ಯಶಕ್ತಿಗಳಿಂದಲೇ ಆದುದೆಂದು ಭಾವಿಸಲು ಸಾಧ್ಯವಿಲ್ಲ. ಅದು ಇತ್ತೀಚಿನ ಯುಗಗಳಲ್ಲಿ ಕಂಡುಬಂದ ಹಿಮನದಿಗಳ ಕಾರ್ಯಾಚರಣೆಯಿಂದಾದುದು. ಪ್ಲಿಸ್ಟೋಸೀನ್ ಕಾಲದಲ್ಲಿ ಉತ್ತರ ಅಮೆರಿಕದ ಇಡೀ ಉತ್ತರ ಭಾಗಗಳನ್ನೆಲ್ಲ ಆವರಿಸಿದ್ದ ಖಂಡಾಂತರ ವರ್ಗದ ಹಿಮಗಳಿಗೆ ಈ ಭಾಗವೇ ಕೇಂದ್ರವಾಗಿತ್ತು. ಇಲ್ಲಿಂದ ಹಿಮನದಿಗಳು ದಕ್ಷಿಣದತ್ತ ಚಲಿಸಿದುವು. ಹೀಗೆ ಮಂದಗತಿಯಲ್ಲಿ ಚಲಿಸುವಾಗ ಬೀಳುಬಿದ್ದ ಭೂಮಿಯ ಹೊರಮೈಯ ಶಿಲಾವಶೇಷಗಳನ್ನು ತಮ್ಮೊಡನೆ ಹೊತ್ತು ಮುಂದುವರಿದುವು. ಕ್ರಮೇಣ ಹಿಮನದಿಗಳು ಕರಗಿದಾಗ ಅವುಗಳೊಡನೆ ಸಾಗುತ್ತಿದ್ದ ಶಿಲಾಕಳಪೆಯ ಬಹುಭಾಗ ದೂರದ ಕೇಂದ್ರದ ತಗ್ಗು ಪ್ರದೇಶಗಳಲ್ಲೂ ಅಲ್ಪಸ್ವಲ್ಪ ಭಾಗ ಕೆನಡಿಯನ್ ಭೂಖಂಡದಲ್ಲೂ ಸಂಚಿತವಾಯಿತು.

ಶಾಶ್ವತ ಭೂಖಂಡದ ಬಹುಭಾಗ ಹಿಮನದಿಗಳಿಂದ ತೇಯಲ್ಪಟ್ಟು ಅಷ್ಟು ಕಡಿದಾಗಿರದ ಬೆಟ್ಟಗಳಿಂದ ಕೂಡಿದೆ. ಇವುಗಳ ಸಾಮಾನ್ಯ ಎತ್ತರ 35 ಮೀಟರುಗಳು. ಈ ಭೂಭಾಗದಲ್ಲಿ ಅನೇಕ ಕಡೆ ಹಿಮನದಿಗಳ ಕೊರೆತದಿಂದುಂಟಾದ ಸರೋವರಗಳು, ಕಮರಿಗಳು ಮತ್ತು ಜೌಗುಪ್ರದೇಶಗಳನ್ನು ನೋಡಬಹುದು. ಹಲವು ಭಾಗಗಳಲ್ಲಿ ಬಹು ಎತ್ತರವಾದ ಮತ್ತು ಅಷ್ಟೇ ಕಡಿದಾದ ಪರ್ವತ ಸಾಲುಗಳೂ ಇವೆ. ಇವು ಅಷ್ಟಾಗಿ ಹಿಮನದಿಯ ಹಾವಳಿಗೆ ಒಳಗಾಗಿಲ್ಲ. ಅಂದರೆ ಹಿಮನದಿಗಳು ಇವುಗಳಿಗಿಂತ ಕೆಳಮಟ್ಟದಲ್ಲಿದ್ದು ಇವುಗಳನ್ನು ಸಂಪೂರ್ಣವಾಗಿ ಆವರಿಸಲು ಸಾಧ್ಯವಾಗಲಿಲ್ಲ.

ಕೇಂದ್ರದ ತಗ್ಗು ಪ್ರದೇಶ: ಇದು ಕೆನಡಿಯನ್ ಶಾಶ್ವತ ಭೂಖಂಡದ ದಕ್ಷಿಣ ಮತ್ತು ಪಶ್ಚಿಮದತ್ತ ಹರಡಿದೆ. ಇಲ್ಲಿ ಕಣಶಿಲೆಗಳಿಂದ ಕೂಡಿದ ಅಡಿಯ ಶಿಲಾ ಸಮುದಾಯದ ಮೇಲೆ ಜಲಜಶಿಲಾ ಪ್ರಸ್ತರಗಳು ಕಂಡುಬರುತ್ತವೆ. ಪಶ್ಚಿಮ ಮತ್ತು ಪೂರ್ವ ವಲಯಗಳ ಪರ್ವತ ಶ್ರೇಣಿಗಳು ಮತ್ತು ಶಾಶ್ವತ ಭೂಖಂಡ ಪ್ರದೇಶಗಳ ಸವೆತದಿಂದ ಬಂದ ಶಿಲಾಛಿದ್ರಗಳ ಸಂಚಯನದಿಂದ ಉಂಟಾದುದೇ ಈ ಶಿಲಾಪ್ರಸ್ತರ ಸಮೂಹ. ಭೂಮಿಯ ಇತರ ಭಾಗಗಳನ್ನು ಮಡಿಸಿ ಸುಕ್ಕುಮಾಡಿದ ಭೂಚಟುವಟಿಕೆಗಳ ಪ್ರಭಾವಕ್ಕೆ ಈ ಪ್ರದೇಶ ಒಳಗಾಗಿಲ್ಲವೆಂದೇ ಹೇಳಬೇಕು. ಇಲ್ಲಿಯ ಪೇಲಿಯೋಜೋಯಿಕ್ ಯುಗದ ಜಲಜಶಿಲೆಗಳು ಬೃಹದಾಕಾರದ ಗುಮ್ಮಟಗಳಾಗಿ, ಕಮಾನುಗಳಾಗಿ, ಬಾಣಲೆಯಂತೆ ಕುಳಿಬಿದ್ದು ಕಮರಿಗಳಾಗಿ ಮಾರ್ಪಟ್ಟಿದ್ದರೂ ಅವುಗಳ ಮಟ್ಟಸವಾದ ವಿನ್ಯಾಸ ಎಲ್ಲೆಲ್ಲೂ ಎದ್ದು ಕಾಣುತ್ತದೆ. ತಗ್ಗುಪ್ರದೇಶದ ಪಶ್ಚಿಮ ಭಾಗದಲ್ಲಿ ಮೀಸೋಜೋಯಿಕ್ ಮತ್ತು ಟರ್ಷಿಯರಿ ಯುಗಗಳ ಜಲಜಶಿಲೆಗಳ ಸಮುದಾಯವಿದೆ. ಈ ಪ್ರಸ್ತರಶಿಲೆಗಳು ರಾಕೀ ಪರ್ವತಗಳ ಭೂಸವೆತದಿಂದ ಉಂಟಾದ ಶಿಲಾಬೀಳಿನ ಶೇಖರಣೆಯಿಂದಾದುವು. ಕ್ರಮೇಣ ಈ ಭೂಭಾಗದ ನದಿಗಳ ಕಾರ್ಯಾಚರಣೆಗೂ ಒಳಗಾದಾಗ ಕಡಿದಾದ ಕಣಿವೆಗಳೂ ಕಂದರಗಳೂ ನಿರ್ಮಿತವಾದುವು.

ಪ್ಲಿಸ್ಟೋಸೀನ್ ಹಿಮನದಿಗಳು ತಾವು ಸಾಗಿಸುತ್ತಿದ್ದ ಶಿಲಾಕಣಗಳನ್ನು ಈಗಿನ ಮಿಸ್ಸೂರಿ ನದಿಯ ಪೂರ್ವ ಭಾಗದಲ್ಲೂ ಒಹಾಯೊ ನದಿಯ ಉತ್ತರ ಭಾಗದಲ್ಲೂ ಶೇಖರಿಸಿದುವು. ಅಲ್ಲದೆ ಕೆಲವು ಕಡೆ ಹಿಮನದಿಗಳು ಹೊರಚಾಚುಗಳು ಕರಗಿ ತಾವು ತರುತ್ತಿದ್ದ ಶಿಲಾ ಬೀಳನ್ನು ಹಿಂದೆ ಬಿಟ್ಟ ಕಾರಣ ನೂರಾರು ಮೀಟರ್ ಎತ್ತರದ ಬೆಟ್ಟಗಳ ಸಾಲು ಮತ್ತು ಶಿಲಾ ಏಣಿಗಳು ಮೈವೆತ್ತುವು; ಮತ್ತೆ ಕೆಲವು ವೇಳೆ ಹಿಮನದಿಗಳು ಸಾಗಿಸುತ್ತಿದ್ದ ಶಿಲಾ ಮುರಕಲು ಚೆಲ್ಲಾಪಿಲ್ಲಿಯಾಗಿ ಹರಡಿ ಕರಗಿದ ಹಿಮಗೆಡ್ಡೆಗಳ ನೀರಿಗೆ ಅಡ್ಡಗಟ್ಟಿದಂತಾಗಿ ಸಣ್ಣ ಪುಟ್ಟ ಸರೋವರಗಳೂ ಜೌಗು ಪ್ರದೇಶಗಳೂ ಉಂಟಾದುವು.

ಈ ಭೂಪ್ರದೇಶದ ದಕ್ಷಿಣದ ಭಾಗದಲ್ಲಿನ ಜಲಜಶಿಲಾ ಸಮುದಾಯವನ್ನು ದಾಟಿ ಹೋದಲ್ಲಿ ಅಪಲೇಷಿಯನ್ ಪ್ರಸ್ಥಭೂಮಿ ಮತ್ತು ಓಜಾರ್ಕ್ ಔಷಿಟಾ ಪ್ರಸ್ಥಭೂಮಿಗಳನ್ನು ನೋಡಬಹುದು. ಇಲ್ಲಿ ಅನೇಕ ಮೀಟರ್‌ಗಳಷ್ಟು ಎತ್ತರದ ಕಡಿದಾದ ಬೆಟ್ಟಗಳೂ ಅತ್ಯಂತ ಆಳವಾದ ನದಿ ಕಣಿವೆಗಳೂ ಇವೆ.

ಅಪಲೇಷಿಯನ್ ಪ್ರಸ್ಥಭೂಮಿ: ಪೇಲಿಯೊಜೋಯಿಕ್ ಯುಗದ ಶಿಲಾಪ್ರಸ್ತರಗಳು, ತೀವ್ರಗತಿಯ ಭೂಚಟುವಟಿಕೆಗಳಿಗೊಳಗಾದ ಕಾರಣ ಹೆಚ್ಚಿನ ರೀತಿಯಲ್ಲಿ ಮಡಿಕೆಬಿದ್ದು ಮೇಲಕ್ಕೆ ಒಯ್ಯಲ್ಪಟ್ಟು ಪರ್ವತಪಂಕ್ತಿಗಳಾಗಿವೆ. ಅನೇಕ ಕಡೆ ಸ್ತರಭಂಗಗಳನ್ನೂ ಗುರುತಿಸಬಹುದು. ಪೀಡ್‌ಮಾಂಟ್ ಮತ್ತು ಬ್ಲೂರಿಜ್ ಪರ್ವತಪ್ರದೇಶಗಳ ಶಿಲಾಸಮುದಾಯ ತೀವ್ರಗತಿಯ ಪರ್ವತಜನ್ಯ ಶಕ್ತಿಗಳಿಗೆ ಸಿಕ್ಕಿ ಕಣಶಿಲೆಗಳಾಗಿ ಮಾರ್ಪಟ್ಟಿವೆ.

ಈ ಕಣಶಿಲಾ ಸಮುದಾಯದ ಪಶ್ಚಿಮಕ್ಕೆ ಬೆಟ್ಟಗಳೂ ಕಣಿವೆಗಳೂ ಹರಡಿವೆ. ಭೂಶಕ್ತಿಗಳೂ ಪೂರ್ವದ ಕಡೆಯಿಂದ ಉದ್ಭವವಾದುವೆಂದು ಇವುಗಳ ಹರವು ಸೂಚಿಸುತ್ತದೆ. ಮುಂದೆ ತಲೆದೋರಿದ ಭೂ ಉತ್ಕರ್ಷ, ಮಡಿಕೆ ಬೀಳುವಿಕೆ, ಸ್ತರಭಂಗ ಮತ್ತು ಭೂಸವೆತಗಳೂ ಈ ಶಿಲೆಗಳ ರಚನೆಯನ್ನು ಕ್ಲಿಷ್ಟಗೊಳಿಸಿವೆ. ಇದನ್ನನುಸರಿಸಿಯೇ ಈ ಭೂಭಾಗದ ಇಂದಿನ ಮೈಲ್ಮೈಲಕ್ಷಣ ರೂಪುಗೊಂಡಿದೆ. ಭೂಶಕ್ತಿಗಳು ಪಶ್ಚಿಮದತ್ತ ಸರಿದು ಕ್ರಮೇಣ ಶಕ್ತಿಹೀನಗೊಂಡು ಕಟ್ಟಕಡೆಗೆ ಹೇಳಹೆಸರಿಲ್ಲದಂತಾದುವು. ಹೀಗಾಗಿ ಪಶ್ಚಿಮ ಪ್ರದೇಶದ ಭೂಭಾಗಗಳ ಮೇಲ್ಮೈಲಕ್ಷಣ ನಿಖರವಾಗಿ ರೂಪುಗೊಂಡಿದ್ದರೂ ಶಿಲಾರಚನೆಯಲ್ಲಿ ಮೂಲಭೂತ ಬದಲಾವಣೆಗಳನ್ನು ಗುರುತಿಸಲು ಬಹು ಕಷ್ಟ. ಇವುಗಳ ಮತ್ತು ಪೂರ್ವ ಭಾಗಗಳ ಶಿಲಾಸಮುದಾಯಗಳ ರಚನೆಯಲ್ಲಿ ಸಾಮ್ಯತೆ ಕಂಡುಬಂದಿದೆ. ಇಲ್ಲಿಯೂ ಬೆಟ್ಟ, ಏಣಿ (ರಿಜ್) ಮತ್ತು ಕಣಿವೆಗಳಿವೆ. ಇವು ಸಮುದ್ರಮಟ್ಟದಿಂದ ಬಹುತೇಕ 100–500 ಮೀ ಗಳಷ್ಟು ಎತ್ತರವಾಗಿವೆ.

ತೀರ ಪ್ರದೇಶ: ಈ ಭಾಗದ ಶಿಲೆಗಳ ರಚನೆ ಬಹು ಸರಳ. ಇಡೀ ಉತ್ತರ ಅಮೆರಿಕದ ಬೇರೆಲ್ಲೂ ಇಷ್ಟು ಸರಳವಾದ ರಚನೆಯನ್ನು ಕಾಣಲಾಗುವುದಿಲ್ಲ. ಪೂರ್ವಕ್ಕೆ ಪೀಡ್‌ಮಾಂಟ್ ಕಣಶಿಲೆಗಳು. ಪಶ್ಚಿಮದತ್ತ ಕೇಂದ್ರ ತಗ್ಗುಪ್ರದೇಶ. ದಕ್ಷಿಣದ ಕಡೆ ಯುಕಟಾನ್ ಪರ್ಯಾಯದ್ವೀಪ– ಈ ಭೂಭಾಗದ ಮೇಲೆ ಅಷ್ಟು ಗಡುಸಲ್ಲದ ಮೀಸೋಜೋಯಿಕ್ ಮತ್ತು ಟರ್ಷಿಯರಿ ಜಲಜಶಿಲಾನಿಕ್ಷೇಪಗಳನ್ನು ಗುರುತಿಸಬಹುದು. ಪ್ರಸ್ತರಗಳೂ ಸಾಮಾನ್ಯವಾಗಿ ಸಮುದ್ರದತ್ತ ವಾಲಿವೆ. ಸಮುದ್ರದ ಕರೆಯುದ್ದಕ್ಕೂ ಜೌಗುಪ್ರದೇಶವಿದ್ದು ಅದು ಈಚಿನ ವರ್ಷಗಳಲ್ಲಿ ಉಂಟಾದ ಭೂಭಾಗವೆಂದು ಮನಗಾಣಬಹುದು. ಅಲ್ಲಲ್ಲಿ ಭೂ ಸವೆತದಿಂದಾಗಿ ಸಣ್ಣಪುಟ್ಟ ಗುಡ್ಡಗಳೂ ಅಷ್ಟು ಕಡಿದಾಗಿರದ ಅಗಲವಾದ ಕಣಿವೆಗಳೂ ಇವೆ.

ಪಶ್ಚಿಮ ಪರ್ವತಶ್ರೇಣಿ (ಕಾರ್ಡಿಲೆರ): ಇವು ಕೆನಡಿಯನ್ ಶಾಶ್ವತ ಭೂಖಂಡದ ಮತ್ತು ಅಪಲೇಷಿಯನ್ ಪರ್ವತಗಳಿಗಿಂತಲೂ ವಯಸ್ಸಿನಲ್ಲಿ ಕಿರಿಯವು. ಬಹು ಎತ್ತರವಾಗಿಯೂ ಕಡಿದಾಗಿಯೂ ಇದ್ದು ಇಡೀ ಉತ್ತರ ಅಮೆರಿಕದ ಮೇಲ್ಮೈ ಲಕ್ಷಣದಲ್ಲಿ ಪ್ರಮುಖ ಸ್ಥಾನವನ್ನಾಕ್ರಮಿಸಿವೆ. ಶಿಲೆಗಳ ಹರವು ಉತ್ತರ–ದಕ್ಷಿಣಾಭಿಮುಖವಾಗಿದ್ದು ಅದನ್ನನುಸರಿಸಿ ಕಣಿವೆಗಳೂ ಕಂದರಗಳೂ ಮೈದೋರಿವೆ. ಈ ಶ್ರೇಣಿಯ ಉತ್ತರದ ಮತ್ತು ದಕ್ಷಿಣದ ಅತ್ಯುನ್ನತ ಶಿಖರಗಳು ಹಿಮನದಿಗಳಿಂದ ತೇಯಲ್ಪಟ್ಟು ಬಹು ಮೊನಚಾಗಿವೆ. ಈ ಕಾರ್ಯಾಚರಣೆಯಲ್ಲಿ ಬೀಳುಬಿದ್ದ ಶಿಲಾವಶೇಷಗಳು ಕಣಿವೆಗಳಲ್ಲಿ ಶೇಖರವಾಗಿವೆ. ಹಲವು ಶಿಖರಗಳ ತುದಿಯಲ್ಲಿ ಲುಪ್ತ ಮತ್ತು ಜಾಗೃತ ಜ್ವಾಲಾಮುಖಿಗಳಿವೆ. ಇವುಗಳಿಂದ ಹೊರಹೊಮ್ಮಿದ ಲಾವಾ ಪ್ರವಾಹಗಳು ಪ್ರಸ್ತರಗಳೋಪಾದಿಯಲ್ಲಿ ಶೇಖರಗೊಂಡಿವೆ. ಅಲ್ಲದೆ ಇವುಗಳೊಡನಿರುವ ಜಲಜ ಶಿಲೆಗಳು ಮಡಿಕೆ ಬೀಳದೆ, ತಮ್ಮ ಪ್ರಸ್ತರೀ ಸ್ವರೂಪವನ್ನು ಕಳೆದುಕೊಳ್ಳದೆ, ಭೂ ಉತ್ಕರ್ಷಗಳಿಗೊಳಗಾಗಿ ಸಹಸ್ರಾರು ಅಡಿಗಳ ಎತ್ತರಕ್ಕೆ ಒಯ್ಯಲ್ಪಟ್ಟು ವಿಶಾಲವಾದ ಪ್ರಸ್ಥಭೂಮಿಗಳಾಗಿವೆ. (ಬಿ.ವಿ.ಜಿ.)

**ಉತ್ತರ ಅಮೆರಿಕದ ಮುಕ್ತ ವ್ಯಾಪಾರ ಒಕ್ಕೂಟ:** ಉತ್ತರ ಅಮೆರಿಕದ ಮುಕ್ತ ವ್ಯಾಪಾರ ಒಕ್ಕೂಟದಲ್ಲಿ ಕೆನಡ, ಅಮೆರಿಕ ಮತ್ತು ಮೆಕ್ಸಿಕೋ ಸೇರಿವೆ. ಎನ್.ಎ.ಎಫ್.ಟಿ.ಎ. 1994 ಜನವರಿ 1ರಂದು ಜಾರಿಗೆ ಬಂದಿದೆ. ಅಮೆರಿಕ ಪ್ರಧಾನ ವ್ಯಾಪಾರ ಕೇಂದ್ರ. ಅಮೆರಿಕ ಸಂಯುಕ್ತ ಸಂಸ್ಥಾನ ತನ್ನಿಂದ ಮೆಕ್ಸಿಕೊ, ಕೆನಡಕ್ಕೆ ಹೋಗುವ ವಸ್ತುಗಳ ಸುಂಕವನ್ನು ಹಂತ ಹಂತವಾಗಿ 14 ವರ್ಷಗಳವರೆಗೆ ಕಡಿಮೆ ಮಾಡಿದೆಯಲ್ಲದೆ. ಕೆಲವು

ನಿರ್ಬಂಧಗಳನ್ನು ತೆಗೆದು ಹಾಕಿದೆ. ಈ ಒಕ್ಕೂಟದ ಒಪ್ಪಂದದ ಮೂಲಕ ಅಮೆರಿಕದ ಈ ಮೂರು ದೇಶಗಳ ನಡುವೆ ಮುಕ್ತ ವ್ಯಾಪಾರ ವಹಿವಾಟುಗಳಿಗೆ ಅನುಕೂಲ ಕಲ್ಪಿಸಲಾಯಿತು. ಬಂಡವಾಳ ಹೂಡಿಕೆ, ಸೇವಾ ನಿಬಂಧನೆಗಳನ್ನು ಸರಳೀಕರಿಸಿ ತನ್ಮೂಲಕ ಈ ಒಕ್ಕೂಟ ಪ್ರಪಂಚದ ಪ್ರಮುಖ ವಾಣಿಜ್ಯ ಒಕ್ಕೂಟಗಳಲ್ಲೊಂದಾಯಿತು. (ಎಂ.ಎಚ್.)

**ಉತ್ತರ ಆಸ್ಟ್ರೇಲಿಯ:** ಆಸ್ಟ್ರೇಲಿಯದ ಆರು ರಾಜಕೀಯ ವಿಭಾಗಗಳಲ್ಲಿ ಒಂದಾದ ಉತ್ತರ ಪ್ರದೇಶ (ನಾರ್ದರ್ನ್ ಟೆರಿಟೊರಿ). ಆಸ್ಟ್ರೇಲಿಯ ಸಂಯುಕ್ತ ಸರ್ಕಾರದ ಆಳ್ವಿಕೆಗೆ ಒಳಪಟ್ಟ ಎರಡು ಪ್ರದೇಶಗಳಲ್ಲಿ ಒಂದು. ಇನ್ನೊಂದು ಆಸ್ಟ್ರೇಲಿಯದ ರಾಜಧಾನಿಯ ಪ್ರದೇಶ. ಆಸ್ಟ್ರೇಲಿಯದ ಉತ್ತರ ಭಾಗದ ಮಧ್ಯದಲ್ಲಿರುವ ಈ ಭಾಗ ದಕ್ಷಿಣ ಅಕ್ಷಾಂಶ $26^0$ ಯಿಂದ ಆಸ್ಟ್ರೇಲಿಯದ ಉತ್ತರ ತೀರದವರೆಗೂ ಪೂ. ರೇ. $129^0$–$138^0$ಯ ವರೆಗೂ ಹಬ್ಬಿದೆ. ದಕ್ಷಿಣ ಪಾರ್ಶ್ವದಲ್ಲಿ ಮಕರಸಂಕ್ರಾಂತಿ ವೃತ್ತ ಹಾದು ಹೋಗುತ್ತದೆಯಾದ್ದರಿಂದ ಇದು ಬಹುಮಟ್ಟಿಗೆ ಉಷ್ಣವಲಯದಲ್ಲೇ ನೆಲಸಿರುವ ಪ್ರದೇಶ.

ವಿಸ್ತೀರ್ಣ: 2,04,834 ಚ.ಕಿಮೀ ಟಿಮಾರ್ ಸಮುದ್ರದ ಮೇಲಿರುವ ಡಾರ್ವಿನ್ ಮುಖ್ಯ ಬಂದರು. ರಾಜಧಾನಿ. ದಕ್ಷಿಣ ಭಾಗದಲ್ಲಿನ ಆಲಿಸ್ ಸ್ಪ್ರಿಂಗ್ಸ್ ಮುಖ್ಯಪಟ್ಟಣ.

ಮೇಲ್ಮೈಲಕ್ಷಣ : ಈ ಪ್ರದೇಶದ ಬಹುಭಾಗ ಬರಡು. ವರ್ಣರಹಿತ, ಸು. 1600 ಕಿಮೀ ಉದ್ದವಿರುವ ಕರಾವಳಿ ಅಂಕು ಡೊಂಕಾಗಿರುವುದಾದರೂ ಅದು ತಗ್ಗಾಗಿಯೂ ಚಪ್ಪಟೆಯಾಗಿಯೂ ಇದೆ. ಸೆರಗಿನಂತೆ ಉದ್ದಕ್ಕೂ ಗುಲ್ಮ ವೃಕ್ಷಗಳು ದಟ್ಟೈಸಿವೆ. ಮರಳು ತುಂಬಿದ ಕಡಲುದಂಡೆಗಳಿಗೂ ಮಣ್ಣಿನ ಜಗತಿಗಳಂತಿರುವ ನದೀ ಮುಖಗಳಿಗೂ ನಡುನಡುವೆ ವಿರಳವಾಗಿ ಮರಳುಗಲ್ಲುಗಳಿಂದೊಡಗೂಡಿದ ಸುಣ್ಣ ಜೇಡಿ ಹಾಗೂ ಕಬ್ಬಿಣದ ಗಟ್ಟಿ ಅದಿರುಗಳಿರುವ ಭೂಶಿರಗಳಿವೆ. ವಿಕ್ಟೋರಿಯ, ಡಾಲಿ, ರೋಪರ್, ಮಿಕಾರ್ಥರ್ ಮುಖ್ಯ ನದಿಗಳು. ಇವೆಲ್ಲ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹುಟ್ಟಿ ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ಹರಿಯುತ್ತವೆ. ಮಳೆಗಾಲದಲ್ಲಿ ಇವುಗಳಲ್ಲಿ ತುಂಬು ಪ್ರವಾಹ; ಒಣಋತುವಿನಲ್ಲಿ ಇವು ಸಣ್ಣ ಸಣ್ಣ ಮಡುಗಳ ಸಾಲುಗಳಂತಾಗುತ್ತವೆ. ಇವಕ್ಕೆ ನೀರು ಒದಗಿಸುವ ಒಂದು ಮುಖ್ಯ ಪ್ರದೇಶವೆಂದರೆ ಬಾರ್ಕ್ಲಿ ಪ್ರಸ್ಥಭೂಮಿ. ಇದು ಪಶ್ಚಿಮ ಆಸ್ಟ್ರೇಲಿಯದ ಪ್ರಸ್ಥಭೂಮಿಯ ವಿಸ್ತರಣೆ. ಸಮುದ್ರದಂಡೆಗೆ ಸಮಾನಂತರದಲ್ಲಿ ವಾಯವ್ಯ–ಆಗ್ನೇಯವಾಗಿ ಹಬ್ಬಿದೆ. ಇಲ್ಲೂ ವಿಕ್ಟೋರಿಯ ನದೀ ಜಿಲ್ಲೆಯಲ್ಲೂ ಸೊಂಪಾದ ಹುಲ್ಲುಗಾವಲುಗಳಿವೆ. ಈ ಪ್ರಸ್ಥಭೂಮಿಯ, ನೈಋತ್ಯದಲ್ಲಿ ನೆಲ ಇಳಿಜಾರು; ಇದಕ್ಕೆ ದಕ್ಷಿಣದಲ್ಲಿರುವುದೇ ವುಡ್ಸ್ ಸರೋವರ. ದಕ್ಷಿಣದಲ್ಲಿ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಮ್ಯಾಕ್ ಡಾನೆಲ್ ಪರ್ವತಶ್ರೇಣಿಯಲ್ಲಿ 1515 ಮೀ. ಎತ್ತರದ ಶಿಖರಗಳುಂಟು. ಇದರ ದಕ್ಷಿಣಕ್ಕೆ ಅಮೆಡ್ಯೂಸ್ ಸರೋವರ. ಈಶಾನ್ಯದಲ್ಲಿ ಹಾರ್ಟ್ಸ್ ಪರ್ವತಶ್ರೇಣಿ. ದಕ್ಷಿಣದ ಪಶ್ಚಿಮಾಗ್ರದಲ್ಲಿ ಪೀಟರ್‌ಮನ್ ಪರ್ವತಶ್ರೇಣಿಯೂ ಪೂರ್ವದಲ್ಲಿ ಸಿಂಪ್ಸನ್ ಮರುಭೂಮಿಯೂ ಇವೆ.

ವಾಯುಗುಣ: ತೀರಪ್ರದೇಶ ಭಾರತದ ದಖನ್ ಪ್ರಸ್ಥಭೂಮಿಯಂತೆ ಮಾನ್‌ಸೂನ್ ಮಾದರಿಯ ವಾಯುಗುಣ ಹೊಂದಿದೆ. ಇಲ್ಲಿ ಮಾನ್‌ಸೂನ್ ಮಾರುತಗಳು ವಾಯವ್ಯ ದಿಕ್ಕಿನಿಂದ ಬೀಸುತ್ತವೆ. ನವೆಂಬರಿನಿಂದ ಏಪ್ರಿಲ್ ತಿಂಗಳವರೆಗೆ ಬೇಸಗೆ. ಆಗ ತೀರ ಪ್ರದೇಶದಲ್ಲಿ ಹೆಚ್ಚು ಮಳೆ. ಜನವರಿ ತಿಂಗಳು ಹೆಚ್ಚು ಶಾಖ. $32^0$ ಸೆ. ಉಷ್ಣತೆ. ಮೇ–ಅಕ್ಟೋಬರ್ ಚಳಿಗಾಲ, $15^0$ ಸೆ. ಉಷ್ಣತೆ.

ಈ ಪ್ರದೇಶ ಉಷ್ಣವಲಯದ ವಾಯುಗುಣದಿಂದ ಕೂಡಿರುವುದರಿಂದ ಇಲ್ಲಿ ಮಾನ್‌ಸೂನ್ ಕಾಡುಗಳೂ ಗುಲ್ಮವೃಕ್ಷದ ಕಾಡುಗಳೂ ಕಂಡುಬರುತ್ತವೆ. ಉತ್ತರದ ತೀರಪ್ರದೇಶದಲ್ಲಿ ಸವನ್ನ ಮಾದರಿಯ ಹುಲ್ಲುಗಾವಲಿನಿಂದ ಕೂಡಿದ ಕಾಡುಗಳಿವೆ. ನೀಲಗಿರಿಮರಗಳು ಧಾರಾಳ. ಆಸ್ಟ್ರೇಲಿಯದ ಇತರ ಕಡೆಗಳಲ್ಲಿರುವಂತೆ ಇಲ್ಲೂ ಕಾಂಗರೂ, ಮೊಸಳೆ, ಹಾವು, ಮೊಲ, ಬಗೆಬಗೆಯ ಪಕ್ಷಿಗಳು, ಕಪ್ಪೆ, ಮೀನು ಇವೆ. ಹಿಂದೆ ಟಿಮಾರ್‌ನಿಂದ ಇಲ್ಲಿಗೆ ತಂದ ಕಾಡೆಮ್ಮೆಗಳನ್ನು ಚರ್ಮಕ್ಕಾಗಿ ಬೇಟೆಯಾಡಲಾಗಿದೆ. ಮಳೆಗಾಲದಲ್ಲಿ ಸೊಳ್ಳೆ ವಿಪರೀತ. ಗೆದ್ದಲಿನ ಹಾವಳಿಯೂ ಬಹಳ.

ಮಳೆ ಕಡಿಮೆಯಾಗಿದ್ದು ಮಣ್ಣೂ ಫಲವತ್ತಾಗಿಲ್ಲದಿರುವುದರಿಂದ ಹೆಚ್ಚು ವ್ಯವಸಾಯ ಸಾಧ್ಯವಿಲ್ಲ. ಸವನ್ನ ಹುಲ್ಲುಗಾವಲಿನ ಪ್ರದೇಶಗಳಲ್ಲಿ ದನ ಕುರಿಗಳನ್ನು ಸಾಕುವುದು ಜನರ ಮುಖ್ಯ ಕಸುಬು. ಗಣಿಗಾರಿಕೆಯೂ ತೀರಪ್ರದೇಶದಲ್ಲಿ ಮೀನುಗಾರಿಕೆಯೂ ಈ ಪ್ರದೇಶದ ಜನರ ಇತರ ಕಸುಬುಗಳು.

ಖನಿಜಸಂಪತ್ತು, ಕೈಗಾರಿಕೆ: ಡಾರ್ವಿನ್ನಿಗೆ 80 ಕಿಮೀ ದಕ್ಷಿಣಕ್ಕಿರುವ ರಂಜಂಗಲ್‌ನಲ್ಲಿ 1949ರಲ್ಲಿ ಯುರೇನಿಯಂ ಪತ್ತೆಯಾಗಿ 1954ರಲ್ಲಿ ಇದರ ಪರಿಷ್ಕರಣ ಕೈಗಾರಿಕೆ ಆರಂಭವಾದಾರಭ್ಯ ಇಲ್ಲಿ ಗಣಿ ಉದ್ಯಮ ಬೆಳೆದಿದೆ. ಆದರೆ ಇದರ ಪ್ರಮಾಣ ಹಾಗೂ ಮೌಲ್ಯ ಇಷ್ಟೆಂಬುದು ಕಾಯ್ದಿಟ್ಟ ರಹಸ್ಯ. ಉಳಿದ ಖನಿಜಗಳ ಮೌಲ್ಯದಲ್ಲಿ ಅರ್ಧಪಾಲು ತಾಮ್ರದ್ದು; ಮೂರನೆಯ ಒಂದು ಭಾಗ ಚಿನ್ನ. ಇವೆರಡನ್ನೂ ಟೆನ್ನಾಂಟ್ ಕ್ರೀಕ್ ಎಂಬಲ್ಲಿ ತೆಗೆಯಲಾಗುತ್ತಿದೆ. ಹಾಟ್ಸ್ ಪರ್ವತ ಶ್ರೇಣಿಯಲ್ಲಿ ಮ್ಯಾಂಗನೀಸ್ ಮತ್ತು ಅಭ್ರಕ ದೊರಕುತ್ತವೆ. ತವರ, ಬೆಳ್ಳಿ ಇಲ್ಲಿ ಸಿಗುವ ಇತರ ಎರಡು ಲೋಹಗಳು.

ವ್ಯಾಪಾರ : ಈ ಪ್ರದೇಶದ ಉತ್ಪನ್ನಗಳು ಇತರ ಪ್ರದೇಶಗಳಿಗೆ ಸಾಗುತ್ತದೆ. ಇಲ್ಲಿಯವರು ತಮಗೆ ಬೇಕಾದ ಸಿದ್ಧವಸ್ತುಗಳನ್ನೂ ಆಹಾರವನ್ನೂ ಆ ಭಾಗಗಳಿಂದ ತರಿಸಿಕೊಳ್ಳುತ್ತಾರೆ. ಇಲ್ಲಿ ಸರ್ಕಾರದ ವರಮಾನಕ್ಕಿಂತ ವೆಚ್ಚ ಆರು ಪಾಲು ಹೆಚ್ಚು.

ಡಾರ್ವಿನ್ ಪಟ್ಟಣದಿಂದ ಬಿರ್‌ಡುಂವರೆಗೆ ಮಾತ್ರ ಸಂಪರ್ಕವುಂಟು. ಉತ್ತರ ದಕ್ಷಿಣವಾಗಿ ಹೆದ್ದಾರಿಯಿದೆ. ದಕ್ಷಿಣದ ಆಲಿಸ್ ಸ್ಪ್ರಿಂಗ್ಸ್‌ನಿಂದ ದಕ್ಷಿಣ ಆಸ್ಟ್ರೇಲಿಯಕ್ಕೆ ಇನ್ನೊಂದು ರೈಲುಮಾರ್ಗವುಂಟು. ಡಾರ್ವಿನ್ ಬಂದರಿನಿಂದ ಹಡಗುಗಳು ಆಸ್ಟ್ರೇಲಿಯದ ಇತರ ಭಾಗಗಳೊಂದಿಗೆ ಸಂಪರ್ಕ ಕಲ್ಪಿಸಿವೆ. ವಿದೇಶೀ ಹಡಗು ಸಂಚಾರವೂ ಉಂಟು.

1862ರ ವರ್ಷ ಈ ಪ್ರದೇಶದ ಆರ್ಥಿಕಾಭಿವೃದ್ಧಿಯಲ್ಲಿ ಒಂದು ಮೈಲಿಗಲ್ಲು. ಆಗ ಮೆಕ್‌ಡೂವಲ್ ದಕ್ಷಿಣ ಆಸ್ಟ್ರೇಲಿಯದಿಂದ ಅಡಿಲೇಡ್ ನದೀಮುಖದವರೆಗೆ ಪ್ರಯಾಣ ಮಾಡಿದ. ದಕ್ಷಿಣೋತ್ತರವಾಗಿ ಆಸ್ಟ್ರೇಲಿಯವನ್ನು ದಾಟಿದವರಲ್ಲಿ ಇವನೇ ಮೊದಲಿಗ. ಈ ಕಾರಣದಿಂದ ಉತ್ತರ ಆಸ್ಟ್ರೇಲಿಯ ತನಗೆ ಸೇರಿದ್ದೆಂದು ದಕ್ಷಿಣ ಆಸ್ಟ್ರೇಲಿಯ ವಾದ ಹೂಡಿತು. ದಕ್ಷಿಣ ಆಸ್ಟ್ರೇಲಿಯವೇ ಈ ಭಾಗದ ಆಡಳಿತ ನಡೆಸತಕ್ಕದ್ದೆಂದು ಇಂಗ್ಲೆಂಡಿನ ವಸಾಹತು ಕಾರ್ಯದರ್ಶಿ ಆಜ್ಞಾಪಿಸಿದ. ಈ ಪ್ರದೇಶದ ಆಡಳಿತ ಸಂಪರ್ಕವನ್ನು ಸಮುದ್ರದ ಮೂಲಕವೇ ಇಟ್ಟುಕೊಳ್ಳಬೇಕಾಗಿತ್ತು. ಮೊದಲು ಅಡಿಲೇಡ್ ನದಿಯ ಬಳಿಯ ಪ್ರದೇಶದಿಂದಲೂ ಅನಂತರ ಡಾರ್ವಿನ್ನಿನಿಂದಲೂ ಆಡಳಿತ ನಡೆಸಲಾಗುತ್ತಿತ್ತು. ಅಡಿಲೇಡಿನಿಂದ ಡಾರ್ವಿನ್ನಿಗೆ 1872ರಲ್ಲಿ ತಂತಿವ್ಯವಸ್ಥೆ ಏರ್ಪಟ್ಟಿತು. ಕೇವಲ ಎರಡೇ ವರ್ಷಗಳಲ್ಲಿ ನಿರ್ಮಿಸಲಾದ ಸು. 3200 ಕಿಮೀ ದೂರದ ಈ ವ್ಯವಸ್ಥೆ ಒಂದು ದೊಡ್ಡ ಸಾಧನೆ. 1940ರ ವರೆಗೂ ಈ ಪ್ರದೇಶದಲ್ಲಿದ್ದ ತಂತಿವ್ಯವಸ್ಥೆ ಇದೊಂದೇ.

ಕಬ್ಬು, ರಬ್ಬರ್, ಕಾಫಿ ಮುಂತಾದ ಆರ್ಥಿಕ ಬೆಳೆ ಬೆಳೆಯಲು ಪ್ರಯತ್ನಗಳು ನಡೆದುವು. ಆದರೆ ಪ್ರತಿಕೂಲ ವಾಯುಗುಣ, ದೂರ ಹಾಗೂ ಪ್ರತಿಕೂಲವಾದ ಜಮೀನು ಹಿಡುವಳಿ ಪದ್ಧತಿ ಇವುಗಳಿಂದಾಗಿ ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಈ ತೋಟಗಳನ್ನು ಬೆಳೆಸಲು ಲೋಕೋಪಯೋಗಿ ಕಾಮಗಾರಿಗಾಗಿಯೂ ಚೀನಿಯರನ್ನು ಕರೆಸಲಾಗಿತ್ತು. ಅವರು ಚಿನ್ನದ ಆಸೆಗೆ ಬಲಿ ಬಿದ್ದು ಆ ಲೋಹದ ಅನ್ವೇಷಣೆಯಲ್ಲಿ ತೊಡಗಿ ಭಗ್ನಮನೋರಥರಾದರು. ಡಾರ್ವಿನ್ನಿನಿಂದ ದಕ್ಷಿಣಕ್ಕೆ ಪೈನ್‌ಕ್ರೀಕ್‌ವರೆಗೆ ಸು. 200 ಕಿಮೀ ಹಾಗೂ ದಕ್ಷಿಣ ಆಸ್ಟ್ರೇಲಿಯದ ಪೋರ್ಟ್ ಆಗಸ್ಟದಿಂದ ಆಲಿಸ್ ಸ್ಪ್ರಿಂಗ್ಸ್‌ಗೂ ರೈಲುಮಾರ್ಗಗಳು ನಿರ್ಮಾಣವಾದುವು.

1911ರಲ್ಲಿ ಆಸ್ಟ್ರೇಲಿಯ ಸರ್ಕಾರ ಈ ಪ್ರದೇಶದ ಆಡಳಿತವನ್ನು ದಕ್ಷಿಣ ಆಸ್ಟ್ರೇಲಿಯದಿಂದ ತೆಗೆದುಕೊಂಡಿತು. ಉತ್ತರ ಸೀಮೆಯ ನಾನಾ ಸಮಸ್ಯೆಗಳ ಬಗ್ಗೆ ಆಯೋಗಗಳು ವರದಿ ಸಲ್ಲಿಸಿದುವು. ಇದರ ಆಡಳಿತದಲ್ಲಿ ನಾನಾ ಸುಧಾರಣೆಗಳಾದುವು. 20ನೆಯ ಶತಮಾನದ ಎರಡನೆಯ ದಶಕದಲ್ಲಿ ಇದನ್ನು ಮಧ್ಯ ಆಸ್ಟ್ರೇಲಿಯ ಮತ್ತು ಉತ್ತರ ಆಸ್ಟ್ರೇಲಿಯ ಎಂದು ಎರಡು ಭಾಗ ಮಾಡಲಾಯಿತು. ಆದರೆ 1931ರಲ್ಲಿ ಇವನ್ನು ಮತ್ತೆ ಒಂದುಗೂಡಿಸಲಾಯಿತು. ಅಂತೂ ಈ ಪ್ರದೇಶ ಸಮಸ್ಯೆಗಳಿಂದ ತುಂಬಿದೆ. ಪ್ರಗತಿ ನಿಧಾನ. ಡಾರ್ವಿನ್ನಿನಲ್ಲಿ ಕಾರ್ಮಿಕ ತೊಂದರೆಗಳು ಹೆಚ್ಚು.

20ನೆಯ ಶತಮಾನದ ಮೂರನೆಯ ದಶಕದಲ್ಲಿ ವಿಮಾನ ಸೌಲಭ್ಯ ಬೆಳೆದಾಗ ಡಾರ್ವಿನ್ ಹೆಚ್ಚು ಪ್ರಾಮುಖ್ಯಕ್ಕೆ ಬಂತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನೀಯರು ಇದರ ಮೇಲೆ ಕಣ್ಣುಹಾಕಿದರು. 1942ರಲ್ಲಿ ಡಾರ್ವಿನ್ನು ಜಪಾನಿಗಳ ಬಾಂಬಿಗೆ ಗುರಿಯಾಗಲಾಗಿ ಉತ್ತರ ಆಸ್ಟ್ರೇಲಿಯದಲ್ಲೇ ಸೈನಿಕ ನೆಲೆಗಳನ್ನು ಸ್ಥಾಪಿಸಲಾಯಿತು. ಆಸ್ಟ್ರೇಲಿಯ ಸರ್ಕಾರಕ್ಕೆ ಈ ಪ್ರದೇಶದಲ್ಲಿ ಆಸಕ್ತಿ ಹೆಚ್ಚಿತು. ಯುದ್ಧಾನಂತರ ಇಲ್ಲಿ ಗಣಿಗಾರಿಕೆಯನ್ನು ಬೆಳೆಸಲಾಗುತ್ತಿದೆ. ಮೂಲನಿವಾಸಿಗಳ ಹಿತರಕ್ಷಣೆಯ ಕಾರ್ಯ ಸಾಗಿದೆ. 1962ರಲ್ಲಿ ಅವರಿಗೆ ಮತದಾನದ ಹಕ್ಕು ಲಭಿಸಿತ್ತು. ಅವರಿಗಾಗಿ ಅನೇಕ ಶಾಲೆಗಳನ್ನು ತೆರೆಯಲಾಯಿತು. (ಪಿ.ಎಚ್.)

**ಉತ್ತರ ಕನ್ನಡ ಜಿಲ್ಲೆ:** ಕರ್ನಾಟಕ ರಾಜ್ಯದ ವಾಯವ್ಯ ಭಾಗದಲ್ಲಿರುವ ಜಿಲ್ಲೆ. ಉತ್ತರದಲ್ಲಿ ಗೋವ, ಬೆಳಗಾವಿ ಜಿಲ್ಲೆ, ಪೂರ್ವದಲ್ಲಿ ಧಾರವಾಡ, ಶಿವಮೊಗ್ಗ ಜಿಲ್ಲೆಗಳು, ದಕ್ಷಿಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ. ಉತ್ತರ ಅಕ್ಷಾಂಶ $13^0 55'$-$15^0 31'$ ಮತ್ತು ಪೂರ್ವರೇಖಾಂಶ $74^0.9'$–$75^0.10'$ ಇವುಗಳ ನಡುವೆ ಹಬ್ಬಿದೆ. ವಿಸ್ತೀರ್ಣ 10,245 ಚ.ಕಿಮೀ.

ಮೇಲ್ಮೈಲಕ್ಷಣ: ಭೌಗೋಳಿಕವಾಗಿ ಈ ಜಿಲ್ಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಕಡಲ ಕರೆಯಿಂದ 16 ಕಿಮೀ ಅಗಲ, 130 ಕಿಮೀ ಉದ್ದ ಇರುವ ಮೈದಾನ, ಕರಾವಳಿ. ಇದರ ಪೂರ್ವ ಮಗ್ಗುಲಿಗೆ ಉದ್ದಕ್ಕೂ ಗೋಡೆಯಂತೆ ದಕ್ಷಿಣೋತ್ತರವಾಗಿ 160 ಕಿಮೀ ದೂರ ಹಬ್ಬಿ ನಿಂತಿರುವ ಸಹ್ಯಾದ್ರಿ ಶ್ರೇಣಿ. ಸಮುದ್ರದ ಕಡೆಗೆ ಕಡಿದಾಗಿ ಇಳುಕಲಾಗಿರುವ ಪರ್ವತ ಸಾಲಿನ ಜಾರು ಮೈಮೇಲೆ ಪಡುಮೊಗನಾಗಿ

ಹರಿಯುವ ನದಿಗಳ ಪೈಕಿ ಕಾಳಿ, ಗಂಗಾವತಿ, ಅಘನಾಶಿನಿ, ಶರಾವತಿಗಳು ಮುಖ್ಯ. ಕಡಲ ತಡಿಯಿಂದ ಈ ನದೀಮುಖಗಳ ಮೂಲಕ 50 ಟನ್ ಭಾರದ ನಾವೆಗಳು ಸ್ವಲ್ಪ ದೂರದವರೆಗೂ ಹೋಗಿ ಬರುತ್ತವೆ (ಕಾಳೀನದಿಯ ಮೇಲೆ 29 ಕಿಮೀ ಗಂಗಾವತಿಯ ಮೇಲೆ 22 ಕಿಮೀ, ಅಘನಾಶಿನಿ ಶರಾವತಿ 29 ಕಿಮೀ). ಉತ್ತರ ಕನ್ನಡ ಜಿಲ್ಲೆಯ ಗಡಿಗೆರೆಯಿಂದಾಚೆಗೆ, ಶಿವಮೊಗ್ಗೆಯ ನೆಲದಲ್ಲಿ 250 ಮೀ ಎತ್ತರದಿಂದ ಶರಾವತಿ ಧುಮ್ಮಿಕ್ಕಿ ಪ್ರಪಂಚ ಪ್ರಸಿದ್ಧ ಜೋಗ್ ಜಲಪಾತ ನಿರ್ಮಿಸಿದೆ. ಮುಂದೆ ಈ ನದಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಹಿಸುತ್ತದೆ. ಶಿರಸಿಗೆ ನೈಋತ್ಯದಲ್ಲಿ 29 ಕಿಮೀ ದೂರದಲ್ಲಿ ಅಘನಾಶಿನಿ ನದಿಯಿಂದಾದ ಉಂಚಳ್ಳಿ ಜಲಪಾತ, ಯಲ್ಲಾಪುರದ ನೈಋತ್ಯಕ್ಕೆ 19 ಕಿಮೀ ದೂರದಲ್ಲಿ ಗಂಗಾವಳಿ ನದಿಯ ಮಾಗೋಡು ಜಲಪಾತ, ಅಲ್ಲಿಂದ ಉತ್ತರಕ್ಕೆ 16 ಕಿಮೀ ದೂರದಲ್ಲಿ ಕಾಳೀನದಿಯ ಲಾಲಗುಳಿ ಜಲಪಾತ ಇವೆ. ಇವುಗಳ ಜೊತೆಗೆ ಗಣೇಶ (ಶಿವಗಂಗಾ), ಕೆಪ್ಪಜೋಗ ಮುಂತಾದ ಚಿಕ್ಕ ತಡಸಲುಗಳು ಅನೇಕ. ಆದ್ದರಿಂದ ಇದು ಜಲಪಾತಗಳ ಜಿಲ್ಲೆಯೆನ್ನಲಡ್ಡಿಯಿಲ್ಲ. ಪೂರ್ವಕ್ಕೆ ಹರಿಯುವ ನದಿಗಳೆಂದರೆ ಸಾಗರದ ಬಳಿ ಹುಟ್ಟಿ ತುಂಗಭದ್ರೆಗೆ ಸೇರುವ ವರದಾ ನದಿ.




ಭಟ್ಕಳದಿಂದ ಕಾರವಾರದ ಉತ್ತರಸೀಮೆಯವರೆಗಿನ ಕರಾವಳಿ ಮರಳು ಭೂಮಿ, ಹಗುರವಾದ ಈ ಮಣ್ಣಿನಲ್ಲಿ ಸಸ್ಯಪೋಷಕ ದ್ರವ್ಯ ಕಡಿಮೆ. ಆದರೆ ಅಲ್ಲಲ್ಲಿ ಇದರ ಮೇಲೆ ಉಪ್ಪು ನೀರು ಬೆರೆತ ಉಸುಕಿನ ನೆಲೆವಿದೆ. ಇಂಥ ಫಲವತ್ತಾದ ನೆಲಕ್ಕೆ ಗಜನಿ ಭೂಮಿ ಎಂದು ಹೆಸರು. ನದಿಗಳ ದಡದಲ್ಲೂ ಮುಖದಲ್ಲೂ ಶೇಖರವಾದ ಮೆಕ್ಕಲು ಮಣ್ಣು ಫಲವತ್ತಾದದ್ದು. ಘಟ್ಟದ ಮೇಲಿರುವ ಫಲವತ್ತಾದ ಕೆಂಪುಮಣ್ಣಿನ ಹೆಸರು ಕಾಗದಾಳೆ. ಊರು, ಕಾನುಗಳ ನಡುವೆ ಬೆಳೆದ ಸೊಪ್ಪಿನ ಗಿಡಗಳಿಂದ ಅಡಕೆ ತೋಟಗಳಿಗೆ ಸೊಪ್ಪಿನ ಗೊಬ್ಬರ ಒದಗಿಸುತ್ತದೆ. ಹಳ್ಳಕೊಳ್ಳಗಳು ಮತ್ತು ಗುಡ್ಡ ಕಣಿವೆಗಳಲ್ಲಿ ಇಂಥ ಗಿಡ ಅಪಾರ ಬೆಳೆಯುತ್ತದೆ. ಅಡಕೆ, ಮೆಣಸಿನ ಕಾಳು, ಏಲಕ್ಕಿ ಬಾಳೆಗಳ ತೋಟಗಳಿರುವುದು ದೊಡ್ಡ ಕಣಿವೆಗಳಲ್ಲಿ.

ವಾಯುಗುಣ: ಕರಾವಳಿಯ ಅಂಚಿನ ಹವಾಮಾನ ಸಮಧಾತು, ಆರೋಗ್ಯಕರ. ಏರುತಗ್ಗುಗಳಿಂದ ತುಂಬಿರುವುದರಿಂದ ಎಷ್ಟೋ ಊರುಗಳಿಗೆ ಸಮುದ್ರದ ಗಾಳಿ ನೇರವಾಗಿ ಬೀಸುವುದಿಲ್ಲ. ವರ್ಷದಲ್ಲಿ ಹೆಚ್ಚು ಕಾಲ ಬೆವರು ಸುರಿಸುವ ಸೆಕೆ; ಗಾಳಿಯಲ್ಲಿ ಹೆಚ್ಚು ಆರ್ದ್ರತೆ. ಬೇಸಗೆಯ ಪರಮಾವಧಿ ಉಷ್ಣತೆ $33^0$ ಸೆ. ಚಳಿಗಾಲದ ಕನಿಷ್ಠ ಉಷ್ಣತೆ ಸುಮಾರು $14^0$ ಸೆ. ಘಟ್ಟದ ಮೇಲೆ ಸೆಕೆಗಾಲ ಸುಖಕರ; ಮಳೆಗಾಲದಲ್ಲಿ ಮಾತ್ರ ಗಾಳಿಯಲ್ಲಿ ಶೈತ್ಯಾಂಶ ಹೆಚ್ಚು.

ಜೂನ್‌ನಿಂದ ಮುಂಗಾರು ಮಳೆ ಪ್ರಾರಂಭ. ಐದರಿಂದ ಏಳು ತಿಂಗಳು ಇಲ್ಲಿ ಮಳೆಗಾಲ. ಭಟ್ಕಳದಲ್ಲಿ 370 ಸೆಂಮೀ, ಕಾರವಾರದಲ್ಲಿ 300 ಸೆಂಮೀ ಮಳೆಯಾಗುತ್ತದೆ. ಘಟ್ಟದ ತುದಿಗೆ ಕೆಲವು ಎಡೆಗಳಲ್ಲಿ 500 ಸೆಂಮೀ ಮಳೆಯಾಗುವುದುಂಟು. ಘಟ್ಟದ ಮೇಲಿನ ತಾಲ್ಲೂಕುಗಳಾದ ಶಿರಸಿ, ಸಿದ್ದಾಪುರ, ಯಲ್ಲಾಪುರ, ಸುಪಗಳಲ್ಲಿ 250 ಸೆಂಮೀ, ಮುಂಡಗೋಡದಲ್ಲಿ 122 ಸೆಂಮೀ ಮಳೆ ಬೀಳುತ್ತದೆ. ವರ್ಷದ ಸರಾಸರಿ ಮಳೆ ಅನುಕ್ರಮವಾಗಿ ಭಟ್ಕಳ, ಕುಮಟ, ಹೊನ್ನಾವರ, ಅಂಕೋಲ, ಕಾರವಾರ, ಸಿದ್ದಾಪುರ, ಯಲ್ಲಾಪುರ, ಸುಪ, ಶಿರಸಿ, ಹಳಿಯಾಳ, ಮುಂಡಗೊಡ ತಾಲ್ಲೂಕುಗಳಲ್ಲಿ ಕಡಿಮೆಯಾಗುತ್ತ ಹೋಗುತ್ತದೆ. ಭಟ್ಕಳದಿಂದ ಮುಂಡಗೋಡಿಗೆ ಮಳೆಯ ಅಂತರ ಸು. 265 ಸೆಂಮೀ. ನೆಲಕ್ಕೆ ನೀರುಣಿಸುವ ಕೆರೆಗಳ ಒಟ್ಟು ಸಂಖ್ಯೆ 9,420, ಒಡ್ಡುಗಳು 3,102, ನೀರಾವರಿಯ ಒಟ್ಟು ಕ್ಷೇತ್ರ 14462 ಹೆ.

ಅರಣ್ಯ ಸಂಪತ್ತು: ಈ ಜಿಲ್ಲೆಯ ಶೇ. 81 ರಷ್ಟು (8345 ಚ.ಕಿಮೀ.) ಅರಣ್ಯ ಪ್ರದೇಶ. ಎಲೆಯುದುರುವ ವೃಕ್ಷಗಳು ಇಲ್ಲಿ ಹೇರಳ. ವರ್ಷದಾದ್ಯಂತ ಹಸುರು ಎಲೆತೊಟ್ಟಿರುವವೂ ಉಂಟು. ಮರಗಿಡಗಳು ವೈವಿಧ್ಯಮಯ. ಸಾಗವಾನಿ, ಹೊನ್ನೆ, ನಂದಿ, ಮತ್ತಿ ಮುಂತಾದವು ನಾಟದ ತುಂಡು ಒದಗಿಸುವ ಮರಗಳು. ಬೆಂಕಿಪೊಟ್ಟಣ ಕೈಗಾರಿಕೆಗೆ ಬೇಕಾಗುವ ಮಿದು ಮರಗಳೂ ಕಾಗದದ ತಯಾರಿಕೆಗೆ ಒದಗಿ ಬರುವ ಬಿದಿರೂ ಬೇಕಾದಷ್ಟಿವೆ. ತಾಳೆ ಬೆಳೆಯುವ ಪ್ರದೇಶದ ವಿಸ್ತೀರ್ಣ 10,200 ಹೆ. ಗಂಧದ ಮರಗಳು ಅಗ್ರಗಣ್ಯ. ಅಳಲೆ, ಸೀಗೆ, ಜೇನುತುಪ್ಪ, ಅರಗು, ಗೋಂದು–ಇವು ಇನ್ನು ಕೆಲವು ಮುಖ್ಯ ಉತ್ಪನ್ನಗಳು. ಇಡೀ ರಾಜ್ಯದ ಅರಣ್ಯ ಶಾಖೆಯ ಒಟ್ಟು ಉತ್ಪನ್ನದಲ್ಲಿ ಶೇ. 55 ರಷ್ಟು ಈ ಜಿಲ್ಲೆಯ ಕೊಡುಗೆ. ಕೈಗಾರಿಕೆಯ ಬೆಳೆವಣಿಗೆಗೆ ಆವಶ್ಯಕವಾದ ಅನೇಕ ಮೂಲ ಸಾಮಗ್ರಿಗಳಿಗೆ ಈ ಜಿಲ್ಲೆಯ ಕಾಡುಗಳು ಆಕರ.

ಖನಿಜ ಸಂಪತ್ತು: ಮ್ಯಾಂಗನೀಸ್, ಕಬ್ಬಿಣದ ಅದಿರು, ಸುಣ್ಣಕಲ್ಲು, ಜೇಡಿಮಣ್ಣು, ಇಲ್ಮನೈಟ್, ಗಾಜು, ಸಾಬೂನುಗಲ್ಲು, ಅಭ್ರಕ, ಬಾಕ್ಸೈಟ್ – ಇವು ಈ ಜಿಲ್ಲೆಯ ಖನಿಜಗಳು. ಮ್ಯಾಂಗನೀಸ್ ಅದಿರುಗಳು ಹಲವೆಡೆ ಧಾರಾಳವಾಗಿ ದೊರಕುತ್ತದೆ. ಸುಪ ತಾಲ್ಲೂಕಿನ ಖೋಡ್ಲಿ ಗಣಿಗಳು ಮ್ಯಾಂಗನೀಸಿಗೆ ಪ್ರಸಿದ್ಧ. ಹೊನ್ನಾವರ ತಾಲ್ಲೂಕಿನ ಅಪ್ಸರಕೊಂಡವೂ ಕುಮಟ ತಾಲ್ಲೂಕಿನ ಪೂರ್ವ ಸೀಮೆಯಲ್ಲಿರುವ ಯಾಣವೂ ಕಬ್ಬಿಣದ ಅದಿರುಗಳ ಆಕರ. ಯಾಣದಲ್ಲಿ ನಿಕ್ಷೇಪವಾಗಿರುವುದು ಸೂಜಿ ಮಾದರಿಯ ಲೋಹಚುಂಬಕ ಶಕ್ತಿಯ ಕಬ್ಬಿಣದ ಅದಿರು. ಯಾಣದಲ್ಲಿ ಸುಣ್ಣದ ಕಲ್ಲು ದೊರೆಯುತ್ತದೆ. ಇತರ ಒಂದೆರಡೆಡೆಗಳಲ್ಲೂ ಸುಣ್ಣದ ಕಲ್ಲಿನ ನಿಕ್ಷೇಪಗಳಿವೆ. ಅಭ್ರಕ, ಕಲ್ನಾರು, ಸಾಬೂನುಗಲ್ಲುಗಳೂ ಉಂಟು. ಸ್ವರ್ಣಮೃತ್ತಿಕೆಯೂ ಬಿಳಿಯ ಜೇಡಿಮಣ್ಣುಗಳೂ ಬಹಳ ಕಡೆಗಳಲ್ಲಿ ಲಭ್ಯವಾಗಿವೆ. ಜಿಗಟು ಮಣ್ಣು, ಉಪ್ಪು, ಉಸುಕುಗಳು ಸಾಕಷ್ಟು ಪ್ರಮಾಣದಲ್ಲುಂಟು. ಸಹ್ಯಾದ್ರಿಪಾದದ ಗೊಂಡಾರಣ್ಯ ಭಾಗಗಳಲ್ಲಿ ಕಬ್ಬಿಣ ಮುಂತಾದ ಲೋಹಗಳ ಅದಿರಿನ ನಿಕ್ಷೇಪಗಳನ್ನು ಕಾಣಬಹುದು.

ಬತ್ತ, ತೆಂಗು, ಕಬ್ಬು, ಅಡಕೆ, ಮೆಣಸು, ಏಲಕ್ಕಿ, ಬಾಳೆ – ಇವು ಜಿಲ್ಲೆಯ ಮುಖ್ಯ ಬೆಳೆ. ಬತ್ತ ಬೆಳೆಯುವ ಕ್ಷೇತ್ರದ ವಿಸ್ತಾರ 87,913.03 ಹೆ. ತೆಂಗಿನ ಕ್ಷೇತ್ರ 7,089.72 ಹೆ. ಕಬ್ಬಿನದು 1,307.11. ಹೆ. ಅಡಕೆಯನ್ನು 5,774.09 ಹೆ.ಗಳಲ್ಲಿ ಬೆಳೆಯುತ್ತಾರೆ. ಮೆಣಸಿನ ಕಾಳು, ಏಲಕ್ಕಿ, ಬಾಳೆ ಇವನ್ನು ಸಾಮಾನ್ಯವಾಗಿ ಅಡಕೆಯ ತೋಟಗಳಲ್ಲೇ ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ರಾಗಿ, ಕಡಲೆ, ತೊಗರಿ, ಇತರ ದ್ವಿದಳ ಧಾನ್ಯಗಳು ಮತ್ತು ನೆಲಗಡಲೆಗಳನ್ನು ಬೆಳೆಯಲಾಗುತ್ತಿದೆ. ಗೋಡಂಬಿ, ಮಾವು, ಹಲಸು, ಪರಂಗಿಹಣ್ಣು ಇತರ ಗಣ್ಯ ಬೆಳೆಗಳು.

ವೃತ್ತಿ: ಇಲ್ಲಿ ಶ್ರಮಜೀವಿಗಳೇ ಹೆಚ್ಚು. ಕುಂಬಾರಿಕೆ, ಚಮ್ಮಾರಿಕೆ, ಗುಡಿಗಾರಿಕೆ, ಹೊಲಿಗೆ, ಕಮ್ಮಾರಿಕೆ, ಬಡಗಿ ಕೆಲಸ, ಚಿನ್ನ, ಬೆಳ್ಳಿ ಕೆಲಸ ಮುಂತಾದುವು ಚಿಕ್ಕ ಉದ್ಯೋಗಗಳು; ಕೃಷಿ, ವ್ಯಾಪಾರ ಸಾಮಾನ್ಯ.

ಗರಗಸದ ಗಿರಣಿ, ಮರದ ಸಾಮಾನು ತಯಾರಿಕೆ, ಗೋಡಂಬಿ ಉದ್ಯಮ, ವಾಹನ ದುರಸ್ತಿ, ಸಾಬೂನು ತಯಾರಿಕೆ, ಮುದ್ರಣಾಲಯ, ಅಕ್ಕಿಗಿರಣಿ, ವಲ್ಕನೀಕರಣ, ಅನುಭೋಗವಸ್ತು ತಯಾರಿಕೆ, ಮೇಣದ ಬತ್ತಿಯ ತಯಾರಿಕೆ ಮುಂತಾದುವು ಅನೇಕರಿಗೆ ಉದ್ಯೋಗ ನೀಡಿವೆ. ಕೆತ್ತನೆ ಕೈಗಾರಿಕೆ, ಬುಟ್ಟಿ, ಚಾಪೆ ತಯಾರಿಕೆ, ಜೇನು ಸಾಕಣೆ, ಕೋಳಿ ಸಾಕಣೆ ಮುಂತಾದುವು ಇತರ ವೃತ್ತಿಗಳು.

ಮತ್ಸ್ಯೋದ್ಯಮ: ಕರಾವಳಿಯಲ್ಲಿ ಅಕ್ಕಿಯ ಜೊತೆಗೆ ಮೀನೂ ಆಹಾರ. ಜಿಲ್ಲೆಯ ಮೀನುಗಾರರ ಸಂಖ್ಯೆ ಸು. 7,000. ಭಟ್ಕಳ, ಹೊನ್ನಾವರ, ಕಾರವಾರ, ಕಾಗಾಲು, ಬೇಲೇಕೇರಿ ಮತ್ತು ಕುಮಟ ಬಂದರುಗಳಲ್ಲಿ ಮೀನುಗಾರಿಕೆ ಹೆಚ್ಚಾಗಿ ನಡೆಯುತ್ತಿದೆ. ಈ ಸ್ಥಳಗಳಲ್ಲದೆ ಒಳನಾಡಿನ ಜಲಾಶಯಗಳಲ್ಲೂ ಮೀನುಗಾರಿಕೆಗೆ ಅವಕಾಶವೊದಗಿಸಲೆಂದು ಧರ್ಮಾಯೋಜನೆ ಮತ್ತು ಕಾಳೀಯೋಜನೆಗಳು ಸಿದ್ಧವಾಗಿವೆ. ಮೀನುಗಾರಿಕೆಯ ಸಹಕಾರಿಸಂಘಗಳಿಗೆ ಮತ್ತು ಪಂಚಾಯತಿಗಳಿಗೆ ಸಹಾಯ ನೀಡುವ ಕಾರ್ಯಕ್ರಮವಿದೆ. ಜಿಲ್ಲೆಯ ಮಲೆನಾಡು ಭಾಗದಲ್ಲಿರುವ ಅಸಂಖ್ಯಾತ ಕೆರೆಗಳಲ್ಲಿ ಮೀನುಗಳನ್ನು ಸಾಕಲು ಅವಕಾಶವುಂಟು. ಪ್ರತಿಯೊಂದು ಸಮಾಜ ವಿಕಾಸ ಕ್ಷೇತ್ರದಲ್ಲೂ ಮೀನು ಸಾಕಲು ಅವಕಾಶ ಕಲ್ಪಿಸಿ ವರ್ಷಕ್ಕೆ 4ರಿಂದ 5 ಟನ್ನು ಮೀನು ಉತ್ಪಾದಿಸಬಹುದಾಗಿದೆ. ಪೌಷ್ಟಿಕ ಆಹಾರದ ಪೂರೈಕೆಯ ಅಂಗವಾಗಿ ಶಿರಸಿ, ಕುಮಟ, ಹೊನ್ನಾವರ ಪ್ರದೇಶಗಳಲ್ಲಿ ಮೀನು ತಿನ್ನುವ ಮಕ್ಕಳಿಗೆ ಶಾಲೆಗಳಲ್ಲಿ ಮೀನು ಒದಗಿಸಲು ಆರಂಭಿಸಲಾಗಿದೆ. ಮೀನುಗಾರಿಕೆಗೆ ಅಗತ್ಯವಾದ ಉಪಕರಣ ನೀಡಿಕೆ, ಮೀನುಗಾರರಿಗೆ ವಸತಿ ಕಲ್ಪನೆ, ಮಾರಾಟ ಸಂಸ್ಥೆಯ ರಚನೆ ಮುಂತಾದ ಕಾರ್ಯಕ್ರಮಗಳಿವೆ.

ಪ್ರಮುಖ ಕೈಗಾರಿಕೆಗಳು: ದಾಂಡೇಲಿಯಲ್ಲಿನ ಕಾಗದದ ಕಾರ್ಖಾನೆ ಈ ಜಿಲ್ಲೆಯ ದೊಡ್ಡ ಕೈಗಾರಿಕೆ. ಪ್ಲೈವುಡ್, ಫೆರೋ ಮ್ಯಾಂಗನೀಸ್, ಮರಕೊಯ್ತ– ಇವು ಇತರ ಕೈಗಾರಿಕೆಗಳು. ಹೆಂಚು, ಇಟ್ಟಿಗೆ, ಬಣ್ಣ, ಮೇಣದ ಬತ್ತಿ, ಸ್ಕ್ರೂಬೋರ್ಡು ಮುಂತಾದ ಕೈಗಾರಿಕೆಗಳನ್ನು ಸ್ಥಾಪಿಸುವ ಯತ್ನ ನಡೆದಿದೆ.

ಪ್ರೇಕ್ಷಣೀಯ ಸ್ಥಳಗಳು: ಈ ಜಿಲ್ಲೆಯ ಕರಾವಳಿಯೂ ಜಲಪಾತಗಳೂ ಸೌಂದರ್ಯದ ಬೀಡುಗಳು. ಕಾರವಾರದ ಹತ್ತಿರದಲ್ಲಿರುವ ಅಂಜದೀವವೆಂಬ ನಡುಗಡ್ಡೆ, ಕರಾವಳಿ ಮತ್ತು ಘಟ್ಟದ ಮೇಲ್ಭಾಗದ ನಡುವಿನ ಕಣಿವೆ ಮಾರ್ಗವಾದ ಅಣಶಿಗಟ್ಟ, ಶಿರಸಿಯ ಪಶ್ಚಿಮಕ್ಕಿರುವ ಬೆಡಸಗಾಮಿಗುಡ್ಡ, ಹೊನ್ನಾವರದ ಹತ್ತಿರ ಇರುವ ಬಸವರಾಜ ದುರ್ಗವೆಂಬ ನಡುಗುಡ್ಡೆ, ಜಿಲ್ಲೆಯ ಉತ್ತರಭಾಗದ ದರ್ಶನ ಗುಡ್ಡೆ, ಭಟ್ಕಳದ ಹತ್ತಿರದ ನೇತ್ರಾಣಿ ನಡುಗುಡ್ಡೆ ಮುಂತಾದುವು ನಿಸರ್ಗ ಸೌಂದರ್ಯ ಕೇಂದ್ರಗಳು.

ಹೊನ್ನಾವರ ತಾಲ್ಲೂಕಿನಲ್ಲಿರುವ ಇಡಗುಂಜಿ ಒಂದು ಗಣ್ಯ ಪುಣ್ಯಕ್ಷೇತ್ರ ಹೊನ್ನಾವರದ ದೋಣಿಯನ್ನೇರಿ ಹೋಗುವಾಗ ಸುತ್ತಲಿನ ನಿಸರ್ಗದ ಆಕರ್ಷಕತೆ ಅದ್ವಿತೀಯವೆನ್ನಿಸುತ್ತದೆ. ಕುಮಟ ತಾಲ್ಲೂಕಿಗೆ ಸೇರಿದ ಗೋಕರ್ಣ ಪಟ್ಟಣದಲ್ಲಿ ಮಹಾಬಲೇಶ್ವರ ದೇವಸ್ಥಾನವಿದೆ. ಅಲ್ಲಿ ಅನೇಕ ಶಿಲಾಶಾಸನಗಳಿವೆ.

ಸುಪದ ದಕ್ಷಿಣದಲ್ಲಿ 32 ಕಿಮೀಗಳಾಚೆ ರಾಕ್ಷಸಘಟ್ಟದ ತುದಿಯ ಮೇಲಿರುವ ಉಳುವಿ ವೀರಶೈವರ ಪ್ರಸಿದ್ಧ ಯಾತ್ರಾಸ್ಥಳ. ಪಂಪಮಹಾಕವಿಯ ಜನ್ಮಸ್ಥಳವಾದ ಬನವಾಸಿ ಇತಿಹಾಸ ಪ್ರಸಿದ್ಧ. ಇಲ್ಲಿನ ಮಧುಕೇಶ್ವರ-ಪಾರ್ವತಿಯರ ದೇವಾಲಯದ ಶಿಲ್ಪ ಗಮನಾರ್ಹ. ಸೋದೆಯ ರಘುನಾಥನಾಯಕ ಮಾಡಿಸಿದ್ದೆಂದು ಹೇಳಲಾದ ಕಲ್ಲುಮಂಚ, ನೃತ್ಯಮಂಟಪ, ಗರ್ಭಗುಡಿಯ ಗೋಪುರ ಮುಂತಾದುವು ಕದಂಬಯುಗದಿಂದ ವಿಜಯನಗರದ ಯುಗದವರೆಗಿನ ವಿವಿಧ ಶಿಲ್ಪ ಶೈಲಿಗಳಿಗೆ ಸಾಕ್ಷಿಯಾಗಿವೆ. ಕುಮಟ, ಶಿರಸಿ ತಾಲ್ಲೂಕುಗಳ ಗಡಿಗಳ ಸಂಧಿಯಲ್ಲಿರುವ ಯಾಣ ಯಾತ್ರಾಸ್ಥಳ.

ಶಿರಸಿಯಿಂದ 13 ಕಿಮೀ ದೂರದಲ್ಲಿರುವ ಸೋಂದಾ ಇತಿಹಾಸ ಪ್ರಸಿದ್ಧ. ಇದು ಸೋದೆನಾಯಕರ ರಾಜಧಾನಿಯಾಗಿತ್ತು. ಇಲ್ಲಿ ತ್ರಿವಿಕ್ರಮ ದೇವಾಲಯ, ವಾದಿರಾಜಮಠ, ಅಕಳಂಕಮಠ ಮತ್ತು ಸ್ವರ್ಣವಲ್ಲೀ ಮಠಗಳಿವೆ. ಶಿರಸಿಗೆ 26 ಕಿಮೀ ದೂರದಲ್ಲಿರುವ ಮಂಜಗುಣಿಯಲ್ಲಿ ವೆಂಕಟರಮಣ ದೇವಾಲಯವಿದೆ. ಇಲ್ಲಿಯ ತೇರು ಪ್ರಸಿದ್ಧ.

ಶರಾವತಿಯ ಮೇಲೆ ಸಮುದ್ರದಿಂದ 29 ಕಿಮೀ ದೂರದಲ್ಲಿರುವ ನಗರ ಬಸ್ತಿಕೇರಿ ಹೈವರಸ ಮನೆತನದವರ ರಾಜಧಾನಿಯಾಗಿತ್ತು. ಇಲ್ಲಿ ಸುಂದರ ಜೈನಬಸದಿಗಳಿವೆ.

ಸಿದ್ದಾಪುರದ ಸನಿಹದಲ್ಲಿರುವ ಬಿಳಗಿ 1400 ರಿಂದ 1763 ರವರೆಗೆ ಆಳಿದ ಆಂಡಣ್ಣ ಮನೆತನದ ರಾಜಧಾನಿ. ಅದೇ ಪ್ರದೇಶಕ್ಕೆ ಸೇರಿದ ಇಟಗಿಯ ರಾಮೇಶ್ವರ ದೇವಾಲಯ ಪ್ರಸಿದ್ಧ.

ಜನಜೀವನ, ಆಡಳಿತ, ಸಾರಿಗೆ: ಉತ್ತರ ಕನ್ನಡ ಜಿಲ್ಲೆಯ ಜನಸಂಖ್ಯೆ 13,54,000. ಸರಾಸರಿ ಜನಸಾಂದ್ರತೆ 220 ಕಿಮೀ. ಇಲ್ಲಿ 11 ತಾಲ್ಲೂಕುಗಳು ಮತ್ತು 13 ಪಟ್ಟಣಗಳಿವೆ. ಹಳ್ಳಿಗಳ ಸಂಖ್ಯೆ 13,653. ಗ್ರಾಮಗಳಲ್ಲಿ 5,68,685 ಜನರೂ ಪಟ್ಟಣಗಳಲ್ಲಿ 1,20,864 ಮಂದಿಯೂ ವಾಸಿಸುತ್ತಾರೆ.

ಸಾಮಾಜಿಕ ಸಾಂಸ್ಕೃತಿಕ ಇತಿಹಾಸದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯೊಡನೆ ಈ ಜಿಲ್ಲೆಯ ಸಂಬಂಧ ಹೆಚ್ಚು. ಶಿಕ್ಷಣ, ವ್ಯಾಪಾರ, ವ್ಯವಹಾರಗಳಲ್ಲಿ ಬಯಲು ಸೀಮೆಯ ಸಂಪರ್ಕ ಇಲ್ಲಿಯ ಜನರಿಗೆ ಅಧಿಕ. ಅಡಕೆ, ಮೆಣಸು, ಏಲಕ್ಕಿಗಳ ಕೃಷಿಯಲ್ಲಿ ಇದು ಶಿವಮೊಗ್ಗ ಜಿಲ್ಲೆಯನ್ನು ಹೋಲುತ್ತದೆ. ಜಿಲ್ಲೆಯಲ್ಲಿ ಅಕ್ಷರಸ್ಥರ ಪ್ರಮಾಣ ಶೇ. 33.2.

ಆಡಳಿತ ವ್ಯವಸ್ಥೆ: ಪಂಚಾಯತಿ, ಪೌರಸಭೆ, ತಾಲ್ಲೂಕು, ಅಭಿವೃದ್ಧಿ ಮಂಡಲಿ ಮತ್ತು ಜಿಲ್ಲಾ ಪರಿಷತ್ತು ಇವು ಇಲ್ಲಿನ ಆಡಳಿತ ವ್ಯವಸ್ಥೆಯ ಮುಖ್ಯ ಅಂಗಗಳು.

ಸಾರಿಗೆ ಸಂಪರ್ಕ: ಇಡೀ ಜಿಲ್ಲೆಯಲ್ಲಿನ ರಾಷ್ಟ್ರೀಯ ಹೆದ್ದಾರಿ ಎಂದರೆ ಪಶ್ಚಿಮ ಕರಾವಳಿಯ ರಸ್ತೆ. ಅದೀಗ ಭಟ್ಕಳದಿಂದ ಅಂಕೋಲ ಮಾರ್ಗವಾಗಿ ಗೋವೆಯ ಗಡಿಗೆ ಸಾಗುತ್ತವೆ. ಬೆಳಗಾವಿ-ಜೋಗ್ ರಸ್ತೆಯ ಸುಧಾರಣೆ, ಹಂತ ಹಂತವಾಗಿ ನಡೆದಿದೆ. ಕುಮಟ, ಬಿಳಗಿ, ಸಿದ್ದಾಪುರಗಳನ್ನು ಮತ್ತು ಹೊನ್ನಾವರ, ದೊಡ್ಡ ಮನೆಗಳನ್ನು ಜೋಡಿಸುವ ರಸ್ತೆ ನಿರ್ಮಿತವಾಗುತ್ತಿವೆ. 2001ರ ವರೆಗೆ ಆದ ಸಿಮೆಂಟ್ ಕಾಂಕ್ರೀಟ್ ರಸ್ತೆ ಒಟ್ಟು ಸು. 160 ಕಿಮೀ ಟಾರು ರಸ್ತೆ 600 ಕಿಮೀ ಜಲ್ಲಿ ರಸ್ತೆ 550 ಕಿಮೀ ಉಳಿದ ರಸ್ತೆಗಳ ಒಟ್ಟಳತೆ 750 ಕಿಮೀ. ಜಿಲ್ಲೆಯ ಮುಖ್ಯ ರೈಲು ಮಾರ್ಗವೆಂದರೆ ಅಳಣಾವರದಿಂದ ದಾಂಡೇಲಿಯವರೆಗಿನ ಮೀಟರ್‌ಗೇಜ್.

ಬಂದರುಗಳು: ಕಾರವಾರ, ಬೇಲೇಕೇರಿ, ತದಡಿ, ಕುಮಟ, ಹೊನ್ನಾವರ, ಭಟ್ಕಳ ಇವು ಮುಖ್ಯ ಬಂದರುಗಳು. ಇವುಗಳಲ್ಲಿ ಯಾವುದೂ ಸರ್ವಋತು ಬಂದರಾಗಿಲ್ಲ. ಬಳ್ಳಾರಿ ಪ್ರದೇಶದ ಕಬ್ಬಿಣದ ಅದಿರನ್ನು ಕಾರವಾರದ ಮೂಲಕ ಕಳುಹಲಾಗುತ್ತಿದೆ. ಈ ಬಂದರಿನ ಬೆಳೆವಣಿಗೆಗಾಗಿ ಎರಡು ಹಂತಗಳ ಕಾರ್ಯಕ್ರಮವನ್ನು ರೂಪಿಸಲಾಗಿದೆ. 5 ಲಕ್ಷ ಟನ್ ಕಬ್ಬಿಣ, 1 ಲಕ್ಷ ಟನ್ ಮ್ಯಾಂಗನೀಸ್ ಮತ್ತು 50,000 ಟನ್ ಸಾಮಾನ್ಯ ಸರಕುಗಳ ಸಾಗಣಿಕೆ ವ್ಯವಸ್ಥೆ. ಸರ್ವಋತು ಬಂದರಾಗಿ ಮಾರ್ಪಾಟು-ಇವು ಈ ಎರಡು ಹಂತಗಳು. ವಿದೇಶೀ ಹಡಗುಗಳು ಈಗ ದಂಡೆಯಿಂದ ಮೂರು ಯೂನಿಟ್ ಆಚೆ ನಿಲ್ಲುತ್ತವೆ. ಅಂತಾರಾಷ್ಟ್ರೀಯ ಹಡಗುಯಾನ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಇಟ್ಟುಕೊಳ್ಳಲಾಗಿದೆ. ಕಾರವಾರದ ಅನಂತರ ಬೇಲೇಕೇರಿ ಮುಖ್ಯ ಬಂದರು. ಅದಿರು ಸಾಗಿಸಲು ಇಲ್ಲಿ ಯಾಂತ್ರಿಕ ಸಲಕರಣೆ ಬಳಸಲಾಗುತ್ತಿದೆ. ಇಲ್ಲಿಂದ ದಿನಕ್ಕೆ 4,000 ಟನ್ ಅದಿರನ್ನು ಸಾಗಿಸಲಾಗುತ್ತಿದೆ. ತದಡಿ ಇನ್ನೊಂದು ಬಂದರು. 23,000 ಟನ್ ಸರಕು ಸಾಮಗ್ರಿಗಳನ್ನು ಪ್ರತಿವರ್ಷ ಇಲ್ಲಿಂದ ಸಾಗಿಸಲಾಗುವುದು. ಹೊನ್ನಾವರವನ್ನು ಮಧ್ಯಮ ತರಗತಿಯ ಬಂದರಾಗಿ ಪರಿವರ್ತಿಸುವ ಯೋಜನೆ ಸರ್ಕಾರಕ್ಕಿದೆ. ಇದು ರೈಲುಮಾರ್ಗಕ್ಕೆ ಸಮೀಪದಲ್ಲಿದೆ. ಭಟ್ಕಳ ಇನ್ನೊಂದು ಬಂದರು. ಇಲ್ಲಿಂದ ಪ್ರತಿವರ್ಷ 2,800 ಟನ್ ಸರಕು ಸಾಗಣೆಯಾಗುತ್ತದೆ. (ಬಿ.ಎಚ್.ಎಸ್.;ಜಿ.ಪಿ.ಎಸ್.)

**ಉತ್ತರ ಕೆರೊಲಿನ:** ಅಮೆರಿಕ ಸಂಯುಕ್ತಸಂಸ್ಥಾನದ ಆಗ್ನೇಯ ಭಾಗದಲ್ಲಿರುವ ಒಂದು ರಾಜ್ಯ. ಮೊಟ್ಟಮೊದಲು ಆ ಒಕ್ಕೂಟ ಸೇರಿದ 13 ರಾಜ್ಯಗಳಲ್ಲಿ ಇದೂ ಒಂದು; ಒಕ್ಕೂಟ ಸಂವಿಧಾನವನ್ನು ಸ್ಥಿರೀಕರಿಸಿದವುಗಳಲ್ಲಿ ಹನ್ನೆರಡನೆಯದು. ಉತ್ತರದಲ್ಲಿ ವರ್ಜಿನಿಯ, ಪೂರ್ವ ಆಗ್ನೇಯಗಳಲ್ಲಿ ಅಟ್ಲಾಂಟಿಕ್ ಸಾಗರ, ದಕ್ಷಿಣದಲ್ಲಿ ದಕ್ಷಿಣ ಕೆರೊಲೀನ ಮತ್ತು ಜಾರ್ಜಿಯ, ಪಶ್ಚಿಮ ವಾಯವ್ಯಗಳಲ್ಲಿ ಟೆನಿಸಿ ಇವೆ. ಉ.ಅ. $30^0.52'$ ಮತ್ತು $26^0.34'$ ಹಾಗೂ ಪ.ರೇ. $75^0.27'$ ಮತ್ತು $84^0.20'$ ನಡುವೆ ಇರುವ ಈ ರಾಜ್ಯದ ವಿಸ್ತೀರ್ಣ 1,36,420 ಚ.ಕಿಮೀ. ವಿಸ್ತಾರದಲ್ಲಿ ಇದು ಸಂಯುಕ್ತ ಸಂಸ್ಥಾನದಲ್ಲಿ 28ನೆಯದು. ಜನಸಂಖ್ಯೆ 8,049,313 (2001). ಕೆರೊಲಿನ ಎಂದರೆ ಚಾರಲ್ಸ್ ನ ದೇಶ. ಇಂಗ್ಲೆಂಡಿನ ದೊರೆ ಒಂದನೆಯ ಚಾರಲ್ಸನ ಗೌರವಾರ್ಥವಾಗಿ ಈ ಹೆಸರನ್ನು 1629ರಲ್ಲಿ ಮೊದಲು ಬಳಸಲಾಯಿತು, ರಾಜಧಾನಿಯ ಹೆಸರು ರ‍್ಯಾಲಿ ಜನಸಂಖ್ಯೆ ,74,000 (2007)-ಸರ್ ವಾಲ್ಟರ್ ರ‍್ಯಾಲಿಯ ಜ್ಞಾಪಕಾರ್ಥ

ಮೇಲ್ಮೈ ಲಕ್ಷಣ: ಈ ರಾಜ್ಯದ ಪೂರ್ವಾರ್ಧ ಭಾಗ ಕರಾವಳಿಯ ಬಯಲು. ಮಧ್ಯದಲ್ಲಿ ಪೀಡ್‌ಮಾಂಟ್ ಪ್ರಸ್ಥಭೂಮಿ. ಪಶ್ಚಿಮದಲ್ಲಿ ಅಪಲೇಷಿಯನ್ ಪರ್ವತ. ಸಮುದ್ರ ತೀರದ ಬಳಿಯ ನೆಲ ತಗ್ಗು, ಜವುಗು; ಮೈದಾನದ ಪಶ್ಚಿಮ ಭಾಗ ಫಲವತ್ತು; ಇಲ್ಲಿನ ಕೊಳೆತ ಸಸ್ಯಪದಾರ್ಥ ಮಿಶ್ರಿತವಾದ ಮರಳುಜೇಡಿಮಣ್ಣು ಹೊಗೆಸೊಪ್ಪಿನ ಬೆಳೆಗೆ ಪ್ರಶಸ್ತ. ಇದು ರಾಜ್ಯದ ಮುಖ್ಯ ಕೃಷಿ ಪ್ರದೇಶ, ಬಯಲಿನ ಮುಖ್ಯ ನದಿಗಳೆಂದರೆ ರೋವನೋಕ್, ಚೌವಾನ್, ಟಾರ್-ಪಾಮ್ಲಿಕೊ, ನೂಸ್-ಟ್ರೆಂಟ್ ಮತ್ತು ಕೇಪ್ ಫೀರ್. ಇವುಗಳ ಪೈಕಿ ಕೇಪ್ ಫೀರ್ ಒಂದೇ ಹಡಗು ಸಂಚಾರಕ್ಕೆ ಯೋಗ್ಯ. ಈ ನದಿಯ ಮುಖದ ಮೇಲಿರುವ ವಿಲ್ಮಿಂಗ್ಟನ್ ರಾಜ್ಯದ ಮುಖ್ಯ ಆಳನೀರಿನ ಬಂದರು.

ಪೀಡ್‌ಮಾಂಟ್ ಪ್ರಸ್ಥಭೂಮಿಯ ಪರಮಾವಧಿ ಎತ್ತರ 454 ಮೀ, ಕನಿಷ್ಠ 121ಮೀ ಆಗ್ನೇಯಾಭಿಮುಖವಾಗಿ ಇಳಿಜಾರಾಗಿರುವ ಈ ಪ್ರಸ್ಥಭೂಮಿಯ ಮುಖ್ಯ ನದಿಗಳು ಯಾಡ್ಕಿನ್, ಕೆಟಾಬ ಮತ್ತು ಬ್ರಾಡ್. ಇವುಗಳ ಆಳ ಕಡಿಮೆ, ವೇಗ ಹೆಚ್ಚು ; ಅಬ್ಬಿಗಳು ಅನೇಕ. ಆದ್ದರಿಂದ ಹಡಗು ಸಂಚಾರಕ್ಕೆ ಯೋಗ್ಯವಲ್ಲ. ರಾಜ್ಯದ ಜವಳಿ, ಹೊಗೆಸೊಪ್ಪು, ಅಣೆಕಟ್ಟು ಕೈಗಾರಿಕೆಗಳು ಬೆಳೆದಿರುವುದು ಈ ಪ್ರದೇಶದಲ್ಲಿ.

ಪಶ್ಚಿಮದ ಅಪಲೇಷಿಯನ್ ಪರ್ವತ ಪ್ರದೇಶದಲ್ಲಿ ಎರಡು ದೊಡ್ಡ ಶ್ರೇಣಿಗಳಿವೆ. ಇವುಗಳಲ್ಲಿ ಪೂರ್ವದ್ದು ಬ್ಲೂರಿಜ್; ಪಶ್ಚಿಮದ್ದು ಗ್ರೇಟ್ ಸ್ಮೋಕಿ. ಇವೆರಡನ್ನೂ ಕೂಡಿಸುವ ಅಡ್ಡ ಶ್ರೇಣಿಗಳು ಅನೇಕ. ಅವುಗಳ ಪೈಕಿ ಬ್ಲ್ಯಾಕ್ ಪರ್ವತದಲ್ಲಿರುವ ಮಿಚೆಲ್ 2025ಮೀ ಅಮೆರಿಕ ಸಂಯುಕ್ತ ಸಂಸ್ಥಾನದ ಪೂರ್ವದಲ್ಲೇ ಅತ್ಯಂತ ಎತ್ತರದ ಶಿಖರ. ಪೂರ್ವ ಅಮೆರಿಕದಲ್ಲಿ ಅತ್ಯಂತ ಹೆಚ್ಚಿನ ಪರ್ವತ ಪ್ರದೇಶ ಇರುವುದು ಈ ರಾಜ್ಯದಲ್ಲೇ. ಆಕಾಶರಾಜ್ಯವೆಂದು ಅಭಿವರ್ಣಿತವಾಗಿರುವ ಈ ಸುಂದರ ಪ್ರದೇಶದಲ್ಲಿ 1760 ಮೀ ಗಳಿಗಿಂತ ಹೆಚ್ಚಿನ ಎತ್ತರದ 43 ಶಿಖರಗಳೂ 1470 ರಿಂದ 1760 ಮೀ ಗಳ ವರೆಗಿನ ಎತ್ತರದ 125 ಶಿಖರಗಳೂ ಇವೆ. ಪರ್ವತ ಕಣಿವೆಗಳು ಇಕ್ಕಟ್ಟಾಗಿ, ಕಡಿದಾಗಿವೆ. ಇಲ್ಲಿನ ನಿಸರ್ಗ ಸೌಂದರ್ಯ, ಆಹ್ಲಾದಕರ ವಾಯುಗುಣಗಳ ಜೊತೆಗೆ ಮಾನವನಿರ್ಮಿತವಾದ ಒಳ್ಳೆಯ ರಸ್ತೆಗಳೂ ಇರುವುದರಿಂದ ಇದು ಈ ರಾಷ್ಟ್ರದ ಪ್ರಮುಖ ಬೇಸಗೆದಾಣಗಳಲ್ಲೊಂದು.

ಬ್ಲ್ಯಾಕ್ ಪರ್ವತಗಳ ಮೇಲಿಂದ ಹಲವಾರು ತೊರೆಗಳು ಜಿಗಿದು ಹೊಳೆಗಳಾಗಿ ಸಂಭವಿಸಿ, ಕೆಲವು ಮಿಸಿಸಿಪಿಯನ್ನೂ ಕೆಲವು ಅಟ್ಲಾಂಟಿಕ್ ಸಾಗರವನ್ನೂ ಸೇರುತ್ತವೆ. ಬ್ಲೂ ರಿಜ್‌ನ ಪಶ್ಚಿಮದಲ್ಲಿ ಹಿವಾಸಿ, ಲಿಟ್ಲ್ ಟೆನಿಸಿ ಮತ್ತು ಫ್ರೆಂಚ್ ಬ್ರಾಡ್ ನದಿಗಳು ಹುಟ್ಟಿ ಟೆನಿಸಿಯನ್ನು ಸೇರುತ್ತವೆ. ಇನ್ನೂ ಉತ್ತರಕ್ಕೆ ನ್ಯೂ ನದಿ ಉದ್ಭವಿಸಿ ಒಹಾಯೊವಿನತ್ತ ಸಾಗುತ್ತದೆ. ಬ್ಲೂ ರಿಜ್‌ನ ಆಗ್ನೇಯ ಭಾಗದಲ್ಲಿ ಉಗಮಿಸುವ ಬ್ರಾಡ್, ಕೆಟಾಬ, ಯಾಡ್ಕಿನ್ ಸ್ವಲ್ಪದೂರ ಈಶಾನ್ಯಾಭಿಮುಖವಾಗಿ ಹರಿದು, ಪೀಡ್ ಮಾಂಟ್ ಪ್ರಸ್ಥಭೂಮಿಯ ಬೆನ್ನೆಣಿನ ಸಂದಿಯಿಂದ ಆಗ್ನೇಯ ದಿಕ್ಕಿಗೆ ತಿರುಗಿ, ರಾಜ್ಯದ ಗಡಿ ದಾಟಿ ದಕ್ಷಿಣ ಕೆರೊಲೀನದಲ್ಲಿ ಧಾವಿಸಿ ಅಟ್ಲಾಂಟಿಕನ್ನು ಸೇರುತ್ತದೆ.

ವಾಯುಗುಣ, ಸಸ್ಯ ಪ್ರಾಣಿ ಸಂಪತ್ತು: ರಾಜ್ಯದ ಆಗ್ನೇಯದಂಚಿನಲ್ಲಿ ಉಪೋಷ್ಣ (ಸಬ್‌ಟ್ರಾಪಿಕಲ್) ವಾಯುಗುಣವಿದೆ. ಪರ್ವತ ಪ್ರದೇಶದಲ್ಲಿ ಸ್ಥೂಲವಾಗಿ ಮಧ್ಯಮ ಖಂಡಾಂತರ ವಾಯುಗುಣ. ರಾಜ್ಯದ ಸರಾಸರಿ ವಾರ್ಷಿಕ ಮಳೆ 120 ಸೆಂಮೀ. ಪರ್ವತದ ಮೇಲೆ 135 ಸೆಂಮೀ.

ವೈವಿಧ್ಯಮಯ ವಾಯುಗುಣ ಹಾಗೂ ಮಣ್ಣಿನಿಂದಾಗಿ ಇಲ್ಲಿನ ಸಸ್ಯವೂ ವೈವಿಧ್ಯಪೂರಿತ. ಶೀತವಲಯದ ನೆರೆಪ್ರದೇಶದ ಸಸ್ಯಗಳಿಂದ ಹಿಡಿದು ಉಪೋಷ್ಣವಲಯದ ಕಿರುತಾಳೆಯವರೆಗೆ ನಾನಾ ಜಾತಿ ಇಲ್ಲಿವೆ. ಮರದ ದಿಮ್ಮಿ ಉತ್ಪಾದನೆಯಲ್ಲಿ ಇದು ರಾಷ್ಟ್ರದಲ್ಲಿ ಐದನೆಯ ರಾಜ್ಯ. ಪೀತದಾರು ಮರ ಎಲ್ಲೆಲ್ಲೂ ಬೆಳೆಯುತ್ತದೆ. ಸಮುದ್ರತೀರದ ಬಳಿಯಲ್ಲಿ ವೀನಸ್ ಫ್ಲೈ-ಟ್ರ್ಯಾಪ್ ಎಂಬ ನೊಣಹಿಡುಕ ಮಾಂಸಾಹಾರಿ ಸಸ್ಯವೂ ಉಂಟು.

ವನ್ಯಪ್ರಾಣಿಗಳಲ್ಲಿ ಕುಂದಿಲಿ, ಅಳಿಲು, ತುಪ್ಪುಳುಮೈ, ಪೊದೆಬಾಲ, ಮೊನೆ ಮುಸುಡಿಯ ರ್‍ಯಾಕೂನ್, ಹೆಬ್ಬೆಟ್ಟುಳ್ಳ ಹಿಂಗಾಲಿರುವ, ವೃಕ್ಷವಾಸಿ ಜಲವಾಸಿ ರಾತ್ರಿಂಚರ ಪ್ರಾಣಿ ಒಪಾಸಮ್, ಜಿಂಕೆ, ಕರಡಿ, ನರಿ, ಕಾಡು ಬೆಕ್ಕು ಸಾಮಾನ್ಯ, ಕೆಂಬಕ್ಕಿ (ಕಾರ್ಡಿನಲ್), ಮೊಂಡು ಪುಕ್ಕಿ (ರೆನ್), ಅಣಕ ಹಕ್ಕಿ (ಮಾಕಿಂಗ್ ಬರ್ಡ್), ಚಿಕಡಿ, ಮರಕುಟಿಗ, ಕೋಗಿಲೆ, ಬೆಳವ, ಲಾವಕ್ಕಿ, ಪಾರಿವಾಳ, ರಾಬಿನ್, ಬಾತು ಕೋಳಿ ಮುಂತಾದ ಹಕ್ಕಿಗಳಿವೆ.

ವ್ಯವಸಾಯ, ವಾಣಿಜ್ಯದೃಷ್ಟಿಯಿಂದ ಹತ್ತಿ, ಹೊಗೆ ಸೊಪ್ಪು ಇಲ್ಲಿನ ಮುಖ್ಯ ಬೆಳೆಗಳು. ಹತ್ತಿ ಬೆಳೆಯಲು ಹಿತಕರವಾದ ವಾಯುಗುಣ ಈ ದೇಶದ ಮೂರರಲ್ಲೆರಡು ಭಾಗದಷ್ಟು ಪ್ರದೇಶದಲ್ಲಿದೆ. ಮೆಕ್ಕೆಜೋಳ ಸರ್ವ ವ್ಯಾಪಿ. ಗೆಣಸು, ನೆಲಗಡಲೆ, ಸೋಯಬೀನ್ಸ್, ಪೀಚ್ ಹಣ್ಣು-ಇತರ ಬೆಳಸು. ವಾಯವ್ಯದಲ್ಲಿ ಗೋದಿಯನ್ನು ತಕ್ಕ ಮಟ್ಟಿಗೆ ಬೆಳೆಯುತ್ತಾರೆ. ರೈ, ಓಟ್ಸ್, ಗೋದಿ ಪರ್ವತ ಪ್ರದೇಶದ ಬೆಳೆಗಳು. ಹಸು, ಹಂದಿ ಮುಖ್ಯ ಸಾಕುಪ್ರಾಣಿಗಳು.

ಖನಿಜ, ಕೈಗಾರಿಕೆ: ಖನಿಜಗಳಲ್ಲಿ ಫೆಲ್‌ಸ್ಪಾರ್ ಮತ್ತು ಅಭ್ರಕ ಮುಖ್ಯ. ಇವು ರಾಜ್ಯದ ಪಶ್ಚಿಮ ಭಾಗದಲ್ಲಿ ದೊರಕುತ್ತವೆ. ಕಲ್ನಾರು, ಬಿಳಿಯ ಜೇಡಿ ಮಣ್ಣು (ಕಾಯೊಲಿನ್) ನಿಕ್ಕಲ್ ಇತರ ಖನಿಜಗಳು. ವಿಲ್ಮಿಂಗ್ಟನ್ನಿನಲ್ಲಿ ಸಮುದ್ರಜಲದಿಂದ ಬ್ರೋಮಿನ್ ತಯಾರಿಸುತ್ತಾರೆ.

ಹತ್ತಿ ಜವಳಿ, ಹೊಗೆಸೊಪ್ಪು, ಅಣೆಕಟ್ಟು ತಯಾರಿಕೆ ಮುಖ್ಯ ಕೈಗಾರಿಕೆಗಳು. ಈ ರಾಜ್ಯದಲ್ಲಿ ಕಲ್ಲಿದ್ದಲಿಲ್ಲ. ಪೀಡ್ ಮಾಂಟ್ ಪ್ರದೇಶದಲ್ಲಿ ವಿದ್ಯುತ್ ಉತ್ಪಾದನೆ ಆಗುತ್ತದೆ. ಷಾರ್ಲಟ್, ಗ್ರೀನ್ಸ್‌ಬರೊ, ರ್‍ಯಾಲಿ ಮುಖ್ಯ ಜವಳಿ ಉತ್ಪಾದನ ಕೇಂದ್ರಗಳು. ಡರೆಂ, ವಿನ್ಸ್‌ಟನ್-ಸೇಲಂಗಳು ಹೊಗೆಸೊಪ್ಪಿನ ಕೈಗಾರಿಕೆಯಲ್ಲಿ ಮುಂದಾಗಿವೆ. (ಸಿ.ಎಂ.;ಜೆ.ಇ.ಸಿ.)

**ಉತ್ತರ ಕೊರಿಯ:** ಉತ್ತರ ಚೀನದಿಂದ ಹೊರಕ್ಕೆ, ಹಳದಿ ಸಮುದ್ರ ಹಾಗೂ ಜಪಾನ್ ಸಮುದ್ರಗಳ ನಡುವೆ ಚಾಚಿಕೊಂಡಿರುವ ಪರ್ಯಾಯ ದ್ವೀಪದಲ್ಲಿ ಉ.ಅ. $38^0$ ಯಿಂದ $42^0$, ಪೂ.ರೇ. $130^0$–$140^0$ ಉತ್ತರಕ್ಕಿರುವ ದೇಶ. ಕೊರಿಯ ಪ್ರಜಾ ಪ್ರಭುತ್ವವಾದಿ ಜನತಾ ಗಣರಾಜ್ಯ (ಡೆಮೊಕ್ರ್ಯಾಟಿಕ್ ಪೀಪಲ್ಸ್ ರಿಪಬ್ಲಿಕ್ ಆಫ್ ಕೊರಿಯ). ಇದಕ್ಕೆ ದಕ್ಷಿಣದಲ್ಲಿ ದಕ್ಷಿಣ ಕೊರಿಯ (ಕೊರಿಯ ಗಣರಾಜ್ಯ) ಇದೆ. ಪೂರ್ವಕ್ಕೆ ಜಪಾನ್ ಸಮುದ್ರ ಮತ್ತು ಪಶ್ಚಿಮಕ್ಕೆ ಹಳದಿ ಸಮುದ್ರಗಳಿವೆ. ವಿಸ್ತೀರ್ಣ 1,22,762 ಚ.ಕಿಮೀ. ಜನಸಂಖ್ಯೆ 22,224,000 (2002). ಕೊರಿಯ ಪರ್ಯಾಯ ದ್ವೀಪದ ಶೇ. 56 ಭಾಗವನ್ನು ಈ ರಾಜ್ಯ ಆಕ್ರಮಿಸಿದೆ. ರಾಜಧಾನಿ : ಪಾಂಗ್‌ಯಾಂಗ್. ಜನಸಂಖ್ಯೆ 2,741,260 (2002).

ಮೇಲ್ಮೈಲಕ್ಷಣ: ಉತ್ತರ ದಕ್ಷಿಣವಾಗಿ ಹಬ್ಬಿರುವ ಈ ರಾಜ್ಯ ಬಹುಪಾಲು ಪರ್ವತಮಯ. ಆದರೆ ಜಪಾನ್ ದ್ವೀಪಗಳಲ್ಲಿರುವಂತೆ ಇಲ್ಲಿ ಜ್ವಾಲಾಮುಖಿಗಳಿಲ್ಲ. ವ್ಯವಸಾಯಯೋಗ್ಯ ಭೂಮಿ ಕಡಿಮೆ. ಉತ್ತರ ಕೊರಿಯವನ್ನು ಅಲ್ಲಿನ ಮೇಲ್ಮೈಲಕ್ಷಣಗಳಿಗನುಗುಣವಾಗಿ ಮೂರು ಭಾಗಗಳನ್ನಾಗಿ ವಿಂಗಡಿಸಬಹುದು : ಮಧ್ಯ ಹಾಗೂ ಉತ್ತರದ ಪರ್ವತ ಪ್ರದೇಶ : ಪೂರ್ತಿಯಾಗಿ ಪರ್ವತಗಳಿಂದ ಆವೃತವಾಗಿರುವುದರಿಂದ ಜನಸಾಂದ್ರತೆ ತೀರ ವಿರಳ. ಅನೇಕ ಶಿಖರಗಳು 2750 ಮೀ ಗಳಿಗಿಂತಲೂ ಎತ್ತರ. ಈ ಪರ್ವತಗಳ ದಕ್ಷಿಣಕ್ಕೆ ವಿಶಾಲವಾದ ಪ್ರಸ್ಥಭೂಮಿಯಿದೆ. ಇಲ್ಲಿ ವಾಸಮಾಡುವ ಗುಡ್ಡಗಾಡಿನ ಕಣಿವೆಗಳಲ್ಲಿ ಸ್ವಲ್ಪ ಮಟ್ಟಿನ ವ್ಯವಸಾಯ ಮಾಡುತ್ತಾರೆ. ಉತ್ತರದಲ್ಲಿ ಯಾಲೂ ಹಾಗೂ ಟೇಡಾಂಗ್ ನದಿಗಳು ಮುಖ್ಯ. ಪೂರ್ವದ ಕರಾವಳಿ ಪ್ರದೇಶ : ಈ ಕಿರಿದಾದ ಕರಾವಳಿಯಲ್ಲಿ ಅನೇಕ ಮೀನುಗಾರರ ಹಳ್ಳಿಗಳಿವೆ. ನದೀಮುಖಗಳಲ್ಲಿ ಸ್ವಲ್ಪಮಟ್ಟಿನ ವ್ಯವಸಾಯ ಸಾಧ್ಯ. ಬತ್ತ ಮತ್ತು ದ್ವಿದಳ ಧಾನ್ಯ ಇಲ್ಲಿನ ಬೆಳೆ. ಅಲೆಗಳ ಹಾವಳಿ ಕಡಿಮೆ. ವಾಯವ್ಯ ಪ್ರದೇಶ : ಪ್ರಮುಖ ವ್ಯವಸಾಯ ಪ್ರದೇಶ. ಆದರೆ ಚಳಿಗಾಲದಲ್ಲಿ ಬೇಸಾಯಕ್ಕೆ ಅನೇಕ ಅಡಚಣೆಗಳಿರುವುದರಿಂದ ವರ್ಷಕ್ಕೆ ಒಂದು ಬೆಳೆ ಮಾತ್ರ ಸಾಧ್ಯ. ಗೋದಿ, ಮೆಕ್ಕೆಜೋಳ ಮುಖ್ಯ ಬೆಳೆ, ಖನಿಜಗಳು ಹೇರಳವಾಗಿ ದೊರೆಯುವುದರಿಂದ ಕೈಗಾರಿಕೆಗಳು ಬೆಳೆದಿವೆ.

ವಾಯುಗುಣ: ಉತ್ತರ ಕೊರಿಯದ್ದು ಪೂರ್ವ ಏಷ್ಯನ್ ರೀತಿಯ ಮಾನ್ಸೂನ್ ವಾಯುಗುಣ. ಬೇಸಗೆಯಲ್ಲಿ ಹೆಚ್ಚು ಉಷ್ಣತೆ, ಹೆಚ್ಚು ಮಳೆ. ಚಳಿಗಾಲದಲ್ಲಿ ನೀರು ಗಡ್ಡೆ ಕಟ್ಟುವ ಮಟ್ಟಕ್ಕಿಂತಲೂ ಕಡಿಮೆ ಉಷ್ಣತೆ.

ಸ್ವಾಭಾವಿಕ ಸಸ್ಯ, ಪ್ರಾಣಿವರ್ಗ: ಉತ್ತರ ಕೊರಿಯದಲ್ಲಿ ಅನೇಕ ಬಗೆಯ ಸಸ್ಯಗಳಿವೆ. ಒಟ್ಟು ಭೂಮಿಯ ಶೇ. 70 ಭಾಗ ಕಾಡು. ಲಾರ್ಚ್, ಸ್ಪ್ರೂಸ್, ಫರ್, ಬರ್ಚ್‌ಗಳು ಉತ್ತರದಲ್ಲಿ ಹೆಚ್ಚು. ಯಾಲೂ ಕಣಿವೆಯಲ್ಲೂ ದಕ್ಷಿಣದಲ್ಲೂ ಮೇಪ್ಲ್, ಬಾಸ್‌ವುಡ್, ಬರ್ಚ್, ಪಾಪ್ಲರ್, ಓಕ್, ಆಷ್, ಹಾರ್ನ್‌ಬೀಮ್, ಎಲ್ಮ್, ಚೆಸ್ಟ್‌ನಟ್, ಹ್ಯಾಕ್‌ಬೆರಿ, ಮ್ಯಾಗ್ನೋಲಿಯ ಮತ್ತು ಜಪಾನೀ ಯೂಗಳಿವೆ. ಲಿಲಿ ಮತ್ತು ಇತರ ಕಾಡು ಹೂಗಳು ಗ್ರಾಮಾಂತರ ಪ್ರದೇಶದ ಸೌಂದರ್ಯ ಹೆಚ್ಚಿಸಿವೆ.

ಇಲ್ಲಿನ ಪ್ರಾಣಿಗಳು ಏಷ್ಯದ ಪ್ರಾಣಿಗಳಿಗಿಂತ ಯುರೋಪಿನವನ್ನೇ ಹೆಚ್ಚಾಗಿ ಹೋಲುತ್ತವೆ. ಇದೊಂದು ವೈಚಿತ್ರ್ಯ. ಇಂಥ ಪ್ರಾಣಿಗಳ ಜೊತೆಗೆ ಹುಲಿ, ಹಿಮಚಿರತೆ, ಕಸ್ತೂರಿಮೃಗಗಳಿವೆ. ತೋಳ, ಕರಡಿ, ಕಾಡುಹಂದಿ, ಜಿಂಕೆ, ಕಪ್ಪೆ, ಹಲ್ಲಿ, ಹಾವು ಇವು ಸಾಮಾನ್ಯ.




ಖನಿಜ ಸಂಪತ್ತು: ಉತ್ತರ ಕೊರಿಯದಲ್ಲಿ ಹೇರಳವಾದ ಖನಿಜ ಸಂಪತ್ತಿದೆ. ಕಬ್ಬಿಣದ ಅದಿರು, ತಾಮ್ರ, ಸೀಸ, ಸತು, ಸ್ವರ್ಣ ಮಕ್ಷಿಕ, ಟಂಗ್ ಸ್ಟನ್, ಕಲ್ಲಿದ್ದಲು, ಚಿನ್ನ ಮುಖ್ಯ.

ವ್ಯವಸಾಯ, ಕೈಗಾರಿಕೆ, ಸಾರಿಗೆ ವ್ಯವಸ್ಥೆ: ಉತ್ತರ ಕೊರಿಯದ ಒಟ್ಟು ಭೂಮಿಯ 1/5 ಭಾಗ ಮಾತ್ರ ವ್ಯವಸಾಯ ಯೋಗ್ಯ. ಬತ್ತ, ಗೋಧಿ, ಬಾರ್ಲಿ, ಮೆಕ್ಕೆಜೋಳ ಮತ್ತು ಸೋಯ ಬೀನುಗಳು ಇಲ್ಲಿನ ಮುಖ್ಯ ಬೆಳೆ. ಹತ್ತಿ, ಹೊಗೆಸೊಪ್ಪು, ನಾರು, ಹಣ್ಣುಗಳನ್ನು ಬೆಳೆಯುತ್ತಾರೆ. ಜಪಾನ್ ಮಾದರಿಯ ಬತ್ತದ ಬೇಸಾಯದಿಂದಾಗಿ ಅಕ್ಕಿಯ ಉತ್ಪಾದನೆ ಹೆಚ್ಚಾಗಿದೆ. 1905ರಲ್ಲಿ ಮೊಟ್ಟ ಮೊದಲ ಬಾರಿಗೆ ಜಪಾನೀಯರ ಪ್ರೋತ್ಸಾಹದಿಂದ ಇಲ್ಲಿ ಹತ್ತಿ ಬೆಳೆಯಲಾಯಿತು. ಈಗ ಹತ್ತಿಯೂ ಇಲ್ಲಿನ ಒಂದು ಮುಖ್ಯ ಬೆಳೆ.

ಉತ್ತರ ಕೊರಿಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಖನಿಜಸಂಪತ್ತಿರುವುದರಿಂದ ಕೈಗಾರಿಕೆಗಳು ಬೆಳೆದಿವೆ. ಜಪಾನೀಯರ ಆಕ್ರಮಣ ಕಾಲದಲ್ಲಿ ರಸಾಯನವಸ್ತು, ಸಿಮೆಂಟ್, ಕಬ್ಬಿಣ, ಉಕ್ಕು, ವಿದ್ಯುತ್ತು ಮತ್ತು ಯಂತ್ರ ಕೈಗಾರಿಕೆಗಳು, ಸ್ಥಾಪಿತವಾಗಿದ್ದುವು. ದ್ವಿತೀಯ ಯುದ್ಧ ಮುಗಿದು ಜಪಾನೀಯರು ಹಿನ್ನಡೆಯುವಾಗ ಇಲ್ಲಿನ ಅನೇಕ ಕೈಗಾರಿಕೆಗಳನ್ನು ನಾಶ ಮಾಡಿದರು. ಕಮ್ಯೂನಿಸ್ಟರ ಆಡಳಿತದಲ್ಲಿ ಕೈಗಾರಿಕಾಕರಣವಾಗುತ್ತಿದೆ. ಇಲ್ಲಿ ಪ್ರಜಾಪ್ರಭುತ್ವವಾದಿ ಗಣರಾಜ್ಯದ ಸ್ಥಾಪನೆಯಾದಾಗ ಎಲ್ಲ ಕೈಗಾರಿಕೆಗಳೂ ರಾಷ್ಟ್ರೀಕರಣಗೊಂಡುವು. ಉತ್ತರ ದಕ್ಷಿಣ ಕೊರಿಯ ಯುದ್ಧದಿಂದ ಮತ್ತೆ ಇಲ್ಲಿನ ಅನೇಕ ಕೈಗಾರಿಕೆಗಳ ನಾಶವಾಯಿತು. ಯೋಜನಾತ್ಮಕ ಆರ್ಥಿಕ ಪ್ರಗತಿಗಾಗಿ ಇಲ್ಲಿನ ಸರ್ಕಾರ ಶ್ರಮಿಸುತ್ತಿದೆ. ವಿದ್ಯುತ್ತು, ಧಾತು ಕೈಗಾರಿಕೆ, ಯಂತ್ರರಚನೆ, ರಸಾಯನವಸ್ತು, ಜವಳಿ ಕೈಗಾರಿಕೆಗಳು ಮುಖ್ಯ. ಸುಮಾರು ಅರ್ಧದಷ್ಟು ಜನ ಈಗಲೂ ವ್ಯವಸಾಯ ನಿರತರು.

ಕೊರಿಯ ಯುದ್ಧಕಾಲದಲ್ಲಿ ಇಲ್ಲಿನ ರಸ್ತೆ ಹಾಗೂ ರೈಲು ವ್ಯವಸ್ಥೆಗಳು ಬಹುತೇಕ ನಾಶ ಹೊಂದಿದುವು. ಪುನರ್ನಿರ್ಮಿತ ರೈಲು ವ್ಯವಸ್ಥೆಯಲ್ಲಿ ಒಂದು ಭಾಗ ಶೇ. 21 ವಿದ್ಯುತ್‌ಚಾಲಿತ. ಮಾಸ್ಕೊ ಬೀಜಿಂಗ್‌ಗಳೊಂದಿಗೆ ರೈಲ್ವೆ ಸಂಪರ್ಕವಿದೆ. ಕೆಲವು ನದಿಗಳು ನೌಕಾಸಂಚಾರ ಯೋಗ್ಯವಾದವು. ಪಿಯಂಗ್ ಯಾಂಗಿನಿಂದ ಮಾಸ್ಕೊ ಬೀಜಿಂಗುಗಳಿಗೆ ವಿಮಾನ ವ್ಯವಸ್ಥೆಯಿಂಟು.

ಆಡಳಿತ, ರಕ್ಷಣಾವ್ಯವಸ್ಥೆ: ಉತ್ತರ ಕೊರಿಯದ ಈಗಿನ ಸಂವಿಧಾನದ (1948) ಪ್ರಕಾರ ಇದು ಜನತಾ ಪ್ರಜಾಪ್ರಭುತ್ವ (ಪೀಪಲ್ಸ್ ಡೆಮಾಕ್ರಸಿ). ಅಧಿಕಾರ ಜನತೆಗೆ ಸೇರಿದ್ದು, ಸಾರ್ವತ್ರಿಕ, ಸಮಾನ ಹಾಗೂ ರಹಸ್ಯ ಮತದಾನದ ಮೂಲಕ ಜನತೆ ಅಧಿಕಾರ

ಚಲಾಯಿಸುತ್ತದೆ. ಪರಮೋನ್ನತ ಜನತಾ ಸಭೆಯಲ್ಲಿ ರಾಷ್ಟ್ರದ ಅಧಿಕಾರ ನಿಯುಕ್ತವಾಗಿದೆ. ಇದರ ಅಧಿವೇಶನ ಸಾಮಾನ್ಯವಾಗಿ ವರ್ಷಕ್ಕೆರಡು ಬಾರಿ. ಈ ಸಭೆ ಸಮಾವೇಶಗೊಂಡಿಲ್ಲದಾಗ ಇದಕ್ಕೆ ಉತ್ತರವಾದಿಯಾಗಿ ನಿರೂಪ ಹೊರಡಿಸುವ ಹೊಣೆ ಅಧ್ಯಕ್ಷಮಂಡಲಿಯದು (ಪ್ರಿಸಿಡಿಯಂ). ಸಂಪುಟವು ಅದರ ಅಧೀನದಲ್ಲಿ ವ್ಯವಹರಿಸುವ ಮಂತ್ರಾಲಯಗಳು ಕೇಂದ್ರೀಯ ಆಡಳಿತಾಂಗಗಳು. ಪ್ರಧಾನಿ, ಉಪಪ್ರಧಾನಿ, ಮಂತ್ರಿಗಳು ಆಯೋಗಗಳ (ಮಂತ್ರಾಲಯಗಳ) ಅಧ್ಯಕ್ಷರು ಇನ್ನು ಕೆಲವರು ಸಂಪುಟ ಸದಸ್ಯರು. ಸಂಪುಟವನ್ನು ನೇಮಿಸುವ ಹೊಣೆ ಪರಮೋನ್ನತ ಜನತಾ ಸಭೆಯದು. ಇದು ಈ ಸಭೆಗೂ ಅಧ್ಯಕ್ಷಮಂಡಲಿಗೂ ಹೊಣೆ. (ಕೆ.ಎನ್.ಯು.)

**ಉತ್ತರ ಡಕೋಟ:** ಅಮೆರಿಕ ಸಂಯುಕ್ತ ಸಂಸ್ಥಾನದ ಉತ್ತರ ಮಧ್ಯ ಗುಂಪಿನ ರಾಜ್ಯಗಳಲ್ಲೊಂದು. ಉ.ಅ. $45^0.55'–49^0$ ಹಾಗೂ ಪ. ರೇ. $96^0.25'–104^0.3'$ ನಡುವೆ ಹಬ್ಬಿರುವ ಈ ರಾಜ್ಯ ಉತ್ತರ ಅಮೆರಿಕ ಖಂಡ ಪ್ರದೇಶದ ನಟ್ಟನಡುವಿನಲ್ಲಿದೆ. ಉತ್ತರಕ್ಕೆ ಕೆನಡದ ಪ್ರಾಂತ್ಯಗಳಾದ ಮ್ಯಾನಿಟೋಬ ಮತ್ತು ಸಸ್ಕ್ಯಾಚವನ್, ಪೂರ್ವದಲ್ಲಿ ಕೆಂಪು ನದಿಯಾಚೆಗೆ ಮಿನಿಸೋಟ, ದಕ್ಷಿಣಕ್ಕೆ ದಕ್ಷಿಣ ಡಕೋಟ ಹಾಗೂ ಪಶ್ಚಿಮಕ್ಕೆ ಮಾಂಟಾನ. ಪೂರ್ವಪಶ್ಚಿಮವಾಗಿ ಪರಮಾವಧಿ ಉದ್ದ 546 ಕಿಮೀ. ದಕ್ಷಿಣೋತ್ತರವಾಗಿ ಗರಿಷ್ಠ ಅಗಲ 341 ಕಿಮೀ. ವಿಸ್ತೀರ್ಣ 1,83,295 ಚ.ಕಿಮೀ. ಪೂರ್ವಭಾಗದ ಗಡಿಯಾದ ಕೆಂಪುನದಿಯನ್ನು ಬಿಟ್ಟರೆ ಉಳಿದ ಮೂರು ಕಡೆಯೂ ಇದರ ಎಲ್ಲೆ ಕೃತಕ. ರಾಜ್ಯಕ್ಕೆ ಈ ಹೆಸರು ಬಂದಿರುವುದು ಅಲ್ಲಿನ ಆದಿವಾಸಿಗಳಾದ ಡಕೋಟ ಅಥವಾ ನ್ಯೂ ಇಂಡಿಯನರಿಂದ, ಡಕೋಟ ಎಂದರೆ ಮಿತ್ರರೆಂದು ಅರ್ಥ. ಅಲುಗು ಬಾಲದ ರಾಜ್ಯ ಅಥವಾ ಫ್ಲಿಕರ್ ಟೇಲ್ ಸ್ಟೇಟ್ ಎಂಬ ಅಡ್ಡಹೆಸರು ಇದಕ್ಕೆ ಬಂದಿರುವುದಕ್ಕೆ ಇಲ್ಲಿ ಸಾಮಾನ್ಯವಾಗಿರುವ ಪುಟ್ಟ ಅಳಿಲು ಕಾರಣ.

ಮೇಲ್ಮೈ ಲಕ್ಷಣ: ಉತ್ತರ ಡಕೋಟವನ್ನು ಪೂರ್ವಪಶ್ಚಿಮವಾಗಿ ಮೂರು ಮುಖ್ಯ ಮೈದಾನಪ್ರದೇಶಗಳಾಗಿ ವಿಭಾಗಿಸಬಹುದು. ಇದರಲ್ಲಿ ಅತ್ಯಂತ ಪೂರ್ವಕ್ಕಿರುವ ಬಯಲು ಕೆಂಪು ನದಿಯ ಕಣಿವೆಯ ಪ್ರದೇಶ. ಇದು ಪುರಾತನ ಭೂಕಲ್ಪದಲ್ಲಿ ಒಂದು ಹಿಮನದೀಪಾತ್ರ. ಈ ಕಣಿವೆಯ ಪಶ್ಚಿಮಕ್ಕೆ ಮಿಸೂರಿ ಪ್ರಸ್ಥಭೂಮಿಯ ಒಳಭಾಗಕ್ಕಿರುವ ಮೈದಾನ ಪ್ರದೇಶ ಸಮುದ್ರಮಟ್ಟಕ್ಕಿಂತ 382 ರಿಂದ 470 ಮೀ ಎತ್ತರವಿದೆ. ಇದರ ವಿಸ್ತಾರ ಪೂರ್ವ ಪಶ್ಚಿಮವಾಗಿ 113 ಕಿಮೀ, ದಕ್ಷಿಣೋತ್ತರವಾಗಿ 322 ಕಿಮೀ. ಅಲ್ಲಲ್ಲಿರುವ ಸರೋವರಗಳ ಪೈಕಿ ಡೆವಿಲ್ಸ್ ಲೇಕ್ ಅತಿ ದೊಡ್ಡದು. ಟರ್ಟ್ಲ್ ಪರ್ವತಗಳು ಈ ಪ್ರದೇಶದ ಉತ್ತರದ ಕಿರೀಟ.

ಈ ರಾಜ್ಯದ ಮೂರನೆಯ ಹಾಗೂ ಅತಿ ಎತ್ತರದ ಭಾಗ ಮೆಟ್ಟಲಿನಂತಿದ್ದು ವಾಯವ್ಯ ಈಶಾನ್ಯವಾಗಿ ಹಬ್ಬಿರುವ ಪ್ರದೇಶವೇ ಮಿಸೂರಿ ಪ್ರಸ್ಥಭೂಮಿ. ಇಲ್ಲಿ ಮಿಸೂರಿ, ಚಿಕ್ಕ ಮಿಸೂರಿ, ಹಾರ್ಟ್, ಕ್ಯಾನನ್ ಬಾಲ್ ಮತ್ತು ನೈಫ್ ನದಿಗಳು ಮುಖ್ಯ. ಇವೇ ಅಲ್ಲದೆ ಅನೇಕ ಚಿಕ್ಕಪುಟ್ಟ ತೊರೆಗಳು ಪ್ರದೇಶದ ಎಲ್ಲ ದಿಕ್ಕುಗಳಲ್ಲೂ ಹರಡಿವೆ. ಎದ್ದು ನಿಂತಂತೆ ತೋರುವ ಕೋಡುಗಲ್ಲುಗಳ ಶಿಖರಗಳು ಶಿಲಾಪೀಠಗಳು ಇಲ್ಲಿನ ವೈಶಿಷ್ಟ್ಯ. ಮಳೆಯ ಹೊಡೆತ, ನದಿಗಳ ಕೊರೆತಗಳಿಂದಾಗಿ ಇಲ್ಲಿನ ನೆಲ ತುಂಡು ತುಂಡಾಗಿದೆ. ಇದರಿಂದಾಗಿ ಈ ನೆಲ ಬೇಸಾಯಕ್ಕೆ ನಿರುಪಯುಕ್ತ. ಆದರೆ ಇಲ್ಲಿ ಸೋಡಿಯಂ ಸಲ್ಫೇಟ್, ಕಲ್ಲಿದ್ದಲು ಮುಂತಾದ ಖನಿಜಗಳು ಹೇರಳ. ಈ ರಾಜ್ಯದ ಅತ್ಯುನ್ನತ ಪ್ರದೇಶವೆಂದರೆ ಸಮುದ್ರ ಮಟ್ಟದಿಂದ 1051 ಮೀ ಎತ್ತರವಿರುವ ಬ್ಲ್ಯಾಕ್ ಬ್ಯೂಟ್ ಎಂಬ ಒಂಟಿ ಗುಡ್ಡ.

ವಾಯುಗುಣ: ಉತ್ತರ ಡಕೋಟದ್ದು ಖಂಡಾಂತರ ವಾಯುಗುಣ. ಉಷ್ಣತೆಯ ಏರಿಳಿತದ ವ್ಯಾಪ್ತಿ ಬಲು ಹೆಚ್ಚು. ಬೇಸಗೆಯಲ್ಲಿ $37.8^0$ ಸೆ. ಏರುವ ಪಾದರಸ, ಚಳಿಗಾಲದಲ್ಲಿ ತಳಕ್ಕಿಳಿದು $-0^0$ ಸೆ. ಮುಟ್ಟುತ್ತದೆ. ಮಳೆ ಆಗ್ನೇಯದಲ್ಲಿ 53 ಸೆಂಮೀ; ನೈಋತ್ಯದಲ್ಲಿ 35 ಸೆಂಮೀ. ಇದರಲ್ಲಿ ಹೆಚ್ಚು ಪಾಲು ವಸಂತಕಾಲದ ಉತ್ತರಾರ್ಧದಲ್ಲೂ ಬೇಸಗೆಯಲ್ಲೂ ಬೀಳುತ್ತದೆ. ಒಂದು ವರ್ಷ ಸುವೃಷ್ಟಿಯಾದರೆ ಇನ್ನೊಂದು ವರ್ಷ ಅನಾವೃಷ್ಟಿ.

ಸ್ವಾಭಾವಿಕ ಸಸ್ಯವರ್ಗ: ಹೆಚ್ಚಿನ ಸಂಖ್ಯೆಯಲ್ಲಿ ಗಿಡಮರಗಳು ಕೆಂಪು ನದೀ ಕಣಿವೆಯಲ್ಲು ಟರ್ಟ್ಲ್ ಪರ್ವತ ಪ್ರದೇಶಗಳಲ್ಲೂ ಕೆನಡದ ಎಲ್ಲೆಯ ಬೆಟ್ಟಗುಡ್ಡಗಳಲ್ಲೂ ಕಂಡುಬರುತ್ತವೆ. ಡೆವಿಲ್ಸ್ ಲೇಕ್ ಹಾಗೂ ಇತರ ಸರೋವರಗಳ ಸುತ್ತಮುತ್ತ ಸ್ವಾಭಾವಿಕ ಸಸ್ಯವರ್ಗವುಂಟು. ಇಲ್ಲಿ ಪಾಪ್ಲರ್, ಕಾಟನ್‌ವುಡ್ ಸಾಮಾನ್ಯ. ಮಿಸೂರಿ ನದಿಯ ದಡಗಳಲ್ಲು ಬ್ಯಾಡ್‌ಲ್ಯಾಂಡ್ ಪ್ರದೇಶದಲ್ಲು ಪೊದೆ ಮತ್ತು ಕುರುಚಲು ವಿಶೇಷ.

ಖನಿಜಸಂಪತ್ತು: ಉತ್ತರ ಡಕೋಟದಲ್ಲಿ ಹೆಚ್ಚಿನ ಪ್ರಮಾಣದ ಲಿಗ್ನೈಟ್ ಕಲ್ಲಿದ್ದಲು ಮತ್ತು ಸ್ಲೇಟುಕಲ್ಲು ಗಣಿಗಳಿವೆ. ಇಲ್ಲಿ ಹೇರಳವಾಗಿ ದೊರಕುವ ಸ್ಲೇಟುಕಲ್ಲು ಮತ್ತು ಜೇಡಿಮಣ್ಣುಗಳು ಇಟ್ಟಿಗೆ, ಹೆಂಚು ಮತ್ತು ಪಿಂಗಾಣಿ ಕೈಗಾರಿಕೆಗಳ ಸ್ಥಾಪನೆಗೆ ಸಹಾಯಕ. ಈ ರಾಜ್ಯದ ಉತ್ತರ ಭಾಗದಲ್ಲಿ ದೊರಕುವ ಬೆಣಚುಕಲ್ಲು ಇನ್ನೊಂದು ಮುಖ್ಯ ಖನಿಜ.

ವ್ಯವಸಾಯ ಮತ್ತು ಪಶುಪಾಲನೆ: ಈ ರಾಜ್ಯ ವ್ಯವಸಾಯವನ್ನೇ ಹೆಚ್ಚಾಗಿ ಅವಲಂಬಿಸಿದೆ. ಸಾಗುವಳಿ ಕ್ಷೇತ್ರಗಳ ವಿಸ್ತರಣೆಯಿಂದ ಬೇಸಾಯದಲ್ಲಿ ಯಂತ್ರಗಳ ಪಾತ್ರ ಹೆಚ್ಚುತ್ತಿದೆ. ಈ ಕೃಷಿ ಕ್ಷೇತ್ರಗಳ ಸರಾಸರಿ ವಿಸ್ತೀರ್ಣ ಸು. 320 ಹೆ. ಒಟ್ಟು ಫಸಲಿನ ಮೌಲ್ಯದಲ್ಲಿ ಅರ್ಧಪಾಲು ವಸಂತಗೋದಿಯದು. ಬಾರ್ಲಿ, ಫ್ಲಾಕ್ಸ್ ಸೀಡ್, ಡುರಂ ಗೋದಿ, ತೊಕೆ ಗೋದಿ (ಓಟ್ಸ್), ಆಲೂಗಡ್ಡೆ, ಸೋಯಅವರೆ, ಸಕ್ಕರೆಬೀಟ್, ಮೆಕ್ಕೆಜೋಳ, ಹುಲ್ಲು–ಇತರ ಫಸಲು.

ಪಶುಪಾಲನೆ ಇನ್ನೊಂದು ಕಸುಬು. ದನಕರು, ಹಂದಿ, ಕುರಿಗಳ ಪೋಷಣೆಯಲ್ಲದೆ ಕೋಳಿ ಸಾಕಣೆಯೂ ಹೆಚ್ಚುತ್ತಿವೆ. ಹೈನು ಲಾಭಕರ. ಸಹಕಾರಿ ಕ್ರಯ–ವಿಕ್ರಯಗಳಲ್ಲಿ ಇಲ್ಲಿನ ರೈತರಿಗೆ ಹೆಚ್ಚಿನ ಆಸಕ್ತಿ. ಸಹಕಾರಿ ಮಾರಾಟ ಹಾಗೂ ಬಳಕೆದಾರರ ಸಹಕಾರ ಸಂಸ್ಥೆಗಳು ದ್ವಿತೀಯ ಯುದ್ಧಾನಂತರ ಕಾಲದಲ್ಲಿ ಹೆಚ್ಚಾಗಿ ಬೆಳೆದಿವೆ.

ಮಿಸೂರಿ ಜಲಾನಯನ ಪ್ರದೇಶದಲ್ಲಿ ಸಂಯುಕ್ತ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಕೈಗೊಂಡಿರುವ ಜಲಾಭಿವೃದ್ಧಿ ಯೋಜನೆಗಳಿಂದ ನೀರಾವರಿ ಸೌಲಭ್ಯವೇ ಅಲ್ಲದೆ ವಿದ್ಯುತ್ತಿನ ಉತ್ಪತ್ತಿಯೂ ಸಾಧ್ಯವಾಯಿತು. ಮಿಸೂರಿಗೆ ಅಡ್ಡಲಾಗಿ ಕಟ್ಟಿದ ಗ್ಯಾರಿಸನ್ ಕಟ್ಟೆ, ಹಾರ್ಟ್ ನದಿಗೆ ಅಡ್ಡಲಾಗಿರುವ ಡಿಕಿನ್ಸನ್ ಮತ್ತು ಹಾರ್ಟ್ ಬ್ಯೂಟ್ ಕಟ್ಟೆ, ಜೇಮ್ಸ್ ನದಿಗೆ ಅಡ್ಡಲಾದ ಜೇಮ್ಸ್ ಟೌನ್ ಕಟ್ಟೆ, ಷಿಯೆನ್ ನದಿಯ ಮೇಲಣ ಬಾಲ್ಡ್‌ಹಿಲ್ ಕಟ್ಟೆ, ಫಾರ್ಕ್ ನದಿಯ ದಕ್ಷಿಣ ಕವಲಿನ ಹಮ್ಮೆ ಕಟ್ಟೆಗಳು ಮುಖ್ಯ.

ಕೈಗಾರಿಕೆಗಳು: ಉತ್ತರ ಡಕೋಟದಲ್ಲಿ ಕೈಗಾರಿಕೆಗಳು ಬಹಳ ತಡವಾಗಿ ಪ್ರಾರಂಭವಾದುವು. ಇಲ್ಲಿನ ವಾಯುಗುಣ ಸಮರ್ಪಕವಾಗಿಲ್ಲದ್ದೂ ಜನಭರಿತ ಪೇಟೆಗಳಿಂದ ಈ ರಾಜ್ಯ ದೂರದಲ್ಲಿರುವುದೂ ಕೈಗಾರಿಕೆಗೆ ಒದಗಿ ಬರುವ ಸಾಮಗ್ರಿ ಇಲ್ಲಿ ಹೆಚ್ಚಾಗಿ ಉತ್ಪಾದನೆಯಾಗದಿದ್ದದ್ದೂ ಇದಕ್ಕೆ ಕಾರಣ. ಇಲ್ಲಿನ ಕೈಗಾರಿಕೆಗಳು ಮುಖ್ಯವಾಗಿ ಕೃಷಿ ಮತ್ತು ಪಶುಪಾಲನೆಗೆ ಸಂಬಂಧಪಟ್ಟಂಥವು. ಬೆಣ್ಣೆ, ಗಿಣ್ಣು, ಹಾಲಿನ ಪುಡಿ ಇವೇ ಮುಂತಾದ ಹೈನು ವಸ್ತುಗಳ ಉತ್ಪಾದನೆಯಾಗುತ್ತಿದೆ. ಹಿಟ್ಟಿನ ಗಿರಣಿಗಳು ರಾಜ್ಯಾದ್ಯಂತ ಹರಡಿವೆ. ಮಾಂಸ ಸಂವೇಷ್ಟನ ಕೈಗಾರಿಕೆಗಳು ಅಲ್ಲಲ್ಲಿ ಉಂಟು. ಆಲೂಗೆಡ್ಡೆಯ ಆಹಾರ ತಯಾರಿಕೆ, ಕೃಷಿ ಉಪಕರಣ ಕೈಗಾರಿಕೆ, ಕಟ್ಟಡ ವಸ್ತು ತಯಾರಿಕೆ ಇವೂ ಮುಖ್ಯ. ಇಲ್ಲಿನ ಉದ್ಯಮಗಳು ಸಾಮಾನ್ಯವಾಗಿ ಸಣ್ಣ ಪ್ರಮಾಣದವು.

ಉತ್ತರ ಡಕೋಟದ ಜನಸಂಖ್ಯೆ 6,42,200 (2000). ಜನಸಾಂದ್ರತೆ ಚ.ಕಿಮೀ.ಗೆ 12 (ಅಮೆರಿಕದಲ್ಲಿ 49.6) ಗ್ರಾಮಾಂತರ ವಾಸಿಗಳದೇ ಅಧಿಕ ಪ್ರಮಾಣ ಶೇ. 64.8. ರಾಜಧಾನಿ ಬಿಸ್ಮಾರ್ಕ್ (ಜನಸಂಖ್ಯೆ 50,000). ಇತರ ನಗರಗಳು ಫಾರ್ಗೋ (70,500), ಗ್ರಾಂಡ್ ಫೋರ್ಕ್ಸ್ (46,000), ಮಿನಟ್ (36,650). (ಕೆ.ಎನ್.ಯು.)

**ಉತ್ತರ ಪಿನಾಕಿನಿ:** ಕೋಲಾರ ಜಿಲ್ಲೆಯ ಕೇಶವ ಬೆಟ್ಟದಲ್ಲಿ ಹುಟ್ಟಿ ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿ ಹರಿದು ನೆಲ್ಲೂರು ಜಿಲ್ಲೆಯ ನೆಲ್ಲೂರಿನ ಬಳಿ ಬಂಗಾಲಕೊಲ್ಲಿಯನ್ನು ಸೇರುವ ನದಿ. ಕೋಲಾರ ಜಿಲ್ಲೆಯ ಎರಡು ಪಟ್ಟಣಗಳಾದ ಮಂಚೇನಹಳ್ಳಿ ಮತ್ತು ಗೌರಿಬಿದನೂರು ಈ ನದಿಯ ದಡದ ಮೇಲಿವೆ. ಇದು ಧನುಸ್ಸಿನಾಕಾರದಲ್ಲಿರುವುದರಿಂದ ಇದಕ್ಕೆ ಪಿನಾಕಿನಿ ಎಂಬ ಹೆಸರು ಬಂದಿರಬಹುದು. ಇದನ್ನು ಉತ್ತರ ಪೆನ್ನಾರ್ ಎಂದೂ ಕರೆಯುತ್ತಾರೆ. ಹೆಚ್ಚು ಮರಳನ್ನು ಹೊತ್ತು ತರುವುದು. ಚಿತ್ರಾವತಿ, ಕುಮುದ್ವತಿಗಳು ಇದರ ಉಪನದಿಗಳು. ಇತ್ತೀಚೆಗೆ ಚಿತ್ರಾವತಿ ನದಿಗೆ ಅಡ್ಡಲಾಗಿ ಅಡ್ಡಗಟ್ಟೆಯನ್ನು ನಿರ್ಮಿಸಲಾಗಿದೆ. ಈ ನದಿಯ ಕರ್ನಾಟಕ ರಾಜ್ಯದ ಜಲಾನಯನ ಪ್ರದೇಶದಲ್ಲಿ ಸು. 116 ಕೆರೆಗಳಿವೆ. ಜಕ್ಕಲಮಡಗು ಮತ್ತು ಶ್ರೀನಿವಾಸ ಸಾಗರಗಳು ಇದರ ಎರಡು ಮುಖ್ಯ ಅಣೆಕಟ್ಟುಗಳು.

ವಿದುರಾಶ್ವತ್ಥ ಪುಣ್ಯಕ್ಷೇತ್ರ ಇರುವುದು ಇದರ ದಡದಲ್ಲೇ. ಇಲ್ಲಿನ ಪವಿತ್ರ ಅಶ್ವತ್ಥಮರವನ್ನು ಮಹಾಭಾರತದ ವಿದುರನೇ ನೆಟ್ಟನೆಂದು ನಂಬಿಕೆ. ಸ್ವಾತಂತ್ರ್ಯ ಹೋರಾಟದಲ್ಲಿಯೂ ವಿದುರಾಶ್ವತ್ಥ ಪ್ರಸಿದ್ಧಿಯಾದುದು. *

**ಉತ್ತರ ಪ್ರದೇಶ:** ಭಾರತದ ಒಂದು ರಾಜ್ಯ. ಉತ್ತರಭಾರತದ ವಿಶಾಲ ಬಯಲಿನ ನಡುಭಾಗದಲ್ಲಿದೆ. ಹಿಂದಿನ ಬ್ರಿಟಿಷ್ ಭಾರತದಲ್ಲಿ 1902ರ ವರೆಗೆ ವಾಯವ್ಯ ಪ್ರಾಂತ್ಯಗಳೆಂದೂ 1902–1935ರ ವರೆಗೆ ಆಗ್ರ–ಔಧ್ ಸಂಯುಕ್ತ ಪ್ರಾಂತ್ಯಗಳೆಂದೂ ಅಲ್ಲಿಂದೀಚೆಗೆ ಸಂಯುಕ್ತ ಪ್ರಾಂತ್ಯಗಳೆಂದು ಕರೆಯಲಾಗುತ್ತಿದ್ದ ಪ್ರದೇಶವೇ ಸ್ಥೂಲವಾಗಿ ಈ ರಾಜ್ಯದ ವ್ಯಾಪ್ತಿ. ಉ. ಅ. $24^0–30^0$ ಮತ್ತು ಪೂ. ರೇ. $77^0–85^0$ ಗಳ ನಡುವೆ ಇದೆ. ಹಿಂದಿನ ದೇಶೀಯ ಸಂಸ್ಥಾನಗಳಾದ ಬನಾರಸ್, ತೆಹರೀ–ಘರ್‌ವಾಲ್ ಮತ್ತು ರಾಂಪುರಗಳನ್ನೂ ಈ ರಾಜ್ಯಕ್ಕೆ ಸೇರಿಸಲಾಗಿದ್ದಿತು. ಇಂದು ಇದರ ವಾಯವ್ಯ ಭಾಗವನ್ನು ಉತ್ತರಾಂಚಲ ರಾಜ್ಯವಾಗಿ ಪ್ರತ್ಯೇಕಿಸಲಾಗಿದೆ. ಇದರ ವಿಸ್ತೀರ್ಣ 2,36,286 ಚ.ಕಿಮೀ. ಜನಸಂಖ್ಯೆ 16,60,52,859. ರಾಜಧಾನಿ ಲಖನೌ. ಜನಸಂಖ್ಯೆ 25,41,101. ವಿಸ್ತೀರ್ಣದಲ್ಲಿ ಇದು ಭಾರತದ ನಾಲ್ಕನೆಯ ರಾಜ್ಯ. ಜನಸಂಖ್ಯೆಯಲ್ಲಿ ಪ್ರಥಮ. ರಾಜ್ಯವನ್ನು 70 ಜಿಲ್ಲೆಗಳಾಗಿ ವಿಂಗಡಿಸಲಾಗಿದೆ.

ಯಮುನಾ ನದಿಯೇ ಪಶ್ಚಿಮ ಗಡಿಯಾಗಿರುವ ಉತ್ತರ ಪ್ರದೇಶ ಹೈಮಾಚಲ ಸಾನ್ನಿಧ್ಯದಲ್ಲಿದೆಯೆನ್ನಬಹುದು. ಉತ್ತರದ ಎಲ್ಲೆಯೊಳಗೆ ಹಿಮಾಲಯದ ಕಾಲುಚಾಚಿದೆ. ಹಿಮವಂತನ ಶಿಖೆಯೇ ಭಾರತ–ಟಿಬೆಟ್ ಮೇರೆ. ಸ್ವಲ್ಪ ಪೂರ್ವಕ್ಕೆ ಸಾಗಿದರೆ ಸಿಗುವುದೇ




ನೇಪಾಳ. ಉತ್ತರ ಪ್ರದೇಶದ ದಕ್ಷಿಣ ಗಡಿಯಲ್ಲಿ ಗಂಗೆಯ ಬಯಲೂ ವಿಂಧ್ಯ ಪ್ರಸ್ಥಭೂಮಿಯೂ ಒಂದನ್ನೊಂದು ಅಪ್ಪುತ್ತವೆ. ಭಾರತದ ರಾಜಧಾನಿಯಾದ ದೆಹಲಿ ಇದರ ಪಶ್ಚಿಮ ಗಡಿಯಂಚು. ಭಾರತ ಪರ್ಯಾಯದ್ವೀಪದ ಕಂಠದಂತಿರುವ ಉತ್ತರ ಪ್ರದೇಶವನ್ನು ಹಾರದ ಮಣಿಗಳಂತೆ ಬಳಸಿರುವ ರಾಜ್ಯಗಳೆಂದರೆ ಹಿಮಾಚಲ ಪ್ರದೇಶ, ಹರಿಯಾಣ, ರಾಜಸ್ತಾನ, ಮಧ್ಯಪ್ರದೇಶ ಮತ್ತು ಬಿಹಾರ. ಕೆಲವು ವರ್ಷಗಳ ಹಿಂದೆ ಉತ್ತರ ಪ್ರದೇಶದ ವಾಯವ್ಯ ಭಾಗ ಸು. 55,845 ಚ.ಕಿಮೀ ಪ್ರದೇಶವನ್ನು ಪ್ರತ್ಯೇಕಿಸಿ, ಉತ್ತರಾಂಚಲ್ ಎಂಬ ರಾಜ್ಯವಾಗಿ ಪರಿಗಣಿಸಲಾಗಿದೆ. ಅದರ ರಾಜಧಾನಿ ಡೆಹರಾಡೂನ್.

ಮೇಲ್ಮೈಲಕ್ಷಣ: ಭೌಗೋಳಿಕವಾಗಿ ಈ ರಾಜ್ಯವನ್ನು ವಿಶಾಲ ಬಯಲು, ಬುಂದೇಲ್ ಖಂಡ (ವಿಂಧ್ಯ ಪ್ರಸ್ಥಭೂಮಿಯ ಅಂಚು) ಎಂದು ಎರಡು ವಿಭಾಗ ಮಾಡಬಹುದು.

ಈ ರಾಜ್ಯ ಗಂಗ–ಯಮುನ ನದಿಗಳ ವಿಶಾಲಬಯಲು. ರಾಜ್ಯದ ಪಶ್ಚಿಮ ಗಡಿಯಲ್ಲಿ ಹರಿಯುವ ಯಮುನ ಮುಂದೆ ರಾಜ್ಯದೊಳಗೆ ಸಾಗಿ ಅಲಹಾಬಾದಿನ ಬಳಿ ಗಂಗೆಯಲ್ಲಿ ಸಂಗಮವಾಗುತ್ತದೆ. ರಾಮಗಂಗಾ, ಗೋಮತಿ, ಘಾಘ್ರಾ – ಇವು ಗಂಗೆ ಯಮುನೆಯರ ಉಪನದಿಗಳು. ಹಿಮಾಲಯದ ಹಿಮ ಮತ್ತು ಮಳೆಗಳಿಂದ ಉಬ್ಬಿ ಹರಿಯುವ ನದಿಗಳು ಸ್ವಲ್ಪ ದೂರ ಹಿಮಾಲಯದ ಮುಖ್ಯ ಶ್ರೇಣಿಗಳ ಗುಂಟ ಕಣಿವೆಯಲ್ಲಿ ಸಾಗಿ ಆಳ ಕಮರಿಗಳನ್ನು ತೋಡಿರುವುದರಿಂದ ಇಲ್ಲಿ ಕಟ್ಟೆ ಕಟ್ಟಲು ಪ್ರಶಸ್ತವಾದ ಅನೇಕ ಸ್ಥಳಗಳುಂಟು.

ನದಿಗಳು ತಂದು ತುಂಬಿದ ಮೆಕ್ಕಲುಮಣ್ಣಿನಿಂದ ಫಲವತ್ತಾದ ಬಯಲು ಹೆಚ್ಚೇನೂ ಎತ್ತರವಿಲ್ಲ. ಪಶ್ಚಿಮದಿಂದ ಪೂರ್ವಕ್ಕೆ–ಬಂಗಾಲ ಕೊಲ್ಲಿಯೆಡೆಗೆ–ಸ್ವಲ್ಪ ಸ್ವಲ್ಪವಾಗಿ ತಗ್ಗಿ ಸಾಗುವ ಈ ಬಯಲಿನ ಪಶ್ಚಿಮದ ಅಂಚು ಸಮುದ್ರಕ್ಕಿಂತ 1,600 ಕಿಮೀ ದೂರವಿದ್ದರೂ ಇದು ಸಮುದ್ರಮಟ್ಟಕ್ಕಿಂತ ಕೇವಲ 215 ಮೀ ಎತ್ತರ ಮಾತ್ರ. ಮೈದಾನದ ಉತ್ತರ ಭಾಗದಲ್ಲಿ ಥಟ್ಟನೆ ಬರುವ ಪ್ರವಾಹಗಳಿಂದ ನದಿಗಳ ಪಾತ್ರ ಬದಲಾಗುವುದರಿಂದ ಸಂಭವಿಸುವ ಕಷ್ಟನಷ್ಟ ಅಧಿಕ. ದಕ್ಷಿಣದ ಎಲ್ಲೆಯಲ್ಲಿರುವ ಎತ್ತರ ನೆಲ ಬಲು ಕಿರಿದು. ಬುಂದೇಲ್‌ಖಂಡವೆಂದು ಪ್ರಸಿದ್ಧವಾದ ಝಾನ್ಸಿ ಜಿಲ್ಲಾಪ್ರದೇಶವನ್ನು ಬಿಟ್ಟರೆ ಉಳಿದ ಭಾಗ ಅಷ್ಟೇನೂ ಫಲವತ್ತಲ್ಲ.

ವಾಯುಗುಣ: ಕರ್ಕಾಟಕ ಸಂಕ್ರಾಂತಿ ವೃತ್ತಕ್ಕೆ ಉತ್ತರದಲ್ಲಿದ್ದರೂ ರಾಜ್ಯದಲ್ಲಿ ಉಷ್ಣವಲಯದ ವಾಯುಗುಣ ಕಂಡುಬರುತ್ತದೆ. ಉತ್ತರದಲ್ಲಿರುವ ಎತ್ತರ ಪರ್ವತಗಳನ್ನುಳಿದು ಇತರ ಭಾಗಗಳಲ್ಲಿ ಮಾನ್‌ಸೂನ್ ಮಾದರಿಯ ವಾಯುಗುಣವಿದೆ. ಬೇಸಗೆಯಲ್ಲಿ ಮಧ್ಯದ ಮೈದಾನದ ಉಷ್ಣತೆ $47^0$ ಸೆಂ. ಜನವರಿಯ ಉಷ್ಣತೆ $13^0$ ಸೆಂ. ಆಗಾಗ್ಗೆ ಶೀತಮಾರುತಗಳೂ ಬೀಸುವುದುಂಟು. ಮಾರ್ಚಿ ತಿಂಗಳ ಮಧ್ಯದಲ್ಲಿ ಚಳಿಗಾಲ ಅಂತ್ಯವಾಗುತ್ತದೆ.

ಜೂನ್ ತಿಂಗಳ ಅಂತ್ಯದಿಂದ ಸೆಪ್ಟೆಂಬರ್ ವರೆಗೆ ಮಳೆಗಾಲ. ಪಶ್ಚಿಮದಿಂದ ಪೂರ್ವದ ಕಡೆಗೆ ಸಾಗಿದಂತೆ ಮಳೆ ಅಧಿಕ. ದೆಹಲಿಯಲ್ಲಿ 64 ಸೆಂಮೀ, ಆದರೆ ಅಲಹಾಬಾದಿನಲ್ಲಿ 100 ಸೆಂಮೀ.

ರಾಜ್ಯ ಫಲವತ್ತಾದ ಮೆಕ್ಕಲುಮಣ್ಣಿನಿಂದ ಕೂಡಿದೆ. ನದಿಗಳ ಕೆಳಕಣಿವೆಗಳಲ್ಲಿ ಹೊಸ ಮೆಕ್ಕಲು ಮೇಲ್ಕಣಿವೆಗಳಲ್ಲಿ ಹಳೆ ಮೆಕ್ಕಲು ಸಾಮಾನ್ಯ. ಮೇಲ್ಕಣಿವೆಯ ಹುಡಿಮಣ್ಣು ಅಷ್ಟೇನೂ ಫಲವತ್ತಲ್ಲ. ಕೆಳಮೈದಾನದ ಕಪ್ಪು ಬಣ್ಣದ ಜಿಗಟು ಮಣ್ಣು ಸಾರಮಯ. ಉತ್ತರದ ಪರ್ವತಗಳ ಮೇಲೆ ಸಮಶೀತೋಷ್ಣ ಪ್ರದೇಶದ ಮಣ್ಣು ದಕ್ಷಿಣದ ಬೆಟ್ಟಗಳಲ್ಲಿ ಸಾಧಾರಣ ಫಲವತ್ತಾದ ಕೆಂಪು ಮಣ್ಣು ಸಾಮಾನ್ಯ.

ಖನಿಜಗಳು: ರಾಜ್ಯದ ಬಹುಭಾಗ ಇತ್ತೀಚಿನ ಶಿಲಾಸ್ತರಗಳಿಂದ ಕೂಡಿರುವುದರಿಂದ ಹೆಚ್ಚು ಖನಿಜಗಳಿಲ್ಲ. ಹಮೀರ್‌ಪುರ, ಝಾನ್ಸಿಗಳಲ್ಲಿ ಗಾಜಿನ ತಯಾರಿಕೆಗೆ ಉಪಯುಕ್ತವಾದ ಉತ್ತಮ ಮರಳು ಅಲಹಾಬಾದ್, ವಾರಾಣಸಿ, ಬಂಡ ಜಿಲ್ಲೆಗಳಲ್ಲಿ ದೊರಕುತ್ತವೆ. ಸಿಮೆಂಟಿನ ತಯಾರಿಕೆಗೆ ಒದಗುವಂಥ ಸುಣ್ಣಕಲ್ಲು, ಕಟ್ಟಡ ಕಲ್ಲು, ಸಾಲ್ಟ್ ಪೀಟರ್, ಬಣ್ಣದ ಮಣ್ಣು ಮುಂತಾದವೂ ರಾಜ್ಯದ ಕೆಲವೆಡೆ ಉಂಟು. ಮ್ಯಾಗ್ನಸೈಟ್, ಸುಣ್ಣಕಲ್ಲು, ಬಣ್ಣಬಣ್ಣದ ಜೇಡಿಮಣ್ಣು ಇತರ ಖನಿಜಗಳು.

ಸಸ್ಯವರ್ಗ: ಈ ರಾಜ್ಯದ ವಿಸ್ತೀರ್ಣದಲ್ಲಿ ಶೇ. 14–16ರಷ್ಟು ಅರಣ್ಯ ಪ್ರದೇಶ. ಉತ್ತರ ಹಾಗೂ ದಕ್ಷಿಣದ ಜಿಲ್ಲೆಗಳಲ್ಲಿ ಕಾಡುಗಳು ಹೆಚ್ಚು. ಜನಸಂಖ್ಯೆ ಹೆಚ್ಚಿದಂತೆ ಮರಗಳನ್ನು ಕಡಿಯಲಾಗಿದೆ. ಉತ್ತರದಲ್ಲಿ 1520 ಮೀ ಎತ್ತರದವರೆಗೆ ಉಷ್ಣವಲಯದ ಕಾಡು ಹರಡಿದೆ.

ಬೆಳೆ: ಭಾರತದ ಶೇ. 13 ವ್ಯವಸಾಯ ಪ್ರದೇಶ ಇರುವುದು ಈ ರಾಜ್ಯದಲ್ಲಿ. ಪೂರ್ವ ಭಾಗದಲ್ಲಿ ಮಳೆಯ ಪ್ರಮಾಣ 100 ಸೆಂಮೀ, ವ್ಯವಸಾಯಕ್ಕೆ ಸಾಕು. ಕಡಿಮೆ ಮಳೆ ಬೀಳುವ ಪಶ್ಚಿಮದಲ್ಲಿ ತರಿ ಬೇಸಾಯಕ್ಕೆ ನೀರಾವರಿ ಆವಶ್ಯಕ. ಬತ್ತ, ಗೋದಿ, ಬಾರ್ಲಿ, ಮೆಕ್ಕೆಜೋಳ, ಜೋಳ, ತೊಗರಿ ಮತ್ತು ಕಡಲೆಗಳು ಈ ರಾಜ್ಯದ ಮುಖ್ಯ ಆಹಾರ ಬೆಳೆಗಳು. ಎಳ್ಳು, ಸಾಸಿವೆ, ಅಗಸೆ, ನೆಲಗಡಲೆ, ಕಬ್ಬು, ಹತ್ತಿ, ಹೊಗೆಸೊಪ್ಪು, ಸೆಣಬು ಮತ್ತು ಚಹ ರಾಜ್ಯದ ಇತರ ವಾಣಿಜ್ಯ ಬೆಳೆಗಳು.

ನೀರಾವರಿ: ಉತ್ತರ ಪ್ರದೇಶದ ನೀರಾವರಿ ವ್ಯವಸ್ಥೆ ವ್ಯಾಪಕವಾಗಿ ಬೆಳೆದಿದೆ. ಬಾವಿ, ಕಾಲುವೆಗಳು ಮುಖ್ಯ. ವಿದ್ಯುತ್ತಿನ ಆಗಮನದಿಂದೀಚೆಗೆ ಕೊಳವೆ ಬಾವಿಗಳು ಹೇರಳವಾಗಿ ಉಂಟು.

ಗಂಗ ಯಮುನೆಯರ ನಡುವಣ ನೆಲಕ್ಕೆ ಪೂರ್ವಯಮುನ ಮತ್ತು ಗಂಗ ಮೇಲ್ಕಣಿವೆ ಕಾಲುವೆಯ ವ್ಯವಸ್ಥೆಗಳಿವೆ. ಅಲ್ಲಿಂದ ಮುಂದೆ ಗಂಗ ಕೆಳಕಣಿವೆ ಕಾಲುವೆ ವ್ಯವಸ್ಥೆ ಮುಖ್ಯ. ಯಮುನ ನದಿಯ ದಕ್ಷಿಣದಲ್ಲಿ ಪ್ರಸ್ಥಭೂಮಿಯ ಅಂಚಿನವರೆಗೆ ಹಬ್ಬಿರುವ ಮೈದಾನಕ್ಕೆ ಬೆಟ್ವ ಕಾಲುವೆಗಳು ನೀರುಣಿಸುತ್ತವೆ. ಗಂಗಾ ಘಾಘ್ರಾ ನದಿಗಳ ನಡುವೆ ಶಾರದಾ ಕಾಲುವೆ ಇನ್ನೊಂದು ಮುಖ್ಯ ನೀರಾವರಿ ವ್ಯವಸ್ಥೆ. ಈ ಹಳೆಯ ವ್ಯವಸ್ಥೆಗಳ ಜೊತೆಗೆ ಈಚೆಗೆ ಸ್ವತಂತ್ರ ಭಾರತದಲ್ಲಿ ನೇಪಾಳದ ಸಹಯೋಗದಿಂದ ಘಾಘ್ರಾ ನದಿಯ ಮೇಲ್ಕಣಿವೆಯಲ್ಲಿ ನೀರಾವರಿ ವ್ಯವಸ್ಥೆ ನಿರ್ಮಿತವಾಗಿದೆ.

ಪ್ರಾಣಿಗಳು: ಭಾರತದ ಇತರೆಡೆಗಳಂತೆ ಉತ್ತರ ಪ್ರದೇಶದಲ್ಲೂ ವ್ಯವಸಾಯಕ್ಕೆ ಉಪಯುಕ್ತವಾದ ಅನೇಕ ಪ್ರಾಣಿಗಳನ್ನು ಸಾಕುತ್ತಾರೆ. ಎತ್ತು, ಹಸು, ಎಮ್ಮೆ, ಕುರಿ ಮತ್ತು ಮೇಕೆಗಳು ಅಧಿಕ ಸಂಖ್ಯೆಯಲ್ಲಿವೆ. ಕುದುರೆ, ಹೇಸರಗತ್ತೆಗಳ ಜೊತೆಗೆ ಒಂಟೆ, ಆನೆಗಳನ್ನೂ ಸಾಮಗ್ರಿ ಸಾಗಿಸಲು ಬಳಸಲಾಗುತ್ತದೆ. ಕಾಡು ಕಡಿಯುವ ಕ್ರಮಗಳ ಫಲವಾಗಿ ವನ್ಯಮೃಗಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆನೆ, ಸಿಂಹ, ಕೋತಿಗಳು ಈಗಲೂ ಅನೇಕ ಕಡೆಗಳಲ್ಲಿವೆ. ಒಂದು ಕಾಲಕ್ಕೆ ದೇಶದ ಉತ್ತರ ಭಾಗ ವನ್ಯಮೃಗಗಳಿಗೆ ಹೆಸರಾಗಿತ್ತು.

ವಿದ್ಯುತ್ತು: ಅನೇಕ ನಗರಗಳಲ್ಲಿ ಉಷ್ಣ ವಿದ್ಯುಜ್ಜನಕಗಳಿವೆ. ಕಾನ್ಪುರದ್ದು ಅತ್ಯಂತ ದೊಡ್ಡದು. ಈಚೆಗೆ ಅಲೀಗಢ ಜಿಲ್ಲೆಯ ಹರ್ದ್ವಾಗಂಜಿನಲ್ಲಿ ಒಂದು ದೊಡ್ಡ ಉಷ್ಣ ವಿದ್ಯುಜ್ಜನಕಾಲಯ ಸ್ಥಾಪಿಸಲಾಗಿದೆ. ನರೋರದಲ್ಲಿ ಅಣುವಿದ್ಯುತ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ರಾಜ್ಯದಲ್ಲಿ ಅನೇಕ ಜಲವಿದ್ಯುದಾಗಾರಗಳು ಕಾರ್ಯರೂಪಕ್ಕೆ ಬಂದಿವೆ. ಇವುಗಳಲ್ಲಿ ಹಲವು ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಆರಂಭವಾದುವು.

ಸಾರಿಗೆ: ಈ ರಾಜ್ಯದಲ್ಲಿ, ಮುಖ್ಯವಾಗಿ ನದೀ ಬಯಲಿನಲ್ಲಿ, ರಸ್ತೆ ಮತ್ತು ರೈಲುಮಾರ್ಗಗಳು ಬಲೆಯಂತೆ ಹೆಣೆದುಕೊಂಡಿವೆ. ಪ್ರತಿ ಚ.ಕಿಮೀಗೆ 12 ಕಿಮೀ ರೈಲುಮಾರ್ಗವುಂಟು. ರಾಷ್ಟ್ರೀಯ ಹೆದ್ದಾರಿಗಳ ಉದ್ದ 2500 ಕಿಮೀ ರಾಜ್ಯ ಹೆದ್ದಾರಿಗಳು 12000 ಕಿಮೀ ಜಿಲ್ಲಾ ಮತ್ತು ಇತರ ರಸ್ತೆಗಳು 29,000 ಕಿಮೀ.

ವಾಣಿಜ್ಯ: ಉತ್ತರ ಪ್ರದೇಶ ವ್ಯವಸಾಯ ಪ್ರಧಾನ ರಾಜ್ಯ. ಇಲ್ಲಿಂದ ಹೊರಕ್ಕೆ ಹೋಗುವ ಸಾಮಗ್ರಿಗಳಲ್ಲಿ ವ್ಯವಸಾಯೋತ್ಪನ್ನಗಳೇ ಅಧಿಕ. ಆಹಾರ ಧಾನ್ಯ, ಸಕ್ಕರೆ, ಸಾಸಿವೆ, ಎಣ್ಣೆ, ಚರ್ಮದ ಸಾಮಾನು, ಗಾಜಿನ ಸಾಮಾನು ಮುಖ್ಯ ನಿರ್ಯಾತಗಳು. ಕಲ್ಲಿದ್ದಲು, ಪೆಟ್ರೋಲಿಯಂ, ಚಹ, ರಾಸಾಯನಿಕ ವಸ್ತುಗಳು, ಜವಳಿ, ಹತ್ತಿ, ತುಪ್ಪ, ಕಬ್ಬಿಣ ಮತ್ತು ಉಕ್ಕಿನ ವಿವಿಧ ಯಂತ್ರೋಪಕರಣಗಳು, ಗಟ್ಟಿ ಕಲ್ಲುಗಳು ಆಮದಾಗುತ್ತವೆ. ಜನಸಂಖ್ಯೆಯ ಆಧಿಕ್ಯದ ಕಾರಣದಿಂದ ಆಹಾರ ಧಾನ್ಯವೂ ಈಚೆಗೆ ಆಮದಾಗುತ್ತಿದೆ.

ಜನಸಾಂದ್ರತೆ, ಶಿಕ್ಷಣ: ಭಾರತದಲ್ಲಿನ ರಾಜ್ಯಗಳ ಪೈಕಿ ಉತ್ತರ ಪ್ರದೇಶ ಅತ್ಯಧಿಕ ಜನಸಂಖ್ಯೆ ಹೊಂದಿದೆ. ಒಟ್ಟು ಭಾರತದ ಶೇ. 9.65 ಪ್ರದೇಶ ಆಕ್ರಮಿಸಿಕೊಂಡಿರುವ ಈ ರಾಜ್ಯ ಇಡೀ ರಾಷ್ಟ್ರದ ಶೇ. 16.81 ಜನಸಂಖ್ಯೆ ಹೊಂದಿದೆ. ಜನಸಾಂದ್ರತೆ ಚ.ಕಿಮೀಗೆ 689. ಇಡೀ ಭಾರತದಲ್ಲಿ ಉತ್ತರ ಪ್ರದೇಶದಲ್ಲೇ ನಗರಗಳ ಸಂಖ್ಯೆ ಹೆಚ್ಚು. ಈ ನಗರಗಳು ರಾಜ್ಯದ ಸಾಂಸ್ಕೃತಿಕ ಹಾಗೂ ಔದ್ಯಮಿಕ ಚಟುವಟಿಕೆಗಳ ಕೇಂದ್ರಗಳು. ಅನೇಕ ಆಧುನಿಕ ಕೈಗಾರಿಕೆಗಳು ಇಲ್ಲಿ ಸ್ಥಾಪಿತವಾಗಿವೆ. ಇವು ಉನ್ನತ ವಿದ್ಯಾಕೇಂದ್ರಗಳೂ ಆಡಳಿತ ಹಾಗೂ ನ್ಯಾಯಕೇಂದ್ರಗಳೂ ಆಗಿ ನಾಡಿನ ಜನಜೀವನದ ಮೇಲೆ ಪ್ರಭಾವ ಬೀರಿವೆ. ಈ ರಾಜ್ಯದಲ್ಲಿರುವ ವಿದ್ಯಾ ಸಂಸ್ಥೆಗಳ ಸಂಖ್ಯೆ 40,000 ಕ್ಕಿಂತ ಹೆಚ್ಚು. ಇವುಗಳಲ್ಲಿ ಒಂಬತ್ತು ವಿಶ್ವವಿದ್ಯಾನಿಲಯಗಳು, 150 ಕಾಲೇಜುಗಳು. ಒಟ್ಟು ವಿದ್ಯಾರ್ಥಿಗಳು ಸಂಖ್ಯೆ 40 ಲಕ್ಷಕ್ಕೂ ಹೆಚ್ಚು.

ಗೋರಖ್‌ಪುರದಂಥ ದೊಡ್ಡ ನಗರಗಳು ವ್ಯಾಪಾರ ಕೇಂದ್ರಗಳು. ಗಂಗಾನದಿಯ ದಡದಲ್ಲಿರುವ ಹೃಷಿಕೇಶ, ಹರಿದ್ವಾರ, ವಾರಾಣಸಿಗಳು ಗಂಗಯಮುನ ಸಂಗಮದಲ್ಲಿರುವ ಅಲಹಾಬಾದ್ ಹಿಂದುಗಳ ಪವಿತ್ರ ಯಾತ್ರಾಸ್ಥಳಗಳು. ಆಗ್ರದಲ್ಲಿನ ಪ್ರಪಂಚ ಪ್ರಸಿದ್ಧ ತಾಜಮಹಲ್, ಇದರ ಬಳಿಯ ಫತೇಪುರಸಿಕ್ರಿಯಲ್ಲಿನ ಅಕ್ಬರನ ಕೋಟೆ ಇವು ಈ ರಾಜ್ಯಕ್ಕೆ ಅಸಂಖ್ಯಾತ ಪ್ರವಾಸಿಗಳನ್ನಾಕರ್ಷಿಸಿವೆ. (ಎಂ.ಕೆ.ಎಸ್.)

**ಉತ್ತರ ಮರಿಯಾನ ದ್ವೀಪಗಳು:** ಅಮೆರಿಕದ ಭಾಗವಾಗಿದ್ದು ಪಶ್ಚಿಮ ಪೆಸಿಫಿಕ್ ಸಾಗರದ ವ್ಯೂಹಾತ್ಮಕ ಸ್ಥಾನದಲ್ಲಿದೆ. ಸು. 15 ದ್ವೀಪಗಳನ್ನು ಒಳಗೊಂಡಿದ್ದು ಹವಾಯಿ ಮತ್ತು ಫಿಲಿಫೈನ್ಸ್ ನ ನಡುವೆ ಕಂಡುಬರುತ್ತದೆ. ಇದರ ಅಕ್ಷಾಂಶ ಮತ್ತು ರೇಖಾಂಶ ಸ್ಥಾನವು ಕ್ರಮವಾಗಿ $15^0 1'$ ಉ. ಹಾಗೂ $145^0 4'$ ಪೂ. ದಲ್ಲಿದೆ. ಈ ದ್ವೀಪದ ದಕ್ಷಿಣದಲ್ಲಿರುವ ಗುವಾಮ್ ದ್ವೀಪವನ್ನೂ ಸೇರಿಸಿದಂತೆ ಈ ಭಾಗವನ್ನು ಮರಿಯಾನ ದ್ವೀಪವೆಂದು ಕರೆಯುತ್ತಾರೆ. ಈ ದ್ವೀಪದ ದಕ್ಷಿಣ ಭಾಗದ ದ್ವೀಪ ಸಮೂಹಗಳು ಸುಣ್ಣಕಲ್ಲಿನಿಂದ ನಿರ್ಮಿಸಲ್ಪಟ್ಟಿದ್ದು ಇವುಗಳ ಕಡಲ ಅಂಚಿನಲ್ಲಿ ಹವಳ ದಿಬ್ಬಗಳು ಕಂಡುಬರುತ್ತವೆ. ಉತ್ತರದ ದ್ವೀಪ ಸಮೂಹಗಳು ಜ್ವಾಲಾಮುಖಿ ಕಾರ್ಯದಿಂದ ಉಗಮಗೊಂಡಿದ್ದು ಅನತಹನ್, ಪಗನ್ ಮತ್ತು ಅಗ್ರಿಹಾನ್ ಎಂಬ ಜಾಗೃತ ಜ್ವಾಲಾಮುಖಿಗಳನ್ನು ಕಾಣಬಹುದಾಗಿದೆ. ಈ ದ್ವೀಪದಲ್ಲಿ ಅತ್ಯಂತ ಎತ್ತರವಾದ ಶಿಖರವೆಂದರೆ ಅಗ್ರಿಹಾನ್ ಸು. 965 ಮೀ ಎತ್ತರವನ್ನು ಹೊಂದಿದ್ದು ಇದು ಜಾಗೃತ ಜ್ವಾಲಾಮುಖಿ ಪರ್ವತವಾಗಿದೆ. ಈ ದ್ವೀಪಗಳ ಐದನೆಯ ಒಂದರಷ್ಟು ಭಾಗ ಮಾತ್ರ ಕೃಷಿ ಚಟುವಟಿಕೆಗಳಿಗೆ ಯೋಗ್ಯವಾದ ಭೂಮಿಯನ್ನು ಹೊಂದಿದ್ದು ಉಳಿದವು ಕುರುಚಲು ಗಿಡ ಮತ್ತು ಹುಲ್ಲುಗಾವಲಿನಿಂದ ಆವರಿಸಲ್ಪಟ್ಟಿದೆ. ಇಲ್ಲಿನ ಪ್ರಮುಖ ಆರ್ಥಿಕ ಚಟುವಟಿಕೆಯು ಮೀನುಗಾರಿಕೆಯಾಗಿದ್ದು, ಅಳಿವಿನಂಚಿನಲ್ಲಿರುವ ಹಲವಾರು ರೀತಿಯ ಜಲಚರಗಳನ್ನು ಹಿಡಿಯುವುದರಿಂದ ಈ ಪ್ರದೇಶ ಸಾಕಷ್ಟು ಸುದ್ದಿಯನ್ನು ಮಾಡಿದೆ.

ಈ ದ್ವೀಪ ಉಷ್ಣವಲಯದ ಸಾಗರಿಕ ಮಾದರಿಯ ವಾಯುಗುಣವನ್ನು ಹೊಂದಿದ್ದು ಋತುಮಾನಿಕವಾಗಿ ಕಂಡುಬರುವ ಈಶಾನ್ಯ ವಾಣಿಜ್ಯ ಮಾರುತಗಳ ಪ್ರಭಾವಕ್ಕೊಳಗಾಗಿ ಇಲ್ಲಿನ ವಾತಾವರಣ ಆಹ್ಲಾದಕರವಾಗಿದೆ. ವಿವಿಧ ಋತುಮಾನಗಳಲ್ಲಿ ಉಷ್ಣಾಂಶವು ಅಲ್ಪ ಪ್ರಮಾಣದಲ್ಲಿ ಏರಿಳಿತಗಳನ್ನು ಹೊಂದಿರುತ್ತದೆ. ಡಿಸೆಂಬರ್‌ನಿಂದ ಜೂನ್ ತಿಂಗಳುಗಳ ನಡುವೆ ಶುಷ್ಕ ವಾತಾವರಣ ಕಂಡುಬರುತ್ತದೆ ಹಾಗೂ ಜುಲೈನಿಂದ ಅಕ್ಟೋಬರ್ ತಿಂಗಳಿನವರೆಗೆ ಮಳೆಯಾಗುತ್ತದೆ. ಈ ದ್ವೀಪದ ರಾಜಧಾನಿ ಸೈಪನ್ ನಗರವಾಗಿದ್ದು ತನ್ನ ಅತ್ಯುತ್ತಮವಾದ ವಾಯುಗುಣದ ವಿಶೇಷತೆಯಿಂದ ಗಿನ್ನೀಸ್ ಪುಸ್ತಕದಲ್ಲಿ ದಾಖಲಾಗಿರುತ್ತದೆ. ದ್ವೀಪದ ವಿಸ್ತೀರ್ಣ ಸು. 477 ಚ.ಕಿಮೀ. ಜನಸಂಖ್ಯೆ 80,801 (2005). ಇಲ್ಲಿನ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 168 ಜನಗಳು. (ಬಿ.ಪಿ.)

**ಉತ್ತರ ಸಮುದ್ರ:** ಗ್ರೇಟ್ ಬ್ರಿಟನ್ನಿಗೂ ಯುರೋಪ್ ಖಂಡಕ್ಕೂ ನಡುವೆ ಇರುವ ಒಂದು ತಟ್ಟೆ (ಷ್ಯಾಲೋ) ಕಡಲು ನಡುವೆ ಇರುವ (ನಾರ್ತ್ ಸೀ) ಷೆಟ್ಲೆಂಡ್ ದ್ವೀಪಗಳ ಉತ್ತರ ಅಂಚಿನಿಂದ (ಉ.ಅ. $61^0$) ಡೋವರ್ ಜಲಸಂಧಿಯವರೆಗೆ (ಉ.ಅ. $51^0$) ಪ.ರೇ $3^0$ ಪೂ.ರೇ $10^0$ ವ್ಯಾಪಿಸಿರುವ ಸಮುದ್ರದ ನೀರು. ನಾರ್ವೆ, ಡೆನ್ಮಾರ್ಕ್. ಜರ್ಮನಿ, ಬೆಲ್ಜಿಯಂ, ನೆದರ್‌ಲೆಂಡ್ಸ್ ಮತ್ತು ಉತ್ತರ ಫ್ರಾನ್ಸ್ ತೀರಗಳನ್ನು ತೊಳೆಯುತ್ತದೆ. ವಿಸ್ತೀರ್ಣ 5,75,000 ಚ.ಕಿಮೀ. ದಕ್ಷಿಣದಿಂದ ಉತ್ತರದೆಡೆಗೆ ಸ್ವಲ್ಪ ಬಾಗಿದೆ. ದಕ್ಷಿಣದ ಭಾಗ ಬಲು ಗಾಢ. ಸಮುದ್ರದ ಇಳಿತದ ಸಮಯದಲ್ಲಿ ಕೆಳಗಣ ಮರಳನ್ನು ನೀರು ಮುಚ್ಚಿಯೂ ಮುಚ್ಚದಂತಿರುತ್ತದೆ. ಈ ಸಮುದ್ರದ ದಕ್ಷಿಣಾರ್ಧದ ಆಳ 40 ಮೀ. ಗಳಿಗಿಂತ ಕಡಿಮೆ. ಈ ಕಡಲ ನಡುವೆ ಇರುವ ತಿಟ್ಟುತಳದ ಹೆಸರು ಡಾಗರ್ ಬ್ಯಾಂಕ್. ತಿಟ್ಟುತಳದ ಉತ್ತರ ಅಂಚು ಕಡಿದು. ಈಶಾನ್ಯದಲ್ಲಿ ನಾರ್ವೆ ಬಳಿ ಕಡಲ ಆಳ ಹೆಚ್ಚು. ಇಲ್ಲಿನ ನೀರು ಕಿರಿದಾದ ಕಂದಕದಂತೆ ನಾರ್ವೆ ತೀರದ ಗುಂಟ ಆಗ್ನೇಯಾಭಿಮುಖವಾಗಿ ಸಾಗುತ್ತದೆ.

ಅಡಿಯ ಭೂರಚನೆಯ ಇತಿಹಾಸ: ಮೂರನೆಯ ಭೂಯುಗದಲ್ಲಿ ಯುರೋಪ್ ಖಂಡಭಾಗ ಕುಸಿದದ್ದರಿಂದ ಈ ಸಮುದ್ರ ರೂಪುಗೊಂಡಿತು. ಅತಿ ನೂತನಯುಗದ (ಪ್ಲಿಯೋಸೀನ್) ಅಂತ್ಯದಲ್ಲಿ ದಕ್ಷಿಣ ಇಂಗ್ಲೆಂಡ್ ಹಾಲೆಂಡ್ ಜರ್ಮನಿಗಳೊಂದಿಗೆ ಕೂಡಿಕೊಂಡಿತ್ತು. ದಟ್ಟ ಕಾಡಿದ್ದ ಈ ಜವುಗು ಮೈದಾನದಲ್ಲಿ ಥೇಮ್ಸ್–ರೈನ್ ನದಿ ವ್ಯವಸ್ಥೆಗಳ ಮುಖಜಭೂಮಿಗಳಿದ್ದುವು. ಬರಬರುತ್ತ ಶೈತ್ಯ ಹೆಚ್ಚಿ, ಪ್ಲಿಸ್ಟೋಸೀನ್ ಯುಗದಲ್ಲಿ ಇದನ್ನು ಹಿಮಗಡ್ಡೆಯ ಪದರಗಳು ಮುಚ್ಚಿಕೊಂಡಿದ್ದುವು. ಹಾಲೆಂಡ್ ಮತ್ತು ಪೂರ್ವ ಆಂಗ್ಲಿಯವೂ ಹಿಮಾವೃತವಾಗಿದ್ದುವು. ಆಗ ಥೇಮ್ಸ್–ರೈನ್ ನದಿಗಳ ವ್ಯವಸ್ಥೆಗಳಿಗೆ ಉತ್ತರದ ಹಾದಿ ಮುಚ್ಚಿಹೋಗಿದ್ದಿರಬೇಕು. ಇವು ಈ ಹಿಮರಾಶಿಯ ದಕ್ಷಿಣಕ್ಕೆ (ಈಗಿನ ಉತ್ತರ ಸಮುದ್ರದ ದಕ್ಷಿಣದಲ್ಲಿ ಇದ್ದ ಹಿಮಾನಿ (ಗ್ಲೇಷಿಯಲ್) ಸರೋವರದಲ್ಲಿ ಐಕ್ಯವಾಗಲಾಗಿ ಈ ಸರೋವರದ ನೀರಿನ ಮಟ್ಟ ಹೆಚ್ಚಿ ಇದು ಅತಿನೂತನ ಯುಗೀಯ ನದಿಕಣಿವೆಯೊಂದರ ಮೂಲಕ ಹರಿದು ಹೋಗಿರಬೇಕು. ಇದೇ ಮುಂದೆ ಅಗಲವಾಗಿ ಆಳವಾಗಿ ಡೋವರ್ ಜಲಸಂಧಿಯಾಯಿತು. ಹಿಮಯುಗದ ಅಂತ್ಯದಲ್ಲಿ ಡಾಗರ್ ತಿಟ್ಟುತಳದ ದಕ್ಷಿಣಭಾಗದಲ್ಲಿ ತಗ್ಗು ಮೈದಾನವಿತ್ತು. ಕ್ರಿ.ಪೂ. 6000ದ ವೇಳೆಗೆ ಸಮುದ್ರದ ಮಟ್ಟ ಏರಿತು. ಉತ್ತರ ಸಮುದ್ರ ಸ್ಥೂಲವಾಗಿ ಈಗಿನ ಆಕಾರ ತಳೆದದ್ದು ಆಗ.

ಉತ್ತರ ಸಮುದ್ರದ ಸುತ್ತಲೂ ಭೂಭಾಗ ಕುಸಿದು ಉಂಟಾದ ತೀರಭಾಗಗಳುಂಟು. ದಕ್ಷಿಣದ ತೀರಗಳು ಅತಿ ಕಿರಿದು. ಇಂಗ್ಲೆಂಡಿನ ತೀರದಲ್ಲಿ ಕಿರಿದಾದ ಕೋಡುಗಲ್ಲುಗಳೂ ಮರಳಿನಿಂದ ಕೂಡಿದ ದಂಡೆಗಳೂ ಕಂಡುಬರುತ್ತವೆ. ಯುರೋಪಿನ ತೀರದಲ್ಲಿ ಜೌಗು ಭಾಗಗಳೂ ಮರಳಿನ ದಿಣ್ಣೆಗಳೂ ಉಪ್ಪು ನೀರಿನ ಹರವುಗಳೂ (ಲಗೂನ್) ಉಂಟು. ಉತ್ತರದ ತೀರಗಳಲ್ಲಿ ಕಡಿದಾದ ಕೋಡುಗಲ್ಲುಗಳೂ ಕಿರಿ ಅಳಿವೆಯಂಥ ಕೊಲ್ಲಿಗಳೂ ಸ್ಕ್ಯಾಗರ್‌ರ್ಯಾಕ್ ಕೊಲ್ಲಿಯ ದಕ್ಷಿಣದಲ್ಲಿ ಮತ್ತು ಇಂಗ್ಲೆಂಡಿನ ವಾಯವ್ಯ ಭಾಗದಲ್ಲಿ ಮೃದುಶಿಲೆಗಳ ಕಿರಿದಾದ ಕೋಡುಗಲ್ಲುಗಳು ಕಂಡುಬರುತ್ತವೆ.

ಅಟ್ಲಾಂಟಿಕ್ ಸಾಗರದಿಂದ ಶೇ. 35 ಕ್ಕಿಂತ ಹೆಚ್ಚಿನ ಲವಣಯುಕ್ತ ನೀರು ಡೋವರ್ ಜಲಸಂಧಿಯ ಮೂಲಕವೂ ಷೆಟ್‌ಲೆಂಡ್ ನಾರ್ವೆಗಳ ಮೂಲಕವೂ ಇಲ್ಲಿಗೆ ಹರಿದು ಬರುತ್ತದೆ. ಈ ಎರಡು ಕವಲುಗಳೂ ವಾಷ್–ಸ್ಕ್ಯಾಗರ್‌ರ್ಯಾಕ್‌ಗಳ ನೆರೆಯಲ್ಲಿ ಸಂಧಿಸುವುದೇ ಇಲ್ಲಿ ತೊಡಕಿನ ಸುಳಿಗಳ ಉದ್ಭವಕ್ಕೆ ಕಾರಣ. ಡೋವರಿನ ಮೂಲಕ ಬರುವ ಪ್ರವಾಹದೊಂದಿಗೆ ಥೇಮ್ಸ್, ರೈನ್ ಮತ್ತು ಎಲ್ಬ್ ನದೀ ನೀರೂ ಸೇರುತ್ತದೆ. ಸ್ಕ್ಯಾಗರ್‌ರ್ಯಾಕ್‌ನಿಂದ ಉತ್ತರಾಭಿಮುಖವಾಗಿ ನಾರ್ವೆ ತೀರದ ಗುಂಟ ಹರಿಯುವ ನೀರು ಶೇ. 30 ರಷ್ಟು ಲವಣಯುಕ್ತವಾದದ್ದು. ಬಾಲ್ಟಿಕ್‌ನಿಂದ ಹರಿದು ಬರುವ ನೀರು ಇದರಲ್ಲಿ ಸೇರುವುದರಿಂದ ಇದರ ಲವಣಾಂಶ ಕಡಿಮೆ. ಸಮಕಾಲಿನ ಉಬ್ಬರ ರೇಖೆಗಳು ಈ ಸಮುದ್ರದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹಬ್ಬಿವೆಯೆನ್ನಬಹುದು. ಆದ್ದರಿಂದ ಸ್ಕಾಟ್ಲೆಂಡ್ ಮತ್ತು ಥೇಮ್ಸ್ ಅಳಿವೆಯಲ್ಲಿ ಉಬ್ಬರಗಳು ಸಂಭವಿಸುವ ಕಾಲ ಒಂದೇ. ಉಬ್ಬರಗಳಿಂದ ಸ್ಕಾಟ್ಲೆಂಡಿನಲ್ಲಿ 4 ಮೀ, ಡಚ್ ಮತ್ತು ಜರ್ಮನ್ ತೀರಗಳಲ್ಲಿ 2 ರಿಂದ 3 ಮೀ, ನಾರ್ವೆ ತೀರದಲ್ಲಿ ಒಂದು ಮೀ, ಸಮುದ್ರಮಟ್ಟ ವ್ಯತ್ಯಾಸವಾಗುತ್ತದೆ. ಪೂರ್ವತೀರದಲ್ಲಿ ಉಬ್ಬರವಿಳಿತಗಳ ವ್ಯತ್ಯಾಸ ಹೆಚ್ಚು. ಬ್ರಿಟನ್, ಬೆಲ್ಜಿಯಂ ಮತ್ತು ನೆದರ್‌ಲೆಂಡ್ಸ್ ದೇಶಗಳ ತೀರ ಭಾಗಗಳಿಗೆ ಇಲ್ಲಿನ ವಿಷಮ ಉಬ್ಬರವಿಳಿತಗಳಿಂದ ಸಂಭವಿಸುವ ಹಾನಿ ಅಧಿಕ. ಬೆಲ್ಜಿಯಮ್ ಮತ್ತು ನೆದರ್‌ಲೆಂಡ್ಸ್‌ಗಳ ತೀರಗಳಲ್ಲಿ ಕೃತಕ ದಿಣ್ಣೆಗಳನ್ನು ನಿರ್ಮಿಸಿ ಆಗುವ ಅನಾಹುತವನ್ನು ಸಾಕಷ್ಟು ಮಟ್ಟಿಗೆ ತಡೆಗಟ್ಟಲಾಗಿದೆ.

ಈ ಸಮುದ್ರದಲ್ಲಿ ಅನೇಕ ಪ್ರವಾಹಗಳೂ ಉಬ್ಬರವಿಳಿತಗಳೂ ಸುಳಿಗಳೂ ಕಂಡುಬರುವುದರಿಂದಲೂ ಅಟ್ಲಾಂಟಿಕ್ ಸಾಗರದ ಬೆಚ್ಚನೆಯ ನೀರಿಗೆ ಭೂಭಾಗದಿಂದ ಹರಿಯುವ ತಂಪಾದ ನೀರು ಸೇರುವುದರಿಂದಲೂ ವಿಪುಲವಾಗಿ ಪ್ಲಾಂಕ್ಟನ್ ಎಂಬ ಜೈವಿಕ ವಸ್ತು ಶೇಖರಣೆಯಾಗುತ್ತದೆ. ಅಲ್ಲದೆ ನೀರಿನ ಅಂಥ ಚಲನೆಗಳಿಂದ ಸಾಕಷ್ಟು ವಾಯುವಿನ ಅಂಶ ನೀರಿನಲ್ಲಿ ಸೇರಲೂ ಅವಕಾಶವಿದೆ. ಸಮುದ್ರ ಹೆಚ್ಚು ಆಳವಿಲ್ಲದಿರುವುದರಿಂದ ಬೆಳಕು ಸಾಕಷ್ಟು ಉಂಟು. ಇಂಥ ಆವರಣ ಮೀನುಗಳಿಗೆ ಅವಶ್ಯಕ. ಆದ್ದರಿಂದ ಉತ್ತರ ಸಮುದ್ರಕ್ಕೆ ಪ್ರಪಂಚದ ಮೀನುಗಾರಿಕೆ ಪ್ರದೇಶಗಳಲ್ಲಿ ಉನ್ನತ ಸ್ಥಾನ ಲಭ್ಯವಾಗಿದೆ. ಚಳಿಗಾಲದಲ್ಲಿ ಮೀನು ಹಿಡಿಯುವ ಚಟುವಟಿಕೆ ಹೆಚ್ಚು.

ಜರಡಿ ಬಲೆಗಳಿಂದ ಈ ಭಾಗದಲ್ಲಿ ಹೇರಳವಾಗಿ ಮೀನು ಹಿಡಿಯುತ್ತಾರೆ. ಬೇಸಗೆಯಲ್ಲಿ ಪೂರ್ವಭಾಗದಲ್ಲಿ ಮೀನು ಹಿಡಿಯುವುದು ಹೆಚ್ಚು. ಆಳವಿಲ್ಲದ ಭಾಗಗಳಲ್ಲಿ ಚಪ್ಪಟೆ ಮೀನು ಉತ್ತರದ ಆಳವಾದ ಪ್ರದೇಶದಲ್ಲಿ ಕಾಡ್ ಮತ್ತು ಹ್ಯಾಡಕ್ ಮೀನೂ ಹೇರಳ. ಪಶ್ಚಿಮಭಾಗದಲ್ಲಿ ಜೂನ್‌ನಿಂದ ನವೆಂಬರ್‌ವರೆಗೆ ಹೆರಿಂಗ್ ಮೀನುಗಳೂ ಉಳಿದ ತಿಂಗಳುಗಳಲ್ಲಿ ಮೆಕರೆಲ್ ಮೀನುಗಳೂ ಸಿಗುತ್ತವೆ. ಡಾಗರ್ ಬ್ಯಾಂಕಿನ ಭಾಗದಲ್ಲಿ ಕಾಡ್ ಮೀನುಗಳು ಸಿಕ್ಕುತ್ತವೆ. ಡಚ್ ಭಾಷೆಯಲ್ಲಿ ಡಾಗರ್ ಎಂದರೆ ಕಾಡ್ ಮೀನು ಎಂದು ಅರ್ಥ. ಉತ್ತರದ ತಂಪು ನೀರಿನಲ್ಲೂ ಇವು ಸಿಕ್ಕುವುದುಂಟು. ಮಧ್ಯಭಾಗದಲ್ಲಿ ಮೀನುಗಳನ್ನು ಗಾಳಗಳಿಂದಲೇ ಹಿಡಿಯುತ್ತಾರೆ. 1899ಮತ್ತು 1927ರಲ್ಲಿ ಆದ ಅಂತಾರಾಷ್ಟ್ರೀಯ ಮೀನುಗಾರಿಕೆ ಒಪ್ಪಂದಗಳಿಂದ ಈ ಸಮುದ್ರದ ಮೀನುಗಾರಿಕೆಯಲ್ಲಿ ನಿರತವಾದ ವಿವಿಧ ರಾಷ್ಟ್ರಗಳು ನಿಯಂತ್ರಣಕ್ಕೊಳಪಟ್ಟಿವೆ.

ಉತ್ತರ ಸಮುದ್ರವನ್ನು ಹಿಂದೆ ಜರ್ಮನ್ ಸಾಗರವೆಂದೂ ಕರೆಯಲಾಗುತ್ತಿತ್ತು. ಈ ಸಮುದ್ರದ ಮೂಲಕ ಸಾಗುವ ಸಾರಿಗೆ ಮಾರ್ಗಗಳು ಅನೇಕ. ಹಲ್, ಬರ್ಗೆನ್, ಸ್ಟಾಕ್‌ಹೋಮ್ ಮಾರ್ಗಗಳು ಮುಖ್ಯ. ಉತ್ತರ ಸಮುದ್ರವನ್ನು ಸೇರುವ ನದಿಗಳು ಈ ಮಾರ್ಗಗಳ ವಿಸ್ತರಣೆಗಳೆಂತಿರುವುದರಿಂದ ಉತ್ತರ ಸಮುದ್ರದ ಪ್ರಾಮುಖ್ಯ ಇನ್ನೂ ಅಧಿಕವಾಗಿದೆಯೆನ್ನಬಹುದು. (ಎ.ಕೆ.)

**ಉತ್ತರ ಸೈಪ್ರೆಸ್‌ನ ಟರ್ಕಿಷ್ ಗಣರಾಜ್ಯ:** ಸೈಪ್ರಸ್ ಗಣರಾಜ್ಯದ ಉತ್ತರದ ಭಾಗದಲ್ಲಿದೆ. ಇದರ ರಾಜಧಾನಿ ನಿಕೊಸಿಯಾ. ಇದು ಸೈಪ್ರಸ್ ನಿಂದ 1983 ನವೆಂಬರ್ 15 ರಂದು ಸ್ವಾತಂತ್ರ್ಯ ಘೋಷಿಸಿಕೊಂಡಿತು. ಆದರೆ ಟರ್ಕಿ ದೇಶವನ್ನು ಉಳಿದು ಬೇರೆ ಯಾವುದೇ ದೇಶ ಇದಕ್ಕೆ ಮಾನ್ಯತೆಯನ್ನು ನೀಡಿಲ್ಲ. ಇದರ ಭೌಗೋಳಿಕ ವಿಸ್ತೀರ್ಣ 3,355 ಚ.ಕಿಮೀ. ಜನಸಂಖ್ಯೆ ಸು. 264172 (2006). ಇಲ್ಲಿನ ಜನಸಾಂದ್ರತೆಯು ಪ್ರತಿ ಚ.ಕಿಮೀ ಗೆ 78 ಜನರು.

ಮೆಡಿಟರೇನಿಯನ್ ವಾಯುಗುಣದ ಸ್ಪಷ್ಟ ಲಕ್ಷಣಗಳನ್ನು ಹೊಂದಿದ್ದು ಬಿಸಿಲು ಹಾಗೂ ಅತ್ಯಂತ ಹೆಚ್ಚು ಶಾಖ ಉಳ್ಳ ಬೇಸಗೆ ಮತ್ತು ಸಾಧಾರಣವಾದ ಶೀತವಾತಾವರಣವನ್ನು ಚಳಿಗಾಲದಲ್ಲಿ ಕಾಣಬಹುದಾಗಿದೆ. ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಈ ಪ್ರದೇಶಗಳು ಅಧಿಕ ಪ್ರಮಾಣದ ಮಳೆಯನ್ನು ಪಡೆಯುತ್ತವೆ. ಸಾಗರದ ಪ್ರಭಾವದಿಂದ ಸಾಗರದ ತೀರ ಪ್ರದೇಶಗಳಲ್ಲಿ ಉಷ್ಣಾಂಶ ಬಹಳ ತೀವ್ರವಾಗಿರದೆ, ಸಾಧಾರಣವಾಗಿದ್ದು, ಸಾಗರದ ನೀರಿನ ಉಷ್ಣಾಂಶ ಹೆಚ್ಚಾಗಿರುತ್ತದೆ. ಸಾಗರದ ನೀರಿನ ಉಷ್ಣಾಂಶ ಯಾವುದೇ ಋತುಮಾನದಲ್ಲೂ $16^0$ಸೆ. ಗಿಂತ ಕಡಿಮೆ ಆಗುವುದಿಲ್ಲ ಹಾಗೂ ಗರಿಷ್ಠ ಪ್ರಮಾಣದ ಉಷ್ಣಾಂಶ ಆಗಸ್ಟ್ ತಿಂಗಳಿನಲ್ಲಿ ಸು. $28^0$ಸೆ.

ಇಲ್ಲಿನ ಆರ್ಥಿಕತೆ ಮುಖ್ಯವಾಗಿ ಸೇವಾಕ್ಷೇತ್ರಗಳಾದ ಸಾರ್ವಜನಿಕ ಸೇವೆಗಳು, ವ್ಯಾಪಾರ, ಪ್ರವಾಸೋದ್ಯಮ, ವಿದ್ಯಾಕ್ಷೇತ್ರಗಳನ್ನು ಅವಲಂಬಿಸಿದೆ. ಜೊತೆಯಲ್ಲಿ ಅಲ್ಪಪ್ರಮಾಣದಲ್ಲಿ ಕೃಷಿ ಚಟುವಟಿಕೆ ಹಾಗೂ ಲಘು ಕೈಗಾರಿಕೆಗಳನ್ನು ನೋಡಬಹುದು. (ಬಿ.ಸಿ.)

**ಉತ್ತರಮುಖಿ:** ಸಮುದ್ರಗಳಲ್ಲಿ ಸಂಚರಿಸುವ ನಾವಿಕರು ನೌಕೆಯ ಚಲನೆಯ ದಿಕ್ಕನ್ನು ಅರಿಯಲು ಮತ್ತು ಕಣ್ಣಿಗೆ ಕಾಣುವ ಯಾವುದೇ ವಸ್ತುವಿನ ದಿಕ್ಕನ್ನು ಅಳೆಯಲು ಉಪಯೋಗಿಸುವ ಉಪಕರಣ (ಕಂಪಾಸ್); ದಿಕ್ಸೂಚಿ ಪರ್ಯಾಯ ಪದ. ಉತ್ತರಮುಖಿ ಮೂಲತಃ ಒಂದು ಅಯಸ್ಕಾಂತ. ಭೂಮಿಯ ಕಾಂತತೆಯ ಪರಿಣಾಮವಾಗಿ ಸಜಾತೀಯ ಧ್ರುವಗಳು ಪರಸ್ಪರ ಅಪಕರ್ಷಿಸುತ್ತವೆ. ವಿಜಾತೀಯ ಧ್ರುವಗಳು ಪರಸ್ಪರ ಆಕರ್ಷಿಸುತ್ತವೆ – ಎಂಬ ನಿಯಮಾನುಸಾರ ಇದರ ನಿಲುವು ಸದಾ ಭೂಮಿಯ ಕಾಂತ ಉತ್ತರ–ದಕ್ಷಿಣ ದಿಕ್ಕಿನಲ್ಲಿರುವುದು. ಉತ್ತರಮುಖಿಯ ರಚನೆಯಲ್ಲಿರುವ ಮೂಲಸೂತ್ರ ಇದೇ.

ಇತಿಹಾಸ: ಉತ್ತರಮುಖಿಯನ್ನು ನಿರ್ಮಿಸಿ ಅದನ್ನು ಸಮುದ್ರಯಾನದಲ್ಲಿ ಮೊದಲು ಉಪಯೋಗಿಸಿದವರು ತಾವೆಂದು ಚೀನ, ಅರೇಬಿಯ, ಗ್ರೀಸ್, ಫಿನ್ಲೆಂಡ್ ಮತ್ತು ಇಟಲಿ ದೇಶದವರು ಹೇಳಿಕೊಳ್ಳುತ್ತಾರೆ. ಇದರ ಉಪಯೋಗ ತಿಳಿಯುವ ಮೊದಲೇ ಪ್ರಪಂಚದ ನಾನಾ ಭಾಗದ ಜನ ಸಮುದ್ರಯಾನ ಮಾಡುತ್ತಿದ್ದರು. ಆಗ ಅವರಿಗೆ ದಿಕ್ಕನ್ನು ತಿಳಿಯಲು ಸಹಾಯಕವಾಗುತ್ತಿದ್ದ ವಸ್ತುಗಳೆಂದರೆ ಸೂರ್ಯ, ಧ್ರುವನಕ್ಷತ್ರ ಮತ್ತು ತಾರಾಗುಚ್ಛಗಳು. ಉತ್ತರಮುಖಿಯನ್ನು ಮೊದಲು ಬಳಸಿದಾಗ ನೌಕೆ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ ಎಂಬುದನ್ನು ತಿಳಿಯಲು ಮಾತ್ರ ಅದು ನೆರವಾಗುತ್ತಿತ್ತು. ಅಂದು ಮಾರುತ ಬೀಸಿದ ದಿಕ್ಕಿನಲ್ಲಿ ನಾವೆ ಚಲಿಸಬೇಕಾಗಿದ್ದುದರಿಂದ ಚಲನದಿಕ್ಕನ್ನು ಬದಲಾಯಿಸಲು ಪ್ರಾಯಶಃ ಸಾಧ್ಯವಾಗುತ್ತಿರಲಿಲ್ಲ.

ಅರಬ್ಬರು ಸಮುದ್ರಯಾನದಲ್ಲಿ ಮುಂದು. ಆದ್ದರಿಂದ ಅವರೇ ಉತ್ತರ ಮುಖಿಯನ್ನು ಮೊದಲು ನಿರ್ಮಿಸಿ ಉಪಯೋಗಿಸಿದವರೆಂಬ ನಂಬಿಕೆ ಬೆಳೆದಿದೆ. ಆದರೆ ಈ ಉಪಕರಣಕ್ಕೆ ಅವರು ತಮ್ಮದೇ ಆದ ಹೆಸರು ಕೊಡದೆ ಇಟಲಿ ಭಾಷೆಯ ಬೊಸ್ಸೋಲ ಎಂಬ ಪದವನ್ನು ಬಳಸುತ್ತಿದ್ದರು. ಇದರಿಂದ ಅವರು ಉತ್ತರ ಮುಖಿಯ ಮೊದಲು ನಿರ್ಮಾತೃಗಳೆಂಬ ನಂಬಿಕೆ ಶಿಥಿಲಗೊಂಡಿದೆ. ಅವರು ಉತ್ತರ ಮುಖಿಯನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಒಂದು ಪರ್ಷಿಯನ್ ಆಖ್ಯಾನಕದಲ್ಲಿ ಆಧಾರ ದೊರೆತಿದೆ (1232ರಲ್ಲಿ ಪ್ರಕಟಿತ). 1282ರಲ್ಲಿ ಪ್ರಕಟವಾದ ಬೈಲಾಕ್ ಕಿಬ್ಚ್ ಜಾಕಿ ಬರೆದ ಮರ್ಚೆಂಟ್ಸ್ ಟ್ರೆಶರ್ ಪುಸ್ತಕದಲ್ಲಿ ಸಿರಿಯನ್ ಸಮುದ್ರದ ನಾವಿಕರು ಉಪಯೋಗಿಸುತ್ತಿದ್ದ ಉತ್ತರಮುಖಿಯ ಸ್ಥೂಲಪರಿಚಯವಿದೆ. ಮರದ ತುಂಡಿಗೋ ಅಥವಾ ದಬ್ಬೆಗೋ ಒಂದು ಕಾಂತ ಸೂಚಿಯನ್ನು ಸಿಕ್ಕಿಸಿ ಅದನ್ನು ನೀರಿನ ಮೇಲೆ ತೇಲಿಬಿಟ್ಟು ನಾವಿಕರು ದಿಕ್ಕನ್ನು ಗೊತ್ತುಮಾಡಿಕೊಳ್ಳುತ್ತಿದ್ದರು.

ಪಶ್ಚಿಮ ಯುರೋಪಿನ ನಾವಿಕರು ಉತ್ತರಮುಖಿಯನ್ನು ಉಪಯೋಗಿಸುತ್ತಿದ್ದರೆಂಬ ವಿಷಯ ತಿಳಿದಿರುವುದು ಅಲೆಕ್ಸಾಂಡರ್ ನೆಕಮ್ (1187) ಎಂಬ ಬರೆಹಗಾರನ ಗ್ರಂಥದ ಮೂಲಕ. ಆಕಾಶದಲ್ಲಿ ಮೋಡಗಳು ಕವಿದು ದಿಕ್ಕುತಪ್ಪಿದಾಗ ನಾವಿಕರು ಕಾಂತದಂಡದಿಂದ ಒಂದು ಸೂಜಿಯನ್ನು ಮುಚ್ಚುತ್ತಾರೆ. ಅದು ತಿರುಗಿ ಸ್ಥಿರಸ್ಥಿತಿಗೆ ಬಂದಾಗ ಉತ್ತರ–ದಕ್ಷಿಣಕ್ಕೆ ನಿಲ್ಲುತ್ತದೆ ಎಂದು ಆತ ಬಣ್ಣಿಸಿದ್ದಾನೆ. 13ನೆಯ ಶತಮಾನದ ಕೊನೆಯಲ್ಲಿ ಸ್ಕಾಂಡಿನೇವಿಯದ ನಾವಿಕರು ಉತ್ತರಮುಖಿಯನ್ನು ಉಪಯೋಗಿಸುತ್ತಿದ್ದರು.

ಮೊದಲು ನಾವಿಕರು ಒಂದು ಸೂಜಿಗಲ್ಲನ್ನು ಮರದ ತುಂಡಿಗೆ ಸಿಕ್ಕಿಸಿ ಅದನ್ನು ನೀರು ತುಂಬಿದ ಬೋಗುಣಿಗಳಲ್ಲಿ ತೇಲಿಬಿಟ್ಟು ದಿಕ್ಸೂಚಿಯಂತೆ ಉಪಯೋಗಿಸಿರಬೇಕು. ತೇಲುವ ಮರದ ತುಂಡು ಸೂಜಿಗಲ್ಲಿನ ಗುಣದಿಂದ ಯಾವಾಗಲೂ ಉತ್ತರ–ದಕ್ಷಿಣ ದಿಕ್ಕಿಗೆ ನಿಲ್ಲುತ್ತದೆ. ಉತ್ತರ–ದಕ್ಷಿಣ ದಿಕ್ಕನ್ನು ಸೂಚಿಸಲು ಒಂದು ಬಣ್ಣದ ಪ್ರಮಾಣರೇಖೆಯನ್ನು ಎಳೆದು ತಳದಲ್ಲಿ ಎಳೆಯ ಬೋಗುಣಿಯನ್ನು ಬೇಕಾದ ಹಾಗೆ ತಿರುಗಿಸಿ ನಾವೆ ಚಲಿಸುವ ದಿಕ್ಕನ್ನು ತಿಳಿಯಬಹುದು. ಎರಡನೆಯ ಹಂತದಲ್ಲಿ ದಿಕ್ಕುಗಳನ್ನು ಗುರುತುಮಾಡಿದ ದುಂಡಾದ ರಟ್ಟುಬಿಲ್ಲೆಯ ಹಿಂಭಾಗಕ್ಕೆ ಕಾಂತ ಸೂಚಿಗಳನ್ನು ಅಂಟಿಸಿ ಅದನ್ನು ನೀರಿನಲ್ಲಿ ತೇಲಿಬಿಟ್ಟು ಉಪಯೋಗಿಸಿರಬೇಕು. ತಿರುಗಣೆಯ ಉಪಯೋಗ ಬಹಳ ಕಾಲ ಕಳೆದ ಮೇಲೆ ಬಂದಿರಬೇಕು.

ಅಮಾಲ್ಫಿ ಬಂದರಿನಿಂದ ನಾವಿಕರು ಮೊದಲು ಮೆಡಿಟರೇನಿಯನ್ ಸಮುದ್ರಕ್ಕೆ ಉತ್ತರಮುಖಿಯನ್ನು ತಂದರೆಂಬ ಪರಂಪರಾಗತ ಐತಿಹ್ಯವೂ ಉಂಟು. ಇದರ ಜೊತೆಗೆ ಅಮಾಲ್ಫಿಯ ಫ್ಲಾವಿವೊ ಗಿವೋಯಿಯ ಎಂಬ ನಾವಿಕನೇ ಉತ್ತರಮುಖಿಯ ನಿರ್ಮಾತೃವೆಂಬ ಕಥೆಯೂ ಬೆರೆತುಕೊಂಡಿದೆ.

ಉತ್ತರಮುಖಿಯ ಮೊದಲ ನಿರ್ಮಾಣ ಮತ್ತು ಉಪಯೋಗದ ಬಗ್ಗೆ ಇಷ್ಟು ಗೊಂದಲವಿದ್ದರೂ 11ನೆಯ ಶತಮಾನದಲ್ಲಿ ಚೀನಿಯರು, 12ನೆಯ ಶತಮಾನದಲ್ಲಿ ಅರಬ್ಬರು, ಸ್ಕಾಂಡಿನೇವಿಯನರು ಮತ್ತು ಪೂರ್ವ ಯುರೋಪೀಯನರು ಅದರ ಉಪಯೋಗವನ್ನು ತಿಳಿದಿದ್ದರೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಈ ಯಾವುದೇ ದೇಶದಲ್ಲಾದರೂ ಲಿಖಿತ ಆಧಾರಗಳು ಸಿಕ್ಕುವ ಕಾಲಕ್ಕಿಂತ ಹಿಂದೆಯೇ ಉತ್ತರಮುಖಿಯ ನಿರ್ಮಾಣ ಮತ್ತು ಉಪಯೋಗ ಆಗಿರಬಹುದು; ಅದರ ನಿರ್ಮಾಣ ಕಲೆ ಮತ್ತು ಉಪಯೋಗದ ವಿಚಾರ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಕಾಲಕಳೆದಂತೆ ಮುಟ್ಟಿರಲೂಬಹುದು.

ಉತ್ತರಮುಖಿಯ ರಚನೆ ಮತ್ತು ಉಪಯೋಗದಲ್ಲಿ ಸುಧಾರಣೆ ಥಟ್ಟನೆ ಆಗಲಿಲ್ಲ. ಹದಿನೆಂಟನೆಯ ಶತಮಾನದ ಆದಿಭಾಗದವರೆಗೆ ಮೆಚ್ಚುವಂಥ ಯಾವ ಕೆಲಸವೂ ನಡೆದಿರಲಿಲ್ಲ. ಕಾಂತಸೂಚಿಗಳಿಗೆ ಬಳಸುತ್ತಿದ್ದ ಕಬ್ಬಿಣ ಉತ್ತಮ ಮಟ್ಟದಲ್ಲವಾದ್ದರಿಂದ ಅವು ಕಾಂತಗುಣವನ್ನು ಬೇಗ ಕಳೆದುಕೊಂಡುಬಿಡುತ್ತಿದ್ದುವು; ಅವುಗಳ ಕಾಂತ ಮಹತ್ತ್ವದಲ್ಲಿ ಸಮಾನತೆ ಇರುತ್ತಿರಲಿಲ್ಲ. ಆದ್ದರಿಂದ ಅವು ತೋರಿಸುತ್ತಿದ್ದ ದಿಕ್ಕಿನಲ್ಲಿ ಲೋಪವಿರುತ್ತಿತ್ತು. 1766ರಲ್ಲಿ ಗೋವಿನ್ ನೈಟ್ ಎಂಬ ತಂತ್ರಜ್ಞ ಉತ್ತರಮುಖಿಗಳ ತಯಾರಿಕೆಯ ಬ್ರಿಟಿಷ್ ಏಕಸ್ವಾಮ್ಯತ್ವ ಪಡೆದುಕೊಂಡು ಒಳ್ಳೆಯ ಮಾದರಿಗಳನ್ನು ಮಾರುಕಟ್ಟೆಗೆ ತಂದ. ಉತ್ತಮ ಉಕ್ಕನ್ನು ಕಾಂತಸೂಚಿಗಳಿಗೋಸ್ಕರ ಆತ ಬಳಸಿದ್ದ; ಮತ್ತು ಮಧ್ಯೆ ಟೊಪ್ಪಿಗೆ ಹಾಕಿ ಅವನ್ನು ತಿರುಗಣೆಗಳ ಮೇಲೆ ಅಳವಡಿಸಿದ್ದ. ಹಿಂದಿನ ಯಾವುದೇ ಉತ್ತರಮುಖಿಯಾದರೂ ಇಷ್ಟು ಸುಧಾರಿಸಿದುದಾಗಿರಲಿಲ್ಲ. ರಾಯಲ್ ನೌಕಾಪಡೆಯವರು ಮತ್ತು ಜರ್ಮನ್ ನಾವಿಕರು ಇದರ ಉಪಯೋಗ ತೃಪ್ತಿಕರವಾಗಿದೆ ಎಂದು ಒಪ್ಪಿಕೊಂಡರು.

1830ರ ವರೆಗೆ ಒಂದೇ ಸೂಜಿಯ ಉತ್ತರಮುಖಿಯೇ ಉಪಯೋಗದಲ್ಲಿತ್ತು. ಆದರೆ 1837ರಲ್ಲಿ ರಾಯಲ್ ನೌಕಾಪಡೆಯವರು ನಾಲ್ಕು ಸೂಜಿಗಳ ಉತ್ತರಮುಖಿಯನ್ನು ಉಪಯೋಗಕ್ಕೆ ತಂದರು. ಇವರ ಮುಖ್ಯ ಉದ್ದೇಶವಾದರೂ ನಾಲ್ಕು ದಿಕ್ಕಿನಲ್ಲಿ ಸಮವಾಗಿ ಜಡಮಾನವನ್ನು ಹಂಚುವುದೆ ಆಗಿತ್ತು. ಇಷ್ಟಾದರೂ ಯಾವ ಉತ್ತರಮುಖಿಯೂ ದೋಷಮುಕ್ತವಾಗಿರಲಿಲ್ಲ. ಹಬೆ ಹಡಗುಗಳ ತಾಕಲಾಟದಲ್ಲಿ ಅವು ಹಾಳಾಗುತ್ತಿದ್ದುವು. 1862ರಲ್ಲಿ ಇ.ಎಸ್. ರಿಚಿ ಮತ್ತು 1866ರಲ್ಲಿ ಡಬ್ಲ್ಯೂ. ಆರ್. ಹ್ಯಾಮರ್ಸ್ಲಿ ಅವರು ಹಡಗುಗಳ ತಾಕಲಾಟದಿಂದ ಉಂಟಾಗುವ ಅಪಾಯವನ್ನು ತಪ್ಪಿಸಲು ಮತ್ತು ತಿರುಗಣೆಯ ಮೇಲೆ ಬೀಳುವ ತೂಕವನ್ನು ಕಡಿಮೆ ಮಾಡಲು ಕಾಂತವನ್ನು ಹೊತ್ತ ಸೂಚಿ ಬಿಲ್ಲೆ ಭಾಗಶಃ ನೀರಿನಲ್ಲಿ ತೇಲುವಂತೆ ಮಾಡಿದರು. ಈ ರೀತಿ ದ್ರವ ಉತ್ತರಮುಖಿ ಅಸ್ತಿತ್ವಕ್ಕೆ ಬಂದಿತು. ರಿಚಿ ರಚಿಸಿದ ಉತ್ತರ ಮುಖಿಯನ್ನು ಯು.ಎಸ್. ಮತ್ತು ರಾಯಲ್ ನೌಕಾಪಡೆಗಳು ಒಪ್ಪಿಕೊಂಡುವು. ಈ ಮಧ್ಯೆ ಲಾರ್ಡ್ ಕೆಲ್ವಿನ್ ನಿರ್ಮಿಸಿದ ಹೊಸತೊಂದು ಉತ್ತರ ಮುಖಿ ದ್ರವ ಉತ್ತರಮುಖಿಯ ಪ್ರಾಮುಖ್ಯವನ್ನು ಸ್ವಲಕಾಲತಗ್ಗಿಸಿತು. ಆದರೂ 1906ರಲ್ಲಿ ದ್ರವ ಉತ್ತರಮುಖಿಯನ್ನು ಎಲ್ಲರೂ ಒಪ್ಪಿಕೊಂಡು ಉಪಯೋಗಿಸತೊಡಗಿದರು.

ಉತ್ತರಮುಖಿಗಿರುವ ದಿಕ್ಸೂಚಕಶಕ್ತಿ ಭೂಮಿಯ ಕಾಂತತ್ವದಿಂದ ಉಂಟಾದುದೆಂದು ತಿಳಿಸಿದವ ವಿಲಿಯಂ ಗಿಲ್ಬರ್ಟ್. ಭೂಮಿಯನ್ನು ಒಂದು ದೊಡ್ಡ ಅಯಸ್ಕಾಂತವೆಂದು ಭಾವಿಸಬಹುದು. ಉತ್ತರಮುಖಿ ತೋರಿಸುವ ದಿಕ್ಕು ಭೌಗೋಳಿಕ ಉತ್ತರವಲ್ಲವೆಂಬ ತಿಳಿವಳಿಕೆ ಚೀನಿಯರಿಗೆ 11ನೆಯ ಶತಮಾನದಲ್ಲೆ ಇದ್ದಿತೆಂಬ ಕಥೆಗಳೂ ಇವೆ. ಪ್ರಪಂಚದ ಯಾವ ಭಾಗದ ನಾವಿಕರಿಗೇ ಆಗಲಿ ಇಂಥ ತಿಳಿವಳಿಕೆ ಇದ್ದಿತೆಂಬ ವಿಷಯ ಗೊತ್ತಾಗುವುದು 1544ರಲ್ಲಿ ಜಾರ್ಜ್ ಹಾರ್ಟ್‌ಮನ್ ಎಂಬ ನಾವಿಕ ಬರೆದ ಪತ್ರದಿಂದ. ವಿಚಲನೆಯನ್ನು ಪತ್ತೆಹಚ್ಚಿದವ ಕೊಲಂಬಸ್ ಎಂದು ಹೇಳುವವರೂ ಇದ್ದಾರೆ. ಆತ ತನ್ನ ಮೊದಲ ಸಮುದ್ರಯಾನದಲ್ಲಿ ತೊಡಗುವುದಕ್ಕೆ ಮುಂಚೆಯೇ ಅವನಿಗೆ ಇದರ ವಿಚಾರ ಗೊತ್ತಿದ್ದಿತೆಂಬುದಕ್ಕೆ ಅನೇಕ ಆಧಾರಗಳಿವೆ.

ನವೀನ ಉತ್ತರಮುಖಿ: ಅಭ್ರಕದ ಸೂಚಿ ಬಿಲ್ಲೆಯ ಕೆಳಗೆ ಕಾಂತ ಸೂಜಿಗಳ ಕಟ್ಟುಗಳಿವೆ. ಇವನ್ನು ವಿವಿಧ ರೀತಿಯಲ್ಲಿ ಅಳವಡಿಸುವುದುಂಟು. ಯಾವುದೇ ರೀತಿಯ ರಚನೆಯಾದರೂ ಅದು ದಿಕ್ಸೂಚನ ಬಲದ ಪ್ರಭಾವಕ್ಕೆ ಅತಿನಿಕಟವಾಗಿ ಒಳಗಾಗುವಂತಿರಬೇಕು. ಬೋಗುಣಿಯ ಮಧ್ಯೆ ಲಂಬವಾಗಿ ನಿಂತಿರುವ ಜ್ಯೂಯಲ್ ಇರುವ ತಿರುಗಣೆಯ ಮೇಲೆ ಗುರುತ್ವ ಕೇಂದ್ರ ಸರಿಯಾಗಿ ಬರುವಂತೆ ಸೂಚಿಬಿಲ್ಲೆ ಇದೆ. ಬೋಗುಣಿಯಲ್ಲಿ ತುಂಬಿರುವ ನೀರು ಮತ್ತು ಆಲ್ಕೊಹಾಲ್ ಮಿಶ್ರಣದಲ್ಲಿ ಸೂಚಿಬಿಲ್ಲೆ ಭಾಗಶಃ ತೇಲುತ್ತದೆ. ಇದರಿಂದ ತಿರುಗಣೆಯ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಬೋಗುಣಿ ಜಿಂಬಾಲುಗಳ ಮೇಲೆ ನಿಂತಿದೆ. ಹಡಗು ಹೇಗೆ ಓಲಾಡಿದರೂ ಸೂಚಿಬಿಲ್ಲೆ ಮಾತ್ರ ಮಟ್ಟತಲದಲ್ಲಿರುತ್ತದೆ. ಬೋಗುಣಿಯಲ್ಲಿರುವ ದ್ರವ ಸೂಚಿಬಿಲ್ಲೆಯ ಕಂಪನಗಳನ್ನು ಶಮನಗೊಳಿಸುತ್ತದೆ. ಆದ್ದರಿಂದ ದಿಕ್ಸೂಚನೆಯಲ್ಲಿ ವಿಳಂಬವಾಗುವುದಿಲ್ಲ. ಹಡಗಿನ ಚಲನದಿಕ್ಕನ್ನು ಬೋಗುಣಿಯ ಒಳಮೈಯಿಂದ ಹೊರಗೆ ಚಾಚಿರುವ ದಾಂಡಿಗ ವಾಚಕ ತಿಳಿಸುತ್ತದೆ. ಇದು ಹಡಗಿನ ಮಧ್ಯ ರೇಖೆಗೆ ಸಮಾನಾಂತರವಾಗಿದೆ. ಜಿಂಬಾಲುಗಳಿರುವ ಪೀಠದ ಹೆಸರು ಬಿನಕಲ್. ಹಡಗಿನ ಕಾಂತತೆಯಿಂದ ಉತ್ತರಮುಖಿಯ ವಾಚನದಲ್ಲಿ ಕಾಣುವ ಲೋಪಗಳನ್ನು ನಿವಾರಿಸಲು ಉಪಯೋಗಿಸುವ ಕಾಂತ ದಂಡಗಳನ್ನು ಮತ್ತು ಮೆದುಕಬ್ಬಿಣದ ಗೋಳಗಳನ್ನು ಜೋಡಿಸಲು ಅನುಕೂಲವಾಗುವಂತೆ ಇದರಲ್ಲಿ ತಕ್ಕ ಜಾಗಗಳಿವೆ.

ಸೂಚಿಬಿಲ್ಲೆಯ ವೃತ್ತಪಟ್ಟಿಯಲ್ಲಿ 360 ಸಮಭಾಗಗಳಿವೆ. ಹಡಗಿನ ಚಲನ ದಿಕ್ಕಿನಲ್ಲಿ ಸೂಕ್ಷ್ಮ ಬದಲಾವಣೆ ಮಾಡುವುದು ಈಗ ಸಾಧ್ಯ. ಹಿಂದೆ ಯಾನ ಕೌಶಲ ಇಷ್ಟು ಸುಧಾರಿಸಿರಲಿಲ್ಲ. ಆದ್ದರಿಂದ ಆಗ ಸೂಚಿಬಿಲ್ಲೆಯಲ್ಲಿ ನಾಲ್ಕು ದಿಕ್ಕುಗಳನ್ನು ಮಾತ್ರ ತೋರಿಸಿರುತ್ತಿದ್ದರು. ಯಾನಕೌಶಲ ಸುಧಾರಿಸದೆ ಪಟ್ಟಿಯ ದಿಕ್ಕುಗಳ ಸಂಖ್ಯೆ ಹೆಚ್ಚಿದರೆ ಅದು ಅರ್ಥಪೂರ್ಣವಾಗಿರುವುದಿಲ್ಲ. ಎಂಟು ಮತ್ತು ಮೂವತ್ತೆರಡು ದಿಕ್ಕುಗಳನ್ನು ತೋರಿಸುವುದು ಮಧ್ಯಕಾಲದಲ್ಲಿ ವಾಡಿಕೆಗೆ ಬಂತು.

ಭೂ ವಿಜ್ಞಾನದಲ್ಲಿ: ಉತ್ತರಮುಖಿಯಲ್ಲಿ ಎರಡು ವಿಧ: 1. ಮೋಜಣಿಗೆ (ಸರ್ವೆ) ಉಪಯೋಗಿಸುವ ಉತ್ತರಮುಖಿ. 2. ಮುಪ್ಪಟ್ಟಿಯ ಉತ್ತರಮುಖಿ (ಪ್ರಿಸ್ಮ್ಯಾಟಿಕ್ ಕಂಪಾಸ್). ಮೋಜಣಿಗಾರರ ಉತ್ತರಮುಖಿಯನ್ನು ಸಾಮಾನ್ಯವಾಗಿ ಗಣಿಮೊದಲಾದುವನ್ನು ಮೋಜಣಿಮಾಡುವಾಗ, ಕೆಲವುವೇಳೆ ಶೃಂಗಕೋನ ಮತ್ತು ಸಮತಲಕೋನಗಳನ್ನು ಅಳೆಯಲು ಉಪಯೋಗಿಸುತ್ತಾರೆ.

ಸೈನ್ಯಖಾತೆಯಲ್ಲಿ: ನೆಲ ಪಡೆಯ ಸೈನಿಕನ ಶಿಕ್ಷಣವಿಭಾಗಗಳಲ್ಲಿ ಭೂಪಟವೀಕ್ಷಣೆ ಒಂದು ಮುಖ್ಯಾಂಶ. ಹೊಸನೆಲದಲ್ಲಿ ತನ್ನ ಇರುವನ್ನು ದೃಢಪಡಿಸಿಕೊಳ್ಳಲು ತಾನು ಕಂಡ ಭಾಗದ ಸೈನಿಕಮಾಹಿತಿಗಳನ್ನು ವರಿಷ್ಠಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಯಪಡಿಸಲು ಈ ಶಿಕ್ಷಣ ಬಲು ಅವಶ್ಯ. ಇದರಲ್ಲಿ ಭೂಪಟದೊಡನೆ ಸೈನಿಕ ಬಳಸುವ ಇನ್ನೊಂದು ಅತಿಮುಖ್ಯ ಉಪಕರಣ ಮುಪಟ್ಟೆ ಗಾಜು ಉತ್ತರಮುಖಿ (ಪ್ರಿಸ್ಮ್ಯಟಿಕ್‌ಕಂಪಾಸ್). ಉಪಕರಣಕ್ಕೆ ಆಳವಡಿಸಿರುವ ಪ್ರಿಸ್ಮಿನ ಆಕಾರದ ಚೌಕಟ್ಟಿನೊಳಗೆ ಭೂತಕನ್ನಡಿ ಇದೆ. ನೋಡಬೇಕೆಂದಿರುವ ವಸ್ತುವನ್ನು ಈ ಭೂತಕನ್ನಡಿ ಮೂಲಕ ದೃಷ್ಟಿಸಿದಾಗ ವಸ್ತುವಿನ ಕಾಂತ ದಿಙ್ಮಾನ ಅದರೊಂದಿಗೇ ಕಾಣುತ್ತದೆ–ಇದರ ಕಾರಣ ಉಪಕರಣದ ರಚನೆಯಲ್ಲಿನ ವೈಶಿಷ್ಟ್ಯ. ಹೀಗೆ ವಸ್ತು ಎಲ್ಲೇ ಇದ್ದರೂ ಅದರ ಕಾಂತ ದಿಙ್ಮಾನವನ್ನು ಸೈನಿಕ ತನ್ನ ನೆಲೆಯಿಂದಲೇ ಅಳೆಯಬಲ್ಲ. ಇದನ್ನು ಮುಂದೆ ಕೆಲವು ಸುಲಭ ಗಣನೆಗಳಿಂದ ಬೇಕಾದಂತೆ ಪರಿವರ್ತಿಸಿಕೊಂಡು ಭೂಪಟದ ಮೇಲೆ ತನ್ನ ಇರವನ್ನು ಕಂಡುಕೊಳ್ಳಬಹುದು. ಇದರ ವಿಪರ್ಯಕ್ರಮವೂ ಬೇಕಾಗುತ್ತದೆ. ಎಂದರೆ, ಸೈನಿಕನ ನೆಲೆ ಮತ್ತು ಉದ್ದೇಶಿತ ಗುರಿಯ ನೆಲೆ ಭೂಪಟದ ಮೆಲೆ ಗೊತ್ತಿದೆ. ಆದರೆ ನೆಲದ ಮೇಲೆ ಗುರಿಗೆ ಸಾಗುವುದು ಹೇಗೆ? ಆಗ ಭೂಪಟದಲ್ಲಿ ಗುರಿಯ ದಿಙ್ಮಾನವನ್ನು ಅಳೆದು ಅದನ್ನು ಕಾಂತ ದಿಙ್ಮಾನಕ್ಕೆ ಸುಲಭ ಗಣನೆಗಳಿಂದ ಪರಿವರ್ತಿಸಿ ದೊರೆಯುವ ಬೆಲೆಗೆ ಉತ್ತರಮುಖಿಯನ್ನು ಅಳವಡಿಸಿ ಅದು ತೋರುವ ದಿಕ್ಕಿಗೆ ಗಮಿಸಬೇಕು. ಮೊದಲಿನ ಕ್ರಮದ ಹೆಸರು ನೆಲದಿಂದ ಭೂಪಟಕ್ಕೆ; ಎರಡನೆಯದರ ಹೆಸರು ಭೂಪಟದಿಂದ ನೆಲಕ್ಕೆ. (ಎಸ್.ಎ.ಎಚ್.)

**ಉತ್ತರಮೇರು ವಲಯ:** ಸ್ಥೂಲವಾಗಿ ಉತ್ತರ ಅಕ್ಷಾಂಶ $66^0.30'$ ಗೆ ಉತ್ತರದಲ್ಲಿ, ಉತ್ತರಮೇರುವಿನ ಮೇಲೆ ಹಾಗೂ ಅದರ ಸುತ್ತಮುತ್ತ ಇರುವ ಪ್ರದೇಶ (ಆರ್ಕ್‌ಟಿಕ್ ರೀಜನ್ಸ್). ಉತ್ತರ ಶೀತವಲಯವೆಂದೂ ಕರೆಯುವುದಿದೆ. $66^0.33'$ ಉತ್ತರ ಅಕ್ಷಾಂಶವಾದ ಉತ್ತರಮೇರು ವೃತ್ತ ಇದರ ಭೌಗೋಳಿಕ ಮೇರೆಯೇನೂ ಅಲ್ಲ. ಉತ್ತರಮೇರುವಿನಿಂದ ಹಿಡಿದು ವೃಕ್ಷಬೆಳವಣಿಗೆಯ ಉತ್ತರದ ಅಂಚಿನ ವರೆಗೆ, ಒಂದೇ ಬಗೆಯ ಸ್ವಾಭಾವಿಕ ಲಕ್ಷಣಗಳಿರುವ ಪ್ರದೇಶಗಳಾದ ಗ್ರೀನ್‌ಲೆಂಡ್, ಸ್ಪಿಟ್ಸ್‌ಬರ್ಗನ್, ಇತರ ಉತ್ತರಮೇರು ದ್ವೀಪಗಳು, ಸೈಬೀರಿಯದ ಉತ್ತರದ ಸಮುದ್ರತೀರ, ಅಲಾಸ್ಕ ಹಾಗೂ ಕೆನಡಗಳ ಉತ್ತರದ ಅಂಚು, ಲ್ಯಾಬ್ರಡಾರ್ ತೀರ, ಐಸ್‌ಲೆಂಡಿನ ಉತ್ತರಾರ್ಧ, ಯುರೋಪಿನ ಆರ್ಕ್‌ಟಿಕ್ ಸಮುದ್ರ ತೀರ–ಇಷ್ಟು ಇದರ ವ್ಯಾಪ್ತಿ.

ಈ ಭೂಪ್ರದೇಶಗಳ ನಡುವೆ ಇರುವ ಖಂಡಾಂತರ ದಿಣ್ಣೆಯ ಮೇಲೆ ಅನೇಕ ದ್ವೀಪಗಳಿವೆಯಾದರೂ ಉತ್ತರಮೇರು ಬೋಗುಣಿಯಲ್ಲಿ ಯಾವ ದ್ವೀಪಗಳೂ ಕಂಡು ಬಂದಿಲ್ಲ.

ಉತ್ತರಮೆರುವಿನ ಭೂಪ್ರದೇಶಗಳು ಬೆಟ್ಟಗುಡ್ಡಮಯವಾಗಿವೆ. ಇವುಗಳ ಮೈಮೇಲೆಲ್ಲ ಕಿಗ್ಗಲ್ಲು ರಾಶಿರಾಶಿಯಾಗಿ ಹರಡಿದೆ. ವಿಚ್ಛಿದ್ರ ಸಮುದ್ರತೀರಗಳಲ್ಲಿ ಅಲ್ಲಲ್ಲಿ ಮುಖಜಭೂಮಿಗಳೇರ್ಪಟ್ಟಿವೆ.

ವಾಯುಗುಣ: ಉತ್ತರಮೇರು ವೃತ್ತವನ್ನು ಸಾಮಾನ್ಯವಾಗಿ ಸಮಶೀತೋಷ್ಣ ಹಾಗೂ ಶೀತವಲಯಗಳ ಎಲ್ಲೆಯ ರೇಖೆಯನ್ನಾಗಿ ಪರಿಗಣಿಸಬಹುದಾದರೂ ಬೇಸಗೆಯಲ್ಲಿ $10^0$ ಸೆ. ಗಿಂತಲೂ ಚಳಿಗಾಲದಲ್ಲಿ $0^0$ ಸೆ. ಗಿಂತಲೂ ಕಡಿಮೆ ಉಷ್ಣತೆಯಿರುವ ಭಾಗಗಳು ವೈಜ್ಞಾನಿಕ ಹಾಗೂ ಸೈನಿಕ ಕಾರ್ಯಚರಣೆ ನಡೆಸುವವರ ದೃಷ್ಟಿಯಿಂದ ಶೀತಪ್ರದೇಶ. ನಾಲ್ಕು ತಿಂಗಳ ಬೇಸಗೆ ಹೊಂದಿದ್ದು $10^0$ ಸೆ. ಉಷ್ಣತೆಯಿದ್ದರೆ ಅಂಥ ಪ್ರದೇಶ ಉಪಮೇರು (ಸಬ್'–ಆರ್ಕ್‌ಟಿಕ್) ವಲಯವೆನಿಸುತ್ತದೆ.

ಉತ್ತರ ಅಲಾಸ್ಕ, ಯೂಕಾನ್, ಸೈಬೀರಿಯದಲ್ಲಿನ ಯಕೂಟ್ ಅತ್ಯಂತ ಚಳಿಪ್ರದೇಶಗಳು. ಉತ್ತರಾರ್ಧಗೋಳದಲ್ಲೇ ಪರಮಾವಧಿ ಚಳಿ ಇರುವುದು ಯಕೂಟ್‌ನಲ್ಲಿ. ಉತ್ತರಮೇರುವೃತ್ತದಿಂದ 320 ಕಿಮೀ ದಕ್ಷಿಣಕ್ಕಿರುವ ಈ ಪ್ರದೇಶದಲ್ಲಿ ಚಳಿಗಾಲದಲ್ಲಿ ಆಗಾಗ್ಗೆ $-35^0$ ಸೆ. ನಷ್ಟು ಕಡಿಮೆ. ಇದನ್ನುಳಿದು ಬೇರೆ ಯಾವ ಉತ್ತರಮೇರು ಪ್ರದೇಶದಲ್ಲೂ $-15.5^0$ ಸೆ. ಗಿಂತ ಕಡಿಮೆ ಉಷ್ಣತೆ ಇರುವುದಿಲ್ಲ. ಉತ್ತರಮೇರುವಿನಲ್ಲಿ $-13^0$ ಸೆ. ಕನಿಷ್ಠ ಗೆರೆ. ಉತ್ತರಮೇರುವಿನ ಭೂಪ್ರದೇಶದಲ್ಲಿ ಬೇಸಗೆಯಲ್ಲಿ ಉಷ್ಣತೆ ಯಾವಾಗಲಾದರೊಮ್ಮೆ $29.5^0$ ಸೆ. ಇರುವುದುಂಟು. ಯೂಕಾನಿನಲ್ಲಿ $37.8^0$ ಸೆ. (ನೆರಳಿನಲ್ಲಿ) ಬೇಸಗೆ ಉಷ್ಣತೆ. ಇಷ್ಟೊಂದು ಉಷ್ಣತೆ ಶೀತವಲಯ ಪ್ರದೇಶದಲ್ಲಿ ಕಂಡುಬರುವುದು ಆಶ್ಚರ್ಯವೆನಿಸಬಹುದಾದರೂ ಇದು ಸತ್ಯ. ಇಲ್ಲಿನ ತಗ್ಗು ಪ್ರದೇಶಗಳಲ್ಲಿ ಬೇಸಗೆಯಲ್ಲಿ ಕೆಲವು ಸಮಯದಲ್ಲಿ ಸೂರ್ಯಕಿರಣ ಬಲು ಪ್ರಖರ. ಈ ಪ್ರದೇಶ ಸಮುದ್ರಮಾರುತಗಳ ಹಾಗೂ ಮಂಜುಮುಸುಕಿನ ಪರ್ವತಾವಳಿಗಳಿಂದ ಬೀಸಿಬರುವ ಮಾರುತಗಳ ಪ್ರಭಾವದಿಂದ ದೂರವಿರುವುದೇ ಇದಕ್ಕೆ ಕಾರಣ.

ಈ ಪ್ರದೇಶದ ಅನೇಕ ಕಡೆಗಳಲ್ಲಿ ಬಿರುಗಾಳಿಗಳಿಲ್ಲ. ಚಂಡಮಾರುತಗಳಂತೂ ಇಲ್ಲವೇ ಇಲ್ಲ. ಪ್ರಸ್ಥಭೂಮಿ, ಪರ್ವತ ಪ್ರದೇಶ ಹಾಗೂ ಸಮುದ್ರತೀರಗಳಲ್ಲಿ ಮಾತ್ರ ಕೊಂಚ ಬಿರುಸಾಗಿ ಗಾಳಿ ಬೀಸುವುದುಂಟು.

ಇಲ್ಲಿನ ಹಿಮವರ್ಷವನ್ನು ಅಳೆಯುವುದು ಕಷ್ಟ. ಮಳೆಯೂ ಕಡಿಮೆ. ಕೆನಡ, ಅಲಾಸ್ಕಗಳಲ್ಲಿ ಬೀಳುವ ಬೇಸಗೆಮಳೆಯನ್ನೂ ಚಳಿಗಾಲದ ಹಿಮವರ್ಷವನ್ನೂ ಸೇರಿಸಿದರೂ ವರ್ಷಕ್ಕೆ 25 ಸೆಂಮೀ ಗಿಂತ ಹೆಚ್ಚೇನೂ ಆಗುವುದಿಲ್ಲ. ಸೈಬೀರಿಯದ ತಗ್ಗು ಪ್ರದೇಶಗಳಲ್ಲಿ ಇವು ಇನ್ನೂ ಕಡಿಮೆ.

ಉತ್ತರಮೇರು ಪ್ರದೇಶಗಳಲ್ಲಿ ಹಿಮನದಿಗಳು ಕಡಿಮೆ. 3030 ಮೀ. ಎತ್ತರದ ಪ್ರದೇಶಗಳಲ್ಲಿ ಕೆಲವು ಹಿಮನದಿಗಳಿವೆ.

ಉತ್ತರಮೇರು ದ್ವೀಪಗಳಲ್ಲೂ ತೀರಪ್ರದೇಶಗಳಲ್ಲಿ, ಆಗಾಗ್ಗೆ ಮಂಜುಕವಿಯುವುದುಂಟು. ಬೇಸಗೆಯಲ್ಲಿ ನೆಲದ ಉಷ್ಣತೆ $26.6^0$ ಸೆ. ಇದ್ದರೆ, ಹತ್ತಿರದ ಸಮುದ್ರದ್ದು $-1.1^0$ ಸೆ. ಉಷ್ಣತೆಯಲ್ಲಿನ ಈ ವ್ಯತ್ಯಾಸದ ಪರಿಣಾಮವೇ ಸಮುದ್ರದ ಮಂಜು. ಇದು ಸಮುದ್ರ ತೀರದಲ್ಲಿ ದಟ್ಟ ಹಾಗೂ ಸಾಮಾನ್ಯ.

ಇಲ್ಲಿನ ಚಳಿಗಾಲಗಳು ದೀರ್ಘ, ಅತಿಶೀತಕರ. ಬೇಸಗೆ ಕಾಲ ಕಡಿಮೆ ಇದ್ದರೂ ಹೆಚ್ಚು ಸೆಕೆ. ಬೇಸಗೆಯಲ್ಲಿ ಸೈಬೀರಿಯದ ತೀರಗಳು ಸಾಮಾನ್ಯವಾಗಿ ನದಿಗಳಿಂದ ಬೆಚ್ಚನೆಯ ನೀರು ಪಡೆಯುವುದರಿಂದ ಅಲ್ಲಿ ಹಿಮ ಇರುವುದಿಲ್ಲ. ವರ್ಷದಲ್ಲಿ ಹೆಚ್ಚು ಕಾಲ ಕಡಲಿನ ಮೇಲ್ಭಾಗ ಹಿಮಾಚ್ಛಾದಿತವಾಗಿರುವುದರಿಂದಲೂ ನೀರು ಆವಿಯಾಗುವುದು ಕಡಿಮೆಯಾದ್ದರಿಂದಲೂ ನದಿಗಳಿಂದ ವರ್ಷೇ ವರ್ಷೇ ಹೊಸ ನೀರು ಬಂದು ಸೇರುವುದರಿಂದಲೂ ಆರ್ಕ್‌ಟಿಕ್ ಸಾಗರದ ನೀರಿನ ಲವಣತೆ ಕಡಿಮೆ. ಪರಿಣಾಮವಾಗಿ ನೀರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತದೆ. ಅಲಾಸ್ಕ ಹಾಗೂ ಸೈಬೀರಿಯಗಳ ಬಳಿಯ ನೀರು ಸ್ಪಿಟ್ಸ್‌ಬರ್ಗನ್ ಮತ್ತು ಗ್ರೀನ್‌ಲೆಂಡ್ ಕಡೆಗೆ ಹರಿದು, ಅಲ್ಲಿ ಹಿಮದಿಂದ ಒಡಗೂಡಿ ದಕ್ಷಿಣದ ಕಡೆಗೆ ಶೀತೋದಕ ಪ್ರವಾಹಗಳಾಗಿ ಹರಿಯುತ್ತದೆ.

ಇಲ್ಲಿನ ವಿಚಿತ್ರ ವಾಯುಗುಣದಿಂದಾಗಿ ಮಾನವ ಇಲ್ಲಿ ಬಲು ಎಚ್ಚರಿಕೆಯಿಂದ ವಾಸಮಾಡಬೇಕು. ವಸಂತ ಋತುವಿನ ಆವಿರ್ಭಾವ ನಿಧಾನವಾದರೂ ಅದು ಬಂದ ಕೂಡಲೆ ಎಲ್ಲೆಲ್ಲೂ ಬಿಳುಪೇ ಕಂಡು ಬರುವುದರಿಂದ ಮಂಜಿನ ಕುರುಡು ಸಂಭವಿಸಬಹುದು. ಇಲ್ಲಿ ಕ್ರಿಮಿಗಳದೂ ಒಂದು ಕಾಟ. ಇದರಿಂದ ತಪ್ಪಿಸಿಕೊಳ್ಳಲು ತಲೆಯ ಬಲೆ ಉಪಯೋಗಿಸಬೇಕು.

ಸಸ್ಯವರ್ಗ: ಮೇರುವಿನ ಹಿಮಾಚ್ಛಾದಿತ ಪ್ರದೇಶ ವಿನಾ ಉಳಿದ ಕಡೆಗಳಲ್ಲಿರುವುದು ಹಲವು ಬಗೆಯ ತೆಳುವಾದ ಸಮುದ್ರ ಸಸ್ಯ. ಇಲ್ಲಿನ ಸಸ್ಯಗಳ ಬೆಳವಣಿಗೆ ಶೀಘ್ರ. ಹೂ, ಬೀಜಗಳು ಬಿಡುವುದು ಬೇಗ. ಈ ಸಸ್ಯಗಳ ಎತ್ತರ 1 ಮೀ. ಗಿಂತ ಕಡಿಮೆ. ಆದರೂ ಹೂಗಳು ಆಕರ್ಷಕ. ಹಣ್ಣುಗಳು ಚಿಕ್ಕವು, ಮೃದು. ಓಟೆಯಿಲ್ಲ. ಅನೇಕ ಸಸ್ಯಗಳ ಮೆದು ತಿರುಳಿನ ಎಲೆಗಳನ್ನು ಬೇಸಗೆಯಲ್ಲಿ ಆಹಾರವಾಗಿ ಬಳಸಬಹುದು. ಶೀತವಲಯದ ಬಯಲುಗಳಲ್ಲಿ (ತಂಡ್ರ) ಶೇ. 30 ಶಿಲಾವಲ್ಕ, ಶೇ. 25 ತೃಣವರ್ಗದ ಸಸ್ಯ, ಶೇ. 25 ಕುರುಚಲು, ಶೇ. 20 ಹುಲ್ಲು ಮತ್ತು ಹೂಗಿಡಗಳಿವೆ. ದಕ್ಷಿಣಕ್ಕಿರುವ ಉಪಮೇರು ಪ್ರದೇಶದ ಉತ್ತರದ ಸೆರಗಿನಲ್ಲಿ ತೂಲಕಾಷ್ಠವೃಕ್ಷಗಳನ್ನು (ಕಾಟನ್–ವುಡ್) ಕಾಣಬಹುದು. ಈ ಅಂಚಿನ ದಕ್ಷಿಣಕ್ಕೆ ಸರಲ (ಪೈನ್), ವೃಕ್ಷದಂಥ ಅನೇಕ ಶಂಕುಧಾರಿ ಮರಗಳಿರುವ ಪ್ರದೇಶವಿದೆ (ಟೈಗ). ಈ ಪ್ರದೇಶದಲ್ಲಿ ಅಲ್ಲಲ್ಲಿ ಸರಲ (ಪೈನ್), ಭೂರ್ಜ (ಬರ್ಚ್) ಮುಂತಾದ ಮರಗಳೂ ಬೆಳೆದಿವೆ. ದಕ್ಷಿಣಕ್ಕೆ ಸಾಗಿದಂತೆ ಇವೇ ಹೆಚ್ಚು.

ಪ್ರಾಣಿವರ್ಗ: ಖಂಡಗಳ ನೆರೆಯ ಕಡಲಿನಲ್ಲಿ ಬಗೆ ಬಗೆಯ ಮೀನುಗಳುಂಟು. ಸೀಲ್‌ಗಳು ಹೇರಳ. ವಿರಳವಾಗಿ ತಿಮಿಂಗಿಲಗಳೂ ಇವೆ. ಭೂಪ್ರದೇಶದಲ್ಲಿ ಪರಿಸರಕ್ಕೆ ಬಲು ಚೆನ್ನಾಗಿ ಹೊಂದಿಕೊಳ್ಳುವ ಪ್ರಾಣಿಯೆಂದರೆ ಹಿಮಸಾರಂಗ. ಹಿಮಕರಡಿಯಂತೂ ಪ್ರಸಿದ್ಧ. ದನಕರು, ಕುರಿ, ಕುದುರೆ ಮತ್ತು ಮೇಕೆಗಳನ್ನು ಸಾಕಬಹುದಾದರೂ ಲಾಭದಾಯಕವಲ್ಲ. ಹಿಮಸಾರಂಗ ತಿನ್ನದಿರುವ ಸಸ್ಯಗಳು ಕಸ್ತೂರಿ ಮೃಗದ ಆಹಾರ. ಹಿಮಸಾರಂಗದಂತೆ ಇದೂ ಮಾಂಸ, ಚರ್ಮಗಳೊಂದಿಗೆ ಉಣ್ಣೆಯನ್ನೂ ಒದಗಿಸುತ್ತದೆ.

ಇಲ್ಲಿರುವ ಕೀಟಗಳಲ್ಲಿ ಅನೇಕ ಬಗೆ. ಹಲವು ಮಾರಕ. ಸೊಳ್ಳೆ ಸಾಮಾನ್ಯ. ಮರಳುನೊಣ, ಕಪ್ಪುನೊಣ ಮತ್ತು ಜಿಂಕೆನೊಣಗಳೂ ಇವೆ. ಹೆಜ್ಜೇನು ವಿರಳ. ಬಗೆ ಬಗೆಯ ಚಿಟ್ಟೆಗಳೂ ಪತಂಗಗಳೂ ಧಾರಾಳ. ಕೆಲವು ಕಡೆ ಮಿಡತೆಗಳೂ ಜೀರುಂಡೆಗಳೂ ಉಂಟು. ಏಷ್ಯದ ಮೇರುಪ್ರದೇಶದಲ್ಲಿ ಹಿಮಸಾರಂಗ, ಮೊಲ, ನರಿ, ತೋಳಗಳು ಬೇಸಗೆಯಲ್ಲಿದ್ದು, ಚಳಿಗಾಲದಲ್ಲಿ ನಿರ್ಗಮಿಸುತ್ತವೆ. ದಂಶಕ ಜಾತಿಯ ಸಂಯಾತಿಗೆ (ಲೆಮಿಂಗ್) ಹಿಮದಡಿಯ ಸಸ್ಯವೇ ಆಹಾರ. ಸೊಳ್ಳೆ, ಮೀನು ಮುಂತಾದುವನ್ನು ತಿಂದು ಬದುಕುವ ಪೆಂಗ್ವಿನ್, ಪೆಲಿಕನ್ ಇತ್ಯಾದಿ ನೀರ ಹಕ್ಕಿಗಳು ಹೆಚ್ಚು.

ಜನಜೀವನ: ಉತ್ತರ–ಪಶ್ಚಿಮ ಯುರೋಪಿನ ಮೂಲವಾಸಿಗಳಾದ ಲ್ಯಾಪ್ ಜನಕ್ಕೆ ಮೀನು ಹಿಡಿಯುವುದೂ ಹಿಮಸಾರಂಗ ಸಾಕುವುದೂ ಮುಖ್ಯೋದ್ಯೋಗ. ಉತ್ತರ–ಪೂರ್ವ ಯುರೋಪ್ ಹಾಗೂ ಪಶ್ಚಿಮ ಸೈಬೀರಿಯದ ಮೂಲವಾಸಿಗಳಾದ ಸ್ಯಾಮೊಯೆಡ್‌ಗಳದೂ ಇದೇ ಬಗೆಯ ಜೀವನ. ಪೂರ್ವ ಸೈಬೀರಿಯದ ಮೂಲವಾಸಿಗಳು ಚೂಕ್‌ಚೀಗಳು. ಇವರಲ್ಲಿ ಒಂದು ಪಂಗಡದವರಿಗೆ ಹಿಮಸಾರಂಗದ ಹಾಲೂ ಮಾಂಸವೂ ಆಹಾರ. ಇನ್ನೊಂದು ಪಂಗಡದವರಿಗೆ ಬೇಟೆ ಹಾಗೂ ಮೀನುಗಾರಿಕೆಯಿಂದ ಜೀವನ. ಯಕೂಡ್ ಜನ ಕುದುರೆ, ಹಿಮಸಾರಂಗ ಸಾಕುತ್ತಾರೆ. ಕೆನಡದ ಉತ್ತರದ ಅಂಚಿನಲ್ಲಿರುವ ಇಂಡಿಯನ್ನರು ಅಲೆಮಾರಿಜನ. ಎಸ್ಕಿಮೋಗಳು ಪೂರ್ವ ಸೈಬೀರಿಯ, ಅಲಾಸ್ಕ, ಲ್ಯಾಬ್ರಡಾರ್ ಮತ್ತು ಗ್ರೀನ್‌ಲೆಂಡ್‌ಗಳಲ್ಲಿ ಹರಡಿದ್ದಾರೆ. ನಾಯಿ ಇವರ ಸಾಕುಪ್ರಾಣಿ.

ಸೈಬೀರಿಯ, ಕೆನಡ ಮತ್ತು ಅಲಾಸ್ಕಗಳಲ್ಲಿ ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲ ದೊರೆಯುತ್ತವೆ. ರಷ್ಯದ ಮೇರುಪ್ರದೇಶದಲ್ಲಿ ಕಲ್ಲಿದ್ದಲು, ತಾಮ್ರ, ಚಿನ್ನ, ಯುರೇನಿಯಂ ಸಿಗುವುದರಿಂದ ಗಣಿಗಾರಿಕೆ ಒಂದು ಮುಖ್ಯ ಕಸುಬು.

ಅನೇಕ ಕಡೆಗಳಲ್ಲಿ ಪಶುಪಾಲನೆ ರೂಢಿಯಲ್ಲಿದೆ. ಹೈನುಗಾರಿಕೆ ಒಂದು ಉದ್ಯೋಗ. ಅನುಕೂಲವಿರುವ ಕಡೆಗಳಲ್ಲಿ ವ್ಯವಸಾಯ ರೂಢಿಯಲ್ಲುಂಟು. ಗ್ರೀನ್ ಲೆಂಡಿನಿಂದ ತಿಮಿಂಗಿಲ ತೈಲ, ಉಪ್ಪು ತುಂಬಿದ ಮೀನು, ಮಾಂಸ–ಇವು ನಿರ್ಯಾತವಾಗುತ್ತವೆ.

ಉತ್ತರಮೇರು ವಲಯದ ಪ್ರಾಮುಖ್ಯ, ಅಭಿವೃದ್ಧಿ: ಪ್ರಪಂಚಲ್ಲಿ ಶೇ. 90 ಜನ ಉತ್ತರಾರ್ಧಗೋಳದಲ್ಲಿ ವಾಸಿಸುತ್ತಾರಷ್ಟೇ ಅಲ್ಲ, ಭಾರತ ಚೀನಗಳನ್ನುಳಿದು ಉತ್ತರದ ಎಲ್ಲ ಮುಖ್ಯ ರಾಷ್ಟ್ರಗಳ ರಾಜಧಾನಿಗಳೂ ಭೂಮಧ್ಯ ರೇಖೆಗಿಂತ ಉತ್ತರ ಮೇರುವೃತ್ತಕ್ಕೆ ಹೆಚ್ಚು ಸಮೀಪವಾಗಿವೆಯೆಂಬುದು ಗಮನಾರ್ಹ. ಆಯಕಟ್ಟಿನ ದೃಷ್ಟಿಯಿಂದ ಈ ಪ್ರದೇಶಕ್ಕೆ ಹೆಚ್ಚಿನ ಪ್ರಾಮುಖ್ಯ. ವಾಣಿಜ್ಯ ದೃಷ್ಟಿಯಿಂದಲೂ ಇಲ್ಲಿನ ಸಂಚಾರಮಾರ್ಗಗಳು ಮುಖ್ಯವಾಗಿವೆ.

ಈ ಪ್ರದೇಶದ ಸಂಪತ್ತಿನ ಉಪಯೋಗ ಎರಡು ಬಗೆ: ಒಂದು ಪುರಾತನವಾದರೆ ಇನ್ನೊಂದು ಅಧುನಿಕತನ. ಕೆಲವು ಜನಾಂಗಗಳು ಈಗಲೂ ಪ್ರಾಚೀನ ರೀತಿಯ ಕೃಷಿ, ಬೇಟೆ, ಮೀನುಗಾರಿಕೆಗಳನ್ನವಲಂಬಿಸಿವೆ. ಈಚೆಗೆ ಇಲ್ಲಿ ಖನಿಜೋದ್ಯಮಗಳೂ ನಿರ್ಯಾತಾವಲಂಬಿ ಉದ್ಯಮಗಳೂ ಬೆಳೆಯುತ್ತಿವೆ. ತುಪ್ಪುಳ ವ್ಯಾಪಾರ, ಗಣಿಗಾರಿಕೆ, ವಿದ್ಯುತ್ ಉತ್ಪತ್ತಿ, ಮರದ ತಿರುಳು (ಪಲ್ಪ್) ತಯಾರಿಕೆಗಳು ಮುಖ್ಯ. ದೊಡ್ಡ ಉದ್ಯಮಗಳು ಬಹುತೇಕ ಸರ್ಕಾರದ ವಶಕ್ಕೆ ಅಥವಾ ಹತೋಟಿಗೊಳಪಟ್ಟಿರುವುದು ಗಮನಾರ್ಹ. ಸೋವಿಯತ್ ಒಕ್ಕೂಟ ಪ್ರದೇಶದಲ್ಲಿ ಇವು ಸಂಪೂರ್ಣವಾಗಿ ಸರ್ಕಾರದ ವಶದಲ್ಲಿರುತ್ತದೆ. ಗ್ರೀನ್‌ಲೆಂಡಿನ ದೊಡ್ಡ ಉದ್ಯಮಗಳೂ ಸರ್ಕಾರದ ಏಕಸ್ವಾಮ್ಯಕ್ಕೊಳಪಟ್ಟಿವೆ. ಪಶ್ಚಿಮ ಯೂರೋಪು, ಕೆನಡ, ಅಲಾಸ್ಕಗಳಲ್ಲಿ ಖಾಸಗಿ ಉದ್ಯಮ ಸಂಸ್ಥೆಗಳಿಗೆ ಸರ್ಕಾರಗಳ ಸಹಾಯಧನ ಹೆಚ್ಚಾಗಿ ದೊರಕುತ್ತಿದೆ.

ಭೌಗೋಳಿಕ ಕಾರಣಗಳಿಂದಾಗಿ ಈ ಪ್ರದೇಶದಲ್ಲಿ ರಸ್ತೆ ಸಾರಿಗೆಗಿಂತ ವಿಮಾನ ಹಾಗೂ ಹಡಗುಸಾರಿಗೆ ವ್ಯವಸ್ಥೆಗಳು ಹೆಚ್ಚು ಪ್ರಗತಿ ಹೊಂದಿವೆ. ಉತ್ತರಮೇರು ಪ್ರದೇಶದ ಮೂಲಕ ಪೂರ್ವದ ರಾಷ್ಟ್ರಗಳಿಗೆ ಹಾದಿ ಕಂಡುಹಿಡಿಯುವ ಯತ್ನ ಹಿಂದಿನಿಂದಲೂ ನಡೆಯುತ್ತಿತ್ತು. ಅಲಾಸ್ಕವನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಕೊಂಡದ್ದು ಬಹುಮಟ್ಟಿಗೆ ಈ ಉದ್ದೇಶದಿಂದಾಗಿಯೆ. ಈಚೆಗೆ ಪೂರ್ವ ಪಶ್ಚಿಮ ಗೋಳಗಳ ಕೆಲವು ವಿಮಾನ ಮಾರ್ಗಗಳು ಈ ಮೂಲಕ ಹಾದು ಹೋಗುತ್ತವೆ.

ಉತ್ತರ ಮೇರು ವಲಯದ ಭೂವಿನ್ಯಾಸ: ಇಲ್ಲಿನ ಭೂಭಾಗಗಳು ಮುಖ್ಯವಾಗಿ ಅತಿಪುರಾತನ ಶಿಲೆಗಳಿರುವ ನಾಲ್ಕು ಕೇಂದ್ರಗಳ ಸುತ್ತ ಶೇಖರಣೆಗೊಂಡು ಕ್ರಮೇಣ ಈಗಿನ ಪರಿಸ್ಥಿತಿ ತಲೆದೋರಿತು. ಇವುಗಳಲ್ಲಿ ಅತಿದೊಡ್ಡದು ಕೆನಡಿಯನ್ ಶಾಶ್ವತಭೂಖಂಡ. ಇದರಮೇಲೆ ಕೆನಡಿಯನ್ ಮೇರು ಪ್ರದೇಶದ ಬಹುಭಾಗ ಹರಡಿದೆ. ಅಲ್ಲದೆ ಪೂರ್ವದತ್ತ ಬ್ಯಾಫಿನ್ ಕೊಲ್ಲಿಯ ಅಡಿಯಲ್ಲಿ ಹರಡಿ ಗ್ರೀನ್‌ಲೆಂಡಿನ ಬಹುತೇಕ ಭಾಗವನ್ನೂ ಒಳಗೊಂಡಿದೆ. ಬಾಲ್ಟಿಕ್ ಶಾಶ್ವತಭೂಭಾಗ ಫಿನ್‌ಲೆಂಡನ್ನು ಕೇಂದ್ರಭಾಗದಲ್ಲಿ ಅಳವಡಿಸಿಕೊಂಡಿದೆ ಮತ್ತು ಇಡೀ ಉತ್ತರ ಸ್ಕಾಂಡಿನೇವಿಯ ಮತ್ತು ವಾಯವ್ಯ ರಷ್ಯವನ್ನು ಒಳಗೊಂಡಿದೆ. ಇತರ ಎರಡು ಶಾಶ್ವತ ಭೂಖಂಡಗಳು ವಿಸ್ತೀರ್ಣದಲ್ಲಿ ಕಿರಿಯವು. ಇವುಗಳಲ್ಲೊಂದಾದ ಅಂಗಾರ ಖಂಡಕೇಂದ್ರ ಸೈಬೀರಿಯದ ಉತ್ತರಭಾಗದಲ್ಲಿನ ಖಟಾಂಗಾ ಮತ್ತು ಲೇನಾ ನದಿಗಳ ನಡುವೆಯೂ ಮತ್ತೊಂದು ಶಾಶ್ವತ ಭೂಖಂಡವಾದ ಕೊಲಿಮಾ ನೈಋತ್ಯ ಸೈಬೀರಿಯ ಪ್ರಾಂತ್ಯದಲ್ಲೂ ಕಂಡುಬಂದಿವೆ.

ಶಾಶ್ವತ ಭೂಭಾಗಗಳ ನಡುವೆ ಅದರಲ್ಲೂ ಅವುಗಳ ಅಂಚಿನುದ್ದಕ್ಕೂ ದೀರ್ಘ ಕಾಲದ ಸ್ತರ ಸಂಗ್ರಹಣಕಾರ್ಯ ನಡೆದ ಆಧಾರಗಳಿವೆ. ಹೀಗಾಗಿ ಹಲವು ಕಡೆ ಶಾಶ್ವತ ಭೂಭಾಗಗಳು ಜಲಜಶಿಲಾಪ್ರಸ್ತರಗಳಿಂದ ಮುಚ್ಚಿಹೋಗಿರುವುದೂ ಉಂಟು. ಇನ್ನು ಕೆಲವು ಪ್ರದೇಶಗಳಲ್ಲಿ ಹೀಗೆ ಶೇಖರವಾದ ಶಿಲಾಪ್ರಸ್ತರಗಳು ಮಡಿಕೆಬಿದ್ದು ಪರ್ವತಗಳಾಗಿ ರೂಪುಗೊಂಡು ಕ್ರಮೇಣ ಭೂಸವೆತಕ್ಕೊಳಗಾಗಿ ನಶಿಸಿಹೋಗಿರುವುದೂ ಉಂಟು. ಉತ್ತರ ಮೇರುಪ್ರದೇಶದಲ್ಲಿ ಎರಡು ಪ್ರಮುಖ ಪರ್ವತಗಳು ಜನಿಸಿದ ಕಾಲಗಳನ್ನು ಗುರುತಿಸಿದ್ದಾರೆ. ಪೆಲಿಯೊಜ಼ೋಯಿಕ್ ಯುಗದಲ್ಲಿ (600 ದ.ಲ.ವ. ಪ್ರಾಚೀನದಿಂದ 225 ದ.ಲ.ವ ಪ್ರಾಚೀನದವರೆಗೆ) ಕ್ಲಿಷ್ಟರಚನೆಯ ಪರ್ವತಗಳು ಮೈವೆತ್ತವು. ಇವುಗಳಲ್ಲಿ ಕೆಲಿಡೋನಿಯನ್ ಮತ್ತು ಹರ್ಸಿನಿಯನ್ ಪರ್ವತಗಳು ಜನಿಸಿದ ಯುಗಗಳ ಕುರುಹುಗಳನ್ನು ಗುರುತಿಸಬಹುದು. ಈ ಪರ್ವತ ಶ್ರೇಣಿ ಕ್ವೀನ್ ಎಲಿಜ಼ಬೆತ್ ದ್ವೀಪಗಳಿಂದ ಮೊದಲಾಗಿ ಪೀರಿಲ್ಯಾಂಡಿನಲ್ಲಿ ಹಾದು ದಕ್ಷಿಣಕ್ಕೆ ಗ್ರೀನ್‌ಲೆಂಡಿನ ಪೂರ್ವತೀರದುದ್ದಕ್ಕೂ ವಿಸ್ತರಿಸಿದೆ. ಇದೇ ಭೂಕಾಲದಲ್ಲಿ ಸ್ವಾಲ್‌ಬಾರ್ಡ್, ನೊವಯ ಜ಼ಿಂಲ್ಯಾಯ ಉತ್ತರಯೂರಲ್, ಟೈಮೀರ್ ಪ್ರಸ್ಥಭೂಮಿ, ಸ್ಪೆವಿರನಯ ಜ಼ಿಂಲ್ಯಾ–ಈ ಪ್ರದೇಶಗಳಲ್ಲಿ ಪರ್ವತಜನ್ಯಕ್ರಿಯೆ ತಲೆದೋರಿತು.

ಎರಡನೆಯ ಪರ್ವತಗಳ ಜನನಕ್ರಿಯೆ ಮೀಸೊಜ಼ೋಯಿಕ್ (225 ದ.ಲ.ವ. ಪ್ರಾಚೀನದಿಂದ 65 ದ.ಲ.ವ. ಪ್ರಾಚೀನದವರೆಗೆ) ಮತ್ತು ಸೀನೋಜ಼ೋಯಿಕ್ ಯುಗಗಳಲ್ಲಿ (65 ದ.ಲ.ವ. ಪ್ರಾಚೀನದಿಂದ ಇಂದಿನವರೆಗೆ) ತಲೆದೋರಿತು. ಇದಕ್ಕೆ ಸಂಬಂಧಿಸಿದ

ಪರ್ವತಗಳು ನೈರುತ್ಯ ಸೈಬೀರಿಯ ಮತ್ತು ಅಲಾಸ್ಕಗಳಲ್ಲಿವೆ. ಮಟ್ಟವಾದ ಅಥವಾ ಅಷ್ಟಾಗಿ ಮಡಿಕೆ ಬಿದ್ದಿರದ ಶಿಲಾಪ್ರಸ್ತರಗಳು ಉತ್ತರ ಕೆನಡ ಶಾಶ್ವತ ಭೂಭಾಗದ ತಗ್ಗು ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಕಂಡುಬಂದಿವೆ. ಉತ್ತರ ರಷ್ಯ ಪಶ್ಚಿಮ ಮತ್ತು ಕೇಂದ್ರ ಸೈಬೀರಿಯಗಳಲ್ಲಿ ಜಲಜಶಿಲಾನಿಕ್ಷೇಪಗಳು ಹೇರಳವಾಗಿವೆ. ಇವುಗಳ ವಯಸ್ಸು ಪೆಲಿಯೊಜೋಯಿಕ್ ಯುಗದಿಂದ ಕ್ವಾಟರ್ನರಿ ಯುಗದವರೆಗೆ.

ಟರ್ಷಿಯರಿ ಯುಗದಲ್ಲಿ (65 ದ.ಲ.ವ. ಪ್ರಾಚೀನದಿಂದ 11 ದ.ಲ.ವ. ಪ್ರಾಚೀನ ದವರೆಗೆ) ಉತ್ತರ ಮೇರುವಿನ ಎರಡು ಪ್ರದೇಶಗಳಲ್ಲಿ ಅಗ್ನಿಶಿಲೆಗಳಿಗೆ ಸಂಬಂಧಿಸಿದ ಚಟುವಟಿಕೆ ಕಾಣಬಂತು, ಒಂದು ಪ್ರದೇಶದಲ್ಲಿ ಈ ಚಟುವಟಿಕೆ ಉತ್ತರ ಪೆಸಿಫಿಕ್‌ನ ಪರ್ವತಜನನ ಕಾರ್ಯಚರಣೆಗೆ ಸಂಬಂಧಿಸಿದೆ. ಈ ವಲಯದ ಜ್ವಾಲಾಮುಖಿಗಳನ್ನು ಇಂದಿಗೂ ಎರಡು ಮುಖ್ಯ ಜಾಡುಗಳಲ್ಲಿ ಕಾಣಬಹುದು. ಮೊದಲನೆಯ ಜಾಡು ಕಾಮ್‌ಚಟ್ಕ, ಅಲ್ಯೂಷಿಯನ್ ದ್ವೀಪಗಳು ಮತ್ತು ಅಲಾಸ್ಕ ದ್ವೀಪಗಳನ್ನೊಳಗೊಂಡಿದೆ. ಮತ್ತೊಂದು ಜಾಡು ಉತ್ತರ ಅಟ್ಲಾಂಟಿಕ್ ಸಾಗರವನ್ನು ಹಾದು ಇಡೀ ಐಸ್ಲೆಂಡ್, ಜಾನ್ ಮೇಯಿನ್ ದ್ವೀಪ ಮತ್ತು ಗ್ರೀನ್‌ಲೆಂಡುಗಳನ್ನೊಳಗೊಂಡಿದೆ. ಇಂದಿಗೂ ಈ ಜಾಡುಗಳಲ್ಲಿ ಹಲವಾರು ಜಾಗೃತ ಜ್ವಾಲಾಮುಖಿಗಳು ನೂರಾರು ಬಿಸಿನೀರಿನ ಚಿಲುಮೆಗಳೂ ಇವೆ.

ಸು. 7,50,000 ವರ್ಷಗಳ ಹಿಂದೆ ಈಗಿನ ಮೇರು ಪ್ರದೇಶಗಳ ವಾಯುಗುಣದಲ್ಲಿ ತೀವ್ರ ಬದಲಾವಣೆಗಳು ತಲೆದೋರಿ ಹವೆ ಅತಿ ಶೀತಗೊಂಡು ಇಡೀ ಭೂಭಾಗ ನೀರ್ಗಲ್ಲ ಹಾಳೆಗಳಿಂದ ಮುಚ್ಚಿಹೋಯಿತು. ಹೀಗಾಗಿ ಹಿಮಯುಗವೇ ಪ್ರಾರಂಭವಾಯಿತು. ಉತ್ತರ ಅಮೆರಿಕದಲ್ಲಿ ನೀರ್ಗಲ್ಲ ಹಾಳೆ ಬ್ಯಾಫಿನ್ ದ್ವೀಪದಲ್ಲಿ ಮೊದಲಾಗಿ ಕ್ರಮೇಣ ದಕ್ಷಿಣ ಮತ್ತು ಪಶ್ಚಿಮದತ್ತ ವರ್ಧಿಸುತ್ತ ಹಲವಾರು ಸಣ್ಣಪುಟ್ಟ ಹಿಮನದಿಗಳನ್ನೂ ಅಳವಡಿಸಿಕೊಂಡು ವಿಸ್ತಾರವಾಗಿ ಬೆಳೆದು ಬೃಹದಾಕಾರದ ಲಾರೆಂಟೈಡ್ ನೀರ್ಗಲ್ಲ ಹಾಳೆ ಎನಿಸಿತು. ಪಶ್ಚಿಮ ಭಾಗದಲ್ಲಿ ಕಿರಿದಾದ ನೀರ್ಗಲ್ಲ ಹಾಳೆ ತಲೆದೋರಿತು. ಹೀಗಾಗಿ ಅಟ್ಲಾಂಟಿಕ್ ಸಾಗರದ ಮೇರು ವಲಯದ ದ್ವೀಪಗಳೆಲ್ಲ ನೀರ್ಗಲ್ಲಿನಿಂದ ಮುಚ್ಚಿಹೋಗಿದ್ದುವು. ಐಸ್ಲೆಂಡಿನ ಹಲಕೆಲವು ಪರ್ವತ ಶಿಖರಗಳು ಮಾತ್ರ ತಲೆ ಎತ್ತಿ ನಿಂತಿದ್ದುವು. ಯುರೋಪಿನಲ್ಲಿ ಸ್ಕಾಂಡಿನೇವಿಯನ್ ನೀರ್ಗಲ್ಲಿನ ಹಾಳೆ ರಷ್ಯದ ಇಡೀ ಉತ್ತರ ಭಾಗವನ್ನೆಲ್ಲ ಆವರಿಸಿತ್ತು. ಪೂರ್ವ ಸೈಬೀರಿಯ ಈ ಹಿಮಯುಗದ ಪ್ರಭಾವಕ್ಕೆ ಅಷ್ಟಾಗಿ ಒಳಪಟ್ಟಿರಲಿಲ್ಲ. ಆದರೆ ಇಲ್ಲಿ ಇನ್ನೂ ಹಳೆಯ ಭೂಯುಗದಲ್ಲಾದ ನೀರ್ಗಲ್ಲಿನ ಪ್ರಭಾವದ ಗುರುತುಗಳನ್ನು ಕಾಣಬಹುದು.

ಕ್ರಮೇಣ ನೀರ್ಗಲ್ಲು ಕರಗಲು ಪ್ರಾರಂಭವಾಗಿ ವಿಶಾಲವಾದ ನೀರ್ಗಲ್ಲಿನ ಪ್ರಸ್ತರಗಳು ಗಾತ್ರದಲ್ಲಿ ಕುಗ್ಗಿ ಅವುಗಳಿಂದ ಮುಚ್ಚಿಹೋಗಿದ್ದ ಪ್ರದೇಶಗಳಲ್ಲಿ ಹೊಸರೀತಿಯ ಭೂವಿನ್ಯಾಸವೇ ತಲೆದೋರಿತು. ಮೇರು ಪ್ರದೇಶದಲ್ಲಿ ಅಷ್ಟಾಗಿ ಸಸ್ಯಸಮೃದ್ಧಿಯಿಲ್ಲದ ಕಾರಣ ಹೀಗೆ ಉಂಟಾದ ಭೂ ರಚನೆಯ ವಿವರಗಳು ಬಲು ಸ್ಪಷ್ಟವಾಗಿ ಗೋಚರವಾಗುತ್ತವೆ. ನೀರ್ಗಲ್ಲ ಪ್ರವಾಹಗಳು ಉತ್ತರ ಕೆನಡ ಮತ್ತು ಫಿನ್ಲೆಂಡ್ ದೇಶಗಳ ಅಗ್ನಿಶಿಲಾಪ್ರಾಂತ್ಯದಲ್ಲಿ ಅಸಂಖ್ಯಾತ ಹಳ್ಳಕೊಳ್ಳಗಳನ್ನೂ ನೂರಾರು ಸಣ್ಣಪುಟ್ಟ ಸರೋವರಗಳನ್ನೂ ನಿರ್ಮಿಸಿವೆ. ತಗ್ಗುಪ್ರದೇಶಗಳಲ್ಲಿ ಗಡುಸಾಗಿರುವ ಶಿಲೆಗಳಿರುವ ಕಡೆ ಅಷ್ಟು ಹೆಚ್ಚಿನ ಏರುಪೇರುಗಳಿರದ ಭೂವಿನ್ಯಾಸವನ್ನು ಕಾಣಬಹುದು. ಅಲ್ಲಲ್ಲೇ ಏಣುಗಳೂ ನೀರ್ಗಲ್ಲ ನಿಕ್ಷೇಪಗಳ ಗುಡ್ಡಗಳೂ ಕಾಣಸಿಗುತ್ತವೆ. ಎತ್ತರ ಭೂಪ್ರದೇಶಗಳಲ್ಲಿ ಹೀಗೆ ಉಂಟಾದ ವಿಶಾಲವಾದ ಆಕೃತಿಯ ಕಣಿವೆಗಳನ್ನೂ ನೋಡಬಹುದು. ಸಮುದ್ರ ತೀರಗಳಲ್ಲಿ ಕಚ್ಚು ಕಚ್ಚಾದ ಫಿಯರ್ಡ್ ಎಂಬ ವಿಶಿಷ್ಟರೀತಿಯ ಭೂವಿನ್ಯಾಸವನ್ನೂ ನೋಡಬಹುದು. ಈ ತೆರನಾದ ವಿನ್ಯಾಸ ದಕ್ಷಿಣ ಅಲಾಸ್ಕ, ಪೂರ್ವಕೆನಡ, ಗ್ರೀನ್‌ಲೆಂಡ್, ನಾರ್ವೆ, ಐಸ್ಲೆಂಡ್ ಮತ್ತು ಹಲವಾರು ಸಣ್ಣಸಣ್ಣ ದ್ವೀಪಗಳ ತೀರಗಳಲ್ಲಿ ಕಾಣಬಹುದು.

ಪ್ಲಿಸ್ಟೊಸೀನ್ ಕಲ್ಪದಲ್ಲಿ (1 ದ.ಲ.ವ. ಪ್ರಾಚೀನದಿಮದ ಇಂದಿನವರೆಗೆ) ನೀರ್ಗಲ್ಲಿನ ಹಾಳೆಗಳು ಕರಗಿದ ಕಾರಣ ಮೇರು ಪ್ರದೇಶದ ತಗ್ಗು ಭೂಭಾಗಗಳನ್ನು ಸಮುದ್ರ ಅತಿಕ್ರಮಿಸಿ ವಿಸ್ತಾರವಾದ ಪ್ರದೇಶಗಳು ಮುಳುಗಡೆಯಾದುವು. ಕಾಲಕ್ರಮೇಣ ಹಲವು ಭೂಚಟುವಟಿಕೆಗಳಿಗೊಳಗಾಗಿ ಮತ್ತೆ ಮೇಲಕ್ಕೆ ಎದ್ದುವು. ಸಮುದ್ರಮಟ್ಟದಿಂದ ಎತ್ತರದಲ್ಲಿರುವ ಕರಾವಳಿ ನಿಕ್ಷೇಪಗಳು ಮತ್ತು ಸಮುದ್ರ ನಿಕ್ಷೇಪಗಳಿಂದ ಈ ಬಗೆಯ ಭೂ ಪ್ರದೇಶಗಳನ್ನು ಗುರುತಿಸಬಹುದು. ಪಶ್ಚಿಮ ಮತ್ತು ಮಧ್ಯ ಕೆನಡ ಪ್ರದೇಶಗಳಲ್ಲಿ ಈ ಬಗೆಯ ನಿಕ್ಷೇಪಗಳು ಪ್ರಸ್ತುತ ಸಮುದ್ರ ಮಟ್ಟದಿಂದ 150–200 ಮೀ ಎತ್ತರದಲ್ಲೂ ಪೂರ್ವ ಭಾಗದಲ್ಲಿ ಸು. 90 ಮೀ ಎತ್ತರದಲ್ಲೂ ಕಂಡುಬಂದಿವೆ. ಅಲ್ಲದೆ ಯೂರೇಷಿಯದ ಮೇರು ಪ್ರದೇಶದ ಅನೇಕ ಕಡೆ ಈ ಭೂಕುರುಹುಗಳನ್ನು ಗುರುತಿಸಬಹುದು. ಇದೂ ಅಲ್ಲದೆ ಸ್ವಾಲ್‌ಬಾರ್ಡ್, ಎಲ್ಲೆಸ್‌ಮಿಯರ್ ದ್ವೀಪ, ಉತ್ತರ ಯೂರಲ್, ಫ್ರಾನ್ಸ್ ಜೋಸೆಫ್ ಪರ್ಯಾಯದ್ವೀಪ ಭಾಗಗಳಲ್ಲೂ ಈ ವಿಶಿಷ್ಟ ಭೂಲಕ್ಷಣಗಳನ್ನು ಸಮುದ್ರಮಟ್ಟದಿಂದ 455 ಮೀ ಎತ್ತರದಲ್ಲಿ ಕಾಣಲು ಸಾಧ್ಯ. ಕೆನಡದ ಅನೇಕ ಕಡೆ ಇದಕ್ಕೆ ಸಂಬಂಧಿಸಿದ ಭೂಚಟುವಟಿಕೆ ಇನ್ನೂ ನಡೆಯುತ್ತಿದೆ ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆತಿವೆ. ಅಲ್ಲದೆ ಪ್ರತಿ ನೂರು ವರ್ಷಕ್ಕೆ 1 ಮೀ ಗಳಷ್ಟು ಮೇಲಕ್ಕೆ ಭೂಭಾಗಗಳು ಏಳುತ್ತಿವೆ ಎಂದೂ ಅಭಿಪ್ರಾಯ ಪಡಲಾಗಿದೆ. ಹೀಗೆಯೇ ಹಲವು ಕಡೆ ಭೂಕುಸಿತಗಳೂ ಆಗುತ್ತಿವೆ.

ಮೇರು ಪ್ರದೇಶದ ಭೂವಿನ್ಯಾಸ ಬಲುಮಟ್ಟಿಗೆ ಪ್ಲಿಸ್ಟೋಸೀನ್ ಕಲ್ಪದ ನೀರ್ಗಲ್ಲ ಪ್ರವಾಹಗಳಿಗೆ ಸಂಬಂಧಿಸಿದ್ದರೂ ಮುಖ್ಯ ಭೂಲಕ್ಷಣಗಳು ಕೇವಲ ಇದನ್ನೇ ಅನುಸರಿಸದೆ ಮೂಲ ಭೂರಚನೆಯನ್ನೂ ಅವಲಂಬಿಸಿವೆ. ಶಾಶ್ವತ ಭೂಖಂಡಗಳಾದ ಕೆನಡಿಯನ್ ಮತ್ತು ಬಾಲ್ಟಿಕ್ ಪ್ರದೇಶಗಳಿಗೆ ಏಕರೀತಿಯ ಮೇಲ್ಮೈಲಕ್ಷಣಗಳಿವೆ. ಹಡ್ಸನ್ ಕೊಲ್ಲಿಯ ಪಶ್ಚಿಮಭಾಗ, ಬ್ಯಾಫಿನ್ ದ್ವೀಪದ ಈಶಾನ್ಯಭಾಗ ಮತ್ತು ಕರೇಲಿಯಗಳಲ್ಲಿ ಭೂಮಿ ತಗ್ಗು ಮತ್ತು ಕಡಿದಾಗಿದೆ. ಸಣ್ಣಪುಟ್ಟ ಹಳ್ಳಕೊಳ್ಳಗಳೂ ಸಣ್ಣಸಣ್ಣ ಸರೋವರಗಳೂ ತುಂಬಿವೆ. ಅಲ್ಲಲ್ಲೇ ಪ್ರವಾಹ ನಿಕ್ಷೇಪಗಳಿಂದ ಕೂಡಿದ 300–600 ಮೀ. ಎತ್ತರದ ಪ್ರಸ್ಥಭೂಮಿಗಳಿವೆ. ಮುಖ್ಯವಾಗಿ ಇವು ಕ್ವಿಬೆಕ್–ಲ್ಯಾಬ್ರಡಾರ್, ಕೆನಡದ ಪಶ್ಚಿಮ ಕೀವಾಟಿನ್ ಮತ್ತು ಪೂರ್ವ ಮೆಕೆನ್‌ಜಿ ಜಿಲ್ಲೆಗಳಲ್ಲೂ ಉತ್ತರ ಸ್ಕಾಂಡಿನೇವಿಯದ ಲ್ಯಾಪ್ಲ್ಯಾಂಡ್ ಪ್ರಸ್ಥಭೂಮಿಯಲ್ಲೂ ಕಾಣಬರುತ್ತವೆ. ಕೆನಡಿಯನ್ ಶಾಶ್ವತಭೂಖಂಡದ ಪೂರ್ವ ಅಂಚಿನುದ್ದಕ್ಕೂ–ಲ್ಯಾಬ್ರಡಾರಿನಿಂದ ಎಲ್ಸ್‌ಮಿಯರ್ ದ್ವೀಪದವರೆಗೆ–ಕಡಿದಾದ ಫಿಯರ್ಡ್ ರಚನೆಯನ್ನೂ 1820 ಮೀ. ಗಳಿಗೂ ಮೀರಿ ಎತ್ತರವಾಗಿರುವ ಪರ್ವತಶಿಖರಗಳನ್ನೂ ನೋಡಬಹುದು. ಗ್ರೀನ್‌ಲೆಂಡ್ ಶಾಶ್ವತ ಭೂಖಂಡದ ಪೂರ್ವ ಮತ್ತು ಪಶ್ಚಿಮ ತೀರಗಳಲ್ಲಿ ಇದೇ ರೀತಿಯ ಭೂಲಕ್ಷಣಗಳಿವೆ. ಜಲಜಶಿಲಾ ನಿಕ್ಷೇಪಗಳಿರುವ ಕಡೆ (ಉದಾಹರಣೆಗೆ: ಉತ್ತರ ಸೈಬೀರಿಯ ಮತ್ತು ಹಡ್ಸನ್ ಕೊಲ್ಲಿಯ ಉತ್ತರಕ್ಕಿರುವ ಮೈದಾನ ಪ್ರದೇಶ) ಬೆಟ್ಟಗಳು, ಪ್ರಸ್ಥಭೂಮಿಗಳು ಮತ್ತು ಮೈದಾನಗಳು ಆವಿರ್ಭವಿಸುತ್ತವೆ. ಅಲ್ಲಲ್ಲೇ ಆಳವಾದ ಮತ್ತು ಕಿರಿದಾದ ಕಣಿವೆಗಳೂ ರೂಪಿತವಾಗುವುದುಂಟು. ಕೆನಡದಲ್ಲಿ ಬಲುಮಟ್ಟಿಗೆ ಮೈದಾನಗಳು ಮತ್ತು ಪ್ರಸ್ಥಭೂಮಿಗಳೂ ಅಂಗಾರ ಶಾಶ್ವತ ಭೂಖಂಡದ ಸುತ್ತ ಬೆಟ್ಟಗಳೂ ಪರ್ವತಶ್ರೇಣಿಗಳೂ ಎದ್ದುಕಾಣುತ್ತವೆ.

ಶಾಶ್ವತ ಭೂಖಂಡಗಳಿಂದ ಬಲುದೂರದಲ್ಲಿ ಹರಡಿರುವ ಜಲಜಶಿಲಾ ಪ್ರಸ್ತರಗಳಿಂದ ಕೂಡಿದ ಭೂಪ್ರದೇಶಗಳಲ್ಲಿ ವಿಶಾಲವಾದ ಮೈದಾನಗಳು ರೂಪುಗೊಂಡಿವೆ. ಈ ಪ್ರದೇಶಗಳೆಲ್ಲ ಸರ್ವಸಾಮಾನ್ಯವಾಗಿ ಮಟ್ಟಸವಾಗಿದ್ದು ಎಲ್ಲೊ ಅಲ್ಲೊಂದು ಇಲ್ಲೊಂದು ಕಡಿದಾದ ಗುಡ್ಡಗಳು ಮತ್ತು ಅಸಂಖ್ಯಾತ ಚಿಕ್ಕ ಚಿಕ್ಕ ಸರೋವರಗಳು ಇವೆ. ಮೈದಾನ ಪ್ರದೇಶಗಳಲ್ಲಿ ದೊಡ್ಡ ನದಿಗಳು ಹರಿಯುತ್ತಿದ್ದು ಆಳವಾದ ಮೆಕ್ಕಲು ನಿಕ್ಷೇಪಗಳನ್ನು ಶೇಖರಿಸಿವೆ.

ಮೇರುಪ್ರದೇಶದಲ್ಲಿ ಎರಡು ಬೇರೆ ಬೇರೆ ಪರ್ವತಜನನ ಕಲ್ಪಗಳಿಗೆ ಸಂಬಂಧಿಸಿದ ತೀವ್ರ ತೆರನಾಗಿ ಮಡಿಕೆಬಿದ್ದಿರುವ ಪರ್ವತಪ್ರದೇಶಗಳಿವೆ. ವಿಶಿಷ್ಟರೀತಿಯ ಮೇಲ್ಮೈಲಕ್ಷಣಗಳಿಂದ ಇವನ್ನು ಸುಲಭವಾಗಿ ಬೇರ್ಪಡಿಸಿ ಗುರುತಿಸಬಹುದು. ಹಳೆಯ ಪೇಲಿಯೋಜೋಯಿಕ್ ಯುಗಕ್ಕೆ ಸಂಬಂಧಿಸಿದ ಪರ್ವತಗಳ ಬಲುಭಾಗ ಭೂಸವೆತಕ್ಕೊಳಗಾಗಿ ನಶಿಸಿಹೋಗಿವೆ. ಅಳಿದುಳಿದ ಶಿಲೆಗಳು ಈಚಿನ ಭೂಚಟುವಟಿಕೆಗಳಿಗೆ ಮತ್ತೆ ಒಳಗಾಗಿ ಮೇಲಕ್ಕೆ ಎತ್ತಲ್ಪಟ್ಟಿವೆ. ಕ್ರಮೇಣ ಇವು ನೀರ್ಗಲ್ಲಿನ ಪ್ರವಾಹಗಳ ಪ್ರಭಾವಕ್ಕೊಳಗಾಗಿ ವಿಶಿಷ್ಟ ಭೂವಿನ್ಯಾಸವನ್ನು ತಳೆದಿವೆ. ಈ ವರ್ಗದ ಪರ್ವತಗಳು ಪೀರಿಲ್ಯಾಂಡ್ ಮತ್ತು ವೆಸ್ಟ್ ಸ್ಪಿಟ್ಸ್‌ಬರ್ಗನ್ ಪ್ರದೇಶಗಳಲ್ಲಿ 1820 ಮೀ. ಗಳಷ್ಟೂ ಎಲ್ಸ್‌ಮಿಯರ್ ದ್ವೀಪದಲ್ಲಿ ಸು. 3030 ಮೀ ಗಳಷ್ಟೂ ಪ್ರಸ್ತ ಭೂಮಿಗಳು ಈಸ್ಟ್ ಸ್ಪಿಟ್ಸ್ ಬರ್ಗನ್, ನಾರ್ವೆಯ ಜ಼ಿಂಲ್ಯಾ ಮತ್ತು ಸ್ವೆವಿರ್ ನಯ ಜ಼ಿಂಲ್ಯಾ ಪ್ರಾಂತ್ಯಗಳಲ್ಲಿ ಸು. 610 ಮೀ ಗಳಷ್ಟೂ ಎತ್ತರವನ್ನು ಮುಟ್ಟಿವೆ.

ಕಿರಿಯ ವರ್ಗದ ಪರ್ವತಗಳು ನೈರುತ್ಯ ಸೈಬೀರಿಯ ಮತ್ತು ಅಲಾಸ್ಕಗಳಲ್ಲಿ ಇನ್ನೂ ಹೆಚ್ಚು ಎತ್ತರವಾಗಿವೆ. ಚೆರ್ಸ್ಕಿ ಶ್ರೇಣಿಯ ಶಿಖರಗಳು 3030 ಮೀ ಕಾಮ್‌ಚಾಟ್ಕ ಶಿಖರಗಳು 4545 ಮೀ ಎತ್ತರ ಇವೆ. ದಕ್ಷಿಣ ಅಲಾಸ್ಕದಲ್ಲಿ ಇನ್ನೂ ಉನ್ನತಶಿಖರಗಳಿವೆ. ಈ ಪ್ರದೇಶದ ವಿಶಾಲ ತಗ್ಗುಗಳಲ್ಲಿ ಯುಕಾಸ್, ಕೋಲಿಮಾ ಮುಂತಾದ ದೊಡ್ಡ ನದಿಗಳು ಪ್ರವಹಿಸುತ್ತವೆ.

ಮೇರುಪ್ರದೇಶದ ಸಾಕಷ್ಟು ಭಾಗವನ್ನು ಮಂದವಾದ ಸ್ಥಾಯೀ ನೀರ್ಗಲ್ಲು (ಪರ್ಮಾ ಫ್ರಾಸ್ಟ್) ಆವರಿಸಿದೆ. ವರ್ಷಗಳುರುಳಿದರೂ ಇದು ಕರಗುವುದು ಅಪೂರ್ವ. ಆದರೆ ಬೇಸಗೆಯಲ್ಲಿ ಮಾತ್ರ ಇದರ ಮೇಲಿನ ತೆಳು ಪದರ ಸುಮಾರಾಗಿ ಕರಗುವುದುಂಟು. ಈ ಶಾಶ್ವತ ನೀರ್ಗಲ್ಲಿನ ಪದರವೇ ಸ್ಥಾಯೀನೀರ್ಗಲ್ಲು (ಪರ್ಮಾ ಫ್ರಾಸ್ಟ್). ಬೇಸಗೆಯಲ್ಲಿ ಕರಗುವ ತೆಳುವಾದ ಹೊರಮೈ ಕ್ರಿಯಾಪದರ (ಆಕ್ಟಿವ್ ಲೇಯರ್). ಉತ್ತರ ಅಲಾಸ್ಕ ಮತ್ತು ಕೆನಡದಲ್ಲಿ ಸ್ಥಾಯೀನೀರ್ಗಲ್ಲವಲಯದ ಆಳ ನೆಲಮಟ್ಟದಿಂದ 250–450 ಮೀ ಉತ್ತರ ಸೈಬೀರಿಯಾದ ನಾರ್ಡ್ವಿಕಿನಲ್ಲಿ ಈ ವಲಯ ಬಲು ಮಂದವಾಗಿದ್ದು ಸು. 610 ಮೀ ಗಳಷ್ಟಿರಬಹುದೆಂದು ಅಂದಾಜುಮಾಡಲಾಗಿದೆ. ಸಾಮಾನ್ಯವಾಗಿ ಈ ವಲಯದ ಮಂದ ಆಯಾ ಪ್ರದೇಶದ ಭೂಲಕ್ಷಣ, ಅಲ್ಲಿಯ ಹವಾಮಾನ, ಸಸ್ಯವರ್ಗ ಮುಂತಾದುವನ್ನು ಅವಲಂಬಿಸಿದೆ. ಅತ್ಯಂತ ದಪ್ಪನೆಯ ಸ್ಥಾಯೀನೀರ್ಗಲ್ಲ ಪದರಗಳು ಹಿಮಯುಗದಲ್ಲಿ ಅದು ತನಕ ನೀರ್ಗಲ್ಲಿನ ಪ್ರಸ್ತರಗಳಿಂದ ಆವೃತವಾಗಿರದ ಭೂಪ್ರದೇಶಗಳಲ್ಲಿ ಉಂಟಾದುವೆಂದು ಅಭಿಪ್ರಾಯಪಡಲಾಗಿದೆ. ದಕ್ಷಿಣಕ್ಕೆ ಸರಿದಂತೆಲ್ಲ ಇವು ಕ್ರಮೇಣ ತೆಳುವಾಗುತ್ತ ಹರಿದು ಹಂಚಿ ಹೋಗಿವೆ. ಕೆಲವು ಕಡೆ ಈ ತೆಳುಪದರಗಳ ಮೇಲೆ ಸಸ್ಯಾಂಗಾರದ ನಿಕ್ಷೇಪಗಳನ್ನು ಅಥವಾ ಜವುಗುಪ್ರದೇಶಗಳನ್ನು ಗುರುತಿಸಬಹುದು. ಇಂಥ ಕಡೆ ಅವು 15 ಸೆಂಮೀ. ಗೂ ಹೆಚ್ಚು ಮಂದವಿರಲಾರವು.

ಸ್ಥಾಯೀ ನೀರ್ಗಲ್ಲ ಪದರಗಳು ಮೂಲ ಮತ್ತು ಆನುಷಂಗಿಕ ಶಿಲೆಗಳ ಮೇಲೆ ಕಂಡುಬರುತ್ತವೆ. ಸಾಮಾನ್ಯವಾಗಿ ಈ ಶಿಲೆಗಳಮೇಲೆ ಇದರ ಪ್ರಭಾವ ಅಷ್ಟಾಗಿರುವುದಿಲ್ಲ. ಆದರೆ ಸೂಕ್ಷ್ಮ ಕಣರಚನೆಯ ಜಲಜಶಿಲಾ ನಿಕ್ಷೇಪಗಳಲ್ಲಿ ಮಂಜಿನ ಕಣಗಳು ಕ್ರಮೇಣ ಪ್ರಸರಿಸಿ ಅಲ್ಲಲ್ಲೇ ಶೇಖರಗೊಂಡು ಮಂಜುಗಡ್ಡೆಯ ಸಣ್ಣಪುಟ್ಟ ಪದರಗಳು ತಲೆದೋರಬಹುದು. ಇವನ್ನು ನೆಲಹಿಮ (ಗ್ರೌಂಡ್ ಐಸ್) ಎನ್ನುತ್ತಾರೆ. ನದೀತೀರಗಳಲ್ಲಿ ಮತ್ತು ಸಮುದ್ರ ಕರಾವಳಿಯ ಬಂಡೆಗಳ ಮೇಲೆ ಹಲವು ವೇಳೆ 6–9 ಮೀ ಮಂದವಿರುವ ನೆಲ ಹಿಮದ ನಿಕ್ಷೇಪಗಳನ್ನು ಕಾಣಬಹುದು.

ಉತ್ತರ ಸೈಬೀರಿಯದಲ್ಲಿ 212 ಮೀ. ಗೂ ಮೀರಿದ ಅತಿಪುರಾತನ ನೀರ್ಗಲ್ಲ ಪ್ರಸ್ತರಗಳಿವೆ. ಬಹುಶಃ ನೀರ್ಗಲ್ಲ ಪ್ರವಾಹ ಅಥವಾ ಘನೀಭೂತವಾದ ಸರೋವರ ಭಾಗ ನದಿಮೆಕ್ಕಲಿನಿಂದ ಸಂಪೂರ್ಣ ಮುಚ್ಚಿಹೋಗಿ ಇದಕ್ಕೆ ಮೂಲ ಕಾರಣವೆನಿಸಿರಬಹುದು. ಹಲವು ಸಂದರ್ಭಗಳಲ್ಲಿ ನೆಲದೊಳಗೆ ಹುದುಗಿರುವ ನೀರ್ಗಲ್ಲಿನ ಹಾಳೆಯಲ್ಲಿ ಅಲ್ಲಲ್ಲೆ ಗುಳಿಬಿದ್ದು ಕ್ರಮೇಣ ಈ ಗುಳಿಗಳೇ ವಿಸ್ತರಗೊಂಡು ನೀರು ಶೇಖರವಾಗಿ ಸರೋವರಗಳೂ ಉಂಟಾಗಬಹುದು. ಸಾಮಾನ್ಯವಾಗಿ ಜೇಡಿನೊಡನೆ ನೀರ್ಗಲ್ಲು ಬೆರೆತು ಉಂಟಾಗಿರುವ ಪ್ರಸ್ತರ ಗಡುಸಾಗಿರುತ್ತದೆ. ಆದರೆ ನೀರ್ಗಲ್ಲು ಕರಗಲು ಪ್ರಾರಂಭವಾದಾಗ ಈ ಗಡುಸುತನವೆಲ್ಲ ಮಾಯವಾಗಿ ಪ್ರಸ್ತರ ಕೆಸರಿನ ಮುದ್ದೆಯಾಗುತ್ತದೆ. ಈ ಬಗೆಯ ಬದಲಾವಣೆಗಳ ಅಧ್ಯಯನ ಶೀತ ಪ್ರದೇಶಗಳ ಇತಿಹಾಸದಲ್ಲಿ ಸಾಕಷ್ಟು ಪ್ರಾಮುಖ್ಯವನ್ನು ಪಡೆದಿದೆ.

ಸ್ಥಾಯೀನೀರ್ಗಲ್ಲು ಅಂತರ್ಜಲ ಪಸರಿಸುವುದನ್ನು ಸಂಪೂರ್ಣವಾಗಿ ತಡೆಗಟ್ಟುತ್ತದೆ. ಹೀಗಾಗಿ ಬೇಸಗೆಯಲ್ಲಿ ಮೇರುಪ್ರದೇಶಗಳಲ್ಲಿ ನೂರಾರು ಸಣ್ಣಪುಟ್ಟ ಸರೋವರಗಳು ಕಾಣಿಸಿಕೊಳ್ಳುತ್ತವೆ. ಇಳಿಜಾರು ಪ್ರದೇಶಗಳಲ್ಲಿ ಶಿಲಾಚೂರು ಮತ್ತು ಮಣ್ಣಿನೊಡನೆ ಬೆರೆತಿರುವ ನೀರ್ಗಲ್ಲು ಕರಗಲು ಪ್ರಾರಂಭವಾಗಿ ಇಡೀ ಭೂಭಾಗವೇ ಜರುಗಿ ಜಾರಿ ಭೂಪಾತಗಳಾಗುವುದೂ ಉಂಟು. ಇದನ್ನು ಸೊಲಿ ಫ್ಲಕ್ಷನ್ ಎನ್ನುತ್ತಾರೆ. ಮೇರುಪ್ರದೇಶದಲ್ಲಿ ಇದು ಸಾಮಾನ್ಯ. ಉತ್ತರ ಅಲಾಸ್ಕದ ಕಡಲುತೀರ, ನಾರ್ವೀಜಿಯನ್ ಸಮುದ್ರದ ಬೇರ್ ದ್ವೀಪ ಮುಂತಾದ ನಯಮಣ್ಣಿನ ಭೂಪ್ರದೇಶಗಳಲ್ಲಿ ಈ ಬಗೆಯ ಭೂಪಾತಗಳು ಅಸಂಖ್ಯಾತ.

ಮೇರು ಪ್ರದೇಶದ ಅಂಚಿನಭಾಗಗಳಲ್ಲಿ ಮಂಜುಗಡ್ಡೆ ಕಟ್ಟುವುದು (ಫ್ರೀಸಿಂಗ್) ಮತ್ತು ಕರಗುವ ಕ್ರಿಯೆಗಳಿಂದ ವಿಶಿಷ್ಟ ಭೂರಚನೆಗಳು ತಲೆದೋರಿವೆ. ಉದಾಹರಣೆಗೆ ನುರುಜುಕಲ್ಲು, ಗುಂಡುಕಲ್ಲು ಮುಂತಾದ ದಪ್ಪದಪ್ಪ ಶಿಲಾಕಣಗಳು ವಿಶಿಷ್ಟ ರೀತಿಯಲ್ಲಿ ಶೇಖರವಾಗಿ ಬಹುಭುಜಾಕೃತಿಯ ಹೊರವಲಯಗಳನ್ನುಂಟು ಮಾಡಿ ಅವುಗಳ ಮಧ್ಯೆ ನಯವಾದ ದೂಳು ಶೇಖರವಾಗುತ್ತದೆ. ವೃತ್ತಾಕಾರಗಳೂ ಮಣ್ಣುಗುಡ್ಡೆಗಳೂ ಹೀಗೆಯೇ ತಲೆದೋರುವುದುಂಟು.

ನೀರ್ಗಲ್ಲಿನ ಪ್ರವಾಹಗಳು: ಮೇರುಪ್ರದೇಶವೆಲ್ಲ ನೀರ್ಗಲ್ಲಿನ ಪ್ರಸ್ತರಗಳಿಂದ ಆವೃತವಾಗಿದೆ ಎಂದು ತಿಳಿದಲ್ಲಿ ಅದು ತೀರ ತಪ್ಪು. ಇಲ್ಲಿಯ ಒಟ್ಟು ವಿಸ್ತೀರ್ಣದ ಕೇವಲ 2/5 ಭಾಗ ಮಾತ್ರ ವರ್ಷದುದ್ದಕ್ಕೂ ನೀರ್ಗಲ್ಲಿನ ಹಾಳೆಗಳಿಂದ ಆವೃತವಾಗಿರುವುದನ್ನು ಗಮನಿಸಬಹುದು. ಅತ್ಯಧಿಕ ಪ್ರಮಾಣದಲ್ಲಿ ಸತತವಾಗಿ ಹಿಮ ಶೇಖರವಾದಾಗ ಮಾತ್ರ ಅದು ಕ್ರಮೇಣ ಮಂಜುಗಡ್ಡೆಯಾಗಿ ಮಾರ್ಪಟ್ಟು ನೀರ್ಗಲ್ಲ ಹಾಳೆಯಾಗಿಯೊ ನೀರ್ಗಲ್ಲ ನದಿಯಾಗಿಯೊ ರೂಪುಗೊಳ್ಳತ್ತದೆ. ಮಂಜುನೀರ್ಗಲ್ಲಾಗಿ ಮಾರ್ಪಡುವುದೂ ಬಲು ನಿಧಾನ. ಅದಕ್ಕೆ ವರ್ಷಗಳೇ ಬೇಕು. ಉದಾಹರಣೆಗೆ ವಾಯವ್ಯ ಗ್ರೀನ್‌ಲೆಂಡಿನ ಹಿಮಾಚ್ಛಾದಿತ ಪ್ರದೇಶವೊಂದರಲ್ಲಿ ರಂಧ್ರವನ್ನು ಕೊರೆದಾಗ 425 ಮೀ ಆಳದವರೆಗೆ ಹಿಮನದಿಯೇ ಕಾಣಸಿಗಲಿಲ್ಲ. ಅಲ್ಲದೆ ಸು. 800 ವಾರ್ಷಿಕ ಮಂಜಿನ ಪದರಗಳಿರುವುದೂ ವ್ಯಕ್ತವಾಯಿತು. ಇದರ ಸಹಾಯದಿಂದ ಅಲ್ಲಿನ 800 ವರ್ಷಗಳ ಹಿಮದ ಇತಿಹಾಸವನ್ನು ಅರಿಯಲು ಸಾಧ್ಯವಾಯಿತು.

ಉತ್ತರಮೇರು ಪ್ರದೇಶ ನೀರ್ಗಲ್ಲ ಪ್ರವಾಹಗಳನ್ನು (ಗ್ಲೇಷಿಯರ್ಸ್) ಅವುಗಳಿಗೆ ಹಿಮ ಒದಗಿ ಬರುವ ಪ್ರದೇಶಗಳನ್ನು ಅನುಸರಿಸಿ ಎರಡು ಗುಂಪುಗಳಾಗಿ ವಿಭಜಿಸಲಾಗಿದೆ. ಇವುಗಳಲ್ಲಿ ದೊಡ್ಡದು ಅಟ್ಲಾಂಟಿಕ್ ಸಾಗರ ಪ್ರದೇಶಕ್ಕೂ ಚಿಕ್ಕದು ಪೆಸಿಫಿಕ್ ಸಾಗರಕ್ಕೂ ಸೀಮಿತವಾಗಿವೆ. ಅತಿದೊಡ್ಡ ನೀರ್ಗಲ್ಲಹಾಳೆ ಎಂದರೆ ಗ್ರೀನ್‌ಲೆಂಡಿನ ಇನ್‌ಲ್ಯಾಂಡ್ ಐಸ್ ಎಂಬುದು. ಉತ್ತರಾರ್ಧಗೋಳದಲ್ಲೆಲ್ಲ ಇದು ಅತ್ಯಂತ ದೊಡ್ಡ ನೀರ್ಗಲ್ಲಹಾಳೆ. ಉತ್ತರ ದಕ್ಷಿಣ 2528 ಕಿಮೀ ಉದ್ದವಿದ್ದು ಸು. 950 ಕಿಮೀ ದಪ್ಪನಾಗಿಯೂ ಇದೆ. ಇದು 18,00,000 ಚಮೀ ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿದೆ. ಗ್ರೀನ್‌ಲೆಂಡಿನ ಸು. 85ರಷ್ಟು ಭಾಗ ಹಾಳೆಯಿಂದ ಆವೃತವಾಗಿದೆ. ಇದು ವಿಶಾಲ ಮತ್ತು ನೀಳವಾದ ಭೂತಗ್ಗಿನಲ್ಲಿದ್ದು ಇದರ ಇಕ್ಕೆಲಗಳಲ್ಲಿ ಕಡಿದಾದ ಪರ್ವತ ಶ್ರೇಣಿಗಳಿವೆ. ತಗ್ಗಿನ ಕೇಂದ್ರಭಾಗದಲ್ಲಿ ನೀರ್ಗಲ್ಲು 300 ಮೀ ಮಂದವಾಗಿದ್ದು ಹಲವೆಡೆ ಸಮುದ್ರಮಟ್ಟದಿಂದ 161 ಕಿಮೀ ಮೀರಿದ ಆಳವನ್ನು ಮುಟ್ಟುತ್ತದೆಂದು ತಜ್ಞರ ಅಭಿಪ್ರಾಯ. ಈ ಆಧಾರವನ್ನನುಸರಿಸಿ ಗ್ರೀನ್‌ಲೆಂಡ್ ದ್ವೀಪವಲ್ಲವೆಂದೂ ಅದನ್ನು ಪರ್ಯಾಯದ್ವೀಪವೆಂದು ಪರಿಗಣಿಸಬೇಕೆಂದೂ ಹಲವರ ಅಭಿಪ್ರಾಯ. ಈ ನೀರ್ಗಲ್ಲಿನ ಹಾಳೆ ಕರಗಿದಲ್ಲಿ ಅದು ಆವೃತವಾಗಿರುವ ಭೂಪ್ರದೇಶ 900 ಮೀ ಎತ್ತರದ ಪ್ರಸ್ಥ ಭೂಮಿಯಾಗಿ ಮಾರ್ಪಡುತ್ತದೆ. ಈ ಬೃಹತ್ ನೀರ್ಗಲ್ಲಿನ ಹಾಳೆಯ ಅತ್ಯಂತ ಎತ್ತರವಾದ ಭಾಗ ಸಮುದ್ರಮಟ್ಟದಿಂದ 3030 ಮೀ ಎತ್ತರದಲ್ಲಿದೆ. ಅದು ದ್ವೀಪದ ಉತ್ತರ ಭಾಗದಲ್ಲಿದೆ. ಮಧ್ಯ ಭಾಗದಲ್ಲಿ ನೀರ್ಗಲ್ಲ ಹಾಳೆಯ ಮೇಲು ಮೈ ಮಟ್ಟಸವಾಗಿರದೆ ಏರುತಗ್ಗಾಗಿದೆ. ತಗ್ಗುಗಳಲ್ಲಿ ಸಾಸ್‌ಟ್ರುಗಿ ಎಂಬ ವಾಯು ನಿಕ್ಷೇಪಗಳೂ ಇವೆ. ಅನೇಕ ಕಡೆ ನಿಧಾನವಾಗಿ ಪ್ರವಹಿಸುತ್ತ ಸಾಗರಗತವಾಗುವ ಅಸಂಖ್ಯಾತ ಹಿಮನದಿಗಳನ್ನೂ ನೋಡಬಹುದು. ಕೆಲವು ಕಡೆ ಸಾಗರವನ್ನು ಹಿಮನದಿ ಸೇರುವೆಡೆ ಅಸಂಖ್ಯಾತ ಹಿಮಗಡ್ಡೆಗಳಾಗಿ ಒಡೆದು ಛಿದ್ರವಾಗುವುದೂ ಉಂಟು. ಈ ಗಡ್ಡೆಗಳು (ಐಸ್‌ಬರ್ಗ್ಸ್) ಸಮುದ್ರದಲ್ಲಿ ತೇಲುತ್ತಿರುತ್ತವೆ. ಇವೇ ನೀರ್ಗಲ್ಲ ದಿಬ್ಬಗಳು. ಇವು ಲ್ಯಾಬ್ರಡಾರ್ ಶೀತಪ್ರವಾಹದಲ್ಲಿ ತೇಲಿಕೊಂಡು ದಕ್ಷಿಣ ಅಟ್ಲಾಂಟಿಕ್ ಸಾಗರವನ್ನು ಮುಟ್ಟುವುದೂ ಉಂಟು.

ಕೆನಡದ ಮೇರು ಪ್ರದೇಶದಲ್ಲಿ ಸ್ಥಾಯೀನೀರ್ಗಲ್ಲಿನ ಪ್ರಸ್ತರಗಳು ಅಷ್ಟು ವಿಶಾಲವಾಗಿಲ್ಲ. ಇರುವ ಹಾಳೆಗಳು ದೇಶದ ಈಶಾನ್ಯ ಭಾಗದಲ್ಲಿ ಕಂಡುಬರುತ್ತವೆ. ಇವುಗಳಲ್ಲೆಲ್ಲ ಮೈಘನ್ ಐಲೆಂಡಿನ ನೀರ್ಗಲ್ಲಿನ ಹಾಳೆ ಪ್ರಮುಖವಾದುದು. ಇದು ವೃತ್ತಾಕಾರವಾಗಿದ್ದು ತಗ್ಗುಪ್ರದೇಶದಲ್ಲಿದೆ. ಮೆಲ್‌ವಿಲ್ ದ್ವೀಪ ಭಾಗದಲ್ಲಿ ಮೂರು ಸಣ್ಣ ನೀರ್ಗಲ್ಲ ನದಿಗಳಿವೆ. ಕಡಲಕರೆಯಲ್ಲಿ ಹಲವು ನೀರ್ಗಲ್ಲ ನದಿಗಳು ಸಮುದ್ರವನ್ನು ಸೇರುವುದನ್ನೂ ನೋಡಬಹುದು. ಅಲ್ಲಲ್ಲೇ ತೇಲುತ್ತಿರುವ ನೀರ್ಗಲ್ಲ ದಿಬ್ಬಗಳೂ ಇವೆ. ಎಲ್ಸ್‌ಮಿಯರ್ ದ್ವೀಪದ ಉತ್ತರದಲ್ಲಿ ಸಾಗರದಲ್ಲಿ ತೇಲುತ್ತಿರುವ ಅತ್ಯಂತ ವಿಶಾಲವಾದ ನೀರ್ಗಲ್ಲ ಹಾಳೆ ಇದೆ. ತೇಲುತ್ತಿರುವ ಅನೇಕ ನೀರ್ಗಲ್ಲ ದ್ವೀಪಗಳು ಇದರಿಂದ ಮೂಡಿಬಂದಿವೆ.

ಅಟ್ಲಾಂಟಿಕ್ ಸಾಗರದ ಉತ್ತರ ಮತ್ತು ಪೂರ್ವಭಾಗಗಳಲ್ಲಿ ಹಲಕೆಲವು ನೀರ್ಗಲ್ಲ ನದಿಗಳನ್ನು ನೋಡಬಹುದು. ಉದಾಹರಣೆಗೆ ನಾರ್ವೆಜಿಯನ್ ಮತ್ತು ಬರೆಂಟ್ಸ್ ಸಮುದ್ರಗಳು. ಐಸ್ಲೆಂಡಿನಲ್ಲಿ ಐದು ಮುಖ್ಯ ನೀರ್ಗಲ್ಲ ಹಾಳೆಗಳಿವೆ. ಇವುಗಳಲ್ಲಿ ಅತ್ಯಂತ ವಿಶಾಲವಾದುದು ವಟ್ನಜೋಕುಲ್. ಇದರ ವಿಸ್ತೀರ್ಣ 8840 ಚ.ಕಿಮೀ. ಇದರ ಅಂಚುಗಳಲ್ಲಿ ಹಲವಾರು ಕಡೆ ಹಿಮನದಿಗಳೂ ಹುಟ್ಟುತ್ತವೆ. ಪಶ್ಚಿಮದತ್ತ ಗ್ರಿಮ್ಸ್‌ವಾಟನ್ ಎಂಬ ಜ್ವಾಲಾಮುಖಿಯನ್ನಿದು ಮುಚ್ಚಿದೆ. ಈ ಅಗ್ನಿಪರ್ವತ ಪ್ರತಿ 6–10 ವರ್ಷಗಳಿಗೊಮ್ಮೆ ಜಾಗೃತಗೊಳ್ಳುತ್ತದೆ. ಇದರಿಂದ ಉತ್ಪತ್ತಿಯಾಗುವ ಅಗಾಧ ಉಷ್ಣದಿಂದ ಹಿಮದ ಹಾಳೆಯ ಬಹುಭಾಗ ಕರಗಿ ಪ್ರವಾಹಗಳೂ ಸಣ್ಣಪುಟ್ಟ ಸರೋವರಗಳೂ ಉಂಟಾಗುತ್ತವೆ.

ಐಸ್ಲೆಂಡಿನ ಉತ್ತರಕ್ಕಿರುವ ಜಾನ್ ಮೇಯಿನ್ ದ್ವೀಪದಲ್ಲಿ ನೀರ್ಗಲ್ಲ ಹಾಳೆ ಮೌಂಟ್ ಬೀರೆನ್‌ಬರ್ಗ್ ಎಂಬ ಅಗ್ನಿಪರ್ವತದ ಮೇಲಿದೆ. ಸ್ವಾಲ್‌ಬಾರ್ಡ್ ಎಂಬ ನೀರ್ಗಲ್ಲ ನದಿಗಳು ದ್ವೀಪದ ಬಹುಭಾಗವನ್ನು ಆವರಿಸಿವೆ. ವೆಸ್ಟ್‌ಸ್ಪಿಟ್ಸ್ ಬರ್ಗನ್ ದ್ವೀಪದ ನೀರ್ಗಲ್ಲ ಹಾಳೆಯಿಂದ ನೂರಾರು ಹಿಮನದಿಗಳು ಹುಟ್ಟುತ್ತವೆ. ಸ್ಕ್ಯಾಂಡಿನೇವಿಯದ ಪ್ರಸ್ಥಭೂಮಿಯ ಸು. 5200 ಚ.ಕಿಮೀ ಪ್ರದೇಶದಲ್ಲಿ ನೀರ್ಗಲ್ಲಹಾಳೆಗಳಿವೆ. ಇವು ಉತ್ತರ ಸ್ವೀಡನ್ ಮತ್ತು ನಾರ್ವೆ ದೇಶಗಳಿಗೆ ಸೀಮಿತ. ಇನ್ನೂ ಉತ್ತರಕ್ಕಿರುವ ಫ್ರಾನ್ಸ್ ಜೋಸೆಫ್ ಪರ್ಯಾಯದ್ವೀಪ ಮತ್ತು ಅದರ ಸುತ್ತಲಿನ ಸಣ್ಣಪುಟ್ಟ ದ್ವೀಪಗಳು ನೀರ್ಗಲ್ಲಿನ ಪ್ರಸ್ತರಗಳಿಂದ ಮುಚ್ಚಿಹೋಗಿವೆ. ಅಲ್ಲಲ್ಲೇ ಹಿಮನದಿಗಳು ಮಂದಗತಿಯಿಂದ ಚಲಿಸುತ್ತ ಇರುವುದನ್ನೂ ಕಾಣಬಹುದು.

ರಷ್ಯದ ಉತ್ತರಭಾಗದಲ್ಲಿ ಯೂರಲ್ ಮತ್ತು ನೈಋತ್ಯ ಸೈಬೀರಿಯದ ಪರ್ವತಪ್ರದೇಶಗಳ ಕಣಿವೆಗಳಲ್ಲಿ ಹಲಕೆಲವು ಹಿಮನದಿಗಳಿವೆ. ಉತ್ತರ ಪೆಸಿಫಿಕ್ ಸಾಗರದ ಅಲಾಸ್ಕ ಪ್ರದೇಶದಲ್ಲಿ ಹಲವಾರು ಹಿಮ ನದಿಗಳಿವೆ. ಇವನ್ನು ಇಡೀ ವಿಶ್ವದಲ್ಲೆ ಅತ್ಯಂತ ಉತ್ತಮದರ್ಜೆಯ ಪರ್ವತ ಹಿಮನದಿಗಳೆಂದು ಪರಿಗಣಿಸಲಾಗಿದೆ. ಇಲ್ಲಿಯ ಫೇರ್‌ವೆಸರ್‌ಶ್ರೇಣಿ, ಸೇಂಟ್ ಎಲಿಯಾಸ್ ಪರ್ವತ ಮತ್ತು ಚುಗಾಷ್ ಪರ್ವತಗಳಲ್ಲಿ ವಿಸ್ತಾರವಾದ ಹಿಮ ಕೇಂದ್ರಗಳಿವೆ. ಇಲ್ಲಿ ಹಲವಾರು ಪ್ರಸಿದ್ಧ ನೀರ್ಗಲ್ಲನದಿಗಳು ಹುಟ್ಟುತ್ತವೆ. ಇವುಗಳಲ್ಲಿ ಮುಖ್ಯವಾದುದು 145 ಕಿಮೀ ಉದ್ದದ ಹಬ್ಬರ್ಡ್, ಸಿವರ್ಡ್ ಮತ್ತು ಮಲಾಸ್ಪಿನ ನೀರ್ಗಲ್ಲ ಪ್ರವಾಹಗಳು. ಇವಲ್ಲದೆ ಅಲಾಸ್ಕ, ಬ್ರೂಕ್ ಮತ್ತು ರೋಮನ್ ಜಾಫ್ ಪರ್ವತ ಶ್ರೇಣಿಗಳಲ್ಲೂ ಅಲ್ಯೂಷನ್ ದ್ವೀಪಗಳಲ್ಲೂ ಹಲವಾರು ನೀರ್ಗಲ್ಲ ನದಿಗಳಿವೆ. ಇವುಗಳಲ್ಲೆಲ್ಲ ಹತ್ತು ಮೈಲಿ ಉದ್ದದ ಓಕಿಯಾಲಾಕ್ ಪ್ರಸಿದ್ಧವಾದುದು.

ಉತ್ತರ ಮೇರುಪ್ರದೇಶದ ಅನೇಕ ನೀರ್ಗಲ್ಲ ನದಿಗಳು ಕರಗಿ ಹಿಂಜರಿಯುತ್ತಿವೆ ಎಂದು ಭೂವಿಜ್ಞಾನಿಗಳ ಅಭಿಪ್ರಾಯ. ಹಿಂದಿನ ಭೂಯುಗಗಳಲ್ಲಿ ಹಿಮದಿಂದ ಆವೃತವಾಗಿದ್ದ ಅನೇಕ ಭೂಪ್ರದೇಶಗಳಲ್ಲಿ ಈಗ ಹಿಮದ ಸುಳಿವೇ ಇಲ್ಲ. ಈಚಿನ ಅಧ್ಯಯನಗಳಿಂದ ಐಸ್ಲೆಂಡಿನಲ್ಲಿ 10–14ನೆಯ ಶತಮಾನದ ವರೆಗೆ ಹಿಮದ ಪ್ರಭಾವ ಅಷ್ಟಾಗಿರದೆ 14ನೆಯ ಶತಮಾನದಿಂದೀಚೆಗೆ ನೀರ್ಗಲ್ಲು ವಿಶಾಲ ಪ್ರದೇಶಗಳನ್ನೂ ಆಕ್ರಮಿಸಿಕೊಂಡಿತೆಂಬುದಕ್ಕೆ ಅನೇಕ ಆಧಾರಗಳು ದೊರೆತಿವೆ. 1750ರಲ್ಲಿ ಇದು ಪರಾಕಾಷ್ಠೆ ಮುಟ್ಟಿ ಮತ್ತೆ ಹಿಂಜರಿಯತೊಡಗಿತ್ತು. ಮುಂದೆ 1850ರ ವೇಳೆಗೆ ಹೆಚ್ಚಾಯಿತು. ಆದರೆ 1890ರಲ್ಲಿ ಅತ್ಯಂತ ಹೆಚ್ಚಿನ ಹಿಂಜರಿತ ಕಂಡುಬಂತು. ತದನಂತರ ಹಿಂಜರಿತದ ವೇಗ ಬಲು ಕಡಿಮೆಯಾಗಿ 1930ರ ವೇಳೆಗೆ ಮತ್ತೆ ಅಧಿಕವಾಯಿತು. ಇಂದಿಗೂ ಈ ಹಿಂಜರಿತ ತೀವ್ರಗತಿಯಲ್ಲೇ ಮುಂದುವರಿಯುತ್ತಿದೆ. (ಕೆ.ಆರ್.ಆರ್.)

**ಉತ್ತರಮೇರು ಶೋಧನೆ:** ಪೂರ್ವ ಏಷ್ಯದ ಸಂಪದ್ಯುಕ್ತ ರಾಷ್ಟ್ರಗಳಿಗೆ ಹಾದಿ ಕಂಡುಹಿಡಿಯಲು ಐರೋಪ್ಯರು ಪ್ರಯತ್ನಿಸಿದ್ದು ಉತ್ತರಮೇರು ಪ್ರದೇಶಗಳ ಅನ್ವೇಷಣೆ, ಆವಿಷ್ಕಾರ, ಶೋಧನೆಗಳಿಗೆ ಮೂಲಪ್ರೇರಣೆಯಾಯಿತು. ಈ ಉದ್ದೇಶ ಹೊಂದಿದ್ದವರಲ್ಲಿ ಕೆಲವರು ಯೂರೋಪಿನ ಉತ್ತರದ ಕಡೆಯಲ್ಲೇ ಪೂರ್ವಾಭಿಮುಖವಾಗಿ ಸಮುದ್ರಯಾನ ಮಾಡಿದರೆ ಇನ್ನು ಕೆಲವರು ಅಟ್ಲಾಂಟಿಕ್ ಸಾಗರದಲ್ಲಿ ಪಶ್ಚಿಮಾಭಿಮುಖವಾಗಿ ಪ್ರಯಾಣ ಮಾಡಿ ಅಮೆರಿಕವನ್ನು ಕಂಡು ಹಿಡಿದು, ಅನಂತರ ಅಮೆರಿಕದ ಉತ್ತರದ ಕಡೆಯಿಂದ ಪಶ್ಚಿಮಾಭಿಮುಖವಾಗಿ ಈಶಾನ್ಯಕ್ಕೆ ನಡೆದರು. ಆದ್ದರಿಂದ ಇವು ಕ್ರಮವಾಗಿ ಈಶಾನ್ಯಮಾರ್ಗ ಹಾಗೂ ವಾಯವ್ಯ ಮಾರ್ಗಗಳೆಂದು ಪ್ರಸಿದ್ಧವಾಗಿವೆ. ಕ್ರಿಸ್ತಪೂರ್ವ ಕಾಲದಲ್ಲೇ ಗ್ರೀಕರೂ ರೋಮನರೂ ಈ ಪ್ರದೇಶವನ್ನು ಕಂಡಿದ್ದರೆಂದು ಕೆಲವರ ವಾದ. ಗ್ರೀನ್‍ಲೆಂಡಿಗೂ ಅದರ ಎದುರಿಗಿನ ಅಮೆರಿಕನ್ ತೀರಗಳಿಗೂ 10ನೆಯ ಶತಮಾನದಲ್ಲಿ ನಾರ್ಸ್ ಜನ ಮಾಡಿದ ಸಮುದ್ರಯಾನಗಳು 1194ರ ಸ್ವಾಲ್‍ಬಾರ್ ಆವಿಷ್ಕಾರವು ಇತಿಹಾಸ ಗುರುತಿಸಬಹುದಾದ ಮೊದಲು ಸಂಗತಿಗಳು. ಉತ್ತರಮೇರು ಪ್ರದೇಶದ ಅಮೆರಿಕನ್ ವಿಭಾಗದ ಶೋಧನೆಯ ಮೊದಲ ಮುಖ್ಯ ಘಟನೆಯೆಂದರೆ 1497ರಲ್ಲಿ ಜಾನ್ ಕ್ಯಾಬಟ್‍ನಿಂದ ನ್ಯೂಫೌಂಡ್‍ಲೆಂಡ್ ಮತ್ತು ಲ್ಯಾಬ್ರಡಾರ್ ಶೋಧನೆ. ಅನಂತರ ಇನ್ನು ಕೆಲವರು ಕ್ಯಾಬಟ್ ಅನುಸರಿಸಿದ ಮಾರ್ಗವನ್ನೇ ಮುಂದುವರಿಸಿ ಉ.ಅ. $60^{0}$ಯ ಬಳಿಯವರೆಗೂ ಸಾಗಿದರು. ಮುಂದಿನ ಮುಖ್ಯ ಪ್ರವಾಸವೆಂದರೆ ವಿಲೋಬಿಯದು (1553). ಈಶಾನ್ಯ ಮಾರ್ಗವನ್ನಾರಂಭಿಸಿದವ ಈತನೇ. ಆದರೆ ಇವನೂ ಸಂಗಡಿಗರೂ ಲ್ಯಾಪ್‍ಲ್ಯಾಂಡಿನ ಬಳಿ ಅಳಿದುಹೋದರು.

ಮುಂದೆ ಅನೇಕ ಇಂಗ್ಲಿಷರು ವಿಲೋಬಿಯ ಮಾರ್ಗದಲ್ಲೇ ಅನ್ವೇಷಣೆ ಮುಂದುವರಿಸಿದರಾದರೂ ಯಾರೂ ಆತ ಕಂಡ ಸ್ಥಳದಿಂದ ಮುಂದೆ ಸಾಗಲಿಲ್ಲ. 1594–97ರಲ್ಲಿ ವಿಲೆಂ ಬಾರೆಂಟ್ಸ್ ಎಂಬ ಡಚ್ ನಾವಿಕ ಮೂರು ಬಾರಿ ಪ್ರವಾಸ ಮಾಡಿ, ಸ್ಪಿಟ್ಸ್‍ಬರ್ಗನ್ನು ಕಂಡು ಹಿಡಿದ. 1607ರಲ್ಲಿ ಹಡ್ಸನ್ ಉ. ಅ. $81^{0}.30'$ ವರೆಗೂ ಹೋಗಿ ಹಿಂದಿರುಗಬೇಕಾಯಿತು. ಪೂರ್ವಾಭಿಮುಖವಾಗಿ ಯಾನ ಮಾಡುವುದು ಅಸಾಧ್ಯವೆಂದು ಆ ಯತ್ನವನ್ನು ಕೈಬಿಡಲಾಯಿತು.

ಈ ಕಾಲದಲ್ಲಿ ಅಮೆರಿಕನ್ ಉತ್ತರಮೇರು ಪ್ರದೇಶದ ಅನ್ವೇಷಣೆ ಶೋಧನೆಗಳ ಪ್ರಯತ್ನವೂ ಸಾಗಿತ್ತು. ಫ್ರೋಬಿಷರ್ (1576), ಜಾನ್ ಡೇವಿಸ್ (1585–88) ಇವರು ಈ ಕ್ಷೇತ್ರದಲ್ಲಿ ಮೊದಲಿಗರು. ಗ್ರೀನ್‍ಲೆಂಡಿನ ಪಶ್ಚಿಮತೀರದಲ್ಲಿ $70^{0}.41'$ವರೆಗೂ ಪ್ರಯಾಣ ಮಾಡಿದ ಹಡ್ಸನ್ ವಾಯವ್ಯ ಮಾರ್ಗವನ್ನನುಸರಿಸಿ, ಅವನ ಹೆಸರಿನ ಕೊಲ್ಲಿಯನ್ನು ಕಂಡುಹಿಡಿದ (ಅದಕ್ಕೆ ಆತನ ಹೆಸರು ಬಂದದ್ದು ಆಮೇಲೆ, ಅದು ಪೆಸಿಫಿಕ್ ಸಾಗರದ ಭಾಗವೆಂದು ಆಗ ಆತ ಭಾವಿಸಿದ್ದ). ಮುಂದೆ ಬ್ಯಾಫಿನ್, ಫಾಕ್ಸ್, ಜೇಮ್ಸ್ ಮುಂತಾದವರು ಈ ಕಾರ್ಯ ಮುಂದುವರಿಸಿದರು. ನಂತರ ಸುಮಾರು ಒಂದು ನೂರು ವರ್ಷ ಕಾಲ ಅಮೆರಿಕನ್ ಉತ್ತರ ಮೇರು ಪ್ರದೇಶದತ್ತ ಯಾರೂ ಗಮನಹರಿಸಲಿಲ್ಲ.

ಸೈಬೀರಿಯ ತೀರ ಪ್ರದೇಶದಲ್ಲಿ ರಷ್ಯಕ್ಕೆ ಬಹಳ ಆಸಕ್ತಿಯಿತ್ತು. 1648ರಲ್ಲಿ ಡೆಷ್ನೆಫ್ ಎಂಬಾತ ಬೆರ್ರಿಂಗ್ ಜಲಸಂಧಿಯ ಮೂಲಕ ಹಾದುಹೋದನಾದರೂ ವಾಸ್ತವವಾಗಿ ಈ ಜಲಸಂಧಿಯ ಶೋಧನೆ ನಡೆಸಿದವ ಬೆರ್ರಿಂಗನೇ–ಒಂದು ಶತಮಾನ ಕಳೆದ ಮೇಲೆ. ಈ ಸಂಧಿಗೆ ಈತನ ಹೆಸರೇ ಬಂದಿದೆ. ಈತ 1741ರಲ್ಲಿ ವಾಯವ್ಯ ಅಮೆರಿಕದ ಒಂದು ಭಾಗದ ಶೋಧನೆ ಮಾಡಿದ. ಸೈಬೀರಿಯದ ಉತ್ತರದ ತುದಿಯನ್ನು ಕಂಡುಹಿಡಿದವ ಚೆಲ್ಯುಸ್ಕಿನ್. ಇದಕ್ಕೆ ಈತನ ಹೆಸರೇ ಬಂದಿದೆ. ಮುಂದೆ ಅನೇಕ ರಷ್ಯನ್ನರು ಈ ಭಾಗಗಳ ಪರಿಶೋಧನೆಯ ಕಾರ್ಯ ಮುಂದುವರಿಸಿದರು.

ಉತ್ತರದ ಮೇರು ಪ್ರದೇಶದ ಶೋಧನೆಯಲ್ಲಿ ಇಂಗ್ಲಿಷರಿಗೆ ಮತ್ತೆ ಆಸಕ್ತಿ ಹುಟ್ಟಿದ್ದು ಹದಿನೆಂಟನೆಯ ಶತಮಾನದಲ್ಲಿ. ಜೆ.ಸಿ.ಫಿಪ್ಸ್ (ಮುಂದೆ ಲಾರ್ಡ್ ಮಲ್ಗ್ರೇರ್) 1773ರಲ್ಲಿ ಸ್ಪಿಟ್ಸ್ ಬರ್ಗನಿಗೆ ಯಾನ ಮಾಡಿ ಅಲ್ಲಿಂದ ಉ.ಅ. $80^{0}.48'$ವರೆಗೂ ಹೋದ. ಬೆರ್ರಿಂಗ್ ಜಲಸಂಧಿಯ ಮೂಲಕ ಯಾನ ಮಾಡಿದ ಜೇಮ್ಸ್ ಕುಕ್ ಅಷ್ಟೊಂದು ಉತ್ತರಕ್ಕೆ ಹೋಗಲಾಗಲಿಲ್ಲ. ಈತನ ವೈಫಲ್ಯದಿಂದ ಈ ಪ್ರಯತ್ನ ತಾತ್ಕಾಲಿಕವಾಗಿ ನಿಂತಿದ್ದು 1806ರಲ್ಲಿ ಮತ್ತೆ ಪ್ರಾರಂಭವಾಯಿತು. ಸ್ಕೋರ್ಸ್ ಬಿ ಗ್ರೀನ್‍ಲೆಂಡಿನ ಪೂರ್ವತೀರದಲ್ಲಿ ಸಂಚರಿಸಿ, ಉ.ಅ. $81^{0}.30'$ ವರೆಗೂ ಪ್ರಯಾಣ ಮಾಡಿದ. ಉತ್ತರಮೇರು ಪ್ರದೇಶದ ಭೂವಿವರಣೆ ಹಾಗೂ ಪ್ರಾಕೃತಿಕ ಇತಿಹಾಸದ ಬಗ್ಗೆ ಹೆಚ್ಚು ಮಾಹಿತಿ ಒದಗಿಸಿದವ ಈತನೇ. ಮುಂದೆ ಅನೇಕರು ಈ ಪ್ರದೇಶದ ಶೋಧನೆಯಲ್ಲಿ ನಿರತರಾದರೂ ಸ್ಕೋರ್ಸ್ ಬಿ ಮುಟ್ಟಿದ ಅಕ್ಷಾಂಶಕ್ಕಿಂತಲೂ ಮುಂದೆ ($82^{0}.43'$ವರೆಗೂ) ಸಾಗಿದವ ಪ್ಯಾರಿ (1827). ಪೌರಸ್ತ್ಯ ರಾಷ್ಟ್ರಗಳಿಗೆ ವಾಯವ್ಯ ಮಾರ್ಗ ಕಂಡು ಹಿಡಿಯುವ ಪ್ರಯತ್ನವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಬ್ರಿಟನ್ನು 20,000 ಪೌ. ಬಹುಮಾನ ನೀಡುವುದಾಗಿ ಪ್ರಕಟಿಸಿತ್ತಾದರೂ ಯಾರೂ ಈ ಬಗ್ಗೆ ಹೆಚ್ಚು ಯಶಸ್ಸು ಗಳಿಸಿರಲಿಲ್ಲ. ಪ್ಯಾರಿ ಈ ನಿಟ್ಟಿನಲ್ಲಿ ಸಾಕಷ್ಟು ದೂರ ಸಾಗಿ ಪ. ರೇ. $110^{0}$ ಯವರೆಗೂ ಹೋದ, ಅನಂತರ ಟರ್ನಗೇನ್ ಬಿಂದುವಿಗೆ 320 ಕಿಮೀ ವರೆಗೂ ರಾಸ್ ಮುಂದುವರಿಯುವುದು ಸಾಧ್ಯವಾಯಿತು. ಬೆರ್ರಿಂಗ್ ಜಲಸಂಧಿಯಿಂದ ಪೂರ್ವಾಭಿಮುಖವಾಗಿ ಪ್ರಯಾಣ ಮಾಡಿದ ಇನ್ನೊಂದು ತಂಡ ಈ ಬಿಂದುವನ್ನು ಮುಟ್ಟಿ ಬಂತು. ಇದೇ ಕಾಲಕ್ಕೆ ಅನೇಕರು ಅಮೆರಿಕನ್ ತೀರಪ್ರದೇಶದ ಪರಿಶೋಧನೆಯಲ್ಲಿ ನಿರತರಾಗಿದ್ದರು.

ಸರ್ ಜಾನ್ ಫ್ರಾಂಕ್‍ಲಿನ್ ಮಹಾಸಾಹಸಿ. ಟರ್ನಗೇನ್ ಸುತ್ತ ಮುತ್ತಣದಲ್ಲಿ ಈತ ಪರಿಶೋಧನೆ ನಡೆಸಿದ. ಕಿಂಗ್ ವಿಲಿಯಂ ದ್ವೀಪದ ಪಶ್ಚಿಮಕ್ಕೆ ಈತನ ಹಡಗುಗಳು ಮಂಜಿನಲ್ಲಿ ಸಿಕ್ಕಿಬಿದ್ದುವು. ಈತನೂ ಈತನ ಜೊತೆಯವರೂ ಮರಣ ಹೊಂದಿದರು (1847).

19ನೆಯ ಶತಮಾನದ ಉತ್ತರಾರ್ಧದಲ್ಲಿ ಸ್ಪಿಟ್ಸ್‍ಬರ್ಗನ್ ಸುತ್ತಮುತ್ತ ಸ್ವೀಡ್ ಜನರ ಚಟುವಟಿಕೆ ಅಧಿಕವಾಗಿತ್ತು. ನೂರ್ಡನ್ ಷೋಲ್ಡ್ 1878ರಲ್ಲಿ ಚೆಲ್ಯುಸ್ಕಿನ್ ಭೂಶಿರ ಸುತ್ತಿ, ಬೇರಿಂಗ್ ಜಲಸಂಧಿಯ ಬಳಿ ಚಳಿಗಾಲ ಕಳೆದು, ಪೆಸಿಫಿಕ್‍ಗೆ ಪ್ರಯಾಣ ಮಾಡಿ 1879ರಲ್ಲಿ ಯೋಕೊಹಾಮ ತಲುಪಿದ. 1803–6ರಲ್ಲಿ ಅಮುಂಡ್ಸೆನ್ ತನ್ನ ಹಡಗಿನಲ್ಲಿ ಪ್ರಯಾಣಮಾಡಿ ಕೆನಡಪ್ರದೇಶ ಮಾರ್ಗವಾಗಿ ಸಾಗಿ ಅಲಾಸ್ಕವನ್ನು ಬಳಸಿದಾಗ ಈ ವಾಯವ್ಯ ಮಾರ್ಗಾನ್ವೇಷಣೆ ಸಂಪೂರ್ಣವಾದಂತಾಯಿತು. ಈ ನಡುವೆ ಆತ ಮೂರು ಚಳಿಗಾಲಗಳನ್ನು ಮಾರ್ಗ ಮಧ್ಯೆ ಕಳೆಯಬೇಕಾಯಿತು. ಮುಂದೆ ಅನೇಕ ತಂಡಗಳು ಇನ್ನೂ ಶೀಘ್ರವಾಗಿ ಈ ಪ್ರಯಾಣ ಮಾಡಿ ಮುಗಿಸಿದುವು.

ಉತ್ತರಮೇರು ದರ್ಶನ: ಉತ್ತರಮೇರುವನ್ನು ಮೊದಲು ಸಂದರ್ಶಿಸಬೇಕೆಂಬ ಉತ್ಸಾಹದಿಂದ ಕಾರ್ಯಪ್ರವೃತ್ತವಾದ ತಂಡಗಳಿಂದ ಮೇರುವಿನ ಇತರ ಪ್ರದೇಶಗಳು ಪತ್ತೆಯಾದುವು, ಉತ್ತರದ ಗುರಿ ಹಿಡಿದ ಅನೇಕ ಸಾಹಸಿಗಳು ನಾನಾ ಬಗೆಯ ವಿಘ್ನಪರಂಪರೆಗಳನ್ನೆದುರಿಸಿದರು. 19ನೆಯ ಶತಮಾನದ ಕೊನೆಯಲ್ಲಿ ಬ್ರಿಟಿಷ್ ಹಾಗೂ ಅಮೆರಿಕನ್ ಅಭಿಯಾನಗಳು ಗ್ರೀನ್‍ಲೆಂಡ್ ಮತ್ತು ಎಲ್ಸ್‍ಮೀರ್ ದ್ವೀಪದ ಕಿರು ಮಾರ್ಗದಲ್ಲಿ ಮುನ್ನುಗ್ಗಿದ್ದುವು (1875–84). ವಿಶೇಷ ರೀತಿಯಲ್ಲಿ ರಚಿಸಲಾದ ಹಡಗೊಂದನ್ನು ನಾನ್ಸನ್ 1893ರಲ್ಲಿ ತೊಡಗಿಸಿ ನೀರ್ಗಲ್ಲಿನ ಖಂಡದೊಂದಿಗೆ ಪಶ್ಚಿಮಾಭಿಮುಖವಾಗಿ ಸಾಗಿ ಉ.ಅ. $84^{0}$ ರಲ್ಲಿ ಹಡಗು ತ್ಯಜಿಸಿ ಪಾದಯಾತ್ರಿಯಾಗಿ ಮುನ್ನಡೆದು ಆ ವರ್ಷದ ಏಪ್ರಿಲ್ 8 ರಂದು ತನ್ನ ಜೊತೆಗಾರ ಜಾನ್ಸನ್ನನೊಂದಿಗೆ ಉ.ಅ. $86^{0}14'$ ತಲುಪಿ ಹಿಂದಿರುಗಿದ. ಆ ಕಾಲದಲ್ಲಿ ಇದೊಂದು ವಿಕ್ರಮ.

ಮುಂದೆ ಅನೇಕ ಪ್ರಯತ್ನಗಳಾದ ಮೇಲೆ ಎಲ್ಸ್‍ಮೀರ್‍ದ್ವೀಪದ ಉತ್ತರದಿಂದ ಅಡ್ಮಿರಲ್ ಪೀರಿ ಮುನ್ನೆಡೆದು, 1909ರ ಏಪ್ರಿಲ್ 6ರಂದು ಉತ್ತರಮೇರು ತಲುಪಿ ಹಿಂತಿರುಗಿದ. 1897ರಲ್ಲಿ ಆಂಡ್ರೀ ಮತ್ತು ಆತನ ಇಬ್ಬರು ಜೊತೆಗಾರರು ಬಲೂನಿನಲ್ಲಿ ಅಲ್ಲಿಗೆ ಹೊರಟು ಕಾಣೆಯಾದರು. ಇವರ ದೇಹಗಳೂ ಇವರು ಬಿಟ್ಟ ಟಿಪ್ಪಣಿಗಳೂ ಚಿತ್ರಗಳೂ ಪತ್ತೆಯಾದದ್ದು 1930ರಲ್ಲಿ.

ಉತ್ತರಮೇರುವಿಗೆ ಸ್ಪಿಟ್ಸ್‍ಬರ್ಗನ್‍ನಿಂದ ಮೊಟ್ಟಮೊದಲು ಹಾರಿಹೋಗಿ ಬಂದವ ಅಡ್ಮಿರಲ್ ಬರ್ಡ್ (1926). ಉಂಬರ್ಟೋನೊಬೀಲೆ ಸ್ಪಿಟ್ಸ್‍ಬರ್ಗನ್ನಿನಿಂದ ಹೊರಟು ಉತ್ತರಮೇರುವನ್ನು ದಾಟಿ ಅಲಾಸ್ಕ ತಲಪಿದ. ಈತನಿಗೆ ವಿರುದ್ಧ ದಿಕ್ಕಿನಲ್ಲಿ ಹಾರಿ ಉತ್ತರಮೇರು ದಾಟಿದವ ಜಿ. ಎಚ್. ವಿಲ್ಕಿನ್ಸ್. ಈತನೇ 1932ರಲ್ಲಿ ಜಲಾಂತರ್ಗಾಮಿ ನೌಕೆಯಲ್ಲಿ ಪ್ರಯಾಣ ಮಾಡಬೇಕೆಂದು ಯೋಚಿಸಿದ್ದ. ಆದರೆ ಯಾಂತ್ರಿಕ ತೊಂದರೆಯಿಂದ ಈ ಯತ್ನವನ್ನು ಕೈಬಿಡಬೇಕಾಯಿತು. ಉತ್ತರ ಮೇರುವಿನ ತೇಲು ನೀರ್ಗಲ್ಲಿನ ಮೇಲೆ ವಿಮಾನದ ಮೂಲಕ ರಷ್ಯ ವಿಜ್ಞಾನ ಪರಿಶೋಧನ ಕೇಂದ್ರ ಸ್ಥಾಪಿಸಿದ್ದು 1937ರಲ್ಲಿ. (ಕೆ.ಆರ್.ಆರ್.)

**ಉತ್ತರಾಂಚಲ:** ಉತ್ತರಾಖಂಡ್ ಭಾರತದ ಈಶಾನ್ಯದ ಒಂದು ರಾಜ್ಯ. ಉತ್ತರ ಪ್ರದೇಶ ರಾಜ್ಯದಿಂದ ಪ್ರತ್ಯೇಕಗೊಂಡು, 2000 ಸೆಪ್ಟೆಂಬರ್ 9 ರಂದು ದೇಶದ 27ನೆಯ ರಾಜ್ಯವಾಗಿ ಉದಯಿಸಿತು. ಈ ರಾಜ್ಯದಲ್ಲಿ ಹಲವು ಪವಿತ್ರ ಯಾತ್ರಾ ಸ್ಥಳಗಳು ಕಂಡು ಬರುವುದರಿಂದ ಇದನ್ನು ದೇವಭೂಮಿ ಎಂದು ಕರೆಯಲಾಗಿದೆ.

$28°–43'$ ಉ.ಅ.ದಿಂದ $31°–27'$ ಉತ್ತರ ಅಕ್ಷಾಂಶದವರೆಗೂ, $77°–34'$ ಪೂ.ರೇ.ದಿಂದ $81^{0}–02'$. ಪೂರ್ವ ರೇಖಾಂಶದವರೆಗೂ ವಿಸ್ತರಿಸಿದೆ. ವಿಸ್ತೀರ್ಣ 53,483 ಚ.ಕಿಮೀ. ಈ ರಾಜ್ಯವು ಪೂರ್ವದಲ್ಲಿ ನೇಪಾಲ, ಉತ್ತರದಲ್ಲಿ ಚೀನ(ಟಿಬೆಟ್) ರಾಷ್ಟ್ರಗಳ ಅಂತಾರಾಷ್ಟ್ರೀಯ ಗಡಿಗಳನ್ನು ಹೊಂದಿದ್ದರೆ, ವಾಯವ್ಯದಲ್ಲಿ ಹಿಮಾಚಲಪ್ರದೇಶ, ದಕ್ಷಿಣದಲ್ಲಿ ಉತ್ತರ ಪ್ರದೇಶಗಳನ್ನು ಗಡಿಗಳನ್ನಾಗಿ ಹೊಂದಿದೆ. ಈ ರಾಜ್ಯದಲ್ಲಿ 13 ಜಿಲ್ಲೆಗಳಿವೆ – ಪಿತ್ತೋರ್‍ಘರ್, ಆಲ್ಮೋರ, ನೈನಿತಾಲ್, ಬಾಗೇಶ್ವರ್, ಚಂಪಾವತ್, ಉತ್ತರಕಾಶಿ, ಉಧಾಂಸಿಂಗ್ ನಗರ, ಚಮೋಲಿ, ಡೆಹರಾಡೂನ್, ಪೌರಿ, ತೆಹ್ರಿ ಗರ್‍ವಾಲ್, ರುದ್ರ ಪ್ರಯಾಗ್, ಮತ್ತು ಹರಿದ್ವಾರ. ಡೆಹರಾಡೂನ್ ಇದರ ರಾಜಧಾನಿ. ಜನಸಂಖ್ಯೆ 4,47,808.

ಮೇಲ್ಮೈ ಲಕ್ಷಣಗಳು: ಪರ್ವತಮಯ ಹಾಗೂ ಏರಿಳಿತ ಭೂ ಸ್ವರೂಪ, ಶಿಲಾಮಯ ಲಕ್ಷಣ, ಆಳವಾದ ಕಣಿವೆ, ಎತ್ತರವಾದ ಶಿಖರಗಳು, ಕಡಿದಾಗಿ ಹರಿಯಬಲ್ಲ ನದಿವ್ಯೂಹ, ತೀವ್ರವಾದ ಮಣ್ಣಿನ ಸವೆತ, ನಿರಂತರವಾದ ಭೂ ಕುಸಿತ ಹಾಗೂ ವಿಸ್ತೃತವಾಗಿ ಚೆದುರಿದಂತೆ ಹಂಚಿಕೆಗೊಂಡಿರುವ ಜನಸಂಖ್ಯೆ ಉತ್ತರಾಂಚಲ ರಾಜ್ಯದ ಪ್ರಮುಖ ಲಕ್ಷಣಗಳಾಗಿವೆ.

ರಾಜ್ಯವನ್ನು ಎರಡು ಮುಖ್ಯ ಭೌಗೋಳಿಕ ವಿಭಾಗಗಳಾಗಿ ವರ್ಗೀಕರಿಸಲಾಗಿದೆ: ಪರ್ವತ ಹಾಗೂ ಬೆಟ್ಟ ಪ್ರದೇಶಗಳು, ಪಾದ ಬೆಟ್ಟಗಳು – ಭಾಭರ್ ಮತ್ತು ತೆರಾಯಿಗಳಿಂದ ಕೂಡಿದ ಮೈದಾನ.




ಪರ್ವತ ಹಾಗೂ ಬೆಟ್ಟಮಯ ಪ್ರದೇಶಗಳು: ರಾಜ್ಯದ ಒಟ್ಟು ಭೂ ಪ್ರದೇಶದ ಶೇ. 92.57 ಭೂಭಾಗ ಪರ್ವತ ಹಾಗೂ ಬೆಟ್ಟಮಯ ಪ್ರದೇಶಗಳಿಂದ ಕೂಡಿದೆ. ಇಲ್ಲಿನ ಎತ್ತರವಾದ ಹಿಮಾಲಯ ಪರ್ವತ ಪ್ರದೇಶಗಳನ್ನು ಕೆಳಕಂಡ 4 ಉಪವಿಭಾಗಗಳಾಗಿ ವರ್ಗೀಕರಿಸಲಾಗಿದೆ:

ಎ) ಉಪ ಹಿಮಾಲಯ: ಇದನ್ನು ಶಿವಾಲಿಕ್ ಪ್ರದೇಶವೆನುವರು. ಹಿಮಾಲಯದ ಅತಿ ಕಿರಿದಾದ ಶ್ರೇಣಿಯಾಗಿದ್ದು, 6 ರಿಂದ 30 ಕಿಮೀ ಅಗಲವಾಗಿದ್ದು, 300–1000 ಮೀ ಎತ್ತರದಿಂದ ಕೂಡಿದೆ. ಇದರ ಉತ್ತರಕ್ಕೆ ಸಮತಟ್ಟಾದ ರೇಖಾಂಶಿಕ ಸ್ವರೂಪದ ಕಣಿವೆಗಳಿಂದ ಕೂಡಿರುವ ಡೂನ್ ಪ್ರದೇಶವಿದೆ.

ಬಿ) ಮಧ್ಯ ಹಿಮಾಲಯ: ಈ ಭಾಗ 60–90 ಕಿಮೀ ಅಗಲವಾಗಿದ್ದು 1000–1300 ಮೀ ಎತ್ತರವನ್ನು ಹೊಂದಿದೆ. ಈ ಪ್ರದೇಶ ತೀವ್ರವಾದ ಏರಿಳಿತ ಸ್ವರೂಪಗಳಿಂದ ಕೂಡಿದ್ದು, ಹಿಮಾಲಯ ಶ್ರೇಣಿ, ಕಣಿವೆ ಮತ್ತು ಸರೋವರ ತಗ್ಗು ಪ್ರದೇಶಗಳಂತಹ ಭಾಗಗಳಿಂದ ಕೂಡಿದೆ.

ಸಿ) ಮಹಾ ಹಿಮಾಲಯ: ಇದು 40–60 ಕಿಮೀ ಅಗಲ, 3000–7000 ಮೀ ಎತ್ತರವನ್ನು ಹೊಂದಿದೆ. ಇಲ್ಲಿ ಹಿಮಾವೃತಗೊಂಡಿರುವುದರಿಂದಲೇ ಇದನ್ನು ಹಿಮಾದ್ರಿ ಎನ್ನುವರು. ಇಲ್ಲಿ ಹಲವಾರು ಹಿಮನದಿಗಳು ಹರಿಯುತ್ತವೆ.

ಡಿ) ಹೊರ ಹಿಮಾಲಯ: ಈ ಭಾಗವನ್ನು ಟೆಥಿಸ್ ಹಿಮಾಲಯ ಮತ್ತು ಇಂಡೋ ಟಿಬೆಟ್ ಪ್ರಸ್ಥಭೂಮಿ ಎಂತಲೂ ಕರೆಯಲಾಗುತ್ತದೆ. ಈ ಪ್ರದೇಶ ಟಿಬೆಟ್ಟಿನ ಯರ್ಲಾಂಗ್ ಸಾಂಗ್ಪೋ (ಬ್ರಹ್ಮಪುತ್ರಾ) ನದಿ ಕಣಿವೆಯ ಕಡೆಗೆ ಇಳಿಜಾರನ್ನು ಹೊಂದಿದೆ.

ಪರ್ವತ ರಹಿತ ಅಥವಾ ಭಾಭರ್, ತೆರಾಯಿ ಪ್ರದೇಶ:

ಭಾಭರ್: ಇದು ಹಿಮಾಲಯ ಪಾದಭಾಗದಲ್ಲಿರುವ ಸಮತಟ್ಟಾದ ಭೂ ಪ್ರದೇಶವಾಗಿದೆ. ಇದು 34 ಕಿಮೀ ಅಗಲವಾಗಿದ್ದು, ಹಿಮಾಲಯದಲ್ಲಿನ ತೊರೆಗಳು ಕಡಿದಾದ ಇಳಿಜಾರನ್ನು ಅನುಸರಿಸಿ ವೇಗವಾಗಿ ಹರಿಯುತ್ತಾ ಬಂಡೆಗಲ್ಲುಗಳು ಮತ್ತು ನುರುಜುಗಲ್ಲುಗಳ ಮಧ್ಯೆ ತಳಭಾಗದಲ್ಲಿ ಇಂಗುತ್ತಾ ಹರಿಯುತ್ತವೆ. ಇಲ್ಲಿನ ಮಣ್ಣನ್ನೇ ಭಾಭರ್ ಎನ್ನುತ್ತೇವೆ. ಈ ನಿಕ್ಷೇಪವು ವ್ಯಾಪ್ಯ ಗುಣದಿಂದ ಕೂಡಿದೆ.

ತೆರಾಯಿ: ಇದು ಭಾಭರ್ ಮಣ್ಣು ವಲಯದ ದಕ್ಷಿಣಕ್ಕೆ ಸಮಾನಾಂತರವಾಗಿ ಸಂಚಯನಗೊಂಡಿದೆ. ಈ ಮಣ್ಣು 80–90 ಕಿಮೀ ಅಗಲವಾಗಿ ಹಾಗೂ ಫಲವತ್ತಿನಿಂದ ಕೂಡಿದೆ. ಈ ಮಣ್ಣು ಹೆಚ್ಚು ನೀರನ್ನು ಹಿಡಿದಿಟ್ಟುಕೊಳ್ಳುವ ಗುಣವನ್ನು ಹೊಂದಿದೆ.

ಜಲವ್ಯವಸ್ಥೆ: ಈ ರಾಜ್ಯದಲ್ಲಿ ಗಂಗಾ, ಯಮುನಾ ಮತ್ತು ಶಾರದಾ ನದಿಗಳು ಹುಟ್ಟಿ ಹರಿಯುತ್ತವೆ. ಕೆಲವು ನದಿಗಳು ಹಿಮನದಿಗಳ ಮೂಲಕ ಉಗಮಹೊಂದಿ ಹರಿಯುತ್ತವೆ. ಈ ರಾಜ್ಯದ ಹಲವು ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಲು ಸೂಕ್ತ ಸನ್ನಿವೇಶವನ್ನು ಹೊಂದಿದೆ. ಆದರೆ ಭಾಗೀರಥಿ – ಭಿಲಂಗಾಣ ನದಿಗೆ ಅಡ್ಡಲಾಗಿ ತೆಹ್ರಿ ಯೋಜನೆಯನ್ನು 1953 ರಲ್ಲಿ ಪ್ರಾರಂಭಿಸಿದ್ದರೂ ಸಹ ಕೆಲವು ವಿರೋಧಗಳ ಮಧ್ಯೆ ಅದು ಇನ್ನೂ ಪೂರ್ಣಗೊಂಡಿಲ್ಲ.

ನೀರಾವರಿ: ರಾಜ್ಯವು 55,544 ಹೆ. ಗಳಷ್ಟು ನೀರಾವರಿ ಪ್ರದೇಶವನ್ನು ಹೊಂದಿದೆ. ಇದು ಒಟ್ಟು ಕೃಷಿ ಪ್ರದೇಶದ ಶೇ. 11.33 ಭಾಗ. ಇಲ್ಲಿನ ನಿವ್ವಳ ನೀರಾವರಿ ಪ್ರದೇಶ ಶೇ. 1.02 ಭಾಗ.

ರಾಜ್ಯದ ನೀರಾವರಿಯು ಮೂಲ ಸ್ವಾಭಾವಿಕ ನೀರಿನ ಹರಿವಾಗಿದೆ. ಹಾಗೂ ನೀರಾವರಿಗೆ ಒಳಪಟ್ಟಿರುವ ಒಟ್ಟು ಪ್ರದೇಶದ ಶೇ. 63.48 ಭಾಗ. ತರುವಾಯ ಕಾಲುವೆ ನೀರಾವರಿ (ಶೇ. 35.13) ಪ್ರಮುಖ. ಬಾವಿ ಮತ್ತು ಕೆರೆ ನೀರಾವರಿ ಸೌಲಭ್ಯವುಂಟು. ನೈನಿತಾಲ್ ಜಿಲ್ಲೆಯು ಹೆಚ್ಚು ನೀರಾವರಿ ಸೌಲಭ್ಯವುಳ್ಳದ್ದು. ತರುವಾಯ ಉತ್ತರಕಾಶಿ, ತೇಹ್ರಿ ಡೆಹ್ರಾಡೂನ್ ಮತ್ತು ಆಲ್ಮೋರ ಜಿಲ್ಲೆಗಳು ಬರುತ್ತವೆ.

ಮಣ್ಣಿನ ಪ್ರಕಾರಗಳು: ಇಲ್ಲಿನ ವಾಯುಗುಣ, ಜೈವಿಕ ಅಂಶಗಳು, ಭೂಸ್ವರೂಪ, ನದಿ ವ್ಯವಸ್ಥೆ, ಮೂಲ ಶಿಲಾ ಲಕ್ಷಣಗಳು ಮತ್ತು ಋತುಗಾರ ಮಣ್ಣಿನ ನಿರ್ಮಾಣ ಮತ್ತು ನಿಯಂತ್ರಣ ಕಾರ್ಯದಲ್ಲಿ ಪ್ರಮುಖ ಪಾತ್ರವಾಗಿಸಿವೆ. ರಾಜ್ಯದಲ್ಲಿ ಕಂಡು ಬರುವ ಮಣ್ಣಿನ ವಿಧಗಳೆಂದರೆ;

ಕೆಂಪು ಜಂಬಿಟ್ಟಿಗೆ ಮಣ್ಣು: ಎತ್ತರವುಳ್ಳ ಇಳಿಜಾರು ಪ್ರದೇಶಗಳಲ್ಲಿ ಹಂಚಿಕೆಯಾಗಿದ್ದು ಅಲ್ಪ ಆಮ್ಲೀಯ ಲಕ್ಷಣ ಹೊಂದಿದ್ದು, ಫಲವತ್ತು ಕಡಿಮೆ.

ಕಂದು ಬಣ್ಣದ ಅರಣ್ಯ ಮಣ್ಣು: ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಂಡು ಬರುತ್ತದೆ. ಇದು ಟರ್ಷಿಯರಿ ಪದರು ಶಿಲಾವರ್ಗದ ಮರುಳು ಶಿಲೆ, ಜೇಡು ಶಿಲೆ ಮತ್ತು ಅಭ್ರಕ ಹೊಂದಿರುವ ಮರಳು ಶಿಲಾ ವರ್ಗಗಳಿಂದ ಕೂಡಿದೆ. ಈ ಮಣ್ಣು 600–1700 ಮೀ ಎತ್ತರದಲ್ಲಿದ್ದು, 800–2000 ಮಿಮೀ ಮಳೆಯನ್ನು ಪಡೆಯುವ ಪ್ರದೇಶಗಳಲ್ಲಿ ಕಂಡುಬರುತ್ತದೆ.

ಉಪ ಬೆಟ್ಟ ಮಣ್ಣು: ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಈ ವಿಧದ ಮಣ್ಣು ಹಂಚಿಕೆಯಾಗಿದೆ. ಅತಿ ಎತ್ತರವಾದ ಹಾಗೂ ಅಧಿಕ ಮಳೆ ಪಡೆಯುವ ಪ್ರದೇಶಗಳಲ್ಲಿ ಹೆಚ್ಚು. ಮೇಲ್ಪದರದ ಸು. 15 ಸೆಂಮೀ ವರೆಗೆ ದಟ್ಟ ಕಂದು ಬಣ್ಣದಿಂದ ಕೂಡಿದ ಮರಳುಮಯ ಲಕ್ಷಣದ ಜೊತೆಗೆ ಕೊಳೆಯಾದ ಸಾವಯವ ಅಂಶವನ್ನು ಒಳಗೊಂಡಿದೆ. 15–50 ಸೆಂಮೀ ಆಳದಲ್ಲಿನ ಮಣ್ಣಿನಲ್ಲಿ ಸಾವಯವ ಹಾಗೂ ಜೈವಿಕ ಅಂಶಗಳ ಲಭ್ಯತೆಯಿದೆ. ಇಲ್ಲಿ ದಿಯೋದರ್, ಸ್ಪ್ರೂಸ್ ಬ್ಲೂಪೈನ್, ಚಿರ್‌ಪೈನ್ ಜಾತಿಯ ಮರಗಳನ್ನು ಕಾಣಬಹುದು.

ಪರ್ವತವಲಯದ ಹುಲ್ಲುಗಾವಲು ಮಣ್ಣು: ಈ ವಿಧದ ಮಣ್ಣು ಸಾಮಾನ್ಯವಾಗಿ ಎತ್ತರವಾದ ಪರ್ವತ ಪ್ರದೇಶಗಳಲ್ಲಿದ್ದು, ಶುಷ್ಕ ಹಾಗೂ ಶೀತ ವಾಯುಗುಣ ಮತ್ತು ವಿರಳವಾದ ಸಸ್ಯವರ್ಗವನ್ನು ಹೊಂದಿದೆ. ಇಲ್ಲಿ ತೆಳುವಾದ ಮಣ್ಣಿನ ಪದರವಿದ್ದು, ತೇವಾಂಶದ ಕೊರತೆಯಿದೆ. ಇದು ನಿರಂತರವಾಗಿ ನಗ್ನೀಕರಣಕ್ರಿಯೆಗೆ ಒಳಪಡುತ್ತಿರುತ್ತದೆ. ಮರಳು ಮಣ್ಣು ವಿಭಿನ್ನ ಗಾತ್ರ ಹೊಂದಿದ್ದು, ಕಣಿವೆಗಳು ಹಾಗೂ ತಗ್ಗು ಪ್ರದೇಶಗಳಲ್ಲಿ ಮಾತ್ರ ಕಂಡು ಬರುತ್ತದೆ. ಇಲ್ಲಿನ ಕೆಲವು ಭಾಗಗಳು ನುರುಜುಗಲ್ಲು, ಮರಳು ಮತ್ತು ಜಂಬಿಟ್ಟಿಗೆ ಮಿಶ್ರಿತ ಮಣ್ಣುಗಳಿಂದ ಕೂಡಿವೆ.

ಶಿಲಾಮಯಗುಣದ ಮಣ್ಣುಗಳು ಈ ವರ್ಗದ ಮಣ್ಣುಗಳು ಬಹಳ ತೆಳುಪದರದಿಂದ ಕೂಡಿದ್ದು, ಮೂಲ ಶಿಲೆಗಳಿಂದ ಶಿಥಿಲಗೊಂಡ ಕಣಗಳಿಂದ ಕೂಡಿದೆ. ಇಲ್ಲಿ ಮಳೆಯ ಕೊರತೆಯಿರುವುದರಿಂದ ಅಲ್ಪ ಪ್ರಮಾಣದ ಸಸ್ಯವರ್ಗವಿರುತ್ತದೆ. ಸಾಂದ್ರಯುತ ಮಣ್ಣಿನ ಸವೆತಕ್ಕೆ ಪೂರಕವಲ್ಲದ ಲಕ್ಷಣವಿಲ್ಲಿ ಕಂಡು ಬರುತ್ತದೆ. ಇಂತಹ ಮಣ್ಣು ಆವರಿಸಿರುವ ಪ್ರದೇಶಗಳು ಮಾರುತದ ಸವಕಳಿ ಕಾರ್ಯಕ್ಕೆ ಒಳಪಡುತ್ತವೆ. ಬಹುತೇಕ ಪ್ರದೇಶಗಳಲ್ಲಿ ಮೂಲ ಶಿಲೆಗಳು ಹೊರಚಾಚಿದ ಲಕ್ಷಣಗಳಿಂದ ಕೂಡಿವೆ.

ವಾಯುಗುಣ: ಈ ರಾಜ್ಯ ಎರಡು ವಿಭಿನ್ನ ವಾಯುಗುಣ ಲಕ್ಷಣಗಳನ್ನು ಹೊಂದಿದೆ. ಇಲ್ಲಿನ ಕಣಿವೆ ಪ್ರದೇಶಗಳಲ್ಲಿ ಉಪ ಉಷ್ಣವಲಯ ವಾಯುಗುಣವಿದ್ದರೆ, ಉನ್ನತ ಇಳಿಜಾರು ಪ್ರದೇಶಗಳಲ್ಲಿ ಸಮಶೀತೋಷ್ಣ ವಲಯ ವಾಯುಗುಣದ ಜೊತೆಗೆ ಬೇಸಿಗೆಯ ಮಾನ್ಸೂನ್ ವಾಯುಗುಣ ಕಂಡು ಬರುತ್ತದೆ. ಮೈದಾನ ಪ್ರದೇಶವು ಉಷ್ಣ ವಲಯದ ಲಕ್ಷಣವನ್ನು ಹೊಂದಿದೆ, ಬೇಸಗೆ ಅವಧಿಯಲ್ಲಿ ಉಷ್ಣಾಂಶವು $40^0$ಸೆ. ಇದ್ದು ಅಧಿಕ ಆರ್ದ್ರತೆಯಿಂದ ಕೂಡಿದ್ದರೆ ಚಳಿಗಾಲವು ಅತಿ ಚಳಿಯಿಂದ ಕೂಡಿದ್ದು, ಉಷ್ಣಾಂಶ $5^0$ಸೆ ಗಳಿಗಿಂತಲೂ ಕಡಿಮೆಯಾಗುವುದನ್ನು ಗಮನಿಸಬಹುದು.

ಈ ರಾಜ್ಯದ ಹಿಮಾಲಯ ಪ್ರದೇಶ ಆಲ್ಪೈನ್ ಲಕ್ಷಣದಿಂದ ಕೂಡಿದೆ. ಅಂದರೆ ಅತಿ ಶೀತವಾದ ಚಳಿಗಾಲ ಮತ್ತು ದೀರ್ಘಕಾಲದ ಹಿಮ ಬೀಳುವಿಕೆಯನ್ನು ಹೊಂದಿದ್ದರೆ, ಮಾನ್ಸೂನ್ ಅವಧಿಯಲ್ಲಿ ಉತ್ತಮ ಮಳೆ ಮತ್ತು ಸೌಮ್ಯ ಬೇಸಗೆ ಕಾಲವನ್ನು ಹೊಂದಿರುತ್ತದೆ. ಈ ಅನುಕೂಲಕರ ವಾಯುಗುಣವು ಪ್ರವಾಸೋದ್ಯಮವನ್ನು ಈ ರಾಜ್ಯದ ಪ್ರಮುಖ ಜೀವನ ಹಾಗೂ ಆದಾಯದ ಮೂಲವಾಗುವಂತೆ ಮಾಡಿದೆ.

ಸಸ್ಯ ಮತ್ತು ಪ್ರಾಣಿವರ್ಗ: ಉಷ್ಣವಲಯದ ಮಳೆ ಅರಣ್ಯಗಳು ಮತ್ತು ಆಲ್ಪೈನ್ ವರ್ಗದ ಅರಣ್ಯಗಳು ಇಲ್ಲಿನ ಬಹುತೇಕ ಭಾಗವನ್ನು ಆವರಿಸಿದೆ. 1969 ರಲ್ಲಿ ಚಾಂಪಿಯನ್ ಮತ್ತು ಸೇಠ್‌ರವರು ವಾಯುಗುಣ ಮತ್ತು ಎತ್ತರದ ಆಧಾರದ ಮೇಲೆ ಇಲ್ಲಿನ ಸಸ್ಯವರ್ಗಗಳನ್ನು 4 ವಲಯಗಳನ್ನಾಗಿ ವರ್ಗೀಕರಿಸಿದ್ದಾರೆ. ಅವುಗಳೆಂದರೆ

1) ಉಷ್ಣವಲಯ–ಉಪಉಷ್ಣವಲಯದ ಅರಣ್ಯ ಪ್ರದೇಶ: ಈ ವಲಯವು ಪ್ರಧಾನವಾಗಿ ಎಲೆಯುದುರುವ, ಅರೆ ಎಲೆಯುದುರುವ ಕಾಡುಗಳಿಂದ ಕೂಡಿದೆ. ಹೊನ್ನೆ ಇಲ್ಲಿನ ಪ್ರಮುಖ ಮರವಾಗಿದೆ. ಈ ಅರಣ್ಯಗಳು 1300 ಮೀ ಎತ್ತರದವರೆಗೂ ಕಂಡುಬರುತ್ತವೆ. ಈ ವಲಯದ ಇತರೆ ಮರಗಳೆಂದರೆ, ಖೈರ್, ಸೆಮಾಲ್, ಕಂಜು, ಸಿಸ್ಸೂ ಮತ್ತು ಹಾಲ್ದುಗಳು.

2) ಉಪಉಷ್ಣವಲಯ ಸಮಶೀತೋಷ್ಣವಲಯ ಪ್ರದೇಶ: ಉಪ ಉಷ್ಣವಲಯದಿಂದ ಸಮಶೀತೋಷ್ಣ ವಲಯದವರೆಗೆ, ಚಿನ್, ಪೈನ್ ಹಾಗೂ ಸೂಚಿಪರ್ಣ ಲಕ್ಷಣದಮರಗಳು 900–2100 ಮೀ ಎತ್ತರದವರೆಗೂ ಕಂಡು ಬರುತ್ತವೆ.

3) ಸಮಶೀತೋಷ್ಣ ವಲಯ–ಉಪ ಆಲ್ಪೈನ್ ವಲಯ: ಈ ವಲಯದಲ್ಲಿನ ಸ್ವಾಭಾವಿಕ ಸಸ್ಯವರ್ಗವು ಮಿಶ್ರ ಸೂಚಿಪರ್ಣ ಗುಣದಿಂದ ಕೂಡಿದ್ದು 1500–3300 ಮೀ. ಎತ್ತರದವರೆಗೆ, ಫರ್, ಸ್ಪ್ರೂಸ್ ಮತ್ತು ಬರ್ಚ್ ಮರಗಳು ಕಂಡು ಬರುತ್ತದೆ.

4) ಆಲ್ಪೈನ್ ಮತ್ತು ಕುರುಚಲು ಸಸ್ಯವರ್ಗ: ಈ ವಿಧದ ಅರಣ್ಯಗಳು 4200 ಮೀ. ಗಳಷ್ಟು ಎತ್ತರದಲ್ಲಿ ಕಂಡು ಬರುತ್ತವೆ. ಇಲ್ಲಿ ಆಲ್ಪೈನ್ ಹುಲ್ಲುಗಾವಲುಗಳು ಹಾಗೂ ಕುರುಚಲು ಪೊದೆಗಳನ್ನು ಮಾತ್ರ ಕಾಣಬಹುದು. ಇದರಿಂದಾಚೆಗೆ ಸಸ್ಯವರ್ಗಗಳನ್ನು ಕಾಣಲಾಗುವುದಿಲ್ಲ.

ರಾಜ್ಯದ ಒಟ್ಟು ಭೂಭಾಗದ ಶೇ. 34.45 ರಷ್ಟು ಪ್ರದೇಶವು ಅರಣ್ಯದಿಂದ ಕೂಡಿದೆ. ಇದರಲ್ಲಿ ಶೇ. 77.74 ರಷ್ಟು ಭಾಗ ಸಾಂದ್ರ ಅರಣ್ಯದಿಂದ ಕೂಡಿದ್ದರೆ, ಶೇ.22.26 ರಷ್ಟು ಮುಕ್ತ ಅರಣ್ಯಗಳಾಗಿವೆ. ಈ ರಾಜ್ಯ ಈ ಹಲವಾರು ಪ್ರಾಣಿ ಸಂಕುಲಗಳನ್ನು ಹೊಂದಿದೆ. ಪ್ರಮುಖವಾಗಿ ಭಾರಲ್, ಹಿಮಚಿರತೆ, ಚಿರತೆಗಳು ಮತ್ತು ಹುಲಿಗಳು. ಇಲ್ಲಿನ ವನ್ಯ ಜೀವಿಗಳ ಸಂರಕ್ಷಣೆಗಾಗಿ ಜಿಮ್‌ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಗಿದೆ. ವಿವಿಧ ಜಾತಿಯ ಹೂಗಳನ್ನು ಮನರಂಜನೆಗಾಗಿ, ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನ, ನಂದಾದೇವಿ ರಾಷ್ಟ್ರೀಯ ಉದ್ಯಾನ, ಗೋವಿಂದ್ ಮತ್ತು ಗಂಗೋತ್ರಿ ರಾಷ್ಟ್ರೀಯ ಉದ್ಯಾನವನಗಳು ನಿರ್ಮಾಣವಾಗಿವೆ.

ಕೃಷಿ: ಇಲ್ಲಿನ ಗ್ರಾಮೀಣ ಜನರು ಕೃಷಿ ವೃತ್ತಿಯನ್ನವಲಂಬಿಸಿದ್ದಾರೆ. ಡೂನ್ ಕಣಿವೆ, ನೈನಿತಾಲ್, ಉಧಾಂಸಿಂಗ್ ಮತ್ತು ಹರಿದ್ವಾರ ಜಿಲ್ಲೆಗಳು ಆಹಾರ ಧಾನ್ಯಗಳನ್ನು ಉತ್ಪಾದಿಸುತ್ತಿವೆ. ರಾಜ್ಯದ ಶೇ.11 ರಷ್ಟು ಭೂಭಾಗವು ಕೃಷಿಗೆ ಯೋಗ್ಯವಾಗಿದೆ. ಇಲ್ಲಿನ ವಾಯುಗುಣ ಪರಿಸ್ಥಿತಿ ಮತ್ತು ಮಣ್ಣಿಗೆ ಅನುಗುಣವಾಗಿ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯಲು ಹೆಚ್ಚು ಸೂಕ್ತ. ಸೇಬು, ಮಾವು, ನಿಂಬೆ, ಸೀಬೆಹಣ್ಣು, ಹಲಸು, ಚೆರ್ರಿ, ಬೆರಿಹಣ್ಣು, ದ್ರಾಕ್ಷಿ, ಕಿತ್ತಳೆ ಮುಂತಾದವುಗಳನ್ನು ಬೆಳೆಯಲಾಗುತ್ತಿದೆ.

ನೈಸರ್ಗಿಕ ಸಂಪನ್ಮೂಲಗಳು:– ರಾಜ್ಯದಲ್ಲಿ ಕಂಡು ಬರುವ ಖನಿಜ ಸಂಪನ್ಮೂಲಗಳನ್ನು ಹೊರತೆಗೆಯುವ ಕಾರ್ಯ ಈಗಿನ್ನು ಆರಂಭವಾಗಬೇಕಿದೆ. ಸಧ್ಯಕ್ಕೆ ಆದಿ ಚಿನ್ನದ ಗಣಿ ಖಾಸಗಿ ಲಿ., ಸಂಸ್ಥೆ ಖನಿಜಗಳನ್ನು ಹೊರ ತೆಗೆಯಬಲ್ಲ ಹಕ್ಕನ್ನು ಹೊಂದಿದೆ. ಇಲ್ಲಿ ಲಭ್ಯವಿರುವ ಖನಿಜಗಳ ನಿಕ್ಷೇಪದ ಪ್ರಮಾಣವು 1707 ದಶಲಕ್ಷ ಟನ್‌ಗಳೆಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಶೇ. 2.43 ತಾಮ್ರ, ಶೇ. 3.68 ಸೀಸ, ಶೇ. 5.65 ಸತು ಎಂದು ತಿಳಿದು ಬರುತ್ತದೆ. ಪ್ರತಿಟನ್ ಅದಿರಿನಲ್ಲಿ 150 ಗ್ರಾಂ. ಬೆಳ್ಳಿ ಮತ್ತು 0.5 ಗ್ರಾಂ ಚಿನ್ನದ ನಿಕ್ಷೇಪವಿದೆಯೆಂದು ಪ್ರಾಥಮಿಕ ಲೋಹಗಳ ಸಮೀಕ್ಷೆಯು ತಿಳಿಸಿದೆ.

ಮೇಲ್ಕಂಡ ಲೋಹಗಳಲ್ಲದೇ ಕೆಲವು ಅಲೋಹ ಖನಿಜ ಸಂಪನ್ಮೂಲಗಳು ಇಲ್ಲಿವೆ. ಉದಾ: ಸುಣ್ಣಕಲ್ಲು ಶಿಲಾಪಾಸ್ಪೇಟ್, ಡಾಲೋಮೈಟ್, ಮ್ಯಾಗ್ನಾಸೈಟ್, ಗ್ರಾಫೈಟ್, ಸೋಪ್‌ಸ್ಟೋನ್, ಜಿಪ್ಸಂ ಇತ್ಯಾದಿ. ರಾಜ್ಯದಲ್ಲಿ ಜಲ ಸಂಪನ್ಮೂಲವು ಅಧಿಕವಾಗಿರುವುದರಿಂದ 500 ಮೆವ್ಯಾ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಒಟ್ಟು 17 ಜಲ ವಿದ್ಯುತ್ ಉತ್ಪಾದನಾ ಸ್ಥಾವರಗಳಿವೆ.

ಕೈಗಾರಿಕೆಗಳು: ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು, ಖಾದಿ ಬಟ್ಟೆ ಸಿದ್ಧ ಉಡುಪು ತಯಾರಿಸುವ ಕೈಗಾರಿಕೆಗಳಿಗೆ, ರಾಜ್ಯ ಸರ್ಕಾರವು ಸೌಲಭ್ಯಗಳನ್ನು ಒದಗಿಸಿಕೊಡುತ್ತಿದೆ. ಪ್ರವಾಸೋದ್ಯಮವು ರಾಜ್ಯದ ಆರ್ಥಿಕತೆಯ ಮೂಲವಾಗಿದೆ. ಹೈನುಗಾರಿಕೆ, ತೋಟಗಾರಿಕೆ, ಪುಷ್ಪೋದ್ಯಮ, ಸಕ್ಕರೆ ಹಾಗೂ ಇತರೆ ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲಾಗಿದ್ದು, ರಾಜ್ಯ ಮಟ್ಟದ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು ಶೇ. 3 ರಷ್ಟು ಬಡ್ಡಿದರದಲ್ಲಿ 2 ಲಕ್ಷದವರೆಗೂ ಧನ ಸಹಾಯ ಮಾಡುತ್ತಿದೆ. ಈ ರಾಜ್ಯವು ಸಾಂಪ್ರದಾಯಿಕ ಕರಕುಶಲ ವಸ್ತುಗಳ ತಯಾರಿಕೆಗೆ ಖ್ಯಾತಿ ಪಡೆದಿವೆ. ಇದರ ಅಭಿವೃದ್ಧಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಹಸ್ತ ಶಿಲ್ಪ ವಿಕಾಸ ಯೋಜನೆಯ ಮೂಲಕ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೈಮಗ್ಗಗಳ ಪಾತ್ರ ಅಪಾರ. ಇಲ್ಲಿ ದೀನ ದಯಾಳ್ ಹಥ್‌ಕರ್ಘಾ ಪ್ರೋತ್ಸಾಹನ್ ಯೋಜನೆಯ ಮೂಲಕ ಕೈಮಗ್ಗ ಸಹಕಾರ ಸಂಘಗಳಿಗೆ ಉತ್ತೇಜನ ನೀಡಲಾಗುತ್ತಿದೆ. ರೇಷ್ಮೆ, ಉಣ್ಣೆ, ಗಿರಣಿ, ಕೃಷಿ ಮತ್ತು ಆಹಾರೋತ್ಪನ್ನ ಸಂಸ್ಕರಣೆ, ಗಿಡಮೂಲಿಕೆ, ಔಷಧಿ ತಯಾರಿಕೆ, ಚಹಾ ಸಂಸ್ಕರಣೆ ಮತ್ತು ಪ್ಯಾಕಿಂಗ್ ಕೈಗಾರಿಕೆಗಳು ಇಲ್ಲಿವೆ. ಅರಣ್ಯಾಧಾರಿತ ಕೈಗಾರಿಕೆಗಳು ಹೆಚ್ಚು. ಮರ ಮತ್ತು ದಿಮ್ಮಿಗಳನ್ನು ಅವಲಂಬಿಸಿದಂತೆ ಕೆಲವು ಕೈಗಾರಿಕೆಗಳಿದ್ದರೆ, ಬಿದಿರು, ರಿಂಗಸ್, ತೊಗಟೆ ಅಸಾಂಪ್ರದಾಯಿಕ ನಾರುಗಳು, ಬೆಂಕಿಪೊಟ್ಟಣ, ಕಾಗದ ಮತ್ತು ಕಾಗದದ ಉತ್ಪನ್ನಗಳು, ಪ್ಲೈವುಡ್, ಫ್ಲಶ್‌ಬೋರ್ಡ್‌ಗಳು, ಪೀಠೋಪಕರಣಗಳು, ಮರದ ಕಲಾ ಕೆತ್ತನೆ, ಆಟದ ವಸ್ತುಗಳು, ಗೊಂಬೆಗಳು ಮತ್ತು ಪೆನ್ಸಿಲ್‌ಗಳನ್ನು ತಯಾರಿಸುವ ಉದ್ಯಮಗಳು ಕೇಂದ್ರೀಕೃತಗೊಂಡಿವೆ.

ಸಾರಿಗೆ: ಸಂಪರ್ಕ: ರಾಜ್ಯದಲ್ಲಿ ರೈಲ್ವೆ ಸಂಪರ್ಕವಿದ್ದು, ಡೆಹರಾಡೂನ್, ಹರಿದ್ವಾರ, ಹೃಷಿಕೇಶ್, ಲಾಲ್‌ಕೌನಿ, ಕಥಾಗೊಡಂ ಮತ್ತು ತಾನಕ್ಪುರಗಳಲ್ಲಿ ರೈಲ್ವೆ ನಿಲ್ದಾಣಗಳಿವೆ. ರಸ್ತೆ ಸಂಪರ್ಕ ಅಭಿವೃದ್ಧಿ ಹೊಂದುತ್ತಿದೆ. ಇಲ್ಲಿನ ಉದಾಂಸಿಂಗ್ ಜಿಲ್ಲೆಯ ಸಂತನಗರ ಪಿತೋರ್‌ಗರ್ ಜಿಲ್ಲೆಯ ನೈನ್‌ಸೈನ್, ಡೆಹರಾಡೂನ್ ಜಿಲ್ಲೆಯ ಜಾಲಿಗ್ರಾಂಟ್‌ಗಳಲ್ಲಿ ವಿಮಾನ ನಿಲ್ದಾಣಗಳಿದ್ದು, ಚಮೋಲಿ ಜಿಲ್ಲೆಯ ಗೌಚಾರ್ ಮತ್ತು ಉತ್ತರ ಕಾಶಿ ಜಿಲ್ಲೆಯ ಚಿನ್ಯಾಲಿ ಸೌರ್ ಎಂಬಲ್ಲಿ ವಿಮಾನ ನಿಲ್ದಾಣಗಳು ನಿರ್ಮಾಣವಾಗುತ್ತಿವೆ.

ವಾಣಿಜ್ಯ: ಈ ರಾಜ್ಯದ ಆರ್ಥಿಕತೆ ಮೂಲಭೂತವಾಗಿ ಪ್ರವಾಸೋದ್ಯಮವನ್ನೇ ಅವಲಂಬಿಸಿದೆ. ಇಲ್ಲಿ ಹಲವಾರು ಪ್ರವಾಸಿ ತಾಣಗಳಿದ್ದು, ವಿದೇಶಿ ಯಾತ್ರಿಕರನ್ನು ಆಕರ್ಷಿಸುವುದರ ಜೊತೆಗೆ ಆ ಪ್ರದೇಶಗಳು ಪ್ರಮುಖ ವಾಣಿಜ್ಯ ಹಾಗೂ ಪ್ರವಾಸಿ ಕೇಂದ್ರಗಳಾಗಿರುವುದನ್ನು ಕಾಣಬಹುದು. ಉದಾ: ಹಲ್ದಾವಾನಿ, ರುದ್ರಾಪುರ, ತನಕ್ಪುರ, ಡೆಹರಾಡೂನ್, ಹರಿದ್ವಾರ, ಕೋಟ್‌ದ್ವಾರ್ ಮತ್ತು ಹೃಷಿಕೇಷ.

ಜನಸಂಖ್ಯೆ 84.79 ಲಕ್ಷ. ಇದರಲ್ಲಿ 43.16 ಲಕ್ಷ ಪುರುಷರು, 41.63 ಲಕ್ಷ ಮಹಿಳೆಯರು. ಈ ರಾಜ್ಯದಲ್ಲಿ 16,606 ಹಳ್ಳಿಗಳು, 34 ನಗರಗಳು ಮತ್ತು 84 ಪಟ್ಟಣಗಳಿವೆ. ಇಲ್ಲಿನ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 159 ಜನ. ಲಿಂಗಾನುಪಾತ 964. ಈ ರಾಜ್ಯದ ಜನಸಂಖ್ಯಾ ಬೆಳವಣಿಗೆಯ ದರ ಶೇ. 20.41.

ಸಾಕ್ಷರತೆ: ಸಾಕ್ಷರತೆಯಲ್ಲಿ ಉತ್ತರಾಂಚಲ ರಾಜ್ಯ ರಾಷ್ಟ್ರದಲ್ಲಿ 14 ನೆಯ ಸ್ಥಾನದಲ್ಲಿದೆ. ರಾಜ್ಯದ ಸಾಕ್ಷರತೆಯ ಪ್ರಮಾಣ ಶೇ. 72.28. ಪುರುಷರ ಸಾಕ್ಷರತಾ ಪ್ರಮಾಣ ಶೇ. 84.01 ಹಾಗೂ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. 60.26.

ಪ್ರಮುಖ ನಗರ ಮತ್ತು ಪಟ್ಟಣಗಳು:– ಈ ರಾಜ್ಯದಲ್ಲಿ ಕೆಲವು ಪ್ರವಾಸಿ ಕೇಂದ್ರಗಳು, ಧಾರ್ಮಿಕ ಕೇಂದ್ರಗಳು ಹಾಗೂ ಪ್ರಮುಖ ನಗರಗಳು ಇವೆ. ಇವುಗಳಲ್ಲಿ ಹಿಂದೂ ಯಾತ್ರಾಸ್ಥಳಗಳಾದ ಯಮುನೋತ್ರಿ, ಗಂಗೋತ್ರಿ, ಬದರೀನಾಥ್, ಕೇದಾರನಾಥ್, ಜೋಷಿಮಟ್, ಹೃಷಿಕೇಷ, ಹರಿದ್ವಾರ, ಸಿಖ್ಖರಿಗೆ ಪ್ರಮುಖವಾದ ಹೇಮಕುಂಡ್ ಸಾಹಿಬ್ ಮತ್ತು ನಾನಕ್‌ಮತ್ ಹೆಸರಾಂತ ಗಿರಿಧಾಮಗಳಾದ ಮುಸ್ಸೋರಿ, ನೈನಿತಾಲ್, ಆಲ್ಮೋರ, ಡೆಹರಾಡೂನ್, ಚಕ್ರತಾ, ರಾಣಿಕೇತ, ಬಾಗೇಶ್ವರ್, ಭೀಮ್‌ತಾಲ್, ಕೌಸಾನಿ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು. (ಎಚ್.ಎಚ್.)

**ಉತ್ಪಾದನಾಂಗಗಳು:** ಉತ್ಪಾದನೆಗೆ ಅಗತ್ಯವಾದ ಸಾಧನಗಳು (ಫ್ಯಾಕ್ಟರ್ಸ್ ಆಫ್ ಪ್ರೊಡಕ್ಷನ್). ಉತ್ಪಾದನಾಂಗಗಳನ್ನು ಗ್ರಾಸ ಅಥವಾ ಆದಾನವೆಂದೂ (ಇನ್‌ಪುಟ್) ಉತ್ಪಾದಿಸಿದ ಪದಾರ್ಥವನ್ನು ಉತ್ಪತ್ತಿ (ಔಟ್‌ಪುಟ್) ಎಂದೂ ಕರೆಯುವ ಪರಿಪಾಟವುಂಟು. ಉತ್ಪಾದನೆಗೆ ಸಹಾಯವಾಗುವಂಥದು ಏನೇ ಇರಲಿ, ಅದು ಉತ್ಪಾದನೆಯ ಅಂಗ ಎಂಬುದು ಬೆನ್‌ಹ್ಯಾಮನ ಮಾತು. ಉತ್ಪಾದನೆಯ ಅಂಗಗಳನ್ನು ಸಾಮಾನ್ಯವಾಗಿ ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ. ಅವೆಂದರೆ 1. ಭೂಮಿ, 2. ಶ್ರಮ, 3. ಬಂಡವಾಳ, 4. ಸಂಘಟನೆ.

ಭೂಮಿ: ಭೂಮಿಯೆಂಬ ಪದಕ್ಕೆ ವಿಶಿಷ್ಟವಾದ ಅರ್ಥವುಂಟು. ಇದು ಕೇವಲ ನೆಲವಲ್ಲ, ಮಣ್ಣಲ್ಲ. ನೆಲ ಜಲ ವಾಯು ಬೆಳಕು ಬೆಂಕಿಗಳ ರೂಪದಲ್ಲಿ ಪ್ರಕೃತಿ ಮಾನವನಿಗೆ ನೀಡುವ ವಸ್ತು ಶಕ್ತಿಗಳಿಗೆಲ್ಲ ಭೂಮಿ ಸಂಕೇತವೆಂಬುದು ಮಾರ್ಷಲನ ಮಾತು. ಮಾನವ ಏನು ಮಾಡಬೇಕಾದರೂ ನೆಲದ ಮೇಲ್ಮೈಯೇ ಅವನಿಗೆ ಮೂಲಾಧಾರ. ಆತನ ಕೃತಿಗಳಿಗೆಲ್ಲ ಅದು ಅನುವು ಮಾಡಿಕೊಡುತ್ತದೆ. ಮನುಷ್ಯನ ನಾಗರಿಕತೆಯ ನಾನಾ ಹಂತಗಳಲ್ಲಿ, ಮನುಷ್ಯ ಬೇಟೆಯ ಜೀವನ ನಡೆಸುತ್ತಿದ್ದಾಗ ಪ್ರಾಣಿ ಸಂಪತ್ತನ್ನೂ, ಪಶು ಪಾಲಕನಾಗಿದ್ದಾಗ ಹುಲ್ಲುಗಾವಲನ್ನೂ, ಬೇಸಾಯಕ್ಕೆ ಫಲವತ್ತಾದ ನೆಲವನ್ನೂ, ಇನ್ನೂ ಹೆಚ್ಚು ಮುಂದುವರಿದಾಗ ಕೈಗಾರಿಕೆಗೆ ಕಚ್ಚಾ ಸಾಮಗ್ರಿಯನ್ನೂ ಸರ್ವಕಾಲದಲ್ಲೂ ನೆಲೆಯನ್ನೂ ಒದಗಿಸಿಕೊಟ್ಟಿರುವುದು ಭೂಮಿಯೇ. ಮಾನವ ಬಳಸುವ ಎಲ್ಲ ಪದಾರ್ಥಗಳ ಮೂಲವೂ ಇದೇ.

ಈ ಭೂಮಿ ಎನ್ನುವುದು ಮಾನವನಿಗೆ ಪ್ರಕೃತಿ ನೀಡಿರುವ ಕಾಣಿಕೆ. ಒಮ್ಮೆ ಅನುಪಯುಕ್ತವಾಗಿದ್ದ ಪ್ರದೇಶಗಳನ್ನು ಮಾನವನಿಂದು ಪರಿವರ್ತಿಸಿಕೊಂಡಿದ್ದಾನೆ, ನಿಜ. ಆದರೂ ಪ್ರಕೃತಿಯಿಂದ ಮಾನವನಿಗೆ ಸಂದಿರುವ ಕೊಡುಗೆಯೊಂದಿಗೆ ಹೋಲಿಸಿದಲ್ಲಿ ಮಾನವ ಅದಕ್ಕೆ ಪ್ರತಿಯಾಗಿ ಮಾಡಿರುವುದು ಅತ್ಯಲ್ಪವೆಂಬುದು ನಿರ್ವಿವಾದ.

ಭೂಮಿಗೆ ಕೆಲವು ವಿಶಿಷ್ಟ ಲಕ್ಷಣಗಳುಂಟು : ಭೂಮಿಯ ಪರಿಮಾಣ ಮಿತವಾದುದ್ದು. ಇದರ ಸರಬರಾಜನ್ನು ಮನುಷ್ಯ ತನಗಿಷ್ಟ ಬಂದಂತೆ ಹಿಗ್ಗಿಸುವುದಾಗಲಿ ಕುಗ್ಗಿಸುವುದಾಗಲಿ ಸಾಧ್ಯವಿಲ್ಲ. ಭೂಮಿಗೆ ಸರಬರಾಜು ಬೆಲೆಯಿಲ್ಲವೆಂದು ಹೇಳಲಾಗಿದೆ. ಹೆಚ್ಚು ಬೆಲೆಗೆ ತಕ್ಕಂತೆ ಅದರ ಸರಬರಾಜನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಬೆಲೆ ಇಳಿದಾಗ ಅದರ ಪ್ರಮಾಣ ತಗ್ಗುವುದಿಲ್ಲ. ನೆಲದ ಪರಿಮಾಣ ಸ್ಥಿರವಾದ್ದರಿಂದ ಜನಸಂಖ್ಯೆ ಹೆಚ್ಚಿದಂತೆ ಅದಕ್ಕೆ ಅಭಾವ ಗೇಣಿ ಉದಿಸುತ್ತದೆ. ಭೂಮಿ ಸ್ಥಿರವಾದದ್ದು. ಬಾಂಬು ದಾಳಿಯಿಂದ

ನೆಲದ ಉತ್ಪಾದಕತೆ ತಾತ್ಕಾಲಿಕವಾಗಿ ನಾಶವಾದರೂ ಅದನ್ನು ಪುನಃ ನೆಲೆಗೊಳಿಸುವುದು ಸಾಧ್ಯ. ರಿಕಾರ್ಡೋ ಮಾತಿನಲ್ಲಿ ಭೂಮಿಯ ಗುಣಧರ್ಮಗಳು ಮೂಲಭೂತ, ಅವಿನಾಶಿ. ಭೂಮಿ ಅಚಲ. ಭೌಗೋಳಿಕವಾಗಿ ಅದನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವುದು ಅಸಾಧ್ಯ. ಸ್ಥಳದಿಂದ ಸ್ಥಳಕ್ಕೆ ಭೂಮಿಯ ಗೇಣಿ ಬದಲಾಗುವುದಕ್ಕೆ ಅದರ ಈ ಗುಣವೇ ಕಾರಣ. ಭೂಮಿಯ ಫಲವತ್ತು ತಾಕಿನಿಂದ ತಾಕಿಗೆ ವ್ಯತ್ಯಾಸವಾಗುತ್ತದೆ. ಒಂದೇ ತೆರನಾದ ಎರಡು ತುಣುಕು ಭೂಮಿ ಇರುವುದು ಅಸಾಧ್ಯ. ಅಂಚಿನ ಬೇಸಾಯದ ಭಾವನೆ ಬೆಳೆದಿರುವುದು ಈ ಕಾರಣದಿಂದ.

ಶ್ರಮ : ಶ್ರಮದ ಅರ್ಥ ಹೆಚ್ಚು ವಿಶಿಷ್ಟ. ಆರೋಗ್ಯಪಾಲನೆಗಾಗಿ ಮಾಡುವ ವ್ಯಾಯಾಮ, ತಾಯಿಯಿಂದ ಶಿಶುಪೋಷಣೆ, ತಂದೆ ಮಗನಿಗೆ ಹೇಳಿಕೊಡುವ ಪಾಠ, ಮನೆಯ ಮುಂದಿನ ತೋಟದಲ್ಲಿ ನಾವು ಮಾಡುವ ಕೆಲಸ–ಇವೆಲ್ಲ ಸಾಮಾನ್ಯ ಅರ್ಥದಲ್ಲಿ ಶ್ರಮವೇ. ಆದರೆ ಆರ್ಥಿಕ ಭೂಗೋಳ ವಿಜ್ಞಾನದ ದೃಷ್ಟಿಯಲ್ಲಿ ಇವೆಲ್ಲ ಶ್ರಮವಲ್ಲ. ಏಕೆಂದರೆ ಇವೆಲ್ಲವೂ ಸ್ವಸಂತೋಷಕ್ಕಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ಮಾಡಿದ್ದು.

ದುಡಿಮೆಯಿಂದ ದೊರಕುವ ಸಂತೋಷಕ್ಕಿಂತಲೂ ಬೇರೆಯಾದ ಫಲವನ್ನೇ ಕ್ವಚಿತ್ತಾಗಿಯೋ ಪ್ರಧಾನವಾಗಿಯೋ ನಿರೀಕ್ಷಿಸಿ ವಿನಿಯೋಗಿಸಿದ ದೈಹಿಕ ಮಾನಸಿಕ ಪ್ರಯಾಸವೆಲ್ಲ ದುಡಿಮೆ–ಎಂಬುದು ಮಾರ್ಷಲನ ವ್ಯಾಖ್ಯೆ. ಈ ಅರ್ಥದಲ್ಲಿ ಶ್ರಮಿಕ ಕೂಲಿಕಾರನಿರಲಿ, ಕೃಷಿಕನಿರಲಿ, ಶಿಕ್ಷಕನಿರಲಿ, ಗುಮಾಸ್ತನಿರಲಿ, ಪೋಲೀಸನಾಗಿರಲಿ, ವೈದ್ಯನಿರಲಿ, ತಂತ್ರಜ್ಞನಾಗಿರಲಿ ಇವರೆಲ್ಲರೂ ಪ್ರತಿಫಲಾಪೇಕ್ಷೆಯಿಂದ ತಮ್ಮ ಕಾರ್ಯ ಮಾಡಿದರೆ ಆ ಕಾರ್ಯ ಶ್ರಮವೆನಿಸಿಕೊಳ್ಳುತ್ತದೆ. ಒಂದು ಕಡೆ ಇವರು ಉತ್ಪಾದಕರಾದರೆ ಇನ್ನೊಂದು ಕಡೆ ಇವರೇ ಅನುಭೋಗಿಗಳು.

ಬಂಡವಾಳ : ಉತ್ಪಾದನೆಯ ಮೂರನೆಯ ಅಂಗವಾದ ಬಂಡವಾಳ ಮೂಲಭೂತವಾಗಿ ಇದ್ದದ್ದಲ್ಲ. ಪ್ರಕೃತಿಯ (ಭೂಮಿ) ಶ್ರಮದ ಪ್ರಯೋಗದ ಫಲವಾಗಿ ಲಭಿಸಿದ ಉತ್ಪನ್ನವನ್ನು ಅನುಭೋಗಿಸದೆ ಅಷ್ಟನ್ನೂ ಅಥವಾ ಅದರ ಒಂದು ಭಾಗವನ್ನು, ಉತ್ಪಾದನೆಯ ಕಾರ್ಯದಲ್ಲಿ ವಿನಿಯೋಗಿಸಿದ್ದೇ ಬಂಡವಾಳ. ಸಾಮಾನ್ಯವಾಗಿ ಬಂಡವಾಳವೆಂದರೆ ಉದ್ಯಮದಲ್ಲಿ ಹೂಡಿದ ಹಣವೆಂಬ ಭಾವನೆಯಿದ್ದರೂ ಹಣವೇ ಬಂಡವಾಳವಲ್ಲ. ಇದರಿಂದ ಕೊಂಡ ಯಂತ್ರ, ಸ್ಥಾವರ, ಉಪಕರಣ, ಕಚ್ಚಾ ಸಾಮಗ್ರಿ ಮುಂತಾದ ಎಲ್ಲವೂ ಬಂಡವಾಳ. ಬಂಡವಾಳವೆಂದರೆ ಉತ್ಪಾದನೆಗಾಗಿ ಉತ್ಪಾದಿಸಿದ ಸಾಧನ ಎಂಬುದು ಬಂಬಾವರ್ಕನ ವ್ಯಾಖ್ಯೆ. ಭೂಮಿ ನಿಸರ್ಗನಿಮಿತ್ತ; ಬಂಡವಾಳ ಮಾನವೋತ್ಪಾದಿತ ಉತ್ಪಾದೀ ಸಾಧನ.

ಸಂಘಟನೆ : ಉತ್ಪಾದನೆಯ ಅಂಗಗಳಾದ ಭೂಮಿ, ಶ್ರಮ ಹಾಗೂ ಬಂಡವಾಳಗಳ ಜೊತೆಗೆ ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಸೇರಿಕೊಂಡ ಇನ್ನೊಂದು ಅಂಗವೇ ಸಂಘಟನೆ. ಸಂಘಟನೆಯೂ ಉತ್ಪಾದನೆಯ ಅಂಗವಾಗುವಷ್ಟು ಪ್ರಮುಖ್ಯವುಳ್ಳದ್ದು. ಭೂಮಿ, ಶ್ರಮ ಹಾಗೂ ಬಂಡವಾಳಗಳು ತಮ್ಮಕ್ಕಷ್ಟೇ ತಾವೇ ಏನನ್ನೂ ಉತ್ಪಾದಿಸಲಾರವು. ಅವುಗಳನ್ನು ಸಂಘಟಿಸಿ ಉತ್ಪಾದನೆಗೆ ಸಹಾಯಕವಾಗುವ ರೀತಿಯಲ್ಲಿ ಚಾಲನೆಗೊಳಿಸುವುದೇ ಉದ್ಯಮಿಯ ಮುಖ್ಯ ಕರ್ತವ್ಯ.

ಉತ್ಪಾದನೆಯ ಕ್ಷೇತ್ರದಲ್ಲಿ ಉದ್ಯಮಿಯ ವಿಶಿಷ್ಟ ಸ್ಥಾನವನ್ನು ಕುರಿತು ಮಾರ್ಷಲ್ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಇಂದು ಬಹುತೇಕ ಭೂ ಅರ್ಥಶಾಸ್ತ್ರಜ್ಞರು ಒಪ್ಪಿದ್ದಾರಾದರೂ ಕೆಲವರು ಆ ರೀತಿ ಭಾವಿಸುವುದಿಲ್ಲ. ಸಂಘಟನೆಯೂ ಒಂದು ವಿಶಿಷ್ಟ ರೀತಿಯ ಶ್ರಮವೇ ಎಂಬುದು ಇವರ ಮತ. ಇವರಲ್ಲಿ ಕೆಲವರ ದೃಷ್ಟಿಯಲ್ಲಿ ಉತ್ಪಾದನೆಯ ಅಂಗಗಳು ಕೇವಲ ಎರಡು ಬಗೆ : ಒಂದು ಮಾನವೀಯ (ಶ್ರಮ, ಸಂಘಟನೆ); ಇನ್ನೊಂದು ಮಾನವೇತರ (ಭೂಮಿ, ಬಂಡವಾಳ). ಆದರೆ ಈ ಕುರಿತ ಸ್ಪಷ್ಟ ವಿಚಾರದೃಷ್ಟಿಯಿಂದ ಇವನ್ನು ನಿಷ್ಪಷ್ಟವಾಗಿ ವಿಭಜಿಸುವುದು ಅವಶ್ಯ. ಭೂಮಿಗೂ ಬಂಡವಾಳಕ್ಕೂ ವ್ಯತ್ಯಾಸವಿರುವಂತೆಯೇ ಶ್ರಮಕ್ಕೂ ಸಂಘಟನೆಗೂ ವ್ಯತ್ಯಾಸವಿದ್ದೇ ಇದೆಯೆಂಬುದು ನಿರ್ವಿವಾದ. ಆದರೆ ಈ ಅಂಗಗಳ ಕೂಡುಗೆರೆಗಳ ಬಳಿ ಒಂದನ್ನಿನ್ನೊಂದರಿಂದ ಪ್ರತ್ಯೇಕಿಸಿ ತೋರಿಸುವುದೂ ಕಷ್ಟವೆಂಬುದು ನಿಜವೇ. ಕಾರ್ಮಿಕನನ್ನೂ ಉದ್ಯಮಿಯನ್ನೂ ಪ್ರತ್ಯೇಕವಾಗಿ ಪರಿಗಣಿಸುವುದು ಅನುಚಿತವೆಂದು ವಾದಿಸುವವರು ಇವರಿಬ್ಬರ ಕ್ರಿಯೆಗಳಿಗೂ ಇರುವ ಮೂಲಲಕ್ಷಣಗಳ ಕಡೆಗೆ ಬೆರಳು ತೋರಿಸುತ್ತಾರೆ. ಈ ಎಲ್ಲ ಬಗೆಯ ಮಾನವೀಯ ಶ್ರಮದ ಹಿಂದೆಯೂ ಸಂಘಟನೆ ಇದ್ದೇ ಇದೆಯೆಂಬುದು ಅವರ ವಾದ. ಉದ್ಯಮಿಯ ಕಾರ್ಯದಲ್ಲಿ ಇದರ ಭಾಗ ಹೆಚ್ಚಿರಬಹುದು, ಅಷ್ಟೇ. ಶ್ರಮ, ಸಂಘಟನೆಗಳೆರಡೂ ಪ್ರತ್ಯೇಕಾಂಗಗಳೆಂದು ವಾದಿಸುವವರು ಈ ಅಂಶವನ್ನೇ ಪ್ರಧಾನವಾಗಿ ಪರಿಗಣಿಸುತ್ತಾರೆ. ಕಾರ್ಮಿಕನ ವಿಚಾರದಲ್ಲಿ ಶ್ರಮದ ಭಾಗ ಹೆಚ್ಚು; ಸಂಘಟನೆಯ ಭಾಗ ಇಲ್ಲವೆನ್ನುವಷ್ಟು ಅಲ್ಪ. ಉದ್ಯಮಿಯ ಕಾರ್ಯದಲ್ಲಿ ಸಂಘಟನೆಯ ಅಂಶವೇ ಅಧಿಕ. ಅದೇ ಎಲ್ಲವೂ ಎಂದರೂ ಸಂದೀತು. ಕಾರ್ಮಿಕ ತನ್ನ ದುಡಿಮೆಯನ್ನಷ್ಟೇ ಸಂಘಟಿಸುತ್ತಾನೆ. ಉದ್ಯಮಿ ಇತರರ ಕೆಲಸವನ್ನು ಸಂಘಟಿಸುತ್ತಾನೆ. ಉದ್ಯಮದ ಬಗ್ಗೆ ಎಲ್ಲ ಹೊಣೆಗಾರಿಕೆಯೂ ಆತನದು; ತೀರ್ಮಾನ ಕೈಕೊಳ್ಳುವವನೂ ಅದನ್ನು ಕಾರ್ಯರೂಪಕ್ಕೆ ತರುವವನೂ ಆತನೇ. ಉದ್ಯಮಿಯ ದೃಷ್ಟಿಯಲ್ಲಿ ಉಳಿದ ಮೂರು ಅಂಗಗಳೂ ಅವನ ವಶದಲ್ಲಿರುವ ಉತ್ಪಾದನ ಸಾಧನಗಳು. ಆತ ಸ್ವಲ್ಪಮಟ್ಟಿಗೆ ಅವುಗಳಲ್ಲಿ ಒಂದನ್ನು ಇನ್ನೊಂದರ ಬದಲು ಬಳಸಬಲ್ಲ. ಆದರೆ ಈ ಮೂರು ಅಂಗಗಳಲ್ಲಿ ಯಾವುದನ್ನೂ ಉದ್ಯಮಿಯ ಬದಲು ಬಳಸಲಾಗುವುದಿಲ್ಲ.

ಭೂಮಿ, ಶ್ರಮ ಹಾಗೂ ಬಂಡವಾಳಗಳನ್ನು ನಿರ್ದಿಷ್ಟ ಹಾಗೂ ಅನಿರ್ದಿಷ್ಟ ಅಂಗಗಳೆಂದೂ ವಿಂಗಡಿಸಬಹುದು. ಇವುಗಳ ಪರಸ್ಪರ ಸಾಮ್ಯದ ಪ್ರಾಮುಖ್ಯವನ್ನು ಈ ವಿಧಾನ ಒತ್ತಿ ಹೇಳುತ್ತದೆ. ಅಲ್ಲದೆ ಸಂಘಟನೆ ಇದರಿಂದ ಭಿನ್ನವಾದದ್ದು. ಒಂದೇ ಬಗೆಯಲ್ಲಿ ನಿಯೋಜಿಸಬಹುದಾದ ಅಂಗಗಳು ನಿರ್ದಿಷ್ಟ ಅಂಗಗಳು; ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಬದಲಾಯಿಸಬಹುದಾದವು ಅನಿರ್ದಿಷ್ಟವೆನಿಸಿಕೊಳ್ಳುತ್ತವೆ. ಒಂದು ಬಗೆಯ ಬಂಡವಾಳದ ಬದಲು ಒಂದು ಬಗೆಯ ಶ್ರಮವನ್ನು ಬಳಸುವುದು ಸಾಧ್ಯ. ಆದರೆ ಒಂದು ಬಗೆಯ ಶ್ರಮದ ಬದಲು ಇನ್ನೊಂದು ಬಗೆಯ ಶ್ರಮವನ್ನಾಗಲಿ, ಒಂದು ಬಗೆಯ ಬಂಡವಾಳದ ಬದಲು ಇನ್ನೊಂದು ಬಗೆಯ ಬಂಡವಾಳವನ್ನಾಗಲಿ ಬಳಸುವುದು ಸಾಧ್ಯವಾಗಲಾರದು. ಇಂಥ ಪ್ರತಿ ವಿಧಾನದ ಬಗ್ಗೆ ತೀರ್ಮಾನ ಕೈಕೊಳ್ಳುವುದು ಉದ್ಯಮಿಯ ಕೆಲಸ. (ಕೆ.ಆರ್.ಎಂ.)

**ಉದಕಮಂಡಲ:** ತಮಿಳುನಾಡಿನಲ್ಲಿರುವ ಒಂದು ಗಿರಿಧಾಮ. ನೀಲಗಿರಿ ಜಿಲ್ಲೆಯ ಮುಖ್ಯ ಕೇಂದ್ರ. ಹಿಂದೆ ಇದು ಮದರಾಸು ಸರ್ಕಾರದ ಬೇಸಗೆ ರಾಜಧಾನಿಯಾಗಿತ್ತು. ಊಟಿ ಎಂಬುದು ಇದರ ಇನ್ನೊಂದು ಹೆಸರು. ಮೈಸೂರಿನಿಂದ ದಕ್ಷಿಣಕ್ಕೆ 150 ಕಿಮೀ ದೂರದಲ್ಲಿ, ಸಮುದ್ರಮಟ್ಟದಿಂದ 2300ಮೀ ಎತ್ತರದಲ್ಲಿದೆ. 2880 ಮೀ ಎತ್ತರವಿರುವ ದೊಡ್ಡ ಬೆಟ್ಟದ ಎರಡು ಅಂಚುಗಳ ನಡುವೆ ಇರುವ ಈ ಊರಿನ ವಾರ್ಷಿಕ ಸರಾಸರಿ ಉಷ್ಣತೆ $10^0$ಸೆ. ವರ್ಷದಲ್ಲಿ ಬಹುಕಾಲ ಇಲ್ಲಿ ದಿನದ ಉಷ್ಣತೆ $15^0$–$20^0$ ಸೆ. ಒಳಗಿರುತ್ತದೆ. ದೇಶ ವಿದೇಶಗಳ ಪ್ರವಾಸಿಗರನ್ನು ವಿಶೇಷತಃ ಆಕರ್ಷಿಸಿರುವ ಈ ಊರು ಗಿರಿಧಾಮಗಳ ರಾಣಿಯೆಂದು ಪ್ರಸಿದ್ಧ. ವಿಶಾಲ ಬೀದಿಗಳಿಂದಲೂ ಗಿಡ ಮರಗಳಿಂದಲೂ ಕೂಡಿದ ಈ ಊರೇ ಒಂದು ದೊಡ್ಡ ಉದ್ಯಾನವನದಂತಿದೆ. ಜನಸಂಖ್ಯೆ: 93,921.

ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ಕಟ್ಟಿದ ಕೆಲವು ಕಟ್ಟಡಗಳ ಪೈಕಿ ಸೇಂಟ್ ಥಾಮಸ್ ಚರ್ಚು, ಸೇಂಟ್ ಸ್ಟೀಫನ್ ಚರ್ಚು ಮತ್ತು ಸ್ಟೋನ್ ಹೌಸ್ ಇವು ಮುಖ್ಯ.

ಇಲ್ಲಿರುವ ಮುಕೆರ್ತಿ ಅಣೆಕಟ್ಟು, ಪೈಕಾರ ಜಲವಿದ್ಯುತ್ ಕೇಂದ್ರ, ಬೈರನ್‌ಬೆಟ್ಟ ಮತ್ತು ಬಟಾನಿಕಲ್ ಗಾರ್ಡನ್‌ಗಳೇ ಅಲ್ಲದೆ ಕಾಫಿ ಮತ್ತು ಚಹ ತೋಟಗಳೂ ಬ್ರಿಟಿಷರು ನಿರ್ಮಿಸಿದ (1823–25) 3 ಕಿಮೀ ಉದ್ದದ ಸರೋವರವೂ ಇಲ್ಲಿಗೆ ಸಮೀಪದಲ್ಲೇ ಇರುವ ಕಲ್ಲಟ್ಟಿ ಜಲಪಾತವೂ ಅಸಂಖ್ಯಾತ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಇಲ್ಲಿ ಒಂದು ಸರ್ಕಾರಿ ಕಾಲೇಜೂ ಕ್ವಿನೈನ್ ಕಾರ್ಖಾನೆಯೂ ಫೋಟೋ ಫಿಲಂ ತಯಾರಿಕಾ ಉದ್ಯಮವೂ ಇದೆ.

ನೀಲಗಿರಿ ಬೆಟ್ಟಗಳ ಆದಿವಾಸಿಗಳು ತೋಡರು. ಇವರು ಇಂದಿಗೂ ತಮ್ಮ ಆ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಕೂನೂರು, ಕೆಟ್ಟಿ, ಕೊತ್ತಗಿರಿ ಮತ್ತು ವೆಲ್ಲಿಂಗ್ಟನ್‌ಗಳು ಊಟಿಯ ಸಮೀಪದಲ್ಲಿರುವ ಇತರ ಗಿರಿಧಾಮಗಳು. *

**ಉದಯಪುರ:** ರಾಜಸ್ತಾನ ರಾಜ್ಯದ ಒಂದು ಜಿಲ್ಲೆ ಮತ್ತು ಜಿಲ್ಲಾ ಆಡಳಿತ ಕೇಂದ್ರ ನಗರ. ಜಿಲ್ಲೆಯ ಮುಖ್ಯ ಸ್ಥಳ. ಉ. ಅ. $23^0 46'$–$25^0 56'$ ಹಾಗೂ ಪೂ. ರೇ. $72^0 50'$–$75^0 38'$ ನಡುವೆ, ಜಯಪುರದ ನೈರುತ್ಯಕ್ಕೆ 340 ಕಿಮೀ. ದೂರದಲ್ಲಿ, ಅರಾವಳಿ ಶ್ರೇಣಿಯ ಬೆಟ್ಟವೊಂದರ ಮೇಲೆ ಸಮುದ್ರ ಮಟ್ಟದಿಂದ 750 ಮೀ ಎತ್ತರದಲ್ಲಿದೆ. ಸು. 1570ರಲ್ಲಿ ಈ ನಗರಸ್ಥಾಪನೆ ಮಾಡಿದ ಮಹಾರಾಣಾ ಉದಯಸಿಂಹನಿಂದ ಇದಕ್ಕೆ ಈ ಹೆಸರು ಬಂದಿದೆ. ಪಿಚೋಡಾ ಸರೋವರದ ಪೂರ್ವದಂಡೆಯ ಮೇಲೆ ಆತ ಈ ನಗರವನ್ನು ಸ್ಥಾಪಿಸಿ ಸುತ್ತ ಭದ್ರವಾದ 33ಮೀ ಎತ್ತರದ ಕೋಟೆ ಕಟ್ಟಿಸಿದ. ಇಲ್ಲಿರುವ ಅರಮನೆ ಇಡೀ ರಾಜಸ್ಥಾನದಲ್ಲೇ ಅತ್ಯಂತ ದೊಡ್ಡದು. ಪಿಚೋಡಾ ಸರೋವರದಲ್ಲಿನ ಎರಡು ದ್ವೀಪಗಳೂ ಅವುಗಳ ಮೇಲೆ ಅಮೃತಶಿಲೆಯಿಂದ ನಿರ್ಮಿತವಾದ ಜಗಮಂದಿರ ಮತ್ತು ಜಗನಿವಾಸ ಅರಮನೆಗಳೂ ಇತಿಹಾಸ ಪ್ರಸಿದ್ಧ.

ಉದಯಪುರದ ಸುತ್ತಮುತ್ತ ಪಿಚೋಡಾದಂತೆ ಅನೇಕ ಕೃತಕ ಸರೋವರಗಳಿವೆ.ಭೂದೃಶ್ಯ ಉಪವನಯೋಜನೆಯ (ಲ್ಯಾಂಡ್‌ಸ್ಕೇಪ್ ಗಾರ್ಡನಿಂಗ್) ಭಾರತೀಯ ಪದ್ಧತಿಗೆ ಇಲ್ಲಿರುವ ಉದ್ಯಾನವೊಂದು ಉತ್ತಮ ಉದಾಹರಣೆ.

ಹಿಂದಿನ ಶತಮಾನಗಳ ಸ್ತಬ್ಧಚಿತ್ರಗಳನ್ನು ಕಾಣಬಯಸಿ ಇಲ್ಲಿಗೆ ಬರುವ ಪ್ರವಾಸಿಗರಿಗೆ ಇಲ್ಲಿ ಇನ್ನೂ ಅನೇಕ ಬಗೆಯ ಆಕರ್ಷಣೆಗಳುಂಟು. ಉದಯಪುರದ ಪೂರ್ವಕ್ಕೆ 4 ಕಿಮೀ ದೂರದಲ್ಲಿ ಪುರಾತನ ನಗರವೊಂದರ ಪಳೆಯುಳಿಕೆಗಳಿವೆ. ಅಮೃತಶಿಲೆಯ ನೆಲಗಟ್ಟು ಹಾಲ್ಗಲ್ಲಿನ ಮೆಟ್ಟಿಲು, ಹೊಳೆಯುವ ಬಿಳಿಶಿಲೆಯಲ್ಲಿ ಕೆತ್ತಿ ನಿಲ್ಲಿಸಿದ ಚಿತ್ತಾರದ ಮಂಟಪಗಳಿಂದ ಇದೊಂದು ಸುಂದರ ತಾಣವಾಗಿದೆ. ಇಲ್ಲಿರುವ ಶಾಸನ ಭಾರತದಲ್ಲೇ ಅತ್ಯಂತ ದೊಡ್ಡದೆಂದು ಹೇಳಲಾಗಿದೆ. ಇಪ್ಪತ್ತೈದು ಚಪ್ಪಡಿಗಳ ಮೇಲೆ ಹರಿದಿರುವ ಈ ಶಾಸನಕ್ಕೆ ಮೇವಾಡದ ಇತಿಹಾಸವೇ ವಸ್ತು.

ಉದಯಪುರ ಜಿಲ್ಲೆಯ ವಿಸ್ತೀರ್ಣ 17,643 ಚ.ಕಿಮೀ. ಜನಸಂಖ್ಯೆ 26,32,210. ಈ ಜಿಲ್ಲೆಯ ಹೆಚ್ಚು ಭಾಗ ಬೆಟ್ಟಮಯ. ದಕ್ಷಿಣ ಭಾಗ ಕಪ್ಪು ಮಣ್ಣಿನಿಂದ ಕೂಡಿದೆ. ಆಗ್ನೇಯ–ನೈಋತ್ಯವಾಗಿ ಹಾಯುವ ಆರಾವಳಿ ಶಾಖೆಯೊಂದರಲ್ಲಿ ಅಭ್ರಕ, ಸೀಸ, ತವರ, ಮೇದಶಿಲೆ (ಸ್ಟೀಯಟೈಟ್) ಮತ್ತು ಕಲ್ನಾರು ಇವೆ. ಮರಳು ಕಲ್ಲು, ಸುಣ್ಣಕಲ್ಲು ಮತ್ತು ಅಮೃತಶಿಲೆಗಳಿಗೂ ಕೊರತೆಯಿಲ್ಲ.

ಉದಯಪುರ ಜಿಲ್ಲೆ ದಕ್ಷಿಣೋತ್ತರವಾಗಿ ಇಳಿಜಾರು. ಬನಾಸ್ ನದಿಯೂ ಅದನ್ನು ಕೂಡುವ ಅನೇಕ ತೊರೆಗಳೂ ಅರಾವಳಿಯಲ್ಲಿ ಹುಟ್ಟಿ ಹರಿಯುತ್ತವೆ. ಉದಯಪುರ ನಗರ ಜನಸಂಖ್ಯೆ: 3,89,317. (ಟಿ.ಆರ್.ಪಿ.;ಬಿ.ಕೆ.ಜಿ.)

**ಉದ್ದನೆಯ ಆಕಾರದ (ನೀಳಾಕಾರದ) ರಾಷ್ಟ್ರ:** ಈ ಆಕಾರದ ರಾಷ್ಟ್ರಗಳು ಈ ರಾಷ್ಟ್ರದ ಸರಾಸರಿ ಅಗಲದ ಕನಿಷ್ಠ 6 ಪಟ್ಟು ಉದ್ದವಾಗಿರುತ್ತವೆ. ಈ ಆಕಾರ ಸಾಮಾನ್ಯವಾಗಿ ಸುತ್ತಲಿನ ಭೌತಿಕ ಅಡೆತಡೆಗಳಿಂದ ಉಂಟಾಗಿರುತ್ತವೆ. ಚಿಲಿ ರಾಷ್ಟ್ರವು ಈ ಆಕಾರದ ರಾಷ್ಟ್ರಕ್ಕೆ ಉತ್ತಮ ಉದಾಹರಣೆಯಾಗಿದೆ. ಏಕೆಂದರೆ, ಈ ರಾಷ್ಟ್ರ ಫೆಸಿಫಿಕ್ ಸಾಗರ ಮತ್ತು ಆಂಡೀಸ್ ಪರ್ವತಗಳ ಮಧ್ಯೆ ರೂಪುಗೊಂಡಿದೆ. ಅದೇ ರೀತಿ ಪಾಕಿಸ್ತಾನ ಹಿಂದುಕುಷ್ ಪರ್ವತ ಮತ್ತು ಥಾರ್ ಮರಭೂಮಿಗಳ ಮಧ್ಯೆ, ಇಟಲಿ ಏಡ್ರಿಯಾಟಿಕ್ ಮತ್ತು ಟೆರ್ಹಿನಿಯನ್ ಸಮುದ್ರಗಳ ಮಧ್ಯೆ ರೂಪುಗೊಂಡಿದೆ. ಸಾಮಾನ್ಯವಾಗಿ ಈ ಉದ್ದನಾಕಾರದ ರಾಷ್ಟ್ರಗಳು ಹೆಚ್ಚಿನ ಸಾಮಾಜಿಕ ಗುಂಪುಗಳನ್ನು ಹೊಂದಿರುತ್ತವೆ. ಈ ಆಕಾರದ ರಾಷ್ಟ್ರಗಳಲ್ಲಿ ಸಾರಿಗೆ ಸಂಪರ್ಕಕ್ಕೆ ಮತ್ತು ಆಡಳಿತಕ್ಕೆ ಅನೇಕ ತೊಂದರೆಗಳು ಉದ್ಭವಿಸುತ್ತವೆ. ಅಲ್ಲದೇ ಉದ್ದವಾದ ರಾಷ್ಟ್ರದ ಗಡಿ ಇರುವುದರಿಂದ ರಕ್ಷಣಾತ್ಮಕ ವೆಚ್ಚ ಹೆಚ್ಚಾಗುತ್ತದೆ. ಸಾರಿಗೆ ಸಂಪರ್ಕ ಅಭಿವೃದ್ಧಿಯಾಗುವುದಿಲ್ಲ. ಉದಾ: ಚಿಲಿ ಮತ್ತು ನಾರ್ವೆ ರಾಷ್ಟ್ರಗಳಲ್ಲಿ ಉತ್ತಮವಾದ ರೈಲ್ವೆ ಸಂಪರ್ಕ ಇರುವುದಿಲ್ಲ. ಚಿಲಿ ರಾಷ್ಟ್ರ ಮೂರು ವಿಶಿಷ್ಟ ಪರಿಸರ ತೊಂದರೆಗಳನ್ನು ಹೊಂದಿದೆ. ಉತ್ತರಕ್ಕೆ ಮರುಭೂಮಿ, ಮಧ್ಯದಲ್ಲಿ ಮೆಡಿಟರೇನಿಯನ್ ಮತ್ತು ದಕ್ಷಿಣದಲ್ಲಿ ಸಾಗರೀಕ ವಾಯುಗುಣವನ್ನು ಹೊಂದಿದೆ. ಇದರ ಪರಿಣಾಮವಾಗಿ ಸಾಮಾಜಿಕ ಮತ್ತು ರಾಜಕೀಯ ವೈವಿಧ್ಯತೆಗಳಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಆಕಾರದ ರಾಷ್ಟ್ರಗಳಿಗೆ ಅನೇಕ ಉದಾಹರಣೆಗಳು ಪ್ರಪಂಚದಲ್ಲಿ ಕಂಡುಬರುತ್ತವೆ. ಅವುಗಳೆಂದರೆ, ನೇಪಾಲ, ಆಸ್ಟ್ರಿಯ, ಸ್ವಿಟ್ಜರ್ಲೆಂಡ್ ರಾಷ್ಟ್ರಗಳು. (ಎಸ್.ಎಸ್.ಎಸ್.)

**ಉಪಗ್ರಹ:** ಮೂಲ ಗ್ರಹದ ಸುತ್ತಲೂ ಪರಿಭ್ರಮಿಸುತ್ತಾ, ಅದನ್ನೇ ಅನುಸರಿಸುತ್ತ ಸೂರ್ಯನ ಸುತ್ತಲೂ ಸುತ್ತುವ ಆಕಾಶಕಾಯ (ಸೆಟಲೈಟ್). ಇದನ್ನು ನೈಸರ್ಗಿಕ ಉಪಗ್ರಹವೆನ್ನುವರು. ಚಂದ್ರ ಭೂಮಿಗೆ ಏಕೈಕ ಸ್ವಾಭಾವಿಕ ಉಪಗ್ರಹ. ಉಪಗ್ರಹ ಶಬ್ದವನ್ನು ಚಂದ್ರ ಎಂಬ ಪರ್ಯಾಯ ಅರ್ಥದಲ್ಲಿ ಬಳಸುವುದುಂಟು. ಉಪಗ್ರಹಗಳು ಗಾತ್ರದಲ್ಲಿ ಗ್ರಹಗಳಿಗಿಂತ ಚಿಕ್ಕವು, ಸ್ವಪ್ರಕಾಶಿತವಲ್ಲ. ಸೌರವ್ಯೂಹದಲ್ಲಿ 78 ಉಪಗ್ರಹಗಳಿವೆ. ಅವುಗಳ ಕೆಲವು ವಿವರಗಳನ್ನು ಇಲ್ಲಿ ಕೊಟ್ಟಿದೆ.

ಪಟ್ಟಿ (1) : ಗ್ರಹ–ಉಪಗ್ರಹ ವಿತರಣೆ

| ಗ್ರಹದ ಹೆಸರು | ಉಪಗ್ರಹಗಳ ಸಂಖ್ಯೆ | ಗ್ರಹದ ಹೆಸರು | ಉಪಗ್ರಹಗಳ ಸಂಖ್ಯೆ |
|---|---|---|---|
| ಬುಧ | 0 | ಗುರು | 16 |
| ಶುಕ್ರ | 0 | ಶನಿ | 30 |
| ಭೂಮಿ | 1 | ಯುರೇನಸ್ | 21 |
| ಮಂಗಳ | 2 | ನೆಪ್ಚೂನ್ | 8 |

ಪಟ್ಟಿ (2) : ಏಳು ಅತಿದೊಡ್ಡ ಉಪಗ್ರಹಗಳ ಕೆಲವು ವಿವರಗಳು

| ಉಪಗ್ರಹದ ಹೆಸರು | ಮೂಲಗ್ರಹದ ಹೆಸರು | ವ್ಯಾಸ (ಮೂ. ಗ್ರ.= 1) | ಉಪಗ್ರಹದ ದ್ರವ್ಯರಾಶಿ (ಮೂ.ಗ್ರ.=1) | ಮೂಲಗ್ರಹದಿಂದ ಸರಾಸರಿ ದೂರ (ಮೂ.ಗ್ರ. ವ್ಯಾ=1) |
|---|---|---|---|---|
| ಚಂದ್ರ | ಭೂಮಿ | 0.28 | 0.01 | 30 |
| ಅಯೊ | ಗುರು | 0.02 | 0.00005 | 3 |
| ಯುರೋಪ | ಗುರು | 0.02 | 0.00003 | 5 |
| ಗನಿಮೀಡ್ | ಗುರು | 0.04 | 0.00008 | 8 |
| ಕಲಿಸ್ಟೊ | ಗುರು | 0.03 | 0.00005 | 13 |
| ಟೈಟಾನ್ | ಶನಿ | 0.04 | 0.0002 | 11 |
| ಟ್ರೈಟನ್ | ನೆಪ್ಚೂನ್ | 0.08 | 0.001 | 8 |

ಉಪಗ್ರಹ–ಮೂಲಗ್ರಹ ವ್ಯವಸ್ಥೆಯ ಗುರುತ್ವಕೇಂದ್ರ ಸೂರ್ಯನ ಸುತ್ತಲೂ ಪರಿಭ್ರಮಿಸುವುದು. ಉಪಗ್ರಹದೊಡನೆ ಹೋಲಿಸುವಾಗ ಮೂಲಗ್ರಹ ಬಲು ದೊಡ್ಡದಾಗಿರುವುದರಿಂದ ಎಲ್ಲ ಸಾಮಾನ್ಯ ಹೇಳಿಕೆಗಳಲ್ಲಿಯೂ ಈ ಗುರುತ್ವಕೇಂದ್ರದ ಕಕ್ಷೆಯನ್ನೇ ಆ ಗ್ರಹದ ಕಕ್ಷೆಯೆಂದು ಭಾವಿಸುವುದು ವಾಡಿಕೆ.

ಒಂದೊಂದೂ ಉಪಗ್ರಹದ ವಿವರ ತಿಳಿಯಲು ಆಯಾ ಮೂಲಗ್ರಹದ ವಿವರ ನೋಡಬೇಕಾಗುತ್ತದೆ. ಈ ನೈಸರ್ಗಿಕ ಉಪಗ್ರಹಗಳಲ್ಲದೇ ಅಂತರಿಕ್ಷ ಸಂಶೋಧನೆಯಲ್ಲಿ ಮಾನವ ಬಿಟ್ಟಿರುವ ಕೃತಕ ಉಪಗ್ರಹಗಳೂ ಇವೆ. (ಆರ್.ಎಲ್.ಎನ್.)

**ಉಪಗ್ರಹಗಳು (ಕೃತಕ):** ದೂರಸಂವೇದನೆಯಲ್ಲಿ ಬಳಸುವ ಉಪಗ್ರಹಗಳಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ :

1. ಭೂಸ್ಥಿರ ಉಪಗ್ರಹಗಳು (ಜಿಯೋ ಸ್ಟೇಷ್ನನರಿ ಸೆಟಲೈಟ್)
2. ಧ್ರುವೀಯ ಕಕ್ಷೆಯ ಉಪಗ್ರಹಗಳು (ಪೋಲಾರ್ ಆರ್ಬಿಟಿಂಗ್ ಸೆಟಲೈಟ್)

ಭೂಸ್ಥಿರ ಉಪಗ್ರಹಗಳು : ಭೂಸ್ಥಿರ ಕೃತಕ ಉಪಗ್ರಹಗಳೆಂದರೆ, ಭೂಮಿಯಿಂದ ಬಹು ಎತ್ತರದಲ್ಲಿ ಭೂಮಿಯ ಪರಿಭ್ರಮಣದ ವೇಗದಷ್ಟೆ ವೇಗವನ್ನು ಹೊಂದಿರುವ ಈ ಉಪಗ್ರಹಗಳು ಒಂದೇ ಸ್ಥಾನದಲ್ಲಿ ನಿಂತಿರುವಂತೆ ಕಂಡುಬರುವುದು. ಆದುದರಿಂದಲೇ ಇವುಗಳನ್ನು ಭೂಸ್ಥಿರ ಉಪಗ್ರಹ ಎನ್ನುವರು. ಈ ಉಪಗ್ರಹಗಳನ್ನು ಭೂಮೇಲ್ಮೈನಿಂದ ಸು. 36,000 ಕಿಮೀ ಎತ್ತರದಲ್ಲಿ ಸ್ಥಿರಗೊಳಿಸುವರು. ಭೂಮಿಯ ಗುರುತ್ವಾಕರ್ಷಣೆ ಹಾಗೂ ಪರಿಭ್ರಮಣದ ಅವಧಿಯನ್ನು ಸರಿದೂಗಿಸಲು ಈ ಎತ್ತರದಲ್ಲಿ ಉಪಗ್ರಹವನ್ನಿರಿಸುವುದು ಅವಶ್ಯಕ. ಅಷ್ಟು ಎತ್ತರದಿಂದ ಭೂಮಿಯ ಶೇ. 33ರಷ್ಟು ಭಾಗವನ್ನು ನೋಡಬಹುದು. ಅವುಗಳಿಂದ ರೇಡಿಯೋ, ದೂರದರ್ಶನದ ತರಂಗಗಳನ್ನು ಪ್ರಸಾರ ಮಾಡಲಾಗುತ್ತದೆ. ಆದ್ದರಿಂದ ಇವುಗಳನ್ನು ಸಂಪರ್ಕ ಮಾಧ್ಯಮದ ಉಪಗ್ರಹಗಳು (ಕಮ್ಯುನಿಕೇಷನ್ ಸೆಟಲೈಟ್) ಎಂದು ಕರೆಯುತ್ತಾರೆ.

ಭೂಕೇಂದ್ರಗಳಿಂದ ವಿವಿಧ ತರಂಗಾಂತರದಲ್ಲಿ ಸಂಕೇತಗಳ ಮೂಲಕ ಉಪಗ್ರಹಗಳಿಗೆ ಮಾಹಿತಿಯನ್ನು ನೀಡಲಾಗುವುದು. ಇವುಗಳನ್ನು ಪಡೆಯುವ ಸಂಪರ್ಕ ಉಪಗ್ರಹ ಅಂಪ್ಲಿಫೈರ್, ತಂತ್ರಜ್ಞಾನದಿಂದ ಅವುಗಳನ್ನು ಮತ್ತಷ್ಟು ಪ್ರಬಲಗೊಳಿಸಿ, ಪುನಃ ಭೂಮೇಲ್ಮೈಯಲ್ಲಿರುವ ರಿಸೀವರ್ ಕೇಂದ್ರಗಳಿಗೆ ಮರುಪ್ರಸಾರ ಮಾಡುವುದು. ಇದರಿಂದ ವಿಸ್ತಾರವಾದ ಪ್ರದೇಶದಲ್ಲಿ ಸಂಕೇತಗಳನ್ನು ಕಳುಹಿಸಲು ಸಹಾಯಕವಾಗಿದೆ.

ಪ್ರಪಂಚದಲ್ಲಿ ಮೊದಲು ಭೂಸ್ಥಿರ ಉಪಗ್ರಹವನ್ನು 1957ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಉಡಾಯಿಸಿತು. ಪ್ರಪಂಚದಾದ್ಯಂತ ಉಪಗ್ರಹ ಸೇವೆಯನ್ನು ಇನ್‌ಟೆಲ್‌ಸ್ಯಾಟ್ ಅಂತಾರಾಷ್ಟ್ರೀಯ ಸಂಸ್ಥೆ ನಿರ್ವಹಿಸುತ್ತಿರುವುದು.

ಇಂದಿನವರೆಗೆ ಪ್ರಪಂಚದ ಅನೇಕ ದೇಶಗಳು ವಿವಿಧ ಉದ್ದೇಶಗಳಿಗಾಗಿ ಅನೇಕ ಉಪಗ್ರಹಗಳನ್ನು ಉಡಾಯಿಸಿವೆ. ಭಾರತದ ಮೊದಲ ಕೃತಕ ಉಪಗ್ರಹ ಆರ್ಯಭಟವನ್ನು ರಷ್ಯದಿಂದ 1975 ಏಪ್ರಿಲ್ 19 ರಂದು ಉಡಾಯಿಸಲಾಯಿತು. ಅನಂತರ, ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ತೀರದ ಶ್ರೀಹರಿಕೋಟ ಹಾಗೂ ತಿರುವನಂತಪುರದಲ್ಲಿ ಉಪಗ್ರಹ ಉಡಾವಣೆಯ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅನಂತರ, ಭಾಸ್ಕರ, ಆ್ಯಪಲ್, IRS-I ಸರಣಿಯ ಉಪಗ್ರಹಗಳನ್ನು ಉಡಾಯಿಸಲಾಗಿದೆ.

2. ಧ್ರುವೀಯ ಕಕ್ಷೆಯ ಭೂಸ್ಥಿರ ಉಪಗ್ರಹಗಳು : ದೂರಸಂವೇದನೆಯಲ್ಲಿ ಈ ಧ್ರುವೀಯ ಕಕ್ಷೆಯ ಭೂಸ್ಥಿರ ಉಪಗ್ರಹಗಳು ಅತ್ಯಂತ ಮಹತ್ತರವಾದವುಗಳಾಗಿವೆ. ಈ ಧ್ರುವೀಯ ಕಕ್ಷೆಯ ಭೂಸ್ಥಿರ ಉಪಗ್ರಹಗಳಲ್ಲಿ ಕಾರ್ಟೋಸ್ಯಾಟ ಅತ್ಯಂತ ಪ್ರಮುಖವಾದುದು. ಈ ಉಪಗ್ರಹವನ್ನು ಭೂನಕ್ಷೆ ಹಾಗೂ ಹಲವಾರು ಯೋಜನೆಗಳನ್ನು ರೂಪಿಸಲು ಹಾರಿಬಿಡಲಾಗಿದೆ. ಇದರ ತೂಕ 1560 ಕೆ.ಜಿ.ಯಾಗಿದ್ದು 618 ಮೀ ಪೋಲಾರ್ ಸನ್ ಸಿಂಕ್ರೋನಸ್ ಕಕ್ಷೆಯಲ್ಲಿ ಕಾರ್ಯನಿರ್ವಹಿಸುತ್ತದೆ. ಅಷ್ಟು ಎತ್ತರದಿಂದ ಭೂ ಹಾಗೂ ಜಲಮೇಲ್ಮೈನ 2.5 ಚ.ಮೀ ಚಿಕ್ಕದಾದ ವಸ್ತುವಿನ ಚಿತ್ರಣವನ್ನು ತೆಗೆಯುವ ಸಾಮಾರ್ಥ್ಯ ಹೊಂದಿದೆ. ಅಲ್ಲದೆ, PSLV - C6 ಹೊತ್ತೊಯ್ದ ಮತ್ತೊಂದು ಉಪಗ್ರಹವೆಂದರೆ ಹ್ಯಾಮ್‌ಸ್ಯಾಟ್. ರೇಡಿಯೋಸೇವೆಯನ್ನು ಹೊರತು ಪಡಿಸಿದಂತೆ ತುರ್ತುಸಂದರ್ಭದಲ್ಲಿ ಪ್ರಕೃತಿವಿಕೋಪಗಳಾದ ಭೂಕಂಪ, ನೆರೆಹಾವಳಿ, ಹವಾಮಾನ ವೈಪರೀತ್ಯಗಳ ಬಗ್ಗೆ ಮಾಹಿತಿಯನ್ನು ಸಕಾಲದಲ್ಲಿ ಪ್ರಸಾರ ಮಾಡಲು ಬಳಸಲಾಗುತ್ತಿದೆ. ಇದು ಭಾರತ ಮತ್ತು ದಕ್ಷಿಣ ಏಷ್ಯದ ಇತರ ದೇಶಗಳಿಗೂ ಸಹ ರೇಡಿಯೋ ಸೇವೆಯನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ. (ಎಂ.ಜಿ.)

**ಉಪನಗರ:** ನಗರ ಅಥವಾ ಪಟ್ಟಣವೊಂದರ ಹೊರವಲಯಗಳಲ್ಲಿ ತೀವ್ರಗತಿಯ ನಗರೀಕರಣದ ಪ್ರಯುಕ್ತ ಉಪನಗರಗಳು ಬೆಳೆಯುತ್ತವೆ (ಸಬರ್ಬ್). ನಗರಗಳಲ್ಲಿರುವ ಎಲ್ಲ ಸವಲತ್ತುಗಳು ಉಪನಗರಗಳಲ್ಲಿ ಕಂಡು ಬರುವುದಿಲ್ಲ ಹಾಗೂ ಹೆಚ್ಚಿನ ತೃತೀಯ ಆರ್ಥಿಕ ಚಟುವಟಿಕೆಗಳು ಉಪನಗರಗಳಲ್ಲಿ ಇರುವುದಿಲ್ಲ. ನಗರಗಳಿಗೆ ಹೋಲಿಸಿದರೆ

ಉಪ ನಗರಗಳಲ್ಲಿ ಜನಸಾಂದ್ರತೆ ಕಡಿಮೆಯಿರುತ್ತದೆ. ಉಪನಗರಗಳು ಸಾಮಾನ್ಯವಾಗಿ ನಗರಗಳ ಸುತ್ತಲಿನ ಸಮತಟ್ಟಾದ ಪ್ರದೇಶಗಳಲ್ಲಿ ಕಂಡುಬರುತ್ತವೆ. ಈ ಪ್ರದೇಶಗಳಲ್ಲಿ ಸಾರಿಗೆ ಸೌಲಭ್ಯವು ಉತ್ತಮವಾಗಿದ್ದು, ಸಾರಿಗೆಯ ಸಹಾಯದಿಂದ ಹಲವಾರು ಚಟುವಟಿಕೆಗಳಿಗೆ ಜನರು ನಿತ್ಯಪ್ರಯಾಣ ಮಾಡುವುದನ್ನು ಕಾಣಬಹುದು. ಉಪನಗರಗಳು ನಗರಗಳಿಂದ ಪ್ರಭಾವಿತವಾಗಿರುತ್ತದೆ. ಉದಾ: ಬೆಂಗಳೂರಿನ ಕೆಂಗೇರಿ ಇತ್ಯಾದಿ. (ಎಚ್.ಎಸ್.ಡಿ.)

**ಉಪ್ಪುಮಣ್ಣುಗಳು:** ನೀರು, ಗಾಳಿ, ಬಿಸಿಲು ಇವುಗಳ ಕ್ರಿಯೆಯಿಂದ ಬಂಡೆ ಮತ್ತು ಖನಿಜಗಳು ಶಿಥಿಲವಾಗಿ ಕ್ರಮೇಣ ಮಣ್ಣು ರೂಪುಗೊಳ್ಳುತ್ತದೆ. ಆಗ ಅವುಗಳಲ್ಲಿರುವ ಸಿಲಿಕ, ಮ್ಯಾಗ್ನೀಸಿಯಂ, ಪೊಟ್ಯಾಶಿಯಂ, ಸೋಡಿಯಂ, ಕ್ಯಾಲ್ಸಿಯಂ, ಕಬ್ಬಿಣ ಮತ್ತು ಅಲ್ಯುಮಿನಿಯಂ ಮತ್ತು ಅನೇಕ ಲವಣಗಳು ಬಿಡುಗಡೆಯಾಗುತ್ತವೆ. ಸಾಕಷ್ಟು ಮಳೆ ಇರುವೆಡೆ ಇವು ಕರಗಿ ತೊಳೆದುಹೋಗುತ್ತವೆ; ಮಳೆ ಕಡಿಮೆ ಇರುವ ಸ್ಥಳಗಳಲ್ಲಿ ಸಂಗ್ರಹವಾಗತೊಡಗುತ್ತವೆ.

ನೀರಾವರಿ ಪ್ರದೇಶಗಳಲ್ಲಿ ಭೂಮಿಯ ಒಳನೀರಿನ ಮಟ್ಟ ಮೇಲಕ್ಕೆ ಏರುತ್ತದೆ. ಅದು ಮಣ್ಣಿನ ಮೇಲ್ಮೈನಿಂದ 2 ಮೀ ಒಳಗೆ ಬಂದಾಗ, ಕೆಳಪದರಗಳಲ್ಲಿರಬಹುದಾದ ಉಪ್ಪು ನೀರಿನೊಡನೆ ಮೇಲಕ್ಕೆ ಬಂದು ನೀರು ಆರಿದಾಗ ಮೇಲ್ಮಣ್ಣಿನಲ್ಲಿ ಶೇಖರಣೆಯಾಗುತ್ತ ಹೋಗುತ್ತದೆ. ಇದಲ್ಲದೆ ಕೆರೆ, ಬಾವಿ, ನದಿ ಮುಂತಾದವುಗಳ ನೀರಿನಲ್ಲೂ ಸ್ವಲ್ಪ ಅಂಶ ಉಪ್ಪು ಮಣ್ಣಿಗೆ ಸೇರಿ ಅದರ ಉಪ್ಪಿನ ಅಂಶ ವೃದ್ಧಿಸುವುದು ಅನಿವಾರ್ಯವಾಗುತ್ತದೆ. ಹೀಗೆ ಏರುತ್ತ ಹೋದ ಉಪ್ಪಿನ ಅಂಶ ಶೇ. 0.20ಕ್ಕಿಂತ ಹೆಚ್ಚಾದಲ್ಲಿ ಬೆಳೆಗೆ ತೊಂದರೆ. ಇಂಥ ಮಣ್ಣಿನ ಮೇಲೆ ನೀರು ಆರಿದಾಗ ಬೂದು ಉಪ್ಪು ತೇಲುವುದನ್ನು ಕಾಣಬಹುದು. ಇದರ ಬಹ್ವಂಶ ಸೋಡಿಯಂ ಕ್ಲೋರೈಡ್ (ಅಡಿಗೆ ಉಪ್ಪು); ಸ್ವಲ್ಪ ಸೋಡಿಯಂ ಸಲ್ಫೇಟ್, ಕ್ಯಾಲ್ಸಿಯಂ ಕ್ಲೋರೈಡ್, ಕ್ಯಾಲ್ಸಿಯಂ ಸಲ್ಫೇಟ್, ಮೆಗ್ನೀಷಿಯಂ ಕ್ಲೋರೈಡ್, ಮೆಗ್ನೀಷಿಯಂ ಸಲ್ಫೇಟ್ ಇರಬಹುದು. ಲವಣಾಂಶ ಒಂದು ಮಟ್ಟಕ್ಕಿಂತ (ಶೇ. 0.02) ಮೇಲೇರಿದಾಗ ಅನೇಕ ಪೈರುಗಳಿಗೆ ತೊಂದರೆಯಾದರೂ ಮಣ್ಣಿಗೆ ಹೆಚ್ಚು ಹಾನಿಯಾಗುವುದಿಲ್ಲ. ಬದಲಾಗಿ ಮಣ್ಣಿನ ಕಣಜೋಡಣೆಯನ್ನು ಕುದುರಿಸಿ ನೀರು ಬಸಿಯುವುದಕ್ಕೆ ಗಾಳಿ ತೂರುವುದಕ್ಕೆ ಸಹಾಯಕವಾಗುತ್ತದೆ. ಆದರೆ ಲವಣಗಳು ಹೆಚ್ಚಿದರೆ ನೀರು ಬಸಿದಾಗ ಸೋಡಿಯಂ ಅಂಶ ಮಣ್ಣಿನಲ್ಲಿನ ಜೇಡಿಯಲ್ಲಿ ವಿನಿಮಯಕ್ರಿಯೆಯಿಂದ ಸೇರಿ ಕಣಜೋಡಣೆ ಹಾಳಾಗಿ ನೀರು ಇಳಿಯದೆ ಮಣ್ಣು ಹಾಳಾಗುತ್ತದೆ.

ಕರ್ನಾಟಕ ರಾಜ್ಯದ ಮೈದಾನ ಪ್ರದೇಶದ ಅದರಲ್ಲೂ ಚಿತ್ರದುರ್ಗಜಿಲ್ಲೆಯ ವಾಣಿವಿಲಾಸ ಸಾಗರದ ಅಚ್ಚುಕಟ್ಟಿನಲ್ಲಿ, ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ, ಕೃಷ್ಣರಾಜಸಾಗರದ ವಿಶ್ವೇಶ್ವರಯ್ಯ ನಾಲಾ ಬಯಲಿನಲ್ಲಿ ಅನೇಕ ಸಾವಿರ ಹೆಕ್ಟೇರ್ ಭೂಮಿ ಇಂಥ ಉಪ್ಪುಮಣ್ಣಿನಿಂದ ಹಾಳಾಗಿವೆ. ಕಡಿಮೆ ಮಳೆ ಬೀಳುವ ಪ್ರದೇಶಗಳಾದ ವಿಜಾಪುರ, ಧಾರವಾಡ ಮತ್ತಿತರ ನೆರೆ ಪ್ರದೇಶಗಳಲ್ಲಿಯೂ ಇಂತಹ ಮಣ್ಣುಗಳಿವೆ.

ಉಪ್ಪು ಮಣ್ಣುಗಳ ಸುಧಾರಣೆ: ಈ ದಿಸೆಯಲ್ಲಿ ಮೊದಲ ಹೆಜ್ಜೆ ನೀರು ಚರಂಡಿಗಳನ್ನು ಹೊಡೆದು ಸಿಹಿ ನೀರನ್ನು ಕಟ್ಟಿ ಉಪ್ಪನ್ನು ಕರಗಿಸಿಬಸಿಯುವುದು: ತರುವಾಯ ಸಾವಯವ ವಸ್ತುಗಳಾದ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್ ಹಸುರೆಲೆ ಗೊಬ್ಬರ ಮುಂತಾದುವನ್ನು ಧಾರಾಳ ಪ್ರಮಾಣದಲ್ಲಿ ಮಿಶ್ರಿಸಿ ಪರಿಸ್ಥಿತಿಯನ್ನು ಸುಧಾರಿಸಬೇಕು. ಮಣ್ಣಿನ ಜೇಡಿಯ ಸೋಡಿಯಂ ಹೆಚ್ಚಳದಿಂದ ತೊಂದರೆಯಿದ್ದಾಗ ಜಿಪ್ಸಂ, ಗಂಧಕ ಮುಂತಾದ ವಸ್ತುಗಳನ್ನು ಮಿಶ್ರಿಸಿ ಮಣ್ಣುಗಳನ್ನು ಉತ್ತಮಗೊಳಿಸುವುದು ಅಗತ್ಯ. ಉಪ್ಪು ಮಣ್ಣುಗಳ ಸುಧಾರಣೆ (ಅದರಲ್ಲೂ ನೀರಾವರಿ ಬಯಲುಗಳಲ್ಲಿ) ನೀರು ಬಳಸುವ ಪ್ರದೇಶದ ಎಲ್ಲ ರೈತರುಗಳ ಸಹಕಾರದಿಂದಲೇ ಸಾಧ್ಯ. ಎಲ್ಲರೂ ವಿವೇಚನೆಯಿಂದ ನೀರು ಬಳಸಿ ಚರಂಡಿ ವ್ಯವಸ್ಥೆಯಿಂದ ಹೆಚ್ಚು ನೀರನ್ನು ಹೊರಸಾಗಿಸುವ ಕ್ರಮವನ್ನು ಅನುಸರಿಸಿದಲ್ಲಿ ಹಾನಿಯ ಪರಿಮಾಣವನ್ನು ತಗ್ಗಿಸುವುದು ಸಾಧ್ಯ. (ಬಿ.ವಿ.ವಿ.)

**ಉಬ್ಬರ ವಿಳಿತ ಶಕ್ತಿ:** ಸಾಗರ, ಸಮುದ್ರಗಳ ನೀರಿನ ಮೇಲ್ಮೈ ಸ್ಥಿರವಾಗಿರದೆ ಸದಾ ಚಲನೆ ಹೊಂದಿರುತ್ತದೆ. ಈ ರೀತಿಯ ಚಲನೆಯಲ್ಲಿ ಉಬ್ಬರ ವಿಳಿತವು ಪ್ರಮುಖವಾದುದು. ಸಮುದ್ರದ ನೀರು ಸೂರ್ಯ ಮತ್ತು ಚಂದ್ರರ ಆಕರ್ಷಣೆಯ ಪ್ರಭಾವದಿಂದಾಗಿ ನಿತ್ಯವೂ ಏರುವುದು ಮತ್ತು ಇಳಿಯುವುದು. ಈ ರೀತಿಯಾಗಿ ಸಮುದ್ರದ ನೀರು ನಿಯತಕಾಲಿಕವಾಗಿ ಏರುವ ಮತ್ತು ಇಳಿಯುವ ಕ್ರಿಯೆಯನ್ನು ಉಬ್ಬರ ವಿಳಿತ ಎನ್ನುತ್ತಾರೆ. ಈ ರೀತಿಯ ಅಲೆಗಳಲ್ಲಿ ಹೆಚ್ಚು ಶಕ್ತಿಯು ಅಡಗಿರುವುದರಿಂದ ಜಲ ವಿದ್ಯುತ್ ಶಕ್ತಿಯನ್ನು ತಯಾರಿಸಬಹುದಾಗಿದೆ. ಪ್ರಪಂಚದ ಎಲ್ಲಾ ಮುಖಜಭೂಮಿ ಮತ್ತು ಸಮುದ್ರ ತೀರ ಪ್ರದೇಶಗಳಲ್ಲಿಯೂ ಕೂಡ ಅಣೆಕಟ್ಟೆಗಳು ಮತ್ತು ಸೇತುವೆಗಳನ್ನು ನಿರ್ಮಿಸಿ ವಿದ್ಯುತ್ ಶಕ್ತಿ ತಯಾರಿಸುವ ಉತ್ತಮ ಸನ್ನಿವೇಶವಿದೆ. ಈ ಶಕ್ತಿಯನ್ನು ಬಳಸಿಕೊಂಡು ಇತ್ತೀಚೆಗೆ ಪ್ರಪಂಚದ ಅನೇಕ ದೇಶಗಳು ವಿದ್ಯುತ್ ಶಕ್ತಿಯನ್ನು ಉತ್ಪಾದನೆ ಮಾಡುತ್ತಿವೆ. ಇಂತಹ ವಿದ್ಯುತ್ ಉತ್ಪಾದನಾ ಕೇಂದ್ರಗಳು ಜಪಾನ್ ಮತ್ತು ಫ್ರಾನ್ಸ್‌ಗಳಲ್ಲಿ ಕಂಡು ಬರುತ್ತವೆ. ಹಾಗೂ ವಾಯವ್ಯ ಪೆಸಿಫಿಕ್ ಮತ್ತು ಈಶಾನ್ಯ ಪೆಸಿಫಿಕ್ ಪ್ರದೇಶಗಳಲ್ಲಿಯೂ ಉಬ್ಬರ ವಿಳಿತ ಶಕ್ತಿಯಿಂದ ವಿದ್ಯುತ್ ಶಕ್ತಿ ತಯಾರಿಸಲು ಉತ್ತಮ ಸನ್ನಿವೇಶವನ್ನು ಹೊಂದಿದೆ.

ಇದೇ ರೀತಿ ಭಾರತದಲ್ಲಿಯೂ ಪ್ರಮುಖವಾಗಿ ಮೂರು ಕಡೆಗಳಲ್ಲಿ ಉಬ್ಬರ ವಿಳಿತ ಶಕ್ತಿಯಿಂದ ಜಲವಿದ್ಯುತ್ ಶಕ್ತಿ ತಯಾರಿಸುವ ಸಾಧ್ಯತೆಯು ಕಂಡು ಬಂದು ಇದಕ್ಕೆ ಭಾರತ ಸರ್ಕಾರದ ಮಾನ್ಯತೆ ದೊರಕಿದೆ. ಅವುಗಳಲ್ಲಿ ಗಲ್ಫ್ ಆಫ್ ಕ್ಯಾಂಬೆ, ಗಲ್ಫ್ ಆಫ್ ಕಛ್ ಮತ್ತು ಗಂಗಾ ಮುಖಜ ಭೂಮಿಯ ಸುಂದರ್‌ಬನ್ ಪ್ರದೇಶಗಳು ಉಬ್ಬರ ವಿಳಿತ ಶಕ್ತಿಯನ್ನು ಉಪಯೋಗಿಸುವ ಉತ್ತಮ ಸನ್ನಿವೇಶವನ್ನು ಹೊಂದಿದ್ದು ಇತ್ತೀಚೆಗೆ ಫ್ರಾನ್ಸ್ ದೇಶದ ಸಹಾಯದಿಂದ ಕಛ್ ಪ್ರದೇಶದಲ್ಲಿ ಈ ಶಕ್ತಿ ಸ್ಥಾವರವನ್ನು ಸ್ಥಾಪಿಸಲು ಯೋಚಿಸಲಾಗಿದೆ. (ಜಿ.ಡಿ.)

**ಉಬ್ಬರವಿಳಿತಗಳು:** ಒಂದು ವಸ್ತುವಿನ ಗುರುತ್ವಾಕರ್ಷಣ ಬಲದಿಂದ ಇನ್ನೊಂದು ವಸ್ತುವಿನ ಮೇಲೆ ಉಂಟಾಗುವ ಪ್ರತಿಬಲಗಳು (ಸ್ಟ್ರೆಸ್ಸ್) ಮತ್ತು ಅವುಗಳಿಂದ ಆ ವಸ್ತುವಿನಲ್ಲಿ ತಲೆದೋರುವ ಪರಿಣಾಮಗಳು (ಟೈಡ್ಸ್). ಎಲ್ಲ ಆಕಾಶಕಾಯಗಳೂ ಭೂಗೋಳದ ವಾಯು ನೆಲ ನೀರುಗಳ ಮೇಲೆ ಗುರುತ್ವಾಕರ್ಷಣ ಬಲಗಳನ್ನು ಬೀರಿ ಪ್ರತಿಬಲಗಳನ್ನು ಉತ್ಪಾದಿಸುತ್ತವೆ. ಆದರೆ ಸೂರ್ಯ ಚಂದ್ರರ ಪ್ರಭಾವವೇ ಇಲ್ಲಿ ಅತ್ಯಧಿಕ ಮತ್ತು ಆ ಕಾರಣದಿಂದ ಗಮನಾರ್ಹ. ವಾಯುವಿನಲ್ಲಿ ಉಂಟಾಗುವ ಉಬ್ಬರವಿಳಿತವನ್ನು ಕಾಣುವುದು ಸಾಧ್ಯವಿಲ್ಲ: ಭೂಮಿ ಶುದ್ಧಗೋಳಾಕಾರವಾಗಿಲ್ಲದಿರಲು ಒಂದು ಕಾರಣ ಉಬ್ಬರವಿಳಿತ. ಸಮುದ್ರ ಅಥವಾ ಇತರ ಜಲರಾಶಿ ನಿಯತಕಾಲಿಕವಾಗಿ ಉಬ್ಬಿ ಇಳಿಯುವ ಘಟನೆಗೆ ಸಾಮಾನ್ಯವಾಗಿ ಉಬ್ಬರವಿಳಿತವೆಂದು ಹೆಸರು.

ಉಬ್ಬರವಿಳಿತಗಳು ಬೇರೆ ಬೇರೆ ಪ್ರದೇಶಗಳಲ್ಲಿ ಎಷ್ಟರಮಟ್ಟಿಗೆ ಎಂದು ಉಂಟಾಗುತ್ತವೆಂಬುದನ್ನು ವೈಜ್ಞಾನಿಕರೀತಿಯಲ್ಲಿ ವಿಚಾರ ಮಾಡಲಾಗಿದೆ. ಸೂರ್ಯ, ಚಂದ್ರ ಮತ್ತು ಭೂಮಿಗಳ ಚಲನೆ ಖಚಿತವಾಗಿ ತಿಳಿದಿರುವುದರಿಂದ ಉಬ್ಬರವಿಳಿತಗಳಿಗೆ ಕಾರಣವಾದ ಬಲಗಳನ್ನು ತರ್ಕಿಸಬಹುದು. ಅದರೆ ಹೀಗೆ ಪಡೆದ ಉಬ್ಬರವಿಳಿತಗಳಿಗೆ ಮಾಹಿತಿ ಅಷ್ಟೊಂದು ಸಮಂಜಸವಾಗಿಲ್ಲ. ಸಾಗರದ ಪಾತ್ರಗಳಿಗೆ ಬಹಳ ತೊಡಕಿನ ಆಕೃತಿಗಳಿರುವುದೇ ಇದಕ್ಕೆ ಕಾರಣ. ಇನ್ನೊಂದು ರೀತಿಯ ಪ್ರಕಾರ, ಒಂದು ನಿರ್ದಿಷ್ಟ ಪ್ರದೇಶಗಳಲ್ಲಿ ಆಯಾ ಕಾಲಕ್ಕೆ ಉಂಟಾಗುವ ಉಬ್ಬರವಿಳಿತಗಳನ್ನು ಗುರುತು ಹಾಕಿ, ಮುಂದೆ ಅದೇ ಕಾಲದಲ್ಲಿ ಅದೇ ರೀತಿಯ ವ್ಯತ್ಯಾಸಗಳು ಆಗಬಹುದೆಂದು ಊಹಿಸಬಹುದು. ಇದೂ ಅಷ್ಟೇನೂ ಸಮರ್ಪಕವಾದ ವಿಧಾನವಲ್ಲ. ನೆಲ ಮತ್ತು ಜಲದ ಪ್ರತಿಯೊಂದು ಕಣವನ್ನೂ ಚಂದ್ರ ಆಕರ್ಷಿಸುತ್ತದೆ. ಇಲ್ಲಿ ಬಲಗಳೂ ಒಂದೇ ದಿಕ್ಕಿನಲ್ಲಿ ಸರಿಸಮಾನವಾಗಿದ್ದರೆ ಉಬ್ಬರವಿಳಿತಗಳು ಸಂಭವಿಸವು. ಅವುಗಳ ಮಾನ ಮತ್ತು ದಿಕ್ಕುಗಳಲ್ಲಿ ಕೊಂಚ ವ್ಯತ್ಯಾಸವಿರುವುದೇ ಉಬ್ಬರವಿಳಿತಗಳಿಗೆ ಕಾರಣ.




ಅಧಿಕ ಭರತ (ಸ್ಪ್ರಿಂಗ್ ಟೈಡ್)




ಕನಿಷ್ಠ ಭರತ (ನೀಪ್ ಟೈಡ್)

ಉಬ್ಬರ ಉನ್ನತಮಟ್ಟಕ್ಕೆ ಏರುವುದಕ್ಕೂ ಸೂರ್ಯಚಂದ್ರರ ಸ್ಥಾನಕ್ಕೂ ಸಂಬಂಧವಿದೆ. ಚಂದ್ರ ಭೂಮಿಯನ್ನು ಅರ್ಧ ಸುತ್ತಲು ಬೇಕಾಗುವ ಕಾಲ ಸು. 12 ಗಂ. 25 ನಿ. ಚಂದ್ರ

ನೆತ್ತಿಯಮೇಲೆ ಬರುವ ಕಾಲಕ್ಕೂ ಮತ್ತು ಉಬ್ಬರ ಉನ್ನತಮಟ್ಟವನ್ನು ಮುಟ್ಟುವ ಕಾಲಕ್ಕೂ ಸ್ವಲ್ಪ ಅಂತರವಿದೆ. ಇದಕ್ಕೆ ಚಾಂದ್ರಉಬ್ಬರವಿಳಿತ ಮಧ್ಯಂತರ (ಲ್ಯೂನಿ ಟೈಡಲ್ ಇಂಟರ್ವಲ್) ಅಥವಾ ಏರು ನೀರಿನ ಮಧ್ಯಂತರ ಎಂದು ಹೆಸರು. ಇದೇ ರೀತಿಯಲ್ಲಿ ಚಂದ್ರ ನೆತ್ತಿಯ ಮೇಲೆ ಬರುವ ಕಾಲ ಮತ್ತು ಇಳಿತ ಕನಿಷ್ಠ ಮಟ್ಟವನ್ನು ತಲಪುವ ಕಾಲದ ಅಂತರಕ್ಕೆ ಇಳಿನೀರಿನ ಅಂತರ ಎಂದು ಹೆಸರು. ಹುಣ್ಣಿಮೆ, ಅಮಾವಾಸ್ಯೆಗಳು ಕಳೆದ ಮಾರನೆ ದಿವಸ ಉಬ್ಬರ ಮಹತ್ತರವಾಗಿರುವುದು. ಇದರ ಹೆಸರು ಅಧಿಕ ಭರತ (ಸ್ಪ್ರಿಂಗ್ ಟೈಡ್) ಅಥವಾ ಉಕ್ಕುಬ್ಬರ. ಪಂಚಮಿಯ ಹೊತ್ತಿಗೆ ಉಬ್ಬರ ಕ್ಷೀಣಿಸುವುದು. ಇದಕ್ಕೆ ಕನಿಷ್ಠ ಉಬ್ಬರ (ನೀಪ್‌ಟೈಡ್) ಎಂದು ಹೆಸರು. ಉಬ್ಬರ ಮೇಷ ಮತ್ತು ತುಲಾಸಂಕ್ರಮಣಕಾಲದಲ್ಲಿ ಹೆಚ್ಚಾಗಿ ಮಕರ, ಕರ್ಕಾಟಕ ಸಂಕ್ರಾಂತಿಗಳಲ್ಲಿ ಕಡಿಮೆಯಾಗುವುದು, ಈ ವ್ಯತ್ಯಾಸಗಳಿಗೆ ಸೂರ್ಯಚಂದ್ರರು ಭೂಮಿ ಕಡೆಗೆ ಇರುವ ದಿಕ್ಕಿನ ದಿಕ್ಪಾತವೇ (ಡೆಕ್ಲೈನೇಷನ್) ಕಾರಣ.

ಸಮುದ್ರತೀರಪ್ರದೇಶಗಳಲ್ಲಿ ನೀರು ಸಾಮಾನ್ಯವಾಗಿ ಎರಡುಸಾರಿ ಉನ್ನತ ಮಟ್ಟಕ್ಕೆ ಏರುವುದು. ಎರಡು ಸಲ ಈ ರೀತಿಯಾಗಲು ಬೇಕಾಗುವ ಕಾಲದ ಅಂತರ 12 ಗಂ. 25 ನಿ. ಈ ಅಂತರ ದಿನ ದಿನಕ್ಕೆ ಸ್ವಲ್ಪ ವ್ಯತ್ಯಾಸವಾಗಬಹುದು ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಅಂತರ ವಿವಿಧ ಪ್ರಮಾಣಗಳಲ್ಲಿ ಇರಬಹುದು. ಭಾರತದ ಪೂರ್ವದ ಸಮುದ್ರಗಳಲ್ಲಿ 12 ಗಂಟೆ ಅಂತರವಿದ್ದರೆ ಚೀನ ಸಮುದ್ರದ ಕೆಲವು ಪ್ರದೇಶಗಳಲ್ಲಿ ಇದು 24 ಗಂಟೆ ಆಗುತ್ತದೆ. ಸಮುದ್ರ ತೀರದಲ್ಲಿ ಅನುಕ್ರಮವಾಗಿ ಉಬ್ಬರ ಅಥವಾ ಇಳಿತಗಳ ಅಂತರ ಒಂದೇ. ಆದರೆ ಅಳಿವೆಗಳಲ್ಲಿ ನೀರಿನ ಮಟ್ಟ ವೇಗವಾಗಿ ಹೆಚ್ಚುತ್ತ ಬಂದು ಇಳಿಯುವುದು ನಿಧಾನ.

ಸರಾಸರಿ ನೀರಿನಮಟ್ಟದಿಂದ ಎಷ್ಟು ಎತ್ತರಕ್ಕೆ ಉಬ್ಬರವಾಗುವುದೋ ಅಷ್ಟೇ ಕೆಳಕ್ಕೆ ಇಳಿತ ಆಗುತ್ತದೆ. ಉಬ್ಬರದ ಎತ್ತರ ಮತ್ತು ಇಳಿತದ ತಗ್ಗು ಇವೆರಡರ ಅಂತರಕ್ಕೆ ಅಲೆಶ್ರೇಣಿ (ರೇಂಜ್) ಎಂದು ಹೆಸರು. ಲಂಡನ್ ಸೇತುವೆ ಹತ್ತಿರ ಉನ್ನತ ಶ್ರೇಣಿ 6.4 ಮೀ, ಕಡಿಮೆ ಶ್ರೇಣಿ 4.5 ಮೀ. ಪೆಸಿಫಿಕ್ ಸಾಗರದ ಕೆಲವು ಕಡೆಗಳಲ್ಲಿ 15 ಮೀ ಇದ್ದರೆ ಮೆಡಿಟರೇನಿಯನ್ ತೀರದಲ್ಲಿ 61 ಸೆಂಮೀ ಗಳಿಗಿಂತ ಹೆಚ್ಚಾಗುವುದಿಲ್ಲ.

ಇಕ್ಕಟ್ಟಾದ ಸಮುದ್ರದಲ್ಲಿ ಅಲೆ ಪ್ರವಾಹ ಒಂದು ದಿಕ್ಕಿನಲ್ಲಿ 6 ಗಂ. 12 ನಿ. ವರೆಗೆ ಹರಿದು ಮತ್ತೆ ಅದರ ಎದುರು ದಿಕ್ಕಿನಲ್ಲಿ ಅಷ್ಟೇ ಕಾಲ ಹರಿಯುತ್ತದೆ. ದಿಕ್ಕು ವ್ಯತ್ಯಾಸವಾಗುವ ಸಮಯದಲ್ಲಿ ನೀರು ಶಾಂತವಾಗಿರುವುದು. ಅಳಿವೆ ಪ್ರದೇಶಗಳಲ್ಲಿ ನೀರು ಹರಿಯುವ ಕಡೆ ಪ್ರವಾಹ ಹೆಚ್ಚು ಕಾಲ ಇದ್ದು ವಿರುದ್ಧ ದಿಕ್ಕಿನಲ್ಲಿ ಕಡಿಮೆ ಕಾಲ ಹರಿಯುತ್ತದೆ. ಬಯಲು ಸಮುದ್ರದಲ್ಲಿ ಅಲೆಯ ಪ್ರವಾಹ ಎಲ್ಲ ದಿಕ್ಕಿನಲ್ಲಿಯೂ ಒಂದೇ ವೇಗವಾಗಿ ಪ್ರವಹಿಸುವುದು. ಅಲೆಯ ಎತ್ತರ ಹೆಚ್ಚುವುದಕ್ಕೂ ಪ್ರವಾಹ ವೇಗ ಅಧಿಕವಾಗುವುದಕ್ಕೂ ಏನೂ ಸಂಬಂಧವಿದ್ದಂತೆ ಕಾಣುವುದಿಲ್ಲ. ಪ್ರವಾಹ ಭೂಮಿಯ ಕಡೆಗೆ ಹರಿಯುತ್ತಿದ್ದರೆ ಅದಕ್ಕೆ ಏರುಉಬ್ಬರ (ಫ್ಲಡ್) ಎಂದೂ ಅದಕ್ಕೆ ವ್ಯತಿರಿಕ್ತ ಕಡೆಗೆ ಹರಿಯುತ್ತಿದ್ದರೆ ಇಳಿ ಉಬ್ಬರ (ಎಬ್)ವೆಂದೂ ಹೆಸರು. ಪ್ರವಾಹದ ವೇಗ ಎಲ್ಲ ಕಡೆಯಲ್ಲಿಯೂ ಒಂದೇ ಸಮನಾಗಿರುವುದಿಲ್ಲ. ಲಿವರ್‌ಪೂಲಿನಲ್ಲಿ 7 ನಾವಿಕ ಮೈಲಿ (ನಾಟ್ಸ್) ಆದರೆ ಉತ್ತರ ಸಮುದ್ರದಲ್ಲಿ ಇದು 1 ನಾವಿಕ ಮೈಲಿ.

ಸಮುದ್ರದ ಉಬ್ಬರವಿಳಿತಗಳಲ್ಲಿ ನೀರಿನ ಮಟ್ಟವನ್ನು ಅಳೆಯಲು ಗುರುತು ಮಾಡಿರುವ ದೋಣ್ಣೆಗಳನ್ನು ಸಮುದ್ರದಲ್ಲಿ ಹೂಳಿರುತ್ತಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಅವಲೋಕಿಸಬೇಕಾದಾಗ ಉಬ್ಬರವಿಳಿತ ಮಾನ (ಟೈಡ್ ಗೇಜ್) ಎಂಬ ಸಾಧನವನ್ನು ಬಳಸುತ್ತಾರೆ. ಪ್ರವಾಹ ವೇಗವನ್ನು ಅಳೆಯಲು ಪ್ರವಾಹ ಮಾಪಕ (ಕರೆಂಟ್ ಮೀಟರ್) ಉಪಯೋಗಿಸುತ್ತಾರೆ. ಈ ಯಂತ್ರಗಳನ್ನು ಅಲ್ಲಾಡದಂತೆ ಸಮುದ್ರದಲ್ಲಿ ನಾಟಿ ಅನಂತರ ಅಳೆಯಬೇಕಾದ್ದರಿಂದ ನಿರ್ದಿಷ್ಟ ವಿವರ ಸಂಗ್ರಹಣೆ ಕಷ್ಟ..

ಇದೇ ರೀತಿ ಸೂರ್ಯನ ಗುರುತ್ವಾಕರ್ಷಣ ಬಲದಿಂದ ಸಾಗರ, ಸಮುದ್ರಗಳಲ್ಲಿ ಉಬ್ಬರವಿಳಿತಗಳು ಉಂಟಾಗುತ್ತವೆ. ಸೂರ್ಯನ ದ್ರವ್ಯರಾಶಿ ಚಂದ್ರನಿಗಿಂತ 27,000,000 ಪಟ್ಟು ಹೆಚ್ಚು. ದೂರ 399 ರಷ್ಟು ಹೆಚ್ಚು. ಆದ್ದರಿಂದ ಸೂರ್ಯನಿಂದ ಉತ್ಪನ್ನವಾಗುವ ಉಬ್ಬರವಿಳಿತಗಳ ಬಲಕ್ಕೂ ಚಂದ್ರನ ಬಲಕ್ಕೂ ಹೋಲಿಸಿದರೆ 27,000,000: $390^3$= 1: 2.17 ಆಗುವುದು. ಆದ್ದರಿಂದ ಸೂರ್ಯನಿಗಿಂತಲೂ ಚಂದ್ರನಿಂದ ಉಂಟಾಗುವ ಉಬ್ಬರವಿಳಿತದ ಬಲ ಹೆಚ್ಚಿನದು.

ಭೂಮಿ, ವಾಯುಮಂಡಲದಲ್ಲಿ ಉಬ್ಬರವಿಳಿತಗಳು: ಭೂಮಿಯ ಜಡಭಾಗದ ಗುರುತ್ವಾಕರ್ಷಣ ಬಲದಿಂದ ಉಬ್ಬರವಿಳಿತಗಳು ನಿರ್ದಿಷ್ಟ ಕಾಲಾವಧಿಯಲ್ಲಿ ಆಗುತ್ತವೆ. ಇದರಿಂದ ಗುರುತ್ವಾಕರ್ಷಣದ ಪ್ರಮಾಣ ಸ್ವಲ್ಪ ವ್ಯತ್ಯಾಸವಾಗಬಹುದು. ವಾಯುಮಂಡಲದಲ್ಲಿ ಉಬ್ಬರವಿಳಿತಗಳು ಉಂಟಾಗಿ ವಾಯುವಿನ ಒತ್ತಡದ ಪ್ರಮಾಣ ಕೊಂಚ ಮಾರ್ಪಾಟಾಗುವುದು. ಘರ್ಷಣೆಯಿಂದ (ಫ್ರಿಕ್ಷನ್) ನಷ್ಟವಾಗುವ ಶಕ್ತಿ ಗ್ರಹಗಳ ಚಲನೆ ವಿಷಯದಲ್ಲಿ ಅತಿಮುಖ್ಯವಾದ ಅಂಶ. ಇದರಿಂದ ಕೌನಿಕ ವೇಗ (ಆಂಗ್ಯೂಲರ್ ಮೊಮೆಂಟಂ) ಒಂದು ರೀತಿಯ ಚಲನೆಯಿಂದ ಇನ್ನೊಂದು ರೀತಿಗೆ ವರ್ಗಾಯಿಸಲು ಅವಕಾಶವಾಗುತ್ತದೆ.

ಒಂದು ಗ್ರಹದ ಚಲನೆಯ ವೇಗ ಉಪಗ್ರಹದ ವೇಗಕ್ಕಿಂತ ಹೆಚ್ಚಾಗಿದ್ದರೆ (ಭೂಮಿ ಚಂದ್ರರವೇಗದಂತೆ) ಘರ್ಷಣೆಯ ಶಕ್ತಿನಷ್ಟದಿಂದ ಗ್ರಹದ ವೇಗ ಕಡಿಮೆಯಾಗುತ್ತದೆ. ಉಪಗ್ರಹದ ಕೌನಿಕಜಡವೇಗ ವ್ಯತ್ಯಾಸವಾಗುವುದು. ಆದರೆ ಗ್ರಹ–ಉಪಗ್ರಹಗಳ ವ್ಯವಸ್ಥೆಯ ಒಟ್ಟು ಕೌನಿಕವೇಗ ಸ್ಥಿರವಾಗಿರುತ್ತದೆ. ಉಬ್ಬರವಿಳಿತದಿಂದ ಕೂಡಿರುವ ಭೂಮಿಯ ಮೇಲೆ ಚಂದ್ರನ ಆಕರ್ಷಣಬಲದಿಂದ ಭೂಮಿಯ ಆವರ್ತನ ವೇಗ ಕಡಿಮೆಯಾಗುತ್ತದೆ. ಇದು ಅತ್ಯಲ್ಪವಾದ್ದರಿಂದ 1,20,000 ವರ್ಷಗಳಲ್ಲಿ ದಿವಸದ ವೇಳೆ 1 ಸೆಕೆಂಡಿನಷ್ಟು ಹೆಚ್ಚಾಗಬಹುದು. ಇದೇ ಕಾರಣದಿಂದ ಚಂದ್ರ ಭೂಮಿಯಿಂದ ದೂರ ದೂರ ಸಾಗುತ್ತಿದೆ.

ಸಮುದ್ರದ ಉಬ್ಬರವಿಳಿತಗಳ ಶಕ್ತಿಯಿಂದ ಯಂತ್ರಗಳನ್ನು ಚಲಿಸಲು ಸಾಧ್ಯವಾಗಿದೆ. ಹೆಚ್ಚು ವೆಚ್ಚ ಮಾಡದೆ ಯಾವ ರೀತಿಯ ಇಂಧನವನ್ನೂ ಉಪಯೋಗಿಸದೆ ಅತಿ ಸುಲಭವಾಗಿ ನಡೆಸಬಹುದಾದ ಯಂತ್ರಗಳು ಕೆಲವು ಪ್ರದೇಶಗಳಲ್ಲಿ ಉಪಯೋಗದಲ್ಲಿವೆ. ಆದರೆ ಅತಿ ಹೆಚ್ಚಾಗಿ ಶಕ್ತಿ ಉಬ್ಬರವಿಳಿತಗಳಿಂದ ಉತ್ಪನ್ನವಾಗದೇ ಇರುವುದರಿಂದಲೂ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಶಕ್ತಿ ದೊರಕಬಹುದೆಂಬ ನಂಬಿಕೆ ಇಲ್ಲದೆ ಇರುವುದರಿಂದಲೂ ಈ ಯಂತ್ರಗಳ ಬಳಕೆ ಹೆಚ್ಚಾಗಿಲ್ಲ.

ಉಪಯೋಗಗಳು: 1. ಆಳವಿಲ್ಲದ ಸಮುದ್ರ ತೀರದ ಬಂದರುಗಳಿಗೆ ದೊಡ್ಡಪ್ರಮಾಣದ ಹಡಗು ಪ್ರವೇಶಿಸಲು ಮತ್ತು ನಿರ್ಗಮಿಸಲು ನೆರವಾಗುತ್ತವೆ. 2. ನದಿಗಳು ಅಥವಾ ಇತರ ಕರ್ತೃಗಳಿಂದ ಸಂಚಯಗೊಂಡ ಅನುಪಯುಕ್ತ ವಸ್ತುಗಳನ್ನು ಉಬ್ಬರವಿಳಿತ ಅಲೆಗಳು ಹಿಂದಿರುಗುವಾಗ ಸಮುದ್ರದೊಳಕ್ಕೆ ಒಯ್ದು ಸ್ವಚ್ಛತೆಗೆ ನೆರವಾಗುತ್ತವೆ. 3. ಉಬ್ಬರದಲೆಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆ ಸಾಧ್ಯತೆಗಳಿವೆ. 4. ಮೀನು ಮತ್ತು ಇತರ ಜಲಚರಗಳಿಗೆ ಬೇಕಾದ ಆಹಾರದ ಹಂಚಿಕೆಗೆ ನೆರವಾಗುತ್ತವೆ ಹಾಗೂ ಮೀನುಗಾರಿಕೆಯ ಮೇಲೆ ಪ್ರಭಾವ ಬೀರುತ್ತವೆ. (ಎ.ಸಿ.)

**ಉಮೇರಿಯ ಸ್ತರಗಳು:** ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿರುವ ಉಮೇರಿಯ ಎಂಬ ಹಳ್ಳಿಯ ಸಮೀಪದಲ್ಲಿ ಶೋಧಿಸಲಾಗಿರುವ ಸಾಗರ ಶಿಲಾ ಪದರಗಳು. ದಪ್ಪ ಸು. 3,048 ಮೀ. ಶೋಧಿಸಿದವನ ಹೆಸರು ಕೆ. ಪಿ. ಸಿನಾರ್. ಉಮೇರಿಯಕ್ಕೆ ಪೂರ್ವದಲ್ಲಿರುವ ಅನೂಕ್‌ಪುರದಲ್ಲಿ ಇಂಥದೇ ಸಾಗರಶಿಲಾಪದರವಿರುವುದನ್ನು ಘೋಷ್ ಎಂಬಾತ ವರದಿ ಮಾಡಿದ (1954). ಉಮೇರಿಯ ಸಾಗರಶಿಲಾಪದರ ತಾಲ್ಚೀರ್ ಗುಂಡುಶಿಲೆಯ ಮೇಲೂ ಬರಕಾರ್ ಶಿಲೆಗಳ ಕೆಳಗೂ ನಿಕ್ಷೇಪಗೊಂಡಿದೆ. ತಾಲ್ಚೀರ್ ಗುಂಡುಶಿಲೆಗೂ ಉಮೇರಿಯಸ್ತರಕ್ಕೂ ಮಧ್ಯೆ ನಿರ್ದಿಷ್ಟ ಅನನುರೂಪತೆ ಇದ್ದರೂ ಉಮೇರಿಯ ಸ್ತರ ಮತ್ತು ಬರಕಾರ್ ಶಿಲೆಗಳು ಅನುರೂಪವಾಗಿರುವುದು ವ್ಯಕ್ತವಾಗಿದೆ. ಉಮೇರಿಯ ಸ್ತರಗಳಲ್ಲಿ ಸಾಗರವಾಸಿಗಳಾದ ಸ್ಪಿರಿಫೆರ, ಪ್ರೊಡಕ್ಟಸ್, ರಿಟಿಕುಲೇರಿಯ ಮತ್ತು ಕೆಲವು ಚಿಕ್ಕ ಶಂಖ ಜಾತಿಯ ಪ್ರಾಣಿಗಳ ಚಿಪ್ಪುಗಳು ಸಾಮಾನ್ಯವಾಗಿ ದೊರೆಯುತ್ತವೆ. ಬ್ರೇಕಿಯೋಪೊಡ ಪ್ರಾಣಿಗಳ ಪಳೆಯುಳಿಕೆಗಳೇ ಹೆಚ್ಚು. ಅವೆಲ್ಲ ಹೊಸಜಾತಿಯವು ಮತ್ತು ವೈಶಿಷ್ಟ್ಯಪೂರಿತವಾದುವು. ಕಪರ್ ರೀಡ್ ಎಂಬಾತ ಇದನ್ನು ಪರೀಕ್ಷಿಸಿ ಇವು ಕಾರ್ಬಾನಿಫೆರಸ್ ಮತ್ತು ಪರ್ಮಿಯನ್ ಕಲ್ಪಗಳ ಪಳೆಯುಳಿಕೆಗಳ ಮಿಶ್ರ ಎಂಬ ಅಭಿಪ್ರಾಯಕ್ಕೆ ಬಂದಿದ್ದಾನೆ. ಈ ಪಳೆಯುಳಿಕೆಗಳು ಹಿಮಾಲಯ ಪ್ರದೇಶ ಮತ್ತು ರಷ್ಯಗಳಲ್ಲಿರುವ ಪರ್ಮೊಕಾರ್ಬಾನಿಫೆರಸ್ ಕಲ್ಪದವನ್ನು ಹೋಲುತ್ತವೆ ಎಂದಿದ್ದಾನೆ, ಡೈನೊಕ್ರೈನಸ್ ಎಂಬ ಪಳೆಯುಳಿಕೆಯಂತೂ ನಿರ್ದಿಷ್ಟವಾಗಿ ಪರ್ಮಿಯನ್ ಕಲ್ಪದ ಆದಿಭಾಗವನ್ನು ಸೂಚಿಸುತ್ತದೆ. ಆದ್ದರಿಂದ ಉಮೇರಿಯ ಪ್ರದೇಶ ಪರ್ಮಿಯನ್ ಕಲ್ಪದ ಆದಿಭಾಗದಲ್ಲಿ ಟೆತಿಸ್ ಸಾಗರದ ಆಕ್ರಮಣಕ್ಕೊಳಗಾಗಿರಬೇಕು. ಆಕ್ರಮಣಾವಧಿ ಮಾತ್ರ ಅತ್ಯಲ್ಪ. ಆದರೆ ಉಮೇರಿಯ ಸ್ತರಗಳೂ ಗೊಂಡವಾನ ಶಿಲಾನಿಕ್ಷೇಪದ ಪ್ರಾರಂಭಕಾಲದ ಪರಿಮಿತಿಯನ್ನು ನಿರ್ಣಯಿಸಲು ಬಲು ಸಹಾಯಕವಾಗಿವೆ. ಈ ಕಾರಣದಿಂದ ಅವುಗಳ ಪ್ರಾಮುಖ್ಯ ಇಮ್ಮಡಿಸಿದೆ. ಉಮೇರಿಯ ಸ್ತರಗಳು, ಗಿರಿಧಿಯ ಕಾರ್ ಹಾರ್ಬಾರಿ ಶಿಲಾಪದರಗಳು, ಸಾಲ್ಟ್‌ರೇಂಜಿನ ಯೂರಿಡೆಸ್ಮ ಮತ್ತು ಕಾನ್ಯುಲೇರಿಯ ಪದರ ಮತ್ತು ಕಾಶ್ಮೀರದ ಗಂಗಮಾಪ್ಟರಿಸ್ ಶಿಲಾಪದರ ಏಕಕಾಲೀನವಾದವುಗಳೆಂದು ಪರಿಗಣಿಸಲ್ಪಟ್ಟಿವೆ. (ಡಿ.ಆರ್.)

**ಉರಿಗಾಂ:** ಕೋಲಾರ ಜಿಲ್ಲೆಯ ರಾಬರ್ಟ್‌ಸನ್ ಪೇಟೆಯ ಒಂದು ಭಾಗ. ಮೊದಲು ಪ್ರತ್ಯೇಕ ಹಳ್ಳಿಯಾಗಿತ್ತು. ಕೋಲಾರದ ಚಿನ್ನದ ಗಣಿಯ ಮೊಟ್ಟ ಮೊದಲ ಸುರಂಗ (1881) ತೋಡಿದ್ದು ಇಲ್ಲಿ. ಮುಂದಿನ ಹತ್ತು ವರ್ಷಗಳಲ್ಲಿ ಈ ಸುತ್ತಲಿನ ಪ್ರದೇಶವೆಲ್ಲ ಅಭಿವೃದ್ಧಿ ಹೊಂದಿ ಹೊಸರೂಪ ತಳೆಯಿತಲ್ಲದೆ ರಾಬರ್ಟ್‌ಸನ್ ಪೇಟೆಯೆಂಬ ಹೊಸನಗರ ಆವಿರ್ಭವಿಸಿದಾಗ ಅದರಲ್ಲಿ ಇದೂ ಲೀನವಾಯಿತು. ಉರಿಗಾಂಪೇಟೆ ಎಂದೂ ಇದನ್ನು ಕರೆಯುವ ವಾಡಿಕೆಯುಂಟು. ಇದೇ ಹೆಸರಿನ ರೈಲ್ವೆ ನಿಲ್ದಾಣವನ್ನು ಹೊಂದಿದೆ. ಇಲ್ಲೊಂದು ಪ್ರಥಮ ದರ್ಜೆಯ ಕಾಲೇಜು ಸ್ಥಾಪಿತವಾಗಿದೆ (1960).

ಇತಿಹಾಸ ದೃಷ್ಟಿಯಿಂದಲೂ ಉರಿಗಾಂಗೆ ಪ್ರಾಶಸ್ತ್ಯವುಂಟು. ಹೊಯ್ಸಳ ದೊರೆ ರಾಮನಾಥನ (13ನೆಯ ಶತಮಾನ) ತಮಿಳು ಶಾಸನಗಳು ಇಲ್ಲಿವೆ. ಅವುಗಳ ಪ್ರಕಾರ ಇದರ ಹೆಸರು ಉರಿಗೈಯಂ.

*

**ಉರುಗ್ವೆ:** ದಕ್ಷಿಣ ಅಮೆರಿಕದ ಒಂದು ಪುಟ್ಟ ಸ್ವತಂತ್ರದೇಶ. ಉತ್ತರದಲ್ಲಿ ಬ್ರೆಜಿಲ್, ದಕ್ಷಿಣದಲ್ಲಿ ರಿಯೊ ದೆ ಲಾ ಪ್ಲಾಟಾ ನದಿಯ ಅಳಿವೆ, ಪಶ್ಚಿಮದಲ್ಲಿ ಉರುಗ್ವೇ ನದಿ, ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರ – ಇವು ಮೇರೆಗಳು. ವಿಸ್ತೀರ್ಣ 1,77,508 ಚ.ಕಿಮೀ. ದ.ಅ. $30^0$–$35^0$ ಹಾಗೂ ಪ.ರೇ. $53^0$–$58^0$ಗಳ ನಡುವೆಯಿದೆ.




ಮೇಲ್ಮೈ ಲಕ್ಷಣ: ಈ ದೇಶದ ದಕ್ಷಿಣ ಭಾಗ ಬ್ರೆಜಿಲಿಯನ್ ಪ್ರಸ್ಥಭೂಮಿಯ ಕೊನೆಯಾದ್ದರಿಂದ ಇಲ್ಲಿ ಹಲವಾರು ಪುಟ್ಟ ಬೆಟ್ಟಗಳಿವೆ, ಕರಾವಳಿಯ ಉದ್ದಕ್ಕೂ ಕಡಲುಬ್ಬರದಿಂದಾದ ಸರೋವರಗಳೂ ಗುಡ್ಡಗಳೂ ಸಾಮಾನ್ಯ. ಈ ಭಾಗದಲ್ಲಿ ಹರಿಯುವ ನದಿಗಳ ದಡಗಳು ಎತ್ತರವಿಲ್ಲ. ಉತ್ತರಾರ್ಧದ ಪ್ರದೇಶ ಹೆಚ್ಚು ವೈವಿಧ್ಯಮಯ. ಇಲ್ಲಿ ಕಂದರಗಳೂ ತಗ್ಗಿನ ಪ್ರಸ್ಥಭೂಮಿಗಳೂ ವಿಶಾಲ ಕಣಿವೆಗಳೂ ಇವೆ. ಆದರೆ ಒಟ್ಟಿನಲ್ಲಿ ಈ ದೇಶದ ಯಾವ ಭಾಗವೂ 610 ಮೀ ಗಿಂತ ಎತ್ತರವಾಗಿಲ್ಲ. ಉರುಗ್ವೇಯಲ್ಲೇ ಹರಿಯುವ ದೊಡ್ಡ ನದಿಗಳು ಯಾವುವೂ ಇಲ್ಲ. ರಿಯೊನೇಗ್ರೊ ಅತ್ಯಂತ ದೊಡ್ಡದು. ಇದರ ಕೆಳಭಾಗ ಮಾತ್ರವೇ ನೌಕಾಸಂಚಾರ ಯೋಗ್ಯ. ಉಳಿದ ನದಿಗಳಲ್ಲಿ ಸಣ್ಣಪುಟ್ಟ ನೌಕೆಗಳು ಯಾನ ಮಾಡಬಹುದಷ್ಟೆ. ರಿಯೊನೇಗ್ರೊವನ್ನು ಬಿಟ್ಟರೆ ಹೆಸರಿಸಬಹುದಾದ ಉಳಿದ ನದಿಗಳೆಂದರೆ ಸಾಂತಾಲೂಸಿಯ, ಕ್ವೀಗ್ವೆರಿ ಮತ್ತು ಸಿಬೊಲಾಟಿ, ಉರುಗ್ವೇಯ ಪಶ್ಚಿಮದಂಚಿನಲ್ಲಿ ಹರಿಯುವ ಉರುಗ್ವೇ ನದಿಯ ಮೇಲೆ ಅದರ ಮುಖದಿಂದ ಪೈಸಾಂಡೂ ನಗರದವರೆಗೆ ಹಡಗಿನ ಸಂಚಾರಾವಕಾಶವುಂಟು. ಅಲ್ಲಿಂದ ಮುಂದೆ ಸಣ್ಣ ನೌಕೆಗಳು ಸಾಲ್ಟೊವರೆಗೂ ಹೋಗಿ ಬರುತ್ತವೆ.

ವಾಯುಗುಣ: ಉರುಗ್ವೇಯದು ಸಮಶೀತೋಷ್ಣ ವಾಯುಗುಣ. ದಕ್ಷಿಣಾರ್ಧ ಗೋಳದಲ್ಲಿರುವುದರಿಂದ ಇಲ್ಲಿ ಜನವರಿ–ಫೆಬ್ರವರಿಗಳಲ್ಲಿ ಬೇಸಗೆಯ ಹವೆ ಇರುತ್ತದೆ. ಆಗಿನ ಸರಾಸರಿ ಉಷ್ಣತೆ $22^0$ ಸೆ. ಜುಲೈ ತಿಂಗಳು ಇಲ್ಲಿ ಅತ್ಯಂತ ಚಳಿ. ಆಗಿನ ಉಷ್ಣತೆ $10^0$ ಸೆಂ. ವರ್ಷದುದ್ದಕ್ಕೂ ದಿನದಿನವೂ ಹವೆ ಬದಲಾಗುತ್ತಿರುತ್ತದೆ. ಝಂಝಾವಾತದ ಕೇಂದ್ರಗಳು ಈ ದೇಶದ ಮೂಲಕ ಹಾದು ಹೋಗುವುದೇ ಈ ಪವನಚಾಂಚಲ್ಯಕ್ಕೆ ಮುಖ್ಯಕಾರಣ. ಉತ್ತರದ ಉಷ್ಣ ಮಾರುತಗಳು ಥಟ್ಟನೆ ಅದೃಶ್ಯವಾಗಿ, ನೈಋತ್ಯದ ಚಳಿಗಾಳಿ ಬೀಸಿ ಉಷ್ಣಮಾಪಕದ ಪಾದರಸ ಕುಸಿಯುವುದು ಸಾಮಾನ್ಯ. ಈ ಕಾರಣದಿಂದ ಉರುಗ್ವೇಯಲ್ಲಿ ನಿಶ್ಚಿತವಾದ ಮಳೆಗಾಲವಾಗಲಿ ಒಣಹವೆಯ ಋತುವಾಗಲಿ ಇಲ್ಲ. ಏಪ್ರಿಲ್ – ಮೇ ತಿಂಗಳುಗಳಲ್ಲಿ ಗರಿಷ್ಠ ಮಳೆ ಬೀಳುತ್ತದೆ. ಚಳಿಗಾಲದಲ್ಲೂ ಮಳೆಯುಂಟು. ಸಮುದ್ರದೆಡೆಯಿಂದ ದೂರದೂರ ಸಾಗಿದಂತೆ ಮಳೆಯ ಪರಿಮಾಣ ಕಡಿಮೆ, ಆದರೆ ಎಲ್ಲೂ ಅನಾವೃಷ್ಟಿಯಿಲ್ಲ. ಬೇಸಗೆಯಲ್ಲಿ ಗುಡುಗು ಸಿಡಿಲುಗಳ ಆರ್ಭಟ ಹೆಚ್ಚು.

ಸ್ವಾಭಾವಿಕ ಸಸ್ಯ, ಪ್ರಾಣಿವರ್ಗ: ಎತ್ತರವಾದ ಹುಲ್ಲಿನ ಬೆಳೆ ಎಲ್ಲೆಲ್ಲೂ ಸಾಮಾನ್ಯವಾಗಿದೆ. ಇವು ನದಿಗಳ ಕೆಳ ಪ್ರದೇಶಗಳಲ್ಲಿ ಹೆಚ್ಚು ಸಾಂದ್ರ, ಆಲ್ಡರ್, ಆಲೊ (ಕತ್ತಾಳೆ ಜಾತಿ), ಪಾಪ್ಲರ್, ಅಕೇಸಿಯ, ವಿಲೊ, ಯೂಕಲಿಪ್ಟಸ್—ಇವು ಮುಖ್ಯ ಮರಗಳು. ತಾಳೆಜಾತಿಯ ಮರಗಳು ಕಣಿವೆಗಳಲ್ಲೂ ಹುಲ್ಲುಗಾವಲುಗಳಲ್ಲೂ ಬಣ್ಣ ಬಣ್ಣದ ನಸುಗಂಪಿನ ಹೂಗಿಡಗಳು ಅಸಂಖ್ಯಾತ.

ಜನವಸತಿ ಇರುವ ಪ್ರದೇಶಗಳಲ್ಲೆಲ್ಲ ವನ್ಯಮೃಗಗಳು ಬಹುಮಟ್ಟಿಗೆ ಅದೃಶ್ಯವಾಗಿವೆ, ಅಮೆರಿಕನ್ ಉಷ್ಟ್ರಪಕ್ಷಿಯೂ ಈಗ ವಿರಳ. ಸಿಂಹ. ಚಿರತೆ. ನರಿ, ಜಿಂಕೆ, ಕಾಡುಬೆಕ್ಕು, ನೀರುಹಂದಿ, ಆರ್ಮಡಿಲ್ಲೊ–ಇವು ಇಲ್ಲಿನ ಕೆಲವು ಚತುಷ್ಪಾದಿ ಪ್ರಾಣಿಗಳು. ರಣಹದ್ದು, ನಾಡುಕಾಗೆ, ಉದ್ದ ತೋಕೆಯ ಸಣ್ಣಗಿಳಿ, ಬಿಲವಾಸಿ ಗೂಬೆ, ಕೆಂಪುಹಕ್ಕಿ, ಝೇಂಕಾರದ ಹಕ್ಕಿ ಇವನ್ನೂ ಇಲ್ಲಿ ಕಾಣಬಹುದು. ಜೇಡಗಳು ಸಾಮಾನ್ಯ, ವಿಷಪೂರಿತ ಹಲ್ಲಿ, ಆಮೆ, ತಲೆಯ ಮೇಲೆ ಶಿಲುಬೆಯ ಗುರುತಿರುವ ಭಯಂಕರ ವಿಷಸರ್ಪ, ಗಿಲಿಕೆ ಹಾವುಗಳಿವೆ. ಉರುಗ್ವೇ ನದಿಯ ಶಿರೋಭಾಗ ಮೊಸಳೆಗಳ ಸಾಮ್ರಾಜ್ಯ.

ಜನ ಜೀವನ: ಶೇ. 50ರಷ್ಟು ಜನ ವ್ಯವಸಾಯಗಾರರು. ದಕ್ಷಿಣಭಾಗದಲ್ಲಿ ಜನಸಂಖ್ಯೆ ಹೆಚ್ಚು ದೇಶದ ಶೇ. 83 ಪ್ರದೇಶದಲ್ಲಿ ಹುಲ್ಲುಗಾವಲಿರುವ ಉರುಗ್ವೇಯನ್ನು ಪ್ರಪಂಚದ ಅತಿ ಉತ್ತಮ ಮೇವಿನಭೂಮಿ ಎನ್ನುತ್ತಾರೆ. 1840ರ ಅನಂತರ ಬ್ರಿಟಿಷರು ಮೆರಿನೊ ಕುರಿಗಳನ್ನು ಇಲ್ಲಿಗೆ ತಂದು ಸಾಕಿದರು. ಅವುಗಳಿಂದ ಉಣ್ಣೆ ಮತ್ತು ಮಾಂಸ ಉತ್ಪಾದಿಸಿ ರಫ್ತು ಮಾಡುತ್ತಾರೆ. ಶೀತಕ ಯಂತ್ರ ಬಂದ ಮೇಲೆ ಮಾಂಸದ ಉದ್ಯೋಗ ಭರದಿಂದ ಸಾಗಿದೆ. ಉರುಗ್ವೇ ನದಿಯ ಮೇಲಿನ ಪೈಸಾಂಡೂ, ಸಾಲ್ಟೊ, ಮತ್ತು ರಿಯೊ ನೇಗ್ರೊ ನದಿಯ ಮೇಲಿರುವ ಮರ್ಸೇದೇಸ್ ಪಟ್ಟಣಗಳಲ್ಲಿ ಮಾಂಸ ಕೈಗಾರಿಕೆ ಪ್ರಮುಖ್ಯ.

ದಕ್ಷಿಣ ಭಾಗದಲ್ಲಿ ವ್ಯವಸಾಯ ಸಾಮಾನ್ಯ. ಅರ್ಧ ಭೂಮಿ ಗೋದಿಗಾಗಿ ಮೀಸಲಾಗಿದೆ. ಅಗಸೆ ನಾರು, ಓಟ್ಸ್, ಬಾರ್ಲಿ, ದ್ರಾಕ್ಷಿ ಇತರ ಬೆಳೆಗಳು. ಎರಡನೆಯ ಮಹಾಯುದ್ಧದ ಅನಂತರ ಇಲ್ಲಿ ಪ್ರಗತಿ ಹೆಚ್ಚಿದೆ. ಸರ್ಕಾರವೇ ವ್ಯವಸಾಯ ಪದಾರ್ಥಗಳ ಬೆಲೆ ನಿಗದಿ ಮಾಡಿ ವ್ಯವಸಾಯಕ್ಕೆ ಪ್ರೋತ್ಸಾಹ ಕೊಟ್ಟಿದೆ. ಈಗ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಹೆಚ್ಚು ಭೂಮಿಯನ್ನು ಸಾಗುವಳಿಗೆ ಒಳಪಡಿಸಲಾಗಿದೆ. ರೈಲುಮಾರ್ಗಗಳ ನಿರ್ಮಾಣ ಬ್ರಿಟಿಷ್ ಬಂಡವಾಳದಿಂದಾಯಿತು. ಈಗ ಎಲ್ಲ ರೈಲುಗಳೂ ಸರ್ಕಾರದ ಅಧೀನದಲ್ಲಿವೆ. ರಸ್ತೆ ಸಾರಿಗೆಯೂ ಪ್ರಗತಿ ಹೊಂದಿದೆ.

ಇಲ್ಲಿಯ ಮುಖ್ಯ ರಫ್ತು ಉಣ್ಣೆ, ಮಾಂಸ, ಮಾಂಸದ ಪದಾರ್ಥಗಳು, ಚರ್ಮ ಹಾಗೂ ಗೋದಿ. ರಫ್ತಿನ ಬಹುಭಾಗ ನೆದರ್ಲೆಂಡ್ಸಿಗೆ ಹೋಗುತ್ತದೆ. ಆಮದು ವಿಶೇಷವಾಗಿ ಸಂಯುಕ್ತ ಸಂಸ್ಥಾನ. ಬ್ರಜಿಲ್, ಜರ್ಮನಿ ಮತ್ತು ಬ್ರಿಟನ್‌ಗಳಿಂದ.

ಉರುಗ್ವೇಯ ಜನ ಪ್ರಧಾನವಾಗಿ ಬಿಳಿಯರು: 19–20ನೆಯ ಶತಮಾನಗಳಲ್ಲಿ ಸ್ಪೇನ್, ಇಟಲಿ ಮತ್ತು ಇತರ ಐರೋಪ್ಯ ದೇಶಗಳಿಂದ ಬಂದವರ ವಂಶದವರು. ಇಂಡಿಯನ್ನರು ಇಲ್ಲವೇ ಇಲ್ಲವೆನ್ನಬಹುದು. ಈ ಲಕ್ಷಣವುಳ್ಳ ಶೇ. 5 ಮಂದಿ ಮಾತ್ರ ಕಾಣಸಿಗುತ್ತಾರೆ. ರೋಮನ್ ಕೆಥೊಲಿಕರು ಬಹುಸಂಖ್ಯಾತರು. ಸ್ಪಾನಿಷ್ ಅಧಿಕೃತ ಭಾಷೆ.

ಉರುಗ್ವೇಯ ಜನಸಂಖ್ಯೆ 3415,920 (2002). ಚ.ಕಿಮೀಗೆ 15 ಜನಸಾಂದ್ರತೆಯಿದೆ. ದಕ್ಷಿಣ ಕರಾವಳಿ ಹಾಗು ಉರಗ್ವೇನದೀ ತೀರಪ್ರದೇಶಗಳಲ್ಲಿ ಜನ ಹೆಚ್ಚಾಗಿ ವಾಸಿಸುತ್ತಾರೆ. ರಾಜಧಾನಿಯಾದ ಮಾಂಟಿವಿಡಿಯೋದಲ್ಲಿ ಜನದಟ್ಟಣೆ ಬಲು ಹೆಚ್ಚು, ಇದರ (ಜನಸಂಖ್ಯೆ 1,330,440: (2002). ಇಡೀ ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚಿನ ಮಂದಿ ಈ ನಗರದಲ್ಲೂ ಸುತ್ತಮುತ್ತಣ ಉಪನಗರಗಳಲ್ಲೂ ವಾಸಿಸುತ್ತಾರೆ.

ಉರುಗ್ವೇಯಲ್ಲಿ ರೈಲುಮಾರ್ಗಗಳೂ ರಸ್ತೆಗಳೂ ಉತ್ತಮವಾಗಿ ಇವೆ. ಇವಕ್ಕೆ ಮಾಂಟಿವಿಡಿಯೊ ಕೇಂದ್ರ. ಅಂತಾರಾಷ್ಟ್ರೀಯ ಸಾಲ ಪಡೆದು ಹೆದ್ದಾರಿಗಳನ್ನು ಉತ್ತಮಪಡಿಸಿ ಮುಖ್ಯವಾಗಿ ಬ್ರೆಜಿಲಿನೊಂದಿಗೆ ಹೆಚ್ಚಿನ ಸಂಪರ್ಕ ಕಲ್ಪಿಸಲಾಗಿದೆ.

ಉರುಗ್ವೇ ಜನರಲ್ಲಿ ಶೇ. 85 ಮಂದಿ ಅಕ್ಷರಸ್ಥರು. ಪೇಸೋ ಇಲ್ಲಿನ ನಾಣ್ಯ.

(ಆರ್.ಆರ್.ಎ.;ಬಿ.ಓ.)

**ಉಲ್ಕೆ:** ವಸ್ತುವಿನ ಒಂದು ಕಣ ಭೂಮಿಯ ವಾಯುಮಂಡಲವನ್ನು ಸೆಕೆಂಡಿಗೆ 11–72 ಕಿಮೀ ವೇಗದಿಂದ ಪ್ರವೇಶಿಸಿದಾಗ ಕಾಣುವ ದೃಶ್ಯ(ಮೀಟಿಯರ್). ಕಣದ ಹೆಸರು ಉಲ್ಕಾಕಲ್ಪ (ಮೀಟಿಯೊರಾಯಿಡ್). ರೂಢಿಯ ಮಾತಿನಲ್ಲಿ ಉಲ್ಕೆಗಳನ್ನು ಬೀಳುವ ನಕ್ಷತ್ರ ಎಂಬುದಾಗಿ ಜನಸಾಮಾನ್ಯರು ವರ್ಣಿಸುವುದಿದೆ. ವಾಸ್ತವಿಕವಾಗಿ ಈ ಕಾಯಗಳಿಗೂ ನಕ್ಷತ್ರಗಳಿಗೂ ಯಾವ ಸಂಬಂಧವೂ ಇಲ್ಲ. ರಾತ್ರಿಯ ಆಕಾಶದಲ್ಲಿ ಕಾಣಿಸಿಕೊಳ್ಳುವ ಉಲ್ಕೆಗಳ ಪೈಕಿ ಸಾಸಿವೆ ಕಾಳಿಗಿಂತ ಹೆಚ್ಚು ಗಾತ್ರದ ಘನಕಾಯಗಳು ತೀರ ವಿರಳ. ಅಷ್ಟು ಪುಟ್ಟವಾದರೂ ಅವು ದೊಡ್ಡ ಗ್ರಹಗಳಂತೆಯೇ ನಿರ್ದಿಷ್ಟ ಕಕ್ಷೆಗಳಲ್ಲಿ ಸೂರ್ಯನ ಸುತ್ತ ಸಂಚರಿಸುತ್ತಿರುತ್ತವೆ. ಇವೇ ಉಲ್ಕಾಕಲ್ಪಗಳು. ಇವುಗಳಿಗೆ ಸಾಮಾನ್ಯವಾಗಿ ಭೂಸಂಪರ್ಕವಿಲ್ಲ. ಭೂಮಿ ಕೂಡ ನಿರಂತರ ಸೂರ್ಯಪರಿಭ್ರಮಣ ಮಾಡುತ್ತಿರುವುದರಿಂದ ಚರ ಉಲ್ಕಾಕಲ್ಪಗಳು ವೇಗವಾಗಿ ಭೂವಾಯುಮಂಡಲಕ್ಕೆ ಡಿಕ್ಕಿ ಹೊಡೆಯುವ ಆಕಸ್ಮಿಕಗಳಿಗೆ ಕೊರತೆಯಿಲ್ಲ. ಈ ಆಕಸ್ಮಿಕಗಳ ಫಲವೇ ಪ್ರಜ್ವಲಿಸುವ ಉಲ್ಕೆಗಳು.

ಪ್ರತಿ ಸೆಕೆಂಡಿಗೆ 11–72 ಕಿಮೀ ಅಧಿಕ ಸಾಪೇಕ್ಷ ವೇಗಗಳಿಂದ ಉಲ್ಕಾಕಲ್ಪಗಳು ವಾಯುಮಂಡಲವನ್ನು ಭೇದಿಸಬಲ್ಲವು. ಇಂಥ ಸಂಘಟನೆಯ(ಇಂಪ್ಯಾಕ್ಟ್) ಪ್ರಥಮ ಪರಿಣಾಮಗಳು ಗೋಚರಕ್ಕೆ ಬರುವಾಗ ಸಾಧಾರಣ ಉಲ್ಕೆಯೊಂದು ಭೂಮಿಯ ಮೇಲ್ಮೈಯಿಂದ 100–130 ಕಿಮೀ ಎತ್ತರದಲ್ಲಿರುತ್ತದೆ. ಅಲ್ಲಿ ವಾಯುಮಂಡಲದ ದ್ರವ್ಯ ಭೂ ಮೇಲ್ಮೈ ಬಳಿಗಿಂತ ಹತ್ತಾರು ಕೋಟಿ ಪಾಲು ವಿರಳವಾಗಿರುವುದಾದರೂ ವಾಯುವಿನ ಅಣುಗಳು ಆಗಲೇ ಸಾಕಷ್ಟು ಸಂಖ್ಯೆಯಲ್ಲಿ ಉಲ್ಕಾಕಲ್ಪಕ್ಕೆ ಬಡಿಯುತ್ತಿರುವುವು. ತತ್ಫಲವಾಗಿ

ಉಲ್ಕಾಕಲ್ಲಿನ ಸ್ಫಟಿಕಜಾಲದೊಳಗಿನ (ಕ್ರಿಸ್ಟಲ್ ಲ್ಯಾಟಿಸ್) ಪರಮಾಣುಗಳು ಹೆಚ್ಚು ಹೆಚ್ಚು ರಭಸದಿಂದ ಕಂಪಿಸತೊಡಗಿ ಬಲುಬೇಗನೆ ಆ ಕಲ್ಲು ಕುದಿಯುವ ಉಷ್ಣತೆಯನ್ನು ಮುಟ್ಟುವುದು. ಬಳಿಕ ಅದರ ಆವಿಗೂ ಗಾಳಿಗೂ ನಡೆಯುವ ಸಂಘಟನೆಯಲ್ಲಿ ಇವೆರಡರ ದ್ರವ್ಯಗಳ ಕೋಟ್ಯಾನುಕೋಟಿ ಅಣು ಪರಮಾಣುಗಳೂ ಉದ್ರಿಕ್ತಸ್ಥಿತಿಗಳಿಗೆ (ಎಕ್ಸೈಟೆಡ್ ಸ್ಟೇಟ್ಸ್) ತಲುಪಿ ಅವು ಎಲೆಕ್ಟ್ರಾನ್ ಮತ್ತು ಧನ ಆಯಾನುಗಳಾಗಿ ಛಿದ್ರಗೊಳ್ಳುತ್ತವೆ. ಉಲ್ಕೆಗಳು ಪ್ರಜ್ವಲಿಸಲು ಪ್ರಧಾನ ಕಾರಣ ಉದ್ರಿಕ್ತ ಸ್ಥಿತಿಗಳಲ್ಲಿರುವ ಅಣುಪರಮಾಣುಗಳು ಮಾಮೂಲು ಸ್ಥಿತಿಗೆ ಹಿಂತಿರುಗುವಾಗ ಮತ್ತು ಪ್ರತ್ಯೇಕಗೊಂಡ ಎಲೆಕ್ಟ್ರಾನ್ ಮತ್ತು ಆಯಾನುಗಳು ಅಣುಪರಮಾಣುಗಳಾಗಿ ಪುನಸ್ಸಂಯೋಗಗೊಳ್ಳುವ ಸಾಧ್ಯತೆಯಿರುವುದರಿಂದ ಅನೇಕ ವೇಳೆ ಉಲ್ಕಾಕಲ್ಲೊಂದರ ಸಾಗಣೆಯ ಬಳಿಕವೂ ಕೆಲಕ್ಷಣಗಳವರೆಗೆ ಅದರ ಮಾರ್ಗರೇಖೆ ನಸುಪ್ರಕಾಶವನ್ನು ಸೂಸುವುದುಂಟು. ಉಲ್ಕೆಗಳ ಅಧ್ಯಯನದಲ್ಲಿ ಬಳಕೆಯಾಗುತ್ತಿರುವ ಉಪಕರಣಗಳ ಪೈಕಿ ರಾಡಾರಿಗೆ ಅಗ್ರಸ್ಥಾನವುಂಟು.

ಸಾಧಾರಣ ಉಲ್ಕಾಕಲ್ಲುಗಳು ಭೂ ಮೇಲ್ಮೈನಿಂದ 60–70 ಕಿಮೀ ಎತ್ತರವನ್ನು ತಲುಪುವಷ್ಟರಲ್ಲಿ ದೂಳು ಮಿಶ್ರಿತವಾದ ಆವಿಯ ರೂಪಕ್ಕೆ ಸಂಪೂರ್ಣವಾಗಿ ಪರಿವರ್ತನೆಗೊಂಡು ವಾಯುಮಂಡಲದೊಂದಿಗೆ ಬೆರೆತುಹೋಗುತ್ತವೆ. ಆದರೆ ಅಧಿಕ ದ್ರವ್ಯರಾಶಿ ಇರುವ ಅಗ್ನಿಗೋಳಗಳೆಂಬ (ಬೋಲೈಡ್ಸ್ ಫೈರ್ ಬಾಲ್ಸ್) ಹೆಸರಿನ ಉಲ್ಕಾಕಲ್ಲುಗಳು ಕೆಲವೊಮ್ಮೆ ತುಸು ದಟ್ಟವೇ ಆಗಿರುವ ಇನ್ನೂ ತಗ್ಗಿನ ವಾಯುಸ್ತರಗಳನ್ನು ಕೂಡ ಪ್ರವೇಶಿಸುವುದುಂಟು. ಈ ಸ್ತರಗಳಲ್ಲಿ ಉಲ್ಕಾಕಲ್ಲುಗಳ ಚಲನೆಗೆ ಪ್ರಚಂಡ ಪ್ರತಿರೋಧವಿದ್ದು ಅಲ್ಲಿ ಅಗ್ನಿಗೋಳಗಳು ತಮ್ಮ ವೇಗವನ್ನು ಅತೀ ತ್ವರೆಯಿಂದ ಕಳೆದುಕೊಳ್ಳತೊಡಗುವುವು. ಷಾಕ್‌ವೇವ್ ವಿಚ್ಛಿನ್ನತೆಯಿಂದಾಗಿ ಅಗ್ನಿಗೋಳಗಳ ಉಜ್ವಲ ಪ್ರಕಾಶ ಹಾಗೂ ಅತ್ಯಧಿಕ ಉಷ್ಣತೆಗಳ ಜೊತೆಗೆ ಅನೇಕ ವೇಳೆ ಗುಡುಗಿನಂಥ ಶಬ್ದಗಳೂ ಉತ್ಪನ್ನವಾಗುತ್ತವೆ. ಇನ್ನೂ ವಾಯುಮಂಡಲದಲ್ಲಿರುವಾಗಲೇ ಬಹಳಷ್ಟು ಅಗ್ನಿಗೋಳಗಳು ಸಂಪೂರ್ಣವಾಗಿ ಕುದಿದು ಆವಿ, ಧೂಮಗಳ ರೂಪದಲ್ಲಿ ನಾಶವಾಗುವುವು. ಛಿದ್ರವಾದರೂ ಪೂರ್ಣವಾಗಿ ದೂಳೀಪಟವಾಗದೆ ಭೂ ಮೇಲ್ಮೈವರೆಗೆ ಪಯಣಿಸುವ ಸಾಮರ್ಥ್ಯ ಭಾರೀ ತೂಕವನ್ನುಳ್ಳ ಕೆಲವು ಅಗ್ನಿಗೋಳಗಳಿಗೆ ಇದೆ. ಭೂ ಮೇಲ್ಮೈಯನ್ನು ಮುಟ್ಟಿದ ತರುವಾಯ ಇಂಥ ಬೃಹದಗ್ನಿಗೋಳಗಳ ಅವಶೇಷಗಳೂ ಉಲ್ಕಾಪಿಂಡಗಳೆನಿಸಿಕೊಳ್ಳುತ್ತವೆ. (ಮೀಟಿಯೊರೈಟ್ಸ್).

ಉಲ್ಕಾಪಿಂಡಗಳಲ್ಲಿ ಕೊನೆಗಾಣುವ ಉಲ್ಕಾಕಲ್ಲುಗಳು ವಾಯುಮಂಡಲವನ್ನು ಪ್ರವೇಶಿಸುವ ಮುನ್ನ ನೂರಾರು ಕಿಲೋಗ್ರಾಮುಗಳಿಂದ ಹಿಡಿದು ನೂರಾರು ಟನ್ನುಗಳಿಗೂ ಮೀರಿದ ತೂಕವನ್ನು ಪಡೆದಿರಬಹುದು. ಅವುಗಳ ಗಾತ್ರ ವೈವಿಧ್ಯ ಕೆಲವು ದೂಳಿ ಉಲ್ಕಾಕಲ್ಲುಗಳು ವಾಯುವಿನ ಅಣುಗಳ ಸಂಘಟನೆಗೆ ಸಿಕ್ಕಿ ತಮ್ಮ ವೇಗವನ್ನು ಕಳೆದುಕೊಳ್ಳುವಾಗ ಬೆಳಗುವುದು ಸಹ ಇಲ್ಲ. ಬಾಹ್ಯಂತರಿಕ್ಷದಲ್ಲಿ ದೂಳಿಉಲ್ಕಾಕಲ್ಲುಗಳ ಸಂಚಾರವಿರುವುದಕ್ಕೆ ಪ್ರತ್ಯಕ್ಷವಾದ ಪ್ರಥಮ ರುಜುವಾತು ದೊರೆತದ್ದು ಅಂತರಿಕ್ಷಗಾಮಿ ರಾಕೆಟ್ಟುಗಳ ಮುಖಾಂತರವೇ. ಅದೇ ಸೂರ್ಯಾಸ್ತಮಯದ ಬಳಿಕ ಹಾಗೂ ಸೂರ್ಯೋದಯಕ್ಕೆ ಪೂರ್ವಭಾವಿಯಾಗಿ ಆಕಾಶದಲ್ಲಿ ಕಂಡುಬರುವ ತ್ರಿಕೋಣಾಕಾರದ ರಾಶಿ ಚಕ್ರ ಪ್ರಭೆ (ಜೋಡಿಯಾಕಲ್ ಲೈಟ್). ದೂಳಿ ಉಲ್ಕಾಕಲ್ಲುಗಳು ವಾಯುಮಂಡಲದ ಮೂಲಕ ಹಾಯ್ದು ಭೂಮಿಯ ಮೇಲ್ಮೈಗೆ ಇಳಿಯಲು ಹಲವಾರು ದಿವಸಗಳ ಅವಧಿಯನ್ನು ತೆಗೆದುಕೊಳ್ಳಬಹುದು. ಪ್ರಜ್ವಲಿಸುವ ಉಲ್ಕಾಕಲ್ಲುಗಳ ಬಾಷ್ಪೀಕರಣದಿಂದ (ವೇಪರೈಸೇಷನ್) ಉತ್ಪನ್ನವಾಗುವ ದೂಳಿನ ಕಣಗಳು ಸಹ ಇದೇ ರೀತಿ ವಾಯುಮಂಡಲದಲ್ಲಿ ಬಲು ಕಾಲ ತೇಲಾಡುತ್ತಿರುತ್ತವೆ.



ಉಲ್ಕಾ ಕಲ್ಲುಗಳು

ಉಲ್ಕಾಕಲ್ಲುಗಳ ಸೃಷ್ಟಿರಹಸ್ಯಕ್ಕೆ ಸೌರವ್ಯೂಹದಲ್ಲಿ ಬೇರೆ ಎರಡು ವರ್ಗಗಳಿಗೆ ಸೇರಿದ ಸೂರ್ಯಗಳೊಂದಿಗೆ ನಿಕಟಸಂಬಂಧ ಇರುವಂತೆ ಕಂಡುಬರುವುದು ಕ್ಷುದ್ರ ಗ್ರಹಗಳು ಮತ್ತು ಧೂಮಕೇತುಗಳು (ಆಸ್ಟಿರಾಯ್ಡ್ ಅಂಡ್ ಕಾಮೆಟ್ಸ್). ಕ್ಷುದ್ರಗ್ರಹಗಳು ದೃಢವಾದ ಘನಕಾಯಗಳು. ಈ ಕ್ಷುದ್ರಗ್ರಹಗಳ ನಡುವೆ ಪದೇ ಪದೇ ಸಂಭವಿಸಬಹುದಾದ ಸಂಘರ್ಷಣೆಗಳಿಂದ ಅವು ಇನ್ನೂ ಕಿರಿದಾದ ಕಾಯಗಳಾಗಿ ಒಡೆಯುತ್ತ ಹೋಗಬಹುದು. ಉಲ್ಕಾಕಲ್ಲುಗಳ ಪೈಕಿ ದೃಢರಚನೆಯ ಲಕ್ಷಣಗಳನ್ನುಳ್ಳವು ಇಂಥ ಅವ್ಯಾಹತ ವಿಭಜನೆಗಳಿಂದ ಜನಿಸಿರುವ ಅತ್ಯಂತ ಕಿರಿಯ ಕ್ಷುದ್ರಗ್ರಹಗಳಿರಬಹುದು. ವಿಶಿಷ್ಟವಾಗಿ ಉಲ್ಕಾಪಾತಗಳಲ್ಲಿ ಪರ್ಯವಸಾನ ಹೊಂದುವ ಉಲ್ಕಾಕಲ್ಲುಗಳನ್ನು ಈ ಎಣಿಕೆಯಲ್ಲಿ ಕಿರು ಕ್ಷುದ್ರಗ್ರಹಗಳೆಂದು ಪರಿಗಣಿಸಬಹುದು. ಕಿರುಕ್ಷುದ್ರಗ್ರಹಗಳ ತಂಡಕ್ಕಿಂತಲೂ ಅಧಿಕ ಸಂಖ್ಯಾತವಾದ ಚಿಕ್ಕ ಘನಕಾಯಗಳೇ ಉಲ್ಕಾಕಲ್ಲುಗಳ ಎರಡನೆಯ ಬಳಗದವು.

ಉಲ್ಕಾಪಿಂಡಗಳು: ಮೊದಲನೆಯ ಬಳಗದ ಉಲ್ಕಾಕಲ್ಲುಗಳಲ್ಲಿ ಪ್ರಧಾನವಾದವು ಉಲ್ಕಾಪಿಂಡಗಳು. ಉಲ್ಕಾಪಿಂಡವೆಂದ ಮಾತ್ರಕ್ಕೆ ಆಕಾಶದಿಂದ ಉಲ್ಕಾಕಲ್ಲೊಂದು ಅವಿಭಕ್ತವಾಗಿ ಬಿದ್ದು ಭೂಮೇಲ್ಮೈಯಲ್ಲಿ ಬಂಡೆಯಂತೆ ಉಳಿದುಕೊಳ್ಳಬೇಕೆಂದೇನಿಲ್ಲ. ವಾಯುಮಂಡಲದಲ್ಲಿ ಉಲ್ಕಾಕಲ್ಲುಗಳು ಬಹುಮಟ್ಟಿಗೆ ನಶಿಸಿಹೋಗುತ್ತವೆ ಹಾಗೂ ಅನೇಕವೇಳೆ ಛಿದ್ರಗೊಳ್ಳುತ್ತವೆ. ಅಲ್ಲದೆ ಕೆಲವು ವೇಳೆ ಉಲ್ಕಾಕಲ್ಲೊಂದು ಸೆಕೆಂಡಿಗೆ ನಾಲ್ಕಾರು ಕಿಲೋಮೀಟರುಗಳಷ್ಟು ಅಧಿಕ ವೇಗದಿಂದ ಭೂಮೇಲ್ಮೈಯನ್ನು ಅಪ್ಪಳಿಸಬಹುದು. ಹಾಗಾದಲ್ಲಿ ಅದರ (ಹಾಗೂ ಅದು ತಾಗಿದ ಮಣ್ಣಿನ) ಬಹಳಷ್ಟು ಭಾಗವೆಲ್ಲ ಹಠಾತ್ತನೆ ಬಾಷ್ಪೀಕೃತವಾಗಿ ಆಸ್ಫೋಟಕವೇಗದಿಂದ ಎಲ್ಲೆಡೆಗಳಿಗೂ ಚದುರಿಹೋಗುವುದು. ಇಂಥ ಆಸ್ಫೋಟನೆಗಳ ಫಲವಾಗಿ ಭೂಮಿಯ ಮೇಲೆ ದೊಡ್ಡ ದೊಡ್ಡ ಕುಳಿಗಳು (ಕ್ರೇಟರ್ಸ್) ಏರ್ಪಡಬಹುದು. ಈಶಾನ್ಯ ಆರಿಜೋನದಲ್ಲಿರುವ (ಉತ್ತರ ಅಮೇರಿಕ) ವರ್ತುಲಾಕಾರದ ಭಾರಿ ಕುಳಿಯೊಂದು ಸುಮಾರು ಹತ್ತು ಸಹಸ್ರ ವರ್ಷಗಳ ಹಿಂದೆ ಈ ರೀತಿಯಲ್ಲಿ ಜನಿಸಿರಬೇಕೆಂದು ನಂಬಲಾಗಿದೆ. ಅದರ ವ್ಯಾಸ ಒಂದೂಕಾಲು ಕಿಲೊಮೀಟರುಗಳು ಮತ್ತು ಅಂಚಿನಿಂದ ತಳಭಾಗಕ್ಕಿರುವ ಆಳ 175 ಮೀ ಕುಳಿಯ ಅಂಚು ನೆರೆಯ ಪ್ರದೇಶದ ಸರಾಸರಿ ಭೂಮಟ್ಟದಿಂದ ಸು. 40 ಮೀ ಗಳಷ್ಟು ಎತ್ತರದಲ್ಲಿದೆ. ಕುಳಿ ಹೊಸದಾಗಿ ಉತ್ಪನ್ನವಾದಾಗ ಪರಿಮಾಣಗಳು ಇನ್ನೂ ಅಧಿಕವಾಗಿದ್ದಿರುವುದರಲ್ಲಿ ಸಂಶಯವಿಲ್ಲ. ಇಂಥ ಕುಳಿಗೆ ಕಾರಣಭೂತವಾದ ಉಲ್ಕಾಕಲ್ಲ ಲಕ್ಷಾಂತರ ಟನ್ನುಗಳಷ್ಟು ತೂಕದ್ದೂ ಲಕ್ಷಾಂತರ ಘನಮೀಟರುಗಳಷ್ಟು ಗಾತ್ರದ್ದೂ ಆಗಿತ್ತೆಂದು ಅಂದಾಜು ಮಾಡಲಾಗಿದೆ. ಅದೇ ಆರಿಜೋನ ಕುಳಿಯ ನೆರೆಯಲ್ಲಿ ದೊರಕಿರುವ ಉಲ್ಕಾದ್ರವ್ಯವೆಲ್ಲ ಚಿಕ್ಕ ಚಿಕ್ಕಚೂರುಗಳ ರೂಪದಲ್ಲಿದೆ. ಅವುಗಳ ಪೈಕಿ 600 ಕಿಗ್ರಾಂ ತೂಕದ್ದೇ ಅತಿ ದೊಡ್ಡದು. ಉಳಿದ ಉಲ್ಕಾದ್ರವ್ಯದ ಭಾರಿ ಬಂಡೆಯೊಂದು ಕುಳಿಯ ನೆಲದೊಳಗಡೆ ಹುದುಗಿದೆಯೆಂದು ಭಾವಿಸಲು ಸಾಕಷ್ಟು ಆಧಾರಗಳೇನಿಲ್ಲ.

ನೂರಾರು ಟನ್ ತೂಕದ ಈ ಬಗೆಯ ಉಲ್ಕಾಕಲ್ಲೊಂದರ ಅವಶೇಷಗಳು ಸಿಖೋತ್–ಅಲಿನ್ ಪರ್ವತಗಳ (ಆಗ್ನೇಯ ಸೈಬೀರಿಯ, ರಷ್ಯ) ಪಡುವಣ ಚಾಚಿನ ಪ್ರದೇಶದಲ್ಲಿದೆ. (12–02–1947) ದಾಖಲೆಯಲ್ಲಿರುವ ಬಿಡಿ ಉಲ್ಕಾವಶೇಷಗಳ ಪೈಕಿ ಅತಿ ದೊಡ್ಡದು ನೈಋತ್ಯ ಆಫ್ರಿಕದ ಗ್ರೂಟ್ ಫಾಂಟೀನ್ ಜಿಲ್ಲೆಯಲ್ಲಿ (ಭಾಗಶಃ ನೆಲದಲ್ಲಿ ಹುದುಗಿಕೊಂಡು) ಬಿದ್ದಿದೆ. ಪಶ್ಚಿಮ ಹೋಬಾ ಎಂಬ ಹೆಸರಿನ ಈ ಉಲ್ಕಾಪಿಂಡದ ಅಂದಾಜು ತೂಕ ಐವತ್ತು ಟನ್ನುಗಳು. ಗ್ರೀನ್‌ಲ್ಯಾಂಡಿನಲ್ಲಿ ಬಿದ್ದಿದ್ದ 31 ಟನ್ ತೂಕದ ಎರಡನೆಯ ಅತಿ ದೊಡ್ಡ ಉಲ್ಕಾಪಾತವನ್ನು ಇಂದು ಅಮೆರಿಕನ್ ಮ್ಯೂಸಿಯಂ–ಹೇಡೆನ್ ಪ್ಲಾನೆಟೇರಿಯಂನಲ್ಲಿ ಪ್ರದರ್ಶನಕ್ಕಿಡಲಾಗಿದೆ; ಅದರ ಹೆಸರು ಆಹ್ನಿಗಿಟೋ. ಹೋಬಾ ಮತ್ತು ಆಹ್ನಿಗಿಟೋಗಳು ಭೂಮಿಗೆ ಯಾವಾಗ ಬಿದ್ದುವೆಂಬ ಬಗ್ಗೆ ದಾಖಲೆಗಳಿಲ್ಲ.

ಉಲ್ಕಾಪಿಂಡಗಳ ಪೈಕಿ ಮುಖ್ಯವಾಗಿ ಆಯೋಲ್ಕಗಳು (ಸೈಡಿರೈಟುಗಳು) ಮತ್ತು ಶಿಲೋಲ್ಕಗಳು (ಏರೋಲೈಟುಗಳು) ಎಂಬ ಎರಡು ವರ್ಗಗಳನ್ನು ಗುರುತಿಸಬಹುದು.

ಇಂದಿಗೂ ರಹಸ್ಯಮಯವಾಗಿ ಉಳಿದುಕೊಂಡಿರುವ ಸಹಸ್ರಾರು ಟನ್ ಮೂಲ ತೂಕದ ಒಂದು ಭಾರಿ ಉಲ್ಕಾಕಲ್ಲ ತುಂಗಸ್ಕ ನದಿಯ (ಮಧ್ಯ ಸೈಬೀರಿಯ, ರಷ್ಯ) ಅರಣ್ಯ ಪ್ರದೇಶದಲ್ಲಿ 1908ರ ಜೂನ್ 30ರಂದು ಬೆಳಗ್ಗೆ 7 ಗಂಟೆ ಹೊತ್ತಿಗೆ ಬಿತ್ತು. ಅದು ಬಿದ್ದ ಸ್ಥಳ ಅದೃಷ್ಟವಶಾತ್ ನಿರ್ಜನವಾಗಿದ್ದರೂ ಗುಡುಗುತ್ತ ಕಾಣಿಸಿಕೊಂಡ ಅಗ್ನಿಗೋಳದ ಉಜ್ವಲ ಪ್ರಕಾಶದಿಂದಲೂ ಅದು ಭೂಮಿಗೆ ಬಡಿದಾಗ ಉಂಟಾದ ಧಕ್ಕೆಯಿಂದಲೂ ನೂರಾರು ಕಿಮೀ ದೂರದಲ್ಲಿ ವಾಸವಾಗಿದ್ದ ಸೈಬೀರಿಯದ ರೈತರು ತಲ್ಲಣಿಸಿಹೋದರು.

(ಎಸ್.ಆರ್.ಎಂ.)

**ಉಷ್ಣತಾಮಾನ:** ಉಷ್ಣತೆಯನ್ನು ಅಳೆಯುವ ಕ್ರಿಯೆ (ಥರ್ಮಾಮೆಟ್ರಿ), ಅಳೆಯುವ ಸಾಧನದ ಹೆಸರು ಉಷ್ಣತಾಮಾಪಕ. ಉಷ್ಣತಾಮಾಪಕದಲ್ಲಿ ಎರಡು ನಿಶ್ಚಿತ ಬಿಂದುಗಳಿವೆ: (i) ಒಂದು ಶಿಷ್ಟ ವಾಯುಭಾರ ಒತ್ತಡದಲ್ಲಿ ಕರಗುತ್ತಿರುವ ಶುದ್ಧ ಹಿಮದಲ್ಲಿ ಉಷ್ಣತಾಮಾಪಕವನ್ನು ಅದ್ದಿದಾಗ ಪಾದರಸ ಸ್ತಂಭ ಸೂಚಿಸುವ ಕೆಳಬಿಂದು (ii) ಅಷ್ಟೇ ಒತ್ತಡದಲ್ಲಿ ಕುದಿಯುತ್ತಿರುವ ಶುದ್ಧ ನೀರಿನಲ್ಲಿ ಅದನ್ನು ಅದ್ದಿದಾಗ ಸ್ತಂಭ ಸೂಚಿಸುವ ಮೇಲುಬಿಂದು. ಈ ಬಿಂದುಗಳ ಹೆಸರು ಕ್ರಮವಾಗಿ ಘನೀಕರಣಬಿಂದು ಮತ್ತು ಕುದಿಯುವಬಿಂದು. ಇವೆರಡು ಬಿಂದುಗಳ ನಡುವಿನ ಅಂತರದ ಹೆಸರು ಮೂಲಾಂತರ (ಫಂಡಮೆಂಟಲ್ ಇಂಟರ್ವಲ್).

| ಉಷ್ಣತಾಮಾನ ಪದ್ಧತಿ | ಘನೀಕರಣಬಿಂದುವಿನ ಉಷ್ಣತೆ | ಕುದಿಯುವ ಬಿಂದುವಿನ ಉಷ್ಣತೆ |
|---|---|---|
| ಸೆಂಟಿಗ್ರೇಡ್, (C-ಸೆಲ್ಸಿಯಸ್) | 0° C | 100° C |
| ಫ್ಯಾರನ್ ಹೀಟ್, F | 32° F | 212°F |

ಇವುಗಳ ಪರಸ್ಪರ ಸಂಬಂಧ ಹೀಗಿದೆ:

$$\frac{C}{100} = \frac{F-32}{180} = \frac{R}{80}$$




ಒಂದು ಉಷ್ಣತಾಮಾಪಕದ ರಚನೆಯ ತಾತ್ತ್ವಿಕ ತಳಹದಿ ಹೀಗಿದೆ. ವಸ್ತುವಿನ ಮೇಲೆ ಉಷ್ಣ ಪ್ರಯುಕ್ತವಾದಾಗ (ಎಂದರೆ ವಸ್ತುವನ್ನು ಕಾಯಿಸಿದಾಗ) ಅದರಲ್ಲಿ ಭೌತ ಬದಲಾವಣೆಗಳುಂಟಾಗುತ್ತವೆ; ಬದಲಾವಣೆಯ ಸ್ವರೂಪ ವಸ್ತುವಿನ ರಚನೆ ಸ್ಥಿತಿಗಳನ್ನೂ ಅವಲಂಬಿಸಿವೆ; ಭೌತ ಬದಲಾವಣೆಯನ್ನು ಆಧರಿಸಿ ವಸ್ತುವಿನ ಉಷ್ಣತೆಯನ್ನು ಅಳೆಯಬಹುದು. ಸೆಂಟಿಗ್ರೇಡ್, ಫ್ಯಾರನ್‌ಹೀಟ್ ಉಷ್ಣತಾಮಾನ ಪದ್ಧತಿಗಳು ಈ ರೀತಿ ರೂಪತಳೆದಂಥವು. ಆದರೆ ಉಷ್ಣಗತಿಶಾಸ್ತ್ರದ ಎಲ್ಲ ಒತ್ತಡಗಳಲ್ಲಿಯೂ ಬಾಯಿಲನ ನಿಯಮವನ್ನು ಪಾಲಿಸುವ ಆದರ್ಶ ಅನಿಲದ (ಐಡಿಯಲ್ ಗ್ಯಾಸ್) ಉಷ್ಣತಾಮಾನಕ್ಕೆ ನಿರಪೇಕ್ಷಮಾನ ಅತ್ಯುತ್ತಮ ವಿಧಾನವಾಗಿದೆ. (ಕೆ.ಎನ್.ಯು.)

**ಉಷ್ಣವಲಯ:** ಸ್ಥೂಲವಾಗಿ ಉತ್ತರ ಅಕ್ಷಾಂಶ $23\frac{1}{2}^0$ ನಿಂದ ದಕ್ಷಿಣ ಅಕ್ಷಾಂಶ $23\frac{1}{2}^0$ ವರೆಗೆ ಹರಡಿರುವ ಪ್ರದೇಶ (ಟ್ರಾಪಿಕಲ್ ಜೋನ್). ಈ ಎರಡು ಅಕ್ಷಾಂಶಗಳ ನಡುವೆ ಇರುವ ಪ್ರದೇಶದಲ್ಲಿ ವಾಸಿಸುವ ಜನಕ್ಕೆ ಸೂರ್ಯ ವರ್ಷಕ್ಕೆ ಎರಡು ಸಾರಿ ನೆತ್ತಿಯ ಮೇಲೆ ಬರುತ್ತದೆ. ಭೂಮಧ್ಯರೇಖೆಯ ಮೇಲೆ ಪ್ರತಿವರ್ಷವೂ ಮಾರ್ಚ್ 21 ಮತ್ತು ಸೆಪ್ಟಂಬರ್ 22 ರಂದು ಇರುತ್ತದೆ. ಆ ಎರಡು ದಿವಸಗಳಲ್ಲಿ ಹಗಲು ಮತ್ತು ರಾತ್ರಿಗಳ ಅವಧಿ ಸಮ ಅಥವ 12 ಗಂಟೆಯಾಗಿರುತ್ತದೆ. ಸೂರ್ಯನ ಪ್ರಭಾವದಿಂದಾಗಿ ಇಲ್ಲಿ ಉಷ್ಣತೆ ಸಾಮಾನ್ಯವಾಗಿ, ಅಧಿಕ. ಬೇಸಗೆ–ಚಳಿಗಾಲಗಳ ವ್ಯತ್ಯಾಸ ಕಡಿಮೆ. ಸಮುದ್ರಕ್ಕಿರುವ ದೂರ ಹಾಗೂ ಗಾಳಿಯ ದಿಕ್ಕಿಗೆ ಅನುಗುಣವಾಗಿ ಮಳೆಯ ಪ್ರಮಾಣದಲ್ಲಿ ಬಹಳ ವ್ಯತ್ಯಾಸವಾಗುತ್ತದೆ. ಜಗತ್ತಿನಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶಗಳೂ ಅತ್ಯಂತ ವಿಸ್ತಾರವಾದ ಮರುಭೂಮಿಗಳೂ ಇಲ್ಲಿವೆ. ನಿತ್ಯಹಸುರೆಲೆಯ ದಟ್ಟವನಗಳಿಂದ ಹಿಡಿದು ಕುರುಚಲು ಗಿಡಗಳವರೆಗೆ ಇಲ್ಲಿ ನಾನಾ ಸಸ್ಯಸ್ತರಗಳನ್ನು ಕಾಣಬಹುದು. ಆದ್ದರಿಂದ ಈ ವಲಯದ ಇಡೀ ಪ್ರದೇಶದಲ್ಲಿ ಸಮಾನವಾದ ಲಕ್ಷಣವೆಂದರೆ ಸೂರ್ಯನ ಪ್ರಖರತೆಯೊಂದೇ.

ಈ ನಾನಾ ಭಿನ್ನತೆಗಳಿಗೆ ಅನುಗುಣವಾಗಿ ಉಷ್ಣವಲಯವನ್ನು 1 ಸಮಭಾಜಕ ವೃತ್ತದ (ಭೂಮಧ್ಯರೇಖೆ) ಪ್ರದೇಶ, 2 ಉಷ್ಣವಲಯದ ಹುಲ್ಲುಗಾವಲಿನ ಪ್ರದೇಶ, 3 ಉಷ್ಣವಲಯದ ಮಾನ್‌ಸೂನ್ ಪ್ರದೇಶ ಮತ್ತು 4 ಉಷ್ಣ ಮರುಭೂಮಿ ಪ್ರದೇಶ ಎಂದು ನಾಲ್ಕು ಸ್ವಾಭಾವಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು.

ಕರ್ಕಾಟಕ ಸಂಕ್ರಾಂತಿವೃತ್ತದಿಂದ ($23\frac{1}{2}^0$ ಉ.) ಮಕರ ಸಂಕ್ರಾಂತಿವೃತ್ತದ ($23\frac{1}{2}^0$ದ.) ವರೆಗಿನ ಪ್ರದೇಶವನ್ನು ಉಷ್ಣವಲಯವೆನ್ನಬಹುದಾದರೂ ವಾಸ್ತವವಾಗಿ ಕೆಲವು ಕಡೆಗಳಲ್ಲಿ ಈ ವಾಯುಗುಣ ಈ ಎಲ್ಲೆಯನ್ನು ಮೀರಿ ಹಬ್ಬಿರುವುದು ಇನ್ನು ಕೆಲವು ಕಡೆಗಳಲ್ಲಿ ಈ ಗಡಿಗಿಂತ ಇನ್ನೂ ಈಚೆಗೇ ಅಂತ್ಯವಾಗಿರುವುದೂ ವೇದ್ಯವಾಗುತ್ತದೆ.

ಸಮಭಾಜಕವೃತ್ತದ ಪ್ರದೇಶ: ಈ ಪ್ರದೇಶ ಸಮಭಾಜಕವೃತ್ತದಿಂದ (ಭೂಮಧ್ಯರೇಖೆ) $5^0$ ಉತ್ತರ ಮತ್ತು $5^0$ ದಕ್ಷಿಣಗಳವರೆಗೆ ಪ್ರಸರಿಸಿದೆ. ದಕ್ಷಿಣ ಅಮೆರಿಕದಲ್ಲಿರುವ ಅಮೆಜ಼ಾನ್ ನದಿಬಯಲು ಪ್ರದೇಶವೇ ಇದಕ್ಕೆ ಹೆಚ್ಚು ಮಾದರಿಯಾಗಿರುವುದರಿಂದ ಇದನ್ನು ಅಮೆಜ಼ಾನ್ ಮಾದರಿಯ ಪ್ರದೇಶವೆಂದು ಕರೆಯುತ್ತಾರೆ. ಇದನ್ನು ಸಮಭಾಜಕವೃತ್ತದ ಅರಣ್ಯಪ್ರದೇಶ, ಉಷ್ಣ–ತೇವ ಸಮಭಾಜಕ ವೃತ್ತ ಪ್ರದೇಶ, ಉಷ್ಣವಲಯದ ಅರಣ್ಯ ಪ್ರದೇಶ ಅಥವಾ ಸೆಲ್ವಾಸ್ ಪ್ರದೇಶವೆಂತಲೂ ಕರೆಯುವರು.

ವಾಯುಗುಣ: ಈ ಪ್ರದೇಶದಲ್ಲಿ ಸೂರ್ಯನ ಕಿರಣಗಳು ನೇರವಾಗಿ ಬೀಳುವುದರಿಂದ ಉಷ್ಣಾಂಶವು ಹೆಚ್ಚು. ಅತಿ ಉಷ್ಣಪ್ರದೇಶಗಳಲ್ಲಿ ಒಂದು. ವರ್ಷವಿಡೀ ಆರ್ದ್ರತೆ ಹೆಚ್ಚು. ಹೀಗಾಗಿ ಈ ಪ್ರದೇಶವನ್ನು ಉಷ್ಣ ಮತ್ತು ತೇವ ವಲಯ ಎನ್ನುವರು. ದೈನಂದಿನ ಉಷ್ಣಾಂಶದಲ್ಲಿ ವ್ಯತ್ಯಾಸ ಹೆಚ್ಚು. ಋತುಕಾಲಿಕ ಉಷ್ಣಾಂಶದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ.

ಈ ಪ್ರದೇಶದ ಒಂದು ವೈಲಕ್ಷಣ್ಯವೆಂದರೆ ಈ ವ್ಯಾಪ್ತಿಯಲ್ಲಿ ಎಲ್ಲೂ ಸಮುದ್ರಕ್ಕಿಂತ ಬಲು ದೂರದಲ್ಲಿರುವ ಭೂಭಾಗಗಳಿಲ್ಲ. ಇಲ್ಲಿ ವರ್ಷವೆಲ್ಲ ಹೆಚ್ಚು ಮಳೆ, ಬೆಳಗ್ಗೆ ಮಂಜು; ಮಧ್ಯಾಹ್ನ ಚುರುಕು ಬಿಸಿಲು ; ಅಪರಾಹ್ನದ ವೇಳೆಗೆ ಮೋಡ, ಗುಡುಗು, ಮಳೆ, ಇದನ್ನು ಪರಿಸರಣ ಮಳೆಯೆನ್ನುತ್ತಾರೆ. ಸಮುದ್ರಕ್ಕೆ ಹತ್ತಿರದ ಪ್ರದೇಶಗಳಲ್ಲೂ ದ್ವೀಪಗಳಲ್ಲೂ ಸಮುದ್ರ ಗಾಳಿ ಯಾವಾಗಲೂ ಬೀಸುತ್ತಿರುವುದರಿಂದ ಹವಾಮಾನವು ಹಿತಕರವಾಗಿರುವುದು. ಸಮುದ್ರಕ್ಕೆ ತಕ್ಕ ಮಟ್ಟಿನ ದೂರದಲ್ಲಿರುವ ಕಾಡುಗಳ ನಡುವೆ ಮಾತ್ರ ಗಾಳಿ ಹೆಚ್ಚಾಗಿ ಬೀಸುವುದಿಲ್ಲ. ವಾಯುಮಂಡಲದಲ್ಲಿನ ಅತಿಯಾದ ತೇವಾಂಶದಿಂದಾಗಿ ಉಷ್ಣತೆ ಎಲ್ಲೂ $37^0$ಸೆ. ಗಿಂತ ಹೆಚ್ಚಾಗಿರುವುದಿಲ್ಲ. (ಉದಾ: ಈಕ್ವೆಡಾರ್) ಹವಾಗುಣವು ತಂಪಾಗಿರುತ್ತದೆ.

ಸಸ್ಯವರ್ಗ: ಅಧಿಕ ಉಷ್ಣಾಂಶ ಮತ್ತು ಮಳೆ ಬೀಳುವುದರಿಂದ ಈ ಪ್ರದೇಶದಲ್ಲಿ ಸಸ್ಯವರ್ಗವು ದಟ್ಟವಾಗಿದ್ದು, ಸದಾ ಹಸುರಾಗಿರುತ್ತದೆ. ಅರಣ್ಯಗಳಲ್ಲಿ ಮರಗಳು ದಟ್ಟ ಹಾಗೂ ಎತ್ತರಕ್ಕೆ ಬೆಳೆಯುತ್ತವೆ. ದಟ್ಟಡವಿಯಲ್ಲಿ ಸೂರ್ಯನ ಬೆಳಕು ಬೀಳುವುದಿಲ್ಲ. ಹೀಗಾಗಿ ಮಂದ ಬೆಳಕಿನ ಪ್ರದೇಶವೆನ್ನುವರು. ಅನೇಕ ಸಸ್ಯಪ್ರಭೇದಗಳಿವೆ. ಪ್ರಮುಖವಾದ ಮರಗಳೆಂದರೆ; ಮಹಾಗನಿ, ಎಬೋನಿ, ರಬ್ಬರ್, ಸಿಂಕೋನ, ಬೀಟೆ, ಕೋಕೊ ಇತ್ಯಾದಿ. ಈ ಪ್ರದೇಶಗಳು ಗಟ್ಟಿಮರಗಳ ಉಗ್ರಾಣವೆಂದೇ ಪ್ರಸಿದ್ಧಿ, ವಾಣಿಜ್ಯದೃಷ್ಟಿಯಿಂದ ಮಹತ್ವವುಳ್ಳವು. ಇಲ್ಲಿನ ಅರಣ್ಯಗಳಲ್ಲಿ ಸ್ತರಗಳ ವ್ಯವಸ್ಥೆ ಕಂಡುಬರುತ್ತದೆ. ಅರಣ್ಯದಲ್ಲಿ ವಿವಿಧ ವನ್ಯಮೃಗಗಳು, ಕ್ರಿಮಿ–ಕೀಟಗಳು ಹಾಗೂ ಪಕ್ಷಿಗಳ ಸಂಕುಲವಿದೆ.

ಜನಜೀವನ: ಹೆಚ್ಚು ಶಾಖ ಮತ್ತು ಅಧಿಕಮಳೆ ಮತ್ತು ದಟ್ಟಕಾಡುಗಳಿಂದ ಕೂಡಿದ ಈ ಪ್ರದೇಶ ಜನಜೀವನಕ್ಕೆ ಯೋಗ್ಯವಾಗಿಲ್ಲ. ಇಲ್ಲಿಯ ಮೂಲನಿವಾಸಿಗಳು ಕುಳ್ಳರು. ಬೇಟೆ ಇವರ ಮುಖ್ಯ ಕಸುಬು. ಕಾಂಗೋ ಪ್ರದೇಶದ ಜನ ಬಲು ಹಿಂದುಳಿದ ಜನಾಂಗ ಅಮೆಜ಼ಾನ್ ಪ್ರದೇಶದ ಜನರ ಮುಖ್ಯ ಕಸಬು ರಬ್ಬರ್ ಹಾಲಿನ ಶೇಖರಣೆ. ಈಸ್ಟ್ ಇಂಡೀಸ್, ಗಿನಿ ಪ್ರದೇಶಗಳಲ್ಲಿ ಮರಗಳನ್ನು ಕಡಿದು ಜೀವನ ನಡೆಸುತ್ತಾರೆ. ಸಮುದ್ರ ತೀರಗಳಲ್ಲಿ ಜನಸಂಖ್ಯೆ ಹೆಚ್ಚು ಇಲ್ಲಿ ನೆಡುತೋಟ ಬೇಸಾಯ ಹೆಚ್ಚಾಗಿ ಬೆಳೆದಿದೆ. ಕೋಕೋ, ರಬ್ಬರ್, ತೆಂಗು, ಬಾಳೆಹಣ್ಣು, ಬತ್ತ ಕಬ್ಬು, ಮೆಕ್ಕೆಜೋಳ, ಜವೆ ಗೋಧಿ ಮುಖ್ಯ ಕೃಷಿ ಉತ್ಪನ್ನ.

ಕೈಗಾರಿಕೆ: ಸುಲಭವಾಗಿ ಸಂಪನ್ಮೂಲಗಳನ್ನು ಪಡೆಯಲಾಗದಿರುವ ಮತ್ತು ಸಂಚಾರ ಸೌಕರ್ಯಗಳು ಉತ್ತಮವಾಗಿಲ್ಲದಿರುವ ಕಾರಣಗಳಿಂದ ಈ ಪ್ರದೇಶಗಳಲ್ಲಿ ಕೈಗಾರಿಕೆಗಳ ಪ್ರಗತಿ ಹೆಚ್ಚಾಗಿ ಅಗಿಲ್ಲ. ವಾಯುಗುಣ ಹಿತಕರವಲ್ಲ ; ಮತ್ತು ಖನಿಜಸಂಪತ್ತು ಹೆಚ್ಚಿಗೆ ಇಲ್ಲ. ಪೆಟ್ರೋಲಿಯಂ ಮತ್ತು ತವರ ಇಲ್ಲಿ ದೊರೆಯುವ ಮುಖ್ಯ ಖನಿಜಗಳು. ಎಣ್ಣೆ ಶುದ್ಧೀಕರಣ ಮತ್ತು ಸಕ್ಕರೆ ಉದ್ಯಮಗಳು ಕಂಡುಬರುತ್ತವೆ.

ಇಲ್ಲಿನ ಜನ ಮುಂದುವರಿದಿಲ್ಲ. ಪಟ್ಟಣಗಳ ಸಂಖ್ಯೆ ಕಡಿಮೆ. ಉಷ್ಣ ಪ್ರದೇಶಗಳಲ್ಲಿ ರೋಗರುಜಿನಗಳು ಹೆಚ್ಚು. ಸಿಡುಬು, ಪ್ಲೇಗ್, ಕಾಲರಾ ಮುಂತಾದ ಸಾಂಕ್ರಾಮಿಕ ಜಾಡ್ಯಗಳು ಕಂಡುಬರುವುವು.

ದಕ್ಷಿಣ ಅಮೆರಿಕದ ಅಮೆಜ಼ಾನ್ ನದಿ ಮೈದಾನ ಮತ್ತು ಗಯಾನ, ಮಧ್ಯ ಆಫ್ರಿಕದ ಕಾಂಗೋ ನದಿಯ ಬಯಲು ಗಿನಿತೀರ ಮತ್ತು ಏಷ್ಯದ ಮಲೇಷ್ಯ, ಇಂಡೊನೇಷ್ಯ, ಪಪುವಾ ನ್ಯೂಗಿನಿ ಮತ್ತು ಥೈಲೆಂಡಿನ ಪರ್ಯಾಯ ದ್ವೀಪಗಳು ಸಮ ಭಾಜಕ ವೃತ್ತದ ಪ್ರದೇಶದ ಮುಖ್ಯ ಭೂಭಾಗಗಳು.

ಉಷ್ಣವಲಯದ ಹುಲ್ಲುಗಾವಲಿನ ಪ್ರದೇಶ : ಉಷ್ಣವಲಯದ ಒಂದು ಸ್ವಾಭಾವಿಕ ವಿಭಾಗ: ಉತ್ತರ ಅಕ್ಷಾಂಶ $5^0$ ಯಿಂದ ಉತ್ತರಕ್ಕೂ ದಕ್ಷಿಣ ಅಕ್ಷಾಂಶ $5^0$ ಯಿಂದ ದಕ್ಷಿಣಕ್ಕೂ $15^0$ಯ ವರೆಗೆ ಹಬ್ಬಿದೆ. ಇದನ್ನು ಸುಡಾನ್ ಮಾದರಿ ಪ್ರದೇಶವೆಂದೂ ಕರೆಯುವುದುಂಟು. ಕಡಿಮೆ ತೇವಾಂಶ, ಒಣಹವೆ ಮತ್ತು ಕಡಿಮೆ ಋತುಭೇದಗಳಿಂದ ಕೂಡಿರುವುದು. ದಟ್ಟ ಕಾಡುಗಳಿಲ್ಲ. ಉದ್ದವಾದ ಹುಲ್ಲು ಸಾಮಾನ್ಯ.

ವಾಯುಗುಣ: ಈ ಪ್ರದೇಶಗಳ, ಉಷ್ಣತೆ, ಮಳೆ ಮತ್ತು ಮಾರುತಗಳಲ್ಲಿ ವ್ಯತ್ಯಾಸಗಳುಂಟು, ದಕ್ಷಿಣ ಒಳಭಾಗದಲ್ಲಿ ಹೆಚ್ಚು ತೇವಾಂಶ ಮತ್ತು ಕಡಿಮೆ ಉಷ್ಣತೆ, ಉತ್ತರ ಭಾಗದಲ್ಲಿ ಒಣಹವೆ ಮತ್ತು ಹೆಚ್ಚು ಉಷ್ಣತೆ, ವರ್ಷದ ಉಷ್ಣತೆಯ ಏರಿಳಿತದ ವ್ಯಾಪ್ತಿ $5^0$ಸೆ. ಒಣಹವೆಯ ಕಾಲದಲ್ಲಿ ಸರಾಸರಿ ಉಷ್ಣತೆ $37^0$ಸೆ.

ಈ ಪ್ರದೇಶ ವಾಣಿಜ್ಯ ಮಾರುತಗಳ ಪಥದಲ್ಲಿರುವುದರಿಂದ ಹೆಚ್ಚು ಪ್ರಬಲವಾದ ಮಾರುತ ಬೀಸುತ್ತದೆ. ಪರ್ವತಪ್ರದೇಶಗಳಲ್ಲಿ ವಾರ್ಷಿಕ ಸರಾಸರಿ ಮಳೆ 190 ಸೆಂಮೀ; ಮರುಭೂಮಿಯ ಅಂಚಿನ ಪ್ರದೇಶಗಳಲ್ಲಿ 40 ಸೆಂಮೀ. ಸಾಮಾನ್ಯವಾಗಿ ವಸಂತ ಮತ್ತು ಬೇಸಗೆ ಕಾಲಗಳಲ್ಲಿ ಮಳೆಯಾಗುತ್ತದೆ. ಚಳಿಗಾಲದಲ್ಲಿ ಒಣಹವೆ, ಮರುಭೂಮಿ ಪ್ರದೇಶಗಳಲ್ಲಿ ಬಹಳ ಕಾಲದವರೆಗೆ ಒಣಹವೆ ಇರುವುದು.

ಸಸ್ಯವರ್ಗ: ಎತ್ತರವಾದ ಹುಲ್ಲು ಮತ್ತು ಅಲ್ಲಲ್ಲಿ ಮರಗಳು ಬೆಳೆಯುತ್ತವೆ. ಕೆಲವು ಪ್ರದೇಶಗಳಲ್ಲಿ ಹುಲ್ಲು 3–3.5ಮೀ ಗಳಿಗಿಂತಲೂ ಹೆಚ್ಚು ಎತ್ತರ ಬೆಳೆಯುವುದುಂಟು. ವಸಂತಕಾಲದಲ್ಲಿ ಮಳೆಬಿದ್ದಾಗ ಹುಲ್ಲುಗಾವಲು ಹಸುರಾಗಿಯೂ ಉಳಿದ ಕಾಲಗಳಲ್ಲಿ ಒಣಗಿ ಬೂದು ಬಣ್ಣದಿಂದಲೂ ಕೂಡಿರುತ್ತದೆ. ಈ ಹುಲ್ಲುಗಾವಲನ್ನು ಸುಡಾನಿನಲ್ಲಿ ಸವನ್ನ, ಗಯಾನದಲ್ಲಿ ಲಾನೋಸ್, ಬ್ರೆಜಿಲ್‌ನಲ್ಲಿ ಪಂಪಾಸ್ ಹಾಗೂ ಇತರ ಭಾಗಗಳಲ್ಲಿ ಪಾರ್ಕ್ ಲ್ಯಾಂಡ್ ಎಂದು ಕರೆಯುವರು. ಸಿಂಹ, ಹುಲಿ, ಚಿರತೆ, ತೋಳ, ಜಿರಾಫೆ, ಹೇಸರಕತ್ತೆ ಜಿಂಕೆ ಮುಂತಾದ ವನ್ಯ ಜೀವಿಗಳು ವ್ಯಾಪಕವಾಗಿವೆ.

ಜನಜೀವನ: ಪಶುಪಾಲನೆ ಮತ್ತು ಬೇಟೆ ಜನರ ಮುಖ್ಯ ಉದ್ಯೋಗ. ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಜನರ ವೃತ್ತಿ ವ್ಯವಸಾಯ. ಮೆಕ್ಕೆಜೋಳ, ಸಜ್ಜೆ, ಹತ್ತಿ, ಕಬ್ಬು, ಹಣ್ಣುಗಳನ್ನು ಬೆಳೆಯುತ್ತಾರೆ. ಸರೋವರ ಮತ್ತು ಸಮುದ್ರ ಪ್ರದೇಶಗಳಲ್ಲಿ ಮೀನುಗಾರಿಕೆ ಮುಖ್ಯ ಕಸಬು. ಈ ಪ್ರದೇಶ ಇನ್ನೂ ಬಹಳಮಟ್ಟಿಗೆ ಹಿಂದುಳಿದಿದೆ.

ಉಷ್ಣವಲಯದ ಮಾನ್ಸೂನ್ ಪ್ರದೇಶ: ಇದು ಉಷ್ಣವಲಯದ ಹುಲ್ಲುಗಾವಲಿನ ಪೂರ್ವಕ್ಕಿದೆ. ಎರಡರ ವಾಯುಗುಣವೂ ಒಂದೇ ಬಗೆ. ಎರಡೂ ಉಷ್ಣವಲಯದಲ್ಲೇ ಇವೆ. ಎರಡರಲ್ಲೂ ಬಿಸಿ ಬೇಸಗೆ, ಈ ಕಾಲದಲ್ಲೇ ಮಳೆ, ಚಳಿಗಾಲ ಒಣಹವೆ: ಆಗ ಅತಿಯಾದ ಚಳಿಯೇನೂ ಇರುವುದಿಲ್ಲ, ಆದರೆ ಉಷ್ಣವಲಯದ ಹುಲ್ಲುಗಾವಲು ಪ್ರದೇಶದಲ್ಲಿ ಸಹಜ ಮಾರುತಗಳಿಂದ ಮಳೆಯಾಗುತ್ತದೆ. ಇಲ್ಲಿ ಹಾಗಲ್ಲ. ಸಹಜಮಾರುತಗಳ ದಿಕ್ಕು ಸಂಪೂರ್ಣ ಬದಲಾಗುವುದರಿಂದ ಇಲ್ಲಿ ಮಳೆ ಬೀಳುತ್ತದೆ. ಭಾರತ, ಪಾಕಿಸ್ತಾನ, ಮಯನ್ಮಾರ್, ಥೈಲೆಂಡ್, ದಕ್ಷಿಣ ಚೀನಗಳು ಅಪ್ಪಟ ಮಾನ್ಸೂನ್ ಪ್ರದೇಶಗಳು. ಮಧ್ಯ ಹಾಗೂ ಉತ್ತರ ಚೀನವನ್ನೂ ಜಪಾನನ್ನೂ ಮಾನ್ಸೂನ್ ನಾಡುಗಳೆಂದೇ ಕರೆಯುವ ವಾಡಿಕೆಯಿದೆ. ಏಕೆಂದರೆ ಅಲ್ಲಿ ಮಳೆಯಾಗುವುದೂ ಇದೇ ವಿಧಾನದಿಂದ. ಆದರೆ ಅವು ಉಷ್ಣವಲಯದ ಮೇರೆಯಿಂದ ಆಚೆಗಿವೆ. ಪೂರ್ವ ಆಫ್ರಿಕ ಮತ್ತು ಉತ್ತರ ಆಸ್ಟ್ರೇಲಿಯಗಳ ಅಂಚಿನ ಭಾಗಗಳೂ ಮಧ್ಯ ಅಮೆರಿಕದ ನೆಲದ ಕೆಲವು ತುಣುಕುಗಳೂ ಮಾನ್ಸೂನ್ ನಾಡುಗಳು.

ವಾಯುಗುಣ: ಅರಬ್ಬೀ ಭಾಷೆಯಲ್ಲಿ ಮಾನ್ಸೂನ್ ಎಂದರೆ ಋತು. ಎಂದರೆ ಇದು ಮಳೆಗಾಲ, ಮಾನ್ಸೂನ್ ನಾಡುಗಳ ಗಾಳಿಯೆಂಬ ಅರ್ಥದಲ್ಲಿ ಭೂಗೋಳಶಾಸ್ತ್ರಜ್ಞರು ಈ ಶಬ್ದ ಬಳಸುತ್ತಾರೆ. ದೊಡ್ಡ ಖಂಡಭಾಗಗಳ ತುದಿಯಲ್ಲಿರುವ ಈ ನಾಡುಗಳಲ್ಲಿ ಬೇಸಗೆಯಲ್ಲಿ ಸೂರ್ಯ ನೆತ್ತಿಯ ಮೇಲೆ ಪ್ರಜ್ವಲಿಸುವಾಗ ನೆಲ ಕಾಯ್ದು, ಹಗುರಾದ ಬಿಸಿಗಾಳಿ ಮೇಲೇರುತ್ತದೆ, ಕಡಿಮೆ ಒತ್ತಡದ ಈ ಪ್ರದೇಶಕ್ಕೆ ಮೋಡ ತುಂಬಿದ ತಣ್ಣನೆಯ ಗಾಳಿ ಸಮುದ್ರದ ಕಡೆಯಿಂದ ಧಾವಿಸಿ ಬರುತ್ತದೆ; ಪರಿಣಾಮವಾಗಿ ಇಲ್ಲಿ ಭಾರಿ ಮಳೆಯಾಗುತ್ತದೆ. ಚಳಿಗಾಲದಲ್ಲಿ ಸಹಜಮಾರುತಗಳು ಬೀಸಿದರೂ ಅವು ಸಾಮಾನ್ಯವಾಗಿ ಸಮುದ್ರದ ಕಡೆಯಿಂದ ಬರುವುದಿಲ್ಲವಾದ್ದರಿಂದ ಹೆಚ್ಚಿನ ಮಳೆಯಿಲ್ಲ.

ಭಾರತದಲ್ಲಿ ನಾಲ್ಕು ಋತುಗಳಿವೆ: 1 ನವೆಂಬರಿನಿಂದ ಜನವರಿಯವರೆಗೆ ಚಳಿಗಾಲ: ಮಳೆಯಿಲ್ಲ. 2 ಫೆಬ್ರುವರಿಯಿಂದ ಜೂನ್ ಆದಿಯ ವರೆಗೆ ಬೇಸಗೆಕಾಲ; ನೆಲ ಕಾಯುತ್ತದೆ; ಮಳೆಯಿಲ್ಲ. 3 ಜೂನಿನಿಂದ ಅಕ್ಟೋಬರ್ ವರೆಗೆ ಮಳೆಗಾಲ. ವಾತಾವರಣ ತಂಪಾಗುತ್ತದೆ. ಉಷ್ಣತೆ ಇಳಿಯುತ್ತದೆ. 4. ಅಕ್ಟೋಬರ್ – ನವೆಂಬರ್ ವರೆಗೆ, ಮಾನ್ಸೂನ್ ನಿರ್ಗಮನ ಕಾಲ. ವಾಯುಗುಣ ಅನಿಶ್ಚಿತ. ಆವರ್ತ ಮಾರುತಗಳ ಸಂಭವವುಂಟು.

ಮಾನ್ಸೂನ್ ನಾಡುಗಳನ್ನು ಮಳೆಗೆ ಅನುಗುಣವಾಗಿ ನಾಲ್ಕು ಸಸ್ಯವರ್ಗ ಭಾಗಗಳಾಗಿ ವಿಂಗಡಿಸಬಹುದು: 1) ವರ್ಷಕ್ಕೆ 200 ಸೆಂಮೀ ಗಳಿಗಿಂತ ಹೆಚ್ಚು ಮಳೆಯಾಗುವ ಪ್ರದೇಶ. ಭೂಮಧ್ಯರೇಖೆಯ ಪ್ರದೇಶದ ಮಾದರಿಯ ನಿತ್ಯ ಹಸುರೆಲೆಯ ಸಸ್ಯ ಸಮೃದ್ಧವಾಗಿದೆ. 2) 100–200 ಸೆಂಮೀ. ಮಳೆಬೀಳುವ ಪ್ರದೇಶ. ಮಾನ್ಸೂನ್ ಎಲೆಯುದುರುವ ಸಸ್ಯ ವರ್ಗ. 3) 50–100 ಸೆಂಮೀಗಳ ವರೆಗೆ ಮಳೆಯಾಗುವ ಪ್ರದೇಶ. ಇಲ್ಲಿ ಪೊದೆ, ಕುರುಚಲು ಬೆಳೆಯುತ್ತವೆ. 4) 25 ಸೆಂಮೀ ಗಳಿಗಿಂತ ಕಡಿಮೆ ಮಳೆ ಬೀಳುವ ಪ್ರದೇಶ; ಮರುಭೂಮಿ, ಅರೆಮರುಭೂಮಿ ಸಸ್ಯವರ್ಗವಿದೆ. ಆನೆ, ಹುಲಿ, ಕಾಂಗರೂ, ಕಪಿ, ಹಾವು, ಹಕ್ಕಿ, ನೀರಾನೆ, ಮೊಸಳೆ, ಕ್ರಿಮಿಕೀಟ—ಇವು ಈ ಪ್ರದೇಶದ ಮುಖ್ಯ ಪ್ರಾಣಿಗಳು.

ಜನಸಾಂದ್ರತೆ ಬಹಳ ಹೆಚ್ಚು. ಪ್ರಪಂಚದ ಜನಸಂಖ್ಯೆಯಲ್ಲಿ ¼ ಭಾಗದಷ್ಟು ಜನಸಂಖ್ಯೆ ಈ ಪ್ರದೇಶಗಳಲ್ಲಿ ಕಂಡುಬರುತ್ತದೆ. ಫಲವತ್ತಾದ ನದೀ ಬಯಲುಗಳು ವ್ಯವಸಾಯಕ್ಕೆ ಯೋಗ್ಯವಾಗಿದ್ದು ಹೆಚ್ಚು ಜನಸಂಖ್ಯೆಯಿಂದ ಕೂಡಿವೆ. ಈ ಪ್ರದೇಶದ ನದಿ ಬಯಲುಗಳನ್ನು ಮಾನವನ ನಾಗರಿಕತೆಯ ತೊಟ್ಟಿಲು ಎಂದು ಕರೆಯಲಾಗಿದೆ. ಅರಣ್ಯಗಳು ವಿವಿಧ ಸಂಪನ್ಮೂಲಗಳನ್ನು ಹೊಂದಿವೆ. ಸಾಲ್, ತೇಗ, ಶ್ರೀಗಂಧ, ಮೇಣ, ಅರಗು, ಅಂಟುರಾಳ ಮುಖ್ಯವಾದ ಉತ್ಪನ್ನಗಳು. ಪಶುಪಾಲನೆ ಹೆಚ್ಚು ಪ್ರಾಮುಖ್ಯ ಪಡೆದಿಲ್ಲ.

ವ್ಯವಸಾಯವನ್ನು ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಲು ಅನೇಕ ಅಂಶಗಳು ಸಹಕಾರಿಯಾಗಿವೆ: ಮಣ್ಣು ಫಲವತ್ತಾಗಿರುವುದು, ವಾಯುಗುಣ ವರ್ಷವೆಲ್ಲ ಹಿತಕರವಾಗಿರುವುದು, ನೀರಾವರಿ ಸೌಲಭ್ಯ, ಹೆಚ್ಚು ಜನಸಂಖ್ಯೆ, ಬತ್ತ, ಗೋದಿ, ಹತ್ತಿ, ಕಬ್ಬು, ಎಣ್ಣೆ ಕಾಳುಗಳು, ಚಹ, ಕಾಫಿ, ಸೆಣಬು ಮುಖ್ಯ ಬೆಳೆಗಳು.

ಉಷ್ಣ ಮರುಭೂಮಿ: ಉಷ್ಣವಲಯದ ಹುಲ್ಲುಗಾವಲಿನ ಪ್ರದೇಶದಿಂದ ಮೇರುವಿನ ಕಡೆಗೆ ಹಬ್ಬಿರುವ ಪ್ರದೇಶ, ಇದರ ಅಂಚಿನಿಂದ ಮಧ್ಯ ಅಕ್ಷಾಂಶದ ಮರುಭೂಮಿ ಮುಂದುವರಿಯುವುದನ್ನೂ ಈ ಪ್ರದೇಶ ಉಷ್ಣವಲಯದ ಸ್ಥೂಲ ಎಲ್ಲೆಗಿಂತ ಆಚೆಗೆ ಹಬ್ಬಿರುವುದನ್ನೂ ಗಮನಿಸಬೇಕು. ಉಷ್ಣವಲಯದ ಸೆರಗಿನಲ್ಲಿ ಹಬ್ಬಿರುವ ಹೆಚ್ಚು ಒತ್ತಡ ಪಟ್ಟಿಯ ಮೇಲೆ ಈ ನಾಡುಗಳಿವೆ. ಸಾಮನ್ಯವಾಗಿ ಚಳಿಗಾಲದಲ್ಲಿ ಗಾಳಿಗಳು ಇಲ್ಲಿಂದ ಹೊರಕ್ಕೆ ಬೀಸುತ್ತವೆ. ಆದ್ದರಿಂದ ಮಳೆಯಿಲ್ಲ, ಬೇಸಗೆಯಲ್ಲಿ ಈ ಪ್ರದೇಶ ಬಹಳ ಕಾಯುವುದರಿಂದ ಗಾಳಿಯ ಒತ್ತಡ ತಗ್ಗುವುದು ಸಾಧ್ಯ. ಆದರೆ ಆಗ ಈ ಪ್ರದೇಶದೊಳಕ್ಕೆ ಬೀಸುವ ಗಾಳಿ ತರಬಹುದಾದ ತೇವ ಹನಿಯೊಡೆಯದಿರುವುದಕ್ಕೆ ಇಲ್ಲಿನ ಅತ್ಯುಷ್ಣತೆಯೇ ಕಾರಣ. ರಾತ್ರಿ ಸ್ವಲ್ಪ ಮಂಜೂ ಆಗೊಮ್ಮೆ ಈಗೊಮ್ಮೆ ಗುಡುಗು ಸಿಡಿಲುಗಳಿಂದ ಕೂಡಿದ ಬಿರುಗಾಳಿ ಮಳೆಯೂ ಬೀಳುವುದುಂಟು.

ನಿರ್ಮಲ ಆಕಾಶ, ಅತಿ ಬಿಸಿಲು, ಕೊರೆಯುವ ಚಳಿಯ ರಾತ್ರಿ, ಅನಾವೃಷ್ಟಿ—ಇವು ಈ ವಾಯುಗುಣದ ಮುಖ್ಯ ಲಕ್ಷಣಗಳು. ಆಗಾಗ್ಗೆ ಗಾಳಿ ಬಹಳ ವೇಗವಾಗಿ ಬೀಸುತ್ತದೆ.

ಈ ಪ್ರದೇಶದ ಉಷ್ಣತೆ ಯಾವಾಗಲೂ ಹೆಚ್ಚು. ಇದು ಬೆಳಗ್ಗೆ $29^0$–$35^0$ಸೆ., ಮಧ್ಯಾಹ್ನ $40.5^0$–$43^0$ಸೆ. ಇರುತ್ತದೆ. ಪ್ರಪಂಚದಲ್ಲೇ ಅತ್ಯಂತ ಉಷ್ಣತೆಯ ಸ್ಥಳ ಲಿಬಿಯಾದ ಅಜೀಜಿಯ ಇರುವುದು ಈ ಪ್ರದೇಶದಲ್ಲಿ.

ಮರುಭೂಮಿಯ ವಾಯುಗುಣದಲ್ಲಿ ಯಾವ ಸಸ್ಯಗಳೂ ಬೆಳೆಯಲು ಅವಕಾಶ ವಿಲ್ಲ. ಈ ಮರುಭೂಮಿಗಳು ವಿಶಾಲವಾದ ಮರಳುರಾಶಿಗಳಿಂದ ಕೂಡಿವೆ ತೇವವಿರುವೆಡೆಯಲ್ಲಿ ಹುಲ್ಲು, ಖರ್ಜೂರ, ಕಳ್ಳಿ ಬೆಳೆಯುತ್ತವೆ. ಉಷ್ಣವಲಯದ ಹುಲ್ಲುಗಾವಲಿನ ಕಡೆಯ ಅಂಚಿನಲ್ಲಿ ಅಷ್ಟಿಷ್ಟು ಹುಲ್ಲೂ, ಮೆಡಿಟರೇನಿಯನ್ ಕಡೆಯಂಚಿನಲ್ಲಿ ಕುರುಚಲೂ ಬೆಳೆಯುತ್ತವೆ. ಮರಳ್ಗಾಡು ನರಿ ಮತ್ತು ಒಂಟೆಗಳೂ ಕೆಲವು ಜಾತಿಗಳ ಹಕ್ಕಿಗಳೂ ಡೇಗೆಗಳು ಇಲ್ಲಿ ಜೀವಿಸಿವೆ.

ಪ್ರಾಣಿ, ಸಸ್ಯ ಮತ್ತು ಜನ ಅಭಿವೃದ್ಧಿ ಹೊಂದಲು ಇಲ್ಲಿನ ಪರಿಸ್ಥಿತಿ ಸಹಕಾರಿಯಾಗಿಲ್ಲ. ಓಯಸಿಸ್‌ಗಳು ಕಂಡುಬರುವ ಪ್ರದೇಶಗಳಲ್ಲಿ ಕೆಲವು ಜನ ನೆಲೆಸಿ ವ್ಯವಸಾಯದಲ್ಲಿ ತೊಡಗಿದ್ದಾರೆ. ಮರುಭೂಮಿಯ ಪ್ರದೇಶಗಳಲ್ಲಿ ಜನಸಂಖ್ಯೆ ಅತಿ ವಿರಳ. ಮರುಭೂಮಿಗಳಲ್ಲಿ ಮೂರು ಬಗೆಯ ಜನ ವಾಸಿಸುತ್ತಾರೆ. ಸದಾ ಸಂಚಾರಿಗಳು: ಮರುಭೂಮಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸರಕು ಸಾಗಿಸುವವರು. ಇಂಥವರು ದರೋಡೆಕಾರರೂ ಆಗಿರುವುದುಂಟು. ನೀರಿನ ವಸತಿ (ಓಯಸಿಸ್) ಇರುವ ಪ್ರದೇಶಗಳಲ್ಲಿ ಸ್ಥಿರವಾಗಿ ನೆಲೆಸುವವರು. ಬೇಸಾಯ, ಪಶುಪಾಲನೆ ಇವರ ಕಸಬು ಖನಿಜ ಸಂಪತ್ತು ಇರುವೆಡೆಗಳಲ್ಲಿ ನೆಲೆಸಿ ಗಣಿ ಉದ್ಯಮದಲ್ಲಿ ನಿರತರಾಗಿರುವವರು. (ಪಿ.ಎಚ್.)

**ಉಷ್ಣವಲಯದ ವ್ಯವಸಾಯ:** ಕರ್ಕಾಟಕ ಸಂಕ್ರಾಂತಿ ವೃತ್ತಕ್ಕೂ ಮಕರ ಸಂಕ್ರಾಂತಿ ವೃತ್ತಕ್ಕೂ ನಡುವೆ ಇರುವ ಪ್ರದೇಶ. ಎಲ್ಲ ಬಗೆಯ ಕೃಷಿಕಾರ್ಯ, ಪಶುಪೋಷಣೆ. ಭೂಮಿಯ ಒಟ್ಟು ನೆಲದ ವಿಸ್ತೀರ್ಣದಲ್ಲಿ ಸುಮಾರು ಕಾಲು ಭಾಗ ಉಷ್ಣವಲಯದಲ್ಲಿದೆ. ಇಡೀ ವಿಶ್ವದ ಪ್ರಜಾಸಂಖ್ಯೆಯ ಮೂರರಲ್ಲೊಂದು ಭಾಗ ವಾಸಿಸುವುದು ಈ ವಲಯದಲ್ಲಿ, ಈ ಜನರಲ್ಲಿ ಬಹುಸಂಖ್ಯಾತರಿಗೆ ಬೇಸಾಯದಿಂದಲೇ ಜೀವನ, ಆದ್ದರಿಂದ ಉಷ್ಣವಲಯದ ವ್ಯವಸಾಯದ ಪ್ರಾಮುಖ್ಯ ಬಹಳ.

ಉಷ್ಣವಲಯದ ವಾಯುಗುಣವನ್ನು ಎಷ್ಟು ಖಚಿತವಾಗಿ ಗುರುತಿಸಬಹುದೋ ಅಷ್ಟೇ ಖಚಿತವಾಗಿ ಇಲ್ಲಿನ ಬೇಸಾಯವನ್ನೂ ಗುರುತಿಸುವುದು ಸಾಧ್ಯ. ಉಷ್ಣವಲಯದ ಬೇಸಾಯ ಪ್ರದೇಶಕ್ಕೂ ಅಧಿಕಾಕ್ಷಾಂಶದ ಪ್ರದೇಶಕ್ಕೂ ನಡುವೆ ಸಾಮಾನ್ಯವಾಗಿ ಪರ್ವತಶ್ರೇಣಿಗಳೂ ಮರುಭೂಮಿಗಳೂ ಅಡ್ಡ ಹಾಯ್ದಿವೆಯಾದ್ದರಿಂದ ಈ ಬೇಸಾಯ ಪ್ರದೇಶ ಇತರ ವಾಯುಗುಣಗಳ ವ್ಯವಸಾಯ ಪ್ರದೇಶಗಳಿಗಿಂತ ಪ್ರತ್ಯೇಕವಾಗಿದೆ. ಆದರೆ ಬ್ರೆಜಿಲ್, ಭಾರತ, ಚೀನಗಳಲ್ಲಿ ಈ ಬಗೆಯ ಪ್ರತ್ಯೇಕತೆ ಇಲ್ಲವಾದ್ದರಿಂದ ಅಲ್ಲಿ ಇದು ಎಲ್ಲಿ ಕೊನೆಗೊಳ್ಳುವುದೆಂದು ನಿಷ್ಕೃಷ್ಟವಾಗಿ ನಿರ್ಣಯಿಸುವುದು ಕಷ್ಟ ಸಾಧ್ಯ. ಉಷ್ಣವಲಯದ ಬೆಳೆಗಳೂ ಬೇಸಾಯ ಪದ್ಧತಿಗಳೂ ಈ ವಲಯದ ಹೊರಗಿನ ಪ್ರದೇಶಗಳಲ್ಲೂ ಅಲ್ಲಲ್ಲಿ ಕಂಡುಬರುವುದುಂಟು.

ಉಷ್ಣವಲಯದ ಹವಾಗುಣ ಪ್ರಾಣಿಗಳಿಗೂ ಸಸ್ಯಗಳಿಗೂ ಬಲು ಉತ್ತೇಜಕ, ಇವು ಇಲ್ಲಿ ವರ್ಣವೈವಿಧ್ಯಪೂರಿತವಾಗಿವೆ. ಆದರೆ ಒಂದೊಂದು ಪ್ರದೇಶದಲ್ಲೂ ಹಲವಾರು ಬಗೆಯ ಬೆಳೆ ತೆಗೆಯುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಅನುವಾದ ಜೀವಿಪರಿಸರ (ಇಕಾಲಜಿ) ಇಲ್ಲಿ ಕಂಡುಬರುವುದಿಲ್ಲ. ಉಷ್ಣತೆಯೇನೋ ಇಲ್ಲಿ ಅನುಕೂಲಕರ. ಎತ್ತರ ಪ್ರದೇಶಗಳಲ್ಲಿ ಸಮಶೀತೋಷ್ಣವಲಯದ ಫಸಲು ತೆಗೆಯಬಹುದು. ಏನೂ ಬೆಳೆಯದಷ್ಟು ಚಳಿಯಿರುವ ಎತ್ತರ ಪ್ರದೇಶ ಬಲು ಕಡಿಮೆ, ಮಾರಕ ಹಿಮ ಬೀಳುವ ಸ್ಥಳಗಳೂ ಅತ್ಯಲ್ಪ. ಉಷ್ಣವಲಯ ಪ್ರದೇಶದಲ್ಲಿ ವರ್ಷ ಪೂರ ಉಷ್ಣತೆಯ ವ್ಯತ್ಯಾಸ ಕಡಿಮೆ, ಹಗಲು ರಾತ್ರಿಗಳ ಉಷ್ಣದ ಅಂತರ ಕೆಲವೆಡೆಗಳಲ್ಲಿ ಹೆಚ್ಚು, ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ

ಮಳೆಯ ಹೊಡೆತದಿಂದ ನೆಲದ ಲವಣಾಂಶ ಕೊಚ್ಚಿ ಹೋಗಿರುವುದುಂಟು. ಮಳೆಯ ನೀರು, ಎಲೆ, ಹಸುರು ಕೊಳೆತು ಗಿಡದ ಬೇರಿಗೆ ಅಂಟಿಕೊಂಡ ಜೇಡಿಮಣ್ಣಿರುತ್ತವೆ. ಅನೇಕ ಕಡೆಗಳಲ್ಲಿ ವರ್ಷವೆಲ್ಲ ಮಳೆ, ಹೆಚ್ಚಾಗಿ ಮಳೆ ಬೀಳುವಲ್ಲಿ ಗಿಡಗಂಟೆ ಸೊಂಪಾಗಿ ಸ್ತರಸ್ತರಗಳಾಗಿ ಬೆಳೆದಿರುವುದುಂಟು. ಆದರೆ ಬೇಸಾಯಕ್ಕೆ ಅನುಕೂಲ ಕಡಿಮೆ.

ಅಧಿಕ ಮಳೆ ಮತ್ತು ಹೆಚ್ಚು ಉಷ್ಣಾಂಶವಿರುವುದರಿಂದ ಸಸ್ಯಗಳು ವರ್ಷವಿಡೀ ಬೆಳೆಯುತ್ತಲೇ ಇರಲು ಅನುಕೂಲವಿದೆ. ಅಂಥ ಪ್ರದೇಶಗಳಲ್ಲಿ ದಟ್ಟಕಾಡುಗಳು ಬೆಳೆಯುವುದು ಸಹಜ. ಬೆಳೆಸಿನ ತೀವ್ರತೆ ಸಮಶೀತೋಷ್ಣವಲಯಕ್ಕಿಂತ ಹೆಚ್ಚು. ಇಲ್ಲಿ ನೆಲದ ಮೇಲೆ ಹರಡುವ ಎಲೆ ಕಸಕಡ್ಡಿಗಳು ಬಹುಕಾಲ ಹಾಗೇ ಉಳಿಯದೆ ಸೂಕ್ಷ್ಮಾಣುಗಳ ಸಹಾಯದಿಂದ ಸಸ್ಯ ಆಹಾರಾಂಶಗಳಾಗಿ ಮಾರ್ಪಾಟುಗೊಂಡು, ಅದೇ ಸಸ್ಯಗಳ ಬೆಳವಣಿಗೆಗೆ ಪೋಷಕವಾಗುತ್ತದೆ. ಇದರಿಂದಲೇ ಫಲವತ್ತು ಕ್ಷಯಿಸದೆ ಹಾಗೇ ಉಳಿದಿರುವಂತೆ ತೋರಿ, ಅಲ್ಲಿಯ ಭೂಪ್ರದೇಶ ಅತ್ಯಂತ ಫಲವತ್ತೆಂಬ ಭ್ರಮೆಯಾಗುತ್ತದೆ. ಆದರೆ ಅದು ನಿಜವಲ್ಲ, ಫಲವತ್ತು ದಟ್ಟಮರ ಬೆಳೆಯುತ್ತಿದ್ದಂತೆ ಅದನ್ನು ಕಡಿದು ನಾಶಪಡಿಸಿದಲ್ಲಿ ಗೊಬ್ಬರಾಂಶವಾಗಲು ಸಾಕಾದಷ್ಟು ಸಾವಯವ ಸಾಮಗ್ರಿ ದೊರಕದೆ ಯಾವುದೇ ಬೆಳೆಸು ಕುಂಠಿತವಾಗುತ್ತದೆ. ಆದ್ದರಿಂದಲೇ ಅನೇಕ ವ್ಯವಸಾಯ ಯೋಜನೆಗಳು ಇಲ್ಲಿ ನಿಷ್ಫಲವಾಗುತ್ತವೆ. ಅತೀವ ಮಳೆ ಮತ್ತು ಉಷ್ಣತೆ, ಕೀಟ ಮತ್ತಿತರ ಉಪದ್ರವಕಾರಿಗಳ ವೃದ್ಧಿಗೆ ಅನುಕೂಲವಾಗಿ ಜನ, ಜಾನುವಾರುಗಳಿಗೆ ಹೆಚ್ಚಿನ ತೊಂದರೆಯಾಗುವುದರಿಂದ ಇಲ್ಲಿ ಅತಿ ಹೆಚ್ಚಿನ ಜನಸಾಂದ್ರತೆಯಿರುವುದಿಲ್ಲ.

ಉಷ್ಣವಲಯದಲ್ಲಿ ಜ್ವಾಲಾಮುಖಿಗಳಿಂದ ಉತ್ಪನ್ನವಾದ ಜಾವದ ಕೆಲಭಾಗ, ಫಿಲಿಪೀನ್ಸ್, ಮಧ್ಯ ಅಮೆರಿಕ ಮುಂತಾದೆಡೆ ಅಡಿಯಲ್ಲಿ ಲಾವಾರಸದ ಕಲ್ಲುಗಳಿಂದ ಮೇಲಿನ ಪೋಷಕಾಂಶಗಳು ತೂರಿ ಹೋಗದೆ ಫಲವತ್ತಾಗಿ ಉಳಿದು ಉತ್ತಮ ವ್ಯವಸಾಯ ಯೋಗ್ಯ ಪ್ರದೇಶಗಳಾಗಿವೆ. ಅಲ್ಲದೆ ಅದೇ ಪ್ರದೇಶದಲ್ಲಿ ಎತ್ತರಕ್ಕೆ ಹೋದಂತೆ ವಾಯುಗುಣ ಮಾರ್ಪಟ್ಟು ಸಮಶೀತೋಷ್ಣವಾಗಿ, ಉಷ್ಣವಲಯದಲ್ಲಿದ್ದರೂ ಸಮಶೀತೋಷ್ಣವಲಯಕ್ಕೆ ಹೊಂದಿದಂಥ ಸಸ್ಯಗಳೇ ಬೆಳೆಯುತ್ತವೆ. ಆದರೆ ಅಲ್ಲಿನ ಹಗಲು ರಾತ್ರಿಗಳ ಹವಾಗುಣಗಳ ಅಂತರ ಹೆಚ್ಚಾಗಿರುವುದರಿಂದ ಸ್ವಲ್ಪ ಮಾರ್ಪಾಟು ಹೊಂದಿರುತ್ತದೆ. ಇದರಿಂದಲೇ ಈ ಪ್ರದೇಶದಲ್ಲಿ ಬೆಳೆಯ ವೈವಿಧ್ಯ ಅಧಿಕ. ತೆಂಗು, ಅಡಕೆ, ಕೋಕೋ, ಕಬ್ಬು, ಸೆಣಬು, ವೆನಿಲಾ ಮತ್ತು ಇತರ ನಾರುಗಳು, ವಿವಿಧ ಔಷಧಗಳು, ಕೀಟನಾಶಕ ಪದಾರ್ಥಗಳು, ಮೆಣಸು, ಲವಂಗ, ಜಾಯಿಕಾಯಿ, ದಾಲ್ಚಿನ್ನಿ ಮುಂತಾದ ಸಂಬಾರ ವಸ್ತುಗಳೂ ವಿವಿಧ ಎಣ್ಣೆ ಉತ್ಪಾದಕ ವೃಕ್ಷ ಮತ್ತು ಸಸ್ಯಗಳೂ ಬತ್ತ ಮುಂತಾದ ಧಾನ್ಯಗಳೂ ವಿಪುಲವಾಗಿ ಬೆಳೆಯುತ್ತವೆ. ಮನೆಗೆ ಉಪಯುಕ್ತವಾದ ವಿವಿಧ ಜಾತಿ ಮರಗಳು—ಬೀಟೆ, ಸಾಗುವಾನಿ, ಮಹಾಗನಿ—ಇಲ್ಲಿ ಹೆಚ್ಚು, ರಬ್ಬರ್, ಗುಟ್ಟಪರ್ಚ, ಡೆಕಲ್ ಅಂಬು, ರಾಳ, ಅರಗು ಮುಂತಾದವು ಇಲ್ಲಿನ ಮುಖ್ಯ ಉತ್ಪನ್ನ, ಪಪಾಯಿ, ಬಾಳೆ, ಅನಾನಸ್, ದೂರಿಯಾನ್ ಮಾಂಗೊಸ್ಟೀನ್, ಮಾವು ಹಲಸು ಮುಂತಾದ ಬಹು ಜನಪ್ರಿಯ ಹಣ್ಣುಗಳ ವೈವಿಧ್ಯ ಉಷ್ಣವಲಯದಲ್ಲಿ ಮಾತ್ರ ಸಾಧ್ಯ; ಹಾಗೂ ಅಲ್ಲಿ ಅನುಕೂಲತೆ ಏರ್ಪಡಿಸಿದಲ್ಲಿ ಹೊಂದಿಕೊಳ್ಳುವ ಹತ್ತಿ, ಮುಸುಕಿನ ಜೋಳ, ತಂಬಾಕು, ಸಿಸಾಲ ನಾರು ಮೊದಲಾದವು ಬಹು ಸಮರ್ಪಕವಾಗಿ ಬೆಳೆಯುತ್ತವೆ.

ಇಲ್ಲಿನ ಹಿಂದುಳಿದ ವ್ಯವಸಾಯ ಮಾರ್ಗವೆಂದರೆ ಸ್ಥಳಾಂತರ ಬೇಸಾಯ. ಒಂದು ಪ್ರದೇಶವನ್ನು ಗುರುತಿಸಿ ಅಲ್ಲಿ ಕಾಡು ಕಡಿದು ಒಣಗಿಸಿ ಸುಟ್ಟು, ಮಳೆ ಬಂದಾಗ ಮೇಲ್ಮಣ್ಣನ್ನು ಕೆದಕಿ ಬೆಳೆ ಇಡುವುದು (ಸ್ಥಳಾಂತರ ಬೇಸಾಯ), ಇಲ್ಲಿನ ಬೆಳೆ ಸಾಮಾನ್ಯವಾಗಿ ನಾರು ಸಂಬಂಧವಾದದ್ದು ಅಥವಾ ಹೊಗೆಸೊಪ್ಪು. ಕಡಿದಾದ ಕಣಿವೆಗಳಲ್ಲೂ ಬದು ಹಾಕಿ ಇದೇ ಮಾರ್ಗ ಅನುಸರಿಸುವರು. ಇನ್ನೂ ಬೇರು ಮುಂತಾದವು ಇರುವುದರಿಂದ ನೇಗಿಲ ಉಪಯುಕ್ತತೆ ಸಾಧ್ಯವಿಲ್ಲ. ಆದ್ದರಿಂದ ಎಲ್ಲಿ ಜನ ಮತ್ತು ಭೂಪ್ರದೇಶದ ಅಭಾವವಿಲ್ಲವೋ ಅಲ್ಲಿ ಮಾತ್ರ ಈ ಪದ್ಧತಿ ಅನುಸರಿಸಲು ಸಾಧ್ಯ. ಒಂದೆರಡು ಬೆಳೆ ತೆಗೆದು ಫಲವತ್ತು ಕಡಿಮೆಯಾದೊಡನೆ ಅಲ್ಲಿ ಪುನಃ ಬೇರೊಂದು ಸ್ಥಳವನ್ನು ಅರಿಸಿ ಅದೇ ಮಾರ್ಗವನ್ನನುಸರಿಸುತ್ತಾರೆ. ಎರಡು ಮೂರು ವರ್ಷಕ್ಕಿಂತ ದೀರ್ಘಕಾಲ ಅದನ್ನು ಅನುಸರಿಸಬೇಕಾದಲ್ಲಿ ಗೊಬ್ಬರ ಒದಗಿಸಬೇಕಾಗುತ್ತದೆ.

ಕಡಿಮೆ ಮಳೆ ಬೀಳುವ–ವರ್ಷದಲ್ಲಿ ಸ್ವಲ್ಪಕಾಲ ಒಣಹವೆ ಇರುವ–ಕಡೆಗಳಲ್ಲೂ ಫಲವತ್ತಿನ ಅಭಾವ, ಕ್ರಿಮಿಕೀಟ ಮುಂತಾದ ಎಲ್ಲ ಪ್ರತಿಕೂಲಗಳೂ ಇವೆ. ಜತೆಗೆ ನೀರಾವರಿಯ ಸೌಲಭ್ಯವಿಲ್ಲದೆ ವರ್ಷವೆಲ್ಲ ಬೆಳೆಯ ಕೆಲಸ ನಡೆಸುವುದು ಇಲ್ಲಿ ಸಾಧ್ಯವಿಲ್ಲ. ಪಶುಸಂಪತ್ತಿನ ವೃದ್ಧಿಗೂ ಅಡಚಣೆಯಾಗಿ ಅನೇಕ ರೋಗಗಳ ಹಾವಳಿ ಇಲ್ಲುಂಟು.

ಉಷ್ಣವಲಯದಲ್ಲಿ ಅನೇಕ ಪ್ರಾಣಿಗಳನ್ನು ಸಾಕುತ್ತಾರೆ. ಹಂದಿ, ಕೋಳಿ, ಆಡು, ಕುರಿ(ಎತ್ತರದ ನೆಲದಲ್ಲಿ ಕಡಿಮೆ ಮಳೆ ಬೀಳುವೆಡೆಯಲ್ಲಿ), ಕೊಂಬಿರುವ ಹಸು, ಎಮ್ಮೆ ಇವು ಸಾಮಾನ್ಯ. ಕುದುರೆಯನ್ನು ಬೇಸಾಯಕ್ಕೆ ಉಪಯೋಗಿಸುವುದು ಅಮೆರಿಕ ಹಾಗೂ ಮುಸ್ಲಿಂ ರಾಷ್ಟ್ರಗಳಲ್ಲಿ ಮಾತ್ರ..

ನೀರು ಹರಿಯುವ ತಗ್ಗು ಪ್ರದೇಶದಲ್ಲಿ ಬತ್ತ ಬೆಳೆಯುತ್ತಾರೆ. ಮೇಲಿನಿಂದ ಹರಿದು ಬರುವ ನೀರಿನಲ್ಲೂ ಆಹಾರಾಂಶವಿದ್ದು ಬತ್ತ ಚೆನ್ನಾಗಿ ಬೆಳೆಯುತ್ತದೆ. ಇದಕ್ಕೆ ಹೆಚ್ಚಿನ ಗೊಬ್ಬರವನ್ನೂ ಒದಗಿಸಲಾಗುತ್ತದೆ. ಸ್ವಲ್ಪ ಇಳಿಜಾರಾದ ವಿಸ್ತಾರ ಪ್ರದೇಶಗಳಲ್ಲಿ ಹೆಚ್ಚಾಗಿ ಮುಸುಕಿನ ಜೋಳ, ಗೋದಿ, ಜೋಳ, ಹತ್ತಿ, ಮುಂತಾದುವನ್ನೂ ಬೆಳೆಯಲಾಗುತ್ತದೆ. ಇಲ್ಲಿ ಪೋಟ ನೇಗಿಲಿನ ಬಳಕೆಯಿದೆ. ಮೆಣಸು, ಬಾಳೆ, ಮರಗೆಣಸು, ಅನಾನಸ್ ಮುಂತಾದವನ್ನು ಸಾಂದ್ರ ಬೇಸಾಯವನ್ನನುಸರಿಸಿ ತೋಟದ ಬೆಳೆಸಾಗಿ ಬೆಳೆಯಲಾಗುತ್ತದೆ. ಕಾಫಿ, ರಬ್ಬರ್, ಎಣ್ಣೆಯ ತಾಳೆಜಾತಿ ಮರಗಳು ಮತ್ತು ಕಬ್ಬು ವಿಸ್ತಾರವಾದ ತೋಟ ಹಿಡುವಳಿಗಳಲ್ಲಿ ಹೆಚ್ಚು. ಇಂಥ ತೋಟಗಳು ಹೆಚ್ಚಾಗಿ ಯೂರೋಪಿಯನ್ನರ ವಶದಲ್ಲಿವೆ. ಹೆಚ್ಚು ಬೆಲೆಬಾಳುವ ಆಧುನಿಕ ಯಂತ್ರೋಪಕರಣಗಳ ಬಳಕೆ, ಉತ್ಪನ್ನಗಳ ವೇಗ ಸಾಗಾಣಿಕೆಯ ಸೌಲಭ್ಯ, ರೋಗರುಜಿನಾದಿಗಳನ್ನು ತಡೆಗಟ್ಟುವ ತಳಿಗಳ ಉಪಯೋಗ–ಇವುಗಳಿಂದ ಅವರು ಹೆಚ್ಚಿನ ಲಾಭ ಪಡೆಯಲು ಶಕ್ತರಾಗಿದ್ದಾರೆ. ಏನೇ ಪ್ರತಿಕೂಲಗಳಿದ್ದರೂ ಉಷ್ಣ ಹವೆಯಲ್ಲಿ ವ್ಯವಸಾಯವೇ ಪ್ರಧಾನ, ನೆಲ, ಜಲ, ಉಷ್ಣತೆ–ಎಲ್ಲವೂ ಹದವಾಗಿರುವಲ್ಲಿ ಸಾಂದ್ರ ಬೇಸಾಯ ಸಾಮಾನ್ಯ. ಅಂಥಲ್ಲಿ ಜನಸಂಖ್ಯೆಯ ಒತ್ತಡ ಹೆಚ್ಚು. (ಎಂ.)

**ಉಸ್ಮಾನಾಬಾದ್:** ಹಿಂದೆ ಹೈದರಾಬಾದ್ ಸಂಸ್ಥಾನದಲ್ಲಿದ್ದು ಈಗ ಮಹಾರಾಷ್ಟ್ರಕ್ಕೆ ಸೇರಿರುವ ಒಂದು ಜಿಲ್ಲೆ. ಆ ಜಿಲ್ಲೆಯ ಕೇಂದ್ರ ಪಟ್ಟಣ. ಸೊಲ್ಲಾಪುರದಿಂದ ಉತ್ತರಕ್ಕೆ 56 ಕಿಮೀ ದೂರದಲ್ಲಿದೆ. 3 ಕಿಮೀ ದೂರದಲ್ಲಿ ಕೆಲವು ವೈಷ್ಣವ–ಜೈನ ಗುಹೆಗಳುಂಟು. ಇವನ್ನು 5–6ನೆಯ ಶತಮಾನಗಳಲ್ಲಿ ಕೊರೆಯಲಾಯಿತೆಂದು ಊಹಿಸಲಾಗಿದೆ.

ಜಿಲ್ಲೆಯ ವಿಸ್ತೀರ್ಣ 8,861 ಚ.ಕಿಮೀ. ಜನಸಂಖ್ಯೆ: 14,72,256. ಈ ಜಿಲ್ಲೆಯಲ್ಲಿ ವರ್ಷಕ್ಕೆ ಸರಾಸರಿ 83 ಸೆಂಮೀ ಮಳೆಯಾಗುತ್ತದೆ. ಕಾಡೇ ಇಲ್ಲದ ಈ ಜಿಲ್ಲೆಯ ಮುಖ್ಯ ಬೆಳೆಗಳು ಜೋಳ, ಗೋದಿ, ಬತ್ತ, ಹತ್ತಿ, ನೆಲಗಡಲೆ ಮತ್ತು ಸಜ್ಜೆ. ಉಸ್ಮಾನಾಬಾದಿಗೆ 20 ಕಿಮೀ ದೂರದಲ್ಲಿ ಇರುವ ಥೈರ್ ಎಂಬುದು ಹಿಂದುಗಳ ಯಾತ್ರಾಸ್ಥಳ. ಇಲ್ಲಿ ಸಂತ ಗೊರೋಬನ ಮಂದಿರ ಇದೆ. ಪ್ರತಿ ವರ್ಷವೂ ನಡೆಯುವ ಜಾತ್ರೆಯ ಸಮಯದಲ್ಲಿ ಭಕ್ತರು ಹೆಚ್ಚು ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಹಿಂದು ರಾಜನೊಬ್ಬ ಕಟ್ಟಿಸಿದ ಕೋಟೆ ಇತಿಹಾಸ ಪ್ರಸಿದ್ಧವಾದದ್ದು. ಇದನ್ನು ಬಹಮನಿ ಅರಸರೂ ಬಿಜಾಪುರದ ಶಾಹಿ ದೊರೆಗಳೂ ವಶಪಡಿಸಿಕೊಂಡಿದ್ದರು. ಇಲ್ಲಿ ಹರಿಯುವ ಬೋರಿ ನದಿಯ ಅಣೆಕಟ್ಟಿನ ನೀರು ಕೋಟೆಯೊಳಗಿನ ಪಾನೀ ಮಹಲಿನ ಚಾವಣಿಯ ಮೇಲೆ ಹರಿದು ಹೋಗುವುದೊಂದು ವೈಶಿಷ್ಟ್ಯ. ಈ ಕಟ್ಟೆಯನ್ನೂ ಮಹಲನ್ನೂ ಕಟ್ಟಿಸಿದವ ಎರಡನೆಯ ಇಬ್ರಾಹಿಂ ಆದಿಲ್‌ಷಾ. (ಆರ್.ಆರ್.ಕೆ.)

# ಋ

**ಋತುಗಳು:** ಭೂಮಿಯು ತನ್ನ ಪಥದಲ್ಲಿ ಸೂರ್ಯನ ಸುತ್ತು ಪರಿಭ್ರಮಿಸುವಾಗ ನಿರ್ದಿಷ್ಟ ಸ್ಥಾನಗಳನ್ನು ಅವಲಂಬಿಸಿದ್ದು ಉಂಟಾಗುವ ವರ್ಷದ ನಾಲ್ಕು ಸಹಜ ಪರಿಸ್ಥಿತಿಗಳೇ ಋತುಗಳು (ಸೀಸನ್ಸ್). ಭೂಗ್ರಹ ತನ್ನ ಪಥದಲ್ಲಿ ಸೂರ್ಯನ ಸುತ್ತ ಪರಿಭ್ರಮಿಸುವಾಗ ಋತುಗಳು ಉಂಟಾಗುತ್ತವೆ. ಭೂಮಿಯ ವಾರ್ಷಿಕ ಚಲನೆಯಿಂದಾಗುವ ಪರಿಣಾಮಗಳಲ್ಲಿ ಒಂದು. ಸೂರ್ಯನ ಸುತ್ತ ಭೂಮಿ ಒಂದು ಪ್ರದಕ್ಷಿಣೆ ಹಾಕಲು ತೆಗೆದುಕೊಳ್ಳುವ ಅವಧಿಯೇ ವರ್ಷ. ಒಂದು ವರ್ಷಾವಧಿಯನ್ನು ಸುಸ್ಪಷ್ಟವಾಗಿ ವಿಭಜಿಸಬಹುದಾದ ಭಾಗಗಳೇ ಋತುಗಳು. ಭೂಗ್ರಹಕ್ಕೆ ಅಗತ್ಯವಾದ ಶಾಖ ಮತ್ತು ಬೆಳಕುಗಳಿಗೆ ಸೂರ್ಯನೆ ಆಕರ. ಸೂರ್ಯನಿಂದ ಪ್ರವಹಿಸುವ ಶಾಖ ಮತ್ತು ಬೆಳಕು ಭೂಮಿಗೆ ಸಮನಾಗಿ ದೊರೆಯುವುದಿಲ್ಲ. ಇಂತಹ ಪರಿಸ್ಥಿತಿಗಳನ್ನನುಸರಿಸಿ ಋತುಗಳ ವಿಭಜನೆ ಮಾಡಲಾಗಿದೆ. ಋತುಗಳು ಮೂರು ಪ್ರಮುಖ ಕಾರಣಗಳಿಂದ ಸಂಭವಿಸುತ್ತವೆ. ಅವುಗಳೆಂದರೆ– 1)

ಸೂರ್ಯನ ಸುತ್ತ ಭೂಮಿಯು ತನ್ನ ನಿಯಮಿತ ಪಥದಲ್ಲಿ ಪರಿಭ್ರಮಿಸುವಿಕೆ (ಅಂಡಕಾರದ ಭೂಪಥ). 2) ಭೂಮಿಯ ಅಕ್ಷ ಭೂಪಥದ ಸಮತಲಕ್ಕೆ $66^1/_2{}^0$ ಓರೆಯಾಗಿರುವುದು. 3) ಭೂ ಅಕ್ಷದ ಸಮಾನಾಂತರತೆ. ಅಲ್ಲದೆ ಸೂರ್ಯನ ಸುತ್ತ ಭೂಮಿಯು ಪ್ರದಕ್ಷಿಣೆ ಹಾಕಲು ತೆಗೆದುಕೊಳ್ಳುವ ಅವಧಿ, ಸೂರ್ಯ ಮತ್ತು ಭೂಮಿಗಳ ಮಧ್ಯಂತರಗಳೂ ಸಹ ಋತುಗಳ ಮೇಲೆ ಪ್ರಭಾವ ಬೀರುತ್ತವೆ.




**ಭೂವಾರ್ಷಿಕ ಚಲನ ಮತ್ತು ಋತುಭೇದಗಳು**

ಭೂ ಅಕ್ಷವು ಭೂಪಥದ ಸಮತಲಕ್ಕೆ ಎಲ್ಲಾ ಸ್ಥಾನಗಳಲ್ಲಿಯೂ ಏಕಮಯವಾಗಿ ಓರೆಯಾಗಿರುವುದನ್ನೆ ಭೂ ಅಕ್ಷ ಸಮಾನಾಂತರತೆ ಎಂದು ಕರೆಯಲಾಗಿದೆ. ಹೀಗಾಗಿ ಭೂ ಅಕ್ಷದ ಉತ್ತರ ತುದಿ (ಉತ್ತರ ಧ್ರುವ ಬಿಂದು) ಧ್ರುವ ನಕ್ಷತ್ರದ ಕಡೆಗೆ ಮುಖ ಮಾಡಿಕೊಂಡಿರುವುದು.

ಋತು ಭೇದಗಳು ಮುಖ್ಯವಾಗಿ ಸೂರ್ಯನ ಚಲನಾಗತಿಯನ್ನು ಅವಲಂಬಿಸಿರುತ್ತವೆ. ಸೂರ್ಯನ ಸುತ್ತ ಪರಿಭ್ರಮಿಸುವಾಗ ಭೂಮಿಯು ವಿವಿಧ ಸ್ಥಾನಗಳನ್ನು ಆಕ್ರಮಿಸುವುದು. ಒಂದು ಗೋಳಾರ್ಧ ಸೂರ್ಯನಿಗೆ ಅಭಿಮುಖವಾಗಿ ಮತ್ತೊಂದು ಗೋಳಾರ್ಧ ವಿರುದ್ಧವಾಗಿಯೂ ಇರುತ್ತದೆ. ಇದರಿಂದ ಭೂಮಿಯ ವಿವಿಧ ಭಾಗಗಳು ಸೂರ್ಯನಿಂದ ಪಡೆಯುವ ಶಾಖ ಮತ್ತು ಬೆಳಕಿನಲ್ಲಿ ವ್ಯತ್ಯಾಸವಾಗುವುದು. ಸೂರ್ಯನ ಕಿರಣಗಳು ನೇರವಾಗಿ ದೀರ್ಘ ಕಾಲ ಬೀಳುವ ಹಾಗೂ ಸೂರ್ಯನ ಕಿರಣಗಳಿಗೆ ಸಮೀಪದಲ್ಲಿರುವ ಪ್ರದೇಶಗಳು ಹೆಚ್ಚು ಉಷ್ಣಾಂಶವನ್ನು ಪಡೆಯುತ್ತವೆ. ಹಾಗೆಯೇ ಸೂರ್ಯನ ಕಿರಣಗಳು ಓರೆಯಾಗಿರುವ ಅಥವಾ ಸೂರ್ಯನ ಕಿರಣಗಳಿಗೆ ದೂರದಲ್ಲಿರುವ ಮತ್ತು ಸೂರ್ಯನ ಕಿರಣಗಳು ಕಡಿಮೆ ಅವಧಿ ಬೀಳುವ ಭಾಗಗಳು ಕಡಿಮೆ ಉಷ್ಣಾಂಶವನ್ನು ಪಡೆಯುತ್ತವೆ. ಹೆಚ್ಚು ಉಷ್ಣಾಂಶ ಪಡೆಯುವ ಭಾಗಗಳಲ್ಲಿ ಬೇಸಗೆ ಕಾಲವೂ ಮತ್ತು ಕಡಿಮೆ ಉಷ್ಣಾಂಶ ಪಡೆಯುವ ಭಾಗಗಳಲ್ಲಿ ಚಳಿಗಾಲವೂ ಉಂಟಾಗುತ್ತವೆ. ಅಲ್ಲದೆ ಸೂರ್ಯನ ಕಿರಣಗಳು ಪ್ರಕಾಶಿಸುವ ಅವಧಿಯೂ ವ್ಯತ್ಯಾಸಗೊಂಡು ಹಗಲು–ರಾತ್ರಿಗಳ ಅವಧಿಯಲ್ಲೂ ವ್ಯತ್ಯಾಸವುಂಟಾಗುವುದು.

ವರ್ಷದ ಎರಡು ದಿನಗಳಲ್ಲಿ ಸೂರ್ಯ ನೇರವಾಗಿ ಸಮಭಾಜಕ ವೃತ್ತದ ಮೇಲೆ ಪ್ರಕಾಶಿಸುವನು. ಅಂದರೆ ಮಾರ್ಚ್ 21 ಹಾಗೂ ಸೆಪ್ಟಂಬರ್ 23ರಂದು ಸಮಭಾಜಕ ವೃತ್ತದ ಮೇಲೆ ನೇರವಾಗಿ ಪ್ರಕಾಶಿಸುವುದರಿಂದ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಹಗಲು ಮತ್ತು ರಾತ್ರಿಗಳ ಅವಧಿ ಕರಾರುವಕ್ಕಾಗಿ 12 ಗಂಟೆಗಳಾಗಿರುತ್ತವೆ. ಭೂಮಿಯ ಈ ಸ್ಥಾನಗಳನ್ನು ವಿಷುವತ್ಸಂಕ್ರಾಂತಿ ಎಂದು ಕರೆಯುವರು. ಮಾರ್ಚ್ 21ರ ದಿನವನ್ನು ಮೇಷ ಸಂಕ್ರಾಂತಿ ಎಂದೂ ಸೆಪ್ಟಂಬರ್ 23ರ ದಿನವನ್ನು ತುಲಾ ಸಂಕ್ರಾಂತಿ ಎಂದೂ ಕರೆಯುವರು.

ಭೂಪಥದ ಮೇಲಿನ ನಾಲ್ಕು ಸ್ಥಾನಗಳನ್ನು ಆಧರಿಸಿ ಒಂದು ವರ್ಷದ ಅವಧಿಯನ್ನು ನಾಲ್ಕು ಋತುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಬೇಸಗೆಕಾಲ, ಶರತ್ಕಾಲ, ಚಳಿಗಾಲ ಮತ್ತು ವಸಂತಕಾಲ. (ಐ.ಎಸ್.ಪಿ.;ಎಸ್.ಎನ್.ಕೆ.)

# ಎ

**ಎ ಬಿ ಸಿ ರಾಷ್ಟ್ರಗಳು:** ದಕ್ಷಿಣ ಅಮೆರಿಕದ ರಾಷ್ಟ್ರಗಳಾದ ಅರ್ಜೆಂಟೈನ, ಬ್ರೆಜಿಲ್ ಮತ್ತು ಚಿಲಿಗಳನ್ನು (ಎ.ಬಿ.ಸಿ. ಪವರ್ಸ್) ಈ ಹೆಸರಿನಲ್ಲಿ ಕರೆಯುವುದಿದೆ. ಪರಸ್ಪರ ಸ್ನೇಹ ಪ್ರಚೋದಕ ಭಾಷಣ, ಅಧಿಕೃತ ಸಂದರ್ಶನ ಮುಂತಾದುವುಗಳ ಮೂಲಕ ತಮ್ಮ ಮೈತ್ರಿ ಬೆಳೆಸಿಕೊಳ್ಳಬೇಕೆಂಬ ಉದ್ದೇಶದಿಂದ ಇವು 1905ರಲ್ಲಿ ಅನೌಪಚಾರಿಕ ಸಂಘವೊಂದನ್ನು ಸ್ಥಾಪಿಸಿಕೊಂಡು ಮುಂದೆ 1915ರಲ್ಲಿ ಈ ಬಗ್ಗೆ ಅಧಿಕೃತ ಒಪ್ಪಂದಕ್ಕೆ ಸಹಿ ಹಾಕಿದವು. ಇವು ಸ್ಥಾಪಿಸಿಕೊಂಡ ಈ ಸಂಘಕ್ಕೆ ಈ ಹೆಸರು ಬಂದಿದೆ. ತಂತಮ್ಮಲ್ಲಿ ಯುದ್ಧ ಪರಿಸ್ಥಿತಿಯೇನಾದರೂ ಉದ್ಭವಿಸಿದರೆ ಇದರ ಹಿಂದಿನ ಕಾರಣಗಳ ನಿಷ್ಪಕ್ಷಪಾತ ತನಿಖೆ ನಡೆಸದೆ ಪರಸ್ಪರ ಯುದ್ಧದಲ್ಲಿ ತೊಡಗಬಾರದೆಂದು ಈ ರಾಷ್ಟ್ರಗಳು ಪ್ರತಿಜ್ಞೆ ಮಾಡಿದ್ದುವು. ದಕ್ಷಿಣ ಅಮೆರಿಕದ ವ್ಯವಹಾರಗಳಲ್ಲಿ ಅಮೆರಿಕ ಸಂಯುಕ್ತಸಂಸ್ಥಾನ ಹಸ್ತಕ್ಷೇಪಮಾಡದಂತೆ ತಡೆಯುವುದೂ ಈ ಸಂಘಟನೆಯ ಉದ್ದೇಶಗಳಲ್ಲೊಂದಾಗಿತ್ತು. ಆದರೆ ಈ ಉದ್ದೇಶಗಳು ಅನಂತರ ಅಷ್ಟೇನೂ ಫಲಪ್ರದವಾಗಲಿಲ್ಲ.

1914ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಕ್ಕೂ ಮೆಕ್ಸಿಕೊಗೂ ಯುದ್ಧ ನಡೆದಾಗ ಈ ಸಂಘದ ರಾಷ್ಟ್ರಗಳು ಇವುಗಳ ನಡುವೆ ರಾಜಿಮಾಡಿಸಲು ಯತ್ನಿಸಿದುವು. ನಯಾಗರ ಜಲಪಾತದ ಬಳಿ ಈ ಸಂಧಾನ ನಡೆಯಿತು. ಮೆಕ್ಸಿಕೊದ ರಾಷ್ಟ್ರಪ್ರೇಮಿ ನಿಸ್ವಾರ್ಥಿ ಆದರ್ಶವಾದಿ ಅಧ್ಯಕ್ಷ ಡಾನ್ ಫ್ರಾನ್ಸಿಸ್ಕೊ ಮದೇರೊನನ್ನು ಕೊಲೆ ಮಾಡಿ ಅಧಿಕಾರಕ್ಕೆ ಬಂದಿದ್ದ ವಿಕ್ಟೋರಿಯಾನೊ ಹ್ಯೂವರ್ಟ್ ಅಮೆರಿಕ ಸಂಯುಕ್ತಸಂಸ್ಥಾನದ ಧ್ವಜಕ್ಕೆ ಸಲ್ಲಬೇಕಾಗಿದ್ದ ಗೌರವವನ್ನೂ ಸಲ್ಲಿಸದೆ ಹೋದದ್ದರಿಂದ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ವಿಲ್ಸನ್ ಆ ದೇಶದ ಬಂದರನ್ನು ಸೆರೆಹಿಡಿದರು. ಈ ನೀತಿಗೆ ಕೊನೆಯಲ್ಲಿ ಜಯ ಲಭಿಸಿತು. ಹ್ಯೂವರ್ಟ್ ಪದಚ್ಯುತನಾಗಿ ದೇಶಭ್ರಷ್ಟನಾದ. ಎ.ಬಿ.ಸಿ. ರಾಷ್ಟ್ರಗಳ ಮಧ್ಯಸ್ಥಿಕೆಯಿಂದಾಗಿ ಇವೆರಡು ರಾಷ್ಟ್ರಗಳ ನಡುವೆ ಯುದ್ಧ ಸಂಭವಿಸಲಿಲ್ಲ.

ಹೊರಗಿನವರ ಕೈವಾಡವಿಲ್ಲದೆ ಪ್ರತಿಯೊಂದು ದೇಶವೂ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂಬ ತತ್ತ್ವ ನಯಾಗರ ಸಮ್ಮೇಳನದಲ್ಲಿ ಅಂಗೀಕೃತವಾಯಿತು. ಆದರೆ ಮುಂದೆ ಈ ತೀರ್ಮಾನವನ್ನು ಕಾರ್ಯಗತ ಮಾಡುವಲ್ಲಿ ಎ.ಬಿ.ಸಿ. ರಾಷ್ಟ್ರಗಳು ಆಸ್ಥೆ ವಹಿಸಲಿಲ್ಲ. 1933ರ ವರೆಗೆ ಈ ಸಂಘ ಯಾವ ಮಹತ್ತ್ವದ ಸಾಧನೆಯನ್ನೂ ಮಾಡಲಿಲ್ಲ. 1933ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ರೂಸ್‌ವೆಲ್ಟನ ಸಲಹೆಯ ಮೇರೆಗೆ ಕ್ಯೂಬದಲ್ಲಿ ಶಾಂತಿಯುತ ಸರ್ಕಾರವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಇದು ವಿಫಲವಾಯಿತಲ್ಲದೆ 1939ರಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತು.

ಈ ತ್ರಿರಾಷ್ಟ್ರ ಸಂಘ ಮಹತ್ತ್ವವಾದದ್ದೇನನ್ನೂ ಸಾಧಿಸಲಾಗದಿದ್ದರೂ ದೊಡ್ಡ ರಾಷ್ಟ್ರಗಳು ಸಣ್ಣ ರಾಷ್ಟ್ರಗಳ ವ್ಯವಹಾರಗಳಲ್ಲಿ ಕೈಹಾಕಬಾರದೆಂಬ ತತ್ತ್ವದ ಪ್ರತಿಪಾದನೆ ಮಾಡಿತು. ದಕ್ಷಿಣ ಅಮೆರಿಕನ್ ರಾಷ್ಟ್ರಗಳಿಗೂ ಆತ್ಮಾಭಿಮಾನವುಂಟೆಂಬುದನ್ನು ಇದು ಪ್ರಪಂಚಕ್ಕೆ ಸಾರಿತು. (ಜಿ.ಆರ್.ಕೆ.)

**ಎಕಿಸ್ಟಿಕ್ಸ್:** ಎಕಿಸ್ಟಿಕ್ಸ್ ಎಂಬ ಪದ ಪುರಾತನ ಗ್ರೀಕ್ ಭಾಷೆಯಿಂದ ಬಂದಿದ್ದು ಮಾನವ ವಸತಿಗಳಾದ ಮನೆ, ಕಟ್ಟಡ, ಕಾಲೋನಿ ಎಂಬ ಅರ್ಥಗಳಿರುವ ಈ ಶಬ್ದವನ್ನು ಮೊದಲಿಗೆ 1968ರಲ್ಲಿ ಡೋಕ್ಸಿಯಾಡಿಸ್ ಎಂಬುವವರು ಬಳಸಿದರು. ಮಾನವನ ವಸತಿ, ಗ್ರಾಮೀಣ ಮತ್ತು ನಗರೀಯ, ವಿಕಾಸ ಮತ್ತು ಬೆಳವಣಿಗೆಯನ್ನು ಕುರಿತ ವೈಜ್ಞಾನಿಕಶೋಧವಿದು. ಮಾನವನ ವಸತಿಗಳ ನಿರ್ಮಾಣ, ಆಕಾರ ಹಾಗೂ ಅವುಗಳ ಬೆಳವಣಿಗೆ, ನಗರಗಳ ಅಭಿವೃದ್ಧಿ, ಯೋಜನೆಗಳು ಮೊದಲಾದವುಗಳ ಅಧ್ಯಯನವಾಗಿದೆ.

ಭೂಪ್ರದೇಶ, ಹಳ್ಳಿ ನಗರಗಳ ಬೆಳವಣಿಗೆ ಮತ್ತು ಅಭಿವೃದ್ಧಿ, ವ್ಯವಸಾಯ, ಉದ್ಯೋಗ, ಉಪಕರಣಗಳು ಮೊದಲಾದ ಅಂಶಗಳ ನಡುವೆ ಸಂಬಂಧವನ್ನು ವಿಶ್ಲೇಷಿಸುತ್ತದೆ. ಈ ಹೆಸರಿನ ನಿಯತಕಾಲಿಕ ಪತ್ರಿಕೆಯೊಂದು ಪ್ರಕಟವಾಗುತ್ತಿದೆ. (ಎಚ್.ಎಸ್.ಡಿ.)

**ಎಕುಮಿನ್:** ಪುರಾತನ ಕಾಲದಲ್ಲಿ ಜನವಸತಿಯು ಮೆಡಿಟರೇನಿಯನ್ ಸಮುದ್ರದ ಸುತ್ತಲಿನ ಪ್ರದೇಶದಲ್ಲಿ ಮಾತ್ರ ಆವರಿಸಿತ್ತು ಮತ್ತು ಜನ ಸಮೂಹವೂ ಕೂಡ ಹೆಚ್ಚಾಗಿ ಭೌಗೋಳಿಕ ಜ್ಞಾನವನ್ನು ಮೆಡಿಟರೇನಿಯನ್ ಸುತ್ತಲಿನ ಪ್ರದೇಶದ ಬಗ್ಗೆ ಮಾತ್ರ ತಿಳಿದುಕೊಂಡಿತ್ತು. ಭೂಮಿಯ ಇನ್ನುಳಿದ ಭಾಗಗಳ ಜ್ಞಾನ ಅವರಿಗೆ ಇರಲಿಲ್ಲ. ಕಾರಣ ಮೆಡಿಟರೇನಿಯನ್ ಪ್ರದೇಶದ ದಟ್ಟ ಜನವಸತಿಯ ಭಾಗವನ್ನು ಎಕುಮಿನ್ ಎಂದು ಕರೆಯಲಾಗುತ್ತಿತ್ತು. ಗ್ರೀಕ್ ಭಾಷೆಯವರ ಜನವಸತಿ ಪ್ರದೇಶ ಎಂದು ಇದರ ಅರ್ಥ. (ಎಂ.ಆರ್.ಎಚ್.)

**ಎಟ್ನ:** ಸಿಸಿಲಿಯ ಪೂರ್ವ ತೀರದಲ್ಲಿರುವ ಪ್ರಸಿದ್ಧ ಸಜೀವ ಅಗ್ನಿಪರ್ವತ. ಮೊಂಗಿಬೆಲ್ಲೊ ಸ್ಥಳೀಯ ಹೆಸರು. ಸು. 1165 ಚ.ಕಿಮೀ ಹರಡಿದೆ. ಇದು ಸುತ್ತಲೂ ಉಗುಳಿದ ಲಾವಾ ಮತ್ತು ಬೂದಿ ಅನೇಕ ಕಡೆ ಫಲವತ್ತಾದ ಮಣ್ಣಾಗಿ ರೂಪಾಂತರಗೊಂಡಿದೆ. ನಿಯತವಲ್ಲದಿದ್ದರೂ ಇದರ ಆಕಾರ 38 ಕಿಮೀ ವ್ಯಾಸದ ಒಂದು ಶಂಖುವಿನಂತಿದೆ. ಬುಡ ದೀರ್ಘವೃತ್ತಾಕಾರವಾಗಿದೆ. ಇಳಿಜಾರಿನಲ್ಲಿ ಅನೇಕ (ಸು. 260) ಚಿಕ್ಕ ಚಿಕ್ಕ ಶಂಖುವಿನಾಕಾರದ ಗುಡ್ಡಗಳು ಎದ್ದಿವೆ. ಮೂಲ ಶಿಖರ ಸು. 3261 ಮೀ ಎತ್ತರ. ಇದರ ಆಕಾರ ಎತ್ತರಗಳು ಆಗಿಂದಾಗ್ಗೆ ಆಗುವ ಸಿಡಿತಗಳಿಂದಾಗಿ ಸತತವಾಗಿ ಬದಲಾಗುತ್ತಿರುತ್ತದೆ. 2940 ಮೀ ಎತ್ತರದಲ್ಲಿ ಒಂದು ವೀಕ್ಷಣಾಲಯವನ್ನು ಸ್ಥಾಪಿಸಲಾಗಿದೆ (1887). ಸುತ್ತಲಿನ ಪ್ರದೇಶದಲ್ಲಿ ಸಮಶೀತೋಷ್ಣ ವಾಯುಗುಣವಿದ್ದು ಭೂಮಿ ಫಲವತ್ತಾಗಿದೆ. ಇದನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು : 1) ತೀರದಿಂದ 460 ಮೀ ಎತ್ತರದ ವರೆಗಿನ ಪ್ರದೇಶ : ಇಲ್ಲಿ ಬಾಳೆ, ಕಬ್ಬು, ಅಂಜೂರ, ಕಿತ್ತಳೆ ಪ್ರಮುಖ ಬೆಳೆ. ಇಲ್ಲಿನ ತಗ್ಗು ಭಾಗದಲ್ಲಿ ಕ್ಯಾಟಾನಿಯ ಪ್ರಸಿದ್ಧ ನಗರವಿದೆ. 2) 1220 ಮೀ ಎತ್ತರದ ವರೆಗಿನ ಪ್ರದೇಶ: ದ್ರಾಕ್ಷಿ, ಆಲಿವ್ ಇಲ್ಲಿನ ಬೆಳೆಗಳು. ಈ ಎರಡು ಪ್ರದೇಶಗಳಲ್ಲಿ ಅಧಿಕ ಜನಸಾಂದ್ರತೆಯಿದೆ. 3) 1830 ಮೀ ವರೆಗಿನ ಪ್ರದೇಶ : ಓಕ್, ಪೈನ್ ಮರಗಳಲ್ಲದೆ ಬಾರ್ಲಿ, ಮುಸುಕಿನ ಜೋಳವನ್ನು ಬೆಳೆಯುತ್ತಾರೆ. 4) 1830 ಮೀ ಮೀರಿದ ಎತ್ತರದ ಪ್ರದೇಶ : ವರ್ಷವೆಲ್ಲ ಹಿಮಾಚ್ಛಾದಿತವಾಗಿರುವುದರಿಂದ ಉಪಯುಕ್ತವಾದ ಬೆಳೆ ಇಲ್ಲ. ಕಡಿದಾದ ಇಳಿಜಾರುಳ್ಳ ಭಾಗ ಅರಣ್ಯಗಳಿಂದಾವೃತವಾಗಿದೆ. ಸು. 1980 ಮೀ ಎತ್ತರದ ಭಾಗಗಳಲ್ಲಿ ಬೂದಿ, ಮರಳು ಲಾವಾ ತುಣುಕುಗಳಿವೆ. ಜೊತೆಗೆ ವಿರಳವಾದ ಸಸ್ಯಗಳಿವೆ.

ಎಟ್ನ ಸಜೀವ ಜ್ವಾಲಾಮುಖಿ

ಐತಿಹಾಸಿಕವಾಗಿ ಇಲ್ಲಿಯವರೆಗೆ ಸು. 150 ಕ್ಕೂ ಹೆಚ್ಚು ಸ್ಫೋಟಗಳನ್ನು ಗುರುತಿಸಲಾಗಿದೆ. ಪ್ರ.ಶ.ಪೂ. 475ರ ಸ್ಫೋಟ ಈವರೆಗೆ ಗೊತ್ತಾದುವುಗಳಲ್ಲಿ ಮೊದಲಿನದು. 17, 18, 19ನೆಯ ಶತಮಾನದಲ್ಲಿ ಸರಾಸರಿ 20-25 ಸ್ಫೋಟಗಳಾದುವು; ಇವುಗಳ ಅಂತರ 4 ರಿಂದ 5 ವರ್ಷಗಳು. ಅನಂತರದ ಸ್ಫೋಟಗಳ ಅಂತರ 7-8 ವರ್ಷಗಳು. 1069, 1669ರ ಸ್ಫೋಟಗಳಿಂದ ಅಪಾರ ಹಾನಿ ಆಯಿತು. 1669ರಲ್ಲಾದ ಸ್ಫೋಟದಿಂದಾಗಿ ಕಾಟಾನಿಯ ಪಟ್ಟಣದ ಬಹುಪಾಲು ನಾಶವಾಯಿತು. (ಕೆ.ಎನ್.ಯು.)

**ಎಡಿನ್‌ಬರೊ:** ಸ್ಕಾಟ್ಲೆಂಡಿನ ಮುಖ್ಯಪಟ್ಟಣ. ಮಿಡ್‌ಲೋಥಿಯನ್ ಪ್ರದೇಶದ ಆಡಳಿತ ನಗರ. ಜನಸಂಖ್ಯೆ 4,48,624 (2001). ಸ್ಕಾಟ್ಲೆಂಡಿನ ಆಗ್ನೇಯ ಭಾಗದಲ್ಲಿ ಫರ್ತ್–ಆಫ್–ಫೋರ್ತ್ ತೀರಪ್ರದೇಶದಲ್ಲಿ 16 ಕಿಮೀ ವಿಸ್ತಾರವಾಗಿದೆ. ಗ್ಲಾಸ್ಗೋ ನಗರದ ಪೂರ್ವಕ್ಕೆ 68 ಕಿಮೀ ಮತ್ತು ಲಂಡನ್ನಿನಿಂದ ಉತ್ತರಕ್ಕೆ 488 ಕಿಮೀ ದೂರದಲ್ಲಿದೆ. ಪೂರ್ವದಿಕ್ಕಿನಿಂದ ನೋಡುವಾಗ ಸಮುದ್ರ ಮಟ್ಟದಿಂದ 242 ಮೀ ಎತ್ತರದ ಅರ್ಥರನ ಸ್ಥಾನವೆಂಬ ಗುಡ್ಡದ ಮುಂಭಾಗದಲ್ಲಿ ಕೋಟೆಯೂ ಹಳೆಯ ನಗರವೂ ಕೋಟೆಯ ಉತ್ತರಕ್ಕೆ ಜಾರ್ಜಿಯನ್ ಕಾಲದ ಹೊಸ ನಗರವೂ ಕಾಣುತ್ತವೆ.

ನೆರೆಹೊರೆಯ ಬುರ್ಡ್‌ಹೌಸಿನ ಸುಣ್ಣಕಲ್ಲು, ಹೇಯ್ಲ್ಸ್, ಸ್ಲೇಟ್‌ಫರ್ಡ್, ಗ್ರಾಂಪಿನ್ ಮತ್ತು ಕ್ರೇಗ್‌ಲೀತ್ ಪ್ರದೇಶಗಳ ಮರಳು ಕಲ್ಲುಗಳನ್ನು ಈ ನಗರದ ಕಟ್ಟಡಗಳಿಗೆ ಉಪಯೋಗಿಸಲಾಗಿದೆ. ಪುರಾತನ ಕಾಲದಲ್ಲಿ ಭೂಮಿಯ ಸರಿಯುವಿಕೆಯಿಂದ ಮೇಲೆದ್ದ ಹಲವಾರು ಬೆಟ್ಟಗಳೂ ಅಗ್ನಿಪರ್ವತ ಸ್ಫೋಟದಿಂದ ಹುಟ್ಟಿಕೊಂಡ ಕೆಲವು ಗುಡ್ಡಗಳೂ ನಗರದ ಪರಿಸರದಲ್ಲಿ ಕಂಡುಬರುತ್ತವೆ. ಪ್ಲಿಸ್ಟೋಸೀನ್ ಹಿಮಪ್ರವಾಹಕ್ಕೆ ಸಿಲುಕಿ ಒಡೆದು ಈ ಬೆಟ್ಟಗುಡ್ಡಗಳು ಈಗಿನ ರೂಪವನ್ನು ಪಡೆದಿವೆ.

ಸಾಹಿತ್ಯದಲ್ಲಿ ಡುನ್‌ಡಿನೆ ಎಂದೂ ಉತ್ತರ ಅಥವಾ ಆಧುನಿಕ ಅಥೆನ್ಸ್ ಎಂದೂ ಹೆಸರಾಗಿರುವ ಈ ನಗರದಲ್ಲಿ ಉತ್ತಮ ಶೈಲಿಯ ಅನೇಕ ಭವನಗಳಿರುವುದಲ್ಲದೆ ಐತಿಹಾಸಿಕ, ಕಲಾತ್ಮಕ ಮತ್ತು ಪ್ರಾಕೃತಿಕ ವಿಶೇಷಗಳೂ ಇವೆ. 1947ರಲ್ಲಿ ಸಂಗೀತ ನೃತ್ಯನಾಟಕ ಮತ್ತು ಕಲಾಪ್ರದರ್ಶನಗಳಿಗೆ ಮೀಸಲಾದ ಎಡಿನ್‌ಬರೊ ಅಂತಾರಾಷ್ಟ್ರೀಯ ಉತ್ಸವ ಪ್ರಾರಂಭವಾಯಿತು.

ಜೀರ್ಣಾವಸ್ಥೆಯಲ್ಲಿರುವ ಹಳೆಯ ವೀಕ್ಷಣಾಲಯ (1774) ಕ್ಯಾಲ್ಟನ್ ಗುಡ್ಡದ ಮೇಲೂ ನಗರದ ವೀಕ್ಷಣಾಲಯ ಅದರ ಪಾರ್ಶ್ವದಲ್ಲೂ ಇದ್ದು ಉಪಯೋಗದಲ್ಲಿರುವ ರಾಯಲ್ ಸಮೀಕ್ಷಾಮಂದಿರ (1896) ಬ್ಲ್ಯಾಕ್‌ಫರ್ಡ್ ಗುಡ್ಡದ ಮೇಲೂ ಸ್ಥಾಪಿತವಾಗಿದೆ. ನಿಕಲ್ಸನ್ ರಸ್ತೆಯಲ್ಲಿರುವ ಶಸ್ತ್ರವೈದ್ಯಕಾಲೇಜು, ಕ್ವೀನ್ ಮಾರ್ಗದಲ್ಲಿರುವ ವೈದ್ಯಕಾಲೇಜು, ಗ್ರಂಥಾಗಾರ ಮತ್ತು ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಸಂಗ್ರಹಾಲಯಗಳು ಇತರ ಮುಖ್ಯ ವೈಜ್ಞಾನಿಕ ಸಂಸ್ಥೆಗಳು. ಮತೀಯ ವಿದ್ಯೆಗಳನ್ನು ಬೋಧಿಸುವ ನ್ಯೂಕಾಲೇಜಿನಲ್ಲಿ ಏಕ್ಸಪ್ರೆಸ್ ಬಿಟೇರಿಯನ್ ಮತ್ತು ಸ್ವತಂತ್ರ ಚರ್ಚು ಪಂಗಡಗಳ ತತ್ತ್ವಗಳನ್ನು ಬೋಧಿಸಲಾಗುತ್ತದೆ. ರಾಯಲ್ ಹೈಸ್ಕೂಲ್, ಎಡಿನ್‌ಬರೊ ಅಕಾಡೆಮಿ, ಫೆಟಿಸ್ ಕಾಲೇಜು– ಇವು ಪ್ರಮುಖ ವಿದ್ಯಾಕೇಂದ್ರಗಳು. ಜಾರ್ಜ್ ಹೆರಿಯಟ್ ಉಚಿತ ವೈದ್ಯಶಾಲೆ ಪ್ರಮುಖ ಸಾರ್ವಜನಿಕ ಸಂಸ್ಥೆಯಾಗಿದೆ. ಇವಲ್ಲದೆ ಅನಾಥಬಾಲಕ ಬಾಲಕಿಯರ ಔದ್ಯೋಗಿಕ ಶಿಕ್ಷಣ ಕೇಂದ್ರಗಳೂ ಉಚಿತ ವೈದ್ಯಶಾಲೆಗಳೂ ಹಲವಾರಿವೆ.

ಎಡಿನ್‌ಬರೊ ನಗರಾಡಳಿತಕ್ಕೆ ಮಸೆಲ್‌ಬರೊ ಮತ್ತು ಲೀತ್ ಬಂದರು ಪ್ರದೇಶಗಳು ಸೇರಿದ್ದು ನಗರವನ್ನು ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ. ಸ್ಕಾಟ್ಲೆಂಡ್ ವಿಭಾಗದ ರಾಜ್ಯ ಸಚಿವ (ಸೆಕ್ರೆಟರಿ ಆಫ್ ಸ್ಟೇಟ್) ಕಾರ್ಯಾಲಯ ಸಂತ ಆಂಡ್ರ್ಯೂಭವನದಲ್ಲಿದೆ. ನಗರಸಭೆಯ 71 ಸದಸ್ಯರಲ್ಲಿ 69 ಮಂದಿ ಚುನಾಯಿತ ಸದಸ್ಯರೂ ಉಳಿದಿಬ್ಬರು ಅಧಿಕೃತ ಸದಸ್ಯರೂ ಆಗಿರುವರು. ನಗರಸಭೆಯ ವಿವಿಧ ಅಧಿಕಾರಿಗಳನ್ನು ಸದಸ್ಯರೇ ಚುನಾಯಿಸುತ್ತಾರೆ. 1833ರ ಮಸೂದೆಯ ಪ್ರಕಾರ ಪ್ರತಿವರ್ಷವೂ ನಗರಸಭೆಯ ಅರ್ಧ ಭಾಗ ಸದಸ್ಯರನ್ನು ಚುನಾಯಿಸಲಾಗುತ್ತದೆ.

ಇಲ್ಲಿನ ಕೈಗಾರಿಕೆಗಳಲ್ಲಿ ಮದ್ಯದ ತಯಾರಿಕೆ, ಅಚ್ಚುಕಲೆ, ಪುಸ್ತಕಗಳ ರಕ್ಷಾಕವಚ ಜೋಡಿಸುವ ಉದ್ಯಮ, ರಬ್ಬರು, ಬಿಸ್ಕತ್ತು, ಮತ್ತಿತರ ಆಹಾರ ವಸ್ತುಗಳ ತಯಾರಿಕೆ, ಔಷಧ, ರಾಸಾಯನಿಕ ವಸ್ತು ಮತ್ತು ಗಾಜು ತಯಾರಿಕೆ ಇವು –ಮುಖ್ಯವಾದವು. ಹಡಗುಗಳ ನಿರ್ಮಾಣ, ರಿಪೇರಿ ಕೆಲಸ, ಕಂಬಿ–ಹಗ್ಗಗಳ ತಯಾರಿಕೆ, ಕಬ್ಬಿಣ ಮತ್ತು ಉಕ್ಕಿನ ಉದ್ಯಮ, ಕಾಗದ ತಯಾರಿಕೆ– ಇವು ಇತರ ಕೈಗಾರಿಕೋದ್ಯಮಗಳು. ಇತ್ತೀಚೆಗೆ ಎಲೆಕ್ಟ್ರಾನಿಕ್ ಉದ್ಯಮಗಳೂ ಬೆಳೆಯುತ್ತಿವೆ. 1960ನೆಯ ದಶಕದಲ್ಲಿ ಪ್ರವಾಸೋದ್ಯಮ ಬೆಳೆದು ವರ್ಷಂಪ್ರತಿ 75,000ಕ್ಕಿಂತಲೂ ಅಧಿಕ ಮಂದಿ ಈ ನಗರಕ್ಕೆ ಭೇಟಿ ಕೊಡುತ್ತಿದ್ದಾರೆ. ವಾರ್ಷಿಕ ಅಂತಾರಾಷ್ಟ್ರೀಯ ಉತ್ಸವಕ್ಕೆ 90,000 ಮಂದಿ ಪ್ರವಾಸಿಗಳು ಬರುತ್ತಾರೆ. ದೇಶದ ವಿವಿಧಭಾಗಗಳಿಂದ ಬರುವ ರೈಲುಗಾಡಿಗಳೂ 9 ಕಿಮೀಗಳ ದೂರದಲ್ಲಿರುವ ಟರ್ನ್ ಹೌಸ್ ವಿಮಾನ ನಿಲ್ದಾಣವೂ ನಗರದಲ್ಲಿರುವ ಉತ್ತಮ ಮೋಟಾರು ಗಾಡಿಗಳ ವ್ಯವಸ್ಥೆಯೂ ಸಂಚಾರ ವ್ಯವಸ್ಥೆಯನ್ನು ಒದಗಿಸುತ್ತವೆ.

ಈ ನಗರದ ಪರಿಸರದಲ್ಲಿರುವ ಲೀತ್ ಬಂದರು ಸ್ಕಾಟ್ಲೆಂಡಿನ ಪೂರ್ವ ತೀರದಲ್ಲೇ ದೊಡ್ಡದಾದ ರೇವುಪಟ್ಟಣವಾಗಿದ್ದು ಫರ್ತ್–ಆಫ್–ಫೋರ್ತ್‌ನ ಸುರಕ್ಷಿತ ಪ್ರದೇಶದಲ್ಲಿ ಸಮುದ್ರದಿಂದ 48 ಕಿಮೀ ಒಳಪ್ರದೇಶದಲ್ಲಿದೆ. ಸಂಸದೀಯಶಾಸನದಿಂದ ಹುಟ್ಟಿದ ಆಡಳಿತ ಮಂಡಲಿಯ ಮೇಲ್ವಿಚಾರಣೆಯಲ್ಲಿರುವ ಈ ಪ್ರದೇಶದಲ್ಲಿ ಒಂದು ಹೊರ ಮತ್ತು ಒಂದು ಒಳ ರೇವೂ ಮೇಲ್ಭಾವಣಿಯಿರುವ ಆರು ಹಡಗು ಕಟ್ಟೆಗಳೂ ಇತ್ತೀಚೆಗೆ ನಿರ್ಮಾಣವಾದ ಆಧುನಿಕ ಬಂದರೂ ಇವೆ. ಈ ಬಂದರಿನಿಂದ ಧಾನ್ಯ, ಸಿಮೆಂಟು, ಮರ, ಉಕ್ಕು–ಕಬ್ಬಿಣ ಮತ್ತು ಗೊಬ್ಬರ ಮುಖ್ಯವಾಗಿ ಆಮದಾಗುತ್ತವೆ. ಕಲ್ಲಿದ್ದಲು, ಕಾಗದ, ಬೀರ್, ಮದ್ಯ ಮುಂತಾದವು ರಫ್ತಾಗುತ್ತವೆ. (ಆರ್.ಎಸ್.)

**ಎಡೆಯೂರು:** ತುಮಕೂರು ಜಿಲ್ಲೆಯ ಕುಣಿಗಲು ತಾಲ್ಲೂಕಿನಲ್ಲಿರುವ ಧಾರ್ಮಿಕ ಕ್ಷೇತ್ರ. ಇದು 15ನೆಯ ಶತಮಾನಕ್ಕೆ ಸೇರಿದ ವೀರಶೈವ ಧರ್ಮಗುರುಗಳಾದ ತೋಂಟದ ಸಿದ್ಧಲಿಂಗಸ್ವಾಮಿಗಳ ಸಮಾಧಿಸ್ಥಳವಾಗಿದ್ದು ಯಾತ್ರಿಕರನ್ನು ಆಕರ್ಷಿಸುತ್ತದೆ. ಇಲ್ಲಿನ ದರ್ಶನೀಯ ಕಟ್ಟಡಗಳಲ್ಲಿ ತೋಂಟದ ಸಿದ್ಧಲಿಂಗಸ್ವಾಮಿಗಳ ಗದ್ದಿಗೆ, ವೀರಶೈವ ಮಠ,

ಚಿತ್ರಮಠ ಸುಂದರವಾದ ತಟಾಕ ಮತ್ತು ಶಿಥಿಲವಾಗಿರುವ ವರದರಾಜಸ್ವಾಮಿ ದೇವಸ್ಥಾನ ಮುಖ್ಯವಾದವು. ತಟಾಕ ನೀಳವಾದ ಕಲ್ಲುಚಪ್ಪಡಿಗಳಿಂದ ನಿರ್ಮಿತವಾಗಿ, ಅದರ ಪ್ರಾಕಾರದ ಮೇಲೆ ಅಂದವಾದ ಕೆತ್ತನೆಗಳಿವೆ. ಚಿತ್ರಮಠದ ಪ್ರಾಂಗಣ ಒಂದು ಕಾಲದಲ್ಲಿ ವರ್ಣಚಿತ್ರಗಳಿಂದ ಅಲಂಕೃತವಾಗಿದ್ದುದರಿಂದ ಆ ಹೆಸರು ಪಡೆದಿದೆ. ಸಿದ್ಧಲಿಂಗಸ್ವಾಮಿಗಳ ಪೀಳಿಗೆಗೆ ಸೇರಿದ ವೀರಶೈವ ಗುರುಗಳ ಕೇಂದ್ರವಾದ ಮತ್ತೊಂದು ಮಠ ಇಲ್ಲಿನ ಮುಖ್ಯ ಆಕರ್ಷಣೆಗಳಲ್ಲೊಂದು. ದ್ರಾವಿಡ ವಾಸ್ತುಶೈಲಿಯಲ್ಲಿರುವ ಸಿದ್ಧಲಿಂಗೇಶ್ವರ ದೇವಾಲಯ ಧನಿವಾಸದ ಚೆನ್ನವೀರಪ್ಪ ಒಡೆಯರು ಎಂಬಾತನಿಂದ ನಿರ್ಮಿತವಾಗಿ ತೋಂಟದ ಸಿದ್ಧಲಿಂಗಸ್ವಾಮಿಗಳ ಗದ್ದಿಗೆಯನ್ನು ಒಳಗೊಂಡಿರುವುದರಿಂದ ಇಲ್ಲಿನ ಮುಖ್ಯ ಆಕರ್ಷಣೆಯಾಗಿದೆ. (ಬಿ.ಸಿ.ಕೆ.)

**ಎಡ್ಗರ್ ಹೂವರ್:** ಪಿಟ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದ ಹೂವರ್ ಸಾರಿಗೆ ಹಾಗೂ ಕೈಗಾರಿಕಾ ಸ್ಥಾನವನ್ನು ಕುರಿತ ಸಿದ್ಧಾಂತಗಳನ್ನು ಪ್ರತಿಪಾದಿಸಿರುವರು. 1937ರಲ್ಲಿ ಹೂವರ್ ಪ್ರಕಟಿಸಿದ ದಿ ಲೊಕೇಷನ್ ಆಫ್ ಇಕನಾಮಿಕ್ ಆಕ್ಟಿವಿಟಿ ಎಂಬ ಪುಸ್ತಕದಲ್ಲಿ ತಮ್ಮ ಕೈಗಾರಿಕಾ ಸ್ಥಾನೀಕರಣದ ಸಿದ್ಧಾಂತವನ್ನು ಎರಡು ಕ್ಷೇತ್ರಾಧ್ಯಯನದ ಮೂಲಕ ವಿವರಿಸಿದ್ದಾರೆ. ಇದರಂತೆ ಯಾವುದಾದರೊಂದು ನಿಗದಿತ ಸ್ಥಳದಲ್ಲಿ ಉತ್ಪಾದಕರು ಅಥವಾ ಮಾರುವವರ ಮಧ್ಯೆ ಪರಿಪೂರ್ಣ ಪೈಪೋಟಿ ಇರುತ್ತದೆ. ಉತ್ಪಾದನಾಂಗಗಳಲ್ಲಿ ಪರಿಪೂರ್ಣ ಚಾಲನೆ ಇರುತ್ತದೆ. ಸಾರಿಗೆ ವೆಚ್ಚ ಹಾಗೂ ಉತ್ಪಾದನಾ ವೆಚ್ಚಗಳು ಒಂದು ಕೈಗಾರಿಕೆಯ ಸ್ಥಾನವನ್ನು ನಿರ್ಧರಿಸುತ್ತವೆ. ಅನುಭೋಗಿಗಳು ಎಲ್ಲಿ ಅತ್ಯಂತ ಕಡಿಮೆ ವಿತರಣಾ ಬೆಲೆ ಇರುತ್ತದೆಯೋ ಅಲ್ಲಿ ವಸ್ತುಗಳನ್ನು ಕೊಳ್ಳುತ್ತಾರೆ. ಸಾರಿಗೆ ವೆಚ್ಚವು ದೂರ ಹೋದಂತೆ ಹೆಚ್ಚಾಗುತ್ತದೆ.

ಹೂವರರ ಸಿದ್ಧಾಂತ ಮುಖ್ಯವಾಗಿ ವಿತರಣಾ ಬೆಲೆಯ ಮೇಲೆ ಅವಲಂಬಿತವಾಗಿದೆ. ಅನುಭೋಗಿಯು ತೆರಬೇಕಾದ ವಸ್ತುವಿನ ಬೆಲೆಯು ಅದರ ಉತ್ಪಾದನಾ ವೆಚ್ಚ ಹಾಗೂ ಸಾರಿಗೆ ವೆಚ್ಚವನ್ನೊಳಗೊಂಡಿರುತ್ತದೆ. ಇದನ್ನು ಸಮಾನ ವಿತರಣಾ ಬೆಲೆ ರೇಖೆಯಿಂದ ಸೂಚಿಸಲಾಗುತ್ತದೆ.

ಹೂವರ್ ತನ್ನ ಸಿದ್ಧಾಂತದಲ್ಲಿ ಹೊರತೆಗೆಯುವ (ಎಕ್ಸ್‌ಟ್ರಾಕ್ಟಿವ್) ಘಟಕಗಳನ್ನು ಮೊದಲು ಪರಿಗಣಿಸುತ್ತಾರೆ. ಈ ಘಟಕಗಳು ಕಚ್ಚಾ ಪದಾರ್ಥಗಳು ಅಥವಾ ನಿಕ್ಷೇಪ (ಡೆಪಾಸಿಟ್) ದೊರೆಯುವ ಸ್ಥಳಗಳನ್ನು ಆಧರಿಸುತ್ತವೆ. ಉತ್ಪಾದನೆ ಹೆಚ್ಚಾದಂತೆ ಹೊರತೆಗೆಯುವ ವೆಚ್ಚ ಬದಲಾಗದಿದ್ದರೆ ಬೆಲೆಯ ಮೇಲೆ ಬೀರುವ ಅಂಶವೆಂದರೆ ಸಾರಿಗೆ ವೆಚ್ಚ ಮಾತ್ರ.

ಯಾವ ಕೈಗಾರಿಕೆಗಳಲ್ಲಿ ಉತ್ಪಾದನೆ ಹೆಚ್ಚಾದಂತೆ ಸರಾಸರಿ ವೆಚ್ಚ ಹೆಚ್ಚಾಗುತ್ತಾ ಹೋಗುತ್ತದೆಯೋ ಅಲ್ಲಿ ಮಾರುಕಟ್ಟೆಯ ಪ್ರದೇಶಗಳೂ ಸಹ ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. (ಪಿ.ಜಿ.)

**ಎಡ್ವರ್ಡ್ ಉಲ್‌ಮನ್:** 1912–76. 20ನೆಯ ಶತಮಾನದ ಮಧ್ಯಂತರದ ಅವಧಿಯ ಪ್ರಮುಖ ಭೂಗೋಳ ವಿಜ್ಞಾನಿ. ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಇವರು ಭೂಗೋಳವಿಜ್ಞಾನದ ಹಲವು ಶಾಖೆಗಳ ಅಭಿವೃದ್ಧಿಗೆ ಕೊಡುಗೆಯನ್ನು ನೀಡಿದರು. ನಗರ ಭೂಗೋಳವಿಜ್ಞಾನ ಹಾಗೂ ಪ್ರಾದೇಶಿಕ ಅಧ್ಯಯನ ಇವರ ಮುಖ್ಯ ಸಂಶೋಧನ ಕ್ಷೇತ್ರಗಳು. ಇವರು ಸಿ.ಡಿ ಹ್ಯಾರಿಸ್‌ರವರೊಡನೆ ಪ್ರಕಟಿಸಿದ ದಿ ನೇಚರ್ ಆಫ್ ಸಿಟೀಸ್ ಗ್ರಂಥದಲ್ಲಿ ನಗರದ ಭೂಬಳಕೆಯ ವಿಶ್ಲೇಷಣೆಗೆ ಸಂಬಂಧಿಸಿದಂತೆ ಮಲ್ಟಿಪಲ್ ನ್ಯೂಕ್ಲಿ ಥೀಯರಿಯನ್ನು (ಬಹುಕೇಂದ್ರೀಯ ಸಿದ್ಧಾಂತ) ಪ್ರತಿಪಾದಿಸಿದರು. ಇದರಲ್ಲಿ ನಗರಗಳು ವಿಸ್ತಾರವಾಗಿ ಬೆಳವಣಿಗೆಯನ್ನು ಹೊಂದಿದಂತೆ ಅದರಲ್ಲಿ ಒಂದೇ ಕೇಂದ್ರ ವಾಣಿಜ್ಯ ವಲಯಕ್ಕೆ (ಸಿಬಿಡಿ) ಬದಲಾಗಿ ಹಲವಾರು ವಾಣಿಜ್ಯ ಕೇಂದ್ರಗಳು ವಿಕಾಸ ಹೊಂದುತ್ತವೆಂದು ಪ್ರತಿಪಾದಿಸಿದರು. ಪ್ರಪಂಚದ ಅತಿದೊಡ್ಡ ನಗರಗಳ ಭೂಬಳಕೆಯಲ್ಲಿ ಈ ರೀತಿಯ ಹಲವಾರು ವಾಣಿಜ್ಯ ಕೇಂದ್ರಗಳಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಇದರಿಂದ ನಗರ ಭೂಬಳಕೆಯ ವಿಶ್ಲೇಷಣೆಗೆ ಇದನ್ನು ನಮೂನೆ ಅಥವಾ ಮಾದರಿಯಾಗಿ ಬಳಸುವುದು ರೂಢಿಯಲ್ಲಿದೆ. ಇವರ ಇತರ ಮುಖ್ಯ ಲೇಖನ, ಕೃತಿಗಳು: ಮೊಬೈಲ್: ಇಂಡಸ್ಟ್ರಿಯಲ್ ಸೀ ಪೋರ್ಟ್ ಅಂಡ್ ಟ್ರೇಡ್ ಸೆಂಟರ್ (1943), ಆನ್ ಎಕನಾಮಿಕ್ ಅನಾಲಿಸಿಸ್ ಆಫ್ ಫಿಲಿಫೈನ್ಸ್ ಡೊಮೆಸ್ಟಿಕ್ ಟ್ರಾನ್ಸ್‌ಪೋರ್ಟೇಷನ್ (1957), ದಿ ಎಕನಾಮಿಕ್ ಬೇಸ್ ಆಫ್ ಅಮೆರಿಕನ್ ಸಿಟೀಸ್ (1969). (ಕೆ.ಎಂ.)



**ಎಣ್ಣೆ ಕಾಳುಗಳು:** ತೈಲೋತ್ಪಾದನೆಗಾಗಿ ಬೆಳೆಯುವ ಹಲವು ಬಗೆಯ ಬೀಜಗಳು. ಹಣ್ಣುಗಳಿಂದಲೂ ಎಣ್ಣೆಯನ್ನು ತಯಾರಿಸಲಾಗುವುದು. ನೆಲಗಡಲೆ, ತೆಂಗಿನಕಾಯಿ, ತಾಳೆಹಣ್ಣು, ಹತ್ತಿಕಾಳು, ಆಲಿವ್ ಹಣ್ಣು, ಎಳ್ಳು, ಹುಚ್ಚೆಳ್ಳು, ಸೋಯ ಅವರೆ, ಸಾಸಿವೆ, ಸೂರ್ಯಕಾಂತಿ ಮೊದಲಾದವುಗಳಿಂದ ತೆಗೆದ ಎಣ್ಣೆಯನ್ನು ಅಡುಗೆ ಮಾಡಲು, ಸೋಪು, ಸುಗಂಧ ದ್ರವ್ಯಗಳು, ಮೇಣದ ಬತ್ತಿ, ಬಣ್ಣ ಮತ್ತು ವಾರ್ನಿಷ್ ತಯಾರಿಕೆ, ಔಷಧ ತಯಾರಿಕೆ, ಕೀಲೆಣ್ಣೆ ತಯಾರಿಕೆ, ವನಸ್ಪತಿ, ದೀಪ ಉರಿಸಲು ಬಳಸಲಾಗುವುದು. ಪಶು ಆಹಾರ ತಯಾರಿಸುವುದಕ್ಕೂ ಎಣ್ಣೆ ತೆಗೆದ ಕಾಳುಗಳ ಸಿಪ್ಪೆ ಮತ್ತು ಹಿಂಡಿಗಳನ್ನು ಉಪಯೋಗಿಸಲಾಗುವುದು.

ನೆಲಗಡಲೆ ಬೀಜವನ್ನು ಎಣ್ಣೆ ತಯಾರಿಸಲು ಮಾತ್ರವಲ್ಲದೆ, ನೇರವಾಗಿ ಅಡುಗೆಗೆ ಮತ್ತು ಹಸಿಯಾಗಿ ಅಥವಾ ಬೇಯಿಸಿ ತಿನ್ನಲು ಬಳಸಲಾಗುವುದು. ಎಣ್ಣೆಯನ್ನು ವನಸ್ಪತಿ, ಸೋಪು, ಕೃತಕ ಚರ್ಮ, ಉಣ್ಣೆ ಹಾಗೂ ರೇಷ್ಮೆ ತಯಾರಿಕೆ, ಕೀಲೆಣ್ಣೆಯಾಗಿ ಮತ್ತು ಮೀನನ್ನು ಕ್ಯಾನಿಂಗ್ ಮಾಡಲು ಸಹ ಬಳಸಲಾಗುವುದು. ನೆಲಗಡಲೆಯಿಂದ ತಯಾರಿಸಿದ ಹಿಂಡಿ ಪಶುಗಳಿಗೆ ಉತ್ಕೃಷ್ಟ ಆಹಾರ.

ನೆಲಗಡಲೆ ಉಷ್ಣವಲಯ ಹಾಗೂ ಉಪ ಉಷ್ಣವಲಯದ ಬೆಳೆ. ಆದ್ದರಿಂದ ಇದರ ಬೆಳವಣಿಗೆಗೆ ಹೆಚ್ಚು ಉಷ್ಣಾಂಶ (29$^{o}$ಸೆ) ಇರಬೇಕು. ಸಾಧಾರಣ ಮಳೆ (40–100 ಸೆಂಮೀ) ಬಿದ್ದರೆ ಸಾಕು. ಇದು ಮರಳು ಮಿಶ್ರಿತ ಮಣ್ಣಿನಲ್ಲಿ ಹೆಚ್ಚು ಇಳುವರಿ ನೀಡುತ್ತದೆ. ನೆಲಗಡಲೆಯನ್ನು ಬೆಳೆಯುವ ಪ್ರಪಂಚದ ಪ್ರಮುಖ ದೇಶಗಳೆಂದರೆ ಭಾರತ, ಚೀನ, ಅಮೆರಿಕ, ನೈಜೀರಿಯ, ಸೆನೆಗಲ್, ಕಾಂಗೋ, ನೈಜರ್, ಫಿಲಿಫೈನ್ಸ್ ಮತ್ತು ಕೊರಿಯ.

ತೆಂಗು: ಉಷ್ಣವಲಯದ ಬೆಳೆ. ತೆಂಗಿನಕಾಯನ್ನು ನೇರವಾಗಿ ತಿನ್ನಲು ಮತ್ತು ಅಡುಗೆಗೆ ಬಳಸಲಾಗುವುದು. ತೆಂಗಿನ ನಾರನ್ನು ಹಗ್ಗ, ಮ್ಯಾಟ್ ತಯಾರಿಕೆಗೂ ತೆಂಗಿನ ಮರದಿಂದ ದೊರೆಯುವ ರಸದಿಂದ ಸಕ್ಕರೆ ಮತ್ತು ಬೆಲ್ಲವನ್ನು, ತೆಂಗಿನ ಕಾಯಿಯ ಸಿಪ್ಪೆಯನ್ನು ಉರುವಲಿಗಾಗಿಯೂ ಕೊಬ್ಬರಿ ಎಣ್ಣೆ ತೆಗೆದು ಉಳಿಯುವ ಸಿಪ್ಪೆಯಿಂದ ದನಕರುಗಳಿಗೆ ಮೇವನ್ನೂ ತಯಾರಿಸಲಾಗುವುದು. ಇದಕ್ಕೆ 27$^{o}$ಸೆ. ಉಷ್ಣಾಂಶ ಮತ್ತು 200 ಸೆಂಮೀ ಮಳೆ ಅಗತ್ಯ. ಸಮುದ್ರದ ಮಂದ ಮಾರುತಗಳು ಈ ಬೆಳೆಗೆ ಉತ್ತೇಜಕ. ಈ ಬೆಳೆಗೆ ಮರಳು ಮಿಶ್ರಿತ ಮಣ್ಣು ಯೋಗ್ಯವಾದುದು. ತೆಂಗನ್ನು ಮುಖ್ಯವಾಗಿ ಫಿಲಿಫೈನ್ಸ್, ಇಂಡೊನೇಷ್ಯ, ನ್ಯೂಗಿನಿ, ಮಲೇಷ್ಯ, ಭಾರತ, ಶ್ರೀಲಂಕ, ಫಿಜಿದ್ವೀಪ ಮತ್ತು ಮೊಸಾಂಬಿಕ್ ದೇಶಗಳಲ್ಲಿ ಬೆಳೆಯಲಾಗುತ್ತಿದೆ.

ತಾಳೆ ಹಣ್ಣು: ತಾಳೆ ಹಣ್ಣುಗಳಿಂದ ಎಣ್ಣೆಯನ್ನು ತೆಗೆಯಲಾಗುವುದು. ಇದನ್ನು ಅಡುಗೆಗೆ, ಸಾಬೂನು, ಮೇಣದ ಬತ್ತಿ, ವನಸ್ಪತಿ, ಗ್ಲಿಸರಿನ್ ಮತ್ತು ಶ್ಯಾಂಪುಗಳ ತಯಾರಿಕೆಯಲ್ಲಿ ಬಳಸಲಾಗುವುದು. ತಾಳೆ ಬೆಳೆಯಲು ಸಮಭಾಜಕ ವೃತ್ತ ಪ್ರದೇಶದ ವಾಯುಗುಣ ಅವಶ್ಯಕ. ಆದ್ದರಿಂದ ಅತಿ ಹೆಚ್ಚು ಮಳೆ (250 ಸೆಂಮೀ) ಹಾಗೂ ಉಷ್ಣಾಂಶ (27$^{o}$ಸೆ) ಇರಬೇಕು. ತಾಳೆಯನ್ನು ನೈಜೀರಿಯ, ನೈಜರ್, ಘಾನ, ಕಾಂಗೋ, ಮಲೇಷ್ಯ ಮತ್ತು ಇಂಡೊನೇಷ್ಯಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ.

ಹತ್ತಿ ಬೀಜ: ಹತ್ತಿ ಬೀಜದಿಂದ ಎಣ್ಣೆಯನ್ನು ತೆಗೆಯಲಾಗುತ್ತದೆ. ಈ ಎಣ್ಣೆಯನ್ನು ಅಡುಗೆ, ವನಸ್ಪತಿ, ಸಾಬೂನು, ಮೇಣದ ಬತ್ತಿ, ಹಾಗೂ ವಾಷಿಂಗ್ ಪೌಡರ್ ತಯಾರಿಕೆಗೆ ಮತ್ತು ಮೀನು ಮತ್ತು ಮಾಂಸಗಳನ್ನು ಸಂಸ್ಕರಣೆ ಮಾಡಲು ಬಳಸಲಾಗುವುದು. ಇದು ಉಷ್ಣವಲಯದ ಬೆಳೆ. ಇದಕ್ಕೆ $20^{0}$ ಯಿಂದ $40^{0}$ ಸೆ. ಉಷ್ಣಾಂಶ ಮತ್ತು ವರ್ಷಕ್ಕೆ 50 ಸೆಂಮೀ ಸಾಧಾರಣ ಮಳೆ ಇರಬೇಕು. ಫಲವತ್ತಾದ ಕಪ್ಪುಮಣ್ಣು, ಮೆಕ್ಕಲು ಮಣ್ಣು ಮತ್ತು ಜೇಡಿಮಣ್ಣು ಈ ಬೆಳೆಗೆ ಪ್ರೋತ್ಸಾಹದಾಯಕವಾದವು. ಹತ್ತಿಯನ್ನು ಬೆಳೆಯುವ ಪ್ರದೇಶಗಳಲ್ಲಿ ಇದರ ಉತ್ಪಾದನೆ ಕಂಡುಬರುತ್ತದೆ. ಉದಾ: ಅಮೆರಿಕ, ರಷ್ಯ, ಚೀನ, ಭಾರತ, ಈಜಿಪ್ಟ್, ಬ್ರೆಜಿಲ್, ಪಾಕಿಸ್ತಾನ, ಆಲ್ಜೀರಿಯ, ಸುಡಾನ್, ಉಗಾಂಡ, ಸಿರಿಯ ಇತ್ಯಾದಿ.

ಆಲಿವ್ ಹಣ್ಣು: ಮುಖ್ಯವಾಗಿ ಆಲಿವ್ ಎಣ್ಣೆಯನ್ನು ತಯಾರಿಸಲು ಬಳಸಲಾಗುವುದು. ಎಣ್ಣೆಯನ್ನು ಅಡುಗೆ, ಸುಗಂಧ ದ್ರವ್ಯ, ಸಾಬೂನು ತಯಾರಿಸಲು ಮತ್ತು ನೇಯ್ಗೆಗೂ ಸಹ ಬಳಸಲಾಗುವುದು. ಆಲಿವ್ ಹಣ್ಣನ್ನು ತಿನ್ನಲು ಮತ್ತು ಅದರ ಹಿಂಡಿಯನ್ನು ಪಶು ಆಹಾರ ಹಾಗೂ ಗೊಬ್ಬರ ತಯಾರಿಸಲು ಬಳಸುವರು. ಆಲಿವ್ ಮೆಡಿಟರೇನಿಯನ್ ವಾಯುಗುಣದಲ್ಲಿ ಬೆಳೆಯುವ ಬೆಳೆ. ಇದಕ್ಕೆ ಬೆಚ್ಚಗಿನ ಹಾಗೂ ತೇವಾಂಶ ರಹಿತ ಬೇಸಗೆ ಮತ್ತು ಆರ್ದ್ರ ಚಳಿಗಾಲ ಅಗತ್ಯ. ನೇರ ಸೂರ್ಯಕಿರಣದಿಂದ ರಕ್ಷಣೆ ಅವಶ್ಯಕ. ಸುಣ್ಣದಂಶವಿರುವ ಮಣ್ಣು ಉತ್ತಮ. ಮೆಡಿಟರೇನಿಯನ್ ವಾಯುಗುಣವುಳ್ಳ ದೇಶಗಳಲ್ಲಿ

ಹಂಚಿಕೆಯಿದೆ. ಉದಾ: ಸ್ಪೇನ್, ಇಟಲಿ, ಗ್ರೀಸ್, ಫ್ರಾನ್ಸ್, ಪೋರ್ಚುಗಲ್, ಟರ್ಕಿ, ಸಿರಿಯ, ಅಲ್ಜೀರಿಯ, ಮೊರಾಕ್ಕೊ ಮತ್ತು ಟುನೀಷಿಯಗಳು.

ಅಗಸೆ: ಇದರಿಂದ ಎಣ್ಣೆ ತೆಗೆದು ಅದನ್ನು ಬಣ್ಣ ಮತ್ತು ವಾರ್ನಿಷ್ ತಯಾರಿಸಲು ಬಳಸಲಾಗುವುದು. ಇದರ ಹಿಂಡಿ ಪಶುಗಳಿಗೆ ಉತ್ಕೃಷ್ಟ ಆಹಾರ. ಅಗಸೆ ಗಿಡ ಮುಖ್ಯವಾಗಿ ಉಷ್ಣವಲಯ ಮತ್ತು ಉಪ ಉಷ್ಣವಲಯಗಳ ಬೆಳೆ. ಆದ್ದರಿಂದ ಬೆಚ್ಚಗಿನ ಮತ್ತು ಸಮನಾದ ಬೇಸಗೆ ಉಷ್ಣಾಂಶ ಅಗತ್ಯ. ಈ ಬೆಳೆಗೆ ಸಾಧಾರಣ ಮಳೆ ಸಾಕು. ಇದು ಮರಳು ಮಿಶ್ರಿತ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಅಗಸೆ ಲಿನೇಸಿ ವರ್ಗಕ್ಕೆ ಸೇರಿದ್ದು. ಅಗಸೆ ಬೆಳೆಯುವ ಪ್ರಮುಖ ರಾಷ್ಟ್ರಗಳು: ಕೆನಡ, ಅರ್ಜೆಂಟೈನ, ಅಮೆರಿಕ, ರಷ್ಯ ಮತ್ತು ಭಾರತ.

ಎಳ್ಳು : ಎಳ್ಳಿನಿಂದ ತೆಗೆದ ಎಣ್ಣೆಯನ್ನು ಅಡುಗೆ, ಸಾಬೂನು, ಔಷಧಿ ಮತ್ತು ಸುಗಂಧ ದ್ರವ್ಯಗಳ ತಯಾರಿಕೆ ಹೀಗೆ ವಿವಿಧ ಉದ್ದೇಶಗಳಿಗೆ ಬಳಸಲಾಗುತ್ತದೆ. ಜೊತೆಗೆ ಕೀಲೆಣ್ಣೆಯಾಗಿ ಮತ್ತು ದೀಪ ಉರಿಸಲು ಉಪಯೋಗಿಸಲಾಗುವುದು. ಇದರ ಹಿಂಡಿಯನ್ನು ದನಗಳ ಆಹಾರಕ್ಕೆ ಬಳಸಲಾಗುತ್ತದೆ. ಇದು ಉಷ್ಣ ಮತ್ತು ಉಪ ಉಷ್ಣವಲಯಗಳ ಬೆಳೆ. ಸಾಧಾರಣ ಮಳೆ ಮತ್ತು ಸಾಧಾರಣ ಫಲವತ್ತಾದ ಮರಳು ಮಿಶ್ರಿತ ಮಣ್ಣು ಸಾಕು. ಹಿಮವೃಷ್ಟಿ, ಅಧಿಕ ಮಳೆ ಮತ್ತು ದೀರ್ಘ ಬರದ ಪರಿಸ್ಥಿತಿ ಹಾನಿಕರ. ಎಳ್ಳಿನ ಗಿಡ ಪಿಡಾಲಿಯೇಸಿ ಕುಟುಂಬಕ್ಕೆ ಸೇರಿದೆ. ಭಾರತ ಮತ್ತು ಚೀನ ಇದರ ಪ್ರಮುಖ ಉತ್ಪಾದಕ ದೇಶಗಳು. ಮೆಕ್ಸಿಕೊ, ಪಾಕಿಸ್ತಾನ ಮತ್ತು ಥೈಲೆಂಡ್ ಇತರ ಉತ್ಪಾದಕ ದೇಶಗಳು. ಕರ್ನಾಟಕದ ಗುಲ್ಬರ್ಗ, ಕೊಪ್ಪಳ, ಬೀದರ್, ಮೈಸೂರು, ಗದಗ, ಮಂಡ್ಯ ಮತ್ತು ರಾಯಚೂರುಗಳಲ್ಲಿ ಈ ಬೆಳೆ ಹೆಚ್ಚಾಗಿ ಕಂಡುಬರುತ್ತದೆ.

ರೇಪ್‍ಕಾಳು: ಇದರಿಂದ ತೆಗೆದ ತೈಲವನ್ನು ಅಡುಗೆಗಾಗಿ, ಸಾಬೂನು ತಯಾರಿಕೆ, ಕೀಲೆಣ್ಣೆ ಮತ್ತು ದೀಪ ಉರಿಸಲು ಬಳಸಲಾಗುವುದು. ಸಮಶೀತೋಷ್ಣವಲಯದ ವಾಯುಗುಣ ಈ ಬೆಳೆಗೆ ಅತ್ಯಂತ ಸೂಕ್ತವಾದುದು. ಇದನ್ನು ಹೆಚ್ಚಾಗಿ ಕೆನಡ, ಫ್ರಾನ್ಸ್, ಜರ್ಮನಿ, ಪೋಲೆಂಡ್, ಸ್ವಿಟ್ಜರ್‌ಲೆಂಡ್, ಸ್ವೀಡನ್ ಮತ್ತು ಭಾರತಗಳಲ್ಲಿ ಬೆಳೆಯಲಾಗುತ್ತಿದೆ.

ಸೋಯ ಅವರೆ: ಇದರ ಕಾಳುಗಳನ್ನು ಮಾನವನ ಮತ್ತು ಪ್ರಾಣಿಗಳ ಆಹಾರವಾಗಿ ಉಪಯೋಗಿಸಲಾಗುವುದು. ಸೋಯ ಅವರೆಯಿಂದ ಎಣ್ಣೆಯನ್ನು ತೆಗೆಯಲಾಗುವುದು. ಇದನ್ನು ಅಡುಗೆ, ವನಸ್ಪತಿ, ಸಾಬೂನು, ಸಾಸ್, ಸೂಪ್, ಬಣ್ಣ, ವಾರ್ನಿಷ್, ಲಿನೋಲಿಯಂ, ಪ್ರಿಂಟಿಂಗ್ ಇಂಕ್, ಗ್ಲಿಸರಿನ್ ಮುಂತಾದವುಗಳ ತಯಾರಿಕೆಗೆ ಬಳಸಲಾಗುವುದು. ಸೋಯ ಅವರೆಗೆ ಉಪಉಷ್ಣವಲಯದ ವಾಯುಗುಣ ಸೂಕ್ತ. ಇದಕ್ಕೆ ಫಲವತ್ತಾದ ಮರಳುಮಿಶ್ರಿತ ಮಣ್ಣು ಉತ್ಕೃಷ್ಟವಾದದ್ದು. ಸೋಯ ಅವರೆಯನ್ನು ಬೆಳೆಯುವ ಪ್ರಮುಖ ರಾಷ್ಟ್ರಗಳೆಂದರೆ ಅಮೆರಿಕ, ಮಂಚೂರಿಯ, ಜಪಾನ್, ಕೊರಿಯ, ಇಂಡೊನೇಷ್ಯ ಮತ್ತು ಬ್ರೆಜಿಲ್.

ಹರಳು: ಇದರ ಮೂಲ ಆಫ್ರಿಕ. ಬೀಜದಿಂದ ಹರಳೆಣ್ಣೆ ತೆಗೆಯಲಾಗುತ್ತದೆ. ಇದನ್ನು ಔಷಧ, ಸಾಬೂನು, ಸುಗಂಧದ್ರವ್ಯ, ಮೇಣದ ಬತ್ತಿ, ಬಣ್ಣ, ವಾರ್ನಿಷ್, ಪ್ಲಾಸ್ಟಿಕ್, ಕೀಲೆಣ್ಣೆಗಳ ತಯಾರಿಕೆ, ದೀಪ ಉರಿಸಲು, ಗೊಬ್ಬರ ಮತ್ತು ಪಶು ಆಹಾರ ತಯಾರಿಕೆಗೂ ಬಳಸಲಾಗುತ್ತದೆ. ಇದು ಉಷ್ಣವಲಯದ ಬೆಳೆ. ಸಾಧಾರಣ ಮಳೆ, 50–75 ಸೆಂಮೀ ಹಾಗೂ $20^0$–$26^0$ ಸೆ. ಉಷ್ಣಾಂಶವಿರಬೇಕು. ಈ ಬೆಳೆಯನ್ನು ಸಾಧಾರಣವಾಗಿ ಬಹು ಬೆಳೆ ಬೇಸಾಯ ಕ್ರಮದಲ್ಲಿ ಬೆಳೆಯಲಾಗುವುದು. ಮರಳುಮಿಶ್ರಿತ ಕೆಂಪು ಮತ್ತು ಮೆಕ್ಕಲು ಮಣ್ಣು ಸೂಕ್ತ. ಇದಕ್ಕೆ ಬರ ನಿಬಾಯಿಸುವ ಸಾಮರ್ಥ್ಯವಿದೆ. ಭಾರತ, ಬ್ರೆಜಿಲ್, ಇಂಡೋನೇಷ್ಯ, ಅಮೆರಿಕ ಮತ್ತು ದಕ್ಷಿಣ ಆಫ್ರಿಕದಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ.

ಸೂರ್ಯಕಾಂತಿ: ಮೆಕ್ಸಿಕೊ ಮತ್ತು ಅಮೆರಿಕಗಳಲ್ಲಿ ಬೆಳೆಯಲಾಗುತ್ತಿತ್ತು. ಅನಂತರ ಪ್ರಪಂಚದ ಇತರ ಭಾಗಗಳಿಗೆ ಹಂಚಿಕೆಯಾಯಿತು. ಇದರ ಎಣ್ಣೆಯನ್ನು ಅಡುಗೆ, ವನಸ್ಪತಿ, ಸಾಬೂನು, ಬಣ್ಣ ಮತ್ತು ಕೀಲೆಣ್ಣೆಯನ್ನು ತಯಾರಿಸಲು ಬಳಸಲಾಗುವುದು. ಇತ್ತೀಚೆಗೆ ಇದರ ಎಣ್ಣೆಗೆ ಹೆಚ್ಚು ಬೇಡಿಕೆಯಿದೆ. ಸೂರ್ಯಕಾಂತಿ ಬೆಳೆಯಲು ಸಾಧಾರಣಕ್ಕಿಂತ ಹೆಚ್ಚು ಉಷ್ಣಾಂಶ ಮತ್ತು ಸಾಧಾರಣ ಮಳೆ ಇರಬೇಕು. ಇದನ್ನು ವಿವಿಧ ರೀತಿಯ ಮಣ್ಣಿನಲ್ಲಿ ಬೆಳೆಯಬಹುದು. ಸೂರ್ಯಕಾಂತಿ ಬೆಳೆಯುವ ಪ್ರಪಂಚದ ಪ್ರಮುಖ ರಾಷ್ಟ್ರಗಳೆಂದರೆ ರಷ್ಯ, ಅರ್ಜೆಂಟೈನ, ಚೀನ, ಪೋಲೆಂಡ್, ಅಮೆರಿಕ ಮತ್ತು ಭಾರತ. ಸಾಸಿವೆ, ಕುಸುಬೆ ಮತ್ತು ಹುಚ್ಚೆಳ್ಳುಗಳೂ ಸಹ ಇತರ ಪ್ರಮುಖ ಎಣ್ಣೆಕಾಳು ಬೆಳೆಗಳಾಗಿವೆ. (ಪಿ.ಟಿ.ಬಿ.)

**ಎಮರಿ:** ಕುರಂದದ ಅಶುದ್ಧ ಅದಿರು. ಕುರಂದ ಮತ್ತು ಮ್ಯಾಗ್ನಟೈಟ್ ಮಿಶ್ರಣವನ್ನು ಈ ಹೆಸರಿನಿಂದ ಕರೆಯುವರು. ಗ್ರೀಸ್ ದೇಶದ ಎಮರಿ ಭೂಶಿರದಲ್ಲಿ ಮೊದಲು ಗುರುತಿಸಿದ್ದರಿಂದ ಅದೇ ಹೆಸರು ಸ್ಥಿರವಾಗಿದೆ. ಇದರಲ್ಲಿ ಮೂರು ಬಗೆ: ಸ್ವಾಭಾವಿಕ ಎಮರಿ–ಇದು ಗ್ರೀಸ್‍ನಲ್ಲಿ ಮಾತ್ರ ಲಭ್ಯ. ಸ್ಪಿನಲ್ ಎಮರಿ– ಇದು ಕುರಂದ ಸ್ಪಿನಲ್ ಮತ್ತು ಮ್ಯಾಗ್ನಟೈಟ್ ಖನಿಜಗಳ ಮಿಶ್ರಣ. ಬಣ್ಣ ಕಪ್ಪು ಮತ್ತು ಹೆಚ್ಚು ಸಾಂದ್ರ. ಪ್ಲೇಜಿಯೋಕ್ಲೇಸ್ ಫೆಲ್ಡ್‌ಸ್ಪಾರ್ ಬೆರತ ಫೆಲ್ಡ್‌ಸ್ಪಾಲ್ ಎಮರಿ ಮೂರನೆಯ ಬಗೆ.

ಎಮರಿಯನ್ನು ಸಾಣೆಕಲ್ಲಿಗೆ, ಅರೆಯುವ ಚಕ್ರಕ್ಕೆ, ಉಪ್ಪು ಕಾಗದ ತಯಾರಿಕೆಗೆ ಮತ್ತು ಗಾಜಿಗೆ ಹೊಳಪು ಕೊಡಲು ಬಳಸುತ್ತಾರೆ. ಭಾರತೀಯ ಉದ್ಯಮದಲ್ಲಿ ಹೆಚ್ಚಿನ ಪಾಲು ವಿದೇಶಗಳಿಂದ ಆಮದಾಗುತ್ತದೆ. (ಬಿ.ಸಿ.ಕೆ.)

**ಎಮ್‍ಡನ್:** ವಾಯವ್ಯ ಜರ್ಮನಿಯ ಹಾನೋವರ್ ಪ್ರದೇಶದ ಒಂದು ಪಟ್ಟಣ. ಎಮ್ಸ್ ನದೀಮುಖದಲ್ಲಿ ಮತ್ತು ಡೋರ್ಟ್‌ಮಂಡ್–ಎಮ್ಸ್ ಕಾಲುವೆಯ ಮೇಲಿದೆ. ಜನಸಂಖ್ಯೆ 65,600 (2003). ಹ್ಯಾಂಬರ್ಗ್ ಮತ್ತು ಬ್ರಿಮೆನ್‍ಗಳನ್ನು ಬಿಟ್ಟರೆ ಇದೇ ಉತ್ತರ ಸಮುದ್ರದಲ್ಲಿ ಜರ್ಮನಿಯಲ್ಲಿನ ಅತ್ಯಂತ ದೊಡ್ಡ ಬಂದರು. ದೊಡ್ಡ ದೊಡ್ಡ ಹಡಗುಕಟ್ಟೆಗಳು ಇಲ್ಲಿವೆ. ಹೆರಿಂಗ್ ಎಂಬ ಒಂದು ಜಾತಿಯ ಮೀನುಗಾರಿಕೆ ಇಲ್ಲಿನ ವೈಶಿಷ್ಟ್ಯ. ಸಾಗಾಣಿಕೆಯ ವ್ಯಾಪಾರ (ಟ್ರಾನ್ಸಿಟ್ ಟ್ರೇಡ್) ಇಲ್ಲಿ ಅಧಿಕ. ಹತ್ತನೆಯ ಶತಮಾನದಿಂದಲೂ ಇದರ ಬಗ್ಗೆ ದಾಖಲೆಗಳಿವೆ. 16ನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಗೆ ಏರಿತು. ಇದು ಮೊದಲು ಪೂರ್ವ ಫ್ರಿಸ್‍ಲೆಂಡಿಗೆ ಸೇರಿದ್ದು, 1815ರಲ್ಲಿ ಹಾನೋವರ್‌ನ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿತು. ಇಲ್ಲಿನ ಚರಿತ್ರಾರ್ಹವಾದ ಭವನಗಳೆಲ್ಲ ಎರಡನೆಯ ಮಹಾಯುದ್ಧಕಾಲದಲ್ಲಿ ನಾಶಗೊಂಡು ಬಂದರು ಮಾತ್ರ ಉಳಿಯಿತು. (ಡಿ.ವೈ.)

**ಎರಟಾಸ್ಥನೀಸ್:** ಪ್ರ.ಶ.ಪೂ. ಸು. 276–196. ಪ್ರಸಿದ್ಧ ಗ್ರೀಕ್ ಭೂಗೋಳವಿಜ್ಞಾನಿ. ಈತನನ್ನು ಭೂಗೋಳವಿಜ್ಞಾನದ ಪಿತಾಮಹನೆಂದು ಕರೆಯಲಾಗಿದೆ. ಇವನ ಆಸಕ್ತಿಯ ಕ್ಷೇತ್ರದ ವ್ಯಾಪ್ತಿ ಅರಿಸ್ಟಾಟಲ್‍ನದರಷ್ಟೇ ಇತ್ತು. ಚರಿತ್ರೆ, ಕ್ರೀಡೆ, ಭೂಗೋಳ, ನಾಟಕ, ಗಣಿತ ಈ ಒಂದೊಂದರಲ್ಲೂ ಇವನ ಕುತೂಹಲ ಹರಿದಿರುವುದನ್ನು ಕಾಣುತ್ತೇವೆ. ಇವನಿಗೆ ಬೀಟ (ಗ್ರೀಕ್ ಅಕ್ಷರ ಮಾಲೆಯಲ್ಲಿ ಎರಡನೆಯ ಅಕ್ಷರ) ಎನ್ನುವ ಅಡ್ಡ ಹೆಸರು ಇತ್ತು. ಎಂದರೆ ಎರಡನೆಯವನು ಎಂದರ್ಥ. ಆಲ್ಫ, ಎಂದರೆ ಮೊದಲನೆಯವನು–ಎರಟಾಸ್ಥನೀಸ್‍ನ ಸಮಕಾಲೀನ ಮತ್ತು ಮಿತ್ರ ಆರ್ಕಿಮಿಡೀಸ್ (ಪ್ರ.ಶ.ಪೂ. ಸು. 287–212). ಅಲೆಗ್ಸಾಂಡ್ರಿಯದ ಗ್ರಂಥಾಲಯದ ಮೊದಲ ಮುಖ್ಯಸ್ಥನಾಗಿರಲು ಎರಟಾಸ್ಥನೀಸನನ್ನು ಮೂರನೆಯ ಟಾಲಮಿ ಕೇಳಿಕೊಂಡಾಗ ಇವನು ಅದಕ್ಕೆ ಒಪ್ಪಿದ. ಇವನ ಹಿರಿಮೆಗೆ ಈ ಮರ್ಯಾದೆ ಒಂದು ಸಾಕ್ಷಿ. ಈತನ ಕೊಡುಗೆಗಳ ಸ್ಥೂಲವಿವರವಿಷ್ಟು: ಟ್ರೋಜನ್ ಯುದ್ಧದ ವರ್ಷವನ್ನು ಗ್ರೀಕ್ ಜಾನಪದಗಳಿಂದ, ಐತಿಹ್ಯಗಳಿಂದ ಮತ್ತು ದೊರೆತ ದಾಖಲೆಗಳ ಆಧಾರದಿಂದ ಇವನು ನಿರ್ಣಯಿಸಿದ (ಪ್ರ.ಶ.ಪೂ. ಸು. 1140). ಅಲ್ಲಿಂದ ಈಚೆಗೆ ಸಂಭವಿಸಿದ ಎಲ್ಲ ಐತಿಹಾಸಿಕ ಘಟನೆಗಳ ನಿಷ್ಕೃಷ್ಟ ಕಾಲಸೂಚಿಯ ತಯಾರಿಕೆಯನ್ನು ಮೊದಲು ಮಾಡಿದವ ಇವನೇ: ಸಾಹಿತ್ಯ ವಿಮರ್ಶೆಯಲ್ಲಿ ಸಾಕಷ್ಟು ಕೈಯಾಡಿಸಿದ; ಸುಖಾಂತ ನಾಟಕಗಳನ್ನು ಕುರಿತು ಶಾಸ್ತ್ರಗ್ರಂಥ ರಚಿಸಿದ; ಗಣಿತಶಾಸ್ತ್ರದಲ್ಲಿ ಮೂಲ ಸಂಖ್ಯೆಗಳನ್ನು (ಪ್ರೈಮ್ ನಂಬರ್ಸ್) ನಿರ್ಣಯಿಸಲು ಒಂದು ಕ್ರಮ ನಿರೂಪಿಸಿದುದರಿಂದ ಎರಟಾಸ್ಥನೀಸನ ಒಂದರಿ ಎಂದೇ ಅದು ಇಂದಿಗೂ ಪ್ರಸಿದ್ಧವಾಗಿದೆ; ಅಂದು ತಿಳಿದಿದ್ದ ಪ್ರಪಂಚ ಬ್ರಿಟಿಷ್ ದ್ವೀಪಗಳಿಂದ ಸಿಂಹಳದವರೆಗೂ ಕ್ಯಾಸ್ಪಿಯನ್ ಸಮುದ್ರದಿಂದ ಇಥಿಯೋಪಿಯದವರೆಗೂ ವ್ಯಾಪಿಸಿತ್ತು. ಈತ ಇದನ್ನು ಚಿತ್ರಿಸುವ ಒಂದು ಭೂಪಟ ತಯಾರಿಸಿದ; ಭೂಮಿಯನ್ನು ಸೂರ್ಯ ಪರಿಭ್ರಮಿಸುವ ತೋರ್ಕೆಯ ಸಮತಲ ಮತ್ತು ಭೂಮ್ಯಕ್ಷ–ಇವುಗಳ ನಡುವೆ ಇರುವ ಕೋನವನ್ನು (ಕ್ರಾಂತಿವೃತ್ತದ ಬಾಗು) ನಿಷ್ಕೃಷ್ಟವಾಗಿ ನಿರ್ಣಯಿಸಿದ.

ಭೂಮಿಯ ಗಾತ್ರ ನಿರ್ಣಯದಲ್ಲಿ ಇವನ ಸಂಶೋಧನೆ ಅತ್ಯಾಧುನಿಕವೂ ಸರಳವೂ ಆಗಿದೆ. ಈ ಬೌದ್ಧಿಕ ವಿಜಯದ ಹಿರಿಮೆ ಇಂದಿನ ಕಾಲದವರೆಗೆ ಜನರಿಗೆ ತಿಳಿದಿರಲಿಲ್ಲ. ಕರ್ಕಾಟಕ ಸಂಕ್ರಾಂತಿ ದಿವಸದಂದು ಸೂರ್ಯ ದಕ್ಷಿಣ ಈಜಿಪ್ಟಿನ ಸಯೀನೆ (ಆಧುನಿಕ ಆಸ್ವಾನ್) ನೆತ್ತಿಯಮೇಲೆ ಬರುವುದೆಂದೂ ಅದೇ ಗಳಿಗೆಯಲ್ಲಿ ಅಲೆಗ್ಸಾಂಡ್ರಿಯದಲ್ಲಿ ಸೂರ್ಯನ ಖಮಧ್ಯದೂರ (ಜೆನಿತ್ ಡಿಸ್ಟನ್ಸ್) $7^0$. ಎಂದೂ ಗೊತ್ತಿತ್ತು. ಈ ವ್ಯತ್ಯಾಸ ಭೂಮಿಯ ಹೊರಮೈ ವಕ್ರತೆಯಿಂದ ಮಾತ್ರ ಸಾಧ್ಯ; ಆದ್ದರಿಂದ ಇವೆರಡು ಸ್ಥಳಗಳ ನಡುವಿನ ದೂರ ತಿಳಿದಿದ್ದರೆ ಮತ್ತು ಭೂಮಿ ಒಂದು ದೊಡ್ಡ ಗೋಲ ಎಂದು ಭಾವಿಸಿದರೆ,

ಭೂಮಿಯ ತ್ರಿಜ್ಯವನ್ನು ಗಣಿಸಬಹುದು. ಈ ಸೂತ್ರದ ಪ್ರಕಾರ ಎರಟಾಸ್ಥನೀಸ್ (ಅಂದಿನ ಗ್ರೀಕ್ ಮಾನದಲ್ಲಿ) ಭೂಮಿಯ ಪರಿಧಿ 40,250 ಕಿಮೀ ಗಳಿಗಿಂತ ಸ್ವಲ್ಪ ಹೆಚ್ಚು ಇದೆ ಎಂದು ತೀರ್ಮಾನಿಸಿದ. ಇಂದಿನ ನಿಷ್ಕೃಷ್ಟ ಬೆಲೆಯೊಂದಿಗೆ ಇದನ್ನು ಹೋಲಿಸುವಾಗ ಆತನ ತರ್ಕಶುದ್ಧತೆ ನಮ್ಮನ್ನು ದಂಗುಬಡಿಸುವಂತಿದೆ. ಆದರೆ ಎಲ್ಲ ಮಹಾ ಭಾವನೆಗಳಂತೆ ಇದೂ ಸಮಕಾಲೀನ ಮೌಲ್ಯಗಳ ಬುಡ ಕಲಕಿತು. ಅಧಿಕಾರವರ್ಗ ತಿಳಿದಿದ್ದ ನೆಲ ಎಷ್ಟು ಕಿರಿಯದು ಎಂದು ಈ ಗಣನೆ ತೋರಿಸಿತು. ಇದನ್ನು ಅಧಿಕಾರಿಗಳು ಒಪ್ಪಲಿಲ್ಲ; ಭೂಮಿ ಅಷ್ಟು ವಿಶಾಲವಾಗಿರುವುದು ಸಾಧ್ಯವಿಲ್ಲ ಎಂದು ತೀರ್ಮಾನಿಸಿ ಪೊಸಿಡೋನಿಯಸ್ ಕೊಟ್ಟಿದ್ದ ಬೆಲೆ (ಸು. 28,980 ಕಿಮೀ) ಸರಿಯಾದದ್ದು ಎಂದು ಒಪ್ಪಿಕೊಂಡರು.

ಆದರೆ ಇಂದಿನ ವೈಜ್ಞಾನಿಕ ಸಂಶೋಧನೆ ಪ್ರಕಾರ ಎರಟಾಸ್ಥನೀಸನ ಲೆಕ್ಕದ ಕ್ರಮ ಸರಿ. ಆಕಾಶದ ದೀರ್ಘ ವೀಕ್ಷಣೆಯಿಂದ 675 ಸ್ಥಿರನಕ್ಷತ್ರಗಳ ಒಂದು ಯಾದಿ ತಯಾರಿಸಿದ್ದನೆಂದು ತಿಳಿದಿದೆ. ತನ್ನ 80ನೆಯ ವಯಸ್ಸಿನಲ್ಲಿ ನಿತ್ರಾಣ ಮತ್ತು ದೃಷ್ಟಿಹೀನ ಎರಟಾಸ್ಥನೀಸ್ ಸ್ವಪ್ರೇರಣೆಯಿಂದ ನಿರಶನ ಶಿಕ್ಷೆ ವಿಧಿಸಿಕೊಂಡು ಅಸುನೀಗಿದ. (ವೈ.ಪಿ.ಸಿ.)

**ಎರಿಟ್ರಿಯ:** 1952ರಿಂದ ಇಥಿಯೋಪಿಯದ ಚಕ್ರವರ್ತಿಯ ಅಧೀನದಲ್ಲಿದ್ದ ಒಂದು ಸ್ವಯಮಾಡಳಿತ ಪ್ರಾಂತ್ಯ. ಹಿಂದೆ ಇಟಲಿಯ ವಸಾಹತು ಆಗಿತ್ತು. 1993 ಮೇ 24ರಂದು ಸ್ವತಂತ್ರ ರಾಷ್ಟ್ರವಾಯಿತು. ಆಗ್ನೇಯ ಆಫ್ರಿಕದಲ್ಲಿ ಕೆಂಪು ಸಮುದ್ರದ ದಡದ ಮೇಲಿದೆ. ವಾಯವ್ಯದಲ್ಲಿ ಸುಡಾನ್ ಗಣರಾಜ್ಯವೂ ಆಗ್ನೇಯದಲ್ಲಿ ಹಿಂದೆ ಫ್ರೆಂಚ್ ಸೋಮಾಲಿ ಲ್ಯಾಂಡ್ ಆಗಿದ್ದ ಪ್ರದೇಶವೂ ದಕ್ಷಿಣದಲ್ಲಿ ಇಥಿಯೋಪಿಯವೂ ಇವೆ. ಉತ್ತರ ಅಕ್ಷಾಂಶ $12^0 42'$–$18^0 2'$ ವರೆಗೆ ಪೂ.ರೇ. $36^0$–$43^0$ ವರೆಗೆ ಕಸಾರ್ ಭೂಶಿರದಿಂದ ಡುಮ್ಮೈರಾ ಭೂಶಿರದವರೆಗೆ ಹಬ್ಬಿರುವ ಇದರ ವಿಸ್ತೀರ್ಣ 1,17,601 ಚ.ಕಿಮೀ. ಜನಸಂಖ್ಯೆ 4,786,994 (2002). ಅಸ್ಮಾರ ರಾಜಧಾನಿ. ಜನಸಂಖ್ಯೆ : 4000000 (2002). ಇದು ಸಮುದ್ರ ಮಟ್ಟಕ್ಕಿಂತ 2280 ಮೀ ಎತ್ತರದಲ್ಲಿದೆ. ದೇಶದಲ್ಲಿ ನೆಲೆಸಿರುವ 17,500 ಇಟಾಲಿಯನ್ನರಲ್ಲಿ ಬಹು ಮಂದಿ ನಗರ ವಾಸಿಗಳು. ಮುಖ್ಯ ರೇವುಪಟ್ಟಣ ಕೆಂಪುಸಮುದ್ರದ ತೀರದಲ್ಲಿರುವ ಮಸಾವ. ಇಲ್ಲಿಂದ ಅಗೋರ್ಡಾಟ್ ನಗರದವರೆಗೆ ಅಸ್ಮಾರದ ಮೂಲಕ ಸಾಗುವ 307 ಕಿಮೀ ರೈಲು ಮಾರ್ಗವಿದೆ.




ಎರಿಟ್ರಿಯದ ಉತ್ತರ ಭಾಗ ಸುಡಾನಿನ ಮೈದಾನದಿಂದ ಕೆಂಪುಸಮುದ್ರದ ಕರಾವಳಿಯವರೆಗೆ ಇಥಿಯೋಪಿಯ ಪ್ರಸ್ಥಭೂಮಿಯನ್ನು ಹಾಯ್ದು ಹಬ್ಬಿದೆ. ಎರಿಟ್ರಿಯದ ಸಮುದ್ರತೀರದ ಉದ್ದ 1079 ಕಿಮೀ. ತೀರದ ಬಯಲು ಪ್ರದೇಶ 16–80 ಕಿಮೀ ಅಗಲ. ಇಲ್ಲಿ ಸೆಕೆ ಹೆಚ್ಚು, ಆರ್ದ್ರತೆಯೂ ಹೆಚ್ಚು; ಮಳೆ ಅನಿಶ್ಚಿತ. ಈ ಬಯಲಿನಿಂದ ಪಶ್ಚಿಮದ ಪರ್ವತಗಳ ಕಡೆಗೆ ಭೂಮಿ ಏರುತ್ತ ಹೋಗುತ್ತದೆ. ಈ ಪರ್ವತಗಳಲ್ಲಿ ಸೋನ 2907 ಮೀ ಅತ್ಯುನ್ನತ ಶಿಖರ. ಉನ್ನತ ಪ್ರದೇಶಕ್ಕೆ ಹೋದಂತೆ ಸಮಶೀತೋಷ್ಣ ವಾಯುಗುಣವನ್ನು ಕಾಣಬಹುದು. ಇಲ್ಲಿ ಬೇಸಗೆಯಲ್ಲಿ ಮಳೆಯಾಗುತ್ತದೆ. ವಾಯವ್ಯದಲ್ಲಿ ಈ ಪ್ರದೇಶ ಸುಡಾನಿನ ಬೆಂಗಾಡಿನ ಕಡೆಗೆ ಇಳಿಜಾರಾಗಿದೆ.

ಇಲ್ಲಿ ನೀರಾವರಿಯ ಸಹಾಯದಿಂದ ಎತ್ತರಕ್ಕೆ ಅನುಸಾರವಾಗಿ ಉಷ್ಣವಲಯದ ಮತ್ತು ಸಮಶೀತೋಷ್ಣವಲಯದ ಧಾನ್ಯಗಳನ್ನು ಬೆಳೆಯಬಹುದು. ಎತ್ತರ ಪ್ರದೇಶಗಳಲ್ಲಿ ಆಹಾರಧಾನ್ಯ (ಹೆಚ್ಚಾಗಿ ಗೋದಿ), ಕಾಫಿ, ಹೊಗೆಸೊಪ್ಪು, ಹಣ್ಣು ತರಕಾರಿ – ಇವು ಮುಖ್ಯ ಬೆಳೆಗಳು, ಮಳೆ ಕಡಿಮೆಯಿರುವ ತಗ್ಗಿನ ಪ್ರದೇಶಗಳಲ್ಲಿ ಮರಗೋಂದು, ಎಣ್ಣೆ ಬೀಜಗಳು, ಖರ್ಜೂರ–ಇವು ಮುಖ್ಯ ಉತ್ಪನ್ನಗಳು. ಪಶುಪಾಲನೆಯೂ ನಡೆಯುತ್ತದೆ. ಕಣಿವೆಗಳಲ್ಲಿ ನೀರಾವರಿಯಿಂದ ಹತ್ತಿ ಬೆಳೆಸುತ್ತಾರೆ. ಮಸಾವದ ಸುತ್ತಮುತ್ತಲೂ ಇದರ ಬಳಿ ಇರುವ ಡಾಹ್‌ಲಾಕ್ ದ್ವೀಪ ಸ್ತೋಮದಲ್ಲೂ ಮೀನು ಹಿಡಿಯುವುದು ಜನರ ಮುಖ್ಯ ಉದ್ಯೋಗ. ಉಗಾರೋ ಮತ್ತು ಮಸಾವಗಳ ಹತ್ತಿರ ಸ್ವಲ್ಪ ಚಿನ್ನ ದೊರಕುತ್ತದೆ. ಕೈಗಾರಿಕೆ ಅತ್ಯಲ್ಪ. ಹತ್ತಿ ಮತ್ತು ಸಿಮೆಂಟ್ ಕಾರ್ಖಾನೆಗಳು ಕೆಲವಿವೆ. ಉಪ್ಪನ್ನೂ ತಯಾರಿಸುತ್ತಾರೆ.

ಎರಿಟ್ರಿಯದ ಪ್ರಸ್ಥಭೂಮಿ ಪ್ರದೇಶದಲ್ಲಿ ಕ್ರೈಸ್ತ ಪಂಗಡದ ಜನರೂ ಉತ್ತರದಲ್ಲಿ ಮತ್ತು ಸಮುದ್ರತೀರದಲ್ಲಿ ಮುಸ್ಲಿಮರೂ ನೈರುತ್ಯ ಭಾಗದಲ್ಲಿ ನೀಗ್ರೋಗಳೂ ಹೆಚ್ಚಾಗಿ ವಾಸಿಸುತ್ತಾರೆ. (ವಿ.ಎಸ್.ಎ.)

**ಎರ್ಗೋಗ್ರಾಫ್:** ಋತು, ವಾಯುಗುಣ ಮತ್ತು ಬೆಳೆಗಳ ನಡುವಿನ ಸಂಬಂಧವನ್ನು ತೋರಿಸುವ ಕ್ರಮ. ಸಸ್ಯ ಬೆಳೆವಣಿಗೆಯ ಚಕ್ರವು ಋತುಗಳಿಗೆ ಅನುಗುಣವಾಗಿರುವುದು. ವಿವಿಧ ಋತುಗಳಲ್ಲಿ ವಿವಿಧ ವಾಯುಗುಣ ಮತ್ತು ಬೆಳೆಗಳು ಕಂಡುಬರುತ್ತವೆ. ಬೆಳೆಗಳಲ್ಲಿ ವಾರ್ಷಿಕ, ಅರ್ಧವಾರ್ಷಿಕ ಮತ್ತು ಕೆಲವು ಮಾಸಿಕ ಬೆಳೆಗಳಿರುತ್ತವೆ. ಈ ಆಲೇಖಗಳು ಹೀಗೆ ಹೆಚ್ಚು ಕಡಿಮೆಯಾಗುವ ಪರಿಮಾಣಗಳನ್ನು ತೋರಿಸುತ್ತವೆ. ಲಂಬಾಕ್ಷದಲ್ಲಿ ಮಾಸಿಕ ಸರಾಸರಿ ಉಷ್ಣಾಂಶ, ಸರಾಸರಿ ಮಳೆ ಮತ್ತು ಸಾಪೇಕ್ಷ ಆರ್ದ್ರತೆಗಳನ್ನು ಹಾಗೂ ಕ್ಷಿತಿಜಾಕ್ಷದಲ್ಲಿ 12 ತಿಂಗಳುಗಳನ್ನು ತೋರಿಸಲಾಗುತ್ತದೆ. ಕ್ಷಿತಿಜಾಕ್ಷದ ಕೆಳಗೆ ಋತುಗಳಿಗನುಸಾರವಾಗಿ ವಿವಿಧ ಬೆಳೆಗಳ ಕ್ಷೇತ್ರವನ್ನು ಭಿನ್ನ ಪ್ರಮಾಣದ ಮೇಲೆ ತೋರಿಸಲಾಗುತ್ತದೆ. (ಜ.ಕೆ.)

**ಎರ್ಡ್‌ಕುಂಡೆ:** ಕಾರ್ಲ್‌ರಿಟ್ಟರ್‌ನ ಪ್ರಸಿದ್ಧ ಕೃತಿ. ಇದರ ಮೊದಲ ಎರಡು ಸಂಪುಟಗಳು 1817–18 ರಲ್ಲಿ ಪ್ರಕಟಗೊಂಡವು. ಪರಿಷ್ಕೃತ ಎರಡನೆಯ ಆವೃತಿ 19 ಸಂಪುಟಗಳಲ್ಲಿ 1822–59 ರ ಅವಧಿಯಲ್ಲಿ ಪ್ರಕಟಗೊಂಡಿತು. ರಿಟ್ಟರ್‌ನು ತನ್ನ ಬರೆವಣಿಗೆಯಲ್ಲಿ ಹೋಲಿಕೆಯಕ್ರಮವನ್ನು ಅನುಸರಿಸಿದ. ಭೂಮಿಯನ್ನು ಒಂದು ಜೈವಿಕ ಒಕ್ಕೂಟವಾಗಿ ಪರಿಗಣಿಸಿ, ಅದು ದೈವಿಕವಾದುದು, ಅದರ ಪ್ರತಿಯೊಂದು ಅಂಶಗಳೂ ವಿಶಿಷ್ಟ ಉದ್ದೇಶಗಳಿಂದ ದೇವರಿಂದ ನಿರ್ಮಿತಗೊಂಡಿವೆಯೆಂದು ಪ್ರತಿಪಾದಿಸಿದ. 'ಆತ್ಮಕ್ಕೆ ದೇಹವಿರುವಂತೆ ಮಾನವನಿಗೆ ಭೂಮಿಯಿರುವುದೆಂದು' ತನ್ನ ಗ್ರಂಥದಲ್ಲಿ ಪ್ರತಿಪಾದಿಸಿದ. ಭೂಮಿ ಮತ್ತು ಮಾನವ ಪರಸ್ಪರ ನೇರ ಸಂಬಂಧವನ್ನು ಹೊಂದಿರುವರೆಂದು ತಿಳಿಯಪಡಿಸಿದ. ಭೂಮಿಯ ವಿವಿಧ ಭೂಪ್ರದೇಶಗಳನ್ನು ಈ ಕೃತಿ ವಿವರಿಸಿದರೂ ಭೂವಿವರಣೆ ಅಪೂರ್ಣವಾಗಿದೆ. ಈ ಕೃತಿಯಲ್ಲಿ ಯುರೋಪಿನ ವಿವರಣೆ ಪೂರ್ಣವಾಗಿಲ್ಲ. (ಆರ್.ಎನ್.)

**ಎರ್ನಾಕುಲಂ:** ಕೇರಳ ರಾಜ್ಯದ ಒಂದು ಪಟ್ಟಣ. ಅದೇ ಹೆಸರಿನ ಜಿಲ್ಲೆಯ ಕೇಂದ್ರ. ಕೊಚ್ಚಿ ಬಂದರಿಗೆ ಈಶಾನ್ಯದಲ್ಲಿ 3 ಕಿಮೀ ದೂರದಲ್ಲಿ ಸಮುದ್ರದ ಹಿನ್ನೀರಿನ ಮಧ್ಯದಲ್ಲಿದೆ. ಜನಸಂಖ್ಯೆ 5 ಲಕ್ಷ. ಕೊಚ್ಚಿ ಮತ್ತು ತಿರುವಾಂಕೂರ್ ಸಂಸ್ಥಾನಗಳು ಸೇರಿ ಒಂದು ರಾಜ್ಯವಾಗುವವರೆಗೂ ಕೊಚ್ಚಿಯ ರಾಜಧಾನಿಯಾಗಿತ್ತು. ಅನಂತರ ಉಚ್ಚನ್ಯಾಯಾಲಯದ ಕೇಂದ್ರವಾಯಿತು. ಇಲ್ಲಿ ಕೇರಳ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಐದು ಕಾಲೇಜುಗಳಿವೆ. ಸಾಬೂನು, ಎಣ್ಣೆ, ಗ್ಲಿಸರಿನ್, ರೇಷ್ಮೆ ಮುಂತಾದ ಕೈಗಾರಿಕೆಗಳು ಇಲ್ಲಿವೆ. ಮೀನುಗಾರಿಕೆ ಹಾಗೂ ತೆಂಗಿನ ಬೇಸಾಯ ಜನರ ಪ್ರಮುಖ ಕಸಬು. ಇಲ್ಲೊಂದು ಸರ್ಕಾರಿ ಮುದ್ರಣಾಲಯವೂ ಇದೆ. *

**ಎಲ್ ಸಾಲ್ವಡಾರ್:** ಮಧ್ಯ ಅಮೆರಿಕದ ಅತಿ ಪುಟ್ಟ ಹಾಗೂ ಅತ್ಯಂತ ಜನಸಾಂದ್ರ ಗಣರಾಜ್ಯ. ಮೇರೆಗಳು: ಉತ್ತರ ಪೂರ್ವಗಳಲ್ಲಿ ಹಾಂಡುರಾಸ್, ದಕ್ಷಿಣದಲ್ಲಿ ಪೆಸಿಫಿಕ್ ಸಾಗರ ಮತ್ತು ಪಶ್ಚಿಮ ವಾಯವ್ಯಗಳಲ್ಲಿ ಗ್ವಾಟೆಮಾಲ. ಮಧ್ಯ ಅಮೆರಿಕನ್ ರಾಷ್ಟ್ರಗಳ ಪೈಕಿ ಕೆರಿಬಿಯನ್ ಸಮುದ್ರಕ್ಕೆ ತಾಕಿದಂತಿರದ ದೇಶವಿದೊಂದೇ. ಇದರ ಪೆಸಿಫಿಕ್ ತೀರದ ಉದ್ದ 274 ಕಿಮೀ. ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ಬೇರೆ ಯಾವುದರಲ್ಲೂ ಬೇಸಾಯ ಇಲ್ಲಿನಷ್ಟು ಸಾಂದ್ರವಾಗಿ ನಡೆಯುವುದಿಲ್ಲ. ಉ.ಅ. $13^0 14'$ ಪೂ.ರೇ. $88^0 90'$. ಪೂರ್ವ ಪಶ್ಚಿಮವಾಗಿ ಇದರ ಉದ್ದ 225 ಕಿಮೀ. ಅಗಲ ದಕ್ಷಿಣೋತ್ತರವಾಗಿ 97 ಕಿಮೀ, ವಿಸ್ತೀರ್ಣ 21,393 ಚ.ಕಿಮೀ. ಜನಸಂಖ್ಯೆ 6,822,328 (2002). ರಾಜಧಾನಿ ಸಾನ್ ಸಾಲ್ವಡಾರ್. ಇದರ ಜನಸಂಖ್ಯೆ 972,810 (2003).

ಮೇಲ್ಮೈ ಲಕ್ಷಣ, ವಾಯುಗುಣ : ದಕ್ಷಿಣದಲ್ಲಿ ಕಿರಿದಾದ ಕರಾವಳಿ. ಮಗ್ಗುಲಲ್ಲೆ ದಕ್ಷಿಣ ಪರ್ವತಶ್ರೇಣಿ. ಇದರ ಹೆಗಲೇರಿ ನಿಂತ ಜ್ವಾಲಾಮುಖಿಗಳ ಪೈಕಿ ಅತ್ಯಂತ ಎತ್ತರವಾಗಿರುವುದು ಸ್ಯಾಂಟ ಆನ (2410 ಮೀ.). ದಕ್ಷಿಣ ಪರ್ವತ ಶ್ರೇಣಿಗೂ ಉತ್ತರದಲ್ಲಿರುವ ಪರ್ವತಸಾಲಿಗೂ ನಡುವೆ ತೊಟ್ಟಿಲಿನಂತೆ ಪ್ರಸ್ಥಭೂಮಿ ಇದೆ. ಲೇಂಪ, ಸಾನ್ ಮಿಗೆಲ್ ನದಿಗಳೂ ಅವುಗಳ ಉಪನದಿಗಳೂ ಆಳವಾದ ಕಮರಿಗಳನ್ನು ಕೊರೆದುಕೊಂಡು ಹರಿಯುತ್ತವೆ.

ವಾಯುಗುಣ ಎತ್ತರಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಪೆಸಿಫಿಕ್ ಕರಾವಳಿಯಲ್ಲೂ ಅಷ್ಟೇನೂ ಎತ್ತರವಿಲ್ಲದ ಪರ್ವತ ಪ್ರದೇಶದಲ್ಲೂ $25^0$ ಸೆ. ನಿಂದ $29^0$ ಸೆ. ವರೆಗೆ ಉಷ್ಣತೆ ವ್ಯತ್ಯಾಸವಾಗುತ್ತದೆ. 657 ಮೀ ಎತ್ತರವಿರುವ ಸಾನ್ ಸಾಲ್ವಡಾರಿನಲ್ಲಿ ಮಾರ್ಚಿಯ ಪರಮಾವಧಿ ಉಷ್ಣತೆ $35^0$ ಸೆ. ಜನವರಿಯಲ್ಲಿ $14^0$ ಸೆ. 1412 ಮೀ ಎತ್ತರದಲ್ಲಿ ಇದು $17^0$ ಸೆ. ನಿಂದ $22^0$ ಸೆ. ನಡುವೆ ವ್ಯತ್ಯಾಸವಾಗುತ್ತದೆ.




ಇಲ್ಲಿರುವುದು ಎರಡೇ ಋತುಗಳು: ಮೇಯಿಂದ ನವೆಂಬರ್‌ವರೆಗೆ ಬೇಸಗೆ–ಮಳೆಗಾಲ. ನವೆಂಬರಿನಿಂದ ಮೇ ವರೆಗೆ ಒಣಹವೆಯ ಚಳಿಗಾಲ. ಪೆಸಿಫಿಕ್ ಕರಾವಳಿಯಲ್ಲಿ ವಾರ್ಷಿಕ ಮಳೆ ಸರಾಸರಿ 172 ಸೆಂಮೀ. ನಡು ಎತ್ತರ ಪ್ರದೇಶದಲ್ಲಿ 177–246 ಸೆಂಮೀ. ಇನ್ನೂ ಎತ್ತರದಲ್ಲಿ ಇದಕ್ಕೂ ಅಧಿಕವಾಗಿ ಮಳೆ ಬೀಳುತ್ತದೆ. ಆಳದ ಕಣಿವೆಗಳಲ್ಲೂ ಪ್ರಸ್ಥಭೂಮಿಯಲ್ಲೂ ಬೀಳುವ ಮಳೆಯ ಮೊತ್ತ 114–152 ಸೆಂಮೀ.

ವ್ಯವಸಾಯ, ಕೈಗಾರಿಕೆ, ವ್ಯಾಪಾರ : ಒಟ್ಟು ಜನಸಂಖ್ಯೆಯಲ್ಲಿ 2/3 ರಷ್ಟು ಜನ ಕೃಷಿಯನ್ನವಲಂಬಿಸಿದ್ದಾರೆ. ಜ್ವಾಲಾಮುಖಿ ಪ್ರದೇಶ ಫಲವತ್ತಾದದ್ದು. ಮುಖ್ಯ ಆಹಾರ ಬೆಳೆ ಮುಸುಕಿನ ಜೋಳ, ಕಬ್ಬು, ಬತ್ತ, ಗೋದಿಗಳನ್ನೂ ಬೆಳೆಯುತ್ತಾರೆ. ಮುಖ್ಯ ವಾಣಿಜ್ಯ ಬೆಳೆಯೆಂದರೆ ಕಾಫಿ. ಎಲ್ ಸಾಲ್ವಡಾರಿನ ರಫ್ತಿನಲ್ಲಿ ಶೇ. 95 ಭಾಗ ಇದೇ. ವಾಯುಗುಣ, ಭೂಗುಣ, ಕಾರ್ಮಿಕರ ಸರಬರಾಯಿ, ಸಮುದ್ರಕ್ಕೆ ದೂರ–ಮುಂತಾದ ಎಲ್ಲ ದೃಷ್ಟಿಗಳಿಂದಲೂ ಕಾಫಿ ಬೆಳೆಗೆ ಇಲ್ಲಿ ಹೆಚ್ಚು ಅನುಕೂಲವಿದೆ. ಚಿನ್ನ, ಬೆಳ್ಳಿ ಇಲ್ಲಿಯ ಮುಖ್ಯ ಖನಿಜಗಳು, ತಾಮ್ರ, ಕಬ್ಬಿಣ, ಸೀಸ, ತವರ, ಗಂಧಕ, ಪಾದರಸ–ಇವು ಇಲ್ಲಿವೆಯಾದರೂ ಇವನ್ನು ಹೆಚ್ಚು ತೆಗೆಯುತ್ತಿಲ್ಲ. ಎಲ್ ಸಾಲ್ವಡಾರಿನ ಕಾಫಿಗೆ ಅಮೆರಿಕ ಸಂಯುಕ್ತ ಸಂಸ್ಥಾನವೇ ಮುಖ್ಯ ಗ್ರಾಹಕರಾಷ್ಟ್ರ. ಹತ್ತಿ ಜವಳಿ, ಹಿಟ್ಟು, ಮರ–ಮುಟ್ಟುಗಳು, ರಾಸಾಯನಿಕ ಪದಾರ್ಥ–ಇವು ಈ ದೇಶದ ಆಮದುಗಳು.

ಇಲ್ಲಿಯ ಜನಸಂಖ್ಯೆಯಲ್ಲಿ ಶೇ. 80 ಮಂದಿ ಸ್ಪ್ಯಾನಿಷ್–ಇಂಡಿಯನ್ ಮಿಶ್ರ (ಮೆಸ್ಟಿಸೊ). ಉಳಿದವರು ಅಚ್ಚ ಇಂಡಿಯನ್ನರು, ಬಿಳಿಯರು ಮತ್ತು ನೀಗ್ರೊಗಳು. ಇಲ್ಲಿಯ ಇತರ ಪಟ್ಟಣಗಳು: ನೇವಾಸಾನ್ ಸಾಲ್ವಡಾರ್, ಸಾನ್ ಮಿಗೆಲ್ ಮತ್ತು ಸ್ಟಾಕಾಟೀಕೊಲುಕ. ಇಲ್ಲಿನ ಭಾಷೆ ಸ್ಪ್ಯಾನಿಷ್. ಹಣ ಕೊಲೂನ್. (ವಿ.ಎಲ್.ಆರ್.)

**ಎಲ್–ನಿನೊ:** ಪ್ರಕೃತಿಯ ಜಲಭಾಗದಲ್ಲಿನ ಒಂದು ವಿಕೋಪ. ಇದು ಏಸುಕ್ರಿಸ್ತನ ಜನ್ಮದಿನಾಚರಣೆಯ ದಿನವಾದ ಡಿಸೆಂಬರ್ ಇಪ್ಪತ್ತೈದಕ್ಕೆ ಹತ್ತಿರದ ದಿನಗಳಲ್ಲಿ ಕಾಣಿಸಿಕೊಳ್ಳುವುದರಿಂದ ಮೀನುಗಾರರು ಇದನ್ನು ಎಲ್–ನಿನೊ ಎಂದು ಕರೆಯುವರು. ಎಲ್–ನಿನೊ ಎಂದರೆ 'ಬಾಲ ಏಸು' ಎಂದರ್ಥ. ಉಷ್ಣವಲಯಧ ವ್ಯಾಪ್ತಿಯ ಪೆಸಿಫಿಕ್ ಸಾಗರದಲ್ಲಿ ಉಷ್ಣಸಾಗರ ಪ್ರವಾಹವು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ. ವಿಶಾಲವಾದ ಪ್ರದೇಶ ಕಾವೇರುತ್ತದೆ. ತನ್ನ ಸುತ್ತಲಿನ ತಂಪುನೀರಿಗಿಂತ ಈ ಪ್ರದೇಶದ ಬಿಸಿನೀರಿನ ಸಾಂದ್ರತೆ ಕಡಿಮೆ. ಹೀಗಾಗಿ ಬಿಸಿ ನೀರಿನ ಪ್ರದೇಶ ಸಾಗರದ ಸಮಪಾತಳಿಯಿಂದ ಕೆಲವು ಅಂಗುಲಗಳಷ್ಟು ಮೇಲೇರುತ್ತದೆ. ಇವೇ ಎಲ್–ನಿನೊ ಮೂಲ.

ಇಪ್ಪತ್ತನೆಯ ಶತಮಾನದಲ್ಲಿ ಅನೇಕ ಬಾರಿ ಎಲ್–ನಿನೊ ಸಂಭವಿಸಿವೆ. 1997–98ರ ಎಲ್–ನಿನೊವಿನಿಂದ ಪೆರುವಿನಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು. ಅಲ್ಲಲ್ಲಿ ಮಹಾಪೂರಗಳುಂಟಾದವು. ದಕ್ಷಿಣ ಆಫ್ರಿಕದಲ್ಲಿ ಬರಗಾಲ ಕಾಣಿಸಿಕೊಂಡಿತ್ತು. ದಕ್ಷಿಣ ಮತ್ತು ಮಧ್ಯ ಅಮೆರಿಕಗಳಲ್ಲಿ ಬಿರುಗಾಳಿ, ಪ್ರವಾಹಗಳು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದವು, ಪಪುವ ನ್ಯೂಗಿನಿಯ ದ್ವೀಪಗಳಲ್ಲಿ ಬರದ ಲಕ್ಷಣಗಳು ಕಾಣಿಸಿಕೊಂಡಿದ್ದವು. ಆಗ್ನೇಯ ಏಷ್ಯದಲ್ಲಿ ಮಧ್ಯಾಹ್ನದ ಬಿಸಿಗಾಳಿ ಹೆಚ್ಚು ಬೀಸಿ ಕಾಡ್ಗಿಚ್ಚು ಉಂಟಾಗಿತ್ತು. ಕಾಲಿಮಂತನ್ ಮತ್ತು ಸುಮಾತ್ರಗಳಲ್ಲಿ ಕಾಡ್ಗಿಚ್ಚಿನಿಂದ ಅರಣ್ಯಗಳು ಸುಟ್ಟು ಬೂದಿಯಾಗಿದ್ದವು. ಮಧ್ಯಾಹ್ನದ ವೇಳೆಯಲ್ಲಿ ಮಬ್ಬುಗತ್ತಲೆ ಉಂಟಾಗಿತ್ತು. ದಾರಿಕಾಣದೆ ವಿಮಾನಾಪಘಾತಗಳೂ ಉಂಟಾಗಿದ್ದವು.

ಭೂಮಿಯ ಹವಾಮಾನದಲ್ಲಿ ಕ್ಷೋಬೆ ಉಂಟುಮಾಡುವ ಈ ನೈಸರ್ಗಿಕ ವೈಪರೀತ್ಯಕ್ಕೆ ಕಾರಣ ಇನ್ನೂ ಸರಿಯಾಗಿ ತಿಳಿದು ಬಂದಿಲ್ಲ. ಬೇಸಿಗೆ ಮತ್ತು ಚಳಿಗಾಲವನ್ನು ರೂಢಿಸುವ ಸಮುದ್ರ ಮತ್ತು ಹವಾಮಾನ ವಲಯಗಳಲ್ಲಿ ಉಷ್ಣಾಂಶದ ಸಮತೋಲವನ್ನು ಸಾಧಿಸುತ್ತಿದ್ದ ಭೂಮಿಯನ್ನು ಸುತ್ತುವ ಉಷ್ಣವಾಯುವಿನ ಅಸ್ತವ್ಯಸ್ತತೆ ಇದಕ್ಕೆ ಮೂಲವೆಂದು ಪರಿಸರ ವಿಜ್ಞಾನಿಗಳ ವಾದ. (ಬಿ.ಸಿ.ಕೆ.)

**ಎಲಿಸೀ ರೆಕ್ಲೂಸ್:** 1830–1905. ಹೆಸರಾಂತ ಭೂಗೋಳವಿಜ್ಞಾನಿ. ಈತ 1830 ಮಾರ್ಚ್ 5 ರಂದು ಜರ್ಮನಿಯ ಸ್ಟೆಫಾಯ್ ಲಾ ಗ್ರಾಂಡೆ ಎಂಬಲ್ಲಿ ಜನಿಸಿದ. 1851ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷ ಕಾರ್ಲ್ ಅವರ ಮಾರ್ಗದರ್ಶನದಲ್ಲಿ ಭೂಗೋಳವಿಜ್ಞಾನದ ಅಧ್ಯಯನ ಮಾಡಿದ. ಸ್ವಂತ ಅಧ್ಯಯನ ಮತ್ತು ಪ್ರವಾಸಗಳ ಮೂಲಕ ಪ್ರಾಕೃತಿಕ ಭೂಗೋಳ ವಿಜ್ಞಾನದಲ್ಲಿ ಪರಿಣತಿ ಪಡೆದ. ಇಂಗ್ಲೆಂಡ್ ಮತ್ತು ಅಮೆರಿಕಗಳಿಗೆ ಭೇಟಿಯನ್ನಿತ್ತ. 1857ರಲ್ಲಿ ಫ್ರಾನ್ಸಿಗೆ ಮರಳಿದ.

ಫ್ರಾನ್ಸಿನಲ್ಲಿ ಭೂಗೋಳವಿಜ್ಞಾನದ ವಿಕಾಸದ ಆರಂಭದ ಮುಖ್ಯ ಶ್ರೇಯಸ್ಸು ಈತನಿಗೆ ಸಲ್ಲುತ್ತದೆ. ಇವನು ಆಧುನಿಕ ಭೂಗೋಳ ವಿಜ್ಞಾನದ ಅನೇಕ ಗ್ರಂಥಗಳನ್ನು ಬರೆದ. ಲಾ ಟೆಕ್ರಿ ಪ್ರಾಕೃತಿಕ ಭೂಗೋಳವಿಜ್ಞಾನ ಕುರಿತ ಗ್ರಂಥ (1867). ಅನಂತರ 1875 ರಿಂದ 1894ರ ವರೆಗೆ ನ್ಯೊವೆಲ್ಲೆ ಜಿಯಾಗ್ರಫಿ ಯೂನಿವರ್ಸಲ್ಲೆ (ವಿಶ್ವದ ಹೊಸ ಭೂಗೋಳವಿಜ್ಞಾನ) ಎಂಬ ಗ್ರಂಥವಾಲೆಯಲ್ಲಿ ಇಡೀ ಪ್ರಪಂಚದ ಪ್ರಾದೇಶಿಕ ವರ್ಣನೆ ಮಾಡಿದ. ಈ ಗ್ರಂಥಮಾಲೆ 19 ಗ್ರಂಥಗಳನ್ನು ಒಳಗೊಂಡಿತ್ತು. ಇವನ ವಿಚಾರಗಳ ಪ್ರಭಾವ ಫ್ರಾನ್ಸಿನ ಹೊರಗೆ ಬ್ರಿಟನ್ ಮತ್ತು ಯುರೋಪಿನ ಇತರ ದೇಶಗಳ ಮೇಲೂ ಉಂಟಾಯಿತು.



(ಎಸ್.ಎಸ್.ಎನ್.)

**ಎಲೆಕ್ಟ್ರಾನಿಕ್ ಕಾಮರ್ಸ್:** ವ್ಯಾಪಾರ ವ್ಯವಹಾರ ವಿದ್ಯುನ್ಮಾನ ಮಾಧ್ಯಮದ ಮೂಲಕ ನಡೆಯುವ ಒಂದು ಬಗೆಯ ಬ್ಯಾಂಕಿಂಗ್ ವ್ಯವಸ್ಥೆ. ಇದು ಒಂದು ವಿದ್ಯುನ್ಮಾನ ಸಂಪರ್ಕ ವ್ಯವಸ್ಥೆಯಾಗಿದ್ದು, ಕೈಗಾರಿಕೆಗಳು, ಗ್ರಾಹಕರು, ಪೂರೈಕೆದಾರರು, ಹೂಡಿಕೆದಾರರು, ವ್ಯಾಪಾರ ಭಾಗಸ್ಥರು ಮತ್ತು ಸರ್ಕಾರದ ಕೇಂದ್ರಗಳ ನಡುವಿನ ಸಂಪರ್ಕವಾಗಿದೆ. ಸರಕು ಮತ್ತು ಸೇವೆಗಳನ್ನು ಅಂತರ್‌ಜಾಲದ ಮೂಲಕ ಯಾವಾಗಲಾದರೂ ಅಥವಾ ಎಲ್ಲಿಯಾದರೂ ಕೊಂಡುಕೊಳ್ಳುವುದು ಅಥವಾ ಮಾರಾಟ ಮಾಡಬಹುದು.

ಇದು ಕೇವಲ ದೊಡ್ಡ ಕಂಪನಿಗಳು ಮತ್ತು ಸರ್ಕಾರದ ಇಲಾಖೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಮಧ್ಯಮ ಮತ್ತು ಸಣ್ಣ ಪ್ರಮಾಣದ ವ್ಯವಹಾರ ಮಾಡುವವರಿಗೂ ಉಪಯುಕ್ತ. ಇದರ ಉಪಯೋಗ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೂ ಉಪಯುಕ್ತವಾಗಿದೆ. ಇದರಿಂದ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಡುವಿನ ಅಂತರ ಕಡಿಮೆಯಾಗಲು ಸಹಾಯಕವಾಗಿದೆ. ಮಾರುಕಟ್ಟೆಯ ವಿಸ್ತರಣೆ, ಸರಕು–ಸೇವೆಗಳಿಗೆ ಪ್ರಚಾರ, ಮಾಹಿತಿಯ ಹಂಚಿಕೆ, ಮಾರಾಟದ ಅಭಿವೃದ್ಧಿ, ಸರಕುಗಳ ಮಾರಾಟ, ವಿಮಾ, ಹಣಕಾಸು ಕ್ಷೇತ್ರ ಮೊದಲಾದವು ಇದನ್ನು ಉಪಯೋಗಿಸುವುದರಿಂದ ನಿಗದಿತ ಅವಧಿಯೊಳಗೆ ಸರಿಯಾಗಿ ವ್ಯಾಪಾರ ನಡೆಯುವುದು. ಇದರಿಂದ ಸಮಯ ಮತ್ತು ಹಣದ ಉಳಿತಾಯವಾಗುತ್ತದೆ. ಉತ್ಪಾದನೆ ಹೆಚ್ಚಾಗಿ, ಮಾರುಕಟ್ಟೆ ವಿಸ್ತರಿಸಲ್ಪಡುವುದು. ಇದನ್ನು ಮೂರು ಕ್ಷೇತ್ರಗಳಲ್ಲಿ ಹೆಚ್ಚು ಅನ್ವಯಿಸಿಕೊಳ್ಳಲಾಗಿದೆ. ಅವುಗಳೆಂದರೆ ವ್ಯಾಪಾರ ಸಂಸ್ಥೆಗಳ ನಡುವೆ, ವ್ಯಾಪಾರಸ್ಥರು ಮತ್ತು ಗ್ರಾಹಕರ ನಡುವೆ ಹಾಗೂ ಒಂದೇ ದೊಡ್ಡ ವ್ಯಾಪಾರ ಸಂಸ್ಥೆಯೊಳಗೆ. ಈ ತಾಂತ್ರಿಕತೆಯನ್ನು ಸರಿಯಾಗಿ ಅಳವಡಿಸಿಕೊಳ್ಳಬೇಕಾದರೆ ಕಂಪ್ಯೂಟರ್, ಅಂತರ್‌ಜಾಲದ ವ್ಯವಸ್ಥೆ, ವೆಬ್‌ಸೈಟ್, ಅತ್ಯುತ್ತಮವಾದ ಸಂಪರ್ಕ ವ್ಯವಸ್ಥೆ, ಪರಿಣಿತ ಕೆಲಸಗಾರರು, ಉತ್ತಮವಾದ ಸೈಬರ್ ಕಾನೂನು, ವ್ಯಾಪಾರದಲ್ಲಿನ ರಕ್ಷಣೆ ಮತ್ತು ಉತ್ತಮ ಗ್ರಾಹಕರು ಅವಶ್ಯಕ. (ಎಸ್.ಕೆ.ಪಿ.)

**ಎಲೆನ್ ಚರ್ಚಿಲ್ ಸೆಂಪಲ್:** 1863–1932. ಅಮೆರಿಕ ದೇಶದ ಭೂಗೋಳ ವಿಜ್ಞಾನಿ. 1863 ರಲ್ಲಿ ಪ್ರತಿಷ್ಠಿತ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ ಈಕೆ 1891 ರಲ್ಲಿ ವಸ್ಸಾರ್‌ನಲ್ಲಿ ಪದವಿಗಳಿಸಿದಳು. ಅನಂತರ ಜರ್ಮನಿಗೆ ತೆರಳಿ, ಅಲ್ಲಿ ರ್‍ಯಾಟ್ಸೆಲ್‌ರ ಮಾರ್ಗದರ್ಶನದಲ್ಲಿ ಅಧ್ಯಯನ ಮುಂದುವರಿಸಿ, ರ್‍ಯಾಟ್ಸೆಲ್‌ರ ಹೊಸ ಪರಿಭಾವನೆಯಾದ ಮಾನವ ಮತ್ತು ಪರಿಸರ ಎಂಬುದರ ಅಧ್ಯಯನದಿಂದ ಪ್ರಭಾವಿತಳಾದಳು. ಅನಂತರ ಜಪಾನ್, ಚೀನ, ಫಿಲಿಪೈನ್ಸ್, ಜಾವ, ಭಾರತ ಮತ್ತು ಯುರೋಪಿನ ರಾಷ್ಟ್ರಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿದಳು. 1903 ರಲ್ಲಿ ಈಕೆ ಅಮೆರಿಕನ್ ಹಿಸ್ಟರಿ ಅಂಡ್ ಇಟ್ಸ್ ಜಿಯೋಗ್ರಾಫಿಕಲ್ ಕಂಡೀಷನ್ಸ್ ಎಂಬ ಕೃತಿಯನ್ನು ಪ್ರಕಟಿಸಿದಳು. 1911 ರಲ್ಲಿ ಭೌಗೋಳಿಕ ಪರಿಸರದ ಪ್ರಭಾವ ಎಂಬ ಗ್ರಂಥವನ್ನು ಬಿಡುಗಡೆ ಮಾಡಿದಳು. ಈ ಗ್ರಂಥದಲ್ಲಿ ಮಾನವನ ಮೇಲೆ ಪರಿಸರದ ಪ್ರಭಾವ ಮತ್ತು ಸಂಬಂಧವನ್ನು ವಿವರಿಸುತ್ತಾ ಮಾನವ, ಪ್ರಾಣಿ, ಪಕ್ಷಿ ಹಾಗೂ ಗಿಡಮರಗಳು ತಮ್ಮ ಸುತ್ತಲಿನ ಪರಿಸರಕ್ಕೆ ಹೊಂದಿಕೊಂಡಂತೆ ಬೆಳೆಯುತ್ತವೆ. ಇವುಗಳ ಸ್ವಭಾವ, ಗುಣಧರ್ಮದ ನಿರ್ಧಾರದಲ್ಲಿ ಪರಿಸರದ ಪ್ರಭಾವ ಮಹತ್ತ್ವವಾದದ್ದು ಎನ್ನುತ್ತಾಳೆ. ಈ ವಿಶ್ಲೇಷಣೆ ಡಾರ್ವಿನ್ನನ ಉಳಿವಿಗಾಗಿ ಹೋರಾಟ ಎಂಬ ಸಿದ್ಧಾಂತವನ್ನು ಆಧರಿಸಿದೆ. ಇದನ್ನು ಸಾಮಾಜಿಕ ಡಾರ್ವಿನ್ ವಾದ ಎನ್ನಲಾಗಿದೆ.

ಈ ಭೌಗೋಳಿಕ ಪರಿಸರದ ಪ್ರಭಾವ ಕೃತಿಯ ವಸ್ತು, ಸೆಂಪಲ್ ಗೌರವ ಮತ್ತು ಪ್ರತಿಭೆಯನ್ನು ದೇಶ ವಿದೇಶಗಳಲ್ಲಿ ಹೆಚ್ಚಿಸಿತು. ಇದರ ಫಲವಾಗಿ ಇವಳನ್ನು 1912 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಲಾಯಿತು. ಹಾಗೆಯೇ ಲಂಡನ್ನಿನ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿ ಆಹ್ವಾನಿಸಿತು.

ಸೆಂಪಲ್ಲಳು ಪರಿಸರ ಪ್ರಭುತ್ವವಾದದ ಜೊತೆ ಜೊತೆಗೆ ಮಾನವ ಭೂಗೋಳವಿಜ್ಞಾನದ ವಿಚಾರವನ್ನೂ ಸಹ ಅಭಿವೃದ್ಧಿಪಡಿಸಿದ್ದಾಳೆ. ಕಡೆಯ ದಿನಗಳಲ್ಲಿ ಮೆಡಿಟರೇನಿಯನ್ ಮೇಲೆ ಭೂಗೋಳವಿಜ್ಞಾನದ ವಿಮರ್ಶೆ ಎಂಬ ಕೃತಿಯನ್ನು ಬರೆಯಲು ಆರಂಭಿಸಿದಳು. ಇವಳ ಮಾರ್ಗದರ್ಶನದಲ್ಲಿ ಅನೇಕ ಭೂಗೋಳವಿಜ್ಞಾನಿಗಳು ಪ್ರಕಾಶಕ್ಕೆ ಬಂದರು. (ಎನ್.ಎಲ್.)

**ಎಲ್ಡೊರಾಡೊ:** ಚಿನ್ನದ ಮುಲಾಮಿನ ಎಂಬ ಅರ್ಥ ಬರುವ ಈ ಶಬ್ದ ಅಮೆರಿಕದ ಕೊಲಂಬಿಯದ ಬೊಗೊಟ ಬಳಿಯ ಇಂಡಿಯನ್ ನಗರವೊಂದರ ನಾಯಕನ ಹೆಸರಾಗಿತ್ತು. ಪರ್ವದದಿನಗಳಲ್ಲಿ ಆತ ಮೈತುಂಬ ಸ್ವರ್ಣಧೂಳಿ ಲೇಪಿಸಿಕೊಂಡು ಬತ್ತಲೆಯಾಗಿ ಸರೋವರದಲ್ಲಿ ಧುಮುಕಿ ಮೀಯುತ್ತಿದ್ದನೆಂದು ಪ್ರತೀತಿ. ಆತನ ಪ್ರಜೆಗಳು ನೀರಿಗೆ ಒಡವೆಗಳನ್ನೂ ಸ್ವರ್ಣದ ವಸ್ತುಗಳನ್ನೂ ಹಾಕುತ್ತಿದ್ದರು. ಈ ದಂತಕಥೆಯನ್ನು ಕೇಳಿದ ಸ್ಪ್ಯಾನಿಷರು ಪೆರುವಿನಿಂದಲೂ ಜರ್ಮನರು ವೆನಿಜುವೆಲದಿಂದಲೂ ಆ ಸ್ವರ್ಣಪುರುಷನನ್ನು ಅನ್ವೇಷಿಸುತ್ತ ಇಲ್ಲಿಗೆ ಬಂದರು. ಆದರೆ ಆತ ಕಾಣಸಿಗಲಿಲ್ಲ. ಸ್ಪ್ಯಾನಿಷರು ಸುತ್ತಿನ ಪ್ರದೇಶವನ್ನೆಲ್ಲ ಜಯಿಸಿದರು. ಅನ್ವೇಷಣೆ ನಿಲ್ಲದೆ ಮುಂದುವರಿಯಿತು. ಇಲ್ಲೆಲ್ಲ ಚಿನ್ನದ ಆಸೆಯಿಂದ ಅಲೆದಾಡಿ ನೆಲವನ್ನು ಗೆದ್ದುಕೊಂಡ ಪಾಶ್ಚಾತ್ಯರು ಇಡೀ ಪ್ರದೇಶವನ್ನೇ ಎಲ್ಡೊರಾಡೊ ಎಂದು ಕರೆದರು. ಬ್ರೆಜಿಲಿನವರು ರಚಿಸಿದ ನಕ್ಷೆಯಲ್ಲಿ ಎಲ್ಡೊರಾಡೊ ಸ್ಥಾನ ಪಡೆಯಿತು. ಚಿನ್ನ ಇದೆಯೆಂದು ನಂಬಲಾಗಿದ್ದ ಇಂಥ ಮಿಥ್ಯಾ ಪ್ರದೇಶಗಳು ಅನೇಕ. ಅಪ್ರಯಾಸವಾಗಿ ಶೀಘ್ರಸಂಪತ್ತು ದೊರಕಬಹುದಾದ ಪ್ರದೇಶವನ್ನು ಎಲ್ಡೊರಾಡೊ ಎಂದು ಕರೆಯುವುದು ವಾಡಿಕೆ. ಸಾಹಿತ್ಯದಲ್ಲೂ ಈ ಪದ ಸ್ಥಾನ ಪಡೆದಿದೆ (ಉದಾ: ಮಿಲ್ಟನನ ಪ್ಯಾರಡೈಸ್ ಲಾಸ್ಟ್, ವಾಲ್ಟೇರನ ಕ್ಯಾಂಡಿಡೆ). (ಕೆ.ಆರ್.ಆರ್.)

**ಎಲ್ಬ:** ಇಟಲಿಯ ಪಶ್ಚಿಮ ತೀರದಲ್ಲಿರುವ ಒಂದು ದ್ವೀಪ. ಟಸ್ಕನಿ ಪ್ರದೇಶದ ಲೆಗ್‌ಹಾರನಿನ ಒಂದು ಭಾಗ. ವಿಸ್ತೀರ್ಣ 223 ಚ.ಕಿಮೀ. ಜನಸಂಖ್ಯೆ 48,000 (2001). ಈ ದ್ವೀಪದ ಪಶ್ಚಿಮ ಭಾಗದಲ್ಲಿ ಅಭ್ರಕ, ಪ್ರಶಸ್ತ ಬೆಣಚುಕಲ್ಲು ಮತ್ತು ಸುಣ್ಣಕಲ್ಲಿನ ನಿಕ್ಷೇಪಗಳೂ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಳೂ ಇವೆ. ಇಲ್ಲಿಯ ಹಿತಕರವಾದ ವಾತಾವರಣದಿಂದಾಗಿ ಎಲ್ಲ ರೀತಿಯ ಸಸ್ಯವರ್ಗ ಬೆಳೆಯಲು ಅನುಕೂಲವಾಗಿದೆ. ಆಲಿವ್ ಮರಗಳು, ದ್ರಾಕ್ಷಿ ಬಳ್ಳಿಗಳು ಹೇರಳ. ಇಲ್ಲಿಯ ಕಬ್ಬಿಣದ ಅದಿರಿಗೆ ಇಟ್ರುಸ್ಕನ್ ಸಂಸ್ಕೃತಿಯ ಅವಶೇಷಗಳ ಹೋಲಿಕೆಯಿರುವುದರಿಂದ ಎಲ್ಬ ಆ ಸಂಸ್ಕೃತಿಯ ಪ್ರಮುಖ ಕೇಂದ್ರವಾಗಿತ್ತೆಂದು ಊಹೆ. ಮಧ್ಯಯುಗದಲ್ಲಿ ಇದನ್ನು ಪೀಸ ಜನ ಆಳುತ್ತಿದ್ದರು. ಇದು 1399 ರಲ್ಲಿ ಪಿಯಾಂಬಿನೋದ ಡ್ಯೂಕರ ಕೈಯಲ್ಲೂ 1548 ರಲ್ಲಿ ಫ್ಲಾರೆನ್ಸಿನ ಒಂದನೆಯ ಕಾಸಿವೊ ಕೈಯಲ್ಲೂ 1595 ರಿಂದ 1709 ವರೆಗೆ ಸ್ಪೇನಿನ ವಶದಲ್ಲೂ ಇದ್ದು ಅನಂತರ ನೇಪಲ್ಸಿನವರ ಅಧೀನಕ್ಕೆ ಬಂತು. 1802ರಲ್ಲಿ ಇದನ್ನು ಫ್ರಾನ್ಸ್ ಗೆದ್ದಿತು. 1814 ರಲ್ಲಿ ಒಂದನೆಯ ನೆಪೋಲಿಯನ್ ರಾಜ್ಯಭ್ರಷ್ಟನಾಗಿ ಎಲ್ಬಕ್ಕೆ ಬಂದ. ಅನಂತರ ಇದೊಂದು ಸ್ವತಂತ್ರ ಸಂಸ್ಥಾನವಾಗಿ ಪರಿವರ್ತನೆ ಹೊಂದಿತು. ನೆಪೋಲಿಯನನೇ ಇದರ ರಾಜ್ಯಸೂತ್ರಗಳನ್ನು ನಡೆಸುತ್ತಿದ್ದ. ಅವನ ಅನಂತರ 1860 ರಲ್ಲಿ ಇದು ಮತ್ತೆ ಇಟಲಿಯ ವಶವಾಯಿತು.

ಪಾರ್ಟೋಫೇರ್ರಾಯೋ ಇಲ್ಲಿನ ಮುಖ್ಯ ಪಟ್ಟಣ ಹಾಗೂ ಬಂದರು. ಇದು ನೆಪೋಲಿಯನನ ಮುಖ್ಯ ಠಾಣ್ಯವಲ್ಲದೆ ಅವನ ಬೇಸಗೆಯ ತಂಗುದಾಣವೂ ಆಗಿತ್ತು. ಆತ ಬಳಸುತ್ತಿದ್ದ ಕಟ್ಟಡಗಳೂ ಸುಂದರವಾದ ಚಿತ್ರಗಳ ಶಾಲೆಯೂ ಇಲ್ಲಿವೆ. (ಕೆ.ಆರ್.ಆರ್.)

**ಎಲ್ಲೆಗಳು ಮತ್ತು ಎಲ್ಲೆ ಪ್ರದೇಶಗಳು:** ವಿವಿಧ ಸ್ವಾಭಾವಿಕ ಪ್ರದೇಶಗಳನ್ನು ಭೂಮಿಯ ಮೇಲೆ ನಾವು ಕಾಣುತ್ತೇವೆ. ಅವುಗಳ ನಡುವೆ ನಿಖರವಾದ ಎಲ್ಲೆಗಳಿಲ್ಲ ಮಾನವ ತನ್ನ ಇತಿಹಾಸದಲ್ಲಿ ಹಾಗೂ ನಾಗರಿಕತೆ ಮುಂದುವರಿದಂತೆ ರಾಜ್ಯ ನಿರ್ಮಾಣ, ದೇಶರಕ್ಷಣೆ, ಸಂಪನ್ಮೂಲಗಳನ್ನು ಉಪಯೋಗಿಸಲು ಸದಾ ಪ್ರಯತ್ನಿಸುತ್ತಿರುವುದು ಕಾಣಬರುತ್ತದೆ. ಇಲ್ಲಿ ಎರಡು ಪ್ರದೇಶ ಅಥವಾ ದೇಶಗಳ ನಡುವೆ ಸರಹದ್ದು ಪ್ರದೇಶಗಳುಂಟಾಗಿ ಅವು ತದನಂತರದ ರಾಜಕೀಯದ ತೀವ್ರ ಬೆಳವಣಿಗೆಯಿಂದಾಗಿ ಗಡಿ/ಎಲ್ಲೆಗಳಾಗಿ ಮಾರ್ಪಟ್ಟಿರುವುದು ತಿಳಿದು ಬರುತ್ತದೆ.

ಎಲ್ಲೆಗಳು ಎರಡು ರಾಜಕೀಯ ಪ್ರದೇಶಗಳ ನಡುವೆ ಇದ್ದು ಅವುಗಳನ್ನು ಸಾರ್ವಭೌಮ ರಾಷ್ಟ್ರಗಳಾಗಿ ಪ್ರತ್ಯೇಕಿಸುವ ಪ್ರಾಮುಖ್ಯತೆಯನ್ನು ಹೊಂದಿರುತ್ತವೆ. ಇತ್ತೀಚೆಗೆ ಜನಸಂಖ್ಯಾ ಹೆಚ್ಚಳದಿಂದಾಗಿ ಹಾಗೂ ರಾಜಕೀಯ ಅಂಶಗಳಿಂದಾಗಿ ಸರ್ಕಾರಗಳಿಗೆ ತಮ್ಮ ದೇಶದ ಎಲ್ಲೆಯನ್ನು ನಿಖರವಾಗಿ ಗುರುತಿಸುವ ಜವಾಬ್ದಾರಿ ಹೆಚ್ಚಾಗಿದೆ, ಅವಶ್ಯಕವೂ ಆಗಿದೆ. ಇಲ್ಲಿ ಭಾರತ–ಚೀನ ದೇಶಗಳ ನಡುವಿನ ಮ್ಯಾಕ್ ಮೋಹನ್ ಲೈನ್ ಎಲ್ಲೆಯನ್ನಾಗಿ ಮತ್ತು ಆಫ್ಘಾನಿಸ್ತಾನಕ್ಕೂ ಹಿಂದಿನ ಸೋವಿಯತ್ ಒಕ್ಕೂಟಕ್ಕೂ ನಡುವಿನ ದುರಾಂಡ್‌ಲೈನ್ ಎಲ್ಲೆಯನ್ನು ಸ್ಮರಿಸಿಕೊಳ್ಳಬಹುದು. ಪುರಾತನ ಕಾಲದಲ್ಲಿ ಎತ್ತರವಾದ ನಿರ್ಜನ ಪ್ರದೇಶ ಎರಡು ದೇಶಗಳ ನಡುವೆ ಒಂದು ತರಹದ ಸರಹದ್ದು / ಎಲ್ಲೆಯಾಗಿತ್ತು. ಆದರೆ ಕಾಲಕ್ರಮೇಣ ಇತಿಹಾಸದಲ್ಲಿ ರೋಮನ್ನರು, ಚೀನಿಯರು, ಆಂಗ್ಲೋಸ್ಯಾಕ್ಸನ್ನರು ಶತ್ರುಗಳಿಂದ ಹಾಗೂ ಅನಾಗರಿಕರಿಂದ ರಕ್ಷಿಸಿಕೊಳ್ಳಲು ಗೋಡೆಗಳನ್ನು ನಿರ್ಮಿಸಿದರು. ಅವು ಎಲ್ಲೆಗಳ ಪ್ರತಿರೂಪಗಳು.

ಇಂದಿನ ಆಧುನಿಕ ಆರ್ಥಿಕ ಪ್ರಪಂಚ ವ್ಯವಸ್ಥೆಯಲ್ಲಿ ಅನೇಕ ಬಗೆಯ ಎಲ್ಲೆಗಳಿವೆ. ಅವನ್ನು ಸ್ಟೀಫನ್ ಬಿ. ಜೋನ್ಸ್‌ರವರು ಪ್ರತ್ಯೇಕ ಎಲ್ಲೆಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ಸ್ವಾಭಾವಿಕ ಎಲ್ಲೆ, ರಾಷ್ಟ್ರೀಯ, ಸಾಮ್ರಾಜ್ಯ ಶಾಹಿ, ಒಪ್ಪಂದದ ರೇಖಾ ಮಾದರಿ ಮತ್ತು ರಾಜಕೀಯ ಶಕ್ತಿಯಾಧಾರಿತ ರಾಷ್ಟ್ರಗಳ ನಡುವಿನ ಸಹಕಾರ. ಸಹ ಬಾಳ್ವೆಗೆ ನಿಖರವಾದ ಎಲ್ಲೆಯ ಗುರುತಿಸುವಿಕೆ ಅತ್ಯಾವಶ್ಯಕವಾಗಿದೆ ಹಾಗೂ ಅದು ಎರಡೂ ದೇಶಗಳ ನಡುವೆ ಸೌಹಾರ್ದ ಮಾತುಕತೆ–ಒಪ್ಪಂದಗಳಿಂದ ಆಗಬೇಕು. ಇಲ್ಲಿ ಗೊಂದಲ ಗೋಜಿನಲ್ಲಿರುವ ಭಾರತ–ಪಾಕಿಸ್ತಾನ ಪಶ್ಚಿಮದೆಲ್ಲೆಯಾಗಬಹುದು ಅಥವಾ ಪರ್ವತಮಯ ಭಾರತ–ಟಿಬೇಟ್ ಚೀನದ ಎಲ್ಲೆಯಾಗಬಹುದು ಅಥವಾ ಪ್ರತಿವರ್ಷ ನದೀಪ್ರವಾಹಗಳಿಂದ ಪೀಡಿತವಾದ ಭಾರತ–ಬಾಂಗ್ಲ ಎಲ್ಲೆಯಾಗಬಹುದು, ಇವುಗಳನ್ನು ಸೌಹಾರ್ದಯುತವಾಗಿ ಗುರುತಿಸಿಕೊಳ್ಳಬೇಕಾಗಿದೆ. (ಬಿ.ಇ.)

**ಎಲ್ಲೋರ:** ಮಹಾರಾಷ್ಟ್ರದಲ್ಲಿ ಗೋದಾವರಿಯ ಉಪನದಿಯೊಂದರ ದಂಡೆಯ ಮೇಲೆ, ಅಜಂತದಿಂದ ನೈಋತ್ಯದಲ್ಲಿ 64 ಕಿಮೀ ದೂರದಲ್ಲೂ ಔರಂಗಾಬಾದಿನಿಂದ ವಾಯವ್ಯದಲ್ಲಿ 26 ಕಿಮೀ ದೂರದಲ್ಲೂ ಇರುವ ಪ್ರಸಿದ್ಧ ಸ್ಥಳ. ಬೌದ್ಧ, ಹಿಂದು ಮತ್ತು ಜೈನ ಧರ್ಮಗಳಿಗೆ ಸೇರಿದ 34 ಗುಹೆಗಳೂ ಒಂದೇ ಕಲ್ಲಿನಲ್ಲಿ ಕಡೆಯಲಾಗಿರುವ ದ್ರಾವಿಡ ಶೈಲಿಯ ಸುಪ್ರಸಿದ್ಧ ಕೈಲಾಸ ದೇವಾಲಯವೂ ಇರುವ ಈ ಊರು ಭಾರತೀಯ ಕಲೆಯ ಮುಖ್ಯ ಕೇಂದ್ರಗಳಲ್ಲೊಂದಾಗಿದೆ. ಇಲ್ಲಿನ ಇಳಿಜಾರಾದ ಬೆಟ್ಟದ ಪಶ್ಚಿಮದ ಅಂಚಿನಲ್ಲಿ ಕಡೆದಿರುವ ಗುಹಾಂತರ ದೇವಾಲಯಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ದಕ್ಷಿಣದಲ್ಲಿರುವ 12 ಗುಹೆಗಳು ಬೌದ್ಧಧರ್ಮಕ್ಕೂ ಮಧ್ಯದ 17 ಗುಹೆಗಳು ಹಿಂದು ಧರ್ಮಕ್ಕೂ ಉತ್ತರದ ಅಂಚಿನ 5 ಗುಹೆಗಳು ಜೈನ ಧರ್ಮಕ್ಕೂ ಸೇರುತ್ತವೆ. ಪ್ರ.ಶ.ವ. 350–650ರ ಮಧ್ಯದಲ್ಲಿ ನಿರ್ಮಿತವಾದ ಬೌದ್ಧ ಚೈತ್ಯವಿಹಾರಗಳಲ್ಲಿ ಎರಡು ಗುಂಪುಗಳಿದ್ದು ಮೊದಲ ಐದು ಗುಹೆಗಳು ದೇರ್‍ವಾರ ಗುಂಪಿಗೂ ಉಳಿದ ಏಳು ಎರಡನೆಯ ಗುಂಪಿಗೂ ಸೇರುತ್ತವೆ. ಮೊದಲ ಗುಂಪಿನ ಗುಹೆಗಳಲ್ಲಿ ಮಹಾನ್ ವಾಡ ಎಂಬ ಕಂಬಗಳಿಂದ ಕೂಡಿದ್ದ ವಿಶಾಲ ಹಜಾರವನ್ನು ಪ್ರಾರ್ಥನಾ ಮಂದಿರವಾಗಿ

ಬಳಸುತ್ತಿದ್ದರು. ಎರಡನೆಯ ಗುಂಪಿನ ಚೈತ್ಯ ಮಂದಿರದಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಈ ಎಲ್ಲಾ ಗುಹೆಗಳು ಒಂದಂತಸ್ತಿನವುಗಳಾಗಿದ್ದು ಕೈಸಾಲೆ, ಕಂಬಗಳಿಂದ ಕೂಡಿದ್ದ ಹಜಾರ ಮತ್ತು ಚೈತ್ಯ ಅಥವಾ ಗರ್ಭಗುಡಿಯನ್ನೊಳಗೊಂಡಿರುತ್ತಿದ್ದವು. ಎರಡನೆಯ ಗುಂಪಿನ ಬೌದ್ಧ ಗುಹೆಗಳಲ್ಲಿ ವಿಶಾಲವಾದ ವಿಹಾರಗಳಿದ್ದು ಸುಂದರ ಚೈತ್ಯಗಳೂ ಇರುತ್ತಿದ್ದುವು. ಮುಂಭಾಗದಲ್ಲಿ ದೊಡ್ಡ ಪ್ರಾಂಗಣಗಳಿರುತ್ತಿದ್ದವು. ಅವುಗಳಲ್ಲಿ 3 ಗುಹೆಗಳು ಮೂರಂತಸ್ತಿನ ನಿರ್ಮಾಣಗಳಾಗಿವೆ. ತೀನ್ ತಾಲ್ ಅಥವಾ ಮೂರಂತಸ್ತಿನ ಭವನವೆಂದು ಹೆಸರಾದ 12 ನೆಯ ಗುಹೆ ಗಮನಾರ್ಹವಾಗಿದೆ. ಸು. 40 ಭಿಕ್ಷುಗಳ ವಸತಿಗೆ ಅನುಕೂಲವಿರುವ ಈ ಗುಹೆಯ ಹಜಾರ ಇನ್ನೂ ಅಧಿಕ ಸಂಖ್ಯೆಯ ಭಿಕ್ಷುಗಳು ಪ್ರಾರ್ಥನೆ ಧರ್ಮೋಪದೇಶಗಳಿಗಾಗಿ ಸೇರಲನುಕೂಲವಾಗಿತ್ತು. ಚೈತ್ಯಗೃಹದಲ್ಲಿ ಕುಳಿತಿರುವ ಬುದ್ಧ ಮತ್ತು ಇತರ ಮೂರ್ತಿಗಳಿವೆ. (ಬಿ.ಕೆ.ಜಿ.;ಕೆ.ಎಸ್.ಎಸ್.)

**ಎಲ್ಸ್‌ವರ್ತ್ ಹಂಟಿಂಗ್‌ಟನ್:** 1876–1947. ಅಮೆರಿಕ ಸಂಯುಕ್ತ ಸಂಸ್ಥಾನದ ಭೂಗೋಳವಿಜ್ಞಾನಿ. ಡಬ್ಲು. ಎಮ್.ಡೆವಿಸ್ ಅವರ ಶಿಷ್ಯ, ಪರಿಸರ ಪ್ರಭುತ್ವವಾದದ ಪ್ರತಿಪಾದಕ. ಸೃಜನಶೀಲ ಚಿಂತಕ, ಬರೆಹಗಾರ, ಉತ್ತಮ ಅಧ್ಯಾಪಕ ಹಾಗೂ ಮಾನವ ಜೀವನದ ಮೇಲೆ ವಾಯುಗುಣದ ಪ್ರಭಾವಗಳನ್ನು ಕುರಿತು ಅತ್ಯುತ್ತಮವಾಗಿ ವಿಶ್ಲೇಷಿಸಿದ ವ್ಯಕ್ತಿ. 1907 ರಲ್ಲಿ ಪ್ರಕಟವಾದ ಈತನ ಪಲ್ಸ್ ಆಫ್ ಏಷ್ಯ ಕೃತಿಯಲ್ಲಿ ಮಧ್ಯ ಏಷ್ಯ ಭಾಗದಿಂದ ಜನರು ಭಾರತ, ಚೀನ ಹಾಗೂ ಪೂರ್ವ ಯುರೋಪಿನ ಭಾಗಗಳಿಗೆ 13ನೆಯ ಶತಮಾನದಲ್ಲಿ ದಾಳಿ ನಡೆಸುವುದರ ಮೂಲಕ ವಲಸೆಯನ್ನು ಕೈಗೊಂಡರು. ಇದಕ್ಕೆ ಮುಖ್ಯವಾಗಿ ಅವರು ವಾಸ ಮಾಡುತ್ತಿದ್ದ ಸ್ಥಳದಲ್ಲಿ ಪ್ರಾಣಿಗಳಿಗೆ ಬೇಕಾದ ಹುಲ್ಲು ಮತ್ತು ಮೇವಿನ ಮೂಲಗಳು ಬತ್ತಿ ಹೋದುದರಿಂದ ಅನಿವಾರ್ಯವಾಗಿ ಈ ಪ್ರದೇಶಗಳ ಮೇಲೆ ದಾಳಿ ಮಾಡಲಾಯಿತೆಂದು ವಿವರಿಸಿದ. ಸಿವಿಲೈಜೇಷನ್ ಅಂಡ್ ಕ್ಲೈಮೇಟ್, ಇವನ ಇನ್ನೊಂದು ಕೃತಿ ಇದರಲ್ಲಿ ನಾಗರಿಕತೆಗಳು ಕೇವಲ ಉತ್ತೇಜಿಸುವ ಅಥವಾ ಅನುಕೂಲಕರ ಹವಾಮಾನವುಳ್ಳ ಪ್ರದೇಶಗಳಲ್ಲಿ ಅಭಿವೃದ್ಧಿ ಹೊಂದುತ್ತದೆ ಎಂದು ಪ್ರತಿಪಾದಿಸಿದ.

1920 ರಲ್ಲಿ ಪ್ರಿನ್ಸಿಪಲ್ಸ್ ಆಫ್ ಹ್ಯೂಮನ್ ಜಿಯೋಗ್ರಫಿ ಎಂಬ ಗ್ರಂಥವನ್ನು ಬರೆದ. ಈ ಗ್ರಂಥ ಕೇವಲ ಭೂಗೋಳ ವಿಜ್ಞಾನ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿ ಸೀಮಿತಗೊಳ್ಳದೆ ಇತಿಹಾಸ, ಸಮಾಜಶಾಸ್ತ್ರ, ಆರೋಗ್ಯ, ಕೃಷಿ, ಜೀವಪರಿಸ್ಥಿತಿ, ವಾಯುಗುಣಶಾಸ್ತ್ರ ಮತ್ತು ಭೂವಿಜ್ಞಾನಗಳ ಅಭ್ಯಾಸಿಗಳಿಗೂ ಪರಾಮರ್ಶನ ಗ್ರಂಥ ಎಂಬ ಖ್ಯಾತಿಗೆ ಒಳಗಾಯಿತು.

ಇವನ ಪ್ರಕಾರ ವಾಯುಗುಣ, ಮಾನವನ ಸಂಸ್ಕೃತಿ, ಅವನ ಇತರ ಜೀವನ ಕ್ರಮ ಮತ್ತು ಇತರ ಎಲ್ಲಾ ಕಾರ್ಯ ಚಟುವಟಿಕೆಗಳಿಗೂ ಕಾರಣವೆಂದು ಪ್ರತಿಪಾದಿಸಿದ. ಅಷ್ಟೇ ಅಲ್ಲದೆ ಹವಾಮಾನವು ಮಾನವನ ಶಕ್ತಿ, ಆರೋಗ್ಯ, ಆಯಸ್ಸು, ಅವನ ಮನೋಭಾವಗಳು ಹಾಗೂ ಸಾಧನೆಗಳ ಮೇಲೂ ಪ್ರಭಾವ ಬೀರುತ್ತದೆ ಎಂದು ವ್ಯಾಖ್ಯಾನಿಸಿದ. (ಬಿ.ಸಿ.)

**ಎವರೆಸ್ಟ್ ಶಿಖರ:** ಪ್ರಪಂಚದ ಅತ್ಯುನ್ನತ ಪರ್ವತಶಿಖರ (8,848 ಮೀ). ಪೂರ್ವ ನೇಪಾಲದ ಪೂರ್ವ ಹಿಮಾಲಯಗಳಲ್ಲಿ ನೇಪಾಲ–ಟಿಬೆಟುಗಳ ಎಲ್ಲೆಯಲ್ಲಿ $27^{0}59'$ ಉತ್ತರ ಅಕ್ಷಾಂಶ. $86^{0}58'$ ಪೂರ್ವ ರೇಖಾಂಶಗಳ ಸಂಧಿಸ್ಥಾನದಲ್ಲಿದೆ. ಇದನ್ನು ಮೊಟ್ಟಮೊದಲು ಗುರುತಿಸಿದ್ದು 1856ರಲ್ಲಿ, ತ್ರಿಕೋನಕಲ್ಪ ವಿಧಾನದಿಂದ. ಭಾರತದ ಸರ್ವೇಯರ್ ಜನರಲ್ ಆಗಿ ಭಾರತದ ಸರ್ವೆ ಇಲಾಖೆಗೆ ಅಪಾರ ಸೇವೆ ಸಲ್ಲಿಸಿದ್ದ ಸರ್ ಜಾರ್ಜ್ ಎವರೆಸ್ಟ್ ಎಂಬುವರ (1790–1866) ಹೆಸರನ್ನು ಈ ಶಿಖರಕ್ಕೆ ಇಡಲಾಯಿತು. ಹೆಸರಿಸಿದ್ದು 1863ರಲ್ಲಿ. ಟಿಬೆಟ್ ಭಾಷೆಯಲ್ಲಿ ಈ ಶಿಖರದ ಹೆಸರು ಚೊಮೊಲುಂಗ್ಮ, ದೇವಿ ಭೂಮಾತೆ ಎಂಬುದು ಇದರ ಅರ್ಥ. ಸಂಸ್ಕೃತದಲ್ಲಿ ಸಾಗರಮಾತೆ ಎನ್ನುವರು.

ಕಣ್ಣು ಕೋರೈಸುವ ಶ್ವೇತ ಹಿಮ, ಕೃಷ್ಣ ಶಿಲೆಯ ಒತ್ತು ಗೋಡೆಗಳು, 3347 ಮೀ ಗಳಿಗಿಂತಲೂ ಎತ್ತರವಾದ ಕಡಿದಾದ ಶಿಲಾಪ್ರಪಾತಗಳು ಈ ಶಿಖರಪೀಠವನ್ನು ಚಿತ್ತಾಕರ್ಷಕವಾಗಿ ಮಾಡಿವೆ. ಆದರೆ ಎವರೆಸ್ಟ್ ಶಿಖರ ಆ ಸಾಲಿನ ಇತರ ಶಿಖರಗಳಷ್ಟು ವೈಶಿಷ್ಟ್ಯಪೂರ್ಣವಾಗಿಲ್ಲ. ಇದೊಂದು ಮುದ್ದೆಮುದ್ದೆಯಾದ ಪಿರಮಿಡ್ಡಿನಂತಿದೆ. ಜಲಜ ಹಾಗೂ ನೈಸ್ ಶಿಲೆಯ ಪೀಠದ ಮೇಲೆ ಪರ್ಮೊ ಕಾರ್ಬಾನಿಫೆರಸ್ ಯುಗದ ಸುಣ್ಣಕಲ್ಲು ಮಿಶ್ರದ ನೈಸ್ ಹಾಗೂ ಪದರುಗಲ್ಲುಗಳಿಂದ ಶಿಖರ ಪೀಠ ನಿರ್ಮಾಣವಾಗಿದೆ. ಓಡೆಲ್ ಮತ್ತು ವೇಗರ್ ಎಂಬುವರು ಈ ಶಿಖರ ಆಂತರಿಕ ಘರ್ಷಣೆಗಳಿಂದ ಲಂಬವಾಗಿ ಮೇಲೆತ್ತಲ್ಪಟ್ಟು ಇಂದಿನ ರೂಪ ಪಡೆದಿದೆಯೆಂದು ತಿಳಿಸಿದ್ದಾರೆ. ಬೇರೆ ಕೆಲವು ವಿಜ್ಞಾನಿಗಳು ಈ ಶಿಖರ ನ್ಯಾಪೆ ರೀತಿಯಲ್ಲಿ ನಿರ್ಮಾಣವಾಗಿ ಹಿಮಸಂಚಯನಗಳಿಂದ ಬೇರೆಯಾಗಿ, ಇಂದಿನ ರೂಪ ಪಡೆದಿದೆ ಎನ್ನುವರು. ಆಂತರಿಕ ಘರ್ಷಣೆ ಇನ್ನೂ ಮುಂದುವರಿಯುತ್ತಿದ್ದು, ಪ್ರತಿವರ್ಷವೂ ಶಿಖರದ ಎತ್ತರ ಹೆಚ್ಚಾಗುತ್ತಿದೆಯೆಂದೂ ಅವರ ಅಭಿಪ್ರಾಯ. ಹಿಮರಾಶಿಯ ಸ್ತರದ ದಪ್ಪ ವಾರ್ಷಿಕವಾಗಿ (1.5 ರಿಂದ 6 ಮೀ) ವ್ಯತ್ಯಾಸವಾಗುತ್ತದೆ. ಸೆಪ್ಟೆಂಬರ್ ಮಾಹೆಯಲ್ಲಿ ಸ್ತರದ ದಪ್ಪ ಹೆಚ್ಚು ಮತ್ತು ಮೇ ಮಾಹೆಯಲ್ಲಿ ಅತಿಕಡಿಮೆ.

ಎವರೆಸ್ಟಿನ ಹಿಮನದಿಗಳು ಸಾಂಗ್ ಪೊ (ಬ್ರಹ್ಮಪುತ್ರಾ) ನದಿಯ ದಕ್ಷಿಣದಲ್ಲಿನ ಹಿಮಾಲಯದ ಆಚೆ ಪಕ್ಕದಲ್ಲಿನ ನೆತ್ತಿಯ ಕಣಿವೆಗಳ (ಘಾಟಿ) ಮೇಲೆಲ್ಲ ಹರಡಿ ಹೋಗಿದ್ದುವೆಂದು ನಂಬಲಾಗಿದೆ. ಈಗಿರುವ ಹಿಮನದಿಗಳಲ್ಲಿ ರಂಗ್‌ಬಕ್ ಮುಖ್ಯವಾದುದು. ಇದು ಎವರೆಸ್ಟಿನಿಂದ ಉತ್ತರದ ಕಡೆಗೆ ಹರಿಯುತ್ತದೆ. 19 ಕಿಮೀ ಉದ್ದವಾಗಿದ್ದು, 6673 ಮೀ ಎತ್ತರದಿಂದ 5005 ಮೀ ತಗ್ಗಿಗೆ ಹರಿಯುವ ಇದು ಪರ್ವತದ ಅಕ್ಷರೇಖೆಗೆ ಸರಿಯಾಗಿ ಅಡ್ಡಹಾಯುತ್ತದೆ.

ಶಿಖರದ ಸುತ್ತಮುತ್ತಣ ಪ್ರದೇಶದಲ್ಲಿ 4550 ಮೀ ವರೆಗೆ ಅತ್ಯಂತ ಕಡಿಮೆ ಪ್ರಮಾಣದಲ್ಲಿನ ವ್ಯವಸಾಯ, ಪಶುಪಾಲನೆ ಸಾಧ್ಯ. ವರ್ಷದಲ್ಲಿ ಹೆಚ್ಚು ಕಾಲ ಹಿಮಾಚ್ಛಾದಿತವಾದ ಈ ಪ್ರದೇಶದಲ್ಲಿ ಜನಜೀವನ ಬಲು ಕಷ್ಟಕರವಾದುದು. ಸದಾ ಹಿಮದಿಂದ ತುಂಬಿರುವ ಈ ಪರ್ವತ ಶಿಖರದ ಮೂಲ ಶಿಲೆ ಅಥವಾ ಭೂಭಾಗವನ್ನು ಕಾಣಲಾಗುವುದಿಲ್ಲ. ಇಲ್ಲಿನ ಜನರ ಆಹಾರ ಟ್ಸಂಬ ಎನ್ನುವ ಬಾರ್ಲಿ ಗಂಜಿ, ಹುಳಿ ಹತ್ತಿಸಿದ ಬೀರ್, ಕಮಟು ವಾಸನೆಯ ಬೆಣ್ಣೆ ಮತ್ತು ಉಪ್ಪು ಮಿಶ್ರಣದ ಟೀ. ಪ್ರಕೃತಿ ವಿಕೋಪ ಇಲ್ಲಿ ಸರ್ವೇ ಸಾಮಾನ್ಯ. ಸಸ್ಯ ಹಾಗೂ ಪ್ರಾಣಿ ಸಮೂಹ ವಿರಳ ಸಸ್ಯ ವರ್ಗ 5157 ಮೀವರೆಗೆ ಮಾತ್ರ ಕಂಡುಬರುತ್ತದೆ, ಅಲ್ಲಿಂದಾಚೆಗೆ ಇಲ್ಲ. ಮಿಡತೆಗಳು 5460 ಮೀವರೆಗೂ ನೊಣಗಳು 6643 ಮೀವರೆಗೂ ಕಂಡುಬರುತ್ತವೆ. ಎವರೆಸ್ಟ್ ಪರ್ವತಾರೋಹಿಗಳನ್ನು ಅನುಸರಿಸುತ್ತ ಕೆಂಪು ಕಾಲಿನ ಕಾಗೆಗಳು 8190 ಮೀವರೆಗೂ ಹೋಗಬಲ್ಲವು. ಅಲ್ಲಿಂದಾಚೆ ಎಲ್ಲವೂ ಹಿಮಾಚ್ಛಾದಿತ. (ಕೆ.ಆರ್.ಆರ್.)

**ಎಸ್ಕಿಮೋ:** ಪೂರ್ವದಲ್ಲಿ ಗ್ರೀನ್‌ಲೆಂಡ್ ಮತ್ತು ಲ್ಯಾಬ್ರಡಾರ್‌ಗಳಿಂದ ಹಿಡಿದು ಪಶ್ಚಿಮದಲ್ಲಿ ಬೇರಿಂಗ್ ಸಮುದ್ರದವರೆಗೂ ಬೇರಿಂಗ್ ಜಲಸಂಧಿಯ ಸಮೀಪದ ಸೈಬೀರಿಯನ್ ಪ್ರದೇಶದಲ್ಲೂ ಇರುವ 9660 ಕಿಮೀ ಉತ್ತರ ಕರಾವಳಿಯುದ್ದಕ್ಕೂ ವಾಸಿಸುವ ಜನ. ಹಡ್‌ಸನ್ ಕೊಲ್ಲಿ ಮತ್ತು ದಕ್ಷಿಣ ಅಲಾಸ್ಕದ ಮೂಲನಿವಾಸಿಗಳಾದ ಇವರು ಕಾಲಕ್ರಮದಲ್ಲಿ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ಹಬ್ಬಿದರು. ಪ್ರಪಂಚ ಜನಾಂಗಗಳ ಇತಿಹಾಸದಲ್ಲಿ ವಿಶಿಷ್ಟಸ್ಥಾನ ಪಡೆದಿರುವ ಈ ಜನರ ಸಂಸ್ಕೃತಿ, ಭಾಷೆ ಮತ್ತು ಭೌತಲಕ್ಷಣಗಳು ಇತ್ತೀಚಿನವರೆಗೂ ಈ ವಿಸ್ತಾರ ಪ್ರದೇಶದ ಉದ್ದಕ್ಕೂ ಒಂದೇ ರೀತಿಯಾಗಿದ್ದವು. ಇಷ್ಟೊಂದು ವಿಸ್ತಾರವಾದ ಭೂಪ್ರದೇಶವನ್ನು ಇವರು ಆವರಿಸಿಕೊಂಡಿದ್ದರೂ ಇವರ ಸಂಖ್ಯೆ ಅರುವತ್ತು ಸಾವಿರವನ್ನೂ ಮೀರಿಲ್ಲದಿರುವುದು ಆಶ್ಚರ್ಯಕರ. ಯಾವ ಕಾಲದಲ್ಲೂ ಇವರ ಸಂಖ್ಯೆ ಇದಕ್ಕಿಂತ ಹೆಚ್ಚಿರಲಿಲ್ಲವೆಂದು ಹೇಳಲಾಗಿದೆ. ಐರೋಪ್ಯರಿಂದ ಬಳುವಳಿಯಾಗಿ ಬಂದ ಸಿಡುಬು, ದಡಾರ, ಇನ್ ಫ್ಲುಯೆಂಜಗಳಿಂದ ಜನ ಒಟ್ಟೊಟ್ಟಿಗೆ ಸತ್ತರೂ ಹೀಗೆ ತೆರವಾದ ಜನಸಂಖ್ಯೆ ಮತ್ತೆ ಮತ್ತೆ ಕೂಡಿಕೊಂಡಿದೆ. ಈಚೆಗೆ ಇದು ಶೀಘ್ರವಾಗಿ ಬೆಳೆಯುತ್ತಿದೆ.

ಎಸ್ಕಿಮೋ ಭಾಷೆಯಲ್ಲಿ ಅಮೆರಿಕನ್ ಎಸ್ಕಿಮೋಗಳಿಗೆ ಇನ್ನುಯಿಟ್‌ಗಳೆಂದೂ ಏಷ್ಯನ್ ಎಸ್ಕಿಮೋಗಳಿಗೆ ಯುಯಿಟ್‌ಗಳೆಂದೂ ಹೆಸರು. ಅಲಾಸ್ಕದ ನೈಋತ್ಯಕ್ಕಿರುವ ಅಲ್ಯೂಷನ್ ದ್ವೀಪಗಳಲ್ಲಿ ವಾಸಿಸುವ ಜನ ಆಲ್ಯೂಷನರು. ಇವರನ್ನು ಬೇರೆ ಜನಾಂಗದವರೆಂದು

ಪರಿಗಣಿಸಲಾಗಿದೆ. ಇನ್ಯುಯಿಟ್ ಅಥವಾ ಯುಯಿಟ್ ಎಂದರೆ ಮನುಷ್ಯ ಎಂದು ಅರ್ಥ. ಎಸ್ಕಿಮೋ ಎಂದರೆ ಹಸಿಮಾಂಸ ಭಕ್ಷಕ ಎಂಬರ್ಥ ಬರುವುದಂತೆ. ಈ ಹೆಸರಿನಿಂದ ಇವರನ್ನು ಕೆನಡದ ಆಲ್ಗೋಂಕ್ವಿನ್ ಇಂಡಿಯನರು ಕರೆಯುತ್ತಿದ್ದರಂತೆ. ಈ ಹೆಸರನ್ನು ಕ್ರೈಸ್ತಪಾದ್ರಿ ಬೇರ್ಡ್ 17ನೆಯ ಶತಮಾನದಲ್ಲಿ ಬಳಕೆಗೆ ತಂದ.

ಎಸ್ಕಿಮೋ ಕುಟುಂಬ

ಎಸ್ಕಿಮೋ ಜನರ ಶರೀರ ಲಕ್ಷಣಗಳಲ್ಲಿ ಏಕರೂಪತೆ ಕಂಡುಬರುವುದಿಲ್ಲ. ಲ್ಯಾಬ್ರಡಾರ್ ಮತ್ತು ಗ್ರೀನ್ಲೆಂಡಿನ ಎಸ್ಕಿಮೋಗಳಿಗಿಂತ ಅಮೆರಿಕನ್ ಉತ್ತರ ಕರಾವಳಿಯ ಮತ್ತು ಗ್ರೀನ್ಲೆಂಡಿನ ಪೂರ್ವತೀರದ ಎಸ್ಕಿಮೋಗಳೂ ಇವರಿಗಿಂತ ಅಲಾಸ್ಕದವರೂ ಹೆಚ್ಚು ಎತ್ತರವಾಗಿದ್ದಾರೆ. ಇವರ ಸರಾಸರಿ ಎತ್ತರ 155–165 ಸೆಂಮೀ. ಕಪಾಲ ಸೂಚ್ಯಂಕ (ಸಿಫಾಲಿಕ್ ಇಂಡೆಕ್ಸ್) 74 ರಿಂದ 82. ಇವರು ಇಂಡಿಯನ್ ಜನಾಂಗದವರಿಗಿಂತ ಭಿನ್ನ. ಇವರಲ್ಲಿ ಮಂಗೋಲಾಯಿಡ್ ಲಕ್ಷಣಗಳೇ ಹೆಚ್ಚಾಗಿವೆ. ಅವರಂತೆ ಇವರ ಕೈ ಪಾದಗಳೂ ಬಹಳ ಸಣ್ಣ. ಇವರ ಮುಂಭಾಗದ ಹಲ್ಲುಗಳೂ ಎಲೆಗುದ್ದಲಿಯ ಆಕಾರದಲ್ಲಿರುತ್ತವೆ. ಹಳದಿ ಬಣ್ಣದ ಚರ್ಮ, ಅಗಲವಾದ ಮುಖ, ಕಿರಿದಾದರೂ ಎತ್ತರವಾದ ಮೂಗು, ದಪ್ಪನೆಯ ತುಟಿ, ನೇರವಾದ ಕಪ್ಪು ಕೂದಲು, ಕುರುಚಲು ಗಡ್ಡ–ಇವು ಎಸ್ಕಿಮೋಗಳ ಇತರ ಶಾರೀರಿಕ ಲಕ್ಷಣಗಳು. ಇವರ ಜೀವಿತಾವಧಿ ಕಡಿಮೆ. ಅರುವತ್ತು ವರ್ಷಕ್ಕೂ ಮೇಲ್ಪಟ್ಟ ಜೀವಿಸುವುದು ಬಲು ವಿರಳ.

ಆಚಾರ ವ್ಯವಹಾರ ಮತ್ತು ಭಾಷೆಗಳ ಆಧಾರದ ಮೇಲೆ ಇವರನ್ನು ಅಲಾಸ್ಕ, ಸೈಬೀರಿಯ, ವಿಕ್ಟೋರಿಯ ಮತ್ತು ಕಾರೊನೇಷನ್ ಖಾರಿಯ ಪ್ರದೇಶ, ಬೂತಿಯ ಫೀಲಿಕ್ಸ್ ಪರ್ಯಾಯದ್ವೀಪ, ಮೆಕೆಂಜಿ ನದಿ ಹಾಗೂ ಹರ್ಷಲ್ ದ್ವೀಪದ ಪ್ರದೇಶ, ಗ್ರೀನ್ಲೆಂಡ್, ಲ್ಯಾಬ್ರಡಾರ್, ಮೆಲ್‌ವಿಲ್ ಪರ್ಯಾಯದ್ವೀಪ ಮತ್ತು ಸೌಥಾಂಪ್ಟನ್ ಎಸ್ಕಿಮೋಗಳೆಂದು ಒಂಬತ್ತು ಬಗೆಯಾಗಿ ವಿಂಗಡಿಸಬಹುದು. ಈ ಒಂದೊಂದು ವಿಭಾಗದಲ್ಲಿಯೂ ಬೇರೆ ಬೇರೆ ಕುಲಸಂಬಂಧವಾದ ಅನೇಕ ಪಂಗಡಗಳಿವೆ.

ಭೌಗೋಳಿಕ ಅಂಶಗಳು ಮಾನವನ ಜನಜೀವನವನ್ನು ಹೇಗೆ ರೂಪಿಸುತ್ತವೆ ಎಂಬುದಕ್ಕೆ ಎಸ್ಕಿಮೋಗಳು ಉತ್ತಮ ನಿದರ್ಶನ. ಇವರು ವರ್ಷಕ್ಕೆ ಆರರಿಂದ ಒಂಬತ್ತು ತಿಂಗಳ ಕಾಲ ಹಿಮದ ಅಡಿಯಲ್ಲಿ ಹುದುಗಿ ಮಲಗುವ, ಅಂಥ ನೆಲದ ಮೇಲೆ ವಾಸಿಸುವ ಛಲಗಾರರು, ಕುಶಲಮತಿಗಳು. ಇಲ್ಲಿನ ಪರಿಸರಕ್ಕೆ ತಕ್ಕಂತೆ ಇವರು ವಸತಿಸೌಕರ್ಯ, ಆಹಾರ ಸಂಪಾದನೆಯ ವಿಧಾನ ಮುಂತಾದವನ್ನು ಕಲ್ಪಿಸಿಕೊಳ್ಳುವುದು ಅನಿವಾರ್ಯ. ಉತ್ತರ ಧ್ರುವ ಪ್ರದೇಶದಲ್ಲಿ ಜೀವಿಸುವ ಸೀಲ್, ಮೀನು ಮುಂತಾದವು ಇವರ ಮುಖ್ಯ ಆಹಾರ. ಈ ಪ್ರಾಣಿಗಳ ಬೇಟೆ ಮುಖ್ಯ ಕಸಬು. ಎರಡು ಹಲಗೆಗಳನ್ನು ಸೇರಿಸಿ ರಚಿಸಿದ ಕೈಯಾಕ್ ಎಂಬ ದೋಣಿಯಲ್ಲಿ ಕುಳಿತು ಇವರು ಜಲಚರಗಳನ್ನು ಹಿಡಿಯುತ್ತಾರೆ. ಸೀಲ್ ಇಲ್ಲಿನ ಹಿಮವಾಸಿಪ್ರಾಣಿ. ಇವರು ಇದರ ಬೇಟೆಯಾಡುವರು. ಚಳಿಗಾಲದಲ್ಲಿ ಹತ್ತಾರು ಸಂಸಾರಗಳ ಜನ ಒಂದೆಡೆ ಸೇರಿ ಬೇಟೆಯಾಡುವುದೂ ವಸಂತ ಋತುವಿನಲ್ಲಿ ಪ್ರಾಣಿಗಳನ್ನು ಹುಡುಕಿಕೊಂಡು ಹೋಗುವುದೂ ಇವರ ಅಭ್ಯಾಸ. ಉಡುಗೆ ತೊಡುಗೆಗಳಿಗೆ ಉಪಯೋಗವಾಗುವ ಕಾರಿಬೂ ಎಂಬ ಹಿಮಸಾರಂಗದ ಚರ್ಮಕ್ಕಾಗಿ ಬೇಸಗೆಯಲ್ಲಿ ಅದನ್ನು ಹುಡುಕಿಕೊಂಡು ದೂರ ಪ್ರದೇಶಗಳವರೆಗೂ ಸಂಚಾರ ಕೈಕೊಳ್ಳುವುದುಂಟು. ಚದರಿದ್ದ ಸಂಸಾರಗಳೆಲ್ಲ ಚಳಿಗಾಲ ಬರುವುದರೊಳಗಾಗಿ ಒಂದುಗೂಡುತ್ತವೆ. ಪ್ರತಿವರ್ಷವೂ ಇವರದು ಇದೇ ಪರಿಪಾಟ. ಭೂಪ್ರದೇಶದ ಪ್ರಾಣಿಗಳನ್ನು ಬೇಟೆಯಾಡಲು ಇವರು ಉಪಯೋಗಿಸುವ ಉಪಕರಣಗಳೆಂದರೆ ಬಿಲ್ಲು, ಬಾಣ ಮತ್ತು ಚರ್ಮದ ಬಲೆ. ಬೇಟೆಯ ಕಾಲದಲ್ಲಿ ಜೊತೆಯಲ್ಲಿ ಬರುವ ನಾಯಿಗಳು ನೆಲದಲ್ಲಿ ಹೂತುಕೊಂಡ ಪ್ರಾಣಿಗಳನ್ನು ಹುಡುಕಲು ಬಹಳ ಸಹಾಯಮಾಡುತ್ತವೆ.

ಎಸ್ಕಿಮೋಗಳು ವಾಸಮಾಡುವ ಮನೆಗಳೂ ವೈಶಿಷ್ಟ್ಯಪೂರ್ಣ. ಬೇಸಗೆಯಲ್ಲಿ ಸೀಲ್ ಅಥವಾ ಜಿಂಕೆಯ ಚರ್ಮದ ಗುಡಾರಗಳಲ್ಲಿ ಇವರ ವಾಸ. ಆದರೆ ಇವರ ಚಳಿಗಾಲದ ಮನೆಗಳು ಬಗೆಬಗೆಯಾಗಿರುತ್ತವೆ. ಪಶ್ಚಿಮ ಆರ್ಕ್‌ಟಿಕ್ ಪ್ರದೇಶದಲ್ಲಿರುವ ನದಿಗಳು ತಮ್ಮ ಪ್ರವಾಹದಲ್ಲಿ ಮರದ ದಿಮ್ಮಿಗಳನ್ನು ಹೊತ್ತು ತರುವುದರಿಂದ, ಅಲ್ಲಿನ ಎಸ್ಕಿಮೋಗಳು ಅವನ್ನು ಉಪಯೋಗಿಸಿಕೊಂಡು ಮರದ ಹಲಗೆಗಳಿಂದ ಮನೆಗಳನ್ನು ಕಟ್ಟಿಕೊಂಡು ಅವುಗಳ ಚಾವಣಿಗಳ ಮೇಲೆ ಹುಲ್ಲುಬೆಳೆಸುತ್ತಾರೆ. ಮರದ ದಿಮ್ಮಿಗಳು ದೊರಕದೆ ಇರುವ ಪ್ರದೇಶದಲ್ಲಿ ಕಲ್ಲಿನಿಂದ ಮನೆಕಟ್ಟಿ ತಿಮಿಂಗಿಲದ ಮೂಳೆಗಳಿಂದ ಮೇಲ್ಛಾವಣಿ ನಿರ್ಮಿಸುತ್ತಾರೆ, ಕೆನಡದ ಎಸ್ಕಿಮೋಗಳು ಗಟ್ಟಿಯಾದ ಮಂಜಿನ ಗಡ್ಡೆಯ ತುಂಡುಗಳನ್ನು ಇಟ್ಟಿಗೆಗಳಂತೆ ಒಂದರಮೇಲೊಂದು ಇಟ್ಟು ವೃತ್ತಾಕಾರದ ಮನೆ ನಿರ್ಮಿಸುತ್ತಾರೆ. ಇದಕ್ಕೆ ಇಗ್ಲೂ ಎಂದು ಹೆಸರು. ನೆಲಕ್ಕೆ ಹಿಮಸಾರಂಗದ ಚರ್ಮ ಹಾಸುವುದರಿಂದ ಬೆಚ್ಚಗಿರುತ್ತದೆ. ಬೇಸಗೆಯಲ್ಲಿ ಮಂಜು ಕರಗಿ ಹರಿದ ಪ್ರವಾಹ ಮನೆಯೊಳಗೆ ನುಗ್ಗುವ ಮುನ್ನವೇ ಇದನ್ನು ಬಿಟ್ಟು ಚರ್ಮದ ಗುಡಾರಕ್ಕೆ ಹೊರಟು ಹೋಗುತ್ತಾರೆ. ಪ್ರಾಣಿಯ ಕೊಬ್ಬನ್ನೋ ಯಾವುದಾದರೂ ಇಂಧನದ ಕಲ್ಲನ್ನೋ ಉರಿಸಿ ದೀಪಮಾಡಿಕೊಳ್ಳಲಾಗುತ್ತದೆ. ಆಹಾರ ಬೇಯಿಸಲೂ ಇದು ಉಪಯುಕ್ತ. ಇದು ಲಭ್ಯವಿಲ್ಲದಿರುವಾಗ ಇವರು ಒಣಗಿದ ಅಥವಾ ಹಿಮದಲ್ಲಿ ಹೆಪ್ಪುಗಟ್ಟಿಸಿದ ಆಹಾರ ತಿನ್ನುತ್ತಾರೆ. ಅನಿವಾರ್ಯ ಸಂದರ್ಭಗಳಲ್ಲಿ ಹಸಿಯ ಮಾಂಸ ಭಕ್ಷಿಸುತ್ತಾರೆ.



ಇಗ್ಲೂ (ಹಿಮದ ಮನೆ)

ಸಾಮಾನ್ಯವಾಗಿ ಕ್ಯಾರಿಬೂ ಪ್ರಾಣಿಯ ತುಪ್ಪಟದಿಂದ ಹೊಲಿದು ಸಿದ್ಧಪಡಿಸಿದ ಚಲ್ಲಣ, ಮೇಲಂಗಿ, ಟೋಪಿ ಮತ್ತು ಪಾದರಕ್ಷೆ–ಇವು ಎಸ್ಕಿಮೋ ಉಡುಗೆ ತೊಡುಗೆ. ಇವು ಇವರನ್ನು ಬೆಚ್ಚಗಿಡುತ್ತವೆ. ಸ್ತ್ರೀ ಪುರುಷರಿಗೆ ಉಡುಗೆ ತೊಡುಗೆಯಲ್ಲಿ ಹೆಚ್ಚು ವ್ಯತ್ಯಾಸವೇನೂ ಕಾಣಬರುವುದಿಲ್ಲ. ಸ್ತ್ರೀಯರ ಉಡುಪನ್ನು ಪುರುಷರ ಉಡುಪಿಗಿಂತ ಸ್ವಲ್ಪ ಭಿನ್ನವಾದ ರೀತಿಯಲ್ಲಿ ಹೊಲಿಯಲಾಗಿರುತ್ತದೆ. ಆಭರಣ ಧರಿಸುವುದೂ ಅದಕ್ಕಿಂತ ಹೆಚ್ಚಾಗಿ ತಮ್ಮ ಮುಖಕ್ಕೆ ಹಚ್ಚೆ ಹುಯ್ಯಿಸಿಕೊಳ್ಳುವುದೂ ಹೆಂಗಸರಿಗೆ ಹಿಂದಿನಿಂದಲೂ ಪ್ರಿಯ.

ಎಸ್ಕಿಮೋಗಳಲ್ಲಿ ಸುವ್ಯವಸ್ಥಿತ ಸಾಮಾಜಿಕ ಪದ್ಧತಿಗಳೇನೂ ಇದ್ದಂತೆ ಕಾಣಬರುವುದಿಲ್ಲ. ಬಲಿಷ್ಠ ವ್ಯಕ್ತಿಯನ್ನು ಹಳ್ಳಿಯ ಮುಖಂಡನೆಂದು ಪರಿಗಣಿಸುತ್ತಿದ್ದರೂ ಅವನ ಮಾತಿಗೆ ಅಷ್ಟೇನೂ ಬೆಲೆಯಿರುತ್ತಿರಲಿಲ್ಲ. ಹಳ್ಳಿಯ ಭೂಮಿ ಎಲ್ಲರಿಗೂ ಸೇರಿತ್ತು. ಏಕಸ್ವಾಮ್ಯವಿರಲಿಲ್ಲ. ಯಾವನಾದರೂ ಒಬ್ಬನಿಗೆ ಒಂದು ದಿನ ಬೇಟೆ ಸಿಗದಿದ್ದರೆ ಅವನಿಗೂ ಅವನ ಸಂಸಾರಕ್ಕೂ ಆಹಾರ ಒದಗಿಸುವುದು ಇತರರ ಕರ್ತವ್ಯವಾಗಿತ್ತು. ಬೇಟೆ ಮತ್ತು ಮೀನುಗಾರಿಕೆ ಪುರುಷರ ಮುಖ್ಯ ಕೆಲಸ; ಅಡುಗೆ ಮಾಡುವುದೂ ಬಟ್ಟೆ ಹೊಲಿಯುವುದೂ ಸ್ತ್ರೀಯರ ಕರ್ತವ್ಯ. ಈ ಶ್ರಮ ವಿಭಾಗದಿಂದ ಒಬ್ಬರ ಸಹಾಯವಿಲ್ಲದೆ ಇನ್ನೊಬ್ಬರು ಬದುಕುವುದು ಕಷ್ಟವಾಗಿತ್ತು. ಆದ್ದರಿಂದ ವಿಧುರರೂ ವಿಧವೆಯರೂ ಬದುಕಲು ಮದುವೆಯಾಗಲೇಬೇಕಾಗಿತ್ತು. ಏಕಪತ್ನಿತ್ವ ಮತ್ತು ಏಕಪತಿತ್ವವೇ ಸಾಮಾನ್ಯವಾಗಿತ್ತು. ವೃದ್ಧರನ್ನೂ ಅನಾಥರನ್ನೂ ಅವರ ಬಂಧುಗಳು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಎಸ್ಕಿಮೋಗಳು ಶಾಂತಿಪ್ರಿಯರು, ವಿಧೇಯರು, ಸತ್ಯಸಂಧರು, ಕಷ್ಟಸಹಿಷ್ಣುಗಳು. ವಿರಾಮ ಕಾಲದಲ್ಲಿ ಇವರು ಸಂಗೀತ, ನೃತ್ಯ ಹಾಗೂ ಮನರಂಜನೆಯ ಆಟಗಳಲ್ಲಿ ನಿರತರಾಗುತ್ತಾರೆ.

ಈಗ ಇವರೆಲ್ಲ ಹೆಚ್ಚು ಕಡಿಮೆ ಕ್ರೈಸ್ತರಾಗಿದ್ದಾರಾದರೂ ತಮ್ಮ ಹಳೆಯ ನಂಬಿಕೆಗಳನ್ನು ಉಳಿಸಿಕೊಂಡಿದ್ದಾರೆ. ಇವು ಅಮೆರಿಕನ್ ಇಂಡಿಯನ್ ಜನರ ನಂಬಿಕೆಗಳನ್ನೆ ಹೋಲುತ್ತವೆ. ಅಲ್ಲಲ್ಲಿ ಕೆಲವು ಸ್ಥಳೀಯ ಬದಲಾವಣೆಗಳನ್ನು ಕಾಣಬಹುದು. ಜೀವ ನಿರ್ಜೀವ ವಸ್ತುಗಳಲ್ಲೆಲ್ಲ ಆತ್ಮನಿರುತ್ತಾನೆಂಬುದು ಇವರ ಮುಖ್ಯ ನಂಬಿಕೆ. ತೋರ್ನ್ಗರ್ಸುಕ್ ಶ್ರೇಷ್ಠ ದೇವತೆ. ಇವನ ಆಶ್ರಯದಲ್ಲಿ ತೋರ್ನ್ಗಾತ್ ಎಂಬ ಇತರ ಅಧಿದೇವತೆಗಳಿರುತ್ತಾರೆ. ಆಹಾರಗಳನ್ನು ಕೊಡುವ ಸ್ತ್ರೀ ದೇವತೆಯಾದ ಸೆಡ್ನ ಸಮುದ್ರದಲ್ಲಿ ವಾಸಿಸುತ್ತಾಳೆಂದು ಕೆಲವರೂ ಆಕೆಯ ಹೆಸರು ಅರ್ನರ್ಕ್ನಗ್ಸಕ್ ಎಂದು ಮತ್ತೆ ಕೆಲವರೂ ಭಾವಿಸುತ್ತಾರೆ. ಈ ದೇವತೆ ಸಮುದ್ರದಲ್ಲಿ ಅಲೆಗಳನ್ನು ಸೃಷ್ಟಿಸುತ್ತಾಳೆ. ಕುಲದ ಕಟ್ಟಳೆಗಳನ್ನು ಮುರಿದವರಿಗೆ ಬೇಟೆಯಲ್ಲಿ ಸಮುದ್ರ ಪ್ರಾಣಿಗಳು ಸಿಕ್ಕದಂತೆ ಮಾಡುವಳು. ಸಮುದ್ರ ಪ್ರಾಣಿಗಳೆಲ್ಲ ಈಕೆಯ ಕೈಬೆರಳುಗಳು. ಆದ್ದರಿಂದ ಈ ಸಮುದ್ರದೇವತೆಯ ಕೋಪಕ್ಕೆ ಯಾರೂ ಗುರಿಯಾಗದಂತೆ ನೋಡಿಕೊಳ್ಳುವುದು ಪುರೋಹಿತನ (ಅಂಗಕಾಕ್) ಕರ್ತವ್ಯ. ಎಸ್ಕಿಮೋಗಳ ಕೆಲವು

ಕುಲಗಳ ಜನ ಮನುಷ್ಯನ ದೇಹದಲ್ಲಿ ಎರಡು ಆತ್ಮಗಳಿವೆಯೆಂದು ಭಾವಿಸುತ್ತಾರೆ. ಮನುಷ್ಯನ ಮರಣಾನಂತರ ಈ ಆತ್ಮಗಳಲ್ಲೊಂದು ಆಕಾಶಕ್ಕೋ ಪಾತಾಳಕ್ಕೋ ಹೋಗಿ ಅಲ್ಲಿ ವಾಸಿಸುವ ಇತರ ಆತ್ಮಗಳನ್ನು ಸೇರುತ್ತದೆ. ಮತ್ತೊಂದು ಆತ್ಮ ದೇಹದಲ್ಲಿಯೇ ಉಳಿದಿರುತ್ತದೆ ; ಅಥವಾ ತಾತ್ಕಾಲಿಕವಾಗಿ ಇನ್ನೊಂದು ಎಳೆ ಮಗುವಿನ ಶರೀರಕ್ಕೆ ಹೋಗುತ್ತದೆ. ಕಣ್ಣಿಗೆ ಕಾಣುವ ಪ್ರತಿಯೊಂದು ವಸ್ತುವಿಗೂ ಒಬ್ಬ ದೇವತೆಯುಂಟು. ಅದರ ಸಹಾಯವಿಲ್ಲದೆ ಆ ವಸ್ತು ತಮಗೆ ದೊರೆಯಲಾರದೆಂಬುದು ಎಸ್ಕಿಮೋಗಳ ನಂಬಿಕೆ. ಆದ್ದರಿಂದ ಪ್ರತಿಯೊಂದು ದೇವತೆಯನ್ನೂ ಒಂದಲ್ಲ ಒಂದು ಬಗೆಯಿಂದ ಸಂತುಷ್ಟಿಗೊಳಿಸುವುದೇ ಎಸ್ಕಿಮೋಗಳ ಆದ್ಯ ಕರ್ತವ್ಯ. ಇದಕ್ಕಾಗಿ ಇವರು ಪುರೋಹಿತನ ನೆರವು ಪಡೆಯುವರು. ಈತನಿಗೆ ದೇವತೆಗಳೊಡನೆ ಮಾತನಾಡುವ ಶಕ್ತಿಯಿದೆಯೆಂದು ನಂಬಲಾಗುತ್ತದೆ. ಈತ ಸಾಮಾನ್ಯ ಜನಕ್ಕೆ ಅರ್ಥವಾಗದ ಎಸ್ಕಿಮೋ ಭಾಷೆಯ ಮಂತ್ರಗಳನ್ನು ಪಠಿಸಿ ದೇವತೆಗಳೊಡನೆ ಸಖ್ಯ ಏರ್ಪಡಿಸಬಲ್ಲನಂತೆ. ಆದ್ದರಿಂದ ಪುರೋಹಿತನಿಗೆ ಈ ಸಮಾಜದಲ್ಲಿ ಮುಖ್ಯ ಸ್ಥಾನವಿದೆ.

ಪಶ್ಚಿಮ ಮತ್ತು ಪೂರ್ವ ಗ್ರೀನ್ಲೆಂಡ್‌ಗಳಲ್ಲಿ ಡೆನ್ಮಾರ್ಕಿನ ಪಾದ್ರಿಗಳೂ ಲ್ಯಾಬ್ರಡಾರಿನಲ್ಲಿ ಮೊರೇವಿಯದ ಪಾದ್ರಿಗಳೂ ಅಲಾಸ್ಕದಲ್ಲಿ ರಷ್ಯನ್ ಪಾದ್ರಿಗಳೂ ಎಸ್ಕಿಮೋ ಜನರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಅವರ ಪ್ರಭಾವವು ಹೆಚ್ಚಾಗಿ ಒಳಗಾಗದ ಕಡೆಗಳಲ್ಲಿ ಎಸ್ಕಿಮೋಗಳು ತಮ್ಮ ಮೂಲ ಧರ್ಮವನ್ನು ಈಗಲೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ. (ಎ.ವಿ.ಎನ್.)

**ಎಸ್ಟೋನಿಯ:** ಸೋವಿಯತ್ ಒಕ್ಕೂಟದ ಗಣರಾಜ್ಯಗಳಲ್ಲೊಂದಾಗಿತ್ತು. 1991 ರಲ್ಲಿ ಎಸ್ಟೋನಿಯನ್ ಸೋವಿಯತ್ ಸಮಾಜವಾದೀ ಗಣರಾಜ್ಯದಿಂದ ಬೇರ್ಪಟ್ಟು ಸ್ವತಂತ್ರ ರಾಷ್ಟ್ರವಾಯಿತು. $57^0 50'$ ಉತ್ತರ ಅಕ್ಷಾಂಶದಿಂದ $59^0 75'$ ಉತ್ತರ ಅಕ್ಷಾಂಶದ ವರೆಗೂ $22^0$ ಪೂರ್ವ ರೇಖಾಂಶದಿಂದ $28^0 10'$ ಪೂರ್ವ ರೇಖಾಂಶದವರೆಗೂ ಹರಡಿದೆ. ಉತ್ತರದಲ್ಲಿ ಫಿನ್ಲೆಂಡ್ ಖಾರಿ, ಪಶ್ಚಿಮದಲ್ಲಿ ಬಾಲ್ಟಿಕ್ ಸಮುದ್ರ, ಪೂರ್ವದಲ್ಲಿ ಪೈಪೂಸ್ ಸರೋವರ, ಪ್ಸ್ಕಾಫ್ ಮತ್ತು ರಷ್ಯನ್ ಸೋವಿಯತ್ ಗಣರಾಜ್ಯ, ದಕ್ಷಿಣದಲ್ಲಿ ಲ್ಯಾಟ್ವಿಯ ಇವುಗಳ ನಡುವೆ ಇರುವ ಈ ರಾಜ್ಯ ಬಾಲ್ಟಿಕ್ ಪ್ರದೇಶದ ಮೂರು ಗಣರಾಜ್ಯಗಳ ಪೈಕಿ ಅತ್ಯಂತ ಚಿಕ್ಕದು (ಉಳಿದೆರಡು ಲಿಥುವೇನಿಯ ಮತ್ತು ಲ್ಯಾಟ್ವಿಯ.) ಪ್ರಧಾನ ಭೂಭಾಗದೊಂದಿಗೆ ಪಶ್ಚಿಮದಲ್ಲಿನ 818 ದ್ವೀಪಗಳೂ ಈ ದೇಶಕ್ಕೆ ಸೇರಿವೆ. ಇವುಗಳಲ್ಲಿ ಮುಖ್ಯವಾದವು: ಸೆರ‍್ರೆಮ (ಅಸೆಲ್) (163 ಚ.ಕಿಮೀ) ಹೀಯೂಮ (ಡೇಗೋ) (600 ಚ.ಕಿಮೀ). ರಾಜ್ಯದ ವಿಸ್ತೀರ್ಣ 29,555 ಚ.ಕಿಮೀ ಗಳಿದ್ದುದು 1946ರ ಅನಂತರ 45,100 ಚ.ಕಿಮೀ ಆಯಿತು. ವಿಸ್ತೀರ್ಣದ ದೃಷ್ಟಿಯಿಂದ ಈ ರಾಜ್ಯದ ಸಮುದ್ರ ತೀರ ಅಧಿಕ ಉದ್ದವೆಂದೇ ಹೇಳಬೇಕು.




ಟ್ಯಾಲಿನ್ ಈ ದೇಶದ ರಾಜಧಾನಿ. ಈ ರಾಜ್ಯದ ಉತ್ತರಾರ್ಧದಲ್ಲೂ ದ್ವೀಪಗಳಲ್ಲೂ ಸಿಲ್ಯೂರಿಯನ್ ಕಾಲದ ಡೊಲೊಮೈಟ್ ಮತ್ತು ಸುಣ್ಣಕಲ್ಲು ಶಿಲೆಗಳೂ ದಕ್ಷಿಣದಲ್ಲಿ ಡಿವೊನಿಯನ್ ಕಾಲದ ಮರಳುಕಲ್ಲುಗಳೂ ಇವೆ. ದೇಶದಾದ್ಯಂತ ಹೇರಳವಾಗಿ ಹಿಮಚಲನೆಗಳಿಂದ ಸಂಭವಿಸಿದ ಸಂಚಯನಗಳುಂಟು. ಇವು ದಕ್ಷಿಣದಲ್ಲಿ ಹೆಚ್ಚು ಒತ್ತಾಗಿವೆ. ಹಿಮಚಲನೆಯಿಂದಾದ ಸರೋವರಗಳು ಸು. 1,500 ಕ್ಕೂ ಅಧಿಕವಾಗಿವೆ. ಮಧ್ಯ ಮತ್ತು ದಕ್ಷಿಣಗಳಲ್ಲಿ ಇವನ್ನು ಹೆಚ್ಚಾಗಿ ಕಾಣಬಹುದು. ಇವುಗಳಲ್ಲಿ ವೋರ್ಟ್ಸ್–ಜಾರು ಅತ್ಯಂತ ದೊಡ್ಡದು.

ಮೇಲ್ಮೈ ಲಕ್ಷಣ : ಇದು ಉತ್ತರ ಯುರೋಪಿನ ಮಹಾ ಮೈದಾನದ ಒಂದು ಭಾಗ. ಇದರ ಬಹು ಭಾಗ ಸಮುದ್ರಮಟ್ಟದಿಂದ 90 ಮೀಗೂ ಕಡಿಮೆ ಎತ್ತರದಲ್ಲಿದೆ. ಆಗ್ನೇಯದಲ್ಲಿ ಅಲ್ಲಲ್ಲಿ ಸ್ವಲ್ಪ ಎತ್ತರದ ಪ್ರದೇಶಗಳನ್ನು ಕಾಣಬಹುದು. ಮುನಮಗಿ (306 ಮೀ.) ಎಸ್ಟೋನಿಯದ ಅತ್ಯಂತ ಎತ್ತರದ ಶಿಖರ. ಉತ್ತರ ಮತ್ತು ಪೂರ್ವ ಪ್ರದೇಶಗಳು ತಗ್ಗು ಬಯಲುಗಳು. ಇವು ಸಮುದ್ರ ಮಟ್ಟದಿಂದ 24 – 44 ಮೀ ಎತ್ತರದಲ್ಲಿವೆ.

ಈ ದೇಶದ ಎಲ್ಲ ನದಿಗಳೂ ಚಿಕ್ಕವು. ಇವುಗಳಲ್ಲಿ ಪ್ರವಾಹ ಇದ್ದೇ ಇರುತ್ತದೆ. ಇವು ಮೂರು ಬಗೆ : ಫಿನ್ಲೆಂಡ್ ಖಾರಿ ಸೇರುವ ನದಿಗಳು, ಪಿರಿಟ, ನಾರ್ವ ಇವು ಜಲಪಾತಗಳಿಂದ ಕೂಡಿವೆ. ರೀಗಾ ಖಾರಿ ಸೇರುವ ನದಿಗಳು : ಪಾರ್ನು, ಕಸರಿ. ಪೈಪೂಸ್ ಸರೋವರವನ್ನು ಸೇರುವ ನದಿಗಳು : ಎಮಜೋಗಿ, ಒಹಂಡು.

ಎಸ್ಟೋನಿಯದ ಸಮುದ್ರತೀರಗಳಲ್ಲಿ ಸಾಗರಿಕ ವಾಯುಗುಣವೂ ಒಳಭಾಗಗಳಲ್ಲಿ ಖಂಡಾಂತರ ವಾಯುಗುಣವೂ ಕಂಡುಬರುತ್ತವೆ. ಸರಾಸರಿ ಉಷ್ಣತೆ $17^0$ ಸೆ. (ಜುಲೈ) ಮತ್ತು $-5^0$ ಸೆ. (ಫೆಬ್ರುವರಿ). ಎಸ್ಟೋನಿಯ ಸಣ್ಣ ದೇಶವಾದರೂ ಉಷ್ಣತೆಯ ವ್ಯತ್ಯಾಸಗಳು ಅಧಿಕ. ವಾಯವ್ಯ ಮಾರುತಗಳಿಂದ ಇಲ್ಲಿ ಮಳೆಯಾಗುತ್ತದೆ. ಬೇಸಗೆಯಲ್ಲಿ ಪರಿಸರಣ ಮಳೆ ಸಾಮಾನ್ಯ. ಮಳೆಯ ವಾರ್ಷಿಕ ಸರಾಸರಿ 60 ಸೆಂಮೀ. ಹಿಮ ಬೀಳುವುದು ಹೆಚ್ಚು. ಚಳಿಗಾಲದಲ್ಲಿ ಒಳಭಾಗಗಳಲ್ಲಿ 25 ಸೆಂಮೀ ದಪ್ಪನಾಗಿ ಹಿಮ ಬೀಳುವುದುಂಟು. ಉತ್ತರ ತೀರದಲ್ಲಿ ವರ್ಷಕ್ಕೆ 130–145 ದಿನಗಳ ಕಾಲ ಹಿಮ ಕವಿದಿರುತ್ತದೆ. ಪಶ್ಚಿಮದಲ್ಲಿ ಈ ಅವಧಿ 50–70 ದಿನ.

ಒಂದನೆಯ ಮಹಾಯುದ್ಧಕ್ಕೆ ಮುಂಚೆ ದೇಶದ 1/4 ಭಾಗ ಕಾಡುಗಳಿಂದ ಕೂಡಿತ್ತು. ಇವುಗಳಲ್ಲಿ ಶೇ. 70 ಎಲೆ ಮೊನಚಿನವು. ಸ್ಪ್ರೂಸ್, ಪೈನ್ ಮರಗಳು ಮುಖ್ಯವಾದವು. ಭೂ ಸುಧಾರಣೆಯ ಪರಿಣಾಮವಾಗಿ ಕಾಡುಗಳನ್ನು ಬಹುತೇಕ ಕಡಿಯಲಾಗಿದೆ. ಈಗ ಅಲ್ಲಲ್ಲಿ ಓಕ್ ಮರದ ಕಾಡುಗಳಿವೆ.

ವ್ಯವಸಾಯ, ಕೈಗಾರಿಕೆ : ಎಸ್ಟೋನಿಯದಲ್ಲೂ ಡೆನ್ಮಾರ್ಕಿನಂತೆ ಮಿಶ್ರವ್ಯವಸಾಯ ಸಾಮಾನ್ಯ. 1919ರಲ್ಲಿ ಆದ ಸುಧಾರಣೆಯ ಪರಿಣಾಮವಾಗಿ ಭೂಮಿ ಸಾಮಾನ್ಯ ಜನತೆಯ ಕೈಸೇರಿತು. 1939ರ ಹೊತ್ತಿಗೆ ಸರಾಸರಿ 23 ಹೆ. ವಿಸ್ತಾರದ 1,39,984 ಹಿಡುವಳಿಗಳಿದ್ದುವು. ಅನಂತರ ಇವುಗಳ ಸಂಖ್ಯೆ 88,000ಕ್ಕೆ ಇಳಿಯಿತು. 1949ರಿಂದೀಚೆಗೆ ಸಾಮೂಹಿಕ ವ್ಯವಸಾಯ ರೂಢಿಗೆ ಬಂದು, ಕೃಷಿಯ ನೆಲವನ್ನೆಲ್ಲ ಕಾಲ್‌ಖಾಜ್‌ಗಳನ್ನಾಗಿ (ಸಾಮೂಹಿಕ ಭೂಮಿ) ವಿಂಗಡಿಸಲಾಯಿತು. 1935ರಲ್ಲಿದ್ದ ಇವುಗಳ ಸಂಖ್ಯೆ 1,137. ರೈ, ಗೋದಿ, ತೋಕೆಗೋದಿ, ಆಲೂಗೆಡ್ಡೆ, ಅಗಸೆ ಮುಖ್ಯ ಬೆಳೆಗಳು. ಹಿಂದೆ ಈ ರಾಜ್ಯ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಪಶುಪಾಲನೆಯೂ ಸಾಮಾನ್ಯ. ಮಹಾಯುದ್ಧದ ಸಮಯದಲ್ಲಿ ಈ ಕಸಬಿಗೆ ಧಕ್ಕೆ ತಗುಲಿತಾದರೂ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ (1951–55) ಇದು ಮತ್ತೆ ಮೊದಲಿನ ಸ್ಥಾನ ಪಡೆಯಿತು. ದನಕರು, ಹಂದಿ, ಕುರಿ, ಕುದುರೆ, ಕೋಳಿಗಳು ಮುಖ್ಯ ಸಾಕು ಪ್ರಾಣಿಗಳು. ಬೆಣ್ಣೆ, ಗಿಣ್ಣು, ಘನೀಕರಿಸಿದ ಹಾಲು ಮುಂತಾದವುಗಳ ವಾರ್ಷಿಕ ಉತ್ಪನ್ನ 10 ಲಕ್ಷ ಟನ್ನುಗಳಿಗಿಂತಲೂ ಹೆಚ್ಚು. ಸಮುದ್ರತೀರದಲ್ಲಿ ಮೀನುಗಾರಿಕೆ ಒಂದು ಮುಖ್ಯ ಕಸಬು. ಇದನ್ನು ಆಧುನಿಕಗೊಳಿಸಲಾಗಿದೆ. ಕೆಲವು ಕಡೆ ತುಪ್ಪುಳು ಚರ್ಮ ತಯಾರಿಕೆಯೂ ಉಂಟು.

ಕೈಗಾರಿಕೆಗಳಿಗೆ ಅಗತ್ಯವಾದ ಶಕ್ತಿ ಸಾಧನೆಗಳು ಇಲ್ಲಿ ಹೇರಳ. ನ್ಯಾಪ್ತ, ಪೆಟ್ರೋಲಿಯಂ ಮೊದಲಾದ ಜಲಜನಕ ಇಂಗಾಲ ಸಂಯುಕ್ತ ಪದರಗಲ್ಲುಗಳು ಉತ್ತರ ಹಾಗೂ ಪೂರ್ವಭಾಗಗಳಲ್ಲಿ ಹರಡಿವೆ. ಈ ಜೇಡಿಪದರಗಲ್ಲುಗಳಿಂದ ಪೆಟ್ರೋಲಿಯಂ, ಮೃದುಚಾಲಕ ಎಣ್ಣೆಗಳು, ರಾಳ ಮತ್ತು ಕಲ್ಲರಗುಗಳನ್ನು ಹೊರತೆಗೆಯಲಾಗುತ್ತದೆ. ಕೋಹ್‌ಟ್ಲಾ ಜಾರ್ವೆ ಮುಖ್ಯ ತೈಲ ಶೋಧನಕೇಂದ್ರ. ಅಲ್ಲಿಂದ 160 ಕಿಮೀ ದೂರದಲ್ಲಿರುವ ಲೆನಿನ್‌ಗ್ರಾಡಿಗೆ 1948ರಲ್ಲೂ ಟ್ಯಾಲಿನಿಗೆ 1953ರಲ್ಲೂ ಎಣ್ಣೆ ಸಾಗಿಸಲು ಕೊಳವೆ ಹಾಕಲಾಯಿತು. ಜಲವಿದ್ಯುತ್ತಿನ ಉತ್ಪಾದನೆಯೂ ಈಚೆಗೆ ಅಧಿಕಗೊಂಡಿದೆ. (1949ರಲ್ಲಿ 25 ಕೋಟಿ ಕಿವ್ಯಾ), ಎಲ್ಲಮಾ, ಪಾರ್ನ್ಯ ಇವು ಉಷ್ಣ ವಿದ್ಯುತ್ ತಯಾರಿಕೆಯ ಕೇಂದ್ರಗಳು. ಟ್ಯಾಲಿನ್ ರಂಜಕ ಮತ್ತು ಲವಣಗಳ ಕೈಗಾರಿಕಾ ಕೇಂದ್ರ. ಹತ್ತಿ ಜವಳಿ ಈ ದೇಶದ ಮುಖ್ಯ ಕೈಗಾರಿಕೆ. ಇದಕ್ಕೆ ನಾರ್ವ ಮುಖ್ಯ ಕೇಂದ್ರ. ಇದಲ್ಲದೆ ರೇಯಾನ್, ಅಗಸೆ, ಉಣ್ಣೆ ಮತ್ತು ಸೆಣಬಿನ ಗಿರಣಿಗಳೂ ಇಲ್ಲುಂಟು. ಉತ್ತರದಲ್ಲಿ ಮರ ಕೊಯ್ಯುವ ಕೈಗಾರಿಕೆ ಮುಖ್ಯ. ಇದರೊಂದಿಗೆ ಅಲ್ಲಲ್ಲಿ ಸಿಮೆಂಟ್, ಗಾಜು, ಜಿಪ್ಸಂ ಕಾರ್ಖಾನೆಗಳೂ ಬೆಳೆದಿವೆ.

ಎಸ್ಟೋನಿಯ ಸಣ್ಣ ದೇಶವಾದರೂ ಇಲ್ಲಿನ ಸಂಚಾರ ಮಾರ್ಗ ಚೆನ್ನಾಗಿ ಬೆಳೆದಿದೆ. (ರೈಲುಮಾರ್ಗ 1,702 ಕಿಮೀ, ರಸ್ತೆ 21,500 ಕಿಮೀ) ಪಲ್‌ಡಿಸ್ಕಿ, ಪಾರ್ನು ಮುಖ್ಯ ಬಂದರುಗಳು.

ಎಸ್ಟೋನಿಯದ ಜನಸಂಖ್ಯೆ 13,32,900 (2005). ಶೇ. 56 ಮಂದಿ ಪಟ್ಟಣಿಗರು. ಇವರ ಪೈಕಿ ಅಧಿಕ ಸಂಖ್ಯೆಯ ಜನ ಉತ್ತರ ತೀರದ ಪಟ್ಟಣಗಳಾದ ಟ್ಯಾಲಿನ್ (2,81,714) ಮತ್ತು ಟಾರ್ಟುಗಳಲ್ಲಿ (74,263) ವಾಸಿಸುತ್ತಾರೆ. ಎಸ್ಟೋನಿಯದ ಜನರ ಪೈಕಿ ಶೇ. 73 ರಸ್ಟು ಮಂದಿ ಫಿನ್ನರ ಸಂಬಂಧಿಗಳು. ಉಳಿದವರಲ್ಲಿ ರಷ್ಯನರು (ಶೇ. 22) ಮುಖ್ಯ. ಫಿನ್, ಉಕ್ರೇನಿಯನ್, ಬೆಲೊರಷ್ಯನ್ ಜ್ಯೂ ಜನ ಇತರರು. ಈ ದೇಶದ ವ್ಯಾಪಾರ ಹೆಚ್ಚಾಗಿ ರಷ್ಯದೊಂದಿಗೆ ನಡೆಯುತ್ತಿತ್ತು. 1919–39ರ ಅವಧಿಯಲ್ಲಿ ಗ್ರೇಟ್ ಬ್ರಿಟನ್ ಮತ್ತು ಜರ್ಮನಿಗಳೊಂದಿಗೆ ವ್ಯಾಪಾರ ಬೆಳೆಯಿತು. ಎರಡನೆಯ ಮಹಾಯುದ್ಧದ ಅನಂತರ ಮತ್ತೆ ರಷ್ಯದೊಂದಿಗೆ ವ್ಯಾಪಾರ ಸಂಬಂಧ ಅಧಿಕವಾಗಿದೆ. ಇಲ್ಲಿನ ಹಣ ಕ್ರೂನ್. (ಕೆ.ಆರ್.ಆರ್.)

# ಏ

**ಏಕದಿಕ್ಛೇದಕ ರೇಖೆ :** ಭೂಪಟದ ಮೇಲಿನ ಎಲ್ಲಾ ರೇಖಾಂಶಗಳನ್ನು ಒಂದೇ ಕೋನದಲ್ಲಿ ಛೇದಿಸುವ ಕಾಲ್ಪನಿಕ ರೇಖೆ (ರಂಬ್ ಲೈನ್ ಅಥವಾ ಲ್ಯಾಕ್ಸೊಡ್ರೋಮ್). ಇದನ್ನೇ ಸದಿಶಾನೌಕಾಪಥವೆಂದೂ ಸಹ ಕರೆಯುವರು. ಈ ರೇಖೆಯನ್ನು ಅನುಸರಿಸಿ ಚಲಿಸುವ ಹಡಗುಗಳು ಒಂದೇ ಕೋನದಲ್ಲಿ ಚಲಿಸುತ್ತವೆ. ಉದಾಹರಣೆಗೆ ಹಡಗು ಆಗ್ನೇಯ ದಿಕ್ಕಿನಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ನೇರವಾಗಿ ಚಲಿಸಿದಾಗ ಅದು ತನ್ನ ಪ್ರಯಾಣದುದ್ದಕ್ಕೂ ಆಗ್ನೇಯ ದಿಕ್ಕಿನಲ್ಲೇ ಚಲಿಸುತ್ತಿರುತ್ತದೆ. ಈ ಎರಡು ಪ್ರದೇಶಗಳು ಭೂ ಮಧ್ಯ ರೇಖೆಯ ಹತ್ತಿರವಿದ್ದರೆ, ಏಕದಿಕ್ಛೇದಕ ರೇಖೆ ಮತ್ತು ಮಹಾವೃತ್ತ ರೇಖೆಯ ನಡುವಣ ವ್ಯತ್ಯಾಸ ಅತ್ಯಲ್ಪವಾಗಿರುತ್ತದೆ. ಆದರೆ ಉನ್ನತ ಅಕ್ಷಾಂಶಗಳಲ್ಲಿ ಒಂದು ಪ್ರದೇಶ ಮತ್ತೊಂದು ಪ್ರದೇಶಕ್ಕಿಂತಲೂ ಸಾಕಷ್ಟು ಅಧಿಕ ದೂರದಲ್ಲಿದ್ದರೆ ಏಕದಿಕ್ಛೇದಕ ರೇಖಾ ಮಾರ್ಗದ ದೂರ ಮಹಾವೃತ್ತ ರೇಖಾ ಮಾರ್ಗಕ್ಕಿಂತ ಸಾಕಷ್ಟು ಅಧಿಕವಾಗಿರುತ್ತದೆ. ಮರ್ಕೇಟರನ ಪ್ರಕ್ಷೇಪಣದಲ್ಲಿ ಮಾತ್ರ ರಂಬ್ ರೇಖೆಯನ್ನು ನೇರವಾದ ಸರಳ ರೇಖೆಯನ್ನಾಗಿ ತೋರಿಸಲಾಗಿದೆ. (ಕೆ.ಎನ್.ಯು.)

**ಏಕದೈವವಾದ:** ಒಂದು ದೈವದ ಅಸ್ತಿತ್ವದಲ್ಲಿ ನಂಬಿಕೆ ಇಡುವುದನ್ನು ಏಕದೈವವಾದ ಎಂದು ಕರೆಯುವರು. ಆಂಗ್ಲ ಭಾಷೆಯಲ್ಲಿ ಏಕದೈವವಾದ ಅಂದರೆ ಮೊನೊಥೀಯಿಸಂ. ಇದು ಗ್ರೀಕ್ ಭಾಷೆಯ ಮೊನೊಸ್ (ಒಬ್ಬ) ಮತ್ತು ಥಿಯೊಸ್ (ದೇವರು) ಎಂಬೆರಡು ಪದಗಳಿಂದ ನಿಷ್ಪನ್ನವಾಗಿದೆ. ಯಹೂದಿ, ಕ್ರೈಸ್ತ, ಇಸ್ಲಾಂ ಮತ್ತು ಸಿಖ್ ಧರ್ಮಗಳಲ್ಲಿ ಏಕದೇವೋಪಾಸನೆ ಇದೆ. ಈ ಎಲ್ಲಾ ಧರ್ಮಗಳು ದೇವರು ಪ್ರಪಂಚದ ಸೃಷ್ಟಿಕರ್ತನಾಗಿದ್ದು ಮಾನವನ ಚಟುವಟಿಕೆಗಳ ಮೇಲೆ ನಿಯಂತ್ರಣ ಹೊಂದಿದ್ದಾನೆ. ಅವನು ಉಪಕಾರಿ, ಪರಿಶುದ್ಧ ಕಾಯ ಮತ್ತು ಅತ್ಯುತ್ತಮದ ಮೂಲ ಎಂದು ಸಾರುತ್ತವೆ.

ಅನೇಕ ತತ್ವಜ್ಞಾನಿಗಳ ಪ್ರಕಾರ ಏಕದೈವವಾದ ಬಹುದೇವತಾವಾದದಿಂದ ಉತ್ಪತ್ತಿಯಾಯಿತು. ಬಹುದೇವತಾ ಶ್ರದ್ಧೆಗಳು ಬಹಳ ಹಳೆಯವು ಹಾಗೂ ಏಕದೇವತಾ ಶ್ರದ್ಧೆಗಳು ಬಹಳ ಮುಂದುವರಿದವುಗಳು. ಯಹೂದಿ ಧರ್ಮದ ವೈಶಿಷ್ಟ್ಯವಾದ ಏಕದೇವೋಪಾಸನೆ ಪ್ರಾಚೀನ ಇಸ್ರೇಲ್‌ನಲ್ಲಿ ಪ್ರಾರಂಭವಾಯಿತು. ಯಹೂದಿಯರ ಪ್ರಥಮ ಪ್ರವಾದಿಯಾದ ಮೋಸೆಸ್ ಏಕದೈವವಾದವನ್ನು ಪರಿಚಯಿಸಿದ. ಯಹೂದಿ ಧರ್ಮದಲ್ಲಿ ಯಹೋವ ಪೂಜೆಗೊಳುವ ಏಕಮಾತ್ರ ವ್ಯಕ್ತಿ ಎಂಬ ನಂಬಿಕೆಯನ್ನು ಅಂಗೀಕರಿಸಿ ಇತರ ಬುಡಕಟ್ಟುಗಳ ಮತ್ತು ರಾಷ್ಟ್ರಗಳ ದೇವರುಗಳ ಅಸ್ತಿತ್ವವನ್ನು ತಿರಸ್ಕರಿಸಲಾಯಿತು.

ಅಲ್ಲಾಹು ಇಸ್ಲಾಂ ಧರ್ಮದ ಒಬ್ಬನೇ ದೈವ. ಇಸ್ಲಾಂ ಧರ್ಮದಲ್ಲಿ ಇದು ಶಾಶ್ವತ, ಅಸಮಾನ ಸೃಷ್ಟಿಕರ್ತ ಎಂಬ ನಂಬಿಕೆಯಲ್ಲಿ ವ್ಯಕ್ತವಾಗಿದೆ. ಅಲ್ಲಾಹನ ಆಜ್ಞಾಪಾಲನೆಯೇ ಇಸ್ಲಾಂ. ಅವನ ಆಜ್ಞಾನುಸಾರ ಜೀವನ ನಡೆಸುವುದೇ ನಿಜವಾದ ಧರ್ಮ, ಮಹಮ್ಮದ ಪೈಗಂಬರ ಇಸ್ಲಾಂ ಧರ್ಮದ ಸಂಸ್ಥಾಪಕ.

ಯೇಸುಕ್ರಿಸ್ತ ಕ್ರೈಸ್ತಧರ್ಮದ ದೇವರು. ಕ್ರೈಸ್ತಧರ್ಮ ತ್ರಿಮೂರ್ತಿತ್ವ (ದೇವರು, ದೇವಪುತ್ರ ಮತ್ತು ದಿವ್ಯಾತ್ಮ) ದಲ್ಲಿ ಒಬ್ಬನೇ ದೇವರು ಎಂಬ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ.

ಏಕೇಶ್ವರ ವಾದದಲ್ಲಿ ನಿಶ್ಚಲವಾದ ಶ್ರದ್ಧೆಯನ್ನಿಡುವುದೇ ಸಿಖ್ ಧರ್ಮದ ಮೂಲ ಬೋಧನೆಯಾಗಿದೆ. ದೇವರು ಒಬ್ಬನೇ ಮತ್ತು ಅವನೇ ಪರಮಸತ್ಯ. ದೇವರಿಗೆ ಆಕಾರವಿಲ್ಲ, ಭಾವವಿಲ್ಲ. ಸಿಖ್ ಧರ್ಮದ ಸಂಸ್ಥಾಪಕರಾದ ಗುರುನಾನಕರು ಸರ್ವೋತ್ತಮವಾದ ದೇವರು ಒಬ್ಬನೇ ಇರುವನೆಂದು ಬೋಧಿಸಿದರು. ಹಿಂದು ಧರ್ಮದಲ್ಲಿ ಕೋಟ್ಯಂತರ ದೇವರುಗಳ ಅಸ್ಥಿತ್ವ ವಿದ್ದರೂ ದೇವನೊಬ್ಬ ನಾಮ ಹಲವು ಎಂಬ ವಾದ ಮನ್ನಣೆ ಪಡೆದಿದೆ. (ಎಸ್.ಎಸ್.ಆರ್.)

**ಏಕಮುಖ ಮತ್ತು ವಿಭಿನ್ನ ಮುಖ ಪ್ರಾದೇಶಿಕ ಬೆಳವಣಿಗೆ:** ಪ್ರಾದೇಶಿಕ ಬೆಳವಣಿಗೆ ಏಕಮುಖವಾಗಿರುತ್ತದೆಯೋ ಅಥವಾ ವಿಭಿನ್ನ ಮುಖವಾಗಿರುತ್ತದೆಯೋ ಎಂಬ ವಿಷಯದ ಬಗೆಗಿನ ಚರ್ಚೆ ಪ್ರಾದೇಶಿಕ ಯೋಜನೆಯ ಚಿಂತನೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದೆ. ಹಿಂದುಳಿದ ಮತ್ತು ಸಂಮೃದ್ಧ ಪ್ರದೇಶಗಳ ನಡುವಿನ ವ್ಯತ್ಯಾಸ ಕಾಲಕ್ರಮೇಣ ಕಡಿಮೆಯಾಗುತ್ತದೆಯೋ ಅಥವಾ ಹೆಚ್ಚಾಗುತ್ತದೆಯೋ ಎಂಬುದು ಯೋಜಕರಲ್ಲಿ ಅಧಿಕ ಜಿಜ್ಞಾಸೆಗೊಳಪಟ್ಟ ವಿಷಯವಾಗಿದೆ. ಕೆಲವು ಪ್ರಾದೇಶಿಕ ಸಿದ್ಧಾಂತಗಳ ಪ್ರಕಾರ ಪ್ರಾದೇಶಿಕ ಅಸಮತೋಲನ ಸ್ವಯಂ ಸರಿಪಡಿಸಿಕೊಳ್ಳಲು ಸಾಧ್ಯವಿದೆಯಾದರೂ ಮಧ್ಯಸ್ಥಿಕೆಯ ಅಗತ್ಯತೆ ಅನಿವಾರ್ಯವಾಗಿದೆ.

ವಿಭಾಗೀಯ ಸಿದ್ಧಾಂತದ ಸಲಹೆಯಂತೆ ಆಂತರಿಕವಾಗಿ ವಿವಿಧ ಕ್ಷೇತ್ರಗಳ ನಡುವೆ ಸಂಪನ್ಮೂಲಗಳ ಪುನರ್ ಹಂಚಿಕೆಗೆ ವಿಪುಲ ಅವಕಾಶಗಳಿದ್ದು ಹಿಂದುಳಿದ ಕೃಷಿ ಪ್ರದೇಶಗಳಲ್ಲಿ ಸಮೃದ್ಧ ಪ್ರದೇಶಗಳಿಗಿಂತ ಹೆಚ್ಚಿನ ಸಂಪನ್ಮೂಲಗಳ ಪುನರ್ ಹಂಚಿಕೆ ಸಾಧ್ಯವಿರುವುದರಿಂದ ಕ್ರಮೇಣ ಪ್ರಾದೇಶಿಕ ಅಭಿವೃದ್ಧಿ ಧೃವೀಕರಣಗೊಳ್ಳುವುದಿಲ್ಲ. ಹಾಗೆಯೇ ಆಂತರಿಕ ಪ್ರಾದೇಶಿಕ ವ್ಯಾಪಾರ ಮಾದರಿಯ ಸಲಹೆಯಂತೆ ಪ್ರಾದೇಶಿಕ ತಲಾದಾಯ ಸಹ ಎಲ್ಲಾ ಪ್ರದೇಶಗಳಲ್ಲಿ ಹೆಚ್ಚಾಗುತ್ತದೆ. ಅಪವ್ಯಯ ಆರ್ಥಿಕ ಪ್ರಮಾಣ ಹೆಚ್ಚಾದಂತೆ ಸಂಮೃದ್ಧ ಪ್ರದೇಶಗಳ ಬೆಳವಣಿಗೆಯನ್ನು ಮಿತಗೊಳಿಸುತ್ತದೆ. ಆದರೂ ಪ್ರಾಯೋಗಿಕವಾಗಿ ಆರ್ಥಿಕ ಅಂಶಗಳ ಚಲನೆ ಕ್ಷೇತ್ರಗಳು ಮತ್ತು ಪ್ರದೇಶಗಳ ನಡುವೆ ಇಲ್ಲವಾದಾಗ ಮತ್ತು ಆರ್ಥಿಕತೆಗಳು ಸಮೃದ್ಧ ಪ್ರದೇಶಗಳ ಬೆಳವಣಿಗೆಯ ಮೇಲೆ ಯಾವುದೇ ಪರಿಣಾಮ ಬೀರಲಾರದಾಗ ಸಮಾನ ಪ್ರಾದೇಶಿಕ ಬೆಳವಣಿಗೆ ಮಿತಿಗೊಳ್ಳಬಹುದು. ಆಗ ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವ ಉದ್ದೇಶದಿಂದ ಸೂಕ್ತ ರೀತಿಯ ನೀತಿ ನಿಯಮಗಳನ್ನು ರೂಪಿಸಿ ಆರ್ಥಿಕಾಂಶಗಳ ಚಾಲನೆಗೆ ಒತ್ತುಕೊಡುವುದು ಅಗತ್ಯವಾಗುತ್ತದೆ.

ಹೈರ್ಶ್‌ಮ್ಯಾನ್, ಫ್ರೀಡ್‌ಮನ್ ಮತ್ತು ಮಿರ್ಡಾಲ್ ಇವರುಗಳ ಬೆಳವಣಿಗೆ ಸಿದ್ಧಾಂತಗಳ ಪ್ರಕಾರ ಪ್ರಾದೇಶಿಕ ಬೆಳವಣಿಗೆ ಪ್ರಾದೇಶಿಕವಾಗಿ ಅಸಮಾನತೆಯಿಂದ ಕೂಡಿರುತ್ತದೆ. ಈ ಸಿದ್ಧಾಂತಗಳಲ್ಲಿ ಚರ್ಚಿಸಿರುವಂತೆ ಪ್ರದೇಶಗಳ ನಡುವಿನ ಬೆಳವಣಿಗೆ ಅಸಮಾನವಾಗಿರುತ್ತದೆ. ಉದಾಹರಣೆ ಸಹಿತ ಹೋಲಿಸಿ ನೋಡುವುದಾದರೆ ಪ್ರದೇಶ 'ಎ' ಪ್ರದೇಶ 'ಬಿ' ಗಿಂತ ಅತಿ ಹೆಚ್ಚು ವೇಗವಾಗಿ ಅಭಿವೃದ್ಧಿಹೊಂದುವುದು. ಏಕೆಂದರೆ ಇದು ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ಅನುಕೂಲತೆಗಳನ್ನು ಹೊಂದಿರುವುದರಿಂದ ಭಿನ್ನಾಭಿಮುಖ ಅಥವಾ ಅಸಮಾನತೆಯ ಬೆಳವಣಿಗೆ ಸ್ವಯಂ ಸರಿಪಡಿಸಿಕೊಳ್ಳುವಿಕೆಯನ್ನು ಹೊಂದಿಲ್ಲದಿರಬಹುದು. ಸ್ಪಷ್ಟವಾಗಿ ಹೇಳುವುದಾದರೆ ಈ ಪ್ರಕ್ರಿಯೆ ಸಮುಚ್ಚಯಕವಾಗಿರಬಹುದಾದುದರಿಂದ ಶ್ರೀಮಂತ ಪ್ರದೇಶಗಳು ಶ್ರೀಮಂತವಾಗಿಯೂ ಮತ್ತು ಬಡತನದಿಂದ ಕೂಡಿದ ಪ್ರದೇಶಗಳು ಅತಿ ಬಡಪ್ರದೇಶಗಳಾಗಿ ಮುಂದುವರಿಯುತ್ತವೆ.

ಮಿರ್ಡಾಲ್‌ರವರು ಸಮುಚಾಯಕ ಕಾರಣ ವಿಧಾನಕ್ಕೆ ಸಂಬಂಧಿಸಿದಂತೆ ಚದುರಿದ ಮತ್ತು ಹಿಂತೊಳೆ ಪರಿಣಾಮಗಳನ್ನು ವಿವರಿಸಿದ್ದಾರೆ. ಚದುರುವಿಕೆ ಪರಿಣಾಮಗಳು – ಶ್ರೀಮಂತ ಮತ್ತು ಹಿಂದುಳಿದ ಪ್ರದೇಶಗಳ ನಡುವಿನ ಬೆಳವಣಿಗೆಯ ಅಂತರವನ್ನು ಕಡಿತಗೊಳಿಸುವುದಕ್ಕೆ ಪೂರಕವಾಗಿದೆ. ಶ್ರೀಮಂತ ಪ್ರದೇಶಗಳು ಬೆಳೆದಂತೆ ಬಡತನ ಪ್ರದೇಶಗಳ ಉತ್ಪನ್ನಗಳ ಬೇಡಿಕೆ ಹೆಚ್ಚಿಸುವುದರಿಂದ ಬಡ ಪ್ರದೇಶಗಳಲ್ಲಿ ಬೇಡಿಕೆ ಹೆಚ್ಚಾಗಿ ಆ ಪ್ರದೇಶಗಳ ಬೆಳವಣಿಗೆಗೆ ಉತ್ತೇಜನ ಕೊಡುತ್ತವೆ.

ಹೀಗೆ ಬಡತನ ಪ್ರದೇಶಗಳಲ್ಲಿ ಉತ್ಪಾದನೆಯ ಬೇಡಿಕೆ ಹೆಚ್ಚುವುದರಿಂದ ಅಂತಹ ಪ್ರದೇಶಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಸಮರ್ಥ ರೀತಿಯಲ್ಲಿ ಬಳಸುವುದರಿಂದ ಸಂಪನ್ಮೂಲಗಳು ಕಡಿಮೆ ಕೂಲಿ ವಲಯದಿಂದ ಹೆಚ್ಚಿನ ಕೂಲಿ ವಲಯಕ್ಕೂ ಹಾಗೂ ಕಡಿಮೆ ಉತ್ಪಾದನೆ ಕ್ಷೇತ್ರದಿಂದ ಹೆಚ್ಚಿನ ಉತ್ಪಾದನೆ ಕ್ಷೇತ್ರಕ್ಕೂ ಪುನರ್ ಹಂಚಿಕೆಯಾಗುತ್ತವೆ. ಅಲ್ಲದೆ ಅಪವ್ಯಯ ಆರ್ಥಿಕತೆಗಳು ಸಮೃದ್ಧ ಪ್ರದೇಶದಲ್ಲಿ ಪ್ರಾರಂಭವಾಗಬಹುದು. ಇದರಿಂದಾಗಿ ಅಭಿವೃದ್ಧಿ ಪ್ರಕ್ರಿಯೆ ಹೆಚ್ಚು ಅಭಿವೃದ್ಧಿ ಪ್ರದೇಶಗಳಿಂದ ಹಿಂದುಳಿದ ಪ್ರದೇಶಗಳಿಗೆ ಪಸರಿಸುತ್ತದೆ. ಆದರೆ ಮಿರ್ಡಾಲ್‌ರವರು ಹೇಳುವಂತೆ ಚದುರಿದ ಪರಿಣಾಮಗಳು ಹಿಂತೊಳೆ ಪರಿಣಾಮಗಳಿಂದ ಸ್ಥಿರವಾಗಿರುತ್ತವೆ. ನಗರ ಕೇಂದ್ರ ಭಾಗದ ಸುತ್ತಮುತ್ತ ವ್ಯವಸಾಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳದಿಂದಾಗಿ ಕೇಂದ್ರ ಸಮೃದ್ಧತೆ ಹೊಂದಿದ್ದರೂ ನಗರದ ಕೇಂದ್ರೀಯ ಭಾಗದ ಸುತ್ತಲಿನ ವಸ್ತುಗಳು ಮೂಲತಃ ವ್ಯವಸಾಯ ವಸ್ತುಗಳಾಗಿದ್ದು ಕಡಿಮೆ ಸ್ಥಿತಿಸ್ಥಾಪಕತ್ವವುಳ್ಳ ಬೇಡಿಕೆಯಿಂದ ಕೇಂದ್ರದ ರೀತಿಯ ಸಮೃದ್ಧತೆಯು ಅನಂತರದ ಸುತ್ತಲಿನ ವ್ಯವಸಾಯ ಪ್ರದೇಶದಲ್ಲಿ ಸಿದ್ಧಿಸದಿರಬಹುದು. ಹೀಗೆ ಬಂಡವಾಳ ಮತ್ತು ಪರಿಣಿತಶ್ರಮ ಮುಂತಾದ ಆಯ್ದ ಸಂಪನ್ಮೂಲಗಳು ನಗರ ಪ್ರದೇಶಗಳಿಗೆ ಹೋಗುವುದು. ಇದು ಹಿಂದುಳಿದ ಪ್ರದೇಶದ ಬೆಳವಣಿಗೆಯನ್ನು ಕುಂಠಿತಗೊಳಿಸುವುದಲ್ಲದೆ ಹಿಂದುಳಿದ ಪ್ರದೇಶಗಳು ಸ್ಪರ್ಧಿಸದಂತಾಗುತ್ತವೆ.

ಕೇಂದ್ರ ಮತ್ತು ಅಂಚಿನ ಸಿದ್ಧಾಂತಗಳು ಸಂಚಿತ (ಕುಮುಲೇಟಿವ್ ಕಾಸೋಮಾನ್) ವಿಧಾನಕ್ಕೆ ಹೆಚ್ಚು ಒತ್ತು ಕೊಟ್ಟಿವೆ. ವಿಭಿನ್ನ ಪ್ರಾದೇಶಿಕ ಬೆಳವಣಿಗೆ ಬಗ್ಗೆ ಪರಿಜ್ಞಾನ ಪಡೆಯಲು ಸಹ ಉಪಯುಕ್ತವಾದ ಮಾಹಿತಿಯನ್ನು ಒದಗಿಸುವುದಲ್ಲದೆ, ವಿವಿಧ ಸಿದ್ಧಾಂತಗಳ ಮೂಲಾಂಶಗಳನ್ನು ಒಟ್ಟುಗೂಡಿಸಿದೆ. ನೀತಿ ನಿಯಮಗಳು ಮತ್ತು ತೊಡಕುಗಳು ಕುರಿತಂತೆ ಆರ್ಥಿಕ ಬೆಳವಣಿಗೆ ಕಾರ್ಯವಿಧಾನದಲ್ಲಿ ಸಾಮಾನ್ಯ ಸ್ಥಿರತೆ ಕಂಡುಬರದೆ ಇರುವುದರಿಂದ ಸರ್ಕಾರದ ಮಧ್ಯಸ್ಥಿಕೆಯ ಅನಿವಾರ್ಯತೆ ಕಂಡುಬರುತ್ತದೆ.

ವಿಭಿನ್ನತೆಯನ್ನು ಹೊಂದಿರುವ ಪ್ರಾದೇಶಿಕ ಬೆಳವಣಿಗೆಯನ್ನು ಅನೇಕ ಸಿದ್ಧಾಂತ ತಜ್ಞರು ಬೆಂಬಲಿಸಿದ್ದಾರೆ. ಅಲ್ಲದೆ ಕೈಗಾರಿಕಾ ರಚನೆ ಮತ್ತು ನಿಯಂತ್ರಣ ಕೇಂದ್ರೀಯವಾಗಿದ್ದು ಪ್ರಾದೇಶಿಕ ಬೆಳವಣಿಗೆಯ ವ್ಯತ್ಯಾಸಗಳನ್ನು ವಿವರಿಸುತ್ತವೆ. ಉದಾ: ಹೊಲ್ಯಾಂಡ್ ಅವರ ಪ್ರಕಾರ ಪ್ರಾದೇಶಿಕ ಅಸಮತೋಲನಕ್ಕೆ ಪ್ರಮುಖವಾಗಿ ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪನಿಗಳು ಬೆಳೆಯುತ್ತಿರುವುದೇ ಕಾರಣವಾಗಿದೆ. ಹೊಲ್ಯಾಂಡ್ ಅವರು ಹೇಳುವಂತೆ ಬಹುರಾಷ್ಟ್ರೀಯ ಬಹುಉತ್ಪನ್ನ ಕಂಪನಿಗಳ ಉದ್ಯಮಗಳು ಆರ್ಥಿಕ ಕ್ಷೇತ್ರವನ್ನು ಆವರಿಸಿಕೊಂಡಿವೆ. ಈ ಉದ್ಯಮಗಳು ಮೂಲತಃ ದೇಶದಲ್ಲಿನ ಪ್ರಾದೇಶಿಕ ಅಸಮತೋಲನವನ್ನು ಮುಂದುವರಿಸುತ್ತವೆ. ಉದ್ಯಮಿಗಳು ಪ್ರಮುಖವಾಗಿ ದೇಶದ ಸಮೃದ್ಧ ಪ್ರದೇಶಗಳಲ್ಲಿ ಕೇಂದ್ರೀಕರಿಸುತ್ತಾರೆ ಮತ್ತು ಅವರಿಗೆ ವಿರುದ್ಧವಾದ ನೀತಿ ನಿಯಮಗಳನ್ನು ರೂಪಿಸಿದಲ್ಲಿ ಸಮಸ್ಯೆಗಳಿಂದ ಕೂಡಿದ ಉದ್ಯಮಿಗಳು ಇತರೆ ಪ್ರದೇಶಗಳಲ್ಲಿ ಉದ್ಯಮಗಳನ್ನು ಕೈಗೊಳ್ಳದೆ ಸರ್ಕಾರದ ನೀತಿಗಳಿಗೆ ವಿರುದ್ಧವಾಗಿ ಪ್ರತಿಭಟಿಸುವುದಲ್ಲದೆ ದೇಶವನ್ನೇ ಬಿಟ್ಟು ಹೋಗುವುದಾಗಿ ಹೇಳುತ್ತಾರೆ.

ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಪ್ರಾಮುಖ್ಯತೆಯನ್ನು ಬೆಳೆಸಿಕೊಳ್ಳುತ್ತಿವೆ ಮತ್ತು ಕೆಲವೇ ಕೆಲವು ದೊಡ್ಡ ಕಂಪನಿಗಳು ಕೈಗಾರಿಕಾ ಕ್ಷೇತ್ರದಲ್ಲಿ ಏಕಸ್ವಾಮ್ಯತೆಯನ್ನು ಅಮೆರಿಕ, ಪಶ್ಚಿಮ ಯುರೋಪ್‌ಗಳಲ್ಲಿಯೂ ಪಡೆದಿವೆ.

ಕೆಲವು ಸಂಗತಿಗಳಲ್ಲಿ ಹೊಲ್ಯಾಂಡ್‌ರವರ ವಿಶ್ಲೇಷಣೆ ಸಮಂಜಸವಾಗಿದ್ದು ಬಹುರಾಷ್ಟ್ರೀಯ ಕಂಪನಿಗಳ ಪ್ರಾದೇಶಿಕ ಅಭಿವೃದ್ಧಿಯ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಆದರೆ ಈ ಬಗ್ಗೆ ಯನ್ನೋಪಲಸ್ ಮತ್ತು ಡುನಿಯಂಗ್ ಅವರು ಇದಕ್ಕೆ ತದ್ವಿರುದ್ಧವಾಗಿ ಅಭಿಪ್ರಾಯವನ್ನು ಸಹ ನೀಡಿರುತ್ತಾರೆ. (ಡಿ.ಎಂ.)

**ಏಕಸ್ವರೂಪ ಪ್ರದೇಶ:** ಏಕ ಸ್ವರೂಪ ಪ್ರದೇಶಗಳು ಸಮಪಾತೀಯ ಗುಣವನ್ನು ಎಲ್ಲ ವಿಷಯದಲ್ಲೂ ತೋರುತ್ತವೆ. ಈ ಪ್ರದೇಶದಲ್ಲಿ ಭೌತಿಕ ಲಕ್ಷಣಗಳು ಕೃಷಿ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ಪ್ರದೇಶದ ಎಲ್ಲೆಯ ಪರಿಮಿತಿಯಲ್ಲಿ ಏಕ ರೂಪವಾದ ಭೌತಿಕ ಅಂಶ ಅಥವಾ ಸಂಸ್ಕೃತಿಕ ಅಂಶಗಳು ಕಂಡುಬರುತ್ತವೆ.

ಮಹಾನಗರ ಪ್ರದೇಶ ಏಕ ಸ್ವರೂಪ ಪ್ರದೇಶವಾಗಿರುತ್ತದೆ. ಎಲ್ಲಿಯವರೆಗೆ ನಗರದ ಸಂರಚನೆ ಒಂದೇ ಸಮಸ್ಥಿತಿಯಲ್ಲಿರುವುದೊ ಅಲ್ಲಿಯವರೆಗೆ ನಗರ ಪ್ರದೇಶವೂ ಏಕ ಸ್ವರೂಪ ಪ್ರದೇಶವಾಗಿರುತ್ತದೆ. ನಗರದ ಎಲ್ಲ ಹರಡಿದಂತೆ ಆರ್ಥಿಕ ಚಟುವಟಿಕೆಗಳು ಒಂದೇ ವಿಧಾನದಲ್ಲಿ ಬೆಳೆಯುತ್ತಿದ್ದರೆ ಆ ಪ್ರದೇಶ ಏಕ ಸ್ವರೂಪ ಪ್ರದೇಶದ ಲಕ್ಷಣಗಳನ್ನು ಹೊಂದಿರುವುದು. ಆದ್ದರಿಂದ ಮಹಾನಗರ ಪ್ರದೇಶ ಪ್ರೇರಕ ಶಕ್ತಿಯುಳ್ಳದ್ದು, ಈ ಪ್ರೇರಕ ಶಕ್ತಿಯು ಪ್ರದೇಶದ ಎಲ್ಲೆಡೆ ಪ್ರಸರಿಸಿದಂತೆ ಆರ್ಥಿಕ ಬೆಳವಣಿಗೆ ತೀವ್ರಗತಿಯಲ್ಲಿ ಪ್ರಗತಿಯನ್ನು ತೋರಿಸುತ್ತದೆ. ಆರ್ಥಿಕ ಚಟುವಟಿಕೆಗಳು ತಾವಾಗಿಯೇ ವಿಕೇಂದ್ರೀಕರಣಗೊಂಡು ಮಹಾನಗರದ ಎಲ್ಲೆಡೆಯಲ್ಲೂ ಏಕ ರೂಪ ಬೆಳವಣಿಗೆಯನ್ನು ಕಾಣಬಹುದು. ಆದ್ದರಿಂದ ಮಹಾನಗರದ ಯೋಜನೆ ಮತ್ತು ಉತ್ತಮ ಆಡಳಿತಕ್ಕೆ ಹೆಚ್ಚಿನ ಒತ್ತು ಅವಶ್ಯಕ. ಈ ತರಹದ ಬೆಳವಣಿಗೆ ಒಂದು ಸ್ವಾಸ್ಥ್ಯ ರೀತಿಯ ಬೆಳವಣಿಗೆಯಾಗಿದ್ದು ಗ್ರಾಮೀಣ ಪ್ರದೇಶ ಬೆಳೆಯಲು ಅನುಕೂಲವಾಗುವುದು. ನಗರ ಮತ್ತು ಗ್ರಾಮಗಳು ನೈಸರ್ಗಿಕ ಸಂಪತ್ತನ್ನು ಪರಸ್ಪರ ಹಂಚಿಕೊಳ್ಳಲು ಸಹಾಯಕವಾಗುವುದು. ಈ ದಿಶೆಯಲ್ಲಿ ಮಹಾನಗರ ಯೋಜನಾ ಸಮಿತಿ (ಮೆಟ್ರೊಪಾಲಿಟನ್ ಪ್ಲಾನಿಂಗ್ ಕಮಿಟಿ) ರಚನೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. (ಎನ್.ಎಸ್.)

**ಏಡ್ರಿಯಾಟಿಕ್ ಸಮುದ್ರ:** ಮೆಡಿಟರೇನಿಯನ್ ಸಮುದ್ರದ ಒಂದು ಶಾಖೆ. ಇಟಲಿ, ಬಾಲ್ಕನ್ ಪರ್ಯಾಯದ್ವೀಪ–ಇವುಗಳ ನಡುವೆ ಇದೆ. ಉತ್ತರ ಅಕ್ಷಾಂಶ $40^0$ ಯಿಂದ $45^0$ ಪೂ.ರೇ. $12^0$–$20^0$ಗಳ ನಡುವೆ ಉತ್ತರ–ದಕ್ಷಿಣವಾಗಿ 800 ಕಿಮೀ ಉದ್ದಕ್ಕೆ ಹಬ್ಬಿದೆ. ಇದರ ಅಗಲ 70–225 ಕಿಮೀ (ಸರಾಸರಿ 177 ಕಿಮೀ.) ವಿಸ್ತೀರ್ಣ ಸು. 96,600 ಚ.ಕಿಮೀ. ಇಡೀ ಮೆಡಿಟರೇನಿಯನ್‌ನಲ್ಲಿ ಇದು ಅತ್ಯಂತ ಕಡಿಮೆ ಆಳದ ಜಲಪ್ರದೇಶ. ಉತ್ತರಾರ್ಧದಲ್ಲಿ ಇದರ ಆಳ ಇನ್ನೂ ಕಡಿಮೆಯಾಗುತ್ತ ಹೋಗುತ್ತದೆ. ಈ ಕಡಲಿನ ಅತಿ ಹೆಚ್ಚಿನ ಆಳವೆಂದರೆ 1186 ಮೀ. ಇದರ ನೀರಿನ ಲವಣತ್ವ ಪ್ರತಿ ಸಾವಿರಕ್ಕೆ 18ರಿಂದ 35ರವರೆಗೆ ವ್ಯತ್ಯಾಸವಾಗುತ್ತದೆ.

ರೋಮನರ ಕಾಲದಲ್ಲಿ ಈ ಕಡಲ ದಂಡೆಯ ಏಡ್ರಿಯ ಎಂಬ ಬಂದರು ಬಲು ಪ್ರಸಿದ್ಧವಾಗಿತ್ತು. ಅದರಿಂದಲೇ ಈ ಕಡಲಿಗೆ ಏಡ್ರಿಯಾಟಿಕ್ ಎಂಬ ಹೆಸರು ಬಂದಿದೆ. ಈ ಬಂದರು ಕಡಲಂಚಿನಿಂದ ಒಳನಾಡಿನಲ್ಲಿ 22 ಕಿಮೀ ದೂರದಲ್ಲಿದೆ. ಆಲ್ಪ್ಸ್ ಮತ್ತು ಅಪೆನ್ನೈನ್ ಪರ್ವತಗಳಿಂದ ಹರಿದು ಬಂದು ಈ ಕಡಲನ್ನು ಸೇರುವ ನದಿಗಳು ಸತತವಾಗಿ ಮಣ್ಣನ್ನು ತಂದು ಇದರಲ್ಲಿ ತುಂಬುತ್ತಲೇ ಇರುವುದರಿಂದ ಈ ನದಿಗಳ ಮುಖಜಭೂಮಿ ಸಮುದ್ರದ ಕಡೆಗೆ ಇಂದಿಗೂ ಬೆಳೆಯುತ್ತಲೇ ಇದೆ. ಕೆಲವು ಕಡೆಗಳಲ್ಲಿ ವರ್ಷಕ್ಕೆ 9 ಮೀ ಸಮುದ್ರ ಹಿಂದೆ ಸರಿಯುತ್ತಿದೆ.

ಏಡ್ರಿಯಾಟಿಕಿನಲ್ಲಿ ಸ್ಥೂಲವಾಗಿ ಮೆಡಿಟರೇನಿಯನ್ ವಾಯುಗುಣವಿದೆ ಎನ್ನಬಹುದಾದರೂ ಇದರ ಉತ್ತರದ ಕಡೆಯಲ್ಲಿ ಖಂಡಾಂತರ ವಾಯುಗುಣದ ಲಕ್ಷಣಗಳೂ ಉಂಟು. ಈ ಕಡಲಿನಲ್ಲಿ ಇಟಲಿ ಕಡೆಯ ದಂಡೆಗೂ ಬಾಲ್ಕನ್ ದಂಡೆಗೂ ನಡುವೆ ಹಲವು ವ್ಯತ್ಯಾಸಗಳನ್ನು ಕಾಣಬಹುದು. ಇಟಾಲಿಯನ್ ಕರಾವಳಿ ಹೆಚ್ಚು ನೇರ ; ಇಲ್ಲಿ ಜೌಗು ಸಾಮಾನ್ಯ. ಬಾಲ್ಕನ್ ತೀರ ಅಂಕುಡೊಂಕು; ಕಡಿದು, ಬಂಡೆಮಯ. ಇಟಲಿಯ ಕಡೆಯಲ್ಲಿ ನೈಸರ್ಗಿಕ ಬಂದರು ಇಲ್ಲವೇ ಇಲ್ಲವೆನ್ನಬಹುದು. ಇಟಲಿಯ ತೀರದ ನಡುಗಡ್ಡೆಯಲ್ಲಿ ಸುಣ್ಣಕಲ್ಲಿನ ಬಂಡೆಯ ಭೂಶಿರದ ರಕ್ಷೆಯಲ್ಲಿರುವ ಆಂಕೋನ ಬಂದರಿನಿಂದಾಚೆಗೆ ಮತ್ತೆ ಈ ಬಗೆಯ ಬಂಡೆಗಲ್ಲಿನ ತೀರ ಟ್ರಿಯೆಸ್ಟೆ ಬಂದರಿನ ಬಳಿಯಲ್ಲೇ ಸಿಕ್ಕುವುದು.

ಈ ಕಡಲಿನ ಇಟಾಲಿಯನ್ ತೀರದಲ್ಲಿ ಒಳ್ಳೆಯ ಬಂದರುಗಳೂ ಇದರ ತೀರಪ್ರದೇಶದಿಂದ ಒಳನಾಡಿಗೆ ನೈಸರ್ಗಿಕ ಭೂಮಾರ್ಗಗಳೂ ಇಲ್ಲವಾದರೂ ಈ ಕಡಲು ಮಧ್ಯ ಯುರೋಪಿನ ವಕ್ಷಸ್ಥಲದವರೆಗೂ ಚಾಚಿ ನಿಂತಿರುವುದರಿಂದ ಇದರ ಪ್ರಾಮುಖ್ಯ ಬಹಳ ಹೆಚ್ಚು. ಇದು ಐರೋಪ್ಯ ವ್ಯಾಪಾರದ ರಾಜಮಾರ್ಗ. ರೋಮನರ ಕಾಲದಿಂದಲೂ ಇಲ್ಲಿನ ಹಲವು ಬಂದರುಗಳು ವ್ಯಾಪಾರ ಕೇಂದ್ರಗಳಾಗಿವೆ. ವೆನಿಸಿನ ಬೆಳವಣಿಗೆಯಾದಾಗ ಏಡ್ರಿಯಾಟಿಕ್ ಮಾರ್ಗಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಬಂತು. ಸೂಯೆಜ಼್ ಕಾಲುವೆಯ ನಿರ್ಮಾಣದಿಂದ ವೆನಿಸ್ ಟ್ರಿಯೆಸ್ಟೆಗಳ ವ್ಯಾಪಾರ ಹೆಚ್ಚಿತು. ಇಂದು ಇವೆರಡು ಬಂದರುಗಳ ಪೈಕಿ ಟ್ರಿಯೆಸ್ಟೆಯದು ಸಿಂಹಪಾಲು. ಲಂಬಾರ್ಡಿ ಮೈದಾನದ ಆಯಾತ–ನಿರ್ಯಾತಗಳಿಗೆ ವೆನಿಸ್ ಇಂದಿಗೂ ಹೆಬ್ಬಾಗಿಲು. ಈ ಎರಡರ ಜೊತೆಗೆ ಆಂಕೋನ, ಬ್ರಿಂಡಿಸಿ, ರಿಯೆಕ ಮತ್ತು ಡೂಬ್ರೊವ್‌ನಿಕ್ ಬಂದರುಗಳು ಈ ಕಡಲ ಮಾರ್ಗದ ವ್ಯಾಪಾರದಲ್ಲಿ ಪಾಲ್ಗೊಂಡಿವೆ. ಏಡ್ರಿಯಾಟಿಕಿನ ಪೂರ್ವ ಪಶ್ಚಿಮ ದಂಡೆಗಳ ಜನರಿಗೆ ಮೀನುಗಾರಿಕೆ ಒಂದು ಮುಖ್ಯ ಕಸಬು. (ಎಂ.ಎ.ಎಚ್.)

**ಏಷ್ಯ:** ಪ್ರಪಂಚದ ಅತ್ಯಂತ ದೊಡ್ಡ ಖಂಡ. ವಿಸ್ತೀರ್ಣ 44,680,718 ಚ.ಕಿಮೀ. ಇದು ಭೂಪ್ರದೇಶದ ಮೂರನೆಯ ಒಂದು ಭಾಗವನ್ನಾವರಿಸಿದೆ. ಜನಸಂಖ್ಯೆ 38,79000000 (2003).

ಯೂರಲ್ ಪರ್ವತ, ಯೂರಲ್ ನದಿ, ಕ್ಯಾಸ್ಪಿಯನ್ ಸಮುದ್ರ, ಕಾಕಸಸ್ ಪರ್ವತದ ಉತ್ತರದ ಇಳಿಜಾರು, ಕಪ್ಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ–ಇವು ಈ ಖಂಡದ ಪಶ್ಚಿಮ ಮೇರೆ. ಪೂರ್ವದಲ್ಲಿ ಪೆಸಿಫಿಕ್ ಸಾಗರ, ದಕ್ಷಿಣದಲ್ಲಿ ಹಿಂದೂಸಾಗರ ಮತ್ತು ಉತ್ತರದಲ್ಲಿ ಆರ್ಕ್‌ಟಿಕ್ ಸಾಗರಗಳು ಎಲ್ಲೆಗಳಾಗಿವೆಯೆನ್ನಬಹುದು. ಇಂಡೋನೇಷ್ಯನ್ ದ್ವೀಪಸ್ತೋಮ, ದಕ್ಷಿಣೋತ್ತರವಾಗಿ ಪೆಸಿಫಿಕ್‌ನಲ್ಲಿ ಹಬ್ಬಿರುವ ದ್ವೀಪಗಳ ಸಾಲು–ಇವೆಲ್ಲ ಏಷ್ಯಕ್ಕೆ ಸೇರಿದ ಪ್ರದೇಶಗಳೇ. ಇಡೀ ಭೂಮಿಯ ಮೇಲೆ ಇದೊಂದು ಬೃಹತ್ ಸಮದ್ವಿಭುಜ ತ್ರಿಭುಜದಂತೆ ಕಾಣುತ್ತದೆ.

ಇದರ ಬೃಹತ್ ಸಮಭುಜಗಳ ಪೈಕಿ ಒಂದು ಏಡನ್ನಿನಿಂದ ಬೆರಿಂಗ್ ಜಲ ಸಂಧಿಯವರೆಗೂ ಇನ್ನೊಂದು ಸಿಂಗಪುರದಿಂದ ಬೆರಿಂಗಿನವರೆಗೂ ಇವೆ. ಇವುಗಳಲ್ಲಿ ಒಂದೊಂದರ ಉದ್ದವೂ 10,400 ಕಿಮೀ. ಏಡನ್ನಿನಿಂದ ಸಿಂಗಪುರದವರೆಗೆ ಸಾಗಿರುವ ಮೂರನೆಯ ಭುಜದ ಉದ್ದ 7200 ಕಿಮೀ.

ಈ ವಿಶಾಲವಾದ ಭೂಖಂಡದ ಒಂದು ವೈಶಿಷ್ಟ್ಯವೆಂದರೆ ಇದು ಇತರ ಖಂಡಗಳೊಂದಿಗೆ ಹೊಂದಿರುವ ಸಂಪರ್ಕ. ಯುರೋಪ್ ವಾಸ್ತವವಾಗಿ ಇದರ ಪಶ್ಚಿಮಭಾಗ. ಏಷ್ಯವೂ ಆಫ್ರಿಕವೂ ಸೂಯೆಜ಼ಿನ ಬಳಿ ಸೇರುತ್ತವೆ. ಉತ್ತರ ಅಮೆರಿಕಕ್ಕೂ ಏಷ್ಯಕ್ಕೂ ನಡುವೆ ಬೆರಿಂಗ್ ಜಲಸಂಧಿಯಿದೆ. ಇಂಡೋನೇಷ್ಯನ್ ದ್ವೀಪಸ್ತೋಮಗಳಾಚೆಯೇ ಆಸ್ಟ್ರೇಲಿಯ. ಹೀಗೆ ಇದರ ಸನ್ನಿವೇಶ ಪ್ರಾಮುಖ್ಯ ಹೆಚ್ಚಿನದು. ಏಷ್ಯದ ಇತಿಹಾಸವೇ ಮುಂತಾದ ನಾನಾ ಅಂಶಗಳ ಮೇಲೆ ಈ ಸನ್ನಿವೇಶವೂ ಸಾಕಷ್ಟು ಪ್ರಭಾವ ಬೀರಿದೆಯೆನ್ನಬಹುದು.

ಕಡಿಮೆ ಸಾಗರಗಳೊಂದಿಗೂ ಏಷ್ಯದ್ದು ಇದೇ ರೀತಿಯ ಸಂಬಂಧ. ಈ ಖಂಡದ ಒಂದು ಭಾಗವಾದ ಏಷ್ಯಮೈನರ್ ಮೆಡಿಟರೇನಿಯನ್ ಸಮುದ್ರದಲ್ಲಿ ಚಾಚಿದೆ. ಇದರ ಮೂಲಕ ಈ ಖಂಡಕ್ಕೆ ಅಟ್ಲಾಂಟಿಕ್ ಸಾಗರದ ಸಂಪರ್ಕವುಂಟು. ಏಷ್ಯದ ಉತ್ತರದಲ್ಲಿರುವುದು ಆರ್ಕ್‌ಟಿಕ್ ಸಾಗರ. ಏಷ್ಯದ ಭಾಗಗಳಾದ ಕ್ಯಾಮ್‌ಚ್ಯಾಟ್ಕ ಸ್ಯಾಕಲೀನ್, ಜಪಾನ್ ಮತ್ತು ಫಿಲಿಪೀನ್ಸ್ ಪೆಸಿಫಿಕ್ ಸಾಗರದಲ್ಲೆ ಇವೆ. ಅರೇಬಿಯ, ದಕ್ಷಿಣ ಭಾರತ ಮತ್ತು ಮಲಯ ಈ ಮೂರು ಪರ್ಯಾಯದ್ವೀಪಗಳು ಹಿಂದೂಸಾಗರದ ಜಲದಲ್ಲಿ ಮೈದಳೆಯುತ್ತವೆ.

$26^0$ಪೂ. ರೇಖಾಂಶದಿಂದ $180^0$ ಪೂ. ರೇಖಾಂಶದ ವರೆಗೂ $82^0$ ಉ. ಅಕ್ಷಾಂಶದಿಂದ $10^0$ ದ. ಅಕ್ಷಾಂಶದ ವರೆಗೂ ಈ ಖಂಡ ಹರಡಿದೆ. ದಕ್ಷಿಣದಲ್ಲಿ ಈಸ್ಟ್ ಇಂಡೀಸ್ ಮುಖಾಂತರ ಸಮಭಾಜಕವೃತ್ತ ಹಾದು ಹೋಗುತ್ತದೆ. ಅರೇಬಿಯ, ಭಾರತ ಮತ್ತು ಮೈಮನ್ಮಾರ್ ಮಧ್ಯಭಾಗದಲ್ಲೂ ದಕ್ಷಿಣ ಚೀನದ ಮುಖಾಂತರವೂ ಹಾದು ಹೋಗುವ ರೇಖೆ ಕರ್ಕಾಟಕ ಸಂಕ್ರಾಂತಿವೃತ್ತ. ಸೈಬೀರಿಯದ ಉತ್ತರದ ಅಂಚಿನಲ್ಲಿ ಉತ್ತರ ಮೇರುವೃತ್ತವಿದೆ. ಉತ್ತರಾರ್ಧ ಗೋಳದಲ್ಲಿನ ಸುಮಾರು ಅರ್ಧ ಪ್ರದೇಶ ಏಷ್ಯದಲ್ಲಿದೆ.

ಈ ಖಂಡದ ಸಮುದ್ರತೀರ ಅಸ್ತವ್ಯಸ್ತವಾಗಿದೆ. ಇದರ ಮೂರು ಕಡೆಗಳಲ್ಲಿ ಸಮುದ್ರವಿದ್ದರೂ ಇದರ ವಿಸ್ತಾರದ ದೃಷ್ಟಿಯಿಂದ ಸಮುದ್ರತೀರ ಬಹಳ ಕಡಿಮೆ 53,130 ಕಿಮೀ. ಅಲ್ಲದೆ ಇದು ಹೆಚ್ಚು ಡೊಂಕಾಗಿಯೂ ಇಲ್ಲ.

ಹಲವು ವಿಚಾರಗಳಲ್ಲಿ ಈ ಖಂಡ ವೈಶಿಷ್ಟ್ಯಪೂರ್ಣ. ವೈಪರಿತ್ಯಗಳ ಖಂಡ. ಇಲ್ಲಿರುವ ಮೃತಸರೋವರ ಪ್ರಪಂಚದ ಅತ್ಯಂತ ತಗ್ಗಿನ ಪ್ರದೇಶದಲ್ಲಿದೆ (ಸಮುದ್ರ ಮಟ್ಟಕ್ಕಿಂತ 378 ಮೀ ಕೆಳಗೆ). ವಿಶ್ವದ ಅತ್ಯಂತ ಎತ್ತರದ ಪರ್ವತ ಶಿಖರವೂ ಇಲ್ಲುಂಟು (ಎವರೆಸ್ಟ್ 8850 ಮೀ). ಅತ್ಯಂತ ಕಡಿಮೆ ಹಾಗೂ ಅತ್ಯಂತ ಹೆಚ್ಚಿನ ಉಷ್ಣತೆಗಳನ್ನೂ ಇಲ್ಲಿ ಕಾಣಬಹುದು. ಜಗತ್ತಿನ ಪ್ರಮುಖ ನಾಗರಿಕತೆಗಳೆಲ್ಲ ಹುಟ್ಟಿದ್ದು ಇಲ್ಲೆ. ಎಲ್ಲ ರೀತಿಯ ಜನರೂ ಇಲ್ಲಿ ವಾಸಿಸುತ್ತಾರೆ. ಅಲೆಮಾರಿ ಸಮುದಾಯದವರೂ ಅತ್ಯಂತ ಮುಂದುವರಿದ ಸಮುದಾಯದವರೂ ಇಲ್ಲಿ ಇದ್ದಾರೆ. ಪ್ರಪಂಚದ ಮುಖ್ಯ ಧರ್ಮಗಳಿಗೆಲ್ಲ ಏಷ್ಯವೇ ಉಗಮಸ್ಥಾನ. ಜುಡಾಯಿಸಂ ಜೆರುಸಲೆಂನಲ್ಲಿ ಜನಿಸಿತು. ಕ್ರೈಸ್ತ ಧರ್ಮ ಪ್ಯಾಲಸ್ತೀನಿನಲ್ಲಿ ಜನಿಸಿ ಪ್ರಪಂಚದಾದ್ಯಂತ ಹರಡಿತು. ಅರೇಬಿಯದಲ್ಲಿ ಜನಿಸಿದ ಇಸ್ಲಾಂ ಧರ್ಮ ಪೂರ್ವಾರ್ಧಗೋಳದಲ್ಲೆಲ್ಲ ಹರಡಿದೆ. ಬೌದ್ಧ ಹಾಗೂ ಹಿಂದೂಧರ್ಮಗಳು ಭಾರತದಲ್ಲಿ ಜನ್ಮ ತಳೆದವು. ಇರಾನಿನ ಪಾರ್ಸೀಧರ್ಮ, ಜಪಾನಿನಲ್ಲಿನ ಷಿಂಟೊ, ಚೀನದ ಕನ್‍ಫ್ಯೂಷಿಯನಿಸಂ ಮತ್ತು ಟಾವೊಇಸಂ–ಇವು ಪ್ರಪಂಚದ ಇತರ ಧರ್ಮಗಳು–ಇವೂ ಏಷ್ಯದಲ್ಲಿ ಜನಿಸಿದುವು. ಪ್ರಪಂಚಕ್ಕೆ ಬೇಕಾದ ಸಂಬಾರಪದಾರ್ಥ, ರೇಷ್ಮೆ, ಪೆಟ್ರೋಲಿಯಂ, ಮ್ಯಾಂಗನೀಸ್, ಅಭ್ರಕಗಳನ್ನು ಒದಗಿಸುವುದೂ ಈ ಖಂಡವೇ. ಪ್ರಪಂಚದಲ್ಲಿರುವ ಎಲ್ಲ ರೀತಿಯ ಸಸ್ಯವರ್ಗಗಳೂ ಖನಿಜಗಳೂ ಇಲ್ಲಿ ದೊರೆಯುತ್ತವೆ. ಅತ್ಯಂತ ಕಡಿಮೆ ಹಾಗೂ ಅತ್ಯಂತ ಹೆಚ್ಚಿನ ಜನಸಾಂದ್ರತೆಯ ಪ್ರದೇಶಗಳು ಇಲ್ಲುಂಟು. ವಿಸ್ತಾರದಲ್ಲಿ ಪ್ರಪಂಚದದ $^{1}/_{3}$ ಭಾಗದಷ್ಟಿರುವ ಈ ಖಂಡದಲ್ಲಿ ಅದರ ಶೇಕಡ 60 ರಷ್ಟು ಜನ ವಾಸಿಸುತ್ತಾರೆ.

ಮೇಲ್ಮೈಲಕ್ಷಣ: ಏಷ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು:

1. ಉತ್ತರದ ತಗ್ಗು ಪ್ರದೇಶ. ಆರ್ಕ್‍ಟಿಕ್ ಸಾಗರದಿಂದ ನೈಋತ್ಯಾಭಿಮುಖವಾಗಿ ಮಹಾತ್ರಿಭುಜದಂತೆ ಹಬ್ಬಿರುವ ಈ ಭಾಗ ಸೈಬೀರಿಯದ ಬಹು ಭಾಗವನ್ನೊಳಗೊಂಡಿದೆ. ಯುರೋಪಿನ ಮಹಾಮೈದಾನಕ್ಕೂ ಇದಕ್ಕೂ ನಡುವೆ ಯೂರೆಲ್ ಪರ್ವತಗಳು ಗಡಿರೇಖೆ. ಇಲ್ಲಿ ಹರಿಯುವ ಓಬಿ, ಯೆನಿಸೀ ಮತ್ತು ಲೀನ ನದಿಗಳು ಬಲು ಉದ್ದ, ನಿಧಾನ. ಆರ್ಕ್‍ಟಿಕ್ ಸಾಗರದ ಕಡೆಗೆ ನೆಲದ ಇಳಿಜಾರು ಬಲು ಅಲ್ಪ. ಇವುಗಳ ಮುಖಭಾಗದಲ್ಲಿ ನೀರು ವರ್ಷದಲ್ಲಿ ಕೆಲಕಾಲ ಹೆಪ್ಪುಗಟ್ಟುತ್ತದೆ. ಆಗ ಮೇಲ್ಗಡೆಯಿಂದ ಹರಿದು ಬಂದ ನೀರು ಮುಂದೆ ಹರಿಯಲಾಗದೆ ಭೂಮಿ ಮೇಲೆ ಹರಡುವುದು ಅನಿವಾರ್ಯ. ತತ್ಫಲವಾಗಿ ಆ ಭೂಮಿಯೆಲ್ಲ ಜೌಗಾಗಿ ಪರಿಣಮಿಸುತ್ತದೆ. ನೈಋತ್ಯದಲ್ಲಿ ಆರಲ್ ಸರೋವರದ ಪ್ರದೇಶ ಒಂದು ಬೋಗುಣಿಯಂತಿದ್ದು ಇದರೊಳಕ್ಕೆ ಕೆಲವು ನದಿಗಳು ಹರಿಯುತ್ತವೆ.

2. ಉತ್ತರದ ತಗ್ಗುನೆಲಕ್ಕೆ ದಕ್ಷಿಣದಲ್ಲಿರುವ ಕೇಂದ್ರೀಯ ತ್ರಿಭುಜವೇ ಏಷ್ಯದ ಎರಡನೆಯ ಭಾಗ. ಏಷ್ಯದ ಮಹಾಪರ್ವತಶ್ರೇಣಿಗಳನ್ನೂ ಅವುಗಳ ಹೆಗಲ ಮೇಲೆ ಕುಳಿತ ಪ್ರಸ್ಥಭೂಮಿಗಳನ್ನೂ ಒಳಗೊಂಡಿರುವುದು ಈ ಪ್ರದೇಶವೇ. ಈ ತ್ರಿಭುಜದ ಪಶ್ಚಿಮಕ್ಕೆ ಏಷ್ಯ ಮೈನರ್‌ವರೆಗೂ ಆಗ್ನೇಯದಲ್ಲಿ ಇಂಡೋ–ಚೀನ ಮತ್ತು ಈಸ್ಟ್ ಇಂಡೀಸ್‍ಗಳ ಉದ್ದಕ್ಕೂ ಪರ್ವತಗಳು ಕವಲೊಡೆದಿವೆ.

ಹೀಗೆ ಕೆಂಪುಸಮುದ್ರದಿಂದ ಬೆರಿಂಗ್ ಜಲಸಂಧಿಯವರೆಗೂ ಹಬ್ಬಿರುವ ಪರ್ವತಾವಳಿಗಳು ಅತ್ಯಂತ ಆಕರ್ಷಣೀಯ. ಇವು ಪ್ರಪಂಚದ ಮಧ್ಯಂತರ ಪರ್ವತಾವಳಿಯ ಒಂದು ಭಾಗ. ಆಗ್ನೇಯ, ವಾಯವ್ಯ ಏಷ್ಯಗಳ ಮಧ್ಯೆ ವಾಯುಗುಣದ ಪ್ರಭಾವ ಹಾಗೂ ಸಂಚಾರ ಮಾರ್ಗಗಳಿಗೆ ಇವು ದೊಡ್ಡ ಅಡ್ಡಿ. ಆರ್ಮೀನಿಯನ್ ಮತ್ತು ಪಾಮಿರ್ ಪರ್ವತಗ್ರಂಥಿಗಳಲ್ಲಿ ಇವುಗಳ ಉಗಮ. ಇವು ಒಳನಾಡಿನ ಜಲಾನಯನ ಪ್ರದೇಶಗಳು.

ಆರ್ಮೀನಿಯನ್ ಗ್ರಂಥಿಯಿಂದ ಪೂರ್ವದ ಕಡೆಗೆ ಇರಾನ್ ಪ್ರಸ್ಥಭೂಮಿಯ ಉತ್ತರಕ್ಕೆ ಇರುವ ಪರ್ವತಗಳು ಎಲ್‍ಬರ್ಜ್ ಮತ್ತು ಕೊಪೆಟ್‍ದಾಗ್. ಡಮಾವಂಡ್ (5630 ಮೀ) ಅತ್ಯುನ್ನತ ಶಿಖರ. ಈ ಪರ್ವತಗಳು ಹಿಂದೂಕುಷ್ ಪರ್ವತಗಳ ಮುಖಾಂತರ ಪಾಮಿರ್ ಗ್ರಂಥಿ ತಲಪುತ್ತವೆ. ಇದರ ಇನ್ನೊಂದು ಕವಲೇ ಸುಲೇಮಾನ್ ಪರ್ವತವಾಗಿ ಪಾಮಿರ್ ಗ್ರಂಥಿಯನ್ನು ತಲಪುತ್ತದೆ. ಇಲ್ಲಿ ಭೂಕಂಪಗಳು ಹೆಚ್ಚು. ಈ ಭೂಭಾಗ ಇನ್ನೂ ಅಸ್ಥಿರ ಎಂಬುದು ಸ್ಪಷ್ಟ.

ಇಲ್ಲಿನ ಆನೇಕ ಪರ್ವತಾವಳಿಗಳು ಚೆಲ್ಲಾಪಿಲ್ಲಿಯಾಗಿ ಅವ್ಯವಸ್ಥಿತವಾಗಿ ಹರಡಿವೆಯಾದರೂ ಮುಖ್ಯವಾದ ಪರ್ವತಸಾಲುಗಳು ಇರಾನಿನಿಂದ ಪೆಸಿಫಿಕ್ ಸಾಗರದ ವರೆಗೆ ಕ್ರಮಬದ್ಧವಾದ ರೀತಿಯಲ್ಲಿ ಹರಡಿವೆ. ಇವುಗಳ ಪೈಕಿ ಅತ್ಯಂತ ಉತ್ತರದಲ್ಲಿ ಆಗ್ನೇಯಾಭಿಮುಖವಾಗಿ ಸಾಗುವುದೇ ಟಿಯೆನ್ ಷಾನ್ ಶ್ರೇಣಿ. ಚೀನದವರು ಇದನ್ನು ಸ್ವರ್ಗಪರ್ವತವೆಂದು ಕರೆಯುತ್ತಾರೆ. ಇದರಿಂದ ಭಿನ್ನವಾಗಿರುವ ಆಲ್ಟೈ ಪರ್ವತ. ಟಯೆನ್ ಷಾನ್ ದಕ್ಷಿಣಕ್ಕಿರುವ ಎರಡು–ಮೂರನೆಯ ಶ್ರೇಣಿಗಳು ಕೂನ್‍ಲೂನ್ ಮತ್ತು ಆಸ್ಟಿನ್‍ಟಾಗ. ಕೂನ್‍ಲೂನ್ ಏಷ್ಯದ ಬೆನ್ನೆಲುಬು, ಚೀನದ ಬೀಸಣಿಗೆ. ಹಲವು ಕವಲುಗಳಿರುವ ಈ ಪರ್ವತದ ವಿಸ್ತಾರ 1127 ಕಿಮೀ. ಒಂದು ದೃಷ್ಟಿಯಲ್ಲಿ ಆಸ್ಟಿನ್ ಟಾಗ ಇದರ ಭಾಗ. ಇದು ಪುರಾತನ, ನಗ್ನೀಕೃತ, ಪಿಷಿಹ್‍ಷಾನ್ ಇನ್ನೊಂದು ಕವಲು. ಇದರ ಎತ್ತರ ಇನ್ನೂ ನಿಖರವಾಗಿ ಪತ್ತೆಯಾಗಿಲ್ಲ.

ಇವೆಲ್ಲಕ್ಕಿಂತ ಭವ್ಯವಾಗಿರುವ ಶ್ರೇಣಿಗಳೆಂದರೆ ಹಿಮಾಲಯ. ಹಿಮಾಲಯದಲ್ಲಿ ಐದು ಸಮಾನಾಂತರ ಉಪಶ್ರೇಣಿ ವಿಭಾಗಗಳಿವೆ. ಬೃಹತ್ ಹಿಮಾಲಯದಲ್ಲಿ 8848 ಮೀ. ಗಿಂತಲೂ ಎತ್ತರವಾಗಿರುವ 60ಕ್ಕಿಂತಲೂ ಹೆಚ್ಚು ಶಿಖರಗಳುಂಟು. ಕಿರಿ ಹಿಮಾಲಯದಲ್ಲಿರುವ ಪರ್ವತಸಾಲುಗಳು ಅನೇಕ. 8848 ಮೀ ಎತ್ತರವಾಗಿರುವ ಎವರೆಸ್ಟ್ ಪ್ರಪಂಚದ ಮಹೋನ್ನತ ಶಿಖರ. ಇದು ಪ್ರಪಂಚದ ಮಾತೃದೇವತೆ (ಜೋಮೊಉಂಗ್ಮ). ಕಾಂಚನಗಂಗಾ (ಕಂಚಿನ್‍ಜಂಗಾ–8470 ಮೀ), ಮಕಲು (8174 ಮೀ), ಧವಳಗಿರಿ (7890 ಮೀ), ನಂಗಪರ್ಬತ್ (7841 ಮೀ), ಅನ್ನಪೂರ್ಣ (7795 ಮೀ), ಗೋಸೈನ್‍ಟಾನ್ (7733 ಮೀ)–ಇವು ಇತರ ಕೆಲವು ಮುಖ್ಯ ಶಿಖರಗಳು.

ಮೈಯನ್ಮಾರ್‌ದಲ್ಲಿ ಈ ಪರ್ವತಗಳು ದಕ್ಷಿಣಾಭಿಮುಖವಾಗಿ ಮುಂದುವರಿಯುತ್ತವೆ. ಅಲ್ಲಿ ಇವುಗಳ ಹೆಸರು ಅರಕಾನ್ ಹಾಗೂ ಪೆಗು ಯೋಮ. ಅಂಡಮಾನ್, ನಿಕೋಬಾರ್ ಮತ್ತು ಇಂಡೊನೇಷ್ಯಗಳ ಮುಖಾಂತರ ಸಾಗುವ ಈ ಪರ್ವತಶ್ರೇಣಿಗಳು ಮಲಯ ಮತ್ತು ಅನ್ನಾಂ ಪರ್ವತಗಳಾಗಿ ಒಡೆದು ಮುಂದುವರಿದು ಕಣ್ಮರೆಯಾಗುತ್ತವೆ.

ಹಿಮಾಲಯಕ್ಕಿಂತ ಕಡಿಮೆ ಎತ್ತರವುಳ್ಳದ್ದೆಂದರೆ ಕಾರಕೋರಂ. ಇದು ವಾಯವ್ಯದಲ್ಲಿಯ ತುರ್ಕಿಸ್ತಾನದ ಕಡೆಗೆ ಮುಂದುವರಿಯುತ್ತದೆ. ಇಲ್ಲಿ ಗಾಡ್ವಿನ್ ಆಸ್ಟಿನ್ ಎಂಬ ಶಿಖರವಿದೆ. ಇದು ಪ್ರಪಂಚದ ಎರಡನೆಯ ಉನ್ನತ ಶಿಖರ (8611 ಮೀ) ಇದರೊಂದಿಗೆ ಗಷೆರ್ ಬ್ರುಮ್ (7785 ಮೀ) ಮತ್ತು ರಕಪೂಷಿ (7518 ಮೀ) ಶಿಖರಗಳೂ ಇಲ್ಲಿವೆ.

ಪರ್ವತಗಳ ಮಧ್ಯದಲ್ಲಿರುವ ಟಿಬೆಟ್ ಒಂದು ಬೃಹತ್ ಪ್ರಸ್ಥಭೂಮಿ, ಪ್ರಪಂಚದ ಮೇಲ್ಚಾವಣಿ. ಇದು 4700–5300 ಮೀ ಎತ್ತರ, 2415 ಕಿಮೀ ಉದ್ದ, 1288 ಕಿಮೀ ಅಗಲ ಇದೆ.

ಪಾಮಿರ್ ಗ್ರಂಥಿ ಇನ್ನೂ ಎತ್ತರ (5882 ಮೀ). ಈ ಗ್ರಂಥಿಯಲ್ಲಿ ಒಂದರೊಳಗೊಂದು ಸೇರಿರುವ ಕಡಿದು ಬಂಡೆಗಳೂ ಶಿಲಾಪರ್ವತಗಳೂ ಇವೆ.

ಏಷ್ಯದ ಪೂರ್ವದ ಅಂಚಿನ ಉದ್ದಕ್ಕೂ ಮಾಲೆಯಾಕಾರದಲ್ಲಿ ಹಬ್ಬಿರುವ ದ್ವೀಪಗಳ ಮೇಲೆ ಪರ್ವತಗಳ ಹಲವು ಸರಪಣಿಗಳಿವೆ. ಈ ದ್ವೀಪಗಳು ಅಗ್ನಿಪರ್ವತಗಳಿಂದಾದವು.

ಏಷ್ಯದ ಮಡಿಕೆ ಪರ್ವತಶ್ರೇಣಿಗಳ ನಡುವಣ ಪ್ರದೇಶಗಳು ಪ್ರಸ್ಥ ಭೂಮಿಗಳು. ಇವುಗಳಲ್ಲಿ ಹಲವು ಚಪ್ಪಟೆಯಾಗಿವೆ. ಹಿಮಾಲಯ ಕುನ್‍ಲುನ್ ಪರ್ವತಗಳ ನಡುವೆ ಇರುವುದು ಟಿಬೆಟ್ ಪ್ರಸ್ಥಭೂಮಿ. ಕುನ್‍ಲುನಿಗೂ ಟಿಯನ್‍ಶಾನ್ ಪರ್ವತಗಳಿಗೂ ನಡುವೆ ಇರುವ ಸಣ್ಣ ಬೋಗುಣಿ ಟಿಬೆಟ್ ಪ್ರಸ್ಥ ಭೂಮಿಗಿಂತ ಸ್ವಲ್ಪ ತಗ್ಗು; ಜೌಗು ಟಾರಿಮ್ ತಗ್ಗು ಪ್ರದೇಶ. ಆಸ್ಟಿನ್‍ಟಗ ಮತ್ತು ಟಿಯೆನ್‍ಶಾನ್– ಪರ್ವತಗಳ ನಡುವೆ ಇರುವ ಜಂಗೇರಿಯನ್ ಬೋಗುಣಿ ಶುಷ್ಕ. ಆಲ್ಟೈಗೆ ದಕ್ಷಿಣದಲ್ಲಿ ಟಿಯನ್‍ಶಿನ್ ಪರ್ವತಗಳ ಈಶಾನ್ಯಕ್ಕೆ ಇರುವ ಪ್ರದೇಶವೇ ಗೋಬಿ ಮರುಭೂಮಿ. ಪಾಮಿರ್ ಗ್ರಂಥಿಯ ಪಶ್ಚಿಮದ ಉತ್ತರ ದಕ್ಷಿಣ ಪರ್ವತ ಕವಲುಗಳ ನಡುವೆ ಪರ್ಷಿಯದ ಬಹುಭಾಗನ್ನಾವರಿಸಿರುವುದು ಇರಾನ್ ಪ್ರಸ್ಥಭೂಮಿ. ಕಪ್ಪು ಸುಮುದ್ರಕ್ಕೂ ಮೆಡಿಟರೇನಿಯನ್ ಸಮುದ್ರಕ್ಕೂ ನಡುವೆ ಆರ್ಮೀನಿಯನ್ ಗ್ರಂಥಿಗೆ ಪಶ್ಚಿಮದಲ್ಲಿ ಏಷ್ಯ ಮೈನರ್ ಪ್ರಸ್ಥಭೂಮಿ ಇದೆ.

ದಕ್ಷಿಣದ ಪುರಾತನ ಪ್ರಸ್ಥಭೂಮಿಗಳು ಏಷ್ಯದ ಇನ್ನೊಂದು ಭೌಗೋಳಿಕ ವಿಭಾಗ, ಅರೇಬಿಯ ಪ್ರಸ್ಥಭೂಮಿ ಹಳೆಯ ಗಟ್ಟಿ ಬಂಡೆಗಳಿಂದ ಕೂಡಿದ್ದು. ಪಶ್ಚಿಮದ ಕೆಂಪು ಸಮುದ್ರದ ಅಂಚು ಕಡಿದು, ಎತ್ತರ. ಪೂರ್ವಾಭಿಮುಖವಾಗಿ ಇಳಿಜಾರು. ಟೈಗ್ರಿಸ್ ಕಣಿವೆಯಲ್ಲಿ ಇದು ಅಂತ್ಯವಾಗುತ್ತದೆ. ಈ ಪ್ರದೇಶ ಬಲು ಶುಷ್ಕ. ಇಲ್ಲಿ ನದಿಗಳಿಲ್ಲ.

ಭಾರತ ಪರ್ಯಾಯದ್ವೀಪದ ದಕ್ಷಿಣದ ಪ್ರಸ್ಥಭೂಮಿಯೂ ಪಶ್ಚಿಮದಿಂದ ಪೂರ್ವಕ್ಕೆ ಇಳುಕಲಾಗಿದೆ. ಇದರ ಪಶ್ಚಿಮದ ಸೆರಗೇ ಪಶ್ಚಿಮಘಟ್ಟ. ಪೂರ್ವದಲ್ಲಿ ತಗ್ಗಾದ ಪೂರ್ವಘಟ್ಟ, ಮಹಾನದಿ, ಗೋದಾವರಿ ಮುಂತಾದ ನದಿಗಳು ಅಲ್ಲಲ್ಲಿ ಈ ಪ್ರಸ್ಥಭೂಮಿಯನ್ನು ಭೇದಿಸಿವೆ.

ಮಯನ್ಮಾರ್ ಪೂರ್ವಕ್ಕಿರುವ ಇನ್ನೊಂದು ಪ್ರಸ್ಥಭೂಮಿ, ಪುರಾತನ ಶಿಲಾಶಾಖೆಯೊಂದು ಮಲಯ ಪರ್ಯಾಯದ್ವೀಪದವರೆಗೂ ಹಬ್ಬಿದೆ. ಈ ಪ್ರಸ್ಥಭೂಮಿಗೆ ಅಡ್ಡಲಾಗಿಯೂ ಹಲವು ನದಿಗಳಿವೆ (ಉದಾ: ಸಾಲ್ವೀನ್, ಮೇಕಾಂಗ್, ಯಾಂಗ್ಟ್ಸಿ).

ಏಷ್ಯದ ನಾಲ್ಕನೆಯ ಮುಖ್ಯ ಭೌಗೋಳಿಕ ವಿಭಾಗವೇ ಮಹಾನದಿಗಳ ಮೈದಾನಗಳು. ಇವು ಫಲವತ್ತಾದ ತಗ್ಗುನೆಲಗಳು. ಯೂಫ್ರೆಟೀಸ್ ಮತ್ತು ಟೈಗ್ರಿಸ್ ಮೈದಾನ, ಸಿಂಧೂನದಿ ಮೈದಾನ, ಗಂಗಾ–ಬ್ರಹ್ಮಪುತ್ರಾ ಮೈದಾನ, ಇರವಾಡಿ ಮೈದಾನ, ಮೀನಾಮ್ ಮೇಕಾಂಗ್ ನದೀ ಕಣಿವೆಗಳು, ಯಾಂಗ್ಟ್ಸೀ ಕಣಿವೆ, ಹ್ವಾಂಗ್ ಹೋ ನದೀ ಪ್ರದೇಶ – ಇವು ಈ ವಿಭಾಗಕ್ಕೆ ಸೇರಿದವು.

ಏಷ್ಯದಲ್ಲಿ ಎತ್ತರವಾಗಿರುವ ಪ್ರದೇಶಗಳಿರುವಂತೆ ಅತ್ಯಂತ ಆಳವಾದ ತಗ್ಗು ಪ್ರದೇಶಗಳೂ ಜೌಗುಪ್ರದೇಶಗಳೂ ಇವೆ. ಪ್ರಪಂಚದಲ್ಲಿ ಎಲ್ಲಕ್ಕಿಂತ ಆಳವಾದ ತಗ್ಗುಪ್ರದೇಶವೆಂದರೆ ಜೋರ್ಡಾನ್ ಇಸ್ರೇಲ್ ನಡುವೆ ಇರುವ ಮೃತಸರೋವರ ಪ್ರದೇಶ. ಇದು ಮೆಡಿಟರೇನಿಯನ್ ಸಮುದ್ರ ಮಟ್ಟಕ್ಕಿಂತ 378 ಮೀ ತಗ್ಗಿನಲ್ಲಿದೆ. ಮಂಗೋಲಿಯದಲ್ಲಿನ ಅನೇಕ ಪ್ರದೇಶಗಳೂ ಕ್ಯಾಸ್ಪಿಯನ್ ಸಮುದ್ರದ ಉತ್ತರ ಹಾಗೂ ಪೂರ್ವ ತೀರಗಳೂ ಇಂಥ ಇನ್ನೆರಡು ಪ್ರದೇಶಗಳು. ಚೀನದ ಸೈಡಾಂ ಜೌಗುಪ್ರದೇಶ 265 ಮೀ ತಗ್ಗಿನಲ್ಲೂ ಟರ್ಫಾನ್ ಓಯಸಿಸ್ 265 ಮೀ ಕೆಳಗೂ ಇವೆ.

ನದಿಗಳು: ಈ ಖಂಡದ ಹೆಚ್ಚುಭಾಗ ಸಾಮಾನ್ಯ ರೀತಿಯ ನದಿ ಹಂಚಿಕೆ ವ್ಯವಸ್ಥೆಯನ್ನು ಹೊಂದಿದ್ದರೂ ಮಧ್ಯದ ಒಳಪ್ರದೇಶ ನದಿಗಳ ಮುಖಾಂತರ ಸಾಗರದೊಂದಿಗೆ ಸಂಬಂಧ ಹೊಂದಿಲ್ಲ. ಇದು ಖಂಡದ ಹೃದಯಭಾಗ. ಇದನ್ನು ಪರ್ವತಶ್ರೇಣಿಗಳು ಸುತ್ತುವರಿದಿವೆ. ಅನೇಕ ಖಂಡಾಂತರ ಜಲಾನಯನ ಪ್ರದೇಶಗಳು ಇಲ್ಲಿವೆ. 129.5 ಲಕ್ಷ ಚ.ಕಿಮೀ ವಿಸ್ತಾರವಾಗಿರುವ ಈ ಪ್ರದೇಶದಲ್ಲಿ ಮಳೆ ವಿರಳ. ನೀರು ಅತಿಯಾಗಿ ಆವಿಯಾಗುತ್ತದೆ. ಆದ್ದರಿಂದ ಸಾಗರಗಳನ್ನು ತಲಪುವ ಮಟ್ಟಿಗೂ ನೀರು ಒದಗಿಸಲು ನದಿಗಳಿಗೆ ಸಾಧ್ಯವಾಗಿಲ್ಲ. ಇಲ್ಲಿನ ಒಂದು ತೊಟ್ಟು ಮಳೆ ನೀರೂ ಸಾಗರ ಸೇರುವುದಿಲ್ಲ.

ಆಫ್ಘಾನಿಸ್ತಾನದ ಪರ್ವತಗಳಿಂದ ಹರಿದು ಬರುವ, ಕರಗಿದ ಹಿಮಜಲದಿಂದ ಕೂಡಿರುವ, ಹೆಲ್‌ಮಂಡ್ ನದಿ ಇರಾನಿನ ಸೈಸ್ತಾನಿನ ಉಪ್ಪುನೀರಿನ ಸರೋವರಗಳಿಂದ ಕೂಡಿದ ಜೌಗುಪ್ರದೇಶದಲ್ಲಿ ಕಣ್ಮರೆಯಾಗುತ್ತದೆ. ಹಿಂದೂಕುಷ್ ಪರ್ವತಗಳಿಂದ ಉತ್ತರದ ಕಡೆ ಹರಿಯುವ ಆಮೂ ದಾರ್ಯಾ (2254 ಕಿಮೀ) ಮತ್ತು ಸಿರ್‌ದಾರ್ಯಾ (2415 ಕಿಮೀ) ಗಳಿಗೆ ಅರಲ್ ಸಮುದ್ರವೇ ಗುರಿ. ಪೂರ್ವದ ಕಡೆ 1600 ಕಿಮೀಗಿಂತಲೂ ಹೆಚ್ಚು ದೂರ ಹರಿಯುವ ಟಾರೀಮ್ ನದಿ ಲೋಪನೋರ್ ಎಂಬ ಶುಷ್ಕ ಶೂನ್ಯ ಪ್ರದೇಶದಲ್ಲಿ ಕಣ್ಮರೆಯಾಗುತ್ತದೆ. ಇಲ್ಲಿ ನದಿಯ ಲೀನ ಬಾಲ್ಕಷ್ ಸರೋವರದಲ್ಲಿ.

ಆದರೆ ಏಷ್ಯದ ಮಧ್ಯದಲ್ಲಿ ಹುಟ್ಟುವ ಅನೇಕ ಬೃಹತ್ ನದಿಗಳು ಸಾಗರಗಳನ್ನು ತಲುಪುತ್ತವೆ. ಈಗಿನ ಸಿಂಧೂ, ಗಂಗಾ, ಬ್ರಹ್ಮಪುತ್ರಾ ಮೂಲನದಿಗಳನ್ನೂ ಅವುಗಳ ಉಪನದಿಗಳನ್ನೂ ಒಳಗೊಂಡಂತೆ ಇಂಡೋ-ಬ್ರಹ್ಮ ನದಿ ಸುಮಾರು ಎರಡು ಕೋಟಿ ವರ್ಷಗಳ ಹಿಂದೆ ಹಿಮಾಲಯಪ್ರದೇಶಗಳಲ್ಲಿ ಹುಟ್ಟಿ 4000 ಕಿಮೀ ಉದ್ದದ ಕಣಿವೆಯೊಂದರಲ್ಲಿ ಬೃಹತ್ ಪ್ರಮಾಣದಲ್ಲಿ ಪ್ರವಹಿಸಿ ಅರಬ್ಬೀ ಸಮುದ್ರವನ್ನು ಸೇರುತ್ತಿತ್ತೆಂಬ ಅಭಿಪ್ರಾಯ ಇದೇ ಇಂಡೋ-ಬ್ರಹ್ಮ್ ಪರಿಭಾವನೆ. ಪ್ರಪಂಚದ 12 ದೊಡ್ಡ ನದಿಗಳಲ್ಲಿ ಏಳು ಏಷ್ಯ ಖಂಡದಲ್ಲಿವೆ. ಇವುಗಳಲ್ಲಿ ಮೂರು ನದಿಗಳು (ಓಬಿ, ಎನಿಸಿ, ಲೀನಾ) ಉತ್ತರದ ಕಡೆ ಹರಿದು ಆರ್ಕ್‌ಟಿಕ್ ಸಾಗರ ಸೇರುತ್ತವೆ. ಬೇಸಗೆಯಲ್ಲಿ ಓಬಿ ನದಿ ಇರ್‌ಟಿಷ್‌ನೊಂದಿಗೆ ಕೂಡಿ ಪಾತ್ರವನ್ನು ಮೀರಿ ದಡಗಳಲ್ಲಿ ಹರಿದು 2,59,000 ಚ.ಕಿಮೀ ಅಭೇದ್ಯ ಜೌಗುಪ್ರದೇಶ ನಿರ್ಮಿಸುತ್ತದೆ. ಎನಿಸಿ (4508 ಕಿಮೀ) ಮತ್ತು ಲೀನಾ (4830 ಕಿಮೀ) ಕೆಲವು ಕಡೆ 32 ಕಿಮೀ ಅಗಲವಾಗಿವೆ. ಯಾನ, ಇಂಡಿಗಿರ್ಕಾ ಮತ್ತು ಕೊಲಿಮಗಳು-ಇಲ್ಲಿನ ಚಿಕ್ಕ ನದಿಗಳು. ಇವೆಲ್ಲವೂ ಚಳಿಗಾಲದಲ್ಲಿ (ಹೆಚ್ಚಾಗಿ ಉತ್ತರಾರ್ಧ ಭಾಗಗಳು) ಹೆಪ್ಪುಗಟ್ಟುತ್ತವೆ. ಪೆಸಿಫಿಕ್ ಸಾಗರವನ್ನು ಸೇರುವ ಹಾಗೂ ಪೂರ್ವದ ಕಡೆ ಹರಿಯುವ ನದಿಗಳಲ್ಲಿ ಆಮೂರ್ (2866 ಕಿಮೀ ಉದ್ದ), ಹ್ವಾಂಗ್‌ಹೋ (4347 ಕಿಮೀ ಉದ್ದ) ಯಾಂಗ್ಟ್ಸೀ (4991 ಕಿಮೀ ಉದ್ದ) ಮತ್ತು ಮೇಕಾಂಗ್ (4186 ಕಿಮೀ ಉದ್ದ) ಮುಖ್ಯವಾದವು. ಆಮೂರ್ ನದಿ ಮಂಚೂರಿಯದ ಉತ್ತರದ ಅಂಚಿನಲ್ಲಿ ಹರಿದು, ಉತ್ತರ ಕಡೆ ತಿರುಗಿ ಓಹಟ್ಸ್ಕ್ ಸಮುದ್ರ ಸೇರುತ್ತದೆ. ಹ್ವಾಂಗ್ ಹೋ ಅತ್ಯಂತ ನಿರ್ದಯಿ ನದಿ. ಚೀನದ ಕಣ್ಣೀರು ಎಂದು ಇದರ ನಾಮಧೇಯ. ಯಾಂಗ್ಟ್ಸೀ ಕಿಯಾಂಗ್ ಕಡಿದಾದ ಬೆಟ್ಟಗಳಿಂದ ಹರಿದು ಬಂದು ಚೀನವನ್ನು ಉತ್ತರ-ದಕ್ಷಿಣಾರ್ಧಗಳನ್ನಾಗಿ ಮಾಡಿ ಪೆಸಿಫಿಕ್ ಸಾಗರ ಸೇರುತ್ತದೆ. ಯುನಾನ್, ಮೀನಂ, ಸಿಯಾಂಗ್, ಮಿನ್ ಹ್ವಾಯಿ, ಹಾಯಿ, ಲಿಆವೊ-ಇಲ್ಲಿನ ಚಿಕ್ಕ ನದಿಗಳು.

ಆಗ್ನೇಯ ಏಷ್ಯದಲ್ಲಿನ ಮೇಕಾಂಗ್, ಇರವಾಡಿ, ಸಾಲ್ವಿನ್ (2818 ಕಿಮೀ) ನದಿಗಳು ಒಂದಕ್ಕೊಂದು ಸಮಾನಾಂತರವಾಗಿ ಉತ್ತರ-ದಕ್ಷಿಣವಾಗಿ ಹರಿಯುತ್ತವೆ.

ಹಿಂದೂ ಸಾಗರವನ್ನು ಸೇರುವ ನದಿಗಳಲ್ಲಿ ಸಿಂಧೂ (2737 ಕಿಮೀ), ಗಂಗಾ (2480 ಕಿಮೀ) ಮುಖ್ಯ. ಟಿಬೆಟ್ಟಿನಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಹರಿಯುವ ಬ್ರಹ್ಮಪುತ್ರಾ ನದಿ ಬಂಗಾಲ ಕೊಲ್ಲಿ ಸೇರುವುದಕ್ಕೆ ಮುಂಚೆ ಹಿಮಾಲಯಗಳಿಂದ ಹರಿದು ಬರುವ ಗಂಗಾ ನದಿಯನ್ನು ಕೂಡಿ ಪ್ರಪಂಚದಲ್ಲಿ ಅತ್ಯಂತ ವಿಶಾಲ ಮುಖಜಭೂಮಿಯನ್ನು ನಿರ್ಮಾಣಮಾಡಿದೆ. ಸಿಂಧೂನದಿ ಹಿಮಾಲಯ ಪರ್ವತಗಳಲ್ಲಿ ಜನಿಸಿ ಉಪ-ನದಿಗಳೊಂದಿಗೆ ಕೂಡಿ ಅರಬ್ಬೀ ಸಮುದ್ರ ಸೇರತ್ತದೆ. ಸಾಲ್ವೀನ್, ಸಿಟ್ಟಾಂಗ್, ಇರವಾಡಿ ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿ, ನರ್ಮದಾ, ತಪತಿ-ಇಲ್ಲಿನ ಇತರ ನದಿಗಳು. ಅತ್ಯಂತ ಪಶ್ಚಿಮದಲ್ಲಿರುವ ಯೂಫ್ರಟೀಸಿನ ಉದ್ದ 2737 ಕಿಮೀ. ಇದು ಟೈಗ್ರಿಸಿನೊಂದಿಗೆ (1771 ಕಿಮೀ) ಕೂಡಿ ಪರ್ಷಿಯನ್ ಕೊಲ್ಲಿ ಸೇರುತ್ತದೆ.

ಸರೋವರಗಳು: ಅತಿಯಾದ ತೇವದಿಂದ ಕೂಡಿದ್ದ ಪ್ರಾರಂಭಿಕ ಯುಗದಲ್ಲಿ ಆರಲ್ ಸಮುದ್ರ ವಿಸ್ತಾರವಾಗಿ ವಿಶಾಲವಾದ ಕ್ಯಾಸ್ಪಿಯನ್ ಸಮುದ್ರದವರೆಗೂ ಹರಡಿದ್ದು ಅಲ್ಲಿಂದ ಮುಂದೆ ಕಪ್ಪುಸಮುದ್ರದವರೆಗೂ ತನ್ನ ಕೈಚಾಚಿತ್ತು. ಕಪ್ಪು ಸಮುದ್ರವೇ ಪ್ರಪಂಚದ ಅತ್ಯಂತ ದೊಡ್ಡ ನಡುಗಡಲು 4,31,360 ಚ.ಕಿಮೀ. ಆರಲ್ ಸಮುದ್ರದ ವಿಸ್ತೀರ್ಣ 66,560 ಚ.ಕಿಮೀ. ಬಾಲ್ಕಾಷ್ 17,152 ಚ.ಕಿಮೀ ಮತ್ತು ಇಸಿಕ್‌ಕಲ್ 5632 ಚ.ಕಿಮೀ. – ಇವೂ ಪ್ರಪಂಚದ ಪ್ರಮುಖ ಸರೋವರಗಳಲ್ಲಿ ಸೇರಿವೆ. ದಕ್ಷಿಣ ಸೈಬೀರಿಯದಲ್ಲಿರುವ ಬೈಕಲ್ ಸರೋವರ (31,129 ಚ.ಕಿಮೀ) ಪ್ರಪಂಚದ ಅತಿ ವಿಶಾಲವಾದ ಸಿಹಿನೀರಿನ ಸರೋವರ. ಸರಾಸರಿ 1.6 ಕಿಮೀ ಆಳವಾಗಿರುವುದರಿಂದ ಬೃಹತ್ ಪ್ರಮಾಣದ ನೀರು ಇದರಲ್ಲಿದ್ದು ಇತರ ವಿಶಾಲ ಸರೋವರಗಳಿಗಿಂತಲೂ ಇದು ಹೆಚ್ಚು ನೀರನ್ನು ಹೊಂದಿದೆ. ಟಿಬೆಟ್ ಮತ್ತು ತುರ್ಕಿಗಳಲ್ಲಿ ಅನೇಕ ಉಪ್ಪು ನೀರಿನ ಸರೋವರಗಳಿವೆ. ತುರ್ಕಿಯಲ್ಲಿನ ವಾನ್ ಮತ್ತು ಇರಾನಿನಲ್ಲಿನ ಉರ್ಮಿಯಾ ಸರೋವರಗಳು ಖನಿಜ ಭರಿತ ಜಲದಿಂದ ಕೂಡಿವೆ. ಚೀನದಲ್ಲಿ ಟುಂಗ್ ಟಿಂಗ್ ಎಂಬುದು ಒಂದು ಮುಖ್ಯ ಸರೋವರ. ಇದರ ವಿಸ್ತಾರ ಯಾಂಗ್ಟ್ಸಿ ನದಿಯ ನೀರಿನ ಪ್ರಮಾಣಕ್ಕೆ ತಕ್ಕಂತೆ ಬದಲಾವಣೆಯಾಗುತ್ತ ಹೋಗುತ್ತದೆ. ಉತ್ತರ ಚೀನದಲ್ಲಿ ಕೊಕೊ-ನೋರ್ (5980 ಚ.ಕಿಮೀ) ಉಪ್ಪು ನೀರಿನ ಸರೋವರ.

ವಾಯುಗುಣ: ಖಂಡದ ಅಸಾಧ್ಯ ವಿಸ್ತಾರ, ನಿಬಿಡತೆ, ಅಕ್ಷಾಂಶಗಳ ವ್ಯತ್ಯಾಸ, ಭೂಮಿಯ ಮೇಲ್ಮೈ ಇವು ಅನೇಕ ವಾಯುಗುಣ ಲಕ್ಷಣಗಳನ್ನು ರೂಪಿಸಿವೆ. ಖಂಡದ ಹೆಚ್ಚು ಭಾಗ ಸಮುದ್ರಕ್ಕೆ ಬಲು ದೂರದಲ್ಲಿರುವುದರಿಂದ ಸೆಕೆ ಮತ್ತು ಚಳಿಗಳ ಅತಿರೇಕಗಳನ್ನೊಳಗೊಂಡ ಖಂಡಾಂತರ ವಾಯುಗುಣವನ್ನು ಕಾಣಬಹುದು. ಅಲ್ಲದೆ ಬೇರೆ ಯಾವ ಖಂಡದಲ್ಲೂ ಪರ್ವತಶ್ರೇಣಿಗಳು ವಾಯುಗುಣದ ಮೇಲೆ ಇಲ್ಲಿಯಷ್ಟು ಪ್ರಭಾವ ಬೀರುವುದಿಲ್ಲ. ಉತ್ತರದಿಂದ ಬರುವ ಶೀತಪ್ರಭಾವಗಳನ್ನು ಮತ್ತು ದಕ್ಷಿಣದಿಂದ ಬರುವ ಉಷ್ಣತೆಯ ಪ್ರಭಾವ ಹಾಗೂ ಜಲಮಾರುತಗಳನ್ನು ಇವು ತಡೆಗಟ್ಟುತ್ತವೆ.

ಜನವರಿಯ ಉಷ್ಣತೆ ದಕ್ಷಿಣದಿಂದ ಉತ್ತರದ ಕಡೆಗೆ ಹೋದಂತೆ ಕಡಿಮೆಯಾಗುತ್ತದೆ. ಸಮತಾಪರೇಖೆಗಳು ಸಾಮಾನ್ಯವಾಗಿ ಪೂರ್ವ ಪಶ್ಚಿಮವಾಗಿವೆ. ಮಧ್ಯ ಮತ್ತು ಉತ್ತರ ಏಷ್ಯಗಳಲ್ಲಿನ ಉಷ್ಣತೆ $0^0$ ಸೆ. ಗಿಂತಲೂ ಕಡಿಮೆ. ಸೈಬೀರಿಯದಲ್ಲಿ ಚಳಿ ವಿಪರೀತ. ಲೀನಾ ನದಿ ತೀರದಲ್ಲಿನ ಸರಾಸರಿ ಉಷ್ಣತೆ ವರ್ಷಪೂರ್ತಿ ಸೊನ್ನೆಗಿಂತ ಮೇಲಿರುತ್ತದೆ. ಲೀನಾ ನದಿ ವರ್ಷದಲ್ಲಿ ಎರಡು ತಿಂಗಳು ಮಾತ್ರ ಹರಿಯುವುದು. ಹಿಮದ ಕಾಟದಿಂದ ದೂರವಿದ್ದರೂ ಇದಕ್ಕೆ ಹೊಂದಿಕೊಂಡಿರುವ ಉಪನದಿಗಳೂ ಮತ್ತಿತರ ಜಲವಿಭಾಗಗಳೂ ವರ್ಷಾಂತರಗಳಿಂದ ಹೆಪ್ಪುಗಟ್ಟಿವೆ. ಇಷ್ಟಾದರೂ ಅತ್ಯಂತ ಚಳಿಪ್ರದೇಶ ಮೇರುವಿನ ಬಳಿ ಇಲ್ಲ. ಯಾನಾ ನದಿಯ ಕಂದರದಲ್ಲಿರುವ ವರ್ಕೊಯಾನ್ಸ್ಕ್ ಅತ್ಯಂತ ಚಳಿಪ್ರದೇಶವಾಗಿದೆ.

ಬೈಕಲ್ ಸರೋವರದ ಬಳಿ ಹೆಚ್ಚಿನ ಒತ್ತಡ ನಿರ್ಮಾಣವಾಗಿ ಏಕಪ್ರಕಾರವಾಗಿ ಮುಂದುವರಿದು ಉತ್ತರದ ಬೆಟ್ಟಗಳವರೆಗೂ ಹರಡುತ್ತದೆ. ಇದನ್ನು ಆರ್ಕ್‌ಟಿಕ್‌ನ ಕಡಲ್ಗಾಳಿಗಳು ಹಿಂದಕ್ಕೆ ತಳ್ಳುತ್ತವೆ. ಬ್ಯೂರಾನ್ (ಪುರ್ಗಾ) ಅಥವಾ ಬ್ಯೂರ್ ಫಾಸ್ ಚಂಡಮಾರುತ ಅತ್ಯಂತ ಭಯಾನಕ.

ಬೇಸಗೆಯಲ್ಲಿ ನೈರುತ್ಯ ಏಷ್ಯ ಅತ್ಯುಷ್ಣಪ್ರದೇಶ. ಅರೇಬಿಯದ ಒಳಭಾಗದಲ್ಲಿ ವಾರ್ಷಿಕ ಆವಿಯಾಗುವಿಕೆ ಸು. 400 ಸೆಂಮೀ. ಇದರ ಪರಿಣಾಮವಾಗಿ ನೆಲ ಸೋಕುವುದಕ್ಕೆ ಮೊದಲೇ ಮಳೆ ಹಾಗೆಯೇ ಆವಿಯಾಗುವುದೂ ಉಂಟು. ಬಿಸಿಲಿಗೆ ನೇರವಾಗಿರುವ ಶಿಲೆಗಳು ಒಡೆದು ಸಿಡಿಯುತ್ತವೆ. ಮರಳು ನೀರಿನ ಕುದಿಯುವ ಉಷ್ಣತೆ ಪಡೆಯುವುದರಿಂದ ಇಲ್ಲಿ ಸಾಮಾನ್ಯವಾಗಿ ಹಗಲಿನಲ್ಲಿ ಪ್ರಯಾಣಮಾಡುವುದನ್ನು ತಪ್ಪಿಸಿ, ರಾತ್ರಿಯ ಹೊತ್ತು ಒಂಟೆಗಳ ಮೇಲೆ ನಕ್ಷತ್ರ ಮಾರ್ಗದರ್ಶನದಲ್ಲಿ ಪ್ರಯಾಣ ಮಾಡುವುದು ರೂಢಿ. ಪರ್ಷಿಯನ್ ಕೊಲ್ಲಿಯಲ್ಲಿನ ನೀರು ಅತ್ಯುಷ್ಣ. ಇಲ್ಲಿನ ಉಷ್ಣತೆ $35^0$ಸೆ. ತೀರಗಳಲ್ಲಿ ಕೆಲವು ಸಲ $49^0$ಸೆ. ಇರುತ್ತದೆ. ಭಾರತದ ಥಾರ್ ಮರುಭೂಮಿಯ ಪ್ರದೇಶಗಳಲ್ಲಿ ಮೈಮೇಲೆ ಹೊಪ್ಪಳಿಗೆಳೇಳುವ ಉಷ್ಣತೆಯಿಂದ ಚಂಗೇಸ್‌ಖಾನನ ಬಲಿಷ್ಠ ಸೈನ್ಯವೇ ಹೆದರಿತೆಂದು ಹೇಳಲಾಗಿದೆ. ಜುಲೈ ತಿಂಗಳಲ್ಲಿ ಮರುಭೂಮಿ ಪ್ರದೇಶಗಳೆಲ್ಲ ಅತ್ಯಂತ ಕಡಿಮೆ ಒತ್ತಡ ಪ್ರದೇಶಗಳಾಗುತ್ತವೆ.

ಅರಬ್ಬೀ ಸಮುದ್ರ ಮತ್ತು ಬಂಗಾಳ ಕೊಲ್ಲಿಗಳು ಮಾನ್ಸೂನ್ ಮಾರುತಗಳ ಕೇಂದ್ರಗಳು. ಪೂರ್ವಚೀನ ಸಮುದ್ರದಲ್ಲೂ ಇದೇ ರೀತಿಯ ಮಾನ್ಸೂನ್ ಮಾರುತಗಳ ಕೇಂದ್ರವಿದೆ.

ಅನೇಕ ಪ್ರದೇಶಗಳು ಸ್ಥಳೀಯ ಉಷ್ಣ ಮಾರುತಗಳ ಶಾಪಕ್ಕೆ ಬಲಿಯಾಗಿವೆಯೆನ್ನಬಹುದು. ವಿಶಾಲ ಪ್ರದೇಶವಾದ ಗೋಬಿ ಮರುಭೂಮಿಯಲ್ಲಿನ ಕರಬುರಾನ್ ಮಾರುತಗಳು ತುರ್ಕಿಯ ಮರುಭೂಮಿ ಹಾಗೂ ಸ್ಟೆಪ್‌ಗಳ ಮೂಲಕ ಹಾದು ಅಲ್ಲಲ್ಲಿರುವ ಸರೋವರಗಳ ಮತ್ತು ನದಿಗಳ ನೀರಿನ ತೇವ ಪಡೆದು ಕ್ಯಾಸ್ಪಿಯನ್ ಸಮುದ್ರದ ಮುಖಾಂತರ ಹಾದುಹೋಗುತ್ತವೆ. ಇವು ವಿಶಾಲವಾದ ಮಳೆ ನೆರಳಿನ ಮರುಭೂಮಿಯಿಂದ ಬರುತ್ತವೆ.

ಇರಾನಿನ ಕೆಲವು ಪ್ರದೇಶಗಳಲ್ಲಿ ಸೈಸ್ತಾನ್ ಎಂಬ 120 ದಿನಗಳ ಮಾರುತಗಳು ಗಂಟೆಗೆ 112 ಕಿಮೀ ವೇಗದಲ್ಲಿ ಬೀಸುತ್ತವೆ. ಕೆಲವು ಸಮಯದಲ್ಲಿ ಬಿರುಗಾಳಿ ಇನ್ನೂ

ಪ್ರಕೋಪ ಹೊಂದಿ ಗಂಟೆಗೆ 192 ಕಿಮೀ ಗಿಂತಲೂ ಹೆಚ್ಚು ವೇಗವಾಗಿ ಬೀಸುವುದುಂಟು. ತುರ್ಕಿಯ ಕಡೆಯಿಂದ ಪರ್ಷಿಯನ್ ಕೊಲ್ಲಿಯ ಕಡೆ ಇದೇ ರೀತಿ ಬೀಸುವುದು ಷಾಮಲ್ ಮಾರುತ.

ಟಿಬೆಟ್ ಇತ್ಯಾದಿ ಎತ್ತರದ ಪ್ರದೇಶಗಳು ಅತ್ಯುಷ್ಣತೆಯ ಕಾಟವನ್ನೇನೊ ತಪ್ಪಿಸಿಕೊಳ್ಳುತ್ತವೆ. ಆದರೆ ಶುಷ್ಕ ಮಾರುತಗಳು ಉತ್ತರದ ಕಡೆಯಿಂದ ಬೀಸುವುದರಿಂದ ಪರಿಸ್ಥಿತಿ ಅಸಹನೀಯ.

ಭಯಾನಕ ಹೂಯ್ಗಾಳಿಗಳು ಅರೇಬಿಯ ಮರುಭೂಮಿಯಿಂದ ಬೀಸಿ ದೂರದಲ್ಲಿ ಸಮುದ್ರದಲ್ಲಿರುವ ಹಡಗುಗಳನ್ನು ಮರಳಿನಿಂದ ಬಡಿಯುವುದುಂಟು. ಉತ್ತರ ಚೀನದಲ್ಲಿ ಇಂಥ ಮಾರುತಗಳ ಪ್ರಭಾವ ಅಧಿಕ. ಅಲ್ಲಿನ ದೂಳು ಮಧ್ಯ ಏಷ್ಯದಲ್ಲಿ ವಿಸ್ತರಿಸಿ ನೂರಾರು ಕಿಮೀ ಅಗಲ, ಸಾವಿರಾರು ಮೀಟರ್ ಆಳ ಸಂಚಿತವಾಗಿರುತ್ತದೆ.

ಹಿಂದೂ ಸಾಗರದಲ್ಲಿನ ಮಾನ್ಸೂನ್ ಮಾರುತಗಳ ಪ್ರಭಾವವನ್ನು ದಕ್ಷಿಣ ಏಷ್ಯದಲ್ಲೆಲ್ಲ ಕಾಣಬಹುದು. ಇವು ಈಶಾನ್ಯದಿಂದ ಆರು ತಿಂಗಳ ಕಾಲ ಬೀಸಿ, ಆಮೇಲೆ ನೈರುತ್ಯದಿಂದ ಬೀಸುತ್ತವೆ. ಪೂರ್ವಕ್ಕೆ ಹೋದಂತೆ ಅವುಗಳ ಪಥವೂ ಕಾಲಾವಧಿಯೂ ವ್ಯತ್ಯಾಸಗೊಳ್ಳುವುವು. ಜೂನಿನಿಂದ ಸೆಪ್ಟೆಂಬರ್‌ವರೆಗೆ ಬೀಸುವ ಈ ಮಾರುತಗಳು ಮಳೆಯನ್ನು ತರದಿದ್ದರೆ ಕೋಟ್ಯಂತರ ಜನ ಕ್ಷಾಮಕ್ಕೆ ಬಲಿಯಾಗುತ್ತಾರೆ. ದಕ್ಷಿಣ ಚೀನ ಮತ್ತು ಜಪಾನ್ ತೀರದಲ್ಲಿ ಬೀಸುವ ಕಡಲ್ಗಾಳಿಗಳು ಅಪಾಯಕಾರಿ.

ಏಷ್ಯದಲ್ಲಿ ಮಳೆ ಹಂಚಿಕೆ ಬಲು ಅಸಮವಾದದ್ದು. ಸೈಬೀರಿಯದಲ್ಲಿ ವಾರ್ಷಿಕ ಮಳೆ 50 ಸೆಂಮೀ ಗಳಿಗಿಂತಲೂ ಕಡಿಮೆ. ಆದರೆ ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ಮಳೆ ಬೀಳುವ ಪ್ರದೇಶ ಅಸ್ಸಾಮಿನಲ್ಲಿದೆ (ಮೌಸಿನ್‌ರಾಮ್) ಚಿರಾಪುಂಜಿಯಲ್ಲಿ ವಾರ್ಷಿಕ ಸರಾಸರಿ ಮಳೆ 1060 ಸೆಂಮೀ. 24 ಗಂಟೆಗಳಲ್ಲಿ 90 ಸೆಂಮೀ ಕಿಂತ ಹೆಚ್ಚು ಮಳೆ ಬೀಳುವುದುಂಟು. ಆದರೆ ಮಳೆ ಹಂಚಿಕೆ ವರ್ಷಪೂರ್ತಿ ಅಸಮರ್ಪಕ. ಇಲ್ಲಿನ ಒಟ್ಟು ಮಳೆ ಐದು ತಿಂಗಳಲ್ಲಿ ಮಾತ್ರ ಬೀಳುತ್ತದೆ; ವರ್ಷದ ಉಳಿದ ತಿಂಗಳುಗಳಲ್ಲಿ ಸಾಮಾನ್ಯವಾಗಿ ಮಳೆ ಇಲ್ಲ.

ದಕ್ಷಿಣ ಚೀನ, ಈಶಾನ್ಯ ಭಾರತ, ಮಯನ್ಮಾರ್, ಲಾವೋಸ್ ವಿಯಟ್ನಾಂ, ಶ್ರೀಲಂಕ–ಮಲೇಷ್ಯ – ಇವು ಅಧಿಕ ಮಳೆಯ ಪ್ರದೇಶಗಳು. ಟೈವಾನ್‌ನ ಕೆಲವು ಕಡೆಗಳಲ್ಲಿ 750 ಸೆಂಮೀ ಮಳೆಯಾಗುವುದುಂಟು. ಉಜಾನ್‌ನಲ್ಲಿ ಇದು ಇನ್ನೂ ಹೆಚ್ಚು. ಮಲೇಷ್ಯದಲ್ಲಿ ಒಂದು ಗಂಟೆಯಲ್ಲಿ ಧಾರಾಕಾರ ಮಳೆ; ಮರುಗಳಿಗೆಯಲ್ಲೆ ಅಸಾಧ್ಯ ಒಣಹವೆ. ವೆರ್ಖೋಯಾನ್ಸ್ಕ್‌ನಲ್ಲಿ ವಾರ್ಷಿಕ ಉಷ್ಣತೆಯ ವ್ಯತ್ಯಾಸ ತೀವ್ರ:. ಏಷ್ಯದ ಮುಖ್ಯ ವಾಯುಗುಣಗಳಿವು: 1. ಉಷ್ಣವಲಯದ ಮಾನ್ಸೂನ್ ವಾಯುಗುಣ ಭಾರತ, ಪಾಕಿಸ್ತಾನ, ಇಂಡೋ–ಚೀನ, ದಕ್ಷಿಣ ಚೀನಗಳಲ್ಲಿ.

2. ಭೂಮಧ್ಯರೇಖೆಯ ವಾಯುಗುಣ: ಮಲೇಷ್ಯ, ಇಂಡೋನೇಷ್ಯಗಳಲ್ಲಿ ಇದು ಅಕ್ಷಾಂಶ ಹಾಗೂ ಸಾಗರಿಕ ಪ್ರಭಾವಗಳಿಗೆ ತಕ್ಕಂತೆ ಬದಲಾಗುವುದುಂಟು. ಉಷ್ಣತೆ ಸಾಮಾನ್ಯವಾಗಿ ಹೆಚ್ಚು, ವರ್ಷಪೂರ್ತಿ ಮಳೆ. ಆದರೆ ಮೇ–ಅಕ್ಟೋಬರ್ ಅವಧಿಯಲ್ಲಿ ಅತ್ಯಂತ ಹೆಚ್ಚು ಮಳೆ. ಡಿಸೆಂಬರ್–ಜನವರಿಗಳು ಸಾಮಾನ್ಯವಾಗಿ ಶುಷ್ಕ.

3. ಸಮಶೀತೋಷ್ಣ ಮಾನ್ಸೂನ್ ವಾಯುಗುಣ: ಮಧ್ಯ ಮತ್ತು ಉತ್ತರ ಚೀನ, ಮಂಚೂರಿಯ, ಮಧ್ಯ ಮತ್ತು ದಕ್ಷಿಣ ಜಪಾನ್‌ಗಳನ್ನೊಳಗೊಂಡ ಈಶಾನ್ಯ ಏಷ್ಯ.

4. ಮರುಭೂಮಿ ಮತ್ತು ಶುಷ್ಕ ಮರುಭೂಮಿ ವಾಯುಗುಣ: ಮಾನ್ಸೂನ್ ಪ್ರದೇಶದ ವಾಯವ್ಯಕ್ಕೆ ಅರೇಬಿಯದಿಂದ ಇರಾನ್ ತುರ್ಕಿಸ್ತಾನಗಳ ಮುಖಾಂತರ ಗೋಬಿ ಮರುಭೂಮಿಯ ಅಂಚಿನವರೆಗೆ. ಇಲ್ಲಿ ಮಳೆ ಇಲ್ಲ. ಬೆಳೆಯೂ ಇಲ್ಲ. ಇರಾನ್‌ವರೆಗಿನ ಪ್ರದೇಶದಲ್ಲಿ ಉಷ್ಣವಲಯದ ವಾಯುಗುಣ, ಉಳಿದ ಕಡೆಗಳಲ್ಲಿ ಸಮಶೀತೋಷ್ಣವಲಯ ವಾಯುಗುಣ.

5. ಮೆಡಿಟರೇನಿಯನ್ ವಾಯುಗುಣ: ಮರುಭೂಮಿ ವಾಯುಗುಣ ಪ್ರದೇಶದ ವಾಯವ್ಯಕ್ಕೆ, ಮೆಡಿಟರೇನಿಯನ್ ಸಮುದ್ರದ ಅಂಚಿನಲ್ಲಿ ಮತ್ತು ತುರ್ಕಿ, ಸಿರಿಯ, ಇಸ್ರೇಲ್, ಜೋರ್ಡಾನ್‌ಗಳಲ್ಲಿದೆ. ಉಷ್ಣತೆಯ ಒಣ ಬೇಸಗೆಗಳೂ ಮಳೆಯಿಂದ ಕೂಡಿದ ಚಳಿಗಾಲಗಳೂ ಈ ವಾಯುಗುಣದ ವೈಶಿಷ್ಟ್ಯ. ಇದರ ಪ್ರಭಾವವನ್ನು ಇರಾನ್ ಪ್ರಸ್ಥಭೂಮಿಯವರೆಗೂ ಕಾಣಬಹುದು.

6. ತಂಡ್ರ ವಾಯುಗುಣ: ಇದು ಉತ್ತರದ ಅಂಚಿನಲ್ಲಿದೆ.

7. ಶೀತ ಹಿತೋಷ್ಣ (ಕೋಲ್ಡ್ ಟೆಂಪರೇಟ್) ವಾಯುಗುಣ: ಸೈಬೀರಿಯದ ಹೆಚ್ಚು ಪ್ರದೇಶಗಳಲ್ಲಿ.

ಸ್ವಾಭಾವಿಕ ಸಸ್ಯವರ್ಗ: ಏಷ್ಯದ ಸಸ್ಯವರ್ಗ ಅಲ್ಲಿನ ವಾಯುಗುಣ ಭೂಗುಣಗಳಿಗೆ ಅನುಸಾರವಾದದ್ದು. ಉಷ್ಣತೆಯೂ ತೇವವೂ ಇದನ್ನು ತೀರ್ಮಾನಿಸುತ್ತವೆ. ಉತ್ತರದಲ್ಲಿ ಸಸ್ಯ ಬೆಳವಣಿಗೆ ಚಟುವಟಿಕೆ ವರ್ಷದಲ್ಲಿ ಕೇವಲ ಮೂರು ತಿಂಗಳು ಮಾತ್ರ; ಆಗ್ನೇಯದಲ್ಲಿ ವರ್ಷಪೂರ್ತಿ ಸಸ್ಯ ಬೆಳವಣಿಗೆಯಾಗುತ್ತದೆ.

ಖಂಡದ ಉತ್ತರದ ಅಂಚಿನಲ್ಲಿ ಆರ್ಕ್‌ಟಿಕ್ ತೀರದುದ್ದಕ್ಕೂ ತಂಡ್ರ ಸಸ್ಯವರ್ಗ. ಸಾವಿರಾರು ಕಿಮೀಗಳ ವಿಸ್ತಾರದ ಒಳಮಣ್ಣು ಶಾಶ್ವತವಾಗಿ ನೂರಾರು ಮೀಟರ್‌ಗಳವರೆಗೆ ಹೆಪ್ಪುಗಟ್ಟಿರುತ್ತದೆ. ಬೇಸಗೆ ಬಲು ಕಡಿಮೆಯಾದ್ದರಿಂದ ಶಾಶ್ವತ ಸಸ್ಯವರ್ಗವಿಲ್ಲ. ಹಾವಸೆಗಳು ಜೌಗು ಪ್ರದೇಶಗಳಿಗೆ ಕಚ್ಚಿಕೊಂಡಿರುತ್ತವೆ. ನೀರು ಹಬ್ಬೆಗಿಡಗಳು ಬಿಳಲುಗಳಂತೆ ಅಲ್ಲಲ್ಲಿ ಇಳಿ ಬಿದ್ದಿರುವುದುಂಟು. ಆಸ್ಪ್ ಮತ್ತು ಭೂರ್ಜ ಸಸಿಗಳು ನೆಲದ ಮೇಲೆ ಕೆಲವು ಸೆಮೀಗಳ ವರೆಗೆ ಕಾಣಿಸಿಕೊಳ್ಳುತ್ತವೆ. ತಗ್ಗು ಪ್ರದೇಶಗಳಲ್ಲಿ ತಂಡ್ರ ಸಸ್ಯವರ್ಗದೊಂದಿಗೆ ಚಿಕ್ಕ ಮರಗಳೂ ಬೆರೆತಿರುವುದುಂಟು.

ತಂಡ್ರದ ದಕ್ಷಿಣದಲ್ಲಿ ಖಂಡದ ಉದ್ದಗಲಕ್ಕೂ ಪ್ರಪಂಚದಲ್ಲೆಲ್ಲ ಅತ್ಯಂತ ವಿಶಾಲವಾದ ಕಾಡುಗಳು ಕಂಡು ಬರುತ್ತವೆ. ಇವನ್ನು ಸೈಬೀರಿಯನ್ ಟೈಗ ಎಂದು ಕರೆಯುತ್ತಾರೆ. ಉತ್ತರ ಯುರೋಪಿನಿಂದ ಉತ್ತರ ಏಷ್ಯದ ಮುಖಾಂತರ ಪೆಸಿಫಿಕ್‌ವರೆಗೆ ಇವು ಹರಡಿವೆ. ಪೈನ್, ಲಾರ್ಚ್, ಸ್ಪ್ರೂಸ್, ಫರ್ ಇತ್ಯಾದಿ ಮರಗಳೊಂದಿಗೆ ಭೂರ್ಜ ಹಾಗೂ ಆಸ್ಪ್‌ಮರಗಳೂ ಮಿಶ್ರವಾಗಿವೆ. ಅಲ್ಲಲ್ಲಿ ಜೌಗುಪ್ರದೇಶಗಳೂ ಉಂಟು.

ಇವುಗಳ ದಕ್ಷಿಣಕ್ಕೆ ಹಾಗೂ ಆಗ್ನೇಯದಲ್ಲಿ ಚಳಿಗಾಲದಲ್ಲಿ ಎಲೆಗಳುದುರುವ, ಅಗಲವಾದ ಎಲೆಗಳುಳ್ಳ ಮರಗಳ ಕಾಡುಗಳು ಕಂಡುಬರುತ್ತವೆ. ಈಶಾನ್ಯ ಏಷ್ಯದಲ್ಲಿರುವುವು ತಣ್ಣಗಿನ ಸಮಶೀತೋಷ್ಣವಲಯ ಕಾಡುಗಳು. ಎತ್ತರದ ಪ್ರದೇಶಗಳಲ್ಲಿ ಮೊನಚಾದ ಎಲೆಗಳ ಮರಗಳುಂಟು. ಓಕ್, ಬೀಚ್, ಮತ್ತು ಕರ್ಪೂರ ಮರಗಳು ಇಲ್ಲಿ ಮುಖ್ಯ. ಉತ್ತರದಲ್ಲಿರುವುವು ಕೊಡೆ ರೀತಿಯ ಮರಗಳು.

ಪೂರ್ವ ಏಷ್ಯದ ಉತ್ತರ ಭಾಗದಲ್ಲಿ ಓಕ್, ಎಲ್ಮ್ ಇತ್ಯಾದಿಮರಗಳ ಕಾಡುಗಳಿವೆ. ಕೊರಿಯದಲ್ಲಿ ಗಟ್ಟಿಮುಟ್ಟಾದ ಬಿದಿರು ದೊರೆಯುತ್ತದೆ. ಮಧ್ಯ ಚೀನ ಮತ್ತು ಜಪಾನ್‌ಗಳಲ್ಲಿ ಬೆಚ್ಚಗಿರುವ ಸಮಶಿತೋಷ್ಣವಲಯ ಕಾಡುಗಳುಂಟು. ಭೂತಕಾರದ ರೆಡ್‌ವುಡ್ ಮರಗಳು ಇಲ್ಲಿವೆ. ಚೀನದಲ್ಲೂ ಕಾಡುಗಳನ್ನು ಕಾಣಬಹುದು. ಆಗ್ನೇಯ ಮತ್ತು ದಕ್ಷಿಣ ಏಷ್ಯದಲ್ಲಿ ಉಷ್ಣವಲಯ ಕಾಡುಗಳು ಇವೆ. ಸದಾ ಹಸುರಾಗಿರುವ ಕಾಡುಗಳಲ್ಲಿ ತೇಗ ಹೇರಳ. ಹಡಗು ನಿರ್ಮಾಣದಲ್ಲಿ ತೇಗ ಅಸಮಾನವಾದುದು. ಮಹಾಗನಿಯ ಅನೇಕ ವಿಧಗಳು ಇಂಡೊನೇಷ್ಯ, ಫಿಲಿಪೈನ್ಸ್‌ನಲ್ಲಿ ಕಂಡುಬರುತ್ತವೆ. ಮಧ್ಯದ ಪರ್ವತಗಳಲ್ಲಿರುವ ಪರ್ವತ ಸಸ್ಯಗಳು ನೆಲದ ಎತ್ತರಕ್ಕೆ ತಕ್ಕಂತೆ ಬದಲಾಗುತ್ತವೆ. ಸಾಮಾನ್ಯ ಎತ್ತರ ಪ್ರದೇಶಗಳಲ್ಲಿ ಓಕ್, ಮೇಪಲ್ ಇತ್ಯಾದಿ ಗಟ್ಟಿ ಮರಗಳು ಬೆಳೆಯುತ್ತವೆ. ಹಿಮಾಲಯಗಳ ದಕ್ಷಿಣದಲ್ಲಿ 5000 ಮೀ ವರೆಗೆ ಎಲೆ ಮೊನಚಾದ ಕಾಡುಗಳು ಇರುವುವು. ಹಿಮರೇಖೆಯವರೆಗೆ ಆಲ್ಪೈನ್ ಸಸ್ಯವರ್ಗ ಇರುವುವು. ಮರುಭೂಮಿ ಪ್ರದೇಶದ ಅಂಚುಗಳಲ್ಲಿ, ಅರೇಬಿಯದಿಂದ ಭಾರತದ ವರೆಗೆ ಜಾಲಿಯ ಮರಗಳು ಮುಳ್ಳಿನ ಪೊದೆಗಳೊಂದಿಗೆ ಬೆಳೆಯುತ್ತವೆ. ಇದರಿಂದ ನರುಗಂಪುಳ್ಳ ಅಂಟುಗಳು, ರಾಳ ಮತ್ತು ಔಷಧಗಳನ್ನು ತಯಾರಿಸುತ್ತಾರೆ. ಓಯಸಿಸ್‌ಗಳಿರುವ ಕಡೆ ಖರ್ಜೂರದ ಮರಗಳಿವೆ. ಏಷ್ಯ ಮೈನರಿನಲ್ಲಿ ಆಲಿವ್, ಓಕ್ ಮರಗಳಿರುವ ಮೆಡಿಟರೇನಿಯನ್ ಸಸ್ಯ ವರ್ಗವನ್ನು ಕಾಣಬಹುದು. ಅರೇಬಿಯದಲ್ಲಿನ ಕೆಲವೇ ಸಸ್ಯಗಳು ಬೂದುಬಣ್ಣ ಇಲ್ಲವೆ ಬೆಳ್ಳಗಿರುತ್ತವೆ. ದಕ್ಷಿಣ ರಷ್ಯದಿಂದ ಮಂಚೂರಿಯದ ವರೆಗೆ ಹಬ್ಬಿರುವುದು ಸ್ಟೆಪಿ–ಹುಲ್ಲುಗಾವಲು. ಮಧ್ಯೆ ಮಧ್ಯೆ ಇರುವ ಪರ್ವತಾವಳಿಗಳು ಮತ್ತು ಮರುಭೂಮಿಗಳಿಂದ ಸ್ಟೆಪಿ ಅಷ್ಟು ಪ್ರಭಾವಿತವಾಗಿಲ್ಲ. ತುರ್ಕಿಸ್ತಾನ್ ಮತ್ತು ಮಧ್ಯ ಏಷ್ಯದ ಹುಲ್ಲುಗಾವಲುಗಳು ಅನಾದಿಕಾಲದಿಂದಲೂ ದನಕರುಗಳ ಸಾಕಣಿಕೆಗೆ ಅನುಕೂಲ ಮಾಡಿಕೊಟ್ಟಿವೆ.

ಪ್ರಾಣಿವರ್ಗ: ಏಷ್ಯದ ವೈಶಾಲ್ಯಕ್ಕೆ ತಕ್ಕಂತೆ ವೈವಿಧ್ಯಪೂರ್ಣ ಪ್ರಾಣಿವರ್ಗವಿದೆ. ಕುದುರೆ ಇಲ್ಲಿನ ಅಲೆಮಾರಿ ಜನಾಂಗಕ್ಕೆ ಸು. 5000 ವರ್ಷಗಳಿಂದಲೂ ಸೇವೆ ಸಲ್ಲಿಸುತ್ತ ಬಂದಿದೆ. ಈ ಖಂಡ ಶೀಘ್ರಗಾಮಿ ಹೇಸರಗತ್ತೆಗಳ ಮೂಲಸ್ಥಾನ. ಪ್ರಾಚೀನತಮ ಮೇಕೆಗಳಿರುವುದು ಟರ್ಕಿಯಲ್ಲಿ. ಒಂಟೆ ಮರುಭೂಮಿಯ ಅತ್ಯಮೂಲ್ಯ ಪ್ರಾಣಿ. ಟಿಬೆಟಿನಲ್ಲಿ ಯಾಕ್ ಭಾರ ಹೊರುವುದಲ್ಲದೆ ಬೆಣ್ಣೆ, ಚರ್ಮ ಮತ್ತು ಮಾಂಸಗಳನ್ನು ಒದಗಿಸುತ್ತದೆ. ಕಾಡುದನಗಳು ಭಾರತ, ಮಲಯಗಳಲ್ಲಿ ಕಂಡುಬರುತ್ತವೆ. ಭಾರತದಿಂದ ಇಂಡೊನೇಷ್ಯದವರೆಗೆ ಎಮ್ಮೆಗಳನ್ನು ಕಾಣಬಹುದು. ಸೈಬೀರಿಯದ ವಿಶಾಲ ಪ್ರದೇಶಗಳಲ್ಲಿ ಹಿಮಸಾರಂಗಗಳು ಗುಂಪು ಗುಂಪಾಗಿ ಓಡಾಡುತ್ತವೆ. ಹಿಮನೆಲದ ಮೇಲೆ ಚಕ್ರಗಳಿಲ್ಲದ ವಾಹನಗಳನ್ನೆಳೆಯಲು ಇವು ಸಹಾಯಕ. ಚರ್ಮ ಮತ್ತು ಮಾಂಸಗಳನ್ನೂ ಇವು ಒದಗಿಸುತ್ತವೆ. ನೇಪಾಲ, ಸಿಕ್ಕಿಂ, ಕಾಶ್ಮೀರ ಇತ್ಯಾದಿ ಪರ್ವತ ಪ್ರದೇಶಗಳಲ್ಲಿ ಕಸ್ತೂರಿ ಮೃಗಗಳು ಧಾರಾಳ. ಪಾಮಿರಿನಲ್ಲಿಯ ಓವಿಸ್ ಪೋಲಿ ಎನ್ನುವ ಹಿಮಕುರಿಗಳ ಕೋಡುಗಳು ಅತ್ಯಂತ ಉಪಯುಕ್ತ. ಏಷ್ಯದಲ್ಲಿ ಅನೇಕ ರೀತಿಯ ಚಿಗರಿಗಳುಂಟು. ಬೊಗಳುವ ಜಿಂಕೆಗಳು ಚೀನದಲ್ಲಿವೆ.

ಶ್ರೀಲಂಕ, ಸುಮಾತ್ರ, ಭಾರತ, ಮಯನ್ಮಾರ್, ಮಲೇಷ್ಯಗಳಲ್ಲಿ ಇಂದಿಗೂ ಆನೆಗಳ ಹಿಂಡುಗಳಿವೆ. ಇವುಗಳನ್ನು ಪಳಗಿಸಿ ಅನೇಕ ರೀತಿಯ ಕಾರ್ಯಗಳನ್ನು ಇವುಗಳಿಂದ ಮಾಡಿಸಿಕೊಳ್ಳುತ್ತಾರೆ. ಈ ಖಂಡದಲ್ಲಿ ನೀರಾನೆಗಳು ಜಾವ, ಸುಮಾತ್ರ, ಮಲಯ, ಮಯನ್ಮಾರ್, ಬೋರ್ನಿಯೊಗಳಲ್ಲಿವೆ. ಭಾರತ, ಮಲೇಷ್ಯ, ಸುಮಾತ್ರಗಳಲ್ಲಿ ಘೇಂಡಾಮೃಗಗಳಿವೆ. ಭಾರತದಲ್ಲಿ ಕಿರುಬಗಳೂ ಹಿಮಾಲಯ, ಕುನ್‌ಲೂನ್‌ಗಳಲ್ಲಿ ಚಿರತೆಗಳೂ ಉಂಟು. ಪ್ರಪಂಚದಲ್ಲೇ ವಿರಳವಾಗುತ್ತಿರುವ ಸಿಂಹಗಳು ಗುಜರಾತಿನ ಗಿರ್ ಕಾಡುಗಳಲ್ಲಿವೆ. ಸೈಬೀರಿಯ ಹಾಗೂ ಭಾರತದ ಕಾಡುಗಳಲ್ಲಿ ತೋಳಗಳೂ ಉಂಟು.

ಏಷ್ಯದಲ್ಲಿ ಅನೇಕ ವಿಧವಾದ ಕರಡಿಗಳಿವೆ. ಇವುಗಳಲ್ಲಿ ಅತ್ಯಂತ ದೊಡ್ಡದಾದ ಬಿಳಿ ಕರಡಿಗಳು ಆಗಾಗ ಆರ್ಕ್‌ಟಿಕ್ ತೀರಗಳಲ್ಲಿ ಕಂಡುಬರುತ್ತವೆ. ಮಾಂಸಾಹಾರಿಗಳಲ್ಲಿ ಅತ್ಯಂತ ಭಯಾನಕ ಪ್ರಾಣಿ ಎಂದರೆ ಹುಲಿ. ಏಷ್ಯದಲ್ಲಿ ಹೊರತಾಗಿ ಮತ್ತೆಲ್ಲೂ ಇವು ದೊರೆಯುವುದಿಲ್ಲ. ಸಾಮಾನ್ಯವಾಗಿ ಭಾರತ, ಬೋರ್ನಿಯೊ, ಶ್ರೀಲಂಕ, ಮಲೇಷ್ಯ, ಸುಮಾತ್ರ, ಜಾವ ಮತ್ತು ಬಾಲಿಗಳಲ್ಲಿನ ಕಾಡುಗಳಲ್ಲಿ ಇವೆ. ಸೈಬೀರಿಯದ ಬಿಳಿ ಹುಲಿಗೆ ಒತ್ತಾದ ಕೂದಲು ಒಂದು ವಿಶೇಷ. ಚೀನದಲ್ಲಿ ಕಂಡುಬರುವ ಪಾಂಡ ಬಹಳ ವಿಚಿತ್ರ ಪ್ರಾಣಿ. ಕರಡಿಯಂತೆ ಕಾಣುವ ಈ ಪ್ರಾಣಿಗೆ ಬಿದಿರಿನ ಚಿಗುರೇ ಆಹಾರ. ಇದರ ತೂಕ 159 ಕಿಗ್ರಾಂಗಳಿಗಿಂತಲೂ ಹೆಚ್ಚು.

ದಕ್ಷಿಣ ಏಷ್ಯದಲ್ಲಿ ಅನೇಕ ರೀತಿಯ ಮಂಗಗಳನ್ನೂ ಕಾಣಬಹುದು. ಮಲಯದಲ್ಲಿರುವ ಗಿಬನ್ ಎನ್ನುವ ನಿಡುದೋಳಿನ ವಾನರ ಮನುಷ್ಯನಂತೆ ಎರಡು ಕಾಲ ಮೇಲೆ ಚಲಿಸುತ್ತದೆ. ಮರದಲ್ಲಿ ವಾಸಿಸುವ ಉದ್ದತೋಳಿನ ಒರ್ಯಾಂಗೂಟ್ಯಾನ್ ನರವಾನರ ಬೋರ್ನಿಯೊ ಸುಮಾತ್ರಗಳಲ್ಲಿ ವಾಸಮಾಡುತ್ತದೆ.

ಏಷ್ಯದಲ್ಲಿ ಅನೇಕ ರೀತಿಯ ಪಕ್ಷಿಗಳಿವೆ. ಮಯನ್ಮಾರ್, ಥೈಲೆಂಡ್, ಇಂಡೋನೇಷ್ಯ, ಮಲೇಷ್ಯ, ಸುಮಾತ್ರ, ಬೋರ್ನಿಯೊ ಕಾಡುಗಳಲ್ಲಿ ಜೀವಂಜೀವ, ಕೊಕ್ಕರೆ ಮತ್ತು ಬೆಳ್ಳಕ್ಕಿಗಳು ಉಂಟು. ಲ್ಯಾಮ್ಮರ್ ಜೀಯರ್ ಎಂಬ ಬೃಹತ್ ಪಕ್ಷಿಯ ರೆಕ್ಕೆಯ ಹರಡು 3 ಮೀ. ನವಿಲುಗಳೂ ಡೇಗೆಗಳೂ ಬೇಕಾದಷ್ಟು ಕಂಡುಬರುತ್ತವೆ. ಪಾರಿವಾಳ, ಕೆಂಪುಂಗುರದ ಉದ್ದತೋಕೆಯ ಸಣ್ಣಗಿಳಿ, ಕೊಂಬುಕೊಕ್ಕಿನ ಹಕ್ಕಿ, ಕೋಗಿಲೆ, ಹದ್ದು, ಗಿಡುಗ ಮತ್ತು ಮರಕುಟುಕ, ಕಾಗೆ, ಮೈನ–ಇತ್ಯಾದಿ ಪಕ್ಷಿಗಳು ದಕ್ಷಿಣ ಮತ್ತು ಆಗ್ನೇಯ ಏಷ್ಯಗಳಲ್ಲಿ ಧಾರಾಳ.

ಭಾರತದಲ್ಲಿರುವ ವಿಷಸರ್ಪಗಳು ಅಸಂಖ್ಯಾತ. ನಾಗರಹಾವುಗಳೂ ಹೆಬ್ಬಾವುಗಳೂ ಹೇರಳ. ಆಮೆಗಳೂ ಹೆಚ್ಚು. ಭಾರತದ ನದಿಗಳಲ್ಲೂ ಮಲಯದ ಬಳಿಯ ಸಮುದ್ರತೀರಗಳಲ್ಲೂ ಮೊಸಳೆಗಳುಂಟು. ಡೂಗಾಂಗ್ ಎನ್ನುವ ಸಸ್ಯಾಹಾರಿ ಸ್ತನಿ ಹಿಂದೂ ಸಾಗರದಲ್ಲಿ ಕಾಣುತ್ತದೆ. ಆದರೆ ಕಡಲ ಹಂದಿಗಳು ಗಂಗಾನದಿಯಲ್ಲಿ ಮಾತ್ರ ಉಂಟು. ಬೈಕಲ್ ಸರೋವರದಲ್ಲಿ ಸಿಹಿನೀರಿನ ತಿಮಿಂಗಲಗಳನ್ನು ಕಾಣಬಹುದು. ಅಸಂಖ್ಯಾತ ಉರಗಗಳಿದ್ದರೂ ಊಸರವಳ್ಳಿ, ಹೆಂಟೆಗೊದ್ದಗಳು ಭಾರತ ಮತ್ತು ಶ್ರೀಲಂಕಗಳಲ್ಲಿ ಮಾತ್ರ ಕಂಡುಬರುತ್ತವೆ.

ವ್ಯವಸಾಯ ಮತ್ತು ಪಶುಪಾಲನೆ: ಈ ಶತಮಾನದ ಆದಿಯಲ್ಲಿ ಪ್ರಾರಂಭವಾದ ವ್ಯವಸಾಯಕ್ರಾಂತಿಯಿಂದ ಏಷ್ಯದ ಸ್ವರೂಪವೇ ಬದಲಾಯಿಸಿತೆನ್ನಬಹುದು. ಕಪ್ಪುಮಣ್ಣಿನಿಂದ ಕೂಡಿರುವ ಸ್ಟೆಪಿ ಏಷ್ಯದಲ್ಲಿ ಹೆಚ್ಚುವರಿ ಧಾನ್ಯ ಬೆಳೆಯುವ ಪ್ರದೇಶ. ಗೋದಿ, ರೈ ಮತ್ತು ಬಾರ್ಲಿ ಮುಖ್ಯ ಬೆಳೆ. ಅಲ್ಲದೆ ಈ ವಲಯದಲ್ಲಿ ಹತ್ತಿ ಪ್ರಮುಖ ಬೆಳೆ. ಸೂರ್ಯಕಾಂತಿ ಮತ್ತು ಅಗಸೆಗಳನ್ನು ಎಣ್ಣೆಗಾಗಿ ಬೆಳೆಯುತ್ತಾರೆ.

ಶುಷ್ಕ ಸ್ಟೆಪಿಗಳಲ್ಲಿ ಕುರಿ ಮತ್ತು ಮೇಕೆಗಳನ್ನೂ ವ್ಯವಸಾಯ ಪ್ರದೇಶಗಳಲ್ಲಿ ದನಕರುಗಳನ್ನೂ ತಂಡ್ರ ಟೈಗಗಳಲ್ಲಿ ಹಿಮಸಾರಂಗಗಳನ್ನೂ ಸಾಕುತ್ತಾರೆ.

ನೈಋತ್ಯ ಏಷ್ಯದಲ್ಲಿ (ಮಧ್ಯ ಪ್ರಾಚ್ಯ) ಭೂಮಧ್ಯ ಸಮುದ್ರದ ಕಡೆಯಿಂದ ಪೂರ್ವದ ಕಡೆಗೆ ವ್ಯವಸಾಯ ಪ್ರದೇಶ ಕಡಿಮೆಯಾಗುತ್ತ ಹೋಗಿ, ಸೌದಿ ಅರೇಬಿಯದಲ್ಲಿ ಇಲ್ಲದಂತಾಗಿದೆ. ಜೋಳ ಬತ್ತಗಳನ್ನು (ನೀರಾವರಿ ಬೆಳೆ) ಇರಾಕ್, ತುರ್ಕಿ, ಕ್ಯಾಸ್ಪಿಯನ್ ತೀರಗಳಲ್ಲೂ ಬೀಟ್‌ರೂಟ್, ಹತ್ತಿಗಳನ್ನು ತುರ್ಕಿ, ಇರಾನ್, ಇಸ್ರೇಲ್‌ಗಳಲ್ಲೂ ಬೆಳೆಯುತ್ತಾರೆ. ಇಸ್ರೇಲ್, ಲೆಬನನ್, ಸಿರಿಯಗಳಲ್ಲಿ ಈಳೆಜಾತಿಯ ಹಣ್ಣುಗಳನ್ನು ಬೆಳೆಯುತ್ತಾರಲ್ಲದೆ, ಅವನ್ನು ರಫ್ತು ಕೂಡ ಮಾಡುತ್ತಾರೆ. ಪ್ರಪಂಚದ 45 ಪಾಲು ಖರ್ಜೂರ ಇರಾನಿನಿಂದ ಬರುತ್ತದೆ. ಅರೇಬಿಯದಲ್ಲೂ ಇದನ್ನು ಬೆಳೆಯುತ್ತಾರೆ. ತುರ್ಕಿ, ಇರಾನ್‌ಗಳಲ್ಲಿ ದ್ರಾಕ್ಷಿಯನ್ನು ಬೆಳೆಸಿ ಒಣಗಿಸುತ್ತಾರೆ.

ಮರುಭೂಮಿ ಮತ್ತು ಅರೆ ಮರುಭೂಮಿಗಳಲ್ಲಿ ಕುರಿ ಮತ್ತು ಮೇಕೆಗಳನ್ನು ಸಾಕುವುದುಂಟು. ಅರೇಬಿಯದ ತಾಕಣಗಳು ಬಲು ಪ್ರಸಿದ್ಧ.

ಭಾರತ, ಪಾಕಿಸ್ತಾನ, ಶ್ರೀಲಂಕಗಳಲ್ಲಿ ಶೇ. 60 ಭಾಗದ ಭೂಮಿ ವ್ಯವಸಾಯಕ್ಕೆ ಒಳಪಟ್ಟಿದೆ. ಬತ್ತ, ಗೋದಿ, ತೃಣಧಾನ್ಯಗಳು, ಜೋಳ–ಇಲ್ಲಿನ ಮುಖ್ಯ ಆಹಾರ ಬೆಳೆಗಳು. ಬಂಗಾಲ, ಅಸ್ಸಾಂ, ಒರಿಸ್ಸ, ದಖನ್ ಪ್ರಸ್ಥಭೂಮಿಯ ತಿರ ಮತ್ತು ಶ್ರೀಲಂಕಗಳಲ್ಲಿ ಬತ್ತದ ಸಾಂದ್ರಬೇಸಾಯವಾಗುತ್ತಿದೆ. ಪಂಜಾಬ್ (ಭಾರತ ಮತ್ತು ಪಾಕಿಸ್ತಾನ್) ಮತ್ತು ಉತ್ತರ ಪ್ರದೇಶಗಳಲ್ಲಿ ಗೋದಿ ಮುಖ್ಯ ಬೆಳೆ. ಗಂಗಾನದಿಯ ಮುಖಜಭೂಮಿಯಲ್ಲಿ (ಭಾರತ ಮತ್ತು ಪಾಕಿಸ್ತಾನ್) ಉತ್ತಮ ಮಟ್ಟದ ಸೆಣಬನ್ನು ಬೆಳೆಯಲಾಗುತ್ತದೆ. ಪಾಕಿಸ್ತಾನ ಮತ್ತು ದಖನ್ ಪ್ರಸ್ಥಭೂಮಿಯ ವಾಯವ್ಯ ಭಾಗಗಳಲ್ಲಿ ಹತ್ತಿಯನ್ನು ಹೇರಳವಾಗಿ ಬೆಳೆಯುತ್ತಾರೆ. ಅಸ್ಸಾಂ, ಪಶ್ಚಿಮ ಬಂಗಾಲ, ಸಿಲ್ಹೆಟ್, ನೀಲಗಿರಿ ಬೆಟ್ಟಗಳು, ಶ್ರೀಲಂಕಗಳಲ್ಲಿ ವಿಶಾಲ ಚಹ ತೋಟಗಳಿವೆ. ಕೇರಳ, ಶ್ರೀಲಂಕಗಳಲ್ಲಿ ರಬ್ಬರ್ ಮತ್ತು ಕರ್ನಾಟಕದಲ್ಲಿ ಕಾಫಿ ತೋಟಗಳಿವೆ.

ಆಗ್ನೇಯ ಏಷ್ಯದ ಫಲವತ್ತಾದ ಪ್ರದೇಶಗಳಲ್ಲಿ ಬತ್ತವನ್ನು ಬೆಳೆಯಲಾಗುತ್ತದೆ. ಇರವಾಡಿ, ಮೇನಾಂ, ಮೇಕಾಂಗ್ ನದಿಗಳ ಮುಖಜಭೂಮಿ ಪ್ರದೇಶಗಳಲ್ಲಿ ಅನೇಕ ಶತಮಾನಗಳಿಂದ ಬತ್ತ ಬೆಳೆಯುತ್ತಿದ್ದಾರೆ. ಇಲ್ಲಿಂದ ಬೇರೆ ಕಡೆಗೆ ಇದರ ಹೆಚ್ಚುವರಿ ರಫ್ತಾಗುತ್ತದೆ. ವಿಯೆಟ್ನಾಂ ಹಾಗೂ ಜಾವದಲ್ಲಿ ಬೆಳೆಯುವ ಬತ್ತ ಸ್ಥಳೀಯ ಆವಶ್ಯಕತೆಗಳನ್ನು ಪೂರೈಸಲು ಸಾಕು. ಜಾವ, ಫಿಲಿಪೈನ್ಸ್‌ಗಳಲ್ಲಿ ಬೆಟ್ಟಗಳನ್ನು ಮೆಟ್ಟಲುಮೆಟ್ಟಲಾಗಿ ಕಡಿದು, ಬತ್ತದ ಗದ್ದೆಗಳನ್ನು ಮಾಡಲಾಗಿದೆ. ಮಧ್ಯ ಮಯನ್ಮಾರ್, ಥೈಲೆಂಡ್, ಕೋರೆಟ್ ಪ್ರಸ್ಥಭೂಮಿಗಳಲ್ಲಿ ನೀರಾವರಿ ಅನುಕೂಲದಿಂದ ಬತ್ತ ಬೆಳೆಯಲಾಗುತ್ತದೆ. ತಂಬಾಕು, ಕಬ್ಬು, ಸೋಯಾಬೀನುಗಳನ್ನು ಇಲ್ಲೆಲ್ಲ ಬೆಳೆಯುತ್ತಾರೆ. ಇಲ್ಲಿನ ಬೆಳೆಗಳಲ್ಲಿ ತೋಟದವು ಬಲು ಮುಖ್ಯ. ಮಲೇಷ್ಯ ಮತ್ತು ಇಂಡೊನೇಷ್ಯಗಳು ಪ್ರಪಂಚದ ಹೆಚ್ಚು ಪಾಲು ಸ್ವಾಭಾವಿಕ ರಬ್ಬರನ್ನು ಒದಗಿಸುತ್ತವೆ. ವಿಯೆಟ್ನಾಂ ಮತ್ತು ಥೈಲೆಂಡ್‌ಗಳಲ್ಲೂ ಇದನ್ನು ಬೆಳೆಯುತ್ತಾರೆ. ಇಂಡೊನೇಷ್ಯ, ಮಲೇಷ್ಯಗಳು ಕೊಬ್ಬರಿ ತಯಾರಿಕೆಯಲ್ಲಿ ಪ್ರಮುಖವಾದುವು. ಮಲೇಷ್ಯ, ಸುಮಾತ್ರಗಳಲ್ಲಿ ತಾಳೆಮರ ಹೆಚ್ಚು ಜನಪ್ರಿಯ. ಜಾವದಲ್ಲಿ ಚಹ ಬೆಳೆಯುತ್ತಾರೆ.

ಚೀನದ ಉತ್ತರದಲ್ಲಿ ಗೋದಿ, ಬಾರ್ಲಿ, ಸೋಯಾಬೀನ್ಸ್ ಬೆಳೆಯುತ್ತಾರೆ. ದಕ್ಷಿಣ ಚೀನ ಮತ್ತು ಟೈವಾನ್‌ಗಳಲ್ಲಿ ಬತ್ತ ಪ್ರಮುಖ ಬೆಳೆ. ಮಂಚೂರಿಯದಲ್ಲಿ ಸೋಯಾಬೀನ್ಸನ್ನೂ ಚೀನದ ಉತ್ತರಾರ್ಧದಲ್ಲಿ ಜೋಳದ ರೀತಿಯ ಕಯೊಲಿನ್ ಬೆಳೆಯನ್ನು ಬೆಳೆಯಲಾಗುವುದು. ಉತ್ತರ ಚೀನ ಮಧ್ಯ ಯಾಂಗ್‌ಟ್ಸಿಗಳಲ್ಲಿ ಹತ್ತಿ, ದಕ್ಷಿಣ ಚೀನ ಬೆಟ್ಟಗಳ ಮತ್ತು ಟೈವಾನ್ ಪ್ರದೇಶಗಳಲ್ಲಿ ಚಹ ಮುಖ್ಯ ವಾಣಿಜ್ಯ ಬೆಳೆಗಳು. ಎಳ್ಳು, ರೇಪ್ ಮತ್ತು ಸೋಯಾಬೀನ್ಸ್ ಬೆಳೆಯಲ್ಲಿ ಚೀನದ್ದು ಮೊದಲನೆಯ ಸ್ಥಾನ. ದಕ್ಷಿಣ ಚೀನ ಮತ್ತು ಟೈವಾನ್‌ಗಳಲ್ಲಿ ಕಬ್ಬು, ತಂಬಾಕು ಮತ್ತು ಈಳೆಜಾತಿಯ ಹಣ್ಣುಗಳನ್ನು ಬೆಳೆಯಲಾಗುತ್ತದೆ.

ಜಪಾನ್ ಕೊರಿಯಗಳಲ್ಲಿ ವ್ಯವಸಾಯಕ್ಕೆ ಪ್ರದೇಶಗಳು ಬಲು ಕಡಿಮೆ. ಆದರೂ ಉತ್ತಮ ವ್ಯವಸಾಯ ವಿಧಾನಗಳನ್ನು ಅನುಸರಿಸಿ ಹೆಚ್ಚಿನ ಬೆಳೆ ತೆಗೆಯುತ್ತಾರೆ. ಜಪಾನಿನಲ್ಲಿ ಬತ್ತದ ಸಾಗುವಳಿಯಾಗುವುದು ನೀರಾವರಿಯಿಂದ. ಉತ್ತರ ಕೊರಿಯದಲ್ಲಿ ಮಿಲೆಟ್ಸ್ ಮತ್ತು ಗೋದಿಯೂ ದಕ್ಷಿಣ ಕೊರಿಯದಲ್ಲಿ ಬಾರ್ಲಿಯೂ ಮುಖ್ಯ ಆಹಾರ ಬೆಳೆಗಳು. ಜಪಾನಿನಲ್ಲಿ ಗೋದಿ, ಬಾರ್ಲಿ, ಓಟ್ಸ್–ಇವು ಬತ್ತದ ಅನಂತರದ ಮುಖ್ಯ ಬೆಳೆಗಳು. ಕೊರಿಯದಲ್ಲಿ ಹತ್ತಿಯೂ ದಕ್ಷಿಣ ಜಪಾನಿನಲ್ಲಿ ಹಿಪ್ಪುನೇರಳೆ ಮತ್ತು ಚಹವೂ ವಾಣಿಜ್ಯ ಬೆಳೆಗಳು.

ಖನಿಜಗಳು ಮತ್ತು ಕೈಗಾರಿಕೆಗಳು: ಏಷ್ಯದಲ್ಲಿ ಹೇರಳವಾದ ಖನಿಜ ಸಂಪತ್ತಿದೆ. ಮುಖ್ಯವಾದ ವಲಯಗಳಿವು:

(ಎ) ರಷ್ಯ ಹಾಗೂ ಕ್ಯಾಸ್ಪಿಯನ್ ದೇಶಗಳ ಸುತ್ತಮುತ್ತ ಎಣ್ಣೆಬಾವಿಗಳಿವೆ. ಮಧ್ಯ ಏಷ್ಯದ ಫರ್ಗನಾ, ಲೀನಾ ಬಯಲುಗಳಲ್ಲೂ ಸ್ಯಾಕಲೀನ್ ಬಯಲುಗಳಲ್ಲೂ ಎಣ್ಣೆ ಸಾಮಾನ್ಯ ಪ್ರಮಾಣದಲ್ಲಿ ದೊರೆಯುತ್ತದೆ.

ಪಶ್ಚಿಮ ಸೈಬೀರಿಯದ ಕುಜ್ನೆಟ್‌ಸ್ಕ್ ಬಯಲು ಸೋವಿಯತ್ ಒಕ್ಕೂಟದ ಎರಡನೆಯ ದೊಡ್ಡ ಕಲ್ಲಿದ್ದಲುಗಣಿ ಪ್ರದೇಶ. ಕಜಾಕ್‌ಸ್ತಾನದಲ್ಲಿನ ಕರಗಂಡ ಕಲ್ಲಿದ್ದಲು ಗಣಿಗಳು ಯೂರಲ್ ಪರ್ವತಗಳಲ್ಲಿರುವ ಲೋಹ ಕೈಗಾರಿಕೆಗಳಿಗೆ ಕಲ್ಲಿದ್ದಲ್ಲನ್ನು ಒದಗಿಸುತ್ತವೆ. ಪೂರ್ವ ಸೈಬೀರಿಯದಲ್ಲಿನ ಇರ್ಕಟ್‌ಸ್ಕ ಮತ್ತು ವ್ಲಾಡಿವೋಸ್ಟಾಕ್ ಬಯಲುಗಳಲ್ಲಿನ ಕಲ್ಲಿದ್ದಲು ಸ್ಥಳೀಯ ಕೈಗಾರಿಕೆಗಳಿಗೆ ಸಹಾಯಕವಾಗಿರುವುದಲ್ಲದೆ, ಟ್ರಾನ್ಸ್–ಸೈಬೀರಿಯನ್ ರೈಲ್ವೆಗೆ ಅನುಕೂಲಕರ. ಟುಂಗುಸ್ಕ ಮತ್ತು ಲೀನಾ ಬಯಲುಗಳಲ್ಲಿ ಕಲ್ಲಿದ್ದಲು ನಿಕ್ಷೇಪಗಳು ಹೇರಳವಾಗಿವೆಯೆಂದು ನಂಬಲಾಗಿದೆ.

ಮಧ್ಯ ಏಷ್ಯದ ಟುಯ–ಮುಯಿನ್‌ನಲ್ಲಿ ಯುರೇನಿಯಂ ದೊರೆಯುತ್ತದೆ. ಕುಜ್ನೆಟ್‌ಸ್ಕ್, ಖಬರೋವ್‌ಸ್ಕ್, ಕಜಾಕ್‌ಸ್ತಾನ್‌ಗಳಲ್ಲಿ ಕಬ್ಬಿಣದ ಅದಿರು, ಮ್ಯಾಂಗನೀಸ್, ಕ್ರೋಮಿಯಂ, ಕೋಬಾಲ್ಟ್ ಇವೆ. ಬಾಲ್ಕಾಷ್ ಸರೋವರದ ಪೂರ್ವದಲ್ಲಿ ತಾಮ್ರವುಂಟು. ಕಜಾಕ್‌ಸ್ತಾನ್, ಮಧ್ಯ ಏಷ್ಯ, ಪಶ್ಚಿಮ ಸೈಬೀರಿಯಗಳಲ್ಲಿ ಅನೇಕ ತಾಮ್ರದ ಗಣಿಗಳಿವೆ. ಪೂರ್ವ ಸೈಬೀರಿಯದಲ್ಲಿ ತವರವಿದೆ. ಕುಜ್ನೆಟ್‌ಸ್ಕ ಸತುವಿಗೂ ಸೋರಿಲಿಸ್ಕ್ ನಿಕ್ಕಲ್‌ಗೂ ಕಜಾಕ್‌ಸ್ತಾನ್ ಮತ್ತು ಕುಜ್ನೆಟ್‌ಸ್ಕ್ ಅಲ್ಯೂಮಿನಿಯಂಗೂ ಪ್ರಸಿದ್ಧ. ಇವಲ್ಲದೆ ಸೈಬೀರಿಯದಲ್ಲಿ ನಿಕ್ಕಲ್, ಬಾಕ್ಸೈಟ್ ಮತ್ತು ಅಲ್ಯೂಮಿನಿಯಂ, ಯೂರಲ್ ಪರ್ವತಗಳಲ್ಲಿ ತಾಮ್ರ, ಕ್ರೋಮಿಯಂ, ಚಿನ್ನ ಮತ್ತು ಪಚ್ಚೆಗಳ ಹೇರಳ ನಿಕ್ಷೇಪಗಳಿವೆಯೆಂದು ಊಹಿಸಲಾಗಿದೆ.

ಖನಿಜಗಳು ಸಿಗುವ ಪ್ರದೇಶಗಳಲ್ಲಿ ಕೈಗಾರಿಕೆಗಳು ಬೆಳೆದಿರುವುದು ಆಶ್ಚರ್ಯವಲ್ಲ. ಆದರೂ ರಷ್ಯದ ಯುರೋಪ್ಯ ಪ್ರದೇಶದಷ್ಟು ಮಟ್ಟಿಗೆ ಏಷ್ಯನ್ ಪ್ರದೇಶದ ಅಭಿವೃದ್ಧಿಯಾಗಿಲ್ಲ. ಕುಜ್ನೆಟ್‌ಸ್ಕ್‌ನಲ್ಲಿ ಅನೇಕ ಭಾರಿ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಟ್ರಾನ್ಸ್–ಸೈಬೀರಿಯನ್ ರೈಲ್ವೆಯೂ ಮಧ್ಯ ಏಷ್ಯದಲ್ಲಿ ಎಂಜಿನಿಯರಿಂಗ್ ಮತ್ತಿತರ ಕೈಗಾರಿಕೆಗಳೂ ಸ್ಥಾಪನೆಯಾಗಿವೆ. ಸೋವಿಯತ್ ಮಧ್ಯ ಏಷ್ಯದಲ್ಲಿ ಬಟ್ಟೆಗಿರಣಿಗಳೂ ವ್ಲಾಡಿವೋಸ್ಟಾಕ್ ಸುತ್ತಮುತ್ತ ಮರ ಕೊಯ್ಯುವ ಕೈಗಾರಿಕೆಗಳೂ ಹರಡಿವೆ.

(ಬಿ) ಪಶ್ಚಿಮ ಏಷ್ಯ: ಅಮೂಲ್ಯವಾದ ಪೆಟ್ರೋಲಿಯಂ ಮತ್ತು ಕಲ್ಲಿದ್ದಲು ಗಣಿಗಳು ಇಲ್ಲಿವೆ. ಟರ್ಕಿಯಲ್ಲಿರುವ ಅಮೂಲ್ಯ ಕಲ್ಲಿದ್ದಲು ಗಣಿಗಳು ಕೈಗಾರಿಕೆಗಳಿಗೆ ಸಹಾಯಕ. ಯೂಫ್ರಟೀಸ್–ಟೈಗ್ರಿಸ್ ಮತ್ತು ಪರ್ಷಿಯನ್ ಕೊಲ್ಲಿಯ ಸುತ್ತಮುತ್ತಲ ಮರುಭೂಮಿ ಪ್ರದೇಶಗಳಲ್ಲಿ ಅಪಾರವಾದ ಪೆಟ್ರೋಲಿಯಂ ನಿಕ್ಷೇಪಗಳಿದ್ದು ಅನೇಕ ಎಣ್ಣೆಬಾವಿಗಳಿವೆ. ಜಾಗ್ರೀಸ ಪರ್ವತಗಳ ಪಾದಗಳ ಬಳಿಯಲ್ಲಿ ಇರಾನ್, ಇರಾಕ್‍ಗಳಲ್ಲಿ ವಿಶಾಲ ಎಣ್ಣೆಬಾವಿಗಳುಂಟು. ಆದರೆ ಇತ್ತೀಚೆಗೆ ಪರ್ಷಿಯನ್ ಖಾರಿಯ ಕುವೈತ್, ಬಹ್ರಿನ್, ಕಾತಾರ್ ಇತ್ಯಾದಿ ದೇಶಗಳು ಪೆಟ್ರೋಲಿಯಂ ಉತ್ಪಾದನೆಗೆ ಹೆಸರಾಗಿವೆ.

ಟರ್ಕಿಯಲ್ಲಿ ದೊರಕುವ ಖನಿಜಗಳು ಅನೇಕ. ಭೂಮಧ್ಯಸಮುದ್ರ ತೀರಗಳಲ್ಲಿ ಮ್ಯಾಂಗನೀಸ್ ದೊರೆಯುತ್ತದೆ. ಈ ದೇಶ ಕ್ರೋಮ್ ತಯಾರಿಕೆಯಲ್ಲಿ ಪ್ರಪಂಚದಲ್ಲಿ ಮೊದಲನೆಯ ಸ್ಥಾನ ಪಡೆದಿದೆ. ತಾಮ್ರ ಇನ್ನೊಂದು ಮುಖ್ಯ ಲೋಹ. ಸೌದಿ ಅರೇಬಿಯದಲ್ಲಿ ಚಿನ್ನವೂ ಉಂಟು. ಮೃತ್ಯುಸರೋವರದ ಬಳಿ ಪೊಟ್ಯಾಷ್, ಟರ್ಕಿಯಲ್ಲಿ ಗಂಧಕ, ಜೋರ್ಡನ್‍ನಲ್ಲಿ ರಂಜಕ ಹೆಸರಿಸುವಂಥ ಖನಿಜಗಳು.

ಯೂಫ್ರಟೀಸ್–ಟೈಗ್ರಿಸ್ ಕಣಿವೆ ಹೇರಳವಾದ ತಾಮ್ರ, ಕಬ್ಬಿಣ ಮತ್ತು ಗಂಧಕ ನಿಕ್ಷೇಪಗಳನ್ನು ಹೊಂದಿದೆ. ಇಲ್ಲಿಯ ಸೀಸದ ಗಣಿಗಳು ಅನೇಕ ಶತಮಾನಗಳಿಂದ ಉತ್ಪಾದನೆಯಲ್ಲಿ ತೊಡಗಿವೆ.

ಈ ಪ್ರದೇಶದಲ್ಲಿ ಪೆಟ್ರೋಲಿಯಂ ಶೋಧ ಮುಖ್ಯ ಕೈಗಾರಿಕೆ. ಟರ್ಕಿ, ಸಿರಿಯ, ಲೆಬೆನನ್, ಇಸ್ರೇಲ್ ಮತ್ತು ಇರಾನಿನ ಅನೇಕ ನಗರಗಳಲ್ಲೂ ಇರಾಕ್, ಆಫ್ಘಾನಿಸ್ತಾನಗಳ ರಾಜಧಾನಿಗಳಲ್ಲೂ ಹತ್ತಿ ಗಿರಣಿ ಕೈಗಾರಿಕೆಗಳುಂಟು.

(ಸಿ) ದಕ್ಷಿಣ ಏಷ್ಯ: ಭಾರತದಲ್ಲಿ ಹೇರಳವಾದ ಕಲ್ಲಿದ್ದಲು ನಿಕ್ಷೇಪಗಳಿವೆ. ದಖನ್ ಪ್ರಸ್ಥಭೂಮಿಯ ಈಶಾನ್ಯದಲ್ಲಿ ಇದು ಕೇಂದ್ರೀಕೃತ. ಅಸ್ಸಾಮಿನ ದಿಗ್ಬಾಯಿ ಮತ್ತು ಪಾಕಿಸ್ತಾನದ ಅಟಕ್‍ನಲ್ಲಿ ಪೆಟ್ರೋಲಿಯಂ ಎಣ್ಣೆಬಾವಿಗಳುಂಟು. ಪ್ರಪಂಚದಲ್ಲೇ ಶ್ರೇಷ್ಠವಾದ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ದೊರಕುವುದು ಭಾರತದ ದಖನ್ ಪ್ರಸ್ಥಭೂಮಿಯ ಈಶಾನ್ಯದಲ್ಲಿ. ಇಲ್ಲಿ ತಾಮ್ರ, ತವರ, ಕ್ರೋಮೈಟ್, ಚಿನ್ನ, ಬಾಕ್ಸೈಟುಗಳೂ ಉಂಟು. ರಾಜಸ್ತಾನದ ಗಣಿಗಳಿಂದ ತೆಗೆಯುವ ಲವಣದ ಜೊತೆಗೆ ಮಹಾರಾಷ್ಟ್ರ, ಗುಜರಾತ್, ತಮಿಳುನಾಡುಗಳಲ್ಲಿ ಸಮುದ್ರದಿಂದ ಉಪ್ಪನ್ನು ತಯಾರಿಸಲಾಗುತ್ತಿದೆ. ಪ್ರಪಂಚದ ಕಾಗೆಬಂಗಾರದ ಉತ್ಪತ್ತಿಯಲ್ಲಿ ಶೇ. 80 ದೊರಕುವುದು ಛೋಟಾನಾಗಪುರದಲ್ಲಿ (ಭಾರತ). ಮೊನಾಜೈಟ್ ನಿಕ್ಷೇಪಗಳಿರುವುದು ಕೇರಳದಲ್ಲಿ. ಪಾಕಿಸ್ತಾನದಲ್ಲಿ ಕ್ರೋಮೈಟ್, ಲವಣಶಿಲೆ ಇತ್ಯಾದಿಗಳು ಕಡಿಮೆ ಪ್ರಮಾಣದಲ್ಲಿ ದೊರೆಯುತ್ತವೆ.

ಭಾರತದಲ್ಲಿ ಎರಡು ಪ್ರಮುಖ ಕೈಗಾರಿಕಾ ವಲಯಗಳಿವೆ: 1. ಜೆಮ್‍ಷೆಡ್‍ಪುರದಿಂದ ಕೋಲ್ಕತದ ವರೆಗಿನ ಪ್ರದೇಶ, 2. ಮುಂಬಯಿಂದ ಅಹಮದಾಬಾದ್ ವರೆಗಿನ ಪ್ರದೇಶ. ಇತರ ಕಡೆಗಳಲ್ಲೂ ಕೈಗಾರಿಕೆಗಳುಂಟು.

(ಡಿ) ಆಗ್ನೇಯ ಏಷ್ಯ: ಆಗ್ನೇಯ ಏಷ್ಯದಲ್ಲಿನ ಖನಿಜ ಸಂಪತ್ತು ಗಮನಾರ್ಹವಾದದ್ದು. ಪ್ರಪಂಚದ ತವರದ ಉತ್ಪತ್ತಿಯಲ್ಲಿ ಶೇ. 12 ಭಾಗ ಬರುವುದು ಮಲೇಷ್ಯದಿಂದ. ಮಲೇಷ್ಯ ಮತ್ತು ಇಂಡೊನೇಷ್ಯಗಳು ತವರ ತಯಾರಿಕೆಯಲ್ಲಿ ಪ್ರಪಂಚದಲ್ಲಿ ಮೊದಲನೆಯ ಮತ್ತು ಮೂರನೆಯ ಸ್ಥಾನಗಳನ್ನೂ ಥೈಲೆಂಡ್ ಮತ್ತು ಮಯನ್ಮಾರ್‌ಗಳು ಐದನೆಯ ಮತ್ತು ಎಂಟನೆಯ ಸ್ಥಾನಗಳನ್ನೂ ಪಡೆದಿವೆ. ವಿಯೆಟ್ನಾಮಿನಲ್ಲಿ ಕಲ್ಲಿದ್ದಲು ಗಣಿಗಳಿವೆ. ಮಲೇಷ್ಯ, ಬೋರ್ನಿಯೊ, ಸುಮಾತ್ರಗಳಲ್ಲಿ ಈ ನಿಕ್ಷೇಪಗಳುಂಟು. ಪ್ರಪಂಚದ ದೃಷ್ಟಿಯಿಂದ ಮುಖ್ಯವಾದ ಎಣ್ಣೆಬಾವಿಗಳು ಮಧ್ಯ ಮಯನ್ಮಾರ್, ಜಾವ, ಸುಮಾತ್ರ, ಬೋರ್ನಿಯಗಳಲ್ಲಿವೆ. ಮಲೇಷ್ಯ, ಫಿಲಿಫೈನ್ಸ್‌ಗಳಲ್ಲಿ ದೊರೆಯುವ ಕಬ್ಬಿಣದ ಅದಿರನ್ನು ಜಪಾನಿಗೆ ರಫ್ತು ಮಾಡಲಾಗುತ್ತದೆ. ವಿಯೆಟ್ನಾಂ, ಮಲೇಷ್ಯ, ಜಾವ, ಫಿಲಿಫೈನ್ಸ್‌ಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಮ್ಯಾಂಗನೀಸ್ ದೊರೆಯುತ್ತದೆ. ಮಧ್ಯ ಮಯನ್ಮಾರ್‌ನಲ್ಲಿ ಸೀಸ, ಸತು ಮತ್ತು ನಿಕ್ಕಲ್ ದೊರೆಯುತ್ತವೆ. ಪ್ರಪಂಚದ ಕ್ರೋಮಿಯಂ ತಯಾರಿಕೆಯಲ್ಲಿ ಫಿಲಿಫೈನ್ಸ್‌ನದು 4ನೆಯ ಸ್ಥಾನ. ಫಿಲಿಫೈನ್ಸ್, ಥೈಲೆಂಡ್, ಮಲೇಷ್ಯ, ಸುಮಾತ್ರ, ದಕ್ಷಿಣ ವಿಯೆಟ್ನಾಂಗಳಲ್ಲಿ ಚಿನ್ನದೊರೆತರೂ ಅಷ್ಟೇನೂ ಮುಖ್ಯವಲ್ಲ.

ಈ ಪ್ರದೇಶಗಳಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗಿಲ್ಲದಿರುವುದಕ್ಕೆ ಶಕ್ತಿಸಾಧನಗಳಿಲ್ಲದ್ದೇ ಕಾರಣ. ಸಿದ್ಧವಸ್ತು ತಯಾರಿಕೆಯ ಕೈಗಾರಿಕೆಗಳು ಇಲ್ಲಿಲ್ಲ. ಸಿಂಗಪುರದಲ್ಲಿ ತವರ ಕರಗಿಸುವ ಕೈಗಾರಿಕೆಯುಂಟು. ಜಾವದಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳೂ ಮಯನ್ಮಾರ್, ಥೈಲೆಂಡ್, ಇಂಡೊನೇಷ್ಯ, ಫಿಲಿಫೈನ್ಸ್ ಮತ್ತು ವಿಯೆಟ್ನಾಂಗಳಲ್ಲಿ ಹತ್ತಿ ಗಿರಣಿ ಕೈಗಾರಿಕೆಗಳೂ ಇವೆ.

(ಇ) ಪೂರ್ವ ಏಷ್ಯ: ಕಲ್ಲಿದ್ದಲು, ಮ್ಯಾಂಗನೀಸ್, ಕಬ್ಬಿಣ, ಬಾಕ್ಸೈಟ್, ತವರ, ಆಂಟಿಮೊನಿ, ಬಿಸ್ಮತ್, ಗ್ರಾಫೈಟ್ ಮತ್ತು ಮ್ಯಾಗ್ನಸೈಟ್‍ಗಳು ಮುಖ್ಯ ಖನಿಜಗಳು. ಚೀನದ ಪ್ರಸ್ಥಭೂಮಿಯಲ್ಲಿ ಪೆಟ್ರೋಲಿಯಂ, ಉಪ್ಪು ದೊರೆಯುತ್ತವೆ. ಜಪಾನಿನಲ್ಲಿ ಖನಿಜಗಳು ಸಾಕಷ್ಟಿಲ್ಲವಾದರೂ ಇದು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ದೇಶ.

ಮಂಚೂರಿಯ, ಕೊರಿಯಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯೂ ಚೀನದಲ್ಲಿ ಕಬ್ಬಿಣ ಮತ್ತು ಉಕ್ಕು, ನೂಲು, ಯಂತ್ರೋಪಕರಣ, ವಾಹನ ಮತ್ತು ರಾಸಾಯನಿಕ ವಸ್ತುಗಳ ಭಾರಿ ಪ್ರಮಾಣದ ಕೈಗಾರಿಕೆಗಳು ಬೆಳೆದಿವೆ.

ಜನಸಂಖ್ಯೆ: ಏಷ್ಯ ಖಂಡದಲ್ಲಿ ಜನಸಂಖ್ಯೆಯದು ಒಂದು ಸಮಸ್ಯೆ. ಪ್ರಪಂಚದ ಜನಸಂಖ್ಯೆಯಲ್ಲಿ ಶೇ. 69 (ಸೋವಿಯತ್ ವಿಭಾಗವನ್ನು ಬಿಟ್ಟು) ಈ ಖಂಡದಲ್ಲಿದೆ. ಏಷ್ಯದ ಜನಸಾಂದ್ರತೆ ಚ.ಕಿಮೀ ಗೆ 300. 2010ಷ್ಟು ಹೊತ್ತಿಗೆ ಏಷ್ಯದ ಜನಸಂಖ್ಯೆ ಬಹಳ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ. ಹೆಚ್ಚು ಜನ ಗ್ರಾಮವಾಸಿಗಳು. ಜಪಾನ್ ವಿನಾ ಉಳಿದಕಡೆಗಳಲ್ಲಿ ಕೈಗಾರಿಕಾನಗರಗಳ ಜನಸಂಖ್ಯೆಯ ಪ್ರಮಾಣ ಕಡಿಮೆ.

ಪಾಕಿಸ್ತಾನದಿಂದ ಹಿಡಿದು ಉತ್ತರ ಚೀನ ಮತ್ತು ಜಪಾನ್ ವರೆಗಿನ ಪ್ರದೇಶದಲ್ಲಿ ಜನನಿವಾಸಕ್ಕೆ ಅನುಕೂಲಕರ ವಾಯುಗುಣ, ಫಲವತ್ತಾದ ಭೂಮಿ, ವ್ಯವಸಾಯ ಮತ್ತು ಕಸಬು ಇವೆ. ಇಲ್ಲಿನ ಜನಸಾಂದ್ರತೆ ಚ.ಕಿಮೀಗೆ 600. ಪೂರ್ವಚೀನದಲ್ಲಿ ಇದು 900ಕ್ಕಿಂತ ಹೆಚ್ಚಾದರೂ ಕೆಲವು ವ್ಯವಸಾಯ ಪ್ರದೇಶಗಳಲ್ಲಿ ಚ.ಕಿಮೀಗೆ 2000ದಿಂದ 3000ದ ವರೆಗೂ ಇದೆ. ಪ್ರಪಂಚದ ಮೂರು ಅತ್ಯಂತ ಜನ ಸಮೃದ್ಧ ಪ್ರದೇಶಗಳಲ್ಲಿ ಎರಡು ಏಷ್ಯದಲ್ಲೇ ಇವೆ. ಇವುಗಳಲ್ಲಿ ಪೂರ್ವ ಚೀನವೇ ಕೇಂದ್ರವಾಗಿರುವ ಪೂರ್ವ ಏಷ್ಯ ಅತ್ಯಂತ ದೊಡ್ಡ ಪ್ರದೇಶ. ಎರಡನೆಯ ಜನಸಾಂದ್ರ ಪ್ರದೇಶವೆಂದರೆ ಆಫ್ಘಾನಿಸ್ತಾನ, ಪಾಕಿಸ್ತಾನ, ಭಾರತ, ಶ್ರೀಲಂಕಗಳನ್ನೊಳಗೊಂಡ ದಕ್ಷಿಣ ಏಷ್ಯ. ಇಡೀ ಖಂಡದ ವಿಸ್ತೀರ್ಣದಲ್ಲಿ ಅರ್ಧಕ್ಕಿಂತ ಕಡಿಮೆ ಇರುವ ದಕ್ಷಿಣ ಹಾಗೂ ಆಗ್ನೇಯ ಏಷ್ಯದಲ್ಲಿ ಏಷ್ಯದ ಶೇ. 90ರಷ್ಟು ಜನವಾಸಿಸುತ್ತಾರೆ. (ಕೆ.ಆರ್.ಆರ್.)

**ಏಷ್ಯ ಮೈನರ್:** ಏಷ್ಯದ ಪಶ್ಚಿಮ ತುದಿಯಲ್ಲಿ, ಆಧುನಿಕ ಟರ್ಕಿಯ ಏಷ್ಯನ್ ಭಾಗವನ್ನೊಳಗೊಂಡ ಪರ್ಯಾಯದ್ವೀಪ. ವಿಸ್ತೀರ್ಣ 7,70,000 ಚ.ಕಿಮೀ. ಆಂಟಿ–ಟಾರಸ್ ಪರ್ವತಶ್ರೇಣಿಯೇ ಇದರ ಪೂರ್ವದ ಗಡಿ. ಪಶ್ಚಿಮ ಉತ್ತರ ದಕ್ಷಿಣಗಳಲ್ಲಿ ಕ್ರಮವಾಗಿ ಏಜಿಯನ್, ಕಪ್ಪು ಮತ್ತು ಮೆಡಿಟರೇನಿಯನ್ ಸಮುದ್ರಗಳಿವೆ. ಏಜಿಯನ್ ಸಮುದ್ರಕ್ಕೂ ಕಪ್ಪು ಸಮುದ್ರಕ್ಕೂ ನಡುವೆ ಕೊಂಡಿಯಂತಿರುವ ಮರ್ಮರ ಸಮುದ್ರದಿಂದ ಐರೋಪ್ಯ ಟರ್ಕಿಯೂ ಏಷ್ಯನ್ ಟರ್ಕಿಯೂ ಪ್ರತ್ಯೇಕಗೊಂಡಿವೆ. ಉ.ಅ. $35^0$–$45^0$ ಪೂ.ರೇ. $25^0$–$45^0$ ರವರಿಗೆ ಹಬ್ಬಿದೆ.

ಏಷ್ಯ ಮೈನರ್ ಎಂಬ ಹೆಸರನ್ನು ಈಗಿನ ಅರ್ಥದಲ್ಲಿ ಮೊಟ್ಟಮೊದಲಿಗೆ ಬಳಸಲಾದದ್ದು 5ನೆಯ ಶತಮಾನದಲ್ಲಿ–ಒರೋಸ್ಟಿಯಸ್ ಬರೆದ ಹಿಸ್ಟೋರಿಯ ಅಡ್ವರ್ಸಸ್ ಪೆಗಾನೋಸ್ ಕೃತಿಯಲ್ಲಿ. ರೋಮಿನ ಏಷ್ಯನ್ ಪ್ರಾಂತ್ಯವನ್ನು ಸೂಚಿಸಲಿಕ್ಕಾಗಿ ಅನಟೋಲಿಯ ಅಥವಾ ಲೆವಾಂಟ್ ಎಂಬುದಕ್ಕೆ ಏಷ್ಯ ಮೈನರ್ ಪರ್ಯಾಯ ಶಬ್ದವಾಗಿತ್ತು. ಅನಂತರ ಬೈಜಾಂಟೈನರಿಂದ ತುರ್ಕರು ಗೆದ್ದುಕೊಂಡ ಪ್ರದೇಶಕ್ಕೆ ಈ ಹೆಸರು ಬಂದದ್ದು 10ನೆಯ ಶತಮಾನದಲ್ಲಿ.

ಭೂರಚನೆ, ಮೇಲ್ಮೈ ಲಕ್ಷಣ : ಪೋರ್ಚುಗಲ್‍ನಿಂದ ಮಲಯ ದ್ವೀಪಸ್ತೋಮದವರೆಗೆ ಅಕ್ಷಾಂಶರೇಖೆಗಳಂತೆ ಹಬ್ಬಿರುವ ಮಡಿಕೆ ಪರ್ವತಗಳ ಪಟ್ಟಿಯಲ್ಲಿ ಏಷ್ಯ ಮೈನರ್ ಪ್ರದೇಶವೂ ಒಂದು ಭಾಗ. ಪರ್ವತರಚನೆಯ ಕಾರ್ಯ ಇಲ್ಲಿ ಇತ್ತೀಚೆಗೆ ತಾನೇ ಮುಗಿದಿದೆ. ಟ್ರೋಆಡ್‍ನಲ್ಲಿ ಪದೇ ಪದೇ ಸಂಭವಿಸುವ ಭೂಕಂಪಗಳು ಕೇರಿಯದ ಕೆಲವು ಭಾಗಗಳಲ್ಲಿ ಹೊಮ್ಮುವ ಬಿಸಿ ಬುಗ್ಗೆಗಳೂ ವಿಷಾನಿಲಗಳು ಯಾನಾರ್ ಟಾಸಿನ ಸತತಜ್ವಾಲೆಯ ಇದಕ್ಕೆ ಸಾಕ್ಷಿ. ಏಷ್ಯ ಮೈನರಿನಲ್ಲಿ ಜೀವಂತ ಅಗ್ನಿಪರ್ವತಗಳು ಈಗ ಇಲ್ಲ.

ಏಷ್ಯ ಮೈನರಿನ ನಡುವಣ ಪ್ರಸ್ಥಭೂಮಿ ಪಶ್ಚಿಮದಲ್ಲಿ ಸಮುದ್ರಮಟ್ಟದಿಂದ 735 ಮೀ ಎತ್ತರವಾಗಿದ್ದು ಪೂರ್ವದ ತುದಿಯಲ್ಲಿ 1324 ಮೀಗೆ ಏರುತ್ತದೆ. ಇದಕ್ಕೆ ಆಗ್ನೇಯದಲ್ಲೂ ದಕ್ಷಿಣದಲ್ಲೂ ಟಾರಸ್ ಪರ್ವತಶ್ರೇಣಿಗಳು ಹಬ್ಬಿವೆ. ಇವು ಈಶಾನ್ಯಾಭಿಮುಖವಾಗಿ ಹಬ್ಬಿ ಅಮಾನಸ್ ಶ್ರೇಣಿಗಳೊಂದಿಗೆ ಕೂಡಿಕೊಂಡು ಮುಂದುವರಿದು ಆಂಟಿ–ಟಾರಸ್ ಎನಿಸಿಕೊಳ್ಳುತ್ತವೆ. ಸಿಲಿಸಿಯ ಕರಾವಳಿ ಪ್ರದೇಶವಿರುವುದು ಟಾರಸ್ ಮತ್ತು ಅಮಾನಸ್ ಮಡಿಕೆಗಳಿಂದ ಸಂಭವಿಸಿರುವ ಕೋನ ಪ್ರದೇಶದಲ್ಲಿ.

ಏಷ್ಯ ಮೈನರಿನ ಉತ್ತರದಲ್ಲಿರುವವು ಪೊಂಟಿಕ್ ಪರ್ವತಶ್ರೇಣಿಗಳು. ಇವು ದಕ್ಷಿಣ ಮತ್ತು ಪೂರ್ವದ ಶ್ರೇಣಿಗಳಿಗಿಂತ ತಗ್ಗು. ಇವನ್ನು ಅನೇಕ ನದಿಗಳು ವಿಭಾಗಿಸುತ್ತವೆ.

ಪರ್ಯಾಯದ್ವೀಪದ ಪಶ್ಚಿಮ ಪರ್ವತಗಳು ಪೂರ್ವ–ಪಶ್ಚಿಮವಾಗಿ ಹಬ್ಬಿರುವ ಮಡಿಕೆ ಶ್ರೇಣಿಗಳು. ಕರಾವಳಿಯಿಂದ ಪ್ರಸ್ಥಭೂಮಿ ಪ್ರದೇಶಕ್ಕೆ ಹಾದುಹೋಗಲು ಅನುಕೂಲವಾದ ವಿಶಾಲ ಕಣಿವೆಗಳು ಇಲ್ಲಿ ಅನೇಕ ಇವೆ. ಇಲ್ಲಿನ ಪರ್ವತಶ್ರೇಣಿಗಳು ಪಶ್ಚಿಮದ ಸಮುದ್ರದೊಳಕ್ಕೆ ಇಳಿದಿರುವುದರಿಂದ ಸಮುದ್ರತೀರ ಅಂಕುಡೊಂಕು. ತೀರದ ದ್ವೀಪಗಳಿಗೂ ಕರಾವಳಿಗೂ ನಡುವಣ ಸಮುದ್ರದ ಆಳ ಹೆಚ್ಚು. ಈ ಕಾರಣಗಳಿಂದಾಗಿ ಇಲ್ಲಿ ನೈಸರ್ಗಿಕ ಬಂದರುಗಳು ಅನೇಕ. ಸಮುದ್ರದೊಳಕ್ಕೂ ಲಂಬಕೋನೀಯವಾಗಿ ಪರ್ವತಶ್ರೇಣಿಗಳು ಇಳಿದಿವೆ.

ಏಷ್ಯ ಮೈನರಿನ ನದಿಗಳು ವರ್ಷವೆಲ್ಲ ತುಂಬಿ ಹರಿಯುವುದಿಲ್ಲ. ಇವುಗಳ ಕೆಳಭಾಗದಲ್ಲಿ ಮರಳು ಹೆಚ್ಚು. ಇವುಗಳಿಂದಾಗಿ ಈ ಪ್ರದೇಶದ ಕರಾವಳಿಯ ರೇಖೆಯೇ ಹಿಂದಿನ ಕಾಲಕ್ಕೂ ಇಂದಿಗೂ ಬಹಳ ವ್ಯತ್ಯಾಸಗೊಂಡಿದೆ. ಏಷ್ಯ ಮೈನರಿನ ಮುಖ್ಯ ನದಿಗಳಿವು: ಪಶ್ಚಿಮದಲ್ಲಿ ಗೆಡಿಜ್, ಬುಯುಕ್ ಮೆಂಡೆರಿಸ್ ಮತ್ತು ಕೋಕ; ಉತ್ತರದಲ್ಲಿ ಸಕರ್ಯ, ಕಿಜೆಲ್ ಇರ್ಮಕ್ ಮತ್ತು ಯೆಸಿಲ್ ಇರ್ಮಕ್; ದಕ್ಷಿಣದಲ್ಲಿ ಸೇಹಾನ್ ಮತ್ತು ಕೇಹಾನ್. ಪ್ರಸ್ಥಭೂಮಿಯ ನಟ್ಟನಡುವೆ ಇರುವ ಟಜ್ ಗೋಲು ಅದರ ಹೆಸರೇ ಸೂಚಿಸುವಂತೆ ಲವಣಸರೋವರ.

ವಾಯುಗುಣ: ಪರ್ಯಾಯ ದ್ವೀಪವನ್ನು ಸುತ್ತುವರಿದ ಪರ್ವತಶ್ರೇಣಿಗಳಿಂದಾಗಿ ನಡುವಣ ಪ್ರಸ್ಥಭೂಮಿಯಲ್ಲಿನ ವಾಯುಗುಣ ವೈಪರಿತ್ಯಗಳಿಂದ ಕೂಡಿದ್ದಾಗಿದೆ. ಅಲ್ಲಿ ವರ್ಷಕ್ಕೆ ಮೂರು ನಾಲ್ಕು ತಿಂಗಳು ಹಿಮದ ಹೊದಿಕೆ; ನಡುಬೇಸಗೆಯಲ್ಲಿ ಬಿಸಿಲು ಧಗೆ ಅಸಾಧ್ಯ. ಎಲ್ಲ ಋತುಗಳಲ್ಲೂ ಗಾಳಿ ಮೊರೆಯುತ್ತ ಬೀಸುತ್ತದೆ. ಮಳೆಯಾಗುವುದು ವಸಂತ ಋತುವಿನಲ್ಲಿ ಮತ್ತು ಬೇಸಗೆಯ ಆದಿಯಲ್ಲಿ. ಚಳಿಗಾಲದಲ್ಲಿ ಪ್ರಸ್ಥಭೂಮಿಯ ನಡುಭಾಗದಿಂದ ದಕ್ಷಿಣಕ್ಕೆ ಬೀಸುವ ಗಾಳಿ ಸಮುದ್ರತೀರಕ್ಕೆ ಇಳಿಯುವಾಗ ತನ್ನ ಶೈತ್ಯವನ್ನು ತ್ಯಜಿಸುತ್ತದೆ. ಆದರೂ ಒಮ್ಮೊಮ್ಮೆ ಥಂಡಿ ಅಧಿಕವಾಗಿ ಅಲ್ಲಿನ ಕಿತ್ತಳೆ ಫಸಲೆಲ್ಲ ನಾಶವಾಗುವುದುಂಟು.

ಚಳಿಗಾಲದಲ್ಲಿ ಪೂರ್ವಾಭಿಮುಖವಾಗಿ ಬೀಸುವ ಚಕ್ರಮಾರುತಗಳಿಂದ ತೀರಪ್ರದೇಶಗಳಲ್ಲಿ ಮಳೆಯಾಗುತ್ತದೆ.

ಸಸ್ಯ ಪ್ರಾಣಿವರ್ಗ: ಏಷ್ಯ ಮೈನರಿನ ಸಸ್ಯ ವೈವಿಧ್ಯಮಯ. ಆದರೆ ಮಧ್ಯ ಮತ್ತು ಪೂರ್ವ ಪ್ರದೇಶಗಳಲ್ಲಿರುವುದೆಷ್ಟೋ ಇನ್ನೂ ತಿಳಿದು ಬಂದಿಲ್ಲ. ಪೂರ್ವದಿಂದ ಪಶ್ಚಿಮಕ್ಕೂ ಪಶ್ಚಿಮದಿಂದ ಪೂರ್ವಕ್ಕೂ-ಏಷ್ಯ ಯುರೋಪುಗಳ ನಡುವೆ-ಸಸ್ಯಗಳು ವಲಸೆ ಹೋಗುವ ಮುಖ್ಯ ಮಾರ್ಗ ಏಷ್ಯ ಮೈನರ್. ನಿತ್ಯಹಸುರಿನ ಸಸ್ಯಗಳಿಂದ ಮರುಭೂಮಿಯ ಕುರುಚಲ ವರೆಗೆ ನಾನಾ ಬಗೆಯ ಸಸ್ಯಗಳನ್ನು ಇಲ್ಲಿ ಕ್ರಮವಾಗಿ ಗುರುತಿಸಬಹುದು. ಪ್ರಾಣಿಗಳಲ್ಲೂ ಇದೇ ಬಗೆಯ ವೈವಿಧ್ಯವುಂಟು. (ಸಿ.ಕೆ.ವೈ.ಡಿ.)

**ಏಷ್ಯದ ಭೂ ಇತಿಹಾಸ:** ಏಷ್ಯಖಂಡದ ಬೆಳವಣಿಗೆಯಲ್ಲಿ ಪರ್ವತಜನ್ಯ ಶಕ್ತಿಗಳು ಪ್ರಮುಖಪಾತ್ರ ವಹಿಸಿವೆ ಎಂದು ಭಾವಿಸಲಾಗಿದೆ. ಮೊದಲಿಗೆ ಅಲ್ಲಲ್ಲೇ ಪುರಾತನ ಭೂಫಲಕಗಳು (ಷೀಲ್ಡ್) ಇದ್ದವು. ಭೂಇತಿಹಾಸದ ನಾನಾ ಯುಗಗಳಲ್ಲಿ ತಲೆದೋರಿದ ಪರ್ವತಜನ್ಯ ಶಕ್ತಿಗಳ ಪ್ರಭಾವದಿಂದ ವಿಸ್ತೀರ್ಣ ಅಭಿನತಿಗಳಲ್ಲಿ (ಜಿಯೊಸಿಂಕ್ಲೈನ್ಸ್) ಸಂಗ್ರಹವಾಗಿದ್ದ ನಿಕ್ಷೇಪಗಳು ಮೇಲಕ್ಕೆ ಎತ್ತಲ್ಪಟ್ಟು ವಿವಿಧ ತೆರನಾಗಿ ಮಡಿಕೆ ಬಿದ್ದು ಹೊಸ ಭೂಭಾಗಗಳಾಗಿ ಮಾರ್ಪಟ್ಟುವು. ಅಲ್ಲದೆ ಕ್ರಮೇಣ ಈ ಹೊಸ ಭೂಭಾಗಗಳು ಶಾಶ್ವತ ಭೂಖಂಡ ಕೇಂದ್ರಗಳೊಡನೆ ಮಿಲನಗೊಂಡು ಭೂಖಂಡದ ವಿಸ್ತೀರ್ಣ ಬೆಳೆಯುತ್ತ ಈಗಿನ ಖಂಡಭಾಗ ರೂಪುಗೊಂಡಿತೆಂದು ಊಹಿಸಲಾಗಿದೆ.

ಈ ಬೃಹತ್ ಖಂಡದ ಭೂ ಇತಿಹಾಸವನ್ನು ತಿಳಿಯಲು ಅದನ್ನು ಎಂಟು ಭಾಗಗಳಾಗಿ ವಿಭಜಿಸಲಾಗಿದೆ:-1 ಅರೇಬಿಯ ಪರ್ಯಾಯದ್ವೀಪ ಮತ್ತು ಇರಾಕ್ ಮೈದಾನ, 2 ಭಾರತ ಪರ್ಯಾಯದ್ವೀಪ ಮತ್ತು ಸಿಂಧೂ-ಗಂಗಾಮೈದಾನ, 3 ತುರ್ಕಿ=ಕಕೇಸಿಯ, ಇರಾನ್ ಮತ್ತು ಆಫ್ಘಾನಿಸ್ತಾನ್ ಪರ್ವತಶ್ರೇಣಿ, 4 ಬಲೂಚಿಸ್ತಾನದಿಂದ ಮಯನ್ಮಾರ್ ದವರೆಗೆ ಹಬ್ಬಿರುವ ಹಿಮಾಲಯ ಪರ್ವತಶ್ರೇಣಿ, 5 ಮಧ್ಯ ಏಷ್ಯ, 6 ಏಷ್ಯಾಟಿಕ್ ರಷ್ಯದ ತಗ್ಗುಪ್ರದೇಶಗಳು, 7 ಪೆಸಿಫಿಕ್ ತೀರಪ್ರದೇಶಗಳು, 8 ದ್ವೀಪಸ್ತೋಮಗಳು.

1. ಅರೇಬಿಯ ಪರ್ಯಾಯದ್ವೀಪ ಮತ್ತು ಇರಾಕ್ ಬಯಲು ಪ್ರದೇಶ : ಪೂರ್ವಕೇಂಬ್ರಿಯನ್ ಶಿಲೆಗಳು ಕೆಂಪು ಸಮುದ್ರದ ತೀರದುದ್ದಕ್ಕೂ ಕೇಂದ್ರ ಅರೇಬಿಯದಲ್ಲೂ ವಿಸ್ತಾರವಾಗಿ ಹರಡಿವೆ. ಅಲ್ಲದೆ ಕೇಂಬ್ರಿಯನ್ ಕಾಲದಿಂದೀಚಿನ ಇತರ ಭೂಯುಗಗಳ ಜಲಜಶಿಲೆಗಳೂ ನಿಕ್ಷೇಪಗೊಂಡಿವೆ. ಇವುಗಳಲ್ಲಿ ಮೀಸೋಜೋಯಿಕ್ ಮತ್ತು ಟರ್ಷಿಯರಿ ಯುಗದ ನಿಕ್ಷೇಪಗಳು ಅತ್ಯಂತ ಉತ್ತಮ ರೀತಿಯಲ್ಲಿ ಕಂಡುಬರುತ್ತವೆ. ಇವು ಜೋರ್ಡನ್, ಟರ್ಕಿ ಮತ್ತು ಇರಾನುಗಳಲ್ಲಿ ಕಮಾನಿನಂತೆ ಮೇಲಕ್ಕೆ ಎತ್ತಲ್ಪಟ್ಟಿವೆ. ಶಿಲಾಪ್ರಸ್ತರಗಳು ತಮ್ಮ ಜಾಡಿನಲ್ಲಿ ಹಲವೆಡೆ ಭಂಗಗೊಂಡಿರುವುದೂ ಉಂಟು. ಮಧ್ಯ ಏಷ್ಯದ ಪ್ರಸಿದ್ಧ ತೈಲಪ್ರದೇಶಗಳು ಹರಡಿರುವುದು ಈ ಭಾಗದಲ್ಲೇ. ಈ ಪ್ರದೇಶದ ಬಹುಮುಖ್ಯ ರಚನಾ ವೈವಿಧ್ಯವೆಂದರೆ ಟರ್ಷಿಯರಿ ಯುಗದ ಕಮರಿಗಳ ಶ್ರೇಣಿ. ಕೆಂಪು ಸಮುದ್ರ, ಮೃತಸಮುದ್ರ ಮತ್ತು ಜೋರ್ಡನ್ ಕಣಿವೆಗಳು ಈ ಶ್ರೇಣಿಯವು. ಇವುಗಳಿಗೆ ಸಂಬಂಧಿಸಿದಂತೆ ತೀವ್ರ ರೀತಿಯಲ್ಲಿ ಜ್ವಾಲಾಮುಖಿಗಳ ಕಾರ್ಯಾಚರಣೆ ಉಂಟಾಯಿತು. ಹೀಗಾಗಿ ಯೆಮೆನ್‌ನಲ್ಲಿ 3742 ಮೀ, ಉತ್ತರ ಹೆಜಾಸಿನಲ್ಲಿ 2851 ಮೀ ಮತ್ತು ದಕ್ಷಿಣ ಸಿರಿಯದಲ್ಲಿ 660 ಮೀ ಮಂದದ ಲಾವಾಪ್ರಸ್ತರಗಳ ಶ್ರೇಣಿಗಳಿವೆ. ಅನೇಕ ಕಡೆ ಈ ಶ್ರೇಣಿಗಳು ಸ್ತರಭಂಗಗಳಿಗೆ ಒಳಗಾಗಿವೆ.

2. ಭಾರತ ಪರ್ಯಾಯದ್ವೀಪ ಮತ್ತು ಸಿಂಧೂ-ಗಂಗಾ ಮೈದಾನ: ಪೂರ್ವ ಕೇಂಬ್ರಿಯನ್ ಕಾಲದಿಂದಲೂ ಪರ್ಯಾಯ ದ್ವೀಪಭಾಗ ಭೂಖಂಡವೆನಿಸಿದೆ. ಮುಂದೆ ತೀವ್ರಸ್ತರಭಂಗ ಮತ್ತು ಭೂ ಹೊರಚಿಪ್ಪಿನ ರಚನೆಯಲ್ಲಾದ ಬದಲಾವಣೆಗಳು ಈ ಭೂಭಾಗದ ಶಿಲಾವಿನ್ಯಾಸವನ್ನು ಸಾಕಷ್ಟು ಕ್ಲಿಷ್ಟಗೊಳಿಸಿವೆ. ಪರ್ಯಾಯದ್ವೀಪದ ಬಹುಭಾಗ ಗೀರುಶಿಲೆ (ನೈಸ್) ಮತ್ತು ಗ್ರಾನೈಟ್‌ಶಿಲೆಗಳಿಂದ ಆವೃತವಾಗಿದೆ.

ಮಧ್ಯ ಭಾರತದ ಹಲವಾರು ಕಡೆ ಕಾರ್ಬೋನಿಫೆರಸ್ ಯುಗದ ಅಂತ್ಯದಿಂದ ಹಿಡಿದು ಕ್ರಿಟೇಷಿಯಸ್ ಯುಗದ ಮೊದಲ ಹಂತದವರೆಗಿನ ಗೊಂಡ್ವಾನ ಕಾಲದಲ್ಲಿ ಉಂಟಾದ ಭೂಚಟುವಟಿಕೆಗಳ ನಿಮಿತ್ತ ಶಿಲಾಪ್ರಸ್ತರಗಳು ಅಲ್ಲಲ್ಲೇ ಕುಸಿದು ಬೃಹದಾಕಾರದ ಇಳುಕಲುಗಳುಂಟಾದವು. ನದಿಗಳು ಕೊಚ್ಚಿ ತಂದ ಮರಳು, ಮಣ್ಣು ಮತ್ತು ಮೆಕ್ಕಲಿನೊಡನೆ ಸಸ್ಯವರ್ಗಗಳ ಭಾಗಗಳೂ ಈ ಭೂತೊಟ್ಟಿಗಳಲ್ಲಿ ನಿಕ್ಷೇಪಹೊಂದಿ ಕಾಲಕ್ರಮೇಣ ಕಲ್ಲಿದ್ದಲಿನ ನಿಕ್ಷೇಪಗಳಾಗಿ ರೂಪಾಂತರಗೊಂಡುವು. ಇವುಗಳಲ್ಲಿ ಬಹು ಪ್ರಸಿದ್ಧವಾದುದು ದಾಮೋದರ್ ಕಣಿವೆಯ ಪ್ರದೇಶ. ಇದೇ ಕಾಲದಲ್ಲಿ ಪೂರ್ವ ಮತ್ತು ಪಶ್ಚಿಮ ತೀರಪ್ರದೇಶಗಳನ್ನು ಸಮುದ್ರ ಪದೇ ಪದೇ ಆವರಿಸಿಕೊಂಡಿತ್ತು. ಮುಂದೆ ಈಗಿನ ಪುಣೆ-ಮುಂಬಯಿ ಪ್ರದೇಶದಲ್ಲಿ ಅಸಂಖ್ಯಾತ ಬಿರುಕುಗಳ ಮೂಲಕ ಬೆಸಾಲ್ಟ್ ಲಾವಾಪ್ರವಾಹಗಳು ಹೊರಹೊಮ್ಮಿ ಸು. 3,22,000 ಚ.ಕಿಮೀ ವಿಸ್ತಾರವಾದ ಪ್ರದೇಶವನ್ನು ಆವರಿಸಿದುವು. ಇಂದಿಗೂ ಈ ಪ್ರಾಂತ್ಯದಲ್ಲಿ ಕರಿಯ ಕಲ್ಲಿನ, ಮೆಟ್ಟಿಲುಮೆಟ್ಟಿಲಾಗಿರುವ ಬೆಟ್ಟಸಾಲುಗಳನ್ನು ನೋಡಬಹುದು.

ಪರ್ಯಾಯದ್ವೀಪದ ಪಶ್ಚಿಮ ಮತ್ತು ಪೂರ್ವತೀರಗಳುದ್ದಕ್ಕೂ ಬೆಟ್ಟಸಾಲುಗಳಿವೆ. ಇವೇ ಪಶ್ಚಿಮಘಟ್ಟಗಳು ಮತ್ತು ಪೂರ್ವಘಟ್ಟಗಳು. ಇವು ಕಬ್ಬಿಣ, ಬೆಣಚು, ಪ್ರಸ್ತರೀಶಿಲೆ, ಗ್ರಾನೈಟ್, ಚಾರ್ನೊಕೈಟ್ ಇತ್ಯಾದಿ ಶಿಲೆಗಳನ್ನು ಹೊಂದಿವೆ. ಸಾಮಾನ್ಯವಾಗಿ ಸಮುದ್ರಮಟ್ಟದಿಂದ 910-1517 ಮೀ ಎತ್ತರ ಮುಟ್ಟಿವೆ. ಇವಲ್ಲದೆ ಛೋಟಾನಾಗಪುರ ಮತ್ತು ಷಿಲ್ಲಾಂಗ್ ಪ್ರಸ್ಥಭೂಮಿಗಳನ್ನೂ ಹೆಸರಿಸಬೇಕು. ಇವು ಸು. 607-910 ಮೀ ಎತ್ತರವಿವೆ.

ಆರಾವಳಿ ಮತ್ತು ವಿಂಧ್ಯಪರ್ವತಗಳಿರುವುದು ಈ ಭಾಗದಲ್ಲೆ. ಇವುಗಳ ಉತ್ತರಕ್ಕೆ ಬಹು ವಿಸ್ತಾರವಾದ ಸಿಂಧೂ-ಗಂಗಾ ಮೈದಾನ ಪ್ರದೇಶವಿದೆ. ಇದು ಉತ್ತಮ ಬಗೆಯ ನದೀ ಮೆಕ್ಕಲಿನಿಂದ ಕೂಡಿದೆ.

3. ಟರ್ಕಿ, ಇರಾನ್ ಮತ್ತು ಆಫ್ಘಾನಿಸ್ತಾನ್ : ಈ ಭೂಭಾಗ ಮಡಿಕೆಬಿದ್ದು ಅಸ್ತವ್ಯಸ್ತವಾಗಿರುವ ಅಸಂಖ್ಯಾತ ಶಿಲಾಶ್ರೇಣಿಗಳಿಂದ ಕೂಡಿದೆ. ಅಲ್ಲಲ್ಲೆ ಸ್ತರಭಂಗಗಳಿಂದುಂಟಾದ ಖಂಡ ಪರ್ವತಗಳನ್ನೂ (ಬ್ಲಾಕ್ ಮೌಂಟನ್ಸ್) ವಿಶಾಲವಾದ ಇಳುಕಲುಗಳನ್ನೂ ನೋಡಬಹುದು. ಉತ್ತರ ಇರಾನಿನ ಎಲ್‌ಬುರ್ಸ್ ಮತ್ತು ಕೋಪೆಡಾಗ್ ಪರ್ವತಶ್ರೇಣಿಗಳು ಪೂರ್ವದಿಕ್ಕಿನತ್ತ ಆಫ್ಘಾನಿಸ್ತಾನದ ಹಿಂದೂಕುಷ್ ಪರ್ವತದ ಕಡೆಗೆ ತಮ್ಮ ಜಾಡನ್ನು ಹರಿಸಿವೆ. ದಕ್ಷಿಣದಲ್ಲಿ ಬಹು ವಿಶಾಲವಾದ ಜಾಗ್ರೋಸ್ ಶ್ರೇಣಿ ಇದೆ. ಇದರಲ್ಲಿ 1556 ಮೀ ಗಳಿಗೂ ಮೀರಿದ ಎತ್ತರದ ಹಲವಾರು ಶಿಖರಗಳಿವೆ. ಇದರ ಜಾಡು ವಾಯವ್ಯ- ಆಗ್ನೇಯವಾಗಿದ್ದು ಇರಾನ್, ಮಯನ್ಮಾರ್ ಮತ್ತು ಬಲೂಚಿಸ್ತಾನಗಳಲ್ಲೆಲ್ಲ ಪ್ರಸರಿಸಿದೆ. ಮಧ್ಯ ಏಷ್ಯದ ಪ್ರಮುಖ ತೈಲಕ್ಷೇತ್ರಗಳಿಗೂ ಜಾಗ್ರೋಸ್ ಶ್ರೇಣಿಗೂ ನಿಕಟಸಂಬಂಧ. ಅದರಲ್ಲೂ ಅರೇಬಿಯನ್ ಪ್ರಸ್ಥಭೂಮಿಗೆ ಒತ್ತಿನಿಂತಿರುವ ಈ ಶ್ರೇಣಿಯ ಅಲೆಯಾಕೃತಿಯ ಮಡಿಕೆಗಳು ಈ ದೃಷ್ಟಿಯಲ್ಲಿ ಬಹು ಪ್ರಮುಖಸ್ಥಾನವನ್ನಾಕ್ರಮಿಸಿವೆ. ಅಲ್ಲದೆ ಈ ಶ್ರೇಣಿಗಳಲ್ಲಿ ಹಲವಾರು ಲವಣ ಇಳುಕಲುಗಳೂ ಜ್ವಾಲಾಮುಖಿಗಳೂ ಇವೆ.

ಟರ್ಕಿಯ ಭೂವಿನ್ಯಾಸ ಕ್ಲಿಷ್ಟವಾದುದು. ಇದರಲ್ಲಿ ಪ್ಲಿಯೊಸೀನ್ ಕಾಲದ 5140 ಮೀ ಎತ್ತರದ ಮೌಂಟ್ ಅರಾರತ್ ಜ್ವಾಲಾಮುಖಿ ಶಿಖರವೇ ಸರಳವಾದ ರಚನೆಯುಳ್ಳದ್ದೆಂದು ಭೂವಿಜ್ಞಾನಿಗಳ ಅಭಿಪ್ರಾಯ. ಈ ಕೇಂದ್ರದಿಂದ ಉಗಮವಾಗುವ ಆಂಟಿ-ಟಾರಸ್ ಮತ್ತು ಟಾರಸ್ ಪರ್ವತಗಳು ಮೆಡಿಟರೇನಿಯನ್ ತೀರದುದ್ದಕ್ಕೂ ಪಾಂಟಿಕ್ ಪರ್ವತ ಕಪ್ಪು ಸಮುದ್ರದುದ್ದಕ್ಕೂ ಹಬ್ಬಿವೆ. ಈ ಶ್ರೇಣಿಯ ಅನಟೋಲಿಯನ್ ಪ್ರಸ್ಥಭೂಮಿಯಲ್ಲಿ ಅಸಂಖ್ಯಾತ ತಗ್ಗುಗಳಿವೆ. ಇವುಗಳಲ್ಲಿ ಟುಜ್ ಮತ್ತು ವಾನ್ ಎಂಬ ಉಪ್ಪಿನಸರೋವರಗಳನ್ನು ಹೆಸರಿಸಬಹುದು. ಕಪ್ಪು ಸಮುದ್ರದ ಜೋಂಗುಲ್ ಡಾಕ್ ಎಂಬಲ್ಲಿ ಬಹುಪ್ರಸಿದ್ಧವಾದ ಕಾರ್ಬೋನಿಫೆರಸ್ ಯುಗದ ಕಲ್ಲಿದ್ದಲು ನಿಕ್ಷೇಪಗಳಿವೆ. ಇತರೆಡೆಗಳಲ್ಲಿ ಕ್ರೋಮ್ ಮತ್ತು ಮ್ಯಾಂಗನೀಸ್ ಅದಿರುಗಳ ವಿಶಾಲ ನಿಕ್ಷೇಪಗಳಿವೆ. ಈ ಭೂಭಾಗದಲ್ಲಿ ಆಗಾಗ್ಗೆ ಆಗುತ್ತಿದ್ದ ಭೂಕಂಪನಗಳು ಪ್ರದೇಶದ ಅಸ್ಥಿರತೆಯನ್ನು ಸೂಚಿಸುತ್ತವೆ.

4. ಹಿಮಾಲಯ ಶ್ರೇಣಿ : ಪೂರ್ವ-ಪಶ್ಚಿಮದುದ್ದಕ್ಕೂ ಹಿಮಾಲಯ ಸು. 2415 ಕಿಮೀ ಹಬ್ಬಿದೆ. ಈ ಜಾಡಿನುದ್ದಕ್ಕೂ ಇದನ್ನು ಐದು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಉತ್ತರದಲ್ಲಿನ ಟಿಬೆಟ್ ಪ್ರಸ್ಥಭೂಮಿಗೂ ಈ ಶ್ರೇಣಿಗೂ ನಡುವೆ ಮೇಲಿನ ಸಿಂಧೂ ಮತ್ತು ಬ್ರಹ್ಮಪುತ್ರ ಕಣಿವೆಗಳಿವೆ. ಇದರ ದಕ್ಷಿಣಕ್ಕೆ ಬೃಹತ್ ಹಿಮಾಲಯ ಶ್ರೇಣಿ ಪ್ರಾರಂಭವಾಗುತ್ತದೆ. ಶ್ರೇಣಿಯಲ್ಲಿ 7280 ಮೀ ಗಳಿಗೂ ಮೀರಿದ ಎತ್ತರದ 60 ಶಿಖರಗಳಿವೆ. ಇವುಗಳಲ್ಲಿ ಬಹುಮುಖ್ಯವಾದುವು : ಎವರೆಸ್ಟ್ (8848 ಮೀ), ನಂಗಪರ್ವತ (8087 ಮೀ) ಮತ್ತು ನಾಮ್‌ಚೆಬರ್ವ (7719 ಮೀ). ಇವುಗಳ ದಕ್ಷಿಣದತ್ತ ಹಲವಾರು ಮೊನಚಾದ ಬೆಟ್ಟದ ಚಾಚುಗಳೂ ಆಳವಾದ ಕಣಿವೆಗಳೂ ಇವೆ. ಇಲ್ಲಿನ ಮುಖ್ಯ ಶಿಖರಗಳ ಎತ್ತರ 4550 ಮೀ ಮತ್ತು ದಕ್ಷಿಣಕ್ಕೆ ಕೆಳ ಹಿಮಾಲಯ ಶ್ರೇಣಿ ಇದೆ. ಇಲ್ಲಿ ಕೆಲವು ಶಿಖರಗಳು 3640ಮೀ ಎತ್ತರವನ್ನು ಮುಟ್ಟಿವೆ.

ಹಲವಾರು ತಗ್ಗು ಪ್ರದೇಶಗಳೂ ಇವೆ. ಇವುಗಳಲ್ಲಿ ಮುಖ್ಯವಾದುದು ಕಾಶ್ಮೀರ ಕಣಿವೆ. ಇದರ ದಕ್ಷಿಣದ ಪರ್ವತಶ್ರೇಣಿಯ ಎತ್ತರ ಬಹುಮಟ್ಟಿಗೆ ಕುಗ್ಗಿ ಕೇವಲ 1925 ಮೀ ಎತ್ತರದ ಸಿವಾಲಿಕ್ ಬೆಟ್ಟಗಳ ಸಾಲಾಗಿದೆ. ಇದು ಬಹುತೇಕ ಮಧ್ಯ ಪ್ಲಿಸ್ಟೊಸೀನ್ ಯುಗದಲ್ಲಿ ಮೇಲುಮೇಲಕ್ಕೆ ಏರುತ್ತಿದ್ದ ಹಿಮಾಲಯ ಪರ್ವತಶ್ರೇಣಿಗಳ ಸವೆತದಿಂದ ದೊರೆತ ಶಿಲಾಚೂರುಗಳಿಂದ ಕೂಡಿದೆ.

5. ಮಧ್ಯ ಏಷ್ಯ : ಇದರಲ್ಲಿ ಮುಖ್ಯವಾದ ಟಿಬೆಟ್ ಪ್ರಸ್ಥಭೂಮಿ 4853 ಮೀ ಎತ್ತರವನ್ನು ಮುಟ್ಟಿದೆ. ಇಲ್ಲಿಯ ಕಾರಕೋರಂ ಪರ್ವತಶ್ರೇಣಿಯ ಗಾಡ್ವಿನ್–ಆಸ್ಟಿನ್ (K-2) ಶಿಖರ 8611 ಮೀ ಎತ್ತರವಿದೆ. ಪಾಮಿರ್ ಮತ್ತು ಟಿಯನ್–ಷಾನ್ ಶ್ರೇಣಿಗಳಲ್ಲಿ 6067 ಮೀ ಗಳಿಗೂ ಮೀರಿದ ಶಿಖರಗಳುಂಟು. ಅಲ್ಲದೆ 2730 ಮೀ ಆಳದ ತಗ್ಗು ಪ್ರದೇಶಗಳೂ ಇವೆ. ಇದಕ್ಕೆ ಉತ್ತಮ ಉದಾಹರಣೆ ಚೀನದ ಸಿಂಘಾಯ್ ಪ್ರಾಂತ್ಯದ ಸೈಡಂ ತಗ್ಗು. ಪ್ರಸಿದ್ಧವಾದ ಟುರ್‌ಫಾನ್ ಓಯಸಿಸ್ ಸಮುದ್ರಮಟ್ಟಕ್ಕೆ 297 ಮೀ ತಗ್ಗಿನಲ್ಲಿದೆ. ವಾಯವ್ಯದ ಭಾಗದಲ್ಲಿ ಗೋಬಿ ಮರುಭೂಮಿ ಇದೆ.

6. ಏಷ್ಯಾಟಿಕ್ ರಷ್ಯದ ತಗ್ಗು ಪ್ರದೇಶಗಳು : ಈ ವಿಭಾಗದ ಕೇಂದ್ರ ಸೈಬೀರಿಯನ್ ಪ್ರಸ್ಥಭೂಮಿ ಲೀನಾ ಮತ್ತು ಎನಿಸಿ ಕಣಿವೆಗಳ ಮಧ್ಯೆ 910 ಮೀ ಗಳಿಗೂ ಕಡಿಮೆ ಎತ್ತರವಾಗಿದೆ. ಎನಿಸಿ ಪಶ್ಚಿಮಕ್ಕಿರುವ ಪಶ್ಚಿಮ ಸೈಬೀರಿಯನ್ ಬಯಲಿನಲ್ಲಿ ಮಡಿಕೆ ಬೀಳದ ಮೀಸೋಜೋ಼ಯಿಕ್ ಮತ್ತು ಟರ್ಷಿಯರಿ ನಿಕ್ಷೇಪಗಳಿವೆ. ಇವು ಯೂರಲ್ ಶ್ರೇಣಿಯ ತನಕ ಹಬ್ಬಿವೆ. ಈ ಭೂಭಾಗ ಸಾಮಾನ್ಯವಾಗಿ ಜೌಗುಪ್ರದೇಶ. ಇದರಲ್ಲಿ ಬಹು ಪ್ರಸಿದ್ಧವಾದುದು ವಾಸ್ಯು ಜೇನ್ ಜೌಗುಪ್ರದೇಶ. ಆಗ್ನೇಯ ಭಾಗದ ಕುಸ್ನೆಸ್ಕ್ ಮತ್ತು ಮಿನುಸಿನ್‌ಸ್ಕ್ ತಗ್ಗುಗಳಲ್ಲಿ ಪೇಲಿಯೊಜೋ಼ಯಿಕ್ ಯುಗದ ಕಲ್ಲಿದ್ದಲ ನಿಕ್ಷೇಪಗಳಿವೆ. ಇವು ಆಲ್ಟಾಯ್ ಮತ್ತು ಸಾಯನ್ ಪರ್ವತಶ್ರೇಣಿಗಳ ತಪ್ಪಲು. ದಕ್ಷಿಣದಲ್ಲಿ ಕಷ್ಘಾಕ್ ದಿಬ್ಬ ಪ್ರದೇಶವಿದೆ. ಇದರ ಸಾಮಾನ್ಯ ಎತ್ತರ 303 ಮೀ. ಕ್ಯಾಸ್ಪಿಯನ್ ಸಮುದ್ರದ ಉತ್ತರ ತೀರ ಪ್ರದೇಶದಲ್ಲಿ ತೈಲಕೇಂದ್ರಗಳಿವೆ.

7. ಪೆಸಿಫಿಕ್ ತೀರಪ್ರದೇಶಗಳು : ಪೂರ್ವ ಸೈಬೀರಿಯದಿಂದ ಪ್ರಾರಂಭವಾಗಿ ಚೀನದ ಮೂಲಕ ಹಾದು ಮಲೇಷ್ಯವನ್ನು ಮುಟ್ಟುವ ಈ ಭೂಭಾಗದಲ್ಲಿ ವಿವಿಧ ವಿನ್ಯಾಸದ ಪ್ರದೇಶಗಳಿವೆ. ಲೀನಾದ ಪೂರ್ವಕ್ಕಿರುವ ವರ್ಖೊಯಾನ್‌ಸ್ಕ್ ಮತ್ತು ಚೆರ್‌ಸ್ಕಿ ಶ್ರೇಣಿಗಳು 2487 ಮೀ ಗಳಿಗೂ ಮೀರಿ ಎತ್ತರವಾಗಿವೆ. ಕಾಮ್‌ಚಟ್ಕ ಪ್ರದೇಶದ 4550 ಮೀ ಎತ್ತರದಲ್ಲಿ ಜ್ವಾಲಾಮುಖಿಗಳಿವೆ.

ಚೀನದಲ್ಲಿ ಯೆನ್–ಷಾನಿಯನ್ ಪರ್ವತಜನ್ಯ ಯುಗಕ್ಕೆ ಒಳಗಾಗಿ ಭೂಭಾಗ ಪುನರುಜ್ಜೀವನಗೊಂಡು ಸ್ತರಭಂಗಗಳ ಪ್ರಭಾವದಿಂದ ಚಚ್ಚೌಕಾಕೃತಿಯ ಬೆಟ್ಟಗಳೂ ಇತ್ತೀಚೆಗೆ ತಲೆದೋರಿದ ಮೆಕ್ಕಲು ಪ್ರದೇಶಗಳೂ ಅಕ್ಕಪಕ್ಕದಲ್ಲಿವೆ. ಮಂಚೂರಿಯ ಬಯಲಿನ ಇಕ್ಕೆಲಗಳಲ್ಲಿ ಖಿಂಗನ್, ಜೆಹೋಲ್, ಲಿಯೊಟುಂಗ್ ಮೊದಲಾದ ತಲೆಕೆಳಗಾದ ವಿನ್ಯಾಸವುಳ್ಳ ಚಚ್ಚೌಕಾಕೃತಿಯ ಭೂಭಾಗಗಳನ್ನು ಗುರುತಿಸಬಹುದು.

ಕೊರಿಯದಲ್ಲಿ ಭೂಚಟುವಟಿಕೆಗಳಿಂದ ಛೇದಿತವಾದ ಪ್ರಸ್ಥಭೂಮಿಗಳೂ ಮೀಸೋಜೋ಼ಯಿಕ್ ಮಡಿಕೆಗಳೂ ಇವೆ. ಆಗ್ನೇಯ ಚೀನ ಸಹ ಹೆಚ್ಚಿನ ರೀತಿಯ ಸ್ತರಭಂಗಗಳಿಗೆ ಒಳಗಾಗಿದೆ. ಇಲ್ಲಿನ ಪೋ'ಯಾಂಗ್, ಟುಂಗ್ ಟಿಂಗ್ ಸರೋವರಗಳು ಮತ್ತು ಸಿಕಿಯಾಂಗ್ ಕಣಿವೆ ಜೇಡು ಮತ್ತು ಸ್ಲೇಟ್ ಶಿಲಾಪ್ರಸ್ತರಗಳಿಂದ ಆವೃತವಾದ ತಗ್ಗುಪ್ರದೇಶಗಳಲ್ಲಿವೆ. ಪಶ್ಚಿಮದತ್ತ ಸರಿದರೆ ಬಹು ಆಳವಾಗಿ ಛೇದಿತವಾದ ಕಣಿವೆಗಳನ್ನು ಹಾದುಹೋಗಬೇಕು, ಅನಂತರ 1820ಮೀ ಎತ್ತರದ ಪಶ್ಚಿಮ ಯುನಾನ್ ಪ್ರಸ್ಥಭೂಮಿ ಸಿಗುತ್ತದೆ. ಇದಕ್ಕೆ ಉತ್ತರದಲ್ಲಿ ಕಡಿದಾದ ಸಿನ್‌ಲಿಂಗ್ ಷಾನ್ ಪರ್ವತಶ್ರೇಣಿ ಇದೆ.

ಪರ್ಮಿಯನ್ ಯುಗದಿಂದೀಚೆಗೆ ಶಾಶ್ವತ ಭೂಖಂಡವೆನಿಸಿದ ಓರ್ ಡೋಸ್ ಪ್ರಸ್ಥಭೂಮಿ, ವಾಯವ್ಯ ಚೀನದ ಕೇಂದ್ರ ಭಾಗದಲ್ಲಿ ಪುರಾತನ ನೆಲಭಾಗದ ನಿಕ್ಷೇಪಗಳು ಎತ್ತರವಾಗಿರುವ ಮತ್ತು ಯಾವ ತೆರನಾದ ಭೂ ಚಟುವಟಿಕೆಗಳಿಗೂ ಒಳಗಾಗಿ ಅಸ್ತವ್ಯಸ್ತಗೊಂಡಿರದ ಲೋಯೆಸ್ ಎಂಬ ಒಂದು ಬಗೆಯ ಹಳದಿ ಮಣ್ಣಿನ ನಿಕ್ಷೇಪಗಳೂ ಇವೆ. ಲೋಯೆಸ್ ಭಾಗದಲ್ಲಿ ಪ್ರಸಿದ್ಧವಾದ ಹಳದಿ ನದಿ, ಹ್ವಾಂಗ್–ಹೋ ಮೈದಾನ, ಸರೋವರಗಳು ಮತ್ತು ನೈಸರ್ಗಿಕ ಕಾಲುವೆಗಳೂ ಇವೆ.

ದಕ್ಷಿಣಭಾಗದ ಯುನಾನ್ ಪ್ರಸ್ಥಭೂಮಿ ಮಯನ್ಮಾರ್, ಕಾಂಬೋಡಿಯ, ಲಾವೋಸ್, ವಿಯಟ್ನಾಮ್ ದೇಶಗಳನ್ನು ಒಳಗೊಂಡಿದೆ. ಮಯನ್ಮಾರ್‌ನಲ್ಲಿ ಇದನ್ನು ಷಾನ್ ಪ್ರಸ್ಥಭೂಮಿ ಎನ್ನುತ್ತಾರೆ. ಇದರ ಅನೇಕ ಕಡೆ ಸಾಲ್‌ವೀನ್ ಮತ್ತು ಮೆಕಾಂಗ್ ನದಿಗಳಿಂದಾದ ಆಳವಾದ ಕಣಿವೆಗಳಿವೆ.

8. ದ್ವೀಪಸ್ತೋಮಗಳು : ಇಂಡೊನೇಷ್ಯದಿಂದ ಜಪಾನ್ ತನಕ ಹಬ್ಬಿರುವ ಈ ಭೂಭಾಗ ಬಹು ಅಸ್ಥಿರವಾದುದು. ಈ ಪ್ರದೇಶದಲ್ಲಿ ಅಸಂಖ್ಯಾತ ಜ್ವಾಲಾಮುಖಿಗಳು ಅವುಗಳಿಗೆ ಸಂಬಂಧಿಸಿದ ದ್ವೀಪಗಳು ಇವೆ. ಪರ್ವತಜನ್ಯ ಶಕ್ತಿಗಳ ಚಟುವಟಿಕೆಯೂ ಬಹು ತೀವ್ರ. ಮಲೇಷ್ಯ ಮತ್ತು ಬೋರ್ನಿಯೊಗಳಲ್ಲಿ ಮೀಸೋಜೋ಼ಯಿಕ್ ಶಿಲೆಗಳು ಉಳಿದೆಡೆ ಟರ್ಷಿಯರಿ ನಿಕ್ಷೇಪಗಳು ಮಡಿಕೆಗಳು ಕಂಡುಬಂದಿವೆ. ಇವುಗಳಲ್ಲಿ ತೈಲಪ್ರದೇಶಗಳೂ ಇವೆ. ಇಂಡೊನೇಷ್ಯದಲ್ಲಿ ಹಲವು ಜ್ವಾಲಾಮುಖಿಗಳ ಶಿಖರಗಳು 3033 ಮೀ ಎತ್ತರವನ್ನೂ ಮೀರಿವೆ. ಅಗ್ನಿ ಪರ್ವತಗಳ ತೀವ್ರಗತಿಯ ಕಾರ್ಯಾಚರಣೆ ಇದ್ದೂ ಭೂಭಾಗ ಮಡಿಕೆ ಬೀಳದೆ ಅಲ್ಲಿನ ಶಿಲಾಪ್ರಸ್ತರಗಳ ಜಾಡಿನಲ್ಲಿ ಭಂಗವಾಗದಿರುವುದು ಜಪಾನಿನ ಭೂವಿನ್ಯಾಸದ ವೈಶಿಷ್ಟ್ಯ. ಇಲ್ಲಿಯ ಅತ್ಯಂತ ದೊಡ್ಡ ಭೂ ಇಳುಕಲಿನಲ್ಲಿ 3758 ಮೀ ಎತ್ತರದ ಫೂಜಿಯಾಮ ಅಗ್ನಿಪರ್ವತವಿದೆ. ಪೂರ್ವಭಾಗದಲ್ಲಿ ಮಡಿಕೆ ಬಿದ್ದಿರುವ ಮತ್ತು ಸ್ತರಭಂಗಗಳಿಂದ ಛೇದಿತವಾದ ಪ್ರಾಚೀನ ಶಿಲಾಪ್ರಸ್ತರಗಳ ಮೇಲೆ ಕಡಿದಾದ ಪರ್ವತಶ್ರೇಣಿ ಇದೆ. ಪಶ್ಚಿಮದತ್ತ ಸ್ತರಭಂಗಗಳಿಗೊಳಗಾಗದ ಕಿರಿಯ ನಿಕ್ಷೇಪಗಳೂ ಅಸಂಖ್ಯಾತ ಅಗ್ನಿ ಪರ್ವತಗಳೂ ಇವೆ. (ಬಿ.ವಿ.ಜಿ.)

# ಐ

**ಐಡೋಗ್ರಾಫ್:** ನಕ್ಷೆಗಳ ವಿಸ್ತರಣೆ ಮತ್ತು ಸಂಕೋಚನದಲ್ಲಿ ಬಳಸುವ ಉಪಕರಣ. ಇದು ಪ್ಯಾಂಥೋಗ್ರಾಫ್ ಉಪಕರಣಕ್ಕಿಂತ ಉತ್ತಮವಾದುದು. ಆದರೆ ಕಾರ್ಯ ವಿಧಾನ ಹೆಚ್ಚು ದೀರ್ಘ. ಇದರಲ್ಲಿ ಮೂರು ಚೌರಸ ಹಿತ್ತಾಳೆಯ ಕಡ್ಡಿಗಳಿರುತ್ತವೆ. ಈ ಉಪಕರಣವನ್ನು ಒಂದು ತಿರುಗಣಿ ಪೀಠಕ್ಕೆ ಬಂಧಿಸಿರುವರು. ಇದರ ಬಳಕೆಯು ಪ್ಯಾಂಥೋಗ್ರಾಫ್ ಉಪಕರಣದಂತೆಯೇ ಇರುವುದು. ಇಂದು ಇದರ ಬಳಕೆ ಕಂಪ್ಯೂಟರೀಕರಣದಿಂದ ಕಡಿಮೆಯಾಗಿದೆ. (ಆರ್.ಎನ್.)

**ಐಫೆಲ್ ಗೋಪುರ:** ಫ್ರಾನ್ಸ್ ದೇಶದ ಪ್ಯಾರಿಸ್ ನಗರದಲ್ಲಿರುವ ಎತ್ತರದ ಗೋಪುರ. ಪ್ಯಾರಿಸಿನ ವಸ್ತುಪ್ರದರ್ಶನಕ್ಕೋಸ್ಕರ ಇದನ್ನು 1889ರಲ್ಲಿ ನಿರ್ಮಿಸಲಾಯಿತು. ಫ್ರಾನ್ಸ್ ದೇಶದ ಪ್ರಸಿದ್ಧ ಎಂಜಿನಿಯರ್ ಮತ್ತು ಸೇತುವೆ ನಿರ್ಮಾಣಕಾರನಾದ ಅಲೆಕ್ಸಾಂಡರ್ ಗಸ್ಟಾವ್ ಐಫೆಲ್ ಈ ಪ್ರಖ್ಯಾತ ಗೋಪುರವನ್ನು ರೂಪಿಸಿ, ನಿರ್ಮಿಸಿದ್ದರಿಂದ ಆತನ ಹೆಸರನ್ನೇ ಗೋಪುರಕ್ಕೆ ಇಡಲಾಗಿದೆ.

ಪ್ಯಾರಿಸಿನ ಚ್ಯಾಂಪ್ ಡಿ ಮಾರ್ಸ್‌ನಲ್ಲಿರುವ ಈ ಬೃಹತ್‌ಗೋಪುರದ ಎತ್ತರ 298 ಮೀ. ಸು. 340 ಚ.ಅಡಿ ಜಾಗವನ್ನಿದು ಆಕ್ರಮಿಸಿದೆ. ಮೆದು ಕಬ್ಬಿಣದಿಂದಾದ ಇದರ ತೂಕ 7,300 ಟನ್ನುಗಳು. ಇದರ ನಿರ್ಮಾಣಕ್ಕೆ ಹತ್ತು ಲಕ್ಷಕ್ಕಿಂತ ಹೆಚ್ಚು ಡಾಲರುಗಳನ್ನು ಖರ್ಚುಮಾಡಲಾಗಿದೆ. ಈ ಗೋಪುರದಿಂದಾಗಿ ಪ್ಯಾರಿಸಿನ ಸೌಂದರ್ಯ ಹೆಚ್ಚಿದೆ. 63 ಜನರನ್ನು ಒಟ್ಟಿಗೆ ಒಯ್ಯಬಲ್ಲ ಮೂರು ವಿದ್ಯುಚ್ಚಾಲಿತ ಎತ್ತಿಗೆ ಯಂತ್ರಗಳು ಕುತೂಹಲಿಗಳನ್ನು ಗೋಪುರದ ತುದಿಗೊಯ್ಯುತ್ತವೆ. ಗೋಪುರದ ನೆತ್ತಿಯಿಂದ ಸುತ್ತಲ 136 ಕಿಮೀ ದೃಶ್ಯ ಗೋಚರವಾಗುತ್ತದೆ. ಹೀಗಾಗಿ ಪ್ರವಾಸಿಗಳ ಮುಖ್ಯ ಆಕರ್ಷಣೆಗಳಲ್ಲಿ ಇದೂ ಒಂದಾಗಿದೆ. ಇದರಲ್ಲೇ 18 ಮೀ ಎತ್ತರದ ಪ್ರಸಾರ ಕೇಂದ್ರವನ್ನು ಅಳವಡಿಸಲಾಗಿದೆ. (ಆರ್.ಡಿ.ಆರ್.)

**ಐಬೀರಿಯನ್ ಪರ್ಯಾಯದ್ವೀಪ:** ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ಸಮುದ್ರಗಳ ನಡುವೆ ಇರುವ ಸ್ಪೇನ್ ಪೋರ್ಚುಗಲ್ಲುಗಳನ್ನೊಳಗೊಂಡ ಪರ್ಯಾಯದ್ವೀಪ. ಇದನ್ನು ಯುರೋಪ್ ಖಂಡದ ಉಳಿದ ಭಾಗದಿಂದ ಪಿರೆನೀಸ್ ಪರ್ವತವೂ ಉತ್ತರ

ಆಫ್ರಿಕದಿಂದ ಜಿಬ್ರಾಲ್ಟರ್ ಜಲ ಸಂಧಿಯೂ ಪ್ರತ್ಯೇಕಿಸುತ್ತವೆ. ನವಶಿಲಾಯುಗದಲ್ಲಿ ಆಫ್ರಿಕದಿಂದ ಇಲ್ಲಿಗೆ ವಲಸೆ ಬಂದರೆಂದು ನಂಬಲಾಗಿರುವ ಪುರಾತನ ಐಬೀರಿಯನರಿಂದ ಇದಕ್ಕೆ ಈ ಹೆಸರು ಬಂದಿದೆ. ಇದರ 4/5 ಭಾಗವನ್ನು ಸ್ಪೇನ್ ದೇಶ ಆವರಿಸಿದೆ; ಇದರ ಹೆಚ್ಚು ಭಾಗ ಪ್ರಸ್ಥಭೂಮಿ. ಸುತ್ತ ಇರುವ ಪರ್ವತಶ್ರೇಣಿಗಳಿಂದ ಹರಿಯುವ ನದಿಗಳ ಪೈಕಿ ಟಾಗಸ್, ಡ್ಯೂರೊ, ಗ್ವಾಡಲ್‌ಕ್ವಿವರ್ ಮತ್ತು ಎಬ್ರೋ ಮುಖ್ಯ. ಇದರ ವಿಸ್ತೀರ್ಣ 5,81,558 ಚ.ಕಿಮೀ. ಕರಾವಳಿಯ ಮೈದಾನ ಕಿರಿದು. ಉ.ಅ. $30^0$–$44^0$ ಪೂ.ರೇ.$3^0$ ಪ.ರೇ $9^0$ ವರೆಗೆ ಹಬ್ಬಿದೆ.

ಈ ಪರ್ಯಾಯದ್ವೀಪದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಸಾಕಷ್ಟು ಮಳೆಯಾಗುತ್ತದೆ; ಒಳಭಾಗಗಳಲ್ಲಿ ಮಳೆ ಕಡಿಮೆ. ಕಣಿವೆಗಳಲ್ಲೂ ಪರ್ವತಗಳ ಮೇಲೂ ಸಾಧಾರಣವಾಗಿ ಕಾಡುಗಳು ಬೆಳೆದಿವೆ. ಬಯಲುಪ್ರದೇಶಗಳಲ್ಲಿ ಗೋದಿ, ಬಾರ್ಲಿ, ಮೆಕ್ಕೆಜೋಳ, ರೈ, ಆಲಿವ್, ಹೊಗೆಸೊಪ್ಪು, ಹಣ್ಣು ಮತ್ತು ಬತ್ತ ಮುಖ್ಯ ಬೆಳೆಗಳು. ದನಕರು ಮತ್ತು ಕುರಿಗಳನ್ನು ಮಾಂಸ, ಚರ್ಮ, ಹಾಲು ಮತ್ತು ಉಣ್ಣೆಗಳಿಗಾಗಿ ಸಾಕುತ್ತಾರೆ. ಮೀನುಗಾರಿಕೆಯೂ ಒಂದು ಮುಖ್ಯ ಕಸಬು. ಈ ಪ್ರದೇಶದಲ್ಲಿ ಪಾದರಸ, ಕಲ್ಲಿದ್ದಲು, ಕಬ್ಬಿಣ, ಸೀಸ, ತವರ, ತಾಮ್ರ, ಸತು, ಪೊಟ್ಯಾಷ್ ಖನಿಜಗಳು ಸಿಕ್ಕುವುವು. ಇವುಗಳಲ್ಲಿ ಹೆಚ್ಚು ಪಾಲು ರಫ್ತಾಗುತ್ತವೆ. ಹತ್ತಿ, ಧಾನ್ಯ, ಸಕ್ಕರೆ, ಕಾಫಿ, ಯಂತ್ರೋಪಕರಣಗಳು, ಬಟ್ಟೆ, ಪೆಟ್ರೋಲಿಯಂ ಮುಂತಾದವು ಆಮದಾಗುತ್ತವೆ. ಕಬ್ಬಿಣ ಮತ್ತು ಉಕ್ಕು, ಬಟ್ಟೆಗಳು, ಸಿಗರೇಟು, ಚರ್ಮದ ಸಾಮಾನುಗಳು, ಮದ್ಯ–ಇವು ಈ ಪ್ರದೇಶದ ಕೆಲವು ಮುಖ್ಯ ಕೈಗಾರಿಕೆಗಳು. ಒಳನಾಡಿನಲ್ಲಿ ಹೆಚ್ಚಿನ ಮಾರ್ಗಾನುಕೂಲಗಳಿಲ್ಲದಿರುವುದಕ್ಕೆ ಪ್ರಾಕೃತಿಕ ಅಡಚಣೆಯೂ ವಿರಳ ಜನಸಂಖ್ಯೆಯೂ ಕಾರಣ. ಆದರೆ ಕರಾವಳಿಯ ಮೈದಾನಗಳಲ್ಲಿ ಮತ್ತು ನದಿ ಕಣಿವೆಗಳಲ್ಲಿ ಸಂಚಾರಸೌಲಭ್ಯಗಳು ಹೆಚ್ಚು ಸಮರ್ಪಕ. ಜನ ಹೆಚ್ಚಾಗಿ ಚಿಕ್ಕ ಪಟ್ಟಣಗಳಲ್ಲಿ ವಾಸಿಸುತ್ತಾರೆ. ಮ್ಯಾಡ್ರಿಡ್ ಸ್ಪೇನಿನ ರಾಜಧಾನಿ ಮತ್ತು ಕೈಗಾರಿಕಾ ಕೇಂದ್ರ, ಮಾರ್ಗಸಂಧಿ. ಲಿಸ್ಬನ್ ಪೋರ್ಚುಗಲ್ಲಿನ ರಾಜಧಾನಿ ಮತ್ತು ಬಂದರು. (ಎ.ಕೆ.)

**ಐರೋಪ್ಯ ಆರ್ಥಿಕ ಸಮುದಾಯ:** ಬೆಲ್ಜಿಯಂ, ಫ್ರಾನ್ಸ್, ಜರ್ಮನ್ ಗಣರಾಜ್ಯ, ಇಟಲಿ, ಲಕ್ಸೆಂಬರ್ಗ್, ನೆದರ್ಲೆಂಡ್ಸ್–ಈ ಆರು ರಾಷ್ಟ್ರಗಳ ನಡುವಣ ಒಪ್ಪಂದಕ್ಕನುಗುಣವಾಗಿ 1958ರ ಜನವರಿ 1 ರಂದು ಸ್ಥಾಪಿತವಾದ ಸಂಸ್ಥೆ (ಯುರೋಪಿಯನ್ ಎಕನಾಮಿಕ್ ಕಮ್ಯೂನಿಟಿ). ಐರೋಪ್ಯ ಸಾಮಾನ್ಯ ಮಾರುಕಟ್ಟೆ (ಕಾಮನ್ ಮಾರ್ಕೆಟ್) ಎಂಬ ಹೆಸರೂ ಇದಕ್ಕುಂಟು. ಸದಸ್ಯ ರಾಷ್ಟ್ರಗಳಿಗೆ ಸಾಮಾನ್ಯವಾದ ಮಾರುಕಟ್ಟೆಯೊಂದನ್ನು ಸ್ಥಾಪಿಸಿ ಅವುಗಳ ಆರ್ಥಿಕ ನೀತಿಗಳಲ್ಲಿ ಸಾಮರೂಪ್ಯವುಂಟಾಗುವಂತೆ ಮಾಡಿ, ತನ್ಮೂಲಕ ಆ ದೇಶಗಳ ಆರ್ಥಿಕ ಚಟುವಟಿಕೆಗಳ ಸಮರಸ ಬೆಳವಣಿಗೆಯನ್ನೂ ಸ್ಥಿರತೆಯನ್ನೂ ಉಂಟುಮಾಡುವುದೂ ಅಲ್ಲಿನ ಪ್ರಜೆಗಳ ಜೀವನಮಟ್ಟ ಹೆಚ್ಚಿಸುವುದೂ ದೇಶಗಳ ನಡುವೆ ನಿಕಟಸಂಬಂಧ ಬೆಳೆಸುವುದೂ ಸಂಸ್ಥೆಯ ಉದ್ದೇಶ. ಇದರ ಸಾಧನೆಗಾಗಿ ಸಂಸ್ಥೆ ಅನುಸರಿಸುವ ಮುಖ್ಯ ವಿಧಾನಗಳಿವು: 1. ಆಮದು–ರಫ್ತು ಸುಂಕಗಳ ಮತ್ತು ನಾನಾ ನಿರ್ಬಂಧಗಳ ರದ್ದು, 2. ಸಮಾನ ಸುಂಕ ವ್ಯವಸ್ಥೆಯ ಮತ್ತು ವಾಣಿಜ್ಯ ನೀತಿಯ ಸ್ಥಾಪನೆ, 3. ಜನ ಸೇವೆ ಮತ್ತು ಬಂಡವಾಳಗಳು ಸುಸೂತ್ರವಾಗಿ ಸಾಗುವಂತೆ ಏರ್ಪಾಡು, 4. ಕೃಷಿ ಮತ್ತು ಸಾರಿಗೆಗೆ ಸಂಬಂಧಿಸಿದಂತೆ ಏಕರೀತಿಯ ನೀತಿಯ ಪ್ರತಿಷ್ಠಾಪನೆ, 5. ನ್ಯಾಯವಾದ ಸ್ಪರ್ಧೆಯ ವ್ಯವಸ್ಥೆಯ ಕಲ್ಪನೆ, 6. ನಾನಾ ಆರ್ಥಿಕ ನೀತಿಗಳನ್ನು ಸಂಯೋಜನೆಗೆ ಒಳಪಡಿಸಿ ವಿದೇಶೀ ವಿನಿಮಯ ಕ್ಷೇತ್ರದಲ್ಲಿ ಪಾವತಿ ಶಿಲ್ಕುಗಳ (ಬ್ಯಾಲೆನ್ಸ್ ಆಫ್ ಪೇಮೆಂಟ್ಸ್) ಸಮತೋಲನ, 7. ಸದಸ್ಯ ರಾಷ್ಟ್ರಗಳ ಪೌರಸಭಾ ಕಾನೂನುಗಳಲ್ಲಿ ಏಕರೂಪತೆಯ ಸಾಧನೆ, 8. ಸಾಮಾಜಿಕ ನಿಧಿಯ ಮತ್ತು ಐರೋಪ್ಯ ನಿಯೋಜನ ಬ್ಯಾಂಕಿನ (ಇನ್‌ವೆಸ್ಟ್‌ಮೆಂಟ್ ಬ್ಯಾಂಕ್) ರಚನೆ ಮತ್ತು 9. ಕೆಲವು ಸದಸ್ಯ ರಾಷ್ಟ್ರಗಳಿಗೆ ಸಂಬಂಧ ಹೊಂದಿರುವ ಸಾಗರಾಂತರ ದೇಶಗಳೂ ಪ್ರದೇಶಗಳೂ ಈ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪನೆ.

ಐರೋಪ್ಯ ಆರ್ಥಿಕ ಸಮುದಾಯದ ಸ್ಥಾಪನೆಗೆ ರಾಜಕೀಯ, ಧ್ಯೇಯಾತ್ಮಕ ಮತ್ತು ಆರ್ಥಿಕ ಪ್ರೇರಕ ಶಕ್ತಿಗಳಿವೆ. ಯುರೋಪಿನ ರಾಷ್ಟ್ರಗಳೆಲ್ಲವೂ ಸೇರಿ ಒಕ್ಕೂಟ ಒಂದನ್ನು ಸ್ಥಾಪಿಸುವುದರ ಮೂಲಕ ಹೆಚ್ಚು ವಿಶಾಲವಾದ ರಾಜಕೀಯ ಸಂಸ್ಥಾಪನೆವಾಗಬೇಕೆಂಬುದು ಸರ್ ವಿನ್‌ಸ್ಟನ್ ಚರ್ಚಿಲ್ ಬಹಳ ಹಿಂದೆಯೇ ಮಾಡಿದ್ದ ಸೂಚನೆ. ಎರಡನೆಯ ಮಹಾಯುದ್ಧದ ತರುವಾಯ ಯುರೋಪಿನಲ್ಲಿ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರವೆಂಬ ಎರಡು ಬಣಗಳು ಒಡೆದು ಮೂಡಿದುವು. ಕಮ್ಯೂನಿಷ್ಟೇತರ ರಾಷ್ಟ್ರಗಳ ಸಂಘಟನೆಯ ಯತ್ನಗಳಲ್ಲಿ ಇದೂ ಒಂದು. ಉತ್ತರ ಅಟ್ಲಾಂಟಿಕ್ ಕೌಲು ಸಂಸ್ಥೆ ಪಶ್ಚಿಮ ಯುರೋಪಿನ ರಾಷ್ಟ್ರಗಳನ್ನೂ ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನೂ ರಕ್ಷಣಾದೃಷ್ಟಿಯಿಂದ ಒಂದುಗೂಡಿಸಿದೆ. ಆರ್ಥಿಕ ಕ್ಷೇತ್ರದ ಸಂಘಟನೆಗಾಗಿ ಐರೋಪ್ಯ ಆರ್ಥಿಕ ಸಮುದಾಯದ ಉದಯವಾಯಿತು.

ಆರ್ಥಿಕ ಲಾಭದೃಷ್ಟಿ ಸಮುದಾಯದ ಇನ್ನೊಂದು ಮುಖ್ಯ ಪ್ರೇರಕ ಶಕ್ತಿ. ಆಧುನಿಕ ಆರ್ಥಿಕ ಪದ್ಧತಿಯಲ್ಲಿ ಅನೇಕ ಕೈಗಾರಿಕೆಗಳಲ್ಲಿ ಬೃಹದ್ಗಾತ್ರ ಉತ್ಪಾದನ ವ್ಯವಸ್ಥೆಯಿಂದ ಮಾತ್ರ ಆಂತರಿಕ ಆಡಳಿತ ಹಾಗೂ ಇತರ ಸುವ್ಯವಸ್ಥಾ ಕ್ರಮಗಳನ್ನೂ ಅನುಸರಿಸಬೇಕಾಗುತ್ತದೆ. ಇಂದು ಈ ಆರ್ಥಿಕ ಸಮುದಾಯವೇ ಪ್ರತ್ಯೇಕ ಒಂದೇ ನಾಣ್ಯವನ್ನೂ ಸಹ ಹೊಂದಿದೆ. ಇದೇ ಯುರೋ ಡಾಲರ್. ಈ ಒಕ್ಕೂಟವನ್ನು ಯುರೋಪಿಯನ್ ಯೂನಿಯನ್ ಎಂದು ಕರೆಯಲಾಗಿದೆ. (ಎ.ಪಿ.ಎಸ್.)

**ಐರ್ಲೆಂಡ್:** ಗ್ರೇಟ್ ಬ್ರಿಟನ್ನಿಗೆ ಪಶ್ಚಿಮದಲ್ಲಿ, ಉತ್ತರ ಅಕ್ಷಾಂಶ $51^0 25'$ ನಿಂದ $55^0 23'$ಗೂ ಪಶ್ಚಿಮ ರೇಖಾಂಶ $5^0 25'$ನಿಂದ $10^0 30'$ಗೂ ನಡುವೆ ಹಬ್ಬಿರುವ ದ್ವೀಪ. ಸರಾಸರಿ 177 ಕಿಮೀ ಅಗಲ ಮತ್ತು 354 ಕಿಮೀ ಉದ್ದ ಇರುವ ಇದರ ವಿಸ್ತೀರ್ಣ 70,273 ಚ.ಕಿಮೀ. ಉತ್ತರ ಐರ್ಲೆಂಡ್ ಮತ್ತು ಐರಿಷ್ ಗಣರಾಜ್ಯಗಳೆಂದು ಇದರಲ್ಲಿ ಎರಡು ರಾಜಕೀಯ ವಿಭಾಗಗಳಿವೆ. ಆದರೆ ಐರ್ಲೆಂಡಿನ ಅತ್ಯಂತ ಉತ್ತರದ ಬಿಂದು ಡಾನೆಗಾಲ್ ಇರುವುದು ಉತ್ತರ ಐರ್ಲೆಂಡಿನಲ್ಲಲ್ಲ, ಐರಿಷ್ ಗಣರಾಜ್ಯದಲ್ಲಿ. ಇತಿಹಾಸ ಪ್ರಸಿದ್ಧವಾದ ಆಲ್ಸ್ಟರ್ ಪ್ರಾಂತ್ಯದ ಒಂಬತ್ತು ಕೌಂಟಿಗಳಲ್ಲಿ (ವಿಭಾಗ) ಆರು ಉತ್ತರ ಐರ್ಲೆಂಡಿನಲ್ಲಿವೆ. ಆದ್ದರಿಂದ ಉತ್ತರ ಐರ್ಲೆಂಡನ್ನು ಆಲ್ಸ್ಟರ್ ಎಂದೂ ಕರೆಯುವುದುಂಟು. ಇದು ಸಂಯುಕ್ತ ಪ್ರಭುತ್ವದಲ್ಲಿದೆ (ಯುನೈಟೆಡ್ ಕಿಂಗ್ಡಮ್). ಐರಿಷ್ ಗಣರಾಜ್ಯದಲ್ಲಿ 26 ಕೌಂಟಿಗಳಿವೆ. ಇದು ಸ್ವತಂತ್ರ ಸಾರ್ವಭೌಮ ರಾಜ್ಯ. ಹಚ್ಚ ಹಸುರು ಹಬ್ಬಿರುವ ಐರ್ಲೆಂಡನ್ನು ಪಚ್ಚೆಯ ದ್ವೀಪವೆಂದು ಕರೆಯುವುದುಂಟು. ಅಂಧಕಾರಯುಗದಲ್ಲಿ ಇದು ಜ್ಞಾನ ನಿಷ್ಠೆಗಳ ಕೇಂದ್ರವಾಗಿತ್ತಂತೆ. ಆದ್ದರಿಂದ ಇದನ್ನು ಸಂತರ ಮತ್ತು ಜ್ಞಾನಿಗಳ ದ್ವೀಪವೆಂದು ಸಂಬೋಧಿಸುವುದೂ ಉಂಟು.




ಮೇಲ್ಮೈ ಲಕ್ಷಣ: ಬಟ್ಟಲ ತಟ್ಟೆಯಂತೆ ಸುತ್ತಲೂ ಹರಕು ಮುರುಕು ಪರ್ವತಗಳು; ನಡುವೆ ಸುಣ್ಣಕಲ್ಲಿನ ಬಯಲು–ಇದು ಸ್ಥೂಲವಾಗಿ ಐರ್ಲೆಂಡಿನ ಸ್ವರೂಪ. ಇದರ ಪೂರ್ವತೀರ ಸಾಮಾನ್ಯವಾಗಿ ನೇರ, ಸರಳ. ಆದರೆ ಪಶ್ಚಿಮದ್ದು ಹಾಗಲ್ಲ. ಅದು ಅತ್ಯಂತ ಅಂಕುಡೊಂಕು; ಹಲವೆಡೆಗಳಲ್ಲಿ ಕೋರೆದಾಡೆಗಳಂತೆ ಸಮುದ್ರದೊಳಕ್ಕೆ ಚಾಚಿರುವ ಕಡಿದಾದ ಬಂಡೆಗಳಿವೆ. ಅಟ್ಲಾಂಟಿಕ್ ಸಾಗರದ ನೆಲಕೊರೆತಕ್ಕೆ ಇವು ಸಾಕ್ಷಿ. ಈ ಕಾರಣದಿಂದಾಗಿ ಈ ತೀರದಲ್ಲಿ ಅನೇಕ ಖಾರಿಗಳೂ ಕೊಲ್ಲಿಗಳೂ ಸಣ್ಣ ದೊಡ್ಡ ದ್ವೀಪಗಳೂ ವಿಸ್ತಾರ ಭೂಪ್ರದೇಶದೊಂದಿಗೆ ಸೂಕ್ಷ್ಮಸಂಬಂಧ ಮಾತ್ರ ಉಳಿಸಿಕೊಂಡಿರುವ ಪರ್ಯಾಯ ದ್ವೀಪಗಳೂ ಅಸಂಖ್ಯಾತವಾಗಿವೆ. ದ್ವೀಪಗಳ ಪೈಕಿ ಅಚಿಲ್ ಮತ್ತು ಆರನ್ ಅತ್ಯಂತ ದೊಡ್ಡವು. ನೈಋತ್ಯದಂಚಿನಲ್ಲಿರುವ ವ್ಯಾಲೆಂಟಿನ ದ್ವೀಪ ಅಟ್ಲಾಂಟಿಕಾಂತರ ಕಡಲತಂತಿಮಾರ್ಗಗಳ ಮುಖ್ಯಕೇಂದ್ರ, ಹವಾವೀಕ್ಷಣಾಲಯ. ಆಳಗಡಲಿನ ಉತ್ತಮ ಬಂದರುಗಳೂ ಇಲ್ಲಿ ಹಲವುಂಟು. ಮಧ್ಯದ ಮೈದಾನದ ಸುಣ್ಣಕಲ್ಲಿನ ಮೆದುನೆಲವನ್ನು ಕೊರೆದು ಒಳಕ್ಕೆ ಚಾಚಿರುವ ಅಟ್ಲಾಂಟಿಕಿನಿಂದಾಗಿರುವ ಮೂರು ದೊಡ್ಡ ಕೊಲ್ಲಿಗಳೆಂದರೆ ಡಾನೆಗಾಲ್, ಸ್ಲೈಗೋ ಮತ್ತು ಗಾಲ್ವೇ. ಈ ಕೊಲ್ಲಿಗಳಿಂದ ಸಂಭವಿಸಿರುವ ಮೂರು ಪರ್ಯಾಯದ್ವೀಪಗಳು ಡಾನೆಗಾಲ್, ಕಾನೆಮಾರ ಮತ್ತು ಕೆರಿ. ನಡುವಣ ಮೈದಾನ ಪೂರ್ವಾಭಿಮುಖವಾಗಿ ಐರಿಷ್ ಸಮುದ್ರದ ವರೆಗೂ ಹಬ್ಬಿದೆ. ಈ ಭಾಗವೇ ಐರ್ಲೆಂಡಿನ ನಗರಭರಿತ ಪ್ರದೇಶ. ಪುರಾತನ ಕಾಲದಿಂದ ಐರ್ಲೆಂಡಿನ ನಾಗರಿಕತೆ ಹಬ್ಬಿದ್ದು ಇಲ್ಲಿ. ಈ ಮೈದಾನ ಒಂದೇ ಸಮನಾಗಿಲ್ಲ. ಸಮುದ್ರ ಮಟ್ಟಕ್ಕಿಂತ ಸರಾಸರಿ 76 ಮೀ ಎತ್ತರವಿರುವ ಈ ಪ್ರದೇಶದಲ್ಲಿ ವಂಕಿಗಳಂತೆ ಸುತ್ತಿರುವ ಹಲವಾರು ಬೆಟ್ಟಗುಡ್ಡಗಳುಂಟು. ಪೂರ್ವಬಿಟ್ಟು ಉಳಿದೆಲ್ಲ ಕಡೆಗಳಲ್ಲೂ ಈ ಪ್ರದೇಶದ ಸುತ್ತ ಪರ್ವತಗಳು ಮುರಿದು ಉಳಿದುಕೊಂಡಿದೆ. ಐರ್ಲೆಂಡಿನ ದಕ್ಷಿಣದಂಚಿನ ಕೆಮ್ಮರಳು ಬಣ್ಣದ ಬೆಟ್ಟಗಳು ಈ ಭಾಗಕ್ಕೆ ಅಪೂರ್ವವಾದ ಪರ್ವತಶೋಭೆ ತಂದಿವೆ. ಬಾಯಿನ್ ಮತ್ತು ಷ್ಯಾನನ್‌ಗಳು ಮೈದಾನದ ಮುಖ್ಯ ನದಿಗಳು.

ಷ್ಯಾನನ್ ನದಿ ಘಟ್ಟವಿಳಿದು ಧುಮ್ಮಿಕ್ಕುವಲ್ಲಿ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಐರ್ಲೆಂಡ್ ಗಣರಾಜಕ್ಕೆ ವಿದ್ಯುತ್ತನ್ನೊದಗಿಸುತ್ತಿರುವುದು ಮುಖ್ಯವಾಗಿ ಇಲ್ಲಿಂದ. ಈ ದೃಷ್ಟಿಯಿಂದ ಉತ್ತರ ಭಾಗದಲ್ಲಿ ಅರ್ನ್ ನದಿ ಪ್ರಮುಖವಾದದ್ದು. ಇದು ಉತ್ತರ ಐರ್ಲೆಂಡಿಗೆ ಹರಿಯುವುದರಿಂದ ಈ ನದಿ ಸಮುದ್ರಕ್ಕೆ ಧುಮ್ಮಿಕ್ಕುವಲ್ಲಿ ವಿದ್ಯದುತ್ಪಾದನೆ ಮಾಡಬಹುದಾದರೂ ಐರ್ಲೆಂಡಿನ ಎರಡು ರಾಜಕೀಯ ವಿಭಾಗಗಳ ನಡುವಣ ವ್ಯಾಜ್ಯದಿಂದ ಇದು ಸಾಧ್ಯವಾಗಿಲ್ಲ.

ವಾಯುಗುಣ: ಐರ್ಲೆಂಡ್ ಉತ್ತರ ಅಟ್ಲಾಂಟಿಕ್ ಚಂಡಮಾರುತಗಳ ನೇರ ಪ್ರಭಾವಕ್ಕೆ ಒಳಗಾಗಿರುವುದರಿಂದ ಇಲ್ಲಿನ ಹವಾಮಾನ ಸಾಮಾನ್ಯವಾಗಿ ಹಿತಕರ; ನೈಋತ್ಯದಲ್ಲಿ ಅತ್ಯಂತ ಸಮಪರ್ಕ ($8^0$–$15^0$ ಸೆಂ.). ಕಡಲ ಸನಿಹದಲ್ಲಿರುವ ಉನ್ನತ ಪರ್ವತಗಳ ಬಳಿ ಪರಮಾವಧಿ ಮಳೆಯಾಗುತ್ತದೆ (200 ಸೆಂಮೀ). ಮೈದಾನದಲ್ಲಿ ಸಾಧಾರಣ (75–100 ಸೆಂಮೀ). ಅಕ್ಟೋಬರಿನಿಂದ ಡಿಸೆಂಬರ್‌ವರೆಗೆ ಮಳೆಗಾಲ. ಪೂರ್ವ ತೀರದಲ್ಲಿ ಆಗಸ್ಟಿನಲ್ಲಿ ಪರಮಾವಧಿ ಮಳೆ. ವಸಂತದಲ್ಲಿ ಒಣ ಹವೆ ಇರುವುದರಿಂದ ವ್ಯವಸಾಯಕ್ಕೆ ಅನುಕೂಲವುಂಟು. ಪಶುಪಾಲನೆಗೆ ಇಲ್ಲಿನ ವಾಯುಗುಣ ಅತ್ಯಂತ ಪ್ರಶಸ್ತವಾಗಿದೆ.

ಸಸ್ಯ ಮತ್ತು ಪ್ರಾಣಿ ಸಂಪತ್ತು: ಇತಿಹಾಸಪೂರ್ವಕಾಲದಲ್ಲಿ ಇಲ್ಲಿ ಉತ್ತರ ಪರ್ವತ ವಿನಾ ಉಳಿದೆಲ್ಲ ಪ್ರದೇಶಗಳಲ್ಲೂ ದಟ್ಟ ಕಾಡುಗಳಿದ್ದುವು. ಸುಮಾರು ನಾಲ್ಕುಸಾವಿರ ವರ್ಷಗಳ ಕಾಲದಿಂದಲೂ ಇಲ್ಲಿ ಜನ ದನಕರು ಸಾಕಿಕೊಂಡಿದ್ದಾರೆ. ಆದ್ದರಿಂದ ಕಾಡು ಕಡಿಯುವ ಹವ್ಯಾಸ ಅತಿಯಾಗಿ ಹೆಚ್ಚಿ 17ನೆಯ ಶತಮಾನದ ವೇಳೆಗೆ ಇದು ಸಂಪೂರ್ಣವಾಗಿ ನಿರ್ನಾಮವಾಗುವ ಸ್ಥಿತಿಗೆ ಬಂದಿತ್ತು. ಐರ್ಲೆಂಡಿನ ಸಸ್ಯವೈವಿಧ್ಯ ಗ್ರೇಟ್ ಬ್ರಿಟನ್ನಿನದಕ್ಕಿಂತ ಕಡಿಮೆ. ಆದರೆ ಐಬೀರಿಯನ್ ಪರ್ಯಾಯದ್ವೀಪಕ್ಕೂ ಉತ್ತರ ಅಮೆರಿಕಕ್ಕೂ ಈ ಪ್ರದೇಶಕ್ಕೂ ಸಂಬಂಧವಿತ್ತೆಂಬುದನ್ನು ಇಲ್ಲಿನ ಸಸ್ಯಗಳೂ ಪ್ರಾಣಿಗಳೂ ಸೂಚಿಸುತ್ತವೆ.

ಜನಸಂಖ್ಯೆ: ಯುರೋಪಿನ ದೇಶಗಳ ಪೈಕಿ ಐರ್ಲೆಂಡ್ ಒಂದರಲ್ಲೇ 19ನೆಯ ಶತಮಾನದ ಉತ್ತರಾರ್ಧದಲ್ಲಿ ಜನಸಂಖ್ಯೆ ಇಳಿಯಿತೆನ್ನಬಹುದು. ಇದಕ್ಕೆ ಕ್ಷಾಮ ಮತ್ತು ಇಲ್ಲಿಂದ ಜನ ಬೇರೆಡೆಗೆ ವಲಸೆಹೋದದ್ದು ಮುಖ್ಯಕಾರಣ. ಇಪ್ಪತ್ತನೆಯ ಶತಮಾನದಲ್ಲಿ ಜನಸಂಖ್ಯೆ ಹೆಚ್ಚುಕಡಿಮೆ ಸ್ಥಿರವಾಗಿದೆ. ಹಳ್ಳಿಗರ ಸಂಖ್ಯೆಯೇ ಹೆಚ್ಚು. ದಕ್ಷಿಣಕ್ಕಿಂತ ಉತ್ತರದಲ್ಲಿ ಪಟ್ಟಣಿಗರ ಸಂಖ್ಯೆ ಹೆಚ್ಚು. ಒಟ್ಟು ಜನಸಂಖ್ಯೆ 3,92,600 (2002).

ಉತ್ತರ ಐರ್ಲೆಂಡ್: ಇದು ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ಪ್ರಭುತ್ವದ ಒಂದು ರಾಜಕೀಯ ವಿಭಾಗ. ಆಂಟ್ರಿಮ್, ಆರ್ಮಾ, ಡೌನ್, ಫರ್ಮೇನ, ಲಂಡನ್‌ಡೆರಿ ಮತ್ತು ಟೈರೋನ್ ಕೌಂಟಿಗಳನ್ನೊಳಗೊಂಡಿದೆ. ಇದನ್ನು ಅಲ್ಸ್ಟರ್ ಎಂದೂ ಕರೆಯುವುದುಂಟು. ಆದರೆ ಪ್ರಾಚೀನ ಅಲ್ಸ್ಟರ್ ಪ್ರಾಂತ್ಯದ ಮೂರು ಕೌಂಟಿಗಳು (ಕ್ಯಾವೆನ್, ಡಾನೆಗಾಲ್ ಮತ್ತು ಮನಗೆನ್) ಐರ್ಲೆಂಡ್ ಗಣರಾಜ್ಯಕ್ಕೆ ಸೇರಿವೆ. ಇದರ ಉತ್ತರಕ್ಕೆ ಅಟ್ಲಾಂಟಿಕ್ ಸಾಗರವೂ ಈಶಾನ್ಯ ಮತ್ತು ದಕ್ಷಿಣಕ್ಕೆ ಉತ್ತರ ಕಡಲ್ಗಾಲುವೆಯೂ ಐರಿಷ್ ಸಮುದ್ರವೂ ದಕ್ಷಿಣ ಪಶ್ಚಿಮಗಳಲ್ಲಿ ಐರ್ಲೆಂಡ್ ಗಣರಾಜ್ಯವೂ ಇವೆ. ಇದರ ವಿಸ್ತೀರ್ಣ 14,144 ಚ.ಕಿಮೀ. ಜನಸಂಖ್ಯೆ 16,85,267 (2001).

1920 ಮತ್ತು 1922ರಲ್ಲಿ ಜಾರಿಗೆ ಬಂದ ಕಾಯಿದೆಗಳ ಪ್ರಕಾರ ಉತ್ತರ ಐರ್ಲೆಂಡಿಗೆ ಪ್ರತ್ಯೇಕ ಸಂಸತ್ತು ಸ್ಥಾಪಿತವಾಗಿದೆ. ದೇಶದ ವಿಭಜನೆಯ ಫಲವಾಗಿ ಇದು ರಾಜಕೀಯ ಕ್ಷೋಭೆಗೆ ಒಳಗಾಯಿತು.

ವ್ಯವಸಾಯ ಇಲ್ಲಿನ ಮುಖ್ಯ ಕಸಬು. ಹಿಡುವಳಿಗಳು ಸಣ್ಣವು. ಬಾರ್ಲಿ, ಓಟ್ಸ್, ಆಲೂಗಡ್ಡೆ, ಗೋದಿ, ಟರ್ನಿಪ್–ಇವು ಮುಖ್ಯ ಬೆಳೆಗಳು. ಹಂದಿ, ದನಕರು, ಕುರಿ, ಕೋಳಿ ಮುಖ್ಯ ಸಾಕುಪ್ರಾಣಿಗಳು.

ಉತ್ತರ ಐರ್ಲೆಂಡಿನ ಖನಿಜಗಳು ಕೆಲವು ಮಾತ್ರ. ಜವಳಿ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳು ಪ್ರಧಾನ. ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ನೆರವು ನೀಡುತ್ತಿದೆ. ಐರ್ಲೆಂಡಿನ ಆಮದು ವ್ಯಾಪಾರದಲ್ಲಿ ಮುಕ್ಕಾಲು ಭಾಗವೂ ರಫ್ತಿನಲ್ಲಿ ಶೇ. 90 ಭಾಗವೂ ಗ್ರೇಟ್ ಬ್ರಿಟನ್ನಿನೊಂದಿಗೆ ನಡೆಯುತ್ತದೆ. ರಾಜಧಾನಿ ಬೆಲ್‌ಫಾಸ್ಟ್, ಇದರ ಜನಸಂಖ್ಯೆ 3,99,270 (2001). ಲಂಡನ್‌ಡೆರಿಯ ಜನಸಂಖ್ಯೆ 55,681.

ಐರ್ಲೆಂಡ್ ಗಣರಾಜ್ಯ: ಉತ್ತರ ಐರ್ಲೆಂಡಿನ 6 ಕೌಂಟಿಗಳನ್ನು ಬಿಟ್ಟು ಉಳಿದ 26ಕೌಂಟಿಗಳು ಇದಕ್ಕೆ ಸೇರಿವೆ. 1922ರಿಂದ 1937ರ ವರೆಗೆ ಇದಕ್ಕೆ ಐರಿಷ್ ಸ್ವತಂತ್ರ ರಾಜ್ಯ ಎಂಬ ಹೆಸರಿತ್ತು. 1937ರ ಸಂವಿಧಾನದ ಪ್ರಕಾರ ಇದರ ಹೆಸರು ದಕ್ಷಿಣ ಐರ್ಲೆಂಡ್ ಎಂದೂ ಇದನ್ನು ಬಳಕೆಮಾತಿನಲ್ಲಿ ಕರೆಯುವುದುಂಟು. ಆದರೆ ಐರ್ಲೆಂಡಿನ ಅತ್ಯಂತ ಉತ್ತರ ಭಾಗ ಇದಕ್ಕೆ ಸೇರಿದೆ. ಇದಕ್ಕೆ ಉತ್ತರ, ವಾಯವ್ಯ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಅಟ್ಲಾಂಟಿಕ್ ಸಾಗರವೂ ಆಗ್ನೇಯದಲ್ಲಿ ಸೇಂಟ್ ಜಾರ್ಜ್ ಕಡಲ್ಗಾಲುವೆಯೂ ಪೂರ್ವದಲ್ಲಿ ಐರಿಷ್ ಸಮುದ್ರವೂ ಈಶಾನ್ಯದಲ್ಲಿ ಉತ್ತರ ಐರ್ಲೆಂಡೂ ಇವೆ. ಲೆನ್ಸ್ಟರ್, ಮನ್ಸ್ಟರ್ ಕನ್ನಾಟ್ ಮತ್ತು ಅಲ್ಸ್ಟರ್ ಎಂಬ ನಾಲ್ಕು ಪ್ರಾಂತ್ಯಗಳಿಂದ ಕೂಡಿರುವ ಈ ದೇಶದ ವಿಸ್ತೀರ್ಣ 70,273 ಚಕಿಮೀ. ಜನಸಂಖ್ಯೆ 39,26,000 (2002).

1918ರ ಡಿಸೆಂಬರಿನಲ್ಲಿ ಚುನಾವಣೆ ನಡೆದು 1919ರಲ್ಲಿ ಸಮಾವೇಶವಾಗಿದ್ದ ಈ ದೇಶದ ಸ್ವಾತಂತ್ರ್ಯವನ್ನು ರಾಷ್ಟ್ರೀಯ ಸಂಸತ್ತು 1919ರ ಜನವರಿಯಲ್ಲಿ ಸಾರಿಕೊಂಡಿತಾದರೂ ಬ್ರಿಟಿಷ್ ಕಾಯಿದೆಯ ಪ್ರಕಾರ ಇದು ಸಂಯುಕ್ತ ಪ್ರಭುತ್ವದ ಭಾಗವಾಗಿಯೇ ಮುಂದುವರಿಯಿತು. ಉತ್ತರ ದಕ್ಷಿಣ ಐರ್ಲೆಂಡುಗಳಿಗೆ ಪ್ರತ್ಯೇಕ ಸಂಸತ್ತುಗಳನ್ನು ಸ್ಥಾಪಿಸುವ ಕಾಯಿದೆ ಜಾರಿಗೆ ಬಂದದ್ದು 1920ರಲ್ಲಿ. 1921ರಲ್ಲಿ ಉತ್ತರ ಐರ್ಲೆಂಡಿನ ಸಂಸತ್ತಿನ ಚುನಾವಣೆ ನಡೆಯಿತು. ಐರ್ಲೆಂಡಿನ ಉಳಿದ ಭಾಗದಲ್ಲಿ ಈ ಕಾಯಿದೆ ಜಾರಿಗೆ ಬರಲಿಲ್ಲ. 1921 ಡಿಸೆಂಬರ್ 6ರಂದು ಗ್ರೇಟ್ ಬ್ರಿಟನ್ ಐರ್ಲೆಂಡುಗಳ ಪ್ರತಿನಿಧಿಗಳ ನಡುವೆ ಒಡಂಬಡಿಕೆಯಾಗಿ, ಐರ್ಲೆಂಡ್ ಗಣರಾಜ್ಯಕ್ಕೆ ಒಳರಾಜ್ಯದ (ಡೊಮಿನಿಯನ್) ಸ್ಥಾನ ಲಭಿಸಿತು. ಉತ್ತರ ಐರ್ಲೆಂಡಿಗೆ ಇದರಿಂದ ಹೊರಬರುವ ಅವಕಾಶ ಕೊಡಲಾಯಿತು. ಐರಿಷ್ ಸ್ವತಂತ್ರರಾಜ್ಯ ಉದಯವಾದದ್ದು ಹೀಗೆ. ಕ್ರಮೇಣ ಇದು ಸಂಯುಕ್ತ ಪ್ರಭುತ್ವದೊಂದಿಗೆ ಸಂಬಂಧ ಕಡಿದುಕೊಂಡಿತು. ಇದು ಐರಿಷ್ ಗಣರಾಜ್ಯವಾದದ್ದು 1937ರಲ್ಲಿ.

ಐರಿಷ್ ಗಣರಾಜ್ಯದ ಸಂಸತ್ತು ಎರಡು ಸಭೆಗಳನ್ನು ಹೊಂದಿದ್ದು ಒಂದು ಪ್ರತಿನಿಧಿ ಸಭೆ ಇನ್ನೊಂದು ಸೆನೆಟ್. ಐರಿಷ್ ಇಲ್ಲಿನ ಪ್ರಥಮ ಅಧಿಕೃತ ಭಾಷೆ; ಇಂಗ್ಲಿಷ್ ಎರಡನೆಯದು.

ಕೃಷಿಯೇ ಜನರ ಮುಖ್ಯ ಕಸಬು. ಒಣಹುಲ್ಲು, ಟರ್ನಿಪ್, ಆಲೂಗೆಡ್ಡೆ, ಸಕ್ಕರೆ, ಬೀಟ್, ಬಾರ್ಲಿ, ಓಟ್ಸ್, ಗೋದಿ–ಇವು ಮುಖ್ಯ ಬೆಳೆಗಳು. ಆಕಳು, ಕುರಿ, ಹಂದಿ ಮುಖ್ಯ ಪ್ರಾಣಿಗಳು. ಮೀನುಗಾರಿಕೆಯೂ ಮುಖ್ಯ ಉದ್ಯೋಗ.

ಇಲ್ಲಿ ಖನಿಜಸಂಪತ್ತು ಅಷ್ಟಿಲ್ಲ. ಜಿಪ್ಸಮ್, ಅಮೃತಶಿಲೆ, ಸ್ಲೇಟ್, ಸುಣ್ಣಕಲ್ಲು, ಕಲ್ಲಿದ್ದಲು, ತಾಮ್ರ, ಕಬ್ಬಿಣ, ಸೀಸ, ಬೆರೈಟೀಸ್ ಸಿಗುತ್ತವೆ. ಆಹಾರ, ಹೊಗೆಸೊಪ್ಪು. ಪಾನೀಯ, ಕಾಗದ, ವಿದ್ಯುದುಪಕರಣ, ಜವಳಿ, ರಸಾಯನ ವಸ್ತು–ಈ ಕೈಗಾರಿಕೆಗಳು ಬೆಳೆಯುತ್ತಿವೆ. ವಿದೇಶೀ ವ್ಯಾಪಾರ ಹೆಚ್ಚಾಗಿ ಗ್ರೇಟ್‌ಬ್ರಿಟನ್, ಕೆನಡ, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್‌ಗಳೊಡನೆ ನಡೆಯುತ್ತದೆ. ಡಬ್ಲಿನ್ ರಾಜಧಾನಿ (ಜನಸಂಖ್ಯೆ 5,68,772), ಕಾರ್ಕ್ (1,22,146), ಲಿಮರಿಕ್ (55,912), ವಾಟರ್‌ಫರ್ಡ್ (29,842) ಮತ್ತು ಗಾಲ್‌ವೇ (24,597) ಇತರ ಪಟ್ಟಣಗಳು. (ಪಿ.ಎಚ್.;ಪಿ.ಎಂ.ಯು.ಎಸ್.)

**ಐಲ್ ಆಫ್ ಮ್ಯಾನ್:** ಐರಿಷ್ ಸಮುದ್ರ ಮಧ್ಯ ಭಾಗದಲ್ಲಿ ಇರುವ ಒಂದು ಸಣ್ಣ ದ್ವೀಪ. $54^0 09'$ ಉ.ಅ. $4^0 29'$ ಪ.ರೇ.ಗಳಲ್ಲಿ ಇದನ್ನು ಎಲನ್‌ವಾನಿನ್ ಎಂತಲೂ ಕರೆಯಲಾಗುತ್ತದೆ. ಸ್ವಯಂ ಆಡಳಿತದ ಬ್ರಿಟಿಷ್ ಕ್ರೌನ್ ಅಧೀನದಲ್ಲಿದೆ. ಈ ದ್ವೀಪವು ಬ್ರಿಟಿಷ್ ದ್ವೀಪಗಳ ಭೌಗೋಳಿಕ ಕೇಂದ್ರಸ್ಥಾನವನ್ನು ಹೊಂದಿದೆ. ಭೌಗೋಳಿಕ ಕ್ಷೇತ್ರ 572 ಚ.ಕಿಮೀ ಜನಸಂಖ್ಯೆ 80,058 (2000). ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 131.2. ಇಲ್ಲಿನ ಹಣ ಪೌಂಡ್ ಸ್ಟರ್ಲಿಂಗ್. ರಾಷ್ಟ್ರೀಯ ಆದಾಯ 2,113 ಬಿ.ಡಾಲರ್. ತಲಾ ಆದಾಯ 28,500 ಡಾಲರ್. ಸರ್ಕಾರ ಇಂಗ್ಲೆಂಡಿನ ರಾಜಮನೆತನದ ಅಧೀನಕ್ಕೊಳಪಟ್ಟಿದೆ.

ಐಲ್ ಆಫ್ ಮ್ಯಾನ್ ದ್ವೀಪಸ್ತೋಮ ಕಾಫ್ ಮ್ಯಾನ್, ಚಿಕನ್‌ರಾಕ್ ಮತ್ತು ಸೆಂಟ್ ಪೀಟರ್ ದ್ವೀಪಗಳನ್ನು ಒಳಗೊಂಡಿದೆ. ಈ ದ್ವೀಪಗಳು ಅಟ್ಲಾಂಟಿಕ್ ಸಾಗರದಲ್ಲಿನ ದಕ್ಷಿಣ ಭಾಗದ ಸೆಂಟ್ ಜಾರ್ಜ್ ಕಾಲುವೆ ಮತ್ತು ಐರ್ಲೆಂಡ್, ಪೀಲ್ಸ್ ಮತ್ತು ಕಾರ್ನ್‌ವಾಲ್‌ಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಉತ್ತರದಲ್ಲಿನ ಕಾಲುವೆ ಉತ್ತರ ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳನ್ನು ಸಂಪರ್ಕಿಸುತ್ತದೆ.

ಐಲ್ ಆಫ್‌ಮ್ಯಾನ್ ಬ್ರಿಟಿಷ್ ದ್ವೀಪ ಸಮೂಹದ ಆಗ್ನೇಯ ತೀರಭಾಗವಾಗಿದೆ. ಇದು 48 ಕಿಮೀ ಉದ್ದ ಮತ್ತು 13 ರಿಂದ 24 ಕಿಮೀ ಅಗಲವಾಗಿದೆ. ಸು. 572 ಚ.ಕಿಮೀ ಭೂ ಪ್ರದೇಶವನ್ನು ಹೊಂದಿದೆ. ಉತ್ತರ ಮತ್ತು ದಕ್ಷಿಣ ಭಾಗದ ಬೆಟ್ಟಗಳನ್ನು ಮಧ್ಯಭಾಗದ ಕಣಿವೆ ವಿಭಜಿಸಿದೆ, ಮೇರು ಉತ್ತರಭಾಗ ಸಮತಟ್ಟಾಗಿದೆ. ಇಲ್ಲಿ ಭೂ ಇತಿಹಾಸಕಾಲದಲ್ಲಿ ಹಿಮನದಿ ಕಾರ್ಯಾಚರಣೆಯಿಂದ ಭೂಮಟ್ಟಸವಾಗಿದೆಯೆಂದು ಕಂಡುಬಂದಿದೆ. ಈ ಭಾಗದಲ್ಲಿ ಅತ್ಯಂತ ಎತ್ತರವಾದ ಪರ್ವತ ಸ್ನೆಫಿಲ್ 621 ಮೀ. ಶಿಖರದ ಮೇಲಿಂದ 6 ರಾಜ್ಯಗಳನ್ನು ಮ್ಯಾನ್, ಸ್ಕಾಟ್ಲೆಂಡ್, ಇಂಗ್ಲೆಂಡ್, ಐರ್ಲೆಂಡ್, ವೇಲ್ಸ್ ಮತ್ತು ಹೆವೆನ್‌ಗಳನ್ನು ಕಾಣಬಹುದು. ಸ್ಥಳೀಯ ಮಾತಿನಂತೆ 7 ನೆಯ ರಾಜ್ಯ ನೆಪ್ಚೂನ್ ಅಥವಾ ಸಮುದ್ರವನ್ನು ಕಾಣಬಹುದು ಎಂಬುದಾಗಿದೆ. ಜನಸಂಖ್ಯೆ 80,058 (2006). ರಾಜಧಾನಿ ಡಾಗ್ಲಾಸ್ (ಡೋಲಿಷ್). ಜನಸಂಖ್ಯೆ 26,218. ಜನಸಂಖ್ಯೆಯ ಶೇ. 93.9 ರಷ್ಟು ಬ್ರಿಟಿಷ್ ದ್ವೀಪವಾಸಿಗಳು. (ಎಸ್.ಎಸ್.ಎಸ್.)

**ಐಸಾಯ್ ಬೋಮ್ಯಾನ್:** 1878–1950. ಅಮೆರಿಕದ ಮಾನವ ಭೂಗೋಳಶಾಸ್ತ್ರಜ್ಞ. ಇವರು ತಮ್ಮ ಸಂಶೋಧನೆ ಹಾಗೂ ಕ್ಷೇತ್ರಕಾರ್ಯಗಳಿಗಾಗಿ ಆಂಡಿಸ್, ಪೆರು, ಬೊಲೀವಿಯ ಹಾಗೂ ಚಿಲಿಗಳಲ್ಲಿ ಹಾಗೂ ಅಟಕಾಮ ಮರುಭೂಮಿಯಲ್ಲಿ ಸಂಚರಿಸಿದರು.

ದ ಜಿಯೋಗ್ರಫಿ ಆಫ್ ದಿ ಸೆಂಟ್ರಲ್ ಆಂಡೀಸ್ ಎಂಬುದು ಇವರ ಡಾಕ್ಟೊರೇಟ್ ಪ್ರಬಂಧ. 1931 ರಲ್ಲಿ ದ ಪಯೋನೀರ್ ಸ್ಪಿಂಗ್ ಎಂಬ ಕೃತಿಯನ್ನು ಪ್ರಕಟಿಸಿದರು. ಇದರಲ್ಲಿ ಅಮೆರಿಕ, ಕೆನಡ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಸೈಬೀರಿಯ, ಮಂಗೋಲಿಯ, ಮಂಚೂರಿಯ ಹಾಗೂ ದಕ್ಷಿಣ ಅಮೆರಿಕಗಳ ಉದಾಹರಣೆಗಳೊಂದಿಗೆ ವಿವರಿಸಿದರು. ಈ ದೇಶದ ಸಮಸ್ಯೆಗಳ ಸ್ವಭಾವವನ್ನು ವಿಶ್ಲೇಷಿಸಿದ್ದಾರೆ. ಬೊಮ್ಯಾನ್‌ರು ಭಾಷಾವಾರು ರಾಜ್ಯದ ಪರಿಕಲ್ಪನೆಯನ್ನೂ ನೀಡಿದ್ದಾರೆ ಈ ಪರಿಭಾವನೆಯನ್ನು ಆಧರಿಸಿ ಎರಡನೆಯ ಮಹಾಯುದ್ಧದ ಅನಂತರ ಪೂರ್ವಯುರೋಪಿನ ರಾಷ್ಟ್ರಗಳನ್ನು ಸ್ಥಾಪಿಸಲಾಯಿತು. ಇದೇ ಪರಿಭಾವನೆಯನ್ನು ಸ್ವಾತಂತ್ರ್ಯಾನಂತರ ಭಾಷಾವಾರು ರಾಷ್ಟ್ರಗಳ ಸ್ಥಾಪನೆಗೆ ಅಳವಡಿಸಿಕೊಳ್ಳಲಾಯಿತು.



(ಎನ್.ಎಲ್.)

**ಐಸ್ಲೆಂಡ್ :** ಅಟ್ಲಾಂಟಿಕ್ ಸಾಗರದ ಶೀತವಲಯದ ದಕ್ಷಿಣಕ್ಕಿರುವ ಒಂದು ಸ್ವತಂತ್ರ ದ್ವೀಪ. ಇದು ಒಂದು ದೊಡ್ಡ ದ್ವೀಪ ಮತ್ತು ನೂರಾರು ಸಣ್ಣ ಪುಟ್ಟ ದ್ವೀಪಗಳ ಸಮೂಹವಾಗಿದೆ. ಉತ್ತರ ಅಮೆರಿಕ ಖಂಡದ ಒಂದು ದೇಶವಾಗಿದ್ದು ಗ್ರೀನ್ ಲೆಂಡ್‌ನಿಂದ 300 ಕಿಮೀ ದೂರದ ಆಗ್ನೇಯ ಭಾಗದಲ್ಲಿದೆ. ಪಶ್ಚಿಮದಲ್ಲಿ ನಾರ್ವೆಯಿಂದ 1000 ಕಿಮೀ ದೂರದಲ್ಲಿದ್ದರೆ ಉತ್ತರದಲ್ಲಿ ಸ್ಕ್ಯಾಂಡಿನೇವಿಯದಿಂದ 800 ಕಿಮೀ ದೂರದಲ್ಲಿದೆ.

ಈ ದ್ವೀಪ ಸಮೂಹ ಒಟ್ಟು 1,03,000 ಚ.ಕಿಮೀ ವಿಸ್ತೀರ್ಣವಾಗಿದ್ದು ಉ.ಅ. $63^0 24'-66^0 32'$ ಹಾಗೂ ಪ.ರೇ. $13^0 30'-24^0 30'$ ಗಳ ನಡುವೆ ಹಬ್ಬಿದೆ.




ಮೇಲ್ಮೈ ಲಕ್ಷಣ: ಶೀತವಲಯದ ದ್ವೀಪವಾಗಿದ್ದು, ಅಗ್ನಿ ಪರ್ವತದಿಂದ ಹೊರಟ ಲಾವಾ ಊಟೆಗಳಿಂದ ನಿರ್ಮಾಣವಾಗಿದ್ದು ಹಿಮದಿಂದಾವೃತವಾಗಿದೆ. ತೀರಪ್ರದೇಶಗಳು ಮಾತ್ರ ವಾಸಿಸಲು ಯೋಗ್ಯವಾಗಿವೆ. ಐಸ್ಲೆಂಡ್ ತುಂಬಾ ಕುತೂಹಲಕಾರಿಯಾದ ನಾಡು. ಇಲ್ಲಿನ ಬಂಡೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳಿರುವುದರಿಂದ ನೀರನ್ನು ಅವು ಉಳಿಸಿಕೊಳ್ಳಲಾರವು. ಹೀಗಾಗಿ ಬಂಡೆಗಳ ವಿಸ್ತಾರ ಪ್ರದೇಶದಲ್ಲಿ ಏನೂ ಬೆಳೆಯದು. 200 ಕ್ಕೂ ಹೆಚ್ಚು ಅಗ್ನಿ ಪರ್ವತಗಳಿವೆ. ಟ್ಯನಡೀಲಾ (1695 ಮೀ), ಸ್ನೂಕಾಸ್ (2119 ಮೀ) ಎತ್ತರದ ಅಗ್ನಿ ಪರ್ವತಗಳಾಗಿವೆ. ಐಸ್ಲೆಂಡ್‌ನಲ್ಲಿ ಬಿಸಿನೀರಿನ ಊಟೆಗಳು, ಖನಿಜ ಚಿಲುಮೆಗಳು, ಬಗೆ ಬಗೆಯ ಪರ್ವತಗಳು ಕಂಡು ಬರುತ್ತವೆ. ತೇಜೋರ್ಸಿ, ಜೋಲೆ, ಉಂಡಾ, ಫ್ಲಿಜೋಯಿಟ್ ಮುಂತಾದವು ಇಲ್ಲಿನ ಪ್ರಮುಖ ನದಿಗಳು.

ವಾಯುಗುಣ: ಇದು ಶೀತವಲಯದ ವಾಯುಗುಣ ಹೊಂದಿದೆ. ಆದರೆ ತೀರಪ್ರದೇಶದ ಹಿತಕರವಾಗಿದ್ದು ಬೇಸಗೆಯಲ್ಲಿ ಗಲ್ಫ್ ಸ್ಟ್ರೀಮ್ ಉಷ್ಣೋದಕ ಪ್ರವಾಹ ಇರುವುದರಿಂದ ಬೆಚ್ಚಗಿರುತ್ತದೆ. ಆದ್ದರಿಂದ ತೀರ ಪ್ರದೇಶದಲ್ಲಿ ವಾರ್ಷಿಕ ಉಷ್ಣಾಂಶ $10^o$ ಸೆ, ಚಳಿಗಾಲದಲ್ಲಿ $1^o$ಸೆ ಕಂಡುಬರುತ್ತದೆ. ಆದರೆ ಒಳ ಪ್ರದೇಶಗಳಲ್ಲಿ $-10^o$ಸೆ ಗಿಂತ ಕಡಿಮೆ ಉಷ್ಣಾಂಶವಿದ್ದು ಹಿಮಭರಿತವಾಗಿವೆ.

ಸಸ್ಯವರ್ಗ: ತೀರಪ್ರದೇಶದಲ್ಲಿ ಬೇಸಗೆಯಲ್ಲಿ ಮಾತ್ರ ಲಿಲ್ಲೀ, ಪಾಚಿ, ಶಿಲಾವಲ್ಕ, ಟಚ್-ಮಿ-ನಾಟ್ ಸಸ್ಯಗಳ ಜೊತೆಗೆ ಕೆಲವು ಸಣ್ಣಪುಟ್ಟ ಪೊದೆಜಾತಿಗೆ ಸೇರಿದ ಸಸ್ಯವರ್ಗ, ಸ್ವಲ್ಪ ಹುಲ್ಲುಗಾವಲು ಕಂಡುಬರುತ್ತವೆ. ತೀರಪ್ರದೇಶದಲ್ಲಿ ಕೆಲವು ಕಡೆ ಓಕ್, ನೀಪಲ್, ಪೈನ್ ಮರಗಳು ಕಂಡುಬರುತ್ತವೆ.

ಪ್ರಾಣಿಗಳು: ಸದಾ ಹಿಮ ಬೀಳುವುದರಿಂದ ಹಿಮನದಿ, ಹಿಮಸಾರಂಗ, ಹಿಮಕರಡಿ, ಹಿಮನಾಯಿ, ಹಿಮತೋಳ, ಕಸ್ತೂರಿ ಮೃಗ ಹೆಚ್ಚಾಗಿ ಕಂಡುಬರುತ್ತವೆ.

ವ್ಯವಸಾಯ: 19ನೆಯ ಶತಮಾನದವರೆಗೆ ಯಾವುದೇ ಚಕ್ರದ ಬಂಡಿಗಳಿರುವ ವಾಹನಗಳ ಪರಿಚಯವಿರಲಿಲ್ಲ. ಆದರೆ ಇಂದು ಅಮೆರಿಕನ್, ಕೆನಡಿಯನ್, ಯುರೋಪಿಯನ್ನರಿಂದಾಗಿ ವ್ಯವಸಾಯ ಸ್ವಲ್ಪ ಅಭಿವೃದ್ಧಿ ಹೊಂದಿದೆ. ತೀರಪ್ರದೇಶಗಳು ಆಲೂಗೆಡ್ಡೆ, ಈರುಳ್ಳಿ, ಹೂವುಗಳು, ತರಕಾರಿಗಳನ್ನು ಸ್ವಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ. ಇಲ್ಲಿನ ಮಣ್ಣು ಫಲವತ್ತಾಗಿಲ್ಲದಿರುವುದರಿಂದ ವ್ಯವಸಾಯ ಕಷ್ಟ.

ಪಶುಸಂಗೋಪನೆ: ತೀರ ಪ್ರದೇಶಗಳಲ್ಲಿ, ಹುಲ್ಲುಗಾವಲುಗಳಲ್ಲಿ ಕುರಿ, ದನ, ಹಂದಿ, ಹಿಮಸಾರಂಗ, ಕುದುರೆಗಳನ್ನು ಸಾಕುತ್ತಾರೆ. ಒಳ ಪ್ರದೇಶಗಳಲ್ಲಿ ಹಿಮ ಸಾರಂಗವನ್ನು ಆಹಾರ, ವಸತಿಗಾಗಿ, ತೈಲಕ್ಕಾಗಿ, ಉಡುಪುಗಳಿಗಾಗಿಯೂ ಸಾಕುತ್ತಾರೆ.

ಮೀನುಗಾರಿಕೆ: ಇದು ಪ್ರಮುಖ ಉದ್ಯೋಗವಾಗಿದೆ. ಅಟ್ಲಾಂಟಿಕ್, ಆರ್ಕ್ಟಿಕ್ ತೀರದಲ್ಲಿ ಮೀನುಗಾರಿಕೆ ಹೆಚ್ಚಾಗಿ ಅಭಿವೃದ್ಧಿ ಹೊಂದಿದ್ದು, ರಾಷ್ಟ್ರೀಯ ಆದಾಯಕ್ಕೆ ಮೂಲವಾಗಿದೆ. ಮೀನು ಜನರ ಪ್ರಮುಖ ಆಹಾರವಾಗಿದೆ.

ಕೈಗಾರಿಕೆ: ಮೀನು ಸಂಸ್ಕರಣೆ ಇಲ್ಲಿನ ಮುಖ್ಯಕೈಗಾರಿಕೆಯಾಗಿದೆ. ತೀರ ಪ್ರದೇಶಗಳಲ್ಲಿ ಆಹಾರ ಸಂಸ್ಕರಣೆ, ಸಿಮೆಂಟ್, ಗೊಬ್ಬರ, ಬಟ್ಟೆ ಕೈಗಾರಿಕೆಗಳು ಸ್ವಲ್ಪ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿವೆ. ಮುಖ್ಯವಾಗಿ ಮೀನುಗಳನ್ನು ಡಬ್ಬಗಳಲ್ಲಿ ಹಾಗೂ ಶೈತ್ಯಾಗಾರಗಳಲ್ಲಿ ರಕ್ಷಿಸುವುದು ಮುಖ್ಯ ಕೈಗಾರಿಕೆಯಾಗಿದೆ.

ಜನ: ಐಸ್ಲೆಂಡ್ ಜನ ವಿದ್ಯಾವಂತರು. 19ನೆಯ ಶತಮಾನದವರೆಗೆ ಅಲ್ಲಿನ ಜನ ಅಧುನಿಕ ಸೌಲಭ್ಯ, ಸಂಪರ್ಕದಿಂದ ದೂರವಾಗಿದ್ದರು. ಈಗ ಐಸ್ಲೆಂಡ್ ಆಧುನಿಕ ದೇಶವಾಗಿದೆ. ಇವರ ಭಾಷೆ ಐಸ್‌ಲ್ಯಾಂಡಿಕ್. ಜನ ಪ್ರಾಟಸ್ಟೆಂಟ್ ಕ್ರಿಶ್ಚಿಯನ್ ಮತಾವಲಂಬಿಗಳಾಗಿದ್ದಾರೆ. ಇಲ್ಲಿ ಬುಡಕಟ್ಟು ಜನಾಂಗದವರಾದ ಎಸ್ಕಿಮೋಗಳು ಇಂದು ಮಾರ್ಪಾಟನ್ನೂ ಹೊಂದಿದ್ದಾರೆ. 9ನೆಯ ಶತಮಾನದಲ್ಲಿ ನಾರ್ವೆ, ಬ್ರಿಟನ್‌ಗಳಿಂದ ಜನರು ವಲಸೆ ಬಂದು ಇಲ್ಲಿ ನೆಲೆಸಿದರು. 1242 ರಲ್ಲಿ ನಾರ್ವೆ ಅರಸರ ಅಧೀನದಲ್ಲಿದ್ದು ಅನಂತರ ಡೆನ್ಮಾರ್ಕಿನ ವಶವಾಯಿತು. 1944 ರಲ್ಲಿ ಐಸ್ಲೆಂಡ್ ಸ್ವತಂತ್ರವಾಯಿತು. ಮೊಟ್ಟ ಮೊದಲ ಬಾರಿಗೆ ವೆಂಗ್‌ವೆಲ್ಲರ್‌ನಲ್ಲಿ ಸ್ವಾತಂತ್ರ್ಯ ಘೋಷಣೆಯ ಸಮಾರಂಭ ನಡೆಯಿತು.

ಜನಸಂಖ್ಯೆ 2,88,000 (2003). ಪ್ರತಿ ಚ.ಕಿಮೀ ಗೆ 2.70 ರಷ್ಟು ಜನರಿದ್ದಾರೆ. ರಾಷ್ಟ್ರಾಧ್ಯಕ್ಷರನ್ನು 4 ವರ್ಷದ ಅವಧಿಗೆ ಆಯ್ಕೆ ಮಾಡಲಾಗುತ್ತದೆ. 35 ವರ್ಷದ ಮೇಲ್ಪಟ್ಟವರು ಅಧ್ಯಕ್ಷರನ್ನು ಆರಿಸಲು ಯೋಗ್ಯವಾಗಿರುತ್ತಾರೆ. ದೇಶವನ್ನು ರಾಜ್ಯ, ಜಿಲ್ಲೆ ಮತ್ತು ಕಾರ್ಪೊರೇಷನ್‌ಗಳಾಗಿ ವಿಂಗಡಿಸಲಾಗಿದೆ. 8 ನಗರ ಕಾರ್ಪೊರೇಷನ್‌ಗಳಿವೆ. ಈ ದೇಶದ ರಾಜಧಾನಿ ರಿಕ್‌ಯವಿಕ್. ಜನಸಂಖ್ಯೆ 1,03,036 (2002). ನಾಣ್ಯ ಕ್ರೊನಾ.

ವ್ಯಾಪಾರ: ಮೀನು ಮತ್ತು ಸಾಗರ ಉತ್ಪನ್ನ ವಸ್ತುಗಳು ಪ್ರಮುಖ ರಫ್ತು ಸರಂಜಾಮು. ಅಲ್ಲದೆ ಹೂವುಗಳು, ಸಂಸ್ಕರಣ ವಸ್ತುಗಳನ್ನೂ ರಫ್ತುಮಾಡಲಾಗುತ್ತದೆ. ಆಹಾರ ಪದಾರ್ಥ, ಯಂತ್ರ, ಯಂತ್ರೋಪಕರಣ, ರಾಸಾಯನಿಕ ವಸ್ತುಗಳು, ಪ್ರಾಣಿಗಳ ಕೊಬ್ಬು, ಪ್ರಾಣಿಗಳ ಆಹಾರ ಮುಂತಾದವುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದು ಆಸ್ಟ್ರೇಲಿಯ, ಡೆನ್ಮಾರ್ಕ್, ಬೆಲ್ಜಿಯಂ, ಫಿನ್‌ಲೆಂಡ್, ಚೀನ, ಫ್ರಾನ್ಸ್, ಜರ್ಮನಿ, ನಾರ್ವೆ, ಸ್ವೀಡನ್ ಮುಂತಾದ ಪ್ರದೇಶಗಳೊಡನೆ ವ್ಯಾಪಾರ ನಡೆಸುತ್ತಿದೆ. (ಎಸ್.ಕೆ.)

# ಒ

**ಒಟ್ಟು ರಾಷ್ಟ್ರೀಯ ಉತ್ಪನ್ನ:** ಜಿ.ಎನ್.ಪಿ. ರಾಷ್ಟ್ರೀಯ ಆದಾಯದ ವಿಶ್ಲೇಷಣೆಯಲ್ಲಿ ವ್ಯಾಪಕವಾದ ಒಂದು ಪರಿಭಾವನೆ. ಒಟ್ಟು ರಾಷ್ಟ್ರೀಯ ಉತ್ಪನ್ನದಿಂದ ಮಾರುಕಟ್ಟೆಯ ಬೆಲೆಯಲ್ಲಿ ಒಂದು ರಾಷ್ಟ್ರದ ಒಟ್ಟು ರಾಷ್ಟ್ರೀಯ ಆದಾಯವನ್ನು ತಿಳಿಯಲು ಸಾಧ್ಯವಾಗುತ್ತದೆ. “ಒಟ್ಟು ರಾಷ್ಟ್ರೀಯ ಉತ್ಪನ್ನವು, ಒಂದು ದೇಶದಲ್ಲಿ ಒಂದು ಗೊತ್ತಾದ ವರ್ಷದಲ್ಲಿ ಉತ್ಪಾದಿಸಲಾದ ಎಲ್ಲ ಅಂತಿಮ ಬಳಕೆಯ ಸರಕು ಮತ್ತು ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯವನ್ನು ಪ್ರತಿನಿಧಿಸುತ್ತದೆ”. ಒಟ್ಟು ರಾಷ್ಟ್ರೀಯ ಉತ್ಪನ್ನದ ಮಾಪನದಲ್ಲಿ ಬಂಡವಾಳ ಸರಕುಗಳ ಸವಕಳಿ ವೆಚ್ಚವನ್ನು ಒಳಗೊಂಡಂತೆ ಎಲ್ಲ ಸರಕು ಮತ್ತು ಸೇವೆಗಳ ಅಂತಿಮ ಮಾರುಕಟ್ಟೆ ಮೌಲ್ಯವನ್ನು ಸೇರಿಸಿಕೊಳ್ಳಲಾಗುತ್ತದೆ. ಇದನ್ನು ಸೂತ್ರದಿಂದ ಕೆಳಕಂಡಂತೆ ವ್ಯಕ್ತಪಡಿಸಬಹುದು.

ಒಟ್ಟು ರಾಷ್ಟ್ರೀಯ ಉತ್ಪನ್ನ=ನಿವ್ವಳ ರಾಷ್ಟ್ರೀಯ ಉತ್ಪನ್ನ+ಸವಕಳಿ ವೆಚ್ಚ. ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಈ ಕೆಳಗಿನ ಅಂಶಗಳನ್ನು ಸೇರ್ಪಡೆ ಮಾಡುವುದರ ಮೂಲಕ ಅಂದಾಜು ಮಾಡಲಾಗುತ್ತದೆ.

ಒಟ್ಟು ರಾಷ್ಟ್ರೀಯ ಉತ್ಪನ್ನ = ಕೂಲಿ ಮತ್ತು ವೇತನ + ಗೇಣಿ + ಬಡ್ಡಿ + ಲಾಭಾಂಶ + ಪ್ರತ್ಯಕ್ಷತೆರಿಗೆ+ಪರೋಕ್ಷ ತೆರಿಗೆ+ ಬಂಡವಾಳ ಸರಕುಗಳ ಸವಕಳಿ ವೆಚ್ಚ + ವಿದೇಶಗಳಿಂದ ಗಳಿಸಿದ ನಿವ್ವಳ ಆದಾಯ. (ಎಚ್.ಎಸ್.ಡಿ.)

**ಒಣ ಬೇಸಾಯ:** 50 ಸೆಂಮೀ ಗಿಂತ ಕಡಿಮೆ ವಾರ್ಷಿಕ ಮಳೆ ಪಡೆಯುವ ಮತ್ತು ನೀರಾವರಿ ಸೌಲಭ್ಯವಿಲ್ಲದ ಅಥವ ಕಡಿಮೆಯಿರುವ ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಪದ್ಧತಿಯು ಕ್ರಮವಾಗಿ ಉಷ್ಣವಲಯ ಮತ್ತು ಉಪಉಷ್ಣವಲಯದ ಶುಷ್ಕ ಮತ್ತು ಅರೆಶುಷ್ಕ ಪ್ರದೇಶಗಳಲ್ಲಿ ಹಂಚಿಕೆಯಾಗಿದೆ. ಈ ಪದ್ಧತಿಯಲ್ಲಿ, ಬೀಳುವ ಅಲ್ಪ ಮಳೆಯನ್ನು ರೈತನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು ಬೆಳೆ ಬೆಳೆಯಲು ಪ್ರಯತ್ನಿಸುತ್ತಾನೆ. ರೈತರು ನೀರನ್ನು ತಡೆಯುವ ಸಾಮರ್ಥ್ಯಕ್ಕನುಗುಣವಾಗಿ ಮತ್ತು ಅಲ್ಪಾವಧಿ ಬೆಳೆಗಳನ್ನು ಮಾತ್ರ ಬೆಳೆಯುತ್ತಾರೆ. ಉದಾ: ಗೋದಿ, ಹತ್ತಿ, ಧಾನ್ಯಗಳು. ಒಣಬೇಸಾಯ ಪದ್ಧತಿ ಪ್ರಮುಖವಾಗಿ ಅಮೇರಿಕದ ಪೂರ್ವಭಾಗ ಮತ್ತು ಕೆನಡ, ಮೆಕ್ಸಿಕೊ ಮತ್ತು ಮಧ್ಯ ಅಮೇರಿಕದ ಎತ್ತರದ ಒಣ ಪ್ರದೇಶಗಳು, ಬ್ರೆಜಿಲ್‌ನ ನೈರುತ್ಯಭಾಗ, ದಕ್ಷಿಣ ಆಫ್ರಿಕ, ಪಶ್ಚಿಮ ಆಸ್ಟ್ರೇಲಿಯ, ಇಸ್ರೇಲ್, ಲೆಬನಾನ್, ಸಿರಿಯ, ಭಾರತದಲ್ಲಿ ರಾಜಸ್ತಾನದ ಪಶ್ಚಿಮಭಾಗ ಮತ್ತು ದಖನ್ ಪ್ರಸ್ಥಭೂಮಿ, ಚೀನದ ಒಳನಾಡುಗಳಲ್ಲಿ ಕಂಡುಬರುತ್ತದೆ.

ಈ ಪದ್ಧತಿಯಲ್ಲಿ ರೈತರು ಸಾಗುವಳಿ ಭೂಮಿಯನ್ನು ಸಮತಟ್ಟು ಮಾಡುವರು. ನಂತರ ಭೂಮಿಯನ್ನು ಹಲವು ಭಾಗಗಳನ್ನಾಗಿ ವಿಭಾಗಿಸಿ ಬದುಗಳನ್ನು ನಿರ್ಮಾಣ ಮಾಡುವರು. ಭೂಮಿಯನ್ನು ಮಳೆ ಬರುವುದಕ್ಕೆ ಮುಂಚೆ ಉಳುಮೆಮಾಡಿ ಮಣ್ಣನ್ನು ಸಡಿಲಗೊಳಿಸುವರು. ಮಳೆಬಿದ್ದ ಅನಂತರ ಆಳವಾಗಿ ಉಳುಮೆ ಮಾಡಿ ಮಳೆಯ ನೀರು ಮಣ್ಣಿನಲ್ಲಿ ಸೇರುವಂತೆ ಮಾಡುತ್ತಾರೆ. ಮಣ್ಣಿನಲ್ಲಿ ತೇವಾಂಶವನ್ನು ಸಂರಕ್ಷಿಸಲು ಬಿತ್ತನೆ ಮಾಡುವುದಕ್ಕಿಂತ ಮುಂಚೆ ಮಣ್ಣನ್ನು ಚೆನ್ನಾಗಿ ಹದಗೊಳಿಸಲಾಗುವುದು. ಬಿದ್ದ ಅತ್ಯಲ್ಪ ಮಳೆಯ ನೀರು ಪೋಲಾಗದಂತೆ ತಡೆಯಲು ಜಮೀನಿನ ಸುತ್ತ ಚಿಕ್ಕ ಬಾವಿಗಳನ್ನು ತೆಗೆದಿರುತ್ತಾರೆ. ಕೃಷಿ ಭೂಮಿಯಲ್ಲಿ ಅನವಶ್ಯಕವಾಗಿ ಬೆಳೆದಿರುವ ಕಳೆಯನ್ನು ಆಗಿಂದಾಗ್ಗೆ ತೆಗೆದು ಮಣ್ಣಿನ ತೇವಾಂಶವನ್ನು ರಕ್ಷಿಸಲಾಗುತ್ತದೆ. ಈ ಪದ್ಧತಿಯು ಅತಿ ವೆಚ್ಚದಾಯಕ. ಏಕೆಂದರೆ ಮಳೆಬಿದ್ದರೆ ಮಾತ್ರ ಉತ್ತಮ ಬೆಳೆಯನ್ನು ಬೆಳೆಯಲು ಸಾಧ್ಯ. ಈ ಬೇಸಾಯದ ಉತ್ಪಾದನೆ ಮಳೆಯನ್ನು ನೇರವಾಗಿ ಅವಲಂಬಿಸಿರುವುದು. ಆದ್ದರಿಂದ ಈ ಪದ್ಧತಿಯಲ್ಲಿ ರೈತನ ಆರ್ಥಿಕ ಸ್ಥಿತಿ ಅನಿಶ್ಚಿತತೆಯಿಂದ ಕೂಡಿರುತ್ತದೆ. (ಕೆ.ಕೆ.)

**ಒತ್ತಡೀಕರಿಸಿದ ನೈಸರ್ಗಿಕ ಅನಿಲ:** ಭೂಮಿಯ ಮೇಲ್ಪದರದಲ್ಲಿ ನೈಜಸ್ಥಿತಿಯಲ್ಲಿಯೇ ದೊರೆಯುವ ಅನಿಲ ರೂಪದ ಹೈಡ್ರೋಕಾರ್ಬನ್. ಸಾಮಾನ್ಯವಾಗಿ ಪೆಟ್ರೋಲಿಯಂ ಜೊತೆಯಲ್ಲಿ ದೊರೆಯುತ್ತದೆ.

ಇದು ಪೆಟ್ರೋಲ್, ಡೀಸಲ್ ಇಂಧನಕ್ಕೆ ಪರ್ಯಾಯ ಶಕ್ತಿಯಾದ ಅನಿಲ. ಇಂದು ಪರಿಸರ ಮಾಲಿನ್ಯದಿಂದ ಹೊರತಾಗಿರುವ ಈ ಅನಿಲವನ್ನು ಭದ್ರವಾದ ಕವಚಗಳಲ್ಲಿ (ಟ್ಯಾಂಕ್) ಶೇಖರಿಸಿ ಹಂಚಬಹುದಾಗಿದೆ. ಭಾರತದ ಕೆಲವು ರಾಜ್ಯಗಳಲ್ಲಿ ವಾಹನಗಳಿಗೆ ಇದರ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ. ಈ ನಿಯಮ ಪ್ರಪಂಚದ ಹಲವು ರಾಷ್ಟ್ರಗಳಲ್ಲಿ ರೂಢಿಯಲ್ಲಿದೆ.

ಈ ಇಂಧನದ ಬೆಲೆಯು ಕಡಿಮೆ. ಪರಿಸರಕ್ಕೆ ಸಂಬಂಧಿಸಿದಂತೆ ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಹಾಗೂ ಶಾಲಾ ಕಾಲೇಜು ವಾಹನಗಳಲ್ಲಿ ಬಳಸಲಾಗುತ್ತದೆ. (ಎಂ.ಎಚ್.)

**ಒರಿಸ್ಸ:** ಭಾರತದ ಒಂದು ರಾಜ್ಯ. $17^0 49'$ ಉ. ಅ. ದಿಂದ $22^0 34'$ ಉತ್ತರ ಅಕ್ಷಾಂಶದವರೆಗೂ $81^0 27'$ ಪೂ. ರೇ. ದಿಂದ $87^0 29'$ ಪೂ. ರೇ. ವರೆಗೂ ಹಬ್ಬಿದೆ. ಭಾರತದ ಪೂರ್ವ ತೀರದಲ್ಲಿ ಹಬ್ಬಿರುವ ಈ ರಾಜ್ಯದ ಈಶಾನ್ಯದಲ್ಲಿ ಪಶ್ಚಿಮ ಬಂಗಾಳ, ಉತ್ತರದಲ್ಲಿ ಜಾರ್ಖಂಡ್, ಪಶ್ಚಿಮದಲ್ಲಿ ಛತ್ತೀಸ್‌ಗಡ, ದಕ್ಷಿಣದಲ್ಲಿ ಆಂಧ್ರಪ್ರದೇಶ ಮತ್ತು ಪೂರ್ವದಲ್ಲಿ ಬಂಗಾಲ ಕೊಲ್ಲಿ ಇವೆ. ವಿಸ್ತೀರ್ಣ 1,55,707 ಚ.ಕಿ.ಮೀ. ಜನಸಂಖ್ಯೆ 3,68,04,660. ರಾಜಧಾನಿ ಭುವನೇಶ್ವರ. ಭಾಷೆ: ಒರಿಯ.



ಭೂರಚನೆಯ ದೃಷ್ಟಿಯಿಂದ ಒರಿಸ್ಸವನ್ನು ಕರಾವಳಿ ಮೈದಾನ, ಮಧ್ಯದ ಬೆಟ್ಟಪ್ರದೇಶ, ಏರುನೆಲ, ನದಿಕಣಿವೆ, ತಗ್ಗಿನ ಪ್ರಸ್ಥಭೂಮಿ ಎಂದು ವಿಂಗಡಿಸಬಹುದು.

ಮಹಾನದಿ, ವೈತರಣಿ, ಬ್ರಾಹ್ಮಣಿ, ಸ್ವರ್ಣರೇಖಾ, ಋಷಿಕುಲ್ಯ ಮತ್ತು ಬೂರಾ ಬಲಾಂಗ್ ಎಂಬ ಆರು ಮುಖ್ಯ ನದಿಗಳು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ಈ ರಾಜ್ಯದ ಕರಾವಳಿಯ ಮೈದಾನಗಳು ರಚಿತವಾಗಿವೆ. ಇವನ್ನು ಆರು ನದಿಮುಖಜಭೂಮಿಗಳ ಪ್ರದೇಶ ಎನ್ನಬಹುದು. ಆದರೂ ಅನೇಕ ನದಿಗಳು ನಿಜಾರ್ಥದಲ್ಲಿ ನದಿಮುಖಜಭೂಮಿಯ ವಿಶಿಷ್ಟತೆಯನ್ನು ಬೆಳೆಸುವುದರಲ್ಲಿ ನಿಷ್ಪ್ರಯೋಜಕವಾಗಿವೆ. ಸಮುದ್ರದಿಂದ ನುಗ್ಗಿಬರುವ ಪ್ರವಾಹಗಳು ಇದಕ್ಕೆ ಕಾರಣ.

ಒರಿಸ್ಸದ ಮುಕ್ಕಾಲು ಭಾಗ ಪರ್ವತ ಪ್ರದೇಶ. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿ ನಡೆದು ಅನಂತರ ಇದ್ದಕ್ಕಿದ್ದಂತೆ ಉತ್ಕರ್ಷಗೊಂಡು ಪೂರ್ವಘಟ್ಟಗಳಲ್ಲಿ ಲೀನವಾಗುತ್ತದೆ. ಜಲಪ್ರವಾಹ ವೈವಿಧ್ಯ ಮೇಲ್ಮೈಯ ನಿರ್ದಿಷ್ಟ ವಿನ್ಯಾಸಕ್ಕೆ ಅನುಗುಣವಾಗಿ ಅದರ ಜಲೋತ್ಸಾರಣ (ಡ್ರೇನೇಜ್) ಏರ್ಪಟ್ಟಿದೆ. 300, 600 ಮತ್ತು 900 ಮೀಗಳಲ್ಲಿ ಒರಿಸ್ಸದ ಪೂರ್ವಘಟ್ಟಗಳು ಮೂರು ಉತ್ಕರ್ಷತೆಗಳನ್ನು ಕಂಡಿವೆಯೆಂದು ನಂಬಲಾಗಿದೆ. ಇವು ಜಲೋತ್ಸಾರಣದ ಪ್ರಾಚೀನ ರೇಖೆಗಳ ಕುರುಹುಗಳನ್ನೆಲ್ಲ ಅಳಿಸಿಬಿಟ್ಟಿವೆಯೆನ್ನಬಹುದಾದರೂ ಈ ಬಗ್ಗೆ ಇನ್ನೂ ವೈಜ್ಞಾನಿಕ ನಿರ್ಣಯವಾಗಿಲ್ಲ. ಪರ್ವತ ಪ್ರದೇಶವನ್ನು ಹೀಗೆ ವಿಭಾಗಿಸಬಹುದು: (1) ಸಿಮುಲಿಯ ಮತ್ತು ಮೇಘಾಸನಿ ಪರ್ವತಗಳು, (2) ಮಂಕರ್ನದ ಮಲಯಗಿರಿ ಮತ್ತು ಗಂಧಮಾರ್ದನ ಪರ್ವತಗಳು, (3) ಬ್ರಾಹ್ಮಣಿ ಮತ್ತು ಮಹಾನದಿ ಜಲಾನಯನ ಭೂಮಿ, (4) ಮಹಾನದಿ, ಋಷಿಕುಲ್ಯ ಮತ್ತು ವಂಶಧಾರಾ ನದಿಗಳ ಪ್ರದೇಶ, (5) ಪೊಟ್ಟಂಗಿ ಮತ್ತು ಚಂದ್ರಗಿರಿ ಪರ್ವತ ಸಾಲುಗಳು.

ಎತ್ತರದ ಪ್ರದೇಶಗಳು ಪ್ರಸ್ಥಭೂಮಿಗಿಂತ ಕಡಿಮೆ ಎತ್ತರದವು. ಅವು 148–296 ಮೀ ಎತ್ತರವಾಗಿವೆ. ನದಿಕೊಳ್ಳಗಳಿಗೆ ಇವು ಆಶ್ರಯ ನೀಡಿವೆ. ಇವೆಲ್ಲವೂ ಪೂರ್ವಘಟ್ಟಗಳ ಪಶ್ಚಿಮದಲ್ಲಿ ವಿಸ್ತಾರವಾಗಿ ಬೆಳೆದಿವೆ. ಬ್ರಾಹ್ಮಣಿ, ಮಹಾನದಿ ಮತ್ತು ವಂಶಧಾರಾ ನದಿಕಣಿವೆಗಳು ಮುಖ್ಯವಾದುವು. ವೈತರಣಿಯ ತಲೆಯೆಡೆಯ ಜಲಾನಯನ ಪ್ರದೇಶಗಳಾದ ಪಾಂಪೋಷ್–ಕಿಯೋಂಝಾರ್–ಪಲ್ಲಹರ ಪ್ರಸ್ಥಭೂಮಿಗಳೂ ಸಬರಿ ನದಿ ಪಾತ್ರದ ತಲೆಯೆಡೆಯ ಜಲಾನಯನ ಭೂಮಿಯಾದ ನವರಂಗಪುರ–ಜಯಪುರ ಪ್ರಸ್ಥಭೂಮಿಯೂ 296–592 ಮೀ ಗಳವರೆಗೆ ಪ್ರಸ್ಥಭೂಮಿಗಳ ಪೈಕಿ ಮುಖ್ಯವಾದುವು.

ಸ್ವಾಭಾವಿಕ ಪ್ರದೇಶಗಳು: ಒರಿಸ್ಸವನ್ನು ತೀರದ ಮೈದಾನಗಳು, ನದೀಕಣಿವೆ ಮತ್ತು ಪ್ರವಾಹಗಳ ಬಯಲು, ಇಳಿಜಾರಾದ ಎತ್ತರದ ಪ್ರದೇಶಗಳು, ಪ್ರಸ್ಥಭೂಮಿಗಳು ಮತ್ತು ಪರ್ವತಗಳು ಎಂದು ವಿಭಾಗಿಸಬಹುದು.

ತೀರದ ಮೈದಾನಗಳನ್ನು ಉತ್ತರ, ಮಧ್ಯ ಮತ್ತು ದಕ್ಷಿಣ ತೀರಗಳ ಬಯಲುಗಳೆಂದು ವಿಂಗಡಿಸಬಹುದಾಗಿದೆ. ನದಿಕಣಿವೆಗಳೂ ಪ್ರವಾಹದ ಬಯಲುಗಳೂ ಮುಖ್ಯನದಿಗಳು 76–152 ಮೀ ಮಟ್ಟರೇಖೆಗಳ ಎತ್ತರದಲ್ಲಿ ಕಂಡುಬರುತ್ತವೆ. 152–304 ಮೀ ಮಧ್ಯದಲ್ಲಿ ಇಳಿಜಾರಾದ ಎತ್ತರದ ಪ್ರದೇಶಗಳು ಕಂಡುಬರುತ್ತವೆ. ರಾಯ್‍ರಂಗ್‍ಪುರ್ ಮತ್ತು ವೈತರಣಿ, ಬ್ರಾಹ್ಮಣಿ ಮತ್ತು ಮಹಾನದಿ ಕೊಳ್ಳಗಳು ಇಳಿಜಾರುಳ್ಳ ಎತ್ತರದ ಪ್ರದೇಶಗಳು. ಪ್ರಸ್ಥಭೂಮಿಗಳಲ್ಲಿ ಕಿಯೋಂಝಾರ್–ಪಂಪೋಷ್ ಪ್ರಸ್ಥಭೂಮಿ, ನವರಂಗ್‍ಪುರ–ಜಯಪುರ ಪ್ರಸ್ಥಭೂಮಿ ಮತ್ತು ವಂಶಧಾರಾ ಮೇಲ್ದಂಡೆಯ ಪ್ರಸ್ಥಭೂಮಿಗಳು ಮುಖ್ಯವಾದವು.

ಒರಿಸ್ಸದ ಬೆಟ್ಟಗಳು ಪೂರ್ವಘಟ್ಟಗಳಿಗೆ ಸೇರಿವೆ. ಮಹಾನದಿ ಮತ್ತು ಬ್ರಾಹ್ಮಣಿ ಮುಂತಾದ ನದಿಗಳು ಈ ಬೆಟ್ಟಗಳನ್ನು ಭೇದಿಸುತ್ತವೆ. ಈಶಾನ್ಯ ದಿಕ್ಕಿನಲ್ಲಿನ ಸಿಮಿಲಿಪಲ್ ಮತ್ತು ಮೇಘಾಸನಿ ಎರಡು ಮುಖ್ಯ ಪರ್ವತ ಶಿಖರಗಳು. ಇವುಗಳ ಎತ್ತರ 1,165 ಮೀ ವೈತರಣಿ–ಬ್ರಾಹ್ಮಣಿ ನದಿಪ್ರವಾಹಗಳ ತೆಕ್ಕೆನೆಲದಲ್ಲಿ ಪಲ್ಲಹರದ ಮಲಯ ಗಿರಿ ಅತ್ಯಂತ ಎತ್ತರ ಶಿಖರ. ಇದರ ಎತ್ತರ 1,186 ಮೀ. ಕೋರಾಪುಟ್ ಮತ್ತು ಕಾಳಹಂದಿ ಜಿಲ್ಲೆಗಳಲ್ಲಿನ ಪರ್ವತಗಳು ತುಂಬ ಎತ್ತರವಾದವು. ಆಂಧ್ರದ ಕರಾವಳಿಯ ಬಯಲಿನಿಂದ ಇವು ಇದ್ದಕ್ಕಿದ್ದಂತೆ ಮೇಲೆದ್ದಿವೆ. ಪೊಟ್ಟಂಗಿಯ ದೇವಮಾಲಿ ಬೆಟ್ಟಗಳಲ್ಲೂ ಎತ್ತರ ಶಿಖರಗಳಿವೆ (1667 ಮೀ).

ಭೂವಿಜ್ಞಾನ: ತೀರದ ಮೈದಾನಗಳು ಮುಖ್ಯವಾಗಿ ಪ್ಲಿಸ್ಟೊಸೀನ್ ಮತ್ತು ಇತ್ತೀಚಿನ ಸಂಚಯನಗಳಿಂದಾಗಿವೆ. ಆಲಿಗೋಸೀನ್ ಮತ್ತು ಕೆಳ ಮಯೋಸೀನ್ ಕಾಲದ ಅವಶೇಷಗಳು ಪುರಿ ಜಿಲ್ಲೆಯಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ಮೇಲ್ಭಾಗದ ಗೊಂಡ್ವಾನ ಶಿಲಾಸ್ತೋಮವನ್ನೊಳಗೊಂಡ ಜುರಾಸಿಕ್ ಶಿಲೆಗಳು ಮಹಾನದಿ ಮುಖಜಭೂಮಿಯ ಅಗ್ರದ ಉತ್ತರದಲ್ಲಿ ಕಂಡುಬರುತ್ತವೆ. ಅಂತ್ಯ ಕಾರ್ಬಾನಿಫರಸ್ (ಗೊಂಡ್ವಾನ ಶಿಲಾಸ್ತೋಮದ ಅಡಿಭಾಗಗಳು) ಸಂಚಯನಗಳು ಮಹಾನದಿ ಮತ್ತು ಬ್ರಾಹ್ಮಣಿ ನದಿಗಳ ಮಧ್ಯಂತರ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವೇ ತಲ್‍ಚೇರ್ ಶಿಲಾಪದರಗಳು. ಇವುಗಳಲ್ಲಿ ಕಲ್ಲಿದ್ದಲಿನ ಭಾರಿ ಸಂಚಯನಗಳನ್ನು ಇತ್ತೀಚೆಗೆ ಕಂಡುಹಿಡಿಯಲಾಗಿದೆ. ಪಶ್ಚಿಮ ಒರಿಸ್ಸದ ಸಬರಿ ಮೇಲ್‍ಕಣಿವೆಯಲ್ಲಿ ಪ್ರಿ–ಕೇಂಬ್ರಿಯನ್ ಕಾಲದ ಕಡಪಶಿಲೆಗಳು ಕಂಡುಬರುತ್ತವೆ. ಧಾರ್ವಾಡೀಯ ಬಂಡೆಗಳು ಉತ್ತರ ಒರಿಸ್ಸದಲ್ಲಿ, ಮಯೂರ್‍ಭಂಜ್, ಕಿಯೋಂಝಾರ್ ಮತ್ತು ಸುಂದರಘರ್ ಜಿಲ್ಲೆಗಳಲ್ಲಿವೆ. ಇಲ್ಲಿನ ಕಬ್ಬಿಣದ ಅದಿರಿನ ನಿಕ್ಷೇಪಗಳು ಜಂಷೆಡ್‍ಪುರ, ದುರ್ಗಾಪುರ ಮತ್ತು ರೂರ್ಕೆಲಗಳಲ್ಲಿನ ಉಕ್ಕಿನ ಕಾರ್ಖಾನೆಗಳಲ್ಲಿ ಅಧಿಕ ಬೇಡಿಕೆಗಳನ್ನು ಪೂರೈಸುತ್ತಿವೆ. ಇವು ರಫ್ತೂ ಆಗುತ್ತಿವೆ. ಫುಲ್‍ಬನಿ ಮತ್ತು ಉತ್ತರ ಗಂಜಾಂ ಜಿಲ್ಲೆಗಳಲ್ಲಿ ಖೊಂಡಲೈಟ್ ಸಿಗುತ್ತದೆ. ಕೋರಾಪುಟ್ ಜಿಲ್ಲೆಯ ಪೂರ್ವಘಟ್ಟಗಳ ಎತ್ತರದ ಪ್ರದೇಶ ಇವುಗಳಿಂದ ಉಂಟಾಗಿದೆ. ಇಡೀ ಪ್ರದೇಶದ ಬಂಡೆಗಲ್ಲುಗಳ ಕೋಡುಭಾಗಗಳು ಮುಖ್ಯವಾಗಿ ಚಾರ್‍ನೋಕೈಟ್ ಶಿಲಾರೀತಿಗಳಿಂದ ಸಂಭವಿಸಿವೆ. ರಾಜ್ಯದ ಹೆಚ್ಚು ಭಾಗ ಗ್ರಾನೈಟ್ ಮತ್ತು ನೀಸ್ ಶಿಲೆಗಳಿಂದಾದದ್ದು. ಇಡೀ ಶ್ರೇಣಿಯಲ್ಲೇ ಇವು ಅತ್ಯಂತ ಪುರಾತನ ಶಿಲೆಗಳು.

ಮಣ್ಣಿನ ಸ್ವರೂಪ: ಒರಿಸ್ಸದಲ್ಲಿ ಸು. 12 ಬಗೆಯ ಮಣ್ಣುಗಳಿವೆ. ಸಮುದ್ರತೀರಕ್ಕೆ ಹೊಂದಿಕೊಂಡಿರುವಂಥ ಕಿರಿವಲಯದ ಮರಳು ಮಣ್ಣುಗಳಿವೆ. ಹೊಸ ಮತ್ತು ಹಳೆಯ ಮೆಕ್ಕಲುಮಣ್ಣುಗಳೆರಡೂ ಇಲ್ಲುಂಟು. ತೀರದ ಬಳಿ ನೂತನ ಮೆಕ್ಕಲು ಕಂಡುಬಂದರೆ, ಪುರಾತನ ಮೆಕ್ಕಲು ಒಳನಾಡಿನಲ್ಲಿ ಕಂಡುಬರುತ್ತದೆ. ಬ್ರಾಹ್ಮಣಿಯ ಅಗ್ರಭಾಗದ ಕಣಿವೆಯಲ್ಲೂ ಮಹಾನದಿ ಮತ್ತು ಬ್ರಾಹ್ಮಣಿಗಳ ತೆಕ್ಕನೆಲದಲ್ಲೂ ಭಾವನಿಪಟ್ಟದ ಎತ್ತರ ಪ್ರದೇಶಗಳಲ್ಲೂ ಪ್ಲೇನೋಸಾಲ್ ಕಂಡುಬರುತ್ತದೆ. ಮಯೂರ್‍ಭಂಜ್, ಸುಂದರಘರ ಮತ್ತು ಕಿಯೋಂಝಾರ್ ಜಿಲ್ಲೆಗಳನ್ನೊಳಗೊಂಡ ಉತ್ತರ ಒರಿಸ್ಸದಲ್ಲಿ ಮುಖ್ಯವಾಗಿ ಕೆಂಪು ಮಣ್ಣಿದೆ. ಸಂಬಲ್‍ಪುರದ ಪೂರ್ವದಲ್ಲಿ, ಮಹಾನದಿಯ ದಂಡೆಯುದ್ದಕ್ಕೂ ಅದರ ಪ್ರವಾಹದ ದಿಕ್ಕಿನಲ್ಲಿ ಹಬ್ಬಿದ ಹಳದಿ ಮಣ್ಣಿನ ಪುಟ್ಟ ತೇಪೆಯೊಂದು ಕಾಣಬರುತ್ತದೆ. ಮುರಕಲ್ಲು ಮರಳಿನಲ್ಲಿ ಉನ್ನತ ಅವನತ ಮಟ್ಟದವೆಂದು ಎರಡು ವಿಧ. ಪುರಿ, ಕಟಕ್ ಮತ್ತು ಬಾಲಸೂರ್ ಜಿಲ್ಲೆಗಳಲ್ಲಿನ ಮೆಕ್ಕಲು ಮೈದಾನಗಳ ಪಶ್ಚಿಮದ ಅಂಚಿನಲ್ಲಿ ಕೆಳಮಟ್ಟದ ಮುರಕಲ್ಲು ಕಾಣುತ್ತದೆ, ಗಂಜಾಮಿನ ಪೂರ್ವಘಟ್ಟಗಳಲ್ಲಿ ಉನ್ನತ ಮಟ್ಟದ ಮುರ ಕಲ್ಲುಗಳು ಸಾಮಾನ್ಯವಾಗಿವೆ. ಕೆಂಪು ಮತ್ತು ಕಪ್ಪುಮಣ್ಣು ಪದ್ಮಪುರ್ ಮತ್ತು ಸಂಬಲ್ಪುರ ಜಿಲ್ಲೆಗಳಲ್ಲಿ ಝಾರ್ ಸುಗಡ ಪ್ರದೇಶದಲ್ಲಿ ಕಂಡುಬರುತ್ತದೆ. ಪೂರ್ವಘಟ್ಟಗಳ ಪಶ್ಚಿಮದ ಇಳಿಜಾರಿನಲ್ಲಿನ ಕೋರಾಪುಟ್ ಜಿಲ್ಲೆಯ ರಾಯಗಡ ಮತ್ತು ನವರಂಗಪುರ ಉಪವಿಭಾಗಗಳಲ್ಲಿ ಬಾಕ್ಸೈಟ್ ಕಂಡುಬರುತ್ತದೆ. ಕಂದುಬಣ್ಣದ ಕಾಡು ಮರಳು ಫುಲ್‍ಬನಿ ಜಿಲ್ಲೆಯ ಬಲಿಗುಡ ಪ್ರದೇಶದಲ್ಲಿನ ವನಪ್ರದೇಶಗಳಲ್ಲಿದೆ. ಕಪ್ಪು ಮಣ್ಣು ಬೌಧ್–ಅತ್‍ಮಲ್ಲಿಕ್ ಪ್ರದೇಶದ ಮಹಾನದಿ ಕಣಿವೆಯಲ್ಲೂ ಬೋಲಾಂಗಿರ್ ಪ್ರದೇಶದಲ್ಲೂ ಖರಿಯಾರ್‍ನಲ್ಲಿ ತೆಲ್ ನದಿಯ ತಲೆಯೆಡೆಯ ಜಲಾನಯನ ಪ್ರದೇಶದಲ್ಲೂ ಉತ್ತರ ನವರಂಗಪುರದಲ್ಲೂ ಕಂಡುಬರುತ್ತದೆ.

ನದಿವ್ಯವಸ್ಥೆ: ಮಹಾನದಿ, ಬ್ರಾಹ್ಮಣಿ, ವೈತರಣಿ, ಸುವರ್ಣ ರೇಖಾ, ಬೂರಾಬಲಾಂಗ್, ವಂಶಧಾರಾ, ನಾಗವಲ್ಲಿ, ಸಿಲೇರು ಮತ್ತು ಸಬರಿ–ಇವು ಒರಿಸ್ಸದ ಮುಖ್ಯ ನದಿಗಳು. ಎಲ್ಲ ನದಿಗಳೂ ಬಂಗಾಳ ಕೊಲ್ಲಿ ಸೇರುತ್ತವೆ. ಮಹಾನದಿಯನ್ನುಳಿದು ಎಲ್ಲ ನದಿಗಳೂ ಮಾನ್ಸೂನ್ ಕಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಉಳಿದ ಕಾಲದಲ್ಲಿ ಬತ್ತಿಹೋಗುತ್ತವೆ. ಮಾನ್ಸೂನ್ ಕಾಲದಲ್ಲಿ ನದಿಗಳಲ್ಲಿನ ನೀರು ಹೆಚ್ಚು ವೇಗವಾಗಿ ಹರಿಯುವುದರಿಂದ ಕಚ್ಚಾ ದೋಣಿಗಳು ಅವುಗಳಲ್ಲಿ ಹೋಗಲಾಗುವುದಿಲ್ಲ. ಆದ್ದರಿಂದ ಸಾರಿಗೆಯ ದೃಷ್ಟಿಯಿಂದ ಈ ನದಿಗಳು ಅಷ್ಟು ಉಪಯುಕ್ತವಲ್ಲ. ಮಹಾನದಿಯಲ್ಲಿ ಮಾತ್ರ ಸಂಬಲ್‍ಪುರದವರೆಗೆ ನಾವೆಯ ಸಂಚಾರ ಸಾಧ್ಯ.

ಕೃಷಿ: ಇದು ರಾಜ್ಯದ ಜನರ ಪ್ರಮುಖ ವೃತ್ತಿ. ಬತ್ತ ಮುಖ್ಯ ಆಹಾರ ಬೆಳೆ. ಬತ್ತದ ಬಯಲುಗಳು ಮುಖ್ಯವಾಗಿ ನದಿಕಣಿವೆಗಳು ಮತ್ತು ತೀರದ ಮೈದಾನಗಳಲ್ಲಿ–ಅಲ್ಲಿ ಅನುಕೂಲ ಪರಿಸ್ಥಿತಿಗಳು ಇರುವುದರಿಂದ–ಹರಡಿವೆ. 2002–03ರಲ್ಲಿ ಆಹಾರ ಧಾನ್ಯ ಬೆಳೆಯುತ್ತಿದ್ದ 4673 ಸಾವಿರ ಹೆಕ್ಟೇರು ಪೈಕಿ ಸು. 4501 ಸಾವಿರ ಹೆಕ್ಟೇರುಗಳಲ್ಲಿ ಬತ್ತದ ಬೆಳೆ ಇತ್ತು. ಬತ್ತಕ್ಕೆ ಎರಡನೆಯದಾಗಿರುವ ಮುಖ್ಯ ಆಹಾರ ಬೆಳೆ ರಾಗಿ (70 ಸಾವಿರದ ಹೆಕ್ಟೇರ್). ದ್ವಿದಳ ಧಾನ್ಯಗಳಲ್ಲಿ ತೊಗರಿ, ಕಡಲೆ ಮುಖ್ಯ. ಎಳ್ಳು ಬೆಳೆಯುವ ಭೂಮಿಯ ವಿಸ್ತಾರ 136 ಸಾವಿರ ಹೆಕ್ಟೇರು. ಇವನ್ನು ನೀರಾವರಿ ಪ್ರದೇಶಗಳಲ್ಲೂ ನದಿಕಣಿವೆಗಳಲ್ಲೂ ಬೆಳೆಸುತ್ತಾರೆ. ನಾರಿನ ಬೆಳೆಗಳಲ್ಲಿ ಸೆಣಬು ಸು. 2.6 ಸಾವಿರ ಹೆಕ್ಟೇರು ಆವರಿಸಿಕೊಂಡಿದೆ. ಇದು ಮುಖ್ಯವಾಗಿ ಮಹಾನದಿ ಮುಖಜಭೂಮಿ ಮತ್ತು ಬಾಲಸೂರ್ ತೀರದ ಮೈದಾನಗಳಿಗೆ ಸೀಮಿತವಾಗಿದೆ. ಮುಖಜಭೂಮಿಯ ತರಿ ಪ್ರದೇಶದಲ್ಲೂ ಹಿರಾಕುಡ್ ಜಲವಸತಿ ಪ್ರದೇಶದಲ್ಲೂ ಕಬ್ಬನ್ನು ಬೆಳೆಸುತ್ತಾರೆ. ಪ್ರತಿ ವರ್ಷವೂ ಒರಿಸ್ಸ ಸು. 68ಲಕ್ಷ ಮೆಟ್ರಿಕ್ ಟನ್ ಬತ್ತ ಉತ್ಪಾದಿಸುತ್ತದೆ. ಈ ವಿಚಾರದಲ್ಲಿ ಇದು ಸ್ವಯಂಪೂರ್ಣ ರಾಜ್ಯ. ಆದರೆ ಬತ್ತದ ಬೆಳೆ ಪ್ರವಾಹವನ್ನೇ ಅವಲಂಬಿಸಿರುವುದರಿಂದ ಅನಾವೃಷ್ಟಿಯ ಕಾಲದಲ್ಲಿ ಅಥವಾ ಅತಿ ಪ್ರವಾಹದಿಂದ ಅಲ್ಲಿ ಅಕ್ಕಿಯ ಕೊರತೆ ಏರ್ಪಡುವುದೂ ಉಂಟು.

ಈ ರಾಜ್ಯದಲ್ಲಿ ಅರಣ್ಯ ಸಂಪನ್ಮೂಲಗಳು ವಿಪುಲ. ಆದರೆ ಅವುಗಳ ಅಸಮರ್ಪಕ ಹಂಚಿಕೆ ಒಂದು ದೊಡ್ಡ ಸಮಸ್ಯೆ. ಅಸಮರ್ಪಕ ರಸ್ತೆ ವ್ಯವಸ್ಥೆ, ವಿಪರೀತ ಏರುತಗ್ಗುಗಳಿಗೆ ಒಳಗಾಗುವ ಪ್ರವಾಹ, ಸರದಿಯ ಬೆಳೆಯ ಕೃಷಿಪದ್ಧತಿ ಅನುಸರಿಸುವ ಗಿರಿಜನ ಸಮೂಹ–ಈ ನಾನಾ ಕಾರಣಗಳಿಂದಾಗಿ ಅರಣ್ಯಪದಾರ್ಥಗಳ ಸಮರ್ಪಕ ಬಳಕೆ ಸಾಧ್ಯವಾಗಿಲ್ಲ. 2001ರಲ್ಲಿದ್ದ 58,130 ಚ.ಕಿಮೀ ಕಾಡುಗಳಲ್ಲಿ 22,400 ಚ.ಕಿಮೀ ಕಾದಿರಿಸಿದ ಕಾಡು, 16,800 ಚ.ಕಿ.ಮೀ ರಕ್ಷಿತ ಅರಣ್ಯ. ಒರಿಸ್ಸದ ಕಾಡುಗಳನ್ನು ಉತ್ತರೋಷ್ಣವಲಯದ ಅರ್ಧ ನಿತ್ಯಹಸುರು ಕಾಡು ಮತ್ತು ಉತ್ತರೋಷ್ಣ ವಲಯದ ತೇವಪೂರಿತ ವಾಯುಗುಣದ

ಎಲೆ ಉದುರುವ ಮರಗಳ ಕಾಡು (ಸಾಲ, ಬಿದಿರು ಮುಂತಾದವು) ಎಂದು ವಿಂಗಡಿಸಬಹುದು. ಮಿಶ್ರಿತ ಅರಣ್ಯಗಳೂ ಅಲ್ಲುಂಟು. ಉತ್ತರೋಷ್ಣವಲಯದ ಒಣ ವಾಯುಗುಣದ ಎಲೆ ಉದುರುವ ಕಾಡೂ ಉಷ್ಣವಲಯದ ಹುಲ್ಲುಗಾವಲೂ ಇವೆ. ಉತ್ತರ ಒರಿಸ್ಸದಲ್ಲಿ ಉತ್ತರ ಉಷ್ಣವಲಯದ ಅರ್ಧ ನಿತ್ಯಹಸುರು ಮತ್ತು ಸಾಲುಮರಗಳ ಕಾಡುಗಳೂ ಮಹಾನದಿ ಮತ್ತು ಬ್ರಾಹ್ಮಣಿ ನದಿಗಳ ನಡುನೆಲ ಮತ್ತು ಋಷಿಕುಲ್ಯದ ಮೇಲ್ಭಾಗದ ಪ್ರದೇಶದಲ್ಲಿ ಬಿದಿರು ಕಾಡುಗಳೂ ಇವೆ. ಉತ್ತರೋಷ್ಣವಲಯದ ಒಣ ವಾಯುಗುಣದ ಎಲೆ ಉದುರುವ ಮರಗಳು ಪಶ್ಚಿಮ ಒರಿಸ್ಸದ ಬೊಲಾಂಗಿರ್ ಮತ್ತು ಸಂಬಲ್‌ಪುರ್ ಜಿಲ್ಲೆಗಳಲ್ಲಿವೆ. ಮ್ಯಾಂಗ್ರೂವ್ ಮಹಾನದಿ ಮುಖಜಭೂಮಿ ಮತ್ತು ಚಿಲ್ಕಾ ಸರೋವರದ ದ್ವೀಪಗಳಿಗೆ ಸೀಮಿತವಾಗಿವೆ. ಬಿದಿರು, ಸೌದೆ ಮತ್ತು ಕಂಡು ಎಲೆಗಳು ಇತರ ಮುಖ್ಯ ಅರಣ್ಯ ವಸ್ತುಗಳು.

ಮರಗೆಲಸ, ಮರ ಕೊಯ್ತು, ಬೀಡಿ, ಕಾಗದ, ಅರಗು, ಚರ್ಮ ಹದಗಾರಿಕೆ, ಕತ್ತಾಳೆ ನಾರು ಮುಂತಾದ ಅರಣ್ಯಮೂಲದ ಕೈಗಾರಿಕೆಗಳಿವೆ.

ನೀರಾವರಿ: 2004–05ರಲ್ಲಿದ್ದ ಒಟ್ಟು ಬೇಸಾಯದ ಭೂಮಿ 8799 ಸಾವಿರ ಹೆಕ್ಟೇರುಗಳಲ್ಲಿ 2696 ಸಾವಿರ ಹೆಕ್ಟರ್‌ಗೆ (ಒಟ್ಟು ಬೇಸಾಯದ ನೆಲದ ಶೇ. 30)ಗೆ ನೀರಾವರಿ ಅನುಕೂಲವಿದೆ. ಹಿರಾಕುಡ್ ಯೋಜನೆ (ವಾರ್ಷಿಕ ನೀರಾವರಿ ಸಾಮರ್ಥ್ಯ 2.2 ಲಕ್ಷ ಎಕರೆ), ಋಷಿಕುಲ್ಯ ಕಾಲುವೆ ಅಚ್ಚುಕಟ್ಟು (1.40 ಲಕ್ಷ ಎಕರೆ), ಸಾಲಂದಿ ಯೋಜನೆ (0.3 ಲಕ್ಷ ಎಕರೆ) – ಇವು ರಾಜ್ಯದ ಮುಖ್ಯ ನೀರಾವರಿ ಯೋಜನೆಗಳು.

ಸಾರಿಗೆ ವ್ಯವಸ್ಥೆ: ಒರಿಸ್ಸದಲ್ಲಿ 1,37,332 ಕಿಮೀ ರಸ್ತೆಗಳಿವೆ. ಇದರಲ್ಲಿ ಕೇವಲ 3595 ಕಿಮೀ ರಾಷ್ಟ್ರೀಯ ಹೆದ್ದಾರಿಗಳು, 29 ರಾಜ್ಯ ಎಕ್ಸ್‌ಪ್ರೆಸ್ ಹೆದ್ದಾರಿಗಳು, 5,102 ಕಿಮೀ ರಾಜ್ಯ ಹೆದ್ದಾರಿಗಳು, 3,189 ಪ್ರಮುಖ ಜಿಲ್ಲಾರಸ್ತೆ, 6,334 ಇತರ ಜಿಲ್ಲಾ ರಸ್ತೆಗಳು, 27,882 ಗ್ರಾಮೀಣ ರಸ್ತೆಗಳಾಗಿವೆ. ಕಚ್ಚಾ ರಸ್ತೆಗಳು ಮಳೆಗಾಲದಲ್ಲಿ ಗಾಡಿಗಳ ಸಂಚಾರಕ್ಕೆ ಪ್ರಯೋಜನಕ್ಕೆ ಬರುವುದಿಲ್ಲ. ಇದಲ್ಲದೆ 17,782 ಕಿಮೀ ನಗರ ರಸ್ತೆಗಳು ಮತ್ತು 6,270 ಕಿಮೀ ನೀರಾವರಿ ರಸ್ತೆಗಳಿವೆ (2006–05). ಒರಿಸ್ಸದ ರಸ್ತೆಗಳ ಮುಖ್ಯ ಸಮಸ್ಯೆ ಎಂದರೆ ಕರಾವಳಿಯ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗಳ ಅಧಿಕ ವೆಚ್ಚ. ವಾರ್ಷಿಕ ನೆರೆಹಾವಳಿಯೇ ಇದಕ್ಕೆ ಮುಖ್ಯ ಕಾರಣ. ಅನೇಕ ನದಿ ಹಾಗೂ ಕಾಲುವೆಗಳಿಗೆ ಸೇತುವೆಗಳನ್ನು ನಿರ್ಮಿಸಬೇಕಾಗುತ್ತದೆ. ಪರ್ವತ ಹಾಗೂ ಬೆಟ್ಟಪ್ರದೇಶಗಳಲ್ಲೂ ರಸ್ತೆಗಳ ಅಭಿವೃದ್ಧಿಯಾಗಿಲ್ಲ. ಒರಿಸ್ಸದ ಕರಾವಳಿಯಲ್ಲಿರುವ ಹೌರಾ–ಚೆನ್ನೈ ರೈಲುಮಾರ್ಗ ಮುಖ್ಯವಾದದ್ದು. ರಾಜ್ಯದ ಒಟ್ಟು ರೈಲುಮಾರ್ಗ 2,287 ಕಿಮೀ ಇದರಲ್ಲಿ 91 ಕಿಮೀ ನ್ಯಾರೋಗೇಜ್ ಮಾರ್ಗ ಸೇರಿದೆ.

ವರ್ಷದ ಹೆಚ್ಚು ದಿನಗಳಲ್ಲಿ ನದಿಗಳಲ್ಲಿ ನಾವೆಯ ಸಂಚಾರ ಅಸಾಧ್ಯ. ತೀರದ ಬಳಿ ಕಡಲು ಆಳವಾಗಿಲ್ಲದೆ, ಮೇಲೆತ್ತಲ್ಪಟ್ಟದ್ದಾಗಿರುವುದರಿಂದ ಸ್ವಾಭಾವಿಕ ಬಂದರಿಗೆ ವಿಶಾಲ ಸ್ಥಳವಾವುದೂ ಇಲ್ಲ. ಮಹಾನದಿಯ ಅಳಿವೆಯಲ್ಲಿನ ಪರದೀಪ್ ಬಂದರನ್ನು ಸುಕಂದ ಗಣಿಗಳಿಂದ ಜಪಾನಿಗೆ ಕಬ್ಬಿಣದ ಅದಿರನ್ನು ರವಾನಿಸಲು ಅನುಕೂಲವಾಗುವಂತೆ ಒಂದು ಮುಖ್ಯ ಬಂದರನ್ನಾಗಿ ಅಭಿವೃದ್ಧಿಗೊಳಿಸಲಾಗಿದೆ. ಮಹಾನದಿ ಮುಖಜಭೂಮಿಯ ಅಗ್ರದಲ್ಲಿರುವ ಕಟಕ್ ಬಳಿಯ ಜೋಬ್ರಾ ಅಣೆಕಟ್ಟೆಯ ಮೂಲದಿಂದ ಹೊರಡುವ ಕೆಲವು ಕಾಲುವೆಗಳಲ್ಲಿ ನಾವೆ ಸಂಚಾರವಿದೆ. ಚಾಂದ್‌ಬಾಲಿ ಮತ್ತು ಗೋಪಾಲ್‌ಪುರ ಇವುಗಳ ಮೇಲಣ ಸಣ್ಣ ಬಂದರುಗಳು. ಸಮುದ್ರದಲ್ಲಿ ಪ್ರಯಾಣ ಮಾಡುವ ಹಡುಗುಗಳು ತೀರಕ್ಕೆ ಬರುವುದಿಲ್ಲ. ಭರ್ತಿ ಮತ್ತು ಖಾಲಿಮಾಡುವ ಕಾರ್ಯ ಚಟುವಟಿಕೆಗಳನ್ನು ಸಣ್ಣ ದೋಣಿಗಳಿಂದ ಕೊಲ್ಲಿಯ ಮಧ್ಯದಲ್ಲಿ ನಡೆಸಲಾಗುತ್ತದೆ. ಭುವನೇಶ್ವರ ವಿಮಾನ ನಿಲ್ದಾಣ ಆಧುನೀಕರಣಗೊಳ್ಳುತ್ತಿದೆ.

ಜನಸಂಖ್ಯೆ: 1901ರಲ್ಲಿ ಒರಿಸ್ಸದ ಜನಸಂಖ್ಯೆ 62 ಲಕ್ಷವಿತ್ತು. 2001ರಲ್ಲಿ ಇದು 368 ಲಕ್ಷಕ್ಕೆ ಏರಿತು. ಆದರೆ ಇದು ರಾಜ್ಯದಾದ್ಯಂತ ಏಕರೀತಿಯಾಗಿ ಏರಿಲ್ಲ. ಇತ್ತೀಚಿನ ದಶಕಗಳಲ್ಲಿ ಒಳನಾಡಿನ ಪ್ರದೇಶವಾದ ಪಶ್ಚಿಮ ಒರಿಸ್ಸದಲ್ಲಿನ ಸಂಪನ್ಮೂಲಗಳು ವಿವಿಧ ರೀತಿಗಳಲ್ಲಿ ಉಪಯೋಗಿಸಲ್ಪಟ್ಟಿರುವುದರಿಂದ ಜನಸಂಖ್ಯೆಯಲ್ಲಿ ಅತ್ಯಂತ ಹೆಚ್ಚಳವಾಗಿದೆ. ಕೋರಾಪುಟ್ ಮತ್ತು ಕಾಳಹಂಡಿ ಜಿಲ್ಲೆಗಳ ದಂಡಕಾರಣ್ಯಪ್ರದೇಶ ಮತ್ತು ವೈತರಣಿಯ ತಲೆಭಾಗದಲ್ಲಿರುವ ಕಿಯೋಂಝಾರ್ ಮತ್ತು ಪನ್‌ಪೋಷ್ ಪ್ರದೇಶಗಳಲ್ಲೂ ಶೇಕಡ ನೂರರಷ್ಟು ಜನಸಂಖ್ಯೆಯ ಹೆಚ್ಚಳವನ್ನು ಕಾಣಬಹುದು. ಬಾರೀಪದಾ ಮತ್ತು ಬೊಲಾಂಗಿರ್‌ಗಳ ಎತ್ತರದ ಪ್ರದೇಶಗಳಲ್ಲೂ ಜನಸಂಖ್ಯೆ ಸಾಕಷ್ಟು ಹೆಚ್ಚಾಗಿದೆ. ಮತ್ತೊಂದು ದೃಷ್ಟಿಯಿಂದ ನೋಡಿದರೆ ಅನೇಕ ವರ್ಷಗಳಿಂದ ಅಭಿವೃದ್ಧಿಯಾಗುತ್ತ ಬಂದಿರುವ ತೀರ ಪ್ರದೇಶಗಳ ಜನಸಂಖ್ಯೆ ಇಳಿದಿದೆ. ಬಾಲಾಸೂರ್, ಭದ್ರಕ್, ಕಟಕ್–ಕೇಂದ್ರಾಪಾರ, ಭುವನೇಶ್ವರ ಮತ್ತು ಬೆರ್‌ಹಾಂಪುರ್ ತೀರಪ್ರದೇಶಗಳು ಇಂಥವು. ಅತ್ಯಂತ ಹೆಚ್ಚಿನ ಜನಸಾಂದ್ರತೆ ಇರುವುದು ಮಹಾನದಿಯ ಮುಖಜಭೂಮಿಯಲ್ಲಿ. ಇಲ್ಲಿನ ಕೆಲವು ಕಡೆಗಳಲ್ಲಿ ಚ.ಕಿಮೀಗೆ 1,000 ಜನರಿದ್ದಾರೆ. ರಾಜ್ಯದ ಸರಾಸರಿ ಜನಸಾಂದ್ರತೆ ಚ.ಕಿಮೀಗೆ 236 ಜನರು.

ಹೆಚ್ಚಿನ ಜನಕ್ಕೆ ವ್ಯವಸಾಯವೇ ಆಧಾರ. ಇಂಥವರು ಒಟ್ಟು ಜನಸಂಖ್ಯೆಯ ಶೇ. 79.3 ಇದ್ದಾರೆ.

ಕೈಗಾರಿಕೆಗಳು ಮತ್ತು ಖನಿಜಗಳು: ಎರಡನೆಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಮಾತ್ರವೇ ಒರಿಸ್ಸದ ಕೈಗಾರಿಕಾ ಯುಗದ ಆವಿರ್ಭಾವವಾಯಿತು. ಜವಳಿ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು, ಕಾಗದ ಮತ್ತು ಕಾಗದದ ರಟ್ಟಿನ ಕಾರ್ಖಾನೆಗಳು ಮತ್ತು ಸತುಲೇಪಿತ ಕೊಳವೆ (ಗ್ಯಾಲ್ವನೈಸ್ಡ್ ಪೈಪ್) ಕಾರ್ಖಾನೆಗಳು ಸ್ಥಾಪಿತವಾದುವು. ರೂರ್ಕೆಲದಲ್ಲಿ ಉಕ್ಕಿನ ಕಾರ್ಖಾನೆ, ಸುಣ್ಣಕಲ್ಲು, ಅಲ್ಯೂಮಿನಿಯಂ ಮತ್ತು ವಿದ್ಯುತ್ ರಾಸಾಯನಿಕ ಕಾರ್ಖಾನೆಗಳಿವೆ. ಹಿರಾಕುಡ್ ಮತ್ತು ಮುಚಕುಂಡ್ ಯೋಜನೆಗಳಿಂದ ಈ ಕೈಗಾರಿಕೆಗಳಿಗೆ ವಿದ್ಯುತ್ತನ್ನು ಒದಗಿಸಲಾಗುತ್ತದೆ. ತಲ್‌ಚೇರ್‌ನಲ್ಲಿ ಕೆಳಮಟ್ಟದ ಕಲ್ಲಿದ್ದಲನ್ನು ಉಪಯೋಗಿಸಿಕೊಂಡು, ಬೃಹತ್ ಪ್ರಮಾಣದ ಉಷ್ಣ–ವಿದ್ಯುತ್ ಶಕ್ತಿಯನ್ನು ತಯಾರಿಸಲು ನಿಯೋಜಿಸಲಾಗಿದೆ. ಶೇ. 60ಕ್ಕಿಂತ ಹೆಚ್ಚು ಪ್ರಮಾಣದ ಲೋಹ ಹೊಂದಿರುವ ಉತ್ತಮ ಮಟ್ಟದ ಕಬ್ಬಿಣದ ಅದಿರನ್ನು ಉತ್ತರ ಒರಿಸ್ಸ ಹೆಚ್ಚಿನ ಪ್ರಮಾಣದಲ್ಲಿ ಜೆಮ್‌ಷೆಡ್‌ಪುರ, ದುರ್ಗಾಪುರ ಮತ್ತು ರೂರ್ಕೆಲ ಉಕ್ಕಿನ ಕಾರ್ಖಾನೆಗಳಿಗೆ ಒದಗಿಸುತ್ತದೆ. ಸುಂದರ್‌ಘರ್ ಪ್ರದೇಶದಲ್ಲಿ ಸುಣ್ಣಕಲ್ಲು ಹೇರಳವಾಗಿ ದೊರೆಯುತ್ತದೆ. ಇದನ್ನು ಉಕ್ಕಿನ ಕಾರ್ಖಾನೆಗಳಲ್ಲಿ ಕಬ್ಬಿಣ ಕರಗಿಸುವ ಮೂಸೆಗಳಲ್ಲಿ ಸ್ರಾವಕವಸ್ತುವನ್ನಾಗಿ (ಫ್ಲಕ್ಸ್) ಉಪಯೋಗಿಸುತ್ತಾರೆ. ಪಶ್ಚಿಮ ಒರಿಸ್ಸದಲ್ಲಿ ಬಾಕ್ಸೈಟ್ ವಿಪುಲವಾಗಿ ದೊರೆಯುತ್ತದೆ. ಆದ್ದರಿಂದ ಹಿರಾಕುಡ್‌ನಲ್ಲಿ ಅಲ್ಯೂಮಿನಿಯಂ ಕಾರ್ಖಾನೆಯೊಂದನ್ನು ಪ್ರಾರಂಭಿಸಲಾಗಿದೆ. ಕಡಿಮೆ ಬೆಲೆಯಲ್ಲಿ ವಿದ್ಯುತ್ ದೊರೆಯುವುದರಿಂದ ಚೌದ್‌ವಾರ್ ಮತ್ತು ಬ್ರಜ್‌ರಾಜ್ ನಗರಗಳಲ್ಲಿ ಕಾಗದದ ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. ಅಂತೆಯೆ ಕೋರಾಪುಟ್‌ನ ದಂಡಕಾರಣ್ಯ ಪ್ರದೇಶಗಳಲ್ಲಿ ಕಾಗದದ ತಯಾರಿಕೆಗೆ ಅನುಕೂಲಗಳುಂಟು. ಕೈಮಗ್ಗ, ನಕ್ಕಿ, ಕೊಂಬಿನ ಸಾಮಾನು, ಒಡವೆ–ಮುಂತಾದ ಗೃಹಕೈಗಾರಿಕೆಗಳು ವ್ಯಾಪಕವಾಗಿವೆ. ವಿದೇಶಿ ವಿನಿಮಯವನ್ನು ಸಂಪಾದಿಸಲು ಕಬ್ಬಿಣದ ಅದಿರನ್ನು ಪರದೀಪ್ ಮತ್ತು ವಿಶಾಖಪಟ್ಟಣಗಳ ಮುಖಾಂತರ ಜಪಾನಿಗೆ ರಫ್ತು ಮಾಡಲಾಗುತ್ತಿದೆ. ಒರಿಸ್ಸದ ಸ್ವಾಭಾವಿಕ ಸಂಪನ್ಮೂಲಗಳೊಂದಿಗೆ ಹೋಲಿಸಿದರೆ ಕೈಗಾರಿಕೆಗಳ ಬೆಳವಣಿಗೆಯ ವೇಗ ಮತ್ತು ತಲಾ ಆದಾಯ ತುಂಬಾ ಸೀಮಿತ. ಇನ್ನೂ ಹೆಚ್ಚಿನ ಮಟ್ಟದ ಕೈಗಾರಿಕೆಯ ಕಾರ್ಯಚಟುವಟಿಕೆಗಳಿಗಾಗಿ ಸಂಚಾರ ಮಾರ್ಗಗಳ ಅಭಿವೃದ್ಧಿ ಅತ್ಯಂತ ಆವಶ್ಯಕ. ಈ ದೃಷ್ಟಿಯಿಂದ ಒರಿಸ್ಸಕ್ಕೆ ಉತ್ತಮ ಭವಿಷ್ಯವಿದೆ.

ರಾಜ್ಯದಲ್ಲಿ ಏಕಸದನವಿರುವ ವಿಧಾನಮಂಡಲವಿದೆ. ಪರದೀಪ್ ಮುಖ್ಯ ಬಂದರು, ಭುವನೇಶ್ವರ್ ರಾಜಧಾನಿ (ಜನಸಂಖ್ಯೆ 38,211). ಇತರ ನಗರಗಳು ಮತ್ತು ಪಟ್ಟಣಗಳು: ಕಟಕ್ (1,46,590), ರೂರ್ಕೆಲ (90,287), ಬೆರ್ಹಾಂಪುರ್ (76,931), ಪುರಿ (60,815), ಸಂಬಲ್‌ಪುರ್ (38,915), ಬಲಸೂರ್ (33,931), ಪರ್ಲಾಕಿಮಿಡಿ (22,708) ಮತ್ತು ಜಯಪುರ್ (25,291).

2001 ಜನಗಣತಿಯ ಪ್ರಕಾರ ರಾಜ್ಯದ ಗಂಡಸರ ಪೈಕಿ ಶೇ. 75.95 ಮತ್ತು ಹೆಂಗಸರಲ್ಲಿ ಶೇ. 50.97 ಮಂದಿ ಅಕ್ಷರಸ್ಥರು. ಪುರಿ ಒಂದು ಮುಖ್ಯ ಯಾತ್ರಾಸ್ಥಳ. ಇಲ್ಲಿ ಜಗನ್ನಾಥನ ದೇವಾಲಯವಿದೆ. ಬ್ರಿಟಿಷ್ ಆಡಳಿತದ ಪ್ರಾರಂಭ ಕಾಲದಲ್ಲಿ ಮಹಾನದಿ ಮುಖಜಭೂಮಿಯನ್ನೂ ಹೂಗ್ಲಿ ನದಿಯನ್ನೂ ಸೇರಿಸುವ ಕಾಲುವೆಯೊಂದನ್ನು ಕಡಲಿಗೆ ಸಮಾನಾಂತರವಾಗಿ ನಿರ್ಮಿಸಲಾಗಿತ್ತು. ಬಾಲಾಸೂರ್ ರೇವು ನಿರ್ಮಾಣವಾಗಿದ್ದು ಇದರ ದಡದ ಮೇಲೆ. ಭುವನೇಶ್ವರ್ ಮತ್ತು ಕಟಕ್‌ಗಳು ಮುಖ್ಯ ವಿಮಾನಕೇಂದ್ರಗಳು. ಭಾರತದ 12 ದೊಡ್ಡ ಬಂದರುಗಳ ಪೈಕಿ ಪರದೀಪ್ ಒಂದು. (ಬಿ.ಎನ್.ಎಸ್.)

**ಒಹಾಯೊ ನದಿ:** ಅಮೆರಿಕ ಸಂಯುಕ್ತಸಂಸ್ಥಾನದ ಒಂದು ನದಿ. ಒಹಾಯೊ ರಾಜ್ಯದ ದಕ್ಷಿಣ ಪೂರ್ವಗಳಲ್ಲಿ ಗಡಿರೇಖೆಯಂತೆ ಹರಿಯುತ್ತದೆ. ಮಿಸಿಸಿಪಿಯ ಏಕೈಕ ಮುಖ್ಯ ಉಪನದಿ. ಅಲೆಘನಿ ಮತ್ತು ಮನೊಂಗಹಲ ನದಿಗಳು ಪಿಟ್ಸ್‌ಬರ್ಗ್‌ನಲ್ಲಿ ಕೂಡಿ ಸಂಭವಿಸಿರುವ ಈ ನದಿಗೆ ವಿಶಾಲವಾದ ಜಲಾನಯನ ಪ್ರದೇಶವಿದೆ. ಉತ್ತರಾಭಿಮುಖವಾಗಿ ಹರಿಯುತ್ತಿದ್ದ ಅಪಲೇಷಿಯನ್ ತೊರೆಗಳಿಗೆ ಮಂಜುಗೆಡ್ಡೆಯಿಂದ ತಡೆಯುಂಟಾಗಿ, ತುಂಬಿದ ನೀರು ಒಂದು ಕಣಿವೆಯಿಂದ ಇನ್ನೊಂದು ಕಣಿವೆಗೆ ಬಿರುಕುಗಳ ಮೂಲಕ ಹರಿದದ್ದರಿಂದ ಸಂಭವಿಸಿದ ಕಣಿವೆಯಲ್ಲಿ ಈ ನದಿ ಹರಿಯುತ್ತದೆ. ತತ್ಫಲವಾಗಿ ಕೆಲವು ಕಡೆಗಳಲ್ಲಿ ಕಮರಿಗಳೇ ನದಿಯ ಪಾತ್ರ. ಒಮ್ಮೊಮ್ಮೆ ಇದು ಥಟ್ಟನೆ ತನ್ನ ದಿಕ್ಕನ್ನು ಬದಲಿಸುತ್ತದೆ. ಎತ್ತರದ ನೆಲದಿಂದ ಅತಿ ಹಳ್ಳದ ಪ್ರದೇಶಕ್ಕೆ ಅಂಬಿನಂತೆ ಜಾರುತ್ತದೆ. ಹೀಗಾಗಿ ಜಲಪಾತಗಳು ಸಂಭವಿಸಿವೆ.

ಒಹಾಯೊ ಒಳ್ಳೆಯ ಜಲಮಾರ್ಗ. ಪ್ರವಾಹ ಕಾಲದಲ್ಲಿ ಜಲಪಾತದ ಮೇಲೂ ಹಡಗುಗಳು ಸಾಗುತ್ತವೆ. ಒಹಾಯೊ ನದಿಯ ಮೇಲೆ 1782ರಷ್ಟು ಹಿಂದಿನಿಂದಲೂ ದೋಣಿಗಳು ಸಂಚರಿಸುತ್ತಿವೆ. ಪ್ರಯಾಣಿಕ ನೌಕೆ ಮೊಟ್ಟಮೊದಲು ಸಿನ್ಸಿನಾಟಿಯಿಂದ ಪಿಟ್ಸ್‌ಬರ್ಗ್‌ಗೆ 1794ರಲ್ಲಿ ಸಂಚಾರ ಮಾಡಿತು. 1880ರಲ್ಲಿ ಪಿಟ್ಸ್‌ಬರ್ಗ್ ಪ್ರದೇಶ ಕೈಗಾರಿಕೆಯಲ್ಲಿ

ಮುಂದುವರಿದಂತೆ ಈ ಜಲಮಾರ್ಗವನ್ನು ಕಲ್ಲಿದ್ದಲು, ಮರದ ದಿಮ್ಮಿ ಮುಂತಾದವುಗಳನ್ನು ಸಾಗಿಸುವುದಕ್ಕೆ ಹೆಚ್ಚಾಗಿ ಬಳಸಿಕೊಳ್ಳಲಾಯಿತು. 1910ರಲ್ಲಿ ಅಮೆರಿಕ ಕಾಂಗ್ರೆಸ್ ಈ ಜಲಮಾರ್ಗವನ್ನು ಅಭಿವೃದ್ಧಿಪಡಿಸಲು ಯೋಚಿಸಿ ಅದಕ್ಕಾಗಿ ಒಂದು ಯೋಜನೆ ತಯಾರಿಸಿತು. ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟಿ ಸದಾಕಾಲವೂ ನೀರುಳ್ಳ 14 ಕಿಮೀ ಕಾಲುವೆಯನ್ನು ಜಲಮಾರ್ಗಕ್ಕೆ ಒದಗಿಸಲಾಯಿತು. (ಬಿ.ಎಸ್.ಎಚ್.)

**ಒಹಾಯೋ:** ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಸೇರಿದ 17ನೆಯ ರಾಜ್ಯ. ಮಧ್ಯ ಪಶ್ಚಿಮದಲ್ಲಿ ಈರಿ ಸರೋವರದ ದಕ್ಷಿಣದಲ್ಲಿದೆ. $40^{0}15'$ ಉ.ಅ. ಮತ್ತು $82^{0}45'$ ಪೂ.ರೇ.ಗು ಇಲ್ಲಿ ಸಂಧಿಸಿವೆ. 1763ರಲ್ಲಿ ಬ್ರಿಟನ್ನಿಗೆ ಸೇರಿದ್ದು 1802ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ರಾಜ್ಯವಾಯಿತು. ವಿಸ್ತೀರ್ಣ 1,15,998 ಚ.ಕಿಮೀ. ಜನಸಂಖ್ಯೆ 1,13,80,000 (2000). ಇದರ ರಾಜಧಾನಿ ಕೊಲಂಬಸ್. ಪುರಾತನ ಕಾಲದಲ್ಲಿ ಒಹಿಯೋ ಹೋಪ್ಇಲ್ ಜನರ ಆವಾಸಸ್ಥಾನ. ಪುರಾತತ್ತ್ವ ದಾಖಲೆಗಳ ಪ್ರಕಾರ ಈ ಜನ ಉತ್ತಮ ಸಂಸ್ಕೃತಿ ಹಾಗೂ ಜೀವನ ಮಟ್ಟವನ್ನು ಹೊಂದಿದ್ದರು. 18ನೆಯ ಶತಮಾನದಲ್ಲಿ ಬ್ರಿಟಿಷರು ಮತ್ತು ಫ್ರೆಂಚರು ಈ ಭಾಗವನ್ನು ಆಕ್ರಮಿಸಿದರು. ಅನಂತರ ಸ್ಕಾಟಿಶ್, ಜರ್ಮನ್ ಹಾಗೂ ಐರಿಶ್ ಜನರ ಆಗಮನವಾಯಿತು. ನದಿಗಳು, ಜಲಮಾರ್ಗಗಳು ಮತ್ತು ರಸ್ತೆಗಳ ಅಭಿವೃದ್ಧಿಯಿಂದಾಗಿ ಪೂರ್ವಭಾಗದಿಂದ ಜನರ ವಲಸೆ ಆರಂಭವಾಯಿತು. ಅಪಲೇಚಿಯಸ್ ಪರ್ವತಗಳ ತಪ್ಪಲಿನ ಇಳಿಜಾರಿನಲ್ಲಿರುವ ಈ ರಾಜ್ಯ ಉತ್ತಮವಾದ ಹವಾಗುಣವನ್ನು ಹೊಂದಿದೆ.

ಮೂಲತಃ ಕೃಷಿ ಪ್ರಧಾನವಾಗಿದ್ದ ಈ ಭೂಭಾಗದಲ್ಲಿ ಬಹುಶೀಘ್ರವಾಗಿ ಅಂತಃಕಲಹಗಳುಂಟಾಗಿ ಕೈಗಾರಿಕಾ ಬೆಳೆವಣಿಗೆಗಳಾದುವು. ಕ್ಲೀವ್‌ಲೆಂಡ್, ಸಿನ್ಸಿನಾಟಿ ಮೊದಲಾದ ಬೃಹತ್ ಕೈಗಾರಿಕಾ ನಗರಗಳ ಬೆಳೆವಣಿಗೆಯಾಯಿತು. ಈರಿ ಸರೋವರ ಹಾಗೂ ಒಹಾಯೊ ನದಿಗಳ ದಂಡೆಗಳಲ್ಲಿ ಕೈಗಾರಿಕಾ ಪ್ರದೇಶಗಳಿವೆ.

ಆಧುನಿಕ ಒಹಾಯೋದಲ್ಲಿ ಈಗಲೂ ಸಮತಟ್ಟಾದ ಉತ್ತಮ ಕೃಷಿ ಕ್ಷೇತ್ರಗಳಿವೆ. ಕೈಗಾರಿಕೆಗಳ, ಸಾರಿಗೆ ಸಂಪರ್ಕಗಳ ಉತ್ತಮ ಬೆಳೆವಣಿಗೆಯಿದೆ. ಇಲ್ಲಿನ ಡೇಟನ್ ನಗರ ವಿಮಾನಗಳನ್ನು ಆವಿಷ್ಕರಿಸಿದ ರೈಟ್ ಸಹೋದರರುಗಳ (ಆರ್‌ವಿಲ್ ಮತ್ತು ವಿಲ್‌ಬರ್) ತವರೂರು. ಹೀಗಾಗಿ ಈ ರಾಜ್ಯ ವಿಮಾನ ತಯಾರಿಕೆ ಹಾಗೂ ಇತರೆ ಸಂಭಂದಪಟ್ಟ ಕೈಗಾರಿಕೆಗಳಿಗೆ ಪ್ರಮುಖ. ಸ್ವಲ್ಪ ಪ್ರಮಾಣದ ಕಲ್ಲಿದ್ದಲು ಗಣಿಗಾರಿಕೆಯಿದೆ. ಭಾರಿ ಕೈಗಾರಿಕೆಗಳು, ವಿದ್ಯುತ್ ಉಪಕರಣಗಳು, ಯಂತ್ರೋಪಕರಣಗಳು ಹಾಗೂ ಸಿದ್ಧಪಡಿಸಿದ ವಸ್ತುಗಳ ತಯಾರಿಕೆಯಿದೆ. (ಕೆ.ಎನ್.ಯು.)

**ಒಳನಾಡಿನ ಜಲಸಾರಿಗೆ:** ಸ್ವಾಭಾವಿಕವಾದ ನದಿಗಳು, ಸರೋವರಗಳು ಅಥವಾ ಕೃತಕವಾದ ಕಾಲುವೆಗಳ ಮೂಲಕ ಆಂತರಿಕವಾಗಿ ಹಡಗು ಅಥವಾ ದೋಣಿಗಳಲ್ಲಿ ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುವ ವ್ಯವಸ್ಥೆಯನ್ನು ಒಳನಾಡಿನ ಜಲಸಾರಿಗೆ ಎಂದು ಕರೆಯುತ್ತಾರೆ. ಜಲಸಾರಿಗೆಯು ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. 18ನೆಯ ಶತಮಾನದಲ್ಲಿ ಜಲಸಾರಿಗೆಯಿಂದ ಪ್ರಯಾಣಿಕರನ್ನು ಮತ್ತು ಸರಕನ್ನು ಒಳನಾಡಿನಲ್ಲಿ ಸಾಗಿಸಲಾಗುತ್ತಿತ್ತು. ಅಂದಿನ ದಿನಗಳಲ್ಲಿ ಆಮದು ಮತ್ತು ರಫ್ತಿನ ಪ್ರಮಾಣ, ಗಾತ್ರ ಮತ್ತು ವೇಗದ ಪ್ರಯಾಣಕ್ಕೆ ಹೆಚ್ಚಿನ ಆದ್ಯತೆಗಳಿರಲಿಲ್ಲ. ಕ್ರಮೇಣ ಹಡಗಿನ ಗಾತ್ರ, ಸರಕಿನ ಪ್ರಮಾಣ ಮತ್ತು ವೇಗವಾಗಿ ಚಲಿಸುವ ಹಡಗುಗಳು ರೂಪುಗೊಂಡವು. ಇದರಿಂದಾಗಿ ಬೃಹತ್‌ಗಾತ್ರದ ಸರಕು ಸಕಾಲದಲ್ಲಿ ತಲಪುವ ವ್ಯವಸ್ಥೆ ಅಭಿವೃದ್ಧಿ ಹೊಂದಿತು. 19ನೆಯ ಶತಮಾನದಲ್ಲಿ ಭೂಸಾರಿಗೆ ಪ್ರಾಮುಖ್ಯತೆಯನ್ನು ಪಡೆಯಿತು, ಪರಿಣಾಮವಾಗಿ ರಸ್ತೆಗಳು, ರಹದಾರಿಗಳು ಸಂಪರ್ಕ ಜಾಲಗಳು ವೇಗವಾಗಿ ವಿಸ್ತರಿಸಿದವು. ಪ್ರಮುಖ ನಗರಗಳಿಗೆ, ಬಂದರುಗಳಿಗೆ ಬಂದರು ನಗರಗಳಿಗೆ, ಕೈಗಾರಿಕಾ ಪ್ರದೇಶಗಳಿಗೆ ರಸ್ತೆಗಳ ಜಾಲ ಸಂಪರ್ಕಗಳು ವಿಸ್ತರಿಸಲ್ಪಟ್ಟಿತು. ರೈಲು ಸಾರಿಗೆ ವ್ಯವಸ್ಥೆಯು ಹಲವು ರಾಷ್ಟ್ರಗಳಲ್ಲಿ ಬೆಳಕಿಗೆ ಬಂದಿತು. ಇದರಿಂದ ಒಳನಾಡಿನ ಜಲ ಸಾರಿಗೆಯು ರಸ್ತೆ, ರೈಲು ಸಾರಿಗೆಗಳ ಜೊತೆ ಪೈಪೋಟಿಯಿಂದ ನಡೆಯಬೇಕಾಯಿತು. ಸರಕು ಮತ್ತು ಪ್ರಯಾಣಿಕರ ರವಾನೆಯಲ್ಲಿ ಒಳಸಾರಿಗೆಯ ಅನುಕೂಲಗಳ ಅರಿವು ಹೆಚ್ಚಾಯಿತು. 20ನೆಯ ಶತಮಾನದ ವೇಳೆಗೆ ಪ್ರಪಂಚದ ಹಲವಾರು ರಾಷ್ಟ್ರಗಳಲ್ಲಿ ಒಳನಾಡಿನ ಜಲಸಾರಿಗೆ ವೇಗವಾಗಿ ಅಭಿವೃದ್ಧಿಯತ್ತ ಸಾಗಿತ್ತು. ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಹಾಗೂ ಕೈಗಾರಿಕೆಗಳನ್ನು ಆಧಾರವಾಗಿ ಹೊಂದಿರುವ ರಾಷ್ಟ್ರಗಳಲ್ಲಿ ಕಚ್ಚಾವಸ್ತುಗಳನ್ನು ಹಾಗೂ ಸಿದ್ಧಪಡಿಸಿದ ಪದಾರ್ಥಗಳನ್ನು ರವಾನಿಸಲು ಜಲಸಾರಿಗೆ ಬಹುವಾಗಿ ಬಳಕೆಗೆ ಬಂದಿತು.

ಪ್ರಸ್ತುತ ಒಳನಾಡಿನ ಜಲಸಾರಿಗೆಯನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿರುವುದು ಈ ಕೆಳಗಿನ ಕಾರಣಗಳಿಂದಾಗಿ. ಈ ವಿಧಾನವು ದೊಡ್ಡ ಪ್ರಮಾಣದ ಸರಕನ್ನು ಕಡಿಮೆ ಖರ್ಚಿನಲ್ಲಿ ರವಾನಿಸಲು ಅನುಕೂಲವಾಗಿದೆ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು, ಅತಿ ಭಾರವಾದ ಪದಾರ್ಥಗಳನ್ನು, ಖನಿಜ, ದ್ರವರೂಪದ ತೈಲ, ಕಲ್ಲಿದ್ದಲು, ಕೆಡದಂತಹ ಆಹಾರ ಪದಾರ್ಥಗಳು, ರಬ್ಬರ್, ಚರ್ಮ, ಕಾಫಿ, ಚಹ, ತಂಬಾಕು, ಕೃಷಿ ಉಪಕರಣಗಳು ಮೊದಲಾದವನ್ನು ಸಾಗಿಸಲು ಜಲಮಾರ್ಗವು ಅತ್ಯಂತ ಸೂಕ್ತ ಹಾಗೂ ಸುರಕ್ಷಿತ. ಜಲಸಾರಿಗೆಯ ಸಾಗಾಣಿಕೆಯಲ್ಲಿ ಪೂರ್ವಭಾವಿಯಾಗಿ ಯಾವುದೇ ಖರ್ಚು ವೆಚ್ಚ ತಗಲುವುದಿಲ್ಲ. ರೈಲು ಮತ್ತು ರಸ್ತೆ ಸಾರಿಗೆ ವ್ಯವಸ್ಥೆ ಇಲ್ಲದ ಪ್ರದೇಶಗಳಲ್ಲಿ ಜಲಸಾರಿಗೆಯ ಪ್ರಾಮುಖ್ಯತೆ ಹೆಚ್ಚಾಗಿದೆ. ಈ ಸಾರಿಗೆಯು ಕೆಲವು ಅನುಕೂಲ – ಅನಾನುಕೂಲ, ಇತಿಮಿತಿಗಳನ್ನು ಒಳಗೊಂಡಿದೆ.

ಜಲಸಾರಿಗೆಯು ಮಂದಗತಿಯಿಂದ ಕೂಡಿದ್ದು, ಜಲಮಾರ್ಗಗಳು ಆಳವಾಗಿ ಮತ್ತು ಸಾರ್ವಕಾಲಿಕವಾಗಿರಬೇಕು. ಜಲವು ಸಮೃದ್ಧಿಯಾಗಿರಬೇಕು, ಜಲಮಾರ್ಗವು ಮಳೆಗಾಲದಲ್ಲಿ ಪ್ರವಾಹರಹಿತವಾಗಿ ಮತ್ತು ಬೇಸಗೆಯಲ್ಲಿ ನೀರಿನ ಮಟ್ಟ ಇಳಿಮುಖವಾಗದಂತಿರಬೇಕು.

ಧ್ರುವ ಪ್ರದೇಶದಲ್ಲಿ ಚಳಿಗಾಲದಲ್ಲಿ ನದಿಗಳು ಮತ್ತು ಸರೋವರಗಳು ಹೆಪ್ಪುಗಟ್ಟುವುದರಿಂದ ಜಲಮಾರ್ಗಗಳು ಮುಚ್ಚಿಹೋಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಉಬ್ಬರ–ವಿಳಿತ, ನೀರಿನ ಸೆಳೆತಗಳು ಜಲಸಾರಿಗೆಗೆ ಮಾರಕಗಳು. ಕಟ್ಟೆಗಳ ನಿರ್ಮಾಣ, ನದಿ–ಕಾಲುವೆಗಳ ಉಸ್ತುವಾರಿ ಮತ್ತು ದುರಸ್ಥಿಕಾರ್ಯಗಳಿಗೆ ಹೆಚ್ಚಿನ ಹಣ ವ್ಯಯವಾಗುತ್ತದೆ. ಒಳನಾಡಿನ ಜಲಸಾರಿಗೆಯು ನದಿ, ಸರೋವರ ಮತ್ತು ಕಾಲುವೆಗಳ ದಂಡೆಯಲ್ಲಿರುವ ಪ್ರದೇಶಗಳಿಗೆ ಮಾತ್ರ ಸೀಮಿತ. ಇಕ್ಕಟ್ಟಾದ ನದಿ ಪಾತ್ರ, ಕಡಿಮೆ ಆಳ, ತೀವ್ರಗತಿಯಲ್ಲಿ ಹರಿಯುವ ನೀರು ಮತ್ತು ಜಲಪಾತವುಳ್ಳ ನದಿಗಳು ಜಲಸಂಚಾರಕ್ಕೆ ಯೋಗ್ಯವಾಗಿರುವುದಿಲ್ಲ. ಒಳನಾಡಿನ ಜಲಸಾರಿಗೆ ಹಂಚಿಕೆ ಪ್ರಪಂಚದ ಕೆಲವು ಭಾಗಗಳಲ್ಲಿ ಮಾತ್ರ ಒಳನಾಡಿನ ಜಲಸಾರಿಗೆ ಹಂಚಿಕೆಯಾಗಿದೆ. ಹೆಚ್ಚಾಗಿ ಯುರೋಪ್, ರಷ್ಯ ಮತ್ತು ಉತ್ತರ ಅಮೆರಿಕದಲ್ಲಿ ಕಂಡುಬರುತ್ತದೆ.

ಒಳನಾಡಿನ ಜಲಸಂಚಾರ ಮಾರ್ಗಗಳನ್ನು ಹೊಂದಿರುವ ಪ್ರಪಂಚದ ಪ್ರಮುಖ ರಾಷ್ಟ್ರಗಳೆಂದರೆ ಚೀನ (110,300 ಕಿಮೀ), ರಷ್ಯ (89,089 ಕಿಮೀ), ಬ್ರೆಜಿಲ್ (50,000 ಕಿಮೀ), ಅಮೆರಿಕ ಸ.ಸ. (41,485 ಕಿಮೀ), ಇಂಡೋನೇಷ್ಯ (21,579 ಕಿಮೀ), ಕೊಲಂಬಿಯ (18,140 ಕಿಮೀ), ವಿಯಟ್ನಾಂ (17,702 ಕಿಮೀ), ಭಾರತ (16,180 ಕಿಮೀ), ಕಾಂಗೊ : (15000 ಕಿಮೀ), ಮಯನ್ಮಾರ್ (12,800 ಕಿಮೀ), ಅರ್ಜೆಂಟೈನ (10.950 ಕಿಮೀ), ಬೊಲಿವಿಯಾ (10,000 ಕಿಮೀ), ಪೆರು (8,600 ಕಿಮೀ), ನೈಜೀರಿಯ (8575 ಕಿಮೀ), ಆಸ್ಟ್ರೇಲಿಯ (8,368 ಕಿಮೀ), ಬಾಂಗ್ಲಾದೇಶ (8,046 ಕಿಮೀ), ಮಲೇಷ್ಯ (7,296 ಕಿಮೀ), ಜರ್ಮನಿ (6,740 ಕಿಮೀ), ಫಿನ್ಲೆಂಡ್ (6,245 ಕಿಮೀ) ಮತ್ತು ಫ್ರಾನ್ಸ್ (5,625 ಕಿಮೀ).

ಯುರೋಪ್ : ಈ ಖಂಡದಲ್ಲಿ ಪ್ರಮುಖ ನದಿಗಳು ಮತ್ತು ಕಾಲುವೆಗಳು ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲಿ, ಜನಭರಿತ ನಗರಗಳ ಮೂಲಕ ಹಾದು ಹೋಗುವುದು ಒಂದು ವಿಶೇಷವಾದ ಅಂಶ. ಸರಕು ರವಾನೆ, ಆಮದು ಮತ್ತು ರಫ್ತಿಗೆ ಜಲಮಾರ್ಗಗಳು ಪೂರಕವಾಗಿವೆ. ಪಶ್ಚಿಮ ಯುರೋಪಿನ ರಾಷ್ಟ್ರಗಳಾದ ಜರ್ಮನಿ, ಬೆಲ್ಜಿಯಂ, ನೆದರ್ಲೆಂಡ್ಸ್ ಮತ್ತು ರುಮೇನಿಯಗಳು ಒಳನಾಡಿನ ಜಲಸಾರಿಗೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿವೆ. ಈ ರಾಷ್ಟ್ರಗಳಲ್ಲಿ ರಸ್ತೆ, ರೈಲು ಮತ್ತು ಜಲಸಾರಿಗೆಯ ನಡುವೆ ಪೈಪೋಟಿಗಳಿವೆ.

ಯುರೋಪಿನ ಮಧ್ಯ, ಉತ್ತರ ಮತ್ತು ಪಶ್ಚಿಮ ಭಾಗಗಳು ಅನೇಕ ನದಿಗಳನ್ನೊಳಗೊಂಡಿದೆ. ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ನೌಕಾಯಾನಕ್ಕೆ ಯೋಗ್ಯವಾದ ರೈನ್, ಎಂಸ್, ಓಡರ್ ಹರಿಯುತ್ತವೆ (ಜರ್ಮನಿ). ಸೀನ್ ಮತ್ತು ಲೋರಿ ನದಿಗಳು ಫ್ರಾನ್ಸ್ ದೇಶದಲ್ಲಿ ಹರಿಯುತ್ತವೆ.

ರೈನ್, ರ್‍ಹೋನ್ ಮತ್ತು ಡ್ಯಾನ್ಯೂಬ್ ವರ್ಷವೆಲ್ಲ ಹರಿಯುವ ನದಿಗಳು. ಇಲ್ಲಿನ ನದಿ ಬಯಲುಗಳಲ್ಲಿ ಅಧಿಕ ಜನಸಾಂದ್ರತೆ, ಕೈಗಾರಿಕೀಕರಣ, ನಗರೀಕರಣ, ಹಿತವಾದ ವಾಯುಗುಣದಿಂದಾಗಿ ಜಲಸಾರಿಗೆಯು ಪೂರಕವಾಗಿ ಅಭಿವೃದ್ಧಿಯಾಗಿದೆ. ರೈನ್ ಪ್ರಮುಖವಾದ ನದಿ, ಈ ನದಿಯು ಮಧ್ಯ ಯುರೋಪಿನ ಸ್ವಿಟ್ಜರ್‌ಲೆಂಡ್, ಜರ್ಮನಿ, ನೆದರ್‌ಲೆಂಡ್ ಮತ್ತು ಫ್ರಾನ್ಸ್ ಭಾಗಗಳಿಗೆ ಜಲಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತಿದೆ. ರ್‍ಹೋನ್ ಮತ್ತು ರೈನ್ ನದಿಗಳಿಂದ ಸು. 800 ಕಿಮೀ ಉದ್ದವಾದ ಜಲಮಾರ್ಗವನ್ನು ಕಲ್ಪಿಸಿದೆ. ಇದು ಮೆಡಿಟರೇನಿಯನ್ ಸಮುದ್ರದ ರಾಟರ್‌ಡ್ಯಾಂ ಬಂದರಿನಿಂದ ಸ್ವಿಟ್ಜರ್‌ಲೆಂಡಿನ ಬಾಸ್ಲೆವರಿಗೂ ಕಾಲುವೆ ಮಾರ್ಗವನ್ನು ಹೊಂದಿದೆ. ರೈನ್ ಪ್ರವಾಹ ರಹಿತ ನದಿ, ಇದು ರ್‍ಹೂರ್ ಕೈಗಾರಿಕಾ ಪ್ರದೇಶದ ಪ್ರಮುಖ ಜಲಮಾರ್ಗ, ಶೇ. $^{1}/_{2}$ದಷ್ಟು ಕೈಗಾರಿಕಾ ವಸ್ತುಗಳು ರೈನ್ ಮಾರ್ಗದಲ್ಲಿ ಸಾಗಿಸಲ್ಪಡುತ್ತದೆ. ಪೆಟ್ರೋಲ್ ಮತ್ತು ಅದರ ಉತ್ಪನ್ನಗಳು, ಆಹಾರ ಪದಾರ್ಥಗಳು, ಮರದ ದಿಮ್ಮಿ, ನ್ಯೂಸ್ ಪ್ರಿಂಟ್, ರಾಸಾಯನಿಕ, ಗಡಿಯಾರಗಳು, ಮರದ ತಿರುಳು ಮತ್ತು ಸಿದ್ಧ ವಸ್ತುಗಳು ಹೊರರಾಷ್ಟ್ರಗಳಿಗೆ ರಫ್ತಾಗುತ್ತವೆ. ಆಮದಾಗುವ ಪದಾರ್ಥಗಳೆಂದರೆ ಕಬ್ಬಿಣದ ಅದಿರು, ಕಲ್ಲಿದ್ದಲು, ರಾಸಾಯನಿಕಗಳು, ಗೊಬ್ಬರ, ಉಕ್ಕಿನ ಪದಾರ್ಥಗಳು ಮತ್ತು ಯಂತ್ರಗಳು.

ಡ್ಯಾನ್ಯೂಬ್, ಮಧ್ಯ ಯುರೋಪಿನ ಪ್ರಮುಖ ನದಿ, ಇದು ಎಂಟು ರಾಷ್ಟ್ರಗಳಿಗೆ ಸಂಪರ್ಕವನ್ನು ಕಲ್ಪಿಸಿದೆ. ಜರ್ಮನಿ, ಆಸ್ಟ್ರಿಯ, ಹಂಗರಿ, ಜೆಕ್, ಸ್ಲಾವಾಕೀಯ, ಯುಗೊಸ್ಲಾವಿಯ, ಬಲ್ಗೇರಿಯ, ರೊಮೇನಿಯ ಮತ್ತು ರಷ್ಯ, ಈ ನದಿಯು 2400 ಕಿಮೀ ಉದ್ದವಿದೆ. ಆದರೆ ಕೇವಲ ಶೇ. 15 ರಷ್ಟು ಸರಕನ್ನು ಮಾತ್ರ ಸಾಗಿಸಲು ಶಕ್ತವಾಗಿದೆ. ಹೆಚ್ಚಿನ ಆಮದು ರಫ್ತುಗಳು ರೊಮೋನಿಯ ಮತ್ತು ಜರ್ಮನಿಗಳ ನಡುವೆ.

ಇತರೆ ಜಲಮಾರ್ಗಗಳೆಂದರೆ, ಮ್ಯಾಂಚೆಸ್ಟರ್ ಹಡಗು ಕಾಲುವೆ. ಇದು ಮ್ಯಾಂಚೆಸ್ಟರ್‌ನಿಂದ ಲಿವರ್‌ಪೂಲ್‌ಗೆ, ಆಮ್‌ಸ್ಟರ್ ಡ್ಯಾಂ–ರ್‍ಹೈನ್ ಕಾಲುವೆ ಮತ್ತು ಗೋಟ ಕಾಲುವೆ, ಲಂಕಾಷೈರ್ ಹತ್ತಿಗಿರಣಿಗಳ ಅಭಿವೃದ್ಧಿಯಲ್ಲಿ ಮ್ಯಾಂಚೆಸ್ಟರ್ ಜಲಮಾರ್ಗವು ಪ್ರಮುಖ ಪಾತ್ರವಹಿಸಿದೆ. ಗೋಟ ಕಾಲುವೆ ಸ್ಟಾಕ್‌ಹೋಂ ಮತ್ತು ಗೋಟನ್‌ಬರ್ಗ್ ನಡುವೆ ಜಲಸಾರಿಗೆಯನ್ನು ಕಲ್ಪಿಸಿದೆ.

ಉತ್ತರ ಅಮೆರಿಕ: ಈ ಖಂಡದಲ್ಲಿ ಎರಡು ಪ್ರಮುಖ ಒಳನಾಡ ಜಲಸಾರಿಗೆ ವ್ಯವಸ್ಥೆಗಳಿವೆ. 1. ಪಂಚಮಹಾ ಸರೋವರಗಳು (ಸುಪೀರಿಯರ್, ಮಿಷಿಗನ್, ಹುರಾನ್, ಆಂಟೇರಿಯ ಮತ್ತು ಈರಿ). ಇದನ್ನು ಸೈಂಟ್ ಲಾರೆನ್ಸ್ ಮಾರ್ಗ ಎಂದು ಕರೆಯುತ್ತಾರೆ. 2. ಮಿಸಿಸಿಪಿ ಜಲಮಾರ್ಗ.

ಪಂಚಮಹಾ ಸರೋವರ – ಸೇಂಟ್ ಲಾರೆನ್ಸ್ ಮಾರ್ಗ : ಈ ಜಲಮಾರ್ಗ ಪ್ರಪಂಚದ ಪ್ರಸಿದ್ಧ ಜಲಮಾರ್ಗ. ಪಂಚಮಹಾ ಸರೋವರಗಳು 2,46,490 ಚ.ಕಿಮೀ ಜಲಭಾಗವನ್ನು ಹೊಂದಿದೆ. ಸು. 1,57,886 ಚ.ಕಿಮೀ ಜಲ ಸರೋವರ ಭಾಗವು ಅ.ಸಂ.ಸಂಸ್ಥಾನಕ್ಕೆ ಸೇರಿದೆ. ಉಳಿದ 88,604 ಚ.ಕಿಮೀ ಕೆನಡಕ್ಕೆ ಸೇರಿದೆ. ಜಲಮಾರ್ಗವನ್ನು ಎರಡೂ ದೇಶಗಳ ಸಮನ್ವಯ ಒಪ್ಪಂದವೊಂದರ ಪ್ರಕಾರ ವಿವಿಧೋದ್ದೇಶ ಯೋಜನೆಯ ಪ್ರಕಾರ ಅತ್ಯಾಧುನಿಕವಾಗಿ ಸುಧಾರಿಸಲಾಗಿದೆ. ಪಂಚಮಹಾ ಸರೋವರಗಳು, ಸೇಂಟ್ ಲಾರೆನ್ಸ್ ಕಾಲುವೆ ಮಾರ್ಗವನ್ನು ಅಭಿವೃದ್ಧಿಪಡಿಸಿದ ಅನಂತರ ಈ ಮಾರ್ಗದ ಪ್ರಾಮುಖ್ಯತೆ ಹೆಚ್ಚಾಯಿತು.

ಈ ಮಾರ್ಗ ದೊಡ್ಡ ಪ್ರಮಾಣದ ಹಡಗು ಸಂಚಾರಕ್ಕೆ ಅನುಕೂಲವಾಗಿದೆ. ಅಧಿಕ ಪ್ರಮಾಣದ ಸರಕನ್ನು ಕಡಿಮೆ ದರದಲ್ಲಿ ಸಾಗಿಸಲು ಪ್ರಯೋಜನವಾಗಿದೆ. ಕಬ್ಬಿಣ ಗಣಿಗಾರಿಕೆ ಪ್ರದೇಶಗಳಾದ ವಿಸ್ಕಾಂಸಿನ್, ಮಿಷಿಗನ್ ಮೇಲ್ದಂಡೆ, ಕ್ಯೂಬೆಕ್ ಮತ್ತು ಲ್ಯಾಬ್ರಡಾರ್‌ಗಳಿಂದ, ಸರಕು, ಕಬ್ಬಿಣ ಮತ್ತು ಉಕ್ಕಿನ ಉತ್ಪನ್ನಗಳನ್ನು ಅಲ್ಲಿಂದ ಮುಂದೆ ಡೆಟ್ರಾಯಿಟ್‌ಗೆ ರವಾನಿಸುತ್ತದೆ. ಕಲ್ಲಿದ್ದಲು ಅಪಲೇಷಿಯನ್‌ನಿಂದ ಈರಿ ಸರೋವರದ ಮೂಲಕ ಸಾಗಿಸಲ್ಪಡುತ್ತದೆ. ಗೋಧಿ, ಸಂಸ್ಕರಿಸಿದ ಆಹಾರ ಪದಾರ್ಥಗಳು ಅ.ಸಂ.ಸಂಸ್ಥಾನ ಮತ್ತು ಕೆನಡದಿಂದ ಸರೋವರ ಮಾರ್ಗವಾಗಿ ಪಶ್ಚಿಮ ಕರಾವಳಿಗೆ ರವಾನೆಯಾಗಿ ಅಲ್ಲಿಂದ ಹೊರರಾಷ್ಟ್ರಗಳಿಗೆ ರಫ್ತಾಗುತ್ತದೆ, ಸುಣ್ಣದ ಕಲ್ಲು, ಕಟ್ಟಡದ ಕಲ್ಲು, ಪೆಟ್ರೋಲ್ ಮತ್ತು ಖನಿಜಗಳು ಕೈಗಾರಿಕಾ ನಗರಗಳಿಗೆ ಸಾಗಿಸಲ್ಪಡುತ್ತವೆ.

ಮಿಸಿಸಿಪಿಯ ಉಪನದಿಗಳಾದ ಒಹಾಯೊ, ಇಲ್ಲಿನಾಯ್ಸ್, ಮಿಸ್ಸೋರಿ ಮತ್ತು ರೆಡ್‌ನದಿಗಳು ಅ.ಸಂ.ಸಂಸ್ಥಾನದ ಪ್ರಮುಖ ಒಳನಾಡಿನ ಜಲಸಾರಿಗೆಯನ್ನು ರೂಪಿಸಿವೆ. ಮಿಸಿಸಿಪಿ ಮತ್ತು ಒಹಾಯೊ ಪಂಚಮಹಾ ಸರೋವರಗಳ ಜೊತೆ ಸಂಪರ್ಕವನ್ನು ಕಲ್ಪಿಸಿವೆ. ಇದು ಸು. 4000 ಕಿಮೀ ಉದ್ದದ ಜಲಮಾರ್ಗದ ಸೌಲಭ್ಯವನ್ನು ಹೊಂದಿದೆ. ಈ ಮಾರ್ಗದಲ್ಲಿ ಸಂಸ್ಕರಿಸಿದ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು, ಕಲ್ಲಿದ್ದಲು, ಕೈಗಾರಿಕಾ ಸಿದ್ಧವಸ್ತುಗಳು ರವಾನೆಯಾಗುತ್ತವೆ.

ದಕ್ಷಿಣ ಅಮೆರಿಕ – ಒಳನಾಡಿನ ಜಲಸಾರಿಗೆಯು ಈ ಖಂಡದಲ್ಲಿ ಭೂಸಾರಿಗೆ ರಹಿತ ಭಾಗಗಳಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ. ಪರ್ವತ ಪ್ರದೇಶ ಹಾಗೂ ದಟ್ಟ ಅರಣ್ಯಗಳನ್ನು ಹೊರತುಪಡಿಸಿ ಒಳನಾಡಿನಲ್ಲಿ ನದಿ ವ್ಯವಸ್ಥೆಯನ್ನು ಹೊಂದಿದೆ. ವಿರಳ ಜನಸಾಂದ್ರತೆ ಹಾಗೂ ಕನಿಷ್ಠ ಸರಕು ಉತ್ಪಾದನೆಗಳಿಂದ ಈ ಖಂಡದಲ್ಲಿ ಒಳನಾಡಿನ ಜಲಸಾರಿಗೆ ಹೆಚ್ಚು ಅಭಿವೃದ್ಧಿ ಹೊಂದಿಲ್ಲ. ಕೆಲವು ಪ್ರಮುಖ ನದಿ ಜಾಲಗಳೆಂದರೆ ಅಮೇಜಾನ್ ಪ್ಲಾಟ–ಪರಾನ–ಪರಗ್ವೆ ಒರಿನೋಕೋ, ಮ್ಯಾಗ್ಡಲೀನಾ. ಅಮೆಜಾನ್ ಪ್ರಪಂಚದ ಅತಿ ಉದ್ದವಾದ ನದಿ ಹಾಗು ಅದರ ಮಾರ್ಗದ 6,400 ಕಿಮೀ ಅಮೆಜಾನ್ ಮತ್ತು ಪ್ಲಾಟಾ – ಪರಾನಾ – ಪರಗ್ವೆ ಜಲಮಾರ್ಗ 1,600 ಕಿಮೀ ನೌಕಾಯಾನಕ್ಕೆ ಯೋಗ್ಯವಾಗಿದೆ. ಬ್ರೆಜಿಲ್, ಬೊಲಿವಿಯ, ಪೆರು ಮತ್ತು ಕೊಲಂಬಿಯ ದೇಶಗಳು ಒಳನಾಡಿನ ಜಲಸಾರಿಗೆಗೆ ಅಮೆಜಾನ್ ನದಿಯನ್ನು ಆಶ್ರಯಿಸಿವೆ. ದಕ್ಷಿಣ ಅಮೆರಿಕ ಖಂಡದಲ್ಲಿ ಪ್ಲಾಟಾ–ಪರಾನ–ಪರಗ್ವೆ ಜಲಮಾರ್ಗ ಸದಾ ಕಾರ್ಯ ನಿರತವಾಗಿರುವಂತಹದು. ಲಾಪ್ಲಾಟ ನದಿವ್ಯವಸ್ಥೆಯು ಬ್ಯೂನಸ್ ಐರೀಸ್ ನಿಂದ ಕೊರುಂಬ–ಬ್ರೆಜಿಲ್‌ವರಿಗೆ ಜಲಮಾರ್ಗವನ್ನು ಹೊಂದಿದೆ. ಪರಗ್ವೆ ನದಿಯು ಪಶ್ಚಿಮ ಬ್ರೆಜಿಲ್ ಮತ್ತು ಪರಗ್ವೆಗಳಿಗೆ ಪ್ರಮುಖ ಜಲಸಾರಿಗೆ ಮಾರ್ಗವಾಗಿದೆ. ಈ ಮಾರ್ಗದ ಮೂಲಕ ರಬ್ಬರ್, ಆಹಾರ ಪದಾರ್ಥಗಳು, ಮರದದಿಮ್ಮಿ, ಮಾಂಸ, ಚರ್ಮ, ಕಾಫಿ, ಪೆಟ್ರೋಲ್, ಸಕ್ಕರೆ ಮತ್ತು ಸಿದ್ಧಪದಾರ್ಥಗಳು ರವಾನೆಯಾಗುತ್ತವೆ.

ಏಷ್ಯ ಖಂಡದ ಒಳನಾಡ ಜಲಸಾರಿಗೆ – ಈ ಖಂಡದಲ್ಲಿ ಜಲಸಾರಿಗೆಯ ಸೌಲಭ್ಯ ಅತ್ಯಲ್ಪ. ಚೀನದ ಯಾಂಗ್–ಟ್ಜೆ–ಸಿಕಿಯಾಂಗ್, ಪಾಕಿಸ್ತಾನದ ಸಿಂಧು ಮತ್ತು ಭಾರತದಲ್ಲಿ ಗಂಗ ಮತ್ತು ಬ್ರಹ್ಮಪುತ್ರ, ಥೈಲೆಂಡ್ ಭಾಗದಲ್ಲಿ ಮಿಕಾಂಗ್ ಮತ್ತು ಮಿನಾಮ್ – ಮಯನ್ಮಾರ್‌ನಲ್ಲಿ ಇರವಾಡಿ, ಒಳನಾಡಿನ ಜಲ ಸಾರಿಗೆಯ ಮಾರ್ಗಗಳನ್ನು ಹೊಂದಿವೆ.

ಯಾಂಗ್–ಟ್ಜೆ–ಸಿಕಿಯಾಂಗ್ ಮತ್ತು ಅದರ ಉಪನದಿಗಳು ಚೀನದ ಮುಕ್ಕಾಲು ಭಾಗದಷ್ಟು ಒಳನಾಡಿನ ಜಲಸಾರಿಗೆಯನ್ನು ಪೂರೈಸುತ್ತಿವೆ. ಯಾಂಗ್–ಟ್ಜೆ–ಸಿಕಿಯಾಂಗ್‌ನ ಪ್ರಮುಖ ಉಪನದಿಗಳು ಹಾನ್, ಹಸಿಯಾಂಗ್ ಮತ್ತು ಟಾನ್. ಈ ಮಾರ್ಗಗಳಲ್ಲಿ ಆಹಾರ ಧಾನ್ಯಗಳು, ಖನಿಜ, ಅರಣ್ಯ ಕಚ್ಚಾ ವಸ್ತುಗಳು ಮತ್ತು ಸಿದ್ಧ ಪದಾರ್ಥಗಳನ್ನು ರವಾನಿಸಲಾಗುತ್ತದೆ. ಚೀನ ದೇಶ 11,030 ಕಿಮೀ ಉದ್ದವಾದ ಜಲಮಾರ್ಗವನ್ನು ಹೊಂದಿದೆ. ಯಾಂಗ್–ಟ್ಜೆ–ಸಿಕಿಯಾಂಗ್ ಚೀನದ ಅತ್ಯಂತ ಮಹತ್ತ್ವವುಳ್ಳ ನದಿ. ಈ ನದಿಯು ಪಶ್ಚಿಮದಿಂದ ಪೂರ್ವಕ್ಕೆ ದೇಶದ ಹೃದಯ ಭಾಗ ಮಾರ್ಗವಾಗಿ ಹರಿಯುತ್ತದೆ. ಈ ನದಿ ಸು. 1,800 ಕಿಮೀ ಉದ್ದವಾದ ಒಳನಾಡಿನ ಜಲಸಾರಿಗೆಯನ್ನು ಒದಗಿಸಿದೆ.

ಏಷ್ಯ ವಾಯವ್ಯ ಭಾಗದ ಒಳನಾಡಿನ ಜಲಸಾರಿಗೆಯನ್ನು ಕಲ್ಪಿಸಿರುವ ನದಿಗಳೆಂದರೆ ಮಿಕಾಂಗ್, ಮೀನಾಂ, ಇರಾವಾಡಿ, ಗಂಗ ಮತ್ತು ಬ್ರಹ್ಮಪುತ್ರ, ನದಿ ಕಣಿವೆ ಪ್ರದೇಶಗಳಲ್ಲಿ ಅಧಿಕ ಜನಸಾಂದ್ರತೆ, ಕೈಗಾರಿಕೆಗಳ ಸ್ಥಾನೀಕರಣ, ಇತರೆ ಸಾರಿಗೆಗಳ ಕೊರತೆ ಹೆಚ್ಚಾಗಿ ಕಂಡುಬರುತ್ತದೆ. ಈ ಭಾಗದಲ್ಲಿ ಸಣ್ಣ ಪ್ರಮಾಣದಲ್ಲಿ ಜಲಸಾರಿಗೆ ಒದಗಿಸುವುದರ ಮೂಲಕ ಸಮುದ್ರ ಮತ್ತು ಒಳನಾಡಿಗೆ ಸಂಪರ್ಕ ಕಲ್ಪಿಸುವುವು. ಪ್ರಮುಖವಾಗಿ ಆಹಾರ ಪದಾರ್ಥಗಳು, ಪೆಟ್ರೋಲಿಯಂ, ಮರದ ದಿಮ್ಮಿ, ಕೈಗಾರಿಕಾ ಸಿದ್ಧ ವಸ್ತುಗಳು ರವಾನೆಯಾಗುತ್ತವೆ.

ಭಾರತದ ನದಿ ವ್ಯವಸ್ಥೆಯ ಜಾಲ ಹಲವಾರು ಪ್ರಾಕೃತಿಕ ನಿಯಮಗಳಿಗೆ ಒಳಪಟ್ಟಿದೆ. ಮಾನ್‌ಸೂನ್ ವಾಯುಗುಣ, ಋತು ಕಾಲಿಕ ವ್ಯತ್ಯಾಸ, ಸಂಚಾರಕ್ಕೆ ಅನಾನುಕೂಲವಾದ ನದಿಮಾರ್ಗಗಳು ಇತ್ಯಾದಿ.

ಜಲಸಂಚಾರಕ್ಕೆ ಅನುಕೂಲವಾದ ನದಿಗಳೆಂದರೆ ಗಂಗ, ಬಹ್ಮಪುತ್ರ, ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ತಪತಿ, ನರ್ಮದ, ಪೆನ್ನಾರ್, ಗೋದಾವರಿ, ಕಾವೇರಿ ನದಿ ಕಾಲುವೆಗಳು ಮತ್ತು ಕೇರಳದ ಪಶ್ಚಿಮ ಕರಾವಳಿ ಕಾಲುವೆಗಳು. ದೇಶದ ಒಳನಾಡಿನ ಜಲಸಾರಿಗೆಯ ಮಾರ್ಗದ ಉದ್ದ ಸು. 16,180 ಕಿಮೀ. ಇದರಲ್ಲಿ 1/5 ರಷ್ಟು ಹಡಗು ಮಾರ್ಗಕ್ಕೆ ಯೋಗ್ಯವಾಗಿದೆ (2495 ಕಿಮೀ).

ಒಳನಾಡಿನ ಜಲಸಾರಿಗೆಯಲ್ಲಿ ನದಿಕಾಲುವೆಗಳು ಪ್ರಾಮುಖ್ಯತೆಯನ್ನು ಹೊಂದಿವೆ. ತಮಿಳುನಾಡು ಮತ್ತು ಆಂಧ್ರಪ್ರದೇಶದ ಬಕ್ಕಿಂಗ್‌ಹ್ಯಾಮ್ ಕಾಲುವೆ, ಒರಿಸ್ಸದ ಡೆಲ್ಟಾಕಾಲುವೆ, ಗೋವದ ಮಾಂಡವಿ ಮತ್ತು ಝುವಾರಿ ಕಾಲುವೆಗಳು ಈ ಸಾಲಿನಲ್ಲಿ ಸೇರುತ್ತವೆ.

ಭಾರತದಲ್ಲಿ ಜಲಸಾರಿಗೆಯನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿಗಳು ಮತ್ತು ವ್ಯಾಪಕವಾದ ರೈಲು ವ್ಯವಸ್ಥೆಯಿಂದ ಜಲಸಾರಿಗೆಯನ್ನು ಕಡೆಗಣಿಸಲಾಗಿದೆ. ಬಕ್ಕಿಂಗ್‌ಹ್ಯಾಮ್ ಕಾಲುವೆಯನ್ನು ಸರಕು ಸಾಗಣಿಕೆಯ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾಯಿತು. ಆದರೆ ರೈಲ್ವೆ ಮಂಡಲಿ ಕಲ್ಲಿದ್ದಲು ಸಂಗ್ರಹಾಗಾರ, ವೇಗವಾಗಿ ಚಲಿಸುವ ರೈಲುಗಳ ಪರಿಚಯ ಹಾಗೂ ದಾಸ್ತಾನು ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸಿದ್ದ ಪರಿಣಾಮವಾಗಿ ಈ ವಲಯದಲ್ಲಿ ಜಲಸಾರಿಗೆ ಹಿಂದುಳಿಯಬೇಕಾಯಿತು. ಬಕ್ಕಿಂಗ್‌ಹ್ಯಾಮ್ ಕಾಲುವೆಯನ್ನು ತಮಿಳುನಾಡಿನ ದಕ್ಷಿಣ ಆರ್ಕಾಟ್‌ನ ಹಿನ್ನೀರು ಕಲ್ಪಿಸುತ್ತದೆ. ಇದು ಪ್ರಪಂಚದ ಕೆಲವೇ ಉದ್ದವಾದ ಜಲಸಂಚಾರ ಮಾರ್ಗಗಳಲ್ಲಿ ಒಂದು. ಇದನ್ನು 1806 ರಲ್ಲಿ ನಿರ್ಮಿಸಲಾಯಿತು. ಈ ಮೇಲೆ ವಿವರಿಸಿರುವ ಕಾರಣಗಳಿಂದ ಪ್ರಸ್ತುತ ಉಪಯೋಗದಲ್ಲಿಲ್ಲ. ಈ ಕಾಲುವೆಯು 425 ಕಿಮೀ ಉದ್ದವಾಗಿದೆ. 256 ಕಿಮೀಗಳು ಆಂಧ್ರ ಪ್ರದೇಶದಲ್ಲಿಯೂ ಮತ್ತು 164 ಕಿಮೀ ತಮಿಳುನಾಡಿನಲ್ಲಿಯೂ ಹಂಚಿಕೆಯಾಗಿದೆ.

ಕೇರಳದಲ್ಲಿ ಸು. 34 ಸಣ್ಣ ಪ್ರಮಾಣದ ನದಿಗಳು ಹರಿಯುತ್ತವೆ. ಅವು ದೇಶಿಯ ದೋಣಿ ಸಂಚಾರಕ್ಕೆ ಯೋಗ್ಯವಾಗಿವೆ. ಕೃಷಿ, ಕೈಗಾರಿಕೆ ಮತ್ತು ಕಚ್ಚಾ ಪದಾರ್ಥಗಳನ್ನು ಹಾಗೂ ಪ್ರಯಾಣಿಕರನ್ನು ಸಾಗಿಸಲು ಅನುಕೂಲವಾಗಿದೆ.

ಕರ್ನಾಟಕದಲ್ಲಿ ಮಂಗಳೂರು ಮತ್ತು ಕಾರವಾರಗಳ ನಡುವೆ ಕೆಲವು ನದಿಗಳಾದ ಕಾಳಿ, ಗಂಗಾವತಿ, ಅಘನಾಶಿನಿ, ಕೊಲ್ಲೂರು, ಸೀತಾ, ಗುರ್ಪುರ ನೇತ್ರಾವತಿಗಳು ಜಲಸಾರಿಗೆಗೆ ಬಳಕೆಯಾಗುತ್ತಿವೆ.

ಒಳನಾಡಿನ ಜಲಸಾರಿಗೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಗಂಗ, ಬಹ್ಮಪುತ್ರ ಮತ್ತು ಉಪನದಿಗಳ ಸಮಿತಿಯನ್ನು 1952 ರಲ್ಲಿ ಸ್ಥಾಪಿಸಲಾಯಿತು. ಈ ಸಮಿತಿಯು 1965 ರಲ್ಲಿ ಒಳನಾಡ ಜಲಸಾರಿಗೆ ಮಂಡಲಿಯ ಜೊತೆ ವಿಲೀನವಾಯಿತು. 1986ರಲ್ಲಿ ಒಳನಾಡಿನ ಜಲಸಾರಿಗೆ ಸಂಸ್ಥೆ ಎಂದು ಸ್ಥಾಪನೆಯಾಯಿತು. ಈ ಸಂಸ್ಥೆಯು ಕೇಂದ್ರ ಸರ್ಕಾರದ ಅಧೀನಕ್ಕೊಳಪಟ್ಟಿರುತ್ತದೆ.

ದೇಶದ ಒಳನಾಡಿನ ಜಲಸಾರಿಗೆಯು ಹಲವು ಹತ್ತು ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದೆ. ನದಿಗಳ ನೀರಿನ ಮಟ್ಟವು ಋತುಕಾಲಿಕವಾಗಿ ವ್ಯತ್ಯಾಸಗೊಳ್ಳುವುದು. ಅಂತರ ರಾಜ್ಯ ನದಿನೀರಿನ ಹಂಚಿಕೆಯ ವಿವಾದಗಳು, ನದಿಕಾಲುವೆಗಳ ಬಿರುಕು ಮತ್ತು ಹೂಳಿನ ಸಮಸ್ಯೆಗಳು ಹಾಗೂ ಉಸ್ತುವಾರಿ ಸಮಸ್ಯೆಗಳು ಪ್ರಮುಖವಾಗಿವೆ.

ಆಫ್ರಿಕ ಖಂಡವು ಉತ್ತಮ ನದಿಜಾಲ ವ್ಯವಸ್ಥೆಯನ್ನು ಹೊಂದಿದೆ. ಆದರೆ ಅವುಗಳ ಉಪಯೋಗವು ತೀರ ಕಡಿಮೆ. ಪ್ರಮುಖ ನದಿಗಳು ಕಾಂಗೋ ನೈಲ್, ನೈಜರ್, ಜ಼ಾಂಬೆಸಿ, ಸೆನೆಗಲ್, ಆರೆಂಜ್ ಹಾಗೂ ಲಿಂಪೋಪೋ ನದಿಗಳು. ಈ ನದಿಗಳು ದಟ್ಟವಾದ ಅರಣ್ಯಗಳು, ದುರ್ಗಮ ಬೆಟ್ಟಗುಡ್ಡ ಕಣಿವೆಗಳು ಮತ್ತು ಜನವಿರಳ ವಲಯಗಳಲ್ಲಿ ಹರಿಯುತ್ತವೆ. ಆದುದರಿಂದ ಜಲ ಸಾರಿಗೆಗೆ ಯೋಗ್ಯವಾಗಿಲ್ಲ. ನೈಲ್ ನದಿ ಒಳನಾಡಿನ ಸಂಚಾರಕ್ಕೆ ಯೋಗ್ಯವಾಗಿದೆ. ಈ ನದಿಯು ಮೆಡಿಟರೇನಿಯನ್ ಸಮುದ್ರಕ್ಕೆ ಸಂಪರ್ಕವನ್ನು ಕಲ್ಪಿಸಿದೆ, ಹೀಗಾಗಿ ಸೂಯಜ್ ಕಾಲುವೆಗೆ ನೈಲ್ ನದಿ ಸಂಪರ್ಕ ಹೆಚ್ಚಾಗಿದೆ ಈ ಮಾರ್ಗದಲ್ಲಿ ಕೈಗಾರಿಕಾ ಸಿದ್ಧ ವಸ್ತುಗಳು, ಪೆಟ್ರೋಲ್, ಪೆಟ್ರೋಲಿಯಂ ಉತ್ಪನ್ನಗಳು, ಹತ್ತಿ, ಚರ್ಮ, ಉಣ್ಣೆ, ಖರ್ಜೂರ ಮೊದಲಾದ ಪದಾರ್ಥಗಳು ಸಾಗಿಸಲ್ಪಡುತ್ತದೆ.

ರಷ್ಯ–ದೇಶವು ಸು. 4 ಲಕ್ಷ ಕಿಮೀ.ಗಳಷ್ಟು ಒಳನಾಡಿನ ಜಲಸಾರಿಗೆಯನ್ನು ಹೊಂದಿದೆ. ಆದರೆ ಇದರಲ್ಲಿ ನಾಲ್ಕನೆಯ ಒಂದು ಭಾಗವನ್ನು ಮಾತ್ರ ಬಳಸಿಕೊಳ್ಳಲಾಗಿದೆ. ರಷ್ಯದ ಯುರೋಪ್ ಮತ್ತು ಏಷ್ಯಭಾಗದ ನದಿಗಳೆಂದರೆ, ಓಲ್ಗಾ, ಡಾನ್, ನೀಪರ್ ಡ್ವಿನಾ ಮತ್ತು ನಿವಾ ಇವು ಯುರೋಪಿನ ಭಾಗಗಳಾಗಿವೆ. ಏನಿಸಿ ಮತ್ತು ಲಿನಾ ಏಷ್ಯ ಭಾಗದ ನದಿಗಳು. ಈ ನದಿಗಳು ಆರ್ಕ್‌ಟಿಕ್, ಕ್ಯಾಸ್ಪಿಯನ್, ಕಪ್ಪು ಮತ್ತು ಬಾಲ್ಟಿಕ್ ಸಮುದ್ರಗಳನ್ನು ಸೇರುತ್ತವೆ. ರಷ್ಯದ ಶೇ. 78 ರಷ್ಟು ಸರಕು ಸಾಗಾಣಿಕೆ ಭೂ ಸಾರಿಗೆಯನ್ನು ಅವಲಂಬಿಸಿದೆ. ಒಳನಾಡಿನ ಜಲಸಾರಿಗೆಯು ರಷ್ಯದ ಜ಼ಾರ್ ಕ್ರಾಂತಿಗೆ ಮೊದಲು ಪ್ರಾಮುಖ್ಯತೆಯನ್ನು ಪಡೆದಿತ್ತು. ಆನಂತರ ಇದರ ಪ್ರಾಮುಖ್ಯತೆಯು ಇಳಿಮುಖವಾಯಿತು. 1913 ರಲ್ಲಿ ಜಲಸಾರಿಗೆಯು ಕೇವಲ ಶೇ. 25 ರಷ್ಟು ಸರಕನ್ನು ಸಾಗಿಸುವಲ್ಲಿ ಸಫಲವಾಗಿತ್ತು. 1953 ರಲ್ಲಿ ಓಲ್ಗಾ–ಡಾನ್ ಕಾಲುವೆಯನ್ನು ಪೂರ್ಣಗೊಳಿಸಲಾಯಿತು. ಈ ಕಾಲುವೆಯು ಓಲ್ಗಾ ಮತ್ತು ಕಪ್ಪುಸಮುದ್ರಕ್ಕೆ ಸಂಪರ್ಕವನ್ನು ಕಲ್ಪಿಸಿದೆ. ಓಲ್ಗಾ –ಯೋಜನೆಯಿಂದ ಹರಿದು ಬರುವ ಹೆಚ್ಚಿನ ಪ್ರಮಾಣದ ನೀರು ಮಾಸ್ಕೊ ಹತ್ತಿರವಿರುವ ಮಾಸ್ಕೊವಾ – ಓಲ್ಗಾ ಕಾಲುವೆಗೆ ಸರಬರಾಜಾಗುತ್ತದೆ. ಓಲ್ಗಾ ನದಿಯು ಯೂರಲ್ ಪರ್ವತಗಳ ಪೂರ್ವಕ್ಕೆ ಹರಿಯುತ್ತದೆ. ಇದರ ಉಪನದಿಗಳೂ ಸೇರಿ ಶೇ. 50 ರಷ್ಟು ಸರಕನ್ನು ಈ ಮಾರ್ಗದಲ್ಲಿ ರವಾನಿಸಲಾಗುತ್ತದೆ. ಈ ರಾಷ್ಟ್ರದಲ್ಲಿ ಒಳನಾಡಿನ ಜಲಸಾರಿಗೆಗೆ ಯೋಗ್ಯವಾದ ಕಾಲುವೆಗಳೆಂದರೆ, ಮಾಸ್ಕೊ–ಓಲ್ಗಾ, ಬಾಲ್ಟಿಕ್–ವೈಟ್‌ಸೀ, ಬಾಲ್ಟಿಕ್–ಓಲ್ಗಾ ಕಾಲುವೆಗಳು. ಈ ಮಾರ್ಗದಲ್ಲಿ ಮರದ ದಿಮ್ಮಿ, ಮರದ ತಿರುಳು, ಆಹಾರ ಪದಾರ್ಥಗಳು ಮೀನು, ಕಚ್ಚಾ ಹತ್ತಿ, ಕಲ್ಲಿದ್ದಲು, ಕಬ್ಬಿಣದ ಅದಿರು, ಖನಿಜಗಳು, ಕಟ್ಟಡ ಸಾಮಗ್ರಿ, ಉಕ್ಕಿನ ಪದಾರ್ಥಗಳು ಪೆಟ್ರೋಲ್ ಇತ್ಯಾದಿಗಳು ರವಾನೆಯಾಗುತ್ತವೆ.

ಆಸ್ಟ್ರೇಲಿಯ– ಈ ಖಂಡದಲ್ಲಿ ಹರಿಯುವ ಪ್ರಮುಖ ನದಿಗಳೆಂದರೆ ಮರ್ರೆ ಮತ್ತು ಡಾರ್ಲಿಂಗ್ ಈ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುವವು, ಬೇಸಗೆಯಲ್ಲಿ ನೀರಿನ ಹರಿವು ಕಡಿಮೆಯಾಗುತ್ತದೆ. ಈ ಎರಡು ನದಿಗಳನ್ನು ಹೊರತು ಪಡಿಸಿ ಇನ್ನುಳಿದಂತೆ ಯಾವುದೇ ಜಲಸಂಚಾರಕ್ಕೆ ಯೋಗ್ಯವಾದ ನದಿಗಳು ಈ ಖಂಡದಲ್ಲಿ ಕಂಡುಬರುವುದಿಲ್ಲ. ಆಸ್ಟ್ರೇಲಿಯ ಖಂಡ ಸು. 8368 ಕಿಮೀ ಉದ್ದವಾದ ಜಲಸಂಚಾರ ಮಾರ್ಗಗಳನ್ನು ಹೊಂದಿದೆ.

(ವಿ.ಎಸ್.ಎ.)

# ಓ

**ಓಕ್ಲಹೋಮ:** ಅಮೆರಿಕ ಸಂಯುಕ್ತಸಂಸ್ಥಾನದ ನೈಋತ್ಯ ಭಾಗದಲ್ಲಿರುವ ಒಂದು ರಾಜ್ಯ. ಪೂರ್ವದಲ್ಲಿ ಮಿಸ್ಸೂರಿ ಮತ್ತು ಅರ್ಕನ್ಸಾಸ್, ದಕ್ಷಿಣದಲ್ಲಿ ಟೆಕ್ಸಸ್, ಪಶ್ಚಿಮದಲ್ಲಿ ಟೆಕ್ಸಸ್ ಮತ್ತು ನ್ಯೂ ಮೆಕ್ಸಿಕೊ ಮತ್ತು ಉತ್ತರದಲ್ಲಿ ಕ್ಯಾನ್ಸಸ್ ಮತ್ತು ಕಾಲರಾಡೋ ರಾಜ್ಯಗಳು ಸುತ್ತುವರಿದಿವೆ. ವೈಶಾಲ್ಯದಲ್ಲಿ ಇದು ಸಂಯುಕ್ತಸಂಸ್ಥಾನದ ರಾಜ್ಯಗಳಲ್ಲಿ 18ನೆಯದು. ವಿಸ್ತೀರ್ಣ 1,81,049 ಚ.ಕಿಮೀ. ಜನಸಂಖ್ಯೆ 34,50,654 (2000). ರಾಜಧಾನಿ ಓಕ್ಲಹೋಮ ಜನಸಂಖ್ಯೆ: 5,06,132 (2000).

ಈ ಪ್ರದೇಶದ ಇಂಡಿಯನ್ನರ ಭಾಷೆಯಲ್ಲಿ ಓಕ್ಲಹೋಮ ಎಂದರೆ ಕೆಂಪುಜನ. ಪ್ರಥಮವಾಗಿ ಈ ಹೆಸರು ಇಂಡಿಯನ್ನರು ವಾಸವಾಗಿದ್ದ ಭಾಗಕ್ಕೆ ಅನ್ವಯವಾಯಿತು (1866).

ಮೇಲ್ಮೈ ಲಕ್ಷಣ : ಆಗ್ನೇಯ ದಿಕ್ಕಿನ ಕಡೆಗೆ ಇಳಿಜಾರಾದ ಈ ಪ್ರದೇಶದ ವಾಯವ್ಯಮೂಲೆ ಸಮುದ್ರಮಟ್ಟದಿಂದ 1515 ಮೀ ಎತ್ತರವಾಗಿದ್ದರೆ, ರೆಡ್ ನದಿಯ ಪ್ರದೇಶದಲ್ಲಿ ಕೇವಲ 90 ಮೀ ಎತ್ತರವಿದೆ. ಪಶ್ಚಿಮ ಭಾಗಗಳಲ್ಲಿ ಮರಗಿಡಗಳಿಲ್ಲದ ಮೈದಾನಗಳಿದ್ದರೆ, ಪೂರ್ವಭಾಗದಲ್ಲಿ ಏರುತಗ್ಗುಗಳಿಂದಲೂ ದಟ್ಟವಾದ ಕಾಡುಗಳಿಂದಲೂ ಕೂಡಿರುವ ಪರ್ವತಗಳಿವೆ. ಪೂರ್ವ ದಕ್ಷಿಣ ಭಾಗಗಳಲ್ಲಿ ನಾಲ್ಕು ಪ್ರಮುಖ ಪರ್ವತಸ್ತೋಮಗಳುಂಟು. ಪಶ್ಚಿಮಕ್ಕೆ ಸಾಗಿದಂತೆ ಓಜ಼ಾರ್ಕ್ ಪರ್ವತದ ಎತ್ತರ ಕ್ರಮೇಣ ಕಡಿಮೆಯಾಗುತ್ತದೆ. ಆಗ್ನೇಯ ಭಾಗದಲ್ಲಿರುವುದು ವಾಷಿಟಾ ಪರ್ವತ. ದಕ್ಷಿಣ ಮಧ್ಯಪ್ರದೇಶದಲ್ಲಿ ಆರ್ಬಕಲ್ ಪರ್ವತಶ್ರೇಣಿಯೂ ಕೆಂಪು ಮತ್ತು ವಾಷಿಟಾ ನದಿಕಣಿವೆಗಳ ಮಧ್ಯಭಾಗದಲ್ಲಿ ವಿಂಟಾ ಪರ್ವತಗಳೂ ಇವೆ. ಪಶ್ಚಿಮದ ಮೈದಾನಗಳಲ್ಲಿ ಜಿಪ್ಸಮ್ ನಿಕ್ಷೇಪಗಳು ಹೇರಳ. ವಾಯವ್ಯಭಾಗದಲ್ಲಿ ಪ್ರಮುಖವಾಗಿರುವ ಚೌಳುಮಣ್ಣಿನ ಮೈದಾನಗಳು ಸಮತಲ ಪ್ರದೇಶಗಳು. ಒಂದೊಂದೂ 3 ರಿಂದ 5 ಕಿಮೀ ಅಗಲವಾಗಿಯೂ 13 ಕಿಮೀ ಉದ್ದವಾಗಿಯೂ ಇವೆ.

ಇಲ್ಲಿನ ಪ್ರಮುಖ ನದಿಗಳು ವಾಯವ್ಯದಿಂದ ಆಗ್ನೇಯಕ್ಕೆ ಹರಿಯುತ್ತವೆ. ಅರ್ಕನ್ಸಾಸ್ ಮುಖ್ಯ ನದಿ. ಇದು ಉತ್ತರದಲ್ಲಿ ರಾಜ್ಯವನ್ನು ಪ್ರವೇಶಿಸಿ ಪೂರ್ವದ ಎಲ್ಲೆಯ ಮಧ್ಯಭಾಗದಲ್ಲಿ ರಾಜ್ಯವನ್ನು ದಾಟಿ ಅರ್ಕನ್ಸಾಸ್ ರಾಜ್ಯದಲ್ಲಿ ಮುಂದುವರಿಯುತ್ತದೆ. ಬಹಳಮಟ್ಟಿಗೆ ಈ ರಾಜ್ಯದ ದಕ್ಷಿಣದ ಅಂಚಿನಲ್ಲೇ ಹರಿಯುವುದು ರೆಡ್ ನದಿ. ನಾರ್ತ್ ಫೋರ್ಕ್, ವಾಷಿಟಾ, ಬ್ಲ್ಯೂ, ಬಾಗಿ, ಕಿಯಾಮಿಚಿ ಇವು ರೆಡ್ ನದಿಯ ಉಪನದಿಗಳು. ಆಗ್ನೇಯ ಭಾಗದಲ್ಲಿ ಲಿಟಲ್ ಇನ್ನೊಂದು ಮುಖ್ಯನದಿ. ಮೌಂಟನ್ ಫೋರ್ಕ್ ಇದರ ಒಂದು ಮುಖ್ಯ ಉಪನದಿ. ಲಿಟಲ್ ನದಿ ಓಕ್ಲಹೋಮದ ಗಡಿ ದಾಟಿ ಹರಿದು, ಅರ್ಕನ್ಸಾಸ್ ರಾಜ್ಯದಲ್ಲಿ ರೆಡ್ ನದಿಯಲ್ಲಿ ಸಂಗಮಿಸುತ್ತದೆ.

ವಾಯುಗುಣ: ಇಲ್ಲಿಯದು ಖಂಡಾಂತರ ವಾಯುಗುಣ. ಉಷ್ಣತೆ ಮತ್ತು ತೇವಗುಣಗಳಲ್ಲಿ ಬಹಳ ತಾರತಮ್ಯಗಳುಂಟು. ಪಶ್ಚಿಮ ಮತ್ತು ಮಧ್ಯಭಾಗಗಳು ಸಾಮಾನ್ಯವಾಗಿ ಪೂರ್ವಭಾಗಕ್ಕಿಂತ ಹೆಚ್ಚು ತಂಪು, ಶುಷ್ಕ. ವಾಯವ್ಯದಲ್ಲಿ ವರ್ಷದ ಸರಾಸರಿ ದೈನಿಕ ಉಷ್ಣತೆ $13^0$ ಸೆಂ. ವಾರ್ಷಿಕ ಸರಾಸರಿ ಮಳೆ 30 ಸೆಂಮೀ. ಆಗ್ನೇಯದಲ್ಲಿ ಮಳೆ 85 ಸೆಂಮೀ. ರಾಜ್ಯದ ಮಧ್ಯದಲ್ಲಿರುವ ಓಕ್ಲಹೋಮ ನಗರದಲ್ಲಿ ವರ್ಷದ ಸರಾಸರಿ ಮಳೆ 60 ಸೆಂಮೀ.

ಸಸ್ಯ ಮತ್ತು ಪ್ರಾಣಿವರ್ಗ : ಓಕ್ಲಹೋಮದ ಪೂರ್ವ ಭಾಗವನ್ನು ಬಹುತೇಕ ಕಾಡು ಆವರಿಸಿತ್ತು, ಅಲ್ಲಲ್ಲಿ ಹುಲ್ಲುಗಾವಲುಗಳಿದ್ದುವು. ಪೈನ್, ಜ್ಯೂನಿಫರ್, ಶಾಲ್ಮಲೀ, ಓಕ್, ವಿಲ್ಲೊ ಮುಂತಾದ ವೃಕ್ಷಜಾತಿಗಳು ಪ್ರಮುಖ. ಮಧ್ಯಭಾಗದಲ್ಲಿ ನದಿಗಳ ಆಚೀಚೆ ದಂಡೆಗಳಲ್ಲಿ ಮಾತ್ರ ಮರಗಳು ಬೆಳೆದಿವೆ. ಪಶ್ಚಿಮಭಾಗದಲ್ಲಿ ತೇವ ಇನ್ನೂ ಕಡಿಮೆ. ಅಲ್ಲಿ ಕೆಲವು ಕುಬ್ಜ ವೃಕ್ಷಗಳು ಮಾತ್ರ ಬೆಳೆಯುತ್ತವೆ. ಪ್ಲಂ, ನಳ್ಳಿಸೇಬು, ಚೆರಿ, ಬ್ಲ್ಯಾಕ್ ಬೆರಿ, ದ್ರಾಕ್ಷಿ, ಸ್ಟ್ರಾಬೆರಿ ಮುಂತಾದ ಫಲಗಳು ಈ ರಾಜ್ಯದಲ್ಲಿ ಬೆಳೆಯುತ್ತವೆ. ವಿಚಿಟಾ ಕಾಡುಗಳಲ್ಲಿ ವನ್ಯಪ್ರಾಣಿಗಳ ನೆಲೆಯನ್ನು ಸರ್ಕಾರ ರಕ್ಷಿಸುತ್ತಿದೆ. ಜಿಂಕೆ, ತೋಳ, ಚಿರತೆ, ಕರಡಿ, ಮಿಂಕ್, ಒಪಾಸಂ, ಮೊಲ, ಅಳಿಲು, ಪಾರಿವಾಳ, ಬಾತುಕೋಳಿ – ಇವು ಕಾಡುಗಳಲ್ಲಿ ಹೇರಳ. ಆದಿಕಾಲದಲ್ಲಿ ಕಾಡೆಮ್ಮೆಗಳು ಹೆಚ್ಚಾಗಿದ್ದುವು. ಸ್ವಚ್ಛಂದ ಮೃಗಬೇಟೆಯ ವಿಹಾರದ ಹಾವಳಿಯಿಂದ ಇವು ಈಗ ಕಡಿಮೆಯಾಗಿವೆ. ಅನೇಕ ಬಗೆಯ ಪಕ್ಷಿಗಳು ಇಲ್ಲಿವೆ. ಋತುಮಾನಕ್ಕೆ ಅನುಗುಣವಾಗಿ ಇವು ವಲಸೆ ಹೋಗುತ್ತವೆ.

ಜನಸಂಖ್ಯೆ: ಬಿಳಿಯರು ಇಲ್ಲಿಗೆ ಬಂದಾಗ ಈ ಪ್ರದೇಶ ಅಮೆರಿಕನ್‌ಇಂಡಿಯನ್ನರ ಆವಾಸಸ್ಥಾನವಾಗಿತ್ತು. ಅಮೆರಿಕ ಸಂಯುಕ್ತಸಂಸ್ಥಾನ 1820ರ ಅನಂತರ ಇತರ ಗಿರಿಜನರನ್ನು ಈ ಪ್ರದೇಶದಲ್ಲಿ ನೆಲೆಸಲು ಪ್ರೇರೇಪಿಸಿತು. ಈ ವಲಸೆಗಾರರು ತಮ್ಮ ಸರ್ಕಾರ, ಶಾಲಾಪದ್ಧತಿ ಮತ್ತು ಇತರ ಪದ್ಧತಿಗಳನ್ನು ಇಲ್ಲಿ ಸ್ಥಾಪಿಸಿದರು. ಅನಂತರವೂ ಕೇಂದ್ರ ಸರ್ಕಾರದ ಉತ್ತೇಜನದಿಂದ ಇತರ ಜನರೂ ವಲಸೆ ಬಂದರು. 20ನೆಯ ಶತಮಾನದ ಮಧ್ಯಭಾಗದ ವೇಳೆಗೆ ಸಂಯುಕ್ತ ಸಂಸ್ಥಾನದ ಇಂಡಿಯನ್ನರಲ್ಲಿ 1/3 ಭಾಗದಷ್ಟು ಜನ ಇಲ್ಲಿ ವಾಸಿಸುತ್ತಿದ್ದರು. ಕ್ರಮೇಣ ಅಂತರ್ಜನಾಂಗ ವಿವಾಹಗಳು ರೂಢಿಗೆ ಬಂದು ಸಮುದಾಯ ಬೆರಕೆಯಾಯಿತು. 1889ರಿಂದ 1910ರವರೆಗೆ ವಿಭಿನ್ನ ಐರೋಪ್ಯ ರಾಷ್ಟ್ರೀಯ ಮೂಲಗಳ ಜನ ಇಲ್ಲಿಗೆ ಬಂದು ನೆಲೆಸಿದರು. ಇದರಿಂದ ರಾಜ್ಯದ ಜನಸಂಖ್ಯೆ ಶೀಘ್ರಗತಿಯಲ್ಲಿ ಬೆಳೆಯಲಾರಂಭಿಸಿತು. 1907ರಲ್ಲಿ 14,14,177 ಇದ್ದ ಜನಸಂಖ್ಯೆ 1950ರಲ್ಲಿ ಇದು 22,33,351ಕ್ಕೆ ಏರಿತು. ಎರಡನೆಯ ಮಹಾಯುದ್ಧದ ಅನಂತರ ಕಪ್ಪುಜನರ ಸಂಖ್ಯೆ ಬೆಳೆದಿದೆ. ಅಂತರ್ಯುದ್ಧಕ್ಕೆ ಮುನ್ನ ಗುಲಾಮರಾಗಿದ್ದು ಅನಂತರ ವಿಮೋಚನೆ ಪಡೆದ ನೀಗ್ರೊ ಜನರ ಸಂತತಿಯವರು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಅರ್ಥವ್ಯವಸ್ಥೆ : 1889ರಲ್ಲಿ ಬಿಳಿಯರ ಪ್ರವೇಶವಾಗುವುದಕ್ಕೆ ಮೊದಲು ಪಶುಪಾಲನೆ ಈ ಪ್ರದೇಶದ ಮುಖ್ಯ ಕಸಬಾಗಿತ್ತು. ಅನಂತರ ವ್ಯವಸಾಯ ಪ್ರಧಾನವಾಗಿ ಬೆಳೆಯಿತು. ಸಾಗುವಳಿ ಭೂಮಿಯ 2/3 ಭಾಗದಲ್ಲಿ ಮಾಲೀಕರೇ ಸ್ವಂತ ಬೇಸಾಯ ನಡೆಸುತ್ತಿದ್ದರು. 1960ರ ಸುಮಾರಿನಲ್ಲಿ ವ್ಯವಸಾಯ ಕಾರ್ಯಗಳಲ್ಲಿ ಯಂತ್ರದ ಬಳಕೆ ಹೆಚ್ಚಿದೆ. ಇದರಿಂದ ಪ್ರಗತಿಯ ವೇಗ ಅಧಿಕವಾಗಿದೆ. ಭೂಸಾರ ರಕ್ಷಣೆ, ನೀರಾವರಿ ಪೂರೈಕೆ, ಪ್ರವಾಹಗಳ ಹಾವಳಿಯ ತಡೆ ಮುಂತಾದ ಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಲಾಗಿದೆ.

ವ್ಯವಸಾಯೋತ್ಪನ್ನಗಳಲ್ಲಿ ಅಗ್ರಸ್ಥಾನ ಗೋದಿಯದು. ಹತ್ತಿಯೂ ಮುಖ್ಯ. ಓಟ್ಸ್, ಬಟಾಣಿ, ಧಾನ್ಯಗಳು, ಬಗೆ ಬಗೆಯ ಹಣ್ಣುಗಳು ಇತರ ಮುಖ್ಯ ಬೆಳೆಗಳು. ದನದ ಮಾಂಸದ ಕೈಗಾರಿಕೆ ಬಹಳ ಲಾಭದಾಯಕ. ಮಾಂಸಕ್ಕಾಗಿ ಸು. 40,00,000 ದನಗಳನ್ನು ಸಾಕಲಾಗುತ್ತಿದೆ. ಹಂದಿ, ಕುರಿ, ಕುದುರೆ ಮತ್ತು ಹೇಸರಕತ್ತೆಗಳು ಇತರ ಸಾಕುಪ್ರಾಣಿಗಳು. ಮರದ ಉತ್ಪನ್ನ ಕೈಗಾರಿಕೆ ಇಲ್ಲಿ ಬೆಳೆದಿದೆ. ವಾರ್ಷಿಕ ಮೌಲ್ಯ ಸು. 80,00,000 ಡಾಲರು.

ತೈಲೋತ್ಪಾದನೆಯೂ ಒಂದು ಮುಖ್ಯ ಉದ್ಯೋಗ. ಇದರ ವಾರ್ಷಿಕ ಉತ್ಪನ್ನದ ಮೌಲ್ಯ 70,00,00,000 ಡಾಲರು. ಸಂಯುಕ್ತಸಂಸ್ಥಾನದ ತೈಲೋತ್ಪಾದನೆಯಲ್ಲಿ ಈ ರಾಜ್ಯದ್ದು ತೃತೀಯ ಸ್ಥಾನ. ತವರ, ಸೀಸ, ಲವಣ, ಡಾಲೊಮೈಟ್, ಗ್ರಾನೈಟ್, ಮರಳು ಮತ್ತು ಜಲ್ಲಿಕಲ್ಲು, ಸುಣ್ಣಕಲ್ಲು, ವಿವಿಧ ರೀತಿಯ ಜೇಡಿಮಣ್ಣಗಳು, ಜಿಪ್ಸಮ್, ಆಸ್ಫಾಲ್ಟ್, ಸಿಲಿಕ ಮುಂತಾದ ಖನಿಜಗಳು ರಾಜ್ಯದಲ್ಲಿ ದೊರಕುತ್ತವೆ. ಹೀಲಿಯಂ ಕೂಡ ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತಿದ್ದು, ಸಂಯುಕ್ತಸಂಸ್ಥಾನದಲ್ಲಿ ಎರಡನೆಯ ಹೀಲಿಯಂ ಕಾರ್ಖಾನೆ ಕೀಯೆಸ್‌ನಲ್ಲಿ ಸ್ಥಾಪಿತವಾಯಿತು (1959).

ವ್ಯವಸಾಯ ಮತ್ತು ಖನಿಜ ಸಂಪತ್ತುಗಳ ಮೇಲೆ ಆಧಾರಿತವಾಗಿರುವ ಅನೇಕ ಕಾರ್ಖಾನೆಗಳು ರಾಜ್ಯದಲ್ಲಿವೆ. ಮಾಂಸಾಹಾರ ತಯಾರಿಕೆ, ಶೇಖರಣೆ, ಧಾನ್ಯಗಳಿಂದ ಹಿಟ್ಟು ತಯಾರಿಕೆ, ದನಗಳ ಆಹಾರ ತಯಾರಿಕೆ, ಬಟ್ಟೆ ತಯಾರಿಕೆ ಮತ್ತು ಗಾಜಿನ ತಯಾರಿಕೆ ಮುಖ್ಯವಾದವು

ಓಕ್ಲಹೋಮ ನಗರ ಇಲ್ಲಿಯ ರಾಜಧಾನಿ. ಇತರ ಮುಖ್ಯ ನಗರಗಳು ಮತ್ತು ಅವುಗಳ ಜನಸಂಖ್ಯೆಗಳನ್ನು 2000ರಲ್ಲಿದ್ದಂತೆ ಆವರಣಗಳೊಳಗೆ ನೀಡಲಾಗಿದೆ: ಟಲ್ಸ (3,82,872); ಇದು ತೈಲಶುದ್ಧೀಕರಣ ಕೇಂದ್ರ, ಈನಿಡ್ (46,436) ತೈಲಶುದ್ಧೀಕರಣ ಮತ್ತು ಆಹಾರ ತಯಾರಿಕೆಗೆ ಪ್ರಸಿದ್ಧ ಲಾಟನ್ (92,757); ಪಶುಪಾಲನೆ, ಗೋದಿ ಮತ್ತು ಹತ್ತಿ ಬೆಳೆಗಳ ಕೇಂದ್ರ ಮಸ್ಕೋಗಿಯಲ್ಲಿ (38,059); ಅಮೆರಿಕನ್ ಇಂಡಿಯನರು ಹೆಚ್ಚಾಗಿದ್ದಾರೆ. ಓಕ್ಲಹೋಮ ವಿಶ್ವವಿದ್ಯಾಲಯ ಪೀಠವಿರುವುದು ನಾರ್ಮನಿನಲ್ಲಿ (1,02,827). (ಬಿ.ಕೆ.ಜಿ.;ಎನ್.ಎ.)

**ಓಮಾನ್** : ಮಧ್ಯ ಪ್ರಾಚ್ಯದ ಸೌದಿ ಅರೇಬಿಯ ಪರ್ಯಾಯ ದ್ವೀಪಕ್ಕೆ ಪೂರ್ವ ಮತ್ತು ಆಗ್ನೇಯ ಭಾಗದಲ್ಲಿನ ಪ್ರದೇಶ (ಸುಲ್ತಾನೇಟ್ ಆಫ್ ಓಮಾನ್). ಪಶ್ಚಿಮ ಮತ್ತು ವಾಯವ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್, ಈಶಾನ್ಯದಲ್ಲಿ ಓಮಾನ್‌ಕೊಲ್ಲಿಯನ್ನು ಒಳಗೊಂಡಿದೆ. ಒಂದು ಕೇಂದ್ರಾಡಳಿತ ಪ್ರದೇಶವಾಗಿದೆ. $22^0$–$23^0$ ಉ.ಅ. ಹಾಗೂ $58^0$–$59^0$ ಪೂ.ರೇ. ಗಳ ನಡುವೆ ಹಬ್ಬಿದೆ. ಇದರ ಒಟ್ಟು ವಿಸ್ತೀರ್ಣ 3,00,000 ಚ.ಕಿಮೀ. 1600 ಕಿಮೀ ಉದ್ದದ ತೀರ ಪ್ರದೇಶವನ್ನು ಒಳಗೊಂಡಿದೆ. ಓಮಾನ್ ಕೊಲ್ಲಿ ಇರಾನನ್ನು ಓಮಾನ್‌ನಿಂದ ಬೇರ್ಪಡಿಸುತ್ತದೆ.

ಭೂ ಸ್ವರೂಪ: ಒಳ ಭಾಗವು ಬೆಟ್ಟ ಗುಡ್ಡಗಳಿಂದಾವೃತವಾಗಿದ್ದು 3770 ಮೀ ಎತ್ತರವಾದ ಶಿಖರವನ್ನು ಒಳಗೊಂಡಿದೆ. (ಜಬಲ್ ಶ್ಯಾಮ್) ಇದು ಮರುಭೂಮಿಯಾಗಿದ್ದು, ತೀರ ಪ್ರದೇಶದಲ್ಲಿ ಮಾತ್ರ ಫಲವತ್ತಾಗಿದೆ. ಅನೇಕ ದ್ವೀಪಗಳನ್ನು ಒಳಗೊಂಡಿದ್ದು ಆಫ್ ಶೋರ್ಸ್ ಕುರಿಯ, ಮೂರಿಯ, ಮಸ್ಸೀರ ದ್ವೀಪಗಳನ್ನು ಒಳಗೊಂಡಿದೆ.

ವಾಯುಗುಣ: ಇದು ಉಷ್ಣವಲಯದ ಮರುಭೂಮಿ ವಾಯುಗುಣವನ್ನು ಹೊಂದಿದ್ದು ವಾರ್ಷಿಕ ಸರಾಸರಿ ಉಷ್ಣಾಂಶ $35^0$ಸೆ. ಗಳು. ಆದರೆ ತೀರಪ್ರದೇಶಗಳಲ್ಲಿ ಮಾನ್ಸೂನ್ ವಾಯುಗುಣದ ಪ್ರಭಾವದಿಂದಾಗಿ $21^0$ಸೆ. ಉಷ್ಣಾಂಶ ಕಂಡುಬರುತ್ತದೆ. ಒಳನಾಡಿನ ಎತ್ತರದ ಪ್ರದೇಶಗಳು ಹೆಚ್ಚು ಮಳೆಯನ್ನು ಮಾನ್ಸೂನ್ ಮಾರುತಗಳಿಂದ ಪಡೆಯುತ್ತವೆ. ಅಲ್ಲದೆ ನೈರುತ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಮಳೆ ಹೆಚ್ಚು. ಬೇಸಗೆಯಲ್ಲಿ ಹೆಚ್ಚು ಬಿಸಿಲು, ಮಳೆಗಾಲದಲ್ಲಿ ಹೆಚ್ಚು ಮಳೆ, ಚಳಿಗಾಲದಲ್ಲಿ ಚಳಿ ಕಂಡುಬರುತ್ತದೆ.

ಸ್ವಾಭಾವಿಕ ಸಸ್ಯವರ್ಗ: ಓಮನ್ ಮರುಭೂಮಿ ಮತ್ತು ಮಾನ್ಸೂನ್ ವಾಯುಗುಣವನ್ನು ಹೊಂದಿರುವುದರಿಂದ ಇಲ್ಲಿ ತೀರ ಪ್ರದೇಶಗಳಲ್ಲಿ ಕುರುಚಲು ಸಸ್ಯವರ್ಗ ಕಂಡುಬರುತ್ತದೆ. ಮುಳ್ಳು ಕಳ್ಳಿಯ ಜಾತಿಗೆ ಸೇರಿದ ಸಸ್ಯವರ್ಗ, ಖರ್ಜೂರ, ಅಂಜೂರ, ನೀಲಗಿರಿ, ಆಲೀವ್ಸ್ ಹೆಚ್ಚಾಗಿ ಕಂಡುಬರುತ್ತದೆ.

ಪ್ರಾಣಿಗಳು: ಕಾಡು ಪ್ರಾಣಿಗಳು ಕಂಡುಬರುವುದಿಲ್ಲ. ಮರುಭೂಮಿಗಳಲ್ಲಿ ಮರಳುಗಪ್ಪೆ, ಅಳಿಲು, ಹಾವುಗಳು, ಮೊಲ, ಕುದುರೆ ಮುಂತಾದವುಗಳು ಇವೆ.

ಜನಸಂಖ್ಯೆ: 3.2 ಮಿ. ಜನಸಂಖ್ಯೆಯನ್ನು ಹೊಂದಿದೆ (2003). ತೀರ ಪ್ರದೇಶದ ನಗರ ಪಟ್ಟಣಗಳು ಅಭಿವೃದ್ಧಿಹೊಂದಿದ್ದು ಮಸ್ಕಟ್, ಆಲ್–ಬಾಬಿನ, ಮುಸನ್‌ದಮ್, ಆದಿ–ದಾಹೀರ, ಅದ್–ದಕ್ಕಲಿಯ, ಆಶ–ಶರ್ಕಿಯ, ಆಲ್‌ವೋಸ್ಟ್, ದೋಫ್ಹಾರ್ಫ್ ಹೆಚ್ಚು ಜನದಟ್ಟಣೆಯಾಗಿವೆ. ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 6.5. ಮಸ್ಕಟ್ ದಟ್ಟ ಜನಸಂಖ್ಯೆ ಹೊಂದಿದ್ದು, ಪ್ರಮುಖನಗರ, ರಾಜಧಾನಿ, ಬಂದರಾಗಿದೆ. ಜನಸಂಖ್ಯೆ 3,50,000 (2004).

ಧರ್ಮ: ಶೇ. 87.41 ರಷ್ಟು ಜನರು ಇಸ್ಲಾಮಿಯರು. ಇವರಲ್ಲಿ ಇಬ್ದಿಯಾ ಮುಸ್ಲಿಂ ಶೇ. 75 ರಷ್ಟು ಸುನ್ನಿ ಮುಸ್ಲಿಂ ಇದ್ದಾರೆ. ಹಿಂದುಗಳು ಶೇ. 5.7 ರಷ್ಟು, ಕ್ರಿಶ್ಚಿಯನ್ ಶೇ. 4.7, ಬೌದ್ಧರು 0.8, ಇತರರು ಶೇ. 1.2 ರಷ್ಟಿದ್ದಾರೆ.




ಭಾಷೆ: ಅರೇಬಿಕ್ ರಾಷ್ಟ್ರಭಾಷೆ, ಇಂಗ್ಲಿಷ್ ಮತ್ತು ಅರೇಬಿಕ್ ಆಡಳಿತ ಭಾಷೆಯೂ ಆಗಿವೆ. ಕೆಲವು ಪ್ರದೇಶಗಳಲ್ಲಿ ಭಾರತೀಯ ಭಾಷೆಗಳು ಅಭಿವೃದ್ಧಿ ಹೊಂದಿವೆ.

ಆರ್ಥಿಕತೆ: ವ್ಯವಸಾಯ, ಪ್ರಾಣಿ ಸಾಕಾಣಿಕೆ, ಮೀನುಗಾರಿಕೆ, ಗಣಿಗಾರಿಕೆ, ಕೈಗಾರಿಕೆ, ವಾಣಿಜ್ಯ ವ್ಯವಹಾರಗಳು ಕಂಡುಬರುತ್ತವೆ.

ವ್ಯವಸಾಯ: ತೀರ ಪ್ರದೇಶಗಳಲ್ಲಿ ದ್ವಿದಳ ಧಾನ್ಯ, ತರಕಾರಿಗಳಾದ ಆಲೂಗಡ್ಡೆ, ಟೊಮೊಟೊ, ಈರುಳ್ಳಿ, ಕೋಸುಗಳನ್ನು ಬೆಳೆಯುವುದಲ್ಲದೆ ಹುಳಿಭರಿತ ಹಣ್ಣುಗಳಾದ ದ್ರಾಕ್ಷಿ, ಖರ್ಜೂರ, ಸೇಬು, ಮಾವು, ಬಾಳೆ, ತಂಬಾಕು, ಕಲ್ಲಂಗಡಿ, ಕರ್ಬೂಜ, ನಿಂಬೆಗಳನ್ನು ಬೆಳೆಯುತ್ತಾರೆ.

ಪಶುಸಂಗೋಪನೆ: ಸಾಗಾಣಿಕೆಗೆ ಬೇಕಾದ ಒಂಟೆ, ಕುದುರೆ, ಕತ್ತೆ, ಹೇಸರಗತ್ತೆ ಪ್ರಮುಖ ಪ್ರಾಣಿಗಳು. ಅಲ್ಲದೆ ಕುರಿ, ಮೇಕೆ, ಕೋಳಿ, ದನಗಳನ್ನು ಸಾಕುತ್ತಾರೆ.

ಗಣಿಗಾರಿಕೆ: ಶೇ. 30.4 ರಷ್ಟು ದೇಶದ ಆದಾಯವು ಗಣಿಗಾರಿಕೆಯನ್ನು ಅವಲಂಬಿಸಿದೆ. ದೇಶದ ಶೇ. 27 ಜನರು ಗಣಿಗಾರಿಕೆಯನ್ನು ಉದ್ಯೋಗಕ್ಕಾಗಿ ಅವಲಂಬಿಸಿದ್ದಾರೆ. ಪೆಟ್ರೋಲಿಯಂ ನಿಕ್ಷೇಪವು ಬೃಹತ್ ಪ್ರಮಾಣದಲ್ಲಿದ್ದು ಪೆಟ್ರೋಲಿಯಂ ಮತ್ತು ಅದರ ಉತ್ಪನ್ನ, ಸ್ವಾಭಾವಿಕ ಅನಿಲಗಳನ್ನು ಉತ್ಪಾದಿಸುವುದಲ್ಲದೆ, ಕ್ರೋಮೈಟ್, ಚಿನ್ನ, ಉಪ್ಪು, ಮಾರ್ಬಲ್, ಜಿಪ್ಸಂ, ಸುಣ್ಣಕಲ್ಲುಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತದೆ.

ಮೀನುಗಾರಿಕೆ: ಸಮುದ್ರದ ಮೀನುಗಾರಿಕೆ ಪ್ರಮುಖವಾಗಿದ್ದು ಆರ್ಥಿಕವಾಗಿ 1,17,000 ಮೆಟ್ರಿಕ್ ಟನ್ ಗಿಂತಲೂ ಅಧಿಕ ಮೀನನ್ನು ಉತ್ಪಾದಿಸಲಾಗುತ್ತದೆ. ಟ್ರಾಫರ್ಸ್, ಸ್ನಾಪರ್ಸ್, ಜಾಟ್ ಫಿಶ್, ಕ್ರಾಕರ್ಸ್, ಡ್ರಮ್ ಫಿಶ್, ಜಾಕ್ ಫಿಶ್, ಕ್ರಿವೆಲ್ಲಾ, ಕವರೀವ, ಶಾರ್ಕ್, ರೇಸ್, ಸ್ಕೇಬ್, ಕಟಲೆಸ್ ಮುಂತಾದ ಪ್ರಮುಖ ಮೀನುಗಳನ್ನು ಹಿಡಿಯುತ್ತಾರೆ. ಮೀನುಗಾರಿಕೆ ಪ್ರಮುಖ ಉದ್ಯೋಗವಾಗಿದೆ.

ಕೈಗಾರಿಕೆ: ಎಣ್ಣೆ ಶುದ್ಧೀಕರಣಕೇಂದ್ರ, ಗ್ಯಾಸೋಲೀನ್, ಪೆಟ್ರೋಲ್, ಸೀಮೆಎಣ್ಣೆ, ಗ್ಯಾಸ್, ಡೀಸಲ್, ವಿದ್ಯುತ್ ಶಕ್ತಿ ಮುಂತಾದವುಗಳ ಉತ್ಪಾದನೆಯು ಅಭಿವೃದ್ಧಿ ಹೊಂದಿವೆ.

ಅಲ್ಲದೆ ಕಟ್ಟಡ ನಿರ್ಮಾಣ ವಸ್ತುಗಳು, ಸಿಮೆಂಟ್, ತಾಮ್ರ ಶುದ್ಧೀಕರಣ, ಆಹಾರ ಸಂಸ್ಕರಣೆ, ಹಗುರ ಎಂಜಿನಿಯರಿಂಗ್ ಪದಾರ್ಥಗಳು, ಹಡಗು, ಸಿದ್ಧ ವಸ್ತುಗಳ ಕೈಗಾರಿಕೆಗಳು ಅಭಿವೃದ್ಧಿಯನ್ನು ಹೊಂದಿವೆ.

ವ್ಯಾಪಾರ: ಕಚ್ಚಾ ಪೆಟ್ರೋಲಿಯಂ, ಶುದ್ಧಪೆಟ್ರೋಲ್, ಡೀಸೆಲ್, ಪ್ರಾಣಿಗಳು, ಮೀನು, ತಾಮ್ರ, ಕಟ್ಟಡ ನಿರ್ಮಾಣ ವಸ್ತುಗಳನ್ನು ಹೊರದೇಶಗಳಿಗೆ ರಫ್ತು ಮಾಡುತ್ತಿದೆ. ಖನಿಜಗಳು, ಆಹಾರ ಪದಾರ್ಥಗಳು, ಪ್ಲಾಸ್ಟಿಕ್, ರಬ್ಬರ್, ಜವಳಿ, ಬೆಲೆಬಾಳುವ ಹರಳುಗಳು, ವಾಹನ, ವಾಹನಗಳ ಬಿಡಿಭಾಗಗಳು, ಪಾತ್ರೆಗಳು ವಿಮಾನಗಳು, ಫೋಟೋಗ್ರಾಫಿಕ್ ಉಪಕರಣ, ಔಷಧಿ, ರಾಸಾಯನಿಕ, ಸಂಗೀತ ಉಪಕರಣ, ಜವಳಿ, ಗಡಿಯಾರ, ಅಪರೂಪದ ವಸ್ತುಗಳು, ಯಂತ್ರ, ಯಂತ್ರೋಪಕರಣ ಮುಂತಾದವುಗಳನ್ನು ಆಮದು ಮಾಡಿಕೊಳ್ಳುತ್ತದೆ. ಆಸ್ಟ್ರೇಲಿಯ, ಬೆಲ್ಜಿಯಂ, ಚೀನ, ಫ್ರಾನ್ಸ್, ಇಟಲಿ, ಜಪಾನ್, ಭಾರತ, ಮಲೇಷ್ಯ, ನೆದರ್ಲೆಂಡ್, ಸೌದಿ ಅರೇಬಿಯ, ಸಿಂಗಪುರ, ಸ್ವೀಡನ್, ಯುಎಈ, ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟನ್ ಮುಂತಾದ ದೇಶಗಳೊಡನೆ ವ್ಯಾಪಾರ ನಡೆಸಲಾಗುತ್ತಿದೆ.

ಸಾರಿಗೆ ಸಂಪರ್ಕ: ಇದು ರಸ್ತೆ , ರೈಲು, ಹಡಗು, ವಿಮಾನ ಸಾರಿಗೆ ವ್ಯವಸ್ಥೆಯನ್ನು ಒಳಗೊಂಡಿದೆ. ರೇಡಿಯೋ, ಪತ್ರಿಕೆ, ಟೆಲಿಫೋನ್, ಟೆಲಿವಿಷನ್, ಕಂಪ್ಯೂಟರ್ ಮುಂತಾದ ಮಾಧ್ಯಮಗಳನ್ನು ಒಳಗೊಂಡಿದೆ. ಶೇ. 71.7 ಜನರು ವಿದ್ಯಾವಂತರಾಗಿದ್ದಾರೆ.

ಸರ್ಕಾರ: ದೇಶದಲ್ಲಿ ಸುಲ್ತಾನ್ ರಾಷ್ಟ್ರಾಧ್ಯಕ್ಷನಾಗಿದ್ದು ಪ್ರಧಾನಮಂತ್ರಿ, ಹಾಗೂ ಇತರ ಮಂತ್ರಿ ಮಂಡಲವನ್ನು ಒಳಗೊಂಡಿದೆ. (ಎಸ್.ಕೆ.)

**ಓಷಿಯಾನಿಯ:** ಪೆಸಿಫಿಕ್ ಸಾಗರ ದ್ವೀಪಗಳ ಪ್ರದೇಶದ ಹೆಸರು. ಏಷ್ಯ ಮತ್ತು ಅಮೆರಿಕ ಖಂಡಗಳ ನಡುವಣ ಎಲ್ಲ ಭೂಪ್ರದೇಶಗಳನ್ನೂ ಇದರ ವ್ಯಾಪ್ತಿಯೊಳಗೆ ಸೇರಿಸುವುದು ಪದ್ಧತಿ. ಆ ಪ್ರಕಾರ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್ ಕೂಡ ಇದರಲ್ಲಿ ಸೇರುತ್ತವೆ. ಉಷ್ಣವಲಯದ ಪ್ರದೇಶಗಳಲ್ಲದ ರ್ಯುಕ್ಯು ಮತ್ತು ಅಲ್ಯೂಷಿಯನ್ ದ್ವೀಪಗಳನ್ನೂ ಜಪಾನ್ ದ್ವೀಪಸ್ತೋಮವನ್ನೂ ಇದರಿಂದ ಹೊರಗು ಮಾಡುವುದು ಹೆಚ್ಚು ಸೂಕ್ತವೆನಿಸಬಹುದು. ಇಂಡೋನೇಷ್ಯ, ಫಿಲಿಪೀನ್ಸ್ ಮತ್ತು ಫಾರ್ಮೋಸ ದ್ವೀಪಗಳ ನಿವಾಸಿಗಳು ಏಷ್ಯನರ ನಿಕಟ ಸಂಬಂಧಿಗಳಾದ್ದರಿಂದ ಅವನ್ನೂ ಹೊರಗಿಡುವುದು ಇನ್ನೂ ಸೂಕ್ತವೆನಿಸುತ್ತದೆ. ಹೀಗೆ ಮಾಡಿದರೆ ಪಾಲಿನೇಷ್ಯ, ಮಲನೇಷ್ಯ ಮತ್ತು ಮೈಕ್ರೊ ನೇಷ್ಯಗಳು ಓಷಿಯಾನಿಯವೆನಿಸಿಕೊಳ್ಳುತ್ತವೆ. ಈ ಪ್ರದೇಶದ ಭೂಪಟ ತಯಾರಿಸಿದ ಐರೋಪ್ಯರು ಓಷಿಯಾನಿಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ಆಸ್ಟ್ರೇಲಿಯವೇ ಮೊದಲನೆಯದು. ನ್ಯೂಗಿನಿಯಿಂದ ಫಿಜಿಯವರೆಗಿನ ಪ್ರದೇಶವಾದ ಮೆಲನೇಷ್ಯ ಎರಡನೆಯ ಭಾಗ. ಮೂರನೆಯ ಮೈಕ್ರೊನೇಷ್ಯದಲ್ಲಿ ಮೇರಿಯಾನ, ಕ್ಯಾರೋಲೈನ್, ಮಾರ್ಷಲ್ ಮತ್ತು ಗಿಲ್ಬರ್ಟ್ ದ್ವೀಪಗಳು ಸೇರಿವೆ. ನಾಲ್ಕನೆಯದು ಪಾಲಿನೇಷ್ಯ. ಇದು ಹವಾಯಿ, ನ್ಯೂಜಿಲೆಂಡ್ ಮತ್ತು ಈಸ್ಟರ್‌ಗಳನ್ನೊಳಗೊಂಡ ಹಲವು ದ್ವೀಪಗಳ ಒಂದು ತ್ರಿಕೋಣ. ಸಾಗರಿಕ (ಓಷಿಯಾನಿಕ್) ಪ್ರದೇಶವನ್ನು ಮಾತ್ರವೇ ಓಷಿಯಾನಿಯವೆಂದು ಕರೆಯುವುದಾದರೆ ಉತ್ತರ ದಕ್ಷಿಣ ಅಕ್ಷಾಂಶ $30^0$ಗಳ ನಡುವಣ ದ್ವೀಪಗಳನ್ನೂ ಅಗ್ನಿಶಿಲಾಭೂಯಿಷ್ಠ ಜ್ವಾಲಾಮುಖಿಗಳನ್ನೂ ಹವಳ ದ್ವೀಪಗಳನ್ನೂ ಮಾತ್ರವೇ ಪರಿಗಣಿಸಬೇಕಾಗುತ್ತದೆ.

ಓಷಿಯಾನಿಯ ಪ್ರದೇಶದಲ್ಲಿ ಚಿಕ್ಕ ದೊಡ್ಡ ದ್ವೀಪಗಳೂ ಜ್ವಾಲಾಮುಖಿಗಳ ಮತ್ತು ಹವಳದ ನೆಲಗಳೂ ಬೆಟ್ಟಗಳೂ ಮೈದಾನಗಳೂ ಇರುವುದಾದರೂ ಒಟ್ಟಿನಲ್ಲಿ ಇಲ್ಲಿರುವ ಜನರೆಲ್ಲರಿಗೂ ಸಮುದ್ರದ ಪ್ರಭಾವದ ಫಲವಾಗಿ ಒಂದೇ ಬಗೆಯ ಸಂಸ್ಕೃತಿಯಿದೆ. ನ್ಯೂಗಿನಿಯ ಮತ್ತು ಮೆಲನೇಷ್ಯದ ಇತರ ಪ್ರದೇಶಗಳ ಜನರ ಸಂಸ್ಕೃತಿ ಮಾತ್ರ ಭಿನ್ನ ಬಗೆಯದು. ಇಲ್ಲಿಯ ಮೊದಲವಾಸಿಗಳಿಗೂ ಸಮುದ್ರಕ್ಕೂ ಬಹಳ ದೂರ. ಸಾಗರಿಕ ಪದಾರ್ಥಗಳಿಗಾಗಿ ಇವರು ಉಪ್ಪುನೀರಿನ ಜನರೊಂದಿಗೆ ವ್ಯಾಪಾರ ನಡೆಸುತ್ತಾರೆ. ಇವರನ್ನು ಬಿಟ್ಟರೂ ಒಟ್ಟಿನಲ್ಲಿ ಇಲ್ಲಿಯ ಮೂಲನಿವಾಸಿಗಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸುವುದು ಸಾಧ್ಯ.

ಜನತೆ: ಶರೀರ ಲಕ್ಷಣಗಳಿಗೆ ಅನುಗುಣವಾಗಿ ಓಷಿಯಾನಿಯದ ಜನರನ್ನು ಐದು ಗುಂಪುಗಳಾಗಿ ವಿಂಗಡಿಸಬಹುದು: 1. ಕಾಕಸಾಯಿಡ್ ವಿಭಾಗಕ್ಕೆ ಸೇರಿದ ಪಾಲಿನೇಷ್ಯನರು; 2. ಮಂಗೋಲಾಯಿಡರೆನ್ನಬಹುದಾದ ಮೈಕ್ರೋನೇಷ್ಯನ್ನರು; 3. ಮೆಲನೇಷ್ಯನರು; 4. ಪ್ಯಾಪುವನರು ಮತ್ತು 5. ನಿಗ್ರಿಟೋಗಳು. ಇವರು ನೀಗ್ರಾಯಿಡರು. ನಿಗ್ರಿಟೋಗಳು ಸಾಗರಿಕ ಕುಬ್ಜರು; ಬಲು ಹಿಂದುಳಿದವರು. ಇವರು ಪಾಪುವನರ ಪ್ರಾಚೀನ ಶಾಖೆಯೆಂದೇ ಅನೇಕರ ಮತ. ಇವರ ಸರಾಸರಿ ಎತ್ತರ 145 ಸೆಂಮೀ. ಕೂದಲು ತುಂಡ, ಉಣ್ಣೆಯ ತೆರ. ತಲೆ ದುಂಡು, ಮೂಗು ಅಗಲ, ಕಪ್ಪಿನಿಂದ ಹಳದಿ ಮಿಶ್ರಿತ ಕಂದಿನ ವರೆಗೆ ಮೈಬಣ್ಣ. ಪಾಪುವನರು ನ್ಯೂ ಗಿನಿಯ ಬಹು ಭಾಗದಲ್ಲೂ ಆಗ್ನೇಯದ ತುದಿಯಲ್ಲೂ ವಾಸವಾಗಿದ್ದಾರೆ. ಇವರದು ಮಿಶ್ರಮಾದರಿ. ಉದ್ದ ತಲೆ, ಹಿಂದೂಡಿದ ಹಣೆ, ದಪ್ಪ ಹುಬ್ಬು, ದೊಡ್ಡ ಮೂಗು, ದಟ್ಟ ಚಾಕೊಲೇಟಿನ ಮೈಬಣ್ಣ, ಉಣ್ಣೆ ಕೂದಲು, ಒತ್ತು ಗಡ್ಡ, 157 ರಿಂದ 170 ಸೆಂಮೀ ಎತ್ತರ, ನ್ಯೂಗಿನಿಯ ಆಗ್ನೇಯ ಭಾಗದಿಂದ ಫಿಜಿ ದ್ವೀಪಗಳ ವರೆಗೂ ಅಲ್ಲಿಂದ ನ್ಯೂ ಕ್ಯಾಲೆಡೊನಿಯದವರೆಗೂ ಇರುವ ಪ್ರದೇಶದ ಮೂಲನಿವಾಸಿಗಳು ಮೆಲನೇಷ್ಯನರು. ಇವರು ಬಹುಶಃ ಪಾಪುವನರಿಂದ ಬಂದವರು. ಆದರೆ ಇಲ್ಲಿಗೆ ವಲಸೆ ಬಂದ ಹಲವಾರು ಪಂಗಡಗಳೊಂದಿಗೆ ಮಿಶ್ರವಾಗಿ ವೈವಿಧ್ಯಮಯವಾಗಿದ್ದಾರೆ. ಇವರದೂ ಉದ್ದ ತಲೆ. ಚಿಕ್ಕದೂ ನೇರವೂ ಅಗಲವೂ ಆದ ಮೂಗು. ಮುಖ ಹೆಚ್ಚು ದುಂಡು, ತುಟಿ ದಪ್ಪ, ಸೊಟ್ಟ ಕಣ್ಣು, ಕಾಫಿಯ ಮೈಬಣ್ಣ, ಗುಂಗುರು ಕೂದಲು. ಇವರು ಸಾಧಾರಣವಾಗಿ ಕುಳ್ಳು. ನ್ಯೂಜಿಲೆಂಡ್, ಹವಾಯಿಯನ್ ದ್ವೀಪಗಳು ಮತ್ತು ಈಸ್ಟರ್ ದ್ವೀಪಗಳ ತ್ರಿಭುಜ ಪ್ರದೇಶದಲ್ಲಿರುವವರು ಪಾಲಿನೇಷ್ಯನರು. ಪೂರ್ವ ಪೆಸಿಫಿಕ್‌ನಲ್ಲೂ ಮಧ್ಯ ಪೆಸಿಫಿಕ್‌ನ ಬಹು ಭಾಗದಲ್ಲೂ ಇವರೇ ಇದ್ದಾರೆ. ಇತರರಿಗಿಂತ ಇವರಲ್ಲಿ ಸಮಾನ ಲಕ್ಷಣಗಳು ಹೆಚ್ಚು. ಅಗಲವಾದ ಎತ್ತರ ಹಣೆ, ದೊಡ್ಡ ನೀಳ ಮೂಗು, ಮಾಟವಾದ ತುಟಿ, ಅಲೆ ಅಲೆ ಕೂದಲು, ಬಿಳಿಯಿಂದ ಕಂದಿನ ವರೆಗೆ ಮೈಬಣ್ಣ, ಸರಾಸರಿಯಲ್ಲಿ 175 ಸೆಂಮೀ ಎತ್ತರ. ಮೈಕ್ರೋನೇಷ್ಯನರೂ ಸ್ಥೂಲವಾಗಿ ಪಾಲಿನೇಷ್ಯನರನ್ನೇ ಹೋಲುತ್ತಾರೆ. ಪಶ್ಚಿಮದ ಕಡೆಯಲ್ಲಿರುವವರು ಮಂಗೋಲಾಯಿಡರ ಲಕ್ಷಣ ಪಡೆದಿದ್ದಾರೆ. ಸಾಮಾನ್ಯವಾಗಿ ಅವರದು ಉಬ್ಬಿದ ಉದ್ದ ಹಣೆ, ಅಗಲ ಕಪೋಲ ಮೂಳೆ, ದಪ್ಪ ಮೂಗು, ಅಗಲ ಬಾಯಿ. ನ್ಯೂ ಗಿನಿಯ ಉತ್ತರಕ್ಕೆ ಪೆಲೂ, ಕ್ಯಾರೊಲೈನ್, ಮಾರ್ಷಲ್ ಮತ್ತು ಗಿಲ್ಬರ್ಟ್ ದ್ವೀಪ, ಸಮೋವದ ಉತ್ತರದ ದ್ವೀಪಗಳು ಈ ಜನರ ವಾಸಸ್ಥಾನ.

ಈ ನಾನಾ ಬುಡಕಟ್ಟುಗಳ ಜನ ಎಲ್ಲಿಂದ ಬಂದರು, ಎಲ್ಲೆಲ್ಲಿ ಸಂಚರಿಸಿ ನೆಲೆಸಿದರು– ಎಂಬ ವಿಚಾರವಾಗಿ ನಾನಾ ವಾದಗಳುಂಟು. ಇಲ್ಲೊಂದು ದೊಡ್ಡ ಭೂಖಂಡ ಇತ್ತು; ಅದು ಮುಳುಗಿಹೋಯಿತು; ಅದರ ಪರ್ವತಶಿಖರಗಳು ಮಾತ್ರ ಉಳಿದಿವೆ; ಆದ್ದರಿಂದ ಈ ವಿಶಾಲ ಪ್ರದೇಶದ ದ್ವೀಪಗಳ ಜನರಲ್ಲಿ ಸಾಮಾನ್ಯ ಲಕ್ಷಣಗಳು ಇರುವುದು ಸಹಜ– ಎಂಬುದೊಂದು ವಾದ. ಆದರೆ ಈ ವಾದವನ್ನು ಸ್ಥಾಪಿಸಲು ಸಾಕ್ಷಿಯೇನೂ ಇಲ್ಲ. ಕ್ಯಾರೊಲೈನ್‌ಗಳ ಪೋನಪೇ ಮತ್ತು ಕೂಸೈಯೆಗಳಲ್ಲಿರುವ ಪಳಿಯುಳಿಕೆಗಳನ್ನು ಪರೀಕ್ಷಿಸುವ ಕೆಲವರು ಇವಕ್ಕೂ ಈಜಿಪ್ಟಿನ ಪಿರಮಿಡ್ಡುಗಳಿಗೂ ಸಂಬಂಧವುಂಟೆಂದೂ ಆ ಸೂರ್ಯಪುತ್ರರು ಬಲು ಹಿಂದೆ ಮುತ್ತು, ಬಂಗಾರಗಳಿಗಾಗಿ ಇಲ್ಲಿಗೆ ಬಂದಿದ್ದಿರಬಹುದೆಂದೂ ಹೇಳುತ್ತಾರೆ. ಆದರೆ ಇದೂ ಬರಿಯ ಊಹೆ ಮಾತ್ರ. ಈ ಪಳೆಯುಳಿಕೆಗಳು ಆ ಕಾಲದಿಂದ ಬಲು ಈಚೆಗಿನ ಪಾಲಿನೇಷ್ಯನ್ ಸಂಸ್ಕೃತಿವಿನ್ಯಾಸಗಳೆಂಬುದು ಹೆಚ್ಚು ಸಮಂಜಸ. ಈಸ್ಟರ್ ದ್ವೀಪದ ಲಿಪಿಗೂ ಮೊಹೆಂಜೊದಾರೊದವಕ್ಕೂ ಸಂಬಂಧ ಕಲ್ಪಿಸುವ ಪ್ರಯತ್ನವೂ ನಡೆದಿದೆ. ಆದರೆ ಈ ಸಂಬಂಧ ಕೇವಲ ಬಾಹ್ಯವಾದದ್ದು. ಇವೆರಡಕ್ಕೂ ಸಮಾನವಾದ ಅಕ್ಷರಗಳಿಗಿಂತ ಭಿನ್ನವಾದವೇ ಅಧಿಕ. ಪಾಲಿನೇಷ್ಯನರ ಮೂಲಪುರುಷರು ಅಮೆರಿಕದಿಂದ ಬಂದವರು ಎಂಬುದಾಗಿ ಹೈಯರ್‌ಡಾಲ್ ಸ್ಥಾಪಿಸಲೆತ್ನಿಸಿದ್ದಾನೆ. ಆದರೆ ಅಮೆರಿಕದ ಪೆರುವಿನಲ್ಲಿ ಸಾಮಾನ್ಯವಾಗಿರುವ ತೆಪ್ಪಗಳು ಪಾಲಿನೇಷ್ಯದಲ್ಲಿ ಬಲು ವಿರಳ. ಪೆರುವಿನ ಸಾಮಾನ್ಯ ಉಪಕರಣ ಕೊಡಲಿ. ಆದರೆ ಪಾಲಿನೇಷ್ಯದ್ದು ಕೈಬಾಚಿ. ಪಾಲಿನೇಷ್ಯಕ್ಕೆ ಅಮೆರಿಕದೊಂದಿಗೆ ಇರುವ ಸಾಂಸ್ಕೃತಿಕ ಸಾಮ್ಯಕ್ಕಿಂತಲೂ ಏಷ್ಯದೊಂದಿಗಿನದೇ ಅಧಿಕ.

ಏಷ್ಯದೊಂದಿಗೆ ಈ ಪ್ರದೇಶದ ಸಂಬಂಧ ಹೆಚ್ಚಾಗಿದ್ದಿರಬಹುದೆಂಬುದು ಇಲ್ಲಿ ಹರಡಿರುವ ಕೆಲವು ಸಸ್ಯಗಳ ಪರಿಶೀಲನೆಯಿಂದ ಉದ್ಭವಿಸುವ ಅನುಮಾನ. ಪಾಲಿನೇಷ್ಯನರಿಗೆ ಬರೆವಣಿಗೆ ತಿಳಿದಿರಲಿಲ್ಲ; ಬಲು ಹಿಂದೆ ನೀಗ್ರಾಯಿಡ್ ಜನಾಂಗಗಳು ಏಷ್ಯದಲ್ಲಿನ ಒತ್ತಡದಿಂದಾಗಿ ಇಲ್ಲಿಗೆ ಬಂದಿದ್ದಿರಬಹುದು. ಮೊದಲು ಬಂದವರು ನಿಗ್ರಿಟೋ. ಅನಂತರ ನೀಗ್ರಾಯಿಡರು ಬಂದು ಇವರನ್ನು ಒತ್ತರಿಸಿರಬಹುದು. ಕೆಲವರು ನ್ಯೂ ಗಿನಿಯಲ್ಲೆ ಉಳಿದು ಹೊಸಬರೊಂದಿಗೆ ರಕ್ತಸಂಬಂಧ ಬೆಳೆಸಿರುವುದೂ ಸಾಧ್ಯ. ಪಾಲಿನೇಷ್ಯನರು ಭಾರತದಿಂದ ಬಂದು, ಇಂಡೋನೇಷ್ಯದಲ್ಲಿ ಕೆಲಕಾಲ ತಂಗಿ, ಅಲ್ಲಿಯ ಭಾಷೆಯ ಕೆಲವು ಗುಣಗಳನ್ನು ಅರಿತುಕೊಂಡು, ಮುಂದೆ ಸಾಗಿದ್ದಿರಬಹುದೆಂಬುದು ಸಕಾರಣವಾದ ಊಹೆ. ಪಾಲಿನೇಷ್ಯನರ ಅನಂತರ ಮಂಗೋಲಾಯಿಡರು ಇಲ್ಲಿಗೆ ಬಂದು, ಅವರಲ್ಲಿ ಕೆಲವರನ್ನು ಬಿಟ್ಟು, ಕೆಲವರೊಂದಿಗೆ ವಿವಾಹಸಂಬಂಧ ಬೆಳೆಸಿದ್ದಿರಬಹುದು. ಮೈಕ್ರೋನೇಷ್ಯನರು ಹುಟ್ಟಿಕೊಂಡದ್ದು ಬಹುಶಃ ಹೀಗೆ. ಇವರಿಗೆ ಪಾಲಿನೇಷ್ಯನರ ಗುಣಲಕ್ಷಣಗಳು ಹಲವುಂಟು.

ಸಂಸ್ಕೃತಿ: ಈ ದ್ವೀಪಗಳ ನಡುವೆ ಬಹಳ ಮಟ್ಟಿಗೆ ಸಾಂಸ್ಕೃತಿಕ ಸಾಮ್ಯಗಳೂ ಇವೆ. ಸಮುದ್ರಕ್ಕೂ ವಾಸಸ್ಥಳಕ್ಕೂ ನಡುವಣ ದೂರ, ಸಾಧನ ಸಂಪತ್ತಿಯ ಲಭ್ಯತೆ ಇವೇ ಸಂಸ್ಕೃತಿಯ ಸ್ವರೂಪದ ನಿರ್ಣಾಯಕ ಅಂಶ. ಜನಾಂಗಗಳ ಭಿನ್ನತೆಗನುಸಾರವಾಗಿ ಅಲ್ಪಸ್ವಲ್ಪ ವ್ಯತ್ಯಾಸಗಳುಂಟಾದರೂ ಮೂಲಾಂಶಗಳು ಎಲ್ಲಕ್ಕೂ ಸಮಾನ. ಸಾಮಾನ್ಯವಾಗಿ ಇಲ್ಲಿಯ ಜನ ಸಣ್ಣ ಸಣ್ಣ ಸಮುದಾಯಗಳಾಗಿ ವಿಂಗಡವಾಗಿರುತ್ತಾರೆ. ದೊಡ್ಡ ದ್ವೀಪಗಳಲ್ಲಿ ಹಳ್ಳಿಗಳುಂಟು. ಪೆಲೂದ ಹಳ್ಳಿಗಳಲ್ಲಿ ಎರಡೆರಡು ಚಾವಡಿಗಳುಂಟು. ನ್ಯೂ ಗಿನಿಯ ಅನೇಕ ಹಳ್ಳಿಗಳಲ್ಲಿ ಸಮುದಾಯ ಭವನಗಳಿವೆ. ಅಡ್ಮಿರಾಲ್ಟಿ ದ್ವೀಪಗಳಲ್ಲಿಯ ಕರಾವಳಿ ಹಳ್ಳಿಗಳನ್ನು ಸಾಮಾನ್ಯವಾಗಿ ಸಮುದ್ರದೊಳಕ್ಕೆ ಚಾಚಿದ ದಿಬ್ಬಗಳ ಮೇಲೆ ನಿರ್ಮಿಸಲಾಗಿದೆ. ಸ್ವಿಸ್ ಸರೋವರ ವಸತಿಗಳನ್ನೆ ಇವು ಹೋಲುತ್ತವೆ.

ಸಾಮಾಜಿಕ ರಾಜಕೀಯ ವ್ಯವಸ್ಥೆ: ಎಲ್ಲ ದ್ವೀಪಗಳಿಗೂ ಸಾಮಾನ್ಯವಾದ ರೀತಿಯ ಸಾಮಾಜಿಕ ಸಂಘಟನೆಯಿಲ್ಲ. ಅಂತಸ್ತು ಮತ್ತು ಯಜಮಾನಿಕೆಗಳ ನಿಯಮಗಳಲ್ಲೂ ಗುಂಪಿನಿಂದ ಗುಂಪಿಗೆ ವ್ಯತ್ಯಾಸವುಂಟು. ಪಾಲಿನೇಷ್ಯದಲ್ಲಿ ಯಜಮಾನಿಕೆ ವಂಶಪಾರಂಪರ್ಯವಾದದ್ದು. ಮೆಲನೇಷ್ಯದ ಕೆಲಭಾಗಗಳಲ್ಲೂ ಈ ಪದ್ಧತಿಯುಂಟು. ಇನ್ನು ಕೆಲವೆಡೆಗಳಲ್ಲಿ ಧಾರ್ಮಿಕ ಮುಖಂಡ ಮತ್ತು ಯುದ್ಧ ನಾಯಕ ಎಂದು ಎರಡು ಸ್ಥಾನಗಳಿರುವುದುಂಟು.

ಅಮೆರಿಕದ ಆಡಳಿತ ಬರುವುದಕ್ಕೆ ಮುಂಚೆ, 19ನೆಯ ಶತಮಾನದಲ್ಲಿ ಹವಾಯಿಯ ಯಜಮಾನಿಕೆಗೆ ರಾಜತ್ವದ ಮಹತ್ತ್ವ ಬಂದಿತ್ತು. ಟೊಂಗ ರಾಜ್ಯದಲ್ಲಿ ಬಲುಸಂಕೀರ್ಣವಾದ ರಾಜಪದ್ಧತಿ ಬೆಳೆಯಿತು. ಮೆಲನೇಷ್ಯದಲ್ಲಿ ದಕ್ಷ ಅನುಭವಿ ಹಿರಿಯರು ಯಜಮಾನರು, ಅಂತಸ್ತಿನ

ವಿಚಾರದಲ್ಲೂ ಭಿನ್ನತೆಗಳುಂಟು. ಶ್ರೀಮಂತರು, ಸಾಮಾನ್ಯರು ಅಥವಾ ಸ್ವತಂತ್ರರು ಮತ್ತು ಗುಲಾಮರು–ಎಂಬ ಮೂರು ವಿಭಾಗಗಳು ಪಾಲಿನೇಷ್ಯದಲ್ಲೂ ಮೈಕ್ರೊನೇಷ್ಯದಲ್ಲೂ ಇದ್ದುವು. ಮೆಲನೇಷ್ಯನರದು ಭಿನ್ನಪದ್ಧತಿ. ಅಲ್ಲಿಯ ಕೆಲವು ಭಾಗಗಳಲ್ಲಿ ಹಲವು ಶ್ರೇಣಿಗಳು ವಿಕಾಸಗೊಂಡುವು.

ಪರಿಶೋಧಕರು ಈ ಪ್ರದೇಶವನ್ನು ಮೊಟ್ಟಮೊದಲು ಕಂಡಾಗ ಇಲ್ಲಿಯ ಜನರಿನ್ನೂ ನವಶಿಲಾಯುಗದಲ್ಲೇ ಇದ್ದರು. ವ್ಯವಸಾಯ ಸರಳವಾಗಿತ್ತು. ಮೆಲನೇಷ್ಯನರ ಮತ್ತು ಪಾಲಿನೇಷ್ಯನರ ಇಡೀ ಅರ್ಥವ್ಯವಸ್ಥೆಗೆ ಮೀನುಗಾರಿಕೆ ಮತ್ತು ತೋಟಗಾರಿಕೆಗಳೇ ಕೇಂದ್ರಗಳಾಗಿದ್ದುವು.

ಉಡುಗೆಗಳು ಸಸ್ಯಮೂಲ. ನ್ಯೂಗಿನಿಯ ಕೆಲವೆಡೆಗಳಲ್ಲಿ ಸಂಪೂರ್ಣ ನಗ್ನತೆಯೂ ಇತ್ತು. ಅಲ್ಲಿ ಉಡುಗೆ ಕೇವಲ ಅಲಂಕಾರಕ್ಕೆ. ಹವಾಗುಣದ ಕಾರಣದಿಂದ ದಕ್ಷಿಣ ತುದಿಯ ಮಾವೋರಿ (ಮೌರಿ) ಜನ ಹೆಚ್ಚು ಉಡುಪು ಧರಿಸುತ್ತಿದ್ದರು. ಇನ್ನು ಕೆಲವು ಕಡೆಗಳಲ್ಲಿ ಸರಳವಾದ ನೆಯ್ಗೆಯ ವಿಧಾನವೂ ಗೊತ್ತಿತ್ತು.

ಉದ್ದನೆಯ ಮರಗಳ ತೋಡುದೋಣಿಗಳೇ ಇವರು ಬಳಸುತ್ತಿದ್ದ ಸಮುದ್ರಯಾನದ ಸಾಧನಗಳು. (ಪಿ.ಎಚ್.)

# ಔ

**ಔರಂಗಾಬಾದ್:** ಮಹಾರಾಷ್ಟ್ರದ ಒಂದು ಜಿಲ್ಲೆ ಮತ್ತು ಜಿಲ್ಲಾ ಆಡಳಿತ ಕೇಂದ್ರ ನಗರ. ಉ.ಅ. $19^{0}.52'$ ಮತ್ತು ಪೂ.ರೇ. $75^{0}.22'$ನಲ್ಲಿದೆ. 1956ರ ವರೆಗೂ ಇದು ಹೈದರಾಬಾದ್ ರಾಜ್ಯದಲ್ಲಿತ್ತು. ಪುಣೆ ಈಶಾನ್ಯದಲ್ಲಿ 220 ಕಿಮೀ ದೂರದಲ್ಲಿ ಮುಂಬಯಿಗೆ ಪೂರ್ವ ಈಶಾನ್ಯಗಳ ನಡುವೆ 330 ಕಿಮೀ ದೂರದಲ್ಲಿ ಕೌನ್ ನದಿಯ ದಡದ ಮೇಲಿದೆ. ಹೈದರಾಬಾದ್–ಮನ್‌ಮಾಡ್ ರೈಲುಮಾರ್ಗದಲ್ಲಿ ಇದೊಂದು ನಿಲ್ದಾಣ.

ಔರಂಗಾಬಾದಿನ ಪೂರ್ವದ ಹೆಸರು ಖಿಡ್ಕಿ (ಖಿರ್ಕಿ). ಅಹಮದ್ ನಗರದ ಪ್ರಧಾನಿಯಾಗಿದ್ದ ಮಲಿಕ್ ಅಂಬರ್ 1601ರಲ್ಲಿ ಇದನ್ನು ಸ್ಥಾಪಿಸಿದ. 1636ರಲ್ಲಿ ದಖನ್ ಪ್ರಾಂತ್ಯಗಳ ವೈಸ್‌ರಾಯಿಯಾಗಿ ಬಂದ ಔರಂಗ್‌ಜ಼ೇಬ್ ಇದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ಇದಕ್ಕೆ ಈಗಿನ ಹೆಸರಿಟ್ಟ. ನಿಜ಼ಾಮರು ದೆಹಲಿಯ ಸಾಮ್ರಾಜ್ಯದಿಂದ ಸ್ವತಂತ್ರರಾದ ಮೇಲೆ ಈ ನಗರ ಅವನ ರಾಜಧಾನಿಯಾಗಿ ಮುಂದುವರಿಯಿತಾದರೂ ಮುಂದೆ ಅವರು ತಮ್ಮ ರಾಜಧಾನಿಯನ್ನು ಹೈದರಾಬಾದಿಗೆ ವರ್ಗಾಯಿಸಿದಾಗಿನಿಂದ ಈ ನಗರದ ಪ್ರಾಮುಖ್ಯತೆ ಕುಂದಲಾರಂಭಿಸಿತು. 1956ರಲ್ಲಿ ಭಾರತದ ರಾಜ್ಯಪುನರ್ವಿಂಗಡಣೆಯಾದಾಗ ಇದೂ ಔರಂಗಾಬಾದ್ ಜಿಲ್ಲೆಯೂ ಮುಂಬಯಿ ರಾಜ್ಯದಲ್ಲಿ ಸೇರಿದುವು. 1960ರಲ್ಲಿ ಇವು ಮಹಾರಾಷ್ಟ್ರದಲ್ಲಿ ಮುಂದುವರಿದುವಲ್ಲದೆ ಈ ವಿಭಾಗಕ್ಕೆ ಔರಂಗಾಬಾದ್ ನಗರವೇ ಕೇಂದ್ರವಾಯಿತು. ಔರಂಗಾಬಾದ್ ನಗರದ ಸುತ್ತಲೂ ಕಲ್ಲಿನಿಂದ ಕಟ್ಟಿದ ಭದ್ರವಾದ ಕೋಟೆಯಿದೆ. ನಗರಕ್ಕೆ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಮಾರ್ಗಗಳುಂಟು. ಇಲ್ಲಿ ಮರಾಠವಾಡ ವಿಶ್ವವಿದ್ಯಾಲಯವೂ ಹತ್ತಿ ಗಿರಣಿಯೂ ಇವೆ.

ಪ್ರಾಚೀನವಾದ ಪ್ರತಿಷ್ಠಾನಪುರ–ಉಜ್ಜಯಿನಿ ವಾಣಿಜ್ಯಮಾರ್ಗ ಔರಂಗಾಬಾದಿನ ಬಳಿಯಲ್ಲಿ ಹಾದುಹೋಗುತ್ತದೆ. ಬೃಹತ್ ಪರ್ವತಶ್ರೇಣಿಗಳ ಮಧ್ಯೆ ವಿಶಾಲ ಬಯಲಿನಲ್ಲಿರುವ ಔರಂಗಾಬಾದ್ ಪ್ರಾಚೀನ ಅವಶೇಷಗಳಿಗೆ ಪ್ರಸಿದ್ಧವಾದದ್ದು. ಇಲ್ಲಿ ಬೆಟ್ಟಸಾಲಿನಲ್ಲಿ ಕೊರೆದ ಬೌದ್ಧರ 11 ಚೈತ್ಯ ಮತ್ತು ವಿಹಾರ ಗುಹೆಗಳಿವೆ. 4ನೆಯ ಗುಹೆಯಲ್ಲಿ ಪ್ರಶ. 2ನೆಯ ಶತಮಾನದ ಹೀನಯಾನ ಪಂಥದ ಭವ್ಯ ಬುದ್ಧನ ಮೂರ್ತಿಯುಳ್ಳ ಚೈತ್ಯ ಹಾಗೂ ಚೈತ್ಯವಿಹಾರಗಳಿವೆ. 1, 8, 9ನೆಯ ಗುಹೆಗಳು ಅಪೂರ್ಣ. ಗರ್ಭಗುಡಿಯನ್ನು ಹಿಂದಿನ ಗೋಡೆಯಿಂದ ಬೇರ್ಪಡಿಸಿ, ಪ್ರದಕ್ಷಿಣ ಪಥವಿಟ್ಟಿರುವುದು ಈ ಚೈತ್ಯಗಳಲ್ಲಿ ಹೆಚ್ಚಾಗಿ ಕಾಣುತ್ತದೆ. 3ನೆಯ ಗುಹೆಯಲ್ಲಿರುವ ಸುತಸೋಮಜಾತಕದ ನಿರೂಪಣೆ, ಸ್ತಂಭಗಳ ವೈವಿಧ್ಯಮಯ ಕುಸುರಿ ಕೆಲಸ, ಭಕ್ತವೃಂದ ಇವೂ 6ನೆಯ ಗುಹೆಯಲ್ಲಿ ಬೋಧಿಸತ್ತ್ವನೊಡನೆ ಇರುವ ಸ್ತ್ರೀಮೂರ್ತಿಗಳ ಸಾಲು, ಪದ್ಮಪಾಣಿ ಅವಲೋಕಿತೇಶ್ವರ, ತಾರಾವೃಂದದ ಚೌಕಟ್ಟು ಮತ್ತು ನೃತ್ಯಗೋಷ್ಠಿ ಇವೂ ಅಂಗಸೌಷ್ಠವ, ಚೆಲುವು, ಶಿಲ್ಪಕಲೆಯ ಪ್ರತಿಭೆ ಮತ್ತು ಕುಶಲತೆಯ ಅತ್ಯುನ್ನತಿಯ ಗುರುತುಗಳಿವೆ. ಅಜಂತ ಗುಹೆಗಳಲ್ಲಿರುವ ಹಾಗೆ ಅಲ್ಲಲ್ಲಿ ವರ್ಣಚಿತ್ರಗಳ ತುಣುಕುಗಳಿವೆ. ಇತ್ತೀಚೆಗೆ ದೃಷ್ಟಿಗೋಚರವಾದ ಎರಡು ಗುಹೆಗಳ ಪೈಕಿ ಒಂದರಲ್ಲಿ ವೀರಭದ್ರ, ಸಪ್ತಮಾತೃಕೆಯರು, ಗಜಾನನ, ದುರ್ಗಾ ಮತ್ತು ಬುದ್ಧನ ಮೂರ್ತಿಗಳಿರುವುದು ಒಂದು ವಿಶೇಷ.

ಕೆಲವು ಮಸೀದಿಗಳು, ನೌಖಂದ್ ಅರಮನೆ, ಕಲ್ಲಿನ ಕೋಟೆಗಳಲ್ಲದೆ ಮಲಿಕ್ ಅಂಬರನ ಕಾಲದಲ್ಲಿ ನೀರು ಪೂರೈಸುವ ಯೋಜನೆಯ ಭಾಗವಾಗಿ ಅದರ ಸರಳತೆಯಷ್ಟೆ ಚತುರತೆಯಿಂದ ಕಟ್ಟಿದ ನೀರಿನ ಕಾಲುವೆಯುಳ್ಳ ಯಂತ್ರ ಪಂಚಕ್ಕಿ ಕುತೂಹಲಜನಕವಾಗಿದೆ.

ಔರಂಗಾಬಾದ್ ಜಿಲ್ಲೆಯ ವಿಸ್ತೀರ್ಣ 16,353 ಚ.ಕಿಮೀ. ಜನಸಂಖ್ಯೆ 29,20,548. ಈ ಜಿಲ್ಲೆಯ ಉತ್ತರದಲ್ಲಿರುವುದೇ ಸಹ್ಯಾದ್ರಿಶ್ರೇಣಿ. ಅಜಂತ ಮತ್ತು ಜಾಸ್ನ ಬೆಟ್ಟಗಳು ಇದರಲ್ಲಿವೆ. ಗೋದಾವರಿ ನದಿ ಈ ಜಿಲ್ಲೆಯ ಮುಖ್ಯ ನದಿ. ಇದರ ಕೆಲವು ಉಪನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತವೆ. ಪರ್ವತಗಳ ಇಳಿಜಾರಿನಲ್ಲಿ ದಟ್ಟವಾದ ಕಾಡುಗಳಿವೆ. ಕಾಡುಹಂದಿ, ಕರಡಿ, ತೋಳ ಮುಂತಾದುವು ಇಲ್ಲಿರುವ ವನ್ಯಮೃಗಗಳು. ಹುಲಿ ಚಿರತೆಗಳನ್ನೂ ಕಾಣಬಹುದು. ಈ ಜಿಲ್ಲೆಯ ಭೂಮಿ ಮಸಬು ಮತ್ತು ಮಿಲ್ವಾ ಎಂಬ ಎರಡು ಬಗೆಯದು. ಜೋಳ, ಸಜ್ಜೆ ಮತ್ತು ಗೋದಿ ಇಲ್ಲಿಯ ಮುಖ್ಯ ಆಹಾರ ಬೆಳೆಗಳು. ದ್ವಿದಳಧಾನ್ಯ ಮತ್ತು ಬತ್ತವನ್ನೂ ಬೆಳೆಯುತ್ತಾರೆ. ಹತ್ತಿ ಮತ್ತು ಎಣ್ಣೆಕಾಳುಗಳನ್ನೂ ಬೆಳೆಯುವುದುಂಟು. ನೆಯ್ಗೆ, ಕಿನ್‌ಕಾಮು ಕೆಲಸ, ಎಣ್ಣೆ ತಯಾರಿಕೆ ಮುಖ್ಯ ಕೈಗಾರಿಕೆಗಳು. ಸಾಗವಾನಿ ಮುಖ್ಯ ಅರಣ್ಯೋತ್ಪನ್ನ. ಪ್ರಪಂಚಪ್ರಸಿದ್ಧ ಎಲ್ಲೋರ ಮತ್ತು ಅಜಂತ ಗುಹೆಗಳು ಇರುವುದು ಈ ಜಿಲ್ಲೆಯಲ್ಲೇ. 13ನೆಯ ಶತಮಾನದ ಕೋಟೆಯನ್ನುಳ್ಳ ದೌಲತಾಬಾದ್ ಇದೇ ಜಿಲ್ಲೆಯಲ್ಲಿದೆ. ಔರಂಗಾಬಾದಿನಿಂದ 14 ಕಿಮೀ ದೂರದಲ್ಲಿ ಬೆಟ್ಟವೊಂದರ ಮೇಲಿರುವ ಈ ನಗರದ ಪೂರ್ವದಹೆಸರು ದೇವಗಿರಿ. 14ನೆಯ ಶತಮಾನದಲ್ಲಿ ದೆಹಲಿಯ ಸುಲ್ತಾನನಾಗಿದ್ದ ಮಹಮ್ಮದ್ ಬಿನ್ ತೊಗಲಖ್ ತನ್ನ ರಾಜಧಾನಿಯನ್ನು ಇಲ್ಲಿಗೆ ಬದಲಾಯಿಸಿ ಇದಕ್ಕೆ ದೌಲತಾಬಾದ್ (ವೈಭವನಗರ) ಎಂದು ಹೆಸರಿಟ್ಟ. ಗೋದಾವರಿ ನದಿಯ ದಡದಲ್ಲಿರುವ ಪೈಠಣ ಒಂದು ಯಾತ್ರಾಸ್ಥಳ. 17ನೆಯ ಶತಮಾನದಲ್ಲಿದ್ದ ವೈಷ್ಣವ ಸಂತ ಏಕನಾಥ ದೇಹತ್ಯಾಗ ಮಾಡಿದ್ದು ಇಲ್ಲೇ. ಔರಂಗಾಬಾದ್ ನಗರಕ್ಕೆ 28 ಕಿಮೀ ದೂರದಲ್ಲಿರುವ ಖುಲ್ದಾಬಾದಿನಲ್ಲಿ ಚಕ್ರವರ್ತಿ ಔರಂಗ್‌ಜ಼ೇಬನ ಸಮಾಧಿಯಿದೆ. ಅದೊಂದು ತೀರ ಸರಳವಾದ ಗೋರಿ. ತಾನು ಬಟ್ಟೆ ಹೊಲಿದು ಸಂಪಾದಿಸಿದಷ್ಟು ಹಣದಿಂದ ಮಾತ್ರ ತನ್ನ ಗೋರಿ ನಿರ್ಮಿಸಬೇಕೆಂದು ಔರಂಗ್‌ಜ಼ೇಬ್ ಸೂಚನೆ ನೀಡಿದ್ದನೆಂದು ಪ್ರತೀತಿ. (ಎ.ಎಸ್.ಯು.;ಬಿ.)

**ಔಷ್ಣೀಯ ಮಾಲಿನ್ಯ:** ಪರಿಸರದ ಜಲಗೋಳಕ್ಕೆ ಅನಪೇಕ್ಷಣೀಯ ಪ್ರಮಾಣದಲ್ಲಿ ಉಷ್ಣದ ಸೇರ್ಪಡೆಯಿಂದ ಉಂಟಾಗುವ ಮಾಲಿನ್ಯ. ಇದನ್ನು ಉಷ್ಣಮಾಲಿನ್ಯ ಎಂದು ಕರೆಯುವರು.

ಮನುಷ್ಯರ ಹಲವು ಚಟುವಟಿಕೆಗಳಿಂದ ಉಷ್ಣ ಜಲಾಶಯಗಳನ್ನು ಸೇರಿ ಅಲ್ಲಿನ ಪರಿಸ್ಥಿತಿ ಹದಗೆಡುತ್ತಿದೆ. ವಿವಿಧ ರೀತಿಯ ಕೈಗಾರಿಕೆಗಳು, ಜೈವಿಕ ಸ್ಥಾವರಗಳು, ಉಷ್ಣ ವಿದ್ಯುತ್ ಸ್ಥಾವರಗಳು ಮೊದಲಾದವುಗಳಿಂದ ಹೊರಬೀಳುವ ತ್ಯಾಜ್ಯ ಉಷ್ಣ ಶಕ್ತಿಯು ನದಿ,ಕೊಳ, ಸಾಗರದಂಥಹ ಜಲಾಶಯಗಳನ್ನು ಸೇರಿಕೊಂಡು ಉಷ್ಣ ಮಾಲಿನ್ಯವನ್ನು ಉಂಟುಮಾಡುತ್ತದೆ.

ಉಷ್ಣೀಯ ನೀರನ್ನು ಹೊರ ಹಾಕುವ ಮೂರು ಮುಖ್ಯ ಮೂಲಗಳಿವು: ಶಾಖ ವಿದ್ಯುತ್ ಕೇಂದ್ರಗಳು, ಅಣುಸ್ಥಾವರಗಳು, ಪುರಸಭೆ ವ್ಯಾಪ್ತಿಯ ಚರಂಡಿ ನೀರು ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಉತ್ಪಾದಿಸುವ ಸ್ಥಾವರಗಳಲ್ಲಿ ಯಂತ್ರಭಾಗಗಳನ್ನು ತಣ್ಣಗಿಡಲು ಭಾರೀ ಪ್ರಮಾಣದಲ್ಲಿ ನೀರನ್ನು ಉಪಯೋಗಿಸುತ್ತಾರೆ. ಈ ನೀರನ್ನು ಸಮೀಪದಲ್ಲಿರುವ ನದಿ ಅಥವಾ ನೀರಾಸರೆಯಿಂದ ಪಡೆದು ಈ ನೀರನ್ನು ಯಂತ್ರದ ಭಾಗಗಳ ಸುತ್ತಲು ಚಲಿಸುವಂತೆ ಮಾಡುತ್ತಾರೆ. ಇದರಿಂದ ಯಂತ್ರದ ಉಷ್ಣಾಂಶ ನೀರಿಗೆ ಸೇರಿ ಅಲ್ಲಿ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಲಕ್ಷಣಗಳು ಏರ್ಪಡುತ್ತವೆ. ಹಾಗೆಯೇ, ಸಂಸ್ಕರಿಸದೆ ಇರುವ ಗ್ರಾಮಸಾರ ಅಥವಾ ಚರಂಡಿಯ ನೀರನ್ನು, ನೀರಿನ ಆಕರಗಳಿಗೆ ಹರಿಸುವುದರಿಂದಲೂ ಉಷ್ಣಮಾಲಿನ್ಯ ಉಂಟಾಗುತ್ತದೆ.

ನೀರಿನ ಉಷ್ಣಾಂಶದ ಹೆಚ್ಚಳದಿಂದ ಅದರ ಆಮ್ಲಜನಕದ ಪ್ರಮಾಣ ಕಡಿಮೆಯಾಗಿ ಜಲಚರಗಳ ವಿನಾಶವಾಗುತ್ತದೆ. ಜಲಾಶಯಗಳ ನೀರಿನ ತಾಪ ಇದ್ದಕ್ಕಿದ್ದಂತೆ ಏರಿದಾಗ ಅಥವಾ ಕಡಿಮೆ ಆದಾಗ ಜಲಚರಗಳಿಗೆ ಆಘಾತ ಉಂಟಾಗುತ್ತದೆ. ಇದಕ್ಕೆ ಉಷ್ಣಾಘಾತ ಅಥವ ಥರ್ಮಲ್‌ಶಾಕ್ ಎನ್ನುತ್ತಾರೆ. (ಕೆ.ಎಸ್.)

# ಕ

**ಕಂಚಿನ ಯುಗ:** ಪೂರ್ವಶಿಲಾಯುಗ, ನವಶಿಲಾಯುಗ ಸಂಸ್ಕೃತಿಗಳ ಅನಂತರ ರೂಢಿಗೆ ಬಂದ ಸಂಸ್ಕೃತಿಯನ್ನು ಸೂಚಿಸುವ ಯುಗ. ತವರ ಮತ್ತು ತಾಮ್ರಗಳ ಮಿಶ್ರಲೋಹವಾದ ಕಂಚಿನಿಂದ ಮಾಡಿದ ಆಯುಧೋಪಕರಣಗಳ ಬಳಕೆ ಪ್ರಧಾನವಾಗಿದ್ದುದರಿಂದ ಈ ಯುಗಕ್ಕೆ ಕಂಚಿನ ಯುಗವೆಂದು ಹೆಸರು. ಈ ಕಾಲದಲ್ಲೂ ಕಲ್ಲಿನಾಯುಧಗಳು ಬಳಕೆಯಲ್ಲಿ ಮುಂದುವರಿಯುತ್ತಿದ್ದವು. ಈ ಸಂಸ್ಕೃತಿಯ ಮೊದಲ ಹಂತದಲ್ಲಿ ಶುದ್ಧವಾದ ತಾಮ್ರದಿಂದ ಮಾಡಿದ ಮತ್ತು ಕಲ್ಲಿನ ಆಯುಧೋಪಕರಣಗಳು ರೂಢಿಯಲ್ಲಿದ್ದುದರಿಂದ, ಆ ಕಾಲವನ್ನು ತಾಮ್ರ ಶಿಲಾಯುಗವೆಂದು ಪುರಾತತ್ತ್ವಜ್ಞರು ಕರೆದಿದ್ದಾರೆ. ಮೆಸೊಪೊಟೇಮಿಯದ ಪ್ರಾಗೈತಿಹಾಸಿಕ ಯುಗಕ್ಕೆ ಸೇರಿದ ಹಲಾಫ್ ಸಂಸ್ಕೃತಿಯಲ್ಲೂ (ಪ್ರ.ಶ.ಪೂ. ಸು. 4000) ಇರಾನಿನಿಂದ ಸೈಲೀಷಿಯದವರೆಗಿನ ಸಮಕಾಲೀನ ಸಂಸ್ಕೃತಿಗಳಲ್ಲೂ ಮೊದಲ ಬಾರಿಗೆ ತಾಮ್ರ ಉಪಯೋಗಿಸಲ್ಪಟ್ಟಿತು. ಪ್ರ.ಶ.ಪೂ. 4ನೆಯ ಸಹಸ್ರಮಾನದಲ್ಲಿ ಲೋಹಗಾರಿಕೆ ಬಹಳ ಮುಂದುವರಿದು ಅನೇಕ ರೀತಿಯ ಆಯುಧೋಪಕರಣಗಳು ಬಳಕೆಗೆ ಬಂದು ಮೆಸೊಪೊಟೇಮಿಯದಲ್ಲಿ ನಗರೀಕರಣ ಕಾರ್ಯ ಆರಂಭವಾಯಿತು. ಪ್ರ.ಶ.ಪೂ. 2000 ವರ್ಷಗಳ ಸುಮಾರಿನಲ್ಲಿ ಮಧ್ಯ ಪ್ರಾಚ್ಯದ ಎಲ್ಲೆಡೆಗಳಲ್ಲೂ ಯುರೋಪಿನ ನವಶಿಲಾಯುಗ ಸಂಸ್ಕೃತಿನೆಲೆಗಳಲ್ಲೂ ತಾಮ್ರದ ಉಪಯೋಗ ರೂಢಿಗೆ ಬಂತು. ಈ ಮೊದಲ ಹಂತದ ಸಂಸ್ಕೃತಿಗಳನ್ನು ತಾಮ್ರಯುಗೀನ ಸಂಸ್ಕೃತಿಯೆಂದು ಕರೆಯಬಹುದಾದರೂ ಬಹುತೇಕ ವಿದ್ವಾಂಸರು ಇದನ್ನು ಕಂಚಿನ ಯುಗದ ಸಂಸ್ಕೃತಿಗಳ ಮೊದಲ ಹಂತವೆಂದು ಪರಿಗಣಿಸುತ್ತಾರೆ. ತಾಮ್ರದೊಂದಿಗೆ ತವರ ಅಥವಾ ಸೀಸವನ್ನು ಮಿಶ್ರಮಾಡಿ ತಯಾರಿಸಿದ ಕಂಚಿನ ಉಪಯೋಗ ಪ್ರ.ಶ.ಪೂ. 2000ಕ್ಕೂ ಮೊದಲು ಎಲ್ಲೂ ಕಂಡುಬಂದಿಲ್ಲ. ಅನಂತರವು ಹಲವು ಶತಮಾನಕಾಲ ಇದರ ಬಳಕೆ ಕಡಿಮೆಯಾಗಿತ್ತು. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ರೂಢಿಗೆ ಬಂದರೂ ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಏಷ್ಯ ಮೈನರ್, ಗ್ರೀಸ್, ಮೆಸೊಪೊಟೇಮಿಯ ಮತ್ತು ಭಾರತಗಳ ಮುಂದುವರಿದ ನಾಗರಿಕತೆಗಳಲ್ಲಿ ಕಂಚಿನ ಉಪಯೋಗ ವಿಶೇಷವಾಗಿ ಕಂಡುಬರುತ್ತದೆ.

ಮೊದಲಿಗೆ ಪ್ರಾಕೃತಿಕವಾಗಿ ತಾಮ್ರದೊಂದಿಗೆ ತವರ ಅಥವಾ ಸೀಸ ಮಿಶ್ರಣವಾಗಿ ಕಂಚಾಗಿದ್ದಿರಬಹುದು. ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ತವರದ ನಿಕ್ಷೇಪಗಳ ಪತ್ತೆಯಾದ ಅನಂತರ ಉದ್ದೇಶಪೂರ್ವಕವಾಗಿ ತಯಾರಿಸಿದ ಕಂಚಿನ ಬಳಕೆ ರೂಢಿಗೆ ಬಂದಿರಬೇಕು. ಮೊದಲಿಗೆ ಅನಟೋಲಿಯದ (ಈಗಿನ ಟರ್ಕಿ) ಪ್ರದೇಶದಲ್ಲಿ ಇಂಥ ಕಂಚಿನ ಆಯುಧಗಳು ಉಪಯೋಗದಲ್ಲಿದ್ದವು. ಪ್ರಾಕ್ತನ ಜಗತ್ತಿನಲ್ಲಿ ತವರವನ್ನು ವಿಶೇಷವಾಗಿ ಒದಗಿಸುತ್ತಿದ್ದ ಇಂಗ್ಲೆಂಡಿನ ಕಾರ್ನ್‌ವಾಲ್ ಪ್ರಾಂತ್ಯದ ನಿಕ್ಷೇಪಗಳು ಪ್ರ.ಶ.ಪೂ. 2ನೆಯ ಸಹಸ್ರಮಾನದಲ್ಲಿ ಕಂಡುಹಿಡಿಯಲ್ಪಟ್ಟು ಬಳಕೆಗೆ ಬಂದುವು. ಈ ರೀತಿ ಸು. 2,000 ವರ್ಷಗಳ ಕಾಲ ಮೊದಲಿಗೆ ತಾಮ್ರ, ಅನಂತರ ಕಂಚಿನ ಬಳಕೆ ಪ್ರಮುಖವಾಗಿದ್ದು ಪ್ರ.ಶ.ಪೂ. 2ನೆಯ ಸಹಸ್ರಮಾನದಂತ್ಯದಿಂದ ಕಬ್ಬಿಣದ ಆವಿಷ್ಕಾರ ನಡೆದು ಕಬ್ಬಿಣದ ಯುಗ ಹುಟ್ಟಿಕೊಂಡಿತು.

ಈ ಕಾಲದಲ್ಲಿ ವ್ಯಾಪಾರ ಮತ್ತು ವೃತ್ತಿನಿಪುಣತೆಗಳು ಬೆಳೆದುಬಂದವು. ಲೋಹದ ಕೆಲಸಗಾರರು, ಅದಿರಿನ ನಿಕ್ಷೇಪಗಳನ್ನು ಅಗೆದು ತೆಗೆಯುತ್ತಿದ್ದವರು ತಮ್ಮ ಕಾರ್ಯಕ್ಷೇತ್ರಗಳಲ್ಲಿ, ನಿಷ್ಣಾತರಾಗಿದ್ದು ತಮ್ಮ ಉತ್ಪನ್ನಗಳನ್ನು ರೈತರಿಗೊದಗಿಸಿ, ಅವರಿಂದ ಆಹಾರ ಅಥವಾ ಇತರ ವಸ್ತುಗಳನ್ನು ಅವರು ಪಡೆದುಕೊಳ್ಳುತ್ತಿದ್ದರು. ಈ ರೀತಿ ಅದಲುಬದಲು ವ್ಯಾಪಾರ ಬೆಳೆಯಿತು. ಅದಿರಿನಿಂದ ಲೋಹವನ್ನು ಬೇರ್ಪಡಿಸುವುದು ಮತ್ತು ಆವಶ್ಯಕವಾದ ಆಯುಧೋಪಕರಣಗಳನ್ನು ನಿರ್ಮಿಸುವುದು ಕುಶಲಕಲೆಗಳಾಗಿ ಬೆಳೆದುವು. ಆಯಾ ವೃತ್ತಿಗೆ ಸಂಬಂಧಿಸಿದ ಕುಶಲ ಕೆಲಸಗಾರರ ಸಂಘಗಳು ಹುಟ್ಟಿಕೊಂಡವು. ವೃತ್ತಿಸಂಬಂಧವಾದ ರಹಸ್ಯಗಳನ್ನು ಅವುಗಳ ಸದಸ್ಯರು ಜತನದಿಂದ ಕಾಪಾಡಿಕೊಳ್ಳುತ್ತಿದ್ದರು. ನವಶಿಲಾಯುಗದಲ್ಲಿ ಪ್ರತಿಯೊಂದು ಕುಟುಂಬ ಮತ್ತು ಪಂಗಡ ಸ್ವಯಂಪೂರ್ಣವಾಗಿರುತ್ತಿದ್ದರೆ ಈ ಕಾಲದಲ್ಲಿ ಸಮಾಜದ ವ್ಯಕ್ತಿಗಳು ಪರಸ್ಪರಾವಲಂಬನೆಯಿಂದ ಜೀವಿಸುತ್ತಿದ್ದುದು ಮಾತ್ರವಲ್ಲ, ದೂರಪ್ರದೇಶಗಳಲ್ಲಿ ಉತ್ಪಾದಿಸುತ್ತಿದ್ದ ವಸ್ತುಗಳನ್ನು ವ್ಯಾಪಾರ ಮುಖೇನ ಪಡೆಯಬೇಕಾಗಿತ್ತು. ಪ್ರತಿಯೊಂದು ವೃತ್ತಿಯವರೂ ತಮಗೆ ಬೇಕಾದುದಕ್ಕಿಂತ ಹೆಚ್ಚಿನ ಉತ್ಪನ್ನಗಳನ್ನು ಇತರರಿಗೆ ನೀಡಿ ಅವರಿಂದ ಅವರ ಉತ್ಪನ್ನಗಳನ್ನು ತಾವು ಪಡೆಯುತ್ತಿದ್ದರು. ಇದರಿಂದ ಒಂದು ರೀತಿಯ ಸಹಕಾರಿ ಸಾಮಾಜಿಕ ಜೀವನ ರೂಢಿಗೆ ಬಂತು. ಈ ಯುಗದ ಮತ್ತೆರಡು ಬಹಳ ಮುಖ್ಯ ಆವಿಷ್ಕಾರಗಳೆಂದರೆ ವ್ಯವಸಾಯದ ಪ್ರಗತಿಗೆ ಸಾಧಕವಾಗಿದ್ದು ಎತ್ತುಗಳಿಂದ ಎಳೆಯಲ್ಪಡುತ್ತಿದ್ದ ನೇಗಿಲು ಮತ್ತು ವ್ಯಾಪಾರದ ಸಾಮಾನುಗಳನ್ನು ದೂರ ಪ್ರದೇಶಗಳಿಂದ ಸಾಗಿಸಲು ಅತ್ಯುಪಯುಕ್ತವಾದ ಗಾಡಿಯ ಚಕ್ರ. ಈ ಎರಡು ಶೋಧನೆಗಳಿಂದ ಜನಜೀವನ ರೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಸಂಭವಿಸಿ ಸಂಪದಭಿವೃದ್ಧಿಗೆ ಕಾರಣವಾಯಿತು. (ಬಿ.ಕೆ.ಜಿ.;ಎ.ವಿ.ಎನ್.)

**ಕಂಟೋನ್ಮೆಂಟ್:** ಸೈನಿಕ ನೆಲೆ ಅಥವಾ ದಂಡು ಪ್ರದೇಶ. ಭಾರತ, ಪಾಕಿಸ್ತಾನ ಮತ್ತು ಶ್ರೀಲಂಕಗಳ ನಗರಗಳಲ್ಲಿ ಬ್ರಿಟಿಷರ ಅವಧಿಯಲ್ಲಿ ಸೈನಿಕ ನೆಲೆಗಳನ್ನು ಸ್ಥಾಪಿಸಲಾಗಿತ್ತು. ಇವುಗಳನ್ನೇ ಕಂಟೋನ್ಮೆಂಟ್‌ಗಳೆಂದು ಕರೆಯಲಾಗಿದೆ. ಕಂಟೋನ್ಮೆಂಟ್ ಎಂಬ ಪದ ಫ್ರೆಂಚ್ ಭಾಷೆಯ ಕ್ಯಾಂಟನ್ ಎಂಬ ಪದದಿಂದ ಬಳಕೆಗೆ ಬಂದಿದ್ದು, ಇದರ ಅರ್ಥ ಜಿಲ್ಲೆ ಅಥವಾ ಒಂದು ಭಾಗವೆಂದಾಗಿದೆ. ಭಾರತದಲ್ಲಿ 16 ರಾಜ್ಯಗಳಲ್ಲಿ ಸು. 62 ಕಂಟೋನ್ಮೆಂಟ್‌ಗಳು ಅಸ್ತಿತ್ವದಲ್ಲಿದೆ. ಅಹಮದಾಬಾದ್, ಬೆಳಗಾಂವಿ, ಬೆಂಗಳೂರು, ಅಂಬಾಲ, ದೆಹಲಿ, ಪುಣೆ ಕಂಟೋನ್ಮೆಂಟ್‌ಗಳು ಇವುಗಳಲ್ಲಿ ಮುಖ್ಯವಾದವು. ಇಂದಿಗೂ ಇವುಗಳು ಸೈನಿಕ ನೆಲೆಗಳಾಗಿ ಉಳಿದಿವೆ. (ಎಸ್.ಎನ್.)

**ಕಂದಾಯ ನಕ್ಷೆಗಳು (ಕೆಡಸ್ಟ್ರಲ್ ನಕ್ಷೆಗಳು):** ಇವುಗಳು ದೊಡ್ಡ ಅಳತೆಯ ನಕ್ಷೆಗಳಿಗೆ ಉತ್ತಮ ಉದಾಹರಣೆ. ಇವುಗಳಲ್ಲಿ ಭೂಮಿ, ಕಟ್ಟಡಗಳು ಮುಂತಾದವುಗಳ ಎಲ್ಲೆಗಳನ್ನು ಕರಾರುವಕ್ಕಾಗಿ ನಮೂದಿಸಲಾಗಿರುತ್ತದೆ. ಇವು ಹಳ್ಳಿಗಳು ಅಥವಾ ಪಟ್ಟಣಗಳ ಭೂ ಬಳಕೆ ಪೂರ್ಣ ವಿವರಗಳನ್ನು ನೀಡುತ್ತವೆ. ಅತಿಚಿಕ್ಕ ಭೂ ಪ್ರದೇಶದಲ್ಲಿರುವ, ಬಾವಿ, ಕಟ್ಟಡ, ಕೆರೆ, ತೋಟ ಮುಂತಾದವುಗಳ ಪೂರ್ಣ ವಿವರಗಳನ್ನು ಒಳಗೊಂಡಿರುತ್ತವೆ. ಇವುಗಳು ಸ್ಥಳೀಯ ಆಡಳಿತ, ತೆರಿಗೆ ವಿಧಿಸಲು ಹಾಗೂ ಆಸ್ತಿ–ಪಾಸ್ತಿಗಳ ವಿವಾದಗಳನ್ನು ಬಗೆಹರಿಸಲು ಅತಿ ಉಪಯುಕ್ತ. (ಆರ್.ಎನ್.)



ಕಂದಾಯ ನಕ್ಷೆ

**ಕಂಬದಕಡ ಯೋಜನೆ:** ಸೋಮವಾರಪೇಟೆ ತಾಲ್ಲೂಕಿನ ಹೊಸಪಟ್ಟಣದ ಬಳಿ ಕಾವೇರಿ ನದಿಗೆ ಒಂದು ಕಟ್ಟೆ ಕಟ್ಟಿ ಸು. 5,110 ದಶಲಕ್ಷ ಘನ ಅಡಿ ನೀರನ್ನು ಶೇಖರಿಸುವುದು ಇದರ ಉದ್ದೇಶ. ಈ ಕಟ್ಟೆಯ ಬಲದಂಡೆ ಕಾಲುವೆಯ ನೀರು ಸು. 1700 ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿ, ಕೊನೆಗೆ ಹಾರಂಗಿ ನೀರಾವರಿ ಯೋಜನೆಯ ಬಲಭಾಗದ ಶಾಖೆಯ ಕಾಲುವೆಯನ್ನು ಸೇರಿ ಸು. 6400

ಹೆ. ಅಧಿಕ ಪ್ರಮಾಣದ ಭೂಮಿಗೆ ನೀರನ್ನೊದಗಿಸುವುದು. ಸು. 1700 ಹೆ. ಬೆಳೆಯುವ, ವರ್ಷಕ್ಕೆ ಎರಡು ಭತ್ತದ ಬೆಳೆ ಮತ್ತು ಸು. 6400 ಹೆ.ಗಳಲ್ಲಿ ಕಬ್ಬಿನ ಬೆಳೆ–ಈ ಯೋಜನೆಯಿಂದ ನೀರಿನ ಸೌಲಭ್ಯವನ್ನು ಪಡೆಯುವುವು. ಮೂಲ ಯೋಜನೆಯ ಒಟ್ಟು ವೆಚ್ಚ ಸು. 500 ಲಕ್ಷ ರೂಪಾಯಿ.

ಈ ಅಣೆಕಟ್ಟೆಯು ಗುಡ್ಡೆಹೊಸೂರಿನಿಂದ ಸು. 8 ಕಿಮೀ ದೂರದ ಹೊಸಪಟ್ಟಣದ ಬಳಿ ಇದೆ. ಕುಶಾಲನಗರದಿಂದ ಇಲ್ಲಿಗೆ ಸು. 12 ಕಿಮೀ ದೂರ. ಕಟ್ಟೆಯ ಉದ್ದ 1,516 ಮೀ ನದಿಯ ತಳಭಾಗದಿಂದ ಕಟ್ಟೆಯ ಎತ್ತರ ಸು. 25.6 ಮೀ ಇದರ ಜಲಶೇಖರಣಾ ಸಾಮರ್ಥ್ಯ ಸು. 6,100 ದಶಲಕ್ಷ ಘನ ಅಡಿಗಳು. ಜಲಾಶಯ ಸು. 5,057 ಎಕರೆಯಷ್ಟು ಭೂಮಿಯನ್ನು ಆವರಿಸುವುದು. ಇದರಲ್ಲಿ 2304 ಎಕರೆ ಖಾಸಗಿ ಆಸ್ತಿಯೂ ಸು. 2,753 ಕಾಡುಪ್ರದೇಶವು ಸೇರಿವೆ. ಕರ್ನಾಟಕದ ಪಾಲಿನ ಕಾವೇರಿ ನದಿಯ ನೀರಿನಲ್ಲಿ ಸು. 5,650 ದಶಲಕ್ಷ ಘನ ಅಡಿ ನೀರು ಇಲ್ಲಿ ಬಳಕೆ ಆಗುವುದು. ಈ ಯೋಜನೆ ಇಂದಿಗೂ ಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. (ಕೆ.ಸಿ.ಜಿ.)

**ಕಕೇಸಿಯನ್ ಭಾಷಾ ಪರಿವಾರ:** ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರಗಳ ಮಧ್ಯ ಭಾಗದಲ್ಲಿ ಇರುವ ಬಹು ವಿಶಾಲವಾದ ಕಕೇಸಿಯ ಪ್ರದೇಶದಲ್ಲಿ ವಾಸಿಸುವ ಜನ ಆಡುತ್ತಿರುವ ವಿವಿಧ ಭಾಷೆಗಳ ಒಂದು ಸಮೂಹ. ಈ ಭಾಷಾಕ್ಷೇತ್ರ ರಷ್ಯದ ದಕ್ಷಿಣದಲ್ಲಿ ಕಕೇಸಿಯನ್ ಭೂಸಂಧಿಯಿಂದ ಮೊದಲಾಗಿ ತುರ್ಕಿ ಮತ್ತು ಇರಾನ್ ದೇಶಗಳವರೆಗೂ ಹರಡಿಕೊಂಡಿದೆ. ಈ ವಿಶಾಲವಾದ ಭೂಪ್ರದೇಶದಲ್ಲಿ ಸು. 40 ಲಕ್ಷಕ್ಕೂ ಹೆಚ್ಚು ಜನ ಈ ಭಾಷೆಗಳನ್ನು ಬಳಸುತ್ತಿದ್ದಾರೆ. ಈ ಭಾಷಾಪರಿವಾರಕ್ಕೆ ಸೇರಿದ ಹೆಚ್ಚು ಉಪಭಾಷೆಗಳು ಕಾಕಸಸ್ ಪರ್ವತದ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಎಲ್ಲ ಭಾಷೆ ಮತ್ತು ಉಪಭಾಷೆಗಳನ್ನು ಅಧ್ಯಯನ ಮಾಡಲು ಹೊರಟಾಗ ಅವು ಪರಸ್ಪರ ಭಿನ್ನ ಭಿನ್ನವಾಗಿಯೇ ಕಂಡುಬಂದಿವೆ. ಈ ಕಾರಣಗಳಿಂದಾಗಿ ಇವು ವಿಶ್ವದ ಯಾವ ಭಾಷಾ ಪರಿವಾರಕ್ಕೂ ಸೇರದೆ ಒಂದು ಸ್ವತಂತ್ರಭಾಷಾಪರಿವಾರವಾಗಿಯೇ ಉಳಿದಿವೆ. ಇವು ಪ್ರಾಚೀನ ಮೆಡಿಟರೇನಿಯನ್ ಭಾಷೆಗಳ ಪಳೆಯುಳಿಕೆಗಳಿಂದ ವಿಕಾಸಗೊಂಡ ಭಾಷೆಗಳಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಹೆಚ್ಚಿನ ವಿಚಾರಗಳನ್ನು ತಿಳಿಯಲು ಸಾಕಷ್ಟು ಪುರಾವೆಗಳಿಲ್ಲದೆ ಇವು ಇನ್ನೂ ಅಸ್ಪಷ್ಟವಾಗಿಯೇ ಉಳಿದಿವೆ. ಈ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ.

ಕಕೇಸಿಯನ್ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳನ್ನು ಮುಖ್ಯವಾಗಿ ಮೂರು ವರ್ಗಗಳನ್ನಾಗಿ ವಿಂಗಡಿಸಬಹುದು:

1. ಪೂರ್ವ ಕಕೇಸಿಯನ್ ಭಾಷಾವರ್ಗ: (1) ಚೆಚೆನ್ (2) ಅವ್ರೊ–ಅಂದಿ (3) ದರ್ಘಿ (4) ಸಮುರ್ (5) ಲಕ್ ಅಥವಾ ಕಸಿ–ಕುಮುಕ್ (6) ಅರ್ಚ್ಚಿ (7) ಹಿನುಲುಘ್ (8) ಉದಿ ಎಂಬ ಎಂಟು ಭಾಷಾಶಾಖೆಗಳು ಸೇರಿವೆ.

2. ಪಶ್ಚಿಮ ಕಕೇಸಿಯನ್ ಭಾಷಾವರ್ಗ: (1) ಅಭಘ (2) ಉಭಿಕ್ (3) ಅದಿಘೆ ಎಂಬ ಮೂರು ಭಾಷಾ ಶಾಖೆಗಳು ಸೇರಿವೆ.

3. ದಕ್ಷಿಣ ಕಕೇಸಿಯನ್ ಭಾಷಾವರ್ಗ: (1) ಜಾರ್ಜಿಯಸ್ (2) ಮಿಂಗ್ರೆಲಿಯನ್ ಮತ್ತು ಲಝ್ (3) ಸ್ವನೇತಿಯನ್ ಎಂಬ ಭಾಷಾಶಾಖೆಗಳು ಸೇರಿವೆ.

ಈ ಭಾಷಾರ್ಗೀಕರಣವನ್ನು ಸಮರ್ಪಕ ಹಾಗೂ ಪರಿಪೂರ್ಣ ಎಂದು ಒಪ್ಪದ ಕೆಲವು ವಿದ್ವಾಂಸರು ಈ ವರ್ಗದ ಕೆಲವು ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿ ಅವುಗಳಲ್ಲಿ ಮುಖ್ಯವಾಗಿ ಕಂಡುಬರಬಹುದಾದ ಸಾಮ್ಯಗಳನ್ನು ಆಧಾರವಾಗಿರಿಸಿಕೊಂಡು ಅವನ್ನು ಮತ್ತೆ ವರ್ಗೀಕರಿಸತೊಡಗಿದರು. ಪೂರ್ವ ಮತ್ತು ಪಶ್ಚಿಮ ಕಕೇಸಿಯನ್ ಭಾಷೆಗಳಲ್ಲಿ ಸಾಕಷ್ಟು ಸಾಮ್ಯ ಕಂಡು ಬಂದ ಕಾರಣದಿಂದ ಅವನ್ನು ಒಟ್ಟುಗೂಡಿಸಿ ಉತ್ತರ ಕಕೇಸಿಯನ್ ಭಾಷಾವರ್ಗವೆಂದು ಕರೆದರು. ಅಂದಿನಿಂದ ಈ ಕಕೇಸಿಯನ್ ಭಾಷಾಪರಿವಾರಕ್ಕೆ ಸೇರಿದ ಎಲ್ಲ ಭಾಷೆಗಳನ್ನೂ ಉತ್ತರ ಮತ್ತು ದಕ್ಷಿಣ ಕಕೇಸಿಯನ್ ಭಾಷಾವರ್ಗಗಳೆಂದು ಕರೆಯುವುದು ರೂಢಿಗೆ ಬಂತು. ಉತ್ತರ ಕಕೇಸಿಯನ್ ಭಾಷೆಗಳಾದ ಪೂರ್ವ ಮತ್ತು ಪಶ್ಚಿಮ ಕಕೇಸಿಯನ್ ಭಾಷೆಗಳು ದಕ್ಷಿಣ ಕಾಕೇಸಿಯನ್ ಭಾಷೆಗಳೊಡನೆ ಹೋಲಿಸಿದಾಗ ಪರಸ್ಪರ ಭಿನ್ನವಾಗಿಯೇ ಕಂಡುಬರುತ್ತವೆ. (ಕೆ.ಕೆ.ಜಿ.)

**ಕಜ಼ಾಕ್‌ಸ್ತಾನ:** ಹಿಂದಿನ ಸೋವಿಯತ್ ಒಕ್ಕೂಟಕ್ಕೆ ಸೇರಿದ್ದ 15 ರಾಜ್ಯಗಳಲ್ಲಿ ಒಂದು. 1991ರಲ್ಲಿ ಸ್ವತಂತ್ರ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂದಿತು. ಮಧ್ಯ ಏಷ್ಯದ ಉತ್ತರ ಭಾಗದಲ್ಲಿರುವ ಇದನ್ನು ಉತ್ತರದಲ್ಲಿ ರಷ್ಯ, ಪೂರ್ವಭಾಗದಲ್ಲಿ ಚೀನ, ದಕ್ಷಿಣದಲ್ಲಿ ಕಿರ್ಗಿಸ್ತಾನ ಸಮುದ್ರ ಹಾಗೂ ತುರ್ಕಮೇನಿಸ್ತಾನದ ಕೆಲವು ಪ್ರದೇಶಗಳು ಸುತ್ತುವರಿದಿವೆ.

ಕಜ಼ಾಕ್‌ಸ್ತಾನ ಗಾತ್ರದಲ್ಲಿ ಸಾಕಷ್ಟು ವಿಶಾಲವಾದ ರಾಜ್ಯ. ಸಮಶೀತೋಷ್ಣವಲಯದ ಹುಲ್ಲುಗಾವಲಿನಿಂದ (ಸ್ಟೆಪ್ಪಿಸ್) ಕೂಡಿರುವ ಈ ರಾಷ್ಟ್ರ ಏರಿಳಿತಗಳಿಂದ ಕೂಡಿರುವ ಮೈದಾನಗಳು, ಕಣಿವೆಗಳು ಹಾಗೂ ಪ್ರಸ್ಥಭೂಮಿಗಳನ್ನು ಹೊಂದಿದೆ. ಅಕ್ಷಾಂಶ $44^{0}55'$ ಉ. ಮತ್ತು ರೇ. $50^{0}90'$ ಪೂ.ದಲ್ಲಿ ವಿಸ್ತರಿಸಿರುವ ಈ ರಾಷ್ಟ್ರ 2,717,300 ಚ.ಕಿಮೀ ಭೌಗೋಳಿಕ ಪ್ರದೇಶವನ್ನು ಹೊಂದಿದೆ. ಇದರಲ್ಲಿ 1894 ಚ.ಕಿಮೀ ಕ್ಯಾಸ್ಪಿಯನ್ ಸಮುದ್ರ ಕರಾವಳಿ ತೀರವನ್ನು ಹೊಂದಿದೆ. ಜನಸಂಖ್ಯೆ 1,52,33,244 (2002). ರಾಜಧಾನಿ ಆಸ್ಥಾನ. ಇದರ ಜನಸಂಖ್ಯೆ 2,80,2000 (2002).




ಭೂ ಸಂಪನ್ಮೂಲಗಳು ಕಜ಼ಾಕ್‌ಸ್ತಾನದ ಕೃಷಿ ಅಭಿವೃದ್ಧಿಗೆ ಪೂರಕವಾಗಿಲ್ಲ. ಅಧಿಕ ಪ್ರಮಾಣದ ಮಣ್ಣಿನ ಸವಕಳಿ, ಅಲ್ಪಮಳೆ, ಒಣಹವೆ, ಅಲ್ಕಲೈನ್‌ನಿಂದ ಕೂಡಿರುವ ಅಂತರ್ಜಲ ಮೊದಲಾದ ಅಂಶಗಳಿಂದ ಕೃಷಿ ಭೂಮಿ ಸ್ವಾಭಾವಿಕ ಸತ್ತ್ವವನ್ನು ಕಳೆದುಕೊಂಡಿದೆ. ಈ ಕಾರಣದಿಂದ ಸರ್ಕಾರ ವಿಶೇಷ ಮಣ್ಣಿನ ಸಂರಕ್ಷಣೆಯ ಕಾರ್ಯವಿಧಾನಗಳನ್ನು ರೂಪಿಸುತ್ತಿದೆ. ಈ ರಾಷ್ಟ್ರ ಮಧ್ಯ ಸ್ಟೆಪಿ ಹುಲ್ಲುಗಾವಲಿನಲ್ಲಿದ್ದು, ಈ ವಲಯ ಸೈಬೀರಿಯದವರೆಗೆ ಹಂಚಿಕೆಯಾಗಿದೆ. ಈ ಭಾಗದಲ್ಲಿ ಸು. 11,000 ಸಣ್ಣಪುಟ್ಟ ನದಿಗಳು, 7,000 ಸರೋವರಗಳು ಹಾಗೂ ಜಲಾಶಯಗಳಿವೆ. ಅಗಾಧವಾದ ಜಲಸಂಪತ್ತು ಕೃಷಿಗೆ ಮತ್ತು ಶಕ್ತಿ ಸಂಪನ್ಮೂಲವಾಗಿ ಹಾಗೂ ನೌಕಾಯಾನಕ್ಕೆ ಬಳಸಿಕೊಳ್ಳಲಾಗುತ್ತಿದೆ. ಈ ಭಾಗದ ಕೆಲವು ಪ್ರಮುಖ ನದಿಗಳು: ಇರ್‌ಟಿಶ್ (1700 ಕಿಮೀ), ಐಷ್ಮ (1400 ಕಿಮೀ), ಯುರಲ್ (1082 ಕಿಮೀ), ಸಿರ್‌ದರ್ಯ (1400 ಕಿಮೀ), ಲೀ (815 ಕಿಮೀ), ಚೂ (800 ಕಿಮೀ), ಟೋಬೋಲ್ (800 ಕಿಮೀ) ಮತ್ತು ನುರು (978 ಕಿಮೀ).

ಸ್ವಾಭಾವಿಕ ಸಂಪನ್ಮೂಲಗಳ ನಿಕ್ಷೇಪಗಳನ್ನು ಸಾಕಷ್ಟು ಪ್ರಮಾಣದಲ್ಲಿ ಈ ದೇಶ ಹೊಂದಿದೆ. ಕ್ರೋಮಿಯ, ತಾಮ್ರ, ಸೀಸ ಮತ್ತು ಸತು, ಕಲ್ಲಿದ್ದಲು, ಪೆಟ್ರೋಲ್, ಚಿನ್ನದ ನಿಕ್ಷೇಪಗಳು ಪತ್ತೆಯಾಗಿವೆ. ಪೆಟ್ರೋಲ್ ಹಾಗೂ ಸ್ವಾಭಾವಿಕ ಅನಿಲದ ನಿಕ್ಷೇಪ ಸು. 14 ಕಣಿವೆಗಳಲ್ಲಿ ಹಂಚಿಕೆಯಾಗಿರುವುದನ್ನು ಪತ್ತೆಮಾಡಲಾಗಿದೆ. ಅವುಗಳಲ್ಲಿ 160 ಪ್ರದೇಶಗಳಲ್ಲಿ ಇಂಧನ ನಿಕ್ಷೇಪ ಉತ್ಕೃಷ್ಟವಾದುದು ಎಂದು ತಿಳಿದುಬಂದಿದೆ. ಚಿನ್ನದ ನಿಕ್ಷೇಪವನ್ನು ಸು. 300 ಪ್ರದೇಶಗಳಲ್ಲಿ ಶೋಧಿಸಲಾಗಿದ್ದು ಅವುಗಳಲ್ಲಿ 173 ಪ್ರದೇಶಗಳಲ್ಲಿ ಉತ್ತಮ ದರ್ಜೆಯ ನಿಕ್ಷೇಪಗಳಿವೆ. ಪ್ರಸ್ತುತ ಪ್ರಪಂಚದ ಶೇ. 1 ರಷ್ಟನ್ನು ಗಣಿಗಾರಿಕೆಯಿಂದ ಹೊರತೆಗೆಯಲಾಗುತ್ತಿದೆ.

ಕಜ಼ಾಕ್‌ಸ್ತಾನ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ದೇಶ. ಕರಗಂಡ ಇಲ್ಲಿನ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ಪ್ರದೇಶ. ಇದು ಸು. 3,000 ಚ.ಕಿಮೀ ವಿಸ್ತೀರ್ಣದಲ್ಲಿ ಹರಡಿದೆ. ಇಲ್ಲಿ 34,000 ಮಿ.ಟನ್. ನಿಕ್ಷೇಪವಿದ್ದು ಅದರಲ್ಲಿ 31,000 ಮಿ.ಟನ್ ಉತ್ತಮ ದರ್ಜೆಯ ಆಂತ್ರಸೈಟ್ ಮತ್ತು ಬಿಟುಮಿನಸ್ ಕಲ್ಲಿದ್ದಲು, 3,000 ಮಿ.ಟನ್ ದ್ವಿತೀಯ ದರ್ಜೆಯ ಬಿಟುಮಿನಸ್ ಮತ್ತು ಲಿಗ್ನೈಟ್ ಕಲ್ಲಿದ್ದಲು ದೊರೆಯುತ್ತದೆ. ಇಲ್ಲಿನ ಕಲ್ಲಿದ್ದಲಿನ ನಿಕ್ಷೇಪವು ಪ್ರಪಂಚದ ಶೇ. 3.5 ರಷ್ಟು ಹಾಗೂ ವಿಶ್ವದ 9ನೆಯ ಅತಿದೊಡ್ಡ ಕಲ್ಲಿದ್ದಲಿನ ನಿಕ್ಷೇಪವನ್ನು ಹೊಂದಿರುವ ರಾಷ್ಟ್ರವಾಗಿದೆ. ಇಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲು ಇರುವುದರಿಂದ ಗಣಿಗಾರಿಕೆ ಸುಲಭ ಮತ್ತು ಲಾಭದಾಯಕವಾದುದು.

2001ರಲ್ಲಿ ಕಜ಼ಾಕ್‌ಸ್ತಾನ ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 1.9 ರಷ್ಟು (72.2 ಮಿ.ಟನ್) ಕಲ್ಲಿದ್ದಲು ಉತ್ಪಾದಿಸಿತ್ತು ಹಾಗೂ 44.9 ಮಿ.ಟನ್‌ಗಳಷ್ಟು ಕಲ್ಲಿದ್ದಲು ದೇಶದಲ್ಲಿ ಬಳಕೆಯಾಗಿತ್ತು. ಅದೇ ವರ್ಷ 27.2 ಮಿ.ಟನ್ (ಶೇ.4) ರಫ್ತುಮಾಡಲಾಗಿತ್ತು.

ಬಾಕ್ಸೈಟ್ ಉತ್ಪಾದನೆಯ ಪ್ರಮುಖ ದೇಶಗಳ ಪಟ್ಟಿಯಲ್ಲಿ ಈ ದೇಶ 10ನೆಯ ಸ್ಥಾನದಲ್ಲಿದೆ. 3668 ಸಾವಿರ ಟನ್ (2001) ಉತ್ಪಾದಿಸಿತ್ತು. ಪ್ರಪಂಚದ ಒಟ್ಟು ಬಾಕ್ಸೈಟ್ ಉತ್ಪಾದನೆಯಲ್ಲಿ ಈ ದೇಶವು ಶೇ. 2.6 ರಷ್ಟು ಉತ್ಪಾದಿಸುತ್ತಿದೆ.

ಇಲ್ಲಿ ಸಾಕಷ್ಟು ಕಬ್ಬಿಣ ಅದಿರಿನ ನಿಕ್ಷೇಪ ಹಂಚಿಕೆಯಾಗಿದೆ. ಪ್ರಪಂಚದ ಒಟ್ಟು ನಿಕ್ಷೇಪದ ಶೇ. 6.1 ರಷ್ಟನ್ನು (19,000 ಮಿ.ಮೆ.ಟನ್) ಹೊಂದಿದೆ. 2001ರಲ್ಲಿ ಶೇ. 1.5 ಮೆ. ಟನ್‌ಗಳಷ್ಟು (16 ಮಿ) ಕಬ್ಬಿಣವನ್ನು ಉತ್ಪಾದಿಸಿತ್ತು. ಕಜ಼ಾಕ್‌ಸ್ತಾನ ಪ್ರಪಂಚದ 9ನೆಯ ಪ್ರಮುಖ ತಾಮ್ರ ಉತ್ಪಾದಿಸುವ ದೇಶ. ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಶೇ. 3.4 ರಷ್ಟನ್ನು ಪೂರೈಸುವುದು (4,70,000 ಟನ್). ಈಗಾಗಲೆ ಈ ರಾಷ್ಟ್ರದಲ್ಲಿ ಉತ್ತಮ ದರ್ಜೆಯ ಕಬ್ಬಿಣದ ಅದಿರು ಪತ್ತೆಯಾಗಿದ್ದು ಸು. 19,000 ಮಿ.ಮೆ.ಟನ್ ನಿಕ್ಷೇಪವಿದೆ ಎಂದು ಅಂದಾಜುಮಾಡಲಾಗಿದೆ. ಈ ನಿಕ್ಷೇಪ ಪ್ರಪಂಚದ ಒಟ್ಟು ನಿಕ್ಷೇಪದ ಶೇ. 6.1 ರಷ್ಟು ಎಂದು ತಿಳಿದುಬಂದಿದೆ. 2001ರಲ್ಲಿ 16 ಮಿ.ಮೆ.ಟನ್ (ಶೇ.1.5) ಕಬ್ಬಿಣವನ್ನು ಉತ್ಪಾದಿಸಲಾಗಿತ್ತು.

ಕಜ಼ಾಕ್‌ಸ್ತಾನ ಸೀಸದ ನಿಕ್ಷೇಪವನ್ನು ಹೊಂದಿರುವ ಪ್ರಪಂಚದ 7ನೆಯ ದೊಡ್ಡ ದೇಶ. ಇಲ್ಲಿನ ನಿಕ್ಷೇಪದ ಮೊತ್ತ 20 ಲಕ್ಷ ಮಿ.ಟನ್. ಮಿ.ಹೆ. (ಶೇ. 1.5) ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 3.4 ರಷ್ಟನ್ನು ಈ ದೇಶ ಉತ್ಪಾದಿಸುತ್ತಿದೆ. ಹಾಗೂ ಶೇ. 3.8ರಷ್ಟು (3,44,000 ಟನ್) ಸತುವನ್ನು ಉತ್ಪಾದಿಸುತ್ತದೆ.

ಕೃಷಿ: ಗೋದಿ ಕಜ಼ಾಕ್‌ಸ್ತಾನದ ಮುಖ್ಯಬೆಳೆ. 11.26 ಮಿ.ಹೆ. ಗಳಲ್ಲಿ ಬೆಳೆಯಲಾಗುತ್ತಿದೆ. ವಾರ್ಷಿಕ ಉತ್ಪಾದನೆಯು 11.52 ಮಿ.ಮೆ.ಟನ್‌ಗಳು. ಈ ರಾಷ್ಟ್ರ ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಶೇ. 2.1 ರಷ್ಟು ಉತ್ಪಾದಿಸುತ್ತಿದೆ. ಇಲ್ಲಿ ಪ್ರತಿ ಹೆಕ್ಟೇರಿಗೆ 1023 ಕಿಗ್ರಾಂ ಇಳುವರಿ ಸಿಗುತ್ತದೆ. ಗೋದಿ ಸಾಗುವಳಿ ಭೂಮಿಯ ಬಹುಭಾಗವನ್ನು ಆವರಿಸಿಕೊಂಡಿದೆ. ಇಲ್ಲಿ ಸಮಷ್ಟಿ ವ್ಯವಸಾಯ ವ್ಯವಸ್ಥೆ, ವೈಜ್ಞಾನಿಕ ಕೃಷಿವಿಧಾನ ಅನುಸರಿಸುತ್ತಿರುವುದು ಹಾಗೂ ಯಾಂತ್ರೀಕರಣ ಬೇಸಾಯ ಕ್ರಮಗಳು ಗೋದಿ ಬೇಸಾಯಕ್ಕೆ ಪೂರಕವಾಗಿವೆ. ವಾಯುಗುಣದ ವಿಷಮ ಪರಿಸ್ಥಿತಿಗಳು ಗೋದಿಯ ಯಶಸ್ವಿಗೆ ಒಮ್ಮೊಮ್ಮೆ ಅಡ್ಡಿಯುಂಟುಮಾಡುವವು. ವಸಂತ ಮತ್ತು ಚಳಿಗಾಲದ ಗೋದಿಗಳೆರಡನ್ನು ಬೆಳೆದರೂ ಉತ್ಪನ್ನದ ಅಧಿಕ ಭಾಗವು ವಸಂತಕಾಲದ ಗೋದಿಯಾಗಿರುತ್ತದೆ. ಪ್ರಪಂಚದ ಪ್ರಮುಖ ಗೋದಿ ರಫ್ತು ಮಾಡುವ ರಾಷ್ಟ್ರಗಳಲ್ಲಿ ಈ ದೇಶ ಎಂಟನೆಯ ಸ್ಥಾನ ಹೊಂದಿದೆ. ಈ ದೇಶ 51.4 ಲಕ್ಷ ಟನ್ (ಶೇ. 3.9) ಗೋದಿಯನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ರವಾನಿಸುತ್ತದೆ.

ಈ ದೇಶದ ಜನಸಂಖ್ಯೆ ಬೆಳೆವಣಿಗೆಯ ದರ ಶೇ. 03, ಜನನ ಪ್ರಮಾಣ ಪ್ರತಿ 1000ಕ್ಕೆ 16, ಶಿಶುಮರಣ ಪ್ರಮಾಣ ಪ್ರತಿ 1000 ಕ್ಕೆ 38.3. ಸರಾಸರಿ ಜೀವಿತಾವಧಿ 66.9 ವರ್ಷಗಳು.

ಕಜ಼ಾಕ್‌ಸ್ತಾನದ ರಾಜಧಾನಿ ಅಸ್ತಾನ್ (28,82,000). ಇಲ್ಲಿನ ಪ್ರಮುಖ ನಗರಗಳು ಅಲ್‌ಮಟಿ (10,45,900) ಕರಗಾಂಡ (4,04,600), ಶೈಮ್‌ಕೆಂಟ್ (3,33,500), ಟಾರಾಜ್ (3,05,700), ಪೌಲೋಡರ್ (2,99,500), ಉಸ್ಟ್–ಕಮೆನೊರ್ಸ್ಕ್ (2,88,000) ಮತ್ತು ಅಕ್ಯೊಟೋಬೆ (2,34,400).

ಅಧಿಕೃತ ಭಾಷೆ ರಷ್ಯನ್. ಶೇ. 95ರಷ್ಟು ಜನ ರಷ್ಯನ್ ಭಾಷೆಯನ್ನಾಡುವರು. ಶೇ. 64ರಷ್ಟು ಕಜಾರ್ ಭಾಷೆಯನ್ನೂ ಬಳಸುವುದುಂಟು. ರಾಷ್ಟ್ರೀಯತೆಯ ಪ್ರಕಾರ ಶೇ. 53.4 ರಷ್ಟು ಕಜ಼ಾಕ್, ಶೇ. 30 ರಷ್ಟು ರಷ್ಯನ್, ಶೇ. 3.7 ರಷ್ಟು ಉಕ್ರೆನಿಯನ್, ಶೇ. 1.4 ರಷ್ಟು ತಾತರ್, ಶೇ. 1.4 ರಷ್ಟು ವೈಗುರ್ ಹಾಗೂ ಶೇ. 4.9 ರಷ್ಟು ಇತರ ಭಾಷೆಯನ್ನಾಡುವವರು ಇಲ್ಲಿ ನೆಲಸಿದ್ದಾರೆ. ಇಲ್ಲಿನ ಹಣ ಟೆಂಗೆ.

ಧಾರ್ಮಿಕವಾಗಿ ಇಸ್ಲಾಂ ಸಂಪ್ರದಾಯವಾದಿಗಳು ಬಹು ಸಂಖ್ಯಾತರಾಗಿದ್ದು, ಒಟ್ಟು ಜನಸಂಖ್ಯೆಯ ಶೇ. 47ರಷ್ಟಿದ್ದಾರೆ. ರಷ್ಯನ್ ಸಂಪ್ರದಾಯದವರು ಶೇ. 44, ಪ್ರಾಟೆಸ್ಟಂಟರು ಶೇ. 2, ಇತರರು ಶೇ. 7 ರಷ್ಟು. ಶೇ. 98ರಷ್ಟು ಸಾಕ್ಷರತೆಯ ಪ್ರಮಾಣವನ್ನು ಈ ದೇಶ ಸಾಧಿಸಿದೆ.

ಕಜ಼ಾಕ್‌ಸ್ತಾನದ ಪ್ರಮುಖ ಆಹಾರ ಬೆಳೆಗಳು ಓಟ್ಸ್, ಮೆಕ್ಕೆಜೋಳ, ಗೋದಿ ಮತ್ತು ಬಾರ್ಲಿ. ಹತ್ತಿ ಇಲ್ಲಿನ ಪ್ರಮುಖ ವಾಣಿಜ್ಯಬೆಳೆ.

ಉಣ್ಣೆತಯಾರಿಕೆ, ಪೆಟ್ರೋಲ್ ಸಂಸ್ಕರಣೆ, ಪಶು ಸಂಗೋಪನೆ, ಧಾನ್ಯ ಸಂಸ್ಕರಣೆ, ಸಕ್ಕರೆಗೆಡ್ಡೆ, ತಾಮ್ರ ಕೈಗಾರಿಕೆ, ಕಬ್ಬಿಣ ಮತ್ತು ಉಕ್ಕು. ಇಲ್ಲಿನ ಪ್ರಮುಖ ಕೈಗಾರಿಕೆಗಳು.

ಸಾರಿಗೆ: ಕಜ಼ಾಕ್‌ಸ್ತಾನ ಸು. 13,601 ಕಿಮೀ (2002) ಉದ್ದದ ರೈಲು ಸಂಪರ್ಕಜಾಲವನ್ನು ಹೊಂದಿದೆ. ರಾಷ್ಟ್ರೀಯ ಹೆದ್ದಾರಿಗಳ ಉದ್ದ 81,331 ಕಿಮೀ. ಸಂಚಾರಕ್ಕೆ ಯೋಗ್ಯವಾದ ರಸ್ತೆಗಳ ಉದ್ದ 77,020 ಕಿಮೀ. ಇತರೆ ರಸ್ತೆಗಳ ಉದ್ದ 4,311 ಕಿಮೀ. ಜಲಸಾರಿಗೆಯ ಉದ್ದ 3,900 ಕಿಮೀ. 2002ರಲ್ಲಿ 10,449 ಮೀ. ಪ್ರಯಾಣಿಕರು ರೈಲು ಪ್ರಯಾಣದ ಸೌಲಭ್ಯ ಪಡೆದಿದ್ದರು. 133,088 ಮಿ.ಟನ್‌ಗಳಷ್ಟು ಸರಕನ್ನು ಸಾಗಿಸಲಾಗಿತ್ತು.

*

**ಕಟಕ್:** ಒರಿಸ್ಸ ರಾಜ್ಯದ ಒಂದು ಜಿಲ್ಲೆ, ನಗರ; ಮಹಾನದಿಯ ದಂಡೆಯ ಮೇಲೆ ಅದರ ಮುಖ್ಯ ಶಾಖೆಯಾದ ಕಟ್ಜೋರಿ ಕವಲೊಡೆಯುವಲ್ಲಿ, ಕೋಲ್ಕತದ ನೈಋತ್ಯಕ್ಕೆ 352 ಕಿಮೀ ಮತ್ತು ಸಮುದ್ರತೀರದಿಂದ 72 ಕಿಮೀ ದೂರದಲ್ಲಿದೆ. ಇದು ಆಗ್ನೇಯ ರೈಲ್ವೆಯ ಒಂದು ನಿಲ್ದಾಣ, ಚೆನ್ನೈ–ಹೌರಾ ರೈಲು ಮಾರ್ಗವೂ ಕೋಲ್ಕತ–ಚೆನ್ನೈ ರಾಷ್ಟ್ರೀಯ ಹೆದ್ದಾರಿಯೂ ಇದರ ಮೂಲಕ ಹಾದುಹೋಗುತ್ತವೆ. ಜನಸಂಖ್ಯೆ 5,87,637.

ಈ ನಗರದಲ್ಲಿ ಅನೇಕ ಸ್ಮಾರಕಗಳಿವೆ. ಲಾಲ್‌ಬಾಗ್ ಅರಮನೆ (1633), ಜಾಮೀ ಮಸೀದಿ (1690), ಕದಾಂ ರಸೂಲ್ (1715) ಇವುಗಳೇ ಅಲ್ಲದೆ 18ನೆಯ ಶತಮಾನದಲ್ಲಿ ನಿರ್ಮಿತವಾದ ಅಮರೇಶ್ವರ ದೇವಸ್ಥಾನ ಮತ್ತು ಜೈನ ದೇವಾಲಯಗಳು ಇವೆ. ಬ್ಯಾಪ್ಟಿಸ್ಟ್ ಚರ್ಚ್, ಕೆಥೊಲಿಕ್ ಚರ್ಚ್ 19ನೆಯ ಶತಮಾನದಲ್ಲಿ ನಿರ್ಮಾಣವಾದವು.

ಈ ನಗರ ಉತ್ಕಲ ವಿಶ್ವವಿದ್ಯಾಲಯದ ಕೇಂದ್ರ. ರ್‍ಯಾವೆನ್‌ಷಾ ಕಾಲೇಜು, ಕ್ರೈಸ್ಟ್ ಕಾಲೇಜು, ಸ್ಟೀವರ್ಟ್ ವಿಜ್ಞಾನ ಕಾಲೇಜು, ಶೈಲಬಾಲಾ ಮಹಿಳಾ ಕಾಲೇಜು, ಶ್ರೀರಾಮಚಂದ್ರಭಂಜ್ ವೈದ್ಯಕೀಯ ಕಾಲೇಜು, ರಾಧಾನಾಥ್ ಟ್ರೇನಿಂಗ್ ಕಾಲೇಜು ಇವು ಉತ್ಕಲ ವಿಶ್ವವಿದ್ಯಾನಿಲಯದ ಕೆಲವು ಮುಖ್ಯ ಉಚ್ಚ ಶಿಕ್ಷಣ ಸಂಸ್ಥೆಗಳು. ಕೇಂದ್ರೀಯ ಅಕ್ಕಿ ಸಂಶೋಧನ ಸಂಸ್ಥೆಯೊಂದು ಇಲ್ಲಿ ಸ್ಥಾಪಿತವಾಗಿದೆ. ಒರಿಸ್ಸದ ಉಚ್ಚನ್ಯಾಯಾಲಯ ಕೂಡ ಇಲ್ಲಿದೆ.

ಈ ನಗರ ಅನೇಕ ಗುಡಿ ಕೈಗಾರಿಕೆಗಳ ಕೇಂದ್ರ. ಚಿನ್ನ ಬೆಳ್ಳಿಯ ತೆರಪು ಚಿತ್ರಕಲೆ, ಕೊಂಬಿನ ಕುಶಲ ಕಲೆ ಮುಖ್ಯ. ಜವಳಿ ಗಿರಣಿ, ಕಾಗದ, ಉಕ್ಕಿನ ಕೊಳವೆ ಮತ್ತು ಗಾಜಿನ ಕಾರ್ಖಾನೆಗಳೂ ಆಧುನಿಕ ಉದ್ಯಮಗಳೂ ಇವೆ. ಒರಿಸ್ಸದ ನಾನಾಭಾಗಗಳೊಂದಿಗೆ ರೈಲ್ವೆ ಮತ್ತು ರಸ್ತೆ ಸಂಪರ್ಕ ಪಡೆದಿರುವ ಕಟಕ್ ಒಂದು ಮುಖ್ಯ ವಾಣಿಜ್ಯ ಕೇಂದ್ರ. ಬ್ರಾಹ್ಮಣಿ ಮತ್ತು ಮಹಾನದಿಗಳ ಮುಖಜಭೂಮಿಯನ್ನೂ ಹಿಂಬದಿಯ ಬೆಟ್ಟದ ನೆಲವನ್ನೂ ಒಳಗೊಂಡಿರುವ ಈ ಜಿಲ್ಲೆಯ ವಿಸ್ತೀರ್ಣ 10,846 ಚ.ಕಿಮೀ. ಜನಸಂಖ್ಯೆ 23,40,686.

ಈ ಜಿಲ್ಲೆಯಲ್ಲಿ ಮೂರು ಸ್ವಾಭಾವಿಕ ವಿಭಾಗಗಳಿವೆ. ಪೂರ್ವದಲ್ಲಿ 5 ರಿಂದ 48 ಕಿಮೀ ವರೆಗೆ ಅಗಲವಾಗಿರುವ ಕಡಲಂಚು ಜವುಗು ನೆಲ ಲವಣಮಯ, ಇದರ ಪಶ್ಚಿಮಕ್ಕೆ ಸು. 64 ಕಿಮೀ ಅಗಲದ, ಮೆಕ್ಕಲುಮಣ್ಣಿನಿಂದ ಕೂಡಿದ ಫಲವತ್ತಾದ ಮೈದಾನವಿದೆ. ಇಲ್ಲಿ ಒಳ್ಳೆಯ ನೀರಾವರಿ ವ್ಯವಸ್ಥೆಯಿದೆ. ಎತ್ತರದ ಪ್ರದೇಶದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹಬ್ಬಿರುವ ಹಲವು ಬೆಟ್ಟಗಳಿವೆ. ಇವುಗಳ ಮೈ ವೃಕ್ಷಪೂರಿತ, ನಡುವೆ ಕಣಿವೆಗಳಿವೆ. ವೈತರಣಿನದಿ ಇದರ ಉತ್ತರದ ಗಡಿ. ಬತ್ತ ಮತ್ತು ದ್ವಿದಳ ಧಾನ್ಯಗಳು ಸೆಣಬು ಈ ಜಿಲ್ಲೆಯ ಮುಖ್ಯ ಬೆಳೆಗಳು. (ವಿ.ಎಲ್.ಆರ್.)

**ಕಡಲೂರು:** ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಕೇಂದ್ರ ಮತ್ತು ಪ್ರಮುಖ ಪಟ್ಟಣ, ಸಣ್ಣ ಬಂದರು. ಪಾಂಡಿಚೇರಿಯಿಂದ 25 ಕಿಮೀ ದೂರದಲ್ಲಿದೆ. ಈ ಪಟ್ಟಣದ ಬಳಿ ಎರಡು ನದಿಗಳು ಕೂಡುವುದರಿಂದ ಕೂಡಲೂರು ಅಥವಾ ಕಡಲೂರು ಎಂಬ ಹೆಸರು ಬಂದಿದೆ. ಈ ಪಟ್ಟಣವನ್ನು ಹೊಸ ಮತ್ತು ಹಳೆಯ ನಗರಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಸರ್ಕಾರಿ ಕಚೇರಿಗಳು, ಅಧಿಕಾರಿಗಳ ಗೃಹಗಳು, ಸೇಂಟ್ ಡೇವಿಡ್‌ನ ಹಳೆಯ ಕೋಟೆ ಮತ್ತು ಪ್ರಾಚೀನ ಶಿವದೇವಾಲಯಗಳು ಹೊಸ ನಗರದಲ್ಲಿವೆ. ಪೇಟೆ ಮತ್ತು ಬಂದರುಗಳು ಹಳೆಯ ನಗರದಲ್ಲಿವೆ. ನೆಲಗಡಲೆ ಇಲ್ಲಿಂದ ರಫ್ತಾಗುವ ಮುಖ್ಯ ವಸ್ತು. ಬಣ್ಣದ ಬಟ್ಟೆಗಳ ನೆಯ್ಗೆ, ಕಡಲೆಕಾಯಿ ಎಣ್ಣೆಯ ಉತ್ಪಾದನೆ, ಹತ್ತಿ ರೇಷ್ಮೆಬಟ್ಟೆಯ ತಯಾರಿಕೆ ಇವು ಮುಖ್ಯ ಕೈಗಾರಿಕೆಗಳು. ಮಲೇಷ್ಯದೊಂದಿಗೆ ವ್ಯಾಪಾರಸಂಪರ್ಕ ಹೊಂದಿದೆ. (ಎಸ್.ಎಸ್.ಎ.)

**ಕಣಶಿಲೆಗಳು:** ಭೂತೊಗಟೆಯನ್ನು ರಚಿಸಿರುವ ಮೂರು ಪ್ರಧಾನ ಶಿಲಾವರ್ಗಗಳ ಪೈಕಿ ಒಂದು (ಸೆಡಿಮೆಂಟರಿ ರಾಕ್ಸ್). ಉಳಿದ ಎರಡು ಪ್ರಧಾನ ವರ್ಗಗಳು ಅಗ್ನಿಶಿಲೆಗಳು ಮತ್ತು ರೂಪಾಂತರಿತ ಶಿಲೆಗಳು. ಕಣಶಿಲೆಗಳನ್ನು ಅವಸಾದನ ಶಿಲೆ, ಪದರು ಶಿಲೆ, ಜಲಜ ಶಿಲೆ ಎಂಬುದಾಗಿಯೂ ಕರೆಯುವುದುಂಟು. ಹೆಚ್ಚಿನ ಕಣಶಿಲೆಗಳು ಪದರ ಪದರವಾಗಿವೆ. ವಾಸ್ತವವಾಗಿ ಪದರಗಳು (ಇಲ್ಲವೇ ಪ್ರಸ್ತರೀಕರಣ) ಕಣಶಿಲೆಗಳ ಒಂದು ಮುಖ್ಯಲಕ್ಷಣ. ಭೂತೊಗಟೆಯ ಸರಾಸರಿ ದಪ್ಪ ಸು. 16 ಕಿಮೀ. ಇದರಲ್ಲಿ ಕಣಶಿಲೆಗಳು ಕೇವಲ ಶೇ. 5 ಮಾತ್ರ ಇವೆಯಷ್ಟೆ ಆದರೆ ಮೇಲ್ಮೈಯ ತೆರೆದುಕೊಂಡಿರುವ ಪ್ರದೇಶದಲ್ಲಿನ ಶಿಲೆಗಳ ಪೈಕಿ ಶೇ. 75 ಕೂಡ ಕಣಶಿಲೆಗಳೇ. ಅಲ್ಲಿಗೆ ಭೂತೊಗಟೆಯ ತೀರ ಹೊರಕವಚದಲ್ಲಿ ಒಂದು ತೆಳು ಪದರವಾಗಿ ಕಣಶಿಲೆಗಳು ವ್ಯಾಪಿಸಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಪದರದ ವಿತರಣೆ ಏಕರೀತಿ ಆಗಿದೆ ಎಂದೇನೂ ಭಾವಿಸಬೇಕಾಗಿಲ್ಲ. ಭೂಇತಿಹಾಸದ ಬೇರೆ ಬೇರೆ ಪ್ರಮುಖ ದಾಖಲೆಗಳನ್ನು ಸೆರೆಹಿಡಿದಿಟ್ಟಿರುವ (ಹೆಚ್ಚಾಗಿ ಫಾಸಿಲುಗಳ ರೂಪದಲ್ಲಿ) ಕಣಶಿಲೆಗಳು ವಿಜ್ಞಾನಿಗಳಿಗೆ ಅತ್ಯಂತ ಕುತೂಹಲಭರಿತ ಭೂಗ್ರಂಥಗಳಾಗಿವೆ. ಪ್ರಸ್ತರಗಳ ರಚನಾಯುಗವನ್ನು ನಿರ್ಣಯಿಸುವುದು ಸಾಧ್ಯ. ಆದ್ದರಿಂದ ಅವುಗಳಲ್ಲಿ ಲಿಖಿತವಾಗಿರುವ ಪಳೆಯುಳಿಕೆಗಳ ವಯಸ್ಸು ವೇದ್ಯವಾಗುವುದು: ಹೀಗಾಗಿ ಯಾವ ಯಾವ ಯುಗಗಳಲ್ಲಿ ಏನೇನು ಘಟನೆಗಳು ಸಂಭವಿಸಿದುವು ಎಂಬುದನ್ನು ಓದುವುದು ಸುಲಭ.

ಶಿಲೆಗಳು ಸಾಮಾನ್ಯವಾಗಿ ನಿರಂತರ ಶಿಥಿಲೀಕರಣಕ್ಕೆ ಒಳಗಾಗುತ್ತಿರುತ್ತವೆ. ಶಿಥಿಲೀಕರಿಸಿದ ಪ್ರದೇಶಗಳಿಂದ ಮಾರುತ, ನದಿ ಮುಂತಾದ ಕರ್ತೃಗಳಿಂದ ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರಗೊಂಡು ಸರೋವರ-ಸಮುದ್ರಗಳ ತಳದಲ್ಲಿ ಅವು ಶೇಖರವಾಗುತ್ತವೆ. ನೀರಿನಲ್ಲಿ ವಿಲೀನಗೊಂಡ ಶಿಲಾಕಣ ಕ್ರಮೇಣ ಒಟ್ಟುಗೂಡಿ ಗಟ್ಟಿಯಾಗಿ ಹೊಸ ಶಿಲೆಗಳಾಗುತ್ತವೆ. ಇವೇ ಕಣಶಿಲೆಗಳು. ಇವನ್ನು ದ್ವಿತೀಯತೆ ಶಿಲೆಗಳು ಎಂದೂ ಕರೆಯುವುದುಂಟು. ಈ ಶಿಲಾವಸ್ತುಗಳು ಶೇಖರವಾದಾಗ ಕಣಗಳು ಬಿಡಿಯಾಗಿರುತ್ತವೆ. ಕಾಲಾನುಕ್ರಮದಲ್ಲಿ ಅವು ಸಂಘಟಿಸಿ ಗಟ್ಟಿಯಾಗುತ್ತವೆ. ಕಣಗಳ ಗಾತ್ರ ದಪ್ಪವಿದ್ದರೆ ಅವುಗಳ ಮಧ್ಯೆ ಬೇರೆ ವಸ್ತು ನಿಕ್ಷೇಪಿಸಿ, ಅವನ್ನೆಲ್ಲ ಬಂಧಿಸುತ್ತದೆ. ಶಿಲಾವಸ್ತುವು ನೀರಿನಲ್ಲಿ ವಿಲೀನವಾಗಿರುವ ಸಿಲಿಕ, ಸುಣ್ಣವಸ್ತು, ಮೆಗ್ನೀಸಿಯಮ್ ಮತ್ತು ಕೆಲವು ವೇಳೆ ಕಬ್ಬಿಣ ವಸ್ತು ಆಗಿರಬಹುದು. ಈ ರೀತಿ ರೂಪುಗೊಂಡ ಶಿಲೆಗಳಿಗೆ ಭೌತಕಣಶಿಲೆಗಳು ಎಂದು ಹೆಸರು. ಇವುಗಳಲ್ಲಿ ಪದರುರಚನೆ, ಪ್ರವಾಹ ಪದರು ರಚನೆ, ಅಲೆಗಳ ಗುರುತುಗಳು, ಒಣಗು ಬಿರುಕುಗಳು, ಪ್ರಾಣಿಗಳ ಜಾಡುಗಳು-ಈ ಮುಂತಾದ ಲಕ್ಷಣಗಳನ್ನು ಗುರುತಿಸಲಾಗಿದೆ.

ಕಣಗಾತ್ರವನ್ನು ಆಧಾರವಾಗಿಟ್ಟುಕೊಂಡು ಭೌತಕಣಶಿಲೆಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು.

1. ರುಡೇಸಿಯಸ್ : ಗುಂಡುಗಳು, ನೊರಜು, ಉರಟು ಮತ್ತು ಉಂಡೆ ಕಲ್ಲುಗಳು ಪ್ರಧಾನವಾಗಿರುವ ಶಿಲೆಗಳು. ಇವು ಸಿಲಿಕ, ಜೇಡು, ಸುಣ್ಣ ಅಥವಾ ಕಬ್ಬಿಣ ವಸ್ತುಗಳಿಂದ ಬಂಧಿತವಾಗಿ ಪೆಂಟೆಶಿಲೆಗಳು ಮತ್ತು ನೊರಜು ಶಿಲೆಗಳಾಗುತ್ತವೆ.

2. ಮರಳುಮಯ ಶಿಲೆ : ಮರಳು ಯಾವುದಾದರೊಂದು ವಸ್ತುವಿನಿಂದ ಬಂಧಿತವಾಗಿ ಆಗುವ ಶಿಲೆಗಳು, ಗ್ರೀಟ್, ಅರ್ಕೋಸ್ ಮತ್ತು ಗ್ರೆವೇಕ್‌ಗಳು ಈ ವರ್ಗದ ಶಿಲೆಗಳು. ಮರಳುಶಿಲೆಯ ಕಣಗಳು ದಪ್ಪವಿದ್ದು, ಚೂಪಾದ ಮೂಲೆಗಳಿದ್ದರೆ, ಆ ಶಿಲೆಗೆ ಗ್ರಿಟ್ ಎಂದು ಹೆಸರು. ಕಪ್ಪು ಮರಳುಶಿಲೆಗೆ ಗ್ರೆವೇಕ್ ಎಂದು ಹೆಸರು.

3. ಮೆಕ್ಕಲು ಶಿಲೆಗಳು : ಗುಂಡು, ಮೆಕ್ಕಲು ಮುಂತಾದ ಶಿಲೆಗಳು ಈ ವರ್ಗಕ್ಕೆ ಸೇರಿದವು. ಇವು ಮರಳುಮಯ ಮತ್ತು ಮೃಣ್ಮಯಶಿಲಾ ವರ್ಗಗಳ ಮಧ್ಯಂತರ ಶಿಲೆಗಳು.

4. ಮೃಣ್ಮಯಶಿಲೆ ಅಥವಾ ಜೇಡುಶಿಲೆಗಳು : ಶಿಲಾಪುಡಿಯಿಂದ ಈ ಶಿಲೆಗಳಾಗುತ್ತವೆ. ಧೂಳು, ಮಣ್ಣು ಮತ್ತು ಜೇಡು-ಈ ವಸ್ತುಗಳು ಗಟ್ಟಿಯಾದಾಗ ಜೇಡು ಶಿಲೆಗಳಾಗುತ್ತವೆ.

ವಿಧಗಳು: ಉತ್ಪತ್ತಿಯ ಆಧಾರದ ಮೇಲೆ ಕಣಶಿಲೆಗಳನ್ನು ಮೂರು ಪ್ರಮುಖ ವಿಧಗಳಾಗಿ ವಿಂಗಡಿಸಬಹುದು. 1. ಭೌತಿಕ ಕ್ರಿಯೆಯಿಂದಾದ ಶಿಲೆಗಳು, 2. ರಾಸಾಯನಿಕ ಕ್ರಿಯೆಯಿಂದಾದ ಶಿಲೆಗಳು, 3. ಜೈವಿಕಾಂಶಗಳಿಂದಾದ ಶಿಲೆಗಳು.

1. ಭೌತಿಕ ಕ್ರಿಯೆಯಿಂದಾದ ಶಿಲೆಗಳು: ಇವು ಯಾಂತ್ರಿಕ ಕ್ರಿಯೆಗಳ ಪರಿಣಾಮದಿಂದ ಉತ್ಪತ್ತಿಯಾದವು. ಭೂಮೇಲ್ಮೈನ ಶಿಲೆಗಳು ನೈಸರ್ಗಿಕ ಕರ್ತೃಗಳ ಪ್ರಕ್ರಿಯೆಗಳಿಂದ ಶಿಥಿಲಗೊಂಡು ಉತ್ಪತ್ತಿಯಾದ ಶಿಲಾಕಣಗಳು ಸುಣ್ಣ, ಸಿಲಿಕ ಮತ್ತು ಖನಿಜಾಂಶಗಳಿಂದ ಬಂಧಿಸಲ್ಪಡುವುದರಿಂದಲೂ ಹಾಗೂ ಮೇಲ್‌ಸ್ತರದ ಭಾರದಿಂದ ಶಿಲೆಗಳಾಗಿ ಪರಿಣಮಿಸುವವು. ರಾಸಾಯನಿಕ ಕ್ರಿಯೆಗೊಳಪಡದೇ ಭೌತಿಕ ಕ್ರಿಯೆಗಳಿಂದ ಉತ್ಪತ್ತಿಯಾಗುವುದರಿಂದ ಇವುಗಳನ್ನು ಭೌತಿಕ ಕ್ರಿಯೆಯಿಂದಾದ ಶಿಲೆಗಳೆನ್ನುವರು. ಇವುಗಳಲ್ಲಿ ಮೂರು ವಿಧಗಳಿವೆ: (ಅ) ಮರಳುಮಯ ಶಿಲೆಗಳು(ಅರೆನಾಷಿಯಸ್ ರಾಕ್ಸ್), (ಆ) ಮೃಣ್ಮಯ ಶಿಲೆಗಳು (ಆರ್ಜಿಲ್ಲಾಷಿಯಸ್ ರಾಕ್ಸ್), (ಇ) ರೂಡೇಷಸ್.

(ಅ) ಮರಳುಮಯ ಶಿಲೆಗಳು: ಮರಳು ಕಣಗಳು ಸಿಲಿಕೇಟ್ ಮತ್ತು ಸುಣ್ಣದಂತಹ ವಸ್ತುಗಳಿಂದ ಪರಸ್ಪರ ಬಂಧಿಸಲ್ಪಟ್ಟು ಗಟ್ಟಿಯಾಗಿ ಉತ್ಪತ್ತಿಯಾಗುವ ಶಿಲೆಗಳಿಗೆ ಮರಳುಮಯ ಶಿಲೆಗಳೆನ್ನುವರು. ಉದಾ: ಮರಳು ಶಿಲೆ. ಇವು ಪ್ರವೇಶ್ಯಶಿಲೆಗಳಾಗಿವೆ. ಇಂತಹ ಶಿಲೆಗಳು ಭಾರತದ ವಿಂಧ್ಯ ಮತ್ತು ಅರಾವಳಿ ಶ್ರೇಣಿಗಳಲ್ಲಿ ಹಾಗೂ ಒರಿಸ್ಸಾ, ಬಿಹಾರ ಮತ್ತು ಆಂಧ್ರ ಪ್ರದೇಶಗಳಲ್ಲಿ ಕಂಡುಬರುವವು.

(ಆ) ಮೃಣ್ಮಯ ಶಿಲೆಗಳು: ಸೂಕ್ಷ್ಮ ಮಣ್ಣಿನ ಕಣಗಳು ಹಾಗೂ ಖನಿಜ ವಸ್ತುಗಳಿಂದ ಉತ್ಪತ್ತಿಯಾದ ಶಿಲೆಗಳಿಗೆ ಮೃಣ್ಮಯ ಶಿಲೆಗಳೆನ್ನುವರು. ಉದಾ: ಜೇಡುಶಿಲೆ, ರೇವೆಗಲ್ಲು. ಇವು ಒತ್ತೊತ್ತಾದ ಕಣಗಳ ರಚನೆಯಿಂದ ಕೂಡಿದ್ದು ಅಪ್ರವೇಶ್ಯ ಶಿಲೆಗಳಾಗಿವೆ. ಇಂತಹ ಶಿಲೆಗಳು ಭಾರತದ ಬಿಹಾರ, ಪಶ್ಚಿಮ ಬಂಗಾಳ, ಕೇರಳ, ಒರಿಸ್ಸಾ, ಗುಜರಾತ್ ಹಾಗೂ ಕರ್ನಾಟಕಗಳಲ್ಲಿ ಕಂಡುಬರುತ್ತವೆ.

(ಇ) ರೂಡೇಷಸ್ ಶಿಲೆಗಳು: ಕಲ್ಲುಗುಂಡುಗಳು ಮತ್ತು ಕಲ್ಲುಹರಳುಗಳು ಪರಸ್ಪರ ಬಂಧಿಸುವಿಕೆ ಹಾಗೂ ಕ್ರೋಢಿಕರಣದಿಂದ ಉತ್ಪತ್ತಿಯಾದ ಶಿಲೆಗಳು. ಉದಾ: ಕಂಗ್ಲಾಮರೇಟ್ ಮತ್ತು ಬ್ರೇಸಿಯಾ. ವೃತ್ತಾಕಾರವುಳ್ಳ, ಗಾತ್ರದಲ್ಲಿ ದೊಡ್ಡದಾದ ಶಿಲಾಗುಂಡುಗಳು ಗಟ್ಟಿಯಾಗಿ ಬಂಧಿಸಲ್ಪಡುವುದರಿಂದ ಉತ್ಪತ್ತಿಯಾದ ಶಿಲೆಗಳನ್ನು ಕಂಗ್ಲಾಮರೇಟ್ ಎನ್ನುವರು. ಒರಟಾದ ಏಣುಗಳುಳ್ಳ ಶಿಲಾಚೂರುಗಳು ಪರಸ್ಪರ ಬಂಧಿಸಲ್ಪಟ್ಟು ಉತ್ಪತ್ತಿಯಾದ ಶಿಲೆಗಳಿಗೆ ಬ್ರೆಸಿಯಾ ಎನ್ನುವರು. ಇವು ಪ್ರವೇಶ್ಯ ಶಿಲೆಗಳಾಗಿರುತ್ತವೆ.

2. ರಾಸಾಯನಿಕ ಕ್ರಿಯೆಯಿಂದಾದ ಶಿಲೆಗಳು: ಸರೋವರ, ಸಮುದ್ರ-ಸಾಗರಗಳ ನೀರಿನಲ್ಲಿ ಹಲವು ದ್ರವ್ಯಗಳು ಕರಗುವವು. ಜಲಾಶಯಗಳು ಬತ್ತಿಹೋದ ಮೇಲೆ ಕರಗಿದ ವಸ್ತುಗಳು ತಳದಲ್ಲಿ ಸಂಚಯವಾಗುವವು. ಅವು ಕ್ರಮೇಣ ಶೇಖರಗೊಂಡು ಮರಳು ಮತ್ತು ರೇವೆ ಮಣ್ಣಿನ ಕಣಗಳ ಮಿಶ್ರಣವಾಗುವುದರೊಂದಿಗೆ ಶಿಲೆಗಳು ಉತ್ಪತ್ತಿಯಾಗುವವು. ಖನಿಜಾಂಶ ಮತ್ತು ಲವಣಯುಕ್ತ ಅಂತರ್ಜಲವು ಚಿಲುಮೆಯ ರೂಪದಲ್ಲಿ ಹೊರಬಂದು ಆವಿಯಾಗುವದರಿಂದಲೂ ಇಂತಹ ಶಿಲೆಗಳು ರಚನೆಯಾಗುವವು. ಉದಾ: ಉಪ್ಪು, ಜಿಪ್ಸಂ, ಡಾಲೋಮೈಟ್.

3. ಜೀವ್ಯಶೇಷಗಳಿಂದಾದ ಶಿಲೆಗಳು: ಪ್ರಾಣಿಗಳು ಮತ್ತು ಸಸ್ಯಗಳ ಅವಶೇಷಗಳಿಂದ ಉತ್ಪತ್ತಿಯಾದ ಶಿಲೆಗಳೇ ಜೀವ್ಯಶೇಷಗಳಿಂದಾದ ಶಿಲೆಗಳು. ಜೀವಿಗಳು ಅಳಿದ ನಂತರ ಅವುಗಳ ಅವಶೇಷಗಳು ಸಂಚಯನಗೊಳ್ಳುವವು. ಅವು ಕ್ರಮೇಣ, ಕ್ಯಾಲ್ಸಿಯಂ, ಸಿಲಿಕ, ಜೇಡಿ, ಮರಳು ಇತ್ಯಾದಿಗಳಿಂದ ಬಂಧಿಸಲ್ಪಟ್ಟು ಗಟ್ಟಿಯಾಗಿ ಶಿಲೆಗಳಾಗಿ ಪರಿಣಮಿಸುವವು. ಉದಾ: ಚಿಪ್ಪು, ಸುಣ್ಣ ಶಿಲೆ. ಸಂಯೋಜನೆಯನ್ನಾಧರಿಸಿ ಇವುಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. (ಅ) ಚೂರ್ಣಾಧಿಕ್ಯ ಶಿಲೆಗಳು (ಆ) ಇಂಗಾಲಾಧಿಕ್ಯ ಶಿಲೆಗಳು.

(ಅ) ಚೂರ್ಣಾಧಿಕ್ಯ ಶಿಲೆಗಳು: ಪ್ರಾಣಿಗಳ ಅವಶೇಷ ಮತ್ತು ರಾಸಾಯನಿಕ ಕ್ರಿಯೆಗಳ ಸಂಯೋಜನೆಯಿಂದ ಉತ್ಪತ್ತಿಯಾದವುಗಳಿಗೆ ಚೂರ್ಣಾಧಿಕ್ಯ ಶಿಲೆಗಳೆನ್ನುವರು. ಸಮುದ್ರ-ಸಾಗರಗಳಲ್ಲಿ ಜೀವಿಸುವ ಅಸಂಖ್ಯಾತ ಜಲಚರಗಳು ಲವಣಗಳನ್ನು ಸೇವಿಸಿ ತಮ್ಮ ಅಸ್ಥಿ ಮತ್ತು ಚಿಪ್ಪುಗಳನ್ನು ಬೆಳೆಸಿಕೊಂಡಿರುತ್ತವೆ. ಅವು ಅಳಿದ ಮೇಲೆ ಅಸ್ಥಿ ಮತ್ತು ಚಿಪ್ಪುಗಳು ಸಂಚಯನವಾಗಿ ಕ್ರಮೇಣ ಅವು ಅಂಟಿಕೊಂಡು ಶಿಲೆಗಳಾಗುತ್ತವೆ. ಇವುಗಳಲ್ಲಿ ಸುಣ್ಣದ ಅಂಶವು ಹೆಚ್ಚಾಗಿರುವ ಪ್ರಯುಕ್ತ ಚೂರ್ಣಾಧಿಕ್ಯ ಶಿಲೆಗಳೆನ್ನುವರು. ಉದಾ: ಸುಣ್ಣದ ಕಲ್ಲು ಮತ್ತು ಸೀಮೆಸುಣ್ಣ. ಇವು ಪ್ರವೇಶ್ಯ ಹಾಗೂ ಕರಗಬಲ್ಲ ಶಿಲೆಗಳು.

(ಆ) ಇಂಗಾಲಾಧಿಕ್ಯ ಶಿಲೆಗಳು: ಸಹಸ್ರಾರು ವರ್ಷಗಳ ಹಿಂದೆ ಗಿಡ-ಮರಗಳು ಭೂಮಿಯೊಳಗೆ ಹೂತು ಹೋಗಿದ್ದು, ಆಂತರಿಕ ಶಾಖ, ಒತ್ತಡ ಮತ್ತು ರಾಸಾಯನಿಕ ಕ್ರಿಯೆಗಳಿಂದ ಪರಿವರ್ತನೆಗೊಂಡು ಶಿಲೆಗಳಾಗಿ ಪರಿಣಮಿಸುವವು. ಅವುಗಳಲ್ಲಿ ಇಂಗಾಲಾಮ್ಲ ಹೆಚ್ಚಾಗಿರುತ್ತದೆ. ಆದ್ದರಿಂದ ಅವುಗಳನ್ನು ಇಂಗಾಲಾಧಿಕ್ಯ ಶಿಲೆ (ಕಾರ್ಬನೇಷಿಯಸ್ ರಾಕ್ಸ್) ಗಳೆಂದು ಕರೆಯುವರು. ಉದಾ: ಕಲ್ಲಿದ್ದಲು. ಭಾರತದ ದಾಮೋದರ, ಮಹಾನದಿ ಮತ್ತು ಗೋದಾವರಿ ನದಿ ಕಣಿವೆಗಳಲ್ಲಿ ಹಂಚಿಕೆಯಾಗಿವೆ. ಈ ಶಿಲೆಗಳು ಆರ್ಥಿಕವಾಗಿ ಬೆಲೆಯುಳ್ಳವು.

ಗುಣ ಲಕ್ಷಣಗಳು: ಈ ಶಿಲೆಗಳು ಭೂ ಮೇಲ್ಮೈಯಲ್ಲಿ ವ್ಯಾಪಕವಾಗಿ ಹರಡಿವೆ. ಸ್ಪಷ್ಟ ಪದರು ರಚನೆಯಿಂದ ಕೂಡಿದ್ದು, ಪಳೆಯುಳಿಕೆಗಳನ್ನು ಹೊಂದಿದೆ. ಇವು ಮೃದು ಮತ್ತು ಪ್ರವೇಶ್ಯ ಶಿಲೆಗಳಾಗಿವೆ. ಸುಲಭವಾಗಿ ಶಿಥಿಲೀಕರಣ ಹಾಗೂ ಸವೆತಕ್ಕೊಳಗಾಗುವವು. ವಿವಿಧ ಖನಿಜ ನಿಕ್ಷೇಪಗಳನ್ನೊಳಗೊಂಡಿವೆ. ಉದಾ: ಕಲ್ಲಿದ್ದಲು, ಪೆಟ್ರೋಲಿಯಂ, ಡಾಲೋಮೈಟ್ ಇತ್ಯಾದಿ. ಕಣ ಶಿಲೆಗಳು ಭೂಮೇಲ್ಭಾಗದಲ್ಲಿ ವ್ಯಾಪಕವಾಗಿ (ಶೇ. 75) ಹಂಚಿಕೆಯಾಗಿವೆ.

ಕರ್ನಾಟಕದಲ್ಲಿ ಕಣಶಿಲಾ ಹಂಚಿಕೆ : ಧಾರವಾಡ ಪದರ ಶಿಲೆಗಳು ಕರ್ನಾಟಕದಲ್ಲಿ ಅತ್ಯಂತ ಹಿಂದಿನ ಅಂದರೆ ಆರ್ಷೇಯ ಕಲ್ಪದ ಕಣಶಿಲೆಗಳು. ಇವು ಹನ್ನೊಂದು ವಲಯಗಳಲ್ಲಿ ರೂಪುಗೊಂಡಿವೆ: 1. ಕ್ಯಾಸಲ್ ರಾಕ್; 2. ಧಾರವಾಡ-ಶಿವಮೊಗ್ಗ; 3. ಗದಗ-ಡಂಬಾಲ್ ಅಥವಾ ಚಿತ್ರದುರ್ಗ- ಚಿಕ್ಕನಾಯಕನಹಳ್ಳಿ ನಾಗಮಂಗಲ; 4. ಸಂಡೂರು; 5. ಬಳ್ಳಾರಿ ಕುಷ್ಟಗಿ; 6. ಪೆನ್ನೇರ್-ಹಗ್ಗರಿ; 7. ಮಸ್ಕಿ-ಹಟ್ಟಿ; 8. ಬೊಮ್ಮನಾಳ್; 9. ಕೋಲಾರ; 10. ರಾಯಚೂರು ಮತ್ತು 11. ಗದ್ವಾಲ್. ಆದಿಜೀವಕಲ್ಪದ ಶಿಲೆಗಳು ಬೆಳಗಾಂವಿ ಜಿಲ್ಲೆಯಲ್ಲಿ ಬೆಳಗಾಂವಿ ನಗರಕ್ಕೂ ಕಾಲಡ್ಗಿಗೂ ಮಧ್ಯೆ ಹೊರಕಂಡಿವೆ. ಇವಕ್ಕೆ ಕಾಲಡ್ಗಿ ಶಿಲಾಶ್ರೇಣಿ ಎಂದು ಹೆಸರು. ಈ ಕಲ್ಪದ ಉತ್ತರಾರ್ಧಕಾಲದ ಶಿಲೆಗಳು ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಭೀಮಾನದಿಯ ಪಾತ್ರದಲ್ಲಿ ಸು. 7770 ಚ.ಕಿಮೀ. ಪ್ರದೇಶದಲ್ಲಿ ಹೊರಕಂಡಿವೆ. ಇವಕ್ಕೆ ಭೀಮಾ ಶಿಲಾಶ್ರೇಣಿ ಎಂದು ಹೆಸರು. ಇದರಲ್ಲಿರುವ ಸುಣ್ಣಶಿಲೆಗಳನ್ನು ಷಾಹಬಾದ್ ಸಿಮೆಂಟ್ ಕಾರ್ಖಾನೆಯಲ್ಲಿ ಉಪಯೋಗಿಸಲಾಗುತ್ತಿದೆ.

ಭಾರತ ಪರ್ಯಾಯ ದ್ವೀಪದ ಕಣಶಿಲೆಗಳ ಹಂಚಿಕೆ : ಈ ಪರ್ಯಾಯ ದ್ವೀಪ ಆರ್ಷೇಯ ಕಲ್ಪದ ಅನಂತರ ಸ್ಥಿರಭೂಭಾಗವಾಯಿತು. ಆದಿಜೀವಕಲ್ಪದ ಪೂರ್ವಾರ್ಧದಲ್ಲಿ ಆಂಧ್ರಪ್ರದೇಶದ ಕಡಪ ಮತ್ತು ಕರ್ನೂಲ್ ಜಿಲ್ಲೆಗಳ ಪ್ರದೇಶ, ಒರಿಸ್ಸದ ಛತ್ತೀಸಗಢ ಪ್ರದೇಶ. ಕರ್ನಾಟಕದ ಬೆಳಗಾಂವಿ ಜಿಲ್ಲೆಯ ಕಾಲಡ್ಗಿ ಪ್ರದೇಶ ಮತ್ತು ದೆಹಲಿ ಪ್ರದೇಶಗಳನ್ನು ಸಮುದ್ರಗಳು ಆಕ್ರಮಿಸಿದ್ದುವು. ಈ ಪ್ರದೇಶಗಳಿಂದ ಸಮುದ್ರಗಳು ಹಿಂಜರಿದು ಉತ್ತರಾರ್ಧದಲ್ಲಿ ವಿಂಧ್ಯಪರ್ವತ ಪ್ರದೇಶ, ಕರ್ನೂಲ್ ಜಿಲ್ಲೆ ಮತ್ತು ಭೀಮಾ ನದಿಯ ಕಣಿವೆ ಪ್ರದೇಶಗಳನ್ನು ಪುನಃ ಆಕ್ರಮಿಸಿದುವು. ಈ ಪ್ರದೇಶಗಳಲ್ಲೆಲ್ಲ ಪಳೆಯುಳಿಕೆರಹಿತ ಕಣಶಿಲೆಗಳಿವೆ. ಪ್ರಾಚೀನ ಜೀವಕಲ್ಪವನ್ನು ಪ್ರತಿನಿಧಿಸುವ ಕಣಶಿಲೆಗಳು ಎಲ್ಲೂ ಸಂಚಯಿಸಿಲ್ಲ. ಮಧ್ಯ ಜೀವಕಲ್ಪದ ಜುರಾಸಿಕ್ ಯುಗದಲ್ಲಿ ಕಚ್ ಮುಂತಾದ ಪ್ರದೇಶಗಳು ಸಮುದ್ರಾಕ್ರಮಣಕ್ಕೊಳಗಾಗಿ ಅಲ್ಲಿ ಪಳೆಯುಳಿಕೆಗಳುಳ್ಳ ಕಣಶಿಲೆಗಳು ರೂಪುಗೊಂಡಿವೆ. ಕ್ರಿಟೇಷಸ್ ಯುಗದ ಮಧ್ಯಭಾಗದಲ್ಲಿ

ಟೆತಿಸ್ ಸಾಗರ ನರ್ಮದಾ ಕಣಿವೆ ಪ್ರದೇಶದಲ್ಲೂ ದಕ್ಷಿಣ ಸಮುದ್ರ ತಿರುಚಿನಾಪಲ್ಲಿ, ವೃದ್ಧಾಚಲಮ್, ಪಾಂಡಿಚೇರಿ, ರಾಜ ಮಹೇಂದ್ರಿ ಮತ್ತು ಅಸ್ಸಾಮ್ ಪ್ರದೇಶಗಳಲ್ಲಿ ಆಕ್ರಮಣ ನಡೆಸಿದುವು. ಆಗ ಸಂಚಯಿಸಿದ ಶಿಲೆಗಳು ಆ ಪ್ರದೇಶಗಳಲ್ಲಿ ಕಂಡುಬರುತ್ತವೆ. ನವಜೀವಕಲ್ಪದ ಮಯೋಸೀನ್ ಯುಗದಲ್ಲಿ ಭಾರತ ಪರ್ಯಾಯದ್ವೀಪದ ಪೂರ್ವ ಮತ್ತು ಪಶ್ಚಿಮತೀರಗಳಲ್ಲಿ ಸಮುದ್ರಾಕ್ರಮಣವಾಗಿ ಮರಳುಶಿಲೆಗಳು ನಿಕ್ಷೇಪವಾಗಿವೆ. ಇವುಗಳಲ್ಲಿ ಕಡಲೂರು ಮರಳುಶಿಲೆಗಳು ಗಮನಾರ್ಹ, ಕಾರ್ಬಾನಿಫೆರಸ್ ಯುಗದ ಅಂತ್ಯದಿಂದ ಜುರಾಸಿಕ್ ಯುಗದ ಅಂತ್ಯದವರೆಗೆ ಸೋನ್‌ದಾಮೋದರ್ ಮಹಾನದಿ ಮತ್ತು ಗೋದಾವರಿ ನದಿ ಕಣಿವೆಗಳಲ್ಲೂ ಪೂರ್ವ ಮತ್ತು ಪಶ್ಚಿಮ ತೀರದ ಕೆಲವು ಸ್ಥಳಗಳಲ್ಲೂ ಸಿಹಿನೀರು ನಿಕ್ಷೇಪಗಳು ಸಂಚಯಿಸಿವೆ. ಇವಕ್ಕೆ ಗೊಂಡ್ವಾನ ಶಿಲಾಸಮುದಾಯ ಎಂದು ಹೆಸರು.

ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಕಣಶಿಲೆಗಳ ಹಂಚಿಕೆ: ಈ ಪ್ರದೇಶ ಇಯೊಸೀನ್ ಯುಗದ ಅಂತ್ಯದವರೆಗೆ ಟೆತಿಸ್ ಸಾಗರದ ಆಕ್ರಮಣಕ್ಕೊಳಗಾಗಿತ್ತು. ಆದ್ದರಿಂದ ಇಲ್ಲಿ ಶಿಲಾಪರಂಪರೆ ಸರಿಸುಮಾರು ಅಖಂಡವಾಗಿದೆ. ಸಿಂದ್–ಬಲೂಚಿಸ್ತಾನ್ ಪ್ರದೇಶ ಮತ್ತು ಅಸ್ಸಾಮ್ ಪ್ರದೇಶಗಳಲ್ಲಿ ಟೆತಿಸ್ ಸಾಗರ ಆಲಿಗೋಸೀನ್ ಯುಗದ ಅಂತ್ಯದವರೆಗೂ ಇದ್ದ ಕಾರಣ ಅಲ್ಲಿನ ಶಿಲಾಪರಂಪರೆ ಆಲಿಗೋಸೀನ್ ಯುಗವನ್ನೂ ಪ್ರತಿನಿಧಿಸುತ್ತದೆ. ಮಯೋಸೀನ್ ಯುಗದಿಂದ ವರ್ತಮಾನ ಕಾಲದವರೆಗೆ ಇಲ್ಲಿ ಸಿಹಿನೀರು ನಿಕ್ಷೇಪಗಳು ಸಂಚಯಿಸಿವೆ. ಶಿವಾಲಿಕ್ ಶಿಲಾಸಮುದಾಯ ಮತ್ತು ಸಿಂಧು–ಗಂಗ ಮೆಕ್ಕಲು–ಇವೇ ಈ ನಿಕ್ಷೇಪಗಳು. (ಕೆ.ಎನ್.ಯು.)

**ಕಥಾರ್:** ಇದು ಮಧ್ಯ ಪ್ರಾಚ್ಯದಲ್ಲಿದೆ, ಸೌದಿ ಅರೇಬಿಯಗೆ ಹೊಂದಿಕೊಂಡಂತಿರುವ ಪರ್ಯಾಯ ದ್ವೀಪವಾಗಿದೆ. ಪಶ್ಚಿಮದಲ್ಲಿ ಅರೇಬಿಯನ್ ಖಾರಿ (ಹಾವತ್ ಅಸ್ ಸಲ್ವ) ಮತ್ತು ಸೌದಿ ಅರೇಬಿಯ, ದಕ್ಷಿಣದಲ್ಲಿ ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್, ವಾಯವ್ಯದಲ್ಲಿ ಬಹ್ರೇನ್ ಖಾರಿ ಮತ್ತು ಬಹ್ರೇನ್ ದ್ವೀಪ ಸಮುದಾಯ ಇದ್ದರೆ ಪೂರ್ವದಲ್ಲಿ ಮತ್ತು ಉತ್ತರದಲ್ಲಿ ಪರ್ಷಿಯನ್ ಖಾರಿ ಕಂಡುಬರುತ್ತದೆ. $25^0$ ಉ.ಅ. ಮತ್ತು $51^0$ ಪೂ. ರೇ. ದಲ್ಲಿದೆ.




ಭೂಸ್ವರೂಪ: ಮಟ್ಟಸವಾದ ಬಂಜರು ಮರುಭೂಮಿಯನ್ನು ಹೊಂದಿದ್ದು ಮರಳು ಮತ್ತು ನುರಜುಗಲ್ಲುಗಳನ್ನು ಅತ್ಯಧಿಕವಾಗಿ ಹೊಂದಿದೆ. ಇದರ ಒಟ್ಟು ವಿಸ್ತೀರ್ಣ 11,000 ಚ.ಕಿಮೀ. ಇದು 563 ಕಿಮೀ ಉದ್ದದ ತೀರ ಪ್ರದೇಶವನ್ನು ಹೊಂದಿದೆ. $24^052'$ ಉ. ದಿಂದ $26^012'$ ಉತ್ತರ ಅಕ್ಷಾಂಶದವರೆಗೂ, $50^048'$ ದಿಂದ $51^028'$ ಪೂರ್ವ ರೇಖಾಂಶದವರೆಗೆ ಹಬ್ಬಿದೆ. ಸಂಪೂರ್ಣವಾಗಿ ಮರುಭೂಮಿಯಾಗಿದೆ.

ವಾಯುಗುಣ: ಬೇಸಗೆಯು ಅತ್ಯಧಿಕ ಉಷ್ಣಾಂಶದಿಂದ ಕೂಡಿರುತ್ತದೆ. ಉಷ್ಣಾಂಶ $49^0$ಸೆ. ಗಿಂತಲೂ ಅತ್ಯಧಿಕವಾಗಿದ್ದು ದೂಳಿನಿಂದ ಕೂಡಿದ ಬಿರುಗಾಳಿ, ಮರಳು ದೂಳು, ಸುಂಟರಗಾಳಿಗಳು ಸರ್ವ ಸಾಧಾರಣವಾಗಿದೆ. ತೀರ ಪ್ರದೇಶದ ಸ್ವಲ್ಪ ಭಾಗ ಮಾತ್ರ ಸಮುದ್ರಗಾಳಿಗಳಿಂದಾಗಿ ಸಾಧಾರಣ ಉಷ್ಣಾಂಶವನ್ನು ಪಡೆಯುತ್ತದೆ. ಅತಿ ಕಡಿಮೆ ಮಳೆ 5–20 ಸೆಂಮೀ ಕಂಡುಬರುತ್ತದೆ. ಇದು ಉಷ್ಣ ವಲಯದ ಮರುಭೂಮಿ ವಾಯುಗುಣವನ್ನು ಹೊಂದಿದೆ.

ಸ್ವಾಭಾವಿಕ ಸಸ್ಯವರ್ಗ: ಅತಿ ಉಷ್ಣಾಂಶ ಹಾಗೂ ಮಳೆ ಇಲ್ಲದ ಕಾರಣ ಯಾವಬಗೆಯ ಸಸ್ಯವರ್ಗಗಳು ಕಂಡುಬರುವುದಿಲ್ಲ.

ಜನಸಂಖ್ಯೆ 8,63,051 (2002). ಪ್ರತಿ ಚ.ಕಿಮೀ ಗೆ 180 ಜನರು ಕಂಡುಬಂದು, ತೀರ ಪ್ರದೇಶದಲ್ಲಿ ಶೇ.89.9 ನಗರಗಳಲ್ಲಿ ವಾಸಿಸುತ್ತಿದ್ದಾರೆ.

ಧರ್ಮ: ಮುಸ್ಲಿಮರು ಶೇ. 95 ಕಂಡುಬರುತ್ತಾರೆ. ಇದರಲ್ಲೂ ಕಥಾರೀಸ್ ಜನಾಂಗದವರು ಹೆಚ್ಚಾಗಿದ್ದಾರೆ. ಅಲ್ಲದೆ ಸುನ್ನಿ ಮುಸ್ಲಿಮರು ಇದ್ದಾರೆ. ಹಿಂದು, ಕ್ರಿಶ್ಚಿಯನ್ ಧರ್ಮ ಅನುಯಾಯಿಗಳು ಇದ್ದಾರೆ.

ಭಾಷೆ: ಆಡಳಿತ ಭಾಷೆ ಅರೆಬಿಕ್, ಜೊತೆಗೆ ಇಂಗ್ಲಿಷ್ ಬಳಕೆಯಲ್ಲಿದೆ.

ಉದ್ಯೋಗ: ತೀರಪ್ರದೇಶಗಳಲ್ಲಿ ಸ್ವಲ್ಪ ವ್ಯವಸಾಯ ಕಂಡು ಬರುತ್ತದೆ.

ಕಾಳುಗಳು: ರೇ, ಬಾರ್ಲಿ, ಗೋದಿ, ಬಾದಾಮಿ, ಖರ್ಜೂರ, ಅಂಜೂರವನ್ನು ಬೆಳೆಯುತ್ತಾರೆ.

ಪ್ರಾಣಿ ಸಾಕಾಣಿಕೆ: ತೀರಪ್ರದೇಶದಲ್ಲಿ ಒಂಟೆ, ಕುದುರೆ, ಕತ್ತೆ, ಹೇಸರಗತ್ತೆಗಳನ್ನು, ಒಳನಾಡಿನಲ್ಲಿ ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ.

ಗಣಿಗಾರಿಕೆ: ಇಲ್ಲಿಯ ಜನರ ಮುಖ್ಯ ಉದ್ಯೋಗ ಗಣಿಗಾರಿಕೆ. ದೇಶದ ಆದಾಯವು ಗಣಿಗಾರಿಕೆಯನ್ನು ಅವಲಂಬಿಸಿದೆ. ಪೆಟ್ರೋಲಿಯಂ ಎಣ್ಣೆ, ಸ್ವಾಭಾವಿಕ ಅನಿಲಗಳ ನಿಕ್ಷೇಪವು ಅತ್ಯಧಿಕವಾಗಿದ್ದು ಹೊರ ತೆಗೆಯುವ ಕಾರ್ಯವು ಪ್ರಮುಖವಾಗಿದೆ.

ಕೈಗಾರಿಕೆ: ರಾಷ್ಟ್ರೀಯ ತಲಾವರಮಾನಗಳೆಲ್ಲವು ಕೈಗಾರಿಕೆಯನ್ನು ಅವಲಂಬಿಸಿದೆ. ಎಣ್ಣೆ ಶುದ್ಧೀಕರಣ (ಶೇ. 25.4), ರಾಸಾಯನಿಕಗಳು (ಶೇ. 24.4), ಗಿರಣಿ, ಸಿಮೆಂಟ್, ಪ್ಲಾಸ್ಟಿಕ್, ಜವಳಿ, ಚರ್ಮದ ಸಾಮಾನು ಪಾದರಕ್ಷೆ, ಪಿಂಗಾಣಿ ಸಾಮಾನು, ಬಣ್ಣ ಮುಂತಾದ ಕೈಗಾರಿಕೆಗಳು ಅಭಿವೃದ್ಧಿ ಹೊಂದಿದೆ.

ವ್ಯಾಪಾರ: ಕಥಾರ್ ಪ್ರಪಂಚದ ಮಾರುಕಟ್ಟೆಯಲ್ಲಿ ವ್ಯಾಪಾರ ಪ್ರಮುಖವಾಗಿದೆ. ಪೆಟ್ರೋಲಿಯಂ, ಸ್ವಾಭಾವಿಕ ಅನಿಲ, ಪಾದರಕ್ಷೆ, ರಾಸಾಯನಿಕ, ಪಿಂಗಾಣಿ ಸಾಮಾನು, ಬಣ್ಣ, ಪ್ಲಾಸ್ಟಿಕ್ ಮುಂತಾದವುಗಳನ್ನು ರಫ್ತುಮಾಡುತ್ತದೆ. ಆಮದು: ಆಹಾರ ಪದಾರ್ಥ, ಸಿದ್ಧ ಉಡುಪು, ಜವಳಿ, ಯಂತ್ರಗಳು, ಯಂತ್ರೋಪಕರಣ, ಔಷಧಿ, ಬೆಲೆಬಾಳುವ ಹರಳುಗಳು, ಎಲೆಕ್ಟ್ರಾನಿಕ್ಸ್ ಉಪಕರಣ, ರೇಡಿಯೋ, ಗಡಿಯಾರ, ದೂರದರ್ಶನ, ಟೆಲಿಫೋನ್ ಮುಂತಾದವುಗಳನ್ನು ಆಮದು ಮಾಡಿಕೊಳ್ಳುತ್ತದೆ. ಇಂದು ಕಥಾರ್‌ನ ಆರ್ಥಿಕತೆ ಸಂಪೂರ್ಣವಾಗಿ ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲವನ್ನು ಅವಲಂಬಿಸಿದೆ.

ರಾಜಕೀಯ: ದೊಹಾ ರಾಜಧಾನಿ. ಜನಸಂಖ್ಯೆ 300,000 (2002). ಇದು ಸಂಪ್ರದಾಯ ನಿರಂಕುಶರಾಜರ ಮಾದರಿಯ ಸರಕಾರವನ್ನು ಹೊಂದಿದೆ. 1971 ಸೆಪ್ಟೆಂಬರ್ 3 ರಂದು ಇಂಗ್ಲೆಂಡ್ ಅಧೀನದಿಂದ ಸ್ವತಂತ್ರವಾಯಿತು. ಇದು 9 ಪುರಸಭೆಯನ್ನು ಹೊಂದಿದೆ. ಅವುಗಳೆಂದರೆ ಬಲಾಡಿಯಲ್, ಅಡ್ ಡಾವಾಯ್, ಅಲ್‌ಗುವಾಯುರಿಯ, ಅಲ್ ಜುಮಾಯಿಲ್‌ಯ, ಅಲ್‌ಕೌರಾ, ಅಲ್‌ರಯ್ಯಾನ್, ಅಲ್‌ವಕ್ರಾ, ಆಶ್ ಶಾಮಲ್, ಜರಾಯನ್, ಅಲ್ಬಟ್ನಾ, ಉಮಾ ಸಲಾಲ್ ಪ್ರದೇಶಗಳಾಗಿವೆ. ಉಮ್ಸಾಟ್, ದೊಹಾ, ಅಲ್‌ಕೌರಾ, ಅಲ್ ಜಮಾಲಿಯಾಗಳು ದೊಡ್ಡ ನಗರಗಳಾಗಿವೆ.

ಸಾರಿಗೆ: ಉತ್ತಮಸಾರಿಗೆ ವ್ಯವಸ್ಥೆಯನ್ನು ಹೊಂದಿದ್ದು ವಾಯು ಸಾರಿಗೆ ಅತ್ಯಂತ ಪ್ರಮುಖವಾಗಿದೆ. ರಸ್ತೆ ಸಾರಿಗೆಯಲ್ಲಿ ಒಂಟೆ, ಕುದುರೆ, ಕತ್ತೆಗಳು ಉಪಯೋಗದಲ್ಲಿವೆ. (ಎಸ್.ಕೆ.)

**ಕಥೈಯೆನ್ ಗಣರಾಜ್ಯ:** ಅಲೆಕ್ಸಾಂಡರನ ಭಾರತ ದಂಡಯಾತ್ರೆಯ ಕಾಲದಲ್ಲಿ, ರಾವಿ ನದಿಯ ಪೂರ್ವದಂಡೆಯ ಮೇಲೆ ಈಗಿನ ಲಾಹೋರ್ ಮತ್ತು ಅಮೃತಸರಗಳ ಹಲವು ಭಾಗಗಳಲ್ಲಿ ಇದ್ದ ಗಣರಾಜ್ಯ. ಸಂಕಲ ರಾಜಧಾನಿ. ಇದು ಕೆಲಕಾಲ ಅತ್ಯಂತ ಪ್ರಬಲವಾಗಿತ್ತೆಂದೂ ಅಲೆಕ್ಸಾಂಡರನಿಂದ ಪರಾಜಿತವಾಗುವ ಮೊದಲು ಸುತ್ತುಮುತ್ತಿನ ಇತರ ಗಣರಾಜ್ಯಗಳನ್ನೂ ಪುರೂರವ, ಅಭಿಸಾರ ಮೊದಲಾದ ರಾಜರನ್ನೂ ಯುದ್ಧಗಳಲ್ಲಿ ಸೋಲಿಸಿದ್ದುದಾಗಿಯೂ ಅರೆಯನ್ ವರ್ಣಿಸಿದ್ದಾನೆ. ಅಲೆಕ್ಸಾಂಡರನ ಆಕ್ರಮಣವನ್ನು ತಡೆಗಟ್ಟಲು ಈ ಗಣರಾಜ್ಯದ ಸೈನ್ಯ ಶಕಟವ್ಯೂಹವನ್ನು ರಚಿಸಿಕೊಂಡು ವೀರಾವೇಶದಿಂದ ಹೋರಾಡಿತು. ಆದರೆ ಅಲೆಕ್ಸಾಂಡರನ ಅಗಾಧ ಸೈನ್ಯವನ್ನು ಗೆಲ್ಲಲಾಗಲಿಲ್ಲ. (ಜಿ.ಆರ್.ಆರ್.)

**ಕನಿಷ್ಠ ಜನಸಂಖ್ಯೆ:** ಯಾವ ಪ್ರದೇಶದಲ್ಲಿ ಜನರು ತಮ್ಮ ಜೀವನಮಟ್ಟದಲ್ಲಿ ಯಾವುದೇ ತೆರನಾದ ಕಡಿತವಿಲ್ಲದೇ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅಸಮರ್ಥರಾಗಿರುತ್ತಾರೋ ಅಂತಹ ಜನಸಂಖ್ಯೆ ಪ್ರದೇಶವನ್ನು ಕನಿಷ್ಠ ಜನಸಂಖ್ಯೆ ಎಂದು ಕರೆಯುತ್ತಾರೆ. ಇಲ್ಲಿ ಸಂಪನ್ಮೂಲಗಳ ಅಪಾರವಾದ ಲಭ್ಯತೆಯಿದ್ದರೂ ಅತ್ಯಂತ ಕಡಿಮೆ ಜನರು ವಾಸಿಸುವುದರಿಂದ ಅದನ್ನು ಬಳಸಿಕೊಳ್ಳಲು ಅಸಮರ್ಥರಾಗಿರುತ್ತಾರೆ. ಇದಕ್ಕೆ ಕಾರಣ ಇಂತಹ ಪ್ರದೇಶದಲ್ಲಿ ತಾಂತ್ರಿಕ ಅಭಿವೃದ್ಧಿಯ ಕೊರತೆ ಕಂಡುಬರುವುದು ಆಗಿದೆ. ಇಂತಹ ಉದಾಹರಣೆಗಳು ವರ್ಗಾವಣೆ ಕೃಷಿ ಪದ್ಧತಿ ಹಾಗೂ ಜೀವನಾಧಾರ ಬೇಸಾಯ ಪದ್ಧತಿಗಳಲ್ಲಿ ಕಂಡುಬರುವುದು ಸಾಮಾನ್ಯ. ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲಿ ಇದು ಹೆಚ್ಚಾಗಿ ಕಂಡುಬರುವುದಿಲ್ಲ. ಆಸ್ಟ್ರೇಲಿಯ, ಕೆನಡದ ಪ್ರೇರೀ ಪ್ರದೇಶ, ನ್ಯೂಜಿಲ್ಯಾಂಡ್, ಅರ್ಜೆಂಟೈನ ಹಾಗೂ ಸಮಶೀತೋಷ್ಣ ಪ್ರದೇಶಗಳ ಕೆಲಭಾಗಗಳಲ್ಲಿ ಕನಿಷ್ಠ ಜನಸಂಖ್ಯೆಯ ಉದಾಹರಣೆಗಳು ಕಾಣಸಿಗುತ್ತವೆ. (ಎಸ್.ಐ.ಬಿ.)

**ಕನ್ಯಾಕುಮಾರಿ:** ಭಾರತದ ದಕ್ಷಿಣತಮ ಭೂಶಿರ; ಇದೇ ಹೆಸರಿನ ಜಿಲ್ಲೆ, ತಮಿಳುನಾಡಿಗೆ ಸೇರಿದೆ. ಭೂಶಿರ ಉ. ಅ. $8^0 4'$ ಮತ್ತು ಪೂ. ರೇ. $77^0 35'$ ನಲ್ಲಿ ಪಶ್ಚಿಮಘಟ್ಟಗಳ ಶಾಖೆಯಾದ ಕಾರ್ಡಮಮ್ ಗುಡ್ಡದ ದಕ್ಷಿಣತುದಿಯಲ್ಲಿದೆ. ಇಲ್ಲಿ ಕನ್ಯಾಕುಮಾರಿಯ ದೇಗುಲವಿರುವುದರಿಂದ ಈ ಸ್ಥಳಕ್ಕೆ ಕನ್ಯಾಕುಮಾರಿ ಎಂಬ ಹೆಸರು ಬಂದಿದೆ. ತಿರುವನಂತಪುರದಿಂದ ಇದು 87 ಕಿಮೀ ದೂರದಲ್ಲಿದೆ. ಇಲ್ಲಿಯ ಭೂಭಾಗ ಬಹು ಕಿರಿದಾಗಿದ್ದು ಸಮುದ್ರದೊಳಕ್ಕೆ ನಾಲಗೆಯಂತೆ ಚಾಚಿಕೊಂಡಿರುವುದರಿಂದ ಸೂರ್ಯೋದಯ

ವಿವೇಕಾನಂದ ಸ್ಮಾರಕದ ದೃಶ್ಯ

ಸೂರ್ಯಾಸ್ತಗಳೆರಡೂ ಇಲ್ಲಿಂದ ನೋಡಲು ಬಲು ರಮ್ಯ; ವರ್ಣಮಯ. ಈ ದೃಶ್ಯವನ್ನು ನೋಡಲೆಂದೇ ಸಹಸ್ರಾರು ಪ್ರವಾಸಿಗಳು ಇಲ್ಲಿಗೆ ಬರುತ್ತಾರೆ. ಇದು ಹಿಂದೂಗಳ ಪುಣ್ಯಕ್ಷೇತ್ರ. ಭೂಭಾಗದ ದಕ್ಷಿಣತುದಿಯಲ್ಲಿ ಕನ್ಯಾಕುಮಾರಿಯ ಪುರಾತನ ದೇವಾಲಯವಿದೆ. ಇದು ಬಹು ಹಿಂದಿನಿಂದಲೂ ಕನ್ಯಾತೀರ್ಥವೆಂದು ಪ್ರಸಿದ್ಧವಾಗಿದ್ದಿತೆಂದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಭೂಭಾಗದ ಅಂಚಿನಿಂದ ಕೆಲವೇ ಮೀ ದೂರದಲ್ಲಿ ವಿವೇಕಾನಂದರ ಬಂಡೆ ಎಂಬ ನಡುಗುಡ್ಡೆಯಿದೆ. ಇಲ್ಲಿ ವಿವೇಕಾನಂದರ ಬೃಹತ್ ಸ್ಮಾರಕವೊಂದರ ನಿರ್ಮಾಣವಾಗಿದೆ. ಕನ್ಯಾಕುಮಾರಿ ಮೀನುಗಾರಿಕೆ ಕೇಂದ್ರ ಕೂಡ. ಕಡಲ ದಂಡೆಯ ಮರಳಿನಲ್ಲಿ ಇಲ್ಮನೈಟ್ ಮತ್ತು ಮೊನಾಜೈಟ್ ನಿಕ್ಷೇಪಗಳಿವೆ. ಈ ಜಿಲ್ಲೆಯ ಜನಸಂಖ್ಯೆ 16,69,763. ನಗರದ ಜನಸಂಖ್ಯೆ 19,678. (ಎನ್.ಎ.;ಎಸ್.ಎನ್.;ಎಚ್.)

**ಕಪಿಲಾ ಯೋಜನೆ:** ಕಪಿಲಾ ನದಿಗೆ ಅಡ್ಡವಾಗಿ ನಿರ್ಮಿಸಿದ ಕಟ್ಟೆ; ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ಬಿದರಹಳ್ಳಿ–ಬೀಚನಹಳ್ಳಿ ಸಮೀಪದಲ್ಲಿದೆ. ಇಲ್ಲಿ ಸಂಗ್ರಹವಾಗುವ ನೀರು, ಅದರ ನೀರಾವರಿ ಉಪಯೋಗ–ಇಷ್ಟೂ ಈ ಯೋಜನೆಯಲ್ಲಿ ಅಡಕವಾಗಿವೆ.

ಕಪಿಲಾನದಿಯು ಕಾವೇರಿ ನದಿಯ ಪ್ರಧಾನ ಉಪನದಿಗಳಲ್ಲಿ ಒಂದು. ನದಿಯ ಉಗಮಸ್ಥಾನ ಕೇರಳದ ವೈನಾಡು. ತಾಲ್ಲೂಕಿನ ಪಶ್ಚಿಮಘಟ್ಟಗಳ ಸಾಲಿನಲ್ಲಿದೆ. ಇದರ ಎತ್ತರ ಸಮುದ್ರಮಟ್ಟದಿಂದ 2100 ಮೀ ನದಿ 212 ಕಿಮೀ ದೂರಕ್ಕೆ ಹರಿದು ತಿರುಮಕೂಡಲು ನರಸೀಪುರದಲ್ಲಿ ಕಾವೇರಿಯನ್ನು ಸೇರುತ್ತದೆ. ಉಗಮಸ್ಥಾನದಲ್ಲಿ ವಾರ್ಷಿಕ ಮಳೆ 175 ರಿಂದ 310 ಸೆಂಮೀ. ತಳದ ಅರಣ್ಯ ಪ್ರದೇಶದಲ್ಲಿ ಇದು 75 ರಿಂದ 175 ಸೆಂಮೀ ಗಳಷ್ಟು ಕಡಿಮೆ. ಮುಂದೆ ಮೈಸೂರು ಜಿಲ್ಲೆಯ ಬಯಲು ಪ್ರದೇಶವನ್ನು ಪ್ರವೇಶಿಸುವ ಹೊತ್ತಿಗೆ ಹಲವಾರು ಉಪನದಿಗಳ ನೀರಿನಿಂದ ಕಪಿಲಾ ನದಿ ಪುಷ್ಟಿಗೊಳ್ಳುತ್ತದೆ. ತಿರುಮಕೂಡಲು ನರಸೀಪುರ, ಯಳಂದೂರು, ಚಾಮರಾಜನಗರ, ಕೊಳ್ಳೇಗಾಲ ತಾಲ್ಲೂಕುಗಳಲ್ಲಿನ ಪರಿಸ್ಥಿತಿ ಯೋಜನೆಯ ನಿರ್ವಹಣೆಗೆ ಅತ್ಯಂತ ಅನುಕೂಲವಾಗಿದ್ದು–ಕಡಿಮೆ ಮಳೆ, ಬಯಲನಾಡು, ತುಂಬುನೀರಿನ ನದಿ, ಅಂಕೆಗೆ ಒಳಪಡುವ ನದಿಯ ನೀರು, ಇಲ್ಲಿ ಹೊಸ ನೆಲ, ಹೊಸ ಪರಿಸರವನ್ನೇ ಸೃಷ್ಟಿಸಿವೆ.

ಯೋಜನೆಯ ರೂಪರೇಖೆಗಳು : ಮೊದಲು 1959ರಲ್ಲಿ ಸರ್ಕಾರದ ಆಡಳಿತ ಅಂಗೀಕಾರ ಪಡೆದ ಈ ಯೋಜನೆಯಲ್ಲಿ ಕಾಲಕ್ರಮೇಣ ಹಲವಾರು ಮಾರ್ಪಾಡುಗಳಾಗಿ; ಇಂದಿನ ಪರಿಷ್ಕೃತ ರೂಪದಲ್ಲಿ ನಿರ್ಮಾಣಗೊಂಡಿದೆ. ಕೆಲವು ವಿವರಗಳು:

| | |
|---|---|
| ಜಲಾನಯನ ಪ್ರದೇಶ | . . . 2,232 ಚ.ಕಿಮೀ |
| ಜಲಾಯನದ ಘನಗಾತ್ರ | . . . 19,200 ಮಿಲಿಯನ್ ಘನ ಅಡಿಗಳು |
| ಪ್ರಧಾನ ಉಪಯೋಗ | . . . 49,606 ಹೆ. ಜಮೀನಿನ ವ್ಯವಸಾಯ, ಮಿಶ್ರ ಬೆಳೆ ಕ್ರಮೇಣ 72,835 ಹೆ. ಗಳಿಗೆ ವಿಸ್ತರಿಸುವ ಯೋಜನೆ. |
| ಇತರ ಉಪಯೋಗಗಳು | . . . 32,000 ಕಿ.ವಾ ವಿದ್ಯುಚ್ಛಕ್ತಿಯ ಉತ್ಪಾದನೆ. ಬೆಂಗಳೂರು ನಗರಕ್ಕೆ 2,800 ಮಿಲಿಯನ್ ಘನ ಅಡಿಗಳಷ್ಟು ನೀರಿನ ಸರಬರಾಜು |
| ನೀರಾವರಿ ಉಪಯೋಗ ಹೊಂದುವ ಪ್ರದೇಶಗಳು | . . . ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ಪ್ರದೇಶಗಳು ನಂಜನಗೂಡು, ಮೈಸೂರು, ತಿರುಮಕೂಡಲು, ನರಸೀಪುರ, ತಾಲ್ಲೂಕುಗಳಿಗೂ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ತಾಲ್ಲೂಕುಗಳಿಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿಗೂ ಈ ಯೋಜನೆಯ ನೆರವು ಭಾಗಶಃ ದೊರೆಯುವುದು. |
| ನಾಲೆಗಳು | . . . ಕಪಿಲಾ ಬಲದಂಡೆ ನಾಲೆ, ಕಪಿಲಾ ಎಡದಂಡೆ ನಾಲೆ ಮತ್ತು ಕೃಷ್ಣರಾಜಸಾಗರದಿಂದ ಬಲದಂಡೆ ಎತ್ತರಮಟ್ಟದ ನಾಲೆ |
| ನಡುವಿನ ಗಾರೆ ಕಟ್ಟಡದ ಕಟ್ಟೆಯ ಉದ್ದ | . . . 250 ಮೀ |
| ಕಟ್ಟೆಯ ಒಟ್ಟು ಉದ್ದ | . . . 2692 ಮೀ |
| ನದಿಪಾತ್ರದ ಸರಾಸರಿ ಮಟ್ಟದಿಂದ ಕಟ್ಟೆಯ ಎತ್ತರ | . . . 27 ಮೀ |
| ಜಲಾಶಯದ ಪಾತ್ರದಿಂದ ಅಡಿಪಾಯ ಸಾಗಿರುವ ಗರಿಷ್ಠ ಆಳ | . . . 28 ಮೀ |
| ಜಲಾಶಯದ ವಿಸ್ತಾರದಿಂದ ಮುಳುಗಡೆ ಯಾಗುವ ಪ್ರದೇಶ | . . . 6076 ಹೆ |
| ಕಟ್ಟೆಯ ಮೇಲಣ ರಸ್ತೆಯ ಅಗಲ | . . . 8 ಮೀ |
| ಕಟ್ಟೆಯ ನಿವೇಶನದಲ್ಲಿ ಹರಿಯುವ ನೀರಿನ ಗರಿಷ್ಠ ಬೆಲೆ | . . . ಸು. 1,94,000 ಕ್ಯೂಸೆಕ್ಸುಗಳು (ಕ್ಯೂಬಿಕ್ ಫೀಟ್ ಪರ್ ಸೆಕೆಂಡ್) |
| ಯೋಜನೆಯ ಒಟ್ಟು ಅಂದಾಜು ಖರ್ಚು | . . . ರೂ. 24.80 ಕೋಟಿ |

(ಎಚ್.ಸಿ.ಕೆ.)

**ಕಪ್ಪುಸಮುದ್ರ:** ಉತ್ತರ ಮತ್ತು ಪೂರ್ವಗಳಲ್ಲಿ ರಷ್ಯದಿಂದಲೂ ಪಶ್ಚಿಮದಲ್ಲಿ ರೊಮೇನಿಯ ಮತ್ತು ಬಲ್ಗೇರಿಯಗಳಿಂದಲೂ ದಕ್ಷಿಣ ಮತ್ತು ನೈಋತ್ಯಗಳಲ್ಲಿ ತುರ್ಕಿಯಿಂದಲೂ ಆವೃತವಾದ ಭೂ ಮಧ್ಯ ಸಮುದ್ರ, ಬಾಸ್ಪೋರಸ್ ಜಲಸಂಧಿಯ ಮೂಲಕವಾಗಿ ಮರ್ಮಾರ ಸಮುದ್ರಕ್ಕೂ ಡಾರ್ಡನಲ್ಸ್ ಮೂಲಕವಾಗಿ ಮೆಡಿಟರೇನಿಯನ್ ಸಮುದ್ರದ ಏಜಿಯನ್ ಶಾಖೆಗೂ ಸಂಬಂಧವಿದೆ. ಈಶಾನ್ಯದ ಅಜೋವ್ ಸಮುದ್ರಕ್ಕೂ ಇದಕ್ಕೂ ನಡುವೆ ಕೆರ್ಚ್ ಜಲಸಂಧಿಯಿದೆ.

1008 ಕಿಮೀ ಉದ್ದವಾಗಿಯೂ 528 ಕಿಮೀ ಪರಮಾವಧಿ ಅಗಲವಾಗಿಯೂ ಇರುವ ಈ ಸಮುದ್ರದ ವಿಸ್ತಾರ 4,60,800 ಚ.ಕಿಮೀ. ಇದರ ತಳ ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಕ್ರಿಮಿಯಾದ ಪಶ್ಚಿಮಕ್ಕೆ ಇದರ ಆಳ 150 ಮೀ ಗಳಿಗಿಂತ ಹೆಚ್ಚಿಲ್ಲ. ಇದರ ಹೆಚ್ಚಿನ ಭಾಗ 50 ಮೀ ಗಿಂತ ಕಡಿಮೆಯೆಂದೇ ಹೇಳಬಹುದು. ಕ್ರಿಮಿಯದ ದಕ್ಷಿಣದಲ್ಲಿ ಇದರ ಆಳ ಶೀಘ್ರವಾಗಿ ಹೆಚ್ಚಿ 1500 ಮೀ ಗಳಾಗಿ ಅನಟೋಲಿಯ ತೀರದ ಸಿನಾಪಿನ ವಾಯವ್ಯದಲ್ಲಿ 2200 ಮೀ ಗಳಿಗೂ ಹೆಚ್ಚು ಆಳವಾಗಿರುತ್ತದೆ. ಇದು ಪರಮಾವಧಿ.

ಪ್ರಾಚೀನ ಭೂ ಯುಗದಲ್ಲಿ ಕಪ್ಪುಸಮುದ್ರ ರೂಪುಗೊಂಡಿತು. ಮೆಡಿಟರೇನಿಯನ್ ಸಮುದ್ರದೊಂದಿಗೆ ಇದರ ಸಂಪರ್ಕವೇರ್ಪಟ್ಟಿತು. ಅದಕ್ಕೆ ಮೊದಲು ಇದೊಂದು ಆಳವಾದ ಉಪ್ಪು ಸರೋವರವಾಗಿತ್ತು. ಆಗ ನೀರಿನ ಮಟ್ಟ ಏರಿ ಉತ್ತರತೀರದ ತಗ್ಗುನೆಲವನ್ನೆಲ್ಲಾ ಆವರಿಸಿ, ನದಿಗಳ ಮುಖಗಳನ್ನೆಲ್ಲಾ ಮುಳುಗಿಸಿತು. ಡ್ಯಾನ್ಯೂಬ್, ನೀಪರ್ ಮುಂತಾದ ನದಿಗಳಿಂದ ಅಗಾಧ ಜಲರಾಶಿ ಇದಕ್ಕೆ ಬಂದು ಸೇರುವುದರಿಂದ ಇದರ ಮೇಲ್ಭಾಗ ಸಾಪೇಕ್ಷವಾಗಿ ಹೆಚ್ಚು ಹೊಸತಾಗಿದ್ದರೂ ಸು. 200 ಮೀ ಕೆಳಗಣ ಭಾಗ ನಿಂತನೀರಿನಿಂದ ಕೂಡಿರುತ್ತದೆ. ಇಲ್ಲಿ ಹೈಡ್ರೋಜನ್ ಸಲ್ಫೈಡ್ ಅಧಿಕವಾಗಿರುವುದಕ್ಕೂ ಆಳದಲ್ಲಿ ವಾಸಿಸುವಂಥ

ಜೀವರಾಶಿ ಇಲ್ಲದಿರುವುದಕ್ಕೂ ಇದು ಕಾರಣ. ಪ್ರವಾಹದ ದಿಕ್ಕು ಅಪ್ರದಕ್ಷಿಣೆ. ಮೇಲಣ ನೀರು ಬಾಸ್ಪೋರಸ್ ಮೂಲಕ ಹರಿದುಹೋಗುತ್ತದೆ. 20 ಮೀ ಗಳ ಕೆಳಗೆ ಮೆಡಿಟರೇನಿಯನ್ ನೀರು ಒಳಬರುತ್ತದೆ. ಇಲ್ಲಿ ಉಬ್ಬರಗಳಿಲ್ಲ. ಆದರೆ ಬಿರುಗಾಳಿ ಅನಿರೀಕ್ಷಿತವಾಗಿ ಪದೇಪದೇ ಸಂಭವಿಸಿ ನೀರಿನಮಟ್ಟದ ಏರಿಕೆಗೆ ಕಾರಣವಾಗುತ್ತದೆ.

ಕಪ್ಪುಸಮುದ್ರದ ತೀರಪ್ರದೇಶದಲ್ಲಿ ಭಿನ್ನತೆಗಳುಂಟು. ಪಶ್ಚಿಮದಲ್ಲಿ, ರುಮೇಲಿ ಭೂಶಿರದಿಂದ ಕಲಿಯಾಕ್ರ ಭೂಶಿರದವರೆಗೆ, ಸಮುದ್ರದ ಸುತ್ತಣ ಭಾಗ ಸ್ವಲ್ಪ ಎತ್ತರವಾಗಿದೆ. ಅದರ ಹಿಂದೆ ಭವ್ಯವಾದ ಪರ್ವತಶ್ರೇಣಿಗಳುಂಟು. ವಾಯವ್ಯ ಮತ್ತು ಉತ್ತರ ಭಾಗಗಳಲ್ಲಿ ತೀರಪ್ರದೇಶ ತಗ್ಗು, ವಿಸ್ತಾರವಾಗಿಯೂ ಕಡಿದಾಗಿಯೂ ಇರುವ ಮುಮ್ಮೈಯುಳ್ಳ ಅನೇಕ ದಿಣ್ಣೆಗಳು ರಷ್ಯದ ಬಂದರಾದ ಒಡೆಸ್ಸಕ್ಕೆ ಒಂದು ಆಕರ್ಷಣೀಯವಾದ ಆವರಣವನ್ನು ಒದಗಿಸಿಕೊಟ್ಟಿವೆ. ನದಿಗಳ ಮುಖಜಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೆಕ್ಕಲು ಮಣ್ಣು ಶೇಖರಣೆಯಾಗುವುದರಿಂದ ಸಮುದ್ರಯಾನ ಕಷ್ಟಕರ. ಡ್ಯಾನ್ಯೂಬ್ ನದಿಯ ಮುಖಜಭೂಮಿ ವಿಸ್ತಾರವಾಗಿದೆ. ಅದು ಮರಳುರಾಶಿಯನ್ನೇ ನಿರ್ಮಿಸಿದೆ. ತೀರದ ಬಳಿ ಆಳವು ಲವಣತ್ವವು ಕಡಿಮೆಯಾಗಿರುವುದರಿಂದ ಚಳಿಗಾಲದಲ್ಲಿ ಸಾಮಾನ್ಯವಾಗಿ ನೀರು ಗಡ್ಡೆಕಟ್ಟುವುದುಂಟು. ಅಜೋವ್ ಸಮುದ್ರ 3 ತಿಂಗಳ ಕಾಲ ಗಡ್ಡೆಕಟ್ಟಿರುತ್ತದೆ. ಕ್ರಿಮಿಯದ ದಕ್ಷಿಣತೀರಕ್ಕೆ ಸಮಾನಾಂತರವಾಗಿ ಪರ್ವತಗಳುಂಟು. ಕೆಲವು ಕಡೆಗಳಲ್ಲಿ (ಉದಾ:ಮಾಲ್ಟಾ) ಸಣ್ಣ ಆಳಕೊಲ್ಲಿಗಳಿವೆ. ಕ್ರಿಮಿಯ ಪರ್ವತ ಪರ್ಯಾಯದ್ವೀಪಕ್ಕೆ ಪಶ್ಚಿಮದಲ್ಲಿರುವ ಸೆವಾಸ್ಟಾಪೋಲ್ ಬಂದರು ಎಲ್ಲ ದೃಷ್ಟಿಗಳಿಂದಲೂ ಬಲು ಪ್ರಶಸ್ತವಾದದ್ದು.

ಕಪ್ಪು ಸಮುದ್ರದ ಪೂರ್ವದ ಕಡೆಗೆ ಕಾಕಸಸ್ ಪರ್ವತಗಳು ಎದ್ದುನಿಂತಿವೆ. ಕೆಲವು ಶ್ರೇಣಿಗಳು ಸಮುದ್ರದವರೆಗೂ ಹರಡಿರುವುದುಂಟು. ತೀರ ಪ್ರದೇಶ ನೇರವಾಗಿದೆ. ಉತ್ತರದಲ್ಲಿ ನವರೋಸಿಕ್ ಒಂದು ದೊಡ್ಡ ಹಡಗುನಿಲ್ದಾಣ. ಆನಟೋಲಿಯದ ತೀರದಲ್ಲೂ ಒಳ್ಳೆಯ ಬಂದರುಗಳಿಲ್ಲ. ಉತ್ತರದಿಂದ ಬೀಸುವ ಗಾಳಿಗೆ ಎದುರಾಗಿರುವುದರಿಂದ ಅಲ್ಲಿ ಸಮುದ್ರಯಾನ ಕಷ್ಟಕರ.

ತುರ್ಕರು ಈ ಸಮುದ್ರಕ್ಕೆ ಕಪ್ಪುಸಮುದ್ರವೆಂದು ನಾಮಕರಣ ಮಾಡಿದರು. ಅವರು ಚಂಡಮಾರುತದಿಂದ ಅಲ್ಲೋಲಕಲ್ಲೋಲವಾಗುತ್ತಿದ್ದ ಸಮುದ್ರವನ್ನು ನೋಡಿ ಹೆದರಿ ಈ ಹೆಸರಿಟ್ಟರು. ಇದೊಂದು ಕಷ್ಟದ ಅನುಭವವಾದ್ದರಿಂದ ಇದು ಕಪ್ಪುಸಮುದ್ರವಾಯಿತು. (ಬಿ.ಎಂ.)

**ಕಬ್ಬಿಣ:** ಕಬ್ಬಿಣ ಪ್ರಸಕ್ತ ಯುಗದಲ್ಲಿ ಅತ್ಯಂತ ಉಪಯುಕ್ತ. ಅಲ್ಯೂಮಿನಿಯಂ ಅನಂತರ ಭೂಮಿಯಲ್ಲಿ ದೊರೆಯುವ ಪ್ರಮುಖ ಲೋಹ. ಕಬ್ಬಿಣ ಪ್ರಕೃತಿಯಲ್ಲಿ ಶುದ್ಧಲೋಹದ ರೂಪದಲ್ಲಿ ದೊರೆಯುವುದಿಲ್ಲ ಅದನ್ನು ಊದು ಕುಲುಮೆ ವಿಧಾನದಿಂದ ಬೇರ್ಪಡಿಸಲಾಗುವುದು. ಇಂದು ಕಬ್ಬಿಣವು ಕೈಗಾರಿಕೋದ್ಯಮದ ಮೂಲವಸ್ತುವಾಗಿದ್ದು, ಆಧುನಿಕ ಯಂತ್ರಯುಗದ ಆರ್ಥಿಕ ಪ್ರಗತಿಗೆ ಬೆನ್ನೆಲುಬಾಗಿದೆ. ಬೆಲೆ ಕಡಿಮೆ ಕಠಿಣತೆಯಂತಹ ಉಪಯುಕ್ತ ಗುಣಗಳಿಂದ ಅನೇಕ ಉದ್ಯೋಗಗಳಿಗೆ ಉಪಯೋಗಿಸಲ್ಪಡುತ್ತದೆ. ಕೃಷಿ, ಸಾರಿಗೆ, ಸಂಪರ್ಕ, ಯುದ್ಧ ಸಾಮಗ್ರಿಗಳು, ಕಟ್ಟಡ ನಿರ್ಮಾಣ, ಅಣೆಕಟ್ಟು ಸೇತುವೆ, ಗೃಹಕೃತ್ಯ ಉಪಕರಣಗಳು ಇತ್ಯಾದಿಗಳಿಗೆ ಕಬ್ಬಿಣ ಅತ್ಯಾವಶ್ಯಕವಾಗಿವೆ.

ಕಬ್ಬಿಣದ ಅದಿರಿನ ವಿಧಗಳು: ಕಬ್ಬಿಣಾಂಶದ ಆಧಾರದ ಮೇಲೆ ಕಬ್ಬಿಣದ ಅದಿರನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಮ್ಯಾಗ್ನಟೈಟ್: ಉತ್ತಮದರ್ಜೆ, ಕಬ್ಬಿಣಾಂಶ ಶೇ. 72, ಬಣ್ಣ ಕಪ್ಪು, ಭಾರ ಮತ್ತು ಕಾಠಿಣ್ಯತೆ ಹೊಂದಿದೆ. ಹೆಮಟೈಟ್: ಶೇ.70ರಷ್ಟು ಕಬ್ಬಿಣಾಂಶ ಬಣ್ಣ ಕಂದು ಮತ್ತು ಕೆಂಪು ಮ್ಯಾಗ್ನಟೈಟ್‌ಷ್ಟು ಭಾರವಿಲ್ಲ, ಜಗತ್ತಿನಲ್ಲಿ ಇದನ್ನು ಹೆಚ್ಚು ಉತ್ಪಾದಿಸಲಾಗುವುದು. ಲಿಮೊನೈಟ್: ಕಬ್ಬಿಣಾಂಶ 60% ಬಣ್ಣ ಕಂದು, ತೇವಾಂಶ ಹೆಚ್ಚು, ಉತ್ಪಾದನಾ ವೆಚ್ಚ ಹೆಚ್ಚು, ಸಿಡರೈಟ್: ದರ್ಜೆ ಕಡಿಮೆ, ಶೇ.40–50 ರಷ್ಟು ಕಬ್ಬಿಣಾಂಶ, ಬಣ್ಣ ಕಂದು ಅಥವಾ ಹಳದಿ, ತೇವಾಂಶ ಅತಿ ಹೆಚ್ಚು.

ಹಂಚಿಕೆ ಮತ್ತು ಉತ್ಪಾದನೆ: ಕಬ್ಬಿಣದ ಅದಿರು ಉತ್ಪಾದಿಸುವ ಪ್ರಮುಖ ರಾಷ್ಟ್ರಗಳೆಂದರೆ ಚೀನ, ಬ್ರೆಜಿಲ್, ಆಸ್ಟ್ರೇಲಿಯ, ಭಾರತ, ರಷ್ಯ, ಉಕ್ರೈನ್, ಅ.ಸಂ.ಸಂ, ಕೆನಡ, ದ.ಆಫ್ರಿಕ, ವೆನಿಜುವೆಲ, ಸ್ವೀಡನ್, ಕಝಕಿಸ್ತಾನ್, ಫ್ರಾನ್ಸ್, ಸ್ಪೇನ್ ಇತ್ಯಾದಿ. ಪ್ರಪಂಚದ ಒಟ್ಟು ಉತ್ಪಾದನೆ 1057 ಮಿ.ಮೆ. ಟನ್ನುಗಳು (2001).

ವ್ಯಾಪಾರ: ಕಬ್ಬಿಣದ ಅದಿರನ್ನು ರಫ್ತು ಮಾಡುವ ರಾಷ್ಟ್ರಗಳೆಂದರೆ ಭಾರತ, ಆಸ್ಟ್ರೇಲಿಯ, ಲೈಬಿರಿಯ, ಚಿಲಿ, ಬ್ರೆಜಿಲ್, ಫಿಲಿಫೈನ್ಸ್.

ಆಮದು: ಕಬ್ಬಿಣದ ಅದಿರನ್ನು ಆಮದು ಮಾಡಿಕೊಳ್ಳುವ ಪ್ರಮುಖ ರಾಷ್ಟ್ರಗಳೆಂದರೆ ಜಪಾನ್, ಬ್ರಿಟನ್, ಜರ್ಮನಿ, ಪೋಲೆಂಡ್, ಸರ್ಬುರಮ, ಮಾಸಿಟೋನಿಯ, ಇಟಲಿ, ಹಂಗೆರಿ, ಅ.ಸಂ.ಸಂ. ಬೆಲ್ಜಿಯಂ, ನೆದರ್ಲೆಂಡ್ಸ್, ಲೆಕ್ಸಂಬರ್ಗ್ ಮತ್ತು ಇರಾನ್. (ಬಿ.ಸಿ.ಕೆ.)

**ಕಬ್ಬಿಣ ಯುಗ:** ಕಬ್ಬಿಣದ ಬಳಕೆ ಬೆಳಕಿಗೆ ಬಂದದ್ದು ಪ್ರ.ಶ.ಪೂ. ಸು. 1200 ರಲ್ಲಿ, ಆಗ ಬಳಕೆಯಲ್ಲಿದ್ದುದು ಬಹುತೇಕ ಉಲ್ಕಾಪಾತದ ಕಬ್ಬಿಣ. ಮೊಟ್ಟ ಮೊದಲಿಗೆ ಪಶ್ಚಿಮ ಏಷ್ಯದ ಕೆಲವು ಪ್ರದೇಶಗಳಲ್ಲಿ ಮುಖ್ಯವಾಗಿ ಕಪ್ಪು ಸಮುದ್ರದ ದಕ್ಷಿಣ ತೀರದಲ್ಲಿ ಕಬ್ಬಿಣದ ಉಪಯೋಗವನ್ನು ಕಂಡು ಹಿಡಿಯಲಾಯಿತು. ಆಕಾಶದ ಉಲ್ಕಾಪಾತಗಳ ರೂಪದಲ್ಲಿ ಬೀಳುತ್ತಿದ್ದ ಕಬ್ಬಿಣವನ್ನು ಆಭರಣ ವಸ್ತುಗಳನ್ನಾಗಿ ಮೆಸಪೊಟೇಮಿಯ, ಈಜಿಪ್ಟ್ ಮುಂತಾದ ಪ್ರಾಚೀನ ನಾಗರಿಕತೆಗಳಲ್ಲಿ ಉಪಯೋಗಿಸುತ್ತಿದ್ದರು. ಉಲ್ಕಾಪಾತದ ಕಬ್ಬಿಣವನ್ನು ಸುಮೇರಿಯನ್ನರು ಸ್ವರ್ಗದ ಲೋಹವೆಂದೂ ಈಜಿಪ್ಷಿಯನ್ನರು ಆಕಾಶದಿಂದ ಬಂದ ಕಪ್ಪು ತಾಮ್ರವೆಂದು ತಮ್ಮ ಬರೆವಣಿಗೆಯಲ್ಲಿ ಕರೆದಿದ್ದಾರೆ. ಮೆಸಪೊಟೇಮಿಯದ ಟೆಲ್ ಅಸ್ಮಾರ್ ಮತ್ತು ಮಾರಿ, ಸಿರಿಯ ಭಗರ್ ಬಿಜರ್ ನೆಲೆಗಳಲ್ಲಿ ಪ್ರ.ಶ.ಪೂ. 2500ರ ಸುಮಾರಿಗೆ ನಿರ್ದೇಶಿಸಬಹುದಾದ ಪದರಗಳಿಂದ ಇದ್ದಿಲಿನ ಕುಲುಮೆಗಳಲ್ಲಿ ಕರಗಿಸಿದ ಕಬ್ಬಿಣದಿಂದ ಮಾಡಲಾದ ವಸ್ತುಗಳು ದೊರಕಿವೆ.

ಪ್ರ.ಶ.ಪೂ. 2ನೆಯ ಸಹಸ್ರಮಾನದ ಪ್ರಾರಂಭದಲ್ಲಿ ಹಿಟ್ಟೈಟ್ ಸಾಮ್ರಾಜ್ಯ ಪ್ರಬಲಿಸಿದಾಗ ನೆರೆಯ ಪ್ರದೇಶವಾದ ಆರ್ಮೇನಿಯ ಪ್ರಾಂತ್ಯದಲ್ಲಿ ವಿಶೇಷವಾಗಿದ್ದ ಕಬ್ಬಿಣದ ಅದಿರನ್ನು ಉಪಯೋಗಿಸಿಕೊಂಡು ಕಬ್ಬಿಣದ ಲೋಹ ವಿದ್ಯೆ ಬೆಳೆಯಲಾರಂಭಿಸಿತು. ಪ್ರ.ಶ.ಪೂ. 1900ರ ಸುಮಾರಿನಲ್ಲಿ ಮೆದು ಕಬ್ಬಿಣವನ್ನು (ರಾಟ್ ಐರನ್) ತಯಾರಿಸಲಾಗುತ್ತಿತ್ತು. ಮೊದ ಮೊದಲು ಕಬ್ಬಿಣ ಲೋಹ ವಿದ್ಯೆ ಹಿಟ್ಟೈಟ್ ಜನಾಂಗದವರಲ್ಲಿ ಗುಪ್ತವಾಗಿ ಉಳಿದಿತ್ತು. ಈ ಲೋಹದ ಆಯುಧಗಳು ಯುದ್ಧದಲ್ಲಿ ಬಹಳ ಪರಿಣಾಮಕಾರಿಗಳಾಗಿದ್ದುದರಿಂದ ಅವರು ಈ ಗುಟ್ಟನ್ನು ಇತರರಿಗೆ ಬಿಟ್ಟು ಕೊಟ್ಟಿರಲಿಲ್ಲ, ಫಿಲಿಫೈನರು ಅನಂತರ ಸಿರಿಯ ಪ್ರದೇಶದಲ್ಲಿ ಕಬ್ಬಿಣದ ನಿಕ್ಷೇಪಗಳನ್ನು ರೂಢಿಸಲು ಬೇಕಾದ ತಂತ್ರಜ್ಞಾನವನ್ನು ಹಿಟೈಟಿನಿಂದ ದೊರಕಿಸಿಕೊಂಡಿದುದಕ್ಕೆ ಆಧಾರಗಳಿವೆ. ಪ್ರ.ಶ.ಪೂ. 1300 ಸುಮಾರಿನಲ್ಲಿ ಸಿರಿಯಾದ ರಾಸ್, ಷಮ್ರಾ ನೆಲೆಯಲ್ಲಿ ಚಿನ್ನದಿಂದ ಅಲಂಕೃತವಾದ ಹೆಚ್ಚು ನಿಕ್ಕಲ್ ಬಳಕೆವುಳ್ಳ ಕಬ್ಬಿಣದ ಬಾಕುವೊಂದು ದೊರೆತಿದೆ. ಕ್ರಿ.ಪೂ 12ನೆಯ ಶತಮಾನದಲ್ಲಿ ಸಮುದ್ರ ಜನರ ದಾಳಿಗಳಿಂದ ಹಿಟೈಟ್ ಸಾಮ್ರಾಜ್ಯದ ಪತನದ ಅನಂತರ ಕಬ್ಬಿಣದ ಲೋಹಗಾರಿಕೆ ಪಶ್ಚಿಮ ಏಷ್ಯದ ಅನೇಕ ಭಾಗಗಳಲ್ಲಿ ಹರಡಿತು. ಇದರ ಫಲವಾಗಿ ಕಬ್ಬಿಣದ ಉಪಕರಣವನ್ನು ವ್ಯವಸಾಯ, ಕೈಗಾರಿಕೆ ಹಾಗೂ ಇತರ ನಿತ್ಯ ಜೀವನದಲ್ಲಿ ಬಳಸುವಂತಾಯಿತು. ಪ್ರ.ಶ.ಪೂ. 1180 ರಲ್ಲಿ ಪ್ಯಾಲಸ್ತೀನಿನ ಗೆರಾರಿನಲ್ಲಿ ದೊಡ್ಡದೊಂದು ಕಬ್ಬಿಣದ ಕಾರ್ಖಾನೆ ಸ್ಥಾಪಿತವಾಗಿತ್ತು. ಅನಂತರ ಅಸ್ಸೀರಿಯನ್ನರು ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಉತ್ಪಾದನೆ ಮಾಡಲಾರಂಭಿಸಿದರು. ನೈರುತ್ಯ ಇರಾನಿನಲ್ಲಿ ಉಪಯೋಗ ಪ್ರಬಲವಾಯಿತು. ಈ ಮಾರ್ಗವಾಗಿ ಕಬ್ಬಿಣದ ಉಪಯೋಗ ಭಾರತಕ್ಕೆ ಪ್ರ.ಶ.ಪೂ. 12ನೆಯ ಶತಮಾನದ ವೇಳೆಗೆ ಬಂದಿರಬಹುದು. ಉತ್ತರ ಪ್ರದೇಶ, ಕರ್ನಾಟಕ ಮತ್ತು ರಾಜಸ್ತಾನಗಳಲ್ಲಿ ಇಂಗಾಲ–14 ಪರೀಕ್ಷಾ ವಿಧಾನದಿಂದ ಪ್ರ.ಶ.ಪೂ. 11ನೆಯ ಶತಮಾನದಲ್ಲಿ ಕಬ್ಬಿಣ ಬಳಕೆಗೆ ಬಂದಿತು. ಕ್ರೀಟ್ ದ್ವೀಪದಲ್ಲಿ ಪ್ರ.ಶ.ಪೂ. 2ನೆಯ ಸಹಸ್ರಮಾನದ ಕೊನೆಯ ಕಾಲದಲ್ಲಿ ಕಬ್ಬಿಣದ ಬಳಕೆ ಪ್ರಾರಂಭವಾಯಿತು. ಸು. ಪ್ರ.ಶ.ಪೂ. 800 ರಲ್ಲಿ ಇಟಲಿ ಮತ್ತು ಮಧ್ಯ ಯುರೋಪ್ ಪ್ರದೇಶದಲ್ಲಿ ಇದರ ಬಳಕೆ ಪ್ರಾರಂಭವಾಯಿತು. ಸು. ಪ್ರ.ಶ.ಪೂ. 400 ರಲ್ಲಿ ಜರ್ಮನಿ, ಬಾಲ್ಕನ್ ಪ್ರದೇಶ, ಹಂಗೆರಿ ಮತ್ತು ರೂಮೇನಿಯಗಳಲ್ಲೂ ಕಬ್ಬಿಣದ ಬಳಕೆ ಪ್ರಾರಂಭವಾಯಿತು. ಫ್ರಾನ್ಸ್ ಮತ್ತು ಬ್ರಿಟಿಷ್ ದ್ವೀಪಗಳಲ್ಲಿ ಪ್ರಶ.ಪೂ. 5ನೆಯ ಶತಮಾನದ ಅಂತ್ಯದಲ್ಲಿ ಕೆಲ್ಪರ್ ಆಕ್ರಮಣದಿಂದ ಕಬ್ಬಿಣದ ಪ್ರವೇಶವಾಯಿತು.

ಕಬ್ಬಿಣದ ಬಳಕೆಯ ವಿವಿಧ ಪ್ರದೇಶಗಳಲ್ಲಿ ವಿವಿಧ ಹಂತಗಳಲ್ಲಿ ಬೆಳೆದು ಬಂದಿದೆ. ಆದರೆ ಗರಿಷ್ಠ ಮಟ್ಟದಲ್ಲಿ ಕಬ್ಬಿಣದ ಉಪಯೋಗವು 20ನೆಯ ಶತಮಾನದಲ್ಲಾಯಿತು. ಶೇವ್ ಮಾಡುವ ಬ್ಲೇಡಿನಿಂದ ಅಂತರಿಕ್ಷದಲ್ಲಿ ಹಾರುವ ರಾಕೆಟ್‌ವರೆಗೆ ಕಬ್ಬಿಣದ ಬಳಕೆಯಿದೆ. ವ್ಯವಸಾಯೋಪಕರಣಗಳು, ಯಂತ್ರೋಪಕರಣಗಳು, ವಾಹನಗಳು, ರೈಲು ಬೋಗಿಗಳು ಮತ್ತು ಕಂಬಿಗಳು, ಕಟ್ಟಡ ಮತ್ತು ಸೇತುವೆ ನಿರ್ಮಾಣ ಅಲ್ಲದೆ ನಾವು ದಿನ ನಿತ್ಯ ಉಪಯೋಗ ಮಾಡುವ ತಟ್ಟೆ ಲೋಟಗಳು ಉಪಯೋಗಿಸುವ ಪೀಠೋಪಕರಣಗಳಲ್ಲಿ ಬಳಕೆ ವ್ಯಾಪಕವಾಗಿ ಕಂಡು ಬರುತ್ತದೆ. (ಬಿ.ಸಿ.ಕೆ.)

**ಕಬ್ಬು:** ಕಬ್ಬಿನ ಗಿಡ ಸಖ್ಯಾರಮ್ ಅಫಿಸಿನ್ನೇರಂ ಜಾತಿಗೆ ಸೇರಿದ ಹುಲ್ಲಿನ ವರ್ಗದ ಸಸ್ಯ. ಆದರೆ ಇದರ ಕಾಂಡ ದಪ್ಪವಾಗಿದ್ದು ಗಟ್ಟಿಯಾಗಿರುತ್ತದೆ. ಕಬ್ಬಿನ ಗಿಡವು 3.5 ಮೀ ಎತ್ತರಕ್ಕೆ ಬೆಳೆಯಬಲ್ಲದು. ಇದರ ಕಾಂಡದಲ್ಲಿ ಸಿಹಿ ಅಂಶವಿರುತ್ತದೆ. ವೇದ, ಉಪನಿಷತ್ತುಗಳ ಉಲ್ಲೇಖದ ಪ್ರಕಾರ ಭಾರತ ಕಬ್ಬಿನ ಮೂಲ ಸ್ಥಾನವೆಂದು ತಿಳಿದುಬರುತ್ತದೆ. ಅನಂತರ ಚೀನ ಹಾಗೂ ಉಷ್ಣವಲಯದ ದೇಶಗಳಲ್ಲಿ ಇದರ ಬೇಸಾಯ ಹರಡಿತು. ಮತ್ತೊಂದು ಮೂಲದ ಪ್ರಕಾರ ಪೂರ್ವ ಏಷ್ಯ ಕಬ್ಬಿನ ಮೂಲಸ್ಥಾನ, ಅನಂತರ ಅರಬ್ಬರಿಂದ ಮಧ್ಯ ಪ್ರಾಚ್ಯ ಹಾಗೂ ದಕ್ಷಿಣ ಯುರೋಪಿನ ಕೆಲ ಭಾಗಗಳಿಗೆ ಹಂಚಿಕೆಯಾಯಿತು. ಪೋರ್ಚುಗೀಸರು ಇದರ ಲಾಭವನ್ನರಿತು ಉಷ್ಣವಲಯದ ತಮ್ಮ ವಸಾಹತು ದೇಶಗಳಲ್ಲಿ ಬೆಳೆಯುವುದಕ್ಕೆ ಆಸ್ಥೆ ವಹಿಸಿದುದರ ಪ್ರಯುಕ್ತ ವೆಸ್ಟ್ ಇಂಡೀಸ್, ಕ್ಯಾನರಿ ದ್ವೀಪಗಳು, ಬ್ರೆಜಿಲ್ ಹಾಗೂ ಕೆರೆಬಿಯನ್ ದೇಶಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಯಿತು. ಕಬ್ಬನ್ನು ಹೆಚ್ಚಾಗಿ ಸಕ್ಕರೆ ತಯಾರಿಸಲು ಬಳಸಲಾಗುವುದು. ಸ್ವಲ್ಪ

ಮಟ್ಟಿಗೆ ಬೆಲ್ಲ ತಯಾರಿಕೆಗೂ ಬಳಕೆಯಾಗುವುದು. ಕಬ್ಬಿನ ಸಿಪ್ಪೆಯನ್ನು ಕಾಗದ ತಯಾರಿಕೆಯಲ್ಲಿ ಸಕ್ಕರೆ ಉದ್ಯಮದಲ್ಲಿ ದೊರೆಯುವ ಉಪವಸ್ತು ಕಾಕಂಬಿಯನ್ನು ಮದ್ಯ ಹಾಗೂ ಕೆಲವು ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುವುದು.

ಕಬ್ಬು ಉಷ್ಣವಲಯದ ಬೆಳೆ. ಈ ಬೆಳೆಗೆ $20^{o}$–$28^{o}$ಸೆ. ಉಷ್ಣಾಂಶ ಅಗತ್ಯ. ಮಂಜು ಈ ಬೆಳೆಗೆ ಹಾನಿಕರ. ಈ ಬೆಳೆಗೆ 150 ಸೆಂಮೀ ಗಿಂತಲೂ ಹೆಚ್ಚು ವಾರ್ಷಿಕ ಮಳೆ ಬೀಳಬೇಕು. ಮಳೆಯು ಕಬ್ಬು ಬೆಳೆಯುವ ಅವಧಿಯುದ್ದಕ್ಕೂ ಸಮನಾಗಿ ಹಂಚಿಕೆಯಾಗಬೇಕು. ಸಾಗರ ಸಮುದ್ರಗಳಿಂದ ಬೀಸುವ ತೇವಾಂಶಭರಿತ ತಂಪಾದ ಮಾರುತಗಳು ಕಬ್ಬಿನ ಗುಣಮಟ್ಟವನ್ನು ಹೆಚ್ಚಿಸುತ್ತವೆ. ಕಬ್ಬು ಬಲಿಯುವ ಮತ್ತು ಕಟಾವು ಮಾಡುವ ಅವಧಿಯಲ್ಲಿ ಒಣ ತಂಪು ಹವೆ ಅಗತ್ಯ. ಕಬ್ಬು ದೀರ್ಘಾವಧಿಯ ಬೆಳೆಯಾದ್ದರಿಂದ ಫಲವತ್ತಾದ, ಸುಣ್ಣ ಮತ್ತು ಲವಣಾಂಶ ಭರಿತ ಮಣ್ಣು ಅಗತ್ಯ. ಮೆಕ್ಕಲು ಮತ್ತು ಮರಳು ಮಿಶ್ರಿತ ಜೇಡಿಮಣ್ಣು ಕಬ್ಬಿನ ಬೆಳೆಗೆ ಯೋಗ್ಯವಾದವು. ನುರಿತ ಕಾರ್ಮಿಕರು, ನೀರಾವರಿ, ಸಾರಿಗೆ ಸೌಲಭ್ಯ, ಕೀಟನಾಶಕಗಳು, ಬಂಡವಾಳ ಹಾಗೂ ವಿಶಾಲವಾದ ಮಾರುಕಟ್ಟೆಯೂ ಆವಶ್ಯಕ.

ಹಂಚಿಕೆ ಮತ್ತು ಉತ್ಪಾದನೆ: ಕಬ್ಬನ್ನು ಉಷ್ಣವಲಯದ ದೇಶಗಳಲ್ಲಿ ಬೆಳೆಯಲಾಗುತ್ತದೆ. ಬ್ರೆಜಿಲ್, ಭಾರತ, ಕ್ಯೂಬ, ಮೆಕ್ಸಿಕೊ, ಚೀನ, ಪಾಕಿಸ್ತಾನ, ಥೈಲೆಂಡ್ ಮತ್ತು ಕೊಲಂಬಿಯಗಳು ಪ್ರಪಂಚದ ಪ್ರಮುಖ ಕಬ್ಬು ಉತ್ಪಾದಿಸುವ ರಾಷ್ಟ್ರಗಳು. ದಕ್ಷಿಣ ಆಫ್ರಿಕ, ಫಿಲಿಪೈನ್ಸ್ ಪೋರ್ಟೊರಿಕೊ, ಹವಾಯಿ, ಮಾರಿಷಸ್, ಇಂಡೋನೇಷ್ಯ, ಅಮೆರಿಕ ಮತ್ತು ಆಸ್ಟ್ರೇಲಿಯಗಳು ಪ್ರಪಂಚದ ಇತರ ಪ್ರಮುಖ ಕಬ್ಬು ಉತ್ಪಾದಿಸುವ ರಾಷ್ಟ್ರಗಳು. ದೂರ ಸ್ಥಳಗಳಿಗೆ ಸಾಗಿಸಲಾಗದ ಹಾಗೂ ಒಣಗುವ ಸರಕಾಗಿರುವುದರಿಂದ ವ್ಯಾಪಾರದ ಪ್ರಾಮುಖ್ಯತೆಯಿಲ್ಲ. (ಪಿ.ಟಿ.ಬಿ.)

**ಕಮೊರೊಸ್:** ಹಿಂದೂ ಮಹಾಸಾಗರದಲ್ಲಿನ ಒಂದು ದ್ವೀಪ ರಾಷ್ಟ್ರ. ಆಫ್ರಿಕ ಖಂಡದ ಪೂರ್ವಭಾಗದಲ್ಲಿ, ಮೊಜಾಂಬಿಕ್ ಕಡಲ್ಗಾಲುವೆಯ ಉತ್ತರದ ತುದಿಯಲ್ಲಿ, ಮಡಗಾಸ್ಕರ್ ಮತ್ತು ಮೊಜಾಂಬಿಕ್‍ಗಳ ನಡುವೆ ಇದೆ. ದ.ಅ. $12^{0}$ ಹಾಗೂ ಪೂ.ರೇ. $44^{0}$ಗಳ ಮೇಲಿದೆ. ಮೊಜಾಂಬಿಕ್ ಟಾಂಜಾನಿಯ, ಮಡಗಾಸ್ಕರ್ ಮತ್ತು ಸೇಶಲ್ಸ್‍ಗಳಿಂದ ಸುತ್ತುವರಿದಿದೆ. ವಿಸ್ತೀರ್ಣ 2,235 ಚ.ಕಿಮೀ. ಜನಸಂಖ್ಯೆ 7,98,000 (2005). ರಾಜಧಾನಿ ಮರೋನಿ. ಜನಸಂಖ್ಯೆ 23,432 (2002).




ಈ ದೇಶ ಅನೇಕ ಜ್ವಾಲಾಮುಖಿ ದ್ವೀಪಗಳಿಂದ ಕೂಡಿದೆ. ನಗಸಿಡ್ಜ, ಮವಾಲಿ, ನಜ್ವಾನಿ, ಗ್ರಾಂಡ್ ಕಮೊರೋಸ್ ಮತ್ತು ಮಯೋಟೆ ಮುಖ್ಯವಾದವು. ಇವಲ್ಲದೆ ಇನ್ನೂ ಅನೇಕ ಚಿಕ್ಕಪುಟ್ಟ ದ್ವೀಪಗಳಿವೆ. ವೈವಿಧ್ಯಮಯ ಸಂಸ್ಕೃತಿ, ಇತಿಹಾಸ ಇದರ ವೈಶಿಷ್ಟ್ಯ. ಆಫ್ರಿಕದ ಪೂರ್ವ ಕರಾವಳಿಯಲ್ಲಿರುವ ಈ ದ್ವೀಪ ಸ್ತೋಮದಲ್ಲಿ ಕರ್ತಲ ಒಂದು ಸಜೀವ ಅಗ್ನಿಪರ್ವತ. ಮೇಲ್ಮೈಲಕ್ಷಣ ಏರು ತಗ್ಗುಗಳಿಂದ ಕೂಡಿದ್ದು ಬೆಟ್ಟಗುಡ್ಡಗಳು ಕಡಿದಾದ ಇಳಿಜಾರುಗಳನ್ನು ಹೊಂದಿವೆ. ದ್ವೀಪ ಸ್ತೋಮಗಳ ಸುತ್ತಲೂ ಅಲ್ಲಲ್ಲಿ ಹವಳ ದಿಬ್ಬಗಳಿವೆ. ಇಲ್ಲಿ ದೊಡ್ಡನದಿಗಳಿಲ್ಲ. ಆದರೆ ಅನೇಕ ಸಣ್ಣ ಸಣ್ಣ ತೊರೆಗಳು ಬೇಸಾಯಕ್ಕೆ ಅನುಕೂಲಕರ. ಇಲ್ಲಿನ ವಾಯುಗುಣದ ಮೇಲೆ ಭಾರತ ಉಪಖಂಡದ ಪ್ರಭಾವವಿದೆ. ಆದುದರಿಂದ ಉಷ್ಣವಲಯದ ಮಾನ್‍ಸೂನ್ ಮಾದರಿಯ ಹವಾಗುಣವಿದೆ. ಉಷ್ಣತೆ ಹಾಗೂ ಆರ್ದ್ರತೆಗಳು ಅಧಿಕ. ಆದರೆ ತಾಪದಾಯಕವಲ್ಲ.

ಇಲ್ಲಿನ ನೈಸರ್ಗಿಕ ಸಂಪತ್ತು ಗಣನೀಯವಲ್ಲ. ಜ್ವಾಲಾಮುಖಜ ಮಣ್ಣು ಫಲವತ್ತಾಗಿದ್ದು, ನೀರಿನ ಸೌಲಭ್ಯವಿರುವುದರಿಂದ ಬೇಸಾಯಕ್ಕೆ ಅನುಕೂಲಕರ. ಇಲ್ಲಿನ ಪ್ರಮುಖ ಬೆಳೆಗಳು ಮೆಕ್ಕೆ ಜೋಳ, ಬತ್ತ ಹಾಗೂ ಹಣ್ಣುಗಳು, ತರಕಾರಿಗಳು, ತಂಬಾಕು ಪದಾರ್ಥಗಳು, ತೆಂಗು, ವೆನಿಲ ಮತ್ತು ಸುಗಂಧಭರಿತ ಸಸ್ಯಗಳ ಉತ್ಪಾದನೆಯಿದೆ. ಕೈಗಾರಿಕೆಗಳ ಬೆಳವಣಿಗೆಗೆ ಬೇಕಾದ ಸೌಲಭ್ಯಗಳಿಲ್ಲ. ಸುಗಂಧ ದ್ರವ್ಯಗಳು, ಹಣ್ಣುಗಳ ಡಬ್ಬೀಕರಣ ಹಾಗೂ ಮೀನುಗಾರಿಕೆ ಪ್ರಮುಖ ಉದ್ಯೋಗಗಳು. ದೇಶದ ಹಣ ಕೊಮಾರಿನ್ ಫ್ರಾಂಕ್, ಅಧಿಕೃತ ಭಾಷೆ ಫ್ರೆಂಚ್ ಮತ್ತು ಅರಾಬಿಕ್, ಸಾಕ್ಷರತೆ ಶೇ. 48ರಷ್ಟಿದೆ. ಮಟ್ಸಮುಡು ಫಾಂಟೋನಿ ಇತರ ಪ್ರಮುಖ ನಗರಗಳು. ಒಟ್ಟು ಜನಸಂಖ್ಯೆಯ ಶೇ. 86 ಸುನ್ನಿ ಮುಸ್ಲಿಮರು. ಉಳಿದವರು ರೋಮನ್ ಕೆಥೊಲಿಕ್ ಧರ್ಮದವರು. (ಕೆ.ಎನ್.ಯು.)

**ಕಮ್ಯೂನ್:** ಮಧ್ಯಯುಗದ ಪಶ್ಚಿಮ ಯುರೋಪಿನ ಪಟ್ಟಣಗಳಿಗಿರುವ ಸಾಮಾನ್ಯವಾದ ಹೆಸರು. ಅದರಲ್ಲೂ 17ನೆಯ ಶತಮಾನದಲ್ಲಿ ರೂಪುಗೊಂಡ ಪ್ಯಾರಿಸ್‍ನಗರ ಸರ್ಕಾರಗಳಿಗೆ ಕಮೂನ್ ಎಂದು ಕರೆಯುತ್ತಿದ್ದರು.

ರೋಮನ್ ಸಾಮ್ರಾಜ್ಯದ ಪತನದ ಪರಿಣಾಮವಾಗಿ ವಾಣಿಜ್ಯ ಸಂಪೂರ್ಣವಾಗಿ ಸ್ಥಗಿತವಾದಾಗ ನಗರಜೀವನ ಬಹಳಮಟ್ಟಿಗೆ ಕ್ಷೀಣಿಸಿತ್ತು. ಪ್ಯಾರಿಸ್, ಲಿಯಾನ್, ಕೊಲೋನ್ ಮುಂತಾದ ಕೆಲವು ಪ್ರಸಿದ್ಧ ಪಟ್ಟಣಗಳು ಅತಂತ್ರವಾಗಿ ಉಳಿದುಕೊಂಡಿದ್ದವು. 11ನೆಯ ಶತಮಾನದಲ್ಲಿ ವ್ಯಾಪಾರದ ಪುನರುಜ್ಜೀವನವಾದಾಗ ಅದರಿಂದಾಗಿ ವರ್ತಕವರ್ಗಗಳ ಉದಯಕ್ಕೆ ಪ್ರೋತ್ಸಾಹ ಸಿಕ್ಕಿದಂತಾಯಿತು. ಗ್ರಾಮಪ್ರಧಾನವಾದ ಊಳಿಗಮಾನ್ಯ ಜಗತ್ತಿನೊಳಕ್ಕೆ ವರ್ತಕರ ಪ್ರವೇಶವನ್ನು ಶ್ರೀಮಂತರು ಸಹಿಸಲಿಲ್ಲ. ಮುಂದಿನ ಎರಡು ಶತಮಾನಗಳ ಕಾಲ ನಗರಗಳು ರಾಜಾಧಿಕಾರ, ಊಳಿಗಮಾನ್ಯಾಧಿಕಾರ ಮತ್ತು ಮತೀಯ ಅಧಿಕಾರಗಳೊಂದಿಗೆ ಪದೇಪದೇ ಘರ್ಷಣೆಯಲ್ಲಿ ನಿರತವಾಗಿದ್ದವು. ಹೊರಗಿನ ಕೋಟಲೆಗಳಿಲ್ಲದೆ ತನ್ನನ್ನು ತಾನೇ ಆಳಿಕೊಳ್ಳಲು ಫ್ರೆಂಚ್ ಪಟ್ಟಣವೊಂದಕ್ಕೆ ಆ ಸ್ಥಳದ ಕೌಂಟ್ ಅಥವಾ ಬಿಷಪ್ ಸನ್ನದು ನೀಡಿದಾಗ ಆ ಪಟ್ಟಣ ಕಮ್ಯೂನ್ ಎಂದು ಕರೆದುಕೊಳ್ಳಲು ಅರ್ಹತೆ ಗಳಿಸುತ್ತಿತ್ತು. ಪಶ್ಚಿಮ ಐರೋಪ್ಯ ಪುರಸಭಾ ಚಳವಳಿಗೇ ಕಮ್ಯೂನ್ ಎಂಬ ಪದವನ್ನು ಈಗ ಬಲು ಸಡಿಲವಾಗಿ ಬಳಸಲಾಗುತ್ತಿದೆ. ಕೊನೆಗೆ ಫ್ರಾನ್ಸಿನ ಕಮ್ಯೂನುಗಳೂ ಸನ್ನದು ಪಡೆದ ಇತರ ಪಟ್ಟಣಗಳೂ ದೊರೆಯ ಅಧಿಕಾರದೊಳಕ್ಕೆ ಬಂದಾಗ ಅವು ತಮ್ಮ ವಿಶಿಷ್ಟ ಹಕ್ಕುಗಳಲ್ಲಿ ಹಲವನ್ನು ಕಳೆದುಕೊಂಡವು.

1791ರ ಫ್ರೆಂಚ್ ಸಂವಿಧಾನದಲ್ಲಿ ಕಮ್ಯೂನ್ ಎಂಬ ಶಬ್ದವನ್ನು ಮತ್ತೆ ಬಳಸಲಾಯಿತು. ತಮ್ಮ ಮೇಯರುಗಳನ್ನೂ ಇತರ ಅಧಿಕಾರಿಗಳನ್ನೂ ಚುನಾಯಿಸಿಕೊಳ್ಳುವ ಅಧಿಕಾರವಿರುವ ನಲವತ್ತು ಸಾವಿರ ಪೌರವ್ಯಕ್ತಿಗಳ ಘಟಕಗಳನ್ನು ಈ ಹೆಸರಿನಿಂದ ಕರೆಯಲಾಯಿತು. ಇಂಥ ಕ್ರಾಂತಿಕಾರಿ ಕಮ್ಯೂನುಗಳ ಪೈಕಿ ಪ್ಯಾರಿಸಿನ ಕಮ್ಯೂನ್ ಅತ್ಯಂತ ಪ್ರಸಿದ್ಧವಾದದ್ದು. ಕಾರ್ಮಿಕ ವರ್ಗಕ್ಕೂ ಇದಕ್ಕೂ ಇದ್ದ ನಿಕಟಸಂಬಂಧ, ರಾಷ್ಟ್ರೀಯ ಸರ್ಕಾರದೊಂದಿಗೆ ಇದಕ್ಕಿದ್ದ ಸಾಮೀಪ್ಯ, ಫ್ರೆಂಚ್ ನಾಗರಿಕತೆಯಲ್ಲಿ ಈ ನಗರಕ್ಕಿದ್ದ ವಿಶಿಷ್ಟ ಸ್ಥಾನ–ಈ ಕಾರಣಗಳಿಂದಾಗಿ ಇದಕ್ಕೆ ಈ ಪ್ರಸಿದ್ಧಿ ಬಂತು. 1789ರ ಚುನಾವಣೆಗಳಿಗಾಗಿ ಪ್ಯಾರಿಸನ್ನು 60 ಉಪವಿಭಾಗಗಳಾಗಿ ಮಾಡಲಾಗಿತ್ತು. ಆದರೆ 1790ರ ಪೌರಸಭೆ ಕಾನೂನಿನ ಪ್ರಕಾರ ಇವುಗಳ ಸಂಖ್ಯೆ 48ಕ್ಕೆ ಇಳಿಯಿತು. ಪ್ರತಿಯೊಂದು ಉಪವಿಭಾಗದಲ್ಲೂ ಹದಿನೇಳು ಸಾವಿರದಿಂದ ಹದಿನೆಂಟು ಸಾವಿರದವರೆಗೆ ಪ್ರಜೆಗಳಿರುತ್ತಿದ್ದರು. ಪ್ಯಾರಿಸಿನ ಕಮ್ಯೂನಿನ ಆಡಳಿತ ನಡೆಸಲು ಆಯ್ಕೆಯಾಗುತ್ತಿದ್ದ ಮಂಡಲಿಯ ಸದಸ್ಯರ ಸಂಖ್ಯೆ 148. ಹದಿನಾಲ್ಕು ವಿಭಾಗಗಳಲ್ಲಿ ಕಾರ್ಮಿಕರು ಒತ್ತಾಗಿ ವಾಸಿಸುತ್ತಿದ್ದರು. 1793 ಮತ್ತು 1794ರ ಕ್ರಾಂತಿಯ ಮೇಲೆ ಈ ಜನರ ಪ್ರಭಾವ ಅಗಾಧ. 1793ರ ಅಗಸ್ಟಿನಲ್ಲಂತೂ ಪರಿಸ್ಥಿತಿ ಬಹಳ ಬಿಕ್ಕಟ್ಟಿನದಾಗಿತ್ತು. ಸೈನಿಕ ಹಿನ್ನಡೆಗಳಿಂದಾಗಿ ರಾಷ್ಟ್ರದ ಜನ ಎಚ್ಚತ್ತಿದ್ದರು. ಕಮ್ಯೂನಿನ ಕಾನೂನುಬದ್ಧ ಸರ್ಕಾರದ ಸ್ಥಾನದಲ್ಲಿ ತಮಗೆ ಅನುಕೂಲವಾದ ಸರ್ಕಾರವನ್ನೇ ಸ್ಥಾಪಿಸಬೇಕೆಂದು ಕೂಡ ಕೆಲವರು ಯೋಚಿಸಿದ್ದರು. ರಾಜತ್ವವನ್ನು ಕಿತ್ತೊಗೆಯುವ ಹಂಚಿಕೆಯೂ ಸಾಗಿತ್ತು. ಆಗಸ್ಟ್ 9, 10ರ ವೇಳೆಗೆ ಇವೆರಡೂ ಸಾಧಿಸಿದವು. ರಾಜಗದ್ದುಗೆಯನ್ನುರುಳಿಸಿ ಅದರ ಮೇಲೆ ಸ್ಥಾಪಿಸಲಾಗಿದ್ದ ಪ್ರಥಮ ಫ್ರೆಂಚ್ ಗಣರಾಜ್ಯ ಸರ್ಕಾರ ಅನಂತರ ಒಂದು ವರ್ಷಕಾಲ ಪ್ಯಾರಿಸ್ ಕಮ್ಯೂನಿನ ಬಂಡಾಯಗಾರ ಸರ್ಕಾರದ ಒತ್ತಡಕ್ಕೆ ಮಣಿಯಬೇಕಾಗಿತ್ತು. ಆರ್ಥಿಕ ಬಿಕ್ಕಟ್ಟಿನ ಫಲವಾಗಿ ಅಶಾಂತಿಯಿಂದ ಕೂಡಿದ್ದ ಕಾರ್ಮಿಕರ ಆಂದೋಲನದಿಂದಾಗಿ ರಾಷ್ಟ್ರೀಯ ಸರ್ಕಾರ ಕೈಗೊಂಡ ಹಲವಾರು ಆರ್ಥಿಕ ಸಾಮಾಜಿಕ ಕ್ರಮಗಳು ಬಲು ತೀವ್ರವಾಗಿದ್ದವು. 1794ರ ಬೇಸಗೆಯಲ್ಲಿ ಈ ಸರ್ಕಾರ ಉರುಳಿದಾಗ ಕಮ್ಯೂನಿನ ಪ್ರಭಾವ ತಗ್ಗಿತು. ಸರ್ಕಾರದ ಮೇಲೆ ಹತೋಟಿ ಹೊಂದಿದ್ದ ಸಂಪ್ರದಾಯವಾದಿಗಳು ಮುಂದಿನ ಕೆಲವೇ ತಿಂಗಳುಗಳಲ್ಲಿ ಕಮ್ಯೂನನ್ನು ಕಾನೂನುಬಾಹಿರಗೊಳಿಸಿದರು.

19ನೆಯ ಶತಮಾನದ ಕ್ರಾಂತಿಕಾರಿ ಜನಕ್ಕೆ ಕಮ್ಯೂನಿನ ನೆನಪು ಬಹಳ ಪವಿತ್ರವೆನಿಸಿತ್ತು. ಇತರ ಕ್ರಾಂತಿಕಾರಿ ಚಳವಳಿಗಳಿಗೆ ಇದೇ ಪ್ರೇರಕಶಕ್ತಿ. 1870–71ರ ಫ್ರಾಂಕೋ–ಪ್ರಷ್ಯನ್ ಯುದ್ಧದಲ್ಲಿ ಫ್ರಾನ್ಸಿಗೆ ಆಘಾತವಾದಾಗ ಪ್ಯಾರಿಸಿಗೂ ವರ್ಸೇಲ್ಸಿನ ಹೊಸ ಸರ್ಕಾರಕ್ಕೂ ನಡುವೆ ವಿರಸ ಸಂಶಯಗಳು ಮೂಡಿದವು. ಪ್ಯಾರಿಸಿನಲ್ಲಿದ್ದ ಕೆಲವು ಫಿರಂಗಿ ದಳಗಳನ್ನು

ಅಲ್ಲಿಂದ ವಾಪಸು ತೆಗೆಯಲು ಸರ್ಕಾರ ಯೋಚಿಸಿದಾಗ ಕೆಳವರ್ಗದ ಜನರಲ್ಲಿ ಹಳೆಯ ಕ್ರಾಂತಿಕಾರಿ ಭಾವನೆಗಳು ಮರುಕಳಿಸಿದವು. 1871 ಮಾರ್ಚ್ 26ರಂದು ಆಯ್ಕೆಯಾದ ಪೌರಸಭೆ ತಾನೇ ಪ್ಯಾರಿಸಿನ ಕಮ್ಯೂನ್ ಎಂದು ಸಾರಿಕೊಂಡಿತಲ್ಲದೆ ಆಗಿದ್ದ ತಾತ್ಕಾಲಿಕ ಸರ್ಕಾರವನ್ನು ಪ್ರತಿಭಟಿಸಿತು. ಇನ್ನೂ ಕೆಲವು ನಗರಗಳಿಗೂ ಕ್ರಾಂತಿಯ ಕಿಡಿ ಹಬ್ಬಿತಾದರೂ ಅಲ್ಲಿ ಅದು ಫಲಿಸಲಿಲ್ಲ. ಇದು ಪ್ಯಾರಿಸಿಗೂ ರಾಷ್ಟ್ರಕ್ಕೂ ನಡುವಣ ಘರ್ಷಣೆಯಾಗಿ ಪರಿಣಮಿಸಿತೆನ್ನಬಹುದು. ಆದರೂ ಈ ಹೊಸ ಕಮ್ಯೂನಿನ ವಿರುದ್ಧ ರಾಷ್ಟ್ರವನ್ನು ಸಂಘಟಿಸುವುದು ಸುಲಭವಾಗಿರಲಿಲ್ಲ. ಕಮ್ಯೂನ್ ಈ ಕಾಲದಲ್ಲಿ ಸರ್ಕಾರದ ಮೇಲೆ ಆಕ್ರಮಣ ನಡೆಸಿ ಗೆಲ್ಲಬಹುದಾಗಿತ್ತು. ಆದರೆ ವ್ಯರ್ಥವಾದ ಚರ್ಚೆಗಳಲ್ಲಿ ತೊಡಗಿ ಅದು ಈ ಅವಕಾಶ ಕಳೆದುಕೊಂಡಿತು. ಏಪ್ರಿಲ್ 2 ರಂದು ಸರ್ಕಾರ ಪ್ಯಾರಿಸಿನ ಉಪನಗರವೊಂದನ್ನು ಹಿಡಿದುಕೊಂಡಿತು. ಅಂತರ್ಯುದ್ಧ ಆರಂಭವಾಯಿತು. ಪ್ರಷ್ಯದ ಮೇಲೆ ಯುದ್ಧಮಾಡಿ ಬಸವಳಿದಿದ್ದ ರಾಷ್ಟ್ರಕ್ಕೆ ಆಗ ಶಾಂತಿ ಬೇಕಿತ್ತು. ಪ್ಯಾರಿಸಿನ ಕಮ್ಯೂನೇ ಅದಕ್ಕೆ ಅಡ್ಡಿಯೆಂಬ ಭಾವನೆಯೂ ಇಲ್ಲದಿರಲಿಲ್ಲ. ಎರಡು ಪಕ್ಷಗಳೂ ಉಗ್ರಕದನ ನಡೆಸಿದವು. ಎರಡೂ ಪಕ್ಷಗಳು ತಮ್ಮ ಖೈದಿಗಳನ್ನು ಗುಂಡಿಕ್ಕಿ ಕೊಂದವು. ನಗರದ ಹಲವು ಭಾಗಗಳು ಭಸ್ಮೀಭೂತವಾದವು. ಕಮ್ಯೂನ್ ಪತನಹೊಂದಿತು. ಆ ವೇಳೆಗೆ ಪ್ರಾಣ ತೆತ್ತ ಪ್ಯಾರಿಸಿನವರ ಸಂಖ್ಯೆ 20,000. *

**ಕರಾಚಿ:** ಪಾಕಿಸ್ತಾನದ ಮುಖ್ಯ ರೇವುಪಟ್ಟಣ. ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರ. ಇದು ಸಿಂಧ್ ಪ್ರಾಂತ್ಯದ ಮುಖ್ಯಪಟ್ಟಣವಾಗಿತ್ತು. ಪಾಕಿಸ್ತಾನದ ರಚನೆಯಾದ ಮೇಲೆ ಅದರ ರಾಜಧಾನಿಯಾಯಿತು. ಈಗ ಇದು ಜಿಲ್ಲೆಯ ಮತ್ತು ವಿಭಾಗದ ಮುಖ್ಯಪಟ್ಟಣ. ಜನಸಂಖ್ಯೆ 92,69,265 (1998). ಹಿಂದೆ ಬ್ರಿಟಿಷರು ಸಿಂಧನ್ನು ಆಕ್ರಮಿಸಿಕೊಳ್ಳುವ ಮುನ್ನ ಇದು ಅಷ್ಟೇನೂ ಪ್ರಸಿದ್ಧವಾಗಿರಲಿಲ್ಲ (1843). ಅಮೆರಿಕನ್ ಅಂತರ್ಯುದ್ಧದ ಫಲವಾಗಿ ಭಾರತದ ಹತ್ತಿಗೆ ಬೇಡಿಕೆಯುಂಟಾದಾಗ ಈ ನಗರದ ವ್ಯಾಪಾರ ಅಧಿಕಗೊಂಡಿತು. ವಾಯವ್ಯ ರೈಲ್ವೆಯ ನಿರ್ಮಾಣವಾದಾಗಿನಿಂದ ಇದರ ಪ್ರಾಮುಖ್ಯ ಅಧಿಕವಾಯಿತು (1878). ಇದರಿಂದಾಗಿ ಅವಿಭಾಜಿತ ಭಾರತದ ಇಡೀ ಪಂಜಾಬು ಇದರ ಹಿನ್ನಾಡಾಗಿ ಪರಿಣಮಿಸಿತಲ್ಲದೆ ಅಫ್ಘಾನಿಸ್ತಾನದ ವರೆಗಿನ ಪ್ರದೇಶದ ವಿದೇಶೀ ವ್ಯಾಪಾರವೆಲ್ಲ ಇದರ ಮೂಲಕವೇ ಸಾಗುವಂತಾಯಿತು. ಇದು ಯುರೋಪಿಗೂ ಈ ಪ್ರದೇಶಕ್ಕೂ ನಡುವೆ ಅತ್ಯಂತ ಹತ್ತಿರದ ಬಂದರು. ಸುಕ್ಕೂರ್ ಜಲಾಶಯದ ನಿರ್ಮಾಣದಿಂದ ನೀರಾವರಿ ಸೌಲಭ್ಯ ಬೆಳೆದು ಸಿಂಧ್‌ನ ಉತ್ಪಾದನೆ ಹೆಚ್ಚಿದಾಗ ಕರಾಚಿಯ ಪ್ರಾಮುಖ್ಯ ಇನ್ನೂ ಹೆಚ್ಚಿತು. ಈಚೆಗೆ ಅಂತಾರಾಷ್ಟ್ರೀಯ ವಿಮಾನ ಮಾರ್ಗದ ಮುಖ್ಯ ಕೇಂದ್ರವಾಗಿದೆ. ಇಲ್ಲಿನ ಬಂದರು ಸಿಂಧು ನದಿಮುಖದ ವಾಯವ್ಯದಲ್ಲಿದೆ. ಕರೆಯ ಉದ್ದಕ್ಕೂ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಕಡಲ ಪ್ರವಾಹವಿರುವುದರಿಂದ ಸಿಂಧು ನದಿಯಿಂದ ಬಂದು ಬೀಳುವ ಮಣ್ಣಿನಿಂದ ಈ ಬಂದರಿಗೇನೂ ಅಪಾಯವಿಲ್ಲ. ಉದ್ದನೆಯ ಮನೋಹರ ನೆಲದ ಚಾಚು ರೇವಿಗೆ ರಕ್ಷಣೆ ನೀಡಿದೆ. ಕಿಯಮಾರಿ ಎಂಬುದು ಹಿಂದೆ ಇದರೊಳಗಿನ ಒಂದು ದ್ವೀಪವಾಗಿತ್ತು. 1850ರಲ್ಲಿ ಇದಕ್ಕೆ ಸೇತುವೆ ಕಟ್ಟಿ ರೈಲ್ವೆ ಸಂಪರ್ಕ ಏರ್ಪಡಿಸಿದ್ದರಿಂದಲೂ ಇದಕ್ಕೂ ಮುಖ್ಯ ಭೂಭಾಗಕ್ಕೂ ನಡುವಣ ಪ್ರದೇಶವನ್ನು ವಸತಿ ಯೋಗ್ಯವಾಗಿ ಪರಿವರ್ತಿಸಿದ್ದರಿಂದಲೂ ಈಗ ಇದು ದ್ವೀಪವಾಗಿ ಉಳಿದಿಲ್ಲ. ಅವಿಭಾಜಿತ ಭಾರತದ ಸಮುದ್ರಮಾರ್ಗದ ರಫ್ತುವ್ಯಾಪಾರದಲ್ಲಿ ಏಳನೆಯ ಬಂದರಿಂದ ಅರನೆಯ ಬಂದರ ವರೆಗಿನಷ್ಟು ಭಾಗ ಕರಾಚಿಯ ಮೂಲಕ ನಡೆಯುತ್ತಿತ್ತು. ಹತ್ತಿ, ಗೋದಿ, ಅಕ್ಕಿ, ಎಣ್ಣೆಬೀಜ, ಉಪ್ಪು – ಇವು ನಿರ್ಯಾತಗಳಾಗಿದ್ದುವು. ಆಗ ಇದರ ಮೂಲಕ ಸಾಗಿಬರುತ್ತಿದ್ದ ಪದಾರ್ಥಗಳೆಂದರೆ ಪೆಟ್ರೋಲಿಯಂ, ಜವಳಿ, ಯಂತ್ರ ಮತ್ತು ಕಲ್ಲಿದ್ದಲು. ಆಮದಿಗಿಂತ ರಫ್ತೇ ಹೆಚ್ಚಾಗಿತ್ತು. ಪಾಕಿಸ್ತಾನದ ರಚನೆಯಾದಾಗ ಭಾರತದ ವಾಯವ್ಯ ಭಾಗದ ವಿದೇಶಿ ವ್ಯಾಪಾರದ ಹೆಬ್ಬಾಗಿಲಾಗಿದ್ದ ಕರಾಚಿಯೂ ಪಾಕಿಸ್ತಾನಕ್ಕೆ ಸೇರಿತು. ಭಾರತಕ್ಕೆ ಈ ಪ್ರದೇಶದ ಆವಶ್ಯಕತೆಗಳನ್ನು ಪೂರೈಸಲು ಈಗ ಗುಜರಾತಿನಲ್ಲಿ ಕಾಂಡ್ಲ ರೇವುಪಟ್ಟಣವನ್ನು ನಿರ್ಮಿಸಲಾಗಿದೆ.

ಪಾಕಿಸ್ತಾನದ ಮುಖ್ಯ ಸ್ಥಳಗಳಿಗೂ ಕರಾಚಿಗೂ ಪಾಕಿಸ್ತಾನ್ ಪಶ್ಚಿಮ ರೈಲ್ವೆಯ ಸಂಪರ್ಕವಿದೆ. ಇಲ್ಲಿಂದ ಭಾರತದ ರೈಲ್ವೆಯೊಂದಿಗೆ ಗಡಿ ನಗರವಾದ ಮುನಾಬಾದಿನ ಮೂಲಕ ಹಾದು ಸಂಪರ್ಕ ಕಲ್ಪಿಸುವ ರೈಲುಮಾರ್ಗವೊಂದುಂಟು. ಕರಾಚಿ ನಗರದ ತೈಲ ನೆಲೆಗಳಿಗೆ ಹತ್ತಿರದಲ್ಲಿರುವುದರಿಂದಲೂ ಇಲ್ಲಿ ಪ್ರವಾಹ ಮತ್ತು ಮಳೆ ಮೋಡಗಳಿಲ್ಲದಿರುವುದರಿಂದಲೂ ಸನ್ನಿವೇಶಮಹಿಮೆಯಿಂದಲೂ ಕರಾಚಿಯ ಡ್ರಿಘ್‌ರೋಡ್ ಮುಖ್ಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿದೆ. (ಎಸ್.ಎನ್.ಎ.ಆರ್.)

**ಕರಾವಳಿಯ ರಕ್ಷಣೆ:** ಸಮುದ್ರದ ಕರಾವಳಿಯ ಸ್ವಭಾವ ದಡದ ಭೂಗುಣವನ್ನು ಅವಲಂಬಿಸಿದೆ. ಬಂಡೆಗಳಿದ್ದರೆ, ಅಲೆಗಳು ದಡವನ್ನು ಸುಲಭವಾಗಿ ಕೊರೆಯಲಾರವು. ಒಂದೇ ನಮೂನೆಯ ಗಟ್ಟಿಯಾದ ಭೂಮಿಯಿದ್ದರೆ ಕೊರೆತ ಕಮ್ಮಿ, ಆದರೆ ಒಂದು ಗಟ್ಟಿಯಾದ ಪದರದ ಮೇಲೆ ಇನ್ನೊಂದು ಮೆದುವಾದದ್ದಿದ್ದರೆ ಸವೆತ ಹೆಚ್ಚಾಗುತ್ತದೆ. ಸಮುದ್ರದ ಮೇಲೆ ಬಗ್ಗಿರುವ ಬಂಡೆಯ ಮುಖ ಕಡಿದಾಗಿದ್ದರೆ ಅಲೆಗಳ ಬಡಿತದಿಂದ ಕೆಳಭಾಗ ಕೊರೆದು ಮೇಲಿನ ಬಂಡೆ ಕೆಳಕ್ಕೆ ಉರುಳುತ್ತದೆ.

ಅಲೆಗಳು, ಪ್ರವಾಹಗಳು ಮತ್ತು ಮಾರುತಗಳು ಸಮುದ್ರದ ತೆರೆದ ದಡಗಳ ಮೇಲೂ ಕೊಲ್ಲಿಗಳ ಮತ್ತು ಅಳಿವೆಗಳ ತೀರಗಳ ಮೇಲೂ ಬಡಿಯುವುವು. ಆಗ ದಡದ ಮೇಲಿರುವ ಮಣ್ಣು, ಮರಳು ಮತ್ತು ನೊರಜು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುತ್ತವೆ. ಈ ಚಲನೆಯಿಂದ ಕೆಲವು ಕಡೆ ದಡ ಕೊರೆಯುತ್ತದೆ. ಇನ್ನೂ ಕೆಲವು ಕಡೆ ಮರಳು ತುಂಬಿಕೊಳ್ಳುತ್ತದೆ. ದಡ ಕೊರೆದಾಗ ಬೆಲೆಬಾಳುವ ಭೂಮಿ, ಮನೆಗಳು ಮತ್ತು ರಸ್ತೆಗಳಿಗೆ ತೊಂದರೆಯಾಗುವುದಾದರೆ ಪರಿಹಾರಕ್ರಮಗಳನ್ನು ತೆಗೆದುಕೊಂಡು ಕರಾವಳಿಯ ರಕ್ಷಣೆ ಮಾಡಬೇಕಾಗುತ್ತದೆ. ಸಮುದ್ರ ಕೊರೆತ ಅನೇಕ ರೀತಿಗಳಲ್ಲಿ ಆಗುತ್ತದೆ.

ಅಲೆಗಳಿಂದ ದಡದ ಕೊರೆತ : ಅಲೆಗಳು ಎರಡು ವಿಧಗಳಲ್ಲಿ ಕೊರೆಯುತ್ತವೆ: 1. ದಡದ ಮರಳನ್ನು ಒಂದು ಜಾಗದಿಂದ ಇನ್ನೊಂದಕ್ಕೆ ಸಾಗಿಸುತ್ತವೆ. 2 ದಡದಿಂದ ಮಣ್ಣನ್ನೋ ಮರಳನ್ನೋ ಆಳವಾದ ದಡದ ಕಡೆಗೆ ಒಯ್ಯುತ್ತವೆ. ಸಮುದ್ರದ ಅಲೆಗಳು ದಡವನ್ನು ತಲುಪಿದಾಗ ಗೋಡು ಮತ್ತು ಮರಳನ್ನು ಕೆದಕಿ ಜೊತೆಗೆ ಸಮುದ್ರತೀರಕ್ಕೆ ಸಮಾಂತರವಾಗಿ ಕಡಲ ತೆರೆಯ ಪ್ರವಾಹವನ್ನು ಹರಿಸುತ್ತವೆಯಷ್ಟೆ. ಈ ಎರಡು ಮಾರ್ಗಗಳಿಂದ ಸಮುದ್ರತೀರದ ಮಣ್ಣು ತೀರದ ಪಕ್ಕದಲ್ಲಿಯೇ ಚಲಿಸುತ್ತದೆ. ಸಾಮಾನ್ಯವಾದ ಅಲೆಗಳೂ ಆ ನೀರನ್ನು ಕಲಕಿದಾಗ ಗೋಡು ಮತ್ತು ಮಣ್ಣು–ಎರಡೂ ಸಮುದ್ರದ ತಳವನ್ನು ಸೇರುತ್ತವೆ. ಕ್ರಮೇಣ ತೀರ ಕೊರೆದು ಹೋಗಿ ದಪ್ಪ ಮರಳು ಮತ್ತು ಸಣ್ಣ ನೊರಜುಕಲ್ಲುಗಳು ಮಾತ್ರ ದಡದಲ್ಲಿ ಉಳಿದುಕೊಳ್ಳುತ್ತವೆ. ದಡದಲ್ಲಿ ಬಂಡೆಗಳಿದ್ದರೆ ಕೊರೆತ ಕೊಂಚ ಕಡಿಮೆಯಾಗುತ್ತದೆ. ಆದರೆ ಮರಳು ಮತ್ತು ಸಣ್ಣ ಕಲ್ಲುಗಳಿರುವ ಸಮುದ್ರತೀರದ ಪಕ್ಕದಲ್ಲಿ ಅಲೆಗಳ ಹೊಡೆತದಿಂದ ಮರಳಿನಿಂದ ಕೂಡಿದ ನದಿಯೇ ಹರಿಯುವಂತೆ ಇರುತ್ತದೆ. ಈ ವರ್ಷ ಅಲ್ಲಿ ಕಾಣುವ ಮರಳು ಪ್ರವಾಹದಲ್ಲಿ ಹರಿದು ಹೋಗಿ ಮಾರನೆಯ ವರ್ಷ ಮೇಲಿನಿಂದ ಹರಿದುಬರುವ ಬೇರೆ ಮರಳು ಅಲ್ಲಿಗೆ ಬಂದಿರುತ್ತದೆ. ಆದರೆ ಕೆಲವು ಸಮುದ್ರ ತೀರಗಳಲ್ಲಿ ಒಂದು ದಿಕ್ಕಿನಲ್ಲಿ ಹೋಗುವ ಮರಳಿಗೆ ಬದಲಾಗಿ ಎದುರು ದಿಕ್ಕಿನಿಂದ ಮರಳು ಬಂದು ಸಮುದ್ರ ತೀರ ಭದ್ರವಾಗಿರುವುದು. ಹಾಗೆಯೇ ಕೆಲವು ತೀರಗಳಲ್ಲಿ ಬಂದು ಸೇರುವ ಮರಳು ಹೆಚ್ಚಾಗಿಯೂ ಇನ್ನು ಕೆಲವು ತೀರಗಳಲ್ಲಿ ಕೊರೆದು ಹೋಗುವ ಮರಳು ಹೆಚ್ಚಾಗಿಯೂ ಇರಬಹುದು. ಮರಳು ಕೊರೆದು ಹೋಗುವಕಡೆಗಳಲ್ಲಿ. ತೀರದ ರಕ್ಷಣೆ ಮಾಡಬೇಕು.



ಗಾಳಿಯಿಂದ ಕೊರೆತ : ಒಣಗಿರುವ ಸಮುದ್ರತೀರದ ಮೇಲೆ ಬೀಸುವ ಗಾಳಿ ಭೂಮಿಯ ಕಡೆಗೆ ಮರಳನ್ನು ಸಾಗಿಸಿ ಮರಳುದಿಣ್ಣೆಗಳನ್ನು ಮಾಡಬಹುದು ಅಥವಾ ಕಡಲ ಕರೆಯ ಪ್ರವಾಹದಿಂದ ಮರಳನ್ನು ಎತ್ತಿ ಕೊರೆತವನ್ನು ಹೆಚ್ಚಿಸಬಹುದು. ಮರಳುದಿಣ್ಣೆಗಳು ದಡಕ್ಕೆ ಹತ್ತಿರವಾಗಿದ್ದರೆ ತುಫಾನುಗಳು ಮತ್ತು ಬಿರುಗಾಳಿಗಳೊಂದಿಗೆ ಬರುವ ದೊಡ್ಡ ಅಲೆಗಳ ದೆಸೆಯಿಂದ ತೀರವನ್ನು ಕಾಪಾಡುತ್ತವೆ.

ತೀರದ ಕಡೆಗೆ ಬೀಸುವ ಗಾಳಿ ದಡದಲ್ಲಿ ನೀರಿನ ಮಟ್ಟವನ್ನು ಹೆಚ್ಚಿಸುತ್ತದೆ. ಆಗ ಇನ್ನೂ ದೊಡ್ಡ ಅಲೆಗಳು ದಡವನ್ನು ಮುಟ್ಟಿ ದಡದ ಭದ್ರವಾದ ಭಾಗಗಳನ್ನೂ ಕೊರೆಯಬಹುದು ಅಲೆಗಳು ಹತ್ತು ಅಡಿಗಳವರೆಗೂ ಏರಿದ ನಿದರ್ಶನಗಳಿವೆ. ಅಂಥ ಸಂದರ್ಭಗಳಲ್ಲಿ ದಡದ ಮೇಲೆ ಪ್ರಾಣ ನಾಶವಾಗಬಹುದು. ಆಸ್ತಿ ಮುಳುಗಿಹೋಗಬಹುದು.

ಸಮುದ್ರತೀರದ ಒಳಗಂಡಿಗಳು : ತೆರೆದ ಸಮುದ್ರದ ತೀರಗಳಲ್ಲಿ ಉಪನದಿಗಳು ಅಳಿವೆಗಳಲ್ಲಿ ಒಳಗೆ ನುಗ್ಗುತ್ತವೆ. ಅಳಿವೆಗಳಲ್ಲಿ ನದಿಗಳಲ್ಲಿ ಬರುವ ಸಿಹಿನೀರಿನ ಜೊತೆಗೆ ಭರತದ ಉಬ್ಬರಗಳಲ್ಲಿ ಒಳಗೆ ಬರುವ ಉಪ್ಪುನೀರು ಸೇರಿರುತ್ತದೆ. ಸಿಹಿನೀರಿನ ಪ್ರಮಾಣ

ಹೆಚ್ಚಾಗಿದ್ದರೆ ಅದರಲ್ಲಿ ಗೋಡುಮಣ್ಣು ಮತ್ತು ಸೊರಜು ಸಮುದ್ರತೀರದ ವರೆಗೂ ಬರಬಹುದು. ಈ ಸಾಮಗ್ರಿ ಮುಖಜಭೂಮಿಗಳಾಗಿಯೋ (ಡೆಲ್ಟ) ದಿಣ್ಣೆಗಳಾಗಿಯೋ ಸಮುದ್ರತೀರದಲ್ಲಿ ದಾಸ್ತಾನಾಗಬಹುದು. ಇಂಥ ಸಾಮಗ್ರಿಯಲ್ಲಿ ಇರುವ ಮರಳು ಅಲೆಗಳಿಗೆ ಸಿಕ್ಕಿ ಕಡಲ ಕರೆಯ ಚಲನೆಯಲ್ಲಿ ಸೇರಿ ತೀರದ ಪಕ್ಕದಲ್ಲಿ ಸಮುದ್ರದಲ್ಲಿ ಸಾಗಿ ಹೋಗಬಹುದು.

ಕೆಲವು ಸಂದರ್ಭಗಳಲ್ಲಿ ಉಪನದಿಗಳು ಹೆಚ್ಚಿನ ಸಾಮಗ್ರಿಯನ್ನು ಹೊತ್ತು ತರದೆ ಅಳಿವೆಯಿಂದ ಸಮುದ್ರತೀರಕ್ಕೆ ಬರುವ ಗೋಡುಮಣ್ಣು ಕಡಿಮೆಯಾಗುವುದು. ಆಗ ಕಡಲ ಕರೆಯ ಚಲನೆಯಲ್ಲಿ ಬರುವ ಮಣ್ಣನ್ನು ಒಳಗಂಡಿ ತಡೆದು ನಿಲ್ಲಿಸುತ್ತದೆ. ಈ ಮಣ್ಣು ಹೆಚ್ಚಾದರೆ ಒಳಗಂಡಿಯ ಬಾಯಿ ಮುಚ್ಚಿಹೋಗುತ್ತದೆ. ಇದಕ್ಕೆ ಪ್ರತಿಯಾಗಿ ಉಬ್ಬರದ ನೀರೂ ಹೊಳೆಯಲ್ಲಿ ಬರುವ ಸಿಹಿನೀರೂ ಅದರಲ್ಲಿ ದಾರಿಯನ್ನು ಮಾಡಲು ಪ್ರಯತ್ನಿಸುತ್ತವೆ. ಹೀಗಾಗಿ ಅಳಿವೆಯ ಬಾಯಿಯನ್ನು ಮುಚ್ಚುವ ಮತ್ತು ತೆರೆಯುವ ಶಕ್ತಿಗಳು ಉಯ್ಯಾಲೆಯ ಹಾಗೆ ಆಡುತ್ತವೆ. ಇದರ ಪರಿಣಾಮವಾಗಿ ಸ್ಥಳವನ್ನು ಬದಲಾಯಿಸುವ ಮರಳುದಿಣ್ಣೆಗಳಲ್ಲಿ ಸೊಟ್ಟ ಸೊಟ್ಟಾದ ನಾಲೆಗಳು ಬಳಸುತ್ತವೆ. ಕಡಲಕರೆಯ ಚಲನದಲ್ಲಿ ಮರಳು ಹೆಚ್ಚಾಗಿ ಬಂದರೆ ದಿಣ್ಣೆಗಳ ಒಳಕ್ಕೆ ನುಗ್ಗಿ ದಾರಿಯನ್ನು ಮಾಡಬಹುದು.

ಮಾನವ ನಿರ್ಮಿತವಾದ ಕೊರೆತ : ಯಾರೂ ಬೇಕಾಗಿ ಸಮುದ್ರತೀರವನ್ನು ಕೊರೆಯುವ ದೃಷ್ಟಿಯಿಂದ ಏನನ್ನೂ ಮಾಡುವುದಿಲ್ಲ. ಬೇರೆ ಯಾವುದೋ ಮಾರ್ಪಾಡನ್ನು ಮಾಡಲು ಹೋದಾಗ ಈ ಪರಿಣಾಮವಾಗುತ್ತದೆ. ಕೆಲವು ವೇಳೆ ಹೀಗೆ ಸಮುದ್ರತೀರ ಕೊರೆಯಬಹುದೆಂಬ ನಿರೀಕ್ಷೆಯೂ ಇರುತ್ತದೆ.

ಅಲೆತಡೆಗಳು : ಬಂದರಿನೊಳಗೆ ಬರುವ ಹಡಗುಗಳಿಗೆ ಅಲೆಗಳ ಹೊಡೆತದಿಂದ ರಕ್ಷಿತವಾದ ಜಾಗವನ್ನು ಕಲ್ಪಿಸುವುದಕ್ಕಾಗಿ ಆಳವಾದ ಜಾಗದಲ್ಲಿ ಕಲ್ಲು ಇಲ್ಲವೆ ಕಾಂಕ್ರೀಟ್‌ನಿಂದ ಅಲೆತಡೆಗಳನ್ನು ಕಟ್ಟುತ್ತಾರೆ. ಇವು ಕಡಲ ಕರೆಯಲ್ಲಿ ಮರಳು ಚಲಿಸುವುದನ್ನು ತಡೆಯುತ್ತವೆ. ಇದರಿಂದ ಒಂದು ಕಡೆ ಮರಳು ಶೇಖರಣೆಯಾಗಿ ಇನ್ನೊಂದು ಕಡೆ ಸಮುದ್ರತೀರ ಕೊರೆದುಹೋಗುತ್ತೆ. ಆದರೆ ಸಮುದ್ರತೀರದಲ್ಲಿ ಅಲೆತಡೆಗಳನ್ನು ಕಟ್ಟಿದಾಗ ಹಿಂಭಾಗದಲ್ಲಿ ದಡ ಕೊರೆಯದಂತೆ ಇವು ತಡೆಯುತ್ತವೆ.

ಜೆಟ್ಟಿಗಳು : ಆಳವಿಲ್ಲದ ಸ್ಥಳದಲ್ಲಿ ಕಾಣಿಸುವ ಮರಳು ದಿಬ್ಬಗಳ ಮೂಲಕ ಜಲಯಾನದ ನಾಲೆಯನ್ನು ಭದ್ರಪಡಿಸಿ ಮೇಲ್ಪಾಡನ್ನು ಮಾಡುವುದಕ್ಕಾಗಿ ನದಿಯ ಅಳಿವೆಯ ಬಾಯಲ್ಲಿ ಕಟ್ಟಿರುವ ಕಟ್ಟಡಗಳಿಗೆ ಜೆಟ್ಟಿಗಳು ಎನ್ನುತ್ತಾರೆ. ಇವುಗಳ ಕ್ರಿಯೆಯೂ ಅಲೆತಡೆಗಳ ಹಾಗೆಯೇ–ಅಳಿವೆಗೆ ಅಡ್ಡಲಾಗಿ ಕಡಲ ಕರೆಯಲ್ಲಿ ಮರಳು ಕೊಚ್ಚಿಹೋಗುವುದನ್ನು ತಡೆಯುತ್ತವೆ.

ಜಲಯಾನದ ನಾಲೆಗಳು : ಸಾಮಾನ್ಯವಾಗಿ ಅಳಿವೆಯ ಬಾಯಿಯಲ್ಲಿ ಮರಳಿನ ದಿಬ್ಬವೊಂದಿರುವುದು. ಇದರ ಮೇಲುಗಡೆ ಕಡಲ ಕರೆಯಲ್ಲಿ ಮರಳು ಹೋಗುತ್ತದೆ. ಜಲಯಾನದ ಸೌಕರ್ಯಕ್ಕಾಗಿ ಈ ದಿಣ್ಣೆಯಲ್ಲಿ ಹೂಳನ್ನು ಎತ್ತಿ ಆಳವಾದ ನಾಲೆಯನ್ನು ತೋಡಬೇಕಾಗುತ್ತದೆ. ಆಮೇಲೆ ನಾಲೆಯಲ್ಲಿ ಶೇಖರಣೆಯಾಗುವ ಮರಳನ್ನು ಆಗಾಗ ಎತ್ತಿ ಸಮುದ್ರದೊಳಕ್ಕೆ ಹಾಕುತ್ತಾರೆ. ಈ ರೀತಿಯಲ್ಲಿ ಕಡಲ ಕರೆಯ ಮರಳಿಗೆ ದಾರಿಯಿಲ್ಲದೆ ಕೆಳಭಾಗ ಕೊರೆದು ಹೋಗುತ್ತದೆ.

ಮರಳಿನ ರಾಶಿಯ ಸಾಗಣೆ : ಸಾಮಾನ್ಯ ಪರಿಸ್ಥಿತಿಯಲ್ಲಿ ಸಮುದ್ರದ ತೀರದಲ್ಲಿ ಗುಡ್ಡೆಯಾಗಿ ಬಿದ್ದಿರುವ ಮರಳಿನ ರಾಶಿಗಳಲ್ಲಿನ ಸಮುದ್ರದ ಕಡೆಯ ಮುಖಗಳು ಕೊರೆದು ಹೋಗುತ್ತವೆ. ಬಳಿಕ ಆ ಮರಳು ದಡ ಕೊರೆದಲ್ಲಿಗೆ ಹೋಗಿ ತುಂಬಿ ಕೊಳ್ಳುತ್ತದೆ. ಆಮೇಲೆ ಗಾಳಿ ತೀರದ ಕಡೆಗೆ ಬೀಸುವಾಗ ದಡದ ಮರಳನ್ನು ಹಾರಿಸಿ ಮರಳ ರಾಶಿಗಳನ್ನು ಮತ್ತೆ ತುಂಬಿಸುತ್ತದೆ. ಜನ ಸಮೃದ್ಧವಾದ ಸಮುದ್ರ ತೀರಗಳಲ್ಲಿ ಈ ರಾಶಿಗಳ ಮರಳನ್ನು ಕಟ್ಟಡಗಳನ್ನು ಕಟ್ಟಲು ಸಾಗಿಸುತ್ತಾರೆ. ಇನ್ನು ಕೆಲವು ಕಡೆ ಜಮೀನಿನ ಮೇಲ್ಪಾಡಿಗೋಸ್ಕರ ಆರಂಭಗಾರರು ಮರಳ ರಾಶಿಗಳನ್ನು ತೆಗೆಯುತ್ತಾರೆ. ಆಗ ಜಮೀನಿನ ಮೇಲೆ ಬಿರುಗಾಳಿಯಲ್ಲಿ ಅಲೆಗಳು ನುಗ್ಗಿ ಅಪಾರವಾದ ನಷ್ಟವನ್ನುಂಟುಮಾಡುತ್ತವೆ.

ಕರಾವಳಿಯ ರಕ್ಷಣೆಯ ಕ್ರಮಗಳು : ಈ ಕ್ರಮಗಳು ಕೊರೆತದ ಕಾರಣಕ್ಕೂ ತೀರದ ಭೂಮಿಯ ಬೆಲೆಗೂ ಅನುಸಾರವಾಗಿರುತ್ತವೆ. ಇವುಗಳಲ್ಲಿ ಮುಖ್ಯವಾದುವನ್ನು ಕೆಳಗೆ ಕೊಟ್ಟಿದೆ.

1. ಕಲ್ಲಿನ ರಾಶಿ : ಸಮುದ್ರತೀರ ಕೊರೆಯದ ಹಾಗೆ ಕಲ್ಲಿನ ಚೂರುಗಳನ್ನು ಮರಳಿನ ಮೇಲುಗಡೆ ಮುಚ್ಚುತ್ತಾರೆ. ಈ ಕಲ್ಲುಗಳು ಅಲೆಗಳು ಮೇಲೆ ಉರುಳಿದಾಗ ಕದಲದಷ್ಟು ದೊಡ್ಡವಾಗಿರಬೇಕು. ಕಲ್ಲುಗಳ ಸಂದುಗಳಲ್ಲಿ ಅಲೆಗಳು ನುಗ್ಗಿ ಮರಗಳನ್ನು ಕೊರೆಯದ ಹಾಗೆ ದೊಡ್ಡ ಕಲ್ಲುಗಳ ಕೆಳಗಡೆ ಸಣ್ಣ ಕಲ್ಲುಗಳ ವರಸೆಯೊಂದಿರಬೇಕು.

2. ದಡದ ಮೇಲೆ ನೆಲಹಾಸು : ಅಲೆಗಳ ಹೊಡೆತವನ್ನು ಎದುರಿಸುವುದಕ್ಕಾಗಿ ದಡದ ಮೇಲೆ ಕಲ್ಲು, ಕಾಂಕ್ರೀಟು, ಇಲ್ಲವೆ ಬಿಟ್ಯುಮನನ್ನು ಒಂದೇ ಮಟ್ಟವಾಗಿ ಹಾಸುತ್ತಾರೆ.

3. ಸಮುದ್ರದ ಗೋಡೆಗಳು : ಈ ಗೋಡೆಗಳನ್ನು ನೀರಿನ ಅಂಚಿನಲ್ಲಿ ಕಟ್ಟಿ ಅಲೆಗಳ ಸಂಪೂರ್ಣವಾದ ಹೊಡೆತವನ್ನು ತಡೆಯುವಂತೆ ಸಂವಿಧಾನವನ್ನು ಮಾಡಿರುತ್ತಾರೆ. ಇವು ಕಲ್ಲು ಇಲ್ಲವೆ ಕಾಂಕ್ರೀಟಿನ ಭದ್ರವಾದ ಗೋಡೆಗಳಂತೆ ಇರುತ್ತವೆ. ಅಪ್ಪಳಿಸುವ ಅಲೆಗಳು ಗೋಡೆಗೆ ಬಡಿದಾಗ ಬೀಳುವ ಆಘಾತವನ್ನು ತಡೆದುಕೊಳ್ಳುವುದಕ್ಕೂ ಗೋಡೆಯ ತಲೆಯ ಮೇಲೆ ಹೆಚ್ಚು ನೀರು ಉರುಳದ ಹಾಗೂ ಗೋಡೆಯ ಸಮುದ್ರದ ಕಡೆಯ ಮುಖಕ್ಕೆ ಬೇರೆಬೇರೆಯ ಆಕಾರಗಳನ್ನು ಕೊಡುತ್ತಾರೆ.

4. ಸಮುದ್ರದ ಅಡ್ಡಕಟ್ಟೆಗಳು : ಈ ಕ್ರಮದಲ್ಲಿ ಸಮುದ್ರತೀರದ ಮೇಲೆ ಮರಳಿನ ಇಲ್ಲವೆ ಮಣ್ಣಿನ ಏರಿಯನ್ನು ಕಟ್ಟಿ ಅದರ ಸಮುದ್ರದ ಕಡೆಯ ಮುಖಕ್ಕೆ ಕಲ್ಲು ಇಲ್ಲವೆ ಕಾಂಕ್ರೀಟಿನಿಂದ ರಕ್ಷಣೆಯನ್ನು ಕೊಡುತ್ತಾರೆ. ಉತ್ತರ ಸಮುದ್ರದ ತೀರದ ಮೇಲೆ ಹಾಲೆಂಡಿನಲ್ಲಿ ಈ ಸಂವಿಧಾನವನ್ನು ವಿಶೇಷವಾಗಿ ಬಳಸಿದ್ದಾರೆ.

5. ಅಲೆತಡೆಗಳು : ಹಿಂದೆ ನೋಡಿದ ಅಲೆತಡೆಗಳನ್ನು ಸಮುದ್ರತೀರದಲ್ಲಿ ಕಟ್ಟಿದಾಗ ಇವು ಹಿಂಭಾಗದಲ್ಲಿ ದಡ ಕೊರೆಯದಂತೆ ತಡೆಯುತ್ತವೆ.

6. ತಡೆಕಟ್ಟು : ಇದನ್ನು ಸಮುದ್ರತೀರದಿಂದ ಅದಕ್ಕೆ ಸಮಕೋನವಾದ ದಿಕ್ಕಿನಲ್ಲಿ ಮರ ಕಲ್ಲು, ಕಾಂಕ್ರೀಟ್–ಇವುಗಳಿಂದ ಕಟ್ಟುತ್ತಾರೆ. ಇದು ಕಡಲ ಕರೆಯ ಮರಳನ್ನು ತಡೆದು ತೀರದಲ್ಲಿರುವ ಮರಳು ಹೊರಗೆ ಹೋಗುವಂತೆ ಮಾಡುತ್ತದೆ. ಕೆಲವು ಕಡೆ ಅನೇಕ ತಡೆಕಟ್ಟುಗಳನ್ನು ದೂರದೂರವಾಗಿ ಸಮಾಂತರವಾಗಿ ಸಮುದ್ರತೀರದಲ್ಲಿ ಕಟ್ಟುವುದೂ ಉಂಟು.

ಸಮುದ್ರತೀರದ ರಕ್ಷಣೆಗಾಗಿ ತಡೆಗಟ್ಟುಗಳನ್ನು ಬಹಳ ಹಿಂದಿನಿಂದಲೂ ಉಪಯೋಗಿಸುತ್ತಿದ್ದಾರೆ. ಅವು ಮರಳನ್ನು ತಡೆದು ಸಮುದ್ರದ ಕರೆಯನ್ನು ಅಗಲ ಮಾಡುತ್ತವೆ. ತೀರ ಕೊರೆದು ಹೋಗುತ್ತಿದ್ದರೆ ತಡೆಕಟ್ಟುಗಳು ಕೊರೆತವನ್ನು ಕಡಿಮೆ ಮಾಡುತ್ತವೆ. ತಡೆಕಟ್ಟುಗಳಲ್ಲಿ ಮುಖ್ಯವಾಗಿ ಎರಡು ನಮೂನೆಗಳಿವೆ. ಒಂದರಲ್ಲಿ ಮರಳು ಅದರ ಮೂಲಕ ತೂರಿ ಹೋಗುತ್ತದೆ; ಇನ್ನೊಂದು ಮರಳನ್ನು ತಡೆದು ನಿಲ್ಲಿಸುತ್ತದೆ. ಈ ನಮೂನೆಯೇ ಹೆಚ್ಚಾಗಿ ಬಳಕೆಯಲ್ಲಿದೆ. ಇದು ಮರಳನ್ನು ತಡೆಕಟ್ಟಿನ ಮೇಲುಭಾಗದಿಂದಲೂ ಸಮುದ್ರದ ಕಡೆಯ ಕೊನೆಯ ಸುತ್ತಲೂ ಆಚೆಗೆ ಬಿಡುತ್ತದೆ. ತಡೆಕಟ್ಟಿನ ಉದ್ದ ಕಡಲಕರೆಯ ಮರಳನ್ನು ಬಹುಕಾಲ ನಿಲ್ಲಿಸುವಷ್ಟು ಹೆಚ್ಚಾಗಿರಬಾರದು.

ಮರಳನ್ನು ತುಂಬುವುದು : ಸಮುದ್ರದ ಕರೆಯನ್ನು (ಬೀಚ್) ಇಳಿಜಾರಾಗಿ ಮಾಡುವುದಕ್ಕಾಗಿ ತೀರದ ಮೇಲೆ ಕೃತಕವಾಗಿ ಮರಳನ್ನು ತುಂಬುವುದುಂಟು. ಏಕೆಂದರೆ ಅಲೆಗಳ ಶಕ್ತಿಯನ್ನು ಈ ಇಳಿಜಾರಾದ ಮರಳಿನ ತೀರ ನಾಶಪಡಿಸುತ್ತದೆ. ಈ ಮರಳು ಸಮುದ್ರಕ್ಕೂ ತೀರದ ಆಚೆಯ ಕಟ್ಟಡಗಳಿಗೂ ನಡುವೆ ರಕ್ಷಣೆಯನ್ನು ಕೊಡುತ್ತದೆ. ಇದರಿಂದ ಕರೆಯ ಅಗಲವುಹೆಚ್ಚಾಗಿ ಆಟೋಟಗಳಿಗೆ ಅನುಕೂಲವಾಗುತ್ತದೆ. ಚೆನ್ನೈ, ಮುಂಬಯಿಯಂಥ ಸಮುದ್ರತೀರಗಳಲ್ಲಿ ವಿನೋದಕ್ಕಾಗಿ ಸಾವಿರಾರು ಜನರು ಪ್ರತಿದಿನವುಸಾಯಂಕಾಲ ಬರುತ್ತಾರೆ. ವಿಶಾಲವಾದ ಮರಳಿನ ಮೇಲೆ ಅವರು ವಿಶ್ರಮಿಸಿಕೊಳ್ಳಲು ಅನುಕೂಲವಾಗುತ್ತದೆ. ಕೆಲವು ವರ್ಷಗಳ ಹಿಂದೆ ಅಮೆರಿಕದ ನ್ಯೂಜೆರ್ಸಿ ಸಮುದ್ರತೀರದ ಮೇಲೆ 10 ಲಕ್ಷ ಸಲೆ ಗಜ ಮರಳನ್ನು ತುಂಬಿ ಅಲ್ಲಿಗೆ ಬರುವ ಜನರಿಗೆ ಸೌಕರ್ಯವನ್ನು ಮಾಡಿಕೊಟ್ಟರು. ಈ ಮರಳಿನ ಸ್ವಲ್ಪ ಭಾಗವನ್ನು ಆಗಾಗ ಭರ್ತಿ ಹಾಕಬೇಕಾಗುತ್ತದೆ.

ಸಮುದ್ರತೀರದಲ್ಲಿ ತುಂಬುವುದಕ್ಕೆ ಆದಷ್ಟು ದಪ್ಪವಾದ ಮರಳನ್ನು ಉಪಯೋಗಿಸಬೇಕು. ಮರಳು ನಯವಾಗಿದ್ದರೆ ಆಳವಾದ ನೀರಿನ ಕಡೆಗೆ ತೊಳೆದು ಹೋಗುತ್ತದೆ. ವಿಹಾರಕ್ಕಾಗಿ ಉಪಯೋಗವಾಗುವ ಸಮುದ್ರತೀರಗಳು ಸಾಧ್ಯವಾದಷ್ಟು ಅಗಲವಾಗಿರಬೇಕು. ಆಗ ಪ್ರಬಲವಾದ ಗಾಳಿಯಲ್ಲಿ ಬಂದ ಅಲೆಗಳು ಮರಳನ್ನು ಕೊರೆಯುವುದು ಕಡಿಮೆಯಾಗುತ್ತದೆ. ಇದಕ್ಕೆ ಪ್ರತಿಯಾಗಿ ಹವೆ ಹಿತವಾಗಿದ್ದಾಗ ಬರುವ ಸಣ್ಣ ಅಲೆಗಳು ಮರಳನ್ನು ತಿರುಗಿ ತಂದು ತೀರಕ್ಕೆ ತುಂಬುತ್ತವೆ. ಆಗ ಸಮುದ್ರತೀರದ ಅಗಲ ಮೊದಲಿನಷ್ಟೇ ಆಗುತ್ತದೆ. (ಎಚ್.ಸಿ.ಕೆ.)

**ಕರೀಂನಗರ:** ಆಂಧ್ರಪ್ರದೇಶದ ತೆಲಂಗಾಣದಲ್ಲಿ ವಾರಂಗಲ್ ವಿಭಾಗದ ಒಂದು ಜಿಲ್ಲೆ. ವಿಸ್ತೀರ್ಣ 11,872 ಚ.ಕಿಮೀ. ಜನಸಂಖ್ಯೆ 3477079.

ಈ ಜಿಲ್ಲೆಯ ನೆಲ ಪೂರ್ವದಿಂದ ಪಶ್ಚಿಮಕ್ಕೆ ಎತ್ತರವಾಗುತ್ತ ಸಾಗುತ್ತದೆ (135 ಮೀ ನಿಂದ 664 ಮೀ). ತಗ್ಗಿನಲ್ಲಿ ಪರ್ವತಗಳುಂಟು. ಇವುಗಳ ಪೈಕಿ ಒಂದು ಸಾಲು ಈಶಾನ್ಯದ ಕಡೆಗೆ ಹೊರಟು, ಗುರ್ರಪಲ್ಲಿ–ಜಗತಿಯಾಲ್‌ಗಳ ನಡುವೆ ಹಾಯ್ದು ಗೋದಾವರಿ ನದಿಯ ಬಳಿಯ ವೇಮಲಕುರ್ತಿ ಬಳಿ ಕೊನೆಗೊಳ್ಳುತ್ತದೆ. ಎರಡನೆಯದು ಇದಕ್ಕೆ ಸಮಾನಾಂತರವಾಗಿ ಸುನಿಗ್ರಾಂನಿಂದ ಮಲ್ಲನ್‌ಗೂರ್ ಕಡೆಗೆ ಹಬ್ಬಿದೆ. ಮೂರನೆಯ ಸಾಲು ಮಾನೇರ್ ನದಿಕಣಿವೆಯ ಬಳಿ ನೈಋತ್ಯದಿಂದ ಈಶಾನ್ಯದ ಕಡೆ ಹೊರಟು, ಸುನಿಗ್ರಾಂ ಬೆಟ್ಟಗಳನ್ನು ಭೇದಿಸಿ, ರಾಂಗೀರನ್ನು ದಾಟಿ, ಗೋದಾವರಿನದಿಯ ಬಳಿ ಕೊನೆಗೊಳ್ಳುತ್ತದೆ.

ಜಿಲ್ಲೆಯಲ್ಲಿ ರೂಪಾಂತರಗೊಂಡ ಶಿಲೆಗಳು ಹೆಚ್ಚಾಗಿವೆ. ಜಿಲ್ಲೆಯ ಹೆಚ್ಚು ಭಾಗವನ್ನು ಪ್ರಥಮ ಯುಗದ ನೈಸ್‌ಶಿಲೆ ಆಕ್ರಮಿಸಿದೆ. ಕಡಪ, ಸುಲ್ಲವಿ ಮತ್ತು ಗೊಂಡ್ವಾನ ರೀತಿಯ ಶಿಲಾ ನಿರ್ಮಾಣಗಳು ಪೂರ್ವಭಾಗದಲ್ಲಿದೆ. ಉತ್ತರದಲ್ಲಿ ಕಪ್ಪು ಜಿಗುಟು ಮಣ್ಣು ಹೆಚ್ಚು. ಇದು ಜಿಲ್ಲೆಯ $^{1}/_{3}$ ಭಾಗವನ್ನು ಆಕ್ರಮಿಸಿದೆ. ಉಳಿದ ಭಾಗಗಳಲ್ಲಿರುವುದು ಲವಣ ಮಿಶ್ರಿತ ಮರಳು.

ಇಲ್ಲಿಯ ಮುಖ್ಯ ನದಿ ಗೋದಾವರಿ. ಉತ್ತರದಲ್ಲಿ ಈ ಜಿಲ್ಲೆಯ ಗಡಿಯಂತೆ ಹರಿಯುತ್ತದೆ. ಗೋದಾವರಿಯ ಉಪನದಿಯಾದ ಮಾನೇರ್ ಇನ್ನೊಂದು ನದಿ ಪೆದ್ದವಾಗು ಮತ್ತು ಚೆಲ್ಲವಾಗು ಇವು ಗೋದಾವರಿಯ ಇತರ ಉಪನದಿಗಳು.

ಉತ್ತರದಲ್ಲಿಯ ಜಗತಿಯಾಲ್, ಮಹದೇವಪುರ ಮತ್ತು ಪಶ್ಚಿಮದ ಸಿರಿಸಿಲ್ಲ ಪ್ರದೇಶಗಳ ವಿನಃ ಉಳಿದ ಭಾಗಗಳು ಆರೋಗ್ಯಕರವಾಗಿವೆ. ಸಮುದ್ರದಿಂದ ದೂರವಾಗಿ ಒಳನಾಡಿನಲ್ಲಿ ಇರುವುದರಿಂದ ಬೇಸಗೆಯಲ್ಲಿ ಉಷ್ಣತೆ ಹೆಚ್ಚು. ಕರೀಂನಗರ ಮತ್ತು ಜಮಿಕುಂಟಗಳಲ್ಲಿ ಮೇ ಮತ್ತು ಡಿಸೆಂಬರ್ ತಿಂಗಳುಗಳ ಉಷ್ಣತೆ ಕ್ರಮವಾಗಿ $43^0$ಸೆ. ಮತ್ತು $10^0$ಸೆ.

ಪಶ್ಚಿಮಾರ್ಧದ ಸ್ವಲ್ಪ ಭಾಗದಲ್ಲಿ, ಜಿಲ್ಲೆಯ ಅಂಚಿನಲ್ಲಿ, ಒತ್ತಾದ ಕಾಡುಗಳೂ ಉತ್ತರದಲ್ಲಿ ಜಗತಿಯಾಲ್‌ಗೆ ಈಶಾನ್ಯದಲ್ಲಿ ತೆಳುವಾದ ಕಾಡುಗಳೂ ಇವೆ. ಇಲ್ಲಿಯ ಕಾಡುಗಳಲ್ಲಿ ಎಬೊನಿ ಮರಗಳು ಹೇರಳ, ತೇಗ, ಮಾವು, ಕರಿಮರಗಳೂ ಉಂಟು. ಈಚೆಗೆ ಅರಣ್ಯ ಕಡಿಮೆಯಾಗುತ್ತಿದೆ.

ಆಂಧ್ರಪ್ರದೇಶದಲ್ಲಿ ಹೆಚ್ಚು ಬಾವಿಗಳೂ, ಅನೇಕ ಕೆರೆಗಳೂ ಉಂಟು. ಇವುಗಳ ಸಹಾಯದಿಂದ ಸು. 16,000 ಹೆ.ಗಳಷ್ಟು ಭೂಮಿ ನೀರಾವರಿಗೆ ಒಳಗಾಗಿದೆ. ಇಲ್ಲಿಯ ಮುಖ್ಯ ಬೆಳೆಗಳು ಬತ್ತ ಜೋಳ, ಮೆಕ್ಕೆ ಜೋಳ ಮತ್ತು ದ್ವಿದಳಧಾನ್ಯಗಳು. ನದೀತೀರದುದ್ದಕ್ಕೂ ಬತ್ತ ಹೆಚ್ಚು; ಒಳಭಾಗಗಳಲ್ಲಿ ಜೋಳ ಹೆಚ್ಚು. ಗೋದಾವರಿಯ ಜಲಾನಯನ ಪ್ರದೇಶಕ್ಕೆ ಈ ಜಿಲ್ಲೆ ಒಳಪಟ್ಟಿದ್ದರೂ ನದಿಗಳಿಂದ ವ್ಯವಸಾಯಕ್ಕೆ ಹೆಚ್ಚು ಅನುಕೂಲ ಉಂಟಾಗಿಲ್ಲ.

ಗೋದಾವರಿಗೆ ಸಂಬಂಧಪಟ್ಟ ಹಾಗೆ ಮಂಥನಿ ಬಳಿ ರಾಮಗುಡಂ ವಿದ್ಯುತ್ ತಯಾರಿಕಾ ಯೋಜನೆಯನ್ನು ನಿರ್ಮಿಸಲಾಗಿದೆ. ಉತ್ತರದಲ್ಲಿ ತಾಮ್ರದ ಗಣಿಗಳಿವೆ. ಈ ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೆಗಳಿಲ್ಲ. ಗ್ರಾಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಬೆಳ್ಳಿಯ ಪದಾರ್ಥಗಳು, ಚರ್ಮದ ವಸ್ತು, ಚಾಕು ಚೂರಿ ಮುಂತಾದವನ್ನು ತಯಾರಿಸುವ ಉದ್ಯಮಗಳಿವೆ.

ಕರೀಂನಗರ ಮಾನೇರ್ ನದಿಯ ದಡದಲ್ಲಿದೆ. ಜಿಲ್ಲಾ ಕೇಂದ್ರದ ಜನಸಂಖ್ಯೆ 215,782. ಸರ್ಕಾರಿ ಕಚೇರಿಗಳೂ ಸಣ್ಣಪುಟ್ಟ ಕೈಗಾರಿಕೆಗಳೂ ಇಲ್ಲಿವೆ. (ಕೆ.ಆರ್.ಆರ್.)

**ಕರೆನ್ ರಾಜ್ಯ:** ಮಯನ್ಮಾರ್ ದೇಶಕ್ಕೆ ಸೇರಿದ ಒಂದು ರಾಜ್ಯ. 1947ರಲ್ಲಿ ರಚಿತವಾದ ಮಯನ್ಮಾರ್ ಸಂವಿಧಾನದ ಪ್ರಕಾರ ಸಾಲ್ವೀನ್ ಜಿಲ್ಲೆ ಹಾಗೂ ಅದರ ಸುತ್ತಮುತ್ತಲಿನ ಕೆಲವು ಪ್ರದೇಶಗಳನ್ನು ಸೇರಿಸಿ ಅವಕ್ಕೆ ಈ ನಾಮಕರಣ ಮಾಡಲಾಗಿತ್ತು. ಬರ್ಮ ಸ್ವತಂತ್ರವಾದರೂ ಕೇವಲ ಆಳರಸರ ಬದಲಾವಣೆ ಮಾತ್ರವೆಂದೂ ಇದರಿಂದ ತಮ್ಮ ಸ್ಥಿತಿ ಇನ್ನೂ ಹದಗೆಡುವುದೆಂದೂ ಅವರು ಭಾವಿಸಿದರು. ಕೇಂದ್ರಾಡಳಿತವನ್ನು ಬಲಪಡಿಸುವ ಸಲುವಾಗಿ ಬರ್ಮ ಸರ್ಕಾರ ಅಂದಿನ ಕೆಲವು ಕ್ರಮ ಕೈಕೊಂಡಾಗ (1948) ಸಶಸ್ತ್ರ ಕರೆನ್ ಜನರು ತಮ್ಮವೆನ್ನಲಾದ ಕೆಲವು ಪ್ರದೇಶಗಳನ್ನಾಕ್ರಮಿಸಿಕೊಂಡು ಬಂಡಾಯವೆದ್ದರು. ಸ್ವಯಮಾಡಳಿತ ರಾಜ್ಯವೇ ಅವರ ಗುರಿ. 1952ರಲ್ಲಿ ಬರ್ಮ ರಾಜ್ಯಾಂಗದಲ್ಲಿ ಸೂಕ್ತ ಬದಲಾವಣೆ ಮಾಡಿ ಕರೆನ್ ರಾಜ್ಯ ನಿರ್ಮಿಸಲಾಯಿತು. ಪಾ–ಅನ್ ಇದರ ರಾಜಧಾನಿ. 1957–59ರ ವೇಳೆಗೆ ಪಾ–ಅನ್ ಸರ್ವತೋಮುಖವಾದ ಪ್ರಗತಿ ಪಡೆಯಿತು. ದೊಡ್ಡ ರಸ್ತೆಗಳು, ವಿಮಾನ ನಿಲ್ದಾಣ, ಸರ್ಕಾರಿ ಕಟ್ಟಡಗಳು, ಆಸ್ಪತ್ರೆ ಮುಂತಾದವೆಲ್ಲ ಅಲ್ಲಿವೆ.

ರಾಜ್ಯದ ವಿಸ್ತೀರ್ಣ 28,392 ಚ.ಕಿಮೀ ಈ ರಾಜ್ಯದ ಸುತ್ತಮುತ್ತ ದಟ್ಟವಾದ ಕಾಡುಗಳು ಹಬ್ಬಿವೆ. ಸರ್ಕಾರ ಇತ್ತೀಚೆಗೆ ಸಾಲ್ವೀನ್ ನದೀತೀರದ ಪ್ರದೇಶಗಳನ್ನೆಲ್ಲ ವ್ಯವಸಾಯಯೋಗ್ಯವನ್ನಾಗಿ ಮಾಡಿದುದರ ಪರಿಣಾಮವಾಗಿ ಇಲ್ಲಿ ಹೇರಳವಾಗಿ ಬತ್ತವನ್ನು ಬೆಳೆಯಲಾಗುತ್ತಿದೆ. ರಬ್ಬರ್, ಹತ್ತಿ, ಕಾಫಿ, ಕಬ್ಬು ಮುಂತಾದ ಬೆಳೆಗಳನ್ನು ಇತ್ತೀಚೆಗೆ ಕಾಣಬಹುದು. ತೇಗ ಒಂದು ಮುಖ್ಯ ಅರಣ್ಯವಸ್ತು. ಇದು ಕರೆನ್ ರಾಜ್ಯದ ನಿರ್ಯಾತಗಳಲ್ಲಿ ಪ್ರಧಾನವಾದದ್ದು. *

**ಕರ್ಣ ರೇಖಾ ಮಾಪಕ:** ಸಾಮಾನ್ಯ ರೇಖಾ ಮಾಪಕಗಳು ಪ್ರಾಥಮಿಕ ಹಾಗೂ ದ್ವಿತೀಯ ಎಂಬ ಎರಡು ಬಗೆಯ ವಿಭಾಗಗಳನ್ನು ಮಾತ್ರ ಒಳಗೊಂಡಿರುತ್ತವೆ. ಕೆಲವು ವೇಳೆ ಇವುಗಳಲ್ಲಿ ದ್ವಿತೀಯ ವಿಭಾಗಗಳೂ ಹೆಚ್ಚು ದೂರವನ್ನು ಪ್ರತಿನಿಧಿಸುತ್ತವೆ. ಉದಾ: 100 ಕಿಮೀ ದೂರವನ್ನು ಪ್ರತಿನಿಧಿಸುವ ಪ್ರಾಥಮಿಕ ವಿಭಾಗವನ್ನು 5 ದ್ವಿತೀಯ ವಿಭಾಗಗಳಾಗಿ ವಿಂಗಡಿಸಿದಾಗ ಪ್ರತಿಯೊಂದು ದ್ವಿತೀಯ ವಿಭಾಗಗಳೂ ಸಹ 20 ಕಿಮೀ ದೂರವನ್ನು ಪ್ರತಿನಿಧಿಸುತ್ತವೆ. ಇವುಗಳಲ್ಲಿ 1 ಕಿಮೀ ಅಥವಾ 5 ಕಿಮೀ ದೂರವನ್ನು ಕರಾರುವಕ್ಕಾಗಿ ಅಳತೆ ಮಾಡುವುದು ಸಾಧ್ಯವಿಲ್ಲ. ಇದಕ್ಕಾಗಿ ಕರ್ಣ ರೇಖಾ ಮಾಪಕವನ್ನು ಬಳಸುವರು (ಡಯಾಗೊನಲ್ ಸ್ಕೇಲ್).

ಕರ್ಣ ರೇಖಾ ಮಾಪಕ ಸಾಮಾನ್ಯ ರೇಖಾ ಮಾಪಕದ ಮುಂದುವರಿಕೆಯಾಗಿದೆ. ಓರೆಯಾದ ಕರ್ಣ ರೇಖೆಗಳನ್ನು ಬಳಸಿ ತೃತೀಯ ಬಗೆಯ ವಿಭಾಗಗಳನ್ನು ಇದರಲ್ಲಿ ಎಳೆಯುವುದರಿಂದ ಮಾಪಕದಲ್ಲಿ ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ಎಂಬ ಮೂರು ಬಗೆಯ ವಿಭಾಗಗಳಿರುತ್ತವೆ. ಈ ಕೆಳಗಿನ ಚಿತ್ರದಲ್ಲಿ AB ರೇಖೆಯನ್ನು ಕರ್ಣ ರೇಖೆಗಳ ಮೂಲಕ 10 ವಿಭಾಗಗಳಾಗಿ ವಿಂಗಡಿಸಲಾಗಿದೆ. ಇದಕ್ಕಾಗಿ AC ಲಂಬರೇಖೆಯನ್ನು ಎಳೆದು ಅದನ್ನು ಅನುಕೂಲಕರ ಅಂತರದಲ್ಲಿ 10 ವಿಭಾಗಗಳಾಗಿ ವಿಂಗಡಿಸಲಾಗಿದೆ. AC ಯಲ್ಲಿರುವ ಬಿಂದುಗಳಿಂದ AB ರೇಖೆಗಳಿಗೆ ಸಮಾನಾಂತರ ರೇಖೆಗಳನ್ನು BC ರೇಖೆಯವರೆಗೆ ಎಳೆಯುವುದು. ಈಗ ಚಿತ್ರದಲ್ಲಿ ತೋರಿಸಿರುವ,

1–1 ರೇಖೆಯು AB ಯ $\frac{1}{10}$ ರಷ್ಟಿದೆ.

2–2 ರೇಖೆಯು AB ಯ $\frac{2}{10}$ ರಷ್ಟಿದೆ.

5–5 ರೇಖೆಯು AB ಯ $\frac{5}{10}$ ರಷ್ಟಿದೆ.

8–8 ರೇಖೆಯು AB ಯ $\frac{8}{10}$ ರಷ್ಟಿದೆ.

9–9 ರೇಖೆಯು AB ಯ $\frac{9}{10}$ ರಷ್ಟಿದೆ.

ಈ ಮೇಲೆ ವಿವರಿಸಿರುವಂತೆ ಕರ್ಣರೇಖೆಯ ದ್ವಿತೀಯ ವಿಭಾಗಗಳನ್ನು ತೃತೀಯ ಪ್ರಕಾರದ ವಿಭಾಗಗಳನ್ನಾಗಿ ವಿಂಗಡಿಸಲು ಅತಿ ಹೆಚ್ಚು ಉಪಯುಕ್ತವಾಗಿರುವುದು.

ಉದಾ–1: ಮಾಪಕವು 1 ಅಂಗುಲ =1 ಗಜ ಇರುವಂತೆ ಗಜ, ಅಡಿ ಮತ್ತು ಅಂಗುಲಗಳನ್ನು ನಿರೂಪಿಸುವ ಕರ್ಣ ರೇಖಾ ಮಾಪಕವನ್ನು, ರಚಿಸುವಾಗ,




ಕರ್ಣರೇಖಾ ಮಾಪಕ

ಮಾಪಕವು 1 ಅಂಗುಲ =1 ಗಜವನ್ನು ಪ್ರತಿನಿಧಿಸುವುದು. ಇದರಿಂದ 5 ಅಂಗುಲ ಉದ್ದವಿರುವ AB ರೇಖೆಯನ್ನು ಎಳೆದು, ಅದನ್ನು 5 ಭಾಗಗಳಾಗಿ ವಿಂಗಡಿಸಿದರೆ ಪ್ರತಿಯೊಂದು ಭಾಗವುಒಂದೊಂದು ಗಜವನ್ನು ಪ್ರತಿನಿಧಿಸುತ್ತವೆ. ಚಿತ್ರದಲ್ಲಿ ತೋರಿಸಿರುವಂತೆ A'O' ರೇಖೆಯನ್ನು ಹಾಗೂ AO ರೇಖೆಗಳನ್ನು ಮೂರು ಸಮಭಾಗಗಳಾಗಿ ವಿಂಗಡಿಸಿ A'O' ರೇಖೆಯ ಬಿಂದುಗಳನ್ನು AO ರೇಖೆಯ ಮೇಲೆ 12 ವಿಭಾಗಗಳನ್ನು ಮಾಡಿ ಅವುಗಳಿಂದ AB ರೇಖೆಗೆ ಸಮಾನಾಂತರ ರೇಖೆಗಳನ್ನು ಎಳೆಯಿರಿ. ಈ ಮಾಪಕದಲ್ಲಿ 2 ಗಜ, 2 ಅಡಿ ಹಾಗೂ 7 ಅಂಗುಲ ಅಳತೆಯನ್ನು ತೆಗೆದುಕೊಳ್ಳುವುದನ್ನು P ರೇಖೆಯಲ್ಲಿ ತೋರಿಸಲಾಗಿದೆ. ಇದೇ ರೀತಿಯಲ್ಲಿ XY ರೇಖೆಯು 5 ಅಂಗುಲದ ರೇಖೆಯ ಮೇಲೆ 1 ಗಜ, 1 ಅಡಿ, 5 ಅಂಗುಲ ಅಳತೆಯನ್ನು ಅಳೆಯಲು ಸೂಕ್ತವಾಗಿರುವುದು. (ಆರ್.ಎನ್.)

**ಕರ್ನಾಟಕ :** ದಕ್ಷಿಣ ಭಾರತದ ರಾಜ್ಯಗಳಲ್ಲೊಂದು. ಇದರ ಹಿಂದಿನ ಹೆಸರು ಮೈಸೂರು ಸಂಸ್ಥಾನ. ಉತ್ತರದಲ್ಲಿ ಕೃಷ್ಣಾ ಮತ್ತು ದಕ್ಷಿಣದಲ್ಲಿ ಕಾವೇರಿ ನದಿ ವ್ಯವಸ್ಥೆಗಳಿಂದ ಕೂಡಿ ದಖನ್ ಪ್ರಸ್ಥಭೂಮಿಯ ನೈರುತ್ಯ ಭಾಗದಲ್ಲಿ, ಉ.ಅ. $11^0 3'$ ನಿಂದ $18^0 45'$ ವರೆಗೂ ಪೂ.ರೇ. $74^0 12'$ ನಿಂದ $78^0 40'$ ವರೆಗೂ ಹಬ್ಬಿರುವ ಈ ನಾಡಿಗೆ, ಕರ್ನಾಟಕ, ಕನ್ನಡ ನಾಡು, ಕನ್ನಾಡು ಎಂಬ ಹೆಸರುಗಳೂ ಇವೆ. ವಾಯವ್ಯ ಮತ್ತು ಉತ್ತರ ದಿಕ್ಕುಗಳಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರಪ್ರದೇಶ, ಆಗ್ನೇಯ ದಕ್ಷಿಣಗಳಲ್ಲಿ ತಮಿಳುನಾಡು, ನೈರುತ್ಯದಲ್ಲಿ ಕೇರಳ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಇದರ ಮೇರೆಗಳು. ಪೂರ್ವಪಶ್ಚಿಮವಾಗಿ ಸು. 400 ಕಿಮೀ ಮತ್ತು ಉತ್ತರದಕ್ಷಿಣವಾಗಿ ಸು.700 ಕಿಮೀ ಹಬ್ಬಿರುವ ಕರ್ನಾಟಕದ ವಿಸ್ತೀರ್ಣ 1,91,791 ಚ.ಕಿಮೀ. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಬೆಳಗಾಂವಿ, ಬಳ್ಳಾರಿ, ಬೀದರ್, ಬಿಜಾಪುರ, ಚಿಕ್ಕಮಗಳೂರು, ಚಿತ್ರದುರ್ಗ ಕೊಡಗು, ಧಾರವಾಡ, ಬಾಗಲಕೋಟೆ, ಗದಗ, ಕೊಪ್ಪಳ, ಗುಲ್ಬರ್ಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ಚಾಮರಾಜನಗರ, ಉತ್ತರ ಕನ್ನಡ, ರಾಯಚೂರು, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ದಾವಣಗೆರೆ, ಹಾವೇರಿ, ತುಮಕೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರ ಎಂಬ 29 ಜಿಲ್ಲೆಗಳಿವೆ. ರಾಜಧಾನಿ ಬೆಂಗಳೂರು. ರಾಜ್ಯದ ಜನಸಂಖ್ಯೆ 5,28,50,562.

ಮೇಲ್ಮೈ ಲಕ್ಷಣ: ಕರ್ನಾಟಕದ ಬಹುಭಾಗ ದಖನ್ ಪ್ರಸ್ಥಭೂಮಿ ಪ್ರದೇಶದಲ್ಲಿದೆ. ಇದು ಭಾರತದಲ್ಲೇ ಅತ್ಯಂತ ಪುರಾತನವಾದ ನೆಲ. ಕರ್ನಾಟಕದ ಪಶ್ಚಿಮದಂಚಿನ ಕಿರಿದಾದ ನೆಲ ಮಾತ್ರ ತಗ್ಗುಪ್ರದೇಶ. ದಖನ್ನಿನ ಆಚೀಚೆ ಮಾಲೆಯಂತೆ ಹಬ್ಬಿರುವ

ಪೂರ್ವ ಪಶ್ಚಿಮ ಘಟ್ಟಗಳು ಕರ್ನಾಟಕದ ದಕ್ಷಿಣದಲ್ಲಿ ನೀಲಗಿರಿಯಲ್ಲಿ ಸಂಧಿಸುತ್ತವೆ. ಪಶ್ಚಿಮ ಕರಾವಳಿಯಿಂದ ಕಡಿದಾಗಿ ಮೇಲೇರುವ ಪಶ್ಚಿಮಘಟ್ಟಗಳು ಪೂರ್ವಘಟ್ಟಗಳಿಗಿಂತ ಹೆಚ್ಚು ಎತ್ತರ. ಸು. 350 ಕಿಮೀ. ಉದ್ದದ ಪಶ್ಚಿಮದ ಕಡಲ ಕರೆ ಬಹುತೇಕ ನೇರ. ತೀರದಿಂದ ಸಮುದ್ರದತ್ತ ಚಾಚಿದಂತೆ 65–80 ಕಿಮೀ. ಖಂಡಾವರಣ ಪ್ರದೇಶದಲ್ಲಿ ಕಡಲ ಆಳ 180 ಮೀ. ಅಡಿಗಳಿಗಿಂತ ಕಡಿಮೆ. ಕಡಿದಾದ ಬೆಟ್ಟದಿಂದ ಕೆಳಗಿಳಿದು ಸಮುದ್ರ ಸೇರುವ ಹೊಳೆ ಝರಿಗಳು ಜಲರಾಶಿಯಲ್ಲಿ ಹೊತ್ತು ತರುವ ಆಹಾರವೂ ಕಿರಿ ಆಳದ ಕಡಲೂ ಕರ್ನಾಟಕದ ಮತ್ಸ್ಯ ಸಂಪತ್ತಿಗೆ ಮೂಲಾಧಾರ.

ಕರ್ನಾಟಕದ ಮಧ್ಯ ಭಾಗದಲ್ಲಿ $15^0$ ಉ. ಅ.ದ ಸನಿಯದಲ್ಲಿ ಹರಿಯುವ ತುಂಗಭದ್ರಾ ನದಿಯ ಉತ್ತರ ದಕ್ಷಿಣ ಭಾಗಗಳು ಕ್ರಮವಾಗಿ ಉತ್ತರ ಮತ್ತು ದಕ್ಷಿಣ ಕರ್ನಾಟಕಗಳೆಂದು ಹೆಸರಾಗಿವೆ. ಭೂ ರಚನೆ, ಮೇಲ್ಮೈಲಕ್ಷಣ, ಮಳೆಬೆಳೆ, ಜನರ ನಡೆ ನುಡಿ, ವ್ಯವಹಾರ, ಆಹಾರ, ಉಡಿಗೆತೊಡಿಗೆ ಇವುಗಳಲ್ಲಿ ಉತ್ತರ ದಕ್ಷಿಣಗಳಲ್ಲಿ ವೈಶಿಷ್ಟ್ಯಗಳುಂಟು. ಆದ್ದರಿಂದ ಪ್ರಾಕೃತಿಕವಾಗಿ ಕರ್ನಾಟಕವನ್ನು 3 ಪ್ರಮುಖ ವಿಭಾಗಗಳಾಗಿ ವಿಂಗಡಿಸಬಹುದು: 1. ಮಲೆನಾಡು 2. ಮೈದಾನ ಮತ್ತು 3. ಕರಾವಳಿ.




1. ಮಲೆನಾಡು: ಇದು ಬೆಟ್ಟ ಗುಡ್ಡಗಳ ಬೀಡಾಗಿದ್ದರೂ ಕರ್ನಾಟಕದ ಸಂಪದ್ಭರಿತವಾದ ಪ್ರಾಕೃತಿಕ ವಿಭಾಗ. ರಾಜ್ಯದ ಪಶ್ಚಿಮಕ್ಕಿದ್ದು ಸಹ್ಯಾದ್ರಿ ಎಂದೇ ಪ್ರಸಿದ್ಧಿ. ಉತ್ತರ ದಕ್ಷಿಣವಾಗಿ 650 ಕಿಮೀ ಉದ್ದವಾಗಿ ಹಬ್ಬಿರುವ ಈ ಸಾಲುಗಳು ದಕ್ಷಿಣದತ್ತ ಸಾಗಿದಂತೆ ಹೆಚ್ಚು ಎತ್ತರವಾಗಿ, ಕೊನೆಗೆ ನೀಲಗಿರಿಯಲ್ಲಿ ಸಮಾವೇಶಗೊಳ್ಳುತ್ತವೆ. ರಾಜ್ಯದ ಸ್ಥಳವಿನ್ಯಾಸದ ಮೇಲೂ ಮೇಲ್ಮೈ ರಚನೆಯ ಮೇಲೂ ಇವುಗಳ ಪ್ರಭಾವ ಅತ್ಯಧಿಕ. ರಾಜ್ಯದ ಅನೇಕ ಮುಖ್ಯ ನದಿಗಳಿಗೆ ಈ ಸಹ್ಯಾದ್ರಿಯೇ ಉಗಮಸ್ಥಾನ. ಇದು ಪೂರ್ವಪಶ್ಚಿಮ ಜಲವಿಭಾಜಕ. ಉತ್ತರದಲ್ಲಿ ಈ ಶ್ರೇಣಿಗಳ ತಳದಲ್ಲಿ ಧಾರವಾಡ ಶಿಲಾವರ್ಗ ದಕ್ಷಿಣದಲ್ಲಿ ಗ್ರಾನೈಟ್ ಶಿಲೆಗಳೂ ಉಂಟು. ಸಹ್ಯಾದ್ರಿಯ ನೆತ್ತಿಯ ಮೇಲಣ ಗಟ್ಟಿ ಶಿಲೆಗಳು ಮಳೆಗಾಳಿಗಳೇ ಮುಂತಾದ ಪ್ರಾಕೃತಿಕ ಜಂಜಡಗಳನ್ನೆದುರಿಸಿ ನಿಂತು ಎತ್ತರವಾಗಿಯೇ ಉಳಿದುಕೊಂಡಿವೆ. ಮೃದು ಶಿಲೆಗಳು ಸವೆದುಹೋಗಿ ಬಾಯ್ದೆರೆದು, ಘಟ್ಟಗಳ ನಡುವೆ ಅಲ್ಲಲ್ಲಿ ಸೀಳುಗಳು ಸಂಭವಿಸಿವೆ. ಸಹ್ಯಾದ್ರಿಯ ಶ್ರೇಣಿಗಳಲ್ಲಿ ಅನೇಕ ಉತ್ತುಂಗ ಶಿಖರಗಳಿವೆ. ಈ ಭಾಗದಲ್ಲಿ ಕರ್ನಾಟಕದ ಅತ್ಯುನ್ನತ ಶಿಖರಗಳಿವೆ. ಸಹ್ಯಾದ್ರಿಯ ಬೃಹದ್‌ಬಾಹುಗಳಲ್ಲೊಂದಾದ ಚಂದ್ರದ್ರೋಣಪರ್ವತ ಅಥವಾ ಬಾಬಾಬುಡನ್‌ಗಿರಿಯಲ್ಲಿರುವ ಮುಳ್ಳಯ್ಯನಗಿರಿ ಶಿಖರದ ಎತ್ತರ ಸು. 1927 ಮೀ. ಇದು ರಾಜ್ಯದ ಅತ್ಯಂತ ಎತ್ತರದ ಶಿಖರ. ಕುದುರೆಮುಖ (1892 ಮೀ), ಕೊಡಚಾದ್ರಿ (1344 ಮೀ), ಪುಷ್ಪಗಿರಿ (1731 ಮೀ), ದತ್ತಗಿರಿ (1895 ಮೀ) ಮತ್ತು ಕಲ್ಲತ್ತಗಿರಿ (1877 ಮೀ). ಇವು ಇತರ ಶಿಖರಗಳು.

ಸಹ್ಯಾದ್ರಿಯ ಪೂರ್ವಭಾಗಕ್ಕಿಂತ ಪಶ್ಚಿಮಭಾಗ ಹೆಚ್ಚು ಕಡಿದಾದ ಶಿಲಾಮುಖ ಭೂಯಿಷ್ಠವೂ ಆದದ್ದು, ಸಹ್ಯಾದ್ರಿಯ ಎರಡು ಬದಿಗಳಲ್ಲೂ ಅಡ್ಡಲಾಗಿ ಹಬ್ಬಿದ ಬೆಟ್ಟದಸಾಲುಗಳಿವೆ. ಪಶ್ಚಿಮಸಾಲು ಕ್ರಮಬದ್ಧವಾಗಿಲ್ಲ. ಪಶ್ಚಿಮಘಟ್ಟಗಳು ಕಡಿದಾಗಿದ್ದರೂ ಇವುಗಳ ನಡುವೆ ಇರುವ ಕಣಿವೆ ಮಾರ್ಗಗಳು ಕರ್ನಾಟಕದ ಪೂರ್ವ ಪಶ್ಚಿಮ ಭಾಗಗಳ ನಡುವಣ ಸಂಪರ್ಕಮಾಧ್ಯಮವಾಗಿ, ರಾಜ್ಯದ ಸಾಂಸ್ಕೃತಿಕ ಬೆಳೆವಣಿಗೆಗೆ ಸಾಧಕವಾಗಿವೆಯೆನ್ನಬಹುದು. ಉತ್ತರ ಕರ್ನಾಟಕದ ಕೊಲ್ಲೂರ್ ಘಾಟಿ, ಶಿವಮೊಗ್ಗ – ಉಡುಪಿಗಳ ನಡುವೆ ಇರುವ ಆಗುಂಬೆ ಘಾಟಿ, ಚಿಕ್ಕಮಗಳೂರು – ಮಂಗಳೂರುಗಳ ನಡುವೆ ಚಾರ್ಮುಡಿ ಘಾಟಿ ಇವು ಪ್ರಮುಖವಾದವು.

ಪಶ್ಚಿಮದಿಂದ ಪೂರ್ವದ ಕಡೆಗೆ ಇಳಿಜಾರಾಗಿರುವ ಪ್ರಸ್ಥಭೂಮಿಯ ಪೂರ್ವದಂಚಿನಲ್ಲಿ, ಈಶಾನ್ಯ ದಿಕ್ಕಿನಿಂದ ನೈರುತ್ಯಾಭಿಮುಖವಾಗಿ ಹಬ್ಬಿ, ನೀಲಗಿರಿಯಲ್ಲಿ ಪಶ್ಚಿಮ ಘಟ್ಟಗಳೊಂದಿಗೆ ಸಂಗಮಿಸುವ ಪೂರ್ವಘಟ್ಟಗಳು ಸಹ್ಯಾದ್ರಿ ಶ್ರೇಣಿಗಳಿಗಿಂತ ತಗ್ಗು, ಕೋಲಾರದಲ್ಲಷ್ಟೇ ಪ್ರಧಾನವಾಗಿ ಎದ್ದುನಿಂತಿರುವ ಈ ಶ್ರೇಣಿಗಳು ಒಟ್ಟಿನಲ್ಲಿ ಪ್ರಸ್ಥಭೂಮಿಯ ತಲಮಟ್ಟಕ್ಕಿಂತ ಅತಿ ಹೆಚ್ಚು ಎತ್ತರವಾಗೇನು ಇಲ್ಲ. ಇವುಗಳದು ಧಾರವಾಡ ಶಿಲಾವರ್ಗದ ರಚನೆ. ಉದ್ದ ಏಣಿನ ಬಂಡೆಗಲ್ಲುಗಳು ಇಲ್ಲಿಯ ವೈಶಿಷ್ಟ್ಯ.




2. ಮೈದಾನ: ಪೂರ್ವಪಶ್ಚಿಮ ಘಟ್ಟಗಳ ನಡುವಣ ದಿಣ್ಣೆ ನೆಲವನ್ನು ಮೈದಾನವೆಂದು ವ್ಯವಹರಿಸುವುದು ವಾಡಿಕೆಯಾಗಿದೆ. ತುಂಗಭದ್ರೆಯ ಉತ್ತರಕ್ಕಿರುವ ಪ್ರದೇಶ ಕಪ್ಪು ಮಣ್ಣಿನಿಂದ ಕೂಡಿದ, ಅಲ್ಲಲ್ಲಿ ಮರಗಳನ್ನೊಳಗೊಂಡ, ಏಕಪ್ರಕಾರವಾಗಿ ಹಬ್ಬಿರುವ ದಿಣ್ಣೆನೆಲದಂತೆ ಕಾಣುತ್ತದೆ. ಆದರೆ ಈ ಪ್ರದೇಶದಲ್ಲೂ ಭೌತಿಕವಾಗಿ ಭಿನ್ನತೆಗಳಿಲ್ಲ. ಉತ್ತರ ಮೈದಾನದ ಮೂರನೆಯೆರಡು ಭಾಗ ಸು. 610 ಮೀ ಎತ್ತರವುಂಟು. ನಗ್ನೀಕೃತ ಬೆಟ್ಟಸಾಲುಗಳೂ ಅಗಲವೂ ಚಪ್ಪಟೆಯೂ ಆದ ಕಣಿವೆಗಳೂ ನದೀವನಗಳೂ ಇದನ್ನು ಅಲ್ಲಲ್ಲಿ ವಿಭಾಗಿಸಿವೆ. ಕೃಷ್ಣಾ , ಭೀಮಾ ಮತ್ತು ತುಂಗಭದ್ರಾ ನದಿಗಳು ಉದ್ದಕ್ಕೂ ಆಚೀಚೆ ಕನಿಷ್ಠ 16 ಕಿಮೀ ಅಗಲಕ್ಕಿರುವ ನೆಲಪಟ್ಟಿಗಳು ಉಳಿದ ನೆಲಕ್ಕಿಂತ ತಗ್ಗು. ಇವು ಪೂರ್ವದಲ್ಲಿ 365–400 ಮೀ ಎತ್ತರದ ವಿಸ್ತಾರವಾದ ಬಯಲಿನಲ್ಲಿ ಸಮಾವೇಶಗೊಳ್ಳುತ್ತವೆ. ಪೂರ್ವಭಾಗದ ಈ ನೆಲ ಅಲ್ಲಲ್ಲಿ ಥಟ್ಟನೆ ಕೆಳಕ್ಕೆ ಇಳಿದಿದೆ. ಕಿಲೋಮೀಟರ್‌ಗಳಷ್ಟು ಹಬ್ಬಿರುವ ಇಂಥ ಇಳುಕಲುಗಳ ಅಂಚಿನ ಕಡಿದುಬಂಡೆಗಳು ಯುಗಯುಗಗಳಿಂದ ಮಳೆಗಾಳಿಗೆ ಮೈಯೊಡ್ಡಿ ಬೆತ್ತಲೆಯಾಗಿ ನಿಂತಿವೆ. ತುಂಗಭದ್ರೆಗೆ ಉತ್ತರದ ಪ್ರದೇಶದಲ್ಲಿರುವ ಪರ್ಯಾಯದ್ವೀಪೀಯ ನೈಸ್ ಶಿಲಾಪದರಗಳಿಗೂ ಇವುಗಳು ನಡುನಡುವೆ ದಕ್ಷಿಣೋತ್ತರವಾಗಿ ಹಬ್ಬಿದ ಭಿನ್ನಸ್ತರಗಳ ಧಾರವಾಡ ಶಿಲೆಗಳಿಗೂ ಮೆತ್ತಿಕೊಂಡಂತೆ ಉತ್ತರದಲ್ಲಿ ಕಡಪ ಕರ್ನೂಲು ಮಾದರಿಯ

ಮರಳು ಕಲ್ಲು, ಸುಣ್ಣಕಲ್ಲು ಮತ್ತು ಬುರುದೆಕಲ್ಲುಗಳ (ಮಡ್‌ಸ್ಟೋನ್) ಅಖಂಡ ಪಟ್ಟಿಕೆಯೊಂದು ಹಬ್ಬಿದೆ. ರಾಜ್ಯದ ಉತ್ತರದಂಚಿನಲ್ಲಿರುವ ಪ್ರದೇಶ ಜ್ವಾಲಾಮುಖಿಯ ಕಪ್ಪುಶಿಲೆಯಿಂದಲೂ ಘನೀಕೃತ ಶಿಲಾಪ್ರವಾಹಗಳಿಂದಲೂ ಕೂಡಿದೆಯೆನ್ನಬಹುದು.

ದಕ್ಷಿಣ ಮೈದಾನ ಉತ್ತರದ್ದಕ್ಕಿಂತ ಭಿನ್ನ, ಉತ್ತರದಕ್ಕಿಂತ ಹೆಚ್ಚು ಎತ್ತರ. ಇದರ ರಚನೆ ಗ್ರಾನೈಟ್ ಮತ್ತು ಧಾರವಾಡ ಶಿಲಾಭಾಗಗಳಿಂದ ಕೂಡಿರುವುದರಿಂದ ಭೂಪ್ರದೇಶ ಹೆಚ್ಚು ವೈವಿಧ್ಯಪೂರಿತ. ಊ ಆಕಾರದ ಉಬ್ಬು ನೆಲದಿಂದೊಡಗೂಡಿದಂತೆ ಇದರ ಲಕ್ಷಣ. ಈ ಅಕ್ಷರದ ಪಶ್ಚಿಮದ ಪಾದ ಮಲೆನಾಡಿನ ಪೂರ್ವತುದಿಯಲ್ಲಿ ಊರಿದಂತಿದೆ. ಅಲ್ಲಿ ಇದರ ಎತ್ತರ 915–975 ಮೀ ಬಿಳಿಗಿರಿರಂಗನ ಬೆಟ್ಟ, (1497 ಮೀ), ಗೋಪಾಲಸ್ವಾಮಿ ಬೆಟ್ಟ (1455 ಮೀ), ಶಿವಗಂಗಾ (1387 ಮೀ), ಸಾವನದುರ್ಗ (1226 ಮೀ), ಚಾಮುಂಡಿ ಬೆಟ್ಟ (1038 ಮೀ), ದೇವರಾಯನ ದುರ್ಗ (1187 ಮೀ), ನಂದಿದುರ್ಗ (1463 ಮೀ), ಇತ್ಯಾದಿ ದಕ್ಷಿಣ ಮೈದಾನದ ಪ್ರಮುಖ ಬೆಟ್ಟಗಳು. ಇದರ ಪೂರ್ವಪಾದವಿರುವುದು ಕೊಳ್ಳೆಗಾಲದ ದಕ್ಷಿಣಕ್ಕಿರುವ ಬಿಳಿಗಿರಿರಂಗನ ಬೆಟ್ಟದಿಂದ ರಾಮನಗರದ ಮೂಲಕ ಮಧುಗಿರಿ ಮತ್ತು ಪಾವಗಡ ವರೆಗೆ (1040–1100 ಮೀ) ಹಬ್ಬಿರುವ ಚಾರ್ನೊಕೈಟ್ ಅಥವಾ ಗ್ರಾನೈಟ್ ಶಿಲಾಶ್ರೇಣಿಯಲ್ಲಿ; ಅಲ್ಲಿಂದ ಇದು ವಾಯವ್ಯಾಭಿಮುಖವಾಗಿ ಹಾದು ಸಂಡೂರಿನ ಬಳಿಯ ಕಬ್ಬಿಣದ ಅದುರಿನ ಬೆಟ್ಟಗಳ ಮೇಲೆ ಸಾಗುತ್ತದೆ. H ಅಕ್ಷರದ ಅಡ್ಡಪಟ್ಟಿ ಅಲ್ಲಲ್ಲಿ ಕತ್ತರಿಸಿದಂತಿದೆ. ಆದರೂ ಇದನ್ನು ಗುರುತಿಸುವುದು ಕಷ್ಟವಲ್ಲ. ರಾಮನಗರದಿಂದ ಹೊಳೆನರಸೀಪುರದವರೆಗೆ ಸಾಮಾನ್ಯವಾಗಿ 1000–1070 ಮೀ ಎತ್ತರವಾಗಿಯೂ ಇರುವ ಶ್ರೇಣಿಯುಂಟು. H ಅಕ್ಷರದ ಕೆಳಅರ್ಧದ ಆವರಣದಲ್ಲಿರುವ ಭಾಗವೇ ಕಾವೇರಿ ಕಣಿವೆಯ ಮಧ್ಯ ಪ್ರದೇಶ. ಇದರ ಎತ್ತರ ಸಾಮಾನ್ಯವಾಗಿ 670–700 ಮೀ ತುಂಗಾಭದ್ರಾ ನದಿ ವ್ಯವಸ್ಥೆ ಇದರ ಉತ್ತರಾರ್ಧದಲ್ಲಿದೆ. ಆದರೂ H ಅಕ್ಷರದ ನಡುಪಟ್ಟಿ ಕಾವೇರಿ–ತುಂಗಾಭದ್ರಾ ನದೀ ವ್ಯವಸ್ಥೆಗಳ ಜಲವಿಭಜನ ರೇಖೆಯೇನೂ ಅಲ್ಲ. ಕಾವೇರಿ ಕಣಿವೆಯ ದಕ್ಷಿಣಕ್ಕೆ ಬಿಳಿಗಿರಿರಂಗನ ಬೆಟ್ಟದ ಕವಲುಗಳು ಮುನ್ನಡೆದು ನೀಲಗಿರಿಯ ಉತ್ತರ ಪಾದದಲ್ಲಿ ಲೀನವಾಗುತ್ತವೆ.

ರಾಮನಗರ–ಹೊಳೆನರಸೀಪುರ ನಡುಪಟ್ಟಿಯ ಉತ್ತರಕ್ಕಿರುವ ಪ್ರಸ್ಥಭೂಮಿಯ ಎತ್ತರ ಸಾಮಾನ್ಯವಾಗಿ 700–730 ಮೀ ಇಲ್ಲಿ ಬಿದ್ದ ಮಳೆ ನೀರು ಭಾಗಶಃ ಕಾವೇರಿ ಕಣಿವೆಗೂ ಉಳಿದದ್ದು ವೇದಾವತಿ–ತುಂಗಭದ್ರಾ ವ್ಯವಸ್ಥೆಗೂ ಜಾರಿಕೊಳ್ಳುತ್ತದೆ. ಈ ಪ್ರದೇಶದಲ್ಲಿ ಧಾರವಾಡ ಶಿಲಾ ಸರಣಿಯಿಂದ ಕೂಡಿದ, ಅಲ್ಲಲ್ಲಿ ಗ್ರಾನೈಟ್ ಭೂಯಿಷ್ಠವಾದ ಸಮಾಂತರ ಶ್ರೇಣಿಗಳುಂಟು. ಇವು ಅಲ್ಲಲ್ಲಿ ಮುರಿದಿವೆ. ಚಿಕ್ಕನಾಯಕನಹಳ್ಳಿಯ ಬಳಿಯಿಂದ ದಾವಣಗೆರೆಯನ್ನು ಹಾದು, ಉತ್ತರ ಮೈದಾನ ಪ್ರದೇಶದಲ್ಲಿ ಮುಂಡರಗಿರಿಯ ಬಳಿಯ ಡಂಬಳ ಬೆಟ್ಟಗಳವರೆಗೆ ಹರಿದಿರುವುದು ಒಂದು ಶ್ರೇಣಿ. ಇದರ ಪಶ್ಚಿಮಕ್ಕೆ 48–56 ಕಿಮೀ ದೂರದಲ್ಲಿ ಹಬ್ಬಿರುವ ಶ್ರೇಣಿ ಹೆಚ್ಚು ಸಂಕೀರ್ಣ. ಇದು ಕೃಷ್ಣರಾಜಪೇಟೆಯ ಬಳಿಯಿಂದ ವಾಯವ್ಯ ದಿಕ್ಕಿನಲ್ಲಿ ಹೊರಟು ಹೊನ್ನಾಳಿಯನ್ನು ದಾಟಿ ಹಬ್ಬಿದೆ. ಈ ಎರಡು ಶ್ರೇಣಿಗಳಲ್ಲೂ ಅನೇಕ ಖನಿಜಗಳುಂಟು. ಇವೆರಡರ ನಡುವಣ ನೆಲವನ್ನು ದಕ್ಷಿಣ ಮೈದಾನದ ಉಪಪ್ರದೇಶವೆನ್ನಬಹುದು. ಇಲ್ಲಿಯ ಬೇಸಾಯ ವಿಶಿಷ್ಟವಾದದ್ದು (ತೆಂಗು ಒಂದು ಮುಖ್ಯ ಬೆಳೆ). ದಕ್ಷಿಣ ಮೈದಾನದ ಪೂರ್ವಭಾಗ ಜಗಲಿಯಂತಿದ್ದು 915 ಮೀ ಎತ್ತರಕ್ಕೆ ಏರಿದೆ. ಬೆಂಗಳೂರಿನ ಸನಿಯದ ಈ ನೆಲದ ಉತ್ತರದ ಏಣು ಹೆಚ್ಚು ಎತ್ತರ. ಗುಡಿಬಂಡೆಯ ಬಳಿಯಿಂದ ಚಿಕ್ಕಬಳ್ಳಾಪುರದವರೆಗೆ ಹಬ್ಬಿರುವ ಬೆಟ್ಟಗಳಲ್ಲಿ ನಂದಿಬೆಟ್ಟವೂ ಒಂದು. ಈ ಶ್ರೇಣಿಯಿಂದ ಪಶ್ಚಿಮಾಭಿಮುಖವಾಗಿ ಸು. 24 ಕಿಮೀ ದೂರ ಸಾಗುವ ಬೆಟ್ಟಸಾಲು ಮೊದಲಿನವಕ್ಕಿಂತ ಕುಳ್ಳು . ಬಾಗೆಪಲ್ಲಿಯ ಪೂರ್ವದೆಡೆಯಿಂದ ಬಂಗಾರಪೇಟೆಯವರೆಗೆ ಇನ್ನೊಂದು ಶ್ರೇಣಿ ಹಬ್ಬಿದೆ. ಇಲ್ಲಿ ಕಲ್ಲುಬಂಡೆಗಳಿಂದ ಕೂಡಿದ ಬರಡು ಬೆಟ್ಟಗಳುಂಟು. ನಂದಿ ಬೆಟ್ಟದಿಂದ ಉತ್ತರದ ನೆಲ ಥಟ್ಟನೆ ಇಳಿಜಾರಾಗಿ ಸಾಗಿ ಪೆನ್ನಾರ್ ನದಿಯ ಬಳಿ ಎತ್ತರ 700–760 ಮೀ ಆಗಿದೆ.

ದಕ್ಷಿಣ ಮೈದಾನದ್ದು ಪ್ರಧಾನವಾಗಿ ಕೆಂಪು ಮಣ್ಣಿನಿಂದ ಕೂಡಿದ ನೆಲ. ಕೆಲವು ಕಡೆಗಳಲ್ಲಿ, ಮುಖ್ಯವಾಗಿ 915 ಮೀ ಎತ್ತರದಲ್ಲಿ ನೆಲ ಕಬ್ಬಿಣಭರಿತವಾಗಿದೆ. ಭೂಸವೆತದಿಂದಾಗಿ ಬಂಡೆಗಳ ಮಣ್ಣಿನ ಹೊದಿಕೆ ಕಳೆದುಹೋಗಿ ನೆಲ ಬರಡಾಗಿದೆ. ಉಳಿದ ಕಡೆಯ ನೆಲ ಕೂಡ ಅರಣ್ಯವರ್ಜನದ ಪರಿಣಾಮವಾಗಿಯೂ ಶತಶತಮಾನಗಳ ಬೇಸಾಯದ ಫಲವಾಗಿಯೂ ತಮ್ಮ ಸಾರವಷ್ಟನ್ನೋ ಕಳೆದುಕೊಂಡಿವೆ. ಹೊಸದಾಗಿ ಬೇಸಾಯಕ್ಕೆ ತಂದ ನೆಲದ ಮಣ್ಣು ಕಪ್ಪಾಗಿರುತ್ತದೆ. ಆದರೆ ಕ್ರಮೇಣ ಅದೂ ಸಾರ ಕಳೆದುಕೊಂಡು ಅಕ್ಕಪಕ್ಕದ ನೆಲದ ಮಣ್ಣಿನಂತೆಯೇ ಪರಿಣಮಿಸಬಹುದು. ಹೊಸ ನೆಲದ ಕಪ್ಪಿಗೆ ಸುಟ್ಟ ಬೇರಿನ ಕರುಕೇ ಕಾರಣವೆಂದು ಕೆಲವರ ಅಭಿಪ್ರಾಯ. ಕಣಿವೆಗಳಲ್ಲಿಯ ನೆಲ ಆಳವಾದ ಸಾರಭೂತ ಮಣ್ಣಿನಿಂದ ಕೂಡಿದ್ದಾಗಿದೆ.

3. ಕರಾವಳಿ: ಸಹ್ಯಾದ್ರಿ ಏಣಿನಿಂದ ಕಡಲ ತಡಿಯವರೆಗೆ ಇರುವುದು ಕರಾವಳಿಯೆನಿಸುತ್ತದೆ. ಸಹ್ಯಾದ್ರಿಯಿಂದ ಅಡ್ಡ ಹಾಯ್ದಿರುವ ಬೆಟ್ಟಗಳು ಮತ್ತು ಲ್ಯಾಟರೈಟ್ ಸಮಾವಿಷ್ಟ ಪ್ರಸ್ಥಭೂಮಿಗಳಿಂದಾಗಿ ಈ ಪ್ರದೇಶದಲ್ಲಿ ಭಿನ್ನತೆಗಳೇರ್ಪಟ್ಟಿವೆ. ಮರಳು ಗುಡ್ಡೆಗಳಿಂದ ಕೂಡಿದ ಕಡಲಂಚು. ತೆಂಗು, ಗೇರು, ಹಚ್ಚಹಸುರಿನ ಬತ್ತದಗದ್ದೆ; ಇವಕ್ಕೆ ಹಿನ್ನಲೆಯಾಗಿ ಪಶ್ಚಿಮಕ್ಕೆ ಅರಣ್ಯಾಚ್ಛಾದಿತ ಘಟ್ಟ ಸೋಪಾನ–ಇದು ಈ ಪ್ರದೇಶದ ಸಾಮಾನ್ಯ ದೃಶ್ಯ. ಈ ಪ್ರದೇಶದ ಉತ್ತರ ಭಾಗವನ್ನು (ಉತ್ತರ ಕನ್ನಡ) ಮಲೆನಾಡೆಂದು ಪರಿಗಣಿಸುವುದೂ ಉಂಟು. ಕಾರವಾರದ ಪೂರ್ವಕ್ಕೂ ದಕ್ಷಿಣಕ್ಕೂ ಇರುವ ಸು. 600 ಮೀ ಎತ್ತರದ ಪ್ರಸ್ಥಭೂಮಿ ಪ್ರದೇಶ ಸಮುದ್ರದ ಸನಿಯದವರೆಗೂ ಚಾಚಿಕೊಂಡಿದೆ. ಆದರೆ ಇದೂ ಅಖಂಡವಾಗಿಲ್ಲ. ಅಲ್ಲಲ್ಲಿ ಅಗಲ ಕಣಿವೆಗಳು ಇದನ್ನು ವಿಭಜಿಸುತ್ತವೆ. ಶಂಕುವಿನಂಥ ಬೆಟ್ಟಗಳು ಮಾತ್ರ 600 ಮೀ ಎತ್ತರವಿವೆಯೆನ್ನಬಹುದು.

ಬೈಂದೂರಿನ ಉತ್ತರಕ್ಕೆ ಕಡಲಕರೆಯ ಮೈದಾನ ವಾಸ್ತವವಾಗಿ ಬಲು ಕಿರಿದು; ಅಲ್ಲಲ್ಲಿ ನದೀ ಅಳಿವೆಗಳ ಆಚೀಚೆ ಉದ್ದುದ್ದನೆಯ ಪಟ್ಟಿಗಳಂತೆ ಕಾಣುತ್ತದೆ. ಬೈಂದೂರಿನಿಂದ ಮಂಗಳೂರಿನವರೆಗೆ ಇದರ ಅಗಲ ಸ್ವಲ್ಪ ಹೆಚ್ಚು; 13–16 ಕಿಮೀ ಗಳಷ್ಟು ವಿಸ್ತರಿಸಿದೆ. ಅಲ್ಲಲ್ಲಿ ಸು. 60 ಮೀ ಎತ್ತರದ ಲ್ಯಾಟರೈಟಿಕ್ ಜಗಲಿಗಳನ್ನು ಕೊರೆದಿರುವ ಅಳಿವೆಗಳನ್ನೂ 16 ಕಿಮೀ ಹಬ್ಬಿರುವ ಮರಳಗುಡ್ಡಗಳನ್ನೂ ಕಾಣಬಹುದು. ಕೆಲವು ಅಳಿವೆಗಳು ಕಡಲುಪ್ಪು ನೀರಿನ ಸರೋವರಗಳಂತಿದ್ದು ಕೇರಳದ ಸನ್ನಿವೇಶವನ್ನು ಹೋಲುವುದೂ ಉಂಟು.

ಕಡಲ ಮಟ್ಟದ ಈ ನೆಲದ ಪೂರ್ವದ ಬದಿಗೆ ಕುಂದಾಪುರದಿಂದ ಮಂಗಳೂರಿನ ದಕ್ಷಿಣದಂಚಿನವರೆಗೆ 15–25 ಕಿಮೀ ಅಗಲವೂ, 60–90 ಮೀ ಎತ್ತರವೂ ಇರುವ ತಗ್ಗಿನ ಪ್ರಸ್ಥಭೂಮಿಯನ್ನು ಕಾಣಬಹುದು. ಕೆಲವೆಡೆಗಳಲ್ಲಿ ಇದರ ಕಡಿದಾದ ಬಂಡೆಗಳು ಕಡಲವರೆಗೆ ಚಾಚಿರುವುದೂ ನೇತ್ರಾವತಿಯಂಥ ಮುಖ್ಯ ನದಿಕಣಿವೆಗಳಿರುವೆಡೆಯಲ್ಲಿ ಈ ನೆಲ ಪಶ್ಚಿಮದ ಕಡೆಗೆ ಹೆಚ್ಚಾಗಿ ಹಬ್ಬಿರುವುದೂ ಉಂಟು. ಈ ಪ್ರಸ್ಥಭೂಮಿಯ ಪ್ರದೇಶ ಅಷ್ಟೇನು ಸವೆತಕ್ಕೊಳಗಾಗಿಲ್ಲ. ಆದರೆ ಉದ್ದಕ್ಕೂ ಇದನ್ನು ಸಮತಲದ, ಕಡಿದಾದ ದಂಡೆಯ ಅನೇಕ ಕಣಿವೆಗಳು ಅಡ್ಡಹಾಯ್ದಿವೆ. ಈ ಕಣಿವೆಗಳ ಅಗಲ ಸು. 2 ಕಿಮೀ ಕರಾವಳಿಯ ಹಾಗೂ ಮಲೆನಾಡಿನ ಲಕ್ಷಣಗಳೆರಡೂ ಇಲ್ಲಿ ಮಿಶ್ರವಾಗಿವೆ. ಒಟ್ಟಿನಲ್ಲಿ ಇದನ್ನು ಕರಾವಳಿಯ ತಗ್ಗುದಿಣ್ಣೆಯೆನ್ನುವುದು ಸಮಂಜಸವಾದೀತು.

ಕರಾವಳಿಯ ತಗ್ಗು ದಿಣ್ಣೆಯ ಪೂರ್ವದಲ್ಲಿ ಘಟ್ಟದೇಣಿನವರೆಗೆ ಇರುವ ಪ್ರದೇಶವನ್ನು ಕರಾವಳಿಯ ಮಲೆನಾಡು ಎನ್ನಬಹುದು. ಪುತ್ತೂರಿನ ಪೂರ್ವದಕ್ಷಿಣಗಳಲ್ಲಿ ಆರಂಭವಾಗಿ ಉತ್ತರದಲ್ಲಿ ಉಡುಪಿಯವರೆಗೂ ಹಬ್ಬಿರುವ ಪ್ರದೇಶದ ಎತ್ತರ ಸಾಮಾನ್ಯವಾಗಿ 300 ಮೀ ಗಿಂತ ಕಡಿಮೆ. ನಡುನಡುವೆ, ಎತ್ತರದ ಬೆಟ್ಟಪಂಕ್ತಿಗಳೂ ಉಂಟು. ಮತ್ತೆ ಕುಂದಾಪುರದ ಉತ್ತರದಲ್ಲಿ ಕರಾವಳಿಯ ಮಲೆನಾಡನ್ನು ಕಾಣಬಹುದು. ಇದು ಸ್ವರ್ಣಾ ನದಿಯ ಉತ್ತರಕ್ಕೆ ಹಬ್ಬಿ ಗೋವೆಯ ಎಲ್ಲೆಯವರೆಗೂ ಪಸರಿಸಿದೆ. ಘಟ್ಟಗಳ ಪೂರ್ವ ಭಾಗದಲ್ಲಿರುವ ನಿಜವಾದ ಮಲೆನಾಡಿಗೂ ಇದಕ್ಕೂ ಒಂದು ಮುಖ್ಯ ವ್ಯತ್ಯಾಸವುಂಟು. ಈ ಪ್ರದೇಶದಲ್ಲಿ 600 ಮೀ ಎತ್ತರವಿರುವ ಕೆಲವೇ ಬೆಟ್ಟತುಂಗಗಳಿವೆ. ಕಾಳಿನದಿ ಅಳಿವೆಯ ಉತ್ತರಕ್ಕೆ ಕಾಡು ಹಬ್ಬಿರುವ ವಿಸ್ತಾರವಾದ ತಗ್ಗುದಿಣ್ಣೆಯನ್ನು ಕಾಣಬಹುದು.

ವಾಯುಗುಣ: ಕರ್ನಾಟಕ ಉಷ್ಣವಲಯದ ಮಾನ್ಸೂನ್ ವಾಯುಗುಣವನ್ನೊಳಗೊಂಡಿದೆ. ಶಾಖ ಮತ್ತು ತೇವಾಂಶವುಳ್ಳ ಬೇಸಗೆ ಮತ್ತು ತಂಪಾದ ಹಾಗೂ ಶುಷ್ಕ ಪರಿಸ್ಥಿತಿಯುಳ್ಳ ಚಳಿಗಾಲವು ಈ ವಾಯುಗುಣದ ಮುಖ್ಯ ಗುಣಲಕ್ಷಣಗಳು. ಆದರೆ ಕರ್ನಾಟಕದ ವಾಯುಗುಣ ವೈವಿಧ್ಯಪೂರ್ಣ. ಅದಕ್ಕೆ ಅಕ್ಷಾಂಶ, ಸಮುದ್ರ ಮಟ್ಟದಿಂದ ಎತ್ತರ, ಸಮುದ್ರ ಸಾಮೀಪ್ಯ, ಸ್ಥಳೀಯ ಮಾರುತಗಳು, ಸಸ್ಯವರ್ಗ, ಭೂಸ್ವರೂಪಗಳು ಮುಂತಾದವು ಕಾರಣವಾಗಿವೆ. ಕರಾವಳಿ ಪ್ರದೇಶ, ಮಲೆನಾಡು ಮತ್ತು ಸಹ್ಯಾದ್ರಿ ಘಟ್ಟಗಳ ಸರಣಿಗಳಲ್ಲಿ ಅಧಿಕ ಮಳೆಯಾಗುವುದರಿಂದ ಆರ್ದ್ರತೆಯುಳ್ಳ ವಾಯುಗುಣವಿರುತ್ತದೆ. ಒಳನಾಡು ಮತ್ತು ಉತ್ತರದ ಜಿಲ್ಲೆಗಳಲ್ಲಿ ಅರೆಶುಷ್ಕ ವಾಯುಗುಣವೂ, ಬಳ್ಳಾರಿ ಹಾಗೂ ಇತರ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಶುಷ್ಕವಾಯುಗುಣವೂ ಬಳ್ಳಾರಿ ಮತ್ತು ಬಿಜಾಪುರ ಪ್ರದೇಶದಲ್ಲಿ ಅತಿ ಸೆಕೆ ಮತ್ತು ಅತಿ ಶುಷ್ಕದ ವಾತಾವರಣವಿರುತ್ತದೆ. ತೀರಪ್ರದೇಶದಲ್ಲಿ ಸಮುದ್ರದ ಪ್ರಭಾವದಿಂದಾಗಿ ಬೇಸಗೆ ಮತ್ತು ಚಳಿಗಾಲದ ಉಷ್ಣಾಂಶ ಸಮತೋಲನಗೊಳ್ಳುತ್ತದೆ. ಸಮುದ್ರದ ಮಂದಮಾರುತಗಳು ಬೇಸಗೆಯ ತಾಪವನ್ನು ಉಪಶಮನ ಮಾಡುತ್ತವೆ. ಆದರೆ ಒಳನಾಡಿಗೆ ಹೋದೆಂತೆಲ್ಲಾ ಸಮುದ್ರದ ಪ್ರಭಾವವು ಕುಗ್ಗುತ್ತಾ ಹೋಗುವುದು. ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಿರುವ ಕರಾವಳಿ, ಅದಕ್ಕೆ ಹೊಂದಿಕೊಂಡಿರುವ ಭಾಗಗಳಲ್ಲಿ, ಹೆಚ್ಚು ಮಳೆ ಬೀಳುವ ಹಾಗೂ ರಾಜ್ಯದ ಪೂರ್ವಭಾಗಗಳಲ್ಲಿರುವ, ಕಡಿಮೆ ಮಳೆ ಬೀಳುವ ಹಾಗೂ ಬರಪೀಡಿತ ಪ್ರದೇಶಗಳ ನಡುವೆ ಸಹ್ಯಾದ್ರಿ ಶ್ರೇಣಿ (ಪಶ್ಚಿಮ ಘಟ್ಟಗಳು) ಗಳು ವಿಭಾಜಕದಂತೆ ವರ್ತಿಸುವವು. ಇದು ಕರ್ನಾಟಕದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ನೈಸರ್ಗಿಕ ಅಂಶಗಳಾಗಿವೆ. ಕರ್ನಾಟಕದ ಮೈದಾನಗಳು ಸಮುದ್ರ ಪ್ರಭಾವದಿಂದ ಹೊರತಾಗಿವೆ.

ನೈಋತ್ಯ ಮಾನ್ಸೂನ್ ಮಾರುತಗಳು ಸಮುದ್ರದ ಕಡೆಯಿಂದ ಭೂಭಾಗದ ಕಡೆಗೆ ಬೀಸುವುದರಿಂದ ಮಳೆಯ ಹಂಚಿಕೆಯಲ್ಲಿ ವ್ಯತ್ಯಾಸವುಂಟಾಗುವುದು. ಪಶ್ಚಿಮದಿಂದ

| ತಿಂಗಳು | ಜ | ಫೆ | ಮಾ | ಏ | ಮೇ | ಜೂ | ಜು | ಆ | ಸೆ | ಅ | ನ | ಡಿ |
|---|---|---|---|---|---|---|---|---|---|---|---|---|
| ಸ್ಥಳ | ಕರಾವಳಿಯ ಕೆಲವು ಸ್ಥಳಗಳ ಮಾಸಿಕ ಸರಾಸರಿ ಉಷ್ಣಾಂಶ ($^0$ಸೆ.) | | | | | | | | | | | |
| ಕಾರವಾರ | 24.0 | 23.9 | 25.0 | 27.8 | 28.9 | 26.1 | 26.1 | 25.0 | 26.2 | 27.2 | 27.2 | 22.8 |
| ಹೊನ್ನಾವರ | 26.1 | 21.7 | 26.1 | 27.8 | 28.9 | 26.1 | 25.0 | 25.0 | 26.1 | 27.8 | 27.8 | 27.2 |
| ಮಂಗಳೂರು | 27.2 | 26.1 | 27.8 | 28.9 | 30.0 | 26.1 | 26.1 | 26.1 | 26.3 | 27.2 | 27.2 | 27.2 |
| ಮಲೆನಾಡಿನ ಮಾದರಿ ಮಡಿಕೇರಿ ಮತ್ತು ಹಾಸನಗಳ ಮಾಸಿಕ ಸರಾಸರಿ ಉಷ್ಣಾಂಶ ($^0$ಸೆ.) | | | | | | | | | | | | |
| ಮಡಿಕೇರಿ | 28.0 | 22.2 | 22.8 | 23.9 | 22.8 | 21.1 | 18.9 | 17.8 | 28.0 | 21.1 | 21.1 | 28.0 |
| ಹಾಸನ | 21.1 | 23.9 | 25.0 | 26.1 | 25.0 | 21.3 | 21.1 | 21.1 | 22.2 | 23.9 | 22.2 | 18.9 |
| ಉತ್ತರ ಮೈದಾನದ ಕೆಲವು ಸ್ಥಳಗಳ ಮಾಸಿಕ ಸರಾಸರಿ ಉಷ್ಣಾಂಶ ($^0$ಸೆ.ಗಳಲ್ಲಿ) | | | | | | | | | | | | |
| ಬೆಳಗಾಂವಿ | 21.1 | 22.2 | 23.9 | 27.8 | 27.8 | 23.9 | 21.1 | 21.1 | 22.2 | 23.8 | 22.2 | 21.1 |
| ಬೀದರ್ | 22.2 | 25.0 | 27.2 | 30.0 | 31.1 | 27.7 | 23.9 | 22.8 | 26.1 | 26.2 | 23.9 | 22.2 |
| ಬಿಜಾಪುರ | 23.9 | 26.1 | 28.9 | 31.1 | 32.2 | 27.2 | 25.0 | 23.9 | 26.2 | 26.1 | 23.9 | 23.9 |
| ಬಳ್ಳಾರಿ | 23.9 | 27.2 | 30.0 | 32.2 | 32.2 | 27.8 | 27.8 | 25.0 | 30.6 | 25.6 | 25.0 | 25.0 |
| ದಕ್ಷಿಣ ಮೈದಾನದ ಕೆಲವು ಸ್ಥಳಗಳ ಮಾಸಿಕ ಸರಾಸರಿ ಉಷ್ಣಾಂಶ ($^0$ಸೆ.ಗಳಲ್ಲಿ) | | | | | | | | | | | | |
| ಬೆಂಗಳೂರು | 21.1 | 23.9 | 26.1 | 27.8 | 27.2 | 22.8 | 22.8 | 22.7 | 23.9 | 23.9 | 22.2 | 22.2 |
| ಚಿತ್ರದುರ್ಗ | 22.2 | 26.1 | 27.2 | 30.0 | 28.9 | 25.0 | 23.8 | 22.8 | 25.0 | 25.0 | 22.8 | 22.2 |
| ಮೈಸೂರು | 22.3 | 23.9 | 25.0 | 27.8 | 27.8 | 22.8 | 23.9 | 23.9 | 23.9 | 23.9 | 23.9 | 23.9 |

ಪೂರ್ವದ ಕಡೆಗೆ ಹೋದಂತೆ ಮಳೆಯ ಹಂಚಿಕೆ ಕಡಿಮೆಯಾಗುವುದು. ಈ ಎಲ್ಲಾ ಅಂಶಗಳನ್ನು ದೃಷ್ಟಿಯಲಿಟ್ಟುಕೊಂಡು ಕರ್ನಾಟಕದ ವಾಯುಗುಣವನ್ನು ಭಾರತದ ವಾಯುಗುಣದ ಕಾಲಗಳಂತೆಯೇ ನಾಲ್ಕು ಮುಖ್ಯ ಭಾಗಗಳನ್ನಾಗಿ ವಿಂಗಡಿಸಬಹುದು.

1. ಚಳಿಗಾಲ (ಡಿಸೆಂಬರ್–ಫೆಬ್ರವರಿ)
2. ಬೇಸಗೆ ಕಾಲ (ಮಾರ್ಚ್–ಮೇ)
3. ಮಳೆಗಾಲ (ಜೂನ್–ಸೆಪ್ಟೆಂಬರ್)
4. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ (ಅಕ್ಟೋಬರ್–ನವೆಂಬರ್)

1. ಚಳಿಗಾಲ: ಕಡಿಮೆ ಉಷ್ಣಾಂಶ ಮತ್ತು ಆರ್ದ್ರತೆ, ಅಲ್ಪಮಳೆ ಹಾಗೂ ನಿರ್ಮಲವಾದ ಆಕಾಶ, ಇವು ಚಳಿಗಾಲದ ವಿಶಿಷ್ಟವಾದ ಲಕ್ಷಣಗಳು. ಈ ಅವಧಿಯಲ್ಲಿ ಕರಾವಳಿ ಪ್ರದೇಶಗಳಲ್ಲಿ 27$^0$ಸೆ. ಉಷ್ಣಾಂಶವಿದ್ದು, ಅದು ಮಲೆನಾಡು ಮತ್ತು ಮೈದಾನಗಳ ಕಡೆಗೆ ಹೋದಂತೆ ಕಡಿಮೆಯಾಗುವುದು. ಉತ್ತರ ಕರ್ನಾಟಕದ ಒಳನಾಡು ಭಾಗಗಳಲ್ಲಿನ ರಾತ್ರಿಯ ತಾಪಮಾನವು ಸರಾಸರಿಗಿಂತಲೂ ಕಡಿಮೆಯಿರುತ್ತದೆ. ಶೀತವಾದ ಗಾಳಿಯಿಂದ ಆಗಾಗ ಚಳಿಯಿರುತ್ತದೆ. ಈ ಕಾಲದಲ್ಲಿ ರಾಜ್ಯದ ಬಹುಭಾಗದಲ್ಲಿ 10 ಸೆಂಮೀ ಗಿಂತಲೂ ಕಡಿಮೆ ಮಳೆ ಬೀಳುವುದು. ಬದಲಿಗೆ ಈ ಅವಧಿಯಲ್ಲಿ ಶುಷ್ಕ ಹವೆಯುಳ್ಳ ಪರಿಸ್ಥಿತಿಯಿರುತ್ತದೆ. ಇದು ಕೃಷಿ ಬೆಳೆಗಳನ್ನು ಕಟಾವು ಮಾಡಲು ಅನುಕೂಲವಾದುದು. ಪ್ರಾತಃಕಾಲ ಕರಾವಳಿ ಹಾಗೂ ಎತ್ತರವಾದ ಭಾಗಗಳಲ್ಲಿ ಮಸುಕಿನ ಮಬ್ಬು ಮತ್ತು ಕಾವಳದ ಪರಿಸ್ಥಿತಿಯಿರುತ್ತದೆ.

2. ಬೇಸಗೆ ಕಾಲ: ಮಾರ್ಚ್ ಅನಂತರ ರಾಜ್ಯದಾದ್ಯಂತ ಉಷ್ಣಾಂಶವು ಗಣನೀಯವಾಗಿ ಏರುತ್ತಾ ಹೋಗಿ ಏಪ್ರಿಲ್–ಮೇ ತಿಂಗಳುಗಳಲ್ಲಿ ಅದು ಗರಿಷ್ಠ ಮಟ್ಟವನ್ನು ತಲುಪುವುದು. ಉಷ್ಣಾಂಶವು ಕರಾವಳಿ ಪ್ರದೇಶದಲ್ಲಿ 31$^0$ಸೆ ವರೆಗೆ ಏರಿದರೆ, ರಾಜ್ಯದ ಈಶಾನ್ಯದ ಕೆಲ ಭಾಗಗಳಲ್ಲಿ 42$^0$ಸೆ ಗಳಿಗೆ ಏರುವುದು. ರಾತ್ರಿಯ ವೇಳೆ ಹಗಲಿಗಿಂತ ತಂಪಾಗಿರುತ್ತದೆ. ಈ ಅವಧಿಯ ಪ್ರಾರಂಭದಲ್ಲಿ ವಾಯುಮಂಡಲದ ತೇವಾಂಶವು ಕಡಿಮೆಯಿದ್ದರೂ ಮೇ ತಿಂಗಳ ಅನಂತರ ಅದು ಹೆಚ್ಚಾಗುತ್ತಾ ಹೋಗುವುದು. ಪರಿಣಾಮವಾಗಿ ಈ ವೇಳೆಯಲ್ಲಿ ಕೆಲಮೊಮ್ಮೆ ಗುಡುಗಿನಿಂದ ಕೂಡಿದ ಪರಿಸರಣ ಮಳೆಯು ಬೀಳುವುದು. ಆಗಾಗ ಮಳೆಯ ಜೊತೆ ಆಲಿಕಲ್ಲುಗಳು ಸುರಿಯುವುದು. ಇಂತಹ ಮಳೆಯು ಸಾಮಾನ್ಯವಾಗಿ ಅಪರಾಹ್ನದ ವೇಳೆಯಲ್ಲಿ ಸಂಭವಿಸುತ್ತದೆ. ಕರಾವಳಿ ಮತ್ತು ದಕ್ಷಿಣದ ಜಿಲ್ಲೆಗಳಲ್ಲಿ ಶಾಖ ಮತ್ತು ಸೆಕೆ, ಉತ್ತರ ಕರ್ನಾಟಕದಲ್ಲಿ ಶಾಖ ಮತ್ತು ಶುಷ್ಕವಾದ ಪರಿಸ್ಥಿತಿಯಿರುತ್ತದೆ.

3. ಮಳೆಗಾಲ: ಇದನ್ನು 'ನೈಋತ್ಯ ಮಾನ್ಸೂನ್ ಮಾರುತ'ಗಳ ಕಾಲವೆಂತಲೂ ಕರೆಯುವರು. ಈ ಅವಧಿಯಲ್ಲಿ ವಾಯುಮಂಡಲವು ಗರಿಷ್ಠ ಪ್ರಮಾಣದ ಆರ್ದ್ರತೆಯನ್ನು ಹೊಂದಿದ್ದು, ಕರಾವಳಿ, ಪ್ರಮಾಣದ ಆರ್ದ್ರತೆಯನ್ನು ಹೊಂದಿದ್ದು, ಕರಾವಳಿ, ಪಶ್ಚಿಮಘಟ್ಟಗಳು, ಮಲೆನಾಡುಗಳಲ್ಲಿ ಅತ್ಯಧಿಕ ಪ್ರಮಾಣದ ಮಳೆ ಬೀಳುವುದು. ಆದರೆ ಪೂರ್ವದ ಕಡೆಗೆ ಹೋದಂತೆ ಮಳೆಯ ಮಾರುತಗಳು ದುರ್ಬಲಗೊಂಡು ಉತ್ತರ ಮೈದಾನದ ಭಾಗಗಳಿಗೆ ಮಳೆಯ ಹಂಚಿಕೆ ವಿರಳವಾಗುವುದು. ಪರಿಣಾಮವಾಗಿ ಅವು ಮಳೆಯ ನೆರಳಿನ ಪ್ರದೇಶಗಳಾಗಿ ಪರಿಣಮಿಸುತ್ತವೆ. ಇದರಿಂದಾಗಿ ಆಗಾಗ್ಗೆ ಕ್ಷಾಮವು ತಲೆದೋರುವುದು. ಈ ಅವಧಿಯಲ್ಲಿ ರಾಜ್ಯದ ಮುಕ್ಕಾಲು ಭಾಗವು ಮಳೆಯನ್ನು ಪಡೆಯುವುದು. ಇದು ಮುಂಗಾರು ಬೆಳೆಗಳಿಗೆ ಪೂರಕವಾಗಿದೆ. ಅಧಿಕ ಮಳೆಯಿಂದಾಗಿ ದೈನಿಕ ಉಷ್ಣಾಂಶವು ಕಡಿಮೆಯಾಗುವುದು. ವಾಯುವಿನ ತೇವಾಂಶವು ಹೆಚ್ಚಾಗುವುದು.

4. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ: ಇದನ್ನು ಈಶಾನ್ಯ ಮಾನ್ಸೂನ್ ಮಾರುತಗಳ ಕಾಲವೆಂತಲೂ ಕರೆಯುವರು. ಈ ಅವಧಿಯಲ್ಲಿ ಒತ್ತಡದ ಹಂಚಿಕೆಯಲ್ಲಿ ಬದಲಾವಣೆಯಾಗುತ್ತದೆ. ಭಾರತದ ಉತ್ತರ ಭಾಗದಲ್ಲಿ ಅಧಿಕ ಒತ್ತಡ ಕೋಶ ಉಂಟಾಗಿ ದಕ್ಷಿಣದಲ್ಲಿ ಒತ್ತಡ ಕಡಿಮೆಯಾಗುವುದು. ಇಂತಹ ತದ್ವಿರುದ್ಧವಾದ ಪರಿಸ್ಥಿತಿಯಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ. ಬಂಗಾಲ ಕೊಲ್ಲಿಯ ಮೇಲೆ ಬೀಸಿ ಬರುವಾಗ ಮಾರುತಗಳು ತೇವಾಂಶವನ್ನು ಒಯ್ಯುವುದರಿಂದ ದೇಶದ ಪೂರ್ವ ಕರಾವಳಿಗೆ ಸ್ವಲ್ಪ ಮಳೆಯಾಗುವುದು. ಇದೇ ಮಾರುತಗಳು ಪಶ್ಚಿಮಕ್ಕೆ ಮುಂದುವರಿದು ಕರ್ನಾಟಕವನ್ನು ತಲುಪುವ ವೇಳೆಗೆ ಅಲ್ಪಸ್ವಲ್ಪ ಮಳೆಯಾಗುವುದು. ಕೆಲವೊಮ್ಮೆ ಆವರ್ತ ಮಾರುತ ಪರಿಸ್ಥಿತಿಯು ಸಂಭವಿಸುತ್ತದೆ. ಒಟ್ಟಾರೆ ಈ ಅವಧಿಯಲ್ಲಿ ವಾಯುಗುಣದ ಪರಿಸ್ಥಿತಿ ಅನಿಶ್ಚಿತವಾಗಿರುತ್ತದೆ.

ಉಷ್ಣಾಂಶದ ಹಂಚಿಕೆ: ಕರ್ನಾಟಕ ಉತ್ತರ ಗೋಳಾರ್ಧದಲ್ಲಿದ್ದರೂ ಸಮಭಾಜಕ ವೃತ್ತಕ್ಕೆ ಸಮೀಪದಲ್ಲಿದೆ. ವರ್ಷವಿಡೀ ಹೆಚ್ಚು ಕಡಿಮೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುತ್ತವೆ. ಪರಿಣಾಮವಾಗಿ ರಾಜ್ಯದಾದ್ಯಂತ ಉಷ್ಣಾಂಶ ಹೆಚ್ಚಾಗಿರುತ್ತದೆ. ರಾಜ್ಯದ ದಕ್ಷಿಣ ಭಾಗವು ಸಮಭಾಜಕ ವೃತ್ತಕ್ಕೆ ಸಮೀಪವಾಗಿದ್ದು ಉಷ್ಣಾಂಶದ ತೀವ್ರತೆ ಉತ್ತರಕ್ಕಿಂತ ಹೆಚ್ಚಾಗಿರುತ್ತದೆ. ಈ ಭಾಗವು ಸಮುದ್ರಮಟ್ಟದಿಂದ ಹೆಚ್ಚು ಎತ್ತರವುಳ್ಳ ಭೂಸ್ವರೂಪವುಳ್ಳದ್ದಾಗಿದ್ದು, ತಾಪಮಾನದಲ್ಲಿ ಗಮನಾರ್ಹವಾದ ಬದಲಾವಣೆ ಕಾಣಬಹುದು. ಹೀಗಾಗಿ ಉತ್ತರ ಮೈದಾನದ ಜಿಲ್ಲೆಗಳಿಗಿಂತ ದಕ್ಷಿಣದಲ್ಲಿ ಉಷ್ಣಾಂಶದ ತೀಕ್ಷ್ಣತೆ ಕಡಿಮೆ. ಕರಾವಳಿ ಮತ್ತು ಮಲೆನಾಡಿನ ಉಷ್ಣಾಂಶದ ಹಂಚಿಕೆ. ಭಿನ್ನವಾದುದು ಸಾಮಾನ್ಯವಾಗಿ ಬಿಸಿಲಿನ ತಾಪ ಹೆಚ್ಚು. ಆದರೆ ಕೋಲಾರ ಜಿಲ್ಲೆಯ ನಂದಿಬೆಟ್ಟ, ಚಾಮರಾಜನಗರ ಜಿಲ್ಲೆಯ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಮತ್ತು ಬಿಳಿಗಿರಿರಂಗನ ಬೆಟ್ಟ ಚಿಕ್ಕಮಗಳೂರು ತಾಲ್ಲೂಕಿನ ಕೆಮ್ಮಣ್ಣು ಗುಂಡಿಗಳಲ್ಲಿ ತಂಪಾದ ಹವಾಮಾನವಿರುತ್ತದೆ.

ಸಮುದ್ರಮಟ್ಟಕ್ಕೆ ಸಮೀಪವಿರುವ ಕರಾವಳಿ ಪ್ರದೇಶದಲ್ಲಿ ಉಷ್ಣಾಂಶ ಹೆಚ್ಚಾಗಿರುವುದು ಸಹಜ. ಅದರಲ್ಲಿ ಹೆಚ್ಚು ಋತುಕಾಲಿಕ ವ್ಯತ್ಯಾಸವಿಲ್ಲ. ಸು. 24$^0$ಸೆ–30$^0$ ಸೆಲ್ಸಿಯಸ್‌ಗಳಾಗಿರುತ್ತದೆ. ಏಪ್ರಿಲ್–ಮೇ ಮಾಸಗಳಲ್ಲಿ ಉಷ್ಣಾಂಶ ರಾಜ್ಯದಾದ್ಯಂತ ಗರಿಷ್ಠ ಮಟ್ಟವನ್ನು ಮುಟ್ಟುತ್ತದೆ. ಸಮುದ್ರದ ಸನಿಯದ ಕರಾವಳಿ ಪ್ರದೇಶದಲ್ಲಿ ಕಡಲ್ಗಾಳಿ ಬೀಸುವುದರಿಂದ ತಾಪಮಾನವು ಶಮನವಾಗುವುದು. ಈ ಕಾಲದಲ್ಲಿ ಸ್ವಲ್ಪ ಮಳೆಬೀಳುವುದುಂಟು. ಮಳೆಗಾಲವು ಪ್ರಾರಂಭವಾದ

ಮೇಲೆ ಉಷ್ಣಾಂಶ ಕಡಿಮೆಯಾಗುತ್ತದೆ. ನವೆಂಬರ್ ಮಾಹೆಯಲ್ಲಿ ತಟ್ಟನೆ ಬದಲಾಗುತ್ತದೆ. ನಿರ್ಗಮನ ಮಾನ್ಸೂನ್ ಪ್ರಭಾವದಿಂದ ದಕ್ಷಿಣ ಮೈದಾನದಲ್ಲಿ ಸ್ವಲ್ಪ ಮಳೆಬೀಳುವುದುಂಟು. ಆಗ ಉಷ್ಣಾಂಶದಲ್ಲಿ ಬದಲಾವಣೆಯಿರುತ್ತದೆ. ಒಂದು ವೇಳೆ ಸೈಕ್ಲೋನ್ ಸಂಭವಿಸಿದರೆ ಇನ್ನೂ ಹೆಚ್ಚು ಬದಲಾವಣೆಯಾಗುವುದು. ಡಿಸೆಂಬರ್ ಮಾಹೆಯಲ್ಲಿ ಉತ್ತರ ಮೈದಾನದ ಉಷ್ಣತೆ ಕಡಿಮೆಯಾದರೂ ದಕ್ಷಿಣದಲ್ಲಿ ಕಡಿಮೆಯಾಗುವುದಿಲ್ಲ. ಮಳೆ ಕಡಿಮೆಯಾದಂತೆ ಹಾಗೂ ಈಶಾನ್ಯದಿಂದ ಬೀಸುವ ತಣ್ಣನೆ ಗಾಳಿಯನ್ನು ಸಹ್ಯಾದ್ರಿ ಸರಣಿಗಳು ತಡೆಯುತ್ತವೆ. ಹೀಗಾಗಿ ಜನವರಿಯಲ್ಲಿ ಉಷ್ಣಾಂಶ ಕನಿಷ್ಠಮಟ್ಟವನ್ನು ತಲುಪುತ್ತದೆ. ಮತ್ತೆ ಮಾರ್ಚಿಯಿಂದ ಉಷ್ಣಾಂಶ ಏರುತ್ತಾ ಹೋಗುವುದು. ಮಡಿಕೇರಿ ಸುತ್ತಮುತ್ತ ಕರಾವಳಿಪ್ರದೇಶಗಳಲ್ಲಿ ಚಳಿಗಾಲ ಮತ್ತು ಬೇಸಗೆಗಳ ನಡುವೆ ಹೆಚ್ಚು ಉಷ್ಣಾಂಶದ ವ್ಯತ್ಯಾಸವಿರುತ್ತದೆ. ಮಾರ್ಚ್–ಏಪ್ರಿಲ್ ಮಾಹೆಗಳಲ್ಲಿ ಸೆಕೆ ಹೆಚ್ಚು ($22^0$ ರಿಂದ $24^0$ಸೆ.) ಆ ಸಮಯದ ಹಗಲಿನ ಗರಿಷ್ಠ ಉಷ್ಣಾಂಶ $28^0$ ರಿಂದ $30^0$ಸೆ., ಚಳಿಗಾಲದಲ್ಲಿ ಬೇಸಗೆಗಿಂತ ಆರ್ದ್ರತೆಯ ಪ್ರಮಾಣ ಕಡಿಮೆ.

ಮಳೆಯ ಹಂಚಿಕೆ: ಕರ್ನಾಟಕದ ಎಲ್ಲಾ ಭಾಗಗಳಲ್ಲೂ, ಮಳೆಯ ಹಂಚಿಕೆ ಸಮನಾಗಿಲ್ಲ. ಇದಕ್ಕೆ ಋತುಕಾಲಿಕ ಮಾನ್ಸೂನ್ ಮಾರುತಗಳು, ಮೇಲ್ಮೈಲಕ್ಷಣ, ಪರ್ಯಾಯ ಪ್ರಸ್ಥಭೂಮಿಯನ್ನಾವರಿಸಿರುವ ಸಮುದ್ರಗಳು ಪ್ರಮುಖ ಕಾರಣಗಳಾಗಿವೆ. ನೈಋತ್ಯ ಮತ್ತು ಈಶಾನ್ಯ ಮಾನ್ಸೂನ್ ಮಾರುತಗಳಿಂದ ರಾಜ್ಯದಾದ್ಯಂತ ಮಳೆ ಬೀಳುತ್ತದೆ. ಚಳಿಗಾಲ ಮತ್ತು ಬೇಸಗೆ ಅವಧಿಗಳಲ್ಲಿ ಸ್ವಲ್ಪವೇ ಮಳೆಯಾಗುವುದು. ವಾರ್ಷಿಕ ಮಳೆಯು ಪಶ್ಚಿಮ ಘಟ್ಟಗಳಲ್ಲಿ ಅತ್ಯಧಿಕವಾಗಿರುತ್ತದೆ. ಅಲ್ಲಿಂದ ಪೂರ್ವದ ಕಡೆಗೆ ಹೋದಂತೆಲ್ಲಾ ಕಡಿಮೆಯಾಗುವುದು. ಅದರಲ್ಲೂ ಮಲೆನಾಡಿನಲ್ಲಿ ಮಳೆಯು ಹೆಚ್ಚು. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಲ್ಲಿ ಅತ್ಯಧಿಕ ಮಳೆ ಬೀಳುವುದು. ಈ ಭಾಗಗಳಲ್ಲಿ ವರ್ಷಕ್ಕೆ ಸರಾಸರಿ 40 ಸೆಂಮೀ ಮಳೆ ಬೀಳುವುದು. ಇದೇ ಪ್ರದೇಶದಲ್ಲಿರುವ ಆಗುಂಬೆ ಪ್ರದೇಶಕ್ಕೆ ವರ್ಷದಲ್ಲಿ 500 ದಿಂದ 800 ಸೆಂಮೀ ಮಳೆಯಾಗುವುದು. ವಾಸ್ತವವಾಗಿ ಆಗುಂಬೆಯಲ್ಲಿ 828 ಸೆಂಮೀ ಮಳೆ ಬೀಳುವುದು. ಇದು ರಾಜ್ಯದಲ್ಲಿ ಅತ್ಯಂತ ಹೆಚ್ಚು ಮಳೆ ಬೀಳುವ ಸ್ಥಳ. ಇದನ್ನು ಕರ್ನಾಟಕದ ಚಿರಾಪುಂಜಿ ಎಂದು ಕರೆಯುವರು. ಕರ್ನಾಟಕದ ಮತ್ತೊಂದು ಅಧಿಕ ಮಳೆ ಬೀಳುವ ಪ್ರದೇಶವೆಂದರೆ ಕೊಡಗಿನ ಪೂರ್ವಭಾಗ. ಒಟ್ಟಾರೆ ಉತ್ತರ ಮತ್ತು ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಬೆಳಗಾಂವಿಯ ನೈಋತ್ಯ ಭಾಗ, ಚಿಕ್ಕಮಗಳೂರಿನ ಪಶ್ಚಿಮ ಭಾಗ, ಹಾಸನದ ಸಕಲೇಶಪುರ ತಾಲ್ಲೂಕುಗಳು ಅತ್ಯಧಿಕ ಪ್ರಮಾಣದಲ್ಲಿ ಮಳೆ ಬೀಳುವ ಭಾಗಗಳಾಗಿವೆ.

ಪೂರ್ವದ ಕಡೆಗೆ ಹೋದಂತೆ ಮಳೆಯ ಪ್ರಮಾಣವು ಕಡಿಮೆಯಾಗುತ್ತಾ ಮೈದಾನದ ಕೆಲವೆಡೆ ಕನಿಷ್ಠ ಪ್ರಮಾಣದಲ್ಲಿ ಮಳೆ ಬೀಳುವುದು. ಬಿಜಾಪುರ, ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಕಡಿಮೆ ಮಳೆಯಾಗುವ ಪ್ರದೇಶಗಳು. ಚಳ್ಳಕೆರೆಯು ಕರ್ನಾಟಕದಲ್ಲೇ ಅತ್ಯಂತ ಕಡಿಮೆ ಮಳೆ (46 ಸೆಂಮೀ) ಬೀಳುವ ಪ್ರದೇಶ. ಚಳ್ಳಕೆರೆಯ ವಾಯವ್ಯ ಭಾಗದಲ್ಲಿರುವ ನಾಯಕನ ಹಟ್ಟಿ ಮತ್ತು ಆಗ್ನೇಯ ದಿಕ್ಕಿನಲ್ಲಿರುವ ಧರ್ಮಪುರ ಎಂಬ ಸ್ಥಳಗಳು ಇನ್ನೂ ಕಡಿಮೆ ಪ್ರಮಾಣದ ಮಳೆಯಾಗುವ ಪ್ರದೇಶಗಳು.

ಭಾರತದ ನಾಲ್ಕು ಋತುಮಾನುಗಳನ್ನು ಗಣನೆಗೆ ತೆಗೆದುಕೊಂಡಾಗ ಕರ್ನಾಟಕಕ್ಕೆ ಹೆಚ್ಚು ಮಳೆಯಾಗುವ ಅವಧಿ ನೈಋತ್ಯ ಮಾನ್ಸೂನ್ ಕಾಲ. ನೈಋತ್ಯ ಮಾನ್ಸೂನ್ ಮಾರುತಗಳು ಕರಾವಳಿಯನ್ನು ತಲುಪುವುದಕ್ಕೂ ಮುಂಚೆ ಅರಬ್ಬಿ ಸಮುದ್ರದ ಮೇಲೆ ಹಾಯ್ದು ಬರುವಾಗ ಅವು ಸಾಕಷ್ಟು ತೇವಾಂಶವನ್ನು ಪಡೆದಿರುತ್ತವೆ. ಅವು ಪಶ್ಚಿಮ ಘಟ್ಟಗಳ ಮೇಲೇರಿದಂತೆಲ್ಲಾ ತಂಪಾಗಿ ಘನೀಕರಣದಿಂದ ದಟ್ಟವಾದ ಮೋಡಗಳು ರೂಪುಗೊಂಡು, ಹೆಚ್ಚು ಮಳೆ ಬೀಳುವುದಕ್ಕೆ ಕಾರಣವಾಗುತ್ತವೆ. ಆದರೆ ಮಳೆಯು ನಿರಂತರವಾಗಿ ಬೀಳುವುದಿಲ್ಲ. ಅದು ಅಕಾಲಿಕವಾಗಿರುತ್ತದೆ. ಹಾಗೆಯೇ ಮಳೆಯ ಹಂಚಿಕೆಯಲ್ಲಿಯೂ ಪ್ರಾದೇಶಿಕ ವ್ಯತ್ಯಾಸವಿರುತ್ತದೆ. ಕರಾವಳಿ ಮತ್ತು ಮಲೆನಾಡು ಭಾಗಗಳಿಗೆ ಹೆಚ್ಚು ಮಳೆಯಾದರೆ ರಾಜ್ಯದ ಪೂರ್ವಾರ್ಧಕ್ಕೆ ಹೋದಂತೆ 40 ಸೆಂಮೀ ಗಿಂತಲೂ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುವುದು. ಆಗುಂಬೆ ಮತ್ತು ಭಾಗಮಂಡಲಗಳಲ್ಲಿ ಈ ಅವಧಿಯಲ್ಲಿ ಬೀಳುವ ಮಳೆ ಅನುಕ್ರಮವಾಗಿ 700 ಸೆಂಮೀ ಮತ್ತು 500 ಸೆಂಮೀ ಗಳಾದರೆ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ಹಾಗೂ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಗಳಲ್ಲಿ ಅನುಕ್ರಮವಾಗಿ 20 ಮತ್ತು 22 ಸೆಂಮೀ ಮಳೆಯನ್ನು ಪಡೆವ ಈ ಋತುವಿನ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಗಳಾಗಿವೆ. ರಾಜ್ಯದ ವಾರ್ಷಿಕ ಮಳೆಯ ಹಂಚಿಕೆಯಲ್ಲಿ ಶೇ. 75ರಷ್ಟು ಮಳೆಯು ಈ ಅವಧಿಯಲ್ಲಿ ಬೀಳುತ್ತದೆ.

ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಮಾರುತಗಳು ಭೂಭಾಗದಿಂದ ಬೀಸುವುದರಿಂದ ಅವು ಸಾಮಾನ್ಯವಾಗಿ ಒಣ ಗಾಳಿಗಳಾಗಿರುತ್ತವೆ. ಆದ್ದರಿಂದ ಅವು ಸಾಕಷ್ಟು ಮಳೆಯನ್ನು ಸುರಿಸಲಾರವು. ಆದರೆ ಬಂಗಾಳ ಕೊಲ್ಲಿಯ ಮೇಲೆ ಹಾಯ್ದು ಬರುವಾಗ ತೇವಾಂಶವನ್ನು ಪಡೆದುಕೊಳ್ಳುವುದರಿಂದ ಭಾರತದ ಪೂರ್ವ ಕರಾವಳಿಗೆ ಸ್ವಲ್ಪ ಮಳೆಯನ್ನು ಸುರಿಸುವವು. ಅವು ಕರ್ನಾಟಕವನ್ನು ತಲುಪುವ ವೇಳೆಗೆ ದುರ್ಬಲವಾಗುವುದರಿಂದ ಅಷ್ಟೊಂದು ಮಳೆಯನ್ನು ಸುರಿಸಲಾರವು. ಆದರೂ ರಾಜ್ಯದ ಬಯಲು ಪ್ರದೇಶಗಳಲ್ಲಿ ಸ್ವಲ್ಪ ಮಳೆಯಾಗುತ್ತದೆ. ಇದನ್ನು ಹಿಂಗಾರು ಮಳೆ ಎಂದು ಕರೆಯುವರು. ಮಳೆಯ ಪ್ರಮಾಣ ಮೈದಾನ ಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೂ ಹಾಗೂ ಕರಾವಳಿಯ ಕಡೆಗೆ ಬಂದಂತೆ ಕಡಿಮೆಯಾಗುವುದು. ತುಮಕೂರಿನ ಪಶ್ಚಿಮ, ಹಾಸನ ಜಿಲ್ಲೆಯ ಪೂರ್ವಭಾಗ, ಮಂಡ್ಯ, ಮೈಸೂರು ಮತ್ತು ಕೋಲಾರ ಜಿಲ್ಲೆಗಳ ಪೂರ್ವ ಭಾಗಗಳಿಗೆ ವಾರ್ಷಿಕ ಮಳೆಯಲ್ಲಿ ಶೇ. 30ರಷ್ಟು ಈ ಅವಧಿಯಲ್ಲಿ ಬೀಳುತ್ತದೆ. ಬೀದರ್, ಗುಲ್ಬರ್ಗ ಮತ್ತು ಕರಾವಳಿಗಳಲ್ಲಿ ಕನಿಷ್ಠ ಪ್ರಮಾಣದಲ್ಲಿ ಮಳೆ ಬೀಳುವುದು.

**ಕರ್ನಾಟಕದ ಜಿಲ್ಲಾವಾರು ಮಳೆಯ ಹಂಚಿಕೆ, (ಸೆಂಮೀಗಳಲ್ಲಿ)**

| | ಜಿಲ್ಲೆ | ವಾರ್ಷಿಕ ಸರಾಸರಿ | ವಾಸ್ತವ ವಾರ್ಷಿಕ ಮಳೆ (2003) |
|---|---|---|---|
| 1. | ಉತ್ತರ ಕನ್ನಡ | 421 | 396 |
| 2. | ದಕ್ಷಿಣ ಕನ್ನಡ | 393 | 353 |
| 3. | ಉಡುಪಿ | 284 | 243 |
| 4. | ಶಿವಮೊಗ್ಗ | 286 | 217 |
| 5. | ಕೊಡಗು | 280 | 215 |
| 6. | ಚಿಕ್ಕಮಗಳೂರು | 206 | 123 |
| 7. | ಹಾಸನ | 276 | 99 |
| 8. | ಬೀದರ್ | 89 | 72 |
| 9. | ಬೆಳಗಾಂವಿ | 83 | 67 |
| 10. | ಮೈಸೂರು | 73 | 59 |
| 11. | ಚಾಮರಾಜನಗರ | 70 | 57 |
| 12. | ಮಂಡ್ಯ | 63 | 54 |
| 13. | ಬೆಂಗಳೂರು (ಗ್ರಾ) | 75 | 53 |
| 14. | ಹಾವೇರಿ | 75 | 53 |
| 15. | ಬೆಂಗಳೂರು | 73 | 52 |
| 16. | ಕೋಲಾರ | 84 | 49 |
| 17. | ಗುಲ್ಬರ್ಗ | 78 | 47 |
| 18. | ದಾವಣಗೆರೆ | 66 | 45 |
| 19. | ಧಾರವಾಡ | 77 | 43 |
| 20. | ತುಮಕೂರು | 54 | 42 |
| 21. | ರಾಯಚೂರು | 62 | 40 |
| 22. | ಗದಗ | 61 | 35 |
| 23. | ಕೊಪ್ಪಳ | 58 | 33 |
| 24. | ಚಿತ್ರದುರ್ಗ | 73 | 33 |
| 25. | ಬಳ್ಳಾರಿ | 61 | 32 |
| 26. | ಬಿಜಾಪುರ | 58 | 31 |
| 27. | ಬಾಗಲಕೋಟೆ | 68 | 24 |
| 28. | ರಾಮನಗರ | ಅಲಭ್ಯ | ಅಲಭ್ಯ |
| 29. | ಚಿಕ್ಕಬಳ್ಳಾಪುರ | ಅಲಭ್ಯ | ಅಲಭ್ಯ |
| | | **119** | **82** |

ಚಳಿಗಾಲದಲ್ಲಿ ಅತ್ಯಲ್ಪ ಮಳೆಯಾಗುವುದು. ಬೇಸಗೆಯ ಕೊನೆಯ ಭಾಗದಲ್ಲಿ, ಅಂದರೆ ಮೇ ತಿಂಗಳಲ್ಲಿ ಪರಿಸರಣ ರೀತಿಯ ಮಳೆ ಬೀಳುವುದು. ಈ ಎರಡು ಋತುವಿನಲ್ಲಿ ಬೀಳುವ ಮಳೆಯ ಹಂಚಿಕೆಯು ರಾಜ್ಯಕ್ಕೆ ಅಷ್ಟೊಂದು ಮಹತ್ತ್ವದ್ದಾಗಿರುವುದಿಲ್ಲ. ಆದರೆ ಮೇ ತಿಂಗಳಲ್ಲಿ ಬೀಳುವ ಮಳೆಯು ಕಾಫಿ ಬೇಸಾಯಗಾರರಿಗೆ ಬಹಳ ಮಹತ್ತ್ವವುಳ್ಳದ್ದಾಗಿರುತ್ತದೆ. ಏಕೆಂದರೆ ಈ ಮಳೆಯು ಕಾಫಿ ಗಿಡಗಳು ಹೂವು ಬಿಡುವುದಕ್ಕೆ ಪೂರಕವಾಗಿರುತ್ತದೆ. ಆದ್ದರಿಂದ ಬೇಸಗೆಯಲ್ಲಾಗುವ ಈ ಮಳೆಯನ್ನು ಕಾಫಿಯ ಹೂಮಳೆ ಎಂದು ಕರೆಯುವರು.

ಮಳೆಯ ಹಂಚಿಕೆಯನ್ನಾಧರಿಸಿ ಕರ್ನಾಟಕವನ್ನು ಮುಖ್ಯವಾಗಿ ಮೂರು ಪ್ರದೇಶಗಳನ್ನಾಗಿ ಈ ಕೆಳಕಂಡಂತೆ ವಿಂಗಡಿಸಬಹುದು:

1) ಅಧಿಕ ಮಳೆ ಬೀಳುವ ಪ್ರದೇಶ: ಈ ಪ್ರದೇಶ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಭಾಗ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಬೆಳಗಾಂವಿಯ ಪಶ್ಚಿಮ ಭಾಗ ಹಾಗೂ ಧಾರವಾಡ ಮತ್ತು ಮೈಸೂರು ಜಿಲ್ಲೆಗಳ ಕೆಲವೇ ಭಾಗಗಳನ್ನೊಳಗೊಂಡಿದೆ. ಈ ಪ್ರದೇಶದ ವಾರ್ಷಿಕ ಸರಾಸರಿ ಮಳೆ 250 ಸೆಂಮೀ ಕೆಲವು ಭಾಗಗಳಲ್ಲಿ 700 ಸೆಂಮೀ ಗಿಂತಲೂ ಹೆಚ್ಚು ಮಳೆಯಾಗುವುದು. ಆಗುಂಬೆಯು ಈ ಪ್ರದೇಶದಲ್ಲಿ ಬರುವುದು. ಈ ಪ್ರದೇಶವು ನೈಋತ್ಯ ಮಾನ್ಸೂನ್ ಮಾರುತಗಳ ಅಭಿಮುಖ ಭಾಗವಾಗಿದ್ದು ಅತ್ಯಧಿಕ ಪ್ರಮಾಣದಲ್ಲಿ ಆರೋಹಣ ಮಾದರಿ ಮಳೆಯನ್ನು ಪಡೆಯುವುದು. ಇಲ್ಲಿ ಬೀಳುವ ಮಳೆಯ ಹಂಚಿಕೆ ಮತ್ತು ಪ್ರಮಾಣಗಳೆರಡೂ ನಿಶ್ಚಿತವಾಗಿರುತ್ತವೆ.




2) ಸಾಧಾರಣ ಮಳೆ ಬೀಳುವ ಪ್ರದೇಶ: ಈ ಪ್ರದೇಶದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಪೂರ್ವಭಾಗ, ಮೈಸೂರು ಜಿಲ್ಲೆ, ಧಾರವಾಡ, ಹಾವೇರಿ ಮತ್ತು ಬೆಳಗಾಂವಿ ಜಿಲ್ಲೆಗಳ ಹೃದಯ ಭಾಗ, ಹಾಸನ, ಮಂಡ್ಯ, ಬೆಂಗಳೂರು ಮತ್ತು ಬೀದರ್ ಜಿಲ್ಲೆಗಳು, ತುಮಕೂರು ಜಿಲ್ಲೆಯ ಉತ್ತರ ಭಾಗ ಮುಂತಾದವು ಸೇರುತ್ತವೆ. ಈ ಪ್ರದೇಶದ ವಾರ್ಷಿಕ ಸರಾಸರಿ ಮಳೆ 95 ಸೆಂಮೀ ಗಳಾಗಿರುತ್ತದೆ. ಆದರೆ ಪಶ್ಚಿಮದಿಂದ ಪೂರ್ವಕ್ಕೆ ಹೋದಂತೆಲ್ಲಾ ಮಳೆಯ ಪ್ರಮಾಣವು ಕಡಿಮೆಯಾಗುವುದು.

3) ಕಡಿಮೆ ಮಳೆ ಬೀಳುವ ಪ್ರದೇಶ: ಈ ಪ್ರದೇಶ ರಾಯಚೂರು ಬಳ್ಳಾರಿ, ಬಿಜಾಪುರ ಮತ್ತು ಚಿತ್ರದುರ್ಗ, ಗುಲ್ಬರ್ಗದ ದಕ್ಷಿಣ ಭಾಗ, ಬೆಳಗಾಂವಿ ಜಿಲ್ಲೆಯ ಪೂರ್ವಭಾಗ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಯ ಉತ್ತರ ಭಾಗ, ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮುಂತಾದವುಗಳನ್ನು ಒಳಗೊಂಡಿದೆ. ಇಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ 60 ಸೆಂಮೀ ಗಳು ಮಾತ್ರ. ಕೆಲವು ಭಾಗಗಳಾದ ಚಿತ್ರದುರ್ಗ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಗಳಲ್ಲಿ ಸರಾಸರಿಗಿಂತಲೂ ಕನಿಷ್ಠ ಪ್ರಮಾಣದಲ್ಲಿ ಮಳೆಯಾಗುವುದು. ಜೊತೆಗೆ ಮಳೆ ಬೀಳುವುದು ಅನಿಶ್ಚಿತವಾಗಿರುತ್ತದೆ. ಪರಿಣಾಮವಾಗಿ ಈ ಪ್ರದೇಶಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತವೆ.

ಬರಪೀಡಿತ ಪ್ರದೇಶಗಳು: ಮಳೆಗಾಲದಲ್ಲಿ ಬೀಳುವ ಮಳೆ ಕಡಿಮೆಯಿದ್ದು, ಹಾಗೂ ಮಳೆಯ ಹಂಚಿಕೆಯಲ್ಲಿ ಹೆಚ್ಚು ಏರುಪೇರಿನಿಂದ ಕೂಡಿದ್ದರೆ ಅಂತಹ ಭಾಗಗಳನ್ನು ಬರಪೀಡಿತ ಪ್ರದೇಶಗಳೆಂದು ಕರೆಯುವರು. ಕರ್ನಾಟಕದಲ್ಲಿ ಅತೀವೃಷ್ಟಿಗಿಂತ ಅನಾವೃಷ್ಟಿ ಅಥವಾ ಬರವು ತಲೆದೋರುವುದು ಹೆಚ್ಚು. ಇದಕ್ಕೆ ಮಾನ್ಸೂನ್ ಮಾದರಿಯ ಮಳೆಯ ಹಂಚಿಕೆಯು ಪ್ರಮುಖವಾದ ಕಾರಣವಾಗಿರುತ್ತದೆ. ಇತ್ತೀಚಿಗೆ ರಾಜ್ಯದ ಮಳೆಯ ಹಂಚಿಕೆಯಲ್ಲಿ ತೀವ್ರವಾದ ಬದಲಾವಣೆ, ಅದರಲ್ಲಿಯೂ ಅನಾವೃಷ್ಟಿಯಿಂದ ಕೃಷಿ ವಲಯದಲ್ಲಿ ಗಂಭೀರವಾದ ಪರಿಸ್ಥಿತಿಯು ಸಂಭವಿಸುವುದು. ಜೊತೆಗೆ ಜಲವಿದ್ಯುಚ್ಛಕ್ತಿಯ ಕೊರತೆ ಉಲ್ಬಣಗೊಳ್ಳುವುದು. ಇಂತಹ ಪರಿಸ್ಥಿತಿಯು ಆಗಾಗ್ಗೆ ತಲೆದೋರುವುದಕ್ಕೆ ಅನೇಕ ಕಾರಣಗಳಿದ್ದರೂ, ಸಸ್ಯವರ್ಗವು ನಾಶವಾಗುತ್ತಿರುವುದು ಹಾಗೂ ವಾಯುಮಾಲಿನ್ಯಗಳು ಪ್ರಮುಖವಾದ ಕಾರಣಗಳಾಗಿವೆ.

ಎಪ್ಪತ್ತೈದು ವರ್ಷಗಳ ದೀರ್ಘಾವಧಿವರೆಗಿನ ರಾಜ್ಯದ 27 ಜಿಲ್ಲೆಗಳ ಮಳೆಯ ಹಂಚಿಕೆಯನ್ನು ಅಭ್ಯಸಿಸಿದಾಗ ಪ್ರತಿವರ್ಷವೂ ಒಂದಲ್ಲ ಒಂದು ಜಿಲ್ಲೆಯಲ್ಲಿ ಬರ ತಲೆದೋರಿರುವುದು ಕಂಡು ಬರುತ್ತದೆ. 1899, 1904, 1905, 1908, 1911, 1920, 1922, 1926, 1934, 1937, 1945, 1952, 1965, 1967, 1972 ಮತ್ತು 2003 ಪ್ರಮುಖ ಬರಪೀಡಿತ ವರ್ಷಗಳಾಗಿವೆ. ಸಾಮಾನ್ಯವಾಗಿ ದಕ್ಷಿಣದ ಜಿಲ್ಲೆಗಳಿಗಿಂತ ಉತ್ತರ ಜಿಲ್ಲೆಗಳಲ್ಲಿ ಬರ ಸಂಭವಿಸುವುದು ಸರ್ವೇ ಸಾಮಾನ್ಯವಾಗಿದೆ. ಉದಾ: ಬೀದರ್, ರಾಯಚೂರು, ಗುಲ್ಬರ್ಗ, ತುಮಕೂರು, ಚಿತ್ರದುರ್ಗ ಇತ್ಯಾದಿ. ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತಿಹೆಚ್ಚು ಸಲ ಬರಗಳು ಸಂಭವಿಸಿವೆ. ಅಂದರೆ 75 ವರ್ಷಗಳಲ್ಲಿ 30 ಸಲ ಬರ ಸಂಭವಿಸಿದೆ. ಇಷ್ಟೇ ಅಲ್ಲದೆ ಕೆಲವು ಜಿಲ್ಲೆಗಳ ಭಾಗಗಳಲ್ಲಿಯೂ ಆಗಾಗ್ಗೆ ಬರ ಸಂಭವಿಸುತ್ತದೆ. ಉದಾ: ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ಚಾಮರಾಜನಗರ, ಬೆಳಗಾಂವಿಯ ಅಥಣಿ, ಧಾರವಾಡದ ನರಗುಂದ, ಚಿಕ್ಕಮಗಳೂರಿನ ಕಡೂರು ಹಾಗೂ ಮಧುಗಿರಿ, ಬಂಗಾರಪೇಟೆ, ಗುಡಿಬಂಡೆ, ಬಾಗೆಪಲ್ಲಿ, ರಾಯಭಾಗ ಇತ್ಯಾದಿ.

ನದೀವ್ಯವಸ್ಥೆ: ಕರ್ನಾಟಕದ ನದೀವ್ಯವಸ್ಥೆ ಅದರ ಮೇಲ್ಮೈಯ ಲಕ್ಷಣಕ್ಕೆ ಅನುಗುಣವಾಗಿದೆ. ರಾಜ್ಯದ ನೀರಿನ ಹರಿವು ಸ್ಥೂಲವಾಗಿ ಪಶ್ಚಿಮದಿಂದ ಪೂರ್ವದ ಕಡೆಗೆ ಹೆಚ್ಚು. ರಾಜ್ಯದ ಜಲವಿಭಾಜಕ ರೇಖೆಯಲ್ಲಿ ಬಲ್ಲಾಳರಾಯನದುರ್ಗದಿಂದ ನಂದಿದುರ್ಗಕ್ಕೆ ಒಂದು, ಅಲ್ಲಿಂದ ದಕ್ಷಿಣಾಭಿಮುಖವಾಗಿ ಆನೆಕಲ್ಲಿನವರೆಗೆ ಇನ್ನೊಂದು, ಹಾಗೂ ದೇವರಾಯನದುರ್ಗದಿಂದ ಪಾವಗಡಕ್ಕೆ ಮತ್ತೊಂದನ್ನೂ ಗುರ್ತಿಸಲಾಗಿದೆ. ಇದರಿಂದ ಕರ್ನಾಟಕದ ಮುಖ್ಯ ಜಲಾನಯನ ವ್ಯವಸ್ಥೆಗಳ ಎಲ್ಲೆಗಳನ್ನು ಗುರುತಿಸಿದಂತಾಗುತ್ತದೆ. ನಂದಿದುರ್ಗ ಮತ್ತು ಬಲ್ಲಾಳರಾಯನದುರ್ಗಗಳನ್ನು ಕೂಡಿಸುವ ಜಲವಿಭಾಜಕ ರೇಖೆಯ ಉತ್ತರಕ್ಕೆ ಹರಿಯುವ ಮುಖ್ಯ ನದಿಗಳು ತುಂಗಾ ಮತ್ತು ಭದ್ರಾ. ಇವು ಪಶ್ಚಿಮಘಟ್ಟಗಳ ಗಂಗಾಮೂಲದಲ್ಲಿ ಹುಟ್ಟಿ ಬೇರೆ ಬೇರೆ ದಿಕ್ಕುಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹರಿದು ಶಿವಮೊಗ್ಗದ ಕೂಡ್ಲಿಯಲ್ಲಿ ಸೇರುತ್ತವೆ. ಅಲ್ಲಿಂದ ಮುಂದೆ ತುಂಗಭದ್ರೆಯೆನಿಸಿಕೊಳ್ಳುವ ನದಿಗೆ ವೇದಾವತಿ ಮತ್ತು ವರದಾ ಎಂಬ ಎರಡು ಮುಖ್ಯ ಉಪನದಿಗಳು. ಕೃಷ್ಣನದಿಯ ಉಪನದಿಯಾದ ತುಂಗಭದ್ರಾ ಅಂತಿಮವಾಗಿ ಆಂಧ್ರಪ್ರದೇಶದ ಕರ್ನೂಲಿನ ಬಳಿ ಕೃಷ್ಣಾ ನದಿಯನ್ನು ಕೂಡಿಕೊಳ್ಳುತ್ತದೆ. ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಹುಟ್ಟಿ ಕರ್ನಾಟಕದ ಉತ್ತರದಲ್ಲಿ ಹರಿದು ಆಂಧ್ರಪ್ರದೇಶಕ್ಕೆ ಹೋಗುವ ಮುಖ್ಯ ನದಿ ಕೃಷ್ಣಾ. ಭೀಮಾ ಇದರ ಮತ್ತೊಂದು ಮುಖ್ಯ ಉಪನದಿ. ಘಟಪ್ರಭಾ ಮಲಪ್ರಭಾ ಮತ್ತು ಡೋಣಿ ಇತರ ಉಪನದಿಗಳಲ್ಲಿ ಕೆಲವು. ಬಲ್ಲಾಳರಾಯನದುರ್ಗ ಮತ್ತು ನಂದಿದುರ್ಗಗಳ ನೇರಕ್ಕೆ ಹಬ್ಬಿರುವ ಬೆಟ್ಟಸಾಲುಗಳ ದಕ್ಷಿಣಕ್ಕಿರುವ ಮುಖ್ಯ ನದಿ ಕಾವೇರಿ. ದಕ್ಷಿಣ ಗಂಗಾವೆಂದೇ ಪ್ರಸಿದ್ಧಿ. ಕೊಡುಗು ಜಿಲ್ಲೆಯ ಬ್ರಹ್ಮಗಿರಿ ಶ್ರೇಣಿಯಲ್ಲಿ ಭಾಗಮಂಡಲದ ಬಳಿ ($12^0 25'$ ಉ.ಅ., $75^0 34'$ ಪೂ.ರೇ.) ಇದು ಹುಟ್ಟುತ್ತದೆ. ಪಶ್ಚಿಮ ಘಟ್ಟಗಳ ತುತ್ತತುದಿಯಲ್ಲಿ ಅರಬ್ಬಿ ಸಮುದ್ರಕ್ಕೆ ಅನತಿದೂರದಲ್ಲಿ ಹುಟ್ಟುವ ಈ ನದಿ ಘಟ್ಟಗಳನ್ನು ದಾಟಿ ಪೂರ್ವಾಭಿಮುಖವಾಗಿ ಹರಿಯುವುದು ಗಮನಾರ್ಹ. ಘಟ್ಟಗಳ ನೆತ್ತಿಗೆರೆಯ ಪಶ್ಚಿಮದ ಕಡೆಯ ಬೆಟ್ಟಸೀಮೆಯ ನೀರನ್ನೂ ಇದು ಸ್ವಲ್ಪಮಟ್ಟಿಗೆ ಕೂಡಿಸಿಕೊಳ್ಳುತ್ತದೆ. ಜೂನ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಸುತ್ತ ಬೀಳುವ ಹೆಚ್ಚು ಮಳೆಯಿಂದ ಉಕ್ಕಿ ಹರಿಯುವ ಕಾವೇರಿ, ಘಟ್ಟಗಳ ಕೆಳಗಿನ ಬಯಲು ಸೀಮೆಗೆ ಸಮೃದ್ಧ ನೀರೊದಗಿಸುವ ಮುಖ್ಯ ಜಲಧಾರೆ. ಮೈಸೂರು, ಹಾಸನ, ಮಂಡ್ಯ ಜಿಲ್ಲೆಗಳ ಮೂಲಕ ಹರಿದು ಬೆಂಗಳೂರು ಜಿಲ್ಲೆಯ ದಕ್ಷಿಣದಂಚನ್ನು ಸೋಂಕಿ ಸಾಗಿ ತಮಿಳು ನಾಡಿಗೆ ಜಾರುವ ಈ ನದಿಯ ಉಪನದಿಗಳು ಅನೇಕ. ಹಾರಂಗಿ, ಯಗಚಿಯಿಂದೊಡಗೂಡಿದ ಹೇಮಾವತಿ, ಲಕ್ಷ್ಮಣತೀರ್ಥ, ಕಪಿಲ, ಸುವರ್ಣಾವತಿ, ಶಿಂಷಾ ಮತ್ತು ಅರ್ಕಾವತಿ–ಇವು ಕರ್ನಾಟಕದ ಇತರ ಕೆಲವು ಉಪನದಿಗಳು. ನುಗು ಮತ್ತು ಗುಂಡಲುಗಳು ಕಪಿಲಾವನ್ನೂ, ಕಣ್ವ ಶಿಂಷಾವನ್ನೂ ಸೇರುವ ಉಪನದಿಗಳು.

ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ಕರ್ನಾಟಕದ ನದಿಗಳೂ ಅಸಂಖ್ಯಾತ ತೊರೆಗಳೂ ಕಡಿದಾದ ಘಟ್ಟ ಪಾರ್ಶ್ವದಿಂದ ಥಟ್ಟನೆ ಇಳಿದು, ಜಲಪಾತಗಳನ್ನು ಸೃಷ್ಟಿಸಿ, ಕಿರಿದಾದ ನೆಲವನ್ನು ದಾಟಿ ಅರಬ್ಬಿ ಸಮುದ್ರದಲ್ಲಿ ಅದೃಶ್ಯವಾಗುತ್ತವೆ. ಪಶ್ಚಿಮ ಕರಾವಳಿ ಪ್ರದೇಶ ಹೆಚ್ಚು ಮಳೆ ಪಡೆಯುವುದರಿಂದ ಈ ನದಿಪಾತ್ರಗಳು ನೀರಾವರಿಗೆ ಅಷ್ಟೇನೂ ಉಪಯುಕ್ತವಲ್ಲ. ಆದರೆ ವಿದ್ಯುದುತ್ಪಾದನೆಗೆ ಇವು ಹೆಚ್ಚು ಉಪಯುಕ್ತ. ದೊಡ್ಡ ನದಿಗಳು ಸಮುದ್ರ ಸೇರುವೆಡೆಯಲ್ಲಿ ಅಳಿವೆಗಳನ್ನು ಸೃಷ್ಟಿಸಿ ದೋಣಿಸಂಚಾರಕ್ಕೆ ಅನುಕೂಲ ಕಲ್ಪಿಸಿವೆ. ಆದರೆ ದಕ್ಷಿಣೋತ್ತರವಾಗಿ ಸಂಚರಿಸಲು ಈ ನದಿಪಾತ್ರಗಳು ದೊಡ್ಡ ಅಡಚಣೆಗಳು. ಇವು ಘಟ್ಟಗಳಿಂದ ಸವೆಸಿ ತರುವ ಮೆಕ್ಕಲುಮಣ್ಣು ಫಲವತ್ತಾಗಿರುವುದರಿಂದ ಗದ್ದೆತೋಟಗಳಿಗೆ

ಉಪಯುಕ್ತ. ಮಳೆಯಿಂದ ತೊಯ್ದ ಘಟ್ಟಗಳ ಜೀವಕೋಟಿಯ ಸಾರ ಗ್ರಹಿಸಿ ಸಮುದ್ರ ಸೇರುವ ಜಲರಾಶಿಯಲ್ಲಿ ಮೀನಿಗೆ ಸಮೃದ್ಧಿಯಾಗಿ ಆಹಾರ ಒದಗುತ್ತದೆ. ಇಡೀ ಭಾರತದಲ್ಲೇ ಕರ್ನಾಟಕದ ಕಡಲ ಮೀನು ಅತ್ಯಧಿಕ ಆಹಾರಾಂಶವುಳ್ಳದ್ದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುವ ನದಿಗಳಲ್ಲಿ ಕಾಳಿ, ಗಂಗಾವಳಿ, ತದಡಿ, ಅಘನಾಶಿನಿ, ನೇತ್ರಾವತಿ, ವರಾಹಿ ಮತ್ತು ಶರಾವತಿ ಮುಖ್ಯ. ಶಿವಮೊಗ್ಗ ಜಿಲ್ಲೆಯ ಅಂಬುತೀರ್ಥದ ಬಳಿ ಉಗಮ ಹೊಂದುವ ಶರಾವತಿ ನದಿ ಘಟ್ಟದಿಂದ ಕೆಳಕ್ಕಿಳಿಯುವಾಗ ಗೇರುಸೊಪ್ಪೆಯಲ್ಲಿ ಭವ್ಯವಾದ ಜಲಪಾತ ಸೃಷ್ಟಿಸಿದೆ. ಕೊಡಗಿನಲ್ಲಿ ಹುಟ್ಟಿ ಕಾಸರಗೋಡಿನ ಸಮುದ್ರ ಸೇರುವ ಪಯಸ್ವಿನೀ ಸ್ವಲ್ಪ ದೂರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುತ್ತದೆ. ಕುದುರೆಮುಖದ ಬಲ್ಲಾಳರಾಯನ ದುರ್ಗದ ಬಳಿ ಉಗಮಿಸುವ ನೇತ್ರಾವತಿ ನದಿ, ಸುಬ್ರಹ್ಮಣ್ಯದ ಕಡೆಯಿಂದ ಜಾರಿ ಬರುವ ಕುಮಾರಧಾರೆಯನ್ನು ಉಪ್ಪಿನಂಗಡಿಯ ಬಳಿ ಕೂಡಿಸಿಕೊಂಡು ಮಂಗಳೂರಿನ ಬಳಿ ಅರಬ್ಬಿ ಸಮುದ್ರದಲ್ಲಿ ಸೇರುತ್ತದೆ. ಉತ್ತರದಿಂದ ಆಗಮಿಸುವ ಗುರುಪುರ ಹೊಳೆಯೂ ನೇತ್ರಾವತಿಯೂ ಸಮುದ್ರ ಸೇರುವುದು ಒಂದೇ ಎಡೆಯಲ್ಲಿ. ಸ್ವರ್ಣಾ, ಸೀತಾ ನದಿಗಳು ಉಡುಪಿ ತಾಲ್ಲೂಕಿನಲ್ಲಿ ಸಂಚರಿಸಿ ಹಂಗರಕಟ್ಟೆಯಲ್ಲಿ ಸಮುದ್ರ ಸೇರುತ್ತವೆ. ಕುಂದಾಪುರ ತಾಲ್ಲೂಕಿನಲ್ಲಿ ಕವಲುಗೂಡುವ ಸಣ್ಣ ಹೊಳೆಗಳು ಆ ತಾಲ್ಲೂಕಿನ ಸೌಂದರ್ಯವರ್ಧಕಗಳು.




ನಂದಿದುರ್ಗದ ಪೂರ್ವಕ್ಕೆ ಹರಿಯುವ ನದಿಗಳದು ಇನ್ನೊಂದು ವ್ಯವಸ್ಥೆ. ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ ಮತ್ತು ಪಾಲಾರ್ ಮುಖ್ಯವಾದವು. ಉತ್ತರ ಪಿನಾಕಿನಿಗೆ ಚಿತ್ರಾವತಿ ಮತ್ತು ಪಾಪಘ್ನಿ ಎಂಬ ಉಪನದಿಗಳು ಸೇರುತ್ತವೆ.

ಸ್ವಾಭಾವಿಕ ಸಸ್ಯವರ್ಗ:ಅತಿ ಶೈತ್ಯದಿಂದ ಬಹಳ ಒಣ ಹವೆಯವರೆಗೆ ವಿಧ ವಿಧದ ವಾಯುಗುಣಗಳೂ 1830 ಮೀ ಗಳಿಂದ ಸಮುದ್ರಮಟ್ಟದವರೆಗೆ ನಾನಾ ಎತ್ತರಗಳನೆಲಗಳೂ ಕರ್ನಾಟಕದಲ್ಲಿರುವುದರಿಂದ ಬಗೆಬಗೆಯ ಸಸ್ಯಗಳನ್ನು ಇಲ್ಲಿ ಕಾಣಬಹುದು. ವರ್ಷದಲ್ಲಿ 100 ಸೆಂಮೀ ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನಿತ್ಯಹರಿದ್ವರ್ಣದ ಕಾಡುಗಳು ಹಬ್ಬಿವೆ. ಮಲೆನಾಡಿನ ಸ್ವಾಭಾವಿಕ ಸಸ್ಯದಲ್ಲಿ ಬಹುಭಾಗ ಈಗಲೂ ಉಳಿದುಕೊಂಡಿದೆ. ಇದು ಈಗಲೂ ಅರಣ್ಯಾವೃತ ಪ್ರದೇಶ. ಮಲೆನಾಡಿನ ತಾಲ್ಲೂಕುಗಳಲ್ಲಿ ಶೇ. 30ರಿಂದ 90 ಭಾಗಗಳು ಈಗಲೂ ಅರಣ್ಯಗಳು. ಇವುಗಳಲ್ಲಿ ಎಲ್ಲವೂ ಸ್ವಾಭಾವಿಕವೆಂದು ಹೇಳಲಾಗುವುದಿಲ್ಲ. ಮೀಸಲು ಅರಣ್ಯಗಳಲ್ಲಿಯ ಮರಗಳು ವಿಶೇಷ ಆರೈಕೆಯಿಂದ ಬೆಳೆದಿವೆ. ತೇಗ ಮುಂತಾದ ಮರಗಳನ್ನು ಕೆಲವೆಡೆಗಳಲ್ಲಿ ನೆಟ್ಟಿರುವುದರಿಂದ ಅಂಥವನ್ನು




ಕಾಡುಗಳೆನ್ನುವುದಕ್ಕಿಂತ ನೆಡುತೋಟಗಳೆನ್ನಬಹುದು. ದಕ್ಷಿಣದಲ್ಲಿ ತ್ಯಜಿಸಲಾದ ಕಾಫಿ ತೋಟಗಳಲ್ಲಿ ಲಾಂಟಾನಾ ಬೆಳೆದಿದೆ. ಉರುವಲಿಗಿಂತ ಲಾಂಬಿಗಳಿಗಾಗಿ ಮರಗಳನ್ನು ಕಡಿಯುವುದೇ ಹೆಚ್ಚು. 150–300 ಸೆಂಮೀ ವಾರ್ಷಿಕ ಮಳೆಯಾಗುವ ಘಟ್ಟಗಳ ತಲೆಯೆಡೆಯ ಕೆಳಪಟ್ಟಿಯ ಸೋಪಾನಗಳಲ್ಲೂ ನೆರೆಯ ಕಣಿವೆಗಳಲ್ಲೂ ಇರುವ ದಟ್ಟವಾದ ನಿರಂತರ ಹಸುರೆಲೆಯ ಕಾಡುಗಳಲ್ಲಿ ಎತ್ತರದ ಗಟ್ಟಿ ಮರಗಳು ಬೆಳೆಯುತ್ತವೆ. ಮಲೆನಾಡಿನ ಉದ್ದನೆಯ ನಡುಪಟ್ಟಿಗಳಲ್ಲಿಯ ಮುಖ್ಯ ಮರಗಳೆಂದರೆ ತೇಗ, ಹೊನ್ನೆ, ಮತ್ತಿ, ನಂದಿ, ಬೀಟೆ ಮತ್ತು ಲಾರೆಲ್. ಪೂರ್ವದ ಅಂಚುಗಳಲ್ಲಿರುವ ಉಷ್ಣವಲಯದ ತೇವ ಪ್ರದೇಶದ ಎಲೆ ಉದುರುವ ಜಾತಿಯ ಮರಗಳ ಪೈಕಿ ಶ್ರೀಗಂಧ ಮುಖ್ಯ. ಎಲ್ಲೆಲ್ಲೂ ಬಿದಿರುಗಳು ಸಾಮಾನ್ಯ. ಅಡವಿಯ ಗಿಡಗಳನ್ನು ಸುಟ್ಟು ಸಾಗುವಳಿ ಮಾಡಿ, ಅದು ಸಾರ ಕಳೆದುಕೊಂಡಾಗ ಆ ಸ್ಥಳವನ್ನು ಬಿಟ್ಟು ಬೇರೆಡೆಯಲ್ಲಿ ಸಾಗುವಳಿ ಮಾಡುವ ಪೋಡು ಕೃಷಿವಿಧಾನ (ವರ್ಗಾವಣೆ ಬೇಸಾಯ) ಹಿಂದೆ ಸಾಮಾನ್ಯವಾಗಿತ್ತು. ಇದರಿಂದ ಬಂಜರಾದ ಸ್ಥಳಗಳಲ್ಲಿ ಬಿದಿರುಮೆಳೆಗಳು ದಟ್ಟವಾಗಿವೆ. ಅಂತೂ ಮಲೆನಾಡು ಪ್ರದೇಶದಲ್ಲಿ ಸುಮಾರು 4,000 ಬಗೆಯ ಗಿಡಮರಗಳುಂಟು. ಪಶ್ಚಿಮ ಕರಾವಳಿಯಲ್ಲಿ ಘಟ್ಟಗಳ ಅಂಚಿನಲ್ಲಿ 10 ರಿಂದ 100 ಕಿಮೀ ಅಗಲದ ಕಾಡುಗಳಿವೆ. ಘಟ್ಟ ಪ್ರದೇಶ ಮುಂಗಾರು ಮಳೆಗೆ ಸಂಬಂಧಿಸಿದಂತೆ ಇರುವ ಸನ್ನಿವೇಶಾನುಗುಣವಾಗಿ ಕಾಡಿನ ಲಕ್ಷಣ ವ್ಯತ್ಯಾಸವಾಗುತ್ತದೆ. ಉಷ್ಣತೆ, ಮಾರುತದ ವೇಗ, ನೆಲದ ಎತ್ತರ ಇವು ಪ್ರಭಾವ ಬೀರುವ ಅಂಶಗಳು. ಘಟ್ಟದ ಶಿಖರಗಳಲ್ಲೂ, ಕಡಿದಾದ ಇಳಿಜಾರಿನಲ್ಲೂ ಮಣ್ಣು ಹೆಚ್ಚು ಆಳವಿಲ್ಲ. ಆದ್ದರಿಂದ ಅಲ್ಲಿ ಅತಿ ಎತ್ತರದ ಮರಗಳು ಬೆಳೆಯಲು ಅನುಕೂಲಕರ. ಧೂಮ, ಕಲ್ಲುಹೊನ್ನೆ, ಬಲಗಿ, ಧೂಪ, ಸಟಗ,

ಹಾಲಮಡ್ಡಿ, ಹಲಗೇರು ಮತ್ತು ಹಲಸು ಮುಂತಾದ ನಿತ್ಯ ಹಸುರು ಮರಗಳೂ ನಾರುಬೇರು, ಕಾಡಿಪಿಂಡಿ, ಕಂಟದ ಮರ ಮುಂತಾದ ಭಿನ್ನಜಾತಿಗಳೂ ಉಂಟು. ನಿತ್ಯ ಹಸುರು ಮರಗಳಿಗೆ ಮುಂದಿನ ಶ್ರೇಣಿಯಲ್ಲಿ 15 ರಿಂದ 20 ಮೀ ಎತ್ತರಕ್ಕೆ ಬೆಳೆಯುವ ಮರಗಳಿವೆ. ಕೂಟಗೇರು, ಬೈರಿ, ಬಿಳಿದೇವದಾರು, ಹೆಬ್ಬಲಸು, ಕಾಡು ಲವಂಗ, ಇಳಿಸಿಂಗಿ ಇವು ಮುಖ್ಯ. ಘಟ್ಟಗಳಿಂದ ಸ್ವಲ್ಪ ದೂರದಲ್ಲಿ ಮಳೆ ಕಡಿಮೆ ಬೀಳುವ ಎಡೆಗಳಲ್ಲಿ ಗಲವಾರ, ಸಪ್ತಪರ್ಣ, ಮಾಸ್ಸಿ, ದಿಂಡಿಗ, ಸಳ್ಳೆ, ಹೆಣ್ಣುಮತ್ತಿ, ಕಾಡುಕಣಗಿಲೆ, ಹೆಣ್ಣುಸಂಪಿಗೆ, ಮರ್ಕಿಮರ, ನಂದಿ, ವಿಷಮುಷ್ಟಿ ಮತ್ತು ಮತ್ತಿ ಬೆಳೆಯುತ್ತವೆ. ಇವು ತೇವಕಾಡಿನ ಎಲೆ ಉದುರುವ ಮರಗಳು, ಕೆಮದಾಳೆ, ಹಲಸು, ಪಾಚಿಗಿಡ, ದೊಡ್ಡಜಾಜಿ, ಕದಂಬ, ಪಾಟಗಾಣಿ, ಇವು ಘಟ್ಟಗಳಲ್ಲೆಯ ಮೂರನೆಯ ಸಾಲಿನ ಮರಗಳು. ಇವಲ್ಲದೆ ಎಲ್ಲೆಲ್ಲೂ ಪೊದೆಗಳೂ ಬಿದಿರುಗಳೂ ಬೆಳೆಯುತ್ತವೆ. ಘಟ್ಟದ ಪೂರ್ವಭಾಗದ ಅನೇಕ ಕಡೆಗಳಲ್ಲಿ ಪೊದರುಗಳು, ತೇಗ, ಜಾಲಿ, ಶ್ರೀಗಂಧ, ಬೂರುಗ, ಕಕ್ಕೆ, ಮುತ್ತಗ, ಜಗಳಗಂಟೆ, ಅಂಕೋಟೆ ಮತ್ತು ಬಿದಿರುಗಳುಂಟು, ಬಗನಿ, ಮಾವು, ಹುಣಿಸೆ ಮುಂತಾದವು ಕರ್ನಾಟಕದಲ್ಲಿ ಸಾಮಾನ್ಯ.

ಕರ್ನಾಟಕದ ಉತ್ತರ ಮೈದಾನದಲ್ಲಿ ಪೂರ್ವ ಪಶ್ಚಿಮದಂಚುಗಳಲ್ಲಿ ಉಷ್ಣವಲಯದ ಒಣಹವೆಯ ಎಲೆ ಉದುರುವ ಸಸ್ಯವನ್ನು ಕಾಣಬಹುದು. ನಡುಭಾಗದಲ್ಲಿ ಪೊದೆಮುಳ್ಳು ಬೆಳೆಯುತ್ತದೆ. ಒಟ್ಟು ಪ್ರದೇಶದ ಶೇ. 10ರಷ್ಟು ಭಾಗದಲ್ಲಿ ಮಾತ್ರ ಸ್ವಾಭಾವಿಕ ಸಸ್ಯವುಂಟು. ಕುರುಚಲು ಕಾಡುಗಳನ್ನು ಎತ್ತರದ ಗುಡ್ಡಗಳ ಪಾರ್ಶ್ವಗಳಲ್ಲಿ ಮಾತ್ರ ಕಾಣಬಹುದು.

ದಕ್ಷಿಣ ಮೈದಾನದ ಸ್ವಾಭಾವಿಕ ಸಸ್ಯವರ್ಗವು ಉಷ್ಣವಲಯದ ಶುಷ್ಕ ಹವೆಯ ಎಲೆ ಉದುರುವ ಜಾತಿಯದು. ಮಧ್ಯ ಮತ್ತು ಪೂರ್ವಭಾಗಗಳಲ್ಲಿ ಮುಳ್ಳುಪೊದೆಗಳಿವೆ. ಕಾಡುಗಳಿರುವುದೆಲ್ಲ ವಿಶೇಷವಾಗಿ ಬೆಟ್ಟಗಳ ಇಳಿಜಾರುಗಳಲ್ಲಿ. ಆದರೆ ಇವು ಹೆಸರಿಗೆ ಮಾತ್ರ ಕಾಡುಗಳು. ವಿಶಾಲ ಪ್ರಸ್ಥಭೂಮಿಯ ಬೆನ್ನ ಮೇಲೆ ಕುರುಚಲು ಹಬ್ಬಿದೆ. ಕನಕಪುರ–ತುಮಕೂರುಗಳ ನಡುವೆ ಅರ್ಧಭಾಗ ಇದರಿಂದ ತುಂಬಿದೆ. ಬಾಗೆಪಲ್ಲಿಯಿಂದ ಬಂಗಾರುಪೇಟೆಯವರೆಗಿನ ಬೆಟ್ಟದಗ್ರಗಳ ಪೂರ್ವದ ಕಡೆಯಲ್ಲೂ ಇದನ್ನು ಕಾಣಬಹುದು. ಸೌದೆ ಮರ ಸಾಮಾನ್ಯ. ಇದರ ಪೂರೈಕೆಗಾಗಿ ಅನೇಕ ಕಡೆ ನಿರ್ದಯೆಯಿಂದ ಮರ ಪೊದೆಗಳನ್ನು ಕತ್ತರಿಸುವುದು ಕಂಡುಬಂದಿದೆ. ಸರ್ವೆ ಮತ್ತು ನೀಲಗಿರಿ ತೈಲ ಮರಗಳು ಇಲ್ಲಿಯ ಆಗಂತುಕ ಜಾತಿಗಳು.

ಪ್ರಾಣಿಗಳು: ನೆಲ ಮಳೆ ಗಿಡಮರಗಳಂತೆ ಪ್ರಾಣಿವರ್ಗ ಕರ್ನಾಟಕದಲ್ಲಿ ವೈವಿಧ್ಯಮಯ. ಘಟ್ಟಸೀಮೆ, ಬಯಲುಸೀಮೆಗಳೆಂದು ಇವನ್ನು ಸ್ಥೂಲವಾಗಿ ವಿಂಗಡಿಸಬಹುದು. ಪಶ್ಚಿಮಘಟ್ಟದ ದಟ್ಟ ಕಾಡುಗಳಲ್ಲಿ ಕುಚ್ಚುಬಾಲದ ಕೋತಿ, ಮುಸುಕ ಮಂಗ, ಲಂಗೂರು, ಕಾಡುಪಾಪಗಳು. ಹುಲಿ, ಚಿರತೆ, ಮುಂಗುಸಿ, ಕಾಡುಬೆಕ್ಕು, ಕಿರುಬ, ತೋಳ, ನೀರುನಾಯಿ ಮತ್ತು ಕರಡಿಗಳು ಹೇರಳವಾಗಿ ಕಾಣಸಿಗುತ್ತವೆ. ಜಿಂಕೆ, ಕಾಡುಹಂದಿ, ಮುಳ್ಳಿಲಿ, ಬಾವಲಿ, ಅಳಿಲು, ಮೊಲ ಮತ್ತು ಮುಳ್ಳುಹಂದಿಗಳು ಲೆಕ್ಕವಿಲ್ಲದಷ್ಟಿವೆ. ಕಾಡುಗಳಲ್ಲಿರುವ ಅತ್ಯಂತ ದೊಡ್ಡ ಪ್ರಾಣಿಯೆಂದರೆ ಆನೆ. ಇದು ಹಾಸನ, ಮೈಸೂರು, ಚಾಮರಾಜನಗರ, ಕೊಡಗು, ಕಡೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಕಾಡುಗಳಲ್ಲಿವೆ. ಕಾಡುಕೋಣ ಇನ್ನೊಂದು ಪ್ರಾಣಿ. ಸಾಂಬಾರ್, ಸಾರಗ, ಕಾಡುಹಂದಿ, ಕೂರ್ಪಂದಿ, ನರಿ ಇವನ್ನೂ ಮಲೆನಾಡಿನ ಕಾಡುಗಳಲ್ಲಿ ಹೇರಳವಾಗಿ ಕಾಣಬಹುದು.

ಕ್ರಿಮಿ–ಕೀಟ ಮತ್ತು ಸಸ್ಯಾಹಾರಗಳು ಧಾರಾಳವಾಗಿ ದೊರಕುವ ಕಾಡುಗಳಲ್ಲಿ ಪಕ್ಷಿಗಳು ಅಸಂಖ್ಯಾತವಾಗಿವೆ. ಕಾಗೆ ಎಲ್ಲೆಲ್ಲೂ ಸಾಮಾನ್ಯ. ಮರದ ಪೈ ಸಾಮಾನ್ಯವಾಗಿ ಅರಣ್ಯದಲ್ಲಿವಾಸಿಸುತ್ತದೆ. ಟಟ್ಟಿಭ ಎಲ್ಲೆಡೆಯೂ ಉಂಟು. ಉಲಿಯಕ್ಕಿಗಳೂ ಅಷ್ಟೆ ಇವುಗಳಲ್ಲಿ ನಾನಾ ವಿಧಗಳು ಉಂಟು. ಹರಟು ಹಕ್ಕಿ ಕರ್ನಾಟಕದ ಇನ್ನೊಂದು ಪಕ್ಷಿ. ಗಂಧರ್ವ ಪಕ್ಷಿ ಮತ್ತು ಬುಲ್‌ಬುಲ್ ಹಸುರುಕಾಡಿನ ಪ್ರಜೆಗಳು. ಬುಲ್‌ಬುಲಿನ ಕೆಲಜಾತಿಗಳು ಇತರೆಡೆಗಳಲ್ಲೂ ಇವೆ. ಕಣಿವೆಗಳಲ್ಲೂ ಬಿದಿರಮಳೆಗಳಲ್ಲೂ ಶ್ಯಾಮಲ ಹಕ್ಕಿಯನ್ನು ಕಾಣಬಹುದು. ತೆಂಕಣ ಕಪ್ಪಕ್ಕಿಗೂ ಕಣಿವೆಯೇ ತವರು. ಚಳಿಗಾಲದಲ್ಲಿ ಇದು ಬೆಚ್ಚನೆಯ ಬಯಲು ಸೀಮೆಗೆ ಬರುವುದುಂಟು. ಕಾಡುಕಡುಕ ಮತ್ತು ಕಳಿಂಗಪಕ್ಷಿಗಳ ವಿವಿಧ ಜಾತಿಗಳಲ್ಲಿ ಕೆಲವು ಕಾಡುಗಳಿಗೂ ಮತ್ತೆ ಕೆಲವು ಬಯಲು ಸೀಮೆಗೂ ವಿಶಿಷ್ಟವಾದವು. ಕೋಗಿಲೆ, ಉಲ್ಲಾಸದ ಸಿಳ್ಳುಹಕ್ಕಿ, ಮೈನಾ, ನೊಣಹಿಡುಕ, ಗೀಜಗ, ಗುಬ್ಬಚ್ಚಿ. ಬಾಗಕ್ಕಿ, ಗಿಳಿ, ಜೇನುಹುಕ್ಕ, ಮೀಂಚುಳ್ಳಿ, ಮಲೆಹಕ್ಕಿ, ಅಂಬಕ್ಕಿ. ಗಿಡುಗ, ಪಾರಿವಾಳ, ಕಪೋತ, ಕೊಕ್ಕರೆ, ಉಲ್ಲಂಗಿ, ನವಿಲು, ಕಾಡುಕೋಳಿ, ಬಾತು, ನಾಗಹಕ್ಕಿ–ಮುಂತಾದ ಒಂದೊಂದರಲ್ಲೂ ನಾನಾ ಬಗೆಯ ಹಕ್ಕಿಗಳು ಮಲೆನಾಡು ಬಯಲುಸೀಮೆ ಕರಾವಳಿ ಪ್ರದೇಶಗಳಲ್ಲಿ ಹರಡಿವೆ.

ಉರಗಗಳಲ್ಲೂ ನಾನಾ ವಿಧಗಳಿವೆ. ಮೊಸಳೆ, ಅಮೆ, ಹಲ್ಲಿ, ಹೆಬ್ಬಾವು, ತಾಳೆಹಾವು, ಹಸುರುಹಾವು, ಕಟ್ಟುಹಾವು, ನಾಗರಹಾವು, ಮಂಡಲದ ಹಾವು, ಹವಳದ ಹಾವು–ಇವು ಕೆಲವು.

ಕಪ್ಪೆಗಳಿಗೂ, ಮೀನುಗಳಿಗೂ ಕರ್ನಾಟಕದಲ್ಲಿ ಕೊರತೆಯಿಲ್ಲ. ಕಡಲ ತೀರದಲ್ಲಿ ಮೀನುಸಮೃದ್ಧವಾಗಿದೆ. ಸೊರಮೀನು, ಗರಗರಸ ಮೀನು, ಕಂಟಕ–ರಶ್ಮಿ, ಹಾವುಮೀನು, ಥೇಡೆ, ಹೆರ್ರಿಂಗ್, ಬಂಗಡ, ಸೀರ್, ಅಕ್ಕುಳೈ, ಪರ್ಚ್, ಸೀಗಡಿ, ಲಾಡಿ, ಕೊಲಾಜಿ, ಮುಲ್ಲೆಟ್ ಮುಂತಾದ ಹಲವು ಬಗೆಗಳುಂಟು. ಒಳನಾಡಿನ ಅಸಂಖ್ಯಾತ ಕೆರೆ ಹಳ್ಳಗಳು ಮೀನುಗಳಿಗೆ ಅನುಕೂಲಕರ.

ಕುರಿ, ಆಡು, ದನಕರು, ಕುದುರೆ ಮುಂತಾದುವು ಸಾಕುಪ್ರಾಣಿಗಳು. ಉತ್ತರ ಬಯಲಿನಲ್ಲಿ ಎಮ್ಮೆಗಳ ಸಂಖ್ಯೆ ಗಮನಾರ್ಹ.

ಕೃಷಿ :ವ್ಯವಸಾಯವೇ ಕರ್ನಾಟಕದ ಮುಖ್ಯ ಆರ್ಥಿಕ ಚಟುವಟಿಕೆ. ಸನ್ನಿವೇಶ, ವಾಯುಗುಣ, ಭೂಗುಣ, ನೀರಾವರಿ ಸೌಲಭ್ಯ–ಇವುಗಳಿಗೆ ಅನುಗುಣವಾಗಿ ವ್ಯವಸಾಯದ ಸ್ವರೂಪವೂ ಬೆಳೆಯೂ ಬದಲಾಗುತ್ತವೆ. ಕರಾವಳಿಯ ತಗ್ಗುಬಯಲು ಸಾಮಾನ್ಯವಾಗಿ ಫಲವತ್ತಾದ ಮಣ್ಣಿನಿಂದ ಕೂಡಿದ್ದು ಸಮೃದ್ಧವಾಗಿ ಮಳೆ ಪಡೆಯುವುದರಿಂದ ಬತ್ತ ಇಲ್ಲಿಯ ಮುಖ್ಯ ಬೆಳೆ. ಕವಿದು ಬಂದ ಮರಳ ಗುಡ್ಡೆಗಳನ್ನು ಅನೇಕ ಕಡೆಗಳಲ್ಲಿ ವಿಸ್ತರಿಸಲಾಗಿದೆ. ವರ್ಷದಲ್ಲಿ ಒಂದು ಬೆಳೆ ಬತ್ತ ತೆಗೆದ ಮೇಲೆ ಕಡಲೆ ಮುಂತಾದ ಕಾಳು ಬೆಳೆಯುವುದುಂಟು. ನೀರಿನ ವಸತಿ ಇರುವಲ್ಲಿ ಒಡ್ಡು ಕಟ್ಟಿಯೋ ಏತದಿಂದ ನೀರು ಹಾಯಿಸಿಯೋ ಬತ್ತದ ಎರಡು ಬೆಳೆಗಳನ್ನು–ಕೆಲವು ಕಡೆ ಮೂರು ಬೆಳೆಗಳನ್ನು ಕೂಡ ತೆಗೆಯುತ್ತಾರೆ. ತರಕಾರಿ ಮೆಣಸು ತೋಟಗಳೂ ಅಲ್ಲಲ್ಲಿ ಕಾಣಸಿಗುತ್ತವೆ. ಕಡಲ ದಂಡೆಗುಂಟ ತೆಂಗಿನ ಮರಗಳು ತಲೆ ಬೀಸುತ್ತ ಸಾವಿರಗಳ ಲೆಕ್ಕದಲ್ಲಿ ನಿಂತಿವೆ. ಮನೆ ಹಿತ್ತಲುಗಳಲ್ಲೂ ತೆಂಗನ್ನು ಬೆಳೆಸುತ್ತಾರೆ. ಎತ್ತರದ ಮತ್ತು ಮರಳ ನೆಲಗಳು ಅಷ್ಟೇನೂ ಫಲವತ್ತಲ್ಲ. ಅಲ್ಲಿ ಮರಳು ತೆಗೆದು ಬತ್ತವನ್ನೋ ತೆಂಗನ್ನೊ ಬೆಳೆಸುವುದುಂಟು. ಉತ್ತರ ಭಾಗದಲ್ಲಿ ಸಾಗುವಳಿ ನೆಲ ಕೆಳಗಿನ ಬಯಲಿನಲ್ಲಿದ್ದು ಹೊಲಮನೆಗಳು ದಿಬ್ಬದ ಮೇಲಿವೆ.

ಕಡಲಕರೆಯ ಮೈದಾನದ ಆರ್ಥಿಕ ಜೀವನ ಹಳ್ಳಿಯಿಂದ ಹಳ್ಳಿಗಳಿಗೆ ವ್ಯತ್ಯಾಸವಾಗುತ್ತದೆ. ವರ್ಷಕ್ಕೆ ಒಂದೇ ಬೆಳೆತೆಗೆಯುವ ಪ್ರದೇಶಗಳಿಗಿಂತ ಎರಡು–ಮೂರು ಬೆಳೆತೆಗೆಯುವವು ಹೆಚ್ಚು ಉತ್ತಮಸ್ಥಿತಿಯಲ್ಲಿವೆ. ಈ ಪ್ರದೇಶದಲ್ಲಿ ಜನಸಾಂದ್ರತೆಯ ಒತ್ತಡ ಬಹಳ ಹೆಚ್ಚು. ಸಣ್ಣಮಟ್ಟ ನೀರಾವರಿ ವ್ಯವಸ್ಥೆಗಳ ಅಗತ್ಯವಿದೆ. ಸದಾಕಾಲದಲ್ಲೂ ನೀರಿರುವ ಸಣ್ಣಮಟ್ಟ ಹೊಳೆಗಳನೇಕ ಇಲ್ಲಿ ಹರಿಯುವುದರಿಂದ ನೀರಾವರಿ ವಿಸ್ತರಿಸುವ ಸಾಧ್ಯತೆಯಿದೆ.

ಗೋಡಂಬಿ, ಹಣ್ಣು ಮತ್ತು ತರಕಾರಿ ಗಿಡಗಳೂ ಇಲ್ಲಿ ಬೆಳೆಯುತ್ತವೆ. ಇವನ್ನು ಹೆಚ್ಚಾಗಿ ಬೆಳೆಸುವುದಕ್ಕೂ ಕ್ರಮ ಕೈಕೊಳ್ಳಲಾಗಿದೆ. ಸೀ–ಐಲೆಂಡ್ ಹತ್ತಿ ಮತ್ತು ಕಬ್ಬು ಬೆಳೆಸುವ ಸಾಧ್ಯತೆಯೂ ಉಂಟು. ಇಷ್ಟೆಲ್ಲ ಆದರೂ ಇಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಬೇರೆ ಉದ್ಯೋಗಗಳನ್ನು ದೊರಕಿಸಿಕೊಡುವ ಅವಶ್ಯಕತೆಯಿದೆ. ಮೀನುಗಾರಿಕೆ, ದೋಣಿ ನಿರ್ಮಾಣ–ಇವುಗಳಲ್ಲದೆ ಮರಗೆಲಸ, ಕುಂಬಾರ ಕೆಲಸ ಮುಂತಾದ ಅನೇಕ ಹಳೆಯ ಕಸಬುಗಳು ಇಂದಿಗೂ ಅಲ್ಪಸ್ವಲ್ಪ ಜೀವಂತವಾಗಿವೆ.

ಕರಾವಳಿಯ ತಗ್ಗು ಪ್ರಸ್ಥಭೂಮಿಯಲ್ಲೂ ಅನೇಕ ಕಡೆಗಳಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುವುದುಂಟು. ಏತ, ಪಂಪು, ಸಣ್ಣ ಅಣೆಕಟ್ಟೆ ಇವುಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಿಕೊಳ್ಳಲಾಗಿದೆ. ಹೊಸ ಅಣೆಕಟ್ಟೆಗಳನ್ನು ಕಟ್ಟಿ ನೀರಾವರಿಯನ್ನು ವಿಸ್ತರಿಸಿ ಇನ್ನೂ ಹೆಚ್ಚು ಕಡೆಗಳಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯಬಹುದು. ಬತ್ತ ಮುಖ್ಯ ಬೆಳೆ. ಋಷ್ಠಿ ಬೆಳೆಯಾಗಿ ಮೆಣಸಿನಕಾಯಿ ಬೆಳೆಯುವುದುಂಟು. ತೆಂಗಿನಕಾಯಿ, ಅಡಕೆ, ತಾಳೆ ಇವು ಆರ್ಥಿಕಬೆಳೆಗಳು. ಅಲ್ಲಲ್ಲಿ ಮೆಣಸಿನ ತೋಟಗಳೂ ಇವೆ. ದಕ್ಷಿಣದಲ್ಲಿ ನೀರಿನ ವಸತಿ ಕಡಿಮೆಯಿರುವೆಡೆಗಳಲ್ಲಿ ಗೇರುಬೀಜ ಒಂದು ಮುಖ್ಯ ಬೆಳೆ.

ಕರಾವಳಿಯ ಮಲೆನಾಡಿನ ಮುಖ್ಯ ಬೆಳೆ ಬತ್ತ. ವರ್ಷಕ್ಕೆ ಒಂದು ಬೆಳೆ ಸಾಮಾನ್ಯ. ಕಬ್ಬು ಬೆಳೆಯುವುದುಂಟು. ಇಲ್ಲಿಯ ಬೆಳೆ ಸಾಮಾನ್ಯವಾಗಿ ಮಳೆಯನ್ನೇ ಅವಲಂಬಿಸಿದೆ. ಕಣಿವೆಗಳ ತಳಗಳಲ್ಲೂ ಇಳಿಜಾರುಗಳಲ್ಲೂ ಮೆಟ್ಟಿಲುಮೆಟ್ಟಿಲಾಗಿ ಹಬ್ಬಿದ ಹಸುರು ಗದ್ದೆಗಳನ್ನೂ ಅವುಗಳ ಸುತ್ತ ಕೆಂಪು ಹಂಚಿನ ಮನೆಗಳನ್ನೂ ಕಾಣಬಹುದು. ಅಲ್ಲಲ್ಲಿ ಅಲ್ಪಸ್ವಲ್ಪ ನೀರಾವರಿ ವ್ಯವಸ್ಥೆಯುಂಟು. ಅಂಥೆಡೆಗಳಲ್ಲಿ ವರ್ಷಕ್ಕೆ ಎರಡು ಮೂರು ಬೆಳೆ ತೆಗೆಯುತ್ತಾರೆ. ದನಗಳ ಸಂಖ್ಯೆಯೂ ಹೆಚ್ಚಾಗಿದೆ. ತೆಂಗು, ಅಡಕೆ ವೀಳೆಯದೆಲೆ, ತಾಳೆ, ಮೆಣಸು, ಬಾಳೆ, ಮಾವು, ಹಲಸು ಇವು ತೋಟಗಳ ಬೆಳೆಗಳು. ನೆರೆಯ ಮಲೆನಾಡಿನಂತೆ ಇಲ್ಲೂ ಮಲೇರಿಯ ಮುಂತಾದ ವ್ಯಾಧಿಗಳಿಂದ ಜನಸಂಖ್ಯೆ ಇಳಿಮುಖವಾಗಿತ್ತು. ಈಚೆಗೆ ಈ ಪ್ರವೃತಿ ನಿಂತಿದೆ. ಅನೇಕ ಹಳ್ಳಿಗಳಲ್ಲಿ ಶೇ. 36–56 ಜನ ಗುತ್ತಿಗೆದಾರರು. ಭೂರಹಿತ ಶ್ರಮಜೀವಿಗಳು ಕೆಲಸವನ್ನರಸಿ ಅಪರೂಪವಾಗಿ ಹೊರಗೆ ಹೋಗಬಹುದು. ಅನೇಕರಿಗೆ ಸ್ಥಳೀಯ ತೋಟಗಳಲ್ಲೇ ಕೆಲಸ ದೊರಕುತ್ತದೆ. ಇಲ್ಲಿ ಜನಸಂಖ್ಯೆಯ ಒತ್ತಡ ಹೆಚ್ಚಾಗಿಲ್ಲ. ಇರುವ ಸಂಪನ್ಮೂಲಗಳನ್ನೆಲ್ಲ ಸಂಪೂರ್ಣವಾಗಿ ಇಲ್ಲಿ ಬಳಸಿಕೊಂಡಿಲ್ಲ.

ಮಲೆನಾಡಿನಲ್ಲಿ ವರ್ಷಕ್ಕೆ ಒಂದು ಬತ್ತದಬೆಳೆ ಸಾಮಾನ್ಯ. ಎರಡು ಬೆಳೆ ಉತ್ತರಾರ್ಧದಲ್ಲಿ ಹೆಚ್ಚು. ಅಲ್ಲಿ ಒಟ್ಟು ಸಾಗುವಳಿ ನೆಲದಲ್ಲಿ ಶೇ. 5–10 ಪ್ರದೇಶದಲ್ಲಿ ಎರಡು ಬೆಳೆ ತೆಗೆಯುವುದುಂಟು. ಮಳೆ ಸಮೃದ್ಧಿಯಾಗಿರುವ ಕಡೆಗಳಲ್ಲಿ ಹಳ್ಳಿಗಳು ತಮಗೆ ಸಾಕಾಗುವಷ್ಟು ಬತ್ತ ಬೆಳೆಯುತ್ತವೆ. ಕಡಿಮೆ ಮಳೆಯ ಪೂರ್ವದಂಚುಗಳಲ್ಲಿ ಒಮ್ಮೊಮ್ಮೆ ಅಕ್ಕಿಯ ಕೊರತೆ ಬರುವುದುಂಟು. ಅಡಕೆ, ವೀಳೆಯದೆಲೆ, ಮೆಣಸು, ಲವಂಗ, ಕಿತ್ತಳೆ, ಕಾಫಿ ಮುಖ್ಯ ಹಣಗಳಿಕೆ ಬೆಳೆಗಳು. ಕಾಫಿ (ಕೆಲವು ಕಡೆ ಚಹ), ಮೆಣಸು ಮುಂತಾದವು ನೆಡು ತೋಟದ (ಪ್ಲಾಂಟೇಷನ್) ಬೆಳೆಗಳು. ಕಾಫಿ ತೋಟಗಳು ದಕ್ಷಿಣದಲ್ಲಿವೆ. ಇವು ಬೃಹದ್ಗಾತ್ರದ ಬಂಡವಾಳ ಉದ್ಯಮಗಳು. ಕಾಫಿ ಬೆಳೆಯುವ ಪ್ರದೇಶ ಉಳಿದೆಡೆಗಳಿಗಿಂತ ಹೆಚ್ಚು ಅಭಿವೃದ್ಧಿಹೊಂದಿದೆ. ಇಲ್ಲಿ ಹಣದ ಪ್ರಸಾರ ಹೆಚ್ಚು. ರಸ್ತೆಗಳು ಬೆಳೆದಿವೆ. ಭೂಸಾರ ಕೊಚ್ಚಿ ಹೋಗಿ ತ್ಯಜಿಸಲಾದ ಕಾಫಿ ತೋಟಗಳೆಡೆಯಲ್ಲಿ ಲಂಟಾನಾ ವಿಶೇಷವಾಗಿ ಬೆಳೆದಿದೆ. ಕಾಫಿ ತೋಟಗಳಲ್ಲಿ ಕೆಲಸ ಮಾಡಲು ಅವಶ್ಯವಾದ ಕಾರ್ಮಿಕರು ದಕ್ಷಿಣ ಕನ್ನಡ ಮತ್ತು ಕೇರಳಗಳಿಂದ ಅಧಿಕ ಸಂಖ್ಯೆಯಲ್ಲಿ ಬರುವರು. ಸ್ಥಳೀಯ ಜನರೂ ತೋಟಗಳಿಂದ ಆಕರ್ಷಿತವಾಗುವುದರಿಂದ ಸಾಮಾನ್ಯ ಬೇಸಾಯಕ್ಕೆ ಸಾಕಷ್ಟು ದುಡಿಮೆಗಾರರ ಅಭಾವ ಏರ್ಪಡುತ್ತದೆ. ದಕ್ಷಿಣ ಮಲೆನಾಡಿನಲ್ಲಿ ಬತ್ತದ ಎರಡು ಬೆಳೆ ತೆಗೆಯದಿರುವುದಕ್ಕೆ ಇದೂ ಒಂದು ಕಾರಣ. ದಕ್ಷಿಣದ ಎತ್ತರದ ಮಲೆನಾಡಿನಲ್ಲಿ ಸಾಗುವಳಿಯಾಗುವ ನೆಲದ ಕಾಲುಭಾಗದಿಂದ ಅರ್ಧಭಾಗದವರೆಗಿನ ಜಮೀನು ಕಾಫಿ ಮತ್ತು ಚಹಗಳಿಗೆ ಮೀಸಲು. ಉತ್ತರದಲ್ಲಿ ಎತ್ತರ ಪ್ರದೇಶಗಳಲ್ಲೂ ಕಾಫಿ ತೋಟಗಳು ಅಷ್ಟೇನೂ ಇಲ್ಲ. ದಕ್ಷಿಣಕ್ಕಿಂತ ಅಲ್ಲಿ ಮಳೆಗಾಲ ಒಂದು ತಿಂಗಳಷ್ಟು ಕಡಿಮೆ. ಕಾಫಿ ಹೂ ಬಿಡಲು ಅವಶ್ಯವಾದ ಬೇಸಗೆ ಮಳೆ ಬರುವ ನಚ್ಚುಗೆಯಿಲ್ಲ. ಬತ್ತ ಎಲ್ಲೆಲ್ಲೂ ಬೆಳೆಯುತ್ತದೆ. ಯಲ್ಲಾಪುರದಿಂದ ಮಡಿಕೇರಿಯವರೆಗಿನ ತಾಲ್ಲೂಕುಗಳಲ್ಲಿ ಮೆಣಸು ಬೆಳೆಯುವ ಪ್ರದೇಶ ಒಟ್ಟು ಸಾಗುವಳಿ ಜಮೀನಿನ ಶೇ. 10 ರಿಂದ 25ರ ವರೆಗಿರುತ್ತದೆ. ಪೂರ್ವದ ತಾಲ್ಲೂಕುಗಳಾದ ನರಸಿಂಹರಾಜಪುರ, ಶಿವಮೊಗ್ಗ ಮತ್ತು ಪಿರಿಯಾಪಟ್ಟಣಗಳಲ್ಲಿ ಶೇ. 5ಕ್ಕಿಂತ ಕಡಿಮೆ ನೆಲದಲ್ಲಿ ಮೆಣಸು ಬೆಳೆಯುತ್ತದೆ. ಮೆಣಸು ಬೆಳೆಯ ಜೊತೆಗೆ ಹಣ್ಣು ತರಕಾರಿ ಬೆಳೆಯುವುದೂ ಸಾಮಾನ್ಯ, ಪೂರ್ವದ ಕಡೆಗೆ ಸಾಗಿದಂತೆ ಮೆಣಸಿನ ಭೂಮಿ ಕಡಿಮೆಯಾಗಿ ಹಣ್ಣು ತರಕಾರಿ ಬೆಳೆ ಹೆಚ್ಚುತ್ತದೆ. ಕಡಿಮೆ ಮಳೆಯ ಪೂರ್ವ ಪ್ರದೇಶದಲ್ಲಿ ಎಣ್ಣೆಕಾಳುಗಳ ಬೆಳೆಯೂ ಮುಖ್ಯ. ನೆರೆಯ ಮೈದಾನದ ಬೆಳೆಯೇ ಇಲ್ಲೂ ಬೆಳೆಯುವುದು ಅಭ್ಯಾಸವಾಗಿದೆ.

ಅರೆಮಲೆನಾಡಿನ ನೆಲದಲ್ಲಿ ಸು. ಶೇ.50 ರಷ್ಟು ಭೂಮಿ ಬೇಸಾಯಕ್ಕೊಳಪಟ್ಟಿದೆಯೆಂದು ಸ್ಥೂಲವಾಗಿ ಹೇಳಬಹುದು. ಶಿಕಾರಿಪುರ ಹಾಸನಗಳಲ್ಲಿ ಬತ್ತ ಅತ್ಯಂತ ಮುಖ್ಯ ಬೆಳೆ. ರಾಗಿ, ಜೋಳ ಮುಂತಾದವೂ ಬೆಳೆಯುತ್ತವೆ. ಹಾಸನದ ದಕ್ಷಿಣದ ಪ್ರದೇಶದಲ್ಲಿ ಕಾಫಿಯನ್ನೂ ಸ್ವಲ್ಪ ಬೆಳೆಯುತ್ತಾರೆ. ಹಿರೇಕೆರೂರಿನ ಉತ್ತರಕ್ಕೆ ಹತ್ತಿಯ ಕಪ್ಪು ನೆಲದ ಬದಿಯ ನೆಲದಲ್ಲಿ ಜೋಳ, ಹತ್ತಿ, ತೊಗರಿ, ಎಣ್ಣೆಕಾಳು ಬೆಳೆಯುತ್ತವೆ. ಹಾಸನ ಮತ್ತು ದಕ್ಷಿಣದಲ್ಲಿ ಆಲೂಗೆಡ್ಡೆ, ಈರುಳ್ಳಿ, ಮಾವು, ಬಾಳೆ, ಕಿತ್ತಳೆ, ತೊಗರಿ, ಎಣ್ಣೆಕಾಳುಗಳು, ತೆಂಗು, ಕಡಲೆಕಾಯಿ ಬೆಳೆಯುವರು.

ಉತ್ತರ ಮೈದಾನದ ಹಳ್ಳಿಗಳು ಅಡಕವಾಗಿವೆ. ಜಮೀನು ಹಿಡುವಳಿಯ ಗಾತ್ರ ಹೆಚ್ಚು . ಭೂರಹಿತ ದುಡಿಮೆಗಾರರ ಪ್ರಮಾಣವೂ ಹೆಚ್ಚು. ಖುಷ್ಕಿ ನೆಲವೇ ಅಧಿಕವಾಗಿದೆ. ಇಲ್ಲಿ ಪರಮಾವಧಿ ಮಳೆ ಬೀಳುವುದು ತಡವಾಗಿಯಾದ್ದರಿಂದಲೂ ನೆಲಕ್ಕೆ ಹೆಚ್ಚು ಜಲಧಾರಣಶಕ್ತಿಯಿರುವುದರಿಂದಲೂ ಚಳಿಗಾಲದ ಬೆಳೆಗಳು(ರಾಬಿ)ಹೆಚ್ಚು. ಪಶ್ಚಿಮದ ಎತ್ತರ ಪ್ರಸ್ಥಭೂಮಿಯ ತಂಪು ಹವೆ ಗೋದಿ ಬೆಳೆಗೆ ಅನುಕೂಲವಾಗಿದೆ. ಎಲ್ಲೆಡೆಗಳಲ್ಲೂ ಜೋಳ ಸಾಮಾನ್ಯ. ಹತ್ತಿ , ಬಾಜ್ರ , ಶೇಂಗ, ರಾಗಿ ಇತರ ಬೆಳೆಗಳು.

ಹರಿಹರದಿಂದ ಹೊನ್ನಾಳಿಯವರೆಗಿನ ಪ್ರದೇಶ ಮಲೆನಾಡಿನ ಸೆರಗಿನಂತಿದೆ. ಇಲ್ಲಿ ಜೋಳ, ರಾಗಿ, ಎಣ್ಣೆಬೀಜ, ತೊಗರಿ, ಹತ್ತಿ, ಸಂಬಾರ ಪದಾರ್ಥ ಮತ್ತು ಬತ್ತ ಬೆಳೆಯುತ್ತವೆ. ಹರಿಹರದಲ್ಲಿ ಸಾಗುವಳಿಯ ನೆಲದಲ್ಲಿ ಶೇ. 39ರಷ್ಟೂ ಹೊನ್ನಾಳಿಯಲ್ಲಿ ಶೇ. 20ರಷ್ಟೂ ಪ್ರದೇಶ ಜೋಳಕ್ಕೆ ಮೀಸಲು. ಹರಿಹರ ಪ್ರದೇಶದಲ್ಲಿ ಎಣ್ಣೆ ಬೀಜಗಳೂ ಹೊನ್ನಾಳಿಯಲ್ಲಿ ತೊಗರಿ ರಾಗಿಗಳೂ ಅನಂತರದ ಮುಖ್ಯ ಬೆಳೆಗಳು. ಧಾರವಾಡ, ಸಂಪಗಾಂವ್, ಹುಬ್ಬಳ್ಳಿ, ಕುಂದಗೋಳ, ಶಿರಹಟ್ಟ ಪ್ರದೇಶಗಳಲ್ಲಿ ಜೋಳ, ಗೋದಿ, ಬತ್ತ, ಹತ್ತಿ , ಬೇಳೆ, ಎಣ್ಣೆ ಬೀಜ, ಸಂಬಾರ ಪದಾರ್ಥ ಬೆಳೆಯುತ್ತವೆ. ಇವುಗಳ ಪೈಕಿ ಕುಂದಗೋಳವೊಂದನ್ನು ಬಿಟ್ಟರೆ ಉಳಿದೆಡೆಗಳಲ್ಲೆಲ್ಲ ಜೋಳ ಬೆಳೆಯುವ ನೆಲವೇ ಒಟ್ಟು ಸಾಗುವಳಿ ಪ್ರದೇಶದ ಶೇ. 25 ರಿಂದ 30ರ ವರೆಗೆ ಇದೆ. ಕುಂದಗೋಳದಲ್ಲಿ ಹತ್ತಿ ಬೆಳೆಯುವ ಪ್ರದೇಶದ ಶೇ. 38.3. ಶಿರಹಟ್ಟಿಯಲ್ಲಿ ಎಣ್ಣೆಬೀಜವೂ ಜೋಳದಷ್ಟೇ ಮುಖ್ಯ ಬೆಳೆ. ಹುಬ್ಬಳ್ಳಿಯಲ್ಲಿ ಹತ್ತಿಯೇ ಜೋಳಕ್ಕೆ ಎರಡನೆಯ ಬೆಳೆ. ಧಾರವಾಡ ಸಂಪಗಾಂವಗಳಲ್ಲಿ ಕಾಳುಗಳಿಗೆ ಎರಡನೆಯ ಸ್ಥಾನ. ಬೆಳಗಾಂವಿ ಪ್ರದೇಶದ ಕೃಷಿ ಭೂಮಿಯಲ್ಲಿ ಶೇ. 29ರಷ್ಟು ಭೂಮಿಯಲ್ಲಿ ಬತ್ತ ಬೆಳೆಯುತ್ತಾರೆ. ಜೋಳ ಕಾಳುಗಳೂ ತಕ್ಕಮಟ್ಟಿಗೆ ಬೆಳೆಯುತ್ತವೆ. ಗೋದಿ, ಹತ್ತಿ, ಎಣ್ಣೆಬೀಜ, ಮೆಣಸು ಮುಂತಾದವು ಇತರ ಬೆಳೆಗಳು. ಚಿಕ್ಕೋಡಿ, ಹುಕ್ಕೇರಿಗಳಲ್ಲಿ ಜೋಳ ಬೆಳೆಯ ಪ್ರದೇಶ ಒಟ್ಟು ಸಾಗುವಳಿ ನೆಲದ ಶೇ. 28ರಷ್ಟು . ಚಿಕ್ಕೋಡಿಯಲ್ಲಿ ಎರಡನೆಯ ಸ್ಥಾನ ಹೊಗೆಸೊಪ್ಪಿಗೆ (ಶೇ. 16.9); ಹುಕ್ಕೇರಿಯಲ್ಲಿ ಎಣ್ಣೆಬೀಜದ್ದು ಎರಡನೆಯ ಸ್ಥಾನ (ಶೇ. 23.9). ಸಜ್ಜೆ, ತೊಗರಿ, ಹಣ್ಣು, ತರಕಾರಿ ಇತರ ಬೆಳೆಗಳು.

ಉತ್ತರ ಮೈದಾನದ ನಡುಪಟ್ಟಿಯ ಪ್ರದೇಶದಲ್ಲಿ ಒಟ್ಟಿನಲ್ಲಿ ಸಾಗುವಳಿಗೆ ಒದಗಿ ಬರದ ನೆಲ ಶೇ. 10ಕ್ಕಿಂತ ಕಡಿಮೆ. ಗದಗಿನ ಪಶ್ಚಿಮದಲ್ಲಿರುವ ಡಂಬಳ ಬೆಟ್ಟ ಮುಂತಾದ ಕೆಲವು ಪ್ರದೇಶಗಳಲ್ಲಿ ಮಾತ್ರ ಸಾಗುವಳಿ ಭೂಮಿ ಕಡಿಮೆ. ಮುಂಗಾರು (ಖರೀಫ್) ಮತ್ತು ಹಿಂಗಾರು (ರಾಬಿ) ಬೆಳೆಗಳೆರಡೂ ಬೆಳೆಯುವುದಾದರೂ ವರ್ಷಕ್ಕೆ ಎರಡು ಬೆಳೆ ತೆಗೆಯುವ ನೆಲ ಕಡಿಮೆ. ಉತ್ತರ ಗೋಕಾಕ, ಉತ್ತರ ಮುಧೋಳ, ಆಗ್ನೇಯ ಮತ್ತು ಉತ್ತರ ಜಮಖಂಡಿ, ರಾಯಬಾಗ್, ಉತ್ತರ ಅಥಣಿ, ಉತ್ತರ ಬಿಜಾಪುರ, ಬಾಗೇವಾಡಿಯ ನಡುಭಾಗ, ಮುದ್ದೇಬಿಹಾಳ, ಪಶ್ಚಿಮ ಸಿಂದಗಿ, ಇಂಡಿ ಬಹುಭಾಗ–ಇಲ್ಲೆಲ್ಲ ಬಾವಿಯ ನೀರಾವರಿ ವ್ಯವಸ್ಥೆಯುಂಟು. ಇಲ್ಲಿ ಬೇಸಾಯ ಬಹುತೇಕ ಜೀವನಾಧಾರಕ್ಕಾಗಿ, ಜೋಳ, ಸಜ್ಜೆ, ಗೋದಿ, ಹತ್ತಿ, ಎಣ್ಣೆಬೀಜ, ತೊಗರಿ, ಮೆಣಸಿನಕಾಯಿ, ಬಾಳೆ, ಗೆಣಸು ಮತ್ತು ಈರುಳ್ಳಿ ಇವು ಇಲ್ಲಿಯ ಬೆಳೆಗಳು. ಮುಧೋಳ, ಬಾದಾಮಿ, ಗೋಕಾಕ, ರಾಮದುರ್ಗ, ಬಾಗಲಕೋಟೆ, ಹುನುಗುಂದ ಈ ಪ್ರದೇಶಗಳಲ್ಲಿ ಸಾಗುವಳಿಯಲ್ಲಿರುವ ಭೂಮಿಯಲ್ಲಿ ಶೇ. 25 ರಿಂದ ಶೇ. 40ರ ವರೆಗೆ ಜೋಳದ ಬೆಳೆಗೆ ಮೀಸಲಾಗಿದೆ. ಸಜ್ಜೆ, ಗೋದಿ, ಹತ್ತಿ, ಎಣ್ಣೆಬೀಜ, ತೊಗರಿ, ಹಣ್ಣು ಮತ್ತು ತರಕಾರಿಗಳೂ ಬೆಳೆಯುತ್ತವೆ. ದಾವಣಗೆರೆ ಮತ್ತು ಹರಪನಹಳ್ಳಿಗಳಲ್ಲೂ ಜೋಳವೇ ಪ್ರಥಮ ಬೆಳೆ. ಹಡಗಲಿ, ಕೂಡ್ಲಿಗಿಗಳಲ್ಲಿ ಎಣ್ಣೆ ಬೀಜ ಪ್ರಧಾನ. ದಾವಣಗೆರೆಯಲ್ಲಿ ರಾಗಿಯೂ ಹರಪನಹಳ್ಳಿಯಲ್ಲಿ ಎಣ್ಣೆ ಬೀಜವೂ ಉಳಿದೆರಡು ಪ್ರದೇಶಗಳಲ್ಲಿ ಜೋಳವೂ ಎರಡನೆಯ ಸ್ಥಾನ ಗಳಿಸುತ್ತವೆ. ತೊಗರಿ, ಹತ್ತಿ, ಬತ್ತ, ಸಜ್ಜೆ, ಸಂಬಾರ, ಹಣ್ಣು ಮತ್ತು ತರಕಾರಿಗಳನ್ನೂ ಬೆಳೆಯುತ್ತಾರೆ. ಗದಗ ನರಗುಂದ, ನವಲಗುಂದಗಳಲ್ಲಿಯ ಬೆಳೆಗಳು ಹತ್ತಿ , ಜೋಳ, ಗೋದಿ, ದ್ವಿದಳ ಧಾನ್ಯ, ಎಣ್ಣೆಬೀಜ, ಹಣ್ಣು , ತರಕಾರಿ.

ಉತ್ತರ ಮೈದಾನದ ಪೂರ್ವ ಪ್ರದೇಶದಲ್ಲಿ ಬೇಸಾಯಕ್ಕೊಳಪಡದ ಭೂಮಿಯ ಪ್ರಮಾಣ ಹೆಚ್ಚು (ಶೇ. 20 ರಿಂದ 59ರ ವರೆಗೆ). ಈಶಾನ್ಯ ಭಾಗದ ಚಿಂಚೋಳಿ ಯಾದಗಿರಿಗಳು ಜೋಳ, ಸಜ್ಜೆ, ಬತ್ತ, ಗೋಧಿ, ಹತ್ತಿ, ಎಣ್ಣೆಬೀಜ, ದ್ವಿಧಳದಾನ್ಯ, ಸಂಬಾರ ಬೆಳೆಗಳನ್ನು ಬೆಳೆಯುತ್ತವೆ. ಶಾಂತಪುರ, ಭಾಲ್ಕಿ, ಹುಮನಾಬಾದ್, ಅಳಂದು, ಗುಲ್ಬರ್ಗ, ಚಿತ್ತಾಪುರ, ಸೆರಂಗಳಲ್ಲೂ ಮೊದಲ ಸ್ಥಾನ ಜೋಳಕ್ಕೆ, ದ್ವಿಧಳದಾನ್ಯ, ಎಣ್ಣೆಬೀಜ ಅನಂತರದ ಮುಖ್ಯ ಬೆಳೆಗಳು. ಇತರ ಬೆಳೆಗಳೂ ಉಂಟು. ಆದರೆ ಹತ್ತಿಯಲ್ಲ. ತುಂಗಭದ್ರ ಪ್ರದೇಶದ ಹೊಸಪೇಟೆ, ಬಳ್ಳಾರಿ, ಸಿಂಧನೂರು, ಸಿರುಗುಪ್ಪ, ಮಾನ್ವಿ, ರಾಯಚೂರುಗಳಲ್ಲಿ ಸಾಗುವಳಿ ಭೂಮಿಯ ಅರ್ಧ ಭಾಗದಲ್ಲಿ ಹತ್ತಿ ಬೆಳೆಯುತ್ತಾರೆ. ಉಳಿದ ಬೆಳೆಗಳನ್ನೆಲ್ಲ ಬೇರೆಯೆಡೆಗಳಂತೆಯೇ ಬೆಳೆಯುತ್ತಾರೆ.

ಉತ್ತರ ಮೈದಾನದ ಕೆಲವು ದೊಡ್ಡ ಪಟ್ಟಣಗಳ ವಿನಾ ಉಳಿದೆಲ್ಲ ಪ್ರದೇಶಗಳಲ್ಲೂ ವ್ಯವಸಾಯಾವಲಂಬಿ ಜನರದೇ ಹೆಚ್ಚು ಸಂಖ್ಯೆ. ಎಲ್ಲ ಕಡೆಗಳಲ್ಲೂ ಶೇ. 57ಕ್ಕಿಂತ ಹೆಚ್ಚು (ಇಡೀ ರಾಜ್ಯದ ಪ್ರಮಾಣ ಶೇ. 76.4). ಉತ್ತರ ದಕ್ಷಿಣ ಮೈದಾನಗಳೆರಡರಲ್ಲೂ ಭೂಮಿ ಒಡೆತನವುಳ್ಳ ರೈತರ ಪ್ರಮಾಣವೇ ಅಧಿಕ.

ಉತ್ತರ ಮೈದಾನದಲ್ಲಿ ಸಾಮಾನ್ಯವಾಗಿ ಎಲ್ಲ ಹಳ್ಳಿಗಳೂ ಆಹಾರ ವಿಚಾರದಲ್ಲಿ ಕೊರತೆಯ ಪ್ರದೇಶಗಳು. ಜೋಳದ ಬೆಳೆ ಚೆನ್ನಾಗಿ ಆದ ವರ್ಷಗಳಲ್ಲಿ ಪರಿಸ್ಥಿತಿ ಉತ್ತಮ. ಹತ್ತಿ ಮತ್ತು ಕಡಲೆಕಾಯಿಯಿಂದ ಬರುವ ಹಣದಿಂದ ಆಹಾರ ಪೂರೈಕೆಯಾಗುತ್ತದೆ.

ದಕ್ಷಿಣ ಮೈದಾನ ಮುಖ್ಯವಾಗಿ ಕೆರೆಗಳ ಸೀಮೆ. ಇದು ಹಳೆಯ ಮೈಸೂರು ರಾಜ್ಯ ಪ್ರದೇಶ. ವಿದ್ಯುದುತ್ಪಾದನೆ, ಕೈಗಾರಿಕೆ ಮತ್ತು ನೀರಾವರಿ ಅಭಿವೃದ್ಧಿ ಕಾರ್ಯಗಳು ಹಿಂದಿನಿಂದಲೂ ಇಲ್ಲಿ ನಡೆದಿವೆ. ಶಿವಸಮುದ್ರದ ಬಳಿಯಿಂದ ಉತ್ತರಕ್ಕೆ ವಿಶ್ವೇಶ್ವರಯ್ಯ ನಾಲೆಯ ಗದ್ದೆ ಬಯಲುಗಳಲ್ಲಿ ಕಬ್ಬು ಬತ್ತಗಳೂ ಅಲ್ಲಲ್ಲಿ ತೆಂಗುಗಳೂ ಹಬ್ಬಿವೆ. ಕೆರೆಗಳ ಬೇಸಾಯ ಸಾರ್ವತ್ರಿಕ. ಕೆರೆಗಳ ಸೀಮೆ 51800 ಚ.ಕಿಮೀ ವಿಸ್ತಾರದಲ್ಲಿ ಹರಡಿದೆ. ಅನೇಕ ಕೆರೆಗಳ ದುರಸ್ತಿಯಲ್ಲಿಲ್ಲ. ಈ ಕೆರೆಗಳು ಹಿಂದಿನ ಶತಮಾನಗಳ ಸಾಮೂಹಿಕ ಕಾರ್ಯಶೀಲತೆಯ ಸಂಕೇತಗಳು.

ದಕ್ಷಿಣ ಮೈದಾನ ಪ್ರದೇಶದಲ್ಲಿ ಸಾಗುವಳಿಗೆ ಒಳಪಡುವ ಭೂಮಿ ಸಾಮಾನ್ಯವಾಗಿ ಅರ್ಧದಷ್ಟಿದೆ. ಪಾವಗಡ, ಕೊಳ್ಳೇಗಾಲ ಮತ್ತು ಗುಬ್ಬಿಯಂಥ ಗುಡ್ಡನಾಡುಗಳಲ್ಲಿ ಶೇ. 90ರ ವರೆಗೂ ಇದು ಏರಿರುವುದುಂಟು. ಮೈಸೂರಿನ ಸುತ್ತಣ ಮೂರು ತಾಲ್ಲೂಕುಗಳಲ್ಲಿ ಮಾತ್ರ ಶೇ. 70ಕ್ಕಿಂತ ಹೆಚ್ಚು ಭೂಮಿ ಸಾಗುವಳಿಯಲ್ಲಿದೆ.

ದಕ್ಷಿಣ ಮೈದಾನದ ದಕ್ಷಿಣಾರ್ಧದಲ್ಲಿ ಉತ್ತರಾರ್ಧದಲ್ಲಿರುವುದಕ್ಕಿಂತ ಕೆರೆಗಳ ಸಂಖ್ಯೆ ಹೆಚ್ಚು. ಅರೆಮಲೆನಾಡಿನ ಬಳಿಯ ಪಶ್ಚಿಮ ಭಾಗದಲ್ಲಿ ಪೂರ್ವ ಭಾಗಕ್ಕಿಂತ ಕಡಿಮೆ. ಬೆಟ್ಟಸೀಮೆಗಳಾದ ಕನಕಪುರ, ಬಂಗಾರಪೇಟೆ, ಚಿಂತಾಮಣಿ ತಾಲ್ಲೂಕುಗಳಲ್ಲೂ ಹೆಚ್ಚು ಕೆರೆಗಳಿಲ್ಲ. ಉತ್ತರ ಮಧ್ಯಭಾಗದಲ್ಲಿ ಗೌರಿಬಿದನೂರಿನಿಂದ ಚಿಕ್ಕನಾಯಕನಹಳ್ಳಿಯ ವರೆಗೆ ಇವು ಅಧಿಕ.

ದಕ್ಷಿಣ ವಿಶ್ವೇಶ್ವರಯ್ಯ ನಾಲೆಯ ಪ್ರದೇಶದ ದಕ್ಷಿಣ ಭಾಗದಲ್ಲೂ ಕಾವೇರಿ ಕಣಿವೆಯ ಬಹುಭಾಗದಲ್ಲೂ ಚನ್ನರಾಯಪಟ್ಟಣ ಮತ್ತು ನಾಗಮಂಗಲದ ಸುತ್ತಲೂ ತುಂಬ ಉತ್ತರದಲ್ಲೂ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ. ಬೆಂಗಳೂರಿನ ಹತ್ತಿರದ ತರಕಾರಿ ಕ್ಷೇತ್ರಗಳನ್ನೂ ಚಿಕ್ಕಬಳ್ಳಾಪುರ ಪ್ರದೇಶದ ಆಲೂಗೆಡ್ಡೆ ಪ್ರದೇಶವನ್ನೂ ಈ ಗುಂಪಿಗೆ ಸೇರಿಸಬಹುದು.

ಸಾಗುವಳಿಗೆ ಒಳಪಟ್ಟ ನೆಲದಲ್ಲಿ ಹೊಲಗಳ ಪ್ರಮಾಣ ಅಧಿಕ. ಇಲ್ಲಿ ರಾಗಿ ಬೆಳೆಯುವುದೇ ಹೆಚ್ಚು. ಸಾಮಾನ್ಯವಾಗಿ ಜೋಳ, ಕಡಲೆ, ಅವರೆ, ತೊಗರಿ, ಎಳ್ಳು, ಹುಚ್ಚೆಳ್ಳು, ಮತ್ತು ಹರಳುಗಳೊಂದಿಗೆ ಇದನ್ನು ಬೆಳೆಯುತ್ತಾರೆ. ಇದರ ಬಿತ್ತನೆಯಾಗುವುದು ಜುಲೈ ತಿಂಗಳಲ್ಲಿ. ನಡುನಡುವಣ ಇತರ ಬೆಳೆಗಳ ಸಾಲುಗಳನ್ನು ಬಿಟ್ಟು ರಾಗಿಯನ್ನು ಕಟಾವು ಮಾಡುವುದು ಡಿಸೆಂಬರಿನಲ್ಲಿ. ಉಳಿದ ಬೆಳೆಯ ಫಸಲು ಸ್ವಲ್ಪ ನಿಧಾನ. ಜೋಳ ಮತ್ತು ಸಜ್ಜೆಯೂ ಮುಖ್ಯ ಬೆಳೆಗಳು. ನೆಲಗಡಲೆಯನ್ನೂ ಕೆಲವು ಕಡೆಗಳಲ್ಲಿ ಹೊಗೆಸೊಪ್ಪನ್ನೂ ಬೆಳೆಯುವುದುಂಟು. ಇವು ನಗದು ಬೆಳೆಗಳು. ತರಿ ಜಮೀನಿನ ಮುಖ್ಯ ಫಸಲೆಂದರೆ ಬತ್ತ. ಡಿಸೆಂಬರ್–ಜನವರಿ ಇದರ ಕೊಯ್ಲು ಕಾಲ. ಕಬ್ಬನ್ನೂ ಬೆಳೆಯುವುದುಂಟು. ಕೆಲವು ವಿಶಿಷ್ಟ ಪ್ರದೇಶಗಳಲ್ಲಿ ಹಿಪ್ಪುನೇರಳೆ ಮುಖ್ಯ ಬೆಳೆ. ಬತ್ತದ ಫಸಲು ತಗೆದ ಮೇಲೆ ಚಳಿಗಾಲದ ಬೆಳೆಯಾಗಿ ಕಡಲೆ, ಹುರುಳಿ ಮುಂತಾದವನ್ನು ಬೆಳೆಯಬಹುದು. ಆದರೆ ಇವು ಅಷ್ಟೇನೂ ಮುಖ್ಯವಲ್ಲ. ಕೆಲವು ಕಡೆಗಳಲ್ಲಿ ರಾಗಿಗೂ ನೀರಾವರಿಯನ್ನು ಬಳಸುವುದುಂಟು. ಇದರ ಫಸಲು ಇಳುವರಿ ಖುಷ್ಕಿ ರಾಗಿಗಿಂತ ಹೆಚ್ಚು. ಕೆರೆಯ ಅಥವಾ ಬಾವಿಯ ಕೆಳಗಿನ ತೋಟಗಳು ತೆಂಗು, ಅಡಕೆ, ವೀಳೆಯದೆಲೆ, ನಿಂಬೆ ಮತ್ತು ಮೆಣಸುಗಳಿಗೆ ಮೀಸಲು, ನದಿಪಾತ್ರದ ಒಣಮರುಳು ಬಯಲುಗಳಲ್ಲಿ ಕಲ್ಲಂಗಡಿ ಮುಂತಾದವನ್ನು ಬೆಳೆಯುವುದುಂಟು. ಇವು ನದಿಪಾತ್ರದ ಅಡಿಯ ನೀರನ್ನು ಬಳಸಿಕೊಳ್ಳುತ್ತವೆ. ಬೆಂಗಳೂರಿನಂಥ ನಗರ ಪ್ರದೇಶಗಳ ಸುತ್ತ ತರಕಾರಿಗಳಿಗಾಗಿ ನೀರಾವರಿ ಬಳಕೆಯುಂಟು.

ದಕ್ಷಿಣ ಮೈದಾನದ ಮುಖ್ಯ ಬೆಳೆ ರಾಗಿ ಬತ್ತಗಳಾದರೂ ಉತ್ತರ ಮೈದಾನದಲ್ಲಿ ಜೋಳವೂ ಪಶ್ಚಿಮ ಕರ್ನಾಟಕದಲ್ಲಿ ಬತ್ತವೂ ಸಾಮಾನ್ಯವಾಗಿ ಪ್ರಧಾನವಾಗಿರುವಷ್ಟು ಮಟ್ಟಿಗೆ ಇವು ಇಲ್ಲಿ ಪ್ರಧಾನವಾಗಿಲ್ಲ. ಕೆಲವು ಕಡೆಗಳಲ್ಲಿ ಜೋಳ ಮುಖ್ಯ ಧಾನ್ಯ ; ಮತ್ತೆ ಕೆಲವೆಡೆಗಳಲ್ಲಿ ಸಜ್ಜೆ ಮುಖ್ಯ. ಅಲ್ಲೆಲ್ಲ ರಾಗಿ, ಬತ್ತಗಳನ್ನೂ ಬೆಳೆಯುವುದುಂಟು. ದಕ್ಷಿಣ ಮೈದಾನದ ಉತ್ತರಾರ್ಧದಲ್ಲಿ ಉತ್ತರ ಮೈದಾನದ ಬೆಳೆಗಳು ಮುಖ್ಯ. ಅರಸಿಕೆರೆ, ಪಾವಗಡ, ಬಾಗೆಪಲ್ಲಿ ಮತ್ತು ಉತ್ತರದ ತಾಲ್ಲೂಕುಗಳಲ್ಲಿ ಜೋಳವೂ, ಹೊಸದುರ್ಗ, ಶಿಡ್ಲಘಟ್ಟ, ಚಿಂತಾಮಣಿಗಳಲ್ಲೂ ಅದಕ್ಕೆ ಉತ್ತರದಲ್ಲೂ ಸಜ್ಜೆಯೂ, ಹೊಸದುರ್ಗ–ಚಳ್ಳಕೆರೆ–ಪಾವಗಡಗಳ ನೇರಕ್ಕೂ ಉತ್ತರಕ್ಕೂ ಹತ್ತಿಯೂ ಬೆಳೆಯುತ್ತವೆ. ಇವು ಕಡಿಮೆ ಮಳೆಯ ಪ್ರದೇಶಗಳು. ನೈಋತ್ಯದಲ್ಲಿ ಜೋಳ, ಹತ್ತಿ, ಹೊಗೆಸೊಪ್ಪು ಬೆಳೆಯುವ ಅಖಂಡ ಪ್ರದೇಶ ಇಲ್ಲಿಯಷ್ಟು ವಿಸ್ತಾರವಾಗಿ ಕರ್ನಾಟಕದಲ್ಲಿ ಬೇರೆಲ್ಲೂ ಇಲ್ಲ. ಉತ್ತರ ವಾಯವ್ಯದಿಂದ ದಕ್ಷಿಣ ಆಗ್ನೇಯದವರೆಗೆ ಎರಡು ಮುಖ್ಯ ವೃಕ್ಷಬೆಳೆಗಳ ಪ್ರದೇಶಗಳನ್ನು ಕಾಣಬಹುದು. ಕಡೂರು ಹೊಸದುರ್ಗಗಳಿಂದ ಚನ್ನಪಟ್ಟಣ ಮದ್ದೂರುಗಳವರೆಗೆ ಈ ಪ್ರದೇಶ ವ್ಯಾಪಿಸಿದ್ದು, ಚಿಕ್ಕನಾಯಕನಹಳ್ಳಿಯಿಂದ ದಾವಣಗೆರೆಯವರೆಗೂ ಕೃಷ್ಣರಾಜಪೇಟೆಯಿಂದ ಹೊನ್ನಾಳಿಯವರೆಗೂ ಹಬ್ಬಿರುವ ಬೆಟ್ಟ ಶ್ರೇಣಿಗಳನ್ನೊಳಗೊಂಡಿದೆ. ಇಲ್ಲಿ ತೆಂಗು ಬೆಳೆಯುತ್ತದೆ. ಇದಕ್ಕೆ ಹೊಂದಿಕೊಂಡಂತೆ, ಸ್ವಲ್ಪ ಪೂರ್ವಕ್ಕೆ, ಅಡಕೆಯೂ ಬೆಳೆಯುತ್ತದೆ. ಇದರ ದಕ್ಷಿಣ ಪಾರ್ಶ್ವದಲ್ಲಿ ಗುಂಡ್ಲುಪೇಟೆ ಚಾಮರಾಜನಗರಗಳವರೆಗೆ ಇರುವ ಪ್ರದೇಶದಲ್ಲಿ ಬಾಳೆ ತೋಟಗಳಿವೆ. ಮಂಡ್ಯದ ಬಳಿ ಕಬ್ಬು ಗೌರಿಬಿದನೂರಿನ ಬಳಿ ಮತ್ತು ಶ್ರೀನಿವಾಸಪುರ ಮುಳಬಾಗಿಲುಗಳಲ್ಲಿ ಏತ ಮತ್ತು ವಿದ್ಯುತ್ ಪಂಪು ಬಾವಿ ನೀರಾವರಿಯಿಂದ ಕಬ್ಬು ಮತ್ತು ಹೊಗೆಸೊಪ್ಪು ಶಿಡ್ಲಘಟ್ಟ ಮತ್ತು ಮಾಗಡಿಯಿಂದ ಕನಕಪುರ ಮತ್ತು ಕೊಳ್ಳೆಗಾಲದವರೆಗಿನ ಪ್ರದೇಶದಲ್ಲಿ ಹಿಪ್ಪುನೇರಳೆಯೂ ದಕ್ಷಿಣ ಮೈದಾನದ ಪೂರ್ವಭಾಗದಲ್ಲಿ ಹಣ್ಣು ತರಕಾರಿಗಳೂ ಬೆಳೆಯುತ್ತವೆ.

ದಕ್ಷಿಣ ಮೈದಾನದ ದಕ್ಷಿಣ, ಮಧ್ಯ ಮತ್ತು ಪೂರ್ವಭಾಗಗಳಲ್ಲಿ ಸಾಕುಪ್ರಾಣಿಗಳ ಸಂಖ್ಯೆ ಉಳಿದ ಭಾಗಗಳಲ್ಲಿರುವುದಕ್ಕಿಂತ ಹೆಚ್ಚು. ಕೆರೆ ಪ್ರದೇಶದಲ್ಲಿ ದನಗಳ ಮೇವಿಗೆ ಅನುಕೂಲವಾದ ಸ್ಥಳ ಹೆಚ್ಚಾಗಿದೆ. ಹಸು, ಎಮ್ಮೆ, ಕುರಿ ಮತ್ತು ಆಡು ಮುಖ್ಯ. ಉತ್ತರಾರ್ಧದ ಕಪ್ಪು ಮಣ್ಣಿನ ಪ್ರದೇಶದಲ್ಲಿ ಕುರಿ ಕಡಿಮೆ. ಕೊಳ್ಳೆಗಾಲ ಪ್ರದೇಶದಲ್ಲಿ ಕುರಿ ಆಡುಗಳಿಗಿಂತ ದನ ಹೆಚ್ಚು. ಕೋಲಾರದ ಕಡೆ ಕಂಬಳಿ ನೇಯ್ಗೆ ಒಂದು ಮುಖ್ಯ ಕಸಬು. ರಾಗಿ–ಬತ್ತ ಬೆಳೆಯುವ ಪ್ರದೇಶದಲ್ಲಿ ಕೋಳಿ ಸಾಕಣೆಯೂ ಹೆಚ್ಚು.

ತೆಂಗು ಬೆಳೆಯುವ ಪ್ರದೇಶದಲ್ಲೂ ವಿಶ್ವೇಶ್ವರಯ್ಯ ನಾಲೆಯ ಬಳಿಯಲ್ಲೂ ಕಾವೇರಿ ಕಣಿವೆಯಲ್ಲೂ ವ್ಯವಸಾಯವಲಂಬಿತ ಜನರ ಸಂಖ್ಯೆ ಹೆಚ್ಚು (ಶೇ. 84–91) ನಂಜನಗೂಡಿನ ಬಳಿಯೂ ಅಧಿಕ. ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶದಲ್ಲೂ ಚಿತ್ರದುರ್ಗ, ದಾವಣಗೆರೆ, ಚನ್ನಪಟ್ಟಣ–ಈ ಪ್ರದೇಶದಲ್ಲೂ ಮೈಸೂರು ನಗರದಲ್ಲೂ ಬೆಳೆದಿರುವ ಕೈಗಾರಿಕೆಗಳಿಂದಾಗಿ ವ್ಯವಸಾಯಾವಲಂಬಿ ಜನರ ಪ್ರಮಾಣ ಕಡಿಮೆ.

**ಕರ್ನಾಟಕದ ಕೃಷಿಗೆ ಸಂಬಂಧಿಸಿದ ಕೆಲವಿವರ, 2004–05**

| ವಿವರ | ಕ್ಷೇತ್ರ (000 ಹೆ.) |
|---|---|
| ಭೂ ವಿಸ್ತೀರ್ಣ | 19049.8 |
| ಕಾಡು | 3070.3 |
| ವ್ಯವಸಾಯೇತರ ಭೂಮಿ | 1331.6 |
| ಕೃಷಿ ಯೋಗ್ಯವಲ್ಲದ ಭೂಮಿ | 788.0 |
| ಖಾಯಂ ಗೋಮಾಳ ಇತ್ಯಾದಿ | 952.2 |
| ವಿವಿಧ ವೃಕ್ಷಾವೃತ ಭೂಮಿ | 304.7 |
| ಕೃಷಿ ಯೋಗ್ಯ ಬರಡು ನೆಲ | 421.2 |
| ಪಾಳು ಭೂಮಿ | 2344.0 |
| ಬಿತ್ತನೆಯ ಪ್ರದೇಶ | 9837.6 |
| ಒಂದಕ್ಕಿಂತ ಹೆಚ್ಚು ಬಿತ್ತನೆಯ ಪ್ರದೇಶ | 1674.2 |
| ನಿವ್ವಳ ನೀರಾವರಿ ಪ್ರದೇಶ | 2450.4 |

**ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆ, 2004–05**

| ಬೆಳೆ | ವಿಸ್ತೀರ್ಣ (ಹೆಕ್ಟೇರು) | ಉತ್ಪನ್ನ (ಟನ್ನುಗಳು) |
|---|---|---|
| ಹಣ್ಣುಗಳು | 260,733 | 416,4611 |
| ತರಕಾರಿಗಳು | 377,374 | 665,4105 |
| ಸಾಂಬಾರು ಬೆಳೆ | 244,501 | 496,933 |
| ತೋಟದ ಬೆಳೆ | 625,693 | 334,005 |
| ವಾಣಿಜ್ಯ ಪುಷ್ಪಗಳು | 20890 | 156,584 |
| ಔಷಧೀಯಗಿಡಗಳು | 381 | 4525 |
| ಸುಗಂಧಿಕ ಗಿಡಗಳು | 665 | 9144 |

**ಕರ್ನಾಟಕದ ಪ್ರಮುಖ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪನ್ನ, 2004–2005**

| ಬೆಳೆ | ವಿಸ್ತೀರ್ಣ (000 ಹೆಕ್ಟೇರು) | ಉತ್ಪನ್ನ (000 ಟನ್ನು) |
|---|---|---|
| **ಆಹಾಧಾನ್ಯಗಳು** | | |
| ಬತ್ತ | 1,308.2 | 5,556.5 |
| ಜೋಳ | 1,662.8 | 1,358.6 |
| ಸಜ್ಜೆ | 444.7 | 266.1 |
| ಮುಸುಕಿನ ಜೋಳ | 850.4 | 2,509.3 |
| ರಾಗಿ | 892.8 | 1,613.9 |
| ತೃಣ ಧಾನ್ಯಬೆಳೆ | 58.4 | 30.6 |
| ಗೋಧಿ | 242.0 | 206.3 |
| **ಒಟ್ಟು ಏಕದಳ ಧಾನ್ಯ** | **5459.2** | **9,691.1** |
| ಕಡಲೆ | 418.1 | 230.9 |
| ತೊಗರಿ | 562.1 | 291.1 |
| ಇತರ ದ್ವಿದಳ ಬೆಳೆ | 108.7 | 384.6 |
| **ಒಟ್ಟು ದ್ವಿದಳಧಾನ್ಯ ಬೆಳೆ** | **2,108.0** | **799.9** |
| **ಎಣ್ಣೆ ಬೀಜಗಳು** | | |
| ನೆಲಗಡಲೆ | 968.6 | 684.1 |
| ಸೂರ್ಯಕಾಂತಿ | 1135.5 | 436.8 |
| ಹರಳು | 17.3 | 15.7 |
| ಹುಚ್ಚೆಳ್ಳು | 27.4 | 5.2 |
| ಎಳ್ಳು | 58.5 | 25.9 |
| ಕುಸುಬೆ | 98.6 | 42.3 |
| ಸಾಸಿವೆ, ರೇಪ್, ಬೀಜ | 6.1 | 1.7 |
| ಅಗಸೆ | 12.9 | 1.0 |
| **ಒಟ್ಟು** | **2,267.4** | **934.1** |

**ಇತರ ಉತ್ಪನ್ನಗಳು**

| | | |
|---|---|---|
| ಹತ್ತಿ | 521.8 | 624.6 |
| ಕಬ್ಬು | 177.9 | 13,993.2 |
| ಮಾವು | 119.2 | 109.8 |
| ದ್ರಾಕ್ಷಿ | 8.5 | 150.3 |
| ಹೊಗೆಸೊಪ್ಪು | 98.1 | 50.1 |
| ಅರಿಸಿನ | 10.2 | 65.6 |
| ಆಲೂಗೆಡ್ಡೆ | 44.7 | 575.8 |
| ತೆಂಗು | 412.7 | 38.7 |
| ಗೋಡಂಬಿ | 61.5 | 104.8 |
| ಅಡಕೆ | 132.3 | 169.9 |
| ಕಾಫಿ | 204.3 | 210.8 |
| ಕೋಕೋ | 1.9 | 22.8 |

ಪಶುಸಂಗೋಪನೆ: ಕರ್ನಾಟಕದಲ್ಲಿ ಪಶುಸಂಗೋಪನೆ ಕೃಷಿಯ ಒಂದು ಭಾಗವಾಗಿ ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. ಜಾನುವಾರುಗಳನ್ನು ಕ್ಷೀರೋತ್ಪನ್ನ, ತುಪ್ಪಳ, ಚರ್ಮ, ಗೊಬ್ಬರ, ಮಾಂಸ ಮುಂತಾದ ಉದ್ದೇಶಗಳಿಗಾಗಿ ಸಾಕಿದರೂ ಕೃಷಿ ಕಾರ್ಯಗಳಿಗೆ ಸಾಕುವುದೇ ಹೆಚ್ಚು. ಉದಾ: ಉಳುಮೆ ಮಾಡಲು, ಸರಕು ಸಾಗಿಸಲು ಇತ್ಯಾದಿ. ದನ, ಎಮ್ಮೆ, ಕುರಿ, ಮೇಕೆ ಮತ್ತು ಕೋಳಿಗಳನ್ನು ಹೆಚ್ಚು ಸಾಕಲಾಗುವುದು. ಇತರ ಪ್ರಾಣಿಗಳನ್ನು ಸಾಕಿದರೂ ಅವುಗಳ ಸಂಖ್ಯೆ ಕಡಿಮೆ. 2003ರಲ್ಲಿದ್ದಂತೆ ಕರ್ನಾಟಕದಲ್ಲಿ ಒಟ್ಟು 283.1 ಲಕ್ಷ ಜಾನುವಾರುಗಳಿದ್ದವು. ಅವುಗಳಲ್ಲಿ 95.4 ಲಕ್ಷ ದನಗಳು, 40 ಲಕ್ಷ ಎಮ್ಮೆ, 72.5 ಲಕ್ಷ ಕುರಿ, 44.8 ಲಕ್ಷ ಮೇಕೆ ಮತ್ತು 3 ಲಕ್ಷ ಹಂದಿಗಳಾಗಿದ್ದವು. ಬೆಳಗಾಂವಿ ಅಧಿಕ ಜಾನುವಾರುಗಳನ್ನೊಳಗೊಂಡ ಜಿಲ್ಲೆಂಗಾದರೆ ಕೊಡಗು ಕಡಿಮೆ ಜಾನುವಾರುಗಳನ್ನೊಳಗೊಂಡ ಜಿಲ್ಲೆಯಾಗಿದೆ.

**2003ರಲ್ಲಿ ರಾಜ್ಯದಲ್ಲಿದ್ದ ಜಾನುವಾರುಗಳ ಸಂಖ್ಯೆ ('000ಗಳಲ್ಲಿ):**

| | |
|---|---|
| ದನಕರು | 9539.0 |
| ಎಮ್ಮೆ | 3991.0 |
| ಕುರಿ | 7256.0 |
| ಆಡು | 4484.0 |
| ಹಂದಿ | 312.0 |
| ಇತರೆ | 2730.0 |
| ಕುಕ್ಕುಟ | 25,592.8 |

ಹೈನುಗಾರಿಕೆ: ಕೃಷಿ ಪ್ರಧಾನವಾದ ಕರ್ನಾಟಕದಲ್ಲಿ ಜಾನುವಾರು ಸಾಕಣೆಯಷ್ಟೆ ಹೈನುಗಾರಿಕೆಯೂ ಮುಖ್ಯ ಉದ್ಯಮ. 1950ರ ದಶಕಕ್ಕೂ ಮುಂಚೆ ರಾಜ್ಯದಲ್ಲಿ ಹಾಲಿನ ಉತ್ಪಾದನೆ ಮತ್ತು ವಿತರಣೆ ಸೀಮಿತವಾಗಿತ್ತು. ಕೃಷಿ ಕ್ಷೇತ್ರಗಳಲ್ಲಿ ಸಾಕುತ್ತಿದ್ದ ಹಸು ಮತ್ತು ಎಮ್ಮೆಗಳ ಹಾಲನ್ನು ಸ್ಥಳೀಯವಾಗಿ ಬಳಕೆಮಾಡಲಾಗುತ್ತಿತ್ತು. ಕ್ರಮೇಣ ಗ್ರಾಮೀಣ ಪ್ರದೇಶಗಳಿಂದ ಪಟ್ಟಣ–ನಗರಗಳಿಗೆ ಹಾಲಿನ ಮಾರಾಟ ಪ್ರಾರಂಭವಾಯಿತು. ಪ್ರಥಮವಾಗಿ ಕೊಡಗು ಜಿಲ್ಲೆಯ ಕೂಡಿಗೆ (1955)ಯಲ್ಲಿ ಆಧುನಿಕ ಹೈನುಗಾರಿಕೆ ಪ್ರಾರಂಭವಾಯಿತು. 1965ರಲ್ಲಿ ಬೆಂಗಳೂರಿನಲ್ಲಿ ಡೈರಿ ಸಂಸ್ಥೆ ಅಸ್ತಿತ್ವಕ್ಕೆ ಬಂದದ್ದು ರಾಜ್ಯದ ಹೈನುಗಾರಿಕೆಯ ಮಹತ್ವದ ಹೆಜ್ಜೆ. ಅದೇ ವರ್ಷ ಕರ್ನಾಟಕ ಕ್ಷೀರಾಭಿವೃದ್ಧಿ ಮಂಡಲಿ ಉಗಮವಾಯಿತು. ಇಂದು ಕರ್ನಾಟಕ ಹಾಲು ಮಹಾಮಂಡಲಿ ರಾಜ್ಯದಾದ್ಯಂತ ಹಾಲು ಸಂಗ್ರಹಿಸುವ ರಾಜ್ಯದ ಏಕೈಕ ಸಾರ್ವಜನಿಕ ಸಂಸ್ಥೆ.

2002ರಲ್ಲಿದ್ದಂತೆ ರಾಜ್ಯದಲ್ಲಿ ಒಟ್ಟು 8833 ನೋಂದಣಿ ಪಡೆದ ಹೈನುಗಾರಿಕಾ ಸಹಕಾರ ಸಂಘಗಳಿವೆ. ಇವುಗಳಲ್ಲಿ ನೋಂದಾಯಿಸಲ್ಪಟ್ಟ 16.6 ಲಕ್ಷ ಸದಸ್ಯರಿದ್ದಾರೆ. ಇವರಲ್ಲಿ ಸಣ್ಣ, ಅತಿ ಸಣ್ಣ ರೈತರು, ಭೂರಹಿತ ಕೃಷಿ ಕಾರ್ಮಿಕರೂ ಸೇರಿದ್ದಾರೆ. ರಾಜ್ಯದಲ್ಲಿ 13 ಹಾಲು ಒಕ್ಕೂಟಗಳಿವೆ ಮತ್ತು 17 ಕ್ಷೀರ ಕೇಂದ್ರಗಳಿವೆ. ಒಟ್ಟು 42 ಶೀತಲೀಕರಣ ಘಟಕಗಳಿವೆ. ಬೆಂಗಳೂರು, ಮೈಸೂರು, ಮಂಡ್ಯ, ತುಮಕೂರು, ಹಾಸನ, ಧಾರವಾಡ, ಬೆಳಗಾವಿ, ಬಿಜಾಪುರ, ಗುಲ್ಬರ್ಗ, ಮಂಗಳೂರು, ಶಿವಮೊಗ್ಗ, ರಾಯಚೂರು ಮತ್ತು ಕೋಲಾರಗಳು ಡೈರಿಕೇಂದ್ರಗಳು. ಈ ಕೇಂದ್ರಗಳು ಹಾಲು ಸಂಗ್ರಹಿಸುವುದು, ಸಂಸ್ಕರಿಸುವುದು ಹಾಗೂ ಮಾರಾಟಮಾಡುವುದಕ್ಕೆ ಸೀಮಿತವಲ್ಲ. ಇತರ ಕ್ಷೀರೋತ್ಪನ್ನಗಳನ್ನೂ ತಯಾರಿಸುತ್ತವೆ. ಉದಾ: ಕ್ರೀಮ್, ಮೊಸರು, ಬೆಣ್ಣೆ, ತುಪ್ಪ, ಮಜ್ಜಿಗೆ, ಸುವಾಸಿತ ವಿಶೇಷ ಬಗೆಯ ಹಾಲು, ಐಸ್‌ಕ್ರೀಮ್, ಪೇಡ, ಮೈಸೂರು ಪಾಕ್, ಕೆನೆರಹಿತ ಹಾಗೂ ಕೆನೆಬರಿತ ಹಾಲಿನ ಪುಡಿ, ಖೋವಾ, ರಸಗುಲ್ಲ ಮತ್ತು ಬರ್ಫಿ.

ಮೀನುಗಾರಿಕೆ: ನೆಲದಲ್ಲಿ ಬೆಳೆಗಳಿಂದ ಪಡೆದುಕೊಳ್ಳುವಂತೆ ಜಲದಲ್ಲಿಯೂ ಆಹಾರ ಪಡೆಯಬಹುದು. ಅಂತಹ ಆಹಾರಗಳಲ್ಲಿ ಮೀನು ಮುಖ್ಯವಾದುದು. ಕರ್ನಾಟಕಕ್ಕೆ ನಿಸರ್ಗವು ನೀಡಿರುವ ಸಂಪನ್ಮೂಲಗಳಲ್ಲಿ ಮತ್ಸ್ಯ ಸಂಪನ್ಮೂಲ ಸೇರಿದೆ. ಕಡಲದಂಡೆಯಲ್ಲಿ ಬದುಕುವ ಜನರ ಮುಖ್ಯವೃತ್ತಿ ಮೀನುಗಾರಿಕೆ. ಇಲ್ಲಿ ಸಾಗರಿಕ ಮತ್ಸ್ಯೋದ್ಯಮ ಅಭಿವೃದ್ಧಿಗೊಂಡಿದೆ. ಪುರಾತನ ಕಾಲದಿಂದಲೂ ರೂಢಿಗೆ ಬಂದಿರುವಂತಹ ವೃತ್ತಿ. ಭೌಗೋಳಿಕ ಪರಿಸ್ಥಿತಿ ಪೂರಕವಾಗಿದ್ದರೂ ಇದೊಂದು ಸಣ್ಣ ಪ್ರಮಾಣದ ಹಾಗೂ ಋತುಕಾಲಿಕವಾದ ಉದ್ಯಮ.

ಕರ್ನಾಟಕ 320 ಕಿಮೀ ಉದ್ದದ ಕರಾವಳಿಯನ್ನು ಹೊಂದಿರುವುದರೊಂದಿಗೆ 27,000 ಚ.ಕಿಮೀ ವಿಸ್ತೀರ್ಣವುಳ್ಳ ಖಂಡಾವರಣ ಪ್ರದೇಶವನ್ನು ಹೊಂದಿದೆ. ಜೊತೆಗೆ 5.03 ಲಕ್ಷ ಹೆ. ಒಳನಾಡಿನ ಜಲರಾಶಿ ಮತ್ತು 8000 ಹೆ. ಹಿನ್ನೀರು ಕ್ಷೇತ್ರವುಂಟು. ಇದು ಸೀಗಡಿ ಮೀನು ಕೃಷಿಗೆ ಉತ್ಕೃಷ್ಟ. ರಾಜ್ಯದಲ್ಲಿ ಸು. 7.6 ಲಕ್ಷ ಮೀನುಗಾರರಿದ್ದಾರೆ. ಅವರಲ್ಲಿ 2 ಲಕ್ಷ ಜನರು ಕರಾವಳಿಯಲ್ಲಿ ಮತ್ತು 5.6 ಲಕ್ಷ ಒಳನಾಡಿನಲ್ಲಿದ್ದು ಮೀನುಗಾರಿಕೆಯಲ್ಲಿ ತೊಡಗಿರುವರು.

ಕರ್ನಾಟಕದಲ್ಲಿ ಕಡಲ ಮತ್ತು ಒಳನಾಡಿನ ಎರಡೂ ರೀತಿಯ ಮೀನುಗಾರಿಕೆ ರೂಢಿಯಲ್ಲಿದೆ. ಸಮುದ್ರ ತೀರವನ್ನು ಹೊಂದಿಕೊಂಡಂತಿರುವ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಡಲ ಮೀನುಗಾರಿಕೆ ಮುಖ್ಯ. ಇವು ಸುಮಾರು 25000 ಚ.ಕಿಮೀ ಗಳಷ್ಟು ಖಂಡಾವರಣ ಪ್ರದೇಶವನ್ನಾವರಿಸಿದ್ದು 28 ಮೀನುಗಾರಿಕೆ ಕೇಂದ್ರಗಳು ಮತ್ತು 204 ಮೀನುಗಾರಿಕಾ ಹಳ್ಳಿಗಳಲ್ಲಿ ಸಾವಿರಾರು ಕುಟುಂಬಗಳು ಮೀನುಗಾರಿಕಾ ವೃತ್ತಿಯನ್ನಾಧರಿಸಿ ಬದುಕುತ್ತಿದ್ದಾರೆ. ಸಂಗ್ರಹಿಸುವ ಮೀನುಗಳೆಂದರೆ. ಸೀಗಡಿ, ಬಂಗಡೆ, ಸಾರ್ಡಿನ್, ತಾಟೆ, ತೊರಕೆ, ಗರಗಸಮೀನು, ಕೊಡ್ವಾಯಿ, ಬಲ್ಲೆಧೋಡಿ, ಕೊದಾಡೆ, ಶೇಡೆ, ಕಡುವಾಯಿ, ತಿಡುಂಬ, ಸಾಂದಾಳ ಇತ್ಯಾದಿ. ಇವುಗಳಲ್ಲಿ ಮೊದಲ 3 ಪ್ರಭೇದಗಳು ಮುಖ್ಯವಾದವು. ಕಾರವಾರ, ಅಂಕೋಲ, ಕುಮಟ, ಹೊನ್ನಾವರ, ಭಟ್ಕಳ, ಮಜಲಿ, ಬಿಂಗಿ, ಬಿಂದಿಯ, ಗಂಗೊಳ್ಳಿ, ಮಲ್ಪೆ, ಕಾರವಾರ, ಮಂಗಳೂರು ಮತ್ತು ಉರಿಯಾವರ ಪ್ರಮುಖ ಕಡಲ ಮೀನುಗಾರಿಕಾ ಕೇಂದ್ರಗಳು.

ಒಳನಾಡಿನ ಮೀನುಗಾರಿಕೆ: 6015 ದೊಡ್ಡ ಕೆರೆಗಳು, 19,697 ಸಣ್ಣಕೆರೆಗಳು, ಕೆಲವು ದೇವಾಲಯ ಪುಷ್ಕರಣಿಗಳು, ಪ್ರಮುಖ ನದಿಗಳಾದ ಕಾವೇರಿ, ತುಂಗಭದ್ರಾ, ಕೃಷ್ಣಾ ಮತ್ತು ಅವುಗಳ ಉಪನದಿಗಳಲ್ಲಿ ಕಂಡುಬರುತ್ತದೆ. ಜೊತೆಗೆ ಸು. 4000 ಹೆ. ಪ್ರದೇಶವುಳ್ಳ ಸೌಳು ನೀರಿನ ಕೊಲ್ಲಿ ಮತ್ತು ಹಿನ್ನೀರುಗಳು ಸಹ ಒಳನಾಡಿನ ಮೀನುಗಾರಿಕೆಗೆ ಲಭ್ಯ. ಆದರೂ ಈ ವಿಧದ ಮೀನುಗಾರಿಕೆ ಹಂಚಿಕೆ ಕಡಿಮೆ. ತುಂಗಭದ್ರಾ ಜಲಾಶಯ, ಭದ್ರಾ ಜಲಾಶಯ, ವಾಣೀ ವಿಲಾಸ ಸಾಗರ, ಶಾಂತಿ ಸಾಗರ, ನುಗು ಕಬಿನಿ, ನೀರಸಾಗರ, ಹೆಸರುಘಟ್ಟ, ಕೃಷ್ಣರಾಜಸಾಗರ, ಮುನಿರಾಬಾದ್ ಮತ್ತು ರಕ್ಕಸ ಕೊಪ್ಪ ಜಲಾಶಯಗಳು ಮುಖ್ಯ ಮೀನುತಳಿ ಮತ್ತು ಮೀನುಪಾಲನಾ ಕೇಂದ್ರಗಳು. ಮೂಗುಮಲ್ಲ, ಬಿಳಿಮೀನು, ಬಾಳೆಮೀನು, ಗೆಂಡೆಮೀನು, ರೂಹು, ಮೈಗಾಲ್ ಗೆಂಡೆ, ಹುಲ್ಲು ಮೀನು, ಬೆಳ್ಳಿಮೀನು, ಟಿಲಾಪಿಯಾ ಮುಂತಾದವು ಒಳನಾಡಿನ ಮೀನುಗಾರಿಕೆಯ ಮೀನುಗಳು. ರಾಜ್ಯ 2003–04ನೇ ಸಾಲಿನಲ್ಲಿ ಸು. 2 ಲಕ್ಷ ಟನ್ನು (ಶೇ. 76) ಕಡಲ ಮೀನು ಮತ್ತು 62 ಸಾವಿರ ಟನ್ನು ಒಳನಾಡಿನ ಮೀನುಗಳನ್ನು ಉತ್ಪಾದಿಸಿತು. ಉತ್ತರ ಮತ್ತು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು ಮೀನು ಉತ್ಪಾದನೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಹೊಂದಿವೆ. ರಾಜ್ಯದಲ್ಲಿ 45 ಮೀನು ಶೈತ್ಯೀಕರಣ ಉಗ್ರಾಣಗಳು ಮತ್ತು 222 ಶೈತ್ಯೀಕೃತ ಮೀನುಸಂಗ್ರಹಣ ಘಟಕಗಳಿವೆ. ಕರ್ನಾಟಕದಲ್ಲಿ ಮೀನು ಬಳಸುವವರ ಸಂಖ್ಯೆ ಕಡಿಮೆ. ಅಂದರೆ ಶೇ. 48 ಜನರು ಮಾತ್ರ ಮೀನು ಬಳಸುವರು. ಕರಾವಳಿ ಜಿಲ್ಲೆಗಳು ಹಾಗು ಅವುಗಳಿಗೆ ಸಮೀಪದ ಇತರ ಭಾಗಗಳಲ್ಲಿ ಮೀನಿನ ಬಳಕೆ ಹೆಚ್ಚು.

ಕರ್ನಾಟಕದಿಂದ ಕೆಲವು ಪ್ರಭೇದದ ಮೀನುಗಳು ಹಾಗೂ ಮತ್ಸ್ಯ ಉತ್ಪನ್ನಗಳು ರಫ್ತಾಗುತ್ತವೆ. ರಾಜ್ಯದ ಸೀಗಡಿ ಮೀನುಗಳಿಗೆ ವಿದೇಶಗಳಲ್ಲಿ ಅಪಾರವಾದ ಬೇಡಿಕೆಯಿದೆ. ರಫ್ತಾಗುವ ಮೀನಿನ ಪ್ರಮಾಣದಲ್ಲಿ ಶೇ. 80 ಸೀಗಡಿ ಮೀನಿನಿಂದ ಕೂಡಿರುತ್ತದೆ.

ನೀರಾವರಿ, ವಿದ್ಯುದುತ್ಪಾದನೆ : ಒಂದು ನದಿಯ ನೀರಿನ ಯಶಸ್ವೀ ಬಳಕೆಗೆ ಮುಖ್ಯವಾದ ಅಂಶಗಳು ನಾಲ್ಕು : ಮೇಲ್ಮೈ ಲಕ್ಷಣ, ವಾಯುಗುಣ, ಭೂರಚನೆ ಮತ್ತು ಸನ್ನಿವೇಶ. ಈ ನಾಲ್ಕು ಅಂಶಗಳೂ ಕರ್ನಾಟಕದಲ್ಲಿ ಅನುಕೂಲಕರವಾಗಿವೆ. ಅಂದಾಜೊಂದರ ಪ್ರಕಾರ ಕರ್ನಾಟಕದಲ್ಲಿ ಸು. 188.1 ಸಾವಿರಕೋಟಿ ಘನ ಮೀಟರ್‌ನಷ್ಟು ಸಂಭವನೀಯ ಜಲಸಂಪತ್ತಿದೆ ಎಂದು ತಿಳಿದಿದೆ. ಇದರಲ್ಲಿ ಮೇಲ್ಮೈ ಜಲ ಮತ್ತು ಅಂತರ್ಜಲಗಳು ಸೇರಿವೆ. ರಾಜ್ಯದ ನದಿಗಳಲ್ಲಿ ಸು. 1 ಕೋಟಿ ಹೆ.ಮೀನಷ್ಟು ನೀರು ಹರಿಯುತ್ತದೆಂದು ತಜ್ಞರ ಅಂದಾಜು. ಇದರಲ್ಲಿ 45–50 ಲಕ್ಷ ಹೆ.ಮೀ ಮೇಲ್ಮೈ ನೀರನ್ನು ಬಳಕೆ ಮಾಡಿಕೊಳ್ಳಬಹುದು. ಹಾಗೂ 42 ಲಕ್ಷ ಹೆ. ಭೂಮಿಗೆ ನೀರಾವರಿ ಸೌಲಭ್ಯ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಮೀಕ್ಷೆಯಂತೆ ಸು. 11,412.2 ದಶಲಕ್ಷ

ಘನ ಮೀಟರ್‌ನಷ್ಟು ಅಂತರ್ಜಲ ಸಂಪತ್ತು ರಾಜ್ಯದಲ್ಲಿ ಲಭ್ಯ. ಇದರಲ್ಲಿ 8,812.2 ದಶಲಕ್ಷ ಘನ ಮೀನಷ್ಟು ನೀರಾವರಿಗೆ ಬಳಸುವ ಹಾಗೂ ಸು. 10 ಲಕ್ಷ ಹೆ. ಭೂಮಿಗೆ ನೀರಾವರಿ ಸೌಲಭ್ಯ ಸಾಧ್ಯ. ಇತ್ತೀಚೆಗೆ ಕುಡಿಯುವ ನೀರಿಗಾಗಿ ಮತ್ತು ನೀರಾವರಿಗಾಗಿ ಅಂತರ್ಜಲವನ್ನು ಹೆಚ್ಚೆಚ್ಚು ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಮೇಲ್ಮೈ ಜಲಸಂಪತ್ತು ನೀಡುವ ನದಿಗಳಲ್ಲಿ ಕೃಷ್ಣ, ಕಾವೇರಿ ಮತ್ತು ಅವುಗಳ ಉಪನದಿಗಳು ಮಹತ್ವವುಳ್ಳವು. ಇವುಗಳಲ್ಲಿ ಸು. 3400 ಟಿ.ಎಂ.ಸಿ ನೀರು ಹರಿಯುತ್ತದೆ. ನೀರಾವರಿಗಲ್ಲದೆ ಈ ನದಿ ಜಲಗಳು ಜಲವಿದ್ಯುಚ್ಛಕ್ತಿ ಉತ್ಪಾದನೆಗೂ ಬಹು ಉಪಯುಕ್ತ. ಪಶ್ಚಿಮಕ್ಕೆ ಹರಿಯುವ ಶರಾವತಿ, ಕಾಳಿ, ವರಾಹಿ, ಬೇಡ್ತಿ, ಅಘನಾಶಿನಿ ಮತ್ತು ಬರಪೊಳೆ ನದಿಗಳು ನೀರಾವರಿಗಿಂತ ವಿದ್ಯುಚ್ಛಕ್ತಿ ಉತ್ಪಾದನೆಗೆ ಹೆಚ್ಚು ಉಪಯುಕ್ತ. ನೀರಾವರಿಯ ಜೊತೆಗೆ ವಿದ್ಯುದುತ್ಪಾದನೆಗೂ ಬಳಸಿಕೊಳ್ಳಲಾಗಿರುವ ಅಥವಾ ಬಳಸಿಕೊಳ್ಳಬಹುದಾದ ನದಿಗಳೆಂದರೆ ಕಾವೇರಿ, ಶಿಂಷಾ, ಭದ್ರಾ, ತುಂಗಭದ್ರಾ, ಕಪಿಲ, ಘಟಪ್ರಭಾ, ಕೃಷ್ಣ (ಮೇಲ್ದಂಡೆ) ಇವು ಮುಖ್ಯ. ಕರ್ನಾಟಕದ ವಿದ್ಯುತ್ ವಿಭವ (ಪವರ್ ಪೊಟೆನ್ಷಿಯಲ್) 60 ಲಕ್ಷ ಕಿವ್ಯಾ ಗಳಿಗಿಂತ ಹೆಚ್ಚು .

ರಾಜ್ಯದ ನದಿ ನೀರನ್ನು ಬೇಸಾಯಕ್ಕಾಗಿ ಬಳಸಿಕೊಳ್ಳುವ ಪ್ರಯತ್ನ ಬಹಳ ಹಿಂದಿನ ಕಾಲದಿಂದಲೂ ನಡೆದುಬಂದಿದೆ. ಕರ್ನಾಟಕದ ಅನೇಕ ನದಿಗಳಿಗೆ ಅಡ್ಡಲಾಗಿ ಕಟ್ಟಿದ ಹಳೆಯ ಅಣೆಕಟ್ಟುಗಳೂ ಕಾಲುವೆಗಳೂ ಈಗಲೂ ನೀರಾವರಿಗೆ ಉಪಯುಕ್ತ. ರಾಜ್ಯದಲ್ಲಿರುವ 37,337 ಚಿಕ್ಕದೊಡ್ಡ ಕೆರೆಗಳ ಕೆಳಗಿರುವ 3,97,530 ಹೆ. ಗಳು ಸೇರಿ ನಾನಾ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದಿದ್ದ ಜಮೀನು 17 ಲಕ್ಷ ಎಕರೆ. ವೇದಾವತಿ ನದಿಗೆ ವಾಣಿವಿಲಾಸ ಸಾಗರವನ್ನು ಸುಮಾರು ಒಂದು ಶತಮಾನದ ಹಿಂದೆ (1907) ನಿರ್ಮಿಸಲಾಯಿತು. ಇದರಿಂದ ನೀರಾವರಿಗೆ ಒದಗಿ ಬಂದಿರುವ ವಿಸ್ತೀರ್ಣ 10 ಸಾವಿರ ಹೆ. ಮೈಸೂರಿನ ಬಳಿಯ ಕೃಷ್ಣರಾಜಸಾಗರದಿಂದ 1,09,375 ಹೆ. ಗಳಿಗೆ ನೀರು ಒದಗುವುದಲ್ಲದೆ ಶಿಂಷಾ ಮತ್ತು ಶಿವಸಮುದ್ರ ಜಲವಿದ್ಯುದ್ಯೋಜನೆಗಳಿಗೆ ನಿರಂತರ ಜಲಧಾರೆ ಏರ್ಪಟ್ಟಿದೆ. ಕೃಷ್ಣರಾಜಸಾಗರ ಕಟ್ಟೆಯ ಕೆಲಸ 1910ರಲ್ಲಿ ಪ್ರಾರಂಭವಾಗಿ 1931ರಲ್ಲಿ ಮುಗಿಯಿತು. ಕಾವೇರಿ ನೀರಿನ ಬಳಕೆಯ ಬಗ್ಗೆ ಆಗಿನ ಮದರಾಸು ಸರ್ಕಾರ ಅಡ್ಡಿ ಮಾಡದಿದ್ದರೆ ಇದು ಇನ್ನೂ ಬೇಗನೆ ಮುಗಿಯುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಕಾಲದಲ್ಲಿ ಹಳೆಯ ಮೈಸೂರು ಸಂಸ್ಥಾನ ಸರ್ಕಾರದ ಆಸಕ್ತಿಯಿಂದಾಗಿ ಆ ಪ್ರದೇಶದಲ್ಲಿ ಅನೇಕ ಸಣ್ಣ ನೀರಾವರಿ ಕಾಮಗಾರಿಗಳು ನಡೆದುವು. ತುಂಗಭದ್ರೆಯ ನೀರನ್ನು ಅಡ್ಡಹಾಯಿಸಿಕೊಳ್ಳಲು ವಿಜಯನಗರದ ಕಾಲದಲ್ಲಿ ನಡೆದ ಕೆಲಸ ಗಮನಾರ್ಹವಾದದ್ದು. ರಾಯರ ಕಾಲುವೆಗಳೆಂದು ಅವು ಈಗಲೂ ಪ್ರಸಿದ್ಧವಾಗಿವೆ. ಹಂಪಿ, ಕಮಲಾಪುರ, ವಲ್ಲಭಪುರ ಮುಂತಾದೆಡೆಗಳಲ್ಲಿ ಅವುಗಳ ಗುರುತುಗಳಿವೆ. ಈಸ್ಟ್ ಇಂಡಿಯ ಕಂಪನಿಯವರು ಸುಂಕೇಪಾಲದ ಬಳಿ ಒಂದು ಅಣೆಕಟ್ಟನ್ನು ಕಟ್ಟಿದ್ದರು. ಕೃಷ್ಣರಾಜಸಾಗರ ನಿರ್ಮಾಣದಿಂದ ಜಲಾಂತರ್ಗತವಾದ ಕೆಲವು ನೀರಾವರಿ ವ್ಯವಸ್ಥೆಗಳು ಟಿಪ್ಪುವಿನ ಕಾಲದವು. ಹೀಗೆ ಕರ್ನಾಟಕದ ಜನ ಅನೇಕ ಶತಮಾನಗಳಿಂದ ನೀರಾವರಿಯ ಕ್ಷೇತ್ರದಲ್ಲಿ ತಕ್ಕಮಟ್ಟಿನ ಕೆಲಸ ಮಾಡಿದ್ದಾರೆ.

ಸ್ವತಂತ್ರ ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಆರಂಭವಾದ ಮೇಲೆ ಅನೇಕ ನೀರಾವರಿ ಕಾರ್ಯಕ್ರಮಗಳು ಜಾರಿಗೆ ಬಂದುವು. ಭದ್ರಾಜಲಾಶಯ, ಬೆಳಗಾಂವಿಯ ಘಟಪ್ರಭಾ ಯೋಜನೆ ಮತ್ತು ಶಿವಮೊಗ್ಗದ ತುಂಗಾ ಅಣೆಕಟ್ಟೆ ಯೋಜನೆ ಮತ್ತು ಮೈಸೂರು ಜಿಲ್ಲೆಯ ನುಗು ಯೋಜನೆ ಇವುಗಳಲ್ಲಿ ಕೆಲವು. ತುಂಗ ಭದ್ರಾ ಯೋಜನೆಯ ಪ್ರಥಮ ಹಂತದ ಕಾರ್ಯವೂ ಆರಂಭವಾಗಿತ್ತು. ಇವಲ್ಲದೆ ಎಂಟು ಮಧ್ಯಮವರ್ಗದ ನೀರಾವರಿ ಯೋಜನೆಗಳೂ ಹಳೆಯ ಕೆರೆಗಳ ದುರಸ್ತಿಯೂ ಹೊಸ ಕೆರೆಗಳ ನಿರ್ಮಾಣಕಾರ್ಯವೂ ನಡೆದುವು. ಇವುಗಳಿಂದ ಲಾಭ ಪಡೆದ ಜಮೀನಿನ ವಿಸ್ತೀರ್ಣ 94,810 ಹೆ. ಇದರಲ್ಲಿ ಹೊಸದಾಗಿ ನೀರಾವರಿ ಸೌಲಭ್ಯ ಪಡೆದ ಜಮೀನು 6160 ಹೆ.

ಕಾವೇರಿ ಕಣಿವೆಯಲ್ಲಿ ಅನೇಕ ಹೊಸ ಕಾರ್ಯಕ್ರಮಗಳು ಜಾರಿಗೆ ಬಂದಿವೆ, ಅಥವಾ ಬರಲಿವೆ. ಹೇಮಾವತಿ, ಕಂಬದಕಡ, ಕಪಿಲ, ಹಾರಂಗಿ, ಸುವರ್ಣಾವತಿ, ಚಿಕ್ಕಹೊಳೆ, ಲಕ್ಷ್ಮಣತೀರ್ಥ ಮುಂತಾದವುಗಳ ನೀರನ್ನು ಬಳಸುವ ಯೋಜನೆಗಳು ಕಾರ್ಯಗತವಾಗಿವೆ. ಇವುಗಳ ಪೈಕಿ ಕಪಿಲ ಯೋಜನೆ ಮುಖ್ಯವಾದದ್ದು. ವರ್ಷಕ್ಕೆ 150–300 ಸೆಂಮೀ ಮಳೆ ಬೀಳುವ ಪ್ರದೇಶವಾದ ವೈನಾಡಿನ ಅನೇಕ ಹೊಳೆಗಳಿಂದ ಕೂಡಿ 230 ಕಿಮೀ ಹರಿದು ತಿರುಮಕೂಡಲು ನರಸೀಪುರದ ಬಳಿ ಕಾವೇರಿನದಿಯನ್ನು ಸೇರುವ ಈ ನದಿಗೆ ಹುಲ್ಲಹಳ್ಳಿಯ ಬಳಿ ಹಿಂದೆಯೇ ಅಣೆಕಟ್ಟು ಕಟ್ಟಿ 4,925 ಹೆ. ನೀರೊದಗಿಸಿಕೊಳ್ಳಲಾಗಿತ್ತು. ಈ ನದಿಯ ನೀರನ್ನು ಇನ್ನೂ ಹೆಚ್ಚಾಗಿ ಬಳಸಿಕೊಳ್ಳುವ ಯೋಚನೆ 1916 ರಿಂದಲೂ ಮೈಸೂರು ಸರ್ಕಾರಕ್ಕಿತ್ತು. ಮೈಸೂರು ನಗರಕ್ಕೆ 61 ಕಿಮೀ ದೂರದಲ್ಲಿ ನಿರ್ಮಿಸಲಾಗುವ ಹೊಸ ಜಲಾಶಯದ ಬಳಿ ನದಿಯ ಪಾತ್ರ ಸಮುದ್ರ ಮಟ್ಟಕ್ಕಿಂತ 672 ಮೀ ಎತ್ತರದಲ್ಲಿದೆ. ಈ ಜಲಾಶಯದ ಶೇಖರಣಾ ಸಾಮರ್ಥ್ಯ 19,200 ಮೆಟ್ರಿಕ್ ಘನ ಅಡಿ ಕಟ್ಟೆಯ ಎತ್ತರ ಅಡಿಪಾಯದಿಂದ 57.3 ಮೀ (ನದೀಪಾತ್ರದಿಂದ 26.8 ಮೀ); ಕನಿಷ್ಠ ಅಗಲ ಅಡಿಪಾಯದಲ್ಲಿ 49 ಮೀ ಮೇಲ್ತುದಿಯಲ್ಲಿ 7.3 ಮೀ ಎಡಬಲದಂಡೆಗಳ ನಾಲೆಗಳಿಂದ 19,450 ಕ್ಯುಸೆಕ್ಸ್ ನೀರು ಬಿಡಲಾಗುತ್ತದೆ. ಎಡದಂಡೆ ನಾಲೆಯಿಂದ 2298 ಹೆ. ಎಕರೆ ಜಮೀನೂ ಬಲದಂಡೆ ಕಾಲುವೆಯಿಂದ 9464 ಹೆ. ಜಮೀನೂ ತರಿ ಸಾಗುವಳಿಗೆ ಒದಗುತ್ತವೆ. ಒಟ್ಟು 30,010 ಹೆ. ಗಳಿಗೆ ಪ್ರಯೋಜನವಾಗುತ್ತದೆ. ಅನುಕೂಲ ಪಡೆಯುವ ತಾಲ್ಲೂಕುಗಳು ಮೈಸೂರು ಜಿಲ್ಲೆಯ ನಂಜನಗೂಡು, ತಿರುಮಕೂಡಲು ನರಸೀಪುರ, ಹೆಗ್ಗಡದೇವನಕೋಟೆ ಮತ್ತು ಚಾಮರಾಜನಗರ.

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ನೈರುತ್ಯದಲ್ಲಿ ನಂಜನಗೂಡಿಗೆ 24 ಕಿಮೀ ದೂರದಲ್ಲಿರುವ ನುಗು ಜಲಾಶಯ ಇನ್ನೊಂದು ಯೋಜನೆ. ಇದರ ಜಲಾನಯನ ಪ್ರದೇಶ ವಿಸ್ತೀರ್ಣ 984 ಚ.ಕಿಮೀ. ಇದರಿಂದ 73 ಸಾವಿರ ಎಕರೆಗಳಿಗೆ ನೀರು ಪೂರೈಕೆಯಾಗುತ್ತದೆ. ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ ಚಿಕ್ಕಹೊಳೆ ಜಲಾಶಯ ಯೋಜನೆ ಮಧ್ಯಮ ದರ್ಜೆಯದು. ಈ ಹೊಳೆ ಸುವರ್ಣಾವತಿಯ ಉಪನದಿ. ಇದರ ಇಳಿಮೇಡು ಪ್ರದೇಶ 394 ಚಕಿಮೀ. 2395 ಹೆ. ಜಮೀನಿಗೆ ಇದರಿಂದ ಪ್ರಯೋಜನ. ಕಪಿಲಾದ ಉಪನದಿಯಾದ ಹೆಬ್ಬಹಳ್ಳಕ್ಕೆ ಹೆಗ್ಗಡದೇವನಕೋಟೆಯ ಬಳಿ ಕಟ್ಟುವ ಕಟ್ಟೆಯ ಇಳಿಮೇಡು 180 ಚ.ಕಿಮೀ. ಕಾವೇರಿ ಕಣಿವೆಯ ಈ ನಾನಾ ಯೋಜನೆಗಳೆಲ್ಲ ಫಲಪ್ರದವಾದಾಗ ಒಟ್ಟು 44 ಲಕ್ಷ ಹೆ. ಗಳಿಗೆ ನೀರಾವರಿ ಸೌಲಭ್ಯ ಒದಗುವುದೆಂಬುದಾಗಿ ನಿರೀಕ್ಷಿಸಲಾಗಿದೆ. ಕಾವೇರಿ ನದಿನೀರಿನ ಬಳಕೆಯ ವಿಚಾರವಾಗಿ 1892ರಲ್ಲೂ 1924ರಲ್ಲೂ ಮೈಸೂರು ಮದ್ರಾಸು ಸರ್ಕಾರಗಳ ನಡುವೆ ಆದ ಒಪ್ಪಂದಗಳ ಪುನರ್ವಿಮರ್ಶೆ ನಡೆಯುತ್ತದೆ (1971).

ತುಂಗಾ, ಭದ್ರಾ, ತುಂಗಭದ್ರ ಯೋಜನೆಗಳಿಂದ ಈಗಾಗಲೇ 3.8 ಲಕ್ಷ ಹೆ. ಗಳಿಗೂ ಹೆಚ್ಚು ನೆಲಕ್ಕೆ ನೀರಾವರಿ ಸೌಲಭ್ಯ ಒದಗಿದೆ. ಇನ್ನು 0.58 ಲಕ್ಷ ಹೆ. ಗಳಿಗೆ ಈ ಸೌಲಭ್ಯ ವಿಸ್ತರಿಸಬಹುದು. ಹೊಸಪೇಟೆಯ ಬಳಿ ತುಂಗಭದ್ರ ನದಿಗೆ ಅಡ್ಡಲಾಗಿ ಕಟ್ಟೆಕಟ್ಟುವ ಕೆಲಸ ಆರಂಭವಾದದ್ದು 1945ರಲ್ಲಿ. ಇದೊಂದು ವಿವಿಧೋದ್ದೇಶ ಯೋಜನೆ. ಕರ್ನಾಟಕ ರಾಜ್ಯದಲ್ಲಿ 3.92 ಹೆ. ಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಇದು ಈ ರಾಜ್ಯದ ಅತ್ಯಂತ ದೊಡ್ಡ ನೀರಾವರಿ ಯೋಜನೆ. ಜೊತೆಗೆ ಇದು 1,72,500 ಕಿವ್ಯಾ ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ. ಕಟ್ಟೆಯ ಎತ್ತರ 49.4 ಮೀ. ಅಗಲ 28.5 ಮೀ ಜಲಾಶಯದ ವಿಸ್ತೀರ್ಣ 482 ಚ.ಕಿಮೀ. ಇದರ ಮುಖ್ಯ ನಾಲೆಗಳಲ್ಲಿ ಎರಡು ಜಲಾಶಯದ ಬಲಗಡೆಯಿಂದಲೂ (ಕೆಳಮಟ್ಟ ಮತ್ತು ಮೇಲ್ಮಟ್ಟದ ನಾಲೆಗಳು) ಮತ್ತೊಂದು ಎಡಗಡೆಯಿಂದಲೂ ಹರಿಯುತ್ತವೆ. ಇದಲ್ಲದೆ ಸಣ್ಣ ಕಾಲುವೆಯೊಂದು ಇದೆ. ಬತ್ತ, ಕಬ್ಬು, ಹಣ್ಣು, ಹೊಗೆಸೊಪ್ಪುಗಳ ಬೆಳೆ ತೆಗೆಯಲು ನೀರು ಒದಗಿಸುವುದಲ್ಲದೆ, ಖುಷ್ಕಿ ಬೆಳೆಗೂ ಸೌಲಭ್ಯ ನೀಡುವುದು ಈ ಯೋಜನೆಯ ವೈಶಿಷ್ಟ್ಯ. 17,330 ಹೆ. ನೆಲದಲ್ಲಿ ಇಂಥ ಲಘು ನೀರಾವರಿ ಬೇಸಾಯಕ್ಕೆ ಇದು ನೆರವು ನೀಡುತ್ತದೆ. ಇದರಲ್ಲಿ ಅರ್ಧ ಭಾಗದಲ್ಲಿ ಹತ್ತಿ ಬೆಳೆಯಲಾಗುತ್ತದೆ. ಮೀನುಗಾರಿಕೆ, ತೋಟಗಾರಿಕೆಗಳಿಗೂ ಈ ಯೋಜನೆಯಿಂದ ಪ್ರೋತ್ಸಾಹ ದೊರಕಿದೆ.

ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿರುವ ಭದ್ರಾ ಜಲಾಶಯ ಯೋಜನೆಯಿಂದ ಈ ಎರಡು ಜಿಲ್ಲೆಗಳು ಹಾಗೂ ಚಿತ್ರದುರ್ಗ ಮತ್ತು ಬಳ್ಳಾರಿಗಳಿಗೂ ನೀರಾವರಿ ಸೌಕರ್ಯ ಒದಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಲಕ್ಕವಳ್ಳಿಯ ಬಳಿ ಕಟ್ಟಲಾದ ಕಟ್ಟೆಗೆ ಎರಡು ಕಡೆಯೂ ನಾಲೆಗಳುಂಟು. ಇದರಿಂದ 89,020 ಹೆ. ಗಳಿಗೆ ನೀರಾವರಿ ಒದಗುತ್ತದೆ. ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ತು 25,000 ಕಿವ್ಯಾ ಈ ಕಟ್ಟೆಯ ಎತ್ತರ 59 ಮೀ. ಉದ್ದ 440 ಮೀ.

ಶಿವಮೊಗ್ಗದಿಂದ 10.6 ಕಿಮೀ. ದೂರದಲ್ಲಿ ಸಕ್ರೆಬೈಲಿನ ಹತ್ತಿರ ತುಂಗಾ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟೆಯ ಎರಡೂ ಬದಿಗಳ ನಾಲೆಗಳಿಂದ 7844 ಹೆ. ಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ. ಕಡಿಮೆ ಮಳೆ ಪಡೆಯುವ ಹೊನ್ನಾಳಿ ತಾಲ್ಲೂಕಿನ ರೈತರಿಗೆ ಈ ಯೋಜನೆಯಿಂದ ಹೆಚ್ಚು ಫಲ. ಅಣೆಕಟ್ಟೆಯ ಎತ್ತರ 12.2 ಮೀ. ಉದ್ದ 365.8 ಮೀ.

ನೀರಾವರಿಗೆ ಒಳಪಡಿಸಬಹುದಾದ ಅತಿ ವಿಶಾಲಪ್ರದೇಶ ಇರುವುದು ರಾಜ್ಯದ ಕೃಷ್ಣಾನದೀ ಕಣಿವೆಯಲ್ಲಿ. ನದಿಯ ಆರು ಉಪನದಿಗಳ ಪೈಕಿ ಘಟಪ್ರಭಾ ಮತ್ತು ಮಲಪ್ರಭಾ ನದಿಗಳ ನೀರನ್ನು ಬಳಸುವ ಯೋಜನೆ ಕಾರ್ಯರೂಪಕ್ಕೆ ಬಂದಿದೆ. ಮಲಪ್ರಭಾ ನದಿಯ ಮೇಲಣ ಕಟ್ಟೆಯ ಎತ್ತರ 55 ಮೀ ಮತ್ತು ಉದ್ದ 4575 ಮೀ ಇದರ ಬಲಭಾಗದ ನಾಲೆಯಿಂದ ಸೌಲಭ್ಯ ಪಡೆಯುವ ಪ್ರದೇಶ 1,77,780 ಹೆ. ಬೆಳಗಾಂವಿ, ಧಾರವಾಡ, ಬಿಜಾಪುರ ಜಿಲ್ಲೆಗಳ ಆಹಾರ ಪೂರೈಕೆ ಇದರಿಂದ ಸಾಧ್ಯವಾಗುತ್ತದೆ. ಘಟಪ್ರಭಾ ನದಿಯ ಧೂಪದಾಳ ಕಟ್ಟೆಯಿಂದ 19 ಕಿಮೀ ಮೇಲೆ ಹಿಡ್ಕಲ್‌ನಲ್ಲಿ ಕಟ್ಟಲಾಗುವ ಕಟ್ಟೆಯ ಎಡಬಲ ನಾಲೆಗಳಿಂದ ಬೆಳಗಾಂವಿ ಜಿಲ್ಲೆಯ ಅಥಣಿ, ರಾಯಬಾಗ, ಗೋಕಾಕ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳಲ್ಲೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ, ಮುಧೋಳ, ಬೀಳಗಿ ಬಾಗಲಕೋಟೆ, ಬಾದಾಮಿ ಮತ್ತು ಹುನಗುಂದ ತಾಲ್ಲೂಕುಗಳಲ್ಲೂ 2.17 ಲಕ್ಷ ಹೆ. ಗಳ ಸಾಗುವಳಿಗೆ ಸೌಲಭ್ಯ ಒದಗುತ್ತದೆ. ಇದು ರಾಜ್ಯದ ಮುಖ್ಯ ನೀರಾವರಿ ಯೋಜನೆಗಳಲ್ಲೊಂದು.

ಕೃಷ್ಣಾ ಕಣಿವೆ ಪ್ರದೇಶದ ಬಹುಭಾಗ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿದೆ. ಹಳೆಯ ಮುಂಬಯಿ ಮತ್ತು ಹೈದರಾಬಾದ್ ಕರ್ನಾಟಕದ ಅಭಾವ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶದಿಂದ ಕೈಗೊಳ್ಳಲಾದ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನ ಆಲಮಟ್ಟಿ ಜಲಾಶಯ ಮತ್ತು ಗುಲ್ಬರ್ಗ ಶೋರಾಪುರ ತಾಲ್ಲೂಕಿನ ನಾರಾಯಣಪುರ ಜಲಾಶಯಗಳಿವೆ. ಆಲಮಟ್ಟಿ ಕಟ್ಟೆಯ ಎಡಭಾಗದ ನಾಲೆ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿಯ 2.0 ಲಕ್ಷ ಹೆ.ಗಳಿಗೂ ನಾರಾಯಣಪುರದ ಕಟ್ಟೆಯ ಎಡ ಮತ್ತು ಬಲದಂಡೆ ನಾಲೆಗಳು ಬಿಜಾಪುರ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ 5.6 ಲಕ್ಷ ಹೆ. ಗಳಿಗೂ ನೀರಾವರಿ ಸೌಲಭ್ಯ ಕಲ್ಪಿಸುತ್ತವೆ. ಇಡೀ ಯೋಜನೆಯಿಂದ ಸು. 4.37 ಲಕ್ಷ ಹೆ. ನೆಲಕ್ಕೆ ಪ್ರಯೋಜನವಾಗುತ್ತದೆ.




ಇವಲ್ಲದೆ ಮಧ್ಯಮ ವರ್ಗದ ನೀರಾವರಿ ಕಾರ್ಯಗಳೂ ಇಲ್ಲಿ ನಡೆದಿವೆ. ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂವಿ ಜಿಲ್ಲೆಗಳ ರಾಮನಹಳ್ಳಿ ಅರೆಶಂಕರ ಮತ್ತು ಕಲಾಸಕೋಪ್ ಕೆರೆಗಳು ಅನುಕ್ರಮವಾಗಿ 1751, 4764 ಮತ್ತು 1043 ಹೆ. ಗಳಿಗೆ ಅನುಕೂಲ, ಬೆಳಗಾಂವಿ ಜಿಲ್ಲೆಯ ಕೊಳಚಿ ಕೋಡಿ ಕಟ್ಟೆಯಿಂದ ನೀರಾವರಿ ಒದಗುವುದು 1149 ಹೆ. ಗಳಿಗೆ, ಬಿಜಾಪುರ ಜಿಲ್ಲೆಯ ಚಿತವಾಡಿ ಕೆರೆಯಿಂದ 803 ಹೆ.ಗಳಿಗೆ ಈ ಸೌಲಭ್ಯ ದೊರಕುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಯಮಗಳ್ಳಿ ಬಳಿ ಧರ್ಮಾನದಿಗೆ ಕಟ್ಟಲಾಗಿರುವ ಮಣ್ಣಿನ ಕಟ್ಟೆಯಿಂದ 10,000 ಎಕರೆಗಳಿಗೆ ನೀರಿನ ಸೌಕರ್ಯ ದೊರಕುತ್ತದೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಮಂಗಳಗ್ರಾಮದ ಬಳಿ ನಾಗಿನ ನದಿಗೆ ಅಡ್ಡಲಾಗಿ ಕಟ್ಟಿದ ಮಣ್ಣಿನ ಕಟ್ಟೆಯ ಅಚ್ಚುಕಟ್ಟಿನಲ್ಲಿ 13,500 ಹೆ. ನೆಲ ನೀರಾವರಿಗೆ ಬರುತ್ತದೆ. ಇದರ ಪೈಕಿ 596 ಹೆ. ಗಳಿಗೆ ಎರಡು ಬೆಳೆಗಳ ಸೌಲಭ್ಯ ಲಭಿಸುವ ನಿರೀಕ್ಷೆಯುಂಟು.

ಕರ್ನಾಟಕ ರಾಜ್ಯದ ವಿಸ್ತೀರ್ಣದಲ್ಲಿ 128 ಲಕ್ಷ ಹೆ. ವ್ಯವಸಾಯಯೋಗ್ಯ ಪ್ರದೇಶ. ಪಂಚವಾರ್ಷಿಕ ಯೋಜನೆಗಳ ಆರಂಭಕ್ಕೆ ಮೊದಲು ನೀರಾವರಿಗೆ ಒಳಪಟ್ಟಿದ್ದ ನೆಲದ ಪ್ರಮಾಣ ಶೇ. 4.9.

ಜಲವಿದ್ಯುಚ್ಛಕ್ತಿ : ಕರ್ನಾಟಕ ರಾಜ್ಯದಲ್ಲಿ ಜಲವಿದ್ಯುತ್ ಅಭಿವೃದ್ಧಿ 1902ಕ್ಕೂ ಹಿಂದೆಯೇ ಆರಂಭವಾಯಿತು. ಕಾವೇರಿ ನದಿಗೆ ಶಿವಸಮುದ್ರದ ಬಳಿ 4,300 ಕಿವ್ಯಾ ಸ್ಥಾಪಿತ ಸಾಮರ್ಥ್ಯದ ಉತ್ಪಾದನಾಕೇಂದ್ರ ನಿರ್ಮಾಣವಾದದ್ದು ಆಗ. ಇದು ಭಾರತದ ಪ್ರಥಮ ದೊಡ್ಡ ಜಲವಿದ್ಯುದ್ಯೋಜನೆ. ಶಿವಸಮುದ್ರದಿಂದ ಕೋಲಾರ ಚಿನ್ನದ ಗಣಿಗಳಿಗೆ ಹಾಕಲಾದ ವಿದ್ಯುತ್ ಪ್ರೇಷಣ (ಪ್ರಸರಣ) ವ್ಯವಸ್ಥೆ ಇಡೀ ಪ್ರಪಂಚದಲ್ಲೇ ಆಗ ಅತ್ಯಂತ ಉದ್ದದ್ದಾಗಿತ್ತು. ಆ ಕೇಂದ್ರದ ವಿದ್ಯುದುತ್ಪಾದನಾ ಸಾಮರ್ಥ್ಯವನ್ನು ಮುಂದೆ 42,000 ಕಿವ್ಯಾ ಗಳಿಗೆ ಹೆಚ್ಚಿಸಲಾಯಿತು. ಶಿಂಷಾ ನದೀವಿದ್ಯುತ್ಕೇಂದ್ರ (17,200 ಕಿವ್ಯಾ) ನಿರ್ಮಾಣವಾದದ್ದು 1940ರಲ್ಲಿ.

ಶರಾವತಿ ವಿದ್ಯುದ್ಯೋಜನೆಯನ್ನು ರೂಪಿಸಿದ್ದು 1938ರಲ್ಲಿ. ಮಹಾತ್ಮಗಾಂಧಿ ಜಲವಿದ್ಯುತ್ಕೇಂದ್ರವನ್ನು ಆ ನದಿಯ ವಿದ್ಯುದ್ವಿಭವದ ಶೇ.10 ರಷ್ಟನ್ನು ಉತ್ಪಾದಿಸಲು ಯೋಜಿಸಲಾಯಿತು (1948). ನದಿಯ ಉಳಿದ ವಿಭವವನ್ನೂ ಬಳಸಿಕೊಳ್ಳಲು ಶರಾವತಿ ಕಣಿವೆ ಯೋಜನೆಯನ್ನು ಆರಂಭಿಸಲಾಯಿತು (1959). ಇದರ ಉತ್ಪಾದನಾ ಸಾಮರ್ಥ್ಯ 8,91,000 ಕಿವ್ಯಾ. 1965 ರಲ್ಲಿ ಈ ಯೋಜನೆಯ ಮೊದಲನೆಯ ಹಂತದ ಉತ್ಪಾದನೆ ಆರಂಭವಾದದ್ದು. ಭದ್ರಾ ಮತ್ತು ತುಂಗಭದ್ರಾ ಜಲಾಶಯಗಳ ಬಳಿಯೂ ವಿದ್ಯುದುತ್ಪಾದನೆಯಾಗುತ್ತದೆ. ಇವುಗಳ ಉತ್ಪಾದನ ಸಾಮರ್ಥ್ಯ 1,32,200 ಕಿವ್ಯಾ ರಾಜ್ಯದ ವಿವಿಧ ಜಲವಿದ್ಯುದ್ಯೋಜನೆಗಳ ವಿವರಗಳನ್ನು ಮುಂದೆ ಕೊಟ್ಟಿದೆ:

| | ಯೋಜನೆಗಳು | ನಿರೀಕ್ಷಿತ ವಿದ್ಯುದ್ವಿಭವ (ಮೆ.ವಾ.ಗಳಲ್ಲಿ) |
|---|---|---|
| 1. | ಶರಾವತಿ ಕಣಿವೆ ಜಲವಿದ್ಯುತ್ ಯೋಜನೆ | 1300 |
| 2. | ಕಾಳಿನದಿ ಜಲವಿದ್ಯುತ್ ಯೋಜನೆ | 1350 |
| 3. | ಬೇಡ್ತಿ ಜಲವಿದ್ಯುತ್ ಯೋಜನೆ | 225 |
| 4. | ಬೇಡ್ತಿ ಎರಡನೆಯ ಘಟ್ಟ | 200 |
| 5. | ವರಾಹಿ ಜಲವಿದ್ಯುತ್ ಯೋಜನೆ | 250 |
| 6. | ಅಘನಾಶಿನಿ ಜಲವಿದ್ಯುತ್ ಯೋಜನೆ | 300 |
| 7. | ಚಕ್ರಾನದಿ ಜಲವಿದ್ಯುತ್ ಯೋಜನೆ | 75 |
| 8. | ಬರಪೊಳೆ ಜಲವಿದ್ಯುತ್ ಯೋಜನೆ | 125 |
| 9. | ಮಹಾದಾಯಿ ಜಲವಿದ್ಯುತ್ ಯೋಜನೆ | 30 |
| 10. | ನೇತ್ರಾವತಿ ಜಲವಿದ್ಯುತ್ ಯೋಜನೆ | 100 |
| 11. | ತುಂಗಭದ್ರಾ ಎಡದಂಡೆ ನಾಲಾಕೇಂದ್ರ ವಿದ್ಯುತ್ ಅಭಿವೃದ್ಧಿ ಯೋಜನೆ | 40 |
| 12. | ಕಪಿಲಾ ಕಟ್ಟೆಯ ವಿದ್ಯುತ್‌ಗೃಹ ಯೋಜನೆ | 16 |
| 13. | ಹಿಡಕಲ್ ಕಟ್ಟೆಯ ವಿದ್ಯುತ್‌ಗೃಹ ಯೋಜನೆ | 28 |
| 14. | ಹೇಮಾವತಿ ಕಣಿವೆ ವಿದ್ಯುತ್ ಅಭಿವೃದ್ಧಿ ಕಾರ್ಯಕ್ರಮಗಳು | 20 |
| 15. | ಕೃಷ್ಣಾನದಿ ವಿದ್ಯುತ್ ಅಭಿವೃದ್ಧಿ ಕಾರ್ಯಕ್ರಮಗಳು | 175 |
| 16. | ಕಾವೇರಿ ಕಣಿವೆ ಜಲವಿದ್ಯುತ್ ಯೋಜನೆ | 800 |

ಕರ್ನಾಟಕದಲ್ಲಿ ಜಲವಿದ್ಯುತ್ತಿನ ಉತ್ಪಾದನೆಯ ಭವಿಷ್ಯ ಉತ್ತಮವಾಗಿದೆ ಎನ್ನಲು ಕೆಲವು ಕಾರಣಗಳುಂಟು: 1. ಈಗಾಗಲೆ ಕಾರ್ಯಗತವಾಗಿರುವ ವಿದ್ಯುದುತ್ಪಾದನ ಕೇಂದ್ರಗಳಿಂದ ಬರುವ ವರಮಾನದಿಂದಲೇ ಮುಂದಿನ ಉತ್ಪಾದನ ಯೋಜನೆಗಳಿಗೆ ಹಣ ಹೂಡುವುದು ಸಾಧ್ಯವಾಗಬಹುದು. 2. ಇದುವರೆಗಿನ ಅನುಭವದ ಆಧಾರದ ಮೇಲೆ ಭವಿಷ್ಯದ ಯೋಜನೆಗಳಿಗೆ ಅವಶ್ಯವಾದ ತಾಂತ್ರಿಕ ಜ್ಞಾನವನ್ನು ಒದಗಿಸಬಹುದು. 3. ವಿದ್ಯುದುತ್ಪಾದನೆಗೆ ಬೇಕಾದ ಯಂತ್ರಗಳನ್ನು ಇಲ್ಲೇ ತಯಾರಿಸುವ ಸಾಧ್ಯತೆಯುಂಟು. 4. ಕೊನೆಯದಾಗಿ ಬೇಡಿಕೆ. ವಿದ್ಯುತ್ ಸರಬರಾಜು ಅಧಿಕವಾದಂತೆಲ್ಲ ಬೇಡಿಕೆಯೂ ಹೆಚ್ಚುವುದರಿಂದ ಉತ್ಪಾದನೆಗೆ ತಡೆಯುಂಟಾಗುವ ಸಂಭವವಿಲ್ಲ.

ಕರ್ನಾಟಕದಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಇತರ ರಾಜ್ಯಗಳಿಗೂ ಸರಬರಾಜು ಮಾಡುವುದರಿಂದ ರಾಜ್ಯಕ್ಕೆ ಇದರಿಂದ ಲಾಭವೂ ಉಂಟು. ಅಲ್ಲದೆ ರಾಜ್ಯದ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ತು ಸರಬರಾಜಾಗುವ ಭರವಸೆಯಿಂದ ಆರ್ಥಿಕ ಪ್ರಗತಿ ಹೆಚ್ಚು ಸುಭದ್ರವಾಗುತ್ತದೆ.

ಕರ್ನಾಟಕದ ಎಲ್ಲಾ ವಿದ್ಯುದಾಗಾರಗಳ ಒಟ್ಟು ಜಲವಿದ್ಯುತ್ ಸ್ಥಾಪಿತ ಸಾಮರ್ಥ್ಯ 1955–56ನೆ ಸಾಲಿನಲ್ಲಿ 179.2 ಮೆ.ವಾ ಗಳಾಗಿತ್ತು. ಅದು 2001–02 ರವೇಳೆಗೆ 3021 ಮೆವಾ ಗಳಿಗೆ ಹೆಚ್ಚಿತ್ತು. ಇಷ್ಟೆಲ್ಲ ಪ್ರಗತಿ ಕಂಡುಬಂದರೂ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವ ಕಂಡುಬರುತ್ತಿದೆ.

ರಾಜ್ಯದ ಕೆಲಭಾಗಗಳಲ್ಲಿ ಜಲವಿದ್ಯುಚ್ಛಕ್ತಿ ಉತ್ಪಾದನೆ ಸಾಧ್ಯತೆಗಳಿವೆ. ಸಹ್ಯಾದ್ರಿ ಶ್ರೇಣಿಗಳಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ಮಲೆನಾಡು ಮತ್ತು ದಕ್ಷಿಣ ಕರ್ನಾಟಕದಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ಮಲೆನಾಡು ಮತ್ತು ದಕ್ಷಿಣ ಕರ್ನಾಟಕದಲ್ಲಿ ಹರಿಯುವ ನದಿಗಳಿಂದ ಹೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆ ಸಾಧ್ಯ. ಈ ನದಿಗಳು ಹೆಚ್ಚು ಮಳೆಯಾಗುವ ಭಾಗಗಳಿಂದ ಹರಿದುಬರುವುದರ ಜೊತೆಗೆ ರಭಸ ಇಳಿತ ಮತ್ತು ಜಲಪಾತಗಳನ್ನು ಸೃಷ್ಟಿಸುತ್ತವೆ.

ರಾಜ್ಯದ ಜಲವಿದ್ಯುಚ್ಛಕ್ತಿಯನ್ನು ವಿವಿಧ ಉದ್ದೇಶಗಳಿಗೆ ಬಳಸಲಾಗುವುದು. ಉದಾ: ಕೈಗಾರಿಕೆ, ಗೃಹಬಳಕೆ, ನೀರಾವರಿ, ಬೀದಿ ದೀಪ ಇತ್ಯಾದಿ. ಆದರೆ ಶೇ. 70 ಜಲವಿದ್ಯುಚ್ಛಕ್ತಿ ಕೈಗಾರಿಕೆಗಳಿಗೆ ಬಳಕೆಯಾಗುವುದು ವಿಶೇಷ ಸಂಗತಿ. ಕರ್ನಾಟಕ ವಿದ್ಯುತ್ ನಿಗಮವು ಹೊಸ ಜಲವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳ ನಿರ್ಮಾಣಕ್ಕೆ ಆಯೋಜಿಸುತ್ತಿದೆ.

ಕೈಗಾರಿಕೆಗಳು: ಕರ್ನಾಟಕದಲ್ಲಿ ಸಣ್ಣದೊಡ್ಡ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲಕರವಾದ ಪರಿಸ್ಥಿತಿಯುಂಟು. ವಿದ್ಯುತ್ತು, ಖನಿಜ ಸಂಪತ್ತು, ವ್ಯವಸಾಯೋತ್ಪನ್ನ, ವಾಯುಗುಣ, ಜನಬಲ-ಎಲ್ಲವೂ ಈ ರಾಜ್ಯದಲ್ಲಿ ಧಾರಾಳ. ವಿದ್ಯುತ್ ವಿಭವ ಹಾಗೂ ಉತ್ಪಾದನೆಗಳ ವಿಚಾರವನ್ನು ಹಿಂದೆಯೇ ವಿವೇಚಿಸಲಾಗಿದೆ. ಖನಿಜಗಳ ವಿಚಾರದಲ್ಲೂ ಕರ್ನಾಟಕಕ್ಕೆ ಕೊರತೆಯಿಲ್ಲ. ರಾಜ್ಯದ ಭೂಗರ್ಭದಲ್ಲಿ 200–250 ಕೋಟಿ ಟನ್ ಉತ್ತಮ ದರ್ಜೆಯ ಕಬ್ಬಿಣದ ಅದಿರು, 100–120 ಲಕ್ಷ ಟನ್ ಮ್ಯಾಂಗನೀಸ್, ಬಾಕ್ಸೈಟ್, ಮ್ಯಾಗ್ನಸೈಟ್, ಕ್ರೋಮೈಟ್, ಸುಣ್ಣಕಲ್ಲು, ಕೊರಂಡಂ, ಎಮರಿ, ಕಲ್ನಾರು, ಜೇಡಿಮಣ್ಣು ಮುಂತಾದವು ಇವೆ. ನೆಲದಿಂದ ತೆಗೆಯುತ್ತಿರುವ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸುಗಳಲ್ಲಿ ಬಹುಭಾಗ ಹೊರದೇಶಗಳಿಗೆ ನಿರ್ಯಾತವಾಗುತ್ತಿದೆ. ರಾಜ್ಯದ ಕಬ್ಬಿಣದ ಅದಿರನ್ನು ಉಪಯೋಗಿಸಿಕೊಂಡು ಉಕ್ಕು ತಯಾರಿಸುತ್ತಿರುವ ಉದ್ಯಮವೆಂದರೆ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ. ಫೆರೋ-ಮ್ಯಾಂಗನೀಸ್ ತಯಾರಿಸುವ 2 ಕಾರ್ಖಾನೆಗಳು ರಾಜ್ಯದಲ್ಲಿವೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಬಳಿ ಜಿಂದಾಲ್ ಉಕ್ಕಿನ ಕಾರ್ಖಾನೆ ಇದೆ.

ಸುಣ್ಣಕಲ್ಲು ಮತ್ತು ಬಾಕ್ಸೈಟುಗಳನ್ನು ಕೈಗಾರಿಕೆಗಳಿಗೆ ಬಳಸಿಕೊಳ್ಳುವ ಪ್ರಯತ್ನವೂ ನಡೆದಿದೆ. ಕರ್ನಾಟಕದ ಸಿಮೆಂಟ್ ಕಾರ್ಖಾನೆಗಳ ವಾರ್ಷಿಕ ಉತ್ಪಾದನಾ ಸಾಮರ್ಥ್ಯ 24ಲಕ್ಷ ಟನ್.

ಕರ್ನಾಟಕದಲ್ಲಿ ಕೈಗಾರಿಕೆಗಳಿಗೆ ಉಪಯುಕ್ತವಾದ ಎರಡು ಮುಖ್ಯ ವ್ಯವಸಾಯೋತ್ಪನ್ನಗಳೆಂದರೆ ಕಬ್ಬು ಮತ್ತು ಹತ್ತಿ. ರಾಜ್ಯದಲ್ಲಿ 33 ಕಾರ್ಯನಿರತ ಸಕ್ಕರೆ ಕಾರ್ಖಾನೆಗಳಿವೆ. ಇವುಗಳ ಸರಾಸರಿ ವಾರ್ಷಿಕ ಉತ್ಪಾದನೆ 2.9 ಲಕ್ಷ ಟನ್. ಇದು ಭಾರತದ ಒಟ್ಟು ಉತ್ಪನ್ನದಲ್ಲಿ ಶೇ. 6ರಷ್ಟಾಗುತ್ತದೆ. ಕಬ್ಬಿನ ಸಿಪ್ಪೆ (ಬಗ್ಯಾಸ್), ಕಾಕಂಬಿ (ಮೊಲ್ಯಾಸೆಸ್) ಇವು ಸಕ್ಕರೆ ಕೈಗಾರಿಕೆಯ ಎರಡು ಮುಖ್ಯ ಉಪೋತ್ಪನ್ನಗಳು. ಕಬ್ಬಿನ ಸಿಪ್ಪೆಯಿಂದ ಕಾಗದವನ್ನೂ ಕಾಕಂಬಿಯಿಂದ ಮದ್ಯಸಾರ (ಆಲ್ಕೊಹಾಲ್) ಮತ್ತು ದನಗಳ ಮೇವನ್ನೂ ತಯಾರಿಸಲಾಗುತ್ತದೆ.

ಕರ್ನಾಟಕದ ಕೈಗಾರಿಕೆಗಳ ಪೈಕಿ ಜವಳಿ ಉದ್ಯಮ ಮುಖ್ಯವಾದದ್ದು. ರಾಜ್ಯದಲ್ಲಿ 44 ದೊಡ್ಡ ಹತ್ತಿ ಗಿರಣಿಗಳಿವೆ. ಇವುಗಳ ಪೈಕಿ 32 ನೂಲು ತೆಗೆಯುವವು; ಉಳಿದವು (12) ಸಂಯೋಜಿತ (ಕಾಂಪೊಸಿಟ್) ಗಿರಣಿಗಳು, ಇವುಗಳ ಒಟ್ಟು ಕದಿರುಗಳ ಸಂಖ್ಯೆ 10,68,000; ಮಗ್ಗಗಳು 5434. ನೂಲಿನ ವಾರ್ಷಿಕ ಉತ್ಪನ್ನ ಸು. 67,000 ಟನ್; ಹತ್ತಿಯ ಬಟ್ಟೆ ಸು. 5.1 ದಶಲಕ್ಷ ಮೀ ಇವುಗಳಲ್ಲದೆ ಅನೇಕ ಸಣ್ಣ ವಿದ್ಯುತ್ ಮಗ್ಗಗಳೂ ಕೈಮಗ್ಗಗಳೂ ಹತ್ತಿ ಮತ್ತು ರೇಷ್ಮೆ ಬಟ್ಟೆಗಳ ಉತ್ಪಾದನೆಯಲ್ಲಿ ನಿರತವಾಗಿವೆ.

ಕರ್ನಾಟಕದ ಅರಣ್ಯೋತ್ಪನ್ನಗಳ ಪೈಕಿ ಕೈಗಾರಿಕೆಗಳಿಗೆ ಉಪಯುಕ್ತವಾದವು ಅನೇಕ. ತೇಗ, ಬೀಟೆ, ಶ್ರೀಗಂಧ, ಮೃದುಮರಗಳು, ಬಿದಿರು-ಇವು ಮುಖ್ಯ. ಶ್ರೀಗಂಧ ವಿಶಿಷ್ಟವಾದದ್ದು. ಸಾಬೂನು, ರಾಸಾಯನವಸ್ತು ಮತ್ತು ಕಾಂತಿವರ್ಧಕ ವಸ್ತು ತಯಾರಿಕೆಯಲ್ಲಿ ಉಪಯುಕ್ತವಾದ ಗಂಧದೆಣ್ಣೆಯನ್ನು ಇದರಿಂದ ತೆಗೆಯಲಾಗುತ್ತದೆ. ರಾಜ್ಯದಲ್ಲಿರುವ ಗಂಧದೆಣ್ಣೆ ಕಾರ್ಖಾನೆಗಳು ಎರಡು. ಇವುಗಳ ವಾರ್ಷಿಕ ಉತ್ಪನ್ನ ಇಡೀ ಭಾರತದ ಉತ್ಪನ್ನದ ಶೇ. 80ರಷ್ಟು..

ಇನ್ನೊಂದು ಮುಖ್ಯ ಅರಣ್ಯೋತ್ಪನ್ನವಾದ ಬಿದಿರನ್ನು ಆಧರಿಸಿ ಕಾಗದ ತಯಾರಿಸಬಹುದು. ರಾಜ್ಯದಲ್ಲಿ 14 ಕಾಗದ ಕಾರ್ಖಾನೆಗಳಿವೆ. ರೆಯಾನ್ ದರ್ಜೆಯ ಮರದ ತಿರುಳು ತಯಾರಿಕೆ ಇನ್ನೊಂದು ಉದಿತೋದಿತ ಕೈಗಾರಿಕೆ. ಮುದ್ರಣಕಾಗದ ತಯಾರಿಕೆಗೆ ರಾಜ್ಯದಲ್ಲಿ ಸೌಲಭ್ಯಗಳಿವೆ. ಪ್ಲೈವುಡ್, ಚಿಪ್‌ಬೋರ್ಡ್, ಮರ ಉಣ್ಣೆ ಮುಂತಾದವನ್ನು ತಯಾರಿಸುವ ಅನೇಕ ಕಾರ್ಖಾನೆಗಳುಂಟು. ರಾಜ್ಯದಲ್ಲಿ ಪ್ಲೈವುಡ್ಡಿನ ಉತ್ಪಾದನೆ 120 ಲಕ್ಷ ಘನ ಅಡಿ. ಇದರಲ್ಲಿ ಒಂದು ಭಾಗ ನಿರ್ಯಾತವಾಗುತ್ತದೆ.

ಲವಣ ಕೈಗಾರಿಕೆಯ ಬೆಳವಣಿಗೆಗೆ ಸಂದಿರುವ ಪ್ರಾಮುಖ್ಯ ಅಲ್ಪವೇನಲ್ಲ. ಅನೇಕ ರಸಾಯನ ಕೈಗಾರಿಕೆಗಳಿಗೆ ಇದು ಮೂಲ ಸಾಮಗ್ರಿಯಾದ್ದರಿಂದಲೇ ಇದಕ್ಕೆ ಈ ಪ್ರಾಶಸ್ತ್ಯ. ಕಾಸ್ಟಿಕ್ ಸೋಡ, ಹೈಡ್ರೊಕ್ಲೋರಿಕ್ ಆಮ್ಲ ಮುಂತಾದ ಅನೇಕ ಕೈಗಾರಿಕೆಗಳು ಸ್ಥಾಪಿತವಾಗುವ ಹಂತದಲ್ಲಿವೆ. ಕರ್ನಾಟಕ ರೇಷ್ಮೆ ಕೈಗಾರಿಕೆ ಪ್ರಾಚೀನವಾದದ್ದು. ಇದು ರಾಜ್ಯದ ಮುಖ್ಯ ಕೈಗಾರಿಕೆಗಳಲ್ಲೊಂದು. ರೇಷ್ಮೆ ಸುತ್ತುವ, ಬಟ್ಟೆ ನೇಯುವ ಕಾರ್ಖಾನೆಗಳೂ ರಾಜ್ಯದಲ್ಲಿವೆ. ರಾಜ್ಯದ ವಾರ್ಷಿಕ ರೇಷ್ಮೆ ಬಟ್ಟೆ ಉತ್ಪಾದನೆ 2.6 ಲಕ್ಷ ಟನ್ನು. ರಾಜ್ಯದಲ್ಲಿ ಸು. 22,800 ರೇಷ್ಮೆ ಕೈಮಗ್ಗಗಳು ಮತ್ತು 23,800 ಯಂತ್ರಚಾಲಿತ ಮಗ್ಗಗಳಿವೆ. ಇವೆಲ್ಲ ಸಾಧನಸಾಮಗ್ರಿ ಮೂಲವಾದ ಕೈಗಾರಿಕೆಗಳು. ಇವಲ್ಲದೆ ಎಲೆಕ್ಟ್ರಾನಿಕ್ಸ್, ವಿದ್ಯುತ್ ಎಂಜಿನಿಯರಿಂಗ್, ಯಂತ್ರೀಯ ಎಂಜಿನಿಯರಿಂಗ್ ಕೈಗಾರಿಕೆಗಳೂ ರಾಜ್ಯದಲ್ಲಿ ಬೆಳೆದಿವೆ. ಕರ್ನಾಟಕ ಕೆಲವು ಮುಖ್ಯ ಕೈಗಾರಿಕೆಗಳ ಉತ್ಪಾದನೆಯನ್ನು (2002–03) ಮುಂದೆ ಕೊಟ್ಟಿದೆ;

ಕರ್ನಾಟಕದಲ್ಲಿ ಆಯ್ದ ಕೈಗಾರಿಕೆಗಳ ಉತ್ಪಾನೆ 2001–02

| ಕೈಗಾರಿಕೆ | ಘಟಕ | ಉತ್ಪಾದನೆ |
|---|---|---|
| ಅಲ್ಯೂಮಿನಿಯಂ | (ಲಕ್ಷಟನ್ನುಗಳಲ್ಲಿ) | 0.33 |
| ಕಬ್ಬಿಣ ಮತ್ತು ಉಕ್ಕು | | 1.74 |
| ಮಾರಾಟ ಉಕ್ಕು | | 0.87 |
| ಗಟ್ಟಿ ಉಕ್ಕು | | 1.14 |
| ಕಾಗದ | | 2.71 |
| ಸಕ್ಕರೆ | | 2.88 |
| ರಾಸಾಯನಿಕ ಗೊಬ್ಬರ | | 14.25 |
| ಸಿಮೆಂಟ್ | | 49.60 |
| ಸಿಗರೇಟ್ | (ಮಿಲಿಯನ್‌ಗಳಲ್ಲಿ) | 19378.00 |
| ಕೈಗಡಿಯಾರಗಳು | (ಲಕ್ಷಗಳಲ್ಲಿ) | 2.02 |
| ರೇಷ್ಮೆ ಬಟ್ಟೆ | (ಲಕ್ಷ ಮೀ) | 264.80 |
| ಹತ್ತಿದಾರ | (000 ಟನ್ನು) | 67.00 |
| ಹತ್ತಿ ಬಟ್ಟೆ | (ದಶಲಕ್ಷ ಮೀ) | 5.10 |

(ಆಧಾರ : ಆರ್ಥಿಕ ಸಮೀಕ್ಷೆ 2002–03)

ರಾಜ್ಯದ ಮುಖ್ಯ ಬೃಹದ್ಗಾತ್ರ ಕೈಗಾರಿಕೆಗಳನ್ನೂ ಅವುಗಳಿರುವ ಸ್ಥಳಗಳನ್ನೂ ಮುಂದೆ ಕೊಟ್ಟಿದೆ:

| ಕೈಗಾರಿಕೆ | ಸ್ಥಳಗಳು |
|---|---|
| ಜವಳಿ | ಬೆಂಗಳೂರು, ದಾವಣಗೆರೆ, ಬಳ್ಳಾರಿ, ರಾಯಚೂರು, ಹುಬ್ಬಳ್ಳಿ, ಗದಗ, ಇಳಕಲ್, ಗುಳೇದಗುಡ್ಡ, ಗೋಕಾಕ, ಗುಲ್ಬರ್ಗ, ರಬಕವಿ, ಬಾದಾಮಿ, ಬಾಗಲಕೋಟೆ, ನಂಜನಗೂಡು, ಚಾಮರಾಜನಗರ |
| ಎಂಜಿನಿಯರಿಂಗ್ | ಬೆಂಗಳೂರು, ಹರಿಹರ |
| ಖನಿಜ ಮತ್ತು ಲೋಹ | ಬೆಂಗಳೂರು, ಭದ್ರಾವತಿ, ಬಳ್ಳಾರಿ, ಕೋಲಾರ, ಶಿವಮೊಗ್ಗ |
| ಆಹಾರ, ಪಾನೀಯ, ಹೊಗೆಸೊಪ್ಪು | ಬೆಂಗಳೂರು |
| ರಾಸಾಯನಿವಸ್ತು, ಬಣ್ಣ ಮುಂತಾದವು | ಬೆಂಗಳೂರು, ಮೈಸೂರು, ಮಂಗಳೂರು |
| ಕಾಗದ, ಮುದ್ರಣ | ಭದ್ರಾವತಿ, ನಂಜನಗೂಡು, ದಾಂಡೇಲಿ, ಮುಂಡಗೋಡ, ಮುನಿರಾಬಾದ, ಎಡೆಯೂರು, ಮಂಡ್ಯ, ಬೆಂಗಳೂರು |
| ಮರ, ಕಲ್ಲು ಮತ್ತು ಗಾಜು ಕೆಲಸ | ರಾಜ್ಯಾದ್ಯಂತ |
| ತೊಗಲು, ಚರ್ಮ ಹದ, ಸರಕು ತಯಾರಿಕೆ | ಬೆಂಗಳೂರು |
| ಹತ್ತಿ ಬಿಡಿಸುವ, ಒತ್ತುವ ಕೈಗಾರಿಕೆ | ದಾವಣಗೆರೆ, ಬೆಳಗಾಂವಿ, ಬಳ್ಳಾರಿ, ಧಾರವಾಡ, ಗುಲ್ಬರ್ಗ, ರಾಯಚೂರು |
| ಮೀನುಗಾರಿಕೆ | ಮಂಗಳೂರು, ಕಾರವಾರ. |

ರಾಜ್ಯ ಸರ್ಕಾರದ ಮುಖ್ಯ ಕೈಗಾರಿಕೆಗಳನ್ನೂ ಅವುಗಳ ಸ್ಥಳಗಳನ್ನೂ ಮುಂದೆ ಕೊಟ್ಟಿದೆ:

| | |
|---|---|
| ಕೇಂದ್ರಿಯ ಕೈಗಾರಿಕಾ ಕಾರ್ಯಾಗಾರ | ಬೆಂಗಳೂರು |
| ಸರ್ಕಾರಿ ಕೇಂದ್ರಿಯ ಕಾರ್ಯಾಗಾರ | ಮಡಿಕೇರಿ |
| ಸರ್ಕಾರಿ ವಿದ್ಯುತ್ ಕಾರ್ಖಾನೆ | ಬೆಂಗಳೂರು |
| ಜೈ ಹಿಂದ್ ಮರಕೊಯ್ಯುವ ಕಾರ್ಖಾನೆ | ದಾಂಡೇಲಿ |
| ಸರ್ಕಾರಿ ಸಾಬೂನು ಕಾರ್ಖಾನೆ | ಬೆಂಗಳೂರು |
| ಸರ್ಕಾರಿ ಪಿಂಗಾಣಿ ಕಾರ್ಖಾನೆ | ಬೆಂಗಳೂರು |
| ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ | ಮೈಸೂರು, ಶಿವಮೊಗ್ಗ |
| ಸರ್ಕಾರಿ ಸ್ಪನ್ ರೇಷ್ಮೆ ಕಾರ್ಖಾನೆ | ಚನ್ನಪಟ್ಟಣ |
| ಮೈಸೂರು ರೇಷ್ಮೆ ಫಿಲೇಚರ್ | ಕನಕಪುರ, ಕೊಳ್ಳೆಗಾಲ, ಮೈಸೂರು |
| ಮೈಸೂರು ಚರ್ಮ ಹದ ಮಾಡುವ (ಕ್ರೋಂಟ್ಯಾನಿಂಗ್) ಕಂಪನಿ | ಬೆಂಗಳೂರು |
| ಹಟ್ಟಿ ಚಿನ್ನದ ಗಣಿ | ಹಟ್ಟಿ |
| ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ | ಮೈಸೂರು |
| ರೇಡಿಯೋ ಮತ್ತು ವಿದ್ಯುತ್ ತಯಾರಿಕೆ ಕಾರ್ಖಾನೆ | ಬೆಂಗಳೂರು |
| ಮೈಸೂರು ಸಕ್ಕರೆ ಕಂಪನಿ | ಮಂಡ್ಯ |
| ಸರ್ಕಾರದ ಹೊಸ ವಿದ್ಯುತ್ ಕಾರ್ಖಾನೆ | ಬೆಂಗಳೂರು |
| ಕೇಂದ್ರ ಸರ್ಕಾರದ ಉದ್ಯಮಗಳು | |
| ಭಾರತ ಅರ್ಥ್ ಮೂವರ್ಸ್ ಲಿಮಿಟೆಡ್ | ಬೆಂಗಳೂರು |
| ಭಾರತ ಎಲೆಕ್ಟ್ರಾನಿಕ್ಸ್ ಲಿ. | ಬೆಂಗಳೂರು |
| ಹಿಂದೂಸ್ತಾನ್ ಮಷೀನ್ ಟೂಲ್ಸ್ ಲಿ. | ಬೆಂಗಳೂರು |
| ಕೋಲಾರ ಚಿನ್ನದ ಗಣಿ ಉದ್ಯಮಗಳು | ಕೋಲಾರ ಚಿನ್ನದ ಗಣಿ |
| ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ | ಬೆಂಗಳೂರು |
| ಇಂಡಿಯನ್ ಟೆಲಿಫೋನ್ ಕೈಗಾರಿಕೆ ಲಿಮಿಟೆಡ್ | ಬೆಂಗಳೂರು |
| ಆಟೋಮೋಟಿವ್ ಆಕ್ಸಲ್ | ಮೈಸೂರು |

ಸರ್ಕಾರಿ ಸ್ವಾಮ್ಯದ ಉಕ್ಕು ಪ್ರಾಧಿಕಾರ:
ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಲಿಮಿಟೆಡ್ — ಭದ್ರಾವತಿ

ಬೆಂಗಳೂರಿನಲ್ಲಿ ಹಿಂದೂಸ್ತಾನ್ ಮಷೀನ್ ಟೂಲ್ಸ್ ಸಂಸ್ಥೆಯ ಅಂಗವಾಗಿ ಸ್ಥಾಪಿತವಾಗಿರುವ ಗಡಿಯಾರ ಕಾರ್ಖಾನೆ ವರ್ಷಕ್ಕೆ 5 ಲಕ್ಷ ಕೈಗಡಿಯಾರಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿರುವಂತೆ ಅದನ್ನು ಯೋಜಿಸಲಾಗಿದೆ. ಬೆಳಗಾಂವಿಯ ಬಳಿ ವರ್ಷಕ್ಕೆ 30,000 ಟನ್ ಅಲ್ಯೂಮಿನಿಯಂ ಗಟ್ಟಿ ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುತ್ತದೆ. ಮಂಗಳೂರಿನ ಸೀಮೆಗೊಬ್ಬರ ಕಾರ್ಖಾನೆ ಇನ್ನೊಂದು ಮುಖ್ಯ ಉದ್ಯಮ.

ಕರ್ನಾಟಕ ರಾಜ್ಯದಲ್ಲಿರುವ ಕುಶಲ ಕೈಗಾರಿಕೆಗಳೂ ಗೃಹ ಕೈಗಾರಿಕೆಗಳೂ ಅನೇಕ. ಕೆಲವು ಮುಖ್ಯ ಗೃಹ ಕೈಗಾರಿಕೆಗಳನ್ನೂ ಅವುಗಳ ಕೇಂದ್ರಗಳನ್ನೂ ಮುಂದೆ ಕೊಟ್ಟಿದೆ:

| | |
|---|---|
| ಮೆರಗು ಸರಕು (ಲ್ಯಾಕರ್‌ವೇರ್) | ಚನ್ನಪಟ್ಟಣ, ಗೋಕಾಕ್, ನೆಲಮಂಗಲ, ಚಿಕ್ಕಮಗಳೂರು, ಶಿವಮೊಗ್ಗ |
| ಗಂಧದ ಗುಡಿಗಾರಿಕೆ | ಸಾಗರ, ಸೊರಬ, ಮೈಸೂರು ದಂತ ಕೆಲಸ ಸಾಗರ, ಸೊರಬ, ಮೈಸೂರು |
| ಹಿತ್ತಾಳೆ ಸಾಮಾನು ತಯಾರಿಕೆ | ನೆಲಮಂಗಲ |
| ಬೆತ್ತದ ಕೆಲಸ | ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ, ಸಾಗರ |
| ಗಾಜಿನ ಬಳೆ | ಯಶವಂತಪುರ, ಪೋಡಗೇರಿ, |
| ಚಾಪೆ ಹೆಣಿಗೆ | ಕಡಕೊಳ, ಕೆಂಗೇರಿ, ಅಮೃತೂರು, ನಾಗಮಂಗಲ, ಹಾಸನ, ಕುಂಬೂರು, ಆನಂದಾಪುರ, ಹಿರಿಯೂರು |
| ಚರ್ಮದ ಹೊಲಿಗೆ | ಬೀರೂರು, ಸಾಗರ, ದೊಡ್ಡಸಿದ್ದವನಹಳ್ಳಿ, ಇಂಡಿ, ರಾಮದುರ್ಗ, ಅಶಾನಿ, ಸವದತ್ತಿ, ಕಾರವಾರ |
| ಮಡಕೆ ಕುಡಿಕೆ | ರಾಮನಗರ, ಖಾನಾಪುರ, ಮಡಿಕೆಬೀಡು, ಕೃಷ್ಣರಾಜಪುರ |
| ಹೆಂಚು | ಮಂಗಳೂರು |
| ಹಗ್ಗ, ಹುರಿ ಪದಾರ್ಥ | ಮಂಗಳೂರು, ಕಾರವಾರ |
| ಅಗರಬತ್ತಿ | ಮೈಸೂರು, ಬೆಂಗಳೂರು |
| ಹತ್ತಿಯ ಹೆಣಿಗೆವಸ್ತು | ಷಹಾಪುರ |
| ಕಂಪ್ಯೂಟರ್ ಟಿ.ವಿ. ಎಲೆಕ್ಟ್ರಾನಿಕ್ಸ್ | ಬೆಂಗಳೂರು |

ಬೆಂಗಳೂರು, ಬೆಳಗಾಂವಿ, ತುಮಕೂರು, ಹುಬ್ಬಳ್ಳಿ, ಹೊಸಪೇಟೆ, ಭದ್ರಾವತಿ, ಮಂಗಳೂರು–ಇವು ಸಣ್ಣ ಕೈಗಾರಿಕೆಗಳ ಮುಖ್ಯ ಕೇಂದ್ರಗಳು. ಸೈಕಲ್ ಡೈನಮೊ ದೀಪ, ಕೇಂದ್ರ ಲೇತು, ಮರ ಗೆಲಸ ಯಂತ್ರ, ರಂಧ್ರ ಒತ್ತುಯಂತ್ರ ಇದ್ದಲಿನ ಇಸ್ತ್ರಿಪೆಟ್ಟಿಗೆ, ಕಬ್ಬಿಣೇತರ ಲೋಹಗಳ ಪೂಜಾ ಸಲಕರಣೆ, ಇವಕ್ಕೆ ಅಖಿಲ ಭಾರತ ಬೇಡಿಕೆಯಿದೆ.

ಕೈಗಾರಿಕೆಗಳ ಪ್ರಗತಿಯಲ್ಲಿ ಭಾರತದ ರಾಜ್ಯಗಳ ಪೈಕಿ ಕರ್ನಾಟಕಕ್ಕೆ ಎಂಟನೆಯ ಸ್ಥಾನ. 2004ರಲ್ಲಿ ರಾಜ್ಯದಲ್ಲಿ 9625 ನೋಂದಣಿಯಾದ ಕಾರ್ಖಾನೆಗಳಿದ್ದುವು. ಕಾರ್ಮಿಕರ ಸಂಖ್ಯೆ 9.6 ಲಕ್ಷ.

ಕರ್ನಾಟಕದ ಸ್ವಾಭಾವಿಕ ವಿಭಾಗಗಳಿಗೆ ಅನುಗುಣವಾಗಿ ಸಣ್ಣ ದೊಡ್ಡ ಕೈಗಾರಿಕೆಗಳ ಹಬ್ಬುಗೆಗಳ ರೀತಿಯನ್ನು ಮುಂದೆ ವಿವೇಚಿಸಲಾಗಿದೆ. ಕರಾವಳಿ ಪ್ರದೇಶದಲ್ಲಿ ಉತ್ತರಕ್ಕಿಂತ ದಕ್ಷಿಣ ಭಾಗದಲ್ಲೇ ಬೃಹದ್ಗಾತ್ರದ ಕೈಗಾರಿಕೆಗಳ ಸಂಖ್ಯೆ ಹೆಚ್ಚು. ಮಂಗಳೂರು, ಉಡುಪಿ, ಮಣಿಪಾಲಗಳಲ್ಲಿ ಅನೇಕ ದೊಡ್ಡ ಹಾಗು ಮಧ್ಯಮ ಗಾತ್ರದ ಮುದ್ರಣಾಲಯಗಳಿವೆ. ಮಂಗಳೂರಿನಲ್ಲಿರುವ ಲೋಹ ವಸ್ತು ತಯಾರಿಕಾ ಕೇಂದ್ರಗಳ ಜೊತೆಗೆ ಎಂಜಿನಿಯರಿಂಗ್ ಕೈಗಾರಿಕೆಗಳೂ ಇವೆ. ಉಡುಪಿ, ಕುಮಟಗಳಲ್ಲೂ ಸಣ್ಣ ಎಂಜಿನಿಯರಿಂಗ್ ಕೇಂದ್ರಗಳಿವೆ. ವ್ಯವಸಾಯಾಧಾರಿತ ಕೈಗಾರಿಕೆಗಳಿರುವುದು ಬಹುತೇಕ ದಕ್ಷಿಣದಲ್ಲೇ. ಮಂಗಳೂರಿನ ಗೋಡಂಬಿ ಮತ್ತು ಕಾಫಿ ಪರಿಷ್ಕರಣ ಹೊಗೆಸೊಪ್ಪು ಮತ್ತು ಬೀಡಿ ಕಾರ್ಖಾನೆಗಳನ್ನು ಇಲ್ಲಿ ಉಲ್ಲೇಖಿಸಬಹುದು. ಅಕ್ಕಿ ಮತ್ತು ಎಣ್ಣೆ ಗಿರಣಿಗಳೂ ಇವೆ. ಮಂಗಳೂರಿನಲ್ಲೂ ಉಡುಪಿಯಲ್ಲೂ ಕೆಲವು ಜವಳಿಯ ಉದ್ಯಮಗಳುಂಟು. ಮಂಗಳೂರಿನ ಇನ್ನೆರಡು ಸಣ್ಣ ಕೈಗಾರಿಕೆಗಳೆಂದರೆ ಸಾಬೂನು ಮತ್ತು ರಸಾಯನವಸ್ತು ತಯಾರಿಕೆ. ಹಂಚು ತಯಾರಿಕೆಯೇ ಕರಾವಳಿಯ ಅತ್ಯಂತ ಮುಖ್ಯವಾದ ದೊಡ್ಡ ಕೈಗಾರಿಕೆ. ಇಲ್ಲಿರುವ 45 ಹೆಂಚಿನ ಕಾರ್ಖಾನೆಗಳಿವೆ ಹಂಚುಗಳಿಗೆ ಇಡೀ ಕರ್ನಾಟಕ ರಾಜ್ಯದಲ್ಲೂ ಭಾರತದ ಪಶ್ಚಿಮ ತೀರದಲ್ಲೂ ಬೇಡಿಕೆಯಿರುವುದಲ್ಲದೆ ಇದು ಶ್ರೀಲಂಕ ಮುಂಬಯಿಯ ಮುಖಾಂತರವಾಗಿ ಪೂರ್ವ ಆಫ್ರಿಕ, ಇರಾನ್ ಮತ್ತು ಮಲೇಷ್ಯಗಳಿಗೂ ರಫ್ತಾಗುತ್ತದೆ. ಆದರೆ ಆಸ್ಬೆಸ್ಟಸ್ ತಗಡಿನೊಂದಿಗೂ ಕೇರಳದ ಹಂಚಿನೊಂದಿಗೂ ಇದು ಸ್ಪರ್ಧಿಸಬೇಕಾಗಿ ಬಂದಿರುವುದರಿಂದ ಇದರ ಉತ್ಪಾದನೆ ಈಚಿನ ವರ್ಷಗಳಲ್ಲಿ ಕುಗ್ಗಿದೆ, ಇದಕ್ಕೆ ಅಗತ್ಯವಾದ ಮಣ್ಣಿಗೆ ಕರಾವಳಿಯಲ್ಲಿ ಕೊರತೆಯಿಲ್ಲ. ಕಡಲ ಕಡೆಯ ಸಾರಿಗೆಸೌಲಭ್ಯ, ಸೌದೆ, ನೆರೆಯ ಮಾರುಕಟ್ಟೆಯ ಬೇಡಿಕೆ–ಇವು ಈ ಕೈಗಾರಿಕೆಯ ಬೆಳೆವಣಿಗೆಗೆ ಕಾರಣವಾದ ಮುಖ್ಯ ಅಂಶಗಳು. ಕರಾವಳಿಯ ಪಟ್ಟಣಗಳಲ್ಲಿ ಮರದಲಾಂಬಿಯ ಕೇಂದ್ರಗಳೂ ಉಂಟು, ಕರಾವಳಿಯಲ್ಲಿ ಸಣ್ಣ ಕೈಗಾರಿಕೆ, ಜವಳಿ ಕೈಗಾರಿಕೆ, ದೋಣಿ ನಿರ್ಮಾಣ, ಮರಗೆಲಸ ಮತ್ತು ಹಗ್ಗ ಹುರಿ ಸರಕು ತಯಾರಿಕೆ ಉಪ ಕಸಬುಗಳು.

ಮೈಸೂರು–ಬೆಂಗಳೂರು–ಕೋಲಾರ ಚಿನ್ನದ ಗಣಿ ಪ್ರದೇಶದೊಂದಿಗಾಗಲಿ, ಹುಬ್ಬಳ್ಳಿ–ಧಾರವಾಡ–ಬೆಳಗಾಂವಿ ಪ್ರದೇಶದೊಂದಿಗಾಗಲಿ ಹೋಲಿಸಿದರೆ ಮಲೆನಾಡಿನಲ್ಲಿ ದೊಡ್ಡ ಕೈಗಾರಿಕೆಗಳು ಕಡಿಮೆ. ಈಗಾಗಲೇ ಬೆಳೆದಿರುವ ಕೈಗಾರಿಕೆಗಳನ್ನು ಇಲ್ಲಿ ವಿವೇಚಿಸಬಹುದು. ಭದ್ರಾವತಿಯ ಕಬ್ಬಿಣ–ಉಕ್ಕು ಕಾರ್ಖಾನೆ ಅತಿ ದೊಡ್ಡದು. ಪಕ್ಕದ ಕಾಗದದ ಕಾರ್ಖಾನೆಯೂ ದೊಡ್ಡದು. ದಾಂಡೇಲಿಯಲ್ಲಿ ಒಂದು ಕಾಗದದ ಕಾರ್ಖಾನೆಯೂ ಲೋಹ ಕಾರ್ಖಾನೆಯೂ ಇವೆ. ಚಿಕ್ಕಮಗಳೂರಿನಲ್ಲಿ ಕೆಲವು ಸಣ್ಣ ಎಂಜಿನಿಯರಿಂಗ್ ಉದ್ಯಮಗಳಿವೆ.

ಭದ್ರಾವತಿ ಕಬ್ಬಿಣ–ಉಕ್ಕಿನ ಕೈಗಾರಿಕೆಯ ಸನ್ನಿವೇಶ ಅತ್ಯುತ್ತಮವಾದದ್ದು. ಕಬ್ಬಿಣದ ಅದಿರು, ಸುಣ್ಣಕಲ್ಲು, ವಿದ್ಯುಚ್ಛಕ್ತಿ ಯಾವುದಕ್ಕೂ ಕೊರತೆಯಿಲ್ಲ. ತಾಂಡವಾಳ, ಉಕ್ಕು ಗಟ್ಟಿ, ಕಬ್ಬಿಣ ಮಿಶ್ರ ಲೋಹಗಳು, ಉಕ್ಕಿನ ಪಟ್ಟಿ, ಬೇಲುಪಟ್ಟಿ ಮತ್ತು ಎರಕ ಕಬ್ಬಿಣ ಕೊಳವೆಗಳನ್ನು ಇದು ತಯಾರಿಸುತ್ತದೆ. ಇದು ಭಾರತದ ದೈತ್ಯಾಕಾರದ ಉಕ್ಕು ಕಾರ್ಖಾನೆಗಳಲ್ಲೊಂದಾಗುವ ನಿರೀಕ್ಷೆಯಿಲ್ಲ. ವಿಶಿಷ್ಟ ಉಕ್ಕುಗಳನ್ನೂ ಮಿಶ್ರಲೋಹಗಳನ್ನೂ ತಯಾರಿಸುವುದರಲ್ಲಿ ನೈಪುಣ್ಯ ಸಂಪಾದಿಸುವುದು ಇದರ ಉದ್ದೇಶ. ಫೆರೊ–ಸಿಲಿಕಾನ್ ಮತ್ತು ಫೆರೊ–ಮ್ಯಾಂಗನೀಸ್ ಉತ್ಪಾದನೆ ಒಂದು ವಿಶಿಷ್ಟ ಬೆಳವಣಿಗೆ. ದಾಂಡೇಲಿಯಲ್ಲಿ ಕಬ್ಬಿಣ ಮಿಶ್ರಲೋಹ ಯಂತ್ರಸ್ಥಾವರವಿದೆ.

ಭದ್ರಾವತಿ ಮತ್ತು ದಾಂಡೇಲಿಗಳ ಕಾಗದದ ಕಾರ್ಖಾನೆಗಳಿಗೆ ಸ್ಥಳೀಯವಾಗಿ ಕಚ್ಚಾಸಾಮಗ್ರಿ ಒದಗುತ್ತವೆ. ಜಲವಿದ್ಯುತ್ತಿಗೂ ಕೊರತೆಯಿಲ್ಲ. ಮೃದುತಿರುಳಿನ ಮರಗಳನ್ನು ಮಲೆನಾಡಿನಲ್ಲಿ ನೆಡುವುದರಿಂದ ಪ್ರಯೋಜನವುಂಟು. ಮುದ್ರಣ ಕಾಗದ ಕೈಗಾರಿಕೆಗೂ ಒಳ್ಳೆಯ ಭವಿಷ್ಯವಿದೆ. ಭದ್ರಾವತಿ–ದಾಂಡೇಲಿಗಳೆರಡೂ ಕರ್ನಾಟಕದ ಕೈಗಾರಿಕೆ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾದ ಕೇಂದ್ರಗಳು. ಹಾಸನದ ವ್ಯವಸಾಯೋಪಕರಣ ಕಾರ್ಖಾನೆ ಸನ್ನಿವೇಶ ದೃಷ್ಟಿಯಿಂದ ಉಚಿತವಾದದ್ದು. ಉತ್ತರ ಮಲೆನಾಡಿನ ಪೂರ್ವಭಾಗದಲ್ಲಿ ಕೆಲವು ಹತ್ತಿ ಹಿಂಜುವ ಉದ್ಯಮಗಳಿವೆ. ಆದರೆ ಇವನ್ನು ವಾಸ್ತವವಾಗಿ ಉತ್ತರ ಮೈದಾನದ ಪಶ್ಚಿಮ ಪ್ರದೇಶದ ಜವಳಿ ಕೈಗಾರಿಕೆಗಳ ಗುಂಪಿಗೆ ಸೇರಿಸಬೇಕು.

ವ್ಯವಸಾಯಾಧಾರಿತ ಕೈಗಾರಿಕೆಗಳೆಂದರೆ ಅಕ್ಕಿ ಮತ್ತು ಎಣ್ಣೆಗಿರಣಿಗಳು. ಮೂಡಿಗೆರೆಯಲ್ಲಿ ಕೆಲವು ದೊಡ್ಡ ಅಕ್ಕಿ ಗಿರಣಿಗಳಿವೆ. ಬಹುತೇಕ ಅಕ್ಕಿ ಗಿರಣಿಗಳಿರುವುದು ಅರೆಮಲೆನಾಡಿನಲ್ಲಿ. ತೀರ್ಥಹಳ್ಳಿಯಲ್ಲೂ ಮಲೆನಾಡಿನ ಎಲ್ಲೆಗಿಂತ ಸ್ವಲ್ಪ ಆಚೆಗಿರುವ ಶಿಗ್ಗಾವಿಯಲ್ಲಿ ಹೊಗೆಸೊಪ್ಪಿನ ಸಣ್ಣ ಪರಿಷ್ಕರಣ ಕೇಂದ್ರಗಳಿವೆ. ದಕ್ಷಿಣದಲ್ಲಿ ಚಿಕ್ಕಮಗಳೂರು, ಹುಣಸೂರು ಮತ್ತು ಮೂಡಿಗೆರೆಗಳಲ್ಲಿ ಕಾಫಿ ಪರಿಷ್ಕರಣ ಕೇಂದ್ರಗಳನ್ನು ಕಾಣಬಹುದು.

ಇವಲ್ಲದೆ ವಿವಿಧ ಬಗೆಯ ಇನ್ನು ಕೆಲವು ದೊಡ್ಡ ಕೈಗಾರಿಕೆಗಳು ಮಲೆನಾಡಿನಲ್ಲಿವೆ. ದಾಂಡೇಲಿಯ ಪ್ಲೈವುಡ್ ಕಾರ್ಖಾನೆ, ಮರ ಕೊಯ್ಯುವ ಕಾರ್ಖಾನೆ, ಭದ್ರಾವತಿಯ ಸಿಮೆಂಟ್ ಕಾರ್ಖಾನೆ ಮುಖ್ಯ. ಮರದ ದಿಮ್ಮಿ ಉದ್ಯಮಗಳು ತರೀಕೆರೆ, ಚಿಕ್ಕಮಗಳೂರು, ಬೇಲೂರು, ಹಾಸನ, ಹುಣಸೂರುಗಳಲ್ಲೂ ಇವೆ. ಈ ಪ್ರದೇಶದ ಹೊರಗಿರುವ ಅರಸೀಕೆರೆ, ಮೈಸೂರು, ನಂಜನಗೂಡುಗಳನ್ನು ಈ ಪಟ್ಟಿಯಲ್ಲಿ ಸೇರಿಸಬಹುದು. ಖಾನಾಪುರ, ಶಿರಾಳಕೊಪ್ಪ, ಸಾಗರ, ಶಿವಮೊಗ್ಗ ಮುಂತಾದೆಡೆಗಳಲ್ಲಿ ಇಟ್ಟಿಗೆ ಮತ್ತು ಹೆಂಚು ತಯಾರಿಕೆಯೂ ಶಿವಮೊಗ್ಗದಲ್ಲಿ ಸಾಬೂನು ಮತ್ತು ರಾಸಾಯನಿಕವಸ್ತು ತಯಾರಿಕೆಯೂ ಲೋಂಡದಲ್ಲಿ ಮೂಳೆ ಗೊಬ್ಬರ ತಯಾರಿಕೆಯೂ ಉಲ್ಲೇಖನಾರ್ಹ.

ಉತ್ತರ ಮೈದಾನದ ಹತ್ತಿ ಬೆಳೆಯುವ ಪ್ರದೇಶದಲ್ಲೆಲ್ಲ ತಲಾ 30 ರಿಂದ 50 ಜನ ಕೆಲಸ ಮಾಡುವ ಸಣ್ಣ ಹತ್ತಿ ಹಿಂಜುವ ಕಾರ್ಖಾನೆಗಳಿವೆ. ಇವು ಸ್ಥಾಪಿತವಾಗಿರುವುದು ಹತ್ತಿ ಸಂಗ್ರಹ ಕೇಂದ್ರಗಳ ಬಳಿಯಲ್ಲಿ. ಹುಬ್ಬಳ್ಳಿ, ಗದಗ, ಬಿಜಾಪುರ, ಅಣ್ಣಿಗೇರಿ, ನರಗುಂದ, ರೋಣ, ಬೈಲಹೊಂಗಲ ಮತ್ತು ಬಾಗಲಕೋಟೆ. ಈ ಸ್ಥಳಗಳಲ್ಲಿ ದೊಡ್ಡ ಉದ್ಯಮಗಳೂ ಉಂಟು. ತುಂಗಭದ್ರಾ ಹತ್ತಿ ಬೆಳೆಯ ಪ್ರದೇಶಕ್ಕೆ ಮುಖ್ಯವಾಗಿ ರಾಯಚೂರು ಹಿಂಜುವ ಕೇಂದ್ರ. ದೊಡ್ಡ ಹತ್ತಿ ಜವಳಿ ಕೈಗಾರಿಕೆ ಗೋಕಾಕ, ಹುಬ್ಬಳ್ಳಿ, ಗದಗ, ಬೆಳಗಾಂವಿ, ಹೊಸಪೇಟೆ ಮತ್ತು ಗುಲ್ಬರ್ಗಗಳಲ್ಲಿ ಕೇಂದ್ರೀಕೃತವಾಗಿದೆ. ಕೈಮಗ್ಗದ ಕೈಗಾರಿಕೆ ಅನೇಕ ಕಡೆಗಳಲ್ಲಿ ಹರಡಿದೆ. ಗುಳೇದ ಗುಡ್ಡ, ಇಳಕಲ್, ಅಮೀನಗಡ, ಹುನಗುಂದ, ಕಮತಗಿ, ರಬಕವಿ, ಪಾಚ್ಛಾಪುರಗಳಲ್ಲಿ ಇಂದಿಗೂ ಇದನ್ನು ಅಧಿಕವಾಗಿ ಕಾಣಬಹುದು. ಬೆಳಗಾಂವಿಯ ಸುತ್ತ ರೇಷ್ಮೆ ಕೈಗಾರಿಕೆಯುಂಟು.

ವ್ಯವಸಾಯೋತ್ಪನ್ನಗಳನ್ನಾಧರಿಸಿದ ದೊಡ್ಡ ಕೈಗಾರಿಕೆಗಳನ್ನು ವ್ಯಾಪಕವಾಗಿ ಕಾಣಬಹುದು. ಎಣ್ಣೆ ಅಕ್ಕಿ ಗಿರಣಿಗಳನ್ನು ಇಲ್ಲಿ ಹೆಸರಿಸಬಹುದು. ಬಾದಾಮಿ, ಯಾದಗಿರಿ ಮುಂತಾದ ಸ್ಥಳೀಯ ಮಾರುಕಟ್ಟೆಗಳಲ್ಲಿ ಇವು ಹೆಚ್ಚಾಗಿವೆ. ಬಿಜಾಪುರ, ರಾಯಚೂರು, ಬಾಗಲಕೋಟೆಗಳು ಮುಖ್ಯ ಕೇಂದ್ರಗಳು. ತುಂಗಭದ್ರಾ ನಾಲೆ ಬಯಲಿನಲ್ಲಿ ಹೊಸಪೇಟೆ, ಮುನಿರಾಬಾದ್‍ಗಳಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಬಾವಿ ನೀರಾವರಿ ಸೌಕರ್ಯವಿರುವ ವಾಯವ್ಯದ ಉಗಾರ್‍ಖುರ್ದ್ ಮತ್ತು ಕಣಬೂರಗಳು ಇನ್ನೆರಡು ಮುಖ್ಯ ಪ್ರದೇಶಗಳು. ಅಲ್ಲಿ, ಮುಖ್ಯವಾಗಿ ನಿಪ್ಪಾಣಿಯಲ್ಲಿ, ಮಧ್ಯಮಗಾತ್ರದ ಹೊಗೆಸೊಪ್ಪಿನ ಕೇಂದ್ರಗಳಿವೆ. ರಾಣಿಬೆನ್ನೂರು, ಸವಣೂರು, ಯಾದಗಿರಿಗಳಲ್ಲೂ ಹುಬ್ಬಳ್ಳಿಯಲ್ಲೂ ಇವನ್ನು ಕಾಣಬಹುದು. ಹುಬ್ಬಳ್ಳಿ ಒಂದು ಮುಖ್ಯ ಕೈಗಾರಿಕಾ ಕೇಂದ್ರ.

ಹರಿಹರದಲ್ಲಿ ಯಂತ್ರೋಪಕರಣ ಕೈಗಾರಿಕೆಯೂ ಸಣ್ಣ ವ್ಯವಸಾಯೋಪಕರಣ ಕಾರ್ಖಾನೆಯೂ ಇವೆ. ಹುಬ್ಬಳ್ಳಿ ಎಂಜಿನಿಯರಿಂಗ್ ಕೈಗಾರಿಕೆಗಳಿಗೂ ಮುಖ್ಯವಾದದ್ದು. ಅಲ್ಲಿ ರೈಲ್ವೆ ಕಾರ್ಯಾಗಾರವಿದೆ. ಬೆಳಗಾಂವಿಯಲ್ಲಿರುವ ಸಣ್ಣ ಕೈಗಾರಿಕೆಗಳು ಬಗೆಬಗೆಯವು. ಬಿಜಾಪುರದಲ್ಲೂ ಕೆಲವು ಸಣ್ಣ ಉದ್ಯಮಗಳುಂಟು.

ಬೆಳಗಾಂವಿಯ ಕೈಗಾರಿಕೆಗಳಲ್ಲಿ ಮರದ ದಿಮ್ಮಿ ಉದ್ಯಮ ಮುಖ್ಯವಾದದ್ದು. ಬಾಗಲಕೋಟೆ ಕಲಾದಗಿಗಳಲ್ಲಿ ಸಿಮೆಂಟ್ ಸಂಬಂಧವಾದ ಸಣ್ಣ ಉದ್ಯಮಗಳಿವೆ. ಮೈದಾನದ ಪಶ್ಚಿಮದಂಚಿನಲ್ಲಿ ಚರ್ಮದ ಕೈಗಾರಿಕೆಯೂ ಉಂಟು. ಗುಲ್ಬರ್ಗದ ದಕ್ಷಿಣಕ್ಕೆ ಶಹಬಾದಿನ ಸಿಮೆಂಟ್ ಕಾರ್ಖಾನೆ ದೊಡ್ಡದು. ಇದು ಬಹುತೇಕ ಯಾಂತ್ರೀಕೃತ. ಬಳ್ಳಾರಿ, ಬೆಳಗಾಂವಿಗಳಲ್ಲಿ ಸಾಬೂನು ಕೈಗಾರಿಕೆಯೂ ಸಣ್ಣ ಪ್ರಮಾಣದಲ್ಲಿ ನಡೆಯುತ್ತದೆ.

ಬೆಂಗಳೂರು–ಪುಣೆ ರೈಲುಹಾದಿಯ ಉದ್ದಕ್ಕೂ ಅದರ ಸಮೀಪದಲ್ಲೂ ಕೈಗಾರಿಕೆಗಳು ಹೆಚ್ಚಾಗಿ ಗೊಂಚಲುಗಳಂತೆ ಸೇರಿಕೊಂಡಿರುವುದನ್ನು ಕಾಣಬಹುದು. ರಾಯಚೂರು–ಷೋರಾಪುರ ರೈಲುಮಾರ್ಗಗಳ ಪ್ರದೇಶದಲ್ಲೂ ತಕ್ಕಮಟ್ಟಿಗೆ ಇವು ಕಾಣಬರುತ್ತವೆ. ಪೂರ್ವಮಧ್ಯ ಪ್ರದೇಶದಲ್ಲಿ ಆಳಂದದಿಂದ ಹೊಸಪೇಟೆಯವರೆಗೆ ಇವು ಇಲ್ಲವೇ ಇಲ್ಲವೆನ್ನಬೇಕು. ಆದರೆ ಇಲ್ಲೆಲ್ಲ ಕೈಮಗ್ಗದಂಥ ಸಣ್ಣ ಕೈಗಾರಿಕೆಗಳು ಹಬ್ಬಿವೆ. ಬೀದರ್‍ನಲ್ಲಿ ಬೀದರಿ ಕೆಲಸ ನಡೆಯುತ್ತದೆ.

ಉತ್ತರ ಮೈದಾನ ಪ್ರದೇಶದ ಮುಖ್ಯ ಕೈಗಾರಿಕೆಯೆಂದರೆ ಜವಳಿ ತಯಾರಿಕೆ. ಬಿಜಾಪುರ, ಧಾರವಾಡ, ಬೆಳಗಾಂವಿ ಮತ್ತು ಬಳ್ಳಾರಿಯಲ್ಲಿ ಉಣ್ಣೆ ತಯಾರಿಕೆ, ಅಲ್ಪ ಪ್ರಮಾಣ ಕೇಂದ್ರೀಕರಿಸಿದ ರೇಷ್ಮೆಯ ಸಣ್ಣ ಉದ್ಯಮಗಳು ಬಿಜಾಪುರದಲ್ಲೂ ದೊಡ್ಡವು ಬೆಳಗಾವಿಯಲ್ಲೂ ಉಂಟು.

ಹತ್ತಿ ಹಿಂಜುವಿಕೆ, ಹತ್ತಿ ಮತ್ತು ರೇಷ್ಮೆ ಜವಳಿ ಕೈಗಾರಿಕೆಗಳು ದಕ್ಷಿಣ ಮೈದಾನದ ಕೆಲವು ಮುಖ್ಯ ಕೇಂದ್ರಗಳಲ್ಲಿವೆ. ಹತ್ತಿ ಹಿಂಜುವ ಕೇಂದ್ರಗಳು ಮುಖ್ಯವಾಗಿ ದಾವಣಗೆರೆ ಚಿತ್ರದುರ್ಗಗಳಲ್ಲಿ–ಇವೆ. ಹತ್ತಿ ಜವಳಿಯ ಮುಖ್ಯ ಕೇಂದ್ರಗಳು, ದಾವಣಗೆರೆ, ಮೈಸೂರು, ನಂಜನಗೂಡು ಮತ್ತು ಬೆಂಗಳೂರು. ಅತಿ ದೊಡ್ಡ ಗಿರಣಿಗಳಿರುವುದು ಬೆಂಗಳೂರಿನಲ್ಲೇ. ಅನೇಕ ಸಣ್ಣ ಉದ್ಯಮಗಳೂ ಅಲ್ಲುಂಟು. ರೇಷ್ಮೆ ಕೈಗಾರಿಕೆಯೂ ಬೆಂಗಳೂರಿನಲ್ಲೇ ಸಾಂದ್ರೀಕೃತವಾಗಿದೆ. ಮೈಸೂರು, ಚನ್ನಪಟ್ಟಣ, ಕನಕಪುರ, ತಿರುಮಕೂಡಲು ನರಸೀಪುರ, ನಂಜನಗೂಡು ಮತ್ತು ಮಾಂಬಳ್ಳಿ ಇತರ ಕೇಂದ್ರಗಳು, ಮೈಸೂರು ಬೆಂಗಳೂರುಗಳಲ್ಲಿ ಈ ಕೈಗಾರಿಕೆಗೆ ಅಗತ್ಯವಾದ ಸಾರಿಗೆ ಮತ್ತು ಕಾರ್ಮಿಕರ ಸೌಲಭ್ಯವುಂಟು.

ಬೆಂಗಳೂರು ಮೈಸೂರುಗಳಲ್ಲಿ ವ್ಯವಸಾಯೋತ್ಪನ್ನಗಳನ್ನವಲಂಬಿಸಿದ ಕೈಗಾರಿಕೆಗಳು ಮುಖ್ಯವಾಗಿ ಕೇಂದ್ರೀಕೃತವಾಗಿವೆ. ಕಾರ್ಮಿಕ ಸರಬರಾಜು, ಮಾರುಕಟ್ಟೆ–ಇವು ಎರಡು ಮುಖ್ಯ ಸೌಲಭ್ಯಗಳು. ಅಕ್ಕಿ ಗಿರಣಿಗಳು ಹೆಚ್ಚಾಗಿ ನಂಜನಗೂಡು, ಕೃಷ್ಣರಾಜನಗರ, ಪಾಂಡವಪುರ ಮತ್ತು ಹೊಳೆನರಸೀಪುರ. ಶಿರಾ ಮಧುಗಿರಿ, ಚಿತ್ರದುರ್ಗ, ಮುಳಬಾಗಿಲು, ದಾವಣಗೆರೆ ಇತ್ಯಾದಿಗಳಲ್ಲಿವೆ. ಗೋದಿ ಹಿಟ್ಟಿನ ತಯಾರಿಕೆ ಬೆಂಗಳೂರಿನಲ್ಲಿ ಮುಖ್ಯ. ಎಣ್ಣೆ ಉತ್ಪಾದನೆ ದಕ್ಷಿಣ ಮೈದಾನ ಪ್ರದೇಶದಲ್ಲೆಲ್ಲ ನಡೆಯುತ್ತದೆ. ಆದರೆ ಕೆಲವು ಕೇಂದ್ರಗಳಲ್ಲಿ ಹೆಚ್ಚು. ಉದಾ: ದಾವಣಗೆರೆ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಕುಡತಿನಿ, ಬಳ್ಳಾರಿ ತುಮಕೂರು, ಹಾಸನ, ಮುಳಬಾಗಿಲು, ಮೈಸೂರು, ಬೆಂಗಳೂರು ಇತ್ಯಾದಿ. ದಕ್ಷಿಣ ಮೈದಾನದಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಕೊಳ್ಳೆಗಾಲ, ಮಂಡ್ಯ, ಪಾಂಡವಪುರ ಹಾಗೂ ಇನ್ನು ಕೆಲವು ಕಡೆಗಳಲ್ಲಿ ಸಕ್ಕರೆ ಉದ್ಯಮವಿದೆ. ಉದಾ: ಕಾಳಮುದ್ದನದೊಡ್ಡಿ, ಸಮೀರವಾಡಿ, ಮುನಿರಾಬಾದ್, ಸಿರುಗುಪ್ಪ ಸರಗೂರು, ದಾವಣಗೆರೆ, ಹೊಸಪೇಟೆ, ಗಂಗಾವತಿ, ಹಳ್ಳಿಖೇಡ, ಮುಧೋಳ, ಗೋಕಾಕ, ಹುಕ್ಕೇರಿ, ಮುನವಳ್ಳಿ, ಹಾಸನ, ಸಂಕೇಶ್ವರ, ಚಿಕ್ಕೋಡಿ, ಚುಂಚನಕಟ್ಟೆ, ಗೌರಿಬಿದನೂರು, ಶಿವಮೊಗ್ಗ, ಕಂಪ್ಲಿ, ಹೊಸಕೋಟೆ. ದಕ್ಷಿಣ ಮೈದಾನದ ನೈಋತ್ಯ ಪ್ರದೇಶವಾದ ಮೈಸೂರು–ನಂಜನಗೂಡು–ಗುಂಡ್ಲುಪೇಟೆ–ಚಾಮರಾಜನಗರ ಸುತ್ತಿನಲ್ಲಿ ಹಲವು ಹೊಗೆಸೊಪ್ಪಿನ ಉದ್ಯಮಗಳಿವೆ. ಬೀಡಿ ಪ್ರಧಾನ ಉತ್ಪನ್ನ. ಬೆಂಗಳೂರಿನಲ್ಲೂ ಈ ಉದ್ಯಮ ಬೆಳೆದಿದೆ. ವೈಟ್‍ಫೀಲ್ಡ್, ರಾಮನಗರ, ಚನ್ನಪಟ್ಟಣ, ಗೌರಿಬಿದನೂರು, ತುಮಕೂರು, ಹೊಸಕೋಟೆ, ಆನೆಕಲ್ಲು, ಕೊರಟಗೆರೆ ಇವು ಇತರ ಕೇಂದ್ರಗಳು. ಈ ಉದ್ಯಮ ಉಳಿದ ಪ್ರದೇಶಗಳಿಗೂ ಹಬ್ಬುತ್ತಿದೆ. ಕಚ್ಚಾಸಾಮಗ್ರಿಯ ಸರಬರಾಜು ಮತ್ತು ಮಾರಾಟಗಳ ವಿಚಾರದಲ್ಲಿ ತೊಂದರೆಯಿಲ್ಲ. ಮೈಸೂರಿನ ಬಳಿಯ ಬೆಳಗೊಳದಲ್ಲಿ ಕಾಗದದ ಕಾರ್ಖಾನೆಯುಂಟು. ಸಕ್ಕರೆ ಕಾರ್ಖಾನೆಯ ಉಪೋತ್ಪನ್ನ ಇದಕ್ಕೆ ಕಚ್ಚಾ ಸಾಮಗ್ರಿ.

ಎಂಜಿನಿಯರಿಂಗ್ ಕೈಗಾರಿಕೆಗಳಲ್ಲಿ ಬೆಂಗಳೂರು ಪ್ರಧಾನ. ಅನೇಕ ದೊಡ್ಡ ಕಾರ್ಖಾನೆಗಳನ್ನೂ ಅಸಂಖ್ಯಾತ ಸಣ್ಣ ಉದ್ಯಮಗಳ ನಿಬಿಡ ನೆಲೆಯನ್ನೂ ಅಲ್ಲಿ ಕಾಣಬಹುದು. ವಿಮಾನ, ದೂರವಾಣಿ, ಲೋಹಗಾರಿಕೆ, ಯಂತ್ರೋಪಕರಣ, ಕೈಗಡಿಯಾರ, ಎಲೆಕ್ಟ್ರಾನಿಕ್ಸ್, ವಿದ್ಯುದುಪಕರಣ, ವಿದ್ಯುದ್ದೀಪ, ರೇಡಿಯೋ ಮುಂತಾದ ಹಲವು ಕೈಗಾರಿಕೆಗಳ ಹಬ್ಬುಗೆಯೇ ಇದೆ. ಬೆಳೆಯುತ್ತಿರುವ ಈ ನಗರದಲ್ಲಿ ಕಾರ್ಮಿಕ ಸರಬರಾಜೂ ಮಾರಾಟ ಸೌಲಭ್ಯವೂ ಧಾರಾಳವಾಗಿದೆ. ಇಲ್ಲಿರುವ ಹಲವಾರು ಕೇಂದ್ರಿಯ ಬೃಹದ್ಗಾತ್ರ ಉದ್ಯಮಗಳು ನಗರದ ಬೆಳವಣಿಗೆಗೆ ಕಾರಣ. ಹಿಂದಿನ ಮೈಸೂರಿನ ಸರ್ಕಾರ ಹಾಕಿದ ತಳಹದಿ ಇಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಮುಖ್ಯ ಕಾರಣ.

ರಾಸಾಯನಿಕಗಳು, ಸಾಬೂನು, ಊದುಬತ್ತಿ ಮುಂತಾದ ಉದ್ಯಮಗಳು ಮುಖ್ಯವಾಗಿ ಮೈಸೂರು ಬೆಂಗಳೂರುಗಳಲ್ಲಿವೆ. ಚಿಂತಾಮಣಿ, ಕೋಲಾರ, ಮುಂತಾದವು ಪರಿಮಳ ವಸ್ತುಗಳನ್ನು ತಯಾರಿಸುತ್ತವೆ. ಸಣ್ಣ ಎಂಜಿನಿಯರಿಂಗ್ ಉದ್ಯಮಗಳು ಮೈಸೂರು, ತುಮಕೂರು, ಗೂಳೂರು, ಕೋಲಾರ, ರಾಬರ್ಟ್‌ಸನ್‌ಪೇಟೆ, ಬಂಗಾರಪೇಟೆಗಳಲ್ಲಿವೆ. ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ ಗಣಿ ಯಂತ್ರ ಮತ್ತು ಬಂಡೆ ಕೊರೆಯುವ ಯಂತ್ರ ತಯಾರಿಸಬಹುದಾದರೂ ಇದಕ್ಕೆ ಅವಶ್ಯವಾದ ಪರಿಣಿತ ಶ್ರಮ ಅಲ್ಲಿ ಬೆಳೆದಿಲ್ಲ. ಅನೇಕ ಬಗೆಯ ಸಣ್ಣ ಉದ್ಯಮಗಳಿಗೂ ಬೆಂಗಳೂರು ಕೇಂದ್ರವಾಗಿದೆ. ಚರ್ಮ ಕೈಗಾರಿಕೆ, ಕೃತಕ ವಸ್ತ್ರ–ಇವು ಮುಖ್ಯ. ಮೈಸೂರಿನಲ್ಲೂ ಚರ್ಮದ ಕೈಗಾರಿಕೆಯುಂಟು. ಇಟ್ಟಿಗೆ ಮತ್ತು ಹೆಂಚು ತಯಾರಿಕೆ ಸಣ್ಣ ಪ್ರಮಾಣದಲ್ಲಿ ತುಮಕೂರು, ಬಂಗಾರಪೇಟೆ ಮತ್ತು ಯಲಹಂಕಗಳಲ್ಲಿ ನಡೆಯುತ್ತದೆ. ಅಮ್ಮಸಂದ್ರದ ಸಿಮೆಂಟ್ ಕೈಗಾರಿಕೆ ದೊಡ್ಡಗಾತ್ರದ್ದು.

ಸಾರಿಗೆ–ಸಂಪರ್ಕ: ಸಾರಿಗೆಯ ವಿಚಾರದಲ್ಲಿ ಕರ್ನಾಟಕಕ್ಕೆ ಅನೇಕ ಸೌಲಭ್ಯಗಳುಂಟು. ಅರಬ್ಬೀ ಸಮುದ್ರಾಭಿಮುಖವಾದ ಸು. 320 ಕಿಮೀ ಕರಾವಳಿಯ ಮೇಲೆ 19 ಸಣ್ಣ ಮತ್ತು ಮಧ್ಯಮ ವರ್ಗದ ಬಂದರುಗಳಿವೆ. ಮಂಗಳೂರು ಒಂದು ದೊಡ್ಡ ಬಂದರಾಗಿ ಅಭಿವೃದ್ಧಿಗೊಳಿಸಲಾಗಿದೆ. ಇವುಗಳ ಹಿನ್ನಾಡು ಬಲು ಫಲವತ್ತಾದದ್ದು. ಕರ್ನಾಟಕದಲ್ಲಿ 2761 ಕಿಮೀ ಬ್ರಾಡ್ ಗೇಜ್ ಮತ್ತು 410 ಕಿಮೀ ಮೀಟರ್ ಗೇಜ್ ರೈಲುಮಾರ್ಗಗಳುಂಟು. ರಸ್ತೆಗಳ ಉದ್ದ 1,31,815 ಕಿಮೀ ಇದರಲ್ಲಿ 92,232 ಕಿಮಿ (ಶೇ.70) ಪಕ್ಕ ರಸ್ತೆ. ಉಳಿದ 39,583 ಕಿಮೀ ಕಚ್ಚಾ ರಸ್ತೆಯಾಗಿರುತ್ತದೆ. 13 ರಾಷ್ಟ್ರೀಯ ಹೆದ್ದಾರಿಗಳು ರಾಜ್ಯದಲ್ಲಿದ್ದು, ಇವುಗಳ ಉದ್ದ 3728 ಕಿಮೀ ಮುಂಬಯಿ ತಿರುವನಂತಪುರಗಳನ್ನು ಕೂಡಿಸುವ ಕರಾವಳಿ ರಸ್ತೆಯೂ ಕಬ್ಬಿಣ ಅದುರು ಸಾಗಿಸಲು ಅವಶ್ಯವಾದ 600 ಕಿಮೀ ರಸ್ತೆಗಳಿವೆ. ಬೆಂಗಳೂರು–ಸೇಲಂ, ಹಾಸನ–ಮಂಗಳೂರು ಮತ್ತು ಕೊಂಕಣ ರೈಲುದಾರಿಗಳು ಹೊಸವು. ಬೆಂಗಳೂರು, ಬೆಳಗಾಂವಿ ಮೈಸೂರು ಮತ್ತು ಮಂಗಳೂರುಗಳಲ್ಲಿ ಮುಖ್ಯ ವಿಮಾನ ನಿಲ್ದಾಣಗಳಿವೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಪರಿಗಣಿಸಲಾಗಿದ್ದು, ದೇವನ ಹಳ್ಳಿಯಲ್ಲಿ ಹೊಸ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯಮುಂದುವರಿದಿದೆ.

ಕರ್ನಾಟಕ ರಾಜ್ಯದ ಸಂಚಾರ ಮಾರ್ಗಗಳನ್ನು ಗಮನಿಸಿದಾಗ ಕೆಲವು ಮುಖ್ಯ ಅಂಶಗಳು ವ್ಯಕ್ತಪಡುವುವು. ವಿಜಯನಗರ ಪತನಾನಂತರ ತುಂಡಾದ ಕನ್ನಡ ನಾಡು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇಪ್ಪತ್ತೇಳು ಆಡಳಿತಗಳಲ್ಲಿ ಹಂಚಿಹೋಗಿತ್ತಾದ್ದರಿಂದ ಸಂಚಾರಸಂಪರ್ಕ ಬೆಳವಣಿಗೆ ವ್ಯವಸ್ಥಿತ ರೀತಿಯಲ್ಲಿ ಸಾಗಲಿಲ್ಲ. ರಾಜ್ಯದ ಹಲವು ಭಾಗಗಳು ರಾಜ್ಯದ ಕೇಂದ್ರದಿಂದ ವಿಮುಖವಾಗಿ ಇತರ ಪ್ರಾಂತ್ಯಗಳ ಅಂಚುಗಳಾಗಿದ್ದುದರಿಂದ ಸಂಚಾರಮಾರ್ಗಗಳ ಬೆಳವಣಿಗೆಯಾಗಲಿಲ್ಲ. ಉತ್ತರ ಕನ್ನಡ, ಬಿಜಾಪುರ ಮತ್ತು ಹೈದರಾಬಾದ್ ಪ್ರದೇಶಗಳು ಬಹಳ ಹಿಂದುಳಿದವು. ಉತ್ತರ ಕನ್ನಡ ಜಿಲ್ಲೆಯೂ ಅಷ್ಟೆ. ಮಂಗಳೂರು ಒಂದು ರೈಲು ಕೊನೆದಾಣ (ಟರ್ಮಿನಸ್). ಕೊಡಗಿನಲ್ಲಿ ರೈಲುಮಾರ್ಗವಿಲ್ಲ. ಬೆಂಗಳೂರು ಧಾರವಾಡ ಜಿಲ್ಲೆಗಳು ಉತ್ತಮ ರೈಲು ಸಂಪರ್ಕ ಹೊಂದಿವೆ. ಬೆಂಗಳೂರು ಹುಬ್ಬಳ್ಳಿಗಳು ರೈಲ್ವೆಕೇಂದ್ರಗಳು. ಹಳೆಯ ಮೈಸೂರು ರಾಜ್ಯದ ರೈಲುಮಾರ್ಗಗಳು ಕ್ರಮಬದ್ಧವಾಗಿ ನಿರ್ಮಿಸಿದಂಥವು. ಅವು ಬೆಂಗಳೂರಿಗೆ ಅಭಿಮುಖವಾದವು. ಉತ್ತರ ಕರ್ನಾಟಕದ ರೈಲುಮಾರ್ಗಗಳು ಹುಬ್ಬಳ್ಳಿಗೆ ಅಭಿಮುಖವಾಗಿವೆ. ಕರ್ನಾಟಕದಲ್ಲಿಯ ಎಲ್ಲಾ ರೈಲು ಮಾರ್ಗಗಳು ಇತ್ತೀಚೆಗೆ ಬ್ರಾಡ್‌ಗೇಜ್‌ಗೆ ಪರಿವರ್ತನೆಯಾಗುತ್ತಿವೆ.

ಕರ್ನಾಟಕದ ಏಕೀಕರಣ ಸಂಪೂರ್ಣವಾಗಬೇಕಾದರೆ, ಆರ್ಥಿಕ ಸಮಗ್ರತೆ ಏರ್ಪಡಬೇಕಾದರೆ, ಆಂತರಿಕ ಮಾರ್ಗಗಳು ಬೆಳೆಯಬೇಕು. ರೈಲುಮಾರ್ಗಗಳ ಕೊರತೆಯನ್ನು ರಸ್ತೆಗಳು ಬಹುತೇಕ ಪೂರೈಸುತ್ತವೆ. ಬೆಂಗಳೂರಿನಿಂದ ಎಲ್ಲ ಜಿಲ್ಲೆಗಳ ಮುಖ್ಯ ಸ್ಥಳಗಳಿಗೂ ಉತ್ತಮ ರಸ್ತೆಗಳಿವೆ. ಇಡೀ ರಾಜ್ಯದ ಸಾರಿಗೆ ವ್ಯವಸ್ಥೆಯನ್ನು ಸ್ಥೂಲವಾಗಿ ವಿವೇಚಿಸಿದ ಮೇಲೆ ವಿವಿಧ ಸ್ವಾಭಾವಿಕ ವಿಭಾಗಗಳ ಪರಿಸ್ಥಿತಿಯನ್ನಷ್ಟು ಪರಿಶೀಲಿಸಬಹುದು. ಕರಾವಳಿಯಲ್ಲಿ ಮಂಗಳೂರೊಂದೇ ರೈಲ್ವೆ ಸಂಪರ್ಕ ಪಡೆದಿರುವ ಮುಖ್ಯ ಸ್ಥಳ. ಬ್ರಾಡ್‌ಗೇಜಿನ ರೈಲುಮಾರ್ಗವೊಂದು ಪಾಲ್ಘಾಟಿನ ಮೂಲಕ ಸುತ್ತಿಕೊಂಡು ಚೆನ್ನೈ ತಲಪುತ್ತದೆ. ಮಂಗಳೂರಿನ ರೈಲ್ವೆ ಹಿನ್ನಾಡು ಕರ್ನಾಟಕದೊಳಗಿಲ್ಲ. ನಿರ್ಮಾಣವಾಗುತ್ತಿರುವ ಮಂಗಳೂರು–ಹಾಸನ ರೈಲ್ವೆಯಿಂದ ಮಂಗಳೂರಿನ ಸಮೃದ್ಧವಾದ ಹಿನ್ನಾಡಿಗೆ ಸಮುದ್ರಮುಖ ಲಭ್ಯವಾದಂತಾಗುತ್ತದೆ. ಕರಾವಳಿಯ ಉದ್ದಕ್ಕೂ ಘಟ್ಟದಾಚೆಗೂ ಹಲವಾರು ಬಸ್ ಸಂಚಾರ ಮಾರ್ಗಗಳುಂಟು. ಕಾರವಾರದಿಂದ ಅಂಕೋಲದ ಮೂಲಕ ಯಲ್ಲಾಪುರ ಹುಬ್ಬಳ್ಳಿ ಧಾರವಾಡಗಳಿಗೂ ಕುಮಟದಿಂದ ಶಿರಸಿಗೂ ರಸ್ತೆ ಸೌಲಭ್ಯವಿದೆ. ಬೆಂಗಳೂರು–ಮೈಸೂರು–ಮಡಿಕೇರಿಗಳ ಮೂಲಕ ಸಾಗುವ ರಸ್ತೆಯೂ ಮುಖ್ಯ. ಹಾಸನ–ಮಂಗಳೂರು, ಮಂಗಳೂರು–ಚಿಕ್ಕಮಗಳೂರು ಮಾರ್ಗಗಳು ಇನ್ನೆರಡು. ಕುಂದಾಪುರ, ಉಡುಪಿ, ಪುತ್ತೂರು, ಮುಲ್ಕಿ, ಮಂಗಳೂರು ಮುಖ್ಯ ರಸ್ತೆಕೇಂದ್ರಗಳು. ಕುಂದಾಪುರ, ಉಡುಪಿ, ಪುತ್ತೂರು, ಮುಲ್ಕಿಗಳಿಂದ ಆಗುಂಬೆಯ ಮೂಲಕ ತೀರ್ಥಹಳ್ಳಿ, ಶಿವಮೊಗ್ಗ, ಕೊಪ್ಪ, ತರೀಕೆರೆಗಳಿಗೆ ಸಂಪರ್ಕವಿದೆ. ಘಟ್ಟದ ಆಚೀಚೆಯ ಸಾರಿಗೆ ಸಂಪರ್ಕ ಪ್ರಾಚೀನವಾದದ್ದು. ಮಂಗಳೂರಿನ ಹಿನ್ನಾಡು ರಸ್ತೆ ಸಮೃದ್ಧಪ್ರದೇಶ.

ಉತ್ತರ ದಕ್ಷಿಣ ಮಲೆನಾಡಿಗೂ ಮೈದಾನಕ್ಕೂ ನಡುವೆ ರೈಲ್ವೆ ಸಂಪರ್ಕವುಂಟು. ಬೆಂಗಳೂರು–ಪುಣೆ ರೈಲುಮಾರ್ಗದಲ್ಲಿ ಅರಸೀಕೆರೆಯಿಂದ ಒಂದು ಕವಲು ಹಾಸನದ ಮೂಲಕ ಮೈಸೂರಿಗೂ ಬೀರೂರಿನಿಂದ ಒಂದು ಕವಲು ಭದ್ರಾವತಿಯ ಮೂಲಕ ಶಿವಮೊಗ್ಗ–ತಾಳಗುಪ್ಪಗಳಿಗೂ ಸಾಗುತ್ತವೆ. ಬೆಂಗಳೂರು–ಪುಣೆ ಮಾರ್ಗ ಸಾಗುವುದು ಅರೆಮಲೆನಾಡಿನಲ್ಲಿ (ಧಾರವಾಡ–ಬೆಳಗಾಂವಿಗಳ ಮೂಲಕ). ಅಳಣಾವರದಿಂದ ದಾಂಡೇಲಿಗೂ ಲೋಂಡದಿಂದ ಕ್ಯಾಸಲ್‌ರಾಕಿಗೂ ಮರ್ಮಗೋವಕ್ಕೂ ಕವಲುಗಳಿವೆ. ಅರೆಮಲೆನಾಡಿನ ಒಂದು ತುಂಡಿನೊಡನೆ ಮೈಸೂರು–ಚಾಮರಾಜನಗರ ರೈಲ್ವೆ ಸಂಪರ್ಕವುಂಟು. ಒಟ್ಟಿನಲ್ಲಿ ಮಲೆನಾಡಿನ ಶೇ. 10 ಭಾಗ ಪ್ರದೇಶವನ್ನು ಮಾತ್ರ ರೈಲ್ವೆ ಮುಟ್ಟಲು ಸಾಧ್ಯವಾಗಿದೆಯೆನ್ನಬಹುದು. ಮಲೆನಾಡಿನ ಮೂಲಕ ಹಾದುಹೋಗುವ ರಸ್ತೆಗಳ ಬಗ್ಗೆ ಪ್ರಥಮವಾಗಿ ಗಮನ ಸೆಳೆಯುವ ಅಂಶವೆಂದರೆ ಪೂರ್ವ–ಪಶ್ಚಿಮವಾಗಿ ಹರಿಯುವ ಮಾರ್ಗಗಳ ಹೆಚ್ಚಳ. ಕರಾವಳಿ ಹೆದ್ದಾರಿಯಂತೆ ಮಲೆನಾಡು ಹೆದ್ದಾರಿಯೊಂದು ಬೆಳೆದಿಲ್ಲ. ಉತ್ತರ ಮಲೆನಾಡಿನಲ್ಲಿ ಯಲ್ಲಾಪುರ ಮತ್ತು ಶಿರಸಿ ಎರಡು ಮುಖ್ಯ ಕೇಂದ್ರಗಳು. ಯಲ್ಲಾಪುರಕ್ಕೂ ಕರಾವಳಿಯ ಅಂಕೋಲ–ಕಾರವಾರಗಳಿಗೂ ಸಂಪರ್ಕವುಂಟು. ಬೆಂಗಳೂರು–ಪುಣೆ ರೈಲುಮಾರ್ಗದೊಂದಿಗೆ ಈಶಾನ್ಯಾಭಿಮುಖವಾಗಿಯೂ ಹಾದಿ ಹರಿದಿದೆ. ಹಳಿಯಾಳ–ಅಳ್ನಾವರ ಜಂಕ್ಷನ್ ಮತ್ತು ಹುಬ್ಬಳ್ಳಿ ಜಂಕ್ಷನ್–ಧಾರವಾಡ ಮಾರ್ಗಗಳಿಗೂ ಸಂಪರ್ಕವಿದೆ. ರಸ್ತೆ ಮಾರ್ಗಗಳು, ಶಿರಸಿಯಿಂದ ಕುಮಟ, ಹಾನಗಲ್, ಹುಬ್ಬಳ್ಳಿ, ಬನವಾಸಿ, ಸಿದ್ಧಾಪುರಗಳಿಗೆ ಸುಲಭವಾಗಿ ಹೋಗಿ ಬರಬಹುದು. ಶಿರಸಿ ಒಂದು ಮುಖ್ಯ ವ್ಯಾಪಾರಸ್ಥಳ. ಮಲೆನಾಡಿ ಮೂಲಕ ಹಾಯ್ದು ಹೋಗುವ ಮೈಸೂರು–ಮಡಿಕೇರಿ–ಮಂಗಳೂರು, ಮಂಗಳೂರು–ಮೂಡಿಗೆರೆ–ಹಾಸನ, ಮಂಗಳೂರು–ಮೂಡಿಗೆರೆ–ಆಲೂರು–ಚಿಕ್ಕಮಗಳೂರು, ಚಿಕ್ಕಮಗಳೂರು–ಹಾಸನ–ಕಡೂರು, ಶಿವಮೊಗ್ಗ–ಭದ್ರಾವತಿ–ಚಿತ್ರದುರ್ಗ, ಭದ್ರಾವತಿ–ಕಡೂರು, ಕೊಪ್ಪ–ತರೀಕೆರೆ, ತೀರ್ಥಹಳ್ಳಿ–ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಮುಖ್ಯ ಕೇಂದ್ರಗಳು.




ಉತ್ತರ ಮೈದಾನದ ಬಹು ವಿಶಾಲ ಪ್ರದೇಶಗಳಲ್ಲಿ ರೈಲುಮಾರ್ಗ ವಿರಳ. ಹಿಂದಿನ ಬೊಂಬಾಯಿ ಕರ್ನಾಟಕದ ಭಾಗಕ್ಕೂ ಹೈದರಾಬಾದ್ ಕರ್ನಾಟಕಕ್ಕೂ ನಡುವೆ ರಸ್ತೆ ಸಂಪರ್ಕ ಅಲ್ಲಲ್ಲಿ ಕಡಿದಿರುವುದನ್ನು ಕಾಣಬಹುದು. ಸಾವಿರಾರು ಚ.ಕಿಮೀ ಪ್ರದೇಶಗಳಲ್ಲಿ ಒಳ್ಳೆಯ ರಸ್ತೆಗಳಿಲ್ಲ. ಗುಂತಕಲ್–ಷೋಲಾಪುರ–ಮುಂಬಯಿ ಮಾರ್ಗಮೊಂದೇ ಬ್ರಾಡ್‌ಗೇಜ್

ರೈಲುಮಾರ್ಗವಾಗಿತ್ತು. ಈಗ ಇತರ ಮಾರ್ಗಗಳೂ ಬ್ರಾಡ್‌ಗೇಜ್‌ಗೆ ಪರಿವರ್ತನೆಯಾಗಿದೆ, ಆಗುತ್ತಿವೆ. ಬೆಂಗಳೂರು–ಪುಣೆ, ಹುಬ್ಬಳ್ಳಿ–ಗುಂತಕಲ್ ಮತ್ತು ಗದಗ್–ಷೋಲಾಪುರದವು ಇತರ ಮಾರ್ಗಗಳು. ಹೊಸಪೇಟೆಯಿಂದ ಕೊಟ್ಟೂರಿಗೂ ಮ್ಯಾಂಗನೀಸ್ ಪ್ರದೇಶಕ್ಕೂ ರೈಲುಸಂಪರ್ಕವುಂಟು. ಈ ಮಾರ್ಗಕ್ಕೆ ಸಾಮೆಹಳ್ಳಿ ಕೊನೆ. ಮ್ಯಾಂಗನೀಸ್ ಅದಿರು ಮುಂಬಯಿ–ವಿಶಾಖಪಟ್ಟಣ–ಚೆನ್ನೈಗಳಿಗೆ ಸಾಗುತ್ತದೆ. ಹೊಸಪೇಟೆಯಿಂದ ಹುಬ್ಬಳ್ಳಿಗೆ ರೈಲಿನಲ್ಲೂ ಅಲ್ಲಿಂದ ಕಾರವಾರಕ್ಕೆ ರಸ್ತೆಯ ಮೂಲಕವೂ ಕಬ್ಬಿಣದ ಅದಿರಿನ ಹರಿವುಂಟು. ಅದಿರು ಸಾಗಣೆ ಮಂಗಳೂರು ಬಂದರಿನ ಇನ್ನೊಂದು ಗುರಿ.




ರಾಣೆಬೆನ್ನೂರಿನಿಂದ ನಿಪ್ಪಾಣಿ ಶೇಡಬಾಳಗಳವರೆಗೆ ರಸ್ತೆಗಳು ಬಲೆಯಂತೆ ಹೆಣೆದುಕೊಂಡಿವೆ. ಹುಬ್ಬಳ್ಳಿ, ಧಾರವಾಡ, ಬೆಳಗಾಂವಿ, ಸಂಕೇಶ್ವರ, ನಿಪ್ಪಾಣಿ, ಚಿಕ್ಕೋಡಿ, ಗೋಕಾಕ, ಬೈಲಹೊಂಗಲ, ಬಿಜಾಪುರ, ಬಾಗಲಕೋಟೆ, ಜಮಖಂಡಿ, ರಾಣೆಬೆನ್ನೂರು, ಯಲಬುರ್ಗ, ಮುದ್ದೇಬಿಹಾಳ, ಸಿಂದಗಿ ಮುಖ್ಯ ರಸ್ತೆಕೇಂದ್ರಗಳು, ರಾಯಚೂರು, ಗುಲ್ಬರ್ಗ, ಹುಮನಾಬಾದ್, ಬೀದರ್ ಇತರ ಕೆಲವು ಮುಖ್ಯ ಸ್ಥಳಗಳು.

ಬೆಂಗಳೂರಿನಿಂದ ನೆಲಮಂಗಲ ಮಾರ್ಗವಾಗಿ ತುಮಕೂರು ಚಿತ್ರದುರ್ಗಗಳಿಗೂ ಹಾಸನಕ್ಕೂ ರಸ್ತೆಗಳಿವೆ. ಬೆಂಗಳೂರು–ಮೈಸೂರು–ಗುಂಡ್ಲುಪೇಟೆ ರಸ್ತೆ ಇನ್ನೊಂದು ಇದು ನೀಲಗಿರಿಯ ಕಡೆಗೆ ಸಾಗುತ್ತದೆ. ಇದು ಒಂದು ಹೆದ್ದಾರಿ. ಚಿಕ್ಕಬಳ್ಳಾಪುರ. ದೊಡ್ಡಬಳ್ಳಾಪುರ, ಕೋಲಾರ ಚಿನ್ನದ ಗಣಿ ಇತರ ಕೇಂದ್ರಗಳು. ಸಾಮಾನ್ಯವಾಗಿ ಎಲ್ಲ ಜಿಲ್ಲಾ ಮುಖ್ಯಸ್ಥಳಗಳಿಗೆ ಮತ್ತು ದೊಡ್ಡ ಊರುಗಳಿಗೆ ರಸ್ತೆ ಸಂಪರ್ಕವುಂಟು.

ಕರ್ನಾಟಕದಲ್ಲಿ ಜಲಮಾರ್ಗಗಳು ಅಷ್ಟೊಂದು ಮಹತ್ವ ಪಡೆದಿಲ್ಲ. ಅದು ಕೆಲವೇ ಭಾಗಗಳಲ್ಲಿ ಕಾಣಬಹುದು. ಉದಾ: ಉತ್ತರ ಮತ್ತು ದಕ್ಷಿಣ ಕನ್ನಡ ಹಾಗು ಉಡುಪಿ ಜಿಲ್ಲೆಗಳು. ಇವು 312 ಕಿಮೀ ಉದ್ದದ ಒಳನಾಡಿನ ಜಲಮಾರ್ಗಗಳನ್ನು ಹೊಂದಿವೆ. ಸಮುದ್ರದ ಹಿನ್ನೀರು, ಖಾರಿಗಳು ಮತ್ತು ನದಿಗಳ ಕೆಲಮುಖ್ಯಭಾಗಗಳು ನೌಕಾಯಾನಕ್ಕೆ ಯೋಗ್ಯ.

ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಂತೆ ರಾಜ್ಯದಲ್ಲಿ 25 ಕ್ಕೂ ಹೆಚ್ಚು ಬಂದರುಗಳಿವೆ. ಉದಾ: ಮಂಗಳೂರು, ಮಲ್ಪೆ, ನವಮಂಗಳೂರು, ಹಂಗರಕಟ್ಟೆ, ಕುಂದಾಪುರ, ಬೈಂದೂರು, ಭಟ್ಕಳ, ಶಿರಾಲಿ, ಮುರ್ಡೇಶ್ವರ, ಮಂಕಿ, ಹೊನ್ನಾವರ ಕುಮಟ ತದಡಿ, ಗಂಗಾವಳಿ, ಅಂಕೋಲ, ಕಾರವಾರ, ಮಾಜಾಳಿ ಇತ್ಯಾದಿ. ನವಮಂಗಳೂರು ಭಾರತದ ಪ್ರಮುಖ ಬಂದರುಗಳಲ್ಲಿ ಒಂದಾಗಿದೆ. ಇದು ಕರ್ನಾಟಕದ ಹೆಬ್ಬಾಗಿಲು ಎಂದೇ ಪ್ರಸಿದ್ಧಿ.




ಕರ್ನಾಟಕದ ಕರಾವಳಿ ಮತ್ತು ಬಂದರುಗಳು

ಸಂಪರ್ಕ ಮಾಧ್ಯಮ: ಕರ್ನಾಟಕದಲ್ಲಿ ಅಂಚೆ, ದೂರವಾಣಿ, ಆಕಾಶವಾಣಿ, ದೂರದರ್ಶನ, ವೃತ್ತ ಪತ್ರಿಕೆ, ಗಣಕ, ಯಂತ್ರ, ಇಂಟರ್‌ನೆಟ್, ಈಮೇಲ್ ಮುಂತಾದ ಸಂಪರ್ಕ ಮಾಧ್ಯಮಗಳಿವೆ. ಮಾರ್ಚ್ 2004, 31ರಲ್ಲಿದ್ದಂತೆ ರಾಜ್ಯದಲ್ಲಿ 9909 ಅಂಚೆ ಕಛೇರಿಗಳಿವೆ. ಇವುಗಳ ಸೌಲಭ್ಯ ಸುಧಾರಿಸಿದೆಯಾದರೂ ಜನಸಂಖ್ಯೆಗೆ ತಕ್ಕಷ್ಟು ಅಂಚೆಕಛೇರಿಗಳಿಲ್ಲ. ಪ್ರತಿ 1 ಲಕ್ಷ ಜನ ಸಂಖ್ಯೆಗೆ 18 ಅಂಚೆ ಕಛೇರಿಗಳಿವೆ. ಬೆಂಗಳೂರು, ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕವೆಂದು 3 ಅಂಚೆ ವೃತ್ತಗಳಿವೆ. ಪ್ರತಿದಿನ ಸರಾಸರಿ 23.74 ಲಕ್ಷ ಟಪಾಲುಗಳು ವಿತರಣೆಯಾಗುತ್ತಿವೆ. ಅವುಗಳಲ್ಲಿ ಸು. ಅರ್ಧದಷ್ಟು ಬೆಂಗಳೂರು ನಗರವೊಂದರಲ್ಲೆ ಇವೆ. ಈ ನಗರದಲ್ಲಿ ದಿನಕ್ಕೆ ಮೂರು ಭಾರಿ ಟಪಾಲು ವಿತರಿಸುವ 17 ಮತ್ತು ಎರಡು ಬಾರಿ ವಿತರಿಸುವ 258 ಅಂಚೆ ಕಛೇರಿಗಳಿವೆ. ಇತ್ತೀಚೆಗೆ ಸ್ಪೀಡ್ ಪೋಸ್ಟ್ ವ್ಯವಸ್ಥೆ ರೂಢಿಗೆ ಬಂದಿದೆ. ರಾಜ್ಯಾದ್ಯಂತ 27,348 ಗಳಿಗಿಂತಲೂ ಹೆಚ್ಚು ಅಂಚೆ ಪೆಟ್ಟಿಗೆ ಸೌಲಭ್ಯವಿದೆ. ಏಳು ಸಂಜೆ ವೇಳೆಯ ಅಂಚೆ ಸೇವಾಕೇಂದ್ರಗಳಿವೆ. ಈಗ ಅಂಚೆ ಸೇವೆಗೆ ಪರ್ಯಾಯವಾದ ಖಾಸಗಿ ವ್ಯವಸ್ಥೆ ಕೊರಿಯಾರ್ ಸೇವೆ ಹೆಚ್ಚು ಪ್ರಚಲಿತವಾಗುತ್ತಿದೆ. ಇವು ನಗರ ಪ್ರದೇಶಗಳಿಗೆ ಮಾತ್ರ ಲಭ್ಯ. ಗ್ರಾಮಾಂತರ ಪ್ರದೇಶಗಳಿಗಿಲ್ಲ.

ದೂರವಾಣಿ ಸಂಪರ್ಕ: ಕರ್ನಾಟಕಕ್ಕೆ 19ನೆಯ ಶತಮಾನದ ಅಂತಿಮಾವಧಿಯಲ್ಲಿ ಪರಿಚಯ. 1881–82ರ ಸುಮಾರಿಗೆ ಬೆಂಗಳೂರಿನ ದಂಡು ಪ್ರದೇಶ ಹಾಗೂ 1889ರಲ್ಲಿ ಕಾಕನ ಕೋಟೆಯಲ್ಲಿ ನಡೆಯುತ್ತಿದ್ದ ಪ್ರಪಂಚವಿಖ್ಯಾತ ಖೆಡ್ಡಾ ಆಚರಣೆಯ ಸಲುವಾಗಿ ಈ ಸೌಲಭ್ಯ ಜಾರಿಗೆ ಬಂದಿತು. ಇಂದು ಅದು ರಾಜ್ಯದಲ್ಲಿ ಅವ್ಯಾಹಿತವಾಗಿ ಬೆಳೆದಿದೆ. ಮಾರ್ಚ್, 2004ರಲ್ಲಿದ್ದಂತೆ ರಾಜ್ಯದ ಒಟ್ಟು ದೂರವಾಣಿಗಳ ಸಂಖ್ಯೆ 27,52,060. ಸು. 2700ಕ್ಕೂ ಹೆಚ್ಚು ದೂರವಾಣಿ ವಿನಿಮಯ ಕೇಂದ್ರಗಳಿವೆ. ಇವುಗಳಲ್ಲಿ ಹೆಚ್ಚು ಕಂಪ್ಯೂಟರ್‌ವ್ಯವಸ್ಥೆಯಿಂದ ಸುಸಜ್ಜಿತವಾಗಿವೆ. ಶೀಘ್ರಗತಿಯ ನಗರೀಕರಣದ ಫಲವಾಗಿ

ಬೆಂಗಳೂರು ನಗರದಲ್ಲಿ ದೂರವಾಣಿ ಸೌಲಭ್ಯ ಹೆಚ್ಚು. ರಾಜ್ಯದ ಎಲ್ಲ ಜಿಲ್ಲಾಕೇಂದ್ರಗಳು, ತಾಲ್ಲೂಕು ಮತ್ತು ಹೋಬಳಿ ಹಾಗೂ ಪ್ರಮುಖ ಹಳ್ಳಿಗಳಿಗೂ ಎಸ್.ಟಿ.ಡಿ. ಮತ್ತು ಪಿ.ಸಿ.ಓ ವ್ಯವಸ್ಥೆ ಸೌಲಭ್ಯವಿದೆ. ಸಾರ್ವಜನಿಕರಿಗೆ ಸುಲಭ ದೂರವಾಣಿ ಸಂಪರ್ಕ ಕಲ್ಪಿಸುವ ಮೊಬೈಲ್‌ಗಳ ವ್ಯವಸ್ಥೆ ಈಗ ಹೆಚ್ಚು ಪ್ರಚಲಿತ. ಟೆಲೆಕ್ಸ್ ವ್ಯವಸ್ಥೆಯೂ ಉಂಟು. ಅನೇಕ ಖಾಸಗಿ ದೂರವಾಣಿ ಸಂಸ್ಥೆಗಳು ಕಾರ್ಯನಿರತವಾಗಿವೆ.

ಆಕಾಶವಾಣಿ: ಮೈಸೂರು ವಿಶ್ವವಿದ್ಯಾನಿಲಯದ ಮನಃಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಎಂ.ವಿ. ಗೋಪಾಲಸ್ವಾಮಿಯವರಿಂದ 1935ರಲ್ಲಿ ಪ್ರಪ್ರಥಮವಾಗಿ ಮೈಸೂರಿನಲ್ಲಿ ಪ್ರಾರಂಭವಾಗುವುದರೊಂದಿಗೆ ಕರ್ನಾಟಕಕ್ಕೆ ಆಕಾಶವಾಣಿ ಪರಿಚಯವಾಯಿತು. ಇಲ್ಲಿಯೇ ಭಾರತದಲ್ಲಿ ಆಕಾಶವಾಣಿ ಎಂಬ ಹೆಸರನ್ನು ಮೊದಲ ಬಾರಿಗೆ ಬಳಸಲಾಯಿತು. ಈಗ ರಾಜ್ಯದಲ್ಲಿ 9 ದೊಡ್ಡ ಪ್ರಮಾಣದ ಆಕಾಶವಾಣಿ ಪ್ರಸಾರ ಕೇಂದ್ರಗಳಿವೆ. ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗ, ಭದ್ರಾವತಿ, ಹಾಸನ, ಚಿತ್ರದುರ್ಗ, ಹೊಸಕೋಟೆ ಮತ್ತು ಮಂಗಳೂರು. ಬೆಂಗಳೂರು ಮತ್ತು ಧಾರವಾಡಗಳಲ್ಲಿ ತಲಾ ಎರಡು ಕೇಂದ್ರಗಳಿವೆ. ಈ ಎಲ್ಲ ಕೇಂದ್ರಗಳು ವಾರ್ತೆ, ಕೃಷಿ, ಕೈಗಾರಿಕೆ, ತೋಟಗಾರಿಕೆ, ಹೈನುಗಾರಿಕೆ, ಪರಿಸರ, ಆರೋಗ್ಯ, ಮನರಂಜನೆ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಬಿತ್ತರಿಸುತ್ತವೆ. ದೂರದರ್ಶನದ ಪ್ರಸರಣವು ಆಕಾಶವಾಣಿಯ ಪ್ರಾಮುಖ್ಯತೆ ಕಡಿಮೆ ಮಾಡಿದೆ.

ದೂರದರ್ಶನ: ಕರ್ನಾಟಕಕ್ಕೆ ವಿಳಂಬವಾಗಿ ಬಳಕೆಗೆ ಬಂದರೂ ಅತ್ಯಂತ ಪರಿಣಾಮಕಾರಿ ಸಮೂಹ ಸಂಪರ್ಕ ಮಾಧ್ಯಮ. ಹೆಚ್ಚು ಆಕರ್ಷಣೀಯ. ರಾಜ್ಯದಲ್ಲಿ ಮೊದಲು 03–09–1977ರಲ್ಲಿ ದೂರದರ್ಶನ ಪ್ರಸಾರ ಗುಲ್ಬರ್ಗದಲ್ಲಿ ಉದ್ಘಾಟನೆಯಾಯಿತು. ಅನಂತರ 01–11–1981ರಲ್ಲಿ ತತ್ಕಾಲಿಕ ದೂರದರ್ಶನ ಕೇಂದ್ರ ಬೆಂಗಳೂರಿನಲ್ಲಿ ಪ್ರಾರಂಭಗೊಂಡು ವಾರದ ಕೆಲವೇ ದಿನಗಳಲ್ಲಿ ಕಾರ್ಯಕ್ರಮ ಪ್ರಸಾರವಾಗುತ್ತಿದ್ದವು. 1988ರಿಂದ ಪೂರ್ಣಪ್ರಮಾಣದ ಪ್ರಸಾರ ಪ್ರಾರಂಭವಾಯಿತು. ಇಂದು ಇದೊಂದು ಪ್ರಾದೇಶಿಕ ಕಾರ್ಯಕ್ರಮಗಳನ್ನು ಬಿತ್ತರಿಸುವ ಸುಸಜ್ಜಿತ ದೂರದರ್ಶನ ಕೇಂದ್ರ. ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಕಾರ್ಯಕ್ರಮಗಳನ್ನು 'ಇನಸಾಟ್' ಉಪಗ್ರಹದ ಮೂಲಕ ಪ್ರಸಾರ ಮಾಡಲಾಗುತ್ತದೆ. ರಾಜ್ಯದಾದ್ಯಂತ 28 ಟ್ರಾನ್ಸ್ ಮೀ ಗಳಿದ್ದು ಅವು ಬೆಂಗಳೂರು ದೂರದರ್ಶನ ಕೇಂದ್ರದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ. ಬೆಂಗಳೂರು ದೂರದರ್ಶನ 'ಚಂದನ'ದಲ್ಲಿ ಪ್ರಾದೇಶಿಕ ಕನ್ನಡ ಕಾರ್ಯಕ್ರಮಗಳ ಪ್ರಸಾರವಾಗುತ್ತವೆ. ಕೇಬಲ್ ನೆಟ್‌ವರ್ಕ ಸೌಲಭ್ಯವಿರುವ ದೂರದರ್ಶನಗಳಲ್ಲಿ ಈಟಿವಿ, ಉದಯ ಟಿವಿ, ಉಷೆ ಟಿವಿ, ಯುಟಿವಿ ಚಾನೆಲ್‌ಗಳ ಮೂಲಕ ಕನ್ನಡ ಕಾರ್ಯಕ್ರಮಗಳೂ ಪ್ರಸಾರವಾಗುವುವು. ಜೊತೆಗೆ ವಿವಿಧ ಭಾಷಾ ವಿವಿಧ ದೇಶಗಳ ಕಾರ್ಯಕ್ರಮಗಳೂ ಲಭ್ಯವಿದೆ.

ಪತ್ರಿಕೋದ್ಯಮ: ಕರ್ನಾಟಕದಲ್ಲಿ ಪತ್ರಿಕೋದ್ಯಮವು, ಪ್ರಥಮ ಕನ್ನಡ ವೃತ್ತಪತ್ರಿಕೆ ಮಂಗಳೂರ ಸಮಾಚಾರ 1843ರಲ್ಲಿ ಮಂಗಳೂರಿನಲ್ಲಿ ಪ್ರಾರಂಭಗೊಂಡಿತು. ಈ ವೃತ್ತಪತ್ರಿಕೆ ಸಂಪಾದಕ ಬಾಸೆಲ್ ಮಿಷನ್ ಸಂಸ್ಥೆಯ ಹರ್ಮನ್ ಮೊಗ್ಲಿಂಗ್. ಕರಾವಳಿಯಿಂದ ಆರಂಭಗೊಂಡ ರಾಜ್ಯದ ಪತ್ರಿಕೋದ್ಯಮ ತರುವಾಯ ಧಾರವಾಡ, ಮೈಸೂರು, ಬೆಂಗಳೂರುಗಳಲ್ಲಿದ್ದು, 19ನೆಯ ಶತಮಾನದ ಅಂತ್ಯದವೇಳೆಗೆ ವಿವಿಧ ಕೇಂದ್ರಗಳಿಂದ ವೃತ್ತ ಪತ್ರಿಕೆಗಳು ಪ್ರಾರಂಭಗೊಂಡವು. ಭಾರತೀಯ ಕಾಂಗ್ರೆಸ್ ಮತ್ತು ಮಹಾತ್ಮ ಗಾಂಧಿಯವರು ಸ್ವತಂತ್ರ ಚಳವಳಿ ಪ್ರವೇಶ ಇಡೀ ದೇಶದ ಪತ್ರಿಕೋದ್ಯಮದ ಮೇಲೆ ಪ್ರಭಾವ ಬೀರಿದವು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕರ್ನಾಟಕದ ಪತ್ರಿಕೋದ್ಯದಲ್ಲಿ ಸಾಕಷ್ಟು ಪೈಪೋಟಿಯಿದೆ. ಮುದ್ರಣ ಕ್ಷೇತ್ರದಲ್ಲಾದ ಕ್ರಾಂತಿಕಾರಕ ಬದಲಾವಣೆ, ಗಣಕಯಂತ್ರದ ಬಳಕೆ, ಕೃತಕ ಉಪಗ್ರಹ, ಇಂಟರ್‌ನೆಟ್ ವ್ಯವಸ್ಥೆ ಮುಂತಾದವು ಕರ್ನಾಟಕದ ಪತ್ರಿಕೋದ್ಯಮದಲ್ಲಿ ವಿಸ್ಮಯ ಲೋಕವನ್ನೇ ನಿರ್ಮಿಸಿವೆ. ಅತ್ಯಧಿಕ ಸಂಖ್ಯೆಯ ಕನ್ನಡ ಮತ್ತು ಇತರ ಭಾಷಾ ಪತ್ರಿಕೆಗಳು ರಾಜ್ಯದ ರಾಜಧಾನಿ ಹಾಗೂ ಭಾರತದ ಬೃಹನ್ನಗರವಾದ ಬೆಂಗಳೂರಿನಿಂದ ಪ್ರಕಟವಾಗುತ್ತವೆ. ಮೈಸೂರು, ಮಂಗಳೂರು, ಧಾರವಾಡ ಹಾಗೂ ಬೆಳಗಾಂವಿಗಳು ಇತರ ಪ್ರಮುಖ ಪತ್ರಿಕೋದ್ಯಮ ಕೇಂದ್ರಗಳು.

ತ್ರಿಶ್ರೇಣೀಯ ಪಂಚಾಯಿತಿ ರಾಜ್ಯ ವ್ಯವಸ್ಥೆ ರಾಜ್ಯದಲ್ಲಿ ಜಾರಿಗೆ ಬರುತ್ತಿದೆ. ರಾಜ್ಯದಲ್ಲಿ 5705 ಪಂಚಾಯಿತಿಗಳೂ 176 ತಾಲ್ಲೂಕು ಬೋರ್ಡುಗಳೂ ಉಂಟು. ಜಿಲ್ಲಾಭಿವೃದ್ಧಿ ಮಂಡಳಿಗಳ ಸಂಖ್ಯೆ 27. ನೂತನ ಕಾಯಿದೆಯ ಅಡಿಯಲ್ಲಿ ಈ ಸಲಹಾಮಂಡಲಿಗಳ ಬದಲು ಜಿಲ್ಲಾ ಪರಿಷತ್ತುಗಳನ್ನು ಸ್ಥಾಪಿಸಲಾಗಿದೆ.

ಕರ್ನಾಟಕದಲ್ಲಿ 28,058 ಹಾಸಿಗೆಗಳಿರುವ 177 ಸರ್ಕಾರಿ ಆಸ್ಪತ್ರೆಗಳೂ 1679 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದು ಅವುಗಳಲ್ಲಿ ರೋಗಿಗಳ ಹಾಸಿಗೆ ಸಂಖ್ಯೆ 17,828, ಪ್ರಾಥಮಿಕ ಆರೋಗ್ಯಗಳ ಘಟಕಗಳು 578, ಅವುಗಳಲ್ಲಿ ರೋಗಿ ಹಾಸಿಗೆ ಸಂಖ್ಯೆ 1229, ಭಾರತೀಯ ವೈದ್ಯಪದ್ಧತಿ ಆಸ್ಪತ್ರೆಗಳು 121, ಈ ಆಸ್ಪತ್ರೆಗಳಲ್ಲಿ ಹಾಸಿಗೆ ಸಂಖ್ಯೆ 8143, ಕುಟುಂಬಕಲ್ಯಾಣ ಕೇಂದ್ರಗಳು 8143, ಸಂತಾನ ಹರಣ ಶಸ್ತ್ರ ಚಿಕಿತ್ಸೆಯಾದವರ ಸಂಖ್ಯೆ 3.77 ಲಕ್ಷ (2003–04), ಕುಟುಂಬ ಕಲ್ಯಾಣ ಉಪ ಕೇಂದ್ರಗಳು 8143, ಔಷಧಿ ಅಂಗಡಿಗಳು 14,566, ಕುಷ್ಠರೋಗ ಚಿಕಿತ್ಸಾ ಘಟಕಗಳು 12, ಜಿಲ್ಲಾ ವೈದ್ಯಕೀಯ ಪ್ರಯೋಗಾಲಯಗಳು 12, ಯುನಾನಿ ಔಷಧಾಲಯಗಳು 71, ಹೋಮಿಯೋಪತಿ ಔಷಧಾಲಯಗಳು 10, ರಾಷ್ಟ್ರೀಯ ಮಲೇರಿಯಾ ನಿರ್ಮೂಲಯೋಜನೆ, ರಾಷ್ಟ್ರೀಯ ಫಿಲೇರಿಯ ನಿಯಂತ್ರಣ ಯೋಜನೆ, ರಾಷ್ಟ್ರೀಯ ಸಿಡುಬು ನಿರ್ಮೂಲ ಯೋಜನೆ, ಕುಷ್ಠರೋಗ ನಿಯಂತ್ರಣ ಯೋಜನೆ, ಬಿ.ಸಿ.ಜಿ. ವ್ಯಾಕ್ಸಿನೇಷನ್ ಯೋಜನೆ–ಇವು ರಾಜ್ಯದಲ್ಲಿ ಜಾರಿಗೆ ಬಂದಿರುವ ಕೆಲವು ಮುಖ್ಯ ಯೋಜನೆಗಳು.

ರಾಜ್ಯದಲ್ಲಿ 4 ಸರ್ಕಾರಿ ವೈದ್ಯಕೀಯ ಕಾಲೇಜುಗಳೂ 19 ಖಾಸಗಿ ವೈದ್ಯಕೀಯ ಕಾಲೇಜುಗಳೂ ಇವೆ (2004). ಭಾರತೀಯ ವೈದ್ಯಪದ್ಧತಿ ಕಾಲೇಜುಗಳು 66, ದಂತವೈದ್ಯಕಾಲೇಜುಗಳು 42, ವೈದ್ಯ ವಿದ್ಯಾಭ್ಯಾಸದ ನಾನಾ ಶಾಖೆಗಳಲ್ಲಿ ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಗಳಿವೆ. ಮೈಸೂರಿನ ಅಂಗವಿಕಲರ ಸಂಸ್ಥೆ, ಬೆಂಗಳೂರಿನ ದಂತವೈದ್ಯ ಕಾಲೇಜು, ಅಖಿಲಭಾರತ ಮಾನಸಿಕ ಆರೋಗ್ಯ ಸಂಸ್ಥೆ ಇವು ಇನ್ನು ಕೆಲವು ಮುಖ್ಯ ಸಂಸ್ಥೆಗಳು.

6 ರಿಂದ 11ರ ವರೆಗಿನ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವುಂಟು. ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲೂ ಪ್ರಾಥಮಿಕದಿಂದ ಪ್ರೌಢ ಶಿಕ್ಷಣದವರೆಗೆ ಉಚಿತ. ರಾಜ್ಯದಲ್ಲಿ 9173 ಪ್ರೌಢ ಶಾಲೆ ಮತ್ತು 2554 ಪದವಿಪೂರ್ವ ಕಾಲೇಜುಗಳಿವೆ. ಈ ಯೋಜನೆಯೊಳಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಸು. 11 ಲಕ್ಷ. ರಾಜ್ಯದಲ್ಲಿ ಒಟ್ಟು 18 ವಿಶ್ವವಿದ್ಯಾನಿಲಯಗಳಿವೆ, ಇವುಗಳಲ್ಲಿ 6 ಸಾಮಾನ್ಯ, 2 ಕೃಷಿ, 1 ಕನ್ನಡ, 1 ಮುಕ್ತ, 1 ತಾಂತ್ರಿಕ, 1 ವೈದ್ಯಕೀಯ 3 ಮಹಿಳಾ ಹಾಗೂ 3 ಇತರೆ ವಿಶ್ವವಿದ್ಯಾನಿಲಯಗಳಾಗಿವೆ. ರಾಜ್ಯದಲ್ಲಿ (2001–02) 1000 ಪದವಿ ಕಾಲೇಜುಗಳಿವೆ. ಅವುಗಳಲ್ಲಿ 35 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇತರೆ ಕಾಲೇಜುಗಳ ಸಂಖ್ಯೆಗಳು ಹೀಗಿವೆ: ಎಂಜಿನಿಯರಿಂಗ್ ಕಾಲೇಜುಗಳು 122; ವೈದ್ಯಕೀಯ ಕಾಲೇಜುಗಳು 32; ನ್ಯಾಯಶಿಕ್ಷಣ ಕಾಲೇಜುಗಳು 67, ವಾಣಿಜ್ಯ ಕಾಲೇಜುಗಳು 13, ಕೃಷಿ ಕಾಲೇಜುಗಳು 2, ಪಶುವೈದ್ಯ ಕಾಲೇಜು 1, ವಿವಿಧ ತಾಂತ್ರಿಕ ಶಿಕ್ಷಣಾಲಯಗಳು (ಪಾಲಿಟೆಕ್ನಿಕ್) 184, ಶಿಕ್ಷಣ ತರಬೇತಿ ಕಾಲೇಜುಗಳು 19, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳು 916, ಫಾರ್ಮಸಿ ಕಾಲೇಜು 1, ಪ್ರಾಚ್ಯ ಶಿಕ್ಷಣ ಸಂಸ್ಥೆಗಳು 5, ಶರೀರ ಶಿಕ್ಷಣ ಕಾಲೇಜು 1, ಲಲಿತಕಲೆಗಳ ಕಾಲೇಜು 1, ಸಮುದ್ರ ಉತ್ಪನ್ನ ಮತ್ತು ಮತ್ಸ್ಯೋದ್ಯಮ ಶಿಕ್ಷಣ ಸಂಸ್ಥೆ 1, ವಾಕ್‌ಶ್ರವಣ ಚಿಕಿತ್ಸಾ ಸಂಸ್ಥೆ 1, ವಿದ್ಯಾರ್ಥಿಗಳ ಸಂಖ್ಯೆ: ಸಾಮಾನ್ಯ ಶಿಕ್ಷಣ ಕಾಲೇಜುಗಳಲ್ಲಿ 3523 ಸಾವಿರ, ಎಂಜಿನಿಯರಿಂಗ್ 42,729, ವೈದ್ಯಕೀಯ 3,955, ದಂತವೈದ್ಯಕೀಯ 2,800 ವಿದ್ಯಾರ್ಥಿಗಳು ಒಟ್ಟು ಶಾಲೆಗಳ ಸಂಖ್ಯೆ 54,520 ವಿದ್ಯಾರ್ಥಿಗಳು 78 ಸಾವಿರ.

ಮೈಸೂರಿನಲ್ಲಿ ಒಂದು ಪ್ರಾದೇಶಿಕ ಶಿಕ್ಷಣ ಕಾಲೇಜಿದೆ. ಇತರ ಸಂಸ್ಥೆಗಳು : ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆ, ಬೆಂಗಳೂರು; ಗ್ಯಾಸ್ ಟರ್ಬೈನ್ ಸಂಶೋಧನ ಪ್ರತಿಷ್ಠಾನ, ಬೆಂಗಳೂರು; ರಾಷ್ಟ್ರೀಯ ಏರೋನಾಟಿಕಲ್ ಪ್ರಯೋಗಾಲಯ, ಬೆಂಗಳೂರು; ರಾಷ್ಟ್ರೀಯ ಕ್ಷಯರೋಗ ಸಂಸ್ಥೆ, ಬೆಂಗಳೂರು ; ಕೇಂದ್ರೀಯ ಆಹಾರ ಸಂಶೋಧನಾಲಯ, ಮೈಸೂರು.

ಜನಸಂಖ್ಯೆ, ಮುಖ್ಯ ಅಂಶಗಳು : ಕರ್ನಾಟಕದ ಜನಸಂಖ್ಯೆ 52,850,562 (2001). ಇವರ ಪೈಕಿ 34,889,033 ಜನ (ಶೇ.66.01) ಗ್ರಾಮ ವಾಸಿಗಳು; 17,961,529 ಮಂದಿ (ಶೇ. 33.98) ಪಟ್ಟಣವಾಸಿಗಳು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 26,898,918 ಪುರುಷರು ಮತ್ತು 25,951,644 ಮಹಿಳೆಯರು 2001ರಲ್ಲಿದ್ದಂತೆ, ಇಡೀ ಭಾರತದ ಶೇ. 6.5ರಷ್ಟು ವಿಸ್ತೀರ್ಣವಿರುವ ರಾಜ್ಯದಲ್ಲಿ ಒಟ್ಟು ರಾಷ್ಟ್ರದ ಜನಸಂಖ್ಯೆಯ ಶೇ.5.13ರಷ್ಟು ಜನ ಇದ್ದಾರೆ (2001).

ರಾಜ್ಯದ ಒಟ್ಟು 29 ಜಿಲ್ಲೆಗಳಲ್ಲಿ ಬೆಂಗಳೂರು ಜನಭರಿತವಾದುದು. (65.37ಲಕ್ಷ). ಇದಕ್ಕೆ ಪ್ರತಿಯಾಗಿ ಕೊಡಗು ಅತಿ ಕಡಿಮೆ ಜನಸಂಖ್ಯೆಯುಳ್ಳ ಜಿಲ್ಲೆ (5.48 ಲಕ್ಷ). ರಾಜ್ಯದಲ್ಲಿ 1901 ರಿಂದ 2001ರವರೆಗೆ 39.7 ಮಿಲಿಯನ್‌ಗಳಷ್ಟು ಜನಸಂಖ್ಯೆ ಹೆಚ್ಚುವರಿಯಾಗಿದೆ. 1991–2001ರ ರಾಜ್ಯದ ಜನಸಂಖ್ಯಾ ಬೆಳವಣಿಗೆ ದರ ಶೇ 17.25 ಆಗಿತ್ತು. 2010ರವೇಳೆಗೆ ರಾಜ್ಯದ ಜನಸಂಖ್ಯೆ ಸು. 61.5 ದಶಲಕ್ಷಗಳಿಗೆ ಹೆಚ್ಚಾಗುವುದೆಂದು ಅಂದಾಜು ಮಾಡಲಾಗಿದೆ.

ಜನಸಾಂದ್ರತೆ: 2001ರ ಜನಗಣತಿಯಂತೆ ರಾಜ್ಯದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀಗೆ 275 ಜನರು. ಭಾರತದ ಸರಾಸರಿಗಿಂತ ಕಡಿಮೆ. ಜಿಲ್ಲೆಗಳಲ್ಲಿ ಬೆಂಗಳೂರು ಅತ್ಯಧಿಕ ಜನಸಾಂದ್ರತೆ (2979) ವುಳ್ಳದ್ದು. ದಕ್ಷಿಣ ಕನ್ನಡ (416) ಮತ್ತು ಮೈಸೂರು (383) ಜಿಲ್ಲೆಗಳು ಅನುಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿವೆ. ಇದಕ್ಕೆ ಪ್ರತಿಯಾಗಿ ಉತ್ತರಕನ್ನಡ ಅತಿ ಕಡಿಮೆ (132) ಜನಸಾಂದ್ರತೆಯುಳ್ಳ ಜಿಲ್ಲೆ. ತರುವಾಯ ಕೊಡಗು (133) ಮತ್ತು ಚಿಕ್ಕಮಗಳೂರು (158) ಜಿಲ್ಲೆಗಳು ಬರುತ್ತವೆ.

ನಗರ–ಗ್ರಾಮೀಣ ಜನಸಂಖ್ಯೆ: ಕರ್ನಾಟಕ ಹಳ್ಳಿ ಪ್ರಧಾನ ರಾಜ್ಯ. ಒಟ್ಟು ಜನಸಂಖ್ಯೆಯಲ್ಲಿ ಶೇ. 66 ಜನರು ಗ್ರಾಮಾಂತರ ಪ್ರದೇಶಗಳಲ್ಲಿಯೂ ಉಳಿದ ಶೇ. 44 ರಷ್ಟು ನಗರಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ ನಗರ ಜನಸಂಖ್ಯೆಯ ಪ್ರಮಾಣ ಭಾರತದ ಸರಾಸರಿಗಿಂತ ಹೆಚ್ಚು. ಬೆಂಗಳೂರು ರಾಜ್ಯದಲ್ಲೆ ಅತಿ ಹೆಚ್ಚು ನಗರ ಜನ ಸಂಖ್ಯೆಯುಳ್ಳ ಜಿಲ್ಲೆ. ಇದು ರಾಜ್ಯದ ಒಟ್ಟು ನಗರ ಜನಸಂಖ್ಯೆಯಲ್ಲಿ ಶೇ. 32.1 ರಷ್ಟನ್ನು ಹೊಂದಿದೆ. ರಾಜ್ಯದ ರಾಜಧಾನಿ, ದೇಶದ ಮಹಾನಗರಗಳಲ್ಲಿ ಒಂದಾಗಿದ್ದು ಕೈಗಾರಿಕಾ ಕೇಂದ್ರವಾಗಿರುವುದರಿಂದ ನಗರ ಜನಸಂಖ್ಯೆ ಅತ್ಯಧಿಕ. ಬೆಂಗಳೂರು ತರುವಾಯ ಬೆಳಗಾವಿ, ಮೈಸೂರು ಮತ್ತು ಧಾರವಾಡಗಳು ಅಧಿಕ ನಗರ ಜನಸಂಖ್ಯೆಯುಳ್ಳವು. ಕೊಡಗು ಅತಿ ಕಡಿಮೆ ನಗರ ಜನಸಂಖ್ಯೆಯುಳ್ಳ ಜಿಲ್ಲೆ. ಇದರ ನಂತರ ಚಾಮರಾಜನಗರ, ಕೊಪ್ಪಳ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ನಗರ ಜನಸಂಖ್ಯೆ ಕಡಿಮೆ. ರಾಜ್ಯದಲ್ಲಿ 1901ರಲ್ಲಿ ನಗರ ಜನಸಂಖ್ಯೆ ಶೇ. 12.6ರಷ್ಟು ಮಾತ್ರ. ಈಗ ಈ ಪ್ರಮಾಣವು ಹೆಚ್ಚಾಗಿದೆ.

**ಕರ್ನಾಟಕದ ಹತ್ತು ಜನಭರಿತ ನಗರಗಳು (2001)**

| | ನಗರ | ಜನಸಂಖ್ಯೆ |
|---|---|---|
| 1. | ಬೆಂಗಳೂರು | 56,86,844 |
| 2. | ಮೈಸೂರು | 7,85,800 |
| 3. | ಹುಬ್ಬಳಿ–ಧಾರವಾಡ | 7,86,018 |
| 4. | ಮಂಗಳೂರು | 6,01,079 |
| 5. | ಬೆಳಗಾಂವಿ | 4,56,999 |
| 6. | ಗುಲ್ಬರ್ಗ | 4,30,265 |
| 7. | ದಾವಣಗೆರೆ | 3,64,523 |
| 8. | ಬಳ್ಳಾರಿ | 3,16,766 |
| 9. | ಬಿಜಾಪುರ | 2,53,891 |
| 10. | ಶಿವಮೊಗ್ಗ | 2,74,352 |

ಲಿಂಗಾನುಪಾತ: 2001 ಜನಗಣತಿಯಂತೆ ಕರ್ನಾಟಕದಲ್ಲಿ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ 964 ಮಹಿಳೆಯರು. ಇದು ಭಾರತದ ಸರಾಸರಿಗಿಂತ (933) ಹೆಚ್ಚು. ಉಡುಪಿ, ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಹೆಚ್ಚು. ಉಡುಪಿ ಜಿಲ್ಲೆಯಲ್ಲಿ ಪ್ರತಿ ಸಾವಿರ ಪುರುಷರಿಗೆ 1127 ಮಹಿಳೆಯರಿದ್ದಾರೆ. ಇದಕ್ಕೆ ಪ್ರತಿಯಾಗಿ ಬೆಂಗಳೂರು ಜಿಲ್ಲೆಯಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ. ಅಂದರೆ ಪ್ರತಿ ಸಾವಿರ ಪುರುಷರಿಗೆ 906 ಮಹಿಳೆಯರಿದ್ದಾರೆ.

ಸಾಕ್ಷರತೆ: ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 33 ರಷ್ಟು ಜನರು ಅನಕ್ಷರಸ್ಥರು (2001) ಇವರಲ್ಲಿ ಶೇ. 23.71 ರಷ್ಟು ಪುರುಷರು ಮತ್ತು ಶೇ. 42.55 ರಷ್ಟು ಮಹಿಳೆಯರು. ರಾಜ್ಯದ ಒಟ್ಟು ಸಾಕ್ಷರತೆ ಶೇ. 67. ಸಾಕ್ಷರತೆ ಗ್ರಾಮೀಣ ಜನರಲ್ಲಿ (ಶೇ. 60) ಕಡಿಮೆ ಮತ್ತು ನಗರಗಳಲ್ಲಿ ಹೆಚ್ಚು (ಶೇ. 81). ಒಟ್ಟಾರೆ ಭಾರತದ ಸರಾಸರಿಗಿಂತ (ಶೇ. 65.4) ಉತ್ತಮವಾಗಿದೆ. ಸಾಕ್ಷರತೆಯಲ್ಲಿ ಬೆಂಗಳೂರು ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಈ ಹಿಂದೆ ಮೊದಲ ಸ್ಥಾನ ಹೊಂದಿದ್ದ ದ.ಕನ್ನಡವು 2ನೇ ಸ್ಥಾನದಲ್ಲಿದೆ. ಉಡುಪಿಗೆ 3ನೇ ಸ್ಥಾನ. ಇದಕ್ಕೆ ಪ್ರತಿಯಾಗಿ ರಾಯಚೂರು ಅತಿ ಕಡಿಮೆ ಸಾಕ್ಷರತೆಯುಳ್ಳ ಜಿಲ್ಲೆ. ಚಾಮರಾಜನಗರ, ಕೊಪ್ಪಳ ಮತ್ತು ಬಿಜಾಪುರ ಜಿಲ್ಲೆಗಳಲ್ಲಿಯೂ ಸಾಕ್ಷರತೆ ದರ ಕಡಿಮೆ.

ಸ್ತ್ರೀ–ಪುರುಷರ ಸಾಕ್ಷರತೆ ಗಮನಿಸಿದಾಗ ಸ್ತ್ರೀಯರಿಗಿಂತ ಪುರುಷರಲ್ಲಿ ಸಾಕ್ಷರರು ಹೆಚ್ಚು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 76.3 ಭಾಗ ಪುರುಷರು ಮತ್ತು ಶೇ. 57.45 ಭಾಗ ಮಹಿಳೆಯರು ಸಾಕ್ಷರರಾಗಿರುತ್ತಾರೆ. ದ.ಕನ್ನಡದಲ್ಲಿ ಪುರುಷ ಸಾಕ್ಷರರು ಹೆಚ್ಚಾಗಿದ್ದರೆ ರಾಯಚೂರಿನಲ್ಲಿ ಕಡಿಮೆ. ಬೆಂಗಳೂರು ಜಿಲ್ಲೆಯ ಮಹಿಳಾ ಸಾಕ್ಷರರ ಪ್ರಮಾಣ ಹೆಚ್ಚು. ಇದಕ್ಕೆ ಪ್ರತಿಯಾಗಿ ಚಾಮರಾಜನಗರ, ಗುಲ್ಬರ್ಗ ಮತ್ತು ಕೊಪ್ಪಳಗಳಲ್ಲಿ ಕಡಿಮೆ. ಇದೇ ರೀತಿ ನಗರ–ಗ್ರಾಮೀಣರ ಸಾಕ್ಷರತೆ ನೋಡಿದಾಗ ಸ್ವಾಭಾವಿಕವಾಗಿ ನಗರಗಳಲ್ಲಿ ಸಾಕ್ಷರತೆ ಹೆಚ್ಚು. ಜಿಲ್ಲಾ ನಗರಗಳ ಸಾಕ್ಷರತೆಯನ್ನು ತೆಗೆದುಕೊಂಡರೆ ಕೊಡಗಿನಲ್ಲಿ ಹೆಚ್ಚು ಮತ್ತು ರಾಯಚೂರು ಜಿಲ್ಲೆಯಲ್ಲಿ ಅತಿ ಕಡಿಮೆ.

ವಯೋರಚನೆ: ರಾಜ್ಯದ ವಯೋರಚನೆಯಲ್ಲಿ ಮಕ್ಕಳ ಪ್ರಮಾಣ ಹೆಚ್ಚು. ಅಂದರೆ ರಾಜ್ಯದ ಜನಸಂಖ್ಯೆಯಲ್ಲಿ 0–14 ವಯಸ್ಸಿನವರು ಶೇ. 24.6 ರಷ್ಟು ಬಾಲಕಬಾಲಕಿಯರು. ಜನಸಂಖ್ಯೆಯಲ್ಲಿ ಶೇ. 6.9 ಭಾಗ ಅರವತ್ತು ಮತ್ತು ಅದಕ್ಕಿಂತಲೂ ಹೆಚ್ಚು ವಯಸ್ಸಿನ ವೃದ್ಧರು. ಉಳಿವರು 15 ರಿಂದ 60 ವಯಸ್ಸಿನವರು. ಇವರನ್ನು ದುಡಿಯುವ ವರ್ಗವೆಂದು ಪರಿಗಣಿಸಲಾಗಿದೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇ. 56 ರಷ್ಟು ದುಡಿಮೆ ಮಾಡುವರಾಗಿದ್ದು, ಅವರನ್ನಾಧರಿಸಿ ಶೇ. 31.5ರಷ್ಟು ಮಕ್ಕಳು ಮತ್ತು ವೃದ್ಧರು ಬದುಕುವರು.

ಕೆಲಸಗಾರರು: ರಾಜ್ಯದ ಜನಸಂಖ್ಯೆಯಲ್ಲಿ ಉದ್ಯೋಗಸ್ಥರು ಮತ್ತು ಉದ್ಯೋಗ ರಹಿತರೆಂದು ಎರಡು ವರ್ಗಗಳಿವೆ. ಮೊದಲ ವರ್ಗದವರು ಉತ್ಪಾದನೆ ಮತ್ತು ಸೇವಾ ಕಾರ್ಯಗಳಲ್ಲಿ ತೊಡಗಿದ ಕೆಲಸಗಾರರು. 2001 ಜನಗಣತಿಯಂತೆ 23,534, 791 ಜನರು ದುಡಿಯುವರು ಹಾಗೂ 29,315,771 ಜನರು ಕೆಲಸಗಾರರಲ್ಲದವರು. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇ. 55 ಭಾಗ ಉದ್ಯೋಗಸ್ಥರಾಗಿರುತ್ತಾರೆ. ದುಡಿಯುವರಲ್ಲಿ 19,364,759 (82.4) ಪೂರ್ಣಕಾಲಿಕ ಕೆಲಸಗಾರರು ಮತ್ತು 41,70,032 (17.6) ಜನರು ಅರೆಕಾಲಿಕ ಕೆಲಸಗಾರರು. ಇವರು ಆರು ತಿಂಗಳಿಗಿಂತ ಕಡಿಮೆ ಕಾಲ ಸೇವೆಯಲ್ಲಿರುವಂತಹವರು.

ರಾಜ್ಯದಲ್ಲಿ ಒಟ್ಟು 68.8 ಲಕ್ಷ ಕೃಷಿಗಾರರು ಮತ್ತು 62.3 ಲಕ್ಷ ಕೃಷಿಕಾರ್ಮಿಕರಿದ್ದಾರೆ ಒಟ್ಟು ಕೆಲಸಗಾರರಲ್ಲಿ ಶೇ. 60 ಭಾಗ ಕೃಷಿವಲಯದಲ್ಲಿ ದುಡಿಯುವವರು.

ಧರ್ಮ: ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ (ಶೇ. 83.86) ಹಿಂದು ಧರ್ಮಿಯರು ಇಸ್ಲಾಮರು ಎರಡನೇ (ಶೇ. 12.23) ಸ್ಥಾನ ಮತ್ತು ಕ್ರೈಸ್ತರು (ಶೇ.1.9) ಮೂರನೇ ಸ್ಥಾನದಲ್ಲಿರುವರು. ಇನ್ನುಳಿದವರು ಜೈನರು, ಬೌದ್ಧರು, ಸಿಕ್ಕರು ಹಾಗೂ ಇತರ ಧರ್ಮಿಯರು. ಜೊತೆಗೆ ರಾಜ್ಯದಲ್ಲಿ ವಿವಿಧ ಜಾತಿ ಮತ್ತು ಉಪಜಾತಿಗಳಿವೆ.

**ಧರ್ಮಕ್ಕನುಸಾರ ಜನಸಂಖ್ಯೆ**

| ಧರ್ಮ | ಜನಸಂಖ್ಯೆ | ಶೇಕಡಪ್ರಮಾಣ |
|---|---|---|
| ಹಿಂದು | 44,321,279 | 83.86 |
| ಇಸ್ಲಾಮ್ | 6,463,127 | 12.23 |
| ಕ್ರೈಸ್ತ | 1,009,164 | 1.91 |
| ಜೈನ | 412,659 | 0.78 |
| ಇತರೆ | 644,333 | 1.22 |

ಕರ್ನಾಟಕದಲ್ಲಿ ಸು. 166 ಮಾತೃಭಾಷೆಗಳಿದ್ದು ಬಹುಭಾಷಾ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಕನ್ನಡ ಪ್ರಮುಖ ಹಾಗೂ ಮಾತೃ ಭಾಷೆ. ರಾಷ್ಟ್ರೀಯ ಅಧಿಕೃತ ಭಾಷೆಗಳಲ್ಲಿ ಒಂದಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 68ರಷ್ಟು ಜನರು ಕನ್ನಡ ಮಾತನಾಡುವರು. ಕನ್ನಡದ ತರುವಾಯ ಉರ್ದು ಎರಡನೇಯದು. (ಶೇ. 9) ಇದು ಭಾಷೆ ಮತ್ತು ಧರ್ಮಗಳ ಸಂಬಂಧ ಕಲ್ಪಿಸುತ್ತದೆ. ಮೂರನೆಯಸ್ಥಾನ ತೆಲುಗುಗೆ ಸೇರುತ್ತದೆ. (ಶೇ. 8.21) ಮರಾಠಿ, ತುಳು, ತಮಿಳು, ಕೊಂಕಣಿ, ಮಲೆಯಾಳಂ, ಮತ್ತು ಲಂಬಾಣಿ ಇತರ ಪ್ರಮುಖ ಭಾಷೆಗಳು. ಈ ಒಂಬತ್ತು ಭಾಷೆಗಳು ರಾಜ್ಯದ ಜನಸಂಖ್ಯೆಯಲ್ಲಿ ಶೇ. 99 ರಷ್ಟನ್ನು ಒಳಗೊಂಡಿದೆ.

ಒಂದೊಂದು ಭಾಷೆ ಒಂದೊಂದು ಜಿಲ್ಲೆಗಳಲ್ಲಿ ಪ್ರಧಾನ. ಹೆಚ್ಚು ಉರ್ದು ಮಾತನಾಡುವವರು ಬೆಂಗಳೂರು, ಬಿಜಾಪುರ, ಗುಲ್ಬರ್ಗ ಮತ್ತು ಧಾರವಾಡ (ಶೇ. 44) ಜಿಲ್ಲೆಗಳು ಹಾಗೂ ಬೆಂಗಳೂರು ಮತ್ತು ಕೋಲಾರಗಳಲ್ಲಿ ತೆಲುಗು (ಶೇ. 57), ಬೆಳಗಾಂವಿ ಮತ್ತು ಬೀದರ್‌ಗಳಲ್ಲಿ ಮರಾಠಿ (ಶೇ. 60), ದ.ಕನ್ನಡ ಜಿಲ್ಲೆಗಳಲ್ಲಿ ಕೊಂಕಣಿ (ಶೇ. 85) ಬಿಜಾಪುರ, ಬೀದರ್, ಗುಲ್ಬರ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಲಂಬಾಣಿ (ಶೇ. 56) ಭಾಷೆ ಮಾತನಾಡುವವರಿದ್ದಾರೆ. ಇವೆಲ್ಲದರ ನಡುವೆ ಆಂಗ್ಲ ಭಾಷೆಯೂ ರೂಢಿಯಲ್ಲಿದೆ.

ಪ್ರಮುಖ ಸ್ಥಳಗಳು : ಬೆಂಗಳೂರು ಕರ್ನಾಟಕದ ರಾಜಧಾನಿ. 17ನೆಯ ಶತಮಾನದಲ್ಲಿ ಸ್ಥಾಪಿತವಾದ ಈ ನಗರದಲ್ಲೂ ಅದರ ಸುತ್ತಮುತ್ತಲೂ ಅನೇಕ ಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳಿವೆ. ಕರ್ನಾಟಕದ ಆಗ್ನೇಯ ಭಾಗದಲ್ಲಿ ಎತ್ತರದ ನೆಲದ ಮೇಲಿರುವ ಈ ನಗರದ ವಾಯುಗುಣ ವರ್ಷಾದ್ಯಂತ ಹಿತಕರ. ನಗರದಲ್ಲಿ ಒಟ್ಟು 2188 ಕೈಗಾರಿಕೆಗಳಿದ್ದು, ಅವುಗಳಲ್ಲಿ 742 ಜವಳಿ, 176 ರಾಸಾಯನಿಕ, 1562 ಎಂಜಿನೀಯರಿಂಗ್ ಕೈಗಾರಿಕೆಗಳಾಗಿರುತ್ತವೆ. ರಾಜ್ಯದ ಒಟ್ಟು ಕೈಗಾರಿಕೆಗಳಲ್ಲಿ ಶೇ. 37 ರಷ್ಟು ಈ ನಗರದಲ್ಲಿ ಸಾಂದ್ರೀಕರಿಸಿವೆ. ಬಹು ರಾಷ್ಟ್ರೀಯ ಉದ್ಯಮಗಳು, ಐ.ಟಿ. ಬಿ.ಟಿ. ಸಂಸ್ಥೆಗಳು, ಹಲವು ಬಂದಿವೆ. ನಗರದಲ್ಲಿ ಕುಶಲ ಹಾಗೂ ಅಕುಶಲ ಕೆಲಸಗಾರರಿಗೇನೂ ಅಭಾವವಿಲ್ಲ. ಇವರ ದಕ್ಷತೆ ಶಿಸ್ತುಗಳೇ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಮುಖ್ಯ ಆಕರ್ಷಣೆ. ರಾಜಾಜಿನಗರದ ಕೈಗಾರಿಕಾ ಎಸ್ಟೇಟು ಸರ್ಕಾರದಿಂದ ಪ್ರವರ್ತಿತವಾದ ಈ ಬಗೆಯ ವ್ಯವಸ್ಥೆಗಳ ಪೈಕಿ ಭಾರತದಲ್ಲೇ ದೊಡ್ಡದು, ಅತ್ಯಂತ ದಕ್ಷವಾದದ್ದು. ಬೆಂಗಳೂರಿನ ಅನೇಕ ಮನೆಗಳಲ್ಲಿ ಪರಂಪರಾಗತವಾಗಿ ಬಂದ ನೇಯ್ಗೆ ಕೆಲಸ ಇಂದಿಗೂ ಪ್ರವರ್ಧಮಾನವಾಗಿದೆ. ಬೆಂಗಳೂರು ಒಂದು ಮುಖ್ಯ ವಾಣಿಜ್ಯ ಕೇಂದ್ರ, ರೈಲ್ವೆ ಮತ್ತು ವಿಮಾನ ಮಾರ್ಗಗಳ ಸಂಧಿಸ್ಥಳ, ಸೇನಾಕೇಂದ್ರ, ಟಿಪ್ಪೂಸುಲ್ತಾನನ ಕೋಟೆ, ಲಾಲ್‌ಬಾಗ್, ಕಬ್ಬನ್‌ಪಾರ್ಕ್, ಅರಮನೆ, ಸರ್ಕಾರದ ಪೀಠವಿರುವ ವಿಧಾನಸೌಧ ಮುಂತಾದ ಪ್ರೇಕ್ಷಣೀಯ ಸ್ಥಳಗಳಲ್ಲದೆ ಅನೇಕ ಸಂಶೋಧನಾಗಾರಗಳೂ ವಿದ್ಯಾಸಂಸ್ಥೆಗಳೂ ಬೆಂಗಳೂರು ಮತ್ತು ಕೃಷಿ

ವಿಶ್ವವಿದ್ಯಾನಿಲಯಗಳೂ ಇವೆ. ಬೆಂಗಳೂರು ನಗರ ಬೆಳೆಯಲು ಸ್ಥಳದ ಅಡಚಣೆಯೇನೂ ಇಲ್ಲ. ಇರುವ ಮುಖ್ಯ ತೊಂದರೆಯೆಂದರೆ ನೀರಿನದು. ಕಾವೇರಿಯಿಂದ ನೀರು ಸರಬರಾಜು ಮಾಡುವ ಯೋಜನೆ ಪೂರೈಸಿದ ಮೇಲೆ ಈ ತೊಂದರೆಯ ನಿವಾರಣೆಯಾಗುತ್ತಿದೆ. ಇತ್ತೀಚೆಗೆ ನಿವೇಶನ, ವಸತಿಗಳ ಕೊರತೆ ತಲೆದೋರಿದೆ. ಕೊಳಗೇರಿಗಳ ಬೆಳವಣಿಗೆ ಹಾಗೂ ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಸಂಚಾರ ಒತ್ತಡದಿಂದ ಅಪಘಾತಗಳು ಹೆಚ್ಚುತ್ತಿವೆ. ಆಡಳಿತ ನಿರ್ವಹಣೆ ಈ ಬೃಹನ್ನಗರದಲ್ಲಿ ಅಸಾಧ್ಯವಾಗುತ್ತಿದೆ.




ಮೈಸೂರು ಭಾರತದ ಉದ್ಯಾನಗಳ ನಗರವೆಂಬ ಹೆಸರು ತಳೆದಿದೆ. ಬೆಂಗಳೂರಿಗೆ ನೈಋತ್ಯದಲ್ಲಿ 140 ಕಿಮೀ ದೂರದಲ್ಲಿದೆ. ವಿಶಾಲ ರಸ್ತೆಗಳೂ ಭವ್ಯ ಭವನಗಳೂ ಮನಮೋಹಕ ಉದ್ಯಾನಗಳೂ ತುಂಬಿರುವ ಈ ನಗರದಲ್ಲಿ ಕರ್ನಾಟಕದ ಅತ್ಯಂತ ಹಳೆಯ ಮೈಸೂರು ವಿಶ್ವವಿದ್ಯಾನಿಲಯ ಇದೆ. ವರ್ಷಕ್ಕೊಮ್ಮೆ ನಡೆಯುವ ದಸರಾ ಉತ್ಸವ ರಾಷ್ಟ್ರೀಯ ಅಂತರರಾಷ್ಟ್ರೀಯ ಖ್ಯಾತಿಗಳಿಸಿದೆ. ಇಂಡೊ–ಸಾರ್ಸನಿಕ್ ಶೈಲಿಯ ಅರಮನೆ ಒಂದು ಆಕರ್ಷಣೆ. ಜಗನ್ಮೋಹನ ಬಂಗಲೆಯ ಕಲಾವಸ್ತು ಸಂಗ್ರಹಾಲಯ, ಲಲಿತಮಹಲ್, ಪ್ರಾಣಿ ಸಂಗ್ರಹಾಲಯ, ಮುಂತಾದವೂ ನಗರದ ಆಗ್ನೇಯಕ್ಕಿರುವ ಚಾಮುಂಡಿ ಬೆಟ್ಟವೂ ಪ್ರೇಕ್ಷಣೀಯ. ಮೈಸೂರು ನಗರ ರಸ್ತೆ ಮತ್ತು ರೈಲುಮಾರ್ಗಗಳ ಸಂಧಿಸ್ಥಳ. ನಗರಕ್ಕೆ ಸಮೀಪದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಸುಪ್ರಸಿದ್ಧವಾದ ಬಂಡೀಪುರ ಅಭಯಾರಣ್ಯವೂ ವನ್ಯಧಾಮವೂ, ರಂಗನತಿಟ್ಟಿನ ಪಕ್ಷಿಧಾಮವೂ ಇರುವುದು. ಇತಿಹಾಸ ಸುಪ್ರಸಿದ್ಧವಾದ ಪುಣ್ಯ ಕ್ಷೇತ್ರಗಳು, ಶ್ರೀರಂಗಪಟ್ಟಣ ತಲಕಾಡುಗಳು, ಹೊಯ್ಸಳ ಶಿಲ್ಪಾಗಾರಗಳಾದ ಸೋಮನಾಥಪುರ ಬೇಲೂರು ಹಳೇಬೀಡುಗಳು ಅತ್ಯಂತ ಉನ್ನತ ಏಕಶಿಲಾವಿಗ್ರಹವಾದ ಗೊಮ್ಮಟೇಶ್ವರವಿರುವ ಶ್ರವಣಬೆಳಗೊಳ, ಶಿವಸಮುದ್ರ ಮತ್ತು ಶಿಂಷ ಹೆಚ್ಚು ಆಕರ್ಷಣೆಗಳು. ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುಚ್ಛಕ್ತಿ, ನೀರಿನ ಸೌಲಭ್ಯ, ಅಗ್ಗದ ಕಾರ್ಮಿಕ ಸರಬರಾಜು, ಸ್ಥಳಾನುಕೂಲ ಇವೆಲ್ಲ ಇದ್ದರೂ ಕೈಗಾರಿಕೆಯ ದೃಷ್ಟಿಯಿಂದ ಈ ನಗರ ಅಷ್ಟು ಮುಂದುವರಿದಿಲ್ಲ. ನಗರದಲ್ಲಿ ಕೆಲವು ದೊಡ್ಡ ಕೈಗಾರಿಕೆಗಳಿವೆ. ಇವುಗಳಲ್ಲಿ ನಾಲ್ಕು ಸರ್ಕಾರದವು.

ಹುಬ್ಬಳ್ಳಿ–ಧಾರವಾಡ ಗುಂಪು ಜನಸಂಖ್ಯೆಯ ದೃಷ್ಟಿಯಿಂದ ಈಗ ಎರಡನೆಯದಾಗಿದೆ. ಹುಬ್ಬಳ್ಳಿ ಧಾರವಾಡಗಳು ಅವಳಿನಗರಗಳು. ಇವೆರಡರ ನಡುವೆ ಹೆಚ್ಚು ಅಂತರವಿಲ್ಲ. ಇವು ಒಂದಾಗುತ್ತಿವೆ. ಹುಬ್ಬಳ್ಳಿಯಲ್ಲಿ ಕೈಗಾರಿಕೆ, ವಾಣಿಜ್ಯಗಳು ಪ್ರಧಾನವಾಗಿವೆ; ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯದ ಕೇಂದ್ರ; ಕೃಷಿ ವಿಶ್ವವಿದ್ಯಾನಿಲಯ ಜಿಲ್ಲಾ ಆಡಳಿತ ಕೇಂದ್ರ, ಹುಬ್ಬಳ್ಳಿ ಸಂಚಾರಮಾರ್ಗಗಳ ಸಂಧಿಸ್ಥಳ.

ಮಂಗಳೂರು ಕರಾವಳಿಯ ದೊಡ್ಡ ನಗರ; ರೇವು ಪಟ್ಟಣ. ಇಲ್ಲಿಯ ಬಂದರು ಕೇವಲ ಸಾಗರ ಮಾರ್ಗದ ಬದಿತಾಣವಾಗಿದ್ದು ಬಹುಕಾಲ ಮುಂಗಾರು ಮಳೆಗಾಲದಲ್ಲಿ ಅನುಪಯುಕ್ತವಾಗಿತ್ತು. ಇಡೀ ಕರ್ನಾಟಕ ಇದರ ಹಿನ್ನಾಡು. ಭಾರತದ ಕಾಫಿ ನಿರ್ಯಾತದ ಮುಕ್ಕಾಲು ಭಾಗ ಸಾಗುವುದು ಈ ಮೂಲಕ. ಕರ್ನಾಟಕದಿಂದ ಹೊರದೇಶಗಳಿಗೆ ಸಾಗುವ ಕಬ್ಬಿಣದ ಅದುರಿನ ಸಾಗಣೆಗೆ ದೃಷ್ಟಿಯಿಂದಲೂ ಇದು ಪ್ರಾಮುಖ್ಯ ತಳೆದಿದೆ. ಈಗ ಇದನ್ನು ಭಾರತದ ಪ್ರಧಾನ ಬಂದರುಗಳಲ್ಲೊಂದಾಗಿ ಅಭಿವೃದ್ಧಿಪಡಿಸಲಾಗಿದೆ. ವಿಶ್ವವಿದ್ಯಾನಿಲಯ ಮತ್ತು ಸ್ನಾತಕೋತ್ತರ ಕೇಂದ್ರವೂ ಅನೇಕ ಶಾಲಾ ಕಾಲೇಜುಗಳೂ ಇಲ್ಲಿವೆ. ನವಮಂಗಳೂರು ಭಾರತದ ಪ್ರಮುಖ ಬಂದರುಗಳಲ್ಲಿ ಒಂದಾಗಿದ್ದು, ಅದು ಕರ್ನಾಟಕದ ಹೆಬ್ಬಾಗಿಲು ಎನಿಸಿಕೊಂಡಿದೆ.

ಕೋಲಾರ ಚಿನ್ನದ ಗಣಿ ಇರುವುದು ಬೆಂಗಳೂರಿನಿಂದ ಸು. 96 ಕಿಮೀ ದೂರದಲ್ಲಿ. ವಿಶ್ವದ ಅತ್ಯಂತ ಆಳವಾದ (2,743 ಮೀ) ಚಿನ್ನದ ಗಣಿ ಇಲ್ಲಿಯದು. ಇದು ಈಗ ರಾಷ್ಟ್ರೀಕರಣಗೊಂಡ ಉದ್ಯಮ. ಇತ್ತೀಚೆಗೆ ಚಿನ್ನದ ನಿಕ್ಷೇಪವು ಮುಗಿದಿರುವುದರಿಂದ ಗಣಿ ಕಾರ್ಯಾಚರಣೆ ಸ್ಥಗಿತವಾಗಿವೆ.

ಬೆಳಗಾಂವಿ ಮರ್ಮಗೋವಕ್ಕೆ ಹೆಬ್ಬಾಗಿಲಿನಂತಿದೆ. ಉತ್ತರ ಮೈದಾನದ ಮುಖ್ಯ ರಸ್ತೆಗಳು ಇಲ್ಲಿ ಸಂಧಿಸಿ ಇಲ್ಲಿಂದಾಚೆಗೆ ಸಾಗುತ್ತವೆ. ಬೆಳೆಯುತ್ತಿರುವ ಹತ್ತಿ ಉದ್ಯಮದ ಕೇಂದ್ರವಿದು. ಇನ್ನೂ ಹಲವು ಕೈಗಾರಿಕೆಗಳಿವೆ. ಇದು ಕರ್ನಾಟಕದ ಎರಡನೆಯ ಸೇನಾಕೇಂದ್ರ, ವಿಶ್ರಾಂತಿಧಾಣ.

ಕರ್ನಾಟಕದಲ್ಲಿ ಪ್ರೇಕ್ಷಣೀಯ ಹಾಗೂ ಯಾತ್ರಾಸ್ಥಳಗಳಿಗೇನೂ ಕೊರತೆಯಿಲ್ಲ. ನಿಸರ್ಗ ಸೌಂದರ್ಯದಿಂದ ಕೂಡಿದ ತಾಣಗಳೂ ಇತಿಹಾಸವನ್ನು ಕೆತ್ತಿದಂತಿರುವ ಕ್ಷೇತ್ರಗಳೂ ಅನೇಕ, ಕೊಡಗಿನಲ್ಲಿರುವ ಭಾಗಮಂಡಲ ಬಳಿಯ ತಲಕಾವೇರಿ ಹಿಂದೂಗಳಿಗೆ ಪವಿತ್ರ ಧರ್ಮಸ್ಥಳ ಪುತ್ತೂರು ತಾಲ್ಲೂಕಿನಲ್ಲಿ ಮಂಗಳೂರಿಗೆ ಸು. 68 ಕಿಮೀ ದೂರದಲ್ಲಿರುವ ಒಂದು ಪವಿತ್ರ ಸ್ಥಳ. ಗೋಕರ್ಣ ಉತ್ತರ ಕನ್ನಡ ಜಿಲ್ಲೆಯ ಯಾತ್ರಾಸ್ಥಳ. ಇಲ್ಲಿಯ ಪವಿತ್ರ ಲಿಂಗ ಗೋವಿನ ಕಿವಿಯಂತಿದೆ. ಹಿಂದುಗಳ ಆರಾಧನಾ ಕೇಂದ್ರವಿದು. ಕಾರ್ಕಳ ಮಂಗಳೂರಿನ ಬಳಿ ಇದೆ. ಇಲ್ಲಿಯ ಗೊಮ್ಮಟೇಶ್ವರ ಶಿಲಾವಿಗ್ರಹ ಶ್ರವಣಬೆಳಗೊಳದಲ್ಲಿರುವುದಕ್ಕೆ ಎರಡನೆಯದು. ಮಂಡ್ಯ ಜಿಲ್ಲೆಯ ಮೇಲುಕೋಟೆ ಶ್ರೀವೈಷ್ಣವ ಕೇಂದ್ರ, ಬೆಟ್ಟದ ಮೇಲೆ ದೇವಸ್ಥಾನದಲ್ಲಿ ವರ್ಷಕ್ಕೊಮ್ಮೆ ನಡೆಯುವ ವೈರಮುಡಿಉತ್ಸವ ಹಿಂದೂ ಆಸ್ತಿಕರ ಆಕರ್ಷಣೆ. ಮೂಡಬಿದಿರೆ ಮಂಗಳೂರಿಗೆ ಸು. 35 ಕಿಮೀ ದೂರದಲ್ಲಿದೆ. ಇದು ಜೈನಕಾಶಿ. ಮೈಸೂರಿನ ಬಳಿ ಕಪಿಲಾ ನದಿ ದಂಡೆಯ ಮೇಲೆ ಇರುವ ನಂಜನಗೂಡು ಈಶ್ವರನ ಆವಾಸಸ್ಥಾನ. ತುಂಗಾನದಿ ದಡದಲ್ಲಿ ಮಲೆನಾಡಿನ ನಡುವೆ ಇರುವ ಶೃಂಗೇರಿಯ ಮಠ ಶಂಕರಾಚಾರ್ಯರಿಂದ ಸ್ಥಾಪಿತವಾದದ್ದು. ಈ ಊರು ನಿಸರ್ಗ ಸೌಂದರ್ಯದಿಂದ ಆವೃತ. ಬೆಳಗಾವಿ ಜಿಲ್ಲೆಯ ಸವದತ್ತಿ ಬಳಿಯ ಶ್ರೀ ರೇಣುಕ ಕ್ಷೇತ್ರಕ್ಕೆ ಎಲ್ಲಮ್ಮನ ಗುಡ್ಡವೆಂಬ ಹೆಸರಿದೆ. ಇಲ್ಲಿಯ ದೇವಸ್ಥಾನ ಪುರಾತನವಾದದ್ದು. ಸಿದ್ಧಗಂಗಾ ತುಮಕೂರಿನ ಬಳಿಯ ಕ್ಷೇತ್ರ. ಸುತ್ತಣ ಪ್ರಕೃತಿಯ ದೃಶ್ಯ ಚೆಲುವಿನದು. ಸುಬ್ರಹ್ಮಣ್ಯ ಪಶ್ಚಿಮ ಘಟ್ಟಗಳ ದಕ್ಷಿಣ ಭಾಗದಲ್ಲಿದೆ. ವರ್ಷಕ್ಕೊಮ್ಮೆ ನಡೆಯುವ ರಥೋತ್ಸವ, ದನಗಳ ಜಾತ್ರೆ ಸಾವಿರಾರು ಮಂದಿಗೆ ಆಕರ್ಷಣೆ. ಉಡುಪಿ ಭಾರತದ ಮುಖ್ಯ ಯಾತ್ರಾಸ್ಥಳಗಳಲ್ಲೊಂದು. ಇಲ್ಲಿ ಮಧ್ವಾಚಾರ್ಯರಿಂದ ಪ್ರತಿಷ್ಠಿತವಾದ ಕೃಷ್ಣನ ಮಂದಿರವಿದೆ. ಅಷ್ಟ ಮಠಗಳಿವೆ.

ಚಿತ್ರದುರ್ಗದ ಬಳಿಯಲ್ಲಿ ಇರುವ ಚಂದ್ರವಳ್ಳಿಯ ಉತ್ಖನನದಿಂದ ಗತಕಾಲದತ್ತ ಇಣುಕುನೋಟ ದೊರಕುತ್ತದೆ. ಕಿತ್ತೂರಿನ ಬಳಿಯ ದೇವಗಿರಿ ಮತ್ತು ದೇಗುಲಹಳ್ಳಿಗಳಲ್ಲಿ ಕದಂಬರ ಕಾಲದ ಶಿಲ್ಪವನ್ನೊಳಗೊಂಡ ದೇವಾಲಯಗಳನ್ನು ಕಾಣಬಹುದು. ತುಮಕೂರಿನ ಬಳಿ ಇರುವ ಕೈದಾಳದ ಚೆನ್ನಕೇಶವನ ದೇವಸ್ಥಾನ ಹೊಯ್ಸಳ ಶೈಲಿಯದು. ಬೆಳಗಾವಿಯ ಬಳಿಯ ಖಾನಾಪುರದಲ್ಲಿ ಪಿಂಗಾಣಿ ಕಾರ್ಖಾನೆಯಿದೆ. ಈ ಪ್ರದೇಶದಲ್ಲಿರುವ ಬಾಕ್ಸೈಟ್ ಮತ್ತು ಮ್ಯಾಂಗನೀಸ್ ನಿಕ್ಷೇಪಗಳು ಬಹು ಸಂಪದ್ಭರಿತವಾದವು. ಸುತ್ತಣ ನಿಸರ್ಗವೂ ಸುಂದರವಾದದ್ದು. ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಸ್ಥಳ ಕಿತ್ತೂರು. ಮಹೀಪಾಲಗಡವಿರುವುದು ಬೆಳಗಾಂವಿಯ ಬಳಿ. ವೈಜನಾಥ ಗುಹಾ ದೇವಾಲಯದಿಂದಾಗಿ ಇದು ಪ್ರಸಿದ್ಧ. ಮಡಿಕೇರಿ ಕೊಡಗು ಜಿಲ್ಲೆಯ ಮುಖ್ಯ ಪಟ್ಟಣ. ಹಿಂದಿನ ಕೊಡಗು ರಾಜ್ಯದ ರಾಜಧಾನಿ. ಇಲ್ಲಿ ಕೊಡಗಿನ ರಾಜರ ಕಾಲದ ಅನೇಕ ಸ್ಮಾರಕಗಳಿವೆ. ಮೈಸೂರಿಗೆ ಸಮೀಪ ಇರುವ ಶ್ರೀರಂಗಪಟ್ಟಣ ಮೈಸೂರು ದೊರೆಗಳ ಮುಂಚಿನ ರಾಜಧಾನಿಯಾಗಿತ್ತು. ಟಿಪ್ಪುಸುಲ್ತಾನನ ಸ್ಮಾರಕ, ದರಿಯಾದೌಲತ್ ಬೇಸಗೆ

ಅರಮನೆ, ಕೋಟೆ ಮತ್ತು ಶ್ರೀರಂಗನಾಥನ ದೇವಾಲಯ ಇವೆ. ಕಾವೇರಿಯಿಂದ ನಿರ್ಮಿತವಾದ ಮೂರು ದೊಡ್ಡ ದ್ವೀಪಗಳಲ್ಲಿ ಶ್ರೀರಂಗಪಟ್ಟಣ ಮೊದಲನೆಯದು. ಎರಡನೆಯದಾದ ಶಿವಸಮುದ್ರವೂ ಕರ್ನಾಟಕದಲ್ಲೇ ಇದೆ.

ಕರ್ನಾಟಕದಲ್ಲಿ ಬೆಟ್ಟದಾಣಗಳೂ ವಿಶ್ರಾಂತಿಧಾಮಗಳೂ ಮೃಗಯಾವಿನೋದ ಪ್ರದೇಶಗಳೂ ವಿಹಾರ ಕೇಂದ್ರಗಳೂ ಅನೇಕ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಆಗುಂಬೆ ಒಂದು ಸಣ್ಣ ಹಳ್ಳಿ. ಅರಬ್ಬೀ ಸಮುದ್ರದ ಕಡೆ ಅಸ್ತಮಿಸುವ ಸೂರ್ಯನನ್ನು ಇಲ್ಲಿಂದ ವೀಕ್ಷಿಸಲು ಅನೇಕರು ಇಲ್ಲಿಗೆ ಬರುತ್ತಾರೆ. ಸುತ್ತಣ ಸನ್ನಿವೇಶ ರಮ್ಯವಾದದ್ದು. ಬಂಡೀಪುರ ಮೈಸೂರಿಗೆ ಸು. 80 ಕಿಮೀ ದೂರದಲ್ಲಿದೆ. ಬನ್ನೇರುಘಟ್ಟ ಬೆಂಗಳೂರಿಗೆ ಸು. 20 ಕಿಮೀ ದೂರದಲ್ಲಿ ಆನೇಕಲ್ಲು ರಸ್ತೆಯ ಬಳಿ ಇದೆ. ಬೆಟ್ಟದ ಬುಡದ ಸಂಪಂಗಿರಾಮಸ್ವಾಮಿ ದೇವಾಲಯ ಪ್ರಕೃತಿ ರಮ್ಯಸ್ಥಳದಲ್ಲಿದೆ. ನಾಗರಹೊಳೆಗೆ ಕೊಡಗಿನ ವಿರಾಜಪೇಟೆಯಿಂದ ಸು. 20 ಕಿಮೀ ದೂರ. ಇದು ಅಭಯಾರಣ್ಯ. ಬೆಂಗಳೂರಿಗೆ ಹತ್ತಿರದಲ್ಲೆ ಇರುವ ನಂದಿ ಬೆಟ್ಟ ವಿಶ್ರಾಂತಿಧಾಮ. ಶಿವಗಂಗಾ ಕೂಡ ಬೆಂಗಳೂರಿಗೆ ಹತ್ತಿರದಲ್ಲಿದೆ. ಇದೊಂದು ಚೆಲುವದಾಣ. ವಸಂತಪುರ ಬೆಂಗಳೂರಿನ ಬಳಿಯ ಪುಟ್ಟ ಬೆಟ್ಟ.

ಅಸಂಖ್ಯಾತ ಜಲಪಾತಗಳು ಕರ್ನಾಟಕದ ಇನ್ನೊಂದು ವೈಶಿಷ್ಟ್ಯ. ಶಿವಮೊಗ್ಗ ಜಿಲ್ಲೆಯ ತಾಳಗುಪ್ಪಕ್ಕೆ ಸು. 16 ಕಿಮೀ ದೂರದಲ್ಲಿ ಶರಾವತಿ ನದಿಯಿಂದಾಗಿರುವ ಜೋಗದ (ಗೇರುಸೊಪ್ಪೆ) ಜಲಪಾತ ಜಗತ್ಪ್ರಸಿದ್ಧ. ಮಂಡ್ಯಕ್ಕೆ ಸು. 80 ಕಿಮೀ ದೂರದಲ್ಲಿರುವ ಶಿವಸಮುದ್ರದ ಬಳಿ ಕಾವೇರಿ ಎರಡಾಗಿ ಕವಲೊಡೆದು ಧುಮ್ಮಿಕ್ಕುತ್ತದೆ. ಉತ್ತರದ ಕವಲು ಗಗನಚುಕ್ಕಿ, ದಕ್ಷಿಣದ್ದು ಭರಚುಕ್ಕಿ. ಭಾರತದಲ್ಲಿ ಮೊಟ್ಟಮೊದಲು ದೊಡ್ಡ ಪ್ರಮಾಣದಲ್ಲಿ ಜಲವಿದ್ಯುತ್ತಿನ ಉತ್ಪತ್ತಿ ಮಾಡಲಾರಂಭಿಸಿದ್ದು ಇಲ್ಲೇ. ಬೆಳಗಾಂವಿ ಜಿಲ್ಲೆಯ ಗೋಕಾಕದ ಘಟಪ್ರಭಾ ನದಿಯ ಗೋಕಾಕ ಜಲಪಾತ ಗೇರು ಸೊಪ್ಪೆಯಷ್ಟು ದೊಡ್ಡದಲ್ಲ. ಇಲ್ಲಿ ಭಾರತದ ಮೊಟ್ಟಮೊದಲಿನ ಜಲವಿದ್ಯುತ್ ಜನಕ ಯಂತ್ರ ಸ್ಥಾಪಿತವಾಯಿತು. ಗೋಕಾಕ ಜಲಪಾತಮೊಂದು ಸುಂದರ ತಾಣ. ಯಲ್ಲಾಪುರಕ್ಕೆ ಉತ್ತರದಲ್ಲಿರುವ ಕಾಳೀನದಿಯ ಲಾಲ್‌ಗುಳಿ, ಯಲ್ಲಾಪುರದ ದಕ್ಷಿಣದಲ್ಲಿ ಗಂಗಾವಳಿ ನದಿಯ ಮಾಗೋಡು, ಬೆಳಗಾವಿಗೆ ಈಶಾನ್ಯದಲ್ಲಿರುವ ಮಾರ್ಕಂಡೇಯ, ಶಿರಸಿಯ ಬಳಿಯ ಶಿವಗಂಗಾ, ಸಿದ್ಧಾಪುರದ ಉಂಚಳ್ಳಿ, ಆಗುಂಬೆಯ ಬಳಿಯ ವರಾಹಿ– ಇವು ಇತರ ಕೆಲವು ಜಲಪಾತಗಳು.

ನದಿಗೆ ಅಡ್ಡಲಾಗಿ ಕಟ್ಟಿದ ಕಟ್ಟೆಗಳಿಂದ ನಿರ್ಮಿತವಾದ ಜಲಾಶಯಗಳೂ ಚೆಲುವುದಾಣಗಳೇ. ಮೈಸೂರಿನ ಹತ್ತಿರ ಇರುವ ಕೃಷ್ಣರಾಜಸಾಗರ ಅತ್ಯಂತ ಪ್ರಸಿದ್ಧವಾದ್ದು. ಇಲ್ಲಿರುವ ಬೃಂದಾವನಕ್ಕೆ ಅಂತರರಾಷ್ಟ್ರೀಯ ಖ್ಯಾತಿಯಿದೆ. ಪ್ರಾಚೀನ ಸರೋವರಗಳಲ್ಲಿ ರಾಣಿಬೆನ್ನೂರಿನ ಬಳಿಯ ಮದಗಮಸೂರ್ ಸರೋವರ ಪ್ರಸಿದ್ಧವಾದದು. ಇದರ ಶಿಲ್ಪ ವಿಶಿಷ್ಟವಾದ್ದು. ವಿಜಯನಗರ ಕಾಲದಲ್ಲಿ ಕಟ್ಟಿದ ಈ ಸರೋವರದ ಕಟ್ಟೆ ಮಣ್ಣಿನದು; ಒಂದು ಫರ್ಲಾಂಗ್ ಉದ್ದವಿದೆ. ಬೆಂಗಳೂರಿಗೆ ಸನಿಯದಲ್ಲಿ ಅರ್ಕಾವತಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ತಿಪ್ಪಗೊಂಡನಹಳ್ಳಿ ಜಲಾಶಯಪ್ರದೇಶ ವಿಹಾರಿಗಳಿಗೊಂದು ಆಕರ್ಷಣೆ. ಮಲಪ್ರಭಾ ನದಿ ಘಟ್ಟಗಳನ್ನು ಕೊರೆದು ಹರಿದುಬರುವ ತಾಣ ನವಿಲುತೀರ್ಥ. ವಾಣಿವಿಲಾಸಸಾಗರ ಹಿರಿಯೂರಿನ ಬಳಿಯ ಕೃತಕ ಸರೋವರ. ತುಂಗಭದ್ರಾ ಕಟ್ಟೆಯ ಮೇಲಿನ ವಿಶಾಲ ಸಾಗರ ಈಚಿನ ಒಂದು ಆಕರ್ಷಣೆಯಾಗಿದೆ.

ಕರ್ನಾಟಕದ ಹಲವಾರು ಎಡೆಗಳಲ್ಲಿರುವ ಐತಿಹಾಸಿಕ ಸ್ಥಳಗಳೂ ಶಿಲ್ಪಕಲಾಕೃತಿಗಳೂ ಅಸಂಖ್ಯಾತ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದಾಗಿದೆ. ಉತ್ತರ ಕರ್ನಾಟಕದಿಂದ ಆರಂಭ ಮಾಡುವುದಾದರೆ, ಬಿಜಾಪುರ ಮೊದಲನೆಯದು. ಪಟ್ಟಣದ ಸುತ್ತಣ ಕೋಟೆಯ ಉದ್ದ 13 ಕಿಮೀ. ಈಗಲೂ ಇದು ಒಳ್ಳೆಯ ಸ್ಥಿತಿಯಲ್ಲಿದೆ. ಇಲ್ಲಿಯ ಗೋಳಗುಮ್ಮಟ ತುಂಬ ಪ್ರಸಿದ್ಧವಾದ್ದು. ಇಲ್ಲಿರುವ ಮಸೀದಿ ಇಡೀ ದಕ್ಷಿಣ ಭಾರತದಲ್ಲೇ ದೊಡ್ಡದು. ಗುಲ್ಬರ್ಗ ಮತ್ತು ಬಿದರೆ ಇನ್ನೆರಡು ಸ್ಥಳಗಳು. ಗುಲ್ಬರ್ಗದ ಕೋಟೆ ಬತ್ತೇರಿಗಳು ದೊಡ್ಡ ಆಕರ್ಷಣೆಗಳು. ಇಲ್ಲಿಯ ಶರಣಬಸವ ದೇವಸ್ಥಾನಕ್ಕೆ ಯಾತ್ರಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ನಿಸರ್ಗದ ಮಡಿಲಲ್ಲಿರುವ ಬೀದರ್‌ನ ಪುರಾತನ ಕೋಟೆಗಳೂ ಭವನಗಳೂ ಹಿಂದೂ–ಮುಸ್ಲಿಂ ಕಲೆಗಳ ಸಂಗಮದ ಪ್ರತೀಕಗಳು. ಬಿದ್ರಿ ಕಲೆಗೆ ಈ ಊರು ಪ್ರಸಿದ್ಧ. ಬೀದರ್‌ಗೆ ಸು. 112 ಕಿಮೀ ದೂರದಲ್ಲಿರುವ ಕಲ್ಯಾಣ ಚಾಳುಕ್ಯರ ರಾಜಧಾನಿಯಾಗಿತ್ತು. ಹಿಂದೂ ಯುದ್ಧಶಿಲ್ಪದ ಪರಿಚಯ ಪಡೆಯಬೇಕೆನ್ನುವವರು ರಾಯಚೂರಿಗೆ ಭೇಟಿ ಕೊಡಬೇಕು. ಇದರ ಹತ್ತಿರದಲ್ಲೇ ಮಂತ್ರಾಲಯವಿದೆ. ಇದು ಹಿಂದೂಗಳಿಗೆ ಪವಿತ್ರಸ್ಥಳ; ಬಾದಾಮಿಯ ಗುಹೆಗಳೂ, ಪಟ್ಟದಕಲ್ಲು, ಐಹೊಳೆಗಳೂ, ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಪರಿಚಯ ಮಾಡಿಕೊಡುತ್ತವೆ. ಬಾದಾಮಿಯಲ್ಲಿ ಹುಟ್ಟಿದ ಚಾಳುಕ್ಯ ಕಲೆ ಗದುಗಿನಲ್ಲೂ ಬೆಳೆಯಿತು. ಈಗ ಗದಗ್ ಹತ್ತಿ ವ್ಯಾಪಾರಕೇಂದ್ರ. ಕನ್ನಡನಾಡಿನ ಶಿವಶರಣರ ಆಧ್ಯಾತ್ಮಿಕ ಸಾಮಾಜಿಕ ಕ್ರಾಂತಿಗೆ ಜನ್ಮ ನೀಡಿದ ಸ್ಥಳವೇ ಕೂಡಲಸಂಗಮ. ಗದಗಿನ ಸನಿಯದಲ್ಲೇ ಇರುವ ಲಕ್ಕುಂಡಿಯಲ್ಲೂ ಐಹೊಳೆಯಲ್ಲಿರುವಂತೆ ಅನೇಕ ಪ್ರಾಚೀನ ದೇಗುಲಗಳಿವೆ. ಇವು ಚಾಳುಕ್ಯ ಕಲೆಯ ವಿವಿಧ ಮಾದರಿಗಳು. ಈ ಪ್ರದೇಶವನ್ನು ಚಾಳುಕ್ಯ ವಾಸ್ತುಶಿಲ್ಪದ ತೊಟ್ಟಿಲು ಎಂದು ಫರ್ಗುಸನ್ ಕರೆದಿದ್ದಾನೆ. ಡಂಬಳ, ಅಣ್ಣಿಗೇರಿ, ಇಟಗಿ, ಕುಕ್ಕನೂರು, ಕುಂದಗೋಳ, ಹಾವೇರಿ, ಲಕ್ಷ್ಮೇಶ್ವರ, ತಿಳವಳ್ಳಿ ನೀರಲಗಿ, ಗಳಗನಾಥ, ಹಾವನೂರು, ಹರಳಹಳ್ಳಿ, ಹಾನಗಲ್, ಬಂಕಾಪುರ, ಬನವಾಸಿ, ಆನವಟ್ಟಿ, ಬಾಳಂ ಬೀಡು, ಉಣಕಲ್, ಗಂಜಿಗಟ್ಟಿ, ಕುರವತ್ತಿ, ಬಾಗಲಿ– ಇವೆಲ್ಲ ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನೂ ಇತಿಹಾಸವನ್ನೂ ಮಿಡಿಯುವ ನಾಡಿಗಳು.

ಇತಿಹಾಸದ ಹಲವಾರು ಸಂಪದ್ಯುಕ್ತ ಸ್ಮೃತಿಗಳು ಚೆಲ್ಲಾಡಿರುವುದು ಹಂಪಿಯಲ್ಲಿ. ಇದು ವಿಜಯನಗರ ಸಾಮ್ರಾಜ್ಯದ ಹೃದಯಪ್ರದೇಶವಾಗಿತ್ತು. ಭಾರತದಲ್ಲಿ ಕೊಟ್ಟ ಕೊನೆಯ ವೈಭವಯುತ ಸಾಮ್ರಾಜ್ಯವಾಗಿದ್ದ ವಿಜಯನಗರದ ಸಂಸ್ಕೃತಿ ನಾಗರಿಕತೆಗಳ ಸಂಕೇತವಾಗಿ ಅಲ್ಲಿ ಅನೇಕ ಭಗ್ನಾವಶೇಷಗಳಿವೆ. ಮಲೆಘಟ್ಟಗಳ ನಡುವಣ ಪಾಳು ಬಯಲಿನ ನಡುವೆ ನಿಂತ ಉಗ್ರನರಸಿಂಹ, ರಾಣಿಮಹಲ್, ಕಮಲಮಹಲ್, ಆನೆಸಾಲು, ಅರಮನೆಯ ಆಸ್ತಿಭಾರ, ಹಜಾರ ರಾಮನ ದೇವಸ್ಥಾನ ಮುಂತಾದ ಹಲವಾರು ಸ್ಮಾರಕಗಳು ವಿಜಯನಗರದ ಭವ್ಯ ಇತಿಹಾಸವನ್ನು ಸಾರುತ್ತವೆ. ಇದರ ಬಳಿಯೇ ಆಧುನಿಕ ಶಿಲ್ಪದ ಫಲವಾದ ತುಂಗಭದ್ರಾ ಕಟ್ಟೆಯಿದೆ.

ದಕ್ಷಿಣ ಮಲೆನಾಡಿನ ಸೆರಗಿನಲ್ಲಿರುವ ಬೇಲೂರು ಹಳೆಬೀಡುಗಳಲ್ಲಿ ಹೊಯ್ಸಳ ಶಿಲ್ಪದ ಮಹೋನ್ನತಿಯನ್ನು ಕಾಣಬಹುದು. ಇಲ್ಲಿಯ ದೇಗುಲಗಳು ವಿಶ್ವಪ್ರಸಿದ್ಧವಾದಂಥವು. ಇಲ್ಲಿ ಕಲ್ಲಿನಲ್ಲಿ ಕಾವ್ಯ ಹೆಪ್ಪುಗಟ್ಟಿದೆ. ಮೈಸೂರಿನ ಬಳಿಯ ಸೋಮನಾಥಪುರದ ದೇವಸ್ಥಾನವೂ ಇದೇ ಸಂಪ್ರದಾಯಕ್ಕೆ ಸೇರಿದ್ದು. ಶ್ರವಣಬೆಳಗೊಳದ ಗೊಮ್ಮಟ ವಿಗ್ರಹ ಬೃಹದಾಕಾರದ ಶಾಂತಿಮೂರ್ತಿ. ಹರಪನಹಳ್ಳಿ, ಕೂಡ್ಲಿಗಿ, ಚಿತ್ರದುರ್ಗ, ಹರಿಹರ, ನೀಲಗುಂದ, ಕೊಟ್ಟೂರು, ಉಚ್ಚಂಗಿ, ಚಂದ್ರವಳ್ಳಿ, ಬನವಾಸಿ, ಸೋಂದಾ–ಇವೂ ಇತಿಹಾಸದ ದೃಷ್ಟಿಯಿಂದ ಪ್ರೇಕ್ಷಣೀಯ. ಭದ್ರಾವತಿಯ ಬಳಿಯ ಕೆಮ್ಮಣ್ಣುಗುಂಡಿ ಬೇಸಗೆಯ ವಿಶ್ರಾಂತಿಧಾಮ. ಶಿರಸಿ ಕುಮಟಗಳ ನಡುವೆ ಇರುವ ಯಾಣ ಚೆಲುವಾದ ಯಾತ್ರಾಸ್ಥಳ. ಮೈಸೂರಿನ ಬಳಿಯ ಚಾಮುಂಡಿಬೆಟ್ಟದ ನಟ್ಟ ನಡುವಿನಲ್ಲಿರುವ ಕಲ್ಲು ಬಸವ ಪ್ರಪಂಚದಲ್ಲೇ ದೊಡ್ಡದು. ಹೀಗೆ ಕರ್ನಾಟಕದಲ್ಲಿ ನಿಸರ್ಗ ರಮ್ಯತೆಯೂ ಮಾನವ ನಿರ್ಮಿತ ಕಲೆಯೂ ಸಮರಸವಾಗಿ ಬೆರೆತುಕೊಂಡಿವೆ.

ರಫ್ತು ವ್ಯಾಪಾರ : ಭಾರತದ ವಿದೇಶೀ ವ್ಯಾಪಾರದ ಭೂಪಟದಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಸ್ವಾತಂತ್ರ್ಯಪೂರ್ವ ದಿನಗಳ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಯ ಬೆಳವಣಿಗೆಯಂತೆಯೇ ರಫ್ತಿನ ಬೆಳವಣಿಗೆಗೂ ಹೆಚ್ಚಿನ ಗಮನ ಕೊಡಲಾಗಿತ್ತು. ಕರ್ನಾಟಕದ ಉತ್ಪನ್ನಗಳಾದ ಗಂಧದ ಎಣ್ಣೆ, ಗಂಧದ ಸಾಬೂನು, ರೇಷ್ಮೆ ಮುಂತಾದವಕ್ಕೆ ಹಿಂದೆ ವಿದೇಶೀ ಮಾರುಕಟ್ಟೆ ಇತ್ತು. ಸರ್ಕಾರ ಕೈಕೊಂಡ ಇಂಥ ನಾನಾ ಕ್ರಮಗಳಿಂದಾಗಿ ಕರ್ನಾಟಕದ ನಿರ್ಯಾತ ದೃಢವಾಗಿ ಹೆಚ್ಚಿದೆ. ವರ್ಷದಿಂದ ವರ್ಷಕ್ಕೆ ಕರ್ನಾಟಕದ ರಫ್ತು ವ್ಯಾಪಾರ ಅಧಿಕವಾಗುತ್ತಿದೆ. ರೇಷ್ಮೆ ವಸ್ತ್ರ, ಎಂಜಿನಿಯರಿಂಗ್ ಸಾಮಗ್ರಿ, ಗೋಡಂಬಿ, ಕಾಫಿ, ಕಬ್ಬಿಣದ ಅದಿರು ಇವಕ್ಕೆ ಬೇಡಿಕೆ ಹೆಚ್ಚುತ್ತಿದೆ.

ಕರ್ನಾಟಕದ ರಫ್ತು ವಸ್ತುಗಳಲ್ಲಿ ಕಬ್ಬಿಣದ ಅದಿರು ಮತ್ತು ಕಾಫಿ ಅತ್ಯಂತ ಮುಖ್ಯವಾದವು. ಎಂಜಿನಿಯರಿಂಗ್ ವಸ್ತುಗಳದು ಮೂರನೆಯ ಸ್ಥಾನ ನಾಲ್ಕನೆಯದು ಗೋಡಂಬಿ (1.56 ಕೋಟಿ ರೂ). ಇದರೊಂದಿಗೆ ನಾಲ್ಕನೆಯ ಸ್ಥಾನಕ್ಕಾಗಿ ಸ್ಪರ್ಧೆ ನಡೆಸಿರುವ ಪದಾರ್ಥ ಗಂಧದ ಎಣ್ಣೆ ಅಪ್ಪಟ ರೇಷ್ಮೆಯನ್ನು ಬಿಟ್ಟು ಉಳಿದ ಜವಳಿ ಪ್ರಾಮುಖ್ಯದ ದೃಷ್ಟಿಯಿಂದ ಆರನೆಯದು ಏಲಕ್ಕಿಯದು ಏಳನೆಯ ಸ್ಥಾನ. ಈ ಏಳು ಪದಾರ್ಥಗಳ ನಿರ್ಯಾತ ಮೌಲ್ಯ ಒಟ್ಟು ರಫ್ತಿನ ಮೌಲ್ಯದ ಶೇ. 85 ರಷ್ಟಾಗುತ್ತದೆ. ಶುದ್ಧ ರೇಷ್ಮೆ ಸಮುದ್ರಮೂಲ ಆಹಾರವಸ್ತು, ಮ್ಯಾಂಗನೀಸ್ ಅದಿರು, ಹೊಗೆಸೊಪ್ಪು, ಫಲೋತ್ಪನ್ನ, ಅಗರಬತ್ತಿ ಮತ್ತು ಕುಶಲ ವಸ್ತುಗಳು, ಗೋಡಂಬಿ, ಚಿಪ್ಪೆಣ್ಣೆ, ಮೂಳೆಪುಡಿ, ಗ್ರಾನೈಟ್ ಸಾಬೂನುಗಳು, ಪರಂಪರಾಗತವಾದ ಪದಾರ್ಥಗಳ ನಿರ್ಯಾತದ ಹೆಚ್ಚಳದ ಜೊತೆಗೆ ಹೊಸಹೊಸ ಕೈಗಾರಿಕೆಗಳ, ಪದಾರ್ಥಗಳು ವಿದೇಶೀ ಮಾರುಕಟ್ಟೆಗಳಲ್ಲಿ ಪ್ರಿಯವಾಗುತ್ತಿವೆ. ಕರ್ನಾಟಕದಿಂದ ರಫ್ತಾಗುವ ಪದಾರ್ಥಗಳು ಮತ್ತು ಅವನ್ನು ಆಮದು ಮಾಡಿಕೊಳ್ಳುವ ದೇಶಗಳನ್ನು ಮುಂದೆ ಕೊಟ್ಟಿದೆ:

| ಪದಾರ್ಥ | ಆಮದು ಮಾಡಿಕೊಳ್ಳುವ ದೇಶಗಳು |
|---|---|
| 1. ಅಗರಬತ್ತಿ | ಬ್ರಿಟನ್, ಅಮೆರಿಕ, ಮಲೇಷ್ಯ, ಫ್ರಾನ್ಸ್, ಥೈಲೆಂಡ್, ಜಪಾನ್, ಘಾನ, ಫೀಜಿ, ಇಟಲಿ, ಹಾಂಗ್‌ಕಾಂಗ್, ದಕ್ಷಿಣ ಅಮೆರಿಕದ ದೇಶಗಳು, ಕೆನಡ, ಆಸ್ಟ್ರೇಲಿಯ, ಉಗಾಂಡ, ಅರೇಬಿಯ, ಇಥಿಯೋಪಿಯ, ಕೀನ್ಯ, ಇರಾಕ್, ಸ್ವೀಡನ್. |

| | |
|---|---|
| 2. ಅಪ್ಪಟ ರೇಷ್ಮೆ | ಜರ್ಮನಿ, ಆಸ್ಟ್ರೇಲಿಯ, ಅಮೆರಿಕ, ಫ್ರಾನ್ಸ್, ಬ್ರಿಟನ್, ಫಿನ್ಲೆಂಡ್, ಹಾಲೆಂಡ್, ಡೆನ್ಮಾರ್ಕ್, ಸ್ವೀಡನ್, ಸ್ವಿಟ್ಜರ್ಲೆಂಡ್, ಮಲೇಷ್ಯ, ಇಟಲಿ, ಕೆನಡ, ಇರಾನ್, ಬೆಲ್ಜಿಯಂ, ಜಪಾನ್, ಕೀನ್ಯ, ಮಲಾವಿ, ನೈಜೀರೀಯ, ಫೀಜಿ, ನಾರ್ವೇ. |
| 3. ಎಂಜಿನಿಯರಿಂಗ್ ವಸ್ತುಗಳು | ಅಮೆರಿಕ, ಕೆನಡ, ಪೋಲೆಂಡ್, ಬಲ್ಗೇರಿಯ, ಹಂಗರಿ, ನೈಜೀರಿಯ, ನ್ಯೂಜಿಲೆಂಡ್, ವಿಯೆಟ್ನಾಂ, ಇರಾಕ್, ಇರಾನ್, ಬೆಲ್ಜಿಯಂ, ದಕ್ಷಿಣ ಅಮೆರಿಕದ ದೇಶಗಳು, ಜರ್ಮನಿ, ಶ್ರೀಲಂಕ, ಐರ್ಲೆಂಡ್. |
| 4. ಏಲಕ್ಕಿ | ಇರಾಕ್, ಅರೇಬಿಯ, ಪರ್ಷಿಯನ್ ಖಾರಿ ದೇಶಗಳು, ಇರಾನ್, ಫಿನ್ಲೆಂಡ್, ಡೆನ್ಮಾರ್ಕ್. |
| 5. ಕಬ್ಬಿಣದ ಅದಿರು | ಜರ್ಮನಿ, ಜಪಾನ್, ಹಂಗರಿ. |
| 6. ಕಬ್ಬಿಣ ಮತ್ತು ಉಕ್ಕು | ಸಿಂಗಪುರ, ಶ್ರೀಲಂಕ, ಜಪಾನ್ |
| 7. ಕಾಫಿ | ಅಮೆರಿಕ, ಬೆಲ್ಜಿಯಂ, ಜರ್ಮನಿ, ನೆದರ್ಲೆಂಡ್ಸ್, ಬ್ರಿಟನ್, ಇರಾಕ್, ಪೋಲೆಂಡ್, ಕೆನಡ, ಸೌದಿ ಅರೇಬಿಯ, ಸ್ವೀಡನ್, ರಷ್ಯ |
| 8. ಕೃತಕ ರೇಷ್ಮೆ | ಮಲಾವಿ, ಬ್ರಿಟನ್. |
| 9. ಗಂಧದ ಎಣ್ಣೆ | ಅಮೆರಿಕ, ಬ್ರಿಟನ್, ನೆದರ್ಲೆಂಡ್ಸ್, ಫ್ರಾನ್ಸ್, ಜರ್ಮನಿ, ಜಪಾನ್, ಹಂಗೇರಿ, ಮಲೇಷ್ಯ, ಸೌದಿ ಅರೇಬಿಯ, ಸ್ವಿಟ್ಜರ್ಲೆಂಡ್, ಇಟಲಿ, ಆಸ್ಟ್ರೇಲಿಯ, ಶ್ರೀಲಂಕ, ಆಫ್ರಿಕ ದೇಶಗಳು, ಅರೇಬಿಯ, ಕೀನ್ಯ, ರಷ್ಯ, ಬಲ್ಗೇರಿಯ. |
| 10. ಗೋಡಂಬಿ | ಅಮೆರಿಕ, ಬೆಲ್ಜಿಯಂ, ಜರ್ಮನಿ, ನೆದರ್ಲೆಂಡ್ಸ್, ಬ್ರಿಟನ್, ಲೆಬನಾನ್, ಸೌದಿ ಅರೇಬಿಯ. |
| 11. ಗೋಡಂಬಿ ಚಿಪ್ಪೆಣ್ಣೆ | ಅಮೆರಿಕ, ಬ್ರಿಟನ್ |
| 12. ಗ್ರಾನೈಟ್ | ಜಪಾನ್, ಸ್ವಿಟ್ಜರ್ಲೆಂಡ್, ಬ್ರಿಟನ್, ಜರ್ಮನಿ, ಇಟಲಿ. |
| 13. ಜವಳಿ | ಅಮೆರಿಕ, ಬ್ರಿಟನ್, ಫ್ರಾನ್ಸ್, ಶ್ರೀಲಂಕ, ಇಂಡೊನೇಷ್ಯ, ಪೋಲೆಂಡ್, ಕೆನಡ, ಫೀಜಿ, ಹಾಂಗ್‌ಕಾಂಗ್, ಕೀನ್ಯ, ನಾರ್ವೇ, ಸಿಂಗಪುರ, ಉಗಾಂಡ, ಆಸ್ಟ್ರೇಲಿಯ, ಮಲಾವಿ, ಇರಾನ್, ಸೈಪ್ರಸ್. |
| 14. ತೆಂಗಿನ ನಾರು, ಹುರಿ | ಇರಾಕ್ |
| 15. ಪ್ಲಾಸ್ಟಿಕ್ ಮತ್ತು ಲಿನೋಲಿಯಂ | ಮಲೇಷ್ಯ, ಸಿಂಗಪುರ, ಬ್ರಿಟನ್, ಉಗಾಂಡ, ಕೀನ್ಯ, ಶ್ರೀಲಂಕ. |
| 16. ಫಲೋತ್ಪನ್ನ | ಬ್ರಿಟನ್, ಪರ್ಷಿಯನ್ ಖಾರಿಯ ದೇಶಗಳು, ಇರಾನ್, ರಷ್ಯ, ಸೌದಿ ಅರೇಬಿಯ, ಸಿಂಗಪುರ, ಅಮೆರಿಕ, ಜಪಾನ್, ಜರ್ಮನಿ, ಶ್ರೀಲಂಕ. |
| 17. ಮರ ಮತ್ತು ದಿಮ್ಮಿ | ಜಪಾನ್, ಶ್ರೀಲಂಕ, ಹಾಂಗ್‌ಕಾಂಗ್. |
| 18. ಮೂಳೆ ಪುಡಿ | ಬೆಲ್ಜಿಯಂ, ಬಲ್ಗೇರಿಯ, ಬ್ರಿಟನ್, ಫ್ರಾನ್ಸ್, ಜರ್ಮನಿ. |
| 19. ರೇಷ್ಮೆ ರದ್ದಿ (ವೇಸ್ಟ್) | ಇಟಲಿ, ಜಪಾನ್, ಸ್ವಿಟ್ಜರ್ಲೆಂಡ್. |
| 20. ಸಮುದ್ರಮೂಲ ಆಹಾರ | ಅಮೆರಿಕ, ಬ್ರಿಟನ್. |
| 21. ಸಾಬೂನುಗಳು, ಅಂಗರಾಗಗಳು | ಇರಾನ್, ಫೀಜಿ, ಅಮೆರಿಕ, ಸಿಂಗಪುರ, ಟಾನ್ಜಾನಿಯ, ಅರೇಬಿಯ, ಜರ್ಮನಿ, ಆಸ್ಟ್ರೇಲಿಯ, ಬ್ರಿಟನ್, ಫಿನ್ಲೆಂಡ್, ಥೈಲೆಂಡ್, ಕೆನಡ, ಬೆಲ್ಜಿಯಂ, ಸ್ವಿಟ್ಜರ್ಲೆಂಡ್. |
| 22. ಹತ್ತಿ ಬೀಜ, ಎಣ್ಣೆ, ಹಿಂಡಿ | ಬ್ರಿಟನ್, ಪೋಲೆಂಡ್, ರಷ್ಯ |
| 23. ಹದ ಮಾಡಿದ ಚರ್ಮ | ಬ್ರಿಟನ್, ನೆದರ್ಲೆಂಡ್ಸ್, ಫ್ರಾನ್ಸ್, ಹಂಗೇರಿ, ಸ್ವಿಟ್ಜರ್ಲೆಂಡ್, ಇಟಲಿ, ಜರ್ಮನಿ, ಬಲ್ಗೇರಿಯ, ಜರ್ಮನಿ, ಫ್ರಾನ್ಸ್. |
| 24. ಹೊಗೆಸೊಪ್ಪು | ಬೆಲ್ಜಿಯಂ, ಬ್ರಿಟನ್, ನೆದರ್ಲೆಂಡ್ಸ್. |

(ಎಚ್.ಎಸ್.ಕೆ.;ಪಿ.ಎಂ.)

**ಕರ್ನಾಟಕದ ಅರಣ್ಯಗಳು:** ಕರ್ನಾಟಕ ಅತ್ಯಂತ ಮಹತ್ವವುಳ್ಳ ಸಮೃದ್ಧ ಕಾಡುಗಳನ್ನುಳ್ಳ ಭಾರತದ ರಾಜ್ಯ. ಸಹ್ಯಾದ್ರಿ ಘಟ್ಟಗಳು ಪ್ರಪಂಚದಲ್ಲಿ ಗುರ್ತಿಸಿರುವ ವಿಶಿಷ್ಟ ಜೈವಿಕ ವೈವಿಧ್ಯತೆಯ 25 ಪ್ರಮುಖ ತಾಣಗಳಲ್ಲಿ ಒಂದಾಗಿದೆ. ವೃಕ್ಷರಾಶಿ ಮತ್ತು ಸಸ್ಯರಾಶಿಗಳಷ್ಟೇ ವನ್ಯಜೀವಿ ಸಂಪತ್ತು ರಾಜ್ಯದಲ್ಲಿದೆ. ರಾಜ್ಯದ ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಘೋಷಿತ ಅರಣ್ಯ ಪ್ರದೇಶ 38,724 ಚ.ಕಿಮೀ ಅಂದರೆ ಭೌಗೋಳಿಕ ಕ್ಷೇತ್ರದಲ್ಲಿ ಶೇ. 20.2 ಅರಣ್ಯ ಪ್ರದೇಶವೆಂದು ದಾಖಲಾಗಿದ್ದರೂ. ಶೇ. 11 ಪ್ರದೇಶ ಮಾತ್ರ ವೃಕ್ಷ ಆವೃತವಾದುದು. ಉಳಿದದ್ದು ಕ್ಷೀಣಿತ ಅರಣ್ಯ ಪ್ರದೇಶವಾಗಿದೆ. ಕರ್ನಾಟಕದ ಅರಣ್ಯ ಕ್ಷೇತ್ರದ ಶೇಕಡ ಪ್ರಮಾಣ ರಾಷ್ಟ್ರೀಯ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ. ರಾಷ್ಟ್ರೀಯ ಅರಣ್ಯ ನೀತಿ ನಿಗದಿಪಡಿಸಿರುವ (ಶೇ. 33.3) ಪ್ರಮಾಣಕ್ಕಿಂತ ಬಹಳ ಕಡಿಮೆ. ಈ ವ್ಯಾಪ್ತಿಗೆ ತರುವುದಕ್ಕಾಗಿ ಅರಣ್ಯೀಕರಣ ಯೋಜನೆಯಲ್ಲಿ ಶೀಘ್ರಗತಿಯಲ್ಲಿ ಬೆಳೆಯುವ ಮರಗಳ ಬೆಳವಣಿಗೆಗಾಗಿ ಹೊಸದಾಗಿ ಸಸಿ ನೆಡಲಾಗುತ್ತಿದೆ. 2001–02 ನೇ ಸಾಲಿನಲ್ಲಿ ಕರ್ನಾಟಕದ ಅರಣ್ಯ ಇಲಾಖೆಯ ಮೂಲಕ 49,755 ಹೆ. ಪ್ರದೇಶವನ್ನು ಹೆಚ್ಚುವರಿಯಾಗಿ ಅರಣ್ಯಪ್ರದೇಶದ ವ್ಯಾಪ್ತಿಗೆ ತರಲಾಗಿದೆ. ನಂತರವೂ ಇಂಥ ಕಾರ್ಯಕ್ರಮವು ಮುಂದುವರಿದಿದೆ. ವೃಕ್ಷ ಬೆಳೆಗಾರರ ಸಹಕಾರ ಸಂಘ, ಗ್ರಾಮ ಅರಣ್ಯ ಸಮಿತಿಗಳು ಹಾಗೂ ಸ್ವಯಂ ಸೇವಾ ಸಂಘಗಳನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಾಗಿದೆ. ರಾಜ್ಯದ ಎಲ್ಲ ಅರಣ್ಯ ವಿಭಾಗಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ದೂರ ಸಂವೇದಿ (ರಿಮೋಟ್ ಸೆನ್ಸಿಂಗ್) ಹಾಗೂ ಭೂಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಇತ್ತೀಚೆಗೆ ಕೋಕೊ ಮತ್ತು ರಬ್ಬರ್ ತೋಟಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನವೂ ಸಾಗಿದೆ.

ಕರ್ನಾಟಕದ ಅರಣ್ಯಗಳು ಅಗಲವಾದ ಎಲೆಗಳುಳ್ಳ ರೀತಿಯವು. ರಾಷ್ಟ್ರೀಯ ಪ್ರಾಮುಖ್ಯವುಳ್ಳ ಅನೇಕ ಬೆಲೆಬಾಳುವ ಮರಗಳು ಇಲ್ಲಿವೆ. ತೇಗ, ಬೀಟೆ, ಮತ್ತಿ, ಬಾಗೆ, ಪಡಾಕ್ ಅನೇಕ ಪ್ರಭೇದದ ಮರಗಳು ಹೇರಳವಾಗಿವೆ. ಶ್ರೀಗಂಧವಂತೂ ಸಂಪೂರ್ಣವಾಗಿ ಕರ್ಣಾಟಕದ್ದೇ ಆಗಿದೆ.

ಸಾಮಾನ್ಯವಾಗಿ ವಿವಿಧ ರೀತಿಯ ಅರಣ್ಯಗಳ ವಿತರಣೆ ಮತ್ತು ಬೆಳವಣಿಗೆಗಳು ಮುಖ್ಯವಾಗಿ ವಾಯುಗುಣ, ಭೂಗುಣ ಮತ್ತು ಭೂಸ್ವರೂಪಗಳು ಹಾಗೂ ಐತಿಹಾಸಿಕ ಕಾರಣಗಳನ್ನು ಅವಲಂಬಿಸಿರುತ್ತವೆ. ಈಗ ಬಂಜರಾಗಿ ಅರಣ್ಯಪ್ರದೇಶವಿಲ್ಲದಿರುವ ಅನೇಕ ಭಾಗಗಳು (ಉದಾ. ಮಂಡ್ಯ ಜಿಲ್ಲೆ) 18ನೆಯ ಶತಮಾನದ ಕೊನೆಯಲ್ಲಿ ಸಾಧಾರಣ ಗಾತ್ರದ ಮರಗಳನ್ನು ಪಡೆದಿದ್ದುವೆಂದು ತಿಳಿದುಬಂದಿದೆ. ಅನೇಕ ಯುದ್ಧಗಳು, ವ್ಯವಸಾಯದ ಬೆಳವಣಿಗೆ, ಜನಸಂಖ್ಯೆಯ ಹೆಚ್ಚಳ, ಮನೆಕಟ್ಟಲು, ಸೌದೆ ಇದ್ದಲುಗಳು ಮತ್ತಿತರ ಸಾಮಗ್ರಿಗಳ ಬಗ್ಗೆ ಮಾನವನ ಹೆಚ್ಚಿನ ಅವಶ್ಯಕತೆಗಳು ಇವೆಲ್ಲವುಗಳಿಂದ ಒಂದು ಕಾಲದಲ್ಲಿ ಶ್ರೀಮಂತವಾಗಿದ್ದ ಅರಣ್ಯಪ್ರದೇಶಗಳು ಇಂದು ಬಂಜರಾಗಿವೆ. ಇಂದಿನ ಅರಣ್ಯಗಳಾದರೂ ಹಾಗೆಯೇ ಉಳಿದು ಬಂದಿರುವುದಕ್ಕೆ ಒಂದು ಮುಖ್ಯ ಕಾರಣವೆಂದರೆ ಅವು ಪ್ರವೇಶಿಸಲಸಾಧ್ಯವಾಗಿರುವುದು. ಆದರೆ ಈಗಿನ ಒಳ್ಳೆಯ ರಸ್ತೆಗಳು ಬುಲ್ಡೋಜರುಗಳು, ಜೀಪ್ ಹಾಗೂ ಲಾರಿಗಳು ಇವನ್ನೂ ಹಾಳು ಮಾಡಲು ದಾರಿ ಮಾಡಿ ಕೊಟ್ಟಿವೆ. ನಮ್ಮ ಕೈಗಾರಿಕೆಗಳಾದ ಕಾಗದ, ಮರದ ತಿರುಳು, ರೇಯಾನ್, ಪ್ಲೈವುಡ್, ಚಿಪ್‌ಬೋರ್ಡ್ಸ್, ವಿನೀರ್ಸ್ ಮುಂತಾದುವೆಲ್ಲ ಮುಖ್ಯವಾಗಿ ಅರಣ್ಯವೃಕ್ಷಗಳನ್ನೇ ಅವಲಂಬಿಸಿವೆ.

ಕರ್ನಾಟಕದ ಅರಣ್ಯಗಳು ಉತ್ತರ ದಕ್ಷಿಣವಾಗಿ ವಿತರಣೆಗೊಂಡಿವೆ. ಇವುಗಳ ಬೆಳವಣಿಗೆ ಮತ್ತು ಅಭಿವೃದ್ಧಿಗಳಲ್ಲಿ ಮಳೆ ಹಂಚಿಕೆಯ ಪಾತ್ರ ಬಹು ಹಿರಿದಾದದ್ದು. ಸಂಪತ್ಕುಮಾರನ್ ಅವರು ಈ ಅರಣ್ಯಗಳನ್ನು ಮೂರು ಬಗೆಯವನ್ನಾಗಿ ವಿಂಗಡಿಸಿದ್ದಾರೆ.

1. ನಿತ್ಯ ಹರಿದ್ವರ್ಣದ ಅರಣ್ಯಪ್ರದೇಶ: ವಾರ್ಷಿಕ ಮಳೆ 150–300 ಸೆಂಮೀ. ವಿತರಣೆ ರಾಜ್ಯದ ಪಶ್ಚಿಮ ಭಾಗಗಳಲ್ಲಿ (ಕೊಡಗು, ಹಾಸನ, ಶಿವಮೊಗ್ಗ, ದ.ಕ., ಉ.ಕ., ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳು).

2. ಮಿಶ್ರ ಎಲೆಯುದುರುವ ಸಸ್ಯ (ಡೆಸಿಡ್ಯುಯಸ್) ಪ್ರದೇಶ: ವಾರ್ಷಿಕ ಮಳೆ 60–150 ಸೆಂಮೀ. ಹಿಂದೆ ಹೇಳಿದ ಅರಣ್ಯಪ್ರದೇಶದ ಪೂರ್ವಭಾಗದಲ್ಲಿದೆ.

3. ಶುಷ್ಕ ಪ್ರದೇಶದ ಸಸ್ಯಗಳು ಮತ್ತು ಕುರುಚಲು ಪ್ರದೇಶ: ವಾರ್ಷಿಕ ಮಳೆ 50 ಸೆಂಮೀ ಗಿಂತ ಕಡಿಮೆ. ಪೂರ್ವದ ಎಲ್ಲ ಜಿಲ್ಲೆಗಳಲ್ಲೂ ಕಂಡುಬರುತ್ತದೆ.

ಮೇಲೆ ಹೇಳಿದ ಮೂರು ವಿವಿಧ ರೀತಿಯವುಗಳಲ್ಲೂ ಇರುವ ಅನೇಕ ಪ್ರಭೇದಗಳು ಬೇರೆ ಬೇರೆಯವೇ ಆದರೂ ಅವುಗಳ ನಡುವೆ ನಿಖರವಾದ ಎಲ್ಲೆಗಳನ್ನು ಎಳೆಯಲಾಗುವುದಿಲ್ಲ. ಏಕೆಂದರೆ ಪಶ್ಚಿಮದಿಂದ ಪೂರ್ವಕ್ಕೆ ಒಂದು ರೀತಿಯ ಅರಣ್ಯ ಮತ್ತೊಂದು ರೀತಿಯದಕ್ಕೆ ನಿಧಾನವಾಗಿ ಎಡೆಗೊಡುತ್ತದೆ.

1. ನಿತ್ಯ ಹರಿದ್ವರ್ಣದ ಅರಣ್ಯ ಪ್ರದೇಶ: ಪಶ್ಚಿಮ ಘಟ್ಟಗಳ ಸಹ್ಯಾದ್ರಿಗಳ ಉದ್ದಕ್ಕೂ 10–70 ಕಿಮೀಗಳ ಅಗಲಕ್ಕೆ ಹರಡಿಕೊಂಡಿದೆ. ಪ್ರಪಂಚದ ಅನೇಕ ಕಡೆಗಳಲ್ಲಿ ಕಂಡುಬರುವ ಉಷ್ಣವಲಯದ ತೇವಪೂರಿತ ಅರಣ್ಯಗಳ ಅವಶೇಷಗಳನ್ನು ಇಲ್ಲಿಯ ಕಡಿದಾದ ಕಣಿವೆಗಳು, ಪರ್ವತಗಳ ಹಳ್ಳತಿಟ್ಟುಗಳು ಮತ್ತು ಪ್ರಪಾತಗಳಲ್ಲಿ ಕಾಣಬಹುದು. ರಸ್ತೆಗಳ ಅಭಾವ ಮತ್ತು ದಟ್ಟವಾಗಿ ಬೆಳೆದಿರುವ ಸಸ್ಯವರ್ಗದಿಂದಾಗಿ ಈ ಅರಣ್ಯಗಳ ಪ್ರವೇಶ ಅತಿ ದುರ್ಗಮವಾಗಿದೆ. ಇಲ್ಲಿನ ಸಸ್ಯವರ್ಗ ಮುಖ್ಯವಾಗಿ ಮೂರು ಸ್ತರಗಳಲ್ಲಿ ಕಂಡುಬರುತ್ತದೆ. ಪ್ರತಿ ಸ್ತರದಲ್ಲೂ ಕಂಡುಬರುವ ಪ್ರಭೇದಗಳು ಸಾಮಾನ್ಯವಾಗಿ ಬೇರೆಯವೇ ಆಗಿವೆ. ಈ ಒಂದೊಂದು ಸ್ತರಕ್ಕೂ ನಡುವಿನ ಅಂತರದಲ್ಲಿ ಉಷ್ಣತೆ ಹಾಗೂ ಆರ್ದ್ರತೆಯ ವ್ಯತ್ಯಾಸಗಳಿವೆ. ಇವು ದಟ್ಟವಾದ ಅಡವಿಗಳಾದ್ದರಿಂದ ಸೂರ್ಯರಶ್ಮಿ ಭೂಮಿಯನ್ನು ಸೋಕುವುದೇ ಕಷ್ಟ ಆದ್ದರಿಂದ ಅರಣ್ಯದ ಒಳಗೆ ಉಷ್ಣತೆ ಬಹು ಕಡಿಮೆ (ಮರಗಳ ಮೇಲಿನ ಒಣಗಾಳಿಯ ಉಷ್ಣತೆಗೆ ಹೋಲಿಸಿದರೆ). ಮಾನ್ಸೂನಿನ ಪ್ರಬಲ ಗಾಳಿಗಳಿಗೆ ಎದುರಾಗಿರುವ ಬೆಟ್ಟಗಳ ಮೇಲೆ ಬೆಳಯುವ ಮರಗಳ ಬೆಳೆವಣಿಗೆ ಕುಂಠಿತವಾಗಿದ್ದು ಅವು ಕುಳ್ಳಾಗಿ ವಿರೂಪಗೊಂಡಿರುತ್ತವೆ. ಅನೇಕ ವೇಳೆ ದಕ್ಷಿಣ ಪಶ್ಚಿಮ ಮಾನ್ಸೂನಿನ ಪ್ರಬಲವಾದ ಮಳೆಯಿಂದ ಕೂಡಿದ ಗಾಳಿಗಳು ಇಲ್ಲಿ ಪ್ರಭೇದಗಳ ವಿತರಣೆಯನ್ನು ನಿಯಂತ್ರಿಸುವುದುಂಟು. ಹಾವಸೆಗಳು, ತೆರ್ಮೆಗಳು, ಕಲ್ಲುಹೂಗಳು ಮತ್ತು ಇತರ ಅಪ್ಪು ಗಿಡಗಳು ಇಲ್ಲಿ ಸಮೃದ್ಧವಾಗಿ ಬೆಳೆಯುತ್ತವೆ.

ಈ ಅರಣ್ಯಗಳ ಮೇಲಿನ ಸ್ತರದಲ್ಲಿ ನೆಲದಿಂದ 60–70 ಮೀ ಗಳಷ್ಟು ಎತ್ತರದ ನಿತ್ಯಹರಿದ್ವರ್ಣ ವೃಕ್ಷಗಳು ಇವೆ. ಇವುಗಳ ಮೇಲೆ ಆರ್ಕಿಡ್ ಸಸ್ಯಗಳು, ಕೆಸುವಿನ ಜಾತಿಯ ಸಸ್ಯಗಳು ಮತ್ತು ತೆರ್ಮೆಗಳು ಹೇರಳವಾಗಿ ಬೆಳೆದಿವೆ. ಈ ಕೆಳಗಿನ ಕೆಲವು ಮುಖ್ಯ ಮರಗಳು ಮೇಲಿನ ಸ್ತರದಲ್ಲಿ ಕಂಡುಬರುತ್ತವೆ : ಉದಾ: ವಾಲಿಮರ, ಧೂಪ, ಎಣ್ಣೆಮರ, ಬಾಗೆ, ನಾಗಸಂಪಿಗೆ, ಸುರಹೊನ್ನೆ, ಸಾಲ್ ಇತ್ಯಾದಿ.

ಮಧ್ಯಮಸ್ತರದಲ್ಲಿ ಮೇಲಿನ ಸ್ತರದ ನೆರಳನ್ನು ಸಹಿಸಿಕೊಳ್ಳುವ ಮಧ್ಯಮ ಗಾತ್ರದ ವೃಕ್ಷಗಳಿವೆ. ವೃಕ್ಷಗಳ ದಪ್ಪ ಕಡಿಮೆ, ಎತ್ತರ 20–60 ಮೀ ಮೇಲಿನ ಸ್ತರ ನಿರ್ಮಿಸಿರುವ ಸೂಕ್ಷ್ಮವಾತಾವರಣದಲ್ಲಿ ಇವು ಚೆನ್ನಾಗಿ ಬದುಕಬಲ್ಲವು. ಈ ಮರಗಳ ಮೇಲೂ ಹಾವಸೆಗಳು ಹಾಗೂ ತೆರ್ಮೆಗಳು ಮುಂತಾದ ಅಪ್ಪುಗಿಡಗಳಿರುತ್ತವೆ. ಇಲ್ಲಿನ ಕೆಲವು ಮುಖ್ಯ ವೃಕ್ಷಗಳೆಂದರೆ–ರುದ್ರಾಕ್ಷಿ, ರಾಮನದಿಕೆ, ಕುಟುಗೇರಿ, ಹೈಗ, ಬಿಳಿದೇವದಾರು, ಹೆಬ್ಬಲಸು ಮಂಡ ಧೂಪ, ಚಿಟ್ಟು ತಂದ್ರಿಮರ, ಗೊಬ್ಬನೇರಳೆ ಇತ್ಯಾದಿ.

ಕೆಳಗಿನ ಸ್ತರದ ಮರಗಳ ಎತ್ತರ 10–20 ಮೀ ವರೆಗೆ ಇದೆ. ಅವುಗಳಲ್ಲಿ ಮುಖ್ಯವಾದ ಮರಗಳೆಂದರೆ ಸಗದೆ, ಹಲಸು, ಕಿಲಾರ್ ಭೋಗಿ, ಕನಾನಿ, ದಾಲ್ಚಿನ್ನಿ, ಎಲ್ಲಗ, ಕೆಂದಾಳ, ಅರದಳ ಕೂರ, ಕಾಡು ಕುಂಬಳ, ಸೊಟಿಗೆಮರ, ಲೊಡ್ಡಗಿನಮರಜ ಇತ್ಯಾದಿ.

ನಿತ್ಯಹರಿದ್ವರ್ಣ ಅರಣ್ಯಗಳು ಬಹುಪಾಲು ಎಲ್ಲ ಸ್ತರವನ್ನು ಆಕ್ರಮಿಸಿಕೊಂಡಿರುತ್ತವೆ. ಇವುಗಳ ತಳಭಾಗದಲ್ಲಿ ಪೊದೆಯಂತೆ ಬೆಳೆದುಕೊಳ್ಳುವ ಸಸ್ಯಗಳು ಕೆಳಗಿನಂತಿವೆ: ಉದಾ; ಹಾಸಿಗೆ ಮರ, ಕುಂಕುಮದ ಮರ, ಬಿಳಿ ದಾಳೆ, ಕಿಸ್ಕಾರ, ಬೆಂಡು ಮರ, ಪಾವಚೆ, ಆರ್ಥ್ರಿ, ದತ್ತಲೆ, ಕಾಡು ಅಡಿಕೆ, ಅಡರುಬಳ್ಳಿಗಳು : ನೀಟಮ್ ಉಲ, ಸ್ಪತೋಡಿಯ ರಾಕ್ಸ್‌ಬರ್ಗಿಯೈ, ದಾಲ್‌ಬರ್ಜಿಯ ಸಿಂಪತೆಟಿಕ, ಬಾಹಿನಿಯ ವಾಹ್ಲಿ (ಹೆಪ್ಪರಿಗೆ) ಸ್ಟ್ರಿಕ್ನಾಸ್ ಕಾಲಂಬ್ರಿನ (ನಾಗಮುಷ್ಠಿ), ಲವಂಗ ಎಲ್ಯೂತೆರಾಂಡ್ರ (ಲವಂಗ ಲತೆ), ಡಯಸ್ಕೋರಿಯ ಏಲೇಟ (ತೂನಗೆಣಸು) ಮತ್ತು ಎಂಟಾಡ ಪರ್ಸಿಯಥ.

ನಿತ್ಯಹರಿದ್ವರ್ಣ ಅರಣ್ಯಗಳ ಬೇರೆ ರೂಪಾಂತರಗಳಾದ ಷೋಲಾ ಅರಣ್ಯಗಳು 1000 ಮೀ ಗಳಿಗಿಂತಲೂ ಎತ್ತರವಿರುವ ಪರ್ವತ ಪ್ರದೇಶಗಳಲ್ಲಿ ಝರಿಗಳ ಎರಡು ಕಡೆಗಳಲ್ಲೂ ಬೆಳೆದುಕೊಂಡಿವೆ. ವಾಯುರಕ್ಷಿತ ಪ್ರದೇಶಗಳಲ್ಲಿ ಮಾತ್ರ ಇವು ಇದ್ದು ತೀರ ಮೇಲಕ್ಕೆ ಗಾಳಿಯ ಹೊಡೆತಕ್ಕೆ ಸಿಕ್ಕಿರುವ ಪರ್ವತಾಗ್ರಗಳಿಗೆ ಹೋದಂತೆಲ್ಲ ಹುಲ್ಲುಗಾವಲುಗಳಿವೆ. ಈ ಉಪೋಷ್ಣವಲಯದ ಅರಣ್ಯಗಳಲ್ಲಿ ಉಷ್ಣವಲಯದ ಮತ್ತು ಸರಿಸುಮಾರು ಸಮಶೀತೋಷ್ಣವಲಯದ ಪ್ರಭೇದಗಳು ಮಿಶ್ರವಾಗಿದ್ದು ಜೊತೆಗೂಡಿ ಬೆಳೆಯುತ್ತಿರುತ್ತವೆ. ಬಾಬಾಬುಡನ್, ಬಿಳಿಗಿರಿರಂಗನ ಬೆಟ್ಟ, ಕುದುರೆಮುಖ ಮುಂತಾದ ಬೆಟ್ಟ ಪ್ರದೇಶಗಳಲ್ಲಿ ಎತ್ತರದ ಭಾಗಗಳಲ್ಲಿ ಷೋಲಾ ಅರಣ್ಯಗಳು ಕಂಡುಬರುತ್ತವೆ. ವಿಶೇಷವೆಂದರೆ ಇಲ್ಲಿನ ಮರಗಳು ಅಷ್ಟು ಎತ್ತರಕ್ಕೆ ಬೆಳೆಯುವುದಿಲ್ಲ ಮತ್ತು ಬೇರುಗಳು ಆಳವಾಗಿರುವುದಿಲ್ಲ. ಮರಗಳ ಮೇಲೆ ಹಾವಸೆಗಳು ಬೆಳೆದುಕೊಂಡಿರುತ್ತವೆ.

ಇವುಗಳಲ್ಲಿ ಗ್ಲಾಕಿಡಿಯನ್ ಆರ್ಬೋರಿಯಮ್, ಲಿಟ್ಸಿಯ ಗ್ಲಾಬ್ರೇಟ, ಪಿಟೋಸ್ಪೋರಮ್ ಟೆಟ್ರಸ್ಪರ್ಮಮ್, ಕುಂಪೋಲಿ, ನೀರುಜಪ್ಪೆ, ಕಲ್‌ಬಿಕ್ಕಿ ಕ್ಯಾಲಿಕಾರ್ಪ ಟೊಮೆಂಟೋಸ, ಕ್ಯಾಂತಿಯಮ್ ಡೈಕಾಕಮ್ ವೈರೈಟಿ ಅಂಬೆಲೇಟಮ್, ಬೀಗದಮರ, ದಾಲ್ಚಿನ್ನಿ ಮೀಲಿಯೋಸ್ಮ ಮೈಕ್ರೊಕಾರ್ಪ, ಹೊನ್ನೆ, ಚಂಗ, ಶೆಫ್ಲೆರ ಕ್ಯಾಪಿಟೇಟ, ಕಂಡಗರಿಗೆ ಮತ್ತು ಷೋಲಾ ಇಳಿಜಾರುಗಳ ಹೊರಭಾಗದಲ್ಲಿ ಆರ್ಟಮಿಸಿಯ ಪಾರ್ವಿಫ್ಲೋರ, ಚಿನ್ನದಾವರೆ ಮತ್ತು ಕಿರು ಈಚಲು ಇವು ಮುಖ್ಯವಾದವು.

ಷೋಲಾ ಅರಣ್ಯಗಳು ವಾಯುಪೀಡಿತ ಪರ್ವತಾಗ್ರಗಳಲ್ಲಿ ಹುಲ್ಲುಗಾವಲುಗಳಿಗೆ ಎಡೆಗೊಟ್ಟಿದ್ದು ಕೆಳಗೆ ಬಂದಂತೆಲ್ಲ ನಿಧಾನವಾಗಿ ಉಷ್ಣವಲಯದ ತೇವಪೂರಿತ ಪರ್ಣಪಾತಿ ಸಸ್ಯದ ಅರಣ್ಯಗಳೊಂದಿಗೆ ಕೂಡಿಕೊಳ್ಳುತ್ತವೆ.

ಪರ್ವತಾಗ್ರಗಳ ಮೇಲೆ ಬೆಳೆಯುವ ಮೂಲಿಕೆಗಳ ಸಸ್ಯವರ್ಗ ಋತುಗಳಿಗೆ ತಕ್ಕಂತೆ ಬೇರೆ ಬೇರೆಯೇ ಆಗಿರುತ್ತದೆ. ಇಲ್ಲಿರುವ ಹುಲ್ಲುಗಳು ಹಾಗೂ ಮೂಲಿಕೆಗಳಿಗೆ ಉಷ್ಣತೆಯ ವೈಪರೀತ್ಯಗಳು, ಸೂರ್ಯನ ಗಾಢಪ್ರಖರತೆ ಮುಂತಾದುವನ್ನೆಲ್ಲ ತಡೆದುಕೊಳ್ಳುವ ಶಕ್ತಿ ಇದೆ. ಒಮ್ಮೊಮ್ಮೆ ಹುಲ್ಲುಗಾವಲುಗಳಲ್ಲಿ ಬೆಳೆವಣಿಗೆ ಕುಂಠಿತಗೊಂಡ, ಅಗಲ ಕಡಿಮೆ ಇರುವ ಎಲೆಗಳ, ಕಡಿಮೆ ಎತ್ತರದ ಮರಗಳು ಕಂಡು ಬರುವುವು. ಓಲಿಯ, ವೆಂಡ್‌ಲ್ಯಾಂಡಿಯ, ಆಲೋಫಿಲಸ್, ಯೂಜೀನಿಯ, ಸಿಂಪ್ಲೊಕಾಸ್ ಮತ್ತು ಲೊನಿಸೆರ ಇವೇ ಆ ಜಾತಿಯವು. ಕುರಂಜಿಗಿಡದ ಪೊದೆಗಳಂತೂ ಸಮೃದ್ಧವಾಗಿ ಬೆಳೆದಿರುತ್ತವೆ. ಇಲ್ಲಿರುವ ಪ್ರಧಾನ ಹುಲ್ಲುಗಳು: ಆಂಡ್ರೋ ಪೋಗಾನ್ ಪರ್ಟುಸಸ್, ಇಶೀಮಮ್ ಪೈಲೋಸಮ್ (ಕುಂದರಕಡ್ಡಿಹುಲ್ಲು), ತಿಮಿಡ ಇಂಬರ್ಬಿಸ್, ಸಿಂಬೊಪೋಗಾನ್ ಪಾಲಿನ್ಯೂರೋಸ್ ಮತ್ತು ಎರಾಗ್ರಾಸ್ಟಿಸ್ ನೈಗ್ರ.

2. ಮಿಶ್ರ ಎಲೆ ಉದುರುವ ಸಸ್ಯ ಪ್ರದೇಶ :ಘಟ್ಟ ಪ್ರದೇಶಗಳ ಪೂರ್ವಭಾಗದಲ್ಲಿದೆ. ಇಲ್ಲಿ ಬಿದಿರು, ತೇಗಗಳ ಜೊತೆಗೆ ನಿತ್ಯಹರಿದ್ವರ್ಣ ಹಾಗೂ ಪರ್ಣಪಾತಿ ಸಸ್ಯ ಪ್ರಭೇದಗಳು ಮಿಶ್ರಗೊಂಡು ಬೆಳೆಯುತ್ತವೆ. ಈ ಪ್ರದೇಶದ ಅಗಲ ಪಶ್ಚಿಮದಿಂದ ಪೂರ್ವಕ್ಕೆ 35–50 ಕಿಮೀ ಗಳಷ್ಟಿದೆ. ಈ ಅರಣ್ಯಗಳನ್ನು ಸುಲಭವಾಗಿ ಪ್ರವೇಶಿಸಬಹುದಾದ್ದರಿಂದ ಸರ್ಕಾರಕ್ಕೆ ಇವುಗಳಿಂದ ಒಳ್ಳೆಯ ಆದಾಯ ಬರುತ್ತದೆ. ಬೀಳುವ ಮಳೆಯ ಪ್ರಮಾಣಕ್ಕನುಗುಣವಾಗಿ ತೇವಪೂರಿತ ಹಾಗೂ ಒಣ ಪರ್ಣಪಾತಿ ಸಸ್ಯದ ಅರಣ್ಯಗಳು ಇಲ್ಲಿ ಬೆಳೆಯುತ್ತವೆ. ಇವೆರಡಕ್ಕಿರುವ ಮುಖ್ಯ ವ್ಯತ್ಯಾಸವೆಂದರೆ ಮೊದಲಿನದರಲ್ಲಿ ಮರಗಳ ಬೆಳೆವಣಿಗೆ ಬಲು ಹುಲುಸಾಗಿರುವುದು. ಇಲ್ಲೂ ಸಸ್ಯವರ್ಗದಲ್ಲಿ ವಿವಿಧಸ್ತರಗಳು ಕಂಡುಬಂದರೂ ಅವು ನಿತ್ಯಹರಿದ್ವರ್ಣ ರೀತಿಯದರಷ್ಟು ಸ್ಪಷ್ಟವಾಗಿರುವುದಿಲ್ಲ. ಮರಗಳು ಅಷ್ಟು ಎತ್ತರವಾಗಿರುವುದಿಲ್ಲ ಮತ್ತು ಅಲ್ಲಲ್ಲಿ ತೆರೆದ ಸ್ಥಳಗಳಿರುತ್ತವೆ. ಸ್ಥಳ ಮತ್ತು ತೇವಗಳಿಗನುಗುಣವಾಗಿ ಸಸ್ಯವರ್ಗ ವೈವಿಧ್ಯಪೂರ್ಣವಾಗಿದೆ. ಈ ಅರಣ್ಯಗಳಿರುವ ಕಣಿವೆಗಳಲ್ಲಿ ಮರಗಳ ಎತ್ತರ 30–40 ಮೀ. ಇಲ್ಲಿನ ಮುಖ್ಯ ಮರಗಳೆಂದರೆ – ಹೆತ್ತೇಗ, ಬಿಲ್ವಾರ, ಪಾದ್ರಿ, ನಂದಿ, ಜಂಬೆ, ತೇಗ, ಬೆಂಡೆಮರ, ಹೊನ್ನೆ ಮುಂತಾದವು. ಇವುಗಳ ಪೈಕಿ ಅನೇಕ ಮರಗಳಿಗೆ ಸುತ್ತಳತೆ 3–5 ಮೀ ಗಳಿಷ್ಟಿರುತ್ತದೆ. ಮೇಲಿನ ಅರಣ್ಯಗಳ ಸ್ಥಳೀಯ ರೂಪಾಂತರಗಳಲ್ಲಿ ಈ ಕೆಳಗಿನ ಸಸ್ಯಗಳೂ ಕಂಡುಬರುತ್ತವೆ : ಉದಾ: ಮಡಿಮರ, ಗೋಮಜ್ಜಿಗೆ, ಕೂಲಿ, ಜಂಬುನೇರಳೆ ಇತ್ಯಾದಿ. ಇವುಗಳ ಜೊತೆಗೆ ಕಿರುಬಿದಿರು ಮತ್ತು ಹೆಬ್ಬಿದಿರುಗಳ ಬೆಳೆದಿರುತ್ತವೆ. ಒಣಪರ್ಣಪಾತಿ ಅರಣ್ಯ ಶಕ್ತಿಯುಡುಗಿನ ತೇವಪೂರಿತ ಅರಣ್ಯದ ರೂಪಾಂತರ. ಇದರ ಮೇಲಿನ ಸ್ತರದಲ್ಲಿ ತೇಗವಿರುತ್ತದೆ. ಅದರ ಜೊತೆಗೇ ಮತ್ತಿ, ನಂದಿ ಮತ್ತು ದಿಂಡಿಗಗಳಿರುತ್ತವೆ. ಎರಡನೆಯ ಸ್ತರವೇನಾದರೂ ಕಂಡುಬಂದಲ್ಲಿ ಅದರಲ್ಲಿ ನೆಲ್ಲಿ, ಕಾವಲ್, ಮುರ್ಕಲಿ ಮುಂತಾದ ಮರಗಳಿರುತ್ತವೆ. ಇಲ್ಲಿ ಅನೇಕ ಅಡರುಬಳ್ಳಿಗಳೂ ಇರುತ್ತವೆ. ಅವುಗಳಲ್ಲಿ ಮುಖ್ಯವಾದವು ಕಂಗೋಂದಿ ಬಳ್ಳಿ, ಕಾಡು ಹಂಬು ತಾವರೆ ಮತ್ತು ಮರ್ಸದ ಬಳ್ಳಿ.

3. ಶುಷ್ಕ ಪ್ರದೇಶದ ಸಸ್ಯಗಳು ಮತ್ತು ಕುರುಚಲು ಪ್ರದೇಶ: ಈ ಪ್ರದೇಶ ವಿಶಾಲವಾದುದು ಮತ್ತು ಉಳಿದ ರೀತಿಯ ಅರಣ್ಯಗಳ ಪೂರ್ವಕ್ಕೆ ಇದು ಹಬ್ಬಿದೆ. ಕರ್ನಾಟಕದ ಶೇ. 80–85 ಭೂಪ್ರದೇಶಗಳನ್ನು ಇದು ಆವರಿಸಿದೆ. ಇದರ ಸಸ್ಯವರ್ಗ ಎಂದೂ ಅರಣ್ಯದಂತೆ ಕಾಣಲಾರದು. ಇಲ್ಲಿನ ವಾರ್ಷಿಕ ಮಳೆ ಅತಿ ಕಡಿಮೆಯಾದ್ದರಿಂದ ಮರಗಳು ಬೆಳೆಯುವುದು ಬಹಳ ಕಷ್ಟ. ಆಕಸ್ಮಾತ್ತಾಗಿ ಮರಗಳೇನಾದರೂ ಬೆಳೆದರೆ ಅವು ಅಲ್ಲೊಂದು ಇಲ್ಲೊಂದರಂತೆ ವಿತರಣೆಗೊಂಡಿದ್ದು ಬಹುಸಣ್ಣ ಪ್ರಮಾಣದವಾಗಿರುತ್ತವೆ. ಇಲ್ಲಿ ಅನಾವೃಷ್ಟಿಯನ್ನು ಸಹಿಸಿಕೊಳ್ಳಬಲ್ಲ ವೈವಿಧ್ಯ ಪೂರ್ಣವಾದ ಮತ್ತು ಮುಳ್ಳುಗಳಿರುವ ಅನೇಕ ಪ್ರಭೇದಗಳಿವೆ. ಇಲ್ಲಿ ಬೆಳೆಯುವ ಮುಖ್ಯ ಮರಗಳೆಂದರೆ – ತಂಡರಸಿ, ಕಾಚಿನ ಮರ, ಜಾಲಿ, ಕಡುವಲೆ, ದಿಂಡಿಗ, ಕಾರಾಚ, ಶ್ರೀಗಂಧ, ಅರಚಿನಬೂರಗ, ಕಕ್ಕೆ, ಎಬನಿ ಮುತ್ತುಗ, ಅಂಕೋಲೆ ಇತ್ಯಾದಿ.

ಕೆಲವು ಜಿಲ್ಲೆಗಳಲ್ಲಿ ಸಣ್ಣ ಗುಡ್ಡಗಳಲ್ಲಿ ಮುಂಡುಗಳ್ಳಿ, ಕರೀಉಪ್ಪಿಗಿಡ ಮುಂತಾದವು ಇವೆ. ವಿಶಾಲವಾದ ಬಯಲುಗಳಲ್ಲಿ ಮರಗಳ ಮಧ್ಯೆ ಅನೇಕ ಜಾತಿಯ ಹುಲ್ಲುಗಳಿವೆ. ಸುಂಕರೀಹುಲ್ಲು, ದೊಡ್ಡ ಹಂಚೀಹುಲ್ಲು, ಕುಂತಿಹುಲ್ಲು ಮತ್ತು ಅಪ್ಲೂಡ ಮ್ಯೂಟಿಕಗಳು ಇವುಗಳಲ್ಲಿ ಕೆಲವು.

ಮೇಲಿನ ಮೂರು ಮುಖ್ಯ ರೀತಿಯ ಅರಣ್ಯಪ್ರದೇಶಗಳ ಪೈಕಿ ನಿತ್ಯಹರಿದ್ವರ್ಣಕಾಡುಗಳನ್ನು ಕಡ್ಡಾಯವಾಗಿ ಸಂರಕ್ಷಿಸಬೇಕು. ಎರಡನೆಯ ರೀತಿಯದನ್ನು ದುರುಪಯೋಗಗೊಳಿಸಿಕೊಳ್ಳದೆ ಸೂಕ್ತವಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಮೂರನೆಯ

ರೀತಿಯ ಅರಣ್ಯಪ್ರದೇಶವಿರುವ ವಿಶಾಲಪ್ರದೇಶದಲ್ಲಿ ವನಮಹೋತ್ಸವ ಕಾರ್ಯಕ್ರಮಗಳನ್ನು ನಡೆಸಿ ಅರಣ್ಯಾಭಿವೃದ್ಧಿಯಾಗುವಂತೆ ಮಾಡುವುದು ಒಳ್ಳೆಯದು. ಮರದ ಕೈಗಾರಿಕೆಗಳಿಗೆ ಬೇಕಾದ ಮರವನ್ನು ಶೀಘ್ರಗತಿಯಲ್ಲಿ ಒದಗಿಸುವ ಪ್ರಭೇದಗಳನ್ನು ಈ ಭಾಗದ ಪ್ರದೇಶಗಳಲ್ಲಿ ಬೆಳೆಸಬೇಕು. (ಬಿ.ಎ.ಆರ್.)

**ಕರ್ನಾಟಕದ ಭೂವಿಜ್ಞಾನ:** ಕರ್ನಾಟಕದ ಭೂವೈಜ್ಞಾನಿಕ ಅಧ್ಯಯನ ಪ್ರಾಕೃತಿಕ ವಿಭಾಗಗಳಷ್ಟೇ ಮುಖ್ಯವಾದುದು. ಭೂರಚನೆ ಭೂಸ್ವರೂಪವನ್ನು ರೂಪಿಸುತ್ತದೆ. ಜೊತೆಗೆ ಖನಿಜ, ಶಿಲೆ ಹಾಗೂ ಮಣ್ಣುಗಳ ಹಂಚಿಕೆಯನ್ನೂ ನಿರ್ಧರಿಸುತ್ತದೆ. ಭಾರತದ ಪರ್ಯಾಯ ಪ್ರಸ್ಥಭೂಮಿಯ ಒಂದು ಭಾಗದಲ್ಲಿ ಕರ್ನಾಟಕವೂ ವಿಸ್ತರಿಸಿದ್ದು, ಅದು ಪುರಾತನ ಭೂ ಇತಿಹಾಸ ಮತ್ತು ಶಿಲಾ ಪರಂಪರೆಯನ್ನು ಹೊಂದಿದೆ.

ಬಾಹ್ಯಶಕ್ತಿಗಳ ಕಾರ್ಯಾಚರಣೆಯಿಂದಾಗಿ ಶಿಲೆಗಳು ರೂಪಾಂತರಗೊಂಡಿರುತ್ತವೆ. ರಾಜ್ಯದ ಪ್ರಸ್ತುತ ಶಿಲಾ ಸಮೂಹವನ್ನು ಕುರಿತು ಭೂವಿಜ್ಞಾನಿಗಳು ಅಧ್ಯಯನ ಮಾಡಿ ಬರೆದಿದ್ದಾರೆ. ಭೂ ಇತಿಹಾಸದ ಮೊಟ್ಟಮೊದಲ ಅಧ್ಯಯನ ಕ್ಯಾಪ್ಟನ್ ಬಿ.ಜೆ. ಬೋಲ್ಡ್ ಎಂಬ ಭೂವಿಜ್ಞಾನಿಯಿಂದ ಪ್ರಾರಂಭ (1880). ಅವರ ಪ್ರಕಾರ ಕರ್ನಾಟಕದ ಭೂವಿಸ್ತೀರ್ಣದಲ್ಲಿ ಶೇ. 70 ಭಾಗ ಸೂಕ್ಷ್ಮ ಗೆರೆಗಳುಳ್ಳ ಬೂದು ಬಣ್ಣದ ಗ್ರಾನೈಟ್-ನೈಸ್ ಶಿಲೆಗಳಿಂದಲೂ ಉಳಿದ ಭಾಗದಲ್ಲಿ ಶೇ. 20 ಭಾಗವು ಹಸುರುಬಣ್ಣದ ಭಿನ್ನಸ್ತರದ (ಶಿಸ್ಟ್) ಶಿಲೆಗಳಿರುವುದು ತಿಳಿದು ಬಂದಿತು. ಇನ್ನೂ ಹಲವು ಭೂವಿಜ್ಞಾನಿಗಳು ರಾಜ್ಯದ ಭೂ ಇತಿಹಾಸವನ್ನು ಅಧ್ಯಯನ ಮಾಡಿ 2,700 ದಶಲಕ್ಷ ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಇಲ್ಲಿನ ಶಿಲಾ ಸಮುದಾಯ "ಆರ್ಷೇಯ ಯುಗಕ್ಕೆ" ಸೇರಿರುತ್ತದೆಂದು ಅಭಿಪ್ರಾಯಪಟ್ಟಿರುವರು. ಇವುಗಳನ್ನು ಎರಡು ಪ್ರಧಾನಗುಂಪುಗಳಾಗಿ ವಿಂಗಡಿಸಲಾಗಿದೆ.

1. ಕಣರಚನೆಯ ಪದರು ಶಿಲೆಗಳು (ಶಿಸ್ಟ್ಸ್) : ಧಾರವಾಡ ಶಿಲಾವರ್ಗವೆಂದು ಇವುಗಳ ಹೆಸರು. ಬ್ರೂಸ್ ಫೂಟ್ ಭೂವಿಜ್ಞಾನಿ ಪ್ರಥಮ ಬಾರಿಗೆ ಧಾರವಾಡದ ಬಳಿ ಶೋಧನೆ ಮಾಡಿದುದರಿಂದ ಇವುಗಳಿಗೆ ಧಾರವಾಡದ ಶಿಸ್ಟ್ ಎಂದು ಹೆಸರಿಸಲಾಗಿದೆ. ರೂಪಾಂತರ ಹೊಂದಿದ ಜಲಜಶಿಲೆಗಳು ಮತ್ತು ಜ್ವಾಲಾಮುಖಿಜನ್ಯಶಿಲೆಗಳೂ ಆಂಫಿಬೊಲೈಟ್, ಪೆಂಡೊಟೈಟ್, ಡನೈಟ್ ಮುಂತಾದ ಅಲ್ಪಸಿಲಿಕಾಂಶ (ಬೇಸಿಕ್) ಶಿಲೆಗಳೂ ಇವುಗಳಲ್ಲಿ ಸೇರಿವೆ. ವ್ಯಾಪ್ತಿ ಸು. 20,700 ಚ.ಕಿಮೀ.

2. ಗ್ರಾನೈಟ್ ಮತ್ತು ನೈಸ್ ಶಿಲಾವಿಧಗಳು: ಈ ಶಿಲೆ ರಾಜ್ಯದಲ್ಲಿ ಅಧಿಕವಾಗಿವೆ. ರಾಜ್ಯದ ದಕ್ಷಿಣಕ್ಕೆ ಇವುಗಳ ಹಂಚಿಕೆ ಹೆಚ್ಚು. ಅನೇಕ ಕಡೆ ಧಾರವಾಡ ಪದರು ಶಿಲೆಗಳನ್ನು ಛೇದಿಸಿಕೊಂಡು ಹೊರಬಂದಿರುವುದರಿಂದ (ಅಂತಸ್ಸರಣ) ಧಾರವಾಡ ಶಿಲಾವರ್ಗವೇ ಈ ರಾಜ್ಯದಲ್ಲಿ ಅತ್ಯಂತ ಪುರಾತನವಾದುದೆಂದು ಪರಿಗಣಿಸಲಾಗಿದೆ.

ಈಗ ಹೊರಕಾಣುತ್ತಿರುವ ಧಾರವಾಡ ಶಿಲಾವರ್ಗಗಳು ಹಲವಾರು ಉದ್ದವಲಯಗಳಾಗಿ ಉತ್ತರದಕ್ಷಿಣದುದ್ದಕ್ಕೂ ಹಬ್ಬಿವೆ. ಇವುಗಳ ಸುತ್ತ ಗ್ರಾನೈಟ್ ಮತ್ತು ನೈಸ್ ಶಿಲೆಗಳು ಹೆಚ್ಚುಕಡಿಮೆ ಸಮಾಂತರವಾಗಿ ಮೂರು ದೊಡ್ಡ ವಲಯಗಳಲ್ಲಿ ಹರಡಿವೆ. ಪಶ್ಚಿಮದಿಂದ ಪೂರ್ವಕ್ಕೆ ಹಾದುಹೋಗುವಾಗ ಧಾರವಾಡ ಶಿಲಾವಲಯಗಳನ್ನು ಒಂದಾದಮೇಲೊಂದರಂತೆ ಕಾಣಬಹುದು. ಇವನ್ನು ಬಿ.ರಾಮರಾಯರು ಕೆಳಕಂಡಂತೆ ವಿಂಗಡಿಸಿದ್ದಾರೆ (1940).

1. ಪಶ್ಚಿಮ ವಲಯ : ಕ್ಯಾಸಲ್‌ರಾಕ್, ಕೊಡಚಾದ್ರಿ, ಆಗುಂಬೆ, ಕುದುರೆಮುಖ ಮತ್ತು ಮಡಿಕೇರಿ ಶಿಲಾಪ್ರದೇಶಗಳನ್ನೊಳಗೊಂಡಿದೆ.

2. ಪಶ್ಚಿಮ ಮಧ್ಯವಲಯ : ಧಾರವಾಡಕ್ಕೆ ಸ್ವಲ್ಪ ಉತ್ತರದಲ್ಲಿ ಪ್ರಾರಂಭವಾಗಿ ದಕ್ಷಿಣದಲ್ಲಿ ಕಾವೇರಿ ನದಿಯ ತೀರದವರೆಗೆ ಸು. 435 ಕಿಮೀ ಉದ್ದವಾಗಿ ಹಬ್ಬಿದೆ. ಇದರಲ್ಲಿ ಮುಖ್ಯವಾಗಿ ಶಿವಮೊಗ್ಗ, ಹೊಳೆನರಸೀಪುರ ಮತ್ತು ಕೃಷ್ಣರಾಜಪೇಟೆ ಪದರು ಶಿಲಾವಲಯಗಳು ಸೇರಿವೆ. ಪಶ್ಚಿಮ ಮತ್ತು ಪಶ್ಚಿಮ ಮಧ್ಯ ಹರವಿನ ಒಟ್ಟು ವಿಸ್ತೀರ್ಣ ಸು. 11,650 ಚ.ಕಿಮೀ.

3. ಮಧ್ಯವಲಯ : ಉತ್ತರದಲ್ಲಿ ಗದಗ ಡಂಬಳದಿಂದ ಪ್ರಾರಂಭವಾಗಿ ಸ್ವಲ್ಪ ದೂರ ಆಗ್ನೇಯಾಭಿಮುಖವಾಗಿ ದಕ್ಷಿಣದತ್ತ ಹರಡಿದೆ. ಇದು ಚಿತ್ರದುರ್ಗ, ಚಿಕ್ಕನಾಯಕನ ಹಳ್ಳಿ, ನಾಗಮಂಗಲ ಮತ್ತು ನುಗ್ಗೇಹಳ್ಳಿ ಮುಂತಾದ ಪದರುಶಿಲಾಪ್ರದೇಶಗಳನ್ನೊಳಗೊಂಡಿದೆ.

4. ಪೂರ್ವ ಮಧ್ಯವಲಯ : ಅನೇಕ ಚಿಕ್ಕ ಪ್ರದೇಶಗಳನ್ನೊಳಗೊಂಡಿದೆ. ಇವುಗಳಲ್ಲಿ ಬ್ಯಾಂಡೈಟ್ ಶಿಲಾವರ್ಗ, ಕೋಡಮೈಟ್ ಶಿಲಾವರ್ಗ ಮತ್ತು ಸಾಕರ್‌ಸನೈಟ್ ಶಿಲಾವರ್ಗಗಳು ಮುಖ್ಯವಾದವು.

5. ಪೂರ್ವವಲಯ : ಕೋಲಾರ ಜಿಲ್ಲೆಯಲ್ಲಿದೆ. ಇದಕ್ಕೆ ಕೋಲಾರ ಶಿಲಾವಲಯವೆಂದು ಹೆಸರು. ಈ ಶಿಲೆಗಳು ಉತ್ತರದಕ್ಷಿಣವಾಗಿ ಹಬ್ಬಿವೆ. ಸು. 260 ಚ.ಕಿಮೀ ಗಳು. ಭಾರತದ ಚಿನ್ನದ ಉತ್ಪತ್ತಿಗೆ ಇದೇ ಮುಖ್ಯ ಕೇಂದ್ರ.

ಶಿಲಾ ಓಟ : ಧಾರವಾಡ ಶಿಲೆಗಳ ಪ್ರಾದೇಶಿಕ ಶಿಲಾ ಓಟ (ಸ್ಟ್ರೈಕ್) ಉತ್ತರ ಭಾಗದಲ್ಲಿ ಉತ್ತರವಾಯವ್ಯ ಮತ್ತು ದಕ್ಷಿಣಾಆಗ್ನೇಯವಾಗಿಯೂ ದಕ್ಷಿಣಕ್ಕೆ ಬಂದಂತೆಲ್ಲ ಉತ್ತರ ದಕ್ಷಿಣವಾಗಿಯೂ ದಕ್ಷಿಣದ ಎಲ್ಲೆಯ ಹತ್ತಿರ ಈಶಾನ್ಯ ನೈಋತ್ಯವಾಗಿಯೂ ಇವೆ.

ಶಿಲಾವಿಭಜನೆ : ಧಾರವಾಡ ಶಿಲಾಸಮುದಾಯಗಳನ್ನು ಬಹುಕಾಲದಿಂದ ಹಲವಾರು ಭೂ ವಿಜ್ಞಾನಿಗಳು ವಿಂಗಡಿಸಲು ಪ್ರಯತ್ನಿಸಿದ್ದಾರೆ. ಇವರಲ್ಲಿ ಮೊದಲಿಗರು ಸಂಪತ್ ಐಯ್ಯಂಗಾರ್ (1906) ಅನಂತರ ಡಬ್ಲ್ಯು.ಎಫ್. ಸ್ಮಿತ್ (1916). ಬಿ.ರಾಮರಾಯರು 1940 ರಲ್ಲಿ ಇದನ್ನು ವಿಂಗಡಿಸಿದ್ದಾರೆ.

ಧಾರವಾಡ ಶಿಲೆಗಳ ಉತ್ಪತ್ತಿ : ಇದೊಂದು ಆಸಕ್ತಿಯನ್ನುಂಟುಮಾಡುವ ವಿಚಾರ. ಕಾರಣ ಈ ಶಿಲೆಗಳು ಸಮುದ್ರದ ಅಡಿಯಲ್ಲಾದ ಇತರ ಶಿಲೆಗಳಂತಲ್ಲ. ಈವರೆಗೆ ಅನೇಕ ಭೂವಿಜ್ಞಾನಿಗಳು ಇವುಗಳ ಉತ್ಪತ್ತಿಯ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಶಿಲೆಗಳು ಸಮಕಾಲೀನ ಶಿಲಾರಸಪ್ರವಾಹ ಹಾಗೂ ಸಿಲಿಕಾಂಶರಹಿತ ಅಗ್ನಿಶಿಲೆಗಳಿಂದಾಗಿರುವ ಮತ್ತು ನೈಸ್ ತಳದ ಶಿಲಾತೊಡಕಿನ ಮೇಲೆ ಅನನುರೂಪತೆಯಿಂದಿರುವ ತೀವ್ರ ರೂಪಾಂತರ ಜಲಜ ಶಿಲೆಗಳೆಂದು ರಾಬರ್ಟ್ ಬ್ರೂಸ್‌ಫುಟ್ ಹೇಳಿದ್ದಾನೆ (1896). ಆದರೆ ಡಬ್ಲ್ಯು.ಎಫ್. ಸ್ಮಿತ್‌ನ ಅಭಿಪ್ರಾಯದಲ್ಲಿ ಈ ಶಿಲೆಗಳೆಲ್ಲವೂ ಅಗ್ನಿಶಿಲೆಗಳಿಂದಾದವುಗಳೇ ವಿನಾ ಜಲಜಶಿಲೆಗಳ ರೂಪಾಂತರದಿಂದಾದವುಗಳಲ್ಲ (1911). ಸು. ಎರಡು ದಶಕಗಳ ತರುವಾಯ ಬಿ.ರಾಮರಾವ್ ಮತ್ತು ಸಹೋದ್ಯೋಗಿಗಳು ಧಾರವಾಡ ಪದರು ಶಿಲಾವರ್ಗದಲ್ಲಿ ಅಲೆಯ ಗುರುತುಗಳು, ಪ್ರವಾಹಸ್ತರಗಳು ಮುಂತಾದ ನಿರ್ದಿಷ್ಟ ಜಲಜಶಿಲಾರಚನೆಗಳನ್ನು ಕಂಡು ಇವು ಜಲಜಶಿಲಾಜನ್ಯವೆಂದು ಅಭಿಪ್ರಾಯಪಟ್ಟರು. ಸಿ. ಎಸ್. ಪಿಚ್ಚಮುತ್ತು ಮತ್ತು ಇತರ ಸಂಶೋಧಕರ ಅಭಿಪ್ರಾಯದಲ್ಲಿ ಧಾರವಾಡ ಪದರುಶಿಲಾವರ್ಗದ ಅನೇಕ ಶಿಲಾವಿಧಗಳು ಜಲಜನ್ಯವೆಂದಿದೆ.

ಶಿಲಾವರ್ಣನೆ : ಈ ವರ್ಗದಲ್ಲಿರುವ ಅನೇಕ ಶಿಲಾವಿಧಗಳನ್ನು ಸ್ಥೂಲವಾಗಿ ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

1. ಸಿಲ್ ಮತ್ತು ಡೈಕುಗಳನ್ನೊಳಗೊಂಡ ಜ್ವಾಲಾಮುಖಿಜಶಿಲೆಗಳು : ಧಾರವಾಡ ಪದರುಶಿಲೆಗಳ ಕೆಳಭಾಗದಲ್ಲಿ ರೂಪಾಂತರ ಹೊಂದಿರುವ ಜ್ವಾಲಾಮುಖಿ ಶಿಲೆಗಳಿವೆ. ಇವುಗಳ ಕಾಲದ ಬಗ್ಗೆ ಬಲು ತೊಡಕಿದೆ. ಇವುಗಳಲ್ಲಿ ಕೆಲವು ಅಧಿಕ ಸಿಲಿಕಾಂಶ, ಮಧ್ಯವರ್ತಿ (ಮಿತ ಸಿಲಿಕಾಂಶ) ಮತ್ತು ಅತ್ಯಲ್ಪ ಸಿಲಿಕಾಂಶ ಶಿಲೆಗಳು. ಇವು ಲಾವಾ ಪ್ರವಾಹಗಳು, ಸಿಲ್ಲುಗಳು, ಪದರಗಳು, ಡೈಕುಗಳು– ಈ ರೂಪಗಳಲ್ಲಿಯೂ ಜ್ವಾಲಾಮುಖಿ ಬೂದಿ, ಟುಫ್ ಮತ್ತು ಕಾಂಗ್ಲಾಮರೇಟುಗಳಾಗಿಯೂ ಇವೆ. ಅಧಿಕ ಸಿಲಿಕಾಂಶದ ಜ್ವಾಲಾಮುಖಿಜನ್ಯ ಶಿಲೆಗಳು ರೂಪಾಂತರಿಸಿ ಒಪಾಲ್‌ಸೆಂಟ್ ಬೆಣಚಿನಿಂದ ಕೂಡಿದ ಶಿಲೆಗಳಾಗಿವೆ. ಇವು ಚಿತ್ರದುರ್ಗ ಜಿಲ್ಲೆಯ ಮಲೆಬೆನ್ನೂರು ಮತ್ತು ತೆಕ್ಕಲುವಟ್ಟಿ ಬಳಿ ಸಿಗುವುವು. ಮಿತ ಸಿಲಿಕಾಂಶ ಮತ್ತು ಅಲ್ಪ ಸಿಲಿಕಾಂಶ ಶಿಲೆಗಳು ರೂಪಾಂತರದಿಂದ ಪದರು ರಚನೆಪಡೆದು ತಿಳಿ ಹಸಿರುಬಣ್ಣದ ಕ್ಲೋರೈಟ್ ಪದರು ಶಿಲೆಗಳಾಗಿವೆ. ಇವುಗಳಿಗೆ ಸಣ್ಣಕಣರಚನೆ ಇದೆ. ಇವು ಶಿವಮೊಗ್ಗ ಮತ್ತು ಚಿತ್ರದುರ್ಗಶಿಲಾಪ್ರದೇಶಗಳಲ್ಲಿವೆ.

2. ಕಣರಚನೆಯ ಪದರು ಶಿಲೆಗಳು : ಧಾರವಾಡ ಶಿಲಾವರ್ಗದ ಬಹುಭಾಗ ವಿವಿಧ ಕಣರಚನೆಯಿಂದ ಕೂಡಿರುವ ಪದರುಶಿಲೆಗಳಿಂದಲೂ ಕಣಕ ಶಿಲೆಗಳಿಂದಲೂ ಕೂಡಿದೆ. ಇವುಗಳಲ್ಲಿ ಮುಖ್ಯವಾದವು : (i) ಕ್ಲೋರೈಟ್ ಪದರುಶಿಲೆ; (ii) ಮೈಕಾ ಪದರುಶಿಲೆ; (iii) ಕಪ್ಪು ಹಾರ್ನ್‌ಬ್ಲೆಂಡ್ ಪದರುಶಿಲೆ; (iv) ಟ್ರಿಮೋಲೈಟ್ ಆಕ್ಟಿನೋಲೈಟ ಪದರುಶಿಲೆ; (v) ಕ್ಯಾಲ್ಕ್‌ಪೈರಾಕ್ಸೀನ್ ಕಣಕ ಶಿಲೆಗಳು; (vi) ಕಯನೈಟ್ ಸ್ಟಾರೊಲೈಟ್ ಪದರುಶಿಲ; (vii) ಕಾರ್ಡಿಯರೈಟ್ ಸಿಲಿಮನೈಟ್ ಪದರುಶಿಲೆ; (viii) ಟಾಲ್ಕ್ ಬಯೊಟೈಟ್ ಪದರುಶಿಲೆ, (ix) ಕಯನೈಟ್ ಸಿಲಿಮನೈಟ್ –ಗ್ರಾಫೈಟ್ ಪದರುಶಿಲೆ.

3. ವಿರೂಪ ಜಲಜಶಿಲೆಗಳು : ಈ ಶಿಲೆಗಳು ಇತರ ಶಿಲೆಗಳಿಗಿಂತ ಕಡಿಮೆಯಿದ್ದರೂ ಉತ್ಪತ್ತಿಯ ರೀತಿಯಿಂದ ಬಹುಮುಖ್ಯವೆನಿಸಿವೆ. ಇವು ಅನೇಕ ಭೂವೈಜ್ಞಾನಿಕ ಕಾರಣಗಳಿಂದಾಗಿ ವಿರೂಪಹೊಂದಿರುವುವು. ಇವುಗಳಲ್ಲಿ ಮುಖ್ಯವಾದವು: (i) ಕಂಗ್ಲಾಮರೇಟುಗಳು; (ii) ಕ್ವಾರ್ಟ್ಜೈಟುಗಳು; (iii) ಫೆರುಜಿನಸ್ ಕ್ವಾರ್ಟ್ಜೈಟುಗಳು; (iv) ಫಿಲ್ಲೈಟುಗಳು ಮತ್ತು ಅರ್ಜಿಲೈಟುಗಳು; (v) ಗ್ರೇವಾಕುಗಳು; (vi) ಸುಣ್ಣಶಿಲೆಗಳು. ಇವುಗಳಲ್ಲದೆ ಅತ್ಯಲ್ಪ ಸಿಲಿಕಾಂಶ (ಅಲ್ಟ್ರ ಬೇಸಿಕ್) ಶಿಲೆಗಳು ದೊಡ್ಡ ಪರಿಮಾಣದಲ್ಲಿ ಪದರುಶಿಲೆಗಳನ್ನು ಭೇದಿಸಿವೆ. ಇವನ್ನು ಟ್ರಾಸ್ ಶಿಲೆಗಳೆಂದೂ ಕರೆಯುವುದುಂಟು.

ಗ್ರಾನೈಟ್ ಮತ್ತು ನೈಸುಗಳು : ಕರ್ನಾಟಕ ರಾಜ್ಯದ ಬಹುಭಾಗವನ್ನಾವರಿಸಿರುವ ಈ ಶಿಲೆಗಳಲ್ಲಿ ಸ್ಮಿತ್ ನಾಲ್ಕು ಬಗೆಯ ಶಿಲೆಗಳನ್ನು ಗುರುತಿಸಿ ಇವು ವಿವಿಧ ಅಂತಸ್ಸರಣ ಕಾಲಗಳಿಗೆ ಸಂಬಂಧಿಸಿದುವೆಂದು ತೋರಿಸಿದ್ದಾನೆ (1916).

1. ಚಾಂಪಿಯನ್ ನೈಸ್, 2. ಪೆನಿನ್‌ಸುಲಾರ್ ನೈಸ್, 3. ಚಾರ್ನಕೈಟ್, 4. ಕ್ಲೋಸ್‌ಪೇಟೆ ಗ್ರಾನೈಟ್.

ಈ ನಾಲ್ಕು ಶಿಲಾಗುಂಪುಗಳಲ್ಲಿಯೂ ಅನೇಕ ಪ್ರಭೇದಗಳಿವೆ. ಇವು ಆಳದಲ್ಲಿ ವಿವಿಧ ಕಾಲಗಳಲ್ಲಿ ಮಾತೃಶಿಲಾದ್ರವದಿಂದ ಹೊರಬಂದವು. ಸ್ಮಿತ್ ಮಾಡಿರುವ ಈ ವಿಂಗಡಣೆ ಈಗಲೂ ಬಳಕೆಯಲ್ಲಿದೆ.

1. ಚಾಂಪಿಯನ್ ನೈಸ್ ಶಿಲೆಗಳು ಗ್ರಾನಿಟಿಕ್ ಶಿಲೆಗಳಲ್ಲಿ ಅತ್ಯಂತ ಪುರಾತನವಾದವು; ಕೋಲಾರ ಚಿನ್ನದ ಗಣಿಪ್ರದೇಶ, ಶೃಂಗೇರಿ ಮತ್ತು ಭದ್ರಾವತಿ ಸಮೀಪದಲ್ಲಿ ಹರಡಿವೆ. ಇವನ್ನು ಮೊಟ್ಟಮೊದಲು ಕೋಲಾರ ಪದರು ಶಿಲಾವಲಯದಲ್ಲಿ ಗುರುತಿಸಲಾಯಿತು. ಹೆಚ್ಚು ಅಭ್ರಕದಿಂದ ಕೂಡಿದ್ದು ಬೂದು ಬಣ್ಣದ ಒಪಾಲಸೆಂಟ್ ಬೆಣಚು ಇರುವುದು ಇವುಗಳ ವಿಶೇಷ ಲಕ್ಷಣ. ಇವು ಪೆನಿನ್‌ಸುಲಾರ್ ನೈಸುಗಳಿಗಿಂತ ಹಿರಿಯವು. ಆದರೆ ಪೆನಿನ್‌ಸುಲಾರ್‌ನೈಸಿನ ಕೆಲವು ಶಿಲಾವಿಧಗಳನ್ನು ಈ ಗುಂಪಿನ ಶಿಲೆಗಳಿಂದ ಗುರುತಿಸುವುದು ಬಹಳ ಕಷ್ಟ.

2. ಕರ್ನಾಟಕದ ಬಹುಭಾಗವನ್ನಾಕ್ರಮಿಸಿರುವ ನೈಸ್ ಮತ್ತು ಗ್ರಾನೈಟ್ ಶಿಲಾತೊಡಕನ್ನು ಪೆನಿನ್‌ಸುಲಾರ್‌ನೈಸ್ ಎಂದು ಪರಿಗಣಿಸಲಾಗಿದೆ. ಇದರಲ್ಲಿ ಮುಖ್ಯ ಶಿಲಾವಿಧಗಳೆಂದರೆ ಗ್ರಾನೋಡಯೊರೈಟ್, ನೈಸಿಕ್ ಗ್ರಾನೈಟ್ ಮತ್ತು ಕಲಬೆರಕೆ ನೈಸುಗಳು ಇವೆಲ್ಲ ಬಹುಮಟ್ಟಿಗೆ ಒಂದೇ ಅಂತಸ್ಸರಣ ಕಾಲದವೇ ಅಥವಾ ಬೇರೆ ಬೇರೆ ಕಾಲಗಳಿಗೆ ಸೇರಿವೆಯೇ ಎಂದು ಹೇಳುವುದು ಕಷ್ಟ. ಅಂತೂ ಇವು ಚಾಂಪಿಯನ್ ನೈಸುಗಳಿಗಿಂತ ಕಿರಿಯವೆಂದು ಸ್ಮಿತ್ ಅಭಿಪ್ರಾಯ ಪಟ್ಟಿದ್ದಾನೆ.

3. ಚಾರ್ನಕೈಟ್ ಶಿಲೆಗಳು ಧಾರವಾಡ ಶಿಲಾವರ್ಗವನ್ನು ಭೇದಿಸುವ ಮೂರನೆಯ ಅಂತಸ್ಸರಣ ಶ್ರೇಣಿ. ಬಿಳಿಗಿರಿರಂಗನಬೆಟ್ಟದ ಸಾಲು, ಪಿರಿಯಾಪಟ್ಟಣದ ಪಶ್ಚಿಮಭಾಗ ಮತ್ತು ಕೊಡಗು ಪ್ರದೇಶಗಳಲ್ಲಿ ಈ ಶಿಲಾಸಮೂಹ ಇದೆ. ಇದಲ್ಲದೆ ರಾಮನಗರ, ಮದ್ದೂರು, ಮಳವಳ್ಳಿ, ಹಲಗೂರು ಮತ್ತು ಇತರ ಪ್ರದೇಶಗಳಲ್ಲಿ ಹೈಪರಸ್ತೀನ್ ಇರುವ ಅಥವಾ ಇಲ್ಲದಿರುವ ಕಣಶಿಲಾವಿಧಗಳಿವೆ. ಚಾರ್ನಕೈಟುಗಳ ಉತ್ಪತ್ತಿಯ ಬಗ್ಗೆ ವಿವಾದವಿದೆ. ಇವುಗಳ ಉತ್ಪತ್ತಿಯ ಬಗ್ಗೆ ಅನೇಕ ಭೂವಿಜ್ಞಾನಿಗಳು ಸಂಶೋಧನೆ ಮಾಡಿದ್ದರೂ ಏಕಾಭಿಪ್ರಾಯ ಮೂಡಿಲ್ಲ.

4. ರಾಮನಗರ ಗ್ರಾನೈಟುಗಳು ಅತ್ಯಂತ ಕಿರಿಯ ಅಂತಸ್ಸರಣ ಶಿಲೆಗಳು. ಇವೂ ಬಳ್ಳಾರಿ ಬಳಿ ಇರುವ ಗ್ರಾನೈಟ್ ಶಿಲಾವಿಧಗಳೂ ಒಂದೇ ತೆರನಾಗಿರುವುದರಿಂದ ಬಿ.ರಾಮರಾಯರು ಇವನ್ನು ಬಳ್ಳಾರಿನೈಸ್ ಎಂದು ಕರೆದಿರುವರು. ಈ ಶಿಲೆಗಳು ಅನೇಕ ಕಡೆ ಇವುಗಳಿಗಿಂತ ಹಿರಿಯ ವಯಸ್ಸಿನ ಪೆನಿನ್‌ಸುಲಾರ್ ನೈಸ್ ಮತ್ತು ಇತರ ಗ್ರಾನೈಟ್‌ನೈಸ್ ಶಿಲಾವರ್ಗಗಳನ್ನು ಭೇದಿಸಿರುವುದು ಸ್ಪಷ್ಟವಾಗಿದೆ. ಇವು ದಕ್ಷಿಣದಲ್ಲಿ ಶಿವನಸಮುದ್ರದಿಂದ ಉತ್ತರದಲ್ಲಿ ಬಳ್ಳಾರಿಯವರೆಗೆ ಹಬ್ಬಿವೆ. ಈ ಶಿಲೆಗಳಿಗೆ ಸಾಮಾನ್ಯವಾಗಿ ದಪ್ಪಕಣ ರಚನೆ ಇದೆ. ಅಲ್ಲಲ್ಲಿ ಪಾರ್ಫಿರಿಟಿಕ್ ರಚನೆಯಿರುವ ಪ್ರಭೇದಗಳಿವೆ. ಇವುಗಳಲ್ಲಿರುವ ಫೆಲ್ಸ್‌ಪಾರ್‌ಕಣಗಳು ತಿಳಿಗುಲಾಬಿ ಬಣ್ಣ ಅಥವಾ ಮಾಂಸಖಂಡದ ಕೆಂಪು ಬಣ್ಣದಿಂದ ಕೂಡಿರುವ ಕಾರಣ ಗುಲಾಬಿ ಮತ್ತು ಬೂದುಬಣ್ಣದ ಶಿಲಾವಿಧಗಳುಂಟಾಗಿವೆ. ಕ್ಲೋಸ್‌ಪೇಟೆ (ಈಗ ರಾಮನಗರ) ಪ್ರದೇಶದ ದಕ್ಷಿಣ ಭಾಗದಲ್ಲಿ ಅಧಿಕ ಸಿಲಿಕಾಂಶದ ಪಾರ್ಫಿರಿಟಿಕ್, ಫೆಲ್ಸೈಟ್, ಲ್ಯಾಂಪ್ರೊಫೈರ್ ಮತ್ತು ಇತರ ಡೈಕ್ ವಿಧಗಳು ಈ ಗ್ರಾನೈಟುಗಳನ್ನು ಭೇದಿಸಿವೆ. ಕ್ಲೋಸ್‌ಪೇಟೆ ಗ್ರಾನೈಟ್ ನಿರ್ದಿಷ್ಟವಲಯದ ಹೊರಗೆ, ಇದೇ ರೀತಿಯ ಶಿಲೆಗಳು ಚಿತ್ರದುರ್ಗ, ಹೊಸದುರ್ಗ, ಅರಸೀಕೆರೆ, ಬಾಣಾವರ, ಕೈವಾರ (ಚಿಂತಾಮಣಿ ಬಳಿ) ಮತ್ತು ಮೈಸೂರು (ಚಾಮುಂಡಿಬೆಟ್ಟ) ಹಾಗೂ ಹೆಗ್ಗಡದೇವನಕೋಟೆ ಬಳಿ ಇವೆ.

ಡೈಕ್ ಶಿಲೆಗಳು : ಆರ್ಷೇಯ ಭೂ ಕಲ್ಪದ ಶಿಲಾವಿಧಗಳನ್ನೆಲ್ಲ ಭೇದಿಸಿರುವ ಅನೇಕ ವಿಧವಾದ ಡೈಕ್ ಸಮೂಹಗಳನ್ನು ಕೆಳಗೆ ಸೂಚಿಸಿದೆ.

1. ಕಪ್ಪು ಹಾರ್ನ್‌ಬ್ಲೆಂಡ್ ಡೈಕುಗಳು : ತುಮಕೂರಿಗೆ ಪಶ್ಚಿಮ ಭಾಗಮತ್ತು ಹಾಸನದ ಪೂರ್ವಭಾಗದಲ್ಲಿ ಹರಡಿವೆ. ತಿಪಟೂರಿಗೆ ಉತ್ತರ ಮತ್ತು ದಕ್ಷಿಣದಲ್ಲಿ ಅತಿ ಒತ್ತಾಗಿ ಹರಡಿವೆ.

2. ನೋರೈಟ್ ಡೈಕುಗಳು : ಬಿಡದಿ, ಹಾರೋಹಳ್ಳಿ, ಮದ್ದೂ, ಹುಣಸೂರಿಗೆ ಪಶ್ಚಿಮ ಮತ್ತು ನೈರುತ್ಯ ದಿಕ್ಕಿನಲ್ಲಿ ಹೆಚ್ಚಾಗಿವೆ.

3. ಫೆಲ್ಸೈಟ್ ಮತ್ತು ಪಾರ್ಫಿರಿ ಡೈಕುಗಳು : ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಸುತ್ತಮುತ್ತಲೂ ಕ್ಲೋಸ್‌ಪೇಟೆ ಗ್ರಾನೈಟ್ ಶಿಲೆಗಳಲ್ಲಿಯೂ ಇವೆ.

4. ಡಾಲರೈಟ್ ಮತ್ತು ಎನ್‌ಸ್ಟೆಟೈಟ್ ಡೈಕುಗಳು : ಕ್ಲೋಸ್‌ಪೇಟ್ ಗ್ರಾನೈಟುಗಳೊಂದಿಗಿರುವ ಫೆಲ್ಸೈಟ್ ಮತ್ತು ಪಾರ್ಫಿರಿಗಳನ್ನು ಭೇದಿಸಿವೆ. ಇವು ಆರ್ಷೇಯ ಕಲ್ಪದಲ್ಲಿ ಅತ್ಯಂತ ಕಿರಿಯಶಿಲಾವಿಧಗಳಾದ್ದರಿಂದ ಈ ಕಲ್ಪವಾದ ತರುವಾಯ ಅಂತಸ್ಸರಣಗೊಂಡಿರಬಹುದೆಂದು ಪರಿಗಣಿಸಲಾಗಿದೆ.

ಪುರಾಣಯುಗ (ಪ್ರೀಕೇಂಬ್ರಿಯನ್) ಕಲಾದಗಿ ಶಿಲಾಶ್ರೇಣಿ : ಕರ್ನಾಟಕದ ಉತ್ತರಭಾಗದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬೆಳಗಾವಿ ಮತ್ತು ಕಲಾದಗಿಗಳ ಮಧ್ಯೆ ಸು. 260 ಕಿಮೀ ಉದ್ದ ಹಾಗು 65–100 ಕಿಮೀ ಅಗಲವಿದ್ದು ಪೂರ್ವಪಶ್ಚಿಮವಾಗಿ ಹಬ್ಬಿರುವ ರೂಪಾಂತರಿತ ಜಲಜಶಿಲಗಳಿವೆ. ಈ ಶಿಲಾವಿಧಗಳಿಗೆ ಕಲಾದಗಿ ಶಿಲಾಶ್ರೇಣಿಯೆಂದು ಹೆಸರು. ಇವು ಸಮತಲವಾಗಿ ಧಾರವಾಡ ಪದರುಶಿಲೆಗಳ ಮೇಲೆ ಅನನುರೂಪತೆಯಿಂದ ಹರಡಿವೆ. ಇವುಗಳ ಮಂದ ಸು. 3050–4575 ಮೀ. ಇವನ್ನು ಕೆಳ ಕಲಾದಗಿ ಮತ್ತು ಮೇಲು ಕಲಾದಗಿ ಎಂದು ಎರಡು ವರ್ಗಗಳಾಗಿ ವಿಭಜಿಸಿದ್ದಾರೆ. ಈ ಶಿಲೆಗಳ ಇಳಿಜಾರು ಉತ್ತರ ಪಶ್ಚಿಮವಾಗಿದೆ. ಮುಖ್ಯವಾಗಿ ಕಂಗ್ಲಾಮರೇಟು, ಮರಳುಶಿಲೆ, ಬೆಣಚು, ಬ್ರೆಕ್ಷಿಯ, ಚೆರ್ಟ್, ಸುಣ್ಣಶಿಲೆ, ಜೇಡುಶಿಲೆ ಮತ್ತು ಹಾರನ್ ಸ್ಟೋನುಗಳಿಂದ ಕೂಡಿದೆ. ಈ ಶ್ರೇಣಿಯ ಬೆಣಚು ಮತ್ತು ಮರಳುಶಿಲೆಗಳಲ್ಲಿ ಅಲೆಗುರುತು ಹಾಗೂ ಪ್ರವಾಹ ಪದರು ರಚನೆಗಳು ಇವೆ. ಬಾದಾಮಿ ಗುಹೆಗಳಲ್ಲಿ ಪ್ರವಾಹಪದರ ಬೆಣಚುಗಳನ್ನು ಉಪಯೋಗಿಸಿ ದೇವಾಲಯಗಳೂ ಹಾಗೂ ಸುಂದರಮೂರ್ತಿಗಳನ್ನು ಕೆತ್ತಿದ್ದಾರೆ.

ಭೀಮಾಶಿಲಾಶ್ರೇಣಿ : ಈ ಶಿಲಾಶ್ರೇಣಿ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಕೃಷ್ಣಾನದಿಯ ಉಪನದಿ ಭೀಮಾನದಿಯ ಪಾತ್ರದಲ್ಲಿ ಚೆನ್ನಾಗಿ ಹೊರಕಾಣುತ್ತದೆ. ವಿಸ್ತಾರ ಸು. 5200 ಕಿಮೀ. ಇವು ಆರ್ಷೇಯ ಕಲ್ಪದ ಶಿಲಾವಿಧಗಳ ಮೇಲೆ ಅನನುರೂಪತೆಯಿಂದ ಹರಡಿವೆ. ಈ ಶ್ರೇಣಿಯಲ್ಲಿ ಕಂಗ್ಲಾಮರೇಟ್, ಮರಳುಶಿಲೆ ಊದಾ ಜೇಡುಶಿಲೆ ಮತ್ತು ಸುಣ್ಣಶಿಲೆಗಳು ಮುಖ್ಯವಾದವು. ಇದನ್ನು ಡಬ್ಲ್ಯು ಕಿಂಗ್ ಮತ್ತು ಆರ್.ಬ್ರೂಸ್‌ಫೂಟ್ ಅವರು ಮೇಲು ಮತ್ತು ಕೆಳ ಎಂದು ವಿಂಗಡಿಸಿದರು. ಆದರೆ ಸಿ.ಮಹದೇವನ್ ಮೂರು ವಿಭಾಗಗಳಾಗಿ ವಿಂಗಡಿಸಿದರು. ಈ ಶ್ರೇಣಿಯ ಶಿಲೆಗಳು ಕರ್ನೂಲು ಶಿಲಾಸಮುದಾಯಕ್ಕೆ ಸಮಕಾಲೀನ (ಸು. 1,450 ದಶಲಕ್ಷವರ್ಷಗಳು) ವಯಸ್ಸನ್ನು ಸೂಚಿಸುತ್ತವೆ. ಇಲ್ಲಿ ಹೇರಳವಾಗಿ ದೊರೆಯುವ ಸಣ್ಣ ಶಿಲೆಗಳನ್ನು ಸಿಮೆಂಟ್ ತಯಾರಿಸಲು ಉಪಯೋಗಿಸುತ್ತಾರೆ.

ಆರ್ಷೇಯೋತ್ತರಕಾಲದ ಅತ್ಯಲ್ಪ ಸಿಲಿಕಾಂಶದ ಡೈಕ್ ಶಿಲೆಗಳು : ಇವು ಆರ್ಷೇಯ ಕಾಲದ ತರುವಾಯ ಮೈದೋರಿವೆ. ಈ ಸಮೂಹದಲ್ಲಿ ಡಾಲರೈಟ್, ಆಲಿವೀನ್ ಡಾಲರೈಟ್, ಎನ್‌ಸ್ಟಟೈಟ್ ಡಾಲರೈಟ್, ಡಯೋರೈಟ್, ಬಸಾಲ್ಟ್ ಮುಂತಾದ ಶಿಲೆಗಳ ಡೈಕುಗಳಿವೆ. ಇವು ಸಾಮಾನ್ಯವಾಗಿ ಕಪ್ಪು ಗುಂಡುಗಳಂತೆ ಹೊರಕಾಣುತ್ತವೆ. ಅಲ್ಲದೆ ಪುರಾತನ ಶಿಲೆಗಳಾದ ನೈಸ್ (ಗೀರುಶಿಲೆ) ಗ್ರಾನೈಟ್ ಶಿಲೆಗಳನ್ನು ಭೇದಿಸಿಕೊಂಡು ಹೊರಬಂದಿವೆ. ಇವನ್ನು ಕಡಪ ಶಿಲಾವರ್ಗದ ಕಾಲ ಅಥವಾ ದಖನ್ ಟ್ರಾಪ್ ಕಾಲಕ್ಕೆ ಸೇರಿಸಲಾಗಿದೆ.

ದಖನ್ ಟ್ರಾಪುಗಳು : ಈ ಶಿಲೆಗಳನ್ನು ದಖನ್ ಜ್ವಾಲಾಮುಖಿಜನ್ಯ ಶಿಲೆಗಳೆಂದೂ ಪ್ರಸ್ಥಭೂಮಿಯಂತೆ ಎತ್ತರವಾದ ಸ್ಥಳವನ್ನು ಆವರಿಸಿರುವುದರಿಂದ ಪ್ರಸ್ಥಭೂಮಿ ಬಸಾಲ್ಟ್ ಎಂದೂ ಕರೆಯುವುದುಂಟು. ಮಧ್ಯಜೀವಿಯುಗದ ಅಂತ್ಯಕಾಲದಲ್ಲಿ (ಅಂದರೆ ಹಿಮಾಲಯ ಪರ್ವತಸ್ತೋಮ ರೂಪುಗೊಳ್ಳುವುದಕ್ಕೆ ಮುಂಚೆ) ಉಂಟಾದ ಭೂ ಚಲನೆಯಿಂದ ಭೂಮಿಯ ಹೊರಮೈಯ್ಯಲ್ಲಾದ ಬಿರುಕುಗಳ ಮೂಲಕ ಅತ್ಯಧಿಕ ಪ್ರಮಾಣದ ಶಿಲಾರಸ ಹೊರಹೊಮ್ಮಿ ದಖನ್ ಟ್ರಾಪುಗಳು ಇಂಥ ಪ್ರದೇಶದಲ್ಲಿ ವ್ಯಾಪಿಸಿವೆ. ಈ ಶಿಲೆಗಳ

| ಭೂ ಇತಿಹಾಸದ ಯುಗ | ಭೂ ಇತಿಹಾಸದ ಕಾಲ | ಕರ್ನಾಟಕದ ಶಿಲಾ ಸಮುದಾಯಗಳು | ಕಳೆದಿರುವ ಕಾಲ (ದಶಲಕ್ಷ ವರ್ಷಗಳಲ್ಲಿ) | ವಯಸ್ಸು (ದಶಲಕ್ಷ ವರ್ಷಗಳಲ್ಲಿ) |
|---|---|---|---|---|
| ನವೀನ ಜೀವಿ ಯುಗ | ಚತುರ್ಥ ಭೂಕಾಲಯುಗ<br>ಇತ್ತೀಚಿನ ಕಾಲ<br>ಪ್ಲೀಸ್ಟೋಸೀನ್<br>ತೃತೀಯ ಭೂಕಾಲಯುಗ<br>ಪ್ಲಿಯೊಸೀನ್<br>ಮಯೋಸೀನ್<br>ಆಲಿಗೋಸೀನ್<br>ಇಯೊಸೀನ್ | ಲ್ಯಾಟರೈಟ್<br>ಕರ್ನಾಟಕದ ಶಿಲಾ<br>(ಇಯೊಸೀನ್ ಮತ್ತು ಕ್ರಿಟೇಷಸುಗಳು ಒಟ್ಟಾಗಿ ದಖನ್ ಟ್ರಾಪ್) | --<br>1<br>14<br>15<br>10<br>20 | --<br>1<br>15<br>30<br>40<br>60 |
| ಮಧ್ಯ ಜೀವಿಯುಗ | ಕ್ರಿಟೇಷಸ್<br>ಜುರಾಸಿಕ್<br>ಟ್ರಯಾಸಿಕ್ | | 65<br>33<br>27 | 125<br>158<br>185 |
| ಪ್ರಾಚೀನ ಜೀವಿ ಯುಗ | ಪರ್ಮಿಯನ್<br>ಕಾರ್ಬಾನಿಫೆರಸ್<br>ಡೆವೋನಿಯನ್<br>ಸೈಲೂರಿಯನ್<br>ಆರ್ಡೋವಿಶಿಯನ್<br>ಕೇಂಬ್ರಿಯನ್ | (ಕ್ರಿಟೇಷಸಿನಿಂದ ಕೇಂಬ್ರಿಯನ್‌ವರೆಗಿನ ಶಿಲಾ ಸಮುದಾಯಗಳನ್ನು ಕರ್ನಾಟಕದಲ್ಲಿಲ್ಲ) | 40<br>85<br>45<br>25<br>70<br>100 | 225<br>310<br>355<br>380<br>450<br>550 |
| ನಿರ್ಜೀವಿ ಯುಗ | ಆಲ್‌ಗಾಂಕಿಯನ್<br>ಆರ್ಷೇಯ ಶಿಲಾತೊಡಕು (ಅಡಿಪಾಯ ತಿಳಿಯದು) | ಪುರಾಣಯುಗ<br>ಭೀಮಾಶ್ರೇಣಿ ಕಲಾದಗಿಶ್ರೇಣಿ<br>ಗ್ರಾನಿಟಿಕ್ ಅಂತಸ್ಸರಗಳು<br>ಧಾರವಾಡ ಶಿಲಾಸಮುದಾಯಗಳು | 900 | 1450<br>2000 |

ಹೊರಸ್ತರ ಹಂತಹಂತವಾಗಿ ಕಾಣುವುದರಿಂದ ಇವುಗಳಿಗೆ ಟ್ರಾಪ್ ಶಿಲೆಗಳೆಂದು ಹೆಸರುಬಂದಿದೆ. ಕೆಲವು ಪ್ರದೇಶಗಳಲ್ಲಿ ಟ್ರಾಪ್‌ಸ್ತರಗಳ ಅಡಿಯಲ್ಲಿ, ಮಧ್ಯದಲ್ಲಿ ಮತ್ತು ಮೇಲೆ ಜಲಜ ಶಿಲಾವಿಧಗಳಿವೆ. ಇವುಗಳಿಗೆ ಅನುಕ್ರಮವಾಗಿ ಟ್ರಾಪ್ ಕೆಳಸ್ತರ, ಅಂತರ ಟ್ರಾಪ್‌ಸ್ತರ ಟ್ರಾಪ್ ಮೇಲುಸ್ತರಗಳೆಂದು ಹೆಸರು. ಇವುಗಳಲ್ಲಿರುವ ಜೀವಾವಶೇಷಗಳ ಆಧಾರದ ಮೇಲೆ ಟ್ರಾಪ್ ವಯಸ್ಸು ಕ್ರಿಟೇಷಸ್ಸಿನಿಂದ ಇಯೋಸೀನ್‌ವರೆಗೆ ವ್ಯಾಪಿಸಿದೆ ಎಂದು ಅಭಿಪ್ರಾಯಪಡಲಾಗಿದೆ. ಕರ್ನಾಟಕದಲ್ಲಿ ಬೆಳಗಾವಿ, ಬಿಜಾಪುರ ಮತ್ತು ಗುಲ್ಬರ್ಗದ ಹಲವಾರು ಭಾಗಗಳಲ್ಲಿ ಒಟ್ಟು ಸು. 25,900 ಚ.ಕಿಮೀ ಗಳಷ್ಟು ಪ್ರದೇಶದಲ್ಲಿ ಟ್ರಾಪ್‌ಶಿಲೆಗಳ ವ್ಯಾಪ್ತಿ ಉಂಟು. ಮಂದ ಸು. 60 ಮೀ. ಈ ಶಿಲೆಗಳು ಅನೇಕ ಹಳೆಯ ಶಿಲಾಸಮುದಾಯಗಳ ಮೇಲೆ ಅನನುರೂಪತೆಯಾಗಿ ವಿಸ್ತರಿಸಿವೆ. ಸತತ ಸವೆತದಿಂದ ದಖನ್ ಟ್ರಾಪ್ ಶಿಲೆಗಳು ಮತ್ತು ಲ್ಯಾಟರೈಟ್ ಎಂಬ ನಿಕ್ಷೇಪಗಳಾಗಿವೆ. ಇವುಗಳಿಗೆ ಶೇಷ ನಿಕ್ಷೇಪಗಳೆಂದು ಹೆಸರು. ಸಾಧಾರಣ ರೀತಿಯಲ್ಲಿ ಶಿಲೆ ಶಿಥಿಲವಾಗಿ ಕಪ್ಪು ಮಣ್ಣು ಉಂಟಾಗುತ್ತದೆ. ಇಂಥ ಮಣ್ಣು ಬಹಳ ಫಲವತ್ತಾಗಿರುತ್ತದೆ.

ತೃತೀಯ ಭೂ ಕಾಲಯುಗದ ಶಿಲಾಸಮುದಾಯಗಳು: ಲ್ಯಾಟರೈಟ್ : ಈ ನಿಕ್ಷೇಪಗಳು ಭೂಮಿಯ ಹೊರಪದರದ ಶಿಲೆಗಳ ಬದಲಾವಣೆಯಿಂದಾಗಿವೆ. ಇಂಥ ಬದಲಾವಣೆಗಳು ಭಾರತ ಮತ್ತೆ ಹಲವು ಉಷ್ಣವಲಯದ ದೇಶಗಳಲ್ಲಿನ ಗ್ರಾನೈಟ್, ನೈಸ್ ಪದರುಶಿಲೆ ಮತ್ತು ಬಸಾಲ್ಟ್ ಇತ್ಯಾದಿ ಶಿಲೆಗಳ ಬದಲಾವಣೆಯಿಂದಾಗುವುವು. ಕಬ್ಬಿಣ, ಮ್ಯಾಂಗನೀಸ್ ಮತ್ತು ಅಲ್ಯೂಮಿನಿಯಂ ಖನಿಜಗಳು ಹೆಚ್ಚಾಗಿರುವ ಲ್ಯಾಟರೈಟ್ ಉತ್ತಮ ಅದುರು ನಿಕ್ಷೇಪಗಳೆನಿಸಿವೆ. ಲೋಹಾಂಶವನ್ನು ಅನುಸರಿಸಿ ಇವುಗಳ ಬಣ್ಣ ಹಳದಿಮಿಶ್ರಿತ ಕೆಂಪು ಬೂದು ಮತ್ತು ಕಪ್ಪು ಕಂದು. ಕರ್ನಾಟಕದಲ್ಲಿ ಇವು ಕೋಲಾರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಹಾಗೂ ಬೆಳಗಾಂವಿ ಜಿಲ್ಲೆಯಲ್ಲಿ ಅನೇಕ ಕಡೆ ಇವೆ. ಲ್ಯಾಟರೈಟುಗಳನ್ನು ಮಲೆನಾಡು ಮುಂತಾದ ಕಡೆ ಅಗೆದು ಹೊರತೆಗೆದು ದೊಡ್ಡ ದೊಡ್ಡ ಇಟ್ಟಿಗೆ ರೂಪದಲ್ಲಿ ಕತ್ತರಿಸಿ ಗೋಡೆಗಳನ್ನು ಕಟ್ಟಲು ಉಪಯೋಗಿಸುತ್ತಾರೆ.

ಇತ್ತೀಚಿನ ಕಾಲದ ಶಿಲಾಸಮುದಾಯಗಳು : ಇತ್ತೀಚಿನ ಶಿಲಾಸಮುದಾಯಗಳಲ್ಲಿ ತೀರಪ್ರದೇಶದ ನಿಕ್ಷೇಪಗಳು, ಮೆಕ್ಕಲು ನಿಕ್ಷೇಪಗಳು ಮತ್ತು ಮಣ್ಣುಗಳು ಮುಖ್ಯವಾದವು.

ತೀರಪ್ರದೇಶದ ನಿಕ್ಷೇಪಗಳು : ಕರ್ನಾಟಕದ ಪಶ್ಚಿಮಭಾಗದ ಸಮುದ್ರತೀರದಲ್ಲಿ ಮಂಗಳೂರಿಗೆ ಸ್ವಲ್ಪ ದಕ್ಷಿಣದಿಂದ ಕಾರವಾರದವರೆಗೆ ಇವು ಹಬ್ಬಿವೆ. ಇವುಗಳಲ್ಲಿ ಬಹುಶಃ ಲ್ಯಾಟರೈಟುಗಳೂ ಸೇರುತ್ತವೆ. ಇವು ಪ್ಲೀಸ್ಟೋಸೀನ್ ಕಾಲದಿಂದ ಇತ್ತೀಚಿನ ಕಾಲದವು.

ಮೆಕ್ಕಲು ನಿಕ್ಷೇಪಗಳು : ನದಿಗಳ ಇಕ್ಕೆಲಗಳಲ್ಲಿಯೂ ಅಳಿವೆಯ ಗಾಳಿಯಿಂದ ತೂರಿಬಂದ ಮತ್ತು ಇತರ ಶಿಲಾವಿಧಗಳು ಸೇರಿವೆ. ಇವು ವ್ಯವಸಾಯಕ್ಕೆ ಫಲವತ್ತಾದ ಪ್ರದೇಶಗಳು.

ಮಣ್ಣುಗಳು : ವಿವಿಧ ಶಿಲೆಗಳ ಸತತವಾದ ಶಿಥಿಲತೆಯಿಂದಾದ ಹಲವಾರು ಬಗೆಯ ಮಣ್ಣುಗಳ ಉತ್ಪತ್ತಿಯಾಗಿವೆ. 1. ಕಪ್ಪು ಮಣ್ಣು ಅಥವಾ ಎರೆಮಣ್ಣು ಚಿತ್ರದುರ್ಗದ ಜಿಲ್ಲೆ, ಚಾಮರಾಜನಗರ, ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕು, ಸ್ವಲ್ಪ ಭಾಗ ಮಂಡ್ಯ ಜಿಲ್ಲೆಯಲ್ಲಿಯೂ ಕಾಣಬರುತ್ತದೆ. 2. ಹಳದಿಮಣ್ಣು ಬಲು ನುಣುಪು. ಇದು ಷಿಕಾರಿಪುರ, ಕುಂಸಿ, ಸೊರಬ ತಾಲ್ಲೂಕುಗಳಲ್ಲಿ ಅನೇಕ ಕಡೆ ಮತ್ತು ಪದರು ಶಿಲಾವಲಯಗಳಲ್ಲಿದೆ. 3. ಕೆಂಪು ಮಣ್ಣು, ಇದು ಗ್ರಾನೈಟ್, ನೈಸುಗಳು ಶಿಥಿಲವಾಗಿ ಉತ್ಪತ್ತಿಯಾಗುತ್ತದೆ. 60–130 ಸೆಂಮೀ ಆಳದವರೆಗೆ ಇರುವುದು. ಇದನ್ನು ಬೆಂಗಳೂರು, ತುಮಕೂರು, ಕೋಲಾರ ಇತ್ಯಾದಿ ಪ್ರದೇಶಗಳಲ್ಲಿ ಕಾಣಬಹುದು. 4. ಉಪ್ಪು ಮತ್ತು ಕ್ಷಾರ ಮಣ್ಣುಗಳು. ಮೈಸೂರು, ಮಂಡ್ಯ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕೆಲವೆಡೆ ಇವೆ. ಇವನ್ನು ಚೌಳುಪ್ಪು ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಗ್ರಾನೈಟ್ ಅಥವಾ ನೈಸ್ ವಲಯಗಳಲ್ಲಿ ತಗ್ಗಾದ ಜೌಗು ಪ್ರದೇಶದಲ್ಲಿ ಮಳೆಗಾಲದಲ್ಲಿ ಈ ಮಣ್ಣುಗಳ ಉತ್ಪತ್ತಿ ಆಗುವುದು. 5. ಕಂಕರ್ ಮತ್ತು ಕಂಕರ್ ಮಣ್ಣುಗಳು. ಗ್ರಾನಿಟಿಕ್ ನೈಸುಗಳು. ಪದರುಶಿಲೆಗಳು ಮತ್ತು ಕರಿಕಲ್ಲುಗಳಿಂದ (ಡಾಲರೈಟ್) ಇವು ಉತ್ಪತ್ತಿಯಾಗುತ್ತವೆ. ಇವು ಉಂಡೆಯಾಕಾರದ ಕೆಳದರ್ಜೆಯ ಸುಣ್ಣಕಲ್ಲುಗಳು.

ಕರ್ನಾಟಕದ ಶಿಲೆಗಳ ವಯಸ್ಸು : ಶಿಲೆಗಳ ವಯೋನಿರ್ಧಾರ ಸಾಧಾರಣ ಜಲಜಶಿಲೆಗಳಂತೆ ಸುಲಭವಲ್ಲ. ಕಾರಣ ಅತಿ ಪುರಾತನಕಾಲದವು. ಅವು ಉತ್ಪತ್ತಿಯಾದ ಅನಂತರ ಹಲವಾರು ಭೂಕ್ರಿಯೆಗಳಿಂದಾಗಿ ಅನೇಕ ರೀತಿಯಲ್ಲಿ ಮಾರ್ಪಟ್ಟಿವೆ. ಮೇಲಾಗಿ ಈ ಶಿಲೆಗಳಲ್ಲಿ ಪ್ರಾಚೀನ ಶಿಲೆಗಳ ಅವಶೇಷಗಳಿಲ್ಲದಿರುವುದು ಮತ್ತಷ್ಟು ತೊಡಕನ್ನೊಡ್ಡಿದೆ. ಈ ರಾಜ್ಯದ ಶಿಲೆಗಳನ್ನು ಅಂತರರಾಷ್ಟ್ರೀಯ ಭೂ ಇತಿಹಾಸ ಕಾಲ ಪ್ರಮಾಣದ ಪಟ್ಟಿಗೆ ಹೋಲಿಸಿ ಈ ಕೆಳಗಿನ ಪಟ್ಟಿಯಲ್ಲಿ ಬರೆದಿದೆ.

ಹಲವಾರು ಭೂವಿಜ್ಞಾನಿಗಳು ಕರ್ನಾಟಕದ ಶಿಲಾವಿಧಗಳ ವಯೋನಿರ್ಧಾರ ಮಾಡಲು ಪ್ರಯತ್ನಿಸಿದ್ದಾರೆ. ಆ ಪ್ರಕಾರ ಈ ಶಿಲಾವಿಧಗಳ ವಯಸ್ಸು ಸು. 1,500–2,000 ದಶಲಕ್ಷವರ್ಷಗಳೆಂದು ಪರಿಗಣಿಸಲಾಗಿದೆ. ಆರ್ಥರ್ ಹೋಮ್ಸನ ಪ್ರಕಾರ (1956) ಭಾರತದ ಆರ್ಷೇಯ ಕಾಲದ ಶಿಲಾವಿಧಗಳ ವಯಸ್ಸು 4,500 ದಶಲಕ್ಷವರ್ಷಗಳು ಮತ್ತು ಧಾರವಾಡ ಪದರುಶಿಲಾವರ್ಗದ ವಯಸ್ಸು ಸು. 3,500 ದಶಲಕ್ಷವರ್ಷಗಳು. ಇತ್ತೀಚೆಗೆ ಎ.ಆರ್.ಕ್ರಾಫರ್ಡ್ ಎಂಬುವರು ಧಾರವಾಡ ಶಿಲಾಸಮುದಾಯಗಳ ವಯಸ್ಸು ಅನಿಶ್ಚಿತವಾದರೂ ರುಬಿಡಿಯಂ (Rb) ಮತ್ತು ಸ್ಟ್ರಾನ್ಷಿಯಂ (Sr) ಪ್ರಮಾಣದ ಆಧಾರದ ಮೇಲೆ ಚಿತ್ರದುರ್ಗದ ಬಳಿ ಇರುವ ಲಾವಾ ಶಿಲಾಸ್ತರಗಳ ವಯಸ್ಸು 2,400 ರಿಂದ 2,450 ದಶಲಕ್ಷ ವರ್ಷಗಳು ಮತ್ತು ಕ್ಲೋಸ್‌ಪೇಟೆ (ರಾಮನಗರ) ಗ್ರಾನೈಟ್ ವಯಸ್ಸು ಸು. 2,400 ರಿಂದ 2,450 ದಶಲಕ್ಷವರ್ಷಗಳೆಂದು ನಿರ್ಧರಿಸಿದ್ದಾರೆ (1969). (ಎಂ.ಎಸ್.ಎಂ.)

**ಕರ್ನಾಟಕದ ಶಿಲಾವರ್ಗಗಳು:** ಕರ್ನಾಟಕ ರಾಜ್ಯದ ಬಹುಭಾಗ ಅತ್ಯಂತ ಪ್ರಾಚೀನವಾದ ಶಿಲೆಗಳಿಂದ ಆವೃತವಾಗಿದೆ. ಇವುಗಳನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಿದ್ದಾರೆ. 1. ಬೆಳ್ಳಿ, ಬಂಗಾರ, ತಾಮ್ರ, ಕಬ್ಬಿಣದ ಸಂಬಂಧದ ಲೋಹಗಳನ್ನೊಳಗೊಂಡಿರುವ ಧಾರವಾಡ ಶಿಲಾಸ್ತೋಮ 2. ಗ್ರಾನೈಟ್ ಸಂಬಂಧದ ನೈಸ್ ಶಿಲಾಸ್ತೋಮ.

ದಕ್ಷಿಣ ಕರ್ನಾಟಕದಲ್ಲಿನ ಶಿಲೆಗಳು ಭೂಮಿಯ ಹುಟ್ಟಿನ ಆದಿಕಾಲದಲ್ಲಿ ರೂಪುಗೊಂಡ ಅತಿ ಪ್ರಾಚೀನ ವರ್ಗಕ್ಕೆ ಸೇರಿದುವೆಂದು ಪ್ರಸಿದ್ಧಿಯಾಗಿವೆ. ಇವುಗಳು ರೂಪುಗೊಂಡ ಕಾಲ ಮೂರು ಸಾವಿರ ಮಿಲಿಯ (ಮುನ್ನೂರು ಕೋಟಿ) ವರ್ಷಗಳಿಗೂ ಹಳೆಯದು. ಈ ಬಗೆಯ ಶಿಲೆಗಳನ್ನು ಸರಗೂರು, ಕೋಲಾರ, ನುಗ್ಗೇಹಳ್ಳಿ, ಹಟ್ಟಿ ಬಳಿ ಗುರುತಿಸಿದ್ದಾರೆ.

ಈ ಪುರಾತನ ಕಾಲದ ಅಗ್ನಿ ಮತ್ತು ರೂಪಾಂತರ ಶಿಲೆಗಳನ್ನು ಛೇದಿಸಿ, ತುಂಡರಿಸಿ, ಅವುಗಳನ್ನು ಬಹುಶಃ ಜೀರ್ಣಿಸಿಕೊಂಡು ಬಹುವ್ಯಾಪಿ ಯಾಗಿರುವ ನೈಸ್ ಶಿಲೆಗಳು ರಾಜ್ಯದ ಬಹುಭಾಗವನ್ನು ಆವರಿಸಿವೆ. ಈ ವರ್ಗದ ಕಲ್ಲುಗಳನ್ನು ಬೆಂಗಳೂರು ಸುತ್ತ ನೋಡಬಹುದು. ನೈಸ್‌ಗಳಿಂದ ಆವೃತವಾದ ಬಯಲು ಸೀಮೆಯಲ್ಲಿ ಅಲ್ಲಲ್ಲಿ ಬೋರಲಿಟ್ಟ ಬಟ್ಟಲುಗಳಂತೆ ಕಲ್ಲುಗುಂಡುಗಳಿಂದ ನಿಬಿಡವಾಗಿ ಎದ್ದುನಿಂತ ಗುಡ್ಡಸಾಲುಗಳನ್ನು ನೋಡಬಹುದು. ಶಿವಗಂಗೆ, ಸಾವನದುರ್ಗ, ದೇವರಾಯನದುರ್ಗ, ಮಧುಗಿರಿ ಮತ್ತು ಕೊರಟಗೆರೆ ಸುತ್ತಲಿನ ಬೆಟ್ಟಗಳು, ಹಂಪೆಯ ಸುತ್ತಲಿನ ಬೆಟ್ಟಸಾಲುಗಳು ಈ ಬಗೆಯ ಗ್ರಾನೈಟ್‌ಗಳಿಂದ ನಿರ್ಮಿತವಾದವು. ಕರ್ನಾಟಕದಲ್ಲಿ ಎಲ್ಲಿ ಹೋದರಲ್ಲಿ ಎದ್ದು ನಿಂತ ಬಗೆಬಗೆಯ ಆಕಾರವನ್ನು ತೋರುವ ಗುಡ್ಡಸಾಲುಗಳು ತಮ್ಮದೇ ಆದ ಒಂದು ನಿಸರ್ಗ ರಮಣೀಯತೆಯನ್ನು ಪಡೆದುಕೊಂಡಿವೆ.

ಈ ನೈಸುಗಳ ಮೇಲೆ ಒರಗಿದಂತೆ ಸಾವಿರಾರು ಅಡಿ ಮಂದದ ಪದರು ಶಿಲೆಗಳು, ದಕ್ಷಿಣದಲ್ಲಿ ಶ್ರೀರಂಗಪಟ್ಟಣದಿಂದ ಹಿಡಿದು ಉತ್ತರದಲ್ಲಿ ಬೆಳಗಾಂವಿಯವರೆಗೂ ಹಬ್ಬಿವೆ. ಧಾರವಾಡದ ಬಳಿ ವಿಸ್ತಾರವಾಗಿ ಹರಡಿರುವುದರಿಂದ ಈ ಶಿಲಾವರ್ಗವನ್ನು ಧಾರವಾಡ ಶಿಲಾವರ್ಗ ಎಂದು ಗುರುತಿಸಿದ್ದಾರೆ. ರಾಜ್ಯದಲ್ಲಿ ದೊರೆಯುವ ಖನಿಜ ಸಂಪತ್ತೆಲ್ಲ ಈ ಧಾರವಾಡ ಪದರುಶಿಲಾ ಸಮುದಾಯವೇ ಆಕರವಾಗಿದೆ. ಪಶ್ಚಿಮ ಘಟ್ಟದ ಸಹ್ಯಾದ್ರಿ ಪರ್ವತ, ಬಾಬಾಬುಡನ್ ಪರ್ವತ ಶ್ರೇಣಿ, ಕೊಡಚಾದ್ರಿ, ಚಿಕ್ಕನಾಯಕನಹಳ್ಳಿ, ಚಿತ್ರದುರ್ಗ, ಗದಗ, ರಾಯಚೂರು, ಹಟ್ಟಿ ಈ ಸುತ್ತಲಿನ ಶಿಲೆಗಳೆಲ್ಲವೂ ಧಾರವಾಡ ಶಿಲಾವರ್ಗಕ್ಕೆ ಸೇರಿದುವು. ಈ ವರ್ಗದ ಶಿಲೆಗಳಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರುಗಳು, ತಾಮ್ರ, ಸೀಸ, ಚಿನ್ನ, ಬೆಳ್ಳಿ ಮುಂತಾದ ಲೋಹಗಳ ಅದುರುಗಳು ದೊರೆಯುತ್ತವೆ.

ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ನೀಲಗಿರಿ ಬೆಟ್ಟ ಸಾಲುಗಳಲ್ಲಿ ಬೂದು ಬಣ್ಣದ ಒಂದು ವಿಶೇಷ ರೀತಿಯ ಗ್ರಾನೈಟ್ ಶಿಲೆಗಳು ದೊರೆಯುತ್ತವೆ. ಇವುಗಳನ್ನು ಚಾರ್ನೊಕೈಟ್ ಎಂದು ಗುರುತಿಸಿದ್ದಾರೆ.

ದಕ್ಷಿಣದಲ್ಲಿ ಶಿವಸಮುದ್ರದಿಂದ ಹಿಡಿದು ಉತ್ತರದಲ್ಲಿ ತುಂಗಭದ್ರೆಯ ದಕ್ಷಿಣ ದಂಡೆಯವರೆಗೆ ಒಂದೇ ಸಮನೆ ಹಬ್ಬಿರುವ ಕಲ್ಲುಗುಂಡುಗಳಿಂದ ನಿಬಿಡವಾದ ಗುಡ್ಡ ಸಾಲು ಕಾಣಿಸುತ್ತದೆ. ಸಾವನದುರ್ಗ, ಕಬ್ಬಾಳದುರ್ಗ, ಶಿವಗಂಗೆ, ಮಧುಗಿರಿ, ಕೊರಟಗೆರೆ ಬೆಟ್ಟಗಳು, ಮಿಡಿಗೇಶಿ, ಪಾವಗಡ, ಮೊಳಕಾಲ್ಮೂರು, ಹಂಪೆ ಈ ಸುತ್ತಲಿನ ಬೆಟ್ಟಗಳೆಲ್ಲವೂ ಒರಟುಒರಟಾದ, ಅಗಲ ಹರಳುಗಳುಳ್ಳ ಕೆಂಪು ಬಣ್ಣದ ಗ್ರಾನೈಟ್‌ಗಳಿಂದ ರೂಪಿತವಾದುವು. ಇವುಗಳನ್ನು ರಾಮನಗರ ಗ್ರಾನೈಟ್ ಎಂಬ ಹೆಸರಿನಿಂದ ಕರೆಯುತ್ತಾರೆ. ರಾಮನಗರ ಸುತ್ತಲಿನ ಬೃಹದಾಕಾರದ ಬಂಡೆಗಳಿಂದ ಕೂಡಿರುವ ಬೆಟ್ಟಗಳೆಲ್ಲವೂ ಈ ಗ್ರಾನೈಟ್‌ನಿಂದ ರೂಪಿತವಾದುವು.

ಮೇಲೆ ವಿವರಿಸಿದ ಶಿಲೆಗಳೆಲ್ಲವೂ ಅತಿ ಪ್ರಾಚೀನವಾದುವು. ಅವು ತಮ್ಮ ಮೊದಲ ರೂಪವನ್ನು ಬದಲಾಯಿಸಿ ರೂಪಾಂತರ ಹೊಂದಿರುತ್ತವೆ. ಇಂಥ ಶಿಲೆಗಳ ಮೇಲೆ ಹಾಸಿದಂತೆ ಈಚಿನ ಇನ್ನೊಂದು ಶಿಲಾವರ್ಗ ಬೆಳಗಾಂವಿಯ ಪೂರ್ವಭಾಗದಿಂದ ಹಿಡಿದು ಬಾಗಲಕೋಟೆಯವರೆಗೆ ಹರಡಿರುವುದು ಕಾಣುತ್ತದೆ. ಈ ವರ್ಗದ ಕಲ್ಲುಗಳಲ್ಲಿ ಸುಣ್ಣಕಲ್ಲಿನ ಶಿಲೆಗಳೆ ಪ್ರಮುಖವಾದವು. ಕಲಾದಗಿಯ ಬಳಿ ಇವು ಬಹುವಾಗಿ ಹರಡಿರುವುದರಿಂದ ಈ ವರ್ಗದ ಶಿಲೆಗಳಿಗೆ ಕಲಾದಗಿ ಶಿಲಾವರ್ಗ ಎಂದು ಹೆಸರಿಸಿದ್ದಾರೆ. ಘಟಪ್ರಭಾ ಮತ್ತು ಕೃಷ್ಣಾ ನದಿಗಳು ಬೆಳಗಾಂವಿ ಬಿಜಾಪುರ ಜಿಲ್ಲೆಗಳಲ್ಲಿ ಈ ಶಿಲೆಗಳನ್ನು ಹಾದುಹೋಗಿರುತ್ತವೆ. ಬಾದಾಮಿ, ಪಟ್ಟದಕಲ್ಲಿನ ದೇವಸ್ಥಾನಗಳು ಈ ಕಲಾದಗಿ ಶಿಲೆಗಳಿಂದ ಕಡೆದವು.

ಇವಕ್ಕೂ ಸ್ವಲ್ಪ ಈಚಿನ ಶಿಲೆಗಳು ಮುಖ್ಯವಾಗಿ ಗುಲ್ಬರ್ಗ ಜಿಲ್ಲೆಯ ಭೀಮಾನದಿಯ ಇಕ್ಕೆಲಗಳಲ್ಲಿ ಕಾಣುತ್ತವೆ. ಇವೂ ಬಹುವಾಗಿ ಸುಣ್ಣಕಲ್ಲಿನಿಂದ ಕೂಡಿದವು. ಇವುಗಳಿಗೆ ಭೀಮಾ ಶಿಲಾಸ್ತೋಮ ಎಂದು ಹೆಸರು. ಇವು ಮುಖ್ಯವಾಗಿ ಮುದ್ದೇಬಿಹಾಳ, ತಾಳಿಕೋಟೆ, ಶಾಹಬಾದ, ವಾಡಿ, ಚಿತ್ತಾಪುರ, ಸೇಡಂ, ಚಿಂಚೋಳಿ ಈ ಸ್ಥಳಗಳಲ್ಲಿ ಕಾಣುತ್ತವೆ. ಇಲ್ಲಿಯ ಸುಣ್ಣಕಲ್ಲನ್ನು ಉಪಯೋಗಿಸಿ ಮೂರು ದೊಡ್ಡಪ್ರಮಾಣದ ಸಿಮೆಂಟ್ ತಯಾರಿಕಾ ಕಾರ್ಖಾನೆಗಳು ಗುಲ್ಬರ್ಗ ಜಿಲ್ಲೆಯಲ್ಲಿದ್ದು ಹೇರಳವಾಗಿ ಸಿಮೆಂಟನ್ನು ತಯಾರಿಸುತ್ತವೆ.

ಮೇಲೆ ವಿವರಿಸಿದ ಎಲ್ಲ ಶಿಲೆಗಳೂ ಅತಿ ಪ್ರಾಚೀನ ಕಾಲಕ್ಕೆ ಸೇರಿದ ಜೀವ ಚಿಹ್ನೆ ಅಷ್ಟಾಗಿ ಕಾಣದ ಶಿಲಾವರ್ಗಗಳಿಗೆ ಸೇರಿದುವು. ಈ ಎಲ್ಲ ವರ್ಗದ ಶಿಲೆಗಳ ಮೇಲೂ ಸು. 5 ಕೋಟಿ ವರ್ಷಗಳ ಹಿಂದೆ ಅಗಾಧ ಪ್ರಮಾಣದಲ್ಲಿ ಶಿಲಾಲಾವ ಪ್ರವಾಹ ರೂಪದಲ್ಲಿ ಹರಿದು ಮಂದವಾದ ಹೊದಿಕೆಯಂತೆ ಕುಳಿತಿದೆ. ಬೆಳಗಾಂವಿ ಜಿಲ್ಲೆಯ ಉತ್ತರಭಾಗ, ಬಿಜಾಪುರ, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳು ದಖನ್‌ಲಾವಾ ಪ್ರವಾಹದಿಂದ ಮುಚ್ಚಿಹೋಗಿವೆ. ಇವು ಮಟ್ಟವಾಗಿದ್ದು ಬಹುದೂರ ಹರಡಿರುತ್ತವೆ. ಇಲ್ಲಿಯ ಬೆಟ್ಟಗಳು ಮೇಜಿನಾಕಾರದಲ್ಲಿದ್ದು, ಶಿಖರಗಳಿರುವುದಿಲ್ಲ. ಈ ಬಗೆಯ ಶಿಲೆಗಳನ್ನು ದಖನ್‌ಲಾವಾಗಳೆಂದು ಗುರುತಿಸುತ್ತಾರೆ. ಇವು ಬೀಳುಬಿದ್ದಾಗ ಅದರಿಂದುಂಟಾದ ಮಣ್ಣು ಕಪ್ಪುಛಾಯೆಯನ್ನು ಹೊಂದಿರುತ್ತದೆ. ಈ ಎರೆಮಣ್ಣಿನ ಪ್ರದೇಶ ಫಲವತ್ತಾದುದು. ನೂರಾರು ಮೈಲುಗಳಷ್ಟು ಏರು ತಗ್ಗು ಇಲ್ಲದ ಕಪ್ಪುಮಣ್ಣಿನಿಂದ ಆವೃತವಾದ ಅಗಾಧ ಬಯಲು ಕಾಣುತ್ತದೆ. ದಖನ್‌ಲಾವಾಗಳಿಂದ ಆವೃತವಾದ ಪ್ರದೇಶ ಈ ಬಗೆಯ ಬಯಲು ಭೂಮಿಗೆ ಉತ್ತಮ ನಿದರ್ಶನ.

ಬೆಳಗಾಂವಿ ಜಿಲ್ಲೆಯ ಪಶ್ಚಿಮಕ್ಕೆ ಮತ್ತು ಬೀದರ್ ಜಿಲ್ಲೆಯ ಬೀದರ್, ಹುಮನಾಬಾದ ಮತ್ತು ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಬಹು ವ್ಯಾಪಿಯಾಗಿ ರಂಧ್ರಮಯವಾಗಿರುವ ಕೆಮ್ಮಣ್ಣು ಬಣ್ಣದ, ಮಣ್ಣುರೂಪಿನ ಆದರೂ ಬಹು ಗಡುಸಾದ ಒಂದು ಬಗೆಯ ಶಿಲೆ ದೊರೆಯುತ್ತದೆ. ಇದೇ ಬಗೆಯ ಶಿಲೆ ಪಶ್ಚಿಮ ಕರಾವಳಿಯ ಉದ್ದಕ್ಕೂ ಕಾಣುವುದುಂಟು. ಇದನ್ನು ಲ್ಯಾಟರೈಟ್ ಎಂದು ಕರೆಯುತ್ತಾರೆ. ಇದನ್ನು ಜಂಬಿಟ್ಟಿಗೆ, ಇಟ್ಟಿಗೆ ಕಲ್ಲು ಎಂದೂ ಕರೆಯುತ್ತಾರೆ. ಕರಾವಳಿಯ ಕಟ್ಟಡಗಳೆಲ್ಲವೂ ಈ ಕಲ್ಲಿನಿಂದ ಕಟ್ಟಿದುವು. ಬೀದರ್, ಬೆಳಗಾಂವಿ ಸುತ್ತಲೂ ಈ ಕಲ್ಲಿನಿಂದ ಕಟ್ಟಿದ ಮನೆಗಳನ್ನು ಗುರುತಿಸಬಹುದು. ಈ ಬಗೆಯ ಶಿಲೆಗಳಲ್ಲಿರುವ ಅಲ್ಯೂಮಿನಿಯಂ ಅಂಶ ಹೆಚ್ಚಾದಾಗ ಅವು ಬಾಕ್ಸೈಟ್ ಅದಿರಾಗಿ ಮಾರ್ಪಡುತ್ತವೆ. ಅವುಗಳಿಂದ ಅಲ್ಯೂಮಿನಿಯಂ ಲೋಹವನ್ನು ಪಡೆಯಬಹುದು. ದಖನ್‌ಲಾವಾಗಳನ್ನು ಮತ್ತು ಅದರ ಮೇಲೆ ರೂಪುಹೊಂದಿದ ಜಂಬಿಟ್ಟಿಗೆಯನ್ನು ಬಿಟ್ಟರೆ ಇನ್ನುಳಿದಿರುವುದು ಕಡಲ ಅಂಚಿನಲ್ಲಿ ಶೇಖರವಾಗಿರುವ ಈಚಿನ ಮರಳು ಶಿಲೆಗಳು, ಮೆಕ್ಕಲು ಮಣ್ಣು.

*

**ಕರ್ನಾಟಕದಲ್ಲಿ ಚಿನ್ನದ ಗಣಿಗಾರಿಕೆ:** ಕರ್ನಾಟಕದ ಚಿನ್ನದ ಗಣಿಗಾರಿಕೆಗೆ ಅತ್ಯಂತ ಪ್ರಾಚೀನ ಇತಿಹಾಸವಿದೆ. ಪ್ರ.ಶ.ಪೂ. ವರ್ಷಗಳಲ್ಲೇ ನಮ್ಮ ನಾಡಿನಲ್ಲಿ ಚಿನ್ನವನ್ನು ಗಣಿ ಮಾಡಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಚಿನ್ನ ದೊರೆಯುವ ಶಿಲೆಗಳ ಬಗ್ಗೆ ಪ್ರಾಚೀನರಿಗೆ ಸ್ಪಷ್ಟ ತಿಳಿವಿತ್ತು. ಈ ಹಿನ್ನೆಲೆಯಲ್ಲಿ ಭೂಮಿಯೊಳಗೆ ಕೂಪ ತೋಡಿ, ಆಳವಾದ ಭಾಗಗಳನ್ನು ಪರಿಶೋಧಿಸಿ ಚಿನ್ನವನ್ನು ಗಣಿ ಮಾಡಿದ್ದಾರೆ. ಹಾಗೆಯೇ ಮೆಕ್ಕಲು ಚಿನ್ನವನ್ನು ಸೋಸಿ ತೆಗೆದಿದ್ದಾರೆ.

ಬ್ರಹ್ಮಗಿರಿಯ ಅಶೋಕನ ಶಾಸನದಲ್ಲಿ ಪ್ರಸ್ತಾಪಿಸಿರುವ ಸುವರ್ಣಗಿರಿ ಎನ್ನುವ ಹೆಸರು ರಾಯಚೂರಿನ ಮಸ್ಕಿಯ ಬಳಿಯ ಸ್ವರ್ಣಭರಿತ ಗುಡ್ಡಗಳನ್ನು ಕುರಿತೇ ಇರಬಹುದೆಂದು ಆಲ್ಚಿನ್ ಎಂಬ ಇತಿಹಾಸಕಾರರ ಅಭಿಪ್ರಾಯ. ಬಹುಶಃ ನವಶಿಲಾಯುಗದಲ್ಲಿ ಎಂದರೆ ಪ್ರಶ.ಪೂ. 3ನೆಯ ಸಹಸ್ರಮಾನದ ಕೊನೆಯಲ್ಲಿ ಪ್ರಾರಂಭವಾಗಿ 1ನೆಯ ಸಹಸ್ರಮಾನದ ಮೊದಲರ್ಧದವರೆಗೆ ಸಣ್ಣ ಪ್ರಮಾಣದಲ್ಲಿ ಚಿನ್ನದ ಗಣಿಗಾರಿಕೆ ಪ್ರಾರಂಭವಾಗಿರಬಹುದು ಅನಂತರ ಮೌರ್ಯರು ದಖನ್ ಪ್ರಾಂತ್ಯವನ್ನು ಆಳುವ ಹೊತ್ತಿಗೆ ಚಿನ್ನದ ಗಣಿಗಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆದಿರಲು ಸಾಧ್ಯ. ಮಸ್ಕಿ, ಮುದಗಲ್, ಸಿಂಗಸಗೂರು, ಕೋಟೆಗಲ್ಲು, ವಾಟೆಗಲ್ಲು ಮುಂತಾದೆಡೆ ನವ ಶಿಲಾಯುಗದ ಅನೇಕ ಕುರುಹುಗಳು ಪತ್ತೆಯಾಗಿವೆ. ಹಟ್ಟಿ ಸುತ್ತಮುತ್ತಲಿರುವ ಪುರಾತನ ಚಿನ್ನದ ಗಣಿಗಳನ್ನು ಕುರಿತು ಹೈದರಾಬಾದ್ ನಿಜಾಮ್ ಸರ್ಕಾರಕ್ಕೆ ಭೂವಿಜ್ಞಾನ ಸಲಹೆಗಾರನಾಗಿದ್ದ ಕ್ಯಾಪ್ಟನ್ ಲಿಯೋನಾರ್ಡ್‌ಮನ್ ಎಂಬಾತ ಸಮೀಕ್ಷೆ ನಡೆಸಿ ಗಣಿಗಳ ಪ್ರಾಚೀನ ಇತಿಹಾಸ ಸಾರುವ ಅಮೂಲ್ಯ ಮಾಹಿತಿಯನ್ನು ನೀಡಿದ್ದಾನೆ.

ದಕ್ಷಿಣ ಭಾರತದಲ್ಲಿರುವ ಪ್ರಾಚೀನ ಚಿನ್ನದ ಗಣಿಗಳಿಂದ ಒಂದು ಅಂಶ ನಿಚ್ಚಳವಾಗಿ ತಿಳಿಯುತ್ತದೆ. ಎಲ್ಲೆಲ್ಲಿ ಚಿನ್ನಭರಿತ ಶಿಲೆಗಳಿವೆಯೋ ಅಲ್ಲೆಲ್ಲ ತಾಂತ್ರಿಕ ತೊಂದರೆ ಗಣಿಗಾರಿಕೆಯನ್ನು ಅರ್ಧಕ್ಕೆ ಕೈ ಬಿಟ್ಟಿರುವ ನಿದರ್ಶನಗಳಿವೆ. ಆದರೆ ಹಟ್ಟಿಯ ಸುತ್ತಮುತ್ತ ಅತ್ಯಂತ ಆಳವಾದ ಪ್ರಾಚೀನ ಚಿನ್ನದ ಗಣಿಗಳಿವೆ. ಮ್ಯಾಕ್ಲರಾನ್ ಎಂಬ ಭೂವಿಜ್ಞಾನಿ ಹಟ್ಟಿಯ ಸುತ್ತಮುತ್ತ 300ಕ್ಕಿಂತಲೂ ಮಿಗಿಲು ಪ್ರಾಚೀನ ಚಿನ್ನದ ಗಣಿಗಳಿವೆ ಎಂದು ತಿಳಿಸಿದ್ದಾನೆ. ಹಟ್ಟಿಯ ಗಣಿಗಳಲ್ಲಿ ಪ್ರಾಚೀನರು ಬಳಸಿದ ಕಬ್ಬಿಣದ ಬಾಣಲೆ, ಕಲ್ಲಿನ ಪೀಠ, ಮಡಕೆಯ ಚೂರುಗಳು ಮುಂತಾದವು ದೊರೆತಿವೆ. ಈ ಪುರಾವೆಗಳನ್ನು ಆಧರಿಸಿ ಪ್ರಾಚ್ಯ ಸಂಶೋಧಕರು ಇವು ಮೊದಲನೇ ಸಂಸ್ಥಾನಕ್ಕೆ ಸೇರಿವೆ ಎಂದು ಕಾಲನಿರ್ಣಯ ಮಾಡಿದ್ದಾರೆ. ಇದೇ ಬಗೆಯ ಗಣಿ ಸಾಮಗ್ರಿಗಳು, ಮಡಕೆ ಚೂರುಗಳು ಕೋಲಾರದ ಚಿನ್ನದ ಗಣಿಗಳಲ್ಲಿ ಒಂದಾದ ಮೈಸೂರು ಗಣಿಯನ್ನು ಆಳವಡಿಸುವಾಗ ದೊರೆತವು. ಅಲ್ಲಿನ ಗಣಿ ವಸ್ತು ಸಂಗ್ರಹಾಲಯದಲ್ಲಿ ಇವುಗಳನ್ನು ರಕ್ಷಿಸಿ ಇಟ್ಟಿದ್ದಾರೆ. ರಾಟೆಗಳ ಮೂಲಕ ಚಿನ್ನದ ಅದಿರನ್ನು ಎತ್ತಿ ಹೊರತೆಗೆದು ಕಲ್ಲಿನ ಮೇಲೆ ಅರೆದು ಸಣ್ಣಗೆ ಪುಡಿ ಮಾಡುವ ತಂತ್ರವನ್ನು ಪ್ರಾಚೀನರು ಅನುಸರಿಸಿದ್ದಾರೆ. ಕರ್ನಾಟಕದಾದ್ಯಂತ ಪ್ರಾಚೀನದ ಗಣಿಗಳ ಸುತ್ತಮುತ್ತ ಚಿನ್ನದ ಅದಿರನ್ನು ಪುಡಿಮಾಡಲು ಬಳಸುತ್ತಿದ್ದ ರುಬ್ಬುಗುಂಡುಗಳು, ಬಂಡೆಗಳ ಮೇಲೆ ಮೂಡಿಸಿರುವ ಕುಳಿಗಳು ಸಾಕಷ್ಟು ಲಭ್ಯವಿವೆ. ಹತ್ತಿರದ ಹೊಳೆಯ ಬಳಿ ಪುಡಿ ಮಾಡಿದ ಅದುರನ್ನು ಜಾಲಿಸಿ, ಚಿನ್ನವನ್ನು ಸಾಂದ್ರತೆಯ ಆಧಾರದ ಮೇಲೆ ಸುಲಭವಾಗಿ ಸಂಗ್ರಹಿಸುತ್ತಿದ್ದರು. ವಿಶೇಷವಾಗಿ ಹಟ್ಟಿ ಚಿನ್ನದ ಗಣಿಗಳಲ್ಲಿ ಪ್ರಾಚೀನ ಗಣಿಗಾರಿಕೆಯ ಅನೇಕ ಕುರುಹುಗಳು ಪತ್ತೆಯಾಗಿವೆ. ಅದಿರನ್ನು ಮೇಲೆ ಎಳೆದುಕೊಳ್ಳಲು ಬಳಸುತ್ತಿದ್ದ ಹಗ್ಗಗಳಿಂದ ಶಿಲಾ ಭಿತ್ತಿಯ ಮೇಲೆ ಮೂಡಿರುವ ಗುರುತುಗಳು ಈಗಲೂ ಉಳಿದಿವೆ. ಗಣಿ ಕುಸಿದು ಬೀಳದಂತೆ ಆಸರೆಗಾಗಿ ಬಳಸುತ್ತಿದ್ದ ಗೊಬ್ಬಳಿ ಮರದ ತುಂಡುಗಳೂ ಪತ್ತೆಯಾಗಿವೆ. ಕೆಲವು ದಿಮ್ಮಿಗಳು ಗರಗಸದಿಂದ ಕೊಯ್ಯಲಾರದಷ್ಟು ಗಟ್ಟಿಯಾಗಿವೆ.

ಕರ್ನಾಟಕದ ಸ್ಥಳನಾಮಗಳ ವೈಶಿಷ್ಟ್ಯವನ್ನು ಪರಿಗಣಿಸಿದಾಗ ಮತ್ತೊಂದು ಅಂಶವೂ ವಿಶೇಷವಾಗಿ ಗಮನ ಸೆಳೆಯುತ್ತದೆ. ಹೊನ್ನು ಹೆಸರಿನ ಅನೇಕ ಸ್ಥಳಗಳು ನಮ್ಮಲ್ಲಿವೆ.. ಹೊನ್ನಗಲ್ಲು, ಹೊನ್ನಾಳಿ, ಹೊನ್ನಬೆಟ್ಟ, ಹೊನ್ನೇಬಾಗಿ, ಹೊನ್ನೆಹಟ್ಟಿ, ಹೊನ್ನೆಕುಣಿ, ಹೊನ್ನದೋಣಿ ಈ ಸ್ಥಳಗಳಲ್ಲಿ ಪುರಾತನ ಚಿನ್ನದ ಗಣಿಗಳಿವೆ. ಪ್ರಾಚೀನ ಚಿನ್ನದ ಗಣಿಗಳೆಲ್ಲವೂ ಈಗ ಸುಸ್ಥಿತಿಯಲ್ಲಿಲ್ಲ. ಅನೇಕ ಗಣಿಗಳು ಗುರುತೂ ಸಿಕ್ಕದಷ್ಟು ಮುಚ್ಚಿ ಹೋಗಿದೆ.

ಕರ್ನಾಟಕದ ಚಿನ್ನದ ಗಣಿಗಳ ಪ್ರಾಚೀನತೆಯನ್ನು ಪ್ರಸಿದ್ಧ ಪ್ರಾಚ್ಯ ಸಂಶೋಧಕ ವೀಲರ್, ಸಿಂಧೂನದಿಯ ಸಂಸ್ಕೃತಿಯವರೆಗೆ ವಿಸ್ತರಿಸಿದ್ದಾರೆ. ಆಲ್ಚಿನ್ ಎಂಬ ವಿದ್ವಾಂಸ ಈ ಕುರಿತು ಇನ್ನಷ್ಟು ಪುರಾವೆಗಳನ್ನು ಮುಂದಿಟ್ಟಿದ್ದಾರೆ. ಸಿಂಧೂ ನಾಗರಿಕತೆಯಲ್ಲಿ ಬಳಸಿರುವ ಬಹುಪಾಲು ಚಿನ್ನ ಬೆಳ್ಳಿಯ ಅಂಶದಿಂದಾದ ಬಿಳಿಚಿನ್ನ (ಎಲೆಕ್ಟ್ರಮ್). ಈ ಬಗೆಯ ಚಿನ್ನ ದೊರೆಯುವುದು ಗಣಿಗಳ ಮೂಲದಿಂದಲೇ ಹೊರತು ಮೆಕ್ಕಲಿನಿಂದಲ್ಲ. ಹಟ್ಟಿಯ ಚಿನ್ನ ಈ ಬಗೆಯದು. ಇದರ ಜೊತೆಗೆ ನವಶಿಲಾಯುಗದ ಅನೇಕ ಅವಶೇಷಗಳು ಹಟ್ಟಿ ಗಣಿಯ ಸುತ್ತಮುತ್ತ ಪತ್ತೆಯಾಗಿರುವುದನ್ನು ಇವರು ಉಲ್ಲೇಖಿಸಿದ್ದಾರೆ. ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿಗಳಲ್ಲಿ ಪ್ರಾಚೀನರು ಬಳಸಿದ್ದ ಮರದ ಕಂಬಗಳನ್ನು ಕಾರ್ಬನ್ 14 ಕಾಲನಿರ್ಣಯಕ್ಕೆ ಒಳಪಡಿಸಿದ್ದಾರೆ. ಈ ಅಧ್ಯಯನದ ಹಿನ್ನೆಲೆಯಲ್ಲಿ ಕೋಲಾರದ ಚಿನ್ನದ ಗಣಿಗಳನ್ನು ಈಗ್ಗೆ 700 ವರ್ಷಗಳಷ್ಟು ಮೊದಲೇ ಪ್ರಾಚೀನರು ಆಳಪಡಿಸಿದ್ದಾರೆಂಬ ಅಂಶ ಹೊರಬಿದ್ದಿದೆ.

ನಮ್ಮ ನಾಡಿನಾದ್ಯಂತ ಚಿನ್ನಕ್ಕಾಗಿ ವ್ಯವಸ್ಥಿತ ಶೋಧನೆ ಮಾಡಿರುವ ಪ್ರಾಚೀನರು ಸ್ಥಳೀಯರೇ ಅಥವಾ ಹೊರಗಿನವರೇ ಎಂಬುದರ ಬಗ್ಗೆ ಸ್ಪಷ್ಟವಾದ ದಾಖಲೆಗಳಿಲ್ಲ. ಲಿಯೋನಾರ್ಡ್‌ಮನ್ ಎಂಬ ಭೂವಿಜ್ಞಾನಿ 1939ರಲ್ಲಿ ಈ ಕುರಿತು ದೀರ್ಘ ಅಧ್ಯಯನ ಮಾಡಿದ. ಆಗಿನ ಮೈಸೂರು ಪ್ರಾಂತ್ಯದಲ್ಲಿ ಮಾಡಿರುವ ಗಣಿಗಾರಿಕೆ ಆಫ್ರಿಕದಲ್ಲಿ ಚಿನ್ನದ ಗಣಿಗಳನ್ನು ಮಾಡಲು ಪ್ರೇರಣೆ ನೀಡಿರಬಹುದೆಂದು ಊಹಿಸಿದ. ರೊಡೇಷಿಯದಲ್ಲಿ ಮೈಸೂರು ಪ್ರಾಂತ್ಯದಲ್ಲಿರುವಂತೆ ಪ್ರಾಚೀನ ಚಿನ್ನದ ಗಣಿಗಳಿಗೆ ಹೋಲಿಕೆಯಿದೆ. ಈ ಚಿನ್ನದ ಗಣಿಗಳ ಸುತ್ತಮುತ್ತಲಿನ ಕಾಡುಹತ್ತಿ, ಹುಣಿಸೇ ಮರ, ಕಾಡು ನಿಂಬೆ, ಸ್ಥಳೀಯವಲ್ಲವೆಂದೂ, ಇವೆಲ್ಲ ಹಿಂದಿನ ಮೈಸೂರು ಪ್ರಾಂತ್ಯದಿಂದ (ಆಗಿನ ಹೈದರಾಬಾದು ಕರ್ನಾಟಕ ಪ್ರಾಂತ್ಯ) ಬಂದಿರಬಹುದೆಂದು ರೋಡಿಷಿಯದ ಭೂವಿಜ್ಞಾನ ಸರ್ವೇ ಸಂಸ್ಥೆಯ ಸದಸ್ಯ ಮೇಜರ್ ಲೈತ್‌ಫುಟ್ ಎಂಬ ತಜ್ಞ, ಕ್ಯಾಪ್ಟನ್ ಲಿಯೋನಾರ್ಡ್‌ಮನ್‌ಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾನೆ.

ಕೋಲಾರದ ಚಿನ್ನದ ಗಣಿಗಳ ಇತಿಹಾಸದಲ್ಲಿ ಅತ್ಯಂತ ಕುತೂಹಲಕಾರಿ ಪ್ರಸಂಗ ಒಂದಿದೆ. ಬೆಂಗಳೂರಿನ ದಂಡು ಪ್ರದೇಶದಲ್ಲಿ ವಾಸವಾಗಿದ್ದ ಐರಿಷ್ ಸೈನಿಕ ಮೈಕೇಲ್ ಲ್ಯಾವೆಲ್ಲೆ ಎಂಬಾತ ನ್ಯೂಜಿಲೆಂಡಿನಲ್ಲಿ ಮಯೋರಿ ಯುದ್ಧದಲ್ಲಿ ಪಾಲ್ಗೊಂಡು ಬೆಂಗಳೂರಿಗೆ ವಾಪಸ್ಸಾದ ಅನಂತರ ಚಿನ್ನದ ಗಣಿಗಾರಿಕೆಯಲ್ಲಿ ಆಸಕ್ತಿ ತಳೆದ. 1871ರಲ್ಲಿ ಕೋಲಾರದ ಚಿನ್ನದ ಗಣಿ ಪ್ರದೇಶವನ್ನು ಗೋಪ್ಯವಾಗಿ ಅಧ್ಯಯನ ಮಾಡಿದ. 1873ರಲ್ಲಿ ಆಗಿನ ಮೈಸೂರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಕೋಲಾರ ಪ್ರದೇಶದಲ್ಲಿ ಕಲ್ಲಿದ್ದಲು ಗಣಿ ಮಾಡಲು ಪರವಾನಗಿ ಕೇಳಿದ್ದ. 1875ರಲ್ಲಿ ಸರ್ಕಾರವನ್ನು ವಂಚಿಸಿ ಮೂರು ವರ್ಷಗಳ ಕಾಲ ಗುತ್ತಿಗೆ ಪಡೆದ. 1876ರಲ್ಲಿ ತನ್ನ ಹಕ್ಕನ್ನು ಮದ್ರಾಸ್ ಸ್ಟಾಫ್ ಕ್ವಾರ್ಟರ್ಸ್‌ನ ಜನರಲ್ ಬೆರಿಸ್‌ಫರ್ಡ್ ಎಂಬುವನಿಗೆ ಮಾರಿಕೊಂಡ. ಮುಂದೆ ಈತ ಒಂದು ಸಿಂಡಿಕೇಟನ್ನು ಮಾಡಿಕೊಂಡು ಕೋಲಾರ್ ಕನ್ಸೇಷನರೀಸ್ ಎಂದು ಹೆಸರಿಟ್ಟು ಅದಕ್ಕೆ ಐದು ಸಾವಿರ

ರೂಪಾಯಿ ಬಂಡವಾಳ ಹೂಡಿದ. ಈ ಸಿಂಡಿಕೇಟ್, ಆಸ್ಟ್ರೇಲಿಯದ ಇಬ್ಬರು ಗಣಿ ತಜ್ಞರನ್ನು ಬರಮಾಡಿಕೊಂಡು ಚಿನ್ನದ ಗಣಿಗಾರಿಕೆ ಪ್ರಾರಂಭಿಸಿತು. 1879ರಲ್ಲಿ ಸ್ವಲ್ಪಪ್ರಮಾಣದ ಚಿನ್ನವೂ ದೊರೆಯಿತು. ಇದರಿಂದ ಪ್ರೇರಿತವಾಗಿ ಅತ್ತ ವೈನಾಡಿನಲ್ಲಿ ಚಿನ್ನದ ಮೇಲೆ ಹಣ ಹೂಡಿದ್ದ ಅನೇಕ ಕಂಪನಿಗಳು ಮೈಸೂರು ಪ್ರಾಂತ್ಯದತ್ತ ಸಾರಾಸಗಟಾಗಿ ಬಂದವು. 1880ರಲ್ಲಿ ಮೈಸೂರು ಗಣಿ ಕಂಪನಿ ಅಸ್ತಿತ್ವಕ್ಕೆ ಬಂದಿತು. ಅನಂತರ ನಂದಿದುರ್ಗ ಕಂಪನಿ ತಲೆಯೆತ್ತಿತು. ಇವುಗಳ ಆಡಳಿತ ಕೇಂದ್ರ ಲಂಡನ್ನಿನಲ್ಲಿತ್ತು. 1881ರ ಹೊತ್ತಿಗೆ ಕೋಲಾರದ ಚಿನ್ನದ ಗಣಿಗಳಲ್ಲಿ 13 ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದವು. 1880ರಲ್ಲೇ ಉರಿಗಾಂ ಕಂಪನಿ 40 ಟನ್ನು ಚಿನ್ನದ ಅದಿರನ್ನು ಅರೆದು 42 ಔನ್ಸ್ ಚಿನ್ನವನ್ನು ಸಂಗ್ರಹಿಸಿ ಆಧುನಿಕ ಗಣಿ ಉದ್ಯಮಕ್ಕೆ ಬುನಾದಿ ಹಾಕಿತು. ಪ್ರಾರಂಭಿಕ ಸ್ಥಿತಿ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಇಲ್ಲಿನ ಚಿನ್ನದ ಗಣಿ ಉದ್ಯಮದ ಬಗ್ಗೆ ಬ್ರಿಟನ್ನಿನ ಗಣಿಗಳು ಮತ್ತು ಖನಿಜ ಎಂಬ ವರದಿಯಲ್ಲಿ ರಾಲ್ಫ್ ಸ್ಟೋಕ್ಸ್ ಎಂಬ ತಜ್ಞ ಬರೆದ ಮಾತುಗಳಿವು:

ಮೊದಲ ದುರದೃಷ್ಟ ಗಣಿಗಳಲ್ಲಿ ಕೋಲಾರದ ಗಣಿಗಳ ಹೆಸರು ಎದ್ದು ಕಾಣುತ್ತದೆ. ಇಲ್ಲಿ ಪ್ರಾಚೀನರು ಬಹು ಹಿಂದೆಯೇ ಚಿನ್ನವನ್ನು ಪತ್ತೆ ಹಚ್ಚಿ ಗಣಿಗಳನ್ನು ಮಾಡಿದ್ದರು. ಹೊಸ ನಿಕ್ಷೇಪವನ್ನು ಪತ್ತೆ ಹಚ್ಚಲು ಆಳವಾದ ಗಣಿಗಳನ್ನು ತೋಡುವುದು ಅನಿವಾರ್ಯವಾಯಿತು.

ಆಗಿನ ಪರಿಸ್ಥಿತಿಯೂ ಅಷ್ಟೇ ನಿರಾಶಾದಾಯಕವಾಗಿತ್ತು. ಕೋಲಾರದ ಸುತ್ತಮುತ್ತ ಸಾಂಕ್ರಾಮಿಕ ರೋಗ ಉಲ್ಬಣಿಸಿತ್ತು. ಗಣಿಗಳಿಗಂತಿರಲಿ, ಕುಡಿಯುವ ನೀರಿಗೆ ಎಂದೂ ಅಲ್ಲಿ ಬವಣೆ ತಪ್ಪೇ ಇರಲಿಲ್ಲ. 1882ರ ಹೊತ್ತಿಗೆ ಗಣಿ ಕಾರ್ಯಾಚರಣೆ ತೀರಾ ಕೆಳಮಟ್ಟಕ್ಕೆ ಕುಸಿದು ಇನ್ನೇನು ಗಣಿಗಳನ್ನು ಮುಚ್ಚದೆ ಬೇರೆ ಮಾರ್ಗವೇ ಇಲ್ಲ ಎಂಬ ತೀರ್ಮಾನ ತೆಗೆದುಕೊಳ್ಳುವ ಹಂತವನ್ನು ತಲಪಿತು. 1880ರಿಂದ 1902ರವರೆಗೆ ಕೋಲಾರದ ಚಿನ್ನದ ಗಣಿಗಾರಿಕೆಯ ಮುಖ್ಯಸ್ಥನಾಗಿದ್ದ ಜಾನ್ ಟೇಲರ್, ಕೋಲಾರದ ಪುರಾತನ ಚಿನ್ನದ ಗಣಿಗಳನ್ನು ಆಳಕ್ಕೆ ಇಳಿಸಿ ಪರಿಶೋಧಿಸಬೇಕೆಂದು ಸಲಹೆ ನೀಡಿದ. ಕ್ಯಾಪ್ಟನ್ ಪ್ಲಮರ್ ಎಂಬಾತ ಗಣಿಯನ್ನು ಆಳಪಡಿಸುತ್ತಿದ್ದಾಗ ಪ್ರಾಚೀನರು ಬಿಟ್ಟಿದ್ದ ಚಿನ್ನದ ಅದಿರಿನ ಶಿಲ್ಕು ದೊರೆಯಿತು.

ಕೋಲಾರದ ಚಿನ್ನದ ಗಣಿ ಪ್ರದೇಶದ ಭೂವಿಜ್ಞಾನ: ಬೆಂಗಳೂರಿನಿಂದ 80 ಕಿಮೀ ಪೂರ್ವಕ್ಕೆ, ಉತ್ತರ ದಕ್ಷಿಣವಾಗಿ ಸು. 80 ಕಿಮೀ ದೂರ ಹಾಯುವ ಕೋಲಾರದ ಪದರ ಶಿಲಾ ಜಾಡಿಗೆ ಕರ್ನಾಟಕದ ಭೂವಿಜ್ಞಾನದಲ್ಲಿ ವಿಶೇಷ ಸ್ಥಾನವಿದೆ. ಇದರ ಅಗಲ ಸರಾಸರಿ ಆರು ಕಿಮೀ ದಕ್ಷಿಣದಲ್ಲಿ ಕಾಮಸಮುದ್ರದಿಂದ ಮುಂದಕ್ಕೆ ಚಾಚಿ ಎರಡು ಕವಲಾಗಿ ಹಂಚಿಹೋಗಿದೆ. ಉತ್ತರದಲ್ಲಿ ಶ್ರೀನಿವಾಸಪುರದವರೆಗೂ ಇದು ವಿಸ್ತರಿಸಿದೆ. ಈ ಶಿಲಾ ಸಮೂಹವನ್ನು ಧಾರವಾಡ ಶಿಲಾ ಸಮೂಹದ ಒಂದು ಭಾಗ ಎಂದು ಪರಿಗಣಿಸಲಾಗಿದೆ. ಕರ್ನಾಟಕದಲ್ಲಿ ಈ ಬಗೆಯ ಶಿಲೆಗಳನ್ನು ಹಸುರು ಶಿಲಾ ಪಟ್ಟಿ ಎಂಬ ಗುಂಪಿಗೆ ಸೇರಿಸಲಾಗಿದೆ. ಚಿನ್ನವಿರುವ ವಲಯ ಈ ಶಿಲಾ ಪಟ್ಟಿಯಲ್ಲಿದೆ. ಸು. ಎಂಟು ಕಿಮೀ ವ್ಯಾಪಿಸಿದೆ. ಇಲ್ಲಿನ ಹಾರ್ನ್‌ಬ್ಲೆಂಡ್ ಪದರ ಶಿಲೆ, ಸ್ವರ್ಣಭರಿತ ಸಿರಗಳಿಗೆ ಮಾತೃವಾಗಿದೆ. ಮೂಲತಃ ಅಗ್ನಿಶಿಲೆಯಾಗಿದ್ದು ಅನಂತರ ರೂಪಾಂತರಣವಾಗಿದೆ. ಪಶ್ಚಿಮ ಅಂಚಿನಲ್ಲಿ ಕಬ್ಬಿಣಯುಕ್ತ ಕ್ವಾರ್ಟ್‌ಜೈಟ್ ಶಿಲೆಗಳಿವೆ ಪೂರ್ವದ ಅಂಚಿನಲ್ಲಿ ಜರ್ಜರಿತವಾದ ಶಿಲೆಗಳಿವೆ. ಕೋಲಾರದ ಪದರು ಶಿಲಾ ಜಾಡಿನಲ್ಲಿ ಅಲ್ಲಲ್ಲೇ ಗ್ರಾನೈಟ್ ಶಿಲೆ ಅಂತಸ್ಸರಣಗೊಂಡಿದೆ. ಸ್ವರ್ಣಭರಿತ ಬೆಣಚು ಸಿರಗಳು ಹಾರ್ನ್‌ಬ್ಲೆಂಡ್ ಶಿಲೆಗಳಲ್ಲಿರುವ ಸ್ತರಭಂಗದಿಂದಾದ ಬಿರುಕುಗಳನ್ನು ತುಂಬಿ ರೂಪುಗೊಂಡಿವೆ ಎಂದು ಭೂವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ಬಹುಶಃ ಗ್ರಾನೈಟ್ ಶಿಲೆ, ನಾಡಶಿಲೆಯಲ್ಲಿ ಅಂತಸ್ಸರಣಗೊಂಡ ಕಾಲಕ್ಕೆ ಶಿಲಾ ಪಾಕದೊಂದಿಗೆ ಬಂದ ಬೆಣಚು ಚಿನ್ನವನ್ನು ಹೊತ್ತು ತಂದು ಈ ಬಿರುಕುಗಳಲ್ಲಿ ತುಂಬಿರಬಹುದು.

ಇಡೀ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಪ್ರಮುಖವಾಗಿ 26 ಸ್ವರ್ಣಭರಿತ ಸಿರಗಳಿವೆ. ಇವುಗಳಲ್ಲಿ ಪ್ರಧಾನವಾಗಿ ಎರಡು ಬಗೆ. ಸಲ್ಫೈಡ್ ಖನಿಜಗಳು ಬೆರೆತಿರುವ ಪಶ್ಚಿಮ ಸಿರಗಳು ಮತ್ತು ನೇರವಾಗಿ ಯಂತ್ರಕ್ಕೆ ಕೊಟ್ಟು ಚಿನ್ನವನ್ನು ಸಂಗ್ರಹಿಸಬಹುದಾದ ಪೂರ್ವ ಸಿರಗಳು. ಇವುಗಳಲ್ಲೆಲ್ಲ ಛಾಂಪಿಯನ್ ಸಿರದ ಮೇಲೆ ಅತ್ಯಂತ ಆಳವಾದ ಗಣಿಯಿದೆ. ಕೋಲಾರದ ಚಿನ್ನದ ಗಣಿಗಳ ಪೈಕಿ ಇದು ಅತ್ಯಂತ ಹೆಚ್ಚಿನ ಚಿನ್ನವನ್ನು ಉತ್ಪಾದಿಸಿದೆ. ದಕ್ಷಿಣದಲ್ಲಿ ಮೈಸೂರು ಗಣಿ, ಮಧ್ಯದಲ್ಲಿ ಛಾಂಪಿಯನ್ ಗಣಿ, ವಾಯವ್ಯದಲ್ಲಿ ನಂದಿದುರ್ಗ ಗಣಿಗಳಿವೆ. 1880ರಿಂದ ಪ್ರಾರಂಭಿಸಿ 1990ರವರೆಗೆ ಈ ಎಲ್ಲ ಗಣಿಗಳಿಂದ ಒಟ್ಟು 800 ಟನ್ನು ಚಿನ್ನ ಉತ್ಪಾದನೆಯಾಗಿದೆ. 3320 ಮೀ ಆಳದವರೆಗೆ ವಿಸ್ತರಿಸಿರುವ ಈ ಗಣಿಗಳ ಎಲ್ಲ ಕೂಪಗಳನ್ನು ಸಾಲಿಗೆ ಪೋಣಿಸಿದರೆ 63 ಕಿಮೀ ಉದ್ದದ ಕೂಪಗಳಾಗುತ್ತವೆ. ಹಾಗೆಯೇ ಎಲ್ಲ ಸುರಂಗಗಳನ್ನು ಒಂದರ ಹಿಂದೆ ಒಂದು ಪೋಣಿಸಿದರೆ ಅವು 650 ಕಿಮೀ ಉದ್ದದ ಸುರಂಗವಾಗುತ್ತದೆ.

ಛಾಂಪಿಯನ್ ಸಿರ ಸಮೂಹ : ಕೋಲಾರದ ಚಿನ್ನದ ಗಣಿಗಳಲ್ಲಿ ಅತ್ಯಂತ ಸ್ವರ್ಣಭರಿತವಾದ ಛಾಂಪಿಯನ್ ಸಿರ ಸಮೂಹ ಅತಿ ಹೆಚ್ಚಿನ ಪ್ರಮಾಣದ ಮೆಗ್ನೀಸಿಯಮ್ ಮತ್ತು ನಿಕ್ಕಲ್ ಧಾತುಗಳಿರುವ ಬಸಾಲ್ಟ್ ಲಾವಾ ಶಿಲೆಗಳಲ್ಲಿದೆ. ಉತ್ತರಕ್ಕೆ ಬಲ್ಲಾಗಟ್ ಗಣಿವರೆಗೆ, ದಕ್ಷಿಣಕ್ಕೆ ಕೋಲಾರ ಗಣಿವರೆಗೆ ಹಬ್ಬಿರುವ ಈ ಸಿರದಲ್ಲಿ ತಿಳಿ ಬೂದುಬಣ್ಣದ ಸಣ್ಣ ಸಣ್ಣ ಬೆಣಚಿನ ಎಳೆಗಳು ಸ್ವರ್ಣಭರಿತವಾಗಿವೆ. ಪುರಾತನ ಚಿನ್ನದ ಗಣಿಗಳು ಈ ಎಳೆಗಳನ್ನು ಆಧರಿಸಿ ಸಾಕಷ್ಟು ಆಳಕ್ಕೆ ಇಳಿದಿವೆ. ಛಾಂಪಿಯನ್ ಸಿರವನ್ನು ಅನುಸರಿಸಿ 102ನೆಯ ಹಂತದವರೆಗೆ ಚಿನ್ನವನ್ನು ತೆಗೆದಿದ್ದಾರೆ. ಈ ಹಂತ 3230 ಮೀ ಆಳದಲ್ಲಿದೆ. ಸಣ್ಣ ಸಣ್ಣ ಸ್ವರ್ಣಭರಿತ ಎಳೆಗಳ ಒಟ್ಟೂ ಅಗಲ ಸು. 200 ಮೀ. 8 ಕಿಮೀ ಉದ್ದಕ್ಕೂ ಕೋಲಾರದ ಪದರ ಶಿಲಾಜಾಡಿನಲ್ಲಿ ಇವು ವ್ಯಾಪಿಸಿವೆ.

ಪಶ್ಚಿಮ ಸ್ವರ್ಣ ಸಿರಗಳು : ಓರಿಯೆಂಟಲ್ ಸಿರ ಸೇರಿದಂತೆ ಪಶ್ಚಿಮದ ಸ್ವರ್ಣ ಸಿರಗಳು ಬಹುತೇಕ ಪಟ್ಟೆರೂಪದ ಚರ್ಟ್ ಮತ್ತು ಜ್ವಾಲಾಮುಖಿ ಜನ್ಯ ಟುಫ್ ಸ್ತರಗಳಿಗೆ ಸೀಮಿತವಾಗಿದೆ. ಚಿನ್ನದೊಂದಿಗೆ ಸಲ್ಫೈಡ್ ಖನಿಜಗಳು ಬೆರೆತಿರುವುದು ಈ ಸಿರಗಳ ವೈಶಿಷ್ಟ್ಯ. ಛಾಂಪಿಯನ್ ಸಿರ ಸಮೂಹಕ್ಕೆ 400 ರಿಂದ 500 ಮೀ ಪಶ್ಚಿಮದಲ್ಲಿರುವ ಈ ಸಿರಗಳ ಒಟ್ಟೂ ಉದ್ದ 4700 ಮೀ ಸು. 300 ಮೀ ಅಗಲ ಸಿರಗಳೂ ವ್ಯಾಪಿಸಿವೆ. ಕೋಲಾರ ಗಣಿಗಳ ಚಿನ್ನದ ಉತ್ಪಾದನೆಯಲ್ಲಿ ಇವುಗಳ ಪಾಲು ಶೇ. 2.5 ಭಾಗ ಮಾತ್ರ. ಬಿಡಿ ಸ್ವರ್ಣಸಿರ ಕೇವಲ 2 ಮೀ ಅಗಲವಾಗಿದೆ. ಈ ಗಣಿಯ ಮೇಲಿನ ಭಾಗವನ್ನು ಹೆಚ್ಚು ಗಣಿ ಮಾಡದೆ ಇರುವುದರಿಂದ ಇದರಲ್ಲೂ ಚಿನ್ನದ ಅದುರು ಗಣನೀಯ ಪ್ರಮಾಣದಲ್ಲಿದೆ.

1956ರಲ್ಲಿ ಕರ್ನಾಟಕ ಸರ್ಕಾರ ಕೋಲಾರದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡಿತು. 1962ರಲ್ಲಿ ಭಾರತ ಸರ್ಕಾರ ಇದನ್ನು ವಹಿಸಿಕೊಂಡಿತು. 1965ರಲ್ಲಿ ಮೈಸೂರು ಗಣಿ ಛಾಂಪಿಯನ್ ಗಣಿಯೊಂದಿಗೆ ವಿಲೀನವಾಯಿತು. 1972ರಲ್ಲಿ ಕೋಲಾರದ ನಾಲ್ಕೂ ಗಣಿ ಕಂಪನಿಗಳನ್ನು ವಿಲೀನ ಮಾಡಿ ಕೋಲಾರ್ ಗೋಲ್ಡ್ ಮೈನಿಂಗ್ ಅಂಡರ್‌ಟೇಕಿಂಗ್ ಸಂಸ್ಥೆಯನ್ನು ಭಾರತ್ ಗೋಲ್ಡ್ ಮೈನಿಂಗ್ ಸಂಸ್ಥೆ ಎಂದು ಮರುನಾಮಕರಣ ಮಾಡಲಾಯಿತು.

ಈಗ ಕೋಲಾರದ ಚಿನ್ನದ ಗಣಿಗಳಕಾರ್ಯ ಬಹುತೇಕ ಸ್ಥಗಿತವಾಗಿದೆ. ಆಳ ಗಣಿ ಮಾಡಿದಷ್ಟೂ ವೆಚ್ಚ ಏರುತ್ತಿದೆ. ಅಲ್ಲದೆ, ಮೊದಲಿನಂತೆ ಗಣಿಯಲ್ಲಿ ಉತ್ಕೃಷ್ಟ ಅದಿರು ಲಭ್ಯವಿಲ್ಲ. 1905ರಲ್ಲಿ ಕೋಲಾರದ ಚಿನ್ನದ ಗಣಿಯಿಂದ ಒಂದೇ ವರ್ಷದಲ್ಲಿ 19 ಟನ್ನು ಚಿನ್ನ ಉತ್ಪಾದನೆಯಾಗಿ ಅದೊಂದು ದಾಖಲೆಯಾಯಿತು. 1984–85 ರಿಂದೀಚೆಗೆ ನಿರಂತರವಾಗಿ ಉತ್ಪಾದನೆ ಕುಗ್ಗಿತು. ಒಂದು ಹಂತದಲ್ಲಿ ಸರ್ಕಾರ ಈ ಗಣಿಗಳನ್ನು ಮುಚ್ಚುವ ಯೋಚನೆಯನ್ನೂ ಮಾಡಿತ್ತು. ಹಾಗೆಂದೊಡನೆ ತಜ್ಞರು ನಿರಾಶರಾಗಿಲ್ಲ. ಹಿಂದೆಲ್ಲ ಉತ್ಕೃಷ್ಟ ದರ್ಜೆಯ ಅದಿರನ್ನು ಮಾತ್ರ ಗಣಿ ಮಾಡಿ ತ್ವರಿತ ಲಾಭ ಗಳಿಸುವುದೇ ಗುರಿಯಾಗಿತ್ತು. ಆಗ ಒಂದು ಟನ್ನು ಅದಿರಿನಲ್ಲಿ 15 ಗ್ರಾಂಗಿಂತ ಕಡಿಮೆ ಚಿನ್ನವಿದ್ದರೆ ಅಂಥ ಅದಿರನ್ನು ನಿಕೃಷ್ಟ ಎಂದು ಪರಿಗಣಿಸಿ ಅಲಕ್ಷಿಸುತ್ತಿದ್ದರು. ಈಗ ತಂತ್ರಜ್ಞಾನದಲ್ಲಿ ಭಾರಿ ಸುಧಾರಣೆಯಾಗಿದೆ. ತೆರೆದ ಗಣಿ ಕಾರ್ಯಾಚರಣೆ ಮಾಡಿ 1 ರಿಂದ 2.5 ಗ್ರಾಂ ಚಿನ್ನವಿದ್ದರೂ ಸಾಕು ಲಾಭದಾಯಕವಾಗಿ ಗಣಿ ಮಾಡಬಹುದೆಂದು ಪ್ರಾಯೋಗಿಕವಾಗಿ ಕಂಡುಕೊಳ್ಳಲಾಗಿದೆ. ಅದರಲ್ಲೂ ಓರಿಯೆಂಟಲ್ ಸ್ವರ್ಣ ಸಿರದ ಬಹುಭಾಗವನ್ನು ಗಣಿ ಮಾಡದೆಯೇ ಮೇಲು ಭಾಗದಲ್ಲಿ ಹಾಗೆಯೇ ಉಳಿಸಿದ್ದಾರೆ. ಇಂಥ ಸಿರಗಳು ತೆರೆದ ಗಣಿ ಮಾಡಲು ಯುಕ್ತ ಎಂದು ತಜ್ಞರು ಭಾವಿಸಿದ್ದಾರೆ. ಇದಲ್ಲದೆ ಕೆ.ಜಿ.ಎಫ್ ಪಟ್ಟಣದ ಸುತ್ತ ಗುಡ್ಡದಂತೆ ರಾಶಿ ಹಾಕಿರುವ ಸಂಸ್ಕರಿಸಿದ ಅದಿರಿನ ವ್ಯರ್ಥ ರಾಶಿ (ಸೈನೈಡ್ ಗುಡ್ಡ) ಮೂವತ್ತು ಕೋಟಿ ಟನ್ನುಗಳಷ್ಟಿದೆಯೆಂದು ಅಂದಾಜು. ಈ ರಾಶಿಯಲ್ಲಿ ಕನಿಷ್ಠ ಶೇ. 0.5 ಭಾಗ ಅತಿ ಸೂಕ್ಷ್ಮ ಚಿನ್ನದ ಕಣಗಳಿವೆ. ಇದನ್ನು ಮರು ಸಂಸ್ಕರಣೆಗೆ ಒಳಪಡಿಸಿದರೆ ಅತ್ಯಂತ ಕನಿಷ್ಠವೆಂದರೂ 25 ಟನ್ನು ಚಿನ್ನ ಉತ್ಪಾದಿಸಲು ಸಾಧ್ಯ. ಈ ರಾಶಿಯಲ್ಲಿರುವ ಶೇ. 60 ಭಾಗ ಚಿನ್ನವನ್ನು ಮರುಪಡೆಯಬಹುದೆಂದು ಗಣನೆ ಮಾಡಲಾಗಿದೆ. ಇದಲ್ಲದೆ ಭಾರತ್ ಗೋಲ್ಡ್ ಮೈನ್ಸ್ ಸಂಸ್ಥೆ ಇತ್ತೀಚೆಗೆ ವರದಿ ಮಾಡಿರುವಂತೆ ಟನ್ನಿಗೆ 5 ಗ್ರಾಂ ಚಿನ್ನವಿರುವ 40 ಲಕ್ಷ ಟನ್ನು ಅದಿರಿನ ಮೀಸಲು ನಿಕ್ಷೇಪ ಇನ್ನೂ ಗಣಿಯಲ್ಲಿದೆ. ಈ ಅಂಶಗಳನ್ನೆಲ್ಲ ಪರಿಗಣಿಸಿ ಕಾರ್ಯೋನ್ಮುಖವಾದರೆ ಕೋಲಾರದ ಚಿನ್ನದ ಗಣಿಗಳಿಗೆ ಇನ್ನಷ್ಟು ಕಾಲ ಜೀವದಾನ ಬರುತ್ತದೆ.

ಹಟ್ಟಿ ಚಿನ್ನದ ಗಣಿಗಳು : ಕೋಲಾರದ ಚಿನ್ನದ ಗಣಿಗಳನ್ನುಳಿದರೆ ಅತ್ಯಂತ ಹೆಚ್ಚಿನ ಚಿನ್ನದ ಗಣಿಗಾರಿಕೆ ನಡೆಯುತ್ತಿರುವುದು ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಗಳಲ್ಲಿ. ಕೋಲಾರದ ಚಿನ್ನದ ಗಣಿ ಪ್ರಾರಂಭವಾದ ಕಾಲಕ್ಕೆ ಹಟ್ಟಿ ಚಿನ್ನದ ಗಣಿಗಳಲ್ಲೂ ಚಿನ್ನ ತೆಗೆಯುವ ಕೆಲಸ ಪ್ರಾರಂಭವಾಯಿತು. 1887 ರಿಂದ 1920ರವರೆಗೆ ಇಲ್ಲಿ 7.5 ಟನ್ನು ಚಿನ್ನವನ್ನು ಗಣಿ ಮಾಡಲಾಗಿದೆ. ಇದಕ್ಕಾಗಿ 3,85,000 ಟನ್ನು ಅದಿರನ್ನು ಅರೆಯಲಾಗಿದೆ. ಆಗಿನ ಅದಿರಿನ ಚಿನ್ನದ ಅಂಶ ಟನ್ನಿಗೆ 19 ಗ್ರಾಂ ಇತ್ತು. ಮೆಯ್ನ್ ರೀಫ್ ಎಂಬ ಸ್ವರ್ಣ ಸಿರಕ್ಕೆ ಮಾತ್ರ ಗಣಿಗಾರಿಕೆ ಸೀಮಿತವಾಗಿತ್ತು.

ಹಟ್ಟಿ ಚಿನ್ನದ ಗಣಿಗಳಿರುವುದು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನಲ್ಲಿ. ಹಟ್ಟಿ, ಹಳ್ಳಿಯ ಹೆಸರು. ಅದರ ಪಕ್ಕದಲ್ಲೇ ಪುರಾತನರು ನೂರಾರು ಸಣ್ಣ ಪುಟ್ಟ ಚಿನ್ನದ ಗಣಿಗಳನ್ನು ತೋಡಿದ್ದರು. ಇಲ್ಲಿ 195 ಮೀ ಆಳದ ಗಣಿಗಳಿವೆ. ರಾಯಚೂರಿನಿಂದ 80 ಕಿಮೀ ಮತ್ತು ಕೃಷ್ಣಾನದಿಯಿಂದ 16 ಕಿಮೀ ದೂರದಲ್ಲಿದೆ. ಹಟ್ಟಿ–ಮಸ್ಕಿ ಶಿಲಾ ಜಾಡೆಂದೇ

ಹೆಸರಾಗಿರುವ ಈ ಜಾಗ ಸು. 750 ಚ.ಕಿಮೀ ಪ್ರದೇಶವನ್ನು ಆಕ್ರಮಿಸಿಕೊಂಡಿದೆ.

ಪ್ರ.ಶ.ಪೂ. 1880ರ ಸು.ನಲ್ಲಿ ಕೋಲಾರದ ಚಿನ್ನದ ಗಣಿಗಳು ಪ್ರಖ್ಯಾತಿ ಪಡೆದ ಕಾಲದಲ್ಲೇ ರಾಯಚೂರಿನ ಈ ಹಟ್ಟಿ ಗಣಿಗಳು ಗಮನ ಸೆಳೆದವು. 1874ರಲ್ಲಿ ಬ್ರೂಸ್‌ಫೂಟ್, ಈ ಭಾಗಗಳಲ್ಲಿ ಚಿನ್ನದ ಸಿರಗಳ ವಿವರಣೆ ನೀಡಿದ. 1877ರ ಹೊತ್ತಿಗೆ ಹೈದರಾಬಾದಿನ ಡೆಕ್ಕನ್ ಕಂಪನಿ 2590 ಚ.ಕಿಮೀ ಜಾಗವನ್ನು ಗುತ್ತಿಗೆಗೆ ಪಡೆದು ರಾಯಚೂರು ದೊಅಬ್ ಗೋಲ್ಡ್ ಫೀಲ್ಡ್ ಹೆಸರಿನಲ್ಲಿ ಸುರಪುರ ತಾಲ್ಲೂಕನ್ನು ಒಳಗೊಂಡಂತೆ ಸಮೀಕ್ಷೆ ನಡೆಸಿ ಚಿನ್ನ ಶೋಧಿಸಲು ಪ್ರಾರಂಭಿಸಿತು. ಭಾರತೀಯ ಭೂವಿಜ್ಞಾನ ಸಂಸ್ಥೆಯ ಪರಿಣಿತ ಭೂವಿಜ್ಞಾನಿಗಳು ಈ ಕಾರ್ಯವನ್ನು ಕೈಗೆತ್ತಿಕೊಂಡರು. ಹಟ್ಟಿ ಹಳ್ಳಿಗೆ ಅರ್ಧ ಕಿಮೀ ಪಶ್ಚಿಮದಲ್ಲಿ ಉಳುಮೆ ಭೂಮಿಯಲ್ಲಿ ತೇಲುತ್ತಿದ್ದ ಬೆಣಚುಕಲ್ಲಿನಲ್ಲಿ ಮೊದಲು ಚಿನ್ನವನ್ನು ಪತ್ತೆ ಹಚ್ಚಲಾಯಿತು. ಇದು ಅಲ್ಲಿನ ಪುರಾತನ ಚಿನ್ನದ ಗಣಿಗಳನ್ನು ಪತ್ತೆ ಹಚ್ಚಲು ನೆರವಾಯಿತು. ಹಟ್ಟಿಗೆ 20 ಕಿಮೀ ಪರಿಧಿಯಲ್ಲೇ 1887–1900ರ ನಡುವೆ ಅನೇಕ ಕಂಪನಿಗಳು ಚಿನ್ನದ ಪರಿಶೋಧನೆಗೆ ತೊಡಗಿದವು. ವಂಡಳ್ಳಿಯಲ್ಲಿ ಇದೇ ಕಂಪನಿಗೆ ಸೇರಿದ ಶಾಖೆ 1898ರಲ್ಲಿ ಗಣಿಯನ್ನು ಪ್ರಾರಂಭಿಸಿತು. 373 ಕಿಗ್ರಾಂ ಚಿನ್ನವನ್ನು ಉತ್ಪಾದಿಸಿ ಹೇಳಿಕೊಳ್ಳುವ ಲಾಭ ಪಡೆಯದೆ ಕಂಪನಿ ಮುಚ್ಚಿತು. 1901ರಲ್ಲಿ ನಿಜಾಮ್ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ಹಟ್ಟಿಯ ಮುಖ್ಯ ಗಣಿಯ ಕಾರ್ಯಾಚರಣೆ ಪ್ರಾರಂಭಿಸಿತು. 1903–20ರ ನಡುವೆ ಅದು 7371 ಕಿಗ್ರಾಂ ಚಿನ್ನವನ್ನು ಉತ್ಪಾದಿಸಿತು. ಇದರಂತೆ ಕೆಂಪನದೊಡ್ಡಿಯ ಬಳಿ ಇದೇ ಕಂಪನಿ 1905ರಲ್ಲಿ 66 ಕಿಗ್ರಾಂ ಚಿನ್ನ ಉತ್ಪಾದಿಸಿ 1908ರಲ್ಲಿ ಮುಚ್ಚಿಹೋಯಿತು.

1937ರಲ್ಲಿ ಹೈದರಾಬಾದ್ ಸರ್ಕಾರ ಹೈದರಾಬಾದ್ ಗೋಲ್ಡ್ ಡೆವಲಪ್‌ಮೆಂಟ್ ಸಿಂಡಿಕೇಟ್ ಮತ್ತು ಜಾನ್ ಟೇಲರ್ ಕಂಪನಿ, ಹಟ್ಟಿಯ ಪುರಾತನ ಚಿನ್ನದ ಗಣಿಗಳ ಕೂಲಂಕಷ ಅಧ್ಯಯನದಲ್ಲಿ ತೊಡಗಿದವು. ಆಗ ಚಿನ್ನದ ಬೆಲೆ ಹೆಚ್ಚಾಗುವುದರ ಜೊತೆಗೆ ರಾಯಚೂರು ಜಿಲ್ಲೆ ಬರ ಪೀಡಿತ ಪ್ರದೇಶವಾಗಿತ್ತು. ಪರಿಹಾರೋಪಾಯವಾಗಿ ಗಣಿ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿತು. ಹಟ್ಟಿ ಚಿನ್ನದ ಗಣಿಗಳ ಅಭಿವೃದ್ಧಿಗೆ ಈ ಯೋಜನೆ ಭದ್ರ ಬುನಾದಿಯನ್ನು ಹಾಕಿಕೊಟ್ಟಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಹಟ್ಟಿ ಚಿನ್ನದ ಗಣಿಯ ಕಾರ್ಯಾಚರಣೆ ಸ್ಥಗಿತವಾಯಿತು. 1947ರವರೆಗೂ ಗಣಿ ಕಾರ್ಯಾಚರಣೆ ಮುಂದುವರಿಯಲಿಲ್ಲ. ಮುಂದೆ ಹೈದರಾಬಾದ್ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಮತ್ತೆ ಚಿನ್ನವನ್ನು ಉತ್ಪಾದಿಸಲು ತೊಡಗಿತು (1948).

ಕರ್ನಾಟಕದ ಏಕೀಕರಣವಾದುದರಿಂದ ಹೈದರಾಬಾದಿನ ಆಡಳಿತದಿಂದ ರಾಯಚೂರು ಜಿಲ್ಲೆ ಕರ್ನಾಟಕದ ವ್ಯಾಪ್ತಿಗೆ ಬಂದದ್ದರಿಂದ ಗಣಿಯ ಸ್ವಾಮ್ಯವು ಕರ್ನಾಟಕಕ್ಕೆ ಬಂತು (1956). ಈಗ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಇಲ್ಲಿ ಚಿನ್ನವನ್ನು ಉತ್ಪಾದಿಸುತ್ತಿದೆ. ಕೋಲಾರದಲ್ಲಿರುವಂತೆ ಇಲ್ಲಿನ ಗಣಿಗಳಿಗೂ ತಮ್ಮದೇ ಆದ ತಾಂತ್ರಿಕ ಅನುಕೂಲಗಳಿವೆ. ಚಿನ್ನವನ್ನು ಸಂಸ್ಕರಿಸುವ ಸ್ಥಾವರವಿದೆ. ಕೃಷ್ಣಾ ನದಿಯ ಜಲ ವಿದ್ಯುತ್ ಪೂರೈಕೆ ಇದೆ. ದಿನವೊಂದರಲ್ಲಿ 910 ಟನ್ನು ಅದಿರನ್ನು ನಿರ್ವಹಿಸುವ ಸಾಮರ್ಥ್ಯ ಇಲ್ಲಿನ ಸ್ಥಾವರಗಳಿಗಿದೆ.

1995ರವರೆಗೆ ಹಟ್ಟಿ ಚಿನ್ನದ ಗಣಿಗಳು ಮೂವತ್ತೆಂಟು ಟನ್ನು ಚಿನ್ನ ಉತ್ಪಾದಿಸಿವೆ. ಮಾರುಕಟ್ಟೆಗೆ ಬಿಟ್ಟು ನೇರವಾಗಿ ಮಾರಾಟ ಮಾಡಿದ್ದರೆ ಈ ಗಣಿಗಳು ಹೇರಳ ಲಾಭ ಸಂಪಾದನೆ ಮಾಡುತ್ತಿದ್ದವು. ಚಿನ್ನದ ನಿಯಂತ್ರಣ ಕಾಯಿದೆಯಿಂದಾಗಿ 1963ರಿಂದ ಚಿನ್ನದ ಉತ್ಪಾದನೆಗೆ ತಕ್ಕ ಬೆಲೆ ಸಿಕ್ಕದೆ ಉಸಿರು ಬಿಗಿ ಹಿಡಿಯುವ ಪರಿಸ್ಥಿತಿಯುಂಟಾಗಿತ್ತು. ಉತ್ಪಾದನೆಯಾದ ಚಿನ್ನವನ್ನು ಸರ್ಕಾರಕ್ಕೆ ಮಾರಬೇಕು. ಆದರೆ ಉತ್ಪಾದಿಸಿದ ಎಲ್ಲ ಮೊತ್ತದ ಚಿನ್ನವನ್ನು ಸರ್ಕಾರ ಕೊಂಡುಕೊಳ್ಳುತ್ತಿರಲಿಲ್ಲ. 1958ರವರೆಗೆ ಇಲ್ಲಿಯ ಚಿನ್ನವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವ ಅವಕಾಶವಿತ್ತು. ಅಂದಿನ ಮಾರುಕಟ್ಟೆ ಬೆಲೆಗೆ ಸರ್ಕಾರ ಚಿನ್ನವನ್ನು ಕೊಳ್ಳುತ್ತಿತ್ತು. ಚಿನ್ನದ ನಿಯಂತ್ರಣ ಕಾಯ್ದೆಯ ರೀತ್ಯಾ ಚಿನ್ನವನ್ನು ಸೀಮಿತ ಕೈಗಾರಿಕೆ ಬಳಕೆಗೆ ಮಾರುವ ಅವಕಾಶ ಇತ್ತು. 1978–79ರಲ್ಲಿ ಹಟ್ಟಿ ಚಿನ್ನದ ಸಂಸ್ಥೆಯಿಂದ ಸರ್ಕಾರ ಕೊಂಡ ಚಿನ್ನ ಕೇವಲ 881 ಕಿಗ್ರಾಂ ಆ ವರ್ಷ ಗಣಿ ಉತ್ಪಾದಿಸಿದ ಚಿನ್ನ 960 ಕಿಗ್ರಾಂ ಇಂಥ ನೀತಿಯಿಂದಾಗಿ ಗಣಿ ಸಂಸ್ಥೆಗಳು ನಷ್ಟ ಅನುಭವಿಸಬೇಕಾಗಿ ಬಂತು. 1948ರಿಂದ ಹಟ್ಟಿ ಗಣಿಗಳಲ್ಲಿ ತೋಡಿರುವ ಸುರಂಗಗಳನ್ನು ಸಾಲಾಗಿ ಜೋಡಿಸಿದರೆ 123.5 ಕಿಮೀ ದೂರ ಸಾಗುತ್ತದೆ. ಎಂದರೆ ಕೋಲಾರದ ಚಿನ್ನದ ಗಣಿಗಳ ಹತ್ತನೆಯ ಒಂದು ಭಾಗದಷ್ಟು. ಹಟ್ಟಿಯ ಸುತ್ತ ಮುತ್ತ ಒಟ್ಟು ಒಂಬತ್ತು ಚಿನ್ನದ ಸಿರಗಳಿವೆ. ಇದರಲ್ಲಿ ಮುಖ್ಯ ಸಿರದ ಮೇಲೆ ತೋಡಿರುವ ಗಣಿ 1140 ಮೀ ಆಳಕ್ಕಿಳಿದಿದೆ.

ಹಟ್ಟಿ ಚಿನ್ನದ ಗಣಿ ಪ್ರದೇಶದ ಭೂವಿಜ್ಞಾನ : ಕೋಲಾರದ ಚಿನ್ನದ ನಿಕ್ಷೇಪಗಳಂತೆಯೇ ಹಟ್ಟಿ ಚಿನ್ನದ ನಿಕ್ಷೇಪಗಳಿಗೂ ಜ್ವಾಲಾಮುಖಿ ಜನ್ಯ ಥೋಲಿಯೈಟ್ ಎಂಬ ಶಿಲೆಗಳೇ ಮೂಲ. ಇಲ್ಲಿನ ಶಿಲೆಗಳು ಭಾರಿ ಪ್ರಮಾಣದಲ್ಲಿ ರೂಪಾಂತರಗೊಂಡಿವೆ. ಸ್ವರ್ಣ ಸಿರಗಳಿರುವುದು ಬಿರುಕು, ಸೀಳುಗಳಿಂದ ಛಿದ್ರವಾದ ಕ್ಷಾರ ಶಿಲೆಗಳಲ್ಲಿ. ಬಿರುಕುಗಳೇ ಖನಿಜೀಕರಣವನ್ನು ನಿಯಂತ್ರಿಸಿದೆ. ಮೆಯ್ನ್ ರೀಫ್, ಓಕ್ಲೆ ರೀಫ್, ವಿಲೇಜ್ ರೀಫ್ ಮುಂತಾಗಿ ಒಂಬತ್ತು ಸ್ವರ್ಣ ಸಿರಗಳಿದ್ದರೂ ಮುಖ್ಯ ಗಣಿ ಅಭಿವೃದ್ಧಿಯಾಗಿದ್ದು ಮೆಯ್ನ್ ರೀಫ್‌ನಲ್ಲಿ. 1895ರಿಂದ 1919ರವರೆಗೂ ಈ ಭಾಗದ ಗಣಿ ಹೆಚ್ಚು ಅಭಿವೃದ್ಧಿಯಾಗಿದೆ. ಹಿಂದೆ ಟನ್ನೊಂದಕ್ಕೆ 19 ಗ್ರಾಂ ಚಿನ್ನವಿರುವ ಬೆಣಚನ್ನು ಮಾತ್ರ ಗಣಿ ಮಾಡಿದ್ದಾರೆ, ಸಲ್ಫೈಡ್ ಖನಿಜಗಳಿರುವ ನಿಕೃಷ್ಟ ದರ್ಜೆಯ ಬೆಣಚನ್ನು ಗಣಿ ಮಾಡದೆ ಬಿಟ್ಟಿದ್ದಾರೆ.

ಈಗ ಉಳಿದ ಸ್ವರ್ಣ ಸಿರಗಳ ಅಭಿವೃದ್ಧಿ ಮಾಡಿದರೆ 750 ಮೀ ಆಳದವರೆಗೆ ಮೂವತ್ತು ದಶಲಕ್ಷ ಟನ್ನು ಚಿನ್ನದ ಅದಿರಿನ ಮೀಸಲು ನಿಕ್ಷೇಪವಿದೆಯೆಂದು ಸಮೀಕ್ಷೆಗಳು ದೃಢಪಡಿಸಿವೆ. ಈ ಪೈಕಿ ಟನ್ನಿಗೆ 6.3 ಗ್ರಾಂ ಚಿನ್ನವಿರುವ ಆರು ದಶಲಕ್ಷ ಟನ್ನು ಅದಿರನ್ನು ಈಗಾಗಲೇ ಹೊರ ತೆಗೆಯಲಾಗಿದೆ.

ಗದಗದ ಚಿನ್ನದ ನಿಕ್ಷೇಪಗಳು : ಗದಗ ಬಹು ಹಿಂದಿನಿಂದ ಮೆಕ್ಕಲು ಚಿನ್ನಕ್ಕೆ ಹೆಸರುವಾಸಿ. ಈ ಪ್ರಾಂತ್ಯದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜಾಲಗಾರರು ಚಿನ್ನ ಸೋಸುತ್ತಿದ್ದ ಉದ್ಯಮವನ್ನು ತಿಳಿಸುವ ಶಾಸನವೊಂದು ದೊರೆತಿದೆ. ಜರಗಿನ ತೆರೆ ಎಂಬ ಕರವನ್ನು ಚಿನ್ನ ಸೋಸುವ ಉದ್ಯಮಕ್ಕೆ ಹಾಕಲಾಗುತ್ತಿತ್ತು. ಅದರ ಮೇಲ್ವಿಚಾರಕ ಜರಗಿನ ತೆರೆಯ ಅಧಿಕಾರಿ. ಗದಗ ತಾಲ್ಲೂಕಿನ ಕುರ್ತುಕೋಟಿಯ ವಿರೂಪಾಕ್ಷ ದೇವಾಲಯದ ಕಂಬದಲ್ಲಿ ದೇವರ ಸೇವೆಗೆಂದು ಜರಗಿನ ತೆರೆಯಲ್ಲಿ ಒಂದು ದೋಣಿಯ ತೆರೆಯನ್ನು ಬಿಡಲಾಗಿದೆ ಎಂದು ನಮೂದಿಸಿದೆ. ಅಲ್ಲಿ ಚಿನ್ನವನ್ನು ಸೋಸುವ ಉದ್ಯಮ ಸಾಕಷ್ಟು ಪ್ರಸಿದ್ಧಿಯಾಗಿತ್ತೆಂಬುದನ್ನು ಇದು ತೋರಿಸುತ್ತದೆ. (ಬೊಂಬಾಯಿ ಕರ್ನಾಟಕ ಶಾಸನ ನಂ. 200, 1926).

ಗದಗಿನ ಕಪ್ಪತ್ತಗುಡ್ಡದ ಪ್ರದೇಶ ಚಿನ್ನಭರಿತವಾದದ್ದು. ಶಿರಹಟ್ಟಿ ತಾಲ್ಲೂಕನ್ನೊಳಗೊಂಡು ದಕ್ಷಿಣದಲ್ಲಿ ತುಂಗಭದ್ರಾ ನದಿಯವರೆಗೂ ಸು. ಅರವತ್ತು ಕಿಮೀ ದೂರ ಹಾಯುವ ಈ ರಮಣೀಯ ಗಿರಿಸಾಲು ಸ್ವರ್ಣಭರಿತ ಶಿಲೆಯಿಂದ ಕೂಡಿದೆ. ಈ ಪ್ರದೇಶದ ಹರವು 50 ಚ.ಕಿಮೀ ಗಿಂತಲೂ ಮಿಗಿಲು. 1840ರಲ್ಲಿ ದೋಣಿ ಮತ್ತು ಸುರಟೂರಿನ ತೊರೆಗಳಿಂದ ವರ್ಷಕ್ಕೆ ಸು. ಆರು ಕಿಗ್ರಾಂ ಚಿನ್ನವನ್ನು ಸೋಸಿ ತೆಗೆಯುತ್ತಿದ್ದ ವರದಿಗಳಿವೆ. ಗದಗಿನ ಕಪ್ಪತ್ತಗುಡ್ಡದ ಸುತ್ತಮುತ್ತ ಪ್ರಾಚೀನರು ಚಿನ್ನವನ್ನು ಅರೆಯಲು ಬಳಸಿದ ಕಲ್ಲುಗಳು, ಒರಳುಕಲ್ಲು, ಕುಟ್ಟುವ ಕಲ್ಲು ಹಲವಾರು ದೊರೆತಿವೆ. ಧಾರವಾಡ ಗೋಲ್ಡ್ ಕಂಪನಿ, ಕಳೆದ ಶತಮಾನದ ಕೊನೆಯಲ್ಲಿ 1,70,000 ಪೌಂಡ್ ಬಂಡವಾಳ ಹೂಡಿ ಅತ್ತಿಕಟ್ಟೆ ಬಳಿ ಗಣಿ ತೋಡಿತು. ಅತ್ತಿಕಟ್ಟೆಯ ದಕ್ಷಿಣದ ಸ್ವರ್ಣಭರಿತ ಬೆಣಚು ಸಿರವನ್ನು ಸಾಂಗ್ಲಿ ಗೋಲ್ಡ್ ಮೈನ್ಸ್ ಕಂಪನಿ ಗಣಿ ಮಾಡಿತು.

ಕೋಲಾರದ ಛಾಂಪಿಯನ್ ರೀಫ್ ಕಂಪನಿ ಗದಗಿನ ಹೊಸೂರು ಬಳಿ ಗಣಿ ಆರಂಭಿಸಿ ಕಬುಲಿಯಾತ್ ಕಟ್ಟೆಯಲ್ಲಿ ಗಣಿ ಕಾರ್ಯಾಚರಣೆ ನಡೆಸಿತು (1911). ಸು. ನೂರ ಅರವತ್ತು ಮೀ ಆಳ ಅಭಿವೃದ್ಧಿ ಪಡಿಸಿತು. ಇದರ ಬಳಿಯೇ ಚಿನ್ನವನ್ನು ಶುದ್ಧೀಕರಿಸುವ ಸಯನೈಡ್ ಸ್ಥಾವರವನ್ನು ತೆರೆದು ಒಟ್ಟಾರೆ 666 ಕಿಗ್ರಾಂ ಚಿನ್ನವನ್ನು ಗದಗಿನ ಚಿನ್ನದ ಗಣಿಗಳು ಉತ್ಪಾದಿಸಿವೆ.

ಕಪ್ಪತ್ತಗುಡ್ಡದ ಪಶ್ಚಿಮಕ್ಕೆ ಮಾಲಿಂಗಪುರ, ಹೊಸೂರು, ಶಿರೂರು, ಎಲೆಶಿರೂರು ಈ ಭಾಗಗಳಲ್ಲಿ ಗಣಿ ಕಾರ್ಯಾಚರಣೆ ತೀವ್ರ ಗತಿಯಲ್ಲಿ ನಡೆದಿದೆ. 1939ರಲ್ಲಿ ನಾರಾಯಣದಾಸ್ ಗಿರಿಧರ ದಾಸ್, 1950ರಲ್ಲಿ ಮೆಸರ್ಸ್ ಆಕ್ಲೆ ಡಂಕನ್ ಕಂಪನಿ, ಗದಗಿನ ಹೊಸೂರು ಬಳಿಯ ಗಣಿಯನ್ನು ಅಭಿವೃದ್ಧಿ ಮಾಡಿದವು. ಕಬುಲಿಯಾತ್ ಕಟ್ಟೆ ಗಣಿ 527 ಕಿಗ್ರಾಂ ಚಿನ್ನವನ್ನು ಕೊಟ್ಟಿದೆ. ಇದರ ದಕ್ಷಿಣಕ್ಕಿರುವ ಅತ್ತಿಕಟ್ಟೆ ಗಣಿ ಮಾಡುವ ಮೊದಲು ಅಲ್ಲಿನ ಬೆಣಚು ಕಲ್ಲಿನಲ್ಲಿ ಹೊಳೆಯುತ್ತಿದ್ದ ಚಿನ್ನದ ರೇಖೆಗಳನ್ನು ಕಾಣಬಹುದಾಗಿತ್ತೆಂದು ಬ್ರೂಸ್‌ಫುಟ್ ವರದಿ ಮಾಡಿದ್ದಾನೆ. ಇಲ್ಲಿ ಎರಡು ಕೂಪಗಳು 120.4 ಹಾಗೂ 52.75 ಮೀ ಆಳ ಇಳಿದಿವೆ. ಮೂರು ಹಂತದಲ್ಲಿ ಗಣಿ ಕಾರ್ಯಾಚರಣೆ ನಡೆದಿದೆ. ಅತ್ತಿಕಟ್ಟೆಯ ಗಣಿಗೆ ದಕ್ಷಿಣಕ್ಕಿರುವ ಮೈಸೂರು ಗಣಿಗಳಲ್ಲಿ ನಾಲ್ಕು ಕೂಪಗಳನ್ನು 106 ಮೀ ಆಳದವರೆಗೆ ಗಣಿ ಮಾಡಿದ್ದಾರೆ. ಈ ಗಣಿಯೊಳಗೆ ಚಿನ್ನವನ್ನು ಹೊಂದಿರುವ ಮೂರು ಬೆಣಚುಕಲ್ಲಿನ ಸಿರಗಳು ಪತ್ತೆಯಾಗಿವೆ. ಗಣಿಯೊಳಗೆ ಸುರಂಗಗಳೂ ವಿಸ್ತರಿಸಿವೆ.

ಸಾಂಗ್ಲಿ ಗೋಲ್ಡ್ ಮೈನಿಂಗ್ ಕಂಪನಿ ಗಣಿ ಮಾಡಿರುವ ಸಾಂಗ್ಲಿ ಗಣಿಗಳು ಮೈಸೂರು ಗಣಿಗಳ ದಕ್ಷಿಣಕ್ಕಿವೆ. ಕಬುಲಿಯಾತ್ ಕಟ್ಟೆಯ ಪಶ್ಚಿಮಕ್ಕೆ ಆರು ಕಿಮೀ ದೂರವಿರುವ ಹೊಸೂರು ಛಾಂಪಿಯನ್ ರೀಫ್ ಗಣಿಗಳು ಉತ್ಕೃಷ್ಟ ಚಿನ್ನದ ಅದಿರನ್ನು ಹೊಂದಿರುವುದು ಬೆಳಕಿಗೆ ಬಂದಿದೆ. ಕಪ್ಪತ್ತಮಲ್ಲಯ್ಯನ ಮಠವಿರುವ ಬಳಿ ಹರಿಯುವ ಹಳ್ಳದಲ್ಲಿ ಹಾಗೂ ಸುರಟೂರಿನ ಬಳಿ ಜಾಲಗಾರರ ತಂಡೋಪತಂಡಗಳು 1874ರಲ್ಲೇ ಚಿನ್ನವನ್ನು ದೊಡ್ಡ ಪ್ರಮಾಣದಲ್ಲಿ ಸೋಸುತ್ತಿದ್ದವು. ಇದರಂತೆ ಸುರಟೂರು ದೋಣಿ, ಜೆಲಿಗಾಂ ಮುಂತಾದ ಕಪ್ಪತ್ತಗುಡ್ಡದ ಪಶ್ಚಿಮ ಇಳಿಜಾರಿನ ತೊರೆಗಳಲ್ಲಿ ಮೆಕ್ಕಲು ಚಿನ್ನ ಧಾರಾಳವಾಗಿ ದೊರೆತಿದೆ. ಗದುಗಿನ ಮೈಸೂರು ಗಣಿಯನ್ನು ಹಟ್ಟಿ ಚಿನ್ನದ ಕಂಪನಿ ಸಾಂಗ್ಲಿ ಗಣಿಗಳನ್ನು ರಾಷ್ಟ್ರೀಯ

ಖನಿಜಾಭಿವೃದ್ಧಿ ಕಾರ್ಪೊರೇಷನ್, ಹೊಸೂರು ಗಣಿಗಳನ್ನು ಭಾರತ ಗೋಲ್ಡ್ ಮೈನಿಂಗ್ ಕಂಪನಿ ಈಗ ಅಭಿವೃದ್ಧಿ ಪಡಿಸುತ್ತಿವೆ.

ಸ್ವರ್ಣ ಸಿರಗಳು : ಗದಗಿನ ಪದರ ಶಿಲಾ ಜಾಡಿನಲ್ಲಿ ಪ್ರಮುಖವಾಗಿ ಮೂರು ಸಿರಗಳು ಸ್ವರ್ಣಭರಿತವಾಗಿವೆ. ಪಶ್ಚಿಮ ಸಿರ, ಮಧ್ಯ ಹಾಗೂ ಪೂರ್ವ ಸಿರ ಸಮೂಹಗಳು. ಇವುಗಳ ಪೈಕಿ ಪಶ್ಚಿಮ ಸಿರ ರೂಪಾಂತರಿತ ಬಸಾಲ್ಟ್ ಮತ್ತು ಆಮ್ಲೀಯ ಜ್ವಾಲಾಮುಖಿ ಶಿಲೆಯಲ್ಲಿದೆ. ಮಧ್ಯದ ಸಿರ ಜ್ವಾಲಾಮುಖಿ ಶಿಲೆ ಮತ್ತು ರೂಪಾಂತರಿತ ಜಲಜ ಶಿಲೆಗಳ ಸಂಪರ್ಕ ಭಾಗದಲ್ಲಿದೆ. ಪೂರ್ವ ಸಿರ ಸಂಪೂರ್ಣವಾಗಿ ಗ್ರೇವೇಕ್ ಎಂಬ ಜಲಜ ಶಿಲೆಗಳಲ್ಲಿ ನೆಲೆಯಾಗಿದೆ. ಈ ಎಲ್ಲ ಸಿರಗಳ ಒಟ್ಟು ಉದ್ದ 32 ಕಿಮೀ.

ಪಶ್ಚಿಮ ಸಿರ ಸಮೂಹದಲ್ಲಿ ಹೊಸೂರು, ಛಾಂಪಿಯನ್, ಎಲ್‌ಸಿರೂರು, ವೆಂಕಟಾಪುರ ಗಣಿಗಳಿವೆ. ಮಧ್ಯದ ಸಿರದಲ್ಲಿ ಕಬುಲಿಯಾತ್ ಕಟ್ಟೆ, ಅತ್ತಿ ಕಟ್ಟೆ, ಸಾಂಗ್ಲಿ, ಮೈಸೂರು ಗಣಿಗಳಿವೆ. ಪೂರ್ವ ಸಿರದಲ್ಲಿ ಸಂಕತೊಡಕ ಗಣಿ ಇದೆ. ಈ ಪೈಕಿ ಹೊಸೂರು ಛಾಂಪಿಯನ್ ಸಿರ 4.238 ಟನ್ನು ಚಿನ್ನವಿರುವ 1630 ದಶಲಕ್ಷ ಟನ್ನು ಅದಿರನ್ನು, ಮೈಸೂರು ಗಣಿ 0.690 ಟನ್ನು ಚಿನ್ನವಿರುವ 0.230 ದಶಲಕ್ಷ ಟನ್ನು ಅದಿರನ್ನು, ಸಾಂಗ್ಲಿ ಗಣಿ 4.143 ಟನ್ನು ಚಿನ್ನವಿರುವ 1.099 ದಶಲಕ್ಷ ಟನ್ನು ಅದಿರನ್ನು ಹೊಂದಿರುವುದಾಗಿ ಪರಿಶೋಧನೆಗಳಿಂದ ಖಚಿತವಾಗಿದೆ.

ಪ್ರಮುಖ ಚಿನ್ನದ ಜಾಡುಗಳಲ್ಲದೆ ಕರ್ನಾಟಕದಲ್ಲಿ ಕಂಡು ಬಂದಿರುವ, ಆಧುನಿಕ ಖನಿಜ ಪರಿಶೋಧಕರ ಗಮನ ಸೆಳೆದಿರುವ ಕೆಲವು ಪ್ರಾಚೀನ ಗಣಿಗಳ ಸಂಕ್ಷಿಪ್ತ ವಿವರಣೆ:

ಬೆಳ್ಳಾರ ಚಿನ್ನದ ಗಣಿಗಳು : ತುಮಕೂರು ಜಿಲ್ಲೆಯಲ್ಲಿ ಬೆಳ್ಳಾರ ಗಣಿಗಳು ಮತ್ತು ಅಜ್ಜನಹಳ್ಳಿ ಚಿನ್ನದ ಗಣಿಗಳಿವೆ. ಈ ಎರಡೂ ಗಣಿಗಳನ್ನು ಆಧುನಿಕವಾಗಿಯೂ ಸಾಕಷ್ಟು ಶೋಧಿಸಿ ಚಿನ್ನವನ್ನು ಪಡೆಯಲಾಗಿದೆ.

ಬೆಳ್ಳಾರ ಗಣಿ ಇರುವುದು ಸಿರಾ ಹುಳಿಯಾರು ರಸ್ತೆಯಲ್ಲಿ ಎರಡು ಕಿಲೋ ಮೀಟರು ಈಶಾನ್ಯಕ್ಕೆ. ಸು. ಎರಡು ಸಾವಿರ ವರ್ಷಗಳ ಹಿಂದೆಯೇ ಪ್ರಾಚೀನರು ಇಲ್ಲಿ ಚಿನ್ನಕ್ಕಾಗಿ ಗಣಿ ಮಾಡಿದ್ದಾರೆ ಎಂಬ ಅಭಿಪ್ರಾಯವನ್ನು ಪ್ರಾಚ್ಯ ಸಂಶೋಧಕರು ವ್ಯಕ್ತಪಡಿಸಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಈ ಗಣಿಯನ್ನು ತೋಡಿರುವುದರಿಂದ ಇಂಡಿಯನ್ ಮೈನ್ಸ್ ಡೆವಲಪ್‌ಮೆಂಟ್ ಸಿಂಡಿಕೇಟ್ ಎಂಬ ಗಣಿಗಾರಿಕೆ ಸಂಸ್ಥೆ 1900–08ರ ನಡುವೆ ಮತ್ತಷ್ಟು ಗಣಿ ಕಾರ್ಯ ಮಾಡಿತು. ಬೆಳ್ಳಾರ ಸಿರದಲ್ಲಿರುವ ಕೂಪಗಳು 70 ಮೀ ಆಳಕ್ಕೆ ಇಳಿದಿವೆ. ಕೆರೆಯ ಸಿರದಲ್ಲಿ ಇವುಗಳ ಆಳ 122 ಮೀ.

ಹಳೆಯ ಗಣಿಗಳನ್ನು ಆಧರಿಸಿ ಮೈಸೂರು ಭೂವಿಜ್ಞಾನ ಇಲಾಖೆ 1944–54ರ ವರೆಗೆ ಇಲ್ಲಿ ತೀವ್ರ ಪರಿಶೋಧನಾ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿತು. ಕೆರೆಯ ಸಿರವನ್ನು ಎರಡು ಹಂತಗಳಲ್ಲಿ ಶೋಧಿಸಿ ಬೆಣಚು ಎಳೆಯನ್ನು ಭೇದಿಸಿದರೂ ಉತ್ತಮ ದರ್ಜೆಯ ಅದಿರು ದೊರೆಯಲಿಲ್ಲ. 1954ರಲ್ಲಿ ಜಾನ್ ಟೇಲರ್ ಕಂಪನಿ ಇಲ್ಲಿನ ಗಣಿಗಾರಿಕೆ ಲಾಭದಾಯಕವಲ್ಲವೆಂದು ವರದಿ ಮಾಡಿತು. ಮತ್ತೆ ದೊಡ್ಡ ಪ್ರಮಾಣದ ಗಣಿಗಾರಿಕೆ ಇಲ್ಲಿ ಮುಂದುವರಿಯಲಿಲ್ಲ. 1944–54ರ ವರೆಗೆ ಬೆಳ್ಳಾರದ ಚಿನ್ನದ ಗಣಿಗಳು 62 ಕಿಗ್ರಾಂ ಚಿನ್ನವನ್ನು ಉತ್ಪಾದಿಸಿದೆ. ಹಿಂದೆ ಗಣಿ ಮಾಡಿ ವ್ಯರ್ಥ ಪದಾರ್ಥವೆಂದು ಶೇಖರಿಸಿದ್ದ ಶಿಲಾ ಪುಡಿಯಲ್ಲಿ ಸಾಕಷ್ಟು ಚಿನ್ನವಿತ್ತು. ಅದನ್ನು ಜಾಲಿಸಿ 1000 ತೊಲ ಚಿನ್ನವನ್ನು ಗಣಿ ಇಲಾಖೆ ಸಂಗ್ರಹಿಸಿತ್ತು.

ಬೆಳ್ಳಾರದ ಗಣಿಗಳೂ ಕೂಡ ಚಿತ್ರದುರ್ಗ ಹಸುರು ಪದರ ಶಿಲಾವಲಯದ ಮಧ್ಯ ಇವೆ. ಅದೇ ಜಾಡಿನಲ್ಲಿ ಉತ್ತರಕ್ಕೆ ಆನೆಸಿದ್ರಿ ಎಂಬ ಬಳಿಯೂ ಪುರಾತನ ಚಿನ್ನದ ಗಣಿಗಳಿವೆ. ಈ ವಲಯ ಸಾಕಷ್ಟು ಬಿರುಕಾಗಿದ್ದು ಅಲ್ಲಿ ಚಿನ್ನ ಸಂಗ್ರಹಣೆಗೆ ಅನುಕೂಲವಾಗಿದೆ.

ಅಜ್ಜನಹಳ್ಳಿ ಗಣಿಗಳು : ಬೆಳ್ಳಾರದಿಂದ 12 ಕಿಮೀ ಉತ್ತರಕ್ಕಿರುವ ಅಜ್ಜನಹಳ್ಳಿ ಗಣಿ ಕೂಡ ಉತ್ತರ ದಕ್ಷಿಣವಾಗಿ ವಿಸ್ತರಿಸಿರುವ ಛಿದ್ರ ವಲಯದಲ್ಲಿ ನೆಲೆಯಾಗಿದೆ. ಚಿತ್ರದುರ್ಗದ ಹಸುರು ಶಿಲಾ ಪಟ್ಟಿಯಲ್ಲಿರುವ ಪಟ್ಟೆ ರೂಪದ ಕಬ್ಬಿಣ ಶಿಲೆಯಲ್ಲಿ ಚಿನ್ನ ದೊರೆಯುವುದು ಈ ಗಣಿಗಳ ವಿಶೇಷ. ಬರಿಗಣ್ಣಿಗೆ ಇಲ್ಲಿ ಚಿನ್ನ ಕಾಣಿಸುವುದಿಲ್ಲ. ಆದರೂ ಪ್ರಾಚೀನರು ಇವು ಸ್ವರ್ಣಭರಿತ ಶಿಲೆಗಳೆಂದು ಗುರುತಿಸಿ ಗಣಿಗಳನ್ನು ತೋಡಿ ಚಿನ್ನವನ್ನು ಸಂಗ್ರಹಿಸಿದ್ದಾರೆ. ಈ ಪ್ರಾಚೀನ ಗಣಿಗಳನ್ನು ಆಧರಿಸಿ ಇಂಡಿಯನ್ ಮೈನ್ಸ್ ಡೆವಲಪ್‌ಮೆಂಟ್ ಸಿಂಡಿಕೇಟ್ ಸಂಸ್ಥೆ ಅನೇಕ ಸುರಂಗಗಳನ್ನು ತೆಗೆದು 1907–08ರ ವರೆಗೆ ಗಣಿ ಕಾರ್ಯಾಚರಣೆ ನಡೆಸಿತು. ಇಲ್ಲಿ 90 ಮೀ ಆಳದವರೆಗೆ ಗಣಿಗಳು ಇಳಿದಿವೆ. ಗವಿ ಗುಡ್ಡ ಎಂಬ ಬೆಟ್ಟದ ಮೇಲೆ ಚಿನ್ನದ ಗಣಿಗಳಿವೆ. ಯುರೋಪಿನ ಸಂಸ್ಥೆಗಳು ಪರಿಶೋಧಿಸಿ ಟನ್ನಿಗೆ 13.6 ಗ್ರಾಂ ಚಿನ್ನವಿರುವ ಅನೇಕ ವಲಯಗಳನ್ನು ಇಲ್ಲಿ ಗುರುತಿಸಿದುವು. ಛಿದ್ರವಾಗಿರುವ ಪಟ್ಟೆ ಕಬ್ಬಿಣ ಶಿಲೆಯಲ್ಲಿ ಬೆಣಚಿನ ಸಿರಗಳು ಮತ್ತು ಕಾರ್ಬೊನೇಟ್ ಅಂಶವಿರುವ ಭಾಗಗಳು ಸ್ವರ್ಣಭರಿತವಾಗಿವೆ. ಇಲ್ಲಿ ಚಿನ್ನವಿರುವ ಸು. ಆರು ಸಮಾನಾಂತರ ವಲಯಗಳನ್ನು ಗುರುತಿಸಲಾಗಿದೆ. ಇಲ್ಲಿ ಚಿನ್ನವು ಪಿರ್ಹೋಟೈಟ್, ಆರ್ಸೆನೋ ಪೈರೈಟ್, ಚಾಲ್ಕೋಪೈರೈಟ್ ಖನಿಜಗಳೊಂದಿಗೆ ದೊರೆಯುತ್ತದೆ. ಭಾರತೀಯ ಭೂವಿಜ್ಞಾನ ಸರ್ವೇಕ್ಷಣ ಸಂಸ್ಥೆ ಈಚೆಗೆ ದೊಡ್ಡ ಪ್ರಮಾಣದಲ್ಲಿ ಇಲ್ಲಿ ಪರಿಶೋಧನೆ ನಡೆಸಿ, ಟನ್ನಿಗೆ 3.5 ಗ್ರಾಂ ಚಿನ್ನವಿರುವ 30 ಲಕ್ಷ ಟನ್ನು ಚಿನ್ನದ ಅದಿರಿರುವುದಾಗಿ ವರದಿ ಮಾಡಿದೆ.

ಹಟ್ಟಿ ಚಿನ್ನದ ಕಂಪನಿ ಪ್ರಯೋಗಾರ್ಥವಾಗಿ ಇಲ್ಲಿ ತೆರೆದ ಗಣಿ ಕಾರ್ಯಾಚರಣೆ ಕೈಗೊಂಡಿದೆ. ಇಲ್ಲಿನ ಅದಿರನ್ನು ಚಿತ್ರದುರ್ಗದ ತಾಮ್ರದ ಅದಿರು ಸಂಸ್ಕರಿಸುವ ಘಟಕಕ್ಕೆ ಕಳಿಸಿ ಚಿನ್ನವನ್ನು ಸಂಸ್ಕರಣೆ ಮಾಡಲಾಗುತ್ತಿದೆ.

ಕೆಂಪಿನಕೋಟೆ ಗಣಿಗಳು: ಹಾಸನ ಜಿಲ್ಲೆಯ ನುಗ್ಗೇಹಳ್ಳಿ ಪದರು ಶಿಲಾ ಪಟ್ಟಿಯಲ್ಲಿ ದಕ್ಷಿಣದ ತುದಿಯಲ್ಲಿರುವ ಕೆಂಪಿನಕೋಟೆ ಗ್ರಾಮದ ಬಳಿ ಪುರಾತನ ಚಿನ್ನದ ಗಣಿಗಳಿವೆ. ಹಳೆಯ ಗಣಿಗಳ ಪೈಕಿ ಒಂದು 200 ಮೀ ಉದ್ದವಿದೆ. ಏಷ್ಯದ ಪ್ರಾಚೀನ ಚಿನ್ನದ ಗಣಿಗಳ ಪೈಕಿ ಇದೇ ಅತ್ಯಂತ ದೊಡ್ಡದು ಎಂದು ರಾಬರ್ಟ್ ಬ್ರೂಸ್‌ಫುಟ್ ಎಂಬ ವಿಜ್ಞಾನಿ ಈ ಭಾಗವನ್ನು ಸಮೀಕ್ಷೆ ಮಾಡಿ ವರದಿ ಮಾಡಿದ (1986). ಈ ಗಣಿಗಳ ಕುರಿತು ಮೊದಲು ವರದಿ ಮಾಡಿದ ಲ್ಯಾವೆಲ್ಲರ್ ಎಂಬ ವಿಜ್ಞಾನಿ ಬಹುಶಃ 17ನೆಯ ಶ. ಚೆನ್ನರಾಯಪಟ್ಟಣವನ್ನು ಆಳುತ್ತಿದ್ದ ಪಾಳೆಯಗಾರರು ತಮ್ಮ ಟಂಕಸಾಲೆಗಾಗಿ ಈ ಗಣಿಗಳನ್ನು ನಿರ್ವಹಿಸುತ್ತಿದ್ದರೆಂದು ವರದಿ ಮಾಡಿದ್ದಾನೆ. 1893–96ರವರೆಗೆ ಕೆಂಪಿನಕೋಟೆ ಗೋಲ್ಡ್ ಫೀಲ್ಡ್ ಎಂಬ ಕಂಪನಿ 155 ಮೀ ಆಳದವರೆಗೆ ಕೂಪವನ್ನು ತೋಡಿತ್ತು. ಇಲ್ಲಿ ಹಾರ್ನ್‌ಬ್ಲೆಂಡ್ ಮತ್ತು ಅಲ್ಟ್ರಾಮೆಫಿಕ್ ಶಿಲೆಗಳ ಬೆಣಚಿನ ಎಳೆಗಳಲ್ಲಿ ಚಿನ್ನ ದೊರೆಯುತ್ತದೆ. ಹೆಚ್ಚು ಸಲ್ಫೈಡ್ ಖನಿಜಗಳು ಬೆರೆತಿಲ್ಲದಿರುವುದರಿಂದ ಚಿನ್ನವನ್ನು ಪ್ರತ್ಯೇಕಿಸುವುದು ಸುಲಭ. 1886ರಲ್ಲಿ ಪ್ರಾಯೋಗಿಕವಾಗಿ 1000 ಟನ್ನು ಅದಿರನ್ನು ಅರೆದು, 1440 ಗ್ರಾಂ ಚಿನ್ನವನ್ನು ಸಾರೀಕರಿಸಲಾಗಿತ್ತು. 1890ರಲ್ಲಿ ಆರ್ಥಿಕ ಕೊರತೆಯಿಂದಾಗಿ ಗಣಿಯನ್ನು ಮುಚ್ಚಬೇಕಾಯಿತು. ಇತ್ತೀಚೆಗೆ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ ಮತ್ತು ಖನಿಜ ಪರಿಶೋಧನಾ ನಿಗಮ, ಸ್ವರ್ಣಭರಿತ ಸಿರಗಳ ವ್ಯಾಪ್ತಿಯನ್ನು ಅರಿಯಲು ಪರಿಶೋಧನಾ ಬೈರಿಗೆ ಕಾರ್ಯಾಚರಣೆ ನಡೆಸಿವೆ. ಕೆಂಪಿನಕೋಟೆ ಚಿನ್ನದ ಗಣಿಗಳಲ್ಲಿ ಟನ್ನಿಗೆ 7.46 ಗ್ರಾಂ ಚಿನ್ನವಿರುವ 3,32,000 ಟನ್ನು ಅದಿರು ಇದೆ ಎಂದು ವರದಿ ಮಾಡಿದೆ.

ಅಂಬಳೆ– ವಳಗೆರೆ ಗಣಿಗಳು : ಮೈಸೂರಿನ ನಂಜನಗೂಡು ತಾಲ್ಲೂಕಿನಲ್ಲಿರುವ ಅಂಬಳೆ–ವಳಗೆರೆ ಗಣಿಗಳು, ಗಾರ್ನೆಟ್ ಖನಿಜವಿರುವ ಆಂಫಿಬೊಲೈಟ್ ಎಂಬ ರೂಪಾಂತರಿತ ಶಿಲೆಗಳಲ್ಲಿವೆ. ಅಂಬಳೆಯ ಬಳಿ ಪುರಾತನ ಗಣಿಗಳಿರುವುದನ್ನು 1895ರಲ್ಲಿ ಪತ್ತೆಹಚ್ಚಲಾಯಿತು. 1899–01ರ ನಡುವೆ ಇಲ್ಲಿ ಕೂಪ ತೋಡಿ 60 ಮೀ ಆಳಕ್ಕೆ ಗಣಿಗಳನ್ನು ಮಾಡಿದ್ದಾರೆ. ಬೆಣಚು ಸಿರದಲ್ಲಿ ಚಿನ್ನದ ಎಳೆಗಳಿದ್ದು, ಟನ್ನಿಗೆ 0.8–7.7 ಗ್ರಾಂ ವರೆಗೆ ಲೋಹವನ್ನು ನೀಡಿದೆ. ಗಣಿ ಕಾರ್ಯಾಚರಣೆಯನ್ನು ಮತ್ತೆ ಮುಂದುವರಿಸಲಿಲ್ಲ.

ಅಂಬಳೆಯ ಉತ್ತರಕ್ಕೆ ಅದೇ ಜಾಡಿನಲ್ಲಿ ನಾಲ್ಕು ಕಿಮೀ ದೂರದಲ್ಲಿರುವ ವಳಗೆರೆ ಬಳಿ ಬಹು ದೊಡ್ಡ ತೆರೆದ ಗಣಿ ಇದೆ. ಇಲ್ಲಿ 30 ಮೀ ಆಳಕ್ಕೆ ತೋಡಿದ ಕೂಪದಲ್ಲಿ ಉತ್ಕೃಷ್ಟ ದರ್ಜೆಯ ಅದಿರು ದೊರೆತಿತ್ತು. 1905ರಲ್ಲಿ ಈ ಗಣಿಯನ್ನು ನಂಜನಗೂಡು ಗೋಲ್ಡ್ ಕಂಪನಿ ವಹಿಸಿಕೊಂಡಿತ್ತು. ಹೆಚ್ಚು ಸಲ್ಫೈಡ್ ಖನಿಜವಿರುವ ಸಿರ ಆಳದಲ್ಲಿ ಸುಮಾರು ಏಳು ಮೀಟರು ಅಗಲವಾಗಿದೆ ಎಂದು ತಿಳಿದು ಬಂದಿದೆ. ಟನ್ನಿಗೆ 9.6 ಗ್ರಾಂ ಚಿನ್ನವಿರುವ ಅದಿರನ್ನು ಹಿಂದೆ ಇಲ್ಲಿ ಸಂಸ್ಕರಿಸಲಾಗಿದೆ. ಭಾರತೀಯ ಭೂವೈಜ್ಞಾನಿಕ ಸಂಸ್ಥೆ ಇಲ್ಲಿ ವ್ಯಾಪಕ ಗಣಿ ಪರಿಶೋಧನೆಯನ್ನು ಕೈಗೆತ್ತಿಕೊಂಡಿದೆ.

ಸಿದ್ದರಹಳ್ಳಿ : ಚಿಕ್ಕಮಗಳೂರು ಜಿಲ್ಲೆಯ ಸಿದ್ದರಹಳ್ಳಿಯ ಬಳಿ, ಅಷ್ಟೇನೂ ಎತ್ತರವಲ್ಲದ ಗುಡ್ಡದ ಮೇಲೆ 1907–09ರ ನಡುವೆ ಚಿನ್ನಕ್ಕಾಗಿ ಕೂಪ ತೋಡಿದ್ದಾರೆ. ಕ್ಲೋರೈಟ್ ಪದರ ಶಿಲೆಯನ್ನು ಹಾಯುವ ಬೆಣಚು ಕಲ್ಲಿನಲ್ಲಿ ಸು. 30 ಮೀ ಆಳದಲ್ಲಿ ತೋಡಿರುವ ಅಡ್ಡ ಸುರಂಗದಲ್ಲಿ ಸ್ವರ್ಣಭರಿತ ಶಿಲೆಗಳು ದೊರೆತಿವೆ. ಒಂದು ಟನ್ನು ಅದಿರಿಗೆ ಆಗಿನ ವರದಿಯಂತೆ 14.7 ಗ್ರಾಂ ಚಿನ್ನವಿದೆ ಎಂದು ತಿಳಿದುಬಂದಿದೆ. ಆಳ ಇಳಿದಂತೆ ಈ ಸ್ವರ್ಣಸಿರ ಕಿರಿದಾಗುತ್ತ ಬಂದಿದ್ದರಿಂದ ಗಣಿ ಕಾರ್ಯಾಚರಣೆಯನ್ನು ನಿಲ್ಲಿಸಬೇಕಾಯಿತು (1913).

ನಂದಿ ಮತ್ತು ಸಿದ್ದರಹಳ್ಳಿಯ ನಡುವೆ ಎರಡು ಪ್ರಾಚೀನ ಚಿನ್ನದ ಗಣಿಗಳಿವೆ. ಒಂದು 40 ಮೀ ಇನ್ನೊಂದು 70 ಮೀ ಆಳವಿದೆ. ಅಷ್ಟೇನೂ ಉತ್ಕೃಷ್ಟ ದರ್ಜೆಯ ಅದುರು ದೊರೆಯದ ಕಾರಣ ಗಣಿ ಕಾರ್ಯಾಚರಣೆ ಉತ್ತೇಜನಕಾರಿಯಾಗಲಿಲ್ಲ.

ಅಜ್ಜಂಪುರದ ಪಶ್ಚಿಮಕ್ಕೆ ನಾಲ್ಕು ಕಿಮೀ ದೂರದಲ್ಲಿ ತರೀಕೆರೆ ಗ್ರಾನೈಟ್ ಇರುವ ಅಂಚಿನಲ್ಲಿ ಕ್ಲೋರೈಟ್ ಪದರ ಶಿಲೆಯಲ್ಲಿ ಎರಡು ಪ್ರಾಚೀನ ಗಣಿಗಳಿವೆ. ಒಂದರ ಹೆಸರು ಹೊನ್ನದೋಣಿ, ಇನ್ನೊಂದು ಹಕ್ಕಿದೋಣಿ. ನೂರು ಮೀ ಆಳದವರೆಗೆ ತೋಡಿರುವ ಬಾಗಿದ ಕೂಪ ಹಕ್ಕಿ ದೋಣಿಯಲ್ಲಿದೆ. ಹಿಂದೆ ಈ ಗಣಿಗಳಿಂದ ಎಷ್ಟು ಚಿನ್ನ ಉತ್ಪಾದನೆಯಾಗಿದೆ ಎಂಬ ಬಗ್ಗೆ ಸ್ಪಷ್ಟ ವಿವರಗಳಿಲ್ಲ.

ಕುದುರೆಕೊಂಡ ಪಲ್ಲವನಹಳ್ಳಿ ಗಣಿಗಳು : ಹೊನ್ನಾಳಿ–ಸವಳಂಗ ಹೆದ್ದಾರಿಯಲ್ಲಿರುವ ಕುದುರೆಕೊಂಡ ಮತ್ತು ಪಲ್ಲವನಹಳ್ಳಿ ಸುತ್ತಮುತ್ತ ಮೆಕ್ಕಲು ಚಿನ್ನ ದೊರೆಯುವುದರ ಬಗ್ಗೆ ಹಿಂದಿನಿಂದಲೂ ಸಾಕಷ್ಟು ವರದಿಗಳಿವೆ. 1880–85ರ ವರೆಗೆ ಈ ಭಾಗದಲ್ಲಿ 80

ಮೀ ಆಳದ ಕೂಪ ತೋಡಿ ಚಿನ್ನದ ಸಿರವನ್ನು ಗಣಿ ಮಾಡಲಾಗಿದೆ. ಹೊನ್ನಾಳಿ ಸ್ವರ್ಣಕ್ಷೇತ್ರ ಎಂದೇ ಈ ಭಾಗಕ್ಕೆ ಹೆಸರು. ಹೊನ್ನಾಳಿ ಗ್ರಾನೈಟ್ ಮತ್ತು ಈಶಾನ್ಯದಲ್ಲಿ ಸೌಲಂಗ ಗ್ರಾನೈಟ್ ನಡುವಿನ ಕ್ಲೋರೈಟ್ ಪದರ ಶಿಲೆಯಲ್ಲಿ ಸ್ವರ್ಣ ಸಿರಗಳು ಹಾಯ್ದಿವೆ. ಕುದುರೆಕೊಂಡ, ಪಲ್ಲವನಹಳ್ಳಿ, ಸುರಹೊನ್ನೆ, ನ್ಯಾಮತಿ ಭಾಗಗಳಲ್ಲಿ ಮಣ್ಣಿನಲ್ಲಿ ತೇಲಿದಂತೆ ಆಗಾಗ ಚಿನ್ನದ ಗಟ್ಟಿ ದೊರೆಯುತ್ತವೆ. ಕುದುರೆಕೊಂಡದ ಗಣಿಗಳನ್ನು ಎರಡನೇ ಮಹಾಯುದ್ಧದ ಸಮಯದಲ್ಲಿ ಮುಚ್ಚಬೇಕಾಯಿತು.

ಹೊನ್ನೇಹಟ್ಟಿ ಗಣಿಗಳು: ಭದ್ರಾವತಿಯ ದಕ್ಷಿಣಕ್ಕೆ ಭದ್ರಾ ನದಿಗೆ ಸಮೀಪವಿರುವ ಹೊನ್ನೇಹಟ್ಟಿ ಹೆಸರೇ ತಿಳಿಸುವಂತೆ ಹೊನ್ನಿನ ಕ್ಷೇತ್ರ. 1887–90ರ ವರೆಗೆ ಇಲ್ಲಿ ಚಿನ್ನಕ್ಕಾಗಿ ವ್ಯಾಪಕ ಪರಿಶೋಧನೆ ನಡೆಸಲಾಗಿದೆ. ಬೆಣಚು ಸಿರಗಳಲ್ಲಿ ಚಿನ್ನದೊಂದಿಗೆ ಪೈರೈಟ್ ಖನಿಜ ಬೆರೆತಿದ್ದು ಹೊನ್ನೇಗುಡ್ಡದ ಮೇಲೆ ಕೂಪಗಳನ್ನು ತೋಡಲಾಗಿದೆ. ಸ್ವರ್ಣಭರಿತ ಸಿರದಿಂದ ಸಂಗ್ರಹಿಸಿದ ಮಾದರಿಯಲ್ಲಿ ಟನ್ನಿಗೆ 4.3 ಗ್ರಾಂ ಚಿನ್ನವಿದ್ದುದಾಗಿ ವರದಿಗಳು ತಿಳಿಸುತ್ತವೆ. ಬೆಟ್ಟದ ಪಾದದಲ್ಲೂ ಅನೇಕ ಪ್ರಾಚೀನ ಗಣಿಗಳಿವೆ. ಆದರೆ ಇವು ಅಷ್ಟೇನೂ ಆಳವಲ್ಲ. ಸಣ್ಣ ಪ್ರಮಾಣದ ಗಣಿ ಕಾರ್ಯಾಚರಣೆಗೆ ಇವು ಯುಕ್ತವೆಂದು ತಜ್ಞರು ಶಿಫಾರಸು ಮಾಡಿದ್ದಾರೆ.

ಜಾಲಗಾರ ಗುಂಡಿ : ಸ್ಥಳನಾಮಗಳನ್ನು ಆಧಾರವಾಗಿಟ್ಟುಕೊಂಡು ಕೆಲವು ಸ್ಥಳಗಳನ್ನು ಪರಿಶೋಧಿಸಿದರೆ ಕರ್ನಾಟಕದ ಬಹಳಷ್ಟು ಸ್ಥಳಗಳಿಗೆ ಯುಕ್ತ ಹೆಸರನ್ನು ಪ್ರಾಚೀನರು ನೀಡಿರುವುದು ಸುಸ್ಪಷ್ಟ. ಇಂಥ ಹೆಸರುಗಳಲ್ಲಿ ಜಾಲಗಾರ ಗುಂಡಿಯೂ ಒಂದು. ಶಿವಮೊಗ್ಗ ಜಿಲ್ಲೆಯ ಈ ಸ್ಥಳ ಮೊದಲಿನಿಂದಲೂ ಚಿನ್ನ ಸೋಸುವ ಉದ್ಯಮದಲ್ಲಿ ಪರಿಚಿತ ಹೆಸರು. ಟಾಲ್ಕ್ ಪದರ ಶಿಲೆಯಲ್ಲಿ 70 ಮೀ ಆಳಕ್ಕೆ ತೋಡಿರುವ ಗಣಿಗಳು ಇಲ್ಲಿವೆ. ಈ ಶಿಲೆಗಳನ್ನು ಹಾಯ್ದಿರುವ ಸಿರ ಬೆಣಚುಯುಕ್ತವಾಗಿವೆ. ಇಲ್ಲಿ ಸಣ್ಣ ಪ್ರಮಾಣದ ಗಣಿ ಕಾರ್ಯಾಚರಣೆ ಮಾಡಿದಾಗ ಪ್ರತಿ ಟನ್ನು ಅದಿರಿನಲ್ಲಿ 15.5 ಗ್ರಾಂ ಚಿನ್ನವಿರುವುದಾಗಿ ತಿಳಿಯಿತು (1913). ಸ್ವರ್ಣಸಿರದ ಜೊತೆಗೆ ಕ್ಯಾಲ್ಸೈಟ್, ಕ್ಲೋರೈಟ್, ಪಟ್ಟೆರೂಪದ ಬೆಣಚು ಪದರ ಶಿಲೆ, ಕಬ್ಬಿಣದ ಆಕ್ಸೈಡ್ ಬೆರೆತಿದೆ. ಇದರಲ್ಲಿರುವ ಪೈರೈಟ್ ಖನಿಜದಲ್ಲೂ ಚಿನ್ನವಿರುವುದಾಗಿಯೂ ತಿಳಿದು ಬಂದಿದೆ.

ಮೂಕನಗವಿ ಗಣಿಗಳು : ಗುಲ್ಬರ್ಗ ಜಿಲ್ಲೆಯ ಕೃಷ್ಣಾನದಿಯ ಉತ್ತರಕ್ಕೆ ಮತ್ತು ಸುರಪುರದ ಪಶ್ಚಿಮಕ್ಕೆ ಅನೇಕ ಪ್ರಾಚೀನ ಚಿನ್ನದ ಗಣಿಗಳಿವೆ. ಮಂಗಳೂರಿನಿಂದ ವಾಯವ್ಯಕ್ಕೆ ಐದು ಕಿಮೀ ದೂರದಲ್ಲಿರುವ ಮೂಕನಗವಿ ಗಣಿ ತುಂಬ ಪ್ರಸಿದ್ಧ. ಇಲ್ಲಿ, ಛಿದ್ರವಾಗಿರುವ ಆಂಫಿಬೋಲೈಟ್ ಎಂಬ ರೂಪಾಂತರಿತ ಅಗ್ನಿಶಿಲೆಗಳಲ್ಲಿ ಹಾಯುವ ಬೆಣಚು ಶಿಲೆಗಳಲ್ಲಿ ಚಿನ್ನ ಸಂಗ್ರಹವಾಗಿದೆ. ಚಿನ್ನದೊಡನೆ ಪೈರೈಟ್, ಪಿರ್ಹೋಟೈಟ್ ಮತ್ತು ಆರ್ಸೆನೋಪೈರೈಟ್ ಖನಿಜಗಳು ಬೆರೆತಿವೆ. ಸು. 600 ಮೀ ಉದ್ದದವರೆಗೆ ಸ್ವರ್ಣಸಿರ ವಿಸ್ತರಿಸಿದೆ. 1980–94 ನಡುವೆ ಹಟ್ಟಿ ಚಿನ್ನದ ಗಣಿ ಸಂಸ್ಥೆ ಈ ಭಾಗವನ್ನು ಪರಿಶೋಧಿಸಿ 32,087 ಟನ್ನು ಅದಿರನ್ನು ಸಾಗಿಸಿ ಹಟ್ಟಿಯ ಸ್ಥಾವರದಲ್ಲಿ ಸಂಸ್ಕರಿಸಿ 117.44 ಕಿಗ್ರಾಂ ಚಿನ್ನವನ್ನು ಸಾರೀಕರಿಸಿತು.

ಚಿನ್ನದ ಪರಿಶುದ್ಧತೆ : ಚಿನ್ನದ ಪರಿಶುದ್ಧತೆಯನ್ನು ಅಳೆಯಲು ಕ್ಯಾರೆಟ್ ಎಂಬ ಮಾನವನ್ನು ಬಳಸುತ್ತೇವೆ. ಗುಲಗಂಜಿಯನ್ನು ನಮ್ಮಲ್ಲಿ ಚಿನ್ನದ ತೂಕ ಮಾಡಲು ಬಹು ಹಿಂದಿನಿಂದಲೂ ಅಕ್ಕಸಾಲಿಗರು ಬಳಸುತ್ತ ಬಂದಿದ್ದಾರೆ. ಮಧ್ಯಯುಗದಿಂದಲೂ ಯುರೋಪಿನಲ್ಲಿ ಕ್ಯಾರೋಬ್ ಮರದ ಬೀಜ ಬಳಸಿ ಚಿನ್ನವನ್ನು ತೂಕ ಮಾಡುತ್ತಿದ್ದುದುಂಟು. ಕ್ಯಾರೆಟ್ ಎಂಬ ಪದ ಇದರಿಂದ ನಿಷ್ಪತ್ತಿಯಾಗಿದೆ. ಕ್ಯಾರೆಟ್ ಎಂದರೆ ಈಗ ಇಷ್ಟು ಗುಲಗಂಜಿ ತೂಕ ಎಂಬ ಅರ್ಥವಲ್ಲ. ಚಿನ್ನದ ಪರಿಶುದ್ಧತೆಯ ಪ್ರಮಾಣ. ಪರಿಶುದ್ಧ ಚಿನ್ನವನ್ನು 24 ಕ್ಯಾರೆಟ್ ಎನ್ನುತ್ತಾರೆ. ಆದರೆ ನಿಸರ್ಗದಲ್ಲೂ ಪರಿಶುದ್ಧ ಚಿನ್ನ ದೊರೆಯುವುದಿಲ್ಲ. ಅಪರಂಜಿ ಚಿನ್ನವೂ 24 ಕ್ಯಾರೆಟ್ ಇರುವುದಿಲ್ಲ. ಸ್ವಲ್ಪ ಪ್ರಮಾಣದ ಇತರ ಲೋಹಗಳೂ ಬೆರೆತಿರುತ್ತವೆ. 24 ಕ್ಯಾರೆಟ್ ಎಂದರೆ 22 ಭಾಗ ಚಿನ್ನ ಉಳಿದ 2 ಭಾಗ ತಾಮ್ರ, ಬೆಳ್ಳಿ, ಸತುವು, ಪ್ಲಾಟಿನಮ್ ಪೆಲ್ಲಾಡಿಯಮ್ ಈ ಯಾವುದೇ ಧಾತುಗಳಿಂದ ಕೂಡಿರಬಹುದು ಇಲ್ಲವೇ ಆಭರಣ ತಯಾರಕರು ಈ ಧಾತುಗಳನ್ನು ಮಿಶ್ರಣ ಮಾಡುತ್ತಾರೆ. ಏಕೆಂದರೆ ಅಪರಂಜಿ ಚಿನ್ನ ತುಂಬ ಮೃದು. ಚಾಕುವಿನಿಂದ ಗೀರಬಹುದು ಅಂತಹ ಚಿನ್ನದಿಂದ ನೇರವಾಗಿ ಆಭರಣ ತಯಾರಿಸಲಾಗುವುದಿಲ್ಲ.

ಸಾಮಾನ್ಯವಾಗಿ ಆಭರಣಕ್ಕಾಗಿ 22 ಕ್ಯಾರೆಟ್ ಶುದ್ಧತೆಯ ಚಿನ್ನವನ್ನು ಬಳಸುತ್ತಾರೆ. ಚಿನ್ನದಲ್ಲಿ ಬೆಳ್ಳಿಯ ಪ್ರಮಾಣ ಹೆಚ್ಚಿದಷ್ಟೂ ಅದು ಬಿಳಿ ಚಿನ್ನವಾಗುತ್ತದೆ (ಎಲೆಕ್ಟ್ರಮ್) ಹಾಗೆಯೇ ಬಿಸ್ಮತ್ ಬೆರೆತಿದ್ದರೆ ಅದು ಕಪ್ಪು ಚಿನ್ನ. (ಬಿ.ಸಿ.ಕೆ.)

**ಕರ್ನೂಲು:** ಆಂಧ್ರಪ್ರದೇಶದ ಒಂದು ಜಿಲ್ಲೆ, ಅದೇ ಹೆಸರಿನ ಜಿಲ್ಲೆಯ ಕೇಂದ್ರ. $15^0 50'$ ಉ.ಅ. ಮತ್ತು $78^0 4'$ ಪೂ.ರೇ. ದಲ್ಲಿದೆ. ತುಂಗಭದ್ರಾ ಮತ್ತು ಹಿಂದ್ರಿ ನದಿಗಳು ಇದರ ಬಳಿ ಸಂಗಮಿಸುತ್ತವೆ. ಚೆನ್ನೈಗೆ ವಾಯವ್ಯದಲ್ಲಿ 384 ಕಿಮೀ ದೂರದಲ್ಲಿ ಸಮುದ್ರಮಟ್ಟದಿಂದ 270 ಮೀ ಎತ್ತರದಲ್ಲಿ ಈ ನಗರವಿದೆ. ಜನಸಂಖ್ಯೆ 320619.

ಆಂಧ್ರ ವಿಶ್ವವಿದ್ಯಾಲಯಕ್ಕೆ ಸಂಬದ್ಧವಾದ ಕಲಾ, ವಿಜ್ಞಾನ ಮತ್ತು ವೈದ್ಯಕೀಯ ಕಾಲೇಜುಗಳೂ ಪ್ರೌಢ ಮತ್ತು ತರಬೇತಿ ಶಾಲೆಗಳೂ ಇರುವ ಕರ್ನೂಲು ಒಂದು ಮುಖ್ಯ ವ್ಯಾಪಾರ ಕೇಂದ್ರ. ಎಣ್ಣೆ, ಹತ್ತಿ ಜವಳಿ ಮತ್ತು ಚಾಪೆ ಇಲ್ಲಿಯ ಮುಖ್ಯ ಕೈಗಾರಿಕಾ ಉತ್ಪನ್ನಗಳು. ಗುಂತಕಲ್–ಹೈದರಾಬಾದ್‌ಗಳಿಗೆ ರೈಲ್ವೆ ಸಂಪರ್ಕವಿದೆ.

ಕರ್ನೂಲು ಜಿಲ್ಲೆಯ ವಿಸ್ತೀರ್ಣ 23749 ಚ.ಕಿಮೀ. ಜನಸಂಖ್ಯೆ 3512266. ಜಿಲ್ಲೆಯ ನಡುವೆ ಉತ್ತರ–ದಕ್ಷಿಣವಾಗಿ ಹಾದುಹೋಗುವ ಎರಡು ಪರ್ವತ ಶ್ರೇಣಿಗಳು ನಲ್ಲಮಲೈ (ಅತ್ಯುನ್ನತ ಶಿಖರ 900 ಮೀ) ಮತ್ತು ಎಲ್ಲಮಲೈ (ಅತ್ಯುನ್ನತ ಶಿಖರ 600 ಮೀ) ಜಿಲ್ಲೆಯ ಮುಖ್ಯ ನದಿಗಳು ತುಂಗಭದ್ರಾ ಮತ್ತು ಕೃಷ್ಣಾ. ಭವನಾಸಿ ನದಿ ನಲ್ಲಮಲೈಯಲ್ಲಿ ಹುಟ್ಟಿ ಸಂಗಮೇಶ್ವರಂನಲ್ಲಿ ಕೃಷ್ಣಾನದಿಯನ್ನು ಸೇರುತ್ತದೆ. ಕರ್ನೂಲು ಜಿಲ್ಲೆಯಲ್ಲಿ ಮಳೆ ಕಡಿಮೆ. ಅನಾವೃಷ್ಟಿ ಆಗಿಂದಾಗ್ಗೆ ಜಿಲ್ಲೆಯನ್ನು ಕಾಡಿಸುವುದುಂಟು, ಬೆಟ್ಟದಲ್ಲಿ ಹುಟ್ಟುವ ಅನೇಕ ಝರಿಗಳಿಗೆ ಅಡ್ಡಲಾಗಿ ಅನೇಕ ಕಟ್ಟೆಗಳನ್ನು ಕಟ್ಟಿ ನೀರಾವರಿ ಏರ್ಪಡಿಸಿಕೊಳ್ಳಲಾಗಿದೆ. ಕರ್ನೂಲು ನಗರದ ಬಳಿ ತುಂಗಭದ್ರಾ ನದಿಯಿಂದ ನಿರ್ಮಿಸಲಾಗಿರುವ ನಾಲೆಯ ಉದ್ದ 40 ಕಿಮೀ.

ರಾಗಿ, ಹತ್ತಿ, ದ್ವಿದಳಧಾನ್ಯಗಳು. ಎಣ್ಣೆಬೀಜ ಮತ್ತು ಬತ್ತ ಮುಖ್ಯ ಬೆಳೆಗಳು. ಹೊಗೆಸೊಪ್ಪನ್ನು ಸಹ ಬೆಳೆಯುತ್ತಾರೆ. ಬ್ಯಾರೈಟ್, ಸ್ಟಿಯಾಟೈಟ್ ಮತ್ತು ಕಬ್ಬಿಣ ಮುಖ್ಯ ಖನಿಜಗಳು ಹತ್ತಿ ಒತ್ತಣೆ, ನೇಯ್ಗೆ, ಎಣ್ಣೆ, ಸಾಲ್ಟ್‌ಪೀಟರ್ ಪರಿಷ್ಕರಣೆ ಮುಖ್ಯ ಉದ್ಯಮಗಳು. ಬಂಗನಪಲ್ಲಿಯಲ್ಲಿ ವಜ್ರದ ಗಣಿಯಿದೆ. ಚೆನ್ನೈ–ಮುಂಬಯಿ ಮತ್ತು ಗುಂತಕಲ್–ಹೈದರಾಬಾದ್ ರೈಲುಮಾರ್ಗಗಳು ಈ ಜಿಲ್ಲೆಯ ಮೂಲಕ ಹಾದು ಹೋಗುತ್ತವೆ.

(ಯು.ಜೆ.ಎಂ.;ಎಸ್.ಎನ್.)

**ಕರ್ನೂಲು ಸ್ತೋಮ:** ಆಂಧ್ರ ಪ್ರದೇಶದ ಕಡಪ ಜಿಲ್ಲೆಯಲ್ಲಿ ಕಡಪ ಶಿಲಾಸ್ತೋಮದ ಮೇಲೆ ಅನನುರೂಪವಾಗಿ ನಿಕ್ಷೇಪವಾಗಿರುವ ಶಿಲಾರಾಶಿ (ಕರ್ನೂಲ್ ಸಿಸ್ಟಂ). ಕುಂದೈರ್ ಕೊಳ್ಳದಲ್ಲೂ (ಇದು ಕೃಷ್ಣಾನದಿಯವರೆಗೂ ಹರಡಿದೆ) ಪಲ್‌ನಾಡ್ ಪ್ರದೇಶದಲ್ಲೂ ಈ ಶಿಲಾವರ್ಗ ಇದೆ. ಇದು ಪಶ್ಚಿಮದಲ್ಲಿ ಸು. 366 ಮೀ ಮಂದವಾಗಿದೆ; ಪಲ್‌ನಾಡ್ ಕಡೆಗೆ ಹೋದಂತೆ ಈ ದಪ್ಪ ಹೆಚ್ಚುತ್ತದೆ. ಪೂರ್ವದ ಕಡೆ ಈ ಸ್ತೋಮ ಭೂಚಲನೆಯಿಂದ ಸ್ವಲ್ಪ ಅಸ್ತವ್ಯಸ್ತಗೊಂಡಿದೆ. ಆದರೂ ಕಡಪ ಶಿಲಾಸ್ತೋಮಗಳಷ್ಟು ಮಡಿಕೆ ಬಿದ್ದಿಲ್ಲ. ಕರ್ನೂಲ್ ಸ್ತೋಮ ಕೆಳಗಿನ ವಿಂಧ್ಯನ್ ಶಿಲಾಸ್ತೋಮಕ್ಕೆ ಸಮಕಾಲೀನವಾದದ್ದು.

ಕರ್ನೂಲ್ ಸ್ತೋಮದಲ್ಲಿ ನಾಲ್ಕು ವಿಧದ ಶಿಲಾಶ್ರೇಣಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಸುಣ್ಣಶಿಲೆ ಮುಖ್ಯವಾಗಿದ್ದರೂ ಜೇಡು ಮತ್ತು ಮರಳು ಶಿಲೆಗಳಿಗೆ ಏನೂ ಕಡಿಮೆ ಇಲ್ಲ.

| | |
|---|---|
| ಕುಂದೈರ್ | ನಂದ್ಯಾಲ್ ಜೇಡುಶಿಲೆಗಳು |
| | ಕೋಯಿಲ್‌ಕುಂಟ್ಲಾ ಸುಣ್ಣ ಶಿಲೆಗಳು |
| ಪನಿಯಮ್ | ಪಿನ್ನಕ್ಲೆಡ್ ಬೆಣಚುಶಿಲೆ |
| | ಪ್ಲೇಟೋ ಬೆಣಚುಶಿಲೆ |
| ಜಮ್ಮಲಮಡಗು | ಆಕ್ ಮರಳುಶಿಲೆ |
| | ನರ್ಜಿ ಸುಣ್ಣಶಿಲೆ |
| ಬಂಗನಪಲ್ಲಿ | ಬಂಗನಪಲ್ಲಿ ಮರಳುಶಿಲೆ |

ಬಂಗನಪಲ್ಲಿ ಶಿಲೆಗಳು ಸಾಮಾನ್ಯವಾಗಿ ದಪ್ಪ ಮರಳಿನಿಂದ ಕೂಡಿವೆ. ಇವುಗಳಲ್ಲಿ ಕೆಲವು ಕಡೆ ಜೇಡು ಮತ್ತು ಕಬ್ಬಿಣಾಂಶ ಸಹ ಇದೆ. ಈ ಶಿಲೆಗಳ ಬಣ್ಣ ಬೂದು ಮತ್ತು ಕಂದು. ಇಲ್ಲಿರುವ ಬೆಣಚು, ಜಾಸ್ಪರ್, ಚರ್ಟ್ ಮತ್ತು ಸ್ಲೇಟಿನ ಉರುಟು ಕಲ್ಲುಗಳು ಶೆಯ್ಯಾರ್ ಶ್ರೇಣಿಯಿಂದ ಬಂದಿವೆ. ಬಂಗನಪಲ್ಲಿ ಶ್ರೇಣಿ ಮುಖ್ಯವಾಗಿ ವಜ್ರಗಳ ತವರುಮನೆ. ಈಚೆಗೆ ಪುನಃ ಶೋಧನೆ ನಡೆಯುತ್ತಿದೆ. ಜಮ್ಮಲಮಡಗು ಶಿಲಾಶ್ರೇಣಿ ಬಂಗನಪಲ್ಲಿ ಶ್ರೇಣಿಯ ಮೇಲೆ ನಿಕ್ಷೇಪಗೊಂಡಿದೆ. ಇದರ ಕೆಳಗಿನ ಸ್ತರಗಳಲ್ಲಿ ಸುಣ್ಣ ಶಿಲೆಗಳಿವೆ; ಬಣ್ಣ ನೀಲಿ, ಬೂದು ಮತ್ತು ಕಂದು. ನರ್ಜಿ ಸುಣ್ಣದ ಶಿಲೆ ಎಂದು ಈ ಶಿಲೆಗಳ ಹೆಸರು. ಇವನ್ನು ಕಟ್ಟಡದ ಕಲ್ಲಿಗಾಗಿ ತೆಗೆಯುತ್ತಾರೆ. ಈ ಶಿಲೆಯ ಮೇಲೆ ಕಂದು ಮತ್ತು ನೇರಿಳೆ ಬಣ್ಣದ ಆಕ್ ಜೇಡುಶಿಲೆ ಸಂಚಿತವಾಗಿದೆ. ಇದರ ಮೇಲಿರುವ ಪಾನ್ಯಂ ಶಿಲಾಶ್ರೇಣಿ ಪಾನ್ಯಂ ಮತ್ತು ಉಂಡುಟ್ಲಗಳ ಸುತ್ತಮುತ್ತ ಚೆನ್ನಾಗಿ ರೂಪುಗೊಂಡಿದೆ. ಇವುಗಳಲ್ಲಿ ಮರಳುಶಿಲೆ ಮತ್ತು ಬೆಣಚುಶಿಲೆಗಳೇ ಮುಖ್ಯ. ಇವುಗಳ ಮೇಲೆ ನಿಕ್ಷೇಪಗೊಂಡಿರುವ ಶಿಲೆಗಳು, ಕುಂದೈರ ನದಿಯ ಪಾತ್ರದಲ್ಲಿ ಚೆನ್ನಾಗಿ ರೂಪುಗೊಂಡಿರುವುದರಿಂದ ಅವುಗಳಿಗೆ ಕುಂದೈರ್ ಶಿಲಾಶ್ರೇಣಿಗಳೆಂದು ಹೆಸರು ಬಂದಿದೆ. ಇದರಲ್ಲಿ ಕೆಳಗಿನ ಮೂರನೆಯ ಒಂದು ಭಾಗ ಸೂಕ್ಷ್ಮ ಕಣದ ಗಟ್ಟಿಶಿಲೆಯಿಂದಲೂ ಮೇಲ್ಭಾಗ ಸುಣ್ಣ ಮಿಶ್ರ ಜೇಡು ಮತ್ತು ಅಶುದ್ಧ ಸುಣ್ಣಶಿಲೆಯಿಂದಲೂ ಕೂಡಿದೆ. ಇವು ಕೋಯಿಲ್‌ಕುಂಟ್ಲ ಮತ್ತು ನಂದ್ಯಾಲ್ ಎಂಬ ಸ್ಥಳಗಳಲ್ಲಿ ಚೆನ್ನಾಗಿ ನಿಕ್ಷೇಪಗೊಂಡಿವೆ. ಆದ್ದರಿಂದ ಇವುಗಳಿಗೆ ಕೋಯಿಲ್‌ಕುಂಟ್ಲ ಸುಣ್ಣಶಿಲೆ ಮತ್ತು ನಂದ್ಯಾಲ್ ಜೇಡುಶಿಲೆಗಳೆಂಬ ಹೆಸರುಗಳಿವೆ.

ಕಡಪ ಕೊಳ್ಳದ ಈಶಾನ್ಯಕ್ಕಿರುವ ಕೃಷ್ಣಾನದಿಯ ಎರಡು ದಡಗಳಲ್ಲಿ ಆವರಿಸಿ ಪಲ್ನಾಡಿನ ಸುತ್ತಮುತ್ತ ರೂಪುಗೊಂಡಿರುವ. ಕಡಪ ಶಿಲಾಸ್ತೋಮದ ಮೇಲೆ ಅನನುರೂಪವಾಗಿ ಶೇಖರವಾಗಿರುವ ಕರ್ನೂಲ್ ಸ್ತೋಮಕ್ಕೆ ಪಲ್ನಾಡ್ ಶಿಲಾಶ್ರೇಣಿ ಎಂದು ಹೆಸರು. ಈ ಸ್ತೋಮದಲ್ಲಿ ಸುಣ್ಣ ಮತ್ತು ಜೇಡುಶಿಲೆಗಳಿವೆ. (ಎಂ.ಎಸ್.ಎಸ್.)

**ಕಲಘಟಗಿ:** ಧಾರವಾಡ ಜಿಲ್ಲೆಯ ಪಶ್ಚಿಮ ಭಾಗದಲ್ಲಿ $15^0 10'$ ಉ. ಅ. ಮತ್ತು $74^0$ $55'$ ಪೂ. ರೇ. ದಲ್ಲಿರುವ ಒಂದು ಪಟ್ಟಣ. ಇದೇ ಹೆಸರಿನ ತಾಲ್ಲೂಕಿನ ಮುಖ್ಯಸ್ಥಳ. ಹುಬ್ಬಳ್ಳಿಯಿಂದ 27 ಕಿಮೀ ಅಂತರದಲ್ಲಿ ಹುಬ್ಬಳ್ಳಿ ಧಾರವಾಡಗಳಿಂದ ಕಾರವಾರಕ್ಕೆ ಹೋಗುವ ಹೆದ್ದಾರಿಯಲ್ಲಿದೆ. ಇದು ಈ ತಾಲ್ಲೂಕಿನಲ್ಲಿಯೇ ಅತಿ ದೊಡ್ಡ ಪಟ್ಟಣ. ವಿಸ್ತೀರ್ಣ 16 ಚ.ಕಿಮೀ ಜನಸಂಖ್ಯೆ 1,36,978 (2001).

ಇದು ಮಲೆನಾಡಿನ ಸರಹದ್ದಿನಲ್ಲಿರುವುದರಿಂದ ಈ ಜಿಲ್ಲೆಯ ಇತರ ಭಾಗಕ್ಕಿಂತ ಇಲ್ಲಿ ಸಾಮಾನ್ಯವಾಗಿ ಮಳೆ ಹೆಚ್ಚು (ವಾರ್ಷಿಕ ಸರಾಸರಿ 88 ಸೆಮೀ).

ಇಲ್ಲಿಯದು ಕಂದು ಬಣ್ಣ ಮಿಶ್ರಿತ ಮಸಾರಿ ಭೂಮಿ. ಕೃಷಿ ಇಲ್ಲಿಯ ಮುಖ್ಯ ಕಸಬು. ಭತ್ತ ಇಲ್ಲಿಯ ಮುಖ್ಯ ಬೆಳೆ. ಇತರ ಕಸಬುಗಳಲ್ಲಿ ತೊಡಗಿದವರು ಕಡಿಮೆ. ಇಲ್ಲಿ ಐದು ಬತ್ತದ ಗಿರಣಿಗಳಿವೆ. ಅವಲಕ್ಕಿ ಚುರಮುರಿಗಳನ್ನೂ ತಯಾರಿಸುವರು. ಕಲಘಟಗಿಯ ಅಕ್ಕಿ ರುಚಿಗೆ ಬಲು ಹೆಸರುವಾಸಿ. ಆದ್ದರಿಂದ ಅದಕ್ಕೆ ಬಹಳ ಬೇಡಿಕೆ ಇದೆ. ಅಕ್ಕಿಯನ್ನು ಬಹಳ ದೂರದ ಪ್ರದೇಶಗಳಿಗೆ ರವಾನಿಸುತ್ತಾರೆ. ಅರಣ್ಯ ಸಮೀಪವಾಗಿರುವುದರಿಂದ ಮರದ, ಬಿದಿರಿನ ಸರಕುಗಳನ್ನು ಇಲ್ಲಿ ತಯಾರಿಸುವರು. ಕಲಘಟಗಿಯ ಬಣ್ಣದ ಮರದ ತೊಟ್ಟಿಲುಗಳು ಒಂದು ಕಾಲಕ್ಕೆ ತುಂಬ ಪ್ರಸಿದ್ಧವಾಗಿದ್ದುವು. ಆದರೆ ಈಗ ಈ ಕೈಗಾರಿಕೆ ಅಷ್ಟಾಗಿ ನಡೆಯದಿದ್ದರೂ ಮೊದಲಿನ ಹೆಸರನ್ನು ಉಳಿಸಿಕೊಂಡಿದೆ. ಇಲ್ಲಿಯ ವಾಸದ ಮನೆಗಳು ಸಾಮಾನ್ಯವಾಗಿ ಹಂಚಿನವು. ಅಷ್ಟು ಎತ್ತರವಾಗಿರುವುದಿಲ್ಲ. ಗುರುವಾರ ಸ್ಥಾನಿಕ ಸಂತೆ ಜರುಗುತ್ತದೆ. ಪಟ್ಟಣದ ಜನಸಂಖ್ಯೆ 14,676 (2001). (ಎಸ್.ಎಂ.ಎಚ್.)

**ಕಲಹರಿ:** ದಕ್ಷಿಣ ಆಫ್ರಿಕದ ಒಂದು ಮರುಭೂಮಿ ಪ್ರದೇಶ. ದಕ್ಷಿಣ ಅಕ್ಷಾಂಶ $20^0$ ಯಿಂದ $28^0$ ವರೆಗೂ ಪೂರ್ವರೇಖಾಂಶ $19^0$ ಯಿಂದ $24^0$ ವರೆಗೂ ಹಬ್ಬಿದೆ. ಇದರ ವಿಸ್ತೀರ್ಣ 9,30,000 ಚ.ಕಿಮೀ. ಮುಖ್ಯವಾಗಿ ಬೆಚುವಾನ ರಕ್ಷಿತ ಪ್ರದೇಶದ ಪಶ್ಚಿಮ ಭಾಗವನ್ನು ಈ ಹೆಸರಿನಿಂದ ಕರೆದರೂ ಪಶ್ಚಿಮ ಆಫ್ರಿಕದ ದಕ್ಷಿಣ ಭಾಗವೂ ದಕ್ಷಿಣ ಆಫ್ರಿಕ ಗಣರಾಜ್ಯದ ಗುಡ್ ಹೋಪ್ ಭೂಶಿರದ ಭಾಗಗಳೂ ಇದರಲ್ಲಿ ಸೇರಿವೆ. ಅಕ್ಷರಶಃ ಮರುಭೂಮಿ ಎನಿಸಿಕೊಳ್ಳುವ ಪ್ರದೇಶ ಕಡಿಮೆಯೇ. ಮಳೆಯೂ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗುತ್ತದೆ : ಈಶಾನ್ಯದಲ್ಲಿ ವರ್ಷಕ್ಕೆ ಸರಾಸರಿ 50 ಸೆಂಮೀ ಮಳೆಯಿದ್ದರೆ ನೈಋತ್ಯದಲ್ಲಿ ಕೇವಲ 13 ಸೆಂಮೀ ಅನಾವೃಷ್ಟಿ ಪ್ರದೇಶದಲ್ಲಿ ಮರಳುಗುಡ್ಡಗಳನ್ನು ಕಾಣಬಹುದು. ಕಲಹರಿಯ ಎತ್ತರ ಎಲ್ಲ ಕಡೆಯೂ ಸು. 900 ಮೀ ಉತ್ತರಭಾಗದಲ್ಲಿ ಓಕವಾಂಗೊ ನದಿಯ ಹೆಚ್ಚಳ ಪ್ರವಾಹದಿಂದ ತುಂಬುವ ಉಪ್ಪಿನ ವಿಶಾಲವಾದ ಮಕರಿಕಾರಿ ಪ್ರದೇಶವೇ ಅತ್ಯಂತ ತಗ್ಗು. ಅಡಿಯ ಪುರಾತನ ಬಂಡೆಗಳ ಮೇಲೆ ಹೊದ್ದುಕೊಂಡಿರುವ ಕೆಮ್ಮರಳು ನೆಲವೇ ಸಾಮಾನ್ಯವಾಗಿ ಕಂಡುಬರುತ್ತದೆ. ಬಿದ್ದ ಮಳೆನೀರನ್ನು ಬೇಗ ಹೀರುವ ಗುಣ ಇದಕ್ಕಿರುವುದರಿಂದ ಒಂದೆರಡು ದಿನಕ್ಕಿಂತ ಹೆಚ್ಚು ಆಯುಸ್ಸಿರುವ ತೊರೆಗಳೇ ಇಲ್ಲಿ ಇಲ್ಲವೆನ್ನಬಹುದು.

ಬೀಳುವ ಮಳೆಗೆ ಅನುಗುಣವಾಗಿ ಇಲ್ಲಿ ಸಸ್ಯವಿತರಣೆಯಾಗಿದೆ : ಕಾಡುಗಳಿಂದ ಸಣ್ಣ ಕುರುಚಲು ಗಿಡಗಳ ವರೆಗೆ ವ್ಯತ್ಯಾಸವಾಗುತ್ತದೆ. ಮಳೆಗಾಲದಲ್ಲಿ ಎಲ್ಲ ಕಡೆಯೂ ಹುಲ್ಲು ಬೆಳೆಯುತ್ತದೆ. ಆನೆ ಮುಂತಾದ ಸಸ್ಯಹಾರಿ ಪ್ರಾಣಿಗಳಿಗೆ ಒಳ್ಳೆಯ ಮೇವುಂಟು. ಮಳೆಗಾಲದಲ್ಲಿ ಬೇಟೆಗಾರರಿಗೆ ಈ ಪ್ರದೇಶವೊಂದು ಆಕರ್ಷಣೆ. ನೈಋತ್ಯದಲ್ಲಿರುವ ಕಲಹರಿ ಜೇಮ್ಸ್ ಬಾಕ್ ರಾಷ್ಟ್ರೀಯ ಉದ್ಯಾನದ ವಿಸ್ತೀರ್ಣ ಸು. 22792 ಚ.ಕಿಮೀ. ಬಂಟು ಬುಡಕಟ್ಟಿನ ಜನ ಕಲಹರಿಯ ಅಂಚಿನಲ್ಲಿ ವಾಸಿಸುತ್ತಾರೆ. ಮರುಭೂಮಿಯ ಮಧ್ಯಪ್ರದೇಶದಲ್ಲಿರುವ ಬುಷ್ಮನ್ ಜನರು ಇಲ್ಲಿಯ ನಿಜವಾದ ಮೂಲವಾಸಿಗಳು. ಇವರ ಸಂಖ್ಯೆ ಸು. 2,000. ಅನೇಕ ವರ್ಷಗಳ ಹಿಂದೆ ಬಂಟು ಜನ ಇವರನ್ನು ಮಧ್ಯಕಲಹರಿ ಪ್ರದೇಶಕ್ಕೆ ಓಡಿಸಿದರು. ಈ ಜನ ಕುಬ್ಜರು, ಮಂಗೋಲಾಯ್ಡ್ ಲಕ್ಷಣವುಳ್ಳವರು, ಪೀತವರ್ಣೀಯರು. ಬಂಟು ಜನರಿಂದ ವಿಶಿಷ್ಟವಾದ ಲಕ್ಷಣ ಇವರದು. ಇವರು ಅಲೆಮಾರಿಗಳು ಚತುರ ಬೇಟೆಗಾರರೂ ಮೂಲಿಕಾಜ್ಞಾನವುಳ್ಳವರೂ ಆದ್ದರಿಂದ ಇವರು ಬದುಕು ಸಾಗಿಸುತ್ತಿದ್ದಾರೆ; ಆ ಕಠಿಣ ಪರಿಸರದ ಮೇಲೆ ಸಂಪೂರ್ಣ ಒಡೆತನ ಸ್ಥಾಪಿಸಿದ್ದಾರೆ.

ಡೇವಿಡ್ ಲಿವಿಂಗ್‌ಸ್ಟನ್ ಮತ್ತು ವಿಲಿಯಂ ಸಿ. ಆಸ್ವೆಲ್–ಇವರೇ ಕಲಹರಿಯನ್ನು ದಾಟಿ ಗಾಮಿ ಸರೋವರವನ್ನು ಪತ್ತೆಹಚ್ಚಿದ ಮೊಟ್ಟಮೊದಲಿನ ಬಿಳಿಯರು (1878–79). ಬೋಯರ್‌ಗಳ ದೊಡ್ಡ ಗುಂಪೊಂದು ಕಲಹರಿ ದಾಟಿತಾದರೂ ಅವರಲ್ಲಿ ಸು. 250 ಮಂದಿಯೂ 9,000 ಜಾನುವಾರುಗಳೂ ನಾಶವಾದವು. ಈಗ ಮೋಟಾರ್ ವಾಹನ ಸೌಕರ್ಯವಿರುವುದರಿಂದ ಸಂಚಾರ ಸುಲಭವಾಗಿದೆ. ಗಾನ್‌ಜ಼ಿ ಜಿಲ್ಲೆಯಲ್ಲಿರುವ ಪ್ರದೇಶಗಳಿಂದ ಕೇಪ್‌ಟೌನಿಗೆ ಹಾಲಿನ ಕೋವ ರವಾನೆಯಾಗುತ್ತದೆ. (ಬಿ.ಎಸ್.ಎಚ್.)

**ಕಲಾದಗಿ ಶ್ರೇಣಿ:** ಕರ್ನಾಟಕದ ರಾಜ್ಯದ ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹಂಚಿಕೆಯಾಗಿರುವ ಪ್ರೀಕೇಂಬ್ರಿಯನ್ ಯುಗದ ಶಿಲಾ ಶ್ರೇಣಿ. ಈ ಶಿಲಾಸ್ತರಗಳು ಬಿಜಾಪುರ ಜಿಲ್ಲೆಯ ಕಲಾದಗಿಯ ಬಳಿ ಅತ್ಯುತ್ತಮವಾಗಿ ಕಂಡುಬರುವುದರಿಂದ ಈ ಹೆಸರು ಬಂದಿದೆ. ಇವನ್ನು ಮೊಟ್ಟಮೊದಲಿಗೆ ವೀಕ್ಷಿಸಿದ ರಾಬರ್ಟ್ ಬ್ರೂಸ್‌ಫುಟ್ ಇವಕ್ಕೆ ಆ ಊರಿನ ಹೆಸರಿಟ್ಟು ಕರೆದ (1876). ಆಗ ಈ ಊರು ಜಿಲ್ಲಾ ಕೇಂದ್ರವಾಗಿತ್ತು. ರೂಪಾಂತರತೆಯಿಂದ ಸ್ವಲ್ಪ ಬದಲಾವಣೆಯಾಗಿರುವ ಜಲಜಶಿಲಾವರ್ಗ. ಮೊದಲು ಇದಕ್ಕೆ ಪುರಾಣ ಎಂಬ ಹೆಸರಿತ್ತು. ಶಿಲಾಶ್ರೇಣಿ ಅನನುರೂಪ್ಯವಾಗಿ ಇದಕ್ಕಿಂತ ಹಿರಿಯದಾದ ಧಾರವಾಡ ಪದರು ಶಿಲೆಗಳು ಮತ್ತು ಗ್ರಾನಿಟಿಕ್ ಶಿಲೆಗಳ ಮೇಲೆ ಸಂಚಿತವಾಗಿದೆ. ಪಶ್ಚಿಮದತ್ತ ಬೆಳಗಾಂವಿಯಿಂದ ಹಿಡಿದು ಪೂರ್ವಕ್ಕೆ ಅಮೀನ್‌ಗಡದವರೆಗೆ ಸು. 190 ಕಿಮೀ ಉದ್ದಕ್ಕೂ ಈ ಶ್ರೇಣಿ ಹಬ್ಬಿದೆ. ಇದರ ಅಗಲ 40–70 ಕಿಮೀ. ಇದಲ್ಲದೆ ಇದಕ್ಕಿಂತ ಕಿರಿಯದೆನಿಸಿದ ದಖನ್ ಲಾವಾಸ್ತರಗಳ ನಡುವೆಯೂ ಈ ಶ್ರೇಣಿಯ ಸಣ್ಣಪುಟ್ಟ ಅಂತಶ್ಶಾಯಿಗಳನ್ನು (ಇನ್‌ಲೈಯರ್ಸ್) ನೋಡಬಹುದು. ಕರ್ನಾಟಕದಲ್ಲೇ ಅಲ್ಲದೇ ನೆರೆಯ ಮಹಾರಾಷ್ಟ್ರದ ರತ್ನಗಿರಿ ಮತ್ತು ಸಾವಂತವಾಡಿಗಳಲ್ಲೂ ಈ ಬಗೆಯ ಪ್ರಸ್ತರಗಳಿವೆ. ನಮ್ಮ ರಾಜ್ಯದ ಅಂತಶ್ಶಾಯಿಗಳಲ್ಲಿ ಜಮಖಂಡಿ ಮತ್ತು ಮುಧೋಳ ಸಮೀಪದವು ಅತ್ಯಂತ ವಿಶಾಲವಾದವು. ಅದರಲ್ಲೂ ಜಮಖಂಡಿಯ ಒಳಚಾಚು ಬಹು ದೊಡ್ಡದು. ಅಲ್ಲದೆ ಗೋಕಾಕ, ಸವದತ್ತಿ ಮತ್ತು ಇತರ ಕೆಲವೆಡೆಗಳಲ್ಲಿ ಈ ಶ್ರೇಣಿಯ ಪ್ರಮುಖ ಬಹಿಶಾಯಿಗಳೂ (ಔಟ್‌ಲೈಯರ್ಸ್) ಇವೆ. ಇಲ್ಲಿ ಶಿಲಾಸ್ತರಗಳು ಅನನುರೂಪ್ಯವಾಗಿ ಆರ್ಕೀಯನ್ ಗೀರು ಮತ್ತು ಪದರು ಶಿಲೆಗಳ ಮೇಲೆ ಸಂಚಿತವಾಗಿವೆ.

ಅನೇಕ ಕಡೆ ಕಲಾದಗಿ ಶಿಲಾಸ್ತರಗಳು ಡೆಕ್ಕನ್ ಲಾವಾ ಪ್ರವಾಹದಿಂದ ಆವೃತವಾಗಿವೆ. ಮುಧೋಳ, ಮಹಾಲಿಂಗಪುರ, ಬಿಮೂಡ್, ಸೋಪದ್ದೆ, ಸಾಲಹಳ್ಳಿ ಮತ್ತು ಚಂದರ್ಗಿ–ಇವುಗಳ ಬಳಿ ಲಾವಾಸ್ತರಗಳ ಮಂದ 15–30 ಮೀ ಗಳು.

ಈ ಶಿಲಾ ಸ್ತರಗಳನ್ನು ಅವುಗಳ ಶಿಲಾಸಂಯೋಜನೆ ಮತ್ತು ಇತರ ಲಕ್ಷಣಗಳ ಆಧಾರದ ಮೇಲೆ ಭಾರತದ ಪ್ರೀಕೇಂಬ್ರಿಯನ್ ವರ್ಗದ ಮೇಲಿನ ಕಡಪ ಹಂತದೊಡನೆ ಸರಿದೂಗಿಸಲಾಗಿದೆ. ಇಲ್ಲಿ ದೊರೆಯುವ ಮರಳುಶಿಲೆ ಮತ್ತು ಸ್ಲೇಟುಶಿಲೆಗಳನ್ನು ಸುತ್ತಮುತ್ತಲ ಪ್ರದೇಶಗಳಲ್ಲಿ ಕಟ್ಟಡನಿರ್ಮಾಣದಲ್ಲಿ ಬಳಸುತ್ತಾರೆ. ಕೆಲವು ಸುಣ್ಣಶಿಲೆಗಳು ಉತ್ತಮ ಅಲಂಕಾರ ಶಿಲೆಗಳೆನಿಸಿವೆ. ಸುಣ್ಣಶಿಲಾನಿಕ್ಷೇಪಗಳು ಸಿಮೆಂಟಿನ ತಯಾರಿಕೆಗೆ ಅಗತ್ಯ ಅಲ್ಲದೇ ಉತ್ತಮ ದರ್ಜೆಯ ಉಕ್ಕು ತಯಾರಿಕೆಗೆ ಬೇಕೇ ಬೇಕು. (ಎಂ.ಎಸ್.ಎಸ್.)

**ಕಲೀನಿನ್‌ಗ್ರಾಡ್:** ಸೋವಿಯತ್ ದೇಶದ ಮುಖ್ಯ ಬಂದರು, ನೌಕಾ ನೆಲೆ, ಪುರಾತನ ನಗರ, ರಷ್ಯ ಗಣರಾಜ್ಯದಲ್ಲಿದೆ. ಹಿಂದಿನ ಹೆಸರು ಕೋನಿಕ್ಸ್‌ಬರ್ಗ್. ಇದು ಆಬ್ಲಾಸ್ಟಿನ ಆಡಳಿತಕೇಂದ್ರ, ಜನಸಂಖ್ಯೆ 427200 (1999). ಮೊದಲು ಪ್ರಷ್ಯದ, ಅನಂತರ ಜರ್ಮನಿಯ ಒಡೆತನದಲ್ಲಿ ಇದ್ದು ಬಾಲ್ಟಿಕ್ ಸಮುದ್ರದ ಮುಖ್ಯ ನೌಕಾನೆಲೆಗಳಲ್ಲೊಂದಾಗಿತ್ತು. ಪಾಟ್ಸ್ ಡ್ಯಾಂ ಒಪ್ಪಂದದ ಪ್ರಕಾರ ಸೋವಿಯತ್ ದೇಶಕ್ಕೆ ಸೇರಿತು (1945). ಪ್ರೇಗೋಲ್ಯ ನದಿಯ ದಡದಲ್ಲಿರುವ ಈ ನಗರ ಮಾಸ್ಕೋಗೆ ಪಶ್ಚಿಮಕ್ಕೆ 1090 ಕಿಮೀ ದೂರದಲ್ಲಿದೆ. ಇದರಿಂದ ನೈಋತ್ಯಕ್ಕೆ ಸು. 545 ಕಿಮೀ ದೂರದಲ್ಲಿ ಬರ್ಲಿನ್ ನಗರವಿದೆ. ಸುಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಇಮ್ಯಾನ್ಯುಯೆಲ್ ಕಾಂಟ್ ಇಲ್ಲಿ ಪ್ರಾಧ್ಯಾಪಕನಾಗಿದ್ದ. ಆತನ ಸ್ಮಾರಕವೊಂದು ಇಲ್ಲಿ ಸ್ಥಾಪಿತವಾಯಿತು (1864). ಎರಡನೆಯ ಮಹಾಯುದ್ಧದ ಕಾಲದಲ್ಲಿ ಕಲೀನಿನ್ ಗ್ರಾಡ್ ನಗರ ಅಪಾರ ಹಾನಿಗೊಳಗಾಯಿತು. ಇಲ್ಲಿಯ ಅನೇಕ ಪುರಾತನ ಕಟ್ಟಡಗಳು ನಾಶವಾದುವು. ಕೆಲವು ಮಾತ್ರ ಇಂದಿಗೂ ಉಳಿದಿದೆ. ಕಲೀನಿನ್ ಗ್ರಾಡಿನ ಬಳಿ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟುವುದಿಲ್ಲವಾಗಿದ್ದರಿಂದ ಇದು ರಷ್ಯ ದೇಶದ ಸರ್ವಋತು ಬಂದರು. ಕಲೀನಿನ್ ಗ್ರಾಡಿನಲ್ಲಿ ಕಾಗದ, ರಸಾಯನವಸ್ತು ಮತ್ತು ಮೀನಿನ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳಿವೆ. ಮರದ ದಿಮ್ಮಿ, ಮೀನುಗಾರಿಕೆ ಎರಡು ಮುಖ್ಯ ಉದ್ಯೋಗಗಳು. ಸಾಗರ ಸಂಶೋಧನ ಇಲಾಖೆಗಳೂ ವಿಜ್ಞಾನ ಸಂಶೋಧನ ಕೇಂದ್ರಗಳೂ ನಗರದಲ್ಲುಂಟು. ಹಿನ್ನಾಡಿಗೆ ಹಲವು ರೈಲುಮಾರ್ಗಗಳಿವೆ. ಹೂಳೆತ್ತಿ ರಚಿಸಿದ ಕಡಲ್ಗಾಲುವೆಯ ಮೂಲಕ ಕಲೀನಿನ್‌ಗ್ರಾಡಿಗೆ ಅದರ ಹೊರ ರೇವುವಾದ ಬಾಲ್ಟಿಸ್ಕ್ ನೊಂದಿಗೆ ಸಂಬಂಧ ಕಲ್ಪಿಸಲಾಗಿದೆ. (ಆರ್.ಡಿ.ಆರ್.)

**ಕಲ್ನಾರು:** ಎಳೆ ಎಳೆಯಾಗಿ ದೊರೆಯುವ, ಕಲ್ಲುಗಳ ರೂಪ ತಳೆಯಬಲ್ಲ ಅತ್ಯುಪಯುಕ್ತ ಖನಿಜಗಳ ಸಾಮಾನ್ಯನಾಮ (ಆಸ್ ಬೆಸ್ಟಸ್). ವಿವಿಧ ದರ್ಜೆಯ ಖನಿಜದ ಎಳೆಗಳಿಂದ ತಯಾರಿಸಲಾದ ಮಾಲುಗಳ ಉಷ್ಣನಿರೋಧಕ ಗುಣದಿಂದ ಕಲ್ನಾರಿಗೆ ಪ್ರಾಮುಖ್ಯ ಬಂದಿದೆ. ಈ ಖನಿಜಕ್ಕೆ ನಾರಿನ ಗುಣವಿದೆ. ಎಳೆಗಳು ರೇಷ್ಮೆಯಂತೆ ನಯವಾಗಿರುತ್ತವೆ. ಇದರ ಬಣ್ಣ ಬಿಳುಪು; ಇದರಲ್ಲಿ ಆಂಫಿಬೋಲ್ ಕಲ್ನಾರು ಮತ್ತು ಕ್ರೈಸೊಲೈಟ್ ಕಲ್ನಾರು ಎಂಬೆರಡು ವಿಧಗಳಿವೆ. ಮೊದಲನೆಯದು ಶುದ್ಧವಾದುದು. ಎರಡನೆಯದು ವಾಣಿಜ್ಯದ ಬಹುಭಾಗವನ್ನು ಪೂರೈಸುತ್ತದೆ. ಎರಡೂ ಭಾರತ ದೇಶದಲ್ಲಿವೆ.

ಮೊದಲನೆಯದು ಮೈಸೂರು ಜಿಲ್ಲೆಯ ಮಾವಿನಹಳ್ಳಿ ಮತ್ತು ಗೋಪಾಲಪುರದ ಬಳಿ ಹಾಗೂ ಹಾಸನ ಜಿಲ್ಲೆಯ ಹೊಳೇನರಸಿಪುರದ ಎಡೆಗೋಡನಹಳ್ಳಿ ಮತ್ತು ಕಬ್ಬೂರಿನ ಬಳಿ ಸಿಗುತ್ತದೆ. ತಮಿಳುನಾಡು ಮತ್ತು ಬಿಹಾರ, ರಾಜಸ್ತಾನಗಳಲ್ಲಿಯೂ ಸಿಗುತ್ತದೆ. ಈ ಕಲ್ನಾರಿನ ಎಳೆಯ ಶಕ್ತಿ ಅಲ್ಪವಾದ್ದರಿಂದ ಬಟ್ಟೆ ತಯಾರಿಕೆಗೆ ಅರ್ಹವಲ್ಲ. ಅಗ್ನಿನಿರೋಧಕ ಕಾಗದ, ಹಲಗೆ ಮೊದಲಾದವನ್ನು ತಯಾರಿಸಬಹುದು.

ಅದಿರುಗಳು: ಕಲ್ನಾರುಗಳಲ್ಲಿ ಕ್ರೈಸೊಲೈಟ್ ಬಹು ಮುಖ್ಯವಾದುದು. ಇದರಲ್ಲಿ ಮೆಗ್ನೀಸಿಯಂ ಸಿಲಿಕೇಟ್ ಮತ್ತು ಮ್ಯಾಂಗನೀಸ್ ಹೈಡ್ರೋ ಸಿಲಿಕೇಟುಗಳು ಇವೆ. ಇದರ ಎಳೆಯು ಅರ್ಧ ನೂಲಿನಿಂದ ಒಂದೂವರೆ ನೂಲಿನಷ್ಟು ದಪ್ಪವಾಗಿಯೂ ಹನ್ನೆರಡು ಅಂಗುಲಗಳಷ್ಟು ಉದ್ದವಾಗಿಯೂ ಇರುತ್ತದೆ. ಈ ಅದಿರು ಕ್ವಿಬೆಕಿನಲ್ಲಿ ಹೆಚ್ಚಾಗಿ ದೊರೆಯುತ್ತದೆ. ಕ್ರೈಸೊಲೈಟ್ ಸುಣ್ಣಕಲ್ಲಿನ ಪ್ರದೇಶದಲ್ಲೂ ಲಭ್ಯ.

ಇನ್ನೊಂದು ಬಗೆಯ ಕಲ್ನಾರನ್ನು ಆಂಥೋಫಿಲೈಟ್ ಅದಿರಿನಿಂದ ಪಡೆಯುತ್ತಾರೆ. ಇದು ಮೆಗ್ನೀಸಿಯಂ ಕಬ್ಬಿಣದ ಸಿಲಿಕೇಟನ್ನು ಒಳಗೊಂಡಿರುತ್ತದೆ. ಇದರ ಎಳೆ ಬಹಳ ಒರಟು. ನಮ್ಯತೆ ಬಲು ಕಡಿಮೆ. ಇವುಗಳ ಬಣ್ಣ ಕಂದು ಮತ್ತು ಹಳದಿ ಮಿಶ್ರಿತ ಹಸಿರು. ಈ ಬಗೆಯ ಕಲ್ನಾರು ಬಹಳ ಬೇಗನೆ ಪುಡಿಯಾಗುತ್ತದೆ.

ಸೋಡಾಕಬ್ಬಿಣ ಮಿಶ್ರವಾಗಿರುವ ಇನ್ನೊಂದು ಬಗೆಯ ಅದಿರನ್ನು ಸಹ ಕಲ್ನಾರು ಎನ್ನುತ್ತಾರೆ. ಇದು ಪ್ರಕೃತಿಯಲ್ಲಿ 10 ಸೆಂಮೀ ಅಗಲದವರೆಗೂ ದೊರೆಯುತ್ತದೆ. ಇದಕ್ಕೆ ಅಧಿಕ ನಮ್ಯತೆ ಇದೆ. ಇದು ಹೆಚ್ಚಿಗೆ ಉಷ್ಣವನ್ನು ತಡೆದುಕೊಳ್ಳಲಾರದೆ ಕೆಲವು ಸಂದರ್ಭಗಳಲ್ಲಿ ಕರಗಿಹೋಗುತ್ತದೆ. ಅತ್ಯುತ್ತಮವಾದ ಕಲ್ನಾರು ಎಂದರೆ ಟ್ರೈಮೋಲೈಟ್. ಇದು ಬಹಳ ನುಣುಪಾಗಿಯೂ ಸಣ್ಣಸಣ್ಣ ಎಳೆಯಾಗಿಯೂ ದೊರೆಯುತ್ತದೆ. ಇದು ಕ್ಯಾಲ್ಸಿಯಂ, ಮೆಗ್ನೀಸಿಯಂ, ಹೈಡ್ರಾಕ್ಸೈಡುಗಳಿಂದ ಕೂಡಿರುತ್ತದೆ. ಇದರ ಬಣ್ಣ ಬಿಳುಪು ಮತ್ತು ಕಂದು ಮಿಶ್ರಿತ ಬಿಳುಪಾಗಿಯೂ ಇದ್ದು ಘನಸಾಂದ್ರತೆ ಒಂದಕ್ಕಿಂತ ಕಡಿಮೆ.

ಉಪಯೋಗಗಳು: ಕಲ್ನಾರು ಅಗ್ನಿನಿರೋಧಕವಾಗಿರುವುದರಿಂದಲೂ ಸುಲಭವಾಗಿ ದಾರದ ಎಳೆಯ ರೂಪದಲ್ಲಿ ಇರುವುದರಿಂದಲೂ ಇದನ್ನು ಹೆಚ್ಚಾಗಿ ಕೈಗಾರಿಕಾ ವಸ್ತುವನ್ನಾಗಿ ಉಪಯೋಗಿಸುತ್ತಾರೆ. ಹತ್ತಿ, ತಾಮ್ರ, ಹಿತ್ತಾಳೆ ಎಳೆಗಳನ್ನು ಸೇರಿಸಿ ಕಲ್ನಾರಿನ ದಾರಗಳನ್ನು ಮಾಡಬಹುದು. ಕಲ್ನಾರನ್ನು ಆವಿಯ ಕೊಳವೆಯ ಸುತ್ತಲೂ ಸುತ್ತುವುದಕ್ಕೆ. ಗೋಡೆಗಳ ಮೇಲೆ ಹಲಗೆಗಳಂತೆ ಹಾಸಲಿಕ್ಕೆ ಮಾತ್ರವಲ್ಲದೆ ಚಿತ್ರ ಮತ್ತು ನಾಟಕಮಂದಿರಗಳಲ್ಲಿ ಅಲಂಕರಣ ಹಾಗೂ ರಕ್ಷಣಾಸಾಮಗ್ರಿಯಾಗಿಯೂ ಉಪಯೋಗಿಸುತ್ತಾರೆ. ಸಣ್ಣ ತಂತಿಗಳನ್ನು ಕಲ್ನಾರಿನ ಪುಡಿಯಲ್ಲಿ ಮಿಶ್ರಮಾಡಿ ವಾಹನಗಳ ವೇಗನಿಯಂತ್ರಣಾ ಸಾಧನವನ್ನಾಗಿ ಮಾಡುತ್ತಾರೆ. ಅದಿರಿನ ಜೊತೆ ರಬ್ಬರ್ ಮಿಶ್ರಮಾಡಿ ಉಷ್ಣವನ್ನು ತಡೆಯುವ ಸಾಧನವನ್ನಾಗಿ ಉಪಯೋಗಿಸುತ್ತಾರೆ. ಕಲ್ನಾರಿನ ಅದಿರನ್ನು ಗ್ರಾಫೈಟ್ ಮತ್ತು ಗ್ರೀಸ್ ಮಿಶ್ರಣದ ಜೊತೆ ಉಗಿಬಂಡಿಗಳಲ್ಲಿ ಉಪಯೋಗಿಸುತ್ತಾರೆ. ಕಲ್ನಾರು ಮಿಶ್ರಣದಿಂದ ಹಗ್ಗ, ದಾರಗಳನ್ನು ಸಹ ಮಾಡುತ್ತಾರೆ. ಹೆಚ್ಚಾಗಿ ಬೆಂಕಿಬಳಿ ಕೆಲಸ ಮಾಡುವವರು ಕಲ್ನಾರಿನಿಂದ ತಯಾರಿಸಿದ ಕವಚ ಮತ್ತು ಕೈಚೀಲಗಳನ್ನು ಉಪಯೋಗಿಸುತ್ತಾರೆ. ಇದು ವಿದ್ಯುಚ್ಛಕ್ತಿ ಪ್ರತಿರೋಧಕ. ಸಿಮೆಂಟ್ ಮತ್ತು ಜಿಪ್ಸಂಗಳನ್ನು ಕಲ್ನಾರಿನ ಅದಿರಿನಲ್ಲಿ ಮಿಶ್ರಮಾಡಿ ನಾನಾ ಬಗೆಯ ಕಲ್ನಾರು ಹಲಗೆ ತಯಾರಿಸುತ್ತಾರೆ. ಹೆಂಚುಗಳು, ಕಾಗದ ಕಲ್ನಾರು ತಯಾರಿಕೆಯಲ್ಲಿ ಬಳಸುತ್ತಾರೆ. ಅದಿರಿನ ಸಣ್ಣ ಕಣಗಳನ್ನು ಬಣ್ಣದ ತಯಾರಿಕೆಯಲ್ಲಿ ಉಪಯೋಗಿಸುವರು. ಇದರಿಂದ ತಯಾರಿಸಿದ ಹಲಗೆಗಳನ್ನು ಮೇಲ್ಚಾವಣಿಗೆ, ಕೊಳವೆಗಳನ್ನು ಹೊಗೆ ಮತ್ತು ನೀರು ಕಾಲುವೆಗೆ ಬಳಸುತ್ತಾರೆ. ನೀರಾವರಿ ಕೆಲಸಗಳಲ್ಲಿ ಕೊಳವೆಗಳು ಬಹಳ ಉಪಯೋಗವಾಗುತ್ತವೆ. ಆದರೆ ಹೆಚ್ಚು ಭಾರವನ್ನು ಇವು ತಡೆಯುವುದಿಲ್ಲ. (ಎ.ಎನ್.ಎಸ್.ಐ.;ಜಿ.ಟಿ.ಜಿ.)

**ಕಲ್ಲಿದ್ದಲು:** ಜೈವಿಕ ಪಳೆಯುಳಿಕೆಗಳು ಸಹಸ್ರಾರು ವರ್ಷ ಭೂಗರ್ಭದಲ್ಲಿ ಹೂತುಹೋಗಿ, ಕೊಳೆತು, ಅನೇಕ ಭೌತ ಜೈವ ರಾಸಾಯನಿಕ ಪರಿವರ್ತನೆಗಳನ್ನು ಹೊಂದಿ ಉತ್ಪನ್ನವಾಗುವ, ಒತ್ತಾದ ಪದರವಿರುವ ಇಂಗಾಲದ ವಸ್ತು (ಕೋಲ್). ಮುಖ್ಯವಾದ ಖನಿಜ ಇಂಧನಗಳಲ್ಲಿ ಇದು ಒಂದು. ಉಷ್ಣಶಕ್ತಿಗೆ ಒಂದು ಪ್ರಧಾನ ಮೂಲ. ಪ್ರಪಂಚದಲ್ಲಿನ ಶಕ್ತಿಯ ಉತ್ಪನ್ನದಲ್ಲಿ ಸು. ಅರ್ಧದಷ್ಟು ಕಲ್ಲಿದ್ದಲಿನಿಂದಲೇ ಆಗುವುದು. ಆದ್ದರಿಂದ ಇದನ್ನು ಕೈಗಾರಿಕೆಯ ಬೆನ್ನುಮೂಳೆ ಎನ್ನುವುದುಂಟು. ಕೋಕ್ ಕುಲುಮೆಯಂತ್ರಗಳಲ್ಲಿಯೂ ಅನಿಲ ಕಾರ್ಖಾನೆಗಳಲ್ಲಿಯೂ ಕಲ್ಲಿದ್ದಲೇ ಮೂಲ ಕಚ್ಚಾ ಸಾಮಗ್ರಿ.

ಉಂಟಾಗುವ ಬಗೆ: ನಿಸರ್ಗದಲ್ಲಿ ಕಲ್ಲಿದ್ದಲು ಉಂಟಾಗುವ ಬಗೆಯಲ್ಲಿ ಎರಡು ಸ್ಪಷ್ಟ ಹಂತಗಳನ್ನು ಗುರುತಿಸಲಾಗಿದೆ. ಮೊದಲಿನದು ಜೀವರಾಸಾಯನಿಕ ಪ್ರಕ್ರಿಯೆ (ಹ್ಯೂಮಿಫಿಕೇಶನ್ ಪ್ರೋಸೆಸ್). ಪ್ರಾಚೀನ ಕಾಲದಲ್ಲಿ ಸರೋವರಗಳ ಸುತ್ತಮುತ್ತ, ಜೌಗುಪ್ರದೇಶಗಳಲ್ಲಿ, ಕಣಿವೆಗಳಲ್ಲಿ ವಿಪುಲವಾಗಿ ಬೆಳೆದಿದ್ದ ಮರಗಳು ಬಿದ್ದು ಕೊಳೆತು ಏಕಾಣುಜೀವಿಗಳ ನಿರಂತರ ಕ್ರಿಯೆಯಿಂದ ಶಿಥಿಲವಾಗಿ ವಿಘಟನೆಗೊಂಡವು. ಇದರ ಪರಿಣಾಮ ಸಸ್ಯಗಳಲ್ಲಿದ್ದ ಪ್ರೋಟೀನುಗಳು, ಕೊಬ್ಬುಗಳು, ಕಾರ್ಬೊಹೈಡ್ರೇಟುಗಳು ಮುಂತಾದ ರಾಸಾಯನಿಕ ವಸ್ತುಗಳು ರಾಸಾಯನಿಕ ಕ್ರಿಯೆಗಳಿಗೆ ಒಳಗಾಗಿ ಸಾರಜನಕದಿಂದ ತುಂಬಿರುವ ಕೆಲವು ಕಪ್ಪು ಬಣ್ಣದ ಹ್ಯೂಮಿನ ವಸ್ತುಗಳಾಗಿ ಪರಿವರ್ತನೆಗೊಂಡವು. ಇವು ಸೂಕ್ಷ್ಮ ತಂತುಗಳಿಂದ ಕೂಡಿದ ಪುಡಿಮಾಡಬಹುದಾದ ಕಪ್ಪು ಬಣ್ಣದ ಸರಂಧ್ರಕ ವಸ್ತುಗಳು, ಪೀಟ್ ಅಥವಾ ಸಸ್ಯಾಂಗಾರ ಎಂದು ಇವುಗಳ ಹೆಸರು. ಸಸ್ಯಗಳ ಮೂಲ ರಚನೆಯನ್ನು ಸಸ್ಯಾಂಗಾರದ ಮೇಲೆ ಚೆನ್ನಾಗಿ ಗುರುತಿಸಬಹುದು.

ಎರಡನೆಯದು ಕಲ್ಲಿದ್ದಲು ಪರಿವರ್ತನಕ್ರಿಯೆ (ಕೋಲಿಫಿಕೇಷನ್ ಪ್ರೋಸೆಸ್): ಸಸ್ಯಾಂಗಾರ ವಸ್ತುಗಳು ಪದರ ಪದರವಾಗಿ ಶೇಖರಣೆಗೊಂಡಂತೆ ಅವುಗಳ ಭಾರದಿಂದ ತಳದ ನೆಲ ಕುಸಿಯಿತು; ಬದಿಯ ಬರೆಗಳು ಕುಸಿದು ಈ ರಾಶಿಯ ಮೇಲೆ ಬೀಳುವುದು. ಹೀಗೆ ಸಸ್ಯಾಂಗಾರ ಆಳ ಆಳಕ್ಕೆ ಸಾಗಿದಂತೆ ಅದರ ಮೇಲೆ ಹೇರಲಾದ ಒತ್ತಡ ಮತ್ತು ಅದರಿಂದ ಉತ್ಪತ್ತಿಯಾದ ತೀವ್ರ ಉಷ್ಣತೆಗಳ ಪ್ರಭಾವದಿಂದ ಎರಡನೆಯ ಪ್ರಕ್ರಿಯೆ ಆರಂಭವಾಯಿತು. ಇದರಿಂದ ಸಸ್ಯಾಂಗಾರ ದಟ್ಟೈಸಿ ಕ್ರಮೇಣ ಕಲ್ಲಿದ್ದಲಾಗಿ ಪರಿವರ್ತನೆಗೊಂಡಿತು. ಈ ಪರಿವರ್ತನ ಪ್ರಮಾಣವನ್ನು ಅನುಸರಿಸಿ ಪೀಟ್ ಲಿಗ್ನೈಟ್ ಬಿಟುಮಿನಸ್ ಮತ್ತು ಆಂಥ್ರಸೈಟ್ ಮುಂತಾದ ಬಗೆಯ ನಮೂನೆಗಳನ್ನು ವಿಂಗಡಿಸುತ್ತಾರೆ. ಸಸ್ಯಾಂಗಾರ ಕಲ್ಲಿದ್ದಲಾಗಿ ಪರಿಣಮಿಸುವಾಗ ಪ್ರಥಮ ನಿರ್ದಿಷ್ಟ ಘಟ್ಟ ಲಿಗ್ನೈಟ್ ಅಥವಾ ಕಂದುಬಣ್ಣದ ಕಲ್ಲಿದ್ದಲು. ಅದು ಮರದ ರಚನೆಯನ್ನು ತೋರಿಸುತ್ತದೆ. ಇದು ಬಲು ಮೃದುವಾಗಿದ್ದು ಹಿಸುಕಿದರೆ ದೂಳಾಗುವಂತಿರುವುದು. ಇದರೊಳಗೆ ಸ್ಥಿರ ಪ್ರಮಾಣದಲ್ಲಿ ಇಂಗಾಲ ಶೇ. 23 ಭಾಗದವರೆಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಮುಂದಿನ ಘಟ್ಟ ಬಿಟುಮಿನಸ್ ಕಲ್ಲಿದ್ದಲು. ಇದು ಹೆಚ್ಚು ಬಳಕೆಯ ಅತ್ಯುಪಯುಕ್ತ ಕಲ್ಲಿದ್ದಲು. ಬಲು ಕಠಿಣವಾಗಿರುವ ವಸ್ತು. ಇದರಲ್ಲಿ ಸ್ಥಿರವಾಗಿರುವ ಇಂಗಾಲಾಂಶ ಶೇ. 50–60 ವರೆಗಿರುತ್ತದೆ. ಆಂಥ್ರಸೈಟ್ ಎಂಬುದು ಗಟ್ಟಿಯಾಗಿಯೂ ಸಾಂದ್ರವಾಗಿಯೂ ಕಡುಕಪ್ಪಾಗಿಯೂ ಇದೆ ಮತ್ತು ಇದು ಕಲ್ಲಿದ್ದಲಿನ ಅತ್ಯಂತ ಶುದ್ಧರೂಪ. ಇದರ ಸ್ಥಿರ ಇಂಗಾಲದ ಪ್ರಮಾಣ ಸು. 90%. ಕಲ್ಲಿದ್ದಲಿನ ಸಾಪೇಕ್ಷ ಗುರುತ್ವ ಮತ್ತು ಉಷ್ಣೋತ್ಪಾದನ ಮೌಲ್ಯ ಲಿಗ್ನೈಟಿನಿಂದ ಆಂಥ್ರಸೈಟಿನವರೆಗೆ ಏರುತ್ತ ಹೋಗುತ್ತದೆ.

ರಾಸಾಯನಿಕವಾಗಿ ಕಲ್ಲಿದ್ದಲು ಸಂಕೀರ್ಣ ಇಂಗಾಲ (ಕಾರ್ಬನ್) ಸಂಯುಕ್ತಗಳನ್ನೂ ಜೊತೆಗೆ ಸ್ವಲ್ಪ ಇಂಗಾಲೇತರ ದ್ರವ್ಯವನ್ನೂ ನೀರನ್ನು ಒಳಗೊಂಡಿದೆ. ಕಲ್ಲಿದ್ದಲಿನ ಮೂಲ ಧಾತುಗಳು ತುಂಬ ಸರಳ_ಕಾರ್ಬನ್, ಹೈಡ್ರೊಜನ್ ಮತ್ತು ಆಕ್ಸಿಜನ್ ಇವು ಪ್ರಧಾನ ಘಟಕಗಳು. ನೈಟ್ರೊಜನ್ ಹಾಗೂ ಸಲ್ಫರ್ ಅಂಶಗಳೂ ಇವೆ. ಕಲ್ಲಿದ್ದಲಿನ ಪರಿವರ್ತನ ಪ್ರಕ್ರಿಯೆ ಮುಂದುವರಿದಂತೆಲ್ಲ ಇಂಗಾಲದ ಪ್ರಮಾಣ ಸಮತೂಕವಾಗಿ ಹೆಚ್ಚುತ್ತದೆ. ಆದರೆ ಆಕ್ಸಿಜನ್ ಮತ್ತು ಹೈಡ್ರೊಜನ್ನುಗಳ ಪ್ರಮಾಣಗಳು ಸಮತೂಕವಾಗಿ ಕಡಿಮೆಯಾಗುತ್ತ ಹೋಗುತ್ತವೆ.

ಕಲ್ಲಿದ್ದಲಿನ ವಿಶ್ಲೇಷಣೆ: ಕಲ್ಲಿದ್ದಲಿನ ಜಲಾಂಶ. ಬಾಷ್ಪಶೀಲದ್ರವ್ಯಾಂಶ ಬೂದಿಯ ಶತಾಂಶ, ಸ್ಥಿರ, ಇಂಗಾಲ ಮತ್ತು ಉಷ್ಣಜನಕ ಕೆಲೊರಿ ಮೌಲ್ಯಗಳನ್ನು ನಿರ್ಣಯಿಸಿ ಈ ಅಂಶಗಳ ಮೇಲೆ ಕಲ್ಲಿದ್ದಲಿನ ದರ್ಜೆಯನ್ನು ಸಾಮಾನ್ಯವಾಗಿ ಗೊತ್ತು ಮಾಡಲಾಗುತ್ತದೆ. ಲೋಹ ತಯಾರಿಕೆಯ ಕಾರ್ಯಗಳಲ್ಲಿ ಉಪಯೋಗಿಸಲು ಅರ್ಹವಾದ ಕಲ್ಲಿದ್ದಲಿನ ಮತ್ತೊಂದು ಮುಖ್ಯ ಲಕ್ಷಣ ಅದರ ಕೋಕಿಂಗ್ ಗುಣ. ಹೆಚ್ಚು ಉಷ್ಣತೆಗೆ ಕಲ್ಲಿದ್ದಲನ್ನು ಕೋಕ್ ಒಲೆಗಳಲ್ಲಿ ಕಾಯಿಸಿದ ಮೇಲೆ, ಎಂದರೆ ಅದರೊಳಗಿನ ಬಾಷ್ಪಶೀಲ ದ್ರವ್ಯಗಳನ್ನು ಕರಗಿಸಿ ಹೊರಗೆ ಹಾಕಿದ ಮೇಲೆ, ಉಳಿದುಕೊಳ್ಳುವ ಅಂಶವೇ ಕೋಕ್. ಕಲ್ಲಿದ್ದಲುಗಳಿಂದ ಪಡೆದ ಕೋಕ್ ದುರ್ಬಲ ಸರಂಧ್ರಕ ಮತ್ತು ಪುಡಿಯಾಗುವಂಥದು ಆಗಿರಬಹುದು ಅಥವಾ ಒಡೆಯದ ಹಾಗೆ ಗಟ್ಟಿಯಾಗಿರಬಹುದು. ಲೋಹ ತಯಾರಿಕೆಯಲ್ಲಿ ಗಟ್ಟಿ ಕೋಕನ್ನು ಮಾತ್ರ ಅದಿರನ್ನು ಕರಗಿಸಲು ಉಪಯೋಗಿಸಬೇಕು.

ಪದರು ಶಿಲೆಗಳ ಸ್ತರಗಳಲ್ಲಿ ಕಲ್ಲಿದ್ದಲಿರುತ್ತದೆ. ಪ್ರತಿಯೊಂದು ಸ್ತರಕ್ಕೂ ಒಂದು ಸೀಮ್ ಎಂದು ಹೆಸರು. ಇಂಥ ಕಲ್ಲಿದ್ದಲಿನ ಶ್ರೇಣಿಗಳು ಒಂದರ ಮೇಲೊಂದರಂತೆ ಒಂದು ನಿಯತ ಕ್ರಮದಲ್ಲಿರುತ್ತವೆ. ಪದರದ ನಡುವೆ ಶೇಲುಗಳ ಮತ್ತು ಮರಳುಗಲ್ಲುಗಳ ದಪ್ಪ ಪದರಗಳಿವೆ. ಒಂದು ಸ್ತರ ಕೆಲವು ಅಡಿಗಳಷ್ಟು ದಪ್ಪವಾಗಿರಬಹುದು ಅಥವಾ ನೂರಾರು ಅಡಿಗಳಷ್ಟೂ ಇರಬಹುದು. ಕಲ್ಲಿದ್ದಲು ಒಂದಾದ ಮೇಲೊಂದು ಬರುವ ಮಂಕಾದ ಮತ್ತು ಹೊಳಪಾದ ಪದರಗಳಿಂದ ಕೂಡಿದೆ. ಹೊಳಪುಳ್ಳ ದ್ರವ್ಯಗಳನ್ನು ವಿಟ್ರೇನ್ ಮತ್ತು ಕ್ಲಾರೈನ್ ಎಂದು ಕರೆಯುತ್ತಾರೆ. ಮಂಕಾಗಿರುವ ಅಂಶಕ್ಕೆ ಡುರೈನ್ ಎಂದು ಹೆಸರು. ಮರದ ಇದ್ದಲಿನಂತಿರುವ ಮತ್ತೊಂದು ಅಂಶವೂ ಕಲ್ಲಿದ್ದಲಿನಲ್ಲಿ ಸೇರಿದೆ; ಇದಕ್ಕೆ ಫ್ಯೂಸೇನ್ ಎಂದು ಹೆಸರು.

ಭೂಮಿಯ ಚರಿತ್ರೆಯನ್ನು ನೋಡಿದ್ದೇ ಆದರೆ ಎರಡು ಅವಧಿಗಳಲ್ಲಿ ಅಂದರೆ ಕಾರ್ಬಾನಿ ಫೆರಸ್_ಪರ್ಮಿಯನ್ (ಸು. 275–200 ದಶಲಕ್ಷ ವರ್ಷಗಳ ಕೆಳಗೆ), ಮತ್ತು ಟರ್ಷಿಯರಿ ಅವಧಿ (40–60 ದಶಲಕ್ಷ ವರ್ಷಗಳ ಕೆಳಗೆ) ಗಳಲ್ಲಿ, ವಿಸ್ತಾರವಾದ ಕ್ಷೇತ್ರಗಳಲ್ಲಿ ಕಲ್ಲಿದ್ದಲಿನ ರಚನಾಪ್ರಕ್ರಿಯೆಗಳು ಜರುಗುತ್ತಿದ್ದುದಾಗಿ ಕಂಡುಬರುತ್ತದೆ. ಜಗತ್ತಿನಲ್ಲಿರುವ ಕಲ್ಲಿದ್ದಲುಗಳೆಲ್ಲ ಇವೆರಡರ ಪೈಕಿ ಒಂದು ಅವಧಿಯಲ್ಲಿ ರೂಪಗೊಂಡವು.

ಕಾರ್ಬಾನಿಫ಼ೆರಸ್_ಪರ್ಮಿಯನ್ ಕಾಲದ ಕಲ್ಲಿದ್ದಲುಗಳು ಹೆಚ್ಚು ಭೂಭಾಗವನ್ನು ಆಕ್ರಮಿಸಿಕೊಂಡಿವೆ. ಇವುಗಳ ಗುಣ ಶ್ರೇಷ್ಠತರವಾಗಿದೆ. ಪ್ರಪಂಚದ ಅತ್ಯುತ್ತಮ ಕಲ್ಲಿದ್ದಲುಗಳು ಈ ಅವಧಿಯವು. ಆದರೆ ಟರ್ಷಿಯರಿ ಅವಧಿಯ ಕಲ್ಲಿದ್ದಲುಗಳು ಸಾಮಾನ್ಯವಾಗಿ ಲಿಗ್ನೈಟುಗಳು ಮತ್ತು ಪೀಟ್. (ಡಿ.ಎಸ್.ಎಸ್.)

**ಕಲ್ಲಿದ್ದಲು ನಿಕ್ಷೇಪಗಳು (ಭಾರತ):** ಭೂ ಇತಿಹಾಸದ ಎರಡು ಸ್ಪಷ್ಟ ಅವಧಿಗಳಿಗೆ ಸೀಮಿತವಾದ ಕಲ್ಲಿದ್ದಲಿನ ನಿಕ್ಷೇಪಗಳನ್ನು ಭಾರತದಲ್ಲಿ ಕಾಣಬಹುದು. ಪರ್ಮಿಯನ್ ಯುಗದವು (ಸು. 275–200 ದಶಲಕ್ಷ ವರ್ಷ ಪ್ರಾಚೀನ ಕಾಲದವು); ಇಯೊಸೀನ್ ಮತ್ತು ಮಿಯೊಸೀನ್ ಯುಗದವು (ಸು. 60–25 ದಶಲಕ್ಷ ವರ್ಷ ಪ್ರಾಚೀನ ಕಾಲದವು). ಮೊದಲಿನವು ಗೊಂಡ್ವಾನಾ ಸಮುದಾಯದಲ್ಲಿವೆ. ಎರಡನೆಯವು ಟರ್ಷಿಯರಿ ಸಮುದಾಯದಲ್ಲಿವೆ. ಆದ್ದರಿಂದ ಇವುಗಳಿಗೆ ಅನುಕ್ರಮವಾಗಿ ಗೊಂಡ್ವಾನಾ ಕಲ್ಲಿದ್ದಲು, ಟರ್ಷಿಯರಿ ಕಲ್ಲಿದ್ದಲು ಎಂಬ ಹೆಸರುಗಳು ಬಂದಿವೆ. ಇವೆರಡರ ಪೈಕಿ ಗೊಂಡ್ವಾನಾ ಕಲ್ಲಿದ್ದಲು ಉತ್ತಮ ದರ್ಜೆಗೆ ಸೇರಿದೆ. ಅದು ಯಥೇಚ್ಛವಾಗಿ ದೊರಕುವುದೂ ಅಲ್ಲದೆ ಹೆಚ್ಚು ಭೂ ಭಾಗವನ್ನು ಸಹ ಆವರಿಸಿಕೊಂಡಿದೆ. ಟರ್ಷಿಯರಿ ಕಲ್ಲಿದ್ದಲು ಹೇರಳವಾಗಿಲ್ಲದಿದ್ದರೂ ಗಣಿ ಉದ್ಯೋಗಕ್ಕೆ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಗೊಂಡ್ವಾನಾ ಕಲ್ಲಿದ್ದಲು ಬಿಟುಮಿನಸ್ ವರ್ಗದ್ದು. ಇದು ಅತ್ಯಂತ ಸಾಮಾನ್ಯವಾದದ್ದು ಮತ್ತು ದಿನವಹಿ ಕಾರ್ಖಾನೆಗಳಲ್ಲೂ ರೈಲ್ವೆಯಲ್ಲೂ ಮನೆಗಳಲ್ಲೂ ಉಪಯೋಗಕ್ಕೆ ಬರುತ್ತಿರುವಂಥದು. ಗೊಂಡ್ವಾನಾ ಕಲ್ಲಿದ್ದಲಿನ ಪ್ರದೇಶಗಳ ಹರವನ್ನು ನೋಡಿದ್ದೇ ಆದರೆ ಅವು ಮುಖ್ಯವಾಗಿ ಈ ಮೂರು ನದಿ ಕಣಿವೆಗಳಲ್ಲಿ ಕಂಡುಬರುವುವು: ಸೋನೆ–ದಾಮೋದರ ಕಣಿವೆ, ಮಹಾನದಿ ಕಣಿವೆ, ವಾರ್ಧಾ–ಗೋದಾವರೀ ಕಣಿವೆ. ಈ ಕಾರಣದಿಂದ ಕಲ್ಲಿದ್ದಲಿನ ಸ್ತರಗಳು ಮುಖ್ಯವಾಗಿ ಪಶ್ಚಿಮ ಬಂಗಾಲ, ಜಾರ್ಖಂಡ್, ಮಧ್ಯಪ್ರದೇಶ, ಛತ್ತಿಸ್‌ಗರ್, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಒರಿಸ್ಸ ರಾಜ್ಯಗಳಲ್ಲಿ ಕಾಣುವುವು. ಇವಲ್ಲದೆ ಕೆಲವು ಸಣ್ಣ ನಿಕ್ಷೇಪಗಳ ಅಸ್ಸಾಂ ಮತ್ತು ಸಿಕ್ಕಿಂ ಪ್ರದೇಶಗಳಲ್ಲೂ ಇವೆ. ಟರ್ಷಿಯರಿ ಕಲ್ಲಿದ್ದಲು ಕಡಿಮೆ ದರ್ಜೆಗೆ ಸೇರಿದ ಲಿಗ್ನೈಟ್ ನಮೂನೆಯದು. ಉತ್ಪಾದನೆ ದೃಷ್ಟಿಯಿಂದ ಇದು ಅಷ್ಟು ಪ್ರಧಾನವಾದುದಲ್ಲವಾದರೂ ಇದಕ್ಕೆ ಆರ್ಥಿಕ ಮಹತ್ತ್ವ ಉಂಟು. ಈ ದರ್ಜೆಯ ಕಲ್ಲಿದ್ದಲು ಅಸ್ಸಾಂ, ಕಾಶ್ಮೀರ, ತಮಿಳುನಾಡು, ರಾಜಸ್ತಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಸಿಕ್ಕುತ್ತದೆ. ಭಾರತದ ಕಲ್ಲಿದ್ದಲು ಕ್ಷೇತ್ರಗಳನ್ನೂ ಅವುಗಳ ಹರವನ್ನೂ ಕೆಳಗೆ ಸೂಚಿಸಲಾಗಿದೆ.

**ಗೊಂಡ್ವಾನ ಕಲ್ಲಿದ್ದಲು ಕ್ಷೇತ್ರಗಳು:**

| **ರಾಜ್ಯಗಳು** | **ಕಲ್ಲಿದ್ದಲು ಕ್ಷೇತ್ರಗಳು** |
|---|---|
| **ಪಶ್ಚಿಮ ಬಂಗಾಲ:** | |
| 1 ದಾಮೋದರ ಕಣಿವೆ | ರಾಣಿಗಂಜ್ (ಬರಾಕರ್ ಪೂರ್ವಭಾಗ), ಬಂಕೂರ. |
| 2 ಡಾರ್ಜಿಲಿಂಗ್ ಜಿಲ್ಲೆ | ಬಾಗ್ರ ಕೋಡೆ ಟಿನ್‌ಢೇರಿಯ. |
| **ಜಾರ್ಖಂಡ್** | |
| 1 ದಾಮೋದರ ಕಣಿವೆ | ರಾಣಿಗಂಜ್ (ಬರಾಕರ್ ಪಶ್ಚಿಮ ಭಾಗ), ಝುರಿಯಾ, ಚಂದ್ರಾಪುರ, ಬೊಕಾರೊ, ರಾಮಗಡ್, ದಕ್ಷಿಣ ಕರಣಪುರ, ಉತ್ತರ ಕರಣಪುರ. |
| 2 ರಾಜಮಹಲ್ ಪ್ರದೇಶ | ಹುರಾ, ಗಿಲ್ ಹುರಿಯ, ಚುಪರ್‌ಭಿಟ, ಪಚ್ವಾರ, ಬ್ರಾಹ್ಮಣಿ. |
| 3 ದೇವಗಡ್ ಪ್ರದೇಶ | ಕುಂಡಿಟ್–ಕುರೈಯಾ, ಸಹಜೂರಿ, ಜೈನ್ತಿಯ. |
| 4 ಹಜಾರಿಬಾಗ್ ಜಿಲ್ಲೆ | ಗಿರಿಧಿ ಜೋಪೆ ಇಟ್‌ಖೊವಿ |
| 5 ಪಲಮಾವು ಪ್ರದೇಶ | ಔರಂಗ ಹುಟಾರ್ ಡಾಲ್ಟನ್‌ಗಂಜ್ |
| **ಮಧ್ಯಪ್ರದೇಶ** | |
| 1 ದಕ್ಷಿಣ ರೇವಾ ಪ್ರದೇಶ | ಸಿಂಗ್ರೌಲಿ, ಉಮೇರಿಯಾ, ಜೋಹಿಲ್ಲಾ ನದಿ ಸೊಹಾಗ್ ಪುರ. |
| **ಛತ್ತೀಸ್‌ಗಡ್** | |
| 1 ಉತ್ತರ ಛತ್ತೀಸ್‌ಗಡ್ ಪ್ರದೇಶ | ತಾತಾಪಾನಿ_ರಾಮಕೋಲ, ಝಿಲ್ ಮಿಲಿ, ಸನಹಟ್, ಜಾಗ್ರಖಾಂಡ್, ಚೆರಿಮಿರಿ, ಕುರೇಸಿಂಯಾ, ಕೊರಿಂಯಾಗಡ್, ಬಿಸ್ರಾಮಪುರ, ಬನ್ ಸಾರ್, ಲಖನ್ ಪುರ, ಪಾಂಚ್‌ಭಾಯಿನಿ, ದಂಹಾಮುಂಡ, ಸೆಂದೂರ್ ಗಡ್. |
| 2 ದಕ್ಷಿಣ ಛತ್ತೀಸ್‌ಗಡ್ ಪ್ರದೇಶ | ಹಸ್ ಡೊ_ರಾಮಪುರ, ಕೊರ್ಬಾ, ರಾಯಗಡ್, ಮಾಂಡ್ ನದಿ, ಕಂಕಣಿ |
| 3 ಸಾತ್ಪುರ ಪ್ರದೇಶ | ಮೊಹಪಾನಿ, ಸೊನಾಡಾ, ಷಾಹಪುರ್, ದುಲೇ ಹಾರಾ, ಪಥಾಕೆರ, ಬಂಹನ್ವಾರಾ, ಟವಾ ಕಣಿವೆ, ಪೆಂಚ್ ಕಣಿವೆ,ಕನ್ ಹನ್ ಕಣಿವೆ |
| **ಮಹಾರಾಷ್ಟ್ರ** | |
| 1 ನಾಗಪುರ ಪ್ರದೇಶ | |
| 2 ವಾರ್ಧಾ ಕಣಿವೆ | ಕಾಮ್ಟಿ, ಬೊಕಾರೊ, ಉಮ್ರೇರ್.ಬಂದರ್, ವರೋರಾ, ರಾಜುರ್, ಚಂದಾ, ಘುಗಸ್_ತೆಲ್ ವಾಸಾ, ಬಲ್ಲಾರ್‌ಪುರ, ವಾಮನ ಪಲ್ಲಿ, ಅಂತರ್ ಗಾವ್_ಅಕ್ಸಾಪುರ್, ಸಸ್ತಿ_ರಾಜೂರ |
| **ಒರಿಸ್ಸ** | |
| 1 ಮಹಾನದಿ ಕಣಿವೆ | ತಾಲ್ಚಾರ್, ರಾಂಪುರ್_ಹಿಂಗಿರ್. |
| ಆಂಧ್ರಪ್ರದೇಶ | |
| 1 ಗೋದಾವರಿ ಕಣಿವೆ | ತಂದೂರ್–ಕನಾಲಾ, ಗೋದಾವರಿ, ಜನಗಾಂ,ಸೇಂದ್ರಪಲ್ಲಿ, ಕಾಮಾವರಂ, ಅಲ್ಲಪಲ್ಲಿ, ಸಿಂಗರೇಣಿ (ಎಲ್ಲಂಡು), ಬಕೊತ್ತಗುಡಿಯಂ, ದಮಾರ್ಚೆಲರಾ, ಕನ್ನೇಗಿರಿ |

**ಟರ್ಷಿಯರಿ ಕಲ್ಲಿದ್ದಲು ಕ್ಷೇತ್ರಗಳು**

| **ರಾಜ್ಯಗಳು** | **ಕಲ್ಲಿದ್ದಲು ಕ್ಷೇತ್ರ** |
|---|---|
| ಅಸ್ಸಾಂ | |
| 1 ಅಸ್ಸಾಮಿನ ಮೇಲ್ಭಾಗ | ಡಯಾಂಗ್ ಕಣಿವೆ, ಡಿಸ್ಸೈ ಕಣಿವೆ, ಜಂಜಿ, ನಾಜಿರ, ಜೈಪುರ್, ಮಾಕುಂ, ನಾಮ್ ಚಿಕ್ ಸಫ್ರೈ ಕಣಿವೆ. |
| 2 ಮಿಕಿರ್ ಬೆಟ್ಟ ಪ್ರದೇಶ | ಕೊಯಿಲಾಜಾನ್, ಡಿಸೊಬೈ, ಲಾಂಗಲೈ. |
| 3 ಖಾಸಿ ಮತ್ತು ಜೈನ್ | ಉಮ್‌ರಿಲೆಂಗ್, ಮಾಬೆಹಲಾರ್ಕರ್, ಬಾಪಂಗ್,ಮಾಲಾಂಗ್, ಚಿರಾಪುಂಜಿ, ಷಿಯಾ ಬೆಟ್ಟಪ್ರದೇಶ ಲಕಾಡಂಗ್. |
| 4 ಗಾರೊ ಬೆಟ್ಟಪ್ರದೇಶ | ಟ್ಯೂರಾ, ರೋಂಗ್ರಗಿರಿ, ಡರಂಗಿರಿ, ಸಿಜು, ಲಗ್ರಿನ್. ಕಲಾಕೋಟ್, ಮೆಟ್ ಕಾ, ಮಹೊಗಲ, ಚಕರ್, |
| ಕಾಶ್ಮೀರ | ಧನ್ ಸ್ವಾಲ್–ಸವಾಲ್ ಕೋಟ್, ಲಡ್ಡ, ಚಿಂಕಾ ಕಾಶ್ಮೀರ ಕಣಿವೆ ಲಿಗ್ನೈಟುಗಳು |
| ತಮಿಳುನಾಡು | ನೈವೇಲಿ, ಕಡಲೂರು_ಪಾಂಡಿಚೆರಿ ಪ್ರದೇಶ. ಪಲಾನ |
| ರಾಜಸ್ತಾನ | ಉಮರ್ ಸರ್ |
| ಗುಜರಾತ್ | ವರ್ಕಲ |
| ಕೇರಳ | ಕ್ವಿಲಾನ್ |

ಗೊಂಡ್ವಾನಾ ಕಲ್ಲಿದ್ದಲು : ಈ ಕಲ್ಲಿದ್ದಲು ನಿಕ್ಷೇಪ ಗೊಂಡ್ವಾನಾ ಸಮುದಾಯದ ಸ್ತರಗಳಲ್ಲಿದೆ. ಭಾರತ ಪರ್ಯಾಯ ದ್ವೀಪದ ಹಲವೆಡೆಗಳಲ್ಲಿ ಕಾರ್ಬಾನಿಫೆರಸ್ ಯುಗದ (ಸು. 275 ದಶಲಕ್ಷ ವರ್ಷಗಳ ಹಿಂದೆ) ಅಂತ್ಯದಲ್ಲಿ ಸಿಹಿನೀರಿನ ಸರೋವರಗಳಿದ್ದು ಅವುಗಳಲ್ಲಿ 4575–6100 ಮೀ ಗಿಂತಲೂ ಮೀರಿ ಶೇಖರವಾದ ಶಿಲಾಸ್ತರಗಳಿಗೆ ಗೊಂಡ್ವಾನಾ ಕಲ್ಲಿದ್ದಲು ಎನ್ನುವರು. ಇಷ್ಟು ಗಾತ್ರದ ಶಿಲಾಸಮುದಾಯವನ್ನು ಕೆಳಭಾಗ ಮತ್ತು ಮೇಲ್ಭಾಗವೆಂದು ವಿಂಗಡಿಸಬಹುದು. ಕೆಳಭಾಗ 3050 ಮೀ ಗಳಿಗಿಂತ ಹೆಚ್ಚಾಗಿ ಮಂದವಾಗಿದ್ದು ಎಲ್ಲ ವರ್ಗದ ಕಲ್ಲಿದ್ದಲನ್ನೂ ಒಳಗೊಂಡಿದೆ. ಈ ಭಾಗವನ್ನು ಕೆಳಕಂಡಂತೆ ವಿಭಾಗಿಸಲಾಗಿದೆ.

| | | |
|---|---|---|
| ಪಂಚೆತ್ ಸಮೂಹ | . . .. . . . . . | 600 ಮೀ |
| ರಾಣಿಗಂಜ್ ಶ್ರೇಣಿ | . . . | 900 ಮೀ |
| ಕೆಳ ದಾಮೂದಾ ಸಮೂಹ ಶ್ರೇಣಿ | . . . | 600 ಮೀ |
| ಗೊಂಡ್ವಾನಾ ಬರಾಕರ್ ಶ್ರೇಣಿ | . . . | 760 ಮೀ |
| ತಲ್ಚಾರ್ ಸಮೂಹ | . . .. . . . . | 300 ಮೀ |

ಉತ್ಪಾದನೆಗೆ ಯೋಗ್ಯವಾದ ಕಲ್ಲಿದ್ದಲಿನ ಸ್ತರಗಳು ದಾಮೂದಾ ಸಮೂಹದಲ್ಲಿ ಮಾತ್ರ ಇರುವುವು. ಮತ್ತು ಎರಡು ಸಮಮಟ್ಟದಲ್ಲಿ ದೊರಕುವುವು. ಒಂದು, ತಳಭಾಗದ ಬರಾಕರ್ ಶ್ರೇಣಿಯಲ್ಲಿ; ಎರಡನೆಯದು, ಮೇಲಿನ ಭಾಗದ ರಾಣಿಗಂಜ್ ಶ್ರೇಣಿಯಲ್ಲಿ. ಇವೆರಡು ಕಲ್ಲಿದ್ದಲಿರುವ ಶ್ರೇಣಿಗಳ ಮಧ್ಯೆ ಕಲ್ಲಿದ್ದಲು ಇಲ್ಲದ ಶ್ರೇಣಿ ಇದೆ. ಬರಾಕರ್ ಶ್ರೇಣಿಯ ಶಿಲೆಗಳು ಕಾಣಬರುವ ಪ್ರದೇಶಗಳಲ್ಲೆಲ್ಲ ಉತ್ಪಾದನೆಗೆ ಯೋಗ್ಯವಾದ ಕಲ್ಲಿದ್ದಲಿನ ಸ್ತರಗಳು ಇವೆ. ಆದರೆ ರಾಣಿಗಂಜ್ ಶ್ರೇಣಿಯ ಕಲ್ಲಿದ್ದಲು ಪ್ರಧಾನವಾಗಿ ಅದೇ ಕಲ್ಲಿದ್ದಲು ಕ್ಷೇತ್ರದಲ್ಲೂ ಸ್ವಲ್ಪಮಟ್ಟಿಗೆ ಝರಿಯಾ ಮತ್ತು ಕರಣಪುರ ಕಲ್ಲಿದ್ದಲು ಕ್ಷೇತ್ರಗಳಲ್ಲೂ ಕಾಣುತ್ತವೆ.

ಸಾಮಾನ್ಯವಾಗಿ ಗೊಂಡ್ವಾನಾ ಕಲ್ಲಿದ್ದಲು ಬಿಟುಮಿನಸ್ ವರ್ಗದ್ದು. ಬರಾಕರ್ ಕಲ್ಲಿದ್ದಲು ರಾಣಿಗಂಜ್ ಕಲ್ಲಿದ್ದಲಿಗಿಂತ ಶ್ರೇಷ್ಠ ದರ್ಜೆಯದು. ಎರಡು ಬಗೆಯ ಕಲ್ಲಿದ್ದಲುಗಳಲ್ಲೂ ಗಂಧಕ ಮತ್ತು ರಂಜಕದ ಅಂಶಗಳು ಅತ್ಯಲ್ಪ ಪ್ರಮಾಣದಲ್ಲಿವೆ. ಬರಾಕರ್ ಕಲ್ಲಿದ್ದಲು ಸಣ್ಣ ಜ್ವಾಲೆಯೊಡನೆ ಉರಿಯುವ. ಶ್ರೇಷ್ಠ ವರ್ಗದ ಗಟ್ಟಿ ಕೋಕನ್ನೂ ಉತ್ಪತ್ತಿಮಾಡಬಲ್ಲುದು. ರಾಣಿಗಂಜ್ ಕಲ್ಲಿದ್ದಲು ನೀಳಜ್ವಾಲೆಯೊಡನೆ ಉರಿಯುವ ದುರ್ಬಲವಾದ ಕೋಕನ್ನು ಉತ್ಪತ್ತಿಮಾಡಬಲ್ಲದು. ಲೋಹ ಕರಗಿಸುವ ಕುಲುಮೆಗಳಲ್ಲಿ ಉಪಯೋಗಿಸಲು ಬರಾಕರ್ ಕಲ್ಲಿದ್ದಲೂ ಹಬೆ ಯಂತ್ರಗಳು ಮತ್ತು ಅನಿಲ ಕಾರ್ಖಾನೆಗಳಲ್ಲಿ ಉಪಯೋಗಿಸಲು ರಾಣಿಗಂಜ್ ಕಲ್ಲಿದ್ದಲೂ ಅತ್ಯುತ್ತಮವೂ ಯೋಗ್ಯವೂ ಆಗಿವೆ.

ಗೊಂಡ್ವಾನಾ ಕಲ್ಲಿದ್ದಲು ಕ್ಷೇತ್ರಗಳು: ಭಾರತದ ವಿವಿಧ ಕಲ್ಲಿದ್ದಲು ಕ್ಷೇತ್ರಗಳನ್ನು ರಾಜ್ಯಗಳ ಪ್ರಕಾರ ವಿಂಗಡಿಸಿ ಈ ಮೊದಲೇ ನಮೂದಿಸಲಾಗಿದೆ. ಇವುಗಳ ಪೈಕಿ ದಾಮೋದರ್ ಕಣಿವೆಯಲ್ಲಿರುವ ಮತ್ತು ಪಶ್ಚಿಮ ಬಂಗಾಳ, ಬಿಹಾರಿನಲ್ಲಿ ಸ್ಥಾಪಿತವಾಗಿರುವ ಕ್ಷೇತ್ರಗಳು ಎಲ್ಲಕ್ಕಿಂತಲೂ ಮುಖ್ಯವಾದುವು. ಏಕೆಂದರೆ ಇಲ್ಲಿ ಭಾರತದ ಅತ್ಯುತ್ತಮ ಕಲ್ಲಿದ್ದಲು ಇರುವುದಲ್ಲದೆ ಇದರ ಉತ್ಪಾದನೆ ಬಹು ಹೆಚ್ಚಾಗಿದೆ. ಪ್ರತಿವರ್ಷವೂ, ಭಾರತದ ಒಟ್ಟು ಕಲ್ಲಿದ್ದಲು ಉತ್ಪತ್ತಿಯಲ್ಲಿ ಮುಕ್ಕಾಲು ಭಾಗದಷ್ಟು ಈ ಪ್ರದೇಶದಿಂದ ಉತ್ಪಾದನೆಯಾಗುತ್ತಿದೆ. ಈ ಕಣಿವೆಯಲ್ಲಿ ಭಾರತದ ಪ್ರಧಾನ ಕಲ್ಲಿದ್ದಲು ಕ್ಷೇತ್ರಗಳಿವೆ. ಅವು ರಾಣಿಗಂಜ್, ಝರಿಯಾ, ಬೊಕಾರೊ ಮತ್ತು ಕರಣಪುರ ಕ್ಷೇತ್ರಗಳು. ಇವುಗಳ ಸಂಕ್ಷೇಪ ವಿವರಣೆಯನ್ನು ಈ ಕೆಳಗೆ ಕೊಡಲಾಗಿದೆ:

ರಾಣಿಗಂಜ್ ಕಲ್ಲಿದ್ದಲು ಕ್ಷೇತ್ರ : ಹೆಚ್ಚು ಭಾಗ ಪಶ್ಚಿಮ ಬಂಗಾಲದಲ್ಲೂ ಪಶ್ಚಿಮದ ಸ್ವಲ್ಪ ಭಾಗ ಜಾರ್ಖಂಡ್ ರಾಜ್ಯದಲ್ಲೂ ಇವೆ. ಇದು ದಾಮೋದರ್ ಕಣಿವೆ ಪ್ರದೇಶದ ಅತ್ಯಂತ ಹಳೆಯ ಕಲ್ಲಿದ್ದಲು ಕ್ಷೇತ್ರ; ಕೋಲ್ಕೊತದಿಂದ ವಾಯವ್ಯಕ್ಕೆ 185 ಕಿಮೀ ದೂರದಲ್ಲಿದೆ ಮತ್ತು ಮುಖ್ಯ ರೈಲ್ವೆ ನಿಲ್ದಾಣವಾದ ಅಸನ್‌ಸಾಲ್ ಈ ಕ್ಷೇತ್ರದ ಮಧ್ಯದಲ್ಲಿದೆ. ಆಗ್ನೇಯ ದಿಕ್ಕಿನಲ್ಲಿರುವ ರಾಣಿಗಂಜ್ ಪಟ್ಟಣ ಕಲ್ಲಿದ್ದಲು ಗಣಿಗಳ ಮುಖ್ಯ ಕೇಂದ್ರವಾಗಿರುವುದರಿಂದ ಈ ಕ್ಷೇತ್ರಕ್ಕೆ ಈ ಹೆಸರು ಬಂದಿದೆ. ಇಲ್ಲಿಂದ ಇದುವರೆಗೆ ಸು. (750) ದಶಲಕ್ಷ ಟನ್‌ಗಳಷ್ಟು ಕಲ್ಲಿದ್ದಲನ್ನು ಅಗೆದು ತೆಗೆಯಲಾಗಿದೆ. ಮತ್ತು ಇನ್ನೂ ಭೂಮಿಯೊಳಗೆ (300 ಮೀ) ಆಳದ ವರೆಗೆ ಸು. (6,700) ದಶಲಕ್ಷ ಟನ್‌ಗಳಷ್ಟು, (600 ಮೀ) ಆಳದ ವರೆಗೆ ಸು. (19,000) ದಶಲಕ್ಷ ಟನ್‌ಗಳಷ್ಟು ಕಲ್ಲಿದ್ದಲು ಇರುವುದಾಗಿ ಅಂದಾಜು ಮಾಡಲಾಗಿದೆ.

ಝರಿಯಾ ಕಲ್ಲಿದ್ದಲು ಕ್ಷೇತ್ರ : ಇದು ಜಾರ್ಖಂಡ್‌ನ ಧನ್‌ಬಾದ್ ಜಿಲ್ಲೆಯಲ್ಲಿ ಕೋಲ್ಕೊತಕ್ಕೆ 256 ಕಿಮೀ ವಾಯವ್ಯ ದಿಕ್ಕಿನಲ್ಲಿ ರಾಣಿಗಂಜ್ ಕ್ಷೇತ್ರದ ಪಶ್ಚಿಮದಲ್ಲಿ ಸ್ಥಾಪಿತವಾಗಿದೆ. ಇದು ಅರ್ಧಚಂದ್ರಾಕಾರವಾಗಿದೆ. ಇದರ ವಿಸ್ತಾರ ಸು. 450 ಚ.ಕಿಮೀ. ಧನ್‌ಬಾದ್ ನಗರ ಈ ಕ್ಷೇತ್ರಕ್ಕೆ ಈಶಾನ್ಯ ದಿಕ್ಕಿನ ಸರಹದ್ದಿನ ಮೇಲಿದೆ. ಗಣಿಗಳ ಮುಖ್ಯ ಕೇಂದ್ರವಾದ ಝರಿಯಾ ಈ ಕ್ಷೇತ್ರದ ಪೂರ್ವಭಾಗದಲ್ಲಿದೆ. ಕಲ್ಲಿದ್ದಲನ್ನು ಒಳಗೊಂಡ ಬರಾಕರ್ ಮತ್ತು ರಾಣಿಗಂಜ್ ಶ್ರೇಣಿಯ ಶಿಲೆಗಳು ಇಲ್ಲಿ ಉತ್ತಮ ರೀತಿಯಲ್ಲಿ ಕಂಡುಬಂದಿವೆ. ಮತ್ತು ಕ್ರಮಶಃ 7600–550 ಮೀ ದಪ್ಪವಾಗಿವೆ. ಇವೆರಡರಲ್ಲೂ ಕಲ್ಲಿದ್ದಲು ಹೇರಳವಾಗಿದೆ. ಬರಾಕರ್ ಶ್ರೇಣಿಯಲ್ಲಿರುವ ಕಲ್ಲಿದ್ದಲು ಅತಿಮುಖ್ಯವಾದುದು ಮತ್ತು ಇದರಲ್ಲಿ 1.2–18 ಮೀ ದಪ್ಪವಿರುವ 24 ಕಲ್ಲಿದ್ದಲು ಸ್ತರಗಳು ಇವೆ. ಇವುಗಳ ಪೈಕಿ 18 ಸ್ತರಗಳು ಪ್ರಧಾನವಾಗಿದ್ದು ಅವು ಕ್ಷೇತ್ರದ ಎಲ್ಲ ಕಡೆಗಳಲ್ಲೂ ವ್ಯಾಪಿಸಿವೆ. ಇವುಗಳಿಗೆ 1–18ರ ವರೆಗೆ ಸಂಖ್ಯೆಗಳ ನಾಮಕರಣ ಮಾಡಲಾಗಿದೆ. 1 ನೆಯದು ಎಲ್ಲಕ್ಕಿಂತ ತಳದ್ದು ಅಥವಾ ಪುರಾತನವಾದದ್ದು ಮತ್ತು 18 ನೆಯದು ಎಲ್ಲಕ್ಕಿಂತ ಮೇಲಿನದು ಅಥವಾ ಆಧುನಿಕವಾದದ್ದು. ಸಾಮಾನ್ಯವಾಗಿ 1–9 ನೆಯ ಸ್ತರಗಳು ಕೀಳುದರ್ಜೆಯ ಕಲ್ಲಿದ್ದಲನ್ನು ಒಳಗೊಂಡಿವೆ. 10–18ನೆಯ ಸ್ತರಗಳಲ್ಲಿ ಶ್ರೇಷ್ಠ ದರ್ಜೆಯ ಕಲ್ಲಿದ್ದಲು ಇದೆ. ಇದಕ್ಕೆ ಒಳ್ಳೆಯ ಕೋಕ್‌ನ ಗುಣ ಉಂಟು. ಅಲ್ಪಭಸ್ಮಾಂಶ ಗುಣವೂ ಇದೆ. ಈ ಸ್ತರಗಳು ಭಾರತದ ಅತ್ಯುತ್ತಮ ಕಲ್ಲಿದ್ದಲಿನ ಭಂಡಾರಗಳು. ರಾಣಿಗಂಜ್ ಶ್ರೇಣಿಯಲ್ಲಿ ಏಳು ಕಲ್ಲಿದ್ದಲು ಸ್ತರಗಳಿವೆ. ಇವುಗಳಲ್ಲಿ ಕೆಲವನ್ನು ಉತ್ಪಾದನೆಗಾಗಿ ಉಪಯೋಗಿಸಲಾಗುತ್ತಿದೆ. ಈ ಕ್ಷೇತ್ರವನ್ನು ಕಳೆದ 70 ವರ್ಷಗಳಿಂದಲೂ ಕಲ್ಲಿದ್ದಲು ಉತ್ಪಾದನೆಗಾಗಿ ವಿಶೇಷವಾಗಿ ಅಭಿವೃದ್ಧಿಗೊಳಿಸಲಾಗಿದೆ. ಈಗ ಇದು ಭಾರತದ ಅತಿಪ್ರಧಾನ ಕ್ಷೇತ್ರ.. ಈ ಕ್ಷೇತ್ರ ಕಬ್ಬಿಣ ಮತ್ತು ಉಕ್ಕಿನ ಉದ್ಯೋಗಕ್ಕೆ ಯೋಗ್ಯವಾದ ಕಲ್ಲಿದ್ದಲಿನ ಮುಖ್ಯ ಆಧಾರ. ಭಾರತದ ಒಟ್ಟು ಉತ್ಪತ್ತಿಯ ಮೂರರಲ್ಲೊಂದು ಭಾಗವನ್ನು ಈ ಕ್ಷೇತ್ರದಿಂದ ಪ್ರತಿವರ್ಷವೂ ತೆಗೆಯಲಾಗುತ್ತಿದೆ. ಇದುವರೆಗೆ ಇಲ್ಲಿಂದ ಒಟ್ಟು 850 ದಶಲಕ್ಷ ಟನ್ನುಗಳಿಗಿಂತ ಅಧಿಕವಾಗಿ ಉತ್ಪಾದನೆ ಮಾಡಲಾಗಿದೆ ಮತ್ತು ಇನ್ನೂ ಭೂಮಿಯಲ್ಲಿ 305 ಮೀ ಆಳದ ವರೆಗೆ 7,000 ದಶಲಕ್ಷ ಟನ್ನುಗಳಷ್ಟು 600 ಮೀ ಆಳದ ವರೆಗೆ 12,000 ದಶಲಕ್ಷ ಟನ್ನುಗಳಷ್ಟು ಕಲ್ಲಿದ್ದಲು ಇರುವುದಾಗಿ ಅಂದಾಜು ಮಾಡಲಾಗಿದೆ.

ಬೊಕಾರೊ ಕಲ್ಲಿದ್ದಲು ಕ್ಷೇತ್ರ : ಇದು ಝರಿಯಾ ಕ್ಷೇತ್ರದ ಪಶ್ಚಿಮಕ್ಕೆ ಹಜಾರಿಬಾಗ್ ಜಿಲ್ಲೆಯಲ್ಲಿ 64 ಕಿಮೀ ಉದ್ದ ಮತ್ತು ಸು. 11 ಕಿಮೀ ಅಗಲದ ಪ್ರದೇಶವನ್ನು ವ್ಯಾಪಿಸಿಕೊಂಡಿದೆ. ಈ ಪ್ರದೇಶದಲ್ಲಿ ಭಾರತದ ಮಂದವಾದ ಕಲ್ಲಿದ್ದಲು ಸ್ತರಗಳು ಇರುವುದರಿಂದಲೂ ಮತ್ತು ಇವು ಭೂಮೇಲ್ಮೈಗೆ ಸಮೀಪದಲ್ಲಿದ್ದು ಅಗೆದು ತೆಗೆಯಲು ಸಾಧ್ಯವಿರುವುದರಿಂದಲೂ ಕಲ್ಲಿದ್ದಲು ಉತ್ಪಾದನೆಗೆ ಬಹುಮುಖ್ಯ ಕ್ಷೇತ್ರವಾಗಿದೆ. ಇಲ್ಲಿನ ಕಲ್ಲಿದ್ದಲು ಪದರಗಳು ಕಾರೋ ಶ್ರೇಣಿ (21–30 ಮೀ ದಪ್ಪ), ಬರ್ಮಾ ಶ್ರೇಣಿ (12–13 ಮೀ ದಪ್ಪ) ಮತ್ತು ಕರ್ಗಲಿ ಶ್ರೇಣಿ (12–45 ಮೀ ದಪ್ಪ). ಈ ಶ್ರೇಣಿಗಳ ಕಲ್ಲಿದ್ದಲು ಉತ್ತಮ ದರ್ಜೆಯವೂ ಮತ್ತು ಕೋಕ್‌ನ ಗುಣ ಉಳ್ಳವೂ ಆಗಿರುವುದರಿಂದ ಲೋಹವಿದ್ಯೆಯಲ್ಲಿ (ಮೆಟಲರ್ಜಿ) ಉಪಯೋಗಿಸಲು ಅರ್ಹವಾಗಿದೆ. ಆದರೆ ಭಸ್ಮಾಂಶ ಸ್ವಲ್ಪ ಹೆಚ್ಚಿಗೆ ಇರುವುದರಿಂದ ಮೊದಲು ಕಲ್ಲಿದ್ದಲನ್ನು ತೊಳೆದು ಆ ಮೂಲಕ ಈ ಅಂಶವನ್ನು ತಗ್ಗಿಸಿ ಅನಂತರ ಕೋಕನ್ನು ಮಾಡಲಾಗುತ್ತಿದೆ. ಈಚೆಗೆ ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಾಪಿಸಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಈ ಕಲ್ಲಿದ್ದಲನ್ನು ಹೇರಳವಾಗಿ ಉಪಯೋಗಿಸಲಾಗುತ್ತಿದೆ.

ಕರಣಪುರ ಕಲ್ಲಿದ್ದಲು ಕ್ಷೇತ್ರ : ಬೊಕಾರೊ ಕ್ಷೇತ್ರದ ಪಶ್ಚಿಮಕ್ಕಿದೆ. ಇದರ ಹರವು ಸು. 1425 ಚ.ಕಿಮೀ. ಇದನ್ನು ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ವಿಂಗಡಿಸಲಾಗಿದೆ. ದಕ್ಷಿಣ ಕ್ಷೇತ್ರದಲ್ಲಿ ಹನ್ನೆರಡು ಕಲ್ಲಿದ್ದಲು ಪದರಗಳು ಉತ್ಖನನಕ್ಕೆ ಯೋಗ್ಯವಾಗಿವೆ. ಇವುಗಳಲ್ಲಿ ಅರ್ಗಾಡಾ ಮತ್ತು ಸಿರ್ಕ ಶ್ರೇಣಿಗಳು ಪ್ರಧಾನವಾದವು. ಇವುಗಳ ದಪ್ಪ 26 ಮೀ ಮತ್ತು 12 ಮೀ. ಇಲ್ಲಿನ ಕಲ್ಲಿದ್ದಲು ಶ್ರೇಷ್ಠ ತರಗತಿಯದು. ಉತ್ತರ ಕರಣಪುರ ಕ್ಷೇತ್ರದಲ್ಲೂ ಹಲವಾರು ಶ್ರೇಣಿಗಳು ಇವೆ. ಇವುಗಳ ಪೈಕಿ ನಾಲ್ಕು ಶ್ರೇಣಿಗಳು 17–20 ಮೀ ದಪ್ಪ ಇವೆ. ಈಚಿನ ವರ್ಷಗಳಲ್ಲಿ ಈ ಕ್ಷೇತ್ರವನ್ನು ಹೆಚ್ಚು ಅಭಿವೃದ್ಧಿಗೊಳಿಸಲಾಗಿದೆ.

ಬಂಗಾಲ ಮತ್ತು ಜಾರ್ಖಂಡ್ ಕ್ಷೇತ್ರಗಳಲ್ಲಿ ಭಾರತದ ಒಟ್ಟು ಉತ್ಪತ್ತಿಯ (23 ಮೀ) ಭಾಗದಷ್ಟು ಉತ್ಪಾದನೆಯಾಗುತ್ತಿದೆ. ಜಾರ್ಖಂಡ್ ಮತ್ತು ಬಂಗಾಲದ ಹೊರಗೆ ಮಧ್ಯಪ್ರದೇಶದಲ್ಲಿ ಅನೇಕ ಕಲ್ಲಿದ್ದಲು ಕ್ಷೇತ್ರಗಳು ರೇವಾ, ಸಾತ್ಪುರ ಮತ್ತು ಛತ್ತೀಸ್‌ಗರ್ ಪ್ರದೇಶಗಳಲ್ಲಿವೆ. ಇವುಗಳ ಪೈಕಿ ಪೆಂಚ್ ಕಣಿವೆ, ಕೊರ್ಬಾ, ಸಿಂಗ್ರೌಲಿ, ಚಿರಿಮಿರಿ ಮತ್ತು ಕುರೇಸಿಯಾ ಕಲ್ಲಿದ್ದಲು ಕ್ಷೇತ್ರಗಳು ಮುಖ್ಯವಾಗಿವೆ. ಈಚೆಗೆ ಈ ಪೈಕಿ ಹಲವಾರು ಕ್ಷೇತ್ರಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಕೊರ್ಬಾ ಕ್ಷೇತ್ರದಲ್ಲಿ (46 ಮೀ) ಮಂದವಾದ ಶ್ರೇಷ್ಠ ಕಲ್ಲಿದ್ದಲಿನ ಪದರಗಳಿವೆ. ಭಾರತದ ಅತ್ಯಂತ ಮಂದವಾದ (91 ಮೀ ಗಿಂತಲೂ ಹೆಚ್ಚು) ಕಲ್ಲಿದ್ದಲಿನ ಶ್ರೇಣಿ ಸಿಂಗ್ರೌಲಿ ಕ್ಷೇತ್ರದಲ್ಲಿ ಇರುವುದಾಗಿ ವರದಿಯಾಗಿದೆ. ಮಧ್ಯ ಪ್ರದೇಶದ ಕಲ್ಲಿದ್ದಲು ಕ್ಷೇತ್ರಗಳಿಂದ ನಮ್ಮ ದೇಶದ ಒಟ್ಟು ಉತ್ಪತ್ತಿಯ ಶೇ. 12 ರಷ್ಟು ಉತ್ಪಾದನೆಯಾಗುತ್ತದೆ.

ಮಹಾರಾಷ್ಟ್ರದ ಕಲ್ಲಿದ್ದಲು ಕ್ಷೇತ್ರಗಳ ಪೈಕಿ ವಾರ್ಧಾ ಕಣಿವೆಯಲ್ಲಿರುವ ಚಂದಾ, ಶಸ್ತಿ ಕ್ಷೇತ್ರಗಳೂ ನಾಗಪುರ ಪ್ರದೇಶದಲ್ಲಿರುವ ಕಾಮತಿ, ಉಮ್ರೇರ್ ಕ್ಷೇತ್ರಗಳೂ ಮುಖ್ಯವಾದವು. ಈ ರಾಜ್ಯದ ಕ್ಷೇತ್ರಗಳಿಂದ ಭಾರತದ ಒಟ್ಟು ಉತ್ಪತ್ತಿಯ ಶೇ. 2 ರಷ್ಟು ಭಾಗ ಕಲ್ಲಿದ್ದಲನ್ನು ತೆಗೆಯಲಾಗುತ್ತಿದೆ.

ಒರಿಸ್ಸದಲ್ಲಿ ಮುಖ್ಯವಾದ ಕ್ಷೇತ್ರಗಳು ಎರಡೇ. ಅವು ಮಹಾನದಿ ಕಣಿವೆಯಲ್ಲಿರುವ ತಾಲ್‌ಚಿರ್ ಮತ್ತು ಹಿಂಗಿರ್–ರಾಮ್‌ಪುರ್ ಕ್ಷೇತ್ರಗಳು. ಇವುಗಳಿಂದ ಉತ್ಪಾದನೆ ಭಾರತದ ಒಟ್ಟು ಉತ್ಪಾದನೆಯ ಶೇ. 1.5 ಭಾಗ.

ಆಂಧ್ರಪ್ರದೇಶದಲ್ಲಿ ಗೋದಾವರಿ ಕಣಿವೆಯಲ್ಲಿ ಅನೇಕ ಕಲ್ಲಿದ್ದಲು ಕ್ಷೇತ್ರಗಳಿವೆ. ಇವುಗಳಲ್ಲಿ ಸಿಂಗರೇಣಿ ಮತ್ತು ಕೋತಗುಂಡಂ ಕ್ಷೇತ್ರಗಳು ಪ್ರಧಾನವಾದವು. ಈ ಪ್ರದೇಶದ ಉತ್ಪಾದನೆ ಭಾರತದ ಒಟ್ಟು ಉತ್ಪತ್ತಿಯಲ್ಲಿ (ಶೇ. 6) ಭಾಗದಷ್ಟು..

ಟರ್ಷಿಯರಿ ಕಲ್ಲಿದ್ದಲು : ಉತ್ಪಾದನೆಯ ದೃಷ್ಟಿಯಿಂದ ಇದು ಭಾರತದ ಒಟ್ಟು ಉತ್ಪತ್ತಿಯಲ್ಲಿ ಶೇ.2 ಕ್ಕಿಂತ ಕಮ್ಮಿ ಆಗಿದ್ದರೂ ಈ ಕಲ್ಲಿದ್ದಲು ದೊರೆಯುವ ಪ್ರದೇಶಗಳಲ್ಲಿ ಗೊಂಡ್ವಾನ ಕಲ್ಲಿದ್ದಲು ಇಲ್ಲದಿರುವುದರಿಂದ ಇವು ಆಯಾ ಪ್ರದೇಶಗಳ ಆರ್ಥಿಕ ದೃಷ್ಟಿಯಲ್ಲಿ ಮಹತ್ತ್ವ ಪೂರ್ಣವಾದವು. ಸಾಮಾನ್ಯವಾಗಿ ಈ ಸಮುದಾಯದ ಕಲ್ಲಿದ್ದಲು ಅಸ್ಸಾಂ ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಇಯೋಸೀನ್ ಅಥವಾ ಆಲಿಗೋಸೀನ್ (ಸು. 60–40 ದಶಲಕ್ಷ ವರ್ಷಗಳ ಕೆಳಗೆ) ಅವಧಿಯ ಶಿಲೆಗಳಲ್ಲಿ ಇರುತ್ತವೆ. ತಮಿಳುನಾಡಿನಲ್ಲಿ ಮಿಯೋಸೀನ್ ಯುಗದ ಶಿಲೆಗಳಲ್ಲಿ ಮಂದವಾದ ಲಿಗ್ನೈಟ್ ಸ್ತರಗಳು ಸಿಕ್ಕುತ್ತವೆ. ಕಾಶ್ಮೀರ ಕಣಿವೆಯಲ್ಲಿ ಪ್ಲೀಸ್ಟೊಸೀನ್ ಯುಗದ (ಸು. 1 ದಶಲಕ್ಷ ವರ್ಷಗಳ ಕೆಳಗೆ) ಶಿಲೆಗಳಲ್ಲೂ ಲಿಗ್ನೈಟ್

ಪದರಗಳು ಇವೆ. ಟರ್ಷಿಯರಿ ಕಲ್ಲಿದ್ದಲು ಸಿಕ್ಕುವ ಮತ್ತು ಉತ್ಪಾದನೆಯಾಗುತ್ತಿರುವ ಮುಖ್ಯ ಪ್ರದೇಶಗಳು ಅಸ್ಸಾಂ, ತಮಿಳುನಾಡು, ಕಾಶ್ಮೀರ ಮತ್ತು ರಾಜಸ್ಥಾನ. ಇದಲ್ಲದೇ ಗುಜರಾತ್ ಮತ್ತು ಕೇರಳ ರಾಜ್ಯಗಳಲ್ಲಿ ಲಿಗ್ನೈಟ್ ನಿಕ್ಷೇಪಗಳು ಇರುವುದಾಗಿ ವರದಿಯಾಗಿದೆ. ಈ ಕೇಂದ್ರಗಳಲ್ಲೆಲ್ಲ ಅಸ್ಸಾಂ ಪ್ರದೇಶ ಪ್ರಧಾನವಾದುದು. ಏಕೆಂದರೆ ಟರ್ಷಿಯರಿ ಕಲ್ಲಿದ್ದಲ ಉತ್ಪತ್ತಿಯಲ್ಲಿ ಇದಕ್ಕೆ ಪ್ರಥಮ ಸ್ಥಾನವಿದೆ. ಅದಲ್ಲದೆ ಇಲ್ಲಿನ ಕಲ್ಲಿದ್ದಲು ಉತ್ತಮವಾದುದು. ಅಸ್ಸಾಂ ಆದಮೇಲೆ ತಮಿಳುನಾಡು ಪ್ರಧಾನವಾದದ್ದು. ಇಲ್ಲಿ ಅಧಿಕವಾಗಿ ಲಿಗ್ನೈಟ್ ಉತ್ಪಾದನೆಯಾಗುತ್ತಿದೆ.

ಟರ್ಷಿಯರಿ ಕಲ್ಲಿದ್ದಲು ಭೂ ಚರಿತ್ರೆಯ ಈಚಿನ ಕಾಲದ ಉತ್ಪನ್ನ. ಇದು ಕಲ್ಲಿದ್ದಲಿನ ವರೆಗಿನ ಪೂರ್ಣ ಪ್ರಕ್ರಿಯೆ ಪಡೆದಿರದೆ ಸಾಮಾನ್ಯವಾಗಿ ಲಿಗ್ನೈಟ್ ಹಂತದಲ್ಲೇ ಇರುತ್ತದೆ. ಆದರೆ ಅಸ್ಸಾಂ ಮತ್ತು ಕಾಶ್ಮೀರ ಪ್ರದೇಶದಲ್ಲಿನ ಹಿಮಾಲಯ ಪರ್ವತದ ತಳಬೆಟ್ಟಗಳಲ್ಲಿರುವ ಲಿಗ್ನೈಟ್ ಸ್ತರಗಳು ಈ ಪರ್ವತದ ಉದ್ಭವಕ್ಕೆ ಕಾರಣವಾದ ಭೂ ಚಲನೆ ಮತ್ತು ಒತ್ತಡಗಳಿಗೆ ಸಿಕ್ಕಿ ಮಡಿಸಿಹೋಗಿ ಪುಡಿಯಾಗಿ, ಬಿಟುಮಿನಸ್ ಕಲ್ಲಿದ್ದಲು ಅಥವಾ ಆಂಥ್ರಸೈಟ್ ಆಗಿ ಪರಿವರ್ತನೆಯಾಗಿರುವುದು ಕಂಡುಬರುತ್ತದೆ. ಟರ್ಷಿಯರಿ ಕಲ್ಲಿದ್ದಲಿನ ಗುಣವೆಂದರೆ ಹೆಚ್ಚಿನ ಗಂಧಕದ ಅಂಶ (ಶೇ. 3–8) ಮತ್ತು ಸಾಮಾನ್ಯ ಕೋಕಿಂಗ್ ಗುಣ. ಗಂಧಕದ ಅಂಶ ಹೆಚ್ಚಿರುವುದರಿಂದ ಇದು ಲೋಹವಿದ್ಯಾಕಾರ್ಯಗಳಲ್ಲಿ ಉಪಯೋಗಿಸಲು ಯೋಗ್ಯವಾಗಿಲ್ಲ.

ಟರ್ಷಿಯರಿ ಕಲ್ಲಿದ್ದಲು ಕ್ಷೇತ್ರಗಳು. ಅಸ್ಸಾಂ : ಟರ್ಷಿಯರಿ ಕಲ್ಲಿದ್ದಲಿನ ಉತ್ಪಾದನೆಗೆ ಇದು ಪ್ರಮುಖ ಕೇಂದ್ರ. ಕಲ್ಲಿದ್ದಲು ಸ್ತರಗಳು ಜೈನ್‌ಷಿಯ ಶ್ರೇಣಿ ಎಂಬ ಇಯೊಸೀನ್ ಕಾಲದ ಶಿಲೆಗಳಲ್ಲಿ ಪಶ್ಚಿಮ ಅಸ್ಸಾಂನಲ್ಲಿಯೂ ಬರೈಲ್ ಶ್ರೇಣಿ ಎಂಬ ಆಲಿಗೋಸೀನ್ ಯುಗದ ಶಿಲೆಗಳಲ್ಲಿ ಅಸ್ಸಾಮಿನ ಮೇಲ್ಭಾಗದಲ್ಲೂ ಇರುತ್ತವೆ. ಇವೆರಡರ ಪೈಕಿ ಬರೈಲ್ ಶ್ರೇಣಿಯಲ್ಲಿರುವ ಕಲ್ಲಿದ್ದಲು ಮುಖ್ಯವಾದದ್ದು. ಉತ್ಪಾದನೆಗೆ ಯೋಗ್ಯವಾದ ಎಲ್ಲ ಸ್ತರಗಳೂ ಇದರಲ್ಲಿವೆ.ಅಸ್ಸಾಮಿನ ಕಲ್ಲಿದ್ದಲು ಪ್ರದೇಶಗಳು ಮೂರು: (1) ಅಸ್ಸಾಮಿನ ಮೇಲ್ಭಾಗದಲ್ಲಿ ಮತ್ತು ದಿಬ್ರುಗಡದ ಪೂರ್ವದಲ್ಲಿ ಈಶಾನ್ಯಕ್ಕಿರುವ ಅತ್ಯಂತ ಕೊನೆಯ ಭಾಗ. (2) ಷಿಲಾಂಗ್ ಪ್ರಸ್ಥಭೂಮಿಗೆ ಈಶಾನ್ಯದಲ್ಲಿರುವ ಮಿಕಿರ್ ಬೆಟ್ಟಗಳು. (3) ಷಿಲಾಂಗ್ ಪ್ರಸ್ಥಭೂಮಿಯ ದಕ್ಷಿಣ ಮತ್ತು ನೈರುತ್ಯ ದಿಕ್ಕಿನ ತುದಿಯಲ್ಲಿರುವ ಜೈನ್‌ಟಿಯ, ಖಾಸಿ ಮತ್ತು ಗಾರೊ ಬೆಟ್ಟಗಳು. ಇವುಗಳ ಪೈಕಿ ಉತ್ಪಾದನೆಗೆ ಯೋಗ್ಯವಾದ ಕ್ಷೇತ್ರಗಳು ಅಸ್ಸಾಮಿನ ಮೇಲ್ಭಾಗದಲ್ಲಿರುವ ಪಟಕಾಯಿ ಬೆಟ್ಟಗಳ ಪ್ರದೇಶದಲ್ಲಿವೆ. ನಾಜಿರ, ಜೈಪುರ್, ಮಾಕುಂ ಕ್ಷೇತ್ರಗಳು ಮುಖ್ಯವಾದವು. ಅಸ್ಸಾಂ ಪ್ರದೇಶದಿಂದ ಭಾರತದ ಒಟ್ಟು ಉತ್ಪತ್ತಿಯ ಸು. ಶೇ. 1.5 ಭಾಗದಷ್ಟು ಕಲ್ಲಿದ್ದಲನ್ನು ತೆಗೆಯಲಾಗುತ್ತಿದೆ.

ಕಾಶ್ಮೀರ : ಇಯೊಸೀನ್ ಕಾಲದ ಕಲ್ಲಿದ್ದಲು ಸ್ತರಗಳು ಕಾಶ್ಮೀರದ ಸರಹದ್ದಿನಲ್ಲಿ ಹಿಮಾಲಯ ಪರ್ವತಪ್ರದೇಶದ ತಪ್ಪಲಿನ ಬೆಟ್ಟಗಳಲ್ಲಿ ಅನೇಕ ಕಡೆ ಕಾಣಬರುತ್ತವೆ. ಇವು ತಕ್ಕಮಟ್ಟಿಗೆ ಮಂದವಾಗಿಯೂ ಉತ್ತಮ ದರ್ಜೆಯವೂ ಆಗಿವೆ. ಇವುಗಳಿರುವ ಮುಖ್ಯ ಸ್ಥಳಗಳು ನಾಲ್ಕು : (1) ರಿಯಾಸಿ ಜಿಲ್ಲೆ : ಇಲ್ಲಿಯ ಮುಖ್ಯ ಕ್ಷೇತ್ರಗಳು ಚಕಾರ್, ಮಹೋಗಲಾ, ಮೆಟ್‌ಕಾ ಮತ್ತು ಕಲಾಕೋಟ್. (2) ಧನಸ್‌ವಾಲ್ : ಸವಾಲ್‌ಕೋಟ್ ಕ್ಷೇತ್ರಗಳು. (3) ದಂಡ್ಲಿ ಪ್ರದೇಶ : ಪೂಂಚ್ ನದಿ ಸಮೀಪದಲ್ಲಿರುವ ದಂಡ್ಲಿ ಕ್ಷೇತ್ರ. (4) ಚೀನಾಬ್ ನದಿಯ ಪೂರ್ವಪ್ರದೇಶ : ಇಲ್ಲಿ ನೆಲೆಗೊಂಡಿರುವ ಲಡ್ಡಾ–ಜಾಂಗ್ಲಗಲಿ ಕ್ಷೇತ್ರ.

ಈ ಪ್ರದೇಶಗಳ ಕಲ್ಲಿದ್ದಲು ಒತ್ತಡಕ್ಕೆ ಸಿಕ್ಕಿ ಅದುಮಿ ಪುಡಿಯಾಗಿರುವುದು. ಕೆಲವು ಕಡೆ ಆಂಥ್ರಸೈಟ್ ಗುಣಗಳನ್ನು ಪಡೆದಿರುತ್ತದೆ. ಈ ಪ್ರದೇಶಗಳಿಂದ ವರ್ಷಕ್ಕೆ ಸು. 20 ಸಾವಿರ ಟನ್ನುಗಳಷ್ಟು ಕಲ್ಲಿದ್ದಲು ಉತ್ಪಾದನೆ ಆಗುತ್ತಿದೆ. ಕಾಶ್ಮೀರ ಕಣಿವೆಯಲ್ಲಿ ಕರೇವಾ ಸಮೂಹವೆಂಬ ಪ್ಲಿಸ್ಟೊಸೀನ್ ಕಾಲದ ಸರೋವರಗಳಲ್ಲಿ ಉತ್ಪನ್ನವಾದ ಅವಸಾದನ ಶಿಲೆಗಳಲ್ಲಿ ಕೆಲವು ಲಿಗ್ನೈಟ್ ಪದರಗಳು ಕಂಡುಬರುತ್ತವೆ. ಇವು ಪ್ರಧಾನವಾಗಿ ಶಾಲಿಗಂಗಾ ಮತ್ತು ಹಂಡ್ವಾರಾ ಪ್ರದೇಶಗಳಲ್ಲಿವೆ. ಇಲ್ಲಿರುವ ರೈಥಾನ್ ಮತ್ತು ನಿಕೋಮಾ ಲಿಗ್ನೈಟ್ ಕ್ಷೇತ್ರಗಳನ್ನು ಈಚೆಗೆ ಅಭಿವೃದ್ಧಿ ಮಾಡಲಾಗುತ್ತಿದೆ.

ತಮಿಳುನಾಡು : ಈ ರಾಜ್ಯದ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಲಿಗ್ನೈಟ್ ಪದರಗಳು ಇರುವುದು ಅನೇಕ ವರ್ಷಗಳಿಂದ ತಿಳಿದಿದ್ದರೂ ಈಚೆಗೆ ಈ ಪ್ರದೇಶವನ್ನು ಪೂರ್ಣವಾಗಿ ಸಂಶೋಧಿಸಲಾಯಿತು. ಇದರ ಪ್ರಕಾರ ಈ ಜಿಲ್ಲೆಯ ಕಡಲೂರು–ವೃದ್ಧಾಚಲಂ ಪ್ರದೇಶದಲ್ಲಿ ಮಿಯೋಸೀನ್ ಕಾಲದ ಶಿಲೆಗಳಲ್ಲಿ ಐದು ಲಿಗ್ನೈಟ್ ಪದರಗಳು 260 ಚ.ಕಿಮೀ ಹರವಿನಲ್ಲಿ ವ್ಯಾಪಿಸಿರುವುದಾಗಿಯೂ 2,000 ದಶಲಕ್ಷ ಟನ್ನುಗಳಷ್ಟು ಲಿಗ್ನೈಟ್ ಭೂಮಿಯಲ್ಲಿರುವುದಾಗಿಯೂ ಕಂಡುಬಂದಿತು.

ನೈವೇಲಿ ಲಿಗ್ನೈಟ್ ಕ್ಷೇತ್ರ : ಇದು ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ವೃದ್ಧಾಚಲಂನಿಂದ 162 ಕಿಮೀ ದೂರದಲ್ಲಿರುವ ನೈವೇಲಿ ಗ್ರಾಮದ ಸುತ್ತ ಆವರಿಸಿದೆ. ಇದರ ವ್ಯಾಪ್ತಿ ಸು. 14 ಚ.ಕಿಮೀ ಗಳಷ್ಟು. ಇಲ್ಲಿ ಉತ್ಪಾದನೆಗೆ ಅಗೆದು ತೆಗೆಯುತ್ತಿರುವ ಲಿಗ್ನೈಟ್ ಪದರ ಸು. 18 ಮೀ ದಪ್ಪವಾಗಿದ್ದು ನೆಲಮಟ್ಟದಿಂದ 55–60 ಮೀ ಗಳಷ್ಟು ಆಳದಲ್ಲಿದೆ. ಮೇಲಿನ 55 ಮೀ ಮಣ್ಣುಕಲ್ಲನ್ನು ತೆಗೆದುಹಾಕಿ ಲಿಗ್ನೈಟ್ ಪದರ ಕಾಣುವಂತೆ ಮಾಡಿದ ಅನಂತರ ಅದನ್ನು ಅಗೆದು ತೆಗೆಯಲಾಗುತ್ತಿದೆ. ಲಿಗ್ನೈಟ್ ಶ್ರೇಣಿಯ ಕೆಳಗಿರುವ ಶಿಲೆಗಳಲ್ಲಿ ಯಥೇಚ್ಛವಾಗಿ ನೀರು ಆರ್ಟೀಸಿಯನ್ ಪರಿಸ್ಥಿತಿಯಲ್ಲಿ ಇರುವುದರಿಂದ ಇದನ್ನು ಹೊರಗೆ ತೆಗೆದು ಹಾಕುತ್ತಿರುವುದು ಅನಿವಾರ್ಯವಾಗಿ ಕಂಡುಬಂದಿತು. ಇಲ್ಲದಿದ್ದರೆ ಗಣಿಯಲ್ಲಿ ನೀರು ತುಂಬಿಕೊಂಡು ಉತ್ಪಾದನೆ ಅಸಾಧ್ಯವಾಗುವುದು. ಇದಕ್ಕೋಸ್ಕರ ಈ ಕ್ಷೇತ್ರದ ಸುತ್ತ ಬಾವಿಗಳನ್ನು ತೋಡಿ 60 ಮೀ ಗಳ ದೂರದಲ್ಲೊಂದರಂತೆ 45 ಅಧಿಕ ಸಾಮರ್ಥ್ಯ ಪಂಪುಗಳನ್ನು ಇಟ್ಟು ಇವುಗಳಿಂದ ಪ್ರತಿ ನಿಮಿಷಕ್ಕೆ 42,000 ಗ್ಯಾಲನ್ ನೀರನ್ನು ಹೊರಹಾಕಲಾಗುತ್ತಿದೆ. ಈ ಪಂಪುಗಳು ದಿನದ 24 ಗಂಟೆಗಳೂ ಕೆಲಸಮಾಡುತ್ತಿರುತ್ತವೆ.

ರಾಜಸ್ಥಾನ : ಇಲ್ಲಿನ ಬಿಕನೀರ್ ಪ್ರದೇಶದಲ್ಲಿ ಖಾರಿ, ಗಂಗಾ ಸರೋವರ, ಚನೇರಿ, ಮಧ್ ಮತ್ತು ಪಲಾನ ಮುಂತಾದ ಸ್ಥಳಗಳಲ್ಲಿ ಲಿಗ್ನೈಟ್ ಇರುವುದು ವರದಿಯಾಗಿದೆ. ಇವುಗಳ ಪೈಕಿ ಪಲಾನ ಕ್ಷೇತ್ರ ಮುಖ್ಯವಾದುದು.

ಪಲಾನ ಲಿಗ್ನೈಟ್ ಕ್ಷೇತ್ರ : ಇದು ಬಿಕನೀರಿಗೆ 21 ಕಿಮೀ ದೂರದಲ್ಲಿದೆ ಮತ್ತು ಇದರ ಹರವು 4 ಚ.ಕಿಮೀ. ಇಲ್ಲಿ ಲಿಗ್ನೈಟ್ ಪದರ 3.6 ಮೀ ದಪ್ಪವಾಗಿದ್ದು ಬಹಳ ಮೃದುವಾಗಿಯೂ ಪುಡಿಯಾಗಿಯೂ ಇದೆ. ಇಲ್ಲಿ ಕಳೆದ 68 ವರ್ಷಗಳಿಂದಲೂ ಲಿಗ್ನೈಟ್ ಉತ್ಪಾದನೆ ಮಾಡಲಾಗುತ್ತಿದೆ.

ಗುಜರಾತ್ : ಇಲ್ಲಿನ ಕಚ್ ಪ್ರದೇಶದ ಉಮರ್‌ಸರ್ ಎಂಬ ಸ್ಥಳದಲ್ಲಿ ಮುಖ್ಯ ಲಿಗ್ನೈಟ್ ನಿಕ್ಷೇಪಗಳು ಇರುವುದಾಗಿ ವರದಿಯಾಗಿದೆ. ಈ ಕ್ಷೇತ್ರ ಇನ್ನೂ ಅಭಿವೃದ್ಧಿಗೆ ಬಂದಿಲ್ಲ.

ಕೇರಳ : ಇಲ್ಲಿ ಅನೇಕ ಸ್ಥಳಗಳಲ್ಲಿ ಲಿಗ್ನೈಟ್ ನಿಕ್ಷೇಪಗಳು ಇರುವುದಾಗಿ ವರದಿಯಾಗಿದೆ. ಅವುಗಳ ಪೈಕಿ ವರ್ಕಲೈ, ಕ್ವಿಲಾನ್, ಕಣ್ಣಾನೂರು ಮತ್ತು ಕಾಸರಗೋಡು ಮುಖ್ಯವಾದವು. ಉತ್ಪಾದನೆ ಕಾರ್ಯ ಎಲ್ಲೂ ಆರಂಭವಾಗಿಲ್ಲ.

ಭಾರತದಲ್ಲಿ 50,000 ದಶಲಕ್ಷ ಟನ್ನುಗಳಷ್ಟು ಗೊಂಡ್ವಾನಾ ಕಲ್ಲಿದ್ದಲೂ 4,000 ದಶಲಕ್ಷ ಟನ್ನುಗಳಷ್ಟು ಟರ್ಷಿಯರಿ ಕಲ್ಲಿದ್ದಲು ನಿಕ್ಷೇಪ ಸಿಗುವುದಾಗಿ ಅಂದಾಜು ಮಾಡಲಾಗಿದೆ. ಭಾರತದಲ್ಲಿ ಕಲ್ಲಿದ್ದಲಿನ ಗಣಿ ಕೆಲಸ ಒಂದು ವಿಶಿಷ್ಟ ಉದ್ಯಮ. ಸು. 800 ಕಲ್ಲಿದ್ದಲು ಗಣಿಗಳಿದ್ದು ನಾಲ್ಕು ಲಕ್ಷಕ್ಕಿಂತಲೂ ಮೇಲ್ಪಟ್ಟು ಕೆಲಸಗಾರರು ಈ ಉದ್ಯೋಗದಲ್ಲಿ ನಿರತರಾಗಿದ್ದಾರೆ. ಪಂಚವಾರ್ಷಿಕ ಯೋಜನೆಯ ಅನಂತರ ಕಲ್ಲಿದ್ದಲಿನ ಉತ್ಪಾದನೆ ಬಹುಮಟ್ಟಿಗೆ ಹೆಚ್ಚಾಗಿದೆ. 1955ರಲ್ಲಿ ಒಟ್ಟು ಉತ್ಪಾದನೆ ಸು. 39 ದಶಲಕ್ಷ ಟನ್ನುಗಳಿದ್ದು 1965ರಲ್ಲಿ 70 ದಶಲಕ್ಷ ಟನ್ನುಗಳನ್ನು ಮೀರಿತು. ಈಗ ಉತ್ಪನ್ನವಾಗುತ್ತಿರುವ ಪರಿಮಾಣ ಸು. 220 ದಶಲಕ್ಷ ಟನ್ನುಗಳು. ಇದರ ಬೆಲೆ 175 ಕೋಟಿ ರೂಪಾಯಿಗಳಿಗಿಂತ ಅಧಿಕವಾಗುತ್ತದೆ. ಇದು ಭಾರತದಲ್ಲಿ ಉತ್ಪನ್ನವಾಗುವ ಖನಿಜಗಳ ಒಟ್ಟು ಬೆಲೆ 70 ಭಾಗದಷ್ಟಾಗುತ್ತದೆ. ಕಲ್ಲಿದ್ದಲನ್ನು ಅತಿ ಹೆಚ್ಚಾಗಿ ಬಳಸಿಕೊಳ್ಳುವ ಪ್ರಧಾನೋದ್ಯಮಗಳು ಶಾಖವಿದ್ಯುತ್ ತಯಾರಿಕೆ ಹಾಗೂ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು. ಇವೆರಡೂ ಕಲ್ಲಿದ್ದಲಿನ ಒಟ್ಟು ಉತ್ಪತ್ತಿಯ ಬಹುಭಾಗವನ್ನು ಉಪಯೋಗಿಸಿಕೊಳ್ಳುತ್ತಿವೆ. ಭಾರತವು ಉತ್ತಮದರ್ಜೆಯ ಕಲ್ಲಿದ್ದಲನ್ನು ಇಂದು ದಕ್ಷಿಣ ಆಫ್ರಿಕ ಹಾಗೂ ಆಸ್ಟ್ರೇಲಿಯಗಳಿಂದ ಆಮದು ಮಾಡಿಕೊಳ್ಳುತ್ತಿದೆ. (ಕೆ.ಎಸ್.ವಿ.ಆರ್.)

**ಕಲ್ಲು:** ಕಟ್ಟಡಗಳನ್ನು ನಿರ್ಮಿಸಲು ಯೋಗ್ಯ ಗುಣಗಳಿರುವ ಹಾಗೂ ನಿಸರ್ಗದಲ್ಲಿ ವಿಪುಲವಾಗಿ ದೊರೆಯುವ ಕಲ್ಲು. ಭೂಗರ್ಭದ ರಚನೆ, ರಾಸಾಯನಿಕ ಸಂಯೋಜನೆಗಳ ದೃಷ್ಟಿಯಿಂದ ಕಲ್ಲನ್ನು ಎರಡು ವಿಧವಾಗಿ ವರ್ಗೀಕರಿಸಬಹುದು. ಕಲ್ಲುಗಳ ಆರ್ಥಿಕ ಬೇಡಿಕೆ ಈ ಗುಣಗಳನ್ನು ಆಧರಿಸಿರುತ್ತದೆ.

ಭೂಗರ್ಭರಚನೆ : ಕಲ್ಲಿನಲ್ಲಿ ಮೂರು ಬಗೆಯ ಭೂಗರ್ಭದ ರಚನೆಯನ್ನು ಕಾಣಬಹುದು : ಅಗ್ನಿಜನ್ಯ, ಜಲಜ, ಪರಿವರ್ತಿತ.

ಅಗ್ನಿಜನ್ಯ ಕಲ್ಲು ಜಲಜ ಕಲ್ಲಿಗಿಂತ ಬಲಿಷ್ಠ. ಸಿಲಿಕೇಟುಗಳು ಹೆಚ್ಚಾಗಿರುವ ಕಲ್ಲು ಸುಣ್ಣ ವಿಶೇಷವಾಗಿರುವವುಗಳಿಗಿಂತ ಮಳೆ ಬಿಸಿಲುಗಳನ್ನು ಚೆನ್ನಾಗಿ ತಡೆಯುತ್ತದೆ. ಸ್ಫಟಿಕಾಕೃತಿಯ (ಕ್ರಿಸ್ಟಲೈನ್) ಕಲ್ಲುಗಳು ಇತರ ಬಗೆಗಳಿಗಿಂತ ಗಟ್ಟಿಯಾಗಿರುತ್ತವೆ. ಹೊಸದಾಗಿ ಸೀಳಿದ ಕಲ್ಲಿನ ಮುಖ ಸ್ಫುಟವಾಗಿ ಚೊಕ್ಕಟವಾಗಿರಬೇಕು. ಕಲ್ಲನ್ನು ನಯಮಾಡಬೇಕಾದರೆ ಅದು ಸಣ್ಣ ಕಣಗಳಿಂದ ಕೂಡಿ ಬಾಳಿಕೆ ಬರುವ ಹಾಗಿರಬೇಕು.

ರಾಸಾಯನಿಕ ಸಂಯೋಜನೆ : ಇಲ್ಲಿಯೂ ಮೂರು ಬಗೆಯ ರಚನೆಗಳಿವೆ : 1 ಸಿಲಿಕಾನ್ ಡೈ ಆಕ್ಸೈಡ್ ಹೆಚ್ಚಾಗಿರುವವು. ಉದಾಹರಣೆಗೆ ಗ್ರಾನೈಟ್, ಮರಳು ಕಲ್ಲು ; 2 ಕ್ಯಾಲ್ಸಿಯಂ ಕಾರ್ಬೊನೇಟ್ (ಸುಣ್ಣ) ಹೆಚ್ಚಾಗಿರುವವು, ಉದಾಹರಣೆಗೆ ಸುಣ್ಣಕಲ್ಲು, ಅಮೃತಶಿಲೆ ; 3 ಮಣ್ಣು ಹೆಚ್ಚಾಗಿರುವವು, ಉದಾಹರಣೆಗೆ ಸ್ಲೇಟ್, ಲ್ಯಾಟರೈಟ್.

ಕೆಲವು ಕಲ್ಲುಗಳು ಒಂದೇ ದಿಕ್ಕಿನಲ್ಲಿ ಸೀಳುತ್ತವೆ. ಕೆಲವು ಎರಡು ಮೂರು ದಿಕ್ಕುಗಳಲ್ಲಿ ಸೀಳುವುದೂ ಉಂಟು. ಒರೆಗಳಿರುವ ಕಲ್ಲುಗಳು ಸುಲಭವಾಗಿ ಸೀಳುತ್ತವೆ. ಬಂಡೆಯಿಂದ ಕಲ್ಲನ್ನು ಕ್ವಾರಿ ಮಾಡುವಾಗ ಎಲ್ಲಿ ದೌರ್ಬಲ್ಯವಿದೆಯೆಂದು ನೋಡಬೇಕು. ಒಂದೊಂದು

ಬಗೆಯ ಕಲ್ಲಿನಲ್ಲಿ ಕೆಲಸ ಮಾಡುವುದರಲ್ಲಿಯೂ ಕೆಲವು ವೈಲಕ್ಷಣ್ಯಗಳಿವೆ. ಇವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಕೆಲವು ಮಾದರಿಗಳು ಹೊರಗೆ ನೋಡುವುದಕ್ಕೆ ಅಲಂಕಾರವಾಗಿರುತ್ತವೆ. ಇವುಗಳಲ್ಲಿ ಬಣ್ಣವೇ ಮುಖ್ಯ. ಅಮೃತಶಿಲೆಯಲ್ಲಂತೂ ಅನೇಕ ನಮೂನೆಗಳಿವೆ. ಕೊರೆದು ನಯಮಾಡಿದಾಗ ಇವುಗಳ ಸೊಬಗು ಎದ್ದು ಕಾಣುತ್ತದೆ.

ಕೆಲವು ಬಗೆಯ ಕಲ್ಲುಗಳನ್ನು ಉಜ್ಜಿದಾಗ ಮೇಲ್ಮೈಗೆ ಹೊಳಪು ಬರುತ್ತದೆ. ಇಂಥ ಕಲ್ಲುಗಳನ್ನು ದೇವಾಲಯ ಹಾಗೂ ಅರಮನೆಗಳಲ್ಲಿ ಉಪಯೋಗಿಸುತ್ತಾರೆ. ಇವುಗಳಲ್ಲಿ ಕೆಲವನ್ನು ಸೂಚಿಸಿದೆ : 1 ಬೆಂಗಳೂರಿನ ಹತ್ತಿರ ಸಾರಕ್ಕಿ ಬಂಡೆಯ ಬೂದು ಬಣ್ಣದ ಗ್ರಾನೈಟ್, 2 ಚಿತ್ರದುರ್ಗ, ಚಾಮುಂಡಿ ಮತ್ತು ಶಿವಗಂಗೆಯ ಬೆಟ್ಟಗಳಲ್ಲಿ ಸಿಕ್ಕುವ ಗುಲಾಬಿ ಬಣ್ಣದ ಪಾರ್ಫಿರಿಟಿಕ್ ಗ್ರಾನೈಟ್, 3 ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಿಕ್ಕುವ ಹಸುರು ಬಣ್ಣದ ಕಲ್ಲುಗಳು, 4 ತುರುವೇಕೆರೆ, ಬಾಣಸಂದ್ರ, ಮೈಸೂರು–ಈ ಪ್ರದೇಶಗಳಲ್ಲಿ ದೊರೆಯುವ ಅಚ್ಚ ಕಪ್ಪಾದ ಕಲ್ಲು, 5 ಅಲ್ಲಲ್ಲಿ ದೊರೆಯುವ ಅಮೃತಶಿಲೆ. ಈಚೆಗೆ ಅಲಂಕಾರದ ಕಲ್ಲುಗಳನ್ನು ಕೃತಕವಾಗಿ ತಯಾರಿಸುತ್ತಿದ್ದಾರೆ.

ಕಟ್ಟಡಗಳನ್ನು ಕಟ್ಟಲು ಗ್ರಾನೈಟ್, ಟ್ರ್ಯಾಪ್, ಬೆಸಾಲ್ಟ್, ಕ್ವಾರ್ಟ್ಸೈಟ್, ಲ್ಯಾಟರೈಟ್, ಷಿಸ್ಟ್, ಸುಣ್ಣಕಲ್ಲು, ಮರಳು ಕಲ್ಲು, ಬಳಪದ ಕಲ್ಲು, ಸ್ಲೇಟ್–ಇವು ದೊರೆಯುವ ಕಡೆಗಳಲ್ಲಿ ಉಪಯೋಗಿಸುತ್ತಾರೆ.

ಗ್ರಾನೈಟ್ ಶ್ರೇಷ್ಠವಾದ ಕಲ್ಲು. ಸ್ಫಟಿಕ ರೂಪದ ಈ ಕಲ್ಲಿನಲ್ಲಿ ಕ್ವಾರ್ಟ್ಜ್, ಫೆಲ್‌ಸ್ಪಾರ್, ಅಭ್ರಕ–ಈ ಖನಿಜಗಳು ಕಣ್ಣಿಗೆ ಕಾಣುವಷ್ಟು ದೊಡ್ಡದಾಗಿರುತ್ತವೆ. ಇದು ಅಗ್ನಿಜನ್ಯ ಕಲ್ಲು. ಇದರಲ್ಲಿರುವ ಫೆಲ್‌ಸ್ಪಾರುಗಳ ಬಣ್ಣವನ್ನು ಅನುಸರಿಸಿ ಇದು ಕೆಂಪು ಅಥವಾ ಬೂದು ಬಣ್ಣವಾಗಿರುತ್ತದೆ. ಇದರಲ್ಲಿನ ಕಣಗಳ ಗಾತ್ರಗಳು ತುಂಬ ವ್ಯತ್ಯಾಸವಾಗುತ್ತವೆ. ಈ ಕಲ್ಲಿನ ಸಾಪೇಕ್ಷ ಸಾಂದ್ರತೆ 2.67. ಕೆಲವು ವೇಳೆ ಫೆಲ್‌ಸ್ಪಾರ್ ಮತ್ತು ಅಭ್ರಕಕ್ಕೆ ಬದಲಾಗಿ ಟೊರ್ಮಲೀನ್ ಇರುವುದೂ ಉಂಟು. ಚಿಲ್ಲರೆ ಖನಿಜಗಳಲ್ಲಿ ಮ್ಯಾಗ್ನಟೈಟ್, ಅಪಟೈಟ್, ಗಾರ್ನೆಟ್, ಎಪಿಡೋಟ್, ಸಿರ್ಕಾನ್–ಇವು ಮುಖ್ಯವಾದವು.

ಪರಿವರ್ತಿತ ಕಲ್ಲುಗಳಲ್ಲಿ ನೀಸ್ ಮುಖ್ಯವಾದದ್ದು. ಸ್ಫಟಿಕಾಕೃತಿಯಾದ ಮೇಲೆ ಈ ಕಲ್ಲು ಪದರ ಪದರವಾಗುತ್ತದೆ. ಟ್ರ್ಯಾಪ್ ಮತ್ತು ಬೆಸಾಲ್ಟ್ ಸಣ್ಣ ಕಣಗಳುಳ್ಳ ಸ್ಫಟಿಕಾಕೃತಿಯ ಕಲ್ಲುಗಳು. ಮರಳು ಕಲ್ಲಿನ ಪರಿವರ್ತನೆಯಿಂದ ಕ್ವಾರ್ಟ್ಜೈಟುಗಳು ಉತ್ಪತ್ತಿಯಾಗುತ್ತಿವೆ. ಮಲೆನಾಡಿನಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ವಿಶೇಷವಾಗಿ ದೊರೆಯುವ ಜಂಬಿಟ್ಟಿಗೆಯಲ್ಲಿ ಮಣ್ಣು ಕಬ್ಬಿಣವೂ ಹೆಚ್ಚಾಗಿ ಬೆರೆತಿರುತ್ತವೆ.; ಇದನ್ನು ಇಟ್ಟಿಗೆಗಳಿಗೆ ಬದಲಾಗಿ ಕಟ್ಟಡದ ಗೋಡೆಗಳಲ್ಲಿಯೂ ತಳಪಾಯದಲ್ಲಿಯೂ ಬಳಸುತ್ತಾರೆ.

ಹಾರ್ನ್‌ಬ್ಲೆಂಡ್, ಕ್ಲೋರೈಟ್, ಕ್ಯಾಲ್ಸೈಟ್ ಮತ್ತು ಅಭ್ರಕ ಇವುಗಳ ಷಿಸ್ಟುಗಳು ಪದರ ಪದರವಾಗಿ ನಯವಾದ ಪರಿವರ್ತನೆಯಾದ ಕಲ್ಲುಗಳು. ಇವು ಅಗ್ನಿಜನ್ಯವಾಗಿದ್ದರೂ ಇರಬಹುದು. ಜಲಜಗಳಾಗಿದ್ದರೂ ಇರಬಹುದು. ಕ್ಯಾಲ್ಸಿಯಂ ಕಾರ್ಬೊನೇಟ್ ಇರುವ ಕಲ್ಲುಗಳು ಸುಣ್ಣಕಲ್ಲುಗಳು. ಹಾಗೆಯೇ ಸಿಲಿಕ ವಿಶೇಷವಾಗಿರುವವು ಮರಳು ಕಲ್ಲುಗಳು. ಸ್ಲೇಟುಗಳಲ್ಲಿ ನಯವಾದ ಪದರಗಳಿರುತ್ತವೆ.

ಕಟ್ಟಡಗಳಲ್ಲಿ ಉಪಯೋಗಿಸುವ ಕಲ್ಲುಗಳನ್ನು ಬಂಡೆಗಳಿಂದ ಈ ಮುಂದಿನ ಕ್ರಮದಲ್ಲಿ ತೆಗೆಯುತ್ತಾರೆ.

1 ಬಂಡೆಯ ಮೇಲೆ ಬೆಂಕಿಯನ್ನು ಹಾಕಿ ಸುಡುವುದು. 2 ಕರಿಯ ಮದ್ದು, ಡೈನಮೈಟ್ ಮೊದಲಾದ ಸ್ಫೋಟಕಗಳನ್ನು ಬಳಸುವುದು. 3 ಅವುಗಳಿಂದಲೂ (ವೆಡ್ಜಸ್) ಉಳಿಗಳಿಂದಲೂ ಸೀಳುವುದು.

ಬಂಡೆಯಿಂದ ತೆಗೆದ ಕಲ್ಲುಗಳನ್ನು ಉಪಯೋಗಕ್ಕೆ ತಕ್ಕಹಾಗೆ ನಯವಾಗಿ ಮಾಡಬೇಕು. ಕಟ್ಟಡಗಳಲ್ಲಿ ಬಳಸುವ ಕಲ್ಲುಗಳ ತಳಮಟ್ಟವಾಗಿಯೂ ಪಕ್ಕಗಳು ಲಂಬವಾಗಿಯೂ ಇರುವಂತೆ ಉಳಿಗಳಿಂದ ನಯ ಮಾಡಬೇಕು.

ನಯವಾದ ಕಂಬಗಳ ಪೀಠಗಳು, ಕಂಬಗಳು, ತಲೆಗಲ್ಲುಗಳು ಕಟ್ಟಡಗಳ ಮೂಲೆ ಕಲ್ಲುಗಳು, ಕಮಾನಿನ ಕಲ್ಲುಗಳು–ಬಿಸಿಲು, ಮಳೆ, ಗಾಳಿಗಳ ಹೊಡೆತದಿಂದ ಕಾಲಾನುಕ್ರಮದಲ್ಲಿ ಸವೆದುಹೋಗುತ್ತವೆ. (ಎಚ್.ಸಿ.ಕೆ.)

**ಕಲ್ಲುಗಣಿ:** ಉಪಯೋಗಾರ್ಹ ಕಲ್ಲುಗಳನ್ನು ಹೊರತೆಗೆಯಬಹುದಾದ ತೋಡುಗುಳಿ ಅಥವಾ ಕಲ್ಲನ್ನು ಅಗೆದುತೆಗೆಯಬಹುದಾದ ಸ್ಥಳ. ವಿವಿಧ ನಮೂನೆಯ ಕಲ್ಲಿನ ಗಣಿಗಳು ಸಾಕಷ್ಟು ಸಂಖ್ಯೆಯಲ್ಲಿ ಇರಬಹುದಾದರೂ ಒಂದು ಗಣಿಯ ಉಪಯುಕ್ತತೆಯನ್ನು ನಿರ್ಧರಿಸುವ ಪ್ರಧಾನಾಂಶ ಅದರ ವಾಣಿಜ್ಯ ಮೌಲ್ಯ. ಆ ಗಣಿಯಿಂದ ದೊರೆಯುವ ಕಲ್ಲುಗಳ ಉಪಯೋಗ ಮನುಷ್ಯನಿಗಿರಬೇಕು. ಅವು ಅಧಿಕ ಪರಿಮಾಣದಲ್ಲಿ ಲಭ್ಯವಿರಬೇಕು ಮತ್ತು ಗಣಿಯಿಂದ ಹೊರಸಾಗಣೆಯ ಸೌಲಭ್ಯ ಹೊಂದಿರಬೇಕು.

ಕ್ವಾರಿ ಪದದಿಂದ ಕ್ವಾರಿಯಿಂಗ್ ಎಂಬುದು ವ್ಯುತ್ಪತ್ತಿಯಾಗಿದೆ. ಕಲ್ಲಿನ ನೈಸರ್ಗಿಕ ತಾಣಗಳಿಂದ ವಾಣಿಜ್ಯೋಪಯೋಗಕ್ಕೋಸ್ಕರ ಕಲ್ಲನ್ನು ಹೊರತೆಗೆಯುವುದು ಎಂದು ಇದರ ಅರ್ಥ. ಇಂದು ಕ್ವಾರಿಯಿಂಗ್ ಒಂದು ದೊಡ್ಡ ಉದ್ಯಮವಾಗಿ ಬೆಳೆದಿದೆ. ಇದರಲ್ಲಿ ಎರಡು ಪ್ರಮುಖ ಶಾಖೆಗಳಿವೆ: ಅಳತೆ ಕಲ್ಲುಗಳ ತಯಾರಿಕೆ, ತುಂಡು ಮತ್ತು ಪುಡಿ ಕಲ್ಲುಗಳ ತಯಾರಿಕೆ.

ಅಳತೆ ಕಲ್ಲು : ಕಟ್ಟಡದ ನಿರ್ಮಾಣದಲ್ಲಿ ಕೆತ್ತನೆಯ ಕೆಲಸಗಳಲ್ಲಿ, ಸುಂದರ ವಿಗ್ರಹಗಳ ಕೆತ್ತನೆ, ಸ್ಲೇಟ್ (ಬರೆಯುವ, ನೆಲಕ್ಕೆ ಚಪ್ಪಡಿ ಹಾಸುವ ಇತ್ಯಾದಿ) ಕಲ್ಲಿನ ಹಾಳೆಗಳ ಕೊಯ್ತೆಗೆತದಲ್ಲಿ ಅಳತೆಕಲ್ಲಿಗೆ ಪ್ರಾಶಸ್ತ್ಯವಿದೆ. ಕಲ್ಲಿನ ಗಣಿಗಳು ಯಥೇಚ್ಛವಾಗಿ ಇರಬಹುದಾದರೂ ಅಳತೆ ಕಲ್ಲುಗಳು ಕೇವಲ ಕೆಲವೇ ಗಣಿಗಳಿಂದ ದೊರೆಯುತ್ತವೆ. ಸಿಡಿಮದ್ದು ಸ್ಫೋಟನೆ, ಹಾರೆ, ಪಿಕ್ಕಾಸುಗಳಿಂದ ಅಗೆತ ಈ ಕೈಗಾರಿಕೆಯಲ್ಲಿ ಮಾರಕವೇ ಆಗಬಹುದು. ಮುಂದುವರಿದ ಯಂತ್ರವಿಧಾನದ ಕೊರೆತಗಳು ಇಂದು ಬಳಕೆಯಲ್ಲಿವೆ. ಯಂತ್ರಚಾಲಿತ ಗರಗಸಗಳು ಸೂಕ್ಷ್ಮವಾಗಿ ಕಲ್ಲಿನ ಚಪ್ಪಡಿಗಳನ್ನು ಕೊಯ್ಯುತ್ತವೆ; ಅವನ್ನು ಸಾಗುಪಟ್ಟಿಗಳ ಮೂಲಕ ಮುಂದಕ್ಕೆ ಸಾಗಿಸುತ್ತಾರೆ. ಇಂಥ ಸೂಕ್ಷ್ಮಕ್ರಿಯೆ ಆವಶ್ಯಕವಿಲ್ಲದ ನಿಕ್ಷೇಪಗಳಲ್ಲಿ (ಉದಾಹರಣೆಗೆ ಕಟ್ಟಡದ ಅಳತೆಗಲ್ಲು, ನೆಲದ ಹಾಸಲು ಗಲ್ಲು, ಮೆಟ್ಟಿಲುಕಲ್ಲು ಇತ್ಯಾದಿ) ಯುಕ್ತಪ್ರಮಾಣದ ಸಿಡಿಮದ್ದು, ಬಾಣ, ಕೊಡತಿ ಮುಂತಾದುವು ಸಾಕು.

ತುಂಡು ಮತ್ತು ಪುಡಿಗಲ್ಲುಗಳು : ಹೆಸರೇ ಸೂಚಿಸುವಂತೆ ಇವುಗಳಲ್ಲಿ ಅಳತೆ ಮುಖ್ಯವಲ್ಲ; ಉದ್ದೇಶದ ಪೂರೈಕೆಗೋಸ್ಕರ ಒಂದು ನಿಯಮಿತ ಗಾತ್ರ ಬೇಕಾಗುವುದು. ಆದ್ದರಿಂದ ಈ ಕಲ್ಲುಗಳನ್ನು ತೋಡುವ ಗಣಿಗಳಲ್ಲಿ ಸಿಡಿಮದ್ದು, ಹಾರೆ, ಪಿಕ್ಕಾಸು, ಗುದ್ದಲಿಗಳ ಬಳಕೆ ಹೆಚ್ಚು. ಬಂಡೆಗಳ ಮೇಲೆ ಆಳವಾಗಿ ಗುಣಿಗಳನ್ನು ತೋಡಿ ಸಾಕಷ್ಟು ಸಿಡಿಮದ್ದನ್ನು ಅಳವಡಿಸಿ ಭಾರೀ ಸ್ಫೋಟನೆಯಿಂದ ಕಲ್ಲಿನ ಚಿಪ್ಪುಗಳನ್ನು ಬಂಡೆಯಿಂದ ಎಳೆಸಲಾಗುವುದು. ಮುಂದೆ ಈ ತುಂಡುಗಳನ್ನು ಹೊಡೆದೋ ಬಡಿದೋ ಅವಶ್ಯವಾದಲ್ಲಿ ಪುನಃ ಸಿಡಿಮದ್ದನ್ನೇ ಉಪಯೋಗಿಸಿಯೋ ಒಡೆಯುತ್ತಾರೆ. ಪುಡಿಗಲ್ಲುಗಳು ಕಲ್ಲಿನ ಕಣಗಳು ಬೇಕಾಗುವಲ್ಲಿ ಯಂತ್ರಗಳಿಗೆ ತುಂಡುಗಲ್ಲುಗಳನ್ನು ಪೂರೈಕೆ ಮಾಡಿ ಅಥವಾ ಯೋಗ್ಯಗಾತ್ರದ ಜಲ್ಲಿಕಲ್ಲು ಜಲ್ಲಡಿಸಯಲ್ಲಿ ಪ್ರತ್ಯೇಕಿಸಲಾಗುವುದು. (ಎಚ್.ಎಸ್.ಆರ್.)

**ಕಾಂಗೋ:** ಆಫ್ರಿಕದ ಅತ್ಯಂತ ಉದ್ದನೆಯ ನದಿಗಳಲ್ಲಿ ಎರಡನೆಯದು. ಇದರ ಉದ್ದ 4346 ಕಿಮೀ. ಇದಕ್ಕಿಂತ ಉದ್ದವಾದ್ದು ನೈಲ್ ನದಿ 4667 ಕಿಮೀ. ಪ್ರಪಂಚದ 5ನೆಯ ಉದ್ದವಾದ ನದಿಯಾದ ಇದರ ಇನ್ನೊಂದು ಹೆಸರು ಜೈರೆ. ಕಾಂಗೋ ನದಿಯ ಜಲಾನಯನ ಪ್ರದೇಶ 3,630,000 ಚಕಿಮೀ ನದಿಯ ಮೂಲ ಆಫ್ರಿಕದ ಪೂರ್ವ ಭಾಗದ ನ್ಯಾಸ ಮತ್ತು ಟಾಂಗನ್ಯೀಕ ಸರೋವರಗಳ ನಡುವೆ ಉದ್ಭವಿಸುವ ಛಾಂಬೇಸಿ ನದಿಯೆಂದು ಗುರ್ತಿಸಿದ್ದಾರೆ. ಛಾಂಬೇಸಿ ತನ್ನ ಪಥದಲ್ಲಿ ಅನೇಕ ಸಣ್ಣ ಮತ್ತು ದೊಡ್ಡ ಉಪ ನದಿಗಳನ್ನು ಕೂಡಿಕೊಂಡು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವನ್ನು ಸೇರುವವರೆಗೆ ನಾನಾ ಹೆಸರುಗಳನ್ನು ತಾಳಿ ಹರಿಯುತ್ತದೆಯಲ್ಲದೆ ಸಮಭಾಜಕವೃತ್ತವನ್ನು ಎರಡು ಸಾರಿ ದಾಟುತ್ತದೆ. ಮಧ್ಯ ಪಶ್ಚಿಮ ಆಫ್ರಿಕದಲ್ಲಿ ಕಾಮನ ಬಿಲ್ಲಿನಂತೆ ಬಾಗಿ ಹರಿಯುವ ಈ ನದಿಯ ವಿಶಾಲ ಕಣಿವೆ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ಬಹುತೇಕ ಎಲ್ಲ ಭಾಗವನ್ನೂ ಛಾಂಬಿಯದ ಪಶ್ಚಿಮ ಭಾಗ ಅಂಗೋಲದ ಉತ್ತರ ಭಾಗವನ್ನೂ ಆವರಿಸಿಕೊಂಡಿದೆ. ಕಾಂಗೋ ನದಿಯ ಪಾತ್ರವನ್ನು ಮೇಲ್ಕಣಿವೆ, ಮಧ್ಯ ಮತ್ತು ಕೆಳಕಣಿವೆಯೆಂದು ವಿಂಗಡಿಸಬಹುದು. ಮಧ್ಯಕಣಿವೆ ಅರ್ಧವರ್ತುಲಾಕಾರವಾಗಿದೆ.

ಮೇಲ್ಕಣಿವೆ: ಕಾಂಗೋ ನದಿಗೆ ಮೂಲವಾದ ಛಾಂಬೇಸಿ ಕರುಂಗ ನದಿಯನ್ನು ಕೂಡಿಕೊಂಡು ಫಲವತ್ತಾದ ಭೂಮಿಯಲ್ಲಿ ನೈಋತ್ಯಕ್ಕೆ ಹರಿದು ಬಂಗ್ವೂಲ ಸರೋವರಕ್ಕೆ ನೆರೆಯಲ್ಲಿರುವ ವಿಶಾಲ ಜೌಗು ಪ್ರದೇಶವನ್ನು ಸೇರುತ್ತದೆ. ಇಲ್ಲಿಂದ ಹೊರಡುವ ಲೂವಪೂಲ (ಲೂವೂವ) ನದಿ ಛಾಂಬೇಸಿ ನದಿಯ ಮುಂದುವರಿದ ಭಾಗ. ಲೂವಪೂಲ ನದಿಗೆ ದೊಡ್ಡ ನದಿ ಎಂಬ ಹೆಸರೂ ಇದೆ. ಲೂವಪೂಲ ಜೌಗು ಪ್ರದೇಶವನ್ನು ಬಿಟ್ಟಮೇಲೆ ತನ್ನ ಗತಿಯಲ್ಲಿ ಪಶ್ಚಿಮಕ್ಕೆ ಬಾಗಿ ತರುವಾಯ ದಕ್ಷಿಣಾಭಿಮುಖವಾಗಿ ಛಾಂಬೇಸಿ ನದಿಯ ಜಲಾನಯನ ಭೂಮಿಯತ್ತ ಸಾಗಿ ಉತ್ತರಕ್ಕೆ ತಿರುಗಿ ಮುಂಬಟುಟ (ಮುಂಬರಿಯ) ಜಲಪಾತವಾಗಿ ಪರಿಣಮಿಸುತ್ತದೆ. ಇದರ ಭೋರ್ಗರೆತ ನೀರವ ರಾತ್ರಿಯಲ್ಲಿ ಸು. 13–15 ಕಿಮೀ ದೂರ ಕೇಳಿಸುವುದುಂಟು. ಇಲ್ಲಿಂದ ಮುಂದೆ 160 ಕಿಮೀ ದೂರ, ಜಾನ್‌ಸ್ಟನ್ ಜಲಪಾತವನ್ನು ಮುಟ್ಟುವವರೆಗೆ ನದಿ ಜಲಸಂಚಾರಕ್ಕೆ ಯೋಗ್ಯವಾಗಿಲ್ಲ. ಅಲ್ಲಿಂದ ಮುಂದಕ್ಕೆ, ಮ್ವೇರೂ ಸರೋವರವನ್ನು ಸೇರುವುದಕ್ಕೆ ಮುಂಚೆ ಲೂವಪೂಲ ಮತ್ತೊಮ್ಮೆ ನದಿಮುಖಜ ಭೂಮಿಯಂಥ ಜೌಗು ಪ್ರದೇಶವನ್ನು ಸೇರುತ್ತದೆ. ತರುವಾಯ ಅದು ಮ್ವೇರೂ ಸರೋವರದ ವಾಯವ್ಯ ಅಂಚಿನಿಂದ ಹೊರಬಂದು ಪಶ್ಚಿಮಾಭಿಮುಖವಾಗಿ ತಿರುಗಿ ಕೆಬಾರ ಮತ್ತು ಮುಗಿಲಾ ಪರ್ವತಶ್ರೇಣಿಗಳಿಗೆ ಅಡ್ಡಲಾಗಿ ಹರಿದು ಲೂವಲಾಬ (ಕೋಮೊಲೋಂಡೊ) ನದಿಯನ್ನು ಸೇರುತ್ತದೆ. ಕೆಲವರು ಕೋಮೊಲೋಂಡೊ ನದಿಯನ್ನೇ ಕಾಂಗೋ ನದಿಯ ಮೂಲವೆಂದು ತಿಳಿಯುತ್ತಾರೆ. ಲೂವಪೂಲ ಮತ್ತು ಲೂವಲಾಬ ನದಿಗಳ ಸಂಗಮವಾದ ಮೇಲೆ ಉತ್ತರಕ್ಕೆ ಹರಿಯುವ ನದಿ ಭಾಗಕ್ಕೆ ಲೂವಲಾಬ –ಕಾಂಗೋ ಎಂಬ ಹೆಸರುಂಟು. ಆ ಪ್ರದೇಶದಲ್ಲಿ ನದಿಯ ಅಗಲ ಅರ್ಧ ಕಿಮೀ. ಅದು ಉತ್ತರ ಮತ್ತು ವಾಯವ್ಯ ದಿಕ್ಕುಗಳನ್ನನುಸರಿಸಿ ಭೂಮಧ್ಯರೇಖೆಯ ಕಡೆ ಹರಿಯುತ್ತದೆ. ನದಿಯ ಈ ಭಾಗದ ಹರಿವಿನಲ್ಲಿ ಡಿಯಾ ರಭಸದ ಇಳಿವುಗಳಿಂದ ಹಡಗಿನ ಸಂಚಾರಕ್ಕೆ ಮೊತ್ತಮೊದಲ ಅಡಚಣೆ ಕಾಣಿಸಿಕೊಳ್ಳುತ್ತದೆ. ಅಲ್ಲಿಂದ ಮುಂದಕ್ಕೆ ಲೂವಲಾಬ ಕಾಂಗೋ ಪೋರ್ಟ್

ದ ಎನ್‌ಫರ್ ಎಂಬ ಕಡಿದಾದ ಕಮರಿಗಳ ಮೂಲಕ ಪ್ರವಹಿಸುತ್ತದೆ. ಈ ಸ್ಥಳದಿಂದ ಮುಂದಕ್ಕೆ ಅನೇಕ ಜಲಪಾತಗಳಿಂದಲೂ ರಭಸಪ್ರವಾಹಗಳಿಂದಲೂ ಕೂಡಿ ಸಮತಲಭೂಮಿಯ ಅತಿರಮ್ಯ ಅರಣ್ಯಗಳ ನಡುವೆ ಬಲು ಠೀವಿಯಿಂದ ಹರಿಯುತ್ತದೆ. ಈ ಭಾಗದಲ್ಲಿ ನದಿಯ ಅಗಲ ಕೆಲವು ಕಡೆ 1.6 ಕಿಮೀ. ಈ ಭಾಗದಲ್ಲಿ ಸೇರುವ ಉಪನದಿಗಳಲ್ಲಿ ಮುಖ್ಯವಾದ ಲೂಕೂಗ ನದಿ ಟಾಂಗನೀಕ ಸರೋವರಕ್ಕೂ ಕಾಂಗೋ ನದಿಗೂ ಸಂಬಂಧ ಕಲ್ಪಿಸುತ್ತದೆ.

ಸಮಭಾಜಕವೃತ್ತಕ್ಕೆ ಕೆಲವು ಕಿಮೀಗಳ ಕೆಳಕ್ಕೆ ನದಿ ಸ್ಟ್ಯಾನ್ಲಿ ಜಲಪಾತವಾಗಿ, ಅಲ್ಲಿಂದ, ಮುಂದಕ್ಕೆ ತನ್ನ ಉತ್ತರಾಭಿಮುಖ ಪಥವನ್ನು ಬದಲಿಸಿ, ಸಮಭಾಜಕದ ಮಹಾಕಣಿವೆಗಳ ಮೂಲಕ ಪಶ್ಚಿಮ ದಿಕ್ಕಿನತ್ತ ಸಾಗುತ್ತದೆ. ಸ್ಟ್ಯಾನ್ಲಿ ಜಲಪಾತ ಪ್ರದೇಶದಲ್ಲಿ ನದಿ ಸು. 1.6 ಕಿಮೀ ದೂರ ರಭಸದ ಹಲವಾರು ಜಾರುಗಳಿಂದ ಕೂಡಿರುವುದರಿಂದ ಅಲ್ಲಿ ನೌಕಾಯಾನಕ್ಕೆ ಅನುಕೂಲವಿಲ್ಲ.

ಮಧ್ಯಕಣಿವೆ: ಸ್ಟ್ಯಾನ್ಲಿ ಜಲಪಾತದಿಂದ ಮುಂದಕ್ಕೆ, 1668 ಕಿಮೀ ದೂರ, ನದಿ ಯಾವ ಅಡಚಣೆಯೂ ಇಲ್ಲದೆ ಹರಿದು, ಇಡೀ ವರ್ಷ ನೌಕಾಸಂಚಾರಕ್ಕೆ ಯೋಗ್ಯವಾಗಿದೆ. ಜಲಪಾತದ ಬಳಿಯಿಂದ ನದಿ ವಾಯವ್ಯಕ್ಕೆ 1010 ಕಿಮೀಗಳ ದೂರ ಅರ್ಧಚಂದ್ರಾಕಾರದಲ್ಲಿ ಹರಿದು ಮತ್ತೆ ಸಮಭಾಜಕವೃತ್ತವನ್ನು ಛೇದಿಸುತ್ತದೆ. ನದಿ ತನ್ನ ಉತ್ತರದ ಗರಿಷ್ಠ ಬಿಂದುವನ್ನು ಮುಟ್ಟಿಬಾಗುವುದು ಈ ಅರ್ಧವೃತ್ತಾಕಾರದ ಹರಿವಿನಲ್ಲೇ. ಸ್ಟ್ಯಾನ್ಲಿ ಜಲಪಾತಗಳಿಗೂ, ಪಶ್ಚಿಮದಲ್ಲಿ ಸಮಭಾಜಕವೃತ್ತವನ್ನು ನದಿ ಮುಟ್ಟುವ ಎಡೆಗೂ ಇರುವ ಅಡ್ಡದೂರ 755 ಕಿಮೀ.

ಸ್ಟ್ಯಾನ್ಲಿ ಜಲಪಾತದಿಂದ ಮುಂದಕ್ಕೆ ಕಾಂಗೋ ನದಿ ಅರ್ಧದಿಂದ 1 ಕಿಮೀ ಅಗಲ ತಾಳಿ ಬೆಟ್ಟಗುಡ್ಡಗಳ ನಡುವೆ ಪ್ರವಹಿಸುತ್ತದೆ. ಜಲಪಾತಕ್ಕೆ 210 ಕಿಮೀ ಗಳ ದೂರದಲ್ಲಿ ಆರುವೀಮಿ ನದಿ ಅದರೊಂದಿಗೆ ಸಂಗಮವಾಗುತ್ತದೆ. ಅಲ್ಲಿಂದ ಮುಂದೆ ನದಿಯ ಅಗಲ 6 ರಿಂದ 8 ಕಿಮೀ. ಈ ಭಾಗದಲ್ಲಿ ನದಿಯ ನಡುವೆ ನೆರೆಮಣ್ಣಿನಿಂದ ಕೂಡಿದ ಅನೇಕ ದ್ವೀಪಗಳುಂಟು. ಆರುವೀಮಿ ಮತ್ತು ಕಾಂಗೋ ನದಿಗಳ ಸಂಗಮಸ್ಥಳದಿಂದ ಮತ್ತೆ 160 ಕಿಮೀಗಳ ದೂರದಲ್ಲಿ ಲೊಯೀಕ ನದಿ ಉತ್ತರದಿಂದ ಬಂದು ಕಾಂಗೋವನ್ನು ಸೇರುತ್ತದೆ. ಲೊಯೀಕ ನದಿಗೆ ಇಟಿಂಬಿರಿ ಎಂಬುದು ಇನ್ನೊಂದು ಹೆಸರು.

ಕಾಂಗೋ ನದಿಯ ಹಿರಿಯ ದ್ವೀಪಗಳಿರುವುದು ಅದರ ಕುದುರೆಲಾಳಾಕೃತಿಯ ಹರಿವಿನ ದಕ್ಷಿಣ ತಿರುವಿನಲ್ಲಿ. ಅವುಗಳಲ್ಲಿ ಇಸುಂಬ ಮತ್ತು ನಸುಂಬ ದ್ವೀಪಗಳೇ ಅತ್ಯಂತ ದೊಡ್ಡವು. ಇವೆರಡು ದ್ವೀಪಗಳ ಉದ್ದ ಅನುಕ್ರಮವಾಗಿ 50 ಮತ್ತು 80 ಕಿಮೀ; ಪರಮಾವಧಿ ಅಗಲ 8 ಕಿಮೀ. ನಸುಂಬ ದ್ವೀಪದ ಎದುರಿಗೆ ಉತ್ತರದಿಂದ ಮೊಂಗಾಲ ನದಿ ಬಂದು ಕಾಂಗೋವನ್ನು ಕೂಡುತ್ತದೆ. ಲುಲಂಬ, ಐಕೆಲೆಂಬ ಮತ್ತು ರುಕಿ–ಈ ಮೂರು ನದಿಗಳು ದಕ್ಷಿಣದಿಂದ ಹರಿದು ಬಂದು ಕಾಂಗೋವನ್ನು ಸೇರುತ್ತವೆ. ಸಮಭಾಜಕವೃತ್ತಕ್ಕೆ 48 ಕಿಮೀಗಳ ಕೆಳಗೆ ಕಾಂಗೋದ ಉತ್ತರದ ಕೂಡುನದಿಗಳಲ್ಲಿ ಅತ್ಯಂತ ದೊಡ್ಡದಾದ ಯುಬಾಂಗ್ ಬಂದು ಸಂಗಮಿಸುತ್ತದೆ. ಈ ಭಾಗದಲ್ಲಿ ಕಾಂಗೋ ನದಿಯ ಅಡ್ಡಳತೆ 13 ಕಿಮೀ. ಯುಬಾಂಗ್ ಸಂಗಮದ ಎದುರಿಗೆ 16 ಕಿಮೀ ಉದ್ದವುಳ್ಳ ಕಡಿದಾದ ನಾಲೆಯೊಂದರ ಮುಖವುಂಟು. ಈ ನಾಲೆ ಕಾಂಗೋ ನದಿಗೂ ನಟೊಂಬಾ ಮಹಾ ಸರೋವರಕ್ಕೂ ಸಂಪರ್ಕ ಕಲ್ಪಿಸುವುದಾಗಿದ್ದು ಪ್ರವಾಹ ಕಾಲದಲ್ಲಿ ಕಾಂಗೋ ನೀರು ಈ ಸರೋವರಕ್ಕೆ ಹರಿದು ಹೋಗುತ್ತದೆ. ನಟೊಂಬಾ ಸರೋವರದ ಉದ್ದ 37 ಕಿಮೀ. ಅಗಲ 19 ಕಿಮೀ.

ಕೆಳಕಣಿವೆ: ಯುಬಾಂಗ್ ಸಂಗಮದ ತರುವಾಯ 200 ಕಿಮೀ ದೂರವಿದೆ. ನದಿಯ ಅಗಲ 1–3 ಕಿಮೀ. ನದಿಯ ಈ ಭಾಗಕ್ಕೆ ನಾಲೆ ಎಂದು ಹೆಸರು. ಈ ಭಾಗದಲ್ಲಿ ಕಾಂಗೋವನ್ನು ಸೇರುವ ನದಿ ಕಾಸ್ಯೆ. ಅಲ್ಲಿಂದ ಮುಂದೆ 32 ಕಿಮೀ ಉದ್ದ 22 ರಿಂದ 32 ಕಿಮೀ ಅಗಲವಿರುವ ಸರೋವರಾಕೃತಿಯ ಸ್ಟ್ಯಾನ್ಲಿ ಮಡುವನ್ನು ಪ್ರವೇಶಿಸುತ್ತದೆ. ಇಲ್ಲಿಗೆ ನದಿಯ ಒಳನಾಡಿನ ನೌಕಾಸಂಚಾರದ ಹಂತ ಮುಗಿದಂತೆ.

ಸ್ಟ್ಯಾನ್ಲಿ ಮಡುವಿನ ಅಂಚಿನ ಬಳಿ ನದಿಯ ಉತ್ತರ ದಂಡೆಯ ಮೇಲೆ ಇರುವುದೇ ಬ್ರ್ಯಾಜವಿಲ್ ನಗರ. ಇದು ಕಾಂಗೋ ಗಣರಾಜ್ಯದ ರಾಜಧಾನಿ. ಮಡುವಿನ ದಕ್ಷಿಣದಲ್ಲಿರುವ ಬೆಟ್ಟಸಾಲುಗಳ ಮುಂದೆ 6 ಕಿಮೀ ದೂರದಲ್ಲಿ ಕಾಂಗೋ ನದಿಯನ್ನು ಪದೇ ಪದೇ ತಡೆಯುವ ಸು. 30 ಪ್ರಮುಖ ಜಲಪಾತಗಳುಂಟು. ಇವುಗಳಲ್ಲಿ ಮೊದಲನೆಯದಕ್ಕೆ ಸು. 550 ಮೀ ದೂರದಲ್ಲಿರುವುದೇ ಕೀನ್ಶಾಸ. ಇದು ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ರಾಜಧಾನಿ. ಕೊನೆಯ ಜಲಪಾತ ಇರುವುದು ಮಟಾಡಿಯಲ್ಲಿ.

ಮಟಾಡಿಯ ಬಳಿಯ ಕಾಂಗೋ ಅಳಿವೆಯ ಭಾಗ 275 ಮೀ ಆಳವಾಗಿದ್ದು ಸಮುದ್ರ ಸೇರುವ ವರೆಗೆ ಸು. 160 ಕಿಮೀ ಉದ್ದವುಂಟು. ಇದರ ಮೇಲೆ ಸು. 136 ಕಿಮೀ ದೂರದವರೆಗೆ ಸಾಗರಗಾಮಿ ಹಡಗುಗಳು ಸಂಚಾರ ಮಾಡಬಹುದು. ನದಿ ಸಮುದ್ರವನ್ನು ಕೂಡುವ ಎಡೆಯಲ್ಲಿ ಉತ್ತರದ ಬನಾನಾ ಪಾಯಿಂಟ್ ಎಂಬ ಸ್ಥಳದಿಂದ ದಕ್ಷಿಣದ ಷಾರ್ಕ್ ಪಾಯಿಂಟ್ ವರೆಗೆ 11 ಕಿಮೀ ಅಗಲವುಂಟು. ಸಮುದ್ರದೊಳಕ್ಕೆ ನದಿಯ ಓಟ 48 ಕಿಮೀ ದೂರಕ್ಕೆ ಸಾಗಿರುವುದನ್ನು ಕಾಂಗೋ ನದಿಯ ಕಂದು ನೀರಿನ ಹಾಗೂ ಸಾಗರದ ನೀಲಜಲದ ವ್ಯತ್ಯಾಸದಿಂದ ಕಾಣಬಹುದು.

ಮಧ್ಯಕಣಿವೆಯಲ್ಲಿ ಪ್ರವಾಹಕಾಲ ಮೇ ಮತ್ತು ನವೆಂಬರ್ ತಿಂಗಳುಗಳು. ನದಿಯ ಕೆಳಗಣ ಪ್ರದೇಶದಲ್ಲಿ ಪ್ರವಾಹ ವಿಳಂಬವಾಗಿ ಬರುತ್ತದೆ.

ಪರಿಶೋಧನೆ: ಡಿಯಾಗೊ ಕಾಮೊ ಎಂಬ ಪೋರ್ಚುಗೀಸ್ ನಾವಿಕ ಕಾಂಗೋ ನದೀಮುಖವನ್ನು ಕಂಡುಹಿಡಿದ (1482–83). ಅಲ್ಲಿಯ ಪ್ರದೇಶ ಪೋರ್ಚುಗಲ್ ರಾಜ್ಯಕ್ಕೆ ಸೇರಿದುದೆಂಬ ಕುರುಹಾಗಿ ಆತ ಶಿಲಾಸ್ತಂಭವೊಂದನ್ನು ಈಗ ಷಾರ್ಕ್ ಪಾಯಿಂಟ್ ಎಂದು ಕರೆಯುವ ಸ್ಥಳದಲ್ಲಿ ನೆಟ್ಟುಹೋದ. ಈ ಶಿಲಾಸ್ತಂಭದ ಪ್ರಯುಕ್ತ ನಾವಿಕರು ಈ ನದಿಯನ್ನು ಪಿಲ್ಲರ್ ರಿವರ್ ಅಥವಾ ಕಂಬದ ನದಿ ಎಂದು ಕರೆದರು. ತರುವಾಯದ ದಿನಗಳಲ್ಲಿ ಐರೋಪ್ಯ ಪ್ರವಾಸಿಗರು ದೇಶೀಯ ನುಡಿಯ ಅಪಭ್ರಂಶವಾಗಿ ನದಿಯನ್ನು ಜೈರ್ ಎಂದು ಕರೆದರು. ಕೊನೆಗೆ ಅದಕ್ಕೆ ಕಾಂಗೋ ಎಂಬ ಹೆಸರು ಬಂದಿತು. ನದೀಮುಖವನ್ನು ಡಿಯಾಗೊ ಕಂಡು ಹಿಡಿದ ಮೇಲೆ 3 ಶತಮಾನಗಳವರೆಗೆ ಇದರ ಪಾತ್ರವನ್ನು ಪರಿಶೋಧಿಸಲು ಯಾವ ಪ್ರಯತ್ನಗಳೂ ಆಗಲಿಲ್ಲ. ಬ್ರಿಟಿಷ್ ಸರ್ಕಾರ ಕ್ಯಾಪ್ಟನ್ ಜೆ.ಕೆ.ಟಕ್ಕಿಯನ್ನು ಕಾಂಗೋ ನದಿಯ ಬಗ್ಗೆ ಪರಿಶೋಧನೆ ನಡೆಸಲು ಕಳುಹಿಸಿತ್ತು (1816). ಆದರೆ ಅವನ ಪ್ರಯಾಣವೂ 60 ವರ್ಷಗಳ ತರುವಾಯ ಅದೇ ಸರ್ಕಾರ ಕಳುಹಿಸಿದ ಮತ್ತೆರಡು ಪರಿಶೋಧಕರ ತಂಡಗಳೂ ವಿಫಲಗೊಂಡುವು. ಕಾಂಗೋ ನದಿಯನ್ನು ಪರಿಶೀಲಿಸಲು ಹೊರಟ ಡೇವಿಡ್ ಲಿವಿಂಗ್‌ಸ್ಟನನ ನೆರವಿಗಾಗಿ 1872ರಲ್ಲಿ ಬಂದ ಲೆಫ್ಟಿನೆಂಟ್ ಡಬ್ಲ್ಯು. ಗ್ರಾಂಡಿ ಕಾಂಗೋ ಅಳಿವೆಯ ದಕ್ಷಿಣದಲ್ಲಿರುವ ಆಂಬ್ರಿಜಿನಿಂದ ಹೊರಟು 1873ರ ಕೊನೆಯಲ್ಲಿ ಜಲಪಾತಗಳವರೆಗೆ ಬಂದು ಅಲ್ಲಿಂದ ಮೇಲೆ ನದಿಯನ್ನು ಪರಿಶೋಧಿಸಲು ಪ್ರಯತ್ನಿಸಿದ. ಅಷ್ಟರಲ್ಲೇ ಲಿವಿಂಗ್‌ಸ್ಟನನ ಮರಣವಾರ್ತೆ ಬಂದಾಗ ಅವನನ್ನು ಇಂಗ್ಲೆಂಡಿಗೆ ವಾಪಸು ಕರೆಸಿಕೊಳ್ಳಲಾಯಿತು.

ಕಾಂಗೋ ನದಿಯ ಮೂಲವನ್ನು ಕಂಡುಹಿಡಿಯುವ ಸಮಸ್ಯೆ ಅದರ ಉಗಮಸ್ಥಾನದ ಬಳಿಯ ಹಲವಾರು ನದಿಗಳ ಬಗ್ಗೆ ನಡೆಸಿದ ಪರಿಶೋಧನೆಗಳಿಂದ ಬಗೆಹರಿಯಿತು. ಡೇವಿಡ್ ಲಿವಿಂಗ್‌ಸ್ಟನ್ ಛಾಂಬೇಸಿ ನದಿ ಬಂಗವ್ಯೂಲು ಸರೋವರದಿಂದ ಹುಟ್ಟುತ್ತದೆ ಎಂಬುದನ್ನು ಕಂಡುಹಿಡಿದ (1868). 1871ರಲ್ಲಿ ಆತ ಲೂವಲಾಬ ನದಿಯ ಅಂಚಿನಲ್ಲಿರುವ ನ್ಯಯಂಗ್ವೆ ಗ್ರಾಮವನ್ನು ಸೇರಿ, ಲೂವಲಾಬ ಯಾವ ನದಿಗೆ ಸೇರುತ್ತದೆ ಎಂಬುದನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ರೋಗ ಪೀಡಿತನಾಗಿ ಮೃತನಾದ (1873). ಲೂವಲಾಬ ನದಿ ನೈಲ್ ನದಿಯನ್ನು ಸೇರುವುದೆಂಬುದು ಅವನ ಭಾವನೆಯಾಗಿತ್ತು. 1872ರ ಹೊತ್ತಿಗೆ ಭೂಗೋಳ ವಿಜ್ಞಾನಿಗಳು ಲಿವಿಂಗ್‌ಸ್ಟನನ ವರದಿಗಳ ಆಧಾರದ ಮೇಲೆಯೇ ಆತ ಕಂಡುಹಿಡಿದ ನದೀವ್ಯೂಹ ಕಾಂಗೋ ನದೀವ್ಯವಸ್ಥೆಗೆ ಸೇರಿದ್ದೇ ಹೊರತು ನೈಲ್ ನದಿ ವ್ಯವಸ್ಥೆಗೆ ಸಂಬಂಧಿಸಿದ್ದಲ್ಲವೆಂಬ ನಿರ್ಣಯಕ್ಕೆ ಬಂದರು. ಆದರೂ ಮೂಲನದಿಯ ಗತಿಯ ಬಗ್ಗೆ ಆಗ ಯಾವ ತಿಳಿವಳಿಕೆಯೂ ಇರಲಿಲ್ಲ. ಲಿವಿಂಗ್‌ಸ್ಟನ್‌ನ ಸಹಾಯಕ್ಕಾಗಿ ಅಮೆರಿಕದಿಂದ ಬಂದ ಎಚ್.ಎಂ.ಸ್ಟ್ಯಾನ್ಲಿ 1876ರ ಅಕ್ಟೋಬರಿನಲ್ಲಿ ಜ್ಹಾಂಜಿಬಾರಿನಿಂದ ಪ್ರಯಾಣ ಮಾಡಿ ನ್ಯಯಂಗ್ವೆ ಗ್ರಾಮ ಸೇರಿ ಅಲ್ಲಿಂದ ಲೂವಲಾಬ ನದಿಯ ಮೇಲುಭಾಗದಲ್ಲಿ 2560 ಕಿಮೀ ಸಂಚರಿಸಿ ಕ್ಯಾಪ್ಟನ್ ಟಕ್ಕಿ ಬಂದ ಸ್ಥಳಕ್ಕೂ ಮುಂದೆ ಇರುವ ಇಸಂಗಿಲ ಗ್ರಾಮ ತಲಪಿದ. ಈ ಸಂಚಾರದಿಂದ ಆತ ಲೂವಲಾಬ ನದಿಯೂ ಪೋರ್ಚುಗೀಸರು ಜೈರಿ ಎಂದು ಕರೆದ ನದಿಯೂ ಒಂದೇ ಎಂದು ಪುಷ್ಟೀಕರಿಸಿದ. ಸ್ಟ್ಯಾನ್ಲಿಯ ಈ ಮಹತ್ತರ ಪ್ರಯಾಣ ರಾಜಕೀಯ, ಭೌಗೋಳಿಕ ಹಾಗೂ ವಾಣಿಜ್ಯ ದೃಷ್ಟಿಯಿಂದ ಆಫ್ರಿಕದ ಇತಿಹಾಸದಲ್ಲಿ ಬಹು ಮುಖ್ಯ ಘಟನೆಯಾಗಿದೆ. ಸ್ಟ್ಯಾನ್ಲಿ 1887ರಲ್ಲಿ ಕೈಗೊಂಡ ತನ್ನ ಕೊನೆಯ ಪ್ರವಾಸದಲ್ಲಿ ಆರುವೀಮಿ ನದಿಯನ್ನು ಭಾಗಶಃ ಪರಿಶೋಧಿಸಿದ. ಅವನ ತರುವಾಯ ರೆವರೆಂಡ್ ಜಾರ್ಜ್ ಗ್ರೆನ್‌ಫೆಲ್ ಕಾಂಗೋ ನದಿ ಮತ್ತು ಅದರ ಉಪನದಿಗಳ ಬಗ್ಗೆ ಮಾಡಿದಷ್ಟು ಪರಿಶೋಧನೆಗಳನ್ನು ಮತ್ತಾವ ಪರಿಶೋಧಕನೂ ಮಾಡಿಲ್ಲ. 1913ರಲ್ಲಿ ಕ್ಯಾಪ್ಟನ್ ಆರ್.ವಾಕರ್ ಲೂವಪೂಲ ನದಿ ಬಂಗವ್ಯೂಲು ಸರೋವರದಿಂದ ಉದ್ಭವಿಸುವುದಿಲ್ಲವೆಂದೂ ಅದು ಛಾಂಬೇಸಿ ನದಿಯ ಮುಂದುವರಿಕೆಯೆಂದೂ ತೋರಿಸಿ ಕೊಟ್ಟ. ಕಾಂಗೋ ನದಿ ಯಾವ ಭಾಗಗಳಲ್ಲಿ ಹಡಗಿನ ಸಂಚಾರಕ್ಕೆ ಅನುಕೂಲವಾಗಿಲ್ಲವೊ ಅಲ್ಲೆಲ್ಲ ರೈಲುಮಾರ್ಗಗಳನ್ನು ಹಾಕಿದ್ದಾರೆ. (ಎ.ಎಂ.ಆರ್.;ಟಿ.ಇ.ಎಚ್.)

**ಕಾಂಗೋ ಗಣರಾಜ್ಯ:** ಆಫ್ರಿಕ ಖಂಡದ ಒಂದು ಗಣರಾಜ್ಯ. ಸ್ವತಂತ್ರವಾಗುವುದಕ್ಕೆ ಮೊದಲು ಇದು ಫ್ರೆಂಚ್ ಸಮಭಾಜಕೀಯ ಆಫ್ರಿಕದ ಮಧ್ಯ ಕಾಂಗೋ ಅಥವಾ ಮೊಯೆನ್–ಕಾಂಗೋದ ಒಂದು ರಾಜ್ಯವಾಗಿತ್ತು. ಗ್ಯಾಬನ್, ಕ್ಯಾಮರೂನ್, ಮಧ್ಯ ಆಫ್ರಿಕ ಗಣರಾಜ್ಯ, ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ಅಂಗೋಲ ಮತ್ತು ಅಟ್ಲಾಂಟಿಕ್ ಸಾಗರ–ಇವು ಇದರ ಮೇರೆಗಳು. ವಿಸ್ತೀರ್ಣ 3,42,000 ಚ.ಕಿಮೀ. ಜನಸಂಖ್ಯೆ 30,391,26. ರಾಜಧಾನಿ ಬ್ರ್ಯಾಜವಿಲ್ಲಿ. ಕಾಂಗೋ ಎಂಬ ಹೆಸರಿನ ಇನ್ನೊಂದು ಗಣರಾಜ್ಯ (ನೋಡಿ–ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ) ಇರುವುದರಿಂದ ಇದನ್ನು ಬ್ರ್ಯಾಜವಿಲ್ ಕಾಂಗೋ ಎಂದು ಕರೆಯುವ ವಾಡಿಕೆಯಿದೆ. $5^0$ದ. – $5^0$ಉ.ಅ. ಮತ್ತು $11^0$–$18^0$ ಪೂ.ರೇ.ದಲ್ಲಿದೆ.

ಮೇಲ್ಮೈಲಕ್ಷಣ : ಕಾಂಗೋ ಗಣರಾಜ್ಯ ಕಾಂಗೋ ನದಿ ಕಣಿವೆಯ ಒಂದು ಭಾಗ. ಈ ದೇಶದ ಪೂರ್ವದ ಗಡಿರೇಖೆಯಂತೆ ಹರಿಯುವ ಯುಬಾಂಗ್ ಮತ್ತು ಕಾಂಗೋ ನದಿಗಳ ಬಲದಂಡೆಯ ಬಳಿಯ ಪ್ರದೇಶ ಒಂದು ಮೈದಾನ. ಇದು ನದಿಕಣಿವೆಯ ನಡುಭಾಗದ ಮೆಕ್ಕಲುಮಣ್ಣಿನಿಂದ ಆವೃತ. ಇದರ ಉದ್ದಗಲಕ್ಕೆ ಅಲ್ಲಲ್ಲಿ ಹಲವಾರು

ನದಿಗಳೂ ಹಳ್ಳಗಳೂ ಹಾದುಹೋಗುತ್ತವೆ. ಮೊಟಾಬ ಎಂಬುದು ಇಂಥ ನದಿಗಳ ಪೈಕಿ ಒಂದು. ಅದು ಡಾಂಗೌ ಬಳಿ ಯುಬಾಂಗನ್ನು ಸೇರುತ್ತದೆ. ಲಿಕೌಲ, ಸಾಂಗ ಮತ್ತು ಅಲಿಮ ಇತರ ನದಿಗಳು. ಇವೆಲ್ಲವೂ ಬಹುತೇಕ ನೌಕಾಯಾನಕ್ಕೆ ಯೋಗ್ಯ. ಕಾಂಗೋ ಯುಬಾಂಗ್‌ಗಳ ಮೂಲಕ ಬ್ರ್ಯಾಜ಼ವಿಲ್‌ನಿಂದ 2400 ಕಿಮೀ ದೂರ ನೌಕಾಯಾನ ಸಾಧ್ಯ. ಈ ಮೈದಾನ ಪಶ್ಚಿಮದ ಕಡೆಗೆ ಕ್ರಮವಾಗಿ ಎತ್ತರವಾಗಿ ಸಾಗಿ, ಅಂತಿಮವಾಗಿ ಪ್ರಸ್ಥಭೂಮಿಯಲ್ಲಿ ಪರ್ಯವಸಾನವಾಗುತ್ತದೆ. ಇದನ್ನು ಅಲ್ಲಲ್ಲಿ ಬೇರ್ಪಡಿಸುವ ಕಣಿವೆಗಳುಂಟು. ಇದರ ಪಶ್ಚಿಮದಲ್ಲಿ ಪರ್ವತಶ್ರೇಣಿಗಳ ಶಿರಃ ಪ್ರದೇಶವಿದೆ. ದಕ್ಷಿಣದ ಕಡಲತೀರವೊಂದು ಕಿರುಮೈದಾನ.




ವಾಯುಗುಣ, ಸಸ್ಯಸಂಪತ್ತು : ಗರಿಷ್ಠ ಉಷ್ಣತೆಯಿರುವ ಪ್ರದೇಶದ ಪಟ್ಟಿ ಸ್ವಲ್ಪ ಉತ್ತರದ ಕಡೆಗಿದ್ದರೂ ಸಮಭಾಜಕ ವೃತ್ತ ಈ ರಾಜ್ಯದ ನಡುವೆ ಹಾದುಹೋಗುವುದರಿಂದ ಇಲ್ಲಿಯದು ಬಹುತೇಕ ಸಮಭಾಜಕ ವೃತ್ತ ಪ್ರದೇಶದ ವಾಯುಗುಣವೆಂದೇ ಹೇಳಬಹುದು. ವರ್ಷವೆಲ್ಲ ಇಲ್ಲಿ ಸರಾಸರಿ ಉಷ್ಣತೆ $20^0$ ರಿಂದ $27^0$ಸೆ.ಗಳ ನಡುವೆ ಇರುತ್ತದೆ. ವಾರ್ಷಿಕ ಮಳೆ 120 ಸೆಂಮೀ. ಮಳೆಗಾಡಿರುವುದು ಸಮಭಾಜಕ ವೃತ್ತದ ದಕ್ಷಿಣದ ಮೈದಾನದಲ್ಲಿ ಮಾತ್ರ. ಮಧ್ಯ ಆಫ್ರಿಕ ಗಣರಾಜ್ಯದ ಬಳಿಯಲ್ಲಿರುವ ಪ್ರದೇಶದಲ್ಲಿ ಮಳೆ ಕಡಿಮೆಯಾದ್ದರಿಂದ ಅದು ಮರ ಬೆರೆತ ಹುಲ್ಲುಮೈದಾನ. ಅದನ್ನು ಸವನ್ನಾ ಹುಲ್ಲುಗಾವಲು ಎನ್ನುವರು. ಮೇಯೋಂಬ್ ಪರ್ವತ ನೆರಳಿನ ನೆಲದಲ್ಲೂ ಬಾಟೆಕ್‌ನ ಮರಳು ಕಲ್ಲಿನ ಪ್ರದೇಶದಲ್ಲೂ ಇದೇ ಸಸ್ಯಪ್ರಕಾರವನ್ನು ಕಾಣಬಹುದು.

ವ್ಯವಸಾಯ, ಕೈಗಾರಿಕೆ : ಕಾಂಗೋದ ಕಾಡುಗಳನ್ನು ಅಲ್ಲಲ್ಲಿ ಕಡಿಯಲಾಗಿದೆ. ಉಳಿದ ಕಡೆಗಳಲ್ಲೂ ಅದನ್ನು ಮೊದಲಿನಂತೆ ಸ್ವಚ್ಛಂದವಾಗಿ ಬೆಳೆಯಗೊಟ್ಟಿಲ್ಲ. ಕೆಸಾವ ಇಲ್ಲಿಯ ಮುಖ್ಯ ಆಹಾರಬೆಳೆ. ಸಾಂಗ ಮತ್ತು ನಿಯಾರಿ ಕಣಿವೆಗಳು ರಫ್ತಿಗಾಗಿ ಬೆಳೆತೆಗೆಯಲು ಅನುಕೂಲಕರ. ನಿಯಾರಿ ಬೇಸಾಯ ಪ್ರದೇಶ ಕಾಂಗೋ–ಓಷನ್ ರೈಲು ಮಾರ್ಗಕ್ಕೆ ಹತ್ತಿರದಲ್ಲಿರುವುದರಿಂದ ಅಲ್ಲಿ ಅನೇಕ ತೋಟಗಳಿವೆ. ಕೆಸಾವ, ನೆಲಗಡಲೆ, ಅಗಸೆನಾರುಗಿಡ ಮತ್ತು ಕಬ್ಬುಗಳನ್ನು ಇಲ್ಲಿ ಬೆಳೆಯುತ್ತಾರೆ. ದನಕರುಗಳನ್ನು ಸಾಕುವುದೂ ಉಂಟು. ಇವೆಲ್ಲ ಎರಡನೆಯ ಮಹಾಯುದ್ಧದಿಂದೀಚೆಗೆ ಪ್ರಗತಿಗೊಂಡ ಉದ್ಯಮಗಳು. ಮುಸುಕಿನಜೋಳ, ಕಬ್ಬು, ಎಣ್ಣೆಬೀಜ ಮುಂತಾದ ಬೆಳೆಗಳ ಅಭಿವೃದ್ಧಿಗಾಗಿ ಪ್ರಯೋಗಕೇಂದ್ರಗಳೂ ಸಂಶೋಧನಕೇಂದ್ರಗಳೂ ಸ್ಥಾಪಿತವಾಗಿವೆ. ದಕ್ಷಿಣದ ದಟ್ಟವಾದ ಅರಣ್ಯವಿದ್ದು ಮರಕಡಿಯುವ–ಕೊಯ್ಯುವ ವೃತ್ತಿ ಪ್ರಚಲಿತವಾಗಿದೆ.

ಕಾಂಗೋದಲ್ಲಿ ಅನೇಕ ಖನಿಜ ನಿಕ್ಷೇಪಗಳುಂಟು. ಮಯೋಂಬದ ಚಿನ್ನ ಮತ್ತು ವಜ್ರ, ಮೌಟಿ ಮತ್ತು ಮಿಂಡೌಲಿಯ ಸೀಸ ಮತ್ತು ತಾಮ್ರ ಇವು ಮುಖ್ಯ. ಬ್ರ್ಯಾಜ಼ವಿಲ್ ಮತ್ತು ಪಾಯಿಂಟ್–ನಾಯಿರ್‌ಗಳಲ್ಲಿ ಕೆಲವು ಕೈಗಾರಿಕೆಗಳಿವೆ. ಕೈಗಾರಿಕೆಗಳು ಬಹಳಷ್ಟುಮಟ್ಟಿಗೆ ಕಾಫಿ ಮತ್ತು ಅರಣ್ಯ ಸಂಪನ್ಮೂಲಗಳನ್ನಾಧರಿಸಿವೆ.

ನೆಲಗಡಲೆ, ಕಕಾಮೊ, ಕಾಫಿ, ಮುಸುಕಿನಜೋಳ, ಬತ್ತ, ತಾಳೆಹಣ್ಣು, ಹೊಗೆ ಸೊಪ್ಪು, ತಾಳೆಬೀಜ, ತೆಂಗಿನಕಾಯಿ, ಮೀನು, ಮರ, ಚಿನ್ನ, ಸೀಸ, ಸತು, ತಾಮ್ರ, ತವರ, ಎಣ್ಣೆ, ಸಕ್ಕರೆ, ಬೀರ್, ಸಾಬೂನು–ಇವು ಮುಖ್ಯ ಉತ್ಪನ್ನಗಳು.

ವ್ಯಾಪಾರ, ಅಭಿವೃದ್ಧಿ, ಸಾರಿಗೆ : ಕಾಂಗೋದ ಅರ್ಥವ್ಯವಸ್ಥೆಗೆ ಗಟ್ಟಿ ಮರ, ವಜ್ರ, ಎಣ್ಣೆ, ಸಕ್ಕರೆ ಮುಂತಾದವುಗಳ ರಫ್ತು ಅಸ್ತಿಭಾರ. ಪ್ರತಿಯಾಗಿ ಅದು ಯಂತ್ರ, ಮೋಟಾರು, ಜವಳಿ, ಪೆಟ್ರೋಲಿಯಂ ವಸ್ತು, ಕಬ್ಬಿಣ, ಉಕ್ಕು, ಉಪ್ಪುಹಾಕಿ ಒಣಗಿಸಿದ ಮೀನು, ಕಾಗದ ಮತ್ತು ವೈನ್‌ಗಳನ್ನು ತರಿಸಿಕೊಳ್ಳುತ್ತದೆ. ಇದರ ಬಹುತೇಕ ವ್ಯಾಪಾರ ಫ್ರಾನ್ಸಿನೊಂದಿಗೆ. ಫ್ರಾನ್ಸಿನಿಂದಲೂ ಐರೋಪ್ಯ ಆರ್ಥಿಕ ಸಮುದಾಯದ ಇತರ ದೇಶಗಳಿಂದಲೂ ಅದು ಸಾಲ, ಆರ್ಥಿಕ ನೆರವು ಮತ್ತು ತಾಂತ್ರಿಕ ಸಹಾಯ ಪಡೆದಿದೆ. ಕೊಯಿತಾವಿನ ಮೇಲೆ ಕಟ್ಟೆ ಕಟ್ಟಿ 9,61,500 ಕಿವ್ಯಾ. ಜಲವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇದರಿಂದ ಅಲ್ಯೂಮಿನಿಯಂ, ಫೆರೊಮ್ಯಾಂಗನೀಸ್, ಫೆರೊ–ಸಿಲಿಕಾನ್ ಮತ್ತು ಕಾಗದದ ತಿರುಳು ಕೈಗಾರಿಕೆಗಳ ಸ್ಥಾಪನೆಯಾಗಿದೆ. ಗ್ಯಾಬನ್‌ನಲ್ಲಿ ಸಿಗುವ ಮ್ಯಾಂಗನೀಸ್ ಅದುರನ್ನು ಪಾಯಿಂಟ್–ನಾಯಿರ್ ರೇವಿಗೆ ಸಾಗಿಸಲು ರೈಲು ಮತ್ತು ಕೇಬಲ್ ಮಾರ್ಗ ನಿರ್ಮಾಣವಾಗಿದೆ. ಇವು ಬ್ರ್ಯಾಜ಼ವಿಲ್ ಕಾಂಗೋದ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳು.

ಯುಬಾಂಗ್ ಮತ್ತು ಕಾಂಗೋ ನದಿಗಳು ಮುಖ್ಯ ಒಳನಾಡಿನ ಜಲ ಸಂಚಾರಮಾರ್ಗಗಳು. ಕಾಂಗೋ ನದಿಯ ಮುಖ್ಯ ಬಂದರು ಬ್ರ್ಯಾಜ಼ವಿಲ್. ಇಲ್ಲಿಯ ರೈಲು ಮಾರ್ಗಗಳು ಎರಡು: ಒಂದು ಅಟ್ಲಾಂಟಿಕ್ ಸಾಗರ ಮುಖದಲ್ಲಿರುವ ಪಾಯಿಂಟ್–ನಾಯಿರ್‌ನಿಂದ ಬ್ರ್ಯಾಜ಼ವಿಲ್‌ವರೆಗೆ, ಇನ್ನೊಂದು ಬ್ರ್ಯಾಜ಼ವಿಲ್‌ನಿಂದ ಗ್ಯಾಬನ್‌ನಲ್ಲಿರುವ ಫ್ರಾನ್ಸ್ ವಿಲ್ ವರೆಗೆ. ಗ್ಯಾಬನ್–ಕಾಮಿಲಾಗ್ ರೈಲ್ವೆಗೂ ಮಸೆಂಜೊ–ನ್ಯಾಂಗಿಯ ಅರಣ್ಯ ಪ್ರದೇಶಕ್ಕೂ ಸಂಪರ್ಕ ಕಲ್ಪಿಸುವ ರಸ್ತೆಯ ನಿರ್ಮಾಣಕಾರ್ಯ 1963ರಲ್ಲಿ ಆರಂಭವಾಯಿತು. ಐರೋಪ್ಯ ಆರ್ಥಿಕ ಸಮುದಾಯದ ಸಹಾಯದಿಂದ ಕೈಕೊಳ್ಳಲಾದ ಈ ಕಾರ್ಯಕ್ರಮದಿಂದ ಬ್ರ್ಯಾಜ಼ವಿಲ್ ಕಾಂಗೋದ ಅರಣ್ಯೋತ್ಪನ್ನ ಶೇ.30ರಷ್ಟು ಅಧಿಕವಾಗುತ್ತದೆ. ಅಲ್ಲಿಯ ಮುಖ್ಯರಸ್ತೆಗಳು ಪಾಯಿಂಟ್–ನಾಯಿರ್‌ನಿಂದ ಬ್ರ್ಯಾಜ಼ವಿಲ್‌ಗೂ ಅಲ್ಲಿಂದ ಓಯೆಸೋಗೂ ಡಾಲಿಸೀಯಿಂದ ಗ್ಯಾಬನ್ ಮುಖಾಂತರ ಕ್ಯಾಮರೂನ್‌ಗೂ ಸಂಪರ್ಕ ಕಲ್ಪಿಸುತ್ತವೆ. ಕಾಂಗೋದಲ್ಲಿ ಆಂತರಿಕ ವಿಮಾನಯಾನದ ವ್ಯವಸ್ಥೆಯೂ ಉಂಟು. ಕಚ್ಚಾತೈಲ, ಮರಮುಟ್ಟು ಪ್ಲೈವುಡ್‌ಗಳು ಕಾಂಗೋದಿಂದ ರಫ್ತಾಗುವ ಪ್ರಮುಖ ಸರಕುಗಳು. ಯಂತ್ರಗಳು, ಸಾರಿಗೆ ಉಪಕರಣ, ಕಬ್ಬಿಣ ಮತ್ತು ಉಕ್ಕುಗಳು ಆಮದಾಗುತ್ತವೆ.

ಜನಸಂಖ್ಯೆ, ನಗರಗಳು ಮತ್ತು ಪಟ್ಟಣಗಳು : ಕಾಂಗೋದ ಒಟ್ಟು ಜನಸಂಖ್ಯೆಯಲ್ಲಿ ಬಂಟು ನೀಗ್ರೋಗಳೇ ಅಧಿಕ. ಐರೋಪ್ಯರು ಸು. 11,000. ಜನಸಾಂದ್ರತೆ: ಚ.ಕಿಮೀ ಗೆ 24.4 ಜನ. ಬಂಟು (ಅದರ ನಾನಾ ಉಪಭಾಷೆಗಳು) ಅಲ್ಲಿಯ ಜನರ ಭಾಷೆ. ಫ್ರೆಂಚ್ ಅಧಿಕೃತ ಭಾಷೆ. ಶೇ. 53.5ರಷ್ಟು ನಗರ ಜನಸಂಖ್ಯೆ. ಸಾಕ್ಷರತೆ ಶೇ. 62.7 ಇಲ್ಲಿ 6 ರಿಂದ 16 ವರ್ಷದವರೆಗೆ ಶಿಕ್ಷಣ ಕಡ್ಡಾಯ ಮತ್ತು ಖಚಿತ. ತಾಂತ್ರಿಕ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಫ್ರಾನ್ಸಿಗೆ ಹೋಗಬೇಕು. ದೇಶದಲ್ಲೆ ಉನ್ನತ ಶಿಕ್ಷಣ ಸೌಲಭ್ಯ ಕಲ್ಪಿಸುವುದಕ್ಕೆ ಸರ್ಕಾರ ಪ್ರಯತ್ನಿಸಿದೆ.

ಆಫ್ರಿಕದ ಫ್ರೆಂಚ್ ಸಮುದಾಯದ ಫ್ರ್ಯಾಂಕ್ (ಸಿ.ಎಫ್.ಎ.) ಅಲ್ಲಿಯ ನಾಣ್ಯ. 1,000 ಸಿ.ಎಫ್.ಎ. = 4.05 ಅಮೆರಿಕನ್ ಡಾಲರ್. ಆಗಸ್ಟ್ 15 ಕಾಂಗೋದ ಸ್ವಾತಂತ್ರ್ಯ ದಿನ.

ಬ್ರ್ಯಾಜ಼ವಿಲ್ ಅಲ್ಲಿಯ ಅತ್ಯಂತ ದೊಡ್ಡ ನಗರ ಮತ್ತು ರಾಜಧಾನಿ; ಜನಸಂಖ್ಯೆ 937580 (2002). ಪಾಯಿಂಟ್–ನಾಯಿರ್, ಇಂಫಾಂಡೊ, ಫೋಟ್–ರೌಸೆ, ಡಾಲಿಸೀ ಮತ್ತು ಜಂಬಾಲ ಇತರ ಪಟ್ಟಣಗಳು. (ಎ.ಎಂ.ಆರ್.)

**ಕಾಂಗೋ ಪ್ರಜಾತಂತ್ರ ಗಣರಾಜ್ಯ (ಜೈರೆ):** ಸಹರದಿಂದ ದಕ್ಷಿಣಕ್ಕಿರುವ ಉಪಖಂಡದ ಎರಡನೆಯ ಅತಿದೊಡ್ಡ ರಾಷ್ಟ್ರ. ಇದು 2,344,885 ಚ.ಕಿಮೀ ವಿಸ್ತಾರವಾದ ಭೌಗೋಳಿಕ ಪ್ರದೇಶವನ್ನು ಹೊಂದಿದೆ. ಇದರ ರಾಜಧಾನಿ ಕಿನ್‌ಶಾಸ್. ದ.ಅ. $5^0 30'$ – $13^0 25'$ ಹಾಗೂ ಪೂ.ರೇ. $11^0$, $31^0$–$25'$ ಗಳ ನಡುವೆ ಹಬ್ಬಿದೆ.

ಮೂಲತಃ ಬೆಲ್ಜಿಯನ್ ಕಾಲೋನಿ ಜೈರ್ ಮಧ್ಯ ಆಫ್ರಿಕದ ಪಶ್ಚಿಮ ಭಾಗದಲ್ಲಿದೆ. 1960 ಜೂನ್ 30 ರಂದು ಬೆಲ್ಜಿಯನ್ ಆಡಳಿತದಿಂದ ಮುಕ್ತಿ ಹೊಂದಿ ಸ್ವತಂತ್ರ ರಾಷ್ಟ್ರವಾಯಿತು. 1970ರ ಅಕ್ಟೋಬರ್‌ವರೆಗೂ ಜೈರೆನ್ನು ಗಣತಂತ್ರ ಕಾಂಗೋ ಎಂದು ಕರೆಲ್ಪಡುತ್ತಿತ್ತು. 1971ರ ಅನಂತರ ಹೆಸರನ್ನು ಬದಲಾಯಿಸಿ ಈ ಭಾಗದ ಕಾಂಗೋ ನದಿಯನ್ನು ಜೈರೆ ನದಿ ಎಂದೂ, ರಾಷ್ಟ್ರದ ಹೆಸರನ್ನು ಜೈರೆ ಎಂದು ನಾಮಕರಣ ಮಾಡಲಾಯಿತು.

ಈ ರಾಷ್ಟ್ರ 1980ರಲ್ಲಿ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿತು, 1990ರ ವೇಳೆಗೆ ರಾಷ್ಟ್ರದ ಆರ್ಥಿಕ ಮುಗ್ಗಟ್ಟು ಮುಗಿಲು ಮುಟ್ಟಿತು. 1994ರ ವೇಳೆಗೆ ಹುಟು ನಿರಾಶ್ರಿತರು–ಲಕ್ಷಾಂತರ ಜನ ರುವಾಂಡದಿಂದ ಜೈರೆಗೆ ವಲಸೆ ಬಂದರು.

1997ರಲ್ಲಿ ಅಲ್ಲಿನ ಅಧ್ಯಕ್ಷ ಮೊಬುಟು ಸಿಸಿ ಸಿಕೊ ಪದಚ್ಯುತಿಗೊಂಡರು, ಅಲ್ಲಿನ ಕ್ರಾಂತಿನಾಯಕ ಲಾರೆಂಟ್ ಕಬಿಲ ಸ್ವಯಂ ಘೋಷಿತ ಅಧ್ಯಕ್ಷರಾದರು. ಜೈರೆನ್ನು ಕಾಂಗೋ ಪ್ರಜಾಸತ್ತಾತ್ಮಕ ಗಣತಂತ್ರ ರಾಜ್ಯ ಎಂದು ಪುನಃ ನಾಮಕರಣ ಮಾಡಲಾಯಿತು.

ಕಾಂಗೋ ಪ್ರಜಾತಂತ್ರ ಗಣರಾಜ್ಯ ಮೊದಲಿನಿಂದಲೂ ಸುದ್ದಿಯಲ್ಲಿರುವ ರಾಷ್ಟ್ರ. ಇದಕ್ಕೆ ಕಾರಣ ಅದು ಹೊಂದಿರುವ ಸ್ಥಾನ ಮತ್ತು ಸನ್ನಿವೇಶ, ಜೊತೆಗೆ ಇದು ಹೊಂದಿರುವ ಅಗಾಧವಾದ ಸ್ವಾಭಾವಿಕವಾದ ಸಂಪನ್ಮೂಲ ಸಂಪತ್ತಿನಿಂದ ಮತ್ತು ಅದರ ಬಲಹೀನತೆಯಿಂದ ಈ ರಾಷ್ಟ್ರ ಬಹುಕಾಲದಿಂದ ಹಲವು ಹತ್ತು ಸಮಸ್ಯೆಗಳ ಆಗರವಾಗಿಯೇ ಉಳಿದಿದೆ. ಹಲವಾರು ಘಟನೆಗಳ ಕೇಂದ್ರ ಬಿಂದುವಾಗಿದೆ. ಪ್ರಮುಖವಾಗಿ ಅದರ ಸ್ವಾತಂತ್ರತೆ, 1960ರ ದಶಕದಲ್ಲಿ ಕಾಂಗೋ ಕ್ರಾಂತಿ ಮೊದಲಾಯಿತು. ಇದರಿಂದ ಶೀತಲ ಸಮರದ

ಭೀತಿ ಮಧ್ಯ ಆಫ್ರಿಕದಲ್ಲಿ ಕಾವಿನ ವಾತಾವರಣ ಮೊದಲುಗೊಂಡಿತು. ತದನಂತರ 1990ರ ದಶಕದಲ್ಲಿ ಈ ರಾಷ್ಟ್ರವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯವಲ್ಲದ ರಾಷ್ಟ್ರ ಎಂದು ಸುದ್ದಿಗೆ ಬಂದಿತು.




ಎಲ್ಲಾ ಗೊಂದಲಗಳ ಪ್ರಮುಖ ಕೇಂದ್ರ ಬಿಂದು ರಾಜಕೀಯವಾಗಿದ್ದು ಈ ದೇಶವು ಸುತ್ತಮುತ್ತಲಿನ 7 ರಾಷ್ಟ್ರಗಳ ಜೊತೆ ತನ್ನ ಗಡಿ ಪ್ರದೇಶವನ್ನು ಹಂಚಿಕೊಂಡಿರುವುದೇ ಆಗಿದೆ. ಅರಬ್ಬರ ವಶದಲ್ಲಿರುವ ಉತ್ತರ–ಸೂಡಾನ್ ದೇಶದಿಂದ ದಕ್ಷಿಣದ ಅಂಗೋಲವರಿಗೂ ಇದನ್ನು ರಾಜಕೀಯ ವೈರಿಗಳು ಸುತ್ತುವರಿದಿರುವ ರಾಷ್ಟ್ರ ಎಂದು ಸೂಕ್ಷ್ಮವಾಗಿ ಕರೆಯುತ್ತಾರೆ. ಲಿಬಿಯ, ಈಜಿಪ್ಟ್ ಹಾಗೂ ದಕ್ಷಿಣ ಆಫ್ರಿಕ ದೇಶಗಳು ಖಂಡದ ಉದ್ದಕ್ಕೂ ಬದ್ಧ ಶತ್ರು ರಾಷ್ಟ್ರಗಳಾಗಿ ಜೈರೆ ಹೊಂದಿದೆ. 1990ರಲ್ಲಿ ಜೈರ್ ರಾಜಕೀಯ ಗಡಿಗಳ ಸಮಸ್ಯೆ ಅಂಗೋಲ ಮತ್ತು ರುವಾಂಡ ಸಮಸ್ಯೆಗಳು ಅಂತಾರಾಷ್ಟ್ರೀಯ ವಿಷಯವಾಗಿ ವಿಶೇಷ ಗಮನ ಸೆಳೆದಿತ್ತು.

ಕಾಂಗೋ ಪ್ರಜಾತಂತ್ರ ಗಣರಾಜ್ಯದ ಸಮಸ್ಯೆ ತಾನು ಹೊಂದಿರುವ ಯಥೇಚ್ಛವಾದ ಖನಿಜ ಸಂಪತ್ತಿನಿಂದಲೆ. ಶತಮಾನಗಳಿಂದ ಇಲ್ಲಿ ಅಡಗಿರುವ ಖನಿಜ ಸಂಪತ್ತಿಗೆ ಹೊರ ರಾಷ್ಟ್ರಗಳು ನಿಖರವಾದ ಮೌಲ್ಯವನ್ನು ಗುರುತಿಸಲಿರಲಿಲ್ಲ. ಆದ ಕಾರಣ ಆ ಸಂಪತ್ತು ಮೌಲ್ಯರಹಿತವಾಗಿತ್ತು. ಇತ್ತೀಚಿನ ದಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕೋಬಾಲ್ಟ್ ಉತ್ಪಾದಿಸುವ ರಾಷ್ಟ್ರವಾಗಿ ಹೊರಬಂದಿದೆ. ಕೈಗಾರಿಕಾ ವಜ್ರಗಳು, ತಾಮ್ರ, ಸತು, ತವರ, ಮ್ಯಾಂಗನೀಸ್, ಚಿನ್ನ, ಟಂಗ್‌ಸ್ಟನ್, ನೈಯೋಬಿಯಂ, ಟೆಂಟಾಲಂ ಮೊದಲಾದ ಖನಿಜ ನಿಕ್ಷೇಪಗಳನ್ನು ಹೊಂದಿದೆ. ಅಟ್ಲಾಂಟಿಕ್ ಕರಾವಳಿಯ ಪ್ರದೇಶದಲ್ಲಿ ತೈಲ ನಿಕ್ಷೇಪವೂ ಕಂಡುಬಂದಿದೆ. ಕಲ್ಲಿದ್ದಲಿನ ನಿಕ್ಷೇಪವೂ ಪತ್ತೆಯಾಗಿದೆ. ಕೃಷಿಗೆ ಯೋಗ್ಯವಾದ ಭೂಮಿ, ಜಲವಿದ್ಯುಚ್ಛಕ್ತಿ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. 1980ರ ದಶಕದಲ್ಲಿ ಖನಿಜ ಉತ್ಪನ್ನದ ಸಾಮರ್ಥ್ಯ ದುರ್ಬಲಗೊಂಡ ಕಾರಣ ಆರ್ಥಿಕ ಮುಗ್ಗಟ್ಟು ತಲೆದೋರಿತು. 1994ರ ಅನಂತರ ತಾಮ್ರ ಮತ್ತು ಕೋಬಾಲ್ಟ್ ಉತ್ಪನ್ನ ಕುಂಟಿತಗೊಂಡಿತ್ತಾದರೂ ವಜ್ರಗಳ ಉತ್ಪಾದನೆಯೇ ಪ್ರಮುಖ ರಫ್ತು ಪದಾರ್ಥವಾಗಿ ಉಳಿದುಕೊಂಡಿದೆ.

ಯುರೋಪಿಯನ್ನರು 15ನೆಯ ಶತಮಾನದಲ್ಲಿ ಈ ದೇಶಕ್ಕೆ ಕಾಲಿಟ್ಟರು. ಅದಕ್ಕೂ ಮೊದಲು ಈ ದೇಶದಲ್ಲಿ ಕಬ್ಬಿಣ ಉತ್ಪಾದನೆ ಮಾಡಲಾಗುತ್ತಿತ್ತು. ದೂರದ ಪ್ರದೇಶಗಳ ಜೊತೆ ವಾಣಿಜ್ಯ ವ್ಯವಹಾರಗಳನ್ನು ಅಭಿವೃದ್ಧಿಪಡಿಸಿಕೊಂಡಿತ್ತು. ಇದರಿಂದ ಕಾಂಗೋ ದಕ್ಷಿಣ ಸವನ್ನಾದ ಬೃಹತ್ ರಾಜ್ಯವಾಗಿ ರೂಪುಗೊಂಡಿತ್ತು. ತಲೆಮಾರುಗಳಿಂದಲೂ ಈ ಪ್ರದೇಶ ಕರಕುಶಲ ಕೆತ್ತನೆ, ನೇಯ್ಗೆ, ಸಂಗೀತ–ನೃತ್ಯ ಹಾಗೂ ಪುರಾತನ ಕಲೆಗಳಿಗೆ ಹೆಸರುವಾಸಿಯಾಗಿತ್ತು.

ಕಳೆದ 5 ಶತಮಾನಗಳಿಂದ ಇಂದಿನ ಈ ದೇಶ ಪ್ರಪಂಚದ ಗಮನವನ್ನು ಸೆಳೆದಿದೆ. 1483ರಲ್ಲಿ ಪೋರ್ಚುಗೀಸ್ ನಾವಿಕ ಡಿಯೋಗೋ ಕಾಮೊ ಕಾಂಗೋ ನದಿಯ ಮಾರ್ಗವಾಗಿ ಜೈರೆಯನ್ನು ತಲುಪಿದ್ದ. ಇದಾದ ಅನಂತರ ಪೋರ್ಚುಗೀಸರು ಕರಾವಳಿಯ ರಾಜ್ಯದ ಜೊತೆ ವಾಣಿಜ್ಯ ವ್ಯವಹಾರಗಳನ್ನು ಅಭಿವೃದ್ಧಿಪಡಿಸಿಕೊಂಡರು. ಜೀತದಾಳುಗಳ ಮಾರಾಟದ ವ್ಯಾಪಾರದಲ್ಲಿಯೂ ಹೊಂದಾಣಿಕೆ ಮಾಡಿಕೊಂಡರು. ಇದರ ಪರಿಣಾಮ ಪೋರ್ಚುಗೀಸರ ವ್ಯವಸ್ಥಿತ ವ್ಯಾಪಾರ ಜಾಲ ಇಡೀ ಕರಾವಳಿಯ ರಾಜ್ಯವನ್ನು ವ್ಯಾಪಿಸಿತು. ಶತಮಾನಗಳು ಕಳೆದಂತೆ ಈ ವ್ಯಾಪಾರ ಜಾಲ ಅಟ್ಲಾಂಟಿಕ್ ಕರಾವಳಿಯವರಿಗೂ ಹಬ್ಬಿತು. 1885ರಲ್ಲಿ ಕಾಂಗೋ ಫ್ರೀ ಸ್ಟೇಟ್ ಅಸ್ತಿತ್ವಕ್ಕೆ ಬಂದಿತು. ಪರಿಣಾಮವಾಗಿ ಇದರ ಗಡಿಭಾಗಗಳ ಸಂಪರ್ಕಜಾಲ ನೈಲ್ ಕಣಿವೆ ಹಾಗೂ ಹಿಂದು ಮಹಾಸಾಗರದವರಿಗೂ ವ್ಯಾಪಿಸಿತು.

ಶತಮಾನಗಳಷ್ಟು ಹಳೆಯದಾದ ಸ್ಥಳೀಯ ಸಂಸ್ಕೃತಿ ಹೊರಜಗತ್ತಿನ ಸಂಪರ್ಕ ಜಾಲದಿಂದ ಸಾಕಷ್ಟು ಬದಲಾವಣೆಗೊಂಡಿತು. ಆಹಾರ ಬೆಳೆಗಳಾದ ಕಸಾವ ಮತ್ತು ಬತ್ತವನ್ನು ಪೋರ್ಚುಗೀಸರು ಮತ್ತು ಪೂರ್ವ ಕರಾವಳಿಯ ಆಫ್ರಿಕನ್ನರಾದ ಆಫ್ರೋ–ಅರಬ್ಬರು 19ನೆಯ ಶತಮಾನದಲ್ಲಿ ಪರಿಚಯಿಸಿದರು.

ಮೇಲ್ಮೈ ಲಕ್ಷಣ: ಭೌಗೋಳಿಕವಾಗಿ ದೇಶವನ್ನು ಕಾಂಗೋ ಕಣಿವೆ ಕೇಂದ್ರ ಭಾಗ, ಉತ್ತರ ಮತ್ತು ದಕ್ಷಿಣದ ಎತ್ತರ ಕಣಿವೆ ಪ್ರದೇಶ, ಪೂರ್ವ ಬೆಟ್ಟ ಪ್ರದೇಶ ಎಂದು ವಿಂಗಡಿಸಬಹುದು.

ಕಾಂಗೋ ಪ್ರಜಾತಂತ್ರ ಗಣರಾಜ್ಯ ಹೃದಯ ಭಾಗ ಕಾಂಗೋ ಕಣಿವೆಯ ಕೇಂದ್ರ ಪ್ರದೇಶವಾಗಿದೆ. ಈ ಪ್ರದೇಶ ಅಸಮಾನವಾದ ಉಬ್ಬು ತಗ್ಗುಗಳಿಂದ ಕೂಡಿದೆ. ಇದರ ಸರಾಸರಿ ಎತ್ತರ 44 ಮೀ. ಇಡೀ ರಾಷ್ಟ್ರದ 1/3 ರಷ್ಟು ಭೂಭಾಗ ಇದೇ ರೀತಿಯ ಸರಾಸರಿ ಎತ್ತರವನ್ನು ಹೊಂದಿದೆ. ಈ ಕಣಿವೆಯ ಉತ್ತರದ ಮತ್ತು ದಕ್ಷಿಣದ ಭಾಗಗಳು ಎತ್ತರವಾಗಿದ್ದು ಬೆಟ್ಟಗಳಿಂದ ಸುತ್ತುವರಿದಿದೆ. ಈ ಪ್ರದೇಶ ಕುರುಚಲು ಸಸ್ಯವರ್ಗವನ್ನು ಹಾಗೂ ಸವನ್ನ ಹುಲ್ಲುಗಾವಲನ್ನು ಹೊಂದಿದೆ. ದಕ್ಷಿಣದಲ್ಲಿ ಉಬ್ಬಿದಂತಿರುವ ಎತ್ತರವಾದ ಭೂ ಪ್ರದೇಶವು 1/3ರಷ್ಟು ಕಾಂಗೋ ಪ್ರಜಾತಂತ್ರ ಗಣರಾಜ್ಯವನ್ನು ಆವರಿಸಿದೆ. ಸು. 500–1000 ಮೀ ಎತ್ತರ. ಜೈರೆಯ ಪೂರ್ವ ಭಾಗ ಉನ್ನತವಾದ ಏರಿಳಿತಗಳಿಂದ ಕೂಡಿದೆ. ಇದಕ್ಕೆ ಹೊಂದಿಕೊಂಡಿರುವ ಗ್ರೇಟ್ ರಿಫ್ಟ್ ವ್ಯಾಲಿಯ ಪರ್ವತ ಪ್ರದೇಶ ಸು. 5000 ಮೀ ಎತ್ತರವಿದೆ. ತಗ್ಗಾದ ಭೂಭಾಗ ಕಣಿವೆಯಂತೆ ಹಬ್ಬಿರುವುದರಿಂದ ಇಲ್ಲಿ ಹಲವಾರು ಸರೋವರಗಳನ್ನು ಕಾಣಬಹುದು.

ನದಿವ್ಯವಸ್ಥೆ: ದೇಶದ ಬಹುಭಾಗ ಕಾಂಗೋ ನದಿಯ ವ್ಯವಸ್ಥೆಗೆ ಒಳಪಟ್ಟಿದೆ. ಕಾಂಗೋ ಹಾಗೂ ಅದರ ಉಪನದಿಗಳು ಈ ವಲಯದಲ್ಲಿ ಬೃಹತ್ ನದಿಜಾಲವನ್ನು ಹೊಂದಿದೆ. ಇಲ್ಲಿ ಹರಿಯುವ ನದಿಗಳು ನೌಕಾಯಾನಕ್ಕೆ ಹಾಗೂ ಜಲವಿದ್ಯುಚ್ಛಕ್ತಿಗೆ ಸಹಕಾರಿಯಾಗಿವೆ. ಕಾಂಗೋ ನದಿಯ ಹರಿವು ಸದಾ ಕಾಲವೂ ಸ್ಥಿಮಿತವಾಗಿರುವುದಕ್ಕೆ ಸಮಭಾಜಕ ವೃತ್ತದ ಎರಡೂ ಕಡೆಗಳಿಂದ ಉಪನದಿಗಳು ಕಾಂಗೋ ನದಿಗೆ ನೀರು ಸರಬರಾಜು ಮಾಡುತ್ತವೆ.

ವಾಯುಗುಣ: ಸಮಭಾಜಕ ವೃತ್ತದ ಉಷ್ಣವಲಯದಲ್ಲಿರುವುದರಿಂದ ಉಷ್ಣಾಂಶ, ಆರ್ದ್ರತೆ ಮತ್ತು ಮಳೆಯ ಪ್ರಮಾಣವೂ ಹೆಚ್ಚಾಗಿರುವುದು ಸಾಮಾನ್ಯ. ಸಮಭಾಜಕ ವೃತ್ತದ ಎರಡೂ ಕಡೆಗಳಲ್ಲಿ ಸದಾ ತೇವಯುತ ಹಾಗೂ ಶುಷ್ಕ ಋತುಗಳು ಕಂಡು ಬರುತ್ತವೆ. ವಾರ್ಷಿಕ ಸರಾಸರಿ ಉಷ್ಣಾಂಶ $25^{0}$ ಸೆ ವಾರ್ಷಿಕ ಮಳೆಯ ಪ್ರಮಾಣ 100–220 ಸೆಂಮೀ. ಕಾಂಗೋ ನದಿಯ ಹೃದಯ ಭಾಗದಲ್ಲಿ ಅತ್ಯಧಿಕ ಮಳೆಯಾಗುತ್ತದೆ. ಕಾಂಗೋ ನದಿಯ ಪಶ್ಚಿಮ ಭಾಗವಾದ ಬಕಾಮೊ ಪ್ರದೇಶದಲ್ಲಿ ವಾರ್ಷಿಕ 200 ಸೆಂಮೀ ಮಳೆಯಾಗುತ್ತದೆ.

ಕಾಂಗೋ ನದಿ ಕಣಿವೆಯಲ್ಲಿ ಉಷ್ಣವಲಯ ಮಳೆ ಕಾಡುಗಳು ಹಾಗೂ ನಿತ್ಯ ಹರಿದ್ವರ್ಣ ಕಾಡುಗಳು ಹಂಚಿಕೆಯಾಗಿವೆ. ಕಣಿವೆಯ ದಕ್ಷಿಣದ ಭಾಗ ಸಮುದ್ರಮಟ್ಟದಿಂದ ಸು. 2000 ಮೀ ಎತ್ತರವಿದೆ. ಈ ಭಾಗ ತೇವ ಮತ್ತು ಶುಷ್ಕ ವಾಯುಗುಣವನ್ನು ಹೊಂದಿದೆ.

ಆರ್ಥಿಕತೆ: ಇದು ಹಿಂದಿನಿಂದಲೂ ರಫ್ತು ಪ್ರಧಾನ ರಾಷ್ಟ್ರ. ತಾಮ್ರ, ಕೋಬಾಲ್ಟ್ ಮತ್ತು ಕಾಫಿಯನ್ನು ಪ್ರಮುಖವಾಗಿ ರಫ್ತು ಮಾಡುವ ರಾಷ್ಟ್ರ. ಪ್ರಮುಖವಾಗಿ ಗಣಿಗಾರಿಕೆಯನ್ನು ಸರ್ಕಾರವೇ ನಡೆಸುತ್ತಿದ್ದರೂ ವಂಚನೆ, ಭ್ರಷ್ಟಾಚಾರ, ಅನೀತಿ ರಾಜಕೀಯ, ದ್ವಂದ್ವ ನೀತಿಗಳಿಂದ ರಾಷ್ಟ್ರದ ಅರ್ಥವ್ಯವಸ್ಥೆ ದುರ್ಬಲವಾಗಿದೆ. 1990ರ ದಶಕದಲ್ಲಿ ಜೈರೆಯ ಅರ್ಥವ್ಯವಸ್ಥೆ ಸಂಪೂರ್ಣ ಕುಸಿತಕ್ಕೊಳಗಾಯಿತು.

ಕೃಷಿ ಕ್ಷೇತ್ರದಲ್ಲಿ ಶೇ. 65ರಷ್ಟು ಜನರಿದ್ದಾರೆ. ಶೇ. 32ರಷ್ಟು ರಾಷ್ಟ್ರೀಯ ಆದಾಯವನ್ನು ಕೃಷಿ ಕ್ಷೇತ್ರ ನೀಡುತ್ತಿದೆ. ಕೃಷಿ ಉತ್ಪನ್ನಗಳನ್ನು ರಫ್ತು ಮಾಡುವ ಸಾಮರ್ಥ್ಯವನ್ನು ರಾಷ್ಟ್ರ ಹೊಂದಿದ್ದರೂ ಅದರ ಉಪಯೋಗವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿಲ್ಲ. ಶೇ. 1 ರಷ್ಟು ಭೂಮಿಯನ್ನು ಕೃಷಿಗೆ ಅಳವಡಿಸಿಕೊಳ್ಳಲಾಗಿದೆ. ಹೀಗಾಗಿ ಆಹಾರ ಪದಾರ್ಥಗಳ ಉತ್ಪನ್ನಗಳಲ್ಲಿ

ಸ್ವಾಯತ್ತತೆಯನ್ನು ಹೊಂದಿಲ್ಲ. 1970ರಲ್ಲಿ ಕೃಷಿಯನ್ನು ರಾಷ್ಟ್ರೀಕರಣಗೊಳಿಸಲಾಯಿತು. ಆದರೂ ಈ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡದ ಕಾರಣ ಕೃಷಿ ಕ್ಷೇತ್ರ ಅಭಿವೃದ್ಧಿಯನ್ನು ಕಾಣಲಿಲ್ಲ. ಸಾರಿಗೆ-ಸಂಪರ್ಕ, ಧನಸಹಾಯ ಹಾಗೂ ಮೂಲಭೂತ ವ್ಯವಸ್ಥೆಗಳನ್ನು ಒದಗಿಸಲಿಲ್ಲ. 1990ರ ಸುಮಾರಿಗೆ ಕೃಷಿ ಕ್ಷೇತ್ರ ಆರ್ಥಿಕವಾಗಿ ತುಂಬ ಬಳಲಿತು. ಪ್ರಮುಖ ಬೆಳೆಗಳು-ಬತ್ತ, ಮುಸುಕಿನ ಜೋಳ, ಬಾಳೆ, ಆಲೂಗೆಡ್ಡೆ, ಹಣ್ಣುಗಳು, ಅವರೆ, ಕೆಸಾವ, ಪೀನಟ್ಸ್, ಯಾಮ್ಸ್, ಸೋರ್‌ಗಮ್ಸ್ ಮತ್ತು ಮಿಲ್ಲೆಟ್ಸ್.

ಜನಸಂಖ್ಯೆ: 2002ರ ಜನಗಣತಿ ಅಂಕಿ-ಅಂಶಗಳ ಪ್ರಕಾರ 60,085,804 ಜನಸಂಖ್ಯೆಯನ್ನು ಈ ರಾಷ್ಟ್ರ ಹೊಂದಿದೆ. ವಾರ್ಷಿಕ ಬೆಳೆವಣಿಗೆಯ ಪ್ರಮಾಣ ಶೇ. 3.3. ರಾಜಧಾನಿ ಕಿನ್‌ಶಾಸದ ಜನಸಂಖ್ಯೆ 5,06,830 (2002).

ಭಾಷೆ : ಜೈರೆಯಲ್ಲಿ ಸು. 250 ಭಾಷೆಗಳು ರೂಢಿಯಲ್ಲಿವೆ. ಫ್ರೆಂಚ್ ಆಡಳಿತ ಭಾಷೆ. ಇತರೆ ನಾಲ್ಕು ಭಾಷೆಗಳಾದ ಕಿಕೊಂಗೋ, ಶಿಲುಬಾ, ಲಂಗಾಲ ಮತ್ತು ಕಿಸ್ವಾಹಿಲಿ ಆಡಳಿತ ಭಾಷೆಗಳೆಂದು ಮಾನ್ಯತೆ ಪಡೆದಿವೆ. 250ಕ್ಕೂ ಅಧಿಕ ಸಮೂಹಗಳು ಈ ರಾಷ್ಟ್ರದಲ್ಲಿ ಕಂಡುಬರುತ್ತವೆ. ಇವರೆಲ್ಲ ಬಂಟು ಭಾಷೆಯ ಜನರೆ- ಇವರಲ್ಲಿ ಲೂಬ, ಕಾಂಗೋ, ಮೊಂಗೋ ಮತ್ತು ಲೂಂಡ ಎಂಬ ವರ್ಗದವರು ಪ್ರಮುಖ.

ಈ ದೇಶದ ಪ್ರಮುಖ ಆರ್ಥಿಕ ಬೆಳೆಗಳು-ಕಾಫಿ, ತಾಳೆ ಎಣ್ಣೆ, ಕಬ್ಬು, ಕೋಕೋ, ರಬ್ಬರ್ ಮತ್ತು ಚಹ. ಕಾಫಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಬೆಲೆ ರಫ್ತು ಪ್ರಮಾಣ ಇತ್ಯಾದಿಗಳನ್ನು ಸರ್ಕಾರವೇ ನಿಯಂತ್ರಿಸುತ್ತದೆ. ಶೇ. 30 ರಿಂದ 60 ರಷ್ಟು ಪ್ರಮಾಣದ ಕಾಫಿ ಬೆಳೆ ಕಳ್ಳ ವ್ಯವಹಾರದಿಂದ ರಾಷ್ಟ್ರದ ಹೊರಗೆ ಹೋಗುತ್ತಿದೆ.

ಗಣಿಗಾರಿಕೆ: ಖನಿಜಗಳ ಉತ್ಪಾದನೆ, ಶುದ್ಧೀಕರಣ ಮತ್ತು ಪೆಟ್ರೋಲಿಯಂ ಉತ್ಪಾದನೆಯಿಂದ ಶೇ. 17ರಷ್ಟು ರಾಷ್ಟ್ರೀಯ ಉತ್ಪಾದನೆ ಸಂದಾಯವಾಗುತ್ತಿದೆ. ತಾಮ್ರ, ಕೋಬಾಲ್ಟ್, ವಜ್ರ, ಬಂಗಾರ ಇವುಗಳ ರಫ್ತಿನಿಂದ ಶೇ. 75ರಷ್ಟು ಆದಾಯ ಗಳಿಕೆಯಾಗುತ್ತದೆ. ಈ ದೇಶ ಪ್ರಪಂಚದಲ್ಲೇ ಅತಿ ಹೆಚ್ಚು ಕೋಬಾಲ್ಟ್ ಉತ್ಪಾದಿಸುತ್ತದೆ. ತಾಮ್ರದ ಉತ್ಪಾದನೆಯಲ್ಲಿ 5ನೆಯ ಸ್ಥಾನವನ್ನೂ, ವಜ್ರಗಳ ಉತ್ಪಾದನೆಯಲ್ಲಿ ಎರಡನೆಯ ಸ್ಥಾನವನ್ನೂ ಹೊಂದಿದೆ. ರಾಷ್ಟ್ರದ ಅರ್ಥವ್ಯವಸ್ಥೆಯ ಸಿಂಹಪಾಲು ತಾಮ್ರಗಣಿಗಾರಿಕೆಯಿಂದಲೇ ಬರುತ್ತದೆ. 1990ರ ಅನಂತರ ತಾಮ್ರಗಣಿಗಾರಿಕೆ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸದಿರುವುದರಿಂದ ಆರ್ಥಿಕ ಸ್ಥಿತಿಯ ಕುಸಿತಕ್ಕೆ ಇದೂ ಒಂದು ಕಾರಣವಾಗಿದೆ.

ಪೆಟ್ರೋಲಿಯಂ: ಈ ದೇಶ 144 ಮಿಲಿಯನ್ ಬ್ಯಾರೆಲ್‌ನಷ್ಟು ತೈಲ ನಿಕ್ಷೇಪವನ್ನು ಹೊಂದಿದೆ ಎಂದು 1990ರ ಅಂಕಿ-ಅಂಶಗಳು ತಿಳಿಸುತ್ತವೆ. ಸಂಸ್ಕರಣ ಘಟಕಗಳ ಕೊರತೆಯಿಂದ ಉತ್ಪಾದನೆಯ ಪ್ರಮಾಣ ಇಳಿಮುಖವಾಗಿದೆ. 2001ರಲ್ಲಿ ಒಟ್ಟು 1248 ಸಾವಿರ ಟನ್ನು ಉತ್ಪಾದಿಸಿತ್ತು.

ಕೈಗಾರಿಕೆ: ಶೇ 17ರಷ್ಟು ರಾಷ್ಟ್ರೀಯ ಆದಾಯ ಕೈಗಾರಿಕೆಗಳಿಂದ ದೊರೆಯುತ್ತಿದೆ. ಕಿನ್‌ಶಾಸ ಮತ್ತು ಶಾಬ ಪ್ರದೇಶಗಳಲ್ಲಿ ಕೈಗಾರಿಕೆಗಳು ಕೇಂದ್ರೀಕರಣಗೊಂಡಿವೆ. ಆಹಾರ ಸಂಸ್ಕರಣೆ, ಬಟ್ಟೆಕೈಗಾರಿಕೆ, ಬೀರ್, ತಂಬಾಕು, ಲೋಹ ಕೈಗಾರಿಕೆ, ಪೀಠೋಪಕರಣ ಮತ್ತು ವಾಹನ ಜೋಡನೆ.

ವಿದ್ಯುಚ್ಛಕ್ತಿ: ಇದರ ಉಸ್ತುವಾರಿಯನ್ನು ಸರ್ಕಾರವೇ ವಹಿಸಿಕೊಂಡಿದೆ. ಈ ರಾಷ್ಟ್ರ 1 ಲಕ್ಷ ಮೆ.ವ್ಯಾ. ಜಲವಿದ್ಯುಚ್ಛಕ್ತಿ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. 1987ರಲ್ಲಿ 2486 ಮೆ.ವ್ಯಾ ನಷ್ಟು ಜಲವಿದ್ಯುಚ್ಛಕ್ತಿ ಉತ್ಪಾದಿಸಿತ್ತು. ಕಾಂಗೋ ಕೆಳದಂಡೆಯ ಇಂಗಾ ಆಣೆಕಟ್ಟೆಯ ಜಲವಿದ್ಯುತ್ ಘಟಕ ದೊಡ್ಡ ಪ್ರಮಾಣದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ. ಈ ಘಟಕ ಸು. 1725 ಕಿಮೀ. ಉದ್ದದ ಹೈ ವೋಲ್ಟೇಜ್ ಟ್ರಾನ್ಸ್‌ಮಿಷನ್ ಲೈನ್ ಹೊಂದಿದೆ. ಇದು ಗಣಿಗಾರಿಕಾ ಪ್ರದೇಶಕ್ಕೆ ವಿದ್ಯುತ್ ಸರಬರಾಜು ಮಾಡುತ್ತದೆ. (ಎ.ಎಸ್.ಎ.)

**ಕಾಂಚನಜುಂಗ:** ಪ್ರಪಂಚದ ಅತ್ಯುನ್ನತ ಪರ್ವತಶೃಂಗಗಳಲ್ಲಿ ಮೂರನೆಯದು. ಹಿಮಾಲಯ ಪರ್ವತಶ್ರೇಣಿಯಲ್ಲಿ ನೇಪಾಲ – ಸಿಕ್ಕಿಂ ಗಡಿಯ ಮೇಲೆ, ಉತ್ತರ ಅಕ್ಷಾಂಶ $27^0 42'$ ಮತ್ತು ಪೂರ್ವರೇಖಾಂಶ $88^0 11'$ನಲ್ಲಿ ಡಾರ್ಜಿಲಿಂಗಿಗೆ ವಾಯವ್ಯಕ್ಕೆ 74 ಕಿಮೀ ದೂರದಲ್ಲಿದೆ. ಸಮುದ್ರಮಟ್ಟದಿಂದ ಇದರ ಎತ್ತರ 8598 ಮೀ.

ಕಾಂಚನಜುಂಗವೆಂಬ ಹೆಸರು ಇದಕ್ಕೆ ಪ್ರಾಪ್ತವಾದದ್ದು ಟಿಬೆಟಿನ ಮೂಲದ ಕಾಂಗ್-ಚೆನ್-ಡ್ಜೋ-ನ್ಗ ಅಥವಾ ಯಾಂಗ್-ಛೆನ್-ಡ್ಜೋ-ನ್ಗ ಎಂಬ ನಾಲ್ಕು ಶಬ್ದಗಳಿಂದ. ಸಿಕ್ಕಿಂನಲ್ಲಿ ಇದಕ್ಕೆ ಪಂಚ ಮಹಾ ಹಿಮ ಸಂಚಯ ಎಂದು ಅರ್ಥ. ಆ ಸುತ್ತಿನ ಜನರ ಪುರಾಣ ಮತ್ತು ಧಾರ್ಮಿಕ ಆಚಾರಗಳಲ್ಲಿ ಈ ಪರ್ವತಶೃಂಗ ಬಹು ಮುಖ್ಯ ಪಾತ್ರ ವಹಿಸಿದೆ. ಪರಿಶೋಧಕನ ದೃಷ್ಟಿಗೆ ಬೀಳುವುದಕ್ಕೂ ಬಲು ಹಿಂದೆಯೇ ಇದರ ಇಳಿಜಾರುಗಳು ವ್ಯಾಪಾರಿಗಳಿಗೂ ದನಕಾಯುವವರಿಗೂ ಪರಿಚಿತವಾಗಿದ್ದುವು.

ಇದು ಕರ್ಕಾಟಕ ಸಂಕ್ರಾಂತಿವೃತ್ತದಿಂದ ಸ್ವಲ್ಪವೇ ಉತ್ತರದಲ್ಲಿರುವುದರಿಂದ ಉಷ್ಣವಲಯಕ್ಕಿಂತ ಬಲುದೂರವಿಲ್ಲ. ಆದರೆ ಎತ್ತರದಿಂದಾಗಿ ಇದರ ನೆತ್ತಿಭಾಗ ಬಲು ಶೀತ. ಸನಿಯದ ಡಾರ್ಜಿಲಿಂಗಿನಿಂದ ಇದು ಹಿಮಾವೃತ ಮಹಾ ಗುಡಾರದಂತೆ ಕಾಣುತ್ತದೆ.

ಕಾಂಚನಜುಂಗ ಪರ್ವತಪುಂಜದ್ದು ಬೃಹತ್ ಶಿಲುಬೆಯ ಆಕಾರ. ಉತ್ತರ-ದಕ್ಷಿಣ, ಪೂರ್ವ-ಪಶ್ಚಿಮವಾಗಿ ಇದರ ದೈತ್ಯಾಕಾರದ ಚತುರ್ಭುಜಗಳು ಚಾಚಿವೆ. ದಕ್ಷಿಣ ಭುಜದ ಮೇಲಿರುವುದು ಕಾಂಚನಜುಂಗದ ಎರಡನೆಯ ಶಿಖರ 8480 ಮೀ ಮೊದಲನೆಯ ಶಿಖರಕ್ಕೂ ಎರಡನೆಯದಕ್ಕೂ ನಡುವೆ ಇರುವುದು ಮೂರನೆಯ ಶಿಖರ. ನಾಲ್ಕನೆಯದು ಪಶ್ಚಿಮ ಬಾಹುವಿನ ಮೇಲಿದೆ. ಕಾಂಚನಜುಂಗದ ಚತುರ್ಬಾಹುಗಳೂ ನೆರೆಯ ಶಿಖರಗಳಲ್ಲಿ ಸಮಾವೇಶಗೊಳ್ಳುತ್ತವೆ. ದಕ್ಷಿಣ ಬಾಹುವಿಗೆ ಸೇರಿದ ಶಿಖರಗಳು ಟಾಲುಂಗ್ (7035 ಮೀ) ಮತ್ತು ಕಬ್ರು (7316 ಮೀ) ಪೂರ್ವಭುಜಕ್ಕೆ ಸೇರಿದಂತಿರುವುದು ಸಿಕ್ಕಿಮಿನಲ್ಲಿರುವ ಸಿಂವು (6815 ಮೀ). ಪಶ್ಚಿಮದ ಬಾಹುವಿಗೆ ಕೂಡಿಕೊಂಡಿರತಕ್ಕವು ನೇಪಾಲದ ಕಂಬಚೆನ್ (7858 ಮೀ) ಮತ್ತು ಜನ್ನು (7710 ಮೀ) ಉತ್ತರದ ಭುಜಕ್ಕೆ ಹೊಂದಿಕೊಂಡಂತೆ ಅವಳಿ (7350 ಮೀ) ನೇಪಾಳಗಿರಿ (7163 ಮೀ), ಲಾಂಗ್ಪೊ (6950 ಮೀ) ಮುಂತಾದ ಅನೇಕ ಎತ್ತರ ಶಿಖರಗಳಿವೆ. ಇವು ನೇಪಾಲ, ಸಿಕ್ಕಿಂಗಳ ಜಲಮೇಡಿನ ಮೇಲಿವೆ. ಈ ಕಡೆಯ ಬೆನ್ನೇಣು ಟಿಬೆಟಿಗೆ ಸಮೀಪ. ಕಾಂಚನಜುಂಗದ ನಾಲ್ಕು ಬಾಹುಗಳ ನಡುವೆ ಈಶಾನ್ಯ ಆಗ್ನೇಯ ನೈಋುತ್ಯ ವಾಯವ್ಯಗಳಲ್ಲಿ ಅನುಕ್ರಮವಾಗಿ ಜೆಮು, ಟಾಲುಂಗ್, ಕಾಂಚನಗಂಗ ಮತ್ತು ಯಾಲುಂಗ್ ಎಂಬ ನೀರ್ಗಲ್ಲ ನದಿಗಳು ಹರಿಯುತ್ತವೆ.

ಈಗ ತಿಳಿದಿರುವಂತೆ ಕಾಂಚನಜುಂಗದ ಪ್ರಥಮ ಭೂಪಟ ತಯಾರಾದದ್ದು 18ನೆಯ ಶತಮಾನದ ನಡುಗಾಲದಲ್ಲಿ ರಿನ್ ಜಿನ್-ನಂಗ್ಯಾಲ್ ಎಂಬ ಪಂಡಿತ ಪ್ರವಾಸಿಯಿಂದ. ಈ ಪ್ರದೇಶವನ್ನು ಪ್ರಪ್ರಥಮವಾಗಿ ಸಂದರ್ಶಿಸಿದ ಐರೋಪ್ಯ ಜೋಸೆಫ್ ಹೂಕರ್. 1848-49 ರಲ್ಲಿ ಈತ ಅಲ್ಲಿಗೆ ಭೇಟಿ ನೀಡಿ ಅಲ್ಲಿಯ ಪರಿಸರವನ್ನು ಬಣ್ಣಿಸಿದ. ಡೊಗ್ಲಾಸ್ ಫ್ರೆಷ್ ಫೀಲ್ಡ್ ಈ ಶೃಂಗವನ್ನು ಪ್ರದಕ್ಷಿಣೆ ಮಾಡಿ ಪರಿಶೀಲಿಸಿದ (1899). ಯಾಲುಂಗ್ ಕಣಿವೆಯತ್ತಣಿಂದ ಶಿಖರಾರೋಹಣ ಸಾಧ್ಯವೆಂದು ಸೂಚಿಸಿದವನಾತ. ಆಂಗ್ಲ-ಸ್ವಿಸ್ ಪರ್ವತಾರೋಹಿ ತಂಡವೊಂದು ಈ ಮಾರ್ಗದಲ್ಲಿ ಮೇಲೇರಲು ಪ್ರಯತ್ನ ನಡೆಸಿತಾದರೂ ಅದು ಸಿದ್ಧಿಸಲಿಲ್ಲ (1905). ಒಬ್ಬ ಸ್ವಿಸ್ಸನೂ ಮೂವರು ಹೊರೆಯಾಳುಗಳೂ ಹಿಮಾಶ್ಮಪ್ರವಾಹವೊಂದಕ್ಕೆ ಸಿಲುಕಿ ಪ್ರಾಣತೆತ್ತ ಫಲವಾಗಿ ಅದೊಂದು ದುರಂತ ಸಾಹಸವಾಯಿತು.

ಅನಂತರ ಪಾಶ್ಚಾತ್ಯರ ಗಮನ ಹರಿದದ್ದು ಕಾಲು ಶತಮಾನ ಕಳೆದ ಮೇಲೆ. ಅವರು ಈ ಪರ್ವತದ ಇತರ ಮುಖಗಳನ್ನು ಪರಿಶೋಧಿಸಿದರು. 1929-31ರಲ್ಲೂ ಪಾಲ್ ಬೌವರನ ನಾಯಕತ್ವದಲ್ಲಿ ಬವೇರಿಯನ್ ತಂಡವೊಂದು ಜಮ್ಮುವಿನ ಕಡೆಯಿಂದಲೂ 1930ರಲ್ಲಿ ಜಿ.ಓ. ಡಿಹ್ರೆನ್ ಪರ್ತನ ತಂಡ ಕಾಂಚನಜುಂಗ ಕಣಿವೆಯ ಕಡೆಯಿಂದಲೂ ಆರೋಹಣ ಪ್ರಯತ್ನ ನಡೆಸಿದುವು. ಈ ಪ್ರಯತ್ನಗಳ ಫಲವಾಗಿ ಸಿದ್ಧಿಸಿದ ಔನ್ನತ್ಯ 7620 ಮೀ ಈ ಮಟ್ಟದಿಂದ ಮುಂದಕ್ಕೆ ಬೌವರನ ತಂಡ ಏರಲಾಗಲಿಲ್ಲ (1931). ಅಲ್ಲಿದ್ದ ಹಿಮರಾಶಿ ಅಪಾಯಕಾರಿಯಾಗಿ ಅಪಘಾತಕ್ಕೆ ಕಾರಣವಾಯಿತು. ಕಾಂಚನಜುಂಗದ ರುದ್ರಭೀಕರತೆಯಿಂದಾಗಿ 1954ರ ವರೆಗೂ ಯಾರೂ ಅದನ್ನೇರುವ ಪ್ರಯತ್ನ ಕೈಕೊಳ್ಳಲಿಲ್ಲ.

ಯಾಲುಂಗ್ ಕಣಿವೆಯ ಕಡೆಯಿಂದ ಪ್ರಯತ್ನ ಮಾಡಿ ನೋಡಬಹುದೆಂಬುದು 1954ರಲ್ಲಿ ಗಿಲ್ಮರ್ ಲೂಯಿಸ್ ಮತ್ತು ಜಾನ್ ಕೆಂಪರ ಪ್ರವಾಸಗಳಿಂದ ದೃಢಪಟ್ಟ ಫಲವಾಗಿ 1955ರಲ್ಲಿ ಚಾರಲ್ಸ್ ಇವಾನ್ಸನ ನಾಯಕತ್ವದಲ್ಲಿ ಆರೋಹಣ ತಂಡವೊಂದು ಈ ಪ್ರಯತ್ನ ಕೈಕೊಂಡಿತು. ಆ ತಂಡ ಬುಡದ ಶಿಬಿರದಿಂದ 5486 ಮೀ ಹೊರಟು, ಮೂರು ವಾರಗಳ ಅನಂತರ 7315 ಮೀ ಎತ್ತರದಲ್ಲಿರುವ ವಿಶಾಲವಾದ ಚಾಚೊಂದನ್ನು ತಲಪಿತು. ಅದರ ಎತ್ತರದ ಕೊನೆಯಲ್ಲಿ 7620 ಮೀ ಪ್ರದೇಶವೇ ಆರೋಹಣತಂಡದ

ಐದನೆಯ ಶಿಬಿರ. ಮುಂದಿನ ಶಿಬಿರದ ಎತ್ತರ 8230 ಮೀ. ಅಲ್ಲಿಂದ ಆರೋಹಣದ ಕೊನೆಯ ಮಜಲು ಆರಂಭವಾಯಿತು. ಆಮ್ಲಜನಕದೊಂದಿಗೆ ಸಜ್ಜಾಗಿದ್ದ ಆರೋಹಿಗಳು ಆತ್ಮವಿಶ್ವಾಸದಿಂದ ಏರಿ ನಡೆದರು. 1955ರ ಮೇ 25 ರಂದು ಜೋ ಬ್ರೌನ್ ಮತ್ತು ಜಾರ್ಜ್ ಬ್ಯಾಂಡರೂ 26 ರಂದು ನಾರ್ಮನ್ ಹಾರ್ಡಿ ಮತ್ತು ಎಚ್. ಆರ್. ಎ. ಸ್ಟ್ರೀತರರೂ ಕಾಂಚನಜುಂಗವನ್ನೇರಿದರು. ಆದರೆ ಸಿಕ್ಕಿಮರಿಗೆ ಪವಿತ್ರವೆನಿಸಿರುವ ಶಿಖರದ ತಲೆ ಮೆಟ್ಟಬಾರದೆಂಬ ಅವರ ಪ್ರಾರ್ಥನೆಗೆ ಬೆಲೆ ಕೊಟ್ಟು ಶಿಖರಾರೋಹಿಗಳು ಅದರ ಶಿಖಾಪ್ರದೇಶಕ್ಕಿಂತ ಕೆಲವು ಗಜಗಳ ಹಿಂದಕ್ಕೆ ನಿಂತು ಹಿಂದಿರುಗಿದರು. *

**ಕಾಂಡಕೃಷಿ:** ಕೆಲವು ವಿಧದ ಗಿಡ ಮತ್ತು ಮರಗಳ ಕಾಂಡವನ್ನು ಕತ್ತರಿಸಿ ಭೂಮಿಗೆ ನೆಡುವುದರಿಂದ ಹೊಸ ಗಿಡಮರಗಳು ಉತ್ಪತ್ತಿಯಾಗುತ್ತವೆ. ಈ ವಿಧಾನದ ಬೇಸಾಯವೇ ಕಾಂಡಕೃಷಿ. ಉದಾಹರಣೆಗೆ: ಗುಲಾಬಿ, ದಾಸವಾಳದ ಗಿಡ, ನುಗ್ಗೆ ಮರ, ಹಿಪ್ಪು ನೇರಳೆ, ಕಬ್ಬು ಇತ್ಯಾದಿ.

ಮೊದಲು ಸ್ಥಿರ ಬೇಸಾಯ ಕಾಂಡ ಕೃಷಿಯಿಂದ ಉಂಟಾಗಿದೆ ಎಂದು ಪ್ರಮುಖ ಸಾಂಸ್ಕೃತಿಕ ಭೂಗೋಳ ಶಾಸ್ತ್ರಜ್ಞರಾದ ಕಾರ್ಲ್ ಸಾಯರ್‌ರವರ ಅಭಿಪ್ರಾಯವಾಗಿದೆ. ಕಾಂಡಕೃಷಿ ಮೊದಲು ಆಚರಣೆಗೆ ಬಂದದ್ದು ಆಗ್ನೇಯ ಏಷ್ಯದಲ್ಲಿ. ಏಕೆಂದರೆ ಇಲ್ಲಿನ ಜನರ ಮೂಲತಃ ಮೀನುಗಾರಿಕೆ ಅನಂತರ ಬೇಟೆಗಾರಿಕೆ ಅಥವಾ ಆಹಾರ ಸಂಗ್ರಹಣಾ ಕಾರ್ಯಗಳಲ್ಲಿ ತೊಡಗಿದ್ದರು. ಆಗ್ನೇಯ ಏಷ್ಯವು ವಿಪುಲವಾದ ನೀರಾವರಿ ಪ್ರದೇಶವನ್ನು ಹೊಂದಿದ್ದು ಇಲ್ಲಿನ ಮೀನುಗಾರಿಕಾ ಬುಡಕಟ್ಟಿನ ಜನರಿಗೆ ಸ್ಥಿರವಾಗಿ ಒಂದು ಕಡೆ ನೆಲೆಸಿ ಗಿಡಗಳನ್ನು ಬೆಳೆಯಲು ಪ್ರೋತ್ಸಾಹ ಮತ್ತು ಅವಕಾಶಗಳನ್ನು ಒದಗಿಸಿಕೊಟ್ಟಿದೆ, ಆಗ್ನೇಯ ಏಷ್ಯವು ವೈವಿಧ್ಯಮಯ ಸಸ್ಯ ತಳಿಗಳಿಗೆ ಉಪಯುಕ್ತವಾಗಿದೆ. ಕಾರಣ ಈ ಪ್ರದೇಶ ವಾಯುಗುಣ ಮತ್ತು ಭೂ ಸ್ವರೂಪಗಳು ವೈವಿಧ್ಯಮಯವಾಗಿದೆ. ಈ ಪ್ರದೇಶದಲ್ಲಿ ಮೊದಲು ಗೃಹಬಳಕೆಗಾಗಿ ಬೆಳೆಗಳನ್ನು ಬೆಳೆಯಲಾಯಿತು. ಪ್ರಮುಖ ಬೆಳೆಗಳೆಂದರೆ ಟಾರೋ, ಗೆಣಸು, ಬಾಳೆ ಮತ್ತು ತಾಳೆ ಮರಗಳು. ಆಗ್ನೇಯ ಏಷ್ಯ ಅಲ್ಲದೆ ಪಶ್ಚಿಮಆಫ್ರಿಕ ಹಾಗೂ ದಕ್ಷಿಣ ಅಮೆರಿಕದ ವಾಯವ್ಯ ಭಾಗಗಳಲ್ಲಿ ಈ ಬೇಸಾಯ ಕಂಡುಬರುತ್ತದೆ. ತಾಳೆ ಮರ ಮತ್ತು ಗೆಣಸು ಪಶ್ಚಿಮ ಆಫ್ರಿಕದ ಪ್ರಮುಖ ಬೆಳೆಯಾಗಿವೆ. ಮೊನಿಯಾಕ ಆಲೂಗಡ್ಡೆ ಮತ್ತು ಅರಾರೂಟ್ (ಬಾಣಗಡ್ಡೆ) ಬೆಳೆಗಳು ದಕ್ಷಿಣ ಅಮೆರಿಕದಲ್ಲಿ ಉಗಮಗೊಂಡಿವೆ.

ಆಗ್ನೇಯ ಏಷ್ಯದಿಂದ ಈ ಕೃಷಿ ಪದ್ಧತಿ ಪ್ರಪಂಚದ ಇತರ ಭಾಗಗಳಿಗೆ ಹರಡಲ್ಪಟ್ಟಿದೆ ಎಂದು ಸಾಯರ್ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉತ್ತರ ಚೀನದಿಂದ ಪೂರ್ವ ಜಪಾನ್ ಮತ್ತು ಪಶ್ಚಿಮ ಭಾರತದ ಮೂಲಕ ನೈರುತ್ಯ ಏಷ್ಯ, ಆಫ್ರಿಕದ ಉತ್ತರ ವಲಯ ಮತ್ತು ಮೆಡಿಟರೇನಿಯನ್ ಪ್ರದೇಶಗಳಿಗೆ ಹರಡಲ್ಪಟ್ಟಿತು. ದಕ್ಷಿಣ ಅಮೆರಿಕದ ವಾಯವ್ಯ ಭಾಗದಿಂದ ಲ್ಯಾಟಿನ್ ಅಮೆರಿಕದ ಉಷ್ಣ ವಲಯ ಪ್ರದೇಶಗಳಿಗೆ ಹರಡಿದೆ ಎಂದು ಸಾಯರ್‌ರವರು ಗುರುತಿಸಿದ್ದಾರೆ. (ಡಿ.ಆರ್.)

**ಕಾಂಡ್ಲ:** ಭಾರತದ ಪಶ್ಚಿಮ ತೀರದಲ್ಲಿರುವ ಒಂದು ಅಂತಾರಾಷ್ಟ್ರೀಯ ಬಂದರು. ಗುಜರಾತ್ ರಾಜ್ಯದ ಕಚ್ ಜಿಲ್ಲೆಯ ದಕ್ಷಿಣ ಕರಾವಳಿಯಲ್ಲಿ (ಉ.ಅ. $23^0$ ಪೂ.ರೇ $70^0$) ಅಂಜಾರ್‌ನಿಂದ ಆಗ್ನೇಯಕ್ಕೆ 19 ಕಿಮೀ ದೂರದಲ್ಲಿದೆ. ಇದು ಹಿಂದೆ ಒಂದು ಹಳ್ಳಿಯಾಗಿತ್ತು, ಮುಂದೆ ಇದನ್ನು ಒಂದು ಬಂದರನ್ನಾಗಿ ಪರಿವರ್ತಿಸಲಾಯಿತು (1930). ಸ್ವಾತಂತ್ರ್ಯಪೂರ್ವ ಭಾರತದ ಪಶ್ಚಿಮ ತೀರದ ಮುಖ್ಯ ಬಂದರುಗಳಲ್ಲೊಂದಾಗಿದ್ದ ಕರಾಚಿ ಪಾಕಿಸ್ತಾನಕ್ಕೆ ಸೇರಿದುದರಿಂದ ಭಾರತದ ಪಶ್ಚಿಮ ಮತ್ತು ವಾಯವ್ಯ ಭಾಗಗಳ ಸಾಗರಾಂತರ ವ್ಯಾಪಾರ ನಿರ್ವಹಿಸುವುದಕ್ಕೂ ಮುಂಬಯಿ ಬಂದರಿನ ಅತಿಯಾದ ಒತ್ತಡದ ನಿವಾರಣೆಗೂ ಇಂಥ ಒಂದು ಬಂದರಿನ ಅವಶ್ಯಕತೆಯಿತ್ತು. ಸಾರಿಗೆ ಮತ್ತು ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಬಂದರಿನ ಬೆಳವಣಿಗೆ ಮೊದಮೊದಲು ಸ್ವಲ್ಪ ಕುಂಠಿತವಾದರೂ 1960ರ ದಶಕದಲ್ಲಿ ಇದು ಗಮನಾರ್ಹವಾಗಿ ವೃದ್ಧಿ ಹೊಂದಿದೆ. ಕಚ್, ಉತ್ತರ ಗುಜರಾತ್, ರಾಜಸ್ತಾನ, ಪಂಜಾಬ್, ಜಮ್ಮು ಮತ್ತು ಕಾಶ್ಮೀರ, ದೆಹಲಿ, ಉತ್ತರ ಪ್ರದೇಶದ ಪಶ್ಚಿಮ ಭಾಗ – ಇವು ಕಾಂಡ್ಲ ಬಂದರಿನಿಂದ ನೇರ ಪ್ರಯೋಜನ ಪಡೆಯಬಹುದಾದ ಪ್ರದೇಶಗಳು. ಇದರ ಹಿನ್ನಾಡಿನ ವಿಸ್ತೀರ್ಣ 712,250 ಚ.ಕಿಮೀ ದೊಡ್ಡ ಪ್ರಮಾಣದ ಹಡಗುಗಳು ಬಂದು ಹೋಗುವುದಕ್ಕೆ ಈ ಬಂದರು ಅನುಕೂಲವಾಗಿದೆ.

ಇದು ಆಧುನಿಕ ಸುಸಜ್ಜಿತ ಬಂದರು. ಇಲ್ಲಿ 6 ಬರ್ಥ್, 5 ಲಂಗರು ಕಲ್ಲು, 3 ಸರಕು ಎತ್ತುವ ಯಂತ್ರ, ಬಂದರು ಕಟ್ಟೆ ಹಾಗೂ ಬಂದರು ಕಾಪುಗಳ ವ್ಯವಸ್ಥೆಯಿದೆ. ಜೊತೆಗೆ ಉಗ್ರಾಣ ವ್ಯವಸ್ಥೆಯಿದೆ. ಇತ್ತೀಚೆಗೆ ಅತ್ಯಾಧುನಿಕ ಸೌಲಭ್ಯಗಳನ್ನು ಅಳವಡಿಸಲಾಗಿದೆ. ಜೊತೆಗೆ ಆಮದು ಮತ್ತು ರಫ್ತು ಸರಕುಗಳ ವಿಲೇವಾರಿಗಾಗಿ ಪೂರಕವಾದ ಉತ್ತಮ ರೈಲು ಮತ್ತು ರಸ್ತೆ ಸಾರಿಗೆಯ ಸಂಪರ್ಕವಿದೆ. ಈ ಬಂದರಿನ ನೆರೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಉತ್ತೇಜಕವಾದ ವಿಶಾಲವಾದ ಪ್ರದೇಶವಿದೆ. ವೇಗವಾಗಿ ಬೆಳೆಯುತ್ತಿರುವ ಕೈಗಾರಿಕಾ ನಗರ. ಖನಿಜ ಮತ್ತು ಕೃಷಿ ಆಧರಿತ ಉದ್ಯಮಗಳ ಅಭಿವೃದ್ಧಿ ಹೊಂದಲು ಸ್ಥಾನೀಕರಣಗಳು ಇಲ್ಲಿ ಯೋಗ್ಯವಾಗಿವೆ. ಎಂಜಿನಿಯರಿಂಗ್, ಲವಣಸಂಬಂಧ ಪದಾರ್ಥಗಳನ್ನು ತಯಾರಿಸುವ ಉದ್ದಿಮೆ, ರಾಸಾಯನಿಕ ಗೊಬ್ಬರ, ತೈಲಶುದ್ಧೀಕರಣ, ರಬ್ಬರ್ ಮತ್ತು ಕೃತಕ ರೇಷ್ಮೆ ಜವಳಿ ಇತ್ಯಾದಿಗಳು ಅಭಿವೃದ್ಧಿಗೊಂಡಿವೆ.

ಕಾಂಡ್ಲ ಬಂದರು ಮತ್ತು ಅದರ ಸುತ್ತಲಿನ ಪ್ರದೇಶ ಮುಕ್ತ ವ್ಯಾಪಾರವಲಯ. ಭಾರತದಲ್ಲಿ ದೊರೆಯದ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲು ಈ ಬಂದರಿನಲ್ಲಿ ಸುಂಕವಿಮೋಚನೆಯ ಸೌಲಭ್ಯವಿದೆ. ರಫ್ತು ಆಧಾರಿತ ಸಲಕರಣೆ, ರಾಸಾಯನಿಕ ವಸ್ತುಗಳು ಮತ್ತು ಕಚ್ಚಾ ವಸ್ತುಗಳಿಗೆ ಆಮದು ಸುಂಕ ಮತ್ತು ಕೇಂದ್ರ ಅಬ್ಕಾರಿ ಸುಂಕದಿಂದ ವಿನಾಯಿತಿ ಮುಕ್ತ ವ್ಯಾಪಾರಕ್ಕೆ ಉತ್ತೇಜನವಾಗಿದೆ. ಹೀಗಾಗಿ ಈ ಬಂದರಿನ ಮೂಲಕ ಆಮದು ಹೆಚ್ಚು. ಇದನ್ನು ಭಾರತದ ಅತ್ಯಂತ ದೊಡ್ಡ ಆಮದು ಬಂದರು ಎನ್ನುವರು.

ಪ್ರತಿವರ್ಷ ಈ ಬಂದರು 40 ದಶಲಕ್ಷಟನ್ನುಗಳಿಗೂ ಹೆಚ್ಚು ಸರಕುಗಳನ್ನು ಆಮದು ಮತ್ತು ರಫ್ತು ಮಾಡುತ್ತದೆ. ಆಮದು ಸರಕುಗಳಲ್ಲಿ ಬಹಳಷ್ಟು ಪೆಟ್ರೋಲಿಯಂ ವಸ್ತುಗಳು ಸೇರಿರುತ್ತವೆ. ಜೊತೆಗೆ ಆಹಾರ ಧಾನ್ಯ, ಖನಿಜ, ಯಂತ್ರೋಪಕರಣ, ರಾಸಾಯನಿಕ ವಸ್ತು, ರಾಸಾಯನಿಕ ಗೊಬ್ಬರ ಇತ್ಯಾದಿ ಈ ಬಂದರಿನ ಮೂಲಕ ಆಮದಾಗುತ್ತವೆ. ಹತ್ತಿ, ಉಪ್ಪು, ಸಕ್ಕರೆ, ಚೂರ್ಣಾಸಿ ಮುಂತಾದವು ಬಂದರಿನ ಮೂಲಕ ರಫ್ತಾಗುತ್ತವೆ. ಈ ಬಂದರಿನ ಒತ್ತಡವನ್ನು ಕಡಿಮೆಮಾಡುವ ಪರ್ಯಾಯ ವ್ಯವಸ್ಥೆಗಾಗಿ 24 ಕಿಮೀ ದಕ್ಷಿಣದಲ್ಲಿ ಟುನ ಮತ್ತು ವಾದಿನರ್ ಎಂಬಲ್ಲಿ ಚಿಕ್ಕ ಬಂದರುಗಳನ್ನು ಭಾರತ ಸರ್ಕಾರ ಅಭಿವೃದ್ಧಿಗೊಳಿಸಿದೆ. (ಪಿ.ಎಂ.)

**ಕಾಂದಹಾರ್:** ಆಫ್ಘಾನಿಸ್ತಾನದ ದೊಡ್ಡ ನಗರ: ಅದೇ ಹೆಸರಿನ ಪ್ರಾಂತ್ಯದ ಮುಖ್ಯಸ್ಥಳ. ಸಮುದ್ರಮಟ್ಟಕ್ಕಿಂತ 1006 ಮೀ ಎತ್ತರದಲ್ಲಿ, ಕಾಬೂಲಿನ ನೈಋತ್ಯಕ್ಕೆ 512 ಕಿಮೀ ದೂರದಲ್ಲಿದೆ. ಪಾಕಿಸ್ತಾನದ ಕ್ವೆಟ್ಟ ಇರುವುದು ಇಲ್ಲಿಗೆ 208 ಕಿಮೀ ದೂರದಲ್ಲಿ ಆಗ್ನೇಯಕ್ಕೆ. ಜನಸಂಖ್ಯೆ 3,16,000 (2001). ಕಾಂದಹಾರದ ಸುತ್ತಮುತ್ತಣ ಸೀಮೆಯಲ್ಲಿರುವಂತೆ ಇಲ್ಲೂ ಪಠಾಣರೇ ಅಧಿಕ ಸಂಖ್ಯೆಯಲ್ಲಿದ್ದಾರೆ.

ಆಧುನಿಕ ಕಾಂದಹಾರ್ ನಗರದಿಂದ ಪೂರ್ವಕ್ಕೆ ಜನನಿಬಿಡವಾದ ಹಳೆಯ ನಗರವಿದೆ. ಅದನ್ನು ನಿರ್ಮಿಸಿದಾತ ಅಹಮದ್ ಷಾ ದುರಾನಿ (1724–73). ಹಳೆಯ ನಗರವನ್ನು ಬಳಸಿದ್ದ ಆಯಾಕಾರದ ಮಣ್ಣಿನ ಕೋಟೆ ಬಹುತೇಕ ಬಿದ್ದು ಹೋಗಿದೆ. ಆದರೂ ಅದರ ಕುರುಹುಗಳನ್ನು ಈಗಲೂ ಕಾಣಬಹುದು.

ಕಾಂದಹಾರದ ಸ್ಥಾನ ಮಹತ್ತ್ವಪೂರ್ಣವಾದದ್ದು. ವಾಯವ್ಯ ಆಫ್ಘಾನಿಸ್ತಾನದ ಹೆರಾತಿನಿಂದ ಭಾರತ–ಪಾಕಿಸ್ತಾನ ಉಪಖಂಡಕ್ಕೆ ಹೋಗುವ ಮಾರ್ಗ ಸಾಗುವುದು. ಇದರ ಮೂಲಕವೇ ಪಾಕಿಸ್ತಾನಕ್ಕೂ ಇದಕ್ಕೂ ರೈಲು ಮತ್ತು ರಸ್ತೆ ಸಂಪರ್ಕವಿದೆ. ಕಾಂದಹಾರದಿಂದ ಹೆರಾತಿನ ಮೂಲಕ ರಷ್ಯಾಕ್ಕೂ ಕಾಬೂಲಿಗೂ ಮಾರ್ಗಗಳಉಂಟು. ತೆಹರಾನ್–ದೆಹಲಿಗಳ ನಡುವೆ ಇರುವ ಕಾಂದಹಾರದಲ್ಲಿ 1960ರಲ್ಲಿ ಒಂದು ವಿಮಾನ ನಿಲ್ದಾಣವನ್ನು ನಿರ್ಮಿಸಲಾಯಿತು.

ಕಾಂದಹಾರ್ ಆಫ್ಘಾನಿಸ್ತಾನದ ಮುಖ್ಯ ವ್ಯಾಪಾರಕೇಂದ್ರ. ಇದು ಉಣ್ಣೆಗೆ ಅತ್ಯಂತ ಪ್ರಸಿದ್ಧ. ಇಲ್ಲೊಂದು ಆಧುನಿಕ ಉಣ್ಣೆ ಗಿರಣಿಯುಂಟು. ಇದು ಉತ್ಪಾದಿಸುವ ಬಟ್ಟೆ ಬಹುತೇಕ ಆಫ್ಘಾನಿಸ್ತಾನದಲ್ಲೇ ಮಾರಾಟವಾಗುತ್ತದೆ. ದ್ರಾಕ್ಷಿ, ಸೇಬು, ದಾಳಿಂಬೆ ಮುಂತಾದ ಹಣ್ಣುಗಳು ಹೇರಳವಾಗಿ ಇಲ್ಲಿಂದ ರಫ್ತಾಗುತ್ತವೆ. ಹತ್ತಿ, ಮಂಜಿಷ್ಠ, ಜೀರಿಗೆ ಮತ್ತು ಇಂಗು ಇತರ ರಫ್ತುಗಳು. ಇಲ್ಲಿಯ ಪೇಟೆಬೀದಿಗಳಲ್ಲಿರುವ ಅಂಗಡಿಗಳಲ್ಲಿ ಪ್ರಪಂಚದ ಎಲ್ಲ ಕಡೆಗಳಿಂದ ಬಂದ ಸರಕುಗಳನ್ನು ಪ್ರದರ್ಶಿಸಿರುವುದನ್ನು ಕಾಣಬಹುದು.

ಕಾಂದಹಾರ್ ಪ್ರಾಂತ್ಯ: ಕಾಂದಹಾರ್ ಪ್ರಾಂತ್ಯದ ಜನಸಂಖ್ಯೆ 8,86,000 (2001). ಉತ್ತರ ದಕ್ಷಿಣವಾಗಿ ಹಜಾರಾ ಪರ್ವತ ಪ್ರದೇಶದಿಂದ ರೆಜಿಸ್ತಾನ್ ಮರುಭೂಮಿ ಮತ್ತು ಪಾಕಿಸ್ತಾನದ ಗಡಿಯವರೆಗೂ ಪೂರ್ವಪಶ್ಚಿಮವಾಗಿ ಕಲಾತ್–ಇ–ಘಿಲ್ಜಾಯಿಯಿಂದ ಹೆಲ್ಮಂಡ್ ನದಿಯ ಸನಿಯದವರೆಗೂ ಈ ಪ್ರಾಂತ್ಯ ಹಬ್ಬಿದೆ. ಪ್ರಾಂತ್ಯದ ವಾಯುಗುಣ ಅತ್ಯಂತ ಹಿತಕರವಾಗಿರುವುದು ವಸಂತ ಋತುವಿನಲ್ಲಿ. ಸಹಿಸಲಾಸಾಧ್ಯವಾದ ಚಳಿಯೇನೂ ಇಲ್ಲಿಲ್ಲ. ಆದರೆ ಬೇಸಗೆ ಮಾತ್ರ ಬಲು ತಾಪಕರ; ಆಗ ಒಣಹವೆ ಇರುತ್ತದೆ. ನದಿಯಿರುವೆಡೆಯಲ್ಲಿ ನೀರಾವರಿ ಸೌಲಭ್ಯವುಂಟು. ಇಲ್ಲದಲ್ಲಿ ಬೆಟ್ಟದ ಬುಡದ ನೀರಿನ ಆಸರೆಯಿಂದ ನೆಲದಡಿಯಲ್ಲೇ ಕಾಲುವೆ ರಚಿಸಿ ನೀರು ಹಾಯಿಸಿಕೊಳ್ಳುವುದುಂಟು. ಪೂರ್ವಕ್ಕಿರುವ ಪ್ರದೇಶವೂ ನೀರಾವರಿ ಬೇಸಾಯಕ್ಕೊಳಪಟ್ಟಿದೆ. ಕಜಕೈ ಮತ್ತು ಅರ್ಗಂದಾಬ್ ಕಟ್ಟೆಗಳಿಂದ ಕಲ್ಪಿಸಲಾದ ನೀರಾವರಿ ಸೌಲಭ್ಯದಿಂದ ಕಾಂದಹಾರ್ ಪ್ರಾಂತ್ಯದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸಲಾಗಿದೆಯಲ್ಲದೆ ಕಾಂದಹಾರ್ ನಗರಕ್ಕೆ ವಿದ್ಯುತ್ ಸರಬರಾಜೂ ಅಗುತ್ತದೆ. ಹೊಸದಾಗಿ ಬೇಸಾಯಕ್ಕೊಳಪಡಿಸಿದ ನೆಲದಲ್ಲಿ ಆಫ್ಘನ್ ಅಲೆಮಾರಿಗಳನ್ನೂ ಕುಚಿ ಜನರನ್ನೂ ನೆಲೆಗೊಳಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಹಣ್ಣು, ಉಣ್ಣೆ, ಗೋದಿ, ಬಾರ್ಲಿ, ಬೇಳೆ, ಮಂಜಿಷ್ಠ (ಮ್ಯಾಡರ್), ಕುದುರೆ ಮಸಾಲೆ ಸೊಪ್ಪು (ಅಲ್ಫಾಲ್ಫ), ಕ್ಲೋವರ್, ಹೊಗೆಸೊಪ್ಪು–ಇವು ಮುಖ್ಯ ಬೆಳೆಗಳು. (ಕೆ.ಆರ್.ಆರ್.)

**ಕಾಂಬೋಡಿಯ:** ಇಂಡೋ–ಚೀನ ಪರ್ಯಾಯ ದ್ವೀಪದಲ್ಲಿರುವ ಒಂದು ರಾಜ್ಯ. ಹಿಂದೆ ಇದನ್ನು ಕಂಪೂಚಿಯ ಎಂದು ಕರೆಯುತ್ತಿದ್ದರು. ಉ.ಅ. $10^0 00'$–$14^0 55'$ ಮತ್ತು ಪೂ.ರೇ. $103^0$ ರಿಂದ $107^0 41'$ ಗಳ ನಡುವೆ ವಿಸ್ತರಿಸಿದೆ. ಉತ್ತರದಲ್ಲಿ ಲಾವೋಸ್, ಪೂರ್ವ ಆಗ್ನೇಯಗಳಲ್ಲಿ ದಕ್ಷಿಣ ವಿಯೆಟ್ನಾಂ ಆಗ್ನೇಯದಲ್ಲಿ ಸೈಯಾಂ ಖಾರಿ ಮತ್ತು ಪಶ್ಚಿಮೋತ್ತರಗಳಲ್ಲಿ ಥೈಯ್ಲೆಂಡ್ ಇವೆ. ವಿಸ್ತೀರ್ಣ 181,035 ಚ.ಕಿಮೀ. ಜನಸಂಖ್ಯೆ 900000 (2002). ರಾಜಧಾನಿ ಪನಾಂ–ಪೆನ್. ಇಲ್ಲಿನ ನಾಣ್ಯ ರಿಯಾಲ್. ಜನಸಾಂದ್ರತೆ ಚ.ಕಿಮೀ ಗೆ 75 ಜನ. ನಗರ ಜನಸಂಖ್ಯೆ ಶೇ. 18 ಮಾತ್ರ. ಸಾಕ್ಷರತೆ ಶೇ. 69.4.




ಮೇಲ್ಮೈ ಲಕ್ಷಣ, ವಾಯುಗುಣ: ಕಾಂಬೋಡಿಯ ಮುಖ್ಯವಾಗಿ ಮೈದಾನ ಪ್ರದೇಶ. ಒಮ್ಮೆ ಸಮುದ್ರದ ಖಾರಿಯಾಗಿದ್ದ ಈ ದೇಶದ ಬಹುಭಾಗ ಮೇಕಾಂಗ್ ನದಿ ತಂದು ಹಾಕಿದ ಮಣ್ಣಿನಿಂದಾಗಿ ಸಮುದ್ರದಿಂದ ಪ್ರತ್ಯೇಕಗೊಂಡು ಭೂಪ್ರದೇಶವಾಗಿ ಮಾರ್ಪಟ್ಟಿದೆ. ಉತ್ತರದಲ್ಲಿ ಥೈಯೆಲೆಂಡ್ ಗಡಿಯ ಅಂಚಿನಲ್ಲಿರುವ ಮರಳುಗಲ್ಲಿನ ಡಾಂಗ್ರೆಕ್ ಪರ್ವತಗಳು ಮಧ್ಯಕಾಂಬೋಡಿಯದ ತಗ್ಗು ಪ್ರದೇಶಗಳಲ್ಲಿ ಕೊಡುತ್ತವೆ. ಈ ಪ್ರದೇಶಗಳ ವಾಯವ್ಯ ಭಾಗದಲ್ಲಿ ಕಾರ್ಡಮಂ ಪರ್ವತಗಳು 1495 ಮೀ ಎತ್ತರವಾಗಿವೆ. ಸುಣ್ಣಕಲ್ಲಿನ ಎಲಿಫೆಂಟ ಶ್ರೇಣಿ ಕಾರ್ಡಮಂ ಪರ್ವತದಿಂದ ದಕ್ಷಿಣ ಹಾಗೂ ಆಗ್ನೇಯಕ್ಕೆ ಸಾಗಿ ತಗ್ಗುಪ್ರದೇಶದ ಬಹುಭಾಗವನ್ನು ತೀರದಿಂದ ಪ್ರತ್ಯೇಕಿಸುತ್ತದೆ. ಸಮುದ್ರ ತೀರದಲ್ಲಿ ಅನೇಕ ಕಿರುದ್ವೀಪಗಳು ಅಂಚುಗಟ್ಟಿ ನಿಂತಿವೆ. ಟಾನ್‌ಲೇಸ್ಯಾಪ್ ಅಥವಾ ಮಹಾಸರೋವರದ ಸುತ್ತಣ ಇಳುಕಲು ನಾಡಿನ ಎರಡು ಪಾರ್ಶ್ವಗಳಲ್ಲು ಪರ್ವತಗಳಿವೆ. ಮೇಕಾಂಗ್ ನದಿಯಾಚೆ, ದಕ್ಷಿಣ ವಿಯೆಟ್ನಾಂ ಕಡೆ ಎತ್ತರವಾದ ಭೂಪ್ರದೇಶಗಳುಂಟು. ಈಶಾನ್ಯದ ಕಟ್ಟಕಡೆಯಲ್ಲಿ, ಸ್ಟಂಗ್–ಟ್ರಂಗ್ ಬಳಿ, ಸೆ ಕಾಂಗ್ ಮತ್ತು ಸ್ರೆಪೊಕ್ ನದಿಗಳ ಜಲಾನಯನ ಭೂಮಿಗಳೂ ಮೀಕಾಂಗ್ ಜಲಾನಯನ ಭೂಮಿಯೂ ಒಮ್ಮುಖವಾಗುತ್ತವೆ. ಟಾನ್‌ಲೇ ಸ್ಯಾಪ್ ಪ್ರಾಚೀನ ಖಾರಿಯ ಅವಶೇಷ. ಸುತ್ತಣ ಮೇಲ್ಯಾಡುಗಳಲ್ಲಿ ಹರಿಯುವ ನದಿಗಳು ಈ ಸರೋವರಕ್ಕೆ ಬಂದು ಸೇರುತ್ತವೆ. ಒಣ ಋತುವಿನಲ್ಲಿ ಇದರ ಆಳ ಎಲ್ಲೂ 2 ಮೀ ಗಿಂತ ಹೆಚ್ಚಾಗಿರುವುದಿಲ್ಲ. ಆಗ ಮಹಾನಾಲೆಯ ಮೂಲಕ ಅದರ ನೀರು ಮೇಕಾಂಗ್ ನದಿಗೆ ಹರಿಯುತ್ತದೆ; ಆದರೆ ಜೂನ್ ತಿಂಗಳಲ್ಲಿ ಮೇಕಾಂಗ್ ನದಿಯ ನೀರು 12 ರಿಂದ 14 ಮೀ ಗಳಿಗೆ ಏರಿ ಅದೇ ನಾಲೆಯ ಮೂಲಕ ತನ್ನ ಪ್ರವಾಹವನ್ನು ಸರೋವರಕ್ಕೆ ಹರಿಸುತ್ತದೆ. ಆಗ ಟಾನ್‌ಲೇ ಸ್ಯಾಪಿನ ನೀರಿನ ಮಟ್ಟ 14–15 ಮೀ ಗಳಿಗೆ ಏರಿ ಅದು ಸುತ್ತಮುತ್ತಣ ಜೌಗು ಪ್ರದೇಶಗಳು, ಅರಣ್ಯಗಳು ಹಾಗೂ ವ್ಯವಸಾಯದ ಭೂಮಿಗಳನ್ನೆಲ್ಲ ಆವರಿಸುತ್ತದೆ.

ಕಾಂಬೋಡಿಯದ್ದು ಉಷ್ಣವಲಯದ ವಾಯುಗುಣ, ಮಾನ್ಸೂನ್ ಪ್ರಭಾವದಿಂದ ಮಳೆಯಾಗುತ್ತವೆ (ಸರಾಸರಿ 150 ಸೆಂಮೀ). ಪರಮಾವಧಿ ಮಳೆ ಸೆಪ್ಟೆಂಬರಿನಲ್ಲಿ. ಉಷ್ಣತೆಯ ಅಂತರ $20^0$ಸೆ.–$36^0$ಸೆ. ಪನಾಂ–ಪೆನ್‌ನಲ್ಲಿ ಸರಾಸರಿ ಉಷ್ಣ $27^0$ಸೆ. ಮೇಯಿಂದ ನವೆಂಬರ್‌ವರೆಗೆ ಮಳೆಗಾಲ. ಸಮುದ್ರ ತೀರದಲ್ಲಿ ಮಳೆ ಹೆಚ್ಚು (500 ಸೆಂಮೀ) ಒಳನಾಡಿಗೆ ಹೋದಂತೆ ಮಳೆ ಕಡಿಮೆ (150 ಸೆಂಮೀ).

ಸಸ್ಯ ಮತ್ತು ಪ್ರಾಣಿ: ಕಾಂಬೋಡಿಯದ ವಿಸ್ತೀರ್ಣದಲ್ಲಿ ಶೇ. 70 ಭಾಗ ಅರಣ್ಯಗಳಿಂದಾವೃತ. ಅಗಲ ಎಲೆಯುಳ್ಳ ಕಾಡು, ನಿತ್ಯಹರಿದ್ವರ್ಣದ ಮತ್ತು ಎಲೆಉದುರುವ ಕಾಡುಗಳಿವೆ. ಉತ್ತರದ ಪರ್ವಗಳ ಇಳಿಜಾರುಗಳಲ್ಲಿ ದಟ್ಟ ಮಳೆ ಅರಣ್ಯಗಳಿವೆ. ಮೈದಾನದಲ್ಲಿ ತೆರದಕಾಡುಗಳು ಮತ್ತು ಸವನ್ನ ಹುಲ್ಲುಗಾವಲಿದೆ. ಆನೆ, ಹುಲಿ, ಚಿರತೆ ಮತ್ತು ಕರಡಿಗಳು ಪ್ರಮುಖ ವನ್ಯಜೀವಿ. ಅಸಂಖ್ಯಾತ ವೈವಿಧ್ಯಮ ಪಕ್ಷಿ ಸಂಕುಲ ನದಿದಂಡೆಗಳಲ್ಲಿ ಕಂಡುಬರುತ್ತದೆ.

ಆರ್ಥಿಕತೆ: ಕಾಂಬೋಡಿಯದ ಜನ ಹೆಚ್ಚಾಗಿ ಕೃಷಿಯಲ್ಲಿ ತೊಡಗುವರು. ಜೀವನಾಧಾರ ಬೇಸಾಯ ರೂಢಿಯಲ್ಲಿದೆ. ಬತ್ತ ಅತ್ಯಂತ ಪ್ರಮುಖವಾದ ಬೆಳೆ. ಜೊತೆಗೆ ಮೆಕ್ಕೆ ಜೋಳ, ನೆಲಗಡಲೆ ಮತ್ತು ರಬ್ಬರ್ ಕೂಡ ಬೆಳೆಯುವರು. ಮೀನುಗಾರಿಕೆ ಮತ್ತು ಪಶು ಪಾಲನೆಯೂ ರೂಢಿಯಲ್ಲಿವೆ. ಜಾನುವಾರುಗಳಲ್ಲಿ ಎಮ್ಮೆ ಮುಖ್ಯವಾದುದು. ಅದನ್ನು ಕೃಷಿಕಾರ್ಯಗಳಿಗೆ ಬಳಸುವರು. ಟೋನ್ಲೆಸ್ಯಾಪ್ ಪ್ರಪಂಚದಲ್ಲೇ ಅತ್ಯಂತ ಸಮೃದ್ಧ ಶುದ್ಧನೀರಿನ ಮೀನುಗಾರಿಕೆ ಕೇಂದ್ರ.

ಕಾಂಬೋಡಿಯದಲ್ಲಿ ಖನಿಜ ಸಂಪತ್ತು ಮಿತ. ಶಕ್ತಿ ಸಾಧನ ಆಧರಿತ ಮತ್ತು ಕೆಲವು ಖನಿಜಗಳನ್ನು ಆಮದು ಮಾಡಿಕೊಳ್ಳಲಾಗುವುದು. ಕೈಗಾರಿಕೆಯಲ್ಲಿ ಹಿಂದುಳಿದಿದೆ. ಸಿಮೆಂಟ್, ಹತ್ತಿಗಿರಣಿ, ಕಾಗದ, ಪ್ಲೈವುಡ್ ತಯಾರಿಕೆ. ರಬ್ಬರ್ ವಸ್ತು ಮತ್ತು ಆಹಾರ ಸಂಸ್ಕರಣ ಉದ್ಯಮಗಳು ಅಭಿವೃದ್ಧಿಗೊಂಡಿವೆ.

ಸಾರಿಗೆ ಪ್ರಗತಿಯಲ್ಲಿದೆ. ಕೆಲವೇ ಸುಧಾರಿತ ರಸ್ತೆಗಳಿವೆ. ಅನೇಕ ಪ್ರದೇಶಗಳು ಸಾರಿಗೆ ಸೌಲಭ್ಯದಿಂದ ವಂಚಿತವಾಗಿವೆ. ಮಳೆಗಾಲದಲ್ಲಿ ಪ್ರವಾಹಗಳೇರ್ಪಡುವುದರಿಂದ ಒಳನಾಡಿನ ಜಲಸಾರಿಗೆ ಸಾಧ್ಯವಿಲ್ಲ. ಎರಡು ಪ್ರಮುಖ ರೈಲುಮಾರ್ಗಗಳಿವೆ: ಪನಾಂಪೆನ್–ಬ್ಯಾಂಕಾಕ್, ಪನಾಂ–ಪೆನ್–ಕೊಂಪಾಂಗ್, ಕೊಂಪಾಂಗ್ ಕಾಂಬೋಡಿಯದ ಏಕೈಕ ಬಂದರು. ಪನಾಂ–ಪೆನ್ ನೆರೆರಾಷ್ಟ್ರಗಳೊಂದಿಗೆ ವಾಯುಯಾನ ಸಂಪರ್ಕ ಹೊಂದಿದೆ.

ಕಾಂಬೋಡಿಯದಿಂದ ಅಕ್ಕಿ, ರಬ್ಬರ್, ಮೆಕ್ಕೆಜೋಳ, ಮೆಣಸು, ಚೌಬೀನೆ, ಮೀನು ಮತ್ತು ವನ್ಯಮೃಗಗಳು ರಫ್ತಾಗುತ್ತವೆ. ಹತ್ತಿ ಬಟ್ಟೆ, ಕಬ್ಬಿಣ–ಉಕ್ಕು, ಯಂತ್ರೋಪಕರಣ, ವಿದ್ಯುತ್‌ಯಂತ್ರಗಳು, ಸಲಕರಣೆಗಳು, ಔಷಧ, ರಾಸಾಯನಿಕ ವಸ್ತು, ಕಾಗದ, ಪೆಟ್ರೋಲಿಯಂ, ಸಿಮೆಂಟ್ ಹಾಗೂ ಹೈನು ಪದಾರ್ಥಗಳು ಆಮದಾಗುತ್ತವೆ.

ಕಾಂಬೋಡಿಯದಲ್ಲಿ ಇತ್ತೀಚಿಗೆ ವೈದ್ಯಕೀಯ ಮತ್ತು ಶಿಕ್ಷಣವನ್ನು ಸುಧಾರಿಸಲು ಕ್ರಮಕೈಗೊಳ್ಳಲಾಗಿದೆ. ಜನಸಂಖ್ಯೆಯಲ್ಲಿ ಶೇ. 87 ರಷ್ಟು ಖ್ಮೆರ್ ಅಥವಾ ಕಾಂಬೋಡಿಯನ್ನರು. ವಿಯೆಟ್ನಾಂ, ಥೈ, ಲಾವೋಸ್ ಮತ್ತು ಚೀನಿಯರಿದ್ದಾರೆ. ಇಂದು ಬೌದ್ಧಧರ್ಮ ಹೆಚ್ಚು ಪ್ರಚಲಿತವಾಗಿದೆ. (ಪಿ.ಎಂ.)

**ಕಾಕನಕೋಟೆ:** ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಸ್ಥಳ. ಮೈಸೂರಿಗೆ 77 ಕಿಮೀ ದೂರದಲ್ಲಿದೆ. ಕಾಡಾನೆಗಳನ್ನು ಹಿಡಿದು ಪಳಗಿಸುವ ಖೆಡ್ಡಾಕ್ಕೆ ಪ್ರಸಿದ್ಧ. ದಟ್ಟವಾದ ಕಾಡಿನಿಂದ ಕೂಡಿದ ಈ ಪ್ರದೇಶದಲ್ಲಿ ತೇಗ, ಹೊನ್ನೆ, ನಂದಿ, ಬೀಟೆ, ಮತ್ತಿ, ಸಾಲ, ಬಿದಿರು ಮುಂತಾದ ಮರಗಳು ಹುಲುಸಾಗಿ ಬೆಳೆದಿವೆ. ಇಲ್ಲಿ ತೇಗದ ಮರಗಳನ್ನು ಬೆಳೆಸಿರುವ ಅರಣ್ಯ ಇಲಾಖೆಗೆ ಸೇರಿದ ನೆಡುತೋಪುಗಳಿವೆ.

ಕಾಕನಕೋಟೆಯ ಕಾಡು ಆನೆಗಳ ಬೀಡು. ಆನೆಗಳಿಂದ ಬೆಳೆಗಳಿಗೂ ಜನಜೀವನಕ್ಕೂ ಆಗಾಗ ತೊಂದರೆ ಆಗುವುದು ಸಾಮಾನ್ಯ. 1873-1971ರ ವರೆಗೆ ನಡೆಸಿದ 36 ಖೆಡ್ಡಾಗಳಲ್ಲಿ 24ನ್ನು ಕಾಕನಕೋಟೆ ಪ್ರದೇಶದಲ್ಲೇ ನಡೆಸಲಾಯಿತು. 1968ರಲ್ಲಿ ಹಿಡಿಯಲಾದ ಆನೆಗಳ ಸಂಖ್ಯೆ 88; 1971ರಲ್ಲಿ 41. ಕಪಿಲಾ ನೀರಾವರಿ ಯೋಜನೆಯಿಂದ ಈ ಪ್ರದೇಶದ ಬಹುಭಾಗ ಮುಳುಗಡೆಯಾಗಿದೆ. (ಕೆ.ಆರ್.ಆರ್.)

**ಕಾಕಸಸ್:** ಕಪ್ಪುಸಮುದ್ರಕ್ಕೂ ಅಜ಼ಾಫ್ ಸಮುದ್ರಕ್ಕೂ ನಡುವೆ ಇರುವ ಕೆರ್ಚ್ ಜಲಸಂಧಿಯ ಬಳಿಯಿಂದ ಹಿಡಿದು ಕ್ಯಾಸ್ಪಿಯನ್ ಸಮುದ್ರದವರೆಗೆ ವಾಯವ್ಯದಿಂದ ಆಗ್ನೇಯಾಭಿಮುಖವಾಗಿ 1440 ಕಿಮೀ ದೂರ ಹಬ್ಬಿರುವ ಪರ್ವತ ಶ್ರೇಣಿ. ಆಲ್ಪ್ಸ್ ಪರ್ವತಕ್ಕಿಂತ ಪಿರೆನೀಸ್ ಪರ್ವತವನ್ನೇ ಹೆಚ್ಚಾಗಿ ಹೋಲುತ್ತದೆ. ಪಿರೆನೀಸಿನಂತೆ ಇದೂ ಎತ್ತರವಾಗಿದೆ, ಕಣಿವೆಗಳಿಂದ ಪ್ರತ್ಯೇಕಗೊಂಡಿಲ್ಲ. ಅತ್ಯಂತ ಎತ್ತರವಾದ ಶಿಖರಗಳು ಇದರ ಉಪಶ್ರೇಣಿಗಳಲ್ಲಿವೆ. ಈ ಶ್ರೇಣಿಯನ್ನು ಪಶ್ಚಿಮ, ಮಧ್ಯ ಮತ್ತು ಪೂರ್ವ ಭಾಗವೆಂದು ವಿಂಗಡಿಸಬಹುದು.

ಪಶ್ಚಿಮ ವಿಭಾಗ: ಇದು ಕೆರ್ಚ್ ಜಲಸಂಧಿಯ ಬಳಿಯಿಂದ ಉತ್ತರ ಇರಾನಿನ ಎಲ್‌ಬುರ್ಜ್ ಪರ್ವತದವರೆಗೆ ವ್ಯಾಪಿಸಿ, ಕಪ್ಪುಸಮುದ್ರಕ್ಕೆ ಸಮಾಂತರದಲ್ಲಿ 670 ಕಿಮೀ ದೂರ ಸಾಗಿರುವುದು. ಪ್ರಧಾನ ಶ್ರೇಣಿಗೂ ಸಮುದ್ರಕ್ಕೂ ನಡುವೆ ಇಕ್ಕಟ್ಟಾದ ಕಣಿವೆಗಳಿಂದ ಪ್ರತ್ಯೇಕವಾಗಿರುವ ಎರಡು ಸಮಾಂತರದ ಶ್ರೇಣಿಗಳಿವೆ. ಅಧಿಕ ಮಳೆ ಹಾಗೂ ಇತರ ಸೂಕ್ತವಾದ ವಾಯುಗುಣದ ಪರಿಸ್ಥಿತಿಯಿಂದ ಕಣಿವೆ–ಕಂದರಗಳಲ್ಲಿ ಸಸ್ಯಸಂಪತ್ತು ಸಮೃದ್ಧವಾಗಿದೆ. ಸಮುದ್ರದ ಕಡೆಗೆ ಕಡಿದಾದ ಇಳಿಜಾರುಗಳಲ್ಲೂ ಅಭೇದ್ಯವಾದ ಅರಣ್ಯವಿದೆ. ಕೆಲವು ಕಡೆ ಈ ಶ್ರೇಣಿಯ ಚಾಚುಗಳು 700–1050 ಮೀ ಎತ್ತರಕ್ಕಿವೆ. ಪ್ರಧಾನ ಶ್ರೇಣಿ ಪೂರ್ವದತ್ತ ಸಾಗಿದಂತೆ 3500–3650 ಮೀ ಗಳ ವರೆಗೆ ಏರುತ್ತದೆ. ಈ ವಿಭಾಗದಲ್ಲಿರುವ ಪ್ರಮುಖ ಶಿಖರಗಳಿವು: ಫಿಷ್ಟ್ (2450ಮೀ), ಓಷ್ಟೆನ್ (2800ಮೀ), ಪುಗುಜ್ (3250ಮೀ), ಸೈಷ್ (3800ಮೀ). ಪ್ರಧಾನ ಶ್ರೇಣಿ ಗಟ್ಟಿಯಾದ ಸ್ಫಟಿಕ ಮಾದರಿಯ ಕಲ್ಲುಬೆಟ್ಟಗಳಿಂದ ಕೂಡಿದೆ. ಉಪಶ್ರೇಣಿಗಳು ಸುಲಭವಾಗಿ ಬಿಡಿಸಬಹುದಾದ ಮೃದು ಕಲ್ಲುಪದರಗಳಿಂದ ಕೂಡಿವೆ, ಅತ್ಯಂತ ಎತ್ತರವಾದ ಶಿಖರಗಳಲ್ಲಿ ಹಿಮ ಮುಸುಕಿರುತ್ತದೆ. ಓಷ್ಟೆನ್ ಶೃಂಗದ ಪೂರ್ವದಲ್ಲಿ ಪ್ರಧಾನ ಪರ್ವತಪಂಕ್ತಿ ಸದಾ ಹಿಮದಿಂದ ಆವರಿಸಿದ್ದು, ಅಲ್ಲಿಂದ ಅನೇಕ ಹಿಮನದಿಗಳು ಉಗಮಿಸಿ ಕಣಿವೆಗಳಲ್ಲಿ ಸಾಗುತ್ತವೆ.

ಈ ವಿಭಾಗದಲ್ಲಿರುವ ಕೆಲವೇ ಕಣಿವೆ ಮಾರ್ಗಗಳು ಬಹಳ ಎತ್ತರದಲ್ಲಿವೆ. ಪರ್ವತದ ಉತ್ತರಭಾಗದ ಮೇಡುಗಳು ಇಳಿಜಾರುಗಳಿಂದ ಕೂಡಿಲ್ಲದಿದ್ದರೂ ಕಪ್ಪುಸಮುದ್ರ ಮತ್ತು ಕೂಬ್ಯಾನ್ ಕಣಿವೆಗೂ ಆ ಕಣಿವೆಯ ಆಚಿನ ಮೈದಾನ ಪ್ರದೇಶಕ್ಕೂ ಸಂಪರ್ಕ ಸುಲಭವಲ್ಲ. ಪಶ್ಚಿಮದಿಂದ ಪೂರ್ವಕ್ಕೆ ಹೋಗುವ ಕಣಿವೆ ಮಾರ್ಗಗಳಲ್ಲಿ ಮುಖ್ಯವಾದವು-ಷೇಖ್ (1650 ಮೀ) ಷೆಟ್ಲಿಭ್ (1850 ಮೀ), ಸೆಮಷ್ಕ (2100 ಮೀ), ಸಾಂಚಾರ್ (2435 ಮೀ), ಸಾಂಚಾರ್ ಘಾಟ್ ಮಾರ್ಗಕ್ಕೂ ಎಲ್‌ಬುರ್ಜ್ ಪರ್ವತಕ್ಕೂ ನಡುವೆ ಮುರುಖ (3500 ಮೀ), ಕ್ಲುಖೋರ್ (2900 ಮೀ) ಮತ್ತು ನಾಖರ್ (2930 ಮೀ) ಕಣಿವೆ ಮಾರ್ಗಗಳಿವೆ.

ಪಶ್ಚಿಮ ಕಾಕಸಸ್ ವಿಭಾಗದ ಪ್ರಾದೇಶಿಕ ಲಕ್ಷಣ ಮತ್ತು ಅನುಕೂಲ ವಾಯುಗುಣದಿಂದ ದಕ್ಷಿಣದ ತೆರಪಿನಲ್ಲಿ ಗಿಡಮರಗಳು ಒತ್ತಾಗಿಯೂ ಯಥೇಚ್ಛವಾಗಿಯೂ ಬೆಳೆದಿವೆ. ವಿವಿಧ ಮರಗಳನ್ನೂ ಬಳ್ಳಿಗಳನ್ನೂ ಒಳಗೊಂಡ ದಟ್ಟ ಕಾಡುಗಳು ಈ ಪ್ರದೇಶದ ಶೇ. 56 ಭಾಗವನ್ನು ಆಕ್ರಮಿಸಿಕೊಂಡಿವೆ. ಆಷ್, ಫರ್, ಪೈನ್, ಬೀಚ್, ಎಲ್ಮ್, ಲೈಮ್, ಯ್ಯೂ, ಎಲ್ಡರ್, ವಿಲೊ, ಓಕ್ ಮೊದಲಾದ ಮಧ್ಯ ಐರೋಪ್ಯ ವೃಕ್ಷಗಳು ಈ ಅರಣ್ಯಗಳಲ್ಲಿ ಬೆಳೆಯುತ್ತವೆ. ನಿತ್ಯಹಸುರಿನ ಪೈನ್ ಜಾತಿಯ ಮರಗಳೂ ಉಂಟು. ಅನೇಕ ಬಗೆಯ ಕುರುಚಲುಗಳನ್ನೂ ಜಲಸಸ್ಯಗಳನ್ನೂ ಇಲ್ಲಿ ಕಾಣಬಹುದು. ದ್ರಾಕ್ಷಿ, ಪೀಚ್, ದಾಳಿಂಬೆ, ಅಂಜೂರ ಮತ್ತು ಆಲಿವ್ ಇವು ಸಮುದ್ರಮಟ್ಟಕ್ಕೆ 457 ಮೀ ಎತ್ತರದ ಪ್ರದೇಶಗಳಲ್ಲಿ ಬೆಳೆಯುತ್ತವೆ. ಚೆಸ್ಟ್‌ನಟ್, ಏಪ್ರಿಕಾಟ್, ಸೇಬು, ಪೇರುಹಣ್ಣು, ಪ್ಲಂ, ಚೆರಿ, ಕಲ್ಲಂಗಡಿ, ಮುಸುಕಿನಜೋಳ, ಆಲೂಗೆಡ್ಡೆ, ಬಟಾಣಿ, ಹತ್ತಿ, ಬತ್ತ, ಹೊಗೆಸೊಪ್ಪು-ಇವು ಈ ಪರ್ವತಭಾಗದ ಬೆಳೆಗಳು.

ಪರ್ವತದ ಈ ಭಾಗದ ನೆರೆಯ ಕಡಲಕರೆ-ಬಹುತೇಕ ನೇರ, ರೇವುಪಟ್ಟಣಗಳು ವಿರಳ, ಕ್ರಿಮಿಯದ ಆಗ್ನೇಯ ತೀರದಲ್ಲಿರುವಂತೆ ಇಲ್ಲಿ ಹಲವು ಬೇಸಗೆಯ ಈಜುದಾಣಗಳಿವೆ. ನಾವರಸ್ಸೀಕ್ಸ್, ಗ್ಲೆಂಜಿಕ್, ಅನಪ, ಸುಖುಂ-ಕಾಲ್ಜ್, ಪೋಟಿ ಮತ್ತು ಬಾಟೂ ಮುಖ್ಯ ಲಂಗರು ನೆಲೆಗಳು.

ಮಧ್ಯ ವಿಭಾಗ: ಈ ವಿಭಾಗವನ್ನು ಪಶ್ಚಿಮ ಮತ್ತು ಪೂರ್ವಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮ ಉಪ ಭಾಗ ಎಲ್‌ಬುರ್ಜ್ ಪರ್ವತದಿಂದ ಪ್ರಾರಂಭವಾಗಿ ಕಾಸ್ಬೆಕ್ ಪರ್ವತ ಹಾಗೂ ಡೇರಿಯಲ್ ಘಾಟಿನ ವರೆಗೆ 320 ಕಿಮೀ ಅಂತರ ಹೊಂದಿದೆ. ಈ ಭಾಗದಲ್ಲಿ ಕಾಕಸಸ್ ಶ್ರೇಣಿಯಲ್ಲೇ ಅತ್ಯಂತ ಎತ್ತರವಾದ ಶಿಖರಗಳಿವೆ. ಉದಾ: ಷ್ಕಾರಾಟೌ (5200 ಮೀ) ಕಾಷ್ಟಾನ್-ಟೌ (5150 ಮೀ), ಎಲ್‌ಬುರ್ಜ್ (ಪಶ್ಚಿಮಶಿಖರ: 5630 ಮೀ ಪೂರ್ವಶಿಖರ 5590 ಮೀ), ಜೈಕಿಲ್ (5420 ಮೀ), ಡಿಕ್-ಟೌ (5197 ಮೀ), ಜಂಗಾ-ಟೌ (ಪಶ್ಚಿಮಶಿಖರ 5080 ಮೀ; ಪೂರ್ವಶಿಖರ 5037 ಮೀ), ಕಾಸ್ಬೆಕ್ (5043 ಮೀ), ಮಿಷಿರ್ಘಿ-ಟೌ (ಪಶ್ಚಿಮಶಿಖರ 5001 ಮೀ; ಪೂರ್ವ ಶಿಖರ 4983 ಮೀ), ಅಡಿಷ್ ಅಥವಾ ಕಾಟ್ಯುನ್-ಟೌ (4967 ಮೀ), ಗೆಸ್ಟೋಲ (4858 ಮೀ), ಟೆಟ್‌ನುಲ್ಡ್ (4852 ಮೀ), ಗಿಮಾರೈ-ಖೋಖ್ (4776 ಮೀ) ಉಷ್ಬ (ನೈರುತ್ಯ ಶಿಖರ 5001 ಮೀ; ಈಶಾನ್ಯ ಶಿಖರ 4694 ಮೀ), ಉಲ್ಲು-ಔಜ್ (4678 ಮೀ), ಆಡೈ-ಖೋಖ್ (4656 ಮೀ), ಟೆಖ್ ಟೆಂಜಿನ್ (4613 ಮೀ) ಮತ್ತು ಟಿಯುಟಿಯನ್-ಟೌ (4607 ಮೀ). ಪರ್ವತಾರೋಹಿಗಳು ಹೆಚ್ಚಾಗಿ ಹತ್ತುವ ಶಿಖರಗಳು ಕಾಸ್ಬೆಕ್ ಮತ್ತು ಎಲ್‌ಬುರ್ಜ್.

ಪ್ರಧಾನ ಪರ್ವತಶ್ರೇಣಿಯ ತುದಿ 3048 ಮೀ ಗಳಿಗೆ ಏರಿದರೂ ಅದರ ಉಪಶ್ರೇಣಿಯಾದ ಬೊಕೊಮೊಯ್ ಖ್ರಿಬೆಟ್ ಅದಕ್ಕಿಂತಲೂ ಎತ್ತರವಾಗಿದೆ. ಬೊಕೊಮೊಯ್ ಪರ್ವತಸಾಲಿನಲ್ಲಿ ಬೆಟ್ಟಗಳು ಮೆಟ್ಟಿಲು ಪಂಕ್ತಿಯಂತೆ ರಚಿತವಾಗಿ ಅನೇಕ ಚಾಚುಗಳಿಂದ ಕೂಡಿವೆ. ಇವುಗಳ ನಡುವೆ ಕಡಿದಾಗಿರುವ ಕಂದರಗಳಲ್ಲಿ ಹಿಮನದಿಗಳು, ಆಳವಾದ ಕಮರಿಗಳಲ್ಲಿ ಪ್ರವಹಿಸಿ, ಉತ್ತರದ ಇಳುಕಲುಗಳಲ್ಲಿ ಸರಿದು, ಟೆರೆಕ್ ಅಥವಾ ಕೂಬ್ಯಾನ್ ನದಿಯನ್ನು ಸೇರುತ್ತವೆ; ಕೆಲವು ಹಿಮನದಿಗಳು ದಕ್ಷಿಣದ ಇಳಿಮೇಡಿನಲ್ಲಿ ಹರಿದು, ರಿಯಾನ್ ಅಥವಾ ಕೂರಾ ನದಿ ಸೇರುತ್ತವೆ. ಮೇಲ್ಕಣಿವೆಗಳಲ್ಲಿ ಸರೋವರಗಳಾಗಲೀ, ಜಲಪಾತಗಳಾಗಲೀ ಕಾಣಬರುವುದಿಲ್ಲ.

ಮಧ್ಯ ಕಾಕಸಸ್ ಪರ್ವತದ ಪಶ್ಚಿಮಭಾಗದಲ್ಲಿ 2895-3048 ಮೀ ಗಳ ಎತ್ತರದಲ್ಲಿ ನಿರಂತರ ಹಿಮಟೋಪಿಯುಂಟು. ಇನ್ನೂ ಎತ್ತರದ ಈ ಭಾಗದಲ್ಲಿ 900 ಹಿಮನದಿಗಳು ಹರಿದು ಬರುತ್ತವೆ. ಅವು ಸಮುದ್ರಮಟ್ಟಕ್ಕೆ ನಿರ್ದಿಷ್ಟವಾದೊಂದು ಎತ್ತರದವರೆಗೆ ಹೆಪ್ಪುಗಟ್ಟಿದ್ದು ಅಲ್ಲಿಂದ ಕೆಳಕ್ಕೆ ಬಂದಾಗ ಕರಗಿ ಹರಿಯುತ್ತವೆ. ಇಲ್ಲಿಯ ಹಿಮನದಿಗಳ ಪೈಕಿ ಬೆಂಜಿಂಗ್ ಅಥವಾ ಉಲ್ಲುವಿನ ಉದ್ದ 17 ಕಿಮೀ : ಸಮುದ್ರಮಟ್ಟಕ್ಕೆ 1992 ಮೀ ವರೆಗೆ ಇಳಿಯುತ್ತದೆ. ಲೆಕ್ಸೈರ್ 12 ಕಿಮೀ; ಸೈಯ 10 ಕಿಮೀ; ಕಾರಗೊಂ 15 ಕಿಮೀ; ಡೈವಡೋರಕ್ 4 ಕಿಮೀ; ಮೈ. ಬಾಲ್ಡ್ ಅಥವಾ ಗೆರೆಷೋ 7 ಕಿಮೀ; ಟುಯ್ಬರ್ 10 ಕಿಮೀ; ಸನ್ನೆರ್ ಅಥವಾ ಜನ್ನೆಲ್ 10 ಕಿಮೀ; ಲರ್ಡ್‌ಖಿಟ್ ಹಿಮನದಿ 8 ಕಿಮೀ; ಪರ್ವತದ ಈ ಭಾಗದಲ್ಲಿ ಹಿಮನದಿಗಳು ಆವರಿಸಿರುವ ಪ್ರದೇಶ ಸು. 1684 ಚ.ಕಿಮೀ ಇವುಗಳಲ್ಲಿ ಅತ್ಯಂತ ಉದ್ದವಾದ ಮಾಲಿವ್ 58 ಕಿಮೀ ದೂರ ಹಿಮಗಡ್ಡೆಗಳಿಂದ ಕೂಡಿದೆ. ಕೆಲವು ಹಿಮನದಿಗಳು ಹಿಂದಕ್ಕೆ ಸರಿಯುತ್ತಿವೆಯೆಂಬ ಅಭಿಪ್ರಾಯವುಂಟು.

ಮಧ್ಯ ಕಾಕಸಸಿನ ಪಶ್ಚಿಮ ಭಾಗದ ಪರ್ವತಪುಂಜ ಬಹಳ ಕಡಿದು. ಅಲ್ಲಿ ದಕ್ಷಿಣ ರಷ್ಯಕ್ಕೂ ಆರ್ಮೇನಿಯ ಮತ್ತು ಏಷ್ಯ ಮೈನರ್ ಭಾಗಗಳಿಗೂ ಸಂಪರ್ಕ ಕಲ್ಪಿಸುವ ಡೇರಿಯಲ್ ಮತ್ತು ಮಾಮಿಸನ್ ಕಣಿವೆ ಮಾರ್ಗಗಳಿವೆ. ಕಾಕಸಸ್ ಪರ್ವತದ ಈ ಭಾಗದ ದಕ್ಷಿಣದ ಇಳಿಮೇಡುಗಳಲ್ಲಿ, ವಿಶೇಷವಾಗಿ ಸ್ವನೇಟಿಯ ಪ್ರದೇಶದಲ್ಲಿ ಗಿಡಮರಗಳು ಒತ್ತಾಗಿರುವುದಲ್ಲದೆ ಅಲ್ಲಿ ಬೆಳೆಯುವ ಪುಷ್ಪಗಳು ಆಲ್ಪ್ಸ್ ಪರ್ವತಗಳಲ್ಲಿ ಬೆಳೆಯುವವಕ್ಕಿಂತ ಹೆಚ್ಚು ವೈವಿಧ್ಯಪೂರಿತ. ವಿವಿಧ ಫರ್ನ್ ಸಸ್ಯಗಳು, ಬಳ್ಳಿಗಳು ಮತ್ತು ಗಗನಚುಂಬಿ ವೃಕ್ಷಗಳು ಈ ಪ್ರದೇಶವನ್ನು ರಮ್ಯಗೊಳಿಸಿವೆ. ಸುಂದರವಾದ ವನಸುಮಗಳು 3962 ಮೀ ಎತ್ತರದ ಉತ್ತರದ ಮೇಡುಗಳಲ್ಲಿ ಯಥೇಚ್ಛವಾಗಿ ಉಂಟು. ವಾಲ್‌ನಟ್ ಮರಗಳು 1650 ಮೀ ಮಟ್ಟದ ವರೆಗಿನ ಪ್ರದೇಶಗಳಲ್ಲಿಯೂ ದ್ರಾಕ್ಷಿ ಮತ್ತು ಹಿಪ್ಪುನೇರಳೆ 990 ಮೀ ಮಟ್ಟದಲ್ಲಿಯೂ ಬೆಳೆಯುತ್ತವೆ. ಗಿಡ ಮೂಲಿಕೆಗಳೂ ಪುಷ್ಪಾಂಚಿತ ನಿತ್ಯಹಸುರು ಗಿಡಗಳೂ ಹುಲ್ಲುಗಾವಲುಗಳೂ 2743 ಮೀ ಮಟ್ಟದ ವರೆಗೆ ಹರಡಿಕೊಂಡಿವೆ. ಪರ್ವತದ ಈ ಪ್ರದೇಶದಲ್ಲಿ ಗೋದಿ, ರೈ, ಓಟ್ಸ್, ಬಾರ್ಲಿ, ಬೀನ್ಸ್, ಹೊಗೆಸೊಪ್ಪು ಇವನ್ನು ಹೇರಳವಾಗಿ ಬೆಳೆಯುತ್ತಾರೆ.

ಮಧ್ಯಕಾಕಸಸಿನ ಪೂರ್ವಭಾಗ ಕಾಸ್ಬೆಕ್ ಪರ್ವತ ಹಾಗೂ ಡೇರಿಯಲ್ ಕಣಿವೆಗಳಿಂದ ಹಿಡಿದು ಬಾಬಾ-ಡಾಘ್ ಪರ್ವತದ ವರೆಗೆ 370 ಕಿಮೀ ದೂರ ವ್ಯಾಪಿಸಿದೆ. ಕಾಕಸಸ್ ಪರ್ವತಗಳು ಇಲ್ಲಿ 370 ಕಿಮೀ ಅಗಲವಾಗಿದೆ. ಸರಾಸರಿ ಎತ್ತರ 3050ಮೀ. ಈ ಭಾಗದಲ್ಲಿ ಸಹ ಶಿಖರಗಳಿವೆ. ಮುಖ್ಯವಾದುವು ಇವು; ಟಸ್ಮಿಯಾಕೊಂ-ಖೋಖ್ (4136ಮೀ), ಷಾನ್-ಟೌ (4430ಮೀ), ಕೆಡೆನ್ಸೈಸ್-ಮಾಗಲಿ (4218 ಮೀ), ಜಿಲ್ಲಾಖೋಖ್ (3854 ಮೀ), ಜಿಕಾರಿ (3830 ಮೀ) ಚೌಖಿ, ಜುಲ್ದಿ-ಡಾಘ್ (3690ಮೀ), ಅಲಾಖುನ್-ಡಾಘ್(3868ಮೀ) ಮತ್ತು ಮಾಫಿ-ಡಾಘ್ (3793 ಮೀ). ಈ ಭಾಗದ ಪ್ರಧಾನ ಪಂಕ್ತಿಯ ಶಿಖರಗಳಿವು ; ಬೋರ್ ಬಾಲೋ (3100 ಮೀ), ಮಹಾಷಾವಿ ಕಲ್ದೆ (3757 ಮೀ), ಮುರೋವ್ (3386 ಮೀ), ಅನ್‌ಸಾಲ್ (3883 ಮೀ), ಜಿನೋರ್-ರೊಸೊ (3389 ಮೀ) ಪ್ರಧಾನ ಶ್ರೇಣಿಗೆ ಮತ್ತೂ ಪೂರ್ವಕ್ಕಿರುವ ಶಿಖರಗಳಿವು: ಟ್ರಫಾನ್-ಡಾಘ್ (4196 ಮೀ), ಬಜಾರ್‌ಡ್ಯೆಯುಜ್ ಅಥವಾ ಕಿಚ್ಚೆನ್ (4489 ಮೀ). ಅದೇ ದಿಕ್ಕಿನಲ್ಲಿ, ಪ್ರಧಾನ ಪಂಕ್ತಿಯ ಪಕ್ಕಕ್ಕಿರುವ ಷಾ-ಡಾಘ್ (4253 ಮೀ), ಷಾಲ್‌ಬಜ್ (4168 ಮೀ) ಮತ್ತು ಮುಲ್ಕಾಮಡ್ (3886 ಮೀ).

ಉತ್ತರದಲ್ಲಿ ಪ್ರಧಾನ ಪಂಕ್ತಿಗೆ ಜೋಡಿಸಿದಂತಿದ್ದು ಪೂರ್ವಕ್ಕೆ ಕ್ಯಾಸ್ಪಿಯನ್ ಸಮುದ್ರದೊಳಕ್ಕೆ ಚಾಚಿರುವ ವಿಶಾಲವಾದ ದಘೇಸ್ತಾನ್ ಪ್ರಸ್ಥಭೂಮಿಯೂ ಉತ್ತರದಲ್ಲಿರುವ ಸುಂದರ ಟೆರೆಕ್ ಕಣಿವೆಗಳೂ ಪರ್ವತದ ಈ ಭಾಗದ ವೈಶಿಷ್ಟ್ಯ. ಆಂಡಿ ಪರ್ವತದ ಅಡ್ಡಸಾಲೇ ಈ ಪ್ರಸ್ಥಭೂಮಿಯ ಒಂದು ಕೊನೆ. ಪ್ರಸ್ಥಭೂಮಿಯ ಉಳಿದ ಪ್ರದೇಶದಲ್ಲಿ 2286-3810 ಮೀ ಗಳ ವರೆಗಿನ ಹಲವಾರು ಸಮಾನಾಂತರವಾದ ಹಾಗೂ ಒರಟು ಶೃಂಗಗಳುಂಟು. ಈ ಪ್ರದೇಶದಲ್ಲಿ ಮರಗಳಿಲ್ಲವೆಂದೇ ಹೇಳಬೇಕು.

ಈ ಭಾಗದ ಕೆಲವು ಶಿಖರಗಳಲ್ಲಿ ಅದರಲ್ಲೂ ಡಿಕ್ಲೋಸ್‌ಮಾಟ ಶಿಖರದಲ್ಲಿ ನೀರ್ಗಲ್ಲ ನದಿಗಳೂ ಹೆಪ್ಪುಗಟ್ಟಿ ಮರಳಿನಿಂದ ಕೂಡಿ ಹರಿಯುವ ನದಿಗಳೂ (ನೇವೆ) ಈ ಭಾಗದ ಕಣಿವೆಗಳು ಎಲ್‌ಬುರ್ಜ್ ಮತ್ತು ಕಾಸ್ಬೆಕ್ ಪರ್ವತಗಳ ನಡುವೆ ಇರುವ ಕಣಿವೆಗಳಿಗಿಂತ ತಗ್ಗಿನವು. ಬಲು ಎತ್ತರದ ಕಣಿವೆಗಳು ಪರ್ವತದ ಪೂರ್ವವಿಭಾಗದ ಕಣಿವೆಗಳಂತೆ ಕಡಿದಾಗಿದ್ದು ಭಾರಿ ಪ್ರಪಾತಗಳಿಂದ ಕೂಡಿವೆ. ಇಲ್ಲಿಯ ಕಣಿವೆಗಳ ಪೈಕಿ ಕೆಸ್ಟೊಮೊಯ ಗೋರ (2379 ಮೀ) ಇರುವುದು ಡೇರಿಯಲ್ ಕಣಿವೆಗೆ ದಕ್ಷಿಣದಲ್ಲಿರುವ ಜಾರ್ಜಿಯನ್ ಮಿಲಿಟರಿ ಮಾರ್ಗದಲ್ಲಿ. ಕೊಡೊರ್ (2835ಮೀ), ಸಟ್ಸ್‌ಖೇನಿ ಮತ್ತು ಗೂಡೂರ್ (3085 ಮೀ) ಹಾಗೂ ಸಾಲ್ವಟ್ (2828 ಮೀ) ಕಣಿವೆಗಳು ಅಖಿಟ ಮಿಲಿಟರಿ ಮಾರ್ಗದಲ್ಲಿವೆ. ಈ ಭಾಗದ ವೃಕ್ಷಗಳು ಪರ್ವತದ ಪಶ್ಚಿಮತುದಿಯ ವೃಕ್ಷಗಳನ್ನೇ ಹೋಲುತ್ತವೆ.

ಪೂರ್ವ ವಿಭಾಗ: ಕಾಕಸಸ್ ಪರ್ವತದ ಪೂರ್ವಭಾಗ ಬಾಬಾಡಾಘ್ ಪರ್ವತದ ಪೂರ್ವದಲ್ಲಿ ಕ್ರಮಕ್ರಮವಾಗಿ ಕ್ಯಾಸ್ಪಿಯನ್ ಸಮುದ್ರದ ಕಡೆಗೆ ಇಳಿದು ಅಪ್ಷಿರಾನ್ ಪರ್ಯಾಯದ್ವೀಪದಲ್ಲಿ ಕೊನೆಗೊಳ್ಳುತ್ತದೆ. ಆದರೂ ಅದು ಕ್ಯಾಸ್ಪಿಯನ್ ಸಮುದ್ರದ ಜಲಮಟ್ಟದ ತಳದಲ್ಲಿಯೇ ಮುಂದುವರಿದು ಸಮುದ್ರಕ್ಕೆ ಪೂರ್ವದಿಕ್ಕಿನಲ್ಲಿ ಕೋಪೆಟ್-ಡಾಘ್ ಪರ್ವತದ ರೂಪದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ. ಆ ಪರ್ವತ ಇರುವುದು ಪರ್ಷಿಯದ ಈಶಾನ್ಯ ಅಂಚಿನಲ್ಲಿ. ಕಾಕಸಸ್ ಪರ್ವತದ ಪೂರ್ವಭಾಗದಲ್ಲಿ ಯಾವ ಶಿಖರವೂ 2743 ಮೀ ಗಿಂತ ಹೆಚ್ಚು ಎತ್ತರದಲ್ಲಿಲ್ಲ. ಪ್ರಧಾನ ಶ್ರೇಣಿಯ ಶಿಖರಗಳಲ್ಲಿ ಹಿಮ ಕವಿಯಯುವುದಿಲ್ಲ. ಅಲ್ಲಿಯ ಪ್ರಮುಖ ಘಾಟ್ ಮಾರ್ಗ 1327 ಮೀ ಮಟ್ಟದಲ್ಲಿರುವ ಆಲ್ಪಿ-ಅಗೆಜ್.

ಪರ್ವತದ ಈ ಭಾಗದಲ್ಲಿ ಉತ್ತರ–ದಕ್ಷಿಣ ದಿಕ್ಕುಗಳ ನಡುವೆ ವಾಯುಗುಣದಲ್ಲಿ ಬದಲಾವಣೆ ಕಾಣುವುದಲ್ಲದೆ ಪ್ರಕೃತಿಯಲ್ಲಿಯೂ ವ್ಯತ್ಯಾಸವುಂಟು. ಹೆಚ್ಚು ಮಳೆಯಾದರೂ ಬೆಚ್ಚನೆಯ ವಾಯುಗುಣ ಇರುವ ನೈಋತ್ಯದ ಇಳಿಜಾರುಗಳ ಮತ್ತು ಕಣಿವೆಗಳ ಪ್ರದೇಶವೆಲ್ಲ ಮನಮೋಹಕವಾದ ಅರಣ್ಯಗಳಿಂದ ತುಂಬಿದೆ. ಆದರೆ ಒಳ ನಾಡಿನ ಸುರಾಂ ಅಥವಾ ಮೆಸ್ಕೆಸ್ ಶ್ರೇಣಿಗಳಲ್ಲಿ ಬೆಂಗಾಡುಗಳೇ ಹೆಚ್ಚು. ಬಂಡೆಗಳಿಲ್ಲದ ಕಡೆ ಪರ್ವತದ ಇಳಿಮೇಡುಗಳು ಹುಲ್ಲುಗಾವಲುಗಳಿಂದ ಕೂಡಿವೆ. ಆದರೆ ನದಿಯ ಕಮರಿಗಳಲ್ಲಿಯ ಪ್ರಕೃತಿದೃಶ್ಯ ಅಲ್ಪ್ಸ್ ಪರ್ವತದ ಕಣಿವೆಗಳ ದೃಶ್ಯಕ್ಕಿಂತಲೂ ಹೆಚ್ಚು ಮನೋಹರ. ಬಾಕು–ಬಟೂಮಿ ರೈಲುಮಾರ್ಗ ಸುರಾಂ ಪರ್ವತ ಸಾಲುಗಳಿಗೆ ಅಡ್ಡಲಾಗಿ ಹಾದುಹೋಗುವುದು.

ನದಿಗಳು: ಕಾಕಸಸಿನ ಪ್ರಮುಖ ನದಿಗಳೆಲ್ಲ ಪರ್ವತದ ಮಧ್ಯಭಾಗದಲ್ಲಿಯೆ ಉಗಮಿಸುತ್ತವೆ. ರಭಸವಾಗಿ ಹರಿಯುವ ಮಜಿಂಟ ಪಿಜೌವ್, ಬಿಜೈಬ್ ಮತ್ತು ಕೊಡೊರ್ ನದಿಗಳು ಎಲ್‌ಬುರ್ಜ್ ಪರ್ವತದ ಪಶ್ಚಿಮದಲ್ಲಿ ಹರಿಯುತ್ತವೆ. ಇನ್ಗುರ್, ಟಷ್ಕೆನಿಸ್–ಟಷ್ಕಲಿ, ರಿಯಾನ್ ಮತ್ತು ಅದರ ಕೂಡುನದಿಗಳು ಉದ್ದವಾಗಿರುವುವಲ್ಲದೆ ರಭಸವಾಗಿಯೂ ಹರಿಯುತ್ತವೆ. ಅವು ಎಲ್‌ಬುರ್ಜ್ ಮತ್ತು ಕಾಸ್ಬೆಕ್ ಪರ್ವತಗಳ ನಡುವಣ ವಿಶಾಲ ಹಿಮಪ್ರದೇಶಕ್ಕೆ ಸೇರಿದವು. ಕಾಕಸಸ್ ಪರ್ವತದ ಮಧ್ಯಭಾಗದಲ್ಲಿ ಹುಟ್ಟಿ ಹರಿಯುವ ನದಿಗಳು ದಕ್ಷಿಣಕ್ಕೆ ಹರಿಯುವ ನದಿಗಳಿಗಿಂತ ಉದ್ದ. ಅವುಗಳಲ್ಲಿ ಮುಖ್ಯವಾದವು ಕೂಬ್ಯಾನ್, ಟೆರೆಕ್, ಮಲ್ಕಾ ಬಕ್ಸಾನ್, ಛೆಗೆಂ, ಛೆರೆಕ್, ಉರುಖ್ ಮತ್ತು ಅರ್ಡನ್. ಟೆರೆಕ್ ನದಿಯ ಉತ್ತರಕ್ಕೆ ಬೆಂಗಾಡಿನಲ್ಲಿ ಹರಿಯುವ ಕೂಮಾ ನದಿ ಹುಟ್ಟುವುದು ಪ್ಯಟಿಗೋರಸ್ಕ್ ಬಳಿಯ ಪರ್ವತಗಳ ನಡುವೆ. ಇದು ಸಮುದ್ರವನ್ನು ಸೇರುವುದಕ್ಕೆ ಮುಂಚೆ ಬಂಜರು ಮೈದಾನಗಳಲ್ಲಿ ಬಹಳವಾಗಿ ಇಂಗುತ್ತದೆ. ದಘೇಸ್ತಾನದ ಎತ್ತರವಾದ ಮಲೆನಾಡು ಪ್ರಾಂತ್ಯಗಳಲ್ಲಿ ಹರಿಯುವ ನಾಲ್ಕು ಪ್ರಮುಖ ನದಿಗಳು ಸಂಗಮಿಸಿದಾಗ ತಳೆಯುವ ಹೆಸರು ಸಮೂರ್, ಈ ನದಿ ಬೀಳುವುದು ಕ್ಯಾಸ್ಪಿಯನ್ ಸಮುದ್ರಕ್ಕೆ. ಕಾಕಸಸ್ ಪರ್ವತದ ಹಿರಿಯ ನದಿಗಳು–ಮುಖ್ಯವಾಗಿ ಕೂಬ್ಯಾನ್, ರೀಯಾನ್ ಮತ್ತು ಟೆರೆಕ್ ನದಿಗಳು–ವಿದ್ಯುಚ್ಛಕ್ತಿಯ ಉತ್ಪಾದನೆಗೂ ವ್ಯವಸಾಯಕ್ಕೂ ಉಪಯುಕ್ತವಾದುವು.

ಜ್ವಾಲಾಮುಖಿಗಳು: ಕಾಕಸಸಿನ ಪ್ರಧಾನ ಮತ್ತು ಉಪಶ್ರೇಣಿಗಳು ಸಂಧಿಸುವ ಹಲವು ಕಡೆಗಳಲ್ಲಿ ನಂದಿತ ಜ್ವಾಲಾಮುಖಿಗಳುಂಟು. ಅವುಗಳಲ್ಲಿ ಪ್ರಸಿದ್ಧವಾದವು ಎಲ್‌ಬುರ್ಜ್ ಮತ್ತು ಕಾಸ್ಬೆಕ್ ಪರ್ವತಗಳಲ್ಲಿವೆ. ಕಾಕಸಸ್ ಪರ್ವತದ ಪೂರ್ವ ಅಂಚಿನಲ್ಲಿರುವ ಷೆಮುಖ ನಗರದ ಬಳಿ ಜ್ವಾಲಾಮುಖಿ 1859, 1872 ಮತ್ತು 1902ರಲ್ಲಿ ಸ್ಫೋಟಿಸಿತು. ಕಾಕಸಸಿನ ಉತ್ತರದ ತಪ್ಪಲಿನ ಉದ್ದಕ್ಕೂ ಅನೇಕ ಕಡೆ ಖನಿಜಯುಕ್ತ ಬಿಸಿನೀರಿನ ಚಿಲುಮೆಗಳಿವೆ. ಪ್ಯಾಟಿಗೋರಸ್ಕ್, ಝೆಲೆಸ್ನೋಮೊಡಸ್ಕ್, ಎಸ್ಸೆನ್‌ಟುಕಿ ಮತ್ತು ಕ್ಲಿಸ್ಲೊಮೊಡಸ್ಕ್‌ಗಳಲ್ಲಿ ಅವನ್ನು ಕಾಣಬಹುದು. ದಘೇಸ್ತಾನದ ಬೆಟ್ಟಗಾಡಿನ ಈಶಾನ್ಯ ಸ್ಥಳಗಳಲ್ಲಿಯೂ ಬುಗ್ಗೆಗಳುಂಟು. ಅರಾರತ್, ಅಲಗೋಜ್, ಅಕ್ಮಂಗನ್, ಸಂಸರ್, ಗೊಡೊರ್ಪಿ ಮತ್ತು ಅಬುಲ್ ಬೆಟ್ಟಗಳ ದಕ್ಷಿಣಕ್ಕೆ, ಆರ್ಮೇನಿಯದ ಪ್ರಸ್ಥಭೂಮಿಯ ಉತ್ತರದ ಅಂಚಿನಲ್ಲಿ ಅಗ್ನಿಪರ್ವತಗಳಿದ್ದ ಚಿಹ್ನೆಗಳಿವೆ.

ಭೂ ರಚನೆ: ಕಾಕಸಸ್ ಪರ್ವತ ಬೀಸಣಿಗೆಯ ಆಕಾರದಲ್ಲಿ ಬಾಗಿದೆ. ಅದರ ಭೌಗೋಳಿಕ ಪ್ರದೇಶ ಕಪ್ಪುಸಮುದ್ರದಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ವ್ಯಾಪಿಸಿದ್ದು, ಇಡೀ ಪರ್ವತ ಪಂಕ್ತಿಗಳು ಇರುವುದು ರಷ್ಯದ ಗಡಿಯೊಳಗೆ. ಪರ್ವತದ ಮಧ್ಯಭಾಗವೆಲ್ಲ ಬಲು ಗಟ್ಟಿಯಾದ ಸ್ಫಟಿಕಮಾದರಿಯ ಕಲ್ಲುಬೆಟ್ಟಗಳಿಂದ ಕೂಡಿದೆ. ಈ ರಚನೆ ಕ್ರಮೇಣ ಪೂರ್ವಭಾಗದಲ್ಲಿ ಕಾಣದಂತಾಗುತ್ತದೆ. ಕಲ್ಲುಬೆಟ್ಟಗಳಲ್ಲಿ ಆದಿ ಭೂಯುಗದ ಖನಿಜ ಪದರಶಿಲೆಗಳೂ ಸುಣ್ಣಕಲ್ಲು ಪದರಗಳುಂಟು. ಪರ್ವತದ ಉತ್ತರ ಭಾಗದಲ್ಲಿ ಸಹ ಇದೇ ಬಗೆಯ ಸುಣ್ಣಕಲ್ಲುಗಳೂ ಸೀಮೆಸುಣ್ಣ ಮಾದರಿಯ ಪದರಗಳೂ ಹೇರಳವಾಗಿವೆ. ಪರ್ವತದ ದಕ್ಷಿಣ ಭಾಗದಲ್ಲಿರುವುವು ಮೂರನೆಯ ಭೂ ಯುಗದ ಶೇಖರಣೆಗಳನ್ನುಳ್ಳ ದ್ವಿತೀಯ ಪದರಗಳು. ಉತ್ತರಭಾಗ ಎರಡನೆಯ ಭೂಯುಗದ ಶಿಲಾಸ್ತರಗಳಿಂದ ಕೂಡಿದ್ದು, ಆದಿಭೂಯುಗದ ಪದರಗಳು ಹಂತ ಹಂತಗಳಲ್ಲಿ ಕೂರಾ ಬಯಲಿನಲ್ಲಿ ಇಳಿಯುತ್ತವೆ. ಅವುಗಳ ತಳದಲ್ಲಿ ಎರಡನೆಯ ಭೂಯುಗದ ಖನಿಜಪದರಗಳು ಮುಂದುವರಿದಿವೆ. ಆದಿ ಭೂಯುಗದಿಂದಲೂ ಅಸ್ತಿತ್ವದಲ್ಲಿರುವ ಈ ಪರ್ವತಶ್ರೇಣಿಯ ಬೆಳವಣಿಗೆಯಲ್ಲಿ ಎಲ್‌ಬುರ್ಜ್ ಮತ್ತು ಕಾಸ್ಬೆಕ್ ಪರ್ವತಗಳ ಜ್ವಾಲಾಮುಖಿಗಳು ಕೊನೆಯ ಹಂತದ ರಚನೆಗೆ ಸೇರಿರಬೇಕು.

ರಷ್ಯದ ಎರಡು ಸ್ವಾಭಾವಿಕ ವಿಭಾಗಗಳಾದ ಉತ್ತರ ಮತ್ತು ದಕ್ಷಿಣ ಕಾಕಸಸ್ ಪರ್ವತ ಪ್ರದೇಶಗಳಲ್ಲಿ ಖನಿಜ ಸಂಪತ್ತು ಹೇರಳವಾಗಿದೆ. ಬಾಕು, ಗ್ರೋಜ್ನಿ ಮತ್ತು ಮೈಕಾಫ್‌ಗಳಲ್ಲಿ ಪೆಟ್ರೋಲ್, ಚೈಟ್ರೂರಾದಲ್ಲಿ ಮ್ಯಾಂಗನೀಸ್, ಓರ್ಜೊನಿಕಿಡ್ಜ್‌ನಲ್ಲಿ ಸೀಸ ಮತ್ತು ತವರ ಮತ್ತು ಟೈರ್ನಿಔಜ್‌ನಲ್ಲಿ ಕಬ್ಬಿಣ ಮಿಶ್ರಲೋಹಗಳು ಸಿಗುತ್ತವೆ. ಜಾರ್ಜಿಯ ಪ್ರದೇಶದಲ್ಲಿ ಸಣ್ಣಮಟ್ಟ ಕಲ್ಲಿದ್ದಲ ಗಣಿಗಳಿರುವುದರಿಂದಲೂ ಕಬ್ಬಿಣದ ಅದಿರು ದೊರಕುವುದರಿಂದಲೂ ಟಿಫ್ಲಿಸ್ ಬಳಿ ಹೊಸ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆಗಳುಂಟು. ಕಾಕಸಸ್ ಪ್ರದೇಶದಲ್ಲಿರುವ ಪ್ರಾಣಿ–ಪಕ್ಷಿಗಳು ವೈವಿಧ್ಯಮಯ. ಕಾಕಸಸ್ ಪ್ರದೇಶದಾದ್ಯಂತ ಅನೇಕ ಬುಡಕಟ್ಟುಗಳಿಗೆ ಹಾಗೂ ದೇಶಗಳಿಗೆ ಸೇರಿದ ಜನರು ಮತ್ತು ವಿವಿಧ ಜನಾಂಗಗಳಿವೆ. (ವಿ.ಜಿ.ಕೆ.)

**ಕಾಕಿನಾಡ:** ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿರುವ ಒಂದು ಪಟ್ಟಣ. ಹಿಂದೆ ಇದಕ್ಕೆ ಕೋಕನಾಡ ಎಂಬ ಹೆಸರಿತ್ತು. ಗೋದಾವರಿ ನದೀಮುಖಜಭೂಮಿಯ ಈಶಾನ್ಯ ತುದಿಯಲ್ಲಿದೆ. ವಿಸ್ತೀರ್ಣ 21.56 ಚ.ಕಿಮೀ. ಜನಸಂಖ್ಯೆ 368672 (2001). ಕಾಕಿನಾಡ ಪುರಸಭೆ ಸ್ಥಾಪಿತವಾದದ್ದು 1866ರಲ್ಲಿ. ಭರತದ (ಸಮುದ್ರದ ಉಬ್ಬರದಿಂದ ಸಂಭವಿಸಿದ) ನದಿಯಾಚೆ ಇರುವ ಜಗನ್ನಾಥಪುರ ಉಪನಗರಕ್ಕೂ ಪಟ್ಟಣದ ಮುಖ್ಯ ಭಾಗಕ್ಕೂ ಹೆದ್ದಾರಿಯಿಂಟು. ಜಗನ್ನಾಥಪುರವನ್ನು 1628ರಲ್ಲಿ ಡಚ್ಚರು ನಿರ್ಮಿಸಿದರು. 1825ರಲ್ಲಿ ಅದು ಇಂಗ್ಲಿಷರ ವಶವಾಯಿತು. 1839ರಲ್ಲಿ ಉಂಟಾದ ಭರತದ ಅಲೆಯಿಂದ ಅದು ನಾಶವಾಗಿತ್ತು.

ಕಾಕಿನಾಡದಲ್ಲಿ ಕಲೆ, ವಿಜ್ಞಾನ, ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳೂ ಆಧುನಿಕವಾಗಿ ಸಜ್ಜಾದ ದೊಡ್ಡ ಆಸ್ಪತ್ರೆಯೂ ಇವೆ.

ಕಾಕಿನಾಡ ಕೊಲ್ಲಿಯ ಲಂಗರುದಾಣ ಆಳವಾಗಿಲ್ಲ. ಹಡಗುಗಳು 12 ಕಿಮೀ ಗಳಾಚೆ ಲಂಗರು ಹಾಕಿ ನಿಲ್ಲಬೇಕು. ದಕ್ಷಿಣ ರೈಲ್ವೆಯ ಸಮಲ್ಕೋಟ್ ನಿಲ್ದಾಣದಿಂದ ಕಾಕಿನಾಡಕ್ಕೆ ಕವಲು ರೈಲುಮಾರ್ಗವುಂಟು. ಗೋದಾವರಿ ಮುಖಜಭೂಮಿಯ ಕಾಲುವೆ ವ್ಯವಸ್ಥೆಯೊಂದಿಗೆ ಧವಿಶೇಶ್ವರಂ ಬಳಿ ಕಾಕಿನಾಡ ಕಾಲುವೆಯ ಮೂಲಕ ಸಂಪರ್ಕ ಏರ್ಪಟ್ಟಿದೆ. ಕಾಕಿನಾಡದಿಂದ ರಫ್ತಾಗುವ ಪದಾರ್ಥಗಳು ಅಕ್ಕಿ, ಎಣ್ಣೆಬೀಜ, ಹೊಗೆಸೊಪ್ಪು ಮತ್ತು ಹತ್ತಿ. ಜವಳಿ, ಅಕ್ಕಿ ಮತ್ತು ಎಣ್ಣೆ ಗಿರಣಿಗಳು ಇಲ್ಲಿವೆ. (ಎಂ.ಎ.ಎಚ್.)

**ಕಾಜಿಪೇಟ್:** ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಗೆ ಸೇರಿದ ಪಟ್ಟಣ, ರೈಲ್ವೆ ಜಂಕ್ಷನ್. ವಾರಂಗಲ್ಲಿಗೆ 15 ಕಿಮೀ ಮತ್ತು ಹೈದರಾಬಾದಿಗೆ 140 ಕಿಮೀ ದೂರದಲ್ಲಿದೆ. ಹೈದರಾಬಾದಿನಿಂದ ಬರುವ ರೈಲುಮಾರ್ಗ ಚೆನ್ನೈ–ದೆಹಲಿ ರೈಲುಮಾರ್ಗವನ್ನು ಇಲ್ಲಿ ಕೂಡುತ್ತದೆ. ಪಾರ್ಕಲ್, ಆತ್ಮಕೂರು, ನರಸರಾಂಪೇಟ, ವಿಜಯವಾಡ, ಖಮ್ಮಂ, ಹೈದರಾಬಾದ್, ಬಲ್ಲಾರ್‌ಷಾ ಮುಂತಾದ ಕಡೆಗಳಿಂದ ಬರುವ ಬಸ್ಸುಗಳು ಇಲ್ಲಿ ಸಂಧಿಸುತ್ತವೆ. ಜನಸಂಖ್ಯೆ 928570. ಇಲ್ಲಿಗೆ ಸು. 8 ಕಿಮೀ ದೂರದಲ್ಲಿರುವ ಧರ್ಮಸಾಗರ ಕೆರೆಯಿಂದ ರಕ್ಷಿತಜಲ ಸರಬರಾಜಾಗುತ್ತದೆ. ಕಾಜಿಪೇಟ್‌ನಲ್ಲಿ ಶಿವನ ಮತ್ತು ಆಂಜನೇಯನ ದೇವಸ್ಥಾನವೂ ಆಫ್‌ಜಲ್ ಷಾ ಬಿಯಾಬನಿಯ (1794–1857) ಗುಂಬಜೂ ಇವೆ. ಸಂತ ಬಿಯಾಬನಿಯ ಪವಾಡಗಳ ಬಗ್ಗೆ ಅನೇಕ ದಂತಕಥೆಗಳುಂಟು. ವರ್ಷಕ್ಕೊಮ್ಮೆ ಎಂಟು ದಿನಗಳ ಕಾಲ ಇವನ ಹೆಸರಿನಲ್ಲಿ ನಡೆಯುವ ಉರ್ಸಿಗೆ ಭಾರತದ ಎಲ್ಲ ಕಡೆಗಳಿಂದಲೂ ಭಕ್ತರು ಬರುತ್ತಾರೆ.

ಕಾಜಿಪೇಟ್‌ನಲ್ಲಿ ಲೇಡಿ ಫಾತಿಮಾ ಚರ್ಚೊಂದಿದೆ. ಕೃಷಿ ಮುಖ್ಯ ಕಸುಬು, ಬೀಡಿ ತಯಾರಿಕೆ, ಚಾಪೆ ಮತ್ತು ಬುಟ್ಟಿ ಹೆಣಿಗೆ ಇತರ ಉದ್ಯೋಗಗಳು. (ಬಿ.ಎಸ್.ಎಚ್.)

**ಕಾಥೆವಾಡ:** ಪಶ್ಚಿಮ ಭಾರತದ ಒಂದು ಪರ್ಯಾಯದ್ವೀಪ. ಗುಜರಾತ್ ರಾಜ್ಯದಲ್ಲಿದೆ. ಇದಕ್ಕೆ ಉತ್ತರದಲ್ಲಿ ಕಚ್ ಖಾರಿಯೂ ಕಚ್ ರಣದ ಜೌಗುನೆಲವೂ ಪೂರ್ವದಲ್ಲಿ ಕ್ಯಾಂಬೆ ಖಾರಿಯೂ ದಕ್ಷಿಣ–ಪಶ್ಚಿಮಗಳಲ್ಲಿ ಅರಬ್ ಕೊಲ್ಲಿಯೂ ಇವೆ. ಗುಜರಾತಿನ ಇತರ ಭಾಗಗಳೊಂದಿಗೆ ಇದಕ್ಕೆ ಸಂಪರ್ಕವಿರುವುದು ಈಶಾನ್ಯದ ಕಂಠಪ್ರದೇಶದ ಮೂಲಕ. ಕಾಥೆವಾಡದ ಈ ಪ್ರತ್ಯೇಕತೆಯಿಂದಾಗಿ ಇದು ಇತಿಹಾಸದ ಉದ್ದಕ್ಕೂ ತನ್ನ ವೈಶಿಷ್ಟವನ್ನು ಉಳಿಸಿ ಬೆಳೆಸಿಕೊಂಡೇ ಬಂದಿದೆ. ಗುಜರಾತಿನ ಜಾಂನಗರ, ಜುನಾಗಢ, ಅಮ್ರೇಲಿ, ಭಾವನಗರ, ಸುರೇಂದ್ರನಗರ ಜಿಲ್ಲೆಗಳನ್ನೊಳಗೊಂಡಿರುವ ಪ್ರದೇಶವಿದು.

ಕರಾವಳಿಯ ಮೈದಾನವನ್ನು ಹೊರತು ಪಡಿಸಿದರೆ ಉಳಿದ ಕಾಥೆವಾಡ ಅಗ್ನಿಶಿಲಾವೃತ ಪ್ರಸ್ಥಭೂಮಿ. ಸಮುದ್ರಮಟ್ಟಕ್ಕೆ 100 ಮೀ ಎತ್ತರಕ್ಕೆ ಇದು ಏರುತ್ತದೆ. ಪ್ರಸ್ಥಭೂಮಿಯ ಮಧ್ಯಭಾಗದಿಂದ ಎಲ್ಲ ದಿಕ್ಕುಗಳಲ್ಲೂ ಚಲ್ಲಾಪಿಲ್ಲಿಯಾಗಿ ಹರಿಯುವ ಅನೇಕ ನದಿ ತೊರೆಗಳು ನೆಲವನ್ನು ನೆತ್ತಿಗಭಿಮುಖವಾಗಿ ಕೊರೆಯುತ್ತಲೇ ಇವೆ. ಅಲ್ಲಲ್ಲಿ 200 ಮೀ ಎತ್ತರಕ್ಕಿರುವ ಬೆಟ್ಟಗಳೂ ಬಂಡೆಸಾಲುಗಳೂ ಇಲ್ಲುಂಟು. ಪ್ರಸ್ಥಭೂಮಿಯ 200–300 ಮೀ ಮಟ್ಟದ ನೇರದಲ್ಲಿ ಜೋಬ್ರದ ಬಳಿ ಗರಿಷ್ಠ ಎತ್ತರಕ್ಕೆ ನಿಲುಕುವ (340–ಮೀ) ಬೆಟ್ಟಗಳ ಗುಂಪಿನ ಹೆಸರು ಮಂಡ. ರಾಜಕೋಟೆ ಗೊಂಡಾಲ್ ಅಕ್ಷಕ್ಕೆ ಪೂರ್ವದಲ್ಲಿ ಆಯಾಕಾರದಲ್ಲಿ ಈ ಹಣಿಕೆ ಹಬ್ಬಿದೆ. ಗಿರ್ ಬೆಟ್ಟ ಶ್ರೇಣಿ ಕಚ್ಚುಕಚ್ಚಾಗಿದೆ. ಪೂರ್ವ–ಪಶ್ಚಿಮವಾಗಿ ಇದು ಸು. 180 ಕಿಮೀ ಹಬ್ಬಿದೆ. ದಕ್ಷಿಣ ತೀರದಿಂದ ಕೇವಲ 75 ಕಿಮೀ ದೂರದಲ್ಲಿರುವ ಈ ಶ್ರೇಣಿಯ ಉತ್ತರ ತುದಿಯಲ್ಲಿ ಪಶ್ಚಿಮದ ಕಡೆಗೆ ಓಜತ್ ನದಿಯೂ ಪೂರ್ವ ಕಡೆಗೆ ಶೆತ್ರಂಜಿ ನದಿಯೂ ಹರಿಯುತ್ತವೆ. ಈ ಶ್ರೇಣಿಯ ಅತ್ಯುನ್ನತ ಶಿಖರ ಸರ್ಕಲನ್ (643 ಮೀ) ಗಿಂತ ಬೆಟ್ಟಗಳ ದಕ್ಷಿಣದ ತಪ್ಪಲು ಅರಣ್ಯಾವೃತವಾಗಿದೆ. ಕಾಥೆವಾಡದ ಅತ್ಯಂತ ಎತ್ತರದ ಬೆಟ್ಟ ಗಿರ್ನಾರ್. ಇದರ ಅತ್ಯುನ್ನತ ಶಿಖರ ಗೋರಖನಾಥ್ (1,117 ಮೀ). ಇದು ಒಮ್ಮೆ ಅಗ್ನಿಪರ್ವತದ ಶಿರಸ್ಸಿನ ಪ್ರದೇಶವಾಗಿತ್ತೆಂದು ಭಾವಿಸಲಾಗಿದೆ. ಈ ಬೆಟ್ಟ ಗಿರ್ ಶ್ರೇಣಿಯಿಂದ ಪ್ರತ್ಯೇಕಗೊಂಡಿರುವುದಕ್ಕೆ ಓಜತ್ ನದಿಯ ನೆಲಗೊರೆತವೇ ಕಾರಣ. ಬಾರ್ದ–ಆಲೆಚ್ ಜೋಡಿ ಬೆಟ್ಟಗಳು ಗಿರ್ನಾರಿಗೆ ವಾಯವ್ಯದಲ್ಲಿವೆ. ಇವು ಪೋರಬಂದರಿಗೆ ಸಮೀಪ. ಪಶ್ಚಿಮದ ಕಡೆ ಇರುವ ಬೆಟ್ಟ ಹೆಚ್ಚು ಎತ್ತರ. ಇದರ ಶಿಖರವೊಂದು 637 ಮೀ ಎತ್ತರವಿದೆ. ಇನ್ನೊಂದು ಬೆಟ್ಟದ ಗರಿಷ್ಠ 298 ಮೀ ಮಾತ್ರ..

ಈ ಮೂರು ಬೆಟ್ಟಸಾಲುಗಳ ನಡುವೆ ನದೀಕಣಿವೆಗಳೂ ಇಳಿಜಾರು ಪ್ರಸ್ಥಭೂಮಿಗಳೂ ಹಬ್ಬಿವೆ. ವಾಸ್ತವವಾಗಿ ಕಾಥೆವಾಡದ ನಡುಭಾಗದಲ್ಲಿ ಚಿಕ್ಕ ಚಿಕ್ಕ ಹಲವು ಪ್ರಸ್ಥಭೂಮಿಗಳನ್ನು ಚಾವಣಿಯ ಹೆಂಚಿನಂತೆ ಜೋಡಿಸಿದಂತಿದೆ. ಇಡೀ ಪ್ರಸ್ಥಭೂಮಿ ನಡುನಡುವೆ ನದಿಗಳು ಭೂಸಾರವನ್ನು ಕೊರೆದುಹಾಕಿರುವುದರಿಂದ ಈ ಪ್ರಸ್ಥಭೂಮಿಯ ಮಣ್ಣಿನ ಹೊದಿಕೆ ತೀರ ತೆಳುವು. ಇಲ್ಲಿ ಮಳೆ ಕಡಿಮೆ. ಮರುಳು ಕಲ್ಲುಗಳಿಂದ ಕೂಡಿದ ಸಾಧಾರಣ ಕಪ್ಪುಮಣ್ಣಿನ ನೆಲ ಅಷ್ಟೇನೂ ಫಲವತ್ತಾಗಿಲ್ಲ. ಪ್ರಸ್ಥಭೂಮಿಯಲ್ಲಿ ಅಲ್ಲಲ್ಲಿ ಅಡ್ಡಡ್ಡಲಾಗಿ ಹಬ್ಬಿರುವ ದಿಬ್ಬಗಳು ನೀರಾವರಿಗಾಗಿ ಜಲಾಶಯ ನಿರ್ಮಾಣಕ್ಕೆ ಸಹಾಯಕವಾಗಿವೆ. ಕಾಥೆವಾಡದ ನಡುಭಾಗದ ನೆಲದಲ್ಲಿ ಶೇ.60ರಷ್ಟು ಸಾಗುವಳಿಗೆ ಒಳಪಟ್ಟಿದೆ. ನೆಲಗಡಲೆ ಮುಖ್ಯ ಬೆಳೆ. ಹೆಚ್ಚು ಫಲವತ್ತಾದೆಡೆಗಳಲ್ಲಿ ಹತ್ತಿ ಬೆಳೆಯುವುದುಂಟು. ಕೈಗಾರಿಕೆಯ ದೃಷ್ಟಿಯಿಂದ ಈ ಪ್ರದೇಶ ಮೈದಾನದಷ್ಟು ಮುಖ್ಯವಲ್ಲ. ಒಟ್ಟಿನಲ್ಲಿ ನಡುವಿನ ಉಬ್ಬುನೆಲವನ್ನು ರಾಜಕೋಟೆ, ಗೊಂಡಾಲ್–ಜೇತ್‌ಪುರ, ಧ್ರಂಗಾಧ್ರ–ವಾಧ್ವಾನ್ ಮತ್ತು ಅಮ್ರೇಲಿ–ಪಾಲಿಟಾನ ಪ್ರಸ್ಥಭೂಮಿಗಳಾಗಿ ವಿಂಗಡಿಸಬಹುದು. ರಾಜಕೋಟೆ, ಗೊಂಡಾಲ್, ಜೇತ್‌ಪುರ. ಧೊರಾಜಿ, ಉಪ್ಲೇತ, ಜುನಾಗಢ, ಸುರೇಂದ್ರನಗರ, ಧ್ರಂಗಾಧ್ರ, ವಾಧ್ವಾನ್, ಮೋರ್ವಿ, ವಂಕನೇರ್, ಅಮೇಲಿ, ಪಾಟಿಟಾನ–ಇವು ಈ ಪ್ರದೇಶದ ಮುಖ್ಯ ಪಟ್ಟಣಗಳು.

ಕಾಥೆವಾಡ ಕಡಿಮೆ ಮಳೆಯ ಪ್ರದೇಶ. ಬರುವ ಮಳೆಯೂ ಅನಿಶ್ಚಿತ. ಒಳಭಾಗದ ಎತ್ತರ ಪ್ರದೇಶದಲ್ಲೂ ಕ್ಯಾಂಬೆ ತೀರದಲ್ಲೂ 50 ಸೆಂಮೀ ಸರಾಸರಿಯಲ್ಲಿ ಮಳೆಯಾಗುತ್ತದೆ. ಉಳಿದ ಕಡೆಗಳಲ್ಲಿ ಕಡಿಮೆ. ಉಷ್ಣತೆ ಜನವರಿಯಲ್ಲಿ 26,5$^0$ಸೆಂ. ನಿಂದ 29,5$^0$ಸೆಂ.; ಮೇನಲ್ಲಿ 32$^0$ಸೆಂ. ಮಧ್ಯಕ ಗರಿಷ್ಠ ಉಷ್ಣತೆ 43$^0$ಸೆಂ. ಮೀರುವುದುಂಟು. ಮುಳ್ಳುಮರಗಳೂ ಅಲ್ಲಲ್ಲಿ ಪರ್ಣಪಾತಿ ವೃಕ್ಷಗಳೂ ಇಲ್ಲಿಯ ಬೆಟ್ಟಗಾಡಿನಲ್ಲಿ ಬೆಳೆಯುತ್ತವೆ. ಉಳಿದ ಕಡೆ ಹುಲ್ಲು ಪೊದೆ ವಿಶೇಷ.

ಇಲ್ಲಿಯ ಎಲ್ಲ ಜಲಮೂಲಗಳನ್ನೂ ಬಹಳ ಎಚ್ಚರಿಕೆಯಿಂದ ಸಾಗುವಳಿಗಾಗಿ ಉಪಯೋಗಿಸಲಾಗುತ್ತಿದೆ. ಬಾಜ್ರ (ಸಜ್ಜೆ) ಮತ್ತು ಗೋದಿ ಇಲ್ಲಿಯ ಮುಖ್ಯ ಬೆಳೆಗಳು. ಹತ್ತಿ ಮೆಕ್ಕೆಜೋಳಗಳನ್ನೂ ಬೆಳೆಯುತ್ತಾರೆ. ದಕ್ಷಿಣತೀರದ ಉದ್ದಕ್ಕೂ ಕೊಬ್ಬರಿಗಾಗಿ ತೆಂಗಿನ ಮರಗಳನ್ನೂ ಸೌದೆಗಾಗಿ ಸರ್ವೆ ಮರಗಳನ್ನೂ ನೆಡಲಾಗಿದೆ. ವಾಯವ್ಯ ತೀರದ ಬಳಿ ಕಾಳು ಮತ್ತು ಎಣ್ಣೆಬೀಜಗಳನ್ನು ಬೆಳೆಯುತ್ತಾರಾದರೂ ವ್ಯವಸಾಯಕ್ಕಿಂತ ಪಶುಪಾಲನೆಯೇ ಅಲ್ಲಿ ಮುಖ್ಯ. ಶಿಲೋತ್ಖನನ (ಕ್ವಾರಿಯಿಂಗ್, ಪೋರ್‌ಬಂದರ್), ಹತ್ತಿಜವಳಿ (ಭಾವನಗರ), ರಾಸಾಯನಿಕವಸ್ತು (ದ್ವಾರಕ), ಚರ್ಮಕೆಲಸ, ಬೆಂಕಿಕಡ್ಡಿ, ಮೃತ್ಪಾತ್ರೆ–ಇವು ಮುಖ್ಯ ಕೈಗಾರಿಕೆಗಳು. ಭಾವನಗರ ಅತ್ಯಂತ ದೊಡ್ಡ ನಗರ ಕ್ಯಾಂಬೆ ಖಾರಿಯ ಬಳಿ ಇರುವ ಬಂದರು. ಓಖಾ ಬಂದರು ಚಿಕ್ಕದಾದರೂ ಆಧುನಿಕವಾದದ್ದು. ಬೇಡಿ ಮೂರನೆಯ ಬಂದರು. ಜಾಂನಗರ ಬಳಿ ನಾಡಿನ ವಾಣಿಜ್ಯಕೇಂದ್ರ, ಸುರೇಂದ್ರನಗರ, ಜುನಾಗಢ, ಅಮ್ರೇಲಿ, ರಾಜಕೋಟೆ ಇತರ ಕೆಲವು ಪಟ್ಟಣಗಳು. (ಬಿ.ಜಿ.ಟಿ.ಎ.;ಕೆ.ಆರ್.ಆರ್.)

**ಕಾನ್ಪುರ:** ಉತ್ತರ ಪ್ರದೇಶದ ಒಂದು ನಗರ ಮತ್ತು ಜಿಲ್ಲಾ ಕೇಂದ್ರ. ಗಂಗಾನದಿಯ ದಕ್ಷಿಣ ದಂಡೆಯ ಮೇಲೆ ಉ.ಅ. 26$^0$28′ ಮತ್ತು ಪೂ.ರೇ. 80$^0$21′ನಲ್ಲಿದೆ. ಲಖನೌಗೆ ನೈಋತ್ಯದಲ್ಲಿ 70 ಕಿಮೀ ದೂರದಲ್ಲೂ ಅಲಹಾಬಾದಿಗೆ ವಾಯವ್ಯದಲ್ಲಿ 184 ಕಿಮೀ ದೂರದಲ್ಲೂ ದೆಹಲಿಗೆ ಆಗ್ನೇಯದಲ್ಲಿ 392 ಕಿಮೀ ದೂರದಲ್ಲೂ ಇರುವ ಈ ನಗರ ಮೂರು ರೈಲ್ವೆ ವಸತಿಗಳನ್ನೂ ದಂಡಿನ ಪ್ರದೇಶವನ್ನೂ ಅರ್ಮಪುರ್ ಉಪನಗರವನ್ನೂ ಒಳಗೊಂಡಿದೆ. ನದೀ ದಂಡೆಯ ಮೇಲಿರುವ ಹಲವಾರು ನಗರಗಳಂತೆ ಇದರ ಹಳೆಯ ನಗರ ನದೀಪಾತ್ರಕ್ಕೆ ಹತ್ತಿರದಲ್ಲಿ ನಿರ್ಮಿತವಾಗಲಿಲ್ಲ. ಅದು ನದಿಯಿಂದ ಒಂದುವರೆ ಕಿಮೀ ಆಚೆಗಿದೆ. ಕಾನ್ಪುರ ಹಿಂದಿನಿಂದಲೂ ಮುಖ್ಯ ಸೈನಿಕ ನೆಲೆಯಾಗಿತ್ತು. ಅದರ ಬಳಿಯಲ್ಲೇ ಸೈನಿಕ ವಿಮಾನ ನೆಲೆಯೂ ಸ್ಥಾಪಿತವಾದುದರಿಂದ ಇದರ ಪ್ರಾಮುಖ್ಯ ಇನ್ನೂ ಹೆಚ್ಚಿತು. ಇದು ಭಾರತದಲ್ಲೇ ಅತ್ಯಂತ ದೊಡ್ಡ ನಗರಗಳಲ್ಲೊಂದಾಗಿದೆ.

ಕಾನ್ಪುರ ಮುಖ್ಯ ರೈಲ್ವೆ ಮತ್ತು ರಸ್ತೆಗಳ ಸಂಧಿಸ್ಥಳ. ದೆಹಲಿ–ಕೋಲ್ಕತ ಹೆದ್ದಾರಿ ಹಾದು ಹೋಗುವುದು ಕಾನ್ಪುರದ ಮೂಲಕ. ಉತ್ತರ, ಈಶಾನ್ಯ ಮತ್ತು ಮಧ್ಯ ರೈಲ್ವೆಗಳು ಇಲ್ಲಿ ಕೂಡುವುದರಿಂದ ಭಾರತದ ಉಳಿದ ಭಾಗಗಳೊಂದಿಗೆ ಇದಕ್ಕೆ ಸುಸಂಪರ್ಕ ಏರ್ಪಟ್ಟಿದೆ. ಇದು ಶಿಕ್ಷಣ ಕೇಂದ್ರ ಕೂಡ. ಕೃಷಿ ಮತ್ತು ವಸ್ತ್ರ ತಂತ್ರಶಾಸ್ತ್ರ ಮುಂತಾದ ಹಲವು ಕಾಲೇಜುಗಳು ಇಲ್ಲುಂಟು. ಇವು ಆಗ್ರ ವಿಶ್ವವಿದ್ಯಾಲಯದ ಮನ್ನಣೆ ಪಡೆದಿವೆ. ಭಾರತೀಯ ತಂತ್ರಶಾಸ್ತ್ರ ಸಂಸ್ಥೆಯ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ವೈದ್ಯಕೀಯ ಕಾಲೇಜು ಲಖನೌ ವಿಶ್ವವಿದ್ಯಾಲಯದ ಮನ್ನಣೆ ಪಡೆದಿದೆ. ಸಣ್ಣ ಸರೋವರದ ಮೇಲೆ ನಿರ್ಮಿತವಾದ ಕಮಲಾ ವಿಶ್ರಾಂತಿ ಭವನ, ಸ್ಮಾರಕ ಸ್ತೂಪ, ಗಾಜಿನ ದೇಗುಲ–ಇವು ನಗರದ ಪ್ರೇಕ್ಷಣೀಯ ಸ್ಥಳಗಳು.

ಕಾನ್ಪುರಕ್ಕೆ ಮೊದಲು ಕನ್ಹೈಯಪುರ ಎಂದು ಹೆಸರಿತ್ತು. ದೆಹಲಿಯ ಸುಲ್ತಾನರ ಕಾಲದಲ್ಲಿ ಇದು ಪ್ರಾಂತೀಯ ರಾಜಧಾನಿಯಾಗಿತ್ತು.

ಈ ನಗರದ ಕೈಗಾರಿಕ ಬೆಳೆವಣಿಗೆ ಉತ್ತರ ಭಾರತದಲ್ಲೇ ವಿಶಿಷ್ಟವಾದುದ್ದು. ಚರ್ಮ ಕೈಗಾರಿಕೆ ಬಹಳ ಮುಖ್ಯ. ಇದು ಸರ್ಕಾರಿ ಜೀನಿನ ಕಾರ್ಖಾನೆಯ ಸ್ಥಾಪನೆಯಿಂದ (ಚರ್ಮದ ಕೈಗಾರಿಕೆ) ಆರಂಭವಾಗಿ ಇಂದು ಬೃಹತ್ ಕೈಗಾರಿಕೆಯಾಗಿದೆ. ಹತ್ತಿ ನೂಲುವ, ಹಿಂಜು, ಒತ್ತುವ ಗಿರಣಿಗಳೂ ಸಣಬು ಮತ್ತು ಉಣ್ಣೆ ಗಿರಣಿಗಳೂ ವನಸ್ಪತಿ, ಸಾಬೂನು, ಪ್ಲಾಸ್ಟಿಕ್ಸ್, ಬಿಸ್ಕತ್ತು, ರಾಸಾಯನಿಕವಸ್ತು, ಹಿಟ್ಟು, ಅವಲಕ್ಕಿ ತಯಾರಿಕೆ, ಭಟ್ಟಿ ಇಳಿಸುವುದು ಮತ್ತು ವಿವಿಧ ಎಂಜಿನಿಯರಿಂಗ್ ಕೈಗಾರಿಕೆಗಳೂ ಸ್ಥಾಪಿತವಾಗಿವೆ. ಹತ್ತಿ ಬಟ್ಟೆ, ಬಗೆಬಗೆಯ ಸರಕುಗಳು, ಸಕ್ಕರೆ, ಸಂಬಾರ ಮತ್ತು ಧಾನ್ಯಗಳ ವ್ಯಾಪಾರದ ಮುಖ್ಯ ಕೇಂದ್ರವಿದು.

1901ರಿಂದೀಚೆಗೆ ಕಾನ್ಪುರದ ಜನಸಂಖ್ಯೆ ನಾಲ್ಮಡಿಯಾಗಿ ಬೆಳೆದಿದೆ. 1931ರಿಂದ 1941ರ ವರೆಗಿನ ಕಾಲದಲ್ಲಿ ಇದು ಲಖನೌ ನಗರವನ್ನೂ ಮೀರಿ ಬೆಳೆಯಿತು. 1941ರಲ್ಲಿ ಇದರ ಜನಸಂಖ್ಯೆ 2001 ರಲ್ಲಿ 2690486 ಇರುವುದು. ಇದರ ಕೈಗಾರಿಕಾ ವಾಣಿಜ್ಯ ಪ್ರಾಮುಖ್ಯ ಅಧಿಕವಾದದ್ದು ಅಮೆರಿಕನ್ ಅಂತರ್ಯುದ್ಧ ಕಾಲದಲ್ಲಿ. ಆಗ ಭಾರತದ ಹತ್ತಿಗೆ ಒಮ್ಮೆಗೇ ಬೇಡಿಕೆ ಹೆಚ್ಚಿತು. ಕಾನ್ಪುರದ ಪ್ರಥಮ ಹತ್ತಿ ಗಿರಣಿಗಳು ಸ್ಥಾಪಿತವಾದುದ್ದು 1869 ರಿಂದ 1882ರ ವರೆಗಿನ ಕಾಲದಲ್ಲಿ.

ಕಾನ್ಪುರ ಈಗ ಭಾರತದ ಹಳೆಯ ಕಾರ್ಖಾನೆ ನಗರಗಳಲ್ಲೊಂದಾಗಿದೆ. ಅಹಮಬಾದಿನಂತೆ ಇದೂ ಹತ್ತಿ ವ್ಯಾಪಾರ ಮತ್ತು ಜವಳಿ ಕೈಗಾರಿಕೆಯಿಂದಾಗಿ ಮುಂದೆ ಬಂದಿತು.

ಕಾನ್ಪುರ ಜಿಲ್ಲೆ : ಗಂಗಾ–ಯಮುನಾ ನದಿಗಳ ಮಧ್ಯೆ ಉ.ಅ. 25$^0$26′–26$^0$28′ ಮತ್ತು ಪೂ.ರೇ. 79$^0$31′–80$^0$34′ ನಡುವೆ ಹರಡಿದೆ. ಅತ್ಯಂತ ಫಲವತ್ತಾದ ನದಿದ್ವಯ ಪ್ರದೇಶವಿದು. ವಿಸ್ತೀರ್ಣ 6100 ಚ.ಕಿಮೀ. ಜನಸಂಖ್ಯೆ 23,81,353 (1961). 2001 ರಲ್ಲಿ 41,37,489 ಕ್ಕೆ ಏರಿತು. ಖಿಂದ್, ಸೇಗುರ್, ಈಶಾನ್, ಪಾಂಡವ, ಉತ್ತರ ನೋನ್ ಮತ್ತು ದಕ್ಷಿಣ ನೋನ್ ಇಲ್ಲಿ ಹರಿಯುವ ಇತರ ನದಿಗಳು. ಈ ಜಿಲ್ಲೆ ಆಗಿಂದಾಗ್ಗೆ ಪ್ರವಾಹದ ಉಪಟಳಕ್ಕೆ ತುತ್ತಾಗಿದೆ. 1924 ಮತ್ತು 1948ರಲ್ಲಿ ಪ್ರವಾಹ ಬಂದಾಗ ಪರಮಟ್ ಮತ್ತು ಹಳೆಯ ಕಾನ್ಪುರ ನಗರ ಪ್ರದೇಶಗಳು ನೀರಿನಲ್ಲಿ ಮುಳುಗಿದ್ದುವು. ಗಂಗಾನದಿಯಲ್ಲಿ ಪ್ರವಾಹ ಬಂದಾಗ ಸೋನ್ ನದಿಯ ನೀರು ಆ ಸುತ್ತೆಲ್ಲ ಹರಡುತ್ತದೆ. ಇಲ್ಲಿಯ ವಾಯುಗುಣ ಬೇಸಗೆಯಲ್ಲಿ ತಾಪಕರ, ಒಣಹವಾಯುಕ್ತ ; ಚಳಿಗಾಲದಲ್ಲಿ ಶೀತಲ. ಸರಾಸರಿ ಮಳೆ 84 ಸೆಂಮೀ. ಮಾವು ಮತ್ತು ಇಪ್ಪೆ ತೋಪುಗಳು ಅಲ್ಲಲ್ಲಿ ಹರಡಿವೆ. ಜಿಲ್ಲೆಯ ಒಂದು ಭಾಗ ಕಾಡು. ಗಂಗಾ ಕಾಲುವೆಯ ನಾಲ್ಕು ಶಾಖೆಗಳಿಂದಲೂ ಜಿಲ್ಲೆಗೆ ನೀರಾವರಿ ಸೌಲಭ್ಯ ಲಭಿಸಿದೆ. ಕಾಳು, ಗೋದಿ, ಅವರೆ, ಬಾರ್ಲಿ, ಸಾಸಿವೆ, ಮುಸುಕಿನಜೋಳ, ಎಳ್ಳು, ಬತ್ತ, ಬಾಜ್ರ, ಕಬ್ಬು, ಹತ್ತಿ–ಇವು ಮುಖ್ಯ ಬೆಳೆಗಳು.

ಬಿಠೂರ್ ಈ ಜಿಲ್ಲೆಯ ಪುರಾತನ ಕ್ಷೇತ್ರಗಳಲ್ಲೊಂದು. ಇಲ್ಲಿ ಬ್ರಹ್ಮನ ಪಾದದ ಗುರುತೆಂದು ಹೇಳಲಾದ ಚಿಹ್ನೆಯೊಂದು ಇದೆ. ಇದು ಹಿಂದೂಗಳಿಗೆ ಪವಿತ್ರ. ವಾಲ್ಮೀಕಿ ಇಲ್ಲಿ ಆಶ್ರಮ ಕಟ್ಟಿಕೊಂಡಿದ್ದನೆಂದು ಹೇಳಲಾಗಿದೆ. ಆರಾಂದ್‌ನ ಸುತ್ತಮುತ್ತ 6ರಿಂದ 9ನೆಯ ಶತಮಾನಗಳ ನಡುವಣ ಕಾಲದಲ್ಲಿ ನಿರ್ಮಿತವಾದ ಅನೇಕ ದೇಗುಲಗಳ ಅವಶೇಷಗಳುಂಟು. (ಸಿ.ಕೆ.ವೈ.ಡಿ.;ಆರ್.ಡಿ.ಆರ್.)

**ಕಾನ್‌ಸ್ಟಾಂಟಿನೋಪಲ್:** ಈಗಿನ ಇಸ್ತಾನ್‌ಬುಲ್ ಎನಿಸಿಕೊಂಡಿರುವ ನಗರ. ಮೊದಲು ಇದಕ್ಕೆ ಬಿಜ್ಞಾಂಟಿಯಂ ಎಂಬ ಹೆಸರಿತ್ತು. ಬಾಸ್ಫೊರಸ್ ಜಲಸಂಧಿಯ ಐರೋಪ್ಯ ದಂಡೆಯ ಮೇಲಿದ್ದ ಈ ನಗರವನ್ನು ಒಂದನೆಯ ಕಾನ್‌ಸ್ಟಾಂಟೈನ್ ಮಹಾಶಯ 330ರಲ್ಲಿ ತನ್ನ ರಾಜಧಾನಿ ಎಂದು ಘೋಷಿಸಿದಾಗ ಆತನ ಹೆಸರಿನಿಂದ ಕಾನ್‌ಸ್ಟಾಂಟಿನೋಪಲಿಸ್ ಎಂದೂ ಹೊಸ ರೋಮ್ ಎಂದೂ ಕರೆಯಲಾಯಿತು. ಏಳು ಮಲೆಗಳ ಮೇಲೆ ನಿರ್ಮಿತವಾಗಿ, ಮೂರು ಸುತ್ತಿನ ಕೋಟೆಯಿಂದ ರಕ್ಷಿತವಾಗಿದ್ದ ಈ ನಗರ ಬಿಜ್ಞಾಂಟಿನ್ ಚಕ್ರಾಧಿಪತ್ಯದ ವೈಭವದ ಪಡಿನೆಲಗಾಗಿ 1453ರಲ್ಲಿ ತುರ್ಕರ ವಶವಾಗುವ ವರೆಗೂ ಮಧ್ಯ ಯುರೋಪಿನಲ್ಲೇ ಅತ್ಯಂತ ಪ್ರಸಿದ್ಧ ನಗರವಾಗಿತ್ತು.

ಪೂರ್ವ ಮತ್ತು ಪಶ್ಚಿಮ ರೋಮನ್ ಸಾಮ್ರಾಜ್ಯಗಳನ್ನು ಕಾನ್‌ಸ್ಟಾಂಟೈನ್ ಒಂದುಗೂಡಿಸಿ, ಕಾನ್‌ಸ್ಟಾಂಟಿನೋಪಲಿನಿಂದ ಅದನ್ನು ಆಳತೊಡಗಿದ ಮೇಲೆ ಈ ನಗರ ಸರ್ವತೋಮುಖವಾಗಿ ಬೆಳೆಯಿತು. ಭವ್ಯಸ್ಮಾರಕಗಳು, ಕ್ರೀಡಾರಂಗಗಳು ಮುಂತಾದ ರಚನೆಗಳಿಂದ ಕೂಡಿ ಅತ್ಯಂತ ಸುಂದರವೂ ವೈಭವಯುತವೂ ಆಗಿ ಕಂಗೊಳಿಸುತ್ತಿತ್ತು. ಕಾನ್‌ಸ್ಟಂಟೈನನ ಕಾಲದಲ್ಲಿ ನಿರ್ಮಿತವಾದ ಸೇಂಟ್ ಸೋಫಿಯ ಅತ್ಯಂತ ಪ್ರಸಿದ್ಧ ಕಟ್ಟಡ. ಥಿಯೋಡೊಸಿಯಸ್ ಮತ್ತು ಜಸ್ಟಿನಿಯನರ ಕಾಲದಲ್ಲಿ ವಿಸ್ತೃತವಾಗಿ ಭವ್ಯರೂಪು ತಳೆಯಿತು.

ಇತಿಹಾಸದಲ್ಲಿ ಕಾನ್‌ಸ್ಟಾಂಟಿನೋಪಲ್ ವಹಿಸಿದ ಪಾತ್ರ ಪ್ರಮುಖವಾದದ್ದು. ಆಗಾಗ್ಗೆ ಇಲ್ಲಿ ಧಾರ್ಮಿಕ ಸಮ್ಮೇಳನಗಳು ನಡೆಯುತ್ತಿದ್ದವು. ಪೂರ್ವ ಪಶ್ಚಿಮ ರೋಮನ್ ಸಾಮ್ರಾಜ್ಯ ಚರ್ಚ್‌ಗಳ ಮನ್ನಣೆ ಪಡೆದ ಮೂರು ವಿಶ್ವಕ್ರೈಸ್ತ ಸಮ್ಮೇಳನಗಳು ಇವುಗಳಲ್ಲಿ ಮುಖ್ಯವಾದುವು. ಈ ನಗರ ಕ್ರೈಸ್ತ ಸಂನ್ಯಾಸಿಗಳ ಪ್ರಸಿದ್ಧ ಕೇಂದ್ರವೂ ಆಗಿತ್ತು. ಇದು ಅತ್ಯಂತ ಪ್ರವರ್ಧಮಾನ ಸ್ಥಿತಿಯಲ್ಲಿದ್ದಾಗ (10ನೆಯ ಶತಮಾನ) ಇದರ ಜನಸಂಖ್ಯೆ 10,00,000.

ಕಲೆ ಸಾಹಿತ್ಯ ಸಂಪತ್ತುಗಳ ಕೇಂದ್ರವಾಗಿದ್ದ ಈ ನಗರ 1433ರಲ್ಲಿ ತುರ್ಕರ ವಶವಾಗಿ ತನ್ನ ವೈಭವವನ್ನು ಕಳೆದುಕೊಂಡಿತು, ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಇದು ಪುನಃ ತಲೆಯೆತ್ತಿ ಮತ್ತೊಮ್ಮೆ ವೈಭವಯುತ್ತವಾಗಿ ಯುರೋಪಿನ ಒಂದು ಪ್ರಸಿದ್ಧ ರಾಜಕೀಯ ಹಾಗೂ ವಾಣಿಜ್ಯ ಕೇಂದ್ರವಾಗಿ ಬೆಳೆಯಿತು. ಒಂದನೆಯ ಮಹಾಯುದ್ಧದ ಅನಂತರ ಮಿತ್ರರಾಷ್ಟ್ರಗಳ ಆಕ್ರಮಣಕ್ಕೊಳಗಾಗಿತ್ತು. (1918–23). 1923ರಲ್ಲಿ ತುರ್ಕಿಯ ರಾಜಧಾನಿಯಾದ್ದರಿಂದ ಇದರ ರಾಜಕೀಯ ಪ್ರಾಮುಖ್ಯ ಕಡಿಮೆಯಾಯಿತೆನ್ನಬಹುದು. ಈ ನಗರಕ್ಕೆ ಇಸ್ತಾನ್‌ಬುಲ್ ಎಂದು ನಾಮಕರಣವಾದದ್ದು 1930ರಲ್ಲಿ. ಜನಸಂಖ್ಯೆ 8,260,438 (1999). (ವಿ.ಕೆ.ವಿ.)

**ಕಾಫಿ:** ವಾಣಿಜ್ಯ ಬೆಳೆಗಳಲ್ಲೊಂದು. ಕಾಫಿಯು ಚಹದಷ್ಟೆ ಪ್ರಮುಖವಾದ ಪಾನೀಯ ಬೆಳೆ. ಇದು ತೋಟಗಾರಿಕೆ ಬೆಳೆ. ಇದು ರೊಬಿಯೇಸಿ ವರ್ಗಕ್ಕೆ ಸೇರಿದ ಉಷ್ಣವಲಯದ ಹರಿದ್ವರ್ಣ ಸಸ್ಯ. ಕಾಫಿ ಬೀಜಗಳನ್ನು ಸ್ವಚ್ಛಗೊಳಿಸಿ ಒಣಗಿಸಿ, ಹುರಿದು, ಪುಡಿಮಾಡಿದ ಮೇಲೆ ಕಾಫಿ ಪೇಯ ತಯಾರಿಸಲು ಬಳಸುವರು. ಇದು ಕೆಫಿನ್ ಎಂಬ ಅಂಶ ಒಳಗೊಂಡಿದೆ. ಅದು ಕಾಫಿ ಪಾನೀಯದ ಉತ್ತೇಜಕತೆಯನ್ನು ಹೆಚ್ಚಿಸುವುದು. ಸುವಾಸನೆ ಹಾಗೂ ಬಣ್ಣ ಬರಲು ಕಾಫಿಗೆ ಒಂದು ಪ್ರಮಾಣದಲ್ಲಿ ಚಿಕೋರಿಯನ್ನು ಸೇರಿಸುವುದುಂಟು. ಚಹದ ಉಗಮದಂತೆ ಕಾಫಿಯ ಗಿಡದ ಮೂಲದ ಬಗ್ಗೆಯೂ ಏಕಭಿಪ್ರಾಯವಿಲ್ಲ. ಕೆಲವರ ಅಭಿಪ್ರಾಯದಂತೆ ಆಫ್ರಿಕದ ಅಬಿಸೀನಿಯ ಪ್ರದೇಶದ ಕಾಫ ಪ್ರಾಂತ್ಯ ಕಾಫಿಯ ಮೂಲ ಸ್ಥಾನವೆಂತಲೂ ಆದ್ದರಿಂದಲೇ ಕಾಫಿ ಎಂಬ ಹೆಸರು ಬಂದಿದೆಯೆಂದು ತಿಳಿಯಲಾಗಿದೆ. ಇನ್ನು ಕೆಲವರ ಪ್ರಕಾರ ಕಾಫಿಯ ಮೂಲ ಸ್ಥಳ ಅರೇಬಿಯದ ಯೆಮೆನ್ ದೇಶವೆಂದು ತಿಳಿದುಬರುತ್ತದೆ. ಕಾಫಿಯನ್ನು ಮೊದಲು ಔಷಧವಾಗಿಯೂ, ಆಹಾರವಾಗಿಯೂ ಅನಂತರ ಪಾನೀಯವಾಗಿಯೂ ಬಳಕೆಯಾಗುತ್ತಿದು ಕ್ರಮೇಣ ಇದು ಪ್ರಪಂಚದಾದ್ಯಂತ ಜನಪ್ರಿಯ ಪಾನೀಯವಾಯಿತು. ಇದರ ಬೇಸಾಯ ಉಷ್ಣವಲಯದ ಎಲ್ಲಾ ಭಾಗಗಳಿಗೂ ಹರಡಿದೆಯೆಂದು ನಂಬಲಾಗಿದೆ.

ಕಾಫಿ ಗಿಡ 6 ರಿಂದ 8 ಮೀ ಎತ್ತರಕ್ಕೆ ಬೆಳೆಯಬಲ್ಲದು. ಆದರೆ ಬೇಸಾಯದಲ್ಲಿ ಹಣ್ಣುಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ಅದನ್ನು 1.5–2.5 ಮೀ ಎತ್ತರಕ್ಕೆ ಆಗಾಗ್ಗೆ ಕತ್ತರಿಸಿ ಓರಣಗೊಳಿಸ (ಪ್ರೂನಿಂಗ್) ಲಾಗುವುದು. ಕಾಫಿ ಗಿಡವನ್ನು ನೆಟ್ಟ 3 ವರ್ಷದಿಂದ ಪ್ರಾರಂಭಗೊಂಡು ಸು. 40 ರಿಂದ 50 ವರ್ಷಗಳವರೆಗೆ ಫಸಲು ದೊರೆಯುತ್ತದೆ.

ಕಾಫಿ ಗಿಡದಲ್ಲಿ ಸು. 70 ಪ್ರಭೇದಗಳಿವೆ. ಆದರೆ ಆರ್ಥಿಕವಾಗಿ ಮೂರು ಪ್ರಭೇದಗಳನ್ನು ಮಾತ್ರ ಸಾಗುವಳಿ ಮಾಡಲಾಗುತ್ತಿದೆ. ಅವುಗಳೆಂದರೆ 1) ಅರೇಬಿಕ 2) ರೋಬುಸ್ಟ 3) ಲಿಬಿರಿಕ. ಅರೇಬಿಕ ಕಾಫಿ ಅತ್ಯಂತ ಉತ್ತಮ ದರ್ಜೆಯದು. ಇದನ್ನು ಮೋಕ ಕಾಫಿ ಎಂತಲೂ ಕರೆಯುವರು. ಆದರೆ ಇದು ರೋಗಗಳಿಗೆ ತುತ್ತಾಗುತ್ತದೆ. ಕಡಿಮೆ ಇಳುವರಿಯನ್ನು ಕೊಡುತ್ತದೆ. ಇದರ ಬೇಸಾಯ ಕಡಿಮೆ. ರೊಬುಸ ಕಾಫಿ ಹೆಚ್ಚು ಇಳುವರಿಯನ್ನು ನೀಡುತ್ತದೆ. ಇದು ರೋಗನಿರೋಧಕ ಶಕ್ತಿಯುಳ್ಳದ್ದಾಗಿದೆ. ಆದರೆ ಇದರ ಗುಣಮಟ್ಟ ಕಡಿಮೆ. ಪ್ರಪಂಚದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಶೇ. 80 ಈ ಬಗೆಯದಾಗಿದೆ.

ಕಾಫಿ ಉಷ್ಣವಲಯದ ಬೆಳೆ. ಇದಕ್ಕೆ ಅಧಿಕ ಉಷ್ಣಾಂಶ ಅಂದರೆ $15^0$–$30^0$ ಸೆ. ಉಷ್ಣಾಂಶವಿರಬೇಕು. ಕಾಫಿ ಬೇಸಾಯಕ್ಕೆ 150–200 ಸೆಂಮೀ ವಾರ್ಷಿಕ ಮಳೆಯ ಹಂಚಿಕೆಯಾಗಬೇಕು. ಹೂ ಬಿಡುವ ಮುನ್ನ ತಪ್ಪದೆ ಮಳೆ ಬೀಳಬೇಕು. ಕಾಫಿ ಗಿಡ ಹಿಮ ವೃಷ್ಟಿಯನ್ನು ಹೆಚ್ಚು ಸಹಿಸುವುದಿಲ್ಲ. ಅಲ್ಲದೆ ಸೂರ್ಯನ ಕಿರಣಗಳು ಕಾಫಿ ಗಿಡದ ಮೇಲೆ ನೇರವಾಗಿ ಬೀಳುವುದು ಹಾನಿಕರ. ಆದ್ದರಿಂದ ಕಾಫಿತೋಟದಲ್ಲಿ ನೆರಳಿಗಾಗಿ ಇತರ ಮರಗಳನ್ನು ಬೆಳೆಸುವುದು ಅತ್ಯಾವಶ್ಯಕ. ಕಾಫಿ ಹಣ್ಣುಗಳನ್ನು ಸಂಗ್ರಹಿಸುವ ಅವಧಿಯಲ್ಲಿ ಒಣ ಹವೆಯಿರಬೇಕು. ಬಿದ್ದ ಮಳೆ ನೀರು ಕಾಫಿ ಗಿಡದ ತಳದಲ್ಲಿ ನಿಲ್ಲದೆ ಹರಿದು ಹೋಗಲು ಇಳಿಜಾರು ಅವಶ್ಯಕ. ಆದ್ದರಿಂದ ಸಾಮಾನ್ಯವಾಗಿ ಕಾಫಿಯನ್ನು ಸಮುದ್ರ ಮಟ್ಟದಿಂದ 600–1800 ಮೀ ಎತ್ತರದಲ್ಲಿರುವ ಬೆಟ್ಟಗಳ ಇಳಿಜಾರುಗಳಲ್ಲಿ ಬೇಸಾಯ ಮಾಡುವುದು ಸೂಕ್ತ. ಸುಣ್ಣ ಮತ್ತು ಕಬ್ಬಿಣಾಂಶವಿರುವ ಮಣ್ಣು ಕಾಫಿ ಬೆಳೆಗೆ ಯೋಗ್ಯವಾದುದು, ಕೆಂಪು ಜೇಡಿ ಮತ್ತು ಕಪ್ಪು ಜೇಡಿ ಮಣ್ಣು ಕಾಫಿಗೆ ಉತ್ಕೃಷ್ಟವಾದುದು.

ಕಾಫಿಯನ್ನು ಬೆಳೆಯುವ ಪ್ರಪಂಚದ ಪ್ರಮುಖ ರಾಷ್ಟ್ರಗಳೆಂದರೆ ಬ್ರೆಜಿಲ್, ಕೊಲಂಬಿಯ, ಇಂಡೊನೇಷ್ಯ, ಕೋಟೆ ಐವರಿ, ಅಂಗೋಲ, ನೈಜೀರಿಯ, ಉಗಾಂಡ, ಕೆಮರೂನ್, ಕೀನ್ಯಾ, ಮಲಗಾಸಿ, ಟಾಂಜಾನಿಯ, ಲೈಬಿರಿಯ, ಕೋಸ್ಟರಿಕ, ನಿಕಾರಾಗುವ, ಗ್ವಾಟೆಮಾಲ, ಎಲ್–ಸಾಲ್ವೆಡರ್, ಕ್ಯುಬ, ಜಮೈಕ್, ಹೈಟಿ, ಪೊರ್ಟೊರಿಕೊ, ಭಾರತ, ಶ್ರೀಲಂಕ, ಇಂಡೊನೇಷ್ಯ ಮತ್ತು ಅರೇಬಿಯ ದೇಶಗಳು. ಇವುಗಳಲ್ಲಿ ಬ್ರೆಜಿಲ್ ಪ್ರಪಂಚದ ಒಟ್ಟು ಕಾಫಿಯ ಉತ್ಪಾದನೆಯಲ್ಲಿ ಶೇ. 28 ಪೂರೈಸುವ ಮೂಲಕ ಕಾಫಿಯರಾಜ ಎಂಬುದಕ್ಕೆ ಅನ್ವರ್ಥವಾಗಿದೆ. ಹಾಗೆಯೇ ಕಾಫಿಯನ್ನು ರಫ್ತು ಮಾಡುವುದರಲ್ಲೂ (ಶೇ. 24) ಪ್ರಥಮ ಸ್ಥಾನದಲ್ಲಿದೆ. ವಿಯೆಟ್ನಾಂ, ಕೊಲಂಬಿಯ ಮತ್ತು ಇಂಡೊನೇಷ್ಯಗಳು ಇತರ ಪ್ರಮುಖ ಕಾಫಿ ಉತ್ಪಾದಿಸುವ ಹಾಗೂ ರಫ್ತು ಮಾಡುವ ದೇಶಗಳಾಗಿವೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿಯು ಪ್ರಮುಖ ಸರಕು ಆಗಿದ್ದು, ಪ್ರಪಂಚದ ಒಟ್ಟು ಕಾಫಿ ಉತ್ಪನ್ನದಲ್ಲಿ ಶೇ. 80 ಭಾಗ ರಫ್ತಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನ ಅತಿಹೆಚ್ಚು ಕಾಫಿ ಆಮದು ಮಾಡಿಕೊಳ್ಳುವ ದೇಶವಾಗಿದೆ. (ಪಿ.ಟಿ.ಬಿ.)

**ಕಾಬೂಲ್:** ಅಫ್ಘಾನಿಸ್ತಾನದ ರಾಜಧಾನಿ. ಆ ದೇಶದ ಅತ್ಯಂತ ದೊಡ್ಡ ನಗರ. ಕಾಬೂಲ್ ನದಿಯ ಬಲದಂಡೆಯ ಮೇಲೆ ಸಮುದ್ರಮಟ್ಟದಿಂದ 1825 ಮೀ ಎತ್ತರದಲ್ಲಿದೆ. ಜನಸಂಖ್ಯೆ 1,424,000. ಇಲ್ಲಿರುವ ಬಹುತೇಕ ಜನ ಪರ್ಷಿಯನ್ ಭಾಷೆಯನ್ನಾಡುವರು; ಪಠಾಣರೂ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಅಸ್ಮೈ ಮತ್ತು ಷೇರ್ ದರ್‍ವಾಜಾ ಬೆಟ್ಟಗಳ ಮಧ್ಯದ ಕಣಿವೆಯಲ್ಲಿ ಈ ನಗರವಿದೆ. ಇಕ್ಕಟ್ಟಾದ ಕಣಿವೆಯೊಂದರ ಮುಖಾಂತರ ಹೊರಪ್ರದೇಶಗಳೊಡನೆ ಸಂಪರ್ಕ ಪಡೆದಿದೆ. ಈ ಕಣಿವೆಯ ಮೂಲಕವೇ ಕಾಬೂಲ್ ನದಿಯೂ ಘಜ್ನಿ ಮತ್ತು ಪಘ್‌ಮಾನ್ ರಸ್ತೆಗಳೂ ಹಾದುಹೋಗುತ್ತವೆ. ಬೆಟ್ಟಗಳ ಮೇಲಿರುವ ಮಣ್ಣಿನಕೋಟೆಯ ಅವಶೇಷಗಳು ಕಾಬೂಲ್‌ಷಾಹಿ ಸುಲ್ತಾನರಿಂದ ನಿರ್ಮಿತವಾದ ಕೋಟೆಯ ಉಳಿಕೆಗಳಿರಬಹುದು. ಹಿಂದೂಕುಷ್ ಪರ್ವತಗಳ ಮೂಲಕ ಹಾದುಹೋಗುವ ಉತ್ತರದ ಎಲ್ಲ ಕಣಿವೆಮಾರ್ಗಗಳ ಮೇಲೂ ತನ್ನ ಪ್ರಭಾವ ಬೀರುವ ಈ ನಗರದ ಭೌಗೋಳಿಕ ನೆಲೆ ಭಾರತ, ಪಾಕಿಸ್ತಾನ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಭೂಸಂಪರ್ಕಕ್ಕೆ ಮುಖ್ಯ ದ್ವಾರದಂತಿದೆ.

ಹಳೆಯ ಮತ್ತು ಈಗಿನ ನಗರ ವಿಭಾಗಗಳು ಒಂದಾಗಿ ಸೇರಿದ್ದು ಇದು ಇಕ್ಕಟ್ಟಾದ ಮತ್ತು ಅಗಲವಾದ ರಸ್ತೆಗಳಿಂದಲೂ ಹಳೆಯ ಮತ್ತು ಆಧುನಿಕ ಕಟ್ಟಡಗಳಿಂದಲೂ ಕೂಡಿದೆ. ನಗರವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಅನೇಕ ಸ್ಮಾರಕಗಳೂ ಆಧುನಿಕ ಭವ್ಯ ಕಟ್ಟಡಗಳೂ ಉದ್ಯಾನಗಳೂ ಇಲ್ಲುಂಟು. ಅಫ್ಘಾನಿಸ್ತಾನದ ಪ್ರಮುಖ ಕೈಗಾರಿಕಾ ಕೇಂದ್ರವಾದ ಇಲ್ಲಿ ಬೆಂಕಿಕಡ್ಡಿ, ಚರ್ಮ,ಹತ್ತಿ ಮತ್ತು ಉಣ್ಣೆ ಗಿರಣಿಗಳು ಸ್ಥಾಪಿತವಾಗಿವೆ. *

**ಕಾಮನ್‌ವೆಲ್ತ್:** ಆಧುನಿಕ ಪ್ರಪಂಚದ ಇತಿಹಾಸದಲ್ಲಿ ಕಾಮನ್‌ವೆಲ್ತ್ ಒಂದು ವಿಶಿಷ್ಟ ಸಂಸ್ಥೆ. 1931ರಲ್ಲಿ ಬ್ರಿಟಿಷ್ ಕಾಮನ್‌ವೆಲ್ತ್ ಸಂಸ್ಥೆ ಸ್ಥಾಪಿತವಾಯಿತು. ಈ ಸಂಸ್ಥೆ ಇನ್ನಿತರ ರಾಜಕೀಯ ಸಂಘಗಳಂತೆ ಇಚ್ಛಾಪೂರ್ವಕವಾಗಿ ಸ್ಥಾಪಿಸಲ್ಪಟ್ಟಿದ್ದಲ್ಲ. ಈ ಸಂಸ್ಥೆ ತನ್ನದೇ ಆದ ಪ್ರಣಾಳಿಕೆಯನ್ನಾಗಲೀ ಲಿಖಿತ ಸಂವಿಧಾನವನ್ನಾಗಲೀ ಹೊಂದಿಲ್ಲ. ಇದಕ್ಕೆ ಸರ್ಕಾರವೂ ಇಲ್ಲ. ಸಂಸತ್ತೂ ಇಲ್ಲ. ತನ್ನದೇ ಆದ ಸೈನ್ಯವನ್ನು ಕಟ್ಟಿಲ್ಲ. ಇದರ ಸದಸ್ಯರಿಗೆ ನಿರ್ದಿಷ್ಟವಾದ ಹಕ್ಕುಗಳಾಗಲೀ ಬಾಧ್ಯತೆಗಳಾಗಲೀ ಇಲ್ಲ. 1949ರ ಲಂಡನ್ ಬ್ರಿಟಿಷ್ ಕಾಮನ್‌ವೆಲ್ತ್ ಸಮ್ಮೇಳನದವರೆಗೂ ಬ್ರಿಟನ್ನಿನ ರಾಜ/ರಾಣಿ ನ್ಯಾಯಮಾತ್ರ ಮುಖ್ಯಸ್ಥರಾಗಿದ್ದರು. ಈ ಸಮ್ಮೇಳನದ ಅನಂತರ ಇದರ ಹೆಸರು ಬ್ರಿಟನ್ ಕಾಮನ್‌ವೆಲ್ತ್ ಬದಲಾಗಿ ಕಾಮನ್‌ವೆಲ್ತ್ ರಾಷ್ಟ್ರಕೂಟ ಎಂದು ಬದಲಾಯಿಸಲಾಯಿತು. ಕಾಮನ್‌ವೆಲ್ತ್ ಸಂಸ್ಥೆ ವಿಶ್ವಸಂಸ್ಥೆಯ ಉದ್ದೇಶಗಳಿಗೆ ಬೆಂಬಲ ನೀಡುವ ಪೂರಕವಾದ ಕೂಟವಾಗಿದೆ. ಕಾಮನ್‌ವೆಲ್ತ್ ರಾಷ್ಟ್ರಗಳ ಕೂಟ ಹಲವು ಉದ್ದೇಶಗಳನ್ನು ಹೊಂದಿದೆ. ಅವುಗಳೆಂದರೆ; ವಿಶ್ವಸಂಸ್ಥೆಯನ್ನು ಬೆಂಬಲಿಸಬೇಕು, ವ್ಯಕ್ತಿ ಸ್ವಾತಂತ್ರ್ಯ ನೀಡಬೇಕು, ವರ್ಣಭೇಧ, ಮತಧರ್ಮ, ರಾಜಕೀಯ ಇತ್ಯಾದಿ ಅಪ್ರಯುಕ್ತ ಅಂಶಗಳ ಆಧಾರದ ಮೇಲೆ ಯಾವ ಒಂದು ಭೇದ–ಭಾವ ಎಣಿಸದೆ ಎಲ್ಲರಿಗೂ ಸಮಾನತೆಯನ್ನು ಸದಸ್ಯ ರಾಷ್ಟ್ರಗಳಲ್ಲಿ ಕಾಪಾಡುವುದು, ಮುಕ್ತ ರಾಯಭಾರವನ್ನು ಬೆಂಬಲಿಸಬೇಕು, ಸಾಮ್ರಾಜ್ಯವಾದ ಹಾಗೂ ವರ್ಣಬೇಧವನ್ನು ಪ್ರತಿಭಟಿಸಬೇಕು, ಆರ್ಥಿಕ–ಸಾಮಾಜಿಕ ಮತ್ತು ಬೌದ್ಧಿಕ ಹಿರಿಮೆಗಾಗಿ ಶ್ರಮಿಸಬೇಕು, ಯುದ್ಧದ ಕಾರಣಗಳನ್ನು ನಿವಾರಿಸವುದು, ಸಮಭಾವ ಮತ್ತು ಸಹಿಷ್ಣುತೆಯನ್ನು ಪ್ರೋತ್ಸಾಹಿಸುವುದು, ಶೋಷಣೆ ಮತ್ತು ಅನ್ಯಾಯವನ್ನು ವಿರೋಧಿಸುವುದು, ಸದಸ್ಯ ರಾಷ್ಟ್ರಗಳಲ್ಲಿ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದು ಕಾಮನ್‌ವೆಲ್ತ್ ರಾಷ್ಟ್ರಗಳ ಉದ್ದೇಶವಾಗಿದೆ. ಸಾಮಾನ್ಯವಾಗಿ ಎರಡು ವರ್ಷಗಳಿಗೊಮ್ಮೆ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಸಮ್ಮೇಳನ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ನಡೆಯುತ್ತದೆ. (ಎಸ್.ಎಸ್.ಎಸ್.)

**ಕಾರಕೋರಂ:** ಒಂದು ಪರ್ವತ ಶ್ರೇಣಿ. ಉತ್ತರದಲ್ಲಿ ಯಾರ್ಕಂಡ್ ನದಿಯೂ ಪಶ್ಚಿಮದಲ್ಲಿ ಕಾರಂಬಾರ್ ಜಲವಿಭಾಗ ರೇಖೆಯೂ ಪೂರ್ವದಲ್ಲಿ ಷೈಯಾರ್ ನದಿಯ ಮೇಲ್ಭಾಗವೂ ಕಾರಕೋರಂ ಕಣಿವೆಯೂ ಇದನ್ನು ಸುತ್ತುವರಿದಿವೆ. ಪಶ್ಚಿಮದಲ್ಲಿ, ಪೂ. ರೇ $74^0$ ಮತ್ತು ಉ. ಅ. $36^0$ ಯ ನೇರದಲ್ಲಿ, ಕಾರಂಬಾರ್ ಬಳಿ ಇದು ಹಿಂದೂಕುಷ್ ಶ್ರೇಣಿಯೊಂದಿಗೆ ಸೇರಿಕೊಳ್ಳುತ್ತದೆ. ಇದರ ಉದ್ದ ಸು. 740 ಕಿಮೀ.

ಕಾರಕೋರಂ ಪರ್ವತಪ್ರದೇಶ ಹಿಮಗಡ್ಡೆಗಳಿಂದ ಕೂಡಿದ್ದು. ಇಲ್ಲಿ ಅನೇಕ ಉದ್ದವಾದ ಹಿಮನದಿಗಳಿವೆ. ಇದರ ಪಶ್ಚಿಮದಲ್ಲಿರುವ ಬಟೂರ (58 ಕಿಮೀ) ಪೂರ್ವಕ್ಕಿರುವ ಸ್ಯೆಯಾಚೆನ್ (75 ಕಿಮೀ) ಮತ್ತು ಹಿಸ್‌ಪಾರ್‌ಬಿಯಾಪೊ (122 ಕಿಮೀ) ಹಿಮ ನದಿಗಳು ಮುಖ್ಯವಾದವು. ಸ್ಯೆಯಾಚೆನ್ ಹಿಮನದಿ ಷೈಯಾಕಿನ ಉಪನದಿಯಾದ ನುಬ್ರಕ್ಕೆ ನೀರನ್ನು ಒದಗಿಸುತ್ತದೆ. ಈ ಪರ್ವತದಲ್ಲಿರುವ 7500 ಮೀ ಗಿಂತ ಎತ್ತರವಾದ ಶಿಖರಗಳ ಸಂಖ್ಯೆ 20. ಇವುಗಳಲ್ಲಿ 14 ಮಹಾಕಾರಕೋರಂ ಪರ್ವತದಲ್ಲಿವೆ. ಇವುಗಳಲ್ಲಿ ಒಂದಾದ $K_2$ (ಗಾಡ್ವಿನ್ ಆಸ್ಟಿನ್) ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಶಿಖರಗಳಲ್ಲಿ ಎರಡನೆಯದು.

ಮಹಾ ಕಾರಕೋರಂ ಪರ್ವತಶ್ರೇಣಿ ದಕ್ಷಿಣದ ಬಟೂರ ಹಿಮನದಿಗೂ ಉತ್ತರದ ಹಿಸ್‌ಪಾರ್, ಪುನ್‌ಮಾ, ಬಾಲ್ಟೋರು ಮತ್ತು ಸೈಯಾಚೆನ್ ಹಿಮನದಿಗಳಿಗೂ ನಡುವೆ ನಿಂತಿದೆ.

ಮಹಾ ಕಾರಕೋರಂ ಪರ್ವತ ವ್ಯವಸ್ಥೆಯ ದಕ್ಷಿಣ ಮತ್ತು ಉತ್ತರ ಪರ್ವತಶ್ರೇಣಿಗಳು ತಗ್ಗು. ಪರ್ವತಶ್ರೇಣಿಗಳ ಮೂಲಕ ಹಾದುಹೋಗುವ ನೈಸರ್ಗಿಕ ಮಾರ್ಗಗಳು ಎರಡು: ಗಿಲ್ಗಿಟಿನಿಂದ ಹುನ್‌ಜ಼ಾ ಕಮರಿಯ ಮೂಲಕ ಮಿಂಟಾಕಾ ಕಣಿವೆಯಲ್ಲಿ ಸಾಗಿ ಪಾಮಿರನ್ನು ದಾಟಿ ಕಾಷ್‌ಗರ್ ತಲುಪುವುದು ಒಂದು ; ಪೂರ್ವದಲ್ಲಿ ಖಾರ್ಡಂಗ್ ಸಾಸೆರ್ ಮತ್ತು ಕಾರಕೋರಂ ಕಣಿವೆಗಳ ಮೂಲಕ ಸಾಗಿ ಖೋಟಾನ್ ಅಥವಾ ಯಾರ್ಕಂಡ್ ತಲುಪುವುದು ಇನ್ನೊಂದು. ಈ ಮಾರ್ಗದಲ್ಲಿ ಸು. ಹತ್ತು ಘಟ್ಟಗಳಷ್ಟು ದೂರ ಜನವಸತಿಯಿಲ್ಲ; ಯಾವ ಸಾಮಾಗ್ರಿಯೂ ಒದಗುವುದಿಲ್ಲ. ಇತರ ಕಣಿವೆಗಳಲ್ಲಿ ಪರ್ವತಾರೋಹಿಗಳಲ್ಲದೆ ಬೇರೆ ಯಾರೂ ಕಾಲಿಡುವುದಿಲ್ಲ. ಆದರೆ ಈ ಪ್ರದೇಶದ ಸಮಗ್ರ ಭೂಪಟವನ್ನು ತಯಾರಿಸಲಾಗಿದೆ. 7500 ಮೀ ಗಿಂತ ಎತ್ತರವಿರುವ ಇಪ್ಪತ್ತು ಶಿಖರಗಳ ಪೈಕಿ ಹನ್ನೆರಡನ್ನು ಆರೋಹಣ ಮಾಡಿ ಆಗಿದೆ. (ಎಂ.ಎ.ಎಚ್.)

**ಕಾರವಾರ:** ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಒಂದು ಪಟ್ಟಣ, ಬಂದರು, ಜಿಲ್ಲಾಕೇಂದ್ರ; ಕಾರವಾರ ತಾಲ್ಲೂಕಿನ ಮುಖ್ಯಸ್ಥಳ. ಉ.ಅ. $14^0 49' 19''$ ಮತ್ತು ಪೂ.ರೇ. $74^0 13' 48''$ ಮೇಲಿರುವ ಪಟ್ಟಣ ಕಾರವಾರ. ಜನಸಂಖ್ಯೆ. 147842. ಕಾರವಾರದ ಪೂರ್ವದ ಬದಿಗೆ ಸಹ್ಯಾದ್ರಿಯ ಶ್ರೇಣಿ ಹಬ್ಬಿದೆ. ಉತ್ತರಕ್ಕೆ ಕಾಳಿ ನದಿ ಹರಿದು ಸಮುದ್ರವನ್ನು ಸಂಗಮಿಸುತ್ತದೆ. ಬಹುದೂರ ನೇರವಾಗಿ ಸಾಗುವ ಪಶ್ಚಿಮ ಕರಾವಳಿ ಕಾರವಾರದ ಬಳಿಯಲ್ಲಿ ಸಮುದ್ರಕ್ಕೆ ಚಾಚಿಕೊಂಡಂತಿದೆ.

ಕಾರವಾರದ ಪೂರ್ವಬದಿಯ ನೀಳ ಪರ್ವತಶ್ರೇಣಿ ಸೌಂದರ್ಯಪೂರಿತವಾದದ್ದು. ಕಾರವಾರದ ಗುಡ್ಡಗಳಲ್ಲಿ ಪ್ರಸಿದ್ದವಾದದ್ದು ಗುಡ್ಡೆಹಳ್ಳಿ. ಸಮುದ್ರಮಟ್ಟದಿಂದ ಸು. 450 ಮೀ ಎತ್ತರದಲ್ಲಿದೆ. ಜನಸಂಚಾರಕ್ಕೆ ಹೆಚ್ಚು ಅನುಕೂಲವಿಲ್ಲದ ಗುಹೆಯ ಒಳಗಡೆ ಇರುವ ಕರಿನಾಸ್ ಎಂಬ ಪುರಾತನ ಶಿಲೆ ಐತಿಹ್ಯದಿಂದ ಕೂಡಿದ್ದು. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಪ್ರಸಿದ್ಧ ಸೆಜ್ಜೇಶ್ವರ ಲಿಂಗದ ದೇವಾಲಯವಿರುವುದು ಕಾರವಾರದಿಂದ 3.5 ಕಿಮೀ ದೂರದಲ್ಲಿ. ಇದು ಗೋಕರ್ಣಕ್ಕೆ ಸಮನಾದ ಪಾವಿತ್ರ್ಯ ಪಡೆದದ್ದೆಂದು ಪ್ರತೀತಿ.

ಕಾರವಾರದ ವೈಶಿಷ್ಟ್ಯವೆಂದರೆ ಅದರ ನೈಸರ್ಗಿಕ ಬಂದರು. ನೈಋತ್ಯ ಮತ್ತು ಈಶಾನ್ಯದ ಗಾಳಿಗಳಿಂದ ರಕ್ಷಣೆ ಪಡೆದಿರುವ ಈ ಬಂದರು ಅತ್ಯಂತ ಸುರಕ್ಷಿತವಾದುದ್ದು. ಬಳ್ಳಾರಿ ಪ್ರದೇಶದ ಕಬ್ಬಿಣದ ಅದಿರು ಕಾರವಾರ ಬಂದರಿನಿಂದಲೂ ಸಾಗುತ್ತದೆ. ದೊಡ್ಡ ಹಡಗುಗಳು ಈಗ ದಂಡೆಯಿಂದ ಮೂರು ಯೂನಿಟ್ ಆಚೆ ನಿಲ್ಲುತ್ತವೆ. ಸದಾಶಿವಗಡ ಅಥವಾ ಚಿತ್ಕುಲ ಬಂದರು ಇರುವುದು ಇದರ ಉತ್ತರಕ್ಕೆ. ಕಡವಾಡ ಬಂದರು ಸ್ವಲ್ಪ ಒಳಭಾಗದಲ್ಲಿದೆ.

ಮೀನುಗಾರಿಕೆ ಇಲ್ಲಿಯ ಮುಖ್ಯ ಕಸಬು. ದೋಣಿ ಕಟ್ಟುವುದೂ ಕೈಮಗ್ಗದ ನೇಯ್ಗೆ ಕೆಲಸ ಇತರ ಉದ್ಯಮಗಳು. ಕಾರವಾರದಲ್ಲಿ ಜಿಲ್ಲಾ ಕಚೇರಿಯೂ ಆಸ್ಪತ್ರೆ ಮತ್ತು ಶಾಲಾ ಕಾಲೇಜುಗಳೂ ಇವೆ. ಗೋವೆ, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಮತ್ತು ಬೆಂಗಳೂರುಗಳಿಗೆ ರಸ್ತೆ ಸಂಪರ್ಕವಿದೆ. ಗೋವೆ, ಮುಂಬಯಿ, ಕುಮಟ ಮತ್ತ ಕೊಚ್ಚಿಗಳಿಗೆ ಕರಾವಳಿಯ ಹಡಗು ಸಂಬಂಧವುಂಟು. (ಎಸ್.ಎಸ್.ಎ.)

**ಕಾರೈಕ್ಕಾಲ್:** ಭಾರತ ಒಕ್ಕೂಟ ಪ್ರದೇಶವಾದ ಪುದುಚೇರಿಯ ಆಡಳಿತಕ್ಕೆ ಸೇರಿರುವ ಭಾಗಗಳಲ್ಲೊಂದು; ಅದೇ ಹೆಸರಿನ ಪಟ್ಟಣ. ಕಾರೈಕ್ಕಾಲ್ ಪ್ರದೇಶ ಉ.ಅ. $10^0 50'$ ನಿಂದ $14^0$ ಯವರೆಗೆ ಮತ್ತು ಪೂ.ರೇ. $70^0 43'$ ನಿಂದ $79^0 52'$ ವರೆಗೆ ಹಬ್ಬಿದೆ. ಪುದುಚೇರಿಯಿಂದ ದಕ್ಷಿಣಕ್ಕೆ 150 ಕಿಮೀ ದೂರದಲ್ಲಿ, ಬಂಗಾಲ ಕೊಲ್ಲಿಯ ದಂಡೆಯ ಮೇಲಿರುವ ಕಾರೈಕ್ಕಾಲ್ ಪ್ರದೇಶದ ಉತ್ತರ, ದಕ್ಷಿಣ, ಪಶ್ಚಿಮಗಳಲ್ಲಿ ತಮಿಳುನಾಡಿನ ತಂಜಾವೂರು ಜಿಲ್ಲೆಯೂ ಪೂರ್ವದಲ್ಲಿ ಬಂಗಾಳ ಕೊಲ್ಲಿಯೂ ಇವೆ. ತಂಜಾವೂರು ಜಿಲ್ಲೆಯ ಭಾಗದಂತಿರುವ ಈ ಪ್ರದೇಶದ ವಿಸ್ತೀರ್ಣ 150 ಚ.ಕಿಮೀ ಕಾರೈಕ್ಕಾಲ್, ತಿರುನಲ್ಲೂರು, ನೆರಾವಿ, ನೆಡುಂಗಾಡು, ಕೊಟ್ಟುಚೆರಿ ಮತ್ತು ತಿರುಮಲೈರಾಯನ್ ಪಟ್ಟಿನಂ ಎಂಬ ಆರು ಸಣ್ಣ ವಿಭಾಗಗಳಾಗಿವೆ (ಕಮ್ಯೂನ್). ಕಾರೈಕ್ಕಾಲ್ ಪಟ್ಟಣವೇ ಅಲ್ಲದೆ 118 ಗ್ರಾಮಗಳುಂಟು. ಪಟ್ಟಣದ ಜನಸಂಖ್ಯೆ 74,333.

ಕಾವೇರಿ ಮುಖಜಭೂಮಿಯಲ್ಲಿ ಅದರ ಕವಲೊಂದರ ದಡದಲ್ಲಿರುವ ಕಾರೈಕ್ಕಾಲ್ ಪ್ರದೇಶದ ಕೃಷಿಕಾರ್ಯ ಕಾವೇರಿಯ ಕಾಲುವೆ ವ್ಯವಸ್ಥೆಗೆ ಒಳಪಟ್ಟಿದೆ. ಬತ್ತ ಮುಖ್ಯ ಬೆಳೆ. ತರಿ ಜಮೀನಿನ ವಿಸ್ತೀರ್ಣ ಸು. 10,000 ಹೆ.ಗಳು.

ಕಾರೈಕ್ಕಾಲ್ ಪಟ್ಟಣ ಪೂರ್ವ ಕರಾವಳಿಯ ತೆರೆದ ಹಡಗುದಾಣಗಳಲ್ಲೊಂದು. ಇಲ್ಲಿ 45 ಮೀ ಎತ್ತರದ ದೀಪಸ್ತಂಭವುಂಟು. 13 ಕಿಮೀ ಫಾಸಲೆಯವರೆಗೂ ಇದು ಕಾಣಿಸುತ್ತದೆ. ದಕ್ಷಿಣ ರೈಲ್ವೆಯ ಮಾಯಾವರಂ –ಪೆರಾಲಂ ರೈಲುದಾರಿ ಕಾರೈಕಾಲ್ ಮೂಲಕ ಹಾದು ಹೋಗುತ್ತದೆ. (ಯು.ಜಿ.ಎಂ.)

**ಕಾರ್ಕಳ:** ಉಡುಪಿ ಜಿಲ್ಲೆಯಲ್ಲಿರುವ ಒಂದು ಇತಿಹಾಸ ಪ್ರಸಿದ್ಧ ಪಟ್ಟಣ ಮತ್ತು ಅದೇ ಹೆಸರಿನ ತಾಲ್ಲೂಕಿನ ಕೇಂದ್ರ. ಸಮುದ್ರಮಟ್ಟದಿಂದ 72 ಮೀ ಎತ್ತರದಲ್ಲಿದೆ. ತಾಲ್ಲೂಕಿನ ವಿಸ್ತೀರ್ಣ 1320 ಚ.ಕಿಮೀ. ಪಶ್ಚಿಮಘಟ್ಟಗಳ ಸಾಲಿನಲ್ಲಿರುವ ಈ ಬೆಟ್ಟಗುಡ್ಡ ಪ್ರದೇಶದಲ್ಲಿ ಹಲವುರೀತಿ ಉತ್ತಮ ಕಟ್ಟಡಕಲ್ಲುಗಳು ಸಿಕ್ಕುತ್ತವೆ. ಚಪ್ಪಡಿಕಲ್ಲು, ಜಂಬುಕಲ್ಲು (ಲ್ಯಾಟರೈಟ್) ಇವು ಮುಖ್ಯವಾದವು. ಜಂಬುಕಲ್ಲು ಭೂಮಿಯಿಂದ ಅಗೆದು ತೆಗೆದಾಗ ಮೃದುವಾಗಿದ್ದು ಕ್ರಮೇಣ ಗಾಳಿಯಲ್ಲಿ ಗಟ್ಟಿಯಾಗುತ್ತದೆ. ಆದ್ದರಿಂದ ಆ ಕಲ್ಲಿನಲ್ಲಿ ಕೊಯ್ದು ತಯಾರಿಸಿದ ಇಟ್ಟಿಗೆಗಳನ್ನು ಈ ಪ್ರದೇಶದಲ್ಲೆಲ್ಲ ಕಟ್ಟಡಗಳಿಗೆ ಉಪಯೋಗಿಸುತ್ತಾರೆ. ಪಶ್ಚಿಮ ಘಟ್ಟಗಳ ಆಗುಂಬೆ ಶ್ರೇಣಿಯ ಸ್ವಲ್ಪಭಾಗ ಕಾರ್ಕಳ ತಾಲ್ಲೂಕಿಗೆ ಸೇರುತ್ತದೆ. ಕಾರ್ಕಳದ ವಾಯುಗುಣ ಹಿತಕರವಾದುದು. ಜೂನ್ ಅಕ್ಟೋಬರ್‌ವರೆಗೆ ಮಳೆಗಾಲ. ಅನೇಕ ಸಣ್ಣ ಹೊಳೆಗಳು ಇಲ್ಲಿ ಹರಿಯುತ್ತವೆ. ರಾಮಸಾಗರ ಇಲ್ಲಿಯ ಮುಖ್ಯ ಸರೋವರ. ಸು. 210 ಮೀ ಎತ್ತರದಿಂದ ಬೀಳುವ ಭಂಡಾಜೆ ಜಲಪಾತ ಕಾರ್ಕಳ ತಾಲ್ಲೂಕಿನಲ್ಲಿದೆ. ಸಮೃದ್ಧವಾದ ಅರಣ್ಯಸಂಪತ್ತು ಮತ್ತು ಅರಣ್ಯಜನ್ಯ ಉತ್ಪನ್ನಗಳು ಕಾರ್ಕಳದ ವೈಶಿಷ್ಟ್ಯ. ಈ ತಾಲೋಕಿನ ಜನಸಂಖ್ಯೆ 204,571.

ಇಲ್ಲಿಯ ಪ್ರಮುಖ ಬೆಳೆ ಬತ್ತ. ಇದಲ್ಲದೆ ತೆಂಗು, ಅಡಕೆ, ಮೆಣಸು, ಶುಂಠಿ, ಅನಾನಸ್, ಹಲಸು, ಮಾವು, ಬಾಳೆ ಮತ್ತು ಗೇರುಬೀಜ ಇಲ್ಲಿಯ ಉತ್ಪನ್ನಗಳಲ್ಲಿ ಮುಖ್ಯವಾದವು. ಕಲ್ಲುಕೆಲಸ, ಬೀಡಿ ಕಟ್ಟುವುದು. ನಶ್ಯದ ತಯಾರಿಕೆ, ಕೊಬ್ಬರಿ ಎಣ್ಣೆ ತಯಾರಿಕೆ, ಹೆಂಚಿನ ತಯಾರಿಕೆ, ಮಡಕೆ ಮತ್ತು ಬೆತ್ತದ ಕೆಲಸ ಮುಂತಾದ ಗ್ರಾಮಕೈಗಾರಿಕೆಗಳಿವೆ. ಸರ್ಕಾರಿ ವ್ಯವಸಾಯ ಸಂಶೋಧನ ಕೇಂದ್ರಗಳು ಇವೆ. ಬೀಜೋತ್ಪಾದನ ಕೇಂದ್ರ (ಸಾಣೂರು), ಅನಾನಸ್ ಸಂಶೋಧನ ಕೇಂದ್ರ (ಮೂಡಬಿದ್ರೆ) ಮತ್ತು ವ್ಯವಸಾಯಭಿವೃದ್ಧಿ ಇವು ಮುಖ್ಯವಾದವು, ಕಾರ್ಕಳದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳೂ ಆಸ್ಪತ್ರೆಗಳೂ ಇವೆ. ಜೈನಕಾಶಿ ಎಂದು ಪ್ರಸಿದ್ಧವಾದ ಮೂಡಬಿದಿರೆ ಈ ತಾಲ್ಲೂಕಿನಲ್ಲಿದೆ. ಸೋಮೇಶ್ವರ ಇನ್ನೊಂದು ಮುಖ್ಯ ಸ್ಥಳ. ಇಲ್ಲಿ ಜೈನಬಸದಿಯೊಂದುಂಟು. ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ದನದ ಜಾತ್ರೆ ಪ್ರಸಿದ್ಧ. ಯಕ್ಷಗಾನ ಮತ್ತು ಚಿತ್ರಕಲೆ ಇಲ್ಲಿಯ ಮುಖ್ಯ ಲಲಿತಕಲೆಗಳು. ಕಾರ್ಕಳ ಪಟ್ಟಣದಿಂದ ಉಡುಪಿ, ಮೂಡಬಿದಿರೆ, ಆಗುಂಬೆ ಮುಂತಾದ ಸ್ಥಳಗಳಿಗೆ ಬಸ್ ವ್ಯವಸ್ಥೆಯುಂಟು. ಪಟ್ಟಣದ ಜನಸಂಖ್ಯೆ 25,118. (ಬಿ.ಜಿ.ಕೆ.;ಕೆ.ಎಸ್.ಡಿ.;ಎಸ್.ಎಸ್.ಎ.)

**ಕಾರ್ಡಿಲ್ಲೆರಾ:** ಪ್ರಮುಖ ಪರ್ವತ ಶ್ರೇಣಿಗಳ ಒಂದು ಗುಂಪು. ಸಾಮಾನ್ಯವಾಗಿ ಖಂಡದ ಒಂದು ಭಾಗ. ಇಂಥ ಪ್ರದೇಶಗಳು ಹಲವಾರು ಪ್ರಸ್ಥಭೂಮಿಗಳನ್ನೂ ಸರೋವರಗಳನ್ನೂ ಕಣಿವೆಗಳನ್ನೂ ಅನೇಕ ಪರ್ವತಶ್ರೇಣಿಗಳನ್ನೂ ಒಳಗೊಂಡಿರುತ್ತವೆ. ಉದಾಹರಣೆಗೆ ಪಶ್ಚಿಮ. ಉತ್ತರ ಅಮೆರಿಕದ ಅಲಾಸ್ಕದಿಂದ ಮಧ್ಯಗಿರಿಗಳ ನಡುವಿನ ಸರೋವರಗಳೂ ಕಣಿವೆಗಳೂ ಸೇರಿದಂತೆ ಇರುವ ಪ್ರದೇಶವನ್ನು ಒಂದು ಕಾರ್ಡಿಲ್ಲೆರಾ ಎಂದು ಕರೆಯಬಹುದು. ಭಾರತದ ಉತ್ತರ ಭಾಗದಲ್ಲಿರುವ ಹಿಮಾಲಯವೂ ಒಂದು ಪರ್ವತಶ್ರೇಣಿಗಳ ಗುಂಪು. ಇದು ಸಹ ಹಲವಾರು ಪರ್ವತಶ್ರೇಣಿಗಳನ್ನೂ ಶಿಖರಗಳನ್ನೂ (ಗೌರಿಶಂಕರ, ನಂದಾದೇವಿ ಇತ್ಯಾದಿ) ಸರೋವರಗಳನ್ನೂ (ಮಾನಸ ಸರೋವರ, ನೈನಿತಾಲ್ ಇತ್ಯಾದಿ) ಕಣಿವೆಗಳನ್ನೂ (ಕೈಬರ್, ಬೋಲಾನ್ ಇತ್ಯಾದಿ) ಪ್ರಸ್ಥಭೂಮಿಗಳನ್ನೂ (ಟಿಬೆಟ್ ಇತ್ಯಾದಿ) ಒಳಗೊಂಡಿದೆ.

ಪ್ರಮುಖ ಭೌಗೋಳಿಕ ಲಕ್ಷಣಗಳಲ್ಲಿ ಕಾರ್ಡಿಲ್ಲೆರಾ ಒಂದು. ಇಂಥ ಪರ್ವತಶ್ರೇಣಿಗಳ ಗುಂಪುಗಳು ಭೂಗರ್ಭಶಾಸ್ತ್ರದ ದೃಷ್ಟಿಯಿಂದ ಸಹ ಮುಖ್ಯವಾದವು. ಇವು ಭೂಮಿಯ ಪ್ರಾಯಸೂಚಕಗಳು. ಪ್ರಾಚೀನ ಕಾಲದ ಇಂಥ ಎಷ್ಟೋ ಪರ್ವತ ಶ್ರೇಣಿಗಳ ಗುಂಪುಗಳು ಶಿಥಿಲೀಕರಣಕ್ಕೊಳಗಾಗಿ ಇಂದು ಅವುಗಳ ಅವಶೇಷಗಳು ಮಾತ್ರ ಜಗತ್ತಿನ ಎಲ್ಲ ಭಾಗಗಳಲ್ಲೂ ಕಾಣುತ್ತಿವೆ. ಈಗ ನಮಗೆ ಕಾಣುತ್ತಿರುವ ಎಲ್ಲ ಮಹಾ ಪರ್ವತಶ್ರೇಣಿಗಳು ಅವುಗಳ ಗುಂಪುಗಳು ತೀರ ಈಚೆಗೆ ಉದ್ಭವವಾದವು (ಉದಾಹರಣೆಗೆ ಹಿಮಾಲಯ). ಈ ಪರ್ವತಶ್ರೇಣಿಗಳ ಗುಂಪುಗಳು ಪ್ರಾಚೀನ ಕಾಲದಲ್ಲಾದ ಮಹಾ ಭೂಚಲನೆಗಳನ್ನೂ ಸೂಚಿಸುತ್ತವೆ. ಇಂಥ ಚಲನೆಗಳಿಂದಾಗಿ ಒಂದು ಕಾಲದಲ್ಲಿ ಸ್ವಲ್ಪವೂ ಮಡಿಕೆಗಳಿಲ್ಲದ ಓರೆಯಿಲ್ಲದ ಜಲಜಶಿಲಾ ಪದರುಗಳು ಸುತ್ತುಮುತ್ತಲಿನ ಒತ್ತಡದಿಂದಾಗಿ ಮಡಿಕೆಗಳಿಗೊಳಗಾಗಿ ಇಂದು ಪರ್ವತ ಶ್ರೇಣಿಗಳಾಗಿವೆ. ಸಾಮಾನ್ಯವಾಗಿ ಈ ಪರ್ವತಶ್ರೇಣಿಗಳ ಗುಂಪುಗಳ ಒಳಭಾಗದಲ್ಲಿ ಅಗ್ನಿಶಿಲೆಗಳಿರುತ್ತವೆ. ಹೀಗೆ ಮಡಿಕೆಗಳುಂಟಾದಾಗ ಕೆಲವು ಭಾರಿ ದೊಡ್ಡ ದೊಡ್ಡ ಬಿರುಕುಗಳುಂಟಾಗಿ ಅವುಗಳ ಮೂಲಕ ಶಿಲಾರಸ ಹೊರಕ್ಕೆ ಚಿಮ್ಮಿ ಜ್ವಾಲಾಮುಖಿಗಳುಂಟಾಗುವುವು. ಇಂಥ ಸನ್ನಿವೇಶಗಳನ್ನು ಅನೇಕ ಪರ್ವತಶ್ರೇಣಿಗಳಲ್ಲಿ ಕಾಣಬಹುದು. ಇದರೊಂದಿಗೇ ಅನೇಕ ಜ್ವಾಲಾಮುಖಿ ಗುಡ್ಡಗಳನ್ನೂ ಅವುಗಳಿಂದುಂಟಾದ ಸರೋವರಗಳನ್ನೂ ಶಿಲಾರಸ ಶಿಲೆಗಳನ್ನೂ ಅನೇಕ ಪರ್ವತಶ್ರೇಣಿಗಳಲ್ಲಿ ಕಾಣಬಹುದು. ಈ ಪರ್ವತಶ್ರೇಣಿಗಳ ಗುಂಪಿನಲ್ಲಿ ವಿವಿಧ ಪರ್ವತಶ್ರೇಣಿಗಳು ಯಾವುದೇ ದಿಶೆಯನ್ನು ಅನುಸರಿಸಿದರೂ ಒಟ್ಟಾಗಿ ಈ ಸಮುದಾಯ ಒಂದು ನಿರ್ದಿಷ್ಟವಾದ ಸಾಮಾನ್ಯ ದಿಶೆಯನ್ನು

ಅನುಸರಿಸುತ್ತವೆ. ಅಂತೆಯೇ ಇದು ಸಾಮಾನ್ಯವಾಗಿ ಒಂದು ಪಟ್ಟಿಯಂತಿದ್ದು ಭೂಪಟದಲ್ಲಿ ಸಹ ಹಾಗೆಯೇ ಕಾಣುತ್ತದೆ. ಅಲ್ಲದೇ ಇದು ಒಂದು ಖಂಡದ ಪ್ರಮುಖ ಪರ್ವತಾಕ್ಷವಾಗಿರುತ್ತದೆ. (ಎಸ್.ಬಿ.ಎಲ್.)

**ಕಾರ್ಡೋವ:** ಸ್ಪೇನಿನ ಆಂಡಲೂಷಿಯದ ಒಂದು ಪ್ರಾಂತ್ಯ ಮತ್ತು ಮುಖ್ಯ ನಗರ. ಇದು ದಕ್ಷಿಣ ಇಳಿಜಾರಿನ ಪ್ರದೇಶದಲ್ಲಿ, ಗ್ವಾಡಲ್ ಕಿವರ್ ನದಿಯ ಬಲ ದಂಡೆಯ ಮೇಲಿದೆ. ಜನಸಂಖ್ಯೆ 3,08,072 (2001). ಪಟ್ಟಣದ ಹಿಂಬದಿಯಲ್ಲಿರುವ ಬೆಟ್ಟದ ಮೇಲೆ ಆಲಿವ್ ಮತ್ತು ಕಿತ್ತಳೆ ತೋಟಗಳನ್ನೂ ಪಶ್ಚಿಮದ ಗೋಡೆಯ ಹಿಂಬದಿಗೆ ಉದ್ಯಾನಗಳನ್ನೂ ಬೆಳೆಸಲಾಗಿದೆ. ಹದಿನಾರು ಕಮಾನುಗಳುಳ್ಳ ರೋಮನ್ ತಳಹದಿಯ ಮೇಲೆ ಕಟ್ಟಿರುವ ಮೂರಿಷ್ ಸೇತುವೆಯಿಂದ ಕಾರ್ಡೋವಕ್ಕೂ ನದಿಯ ಆಚೆಯ ಪ್ರದೇಶಕ್ಕೂ ಸಂಪರ್ಕ ಏರ್ಪಟ್ಟಿದೆ. ಸೇತುವೆಯ ದಕ್ಷಿಣ ತುದಿಯಲ್ಲಿ ಲಾಕಲಹೊರ್ರ ಗೋಪುರವೂ ಉತ್ತರದಲ್ಲಿ ಹಾಳುಬಿದ್ದಿರುವ ಊರುಬಾಗಿಲೂ ನಗರಾಧಿದೇವತೆ ಆರ್ಕೇಂಜೆಲ್ ರಾಫೆಲನ ಪ್ರತಿಮೆಯೂ ಇವೆ. ಇಲ್ಲಿರುವ ಕಾಲೇಜುಗಳು ಮತ್ತು ಶಾಲೆಗಳ ಪೈಕಿ 1590ರಲ್ಲಿ ಕಾರ್ಡೋವದ ಬಿಷಪ್ ಪಾಚಿಕೊ ಸ್ಥಾಪಿಸಿದ ಮಹಿಳಾ ವಿದ್ಯಾಲಯವೂ ಒಂದು.

ಕಾರ್ಡೋವ ಪ್ರಾಂತ್ಯ ಆಂಡಲೂಸಿಯ ಪ್ರದೇಶದ ಒಂದು ಭಾಗ. ವಿಸ್ತೀರ್ಣ 13,557 ಚ.ಕಿಮೀ. ಗ್ವಾಡಲ್‌ಕಿವರ್ ನದಿ ಈ ಪ್ರಾಂತ್ಯದ ನಡುವೆ ಪೂರ್ವ–ಈಶಾನ್ಯದಿಂದ ಪಶ್ಚಿಮ–ವಾಯವ್ಯ ದಿಕ್ಕಿನಲ್ಲಿ ಹರಿಯುತ್ತದೆ. ನದಿಯ ಉತ್ತರಕ್ಕಿರುವುದು ಸಿಯರ ಮೊರೆನ ಪರ್ವತ ಪ್ರದೇಶ. ಇಲ್ಲಿ ಹೆಚ್ಚು ಜನವಸತಿ ಇಲ್ಲ. ಚಳಿಗಾಲದಲ್ಲಿ ಕುರಿಗಳಿಗೆ ಒಳ್ಳೆಯ ಮೇವು ದೊರೆಯುತ್ತದೆ. ಕಲ್ಲಿದ್ದಲು, ಬೆಳ್ಳಿ, ಸೀಸ ಮತ್ತು ಸತು ಇಲ್ಲಿಯ ಖನಿಜಗಳು. ಗ್ವಾಡಲ್‌ಕಿವರ್ ನದಿಯ ದಕ್ಷಿಣಕ್ಕಿರುವ ಲಾ ಕಾಮಪಿನ ಮೈದಾನ ಫಲವತ್ತಾದ್ದು. ಇದು ಕೃಷಿಗೂ ದನ–ಕುದುರೆಗಳ ಮೇವಿಗೂ ಉಪಯುಕ್ತ. ಉತ್ತಮ ದ್ರಾಕ್ಷಿ ತೋಟಗಳೂ ಆಲಿವ್ ಮರದ ತೋಪುಗಳೂ ಇವೆ. ರ್ಯೂಟ್‌ನಲ್ಲಿ ಉಪ್ಪಿನ ಗಣಿಯಿದೆ. ಇದು ಸಂಪದ್ಭರಿತ ಪ್ರದೇಶವಾದ್ದರಿಂದ ಇದರ ಜನಸಾಂದ್ರತೆಯೂ ಹೆಚ್ಚು. ಕಾರ್ಡೋವದ್ದು ವೈಪರೀತ್ಯದ ವಾಯುಗುಣ. ಬೇಸಗೆಯಲ್ಲಿ ಮಳೆ. ಪರ್ವತಗಳ ಮೇಲೆ ತಿಂಗಳುಗಟ್ಟಲೆ ಮಂಜು ಮುಸುಕಿರುತ್ತದೆ. ಕಾರ್ಡೋವದ ಕೆಲವು ಮುಖ್ಯನಗರಗಳಿವು: ಪ್ಯೂಂಟಿ–ಜೆನಿಲ್, ಲುಸೇನ, ಪ್ರಗೊ ಡಿ ಕಾರ್ಡೋವ, ಮಾಂಟಿಲ್ಲ, ಕಾಬ್ರ, ಪಲ್ಮ ಡೆಲ್ ರೆಯೊ ಮತ್ತು ರ್ಯೂಟ್, ಮಡ್ರಿಡ್. ಇತರ ಮುಖ್ಯ ನಗರಗಳೊಡನೆ ಸಂಬಂಧ ಕಲ್ಪಿಸುವ ರೈಲುಮಾರ್ಗಗಳು ಕಾರ್ಡೋವದ ಮೂಲಕ ಹಾದುಹೋಗುತ್ತವೆ. (ಬಿ.ಎಸ್.ಎಚ್.)

**ಕಾರ್ಥೇಜ್:** ಪ್ರಾಚೀನ ಪ್ರಸಿದ್ಧ ನಗರಗಳಲ್ಲೊಂದು. ಇದನ್ನು ಪ್ರ.ಶ.ಪೂ. 814ರಲ್ಲಿ ಫಿನೀಷಿಯನ್ನರು ವ್ಯಾಪಾರ ಸೌಕರ್ಯಕ್ಕಾಗಿ ಆಫ್ರಿಕದ ಉತ್ತರ ತೀರದಲ್ಲಿ ಸ್ಥಾಪಿಸಿದರು. ಟ್ಯೂನಿಸ್ ನಗರದ ನೆರೆಯಲ್ಲಿರುವ ಕಾರ್ಥೇಜಿನಲ್ಲಿ ಬಂದರು ನಿರ್ಮಾಣಕ್ಕೆ ಅನುಕೂಲಕರವಾದ ಸನ್ನಿವೇಶವೂ ವ್ಯವಸಾಯೋಪಯುಕ್ತವಾದ ಭೂಮಿಯೂ ಇರುವುದು ಒಂದು ವೈಶಿಷ್ಟ್ಯ. ಫಿನೀಷಿಯನ್ ರಾಜ್ಯ ಸ್ವತಂತ್ರವಾಗಿದ್ದಾಗ ಕಾರ್ಥೇಜ್ ಅದರ ಅಧೀನದಲ್ಲಿತ್ತು. ಆ ರಾಜ್ಯ ಪರ್ಷಿಯಕ್ಕೆ ಸೇರಿದ ಮೇಲೆ ಕಾರ್ಥೇಜ್ ಸ್ವತಂತ್ರವಾಗಿ ಬಹುಬೇಗ ತನ್ನ ರಾಜ್ಯವನ್ನು ವಿಸ್ತರಿಸಿತು. (ಪಿ.ಎಸ್.ಎಸ್.)

**ಕಾರ್ಡೋವ:** ಅರ್ಜೆಂಟೈನದ ಒಂದು ನಗರ ಮತ್ತು ಅದೇ ಹೆಸರಿನ ಪ್ರಾಂತ್ಯದ ಮುಖ್ಯಪಟ್ಟಣ. ಸಮುದ್ರ ಮಟ್ಟಕ್ಕಿಂತ 432 ಮೀ ಎತ್ತರದಲ್ಲಿದೆ. ಜನಸಂಖ್ಯೆ 12,75,585 (1999). ಜೆರೊನಿಮೊ ಲೂಯಿ ಡಿ ಕಾಬ್ರೆರ 1573ರಲ್ಲಿ ಇದನ್ನು ಸ್ಥಾಪಿಸಿದ. ಜೆಸುಯಿಟರು 1613ರಲ್ಲಿ ಇಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಅಂದಿನಿಂದ ಇದು ದಕ್ಷಿಣ ಅಮೆರಿಕದ ಸಾಂಸ್ಕೃತಿಕ ಕೇಂದ್ರವಾಯಿತು. ರೊಸಾರಿಯೊ ಮತ್ತು ಕಾರ್ಡೋವಗಳ ನಡುವೆ ಕಾರ್ಡೋವದ ಅಧ್ಯಕ್ಷ ಡೊಮಿಂಗೋ ಮಿಯೆಂಟೊ ರೈಲುಹಾದಿ ಹಾಕಿಸಿ ವ್ಯಾಪಾರಾಭಿವೃದ್ಧಿಗೆ ಅನುಕೂಲ ಮಾಡಿದ. ಇಲ್ಲಿ ಗಣಿ ಉದ್ಯಮದ ತಾಂತ್ರಿಕ ಶಾಲೆ, ಕೃಷಿ ಕಾಲೇಜು, ಖಗೋಳ ವೀಕ್ಷಣಾಲಯ ಮತ್ತು ಕಾರ್ಖಾನೆಗಳು ಇವೆ. ರಿಯೊಪ್ರಿಮಿರೊ ನದಿಗೆ ಅಡ್ಡಲಾಗಿ ಕಟ್ಟಲಾದ ಡಿಕ್ ಸಾನ್ ರಾಕ್ ಕಟ್ಟೆಯ ಜಲಾಶಯದಿಂದ ನಗರಕ್ಕೆ ನೀರಿನ ಸರಬರಾಜು ಆಗುತ್ತದೆ. ಇದು ದಕ್ಷಿಣ ಅಮೆರಿಕದಲ್ಲಿ ಅತಿ ದೊಡ್ಡದಾದ ಕಟ್ಟೆ; ನೀರಾವರಿ ಸೌಲಭ್ಯದ ಜೊತೆಗೆ ಕಾರ್ಖಾನೆಗಳಿಗೆ ಅಗತ್ಯವಾದ ವಿದ್ಯುತ್ತನ್ನೂ ಒದಗಿಸುತ್ತಿದೆ. ಕಾರ್ಡೋವದಿಂದ ಇತರ ಮುಖ್ಯ ಸ್ಥಳಗಳಿಗೆ ರಸ್ತೆ, ರೈಲ್ವೆ ಮತ್ತು ವಿಮಾನ ಸಂಪರ್ಕಗಳಿವೆ.

ಕಾರ್ಡೋವ ಪ್ರಾಂತ್ಯದ ವಿಸ್ತೀರ್ಣ 166912 ಚ.ಕಿಮೀ. ಇದು ಅರ್ಜೆಂಟೀನದ ಮಧ್ಯಪ್ರಾಂತ್ಯ. ಬೊಲಿವಿಯ ಮತ್ತು ಚಿಲಿಯೊಡನೆ ಇದರ ವ್ಯಾಪಾರ ಅಭಿವೃದ್ಧಿಯಾದಂತೆ 16ನೆಯ ಶತಮಾನದಲ್ಲಿ ಕಾರ್ಡೋವ ಅಸ್ತಿತ್ವಕ್ಕೆ ಬಂತು. 1852–62ರಲ್ಲಿ ಬ್ಯೂನಸ್ ಐರಿಸಿನ ಆಳ್ವಿಕೆಗೆ ಎದುರಾಗಿ ಅರ್ಜೆಂಟೈನ ಒಕ್ಕೂಟಕ್ಕೆ ಇದು ಬೆಂಬಲವಿತ್ತಿತು. ಸಮುದ್ರಮಟ್ಟಕ್ಕಿಂತ 2841 ಮೀ ಎತ್ತರವಿರುವ ಸಿರಾಸ್ ಡಿ ಕಾರ್ಡೋವ ಪರ್ವತವೇ ಇದರ ಪಶ್ಚಿಮದ ಎಲ್ಲೆ. ಪಂಚನದಿಗಳು ಈ ಪರ್ವತದಲ್ಲಿ ಹುಟ್ಟಿ ಪೂರ್ವದ ಕಡೆಯ ಇಳಿಜಾರಿನಲ್ಲಿ ಹರಿಯುತ್ತವೆ. ಸಹ್ಯವಾದ ಚಳಿಗಾಲವೂ ಶಾಖದಿಂದ ಕೂಡಿದ ಬೇಸಗೆಯೂ ಕಾಣಬರುತ್ತವೆ. ನವೆಂಬರ್ ಮತ್ತು ಫೆಬ್ರವರಿ ತಿಂಗಳುಗಳ ನಡುವೆ ಮಳೆ ಬೀಳುತ್ತದೆ. ಅರಣ್ಯಗಳಿಂದಲೂ ಹುಲ್ಲುಗಾವಲಿನಿಂದಲೂ ಕೂಡಿರುವ ಈ ಪ್ರದೇಶ ಪ್ರವಾಸಿಗರ ಆಕರ್ಷಣೆ. ಗೋದಿ, ಬಾರ್ಲಿ, ಓಟ್ಸ್, ಆಲ್ಫಾಲ್ಫ ಇಲ್ಲಿಯ ಮುಖ್ಯ ಬೆಳೆಗಳು. ಪಶುಪಾಲನೆಯೂ ಮುಖ್ಯ ಕಸಬಾಗಿದೆ. ಸುಣ್ಣಕಲ್ಲು, ಗ್ರಾಫೈಟ್, ಅಭ್ರಕ ಮತ್ತು ಬೆರಿಲಿಯಂ ಸಿಗುತ್ತವೆ. ಕಾರ್ಡೋವ, ರಿಯೋಕಾಟಿ ಮತ್ತು ವಿಲಮರಿಯ ಮುಖ್ಯ ಕೈಗಾರಿಕಾ ಕೇಂದ್ರಗಳು. ಆಲ್ಟಾ ಗ್ರೇಸಿಯಾ ಕೊಸ್ಕಿನ್, ಲ ಕಂಬ್ರೆ, ಕಪಿಲ ಡೆಲ್ ಮಾಂಟೆ ಮತ್ತು ಲ ಫಾಲ್ಡ ಮುಖ್ಯ ಪ್ರವಾಸಿ ಕೇಂದ್ರಗಳು. (ಬಿ.ಎಸ್.ಎಚ್.)

**ಕಾರ್ಬನ್ – 14 ಕಾಲನಿರ್ಣಯ:** ಪ್ರಾಕ್ತನ ಅವಶೇಷಗಳಲ್ಲಿನ ಸಾವಯವ ಪದಾರ್ಥಗಳಲ್ಲಿ ಕಂಡುಬರುವ ವಿಕಿರಣಕ್ರಿಯೆಯನ್ನು ಅಳೆದು ಕಾಲನಿರ್ಣಯಮಾಡುವ ಒಂದು ವಿಧಾನ. ಇದರ ನೆರವಿನಿಂದ ಪ್ರಾಕ್ತನಶಾಸ್ತ್ರಜ್ಞರು ಬೇರೆ ವಿಧಾನಗಳಿಂದ ಕಾಲ ನಿರ್ಧಾರ ಮಾಡಲಾಗಿದ್ದ ಅವಶೇಷಗಳ ಕಾಲವನ್ನು ಪರೀಕ್ಷಿಸಿ, ಅದರ ಉಪಯುಕ್ತತೆಯನ್ನು ದೃಢಪಡಿಸಿಕೊಂಡರು. ಅನಂತರ ವಾದಗ್ರಸ್ತವಾಗಿದ್ದ ಹಲವಾರು ಅವಶೇಷಗಳ ಸಂಸ್ಕೃತಿಗಳ ಕಾಲನಿರ್ಣಯಕ್ಕೆ ಈ ವಿಧಾನವನ್ನು ಬಳಸಲಾಯಿತು. ಫ್ರಾನ್ಸಿನ ಲಾಸ್ಕೋ ಗುಹೆಗಳಲ್ಲಿ ಅಂತ್ಯಶಿಲಾಯುಗ ಸಂಸ್ಕೃತಿಗಳ ಮಾನವ ನಿರ್ಮಿಸಿದ್ದ ವರ್ಣಚಿತ್ರಗಳ ಕಾಲದ ವಿಷಯವಾಗಿ ಬಹಳಷ್ಟು ಭಿನ್ನಾಭಿಪ್ರಾಯಗಳಿದ್ದುವು. ಆ ಗುಹೆಗಳಲ್ಲಿ ವರ್ಣಚಿತ್ರಗಳೊಂದಿಗೆ ದೊರಕಿದ ಇದ್ದಲು ತುಂಡುಗಳನ್ನು ಈ ವಿಧಾನದಿಂದ ಪರೀಕ್ಷಿಸಿ ಲಿಬ್ಬಿ ಆ ವರ್ಣಚಿತ್ರಗಳ ಕಾಲ ಸು. 15,516 ವರ್ಷಗಳೆಂದು ನಿರ್ಧರಿಸಿದ. ಭಾರತದ ಹರಪ್ಪ ನಾಗರಿಕತೆ, ನವಶಿಲಾಯುಗದ ಸಂಸ್ಕೃತಿಗಳ ಕಾಲವನ್ನು ಈ ವಿಧಾನದಿಂದ ನಿರ್ಧರಿಸಲಾಗಿದೆ. ಕಾರ್ಬನ್–14 ವಿಧಾನದ ರೀತ್ಯಾ ಪಂಜಾಬ್, ಸಿಂಧ್ ಪ್ರಾಂತಗಳಲ್ಲಿ ಹರಪ್ಪ ನಾಗರಿಕತೆ ಪ್ರ.ಶ.ಪೂ. 2300–1700ರ ವರೆಗೆ ನೆಲೆಸಿದ್ದರೆ ನವಶಿಲಾಯುಗ ಸಂಸ್ಕೃತಿಗಳು ಕಾಶ್ಮೀರ ಪ್ರದೇಶದಲ್ಲಿ ಪ್ರ.ಶ.ಪೂ. 2400–1200 ರ ವರೆಗೂ ದಕ್ಷಿಣ ಭಾರತದಲ್ಲಿ ಪ್ರ.ಶ.ಪೂ. 2300 ರಿಂದ 1000 ರ ವರೆಗೂ ಇದ್ದುವೆಂದು ತಿಳಿದುಬರುತ್ತದೆ. ಭಾರತದ ಇತರ ಪ್ರಾಗ್ಚಾರಿತ್ರಿಕ ಸಂಸ್ಕೃತಿಗಳಿಗೂ ಈ ವಿಧಾನದ ರೀತ್ಯಾ ಕಾಲನಿರ್ಧಾರ ಮಾಡಲಾಗಿದೆ.

ಕಾರ್ಬನ್–14 ಕಾಲನಿರ್ಣಯ ವಿಧಾನದಲ್ಲಿ ಕೆಲವು ಕುಂದು ಕೊರತೆಗಳೂ ಇವೆ. ಪ್ರಯೋಗ ಶಾಲೆಯಲ್ಲಿ ಪ್ರಾಕ್ತನ ಸಾವಯವ ವಸ್ತುಗಳಲ್ಲಿನ ಕಾರ್ಬನ್–14ರ ಪ್ರಮಾಣವನ್ನು ಅಳೆಯುತ್ತಿರುವಾಗ ಆಧುನಿಕ ಕಾಲದ ಕಾರ್ಬನ್ನಿನ ಪ್ರಭಾವ ಅದರ ಮೇಲೆ ಕಂಡುಬರುತ್ತದೆ. ಇದನ್ನು ತಡೆಯಲು ವಿಜ್ಞಾನಿಗಳು ಈ ಯಂತ್ರದ ಸುತ್ತ ಉಕ್ಕಿನ ರಕ್ಷಣಾ ಕವಚವನ್ನು ಒದಗಿಸುತ್ತಾರೆ. ಈಚೆಗೆ ಇತರ ಕ್ರಮಗಳನ್ನೂ ಕೈಗೊಳ್ಳುತ್ತಿರುವುದಾಗಿ ತಿಳಿದುಬಂದಿವೆ. ಎಲ್ಲ ರೀತಿಯ ವಸ್ತುಗಳಲ್ಲೂ ಕಾರ್ಬನ್–14 ಒಂದೇ ಪ್ರಮಾಣದಲ್ಲಿರುತ್ತದೆಯೇ ಎಂಬ ಸಮಸ್ಯೆ ಈಚೆಗೆ ವಿಜ್ಞಾನಿಗಳಲ್ಲಿ ಎದ್ದಿದೆ. ಲಿಬ್ಬಿ ಇದು ಒಂದೇ ಪ್ರಮಾಣದಲ್ಲಿದೆ ಎಂದು ಒಪ್ಪಿಕೊಂಡಿದ್ದರೂ ಈಚೆಗೆ ಮಿನಿಸೋಟ ವಿಶ್ವವಿದ್ಯಾಲಯದ ಎ.ಓ. ನೈಯರ್ ಇದು ಸರಿಯಲ್ಲವೆಂದು ತೋರಿಸಿದ್ದಾನೆ. ಕಾರ್ಬನ್–14 ಕಪ್ಪೆಚಿಪ್ಪು, ಶಂಖ ಮುಂತಾದ ಪದಾರ್ಥಗಳಲ್ಲಿ ಮರದಲ್ಲಿರುವುದಕ್ಕಿಂತ ಹೆಚ್ಚಾಗಿರುತ್ತದೆಂದೂ ಹೇಳಲಾಗಿದೆ. ಪ್ರಾಕ್ತನ ಸಾವಯುವ ಪದಾರ್ಥಗಳು ಭೂ ಪದರಗಳಲ್ಲಿದ್ದಾಗ ಮಣ್ಣಿನಲ್ಲಿರುವ ಆಮ್ಲಗಳು (ಹ್ಯೂಮಿಕ್ ಆಸಿಡ್ಸ್) ಅವುಗಳೊಂದಿಗೆ ಸೇರುವ ಸಾಧ್ಯತೆಯಿದೆ. ಆದ್ದರಿಂದ ಈಚಿನ ಕಾರ್ಬನ್ ಪ್ರಾಕ್ತನ ವಸ್ತುಗಳಲ್ಲಿನ ಕಾರ್ಬನ್ನಿನೊಂದಿಗೆ ಬೆರೆತುಹೋಗಿ ಕಾಲನಿರ್ಣಯದಲ್ಲಿ ಏರುಪೇರಾಗುತ್ತದೆ. ವಿಜ್ಞಾನಿಗಳು ಈ ಸಾಧ್ಯತೆಯ ವಿರುದ್ಧವೂ ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಪ್ರಯೋಗಶಾಲೆಗೆ ಪ್ರಾಕ್ತನ ಸಾವಯವ ವಸ್ತುಗಳನ್ನು ಕಳಿಸುವಾಗ ಸೂಕ್ತ ಜಾಗ್ರತೆ ವಹಿಸದಿದ್ದರೆ ಕಾಲನಿರ್ಣಯ ಮಾಡಲು ಸಾಧ್ಯವಿಲ್ಲ. ಈಗಿನ ವಾತಾವರಣದಲ್ಲಿರುವ ಕಾರ್ಬನ್ ಪ್ರಾಕ್ತನ ವಸ್ತುಗಳೊಂದಿಗೆ ಸೇರದಂತೆ ಕ್ರಮ ಕೈಗೊಳ್ಳಬೇಕು.

ಈ ಹಲವು ಅಡಚಣೆಗಳನ್ನು ಹೋಗಲಾಡಿಸಿ, ಪ್ರಯೋಗ ವಿಧಾನಗಳನ್ನು ಉತ್ತಮಗೊಳಿಸಲು ವಿಜ್ಞಾನಿಗಳು ಇನ್ನೂ ಶ್ರಮಿಸುತ್ತಿದ್ದಾರೆ. ಈ ದಿಶೆಯಲ್ಲಿ ಜೆ. ವಿ. ಪಿ. ಲಾಂಗ್ ಎಂಬಾತನ ಪ್ರಯತ್ನ ಗಮನಾರ್ಹ. ಪ್ರಾಕ್ತನಶಾಸ್ತ್ರದಲ್ಲಿ ಬಳಕೆಯಲ್ಲಿರುವ ಕಾಲನಿರ್ಣಯ ಪದ್ಧತಿಗಳಲ್ಲಿ ಕಾರ್ಬನ್–14 ಕಾಲನಿರ್ಣಯ ವಿಧಾನ ಅತ್ಯಂತ ಪ್ರಯೋಜನಕಾರಿ. (ಎಸ್.ಎಂ.)

**ಕಾರ್ಬನಿಫೆರಸ್ ಸ್ತೋಮ:** ಉತ್ತರ ಪೇಲಿಯೋಜೋಯಿಕ್ ಕಲ್ಲುಗಳು ಮತ್ತು ಕಾಲದ ಒಂದು ಪ್ರಮುಖ ವಿಭಾಗ. ಇಂಗ್ಲೆಂಡಿನಲ್ಲಿ ಕಲ್ಲಿದ್ದಲನ್ನು ಒಳಗೊಂಡ ಸ್ತರಗಳನ್ನು ಕಲ್ಲಿದ್ದಲು ಸ್ತರಗಳು ಎಂದು ಬಹಳ ಕಾಲದವರೆಗೆ ಕರೆಯುತ್ತಿದ್ದರು. ಕೋನಿಬೇರ್ ಮತ್ತು ಫಿಲಿಪ್ಸ್ ಎಂಬುವರು ಹಳೆ ಕೆಂಪು ಮರಳು ಶಿಲೆಗಳ ಸಮೇತ ಕಲ್ಲಿದ್ದಲು ಸ್ತರಗಳನ್ನು ಒಳಗೊಂಡ ಶಿಲಾರಾಶಿಗೆ ಕಾರ್ಬನಿಫೆರಸ್ ಸ್ತೋಮಗಳು ಎಂಬ ಹೆಸರನ್ನು

ಕೊಟ್ಟರು (1822). ಹಳೆ ಕೆಂಪು ಮರಳು ಶಿಲೆಗಳನ್ನು ಕಾರ್ಬನಿಫೆರಸ್ ಸ್ತೋಮಗಳಲ್ಲಿ ಕಲ್ಲಿದ್ದಲು ಶೇಖರಗೊಂಡಿದ್ದರೂ ಪ್ರಪಂಚದ ಎಲ್ಲ ಮುಖ್ಯ ಕಲ್ಲಿದ್ದಲು ಗಣಿಗಳು ಕಾರ್ಬನಿಫೆರಸ್ ಸ್ತೋಮಗಳಿಗೇ ಸೀಮಿತಗೊಂಡಿವೆ (1839). ಅದ್ದರಿಂದಲೇ ಕಾರ್ಬನಿಫೆರಸ್ ಮತ್ತು ಪರ್ಮಿಯನ್ ಶಿಲಾಸ್ತೋಮಗಳನ್ನು ಒಟ್ಟು ಸೇರಿಸಿ ವಾಗನ್ ಎಂಬಾತ ಅಂತ್ರ ಕೊಲಿಥಿಕ್ ಸ್ತೋಮಗಳು ಎಂದು ಕರೆದಿದ್ದಾನೆ. ವಾಸ್ತವವಾಗಿ ಕಾರ್ಬನಿಫೆರಸ್ ಮತ್ತು ಪರ್ಮಿಯನ್ ಸ್ತೋಮಗಳ ಮಧ್ಯೆ ಎರಡಕ್ಕೂ ಸೇರಿದ ಮಧ್ಯಕಾಲದ ಪದರಗಳು ಇವೆ. ಈ ಪದರುಗಳನ್ನು ಪರ್ಮೊಕಾರ್ಬನಿಫೆರಸ್ ಪದರಗಳೆಂದು ಕರೆದಿರುವುದೇ ಈ ಎರಡು ಸ್ತೋಮಗಳನ್ನು ನಿಖರವಾಗಿ ಬೇರ್ಪಡಿಸಲು ಅಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದೇ ರೀತಿ ಡೆವೋನಿಯನ್ ಕಾರ್ಬನಿಫೆರಸ್ ನಡುವೆ ಅನುರೂಪತೆ ಕಂಡುಬರುವುದಿಲ್ಲ.

ಇಂಗ್ಲೆಂಡಿನಲ್ಲಿ ಕಾರ್ಬನಿಫೆರಸ್ ಸ್ತೋಮಗಳನ್ನು ಪರ್ವತ ಸುಣ್ಣಶಿಲೆ, ಮಿಲ್‌ಸ್ಟೋನ್‌ಗ್ರಿಟ್ ಮತ್ತು ಕಲ್ಲಿದ್ದಲು ಸ್ತರಗಳೆಂದು ಮೂರು ಭಾಗಗಳಾಗಿ ವಿಭಜಿಸಿರುತ್ತಾರೆ. ಈ ಸ್ತೋಮ ಕಾರ್ಬನಿಫೆರಸ್ ಯುಗದ ಪೂರ್ಣಕಾಲವನ್ನು ಪ್ರತಿಫಲಿಸುವುದಿಲ್ಲ. ಪಶ್ಚಿಮ ಯುರೋಪ್, ರಷ್ಯ ಮತ್ತು ಭಾರತ ದೇಶಗಳಲ್ಲಿ ಇಂಗ್ಲೆಂಡಿನ ಕಲ್ಲಿದ್ದಲು ಸ್ತರಗಳಿಗಿಂತ ಕಿರಿಯ ವಯಸ್ಸಿನ ಶಿಲೆಗಳಿವೆ. ಈ ಪ್ರದೇಶಗಳಲ್ಲಿಯೂ ಶಿಲಾಸ್ತೋಮಗಳನ್ನು ಕೆಳ, ಮಧ್ಯ ಮತ್ತು ಮೇಲಣ ಎಂದು ಮೂರು ಭಾಗಗಳನ್ನಾಗಿ ವಿಭಜಿಸಿರುತ್ತಾರೆ. ಇಂಗ್ಲೆಂಡಿನ ಕಾರ್ಬನಿಫೆರಸ್ ಸ್ತೋಮಗಳು ಈ ಪ್ರದೇಶಗಳ ಕೆಳ ಮತ್ತು ಮಧ್ಯಭಾಗಗಳಿಗೆ ಸರಿದೂಗುತ್ತವೆ. ಉತ್ತರ ಅಮೆರಿಕದಲ್ಲಿ ಈ ಕಾಲದ ಶಿಲಾರಾಶಿಯನ್ನು ಮಿಸಿಸಿಪಿಯನ್ ಸ್ತೋಮ ಮತ್ತು ಪೆನ್ಸಿಲ್ವೇನಿಯನ್ ಸ್ತೋಮ ಎಂದು ಎರಡು ಬೇರೆ ಸ್ತೋಮಗಳನ್ನಾಗಿಯೇ ಪರಿಗಣಿಸಿರುತ್ತಾರೆ. ಇವು ಕ್ರಮವಾಗಿ ಯೂರೋಪು ಮತ್ತು ರಷ್ಯದ ಕೆಳ ಮತ್ತು ಮಧ್ಯ ಭಾಗಗಳಿಗೆ ಸರಿದೂಗುತ್ತವೆ. ಏಷ್ಯ (ಭಾರತ) ಮತ್ತು ಆಸ್ಟ್ರೇಲಿಯಗಳಲ್ಲಿ ಕಾರ್ಬನಿಫೆರಸ್ ಮತ್ತು ಪರ್ಮಿಯನ್ ಸ್ತೋಮಗಳ ಮಧ್ಯೆ ಮಧ್ಯವರ್ತಿ ಪದರಗಳೂ ಇವೆ. ಇವಕ್ಕೆ ಪರ್ಮೊಕಾರ್ಬನಿಫೆರಸ್ ಪದರಗಳೆನ್ನುವರು.

ಭಾರತದಲ್ಲಿ ಕಾರ್ಬನಿಫೆರಸ್ ಶಿಲೆಗಳು ಸ್ಪಿಟಿ ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಮತ್ ಬೆಣಚುಶಿಲೆಯ ಮೇಲೆ ನಿಕ್ಷೇಪಗೊಂಡಿವೆ. ಈ ಸ್ತೋಮಗಳನ್ನು ಕನವಾರ ಸ್ತೋಮ ಎನ್ನುವರು. ಇದರ ದಪ್ಪ ಸು. 1600 ಮೀ. ಈ ಸ್ತೋಮವನ್ನು ಕೆಳ ಮತ್ತು ಮೇಲಣ ಭಾಗಗಳಾಗಿ ವಿಭಜಿಸುತ್ತಾರೆ. ಕೆಳಭಾಗ ಸ್ಪಿಟಿ ಪ್ರದೇಶದ ಲಿಪಾಕ್ ನದಿ ಕಣಿವೆಯಲ್ಲಿ ಚೆನ್ನಾಗಿ ಹೊರಗೆ ಕಂಡಿರುವುದರಿಂದ ಇದನ್ನು ಲಿಪಾಕ್ ಶಿಲಾಶ್ರೇಣಿಗಳೆನ್ನುವರು. ಇದರಲ್ಲಿ ಸುಣ್ಣಶಿಲೆ ಮತ್ತು ಜೇಡುಶಿಲೆಗಳಿವೆ. ಮೇಲಣ ಭಾಗದಲ್ಲಿ ಬೆಣಚುಶಿಲೆ ಮತ್ತು ಜೇಡುಶಿಲೆಗಳೇ ಹೆಚ್ಚು. ಇವನ್ನು ಪೊಶ್ರೇಣಿ ಎನ್ನುವರು. ಇವುಗಳಲ್ಲಿ ಬ್ರಿಯೋಜೋವ ಗುಂಪಿನ ಫೆನೆಸ್ಟೆಲ್ಲಾ ಮತ್ತು ಪ್ರೋಟೊರೆಟಿಪೊರೆ ಪ್ರಾಣಿಗಳ ಅವಶೇಷಗಳು ವಿಶೇಷವಾಗಿವೆ. ಕಾಶ್ಮೀರದಲ್ಲಿ ಈ ಕಾಲದ ಶಿಲೆಗಳನ್ನು ಸಿರಿಂಗಥೀರಿಸ್ ಸುಣ್ಣಶಿಲೆ ಮತ್ತು ಫೆನೆಸ್ಟೆಲ್ಲಾ ಜೇಡುಶಿಲೆ ಎಂಬ ಎರಡು ಭಾಗಗಳಾಗಿ ವಿಭಜಿಸಲಾಗಿದೆ. ಇವು ಕ್ರಮವಾಗಿ ಲಿಪಾಕ್ ಮತ್ತು ಪೊಶ್ರೇಣಿಗಳಿಗೆ ಸರಿದೂಗುತ್ತವೆ.

ಕಾರ್ಬನಿಫೆರಸ್ ಯುಗದ ಅಂತ್ಯಕಾಲದಲ್ಲಿ ಪ್ರಪಂಚದ ಅನೇಕ ಕಡೆಗಳಲ್ಲಿ ಮಹತ್ತರ ಬದಲಾವಣೆಗಳಾದುವು. ನೆಲಜಲಗಳ ಪುನರ್‌ವರ್ಗೀಕರಣವಾಯಿತು. ಈ ಕಾರ್ಯಕ್ಕೆ ಸಂಬಂಧಿಸಿದಂತೆ ಪರ್ವತ ಕಾರ್ಯಾಚರಣೆ ನಡೆಯಿತು. ಅಗ ಉದಯಿಸಿದ ಪರ್ವತಗಳಲ್ಲಿ ಹರ್ಸೀನಿಯನ್ ಪರ್ವತ ಮುಖ್ಯವಾದುದು. ಆದ್ದರಿಂದ ಈ ಪರ್ವತ ಕಾರ್ಯವನ್ನು ಹರ್ಸೀನಿಯನ್ ಪ್ರಳಯವೆಂದು ಕರೆಯುತ್ತೇವೆ. ಇದರ ತರುವಾಯ ಪ್ರಪಂಚದ ನೆಲವೆಲ್ಲ ಎರಡು ಖಂಡಗಳಾಗಿತ್ತು. ಇವೆರಡರ ಮಧ್ಯೆ ಹೆಚ್ಚು ಕಡಿಮೆ ಭೂಮಧ್ಯ ಭಾಗದಲ್ಲಿ ಒಂದು ಸಾಗರವಿತ್ತು. ಇದಕ್ಕೆ ಟೆತಿಸ್ ಸಾಗರ ಎಂದು ಹೆಸರು. ಟೆತಿಸ್ ಸಾಗರಕ್ಕೆ ಉತ್ತರದಲ್ಲಿದ್ದ ಖಂಡ ಯೂರೇಷ್ಯ, ಗ್ರೀನ್ಲೆಂಡ್ ಮತ್ತು ಉತ್ತರ ಅಮೆರಿಕಗಳಿಂದ ಕೂಡಿತ್ತು. ಇದಕ್ಕೆ ಅಂಗಾರ ಖಂಡ ಅಥವಾ ಯೂರೇಷ್ಯನ್ ಖಂಡ ಎಂದು ಹೆಸರು. ದಕ್ಷಿಣ ಖಂಡ ಆಫ್ರಿಕ, ದಕ್ಷಿಣ ಅಮೆರಿಕ, ಭಾರತ ಪರ್ಯಾಯದ್ವೀಪಭಾಗ, ಆಸ್ಟ್ರೇಲಿಯ ಮತ್ತು ಅಂಟಾರ್ಟಿಕ್‌ಗಳನ್ನು ಒಳಗೊಂಡಿತ್ತು. ಈ ಖಂಡಕ್ಕೆ ಗೊಂಡ್ವಾನಖಂಡ ಎಂದು ಹೆಸರು. ಪರ್ಮೊಕಾರ್ಬನಿಫೆರಸ್ ಕಾಲದಲ್ಲಿ ಗೊಂಡ್ವಾನಖಂಡದಲ್ಲಿ ತೀವ್ರ ಶೀತವಾಯುಗುಣವಿತ್ತು. ಈ ಖಂಡದ ಬಹುಭಾಗ ನೀರ್ಗಲ್ಲು ನದಿಗಳಿಂದ ಅವರಿಸಲ್ಪಟ್ಟಿತ್ತು. ಭಾರತ ಪರ್ಯಾಯ ದ್ವೀಪದ ತಾಲ್ಚೀರ್, ಸಾಲ್ಟ್‌ರೇಂಜ್, ಕಾಶ್ಮೀರದ ಹಜಾರಾ, ಘರ್‌ವಾಲ್ ಮತ್ತು ಸಿಮ್ಲ ಮುಂತಾದ ಕಡೆಗಳಲ್ಲಿ ನೀರ್ಗಲ್ಲುನದಿಯ ಕಾರ್ಯದ ಗುರುತುಗಳಿಂದ ಕೂಡಿದ ಗುಂಡು ಶಿಲಾನಿಕ್ಷೇಪಗಳಿವೆ.

ಸಾಲ್ಟ್‌ರೇಂಜ್ ಪ್ರದೇಶದಲ್ಲಿ ಕೇಂಬ್ರಿಯನ್ ಯುಗದ ತರುವಾಯ ಶಿಲಾನಿಕ್ಷೇಪ ಕಾರ್ಯ ನಿಂತು ಮತ್ತೆ ಈ ಗುಂಡುಶಿಲೆಯಿಂದ ಆರಂಭವಾಗಿದೆ. 45 ಮೀ ದಪ್ಪದ ಈ ಗುಂಡುಶಿಲೆಯಲ್ಲಿ ಹಳದಿ, ಹಸರು ಮತ್ತು ಬಿಳಿ ಚುಕ್ಕೆಗಳುಳ್ಳ ಮರಳುಶಿಲೆ ಇದೆ. ಇದರ ತಳದಲ್ಲಿ ಯೂರಿಡೆಸ್ಮಿ ಎಂಬ ಪ್ರಾಣಿಯ ಅವಶೇಷಗಳಿವೆ. ಚುಕ್ಕೆ ಮರಳುಶಿಲೆಗಳು ರಷ್ಯದ ಯುರೆಲಿಯನ್ ಶಿಲಾಶ್ರೇಣಿಗೆ ಸಮದೂಗುವುದು.

ಕಾರ್ಬನಿಫೆರಸ್ ಸ್ತೋಮಗಳಲ್ಲಿ ಸಸ್ಯಾವಶೇಷಗಳು ಹೇರಳವಾಗಿವೆ. ಈ ಸಸ್ಯವರ್ಗ ಪ್ರಪಂಚದ ಮುಕ್ಕಾಲುಭಾಗದ ಕಲ್ಲಿದ್ದಲಿನ ಆಕರವಾಗಿರುವುದರಿಂದ (ಈಗಿನ ಸಸ್ಯವರ್ಗವನ್ನುಳಿದು) ಸಸ್ಯವರ್ಗದ ವಿಚಾರವಾಗಿ ಗೊತ್ತಿಲ್ಲದಿರುವುದರಿಂದ ಎಲ್ಲರ ಗಮನವನ್ನೂ ಸೆಳೆಯುತ್ತದೆ. ಈ ಕಾಲದ ಅನೇಕ ಸಸ್ಯಗಳನ್ನು ಈಗಿನ ಜಾತಿಗಳಿಗೆ ಸೇರಿಸಬಹುದು. ಆದರೆ ಅವು ಈಗಿರುವ ಜೀವಂತ ಸಂಬಂಧಿಗಳಿಗಿಂತ ಬಹು ದೊಡ್ಡವು. (ಡಿ.ಆರ್.)

**ಕಾರ್ಬೆಟ್, ಜಿಮ್:** 1875–1955. ಭಾರತದಲ್ಲಿ ನೆಲಸಿದ್ದ ಪ್ರಸಿದ್ಧ ಇಂಗ್ಲಿಷ್ ಬೇಟೆಗಾರ. ಈತನ ಹುಟ್ಟೂರು ಕಾಲಧುಂಗಿ. ಇದು ಕುಮಾಂವ್ ಬೆಟ್ಟಗಳ ಸಾಲಿನಲ್ಲಿ ಉತ್ತಮ ಆರೋಗ್ಯಧಾಮವಾದ ನೈನಿತಾಲಿಗೆ 36 ಕಿಮೀ ದೂರದಲ್ಲಿದೆ. ಕಾಲಧುಂಗಿಯಲ್ಲಿ ಈತನಿಗೆ ಅನೇಕ ಎಕರೆ ಜಮೀನಿತ್ತು. ಅಲ್ಲದೆ ಈತ ಮೊಕಾಮ್ಘ ಘಾಟ್ ರೈಲುನಿಲ್ದಾಣದಲ್ಲಿ ಇಪ್ಪತ್ತೊಂದು ವರ್ಷಗಳ ಕಾಲ ಸಾಮಾನು ಸಾಗಿಸುವ ಕಂಟ್ರಾಕ್ಟರ್ ಉದ್ಯೋಗದಲ್ಲಿದ್ದುದಲ್ಲದೆ ಎರಡನೆಯ ಮಹಾಯುದ್ಧದಲ್ಲಿ ಕಂಟ್ರಾಕ್ಟ್ ಕೆಲಸವನ್ನು ಆಳುಗಳಿಗೆ ವಹಿಸಿ ನಾಲ್ಕು ವರ್ಷ ಸೈನ್ಯದಲ್ಲಿದ್ದು ಯುದ್ಧಭೂಮಿಗೂ ಹೋಗಿಬಂದ.

ಜಿಮ್ ಕಾರ್ಬೆಟ್ ತನ್ನ ಜೀವಿತದ ಬಹುಕಾಲವನ್ನು ಹಿಮಾಲಯ ಪರ್ವತದ ಶ್ರೇಣಿಯ ದಕ್ಷಿಣದ ಬೆಟ್ಟಗಳ ಸಾಲಿನಲ್ಲಿ ಕಳೆದ. ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೇ ನೆಲಸಿದ್ದ ಈತನಿಗೆ ಕಾಡಿನ ಸೊಬಗು, ಕಾಡಿನ ರಹಸ್ಯ, ವನ್ಯಜಂತುಗಳ ಸ್ವಭಾವ, ಕಾಡಿನಲ್ಲಿ ಕಷ್ಟ – ಕಾರ್ಪಣ್ಯಗಳನ್ನು ಅನುಭವಿಸುವ ಬಡಜನ– ಇವೆಲ್ಲದರ ಸೂಕ್ಷ್ಮವಾದ ಅನುಭವವಿತ್ತು. ಕುಮಾಂವ್ ಬೆಟ್ಟಗಳ ಸಾಲಿನಲ್ಲಿದ್ದ ಅನೇಕ ನರಭಕ್ಷಕ, ಗೋಭಕ್ಷಕ ಹುಲಿಚಿರತೆಗಳನ್ನು ಕೊಂದು ಸಂತ್ರಸ್ತ ಜನರಿಗೆ ಉಪಕಾರವನ್ನೂ ಬಡಜನರಿಗೆ ಅನೇಕ ರೀತಿಯಲ್ಲಿ ಯಥೋಚಿತವಾದ ಸಹಾಯವನ್ನೂ ಈತ ಮಾಡಿದ. ದೀನದಲಿತರ ಬಗ್ಗೆ ಈತನಿಗಿದ್ದ ಪ್ರೀತಿ ಔದಾರ್ಯಗಳು ಮೆಚ್ಚುವಂಥವು. ಕುಮಾಂವ್ ನರಭಕ್ಷಕಗಳು, ರುದ್ರಪ್ರಯಾಗದ ನರಭಕ್ಷಕ ಚಿರತೆ, ದೇವಾಲಯದ ಹುಲಿ ಮತ್ತು ಇನ್ನಷ್ಟು ಕುಮಾಂವ್ ನರಭಕ್ಷಕಗಳು, ನನ್ನ ಭಾರತ, ಕಾಡಿನ ಚರಿತ್ರೆ–ಈ ಪುಸ್ತಕಗಳನ್ನು ಕಾರ್ಬೆಟ್ ಬರೆದಿದ್ದಾನೆ. ಈ ಗ್ರಂಥಗಳಲ್ಲಿ ತಾನು ಮಾಡಿದ ನರಭಕ್ಷಕ ಹುಲಿಚಿರತೆಗಳ ಬೇಟೆಯ ಕಥೆಗಳನ್ನು ಕಾರ್ಬೆಟ್ ಹೃದಯಂಗಮವಾಗಿ, ರೋಚಕವಾಗಿ ವರ್ಣಿಸಿದ್ದಾನೆ. ಹುಲಿಚಿರತೆಗಳ ಹಾವಳಿ, ಅವನ್ನು ಕೊಲ್ಲಲು ಮಾಡಿದ ಸಾಹಸಗಳು, ಕೆಲವು ಸಲ ತಾನು ಕೊಂದ ದೇಹದ ಬಳಿಗೆ ಮತ್ತೆ ಬಾರದ ದುಷ್ಟಪ್ರಾಣಿಯನ್ನು ಅರಸುತ್ತ ಪಟ್ಟಪಾಡು, ತೋರಿದ ಧೈರ್ಯೋತ್ಸಾಹಗಳು–ಸ್ವಾನುಭವಪೂರ್ಣವಾಗಿದ್ದು ರೋಮಾಂಚಕಾರಿಯಾಗಿವೆ. ಈ ಗ್ರಂಥಗಳಲ್ಲಿ ಲೇಖಕನ ಅರಣ್ಯಜಗತ್ತಿನ ಪೂರ್ಣ ಪರಿಚಯವನ್ನೂ ಹವ್ಯಾಸ ಆಸಕ್ತಿಗಳನ್ನೂ ಕಾಣಬಹುದಾಗಿದೆ. ಕಾಡಿನಲ್ಲಿ ಅಲೆಯುವುದು, ಮೃಗಪಕ್ಷಿಗಳ ಮರ್ಜಿ ಸ್ವಭಾವಗಳನ್ನು ಅಭ್ಯಸಿಸುವುದು, ಅವುಗಳ ಕೂಗು ಗರ್ಜನೆಗಳನ್ನು ಅನುಕರಿಸುವುದು ಕಾರ್ಬೆಟ್ಟನಿಗೆ ಬಾಲ್ಯದಿಂದಲೂ ಹವ್ಯಾಸವಾಗಿತ್ತು. ಮೃಗಯಾ ಸಾಹಿತ್ಯದಲ್ಲಿ ಕಾರ್ಬೆಟ್ಟನದು ಎತ್ತಿದ ಕೈ. ಅಲ್ಲದೆ ಮೃಗಯಾ ಸಾಹಿತ್ಯವನ್ನು ನಿಜವಾದ ಸಾಹಿತ್ಯದ ಮಟ್ಟಕ್ಕೆ ಏರಿಸಿದ ಕೀರ್ತಿ ಇವನದಾಗಿದೆ.

ನನ್ನ ಭಾರತ ಎಂಬ ಗ್ರಂಥದಲ್ಲಿ ಬಡ ಭಾರತೀಯರ ಸತ್ಯ, ನಿಷ್ಠೆ, ಸರಳತನ, ಕಷ್ಟದ ದುಡಿಮೆಗಳನ್ನೂ ತನ್ನ ಹವ್ಯಾಸ ಉದ್ಯೋಗಗಳನ್ನೂ ಲೇಖಕ ಕಥೆಗಳಾಗಿ ಬಣ್ಣಿಸಿದ್ದಾನೆ. ಕಾಡಿನ ಚರಿತ್ರೆ ಎಂಬ ಪುಸ್ತಕದಲ್ಲಿ ತನ್ನ ಬಾಲ್ಯ, ಬಾಲ್ಯದಲ್ಲಿ ಮಾಡಿದ ಶಿಕಾರಿ ಮೊದಲಾದ ಜೀವನಾನುಭವಗಳನ್ನು ತಿಳಿಸಿದ್ದಾನೆ. ಜಿಮ್ ಕಾರ್ಬೆಟ್ ಶಿಕಾರಿದಾರ ಮಾತ್ರವಲ್ಲದೆ ಸಮಾಜಸುಧಾರಕನೂ ಬಡವರ ಬಂಧುವೂ ಅಗಿದ್ದನೆಂಬುದು ತಿಳಿಯುತ್ತದೆ. ತನ್ನ ವಿಶಿಷ್ಟ ಗುಣಗಳಿಂದ ಈತ ಕುಮಾಂವ್ ಬೆಟ್ಟಗಳ ಸಾಲಿನ ಹಳ್ಳಿಗರಿಗೆಲ್ಲ ಪರಿಚಿತನಾಗಿದ್ದಂತೆ ತನ್ನ ಗ್ರಂಥಗಳ ಮೂಲಕ ಪ್ರಪಂಚದ ಮೃಗಯಾ ಸಾಹಿತ್ಯದ ಓದುಗರಿಗೆಲ್ಲ ಪರಿಚಿತನಾಗಿದ್ದಾನೆ.

ಕುಮಾಂವ್ ನರಭಕ್ಷಕಗಳು ಎಂಬ ಈತನ ಪುಸ್ತಕದ ಆಧಾರದ ಮೇಲೆ ರಮ್ಯ ವರ್ಣರಂಜಿತ ಚಲನಚಿತ್ರವೊಂದು ತಯಾರಾಗಿದೆ. ಇವನ ಹೆಸರಿನಲ್ಲಿ (ಜಿಮ್ ಕಾರ್ಬೆಟ್ ನ್ಯಾಷನಲ್ ಪಾರ್ಕ್) ಅಸ್ಸಾಂನಲ್ಲಿ ವನ್ಯಮೃಗ ಸಂರಕ್ಷಣ ಪ್ರದೇಶವನ್ನು ಸ್ಥಾಪಿಸಲಾಗಿದೆ. (ಎಸ್.ಕೆ.ಆರ್.ಎ.)

**ಕಾರ್ಯಾತ್ಮಕ ಪ್ರದೇಶ:** ಕಾರ್ಯಾತ್ಮಕ ಪ್ರದೇಶವು ವ್ಯವಸ್ಥೆಯನ್ನು ಹೊಂದಿರುವ ಪ್ರದೇಶ ಇದನ್ನು ವ್ಯಾವಹಾರಿಕ ಪ್ರದೇಶವೆಂದು ಗುರುತಿಸಬಹುದು. ಇಲ್ಲಿ ಕೆಲವು ಆಯ್ದ ವಿಷಯಗಳು ಪರಸ್ಪರ ಹೊಂದಾಣಿಕೆಗೆ ಒಳಪಟ್ಟಿರುತ್ತದೆ. ಪ್ರಾದೇಶಿಕ ಯೋಜನಾಗಾರರು ಸುಲಭವಾಗಿ ಒಪ್ಪಿಕೊಳ್ಳುವ ಪ್ರದೇಶವೆಂದರೆ ಕಾರ್ಯಾತ್ಮಕ ಪ್ರದೇಶ. ಈ ಪ್ರದೇಶದ ಗುಣಗಳು ಭಿನ್ನವಾಗಿರದೆ ಏಕ ಸ್ವರೂಪದ ಗುಣವನ್ನು ಮತ್ತು ಲಕ್ಷಣಗಳನ್ನು ಬಿಂಬಿಸುತ್ತದೆ. ಗುಡ್ಡಗಾಡಿನ ವರ್ಗದವರು (ಉದಾ: ಸೋಲಿಗ ಮತ್ತು ಗೂಂಡ್ಸ್) ಒಂದೇ ತರಹದ ಭೌತಿಕ ರೂಪವನ್ನು, ಗುಣ, ನಡವಳಿಕೆಗಳು ಮತ್ತು ಕಸಬನ್ನು ಹೊಂದಿರುತ್ತಾರೆ. ಭೌತಿಕ ಪ್ರದೇಶಗಳು ಒಂದೇ ಗುಣಲಕ್ಷಣಗಳನ್ನು ಹೊಂದಿರುವುವು. ಉದಾ: ಕಪ್ಪು ಮಣ್ಣಿನ/ಜೇಡಿ ಮಣ್ಣಿನ ಪ್ರದೇಶ, ನಿತ್ಯ ಹರಿದ್ವರ್ಣ. ಅರಣ್ಯ ಪ್ರದೇಶ, ಬೃಹತ್ ನಗರ ಪ್ರದೇಶಗಳು. ಈ ಪ್ರದೇಶಗಳನ್ನು ಗುರುತಿಸುವುದು ಬಹಳ ಸುಲಭ ಮತ್ತು ಸಾಮಾನ್ಯ ಕಾರ್ಯಾತ್ಮಕ ಪ್ರದೇಶಗಳು ಹೆಚ್ಚಾಗಿ ಮಾರುಕಟ್ಟೆ ಅವಲಂಬಿತ ದೇಶಗಳಲ್ಲಿ ಕಂಡುಬರುತ್ತದೆ. ಬೆಳವಣಿಗೆಯ ಧ್ರುವ (ಗ್ರೋತ್ ಪೋಲ್) ಮತ್ತು ಬೆಳೆವಣಿಗೆಯ ಕೇಂದ್ರ (ಗ್ರೋತ್ ಸೆಂಟರ್) ಕಾರ್ಯಾತ್ಮಕ ಪ್ರದೇಶದ ಸ್ಪಷ್ಟ ಉದಾಹರಣೆ. (ಎನ್.ಎಸ್.)

**ಕಾರ್ಲ್ ಓ.ಸೌರ್:** ಅಮೆರಿಕದ ಭೂಗೋಳಶಾಸ್ತ್ರಜ್ಞ. ಇವರು ಸಂಭವವಾದವನ್ನು (ಪ್ರೊಬ್ಯಾಬಿಲಿಸಮ್) ಪ್ರಬಲರಾಗಿ ಸಮರ್ಥಿಸಿದರು. ಸಾಧ್ಯತಾವಾದದ (ಪಾಸಿಬಿಲಿಸಿಮ್) ಬಗ್ಗೆ ಸರ್ವ ಸ್ವೀಕೃತವಾದ ಅಭಿಪ್ರಾಯಗಳನ್ನು ಪ್ರತಿಪಾದಿಸಿದರು. ಇವರು ಸಾಧ್ಯತಾವಾದವನ್ನು ಕುರಿತು ಪ್ರಾಕೃತಿಕ ಪರಿಸರದ ಪ್ರಾಧಾನ್ಯತೆ ಅಥವಾ ಪ್ರಾಮುಖ್ಯತೆಯಿಂದ, ಸಾಂಸ್ಕೃತಿಕ ಪರಿಸ್ಥಿತಿಗಳ ಕಡೆಗೆ ಉಂಟಾಗಿರುವ ಅವಸ್ಥಾ ಪರಿವರ್ತನೆಯ ಸ್ವರೂಪಗಳನ್ನು ಗುರುತಿಸುವ ಹಾಗೂ ವಿವರಣೆ ಕೊಡುವುದು. ಭೂಗೋಳಶಾಸ್ತ್ರಜ್ಞರ ಜವಾಬ್ದಾರಿ ಎಂದು ಉದ್ಘೋಷಿಸಿದ್ದಾರೆ. ಈ ರೀತಿಯಾದ ಅತ್ಯಂತ ವಿವೇಚನಾ ಪೂರ್ವಕವಾದಂತಹ ವ್ಯಾಖ್ಯಾನವು ಸಾಧ್ಯತಾವಾದದ ಬಗ್ಗೆ ಸೌರ್‌ರವರ ಪ್ರಬಲ ಆಸಕ್ತಿಯನ್ನು ತೋರಿಸುತ್ತದೆ. ಅವರು ಜೆಫರ್‌ಸನ್‌ರೊಡನೆ ಸೇರಿ ಕೋರೋಲೊಜಿ ಎಂಬ ಪರಿಭಾವನೆಯನ್ನು ಹುಟ್ಟು ಹಾಕಿದರು. ಕೋರೋಲಜಿ ಎಂದರೆ ಪ್ರಾದೇಶಿಕ ಮತ್ತು ಸ್ಥಳಗಳ ಅಧ್ಯಯನ. ಸೌರ್‌ರವರ ಅಭಿಪ್ರಾಯದಂತೆ ಕೋರೋಲಜಿ ಎಂದರೆ ಭೂಗೋಳಶಾಸ್ತ್ರವು ಭೂಮೇಲ್ಮೈನ ಪರಸ್ಪರ ಸಂಬಂಧಿಸಿದ ವಸ್ತುಗಳ ಬಗ್ಗೆ ಅಧ್ಯಯನ ನಡೆಸುತ್ತದೆ. ಜೊತೆಗೆ ಸ್ಥಳದಿಂದ ಸ್ಥಳಕ್ಕೆ ಇರುವ ಭೌಗೋಳಿಕ ಹಾಗೂ ಸಾಂಸ್ಕೃತಿಕ ಭಿನ್ನತೆಗಳನ್ನು ಅಭ್ಯಾಸ ಮಾಡುತ್ತದೆ.



ಕಾರ್ಲ್‌ಓ ಸೌರ್ ಅವರು ಅಮೆರಿಕದಲ್ಲಿ ಸಾಂಸ್ಕೃತಿಕ ದೃಶ್ಯಾವಳಿಯ (ಕಲ್ಚರಲ್ ಲ್ಯಾಂಡ್‌ಸ್ಕೇಪ್) ಅಧ್ಯಯನವನ್ನು ಆರಂಭಿಸಿದರು. ಈ ಅಧ್ಯಯನ ಜರ್ಮನಿಯಲ್ಲಿ ಆಗಲೇ ಪ್ರಚಲಿತವಾಗಿತ್ತು. ಅನಂತರ ಇವರು ಪ್ರಪ್ರಥಮವಾಗಿ ಬರ್ಕ್‌ಲೀ ವಿ.ವಿ ನಲ್ಲಿ ಆರಂಭಿಸಿ ಅಮೆರಿಕದಲ್ಲಿ ಅಭಿವೃದ್ಧಿ ಪಡಿಸಿದರು. ಇದನ್ನು ಅನುಸರಿಸಿದವರನ್ನು ಬರ್ಕ್‌ಲೀ ಪಂಥ ಎಂದೇ ಕರೆಯಲಾಯಿತು.

ಇವರು ಐತಿಹಾಸಿಕ ಭೂಗೋಳಶಾಸ್ತ್ರಕ್ಕೂ ಅಪಾರವಾದ ಕೊಡುಗೆ ನೀಡಿದ್ದಾರೆ. ಮೆಕ್ಸಿಕೋದೇಶದ ಪೆಸಿಫಿಕ್ ಕರಾವಳಿಯಲ್ಲಿ ನೆಲೆಸಿದ್ದ ಕೆಂಪು ಇಂಡಿಯನ್ನರ ವಸತಿ ಗಡಿ ಭಾಗಗಳ ಬಗ್ಗೆ ಅಧ್ಯಯನ ನಡೆಸಿ ವಿಶ್ಲೇಷಿಸಿದ್ದಾರೆ. (ಎನ್.ಎಲ್.)

**ಕಾರ್ಲ್ ಗಿಲ್ಬರ್ಟ್:** 1843–1918. ಅಮೆರಿಕ ಮೂಲದ ಭೂಗರ್ಭಶಾಸ್ತ್ರಜ್ಞರು. ಶೈಕ್ಷಣಿಕ ಕ್ಷೇತ್ರದಲ್ಲಿ ಜಿ.ಕೆ. ಗಿಲ್ಬರ್ಟ್ ಎಂದೇ ಹೆಸರಾದವರು. 1879ರಲ್ಲಿ ಸ್ಥಾಪಿಸಲಾದ ಯುನೈಟೆಡ್ ಸ್ಟೇಟ್ಸ್ ಜಿಯಲಾಜಿಕಲ್ ಸರ್ವೀಸ್ (ಯು.ಎಸ್.ಜಿ.ಎಸ್)ನಲ್ಲಿ ಹಿರಿಯ ಭೂಗರ್ಭಶಾಸ್ತ್ರಜ್ಞರಾಗಿ ಕೆಲಸಕ್ಕೆ ಸೇರಿಕೊಂಡು ಅವರ ಕೊನೆಯ ದಿನಗಳವರೆಗೂ ಸಂಸ್ಥೆಯ ಏಳಿಗೆಗೆ ಶ್ರಮಿಸಿದರು. 1899ರಲ್ಲಿ ಕೈಗೊಂಡ ಹ್ಯಾರಿಮನ್ ಅಲಾಸ್ಕ ಅನ್ವೇಷಣೆಯಲ್ಲಿ ಇವರು ಸಕ್ರಿಯ ಪಾತ್ರವಹಿಸಿದ್ದರು.



ಇವರು ಹೆನ್ರಿ ಪರ್ವತಗಳ ಭೂಗರ್ಭದ ಅಂಶಗಳ ಮೇಲೆ ಹಾಗೂ 1890ರಲ್ಲಿ ಪುರಾತನ ಬೋನಿವಿಲ್ಲ ಸರೋವರದ ಉಗಮದ ಬಗ್ಗೆ ಅಧ್ಯಯನ ನಡೆಸಿದರು. ಆ ನಂತರ ಈ ಸರೋವರ ಗ್ರೇಟ್ ಸಾಲ್ಟ್‌ಲೇಕ್ ಸರೋವರದ ಉಗಮಕ್ಕೆ ಹೇಗೆ ಕಾರಣವಾಯಿತೆಂಬುದರ ಬಗ್ಗೆ ವಿವರಣೆ ನೀಡಿದರು. ಈ ಪ್ರದೇಶವನ್ನು ಮೊದಲು ಗುರುತಿಸಿದ ಮಹಾದಂಡನಾಯಕ ಬೆಂಜಮಿನ್ ಬೊನಿವಿಲ್ಲಿಯ ಹೆಸರನ್ನು ಅವರ ಅನಂತರ ಈ ಸರೋವರಕ್ಕೆ ನೀಡಿದ ವ್ಯಕ್ತಿ ಗಿಲ್ಬರ್ಟ್.

ಇವರು ಭೂಸಾದೃಶ್ಯ ವಿನ್ಯಾಸದ ಉಗಮ, ನಗ್ನೀಕರಣ, ನದಿಗಳ ಕಾರ್ಯ, ಅದರಿಂದ ಉಂಟಾದ ಭೂ ಸಾದೃಶ್ಯಗಳು ಹಾಗೂ ಸಂಚಯನ ಕ್ರಿಯೆಯಿಂದುಂಟಾದ ಭೂ ಪ್ರದೇಶಗಳ ಮೇಲೆ ಅಧ್ಯಯನ ನಡೆಸಿದರು. ಅಲ್ಲದೆ ಚಂದ್ರ ಗ್ರಹದ ಕುಳಿಗಳ ಮೇಲೆ ಅನೇಕ ಸಿದ್ಧಾಂತಗಳನ್ನು ಮಂಡಿಸಿದರು.

ಚಂದ್ರ ಹಾಗೂ ಮಂಗಳ ಗ್ರಹದ ಕುಳಿಗಳಿಗೆ ಇವರ ಹೆಸರನ್ನೂ ಮಂಗಳ ಗ್ರಹದ ಒಂದು ಕುಳಿಗೆ ಬೊನಿವಿಲ್ಲಿಯವರ ಹೆಸರನ್ನೂ ಇಡಲಾಗಿದೆ. (ಎಸ್.ಎಸ್.ಎನ್.)

**ಕಾರ್ಲ್‌ರಿಟ್ಟರ್:** 1779–1859. ಜರ್ಮನಿಯ ಭೂಗೋಳಶಾಸ್ತ್ರಜ್ಞ. ಅಲೆಗ್ಸಾಂಡರ್ ವಾನ್ ಹಂಬೋಲ್ಟ್ ಅವರ ಸಮಕಾಲೀನ. ಪ್ರಪಂಚದ ಭೂಗೋಳಶಾಸ್ತ್ರದ ಮೊದಲ ಪ್ರಾಧ್ಯಾಪಕ. ಈತನ ಪ್ರಸಿದ್ಧ ಕೃತಿ ಎರ್ಡ್‌ಕುಂಡೆ. ಈತ ಪ್ರಾದೇಶಿಕ ಭೂಗೋಳಶಾಸ್ತ್ರಕ್ಕೆ ನೀಡಿದ ಕೊಡುಗೆ ಅಪಾರ. ಜರ್ಮನಿಯಲ್ಲಿ ಹಂಬೋಲ್ಟ್‌ನಿಗಿಂತ ಹೆಚ್ಚು ಪ್ರಭಾವಶಾಲಿ ಪ್ರಾಧ್ಯಾಪಕ ಹಾಗೂ ಮುಂದಿನ ಒಂದು ತಲೆಮಾರಿನ ಭೌಗೋಳಿಕ ಚಿಂತನೆಯು ಕಾರ್ಲ್‌ರಿಟ್ಟರ್‌ನ ಪ್ರಭಾವದಿಂದ ಕೂಡಿರುವಷ್ಟು ಮಹತ್ತರ. ಜರ್ಮನಿಯಲ್ಲಿ ಇಮ್ಯಾನ್ಯುಯೆಲ್ ಕ್ಯಾಂಟ್ ಅವರಿಂದ ಆರಂಭವಾದ ಭೂಗೋಳಶಾಸ್ತ್ರದ ತಾತ್ವಿಕ ನಿರೂಪಣೆ ಅಲೆಗ್ಸಾಂಡರ್‌ವಾನ್ ಹಂಬೋಲ್ಟ್ ಮತ್ತು ಕಾರ್ಲ್‌ರಿಟ್ಟರ್ ಅವರಿಂದ ಮುಂದುವರಿದು ಇದು ಪ್ರತ್ಯೇಕ ಶೈಕ್ಷಣಿಕ ಅಧ್ಯಯನ ವಿಷಯವಾಗಿ ರೂಪಿತಗೊಂಡಿತು. ಈ ಬೆಳೆವಣಿಗೆಯಲ್ಲಿ ರಿಟ್ಟರ್‌ನ ಪಾತ್ರ ಹಂಬೋಲ್ಟ್‌ನಷ್ಟೇ ಮುಖ್ಯವಾದದು. ರಿಟ್ಟರ್ ಹಂಬೋಲ್ಟ್‌ನನ್ನು ತನ್ನ 'ಗುರು' ಎಂದು ಕರೆದಿದ್ದರೆ ಹಂಬೋಲ್ಟ್ ರಿಟ್ಟರನನ್ನು ತನ್ನ ಹಳೆಯ ಸ್ನೇಹಿತನೆಂದು ಕರೆದಿರುವನು. ಇವರಿಬ್ಬರೂ ಒಂದೇ ದೇಶದವರಲ್ಲಿದ್ದು ಸಮಕಾಲೀನರಾಗಿದ್ದರೂ ಭೂಗೋಳಶಾಸ್ತ್ರದ ಬೆಳವಣಿಗೆಯಲ್ಲಿ ಇವರ ಕೊಡುಗೆಗಳು ಭಿನ್ನ. ವಸ್ತುನಿರೂಪಣೆಯಲ್ಲಿ ಅನುಸರಿಸಿದ ಮಾರ್ಗವೂ ಸಹ ಪರಸ್ಪರ ತದ್ವಿರುದ್ಧ.

ರಿಟ್ಟರ್ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳನ್ನು ಅಭ್ಯಸಿಸಿ ಅಧ್ಯಾಪಕ ವೃತ್ತಿಯನ್ನು ಆರಂಭಿಸಿದ. ಕ್ಷೇತ್ರ ಅಧ್ಯಯನಗಳ ಪ್ರಾಮುಖ್ಯತೆಯನ್ನು ತಿಳಿದು ಸ್ವಿಟ್ಜೆರ್ಲೆಂಡ್ ಮತ್ತು ಇಟಲಿಗಳಲ್ಲಿ ಪ್ರವಾಸವನ್ನು ಕೈಗೊಂಡು ಈ ಹಂತದಲ್ಲಿಯೇ 1807ರಲ್ಲಿ ಹಂಬೋಲ್ಟನನ್ನು ಸಂಧಿಸಿದ. ಅನಂತರ ಅಧ್ಯಯನವನ್ನು ಮುಂದುವರಿಸಿ ಬರ್ಲಿನ್‌ನಲ್ಲಿ ಹೊಸದಾಗಿ ಆರಂಭವಾದ ಭೂಗೋಳಶಾಸ್ತ್ರ ವಿಭಾಗದ ಪ್ರಪಂಚದ ಮೊದಲ ಪ್ರಾಧ್ಯಾಪಕನಾಗಿ ನೇಮಕಗೊಂಡ. ಇಲ್ಲಿಯೇ 39 ವರ್ಷಗಳ ಕಾಲ ಸೇವೆಸಲ್ಲಿಸಿದ ಚಾರ್ಲ್ಸ್ ಡಾರ್ವಿನ್ನನ ಪ್ರಸಿದ್ಧ ಕೃತಿ ಆರಿಜಿನ್ ಆಫ್ ಸ್ಪೀಸಿಸ್ ಪ್ರಕಟಗೊಂಡು ಭೂಗೋಳಶಾಸ್ತ್ರವೂ ಸೇರಿದಂತೆ ಎಲ್ಲಾ ವಿಜ್ಞಾನಗಳ ಮೇಲೂ ಅಪಾರ ಪ್ರಭಾವವನ್ನು ಬೀರಿತು (1859). ರಿಟ್ಟರ್ ಪರಿಸರ ಪ್ರಭುತ್ವವಾದವನ್ನು ನಿಖರವಾಗಿ ಪ್ರತಿಪಾದಿಸದಿದ್ದರೂ ಭೂಮಿ ಮತ್ತು ಅದರ ಜನತೆ ಪರಸ್ಪರ ಅತಿ ಪೂರಕವಾದವು. ಈ ಎರಡನ್ನೂ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಇದರಿಂದಾಗಿಯೇ ಇತಿಹಾಸ ಮತ್ತು ಭೂಗೋಳಶಾಸ್ತ್ರಗಳನ್ನು ಪ್ರತ್ಯೇಕಿಸಲಾಗುವುದಿಲ್ಲ. ಭೂಮಿ ಜನರನ್ನೂ ಜನರು ಭೂಮಿಯ ಮೇಲೆ ಪರಿಣಾಮವನ್ನುಂಟುಮಾಡುವುವೆಂದು ವಿವರಿಸಿದ.

ಪ್ರಪಂಚದ ಪ್ರತಿಯೊಂದು ಭೂಭಾಗವೂ ವಿಶಿಷ್ಟ. ಅವುಗಳ ಪ್ರಾಕೃತಿಕ ಹವಾಮಾನಿಕ ಅಂಶಗಳು ಪೂರಕವಾಗಿದ್ದು ಆ ಪ್ರದೇಶದ 'ಏಕತೆಗೆ' ಕಾರಣವಾಗುತ್ತವೆಯೆಂದು ಈತ ವಿವರಿಸಿದ. ಇವನು ಈ ರೀತಿಯ ಒಕ್ಕೂಟ ಅಥವಾ ಏಕತೆಯ ಪರಿಭಾವನೆಗಳು ಅಂದಿನ ಕಾಲದಲ್ಲಿ ಪ್ರಚಲಿತವಾಗಿದ್ದ ಹೆಗೆಲ್, ಗಯೂಟ ಮೊದಲಾದ ಪ್ರಸಿದ್ಧ ತತ್ವಶಾಸ್ತ್ರಜ್ಞರ ಪ್ರಭಾವವನ್ನು ಒಳಗೊಂಡಿವೆ. ರಿಟ್ಟರ್ ಧಾರ್ಮಿಕ ಪ್ರಭಾವಕ್ಕೆ ಹೆಚ್ಚು ಒಳಗಾಗಿದ್ದು, ಈತನ ವಿವರಣೆಗಳಲ್ಲಿ ದೈವೀಕ ವಾದವನ್ನು ಸ್ಪಷ್ಟವಾಗಿ ಕಾಣಬಹುದು. ವೈಜ್ಞಾನಿಕ ವಿವರಗಳಿಗೆ ನೀಡಿದ ಪ್ರಾಮುಖ್ಯತೆ ಕಡಿಮೆ. ಇದನ್ನೇ ಥಿಯಾಲಾಜಿಕಲ್ ವಿವರಣೆಗಳೆಂದೂ ಸಹ ಕರೆಯಲಾಗಿದೆ. ಈ ಬಗೆಯ ವಿವರಗಳು ಈತನ ಪ್ರಸಿದ್ಧ ಕೃತಿ ಎರ್ಡ್‌ಕುಂಡೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ಪ್ರಕೃತಿಯ ಪ್ರತಿಯೊಂದು ಅಂಶ ಅಥವಾ ಭಾಗಗಳು ಒಂದು ನಿರ್ದಿಷ್ಟ ಉದ್ದೇಶದಿಂದ ದೈವೀಕ ನಿರ್ಮಿತವಾಗಿವೆ. ದೇವರು ವಿಶ್ವದ ಯೋಜನಾಕಾರ. ಭೂಮಿಯು ಮನುಷ್ಯನಿಗೆ ದೇವರು ನೀಡಿರುವ

ಶೈಕ್ಷಣಿಕ ಮಾದರಿ. ಅದರ ಪ್ರಕೃತಿ ದೇವರು ನಿರ್ದಿಷ್ಟ ಉದ್ದೇಶದಿಂದ ನೀಡಿದುದಾಗಿದ್ದು ಅದು ಮಾನವನಿಗೆ ಅಭಿವೃದ್ಧಿಯ ಪಥವನ್ನು ಸೂಚಿಸುವುದೆಂದು ವಿವರಿಸಿದ. ಮುಂದುವರಿದು ಭೂಖಂಡಗಳ ಆಕಾರ ಮತ್ತು ಸ್ಥಾನಗಳೂ ಸಹ ಆಕಸ್ಮಿಕವಾಗಿರದೆ ದೈವ ನಿಶ್ಚಿತವಾದ ಪಾತ್ರವನ್ನು ನಿರ್ವಹಿಸುತ್ತವೆಯೆಂದು ವಿವರಿಸಿದ. ಹೀಗೆ ರಿಟ್ಟರ್‌ನ ಬರವಣಿಗೆಗಳು ಧಾರ್ಮಿಕ ಪ್ರಧಾನವಾಗಿದ್ದರೆ ಇದಕ್ಕೆ ವಿರುದ್ಧವಾಗಿ ಹಂಬೋಲ್ಟ್‌ನ ವಿವರಣೆಗಳು ವೈಜ್ಞಾನಿಕವಾಗಿವೆ. ಇವನು 1859ರಲ್ಲಿ ನಿಧನನಾದ. (ಆರ್.ಎನ್.)

**ಕಾರ್ಸಿಕ:** ಪಶ್ಚಿಮ ಮೆಡಿಟರೇನಿಯನ್ ಸಮುದ್ರದ ಒಂದು ದ್ವೀಪ. ಫ್ರಾನ್ಸಿಗೆ ಸೇರಿದೆ. ಫ್ರಾನ್ಸಿನ ಮುಖ್ಯ ಭೂಪ್ರದೇಶದಿಂದ ಇಲ್ಲಿಗೆ 168 ಕಿಮೀ ದೂರ. ಇಟಲಿಗೆ ಇದು 80 ಕಿಮೀ ದೂರದಲ್ಲಿದೆ. ದಕ್ಷಿಣದಲ್ಲಿರುವ ಸಾರ್ಡಿನಿಯ ದ್ವೀಪಕ್ಕೂ ಕಾರ್ಸಿಕಕ್ಕೂ ನಡುವೆ ಬೂನಿಫಾಚೂ ಜಲಸಂಧಿಯಿದೆ. ಇದು ಮೆಡಿಟರೇನಿಯನ್ ಸಮುದ್ರದ ದೊಡ್ಡ ದ್ವೀಪಗಳಲ್ಲಿ ಮೂರನೆಯದು. ಉ.ಅ. $43^0$ ಮತ್ತು ಪೂ.ರೇ. $10^0$ ನಡುವೆ, ಸ್ಥೂಲವಾಗಿ ಅಂಡಾಕೃತಿಯಲ್ಲಿರುವ ಕಾರ್ಸಿಕ ದ್ವೀಪದ ವಿಸ್ತೀರ್ಣ 8619 ಚ.ಕಿಮೀ. ಜನಸಂಖ್ಯೆ 260196 (1999).

ಇಲ್ಲಿಯ ಜನರ ಭಾಷೆ ಇಟಾಲಿಯನ್; ಇಟಲಿಯೊಂದಿಗೆ ಅವರ ಸಾಂಸ್ಕೃತಿಕ ಸಂಬಂಧವೂ ಇದೆ. ಇವರು ಸಂಪ್ರದಾಯಪ್ರಿಯರು. ದ್ವೀಪವಾಸಿಗಳಾದರೂ ನುರಿತ ನಾವಿಕರಲ್ಲ; ಅರಣ್ಯಗಳಲ್ಲೇ ಮುಖ್ಯವಾಗಿ ಅವರ ವಾಸ.

ಕಾರ್ಸಿಕ ಗುಡ್ಡಗಾಡುಪ್ರದೇಶ. ಹೆಚ್ಚಾಗಿ ಗ್ರಾನುಲೈಟ್‌ನಂಥ ಸ್ಫಟಿಕ ಶಿಲೆಗಳನ್ನು ಒಳಗೊಂಡಿದೆ. ಸಿಂಟೂ (2696 ಮೀ) ಮತ್ತು ರೂಟಾನಂಥ (2584 ಮೀ) ಇವು ಅತ್ಯಂತ ಎತ್ತರದ ಶಿಖರಗಳು. ನದಿ ಕಣಿವೆಗಳು ಇಕ್ಕಟ್ಟಾಗಿಯೂ ಆಳವಾಗಿಯೂ ಇವೆ. ಪಶ್ಚಿಮ ಕರಾವಳಿಗಿಂತ ಪೂರ್ವ ಕರಾವಳಿ ಹೆಚ್ಚು ಇಕ್ಕಟ್ಟು. ವಾಯುಗುಣ ಮೆಡಿಟರೇನಿಯನ್ ಮಾದರಿ. ಸಮುದ್ರಮಟ್ಟ ಪ್ರದೇಶದಲ್ಲಿ ಬೇಸಗೆಯ ಸರಾಸರಿ ಉಷ್ಣತೆ $22^0$ಸೆ. ಚಳಿಗಾಲವೂ ತಕ್ಕಮಟ್ಟಿಗೆ ಬೆಚ್ಚಗಿರುತ್ತದೆ. (7–$10^0$ಸೆ.) ಕಣಿವೆಗಳು ಮುಳ್ಳು ಪೊದೆಗಳಿಂದ ತುಂಬಿವೆ. ಅರಣ್ಯಗಳಲ್ಲಿ ಚೆಸ್ಟ್‌ನಟ್ ಮರ ಹೇರಳ. ನೆಲ ಹೆಚ್ಚು ಫಲವತ್ತಾಗಿಲ್ಲ.

ಇಕ್ಕಟ್ಟಾದ ಕರಾವಳಿಬಯಲಿಗೆ ಮಾತ್ರ ಕೃಷಿ ಸೀಮಿತವಾಗಿದೆ. ಶೇ. 2ರಷ್ಟು ಭೂಮಿಯಲ್ಲಿ ಮಾತ್ರ ಸಾಗುವಳಿ ನಡೆದಿದೆ. ಇಲ್ಲಿಯ ಕಾಲುಭಾಗ ನೆಲ ದನಕರುಗಳ ಮೇವಿಗೆ ಅನುಕೂಲಕರ. ಗೋದಿ, ದ್ರಾಕ್ಷಿ ಮತ್ತು ಅಲಿವ್ ಮುಖ್ಯ ಬೆಳೆಗಳು. ಪ್ರವಾಸೋದ್ಯಮ ಬೆಳೆಯುತ್ತಿದೆ. ಆಲಿವ್ ಮದ್ಯ ಮತ್ತು ಮರಮಟ್ಟು ಮುಖ್ಯ ನಿರ್ಯಾತ ವಸ್ತುಗಳು.

ಅಜಾಕಿಯ ರಾಜಧಾನಿ. ಬಸ್ತಿಯ ಮುಖ್ಯ ಬಂದರು. ಇದು ಕಾರ್ಸಿಕದ ಅತ್ಯಂತ ದೊಡ್ಡ ನಗರ. (ಕೆ.ಎನ್.ಯು.)

**ಕಾಲಮಾನಿಕ ಭೂಗೋಳ ವಿಜ್ಞಾನ :** ಇದನ್ನು ಐತಿಹಾಸಿಕ ವಿಧಾನವೆಂದೂ ಕರೆಯುವರು. ಭೂಗೋಳ ಶಾಸ್ತ್ರದಲ್ಲಿ ಪ್ರಚಲಿತವಾದ ಎರಡು ವಿಶ್ಲೇಷಣಾ ವಿಧಾನಗಳಿವೆ. ಅವುಗಳೆಂದರೆ ಪ್ರಾದೇಶಿಕ ವಿಶ್ಲೇಷಣೆ (ಸ್ಪೇಶಿಯಲ್ ಅನಾಲಿಸಿಸ್) ಹಾಗೂ ಕಾಲಮಾನಿಕ ವಿಶ್ಲೇಷಣೆ, (ಟೆಂಪೊರಲ್ ಅನಾಲಿಸಿಸ್).

ಕಾಲಮಾನಿಕ ವಿಧಾನವು ಭೂಮೇಲ್ಮೈಯಲ್ಲಿ ಯಾವುದೇ ಬಗೆಯ ಲಕ್ಷಣಗಳು ಹೇಗೆ ಕಾಲಮಾನಿಕವಾಗಿ ವಿಕಾಸವನ್ನು ಹೊಂದಿ ಪ್ರಸ್ತುತ ಲಕ್ಷಣವನ್ನೂ ಪಡೆದಿವೆ. ಎಂಬುದನ್ನು ವಿವರಿಸುವುದು. ಡಬ್ಲ್ಯೂ ಎಂ ಡೇವಿಸ್ಸರ ಭೂಸವೆತ ಚಕ್ರ, ರೋಸ್ಟೋ ಪ್ರತಿಪಾದಿಸಿದ ಆರ್ಥಿಕ ಅಭಿವೃದ್ಧಿಯ ಹಂತಗಳು, ಎಲ್ಸ್ ವರ್ಥ್ ಹಂಟಿಂಗ್‌ಟನ್ ಮೈನ್ ಸ್ಪ್ರಿಂಗ್ಸ್ ಆಫ್ ಸಿವಿಲೈಜೇಷನ್ ಮೊದಲಾದವು ಈ ಪ್ರಕಾರದ ಅಧ್ಯಯನಗಳಿಗೆ ಉದಾಹರಣೆಗಳು. ಸಾಂಸ್ಕೃತಿಕ ಭೂಗೋಳ ಶಾಸ್ತ್ರದಲ್ಲಿ ಈ ವಿಧಾನವನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಡೇವಿಡ್ ಹಾರ್ವೆ ತಿಳಿಸಿರುವಂತೆ ಈ ವಿಧಾನದಿಂದ ಯಾವುದೇ ಲಕ್ಷಣಗಳು ಅಭಿವೃದ್ಧಿಯ ಪೂರ್ಣ ಜ್ಞಾನವನ್ನು ಪಡೆಯಬಹುದಾಗಿದೆ. (ಆರ್.ಎನ್.)

**ಕಾಲಲೇಖಿ ಮತ್ತು ಕಾಲಮಾಪಿ:** ಒಂದು ಘಟನೆಯ ಸಂಭವಕಾಲವನ್ನು ಖಚಿತವಾಗಿ ಬರೆದಿಡಲು ಅಥವಾ ಗುರುತು ಮಾಡಲು ಬಳಸುವ ಉಪಕರಣ ಹಾಗೂ (ಕ್ರೋನೋಗ್ರಾಫ್). ವಿಶೇಷವಾಗಿ ಸಮುದ್ರನೌಕೆಗಳಲ್ಲಿ ಕಾಲವನ್ನು ನಿಷ್ಕೃಷ್ಟವಾಗಿ ಅಳೆಯಲು ಬಳಸುವ ಬಲು ದೊಡ್ಡ ಮತ್ತು ಸುಭದ್ರವಾಗಿ ರಚಿಸಲಾಗಿರುವ ಗಡಿಯಾರ (ಕ್ರೋನೋ ಮೀಟರ್). ಯಾವುದೇ ಸೂಕ್ಷ್ಮ ಗಡಿಯಾರವನ್ನೂ ಕಾಲಮಾಪಿ ಎಂದೇ ರೂಢಿಯಲ್ಲಿ ಕರೆಯುವುದುಂಟು.

ಕ್ರಮಾನುಗತವಾಗಿ ಸಂಭವಿಸುವ ಎರಡು ಘಟನೆಗಳ ಕಾಲಗಳ ಅಂತರವನ್ನು ನಿಖರವಾಗಿ ನಕ್ಷೆಯ ಮೂಲಕ ಕಾಲಲೇಖಿ ತೋರಿಸುತ್ತದೆ. ವಸ್ತುಗಳ ಚಲನದರವನ್ನು ಇದರ ನೆರವಿನಿಂದ ನಿಖರವಾಗಿ ಅಳೆಯಬಹುದು. ಕೆಲವು ಕಾಲಮಾಪಿಗಳು ಮಿನಿಟು, ಸೆಕೆಂಡು ಅಥವಾ ಅದರ ಭಾಗಾಂಶಗಳನ್ನು ತೋರಿಸಬಲ್ಲುವು; ಮತ್ತೆ ಕೆಲವು ದಿವಸ, ತಿಂಗಳು, ವರ್ಷ ಮತ್ತು ಚಂದ್ರನ ವಿವಿಧ ಅವಸ್ಥೆಗಳನ್ನು ಸೂಚಿಸಬಲ್ಲವು. ಕಾಲಮಾಪಿ ಗಡಿಯಾರದಂತೆ ಜರುಗಿದ ಕಾಲದ ಸರಾಸರಿಯನ್ನು ಸೂಚಿಸುವುದರ ಜೊತೆಗೆ ಇನ್ನೂ ಅನೇಕ ಕಾರ್ಯಗಳನ್ನು ಮಾಡಬಲ್ಲದು.

ಕಾಲಮಾಪಿಗಳಲ್ಲಿರುವ ಹಲವಾರು ವಿಧಗಳನ್ನು ಈ ಕೆಳಕಂಡ ತತ್ವಗಳನ್ನು ಅನುಸರಿಸಿ ರಚಿಸಲಾಗಿದೆ:

1. ಹೆಚ್ಚು ಉದ್ದದ ಕಾಲಗಳನ್ನು, ಸೌರವ್ಯೂಹದಲ್ಲಿ ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಗ್ರಹಗಳು ಅವುಗಳ ಅಕ್ಷದ ಸುತ್ತ ಆವರ್ತಿಸಲು ತೆಗೆದುಕೊಳ್ಳುವ ಕಾಲದಿಂದ ತಿಳಿಯಬಹುದು. ಈ ದೃಷ್ಟಿಯಲ್ಲಿ ಭೂಮಿಯೇ ಒಂದು ಕಾಲಮಾಪಿ.

2. ಭೂಮಿಯ ಗುರುತ್ವ ವೇಗೋತ್ಕರ್ಷದಿಂದ ನಿಯಂತ್ರಿಸಲ್ಪಟ್ಟ ಆಂದೋಲನಗಳನ್ನು ಉಂಟುಮಾಡುವ ಸಾಧನಗಳನ್ನು ಕಾಲಮಾಪಿಗಳನ್ನಾಗಿ ಉಪಯೋಗಿಸಬಹುದು. ಉದಾಹರಣೆಗೆ (i)ಲೋಲಕಗಳು, (ii)ನೀರುಗಡಿಯಾರಗಳು, (iii) ಪುರಾತನ ಮರುಳು ಗಡಿಯಾರಗಳು.

3. ವಸ್ತುಗಳ ಸ್ಥಿತಿಸ್ಥಾಪಕತ್ವ ಗುಣಗಳನ್ನು ಅನುಸರಿಸಿ ಆಂದೋಳನಗೊಳ್ಳುವ ಸಾಧನಗಳಿಂದಲೂ ಕಾಲಮಾಪಿಗಳನ್ನು ನಿರ್ಮಿಸಬಹುದು. ಉದಾ: ಅಂದೋಲಿಸುವ ಪೀಪಿಗಳು, ಶೃತಿಕವಲುಗಳು, ಕ್ವಾರ್ಟ್ಸ್‌ಸ್ಪಟಿಕಗಳ ಆಂದೋಳನ. ಕೈಗಡಿಯಾರ ನಿಲ್ಲಡಿಯಾರಗಳಲ್ಲಿ ಉಪಯೋಗಿಸುವ ಸಮತೋಲನ ಚಕ್ರಗಳು. (ಪಿ.ವಿ.)

**ಕಾಲುವೆ ನೀರಾವರಿ:** ನದಿಗಳಿಂದ, ಜಲಾಶಯಗಳಿಂದ ಅಥವಾ ಕೆರೆಗಳಿಂದ ನೇರವಾಗಿ ಕಾಲುವೆತೋಡಿ, ತನ್ಮೂಲಕ ಸಾಗುವಳಿ ಭೂಮಿಗೆ ನೀರುಪೂರೈಕೆ ಮಾಡುವುದೇ ಕಾಲುವೆ ನೀರಾವರಿ. ನೀರಾವರಿ ವ್ಯವಸ್ಥೆಯಲ್ಲಿ ಕಾಲುವೆ ನೀರಾವರಿಯು ಅತಿ ಪ್ರಮುಖವಾದದು. ಕಾಲುವೆಗಳು ನೀರಾವರಿಯ ಅತಿ ಮಹತ್ವದ ಸಾಧನಗಳಾಗಿದ್ದು, ಪ್ರಪಂಚದಾದ್ಯಂತ ಸಾಕಷ್ಟು ವಿಸ್ತಾರವಾದ ಕಾಲುವೆ ಜಾಲವು ಹರಡಿರುವುದನ್ನು ಕಾಣಬಹುದು. ಸಾಕಷ್ಟು ನೀರಿನ ಪೂರೈಕೆ, ತಗ್ಗು ಅಥವಾ ಸಮತಟ್ಟಾದ ಭೂಸ್ವರೂಪ ಮತ್ತು ವಿಸ್ತಾರವಾದ ಜಲಾನಯನ ಪ್ರದೇಶ ಇವು ಕಾಲುವೆ ನೀರಾವರಿಗೆ ಅನುಕೂಲವಾದ ಅಂಶಗಳು. ಕಾಲುವೆಗಳಲ್ಲಿ ಮುಖ್ಯವಾಗಿ 2 ವಿಧಗಳುಂಟು. ಪ್ರವಾಹ ಕಾಲುವೆಗಳು, ಸರ್ವಕಾಲಿಕ ಕಾಲುವೆಗಳು.

ಯಾವುದೇ ವಿಧದ ಅಣೆಕಟ್ಟುಗಳನ್ನು ನಿರ್ಮಿಸದೇ ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು. ನದಿ ತುಂಬಿ ಪ್ರವಾಹದಿಂದ ಹರಿಯುವಾಗ ಕಾಲುವೆಗಳಲ್ಲಿ ನೀರು ಹರಿಯುತ್ತದೆ. ಇವುಗಳೇ ಪ್ರವಾಹ ಕಾಲುವೆಗಳು. ಇವು ಮಳೆಗಾಲದಲ್ಲಿ ಮಾತ್ರ ಉಪಯುಕ್ತ. ಬೇಸಗೆಯಲ್ಲಿ ಅನುಪಯುಕ್ತ. ಹೀಗಾಗಿ ಇವು ಋತುಕಾಲಿಕಾ ಕಾಲುವೆಗಳಾಗಿರುತ್ತವೆ.

ನದಿಗಳಿಗೆ ಅಣೆಕಟ್ಟೆಗಳನ್ನು ಕಟ್ಟಿ, ಜಲಾಶಯದಲ್ಲಿ ನೀರು ಸಂಗ್ರಹಿಸಿ, ಅದನ್ನು ಕೃಷಿ ಭೂಮಿಗೆ ಸರಬರಾಜು ಮಾಡಲು ತೋಡಿದ ಕಾಲುವೆಗಳೇ ಸರ್ವಕಾಲಿಕ ಕಾಲುವೆಗಳು. ಇಂತಹ ಕಾಲುವೆಗಳನ್ನು ವರ್ಷವೆಲ್ಲ ಅಥವಾ ಅಗತ್ಯವಿದ್ದಾಗಲೆಲ್ಲ ನೀರಾವರಿಗೆ ಬಳಕೆ ಮಾಡಬಹುದು. ಇಂಥ ಕಾಲುವೆಗಳ ಹೆಚ್ಚು ಚಾಲ್ತಿಯಲ್ಲಿವೆ.

ಕಾಲುವೆಗಳು ನೀರಾವರಿಗೆ ಮಾತ್ರವಲ್ಲದೆ ಜಲಸಂಚಾರಕ್ಕೂ ಸಹ ಬಹು ಉಪಯುಕ್ತವಾದವುಗಳಾಗಿವೆ. ಬಳಕೆಯಲ್ಲಿರುವ ನೀರಾವರಿ ಪದ್ಧತಿಗಳಲ್ಲಿ ಕಾಲುವೆ ನೀರಾವರಿಯು ಅತ್ಯಂತ ಪ್ರಮುಖವಾದುದು, ಇವುಗಳು ಬಹು ದೀರ್ಘ ಕಾಲದವರೆಗೆ ಬಳಕೆಗೆ ಬರುತ್ತವೆಯಲ್ಲದೆ, ಅತಿ ಹೆಚ್ಚು ವ್ಯವಸಾಯ ಪ್ರದೇಶಗಳಿಗೆ ನೀರನ್ನು ಒದಗಿಸುವ ನೀರಾವರಿ ಪದ್ಧತಿಯಾಗಿದೆ. (ಎಚ್.ಎಸ್.ಡಿ.)

**ಕಾಲ್ಡೆರ:** ವಿಶಾಲವಾದ ಬೋಗುಣಿ ಆಕಾರದ ಜ್ವಾಲಾಮುಖಿ ನಿರ್ಮಿತ ಮಹಾ ಕೂಪ ಅಥವಾ ಕುಂಡ. ಕೆಲಮೊಮ್ಮೆ ಜ್ವಾಲಾಮುಖಿಯು ಅತ್ಯಂತ ಭಯಂಕರವಾಗಿ ಸ್ಫೋಟಿಸಿದಾಗ ಮೊದಲಿದ್ದ ಜ್ವಾಲಾಮುಖಿಯ ಬಾಯಿ ಅಥವಾ ಕುಂಡವು ಕಿತ್ತೆಸೆಯಲ್ಪಟ್ಟು

ವಿಸ್ತಾರವಾದ ಕಡಾಯಿ ಆಕೃತಿಯ ಕುಳಿ(ಕೂಪ) ನಿರ್ಮಾಣವಾಗುವುದು. ಇದೇ ಕಾಲ್ಡೆರ ಅಥವಾ ಜ್ವಾಲಾಮುಖಿಯ ಮಹಾ ಕುಂಡ. ಕಾಲ್ಡೆರ ಎಂಬುದು ಸ್ಪಾನಿಷ್ ಭಾಷೆಯ ಕಾಲ್ಡ್ರಾನ್ ಶಬ್ದದಿಂದ ಬಂದದ್ದು. ಕಾಲ್ಡ್ರಾನ್ ಎಂದರೆ ಕಡಾಯಿ ಎಂದರ್ಥ.

ಕಾಲ್ದೆರಗಳು ಶಂಕುವಿನ ಭಾಗವು ಕುಸಿಯುವುದರಿಂದಲೂ ನಿರ್ಮಾಣವಾಗುತ್ತವೆ. ಇವು ಸಾಕಷ್ಟು ಅಗಲವಾಗಿರುತ್ತವೆ. ಇವುಗಳ ಬಾಹ್ಯ ಮತ್ತು ಆಂತರಿಕ ಭಾಗಗಳು ಕಡಿದಾಗಿರುತ್ತವೆ. ಉದಾ: ಜಾವ ದ್ವೀಪದ ಕ್ರಕಟೋವ (78 ಕಿಮೀ ವ್ಯಾಸ) ಅಲಾಸ್ಕಾದ ಪರ್ಯಾಯ ದ್ವೀಪದ ಕಟ್ಮಾಯಿ (3 ಕಿಮೀ ಅಗಲ 600–1100 ಮೀ ಆಳ), ಓರೆಗಾನ್ (ಅಮೆರಿಕ) ಕ್ರೇಟರ್ ಲೇಕ್ (9.6 ಕಿಮೀ ವ್ಯಾಸ. 1200 ಮೀ ಆಳ) ಇಂಡೋನೇಷ್ಯದ ಟೋಬಸರೋವರ (1800 ಚ.ಕಿಮೀ) ಇತ್ಯಾದಿ. (ಎಂ.ಎಸ್.ಎಸ್.)

**ಕಾವಿಮಣ್ಣು:** ಕಬ್ಬಿಣದ ಆಕ್ಸೈಡುಗಳ (ಲೈಮೊನೈಟ್ ಹಿಮಟೈಟ್, ಅಪೂರ್ವವಾಗಿ ಮ್ಯಾಗ್ನಟೈಟ್) ಮತ್ತು ಜೇಡುಮಣ್ಣಿನ ಚೆನ್ನಾಗಿ ಕಲೆತ ಮಿಶ್ರಣ (ಓಕರ್). ಇದರಲ್ಲಿ ಕಬ್ಬಿಣದ ಆಕ್ಸೈಡ್ ಪರಿಶುದ್ಧ ಪ್ರಮಾಣ ಶೇ. 15–80 ವರೆಗೂ ಇರುತ್ತದೆ. ಸ್ವಾಭಾವಿಕ ಖನಿಜ ಬಣ್ಣಗಳಲ್ಲಿ ಕಬ್ಬಿಣದ ಹೈಡ್ರಸ್ ಆಕ್ಸೈಡ್ ಪರಿಶುದ್ಧವಾಗಿಯೋ ಅಥವಾ ಜೇಡುಮಣ್ಣಿನೊಂದಿಗೆ ಬೆರೆತು ಹೇರಳವಾಗಿ ದೊರಕುವುದು. ಹೈಡ್ರಾಕ್ಸೈಡ್ ಮಿಶ್ರಿತ ಜೇಡಿ ಮಣ್ಣನ್ನು ಕಾವಿ ಮಣ್ಣು ಎಂದು ಕರೆಯುತ್ತಾರೆ.

ಆಕರ: ನೀರಿನಿಂದ ಸಾಗಣೆಗೊಂಡು ಪ್ರಸ್ತರಿಸಿದ ಮಡ್ಡಿಯಿಂದ ಉತ್ಪತ್ತಿಯಾದ ನಿಕ್ಷೇಪವಾಗಿಯೂ ಕಬ್ಬಿಣದ ಅದುರುಗಳು, ಪದರಶಿಲೆ, ಸುಣ್ಣಶಿಲೆ ಇವುಗಳ ರಾಸಾಯನಿಕ ಶೈಥಿಲ್ಯದಿಂದ ಉಂಟಾದ ಸ್ಥಳೀಯ ಶೇಷವಸ್ತು ನಿಕ್ಷೇಪವಾಗಿಯೂ ಕಾವಿ ಮಣ್ಣು ದೊರೆಯಬಹುದು. ರಾಸಾಯನಿಕ ವಸ್ತುಗಳ ಸಂಯೋಗದಿಂದ ಕಾವಿಮಣ್ಣು ಅನೇಕ ವರ್ಣಗಳಲ್ಲಿ ದೊರೆಯುತ್ತದೆ. ಬಣ್ಣದಲ್ಲಿ ನಾನಾ ಛಾಯೆಯ ಹಳದಿಯಲ್ಲಿಯೂ ಕಂದು ಕೆಂಪು ಬಣ್ಣಗಳಲ್ಲಿಯೂ ಇರುವುದು. ಕೆಲವು ವಿಧವಾದ ಕಾವಿಮಣ್ಣುಗಳು ಹಸುರಾಗಿ ಸಹ ಇರುವುದುಂಟು. ಹಳದಿ ಬಣ್ಣದ ಕಾವಿಮಣ್ಣನ್ನು ಗೋಪಿ ಎಂದೂ ಕಂದು ಬಣ್ಣದ್ದನ್ನು ಕಾವಿ ಎಂದೂ ಕರೆಯುವುದು ರೂಢಿ. ಕಾವಿಮಣ್ಣುಗಳನ್ನು ಅವು ದೊರೆಯುವ ವಿಧಾನದಲ್ಲಿಯಾಗಲೀ ಸಂಸ್ಕರಿಸಿದ ಮೇಲಾಗಲೀ ಬಣ್ಣ ಬಳಿಯುವುದಕ್ಕೂ ಜಲವರ್ಣ ಮತ್ತು ತೈಲವರ್ಣಗಳನ್ನು ತಯಾರಿಸುವುದಕ್ಕೂ ಉಪಯೋಗಿಸುತ್ತಾರೆ.

ಹಳದಿ ಕಾವಿಮಣ್ಣು: ಇದು ಮುಖ್ಯವಾಗಿ ಲೈಮೊನೈಟ್ ಮತ್ತು ಜೇಡು ಮಣ್ಣು ಕಲೆತ ಮಿಶ್ರಣ. ಇದನ್ನು ಕಾಯಿಸಿದಾಗ ಉಷ್ಣತೆಯ ಪ್ರಕಾರ ಕಂದು ಬಣ್ಣದ ವಿವಿಧ ಛಾಯೆಗಳು ಬರುತ್ತವೆ. ಅಲ್ಪಪ್ರಮಾಣದಲ್ಲಿ ಮ್ಯಾಂಗನೀಸ್ ಬೆರೆತಿದ್ದರೆ ಸೀಯನ್ನ ಎಂಬ ಹಳದಿ ಮಿಶ್ರಿತ ಕಂದು ಬಣ್ಣವಾಗುವುದು. ಹೆಚ್ಚಿನ ಪ್ರಮಾಣದಲ್ಲಿ ಅಂದರೆ 10%–25% ಭಾಗದಷ್ಟು ಮ್ಯಾಂಗನೀಸ್ ಆಕ್ಸೈಡ್ ಬೆರೆತಿದ್ದರೆ ಅಂಬರ್ ಎಂಬ ಕಂದು ಬಣ್ಣದ ಪದಾರ್ಥವಾಗುವುದು.

ಕೆಂಪು ಕಾವಿಮಣ್ಣು: ಇದರಲ್ಲಿ ಮುಖ್ಯವಾಗಿ ಕಬ್ಬಿಣದ ಕೆಂಪು ಆಕ್ಸೈಡ್ (ಹಿಮಟೈಟ್) ಮತ್ತು ಮಣ್ಣು ಪದಾರ್ಥಗಳು ವಿವಿಧ ಪ್ರಮಾಣದಲ್ಲಿ ಬೆರೆತಿರುತ್ತವೆ. ಬಣ್ಣದಲ್ಲಿ ಕೇಸರಿ ಬಣ್ಣದಿಂದ ರಕ್ತಕೆಂಪು ಮತ್ತು ಊದಾಕೆಂಪು ಬಣ್ಣಗಳವರೆಗೆ ವ್ಯತ್ಯಾಸವಾಗಬಹುದು.

ಹಸಿರು ಕಾವಿಮಣ್ಣು: ಇದು ಮುಖ್ಯವಾಗಿ ಎಪಿಡೋಟ್ ಕ್ಲೋರೈಟ್ ಹಾರ್ನ್ ಬ್ಲೆಂಡ್ ಮುಂತಾದ ಕಬ್ಬಿಣ–ಮೆಗ್ನಿಸಿಯಂ–ಸಿಲಿಕೇಟ್ ಸಂಯೋಜಿತ ಖನಿಜಗಳ ರಾಸಾಯನಿಕ ಬದಲಾವಣೆ ಶೈಥಿಲ್ಯಗಳಿಂದ ಉಂಟಾಗುತ್ತದೆ.

ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿವಿಧ ಛಾಯೆಯ ಹಳದಿ ಮತ್ತು ಕಂದು ಬಣ್ಣದ ಕಾವಿಮಣ್ಣುಗಳು ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು ಮತ್ತು ಸುಣ್ಣಶಿಲೆಗಳೊಂದಿಗೆ ಮಿಶ್ರವಾಗಿ ಸಿಕ್ಕುತ್ತದೆ. ಹಸುರು ಬಣ್ಣದ ಕಾವಿಮಣ್ಣು ತುಮಕೂರು ಜಿಲ್ಲೆಯ ಗೊಲ್ಲಹಳ್ಳಿ ಪ್ರದೇಶದಲ್ಲಿ ಅಲ್ಪಪ್ರಮಾಣದಲ್ಲಿ ದೊರೆಯುವುದು. ಕೆಂಪು ಬಣ್ಣದ ಸ್ವಚ್ಛ ರೆಡ್ ಆಕ್ಸೈಡ್ (ಹೆಮಟೈಟ್) ಕಾವಿಯ ವಿಶಾಲ ನಿಕ್ಷೇಪಗಳು ಮತ್ತು ಕೆಂಪು ಕಾವಿಮಣ್ಣು ಹೇರಳವಾಗಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಂಡೂರು ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿ ದೊರೆಯುತ್ತದೆ. (ಜಿ.ಎಸ್.ಎ.)

**ಕಾವೇರಿ ನದಿ:** ಭಾರತದ ಪರ್ಯಾಯ ದ್ವೀಪದಲ್ಲಿ ಹರಿಯುವ ನದಿಗಳಲ್ಲಿ ಒಂದು. ದಕ್ಷಿಣ ಗಂಗೆ ಎಂದು ಪ್ರಸಿದ್ಧಿ. ಈ ನದಿಹರಿಯುವ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಕೃಷಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ಬಹಳ ಉಪಯುಕ್ತ. ಕಾವೇರಿ ಹರಿಯುವ ನಾಡು ಪವಿತ್ರ ಭೂಮಿ ಎಂದು ಪರಿಗಣಿಸಲಾಗಿದೆ.

ಉಗಮ, ಹರಿವು : ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟಗಳ ಬ್ರಹ್ಮಗಿರಿಯಲ್ಲಿ (ಉ.ಅ$12^0 50'$ ಪೂ.ರೇ. $75^0 34'$) ಕಾವೇರಿ ಉಗಮಿಸುತ್ತದೆ (1355 ಮೀ ಎತ್ತರದಲ್ಲಿ). ಈ ಸ್ಥಳಕ್ಕೆ ತಲಕಾವೇರಿಯೆಂದು ಹೆಸರು. ಗಿರಿಯ ನೆತ್ತಿಯ ಮೇಲೆ ಅರಬ್ಬಿ ಸಮುದ್ರಕ್ಕೆ ಹತ್ತಿರದಲ್ಲಿಯೇ ಹುಟ್ಟುವ ಈ ನದಿ ಅಡ್ಡ ಘಟ್ಟಗಳನ್ನು ದಾಟಿ ಪೂರ್ವಾಭಿಮುಖವಾಗಿ ಹರಿಯುವುದು ಒಂದು ಸ್ವಾರಸ್ಯ. ಪಶ್ಚಿಮದತ್ತ ಜಾರಿದ್ದರೆ ಅದರ ನೀರು ನೆಟ್ಟಗೆ ಅರಬ್ಬಿ ಸಮುದ್ರವನ್ನು ಸೇರುತ್ತಿತ್ತು. ಅದು ಈಗ ಹರಿಯುತ್ತಿರುವ ಪ್ರದೇಶ ಆಗ ಬಹುತೇಕ ಬರಡಾಗುತ್ತಿತ್ತು. ಜೂನ್‌ನಿಂದ ಸೆಪ್ಟೆಂಬರಿನವರೆಗೆ ಕೊಡಗಿನಲ್ಲಿ ಸಮೃದ್ಧಿಯಾಗಿ ಬೀಳುವ ಮಳೆಯಿಂದಾಗಿ ಆ ಕಾಲದಲ್ಲಿ ಕಾವೇರಿ ತುಂಬಿ ಹರಿಯುತ್ತದೆ. ಘಟ್ಟದ ಬದಿಯ ಮೈದಾನಕ್ಕೂ ತಮಿಳುನಾಡಿನ ಬಯಲು ನೆಲಕ್ಕೂ ನೀರುಣಿಸುತ್ತದೆ. ಈ ನದಿಯ ಉದ್ದ 804 ಕಿಮೀ ಅದರಲ್ಲಿ 380 ಕಿಮೀ ಕರ್ನಾಟಕ, 360 ಕಿಮೀ ತಮಿಳುನಾಡಿನಲ್ಲಿದ್ದು, ಉಳಿದ 64 ಕಿಮೀ ಎರಡೂ ರಾಜ್ಯಗಳ ಗಡಿಯಲ್ಲಿ ಹರಿಯುವುದು. ಈ ನದಿಯ ಒಟ್ಟು ಜಲಾನಯನ ಪ್ರದೇಶ 81,150 ಚ.ಕಿಮೀ. ಇದರಲ್ಲಿ ಶೇ. 42.2 ಭಾಗ ಕರ್ನಾಟಕದಲ್ಲಿದ್ದರೆ ಉಳಿದ ಹೆಚ್ಚಿನ ಭಾಗ ತಮಿಳುನಾಡಿನಲ್ಲಿದೆ (ಶೇ.54.3). ಅಲ್ಪ ಭಾಗ (ಶೇ.3.50) ಕೇರಳದಲ್ಲಿ ವಿಸ್ತರಿಸಿದೆ. ಈ ನದಿಯು ಕಾವೇರಿಪಟ್ಟಿನಮ್ ಬಳಿ ಬಂಗಾಲ ಕೊಲ್ಲಿಯನ್ನು ಸೇರುತ್ತದೆ.



ಚಿತ್ರ : 5.10

ಉಗಮಸ್ಥಾನದಿಂದ ಸಿದ್ದಾಪುರದವರೆಗೆ ಆಗ್ನೇಯಾಭಿಮುಖವಾಗಿ ಹರಿಯುತ್ತ ಅಲ್ಲಿಂದ ಈಶಾನ್ಯದಿಕ್ಕಿನಲ್ಲಿ ಹರಿಯುವ ಕಾವೇರಿ, ಕೊಡಗಿನ ಅನೇಕ ಉಪನದಿಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಹುಟ್ಟುವೆಡೆಯಿಂದ ಐದು ಕಿಮೀ ಕೆಳಕ್ಕೆ ಭಾಗಮಂಡಲದಲ್ಲಿ ಕಾವೇರಿಯನ್ನು ಕೂಡಿಕೊಳ್ಳುವ ನದಿಯ ಹೆಸರು ಕನ್ನಿಕ. ಕೊಡಗಿನಲ್ಲಿ ದಕ್ಷಿಣದ ಕಡೆಯಿಂದ ಕಾವೇರಿಗೆ ಬಂದು ಸೇರುವವು ಕಕ್ಕಬೆ ಹೊಳೆ, ಕಾಡನೂರು ಹೊಳೆ ಮತ್ತು ಸಮ್ಮೆ ಹೊಳೆ. ಮಡಿಕೇರಿ ಶ್ರೇಣಿಯ ದಕ್ಷಿಣದ ಜಲಾನಯನ ಪ್ರದೇಶದಿಂದ ಹರಿದುಬರುವ ಮುತ್ತಾರುಮುಡಿ ಹೊಳೆ ಕಾವೇರಿಯ ಉತ್ತರ ಪಾರ್ಶ್ವದಲ್ಲಿ ಅದನ್ನು ಸೇರಿಕೊಳ್ಳುತ್ತದೆ. ಈ ಭಾಗದಲ್ಲಿ ಕಾವೇರಿಯನ್ನು ಕೂಡಿಕೊಳ್ಳುವ ಇನ್ನೊಂದು ನದಿ ಚಿಕ್ಕ ಹೊಳೆ. ಕುಶಾಲನಗರಕ್ಕೆ ಉತ್ತರದಲ್ಲಿ ಕಾವೇರಿಯಲ್ಲಿ ಸಂಗಮಿಸುವ ಮುಖ್ಯ ನದಿಯೆಂದರೆ ಹಟ್ಟಿ ಅಥವಾ ಹಾರಂಗಿ. ಕಕ್ಕೆಹೊಳೆ, ಜೇರನಹೊಳೆ, ಹಟ್ಟಿಹೊಳೆ ಇವು ಹಾರಂಗಿಯನ್ನು ಸೇರುವ ಹೊಳೆಗಳು.

ಹುಟ್ಟುವೆಡೆಯಿಂದ ಘಟ್ಟದ ಇಳಿಜಾರಿನಲ್ಲಿ ವೇಗವಾಗಿ ಹರಿಯುವ ಕಾವೇರಿ ಕೇವಲ 8 ಕಿಮೀ ಸಾಗುವ ವೇಳೆಗೆ 450 ಮೀ ಔನ್ನತ್ಯವನ್ನು ಕಳೆದುಕೊಂಡಿರುತ್ತದೆ. ಭಾಗಮಂಡಲದಿಂದಲೇ ಅದಕ್ಕೆ ಪ್ರೌಢನದಿಯ ಲಕ್ಷಣಗಳೆಲ್ಲ ಪ್ರಾಪ್ತವಾಗಿರುತ್ತವೆ. ಅಡ್ಡಬರುವ ಬಂಡೆಗಳಲ್ಲಿ ಯಾವುದೂ ಅಭೇದ್ಯವಾದ ಅಡ್ಡಿಯಾಗಿ ಪರಿಣಮಿಸಿಲ್ಲ. ಪ್ರಾಚೀನ ನದಿಯ ಚಿಹ್ನೆಗಳೆಲ್ಲ ಕಾವೇರಿಗೂ ಉಂಟು. ಇದು ಹರಿಯುವ ಪಾತ್ರದ ಮೇಲ್ಮೈಗೆ ಈ ನದಿಯಷ್ಟು ವಯಸ್ಸಾಗಿಲ್ಲ. ಈಚೆಗೆ ಸಂಭವಿಸಿದ ಭೂ ಉತ್ಕರ್ಷದ ಪರಿಣಾಮವದು.

ಹಾರಂಗಿಯೊಡಗೂಡಿ ಮೈಸೂರು–ಕೊಡಗು ಜಿಲ್ಲೆಗಳ ಗಡಿಯುದ್ದಕ್ಕೂ ಸಾಗಿದ ತರುವಾಯ ಇದು ಹಾಸನ ಜಿಲ್ಲೆಯ ದಕ್ಷಿಣಾಗ್ರದಲ್ಲಿ ರಾಮನಾಥಪುರದ ಬಳಿ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಅಲ್ಲಿಂದಲೇ ಇದಕ್ಕೆ ಮೈಸೂರು ಜಿಲ್ಲೆಯತ್ತ ಗಮನ. ಅನತಿದೂರದಲ್ಲೇ ಸಾಲಿಗ್ರಾಮದ ಬಳಿಯ ಚುಂಚನಕಟ್ಟೆಯಲ್ಲಿ ಜಲಪಾತವಾಗಿ ಪರಿಣಮಿಸಿ, ವೇಗವನ್ನಿಷ್ಟು ಕಡಿಮೆಗೊಳಿಸಿಕೊಂಡು, ಕೃಷ್ಣರಾಜನಗರದ ಮಾರ್ಗವಾಗಿ ಮುಂದೆ ಸಾಗುವ ಕಾವೇರಿಯನ್ನು ಕನ್ನಂಬಾಡಿಯ ಬಳಿಯಲ್ಲಿ ಸಂಗಮಿಸುವ ಉಪನದಿಗಳು ಹೇಮಾವತಿ ಮತ್ತು ಲಕ್ಷ್ಮಣತೀರ್ಥ, ಇವೆರಡೂ ಅನುಕ್ರಮವಾಗಿ ಕೊಡಗಿನ ಉತ್ತರ ದಕ್ಷಿಣ ಪ್ರದೇಶಗಳ ನೀರನ್ನು ಕೂಡಿಸಿಕೊಂಡು, ಮೊದಲನೆಯದು ಹಾಸನ ಜಿಲ್ಲೆಯಲ್ಲೂ ಎರಡನೆಯದು ಮೈಸೂರು ಜಿಲ್ಲೆಯಲ್ಲೂ ಹರಿದುಬರುತ್ತವೆ.

ಕನ್ನಂಬಾಡಿಯ ಬಳಿ ಮಂಡ್ಯ ಜಿಲ್ಲೆ ಪ್ರವೇಶಿಸುವ ಕಾವೇರಿ ಆ ಜಿಲ್ಲೆಯ ದಕ್ಷಿಣಾಗ್ರದಲ್ಲೇ ಹರಿದು, ತನ್ನ ವೇಗವನ್ನು ಇನ್ನೂ ತಗ್ಗಿಸಿಕೊಂಡು, ಶ್ರೀರಂಗಪಟ್ಟಣದಲ್ಲಿ ಕವಲೊಡೆದು ಅದನ್ನೊಂದು ದ್ವೀಪವಾಗಿ ಪರಿವರ್ತಿಸಿ, ಮತ್ತೆ ಮೈಸೂರು ಜಿಲ್ಲೆಯ ಉತ್ತರದಂಚಿನಲ್ಲಿ ಸಾಗುತ್ತದೆ. ಬನ್ನೂರು, ಸೋಸಲೆಗಳನ್ನು ದಾಟಿದ ಮೇಲೆ ಸಿಕ್ಕುವುದು ತಿರುಮಕೂಡಲು ನರಸೀಪುರ. ಈ ಎಡೆಯಲ್ಲಿ ಮೈಸೂರು ಜಿಲ್ಲೆಯ ದಕ್ಷಿಣದ ಕಡೆಯಿಂದ ಹರಿದು ಬರುವ ಕಪಿಲಾ ನದಿ ಕಾವೇರಿಯನ್ನು ಸೇರುವುದು.

ಮಂಡ್ಯ–ಮೈಸೂರು ಜಿಲ್ಲೆಗಳ ಗಡಿ ಮುಟ್ಟಿ ದಕ್ಷಿಣಕ್ಕೆ ತಿರುಗಿ ತಲಕಾಡನ್ನು ಎಡಕ್ಕೆ ಬಿಟ್ಟು ಮತ್ತೆ ಪೂರ್ವದತ್ತ ನೋಟ ಹರಿಯಿಸುವ ಕಾವೇರಿಯ ಈ ವರ್ತನೆಯಿಂದಾಗಿ ತಲಕಾಡಿನ ಸುತ್ತೆಲ್ಲ ಮರಳು ಹಾಯ್ದಿದೆ. ಪಾತ್ರದುದ್ದಕ್ಕೂ ತುಂಬಿ ತಂದ ಮರಳನ್ನೆಲ್ಲ ವಿಸರ್ಜಿಸಲು ಕಾವೇರಿಗೆ ಈ ತಿರುವು ಅತ್ಯಂತ ಅನುಕೂಲಕರ. ತಲಕಾಡಿನ ಬಳಿ ಬಲಗಡೆಯಿಂದ ಹರಿದು ಬರುವ ಸುವರ್ಣಾವತಿ ನದಿ ಸಂಗಮಿಸುವುದು.

ಮತ್ತೆ ಕಾವೇರಿಯ ಗತಿ ಬದಲಾಗುತ್ತದೆ. ಉತ್ತರಾಭಿಮುಖವಾಗಿ ಹರಿದು, ಮಂಡ್ಯ ಜಿಲ್ಲೆಯ ಗಡಿಗೆ ಸೋಕಿ ನಡೆದು, ಶಿವಸಮುದ್ರ ಬಳಿಯಲ್ಲಿ ಕವಲೊಡೆದು, ಗಗನಚುಕ್ಕಿ ಭರಚುಕ್ಕಿಗಳಾಗಿ ಧುಮುಕಿ (91 ಮೀ ಮತ್ತು 61 ಮೀ), ಮತ್ತೆ ಒಂದಾಗಿ ಸಾಗುತ್ತದೆ. ಇಲ್ಲಿ ನಿರ್ಮಾಣವಾಗಿರುವುದು ಕಾವೇರಿಯ ಎರಡನೆಯ ದೊಡ್ಡ ದ್ವೀಪ. ಇಲ್ಲಿ ಶಿಂಷಾನದಿ ಕೂಡುತ್ತದೆ. ಅದಕ್ಕೂ ಮುಂಚೆ ಶಿಂಷಾ ಜಲಪಾತವನ್ನು ನಿರ್ಮಿಸಿದೆ.

ಕೇವಲ 80 ಕಿಮೀ ದೂರದಲ್ಲಿ 800 ಮೀ ಕೆಳಕ್ಕಿಳಿಯುವ ಕಾವೇರಿ ನದಿ ಅನಂತರ ಬೆಂಗಳೂರು ಜಿಲ್ಲೆಯ ದಕ್ಷಿಣ ಅಂಚನ್ನು ಸೋಂಕಿ ಹರಿಯುತ್ತದೆ. ಸಮುದ್ರಮಟ್ಟಕ್ಕಿಂತ ಸು. 750 ಮೀ ಎತ್ತರವಿರುವ ಮೈಸೂರು ಪ್ರಸ್ಥಭೂಮಿಯ ಫಲವತ್ತಾದ ಪ್ರದೇಶದಲ್ಲಿ ಹಾವಿನಾಕಾರದಲ್ಲಿ ಹರಿದು ಅಗಲ ಹೆಚ್ಚಿಸಿಕೊಂಡು ನಿಧಾನವಾಗಿ ಸಾಗಿದ ನದಿಯ ಸ್ವಭಾವವು ಶಿವಸಮುದ್ರದಿಂದಾಚೆಗೆ ವ್ಯತ್ಯಾಸವಾಗುತ್ತದೆ. ಕರ್ನಾಟಕ ಪ್ರಸ್ಥಭೂಮಿಯಿಂದ ತಮಿಳುನಾಡಿನ ತಗ್ಗುಬಯಲಿಗೆ ಹರಿಯುವಾಗ ಅದರ ವೇಗ ಅತಿ ಹೆಚ್ಚು. ಅದರ ಪ್ರವಾಹದ ಗಾತ್ರವನ್ನು ಭರಿಸುವಷ್ಟು ವಿಸ್ತಾರವಾದ ಪಾತ್ರವಿಲ್ಲದ್ದರಿಂದ ನದಿ ಅತ್ಯಂತ ರಭಸವಾಗಿ ಹರಿಯುತ್ತದೆ. ಗಟ್ಟಿಬಂಡೆಗಳು ಜೇಡಿಮಣ್ಣಿನ ಹೆಪ್ಪುಗಳಂತೆ ಸವೆದು ಚಿಪ್ಪಾಗಿವೆ. ಅಲ್ಲಿ ಸಂಭವಿಸಿರುವ 12–75 ಮೀ ಆಳದ ಹಲವಾರು ಗುಂಡಿಗಳು ನದಿಯ ಪ್ರಪಾತಕ್ಕೆ ನಿದರ್ಶನ. ಒಂದೆಡೆಯಲ್ಲಂತೂ ನದಿಯ ಪಾತ್ರ ಬಲು ಕಿರಿದು. ಹಿಂದೆ ಇದನ್ನು ಮೇಕೆ ದಾಟಬಹುದಾಗಿತ್ತಂತೆ. ಈಗ ಅದರ ಅಗಲ ಅಷ್ಟೊಂದು ಕಿರಿದಾಗಿಲ್ಲ. ಮೇಕೆದಾಟು ಎಂಬ ಹೆಸರಿನಿಂದಲೇ ಆ ಸ್ಥಳ ಪ್ರಸಿದ್ಧವಾಗಿದೆ.

ಎತ್ತರ ಭಾಗದಿಂದ ತಗ್ಗಿಗೆ ಹರಿಯುವ ಕಾವೇರಿ ಈ ಭಾಗದಲ್ಲಿ ಅನೇಕ ಸಣ್ಣಪುಟ್ಟ ಹೊಳೆ ತೊರೆಗಳನ್ನು ಕೂಡಿಸಿಕೊಳ್ಳುತ್ತದೆ. ಇವುಗಳ ಪೈಕಿ ಕಣ್ವ ಮತ್ತು ಅರ್ಕಾವತಿಗಳು ದೊಡ್ಡವು. ಇವು ಬೆಂಗಳೂರು ಜಿಲ್ಲೆಯ ಮೂಲಕ ಹರಿದುಬರುತ್ತವೆ. ಇತರ ಹೊಳೆಗಳ ಪಾತ್ರಗಳನ್ನು ಏರಿಸಿಕೊಂಡು, ಇಕ್ಕಟ್ಟನ್ನು ಆದಷ್ಟು ನಿವಾರಿಸಿಕೊಂಡು ಸಾಗುವ ನದಿಯ ಈ ಪಾತ್ರ ಇತ್ತೀಚಿನದು. ಆದ್ದರಿಂದ ಕ್ರಮಪ್ರಾಪ್ತವಾದ ಪಾತ್ರ ಏರ್ಪಡಿಸಿಕೊಳ್ಳಲು ನದಿಗೆ ಇನ್ನೂ ಸಾಧ್ಯವಾಗಿಲ್ಲ.

ಕಾವೇರಿಯಿಂದ ಕರ್ನಾಟಕಕ್ಕೆ ಆಗಿರುವ ಉಪಕಾರ ಅಷ್ಟಿಷ್ಟಲ್ಲ. ಅದರ ಹರಿವಿನ ಉದ್ದಕ್ಕೂ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ನದಿಯ ಎರಡೂ ದಂಡೆಗಳಲ್ಲಿ ಮೆಟ್ಟಿಲು ಮೆಟ್ಟಿಲಾಗಿ ನೀರಾವರಿಯ ಸೌಲಭ್ಯ ಒದಗಿಸಿರುವ ಕಾಲುವೆಗಳ ಒಟ್ಟು ಉದ್ದ 1,900 ಕಿಮೀ. ಇಲ್ಲಿಯ ಅಣೆಕಟ್ಟುಗಳಲ್ಲಿ ಕೆಲವು ಅತ್ಯಂತ ಹಳೆಯವು. ಇವುಗಳಲ್ಲಿ ಕೆಲವು 1,000 ವರ್ಷಗಳ ಹಿಂದೆ ಕಟ್ಟಿದವು.

ಕನ್ನಂಬಾಡಿಯ ಬಳಿ ಕಟ್ಟಿರುವ ಕೃಷ್ಣರಾಜಸಾಗರ ಅಣೆಕಟ್ಟೆ 20ನೆಯ ಶತಮಾನದ ಪ್ರಾರಂಭದ್ದು. ನದಿಯ ಪಾತ್ರದಿಂದ 38 ಮೀ ಎತ್ತರವಿರುವ ಕಟ್ಟೆಯ ಉದ್ದ 1,996 ಮೀ ಜಲಾಶಯದಲ್ಲಿ ಶೇಖರಿಸಬಹುದಾದ ನೀರಿನ ಪರಿಮಾಣ 1175 ಘನ ಮೀ ಶಿವಸಮುದ್ರದ ಬಳಿಯ ವಿದ್ಯುದುತ್ಪಾದನ ಕೇಂದ್ರಕ್ಕೆ ವರ್ಷವಿಡೀ ನೀರು ಒದಗಿಸುವುದು, ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚಿನ ನೀರಾವರಿ ಸೌಲಭ್ಯ ಕಲ್ಪಿಸುವುದು ಕೃಷ್ಣರಾಜಸಾಗರ ಕಟ್ಟೆಯ ನಿರ್ಮಾಣದ ಉದ್ದೇಶ.

ಶಿವಸಮುದ್ರದ ಬಳಿಯಲ್ಲಿ ನಿರ್ಮಿಸಲಾಗಿರುವ ವಿದ್ಯುದುತ್ಪಾದನ ಕೇಂದ್ರ, ಇಡೀ ಏಷ್ಯಾದಲ್ಲೇ ಅತ್ಯಂತ ಹಳೆಯ ದೊಡ್ಡ ವಿದ್ಯುತ್‍ಕೇಂದ್ರ (1902).

ಕರ್ನಾಟಕದ ಆಗ್ನೇಯದ ಅಂಚಿನ ಉದ್ದಕ್ಕೂ ಹರಿದು, ಹೊಗೇನಕಲ್ಲಿನ ಬಳಿ ಮತ್ತೆ ಧುಮುಕಿ, ಕೊನೆಗೆ ಕರ್ನಾಟಕವನ್ನು ಬೀಳ್ಕೊಂಡು ತಮಿಳುನಾಡಿಗೆ ಪ್ರವೇಶಿಸುವ ವೇಳೆಗೆ ನದಿಯ ದಿಕ್ಕು ಎರಡು ಬಾರಿ ಬದಲಾಗುತ್ತದೆ. ಹೊಗೇನಕಲ್ಲಿನ ಬಳಿ ದಕ್ಷಿಣಾಭಿಮುಖ ಮತ್ತು ಬೋಡಮಲೈ ಬೆಟ್ಟದ ಬಳಿ ಪೂರ್ವಾಭಿಮುಖ. ಸ್ವಲ್ಪ ದೂರ ಹೀಗೆ ಸಾಗುವಲ್ಲಿ ಪುನಃ ಅದು ದಕ್ಷಿಣಕ್ಕೆ ತಿರುಗಿ ಹರಿಯುತ್ತದೆ.

ಪಾಲಾರಿನ ನೀರನ್ನೂ ಒಳಗೊಂಡು ಮುಂದುವರಿಯುವ ಕಾವೇರಿಗೆ ಮೆಟ್ಟೂರಿನ ಬಳಿಯಲ್ಲಿ ಒಂದು ಎತ್ತರ ಕಟ್ಟೆ ಕಟ್ಟಲಾಗಿದೆ. 1615 ಮೀ ಉದ್ದ, 53 ಮೀ ಎತ್ತರದ ಕಟ್ಟೆಯಿದು. ವಿದ್ಯುದುತ್ಪಾದನೆಯೂ ನೀರಾವರಿ ಸೌಲಭ್ಯ ಕಲ್ಪನೆಯೂ ಇದರ ಉದ್ದೇಶ. ಮೆಟ್ಟೂರು ಜಲಾಶಯದಿಂದಾಗಿ ತಂಜಾವೂರಿನ ಕಾವೇರಿಬಯಲಿಗೆ ನೀರು ಸರಬರಾಜಾಗುತ್ತದೆ.

ಮೆಟ್ಟೂರಿನಿಂದ ಮುಂದೆ ಭವಾನಿಯವರೆಗೆ ದಕ್ಷಿಣ ದಿಕ್ಕಿನಲ್ಲಿ ಹರಿಯುವ ಕಾವೇರಿಗೆ ಅಲ್ಲಿ ಪಶ್ಚಿಮದಿಂದ ಹರಿದು ಬರುವ ಭವಾನಿ ನದಿ ಸಂಗಮಿಸುತ್ತದೆ. ಮತ್ತೆ ಪೂರ್ವಾಭಿಮುಖವಾಗಿ ಹರಿಯುವ ಕಾವೇರಿಯ ಚರ್ಯೆಯೇ ಮುಂದೆ ಬದಲಾಗುತ್ತದೆ. ಸಮುದ್ರ ಹತ್ತಿರವಾದಂತೆಲ್ಲ ಅದರದು ಗಂಭೀರ ಗಮನ, ಪಾತ್ರವೂ ವಿಸ್ತಾರ. ಅದರ ದಡದುದ್ದಕ್ಕೂ ಹಲವಾರು ಪಟ್ಟಣಗಳು ಮಾಲೆಯಂತೆ ನೆಲೆಸಿವೆ. ಕೊಯಮತ್ತೂರಿನ ಆಲಂಬಾಡಿಯ ಬಳಿ ನದಿಯ ಪ್ರವಾಹದ ನಡುವೆ ಅಡ್ಡ ಬರುವ ಬಂಡೆಗೆ ತಾಕಿ ತುಂತುರು ಹನಿಗಳನ್ನು ನಿರಂತರವಾಗಿ ಚಿಮ್ಮಿಸುತ್ತದೆ. ತಿರುಚ್ಚಿರಪಳ್ಳಿಯ ಪ್ರಸಿದ್ಧವಾದ ಬಂಡೆಯನ್ನು ದಾಟಿದ ಮೇಲೆ ಕಾವೇರಿ ಮತ್ತೆ ಕವಲೊಡೆಯುತ್ತದೆ. ಇದರಿಂದ ನಿರ್ಮಾಣವಾಗಿರುವ ದ್ವೀಪವೇ ಶ್ರೀರಂಗ ಎರಡು ಕವಲುಗಳೂ ತಿರುಚ್ಚಿರಪ್ಪಳ್ಳಿಯಿಂದ 16 ಕಿಮೀ ದೂರದಲ್ಲಿ ಮತ್ತೆ ಸೇರುತ್ತವೆ. ಗ್ರ್ಯಾಂಡ್ ಆಣೆಕಟ್ಟೆಯ ನಿರ್ಮಾಣವಾಗಿರುವುದು ಈ ಸ್ಥಳದಲ್ಲಿ. ತಂಜಾವೂರು ಜಿಲ್ಲೆಯ ನೀರಾವರಿ ವ್ಯವಸ್ಥೆಗೆ ಇದೇ ಮೂಲ. ಇಲ್ಲಿಯದು ಭಾರತದಲ್ಲೇ ಅತ್ಯಂತ ಪ್ರಾಚೀನ ನೀರಾವರಿ ವ್ಯವಸ್ಥೆ (2ನೆಯ ಶ.). ಕುಂಭಕೋಣಂ, ಮಯೂರಂ, ಶಿರ್ಕಾ ಮತ್ತು ನನ್ನಿಲಂ ತಾಲ್ಲೂಕುಗಳಿಗೂ ತಂಜಾವೂರು, ಮನ್ನಾರ್‍ಗುಡಿ, ತಿರುತ್ತುರೈಪುಂಡಿ ಮತ್ತು ನಾಗಪಟ್ಟಣಂ ತಾಲ್ಲೂಕುಗಳ ಭಾಗಗಳಿಗೂ ಕಾವೇರಿಯ ನೀರಾವರಿ ಸೌಲಭ್ಯ ಒದಗಿದೆ. ತಮಿಳುನಾಡಿನ ಬತ್ತದ ಕಣಜದ ಪ್ರದೇಶವಿದು.

ಮುಖಜಭೂಮಿಯ ಪ್ರದೇಶದಲ್ಲಿ ಕಾವೇರಿ ಎರಡು ಮುಖ್ಯ ಕವಲುಗಳಾಗಿ ಒಡೆಯುತ್ತದೆ. ಉತ್ತರದ್ದು ಕೊಲ್ಲಡಂ, ದಕ್ಷಿಣದ ಕವಲು ಕಾವೇರಿಯೆಂದೇ ಕರೆಸಿಕೊಳ್ಳುತ್ತದೆ. ತಂಜಾವೂರಿನ ಮುಖಜಭೂಮಿ ಪ್ರದೇಶದಲ್ಲಿ ನೀರಾವರಿಗೆ ಬಳಸಿಕೊಂಡು ಉಳಿದ ನೀರನ್ನು ಉತ್ತರದ ಶಾಖೆಯಾದ ಕೊಲ್ಲಡಂಗೆ ಬಿಡಲಾಗುತ್ತದೆ. ಈಶಾನ್ಯಾಭಿಮುಖವಾಗಿ ಹರಿಯುವ ಈ ಕವಲು ಪೋರ್ಟೊನೋವೋ ಬಳಿ ಕಡಲು ಸೇರುತ್ತದೆ. ಕಾವೇರಿಯ ಎರಡು ಶಾಖೆಗಳು ಸಮುದ್ರದಲ್ಲಿ ಸಂಗಮವಾಗುವ ಮುನ್ನ ಹಲವಾರು ಕವಲುಗಳಾಗಿ ಒಡೆದು ನೀರಾವರಿಯ ಬಲೆಯನ್ನೇ ಹೆಣೆದಿವೆ. ಇದರ ನೀರಿನ ಬಹುಭಾಗವನ್ನು ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಬೇರಾವ ನದಿಯನ್ನೂ ಇಷ್ಟೊಂದು ಸಮರ್ಪಕವಾಗಿ ನೀರಾವರಿಗೆ ಉಪಯೋಗಿಸಿಕೊಂಡಿಲ್ಲವೆಂದು ಹೇಳಲಾಗಿದೆ.

ಕೊಡಗಿನ ಪ್ರದೇಶದಲ್ಲಿ ಸಣ್ಣ ತೊರೆಯಾಗಿ ಉಗಮಹೊಂದಿ, ತಾರುಣ್ಯದ ಆರಂಭದಿಂದಲೇ ಸುತ್ತಣ ಸೀಮೆಯ ಸಂಪತ್ತಿಗೆ ಕಾರಣವಾಗಿ, ಶಿವಸಮುದ್ರದಲ್ಲಿ ಪರಿಧಿಯನ್ನು ಲಂಘಿಸುವಾಗ ವಿದ್ಯುತ್ತನ್ನು ಚಿಮ್ಮಿಸಿ, ತಮಿಳುನಾಡಿನಲ್ಲಿ ತುಂಬು ಚೆಲುವು ತಳೆದು ಸಮುದ್ರವನ್ನು ಸಂಗಮಿಸಿದ ಕಾವೇರಿಯ ಉಪಯುಕ್ತತೆಯಿಂದಾಗಿ ಅದನ್ನು ಜನರು ಪವಿತ್ರನದಿಯೆಂದು ಪೂಜಿಸುತ್ತಾರೆ.

ಕಾವೇರಿಯ ಕ್ಷೇತ್ರಗಳು : ಉಗಮದಿಂದ ಸಂಗಮದವರೆಗೂ ಕಾವೇರಿಯ ದಂಡೆಯ ಮೇಲೆ ಅನೇಕ ಪುಣ್ಯಕ್ಷೇತ್ರಗಳಿವೆ. ಮೊದಲನೆಯ ಸ್ಥಳ ತಲಕಾವೇರಿ ವರ್ಷವಿಡೀ ಕಾವೇರಿನದಿಯಲ್ಲಿ ಸ್ನಾನ ಮಾಡಿ ದೇವರಿಗೆ ಪೂಜೆ ಮಾಡಿಸುವುದು ಪುಣ್ಯಕರವೆಂದು ಜನರು ನಂಬಿದ್ದರೂ ತುಲಮಾಸದಲ್ಲಿ ಕಾವೇರಿ ಸ್ನಾನ ಮಾಡುವುದರಿಂದ ಹೆಚ್ಚು ಪುಣ್ಯವುಂಟಾಗುತ್ತದೆಂಬುದು ಜನರಿಗೆ ನಂಬಿಕೆ. ಕೊಡಗಿನಲ್ಲಿ ಕಾವೇರಿಯ ದಂಡೆಯ ಮೇಲಣ ಇತರ ಪವಿತ್ರ ಕ್ಷೇತ್ರಗಳು ಭಾಗಮಂಡಲ, ಹರಿಶ್ಚಂದ್ರ, ಬಲಮುರಿ, ಗುಹೆ ಮತ್ತು ರಾಮಸ್ವಾಮಿ ಕಣಿವೆ. ಹಾಸನ ಜಿಲ್ಲೆಯ ರಾಮನಾಥಪುರ ಒಂದು ಪ್ರಸಿದ್ದ ಯಾತ್ರಾಸ್ಥಳ. ಚುಂಚನಕಟ್ಟೆಯಲ್ಲಿ ಕಾವೇರಿಯ ಜಲಪಾತ ಪ್ರೇಕ್ಷಣೀಯ. ದಂಡೆಯ ಮೇಲಣ ಶ್ರೀರಾಮ ದೇವಸ್ಥಾನ ಪ್ರಸಿದ್ಧವಾಗಿದೆ. ಇಲ್ಲೂ ರಾಮನಾಥಪುರದಲ್ಲೂ ವರ್ಷಕ್ಕೊಮ್ಮೆ ಜಾತ್ರೆಗಳು ಜರಗುತ್ತವೆ. ಕೃಷ್ಣರಾಜಸಾಗರದ ಬೃಂದಾವನವಂತೂ ನಯನಮನೋಹರವಾದದ್ದು. ಇಲ್ಲಿ ಕಟ್ಟೆಯ ಬದಿಗೆ ಕಾವೇರಿಯ ಪ್ರತಿಮೆಯನ್ನು ಪ್ರತಿಷ್ಠಿಸಲಾಗಿದೆ. ಶ್ರೀರಂಗಪಟ್ಟಣಕ್ಕೆ ಸ್ವಲ್ಪ ಮೇಲಕ್ಕಿರುವ ಪುಟ್ಟ ನಡುಗಡ್ಡೆಯು ಪಕ್ಷಿಗಳಿಗೆ ಪ್ರಸಿದ್ಧವಾಗಿದೆ. ರಂಗನತಿಟ್ಟು ಎಂದು ಪ್ರಸಿದ್ಧವಾದ ಇಲ್ಲಿಯ ಪಕ್ಷಿಧಾಮಕ್ಕೆ ವಿಶ್ವದ ನಾನಾ ಕಡೆಗಳಿಂದ ಬಗೆಬಗೆಯ ಪಕ್ಷಿಗಳು ವಲಸೆ ಬರುತ್ತವೆ.

ಇಲ್ಲಿಂದ ಮುಂದೆ ಅನತಿದೂರದಲ್ಲಿ ಕಾವೇರಿ ತ್ರಿವೇಣಿ ಸಂಗಮವಿದೆ. ಮುಂದೆ ಇದರ ಶಾಖೆಯೊಂದರ ಗಂಜಾಂ ದಂಡೆಯಲ್ಲಿ ನಿಮಿಷಾಂಬ ದೇವಾಲಯವಿದೆ. ಕಾವೇರಿಯ ಮೂರು ದೊಡ್ಡ ದ್ವೀಪಗಳ ಪೈಕಿ ಮೊದಲನೆಯದು ಶ್ರೀರಂಗಪಟ್ಟಣ. ಎರಡನೆಯ ದ್ವೀಪವಾದ ಶಿವಸಮುದ್ರದಲ್ಲೂ ಮೂರನೆಯದಾದ ಶ್ರೀರಂಗಂನಲ್ಲೂ ರಂಗನಾಥ ದೇವಾಲಯಗಳಿವೆ. ಶ್ರೀರಂಗಪಟ್ಟಣ ಇತಿಹಾಸಪ್ರಸಿದ್ಧವಾದ ಸ್ಥಳವೂ ಹೌದು. ತಲಕಾಡಿನ ಬಳಿಯಲ್ಲಿ ಮಾಧವಮಂತ್ರಿ ಅಣೆಕಟ್ಟೆ ಇದೆ. ಹೆದೆಯೇರಿಸಿದ ಬಿಲ್ಲಿನಂತೆ ಬಾಗಿ ಹರಿಯುವ ನದಿಗೆ ಇಲ್ಲೊಂದು ಮಡು ಏರ್ಪಟ್ಟಿದೆ. ಮಾಲಂಗಿ ಮಡುವೆಂದು ಇದು ಪ್ರಸಿದ್ಧವಾಗಿದೆ. ತಲಕಾಡು ಕೂಡ ಇತಿಹಾಸ ಪ್ರಸಿದ್ಧಿ ಪಡೆದ ಸ್ಥಳ. ಗಂಗರಸರು ಇಲ್ಲಿ ರಾಜ್ಯವಾಳಿದರು. ತಲಕಾಡಿನ ಪಂಚಲಿಂಗದರ್ಶನ ಹನ್ನೆರಡುವರ್ಷಗಳಿಗೊಮ್ಮೆ ಅಸಂಖ್ಯಾತ ಯಾತ್ರಿಕರನ್ನು ಆಕರ್ಷಿಸುತ್ತದೆ.

ಶ್ರೀರಂಗಂನಿಂದಾಚೆಗೆ ಕಲ್ಲಣೈಯಲ್ಲಿ ಚೋಳರಾಜ ಕರಿಕಾಲನ ಭವ್ಯಪ್ರತಿಮೆಯಿದೆ. ಕಾವೇರಿಯನ್ನು ನೀರಾವರಿಗೆ ಉಪಯೋಗಿಸಿಕೊಂಡ ಮೊದಲ ದೊರೆ ಈತ. ತಿರುಚ್ಚಿರಾಪಳ್ಳಿ ಮತ್ತು ತಂಜಾವೂರು ಜಿಲ್ಲೆಗಳಲ್ಲಿ ಅಲ್ಲಲ್ಲಿ ಕಲ್ಲಿನಿಂದ ಕಾವೇರಿನದಿಗೆ

ಅಣೆಕಟ್ಟು ಕಟ್ಟಿಸಿದ್ದ. ತಿರುಚ್ಚಿರಾಪಳ್ಳಿಯ ಒರೈಯೂರಿನಿಂದ ಕಾವೇರಿ ಪೂಂಪಟ್ಟಿನಂಗೆ ತನ್ನ ರಾಜಧಾನಿ ಬದಲಾಯಿಸಿದ. ಅಲ್ಲಿಂದ ಮುಂದೆ ಸಿಕ್ಕುವ ಇನ್ನೊಂದು ಮುಖ್ಯಸ್ಥಳವೆಂದರೆ ಕುಂಭಕೋಣಂ ಇಲ್ಲೂ ಹನ್ನೆರಡು ವರ್ಷಗಳಿಗೊಮ್ಮೆ ಜಾತ್ರೆ ನೆರೆಯುತ್ತದೆ.

ತಂಜಾವೂರಿನಿಂದೀಚೆಗೆ ಸಿಗುವ ಪವಿತ್ರ ಸ್ಥಳ ತಿರುವಾಯೂರು, ಮಯೂರಂ ಇನ್ನೊಂದು. ತಿರುವೈಯಾರ್ ತ್ಯಾಗರಾಜರ ತಪೋಭೂಮಿ. ಅಲ್ಲಿ ಇವರ ಸಮಾಧಿಯಿದೆ. ಪ್ರತಿವರ್ಷವೂ ಇವರ ಪುಣ್ಯತಿಥಿಯಂದು ದಕ್ಷಿಣದೇಶದ ಸಂಗೀತಪ್ರೇಮಿಗಳು ಇಲ್ಲಿ ಸೇರಿ ತ್ಯಾಗರಾಜರನ್ನು ಆರಾಧಿಸುತ್ತಾರೆ. ಅನಂತರದ ಪವಿತ್ರಕ್ಷೇತ್ರ ಚಿದಂಬರಂ ಇಲ್ಲಿ ಒಂದೇ ಗುಡಿಯಲ್ಲಿ ಶಿವ, ವಿಷ್ಣು ಇಬ್ಬರಿಗೂ ಪೂಜೆ ಸಲ್ಲುತ್ತದೆ. ಕಾವೇರಿ ಕಡಲಲ್ಲಿ ಐಕ್ಯವಾಗುವ ಎಡೆಯೂ ಪವಿತ್ರವೇ. ಅದು ಸುಪ್ರಸಿದ್ಧವಾದ ಕಾವೇರಿ ಪೂಂಪಟ್ಟಿನಂ. (ಡಿ.ಎನ್.ಕೆ.;ಜಿ.ಕೆ.ಜಿ.)

**ಕಾವೇರಿ ಪೂಂಪಟ್ಟಿನಂ:** ತಮಿಳುನಾಡಿನ ಪೂರ್ವ ತೀರದಲ್ಲಿ ಕಾವೇರಿ ನದಿ ಸಮುದ್ರವನ್ನು ಸೇರುವೆಡೆಯಲ್ಲಿರುವ ಒಂದು ಹಳ್ಳಿ. ಚೋಳರ ಆಳಿಕೆಯ ಮೊದಲ ಕಾಲದಲ್ಲಿ ಇದೊಂದು ಮುಖ್ಯ ರೇವುಪಟ್ಟಣವಾಗಿತ್ತೆಂದು ತತ್ಕಾಲೀನ ಮತ್ತು ಈಚೆಗಿನ ಸಾಹಿತ್ಯದಿಂದಲೂ ವಿದೇಶೀಯರ ಬರವಣಿಗೆಗಳಿಂದಲೂ ತಿಳಿದುಬಂದಿದೆ. ಇಲ್ಲಿ ಕ್ರಿಸ್ತಶಕದ ಆರಂಭಕಾಲಕ್ಕೆ ಸೇರಿದ ನಾಣ್ಯಗಳು ಮತ್ತು ಮಡಕೆ ಚೂರುಗಳು ದೊರಕಿದುದರಿಂದ ಪುರಾತತ್ತ್ವಜ್ಞರು ಭೂಶೋಧನೆ ನಡೆಸಿದರು. ದೋಣಿಗಳಲ್ಲಿ ಸರಕುಗಳನ್ನು ತುಂಬುವ ಮತ್ತು ಅವುಗಳಿಂದ ಇಳಿಸುವ ಸಲುವಾಗಿ ಪ್ರ.ಶ.ಪೂ. 3 ನೆಯ ಶತಮಾನದ ಒಂದು ಬಂದರು ಕಟ್ಟೆ, ಕಾವೇರಿ ನದಿಯಿಂದ ನೀರನ್ನು ಸಂಗ್ರಹಿಸಲು ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ ಕೊಳ, ಬೌದ್ಧವಿಹಾರವೊಂದರಲ್ಲಿ 8 ಚದರದ ವರ್ಣಚಿತ್ರಗಳನ್ನುಳ್ಳ ಏಳು ಕೋಣೆಗಳ ಒಂದು ಭಾಗ, ಸುಟ್ಟ ಮಣ್ಣಿನ ಮತ್ತು ಸುಣ್ಣದ ಶಿಲ್ಪಗಳಿಂದ ಅಲಂಕೃತವಾದ ಕಂಚಿನ ಧ್ಯಾನಿ ಬುದ್ಧವಿಗ್ರಹ, ಬುದ್ಧಪದವಿರುವ ಶಿಲೆ–ಇವು ಇಲ್ಲಿ ಸಿಕ್ಕಿರುವ ಇತರ ಮುಖ್ಯ ಅವಶೇಷಗಳು. (ಬಿ.ಕೆ.ಜಿ.)

**ಕಾಸರಗೋಡು:** ಕೇರಳ ರಾಜ್ಯದಲ್ಲಿರುವ ಒಂದು ಪಟ್ಟಣ, ಅದೇ ಹೆಸರಿನ ತಾಲ್ಲೂಕಿನ ಮುಖ್ಯಸ್ಥಳ. ಕಣ್ಣಾನೂರು ಜಿಲ್ಲೆಯಲ್ಲಿ, ಪಯಸ್ವಿನಿ ನದಿ ಅರಬ್ಬೀ ಸಮುದ್ರವನ್ನು ಸೇರುವೆಡೆಯಲ್ಲಿದೆ.

ಕಾಸರಗೋಡು ತಾಲ್ಲೂಕು ಕೇರಳದ ಉತ್ತರದ ತುದಿಯಲ್ಲಿದೆ. ಉತ್ತರ ಪೂರ್ವಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ದಕ್ಷಿಣದಲ್ಲಿ ಹೊಸದುರ್ಗ ತಾಲ್ಲೂಕು, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಇವು ಕಾಸರಗೋಡು ತಾಲ್ಲೂಕಿನ ಮೇರೆಗಳು. ತಾಲ್ಲೂಕಿನ ವಿಸ್ತೀರ್ಣ 975 ಚ.ಕಿಮೀ.

ಕಾಸರಗೋಡು ತಾಲ್ಲೂಕು ಏರು ತಗ್ಗುಗಳುಳ್ಳ ಪ್ರದೇಶ. ಸಮುದ್ರದ ದಡದಲ್ಲಿ ಅಲ್ಲಲ್ಲಿರುವ ಲ್ಯಾಟರೈಟ್ ಕಲ್ಲಿನ ಗುಡ್ಡಗಳು ಪೂರ್ವಕ್ಕೆ ಹೋದಂತೆಲ್ಲ ಎತ್ತರವಾಗುತ್ತವೆ. ಸಣ್ಣ ಸಣ್ಣ ಕಣಿವೆಗಳು, ತೊರೆಗಳು, ಝರಿಗಳು ಇವೆ. ಅಡಕೆ, ಬತ್ತ, ತೆಂಗು, ಗೇರುಬೀಜ ಮುಂತಾದವನ್ನು ಬೆಳೆಯಲು ನೈಸರ್ಗಿಕ ಅನುಕೂಲತೆಗಳುಳ್ಳ ಫಲವತ್ತಾದ ಭೂಭಾಗವಿದು. ಸಮುದ್ರದ ದಡದಿಂದ ಪೂರ್ವಕ್ಕೆ ಸು. 32 ಕಿಮೀ ಅನಂತರ ಅಲ್ಲಲ್ಲಿ ದಟ್ಟವಾದ ಕಾಡುಗಳು ಹಬ್ಬಿವೆ.

ಕಾಸರಗೋಡು ತಾಲ್ಲೂಕಿನ ಕನಿಷ್ಠ ಉಷ್ಣತೆ $16^0$ ಸೆಂ.–$26.7^0$ ಸೆಂ. ಗರಿಷ್ಠ ಉಷ್ಣತೆ $24.6^0$ ಸೆಂ. $35^0$ಸೆಂ. ಜೂನ್ ತಿಂಗಳಲ್ಲಿ ಮಳೆಗಾಲ ಆರಂಭವಾಗುತ್ತದೆ. ಐದು ತಿಂಗಳು ಮಳೆಗಾಲ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಚಂದ್ರಗಿರಿಯ ಹತ್ತಿರ ಅರಬ್ಬೀ ಕಡಲನ್ನು ಸೇರುವ ಪಯಸ್ವಿನಿ ಈ ತಾಲ್ಲೂಕಿನ ನದಿಗಳಲ್ಲೆಲ್ಲ ದೊಡ್ಡದು. ಉಳಿದವು ಮೊಗ್ರಾಲ್, ಕುಂಬಳೆ, ಸಿರಿಯ ಮತ್ತು ಉಪ್ಪಳ ನದಿಗಳು.

ತಾಲ್ಲೂಕಿನ ಮುಖ್ಯ ಬೆಳೆ ಬತ್ತ. ತಗ್ಗಿನ ಬಯಲುಗಳಲ್ಲಿ ವರ್ಷದಲ್ಲಿ ಮೂರು ಬತ್ತದ ಬೆಳೆಗಳು. ಅಡಕೆ ಬೆಳೆಗೆ ಇದು ಪ್ರಸಿದ್ಧ. ಅಡಕೆ, ಗೇರುಬೀಜ ಮತ್ತು ಮೆಣಸು ಇಲ್ಲಿಯ ಪ್ರಸಿದ್ಧ ವಾಣಿಜ್ಯ ಬೆಳೆಗಳು. ಸಮುದ್ರತೀರಪ್ರದೇಶದಲ್ಲಿ ತೆಂಗಿನ ಬೆಳೆ ಅಧಿಕ. ಕಾಸರಗೋಡಿಗೆ 34 ಕಿಮೀ ದೂರದಲ್ಲಿ ಕೇಂದ್ರೀಯ ಪ್ಲಾಂಟೇಷನ್ ಸಂಶೋಧನ ಸಂಸ್ಥೆಯಿದೆ. ಭಾರತದ ತೆಂಗು, ಅಡಕೆ, ಕೋಕೋ ಮತ್ತು ಗೇರುಬೀಜದ ಸಂಶೋಧನೆಗೆ ಸಂಬಂಧಿಸಿದ ಪ್ರಧಾನ ಕೇಂದ್ರವಿದು.

ಬಡಗಿ ಕೆಲಸ, ಚಿನ್ನಬೆಳ್ಳಿ ಕೆಲಸ, ಕಮ್ಮಾರಿಕೆ, ಹೊಲಿಗೆ, ಮಡಕೆ ಮಾಡುವುದು, ಬೀಡಿ ಕಟ್ಟುವುದು, ಚಾಪೆ ತಯಾರಿಸುವುದು ಮುಂತಾದ ಸಣ್ಣ ಸಣ್ಣ ಉದ್ಯಮಗಳಿಂದ ಜೀವಿಸುವ ಶ್ರಮಜೀವಿಗಳ ಸಂಖ್ಯೆ ಇಲ್ಲಿ ಅಧಿಕ. ಗೋಡಂಬಿ ಕಾರ್ಖಾನೆ, ಗರಗಸದ ಕಾರ್ಖಾನೆ, ಮತ್ಸ್ಯೋದ್ಯಮ, ವಾಹನಗಳ ರಿಪೇರಿ, ಇವು ಇಲ್ಲಿಯ ಕೈಗಾರಿಕೆಗಳು.

ಈ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿಯ ಉದ್ದ ದಕ್ಷಿಣೋತ್ತರಕ್ಕೆ 48 ಕಿಮೀ ಕಾಸರಗೋಡಿನಿಂದ ಪೂರ್ವಕ್ಕೆ ಜಾಲ್ಲೂರು ರಸ್ತೆಯ ಉದ್ದ 48 ಕಿಮೀ ಕಾಸರಗೋಡಿನಿಂದ ಈಶಾನ್ಯಕ್ಕೆ ಪುತ್ತೂರಿಗೆ ಹೋಗುವ ರಸ್ತೆಯ ಉದ್ದ 34 ಕಿಮೀ. ಉಳಿದವು ಸಣ್ಣಸಣ್ಣ ರಸ್ತೆಗಳು. ದಕ್ಷಿಣ ರೈಲ್ವೆಯ ಬ್ರಾಡ್ ಗೇಜ್ ಮಾರ್ಗ ಈ ತಾಲ್ಲೂಕಿನ ಕರಾವಳಿಯ ಅಂಚಿನಲ್ಲಿ 35 ಕಿಮೀ ಗಳನ್ನು ಹಾಯ್ದುಹೋಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸು ಸರ್ಕಾರದ ಆಡಳಿತದಲ್ಲಿದ್ದಾಗ ಹೊಸದುರ್ಗವೂ ಸೇರಿದಂತೆ ಈ ತಾಲ್ಲೂಕು ದಕ್ಷಿಣಕನ್ನಡ ಜಿಲ್ಲೆಯ ಒಂದು ಅಂಗವಾಗಿತ್ತು. 1956ರಲ್ಲಿ ಭಾಷಾನುಗುಣ ರಾಜ್ಯರಚನೆಯಾದ ಮೇಲೆ ಈ ತಾಲ್ಲೂಕು ಕೇರಳ ರಾಜ್ಯಸರ್ಕಾರದ ಆಡಳಿತಕ್ಕೊಳಪಟ್ಟಿತು. 1957ರ ಜನವರಿ 1ರಂದು ಹೊಸದುರ್ಗ (ಕಾಞಂಗಾಡು) ಪ್ರತ್ಯೇಕ ತಾಲ್ಲೂಕಾಯಿತು. ಕಾಸರಗೋಡು ತಾಲ್ಲೂಕಿನಲ್ಲಿ ಒಂದು ಪುರಸಭೆಯೂ ಹದಿನೆಂಟು ಪಂಚಾಯಿತಿಗಳೂ ಇವೆ.

ಕಾಸರಗೋಡು ತಾಲ್ಲೂಕಿನಲ್ಲಿರುವ ಲೋಯರ್ ಪ್ರೈಮರಿ ಶಾಲೆಗಳು 134, ಅಪ್ಪರ್ ಪ್ರೈಮರಿ ಶಾಲೆಗಳು 65, ಪ್ರೌಢಶಾಲೆಗಳು 20, ಒಂದು ಕುರುಡರ ಶಾಲೆ ಇವೆ. ಕನ್ನಡ–ಮಲೆಯಾಳ ಶಾಲೆಗಳೆರಡೂ ಉಂಟು. ಕನ್ನಡ ಶಾಲೆಗಳೇ ಅಧಿಕ. ಒಂದು ಉಪಾಧ್ಯಾಯರ ಶಿಕ್ಷಣ ಕೇಂದ್ರ, ಸಂಸ್ಕೃತ ಕಾಲೇಜೂ, ವಿವಿಧ ಪದವಿ ತರಗತಿಗಳ ಮತ್ತು ಕನ್ನಡ ಎಂ.ಎ. ತರಗತಿಗಳುಳ್ಳ ಕಾಲೇಜುಗಳು ಇಲ್ಲಿವೆ. (ಬಿ.ಕೆ.ಟಿ.)

**ಕಾಸ್ಮಾಸ್:** ಅಲೆಗ್ಸ್ಯಾಂಡರ್ ವಾನ್ ಹಂಬೋಲ್ಟ್‌ರವರ ಪ್ರಸಿದ್ಧ ಕೃತಿ. ಐದು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಈ ಕೃತಿಯು ಪ್ರಪಂಚದ ಹಲವು ಭಾಷೆಗಳಿಗೆ ಭಾಷಾಂತರಗೊಂಡಿದೆ. ಈ ಬೃಹತ್ ಗ್ರಂಥ ಭೂಗೋಳವಿಜ್ಞಾನದ ವೈಜ್ಞಾನಿಕ ಅಧ್ಯಯನದ ಬೆಳವಣಿಗೆಗೆ ಅಡಿಗಲ್ಲನ್ನು ಒದಗಿಸಿತು.

ಕಾಸ್ಮೋಸ್: ಸ್ಕೆಚ್ ಆಫ್ ಎ ಫಿಸಿಕಲ್ ಡಿಸ್ಕ್ರಿಪ್ಷನ್ ಆಫ್ ದಿ ವರ್ಲ್ಡ್ ಇದರ ಪೂರ್ಣ ಹೆಸರು. ಇದರ ಮೊದಲ ಎರಡು ಸಂಪುಟಗಳು ಜರ್ಮನ್ ಭಾಷೆಯಲ್ಲಿ 1845–47 ರಲ್ಲಿಯೇ ಪ್ರಕಟಗೊಂಡವು. ಮೂರನೆಯ ಹಾಗೂ ನಾಲ್ಕನೆಯ ಸಂಪುಟಗಳು 1850–58 ರಲ್ಲಿ ಪ್ರಕಾಶನವಾದವು. ಐದನೆಯ ಹಾಗು ಕೊನೆಯ ಸಂಪುಟ ಅಪೂರ್ಣವಾಗಿಯೇ ಹಂಬೋಲ್ಟ್‌ನ, ಮರಣದನಂತರ ಪ್ರಕಟವಾಯಿತು (1863). ಈ ಗ್ರಂಥದಲ್ಲಿ ಹಂಬೋಲ್ಟ್ 'ಜುಸಮ್ಮನ್ ಹ್ಯಾಂಗ್' ಪರಿಭಾವನೆಯನ್ನು ಅನುಸರಿಸಿ ಭೂಮೇಲ್ಮೈನ ವಿವಿಧ ಅಂಶಗಳು ಹೇಗೆ ಒಂದಕ್ಕೊಂದು ಪೂರಕವಾಗಿವೆಯೆಂದು ವಿವರಿಸಿದ.

ಕಾಸ್ಮೋಸ್ ಗ್ರಂಥ ನಾಲ್ಕು ಮುಖ್ಯ ಸೈದ್ಧಾಂತಿಕ ಪ್ರಕಾರಗಳನ್ನು ಒಳಗೊಂಡಿದೆ. ಇವುಗಳೆಂದರೆ: 1. ಪ್ರಪಂಚದ ಭೌತಿಕ ವಿವರಣೆಯು ಪ್ರತ್ಯೇಕ ಅಧ್ಯಯನ ವಸ್ತುವಾಗಿರುವುದರ ಅರ್ಥ ಹಾಗೂ ಅದರ ಇತಿಮಿತಿಗಳು. 2. ಪ್ರಾಕೃತಿಕ ಒಕ್ಕೂಟದ ವಿವರಣೆ. ಅಂದರೆ ಭೂಮೇಲ್ಮೈಗಳಲ್ಲಿ ಕಂಡುಬರುವ ವಿವಿಧ ಅಂಶಗಳು ಪರಸ್ಪರ ಅವಲಂಬಿತವಾಗಿರುವ ರೀತಿನೀತಿಗಳು. 3. ಪ್ರಾಕೃತಿಕ ಕ್ರಿಯೆ ಮನುಷ್ಯ ಜೀವನದ ಸ್ಫೂರ್ತಿಯಾಗಿರುವ ರೀತಿ. ಇದು ಮನಷ್ಯನು ಅನ್ವೇಷಣೆ ಅಥವಾ ಸಂಚಾರದಲ್ಲಿ ತೊಡಗಲು, ಕವಿತೆಗಳನ್ನು ಬರೆಯಲು, ಭೂಸ್ವರೂಪಗಳನ್ನೂ ಚಿತ್ರಿಸಲು ವಿವಿಧ ಪ್ರಕಾರದ ಸಸ್ಯಗಳನ್ನು ಅಭ್ಯಸಿಸಲು ಪ್ರೇರೇಪಣೆ ನೀಡಿರುವ ವಿಧಾನವನ್ನು ವಿವರಿಸುವುದು. 4. ಕೊನೆಯ ವಿಧಾನವು ಪ್ರಾಕೃತಿಕ ತತ್ತ್ವಶಾಸ್ತ್ರದ ಇತಿಹಾಸ ಹಾಗೂ ಅದರ ಪರಿಭಾವನೆಗಳನ್ನು ಅಂದರೆ ಭೂಮೇಲ್ಮೈ ಒಂದು ಜೈವಿಕ ಒಕ್ಕೂಟವಾಗಿರುವ ರೀತಿಯನ್ನು ಕುರಿತು ವಿವರಿಸುವುದು. (ಆರ್.ಎನ್.)

**ಕಾಳಿನದಿ:** ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಸುಪಾದ ಬಳಿ ಸಮುದ್ರ ಮಟ್ಟಕ್ಕೆ 945 ಮೀ ಎತ್ತರದಲ್ಲಿ ಉಗಮ ಹೊಂದಿ ಪಶ್ಚಿಮ ಘಟ್ಟಗಳ ಇಕ್ಕಟ್ಟಾದ ಕಂದರಗಳ ಮೂಲಕ ಹರಿಯುವ ನದಿ. ಮೊದಲು ಸ್ವಲ್ಪದೂರ ಆಗ್ನೇಯಾಭಿಮುಖವಾಗಿ ಹರಿದು, ದಾಂಡೇಲಿಯನ್ನು ಸೋಕಿ ನಿಬಿಡಾರಣ್ಯಗಳನ್ನು ಹಾಯ್ದು. ಅನಂತರ ಪಶ್ಚಿಮಕ್ಕೆ ಮೊಗ ಮಾಡಿ ಘಟ್ಟದ ಇಳಿಜಾರಿನಲ್ಲಿ ಜಿಗಿದು, ಉತ್ತರ ಕನ್ನಡ ಜಿಲ್ಲೆಯ ಕೇಂದ್ರವಾದ ಕಾರವಾರದ ಬಳಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಕರ್ನಾಟಕದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ಉದ್ದವಾದುದು. ಈ ನದಿಯ ಉದ್ದ ಕೇವಲ 184 ಕಿಮೀ. ಇದರ ಒಟ್ಟು ಜಲಾನಯನ ಪ್ರದೇಶ 12560 ಚ.ಕಿಮೀ. ಇದು ಹರಿಯುವ ಮಾರ್ಗದಲ್ಲಿ ಬಹುಭಾಗ ಪರ್ವತ ಪ್ರದೇಶ. ಕಡಲು ಸೇರುವ ಮುನ್ನ ಇದು ದಾಟುವ ಕರಾವಳಿ ಕೂಡ ಬಹಳ ಕಿರಿದು. ಅದ್ದರಿಂದ ಇದು ನೀರಾವರಿಗೆ ಹೆಚ್ಚಾಗಿ ಉಪಯುಕ್ತವಾಗಿಲ್ಲ. ಈ ನದಿಯ ಜಲಾನಯನ ಪ್ರದೇಶದಲ್ಲಿ ವರ್ಷಕ್ಕೆ ಸು. 889 ಸೆಂಮೀ ಮಳೆಯಾಗುತ್ತದೆ. ಕಾಳಿನದಿ ಮತ್ತು ಇದರ ಉಪನದಿಗಳಾದ ಪಂಡ್ರಿ, ಬಾರ್ಚಿ, ತಟ್ಟಿಹಳ್ಳ, ಕಾನೇರಿ ಮತ್ತು ಮಾದ್ರಿ ನದಿಗಳೂ ಮಳೆಗಾಲದಲ್ಲಿ (ಜೂನ್–ಸೆಪ್ಟೆಂಬರ್) ತುಂಬಿ ಹರಿಯುತ್ತವೆ. ಈ ನದಿಯ ನೀರಿನ ಘನಗಾತ್ರ 278 ಟಿಎಂಸಿ ಅಡಿ.

ಕಾಳಿಯ ಅಗಾಧ ಜಲರಾಶಿಯನ್ನು ನೀರಾವರಿಗೆ ಹೆಚ್ಚಾಗಿ ಬಳಸಿಕೊಳ್ಳಲು ಅವಕಾಶವಿಲ್ಲವಾದರೂ ಇದರ ವಿದ್ಯುತ್‌ವಿಭವ ಅಗಾಧವಾದ್ದು (13 ಲಕ್ಷ ಕಿವಾ) ಈ ಪ್ರದೇಶದಲ್ಲಾಗುವ ಮಳೆಯಲ್ಲಿ ಶೇ. 90 ರಷ್ಟು ಕೇವಲ ನಾಲ್ಕು ತಿಂಗಳುಗಳಲ್ಲಿ–ಜೂನ್ ಮಧ್ಯದಿಂದ ಅಕ್ಟೋಬರ್ ಮಧ್ಯದವರೆಗೆ–ಬೀಳುವುದರಿಂದ ವರ್ಷವಿಡೀ ವಿದ್ಯುದುತ್ಪಾದನೆ ಸಾಧ್ಯವಾಗುವಂತೆ ಇದರ ಪ್ರವಾಹವನ್ನು ನಿಯಂತ್ರಿಸುವುದು ಅವಶ್ಯ. ನದಿ ಅರಬ್ಬೀ ಸಮುದ್ರವನ್ನು ಸೇರುವ ಮುನ್ನ ಅದರಿಂದ ಆದಷ್ಟು ಹೆಚ್ಚಿನ ಪ್ರಯೋಜನ ಪಡೆಯುವ

ಸಲುವಾಗಿ ಅಲ್ಲಲ್ಲಿ ಜಲಾಶಯಗಳನ್ನು ನಿರ್ಮಿಸಿ ವಿದ್ಯುದುತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಬೇಕಾಗುತ್ತದೆ. ಅದಕ್ಕಾಗಿ ವ್ಯಾಪಕ ಸಮೀಕ್ಷೆಯನ್ನು ನಡೆಸಲಾಗಿದೆ. ವಿದ್ಯುತ್ತಿನ ಅಭಿವೃದ್ಧಿಗಾಗಿ ಯೋಜನೆಯೊಂದನ್ನು ರಚಿಸಲಾಗಿದೆ. ಉತ್ತರಕನ್ನಡ ಜಿಲ್ಲೆಯ ಸೂಪ ಮತ್ತು ಅಂಬಿಕಾ ನಗರದ ಬಳಿ ಈ ನದಿಗೆ ಎರಡು ಜಲವಿದ್ಯುದಾಗರಗಳನ್ನು ನಿರ್ಮಿಸಲಾಗಿದೆ.

ಕಾಳಿ ನದಿ ಜಲವಿದ್ಯುತ್ ಯೋಜನೆ: ಈ ನದಿಗೆ ಉತ್ತರ ಜಿಲ್ಲೆಯಲ್ಲಿ ನಿರ್ಮಿಸಿದ ಕಾಳಿ ಜಲವಿದ್ಯುತ್‌ಯೋಜನೆ. ಈ ಯೋಜನೆಯನ್ನು ಮೂರು ಹಂತಗಳಲ್ಲಿ ನಿರ್ಮಿಸಲಾಗುವುದು. ಅವುಗಳಲ್ಲಿ ನಾಗಝರಿ ವಿದ್ಯುದಾಗರ ಮತ್ತು ಸೂಪ ಅಣೆಕಟ್ಟು ವಿದ್ಯುದಾಗಾರಗಳು ಅನುಕ್ರಮವಾಗಿ 6 ಮತ್ತು 2 ವಿದ್ಯುಜನಕಗಳನ್ನು ಹೊಂದಿದ್ದು ತಲಾ 135 ಮತ್ತು 50 ಮೆವ್ಯಾ ಗಳ ಸ್ಥಾಪಿತ ಸ್ಥಾಮರ್ಥ್ಯವನ್ನು ಹೊಂದಿವೆ. ಈ ಎರಡೂ ವಿದ್ಯುದಾಗಾರಗಳ ಒಟ್ಟು ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯ 910 ಮೆವ್ಯಾ (810+100=910) ಗಳಾಗಿರುತ್ತದೆ. ಸರಾಸರಿ ವಾರ್ಷಿಕ ವಿದ್ಯುತ್ ಉತ್ಪಾದನೆ 3350 ದಲ. ಯುನಿಟ್‌ಗಳು.

ಕಾಳಿನದಿ ವಿದ್ಯುಚ್ಛಕ್ತಿಯಲ್ಲಿ ಬೊಮ್ಮನಹಳ್ಳಿ ಅಣೆಕಟ್ಟೆ, ತಟ್ಟೆಹಳ್ಳ ಅಣೆಕಟ್ಟೆ, ತಟ್ಟೆಹಳ್ಳ–ಬೊಮ್ಮನಹಳ್ಳಿ ಜಲವಾಹಕಮಾರ್ಗ, ನಾಗಝರಿ ವಿದ್ಯುದಾಗಾರ, ಸೂಪ ಅಣೆಕಟ್ಟೆ–ಸೂಪವಿದ್ಯುದಾಗಾರ ನಿರ್ಮಾಣ ಮುಂತಾದವುಗಳು ಸೇರಿವೆ. ಎರಡನೆ ಹಂತದ ಯೋಜನೆ ದಾಂಡೆಲಿ, ಕೊಡಸಳ್ಳಿ ಮತ್ತು ಕದ್ರಿ ಬಳಿಯ ವಿದ್ಯುದಾಗಾರಗಳ ನಿರ್ಮಾಣವು ಸೇರಿದೆ. ಇವು ಅನುಕ್ರಮವಾಗಿ 120–150 ಮೆವಾ ವಿದ್ಯುತ್ತನ್ನು ನಿರ್ಮಿಸುವ ಉದ್ದೇಶವಿದೆ. ಇದರ ಕಾರ್ಯನಿರ್ವಹಣೆ ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ಸೇರಿದೆ. (ಪಿ.ಎಂ.)

**ಕಿಂಬರ್ಲಿ:** ದಕ್ಷಿಣ ಆಫ್ರಿಕದ ಮಧ್ಯಭಾಗದಲ್ಲಿ ಫ್ರೀ ಸ್ಟೇಟಿನ ಗಡಿಯ ಬಳಿ, ಉತ್ತರ ಗುಡ್ ಹೋಪ್ ಪ್ರಾಂತ್ಯದಲ್ಲಿರುವ ಮುಖ್ಯ ನಗರ. ವಜ್ರದ ಗಣಿಗಳಿಂದಾಗಿ ಪ್ರಸಿದ್ಧವಾಗಿದೆ. ಸಮುದ್ರಮಟ್ಟಕ್ಕಿಂತ 1200 ಮೀ ಎತ್ತರದಲ್ಲಿರುವ ಈ ನಗರದ ಜನಸಂಖ್ಯೆ 1,70,432 (1996).

ಕಿಂಬರ್ಲಿಗೂ ದಕ್ಷಿಣ ಆಫ್ರಿಕದ ಇತರ ಪ್ರಮುಖ ಪಟ್ಟಣಗಳಿಗೂ ರೈಲು ರಸ್ತೆ ಮತ್ತು ವಾಯುಮಾರ್ಗಗಳಿವೆ. ಕಿಂಬರ್ಲಿ ಮುಖ್ಯವಾಗಿ ವಜ್ರದ ಗಣಿಗಳಿಗೆ ಪ್ರಸಿದ್ಧವಾಗಿದ್ದರೂ ಇದು ಉತ್ತರ ಕೇಪ್ ಪ್ರಾಂತ್ಯದ ಪ್ರಮುಖ ವಾಣಿಜ್ಯಕೇಂದ್ರವಾಗಿರುವುದರಿಂದ ಇದರ ಪ್ರಾಮುಖ್ಯತೆ ಹೆಚ್ಚಿದೆ. ಕಬ್ಬಿಣದ ಅದಿರು, ಉಪ್ಪು, ಕಲ್ನಾರು, ಸುಣ್ಣದ ಕಲ್ಲು ಮತ್ತು ಮ್ಯಾಂಗನೀಸ್‌ಗಳಲ್ಲಿ ವಹಿವಾಟು ನಡೆಯುತ್ತದೆ. ಬಟ್ಟೆಗಿರಣಿಗಳೂ ಹಾಗೂ ಯಂತ್ರಗಳ ಕಾರ್ಖಾನೆಗಳು ಇಲ್ಲಿವೆ. (ಎಂ.ಎ.ಎಚ್.)

**ಕಿಕ್ಕೇರಿ:** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ ಮತ್ತು ಅದೇ ಹೆಸರಿನ ಹೋಬಳಿಯ ಕೇಂದ್ರ, ಕೃಷ್ಣರಾಜಪೇಟೆಗೆ 13 ಕಿಮೀ ಮತ್ತು ಶ್ರವಣಬೆಳಗೊಳಕ್ಕೆ 16 ಕಿಮೀ ದೂರದಲ್ಲಿ ಕೃಷ್ಣರಾಜಪೇಟೆ– ಚನ್ನರಾಯಪಟ್ಟಣ ರಸ್ತೆಯಲ್ಲಿದೆ. ಈ ಹೋಬಳಿಯಲ್ಲಿ ಕಿಕ್ಕೇರಿಯೇ ದೊಡ್ಡ ಗ್ರಾಮ.

ಇಲ್ಲಿ ಒಂದು ರಮ್ಯವಾದ ಕೆರೆ ಮತ್ತು ಜೀರ್ಣವಾದ ಒಂದು ಪುರಾತನ ಕೋಟೆಯೂ ಇದೆ.

ಈ ಹೋಬಳಿಯ ಜನರ ಮುಖ್ಯ ಕಸಬು ವ್ಯವಸಾಯ, ಮುಂಗಾರು ಬೆಳೆಗಳಾದ ರಾಗಿ, ಜೋಳಗಳನ್ನು ಬೆಳೆಯುತ್ತಾರೆ. ಕಬ್ಬು, ತೆಂಗು, ಬಾಳೆ ಉಳಿದ ಮುಖ್ಯ ಬೆಳೆಗಳು. ಹತ್ತಿ ದಾರ, ನೇಯ್ಗೆ ಮತ್ತು ರೇಷ್ಮೆ ದಾರಗಳನ್ನು ತೆಗೆಯುವುದರಲ್ಲಿ ಕಿಕ್ಕೇರಿ ಹೆಸರುವಾಸಿಯಾಗಿದೆ. ಇಲ್ಲಿ 9 ಸಹಕಾರ ನೇಯ್ಗೆ ಸಂಘಗಳಿವೆ. ಹಿಂದು ಮತ್ತು ಮುಸ್ಲಿಮರೂ ಈ ಗ್ರಾಮದಲ್ಲಿ ಹೆಚ್ಚು ವಾಸಿಸುತ್ತಾರೆ. (ಪಿ.ಎಚ್.)

**ಕಿಗೋಮ ಪ್ರದೇಶ:** ಟಾಂಗನೀಕದ ಒಂದು ಪ್ರದೇಶ. 1963ರ ಮೇ ತಿಂಗಳಿನಲ್ಲಿ ಪುನರ್‌ರಚಿತವಾದ ಆಡಳಿತ ಘಟಕಗಳಲ್ಲೊಂದು. ಹಿಂದಣ ಪಶ್ಚಿಮ ಪ್ರದೇಶದಲ್ಲಿದ್ದ ಕಿಗೋಮ ಮತ್ತು ಕಸೂಲು ಜಿಲ್ಲೆಗಳು ಇದರಲ್ಲಿವೆ. ಕಿಗೋಮ ಪ್ರದೇಶದಲ್ಲಿ ಮಧ್ಯ ಟಾಂಗನ್ಯೀಕ ಪ್ರಸ್ಥಭೂಮಿ ಮೇಲ್ಮುಖವಾಗಿ ಮಡಿಸಿಕೊಂಡಿದೆ. ಇಲ್ಲಿಯ ಉನ್ನತ ಶಿಖರದ ಹೆಸರು ಕುಂಗ್ವೆ (2500 ಮೀ). ಈ ಪ್ರದೇಶದ ಉತ್ತರ ಭಾಗದಲ್ಲಿ ಮಲಾಗರಾಸಿ ನದಿಯೂ ಅದರ ಉಪನದಿಯಾದ ಮೊಯೋಮೋಸಿಯೂ ಹರಿದು ಟಾಂಗನೀಕ ಸರೋವರವನ್ನು ಸೇರುತ್ತವೆ. ಈ ಪ್ರದೇಶದ ಸರಾಸರಿ ಮಧ್ಯಾಹ್ನದ ಉಷ್ಣತೆ ಆಗಾಗ್ಗೆ $32^0$ ಸೆ. ಗಳನ್ನೂ ಮೀರಿರುತ್ತದೆ. ವಾರ್ಷಿಕ ಮಳೆಯ ಸರಾಸರಿ 75 ಸೆಂಮೀ. ಉನ್ನತ ಪ್ರದೇಶಗಳಲ್ಲಿ 100–125 ಸೆಂಮೀ ಮಳೆ ಬೀಳುತ್ತದೆ. ಇಲ್ಲಿ ಬಗೆ ಬಗೆಯ ಗುಣಗಳ ಮಣ್ಣುಗಳಿವೆ. ಎತ್ತರ ಪ್ರದೇಶದಲ್ಲಿ ನಿತ್ಯಹಸುರು ಕಾಡುಗಳೂ ಉಳಿದೆಡೆಗಳಲ್ಲಿ ಬಗೆಬಗೆಯ ಹುಲ್ಲುಗಾವಲುಗಳೂ ಇವೆ. ಜನಸಂಖ್ಯೆ 628677 (2000).

ಇಲ್ಲಿರುವ ಜನರ ಗಣಗಳಲ್ಲಿ ಹಾ ಅತ್ಯಂತ ದೊಡ್ಡದು. ಈ ಜನ ಕಿಗೋಮದ ಎಲ್ಲ ಕಡೆಗಳಲ್ಲಿಯೂ ಹರಡಿದ್ದಾರೆ. ರುಂಡಿಗಳು ಇನ್ನೊಂದು ಗುಂಪು. ಇವರು ಹಾಗಳನ್ನೇ ಬಹಳಮಟ್ಟಿಗೆ ಹೋಲುತ್ತಾರೆ. ನ್ಯಾಂವೇಜಿ. ವಿನ್ಜಾ (ಬಿನ್ಜಾ) ಕಿಕೋ (ನ್ಯಾಹೋಜ) ಇವರು ಇತರರು. ಕಿಕೋ ಜನ ಬಹುತೇಕ ಅಜ್ಞಾತವಾಸಿಗಳು. ಇವರು ಮಲಾಗರಾಸಿಯ ಜವುಗು ಪ್ರದೇಶಗಳಲ್ಲಿದ್ದಾರೆ.

ಕಿಗೋಮ ಪ್ರದೇಶದ ಮುಖ್ಯ ಪಟ್ಟಣ ಕಿಗೋಮ. ಟಾಂಗನೀಕ ಸರೋವರದ ದಡದಲ್ಲಿದೆ. ಡಾರ್ ಎ ಸಲಾಮಿನಿಂದ ಇಲ್ಲಿಗೆ ರೈಲ್ವೆಯುಂಟು. ಹತ್ತಿ, ಮೆಕ್ಕೆ ಜೋಳ, ಧಾನ್ಯಗಳು ಮತ್ತು ಎಣ್ಣೆಬೀಜಗಳು ಈ ಪ್ರದೇಶದ ಪ್ರಮುಖ ಬೆಳೆಗಳು. ಸಿಹಿ ಗೆಣಸು, ಅಲೂಗೆಡ್ಡೆ, ಬತ್ತ ಮತ್ತು ಸಂಬಾರ ಪದಾರ್ಥಗಳನ್ನೂ ಕಾಫಿ ಮತ್ತು ಹೊಗೆಸೊಪ್ಪುಗಳನ್ನೂ ಬೆಳೆಯುತ್ತಾರೆ. ಜೇನುಮೇಣ ಸಂಗ್ರಹಣ ಮತ್ತು ಮೀನುಗಾರಿಕೆ ಎರಡು ಮುಖ್ಯ ಉಪಕಸಬುಗಳು. ತುಪ್ಪದ ತಯಾರಿಕೆ ಚರ್ಮದ ಹದಗಾರಿಕೆ– ಈ ಕಸಬುಗಳೂ ಉಂಟು. ಬೆಲೆಬಾಳುವ ಮರದ ದಿಮ್ಮಿಗಳು ಇಲ್ಲಿ ದೊರಕುತ್ತವೆ. ಉವಿನ್ಜದ ಉಪ್ಪಿನ ಊಟೆಗಳಲ್ಲಿ ವರ್ಷವರ್ಷವೂ ಹೇರಳವಾಗಿ ಉಪ್ಪಿನ ಉತ್ಪಾದನೆಯಾಗುತ್ತದೆ. ಈ ಪ್ರದೇಶದಲ್ಲಿ ಟ್ಸೆಟ್ಸೆ ನೊಣದ ಅಪಾಯ ಅಧಿಕ. ನಿದ್ರಾವ್ಯಾಧಿ ವರ್ಷವರ್ಷವೂ ಮರುಕೊಳಿಸುತ್ತಿರುತ್ತದೆ.(ಕೆ.ಎನ್.ಯು.)

**ಕಿರಿಬಾತಿ:** ಓಸಿಯಾನಿಯ ದ್ವೀಪ ಸಮೂಹ ರಾಷ್ಟ್ರ. $50^0$ ದ.ಅ ಹಾಗೂ $180^0$ ಪೂ.ರೇ. ದಲ್ಲಿದೆ. ಇದರ ವಿಸ್ತೀರ್ಣ 801 ಚ.ಕಿಮೀ. ಜನಸಂಖ್ಯೆ 1,03,092 (2002). ಇದರ ರಾಜಧಾನಿ ಟರಾವ. ಜನಸಂಖ್ಯೆ 25,154 (2002).

ಕಿರಿಬಾತಿ ಗಿಲ್ಬರ್ಟ್ ದ್ವೀಪ ಸಮೂಹದಲ್ಲೊಂದು ಪ್ರಮುಖ ದ್ವೀಪ ಈ ದ್ವೀಪವನ್ನು ಬ್ರಿಟಿಷರು 1979 ರವರಿಗೂ ತಮ್ಮ ಸ್ವಾಧೀನದಲ್ಲಿರಿಸಿಕೊಂಡಿದ್ದರು. 1979 ಜುಲೈ 11 ರಂದು ಸ್ವಾತಂತ್ರ ರಾಷ್ಟ್ರವಾಗಿ ಕಿರಿಬಾಸ್ ಅಥವಾ ಕಿರಿಬಾತಿ ಎಂದು ಹೆಸರು ಪಡೆಯಿತು.

ಈ ದ್ವೀಪ ಸಮೂಹ ಶಾಂತಸಾಗರದ ಪಶ್ಚಿಮದಲ್ಲಿ 33 ದ್ವೀಪಗಳನ್ನು ಒಳಗೊಂಡಿದೆ, ಎಲ್ಲಾ ದ್ವೀಪಗಳು, ಓಶನ್ ದ್ವೀಪ ಹೊರತು ಪಡಿಸಿ, ತಗ್ಗಾದ ದ್ವೀಪಗಳು. ಇಲ್ಲಿ ಹೆಚ್ಚಾಗಿ ತೆಂಗು ಕಂಡು ಬರುತ್ತದೆ. ಹಣ್ಣು, ತರಕಾರಿ, ತೆಂಗನ್ನು ಹೆಚ್ಚಾಗಿ ಆರ್ಥಿಕ ದೃಷ್ಟಿಯಿಂದ ಬೆಳೆಯುತ್ತಾರೆ.

ಇಲ್ಲಿನ ವಾಸಿಗಳು ಪ್ರಮುಖವಾಗಿ ಮೈಕ್ರೋನೇಷ್ಯ ಮತ್ತು ಪಾಲಿನೇಷ್ಯ ಮೂಲದವರು, ಕ್ರಿಶ್ಚಿಯನ್ ಧರ್ಮಸ್ಥರು. ಈ ದ್ವೀಪದಲ್ಲಿ ಎರಡು ಪ್ರಮುಖ ಭಾಷೆಗಳಾದ ಗಿಲ್ಬರ್ಟ್ಸ್ ಮತ್ತು ಇಂಗ್ಲಿಷ್ ಬಳಕೆಯಲ್ಲಿವೆ.

ಮೀನುಗಾರಿಕೆ ಹಾಗು ಕೃಷಿ ಪ್ರಧಾನವಾದ ಕಸಬು, ಓಶನ್ ದ್ವೀಪವು ಉತ್ತಮ ಗುಣಮಟ್ಟದ ಲವಣ ನಿಕ್ಷೇಪವನ್ನು ಹೊಂದಿದೆ–ಗಣಿಗಾರಿಕೆಯು ಪ್ರಗತಿಯಲ್ಲಿದೆ ಫಾಸ್ಫೇಟ್




ಲವಣವನ್ನು ಈ ರಾಷ್ಟ್ರವು ರಫ್ತು ಮಾಡುವುದರ ಮೂಲಕ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಿಕೊಂಡಿದೆ, ಇಲ್ಲಿನ ಕರೆನ್ಸಿ–ಆಸ್ಟ್ರೇಲಿಯನ್ ಡಾಲರ್. ರಾಷ್ಟ್ರದ ಉತ್ಪಾದನೆಯ ನಿವ್ವಳ ಆದಾಯ ಕೇವಲ $30, ತಲಾವಾರು ಆದಾಯ $ 417. (ವಿ.ಎಸ್.ಎ.)

**ಕಿರ್ಗೀಸ್ತಾನ್ ಗಣರಾಜ್ಯ:** ಮಧ್ಯ ಏಷ್ಯದ ಒಂದು ಸ್ವತಂತ್ರ ಗಣರಾಜ್ಯ. ಉ.ಅ. $38^0$–$43^0$ ಉ.ಅ. ರೇ. $68^0$–$80^0$ ಪೂ.ರೇ. ವರೆಗೆ ಹಬ್ಬಿದೆ. ಕಿರ್ಗಿಜಿಯ ಎಂಬುದು ರೂಢಿಯಲ್ಲಿರುವ ಹೆಸರು. ಇದರ ವಿಸ್ತೀರ್ಣ 1,99,900 ಚ.ಕಿಮೀ. ಜನಸಂಖ್ಯೆ 5,002,000 (2002). ರಾಜಧಾನಿ ಬಿಶ್‌ಕೆಕ್.

ಮೇಲ್ಮೈ ಲಕ್ಷಣ : ಬೆಟ್ಟಗುಡ್ಡಗಳಿಂದ ಕೂಡಿದ ಕಿರ್ಗಿಜ್ ರಾಜ್ಯದ ಬಹುಭಾಗ ಸಮುದ್ರಮಟ್ಟಕ್ಕೆ 1590 ಮೀ ಗೂ ಹೆಚ್ಚಿನ ಎತ್ತರದಲ್ಲಿದೆ. ಈ ಶ್ರೇಣಿಗಳ ಪಶ್ಚಿಮ ಭಾಗ ಈ ರಾಜ್ಯದಲ್ಲಿದೆ. ಈ ಶ್ರೇಣಿಗೆ ಸೇರಿದ ಪೊಬೇಡಾ (7330 ಮೀ) ಮತ್ತು ಖಾನ್‌ಟೆಂಗ್ರಿ (6885 ಮೀ) – ಈ ಎರಡು ಶಿಖರಗಳು ಕಿರ್ಗಿಜ್‌–ಚೀನ ಗಡಿಯಲ್ಲಿವೆ. ಈ ಪ್ರದೇಶದ ಬಳಿಯಿಂದ ಪಶ್ಚಿಮಕ್ಕೆ ಕುಂಗ್ಯೆ–ಅಲಾ–ಟೌ ಪರ್ವತ ಶ್ರೇಣಿಯೂ ನೈಋತ್ಯಕ್ಕೆ

ಕೊಕ್ಷಾಲ್–ಟೌ ಶ್ರೇಣಿಯೂ ಹಬ್ಬಿವೆ. ಕೊಕ್ಷಾಲ್–ಟೌ ಪರ್ವತ ಶಿಖರ ಕಿರ್ಗಿಜ್–ಚೀನ ಗಡಿಯ ಗುರುತಾಗಿದೆ. ಕುಂಗೈ–ಅಲಾ–ಟೌ ಪರ್ವತಶ್ರೇಣಿ ಕಿರ್ಗಿಜ್ ಬೆಟ್ಟದ ಸಾಲುಗಳ ಚಾಚಿನಿಂದ ಪಶ್ಚಿಮಕ್ಕೆ ಮತ್ತಷ್ಟು ದೂರ ವ್ಯಾಪಿಸಿಕೊಂಡಿದೆ. ಅಲ್ಟಾಯ್ ಪರ್ವತಗಳು ಕೊಕ್ಷಾಲ್–ಟೌ ಪರ್ವತ ಶ್ರೇಣಿಯ ಮುಂದುವರಿಕೆ. ಕಿರ್ಗೀಜಿಯದ ಬಹುಭಾಗ ಈ ಪರ್ವತದ ಕವಲಿನಿಂದ ಆವೃತವಾಗಿದೆ.




ಈ ದೇಶದ ಅತ್ಯಂತ ಆಳವಾದ ಸರೋವರಗಳಲ್ಲಿ ಒಂದಾದ ಇಸಿಕ್‌ಕಲ್ ಇರುವುದು ಪೂರ್ವದ ಪ್ರಸ್ಥಭೂಮಿಯಲ್ಲಿ. 5200 ಮೀ ಎತ್ತರಕ್ಕೆ ಹೋಗುವ ಪೊಬೇಡಾ ಮತ್ತು ಕಾನ್–ಟ್ರೆಂಗ್ರಿ ಪರ್ವತಗಳ ದಟ್ಟ ಭಾಗದಿಂದ ಪಶ್ಚಿಮಕ್ಕೆ ವ್ಯಾಪಿಸಿರುವ ಬೆಟ್ಟಸಾಲುಗಳಲ್ಲಿ ಮೂರನೆಯದು ತೆರ್‌ಸ್ಕೈ–ಅಲಾ–ಟೌ ಪರ್ವತಸಾಲು. ಇಸಿಕ್‌ಕಲ್ ಸರೋವರದ ದಕ್ಷಿಣ ಅಂಚಿನ ಉದ್ದಕ್ಕೂ ಅದರ ತಪ್ಪಲು ಹರಡಿದೆ. ಈ ಪ್ರಸ್ಥಭೂಮಿಯ ಪ್ರಮುಖ ಪ್ರದೇಶದ ಅಗಲ 200 ಕಿಮೀ. 3000 ಮೀ ಎತ್ತರದಲ್ಲಿರುವ ಮತ್ತು ಪೂರ್ವ–ಪಶ್ಚಿಮ ದಿಕ್ಕುಗಳಿಗೆ ಹರಡಿರುವ ಈ ಪ್ರದೇಶದಲ್ಲಿ ಉದ್ಭವಿಸುವ ಮುಖ್ಯ ನದಿಗಳು ಎರಡು : ಇವುಗಳಲ್ಲಿ ಚೂ ನದಿ ಒಂದು. ಇದು ಕುಂಗೈ–ಅಲಾ–ಟೌ ಮತ್ತು ಕಿರ್ಗಿಜ್ ಶ್ರೇಣಿಗಳ ನಡುವೆ ಇರುವ ಕಡಿದಾದ ಕಣಿವೆಗಳ ಮೂಲಕ ಉತ್ತರಕ್ಕೆ ಹರಿದು. ತರುವಾಯ ಈಶಾನ್ಯಕ್ಕೆ ತಿರುಗಿ, ಸು. 150 ಕಿಮೀ ದೂರ ಹರಿದು ಕಿರ್ಗೀಜಿಯ ಮತ್ತು ಕಜಾಕ್‌ಸ್ತಾನಗಳ ನಡುವಣ ಗಡಿಯಾಗಿ ಪರಿಣಮಿಸುತ್ತದೆ. ಇಲ್ಲಿ ಹುಟ್ಟುವ ಇನ್ನೊಂದು ನದಿ ನರಿನ್. ಪೂರ್ವಕ್ಕೆ ಫರ್ಗಾನ ಕಣಿವೆಯ ಮೂಲಕ ಪೂರ್ವಕ್ಕೆ ಹರಿಯುತ್ತದೆ. ಇದು ಸಿರ್ ದಾರ್‍ಯದ ಉಪನದಿ. ಕೊಕ್ಷಾಲ್ ಮತ್ತು ಅಲಾಯ್ ಪರ್ವತ ಶ್ರೇಣಿಗಳು ಸೇರುವ ಬೆಟ್ಟಗಳ ಗಂಟಿನ ಭಾಗದಿಂದ ಫರ್ಗಾನ ಶ್ರೇಣಿ ಕವಲೊಡೆದು ವಾಯವ್ಯಾಭಿಮುಖವಾಗಿ ಸಾಗುತ್ತದೆ.

ಕಿರ್ಗೀಜಿಯದ ಪಶ್ಚಿಮ ಪ್ರದೇಶ ಪೂರ್ವದ್ದಕ್ಕಿಂತ ತಗ್ಗಾಗಿದೆ. ಅದು ಸ್ಥೂಲವಾಗಿ ಕುದುರೆಯ ಲಾಳದ ಆಕಾರದಲ್ಲಿ ಪಶ್ಚಿಮಕ್ಕೆ ತೆರೆದಂತಿದ್ದು. ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಫರ್ಗಾನ ಕಣಿವೆಯಿಂದ ಆವೃತವಾಗಿದೆ. ಈ ಕಣಿವೆಯ ಮುಖ್ಯಭಾಗ ಉಜ್ಬೆಕಿಸ್ತಾನಕ್ಕೂ ಇದರ ಪಶ್ಚಿಮದ ಒಂದು ಭಾಗ ತಾಜಿಕಿಸ್ತಾನಕ್ಕೂ ಸೇರಿವೆ. ಈ ಭಾಗದಲ್ಲಿ ಹರಿಯುವ ಸಿರ್ ದಾರ್‍ಯ ನದಿಯನ್ನು ಕಾರಾ ದಾರ್‍ಯಾ ಎಂದು ಕರೆಯುವರು. ಈ ನದಿ ಕಿರ್ಗೀಜಿಯದ ನೈಋತ್ಯ ಭಾಗದಲ್ಲಿ ಹುಟ್ಟುತ್ತದೆ.

ವಾಯುಗುಣ: ಭೂಮಿಯ ಎತ್ತರ ಮತ್ತು ತೆರಪಿಗೆ ಅನುಗುಣವಾಗಿ ವಾಯುಗುಣ ವ್ಯತ್ಯಾಸ ಹೊಂದುತ್ತದೆ. ಪಶ್ಚಿಮಕ್ಕೂ ಉತ್ತರಕ್ಕೂ ಮುಖ ಮಾಡಿರುವ ಇಳಕಲು ಪ್ರದೇಶಗಳಲ್ಲಿ ಹೆಚ್ಚು ತೇವದ ಗಾಳಿ ಬೀಸುವುದರಿಂದಲೂ ಬಿಸಿಲು ಕಡಿಮೆಯಾಗಿರುವುದರಿಂದಲೂ ಅಲ್ಲಿ ಸಸ್ಯಸಂಪತ್ತು ಹೇರಳವಾಗಿದೆ. ಕಿರ್ಗೀಜಿಯದಲ್ಲಿ 3000 ಮೀ ಎತ್ತರದವರೆಗೆ ಮಳೆ ಕ್ರಮವಾಗಿ ಹೆಚ್ಚುತ್ತಾ ಹೋಗುತ್ತದೆ. ಅದಕ್ಕೂ ಹೆಚ್ಚಿನ ಎತ್ತರದಲ್ಲಿ ಬೇಸಗೆಯಲ್ಲಿ ಸಹ ಹಿಮಗಡ್ಡೆಯಿರುತ್ತದೆ. ಫ್ರೂನ್‌ಜೆನಗರದ ಪ್ರದೇಶದಲ್ಲಿ ವಾರ್ಷಿಕ ಮಳೆ 35 ಸೆಂಮೀ. ಫ್ಲೆವಾಲ್ಸ್ ಬಳಿ 125 ಸೆಂಮೀ. ಜನವರಿಯ ಕನಿಷ್ಠ ಉಷ್ಣತೆ ಈ ಎರಡು ಕಡೆಗಳಲ್ಲಿ – $4^{0}$ಸೆ. ಮತ್ತು ಪ್ರೆವಾಲ್ಸ್‌ನಲ್ಲಿ $18^{0}$ಸೆ.

ಸ್ವಾಭಾವಿಕ ಸಸ್ಯಗಳು : ಹಿಮಘನೀಕರಣ ಮತ್ತು ಭೂಮಿಯ ಎತ್ತರಕ್ಕನುಗುಣವಾಗಿ ಇಲ್ಲಿಯ ಸಸ್ಯಗಳು ಆಲ್ಪ್ಸ್ ಪರ್ವತಗಳ ಸಸ್ಯಗಳನ್ನೇ ಹೋಲುತ್ತವೆ. ಉಪಆಲ್ಪ್ಸ್ ಮಾದರಿಯ, ಮನೋಹರವಾದ ಹಾಗೂ ವಿವಿಧ ಹೂಗಳಿಂದ ಕೂಡಿದ ಹುಲ್ಲುಗಾವಲುಗಳು ಈ ರಾಜ್ಯದಲ್ಲಿವೆ. ಕಣಿವೆಯ ತಪ್ಪಲುಗಳಲ್ಲಿ ಮತ್ತು ಉತ್ತರದ ಇಳಿಭೂಮಿಗಳಲ್ಲಿ ಹೊರತು ಇತರ ಕಡೆಗಳಲ್ಲಿ ಅರಣ್ಯಗಳು ವಿರಳ. ಅರಣ್ಯಗಳು ಇರುವ ಕಡೆ ಪೈನ್ ಮಾದರಿಯ ಗಿಡಗಳೇ ಹೆಚ್ಚು. ಫರ್ ಮತ್ತು ಎರಡು ವಿಧಗಳ ಸ್ಪ್ರೂಸ್ ಜಾತಿಯ ಗಿಡಗಳು, ಮಾಪಲ್, ಆಷ್, ಅಸ್ಪೆನ್ ಮತ್ತು ಜಾನಿಪರ್ ಮರಗಳು ಇಲ್ಲಿ ಬೆಳೆಯುತ್ತದೆ. ಫ್ರೂನ್‌ಜೆನಗರದ ಪೂರ್ವ ಮತ್ತು ಪಶ್ಚಿಮಕ್ಕೆ ಹರಡಿರುವ ಕಿರ್ಗಿಜ್ ಪರ್ವತಶ್ರೇಣಿಯ ಉತ್ತರ ಭಾಗದ ಫಲವತ್ತಾದ ಮೆಕ್ಕಲು ಮಣ್ಣಿನ ಪ್ರದೇಶ; ಸಮುದ್ರಮಟ್ಟಕ್ಕೆ 1200 ಮೀ ಎತ್ತರಕ್ಕಿರುವ ಕೃಷಿ ಭೂಮಿ ಪ್ರದೇಶ; 2400 ಮೀ ಎತ್ತರಕ್ಕಿರುವ ಶಂಕಾಕಾರದ ಗಿಡಗಳಿರುವ ಪ್ರದೇಶ; ಸದಾ ಹಿಮದಿಂದ ಕೂಡಿದ 3300 ಮೀ ಎತ್ತರಕ್ಕಿರುವ ಉಪ ಆಲ್ಪೈನ್ ಮತ್ತು ಆಲ್ಪ್ಸ್ ಪರ್ವತಗಳ ಮಾದರಿಯ ಹುಲ್ಲುಗಾವಲುಗಳಿರುವ ಪ್ರದೇಶ –ಹೀಗೆ ಉತ್ತರದ ಇಳಿಜಾರು ಪ್ರದೇಶವನ್ನು ವಿಭಜಿಸಬಹುದು. ಫರ್ಗಾನ ಕಣಿವೆಯ ಕಿರ್ಗಿಜ್ ಭಾಗವೂ ಜಲಾಲ್–ಅಬಾದ್ ಮತ್ತು ಅಷ್ ನಗರಗಳ ಸುತ್ತುಮುತ್ತಲ ಪ್ರದೇಶವೂ ಫಲವತ್ತಾಗಿವೆ. ಸೇಬು, ಮರಸೇಬು, ಪ್ಲಮ್, ಏಪ್ರಿಕಾಟ್ ಮತ್ತು ವಾಲ್ನಟ್‌ಗಳು ಕೆಲವು ಕಣಿವೆಗಳಲ್ಲಿ ಸ್ವಾಭಾವಿಕವಾಗಿಯೇ ಬೆಳೆಯುತ್ತವೆ. ಕಾಡು ಮೃಗಗಳು ಇಲ್ಲಿ ಕಡಿಮೆ. ಅನೇಕ ಬಗೆಯ ಹಕ್ಕಿಗಳು ತಗ್ಗು ಪ್ರದೇಶಗಳಲ್ಲಿ ಹೇರಳವಾಗಿವೆ. ಮೌಫ್ಲಾನ್, ಜಿಂಕೆ, ಮಾರ್‌ಮಾಟ್ ಅಳಿಲುಗಳಿವೆ.

ಕಿರ್ಗೀಜ್ ಗಣರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಕಿರ್ಗಿಜ್ ಜನರು (40.5%), ರಷ್ಯನರು (30.2%), ಉಳಿದವರು ಉಕ್ರೇನಿಯನ್ನರು ಮತ್ತು ಉಜ್ಬೆಕರು ಆಷ್ ನಗರ ಅಷ್–ಖೊರೊಗ್ ರಸ್ತೆಯ ಕೊನೆಯ ಪಟ್ಟಣ ಹಾಗೂ ರೇಷ್ಮೆ ಕೈಗಾರಿಕೆಯ ಮುಖ್ಯಕೇಂದ್ರ. ಕಿಜಿಲ್–ಕಿಯ ನಗರ ಕಲ್ಲಿದ್ದಲು ಗಣಿಗಳ ಕೇಂದ್ರ, ಪ್ರೆವಾಲ್ಸ್ ಇಸಿಕ್–ಕಲ್ ಸರೋವರದ ದಡದ ಮೇಲಿದೆ. ಇದು ದ್ರಾಕ್ಷಾರಸ ಮತ್ತು ಬೀರ್ ತಯಾರಿಕಾ ಕೇಂದ್ರ. ಟೊಕ್ಮಾಕ್ ಮೋಟಾರುವಾಹನ ರಿಪೇರಿ ಮತ್ತು ನಾರು ಹದಗೊಳಿಸುವ ಕೇಂದ್ರವಾಗಿದೆ.

ಕೃಷಿ, ಕೈಗಾರಿಕೆ, ಸಾರಿಗೆ : ಕ್ರಾಂತಿಗೆ ಹಿಂದೆ ಈಗಿನ ಕಿರ್ಗೀಜಿಯ ಪ್ರದೇಶದ ಜನ ಕೃಷಿಯಲ್ಲಿ ನಿರತರಾಗಿದ್ದರು. ಇತ್ತೀಚಿಗೆ ವಿವಿಧ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ಕಲ್ಲಿದ್ದಲು ಮತ್ತು ಸೀಸದ ಅದಿರನ್ನು ತೆಗೆಯುವ ಗಣಿ ಕೆಲಸ, ವ್ಯವಸಾಯ, ಹೈನು ಕೈಗಾರಿಕೆ, ಸಕ್ಕರೆ ತಯಾರಿಕೆ; ಕಬ್ಬಿಣೇತರ ಲೋಹ ಕೈಗಾರಿಕೆ (ಪಾದರಸ ಮತ್ತು ಅಂಟಿಮೊನಿ ಲೋಹ), ಉತ್ತಮ ದರ್ಜೆಯ ತುಪ್ಪಟ–ಕುರಿಗಳ ಸಾಕಣೆ; ಉಣ್ಣೆ ಮಾರಾಟ, ಮಾಂಸವನ್ನು ಡಬ್ಬಗಳಲ್ಲಿ ತುಂಬುವುದು; ಮರಗಳ ತೊಗಟೆಯಿಂದ ಚಾಪೆ, ಹಗ್ಗ ಮೊದಲಾದವುಗಳ ತಯಾರಿಕೆ ಮತ್ತು ವೈದ್ಯಕೀಯ ಉಪಯೋಗಕ್ಕಾಗಿ ಗಸಗಸೆ ಗಿಡಬೆಳೆಸುವುದು–ಇವು ಕಿರ್ಗೀಜಿಯದ ಪ್ರಮುಖ ಉದ್ಯಮಗಳು. ಶೇ. 50ರಷ್ಟು ಭೂಮಿಯಲ್ಲಿ ಆಹಾರಧಾನ್ಯಗಳನ್ನು ಬೆಳೆಯುತ್ತಾರೆ; ಉಳಿದ ಭೂಮಿಯನ್ನು ವಾಣಿಜ್ಯ ಬೆಳೆಗಳಿಗಾಗಿ ಬಳಸಲಾಗುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಜಾನುವಾರುಗಳ ಸಾಕಣೆ ಹೆಚ್ಚುತ್ತಿದೆ. ಬೇಸಿಗೆಯಲ್ಲಿ ಉತ್ತರಭಾಗದ ಕಣಿವೆಗಳಲ್ಲಿ ಸಸ್ಯಗಳು ಯಥೇಚ್ಛವಾಗಿರುವುದರಿಂದ ದಕ್ಷಿಣದ ಮಂದೆಗಳನ್ನು ಅಲ್ಲಿಗೆ ಸಾಗಿಸುತ್ತಾರೆ.

ದಕ್ಷಿಣದಲ್ಲಿ ಸುಲ್ಯುಕ್ತ ಮತ್ತು ಕಿಜಿಲ್–ಕಿಯಗಳಲ್ಲೂ ಪೂರ್ವದಲ್ಲಿ ಕೋಕ್‌ಯಾಂಗಾಕ್ ತಾಷ್‌ಕುಮೈರ್‌ಗಳಲ್ಲೂ ಕಲ್ಲಿದ್ದಲು ಸಿಗುತ್ತದೆ. ಪೂರ್ವ ಫರ್ಗಾನ ಕಣಿವೆಯ ಚಾಂಗಿರ್‌ಟಾಷ್ ಮತ್ತು ಮೈಲಿ–ಸೈಗಳಲ್ಲಿ ತೈಲನಿಕ್ಷೇಪಗಳಿವೆ. ಹೊಸ ತೈಲನಿಕ್ಷೇಪಗಳು ಕೋಕ್‌ಟಾಷ್ ಮತ್ತು ಇಜ್ಬಸ್ಕೆಂಟ್‌ಗಳಲ್ಲಿ ದೊರಕಿವೆ. ಜೇಲಿಸ್ಕಿಯಲ್ಲೂ ಅಲಾ–ಟಾ ಪರ್ವತಗಳ ದಕ್ಷಿಣದ ಇಳುಕುಲು ಪ್ರದೇಶದ ಅಕುಟ್ಯುಜ್‌ನಲ್ಲೂ ಪಾದರಸ ಮತುಹಾ ಆಂಟಿಮೊನಿ ಗಣಿಗಳಿವೆ. ಟ್ಯುಯ–ಮುಯುನ್ ಮತ್ತು ಮೈಲಿ–ಸೈ ಬಳಿ ಯುರೇನಿಯಂ ಲೋಹ ಸಿಗುತ್ತದೆ.

ರಾಜಧಾನಿ ಬಿಷಕೆಕ್‌ನ ಸುತ್ತಲೂ ಅನೇಕ ಸಣ್ಣಪುಟ್ಟ ಕೈಗಾರಿಕೆಗಳ ಸ್ಥಾಪನೆಯಾಗಿದೆ. ಅವುಗಳಲ್ಲಿ ರೇಷ್ಮೆ ಮತ್ತು ಹತ್ತಿಬೀಜದಿಂದ ಎಣ್ಣೆ ತೆಗೆಯುವ ಕಾರ್ಖಾನೆಗಳು ಮತ್ತು ಹತ್ತಿ ಬಿಡಿಸುವ ಯಂತ್ರಾಗಾರಗಳು ಮುಖ್ಯವಾದವು. ವ್ಯವಸಾಯ ಸಲಕರಣೆಗಳ ಕಾರ್ಖಾನೆಗಳು ಸಹ ಇವೆ. ಸಕ್ಕರೆ ಕಾರ್ಖಾನೆ, ಮಾಂಸವನ್ನು ಡಬ್ಬಗಳಲ್ಲಿ ತುಂಬುವ ಕಾರ್ಖಾನೆ, ಹಿಟ್ಟಿನ ಗಿರಣಿ, ಪಾದರಕ್ಷೆಯ ತಯಾರಿಕೆಯ ಕಾರ್ಖಾನೆ, ಹಣ್ಣುಗಳನ್ನು ಡಬ್ಬಗಳಲ್ಲಿ ಶೇಖರಿಸುವ ಕಾರ್ಖಾನೆ–ಇವು ಚು ಕಣಿವೆಯಲ್ಲಿ ಬೆಳೆದಿವೆ.

ಕಿರ್ಗೀಜ್ ಬೆಟ್ಟಗುಡ್ಡಗಳ ದೇಶವಾದ್ದರಿಂದ ರೈಲುಮಾರ್ಗಗಳು ಹೆಚ್ಚಾಗಿಲ್ಲ. ಫ್ರೂನ್‌ಜೆ ಮತ್ತು ಚಿಮ್‌ಕೆಂಟ್ ನಗರಗಳ ನಡುವೆ ರೈಲ್ವೆ ಸಂಪರ್ಕವುಂಟು. ಎರಡನೆಯ ಮಹಾಯುದ್ಧದ ತರುವಾಯ ಈ ರೈಲುಮಾರ್ಗವನ್ನು ಇಸಿಕ್–ಕಲ್ ಸರೋವರದ ದಂಡೆಯ ರೈಬಾಚ್ಯೆ ನಗರದವರೆಗೆ ವಿಸ್ತರಿಸಿದೆ. ಶೇ. 80ರಷ್ಟು ಸರಕುಗಳನ್ನು ರಸ್ತೆಗಳ ಮೂಲಕವೇ ಸಾಗಿಸುತ್ತಾರೆ. ಫ್ರೂನ್‌ಜೆ ರೈಬಾಚ್ಯೆ–ನಾರಿನ್–ಟೋರುಗಾರ್ಟ್ ರಸ್ತೆ ಫ್ರೂನ್‌ಜೆ –ನಮನ್ಗನ್ ರಸ್ತೆ, ಟಾಲಾಸ್–ಚ್ಯಂಬುಲ್ ರಸ್ತೆ, ಕೋಚ್ ಕೋರ್ಕ–ಚಾಯೇಕ್ ರಸ್ತೆ, ಇಸಿಕ್–ಕಲ್ ಸರೋವರದ ಉತ್ತರ ಮತ್ತು ದಕ್ಷಿಣ ಅಂಚುಗಳಲ್ಲಿ ರೈಬಾಚ್ಯೆ ನಗರದಿಂದ ಪ್ರೆವಾಲ್ಸ್‌ವರೆಗೆ ಹಾಕಿರುವ ಇಸಿಕ್–ಕಲ್–ರಿಂಗ್ ರಸ್ತೆ ಮತ್ತು ಅಷ್–ಕಿಜಿಲ್‌ಕಿಯ ರಸ್ತೆ–ಇವು ಈ ಗಣರಾಜ್ಯದ ಪ್ರಮುಖ ಹೆದ್ದಾರಿಗಳು.

ಇಸಿಕ್-ಕಲ್ ಸರೋವರ ಚಳಿಗಾಲದಲ್ಲಿ ಹೆಪ್ಪುಗಟ್ಟುವುದಿಲ್ಲವಾಗಿ ಚೌಬೀನೆ, ತೈಲ, ಕಲ್ಲಿದ್ದಲು ಮತ್ತು ಗೋದಿ-ಇವುಗಳನ್ನು ಈ ಸರೋವರದ ಮೂಲಕ ಹಡಗುಗಳಲ್ಲಿ ಸಾಗಿಸುತ್ತಾರೆ. ಮಾಸ್ಕೋ ಮತ್ತು ತಾಷ್ಕೆಂಟ್ ನಗರಗಳೊಂದಿಗೆ ವಿಮಾನ ಸಂಪರ್ಕವುಂಟು. (ವಿ.ಜಿ.ಕೆ.)

**ಕಿಲಿಮಾಂಜಾರೋ:** ಟಾಂಗನೀಕ ರಾಜ್ಯದಲ್ಲಿರುವ ಪರ್ವತಗುಚ್ಛ: ಜ್ವಾಲಾಮುಖಿಯಿಂದ ನಿರ್ಮಿತ. ಕೀನ್ಯದ ಸರಹದ್ದಿನವರೆಗೂ ಹಬ್ಬಿದೆ. 910 ಮೀ ಎತ್ತರದ ಪ್ರಸ್ಥಭೂಮಿಯ ಮೇಲೆ ನಿಂತಿರುವ ಈ ಗುಚ್ಛದ ನಡುಶಿಖರದ ಹೆಸರು ಕೀಬೋ. ಇದರ ಎತ್ತರ 5866 ಮೀ. ಇದು ಆಫ್ರಿಕದಲ್ಲೇ ಅತ್ಯುನ್ನತ ಶಿಖರ. ಕಿಲಿಮಾಂಜಾರೋ ಪರ್ವತಗುಚ್ಛ ಪೂರ್ವ-ಪಶ್ಚಿಮವಾಗಿ 81 ಕಿಮೀ ಹಬ್ಬಿದೆ. ಇದರಲ್ಲಿರುವ ಮುಖ್ಯ ಜ್ವಾಲಾಮುಖಿಗಳು ಮೂರು : ಇವುಗಳಲ್ಲಿ ಕೀಬೋ ಇತ್ತೀಚಿನದು. ಷೀರಾ ಅತ್ಯಂತ ಹಳೆಯದು.

ಪ್ರಸ್ಥಭೂಮಿಯಿಂದ ನೋಡಿದರೆ ಕೀಬೋ ಶಿಖರವೊಂದು ಹಿಮಕವಚ ತೊಟ್ಟ ಗೋಪುರದಂತೆ ಕಾಣಿಸುತ್ತದೆ. ಕೀಬೋದ ಹೊರ ಬಾಯಿಯ ಅಗಲ 2.4 ಕಿಮೀ ಆಳ 182 ಮೀ. ಇದರೊಳಗಿರುವ ಶಂಕುವಿನಾಕಾರದ ಬೂದಿಯ ಗುಡ್ಡೆಯ ನಡುವೆ ಇರುವ ಬಾಯಿಯ ಅಗಲ 337 ಮೀ, ಆಳ 121.33 ಮೀ.

ಪೂರ್ವ ಅಫ್ರಿಕದ ಇತರ ಪರ್ವತಗಳಂತೆ ಕಿಲಿಮಾಂಜಾರೋದಲ್ಲೂ ಎತ್ತರಕ್ಕೆ ಅನುಗುಣವಾಗಿ ಖಚಿತವಾದ ಸಸ್ಯವಲಯಗಳನ್ನು ಗುರುತಿಸಬಹುದು. 1213 ಮೀ – 1820 ಮೀ ಎತ್ತರದ ದಕ್ಷಿಣ ಇಳಿಜಾರು ಪ್ರದೇಶದಲ್ಲಿ ಕಾಫಿ, ಬಾಳೆ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. 1820 ಮೀ – 3000 ಮೀ ಎತ್ತರದ ಪ್ರದೇಶ ದಟ್ಟ ಕಾಡುಗಳಿಂದ ತುಂಬಿದೆ. ಉತ್ತರ ಭಾಗದ ಅಷ್ಟೇ ಎತ್ತರದ ಪ್ರದೇಶದಲ್ಲಿ ಇವು ತೆಳ್ಳಗಾಗುತ್ತ ನಡೆದು ವಾಯವ್ಯದ ಒಣ ವಾಯುಗುಣ ಪ್ರದೇಶದಲ್ಲಿ ಅದೃಶ್ಯವಾಗುತ್ತವೆ. ಕಾಡು ಪ್ರದೇಶದ ಮೇಲ್ಭಾಗದಲ್ಲಿ, ಎಂದರೆ 4550 ಮೀ ಗಿಂತ ಎತ್ತರದಲ್ಲಿ. ಮಳೆಯ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತದೆ.

ಅಗ್ನಿ ಪರ್ವತದ ಕುಂಡ

ಕಿಲಿಮಾಂಜಾರೋ ಪರ್ವತಾವಳಿಯ ಸು. 1935 ಚ.ಕಿಮೀ ಪ್ರದೇಶವನ್ನು ಅಭಯಾರಣ್ಯವಾಗಿ ಪರಿಗಣಿಸಲಾಗಿದೆ. ಆನೆ, ಖಡ್ಗಮೃಗ, ಕಾಡೆಮ್ಮೆ, ಜಿಂಕೆ ಮುಂತಾದ ಪ್ರಾಣಿಗಳು ಇಲ್ಲಿ ವಾಸವಾಗಿವೆ.

ಪರ್ವತದ ದಕ್ಷಿಣದಲ್ಲಿರುವ ಮೋಷಿ ಎಂಬಲ್ಲಿಂದ ಕಿಲಿಮಾಂಜಾರೋ ಪರ್ವತದ ಆರೋಹಣ ಸುಲಭ. ಜೋಹಾನ್ಸ್ ರೆಬ್‍ಮನ್ ಮತ್ತು ಲುಡ್ವಿಗ್ ಕ್ರಾಫ್ ಎಂಬ ಜರ್ಮನ್ ಪಾದ್ರಿಗಳು 1848ರಲ್ಲಿ ಕಿಲಿಮಾಂಜಾರೋವನ್ನು ಕಂಡುಹಿಡಿದರು. ಹ್ಯಾನ್ಸ್ ಮೇಯರ್ ಮತ್ತು ಲುಡ್ವಿಗ್ ಪರ್ಟ್‍ಷೆಲರ್-ಇವರು 1889ರಲ್ಲೂ ಫ್ರಿಟ್ಸ್ ಜೇಗರ್ 1997ರಲ್ಲೂ ಕೀಬೋ ಶಿಖರವನ್ನೇರಿದರು. (ಆರ್.ಡಿ.ಆರ್.)

**ಕಿಲಿಮಾಂಜಾರೋ ಪ್ರದೇಶ:** ಟಾಂಗನೀಕದ ಒಂದು ಆಡಳಿತ ವಿಭಾಗ. 1963ರಲ್ಲಿ ಆ ದೇಶ ಕೈಕೊಂಡ ಪುನರ್ವಿಂಗಡಣೆಯ ಫಲವಾಗಿ ಅಸ್ತಿತ್ವಕ್ಕೆ ಬಂತು. ಕಿಲಿಮಾಂಜಾರೋ ಜಿಲ್ಲೆ ಮತ್ತು ಪಾರೆ ಜಿಲ್ಲೆಯನ್ನು ಸೇರಿಸಿ ಈ ಪ್ರದೇಶವನ್ನು ರಚಿಸಲಾಯಿತು. 12800 ಚಕಿಮೀ ವಿಸ್ತಾರವಾಗಿದೆ.

ಕಿಲಿಮಾಂಜಾರೋ ಪರ್ವತಶ್ರೇಣಿಯಿಂದ ಆಗ್ನೇಯಾಭಿಮುಖವಾಗಿ ಪಾರೆ ಪರ್ವತಗಳು ಹಬ್ಬಿವೆ. ಕಿಲಿಮಾಂಜಾರೋದಲ್ಲಿ ಹುಟ್ಟುವ ಹೊಳೆಗಳು ಉತ್ತರಾಭಿಮುಖವಾಗಿ ಹರಿದು ಅಂಬೊಸೆಲಿ ಸರೋವರವನ್ನೋ ಕೀನ್ಯದಲ್ಲಿರುವ ಟ್ಸಾವೋ ನದಿಯನ್ನೋ ಸೇರುತ್ತವೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಮಳೆಯಾಗುವುದು ಮಾರ್ಚ್-ಮೇ ತಿಂಗಳುಗಳಲ್ಲಿ. ಎತ್ತರಕ್ಕೆ ಅನುಗುಣವಾಗಿ ಉಷ್ಣತೆ ವ್ಯತ್ಯಾಸವಾಗುತ್ತದೆ. ಪರ್ವತದ ಬದಿಗಳಲ್ಲಿರುವ ಜ್ವಾಲಾಮುಖಿನಿರ್ಮಿತ ನೆಲ ಅತ್ಯಂತ ಫಲವತ್ತಾದ್ದು. ಪರ್ವತದ ತಪ್ಪಲುಗಳು ಕೆಂಪುಮಣ್ಣಿನಿಂದ ಕೂಡಿವೆ. ವೃಕ್ಷರಾಜಿತ ಸವಾನದಿಂದ ಹಿಡಿದು ಪರ್ವತಕಾಡುಗಳ ಮತ್ತು ಅಫ್ರೊ-ಅಲ್ಪೈನ್ ಸಸ್ಯಗಳವರೆಗೆ ನಾನಾ ಬಗೆಯ ಸಸ್ಯಗಳುಂಟು.

ಕಿಲಿಮಾಂಜಾರೋ ಪ್ರದೇಶದಲ್ಲಿ ವಾಸಿಸುವ ಜನರ ಪಂಗಡಗಳಲ್ಲಿ ಚಗ್ಗಾ ಎಂಬುದು ಅತಿ ದೊಡ್ಡದು : ಇವರು ಕಿಲಿಮಾಂಜಾರೋ ಪರ್ವತದ ಇಳಿಜಾರುಗಳಲ್ಲಿ ವಾಸಿಸುತ್ತಾರೆ. ಪಾರೆಗಳು ವಾಸಿಸುವುದು ಪಾರೆ ಜಿಲ್ಲೆಯಲ್ಲಿ. ಮೂರನೆಯ ಪ್ರಮುಖ ಪಂಗಡವೆಂದರೆ ಮ್ಬುಗು. ಕಿಲಿಮಾಂಜಾರೋದ ಇಳಿಜಾರುಗಳಲ್ಲಿ ಕೆಲವು ಐರೋಪ್ಯರೂ ವಾಸಿಸುತ್ತಾರೆ.

ಕಾಫಿ ಇಲ್ಲಿಯ ಮುಖ್ಯ ಬೆಳೆ. ನೀರಾವರಿ ಬೆಳೆಯಾದ ಕಬ್ಬಿನಿಂದ ಸಕ್ಕರೆ ತೆಗೆಯುವ ಒಂದು ಕಾರ್ಖಾನೆ ಅರುಷ ಚಿನಿ ಎಂಬಲ್ಲಿ ಇದೆ. ಕತ್ತಾಳೆ ನಾರು, ಮುಸುಕಿನ ಜೋಳ, ಬಾಳೆ, ಗೆಣಸು ಮತ್ತು ತಿಂಗಳ ಹುರುಳಿ ಇತರ ಬೆಳೆಗಳು. ಮೋಷಿ ಈ ಪ್ರದೇಶದ ಆಡಳಿತಕೇಂದ್ರ. ಕಿಲಿಮಾಂಜಾರೋದ ದಕ್ಷಿಣದ ಬದಿಯಲ್ಲಿ ಈ ಪಟ್ಟಣವಿದೆ. ಜನಸಂಖ್ಯೆ 246479 (2002). ಇಲ್ಲಿಗೂ ಟಾಂಗಕ್ಕೂ ರೈಲ್ವೆ ಸಂಪರ್ಕವುಂಟು. ಕೀನ್ಯ ರೈಲ್ವೆಯೊಂದಿಗೂ ಸಂಬಂಧ ಏರ್ಪಟ್ಟಿದೆ. (ಬಿ.ಎನ್.ಎ.ಜಿ.)

**ಕೀನ್ಯ:** ಪೂರ್ವ ಆಫ್ರಿಕದ ಒಂದು ಗಣರಾಜ್ಯ. $5^0$ ದ.ಅ. – $6^0$ ಉ.ಅ. ಹಾಗು $33^0$ ಪೂ.ರೇ. – $42^0$ ಪೂ.ರೇ ದಲ್ಲಿ ಹಬ್ಬಿದೆ. ಕೀನ್ಯದ ಒಟ್ಟು ವಿಸ್ತೀರ್ಣ 582,646 ಚ.ಕಿಮೀ. ಜನಸಂಖ್ಯೆ 31139000 (2002). ರಾಜಧಾನಿ ನೈರೋಬಿ, ಇದರ ಜನಸಂಖ್ಯೆ 21,43,254 (2002). ಕೀನ್ಯಕ್ಕೆ ಆ ಹೆಸರು ಬಂದಿರುವುದು ಕೀನ್ಯ ಪರ್ವತದಿಂದಾಗಿ. ಅದನ್ನು ಕಿಕೂಯುಗಳು ಕೀರೀನ್ಯಗ (ಧವಳ ಪರ್ವತ) ಎಂದು ಕರೆಯುತ್ತಾರೆ.

ಮೇಲ್ಮೈಲಕ್ಷಣ: ಇದರ ತೀರ ಪ್ರದೇಶ ದಕ್ಷಿಣದಲ್ಲಿರುವ ಉಂಬ ನದಿಯ ಮುಖಜಭೂಮಿಯಿಂದ ಉತ್ತರದ ಟಿಕ್ ನದಿಮುಖದವರೆಗೂ ಹಬ್ಬಿದೆ. ತೀರ ಅಂಕು ಡೊಂಕು: ಅನೇಕ ಕೊಲ್ಲಿಗಳೂ ಖಾರಿಗಳು ಇವೆ. ಮೊಂಬಾಸ ಮತ್ತು ಕಿಲಿಂಡೀನಿ ಉತ್ತಮವಾದ ಬಂದರುಗಳು. ಮೊಂಬಾಸ, ಲಾಮು ಮಂಡ ಮತ್ತು ಪಟ್ಟ ದ್ವೀಪಗಳು ಮುಖ್ಯ ಭೂಭಾಗದಿಂದ ಬೇರ್ಪಟ್ಟಿವೆ. ಕರಾವಳಿಯ ಮೈದಾನ 4 ರಿಂದ 16 ಕಿಮೀ ಗಳಷ್ಟು ಅಗಲವಾಗಿದೆ. ಪಶ್ಚಿಮಕ್ಕೆ ಹೋದಂತೆಲ್ಲ ಭೂಮಿಯ ಎತ್ತರ ಹೆಚ್ಚುತ್ತ ಹೋಗಿ ಸು. 1800 ಮೀ ಏರುತ್ತದೆ. ನಿಯಿಕ ಪ್ರದೇಶದಲ್ಲಿಯ ಬೆಟ್ಟಗುಡ್ಡಗಳು ಜಲಜಶಿಲೆಗಳಿಂದ ಮಾರ್ಪಟ್ಟಿವೆ. ಟೇಟ ಮತ್ತು ಪಶ್ಚಿಮ ಮೆಚ ಕೋಸ್‍ಗಳು ಬಿಡಿ ಪರ್ವತಗಳು. ಯಟ್ಟಾ ಪ್ರಸ್ಥಭೂಮಿ, ಚೀಯೂಲು ಶ್ರೇಣಿ ಮತ್ತು ಕಿಲಿಮಾಂಜಾರೋ ಪರ್ವತಗಳಲ್ಲಿ ಅನೇಕ ಜ್ವಾಲಾಮುಖಿಗಳುಂಟು. ರೂಡಾಲ್ಫ್ ಸರೋವರದ ಪೂರ್ವಕ್ಕಿರುವ ಕೂಲಾಲ್ ಜ್ವಾಲಾಮುಖಿಯ ಕುಪ್ಪೆಯ ಎತ್ತರ 2258 ಮೀ ಮಾರ್ಸಾಬಿಟ್ 1679 ಮೀ ಎತ್ತರವಾಗಿದೆ. ಇವುಗಳ ಸುತ್ತಮುತ್ತಲೂ ಬರಡು ಭೂಮಿ ಹರಡಿದೆ.

ಪೂರ್ವ ಕೀನ್ಯದಲ್ಲಿರುವ ಸೀಳು ಕಣಿವೆಯ ಪೂರ್ವದ ಅಂಚು ಕಡಿದಾಗಿಯೂ ಎತ್ತರವಾಗಿಯೂ ಇದೆ. ಅಲ್ಲಿರುವ ಅಬರ್‍ದಾರ್ ಶ್ರೇಣಿಯ ಸರಾಸರಿ ಎತ್ತರ 3300 ಮೀ. ಅಲ್ಲಿಯ ಸಟ್ಟಿಮ್ಮ ಮತ್ತು ಕಿನಾಂಗಾಪ್ ಶಿಖರಗಳು ಅನುಕ್ರಮವಾಗಿ 3900 ಮೀ ಹಾಗೂ 3850 ಮೀ ಎತ್ತರವಾಗಿವೆ. ಇದರ ಉತ್ತರಕ್ಕಿರುವ ಲೈಕೀಪೀಯ ಪ್ರದೇಶದ ಎತ್ತರ 1800 ಮೀ. ನೈರೋಬಿಯ ದಕ್ಷಿಣ ಭಾಗದಲ್ಲಿ ಆತಿ ಮತ್ತು ಕಪಿಟೆ ಮೈದಾನಗಳಿವೆ. ಅಬರ್‍ದರ್ ಶ್ರೇಣಿಗಳು ಪೂರ್ವ ಅಗ್ನೇಯಗಳ ಕಡೆ ಇಳಿಜಾರಾಗಿ ಸಾಗಿ ಮತ್ತೆ ಎತ್ತರವಾಗುತ್ತವೆ. ಕೀನ್ಯ ಪರ್ವತ (5122 ಮೀ) ಇರುವುದು ಇಲ್ಲೇ. ಮೇರುವಿನ ಈಶಾನ್ಯಕ್ಕೆ ನ್ಯಾಂಬೇನಿ ಶ್ರೇಣಿಯಿದೆ. ಇದು ಜ್ವಾಲಾಮುಖಿ ನಿರ್ಮಿತವಾದದ್ದು.

ಸೀಳು ಕಣಿವೆ 48–64 ಕಿಮೀ) ಅಗಲವಾಗಿದ್ದು ಸುತ್ತಮುತ್ತಲಿನ ಪ್ರದೇಶಕ್ಕಿಂತ 600–900 ಮೀ ಆಳವಾಗಿದೆ. ಈ ಕಣಿವೆಯ ಉದ್ದಕ್ಕೂ ಅನೇಕ ಬೆಟ್ಟಗುಡ್ಡಗಳೂ, ಜ್ವಾಲಾಮುಖಿಗಳೂ, ಆಳವಿಲ್ಲದ ಸರೋವರಗಳೂ ಉಂಟು. ಇವುಗಳಲ್ಲಿ ಮಗಾಡಿ, ನೈವಾಷ, ಎಲ್ಮೆಂಟೇಟ, ನಾಕೂರು, ಹ್ಯಾನಿಂಗ್ಟನ್ ಮತ್ತು ಬಾರಿಂಗೊ ಮುಖ್ಯ. ಸೀಳು ಕಣಿವೆಯ ಪಶ್ಚಿಮಪಾರ್ಶ್ವ ಪೂರ್ವಪಾರ್ಶ್ವಕ್ಕಿಂತ ಕಡಿದಾಗಿಲ್ಲದಿದ್ದರೂ ಹೆಚ್ಚು ಎತ್ತರವಾಗಿದೆ. ಇದರ ಸರಾಸರಿ ಎತ್ತರ 2700 ಮೀ ಗಿಂತ ಹೆಚ್ಚು. ಈ ಉನ್ನತ ಪ್ರದೇಶದ ಪಶ್ಚಿಮ ಭಾಗದಲ್ಲಿರುವ ಟ್ರಾನ್ಸ್-ನ್ಜೋಯ ಮತ್ತು ವಾಸಿನ್‍ಗೀಷು ಪ್ರಸ್ಥಭೂಮಿಗಳು ಮತ್ತು ದಕ್ಷಿಣಕ್ಕಿರುವ ನಾಂದಿ ಮತ್ತು ಕೆರಿಚೋ ಪರ್ವತ ಪ್ರದೇಶ-ಇವೆಲ್ಲ 1800–2100 ಮೀ ಎತ್ತರದಲ್ಲಿದೆ. ಪರ್ವತ ಪ್ರದೇಶದ ಪಶ್ಚಿಮದ ತುದಿಯಲ್ಲಿರುವ ಎಲ್‍ಗಾನ್ ಶಿಖರದ ಎತ್ತರ 4250 ಮೀ. ಇದು ಉಗಾಂಡ ಗಡಿಯಲ್ಲಿದೆ.

ಪಶ್ಚಿಮ ಕೀನ್ಯದ ಪರ್ವತ ಪ್ರದೇಶದ ಎತ್ತರ 950–1500 ಮೀ. ಪ್ರಸ್ಥಭೂಮಿಯ ನಡುವೆ ತಗ್ಗುನೆಲ ಹಬ್ಬಿದೆ. ದಕ್ಷಿಣದಲ್ಲಿ ಕಿಸ್ಸೆ ಪರ್ವತ ಪ್ರದೇಶವೂ ಗ್ವಾಸಿ ಮತ್ತು ಹೋಮ ಜ್ವಾಲಾಮುಖಿಗಳೂ ಮುಖ್ಯವಾದುವು. ಈ ಪ್ರದೇಶದ ಭಾಗದಲ್ಲಿ ದೊಡ್ಡ ಗ್ರ್ಯಾನೈಟ್ ಗುಡ್ಡಗಳಿವೆ.

ಕೀನ್ಯದ ಸೀಳು ಕಣಿವೆಯ ಪಶ್ಚಿಮದ ಜಲೋತ್ಸಾರಣ ಪ್ರದೇಶದಲ್ಲಿ ಹರಿಯುವ ನದಿಗಳು ವಿಕ್ಟೋರಿಯ ಸರೋವರವನ್ನು ಸೇರುತ್ತವೆ. ಪೂರ್ವದ ನದಿಗಳು ಹಿಂದೂ ಸಾಗರದ ಕಡೆಗೆ ಹರಿಯುತ್ತವೆ. ಕೀನ್ಯದ ದೊಡ್ಡ ನದಿ ಟಾನ. ಇದರ ಉದ್ದ 800 ಕಿಮೀ. ಅತಿ–ಸಾಬಾಕಿ–ಗಾಲಾನ ನದಿಯ ವ್ಯವಸ್ಥೆಯ ಉದ್ದ 500 ಕಿಮೀ. ಇದು ನೈರೋಬಿಯ ಉತ್ತರದಲ್ಲಿ ಉಗಮಿಸಿ ಮಲಿಂಡಿಯ ಬಳಿ ಹಿಂದೂ ಸಾಗರವನ್ನು ಸೇರುತ್ತದೆ. ವಾಸೋನೀರೋ ನದಿಯ ಉಗಮ ಲೈಕಿಪಿಯ ಪ್ರಸ್ಥಭೂಮಿಯಲ್ಲಿ, ಇದು ಪೂರ್ವ ಮುಖವಾಗಿ ಹರಿದು ಲೊರಿಯನ್ ಜವುಗು ಪ್ರದೇಶವನ್ನು ಸೇರುತ್ತದೆ.




ವಾಯುಗುಣ: ಸಮಭಾಜಕದ ಆಚೀಚೆ ಹಬ್ಬಿರುವ ಕೀನ್ಯದ ಅನೇಕ ಕಡೆ ವರ್ಷಕ್ಕೆ 75 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ; ಉತ್ತರ ಕೀನ್ಯದಲ್ಲಿ 25 ಸೆಂಮೀ. ಗಿಂತ ಕಡಿಮೆ. ಅಧಿಕ ಉಷ್ಣತೆ ಮತ್ತು ಬಾಷ್ಪೀಕರಣದಿಂದಾಗಿ ಶುಷ್ಕತೆ ಹೆಚ್ಚು. ಮಳೆ ಬಹಳ ಅನಿಶ್ಚಿತ. ಕೆಲವು ವರ್ಷಗಳಲ್ಲಿ ಅನಾವೃಷ್ಟಿಯ ಕ್ಷೇತ್ರ ವಿಸ್ತರಿಸುವುದುಂಟು ತೀರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುತ್ತದೆ. ಇಲ್ಲಿಯ ಸರಾಸರಿ ಉಷ್ಣತೆ 21$^0$ಸೆ. ಜನವರಿ–ಮಾರ್ಚಿಯಲ್ಲಿ ಸೆಖೆ ಹೆಚ್ಚು; ಜೂನ್–ಜುಲೈ ತಂಪು ಕಾಲ. ಸಾಗರ ಮಾರುತ ಆಹ್ಲಾದಕರ; ಅಲ್ಲಿ ಬಿಸಿಲು ಹೆಚ್ಚು, ಪೂರ್ವ ಕೀನ್ಯದ ಉನ್ನತ ಪ್ರದೇಶಗಳಲ್ಲಿ ತಕ್ಕಮಟ್ಟಿನ ಮಳೆಯಾಗುತ್ತದೆ. ಅಲ್ಲಿ ಮಾರ್ಚಿಯಿಂದ ಮೇ ವರೆಗೆ ಮಳೆಗಾಲ. ಅಕ್ಟೋಬರಿನಿಂದ ಡಿಸೆಂಬರಿನ ವರೆಗಿನ ಕಾಲದಲ್ಲೂ ಮಳೆಯಾಗುತ್ತದೆ. 2100 ಮೀ ಗಿಂತ ಹೆಚ್ಚು ಎತ್ತರವಾಗಿರುವ ಪ್ರದೇಶದಲ್ಲಿ ಮಂಜು ಸುರಿಯುತ್ತದೆ.ಕೀನ್ಯ ಪರ್ವತ ಪ್ರದೇಶದಲ್ಲಿ ಅನೇಕ ಹಿಮನದಿಗಳುಂಟು; ಪಶ್ಚಿಮ ಕೀನ್ಯದ ಪ್ರಸ್ಥಭೂಮಿಗಳಲ್ಲಿ ಸಮನಾಗಿ ಮಳೆಯ ಹಂಚಿಕೆಯಾಗಿದೆ. ಆದರೆ ಕಿಸೂಮು ಮೈದಾನ ಹಾಗೂ ವಿಕ್ಟೋರಿಯ ಸರೋವರತೀರದಲ್ಲಿ ಮಳೆ ಕಡಿಮೆ.

ಸ್ವಾಭಾವಿಕ ಸಸ್ಯಗಳು: 1800–3000 ಮೀ ಎತ್ತರದ ಪ್ರದೇಶಗಳಲ್ಲಿ ಅಲ್ಲಲ್ಲಿ ನಿತ್ಯಹಸಿರು ಕಾಡುಗಳುಂಟು. ಇವುಗಳ ಕೆಳಭಾಗದಲ್ಲಿ ಹುಲ್ಲುಗಾವಲುಗಳಿವೆ. ಕೀನ್ಯದ ಅರಣ್ಯಗಳ ಒಟ್ಟು ವಿಸ್ತೀರ್ಣ 17200 ಚಕಿಮೀ. ಇವೆಲ್ಲವೂ ಪೂರ್ತಿಯಾಗಿ ಎತ್ತರವಾದ ಪ್ರದೇಶಗಳಲ್ಲಿವೆ. ಇವುಗಳಿಗಿಂತ ಮೇಲೆ ಬಿದಿರು ಬೆಳೆದಿದೆ. ಅದಕ್ಕೂ ಎತ್ತರದ ಭೂಮಿ ಬಹುತೇಕ ಬಂಜರು. ಅಲ್ಲಲ್ಲಿ ಕುರುಚಲುಗಳು ಬೆಳೆದಿವೆ. ಪಶ್ಚಿಮದ ಪ್ರಸ್ಥಭೂಮಿಯಲ್ಲಿ ವಿಸ್ತಾರವಾದ ಹುಲ್ಲುಗಾವಲೂ ಅಲ್ಲಲ್ಲಿ ಮರಗಳೂ ಉಂಟು. ಮೇಲೆ ವಿವರಿಸಿದ ಸಸ್ಯ ಪ್ರಕಾರಗಳಿರುವುದು ಲೈಕಿಪಿಯ, ಸೀಳುಕಣಿವೆ ಮತ್ತು ನೈರೋಬಿಯ ದಕ್ಷಿಣ ಭಾಗದಲ್ಲಿ. 900 ಮೀ ಗಿಂತ ತಗ್ಗಿನ ಪ್ರದೇಶಗಳು ಅರೆಮರುಭೂಮಿಗಳು; ಇಲ್ಲಿ ಮುಳ್ಳುಪೊದೆ ಮತ್ತು ಕುರುಚಲು ಸಾಮಾನ್ಯ. ಉತ್ತರ ಕೀನ್ಯದ ಇನ್ನೂ ಒಣಪ್ರದೇಶಗಳು ಮರುಭೂಮಿಗಳು. ಕರಾವಳಿಯಲ್ಲಿ ಅಲ್ಲಲ್ಲಿ ದಟ್ಟವಾದ ಕಾಡುಗಳೂ ಭರತದ ಅಂಚುಗಳಲ್ಲಿ ತೆಂಗು ತಾಳೆಗಳೂ ಅಳಿವೆಗಳ ಪ್ರದೇಶಗಳಲ್ಲಿ ಗುಲ್ಮವೃಕ್ಷಗಳೂ ಸಾಮಾನ್ಯವಾಗಿವೆ.

ಪ್ರಾಣಿಗಳು: ಕೀನ್ಯದ ಕುರುಚಲು ಪೊದೆಗಳ ಪ್ರದೇಶಗಳು ಅನೇಕ ವನ್ಯ ಮೃಗಗಳ ಬೀಡುಗಳಾಗಿವೆ. ಸಿಂಹ, ಚಿರತೆ, ಕಡವೆ, ಕಾಡುನಾಯಿ, ಕಾಡೆಮ್ಮೆ, ಘೇಂಡಾ ಮೃಗ. ಹೇಸರಗತ್ತೆ, ಜಿರಾಫೆಗಳು ಅಧಿಕ ಸಂಖ್ಯೆಯಲ್ಲಿವೆ. ದೊಡ್ಡ ದೊಡ್ಡ ನದಿಗಳಲ್ಲೂ ಸರೋವರಗಳಲ್ಲೂ ನೀರಾನೆಗಳೂ ಮೊಸಳೆಗಳೂ ಮೀನುಗಳೂ ಹೇರಳವಾಗುಂಟು. ನರಿ, ಬಬೂನ್ ಮತ್ತು ಕೋಲಂಬಸ್ ಕೋತಿಗಳೂ ಇವೆ. ಹೆಬ್ಬಾವು, ನಾಗರಹಾವು ಮತ್ತು ಮಾಂಬಾಜಾ ಹಾವುಗಳಿಗೂ ಅನೇಕ ವಿಷಕೀಟಗಳಿಗೂ ಕ್ರಿಮಿ ಕೀಟಗಳಿಗೂ ಇದು ನೆಲೆ. ಉಷ್ಟ್ರಪಕ್ಷಿ, ಕೊಕ್ಕರೆ, ರಣಹದ್ದು, ಗೂಬೆ, ಬಾತು, ಪೆಲಿಕನ್– ಇವು ಕೆಲವು ಹಕ್ಕಿಗಳು. ಕೀನ್ಯದ ವನಗಳು ಮೃಗಯಾ ವಿಹಾರಕ್ಕಾಗಿ ಪ್ರಸಿದ್ಧವಾಗಿವೆ. ಇವು ಸೌಂದರ್ಯದ ನೆಲೆಗಳು ವಿಶ್ವದ ಎಲ್ಲ ಭಾಗಗಳಿಂದಲೂ ಪ್ರವಾಸಿಗರನ್ನು ಇವು ಆಕರ್ಷಿಸಿವೆ. ನೈರೋಬಿ ವನ (112 ಚ.ಕಿಮೀ) ಟ್ಸಾವೋ ವನ (20567 ಚ.ಕಿಮೀ) ಮೌಂಟ್ ಕೀನ್ಯ (581 ಚ.ಕಿಮೀ) ಆಬರ್ಡ್ಯಾರ್ (583 ಚಕಿಮೀ) ಆಂಬೋಸೀಲಿ (3223 ಚಕಿಮೀ) ಮಾರಾ (1790 ಚಕಿಮೀ) ಮತ್ತು ಮೇರು (1536 ಚಕಿಮೀ)–ಇವು ಕೀನ್ಯದ ಮುಖ್ಯ ರಾಷ್ಟ್ರೀಯ ವನಗಳು.

ಜನಜೀವನ: ಕೀನ್ಯದ ಜನರಲ್ಲಿ ಆಫ್ರಿಕನೇತರರು ಕೇವಲ 3% ಇದ್ದರು. ಇವರ ಸಂಖ್ಯೆ ಈಚೆಗೆ ಕಡಿಮೆಯಾಗಿದೆ. ಐರೋಪ್ಯರು ಹಿಂದೆ ಇಲ್ಲಿ ವಾಣಿಜ್ಯ, ಕೃಷಿಗಳಲ್ಲಿ ಅಧಿಕವಾಗಿ ನಿರತರಾಗಿದ್ದರು. ವಲಸೆಗಾರರಲ್ಲಿ ಭಾರತೀಯರೂ ಪಾಕಿಸ್ತಾನಿಗಳೂ ಅಧಿಕ ಸಂಖ್ಯೆಯಲ್ಲಿದ್ದಾರೆ ಮತ್ತು ಅರಬ್ಬರಿದ್ದಾರೆ. ಇವರ ವಾಸ ಬಹುತೇಕ ಕರಾವಳಿಯಲ್ಲಿ. ಆಫ್ರಿಕನ್ ಜನರಲ್ಲಿ ಬಹುಸಂಖ್ಯಾತರು ಸ್ಥಳೀಯ ಮತಗಳನ್ನನುಸರಿಸುವವರು. ಕ್ರೈಸ್ತರು ಸು. ಶೇ. 25 ರಷ್ಟು ಇದ್ದಾರೆ. ಮುಸ್ಲಿಮರು ಶೇ. 6. ಇವರಲ್ಲಿ ಬಹುಮಂದಿ ಆಗಾಖಾನನ ಇಸ್ಮೇಲಿ ಅನುಯಾಯಿಗಳು. ಕೀನ್ಯದ ಅಧಿಕೃತ ಭಾಷೆಗಳು ಇಂಗ್ಲಿಷ್ ಮತ್ತು ಸ್ವಾಹಿಲಿ. ಕಿಕೂಯು ಮತ್ತು ಲುವೋ ಭಾಷೆಗಳು ಪ್ರಚಾರದಲ್ಲಿವೆ.

ಕೀನ್ಯದ ರಾಜಧಾನಿ ನೈರೋಬಿ. ಇತರ ಮುಖ್ಯ ನಗರಗಳು ಮೊಂಬಾಸ, ನಾಕೂರು, ಕೀಸೂಮು, ಎಲ್ಡೊರೆಟ್ ಮತ್ತು ಕಿಟಾಲೆ.

ಕೃಷಿ: ಆಫ್ರಿಕದ ಬಹುಪಾಲು ರಾಷ್ಟ್ರಗಳಂತೆ ಕೀನ್ಯವೂ ಆರ್ಥಿಕ ದೃಷ್ಟಿಯಿಂದ ಹಿಂದುಳಿದ ರಾಷ್ಟ್ರ. ಕೀನ್ಯದ ಅರ್ಥವ್ಯವಸ್ಥೆ ಮೂಲಭೂತವಾಗಿ ಕೃಷಿಮೂಲವಾದ್ದು. ಕೈಗಾರಿಕೋದ್ಯಮ ಎರಡನೆಯ ಮಹಾಯುದ್ಧದಿಂದೀಚೆಗೆ ಬೆಳೆಯುತ್ತ ಬಂದಿದ್ದರೂ ಕೀನ್ಯದ ಅರ್ಥವ್ಯವಸ್ಥೆಯಲ್ಲಿ ಅದರ ಸ್ಥಾನ ಇನ್ನೂ ಕೆಳಮಟ್ಟದಲ್ಲಿಯೇ ಇದೆ. 1954ರಲ್ಲಿ ಕೀನ್ಯದ ರಾಷ್ಟ್ರೀಯ ವರಮಾನದ ಶೇ. 47 ಕೃಷಿಯಿಂದ ಬಂದಿತ್ತು. ಕೈಗಾರಿಕೆಯ ಪಾಲು ಕೇವಲ ಶೇ. 10. ಅಲ್ಲಿಂದೀಚೆಗೆ ಪರಿಸ್ಥಿತಿ ಸ್ವಲ್ಪ ಉತ್ತಮಗೊಂಡಿದೆ. ಕೃಷಿ ಕೈಗಾರಿಕೆಗಳ ಪಾಲು ಅನುಕ್ರಮವಾಗಿ ಶೇ. 36 ಮತ್ತು ಶೇ. 14 ಎಂದು ಇತ್ತೀಚೆಗೆ ಅಂದಾಜು ಮಾಡಲಾಗಿದೆ.

ಕಾಫಿ, ಚಹ, ಸಕ್ಕರೆ, ಕತ್ತಾಳೆ ನಾರು, ಜೋಳ, ಗೋದಿ, ಓಟ್ಸ್ ಮತ್ತು ಹತ್ತಿ ಇಲ್ಲಿಯ ಮುಖ್ಯ ಬೆಳೆಗಳು. ಮಾಂಸ ಮತ್ತು ಹೈನುವಸ್ತುಗಳ ಉತ್ಪಾದನೆಯೂ ಗಮನಾರ್ಹವಾಗಿದೆ.

ಕೃಷಿಕಾರ್ಯ ಕೀನ್ಯದ ಪ್ರಸ್ಥಭೂಮಿ ಬಯಲುಸೀಮೆ ಹಾಗೂ ತೀರ ಪ್ರದೇಶಗಳಲ್ಲಿ ಕೇಂದ್ರಿಕೃತವಾಗಿದೆ. ಪ್ರಸ್ಥಭೂಮಿ ಪ್ರದೇಶದಲ್ಲಿ ಶೇ. 90 ರಷ್ಟು ಭೂಮಿಯ ಮಾಲೀಕತ್ವ ಐರೋಪ್ಯರದು. ಇವರು ಕಾಫಿ, ಚಹ, ಕತ್ತಾಳೆ ನಾರು ಮೊದಲಾದ ಪ್ಲಾಂಟೇಷನ್ ಬೆಳೆಗಳ ಉತ್ಪಾದನೆಯಲ್ಲಿ ನಿರತರಾಗಿದ್ದಾರೆ. ಏಷ್ಯನರು ಮುಖ್ಯವಾಗಿ ಕಬ್ಬು ಬೆಳೆ ಮತ್ತು ಅದರ ಸಂಸ್ಕರಣದಲ್ಲಿ ನಿರತರಾಗಿದ್ದಾರೆ. ಆಫ್ರಿಕನ್ನರು ಆಹಾರವಸ್ತುಗಳನ್ನು ಬೆಳೆಯುವುದರ ಜೊತೆಗೆ ಅಲ್ಪ ಪ್ರಮಾಣದಲ್ಲಿ ಕಾಫಿ, ಹತ್ತಿ ಚಹಾ ಮತ್ತು ಕತ್ತಾಳೆ ನಾರುಗಳನ್ನೂ ಬೆಳೆಯುತ್ತಾರೆ. ಈಚೆಗೆ ಕೀನ್ಯ ಸರ್ಕಾರ ಆಫ್ರಿಕನ್ನರ ಸ್ಥಿತಿಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳಲ್ಲಿ ಅವರನ್ನು ಕೃಷಿ ಉದ್ಯಮಗಳಲ್ಲಿ ನೆಲೆಗೊಳಿಸುವುದೂ ಒಂದಾಗಿದೆ. ಕೀನ್ಯದ ಪ್ರಸ್ಥಭೂಮಿ ಪ್ರದೇಶದ ಜಮೀನಿನಲ್ಲಿ ಎಲ್ಲರಿಗೂ ಸಾಗುವಳಿಗೆ ಅವಕಾಶ ಮಾಡಿಕೊಟ್ಟಿರುವುದರ ಜೊತೆಗೆ ಸರ್ಕಾರ ಐರೋಪ್ಯರಿಂದ ಕೊಂಡ ಭೂಮಿಯಲ್ಲಿ ಆಫ್ರಿಕನರನ್ನು ನೆಲೆಗೊಳಿಸುವ ಬೃಹತ್ ಯೋಜನೆಯೊಂದನ್ನು ಕೈಗೊಂಡಿದೆ.

ಕೀನ್ಯ ಆಹಾರ ವಿಚಾರದಲ್ಲಿ ಬಹುತೇಕ ಸ್ವಯಂಪೂರ್ಣತೆ ಪಡೆದಿದೆ. ಕೀನ್ಯದ ಕಾಡುಗಳು ಸ್ಥಳೀಯ ಮರಮುಟ್ಟಿನ ಬೇಡಿಕೆಯನ್ನು ಪೂರೈಸುವುದರ ಜೊತೆಗೆ ರಫ್ತಿಗಾಗಿ ಮರಗಳನ್ನು ಒದಗಿಸುತ್ತವೆ. ಸರ್ಕಾರ ಈಚೆಗೆ ಪುನರ್ನವೀಕರಣ ಕಾರ್ಯಕ್ರಮವನ್ನು ಕೈಗೊಂಡು ಕಾಡುಗಳನ್ನು ವೃದ್ಧಿಗೊಳಿಸುವುದರಲ್ಲಿ ನಿರತವಾಗಿದೆ. ಕೀನ್ಯದಲ್ಲಿ ಸಮುದ್ರತೀರ ಸಾಕಷ್ಟಿದ್ದರೂ ಸಾಗರಮತ್ಸ್ಯೋತ್ಪನ್ನ ದೇಶದ ಒಟ್ಟು ಮತ್ಸ್ಯೋತ್ಪನ್ನದ 1/5 ರಷ್ಟು ಮಾತ್ರ. ವಿಕ್ಟೋರಿಯ ಸರೋವರ ಮುಖ್ಯ ಮತ್ಸ್ಯೋದ್ಯಮ ಕೇಂದ್ರ.

ಖನಿಜ ಕೈಗಾರಿಕೆ: ಕೀನ್ಯದಲ್ಲಿ ಹೆಚ್ಚು ಖನಿಜ ನಿಕ್ಷೇಪಗಳಿಲ್ಲ. ಚಿನ್ನ ಬೆಳ್ಳಿ, ತಾಮ್ರ, ಸುಣ್ಣಕಲ್ಲು, ಉಪ್ಪು ಮುಂತಾದವು ಇದ್ದರೂ ಬಹು ಕಡಿಮೆ. ಕಲ್ಲಿದ್ದಲು ಮತ್ತು ಕಬ್ಬಿಣದ ಅದುರುಗಳು ಕೀನ್ಯದಲ್ಲಿ ದೊರಕುವುದಿಲ್ಲ. ಆದರೂ ಈಚೆಗೆ ಅಲ್ಲಿಯ ಸರ್ಕಾರ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕೈಕೊಂಡಿದೆ. ದೇಶದ ಸ್ವಸಂಪೂರ್ಣತೆ ಸಾಧಿಸುವ ಉದ್ದೇಶದಿಂದ ಬಂಡವಾಳವಸ್ತುಗಳಿಗಿಂತ ಅನುಭೋಗಿವಸ್ತು ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಆಹಾರ ಪದಾರ್ಥ, ಸಿಗರೇಟ್, ಉಣ್ಣೆಯ ಹೊದಿಕೆಗಳು, ಪಾದರಕ್ಷೆ ಮತ್ತಿತರ ಅನುಭೋಗ ವಸ್ತುಗಳ ಕಾರ್ಖಾನೆಗಳನ್ನು ಮುಖ್ಯ ನಗರಗಳಲ್ಲಿ ಸ್ಥಾಪಿಸಲಾಗಿದೆ.

ಅಂತಾರಾಷ್ಟ್ರೀಯ ವ್ಯಾಪಾರ: ಕೀನ್ಯದ ರಫ್ತುಗಳಲ್ಲಿ ಮುಖ್ಯವಾದವು ಕಾಫಿ, ಕತ್ತಾಳೆ ನಾರು, ಚಹ, ಮಾಂಸ ಹಾಗೂ ಚರ್ಮ. ಕೈಗಾರಿಕಾವಸ್ತುಗಳು, ಯಂತ್ರಗಳು ಮತ್ತು ಪೆಟ್ರೋಲಿಯಂ ಮುಖ್ಯ ಆಮದುಗಳು. ಕೀನ್ಯದ ರಫ್ತುಗಳ 1/3 ಭಾಗ ಬ್ರಿಟನಿಗೂ 1/3 ಭಾಗ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಜರ್ಮನಿಗೂ ಹೋಗುತ್ತದೆ. ಅದರ ಆಮದುಗಳಲ್ಲಿ ಬಹುಭಾಗ ಬ್ರಿಟನ್, ಜಪಾನ್, ಜರ್ಮನಿ ಮತ್ತು ಇರಾನ್‍ಗಳಿಂದ ಬರುತ್ತದೆ. ಅದರ ವ್ಯಾಪಾರಶಿಲ್ಕು ಅದಕ್ಕೆ ಸಾಮಾನ್ಯವಾಗಿ ಅನುಕೂಲಕರವಾಗಿಲ್ಲ.

ಸಾರಿಗೆ ಸಂಪರ್ಕ: ಕೀನ್ಯ ಮತ್ತು ಉಗಾಂಡಗಳ ಆಮದು ರಫ್ತುಗಳ ಬಹುಭಾಗ ಸಾಗುವುದು ಮಾಂಬಾಸದ ಮೂಲಕ. ಇದು ಪೂರ್ವ ಆಫ್ರಿಕದ ಅತಿದೊಡ್ಡ ಬಂದರು. 1896ರಲ್ಲಿ ಆರಂಭವಾಗಿ 1901ರಲ್ಲಿ ಪೂರ್ಣಗೊಂಡ ಉಗಾಂಡ ರೈಲ್ವೆಯಿಂದ ಮಾಂಬಾಸಕ್ಕೂ ವಿಕ್ಟೋರಿಯ ಸರೋವರದ ದಂಡೆಯ ಕೀಸೂಮುವಿಗೂ ಸಂಪರ್ಕ ಏರ್ಪಟ್ಟಿದೆ. ಅಲ್ಲಿಂದ ಉಗಾಂಡಕ್ಕೆ ಜಹಜು ಸಂಪರ್ಕವುಂಟು. 1931ರಲ್ಲಿ ನಾಕೂರುವಿನಿಂದ ವಾಸಿನ್ ಗೀಷು ಪ್ರಸ್ಥಭೂಮಿಯ ಮೂಲಕ ಉಗಾಂಡದ ಕಾಂಪಾಲಕ್ಕೆ ರೈಲ್ವೆಸಂಪರ್ಕ ಕಲ್ಪಿಸಲಾಯಿತು. 1951ರಲ್ಲಿ ಈ ರೈಲು ಮಾರ್ಗವನ್ನು ಪಶ್ಚಿಮ ಉಗಾಂಡದ ಕಾಸೇಸೆ ವರೆಗೂ ವಿಸ್ತರಿಸಲಾಯಿತು. ಹೀಗಾಗಿ ಮಾಂಬಾಸದ ಹಿನ್ನಾಡಿನಲ್ಲಿ 1657 ಕಿಮೀ ಉದ್ದದ ರೈಲು ಸಂಪರ್ಕ ಕಲ್ಪಿಸಿದಂತಾಗಿದೆ. ವಾಯಿಯಿಂದ ಕಾಹೆಗೆ (ಟಾಂಗನೀಕ) ಹಾಕಲಾಗಿರುವ ರೈಲುಮಾರ್ಗದ ಉದ್ದ 150 ಕಿಮೀ. ಇದರಿಂದ ಟಾಂಗ ರೈಲುಮಾರ್ಗಕ್ಕೆ ಸಂಬಂಧ ಏರ್ಪಟ್ಟಿದೆ. ಮಗಾಡಿ ಸರೋವರದ ಸೋಡ ಉತ್ಪನ್ನವನ್ನು ಸಾಗಿಸಲು ಕೋನ್ಜಾದಿಂದ ಕವಲೊಡೆಯುವ ಮಾರ್ಗ ಅನುಕೂಲಕರವಾಗಿದೆ. ಇತರ ರೈಲುಮಾರ್ಗಗಳು ಪರ್ವತನಾಡಿನ ಕೃಷಿ ಪ್ರದೇಶಗಳಿಗೆ ಉಪಯುಕ್ತವಾಗಿವೆ.

ರಸ್ತೆಗಳು ಅಷ್ಟೇನೂ ಅಭಿವೃದ್ಧಿ ಹೊಂದಿಲ್ಲ. ನೈರೋಬಿಗೆ ಆಗ್ನೇಯದಲ್ಲಿರುವ ಎಂಬಾಸಾಕಿಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. (ಕೆ.ಎನ್.ಸಿ.;ಎ.ಬಿ.ಎ.)

**ಕೀನ್ಷಾಸ:** ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ರಾಜಧಾನಿ: ಕಿನ್ಷಾಸ ಪ್ರಾಂತ್ಯದ ಆಡಳಿತ ಕೇಂದ್ರ. ಕಾಂಗೋ ನದಿಯ ಎಡದಂಡೆಯ ಮೇಲೆ–ಅದರ ದಕ್ಷಿಣ ಪಾರ್ಶ್ವದಲ್ಲಿ –ಸ್ಟಾನ್ಲಿ ಮಡುವಿನ ಮುಖಭಾಗದಲ್ಲಿ– ಹಬ್ಬಿದೆ. ಜನಸಂಖ್ಯೆ 4655313 (1994).

ಕೀನ್ಷಾಸ ಕಾಂಗೋರಾಜ್ಯದ ಮುಖ್ಯವಾಣಿಜ್ಯ ಕೇಂದ್ರ. ಕೀನ್ಷಾಸದ ಬಂದರು ಐರೋಪ್ಯರ ಬಡಾವಣೆಯ ಎದುರಿಗೆ ನದೀ ದಂಡೆಯನ್ನು ಆವರಿಸಿ ಕೊಂಡಿದೆ. ಅಲ್ಲಿಂದ ನದಿಯ ಪ್ರವಾಹಕ್ಕೆ ಎದುರಾಗಿ, 1,600 ಕಿಮೀ ದೂರದಲ್ಲಿರುವ ಕೀಸಾಂಗಾನಿಯವರೆಗೆ ನೌಕಾಸಂಚಾರ ಸಾಧ್ಯ. ಕಾಂಗೋ ನದೀಮಾರ್ಗದಲ್ಲಿ ಕೀನ್ಷಾಸ ನಗರವೇ ಪಶ್ಚಿಮದ ತುದಿ. ಅಲ್ಲಿಂದ ಮುಂದೆ, ನೈರುತ್ಯದಲ್ಲಿ 250 ಕಿಮೀ ದೂರದಲ್ಲಿರುವ ಮಟಾಡಿ ರೇವಿಗೆ ಸಮುದ್ರ ನೌಕೆಗಳು ಕಾಂಗೋ ನದಿಯ ಮೂಲಕ ಬರುತ್ತವೆ. ಕೀನ್ಷಾಸ ನಗರಕ್ಕೂ ಮಟಾಡಿಗೂ ನಡುವೆ ರೈಲುಮಾರ್ಗವಿದೆ. ಈ ಭಾಗದಲ್ಲಿ ಕಾಂಗೋನದಿಯ ವೇಗ ಅಧಿಕವಾಗಿದ್ದು ಅನೇಕ ಜಲಪಾತಗಳಿರುವುದರಿಂದ ಇಲ್ಲಿ ನೌಕಾಯಾನ ಸಾಧ್ಯವಿಲ್ಲ.

ಕೀನ್ಷಾಸ ನಗರದಿಂದ ತೆಂಗಿನಕಾಯಿ, ಚೌಬೀನೆ, ಕಾಫಿ, ತವರ, ರಬ್ಬರ್, ದಂತ, ಸಕ್ಕರೆ ಮೊದಲಾದವು ರಫ್ತಾಗುತ್ತವೆ. ನಗರದಲ್ಲಿ ಹಲವು ಜವಳಿ ಗಿರಣಿಗಳಿವೆ. ಬಂದರಿನ ಬಳಿ ವನಸ್ಪತಿ ಎಣ್ಣೆ ಹಾಗೂ ಪೆಟ್ರೋಲಿಯಂ ದಾಸ್ತಾನು ಸ್ಥಳಗಳುಂಟು. ಕಾಂಗೋ ನದಿಯಲ್ಲಿ ಸಂಚರಿಸುವ ಹಡಗುಗಳ ಉಪಯೋಗಕ್ಕಾಗಿ ಮಟಾಡಿ–ಕೀನ್ಷಾಸ ನಗರಗಳ ನಡುವೆ ನದಿಯ ಅಂಚಿನಲ್ಲೇ ಪೆಟ್ರೋಲಿಯಂ ಎಣ್ಣೆಯ ಕೊಳವೆಯನ್ನು ಹಾಕಿದ್ದಾರೆ. ಅಂತಾರಾಷ್ಟ್ರೀಯ ಹಾಗೂ ಅಂತರ್ದೇಶೀಯ ಸಂಚಾರ ಸೌಕರ್ಯಕ್ಕಾಗಿ ಏರ್ಪಟ್ಟಿರುವ ವಿಮಾನ ನಿಲ್ದಾಣ ಈ ನಗರದ ಪೂರ್ವ ದಿಕ್ಕಿನಲ್ಲಿದೆ. (ವಿ.ಜಿ.ಕೆ.)

**ಕೀಲ್ ಕಾಲುವೆ:** ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಕಡಲುಗಳನ್ನು ಕೂಡಿಸುವ ಕಾಲುವೆ. 1887–95ರಲ್ಲಿ ನಿರ್ಮಿತವಾದ ಇದನ್ನು 1907–14ರಲ್ಲಿ ವಿಸ್ತರಿಸಲಾಯಿತು. ಹೋಲ್ಟೆನೌ ಮತ್ತು ಬ್ರನ್ಸ್‌ಬುಟೆಲ್‌ಕೂಗ್‌ಗಳೆಡೆಗಳಲ್ಲಿರುವ ತೂಬುಗಳು 325 ಮೀ ಉದ್ದ, 44 ಮೀ ಅಗಲ ಮತ್ತು 14 ಮೀ ಎತ್ತರವಾಗಿವೆ. ಹೋಲ್ಟೆನೌ ಎಂಬುದು ಕೀಲ್‌ನ ಬಂದರು. ಬ್ರನ್ಸ್‌ಬುಟೆಲ್‌ಕೂಗ್ ಎಂಬುದು ಎಲ್ಬ್ ನದಿಯ ಮುಖ. ಕಾಲುವೆಯ ಉದ್ದ 86 ನಾವಿಕ ಕಿಮೀ, ಅಗಲ 101 ಮೀ ಆಳ 11.11 ಮೀ.

ಕೀಲ್ ಕಾಲುವೆ ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಸಮುದ್ರಗಳನ್ನು ಕೂಡಿಸುವ ಅತಿ ಸುರಕ್ಷಿತವಾದ, ಬಹಳ ಅನುಕೂಲಗಳುಳ್ಳ ಮತ್ತು ಅತಿ ಕಡಿಮೆ ವೆಚ್ಚದ ಜಲಮಾರ್ಗ. (ಎಂ.ಎಸ್.)

**ಕೀವ್‌ಸರೋವರ:** ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ಪೂರ್ವ ಗಡಿಯ ಬಳಿ ಇರುವ ಸರೋವರಗಳ ಪೈಕಿ ಅತ್ಯುನ್ನತವಾದ್ದು. ಸಮುದ್ರಮಟ್ಟಕ್ಕಿಂತ 1438 ಮೀ. ಎತ್ತರದಲ್ಲಿ, ಕೀಮೊ ಪ್ರಾಂತ್ಯಕ್ಕೂ ರುವಾಂಡಕ್ಕೂ ನಡುವೆ ಇದೆ. ಇದರ ಉದ್ದ 90 ಕಿಮೀ, ಗರಿಷ್ಠ ಅಗಲ 50 ಕಿಮೀ, ವಿಸ್ತೀರ್ಣ 2667 ಚ.ಕಿಮೀ. ತ್ರಿಕೋಣಾಕೃತಿಯಲ್ಲಿರುವ ಈ ಸರೋವರದ ಸರಾಸರಿ ಆಳ 216 ಮೀ. ಹಲವು ಕಡೆ ಇದು 467 ಮೀ ಆಳವಾಗಿದೆ. ಇದರ ನೀರು ದಕ್ಷಿಣದ ಕಡೆಗೆ ರೂಜ಼ಿಜ಼ಿ ನದಿಯ ಬಂಡೆಗಳ ಮೂಲಕ ಹೊರಕ್ಕೆ ಹರಿದು 690 ಮೀ ಕೆಳಗಿರುವ ಟಾಂಗನೀಕ ಸರೋವರವನ್ನು ಸೇರುತ್ತದೆ. ಇಲ್ಲಿ ವಿದ್ಯುತ್ತಿನ ಉತ್ಪಾದನೆಯಾಗುತ್ತದೆ.

ಕೀವ್ ಆಫ್ರಿಕದಲ್ಲೆಲ್ಲ ಅತ್ಯಂತ ಸುಂದರವಾದ ಸರೋವರ. ಇಟಲಿಯ ಲಾಗೋಮಾಜೋರಿ ಸರೋವರವನ್ನು ಬಿಟ್ಟರೆ ಕೀವ್ ಸರೋವರವೇ ಪ್ರಪಂಚದ ಅತ್ಯಂತ ಸುಂದರ ಸರೋವರವೆಂದು ಜಾನ್ ಗಂತರ್ ಹೇಳಿದ್ದಾನೆ. ಚಿತ್ರಪಟದಂತೆ ಆಕರ್ಷಕವಾದ ಪ್ರಕೃತಿ ಸೌಂದರ್ಯದಿಂದ ಕೂಡಿದ ಮತ್ತು ಮೆಟ್ಟಲು ಮೆಟ್ಟಲಾಗಿರುವ ದಡಗಳು ಕೆಲವು ಕಡೆ ಅತ್ಯಂತ ಕಡಿದಾಗಿವೆ.

ಕೀವ್ ಸರೋವರದ ಮೇಲ್ಮೈ ಆಗಿಂದಾಗ್ಗೆ ಥಟ್ಟನೆ ಸಂಭವಿಸುವ ಬಿರುಗಾಳಿಯಿಂದ ಪ್ರಕ್ಷುಬ್ಧಗೊಳ್ಳುತ್ತದೆ. ಈ ಸರೋವರದಲ್ಲಿ ಮೀನು, ನೀರುನಾಯಿ ಮತ್ತು ನೀರುಬೆಕ್ಕುಗಳುಂಟು, ಮೊಸಳೆಗಳಾಗಲಿ, ನೀರಾನೆಗಳಾಗಲೀ ಇಲ್ಲ. ಇದರ ಸುತ್ತ ಮುತ್ತ ಸೊಳ್ಳೆಗಳಿಲ್ಲ. ಈ ಸರೋವರದಲ್ಲಿರುವ ಜೀವಿವರ್ಗವೂ ಟಾಂಗನೀಕ ಸರೋವರದ್ದೂ ಭಿನ್ನವಾದವು: ಆದರೆ ಇದೂ ಎಡ್ವರ್ಡ್ ಸರೋವರದ್ದೂ ಒಂದೇತರ. ಜ್ವಾಲಾಮುಖಿಯ ಲಾವದಿಂದಲೂ ಮಳೆಯ ನೀರಿನಿಂದಲೂ ಈ ಸರೋವರ ಸಂಭವಿಸಿದೆಯೆಂದು ಹೇಳಲಾಗಿದೆ. 1894ರಲ್ಲಿ ಜರ್ಮನಿಯ ಪರಿಶೋಧಕ ಕೌಂಟ್ ಅಡಾಲ್ಫ್ ವಾನ್ ಗಾಟ್ಸೆನ್ ಮೊದಲ ಬಾರಿಗೆ ಕೀವೂ ಸರೋವರವನ್ನು ಸಂದರ್ಶಿಸಿದ ವಿದೇಶೀಯ. (ಎಸ್.ಎನ್.ಎಲ್.)

**ಕುಂದಗೋಳ:** ಧಾರವಾಡ ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯಸ್ಥಳ. ಹುಬ್ಬಳ್ಳಿ ತಾಲ್ಲೂಕಿನ ಆಗ್ನೇಯಕ್ಕಿದೆ. ತಾಲ್ಲೂಕಿನ ವಿಸ್ತೀರ್ಣ 608 ಚ.ಕಿಮೀ. ಜನಸಂಖ್ಯೆ 1,57,039. 1948ರಲ್ಲಿ ಇದು ಧಾರವಾಡ ಜಿಲ್ಲೆಯಲ್ಲಿ ಸಮಾವೇಶವಾಗುವ ಮೊದಲು ಜಮಖಂಡಿ ಸಂಸ್ಥಾನದ ಆಡಳಿತದಲ್ಲಿತ್ತು. ಇಲ್ಲಿಯದು ಶುಷ್ಕ ವಾಯುಗುಣ; ಕಪ್ಪುಮಿಶ್ರಿತ ತುಂಬ ಫಲವತ್ತಾದ ಮಣ್ಣು. ಹತ್ತಿ ಮತ್ತು ಜೋಳ ಇಲ್ಲಿಯ ಮುಖ್ಯ ಬೆಳೆಗಳು. ಮಳೆ ಸಾಮಾನ್ಯವಾಗಿ 60–75 ಸೆಮೀ.

ಮೊದಲು ಈ ತಾಲ್ಲೂಕಿನಲ್ಲಿದ್ದ ಗ್ರಾಮಗಳ ಸಂಖ್ಯೆ 58. ಪ್ರಾದೇಶಿಕ ಬದಲಾವಣೆಗಳ ಅನಂತರ 51ಕ್ಕೆ ಇಳಿಯಿತು. ಪಟ್ಟಣವೆಂದರೆ ಕುಂದಗೋಳವೊಂದೇ. ಎರಡು ದೊಡ್ಡ ಪಂಚಾಯಿತಿ ಗ್ರಾಮಗಳಿವೆ, ಉಳಿದವು ಕಿರಿಯವು.

ತಾಲ್ಲೂಕಿನ ಮುಖ್ಯಸ್ಥಳವಾದ ಕುಂದಗೋಳ ಇತಿಹಾಸ ಪ್ರಸಿದ್ಧವಾದ್ದು. ಹುಬ್ಬಳ್ಳಿಯಿಂದ ಆಗ್ನೇಯಕ್ಕೆ 15 ಕಿಮೀ ದೂರದಲ್ಲಿರುವ ಈ ಪಟ್ಟಣ ಹುಬ್ಬಳ್ಳಿ–ಬೆಂಗಳೂರು ಮುಖ್ಯ ರೈಲುಮಾರ್ಗದಲ್ಲಿದೆ. ಇಲ್ಲಿಯ ಪುರಸಭೆ 1877ರಲ್ಲಿ ಸ್ಥಾಪಿತವಾಯಿತು. ಜನಸಂಖ್ಯೆ 16,837. ಇಲ್ಲಿ ದೊಡ್ಡಕೈಗಾರಿಕೆ ಇಲ್ಲ. ಹತ್ತಿ ಶುದ್ಧೀಕರಣ ಕಾರ್ಖಾನೆಯಿದೆ. ಕೃಷಿಯೇ ಮುಖ್ಯ ಕಸಬು. (ಎಸ್.ವಿ.ಪಿ.ಎ.)

**ಕುಂದಾಪುರ:** ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿದೆ. ವಾರ್ಷಿಕ ಸರಾಸರಿ ಮಳೆ 360 ಸೆಂಮೀ. ನೈರುತ್ಯ ಮಾನ್ಸೂನ್ ಮಾರುತಗಳ ಪ್ರಭಾವದಿಂದ ವಿಶೇಷ ಮಳೆಯಾಗುತ್ತದೆ. ಎತ್ತರ ಪ್ರದೇಶದಲ್ಲಿರುವ ದಟ್ಟವಾದ ಕಾಡುಗಳಲ್ಲಿ ತೇಗ, ಹೊನ್ನೆ, ಬೀಟೆ, ಕರಿ ಮರ, ಬೆಳನಂದಿ, ಮತ್ತಿ, ಹಲಸು ಮುಂತಾದ ಮರಗಳಿವೆ. ತಾಲ್ಲೂಕಿನ ಕೇಂದ್ರವಾದ ಕುಂದಾಪುರದಲ್ಲಿ ಮತ್ತು ಬಸ್ರೂರಿನಲ್ಲಿ ಮರಕೊಯ್ಯುವ ಕಾರ್ಖಾನೆಗಳಿವೆ.

ಭೂಮಿ ಫಲವತ್ತಾಗಿದೆ. ಜನರ ಮುಖ್ಯ ವೃತ್ತಿ ಕೃಷಿ. ಬೇಸಾಯಕ್ಕೆ ಮಳೆಯ ನೀರೇ ಆಧಾರ. ನೀರಾವರಿಗಾಗಿ ಅಲ್ಲಲ್ಲಿ ನದಿಗಳಿಗೆ ಸಣ್ಣ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ತಾಲ್ಲೂಕಿನಲ್ಲಿ ಬೆಳೆಯುವ ಮುಖ್ಯ ಅಹಾರ ಬೆಳೆಗಳು ಬತ್ತ ಮತ್ತು ರಾಗಿ, ಉದ್ದು, ಹೆಸರು, ಹುರುಳಿ, ಅವರೆ, ಅಡಕೆ, ತೆಂಗು, ಬಾಳೆ, ಕಬ್ಬು, ಗೇರುಬೀಜ, ಮೆಣಸು ಮತ್ತು ಗೆಣಸು ಇತರ ಬೆಳೆಗಳು. ಬುಟ್ಟಿ ಮತ್ತು ಚಾಪೆಗಳನ್ನು ಹೆಣೆಯುವುದು, ಬೆತ್ತದ ಕೆಲಸ, ನೆಯ್ಗೆ, ಚರ್ಮದ ಸಾಮಾನು, ಕೊಬ್ಬರಿ ಎಣ್ಣೆ ಮತ್ತು ಹೆಂಚು ತಯಾರಿಕೆ ಮೀನುಗಾರಿಕೆ–ಇವು ಇಲ್ಲಿಯ ಮುಖ್ಯ ಉದ್ಯೋಗಗಳು. ಹೆಂಚು, ಬೆಲ್ಲ, ತೆಂಗಿನಕಾಯಿ ಮತ್ತು ಮಡಕೆ ಇವು ತಾಲ್ಲೂಕಿನಿಂದ ಹೊರಗೆ ವ್ಯಾಪಾರವಾಗುವ ವಸ್ತುಗಳು. ತಾಲ್ಲೂಕಿನ ಒಟ್ಟು ಜನಸಂಖ್ಯೆ 3,77,372.

ಈ ತಾಲ್ಲೂಕಿನಲ್ಲಿ ಒಂದು ಕಾಲೇಜು, ಪ್ರೌಢಶಾಲೆಗಳು ಮತ್ತು ಇತರೆ ಶಾಲೆಗಳು ಇವೆ. ತಾಲ್ಲೂಕು ರಾಷ್ಟ್ರೀಯ ವಿಸ್ತರಣ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮ ಪ್ರದೇಶಗಳು ಅಭಿವೃದ್ಧಿ ಹೊಂದುತ್ತಿವೆ. ಈ ಯೋಜನೆಯ ಆಶ್ರಯದಲ್ಲಿ ವಯಸ್ಕರ ಶಿಕ್ಷಣವೂ ನಡೆಯುತ್ತಿದೆ.

ತಾಲ್ಲೂಕಿನ ಕೇಂದ್ರವಾದ ಈ ಪಟ್ಟಣ ಒಂದು ಬಂದರು ಮತ್ತು ಮುಖ್ಯ ವ್ಯಾಪಾರ ಕೇಂದ್ರ. ಹಾಲಾಡಿ (ಗರ್ಗತ), ಚಕ್ರ, ಕೊಲ್ಲೂರು, ಜಿಂಬೂ ಮತ್ತು ಸೂಕ್ತಿಮತಿಗಳೆಂಬ ಐದು ನದಿಗಳು ಸಂಗಮವಾಗಿ ನಿರ್ಮಾಣವಾದ ವಿಶಾಲವಾದ ಪಂಚಗಂಗಾವಳಿ (ಗಂಗೊಳ್ಳಿ) ನದೀ ಅಳಿವೆಯ ದಕ್ಷಿಣಕ್ಕೆ ಸಮತಟ್ಟಾದ ಪ್ರದೇಶದಲ್ಲಿದೆ. ಪಂಚ ಗಂಗಾವಳಿಯ ಅಳಿವೆಯ ಉತ್ತರ ತೀರದಲ್ಲಿರುವ ಗಂಗೊಳ್ಳಿ ಹಿಂದಿನ ಕಾಲದಿಂದಲೂ ಬಳಕೆಯಲ್ಲಿದ್ದ ಬಂದರು. ಅಳಿವೆಯಿಂದ 5 ಕಿಮೀ ದೂರದೊಳಗೆ ನದಿಯಲ್ಲಿ ಹಲವು ಚಿಕ್ಕ ಫಲವತ್ತಾದ ದ್ವೀಪಗಳು ಇವೆ. ಅವುಗಳಲ್ಲಿ ಉಪ್ಪಿನ ಕುದುರು, ಹಿರಿ (ಹೇರಿ) ಕುದುರು ಮತ್ತು ಹಟ್ಟಿ ಕುದುರು ಮುಖ್ಯವಾದವು.

ಪಶ್ಚಿಮ ಕರಾವಳಿಯ ಹೆದ್ದಾರಿ ನಿರ್ಮಾಣದ ಅಂಗವಾಗಿ ಗಂಗಾವಳಿಗೆ ಹಾಕಲಾದ ಹೊಸ ಮಾದರಿಯ ಸೇತುವೆಗಳಿಂದ ಕುಂದಾಪುರದ ದಕ್ಷಿಣೋತ್ತರ ಭಾಗಗಳಿಗೆ ನೇರ ಸಂಚಾರ ಸಂಪರ್ಕವುಂಟಾಗಿದೆ. ಕುಂದಾಪುರ ಹೆಂಚು ಮತ್ತು ಕೆಲವು ಚಿಕ್ಕ ಕೈಗಾರಿಕೆಗಳ ಕೇಂದ್ರವಾಗಿಯೂ ಹೆಸರಾಗಿದೆ. ಇಲ್ಲಿ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಶಾಲಾ ಕಾಲೇಜುಗಳಿವೆ. ಕುಂದಾಪುರದಲ್ಲಿ ಪ್ರತಿ ಶನಿವಾರ ನಡೆಯುವ ಸಂತೆ ಈ ಭಾಗದಲ್ಲೆಲ್ಲ ಪ್ರಸಿದ್ಧವಾದ್ದು. ಕೊಡಚಾದ್ರಿ ವಲಯದ ಕಬ್ಬಿಣದ ಅದಿರಿನ ಸ್ವಲ್ಪ ಭಾಗ ಗಂಗೊಳ್ಳಿ ಬಂದರಿನ ಮೂಲಕ ರಫ್ತಾಗುತ್ತದೆ. ಇದನ್ನು ಅಧಿಕಗೊಳಿಸುವ ದೃಷ್ಟಿಯಿಂದ ಕೊಡಚಾದ್ರಿಯಿಂದ ಗಂಗೊಳ್ಳಿಗೆ ಅದಿರು ರವಾನೆಗಾಗಿ ಒಂದು ಸಾರಿಗೆ ದಾರಿಯನ್ನು ರಚಿಸುವ ಸಾಧ್ಯತೆ ಪರಿಶೀಲನೆಯಲ್ಲಿದೆ. ಕುಂದಾಪುರದಿಂದ 6 ಕಿಮೀ ದೂರಕ್ಕೆ ಪೂರ್ವದಲ್ಲಿರುವ ಬಸರೂರು ಒಂದು ಚಾರಿತ್ರಿಕ ಸ್ಥಳ. ಯಕ್ಷಗಾನ, ನಾಟಕ ಮತ್ತು ಕುಣಿತ ಈ ತಾಲ್ಲೂಕಿನ ಮುಖ್ಯ ಕಲೆಗಳು. ಗ್ರಾಮಪ್ರದೇಶದಲ್ಲಿ ಕಂಬಳ ಮತ್ತು ಕೋಳಿಕಾಳಗ ಜನಪ್ರಿಯವಾಗಿವೆ. (ಎಂ.ವಿ.;ಎಂ.ಜಿ.ಕೆ.)

**ಕುಂಭಕೋಣಂ:** ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ, ಕಾವೇರಿ ನದಿಯ ದಂಡೆಯಲ್ಲಿ, ಚೆನ್ನೈನಿಂದ 310 ಕಿಮೀ ದೂರದಲ್ಲಿರುವ ಒಂದು ಪುರಾತನ ನಗರ. ಹಿಂದೆ ಇದು ಚೋಳರ ರಾಜಧಾನಿಯಾಗಿತ್ತು. ವಿಸ್ತೀರ್ಣ 12 ಚ.ಕಿಮೀ. ಇಲ್ಲಿ ಕುಂಭೇಶ್ವರ ದೇವಾಲಯವಿರುವುದರಿಂದ ಇದಕ್ಕೆ ಈ ಹೆಸರು ಬಂದಿರುವುದಾಗಿ ಹೇಳಲಾಗಿದೆ. ಕಾವೇರಿಯ ದೇವಾಲಯವಿರುವುದರಿಂದ ಇದಕ್ಕೆ ಈ ಹೆಸರು ಬಂದಿರುವುದಾಗಿಯೂ ಹೇಳಲಾಗಿದೆ. ಕಾವೇರಿಯ ಎರಡು ಶಾಖೆಗಳ ಮಧ್ಯದಲ್ಲಿ ಪೂರ್ವ ಪಶ್ಚಿಮವಾಗಿ ಹರಡಿದೆ. 5 ಕಿಮೀ ಉದ್ದದ ತಗ್ಗು ಪ್ರದೇಶದಲ್ಲಿ ಉ. ಅ. $10^0 58'$ ಮತ್ತು ಪೂ. ರೇ. $79^0 25'$ ಮೇಲಿದೆ. ಇದರ ಪುರಾತನ ಐತಿಹಾಸಿಕ ದಾಖಲೆಗಳು ಅಪೂರ್ಣವಾಗಿವೆ. ಆದಿಶಂಕರರಿಂದ ಸ್ಥಾಪಿತವಾದುದೆಂದು ಹೇಳಲಾದ ಕಾಶಿ ಮಠ ಇಲ್ಲಿದೆ.

ಕುಂಭಕೋಣಂ ಪ್ರಮುಖ ಕೈಗಾರಿಕಾ ಕೇಂದ್ರ. ಇಲ್ಲಿ ರೇಷ್ಮೆಸೀರೆ, ಹತ್ತಿಬಟ್ಟೆ, ಹಿತ್ತಾಳೆ ಮತ್ತು ತಾಮ್ರದ ಪೂಜಾ ಪಾತ್ರೆಗಳು, ಗಂಟೆ ಮುಂತಾದವುಗಳನ್ನು ತಯಾರಿಸುವರು. ಅಕ್ಕಿ ಗಿರಣಿ, ತೆಂಗಿನ ಎಣ್ಣೆಯ ತಯಾರಿಕೆ ಇವು ಇಲ್ಲಿಯ ಎರಡು ದೊಡ್ಡ ಕೈಗಾರಿಕೆಗಳು. ಬತ್ತ, ತೆಂಗು, ವೀಳೆಯದೆಲೆ ಮತ್ತು ಬಾಳೆ ಹಣ್ಣು ಇಲ್ಲಿಯ ಮುಖ್ಯ ಕೃಷಿ ಉತ್ಪನ್ನಗಳು. ಸರ್ಕಾರಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಶಾಲೆಗಳೂ ಇತರ ಹಲವಾರು ಶಾಲೆಗಳೂ ಇವೆ. ಇದು ರೈಲ್ವೆ ಮತ್ತು ರಸ್ತೆಗಳ ಸಂಧಿಸ್ಥಳ. ಜನಸಂಖ್ಯೆ 1,40,021. (ಯು.ಜಿ.ಎಂ.;ಜಿ.ಎಚ್.)

**ಕುಕ್ ದ್ವೀಪಗಳು:** ಶಾಂತಸಾಗರದ ಈ ದ್ವೀಪ ಸಮೂಹ ನ್ಯೂಜಿಲೆಂಡಿನ ಈಶಾನ್ಯದಲ್ಲಿದೆ. ಫ್ರೆಂಚ್ ಪಾಲಿನೇಷ್ಯ ಮತ್ತು ಫಿಜಿ ದ್ವೀಪಗಳ ಮಧ್ಯ ದ.ಅ. $21^0 12'$ ಮತ್ತು ಪ.ರೇ. $159^0 46'$ ನಡುವೆ ಹಂಚಿಕೆಯಾಗಿದೆ.

ಇಲ್ಲಿ ಸು. 15 ಪ್ರಮುಖ ದ್ವೀಪಗಳಿದ್ದು ಅವು ಸು. 2.2 ಮಿಲಿಯನ್ ಚ.ಕಿಮೀ ವಿಸ್ತಾರ ಸಾಗರದಲ್ಲಿ ಹಂಚಿಕೆಯಾಗಿವೆ. ಈ ದ್ವೀಪಗಳನ್ನು ಎರಡು ಪ್ರತ್ಯೇಕ ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಅವು ದಕ್ಷಿಣ ಕುಕ್ ದ್ವೀಪಗಳು ಮತ್ತು ಉತ್ತರದ ಕುಕ್ ದ್ವೀಪಗಳಾದ ಹವಳದಿಬ್ಬಗಳು.

ಈ ದ್ವೀಪಗಳು ಜ್ವಾಲಾಮುಖಿ ಕಾರ್ಯಾಚರಣೆಯಿಂದ ಉಂಟಾಗಿರುವುದು ಉತ್ತರದಲ್ಲಿರುವ ಕುಕ್ ದ್ವೀಪಗಳು ದಕ್ಷಿಣದ ದ್ವೀಪಗಳಿಗಿಂತ ಪುರಾತನವಾದದ್ದು, ಇವುಗಳಲ್ಲಿ 6 ದ್ವೀಪಗಳು ನೀರಿನಲ್ಲಿ ಮುಳುಗಡೆಯಾಗಿದ್ದು ಅವುಗಳ ಮೇಲೆ ಹವಳ ದಿಬ್ಬಗಳು ನಿರ್ಮಾಣವಾಗಿವೆ.

15 ಕುಕ್ ದ್ವೀಪಗಳನ್ನು ಮೂರು ಪ್ರಮುಖ ವಿಭಾಗಗಳನ್ನಾಗಿ ಎತ್ತರದ ಆಧಾರದ ಮೇಲೆ ವರ್ಗೀಕರಿಸಲಾಗಿದೆ: ಎತ್ತರದ ಕುಕ್ ದ್ವೀಪಗಳು ತಗ್ಗಿನ ಕುಕ್ ದ್ವೀಪಗಳು ಉತ್ತರದ ಕುಕ್ ದ್ವೀಪಗಳು. ಈ ದ್ವೀಪ ರಾಷ್ಟ್ರ 240 ಚ.ಕಿಮೀ. ವಿಸ್ತಾರವನ್ನು ಹೊಂದಿದೆ. ಇಲ್ಲಿನ ಜನಸಂಖ್ಯೆ 18,027 (2001). ಜನಸಾಂದ್ರತೆ 76 ಪ್ರತಿ ಚ.ಕಿಮೀಗೆ. ಅಧಿಕೃತ ಭಾಷೆ ಇಂಗ್ಲಿಷ್ ಮತ್ತು ಕುಕ್‌ದ್ವೀಪಗಳ ಮಾಔರಿ, ಸರ್ಕಾರ ರಾಜ ಪ್ರಭುತ್ವ: ನ್ಯೂಜಿಲೆಂಡ್ ಡಾಲರ್ ಇಲ್ಲಿನ ನಾಣ್ಯ. ರಾಜಧಾನಿ ಅವರುವ.

ಈ ದ್ವೀಪಗಳ ರಾಜಕೀಯ ವ್ಯವಸ್ಥೆ ಗಣತಂತ್ರ ಪ್ರಜಾಪ್ರಭುತ್ವದ ಚೌಕಟ್ಟಿಗೆ ಒಳಪಟ್ಟಿದೆ. ಲೋಕಸಭೆಗೆ ಸದಸ್ಯರು ತಮ್ಮ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ, ನ್ಯೂಜಿಲೆಂಡಿನ ಅಧೀನದಲ್ಲಿ ಸರ್ಕಾರ ಕಾರ್ಯ ನಿರ್ವಹಿಸುತ್ತದೆ. ರಕ್ಷಣಾಕಾರ್ಯಗಳು ನ್ಯೂಜಿಲೆಂಡ್ ಮೂಲಕ ನಡೆಯುತ್ತದೆ.

ಅರ್ಥವ್ಯವಸ್ಥೆ–ಪ್ರವಾಸೋದ್ಯಮ ದೇಶದ ಅವಿಭಾಜ್ಯ ಅಂಗವಾಗಿದೆ. ಹೆಚ್ಚಿನ ಆದಾಯ ಇದರಿಂದ ಬರುತ್ತದೆ. ಬ್ಯಾಂಕಿಂಗ್ ಮತ್ತು ಸಾಗರ ಮೂಲದ ಪದಾರ್ಥಗಳು ಮತ್ತು ಹಣ್ಣುಗಳ ರಫ್ತಿನಿಂದ ವಿದೇಶಿವಿನಿಮಯವನ್ನು ಗಳಿಸುತ್ತಿದೆ. ತಲಾ ಆದಾಯ 9,100 ಡಾಲರ್. (2001). (ವಿ.ಎಸ್.ಎ.)

**ಕುಕ್, ಜೇಮ್ಸ್:** 1728–79. ಇಂಗ್ಲೆಂಡಿನ ಪ್ರಸಿದ್ಧ ನಾವಿಕ, ಸಂಶೋಧಕ ಮತ್ತು ಜಲರಾಶಿ ವಿವರಣಶಾಸ್ತ್ರಜ್ಞ (ಹೈಡ್ರೊಗ್ರಾಫರ್). ಯಾರ್ಕ್‌ಷೈರಿನ ಮಾರ್ಟನ್‌ನಲ್ಲಿ ಕೃಷಿಕೂಲಿಗಾರನೊಬ್ಬನ ಮಗನಾಗಿ ಹುಟ್ಟಿ ಅಲ್ಲೇ ವಿದ್ಯಾಭ್ಯಾಸ ಪಡೆದ. ತನ್ನ 17ನೆಯ ವಯಸ್ಸಿನಲ್ಲಿ ಕಿರಾಣಿ ಅಂಗಡಿಯೊಂದರಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದರೂ ಅವನ ಒಲವು ಸಮುದ್ರಯಾನದ ಕಡೆಗಿತ್ತು. ಆದ್ದರಿಂದ ಜಾನ್ ವಾಕರ್ ಎಂಬ

ನೌಕಾಯಜಮಾನನ ಬಳಿ ಕೆಲಸಕ್ಕೆ ಸೇರಿ ಪರಿಶ್ರಮ ಗಳಿಸಿದ (1746). ಚಳಿಗಾಲದಲ್ಲಿ ಗಣಿತ ಮತ್ತು ನೌಕಾಯಾನದ ಬಗ್ಗೆ ಅಭ್ಯಾಸ ನಡೆಸುತ್ತಿದ್ದ. ಸು. 10 ವರ್ಷಗಳ ನಂತರ, ಬ್ರಿಟನ್ ಫ್ರಾನ್ಸ್‌ಗಳ ನಡುವೆ ಯುದ್ಧ ಸಂಭವಿಸಿದಾಗ, ಕುಕ್ ನೌಕಾಸೈನ್ಯ ಸೇರಿ ವಿವಿಧ ಮಟ್ಟಗಳಲ್ಲಿ ಸೇವೆ ಸಲ್ಲಿಸಿ ಪಡೆದ ಅನುಭವ ಅಪಾರವಾದ್ದು (1755). ಅಲ್ಲಿ ಆತನ ಸಾಮರ್ಥ್ಯ ದಕ್ಷತೆಗಳು ಮೆಚ್ಚುಗೆಗಳಿಸಿದುವು. ಅವನಿಗೆ ಶೀಘ್ರವಾಗಿ ಬಡ್ತಿಗಳು ಲಭ್ಯವಾದುವು. ಸೇಂಟ್ ಲಾರೆನ್ಸ್ ನದಿ ಲ್ಯಾಬ್ರಡಾರ್ ಮತ್ತು ನ್ಯೂಫೌಂಡ್‌ಲೆಂಡ್ ತೀರಪ್ರದೇಶಗಳ ಪರಿಶೋಧನೆಯಲ್ಲಿ ಕುಕ್ ತೊಡಗಿದ್ದ (1759–1767). ಈತ ತಯಾರಿಸಿದ ಭೂಪಟಗಳು ನೀಡಿದ ಭೌಗೋಳಿಕ ಮಾಹಿತಿಗಳು ಲಂಡನ್ನಿನ ರಾಯಲ್ ಸೊಸೈಟಿಯ ಮೆಚ್ಚುಗೆಗಳಿಸಿದುವು. ಕುಕ್‌ಗೆ ಆ ಸಂಸ್ಥೆಯ ಸದಸ್ಯತ್ವದ ಗೌರವ ಲಭ್ಯವಾಯಿತು. ತಹೀತಿ ದ್ವೀಪದಿಂದ ಶುಕ್ರಗ್ರಹವನ್ನು ವೀಕ್ಷಿಸಲು ಮತ್ತು ದಕ್ಷಿಣ ಪೆಸಿಫಿಕ್ ಸಾಗರ ಪ್ರದೇಶದಲ್ಲಿ ಸಂಶೋಧನೆ ನಡೆಸಲು 1768 ರಲ್ಲಿ ಎಂಡೆವರ್ ನೌಕೆಯ ಕಪ್ತಾನನಾಗಿ ಕುಕ್ ತೆರಳಿದ. ನ್ಯೂಜಿಲೆಂಡ್, ಆಸ್ಟ್ರೇಲಿಯ ಮತ್ತು ನ್ಯೂಗಿನಿ ತೀರಪ್ರದೇಶಗಳ ಪರಿಶೋಧನೆಯ ಅನಂತರ 1771 ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿ ಪುನಃ ಮರುವರ್ಷ ಅಂಟಾರ್ಕ್‌ಟಿಕ್ ಖಂಡದ ಪರಿಶೋಧನೆಗಾಗಿ ತೆರಳಿ 1775 ರವರೆಗೂ ಆ ಕಾರ್ಯದಲ್ಲಿ ನಿರತನಾಗಿದ್ದ. ಪೆಸಿಫಿಕ್ ಸಾಗರದ ಉತ್ತರ ಭಾಗದಿಂದ ಅಟ್ಲಾಂಟಿಕ್ ಸಾಗರಕ್ಕೆ ಹತ್ತಿರದ ಮಾರ್ಗಾನ್ವೇಷಣೆ ಮಾಡಲು ಹೊರಟು ಹವಾಯಿ ದ್ವೀಪಗಳ ಮಾರ್ಗವನ್ನು ಕಂಡು ಹಿಡಿದದ್ದು ಕುಕ್‌ನ ಇನ್ನೊಂದು ಸಾಧನೆ (1776). ಕುಕ್ ಹವಾಯಿ ದ್ವೀಪಗಳಲ್ಲಿ ತಂಗಿದ್ದಾಗ ದೇಶೀಯರೊಡನೆ ಘರ್ಷಣೆ ಸಂಭವಿಸಿ, 1779 ರ ಫೆಬ್ರವರಿ 14 ರಂದು ಅವರಿಂದ ಕೊಲೆಗೀಡಾದ.

1768 ರಿಂದ ತನ್ನ ಮರಣದವರೆಗೆ ಕುಕ್ ಮೂರು ಸಾರಿ ಸಮುದ್ರಯಾನ ಮಾಡಿ ನಾವಿಕರ ಅನೇಕ ಭೌಗೋಳಿಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಕಾರಣವಾದ. ಸಮುದ್ರಯಾನವನ್ನು ಶಾಸ್ತ್ರೀಯವಾಗಿ ಅಭ್ಯಾಸಿಸಿದವರಲ್ಲಿ ಕುಕ್ ಮೊದಲಿಗ. ಪೆಸಿಫಿಕ್ ಸಾಗರದ ಉತ್ತರ ಅಮೆರಿಕನ್ ತೀರಪ್ರದೇಶದ ಭೌಗೋಳಿಕ ಪರಿಚಯ ಮಾಡಿಕೊಟ್ಟದ್ದು ಕುಕ್‌ನ ಅತ್ಯಂತ ಮುಖ್ಯ ಕೊಡುಗೆಗಳಲ್ಲೊಂದು. (ಎಸ್.ಎಚ್.ಐ.)

**ಕುಟುಂಬ ಯೋಜನೆ:** ಮಕ್ಕಳ ಸಂಖ್ಯೆಯನ್ನು ಹೆಚ್ಚು ಕಡಿಮೆ ಮಾಡುವ, ಮಕ್ಕಳ ಜನನದ ಮಧ್ಯದ ಅಂತರವನ್ನು ಹೆಚ್ಚು ಮಾಡುವ ಉದ್ದೇಶಗಳಿಗಾಗಿ ಪಾಲಕರಿಗೆ ತಿಳುವಳಿಕೆ ನೀಡಿ, ಸೌಲಭ್ಯ ಒದಗಿಸುವುದು. ಕುಟುಂಬ ಯೋಜನೆಯ ಮೂಲ ವಿಚಾರವಾಗಿದೆ. ಹೀಗೆ ಕುಟುಂಬ ಯೋಜನೆಯು ಯೋಜಿತ ಪಾಲಕತನಕ್ಕೆ ಪೂರಕವಾಗುವ ಯೋಜನಾ ಕ್ರಮವಾಗಿದೆ. ವೈಯಕ್ತಿಕ ಫಲಿತತೆ ಹಾಗೂ ಫಲವತ್ತತೆ, ಮಹಿಳೆಯ ಪುನರುತ್ಪತ್ತಿ ಸಾಮರ್ಥ್ಯ ಇತ್ಯಾದಿಗಳು ಜನಸಂಖ್ಯಾ ಜೈವಿಕ ಗುಣಾತ್ಮಕ

ಅಂಶಗಳಾಗಿದ್ದು ಇವು ಲಿಂಗ ತಾರತಮ್ಯ, ಭ್ರೂಣ ಹತ್ಯೆ, ಜನಸಂಖ್ಯಾ ಹೆಚ್ಚಳ ಇವೇ ಮುಂತಾದ ಸಮಸ್ಯೆಗಳ ಸೃಷ್ಟಿಗೂ ಸಹ ಕಾರಣವಾಗುತ್ತವೆ. ಈ ಜೈವಿಕ ಗುಣ ಲಕ್ಷಣಗಳಲ್ಲಿ ಪರಿವರ್ತನೆ ಉಂಟು ಮಾಡಿ ದೇಶದಲ್ಲಿ ಅನುಕೂಲಕರವಾದ ಜನಸಂಖ್ಯೆಯನ್ನು ರೂಪಿಸುವುದೇ ಕುಟುಂಬ ಯೋಜನಾ ಕಾರ್ಯಕ್ರಮಗಳ ಮುಖ್ಯ ಉದ್ದೇಶವಾಗಿದೆ. ಒಂದು ದೇಶದ ಅನುಕೂಲಕರವಾದ ಹಾಗೂ ಗುಣಾತ್ಮಕ ಜನಸಂಖ್ಯಾ ರಚನೆಗೆ ಕುಟುಂಬ ಯೋಜನಾ ಕಾರ್ಯಕ್ರಮಗಳು ಸಹಾಯಕವಾಗುತ್ತವೆ. ಹೀಗೆ ಕುಟುಂಬ ಯೋಜನಾ ಕಾರ್ಯಕ್ರಮಗಳ ಯಶಸ್ಸು ಒಂದು ದೇಶದ ಅಭಿವೃದ್ಧಿಯನ್ನು ನಿರ್ಧರಿಸುತ್ತವೆ.

ಕುಟುಂಬ ಯೋಜನೆ ಸಂಶೋಧನೆಗೆ ಸಂಬಂಧಿಸಿದಂತೆ, ಇಂದಿನ ಭೂಗೋಳ ವಿಜ್ಞಾನದಲ್ಲಿ ಎರಡು ಮಹತ್ತ್ವದ ಅಭಿವೃದ್ಧಿಗಳು ಇತ್ತೀಚೆಗೆ ಆಗಿವೆ. ಮೊದಲನೆಯದಾಗಿ, ಅತಿ ಮೂಲವಾದ ಹೆಜರೀಸ್ಟ್ರಿಯನ್‌ನ ಪ್ರಸರಣ ನಿಯಮ ತತ್ತ್ವ ಹಾಗೂ ಎರಡನೆಯದಾಗಿ, ಕುಟುಂಬ ಯೋಜನೆಗೆ ಅನ್ವಯವಾಗುವ ಪ್ರತಿಪರವಾದ ವಿಶ್ಲೇಷಣೆಯ ತತ್ತ್ವಗಳನ್ನು ಭೌಗೋಳಿಕ ಸಂಶೋಧನೆಗೆ ಅನ್ವಯಿಸಬೇಕು ಎಂಬುದನ್ನು ಬ್ರೌನ್ (1975) ಹೇಳಿದ್ದಾನೆ. (ಎಸ್.ಎಂ.ಎಚ್.)

**ಕುಣಿಗಲು:** ತುಮಕೂರು ಜಿಲ್ಲೆಯ ಒಂದು ಪಟ್ಟಣ; ಅದೇ ಹೆಸರಿನ ತಾಲ್ಲೂಕಿನ ಕೇಂದ್ರ. ತುಮಕೂರಿನ ದಕ್ಷಿಣಕ್ಕೆ 35 ಕಿಮೀ ದೂರದಲ್ಲಿದೆ. ಬೆಂಗಳೂರು–ಹಾಸನ ರಸ್ತೆಯಲ್ಲಿ ಸಮುದ್ರಮಟ್ಟದಿಂದ 775 ಮೀ ಎತ್ತರದಲ್ಲಿದೆ. ಶಿವ ಇಲ್ಲಿಯ ಕಲ್ಲುಬಂಡೆಯ ಮೇಲೆ ನೃತ್ಯ (ಕುಣಿ) ಮಾಡಿದನೆಂದೂ ಆದ್ದರಿಂದ ಇದಕ್ಕೆ ಕುಣಿಗಲ್ಲೆಂಬ ಹೆಸರು ಬಂತೆಂದೂ ಇದನ್ನು ಕುರಿತ ಐತಿಹ್ಯವಿದೆ. ಆದರೆ ಶಾಸನಗಳಲ್ಲಿ ಇದರ ಹೆಸರನ್ನು ಕುಣಿಗಿಲ್ ಅಥವಾ ಕುಣಿಂಗಿಲ್ ಎಂದು ಹೇಳಲಾಗಿದೆ. ಶಿವಗಂಗೆಯಲ್ಲಿ ಹುಟ್ಟುವ ನಳಿನಿ, ನಾಗಿನಿ ಮತ್ತು ಕಮಲಾ ನದಿಗಳು ಈ ಸ್ಥಳದಲ್ಲಿ ಸಂಗಮವಾಗುವುವೆಂದು ಜನರ ನಂಬಿಕೆ.

ಕುಣಿಗಲಿನಲ್ಲಿ ಅಖಿಲಭಾರತ ಖ್ಯಾತಿಯ ಕುದುರೆಕಾವಲಿದೆ (ಸ್ಟಡ್–ಫಾರ್ಮ್). ಬೆಂಗಳೂರಿನ ಕಡೆಯಿಂದ ಕುಣಿಗಲಿಗೆ ಪ್ರವೇಶಿಸುವಾಗಲೇ ಕಾಣಬರುವ ಈ ಕಾವಲು ಭಾರತದಲ್ಲಿ ಅತ್ಯಂತ ಹಳೆಯದು ಮತ್ತು ಶ್ರೇಷ್ಠವಾದದ್ದು. ಮೈಸೂರು ಸೈನ್ಯಕ್ಕೆ ಅಗತ್ಯವಾದ ಕುದುರೆ ತಳಿಗಳನ್ನು ಬೆಳೆಸುವ ಉದ್ದೇಶದಿಂದ 170 ವರ್ಷಗಳ ಹಿಂದೆ ಇದನ್ನು ಸ್ಥಾಪಿಸಲಾಯಿತು. ರೇಷ್ಮೆಯ ಹುಳುಗಳು ಸಾಕಣೆ ಇಲ್ಲಿಯ ಇನ್ನೊಂದು ಉದ್ಯಮ. ಇಲ್ಲಿಯ ರೇಷ್ಮೆ ಕ್ಷೇತ್ರದಲ್ಲಿ ಸಂಶೋಧನೆಯ ಕಾರ್ಯ ನಡೆಯುತ್ತಿದೆ. ಕುಣಿಗಲ್ ಕೆರೆಯಿಂದ ಬತ್ತದ ಗದ್ದೆಗಳಿಗೂ ಅಡಕೆ ತೆಂಗು ತೋಟಗಳಿಗೂ ನೀರಾವರಿ ಸೌಲಭ್ಯ ಒದಗಿದೆ.

ಕುಣಿಗಲ್ ತಾಲ್ಲೂಕಿನ ಜನಸಂಖ್ಯೆ 2,35,182 ಕುಣಿಗಲು, ಎಡೆಯೂರು, ಅಮೃತೂರು, ಹುಲಿಯೂರುದುರ್ಗ ಮತ್ತು ಕೋಠಿಗೆರೆ ಹೋಬಳಿಗಳಿಂದ ಕೂಡಿದ ಈ ತಾಲ್ಲೂಕಿನಲ್ಲಿ 290 ಗ್ರಾಮಗಳಿವೆ. ಅನೇಕ ದೊಡ್ಡ ಕೆರೆಗಳಿರುವ ಈ ತಾಲ್ಲೂಕಿನಲ್ಲಿ ಬೇಸಾಯ ಮುಖ್ಯವೃತ್ತಿ. ಬತ್ತ, ಕಬ್ಬು, ರಾಗಿ, ಹುರುಳಿ, ಜೋಳ, ತೆಂಗು, ಎಳ್ಳು ನೆಲಗಡಲೆ ಮತ್ತು ಹರಳು ಮುಖ್ಯಬೆಳೆಗಳು ರೇಷ್ಮೆ ವ್ಯವಸಾಯವೂ ನಡೆಯುತ್ತದೆ. ಕುಣಿಗಲ್ ಪಟ್ಟಣದ ಜನಸಂಖ್ಯೆ 30,291. (ಎಂ.ಜಿ.ಕೆ.)

**ಕುನ್‌ಲುನ್ ಪರ್ವತಗಳು:** ಏಷ್ಯ ಖಂಡದ ಅತ್ಯಂತ ಉದ್ದವಾದ ಪರ್ವತ ವ್ಯವಸ್ಥೆ. ಜರ್ಮನಿಯ ಭೂಗೋಳವಿಜ್ಞಾನಿ ಫರ್ಡಿನಂಡ್ ವಾನ್ ರಿಚ್ ಥೋಫೇನ್ ಇದನ್ನು ಏಷ್ಯದ ಬೆನ್ನೆಲುಬು ಎಂದು ಕರೆದಿದ್ದಾನೆ. ಇದು ತಾರೀಮ್ ನದಿಪ್ರದೇಶದಲ್ಲಿ ದಕ್ಷಿಣದಲ್ಲಿ, ಟಿಬೆಟ್ ಪ್ರಸ್ಥಭೂಮಿಯ ಉತ್ತರದ ಮೇರೆಯಾಗಿ, ಉತ್ತರ ಅಕ್ಷಾಂಶ $34^0$–$40^0$ಗಳಿಗೂ ಪೂರ್ವ ರೇಖಾಂಶ $74^0$–$103^0$ ಗಳಿಗೂ ನಡುವೆ ಹಬ್ಬಿದೆ. ಟ್ಸಿನ್‌ಲಿಂಗ್ ಷಾ ಪರ್ವತ ಇದರ ಪೂರ್ವದ ವಿಸ್ತರಣ. ಆದರೆ ಅದೊಂದು ಪ್ರತ್ಯೇಕ ಪರ್ವತವೆಂದೇ ಸಾಮಾನ್ಯವಾಗಿ ಪರಿಗಣಿತವಾಗಿದೆ. ತಾರೀಮ್ ನದಿಯ ದಕ್ಷಿಣಕ್ಕಿರುವ ತಾಕ್ಲಾಮಾಕಾನ್ ಮರುಭೂಮಿಗೂ ಟಿಬೆಟ್ ಪ್ರಸ್ಥಭೂಮಿಗೂ ನಡುವೆ, ಪಾಮಿರ್ ಪರ್ವತಗ್ರಂಥಿಯಿಂದ ಕಾರ ಮೂರಾನ್ ದಾರ್ಯ ನದಿಯವರೆಗಿನ ಭಾಗವನ್ನಷ್ಟೆ ಕುನ್‌ಲುನ್ ಎಂದು ಪರಿಭಾವಿಸುವುದೂ ಉಂಟು. ಆದರೆ ಇದು ವಾಸ್ತವವಾಗಿ ಕುನ್‌ಲುನ್ ಪರ್ವತ ವ್ಯವಸ್ಥೆಯ ಪಶ್ಚಿಮ ಭಾಗ ಮಾತ್ರ. ಇದರ ಪೂರ್ವ ಭಾಗ ಟ್ಸೈ ಡಾಂ ತಗ್ಗು ಪ್ರದೇಶದವರೆಗೂ ಹಬ್ಬಿದೆ. ಪೂರ್ವದಿಂದ ಪಶ್ಚಿಮಕ್ಕೆ ಈ ವ್ಯವಸ್ಥೆಯ ಉದ್ದ 2880 ಕಿಮೀ ಗಳು.

ಪಶ್ಚಿಮದಲ್ಲಿ ಈ ಪರ್ವತ ಭಾಗಗಳು ಬಹಳವಾಗಿ ಮಡಿಸಿ ಮುದುರಿಕೊಂಡಿವೆ. ಆದರೆ ಪೂರ್ವಭಾಗದಲ್ಲಿ ಹೀಗಿಲ್ಲ. ಈ ಪರ್ವತ ವ್ಯವಸ್ಥೆಯ ಸರಾಸರಿ ಎತ್ತರ 6006 ಮೀ. ಇದರಲ್ಲಿ ಕೆಲವು ಉನ್ನತ ಶಿಖರಗಳಿವೆ. ಇವುಗಳಲ್ಲಿ ಉಲೂ ಮುಜ್ಞ್‌ತಾ ಅತ್ಯಂತ ಎತ್ತರವಾದ್ದು (7604 ಮೀ) ಕುನ್‌ಲುನ್ ಪರ್ವತಗಳ ಪಶ್ಚಿಮದ ತುದಿಯಲ್ಲಿ, ಕಾಷಾಗಾರ್ ಶ್ರೇಣಿಯಲ್ಲಿ ಇರುವ ಎರಡು ಉನ್ನತ ಶಿಖರಗಳು ಕುಂಗರ್ (7600 ಮೀ) ಮತ್ತು ಮೂಸ್‌ಟಾ ಆಟಾ (7434 ಮೀ).

ಪಶ್ಚಿಮ ಕುನ್‌ಲುನ್ ಪರ್ವತಗಳಲ್ಲಿ ಒಂದೇ ಬಗೆಯ ಎರಡು ಶ್ರೇಣಿಗಳಿವೆ. ಇವುಗಳ ನಡುವೆ ಕಿರಿದಾದ ಹಾಗೂ ಆಳವಾದ ಕಣಿವೆಗಳಿವೆ. ಪೂರ್ವ ಕುನ್‌ಲುನ್ ಪರ್ವತಗಳಲ್ಲೂ ಟಿಬೆಟ್ ಪ್ರಸ್ಥಭೂಮಿಯಲ್ಲೂ ಇದೇ ಬಗೆಯ ಕಣಿವೆಗಳುಂಟು. ಇವುಗಳ ನಡುವೆ ಆಳದಲ್ಲಿ ಸರೋವರಗಳಿರುವುದು ಇಡೀ ಟಿಬೆಟ್ ಪ್ರದೇಶದ ಒಂದು ವೈಶಿಷ್ಟ್ಯ. ಯಾರ್ ಖಂಡದ ಪೂರ್ವಕ್ಕೆ ಕುನ್‌ಲುನ್ ಪರ್ವತಗಳು ಕ್ರಮೇಣ ಹೆಚ್ಚು ಅಗಲವಾಗುತ್ತವೆ. ಇವುಗಳ ಉತ್ತರದ ಕವಲುಗಳಿಗೆ ಅನುಕ್ರಮವಾಗಿ ಟಿಜ್‌ನಾಥ್, ಸಾಂಜುಟಾ ಮತ್ತು ಕಾರಂಘು ಎಂಬ ಹೆಸರುಗಳಿವೆ. ದಕ್ಷಿಣದ ಕವಲುಗಳು ರಾಸ್ ಕೆಮ್, ಕಾರ್‌ಲಿಕ್ ತಾ ಮತ್ತು ಸುಗೇಟ್ ತಾ. ಇವು ಪಶ್ಚಿಮದಿಂದ ಪೂರ್ವದ ಕಡೆಗೆ ತಗ್ಗುತ್ತ ಸಾಗುತ್ತವೆ. ಆದರೆ ಅವುಗಳ ಮಹೌನ್ನತ್ಯ 5705 ಮೀ. ಕೆಲವು ಶಿಖರಗಳು 6306 ಮೀ ಗಳವರೆಗೂ ಉಂಟು. ಉತ್ತರದ ಪರ್ವತಗಳು ಹೆಚ್ಚು ಕಡಿದಾಗಿವೆ. ಕಣಿವೆ ದಾರಿಗಳಾದ ಕಾರ್ಲಿಕ್, ಸುಗೇಟ್ ಮತ್ತು ಹಿಂದೂ ಟಾಷ್‌ಗಳ ಎತ್ತರ 4804 ಮೀ ಗಿಂತ ಹೆಚ್ಚು. ಯಾಂಗಿ ಕಣಿವೆದಾರಿ 5705 ಮೀ ಗಿಂತಲೂ ಎತ್ತರದಲ್ಲಿದೆ.

ಪೂ.ರೇ. $86^0$ ಪ್ರದೇಶದಿಂದ ಕುನ್‌ಲುನ್ ಪರ್ವತಗಳು ಅಗಲವಾಗುತ್ತಾ ಹೋಗಿ ಪುನಃ ಎರಡು ಶ್ರೇಣಿಗಳಾಗಿ ಒಡೆಯುತ್ತವೆ. ಉತ್ತರದಲ್ಲಿರುವ ರಷ್ಯನ್, ಆಸ್ಟಿನ್ ಟಾ, ನಾನ್ ಷಾನ್‌ಗಳೂ ದಕ್ಷಿಣದಲ್ಲಿರುವ ಅರ್ಕಾಟಾ, ಕಾಲ್ಟಾಲಾಘಾನ್ ಮತ್ತು ಬೊಕಾಲಿಕ್ ಟಾಗಳು ಇವುಗಳ ಕವಲುಗಳು. ಈ ಎರಡು ಪರ್ವತಶ್ರೇಣಿಗಳನ್ನು ಟ್ಸೈಡಾಂ ಕಣಿವೆ ಪ್ರತ್ಯೇಕಿಸುತ್ತದೆ. ಪೂರ್ವದಲ್ಲಿಯ ಮುಖ್ಯ ಶಿಖರಗಳು 6906 ಮೀ ಗಿಂತ ಎತ್ತರದಲ್ಲಿವೆ. ಉಲೂಮುಜ್ ತಾ ಮತ್ತು ಷಷ್ಕಮೋನೋ ಮುಖ್ಯ ಶಿಖರಗಳು 7597 ಮೀ ಗಿಂತ ಉನ್ನತವಾದುವು. ಕಾರಾ ಮುರನ್ ರೆಕ್ಟಿಯೆಮ್ ಕಣಿವೆಗಳ ಎತ್ತರ ಅನುಕ್ರಮವಾಗಿ 5495 ಮೀ ಮತ್ತು 5345 ಮೀ. ಇಲ್ಲಿಯ ಕಣಿವೆಗಳೆಲ್ಲವೂ ಶಿಲಾನಿಚಯಗಳಿಂದ ತುಂಬಿವೆ. ಪರ್ವತಪಾರ್ಶ್ವಗಳು ಮುರಕಲುಗುಪ್ಪೆಗಳಿಂದ ಮುಚ್ಚಿಹೋಗಿರುವುದರಿಂದ ಇಲ್ಲಿ ಸಸ್ಯ ಯಾವುದೂ ಬೆಳೆಯುವುದಿಲ್ಲ.

ಸೈಡಾಂ ತಗ್ಗುನೆಲದ ಈಶಾನ್ಯಕ್ಕಿರುವ ಮುಖ್ಯ ಶ್ರೇಣಿಗಳು ವಾಯವ್ಯದಿಂದ ಆಗ್ನೇಯಕ್ಕೆ ಹಬ್ಬಿವೆ. ಇವುಗಳಲ್ಲಿ ರಿಚ್‌ಥೋಪೇನ್, ಹಂಬೋಲ್ಟ್, ದಕ್ಷಿಣ ಟ್ಸಂಗ್ ಹ್ಯ ಮತ್ತು ಮುಷ್ಕೆಟೋವ್ ಶ್ರೇಣಿಗಳು ಪ್ರಮುಖವಾದವು. ಮಷ್ಕೆಟೋವ್ ಶ್ರೇಣಿ ದಕ್ಷಿಣದಲ್ಲಿ ಲಾಂಚೌ ವರೆಗೂ ಹಬ್ಬಿದೆ. ಈ ಶ್ರೇಣಿಗಳ ಪ್ರದೇಶದಲ್ಲಿಯ ಕಣಿವೆಗಳು ಸಮತಟ್ಟಾಗಿದ್ದು ಅಗಲವಾಗಿವೆ. ಈ ಕಣಿವೆಗಳೆಲ್ಲವೂ 3003–3607 ಮೀ ಎತ್ತರದಲ್ಲಿವೆ. ಈ ಪ್ರದೇಶದಲ್ಲಿ ಬಾರಾ ನೂರ್ ಸಿಹಿ ನೀರಿನ ಸರೋವರ ಮತ್ತು ಕೋಕೊ ನಾರ್ ಉಪ್ಪು ನೀರಿನ ಸರೋವರ ಇವೆ. ಕೋಕೊ ನಾರ್ 3157 ಮೀ ಎತ್ತರದಲ್ಲಿದೆ. ಇದರ ವಿಸ್ತೀರ್ಣ 2608 ಚ.ಕಿಮೀ. ಇದರಲ್ಲಿ ಮೀನುಗಳು ಹೇರಳವಾಗಿವೆ. ಆದರೆ ಇದು ನವೆಂಬರಿನಿಂದ ಮಾರ್ಚಿಯ ವರೆಗೆ ಹೆಪ್ಪುಗಟ್ಟಿರುತ್ತದೆ.

ನಾನ್ ಷಾನ್ ಪ್ರಸ್ಥಭೂಮಿಯ ಎತ್ತರ 3603–4204 ಮೀ. ಇದರ ಅನೇಕ ಭಾಗಗಳಲ್ಲಿ ಎತ್ತರವಾದ ಪರ್ವತಶ್ರೇಣಿಗಳಿವೆ. ಇವು 13 ರಿಂದ 30 ಕಿಮೀ ಅಗಲವಾಗಿವೆ. ಪಾಮಿರ್ ಬಳಿಯಿರುವ ಪಶ್ಚಿಮ ಕುನ್‌ಲುನ್ ಪರ್ವತಗಳು ಹಾಗೂ ಉತ್ತರದ ತುದಿಯಲ್ಲಿರುವ ಆಸ್ಟಿನ್ ಟಾ ಮತ್ತು ನಾನ್ ಷಾನ್ ಪರ್ವತಗಳ 4204–4415 ಮೀ ಎತ್ತರದಲ್ಲಿ ಹಿಮರೇಖೆ ಸಾಗುತ್ತವೆ. ಆದರೆ ದಕ್ಷಿಣಕ್ಕಿರುವ ಶ್ರೇಣಿಗಳಲ್ಲಿ ಹಿಮರೇಖೆ ಸಾಗಿರುವುದು 6006 ಮೀ ಎತ್ತರದಲ್ಲಿ.

ಕುನ್‌ಲುನ್ ಪರ್ವತ ಪ್ರದೇಶದಲ್ಲಿ ಕಬ್ಬಿಣದ ಅದುರು, ತಾಮ್ರ, ಚಿನ್ನ ಮತ್ತು ಕಲ್ಲಿದ್ದು ನಿಕ್ಷೇಪಗಳು ಅಲ್ಪ ಪ್ರಮಾಣದಲ್ಲಿ ಸಿಗುತ್ತವೆ. ತಾಮ್ರ ಮತ್ತು ಲವಣಗಳು ಉತ್ತರ ಕುನ್‌ಲುನ್‌ನ ತಪ್ಪಲುಗಳಲ್ಲಿ, ಯಾರ್‌ಕಂಡ್ ಮತ್ತು ಖೋಟಾನ್‌ಗಳ ನಡುವಣ ಪ್ರದೇಶದಲ್ಲಿ ಕಂಡುಬರುತ್ತದೆ. ಯಾರ್‌ಕಂಡ್ ಒಂದು ಮುಖ್ಯ ವಾಣಿಜ್ಯ ಕೇಂದ್ರ. ಖೋಟಾನ್ ಜಿಲ್ಲೆಯಲ್ಲಿ ಸತು ದೊರಕುತ್ತದೆ. ಕ್ವಾರ್ಟ್ಸ್ ಕಲ್ಲನ್ನು ಗಣಿಯಿಂದ ತೆಗೆಯುತ್ತಾರೆ.

ಕುನ್‌ಲುನ್ ಪ್ರದೇಶದಲ್ಲಿ ಜನಸಂಖ್ಯೆ ಅತ್ಯಂತ ವಿರಳ. ಉಯಿಗರ್ಸ್ ಜನ ಮುಖ್ಯವಾಗಿ ಅಲೆಮಾರಿ ಪಶುಪಾಲಕರು. ಅಲ್ಪಸ್ವಲ್ಪ ಕೃಷಿ ಮಾಡುವುದೂ ಉಂಟು. ಪಶ್ಚಿಮ ಕುನ್‌ಲುನ್ ಮತ್ತು ಪೂರ್ವ ನಾನ್ ಷಾನ್ ಪ್ರದೇಶಗಳಲ್ಲಿ ಸಾಕಷ್ಟು ನೀರಿನ ಆಸರೆಯುಂಟು. ಇಲ್ಲಿ ಹುಲ್ಲುಗಾವಲುಗಳೂ ಮೊನಚು ಎಲೆ ಮರಗಳ ಕಾಡುಗಳೂ ಇವೆ. ಪಶ್ಚಿಮ ಭಾಗದಲ್ಲಿ ಅನೇಕ ಚಿಕ್ಕಪುಟ್ಟ ನದಿಗಳು ಕಡಿದಾದ ಕಣಿವೆಗಳಲ್ಲಿ ಬಹು ವೇಗವಾಗಿ ಹರಿಯುತ್ತವೆ. ಕುನ್‌ಲುನ್‌ನ ಕಣಿವೆಗಳಲ್ಲಿ ಪ್ರಾಣಿಗಳ ಮೂಲಕ ಮಾತ್ರ ಸಂಚಾರ ಸಾಧ್ಯ. ಲಾನ್‌ಚಾನಿಂದ ಕಾಷ್‌ಗರ್ ವರೆಗೆ ಒಂದು ಮೋಟಾರ್ ರಸ್ತೆಯಿದೆ. ಪ್ರ.ಶ.ಪೂ. 100 ರಿಂದಲೂ ಈ ಮಾರ್ಗವನ್ನು ಚೀನೀಯರು ರೇಷ್ಮೆ ವ್ಯಾಪಾರಕ್ಕಾಗಿ ಉಪಯೋಗಿಸುತ್ತಿದ್ದರು. (ಕೆ.ಎನ್.ಪಿ.)

**ಕುಮಟ:** ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯ ಪಟ್ಟಣ. ಕುಮಟ ತಾಲ್ಲೂಕು ಉ.ಅ.$14^0 21'$ ನಿಂದ $14^0$ $37'$ ವರೆಗೂ ಪೂ.ರೇ. $74^0$ $20'$ ನಿಂದ $74^0$ $44'$ ವರೆಗೂ ಹಬ್ಬಿದೆ. ವಿಸ್ತೀರ್ಣ 597 ಚ.ಕಿಮೀ. ಜನಸಂಖ್ಯೆ 145772. ತಾಲ್ಲೂಕಿನಲ್ಲಿ 112 ಹಳ್ಳಿಗಳಿವೆ. ಕುಮಟ, ಗೋಕರ್ಣ– ಇವು ಪಟ್ಟಣಗಳು. ಬಂಡೆಕಲ್ಲುಗಳಿಂದ ಕೂಡಿದ ಕೆಲವುಬೆಟ್ಟಗಳೂ ಕೆಲವು ಸಣ್ಣಮುಟ್ಟ ಅಳಿವೆ ಕೋಡಿಗಳೂ ಇರುವ ಈ ತಾಲ್ಲೂಕಿನ ಅಗಲ ಸು. 16–19 ಕಿಮೀ. ಗಂಗಾವಳಿ

ನದಿಯ ದಕ್ಷಿಣಕ್ಕಿರುವ ಈ ತಾಲ್ಲೂಕಿನ ತೀರಭಾಗ ಮರಳಿನಿಂದ ಕೂಡಿದೆ. ಒಳಭಾಗದಲ್ಲಿ ಗೋಡು ಅಥವಾ ಮರಳು ಗೋಡುಮಣ್ಣು ಸಾಮಾನ್ಯ. ವಾರ್ಷಿಕ ಮಳೆ ಸು. 381 ಸೆಂಮೀ. ತಾಲ್ಲೂಕಿಗೆ ಹಿನ್ನೆಲೆಯಂತಿರುವ ಪಶ್ಚಿಮ ಘಟ್ಟದ ಮೇಲೆ ದಟ್ಟವಾದ ಕಾಡುಗಳು ಬೆಳೆದಿವೆ. ಬತ್ತ, ತೆಂಗು, ಅಡಕೆ, ಮೆಣಸು, ಕಬ್ಬು–ಇವು ಮುಖ್ಯ ಬೆಳೆಗಳು.

ಕುಮಟ ಪಟ್ಟಣ ಕಾರವಾರದಿಂದ 64 ಕಿಮೀ ದಕ್ಷಿಣಕ್ಕೆ, ಹೊನ್ನಾವರದಿಂದ 16 ಕಿಮೀ ಉತ್ತರಕ್ಕೆ ಇದೆ. ಜನಸಂಖ್ಯೆ 27,597. ಇದೊಂದು ರೇವುಪಟ್ಟಣ. ಸಮುದ್ರಯಾನ ಮಾಡುವವರ ನೆರವಿಗಾಗಿ ಇಲ್ಲೊಂದು ದೀಪಸ್ತಂಭವಿದೆ. ಕುಂಭೇಶ್ವರ ದೇವಾಲಯದಿಂದಾಗಿ ಇದನ್ನು ಕುಂಬಟುಂ ಎಂದು ಕರೆಯುತ್ತಿದ್ದುದಾಗಿಯೂ ಅದರಿಂದ ಕುಮಟವೆಂಬ ಹೆಸರು ಬಂತೆಂದೂ ಹೇಳಲಾಗಿದೆ. 19ನೆಯ ಶ. ದಲ್ಲಿ ದಕ್ಷಿಣ ಮಹಾರಾಷ್ಟ್ರ ಮತ್ತು ಬಳ್ಳಾರಿ ಪ್ರದೇಶಗಳಿಂದ ಹತ್ತಿಯನ್ನು ಇಲ್ಲಿಗೆ ತಂದು ಇಲ್ಲಿಂದ ಮುಂಬಯಿಗೆ ಕಳುಹಿಸಲಾಗುತ್ತಿತ್ತು. ಇದು ಹಿಂದೆ ಜೈನ ಕೇಂದ್ರವಾಗಿತ್ತು. ಈಗಲೂ ಇಲ್ಲಿ ಅನೇಕ ಜೈನ ಬಸದಿಗಳಿವೆ. ಪೋರ್ಚುಗೀಸರು ಇಲ್ಲಿಯ ಜನರಿಂದ ತೆರಿಗೆ ವಸೂಲಿ ಮಾಡುತ್ತಿದ್ದರೆಂದು ಹೇಳಲಾಗಿದೆ. ಟಿಪ್ಪು ಈ ಪಟ್ಟಣದ ಮೇಲೆ ಎರಡು ಸಾರಿ ಆಕ್ರಮಣ ನಡೆಸಿದ್ದ.

ಕುಮಟ ಒಂದು ವ್ಯಾಪಾರ ಕೇಂದ್ರ, ಅನೇಕ ರಸ್ತೆಗಳ ಸಂಧಿಸ್ಥಳ. ಇಲ್ಲಿಂದ ಕಾರವಾರ, ಭಟ್ಕಳ, ಯಲ್ಲಾಪುರ, ಶಿರಸಿ, ಶಿವಮೊಗ್ಗಗಳಿಗೆ ರಸ್ತೆಗಳಿವೆ. ಗಂಧದ ಕುಸುರಿ ಕೆಲಸಕ್ಕೆ ಈ ಪಟ್ಟಣ ಪ್ರಸಿದ್ಧವಾಗಿದೆ. ಮೀನುಗಾರಿಕೆ ಒಂದು ಕಸಬು. ಇಲ್ಲಿ ತಾಲ್ಲೂಕು ಕಚೇರಿ, ಆಸ್ಪತ್ರೆ ಮತ್ತು ಶಾಲಾಕಾಲೇಜುಗಳಿವೆ. (ಎ.ಕೆ.)

**ಕುಮಾಂವ್:** ಭಾರತದ ಹಿಂದಿನ ಉತ್ತರ ಪ್ರದೇಶದ ಹಾಗೂ ಈಗಿನ ಉತ್ತರಾಂಚಲ ರಾಜ್ಯದ ಒಂದು ಆಡಳಿತ ವಿಭಾಗ, ಅಲ್ಮೋರ, ಘರ್ವಾಲ್, ನೈನಿತಾಲ್, ಚಾಮೋಲಿ ಮತ್ತು ಉತ್ತರ ಕಾಶಿ–ಇವು ಇದರಲ್ಲಿದ್ದ ಜಿಲ್ಲೆಗಳು. ಡೆಹ್ರಾ–ಡೂನ್ ಜಿಲ್ಲೆ, ಹಿಂದೆ ಸಂಸ್ಥಾನವಾಗಿದ್ದು ಉತ್ತರ ಪ್ರದೇಶದಲ್ಲಿ ವಿಲೀನಗೊಂಡ ತೆಹ್ರಿ ಘರ್ವಾಲ್–ಇವೂ ಸೇರಿದ ವಿಸ್ತಾರ ಪ್ರದೇಶವನ್ನು ಹಿಂದಿನಿಂದಲೂ ಕುಮಾಂವ್ ಎಂದು ಕರೆಯುವ ರೂಢಿಯಿದೆ. ಯಮುನಾ ನದಿಯ ಉಪನದಿಯಾದ ಟೋನ್ಸ್ ಮತ್ತು ಶಾರದಾದ ಉಪನದಿಯಾದ (ಮಹಾ) ಕಾಳಿ–ಇವುಗಳ ನಡುವೆ ಈ ಪ್ರದೇಶ ಹಬ್ಬಿದೆ. (ಮಹಾ) ಕಾಳಿ ನೇಪಾಳದ ಪಶ್ಚಿಮ ಎಲ್ಲೆ. ಯಮುನಾ, ಗಂಗಾ, ರಾಮಗಂಗಾ ಮತ್ತು ಶಾರದ ನದಿಗಳ ಹಿಮಾಲಯದ ಜಲಾನಯನ ಪ್ರದೇಶವನ್ನು ಇದು ಒಳಗೊಂಡಿದೆ. ಉಪಸಿವಾಲಿಕ್ ಶ್ರೇಣಿಗಳಿಂದ ಕ್ರಮವಾಗಿ ಎತ್ತರವಾಗುತ್ತ ಸಾಗಿ, ಹಿಮನದಿಗಳ ಮಾಲೆಧರಿಸಿರುವ ಧವಳ ಶಿಖರಗಳಿಂದೊಡಗೂಡಿದ ಈ ಪರ್ವತಪ್ರದೇಶದಲ್ಲಿ ಭಾಗೀರಥಿ ಮತ್ತು ಅಲಕನಂದಾಗಳು ಉಗಮಿಸುತ್ತವೆ. ಕೇದಾರನಾಥ ಬದರೀನಾಥ ಶಿಖರಗಳು ಇರುವುದು ಇಲ್ಲಿ. ಪೂರ್ವದಲ್ಲಿರುವ ತ್ರಿಶೂಲ, ನಂದ, ಕೋಟ್ ಮತ್ತು ನಂದಾದೇವಿ ಶಿಖರಗಳಿಗಿಂತ ಎತ್ತರವಾದ ಶಿಖರಗಳು ಭಾರತದಲ್ಲಿ ಕಾಶ್ಮೀರವನ್ನು ಬಿಟ್ಟರೆ ಬೇರೆಲ್ಲೂ ಇಲ್ಲ. ಇಡೀ ಪ್ರದೇಶದಲ್ಲಿ ಅನೇಕ ಕಣಿವೆಗಳಿವೆ.

ಕುಮಾಂವ್ ಪ್ರದೇಶದ್ದು ಪರ್ವತ ವಾಯುಗುಣ. ತಗ್ಗಿನ ಕಣಿವೆಗಳಲ್ಲಿ ಬೇಸಗೆಯಲ್ಲಿ ಉಷ್ಣತೆ ಹೆಚ್ಚು, ಚಳಿಗಾಲದಲ್ಲಿ ಹೆಚ್ಚು ಚಳಿ. ಮೇ–ಜೂನ್ ಗರಿಷ್ಠ ಉಷ್ಣತೆ ಇರುತ್ತದೆ. ಕೆಳಗಿನ ಪ್ರದೇಶ ಬಹುತೇಕ ಅರಣ್ಯಮಯ. ಎತ್ತರಕ್ಕನುಗುಣವಾಗಿ ಸಸ್ಯದಲ್ಲಿ ಪ್ರಭೇದಗಳಿವೆ.

ಇಡೀ ಪ್ರದೇಶದಲ್ಲಿ ಪಶುಪಾಲನೆ ಮತ್ತು ವ್ಯಾಪಾರಕ್ಕಿಂತ ಕೃಷಿ ಪ್ರಧಾನವಾದದ್ದು. ಧೂಪ, ರಾಳ ಇವು ಮುಖ್ಯ ಅರಣ್ಯೋತ್ಪನ್ನಗಳು. ರಾಳ ಸಂಗ್ರಹಣೆ ಬಹು ಮುಖ್ಯ ಕಸಬು. ಕಬ್ಬಿಣ, ತಾಮ್ರ, ಸ್ಫಟಿಕ, ಜಿಪ್ಸಮ್, ಸೀಸ ಮತ್ತು ಗ್ರಾಫೈಟ್ ಖನಿಜನಿಕ್ಷೇಪಗಳಿವೆ. ಆದರೆ ಆರ್ಥಿಕವಾಗಿ ಇವು ಮುಖ್ಯವಲ್ಲ.

ಕುಮಾಂವ್ ಆಡಳಿತವಿಭಾಗದ ಕೇಂದ್ರ ನೈನಿತಾಲ್. ಈ ಪ್ರದೇಶಕ್ಕೆ ಕುಮಾಂವ್ ಎಂಬ ಹೆಸರು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವಂತೆ ಕಾಣುತ್ತದೆ. ಸ್ಕಂದಪುರಾಣದಲ್ಲಿ ಬರುವ ಕುಮಾರವನ ಅಥವಾ ಕೂರ್ಮವನವೇ ಕುಮಾಂವ್ ಎಂದು ಪರಿವರ್ತನೆಗೊಂಡಿರಬಹುದೆಂಬುದು ಕೆಲವರ ಅಭಿಮತ. ಸ್ಥಳೀಯ ಭಾಷೆಯೊಂದರ ಹೆಸರಾದ ಕುಮುನೊ ಎನ್ನುವುದರಿಂದ ಈ ಹೆಸರು ಬಂತೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ಕುಮಾಂವ್ ಪ್ರದೇಶದಲ್ಲಿ ಅಲ್ಲಲ್ಲಿ ಕೈಕೊಡಲಿಗಳೂ ಬಾಚಿಗಳೂ ದೊರಕಿದ್ದರೂ ಈ ಪ್ರದೇಶದ ಇತಿಹಾಸ ಪೂರ್ವಕಾಲದ ನಿರ್ದಿಷ್ಟ ಸ್ವರೂಪವಿನ್ನೂ ತಿಳಿದಿಲ್ಲ. ಆರ್ಯರು ಕುಮಾಂವಿನ ಮೂಲಕ ಭಾರತಕ್ಕೆ ಬಂದರು ಎನ್ನುವ ಸಿದ್ಧಾಂತಕ್ಕೆ ವಿದ್ವಾಂಸರ ಮನ್ನಣೆ ದೊರಕಿಲ್ಲ. ಪ್ರಾಚೀನ ಕಾಲದಿಂದ ಇಲ್ಲಿ ಕಿರಾತರು ಮತ್ತು ಖಾಸಿಗಳೆಂಬ ಅನಾಗರಿಕ ಜನ ಇದ್ದರೆಂಬುದು ಖಚಿತ. (ಎ.ವಿ.ಎನ್.)

**ಕುರಂದ :** ಇದು ಒಂದು ಅಲ್ಯೂಮಿನಿಯಂ ಆಕ್ಸೈಡ್‌ನ ಖನಿಜ ಷಡ್ಭುಜಾಕೃತಿಯಲ್ಲಿ ನೈಸರ್ಗಿಕವಾಗಿ ದೊರೆಯುತ್ತದೆ. ವಜ್ರದ ನಂತರ ಅತಿ ಗಡುಸಾದ ಖನಿಜ. ಇಂಗ್ಲಿಷ್ ಸಮಾನಾರ್ಥಕ ಹೆಸರು ಕೊರಂಡಮ್, ಪರಿಶುದ್ಧವಿದ್ದಾಗ ಹರಳು ಪಾರದರ್ಶಕ. ಆದರೆ ಅನೇಕ ಅಂತರ್ಗತ ಖನಿಜ ಧಾತುಗಳು ಇದರ ವರ್ಣ ವೈವಿಧ್ಯಕ್ಕೆ ಎಡೆಗೊಡುತ್ತದೆ. ಕ್ರೋಮಿಯಂ ಬೆರೆತಾದ ಇದರ ಬಣ್ಣ ಹಸಿರು, ಕಬ್ಬಿಣ ಬೆರೆತಾಗ ಕೆಂಪು, ನೀಲಿ ವರ್ಣ, ಕೆಂಪು ಅಥವಾ ಮಾಣಿಕ್ಯ ಕುರಂದದ ರತ್ನ ಖನಿಜ, ಹಾಗೆಯೇ ಜಲ ನೀಲ ವರ್ಣದ ನೀಲ ಕೂಡ ಕುರಂದದ ಮತ್ತೊಂದು ಖನಿಜ. ಇದು ಸಣ್ಣ ಸಣ್ಣ ಹರಳಾಗಿ, ಅಪೂರ್ಣ ಸ್ಫಟಿಕವಾಗಿ ದೊರೆಯುತ್ತದೆ. ಇದರ ಕಾಠಿಣ್ಯದಿಂದ ಕೈಗಾರಿಕೆಯಲ್ಲಿ ಹೆಚ್ಚಿನ ಬೇಡಿಕೆ ಪಡೆದಿದೆ. ಇದು ವಿಶೇಷವಾಗಿ ಮಯನ್ಮಾರ್, ಶ್ರೀಲಂಕ, ಥೈಲೆಂಡ್, ಅಮೆರಿಕ, ಆಸ್ಟ್ರೇಲಿಯ ಮತ್ತು ದ. ಆಫ್ರಿಕದಲ್ಲಿ ದೊರೆಯುತ್ತದೆ. ಇದನ್ನು ಮೊಟ್ಟ ಮೊದಲು ಗುರುತಿಸಿದ್ದು ಭಾರತದಲ್ಲಿ. (ಬಿ.ಸಿ.ಕೆ.)

**ಕುರ್ದ್ ಜನಾಂಗ:** ಕುರ್ದಿಸ್ತಾನವೆಂದು ಹೆಸರಿಸಲಾಗಿರುವ ಭೂಭಾಗದಲ್ಲಿನ ನಿವಾಸಿಗಳು. ಇವರಿಂದಲೇ ನಾಡಿಗೆ ಆ ಹೆಸರು. ಸುಮಾರು ಏಳನೆಯ ಶತಮಾನದಿಂದ ಪಶ್ಚಿಮ ಇರಾನಿಯರಿಗೆ ಮತ್ತು ಜಾಗ್ರೋಸ್ ವಲಯದಲ್ಲಿರುವ ಇರಾನೀಕೃತ ಬೆಟ್ಟಗಾಡಿನ ಜನಗಳಿಗೆ ಈ ಹೆಸರನ್ನು ಬಳಸಲಾಗುತ್ತಿದೆ. ಆದರೆ ಇವರ ಇತಿಹಾಸ ಇನ್ನೂ ಪ್ರಾಚೀನವೆಂದು ನಂಬಲು ಸಾಕಷ್ಟು ಆಧಾರಗಳಿವೆ. ಪಾಲಿಬಿಯಸ್ (ಪ್ರ.ಶ.ಪೂ.ಸು. 200–120), ಸ್ಟ್ರಾಬೊ (ಪ್ರ.ಶ.ಪೂ. 64–20) ಮತ್ತಿತರರು ಹೆಸರಿಸಿರುವ ಕುರ್ತಿಯೋಯಿ ಡಕಾಯಿತ ತಂಡವೂ ಕಾರ್ದೂಚ್ಚೀ ತಂಡವೂ ಇದೇ ಜನಾಂಗದವರಾಗಿದ್ದಿರಬೇಕೆಂದು ನಂಬಲಾಗಿದೆ. ಪೂರ್ವ ತುರ್ಕಿಸ್ತಾನ, ಈಶಾನ್ಯ ಇರಾಕ್, ವಾಯವ್ಯ ಪರ್ಷಿಯ ಹಾಗೂ ಸೋವಿಯತ್ ಟ್ರಾನ್ಸ್ ಕಾಕೇಸಿಯ ಮತ್ತು ಸಿರಿಯಾದ ಮೇರೆಯೊಳಗಿನ ಪ್ರಾಂತ್ಯಗಳಿಂದ ಆವೃತವಾಗಿರುವ ಕೆಲವು ಪ್ರದೇಶಗಳಲ್ಲಿ ಈಗ ಕುರ್ದ್ ಜನಾಂಗ ವಾಸಿಸುತ್ತಿದೆ. ಡಮಾಸ್ಕಸ್ (ಸಿರಿಯ), ಅಲೆಪ್ಪೊ (ಸಿರಿಯ), ಕಜ್ವೀನ್, ಕರಸಾನ್ ಮತ್ತು ಕೇರ್‌ಮಾನ್ (ಇರಾನ್), ಮತ್ತು ಅಂಕಾರದಂಥ (ತುರ್ಕಿಸ್ತಾನ) ದೂರದ ನಗರಗಳಲ್ಲಿಯೂ ಈ ಜನರಿರುವುದು ಕಂಡುಬಂದಿದೆ. ಈಚಿನ ವರದಿಗಳ ಪ್ರಕಾರ ಇವರ ಜನಸಂಖ್ಯೆ ಒಂದು ಕೋಟಿಗಿಂತಲೂ ಹೆಚ್ಚಾಗಿದೆ ಎಂದು ಹೇಳಲಾಗಿದ್ದರೂ ಈ ಸಂಖ್ಯೆ ಪ್ರಶ್ನಾತೀತವಾಗಿಲ್ಲ. ಕೆಲವು ವರದಿಗಳ ಪ್ರಕಾರ ಈ ಸಂಖ್ಯೆ ಅರವತ್ತು ಲಕ್ಷಕ್ಕಿಂತ ಹೆಚ್ಚಾಗಿಲ್ಲ.

ಪ್ರ.ಶ.ಪೂ. 2400–2300ರ ನಡುವಣ ಅವಧಿಯಲ್ಲಿ ಈ ಪ್ರದೇಶದಲ್ಲಿ ವಾಸವಾಗಿದ್ದ ಗುತಿ ಅಥವಾ ಕುರ್ತಿ ಜನಾಂಗವೇ ಕುರ್ದ್ ಜನಾಂಗಕ್ಕೆ ಮೂಲವೆಂದು ಹೇಳಲಾಗಿದೆ. ಈ ಪ್ರದೇಶದಲ್ಲಿದ್ದ ಮೂಲನಿವಾಸಿಗಳು ಬಹುಮಟ್ಟಿಗೆ ತಮ್ಮ ಸುತ್ತ ಮುತ್ತ ಇದ್ದ ತುರ್ಕರು, ಅರ್ಮೇನಿಯನ್ನರು, ಸೆಮೈಟ್‌ಗಳು ಮತ್ತು ಇರಾನಿಯ ರೊಂದಿಗೆ ಬೆರೆತುಹೋಗಿದ್ದಾರೆ. ಇಂದು ನಮಗೆ ಕಾಣಸಿಗುವುದು ಮಿಶ್ರಜನಾಂಗ ಮಾತ್ರ. ಸುಮಾರು ಏಳನೆಯ ಶತಮಾನದಲ್ಲಿ (636) ಅರಬ್ಬರು ಕುರ್ದಿಗಳ ಮೇಲೆ ಜಯಗಳಿಸಿ, ಅವರನ್ನು ಇಸ್ಲಾಮ್ ಧರ್ಮಕ್ಕೆ ಪರಿವರ್ತಿಸಿದರು. ಹೀಗಾಗಿ ಈ ಜನಾಂಗದ ಬಹುಭಾಗ ಸುನ್ನೀ ಸಂಪ್ರದಾಯದ ಮುಸ್ಲಿಮರಾಗಿದ್ದಾರೆ. ದರ್‌ವೇಶ್ ಅನುಭಾವ ಪಂಥದ ಅನುಯಾಯಿಗಳು ಅದರಲ್ಲೂ ಖಾದಿರಿ ಮತ್ತು ನಕ್ಷ್ ಬಂದಿ ಪಂಥದವರು ಕುರ್ದಿಸ್ತಾನದ ಎಲ್ಲ ಜಿಲ್ಲೆಗಳಲ್ಲೂ ಇದ್ದಾರೆ. ಭಿನ್ನಧರ್ಮೀಯರಾದ ಬೇಕ್‌ತಶೀಖಿ, ಜಿಲ್‌ಬಶ್, ಮತ್ತು ಅಹ್ಲ್ – ಇ – ಹಕ್ ಹಾಗೂ ಯಜೀದಿಗಳ ಸಂಖ್ಯೆ ಸು. 40,000 ಕ್ಕೂ ಹೆಚ್ಚಾಗಿದೆ ಎಂದು ಹೇಳಲಾಗಿದೆ.

ಕುರ್ದಿಗಳು ಕಪ್ಪುಬಣ್ಣದವರು; ಕೂದಲು ಕಂದು ಅಥವಾ ಕಪ್ಪು, ಕಣ್ಣು ಕಂದು ಅಥವಾ ಬೂದು. ಮಧ್ಯಮ ನಿಲವಿನ, ಧೀರಸ್ವಭಾವದ ಗಟ್ಟಿಮುಟ್ಟಾಗಿರುವ ಜನರಿವರು. ಈ ಬೃಹತ್ ಜನಸಮುದಾಯದ ಬಹುಭಾಗ – ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ – ಅನೇಕ ಸಣ್ಣ ಸಣ್ಣ ಪಂಗಡಗಳಾಗಿ ಹಂಚಿಹೋಗಿದೆ. ಪ್ರತಿಯೊಂದು ಪಂಗಡಕ್ಕೂ ಅನುವಂಶಿಕವಾಗಿ ನಾಯಕತ್ವದ ಜಮೀನುದಾರ್ ಅಥವಾ ದರ್ವೇಶ್ ಶೇಕ್ ಮುಖ್ಯಸ್ಥನಾಗಿರುತ್ತಾನೆ. ಇವರು ಪರಮಾಧಿಕಾರಿಗಳಂತೆ ಅಧಿಕಾರ ಚಲಾಯಿಸುತ್ತ ಬಂದಿದ್ದಾರೆ. ಆದರೆ ಈಚೆಗೆ ಕೇಂದ್ರ ಆಡಳಿತ ವ್ಯವಸ್ಥೆಯಲ್ಲಿ ಸಂಘಟನೆ ಹೆಚ್ಚುತ್ತ ಬಂದಂತೆ ಈ ಹಳೆಯ ಸಾಮಾಜಿಕ ವ್ಯವಸ್ಥೆ ಕಣ್ಮರೆಯಾಗುತ್ತ ನಡೆದಿದೆ.

ಕುರ್ದಿಸ್ತಾನದಲ್ಲಿ ವಾಯವ್ಯ ಇರಾನೀ ಭಾಷೆಯ ಪ್ರಭೇದವಾದ ಕುರ್ದಿಭಾಷೆ ಬಳಕೆಯಲ್ಲಿದೆ. ಇದರ ಉಪಭಾಷೆಗಳು, ಪರಸ್ಪರ ಅರಿವು ಅಸಾಧ್ಯವಾಗುವಷ್ಟರ ಮಟ್ಟಿಗೆ ತೀರ ಭಿನ್ನವಾಗಿವೆ. ಕಣಿವೆಯಿಂದ ಕಣಿವೆಗೆ ಉಪಭಾಷೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆಯಾದರೂ ಇವುಗಳಲ್ಲಿ ಕಾಣಬರುವ ಕೆಲವು ವಿಶಿಷ್ಟ ಲಕ್ಷಣಗಳು ಇವೆಲ್ಲ ಒಂದೇ ಮೂಲದಿಂದ ಉತ್ಪನ್ನವಾಗಿರುವ ಉಪಭಾಷೆಗಳು ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಕುರ್ದ್ ಜನಾಂಗದ ಶೇ. 55ಕ್ಕೂ ಹೆಚ್ಚು ಭಾಗ ಅರೆ ಅಲೆಮಾರಿ ಜೀವನವನ್ನು ನಡೆಸುತ್ತಿದೆ. ಋತುಮಾನವನ್ನು ಅನುಸರಿಸಿ ಪರ್ವತಶಿಖರಗಳಿಂದ ಕಣಿವೆಗಳತ್ತ ತಮ್ಮ ಹಸು–ಕರು, ಕುರಿ, ಮೇಕೆ ಮತ್ತು ಕತ್ತೆಗಳ ಮಂದೆಯೊಡನೆ ವಲಸೆ ಬರುವುದೂ ಉಂಟು. ಉಳಿದವರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಚಳಿಗಾಲದಲ್ಲಿ ಅವರು ಕಂಬಳಿ ನೇಯುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಪರ್ವತಶ್ರೇಣಿಗಳಿಂದಾಗಿ ಭೂಪ್ರದೇಶಗಳು ಬಹುಮಟ್ಟಿಗೆ ಬೇರ್ಪಟ್ಟಿರುವುದರಿಂದ ಸಂಪರ್ಕ ಕಡಿಮೆಯಾಗಿದೆಯಾದರೂ ತಂತಮ್ಮ ಪ್ರದೇಶಗಳಿಗೆ ಹತ್ತಿರವಾಗಿರುವ ನಗರಗಳಲ್ಲಿ ಅವರು ವ್ಯಾಪಾರ ನಡೆಸುತ್ತಾರೆ. ಕಿರ್‌ಕುಕ್

ತೈಲಕ್ಷೇತ್ರ ಕುರ್ದಿಸ್ತಾನದ ನೈರುತ್ಯ ಅಂಚಿನಲ್ಲಿದೆ. ಇಷ್ಟಾದರೂ ಕುರ್ದಿಸ್ತಾನದ ಆರ್ಥಿಕತೆ ಬಹುಮಟ್ಟಿಗೆ ವ್ಯವಸಾಯಾಶ್ರಿತವಾಗಿಯೇ ಇದೆ. ಇತರ ಮುಸ್ಲಿಮ್ ರಾಷ್ಟ್ರಗಳಿಗಿಂತ ಸ್ತ್ರೀಯರು ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ. ಆಡಳಿತ ವ್ಯವಸ್ಥೆಯಲ್ಲಿ ಸ್ಥಳೀಯ ರಾಜಕೀಯ ಚಟುವಟಿಕೆಗಳಲ್ಲಿ, ರಾಷ್ಟ್ರೀಯ ಆಂದೋಲನಗಳಲ್ಲಿ ಮತ್ತು ಯುದ್ಧಗಳಲ್ಲಿ ಅವರು ಪ್ರಮುಖ ಪಾತ್ರವಹಿಸಿರುವುದನ್ನು ಇಲ್ಲಿ ಕಾಣಬಹುದು. (ಪಿ.ಜಿ.ಡಿ.)

**ಕುರ್ದಿಸ್ತಾನ್:** ನೈರುತ್ಯ ಏಷ್ಯದಲ್ಲಿ ವಿಶಾಲವಾದ ಪ್ರಸ್ಥಭೂಮಿ ಮತ್ತು ಪರ್ವತಶ್ರೇಣಿಯಿಂದ ಕೂಡಿದ ಒಂದು ಪ್ರದೇಶ. ಕುರ್ದ್ ಜನರಿಂದಾಗಿ ಕುರ್ದಿಸ್ತಾನ ಎಂಬ ಹೆಸರು ಬಂದಿದೆ. ರಾಜಕೀಯವಾಗಿಯಾಗಲಿ ಭೌಗೋಳಿಕವಾಗಿಯಾಗಲಿ ಈ ಪ್ರದೇಶವನ್ನು ಒಂದು ಘಟಕವಾಗಿ ಪರಿಗಣಿಸಿಲ್ಲವಾದಕಾರಣ ಇದರ ಎಲ್ಲೆಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ. ತುರ್ಕಿಯ ಪೂರ್ವ ಭಾಗದ ಪ್ರದೇಶ, ಇರಾನಿನ ವಾಯವ್ಯ ಭಾಗ, ಇರಾಕ್ ಮತ್ತು ಸಿರಿಯದ ಈಶಾನ್ಯ ಭಾಗ, ಇದರಲ್ಲಿ ಸೇರಿವೆಯೆಂದು ಸ್ಥೂಲವಾಗಿ ಹೇಳಬಹುದು. ವಾಯವ್ಯ–ಆಗ್ನೇಯಾಭಿಮುಖವಾಗಿ 960 ಕಿಮೀ ಉದ್ದವಾಗಿರುವ ಇದರ ಅಗಲ 200 ಕಿಮೀ ಕುರ್ದ್ ಜನರೆಲ್ಲ ಈ ಭಾಗದಲ್ಲಿದ್ದಾರೆಂದು ಹೇಳಲಾಗದು. ಏಕೆಂದರೆ, ಹಲವರು ಅರ್ಮೇನಿಯನ್ ಸೋವಿಯತ್ ಗಣರಾಜ್ಯದಲ್ಲೂ ವಾಸಿಸುತ್ತಿದ್ದಾರೆ.

ಈ ಪ್ರದೇಶ ಜಾಗ್ರೋಸ್ ಪರ್ವತಶ್ರೇಣಿಯಿಂದ ಕೂಡಿದೆ. ಇಲ್ಲಿ 3950 ಮೀ ಗೂ ಎತ್ತರದ ಪರ್ವತಗಳಿವೆ. ಅಧಿಕ ಮಳೆಯಾಗುತ್ತದೆ. ಬೇಸಗೆಯಲ್ಲಿ ಹೆಚ್ಚು ಸೆಕೆ, ಚಳಿಗಾಲದಲ್ಲಿ ಹೆಚ್ಚು ಚಳಿ. ವರ್ಷದ 4–5 ತಿಂಗಳುಗಳ ಕಾಲ ಹಿಮ ಬೀಳುತ್ತದೆ. ಕೆಲವು ಪ್ರದೇಶಗಳಲ್ಲಿ ಬೇಸಗೆಯಲ್ಲಿ ಪರ್ವತಗಳ ಮೇಲಿನ ಹಿಮ ಕರಗಿ ನೀರಾಗಿ ಹರಿಯುವುದರಿಂದ ಇಳಿಜಾರಿನಲ್ಲಿ ಪಶುಪಾಲನೆ ಮತ್ತು ಕುರಿಪೋಷಣೆಗೆ ಸಹಾಯಕ. ಓಕ್, ಆಷ್, ಎಲ್ಮ್ ಮರಗಳು ಬೆಳೆಯುತ್ತವೆ.

ಬತ್ತ, ಜೋಳ, ಹತ್ತಿ, ಹೊಗೆಸೊಪ್ಪು, ದ್ರಾಕ್ಷಿ, ಮತ್ತು ಎಣ್ಣೆಬೀಜಗಳು ಇಲ್ಲಿಯ ಮುಖ್ಯ ಬೆಳೆ. ನೇಯ್ಗೆ ಮತ್ತು ಚರ್ಮ ಹದಮಾಡುವ ಗೃಹಕೈಗಾರಿಕೆಗಳಿವೆ. ಇಲ್ಲಿಯ ರತ್ನಕಂಬಳಿಗಳು ಪ್ರಸಿದ್ಧವಾದವು. ಬಹುತೇಕ ಸುನ್ನಿಪಂಗಡದ ಮುಸ್ಲಿಮರಾದ ಈ ಜನ ಹೆಚ್ಚಾಗಿ ಪರ್ವತಾರೋಹಿಗಳು, ಇಲ್ಲವೆ ಅಲೆಮಾರಿಗಳು. ಇವರು ತಮ್ಮ ಕುರಿ ಮತ್ತು ಮೇಕೆಗಳೊಂದಿಗೆ ಬೇಸಗೆಯಲ್ಲಿ ಪರ್ವತಗಳಿಗೂ ಚಳಿಗಾಲದಲ್ಲಿ ಕಣಿವೆಗಳಿಗೂ ಅಲೆಯುತ್ತಿರುತ್ತಾರೆ. ಇತ್ತೀಚಿಗೆ ನೀರಾವರಿ ಯೋಜನೆಗಳಿಂದಾಗಿ ಒಂದು ಕಡೆ ನೆಲೆಸಿ ವ್ಯವಸಾಯ ಮಾಡುತ್ತಿದ್ದಾರೆ. ಹಲವರು ಕೆಲಸಗಳಿಗಾಗಿ ನೆರೆರಾಜ್ಯಗಳನ್ನು ಸೇರಿದ್ದಾರೆ. *

**ಕುಲಪರ್ವತಗಳು:** ಒಂದು ದ್ವೀಪದ ಅಥವಾ ಭೂಪ್ರದೇಶದ ಎಲ್ಲೆ ಕಟ್ಟನ್ನು ತಿಳಿಸುವ ಮೂಲಪರ್ವತಗಳಿವು. ಜಂಬು, ಪಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರ ದ್ವೀಪಗಳಿಗೆ ಸಂಬಂಧಿಸಿದಂತೆ ವಿವಿಧ ಹೆಸರಿನ ಕುಲಪರ್ವತಗಳಿವೆ. ಈ ಪದದ ಬಳಕೆ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿದೆ. ಪುರಾಣಗಳಲ್ಲಿ ಉಲ್ಲೇಖಗಳಿವೆ.

ಮಹೇಂದ್ರ, ಮಲಯ, ಸಹ್ಯ, ಶಕ್ತಿಮಾನ್, ರುಕ್ಷ, ಮತ್ತು ವಿಂಧ್ಯಗಳು ಜಂಬೂ ದ್ವೀಪದ ಭರತವರ್ಷದ ಸಪ್ತ ಕುಲಪರ್ವತಗಳು, ಅಷ್ಟದಿಗ್ಗಜಗಳು ಭೂಮಿಯನ್ನು ಕೆಳಕ್ಕೆ ಬೀಳದಂತೆ ಹೊತ್ತಿರುವಂತೆ ಕುಲಪರ್ವತಗಳು ಭೂಮಿಯನ್ನು ಹಾರಿ ಹೋಗದಂತೆ ಒತ್ತಿ ಹಿಡಿದಿವೆಯೆನ್ನಲಾಗಿದೆ. ಇದು ಪುರಾಣ ಕಲ್ಪನೆ.

ಜೈನಪುರಾಣಗಳಲ್ಲಿ ಹೇಳಿರುವ ಪರ್ವತಗಳು ಇವು; ಹಿಮವಂತ, ಮಹಾಹಿಮವಂತ, ನಿಷಧ, ನೀಲ, ರುಕ್ಮಿ, ಶಿಖರಿ. ಇವು ಜಂಬೂದ್ವೀಪದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತ ಕ್ರಮವಾಗಿ ಪೂರ್ವ–ಪಶ್ಚಿಮವಾಗಿ ಹಬ್ಬಿ ಭೂಭಾಗವನ್ನು ಸಪ್ತಕ್ಷೇತ್ರಗಳಾಗಿ ವಿಭಾಗಿಸಿವೆ. (ಬಿ.ಜಿ.)

**ಕುಲು:** ಹಿಮಾಲಯ ಪ್ರದೇಶದಲ್ಲಿ, ಮಂಡಿಯ ಉತ್ತರಕ್ಕಿರುವ ಒಂದು ಕಣಿವೆ, ಹಿಮಾಚಲ ಪ್ರದೇಶ ರಾಜ್ಯದ ಒಂದು ಜಿಲ್ಲೆ. ಜನಸಂಖ್ಯೆ 379865. ಇದೇ ಹೆಸರಿನ ಒಂದು ಪಟ್ಟಣ. ಪಿರ್ ಪಂಜಾಲ್ ಶ್ರೇಣಿಯಲ್ಲಿ ರೊಹ್ತಾಂಗ್ ಕಣಿವೆಯಲ್ಲಿ (3918 ಮೀ) ಹುಟ್ಟಿ, ಪೈನ್ ಮತ್ತು ದೇವದಾರು ವೃಕ್ಷಗಳನ್ನು ಹೊದ್ದುನಿಂತ ಹಿಮಶಿಖರಗಳ ನಡುವೆ ಜಾರಿ, ಜಲಪಾತಗಳನ್ನು ನಿರ್ಮಿಸಿ, ಕಂದರಗಳಲ್ಲಿ ನುಸುಳಿ ಬರುವ ಬೀಯಾಸ್ ನದಿಯ ಮೇಲ್ಭಾಗದ ಸುಂದರ ಕಣಿವೆಯಿದು. ಬೀಯಾಸನ್ನು ಲಾರ್ಜಿಯಲ್ಲಿ ಕೂಡುವ ಸೇಜ್ ನದಿಯಿಂದಾಗಿ ಕುಲು ಸರಾಜ್ ಬೇರ್ಪಟ್ಟಿದೆ. ಹೆಚ್ಚಿನ ಜನವಸತಿಯಿರುವುದು 1502 ಮೀ ಎತ್ತರದ ಪ್ರದೇಶದಲ್ಲಿ, 2705 ಮೀ ಎತ್ತರದವರೆಗೂ ಹಳ್ಳಿಗಳಿವೆ. ಕೃಷಿ ಇಲ್ಲಿಯ ಮುಖ್ಯ ಕಸಬು. ಉತ್ಕೃಷ್ಟವಾದ ಸೇಬು, ಬೆರಿ, ಪ್ಲಂ, ಮತ್ತು ಪರ್ಸಿಯನ್ ಹಣ್ಣುಗಳು ಇಲ್ಲಿ ಬೆಳೆಯುತ್ತವೆ. ಕಣಿವೆಯನ್ನು ಬೆಳ್ಳಿಕಣಿವೆ ಎಂದು ಕರೆಯುತ್ತಾರೆ. ಚಳಿಗಾಲದಲ್ಲಿ ಹಿಮ ಹರಡಿದಾಗ, ವಸಂತಕಾಲದಲ್ಲಿ ಹಣ್ಣಿನ ಮರಗಳು ಮಂಜು ಬಿಳಪಿನ ಹೂಗಳಿಂದ ತುಂಬಿದಾಗ, ಬೆಳ್ಳಿಯಂತೆ ಕಂಗೊಳಿಸುತ್ತದೆ. ತನ್ನ ನಿಸರ್ಗ ಸೌಂದರ್ಯದಿಂದಾಗಿ ಈ ಕಣಿವೆ ಅನೇಕ ಪ್ರವಾಸಿಗಳ ಆಕರ್ಷಣೆಯಾಗಿದೆ. ಪಠಾಣಕೋಟೆಯಿಂದ ಮೋಟಾರಿನಲ್ಲಿ ಅಲ್ಲಿಗೆ ಹೋಗಬಹುದು. ಕುಲು ಕಣಿವೆಗೆ ಅತ್ಯಂತ ಹತ್ತಿರದ ರೈಲ್ವೆನಿಲ್ದಾಣ ಜೋಗಿಂದರ್, ಕುಲು ಪಟ್ಟಣ 1200 ಮೀ ಎತ್ತರದಲ್ಲಿದೆ. ಇದು ಕುಲು ಉಪವಿಭಾಗದ ಕೇಂದ್ರ . ಇಲ್ಲಿಯ ಶಾಲು ಕೈಗಾರಿಕೆ ಪ್ರಸಿದ್ಧವಾಗಿದೆ. ಇದು ವ್ಯಾಪಾರಕೇಂದ್ರವೂ ಹೌದು. ದಸರಾದ ಸಮಯದಲ್ಲಿ ಇಲ್ಲೊಂದು ದೊಡ್ಡ ಜಾತ್ರೆ ನಡೆಯುತ್ತದೆ. ಆಗ ಪರ್ವತದೇವತೆಗಳ ಉತ್ಸವ ನಡೆಯುತ್ತದೆ. 1801 ಮೀ. ಗಿಂತ ಎತ್ತರದಲ್ಲಿರುವ ಮನಾಲಿ ಇನ್ನೊಂದು ಆಕರ್ಷಕ ಪ್ರವಾಸಿ ಕೇಂದ್ರ. ಜವಹರ್‌ಲಾಲ್ ನೆಹರೂ ಇದನ್ನು ಬಹಳ ಮೆಚ್ಚಿದ್ದರು. ಕುಶಾಲ ನಡಿಗೆ (ಹೈಕಿಂಗ್) ಮತ್ತು ಪರ್ವತಾರೋಹಣದ ಅಭ್ಯಾಸಕ್ಕೆ ಇದು ಆದರ್ಶ ಪರಿಹಾರ. ಈಚೆಗೆ ಇಲ್ಲೊಂದು ಹಿಮಾಲಯನ್ ಪರ್ವತಾರೋಹಣ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಜನಸಂಖ್ಯೆ 18,306. (ಎಸ್.ಎಲ್.ಕೆ.)

**ಕುವೈತ್:** ಪಶ್ಚಿಮ ಏಷ್ಯದಲ್ಲಿ ಪರ್ಷಿಯನ್ ಕೊಲ್ಲಿಯ ವಾಯವ್ಯ ಭಾಗದಲ್ಲಿರುವ ಒಂದು ಸ್ವತಂತ್ರ್ಯ ರಾಜ್ಯ. 1961 ರಲ್ಲಿ ಇವಕ್ಕೆ ಬ್ರಿಟನ್‌ನಿಂದ ಸ್ವಾತಂತ್ರ್ಯ ದೊರಕಿತು. $28^0$–$30^0$ ಉ. ಅ. ಹಾಗು $46^0$–$49^0$ ಪೂ. ರೇಖಾಂಶಗಳ ನಡುವೆ ಇದೆ. ಇದರ ಉತ್ತರದಲ್ಲಿ ಇರಾಕ್ ಮತ್ತು ದಕ್ಷಿಣದಲ್ಲಿ ಸೌದಿ ಅರೇಬಿಯ ಇವೆ. ವಿಸ್ತೀರ್ಣ 17818 ಕಿಮೀ. ಜನಸಂಖ್ಯೆ 2589000 (2002). ರಾಜಧಾನಿ ಕುವೈತ್. ಜನಸಂಖ್ಯೆ 12,22,000. ಕರಾವಳಿಯ ಬಳಿ ಇರುವ ಅನೇಕ ದ್ವೀಪಗಳು ಇದಕ್ಕೆ ಸೇರಿವೆ. ಇವುಗಳ ಪೈಕಿ ಫೈಲಕ ಮುಖ್ಯವಾದುದ್ದು ಈ ದ್ವೀಪದಲ್ಲಿ ಪ್ರ.ಶ.ಪೂ. 2500ರಷ್ಟು ಪ್ರಾಚೀನವಾದ ಅವಶೇಷಗಳು ದೊರಕಿವೆ. ಕುವೈತ್ ಮರಳುಗಾಡಿನಿಂದ ಕೂಡಿದ ಪ್ರದೇಶ. ಕುವೈತ್ ನಗರದ ಪಶ್ಚಿಮಕ್ಕೆ 30 ಕಿಮೀ ದೂರದಲ್ಲಿ ಅಲ್ ಜಹ್ರಾ ಎಂಬ ಒಂದು ಸಣ್ಣ ಓಯಸಿಸ್ ಇದೆ. ಕುವೈತ್‌ನಲ್ಲಿ ಬೇಸಗೆಯಲ್ಲಿ ಸೆಕೆ ವಿಪರೀತ. ವಾಯುವಿನಲ್ಲಿ ತೇವಾಂಶ ಬಲು ಕಡಿಮೆ, ಚಳಿಗಾಲದಲ್ಲಿ ವಾಯುಗುಣ ಹಿತಕರವಾಗಿದೆ. ಆದರೆ ಆಗಾಗ್ಗೆ ಬೀಸುವ ಬಿರುಗಾಳಿ ಧೂಳಿನಿಂದ ಕೂಡಿರುತ್ತದೆ. ಮಳೆ ಸಾಮಾನ್ಯವಾಗಿ ಬಲು ಕಡಿಮೆ.

ನಗರದ ನೋಟ

ಆಡಳಿತ ಮತ್ತು ಸಾಮಾಜಿಕ ಸ್ಥಿತಿ : ಕುವೈತ್ ರಾಜ್ಯದ ಹೆಚ್ಚು ಸಂಖ್ಯೆಯ ಜನ ರಾಜಧಾನಿಯಾದ ಕುವೈತ್‌ನಲ್ಲಿ ವಾಸಿಸುತ್ತಾರೆ. ಇವರಲ್ಲಿ ಅಕ್ಕಪಕ್ಕದ ರಾಜ್ಯಗಳಿಂದ ಬಂದ ಅರಬ್ಬರೂ ಇರಾನಿಯನರೂ ಪಾಕಿಸ್ತಾನದವರೂ ಭಾರತದವರೂ ಬ್ರಿಟಿಷ್ ಮತ್ತು ಅಮೆರಿಕನರೂ ಇದ್ದಾರೆ. ಕುವೈತಿನ ಷೆಖನೇ ಆ ದೇಶದ ಪ್ರಧಾನ ಮಂತ್ರಿ. 4 ಮಂದಿ ಚುನಾಯಿತರೂ ಷೇಖರಿಂದ ನೇಮಕವಾದ 10 ಮಂದಿ ಸದಸ್ಯರೂ ಇರುವ ಒಂದು ಮಂತ್ರಿ ಮಂಡಲವಿದೆ. 21 ವರ್ಷ ತುಂಬಿದ ಗಂಡಸರೆಲ್ಲ ಓಟುಮಾಡುವ ಹಕ್ಕನ್ನು ಪಡೆದಿದ್ದಾರೆ. ಅಲ್ಲಿ ಚುನಾಯಿತ ಪ್ರಜಾಪ್ರತಿನಿಧಿ ಸಭೆಯಿದೆ. ಮಂತ್ರಿಮಂಡಲದ ಸಹಾಯಕ್ಕೆ ಸು. 4,000 ಸರ್ಕಾರಿ ಅಧಿಕಾರಿಗಳಿದ್ದಾರೆ. ರಾಜ್ಯವನ್ನು ಕುವೈತ್ (ರಾಜಧಾನಿ), ಅಹಮದಿ ಮತ್ತು ಹವಾಲಿ ಎಂಬುದಾಗಿ ಮೂರು ಆಡಳಿತ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿದೆ.

ಕುವೈತ್ ಆಯವ್ಯಯದ ಮುಂಗಡಪತ್ರವನ್ನು ಪ್ರಜಾಪ್ರತಿನಿಧಿಸಭೆಯಲ್ಲಿ ಮಂಡಿಸ ಬೇಕು. ಆದರೆ ಆಯವ್ಯಯದ ಮುಂಗಡ ಪತ್ರವನ್ನಾಗಲಿ, ಅಭಿವೃದ್ಧಿ ಕಾರ್ಯಕ್ರಮಗಳನ್ನಾಗಲಿ ಸಾರ್ವಜನಿಕವಾಗಿ ಪ್ರಕಟಪಡಿಸುವುದಿಲ್ಲ. ದೇಶದಲ್ಲಿ ಉಚಿತ ಶಿಕ್ಷಣವೂ ವೈದ್ಯಕೀಯ ಸೌಲಭ್ಯವೂ ಜಾರಿಯಲ್ಲಿವೆ. ರಾಜ್ಯಾದಾಯವನ್ನು ರಸ್ತೆಗಳು, ಬಂದರುಗಳು ಮತ್ತು ಕಟ್ಟಡಗಳ ನಿರ್ಮಾಣಕ್ಕೂ ವಿದ್ಯಾಭ್ಯಾಸ, ವೈದ್ಯಕೀಯ ಸೌಲಭ್ಯ, ನೀರು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸಲೂ ಬಳಸುತ್ತಾರೆ. ಕುವೈತ್‌ನ ನಾಣ್ಯ ಕುವೈತ್ ದೀನಾರ್. ಭಾಷೆ ಅರಬಿಕ್.

ಕುವೈತ್ ನಗರ ಅತ್ಯಂತ ಆಧುನಿಕವಾದ್ದು. ಇದು ಪರ್ಷಿಯನ್ ಖಾರಿಯ ಶಿರೋಭಾಗದಲ್ಲಿದೆ. ಅಗಲವಾದ ರಸ್ತೆಗಳು, ಹೊಸ ಮಾರುಕಟ್ಟೆ ಮತ್ತು ದೊಡ್ಡ ಕಟ್ಟಡಗಳಿಂದ ಕೂಡಿದ ಈ ನಗರದ ಬಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇದು ಒಳ್ಳೆಯ ಬಂದರು. ಜನಸಂಖ್ಯೆ 28859 (1995). 1990–91ರ ಪರ್ಷಿಯನ್ ಖಾರಿ ಯುದ್ಧದಲ್ಲಿ ಈ ನಗರವು ಬಹಳಷ್ಟು ಹಾನಿಗೊಳಗಾಗಿದ್ದು ನಂತರ ಶೀಘ್ರವೇ ಚೇತರಿಸಿಕೊಂಡಿದೆ.

ಕೃಷಿ: ಕುವೈತಿನ ಕೃಷಿ ಬಹಳ ಸೀಮಿತವಾದುದು. ಇದು ಆಹಾರ ಹಣ್ಣು ತರಕಾರಿಗಳ ವಿಚಾರದಲ್ಲಿ ಬಹುಮಟ್ಟಿಗೆ ಪರಾವಲಂಬಿ. ಕೃಷಿ ಉತ್ಪನ್ನದಲ್ಲಿ ಹೆಚ್ಚಳ ಸಾಧ್ಯವಿಲ್ಲದಿರುವುದಕ್ಕೆ ಈ ರಾಷ್ಟ್ರದ ಭೌಗೋಳಿಕ ಪರಿಸ್ಥಿತಿಯೇ ಕಾರಣ. ಹೆಚ್ಚಾಗಿ ಮರಳು ಕಾಡಿನಿಂದ

ಆವೃತವಾಗಿರುವ ಈ ದೇಶದಲ್ಲಿ ಅಂಜೂರ, ಧಾನ್ಯ ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದರೂ ಪ್ರಗತಿ ಗಮನಾರ್ಹವಾಗಿ ನಡೆದಿಲ್ಲ. ಸರ್ಕಾರ 36 ಹೆ. ಪ್ರಾಯೋಗಿಕ ಭೂಮಿಯಲ್ಲಿ ತಾನೇ ಕೃಷಿ ನಡೆಸುತ್ತಿದ್ದು, ಹೊಸ ಹೊಸ ವಿಧಾನಗಳ ಬಗ್ಗೆ ಪ್ರಚಾರಮಾಡುತ್ತಿದೆ. ತನ್ನ ಜಮೀನಿನಲ್ಲಿ ಹೈನು ಉದ್ಯಮವನ್ನು ಸಹ ಸರ್ಕಾರ ಕೈಗೊಂಡಿದೆ. ಇದರಿಂದ ಉತ್ತೇಜಿತರಾಗಿರುವ ಖಾಸಗಿ ಜನರು ಸಹ ಪಶುಪಾಲನೆಯ ಉದ್ಯಮವನ್ನು ಈಚೆಗೆ ಹೆಚ್ಚು ಹೆಚ್ಚಾಗಿ ಕೈಗೊಳ್ಳುತ್ತಿದ್ದಾರೆ ನೀರಿನ ಕೊರತೆಯೇ ಈ ದೇಶದ ಕೃಷಿ ವಿಸ್ತರಣೆಗಿರುವ ದೊಡ್ಡ ಸಮಸ್ಯೆ. ಆದರೆ ಷಾಟ್–ಅಲ್–ಅರಬ್ ನೀರಾವರಿ ಯೋಜನೆಯಿಂದಾಗಿ ನೀರು ದೊರೆಯುವಂತಾದಾಗ ಇಲ್ಲಿಯ ಕೃಷಿ ಉದ್ಯಮ ವಿಸ್ತಾರವಾಗುವ ಸಾಧ್ಯತೆ ಬಹಳ ಇದೆ. ಈ ಯೋಜನೆಯಿಂದಾಗಿ 7 ಕೋಟಿ ಗ್ಯಾಲನ್ ನೀರು ಕೃಷಿ ಹಾಗೂ ತೋಟಗಾರಿಕೆಗೆ ಸರಬರಾಜಾಗುವ ಸಾಧ್ಯತೆ ಇದೆ. ಅಂತರ್ಜಲವನ್ನು ಪತ್ತೆಹಚ್ಚಲಾಗಿದೆ. ಕೃಷಿ ವಿಸ್ತರಣೆ, ಜಲ ಲಭ್ಯತೆ ಮತ್ತು ಭೂಸಾರಪರೀಕ್ಷೆಗಳಿಗಾಗಿ ಸರ್ಕಾರ ಒಂದು ತೀವ್ರ ಸಮೀಕ್ಷೆ ಕೈಗೊಂಡಿದೆ. ಮತ್ಸ್ಯೋದ್ಯಮಕ್ಕೆ ಪ್ರೋತ್ಸಾಹ ನೀಡುತ್ತಿದೆ.

ಕೈಗಾರಿಕೆಗಳು : ತೈಲಕೈಗಾರಿಕೆಗೆ ಕುವೈತಿನಲ್ಲಿ ಪ್ರಥಮಸ್ಥಾನ. ಇತರ ಉತ್ಪಾದನ ಕೈಗಾರಿಕೆಗಳು ಈ ಅರ್ಥವ್ಯವಸ್ಥೆಯಲ್ಲಿ ಹೇಳಿಕೊಳ್ಳುವಷ್ಟರ ಮಟ್ಟಿಗೆ ಬೆಳೆದಿಲ್ಲ. ಕುವೈತಿನಲ್ಲಿ ಉತ್ಪಾದಿತವಾಗುವ ತೈಲದಲ್ಲಿ ಸು. ಶೇ. 92 ರಷ್ಟು ಬ್ರಿಟಿಷ್–ಅಮೆರಿಕನ್ ತೈಲಸಂಸ್ಥೆಗಳ ಅಧೀನದಲ್ಲಿದೆ. ತೈಲಕ್ಷೇತ್ರದಿಂದ ರಾಷ್ಟ್ರೀಯ ಉತ್ಪನ್ನಕ್ಕೆ ಶೇ. 61ರಷ್ಟು ಕಾಣಿಕೆ ಸಲ್ಲುತ್ತದೆ. ಸರ್ಕಾರದ ಆದಾಯದ ಶೇ. 94ರಷ್ಟು ಬರುವುದು ತೈಲಕ್ಷೇತ್ರದಿಂದ. ತೈಲ ಉತ್ಪಾದನೆ ಮತ್ತು ಅದರ ವಿತರಣೆಯಲ್ಲಿ 7,000 ಜನ ಉದ್ಯೋಗಿಗಳಿದ್ದಾರೆ. ತೈಲ ಉತ್ಪಾದನೆಯಲ್ಲಿ ಕುವೈತಿನದು ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನ. ರಫ್ತಿನಲ್ಲಿ ಎರಡನೆಯ ಸ್ಥಾನ. ತೈಲ ಉತ್ಪಾದನ ವೆಚ್ಚ ಸಹ ಈ ದೇಶದಲ್ಲಿ ಬಹಳ ಕಡಿಮೆ. ತೈಲಕೈಗಾರಿಕೆಯನ್ನುಳಿದು ಇತರ ಕೈಗಾರಿಕೆಗಳು ಕುವೈತಿನಲ್ಲಿ ಹೆಚ್ಚಾಗಿ ಪ್ರಗತಿ ಹೊಂದಿಲ್ಲ. ಕಚ್ಚಾಸಾಮಗ್ರಿಯ ಕೊರತೆ, ನೀರಿನ ಅಭಾವ, ಕಾರ್ಮಿಕರ ವೇತನದ ಹೆಚ್ಚಳ–ಇವು ಮುಖ್ಯ ಕಾರಣಗಳು. ಇತರ ಕೈಗಾರಿಕೆಗಳಲ್ಲಿ ಇಟ್ಟಿಗೆ, ಹೆಂಚು, ಶೀತೋಪಕರಣಗಳು, ಸಣ್ಣ ಎಂಜಿನಿಯರಿಂಗ್ ವಸ್ತುಗಳು, ಸಿಮೆಂಟ್, ಉಪ್ಪು, ಕ್ಲೋರಿನ್ ಮತ್ತು ಅಮೃತಶಿಲೆ–ಇವು ಮುಖ್ಯ. ಕೈಗಾರಿಕಾ ರಂಗದಲ್ಲಿ ಕುವೈತಿನ ಇತ್ತೀಚಿನ ಗಮನಾರ್ಹ ಸಾಧನೆಯೆಂದರೆ, ಅದು 1966ರಲ್ಲಿ ಸ್ಥಾಪಿಸಿದ ಪೆಟ್ರೋಕೆಮಿಕಲ್ ಗುಂಪಿನ ಬೃಹತ್ ಉದ್ಯಮ. ಈ ಗುಂಪಿನ ಕೈಗಾರಿಕೆಗಳು ಅಮೋನಿಯ, ಯೂರಿಯ, ಸಲ್ಫ್ಯೂರಿಕ್ ಆಮ್ಲ, ಅಮೋನಿಯಂ ಸಲ್ಫೇಟ್ ಉತ್ಪಾದಿಸುತ್ತವೆ. 1967ರಲ್ಲಿ ತೈಲಶುದ್ಧೀಕರಣ ಉದ್ಯಮವೊಂದು ಸ್ಥಾಪಿತವಾಯಿತು. ಕುವೈತ್‍ನಲ್ಲಿ ಪ್ರಪಂಚದಲ್ಲಿಯೇ ದೊಡ್ಡದಾದ ಸಮುದ್ರಜಲಬಟ್ಟಿ ಇದೆ. ಹೊಸಕೈಗಾರಿಕೆಗಳಿಗೆ ಉತ್ತೇಜನ ನೀಡಲು ಸರ್ಕಾರ ಬಹುವಾಗಿ ಶ್ರಮಿಸುತ್ತಿದೆ. ಕಟ್ಟಡ ಉದ್ಯಮವೂ ಬೆಳೆಯುತ್ತಿದೆ. ದೋಣಿ ನಿರ್ಮಾಣ ಇನ್ನೊಂದು ಮುಖ್ಯಉದ್ಯಮ.

ರಸ್ತೆಸಾರಿಗೆ, ವಿಮಾನಸಾರಿಗೆ ಮತ್ತು ಜಲಸಾರಿಗೆ ಕುವೈತ್ ಅರ್ಥವ್ಯವಸ್ಥೆಯಲ್ಲಿ ಬಹಳ ಮುಖ್ಯವಾದವು. ರೈಲುಮಾರ್ಗವಿಲ್ಲ. ಪಶ್ಚಿಮ ಏಷ್ಯದ ಬಂದರುಗಳಲ್ಲಿ ಕುವೈತ್ ಮುಖ್ಯವಾದ್ದು. ಅನೇಕ ಅಂತಾರಾಷ್ಟ್ರೀಯ ವಿಮಾನಸಂಸ್ಥೆಗಳು ಕುವೈತ್‍ಗೆ ಸಂಪರ್ಕ ಕಲ್ಪಿಸಿವೆ. ವಿದೇಶೀ ವಾಣಿಜ್ಯರಂಗದಲ್ಲಿ ಕುವೈತ್ ಯಾವ ತೊಡಕನ್ನೂ ಎದುರಿಸುತ್ತಿಲ್ಲ. ತನ್ನ ಆಮದಿಗೆ ಬೇಕಾದ ಹಣಕ್ಕೆ ಯಾವ ಕೊರತೆಯೂ ಇಲ್ಲ. ಆಹಾರ, ಯಂತ್ರಸಾಮಗ್ರಿ ಮತ್ತು ಸಾರಿಗೆ ಸಲಕರಣೆಗಳನ್ನು ಮುಖ್ಯವಾಗಿ ಅಮೆರಿಕ, ಗ್ರೇಟ್ ಬ್ರಿಟನ್, ಜಪಾನ್ ಮತ್ತು ಜರ್ಮನಿಗಳಿಂದ ಅದು ಆಮದು ಮಾಡಿಕೊಳ್ಳುತ್ತದೆ. ತೈಲ ಇದರ ಮುಖ್ಯ ರಫ್ತುವಸ್ತು. ತೈಲಾದಾಯದ ವಿತರಣೆಯ ಮುಖ್ಯ ಮಾಧ್ಯಮ ಕುವೈತ್ ಸರ್ಕಾರ. ಸರ್ಕಾರವೇ ಅತ್ಯಂತ ಹೆಚ್ಚಿನ ಉದ್ಯೋಗಿಗಳನ್ನು ನೇಮಿಸಿಕೊಂಡಿರುವ ಸಂಸ್ಥೆ. ಉದ್ಯೋಗಸ್ಥರಲ್ಲಿ ಶೇ. 46ರಷ್ಟಕ್ಕೆ ಸರ್ಕಾರ ಉದ್ಯೋಗವನ್ನೊದಗಿಸಿದೆ. ಕುವೈತ್ ಸರ್ಕಾರ ವಿದ್ಯಾಭ್ಯಾಸ ಮತ್ತು ಆರೋಗ್ಯಕ್ಕಾಗಿ ತನ್ನ ಪ್ರಜೆಗಳ ಮೇಲೆ ಮಾಡುತ್ತಿರುವ ತಲಾ ವೆಚ್ಚ ಪ್ರಪಂಚದಲ್ಲೇ ಅತ್ಯಧಿಕವಾದ್ದು ಎಂದು ಅಂದಾಜುಮಾಡಲಾಗಿದೆ. ಇಡೀ ಪಶ್ಚಿಮ ಏಷ್ಯದಲ್ಲಿ ಕುವೈತ್‍ನ ನೌಕರರಿಗೆ ದೊರೆಯುವ ವೇತನ ಗರಿಷ್ಠ ಮಟ್ಟದ್ದು. ತನ್ನ ಕಾರ್ಯಕ್ರಮಗಳ ಪ್ರಗತಿಗಾಗಿ ಕುವೈತ್ ಪಂಚವಾರ್ಷಿಕ ಯೋಜನೆಯೊಂದನ್ನು ರೂಪಿಸಿಕೊಂಡಿದೆ. ವರ್ಷಕ್ಕೆ ಶೇ. 5ರ ಬೆಳವಣಿಗೆ ಸಾಧಿಸುವುದು ಯೋಜನೆಯ ಗುರಿ. (ಸಿ.ಕೆ.ಆರ್.)

**ಕುಷ್ಟಗಿ:** ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ತಾಲ್ಲೂಕಿನ ವಿಸ್ತೀರ್ಣ 1,386 ಚ.ಕಿಮೀ. ಜನಸಂಖ್ಯೆ 2,39,259. ತಾಲ್ಲೂಕಿನಲ್ಲಿ ಒಟ್ಟು 164 ಹಳ್ಳಿಗಳಿವೆ. ಆಡಳಿತದ ದೃಷ್ಟಿಯಿಂದ ತಾಲ್ಲೂಕನ್ನು ಲಿಂಗಸುಗೂರು ಉಪವಿಭಾಗಕ್ಕೆ ಸೇರಿಸಲಾಗಿದೆ. ತಾಲ್ಲೂಕನ್ನು ಕುಷ್ಟಗಿ, ಹನುಮಸಾಗರ, ಗುಡಡೂರು ಮತ್ತು ತಾವರಗೇರಿ ಎಂಬ ನಾಲ್ಕು ಹೋಬಳಿಗಳಾಗಿ ವಿಭಾಗಿಸಲಾಗಿದೆ.

ತಾಲ್ಲೂಕಿನ ಬಹುಭಾಗ ಪ್ರೀ–ಕೇಂಬ್ರಿಯನ್ ಯುಗದಲ್ಲಿ ನಿರ್ಮಾಣಗೊಂಡ ಭೂಪದರಗಳಿಂದ ಕೂಡಿದೆ. ಇಲ್ಲಿಯ ಬಹುಪಾಲು ಶಿಲೆಗಳು ಧಾರವಾಡ ಶಿಲಾವರ್ಗಕ್ಕೆ ಸೇರಿದವು. ಕಲಾದಗಿ ಶ್ರೇಣಿಗೆ ಸೇರಿದ ಕೆಲವು ಶಿಲೆಗಳು ತಾಲ್ಲೂಕಿನ ವಾಯವ್ಯಕ್ಕೆ ಹರಡಿವೆ. ಇವುಗಳಲ್ಲಿ ಪೆಂಟೆಶಿಲೆ ಮತ್ತು ಮರಳುಶಿಲೆಯ ಪದರಗಳನ್ನು ಕಾಣಬಹುದು. ತಾಲ್ಲೂಕಿನ ಬಹುಪಾಲು ಭೂಮಿ ಕಪ್ಪು. ಕೆಲವು ಕಡೆ ಮರಳುಮಿಶ್ರಿತವಾದ, ಕೆಂಪು ಛಾಯೆಯ ಮಣ್ಣನ್ನು ಕಾಣಬಹುದು. ವರ್ಷವಿಡೀ ಸಾಮಾನ್ಯವಾಗಿ ಒಣ ಹವೆ ಇರುತ್ತದೆ. ವಾರ್ಷಿಕ ಮಳೆ ಸರಾಸರಿ 60 ಸೆಂಮೀ. ಸಾಮಾನ್ಯವಾಗಿ ಮಳೆ ಕಡಿಮೆಯಾದರೂ ಕೆಲವು ಸಾರಿ ತಾಲ್ಲೂಕು ಅತಿವೃಷ್ಟಿಗೆ ಈಡಾಗಿದ್ದೂ ಉಂಟು. 1944ರ ಸುಮಾರಿನಲ್ಲಿ ಆದ ಅತಿವೃಷ್ಟಿಯಿಂದ ತಾಲ್ಲೂಕಿನ ಪ್ರಮುಖ ಆಹಾರ ಬೆಳೆಯಾದ ಜೋಳವೆಲ್ಲ ಹಾಳಾಗಿ ಬರ ಬಂದಿತ್ತು. ಇದನ್ನು ಇಂದಿಗೂ ಸಜ್ಜೆ ಬರ ಎಂದು ಅಲ್ಲಿಯವರು ನೆನೆಯುತ್ತಾರೆ. 1949ರಲ್ಲಿ ಮತ್ತೊಮ್ಮೆ ತಾಲ್ಲೂಕು ಭಾರಿ ಮಳೆಗೆ ಈಡಾಗಿತ್ತು. ಆಗ 20 ದಿವಸಗಳ ಕಾಲ ಸತತವಾಗಿ ಸಂಭವಿಸಿದ ವರ್ಷಧಾರೆಯಿಂದಾಗಿ ತಾಲ್ಲೂಕಿನ ಸಾಮಾನ್ಯ ಮನೆಗಳಲ್ಲಿ 70 ಕುಸಿದುವು.

ತಾಲ್ಲೂಕಿನಲ್ಲಿ ಖುಷ್ಕಿ ಬೆಳೆಯೇ ಹೆಚ್ಚು. ಜೋಳ, ಸಜ್ಜೆ, ಗೋದಿ, ಶೇಂಗ, ಹತ್ತಿ, ಎಳ್ಳು ಮತ್ತು ತೊಗರಿ ಇಲ್ಲಿಯ ಮುಖ್ಯ ಬೆಳೆಗಳು. ತರಿ ಜಮೀನಿನಲ್ಲಿ ಕೆರೆ ಹಾಗೂ ಭಾವಿ ನೀರಾವರಿಯ ಸಹಾಯದಿಂದ ಸಾಮಾನ್ಯವಾಗಿ ಬತ್ತವನ್ನೂ ಕೆಲವೆಡೆ ಕಬ್ಬನ್ನೂ ಬೆಳೆಯುತ್ತಾರೆ. ತಾಲ್ಲೂಕಿನಲ್ಲಿ ಬಹಳ ಕಡೆ ಹತ್ತಿ ಬೆಳೆಯುತ್ತಾರೆ. ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳ ಬಳಕೆ ಅಷ್ಟಾಗಿಲ್ಲ.

ಕೃಷಿಗೆ ಎರಡನೆಯದಾದ ಕಸಬೆಂದರೆ ನೇಯ್ಗೆ. ಹನಮಸಾಗರ, ತಾವರಗೇರಿ ಮತ್ತು ದೋತಿಹಾಳಗಳು ನೇಯ್ಗೆಯ ಕೇಂದ್ರಗಳು. ಇಲ್ಲಿ ತಯಾರಾಗುವ ಇಳಕಲ ಸೀರೆಗಳಿಗೆ ಅನೇಕ ಕಡೆ ಬೇಡಿಕೆಯುಂಟು.

ತಾಲ್ಲೂಕಿನ ಕೇಂದ್ರವಾದ ಕುಷ್ಟಗಿ ಪಟ್ಟಣದ ಜನಸಂಖ್ಯೆ 21,180. ಇದೊಂದು ಮುಖ್ಯ ವ್ಯಾಪಾರಸ್ಥಳ. ತಾಲ್ಲೂಕಿನಲ್ಲಿ ಬೆಳೆದ ಹತ್ತಿ ಮತ್ತು ಶೇಂಗ ಹೊರ ಮಾರುಕಟ್ಟೆಗೆ ಹೋಗುವುದು ಇದರ ಮೂಲಕವೇ. ಇಲ್ಲೊಂದು ನಿಯಂತ್ರಿತ ಮಾರುಕಟ್ಟೆ ಸ್ಥಾಪಿತವಾಗಿದೆ. ಚಿತ್ರದುರ್ಗ– ಸೋಲಾಪುರ ರಾಷ್ಟ್ರೀಯ ಹೆದ್ದಾರಿಯೂ ಒಂದು ರಾಜ್ಯ ಹೆದ್ದಾರಿಯೂ ಕುಷ್ಟಗಿ ಪಟ್ಟಣವನ್ನು ಹಾದು ಹೋಗುತ್ತವೆ. ಪಟ್ಟಣದ ನಾಲ್ಕೂ ದಿಕ್ಕುಗಳಲ್ಲಿರುವ ಗುಂಬಜ಼್‍ಗಳು ಈ ಪಟ್ಟಣದ ಗಡಿ ಗುರುತುಗಳು. (ಎಸ್.ಎಂ.ಎಚ್.)

**ಕೂಡಲಿ:** ಶಿವಮೊಗ್ಗ ತಾಲ್ಲೂಕಿನಲ್ಲಿರುವ ಪ್ರಮುಖ ಯಾತ್ರಾಸ್ಥಳ ಹಾಗೂ ತುಂಗಾ ಮತ್ತು ಭದ್ರಾ ನದಿಗಳ ಸಂಗಮಸ್ಥಳ. ಸುಮಾರು 500 ವರ್ಷಗಳ ಹಿಂದೆ ಮರಾಠಾ ಸ್ಮಾರ್ತರ ಸಲುವಾಗಿ ಇಲ್ಲಿ ಒಂದು ಶಂಕರಮಠವನ್ನು ಸ್ಥಾಪಿಸಲಾಯಿತು. ಅದು ಕೂಡಲಿ ಶೃಂಗೇರಿ ಮಠವೆಂಬ ಹೆಸರಿನಿಂದ ಮುಂದುವರಿಯುತ್ತಿದೆ. ಇಲ್ಲೊಂದು ಮಾಧ್ವಮಠವೂ ಉಂಟು.

ಇಲ್ಲಿ ಬ್ರಹ್ಮೇಶ್ವರ, ರಾಮೇಶ್ವರ ಮತ್ತು ನರಸಿಂಹ ದೇವರ ಆಲಯಗಳಿವೆ. ಕದಂಬ, ಹೊಯ್ಸಳ, ವಿಜಯನಗರ, ಕೆಳದಿನಾಯಕ ಮುಂತಾದ ರಾಜಮನೆತನಗಳಿಗೆ ಸೇರಿದ ಶಾಸನಗಳೂ ದೊರಕಿವೆ. (ಎ.ವಿ.ಎನ್.)

**ಕೃತಕ ಮಳೆ:** ಮೋಡಗಳ ಮೇಲೆ ಕೆಲವು ರಾಸಾಯನಿಕಗಳನ್ನು ಬಿತ್ತುವುದರ (ಸೀಡಿಂಗ್) ಮೂಲಕ ಆ ಮೋಡಗಳು ಘನೀಕರಿಸಿ ನೀರಾಗಿ ಸುರಿಯುವ ವಿದ್ಯಮಾನ (ಆರ್ಟಿಫಿಷಿಯಲ್ ರೈನ್). ಇದರ ಹಿನ್ನೆಲೆಯಲ್ಲಿರುವ ತತ್ತ್ವ ಪ್ರಕೃತಿಯ ಅನುಕರಣೆಯ ಪ್ರಯತ್ನ. ಅಲ್ಲಿ ಮೋಡ ಮಳೆಯಾಗಿ ಸುರಿಯುವ ಮುನ್ನ ಯಾವ ಯಾವ ಹಂತಗಳ ಮೂಲಕ ಸಾಗುತ್ತವೆ ಎಂಬುದನ್ನು ಅಭ್ಯಸಿಸಿ ಅವನ್ನು ಮೋಡಗಳ ಮೇಲೆ ಕೃತಕವಾಗಿ ಪ್ರಯುಕ್ತಿಸಲು ಮಾಡುವ ಏರ್ಪಾಡಿದು. ಬರ್ಫದ ಅಥವಾ ತತ್ಸಮಾನ ನೀರಿನ ದೊಡ್ಡ ತುಣುಕುಗಳ ಇರವು ಮೋಡ ನೀರಾಗಿ ಕರಗುವ ಕ್ರಿಯಾವಿನ್ಯಾಸದ (ಮೆಕ್ಯಾನಿಸಂ) ಚಾಲನೆಗೆ ಅವಶ್ಯವೆಂದು ಕಂಡುಬಂದಿದೆ. ಎಲ್ಲ ಮೋಡಗಳೂ ಮಳೆಯಾಗಿ ಸುರಿಯದಿರಲು ಕಾರಣ ಅಂಥವುಗಳಲ್ಲಿ ಈ ಕ್ರಿಯಾವಿನ್ಯಾಸ ಇಲ್ಲದಿರುವುದು ಮಳೆಯಾಗಲು ಶುಷ್ಕ ಬರ್ಫ ಅಥವಾ ಬೆಳ್ಳಿಯ ಅಯೊಡೈಡನ್ನು ಮೋಡಗಳ ಮೇಲೆ ಚೆಲ್ಲಿದಾಗ, ಅವು ಘನೀಕರಿಸಿ ಮಳೆ ಸುರಿಯುವುದು. ಶುಷ್ಕ ಬರ್ಫ ವಿಧಾನದಲ್ಲಿ ಸು. 1 ಸೆಂಮೀ ವ್ಯಾಸವಿರುವ ಬರ್ಫದ ತುಣುಕುಗಳನ್ನು ಅತಿಶೈತ್ಯಗೊಂಡಿರುವ ಮೋಡದ ತುತ್ತತುದಿಯಲ್ಲಿ ಎಸೆಯಲ್ಪಡುತ್ತದೆ. ಪ್ರತಿಯೊಂದು ತುಣುಕೂ ಅದರ ಆಸುಪಾಸಿನ ವಾಯುವನ್ನು – $40^0$ಸೆ. ಗಿಂತಲೂ ಕೆಳಗಿನ ಉಷ್ಣತೆಗೆ ಶೀತಲಿಸುತ್ತದೆ. ಈ ಕ್ರಿಯೆಯಲ್ಲಿ ಅದು ಸು. 10–12 ಅತಿಸೂಕ್ಷ್ಮ ಬರ್ಫದ ಕಣಗಳನ್ನು ಸಹ ಉಂಟುಮಾಡುವುದೆಂದು ಅಂದಾಜು. ಇವು ಮೋಡದ ಎಲ್ಲೆಡೆಯೂ ಕ್ರಮೇಣ ಪಸರಿಸಿ, ಬೆಳೆದು, ಹಿಮಚಂಡುಗಳಾಗಿ ವಿಸ್ತರಿಸುತ್ತವೆ. ಇಷ್ಟಾದ ಮೇಲೆಯೂ ನೀರಾಗಿ ಸುರಿಯುವ ಕೃತಕ ಮಳೆಯ ಪ್ರಮಾಣ ಗಮನಾರ್ಹ.

ಬಿತ್ತಿದ ಮೋಡ ಸುರಿಸುವ ಕೃತಕ ಮಳೆಯ ಮೊತ್ತ ಸಮಾನ ಪರಿಮಾಣದ ಬಿತ್ತದ ಮೋಡ ಸುರಿಸುವ ಸಹಜ ಮಳೆಯ ಮೊತ್ತಕ್ಕಿಂತ ಹೆಚ್ಚಾಗಿರುವುದಿಲ್ಲ. ವಾಸ್ತವವಾಗಿ ಅವು ಸಾದೃಶ್ಯವಾಗಿರುತ್ತವೆ.

ಕೃತಕ ಮಳೆಯ ಈ ತಂತ್ರ ಸುಭದ್ರವಾದದ್ದು ಎಂಬುದು ಇಂದಿನ ನಂಬಿಕೆ. ಆದರೆ ಮೇಘ ಭೌತವಿಜ್ಞಾನದ ಸಮಗ್ರ ವಿವರಗಳೂ ತಿಳಿಯದ ವಿನಾ ಭಾರಿ ಪ್ರಮಾಣದಲ್ಲಿ ಮಿತವ್ಯಯದಿಂದ ಯಶಸ್ಸು ಗಳಿಸುವುದು ಬಲು ದೂರದ ಆಸೆ. *

**ಕೃಷಿ:** ಮನುಷ್ಯ ತನಗೆ ಅಗತ್ಯವಾದ ಆಹಾರಧಾನ್ಯಗಳು ಮತ್ತು ಕಚ್ಚಾ ಪದಾರ್ಥಗಳನ್ನು ಪಡೆಯುವುದಕ್ಕಾಗಿ ಭೂಮಿಯನ್ನು ಉತ್ತು, ಬಿತ್ತನೆಮಾಡಿ, ಬೆಳೆಗಳನ್ನು ಪೋಷಿಸುವ ಕಲೆಯನ್ನು ಕೃಷಿ ಅಥವಾ ವ್ಯವಸಾಯವೆನ್ನುವರು. ಕೃಷಿ ಪದಕ್ಕೆ ಸಮಾನಾರ್ಥವುಳ್ಳ ಆಂಗ್ಲಭಾಷೆಯ ಅಗ್ರಿಕಲ್ಚರ್ ಎಂಬ ಶಬ್ದವು ಲ್ಯಾಟಿನ್ ಭಾಷೆಯ ಆಗರ್ ಮತ್ತು ಕಲ್ಚರ್ ಎಂಬ ಎರಡು ಶಬ್ದಗಳ ಸಂಯೋಜನೆಯಿಂದಾದದು. ಅಗರ್ ಎಂದರೆ ನೆಲ ಅಥವಾ ಮಣ್ಣು ಎಂತಲೂ ಕಲ್ಚರ್ ಎಂದರೆ ಉಳುಮೆ ಅಥವಾ ಸಾಗುವಳಿ ಎಂದು ಅರ್ಥ. ಅಂದರೆ ಬೆಳೆಗಳನ್ನು ಬೆಳೆಯಲು ಸಾಗುವಳಿ ಮಾಡುವುದನ್ನು ವ್ಯವಸಾಯ ಎನ್ನಲಾಗುತ್ತದೆ. ಆದರೆ ಇಂದು ಕೃಷಿಯು ಬೆಳೆಗಳನ್ನು ಬೆಳೆಯುವುದಕ್ಕೆ ಸೀಮಿತವಾಗಿರದೆ ಪಶುಪಾಲನೆ, ಕೋಳಿ ಸಾಕಣೆ ಮತ್ತು ಜೇನು ಸಾಕುವುದಕ್ಕೂ ವಿಸ್ತರಿಸಿದೆ. ಬೇಸಾಯ, ವ್ಯವಸಾಯ, ಸಾಗುವಳಿ, ಒಕ್ಕಲು ಮುಂತಾದವನ್ನು ಸಾಂದರ್ಭಿಕವಾಗಿ ಕೃಷಿಗೆ ಪರ್ಯಾಯ ಪದಗಳಾಗಿ ಬಳಕೆ ಮಾಡುವುದಿದೆ.

ಪ್ರಾಮುಖ್ಯತೆ: ಕೃಷಿ ಮಾನವನ ಪುರಾತನ ಮೂಲ ವೃತ್ತಿಗಳಲ್ಲಿ ಪ್ರಮುಖವಾದುದು. ಜಗತ್ತಿನ ಅನೇಕ ರಾಷ್ಟ್ರಗಳ ಆರ್ಥಿಕ, ಸಾಮಾಜಿಕ ಹಾಗೂ ವಾಣಿಜ್ಯ ಪ್ರಗತಿಗೆ ಇದು ಆಧಾರವಾಗಿದೆ. ಇದೊಂದು ಜೀವನಾಧಾರಿತ ವೃತ್ತಿ. ಜನರಿಗೆ ಆಹಾರ ಧಾನ್ಯಗಳು, ಸಂಬಾರ ಪದಾರ್ಥ, ಹಣ್ಣು ಮತ್ತು ತರಕಾರಿ, ಜಾನುವಾರುಗಳಿಗೆ ಮೇವು ಹಾಗೂ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತದೆ. ಕೆಲವು ದೇಶಗಳ ರಾಷ್ಟ್ರೀಯ ನಿವ್ವಳ ಆದಾಯದ ಮೂಲ ಆಕರವಾಗಿದೆ. ರಫ್ತುಗಳ ಆಕರ, ತೃತೀಯ ವೃತ್ತಿಗಳಿಗೂ ಪೂರಕವಾದ ವೃತ್ತಿ. ಪ್ರಪಂಚದ ಕೆಲವುದೇಶಗಳ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ನಿರ್ಣಯಿಸುವುದರಲ್ಲೂ ಕೃಷಿ ಪಾತ್ರ ಮಹತ್ವವುಳ್ಳದ್ದು.

ಕೃಷಿಯನ್ನು ನಿರ್ಧರಿಸುವ ಅಂಶಗಳು: ಪ್ರಪಂಚದ ವಿವಿಧ ಭಾಗಗಳಲ್ಲಿ ರೂಢಿಯಲ್ಲಿರುವ ವಿವಿಧ ಪ್ರಕಾರದ ಕೃಷಿ ವಿಧಾನಗಳು ಮತ್ತು ಕೃಷಿ ಬೆಳೆ, ಅವುಗಳ ಉತ್ಪನ್ನಗಳು ಹಲವು ನಿರ್ಣಾಯಕಗಳನ್ನಾಧರಿಸಿವೆ. ಅವು ಭೌಗೋಳಿಕ, ಆರ್ಥಿಕ ಹಾಗೂ ಇತರೆ ಅಂಶಗಳನ್ನೊಳಗೊಂಡಿವೆ. ಪ್ರಮುಖ ನಿರ್ಣಾಯಕಗಳೆಂದರೆ ವಾಯುಗುಣ, ಮಣ್ಣು, ಭೂಸ್ವರೂಪಗಳು, ಮಾರುಕಟ್ಟೆ, ಬಂಡವಾಳ, ಸಾರಿಗೆ ವ್ಯವಸ್ಥೆ, ಕಾರ್ಮಿಕರ ಲಭ್ಯತೆ, ಸರ್ಕಾರದ ನಿಲುವು, ವಿಜ್ಞಾನ-ತಂತ್ರಜ್ಞಾನ, ಗೇಣಿ ಪದ್ಧತಿ, ಭೂಬಳಕೆವಿಧಾನ, ಭೂಹಿಡುವಳಿಯ ಗಾತ್ರ ಮತ್ತು ವೈಯಕ್ತಿಕ ಒಲವು.

ಪ್ರರೂಪಗಳು: ಆಹಾರ ಮತ್ತು ಕೃಷಿ ಸಂಸ್ಥೆ (ಫುಡ್ ಅಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್, ಎಫ್.ಎ.ಒ) 1962ರಲ್ಲಿ ಪ್ರಕಟಿಸಿದ ಒಂದು ಪತ್ರದಲ್ಲಿ ಈ ಕೆಳಗಿನ ವಿವಿಧ ಪ್ರರೂಪಗಳನ್ನು (ಟೈಪ್ಸ್) ಕೃಷಿಯಲ್ಲಿ ಗುರುತಿಸಿದೆ-(1) ಕೈಗಾರಿಕೆಯಲ್ಲಿ ಪ್ರಗತಿಗೊಂಡಿರುವ ದೇಶಗಳಲ್ಲಿ ಅಲ್ಪ ಸಾಗುವಳಿ ಪ್ರದೇಶದಿಂದ ಉನ್ನತ ಮೌಲ್ಯದ ಬೆಳೆಗಳ ತೀವ್ರಕೃಷಿ.(2) ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಾಗುವಳಿ ಎಂದರೆ ಹಳ್ಳಿ ಮತ್ತು ಬೇಸಾಯದಿಂದಲೇ ಬಡ ಬದುಕನ್ನು ಸಾಗಿಸುವ ರೈತ ಎಂಬ ಅರ್ಥ ಮೂಡುತ್ತದೆ. (3) ಸರಿಯಾದ ಹಿಡುವಳಿಗಳು, ಅವುಗಳಲ್ಲಿ ಮಿಶ್ರಬೆಳೆಗಳ ಹಾಗೂ ಜಾನುವಾರುಗಳ ಸಮೃದ್ಧ ಕೃಷಿ, ತತ್ಪರಿಣಾಮವಾಗಿ ಶ್ರೀಮಂತವಾಗಿರುವ ಕುಟುಂಬ. (4) ಕೇಂದ್ರೀಯವಾದ ಒಂದು ಆಡಳಿತ ವ್ಯವಸ್ಥೆಗೆ ಒಳಪಟ್ಟು ಇರುವ ವಿಸ್ತಾರವಾದ ತೋಟಗಾರಿಕೆಗಳು, ಇವುಗಳ ಮೇಲ್ವಿಚಾರಣೆಗೆ ಸ್ಥಳೀಯವಾಗಿ ಇರುವ ಒಕ್ಕಲುಗಳು ಇತ್ಯಾದಿ. (5) ಕಾಳು ಹಾಗೂ ಹತ್ತಿ ಬೆಳೆಯುವ ಯಾಂತ್ರೀಕೃತವಾದ ವಿಸ್ತಾರ ಬಯಲು ಭೂಮಿಗಳು. ಜಾನುವಾರುಗಳ ಮೇವಿಗಾಗಿ ವಿಶಾಲವಾದ ಹುಲ್ಲುಗಾವಲುಗಳು ಇತ್ಯಾದಿ. (6) ಬೇಸಾಯವನ್ನು ಬಿಡುವಿನ ಸಮಯದ ಉಪಕಸುಬಾಗಿ ಅಂಗೀಕರಿಸಿದ ಇತರ ಉದ್ಯಮಗಳ ಕೆಲಸಗಾರರು ಅಲ್ಪಕಾಲದ ಕೃಷಿಗೋಸ್ಕರ ಉಪಯೋಗಿಸುವ ಹಿಡುವಳಿಗಳು. ಬಿಡುವಿನ ವೇಳೆಯ ಉದ್ಯಮದಿಂದ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದೇ ಇಂಥವರ ಪ್ರಧಾನೋದ್ದೇಶ.

ಸಾಗುವಳಿ ಭೂಮಿಯ ಲಭ್ಯತೆ, ಬೆಳೆಗಳ ಪದ್ಧತಿ, ಮಳೆ ಮತ್ತು ನೀರಿನ ಪೂರೈಕೆ, ಕೃಷಿ ಉತ್ಪನ್ನ, ಮಾರುಕಟ್ಟೆ ಹಾಗೂ ಭೂಬಳಕೆ ಉದ್ದೇಶಗಳ ಆಧಾರದ ಮೇಲೆ ಕೃಷಿ ವಿಧಾನಗಳನ್ನು ಕೆಳಗೆ ಕೊಟ್ಟಿರುವಂತೆ ವಿಂಗಡಿಸಲಾಗಿದೆ. 1) ಸಾಂದ್ರ ಬೇಸಾಯ. 2) ವಿಸ್ತರಣಾ ಬೇಸಾಯ. 3) ಏಕಬೆಳೆ ಬೇಸಾಯ, 4) ದ್ವಿಬೆಳೆ ಬೇಸಾಯ 5) ಬಹುಬೆಳೆ ಬೇಸಾಯ. 6) ಆರ್ದ್ರ, ಒಣ ಮತ್ತು ನೀರಾವರಿ ಬೇಸಾಯ. 7) ಜೀವನಾಧಾರ ಬೇಸಾಯ. 8) ವಾಣಿಜ್ಯ ಬೇಸಾಯ. 9) ನೆಡುತೋಟ ಬೇಸಾಯ ಮತ್ತು 10) ಮಿಶ್ರ ಬೇಸಾಯ.

ಇತಿಹಾಸ: ವ್ಯವಸಾಯದ ಆದಿಯನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಕಾರಣ ಅದು ನಾಗರಿಕತೆಯಷ್ಟೇ ಪ್ರಾಚೀನವಾದದ್ದು, ಆದರೆ ಇದರ ವಿಕಾಸ ಹೇಗೆ ಆಗಿರಬಹುದೆಂದು ಊಹಿಸುವುದು ಸುಲಭ. ಮೊದಲಲ್ಲಿ ಮನುಷ್ಯ ತನ್ನ ಆಹಾರ ಸಂಪಾದನೆ ಹಾಗೂ ರಕ್ಷಣೆಗೋಸ್ಕರ ಕೈಕಾಲುಗಳ ಬಲ ಮತ್ತು ಚಟುವಟಿಕೆಗಳ ಮೇಲೆ ಅವಲಂಬಿಸಿಕೊಂಡಿದ್ದ. ನಿಸರ್ಗದಲ್ಲಿ ಸ್ವೇಚ್ಛೆಯಾಗಿ ಸಮೃದ್ಧವಾಗಿ ಬೆಳೆದು ಯಥೇಚ್ಛವಾಗಿ ಈತನಿಗೆ ಲಭಿಸುತ್ತಿದ್ದ ಸಸ್ಯ ಹಾಗೂ ಪ್ರಾಣಿ ಉತ್ಪನ್ನಗಳೇ ಈತನ ಆಹಾರ. ನೆಲ, ಹವೆ, ನೀರು, ಕಾಲ ಇವೇ ಮುಂತಾದ ಅಂಶಗಳನ್ನು ಅನುಸರಿಸಿ ಸಸ್ಯಗಳಲ್ಲಿ ಆಗುತ್ತಿದ್ದ ಬದಲಾವಣೆಗಳನ್ನೂ ಆವರ್ತನೆಗಳನ್ನೂ ಮನುಷ್ಯ ತನ್ನ ಬುದ್ಧಿ ಬೆಳೆದಂತೆ ಗಮನಿಸಿ ಪ್ರಯತ್ನದಿಂದ ಇಂಥ ಕೆಲವು ಕ್ರಿಯೆಗಳಲ್ಲಾದರೂ ಭಾಗಿಯಾಗಲು ಆರಂಭಿಸಿದ. ಆದಿಮ ವ್ಯವಸಾಯ ಹೀಗೆ ತೊಡಗಿರಬೇಕು. ಭಾರತದ ಪ್ರಾಚೀನ ಗ್ರಂಥಗಳಲ್ಲಿ ಉಕ್ತವಾಗಿರುವ ವ್ಯವಸಾಯಪದ್ಧತಿ ತೀರ ಶಾಸ್ತ್ರೀಯವಾದದ್ದು ಮಾತ್ರವಲ್ಲ ಜನಜೀವನದ ಏಳ್ಗೆಗೆ ಮತ್ತು ರಾಷ್ಟ್ರದ ಸರ್ವತೋಮುಖ ಅಭ್ಯುದಯಕ್ಕೆ ವ್ಯವಸಾಯವೇ ಹೇಗೆ ಕಂಕಾಲ ಎಂಬುದನ್ನು ಸಹ ಅಲ್ಲಿ ಅವಧರಿಸಿರುವುದು ಕಾಣುತ್ತದೆ. ವೇದ ಕಾಲದಲ್ಲೇ ಭಾರತೀಯ ವ್ಯವಸಾಯ ಇಷ್ಟೊಂದು ಪ್ರಗತಿಯನ್ನು ಸಾಧಿಸಿದ್ದು ಗಮನಿಸುವಾಗ ಭಾರತದಲ್ಲಿ ಆದಿಮ ವ್ಯವಸಾಯ ಆರಂಭವಾದ ಕಾಲವನ್ನು ಅವೆಷ್ಟೋ ಸಹಸ್ರ ವರ್ಷಗಳ ಹಿಂದಕ್ಕೆ ತಳ್ಳಬೇಕಾಗುತ್ತದೆ. ಕೌಟಿಲ್ಯ, ಶುಕ್ರ ಇವರ ಗ್ರಂಥಗಳಲ್ಲೂ ಮನುಸ್ಮೃತಿಯಲ್ಲೂ ವ್ಯವಸಾಯ, ವಿಧಾನಗಳನ್ನು ವೈಜ್ಞಾನಿಕವಾಗಿ ನಿರೂಪಿಸಲಾಗಿದೆ; ವ್ಯವಸಾಯ ಒಂದು ಜೀವಪೋಷಕ ಕಲೆ ಎಂದೇ ಅಲ್ಲಿ ಅದಕ್ಕೆ ಮನ್ನಣೆ ನೀಡಲಾಗಿದೆ. ಮಳೆನೀರಿನ ನೆರವಿನಿಂದ ನಡೆಸುವ ವ್ಯವಸಾಯ; ನದಿ, ಕಾಲುವೆ, ಬಾವಿ, ಯಾಂತ್ರಿಕ ಸಾಧನೆ-ಇವುಗಳ ಉಪಯೋಗ; ಬಿತ್ತುವ ವಿಧಾನದಲ್ಲಿ ಅನುಸರಿಸಬೇಕಾದ ಆವರ್ತನೆ; ಮಣ್ಣಿನ ಮತ್ತು ಹವಾಗುಣವನ್ನು ತಿಳಿದುಕೊಂಡು ಬಿತ್ತಬೇಕಾದ ಬೀಜಗಳ ಆಯ್ಕೆ; ತೀವ್ರ ಹಾಗೂ ವಿಸ್ತಾರ ಕೃಷಿಯ ಸಾಪೇಕ್ಷ ಅನುಕೂಲತೆಗಳು; ಬೆಳೆಗಳಿಗೆ ಬೀಳುವ ಪಿಡುಗುಗಳ ನಿವಾರಣೆ; ಹಿಡುವಳಿಯ ಗಾತ್ರ; ಜಮೀನ್ದಾರ ಗೇಣಿದಾರ ಸಂಬಂಧ; ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯ-ಇವೇ ಮುಂತಾದ ಕೃಷಿ ಹಾಗೂ ತತ್ಸಂಬಂಧ ಸಮಸ್ತ ಶಾಖೆಗಳನ್ನೂ ಕೂಲಂಕಷವಾಗಿ ಯಾವ ಆಧುನಿಕ ಮಾನಕದಿಂದಲೂ ಅತ್ಯಾಧುನಿಕವಾಗಿ ಕಾಣುವಂತೆ ಇರುವುದನ್ನು ನೋಡುವಾಗ ಪ್ರಾಚೀನ ಭಾರತದ ಕೃಷಿಪ್ರಗತಿಯ ಬಗ್ಗೆ ವಿಶೇಷಾಭಿಮಾನ ಮೂಡುವುದು ಸಹಜ. ಯುದ್ಧಕಾಲದಲ್ಲಿ ಸಹ ಕೃಷಿವ್ಯವಸ್ಥೆಗೆ ಯಾವ ಆತಂಕವೂ ಉಂಟಾಗದಂತೆ ಈ ಉದ್ಯಮ ಮುಂದುವರಿಯುತ್ತಿರಬೇಕೆಂಬುದು ಯುದ್ಧನಿರತ ರಾಷ್ಟ್ರಗಳೆಲ್ಲವೂ ಒಪ್ಪಿ ಪಾಲಿಸುತ್ತಿದ್ದ ಸತ್ಸಂಪ್ರದಾಯ. ನೆಲವೆಂದರೆ ಸಂಪತ್ತು, ನೆಲದ ಮೇಲೆ ವ್ಯವಸ್ಥಿತ ಕೃಷಿವಿಧಾನಗಳನ್ನು ಪ್ರಯೋಗಿಸುವುದರಿಂದ ಈ ಸಂಪತ್ತನ್ನು ಬಹುಪಾಲು ವೃದ್ಧಿಸಬಹುದು ಎಂದು ಅವರಿಗೆ ಚೆನ್ನಾಗಿ ಮನವರಿಕೆ ಆಗಿತ್ತು.

ಸುವ್ಯವಸ್ಥಿತ ವ್ಯವಸಾಯದ ಪ್ರಥಮ ಹಂತವಾದ ವರ್ಣಾವಣೆ ಭೂಸಾಗುವಳಿ ಹಾಗೂ ಸಾಕುಪ್ರಾಣಿಗಳ ಪಾಲನೆಯನ್ನು ಬೈಬಲಿನಲ್ಲಿ ಸುಸ್ಪಷ್ಟವಾಗಿ ವರ್ಣಿಸಿದೆ. ಹಳೇ ಬೈಬಲಿನ ಕಾಲದಲ್ಲಿ ವ್ಯವಸಾಯದ ವಿಧಾನ ಸಂಚಾಸ್ವರೂಪದ್ದು. ಅದು ಕುರಿಪಾಲನೆಗೆ ಸಂಬಂಧಿಸಿತ್ತು. ಜನಸಂಖ್ಯೆ ವೃದ್ಧಿಹೊಂದಿದಂತೆ ಸಾಗುವಳಿ ಪುಷ್ಟಿಗೊಂಡಿತು. ಬರಬರುತ್ತ ಜನ ತಾವು ಸಾಗುವಳಿ ಮಾಡುತ್ತಿದ್ದ ಸ್ಥಳಗಳಲ್ಲಿಯೇ ಶಾಶ್ವತವಾಗಿ ನೆಲೆಸತೊಡಗಿದರು. ಸ್ವಾಭಾವಿಕವಾಗಿಯೇ ಫಲವತ್ತದೇಶಗಳು, ಅನುಕೂಲ ಹವಾಪರಿಸ್ಥಿತಿ ಇದ್ದ ವಲಯಗಳು, ನದಿ ಸರೋವರ ಹಾಗೂ ಸಮುದ್ರ ತೀರದ ಭೂಮಿಗಳು ಈ ಜನರ ಆಯ್ಕೆಗಳಾದುವು. ಸಹಜವಾಗಿ ಕೃಷಿ ನಿವೇಶನಗಳು ಬೆಳೆದು ಕೃಷ್ಯಾಧಾರಿತ ಚಟುವಟಿಕೆಗಳಿಗೆ ಪ್ರಾಧಾನ್ಯ ಲಭಿಸಿತು. ಭಾರತ, ಮೆಸೊಪೊಟೇಮಿಯ, ಈಜಿಪ್ಟ್, ಚೀನ ಮುಂತಾದ ಪ್ರಾಚೀನ ನಾಗರಿಕತೆಗಳು ಕೃಷ್ಯಾಧಾರಿತವಾದವು. ಹೀಗೆ ಪ್ರಪಂಚ ಮೂಲತಃ ಕೃಷ್ಯಾಧಾರಿತವಾಗಿದ್ದರೂ ಯಂತ್ರೋದ್ಯಮಗಳು ರಂಗಪ್ರವೇಶಿಸಿದಂದಿನಿಂದ ಪರಿಸ್ಥಿತಿ ಸಂಕೀರ್ಣಗೊಳ್ಳಲಾರಂಭಿಸಿತು. ಬೆಳೆಯುತ್ತಿದ್ದ ಜನಸಂಖ್ಯೆ, ಕೈಗಾರಿಕಾ ಕ್ರಾಂತಿಯಿಂದ ಸಿದ್ಧಿಸಿದ ಹೊಸ ಆಯಾಮ, ಆಳರಸರ ಸಾಮ್ರಾಜ್ಯದಾಹ, ಸಾರಿಗೆ ಸಂಪರ್ಕಗಳ ವಿಕಾಸ ಮತ್ತು ಪ್ರಚಾರ ಇದೇ ಮುಂತಾದ ನೂತನಯುಗದ ಕೊಡುಗೆಗಳ ಫಲವಾಗಿ ಕೃಷಿಗೆ ಮೊದಲಿನ ಅವಧಾರಣೆ ತಪ್ಪಿ ಹೋಯಿತು. ಕೃಷಿಯನ್ನು ಸಹ ಒಂದು ಕೈಗಾರಿಕೆ ಎಂದು ಪರಿಗಣಿಸಿ ಅದನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ವಿಜ್ಞಾನಲಬ್ಧ ಸಿದ್ಧಿಗಳನ್ನು ಅದಕ್ಕೆ ಅನ್ವಯಿಸಿ ಹೆಚ್ಚಿನ ಫಲಿತಾಂಶಗಳನ್ನು ಪಡೆಯುವ ಪ್ರವೃತ್ತಿ ತಲೆದೋರಿತು.

ಹೊಸ ಒಲವುಗಳು: ಪ್ರಪಂಚದ ಜನಸಂಖ್ಯೆ ಪ್ರತಿ ವರ್ಷವೂ ಅವಿರತವಾಗಿ ಹೆಚ್ಚುತ್ತಿದೆ. ಇದರಿಂದ ಆಹಾರದ ಬೇಡಿಕೆ ಒಂದು ಕಡೆ ಹೆಚ್ಚುತ್ತಿದ್ದರೆ ಆಹಾರ ಉತ್ಪಾದನೆಗೆ ಬೇಕಾದ ನೆಲ ಸಂಪತ್ತು ಇನ್ನೊಂದು ಕಡೆ ಕುಗ್ಗುತ್ತಿದೆ. ಈ ಉಭಯನಷ್ಟವನ್ನು ಸಮರ್ಥವಾಗಿ ಎದುರಿಸಲು ಹೊಸ ದಾರಿಗಳನ್ನು ಮಾನವ ಕಂಡುಕೊಂಡಿದ್ದಾನೆ-ವಿಸ್ತಾರಕೃಷಿ, ಸಾಂದ್ರಬೇಸಾಯ, ಬೆಳೆಗಳ ಆವರ್ತನೆ, ಬಿತ್ತನೆಯ ಬೀಜಗಳ ತಳಿ ಸುಧಾರಣೆ, ಸಂಕರ ಬೀಜಗಳ ಬಳಕೆ, ನೀರಿನ ನಿಯಂತ್ರಣ, ನೀರಾವರಿ ಅಭಿವೃದ್ಧಿ ಮಣ್ಣಿನ ಪರೀಕ್ಷೆ ಮತ್ತು ಗುಣನಿರ್ಧಾರ, ಕೃತಕ ಗೊಬ್ಬರಗಳ ಸಾರ್ವತ್ರಿಕ ಉಪಯೋಗ, ಯಂತ್ರಗಳ ನೆರವು. ಔಷಧ ಮತ್ತು ಕೀಟನಾಶಕಗಳ ಬಳಕೆ, ಹವೆಯ ನಿಯಂತ್ರಣ ಇವೇ ಮುಂತಾದವು

ಕೃಷಿವಿಜ್ಞಾನದಲ್ಲಿ ಮಾನವ ತೋರಿಸುತ್ತಿರುವ ಈಚಿನ ಒಲವುಗಳು. ಈಗ ಕೃಷಿ ಎಂಬುದು ಒಂದು ಸುಸಂಘಟಿತ ಉದ್ಯಮ, ಯಾರೋ ಕೆಲವರು ವಿರಾಮವಾಗಿ ನಡೆಸುವ ಹವ್ಯಾಸವಲ್ಲ. ನಿಸರ್ಗ ತಾನೇ ತಾನಾಗಿ ಕೊಡುವ ಫಲಗಳು ಇಂದು ಸಾಲವು, ನಿಸರ್ಗ, ಮನುಷ್ಯಪ್ರಯತ್ನ, ತಂತ್ರಜ್ಞಾನ ಮತ್ತು ವಿಜ್ಞಾನದ ನೆರವು ಹೀಗೆ ಮೂರು ಘಟಕಗಳ ಸಂಯುಕ್ತ ಫಲ ಇಂದಿನ ಕೃಷಿ. ಉದ್ದೇಶ ವೆಚ್ಚದಲ್ಲಿ ಮಿತವ್ಯಯ ಉತ್ಪಾದನೆಯಲ್ಲಿ ಗರಿಷ್ಠ ಸಿದ್ಧಿ.

ಸಲಕರಣೆಗಳು: ಎಂದಿನಿಂದಲೂ ಪಳಗಿಸಿದ ಪ್ರಾಣಿಗಳಾದ ಹಸು, ಎತ್ತು,ಎಮ್ಮೆ, ಕೋಣ, ಕುದುರೆ ಮುಂತಾದುವು ಕೃಷಿಕನ ನಿಕಟ ಒಡನಾಡಿಗಳಾಗಿ ಬಂದಿವೆ. ಕೋಳಿ,ಹಂದಿ, ನಾಯಿ, ಆಡು, ಕುರಿ ಮುಂತಾದ ಇತರ ಸಾಕುಪ್ರಾಣಿಗಳು ಒಂದಲ್ಲ ಒಂದು ರೀತಿಯಲ್ಲಿ ಕೃಷಿ ಪ್ರಪಂಚದಲ್ಲಿ ದೃಢ ಅಸ್ತಿತ್ವ ಪಡೆದಿವೆ. ಇವೆಲ್ಲವೂ ಸೇರಿ ಕೃಷಿ ಭೂಮಿವಿಜ್ಞಾನ ಒಂದು ಸಂಗತ ಚಿತ್ರವಾಗುತ್ತದೆ. ಈ ಪ್ರಾಣಿಗಳು ಕೃಷಿಕನ ಜೀವಂತ ಸಲಕರಣೆಗಳಾದರೆ ಬಡಿಗೆ, ಕೋಲಿನಿಂದ ತೊಡಗಿ ಕುಕ್ಕೆ, ನೇಗಿಲು, ತಟ್ಟೆ, ಏತ, ಚಕ್ರ, ಗಾಡಿಗಳ ಮೂಲಕ ಇಂದಿನ ಸ್ವಯಂಚಾಲಿತ ಯಂತ್ರಗಳವರೆಗಿನ ಸಮಸ್ತ ಸಲಕರಣೆಗಳೂ ಕೃಷಿಕನ ಅನಿವಾರ್ಯ ಒಡನಾಡಿಗಳು. ಏತ ಕಟ್ಟೆಗಳಿಂದ ಆರಂಭವಾದ ನೀರಾವರಿ ತಂತ್ರ ಇಂದಿನ ನೀರಾವರಿಯ ಬೃಹದ್ಯೋಜನೆಗಳಲ್ಲಿ ವಿಕಾಸಗೊಂಡಿದೆ.

ಸಾಗುವಳಿ ಪದ್ಧತಿಗಳು : ಪ್ರಥಮ ವ್ಯವಸಾಯಗಾರರು ನೈಸರ್ಗಿಕ ಪದ್ಧತಿಯನ್ನು ಅನುಸರಿಸಿದರು; ಎಂದರೆ ಬಿತ್ತುವುದು ಮತ್ತು ಬೆಳೆ ಕೊಯ್ಯುವುದು ಬೆಳೆಯ ಇಳುವರಿ ಕಡಿಮೆ ಆದಾಗ ಹಳೆ ನೆಲವನ್ನು ಪಾಳುಬಿಟ್ಟು ಹೊಸ ಹಸುರುಗಳನ್ನು ಅರಸುತ್ತ ಹೋಗುವುದು. ಅಲೆಮಾರಿ ಜನಸಂಖ್ಯೆಗೆ ಇದೇನೋ ಸರಿಹೊಂದಿತು. ಆದರೆ ಒಂದೆಡೆ ಸ್ಥಿರವಾಗಿ ನೆಲೆಸಿದ ಕೃಷಿಕರು ಹೀಗೆ ಮಾಡುವಂತಿರಲಿಲ್ಲ. ತಮ್ಮ ನೆಲೆಯ ವಲಯದಲ್ಲೇ ಒಂದಷ್ಟು ಭೂಮಿಯನ್ನು ಕ್ರಮಾನುಗತವಾಗಿ ಪಡ ಬೀಳಿಸಲು ಆರಂಭಿಸಿದರು. ಇಂಥ ಭೂಮಿ ಪುನರಪಿ ಕ್ರಮೇಣ ತನ್ನ ಫಲವಂತಿಕೆಯನ್ನು ಪಡೆಯುವವರೆಗೆ ಅದನ್ನು ಕೃಷಿಗೆ ಬಳಕೆ ಮಾಡುತ್ತಿರಲಿಲ್ಲ. ಪಡಬೀಳಿಸುವ ಪದ್ಧತಿ ಪ್ರ.ಶ.ಪೂ. 2,000 ವರ್ಷಗಳಷ್ಟು ಪ್ರಾಚೀನದಲ್ಲೇ ರೂಢಿಯಲ್ಲಿತ್ತು. ಇದೇ ವೇಳೆಗೆ ಬೂದಿ, ದನದಗೊಬ್ಬರ, ಸೊಪ್ಪು ಸದೆ ಮುಂತಾದವನ್ನು ಉಳುಮೆಯ ನೆಲಕ್ಕೆ ಯುಕ್ತ ಕಾಲಗಳಲ್ಲಿ ಯುಕ್ತ ಪ್ರಮಾಣಗಳಲ್ಲಿ ಸೇರಿಸಿ ಅದರ ಫಲವಂತಿಕೆಯನ್ನು ವರ್ಧಿಸುವ ಕ್ರಮವೂ ರೂಢಿಗೆ ಬಂದಿತ್ತು. ಮಧ್ಯಯುಗದ (ಸು. 10 ಶ.) ಇಂಗ್ಲೆಂಡಿನಲ್ಲಿ ಪ್ರಚಲಿತವಾಗಿದ್ದ ಎರಡು–ಮತ್ತು–ಮೂರು ಕ್ಷೇತ್ರ ಸಾಗುವಳಿಯನ್ನು ಇಲ್ಲಿ ಹೆಸರಿಸಬೇಕು. ಆ ಕಾಲದ ಇಂಗ್ಲೆಂಡಿನ ಜಹಗೀರುಗಳಲ್ಲಿಯ ಜಹಗೀರುದಾರರ ಮತ್ತು ಹಳ್ಳಿಗರ ಭೂಮಿಗಳನ್ನು ಒಟ್ಟಾಗಿ ಸೇರಿಸಿ ತೋಟ, ಸಾಗುವಳಿ ಪ್ರದೇಶ, ಹುಲ್ಲುಗಾವಲು, ಬಂಜರು ಭೂಮಿ ಎಂಬುದಾಗಿ ವಿಂಗಡಿಸಿದ್ದರು. ಸಾಗುವಳಿ ಕ್ಷೇತ್ರವನ್ನು ಎರಡು ಅಥವಾ ಮೂರು ದೊಡ್ಡ ಹೊಲಗಳಾಗಿ ವಿಭಾಗಿಸಿ ಇಂಥ ಒಂದೊಂದು ಹೊಲವನ್ನು ಒಂದು ಎಕರೆ ಅಥವಾ ಕಡಿಮೆ ವಿಸ್ತೀರ್ಣದ ಪಟ್ಟಿಗಳಾಗಿ ವಿಭಾಗಿಸಿದ್ದರು. ಒಬ್ಬೊಬ್ಬ ರೈತ ಒಂದೊಂದು ಪಟ್ಟಿಯನ್ನು ಸಾಗುವಳಿ ಮಾಡುತ್ತಿದ್ದ. ಮೂರು–ಕ್ಷೇತ್ರ ಸಾಗುವಳಿ ಪದ್ಧತಿಯಲ್ಲಿ ಒಂದು ಹೊಲವನ್ನು ಪಡಬಿಟ್ಟರೆ ಒಂದರಲ್ಲಿ ಗೋದಿ ಅಥವಾ ರೈ ಧಾನ್ಯವನ್ನು ಬೆಳೆಸುತ್ತಿದ್ದರು. ಇನ್ನೊಂದರಲ್ಲಿ ಬಾರ್ಲಿ ಓಟ್ ಧಾನ್ಯ ಬೆಳೆಗಳನ್ನು ಬೆಳೆಸುತ್ತಿದ್ದರು. ಎರಡು–ಕ್ಷೇತ್ರ ಸಾಗುವಳಿ ಪದ್ಧತಿಯಲ್ಲಿ ಅರ್ಧದಷ್ಟು ಭೂಮಿಯನ್ನು ಪಡಬಿಟ್ಟು ಉಳಿದ ಅರ್ಧದಲ್ಲಿ ಚಳಿಗಾಲದ ಮತ್ತು ವಸಂತ ಋತುವಿನ ಧಾನ್ಯಗಳನ್ನು ಬೆಳೆಸುತ್ತಿದ್ದರು. ಎರಡು–ಕ್ಷೇತ್ರದ ಪದ್ಧತಿಗಿಂತ ಶೇ. 50 ಹೆಚ್ಚು ಇಳುವರಿ ಮೂರು–ಕ್ಷೇತ್ರದ ಸಾಗುವಳಿ ಪದ್ಧತಿಯಲ್ಲಿ ದೊರೆಯುತ್ತಿತ್ತು. ಪಡ ಬಿಡುವ ಪದ್ಧತಿ ಬೆಳೆಗಳ ಆವರ್ತನೆಗೆ ಅವಕಾಶ ಒದಗಿಸುತ್ತಿತ್ತು. ನೈಟ್ರೋಜನ್ನನ್ನು ನೆಲದಲ್ಲಿ ಸೆರೆ ಹಿಡಿದಿಡುವ ದ್ವಿದಳ ಧಾನ್ಯಗಳನ್ನು ಮೊದಲು ಬೆಳೆಸಿ ತರುವಾಯ ಅದೇ ಹೊಲದಲ್ಲಿ ತೃಣ ಧಾನ್ಯಗಳನ್ನು ಬೆಳೆಸಿ ಹೆಚ್ಚು ಇಳುವರಿಯನ್ನು ಪಡೆಯುತ್ತಿದ್ದರು.

ಬೇಸಾಯದ ಸಮಸ್ಯೆಗಳು: ಲಭ್ಯವಾದ ಅಂಕಿಅಂಶಗಳ ಆಧಾರದ ಮೇಲೆ ಹೇಳುವುದಾದರೆ ಪ್ರಪಂಚದ ಜನಸಂಖ್ಯೆಯ ಶೇ. 60 ರಷ್ಟು ಬೇಸಾಯವನ್ನು ಜೀವನವೃತ್ತಿಯಾಗಿ ಅವಲಂಬಿಸಿದೆ. ಈ ಜನರಿಗೆ ತಮ್ಮ ನೆಲದ ಮೇಲಿರುವ ಪ್ರೇಮ ಮತ್ತು ಒಡನಾಟ ಮನುಷ್ಯ ಜನಾಂಗದಷ್ಟೇ ಪ್ರಾಚೀನವಾದದ್ದು. ಆದ್ದರಿಂದ ಬೇಸಾಯಕ್ಕೆ ಸಂಬಂಧಿಸಿದ ಯಾವ ಸುಧಾರಣೆಯೇ ಆಗಲಿ ಬೇಸಾಯವನ್ನೇ ಅವಲಂಬಿಸಿರುವ ಜನರ ಹಿತವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಜಾರಿಗೆ ತರಬೇಕು. ಕೈಗಾರಿಕೆಗಳ ಕಾರ್ಮಿಕರು ಸುಸಂಘಟಿತರಾಗಿರುವುದರಿಂದ ಅವರ ಯೋಗಕ್ಷೇಮವನ್ನು ಆಡಳಿತವಾಗಲೀ ಸರ್ಕಾರವಾಗಲೀ ಕಡೆಗಣಿಸಿ ಸುಧಾರಣೆಗಳನ್ನು ತರುವುದು ಸಾಧ್ಯವಾಗದು. ಬೇಸಾಯಗಾರರ ಪರಿಸ್ಥಿತಿ ಹೀಗಲ್ಲ. ದೇಶವಿಡೀ ಹರಡಿಹಂಚಿಹೋಗಿರುವ ಇವರ ಅಭಿವೃದ್ಧಿಯ ಕಡೆಗೆ ಸರ್ಕಾರ ಅಧಿಕ ಲಕ್ಷ್ಯಕೊಡಬೇಕು. ಇದು ಆಡಳಿತದ ಸಮಸ್ಯೆಯಾದರೆ ಬೇಸಾಯದ ಇತರ ಸಮಸ್ಯೆಗಳು ನಿಸರ್ಗಜನ್ಯವಾದವು. ಅತಿವೃಷ್ಟಿ, ಅನಾವೃಷ್ಟಿ, ನೆರೆ ಹಾವಳಿ, ಕೀಟಗಳ ಪಿಡುಗು, ಸಸ್ಯವ್ಯಾಧಿಗಳು, ಬೆಂಕಿ, ಹವೆ, ಮಣ್ಣಿನ ಸವೆತ ಮತ್ತು ಮಾಲಿನ್ಯ ಇತ್ಯಾದಿ. ವೈಜ್ಞಾನಿಕ ವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದರಿಂದ ನೈಸರ್ಗಿಕ ಸಮಸ್ಯೆಗಳಲ್ಲಿ ಹೆಚ್ಚಿನವನ್ನು ಪರಿಹರಿಸಬಹುದು ಮಾತ್ರವಲ್ಲ, ಅತಿವೃಷ್ಟಿ, ನೆರೆಹಾವಳಿ ಮೊದಲಾದವನ್ನು ಯುಕ್ತ ಪೂರ್ವಯೋಜನೆಗಳ ನೆರವಿನಿಂದ ಪ್ರಯೋಜನಕಾರಿಗಳಾಗಿ ಸಹ ಮಾಡಬಹುದು. ಇದು ಹೇಗೇ ಇರಲಿ, ಬೇಸಾಯದ ಪ್ರಧಾನ ಅವಳಿ ಸಮಸ್ಯೆಗಳೆಂದರೆ ಹವಾಮಾನ ಮುನ್ಸೂಚಿಸಲಾಗದ ವರ್ತನೆ ಮತ್ತು ಬೇಸಾಯಗಾರರ ಕನಿಷ್ಠ ಜೀವನ ಮಟ್ಟ. ಇವನ್ನು ಪರಿಹರಿಸಲು ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಬೇರೆ ಬೇರೆ ಯೋಜನೆಗಳಿವೆ. ಕೃಷಿಯ ಇನ್ನೊಂದು ಸಮಸ್ಯೆ ಭೂಸಂರಕ್ಷಣೆ. ಜಾನುವಾರುಗಳನ್ನು ಮಿತಿಮೀರಿ ಬೆಳೆಸಿಕೊಂಡು ಅವುಗಳ ಉಪಯೋಗಾರ್ಥ ಸಾಗುವಳಿ ಭೂಮಿಯ ಬಳಕೆ, ಅವೈಜ್ಞಾನಿಕ ವಿಧಾನಗಳಿಂದ ಕೃಷಿ ಮಾಡಿ ನೆಲದ ಸಾರಗುಂದಿಸುವಿಕೆ, ಕಾಡುಗಳ ಅವ್ಯಾಹತ ಸೂರೆ, ನಗರ–ಪಟ್ಟಣಗಳ ಅತಿವೃದ್ಧಿ, ನೀರಿನ ಪ್ರವಾಹದ ಮೇಲೆ ನಿಯಂತ್ರಣವಿಲ್ಲದೇ ಇಳಿಜಾರು ಪ್ರದೇಶಗಳಲ್ಲಿನ ಮಣ್ಣಿನ ಸವೆತ ಇವೇ ಮುಂತಾದವು ಮಿತಿಯಲ್ಲಿರುವ ಕೃಷಿ ಭೂಮಿಯನ್ನು ಸಾರರಹಿತವನ್ನಾಗಿಸುತ್ತವೆ. ವಸತಿಗೃಹಗಳು, ನಗರ–ಪಟ್ಟಣ ಕೈಗಾರಿಕೆಗಳು ಹೊರಹಾಕುವ ಮಲಿನವಾದ ನೀರು, ವ್ಯರ್ಥ–ತ್ಯಾಜ್ಯ ಘನಪದಾರ್ಥ, ರಾಸಾಯನಿಕ ವಸ್ತುಗಳು, ಗಣಿಗಾರಿಕೆ ಚಟುವಟಿಕೆ, ವಿಕಿರಣಶೀಲವಸ್ತುಗಳ ಬಿಡುಗಡೆ, ಕ್ರಿಮಿನಾಶಕ ವಸ್ತುಗಳ ಬಳಕೆ ಮುಂತಾದವುಗಳಿಂದ ಮಣ್ಣು ಮಾಲಿನ್ಯ ತೀವ್ರ ಸ್ವರೂಪತಾಳಿದೆ. ಇದರಿಂದ ಕೃಷಿಕ್ಷೇತ್ರಕ್ಕೆ ದೊಡ್ಡ ಕೊಡಲಿಪೆಟ್ಟು ಬೀಳಲಿದೆ. ವ್ಯವಸಾಯ ಸುಧಾರಣೆಯ ಎಲ್ಲ ಯೋಜನೆಗಳೂ ಇವೆಲ್ಲ ಸಮಸ್ಯೆಗಳನ್ನೂ ಅವುಗಳ ತೀವ್ರ ಪರಿಣಾಮಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. (ಕೆ.ಸಿ.ಎನ್.)

**ಕೃಷಿ ಭೂಗೋಳ ವಿಜ್ಞಾನ:** ಮಾನವನು ಬದುಕುತ್ತಿರುವ ಪರಿಸರದ ನೆಲವನ್ನು ಹಸನುಮಾಡಿ, ಬಿತ್ತನೆಮಾಡಿ ಬೆಳೆಗಳನ್ನು ಸಾಗುವಳಿ ಮಾಡುವ ಕಲೆಯನ್ನು ಕುರಿತು ವಿವರಣೆ ಅಥವಾ ಅಧ್ಯಯನಕ್ಕೆ ಕೃಷಿ ಭೂಗೋಳವಿಜ್ಞಾನಿಗಳೆನ್ನುವರು. ಆರ್ಥಿಕ ಭೂಗೋಳವಿಜ್ಞಾನ ಪ್ರಮುಖ ವಿಭಾಗ. ಕೃಷಿ ಭೂಗೋಳವಿಜ್ಞಾನಿಗಳು ಕೃಷಿ ಎಂಬ ಪದವು ಬೆಳೆಗಳನ್ನು ಸಾಗುವಳಿ ಮಾಡುವುದಕ್ಕಲ್ಲದೆ ಪಶುಪಾಲನೆ ಸಹ ಒಳಗೊಂಡಿದೆ ಎಂದು ಸೂಚಿಸಿದ್ದಾರೆ.

ಕೃಷಿ ಭೂಗೋಳವಿಜ್ಞಾನ ಕುರಿತಂತೆ ಹಲವು ವ್ಯಾಖ್ಯೆಗಳು ಪ್ರತಿಪಾದಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ಈ ರೀತಿಯಾಗಿವೆ.

ಜಾನ್‌ಸ್ಸನ್ ರವರ ಪ್ರಕಾರ ಕೃಷಿ ಚಟುವಟಿಕೆಯಲ್ಲಿನ ಪ್ರಾದೇಶಿಕ ವ್ಯತ್ಯಾಸ ಅದಕ್ಕೆ ಕಾರಣ ಮತ್ತು ವಿವರಣೆ ಒಳಗೊಂಡಿರುವುದೇ ಕೃಷಿ ಭೂಗೋಳವಿಜ್ಞಾನ.

ಹಿಲ್‌ಮನ್‌ರವರ ಪ್ರಕಾರ ಭೂಖಂಡಗಳ ಮತ್ತು ದೇಶಗಳ ಕೃಷಿಯನ್ನು ತುಲನೆಮಾಡಿ ಅಭ್ಯಸಿಸುವುದೇ ಕೃಷಿ ಭೂಗೋಳವಿಜ್ಞಾನ.

ಬರ್ನಾರ್ಡ್‌ರವರ ಪ್ರಕಾರ ಕೃಷಿಯ ಪ್ರಾದೇಶಿಕ ವ್ಯತ್ಯಾಸ ಮತ್ತು ಅದಕ್ಕೆ ಕಾರಣವಾದ ಅಂಶಗಳನ್ನು ಕುರಿತು ವಿವರಿಸುವದೇ ಕೃಷಿ ಭೂಗೋಳವಿಜ್ಞಾನ.

ಈ ಮೇಲ್ಕಂಡ ವ್ಯಾಖ್ಯೆಗಳಲ್ಲಿ ಸ್ವಲ್ಪ ಭಿನ್ನತೆಯಿದ್ದರೂ ಸಹ ಸಸ್ಯ ಮತ್ತು ಪ್ರಾಣಿಗಳ ಪೋಷಣೆ ಕುರಿತ ಅಧ್ಯಯನ ಕೃಷಿ ಭೂಗೋಳವಿಜ್ಞಾನದ ಪ್ರಮುಖ ವಸ್ತು ವಿಷಯವಾಗಿದೆ. ವ್ಯವಸಾಯ ಚಟುವಟಿಕೆಗಳು ಪ್ರಾದೇಶಿಕವಾಗಿ ವ್ಯತ್ಯಾಸಹೊಂದಿದ್ದು ಇದಕ್ಕೆ ಕಾರಣವನ್ನು ಹುಡುಕುವುದು ಭೂಗೋಳವಿಜ್ಞಾನಿಗಳ ಪ್ರಮುಖ ಉದ್ದೇಶವಾಗಿದೆ. ವಿಸ್ತಾರವಾದ ಕೃಷಿ ಭೂಗೋಳವಿಜ್ಞಾನದ ಅಧ್ಯಯನದಲ್ಲಿ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಅಗತ್ಯ ಸೌಲಭ್ಯಗಳ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕೃಷಿ ಭೂಗೋಳವಿಜ್ಞಾನದ ಪ್ರಮುಖ ಉದ್ದೇಶಗಳು; ವಿವಿಧ ಬೇಸಾಯ ಕ್ರಮಗಳು ಹೇಗೆ ಭೂಮಿಯ ಮೇಲೆ ಹಂಚಿಕೆಯಾಗಿವೆ ಹಾಗೂ ಅವು ಹೇಗೆ ಪ್ರಾದೇಶಿಕವಾಗಿ ವಿಭಾಗಿತವಾಗಿವೆ ಎಂಬುದನ್ನು ವಿವರಿಸುವುದು. ಒಂದು ನಿರ್ಧಿಷ್ಟವಾದ ವ್ಯವಸಾಯ ವಿಧಾನ ಒಂದು ನಿರ್ಧಿಷ್ಟ ಪ್ರದೇಶದಲ್ಲಿ ಅಭಿವೃದ್ಧಿಗೊಂಡಿದೆ ಮತ್ತು ಹೇಗೆ ಅದು ಬೇರೆ ಪ್ರದೇಶದ ಬೇಸಾಯಕ್ಕಿಂತ ವಿಭಿನ್ನವಾಗಿದೆ ಎಂಬುದನ್ನು ತಿಳಿದುಕೊಳ್ಳುವುದು. ಬೇಸಾಯ ಪದ್ಧತಿಯ ವಿಧಾನವನ್ನು ವಿಶ್ಲೇಷಿಸುವುದು. ಕೃಷಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದ ಕಡೆಗೆ ಎಷ್ಟು ಪ್ರಮಾಣದಲ್ಲಿ ವ್ಯತ್ಯಾಸ ಗೊಂಡಿದೆ ಎಂಬುದನ್ನು ತೋರಿಸುವುದು. ವಿವಿಧ ಬೆಳೆಗಳ ಉತ್ಪಾದನಾ ಪ್ರದೇಶಗಳನ್ನು ಗುರ್ತಿಸುವುದು. ಎರಡು ಪ್ರದೇಶಗಳ ನಡುವಿನ ವ್ಯತ್ಯಾಸದ ಮಟ್ಟವನ್ನು ಪರೀಕ್ಷಿಸುವುದು ಮತ್ತು ಅಳೆಯುವುದು. ಕೃಷಿ ಉತ್ಪಾದನೆಯು ಕುಂಠಿತಗೊಂಡಿರುವ ಪ್ರದೇಶಗಳನ್ನು ಗುರ್ತಿಸುವುದು. ಕೃಷಿಯ ನಿಶ್ಚಲತೆ, ವಿನಿಮಯಕ್ಕೆ ಮತ್ತು ಚಲನಾತ್ಮಕ ಪ್ರದೇಶಗಳ ಗಡಿಯನ್ನು ಗುರ್ತಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಆರ್ಥಿಕ ಭೂಗೋಳವಿಜ್ಞಾನದಲ್ಲಿ ಪ್ರಮುಖವಾಗಿ ಮಾನವನ ವೃತ್ತಿಗಳಾದ ಪ್ರಾಥಮಿಕ, ದ್ವಿತೀಯ, ತೃತೀಯ ಮತ್ತು ಚತುರ್ಥ ಚಟುವಟಿಕೆಗಳನ್ನು ಪರಿಶೀಲಿಸುವುದು. ಮೊದಲು ಪ್ರಾಥಮಿಕ ಹಂತದಲ್ಲಿ ಮಾನವನು ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಣೆ ರೂಢಿಯಲ್ಲಿದ್ದು, ನಂತರ ನಿಯೋಲಿಥಿಕ್ ಅವಧಿಯಲ್ಲಿ ಮಾನವನು ಬೆಳೆಗಳನ್ನು ಬೆಳೆಯುವ ಕಲೆಯನ್ನು ಪ್ರಾರಂಭಿಸಿದನು. ಇದರಿಂದಾಗಿ ವ್ಯವಸಾಯವು ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ಅಭಿವೃದ್ಧಿ ಹೊಂದಿತು. ಇಂದು ಪ್ರಪಂಚದ ಒಟ್ಟು ಜನಸಂಖ್ಯೆಯ 2/3 ರಷ್ಟು ವ್ಯವಸಾಯವನ್ನವಲಂಬಿಸಿದ್ದಾರೆ. (ಡಿ.ಆರ್.)

**ಕೃಷಿ ವಿಧಗಳು:** ಬೇಸಾಯದ ಸ್ವರೂಪ ಮತ್ತು ಗುಣಲಕ್ಷಣಗಳು ಹಲವು ಅಂಶಗಳನ್ನು ಅವಲಂಬಿಸಿರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸಾಗುವಳಿ ಭೂಮಿಯ ದೊರೆಯುವಿಕೆ, ವಾಯುಗುಣ, ನೀರು, ಬೆಳೆಗಳ ಮಾದರಿ, ಉತ್ಪಾದನಾ ಗಾತ್ರ ಅಥವಾ ಪ್ರಾದೇಶಿಕ ವ್ಯತ್ಯಾಸವು ಅತ್ಯಂತ ಪ್ರಮುಖವಾದವು. ಇವುಗಳ ಆಧಾರದ ಮೇಲೆ ಪ್ರಪಂಚದ ವ್ಯವಸಾಯ ಪದ್ಧತಿಯನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

ಸಾಂದ್ರಬೇಸಾಯ: ಒಂದು ನಿರ್ದಿಷ್ಟ ಕೃಷಿ ಪ್ರದೇಶದಲ್ಲಿ ಅಧಿಕ ಬಂಡವಾಳ ಮತ್ತು ಕೂಲಿಗಾರರನ್ನು ತೊಡಗಿಸಿ ಒಂದು ವರ್ಷದ ಅವಧಿಯಲ್ಲಿ ಎರಡು ಅಥವಾ ಮೂರು ಫಸಲುಗಳು ಪಡೆಯುವ ವ್ಯವಸಾಯ ಪದ್ಧತಿ. ಇದು ಹೆಚ್ಚು ಜನಸಾಂದ್ರತೆಯ ಪ್ರದೇಶವಾದ ಆಗ್ನೇಯ ಏಷ್ಯದಲ್ಲಿ ಹೆಚ್ಚು. ಭಾರತ, ಬಾಂಗ್ಲಾದೇಶ, ಥೈಲೆಂಡ್, ಮಯನ್ಮಾರ್, ಚೀನ, ಶ್ರೀಲಂಕ, ಇಂಡೋನೇಷ್ಯ ಇತ್ಯಾದಿ ಹಾಗೂ ಪಶ್ಚಿಮ ಯೂರೋಪಿನಲ್ಲೂ ಕಂಡುಬರುವುದು. ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ಗರಿಷ್ಠ ಉತ್ಪನ್ನಗಳನ್ನು ಪಡೆಯಲು ಅಧಿಕ ಪ್ರಮಾಣದ ಬಂಡವಾಳ ಮತ್ತು ಶ್ರಮ ವಿನಿಯೋಗಿಸಲಾಗುವುದು. ಈ ಪಟ್ಟಿಯಲ್ಲಿ ಇಳುವರಿ ಹೆಚ್ಚು, ಆದರೆ ತಲಾವಾರು ಉತ್ಪಾದನಾ ಪ್ರಮಾಣ ಕಡಿಮೆ. ಈ ಪ್ರದೇಶಗಳಲ್ಲಿ ಜನರು ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಅಧಿಕ ಉತ್ಪಾದನೆ ಪಡೆಯಲು ಭೂಮಿಗೆ ರಸಗೊಬ್ಬರ, ಸುಧಾರಿತ ಬೀಜ, ಬೆಳೆಗಳ ಆವರ್ತನ, ನೀರಾವರಿ ಸೌಲಭ್ಯಗಳನ್ನು ಒದಗಿಸಲಾಗುವುದು.

ವಿಸ್ತಾರ ಬೇಸಾಯ : ಸಾಗುವಳಿ ಯೋಗ್ಯ ಭೂಮಿಯು ವಿಸ್ತಾರವಾಗಿರುವ, ವಿರಳ ಜನ ಸಾಂದ್ರತೆಯ ಪ್ರದೇಶಗಳಲ್ಲಿ ಕೃಷಿ ಉಪಕರಣಗಳ ಸಹಾಯದಿಂದ ಒಂದೇ ಬೆಳೆಯನ್ನು ವಾಣಿಜ್ಯ ಮಾದರಿಯಲ್ಲಿ ಉತ್ಪಾದಿಸುವ ಬೇಸಾಯ ಕ್ರಮ. ಇದು ಸಾಮಾನ್ಯವಾಗಿ ಸಮಶೀತೋಷ್ಣ ವಲಯದಲ್ಲಿ ಕಂಡು ಬರುತ್ತದೆ. ಅಮೆರಿಕ, ಕೆನಡ, ಅರ್ಜೆಂಟೈನ, ಪೆರು ಇತ್ಯಾದಿ ದೇಶಗಳಲ್ಲಿ ಈ ಬೇಸಾಯ ಹಂಚಿಕೆಯಾಗಿದೆ. ಈ ಬೇಸಾಯವು ಪ್ರಮುಖವಾಗಿ ಬಂಡವಾಳ ಕೇಂದ್ರಿತವಾಗಿದೆ. ಈ ಪ್ರದೇಶದ ಹೆಚ್ಚಿನ ಜನರು ದ್ವಿತೀಯ ಮತ್ತು ತೃತೀಯ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗಿರುತ್ತಾರೆ.

ಆರ್ದ್ರ ಬೇಸಾಯ: ಸಾಕಷ್ಟು ಮಳೆ ಬೀಳುವ ಭೂ ಪ್ರದೇಶಗಳಲ್ಲಿ ಅಧಿಕ ನೀರನ್ನು ಬಯಸುವ ಬತ್ತ, ಕಬ್ಬು, ಮುಂತಾದ ಬೆಳೆಗಳನ್ನು ಮಳೆಯನ್ನೇ ಆಧರಿಸಿ ಬೆಳೆಯಲಾಗುತ್ತಿರುವ ವ್ಯವಸಾಯ ಪದ್ಧತಿ. ಈ ಬೇಸಾಯವು ಏಷ್ಯದ ಮಾನ್ಸೂನ್ ಪ್ರದೇಶ, ಆಫ್ರಿಕದ ಉಷ್ಣ ವಲಯ ಮತ್ತು ಮೆಡಿಟರೇನಿಯನ್ ಪ್ರದೇಶಗಳಲ್ಲಿ ಹಂಚಿಕೆಯಾಗಿದೆ.

ನೀರಾವರಿ ಬೇಸಾಯ: ಕೃತಕವಾಗಿ ನೀರನ್ನು ಪೂರೈಕೆ ಮಾಡಿ ಬೆಳೆಗಳನ್ನು ಉತ್ಪಾದಿಸುವುದೇ ನೀರಾವರಿ ಬೇಸಾಯ. ಋತುಕಾಲಿಕ ಹಾಗೂ ಅಕಾಲಿಕವಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ಕಾಲುವೆ, ಬಾವಿ, ಕೆರೆ, ಕೊಳವೆ ಬಾವಿ ಇತ್ಯಾದಿ ಮೂಲಗಳಿಂದ ನೀರು ಪೂರೈಸಿ ಬೆಳೆ ಬೆಳೆಯಲಾಗುತ್ತದೆ. ಇತ್ತೀಚೆಗೆ ಈ ಕೃಷಿ ಪದ್ಧತಿ ಪ್ರಚಲಿತವಾಗುತ್ತಿದೆ. ವೆಚ್ಚದಾಯಕವಾದರೂ ರೈತ ವರ್ಷವಿಡೀ ಕೃಷಿಕಾರ್ಯಗಳಲ್ಲಿ ತೊಡಗಿಸಿಕೊಂಡು ಎರಡು ಮೂರು ಫಸಲುತೆಗೆಯುವನು. ಇಳುವರಿ ಹೆಚ್ಚು. ರೈತನು ಆರ್ಥಿಕವಾಗಿ ಸುಧಾರಿಸಬಲ್ಲ. ಬಹು ಬೆಳೆಸಾಧ್ಯವಿದೆ. ಈ ಪದ್ಧತಿಯು ನೈರುತ್ಯ ಏಷ್ಯದ ಮಾನ್ಸೂನ್ ಪ್ರದೇಶ, ಏಷ್ಯ ಮತ್ತು ಆಫ್ರಿಕದ ಉಪ ಉಷ್ಣವಲಯಗಳಲ್ಲಿ ಹಂಚಿಕೆಗೊಂಡಿದೆ. ಉದಾ: ಭಾರತ, ಪಾಕಿಸ್ತಾನ, ಬಾಂಗ್ಲಾದೇಶದ, ಈಜಿಪ್ಟ್, ಸುಡಾನ್, ಆಸ್ಟ್ರೇಲಿಯ ಇತ್ಯಾದಿ.

ಒಣ ಬೇಸಾಯ: ವಾರ್ಷಿಕವಾಗಿ 50 ಸೆಂಮೀ ಗಳಿಗಿಂತ ಕಡಿಮೆ ಮಳೆ ಪಡೆಯುವ ಭೂ ಪ್ರದೇಶಗಳಲ್ಲಿ ಈ ಬೇಸಾಯವು ಕಂಡು ಬರುವುದು. ಒಣ ಪರಿಸ್ಥಿತಿಯಲ್ಲಿ ಬೀಳುವ ಅತ್ಯಲ್ಪ ಮಳೆಯ ಜಲಾಂಶವನ್ನು ಸಂರಕ್ಷಿಸಿ, ಬೆಳೆಗಳನ್ನು ಬೆಳೆಯುವುದೇ ಒಣಬೇಸಾಯ. ಈ ಬೇಸಾಯವು ಅಮೆರಿಕ ಪಶ್ಚಿಮ ಭಾಗ, ಕೆನಡ, ಮೆಕ್ಸಿಕೋ, ಲೆಬನಾನ್, ಇಸ್ರೇಲ್, ಈಜಿಪ್ಟ್, ಸಿರಿಯ, ಟರ್ಕಿ, ಪ್ಯಾಲಸ್ತೀನ್ ಹಾಗೂ ಮಧ್ಯ ಚೀನ, ದಖನ್ ಪ್ರಸ್ಥಭೂಮಿ, ಮತ್ತು ಪಶ್ಚಿಮ ರಾಜಸ್ತಾನಗಳಲ್ಲಿ ಹಂಚಿಕೆಯಾಗಿದೆ. ತೇವಾಂಶವನ್ನು ಸಂರಕ್ಷಿಸಲು ಆಳವಾದ ಉಳುಮೆ, ಮಣ್ಣಿನ ಸವೆತ ನಿಯಂತ್ರಿಸಲು ಒದುಗಳ ನಿರ್ಮಾಣ, ಕಳೆತೆಗೆಯುವುದು, ಧೂಳೀಕರಿಸುವುದು, ಬರನಿಬಾಯಿಸುವ ಬೆಳೆಗಳನ್ನೆ ಬೆಳೆಯುವುದು ಈ ಕೃಷಿ ಪದ್ಧತಿಯ ಪ್ರಮುಖ ಲಕ್ಷಣಗಳು.

ಏಕ ಬೆಳೆಬೇಸಾಯ: ವರ್ಷದಲ್ಲಿ ಒಂದು ವ್ಯವಸಾಯ ಕ್ಷೇತ್ರದಲ್ಲಿ ಒಂದೇ ಬೆಳೆಯನ್ನು ಬೆಳೆಯುವುದೇ ಏಕ ಬೆಳೆಯ ಬೇಸಾಯ. ರಫ್ತಿನ ಉದ್ದೇಶದಿಂದ ಬೆಳೆಗಳನ್ನು ಬೆಳೆಯಲಾಗುವುದು. ಇದು ನೆಡುತೋಟ ಬೇಸಾಯದಲ್ಲಿ ಕಂಡು ಬರುವುದು. ಭಾರತ ಚೀನ, ಶ್ರೀಲಂಕಗಳ ಚಹ ತೋಟ, ಬ್ರೆಜಿಲ್‌ನ ಕಾಫಿತೋಟ, ಮಲೇಷ್ಯದ ರಬ್ಬರ್ ತೋಟ ಇವೆಲ್ಲವೂ ಏಕ ಬೆಳೆ ಬೇಸಾಯವಾಗಿವೆ. ರೈತ ಒಂದೇ ಬೆಳೆಯಲ್ಲಿ ಪರಿಣಿತ, ಕೃಷಿಉಪಕರಣ ಆಧುನಿಕ ಕೃಷಿಪದ್ಧತಿ ಅಳವಡಿಕೆಯಿದೆ. ನಿರ್ವಹಣೆ ಸುಲಭ. ಮಣ್ಣಿನ ಸಾರ ಕಾಪಾಡಬಹುದು.

ದ್ವಿಬೆಳೆಯ ಬೇಸಾಯ: ಒಂದೇ ವ್ಯವಸಾಯ ಭೂಮಿಯಲ್ಲಿ ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆಯುವುದೇ ದ್ವಿ ಬೆಳೆಯ ಬೇಸಾಯ. ಈ ಬೇಸಾಯವು ಜನಸಾಂದ್ರತೆಯಿಂದ ಕೂಡಿದ ಭಾಗಗಳಲ್ಲಿ ಕಂಡು ಬರುವುದು. ಆಗ್ನೇಯ ಏಷ್ಯ, ವಾಯವ್ಯ ಯುರೋಪ್ ಮತ್ತು ಆಫ್ರಿಕದ ಉಷ್ಣವಲಯಗಳಲ್ಲಿ ಈ ಬೇಸಾಯವು ಹಂಚಿಕೆಯಾಗಿದೆ. ಮೊದಲ ಬೆಳೆ ಕಟಾವು ಮಾಡಿದ ಮೇಲೆ ಮತ್ತೊಂದು ಹಿಂಗಾರು ಬೆಳೆ ಸಾಗುವಳಿ ಮಾಡಲಾಗುವುದು.

ಬಹು ಬೆಳೆಯ ಬೇಸಾಯ: ಒಂದೇ ವ್ಯವಸಾಯ ಕ್ಷೇತ್ರದಲ್ಲಿ ವರ್ಷದಲ್ಲಿ ಅನೇಕ ಬೆಳೆಗಳನ್ನು ಬಿತ್ತನೆ ಮಾಡಿ ಬೆಳೆಯುವುದೆ ಬಹು ಬೆಳೆ ಬೇಸಾಯ. ಅತ್ಯಧಿಕ ಜನಸಂಖ್ಯಾ ಒತ್ತಡದಿಂದ ಹಾಗೂ ವ್ಯವಸಾಯ ಭೂಮಿಯ ಕೊರತೆಯಿಂದಾಗಿ ಈ ಬೇಸಾಯ ಜಾರಿಯಲ್ಲಿದೆ. ಈ ಬೇಸಾಯವು ಆಗ್ನೇಯ ಏಷ್ಯದ ಜನಸಾಂದ್ರತಾ ವಲಯಗಳಾದ ಚೀನ, ಭಾರತ, ಇಂಡೋನೇಷ್ಯ, ಥೈಲೆಂಡ್ ಮತ್ತು ಬಾಂಗ್ಲಾ ದೇಶಗಳಲ್ಲಿ ಕಂಡುಬರುವುದು.

ಪುರಾತನ ಜೀವನಾಧಾರ ಬೇಸಾಯ: ರೈತ ತನ್ನ ಜೀವನಾವಶ್ಯಕತೆಗಳಿಗೆ ಬೇಕಾದಷ್ಟು ಕೃಷಿಉತ್ಪನ್ನಗಳನ್ನು ಉತ್ಪಾದಿಸುವುದನ್ನೇ ಪುರಾತನ ಜೀವನಾಧಾರ ಬೇಸಾಯ ಎನ್ನುವರು ಇದು ಅತ್ಯಂತ ಹಳೆಯ ವ್ಯವಸಾಯ ವಿಧಾನವಾಗಿದೆ. ಈ ಬೇಸಾಯ ಪದ್ಧತಿಯು ಪ್ರಪಂಚದ ಉಷ್ಣ ಹಾಗೂ ಉಪ ಉಷ್ಣವಲಯದ ಹಲವು ಭಾಗಗಳಲ್ಲಿ ಕಂಡುಬರುವುದು.

ಬೇಸಾಯದ ವರ್ಗ, ಉತ್ಪಾದನೆ, ದೃಢತೆಯ ಆಧಾರದ ಮೇಲೆ ಇದನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ.

ಪುರಾತನ ವರ್ಗಾವಣೆ ಬೇಸಾಯ: ಅರಣ್ಯದ ಹಲವು ಭಾಗಗಳಲ್ಲಿನ ಮರಗಳನ್ನು ಕತ್ತರಿಸಿ ಅಲ್ಲಿ ಬೇಸಾಯ ಮಾಡಿ ಫಸಲನ್ನು ಪಡೆದ ನಂತರ ಇತರ ಪ್ರದೇಶಗಳಿಗೆ ವಲಸೆ ಹೋಗುವರು. ಈ ಬೇಸಾಯ ಕ್ರಮಗಳು ಪುರಾತನ ವರ್ಗಾವಣೆ ಬೇಸಾಯ ಎನ್ನುವರು. ಇದು ದಕ್ಷಿಣ ಮತ್ತು ಆಗ್ನೇಯ ಏಷ್ಯ, ಮಧ್ಯ ಅಮೆರಿಕ ಹಾಗೂ ಆಫ್ರಿಕದ ಉಷ್ಣವಲಯಗಳಲ್ಲಿ ಹಂಚಿಕೆಯಾಗಿದೆ.

ಪುರಾತನ ಸ್ಥಿರ ಬೇಸಾಯ : ಒಂದು ನಿರ್ದಿಷ್ಟವಾದ ವ್ಯವಸಾಯ ಭೂಮಿಯಲ್ಲಿ ಸ್ಥಿರವಾಗಿ ನೆಲೆಸಿ ಬೇಸಾಯಗಾರನು ತನ್ನ ಅವಶ್ಯಕತೆಗೆ ಬೇಕಾದಷ್ಟು ಫಸಲು ಬೆಳೆಯುವ ಪದ್ಧತಿಯನ್ನೇ ಪುರಾತನ ಸ್ಥಿರ ಬೇಸಾಯ ಎನ್ನುವರು. ಇದು ಆಗ್ನೇಯ ಏಷ್ಯದ ರಾಷ್ಟ್ರಗಳಾದ ಇಂಡೊನೇಷ್ಯ, ಮಲೇಷ್ಯ, ಮಯನ್ಮಾರ್ ಹಾಗೂ ದಕ್ಷಿಣ ಅಮೆರಿಕದ ಅಮೆಜ಼ಾನ್ ಬಯಲು ಮತ್ತು ಪೂರ್ವ ಇಂಡಿಸ್‌ಗಳಲ್ಲಿ ಹಂಚಿಕೆಯಾಗಿದೆ.

ವಾಣಿಜ್ಯ ಧಾನ್ಯಬೇಸಾಯ : ಮಾರಾಟದ ಉದ್ದೇಶ ಹಾಗು ಲಾಭಗಳಿಕೆಯನ್ನು ಮುಖ್ಯ ಉದ್ದೇಶವಾಗಿ ಹೊಂದಿರುವ ಬೇಸಾಯವನ್ನು ವಾಣಿಜ್ಯ ಧಾನ್ಯ ಬೇಸಾಯ ಎನ್ನುವರು. ಈ ಬೇಸಾಯವು ಹೆಚ್ಚಾಗಿ ಸಮಶೀತೋಷ್ಣ ವಲಯದಲ್ಲಿ ಕಂಡು ಬರುವುದು. ಅಮೆರಿಕ, ಕೆನಡ, ದಕ್ಷಿಣ ಅಮೆರಿಕ, ಅರ್ಜೆಂಟೈನ, ಆಸ್ಟ್ರೇಲಿಯ, ನ್ಯೂಜಿಲೆಂಡ್, ಉಕ್ರೈನ್, ರಷ್ಯ, ಜರ್ಮನಿ, ಫ್ರಾನ್ಸ್, ನೆದರ್ಲೆಂಡ್ಸ್‌ನಲ್ಲಿ ಈ ಬೇಸಾಯ ಹಂಚಿಕೆಯಾಗಿದೆ. ಯಾವುದಾದರೊಂದು ನಿರ್ದಿಷ್ಟ ಬೆಳೆಸಾಗುವಳಿ, ಯಾಂತ್ರೀಕರಣ ಬೇಸಾಯ, ಉತ್ತಮ ತಲಾವಾರು ಇಳುವರಿ, ನೀರಾವರಿ ರಸಗೊಬ್ಬರಗಳ ಬಳಕೆ ಮತ್ತು ದೊಡ್ಡ ಭೂಹಿಡುವಳಿ – ಪ್ರಮುಖಗುಣಲಕ್ಷಣಗಳು.

ನೆಡುತೋಟ ಬೇಸಾಯ (ಪ್ಲಾಂಟೇಷನ್ ಫಾರ್ಮಿಂಗ್): ಒಂದೇ ಬೆಳೆಯನ್ನು ವಿಸ್ತಾರವಾದ ತೋಟಗಳಲ್ಲಿ ಬೆಳೆಯುವುದೇ ನೆಡುತೋಟ ಬೇಸಾಯ. ಇದು ರಫ್ತು ಕೇಂದ್ರಿತ ಬೇಸಾಯವಾಗಿದೆ. ಈ ಬೇಸಾಯದ ಪ್ರಮುಖ ಬೆಳೆಗಳೆಂದರೆ – ಬ್ರೆಜಿಲ್, ಪರುಗ್ವೆ ಮತ್ತು ಬೊಲಿವಿಯಗಳ ಕಾಫಿ, ಕ್ಯೂಬ, ಬ್ರೆಜಿಲ್, ಪೆರು, ಪೋರ್ಟರಿಕೊ ಮತ್ತು ಫಿಲಿಫೈನ್ಸ್‌ನ ಕಬ್ಬು, ಭಾರತ, ಶ್ರೀಲಂಕ, ಇಂಡೋನೇಷ್ಯದ ಚಹ, ಪಶ್ಚಿಮ ಇಂಡೀಸ್, ಬ್ರೆಜಿಲ್‌ನ ಕೋಕೋ, ಕೆರೆಬಿಯನ್ ತಗ್ಗಿನ – ಬಾಳೆ. ಮಲೇಷ್ಯದ ರಬ್ಬರ್ ಇತ್ಯಾದಿ. ಬಹುವಾರ್ಷಿಕ ಬೆಳೆ, ಯುರೋಪಿಯನ್ನರಿಂದ ಉಷ್ಣವಲಯ ಮತ್ತು ಉಪಉಷ್ಣವಲಯಗಳಲ್ಲಿ ಪ್ರಾರಂಭ, ಅಧಿಕ ಬಂಡವಾಳ ತೊಡಗಿಸುವುದು, ಆಧುನಿಕ ಬೇಸಾಯಕ್ರಮ ರಫ್ತು ಮತ್ತು ಹಣಗಳಿಕೆ ಉದ್ದೇಶ ಇವು ಪ್ರಮುಖ ಲಕ್ಷಣಗಳು.

ಮುಂಗಾರು ಬೇಸಾಯ: ಮಳೆಗಾಲದ ಋತುವಿನಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವುದೇ ಮುಂಗಾರು ಬೇಸಾಯ. ಸಾಮಾನ್ಯವಾಗಿ ಈ ಅವಧಿಯಲ್ಲಿ ಬತ್ತ, ಗೋದಿ, ಮೆಕ್ಕೆಜೋಳ ಮುಂತಾದ ಏಕದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ.

ಹಿಂಗಾರು ಬೇಸಾಯ : ಚಳಿಗಾಲದ ಅವಧಿಯಲ್ಲಿನ ಬೇಸಾಯವನ್ನು ಹಿಂಗಾರು ಬೇಸಾಯ ಎನ್ನುವರು. ಗೋದಿ, ಬಾರ್ಲಿ, ತರಕಾರಿಗಳು, ಎಣ್ಣೆಕಾಳುಗಳು ಚಳಿಗಾಲದ ಮುಖ್ಯ ಬೆಳೆಗಳಾಗಿವೆ.

ಮಾನ್ಸೂನ್ ಮಾದರಿಯ ಬೇಸಾಯ : ಮಾನ್ಸೂನ್ ವಾಯುಗುಣ ಹೊಂದಿರುವ ಪ್ರದೇಶಗಳಲ್ಲಿನ ಬೇಸಾಯಕ್ರಮವನ್ನು ಮಾನ್ಸೂನ್ ಮಾದರಿಯ ಬೇಸಾಯ ಎನ್ನವರು. ಇಲ್ಲಿ ಸಾಂದ್ರಜೀವನಾಧಾರ ಬೇಸಾಯವು ಕಂಡುಬರುವುದು. ಈ ಬೇಸಾಯವು ಅತ್ಯಂತ ಪ್ರಧಾನವಾದ ದೇಶಗಳೆಂದರೆ ಭಾರತ, ಚೀನ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕ, ಮಯನ್ಮಾರ್, ಥೈಲೆಂಡ್, ಲಾವೋಸ್, ಕಾಂಬೋಡಿಯ, ವಿಯೆಟ್ನಾಂ, ಇಂಡೋನೇಷ್ಯ, ಮಲೇಷ್ಯ, ಫಿಲಿಪೈನ್ಸ್, ಜಪಾನ್, ಕೊರಿಯ ಮತ್ತು ಪೂರ್ವಾತ್ಯದ ಅನೇಕ ದೇಶಗಳು.

ಮೆಡಿಟರೇನಿಯನ್ ಬೇಸಾಯ: ಹೆಸರೇ ಸೂಚಿಸುವಂತೆ ಮೆಡಿಟರೇನಿಯನ್ ಸಮುದ್ರದ ಸುತ್ತ ನೆಲೆಸಿರುವ ದೇಶಗಳು ಈ ರೀತಿಯ ಬೇಸಾಯವನ್ನು ಒಳಗೊಂಡಿವೆ. ಉದಾಹರಣೆಗೆ, ಫ್ರಾನ್ಸ್, ಸ್ಪೇನ್, ಆಲ್ಜೀರಿಯ, ಮೊರಾಕೋ, ಟರ್ಕಿ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯ, ಚಿಲಿಯ ಕೇಂದ್ರ ಭಾಗ, ದಕ್ಷಿಣ ಆಫ್ರಿಕದ ದಕ್ಷಿಣ ಭಾಗ, ದಕ್ಷಿಣ ಮತ್ತು ಆಗ್ನೇಯ ಆಸ್ಟ್ರೇಲಿಯ ಹಾಗೂ ಮರ್ರೆಡಾರ್ಲಿಂಗ್ ನದಿ ಕಣಿವೆಗಳು ಸಾಂಪ್ರದಾಯಿಕ ಮತ್ತು ವಾಣಿಜ್ಯ ಬೇಸಾಯ ಎರಡು ರೀತಿಯ ಬೇಸಾಯದ ಮೇಲೆ ಇಲ್ಲಿನ ವಾಯುಗುಣ ಪ್ರಭಾವ ಬೀರುತ್ತದೆ. ಜೊತೆಗೆ ಆಹಾರ ಧಾನ್ಯ, ಹಣ್ಣುಗಳ ಬೇಸಾಯ, ತೋಟಗಾರಿಕೆಗಳ ಅಭಿವೃದ್ಧಿಗೆ ಸೂಕ್ತವಾಗಿದೆ.

ವಾಯವ್ಯ ಯುರೋಪ್‍ನ ಮಿಶ್ರಬೇಸಾಯ: ಆಹಾರ ಧಾನ್ಯಗಳು ಬೆಳೆಯುವುದರ ಜೊತೆಗೆ ಪಶುಪಾಲನೆಯು ಜೊತೆಜೊತೆಯಾಗಿ ಸಾಗುವ ವಿಧಾನವು ಮಿಶ್ರಬೇಸಾಯ ಎನ್ನುವರು. ಈ ಬೇಸಾಯದ ಪ್ರಮುಖ ಉದ್ದೇಶ ಬೇಸಾಯದ ನಷ್ಟಗಳನ್ನು ಕಡಿಮೆಗೊಳಿಸುವುದು. ಒಂದು ವೇಳೆ ಬೆಳೆ ನಷ್ಟವಾದರೆ ರೈತರು ಸಾಕುಪ್ರಾಣಿಗಳಿಂದ ಸರಿದೂಗಿಸಿಕೊಳ್ಳಬಹುದು. ಇದು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ರೂಢಿಯಲ್ಲಿದೆ. ಇದು ಯುರೇಷ್ಯದಲ್ಲಿ ಸು. $40^{o}$–$65^{o}$ ಉತ್ತರ ಅಕ್ಷಾಂಶದವರೆಗೆ ವಿಸ್ತರಿಸಿದೆ. ಜೊತೆಗೆ ಅಮೆರಿಕ, ಕೇಂದ್ರ ಮೆಕ್ಸಿಕೊ, ಉರುಗ್ವೆ, ದಕ್ಷಿಣ ಚಿಲಿ, ಅರ್ಜೆಂಟೀನ, ದಕ್ಷಿಣ ಆಫ್ರಿಕದಲ್ಲಿ ಕಂಡು ಬರುವುದು.

ಜಹಗೀರುದಾರಿಕೆಯ ಬೇಸಾಯ: ಇದು ಮಧ್ಯವರ್ತಿ ಬೇಸಾಯ ಪದ್ಧತಿಯಾಗಿದೆ. ಭೂ ಒಡೆಯರು ಬೇಸಾಯ ಪದ್ಧತಿಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದು ಬೇಸಾಯಗಾರರ ಮೂಲಕ ಬೆಳೆಗಳನ್ನು ಸಾಗುವಳಿ ಮಾಡಿಸಿ ಕಡಿಮೆ ಕೃಷಿ ಉತ್ಪನ್ನವನ್ನು ರೈತರಿಗೆ ನೀಡುತ್ತಾರೆ. ಈ ಬೇಸಾಯ ಕ್ರಮವೇ ಜಹಗೀರುದಾರಿಕೆಯ ಬೇಸಾಯ. ಈ ಬೇಸಾಯದಲ್ಲಿ ಉತ್ಪಾದನೆ ಅತೀ ಕಡಿಮೆ, ಮಣ್ಣಿನ ಫಲವತ್ತತೆ ಇಳಿಮುಖವಾಗುವುದು, ಹಾಗೂ ಉತ್ಪಾದನಾ ಪದ್ಧತಿ ಸ್ಥಿರವಾಗಿರುವುದು ಈ ಬೇಸಾಯ ಪ್ರಮುಖ ಪ್ರಮುಖ ಗುಣಲಕ್ಷಣಗಳಾಗಿವೆ.

ಬಂಡವಾಳಗಾರಿಕೆಯ ಬೇಸಾಯ: ಬಂಡವಾಳಶಾಯಿಗಳ ಬಂಡವಾಳ ಹೂಡಿಕೆಯಿಂದ ನಿರ್ವಹಿಸುವ ಬೇಸಾಯವೇ ಬಂಡವಾಳಗಾರಿಕೆ ಬೇಸಾಯ. ಇದು ಅತ್ಯಧಿಕ ಲಾಭಗಳಿಕೆಯ ದೃಷ್ಟಿಯಿಂದ ಒಂದು ಉದ್ಯಮವಾಗಿ ಅಭಿವೃದ್ಧಿಗೊಂಡಿದೆ. ಈ ರೀತಿಯ ಬೇಸಾಯ ಕ್ರಮ ಜಾರಿಯಲ್ಲಿರುವ ದೇಶಗಳೆಂದರೆ ಯುರೋಪ್, ಉತ್ತರ ಅಮೆರಿಕ ಇತ್ಯಾದಿ.

ಸಮಾಜವಾದಿಕೆಯ ಬೇಸಾಯ: ಈ ರೀತಿಯ ಬೇಸಾಯ ಪದ್ಧತಿಯಲ್ಲಿ ಭೂಮಿಯು ರೈತರ ಒಡೆತನದಲ್ಲಿದ್ದರು ಸಹ ಸರ್ಕಾರವು ಅದರ ಹಿಡಿತವನ್ನು ಹೊಂದಿರುತ್ತದೆ. ಬೇಸಾಯಗಾರರು ಬೆಳೆದ ಉತ್ಪನ್ನವನ್ನು ಆಧರಿಸಿ ತಮ್ಮ ಪಾಲನ್ನು ಪಡೆದುಕೊಳ್ಳುತ್ತಾರೆ. ಈ ಬೇಸಾಯವು ಕ್ಯೂಬ ಮತ್ತು ಚೀನದ ಕೆಲವು ಭಾಗಗಳಲ್ಲಿ ಆಚರಣೆಯಲ್ಲಿದೆ.

ರಾಜ್ಯ ಸಾಮುದಾಯಿಕ ಬೇಸಾಯ: ಇದು ಸಮಾಜವಾದಿ ಪರಿಕಲ್ಪನೆಯನ್ನು ಹೊಂದಿದ್ದು ರಾಜ್ಯಗಳು ಬೇಸಾಯ ಭೂಮಿಯನ್ನು ಸರಿಪಡಿಸುತ್ತವೆ. ವೈಜ್ಞಾನಿಕ ಪರಿಗಣನೆ, ಬಂಡವಾಳ ಮತ್ತು ಮಾರುಕಟ್ಟೆಯು ಸಾಮಾನ್ಯವಾಗಿ ರಾಜ್ಯಗಳ ಹಿಡಿತದಲ್ಲಿದ್ದು ಮುಖಂಡ ಪದ್ಧತಿಯನ್ನು ಒದಗಿಸುತ್ತವೆ. ಈ ರೀತಿಯ ಬೇಸಾಯವು ರಷ್ಯದಲ್ಲಿ ಕಂಡು ಬರುತ್ತವೆ.

ಸಹಕಾರಿ ಬೇಸಾಯ: ಆರ್ಥಿಕ ಬೆಳವಣಿಗೆಗೆ ಎಲ್ಲಾ ಸಾಗುವಳಿದಾರರ ಭೂಮಿಯನ್ನು ಒಟ್ಟು ಸೇರಿಸಿ ಅದರಲ್ಲಿ ಬೇಸಾಯ ಮಾಡಿ ಬಂದ ಉತ್ಪನ್ನವನ್ನು ಹಂಚಿಕೊಳ್ಳುವ ವಿಧಾನವನ್ನು ಸಹಕಾರಿ ಬೇಸಾಯ ಎನ್ನುವರು. ಇದರಿಂದ ಪ್ರತಿಯೊಬ್ಬ ರೈತನಿಗೂ ಲಾಭವಾಗುವುದು. ಈ ಬೇಸಾಯ ಪದ್ಧತಿಯನ್ನು ಈಗ ಪ್ರೋತ್ಸಾಹಿಸುತ್ತಿರುವ ದೇಶಗಳೆಂದರೆ ಚೀನ, ಇಸ್ರೇಲ್, ಮೆಕ್ಸಿಕೊ ಮತ್ತು ಭಾರತ.

ಏಕ ವ್ಯಕ್ತಿ ಪರ ಬೇಸಾಯ: ಇಲ್ಲಿ ಭೂ ಒಡೆತನ ಏಕ ವ್ಯಕ್ತಿಗೆ ಸೇರಿದ್ದು ಸಂಪೂರ್ಣ ಬೇಸಾಯ ಪ್ರಕ್ರಿಯೆಯು ಅವನ ಉದ್ದೇಶದಂತೆ ನಡೆಯುವ ಬೇಸಾಯ ಕ್ರಮವನ್ನು ಏಕ ವ್ಯಕ್ತಿ ಪರ ಬೇಸಾಯ ಎನ್ನುವರು. (ಡಿ.ಆರ್.)

**ಕೃಷಿಕ ಸಮಾಜ:** ಕೃಷಿಯು ಬಹು ಮುಖ್ಯವಾದ ಮತ್ತು ಅತ್ಯಂತ ಪುರಾತನವಾದ ವೃತ್ತಿಯಾಗಿದ್ದು ಇಂದು ಪ್ರಪಂಚದ ಬಹುಭಾಗ ಜನಸಂಖ್ಯೆಯ ಜೀವನೋಪಾಯದ ಮಾರ್ಗವಾಗಿದೆ. ಪೂರ್ತಿಯಾಗಿ ಕೃಷಿಯಲ್ಲಿ ತೊಡಗಿರುವ ಸಮಾಜವನ್ನು ಕೃಷಿಕ ಸಮಾಜ (ಅಗ್ರೇರಿಯನ್ ಸೊಸೈಟಿ) ಎಂದು ಹೇಳಲಾಗುವುದು. ಅದು ಮೂಲತಃ ಕೃಷಿಕ (ಸಾಗುವಳಿದಾರ)ರನ್ನೂ ಹಾಗೂ ಕೃಷಿ ಕಾರ್ಮಿಕರನ್ನೂ ಒಳಗೊಂಡಿರುತ್ತದೆ. ಕೈಗಾರಿಕಾ ಕ್ರಾಂತಿಗಿಂತ (18 ಶ.) ಮೊದಲು ಪ್ರಪಂಚದಾದ್ಯಂತ ಕೃಷಿಯು ಜನರ ಪ್ರಮುಖ ವೃತ್ತಿಯಾಗಿತ್ತು. ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಅಂದರೆ 1760 ರಲ್ಲಿ ಕೈಗಾರಿಕಾ ಕ್ರಾಂತಿಯು ಬ್ರಿಟನ್‍ನಲ್ಲಿ ಪ್ರಾರಂಭವಾಗಿ 1830ರ ನಂತರ ಬೆಲ್ಜಿಯಂ, ಫ್ರಾನ್ಸ್, ಜರ್ಮನಿ, ಅಮೆರಿಕ, ಜಪಾನ್ ಮೊದಲಾದ ದೇಶಗಳಿಗೂ ಹಾಗೂ 20ನೆಯ ಶತಮಾನದಲ್ಲಿ ಪೂರ್ವ ಯುರೋಪ್, ಚೀನ ಮತ್ತು ಭಾರತ ದೇಶಗಳಿಗೂ ಹರಡಿತು. ಅದರ ಪರಿಣಾಮದಿಂದ ಸಾಂಪ್ರದಾಯಿಕ ಕೃಷಿಕ ಆರ್ಥಿಕತೆ ಬದಲಾಗಿ ಕೈಗಾರಿಕಾ ಪ್ರಧಾನ ಆರ್ಥಿಕತೆ ಪ್ರಾರಂಭವಾಯಿತು.

ಭಾರತ ಕೃಷಿ ಪ್ರಧಾನ ದೇಶ. ಕೃಷಿಯನ್ನು ಭಾರತದ ಆರ್ಥಿಕತೆಯ ಬೆನ್ನೆಲುಬು ಎಂದು ಪರಿಗಣಿಸಲಾಗಿದೆ. ಏಕೆಂದರೆ ಭಾರತದ ಜನಸಂಖ್ಯೆಯ ಬಹುಭಾಗಕ್ಕೆ ಕೃಷಿ ಉದ್ಯೋಗವನ್ನೂ ಜೀವನಾಧಾರವನ್ನೂ ಒದಗಿಸಿದೆ. ಒಂದು ಕಾಲದಲ್ಲಿ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚು ಜನರು ಕೃಷಿಯನ್ನು ಅವಲಂಬಿಸಿದ್ದರು. ಆರ್ಥಿಕ ಯೋಜನೆಗಳ ಅವಧಿಯಲ್ಲಿ ಸಾಧಿಸಿದ ಅದ್ಭುತ ಕೈಗಾರಿಕಾಭಿವೃದ್ಧಿಯ ತರುವಾಯ ಕೃಷಿ ಇಂದಿಗೂ ಭಾರತೀಯರ ಮುಖ್ಯ ವೃತ್ತಿಯಾಗಿದೆ. ಕೃಷಿ ಕ್ಷೇತ್ರದಲ್ಲಿ ಉದ್ಯೋಗ ಪಡೆದ ಜನಸಂಖ್ಯೆ 1951 ರಲ್ಲಿ 9.7 ಕೋಟಿಗಳಿಂದ 2001 ರಲ್ಲಿ 23.4 ಕೋಟಿಗಳಿಗೇರಿತು. ಆದರೆ ಕೃಷಿಕ ಜನಸಂಖ್ಯೆಯ ಪ್ರಮಾಣ ಐದು ದಶಕಗಳಲ್ಲಿ 1951 ರಲ್ಲಿ ಶೇ. 69.7 ರಿಂದ 2001 ರಲ್ಲಿ ಶೇ. 58.2 ಕ್ಕಿಳಿಯಿತು. ಇದಕ್ಕೆ ಕೈಗಾರಿಕಾಭಿವೃದ್ಧಿಯೇ ಪ್ರಮುಖ ಕಾರಣವೆಂದು ಹೇಳಬಹುದು.

ಭಾರತದ ಬಹುತೇಕ ಕೃಷಿಕರು ಅನಕ್ಷರಸ್ಥರು, ಅಜ್ಞಾನಿಗಳು ಮತ್ತು ಸಂಪ್ರದಾಯವಾದಿಗಳು. ಆದ್ದರಿಂದ, ಅವರು ಇಂದಿಗೂ ತೀರಾ ಹಿಂದುಳಿದ ಮತ್ತು ಅವೈಜ್ಞಾನಿಕ ಕೃಷಿ ಪದ್ಧತಿಯನ್ನು ಅನುಸರಿಸುತ್ತಾರೆ. ಅವರು ಸಾಮಾನ್ಯವಾಗಿ ಬಡವರು, ಅವರಿಗೆ ಕೃಷಿಕಾರ್ಯಗಳಿಗೆ ಸಾಕಷ್ಟು ಹಣಕಾಸಿನ ಸೌಲಭ್ಯ ದೊರಕುತ್ತಿಲ್ಲ. ಆದ್ದರಿಂದ ಅತ್ಯಾಧುನಿಕ ಕೃಷಿ ಯಂತ್ರೋಪಕರಣ, ಉತ್ತಮ ಬಿತ್ತನೆ ಬೀಜ, ನೀರಾವರಿ, ರಸಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆಯಿಂದ ವಂಚಿತರಾಗಿದ್ದಾರೆ. ಹೀಗೆ ಆರ್ಥಿಕ ಮುಗ್ಗಟ್ಟಿನಿಂದ ಯಾಂತ್ರೀಕರಣ ಕೃಷಿ ಮತ್ತು ವೈಜ್ಞಾನಿಕ ಸಾಗುವಳಿಗೆ ಅಡ್ಡಿಯಾಗಿದೆ.

ಇವುಗಳಲ್ಲದೆ ಉಗ್ರಾಣ, ಮಾರುಕಟ್ಟೆ, ಸಾರಿಗೆ, ಸಂಪರ್ಕ ಮತ್ತು ಉತ್ತೇಜಕ (ಸರ್ಕಾರದಿಂದ ಸಹಾಯ ಧನ, ಬೆಳೆವಿಮೆ, ತೆರಿಗೆ ರಿಯಾಯಿತಿ, ಬೆಂಬಲ ಬೆಲೆ, ಬಹುಮಾನ)ಗಳ ಅಭಾವ, ಗ್ರಾಮೀಣ ಋಣಭಾರ, ಭೂಒಡೆತನ (ಗೇಣಿಗಾರಿಕೆ), ಸಣ್ಣ ಹಿಡುವಳಿ, ಮಧ್ಯವರ್ತಿಗಳ ಹಾವಳಿ ಮೊದಲಾದ ಅಂಶಗಳು ಕೃಷಿಕರನ್ನು ನಿರಂತರವಾಗಿ ಕಾಡುತ್ತಿವೆ. (ಎಸ್.ಎಸ್.ಎನ್.)

**ಕೃಷಿಯ ವಿಕಾಸ:** ಕೃಷಿ ವೃತ್ತಿಯು ಎಂದು ಮತ್ತು ಎಲ್ಲಿ ಪ್ರಾರಂಭವಾಯಿತೆಂಬುದು ತಿಳಿದಿಲ್ಲ. ಪುರಾತನ ಮಾನವರು ಆಹಾರ ಸಂಗ್ರಹಣಾ ಚಟುವಟಿಕೆ ಪ್ರಾರಂಭಿಸಿರಬೇಕು. ಪ್ರಕೃತಿಯಲ್ಲಿ ದೊರೆಯುತ್ತಿದ್ದ ಹಣ್ಣು–ಹಂಪಲು ಗೆಡ್ಡೆ–ಗೆಣಸು, ಎಲೆಗಳನ್ನು ಸಂಗ್ರಹಿಸಿ ಹಸಿವನ್ನು ಪೂರೈಸಿಕೊಳ್ಳುತ್ತಿದ್ದರು. ಅಂದು ಪ್ರಕೃತಿಯಲ್ಲಿ ಇವೆಲ್ಲ ವಿಪುಲವಾಗಿ ದೊರೆಯುತ್ತಿದ್ದವು. ಜೊತೆಗೆ ಜನರ ಸಂಖ್ಯೆಯೂ ಬಹಳ ಕಡಿಮೆಯಿತ್ತು. ಕಾಲವು ಗತಿಸಿದಂತೆ ಜನರ ಸಂಖ್ಯೆ ಹೆಚ್ಚಿತು. ಮುಂಚೆ ದೊರೆಯುತ್ತಿದ್ದ ಆಹಾರ ವಸ್ತುಗಳಲ್ಲಿ ಕೊರತೆ ಪ್ರಾರಂಭಗೊಂಡು, ಪರ್ಯಾಯವಾಗಿ ಮಾನವನು ಮೀನು ಹಿಡಿಯುವುದು ಮತ್ತು ಬೇಟೆಯಾಡುವುದನ್ನು ಪ್ರಾರಂಭಿಸಿದನು. ಆಹಾರಕ್ಕಾಗಿ ಹುಡುಕಾಟ ಮುಂದುವರಿಯಿತು. ಜನರ ಸಂಖ್ಯೆ ಹೆಚ್ಚಾದಂತೆ, ಅವರು ದೀರ್ಘಕಾಲ ನಿರಾಳವಾಗಿ ಬದುಕುವುದಕ್ಕಾಗಿ ಇತರೆ ಆಹಾರ ವಸ್ತುಗಳನ್ನು ಪಡೆಯಬೇಕೆಂಬುದರ ಅರಿವಾಯಿತು. ಹಾಲು, ಮಾಂಸಕ್ಕಾಗಿ ಮೊದಲು ಪ್ರಾಣಿಗಳನ್ನು ಸಾಕಲು ಮಾನವ ಪ್ರಾರಂಭಿಸಿದ. ಅವುಗಳನ್ನು ಸರಕುಸಾಗಿಸುವುದಕ್ಕೂ ಬಳಸಿಕೊಂಡ. ತರುವಾಯ ಆಹಾರ ಮೂಲ ಸಸ್ಯಗಳಿಗೆ ಸಂಬಂಧಿಸಿದ ಬೀಜ ಬಿತ್ತನೆ ಮಾಡಿ, ಜೋಪಾನವಾಗಿ ಪೋಷಿಸಿ ಫಸಲು ಪಡೆಯುವುದನ್ನು ಪ್ರಾರಂಭಿಸಿದ. ನಂತರ ಅಲೆಯುವುದಕ್ಕೆ ಬದಲಾಗಿ ಒಂದೆಡೆ ನೆಲಸಿ ಬದುಕಲು ಪ್ರಯತ್ನಿಸಿದ. ಹೀಗೆ ಕೃಷಿ ಒಂದು ವೃತ್ತಿಯಾಗಿ ಪ್ರಾರಂಭಗೊಂಡು ಕಾಲ ಚಕ್ರ ಉರುಳಿದಂತೆ ಅದರಲ್ಲಿ ಸಾಕಷ್ಟು ವಿಕಾಸವಾಯಿತು. ಕಲೆ, ಮತ್ತು ಕರಕುಶಲತೆಗಳೂ ಕ್ರಮೇಣ ರೂಢಿಗೆ ಬರುತ್ತಾ ನಾಗರಿಕತೆ ಸ್ವಾಭಾವಿಕವಾಗಿ ಹೆಚ್ಚೆಚ್ಚು ಪ್ರಗತಿಗೊಂಡಿತು. ಕೃಷಿ ಉತ್ಪನ್ನದಲ್ಲೂ ಸಾಕಷ್ಟು ಸುಧಾರಣೆಗೊಂಡಿತು.

ವ್ಯವಸಾಯದಲ್ಲಿ ಎರಡು ರೀತಿಯ ವಿಧಾನಗಳಿರುವುದನ್ನು ನೋಡಬಹುದು ಬೀಜ ಕೃಷಿ ಮತ್ತು ಕಾಂಡ ಕೃಷಿ. ಮೊಟ್ಟ ಮೊದಲ ಬಾರಿಗೆ ಕೃಷಿ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಏಕಕಾಲಕ್ಕೆ ಉಗಮಿಸಲಿಲ್ಲ. ಬದಲಾಗಿ ವಿವಿಧ ಕಾಲಗಳಲ್ಲಿ ವಿವಿಧ ಪ್ರದೇಶಗಳಲ್ಲಿ ಉಗಮಿಸಲ್ಪಟ್ಟಿತು. ನಂತರ ಪ್ರಪಂಚದ ಇತರ ಭಾಗಗಳಿಗೆ ಹರಡಲ್ಪಟ್ಟಿತು. ಮಾನವನು ಮೊಟ್ಟಮೊದಲ ಬಾರಿಗೆ ಒಂದೆಡೆ ನೆಲೆಸಿ ಕಾಂಡಕೃಷಿಯ ಮೂಲಕ ಕೃಷಿ ಪ್ರಾರಂಭಿಸಿದನು ಎಂಬ ನಂಬಿಕೆ ಇದೆ.

ಇತ್ತೀಚಿನ ಸಂಶೋಧನೆಯ ಪ್ರಕಾರ ಕೃಷಿ ನೈಋತ್ಯ ಏಷ್ಯದಲ್ಲಿ ಸುಮೇರಿಯನ್‍ರ ಕಾಲದಲ್ಲಿ ಅಂದರೆ ಪ್ರ.ಶ.ಪೂ. 8000 ರಲ್ಲಿ ಮೊದಲು ಪ್ರಾರಂಭವಾಯಿತು. ನೈಋತ್ಯ ಏಷ್ಯದಲ್ಲಿ ಸು. ಪ್ರ.ಶ.ಪೂ. 9000–8000 ವರ್ಷಗಳ ಹಿಂದೆ ಗೋದಿ, ಬಾರ್ಲಿ, ಬಟಾಣಿ

ಬೆಳೆಗಳ ಬಿತ್ತನೆ ಹಾಗೂ ಕಟಾವು ಮಾಡುವುದನ್ನು ಗುರುತಿಸಿದ್ದಾರೆ. ಇದೇ ರೀತಿ ಆಗ್ನೇಯ ಏಷ್ಯದಲ್ಲಿ ಸು. ಪ್ರ.ಶ.ಪೂ. 7000–5000 ವರ್ಷಗಳ ಹಿಂದೆ ಬತ್ತ ಮತ್ತು ಕಬ್ಬು ಬೆಳೆಯುವುದನ್ನು ಕಾಣಬಹುದು.

ಕೃಷಿ ಜೊತೆಗೆ ಮಾನವನು ಹಲವು ಪ್ರಾಣಿಗಳನ್ನು ಸಾಕುವುದನ್ನು ಕಾಣುತ್ತೇವೆ. ಇವುಗಳನ್ನು ನಿರ್ದಿಷ್ಟವಾಗಿ ಹಾಗೂ ಆರ್ಥಿಕ ದೃಷ್ಟಿಕೋನದಿಂದ ಅಥವಾ ಕೆಲವು ವೇಳೆ ಧಾರ್ಮಿಕ ದೃಷ್ಟಿಕೋನದಿಂದಲೂ ಹಲವು ಪ್ರಾಣಿಗಳನ್ನು ಸಾಕುವುದನ್ನು ಕಾಣಬಹುದು. ನೈಋತ್ಯ ಏಷ್ಯ ಭಾಗದಲ್ಲಿ ನಾಯಿ, ಕುರಿ, ಮೇಕೆ, ಹಸು, ಹಂದಿಗಳ ಸಾಕಾಣಿಕೆ ಸು. 9,000–7000 ವರ್ಷಗಳ ಹಿಂದೆಯೇ ಗುರ್ತಿಸಿದ್ದಾರೆ. ಕುದುರೆಗಳ ಸಾಕಣೆಯು ಮಧ್ಯ ಏಷ್ಯದಲ್ಲಿ, ಒಂಟೆಯನ್ನು ಅರೇಬಿಯ ಪ್ರಸ್ಥಭೂಮಿಯಲ್ಲಿ ಸು. 6000–5000 ವರ್ಷಗಳ ಹಿಂದೆ ಕಂಡುಬಂದಿದೆ. ದಕ್ಷಿಣ ಏಷ್ಯದಲ್ಲಿ ಎಮ್ಮೆಗಳು, ಭಾರತ – ಮಯನ್ಮಾರ್‌ದಲ್ಲಿ ಕೋಳಿ ಸಾಕಾಣೆಯನ್ನು 3000 ವರ್ಷಗಳ ಹಿಂದಿನಿಂದ ಕಾಣಬಹುದಾಗಿದೆ. ಹೀಗೆ ವ್ಯವಸಾಯದಲ್ಲಿ ವಿವಿಧ ಬೆಳೆಗಳು ಹಾಗೂ ಸಾಕು ಪ್ರಾಣಿಗಳು ಹಂತ ಹಂತವಾಗಿ ಅಭಿವೃದ್ಧಿಗೊಂಡು ವಿಕಾಸವಾಗಿರುವುದನ್ನು ಕಾಣುಬಹುದು. (ಡಿ.ಆರ್.)

**ಕೃಷ್ಣಗಿರಿ:** ತಮಿಳುನಾಡಿನ ಒಂದು ಜಿಲ್ಲೆ. ಅದೇ ಹೆಸರಿನ ತಾಲ್ಲೂಕು; ಮತ್ತು ಆ ತಾಲ್ಲೂಕಿನ ಮುಖ್ಯಪಟ್ಟಣ. ಉ.ಅ. $12^0 14'$–$12^0 43'$ ಮತ್ತು ಪೂ.ರೇ. $77^0 58'$–$78^0 30'$ ನಡುವೆ ಈ ಜಿಲ್ಲೆ ಹಬ್ಬಿದೆ. ತಾಲ್ಲೂಕಿನ ಸುತ್ತಣ ಪ್ರದೇಶದಲ್ಲಿ ಎತ್ತರದ ಬೆಟ್ಟಗಳಿವೆ. ಅನೇಕ ಬೆಟ್ಟಗಳ ನೆತ್ತಿಗಳ ಮೇಲೆ ಕೋಟೆಗಳುಂಟು. ಈ ಬೆಟ್ಟಗಳಲ್ಲಿ ಅನೇಕ ತೊರೆಗಳು ಹುಟ್ಟಿ ಪೊನ್ನಯಾರ್ ನದಿಯನ್ನು ಸೇರುತ್ತವೆ. ತಾಲ್ಲೂಕಿನಲ್ಲಿ 500ಕ್ಕೂ ಹೆಚ್ಚು ಹಳ್ಳಿಗಳುಂಟು. ಈ ಜಿಲ್ಲೆಯ ಮುಖ್ಯ ನಗರಗಳೆಂದರೆ ಕೃಷ್ಣಗಿರಿ ಮತ್ತು ಹೊಸೂರು, ವೇಪನಪಲ್ಲಿ, ಡೆಂಕಣಿಕೋಟೆ, ಬೇರಿಕೆ, ಕೆಲಮಂಗಲಂ, ಬಾಗಲೂರು ಪಟ್ಟಣಗಳ ಸ್ಥಾನವನ್ನು ಹೊಂದಿವೆ. 2000 ದವರಿಗೂ ಸೇಲಂ ಜಿಲ್ಲೆಯ ಧರ್ಮಪುರಿ ಭಾಗವಾಗಿದ್ದ ಕೃಷ್ಣಗಿರಿ ಪ್ರತ್ಯೇಕವಾಗಿ ಜಿಲ್ಲೆಯಾಗಿ ರೂಪುಗೊಂಡಿದೆ.

ಕೃಷ್ಣಗಿರಿ ಪಟ್ಟಣ ತಾಲ್ಲೂಕಿನ ಕೇಂದ್ರ. ಉ.ಅ. $12^0 31'$ ಮತ್ತು ಪೂ.ರೇ. $78^0 13'$ ಮೇಲಿದೆ. ವಿಸ್ತೀರ್ಣ ಸು. 12 ಚ.ಕಿಮೀ. ದಕ್ಷಿಣ ರೈಲ್ವೆಗೆ ಸೇರಿದ ತಿರುಪ್ಪತ್ತೂರ್ ನಿಲ್ದಾಣಕ್ಕೆ 35 ಕಿಮೀ ದೂರದಲ್ಲಿದೆ. ತಿರುಪ್ಪತ್ತೂರಿಗೂ ಕೃಷ್ಣಗಿರಿಗೂ ರಸ್ತೆ ಸಂಪರ್ಕವುಂಟು. ಮೊದಲು ಇವುಗಳ ನಡುವೆ ನ್ಯಾರೋ ಗೇಜ್ ರೈಲು ಸಂಪರ್ಕವಿತ್ತು. ಈಗ ಇದನ್ನು ತೆಗೆದುಹಾಕಲಾಗಿದೆ. ಪಟ್ಟಣದ ಹಳೆಯ ಭಾಗವನ್ನು ಕೃಷ್ಣಗಿರಿಯೆಂದೂ ಹೊಸಬಡಾವಣೆಯಿರುವ ಭಾಗವನ್ನು ದೌಲತಾಬಾದ್ ಎಂದೂ ಕರೆಯುತ್ತಾರೆ. ಸರ್ಕಾರಿ ಕಚೇರಿಗಳು ದೌಲತಾಬಾದಿನಲ್ಲಿವೆ. ಪಟ್ಟಣದ ರಕ್ಷಣೆಗಾಗಿ ಕಡಿದಾದ ಬೆಟ್ಟದ ಮೇಲೆ ಕಟ್ಟಲಾದ ದುರ್ಗದಿಂದ ಕಾಣುವ ನೋಟ ಭವ್ಯವಾದ್ದು. ಕೃಷ್ಣಗಿರಿಯ ಸುತ್ತಣ ಪ್ರದೇಶದಲ್ಲಿ ಒಳ್ಳೆಯ ದ್ರಾಕ್ಷಿ ಬೆಳೆ ಇದೆ. ಜನಸಂಖ್ಯೆ 65,024. (ಯು.ಜಿ.ಎಂ.)

**ಕೃಷ್ಣರಾಜನಗರ:** ಮೈಸೂರು ಜಿಲ್ಲೆಯ ವಾಯವ್ಯ ಭಾಗದ ತಾಲ್ಲೂಕು; ಆ ತಾಲ್ಲೂಕಿನ ಕೇಂದ್ರ. ದಕ್ಷಿಣದಲ್ಲಿ ಹುಣಸೂರು ತಾಲ್ಲೂಕು, ಆಗ್ನೇಯದಲ್ಲಿ ಮೈಸೂರು ತಾಲ್ಲೂಕು, ಪೂರ್ವದಲ್ಲಿ ಕೃಷ್ಣರಾಜಸಾಗರ ಜಲಾಶಯ, ಉತ್ತರದಲ್ಲಿ ಹಾಸನ ಮತ್ತು ಮಂಡ್ಯ ಜಿಲ್ಲೆಗಳು ಮತ್ತು ಪಶ್ಚಿಮದಲ್ಲಿ ಪಿರಿಯಾಪಟ್ಟಣ ತಾಲ್ಲೂಕು–ಇವು ತಾಲ್ಲೂಕಿನ ಮೇರೆಗಳು. ವಿಸ್ತೀರ್ಣ 605 ಚ.ಕಿಮೀ. ಪಶ್ಚಿಮದಿಂದ ಪೂರ್ವಾಭಿಮುಖವಾಗಿ ತಾಲ್ಲೂಕು ಇಳಿಜಾರಾಗಿದೆ. ಜನಸಂಖ್ಯೆ 2,39,155. ಎತ್ತರದ ಬೆಟ್ಟಗಳಾಗಲಿ, ಕಾಡುಗಳಾಗಲಿ ಹೆಚ್ಚಾಗಿಲ್ಲ. ಎತ್ತರದ ಪ್ರದೇಶಗಳಲ್ಲಿ ಕಿರಿ ಪೊದೆಗಳು ತಗ್ಗಿನ ಮುಳ್ಳಿನ ಗಿಡಗಳೂ ಇವೆ. ಅಲ್ಲಲ್ಲಿ ಕಣಿವೆಗಳಲ್ಲಿ ತೋಪುಗಳುಂಟು. ಇಲ್ಲಿಯ ಮಣ್ಣು ಕಪ್ಪುಮಿಶ್ರಿತ ಕಂದು ಜೇಡಿಮಣ್ಣು. ಮಣ್ಣಿನ ಗುಣದಲ್ಲಿ ವ್ಯತ್ಯಾಸವಿದ್ದರೂ ನೀರಾವರಿಯ ಅನುಕೂಲವಿರುವೆಡೆಯಲ್ಲಿ ಇದನ್ನು ವ್ಯವಸಾಯಕ್ಕೆ ಚೆನ್ನಾಗಿ ಅಳವಡಿಸಿಕೊಳ್ಳಲಾಗಿದೆ. ತಾಲ್ಲೂಕಿನ ಉತ್ತರಭಾಗದಲ್ಲಿ ಅತ್ಯಂತ ಪ್ರಾಚೀನವಾದ ಧಾರವಾಡ ಪದರಶಿಲೆಗಳಿವೆ. ಉಳಿದ ಭಾಗಗಳೂ ಪರ್ಯಾಯ ದ್ವೀಪೀಯ ನೈಸ್ ಶಿಲೆಯಿಂದ ಕೂಡಿವೆ. ತಾಲ್ಲೂಕಿನ ಉಷ್ಣತೆ ಚಳಿಗಾಲದಲ್ಲಿ $16^0$ಸೆ. – $18^0$ಸೆ. ಬೇಸಗೆಯಲ್ಲಿ $27^0$ಸೆ.–$30^0$ಸೆ. ಇದು ವ್ಯವಸಾಯಕ್ಕೆ ಅನುಕೂಲವಾದುದು. ಗರಿಷ್ಠ ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ ಏಪ್ರಿಲ್ ಮತ್ತು ಡಿಸೆಂಬರ್ ತಿಂಗಳಲ್ಲಿ ಇರುತ್ತವೆ. ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಸಾಮಾನ್ಯವಾಗಿಯೂ ಅಕ್ಟೋಬರಿನಲ್ಲಿ ಹೆಚ್ಚಾಗಿಯೂ ಮುಂಗಾರು ಮಳೆಯಾಗುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 70 ಸೆಂಮೀ.

ಕಾವೇರಿ ನದಿ ಈ ತಾಲ್ಲೂಕಿನ ನಡುವೆ ಪ್ರವಹಿಸುತ್ತದೆ. ಚುಂಚನಕಟ್ಟೆಯ ಬಳಿ ಇಕ್ಕಟ್ಟಾದ ಕಣಿವೆಯಲ್ಲಿ ಬಂಡೆಗಳ ಮೇಲಿಂದ ದುಮುಕಿ ಮುಂದೆ ಹೇಮಾವತಿ ಮತ್ತು ಲಕ್ಷ್ಮಣತೀರ್ಥದೊಂದಿಗೆ ಕೂಡಿಕೊಳ್ಳುತ್ತದೆ. ಕೃಷ್ಣರಾಜಸಾಗರ ಜಲಾಶಯವನ್ನು ನಿರ್ಮಿಸಲಾಗಿರುವುದು ಅಲ್ಲೇ. ಆ ಕಟ್ಟೆ ಮಂಡ್ಯ ಜಿಲ್ಲೆಯಲ್ಲಿದೆಯಾದರೂ ಜಲಾಶಯದ ನೀರು ಕೃಷ್ಣರಾಜ ನಗರದ ಭಾಗದಲ್ಲೂ ಹರಡಿದೆ. ಕಾವೇರಿಯ ಆಣೆಕಟ್ಟುಗಳಿಂದ ಈ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಒದಗಿ ಬಂದಿದೆ. ಕಾಲುವೆಗಳ ಒಟ್ಟು ಉದ್ದ 160 ಕಿಮೀ ಗಳಿಗೂ ಅಧಿಕ. ಈ ತಾಲ್ಲೂಕಿನ ಮುಖ್ಯ ಬೆಳೆ ಬತ್ತ. ಕಬ್ಬಿನ ಬೆಳೆ ಈಚೆಗೆ ರೂಢಿಗೆ ಬರುತ್ತಿದೆ. ರಾಗಿ ಇಲ್ಲಿಯ ಮುಖ್ಯ ಖುಷ್ಕಿ ಬೆಳೆ. ಎಣ್ಣೆಬೀಜಗಳು, ದ್ವಿದಳ ಧಾನ್ಯಗಳು ಮತ್ತು ಹೊಗೆಸೊಪ್ಪು ಇತರ ಬೆಳೆಗಳು. ಬತ್ತಕ್ಕೆ ಒಳ್ಳೆಯ ಬೆಲೆ ಬರುತ್ತಿರುವುದರಿಂದ ಅಡಕೆ ತೋಟಗಳನ್ನು ಬತ್ತದ ಗದ್ದೆಗಳಾಗಿ ಪರಿವರ್ತಿಸುತ್ತಿದ್ದಾರೆ. ತೋಟದ ಬೆಳೆಗಳೆಂದರೆ ಬಾಳೆ, ವೀಳಯದೆಲೆ, ಗೆಣಸು ಮತ್ತು ತರಕಾರಿಗಳು.

ಈ ತಾಲ್ಲೂಕಿನಲ್ಲಿ ಅನೇಕ ಗೃಹ ಕೈಗಾರಿಕೆಗಳು ಉಂಟು. ಅಲ್ಲಲ್ಲಿ ಹತ್ತಿ ಬಟ್ಟೆ ಮತ್ತು ಕಂಬಳಿಗಳನ್ನು ತಯಾರಿಸುತ್ತಾರೆ. ಚುಂಚನಕಟ್ಟೆಯಲ್ಲಿ ಜನವರಿ ತಿಂಗಳಿನಲ್ಲಿ ದೊಡ್ಡ ಜಾತ್ರೆಯಾಗುತ್ತದೆ. ದನಗಳ ಪ್ರದರ್ಶನ ಈ ಜಾತ್ರೆಯ ಮುಖ್ಯ ಆಕರ್ಷಣೆ.

ಮೈಸೂರು–ಹಾಸನ ರೈಲು ಮತ್ತು ರಸ್ತೆ ಮಾರ್ಗಗಳು ಈ ತಾಲ್ಲೂಕಿನ ಮುಖಾಂತರ ಹಾದು ಹೋಗುತ್ತವೆ. ಕೃಷ್ಣರಾಜನಗರದಿಂದ ನೆರೆಯ ತಾಲ್ಲೂಕು ಕೇಂದ್ರಗಳಿಗೆ ರಸ್ತೆ ಮಾರ್ಗಗಳಿವೆ. ಕೃಷ್ಣರಾಜನಗರ, ಮಿರ್ಲೆ, ಸಾಲಿಗ್ರಾಮ, ಹೊಸ ಅಗ್ರಹಾರ ಮತ್ತು ಹೆಬ್ಬಾಳು ಈ ತಾಲ್ಲೂಕಿನ ಮುಖ್ಯ ಸ್ಥಳಗಳು. ಕೃಷ್ಣರಾಜನಗರ ಈ ತಾಲ್ಲೂಕಿನ ಆಡಳಿತ ಮತ್ತು ವಾಣಿಜ್ಯ ಕೇಂದ್ರ. ಜನಸಂಖ್ಯೆ 30633. ಇದು ಸಾರಿಗೆ ಮಾರ್ಗಗಳ ಕೇಂದ್ರವೂ ಹೌದು. ಹಳೆಯ ಊರು ಕಾವೇರಿ ನದಿಯ ದಂಡೆಯಲ್ಲಿ, ಅದು ಎಡಕ್ಕೆ ತಿರುಗುವಲ್ಲಿ ಇತ್ತು. ಆದ್ದರಿಂದ ಅದಕ್ಕೆ ಎಡತೊರೆಯೆಂಬ ಹೆಸರು ಬಂದಿತ್ತು. ಅಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿದ ಅರ್ಕೇಶ್ವರ ದೇವಸ್ಥಾನವಿದೆ. ಈ ಪಟ್ಟಣ ಪದೇಪದೇ ಕಾವೇರಿ ನದಿಯ ಪ್ರವಾಹಕ್ಕೆ ತುತ್ತಾಗುತ್ತಿತ್ತು. ಕೃಷ್ಣರಾಜಸಾಗರ ನಿರ್ಮಾಣವಾದ ಮೇಲೆ ಅದರಿಂದ ಈ ಪಟ್ಟಣದ ಒಂದು ಭಾಗ ಮುಳುಗಡೆಯಾದುದರಿಂದ ಹೊಸ ಪಟ್ಟಣವನ್ನು ಹಳೆಯ ಊರಿಗೆ ಎರಡು ಮೈಲಿ ದೂರದಲ್ಲಿ ಎತ್ತರವಾದ ಸ್ಥಳದಲ್ಲಿ ನಿರ್ಮಿಸಲಾಯಿತು. ಆಗ ಇದರ ಹೆಸರು ಕೃಷ್ಣರಾಜನಗರ ಎಂದಾಯಿತು. ಇಲ್ಲಿ ನಿಯಂತ್ರಿತ ಮಾರುಕಟ್ಟೆಯೂ ಶಾಲಾ ಕಾಲೇಜುಗಳು ನ್ಯಾಯಾಲಯ ಮತ್ತು ಆಸ್ಪತ್ರೆಗಳು ಇವೆ. ಪ್ರತಿ ಶುಕ್ರವಾರ ಇಲ್ಲಿ ಸಂತೆ ನಡೆಯುತ್ತದೆ. (ಎಚ್.ಸಿ.ಕೆ.)

**ಕೃಷ್ಣರಾಜಪೇಟೆ:** ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ತಾಲ್ಲೂಕು ಮತ್ತು ಆ ತಾಲ್ಲೂಕಿನ ಕೇಂದ್ರ. ಪಾಂಡವಪುರದ ರೈಲ್ವೆ ನಿಲ್ದಾಣದಿಂದ 35 ಕಿಮೀ ಮತ್ತು ಮೈಸೂರಿಗೆ 56 ಕಿಮೀ ದೂರದಲ್ಲಿದೆ. ಇದಕ್ಕೆ 1891ರವರೆಗೆ ಅತ್ತಿಗುಪ್ಪೆ ಎಂಬ ಹೆಸರಿತ್ತು. ಆಗ ಇದು ಹಾಸನ ಜಿಲ್ಲೆಗೆ ಸೇರಿತ್ತು. ಆ ವರ್ಷ ಇದಕ್ಕೆ ಕೃಷ್ಣರಾಜಪೇಟೆಯೆಂದು ನಾಮಕರಣ ಮಾಡಿ ಇದನ್ನು ಮೈಸೂರು ಜಿಲ್ಲೆಗೆ ವರ್ಗಾಯಿಸಲಾಯಿತು. 1939ರಲ್ಲಿ ಮೈಸೂರು ಜಿಲ್ಲೆಯನ್ನು ಇಬ್ಭಾಗಿಸಿ ಮಂಡ್ಯ ಜಿಲ್ಲೆಯನ್ನು ನಿರ್ಮಿಸಿದಾಗ ಇದು ಪಾಂಡವಪುರ ಉಪವಿಭಾಗಕ್ಕೆ ಸೇರಿತು. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ 6 ಹೋಬಳಿಗಳು 286 ಹಳ್ಳಿಗಳು ಇವೆ. ಕೃಷ್ಣರಾಜಪೇಟೆ ತಾಲ್ಲೂಕಿನ ವಿಸ್ತೀರ್ಣ 904 ಚ.ಕಿಮೀ. ಜನಸಂಖ್ಯೆ 2,47,757.

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಹಲವು ಬೆಟ್ಟಗುಡ್ಡಗಳಿವೆ. ಇವುಗಳಲ್ಲಿ ಚನ್ನಗಿರಿ ಮತ್ತು ಜೆಲ್ಲಿ ಬೆಟ್ಟಗಳು ಮುಖ್ಯವಾದುವು. ಜೆಲ್ಲಿ ಬೆಟ್ಟ ಕೃಷ್ಣರಾಜಪೇಟೆಗೆ 48 ಕಿಮೀ ದೂರದಲ್ಲಿದೆ. ಬೆಣಚುಕಲ್ಲು ಮತ್ತು ಬೂದು ಬಣ್ಣದ ಶಿಲೆಗಳು ಇಲ್ಲಿವೆ. ದಕ್ಷಿಣದ ಗವಿಬೆಟ್ಟ ಭಾಗದಲ್ಲಿ ಗಟ್ಟಿಯಾದ ಕೆಂಪು ಶಿಲೆಗಳಿವೆ. ಇದರ ಎತ್ತರ ಸಮುದ್ರ ಮಟ್ಟದಿಂದ 750–900 ಮೀ. ತಾಲ್ಲೂಕಿನಲ್ಲಿ ಮುಂಗಾರು ಮತ್ತು ಹಿಂಗಾರು ಮಾರುತಗಳಿಂದ ಮಳೆಯಾಗುತ್ತದೆ. ಏಪ್ರಿಲ್‌ನಿಂದ ನವೆಂಬರ್‌ವರೆಗೆ ನೈಋತ್ಯ ಮಾರುತಗಳಿಂದ ಹೆಚ್ಚು ಮಳೆಯಾಗುತ್ತದೆ. ಅಕ್ಟೋಬರ್ ತಿಂಗಳು ಮಳೆಯ ಶಿಖರ ಮಾಸ. ಮಾರ್ಚ್–ಮೇ ತಿಂಗಳುಗಳಲ್ಲಿ ಉಷ್ಣತೆ ಹೆಚ್ಚು. ಏಪ್ರಿಲ್ ತಿಂಗಳಿನಲ್ಲಿ ಹಗಲಿನ ಗರಿಷ್ಠ ಮತ್ತು ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ $35^0$ಸೆ.–$20^0$ಸೆ. ಗರಿಷ್ಠ ಉಷ್ಣತೆ ಕೆಲವು ವೇಳೆ $36^0$ಸೆ. ವರೆಗೂ ಹೆಚ್ಚಾಗಿರುವುದೂ ಉಂಟು. ಡಿಸೆಂಬರ್ ತಿಂಗಳಿನಲ್ಲಿ ಉಷ್ಣತೆ $32^0$ಸೆ. – $16^0$ಸೆ. ಕೆಲವು ಬಾರಿ ಇದು $10^0$ಸೆ. ಗೆ ಇಳಿದಿದ್ದು ಉಂಟು.

ಇಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣಿನ ಪ್ರದೇಶ ಹೆಚ್ಚು. ಕೆಲವು ಕಡೆ ಜೇಡಿಮಣ್ಣಿನ ನೆಲವಿದೆ. ವಿಶಾಲಪ್ರದೇಶ ಬಂಜರು ನೆಲ. ಪೊದೆ ಅಥವಾ ಕುರುಚಲು ಗಿಡಗಳಿಂದ ಕೂಡಿದ ಕಾಡುಗಳು ಅಲ್ಲಲ್ಲಿ ಕಂಡುಬರುತ್ತವೆ. ಕೃಷ್ಣರಾಜಪೇಟೆಯ ಮುಖ್ಯ ವೃತ್ತಿ ವ್ಯವಸಾಯ; ಶೇ. 90ರಷ್ಟು ಜನ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಸು. 46,148 ಹೆ. ಭೂಮಿ ಸಾಗುವಳಿಗೆ ಒಳಪಟ್ಟಿದೆ. ವ್ಯವಸಾಯ ಮಳೆಯನ್ನೇ ಬಹುವಾಗಿ ಅವಲಂಬಿಸಿದೆ. ಕೆರೆ, ಕಾಲುವೆ ಮತ್ತು ಬಾವಿಗಳು ಇವೆ. ಹೇಮಾವತಿ ಈ ಪ್ರದೇಶದ ಮುಖ್ಯವಾದ ನದಿ. ಮುಂಗಾರು ಮತ್ತು ಹಿಂಗಾರು ಎಂಬ ಎರಡು ವಿಧವಾದ ಬೆಳೆಗಳನ್ನು ಬೆಳೆಯುವರು. ಮುಂಗಾರು ಬೆಳೆ ಜೂನ್–ಜುಲೈ ತಿಂಗಳುಗಳಲ್ಲಿಯೂ ಹಿಂಗಾರು ಬೆಳೆ ಡಿಸೆಂಬರ್–ಜನವರಿ ತಿಂಗಳುಗಳಲ್ಲೂ ಕಟಾವಾಗುತ್ತವೆ. ರಾಗಿ, ಬತ್ತ, ಹುರುಳಿ ಮತ್ತು ಜೋಳ

ಮುಖ್ಯವಾದ ಬೆಳೆಗಳು. ಕಬ್ಬು, ನೆಲಗಡಲೆ, ಬಾಳೆ, ತೆಂಗು, ಹೊಗೆಸೊಪ್ಪು ಇವು ಇತರ ಮುಖ್ಯ ಬೆಳೆಗಳು. ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬನ್ನೂರು ಜಾತಿಯ ಕುರಿಗಳನ್ನು ಸಾಕುತ್ತಾರೆ. ದನ ಮತ್ತು ಕೋಳಿ ಸಾಕಣೆಯು ಸಾಕಷ್ಟು ರೂಢಿಯಲ್ಲಿದೆ.

ಸೀಳನೆರೆ ಹಳ್ಳಿಯ ಬಳಿ ಕ್ರೋಮೈಟ್ ನಿಕ್ಷೇಪಗಳಿವೆ. ಕಿಕ್ಕೇರಿ ಮತ್ತು ಸಿಂದಘಟ್ಟ ರೇಷ್ಮೆ ಬಟ್ಟೆ ತಯಾರಿಕೆಗೆ ಪ್ರಸಿದ್ಧ. ಇಲ್ಲಿ 4,400ಕ್ಕಿಂತಲೂ ಹೆಚ್ಚು ರೇಷ್ಮೆ ನೂಲಿನ ರಾಟೆಗಳು ಇವೆ.

ಸಾರಿಗೆ ಸೌಲಭ್ಯ ಹೆಚ್ಚಾಗಿ ಅಭಿವೃದ್ಧಿಯಾಗಿಲ್ಲ. ಕೃಷ್ಣರಾಜಪೇಟೆಯಲ್ಲಿ ಹಲವು ರಸ್ತೆಗಳು ಕೂಡುತ್ತವೆ. ಕೃಷ್ಣರಾಜಪೇಟೆಗೆ ಈಶಾನ್ಯದಲ್ಲಿರುವ ಕೋಟಿಗನಹಳ್ಳಿ ಮತ್ತು ಪೂರ್ವದ ನಾಗಮಂಗಲಕ್ಕೆ ಡಾಂಬರು ರಸ್ತೆಯ ಸಂಪರ್ಕವಿದೆ. ಇದು ಬೆಟ್ಟ ಗುಡ್ಡಗಳ ಮತ್ತು ಹಸುರು ಕಣಿವೆಗಳ ನಡುವೆ ಸಾಗುತ್ತದೆ. ಬೆಂಗಳೂರು–ನಾಗಮಂಗಲ ಬಸ್ಸುಗಳು ಕೃಷ್ಣರಾಜಪೇಟೆಯ ಮಾರ್ಗವಾಗಿ ಹೋಗುತ್ತವೆ. ಅಕ್ಕಿಹೆಬ್ಬಾಳಿಗೂ ಮೇಲುಕೋಟೆಗೂ ಹೇಮಗಿರಿಗೂ ಬಸ್ಸಿನ ಸಂಪರ್ಕವುಂಟು. ವರ್ಷಕ್ಕೊಮ್ಮೆ ಹೇಮಗಿರಿಯಲ್ಲಿ ನಡೆಯುವ ಜಾತ್ರೆಯು ಪ್ರಸಿದ್ಧವಾದದ್ದು. ಅಲ್ಲಿ ದನಗಳ ವ್ಯಾಪಾರವಾಗುತ್ತದೆ.

ತಾಲ್ಲೂಕಿನ ಕೇಂದ್ರ ಮತ್ತು ದೊಡ್ಡ ಪಟ್ಟಣ ಕೃಷ್ಣರಾಜಪೇಟೆ. ಜನಸಂಖ್ಯೆ 22,473. ಸರ್ಕಾರಿ ಪಾಲಿಟೆಕ್ನಿಕ್, ಪ್ರೌಢಶಾಲೆ ಮತ್ತು ಕಾಲೇಜುಗಳಿವೆ. (ಪಿ.ಎಚ್.)

**ಕೆಂಟಕಿ:** ಉತ್ತರ ಅಮೆರಿಕ ದಕ್ಷಿಣ ಮಧ್ಯದಲ್ಲಿರುವ ಒಂದು ರಾಜ್ಯ. ನೀಲಿಹುಲ್ಲು ಸಮೃದ್ಧಿಯಾಗಿ ಈ ರಾಜ್ಯದಲ್ಲಿ ಬೆಳೆಯುವುದರಿಂದ ನೀಲಿ ಹುಲ್ಲಿನ ರಾಜ್ಯ ಎಂಬುದು ಇದರ ಜನಪ್ರಿಯ ಹೆಸರು. ರಾಜ್ಯದ ಉತ್ತರದ ಮಧ್ಯಭಾಗದಲ್ಲಿ ಹರಿಯುವ ಕೆಂಟಕಿ ನದಿಯಿಂದಾಗಿ ಇದಕ್ಕೆ ಕೆಂಟಕಿ ಎಂಬ ಹೆಸರು ಬಂದಿದೆ. ಇದರ ವಿಸ್ತೀರ್ಣ 104664 ಚ.ಕಿಮೀ. ಜನಸಂಖ್ಯೆ 4041769 (2002).

ಮೇಲ್ಮೈ ಲಕ್ಷಣ: ಪೂರ್ವದಲ್ಲಿಯ ಪರ್ವತ ಪ್ರದೇಶಗಳಿಂದ ಪಶ್ಚಿಮದೆಡೆಗೆ ಸಾಗುತ್ತ ಬಂದಂತೆ ನೆಲ ತೆವರುತೆವರಾಗಿ ತಗ್ಗುತ್ತ ಸಾಗುತ್ತದೆ. ಉ.ಅ. $36^0 30'$ ಮತ್ತು $39^0 6'$ ಹಾಗೂ ಪೂ.ರೇ. $82^0$–$89^0 33'$ ಗಳ ನಡುವಣ ಮಿಸಿಸಿಪಿ ಜಲಾನಯನ ಪ್ರದೇಶದಲ್ಲಿ ಈ ರಾಜ್ಯ ಹಬ್ಬಿದೆ. ಆಗ್ನೇಯ ದಿಕ್ಕಿನಲ್ಲಿ ಕೆಲಭಾಗ ಕಂಬರ್ಲೆಂಡ್ ಮತ್ತು ಪೈನ್ ಪರ್ವತಗಳಿಂದ ಆವೃತವಾಗಿದೆ. ರಾಜ್ಯದಲ್ಲಿಯ ಅತ್ಯುನ್ನತ ಪ್ರದೇಶವೆಂದರೆ ಹಾರ್ಲಾನ್ ಕೌಂಟಿಯಲ್ಲಿಯ ಬಿಗ್ ಬ್ಲ್ಯಾಕ್ ಪರ್ವತ (1250 ಮೀ); ಅತಿ ತಗ್ಗಿನ ಪ್ರದೇಶವೆಂದರೆ ಮಿಸಿಸಿಪಿ ನದಿಯ ದಂಡೆಯ ಮೇಲಿರುವ ಪುಲ್ಟನ್ ಕೌಂಟಿ (75 ಮೀ). ರಾಜ್ಯದ ಸರಾಸರಿ ಎತ್ತರ 225 ಮೀ. ರಾಜ್ಯದ ಪೂರ್ವದ ಕಾಲುಭಾಗ ಪೂರ್ತಿ ಪರ್ವತಮಯ; ಆದರೆ ವಾಸ್ತವವಾಗಿ ನೋಡಿದರೆ ಕಂಬರ್ಲೆಂಡ್ ಮತ್ತು ಪೈನ್ ಪರ್ವತಗಳನ್ನು ಬಿಟ್ಟು ಉಳಿದೆಲ್ಲ ಭಾಗವೂ ಆಲೆಗೆನಿ ಪ್ರಸ್ಥಭೂಮಿಯೆಂದೇ ಹೇಳಬೇಕು. ಕಿರಿದಾದ ಕಣಿವೆಗಳಿಂದಲೂ ಕಡಿದಾದ ಗುಡ್ಡಗಳಿಂದಲೂ ಕೂಡಿರುವ ಈ ಪ್ರದೇಶದ ಗರಿಷ್ಠ ಎತ್ತರ 450 ಮೀ. ಟೆನೆಸೀ ನದಿಗೆ ಪೂರ್ವಕ್ಕಿರುವ ಉಳಿದ ಭಾಗ ನೀಲಿ ಹುಲ್ಲಿನಿಂದಲೂ ದಕ್ಷಿಣದಲ್ಲಿ ಹೈಲೆಂಡ್ ರಿಮ್ ಪ್ರಸ್ಥಭೂಮಿಯಿಂದಲೂ ಕೂಡಿದೆ. ನೀಲಿ ಹುಲ್ಲಿನ ಭೂಮಿ ಸವೆತಕ್ಕೀಡಾದ್ದು. ಕೆಲವೆಡೆ ಸಮತಲ ಪ್ರದೇಶಗಳಲ್ಲಿ ಸೊಂಪಾದ ನೀಲಿ ಹುಲ್ಲಿನಿಂದೊಡಗೂಡಿದ ಬೆಟ್ಟಗಳು ಹಾಗೂ ಕಣಿವೆಗಳು ಸುತ್ತುವರಿದ ನೈಸರ್ಗಿಕ ಉದ್ಯಾನಗಳು ಮನೋಹರವಾಗಿವೆ. ರಾಜ್ಯದಲ್ಲಿ ಹರಿಯುವ ನದಿಗಳಲ್ಲಿ ಕೆಂಟಕಿ, ಲಿಕಿಂಗ್, ರಾಕ್ ಕ್ಯಾಸಲ್, ಸಾಲ್ಟ್, ಗ್ರೀನ್ ಮತ್ತು ಟ್ರೇಡ್ ವಾಟರ್ ಮುಖ್ಯವಾದವು.

ವಾಯುಗುಣ: ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿದಲ್ಲಿ ಕೆಂಟಕಿಯ ವಾಯುಗುಣ ಹೆಚ್ಚು ಹಿತಕರ. ಆಗ್ನೇಯ ಭಾಗದಲ್ಲಿ ಮಧ್ಯಕ ವಾರ್ಷಿಕ ಉಷ್ಣತೆ $10^0$ಸೆ. ನೈರುತ್ಯದಲ್ಲಿ ಟೆನೇಸಿಗೆ ಪಶ್ಚಿಮದಲ್ಲಿ $15.55^0$ಸೆ. ಇಡೀ ರಾಜ್ಯದ ಮಧ್ಯಕ ಉಷ್ಣತೆ $12.77^0$ಸೆ. ವಾರ್ಷಿಕ ಸರಾಸರಿ ಮಳೆ ಈಶಾನ್ಯದಲ್ಲಿ 90 ಸೆಂಮೀ ನಿಂದ ದಕ್ಷಿಣದಲ್ಲಿ 125 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ. ಇಡೀ ರಾಜ್ಯದಲ್ಲಿ 115 ಸೆಂಮೀ. ಸಾಮಾನ್ಯವಾಗಿ ವರ್ಷ ಪೂರ್ತಿ ಮಳೆಯಾಗುತ್ತದೆ. ಹಿಮಪಾತ ಇಲ್ಲವೇ ಇಲ್ಲವೆನ್ನಬಹುದು. ಪಶ್ಚಿಮದಿಂದ ಅಥವಾ ನೈರುತ್ಯದಿಂದ ಗಾಳಿ ಬೀಸಿ ತೇವವನ್ನು ಹೊತ್ತು ತರುತ್ತದೆ. ಉತ್ತರ ಹಾಗೂ ವಾಯವ್ಯ ದಿಕ್ಕುಗಳಿಂದ ಬೀಸುವ ಚಳಿಮಾರುತಗಳು ಹಣ್ಣಿನ ತೋಟಗಳಿಗೆ ಅಪಾಯಕರ. (ಎಸ್.ಎಲ್.ಎ.;ಸಿ.ಎಂ.)

**ಕೆನಡ:** ಉತ್ತರ ಅಮೆರಿಕದ ಒಂದು ಸಂಯುಕ್ತ ರಾಜ್ಯ. ಕಾಮನ್‌ವೆಲ್ತ್ ರಾಷ್ಟ್ರಸಮುದಾಯದ ಅತ್ಯಂತ ದೊಡ್ಡ ದೇಶ. ಕೆನಡದ ಉತ್ತರತಮ ಬಿಂದು ಕೊಲಂಬಿಯ ಭೂಶಿರ (ಉ.ಅ. $83^0 06'$); ದಕ್ಷಿಣತಮ ಬಿಂದು ಈರೀ ಸರೋವರದ ಮಿಡ್ಲ್ ದ್ವೀಪದಲ್ಲಿದೆ (ಉ.ಅ. $41^0 41'$). ಪೂರ್ವ–ಪಶ್ಚಿಮವಾಗಿ ಇದು ಸ್ಪಿಯರ್ ಭೂಶಿರದಿಂದ (ಪೂ.ರೇ. $52^0 37'$) ಅಲಾಸ್ಕದ ಮೇರೆಯ (ಪೂ.ರೇ. $141^0$) ವರೆಗೆ ಹಬ್ಬಿದೆ. ಆಡಳಿತ ದೃಷ್ಟಿಯಿಂದ ಹತ್ತು ಪ್ರಾಂತ್ಯಗಳಾಗಿ ಮತ್ತು ಎರಡು ಪ್ರದೇಶಗಳಾಗಿ ವಿಂಗಡವಾಗಿರುವ ಕೆನಡದ ವಿಸ್ತೀರ್ಣ 99,70,610 ಚ.ಕಿಮೀ. ಜನಸಂಖ್ಯೆ 31,244,000 (2002). ರಾಜಧಾನಿ ಒಟ್ಟಾವ.

ಭೂರಚನೆ: ವಿಶ್ವದ ಕೆಲವು ಅತ್ಯಂತ ಪುರಾತನ ಶಿಲೆಗಳು ಕೆನಡದಲ್ಲಿವೆ. ಹಡ್ಸನ್ ಕೊಲ್ಲಿಯ ಅವನತ ಪ್ರದೇಶದ ಸುತ್ತ ಇರುವ ನೆಲದ ಹೊದಿಕೆಯ ತಳದಲ್ಲಿ, ಬಲು ಹತ್ತಿರದಲ್ಲೇ, 41,00,000 ಚ.ಕಿಮೀ ವಿಸ್ತಾರದಲ್ಲಿ, ಅವು ಸಿಗುತ್ತವೆ. ಈ ಪ್ರದೇಶವೇ ಕೆನಡಿಯನ್ ಫಲಕ (ಷೀಲ್ಡ್: ಸ್ಥಿರ ಭೂಪ್ರದೇಶ). ಇಲ್ಲಿ ಪೂರ್ವ ಕೇಂಬ್ರಿಯನ್ ಕಲ್ಪದ (600 ದಲ.ವರ್ಷಗಳಿಗಿಂತಲೂ ಪ್ರಾಚೀನ ಕಾಲ) ಗ್ರಾನೈಟ್, ನೀಸ್ (ಗೀರುಶಿಲೆ), ಷಿಸ್ಟ್ (ಪದರಶಿಲೆ), ಕ್ವಾರ್ಟ್ಸೈಟ್ (ಬೆಣಚುಶಿಲೆ)–ಮುಂತಾದ ಕಣಶಿಲೆಗಳನ್ನು ಕಾಣಬಹುದು. ಚಿನ್ನ, ಬೆಳ್ಳಿ, ಪ್ಲಾಟಿನಂ, ತಾಮ್ರ, ನಿಕ್ಕಲ್, ಕೊಬಾಲ್ಟ್, ಕಬ್ಬಿಣ, ಸೀಸ ಮತ್ತು ಸತುಗಳ ನಿಕ್ಷೇಪಗಳು ಈ ಬಂಡೆಗಳಲ್ಲಿವೆ. ಗಣಿ ಉದ್ಯಮ ಪ್ರಧಾನವಾದ ರಾಷ್ಟ್ರಗಳಲ್ಲಿ ಕೆನಡವೂ ಒಂದು.

ಕೆನೆಡಿಯನ್ ಫಲಕದಲ್ಲಿ ಒಮ್ಮೆ ಬೃಹತ್ ಪರ್ವತ ಪಂಕ್ತಿಗಳಿದ್ದುವೆಂಬುದು ಇಲ್ಲಿಯ ಶಿಲಾರಚನೆಯಿಂದ ವೇದ್ಯವಾಗುತ್ತದೆ. ಆದರೆ ಪೂರ್ವ ಕೇಂಬ್ರಿಯನ್ ಕಲ್ಪದ ಅಂತ್ಯದ ವೇಳೆಗೆ ಈ ಭಾಗವೆಲ್ಲ ಸವೆದು ತಗ್ಗಾಗಿ ಪರಿಣಮಿಸಿತು. ಅನಂತರ ಸಮುದ್ರದ ನೀರು ಇದರೊಳಕ್ಕೆ ನುಗ್ಗಿತು. ಸ್ವಲ್ಪಕಾಲದ ಮೇಲೆ ಈಶಾನ್ಯ ಭಾಗ ಸ್ವಲ್ಪ ಮೇಲಕ್ಕೆದ್ದಿರಬೇಕು. ಉತ್ತರ ಲ್ಯಾಬ್ರಡಾರ್, ಬ್ಯಾಫಿನ್ ದ್ವೀಪ ಇವು ಸಮುದ್ರಮಟ್ಟದಿಂದ 1500 ಮೀ ಗಿಂತ ಹೆಚ್ಚು ಎತ್ತರದಲ್ಲಿವೆ.

ಪುರಾತನ ಭೂಭಾಗದ ಸವೆತದಿಂದುಂಟಾದ ಶಿಲಾಸಾಮಗ್ರಿಗಳು ಸುತ್ತಮುತ್ತಲ ಇಳುಕಲುಗಳಲ್ಲಿ ಶೇಖರಗೊಂಡು, ಪೇಲಿಯೋಜ಼ೋಯಿಕ್ ಯುಗದಲ್ಲಿ ಮರಳುಶಿಲೆ, ಸುಣ್ಣಶಿಲೆ ಮತ್ತು ಜೇಡುಶಿಲಾಸ್ತೋಮಗಳಾಗಿ ಮಾರ್ಪಟ್ಟುವು. ಇವುಗಳಲ್ಲಿ ಉತ್ತಮ



ಸ್ತರರಚನೆಯನ್ನು ಕಾಣಬಹುದು. ಖಂಡದ ಮಧ್ಯಭಾಗದಲ್ಲಿ ಈ ಜಲಜ ಶಿಲಾಸ್ತರಗಳು ಫಲಕದ ಗಡುಸಾದ ಶಿಲಾರಾಶಿಯ ಮೇಲೆ ನಿಂತಿವೆ. ಅನಂತರ ತಲೆದೋರಿದ ಭೂ ಚಟುವಟಿಕೆಗಳ ಪ್ರಭಾವಕ್ಕೆ ಇವು ಅಷ್ಟಾಗಿ ಒಳಗಾಗಿದ್ದಂತೆ ಕಂಡುಬರುವುದಿಲ್ಲ. ಆದರೆ ಖಂಡದ ಆಗ್ನೇಯ ಅಂಚಿನ ಶಿಲಾಸ್ತರಗಳು ಮಡಿಕೆಬಿದ್ದು ಅಪಲೇಷಿಯನ್ ಪರ್ವತಗಳಾಗಿವೆ. ಪಶ್ಚಿಮ ಮತ್ತು ನೈಋತ್ಯ ಭಾಗಗಳಲ್ಲಿ ಪೇಲಿಯೋಜೋಯಿಕ್ ಯುಗದ (600 ದ.ಲ.ವ. ಪ್ರಾಚೀನದಿಂದ 225 ದ.ಲ.ವ. ಪ್ರಾಚೀನದವರೆಗಿನ ಅವಧಿ) ವಿಸ್ತಾರವಾದ ಶಿಲಾಸ್ತರಗಳ ಮೇಲೆ ಮೀಸೋಜೋಯಿಕ್ ಯುಗದ (225 ದ.ಲ.ವ. ಪ್ರಾಚೀನದಿಂದ 65 ದ.ಲ.ವ. ಪ್ರಾಚೀನದವರೆಗಿನ ಅವಧಿ) ಜಲಜಶಿಲೆಗಳು ಹರಡಿಕೊಂಡುವು. ಈ ಎರಡೂ ಯುಗಗಳ ಶಿಲಾಸ್ತೋಮಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಜಿಪ್ಸಂ, ಲವಣ, ಪೊಟ್ಯಾಷ್ ಮುಂತಾದ ಉಪಯುಕ್ತ ಖನಿಜನಿಕ್ಷೇಪಗಳಿವೆ.

ಮೀಸೋಜೋಯಿಕ್ ಯುಗದ ಕೊನೆಯಲ್ಲಿ ಖಂಡದ ಪಶ್ಚಿಮದ ಅಂಚಿನ ಉದ್ದಕ್ಕೂ ಭೂಮಿಯ ಹೊರಪದರ ಅಸ್ಥಿರವಾಗಿತ್ತು. ಮಂದವಾದ ಶಿಲಾಪ್ರಸ್ತರಗಳು ಅತೀವ ಒತ್ತಡದಿಂದಾಗಿ ಮಡಿಕೆ ಬಿದ್ದುದೇ ಅಲ್ಲದೆ, ಸ್ತರಭಂಗಗಳಿಗೂ ಒಳಗಾಗಿ ಮೇಲಕ್ಕೆದ್ದುವು. ಕಾರ್ಡಿಲೆರಾ ಪರ್ವತಸ್ತೋಮ ಸಂಭವಿಸಿದ್ದು ಹೀಗೆ. ಆಲ್ಬರ್ಟನ್ ಅಡಿಬೆಟ್ಟಗಳಿಂದ ಪೆಸಿಫಿಕ್‌ನ ವರೆಗೆ 800 ಕಿಮೀ ಅಗಲ ಇರುವ ಈ ಪ್ರದೇಶದಲ್ಲಿ ರಾಕಿಯ ಉನ್ನತ ಶಿಖರಗಳೂ ಕೊಲಂಬಿಯ ಪರ್ವತಗಳೂ ಕೋಸ್ಟ್ ಪರ್ವತಗಳೂ ವ್ಯಾಂಕೂವರ್ ದ್ವೀಪದ ಪರ್ವತಗಳೂ ಸೇರಿವೆ. ಮೀಸೋಜೋಯಿಕ್ ಯುಗದ ಸ್ವಲ್ಪ ಮುಂಚಿನ ಕಾಲದಲ್ಲಿ ಕೆನೆಡಿಯನ್ ಫಲಕದ ಈಶಾನ್ಯ ತುದಿಯ ಉದ್ದಕ್ಕೂ ಭೂಮಿಯ ಹೊರಪದರದಲ್ಲಿ ಅಸ್ಥಿರತೆ ಉಂಟಾಗಿತ್ತು. ಉತ್ತರ ಆರ್ಕ್‌ಟಿಕ್ ದ್ವೀಪಗಳ ಅಲ್ಯೂಷಿಯನ್ ಪರ್ವತಶ್ರೇಣಿಗಳು ಸಂಭವಿಸಿದ್ದು ಇದರಿಂದಾಗಿಯೇ.

ಪಶ್ಚಿಮ ಕೆನಡದ ಕೆಲವು ಭಾಗಗಳಲ್ಲಿ, ಮುಖ್ಯವಾಗಿ ದಕ್ಷಿಣ ಆಲ್ಬರ್ಟದಲ್ಲಿ, ಪುರಾತನ ರಾಕಿ ಪರ್ವತಶ್ರೇಣಿಗಳ ಸವೆತದಿಂದುಂಟಾಗಿರುವ ಟರ್ಷಿಯರಿ (65 ದ.ಲ.ವ. ಪ್ರಾಚೀನದಿಂದ 1 ದ.ಲ.ವ. ಪ್ರಾಚೀನದ ವರೆಗಿನ ಅವಧಿ) ಶಿಲಾಸ್ತೋಮಗಳಿವೆ. ಇವು ಸಹ ಭೂಸವೆತಕ್ಕೊಳಗಾದ್ದಕ್ಕೆ ದಾಖಲೆಗಳಿವೆ. ಈ ಭೂಯುಗದ ನುರುಜು ಶಿಲಾಸ್ತರದ ಅಲ್ಪಸ್ವಲ್ಪ ಭಾಗವನ್ನು ಸೈಪ್ರಸ್ ಬೆಟ್ಟಗಳ ಮೇಲೂ ರಾಕಿ ಶ್ರೇಣಿಯ ತಪ್ಪಲು ಬೆಟ್ಟಗಳಲ್ಲೂ ಅಲ್ಲಲ್ಲೇ ನೋಡಬಹುದು. ಇಡೀ ಉತ್ತರ ಅಮೆರಿಕದ ಬಹುಮಟ್ಟಿನ ಮೇಲ್ಮೈಲಕ್ಷಣ ಮತ್ತು ಸ್ಥಿರತೆಗೆ ಕಾರಣಭೂತವಾದ ಮತ್ತು ಕಣಶಿಲೆಗಳಿಂದಾದ ಪುರಾತನ ಕೆನಡಿಯನ್ ಫಲಕವನ್ನು ಕೆನಡದ ಕೆಲವೆಡೆ ಕಿರಿಯ ಪ್ರಸ್ತರೀಶಿಲೆಗಳು ಸು. 3000 ಮೀ ಗಳಷ್ಟು ಮಂದವಾಗಿ ಆವರಿಸಿಕೊಂಡಿವೆ.

**ವ್ಯಾಂಕೋವರ್ ನಗರ**

ಪ್ಲೀಸ್ಟೊಸೀನ್ ಕಲ್ಪದಲ್ಲಿ (1 ದ.ಲ.ವ. ಪ್ರಾಚೀನದಿಂದ ಇಂದಿನ ವರೆಗಿನ ಅವಧಿ) ಕೆನಡದ ಬಹುಭಾಗ ಹಿಮನದಿಗಳಿಂದ ಆವೃತವಾಗಿತ್ತು. ಇವುಗಳ ಕಾರ್ಯಾಚರಣೆಯಿಂದಾಗಿ ಇದರ ಮೇಲ್ಮೈಯ ನಿಕ್ಷೇಪಗಳು ಮುರುಕಲು ಗುಪ್ಪೆಗಳು, ಟಿಲ್, ಹರಿಯುವ ನೀರಿನಿಂದ ವಿಂಗಡವಾದ ನುಜುರು, ಮರಳು, ಗೋಡು ಅಥವಾ ಜೇಡಿಮಣ್ಣಿನಿಂದ ಕೂಡಿವೆ. ಪುರಾತನ ನದಿಪಾತ್ರಗಳಾಗಿದ್ದೆಡೆಯಲ್ಲಿ ದಪ್ಪ ಕಣಗಳ ನಿಕ್ಷೇಪಗಳೂ ಹಿಮನದಿಯ ಸರೋವರಗಳ ತಳದಲ್ಲಿ ಸೂಕ್ಷ್ಮಕಣಗಳ ನಿಕ್ಷೇಪಗಳೂ ಸೇರಿದುವೆಂದು ಕಂಡುಬರುತ್ತದೆ. ಪೂರ್ವ ಮತ್ತು ಪಶ್ಚಿಮ ಕೆನಡದಲ್ಲಿ ಕೃಷಿಗೆ ಅತ್ಯಂತ ಪ್ರಶಸ್ತವೆನಿಸಿದ ಪ್ರದೇಶಗಳು ಹಿಂದೆ ಅಗಾಸಿಸ್ ಮತ್ತು ಇತರ ಪುರಾತನ ಸರೋವರಗಳ ತಳಭಾಗಗಳಾಗಿದ್ದುವು.

ಮೇಲ್ಮೈ ಲಕ್ಷಣ: ಭೂಮಿಯ ಮೇಲ್ಮೈ ಏರುತಗ್ಗುಗಳಿಂದ ಕೂಡಿದ ಬೋಗುಣಿಯಂತಿದೆ. ಇದರ ಅತ್ಯಂತ ತಗ್ಗಿನ ಜಾಗದಲ್ಲಿ ಹಡ್ಸನ್ ಕೊಲ್ಲಿ ಇದೆ. ಈ ಅವನತ ಪ್ರದೇಶದ ಸುತ್ತಲೂ ಬಹುತೇಕ ಇರುವವು ಕೆನೆಡಿಯನ್ ಫಲಕದ ಪುರಾತನ ಗಟ್ಟಿಶಿಲೆಗಳು. ಅಲ್ಲಲ್ಲಿ ಒರಟಾದ ಬಂಡೆಗಳು ಮೇಲೆದ್ದಿವೆ. ಆದರೆ ಇವು ಎತ್ತರವಾಗಿಲ್ಲ. ಕೆನಡಿಯನ್ ಫಲಕದ ದಕ್ಷಿಣಕ್ಕೂ ಪಶ್ಚಿಮಕ್ಕೂ ಸಮತಲ ಬಂಡೆಗಳ ಹಾಸಿನ ಮೇಲೆ ವಿಶಾಲ ಬಯಲುಗಳು ಹಬ್ಬಿವೆ. ಸೇಂಟ್ ಲಾರೆನ್ಸ್ ಮತ್ತು ಕೆಳಗಿನ ಮಹಾಸರೋವರಗಳ ಬಳಿಯ ಮತ್ತು ದಕ್ಷಿಣ ಮ್ಯಾನಿಟೋಬದ ಮೈದಾನಗಳು ಸಮುದ್ರಮಟ್ಟದಿಂದ ಸಾಮಾನ್ಯವಾಗಿ 300 ಮೀ ಗಿಂತ ಎತ್ತರವಾಗಿಲ್ಲ ಸ್ಯಾಸ್ಕ್ಯಾಚೆವನ್‌ನ ಮಹಾ ಮೈದಾನಗಳು ಮತ್ತು ಆಲ್ಬರ್ಟ ಇವು ಸಮುದ್ರಮಟ್ಟದಿಂದ 600–1050 ಮೀ ಎತ್ತರವಾಗಿವೆ. ಇಲ್ಲಿಯ ವಿಶಾಲ ಪ್ರದೇಶಗಳಲ್ಲಿ ಸ್ಯಾಸ್ಕ್ಯಾಚೆವನ್ ನದಿಕಣಿವೆಗಳನ್ನು ಬಿಟ್ಟರೆ ಬೇರೆಲ್ಲೂ ಏರುತಗ್ಗುಗಳಿಲ್ಲ. ಸೈಪ್ರೆಸ್ ಬೆಟ್ಟಗಳು, ವುಡ್ ಪರ್ವತಗಳು ಮುಂತಾದವು ತಕ್ಕಮಟ್ಟಿಗೆ ಕಡಿದಾಗಿವೆ.

ಕೆನಡವನ್ನು ಭೌಗೋಳಿಕವಾಗಿ 1. ಕೆನಡಿಯನ್ ಫಲಕ 2. ಆಕೇಡಿಯ ಪ್ರದೇಶ 3. ಸೇಂಟ್ ಲಾರೆನ್ಸ್ 4. ಹುಲ್ಲುಗಾವಲು ಮತ್ತು 5. ಕಾರ್ಡಿಲೇರ ಪ್ರದೇಶ ಎಂದು ಐದು ಭಾಗಗಳಾಗಿ ವಿಂಗಡಿಸಬಹುದು.

1. ಕೆನಡಿಯನ್ ಫಲಕ: ಇದರ ವಿಸ್ತೀರ್ಣ 4533760 ಚ.ಕಿಮೀ. ಇದರಲ್ಲಿ ಲ್ಯಾಬ್ರಡಾರ್, ಕ್ವಿಬೆಕ್ ಪ್ರಾಂತ್ಯದ ಬಹುಭಾಗ, ಉತ್ತರ ಆಂಟೇರಿಯೋ ಮತ್ತು ಆರ್ಕ್‌ಟಿಕ್ ಪ್ರದೇಶ–ಇವು ಸೇರಿವೆ. ಇದರ ಪಶ್ಚಿಮದ ಗಡಿ ಲೇಕ್–ಆಫ್–ದಿ–ವುಡ್‌ನಿಂದ ವಾಯವ್ಯಕ್ಕೆ ಮೆಕೆನ್‌ಜಿ ನದಿ ಆರ್ಕ್‌ಟಿಕ್ ಸಾಗರವನ್ನು ಸೇರುವ ಸ್ಥಳದವರೆಗೆ ಹಬ್ಬಿದೆ. ಆರ್ಕ್‌ಟಿಕ್ ಸಾಗರದ ದ್ವೀಪಗಳ ದಕ್ಷಿಣ ಭಾಗಗಳು ಸೇರಿರುವುದೂ ಈ ಪ್ರದೇಶಕ್ಕೇ. ನಡುವೆ ಹಡ್ಸನ್ ಕೊಲ್ಲಿಯಿಂದ ಕೂಡಿ ಅರ್ಧಚಂದ್ರಾಕೃತಿಯಲ್ಲಿರುವ ಈ ಪ್ರದೇಶದಲ್ಲಿ ಖನಿಜನಿಕ್ಷೇಪಗಳು ಹೇರಳವಾಗಿವೆ. ನಿಕ್ಕಲ್, ತಾಮ್ರ ಮತು ಚಿನ್ನ ಮುಖ್ಯವಾದವು. ಈ ಭಾಗದಲ್ಲಿ ಲ್ಯಾಬ್ರಡಾರಿನ ನಚ್ವಾಕ್ ಪರ್ವತ ಶ್ರೇಣಿಯ ಶಿಖರಗಳು 1650 ಮೀ ಎತ್ತರಕ್ಕೇರಿವೆ. ಇತರ ಕಡೆಗಳಲ್ಲಿ ಕಿರುಬೆಟ್ಟಗಳು ಮತ್ತು ಗಟ್ಟಿಬಂಡೆಗಳ ಸಾಲುಗಳು ಮಾತ್ರ ಉಂಟು. ಭೂಸ್ತರಗಳು ಮೃದುವಾಗಿರುವ ಕಡೆ ಕಣಿವೆಗಳು ಹೆಚ್ಚು. ಅವುಗಳ ಮಧ್ಯೆ ಸರೋವರಗಳಿವೆ. ಕೆನಡಿಯನ್ ಫಲಕದ ಅರ್ಧ ಭಾಗದ ಎತ್ತರ ಸಮುದ್ರಮಟ್ಟಕ್ಕೆ 300 ಮೀ ಗಿಂತ ಕಡಿಮೆ. ಹಡ್ಸನ್ ಕೊಲ್ಲಿಯ ಸುತ್ತ 160–800 ಕಿಮೀ ಗಳಷ್ಟು ದೂರ ವ್ಯಾಪಿಸಿ, ನೈಋತ್ಯಕ್ಕೆ ವಿನಿಪೆಗ್ ಸರೋವರದ ಆದಿಯುಗದ ಶಿಲೆಗಳ ಅಂಚಿನ ವರೆಗೆ ಭೂಮಿ ಇಳುಕಲಾಗಿದೆ. ಈ ಪ್ರದೇಶದ ಉತ್ತರಕ್ಕೆ ಹೋದಂತೆಲ್ಲ ಮರಗಳು ಹೆಚ್ಚು ಹೆಚ್ಚು ಗಿಡ್ಡಾಗಿರುವುದನ್ನು ಕಾಣಬಹುದು. ಅದಕ್ಕೂ ಮುಂದೆ ಬಂಜರು ಪ್ರದೇಶ. ಋತುಗಳಿಗೆ ತಕ್ಕಂತೆ ಹಿಮಸಾರಂಗ ಮತ್ತು ಕಸ್ತೂರಿ ವೃಷಭಗಳು ಉತ್ತರ–ದಕ್ಷಿಣಗಳ ನಡುವೆ ಸಂಚರಿಸುತ್ತವೆ. ಹಡ್ಸನ್ ಕೊಲ್ಲಿಯ ಉತ್ತರಕ್ಕಿರುವ ಕೆಲವು ವಿಶಾಲ ದ್ವೀಪಗಳಲ್ಲಿ ಅಲ್ಲಲ್ಲಿ ನೀರ್ಗಲ್ಲ ನದಿಗಳಿವೆ. ಅದು ಅತ್ಯಂತ ಶೀತಪ್ರದೇಶ. ಇಂಡಿಯನರೂ ಎಸ್ಕಿಮೋಗಳೂ ಬೇಸಗೆಯಲ್ಲಿ ಮಾತ್ರ ಅಲ್ಲಿಗೆ ಹಿಮಸಾರಂಗಗಳ ಬೇಟೆಗಾಗಿ ಬರುತ್ತಾರೆ.

2. ಆಕೇಡಿಯ ಪ್ರದೇಶ: ಕೆನಡಕ್ಕೆ ಮೊದಮೊದಲು ಬಂದ ಫ್ರೆಂಚ್ ವಲಸಿಗರು ನೋವಸ್ಕೋಷ ಭಾಗವನ್ನು ಅಕೇಡಿಯ ಎಂದು ಕರೆದರು. ಈ ಪ್ರದೇಶಕ್ಕೆ ಈಗ ನೋವಸ್ಕೋಷ, ನ್ಯೂ ಬ್ರನ್ಸ್‌ವಿಕ್ ಮತ್ತು ಪ್ರಿನ್ಸ್ ಎಡ್ವರ್ಡ್ ದ್ವೀಪ ಎಂಬ ಹೆಸರಿವೆ. ಕ್ವಿಬೆಕ್ ಪ್ರಾಂತ್ಯದ ಆಗ್ನೇಯ ಭಾಗ ಮತ್ತು ನ್ಯೂ ಫೌಂಡ್‌ಲೆಂಡ್ ಸೇರುತ್ತವೆ. ನ್ಯೂಬ್ರನ್ಸ್‌ವಿಕ್ ಪ್ರಾಂತ್ಯದ ಪರ್ವತಗಳು ಕಲ್ಲಿದ್ದಲ ಸ್ತರಗಳಿಂದ ಕೂಡಿವೆ. ಈ ಪ್ರಾಂತ್ಯಕ್ಕೆ ಕಡಿದಾದ ಭೂಕಂಠದಿಂದ ಸಂಪರ್ಕ ಹೊಂದಿರುವ ನೋವ ಸ್ಕೋಷ ಪರ್ಯಾಯ ದ್ವೀಪ ಸುತ್ತಲೂ ಕೊಲ್ಲಿಗಳಿಂದಲೂ ರೇವುಗಳಿಂದಲೂ ಕೂಡಿದೆ. ಅಲ್ಲಿ ಬ್ರಿಟನ್ ಭೂಶಿರವೇ ಮೊದಲಾದ ಕಡೆಗಳಲ್ಲಿ ಕಲ್ಲಿದ್ದಲೂ ಪ್ಲಾಸ್ಟರ್ ಆಫ್ ಪ್ಯಾರಿಸ್ ತಯಾರಿಕೆಗೆ ಬಳಸುವ ಜಿಪ್ಸಮ್ ಖನಿಜ ಸಿಗುತ್ತವೆ. ಕ್ವಿಬೆಕ್ ಭಾಗದಲ್ಲಿ ಕಲ್ನಾರು ದೊರಕುತ್ತದೆ. ಕೆನಡದ ಅತ್ಯಂತ ಕಿರಿ ಪ್ರಾಂತ್ಯವಾದ ಪ್ರಿನ್ಸ್ ಎಡ್ವರ್ಡ್ ದ್ವೀಪ ಕೆಂಪು ಭೂಮಿಯಿಂದ ಕೂಡಿದ್ದು.

3. ಸೇಂಟ್ ಲಾರೆನ್ಸ್ ನದೀಬಯಲು: ಮೊಟ್ಟಮೊದಲ ವಲಸಿಗರು ಸೇಂಟ್ ಲಾರೆನ್ಸ್ ನದಿಯ ಮುಖಭಾಗದಿಂದ ಆಗಮಿಸಿದ ಕಾರಣ, ಈ ನದಿಯ ಭಾಗಗಳಲ್ಲಿ ನಗರಗಳು ಜನಭರಿತವಾಗಿರುವುವಲ್ಲದೆ ಶ್ರೀಮಂತರನೇಕರು ಈ ನದಿಯ ತೀರಗಳಲ್ಲಿ ನೆಲಸಿದ್ದಾರೆ. ಕ್ವಿಬೆಕ್ ನಗರದಿಂದ ಹ್ಯೂರನ್ ಸರೋವರದ ವರೆಗೆ 1500 ಚ.ಕಿಮೀ ಗಳಷ್ಟು ನೆಲ ಫಲವತ್ತಾದದ್ದು. ಹಿಂದೆ ಬೆಟ್ಟಗುಡ್ಡಗಳ ಮತ್ತು ಅರಣ್ಯಗಳ ದೆಸೆಯಿಂದ ಪ್ರತ್ಯೇಕವಾಗಿದ್ದ ಭಾಗಗಳು ಗಣಿಗಳ ಅಭಿವೃದ್ಧಿಯಿಂದಲೂ ವಲಸೆಗಾರರ ನೆಲೆಗಳಿಂದಲೂ ಪರಸ್ಪರ ಸಂಪರ್ಕ ಪಡೆದಿವೆ. ಕೆನಡದ ಅತ್ಯಂತ ದೊಡ್ಡ ಪಟ್ಟಣ ಮಾಂಟ್ರಿಯಾಲ್; ಕೈಗಾರಿಕೆಯ ಕೇಂದ್ರ ಟೊರಾಂಟೋ, ಕೆನಡದ ರಾಜಧಾನಿ ಒಟ್ಟಾವ ಇವು ಈ ಪ್ರದೇಶಕ್ಕೆ ಸೇರಿದವು.

4. ಹುಲ್ಲುಗಾವಲು: ಒಳನಾಡ ಹುಲ್ಲುಗಾವಲು ಪ್ರದೇಶ ಕೆನಡಿಯನ್ ಫಲಕದ ಅಂಚಿನಿಂದ ವಾಯವ್ಯಕ್ಕೆ ರಾಕಿ ಪರ್ವತಗಳವರೆಗೆ ಹಬ್ಬಿದೆ. ಇದಕ್ಕೆ ಮ್ಯಾನಿಟೋಬದ ದಕ್ಷಿಣ ಭಾಗಗಳು ಸ್ಯಾಸ್ಕ್ಯಾಚೆವನ್ ಪ್ರಾಂತ್ಯ ಮತ್ತು ಆಲ್ಬರ್ಟ ಪ್ರಾಂತ್ಯದ ಬಹುಭಾಗಗಳು ಸೇರಿವೆ. ಇದು ಗೋದಿ ಬೆಳೆಗೆ ಪ್ರಸಿದ್ಧವಾದ್ದು. ಈ ಪ್ರದೇಶ ರಾಕಿ ಪರ್ವತವನ್ನು ಮುಟ್ಟುವ ಕಡೆ ಗ್ಯಾಸೊಲಿನ್ ಎಣ್ಣೆ ಸಿಗುತ್ತದೆ. ಹಿಂದೆ ಅಭಾವ ಪ್ರದೇಶವೆಂದು ಪರಿಗಣಿತವಾಗಿದ್ದ ಈ ಪ್ರದೇಶ ಎರಡನೆಯ ಮಹಾಯುದ್ಧದ ತರುವಾಯ ಗ್ಯಾಸೊಲಿನ್ ಎಣ್ಣೆಯ ಗಣಿಗಳಿಂದಲೂ ಖನಿಜದ ಗಣಿಗಳಿಂದಲೂ ಉತ್ತಮ ಕೃಷಿಯಿಂದಲೂ ಅಭಿವೃದ್ಧಿ ಹೊಂದಿ ಕೆನಡದ ಪೂರ್ವ ಭಾಗಗಳಷ್ಟೇ ಪ್ರಗತಿ ಹೊಂದಿದೆ.

5. ಕಾರ್ಡಿಲ್ಲೇರ ಪ್ರದೇಶ : ಪಶ್ಚಿಮದ ಇಡೀ ರಾಕಿ ಪರ್ವತಗಳ ಪ್ರದೇಶ ಕಾರ್ಡಿಲ್ಲೇರ. ಈ ಪರ್ವತಗಳಿಗೆ ಸಮಾಂತರವಾಗಿ ವಿವಿಧ ಯುಗಗಳ ಶಿಲಾಸ್ತರಗಳಿಂದ ಕೂಡಿದ ಪರ್ವತ ಶ್ರೇಣಿಗಳು ಸಹ ಸೇರಿವೆ. ರಾಕಿ ಪರ್ವತಗಳ ಕಡೆಯ ಅನೇಕ ನದಿ ಕಣಿವೆಗಳ ಫಲವತ್ತಾದ ಭೂಮಿ ಬ್ರಿಟಿಷ್ ಕೊಲಂಬಿಯಕ್ಕೆ ಸೇರಿದೆ. ಈ ಕಣಿವೆಗಳು ವಾಯವ್ಯಕ್ಕೆ 800 ಕಿಮೀ ದೂರ ಹರಡಿವೆ. ಇವುಗಳ ಅಗಲ 160 ಕಿಮೀ. ಇವುಗಳ ಮಧ್ಯೆ ಅನೇಕ ನದಿಗಳು ಹರಿಯುತ್ತವೆ.

ಇಲ್ಲಿಯ ಪರ್ವತಗಳಲ್ಲಿ ಮುಖ್ಯವಾದವು ಲೋಗನ್, ಸೇಂಟ್ ಇಲೈಯಸ್, ಆಲ್ಬರ್ಟ ಪ್ರಾಂತ್ಯದ ರಾಬ್‌ಸನ್ ಮತ್ತು ಸೆಲ್ಕರ್ಕ್. ದಕ್ಷಿಣ ಭಾಗದ ಪರ್ವತಗಳಲ್ಲಿ ಸಮುದ್ರಮಟ್ಟಕ್ಕೆ ಎತ್ತರದಲ್ಲಿ ಮಂಜು ಕವಿಯುತ್ತದೆ. ಸೆಲ್ಕರ್ಕ್ ಮತ್ತು ರಾಕಿ ಪರ್ವತಗಳಲ್ಲಿ ನೀರ್ಗಲ್ಲಿನ ಅನೇಕ ದೊಡ್ಡ ನದಿಗಳುಂಟು. ಅವುಗಳ ಮಂಜುಗಟ್ಟುನೆಲ 250 ಚಕಿಮೀ ಗಳಷ್ಟು ವ್ಯಾಪಕವಾಗಿದೆ. ಬ್ರಿಟಿಷ್ ಕೊಲಂಬಿಯ ಭಾಗದಲ್ಲಿ 2250 ಮೀ ಎತ್ತರದಲ್ಲಿ ಮರಗಳು ಯಥೇಚ್ಛ.

ನದಿಗಳು ಮತ್ತು ಸರೋವರಗಳು: ಕೆನಡದ ಅನೇಕ ಭಾಗಗಳಲ್ಲಿ ನೂರಾರು ಕಿಮೀ ಉದ್ದವುಳ್ಳ ಸಾವಿರಾರು ಮೀ ಆಳವಾದ ಮಹಾ ಸರೋವರಗಳಿಂದ ಹಿಡಿದು, ದಟ್ಟಡವಿಗಳಲ್ಲಿ ಕಾಣದಂತಿರುವ ಹೊಂಡಗಳವರೆಗೆ ವಿವಿಧ ಗಾತ್ರಗಳ ಜಲಾಶಯಗಳಿವೆ. ವಿಶಾಲವಾದ ಹಾಗೂ ಒತ್ತಾಗಿ ಹರಡಿ ಕೊಂಡಿರುವ ಸರೋವರಗಳು ಹಡ್ಸನ್ ಕೊಲ್ಲಿಗೆ 800 ಕಿಮೀ ಗಳಿಂದ ಹಿಡಿದು 1600 ಕಿಮೀ ಗಳ ಅಂತರದಲ್ಲಿವೆ. ಅವುಗಳಲ್ಲಿ ಪ್ರಖ್ಯಾತವಾದವು ಅಮೆರಿಕ ಸಂಯುಕ್ತಸಂಸ್ಥಾನಕ್ಕೂ ಕೆನಡಕ್ಕೂ ನಡುವಣ ಗಡಿಗಳಾಗಿ ಪರಿಣಮಿಸಿವೆ. ಮಹಾಸರೋವರಗಳೆನಿಸಿಕೊಳ್ಳುವಷ್ಟು ಗಾತ್ರದ ಸರೋವರಗಳು ಕೆನಡದ ಒಳನಾಡಿನಲ್ಲೂ ಇವೆ. ಅವುಗಳಲ್ಲಿ ಗ್ರೇಟ್ ಬೇರ್, ಗ್ರೇಟ್ ಸ್ಲೇವ್ ಮತ್ತು ವಿನಿಪೆಗ್ ಸರೋವರಗಳನ್ನು ಹೆಸರಿಸಬಹುದು.

ಕೆನಡದ ನದಿಗಳಿಗೆ ಬಳಸು ಹೆಚ್ಚು. ಸರೋವರಗಳ ನಡುವೆ ಅನುಕ್ರಮ ಸಂಬಂಧ ಕಲ್ಪಿಸುವ ನದಿಗಳು ಹಲವು. ಒಂದೇ ನದಿ ಅನೇಕ ಹೆಸರುಗಳನ್ನು ತಾಳಿರುವುದೂ ಉಂಟು. ಆಂಟೇರಿಯೋ ಸರೋವರದ ಈಶಾನ್ಯದ ಕೊನೆಯಿಂದ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುವ ನದಿ ಸೇಂಟ್ ಲಾರೆನ್ಸ್. ಅದರಿಂದಲೂ ಅದು ಸಂಪರ್ಕ ಹೊಂದಿರುವ ಸರೋವರಗಳಿಂದಲೂ ಖಂಡದ ಹೃದಯಭಾಗಕ್ಕೆ ಜಲಸಂಪರ್ಕ ಲಭ್ಯವಾಗಿದೆ. ಮಾಂಟ್ರಿಯಾಲ್ ಮತ್ತು ಕ್ವಿಬೆಕ್ ಪಟ್ಟಣಗಳಿಗೆ ಜಲಮಾರ್ಗ ಏರ್ಪಡಿಸಿರುವುದು ಈ ನದಿ. ಒಳನಾಡಿನಿಂದ ಹರಿದು ಹಡ್ಸನ್ ಕೊಲ್ಲಿಯನ್ನು ಸೇರುವ ನದಿಗಳಲ್ಲಿ ಡೂಬಾಂಟ್, ಚರ್ಚಿಲ್, ನೆಲ್ಸನ್, ಆಲ್ಬನಿ, ಮೂಸ್, ಈಸ್ಟ್‌ಮೇನ್ ಮತ್ತು ನಾಟ್ಟವೇ ಮುಖ್ಯವಾದವು.

ಆರ್ಕ್‌ಟಿಕ್ ಪ್ರದೇಶದ ಅತ್ಯಂತ ದೊಡ್ಡ ನದಿ ಮಕೆನ್‌ಜಿ. ಪೀಸ್ ಮತ್ತು ಆತಬ್ಯಾಸ್ಕ ಇದರ ಮುಖ್ಯ ಉಪನದಿಗಳು. ಪೆಸಿಫಿಕ್ ಸಾಗರ ಸೇರುವ ನದಿಗಳಲ್ಲಿ ದೊಡ್ಡವು ಯೂಕಾನ್, ಫ್ರೇಸರ್ ಮತ್ತು ಕೊಲಂಬಿಯ.

ಕೊಲಂಬಿಯ ನದಿ ವಾಯವ್ಯಕ್ಕೆ ಸಾಗಿ 650 ಕಿಮೀ ಗಳಷ್ಟು ದೂರ ದಕ್ಷಿಣಾಭಿಮುಖವಾಗಿ ಹರಿದು ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಪ್ರವೇಶಿಸುತ್ತದೆ. ಈ ನದಿಗಿಂತ ಕಿರಿಯದಾದ ಫ್ರೇಸರ್ ನದಿ ಉತ್ತರದಿಂದ ದಕ್ಷಿಣಕ್ಕೆ ಹರಿದು, ನ್ಯೂ ವೆಸ್ಟ್‌ಮಿನ್‌ಸ್ಟರ್ ಬಳಿ ಪೆಸಿಫಿಕ್ ಸಾಗರವನ್ನು ಸೇರುತ್ತದೆ. ಈ ಭಾಗದ ನದಿಗಳು ಆಳವಾದ ಕಣಿವೆಗಳ ಮೂಲಕ ಹಾದು ಸಾಗರವನ್ನು ಪ್ರವೇಶಿಸುತ್ತವೆ. ಖಂಡಾಂತರ ರೈಲುಮಾರ್ಗಗಳು ಈ ನದಿ ಕಣಿವೆಗಳಲ್ಲಿ ಹಾದುಹೋಗುತ್ತವೆ.

ವಾಯುಗುಣ: ಸು. $42^{0}$ ಉ.ಅ.ದಿಂದ ಹಿಡಿದು ಆರ್ಕ್‌ಟಿಕ್ ಪ್ರದೇಶದ ವರೆಗೂ ಸಾಗರಗಳ ತೀರ ಹೊಂದಿರುವ ಕೆನಡ ಸ್ವಾಭಾವಿಕವಾಗಿಯೇ ವಿವಿಧ ವಾಯುಗುಣಗಳಿಂದ ಕೂಡಿದೆ. ಭಾರಿ ವಾಯುರಾಶಿಗಳಿಂದ ಇದರ ವಾಯುಗುಣ ಪ್ರಭಾವಿತವಾಗಿದೆ. ತಣ್ಣಗಿನ ಒಣಗಾಳಿ ಉತ್ತರದಿಂದ ದಕ್ಷಿಣದ ಕಡೆಗೆ ಮಕೆನ್‌ಜಿ ಕಣಿವೆ ಮತ್ತು ಹಡ್ಸನ್ ಕೊಲ್ಲಿಗಳ ಮೂಲಕ ಬೀಸುತ್ತದೆ. ಚಳಿಗಾಲದಲ್ಲಿ ಇದು ಮಹಾಸರೋವರಗಳವರೆಗೂ ಬೀಸಿ, ಅವನ್ನೂ ದಾಟಿ ಸಂಯುಕ್ತ ಸಂಸ್ಥಾನದ ಪ್ರದೇಶವನ್ನೂ ತಾಕಬಹುದು. ಬೇಸಿಗೆಯಲ್ಲಿ ಮೆಕ್ಸಿಕೊ ಖಾರಿ ಮತ್ತು ಅಟ್ಲಾಂಟಿಕ್ ಸಾಗರದಿಂದ ಬೆಚ್ಚನೆಯ ಮತ್ತು ತೇವಗೂಡಿದ ಗಾಳಿ ಉತ್ತರಕ್ಕೆ ಬೀಸಿ, ಆಗ್ನೇಯ ಕೆನಡವನ್ನು ವ್ಯಾಪಿಸುತ್ತದೆ. ಉತ್ತರ ಪೆಸಿಫಿಕ್‌ನಿಂದ ತಂಪಾದ, ತೇವ ತುಂಬಿದ ಗಾಳಿ ಪಶ್ಚಿಮದ ಅಂಚಿನಲ್ಲಿ ವರ್ಷವೆಲ್ಲ ಬೀಸಿ ಪರ್ವತಪಂಕ್ತಿಗಳನ್ನು ದಾಟಿ ಒಳನಾಡಿನಲ್ಲಿ ಮಳೆ ಸುರಿಸುತ್ತದೆ; ಪಶ್ಚಿಮದಲ್ಲಿ ಚಳಿಗಾಲದಲ್ಲಿ ಮಳೆ ಹೆಚ್ಚು. ಅಮೆರಿಕ ಸಂಯುಕ್ತಸಂಸ್ಥಾನದ ನೈಋತ್ಯ ಭಾಗದ ಮರುಭೂಮಿ ಪ್ರದೇಶದ ಮೇಲಿಂದ ಬೀಸುವ ಗಾಳಿ ಬೇಸಗೆಯ ನಡುಗಾಲದಲ್ಲಿ ದಕ್ಷಿಣ ಕೆನಡದ ಮೇಲೆ ಪ್ರಭಾವ ಬೀರುವುದುಂಟು. ಕೆನಡದ ಬಹುಭಾಗ ಶೀತಪ್ರದೇಶ. ವಾಸಕ್ಕೆ ಹೆಚ್ಚು ಅನುಕೂಲಕರವಲ್ಲ. ದಕ್ಷಿಣ ಭಾಗ ಮಾತ್ರ ಉಷ್ಣತಮ. ಉಷ್ಣತೆ, ಮಳೆ, ಸಸ್ಯ ಬೆಳೆಯುವ ಕಾಲದ ಅವಧಿ ಇವುಗಳ ದೃಷ್ಟಿಯಿಂದ ಕೆನಡವನ್ನು ಹಲವು ವಾಯುಗುಣ ವಿಭಾಗಗಳಾಗಿ ವಿಂಗಡಿಸಬಹುದು: 1. ಉತ್ತರದ ಆರ್ಕ್‌ಟಿಕ್ ವಾಯುಗುಣ. ಜುಲೈಯ ಸರಾಸರಿ ಉಷ್ಣತೆ $10^{0}$ಸೆ. ಇರುವ ಉತ್ತರದ ಪ್ರದೇಶ. ಕಡಿಮೆ ಉಷ್ಣತೆ. ಉದ್ದನೆಯ ದಿನ. ಧ್ರುವ ಪ್ರದೇಶದ ಬಳಿ ಸೂರ್ಯ ಹಲವು ವಾರಗಳ ಕಾಲ ಮುಳುಗುವುದಿಲ್ಲ. ಇಲ್ಲಿ ಚಳಿಗಾಲ ದೀರ್ಘ, ತೀವ್ರ, ಅಂಧಕಾರಮಯ. ಅವಪಾತ ಬಲು ಕಡಿಮೆ (12–25 ಸೆಂಮೀ). ಮಣ್ಣಿನ ತಳಭಾಗ ಬಹುತೇಕ ಶಾಶ್ವತವಾಗಿ ಗಡ್ಡೆ ಕಟ್ಟಿರುತ್ತದೆ. 2. ಆರ್ಕ್‌ಟಿಕ್ ವಾಯುಗುಣ ರೇಖೆಯ ದಕ್ಷಿಣಕ್ಕೆ ಉಪ–ಆರ್ಕ್‌ಟಿಕ್ ವಾಯುಗುಣವಿದೆ. $6.1^{0}$ಸೆ. ಗಿಂತ ಕಡಿಮೆ ಉಷ್ಣತೆ 5 ತಿಂಗಳುಗಳಿಗಿಂತ ಹೆಚ್ಚು ಕಾಲ ಇರುವುದಿಲ್ಲ. ಚಳಿಗಾಲ ಬಲು ತೀವ್ರ. ಪಶ್ಚಿಮ ಭಾಗದಲ್ಲಿ 25–30 ಸೆಂಮೀ ಅವಪಾತ. ಪೂರ್ವದಲ್ಲಿ ಇನ್ನೂ ಹೆಚ್ಚು. ಇದರಲ್ಲಿ ಹಿಮದ ಭಾಗವೇ ಅಧಿಕ. 3. ಉತ್ತರ ಮಾರುತೀಯ (ಬೋರಿಯಲ್) ವಾಯುಗುಣದಲ್ಲಿ ಜುಲೈ ಉಷ್ಣತೆ $15^{0}$ಸೆ. ಗಿಂತ ಹೆಚ್ಚು. ಪಶ್ಚಿಮದಲ್ಲಿ ವರ್ಷದಲ್ಲಿ 30–35 ಸೆಂಮೀ ಮಳೆ (ಬೇಸಗೆಯಲ್ಲಿ). ಪೂರ್ವದಲ್ಲಿ ಹಿಮಪಾತ ಹೆಚ್ಚು. ಇಲ್ಲಿ ಮೃದು ತಿರುಳಿನ ಮರಗಳ ಕಾಡು ಬೆಳೆಯುತ್ತದೆ. 4. ಅಟ್ಲಾಂಟಿಕ್ ವಾಯುಗುಣದಲ್ಲಿ ಚಳಿಗಾಲದ ನಡುವಣ ಉಷ್ಣತೆಯ ಸರಾಸರಿ $9^{0}4^{0}$ಸೆ. ಬೇಸಗೆಯಲ್ಲಿ ಮೂರು ತಿಂಗಳುಗಳ ಕಾಲ $15.5^{0}$ಸೆ. ಗಿಂತ ಹೆಚ್ಚು ಉಷ್ಣತೆ. ವಾರ್ಷಿಕ ಅವಪಾತ 100–135 ಸೆಂಮೀ. ಚಳಿಗಾಲದಲ್ಲೇ ಹೆಚ್ಚು ಮಳೆ. ನ್ಯೂ ಬ್ರನ್ಸ್‌ವಿಕ್‌ನ ಕೆಲವು ಭಾಗಗಳಲ್ಲಿ ಚಳಿಗಾಲದಲ್ಲಿ 20–25 ಸೆಂಮೀ ಹಿಮ ಬೀಳುತ್ತದೆ. ಅಟ್ಲಾಂಟಿಕ್ ತೀರ ಪ್ರದೇಶದಲ್ಲಿ ಬೇಸಿಗೆಯಲ್ಲಿ ಆಗಾಗ್ಗೆ ದಟ್ಟವಾದ ಮಂಜು ಬೀಳುವುದುಂಟು. 5. ಮಹಾಸರೋವರಗಳ ಮತ್ತು ಸೇಂಟ್ ಲಾರೆನ್ಸ್ ನದಿಯ ಪ್ರದೇಶದಲ್ಲಿ ಸಾಮಾನ್ಯವಾಗಿ ಅಟ್ಲಾಂಟಿಕ್ ಪ್ರದೇಶದಲ್ಲಿದ್ದಂತೆಯೇ ವಾಯುಗುಣ ಇರುತ್ತದೆ. ಆದರೆ ಇಲ್ಲಿ ವಸಂತಾಗಮನವಾಗುವುದು ಬೇಗ. ಬೇಸಗೆ ಹೆಚ್ಚು ದೀರ್ಘ. ಮಾಂಟ್ರಿಯಾಲ್ ಟೊರಾಂಟೋಗಳಲ್ಲಿ ಜುಲೈ ಉಷ್ಣತೆ $21^{0}$ಸೆ. ಸರೋವರಗಳ ನಡುವಣ ಪರ್ಯಾಯದ್ವೀಪ ಪ್ರದೇಶದಲ್ಲಿ (ದಕ್ಷಿಣ ಆಂಟೇರಿಯೋ) ಉಷ್ಣತೆ ಇನ್ನೂ ಹೆಚ್ಚು. ವರ್ಷವೆಲ್ಲ ಸಮನಾಗಿ ಅವಪಾತ. ವಾರ್ಷಿಕ ಸರಾಸರಿ 75–100 ಸೆಂಮೀ ಬೇಸಗೆಯಲ್ಲಿ ಒಮ್ಮೊಮ್ಮೆ ಅನಾವೃಷ್ಟಿ ಸಂಭವಿಸುವುದುಂಟು. 6. ಹುಲ್ಲುಗಾವಲಿನ ಪ್ರದೇಶದಲ್ಲಿ ಮಳೆ ಸಾಧಾರಣ (30–40 ಸೆಂಮೀ). ಇದು ಬೀಳುವುದು ಬಹುತೇಕ ಬೇಸಗೆಯಲ್ಲಿ. ಬೇಸಗೆಯ ನಡುಗಾಲದಲ್ಲಿ ಉಷ್ಣತೆಯ ಸರಾಸರಿ 18.33ಸೆ. ವಿನಿಪೆಗ್, ಪ್ರಿನ್ಸ್‌ಆಲ್ಬರ್ಟ್ ಮತ್ತು ಎಡ್ಮಂಟನ್‌ಗಳಲ್ಲಿ ಚಳಿಗಾಲದ ನಡುವಣ ಉಷ್ಣತೆ $0^{0}$ಸೆ. 7. ಪೆಸಿಫಿಕ್ ಅಂಚಿನಲ್ಲಿ ಚಳಿ ತೀವ್ರವಿಲ್ಲ: ವಾಯುಗುಣ ತೇವಪೂರಿತ. ಹಿಮ ಬಿಂದುವಿಗಿಂತ ಕೆಳಕ್ಕೆ ಉಷ್ಣತೆ ಸಾಮಾನ್ಯವಾಗಿ ಇಳಿಯುವುದಿಲ್ಲ. ಬಹುಭಾಗದಲ್ಲಿ ವರ್ಷಕ್ಕೆ 200 ಸೆಂಮೀ ಅವಪಾತ. 8. ಪಶ್ಚಿಮ ಪರ್ವತ ಪ್ರದೇಶದಲ್ಲಿ ಎತ್ತರ ಹಾಗೂ ಮಳೆ ಮಾರುತದ ಪ್ರಭಾವಕ್ಕೆ ಅನುಗುಣವಾಗಿ ಶಿಖರಗಳು ಹಿಮಾವೃತ.

ಸ್ವಾಭಾವಿಕ ಸಸ್ಯಗಳು ಪ್ರಾಣಿಗಳು: ಸಮುದ್ರತೀರವುಳ್ಳ ಪ್ರಾಂತ್ಯ, ಕ್ವಿಬೆಕ್ ಮತ್ತು ಪಶ್ಚಿಮ ಆಂಟೇರಿಯೋಗಳಲ್ಲಿಯ ಸ್ವಾಭಾವಿಕ ಸಸ್ಯಗಳು ಒಂದೇ ರೀತಿಯವು. ಸೇಂಟ್ ಲಾರೆನ್ಸ್ ನದಿಯ ದಕ್ಷಿಣ ಭಾಗ ಮತ್ತು ಲಾರೆನ್ಸ್ ಖಾರಿಯ ಪ್ರದೇಶಗಳಲ್ಲಿ ಆರ್ಕ್‌ಟಿಕ್ ಹಾಗೂ ಉಪ–ಆರ್ಕ್‌ಟಿಕ್ ವಲಯಗಳಲ್ಲಿ ಬೆಳೆಯುವ ಸಸ್ಯಗಳಿವೆ. ಅರಣ್ಯಗಳಿಂದ ಕೂಡಿದ ಆಂಟೇರಿಯೋ ಪ್ರಾಂತ್ಯದ ಆಚೆ, ಮ್ಯಾನಿಟೋಬ ಪ್ರಾಂತ್ಯದಲ್ಲಿ ಮತ್ತು ವಾಯವ್ಯಭಾಗದಲ್ಲಿ ಹುಲ್ಲುಗಾವಲುಗಳು ರೆಡ್ ನದಿಯಿಂದ ರಾಕಿ ಪರ್ವತಗಳ ತಪ್ಪಲುವರೆಗೂ ಹರಡಿವೆ. ಕೊಲಂಬಿಯದ ಪರ್ವತ ಭಾಗಗಳಲ್ಲಿ ವಾಯುಗುಣಕ್ಕನುಗುಣವಾಗಿ ಹಲವಾರು ಬಗೆಯ ಸಸ್ಯಗಳಿವೆ. ಪೆಸಿಫಿಕ್ ಸಾಗರದ ಅಂಚಿನ ಅರಣ್ಯಗಳಲ್ಲಿ ಹಾಗೂ ಬಯಲುಗಳಲ್ಲಿ ಕಾಡುಹೂ ಗಿಡಗಳು ತುಂಬಿವೆ.

ಸೇಂಟ್ ಲಾರೆನ್ಸ್ ತಳನಾಡಿನಲ್ಲಿ ಅರಣ್ಯಗಳನ್ನು ಹೆಚ್ಚಾಗಿ ಕಡಿದುಹಾಕಿದ್ದಾರೆ. ರಕ್ಷಿತ ಅರಣ್ಯಗಳು ಕೆನಡಿಯನ್ ಫಲಕಭಾಗಗಳಲ್ಲಿವೆ. ಉತ್ತರ ಆರ್ಕ್‌ಟಿಕ್ ಭಾಗಗಳಲ್ಲಿ ತಂಡ್ರದ ಪಾಚಿ, ಹುಲ್ಲು, ಬಂಡೆಗೆ ತಗಲುವ ಕಲ್ಲುಹೂ ಹಾಗೂ ಕುಬ್ಜಸಸ್ಯಗಳಿವೆ. ಲ್ಯಾಬ್ರಡಾರ್ ತೀರದಲ್ಲಿ ಅರಣ್ಯಗಳಿದ್ದರೂ ಚೌಬೀನೆಗೆ ಯುಕ್ತವಾದ ಮರಗಳಿಲ್ಲ. ಲಾರೆನ್ಸ್ ನದಿಯ ಉತ್ತರದಲ್ಲಿ ಶಂಕುಧರ ವೃಕ್ಷಗಳು ಹೆಚ್ಚು. ಸುಪೀರಿಯರ್ ಸರೋವರದಿಂದ ಕ್ವಿಬೆಕ್ ವರೆಗೆ ಒತ್ತಾದ ಅರಣ್ಯಗಳಿವೆ. ಅದು ಇಂದಿಗೂ ಪೂರ್ವ ಕೆನಡದ ದಿಮ್ಮಿ ಉತ್ಪಾದನ ಪ್ರದೇಶ. ಅಲ್ಲಿ ಬಿಳಿಯ ಪೈನ್, ಸ್ಪ್ರೂಸ್, ಹೆಮ್ಲಾಕ್, ಹಳದಿ ಬರ್ಚ್ ಹಾಗೂ ಮೇಪಲ್ ಮರಗಳು ಹೇರಳವಾಗಿವೆ. ಲ್ಯಾಬ್ರಡಾರಿನ ದಕ್ಷಿಣ ಭಾಗದಿಂದ ಹಿಡಿದು ಅಲಾಸ್ಕದ ಅಂಚಿನವರೆಗೆ ವ್ಯಾಪಕವಾಗಿ ಪೈನ್ ಜಾತಿಯ ವೃಕ್ಷಗಳಿಂದ ಕೂಡಿದ ಉತ್ತರ ಅರಣ್ಯ ವಲಯವುಂಟು. ಅಲ್ಲಿ ಜಾಕ್, ಪೈನ್, ಬಿಳಿಯ ಬರ್ಚ್, ವಿಲೊ ಮೊದಲಾದ ಮರಗಳಿವೆ. ಅಲ್ಲಿಯ ಬಿಳಿ ಸ್ಪ್ರೂಸ್ ಮತ್ತು ಕರಿ ಸ್ಪ್ರೂಸ್ ಮರಗಳ ದಿಮ್ಮಿಗಳು ಕಾಗದ ತಯಾರಿಕೆಗೆ ಬೇಕಾದ ತಿರುಳಿಗೆ ಉಪಯೋಗವಾಗುತ್ತವೆ.

ಜನ ಜೀವನ: ಕೆನಡದ ಮಾನವ ಇತಿಹಾಸಕ್ಕೆ ಹಲವಾರು ವಲಸೆಗಳ ಮತ್ತು ನೆಲಸುಗಳ ಹಿನ್ನೆಲೆಯುಂಟು. ಅದರ ಪ್ರಜಾಸಂಖ್ಯೆಯಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಜನಾಂಗದವರೇ ಹೆಚ್ಚು. ಫ್ರೆಂಚ್ ಕೆನಡಿಯನ್ನರಲ್ಲಿ ಬಹಳ ಮಂದಿ 18ನೆಯ ಶತಮಾನದಲ್ಲಿ

ನಾರ್ಮಂಡಿ ಮತ್ತು ವಾಯವ್ಯ ಫ್ರಾನ್ಸಿನ ಇತರ ಭಾಗಗಳಿಂದ ವಲಸೆ ಬಂದು ನ್ಯೂ ಫ್ರಾನ್ಸ್ ಮತ್ತು ಅಕೇಡಿಯ ಭಾಗಗಳಲ್ಲಿ ನೆಲಸಿದವರ ಸಂತತಿಯವರಾಗಿದ್ದಾರೆ. ಬ್ರಿಟಿಷ್ ಜನಾಂಗದವರು ಭಾಗಶಃ ಅಮೆರಿಕ ಸಂಯುಕ್ತ ಸಂಸ್ಥಾನದ ಕಡೆಯಿಂದ ಉತ್ತರಕ್ಕೆ ಸಾಗಿಬಂದು ನೆಲಸಿದ ಆಂಗ್ಲರ ಸಂತತಿಯವರಾಗಿದ್ದಾರೆ. ಕಳೆದ ಶತಮಾನದ ಕೊನೆಯಿಂದ ಇಂಗ್ಲೆಂಡಿನಿಂದ ನೇರವಾಗಿ ವಲಸೆ ಬಂದ ಬ್ರಿಟಿಷ್ ಜನರ ಸಂತತಿಯವರೂ ಇದ್ದಾರೆ. ವಲಸೆಗಳನ್ನು ಸ್ವಾಗತಿಸುವ ನೀತಿ 1890ರಲ್ಲಿ ಪ್ರಾರಂಭವಾಯಿತು. ಆಗಿನಿಂದ ಅನೇಕ ಐರೋಪ್ಯ ಬುಡಕಟ್ಟುಗಳ ಜನರು ಸಹ ಕೆನಡದಲ್ಲಿ ನೆಲಸಿದ್ದಾರೆ. ಕೆನಡದ ಹುಲ್ಲುಗಾವಲು ಪ್ರಾಂತ್ಯವನ್ನು ವಸತಿಗೆ ತೆರೆದಾಗ, ಅಮೆರಿಕ ಸಂಯುಕ್ತ ಸಂಸ್ಥಾನದ ಬೆಳೆವಣಿಗೆಯ ದರದಲ್ಲೇ ಕೆನಡದ ಜನಸಂಖ್ಯೆಯೂ ಬೆಳೆಯಲಾರಂಭಿಸಿತು. ಸೇಂಟ್ ಲಾರೆನ್ಸ್ ಕಣಿವೆಯಲ್ಲಿ ದೊಡ್ಡ ಪಟ್ಟಣಗಳು ಸ್ಥಾಪಿತವಾಗಿ ವೃದ್ಧಿಗೊಂಡುವು. 1918–30ರಲ್ಲಿ ಕೆನಡಕ್ಕೆ 5 ಲಕ್ಷ ಬ್ರಿಟಿಷರು ವಲಸೆ ಬಂದರು. ಕೆನಡಕ್ಕೆ ವಲಸೆ ಬರುವುದನ್ನು 1919ರಿಂದ ನಿಯಂತ್ರಣಕ್ಕೆ ಒಳಪಡಿಸಲಾಗಿದೆ. ಕೆನಡದ ಮೂಲನಿವಾಸಿಗಳು ಇಂಡಿಯನರು. ಅವರಲ್ಲಿ ಮುಕ್ಕಾಲು ಭಾಗ ಜನ ಕೆನಡಿಯನ್ ಫಲಕ ಮತ್ತು ಕಾರ್ಡಿಲೇರ ಪ್ರದೇಶಗಳಲ್ಲಿ ಅವರಿಗಾಗಿ ಏರ್ಪಡಿಸಲಾದ ಮೀಸಲು ಸ್ಥಳಗಳಲ್ಲಿ ವಾಸವಾಗಿದ್ದಾರೆ. ಎಸ್ಕಿಮೋ ಜನರ ಸಂಖ್ಯೆ ಕಡಿಮೆ. ಕೆನಡದಲ್ಲಿ ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಮತಗಳನ್ನು ಅನುಸರಿಸುವ ಜನರಿದ್ದಾರೆ. ಎಸ್ಕಿಮೋ ಮತ್ತು ಇಂಡಿಯನ್ ಜನ ತಮ್ಮ ಸಂಪ್ರದಾಯ ಮತ್ತು ನಂಬಿಕೆಗಳನ್ನೇ ಅನುಸರಿಸುತ್ತಾರೆ.

ಕೃಷಿ : ಗೋದಿ ಕೆನಡದ ಮುಖ್ಯ ಬೆಳೆ. ಅದನ್ನು ಆಲ್ಬರ್ಟ, ಸ್ಯಾಸ್ಕ್ಯಾಚೆವನ್, ಬ್ರಿಟಿಷ್ ಕೊಲಂಬಿಯ ಮತ್ತು ಹುಲ್ಲುಗಾವಲುಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಕ್ವಿಬೆಕ್, ಆಂಟೇರಿಯೋಗಳಲ್ಲಿ ಹೈನುಗಾರಿಕೆ ಹೆಚ್ಚು; ಕ್ಷೀರೋತ್ಪನ್ನಗಳನ್ನು ಡಬ್ಬಗಳಲ್ಲಿ ಶೇಖರಿಸಿ ರಫ್ತು ಮಾಡುತ್ತಾರೆ. ನೋವಸ್ಕೋಷ, ದಕ್ಷಿಣ ಕ್ವಿಬೆಕ್, ಆಂಟೇರಿಯೋ, ಬ್ರಿಟಿಷ್ ಕೊಲಂಬಿಯಗಳಲ್ಲಿ ವಿವಿಧ ಹಣ್ಣುಗಳು ಬೆಳೆಯುತ್ತವೆ. ಸಕ್ಕರೆ ಬೀಟನ್ನು ಅನೇಕ ಕಡೆ ಬೇಸಾಯ ಮಾಡುತ್ತಾರೆ. ಕೆನಡದಲ್ಲಿ ಉತ್ತಮ ಬಗೆಯ ತಂಬಾಕು ಬೆಳೆಯುತ್ತದೆ. ಬಾರ್ಲಿ, ಓಟ್ಸ್, ಆಲೂಗೆಡ್ಡೆ ಇವು ಈ ದೇಶದ ಇತರ ಬೆಳೆಗಳು.

ಕೈಗಾರಿಕೆ : ಕೆನಡದಲ್ಲಿ ಖನಿಜಸಂಪತ್ತು ಯಥೇಚ್ಛವಾಗಿದೆ. ಆದ್ದರಿಂದ ಗಣಿ ಕೈಗಾರಿಕೆಗಳು ಮಹತ್ವ ಪಡೆದುಕೊಂಡಿವೆ. ನೋವಸ್ಕೋಷ, ಆಲ್ಬರ್ಟ ಮತ್ತು ಬ್ರಿಟಿಷ್ ಕೊಲಂಬಿಯ ಪ್ರಾಂತ್ಯಗಳಲ್ಲಿ ಹೆಚ್ಚು ಕಲ್ಲಿದ್ದಲು ದೊರಕುತ್ತದೆ. ಬ್ರಿಟಿಷ್ ಕೊಲಂಬಿಯ ಮತ್ತು ಯೂಕಾನ್ ಚಿನ್ನದ ಗಣಿಗಳಿಗೆ ಪ್ರಸಿದ್ಧಿ. ಆಂಟೇರಿಯೋದ ಪಾರ್ಕ್ಯುಪೈನ್ ಚಿನ್ನದ ಗಣಿ ಪ್ರಪಂಚದ ಪ್ರಮುಖ ಚಿನ್ನದ ಗಣಿಗಳಲ್ಲಿ ಮೂರನೆಯದು. ಗ್ರೇಟ್ ಸ್ಲೇವ್ ಸರೋವರದ ಉತ್ತರಕ್ಕೆ ಎಲ್ಲೋನೈಫ್‌ನಲ್ಲಿ ಮತ್ತು ವ್ಯಾಂಕೋವರ್‌ನಲ್ಲಿ ಹೊಸ ಚಿನ್ನದ ಗಣಿಗಳು ಪ್ರಾರಂಭವಾಗಿವೆ. ಬೆಳ್ಳಿ, ಸೀಸ, ತವರದ ಗಣಿಗಳು ಕೆನಾಗಮಿ ನಗರ ಮತ್ತು ಯೂಕಾನ್ ಪ್ರಾಂತ್ಯಗಳಲ್ಲಿವೆ. ಕ್ವಿಬೆಕ್, ಆಂಟೇರಿಯೋ ಮತ್ತು ಬ್ರಿಟಿಷ್ ಕೊಲಂಬಿಯಗಳಲ್ಲಿ ತಾಮ್ರ ಹೇರಳ. ನಿಕ್ಕಲ್ ಆಂಟೇರಿಯೋದ ಸಡ್‌ಬರಿ ಜಿಲ್ಲೆಯಲ್ಲಿ ಸಿಗುತ್ತದೆ. 1951ರಲ್ಲಿ ಲಿನ್ ಸರೋವರದ ಬಳಿ (ಮ್ಯಾನಿಟೋಬ) ನಿಕ್ಕಲ್ ಸಿಕ್ಕಿತು. ಅಲ್ಲಿ ಗಣಿಗಳು ಆರಂಭವಾಗಿವೆ. ಕೆನಡದಲ್ಲಿ ಗ್ಯಾಸೊಲಿನ್ ಹೇರಳವಾಗಿ ಸಿಗುತ್ತದೆ. ಆಲ್ಬರ್ಟದ ಟರ್ನರ್ ಕಣಿವೆಯ ಎಣ್ಣೆ ಗಣಿಗಳು ಪ್ರಮುಖವಾದವು. ದೊಡ್ಡ ಕೊಳವೆಗಳಲ್ಲಿ ಇದನ್ನು ದೂರ ಪ್ರಾಂತ್ಯಗಳಿಗೆ ಸಾಗಿಸುತ್ತಾರೆ. ಅವುಗಳಲ್ಲಿ ಎಡ್‌ಮಂಟನ್‌ನಿಂದ ವ್ಯಾಂಕೂವರ್ ವರೆಗೆ ಹಾಕಿರುವ 1150 ಕಿಮೀ ಕೊಳವೆಯೂ ಹುಲ್ಲುಗಾವಲು ಪ್ರದೇಶದ ಎಣ್ಣೆಯನ್ನು 3200 ಕಿಮೀ ಗಳಾಚೆಗೆ, ಪೂರ್ವದಲ್ಲಿರುವ ಮಾಂಟ್ರಿಯಾಲ್ ನಗರಕ್ಕೆ ಸಾಗಿಸುವ ಕೊಳವೆಯೂ ಮುಖ್ಯವಾದವು.

ಅರಣ್ಯ ಕೈಗಾರಿಕೆ: ಅರಣ್ಯಗಳಲ್ಲಿ ಚೌಬೀನೆ ಮರಗಳು ದೊರಕುತ್ತವೆ. ಕಾಗದ ತಯಾರಿಕೆಗೆ ತಿರುಳು ಒದಗಿಸುವ ಮರಗಳು ಹೇರಳ. ಕೆನಡದ 40 ಪ್ರಮುಖ ಕೈಗಾರಿಕೆಗಳಲ್ಲಿ ಕಾಗದ ತಯಾರಿಕೆ ಒಂದು. ಕಾರ್ನರ್ ಬ್ರೂಕ್, ಗ್ರ್ಯಾಂಡ್ ಫಾಲ್ಸ್, ತ್ರೀ ರಿವರ್ಸ್, ಕಾರ್ನ್‌ವಾಲ್, ಪೋರ್ಟ್ ಆರ್ಥರ್, ಪೋರ್ಟ್ ವಿಲಿಯಂ, ಕ್ವಿಬೆಕ್ ನಗರ, ವ್ಯಾಂಕೋವರ್ ಇವು ಕಾಗದ ತಯಾರಿಕೆ ಕೇಂದ್ರಗಳು.

ತುಪ್ಪುಳ ಕೈಗಾರಿಕೆ : ತುಪ್ಪುಳ ಸಂಗ್ರಹ ಮತ್ತು ವ್ಯಾಪಾರ ಕೆನಡದಲ್ಲಿ ಬಹಳ ಕಾಲದಿಂದ ನಡೆಯುತ್ತಿದೆ. ಇದಕ್ಕೆ ಹೆಚ್ಚು ಬೇಡಿಕೆ ಇರುವುದರಿಂದ ಕೆನಡದ ವಿವಿಧ ಭಾಗಗಳಲ್ಲಿ ತುಪ್ಪುಳ ಪ್ರಾಣಿಗಳನ್ನು ಸಾಕುವ, ಅದರಲ್ಲೂ ವಿಶೇಷವಾಗಿ ಬೆಳ್ಳಿನರಿ ಮತ್ತು ಕರಿಯ ನರಿಗಳನ್ನು ಸಾಕುವ ಕ್ಷೇತ್ರಗಳಿವೆ. ಪ್ರಿನ್ಸ್ ಎಡ್ವರ್ಡ್ ದ್ವೀಪ, ಕ್ವಿಬೆಕ್ ಮತ್ತು ಆಂಟೇರಿಯೋಗಳಲ್ಲಿ ತುಪ್ಪುಳ ಸಂಗ್ರಹದ ಮತ್ತು ತುಪ್ಪುಳ ವಸ್ತುಗಳ ತಯಾರಿಕೆಯ ಉದ್ಯಮಗಳಿವೆ.

ಮೀನುಗಾರಿಕೆ : ಮೀನುಗಾರಿಕೆ ಕೆನಡದ ಹಳೆಯ ವೃತ್ತಿ. ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರತೀರಗಳಲ್ಲಿ ಮತ್ತು ಒಳನಾಡ ಸರೋವರಗಳಲ್ಲಿ ಆಧುನಿಕ ಸಾಧನಗಳಿಂದ ಮತ್ತು ವಿಧಾನಗಳಲ್ಲಿ ಮೀನು ಹಿಡಿಯುತ್ತಾರೆ. ಅಮೆರಿಕದೊಡನೆ ಮಾಡಿಕೊಂಡ ಒಡಂಬಡಿಕೆಯ ಮೇರೆಗೆ ಸಾಗರತೀರಗಳಲ್ಲಿ ಮೀನು ಹಿಡಿಯುವ ಉದ್ಯಮ ಕ್ರಮಗೊಂಡಿರುವುದಲ್ಲದೆ, ಸರ್ಕಾರ ಬೆಸ್ತರಿಗೆ ಉತ್ತೇಜಕವಾಗಿ ಬಹುಮಾನಗಳನ್ನು ನೀಡುತ್ತದೆ.

ಸಾರಿಗೆ ಸಂಪರ್ಕ: ಕೆನಡ ಗೋದಿ, ಚೌಬೀನೆ, ಮರದ ತಿರುಳು, ಕಾಗದ, ಖನಿಜಗಳು ಇವೇ ಮೊದಲಾದ ವಸ್ತುಗಳನ್ನು ಒತ್ತಾದ ಜನಸಂಖ್ಯೆಯುಳ್ಳ ಕೈಗಾರಿಕೆಯ ರಾಷ್ಟ್ರಗಳಿಗೆ ರಫ್ತು ಮಾಡುತ್ತದೆ. ಈ ಸರಕುಗಳ ರವಾನೆಯಲ್ಲಿ ಅಗ್ಗದ ಜಲಸಾರಿಗೆಯದು ಮುಖ್ಯ ಪಾತ್ರ. ಭೌಗೋಳಿಕ ಪರಿಸ್ಥಿತಿಗಳಿಂದಾಗಿ ಕೆನಡದ ಬಂದರುಗಳು ಅನೇಕ ಕಡೆ ಅನುಕೂಲವಾಗಿಲ್ಲ. ಶೀತ ಕಾಲದಲ್ಲಿ ಒಳನಾಡಿನ ಮಾಂಟ್ರಿಯಾಲ್ ಬಂದರು ಮುಚ್ಚಿರುತ್ತದೆ; ಹ್ಯಾಲಿಫಾಕ್ಸ್ ಮತ್ತು ಸೇಂಟ್ ಜಾನ್ ಬಂದರುಗಳು ಒಳನಾಡಿಗೆ ಬಲು ದೂರದಲ್ಲಿವೆ. ಪನಾಮಾ ಕಾಲುವೆಯನ್ನು ತೆರೆದ ಮೇಲೆ ವ್ಯಾಂಕೋವರ್ ಬಂದರು ಸರಕುಗಳ ರಫ್ತಿಗೆ ಮುಖ್ಯಕೇಂದ್ರವಾಯಿತು. ಹುಲ್ಲುಗಾವಲಿನಲ್ಲಿ ಬೆಳೆಯುವ ಗೋದಿಯನ್ನು ಪೂರ್ವದ ಮಹಾಸರೋವರಗಳ ಅಂಚಿಗೆ ಸಾಗಿಸಲು ಅನೇಕ ಕಾಲುವೆಗಳು ಏರ್ಪಟ್ಟಿವೆ. ಅವುಗಳಲ್ಲಿ ಕೆನೆಡಿಯನ್ ಕಾಲುವೆಯ ಆಳ 5.7 ಮೀ. ವೆಲಂಡ್ ಕಾಲುವೆ 9 ಮೀ ಆಳವಿದೆ. ಹಡಗುಗಳು ಆಂಟೇರಿಯೋ ಸರೋವರಕ್ಕೆ ಹೋಗಲು ಇದು ಸಹಾಯಕ. ಸೇಂಟ್ ಲಾರೆನ್ಸ್ ನದಿಯ ಜಲಮಾರ್ಗಗಳ ಮೂಲಕ ಹಡಗುಗಳು ಸಾಗರತೀರವನ್ನು ಸೇರುತ್ತವೆ.

ಬಯಲುಗಳಿಂದ ಗೋದಿಯ ಸಾಗಣೆಗೆ ರೈಲುಮಾರ್ಗಗಳು ಮತ್ತೊಂದು ಅನುಕೂಲ ಸಾಧನ. 1850ರ ದಶಕದಲ್ಲಿ ಕೆನಡದಲ್ಲಿ ರೈಲು ಮಾರ್ಗಗಳನ್ನು ಹಾಕಲು ಪ್ರಾರಂಭಿಸಿದರು. ಹಲವಾರು ರೈಲುಮಾರ್ಗಗಳು ಕೆನಡಿಯನ್ ನ್ಯಾಷನಲ್ ರೈಲ್ವೆ ಸಂಸ್ಥೆಗೆ ಸೇರಿವೆ. ಅಂತರವಸಾಹತು ರೈಲುಮಾರ್ಗಗಳು, ಕೆನಡಿಯನ್ ನಾರ್ದರನ್, ಗ್ರ್ಯಾಂಡ್ ಟ್ರಂಕ್ ಪೆಸಿಫಿಕ್ ಮತ್ತು ನ್ಯಾಷನಲ್ ಟ್ರಾನ್ಸ್ ಕಾಂಟಿನೆಂಟಲ್–ಇವೆಲ್ಲವೂ ಸೇರ್ಪಡೆಯಾಗಿ ಈಗ ಸರ್ಕಾರದ ಮಾಲೀಕತ್ವದಲ್ಲಿ ಕೆನಡಿಯನ್ ನ್ಯಾಷನಲ್ ರೈಲ್ವೆ ಸಂಸ್ಥೆ ಏರ್ಪಟ್ಟಿದೆ. ಅಂತರಕೆನಡ ವಿಮಾನ ಸಂಚಾರದಿಂದ ಅಟ್ಲಾಂಟಿಕ್ ತೀರದಿಂದ ಪೆಸಿಫಿಕ್ ತೀರದವರೆಗೆ ತ್ವರಿತ ಪ್ರಯಾಣ ಸಾಧ್ಯವಾಗಿದೆ. ಮೋಟಾರು ಸಂಚಾರ ಹೆಚ್ಚಾಗಿದೆ. ನ್ಯೂ ಫೌಂಡ್‌ಲ್ಯಾಂಡಿನಿಂದ ಬ್ರಿಟಿಷ್ ಕೊಲಂಬಿಯವರೆಗೆ 8000 ಕಿಮೀ ಹೆದ್ದಾರಿ ಹೊಸದಾಗಿ ಏರ್ಪಟ್ಟಿದೆ.

ನಗರಗಳು, ಪಟ್ಟಣಗಳು: ಕೆನಡದ ಪ್ರಮುಖ ನಗರಗಳು ವ್ಯಾಪಾರಕ್ಕೆ ಯೋಗ್ಯವಾದ ಸ್ಥಳಗಳಲ್ಲಿ ಸ್ಥಾಪಿತವಾಗಿ ಮನೋಹರವಾದ ಪರಿಸರ ಪಡೆದಿವೆ. ಪೆಸಿಫಿಕ್ ಸಾಗರದ ಅಂಚಿನ ವ್ಯಾಂಕೂವರ್ ನಗರದ ಹಿನ್ನೆಲೆಯಲ್ಲಿ ಹಿಮಚುಂಬಿತ ಪರ್ವತಗಳಿವೆ. ಆಂಟೇರಿಯೋ ಸರೋವರದ ಅಂಚಿನಲ್ಲಿರುವ ಟೊರಾಂಟೋ ಪ್ರಕೃತಿಯ ಸೊಬಗಿನ ನಡುವೆ ಇದೆ. ಮಾಂಟ್ರಿಯಾಲ್ ಪಟ್ಟಣ ಸೇಂಟ್ ಲಾರೆನ್ಸ್ ನದಿಗೆ ಎದುರಾಗಿರುವ ಬೆಟ್ಟದ ತಪ್ಪಲಲ್ಲಿ ನಿರ್ಮಿತವಾಗಿದೆ. ಕ್ವಿಬೆಕ್ ನಗರ ಸಹ ಅದೇ ನದಿಯ ಅಂಚಿನಲ್ಲಿದೆ. ಕೆನಡದ ರಾಜಧಾನಿ ಒಟ್ಟಾವ ಅದೇ ಹೆಸರಿನ ನದಿಯ ತೀರದಲ್ಲಿದೆ. ನೋವಸ್ಕೋಷದ ಮನೋಹರವಾದ ಕಡಲತೀರದಲ್ಲಿ ಹ್ಯಾಲಿಫ್ಯಾಕ್ಸ್ ನಗರವಿದೆ; ಅದಕ್ಕೆ ಅತ್ಯುತ್ತಮವಾದ ಸ್ವಾಭಾವಿಕ ಬಂದರಿದೆ. ಲಾಭವಿದ್ದಲ್ಲಿ ಜನ ಎಂಬಂತೆ ಜನಜೀವನ ಕಷ್ಟವಾದ ಶೀತಪ್ರದೇಶಗಳಲ್ಲಿ ಸಹ ನಗರಗಳು ಏರ್ಪಟ್ಟಿವೆ. ಉತ್ತರದಲ್ಲಿ ಚಿನ್ನ ಸಿಕ್ಕುವೆಡೆ ಇರುವ ನಗರ ಎಲ್ಲೋನೈಫ್. ಮೆಕೆನ್‌ಜಿ ನದಿಯ ಪಶ್ಚಿಮ ನಾಲೆಯ ಹಿಮಗಟ್ಟಿದ ದಂಡೆಯ ಮೇಲೆ ಇರುವ ಅಕ್ಲಾವಿಕ್ ತುಪ್ಪುಳ ವ್ಯಾಪಾರ ಕೇಂದ್ರ. ಎಡ್‌ಮಂಟನ್ ಮತ್ತು ಕಾಲ್ಗರಿ (ಆಲ್ಬರ್ಟ), ವಿಕ್ಟೋರಿಯ (ಬ್ರಿಟಿಷ್ ಕೊಲಂಬಿಯ), ಸೇಂಟ್ ಜಾನ್ಸ್ (ನ್ಯೂ ಫೌಂಡ್‌ಲೆಂಡ್), ಷಾರ್ಲಟ್ ಟೌನ್ (ಪ್ರಿನ್ಸ್ ಎಡ್ವರ್ಡ್ ದ್ವೀಪ), ರೆಜಿನ, ಸ್ಯಾಸ್ಕ್ಯಾಚೆವನ್ ಮತ್ತು ಹ್ವೈಟ್ ಹಾರ್ಸ್ (ಯೂಕಾನ್)–ಇವು ಇತರ ಮುಖ್ಯ ಸ್ಥಳಗಳು. ಮುಖ್ಯ ನಗರಗಳೆಂದರೆ, ಮಾಂಟ್ರಿಯಾಲ್, ಟೊರಾಂಟೊ, ವ್ಯಾಂಕೋವರ್, ವಿನಿಪೆಗ್, ಹಾಮಿಲ್ಟನ್, ರೈಟೆಕ್, ಎಡ್ಮಂಟನ್, ಕ್ಯಾಟ್‌ಗರಿ, ವಿಂಡ್‌ಸರ್, ಹ್ಯಾಲಿಪಾಕ್ಸ್, ಕಿಚಿನರ್, ಲಂಡನ್ ಇತ್ಯಾದಿ. (ವಿ.ಜಿ.ಕೆ.)

**ಕೆರೆ ನೀರಾವರಿ:** ಪುರಾತನ ಕಾಲದಿಂದಲೂ ಬಳಕೆಯಲ್ಲಿರುವ ಪದ್ಧತಿ. ಝರಿ, ತೊರೆ ಮತ್ತು ಹಳ್ಳಗಳ ಮೂಲಕ ಹರಿಯುವ ಮಳೆ ನೀರಿಗೆ ತಗ್ಗಿನ ಭಾಗದಲ್ಲಿ ಅಡ್ಡಲಾಗಿ ಮಣ್ಣಿನಿಂದ ಅಥವಾ ಕಲ್ಲುಗಳಿಂದ ಒಡ್ಡುಗಳನ್ನು (ಏರಿ) ನಿರ್ಮಿಸಿ ನೀರು ಸಂಗ್ರಹಿಸುವುದು. ಸಂಗ್ರಹಿಸಿದ ನೀರನ್ನು ತೂಬಿನ ಅಥವಾ ಚಿಕ್ಕಕಾಲುವೆಗಳ ಮೂಲಕ ಕೃಷಿ ಭೂಮಿಗೆ ಪೂರೈಸುವುದೇ ಕೆರೆ ನೀರಾವರಿ. ಕೆರೆಗಳ ಗಾತ್ರ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗಿರುತ್ತದೆ. ಬೇರೆ ನೀರಾವರಿ ಪದ್ಧತಿಗೆ ಹೋಲಿಸಿಕೊಂಡಲ್ಲಿ ಕೆರೆ ನೀರಾವರಿ ಹಲವು ಸಮಸ್ಯೆಗಳಿಂದ ಕೂಡಿರುವುದು.

ಅವುಗಳೆಂದರೆ: ಕೆರೆಯ ನಿರ್ಮಾಣಕ್ಕೆ ನೀರಾವರಿ ಪ್ರದೇಶದ ಸುಮಾರು ಕಾಲುಭಾಗ ಪ್ರದೇಶ ಬೇಕಾಗುತ್ತದೆ. ಕೆರೆಗಳು ಮಳೆಯನ್ನು ಅವಲಂಬಿಸಿದ್ದು ಮಳೆಗಾಲದಲ್ಲಿ ಮಾತ್ರ ತುಂಬಿರುತ್ತವೆ. ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಆದ್ದರಿಂದ ಕೆರೆಗಳು ವರ್ಷ ಪೂರ್ತಿ ನೀರನ್ನು ಪೂರೈಸಲು ಸಾಧ್ಯವಿಲ್ಲ. ಕೆರೆಗಳಲ್ಲಿ ಬೇಗ ಹೂಳು ತುಂಬುವುದರಿಂದ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ. ಹೂಳು ತೆಗೆಯುವುದು ಬಲು ವೆಚ್ಚದಾಯಕ ಕಾರ್ಯ. ಕೆರೆನೀರಿನ ಬಳಕೆಯಲ್ಲಿ ಜನರ ನಡುವೆ ಸಾಮರಸ್ಯ ಕಂಡುಬರದಿದ್ದಲ್ಲಿ ಸಂಘರ್ಷಗಳುಂಟಾಗುತ್ತವೆ. ಇತ್ತೀಚಿನ ವರ್ಷಗಳಲ್ಲಿ ಬಹುತೇಕ ಕೆರೆಗಳು ವಸತಿ ನಿರ್ಮಾಣಕ್ಕಾಗಿ ಬಳಕೆಯಾಗುತ್ತಿರುವುದರಿಂದ ಕೆರೆಗಳ ಸಂಖ್ಯೆ ಕಡಿಮೆಯಾಗುತ್ತಿವೆ.

ಈ ಮೇಲಿನ ಎಲ್ಲಾ ಸಮಸ್ಯೆಗಳಿದ್ದರೂ ಕೆರೆ ನೀರಾವರಿಯಿಂದ ಕೆಲವು ಅನುಕೂಲಗಳಿವೆ. ಅವುಗಳೆಂದರೆ; ಇದು ಇಂದಿಗೂ ಕೆಲವು ರಾಷ್ಟ್ರಗಳಲ್ಲಿ ಕೃಷಿ ಪ್ರದೇಶಗಳಿಗೆ ನೀರನ್ನು ಒದಗಿಸುವ ಮೂಲವಾಗಿದೆ. ಅನವಶ್ಯಕವಾಗಿ ಪೋಲಾಗುತ್ತಿದ್ದ ನೀರನ್ನು ತಡೆಯುತ್ತದೆ. ಇದರಿಂದ ಸುತ್ತಲಿನ ಪ್ರದೇಶದ ಅಂತರ್ಜಲ ಮಟ್ಟ ಸುಧಾರಿಸಿ ಭಾವಿ ನೀರಾವರಿಗೆ ಸಹಾಯಕವಾಗಿದೆ. (ಕೆ.ಕೆ.)

**ಕೆರೆಬಿಯನ್ ದ್ವೀಪಗಳು:** ವೆಸ್ಟ್ ಇಂಡೀಸ್ ದ್ವೀಪಸ್ತೋಮದ ಲೆಸ್ಸರ್ ಆಂಟಿಲಿಸ್ ದ್ವೀಪಗಳನ್ನು ಈ ಹೆಸರಿನಿಂದಲೂ ಕರೆಯುವುದುಂಟು. ವಿರಳವಾಗಿ ಇಡೀ ವೆಸ್ಟ್ ಇಂಡೀಸ್ ದ್ವೀಪಸ್ತೋಮವನ್ನೇ ಈ ಹೆಸರಿನಿಂದ ಕರೆಯುವುದೂ ಇದೆ. ಇದನ್ನು ಐರೋಪ್ಯರು ಕಂಡುಹಿಡಿದಾಗ ಇಲ್ಲಿ ವಾಸವಾಗಿದ್ದ ಕ್ಯಾರಿಬ್ ಜನರಿಂದಾಗಿ ಈ ದ್ವೀಪಸ್ತೋಮಕ್ಕೆ ಕ್ಯಾರಿಬೀ ಎಂಬ ಹೆಸರು ಬಂದಿದೆ. ಅಮೆರಿಕ ಸಂಯುಕ್ತ ಸಂಸ್ಥಾನ, ಗ್ರೇಟ್ ಬ್ರಿಟನ್, ಫ್ರಾನ್ಸ್, ನೆದರ್ಲೆಂಡ್ಸ್ ಮತ್ತು ವೆನಿಜುವೇಲ ದೇಶಗಳಿಗೆ ಸೇರಿದ ದ್ವೀಪಗಳು ಈ ಗುಂಪಿನಲ್ಲಿ ಸೇರಿವೆ. ಈ ದ್ವೀಪಸಮೂಹ ಒಂದು ಸರಪಳಿಯಾಕಾರದಲ್ಲಿ ಪೋರ್ಟೊರೀಕೊದಿಂದ ವೆನಿಜುವೇಲದ ಉತ್ತರತೀರದ ವರೆಗೂ ವಿಸ್ತರಿಸಿದೆ. ಈ ಸ್ತೋಮದ ಉತ್ತರ ಭಾಗದಲ್ಲಿ ಲೀವರ್ಡ್ ದ್ವೀಪಗಳೂ ದಕ್ಷಿಣ ಭಾಗದಲ್ಲಿ ವಿಂಡ್‌ವರ್ಡ್ ದ್ವೀಪಗಳೂ ಇವೆ. ಗ್ವಾಡಲೂಪ್, ಮಾರ್ಟನೀಕ್, ಬಾರ್ಬಡೋಸ್, ಟ್ರಿನಿಡಾಡ್ ಮತ್ತು ಟೊಬಾಗೋ ಇಲ್ಲಿಯ ಮುಖ್ಯ ದ್ವೀಪಗಳು.

ಕೆರೆಬಿ ದ್ವೀಪಗಳು ಜ್ವಾಲಾಮುಖಿಯ ಕ್ರಿಯೆಯಿಂದಾದವು. ಅವು ಬೆಟ್ಟಗುಡ್ಡಗಳಿಂದ ಕೂಡಿವೆ. ಮೇ 1902ರಲ್ಲಿ ಗ್ವಾಡಲೂಪ್ ಮತ್ತು ಮಾರ್ಟನೀಕ್ ದ್ವೀಪಗಳಲ್ಲಿ ಜೀವಂತ ಜ್ವಾಲಾಮುಖಿಗಳಿಂದ ಅಪಾರ ಹಾನಿಗಳು ಸಂಭವಿಸಿದುವು.

ಇಲ್ಲಿಯದು ಉಷ್ಣವಲಯದ ವಾಯುಗುಣ. ಸುತ್ತಮುತ್ತಲಿನ ಸಮುದ್ರಗಳ ಉಷ್ಣ ಪ್ರವಾಹಗಳು ಮತ್ತು ಪೂರ್ವದ ವ್ಯಾಪಾರ ಮಾರುತಗಳು ಇಲ್ಲಿಯ ವಾಯುಗುಣದ ಮೇಲೆ ಪರಿಣಾಮ ಬೀರಿವೆ. ಈ ಪ್ರದೇಶದಲ್ಲಿ ಪದೇ ಪದೇ ಬೀಸುವ ಚಂಡಮಾರುತಗಳ ಹಾವಳಿ ವಿಪರೀತ. ಮಳೆಯ ಪರಿಮಾಣ ದ್ವೀಪದಿಂದ ದ್ವೀಪಕ್ಕೆ ವ್ಯತ್ಯಾಸವಾಗುವುದುಂಟು.

ಇಲ್ಲಿ ಉಷ್ಣವಲಯದ ಸಸ್ಯಗಳಿವೆ. ಮಹಾಗನಿ ಮತ್ತು ಸಿಡಾರ್ ಮುಖ್ಯವಾದ ಮರಗಳು. ಜಿಂಕೆ, ಕೋತಿ, ಕತ್ತೆ, ಉರಗವರ್ಗದ ಪ್ರಾಣಿಗಳು, ಆಮೆ ಇವು ಮುಖ್ಯವಾದ ಪ್ರಾಣಿಗಳು. ಅನೇಕ ಬಗೆಯ ಮೀನುಗಳೂ ಉಂಟು. ಮೈದಾನ ಪ್ರದೇಶಗಳಲ್ಲಿ ಕೃಷಿ ಮುಖ್ಯ ಉದ್ಯೋಗ. ಕಬ್ಬು, ಕಾಫಿ, ಕೋಕೋ, ಹೊಗೆಸೊಪ್ಪು, ಬಾಳೆಹಣ್ಣು ಮತ್ತು ತರಕಾರಿಗಳು ಇಲ್ಲಿಯ ಮುಖ್ಯ ಬೆಳೆಗಳು. ಟ್ರಿನಿದಾದ್ ಮತ್ತು ಬಾರ್ಬಡೋಸ್‌ನಲ್ಲಿ ಎಣ್ಣೆ ದೊರೆಯುತ್ತದೆ. ಟ್ರಿನಿದಾದ್ ಮತ್ತು ಮಾರ್ಟನೀಕ್‌ಗಳಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. ಇಲ್ಲಿಯ ಜನರಲ್ಲಿ ಬಹು ಸಂಖ್ಯಾತರು ನೀಗ್ರೋಗಳು. ಬಿಳಿಯರೂ ಇದ್ದಾರೆ.

ಕ್ಯಾರಿಬೀ ದ್ವೀಪಗಳಲ್ಲಿ ಅನೇಕ ರಸ್ತೆಗಳುಂಟು. ಕತ್ತೆ ಇಲ್ಲಿ ಸಾಗಣೆಯ ಮುಖ್ಯ ಸಾಧನ. ಮುಖ್ಯ ವಾಯುಮಾರ್ಗಗಳಿಲ್ಲ. ಟ್ರಿನಿದಾದ್ ಮತ್ತು ಸೇಂಟ್ ಲೂಸಿಯಗಳಲ್ಲಿ ಉತ್ತಮ ಬಂದರುಗಳಿವೆ. (ಎಂ.ಎ.ಎಚ್.)

**ಕೆರೆಬಿಯನ್ ಸಮುದ್ರ:** ಉತ್ತರದಕ್ಷಿಣ ಅಮೆರಿಕಗಳ ನಡುವೆ ಮೆಕ್ಸಿಕೊ ಖಾರಿಯ ದಕ್ಷಿಣಕ್ಕೆ ಹರಡಿರುವ ಆಳವಾದ ಉಪಸಾಗರ. ಕೆರೆಬಿಯನ್ ಸಮುದ್ರವೂ ಮೆಕ್ಸಿಕೊ ಖಾರಿಯೂ ಉತ್ತರ ದಕ್ಷಿಣ ಅಮೆರಿಕ ಭೂಖಂಡಗಳಿಂದ ಬಹಳ ಮಟ್ಟಿಗೆ ಸಮ್ಮದ್ಧವಾಗಿರುವುದರಿಂದ ಇವೆರಡು ಜಲ ಪ್ರದೇಶಗಳನ್ನೂ ಒಂದಾಗಿ ಪರಿಗಣಿಸಿ ಅಮೆರಿಕನ್ ಮೆಡಿಟರೇನಿಯನ್ ಸಮುದ್ರವೆಂದು ಕರೆಯುವುದು. ಜರ್ಮನ್ ಸಾಗರವಿಜ್ಞಾನಿಗಳ ರೂಢಿ. ಉತ್ತರಕ್ಕೆ ವೆಸ್ಟ್ ಇಂಡೀಸಿನ ಗ್ರೇಟರ್ ಅಂಟಿಲಿಸ್ ಮತ್ತು ಪೂರ್ವಕ್ಕೆ ಲೆಸ್ಸರ್ ಆಂಟಿಲಿಸ್ ದ್ವೀಪಗಳು ದಕ್ಷಿಣಕ್ಕೆ ವೆನಿಜುವೇಲ, ಕೊಲಂಬಿಯ, ಪನಾಮ ಮತ್ತು ಕಾಸ್ಟರೀಕ, ಪಶ್ಚಿಮಕ್ಕೆ ನಿಕರಾಗುವ, ಹಾಂಡುರಾಸ್ ಗ್ವಾಟಿಮಾಲ ಮತ್ತು ಮೆಕ್ಸಿಕೋ–ಇವು ಇದರ ಮೇರೆಗಳು. ದಕ್ಷಿಣೋತ್ತರವಾಗಿ 620 ಕಿಮೀ – 1120 ಕಿಮೀ ಅಗಲವೂ ಪೂರ್ವಪಶ್ಚಿಮವಾಗಿ 2400 ಕಿಮೀ ಗರಿಷ್ಠ ಉದ್ದವೂ ಇರುವ ಇದರ ವಿಸ್ತೀರ್ಣ ಸು. 167920,000 ಚ.ಕಿಮೀ.

ಕೆರೆಬಿಯನ್ ಒಂದು ಮಹಾಕಡಲ್ಗಾಲುವೆಯಂತೆ ತೋರುವ ಸಮುದ್ರ. ಆದರೆ ಇದು ಕಾಲುವೆಯಷ್ಟು ಕ್ರಮಬದ್ಧವಾಗಿಲ್ಲ. ವಾಯವ್ಯದಲ್ಲಿ ಇದು ಯೂಕಟಾನ್ ಕಡಲ್ಗಾಲುವೆಯ ಮೂಲಕ ಮೆಕ್ಸಿಕೋ ಖಾರಿಯೊಂದಿಗೆ ಕೂಡಿಕೊಂಡಿದೆ. ಪೂರ್ವದಲ್ಲಿ ಉತ್ತರ ಅಟ್ಲಾಂಟಿಕ್ ಸಾಗರದ ಉಷ್ಣವಲಯದ ಭಾಗದೊಂದಿಗೆ ಕೂಡಿಕೊಂಡಿದೆ. ಅಟ್ಲಾಂಟಿಕ್‌ನಿಂದ ಇದು ಬೇರ್ಪಟ್ಟಂತಿರಲು ಲೆಸ್ಸರ್ ಆಂಟಿಲಿಸ್ ದ್ವೀಪಗಳು ಕಾರಣ. ಈ ದ್ವೀಪಗಳ ನಡುವೆ ಸಮುದ್ರದ ಆಳ 600 ಮೀ ಗಿಂತ ಹೆಚ್ಚಿಲ್ಲ. ಆನೆಗಾಡ ಜಲಸಂಧಿಯೇ ಅತ್ಯಂತ ಆಳ. ಕ್ಯೂಬದ ಪೂರ್ವದ ತುದಿಗೂ ಹೈಟಿಯ ವಾಯವ್ಯ ಭಾಗಕ್ಕೂ ನಡುವೆ ಇರುವ ಮಾರ್ಗದ ಮುಖದ ಬಳಿಯ ಆಳ, ಕ್ಯೂಬದ ಪಶ್ಚಿಮಕ್ಕೆ ಯೂಕಟ್ಯಾನಿನ ಆಳ ಹೆಚ್ಚು.

ಕೆರೆಬಿಯನ್ ನಡುವೆ ಅನೇಕ ನಿಡಿದಾದ ಮಡುಗಳಿವೆ. ಇವುಗಳ ನಡುವೆ ಜಲದಡಿಯಲ್ಲಿ ಕಡಿದಾದ ನೆಲದೇಣುಗಳೂ ಉಂಟು. ಈ ಲಕ್ಷಣದಲ್ಲಿ ಇದು ಮೆಡಿಟರೇನಿಯನ್ ಸಮುದ್ರವನ್ನು ಹೋಲುವುದಾದರೂ ಮೆಡಿಟರೇನಿಯನ್‌ಗಿಂತ ಕೆರೆಬಿಯನ್ ಹೆಚ್ಚು ಆಳ. ಅಟ್ಲಾಂಟಿಕ್ ಸಾಗರಕ್ಕೂ ಇದಕ್ಕೂ ನಡುವಣ ಸಮುದ್ರಭಾಗವೂ ಹೆಚ್ಚು ಆಳವಾಗಿದೆ. ಆದರೆ ಮೆಡಿಟರೇನಿಯನಿಗಿಂತ ಇದು ಕಿರಿದಾದ ಸಮುದ್ರ.

ಕೆರೆಬಿಯನ್ ಮೂಲತಃ ಖಂಡೀಯ ಸಮುದ್ರವಲ್ಲ. ಆದರೆ ಇದು ಸಂಪೂರ್ಣ ಸಾಗರಿಕವೂ ಅಲ್ಲ. ರಚನೆಯಲ್ಲೇನೋ ಇದು ಸಾಗರಪಾತ್ರದ ಹಾಗೆಯೇ ಇದೆ. ಭೂರಚನೆಯ ಆಧಾರದ ಮೇಲೆ ಇದನ್ನು ಪೂರ್ವ ಪಶ್ಚಿಮ ಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮಭಾಗ ಚಿಕ್ಕದು. ಇದಕ್ಕೆ ಕೇಮ್ಯಾನ್ ಸಮುದ್ರವೆಂದೂ ಹೆಸರುಂಟು. ಈ ಎರಡು ಭಾಗಗಳಿಗೂ ನಡುವೆ–ಹಾಂಡುರಾಸ್ ನಿಕರಾಗ್ವಗಳಿಂದ ಜಮೈಕದ ವರೆಗೆ ಮತ್ತು ಅಲ್ಲಿಂದ ಹೈಟಿಯವರೆಗೆ– ಸಮುದ್ರ ತಳ ಅಗಲವಾಗಿ ಜಗಲಿಯಂತೆ ಹಬ್ಬಿದೆ. ಜಮೈಕಾದ ಆಗ್ನೇಯಕ್ಕೆ ಇರುವ ಸಮುದ್ರಭಾಗದ ಪಶ್ಚಿಮಪ್ರದೇಶ ಕೊಲಂಬಿಯನ್ ಮತ್ತು ವೆನಿಜುವೇಲನ್ ಪಾತ್ರಗಳಾಗಿ ವಿಂಗಡಿಸಲಾಗಿದೆ. ಇವುಗಳ ನಡುವೆ ಜಲದ ತಳಭಾಗ ನೆಲ ಎತ್ತರವಾಗಿ, ಬೆನ್ನೇಣಿನಿಂದ ಕೂಡಿದ್ದಾಗಿದೆ. ಕೆರೆಬಿಯನ್ ಸಮುದ್ರ ಅತ್ಯಂತ ಆಳವಾಗಿರುವುದು ಕೇಮ್ಯಾನ್ ಸಮುದ್ರಭಾಗದಲ್ಲಿ–ಬಾರ್ಟ್‌ಲೆಟ್‌ನಲ್ಲಿ (6836 ಮೀ) ಇದು ಕ್ಯೂಬಕ್ಕೂ ಜಮೈಕಕ್ಕೂ ನಡುವೆ ಇದೆ.

ಈ ಸಮುದ್ರಪಾತ್ರದ ಮೇಲ್ಮೈ ತೀವ್ರವಾದ ಏರುತಗ್ಗುಗಳಿಂದ ಕೂಡಿದ್ದು, ಕಡಿದಾದ ಬೆನ್ನೇಣುಗಳ ಬದಿಯಲ್ಲಿ ಅತಿ ಆಳದ ಕೊಳ್ಳಗಳುಂಟು. ಕೆಲವು ಬೆನ್ನೇಣುಗಳು ಸಮುದ್ರದ ನೀರಿನ ಮಟ್ಟದಿಂದ ಮೇಲಕ್ಕೂ ತಲೆ ಎತ್ತಿ ನಿಂತಿವೆ. ಪೋರ್ಟೋರೀಕೋದ ಬೆನ್ನೆಲುಬಿನಂತಿರುವ ಪರ್ವತಶ್ರೇಣಿಯ ಎತ್ತರ, ಸಮುದ್ರಮಟ್ಟದಿಂದ 333 ಮೀ. ಆದರೆ ಅದರ ಬದಿ ಅತಿಕಡಿದಾಗಿದೆ; ಕಡಲ ಕಿನಾರೆಯಿಂದ ಕೇವಲ 88 ಕಿಮೀ ಸಾಗುವುದರೊಳಗೆ 5150 ಮೀ ಕೆಳಕ್ಕೆ ಇಳಿಯುತ್ತದೆ. ಈ ಇಳಿಜಾರು ಹೀಗೆಯೇ ಮುಂದುವರಿದು, ತೀರದಿಂದ 120 ಕಿಮೀ ಗಳಷ್ಟೇ ದೂರದಲ್ಲಿ ಅಟ್ಲಾಂಟಿಕ್ ಸಾಗರದ ಅತ್ಯಂತ ಆಳಪ್ರದೇಶವಾಗಿ ಪರಿಣಮಿಸುತ್ತದೆ. ಈ ಸ್ಥಳದ ಆಳ ಸಮುದ್ರಮಟ್ಟದಿಂದ 9145 ಮೀ.

ಈ ಸಮುದ್ರದಲ್ಲಿ ಭರತದ ಚಲನೆ ಕಡಿಮೆ. ಇದು ನಿಲುಕುವ ಗರಿಷ್ಠ 3 ಮೀ ಎತ್ತರ; ಸರಾಸರಿ 1ಮೀ. ಕೆರೆಬಿಯನ್ ಸಮುದ್ರ ಆವೃತವಾಗಿರುವುದು ಇದಕ್ಕೆ ಒಂದು ಕಾರಣ. ಅಟ್ಲಾಂಟಿಕ್‌ನಿಂದ ಹರಿದುಬರುವ ಸಾಗರಪ್ರವಾಹ ಕೆರೆಬಿಯನ್ ಸಮುದ್ರವನ್ನು ಹಾಯ್ದು ಯೂಕಟಾನ್ ಮೂಲಕ ವೇಗವಾಗಿ ಮುಂದುವರಿಯುತ್ತದೆ. ಅಲ್ಲಿ ಇದರ ಕವಲೊಂದು ಪೂರ್ವಾಭಿಮುಖವಾಗಿ ತಿರುಗಿ ಫ್ಲಾರಿಡ ಜಲಸಂಧಿಯ ಮೂಲಕ ಹರಿಯುತ್ತದೆ. ಈ ಸಮುದ್ರದ ಪ್ರತಿಪ್ರವಾಹಗಳ ಪೈಕಿ ಕೊಲಂಬಿಯನ್ ಪಾತ್ರದ ದಕ್ಷಿಣ ಪಾರ್ಶ್ವದಲ್ಲಿ ಅಪ್ರದಕ್ಷಿಣವಾಗಿ ಹರಿಯುವುದೂ ಕ್ಯೂಬದ ದಕ್ಷಿಣತೀರದ ಬಳಿ ಪೂರ್ವದ ಕಡೆಗೆ ಹರಿಯುವುದೂ ಮುಖ್ಯವಾದಂಥವು. ಈ ಸಮುದ್ರದ ಮೇಲೆ ಈಶಾನ್ಯ ಮಾರುತಗಳು ಬೀಸುತ್ತವೆ. ಸೆಪ್ಟೆಂಬರಿನಿಂದ ನವೆಂಬರ್‌ವರೆಗೆ ಇವುಗಳ ಬಲ ಸ್ವಲ್ಪ ಕುಗ್ಗಿರುತ್ತದೆ. ಈ ಪ್ರದೇಶದಲ್ಲಿ ಮಂಜು ಅಪರೂಪ. ಗಾಳಿಯ ಉಷ್ಣತೆ ಫೆಬ್ರವರಿಯಲ್ಲಿ ಸು. $22^0$ಸೆ. ಸೆಪ್ಟೆಂಬರಿನಲ್ಲಿ ಸು. $28^0$ ಸೆ. ಕೆರೆಬಿಯನ್ ಸಮುದ್ರ ಪ್ರದೇಶದಲ್ಲಿ ಪ್ರತಿವರ್ಷವೂ ಆಗಸ್ಟ್‌ನಿಂದ ಅಕ್ಟೋಬರ್ ವರೆಗಿನ ಕಾಲದಲ್ಲಿ ಭೀಕರ ಚಂಡಮಾರುತಗಳು ಬೀಸುವುದುಂಟು.

(ಬಿ.ಎಸ್.ಎಚ್.)

**ಕೆಲ್ಟ್ ಜನಾಂಗ:** ಪ್ರಶ.ಪೂ. ಒಂದನೆಯ ಸಹಸ್ರಮಾನದಲ್ಲಿ ಐರೋಪ್ಯ ಸಂಸ್ಕೃತಿಯ ಬೆಳವಣಿಗೆಗೆ ಗಮನಾರ್ಹ ಕೊಡುಗೆಗಳನ್ನು ನೀಡಿದ ಒಂದು ಜನಾಂಗ. ಕೆಲ್ಟ್ ಜನರು ಪ್ರಾಚೀನ ಕಾಲದಲ್ಲಿ ಆಲ್ಪ್ಸ್ ಪರ್ವತದ ಉತ್ತರದ ಸಮಶೀತೋಷ್ಣ ಪ್ರದೇಶದಲ್ಲಿ ಪ್ರಸಿದ್ಧಿಗೆ ಬಂದರು. ಗ್ರೀಕ್ ಚರಿತ್ರಕಾರರು ಇವರನ್ನು ಕೆಲ್ಟಾಯ್ ಎಂದು ಕರೆದರು. ಇದರ ಆಧಾರದ ಮೇಲೆ ಕೆಲ್ಟ್ ಎಂಬ ಪದ ಬಳಕೆಗೆ ಬಂದಿದೆ. ರೈನ್ ಮತ್ತು ಡ್ಯಾನ್ಯೂಬ್ ನದಿಗಳ ದಂಡೆಗಳಲ್ಲಿ ಮೊಟ್ಟಮೊದಲು ವಾಸಿಸುತ್ತಿದ್ದ ಇವರು ಕಾಲಕ್ರಮದಲ್ಲಿ ದಕ್ಷಿಣ ಮತ್ತು ಪಶ್ಚಿಮದ ಕಡೆಗೆ ಹರಡಿಕೊಂಡರು. (ಎ.ವಿ.ಎನ್.)

**ಕೆಲ್ವಿನ್ ಉಷ್ಣತಾಮಾನ ಪದ್ಧತಿ:** ಸ್ಕಾಟ್ಲೆಂಡಿನ ಗಣಿತ ಹಾಗೂ ಭೌತವಿಜ್ಞಾನಿ ಲಾರ್ಡ್ ಕೆಲ್ವಿನ್ (1824–1907) ರೂಪಿಸಿದ ಒಂದು ಉಷ್ಣತಾಮಾನ ಪದ್ಧತಿ (1848) ಒಂದು ಅನಿಲದ ಘನಗಾತ್ರ, ಒತ್ತಡ ಮತ್ತು ಉಷ್ಣತೆಗಳಿಗೆ ಸಂಬಂಧ ಪಟ್ಟ ಅಧ್ಯಯನಕ್ಕೆ ಉಷ್ಣತಾಮಾನಪದ್ಧತಿ ನೆರವಾಗುತ್ತದೆ. (ಕೆ.ಎನ್.ಯು.)

**ಕೇಂದ್ರ ಮತ್ತು ಅಂಚು ಸಿದ್ಧಾಂತ:** ಕೇಂದ್ರ ಮತ್ತು ಅಂಚು ಸಿದ್ಧಾಂತ ಸ್ಥಾನಿಕವಾಗಿ ಆರ್ಥಿಕ ಅಭಿವೃದ್ಧಿಯ ಹರಡುವಿಕೆಯನ್ನು ವಿವರಿಸುವ ಸಿದ್ಧಾಂತವಾಗಿದೆ. ಸಾಮಾನ್ಯವಾಗಿ ಆರ್ಥಿಕಾಭಿವೃದ್ಧಿಯನ್ನು ಒಂದು ಪ್ರದೇಶದ, ಒಂದು ದೇಶದ ಅಥವ ಅಂತಾರಾಷ್ಟ್ರೀಯ ಮಟ್ಟದಲ್ಲಿ ವೀಕ್ಷಿಸಿದಾಗ ಅದು ಅಸಮಾನವಾಗಿರುವುದನ್ನು ಕಾಣುತ್ತೇವೆ.

ಆರ್ಥಿಕ ಅಭಿವೃದ್ಧಿಯು ಕೇಂದ್ರಸ್ಥಾನಗಳಲ್ಲಿ ಹೆಚ್ಚಾಗಿಯೂ, ಅಲ್ಲಿಂದ ದೂರ ಅಥವಾ ಅಂಚಿನ ಪ್ರದೇಶಗಳಿಗೆ ಹೋದಂತೆ ಅದು ಕಡಿಮೆಯಾಗಿಯೂ ಕಂಡುಬರುತ್ತದೆ. ಉದಾ: ಕರ್ನಾಟಕದಲ್ಲಿ ಬೆಂಗಳೂರು ಪ್ರದೇಶವು ಕೇಂದ್ರ ಸ್ಥಾನವನ್ನು ಪ್ರತಿನಿಧಿಸುತ್ತದೆ. ಇದರಿಂದ ನಾವು ದೂರ ಹೋದಂತೆ ಆರ್ಥಿಕ ಅಭಿವೃದ್ಧಿಯು ಸಾಮಾನ್ಯವಾಗಿ ಇಳಿಕೆಯಾಗಿರುವುದು. ಈ ಸಿದ್ಧಾಂತದ ಪ್ರಕಾರ ಕೆಲವೆಡೆ ಅಭಿವೃದ್ಧಿಯು ಕೇಂದ್ರ ಭಾಗಗಳಲ್ಲಿ ಮಾತ್ರ ಆಗಿ ಅಂಚಿನ ಪ್ರದೇಶಗಳಲ್ಲಿ ನಿಂತು ಹೋಗಿದೆ ಎಂದು ಅಥವ ಅತಿ ಕಡಿಮೆಯಿರುತ್ತದೆ ಎಂದು, ಈ ಸಿದ್ಧಾಂತ ತಿಳಿಸುತ್ತದೆ.

ಈ ಸಿದ್ಧಾಂತವನ್ನು ಫ್ರೈಡ್‌ಮ್ಯಾನ್ ಎಂಬ ಅರ್ಥಶಾಸ್ತ್ರಜ್ಞ ಮಂಡಿಸಿದ್ದಾರೆ (1996). ಈ ಸಿದ್ಧಾಂತದ ಪ್ರಕಾರ ಆರ್ಥಿಕ ಅಭಿವೃದ್ಧಿಯಲ್ಲಿ ನಾಲ್ಕು ಬೆಳವಣಿಗೆಯ ಹಂತಗಳಿದ್ದು, ಆರ್ಥಿಕ ಪ್ರದೇಶದಲ್ಲಿ ಪ್ರತಿ ಹಂತದಲ್ಲೂ ಕೇಂದ್ರ ಪ್ರದೇಶಕ್ಕೂ ಮತ್ತು ಅದರ ಅಂಚಿನ ಪ್ರದೇಶಕ್ಕೂ ಬೆಳವಣಿಗೆಯಲ್ಲಿ ವ್ಯತ್ಯಾಸಗಳಿರುತ್ತವೆಂದು ನಿರೂಪಿಸಿದ್ದಾರೆ. ಒಂದು ರೀತಿಯಲ್ಲಿ ಈ ಸಿದ್ಧಾಂತದ ಪ್ರಕಾರ ಕೇಂದ್ರಪ್ರದೇಶ ದೇಶದ ಅಥವ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಹೊಂದಿದ ಜಿಲ್ಲೆಗಳನ್ನು ಹೊಂದಿದ್ದು ದೇಶದ ಆರ್ಥಿಕ ಸಾಮರ್ಥ್ಯ, ಐಶ್ವರ್ಯ ಮತ್ತು ದೇಶದ ಹೊಸ ಸಂಶೋಧನೆಗಳು ಹಾಗೂ ತಂತ್ರಜ್ಞಾನದ ಅಭಿವೃದ್ಧಿಯ ಕೇಂದ್ರೀಕರಣವನ್ನು ಕಾಣುತ್ತೇವೆ. ಆದರೆ ಅಂಚು ಪ್ರದೇಶ ಕೇಂದ್ರ ಭಾಗದಿಂದ ಹೊರಗಡೆ ಇದ್ದು, ಆರ್ಥಿಕಾಭಿವೃದ್ಧಿಯಲ್ಲಿ ಹಿಂದುಳಿದ ಪ್ರದೇಶವಾಗಿರುತ್ತದೆ. (ಬಿ.ಇ.)

**ಕೇಂದ್ರ ಸರ್ಕಾರದ ರಾಷ್ಟ್ರ:** ಯಾವ ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲಾ ಅಧಿಕಾರಗಳು ರಾಷ್ಟ್ರೀಯ ಸರ್ಕಾರದಲ್ಲಿ ಕೇಂದ್ರೀಕರಿಸಲ್ಪಟ್ಟಿರುತ್ತವೆಯೋ ಅದನ್ನು ಕೇಂದ್ರ ಸರ್ಕಾರದ ರಾಷ್ಟ್ರಗಳೆನ್ನುವರು. ಈ ವ್ಯವಸ್ಥೆಯಲ್ಲಿ ಉಪರಾಷ್ಟ್ರೀಯ ಘಟಕಗಳು ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುತ್ತವೆ. ಇವುಗಳು ಕಾರ್ಯ ನಡೆಸಲು ಕೇಂದ್ರ ಸರ್ಕಾರ ಅಧಿಕಾರ ಕೊಟ್ಟಿರುತ್ತವೆ. ಆದರೆ ಇಂದಿನ ಆಧುನಿಕ ಸರ್ಕಾರಗಳು ಆಡಳಿತದಲ್ಲಿ ದಕ್ಷತೆ ತರುವುದಕ್ಕೋಸ್ಕರ ಸ್ಥಳೀಯ ಸರ್ಕಾರಕ್ಕೆ ಅಧಿಕಾರ ಕೊಟ್ಟಿವೆ. ಆದಾಗ್ಯೂ ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಅನುಗುಣವಾಗಿ ಸ್ಥಳೀಯ ಸರ್ಕಾರಗಳು ಕೆಲಸ ನಡೆಸುತ್ತಿವೆ. ಪ್ರಪಂಚದಲ್ಲಿ ಹಲವಾರು ರಾಷ್ಟ್ರಗಳಲ್ಲಿ ಕೇಂದ್ರೀಯ ಸರ್ಕಾರ ಬಹಳಷ್ಟು ಸರಳ ಮತ್ತು ಅನುಕೂಲತೆಗಳನ್ನು ಒಳಗೊಂಡಿವೆ. ಈ ವ್ಯವಸ್ಥೆಯ ರಾಷ್ಟ್ರಗಳಲ್ಲಿ ಬೃಹತ್ ಪ್ರಮಾಣದ ಆಡಳಿತಶಾಹಿಗಳು ಹುಟ್ಟಿಕೊಳ್ಳುತ್ತವೆ. ಇದನ್ನು ತೊಡೆದು ಹಾಕಲು ಇತ್ತೀಚೆಗೆ ವಿಕೇಂದ್ರೀಕರಿಸಿದ ಆಡಳಿತ ಪದ್ಧತಿ ಹಲವಾರು ರಾಷ್ಟ್ರಗಳಲ್ಲಿ ಜಾರಿಗೆ ಬಂದಿದೆ. (ಬಿ.ಇ.)

**ಕೇಂದ್ರಸ್ಥಾನ ಸಿದ್ಧಾಂತ:** ಮಾನವನ ವಸತಿ ವ್ಯವಸ್ಥೆಯನ್ನು ಅವುಗಳು ನಿರ್ವಹಿಸುವ ಕಾರ್ಯರೀತಿಯನ್ನಾಧರಿಸಿ ಕೊಪ್ಪಲು, ಹಳ್ಳಿ, ಪಟ್ಟಣ, ನಗರಗಳೆಂದು ಬೇರ್ಪಡಿಸಲಾಗಿದೆ. ವಸತಿ ಕೇಂದ್ರಗಳು ತಮ್ಮ ಸುತ್ತಲಿನ ಪ್ರದೇಶಗಳಿಗೆ ವಿವಿಧ ಬಗೆಯ ಸೇವೆಗಳು ಹಾಗೂ ಸೌಕರ್ಯಗಳನ್ನು ಒದಗಿಸುತ್ತವೆ. ಹೀಗೆ ಒಂದು ವಸತಿಯಿಂದ ಸೇವೆಯನ್ನು ಪಡೆಯುವ ಅದರ ಸುತ್ತಮುತ್ತಲಿನ ಪ್ರದೇಶವನ್ನು ಆ ವಸತಿಯ ಹಿನ್ನಾಡು ಎಂದು ಕರೆಯುವರು. ವಸತಿಗಳು ಗ್ರಾಮಾಂತರವಾಗಿರಬಹುದು ಅಥವಾ ನಗರಗಳಾಗಿರಬಹುದು. ಅವುಗಳ ಪ್ರಾದೇಶಿಕ ಹಂಚಿಕೆಯಲ್ಲಿ ನಿರ್ದಿಷ್ಟವಾದ ವ್ಯವಸ್ಥೆಯನ್ನು ಕಾಣಬಹುದು. ಆ ವ್ಯವಸ್ಥೆಯ ವಿವರಣೆಯೇ ಕೇಂದ್ರಸ್ಥಾನ ಸಿದ್ಧಾಂತದ ಮೂಲ ಉದ್ದೇಶ. ಇದನ್ನು 1933 ರಲ್ಲಿ ಜರ್ಮನಿಯ ವಾಲ್ಟರ್ ಕ್ರಿಸ್ಟಾಲರ್ ಪ್ರತಿಪಾದಿಸಿದ. ತುಲಾನಾತ್ಮಕವಾಗಿ ವಸತಿಗಳ ಸ್ಥಾನ, ಅಂತರ ಮತ್ತು ಹಂಚಿಕೆಗಳನ್ನು ಈತನು ವಿವರಿಸಲು ಯತ್ನಿಸಿದ್ದಾನೆ. ಕಾರ್ಯಶ್ರೇಣಿ ಮತ್ತು ವಿವಿಧ ವರ್ಗದ ವಸತಿಗಳ ಪರಸ್ಪರ ಸಂಬಂಧವನ್ನು ಕೇಂದ್ರ ಸ್ಥಾನ ಸಿದ್ಧಾಂತ ನಿರ್ಧರಿಸುತ್ತದೆ. ಕ್ರಿಸ್ಟಾಲರ್ ಸಿದ್ಧಾಂತದ ಮೂಲ ಅಂಶಗಳು ಈ ಕೆಳಗಿನಂತಿವೆ.

ಕೇಂದ್ರ ಸ್ಥಳಗಳು ಸಾಮಾನ್ಯವಾಗಿ ವಸತಿ ಕೇಂದ್ರಗಳ ಮಾರುಕಟ್ಟೆ ಕೇಂದ್ರವಾಗಿದ್ದು, ನಗರವಾಸಿಗಳಿಗೆ, ಸುತ್ತಮುತ್ತಲಿನ ಜನರಿಗೆ ಹತ್ತಿರವಾಗಿರುತ್ತವೆ. ಸರಕುಗಳು, ಸೇವೆಗಳ ವಿನಿಮಯ ಇಲ್ಲಿ ಪ್ರಮುಖವಾಗಿದ್ದು, ಕೊಳ್ಳುವವರಿಗೆ ಕಡಿಮೆ ಖರ್ಚಿನದ್ದಾಗಿದ್ದರೆ, ಮಾರಾಟಗಾರರಿಗೆ ಈ ಪ್ರದೇಶವು ಲಾಭದಾಯಕವಾಗಿರುತ್ತವೆ.

ಕೇಂದ್ರ ಸ್ಥಳಗಳು ವೃತ್ತಾಕಾರವಾಗಿದ್ದು, ಅಧಿಕ ಜನಸಾಂದ್ರತೆ ಮತ್ತು ಉತ್ತಮ ಸಂಪರ್ಕವನ್ನು ಹೊಂದಿರುತ್ತದೆ. ಬಹುದೊಡ್ಡ ನಗರವಾಗಿದ್ದರೆ ಅದರ ಹಿನ್ನಾಡು ಕೂಡ ವಿಸ್ತಾರವಾಗಿರುತ್ತದೆ. ಕೇಂದ್ರ ಸ್ಥಳದ ಸೇವಾ ಸೌಲಭ್ಯಗಳು ಸಂಕೀರ್ಣತೆಯಿಂದ ಕೂಡಿರುತ್ತವೆ. ಸೇವೆ ಮತ್ತು ಕಾರ್ಯಸ್ವರೂಪವನ್ನಾಧರಿಸಿ ನಿರ್ದಿಷ್ಟ ಜನಸಂಖ್ಯಾ ಮಿತಿ ರೂಪುಗೊಳ್ಳುತ್ತದೆ. ಚಿಕ್ಕ ಪಟ್ಟಣಗಳಲ್ಲಿ ದೊರೆಯಬಹುದಾದ ಸರಕು ಮತ್ತು ಸೇವೆಗಳು ದೊಡ್ಡ ಪ್ರಮಾಣದ ಕೇಂದ್ರ ಸ್ಥಳಗಳಲ್ಲಿ ದೊರೆಯುತ್ತವೆ. ಹಿನ್ನಾಡುಗಳು ವೃತ್ತಾಕಾರವನ್ನು ಹೊಂದಿದ್ದರೂ ವಿವಿಧ ವಸತಿಗಳ ಹಿನ್ನಾಡನ್ನು ಪ್ರತ್ಯೇಕಿಸುವ ವೃತ್ತಗಳನ್ನೆಳೆದಾಗ, ವಿವಿಧ ಕೇಂದ್ರಗಳ ಹಿನ್ನಾಡುಗಳನ್ನು ಪ್ರತ್ಯೇಕಿಸಲು ಷಟ್ಕೋನಾಕೃತಿಯ ಬಳಕೆ ಉಪಯುಕ್ತವಾದುದೆಂದು ಕ್ರಿಸ್ಟಾಲರ್ ಪ್ರತಿಪಾದಿಸಿದ.

ಒಟ್ಟಾರೆ ಕ್ರಿಸ್ಟಾಲರ್‌ನ ಕೇಂದ್ರಸ್ಥಾನ ಸಿದ್ಧಾಂತ ಈ ಕೆಳಗಿನ ಸಾಮಾನ್ಯ ಭಾವಗಳನ್ನು ಹೊಂದಿದೆ.




ಕೇಂದ್ರಸ್ಥಾನ ಸಿದ್ಧಾಂತದಲ್ಲಿ ಶ್ರೇಣಿ ಆಧರಿತ ವಸತಿಗಳ ವ್ಯವಸ್ಥೆ

ಕೇಂದ್ರಸ್ಥಾನ ಮುಖ್ಯವಾಗಿ ಸೇವಾ ಸೌಲಭ್ಯಗಳ ಸುತ್ತ ಬೆಳೆಯುವುದು. ಕೇಂದ್ರಸ್ಥಾನ ವಸತಿಗಳ ಒಟ್ಟು ಲೆಕ್ಕಾಚಾರವಾಗಿರದೇ ವಸತಿ ಮತ್ತು ಜನಸಂಖ್ಯೆಯ ಆರ್ಥಿಕ ಬೆಳವಣಿಗೆಯ ಮಟ್ಟವನ್ನು ಆಧರಿಸಿ ಇರುವಂತದ್ದಾಗಿದೆ. ಚಿಕ್ಕ ವಸತಿಗಳು ಪರಸ್ಪರ 7 ಕಿಮೀ ಅಂತರದಲ್ಲೂ ಅನಂತರದ ಪಟ್ಟಣಗಳು ಪರಸ್ಪರ 12 ಕಿಮೀ ಅಂತರದಲ್ಲೂ ನೆಲೆಗೊಂಡಿವೆಯೆಂದು ತನ್ನ ಸಿದ್ಧಾಂತದ ಮೂಲಕ ನಿರೂಪಿಸಿದ. ಇದನ್ನು ಬಳಸಿ ನಗರಗಳ ಕಾರ್ಯ, ವಿಸ್ತಾರ ಮತ್ತು ಹಂಚಿಕೆಯ ವ್ಯವಸ್ಥೆಯನ್ನು ವಿಶ್ಲೇಷಿಸಲು ಬಹು ಉಪಯುಕ್ತವಾಗಿರುವುದು. (ಕೆ.ಬಿ.)

**ಕೇಂದ್ರಾಭಿಮುಖ ಮತ್ತು ಕೇಂದ್ರಾಪಗಾಮಿ ಬಲಗಳು:** ವೃತ್ತಾಕಾರದ ಕಕ್ಷೆಯ ಮೇಲೆ ಒಂದು ಕಣ ಚಲಿಸುತ್ತಿರುವಾಗ ಅದರ ಮೇಲೆ ವೃತ್ತಕೇಂದ್ರದೆಡೆಗೆ ವರ್ತಿಸುತ್ತಿರುವ ಬಲ ಕೇಂದ್ರಾಭಿಮುಖ ಬಲ (ಸೆಂಟ್ರಿಪೀಟಲ್ ಫೋರ್ಸ್). ಒಂದು ಜಡ ಚೌಕಟ್ಟನ್ನು ಕುರಿತು W ಕೋನವೇಗದಿಂದ ಆವರ್ತಿಸುತ್ತಿರುವ ಒಂದು ನಿರ್ದೇಶಕ ಚೌಕಟ್ಟಿನಲ್ಲಿರುವ ಒಬ್ಬ ವೀಕ್ಷಕ ಅನುಭವಿಸುವ ಆರೀಯವಾಗಿ ಹೊರಚಾಚಿರುವ ಬಲ ಕೇಂದ್ರಾಪಗಾಮಿ ಬಲ (ಸೆಂಟ್ರಿಫ್ಯೂಗಲ್ ಫೋರ್ಸ್).

ಕೇಂದ್ರಾಪಗಾಮಿ ಬಲ ಎನ್ನುವುದು ಒಂದು ಕಲ್ಪನೆ, ನಿಜವಲ್ಲದ ಬಲ ಎಂಬ ಅಭಿಪ್ರಾಯವಿದೆ. ಬಲ, ಪ್ರತಿಬಲಗಳು ಒಂದನ್ನು ಇನ್ನೊಂದು ನಿವಾರಿಸುವುದರಿಂದ ಒಟ್ಟು ಬಲ ಸೊನ್ನೆಯಾಗಿ ಕಣ ಸರಳರೇಖೆಯಲ್ಲಿ ಚಲಿಸಬೇಕಾಗುತ್ತದೆ ಎನ್ನುವುದೇ ಈ ಅಭಿಪ್ರಾಯಕ್ಕೆ ಕಾರಣ. ಆದ್ದರಿಂದ ಕೇಂದ್ರಾಪಗಾಮಿ ಬಲದ ನಿಜಸ್ವರೂಪವನ್ನು ತಿಳಿಯುವುದು ಆವಶ್ಯಕ. ವೇಗವಾಗಿ ತಿರುಗುವ ಗಿರಗಟ್ಟಲೆಯಲ್ಲಿ (ಮೆರ್ರಿಗೋರೌಂಡ್) ಕುಳಿತು ಒಂದು ಭಾರವಾದ ವಸ್ತುವನ್ನು ಕೈಯಲ್ಲಿ ಹಿಡಿದರೆ ಆ ವಸ್ತು ವೃತ್ತಕಕ್ಷೆಯಲ್ಲಿ ಆವರ್ತಿಸುವಾಗ ನಮ್ಮ ಕೈಯನ್ನು ಕೇಂದ್ರವಿಮುಖ ದಿಕ್ಕಿನಲ್ಲಿ ಜಗ್ಗಿಸುತ್ತದೆ. ವಸ್ತು ಕೇಂದ್ರದಿಂದ ದೂರವಾಗದೆ ಇರಬೇಕಾದರೆ ನಾವು ಆ ವಸ್ತುವನ್ನು ಕೇಂದ್ರದ ಕಡೆಗೆ ಸತತವಾಗಿ ಎಳೆದು ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಆವರ್ತಿಸುತ್ತಿರುವ ಚೌಕಟ್ಟಿನಲ್ಲಿ ಕೇಂದ್ರಾಪಗಾಮಿ ಬಲದ ಅಸ್ತಿತ್ವ ಮತ್ತು ಅದರ ಪರಿಣಾಮ ನಿಜವಾದವೇ. ನೆಲದ ಮೇಲೆ ಇರುವ ವೀಕ್ಷಕನಾದರೋ (ಈತ ಚಲಿಸುತ್ತಿಲ್ಲ) ವಸ್ತು ಸರಳರೇಖೆಯಲ್ಲಿ ಚಲಿಸುವುದನ್ನು ತಪ್ಪಿಸಿ ವೃತ್ತಕಕ್ಷೆಯ ಚಲಿಸುವಂತೆ ಮಾಡಲು ಕೇಂದ್ರಾಭಿಮುಖ ಬಲ ಮಾತ್ರ ಪ್ರಯುಕ್ತವಾಗುತ್ತಿದೆ ಎಂದು ಎಣಿಸುತ್ತಾನೆ. ಕೇಂದ್ರಾಪಗಾಮಿ ಬಲ ಮಾತ್ರ ಈತನ ದೃಷ್ಟಿಯಿಂದ ನಿಜವಲ್ಲ. ಆವರ್ತಿಸುವ ಚೌಕಟ್ಟಿಗೆ ಸಂಬಂಧಿಸಿದಂತೆ ಕೇಂದ್ರಾಪಗಾಮಿ ಬಲ ಇರುವುದು ನಿಜ. (ಎಚ್.ಎಸ್.ವಿ.)

**ಕೇಂದ್ರೀಯ ಪ್ರದೇಶ (ನೋಡಲ್ ಪ್ರದೇಶ):** ಕೇಂದ್ರೀಯ ಪ್ರದೇಶವೂ ಒಂದೇ ತರಹದ ಗುಣವನ್ನು ಹೊಂದಿರುವುದಾದರೂ, ಈ ಗುಣಗಳು ಕೇವಲ ತನ್ನ ಆಂತರಿಕ ವಿನ್ಯಾಸಕ್ಕೆ ಮತ್ತು ವ್ಯವಸ್ಥೆಗೆ ಸೀಮಿತವಾಗಿರುತ್ತವೆ. ಈ ಪ್ರದೇಶ ಕೇಂದ್ರ ಬಿಂದುವನ್ನು ಹೊಂದಿದ್ದು, ಸಾರಿಗೆ ಮತ್ತು ಸಂಪರ್ಕ ವಾಹಕಗಳು ಬಿಂದುವಿನ ಸುತ್ತ ಹೆಣೆದಿರುತ್ತದೆ. ಹೆದ್ದಾರಿ ಮತ್ತು ಮುಖ್ಯ ದಾರಿಗಳು ಎಲ್ಲಿ ಪರಸ್ಪರ ಸಂಧಿಸುತ್ತವೆಯೋ ಅಲ್ಲಿ ಸೌಲಭ್ಯಗಳಿದ್ದಲ್ಲಿ ಕೇಂದ್ರೀಯ ಪ್ರದೇಶಗಳು ಅಭಿವೃದ್ಧಿ ಹೊಂದುತ್ತದೆ. ಆರ್ಥಿಕ

ಚಟುವಟಿಕೆಗಳು ಕೇಂದ್ರೀಯ ಪ್ರದೇಶವನ್ನು ಬಲಗೊಳಿಸುತ್ತದೆ. ಎಲ್ಲಿ ಆರ್ಥಿಕ ನೆಲೆ ಭದ್ರವಾಗಿರುತ್ತದೊ ಅಲ್ಲಿ ಡೈನಾಮಿಕ್ ಬೃಹತ್‌ನಗರಗಳು ಬೆಳೆಯಲು ಸಹಕಾರಿಯಾಗಿರುತ್ತದೆ. ಉದಾಹರಣೆಗೆ ದೆಹಲಿ ನಗರ ಮತ್ತು ಬೆಂಗಳೂರು ನಗರ. ಆದರೆ ಎಲ್ಲಾ ಕೇಂದ್ರೀಯ ಪ್ರದೇಶಗಳು ಸದೃಢವಾಗಿರುವುದಿಲ್ಲ. ಹೆದ್ದಾರಿಯಿಂದ ಸಂಧಿಸಲ್ಪಟ್ಟಿದ್ದರೂ, ಸಂಪನ್ಮೂಲದ ಮತ್ತು ಸೌಲಭ್ಯಗಳ ಕೊರತೆಯಿಂದ ಕೇಂದ್ರೀಯ ಪ್ರದೇಶಗಳು ದುರ್ಬಲವಾಗಿರುತ್ತವೆ. ಉದಾಹರಣೆಗೆ ನಾಗಪುರ. ಈ ದುರ್ಬಲ ಕೇಂದ್ರೀಯ ಪ್ರದೇಶಗಳು ಸುತ್ತಲಿನ ಪ್ರದೇಶ ಬೆಳೆಯಲು ಸಹಕಾರಿಯಾಗಿರುವುದಿಲ್ಲ ಮತ್ತು ಪ್ರಸರಣ ಪರಿಣಾಮವನ್ನು ಬೀರುವುದಿಲ್ಲ. ರೈಲು ಸಂಪರ್ಕ ಮತ್ತು ವಾಯು ಸಂಪರ್ಕಗಳಿದ್ದಲ್ಲಿ ಕೇಂದ್ರೀಯ ಪ್ರದೇಶಗಳು ತ್ವರಿತಗತಿಯಲ್ಲಿ ಬೆಳವಣಿಗೆಯನ್ನು ಹೊಂದುತ್ತವೆ. (ಎಸ್.ಎಸ್.)

**ಕೇಂದ್ರೀಯ ಪ್ರವೃತ್ತಿಯ ಮಾಪನಗಳು:** ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಆವೃತ್ತಿ ಪಟ್ಟಿಯನ್ನು ರಚಿಸಿದಾಗ ಪ್ರಮುಖವಾದ ಒಂದು ವಿಷಯ ವ್ಯಕ್ತವಾಗುತ್ತದೆ. ಅದೆಂದರೆ ಆವೃತ್ತಿ ಪಟ್ಟಿಯಲ್ಲಿನ ಅಂಕಿ ಅಂಶಗಳು ಆ ಪಟ್ಟಿಯ ಮಧ್ಯಮ ಬೆಲೆಯ ಸುತ್ತ ಕೇಂದ್ರೀಕೃತವಾಗಿರುತ್ತವೆ. ಅಂಕಿ ಅಂಶಗಳ ಈ ಪ್ರವೃತ್ತಿಯನ್ನೇ ಕೇಂದ್ರೀಯ ಪ್ರವೃತ್ತಿಯೆಂದೂ ಇದನ್ನು ಅಳೆಯುವ ಮಾಪನಗಳನ್ನು ಕೇಂದ್ರೀಯ ಪ್ರವೃತ್ತಿ ಮಾಪನಗಳೆಂದೂ ಕರೆಯುತ್ತಾರೆ. ಕೇಂದ್ರೀಯ ಪ್ರವೃತ್ತಿಯ ಬೆಲೆಯನ್ನು ಸಂಬಂಧಿಸಿದ ಅಂಕಿ ಅಂಶಗಳ ಸರಾಸರಿ ಬೆಲೆಯೆಂದು ಪರಿಗಣಿಸಿ ಅದನ್ನು ಪ್ರಾತಿನಿಧಿತ ಸಂಖ್ಯೆ ಎಂದೂ ಸಹ ಕರೆಯುತ್ತಾರೆ. ಸರಾಸರಿ ಅಂಕಿ ಅಂಶಗಳ ಸಾರಾಂಶವನ್ನು ವರ್ಣಿಸುತ್ತದೆ. ಮತ್ತು ಕೆಲವು ಮಹತ್ತ್ವವಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

1) ಅಧಿಕ ಅಂಕಿ ಅಂಶಗಳನ್ನು ಸಾಂದ್ರೀಕರಿಸಿ ಒಂದು ಪ್ರಾಧಿನಿದಿತ ಸಂಖ್ಯೆಯನ್ನು ಕೊಡುವುದರಿಂದ ಆ ವಿಷಯದ ಬಗ್ಗೆ ಸ್ಪಷ್ಟವಾದ ಅರಿವನ್ನು ಮೂಡಿಸುತ್ತದೆ. ಉದಾಹರಣೆಗೆ ಒಂದು ಸ್ಥಳದಲ್ಲಿ ಯಾವುದೇ ತಿಂಗಳಿನ ಎಲ್ಲಾ ದಿನಗಳ ಉಷ್ಣಾಂಶವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟವಾದ ಕೆಲಸ ಆದರೆ ಆ ತಿಂಗಳಿನ ದೈನಂದಿನ ಸರಾಸರಿ ಉಷ್ಣಾಂಶವನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು.

2) ಸರಾಸರಿಗಳ ಇನ್ನೊಂದು ಕಾರ್ಯವೆಂದರೆ ಎರಡು ಪ್ರದೇಶಗಳ ಅಥವಾ ಎರಡು ಗುಂಪುಗಳ ನಡುವಿನ ಹೋಲಿಕೆಯನ್ನು ಸಮರ್ಪಕವಾಗಿ ಮಾಡಲು ಸಹಾಯವಾಗುತ್ತದೆ. ಅಂದರೆ ಒಂದು ಪ್ರದೇಶದ ವಾರ್ಷಿಕ ಸರಾಸರಿ ಮಳೆಯನ್ನು ಇನ್ನೊಂದು ಪ್ರದೇಶದ ವಾರ್ಷಿಕ ಸರಾಸರಿ ಮಳೆಯೊಂದಿಗೆ ಹೋಲಿಸಿ, ಯಾವ ಪ್ರದೇಶ ಅಧಿಕ ಮಳೆಯುಳ್ಳದ್ದು ಎಂಬುದನ್ನು ಸುಲಭವಾಗಿ ಹೇಳಬಹುದು.

ಸರಾಸರಿಯ ವಿಧಗಳು: ಸಾಮಾನ್ಯವಾಗಿ ರೂಢಿಯಲ್ಲಿರುವ ಕೇಂದ್ರೀಯ ಪ್ರವೃತ್ತಿ ಮಾಪನಗಳೆಂದರೆ 1) ಗಣಿತ ಸರಾಸರಿ 2) ಮಧ್ಯಕ ಮತ್ತು 3) ಬಹುಳಕ. ಪ್ರತಿಯೊಂದು ವಿದವೂ ಸಹ ತನ್ನದೆ ಆದ ಗುಣದೋಷಗಳನ್ನು ಒಳಗೊಂಡಿದ್ದು, ಅಧ್ಯಯನದ ಉದ್ದೇಶಗಳಿಗೆ ಅನುಗುಣವಾಗಿ ಈ ವಿಧಗಳನ್ನು ಆಯ್ಕೆ ಮಾಡಿಕೊಳ್ಳ ಬೇಕಾಗುತ್ತದೆ. (?)

**ಕೇಂದ್ರೀಯ ವಲಯ ಸಿದ್ಧಾಂತ:** ಪ್ರಖ್ಯಾತ ನಗರ ಅಧ್ಯಯನ ಶಾಸ್ತ್ರಜ್ಞನಾದ ಈ.ಡಬ್ಲ್ಯೂ ಬರ್ಗೆಸ್ ಅಮೆರಿಕದ ಶಿಕಾಗೋ ನಗರವನ್ನು ಅಭ್ಯಸಿಸಿ ಕೇಂದ್ರೀಯ ಸಿದ್ಧಾಂತವನ್ನು ಪ್ರಪ್ರಥಮ ಬಾರಿಗೆ ಪ್ರಪಂಚಕ್ಕೆ ಪರಿಚಯಿಸಿದ (1923). ಈತನ ಮತಾನುಸಾರ ಒಂದು ನಗರ ಒಂದು ಕೇಂದ್ರದಿಂದ ದೂರಕ್ಕೆ ಹೋದಂತೆ ವೃತ್ತಾಕಾರವಾಗಿ ಇತರ ವಲಯಗಳು ಬೆಳವಣಿಗೆಯನ್ನು ಹೊಂದುತ್ತಾ ನಗರದ ಅಭಿವೃದ್ಧಿಗೆ ಸಹಾಯಕವಾಗುತ್ತವೆ. ನಗರದ ಆಂತರಿಕ ರಚನೆಯು ಭಿನ್ನವಾಗಿರುತ್ತದೆ. ಆದ್ದರಿಂದ ಈತ ಈ ಕೆಳಕಂಡಂತೆ ನಗರದ ಆಂತರಿಕತೆಯನ್ನು 5 ವಿಭಾಗಗಳಾಗಿ ವಿಂಗಡಿಸಿದ್ದಾನೆ. ಅವುಗಳೆಂದರೆ,

ಅ. ಲೂಪ್ ಅಥವಾ ಕೇಂದ್ರೀಯ ವಾಣಿಜ್ಯ ವಲಯ: ಈ ವಲಯವನ್ನು ಅಮೆರಿಕದ ಪರಿಭಾಷೆಯಲ್ಲಿ ಡೌನ್‌ಟೌನ್ ಎನ್ನುತ್ತಾರೆ. ಇದು ನಗರದ ಕೇಂದ್ರವಲಯದಲ್ಲಿ ಸ್ಥಾಪಿತವಾಗಿರುತ್ತದೆ. ಇದೊಂದು ವ್ಯಾಪಾರ ಮತ್ತು ಆಡಳಿತ ಚಟುವಟಿಕೆಗಳ ಪ್ರದೇಶ. ಎಲ್ಲಾ ವ್ಯಾಪಾರ ಚಟುವಟಿಕೆಗಳು ಮತ್ತು ಅಂಗಡಿ ಮಳಿಗೆಗಳು, ಸಾರ್ವಜನಿಕ ಕಟ್ಟಡಗಳು, ಬ್ಯಾಂಕ್, ಸಂಘಸಂಸ್ಥೆಗಳು, ಸಿನಿಮಾ ಮಂದಿರಗಳು, ಕಲಾಮಂದಿರಗಳು ಮತ್ತು ನಿರ್ದೇಶಾತ್ಮಕ ಕೇಂದ್ರಗಳನ್ನು ಹೊಂದಿರುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ಬಹು ಮಹಡಿಯ ವಾಣಿಜ್ಯ ಸಂಕೀರ್ಣ ಮತ್ತು ವಾಹನಗಳ ಸಂಚಾರಿವಲಯಗಳು ಕಂಡುಬರುತ್ತವೆ.

ಆ. ಬದಲಾವಣಾ ವಲಯ: ಈ ವಲಯವು ವ್ಯಾಪಾರ ಮತ್ತು ಮಾರುಕಟ್ಟೆ ವಲಯದ ಆಸುಪಾಸಿನಲ್ಲಿರುತ್ತದೆ. ಇದು ಶಿಥಿಲಗೊಂಡ ಕಟ್ಟಡಗಳು ಮತ್ತು ಕೊಳಚೆ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಇದು ವಸತಿವಲಯದಿಂದ ವ್ಯಾಪಾರಿ ವಲಯವಾಗಿ ಪರಿವರ್ತನಗೊಳ್ಳುತ್ತದೆ. ಇದು ಅತಿಯಾಗಿ ಕೇಂದ್ರೀಕೃತಗೊಳ್ಳುತ್ತಿರುವ ವ್ಯಾಪಾರ ವಲಯದಿಂದ ಉತ್ಪಾದಿತ ಅಹಿತಕರ ನೆರೆಹೊರೆಯಾಗಿ ಪರಿವರ್ತನೆಗೊಂಡಿದ್ದಾಗಿದೆ. ಈ ವಲಯದಲ್ಲಿ ಒಳ ವಲಸೆಗಾರರು ಮತ್ತು ಅಧಿಕವಾಗಿ ಹಿಂದುಳಿದ ಜನರು ನೆಲೆಸಿರುತ್ತಾರೆ. ಈ ಸ್ಥಿತ್ಯಂತರ ವಲಯವು ವ್ಯಾಪಾರ ಮತ್ತು ಲಘು ಕೈಗಾರಿಕಾ ಪ್ರದೇಶವಾಗಿದ್ದು ಕೊಳಕು ದುರಾಚಾರಗಳಿಂದ ಕೂಡಿರುತ್ತದೆ.







ಇ. ಕಾರ್ಮಿಕ ವಸತಿ ವಲಯ: ಈ ವಲಯವು ಬದಲಾವಣಾ ವಲಯಕ್ಕೆ ಅತೀ ಸಮೀಪದಲ್ಲಿದ್ದು ಕಾರ್ಖಾನೆಗಳು ಈ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತವೆ. ಕಾರ್ಮಿಕರು ಸಾಮಾನ್ಯವಾಗಿ ತಮ್ಮ ಕೆಲಸದ ಸ್ಥಳಗಳ ಸಮೀಪದಲ್ಲಿ ಇರಲು ಅಪೇಕ್ಷಿಸುತ್ತಾರೆ. ಈ ವಲಯವು ಕೊಳಚೆ ಪ್ರದೇಶಗಳ ಸಮೀಪದಲ್ಲಿದ್ದು ಬಹುವಸತಿ ಕಟ್ಟಡಗಳನ್ನು ಹೊಂದಿರುತ್ತದೆ. ಇಲ್ಲಿ ವಠಾರಗಳು ಹೆಚ್ಚು ಹಾಗು ಕಾರ್ಮಿಕರ ಪ್ರಾಬಲ್ಯ ಹೆಚ್ಚು.

ಈ. ವಸತಿ ವಲಯ: ಈ ವಲಯವು ನಗರ ಕೇಂದ್ರವಲಯದಿಂದ ಸಾಕಷ್ಟು ದೂರವಿರುತ್ತವೆ. ಇದು ಉತ್ತಮ ಶ್ರೇಣಿಯ ವಾಸದ ಮನೆಗಳು, ಬಂಗಲೆಗಳು ಮತ್ತು ಬಹುಮಹಡಿಯ ಕಟ್ಟಡಗಳನ್ನು ಹೊಂದಿರುತ್ತದೆ. ಈ ವಲಯವು ವಿಶಾಲವಾದ ರಸ್ತೆಗಳು, ಉದ್ಯಾನವನ, ಸುಂದರವಾದ ಕಟ್ಟಡಗಳನ್ನು ಹೊಂದಿರುತ್ತವೆ.

ಉ. ನಿತ್ಯ ಸಂಚಾರಿ ವಲಯ: ಕಮ್ಯೂಟರ್ ವಲಯ: ಈ ವಲಯ ನಗರದ ಹೊರವಲಯಗಳ ಮತ್ತು ನಗರ ಗ್ರಾಮ ಎಲ್ಲೆಯಲ್ಲಿ ಕಂಡುಬರುತ್ತದೆ. ಈ ವಲಯವು ಕೆಲಸಗಾರರನ್ನು, ಕೂಲಿಕಾರ್ಮಿಕರನ್ನು, ಭೂ ಒಡೆಯರನ್ನು ಹಾಗೂ ನಗರದಲ್ಲಿ ವಾಸಿಸಲು ನೆಲೆ ಸಿಕ್ಕದವರನ್ನು ಒಳಗೊಂಡಿರುತ್ತದೆ. ಈ ವಲಯದ ನಿವಾಸಿಗಳು ವಾಹನಗಳ ಸೌಲಭ್ಯಗಳ ಮೂಲಕ ದಿನವು ಕೆಲಸದ ಸ್ಥಳಗಳಿಗೆ ಸಂಚರಿಸುತ್ತಾರೆ ಮತ್ತು ಈ ವಲಯವು ನಗರದಿಂದ ಬೇರ್ಪಟ್ಟು ಹಸುರು ವಲಯದಿಂದ ಕೂಡಿರುತ್ತದೆ.

ಬರ್ಗೆಸ್‌ರವರ ಪ್ರಕಾರ ನಗರದ ಬೆಳೆವಣಿಗೆಯು ನಗರದಲ್ಲಿ ವಾಸಿಸುವ ವಿವಿಧ ಹಂತದ ಜನರು, ಅವರ ವೃತ್ತಿ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಆಧರಿಸಿ ನಗರದ ಬಳಕೆಯಾಗಿರುತ್ತದೆ. ನಗರದ ಹೃದಯ ಭಾಗದಲ್ಲಿ ಭೂ ಬಳಕೆ ಅಧಿಕವಾಗಿರುತ್ತವೆ. ಮತ್ತು ಕೇಂದ್ರದಿಂದ ಹೊರ ಹೋದಂತೆ ಬಳಕೆ ಪ್ರಮಾಣ ಕಡಿಮೆ. ಹಾಗು ಇಲ್ಲಿ ಅಧಿಕ ಪ್ರಮಾಣ ವಿದೇಶಿಯರು ಕಂಡುಬಂದರೆ ಲಿಂಗಾನುಪಾತ ಪ್ರಮಾಣ ಮತ್ತು ಬಡತನ ಕಡಿಮೆಯಾಗುತ್ತಾ ಹೋಗುತ್ತದೆ. (ಡಿ.ಎಂ.)

**ಕೇಂದ್ರೀಯ ವಾಣಿಜ್ಯ ಪ್ರದೇಶ:** ಸಾಮಾನ್ಯ ಅಥವಾ ಪ್ರಧಾನವಾಗಿ ವ್ಯಾಪಾರ ಮತ್ತು ವಾಣಿಜ್ಯ ದೃಷ್ಟಿಯಿಂದ ಬಳಸಲ್ಪಡುವ ಪ್ರದೇಶಗಳನ್ನು ಕೇಂದ್ರ ವಾಣಿಜ್ಯ ಪ್ರದೇಶ ಎಂದು ಕರೆಯುತ್ತೇವೆ (ಸಿ.ಬಿ.ಡಿ). ಈ ವಲಯದಲ್ಲಿ ಭೂಮಿಯ ಬೆಲೆಯು ಅಧಿಕವಾಗಿರುತ್ತದೆ. ಹಾಗೂ ಬಹುಮಹಡಿ ಕಟ್ಟಡಗಳು ಕಂಡುಬರುತ್ತವೆ. ಈ ಪ್ರದೇಶ ಹೆಚ್ಚಾಗಿ ನೆಲಮಾಳಿಗೆ ಕಟ್ಟಡಗಳು ಹಾಗೂ ದಟ್ಟವಾದ ವಾಹನ ಸಂಚಾರಗಳಿಂದ ಕೂಡಿರುತ್ತದೆ. ಈ ಕೇಂದ್ರದಲ್ಲಿ ವಾಸದ ವಸತಿಗಳು ತುಂಬಾ ವಿರಳ ಮತ್ತು ದಿನ ನಿತ್ಯ ಬಂದು ಹೋಗುವವರ ಪ್ರಮಾಣ ಅಧಿಕವಾಗಿರುತ್ತದೆ. ಹಗಲಿನ ಅವಧಿಯಲ್ಲಿ ಈ ಪ್ರದೇಶವು ತುಂಬಾ ಜನಸಾಂದ್ರತೆಯಿಂದ ಕೂಡಿರುತ್ತದೆ. ಭೂ ಬಳಕೆ ಅಗಾಧವಾಗಿರುತ್ತದೆ ಹಾಗೂ ಭೂಮಿಯು ಸದ್ಬಳಕೆಯಿಂದ ಕೂಡಿರುತ್ತದೆ.

ಈ ಕೇಂದ್ರೀಯ ವಾಣಿಜ್ಯ ಪ್ರದೇಶದ ಸುತ್ತ ನಗರ ಹರಡಿಕೊಂಡಿರುತ್ತದೆ. ಇದು ಕೇಂದ್ರ ಸ್ಥಾನವಾಗಿದ್ದು ಇಲ್ಲಿ ಸಾರ್ವಜನಿಕ ಕಟ್ಟಡಗಳು ಸರ್ಕಾರಿ ಮತ್ತು ಅರೆಸರ್ಕಾರಿ ಕಛೇರಿಗಳು ವಾಣಿಜ್ಯ, ವ್ಯಾಪಾರ ಮಳಿಗೆಗಳು ಬ್ಯಾಂಕುಗಳ ಮುಖ್ಯ ಕಛೇರಿಗಳು, ಉಪಹಾರ ಗೃಹಗಳು ಕ್ಲಬ್‌ಗಳು, ಸಿನಿಮಾಮಂದಿರಗಳು ಮುಂತಾದವುಗಳು ಅಧಿಕವಾಗಿರುತ್ತವೆ. ಇಲ್ಲಿನ ಭೂಮಿಯ ಮೌಲ್ಯವು ಅತ್ಯಂತ ಅಧಿಕವಾಗಿರುತ್ತದೆ. ಸಿಬಿಡಿ ಯು ವಾಣಿಜ್ಯ ಕೇಂದ್ರ ಪ್ರದೇಶವಾಗಿರುವುದರಿಂದ ಸಾಮಾಜಿಕ, ನಾಗರಿಕ ಕೇಂದ್ರವೂ ಆಗಿದೆ. ಉದಾ: ಕನ್ನಾಟ್ ಪ್ರದೇಶ (ದೆಹಲಿ), ಎಂ.ಜಿ.ರೋಡ್ (ಬೆಂಗಳೂರು).

ಅಮೆರಿಕದ ಸಿಬಿಡಿ ಗಳ ಬಗ್ಗೆ ಈಗಾಗಲೇ ಅನೇಕ ಅಧ್ಯಯನ ನಡೆದು ಅಲ್ಲಿನ ಭೂಮಿಯನ್ನು ಸದ್ಬಳಕೆ ಮಾಡಿಕೊಳ್ಳುತ್ತಾರೆ. ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ಇಲ್ಲಿ ನಗರಗಳನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳಲಾಗಿದೆ. ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ ಅಧಿಕವಾಗಿ ವ್ಯಾಪಾರ ಮಳಿಗೆಗಳು ಕಂಡುಬರುತ್ತವೆ. ಆದರೆ ಸ್ಥಾನದ ಸಾಂದ್ರತೆ ಒಂದು ನಗರದಿಂದ ಮತ್ತೊಂದು ನಗರಕ್ಕೆ ಭಿನ್ನತೆಯಿಂದ ಕೂಡಿರುತ್ತದೆ. ಏಕೆಂದರೆ ಕೆಲವು ಸಿಬಿಡಿಗಳು ಯೋಜನಾಬದ್ಧವಾಗಿ ನಿರ್ಮಿತವಾಗಿರುತ್ತದೆ. ಮತ್ತು ಕೆಲವು ಯೋಜನಾಬದ್ಧವಾಗಿರುವುದಿಲ್ಲ. ಆದ್ದರಿಂದ ಇವುಗಳ ತಾಂತ್ರಿಕ ಸಾಮಾಜಿಕ, ಸಾಂಸ್ಕೃತಿಕ ಅಂಶಗಳಿಂದ ಬಳಲುತ್ತಿರುತ್ತದೆ. ಭಾರತದ ನಗರಗಳು ಸಾಮಾನ್ಯವಾಗಿ ಹಳೆಯದಾದರೂ ಈಚೆಗೆ ತುಂಬಾ ಬೆಳವಣಿಗೆಯನ್ನು ಹೊಂದಿರುತ್ತವೆ. ಕೇಂದ್ರೀಯ ವಾಣಿಜ್ಯ ಪ್ರದೇಶಗಳಲ್ಲಿ ನೀಳ ವಸತಿಗಳಿಗಿಂತ ಕಾರ್ಯಮುಖ ವಸತಿಗಳು ಅಧಿಕವಾಗಿರುತ್ತವೆ. ಜೊತೆಗೆ ಅಲ್ಲಿನ ಬಾಡಿಗೆಯೂ ತುಂಬ ಅಧಿಕ, ಪ್ರಸಕ್ತ ಸನ್ನಿವೇಶಗಳನ್ನು ಗಮನಿಸಿದಾಗ ಈ ಪ್ರದೇಶಗಳು ಆರ್ಥಿಕವಾಗಿ ಸಬಲತೆಯಿಂದ ಕೂಡಿದೆ. (ಡಿ.ಎಂ.)

**ಕೇಂಬ್ರಿಜ್[1]:** ಇಂಗ್ಲೆಂಡಿನ ಕೇಂಬ್ರಿಜ್‌ಷೈರ್ ಕೌಂಟಿಯ ಮುಖ್ಯ ಪಟ್ಟಣ; ವಿಶ್ವವಿದ್ಯಾಲಯ ಕೇಂದ್ರ; ಪಾರ್ಲಿಮೆಂಟರಿ ಕ್ಷೇತ್ರ. ಲಂಡನ್ನಿನ ಈಶಾನ್ಯಕ್ಕೆ 90 ಕಿಮೀ ಮತ್ತು ಆಕ್ಸ್‌ಫರ್ಡಿನ ಈಶಾನ್ಯಕ್ಕೆ 128 ಕಿಮೀ ದೂರದಲ್ಲಿರುವ ಈ ನಗರ ಜವುಗಿನಿಂದ ಕೂಡಿದ ಮೈದಾನದಲ್ಲಿ, ಸಮುದ್ರಮಟ್ಟಕ್ಕೆ 7–26 ಮೀ ಎತ್ತರದಲ್ಲಿದೆ. ವಿಶ್ವವಿದ್ಯಾಲಯದ ನಿವಾಸಿಗಳೂ ಸೇರಿದಂತೆ ಇಲ್ಲಿಯ ಜನಸಂಖ್ಯೆ 1,08,878. ಊಜ್ ನದಿಯ ಉಪನದಿಯಾದ ಕೇಮ್‌ಗೆ ಪೂರ್ವದಡದಲ್ಲಿ ಈ ನಗರದ ಬಹುಭಾಗ ಹಬ್ಬಿದೆ. ನದಿಯ ಇನ್ನೊಂದು ದಡವನ್ನೂ ಇದರ ಉಪನಗರಗಳು ಆವರಿಸಿವೆಯಾದರೂ ಪಶ್ಚಿಮದ ವಿಸ್ತರಣ ಬಹಳ ಮಟ್ಟಿಗೆ ವಿಶ್ವವಿದ್ಯಾಲಯಕ್ಕೇ ಮೀಸಲಾಗಿದೆ. ದಕ್ಷಿಣದಲ್ಲಿ ಸುಣ್ಣಕಲ್ಲಿನ ಮತ್ತು ಪಶ್ಚಿಮದಲ್ಲಿ ಜೇಡಿಮಣ್ಣಿನ ಗುಡ್ಡಗಳ ಸಾಲುಗಳಿವೆ. ಇಂಗ್ಲೆಂಡಿನ ನಿಜವಾದ ವಿಶ್ವವಿದ್ಯಾಲಯನಗರವೆಂದರೆ ಆಧುನಿಕ ಕೇಂಬ್ರಿಜ್ ಒಂದೇ ಎಂದು ಬಣ್ಣಿಸಲಾಗಿದೆ. ಇಲ್ಲಿ 15–19ನೆಯ ಶತಮಾನಗಳ ನಡುವೆ ಕಟ್ಟಿದ ಬೃಹದ್ ಚರ್ಚ್‌ಗಳು ಮತ್ತು ಸೌಧಗಳಿವೆ. ವಾಸ್ತುಶಿಲ್ಪದ ಈ ಹಲವಾರು ಮಾದರಿಗಳು ನಗರದ ಸೌಂದರ್ಯವನ್ನು ಹೆಚ್ಚಿಸಿವೆ. ಕಾರ್ಪಸ್ ಕ್ರಿಸ್ಟಿ ಭವನ, ಪೀಟರ್‌ಹೌಸ್‌ನ ಸಂಘ ಭವನ, ಕ್ವೀನ್ಸ್ ಕಾಲೇಜಿನ ಅಧ್ಯಕ್ಷಗೃಹ, ಕ್ಲೇರ್ ಮಂದಿರ, ಕಿಂಗ್ಸ್ ಕಾಲೇಜ್ ಕಟ್ಟಡ, ಟ್ರಿನಿಟಿ ಕಾಲೇಜ್ ಭವನ ಮುಂತಾದವೂ ಅಲ್ಲಲ್ಲಿ ತೆರವಾದ ಹಸುರು ಬಯಲುಗಳೂ ಸಸ್ಯಶಾಸ್ತ್ರಕ ಉದ್ಯಾನವೂ ನಗರದ ಸೌಂದರ್ಯವನ್ನು ಹೆಚ್ಚಿಸಿವೆ. ಇಲ್ಲಿ ಅನೇಕ ಸುಂದರ ಸೇತುವೆಗಳು ಕಂಗೊಳಿಸುತ್ತವೆ. ಕಿಂಗ್ಸ್ ಕಾಲೇಜಿನ ಆರಾಧನ ಮಂದಿರ (1446–1515) ಒಂದು ಪ್ರಖ್ಯಾತ ಕಟ್ಟಡ. ಇದು ಆರನೆಯ ಹೆನ್ರಿಯ ಕಾಲದಲ್ಲಿ ರೂಪುಗೊಂಡು ಇಂಗ್ಲೆಂಡಿನ ಮಧ್ಯಯುಗದ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಈ ಚರ್ಚಿನ ದೊಡ್ಡದೊಡ್ಡ ಒತ್ತು ಗೋಡೆಗಳು, ಉನ್ನತ ಶಿಖರಗಳು, ಅವುಗಳ ಮೇಲಿನ ಅಲಂಕಾರಯುತ ಬುರುಜುಗಳು, ವರ್ಣರಂಜಿತ ಚಿತ್ರಕಲೆಯಿಂದ ಕೂಡಿದ ಗಾಜಿನ ಕಿಟಕಿಗಳು ಅದ್ಭುತವಾಗಿವೆ.

ಸೇಂಟ್ ಬೆನೆಟ್ ಚರ್ಚ್, ಸೇಂಟ್ ಸೆಪಲ್ಕರ್ ಚರ್ಚ್ ಮುಂತಾದ ಅನೇಕ ಪ್ರಸಿದ್ಧ ಚರ್ಚುಗಳು ಇಲ್ಲಿವೆ. 19ನೆಯ ಶತಮಾನದಲ್ಲಿ ಸ್ಥಾಪಿತವಾದ ಫಿಟ್‌ಜ್‌ವಿಲಿಯಂ ವಸ್ತುಸಂಗ್ರಹಾಲಯ, ಎರಡನೆಯ ಮಹಾಯುದ್ಧಾನಂತರ ನಿರ್ಮಿತವಾದ ಎಂಜಿನಿಯರಿಂಗ್ ಪ್ರಯೋಗಾಲಯ, ಸ್ಕಾಟ್ ಧ್ರುವೀಯ ಸಂಶೋಧನಾಲಯ, ರಸಾಯನಶಾಸ್ತ್ರ ಪ್ರಯೋಗಾಲಯ, ಇವು ಇತರ ಕೆಲವು ಮುಖ್ಯ ಭವನಗಳು. ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡ ಕೇಂ ನದಿಗೆ ಪಶ್ಚಿಮದಲ್ಲಿದೆ. ಮ್ಯಾಗ್ಡಲೀನ್ ಕಾಲೇಜಿನ ಬಳಿ ಜನಪದ ವಸ್ತು ಸಂಗ್ರಹಾಲಯವಿದೆ.

ಕೇಂಬ್ರಿಜ್‌ಗೆ ಲಂಡನ್ ಮತ್ತು ಇತರ ಸ್ಥಳಗಳೊಂದಿಗೆ ಒಳ್ಳೆಯ ಸಾರಿಗೆ ಸಂಪರ್ಕವಿದೆ. ದೋಣಿ ವಿಹಾರ, ದೋಣಿ ಸ್ಪರ್ಧೆ, ತೋಡುದೋಣಿ ಸಂಚಾರ ಮುಂತಾದವಕ್ಕೆ ಕೇಂ ನದಿಯನ್ನು ಉಪಯೋಗಿಸಿಕೊಳ್ಳಲಾಗಿದೆ. ದೊಡ್ಡ ಯಾನಗಳಿಗಾಗಿ ಬಾಡಿಗೆಗೆ ನಾವೆಗಳೂ ದೊರಕುತ್ತವೆ. ಇಲ್ಲೊಂದು ಚಿಕ್ಕ ವಿಮಾನ ನಿಲ್ದಾಣವೂ ವಿಮಾನ ಶಿಕ್ಷಣಶಾಲೆಯೂ ಉಂಟು.

ಇಲ್ಲಿ ವ್ಯಾಪಕವಾಗಿ ಕೈಗಾರಿಕೆ ಬೆಳೆದಿದ್ದರೂ ನಗರಮಧ್ಯದಿಂದ ಬಲು ದೂರ ಚಾಚಿಲ್ಲ. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ, ಅದರ ಬೇಡಿಕೆಗಳನ್ನು ಪೂರೈಸುವ ಕೈಗಾರಿಕೆಗಳೇ ಹೆಚ್ಚು. ಕಟ್ಟಡ, ಮುದ್ರಣ, ಉಪಕರಣ, ರೇಡಿಯೊ ಎಲೆಕ್ಟ್ರಾನಿಕ್ಸ್, ಹಿಟ್ಟುಗಿರಣಿ, ಆಸ್ಫಾಲ್ಟ್– ಇವು ಇಲ್ಲಿಯ ಕೆಲವು ಕೈಗಾರಿಕೆಗಳು. ಅಂತರರಾಷ್ಟ್ರೀಯ ಖ್ಯಾತಿಯ, ಹೊಸ ಹಳೆಯ ಪುಸ್ತಕಗಳ ಮತ್ತು ಪುರಾತನ ವಸ್ತುಗಳ ಅಂಗಡಿಗಳೂ ಇಲ್ಲುಂಟು.

ಕೇಂಬ್ರಿಜ್‌ನ ಅತ್ಯಂತ ಪುರಾತನ ವಸತಿ ಇದ್ದದ್ದು ಬಹುಶಃ ಕೇಂ ನದಿಯ ಮೇಲೆ, ಸಮುದ್ರಕ್ಕೆ ಅತ್ಯಂತ ಹತ್ತಿರದಲ್ಲಿ, ಮಿಡ್ಲೆಂಡ್ಸ್‌ನ ಒಣ ನೆಲದಿಂದ ಪೂರ್ವದ ಒಣನೆಲಕ್ಕೆ ದಾಟಲು ಸಾಧ್ಯವಿದ್ದ ಸ್ಥಳದಲ್ಲಿ. ಈ ಎಡೆಯಲ್ಲಿ ಬಹಳ ಹಿಂದಿನಿಂದಲೂ ಒಂದು ಸೇತುವೆ ಇದೆ. ಸೇತುವೆಯ ಹೆಸರನ್ನು ಪಡೆದಿರುವ ಕೌಂಟಿ ಇಂಗ್ಲೆಂಡಿನಲ್ಲಿ ಕೇಂಬ್ರಿಜ್ ಒಂದೇ. ಅತ್ಯಂತ ಪ್ರಾಚೀನ ಕೇಂದ್ರವೊಂದರ ಸುತ್ತ ನಿರ್ಮಿತವಾದ ಆಧುನಿಕ ನಗರದ ಎಲ್ಲ ಸಮಸ್ಯೆಗಳೂ ಕೇಂಬ್ರಿಜಿನಲ್ಲಿವೆ. ಸಾರಿಗೆ ಮತ್ತು ವಸತಿ ಸಮಸ್ಯೆಗಳನ್ನು ಪರಿಹರಿಸಲು ಸಮಗ್ರವಾದ ಯೋಜನೆಯೊಂದು ಜಾರಿಗೆ ಬಂದಿದೆ. *

**ಕೇಂಬ್ರಿಜ್[2]:** ಅಮೆರಿಕ ಸಂಯುಕ್ತಸಂಸ್ಥಾನದ ಮ್ಯಾಸಚೂಸೆಟ್ಸ್ ರಾಜ್ಯದಲ್ಲಿರುವ ಒಂದು ನಗರ. ಮ್ಯಾಸಚೂಸೆಟ್ಸ್‌ನ ರಾಜಧಾನಿಯೂ ಮ್ಯಾಸಚೂಸೆಟ್ಸ್ ಕೊಲ್ಲಿಯ ಮೇಲಿರುವ ಬಂದರೂ ಆದ ಬಾಸ್ಟನ್ ನಗರಕ್ಕೆ ಹತ್ತಿರದಲ್ಲಿದೆ. ಮಿಡ್ಲ್ ಸೆಕ್ಸ್ ಕೌಂಟಿಯ ಕೇಂದ್ರ. ಜನಸಂಖ್ಯೆ 101355.

ಇಲ್ಲಿ ಮೊಟ್ಟಮೊದಲ ವಸತಿ ಸ್ಥಾಪಿತವಾದುದು ಮ್ಯಾಸಚೂಸೆಟ್ಸ್ ಕೊಲ್ಲಿ ಕಂಪನಿಯಿಂದ (1630). ಆ ಸ್ಥಳ ಈಗ ಹಾರ್ವರ್ಡ್ ಚೌಕದ ಬಳಿ ಇದೆ. ಮೊದಲು ಇದಕ್ಕೆ ನ್ಯೂಟೌನ್ ಎಂಬ ಹೆಸರಿತ್ತು. ಹಾರ್ವರ್ಡ್ ಕಾಲೇಜಿನ ಸ್ಥಾಪನೆಯಾದ ಎರಡು ವರ್ಷಗಳ ಅನಂತರ ಇದಕ್ಕೆ ಇಂಗ್ಲೆಂಡಿನ ವಿಶ್ವವಿದ್ಯಾಲಯನಗರವಾದ ಕೇಂಬ್ರಿಜಿನ ಹೆಸರನ್ನೇ ಇಡಲಾಯಿತು (1638). ಇದು ಮ್ಯಾಸಚೂಸೆಟ್ಸ್ ಕೊಲ್ಲಿ ವಸಾಹತಿನ ರಾಜಧಾನಿಯಾಗಬೇಕೆಂಬುದು ಹಲವರ ಇಷ್ಟವಾಗಿತ್ತು. ಆದರೆ ಆ ಗೌರವ ಬಾಸ್ಟನಿಗೆ ಸಂದಿತು. ವಾಣಿಜ್ಯ ಮತ್ತು ರಕ್ಷಣೆಗಳ ದೃಷ್ಟಿಯಿಂದ ಆ ನಗರ ಹೆಚ್ಚು ಸಮರ್ಪಕವೆನಿಸಿದ್ದೇ ಇದಕ್ಕೆ ಕಾರಣ.

ಹಾರ್ವರ್ಡ್ ಚೌಕದ ಸುತ್ತ ಇರುವ ಹಳೆಯ ಕೇಂಬ್ರಿಜ್ ಅಮೆರಿಕನರ ಸಂಸ್ಕೃತಿಯ ಸಂಕೇತವಾಗಿದೆ. ಹಾರ್ವರ್ಡ್ ಕಾಲೇಜನ್ನು ಸ್ಥಾಪಿಸಿದಾಗಿನಿಂದ ಇದಕ್ಕೆ ಹೆಚ್ಚಿನ ಪ್ರಾಮುಖ್ಯ ಬಂದಿದೆ. ಇದಕ್ಕೆ ಹತ್ತಿರದಲ್ಲೇ 20ನೆಯ ಶತಮಾನದಲ್ಲಿ ವಾಣಿಜ್ಯ ಕೇಂದ್ರವೊಂದು ಬೆಳೆದಿದೆ. ಇಲ್ಲಿ ಅಮೆರಿಕದ ಪ್ರಥಮ ಅಚ್ಚುಕೂಟ ಸ್ಥಾಪಿತವಾಯಿತು (1639). ಆದರೆ ನಗರ ಶೀಘ್ರವಾಗಿ ಬೆಳೆದದ್ದು 20ನೆಯ ಶತಮಾನದಲ್ಲಿ, ಬಾಸ್ಟನಿನಿಂದ ಕೇಂಬ್ರಿಜಿಗೆ ಸುರಂಗಮಾರ್ಗವೊಂದು ನಿರ್ಮಾಣವಾದ ಮೇಲೆ (1912) ಬಾಸ್ಟನಿನ ಉದ್ಯಮಿಗಳು ಇಲ್ಲಿಗೆ ಶೀಘ್ರವಾಗಿ ಬರುವುದು ಸಾಧ್ಯವಾದ್ದರಿಂದ ಇಲ್ಲಿ ಕೈಗಾರಿಕೆಗಳು ಬೆಳೆದುವು. ಇಪ್ಪತ್ತನೆಯ ಶತಮಾನದ ನಡುಗಾಲದ ವೇಳೆಗೆ ಇಲ್ಲಿ 400 ಉತ್ಪಾದನೋದ್ಯಮಗಳಿದ್ದುವು. ಲೋಹೋತ್ಪನ್ನಗಳು, ವಿದ್ಯುದುಪಕರಣ, ಮುದ್ರಣ, ಪ್ರಕಾಶನ, ರಸಾಯನ ವಸ್ತುಗಳು, ರಬ್ಬರ್ ಮತ್ತು ಚರ್ಮ ವಸ್ತುಗಳು–ಇವು ಕೆಲವು ಕೈಗಾರಿಕೆಗಳು, ಇವುಗಳ ಜೊತೆಜೊತೆಗೆ ಇಲ್ಲಿ ಅನೇಕ ಸಂಶೋಧನಾಲಯಗಳೂ ಪ್ರಯೋಗಾಲಯಗಳೂ ಬೆಳೆದಿವೆ. ಹಾರ್ವರ್ಡ್ ವಿಶ್ವವಿದ್ಯಾಲಯ ಮತ್ತು ಮ್ಯಾಸಚೂಸೆಟ್ಸ್ ತಾಂತ್ರಿಕ ಸಂಸ್ಥೆ (ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ–ಎಂ.ಐ.ಟಿ.)–ಇವು ಹತ್ತಿರದಲ್ಲೇ ಇರುವುದರಿಂದ ಸಂಶೋಧನೆಗೆ ಅನುಕೂಲವಾಗಿವೆ. ಮೂಲಭೂತ ಸಂಶೋಧನೆ ನಡೆಸಲು ಅಲ್ಲಿರುವ ಸೌಲಭ್ಯಗಳು ಅಸಾಧಾರಣವಾದವು; ಕೆಲವಂತೂ ವಿಶಿಷ್ಟವಾದಂಥವು. ನ್ಯೂಕ್ಲಿಯರ್ ರಿಯಾಕ್ಟರ್,

ಎಲೆಕ್ಟ್ರಾನಿಕ್ಸ್ ಸಂಶೋಧನ ಪ್ರಯೋಗಾಲಯ, ಸರ್ವೋಕ್ರಿಯಾತಂತ್ರ (ಸರ್ವೋಮೆಕ್ಯಾನಿಸಮ್ಸ್) ಪ್ರಯೋಗಾಲಯ, ಅತೀತಶಬ್ದ ಗಾಳಿಸುರಂಗಗಳು, ಅಂತಾರಾಷ್ಟ್ರೀಯ ನಗರ ಪ್ರಾದೇಶಿಕ ಅಧ್ಯಯನದ ಮತ್ತು ಸಂಪರ್ಕ ವಿಜ್ಞಾನಗಳ ಅಧ್ಯಯನದ ಸೌಲಭ್ಯಗಳು-ಇವು ಕೆಲವು. ಈಗ ಇಲ್ಲಿ ವಾಷಿಂಗ್ಟನ್ ಡಿ.ಸಿ.ಯಲ್ಲಿದ್ದ ಸ್ಮಿತ್ಸೋನಿಯನ್ ಖಭೌತ ವೀಕ್ಷಣಾಲಯದ ಮುಖ್ಯ ಕೇಂದ್ರವಿದೆ. *

**ಕೇಂಬ್ರಿಯನ್:** ಪೇಲಿಯೋಜೋಯಿಕ್ ಯುಗದ ಪ್ರಥಮ ಕಲ್ಪ; ಸು. 600 ದಶಲಕ್ಷ ವರ್ಷ ಪ್ರಾಚೀನದಿಂದ 500 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ; ವಿಪುಲ ಪಳೆಯುಳಿಕೆಗಳನ್ನು ಒಳಗೊಂಡಿರುವ ಅತಿ ಕೆಳಗಿನ ಭೂವೈಜ್ಞಾನಿಕ ವ್ಯವಸ್ಥೆ. ರೂಢಿಯಲ್ಲಿ ಪಳೆಯುಳಿಕೆಯುಕ್ತ ಸ್ತರಗಳಿಗೂ ಸಮಕಾಲೀನ ಪಳೆಯುಳಿಕೆರಹಿತ ಶಿಲಾಸ್ತೋಮಗಳಿಗೂ ಇರುವ ಹೆಸರು. ಕೇಂಬ್ರಿಯನ್ ಎಂಬ ಹೆಸರನ್ನೂ ಪರಿಕಲ್ಪನೆಯನ್ನೂ ಸೂಚಿಸಿ (1835) ಬಳಕೆಗೆ ತಂದವ ಎ. ಸೆಡ್ಜಿ ವಿಕ್. ಸ್ಪಷ್ಟವಾಗಿ ಮತ್ತು ಸಂದೇಹಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ರಕ್ಷಿಸಲ್ಪಟ್ಟಿರುವ ಗತಕಾಲಗಳ ಜೀವರಾಶಿಗಳಲ್ಲಿ ಈ ಶಿಲಾಸ್ತೋಮದ ಜೀವರಾಶಿಯೇ ಅತ್ಯಂತ ಪ್ರಾಚೀನವಾದದ್ದು. ಆದ್ದರಿಂದಲೇ ಕೇಂಬ್ರಿಯನ್ ಸ್ತೋಮ ಭೂ ಇತಿಹಾಸಜ್ಞರ ಗಮನವನ್ನು ಸೆಳೆಯುತ್ತದೆ. ಕೇಂಬ್ರಿಯನ್ ಕಲ್ಪದ ಪ್ರಾರಂಭದಿಂದ ಭೂ ಇತಿಹಾಸದ ಛಾಯೆ ಬದಲಾಗುತ್ತದೆ. ಪೂರ್ವ ಕೇಂಬ್ರಿಯನ್ ಕಾಲಗಳ ಅಧ್ಯಯನದಲ್ಲಿ ಕಾಣುವ ಅಸ್ಪಷ್ಟತೆ ಈ ಕಲ್ಪದಲ್ಲಿ ಮಾಯವಾಗಿ ಸ್ಪಷ್ಟ ಮತ್ತು ನಿಖರವಾದ ಘಟನಾ ಪರಂಪರೆಗಳನ್ನು ಅರಿಯಲು ಸಾಧ್ಯವಾಗುತ್ತದೆ.

ಪ್ರಪಂಚದ ಎಲ್ಲ ಕಡೆಗಳಲ್ಲಿಯೂ ಕೇಂಬ್ರಿಯನ್ ಸ್ತೋಮಗಳಲ್ಲಿ ಶಿಲಾ ಸಂಯೋಜನೆ ಒಂದೇ ರೀತಿ ಇರುವುದು ಕಂಡುಬಂದಿದೆ. ಈ ಶಿಲಾಸ್ತೋಮಗಳಲ್ಲಿ ಸಾಮಾನ್ಯವಾಗಿ ಪೆಂಟೆಶಿಲೆ, ಕೆಂಪು ನೊರಜು ಶಿಲೆ, ಬೆಣಚು ಶಿಲೆ ಮತ್ತು ಗ್ರಾನೈಟ್ ಶಿಲೆಗಳು ಹೆಚ್ಚು; ಜೇಡು ಶಿಲೆ ಮತ್ತು ಸುಣ್ಣ ಶಿಲೆಗಳ ಪರಿಮಾಣ ಅಲ್ಪ. ಅವುಗಳಲ್ಲಿ ಪ್ರವಾಹದ ಗುರುತು ಅಲೆಗಳ ಗುರುತು ಮತ್ತು ಬಿಸಿಲು ಬಿರುಕುಗಳು ಇವೆ. ಆದ್ದರಿಂದ ಈ ಶಿಲೆಗಳು ಹಿಂದೆ ನೀರಿನಲ್ಲಿದ್ದಿರಬೇಕೆಂದೂ ಕೆಲವು ಸಲವಾದರೂ ನೀರು ಆರಿದುದರ ಪರಿಣಾಮವಾಗಿ ಒಣಗಿರಬಹುದೆಂದು ತಿಳಿಯಬಹುದು. ಕೇಂಬ್ರಿಯನ್ ಶಿಲಾಸ್ತೋಮಗಳು 500 ದಶಲಕ್ಷ ವರ್ಷಗಳ ಹಿಂದಿನವುಗಳಾದ್ದರಿಂದ ಅವು ಬಹು ಕಾಲಕಲ್ಪಟ್ಟು ಮಡಿಕೆಗಳಾಗಿಯೂ ಸ್ತರಭಂಗ ಹೊಂದಿ ಸ್ಥಳಾಂತರಿಸಲ್ಪಟ್ಟು ರೂಪಾಂತರ ಹೊಂದಿಯೂ ಇರುವುದು ಸ್ವಾಭಾವಿಕ. ಅವುಗಳಲ್ಲಿ ಕೆಲವೆಡೆಗಳಲ್ಲಿ ಶಿಲಾರಸ ಅಂತಸ್ಸರಣಗೊಂಡಿರುತ್ತದೆ.

ಕೇಂಬ್ರಿಯನ್ ಶಿಲಾಸ್ತೋಮ ಒಲೆನೆಲ್ಲಸೆ ಎಂಬ ಟ್ರೈಲೊಬೈಟ್ ಪ್ರಾಣಿಯ ಅವಶೇಷಗಳಿಂದ ಕೂಡಿರುವ ನಿಕ್ಷೇಪದೊಂದಿಗೆ ಪ್ರಾರಂಭವಾಗುವುದೆಂದು ಪರಿಗಣಿಸಲಾಗಿದೆ. ಆದರೆ ಅದರ ಅಂತ್ಯವನ್ನು ಕುರಿತು ಖಚಿತ ನಿರ್ಧಾರ ಆಗಿಲ್ಲ. ಈ ಶಿಲಾಸ್ತೋಮದ ಮೇಲೆ ಜೇಡು ಶಿಲೆಗಳಿವೆ. ಇವುಗಳಿಗೆ ಟ್ರೆಮೆಡಿಕ್ ಶಿಲೆಗಳು ಎಂದು ಹೆಸರು. ಮೊದಲು ಈ ಶಿಲೆಗಳನ್ನು ಕೇಂಬ್ರಿಯನ್ ಸ್ತೋಮದ ಮೇಲ್ಭಾಗ ಎಂದು ಪರಿಗಣಿಸಲಾಗಿತ್ತು. ಆದರೆ ಇವುಗಳಲ್ಲಿರುವ ಪಳೆಯುಳಿಕೆಗಳು ಆರ್ಡೋವಿಶಿಯನ್ ಕಲ್ಪದ ಪಳೆಯುಳಿಕೆಗಳ ಸಮೀಪ ಬಾಂಧವ್ಯವನ್ನು ವ್ಯಕ್ತಪಡಿಸುತ್ತವೆ. ಹೀಗಾಗಿ ಈ ಶಿಲೆಗಳನ್ನು ಈಗ ಆರ್ಡೋವಿಶಿಯನ್ ಸ್ತೋಮಕ್ಕೆ (ಸು. 500 ದಶಲಕ್ಷ ವರ್ಷ ಪ್ರಾಚೀನದಿಂದ 440 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ, ಕೇಂಬ್ರಿಯನ್ ಕಲ್ಪದ ತರುವಾಯ ಬಂದ ಕಲ್ಪ) ವರ್ಗಾಯಿಸಿದೆ. ಕೇಂಬ್ರಿಯನ್ ಮತ್ತು ಆರ್ಡೋವಿಶಿಯನ್ ಸ್ತೋಮಗಳ ಸಂಪರ್ಕ ಕೆಲವೆಡೆಗಳಲ್ಲಿ ಸ್ಪಷ್ಟ ಅನನುರೂಪತೆಯನ್ನು ತೋರಿಸುತ್ತದೆ. ಕೇಂಬ್ರಿಯನ್ ಕಾಲದ ಶಿಲಾನಿಕ್ಷೇಪಗಳು ಭಾರತ ಪರ್ಯಾಯ ದ್ವೀಪದ ಹೊರಭಾಗದಲ್ಲಿಯೂ ನಿಕ್ಷೇಪಗೊಂಡಿವೆ, ಅದರಲ್ಲಿ ಈ ಮೂರು ಸ್ಥಳಗಳಲ್ಲಿ ಸಾಕಷ್ಟು ಪರಿಶೋಧನೆ ನಡೆದಿದೆ : 1 ಸಾಲ್ಟ್‌ರೇಂಜ್ ಪ್ರದೇಶ, 2 ಸ್ಪಿಟಿ ಕಣಿವೆ ಪ್ರದೇಶ, 3 ಕಾಶ್ಮೀರ ಪ್ರದೇಶ. (ಡಿ.ಆರ್.)

**ಕೇದಾರನಾಥ:** ಉತ್ತರಾಂಚಲ್ ರಾಜ್ಯದ ಗಡವಾಲ್ ಜಿಲ್ಲೆಯಲ್ಲಿರುವ ಪ್ರಸಿದ್ಧ ಶೈವ ಕ್ಷೇತ್ರ. ಕೇದಾರಪುರಿ ಎಂಬ ಹೆಸರುಂಟು. ಇದು ಹಿಮಾಲಯ ತಪ್ಪಲಲ್ಲಿ ಸಮುದ್ರ ಮಟ್ಟಕ್ಕೆ 3531 ಮೀ ಎತ್ತರದಲ್ಲಿದೆ. ಇಲ್ಲಿಯ ಕೇದಾರನಾಥೇಶ್ವರನಿಗೆ ಪೂಜೆ ಸಲ್ಲಿಸಲು ಯಾತ್ರಿಕರು ವರ್ಷವರ್ಷವೂ ತಂಡೋಪತಂಡವಾಗಿ ಬರುತ್ತಾರೆ.

ಈ ಕ್ಷೇತ್ರ ಕೆಲಕಾಲ ಬೌದ್ಧರ ಒಂದು ಮುಖ್ಯ ಕೇಂದ್ರವಾಗಿತ್ತು. ಶಂಕರಾಚಾರ್ಯರು ಇಲ್ಲಿಗೆ ಆಗಮಿಸಿ ಬೌದ್ಧರ ಪ್ರಾಬಲ್ಯವನ್ನು ಕುಗ್ಗಿಸಿದರು. ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಇಲ್ಲಿ ಶಂಕರಾಚಾರ್ಯರು ನಿರ್ವಾಣ ಹೊಂದಿದರೆಂಬ ಹೇಳಿಕೆಯೂ ಇದೆ.

ಕೇದಾರನಾಥೇಶ್ವರ ದೇವಾಲಯವನ್ನು ಎತ್ತರವಾದ ಸ್ಥಳದಲ್ಲಿ ಕಟ್ಟಲಾಗಿದೆ. ಸುತ್ತ ಹಿಮದಿಂದ ಆವೃತವಾದ ಪರ್ವತ ಶಿಖರಗಳಿವೆ. ಇಲ್ಲಿಯ ಶಿವಲಿಂಗ ಭಾರತದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಹೆಸರಾಗಿದೆ.

ಗರ್ಭ ಗುಡಿಯಲ್ಲಿ ಕತ್ತಲಿದ್ದು ಸದಾ ನಂದಾದೀಪ ಉರಿಯುತ್ತಿರುತ್ತದೆ. ದೇವಾಲಯದ ಆವರಣದಲ್ಲಿ ಪಂಚಪಾಂಡವರು, ದ್ರೌಪದಿ, ಕುಂತಿ, ಪಾರ್ವತಿ, ಲಕ್ಷ್ಮಿ ಮುಂತಾದ ವಿಗ್ರಹಗಳಿವೆ. ಇವುಗಳಿಗೂ ನಿತ್ಯ ಪೂಜೆ ನಡೆಯುತ್ತದೆ. ನಿಷಿದ್ಧವಾದ್ದರಿಂದ ಇಲ್ಲಿಯ ಶಿವಲಿಂಗಕ್ಕೆ ನೀರಿನಿಂದ ಅಭಿಷೇಕ ಮಾಡುವುದಿಲ್ಲ. ಆದರೆ ತುಪ್ಪದ ಉಂಡೆಗಳನ್ನು ಮಾಡಿ ಲಿಂಗದ ಮೇಲೆ ಎಸೆಯುತ್ತಾರೆ. ಶಿವಲಿಂಗದ ಪೀಠದ ಬಳಿ ಪಂಡರು (ಪೂಜಾರಿಗಳು) ಕುಳಿತು ಮಂತ್ರ ಘೋಷಣೆ ಮಾಡಿ ಭಕ್ತಾದಿಗಳು ತಂದ ನೈವೇದ್ಯವನ್ನು ದೇವರಿಗೆ ಅರ್ಪಿಸುತ್ತಾರೆ. ಪೂಜೆ ಮುಗಿದ ಅನಂತರ ಪೂಜೆ ಸಲ್ಲಿಸಿದಾತ ಒಮ್ಮೆ ಶಿವಲಿಂಗವನ್ನು ಆಲಂಗಿಸಿಕೊಳ್ಳುತ್ತಾನೆ. ಇದರಿಂದ ಶಿವ ಸಾನಿಧ್ಯವನ್ನು ಪಡೆದನೆಂಬ ಸಂತುಷ್ಟಿ ಭಕ್ತನ ಪಾಲಿನದಾಗುತ್ತದೆ. ಈ ಕ್ಷೇತ್ರದಲ್ಲಿ ಮಡಿ, ಮೈಲಿಗೆಗಳ ನಿಯಮಗಳು ಅಷ್ಟಾಗಿಲ್ಲ. ಪಂಡರೂ ಅಷ್ಟೇ, ತಮ್ಮ ದೈನಂದಿನ ಪೋಷಾಕಿನಲ್ಲೆ ಪೂಜೆ, ಅರ್ಚನೆಗಳನ್ನು ನಡೆಸಿಕೊಡುತ್ತಾರೆ. ಇಲ್ಲಿಯ ಅರ್ಚಕ ನಂಬೂದರಿ ಬ್ರಾಹ್ಮಣ ಮನೆತನಕ್ಕೆ ಸೇರಿದವ.

ಕೇದಾರನಾಥ ಮಂದಿರದಲ್ಲಿ ಪೂಜಾದಿಗಳು ನಡೆಯುವುದು ವರ್ಷದಲ್ಲಿ 6 ತಿಂಗಳು ಮಾತ್ರ. ಏಪ್ರಿಲ್ ತಿಂಗಳ ಕೊನೆಯ ಭಾಗದಲ್ಲಿ ಶುಭ ನಕ್ಷತ್ರದಲ್ಲಿ ಮಂದಿರದ ಬಾಗಿಲುಗಳನ್ನು ತೆರೆಯುವರು. ಕಾರ್ತೀಕ ಮಾಸದಲ್ಲಿ ಬಾಗಿಲನ್ನು ಮುಚ್ಚುವರು. ಉಳಿದ 6 ತಿಂಗಳು ಕೇದಾರನಾಥೇಶ್ವರನ ಉತ್ಸವ ಮೂರ್ತಿಯನ್ನು 40 ಕಿಮೀ ಕೆಳಗಿರುವ ಉಷಾಮಠಕ್ಕೆ ತಂದು ಪೂಜಾದಿಗಳನ್ನು ಸಲ್ಲಿಸುವರು.

ದೇವಸ್ಥಾನದ ಸುತ್ತ ಪ್ರದಕ್ಷಿಣೆ ಬರುವ ದಾರಿಯಲ್ಲಿ ಎಂಟು ದಿಕ್ಕುಗಳಲ್ಲೂ ಪವಿತ್ರವೆಂದು ಭಾವಿಸಲಾದ ನೀರಿನ ಎಂಟು ಕುಂಡಗಳಿವೆ. ಸಮೀಪದಲ್ಲಿಯೇ ಭೈರವ ಝಾಂಪ್ ಎಂಬ ಬಂಡೆ ಇದೆ. ಈ ಬಂಡೆಯ ಮೇಲಿಂದ ಬಿದ್ದು ಪ್ರಾಣ ತ್ಯಾಗ ಮಾಡಿದರೆ ಮುಂದಿನ ಜನ್ಮದಲ್ಲಿ ಅತೃಪ್ತ ಕಾಮನೆಗಳು ಈಡೇರುತ್ತವೆ ಎಂಬ ನಂಬಿಕೆ ಇದೆ.

ಬದರೀ, ಕೇದಾರ, ಮಧ್ಯಮಹೇಶ್ವರ, ತುಂಗನಾಥ, ರುದ್ರನಾಥ ಮತ್ತು ಕಲ್ಲೇಶ್ವರ ಇವು ಇದರ ಸಮೀಪದಲ್ಲಿರುವ ದೇವಸ್ಥಾನಗಳು. ಇವಿಷ್ಟು ಸೇರಿ ಪಂಚ ಕೇದಾರನಾಥ ಎಂಬ ಹೆಸರಾಗಿದೆ. (ಜಿ.ಎಚ್.)

**ಕೇಪ್ ಟೌನ್:** ದಕ್ಷಿಣ ಆಫ್ರಿಕ ಗಣರಾಜ್ಯದ ರಾಜಧಾನಿ. ಕೇಪ್ ಪ್ರಾಂತ್ಯದ ಆಡಳಿತ ಕೇಂದ್ರ. ಕೇಪ್ ಪರ್ಯಾಯದ್ವೀಪದ ಉತ್ತರದ ಕೊನೆಯಲ್ಲಿದೆ. ಜನಸಂಖ್ಯೆ 29,93,000 (2001). ನಗರದ ನಡುವಣ ಭಾಗ ವ್ಯಾಪಾರಕೇಂದ್ರ. ಅದರ ಮೂರು ಪಾರ್ಶ್ವಗಳಲ್ಲಿ ಉಪನಗರಗಳು ಹಬ್ಬಿವೆ. ನಗರದ ರಸ್ತೆಗಳ ಪೈಕಿ ಆಡರ್ಲಿ ಬೀದಿ ಮುಖ್ಯವಾದುದ್ದು. ಹೀರೆನ್‌ಗ್ರಾಕ್ಟ್‌ನಲ್ಲಿ ಇದು ಮುಂದುವರಿದಿದೆ. ಆಡರ್ಲಿ ರಸ್ತೆಯಿಂದ ದಕ್ಷಿಣಕ್ಕೆ ಇರುವ ಸರ್ಕಾರಿ ಅವೆನ್ಯೂ ಒಂದು ಸುಂದರ ತಾಣ. ಎರಡೂ ಬದಿಯಲ್ಲಿ ಓಕ್ ಮರಗಳಿಂದ ಕೂಡಿದ ಈ ಮಾರ್ಗದಲ್ಲಿ ವಾಹನಗಳಿಗೆ ಪ್ರವೇಶವಿಲ್ಲ. ಆಡರ್ಲಿ ಬೀದಿಯ ಪಶ್ಚಿಮಕ್ಕಿರುವ ಗ್ರೀನ್ ಮಾರ್ಕೆಟ್ ಚೌಕ ಹಿಂದೆ ನಗರದ ಕೇಂದ್ರವಾಗಿತ್ತು. ಗ್ರ್ಯಾಂಡ್ ಪೆರೇಡ್ ಒಂದು ವಿಸ್ತೃತ ದೀರ್ಘಚತುರಸ್ರ ಸ್ಥಳ ; ಅಂಗಡಿಗಳ ಕೇಂದ್ರ ; ವಾಹನ ಚಾಲನೆಗೆ ಪ್ರಶಸ್ತ.

ಸಿಟಿಹಾಲ್

ನಗರದಲ್ಲಿ ಎರಡು ಮುಖ್ಯ ಸಾರಿಗೆ ವ್ಯವಸ್ಥೆಗಳಿವೆ. ಉಪನಗರ ವಿದ್ಯುತ್ ರೈಲ್ವೆ ಸರ್ಕಾರಿ ಒಡೆತನದ್ದು. ಕೇಪ್ ಟೌನ್ ರೈಲುನಿಲ್ದಾಣದಿಂದ ದಕ್ಷಿಣದ ಉಪನಗರವನ್ನು ಹಾದು ಸೈಮನ್‌ಟೌನ್‌ಗೆ ಒಂದು ಮಾರ್ಗವಿದೆ. ಇದಕ್ಕೆ ಹಲವು ಕವಲುಗಳು ಉಂಟು. ಬಸ್‌ಗಳು ಸಂಚರಿಸುತ್ತವೆ. ಟೇಬಲ್ ಪರ್ವತದ ತಂತಿದಾರಿ ಕೇಪ್ ಟೌನಿನ ವೈಶಿಷ್ಟ್ಯ. ಇದು ಪರ್ವತದ ಶಿಖರಕ್ಕೆ ಪ್ರೇಕ್ಷಕರನ್ನು ಕರೆದೊಯ್ಯುತ್ತದೆ. ಅಲ್ಲಿಂದ ನಗರದ ನೋಟ ಅತ್ಯಂತ ರಮಣೀಯ. ರಾಷ್ಟ್ರೀಯ ರೈಲ್ವೆ ವ್ಯವಸ್ಥೆಯ ಕೊನೆಯ ನಿಲ್ದಾಣ ಕೇಪ್‌ಟೌನ್.

ಇಲ್ಲಿಂದ ದಕ್ಷಿಣ ಆಫ್ರಿಕದ ಎಲ್ಲ ಮುಖ್ಯ ಸ್ಥಳಗಳಿಗೂ ರೈಲ್ವೆ ಸಂಪರ್ಕವುಂಟು. ನಗರಕ್ಕೆ 20 ಕಿಮೀ ದೂರದಲ್ಲಿ ವಿಮಾನ ನಿಲ್ದಾಣವುಂಟು. ದಕ್ಷಿಣ ಆಫ್ರಿಕದ ಮುಖ್ಯ ಬಂದರು ಕೇಪ್‌ಟೌನ್. ಚಿನ್ನ, ವಜ್ರ ಮತ್ತು ಹಣ್ಣುಗಳು ಇಲ್ಲಿಂದ ರಫ್ತಾಗುತ್ತವೆ. ವಜ್ರಗೆಲಸ, ನೌಕಾ ನಿರ್ಮಾಣ, ಫಲಸಾರ ಉತ್ಪಾದನೆ, ಸಿಮೆಂಟ್, ಕಲ್ನಾರು, ರಾಸಾಯನಿಕ ಗೊಬ್ಬರ, ಬಣ್ಣ, ಪ್ಲಾಸ್ಟಿಕ್, ಪಾದರಕ್ಷೆ, ಸಾಬೂನು, ಜವಳಿ, ಎಂಜಿನಿಯರಿಂಗ್, ವಿದ್ಯುದುಪಕರಣ, ಮದ್ಯ ಮತ್ತು ಮದ್ಯಸಾರ ಕೈಗಾರಿಕೆಗಳಿವೆ.

ಕೇಪ್‌ಟೌನಿನ ಉಷ್ಣತೆ $11.11^0$ ಸೆ. – $20^0$ ಸೆ. ವಾರ್ಷಿಕ ಸರಾಸರಿ ಮಳೆ ಸು. 60 ಸೆಂಮೀ ಸೆಪ್ಟೆಂಬರ್ ತಿಂಗಳಿನಲ್ಲಿ ಕಾಡುಹೂಗಳು ಎಲ್ಲೆಲ್ಲೂ ಅರಳಿ ಕಣ್ಮನ ಸೆಳೆಯುವ ದೃಶ್ಯಗಳನ್ನು ವಿರಚಿಸುತ್ತವೆ. ಆಗ ಇಲ್ಲಿ ವಸಂತಋತು. ಸಮುದ್ರತೀರದ ನುಣ್ಣನೆಯ, ಹಳದಿ ಬಣ್ಣದ ಮರಳು ಮತ್ತು ಹಿತಕರವಾದ ಬಿಸಿಲು ಇವುಗಳಿಂದಾಗಿ ಕೇಪ್‌ಟೌನ್ ಪ್ರವಾಸಿಗಳಿಗೆ ತುಂಬ ಪ್ರಿಯವಾದ ತಾಣವಾಗಿದೆ. (ಪಿ.ಜಿ.ಡಿ.)

**ಕೇಪ್ ಪ್ರಾಂತ್ಯ:** ದಕ್ಷಿಣ ಆಫ್ರಿಕ ಗಣರಾಜ್ಯದ ನಾಲ್ಕು ಪ್ರಾಂತ್ಯಗಳಲ್ಲಿ ಒಂದು ; ಅವುಗಳ ಪೈಕಿ ಅತ್ಯಂತ ದೊಡ್ಡದು, ವಿಸ್ತೀರ್ಣ 7,12,870 ಚ.ಕಿಮೀ. ಜನಸಂಖ್ಯೆ 1,17,04,863 (1999).

ಭೌತಿಕ ಲಕ್ಷಣ: ಭೌತಿಕವಾಗಿ ಕೇಪ್ ಪ್ರಾಂತ್ಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಸಮುದ್ರಮಟ್ಟಕ್ಕೆ ಸರಾಸರಿ 900 ಮೀ ಎತ್ತರದಲ್ಲಿರುವುದು ಮೊದಲನೆಯದು. ಇದು ದಕ್ಷಿಣ ಆಫ್ರಿಕದ ಪ್ರಸ್ಥಭೂಮಿಗೆ ಸೇರಿದೆ. ಆರೆಂಜ್ ನದಿಯ ಬಳಿ ಈ ಪ್ರದೇಶದ ಎತ್ತರ 600 ಮೀ. ಪೂರ್ವದಲ್ಲಿ 1200 ಮೀ. ಈ ಪ್ರಸ್ಥಭೂಮಿಯ ಎಲ್ಲೆಯನ್ನು ಸಮುದ್ರ ತೀರಕ್ಕೆ ಸಮಾಂತರವಾಗಿ ಸಾಗುವ ಪರ್ವತಶ್ರೇಣಿಯ ಮಹಾ ಇಳಿಜಾರಿನಿಂದ ಗುರುತಿಸಬಹುದು. ಈ ಪರ್ವತಶ್ರೇಣಿಯನ್ನು ಡ್ರಾಕೆನ್ಸ್‌ಬರ್ಗ್, ಸ್ಟಾರಂಬರ್ಗ್ ಮುಂತಾದ ಸ್ಥಳೀಯ ಹೆಸರುಗಳಿಂದ ಕರೆಯುತ್ತಾರೆ. ಈ ಪ್ರದೇಶದಲ್ಲಿ ಮಧ್ಯಾಹ್ನದ ಬಿಸಿಲು ತೀಕ್ಷ್ಣವಾಗಿರುತ್ತದೆ. ಸಂಜೆಯ ವರ್ಣರಂಜಿತ ಆಕಾಶ ಮನಮೋಹಕ; ವೆಲ್ಡಿನ (ಹುಲ್ಲುಗಾವಲು) ಸುಂದರ ನಿಶೆಯ ನೋಟ ಮನ ತಣಿಸುವಂಥದು.

ಪರ್ವತಗಳ ಇಳಿಜಾರುಗಳಿಗೂ ಸಮುದ್ರಕ್ಕೂ ನಡುವೆ ಇರುವುದು ಎರಡನೆಯ ವಿಭಾಗ. ಇದರಲ್ಲಿ ಹಲವಾರು ಉಪವಿಭಾಗಗಳುಂಟು. ಅವುಗಳಲ್ಲಿ ಮೊದಲನೆಯದು ಗ್ರೇಟ್ ಕ್ಯಾರೂ ಪ್ರದೇಶ. ಇದು ಬೆಂಗಾಡು. ಇದರ ಉತ್ತರಕ್ಕೆ ಪರ್ವತಗಳ ಇಳಿಭೂಮಿಯೂ ದಕ್ಷಿಣಕ್ಕೆ ಬೆಟ್ಟದ ಸ್ತರಗಳೂ ಇವೆ. ಇದರ ಎತ್ತರ ಸಮುದ್ರಮಟ್ಟದಿಂದ 300–1200 ಮೀ. ಇಲ್ಲಿಯ ಭೂಪದರಗಳು ಬಲವಾದ ಮರಳುಗಲ್ಲುಗಳಿಂದ ಕೂಡಿವೆ; ಈ ಪ್ರದೇಶದ ಮೃದುವಾದ ಜೇಡಿ ಪದರಗಲ್ಲುಗಳು ಸುಲಭವಾಗಿ ಕೊರೆದುಹೋಗುವಂಥವು. ಗ್ರಾಫ್ ರೈನೆಟ್‌ಗೆ ಈಶಾನ್ಯದಲ್ಲಿರುವ ನೆಲ ಎರಡನೆಯ ಉಪವಿಭಾಗ. ಅದು ಕ್ಯಾರೂ ಮರುಭೂಮಿಯ ಬಂಡೆಗಳಿಂದ ರೂಪಗೊಂಡಿದೆ. ಅಲ್ಲಿ ಹಲವಾರು ಇಳಿವೋಡು ಪದರಗಳುಂಟು. ಈ ಪದರಗಳು ಮರಳುಗಲ್ಲು ಹಾಗೂ ಡಾಲರೈಟ್ ಶಿಲೆಗಳಿಂದ ಕೂಡಿದವು. ಈ ವಿಭಾಗವನ್ನು ಲಿಟ್ಲ್ ಕ್ಯಾರೂ ಪ್ರದೇಶವೆಂದು ಕರೆಯುತ್ತಾರೆ. ಗ್ರಿಕ್ವಲ್ಯಾಂಡ್ ಈಸ್ಟ್ ಎಂಬ ಪ್ರದೇಶ ಶಿಲೆಗಳ ದಿಬ್ಬಸಾಲುಗಳಿಂದ ಕೂಡಿದ್ದು ಆ ಶ್ರೇಣಿಗಳಲ್ಲಿ ಇಂಜೆಲಿ, ಕರಿ ಮತ್ತು ಇನ್‌ಸಿಜ್ವ ಬೆಟ್ಟಗಳಿವೆ.

ನದಿಗಳು: ಮಹಾ ಇಳಕಲು ಭೂಪ್ರದೇಶ ಪ್ರಮುಖ ಜಲವಿಭಜನೆಯ ನೆಲ, ಒಳನಾಡ ಪ್ರಸ್ಥಭೂಮಿಯಲ್ಲಿ ಆರೆಂಜ್ ನದಿಯೂ ಅದರ ಉಪನದಿಗಳೂ ಹರಿಯುತ್ತವೆ. ಆರೆಂಜ್ ನದಿ ಹರಿಯುವುದು ಪೂರ್ವದಿಂದ ಪಶ್ಚಿಮಕ್ಕೆ. ಅದು ಅಟ್ಲಾಂಟಿಕ್ ಸಾಗರ ಸೇರುತ್ತದೆ. ಇಳಿಭೂಮಿಯ ಪ್ರದೇಶದಲ್ಲಿ ಅನೇಕ ನದಿಗಳು ಹುಟ್ಟಿ ಕ್ಯಾರೂ ಬಂಜರುಭೂಮಿಗೆ ಅಡ್ಡಲಾಗಿಯೂ ಸ್ತರಪ್ರದೇಶಗಳ ನಡುವೆಯೂ ಹರಿದು ಸಮುದ್ರಕ್ಕೆ ಬೀಳುತ್ತವೆ. ಈ ನದಿಗಳಲ್ಲಿ ಮುಖ್ಯವಾದವು ಆಲಿಫ್ಯಾಂಟ್ಸ್, ಕೈ, ಫಿಷ್, ಸಂಡೇ, ಗ್ಯಾಂಟಾಸ್, ಗ್ಯಾಂಕ್ ಮತ್ತು ಬ್ರೀಡ್, ಬೇಸಿಗೆಯಲ್ಲಿ ಈ ನದಿಗಳು ಸಾಕಷ್ಟು ನೀರಿಲ್ಲದೆ ಅನೇಕ ಮಡುವುಗಳಾಗಿ ಪರಿವರ್ತನೆಗೊಳ್ಳುತ್ತವೆ. ಕೇಪ್ ಪ್ರಾಂತ್ಯದ ಆಗ್ನೇಯ ಭಾಗದಲ್ಲಿ ನದಿಗಳು ಮರಳುಗಲ್ಲು ಮತ್ತು ಡಾಲರೈಟ್ ಶಿಲೆಗಳಿಂದ ಕೂಡಿದ ಭೂಮಿಯಲ್ಲಿ ಹರಿಯುತ್ತವೆ. ಮಳೆ ಕಡಿಮೆ ಇರುವಲ್ಲಿ ಸರೋವರಗಳು ಕಡಿಮೆ.

ವಾಯುಗುಣ: ಸಮುದ್ರಕ್ಕಿರುವ ದೂರ ಮತ್ತು ಪರ್ವತಗಳಿರುವ ಸ್ಥಳ–ಇವುಗಳಿಗೆ ಅನುಗುಣವಾಗಿ ಕೇಪ್ ಪ್ರಾಂತ್ಯದ ವಾಯುಗುಣದಲ್ಲಿ ವ್ಯತ್ಯಾಸ ಉಂಟು. ಕೇಪ್ ಟೌನಿನ ಸರಾಸರಿ ಮಳೆ 65 ಸೆಂಮೀ. ಪರ್ವತ ಶ್ರೇಣಿಗಳ ನಡುವೆ ತೀರ ಪ್ರದೇಶಕ್ಕಿಂತ ಕಡಿಮೆ ಮಳೆ. ಕ್ಯಾರೂ ಪ್ರದೇಶದಲ್ಲಿ ಕಾಣಬರುವುದು ಮರುಭೂಮಿಯ ವಾಯುಗುಣ. ಪೋರ್ಟ್ ಎಲಿಜಬೆತ್‌ನಲ್ಲಿ ಸರಾಸರಿ 60 ಸೆಂಮೀ ಮಳೆ. ಈಸ್ಟ್ ಲಂಡನ್‌ನಲ್ಲಿ 80 ಸೆಂಮೀ. ನೈಋತ್ಯ ತೀರದ ಕೆಲವು ಭಾಗಗಳಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆಯಾಗುತ್ತದೆ. ಒಳನಾಡು ಸಮುದ್ರಮಟ್ಟಕ್ಕೆ ಎತ್ತರವಾಗಿರುವುದರಿಂದ ಅಲ್ಲಿಯ ವಾಯುಗುಣ ಹಿತಕರ. ಬೆಟ್ಟಗಳ ಮೇಲೆ ಮಂಜು ಮುಸುಕುವುದು ಅಪರೂಪ.

ಸಸ್ಯಗಳು: ಸ್ತರ ಪರ್ವತಗಳು, ಆಲಿಫ್ಯಾಂಟ್ಸ್ ಮತ್ತು ಸಂಡೇ ನದಿ ಇರುವ ನೈಋತ್ಯ ಪ್ರದೇಶದಲ್ಲಿ ಕುರುಚಲು ಮತ್ತು ಪೊದೆಗಳು ಹೇರಳ. ವಸಂತ ಕಾಲದಲ್ಲಿ ಪರ್ವತಗಳ ಇಳಿಮೋಡುಗಳು ನಾನಾ ಬಗೆಯ ಹೂವುಗಳಿಂದ ಕೂಡಿ ವರ್ಣರಂಜಿತವಾಗಿರುತ್ತವೆ. ನದಿ ಮತ್ತು ಫ್ಲೇ ಜೌಗು ಪ್ರದೇಶದಲ್ಲಿ ಪಾಲ್ಮಿಯಿಟ್ ಮತ್ತು ಪಿಗ್‌ಲಲಿ ಗಿಡಗಳು ಬೆಳೆಯುತ್ತವೆ. ಸ್ಟಿಂಕ್‌ವುಡ್ ಮತ್ತು ಬ್ಲಾಕ್ ಐರನ್‌ವುಡ್ ಸಹ ಉತ್ತಮ ಚೌಬೀನೆ ಮರಗಳು. ಮಳೆಗಾಲದಲ್ಲಿ ಕ್ಯಾರೂ ಪ್ರದೇಶದಲ್ಲಿ ಗೆಡ್ಡೆಯ ಗಿಡಗಳು ಬೆಳೆದು ಹೂವುಗಳು ಅರಳುತ್ತವೆ; ತರುವಾಯ ಆ ಪ್ರದೇಶ ಮರುಭೂಮಿಯ ಸ್ವರೂಪ ತಾಳುತ್ತವೆ. ಕೇಪ್ ಪ್ರಾಂತ್ಯದ ಈಶಾನ್ಯ ಭಾಗದಲ್ಲಿ ಹುಲ್ಲುಗಾವಲು ಹಾಗೂ ಅರಣ್ಯಗಳುಂಟು. ಮಹಾ ಇಳಿಭೂಮಿ ಮತ್ತು ತೀರಗಳ ನಡುವೆ ಸವನ್ನಾ ಹುಲ್ಲುಗಾವಲುಗಳಿವೆ.

ಕೃಷಿ: ಕೇಪ್ ಪ್ರಾಂತ್ಯದ ಬಹುಭಾಗ ಬಂಜರು ಭೂಮಿ. ಕ್ಯಾರೂ ಮತ್ತು ಸ್ತರ ಪರ್ವತಗಳ ಕಣಿವೆಗಳಲ್ಲಿ ಕೃಷಿ ನೀರಾವರಿಯನ್ನು ಅವಲಂಬಿಸಿದೆ. ಪೂರ್ವಜಿಲ್ಲೆಗಳಲ್ಲಿ ಮೆಕ್ಕೆ ಜೋಳ, ಗೋದಿ, ಓಟ್ಸ್ ಮತ್ತು ಹಣ್ಣುಗಳನ್ನು ಬೆಳೆಯುತ್ತಾರೆ. ದ್ರಾಕ್ಷಿ ಬೆಳೆ ಹೆಚ್ಚು. ದ್ರಾಕ್ಷಾರಸ ಕೈಗಾರಿಕೆ ಅಭಿವೃದ್ಧಿ ಹೊಂದಿದೆ. ಹೊಗೆಸೊಪ್ಪು ಬೆಳೆಯೂ ಹೆಚ್ಚು. ತುಪ್ಪಟಕ್ಕಾಗಿ ಕುರಿ ಸಾಕುತ್ತಾರೆ. ಉಷ್ಟ್ರ ಪಕ್ಷಿಗಳನ್ನು ಅವುಗಳ ಬೆಲೆ ಬಾಳುವ ಗರಿಗಳಿಗಾಗಿ ಸಾಕುತ್ತಾರೆ. ಮೀನುಗಳನ್ನು ಡಬ್ಬಗಳಲ್ಲಿ ಶೇಖರಿಸಿ ಹೊರದೇಶಗಳಿಗೆ ರಫ್ತು ಮಾಡುತ್ತಾರೆ.

ಖನಿಜ ಸಂಪತ್ತು : ಕೇಪ್ ಪ್ರಾಂತ್ಯದ ಬಹುಮುಖ್ಯ ಖನಿಜ ಸಂಪತ್ತು ವಜ್ರ. ಕಿಂಬರ್ಲಿಯ ಗಣಿಗಳಲ್ಲಿ ಅಮೂಲ್ಯ ವಜ್ರಗಳು ದೊರಕುತ್ತವೆ. ಅದರ ಉತ್ಪನ್ನ ಈಗ ಏರಿಳಿತಗಳಿಗೆ ಒಳಗಾಗಿದೆ. ವಜ್ರ ಉತ್ಪನ್ನ ಸಂಘದ ಸದಸ್ಯತ್ವ ಪಡೆದ ಪ್ರತಿಯೊಂದು ಉದ್ಯಮ ಸಂಸ್ಥೆಗೂ ಮಾರುಕಟ್ಟೆಗೆ ಕಳುಹಿಸಬೇಕಾದ ವಜ್ರದ ಪ್ರಮಾಣವನ್ನು ನಿಗದಿ ಮಾಡಲಾಗಿದೆ. ಕೇಪ್ ಪ್ರಾಂತ್ಯದಲ್ಲಿ ತಾಮ್ರದ ಗಣಿಗಳೂ ಉಂಟು.

ವ್ಯಾಪಾರ: ಕೇಪ್ ಪ್ರಾಂತ್ಯದಿಂದ ರಫ್ತಾಗುವ ಸರಕುಗಳು ವಜ್ರ, ಉಣ್ಣೆ, ಮೋಹೆರ್, ಆಡಿನ ಕೂದಲು, ಹಗುರ ಬಟ್ಟೆ, ಚರ್ಮ, ಹಣ್ಣುಗಳು ಮತ್ತು ದ್ರಾಕ್ಷಾರಸ. ಮುಖ್ಯ ಆಮದುಗಳು ಹತ್ತಿ ಜವಳಿ, ಆಹಾರ ಪದಾರ್ಥಗಳು, ಗಾಜಿನ ಪಾತ್ರೆ ಹಾಗೂ ಸಾಮಾನುಗಳು, ಯಂತ್ರೋಪಕರಣ, ಕಲ್ಲಿದ್ದಲು ಮತ್ತು ಚೌಬೀನೆ.

ನಗರಗಳು : ಕೇಪ್ ಪ್ರಾಂತ್ಯದ ಪ್ರಮುಖ ನಗರಗಳೆಲ್ಲ ಸಮುದ್ರ ತೀರಗಳಲ್ಲಿವೆ. ಇವುಗಳಲ್ಲಿ ಪ್ರಸಿದ್ಧವಾದವು ಕೇಪ್‌ಟೌನ್, ಪೋರ್ಟ್ ಎಲಿಜಬೆತ್, ಈಸ್ಟ್ ಲಂಡನ್, ಮೋಸೆಲ್‌ಬೇ, ಪೋರ್ಟ್‌ಸೆಂಟ್ ಜಾನ್ಸ್, ಪೋರ್ಟ್ ನೊಲ್ಲೊತ್ ಕಿಂಬರ್ಲಿ ಮುಖ್ಯ ಒಳನಾಡ ಕೇಂದ್ರ. ಕೇಪ್‌ಟೌನ್ ದಕ್ಷಿಣ ಆಫ್ರಿಕ ಗಣರಾಜ್ಯದ ಪಾರ್ಲಿಮೆಂಟ್ ಅಧಿವೇಶನ ಸೇರುವ ಸ್ಥಳ, ಪ್ರಸಿದ್ಧ ರೇವು ಮತ್ತು ವಿಮಾನ ನಿಲ್ದಾಣ. ರೈಲ್ವೆ ಮತ್ತು ಮೋಟಾರು ಇವು ಕೇಪ್ ಪ್ರಾಂತ್ಯದ ಪ್ರಧಾನ ಸಂಚಾರ ಸಾಧನಗಳು. ಇಲ್ಲಿಯ ಮುಖ್ಯ ಬಂದರು ಸ್ಥಳಗಳಿಂದ ಒಳನಾಡಿನ ಮೂಲಕ ಇತರ ರಾಜ್ಯಗಳಿಗೂ ಸಂಚಾರ ಸಂಪರ್ಕವಿದೆ. ಕೇಪ್ ಟೌನ್‌ನಿಂದ ಕಿಂಬರ್ಲಿ, ಜೋಹಾನ್ಸ್ ಬರ್ಗ್ ಮತ್ತು ಪ್ರಿಟೋರಿಯ ಪಟ್ಟಣಗಳಿಗೆ ರೈಲ್ವೆ ಮತ್ತು ರಸ್ತೆಗಳುಂಟು. ಪೋರ್ಟ್ ಎಲಿಜಬೆತ್‌ನಿಂದಲೂ ಈಸ್ಟ್ ಲಂಡನ್ನಿನಿಂದಲೂ ಒಳನಾಡಿಗೆ ರೈಲುಮಾರ್ಗವುಂಟು. (ವಿ.ಜಿ.ಕೆ.;ಐ.ಆರ್.)

**ಕೇಪ್ ವರ್ಡೆ ದ್ವೀಪಗಳು:** ಪಶ್ಚಿಮ ಆಫ್ರಿಕದ ತೀರದ ಬಳಿ ಇರುವ ದ್ವೀಪಸ್ತೋಮ. ವರ್ಡ್ ಭೂಶಿರಕ್ಕೆ 450 ಕಿಮೀ ದೂರದಲ್ಲಿದೆ. ಮರುಭೂಮಿಯ ಶಿರದ ಎದುರಿಗೆ ಹಸಿರು ತುಂಬಿ ನಿಂತ ನೆಲವಾದ್ದರಿಂದ ಇದನ್ನು ಪೋರ್ಚುಗೀಸ್ ನಾವಿಕರು ಕೇಪ್ ವರ್ಡೆ ಎಂದು ಕರೆದರೆಂದು ಹೇಳಲಾಗಿದೆ. ಬಾಲಚಂದ್ರನ ಆಕಾರದಲ್ಲಿರುವ ಈ ದ್ವೀಪಸ್ತೋಮ ಉತ್ತರದಿಂದ ದಕ್ಷಿಣಕ್ಕೆ ಸು. 270 ಕಿಮೀ ಮತ್ತು ಪೂರ್ವದಿಂದ ಪಶ್ಚಿಮಕ್ಕೆ 290 ಕಿಮೀ ಹರಡಿಕೊಂಡಿದೆ. ಉ.ಅ. $14^0 47'$–$17^0 13'$ ಮತ್ತು ಪ.ರೇ. $22^0 40'$–$25^0 22'$ ನಡುವೆ 14 ದ್ವೀಪಗಳಿಂದ ಕೂಡಿದೆ. ಇದರ ವಿಸ್ತೀರ್ಣ 3,940 ಚ.ಕಿಮೀ. ರಾಜಧಾನಿ ಪ್ರೈಯ. ಇಲ್ಲಿನ ಜನಸಂಖ್ಯೆ 4,18,224 (2005).

ಈ ಸ್ತೋಮದ ದ್ವೀಪಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಉತ್ತರದ, ಮಾರುತಸಮ್ಮುಖ ದ್ವೀಪಗಳು ಇವು: ಬೋ ವಿಸ್ಟ, ಸಾಲ್, ಸೌನ್ ನಿಕೊಲಾವು, ಸಾಂಟಾ ಲೂಸೀಯಾ, ಸೌವೂ ವಿಸಾಂಟೆ, ಸ್ಯಾಂಟೊ ಆಂಟೌವೊ, ಬ್ರಾಂಕೋ ಮತ್ತು ರಾಜೂ. ದಕ್ಷಿಣದ ಮಾರುತವಿಮುಖ ದ್ವೀಪಗಳಿವು; ಮೈಮೊ, ಸೌವೂ ಟಾಯಾಗೂ, ಫೋಗೂ, ಬ್ರಾವಾ ಮತ್ತು ಇಲ್ಯೇವೂಸ್ ಡೂ ರಾಂಬೂ. ಇವುಗಳ ಪೈಕಿ ಹತ್ತರಲ್ಲಿ ಮಾತ್ರ ಜನವಸತಿಯಿದೆ.

ಈ ದ್ವೀಪಸ್ತೋಮದ ಎಲ್ಲ ದ್ವೀಪಗಳೂ ಜ್ವಾಲಾಮುಖಿ ಪರ್ವತದಿಂದಾದವು. ಇವು ಆಳ ಕಡಲಿನಿಂದ ಪರಸ್ಪರ ಪ್ರತ್ಯೇಕಗೊಂಡಿವೆ. ಇವುಗಳ ಭೂಪ್ರದೇಶ ಬಹುಮಟ್ಟಿಗೆ ಪರ್ವತಮಯ. ಆದರೆ ಆಫ್ರಿಕಕ್ಕೆ ಹತ್ತಿರದಲ್ಲಿರುವ ಸಾಲ್, ಬ್ರಾವೂ ವಿಸ್ಟ ಮತ್ತು ಮೈಮೊ ದ್ವೀಪಗಳು ಬಹುತೇಕ ಸಮತಲ ಪ್ರದೇಶಗಳು; ಅಲ್ಲಲ್ಲಿ ಮರಳಿನ ದಿಬ್ಬು ಮತ್ತು ಉಪ್ಪಿನ ಬೆಟ್ಟಗಳು ಕಾಣಬರುತ್ತವೆ. ಇಲ್ಲಿಯ ಮುಖ್ಯ ಶಿಖರಗಳು ಮೂರು: ಫೋಗೂ ದ್ವೀಪದಲ್ಲಿರುವ

ಅಗ್ನಿಪರ್ವತ ಕ್ಯಾನೋ (2640 ಮೀ), ಸ್ಯಾಂಟೂ ಆಂಟೌನ್ ದ್ವೀಪದಲ್ಲಿರುವ ಪಾಮೋ ದ ಅಸ್ಸುಕಾರ್ (2400 ಮೀ) ಮತ್ತು ಸೌನ್ ಟ್ಯಾಗೂ ದ್ವೀಪದಲ್ಲಿರುವ ಪಿಕೋ ದ ಅಂತೋನಿಯ (2200 ಮೀ), ಫೋಗೂ ದ್ವೀಪದ ಅಗ್ನಿಪರ್ವತ ಜೀವಂತವಾಗಿದ್ದರೂ, ಇದರ ಉಪದ್ರವ ಅಷ್ಟೇನೂ ಗಮನಾರ್ಹವಾಗಿರಲಿಲ್ಲ. ಆಗಾಗ್ಗೆ ಭೂಕಂಪಗಳಾದ ದಾಖಲೂ ಉಂಟು. ಕಡಲ ತೀರ ಬಹುಮಟ್ಟಿಗೆ ಬಂಡೆಗಳಿಂದ ತುಂಬಿದ್ದು, ತುಂಬ ಅಪಾಯಕಾರಿಯಾಗಿದೆ. ಬ್ರಾವೊ ವಿಸ್ಟದ ಪೂರ್ವ ಕರಾವಳಿಯಲ್ಲಿ ಬಂಡೆಯ ಸಾಲುಗಳು, ಮರಳುದಿಬ್ಬಗಳು ಮತ್ತು ಮರಳುದಂಡೆಗಳು ತುಂಬಿಕೊಂಡಿವೆ.




ಕೇಪ್ ವರ್ಡೆ ದ್ವೀಪಗಳದು ಉಷ್ಣವಲಯದ ವಾಯುಗುಣ, ಸರಾಸರಿ ಉಷ್ಣತೆ 23.8$^0$ಸೆ. ಬೇಸಗೆಯ ತಿಂಗಳುಗಳಲ್ಲಿ ಇದು 26$^0$ಸೆ.–32$^0$ಸೆ. ವರೆಗೂ ಹೋಗುವುದುಂಟು. ಮಳೆಗಾಲದ ಅವಧಿ ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ. ಮಳೆ ಮಾತ್ರ ಬಹಳ ಕಡಿಮೆ.

ಈ ದ್ವೀಪಸ್ತೋಮದಲ್ಲಿಯ ಸಸ್ಯಗಳು ಬಹುಮಟ್ಟಿಗೆ ಆಫ್ರಿಕದವು. ಇದಕ್ಕೇ ವಿಶಿಷ್ಟವಾದವೆಂದು ಹೆಸರಿಸಲಾಗಿರುವ 70 ಜಾತಿಯ ಸಸ್ಯಗಳಿವೆ. ಶುಷ್ಕ ಪ್ರದೇಶಗಳಲ್ಲಿ ಸಸ್ಯಗಳು ಕಾಣಬರುವುದಿಲ್ಲವಾದರೂ ಫಲವತ್ತಾಗಿರುವ ಕೆಲವು ಕಣಿವೆಗಳಲ್ಲಿ ಉಷ್ಣವಲಯದ ಸಸ್ಯಗಳು ಸಾಕಷ್ಟು ಸಮೃದ್ಧವಾಗಿ ಬೆಳೆದಿವೆ. ಮಾವು, ಖರ್ಜೂರ, ಕಬ್ಬು ಮುಖ್ಯವಾದವು. ಪೋರ್ಚುಗೀಸರು ತಂದು ಬೆಳೆಸಿರುವ ಮುಖ್ಯ ಆರ್ಥಿಕ ಬೆಳೆಗಳು ಕಾಫಿ, ಹೊಗೆಸೊಪ್ಪು, ಮೆಕ್ಕೆಜೋಳ, ಹತ್ತಿ, ಕಬ್ಬು, ಕಿತ್ತಳೆ, ಸಿಂಕೋನ, ಇಂಡಿಗೋ, ಬಟಾಣಿ ಮತ್ತು ಗೆಣಸನ್ನೂ ಬೆಳೆಯಲಾಗುತ್ತಿದೆ. ಇವುಗಳಲ್ಲಿ ಹಲವು ರಫ್ತಿನ ಬೆಳೆಗಳೂ ಹೌದು.

ಪ್ರಾಣಿಗಳ ಸಂಖ್ಯೆ ತೀರ ಕಡಿಮೆ. ದೇಶೀಯ ಸ್ತನಿಗಳಂತೂ ಇಲ್ಲವೇ ಇಲ್ಲ. ದ್ವೀಪಗಳಲ್ಲಿ ಕೆಲವು ಬಗೆಯ ಹಕ್ಕಿಗಳು ಮಾತ್ರ ಕಾಣಬರುತ್ತವೆ. ಈ ದ್ವೀಪಸ್ತೋಮದ ನಿವಾಸಿಗಳು ಪಶುಪಾಲನೆಯನ್ನೂ ಕೈಗೊಂಡಿದ್ದಾರೆ. ಮೇಕೆ, ಕುದುರೆ, ಹಂದಿ ಮತ್ತು ಕತ್ತೆಗಳು ಸಾಕುಪ್ರಾಣಿಗಳು. ಕಡಲತೀರದಲ್ಲಿ ಕಡಲಾಮೆಗಳು ಹೇರಳ.

ಇಲ್ಲಿ ಹುಲ್ಲಿನ ಹ್ಯಾಟು, ಕುಸುರಿಗೆಲಸದ ವಸ್ತ್ರ, ಹತ್ತಿಬಟ್ಟೆ ಮತ್ತು ಬ್ರಾಂದಿ ಉತ್ಪಾದನೆಯಾಗುತ್ತವೆ. ಅನೇಕ ದ್ವೀಪಗಳಲ್ಲಿ ಉಪ್ಪಿನ ಗಣಿಗಳುಂಟು. ಮುಖ್ಯ ಧಾನ್ಯಗಳು, ಬಣ್ಣದ ವಸ್ತುಗಳು, ಮೇಕೆಯಚರ್ಮ, ಉಪ್ಪು, ಮದ್ಯಸಾರ ಮತ್ತು ಮೀನುಗಳನ್ನು ಪೋರ್ಚುಗಲ್ಲಿಗೂ ಆಫ್ರಿಕದ ಕರಾವಳಿಯಲ್ಲಿರುವ ಪೋರ್ಚುಗೀಸ್ ವಸಾಹತುಗಳಿಗೂ ರಫ್ತು ಮಾಡಲಾಗುತ್ತದೆ.

ಸು. ಶೇ. 70ರಷ್ಟು ದ್ವೀಪನಿವಾಸಿಗಳಿಗೆ ಕೃಷಿಯೇ ಜೀವನೋಪಾಯ. ಈ ದ್ವೀಪಸ್ತೋಮಕ್ಕಿರುವ ಶಾಪವೆಂದರೆ ನೀರಿನ ಕೊರತೆ. ಮಳೆಯಾದ ವರ್ಷದಲ್ಲಿ ಉತ್ಪಾದನೆ ಹೆಚ್ಚಾಗಿರುತ್ತದೆಯಾದರೂ ಅನಾವೃಷ್ಟಿಯ ಭಯ ಇದ್ದೇ ಇದೆ. ಅನೇಕ ವೇಳೆ ಈ ದ್ವೀಪಸ್ತೋಮ ಮೂರು ವರ್ಷಗಳಷ್ಟು ದೀರ್ಘಕಾಲ ಅನಾವೃಷ್ಟಿಗೆ ತುತ್ತಾಗಿರುವುದೂ ಉಂಟು. ಈ ಪ್ರದೇಶ ದಿನ ಕಳೆದಂತೆಲ್ಲಾ ಶುಷ್ಕವಾಗಿ ಹೋಗುತ್ತಿರುವುದರಿಂದ ಈ ಸಮಸ್ಯೆ ಮತ್ತಷ್ಟು ತೀವ್ರವಾಗಿ ಪರಿಣಮಿಸಿದೆ. ಮೊದಲಿಗೆ ಇಲ್ಲಿ ಬಂದು ನೆಲೆಸಿದ ಜನ ಅರಣ್ಯನಿರ್ಮೂಲ ಕಾರ್ಯದಲ್ಲಿ ತೊಡಗಿದ್ದು ಮತ್ತು ಮೇಕೆಗಳನ್ನು ಇಲ್ಲಿ ತಂದುಬಿಟ್ಟದ್ದು ಇದಕ್ಕೆ ಕಾರಣವೆಂದು ಹೇಳಲಾಗಿದೆ. ಈಚೆಗೆ ಜಲಸಂಶೋಧನೆ ಮತ್ತು ನೀರಾವರಿ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಅರಣ್ಯಪ್ರದೇಶವನ್ನು ಹೆಚ್ಚಿಸುವ ಕಾರ್ಯಕ್ರಮವೂ ಇದರಲ್ಲಿ ಸೇರಿದೆ. ಕೆಲವು ದ್ವೀಪಗಳು ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಹಣ್ಣುಗಳ ಬೆಳೆಗೆ ಪ್ರಶಸ್ತವಾಗಿವೆಯೆಂದು ತಿಳಿದುಬಂದಿದೆ. ಆದರೆ ಸಾರಿಗೆ ಸಂಪರ್ಕ ವ್ಯವಸ್ಥೆ ಬೆಳೆದಿಲ್ಲದಿರುವುದರಿಂದ ವಾಣಿಜ್ಯ ರೂಪದಲ್ಲಿ ಲಾಭದಾಯಕವಾಗುವಂತೆ ಈ ಉದ್ಯಮವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ. ಸಾಲ್ ದ್ವೀಪದಲ್ಲಿರುವ ಎಸ್ಪಾರ್‌ಗೋಸ್ ಮುಖ್ಯ ವಿಮಾನ ನಿಲ್ದಾಣ. ಮಿಂಡೆಲೋ ಮುಖ್ಯ ಬಂದರು.

ಆಡಳಿತದ ಅನುಕೂಲಕ್ಕಾಗಿ ಈ ದ್ವೀಪವನ್ನು 12 ಜಿಲ್ಲೆಗಳನ್ನಾಗಿಯೂ 31 ಉಪಜಿಲ್ಲೆಗಳನ್ನಾಗಿಯೂ ವಿಭಾಗಿಸಲಾಗಿದೆ. (ಟಿ.ಎಚ್.ಎಚ್.)

**ಕೇಮ್ಯಾನ್ ದ್ವೀಪಗಳು:** ಬ್ರಿಟಿಷ್ ಆಡಳಿತಕ್ಕೆ ಸೇರಿರುವ ಪಶ್ಚಿಮ ಕೆರೆಬಿಯನ್ ಸಮುದ್ರದಲ್ಲಿರುವ ದ್ವೀಪಸಮೂಹ. ಇವನ್ನು ಕೇಮ್ಯಾನ್ಸ್ ದ್ವೀಪಗಳೆಂದೂ ಕರೆಯುವುದುಂಟು. ಈ ದ್ವೀಪಗಳನ್ನು 1505 ಮೇ 10 ರಂದು ಕ್ರಿಸ್ಟಫರ್ ಕೊಲಂಬಸ್ ಅನ್ವೇಷಿಸಿದ. ಈ ದ್ವೀಪಗಳು ಉ.ಅ. 19$^0$20′ ಹಾಗೂ ಪ.ರೇ. 81$^0$24′ ವ್ಯಾಪ್ತಿಯಲ್ಲಿ ಹಂಚಿಕೆಯಾಗಿವೆ. ಇದರ ಒಟ್ಟು ಭೂಪ್ರದೇಶ 260 ಚ.ಕಿಮೀ. ಜನಸಂಖ್ಯೆ: 45017 (2005), ಜನಸಾಂದ್ರತೆ ಪ್ರತಿ ಚ.ಕಿಮೀ.ಗೆ 139. ಆಡಳಿತ ಭಾಷೆ ಇಂಗ್ಲಿಷ್. ಕೇಮ್ಯಾನ್ ಡಾಲರ್ ಇಲ್ಲಿನ ನಾಣ್ಯ. ರಾಜಧಾನಿ ಜಾರ್ಜ್‌ಟೌನ್.

ಈ ದ್ವೀಪಗಳ ಸುತ್ತಲಿನ ಭಾಗಗಳು ಸಮುದ್ರದಲ್ಲಿ ಮುಳುಗಡೆಯಾಗಿದ್ದು ಬೃಹದಾಕಾರದ ಶಿಖರಗಳನ್ನು ಹೊಂದಿರುವ ಪರ್ವತ ಸಾಲುಗಳಿವೆ. ಕೇಮ್ಯಾನ್ ತಗ್ಗು ಸಮುದ್ರ ತಳದಿಂದ 800 ಮೀ ಆಳವಾಗಿದೆ. ಈ ದ್ವೀಪಗಳು ದಕ್ಷಿಣ ಕೆರೆಬಿಯನ್ ಸಮುದ್ರದ ಕ್ಯೂಬ ಮತ್ತು ಪಶ್ಚಿಮದ ಜಮೈಕಗಳ ನಡುವೆ ಹಂಚಿಕೆಯಾಗಿವೆ. ಇಲ್ಲಿನ ಮೂರು ದೊಡ್ಡ ದ್ವೀಪಗಳು ಬಹುತೇಕ ನಕ್ಷೆಗಳಲ್ಲಿ ಕಾಣಿಸುವುದೇ ಇಲ್ಲ. ಈ ದ್ವೀಪಗಳು ಮಿಯಾಮಿಯಿಂದ ಸು. 770 ಕಿಮೀ ದೂರದಲ್ಲಿವೆ. ಕ್ಯೂಬದ ದಕ್ಷಿಣಕ್ಕೆ 290 ಕಿಮೀ, ಜಮೈಕದ ವಾಯವ್ಯಕ್ಕೆ 290 ಕಿಮೀ ದೂರದಲ್ಲಿದೆ. ಗ್ರಾಂಡ್ ಕೇಮ್ಯಾನ್ ದೊಡ್ಡ ದ್ವೀಪ 197 ಚ.ಕಿಮೀ ವಿಸ್ತಾರವಾಗಿದೆ. ಎರಡು ಸಹೋದರಿ ದ್ವೀಪಗಳಾದ ಕೇಮ್ಯಾನ್ ಬ್ರಾಕ್ ಮತ್ತು ಲಿಟಲ್ ಕೇಮ್ಯಾನ್ ಸು. 145 ಕಿಮೀ ದೂರದಲ್ಲಿ ಗ್ರಾಂಡ್ ಕೇಮ್ಯಾನ್ ದ್ವೀಪದ ಪೂರ್ವದಲ್ಲಿವೆ. ಈ ದ್ವೀಪಗಳು ಅನುಕ್ರಮವಾಗಿ 36 ಚ.ಕಿಮೀ ಮತ್ತು 25.9 ಚ.ಕಿಮೀ ವಿಸ್ತೀರ್ಣವನ್ನು ಹೊಂದಿವೆ. ಈ ಮೂರು ದ್ವೀಪಗಳೂ ಬೃಹತ್ ಹವಳ ದಿಬ್ಬ ಶಿರೋಭಾಗಗಳಾಗಿದ್ದು ಹಿಮಯುಗದಲ್ಲಿ ಕ್ಯೂಬನ್ ಸ್ಸಿಯಾರಾ ಮೇ ಇಸ್ಟ್ರಾ ಪಶ್ಚಿಮ ಶ್ರೇಣಿಯ ವ್ಯಾಪ್ತಿ ಎಂದು ತಿಳಿದುಬರುತ್ತದೆ. ಇಲ್ಲಿನ ಪ್ರಮುಖ ಭೂಲಕ್ಷಣವೆಂದರೆ ಕೇಮ್ಯಾನ್ ಬ್ರಾಕ್‌ನಲ್ಲಿರುವ ಜಲಪಾತ. 42.6 ಮೀ ಎತ್ತರ (ಸಮುದ್ರ ಮಟ್ಟದಿಂದ). ಈ ದ್ವೀಪದ ಅತ್ಯಂತ ಎತ್ತರ ಭಾಗವಾಗಿದೆ.

ಆರ್ಥಿಕತೆ: ಸರ್ಕಾರದ ಪ್ರಾಥಮಿಕ ಆದಾಯ ಪರೋಕ್ಷ ತೆರಿಗೆಯಿಂದ, ಶೇ. 20ರಷ್ಟು ಆಮದು ಸುಂಕದ ರೂಪದಲ್ಲಿ ಬರುತ್ತದೆ. ವಾಹನಗಳ ಆಮದಿನ ಮೇಲೆ ಶೇ. 40ರಷ್ಟು ತೆರಿಗೆ ವಿಧಿಸಲಾಗುತ್ತದೆ. ಸಣ್ಣಪ್ರಮಾಣದಲ್ಲಿ ಪ್ರವಾಸಿಗರಿಂದ ಶುಲ್ಕವನ್ನು ವಸೂಲಿಮಾಡಲಾಗುತ್ತದೆ.

ಪ್ರವಾಸೋದ್ಯಮ: ರಾಷ್ಟ್ರದ ಆದಾಯದ ಶೇ. 70 ರಿಂದ 75ರಷ್ಟು ಪ್ರವಾಸೋದ್ಯಮ ಪೂರೈಸುತ್ತಿದೆ. ಪ್ರತಿವರ್ಷ ಒಂದು ಮಿಲಿಯನ್ ಪ್ರವಾಸಿಗರು ಗ್ರ್ಯಾಂಡ್ ಕೇಮ್ಯಾನ್ ದ್ವೀಪಕ್ಕೆ ಆಗಮಿಸುತ್ತಾರೆ. ಕೇಮ್ಯಾನ್ ದ್ವೀಪದ ಸುತ್ತಲಿನ ಸಮುದ್ರದ ನೀರು ಪ್ರಪಂಚದ ಪರಿಶುಭ್ರವಾದ ಮತ್ತು ಈಜಲು ಸುರಕ್ಷಿತ ಎಂದು ಪರಿಗಣಿಸಲಾಗಿದೆ. ಇಲ್ಲಿನ ಪ್ರಮುಖ ವೀಕ್ಷಣಾ ತಾಣಗಳೆಂದರೆ ಐರನ್‌ಶೋರ್ ಭೂಸಾದೃಶ್ಯ, 24 ಎಕರೆ ವ್ಯಾಪ್ತಿಯ ಮರೈನ್ ಥೀಮ್ ಪಾರ್ಕ್, ಬೋಟ್ಸ್‌ವೈನ್ ಬೀಚ್ ಇತ್ಯಾದಿ.

ಇಲ್ಲಿನ ಆರ್ಥಿಕ ಸೇವೆಗಳೆಂದರೆ ಬ್ಯಾಂಕಿಂಗ್, ಮೂಚುಯಲ್ ಫಂಡ್ಸ್, ಜೀವವಿಮೆ, ಹಡಗುಗಳ ನೊಂದಾವಣೆ, ಸಂಸ್ಥೆಗಳು ಮತ್ತು ಪಾಲುದಾರಿಕೆ, ಸ್ಟಾಕ್ ಎಕ್ಸ್‌ಚೇಂಜ್ ಇತ್ಯಾದಿ. ಇತ್ತೀಚಿನ ವರದಿಯ ಪ್ರಕಾರ ಅಂತಾರಾಷ್ಟ್ರೀಯ ಹಣಕಾಸು ನಿಧಿ ಈ ದ್ವೀಪದಲ್ಲಿನ ಹಣಕಾಸು ಸಂಸ್ಥೆಗಳ ಉಸ್ತುವಾರಿ ಮತ್ತು ನಿಯಂತ್ರಣಕ್ಕೆ ಒಪ್ಪಿಗೆ ನೀಡಿದೆ. (ಎಚ್.ಎಸ್.)

**ಕೇರಳ:** ಭಾರತದ ಒಂದು ರಾಜ್ಯ. ಪರ್ಯಾಯ ದ್ವೀಪ ಪ್ರದೇಶದ ಆಗ್ನೇಯದ ತುದಿಯಲ್ಲಿದೆ. ಉ.ಅ. 8$^0$–13′ ಮತ್ತು ಪೂ.ರೇ. 72$^0$–74$^0$ ನಡುವೆ ಉದ್ದಕ್ಕೆ ಚಾಚಿರುವ ಈ ರಾಜ್ಯದ ಗರಿಷ್ಠ ಅಗಲ 120 ಕಿಮೀ. ಪೂರ್ವದಲ್ಲಿ ತಮಿಳುನಾಡು, ಉತ್ತರದಲ್ಲೂ ಈಶಾನ್ಯದಲ್ಲೂ ಕರ್ನಾಟಕ, ಪಶ್ಚಿಮದಲ್ಲಿ ಅರಬ್ಬಿ ಕಡಲು–ಇವುಗಳ ನಡುವೆ ಇರುವ ಕೇರಳ ರಾಜ್ಯದ ವಿಸ್ತೀರ್ಣ 38855 ಚ.ಕಿಮೀ. ಜನಸಂಖ್ಯೆ 3,18,38,619. ರಾಜಧಾನಿ ತಿರುವನಂತಪುರ. ಜನಸಂಖ್ಯೆ 8,89,191.

ಭೂಸ್ವರೂಪ : ಕೇರಳ ರಾಜ್ಯವನ್ನು ಮೂರು ಸ್ವಾಭಾವಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು. 1. ಮೆಕ್ಕಲು ಮಣ್ಣಿನಿಂದ ಕೂಡಿದ ಕರಾವಳಿ 2. ಜಂಬು ಮಣ್ಣಿನ ತಗ್ಗು ಪ್ರಸ್ಥಭೂಮಿ 3. ಅಡಿಬೆಟ್ಟ ನೀಸ್ ಶಿಲಾವೃತ ಪರ್ವತ ಶ್ರೇಣಿ.

ಕರಾವಳಿ ಅತ್ಯಂತ ಸುಂದರ ಪ್ರದೇಶ. ಪ್ರಕೃತಿ ಸಂಪದ್ಭರಿತ. ಅರಬ್ಬಿ ಸಮುದ್ರದಗುಂಟ 240 ಕಿಮೀ ಉದ್ದಕ್ಕೆ, ದಕ್ಷಿಣ ಕನ್ನಡದಿಂದ ಹಿಡಿದು ದಕ್ಷಿಣದ ಕೊಚ್ಚಿಯವರೆಗೆ ಹಬ್ಬಿರುವ ಈ ಪ್ರದೇಶದ ಪೂರ್ವಕ್ಕಿರುವ ಪಶ್ಚಿಮ ಘಟ್ಟಗಳು ಇದನ್ನು ಕೊಡಗು, ನೀಲಗಿರಿ ಮತ್ತು

ಕೊಯಮತ್ತೂರುಗಳಿಂದ ಪ್ರತ್ಯೇಕಿಸಿವೆ. ಮೇಲ್ಕಂಡ ಮೂರು ಮುಖ್ಯ ಭೂಸ್ವರೂಪದ ಒಂದೊಂದು ವಿಭಾಗವೂ ಸ್ವಾಭಾವಿಕ ಮೂರು ಉಪಭಾಗಗಳಾಗಿ ವಿಂಗಡಿಸಲಾಗುತ್ತದೆ.

ಒಂದು ಪಾನಾಯರ್ ನದಿಯವರೆಗಿನದು, ಇನ್ನೊಂದು ಪೆರಿಯಾರ್ ನಿಂದ ದಕ್ಷಿಣಕ್ಕಿರುವುದು, ಮೂರನೆಯದನ್ನು ಮಲಬಾರ್, ಕೊಚ್ಚಿ ಮತ್ತು ತಿರವಾಂಕೂರು ಪ್ರದೇಶವೆಂದು ಕರೆಯಲಾಗುವುದು. ಮಲಬಾರ್ ಕರಾವಳಿ ಪ್ರದೇಶ ಮಲಬಾರಿನ ದಕ್ಷಿಣದ ಕೊನೆಯಲ್ಲಿ ಘಟ್ಟಗಳು ಕಡಲೆಡೆಯಿಂದ 96 ಕಿಮೀ ದೂರದಲ್ಲಿವೆ. ಅವಿಚ್ಛಿನ್ನವಾಗಿ ಸಾಗಿರುವ ಪರ್ವತ ಶ್ರೇಣಿಗೆ ತಡೆ ಒದಗಿರುವುದು ಪಾಲ್ಘಾಡಿನಲ್ಲಿ, ಈ ಘಾಟಿನ ಅಗಲ 26 ಕಿಮೀ ಮಲಬಾರ್ ಬೆಟ್ಟಗಳ ಅತ್ಯಂತ ಎತ್ತರ ಶಿಖರವೆಂದರೆ ವವುರ್‌ಮಲಾ ಅಥವಾ ಒಂಟೆಯ ಡುಬ್ಬ (2870 ಮೀ). ಅಲ್ಲಿಂದ ಮುಂದೆ ಈ ಶ್ರೇಣಿ ತಗ್ಗುತ್ತಾ ಸಾಗುತ್ತದೆ. ಕರಾವಳಿಯಲ್ಲಿ ತೆಂಗಿನ ಮರಗಳ ಸಾಲು, ಬತ್ತದ ಗದ್ದೆ ಮತ್ತು ಲಗೂನ್‌ಗಳಿವೆ. ಕರಾವಳಿಯ ಮಟ್ಟ ಪ್ರದೇಶ 3–4 ಕಿಮೀ ಗಳಿಗಿಂತ ಅಗಲವಿಲ್ಲ. ಮಲಬಾರಿನಲ್ಲಿ ಅನೇಕ ಹೊಳೆ ಮತ್ತು ತೊರೆಗಳು ಹರಿಯುತ್ತವೆ. ಭವಾನಿ, ಕಪಿಲಾ, ರಾಮಪುರ – ಇವು ಪೂರ್ವಕ್ಕೆ ಹರಿಯುತ್ತವೆ. ಪೊನ್ನಾನಿ ಮಲಬಾರಿನ ಅತ್ಯಂತ ಉದ್ದವಾದ ನದಿ. ಅದರೆ ಅತ್ಯಂತ ಮುಖ್ಯವಾದುದೆಂದರೆ ಬೆಪೂರೆ ಮತ್ತು ವಲರ್ ಪಟ್ಟಣ. ಈ ಮೂರು ನದಿಗಳು ವಿಸ್ತಾರವಾದ ಹಿನ್ನೀರಿನೊಂದಿಗೆ ಕೂಡಿದೆ. ಕಡಲ ತೀರದಿಂದ 5 ಕಿಮೀ ವರೆಗೆ ಸುಮುದ್ರ ಆಳವಾಗಿಲ್ಲ. ಅಲ್ಲಿಂದ ಒಮ್ಮೆಗೆ 1000 ಫ್ಯಾದಂ ಆಳವಿರುತ್ತದೆ. ಅಲ್ಲಲ್ಲಿ ಜಂಬು ಮಣ್ಣಿನ ದಿಣ್ಣೆಗಳು, ಮರಳುಗುಡ್ಡೆಗಳು ಕಂಡುಬರುತ್ತವೆ.

ಕೊಚ್ಚಿಯ ಪ್ರದೇಶದಲ್ಲಿ ಘಟ್ಟ, ಮೈದಾನ ಮತ್ತು ಕಡಲಕರೆ ಎಂಬ ಮೂರು ಸ್ವಾಭಾವಿಕ ವಿಭಾಗಗಳಿವೆ. ಘಟ್ಟ ಪ್ರದೇಶ ಶೇ. 50 ರಷ್ಟು ಭಾಗವನ್ನು ಆವರಿಸಿದೆ. ತೇಗ, ಬೀಟೆ ಮುಂತಾದ ಅಮೂಲ್ಯ ಮರಗಳಿಂದ ತುಂಬಿರುವ ಘಟ್ಟಶ್ರೇಣಿ. ಮೈದಾನದಲ್ಲಿ ಅಡ್ಡಲಾಗಿ ಆನೇಕ ನದಿಗಳು ಹರಿಯುತ್ತವೆ. ಕಡಲಕರೆಯಲ್ಲಿ ಉದ್ದಕ್ಕೂ ಹಿನ್ನೀರಿದೆ. ಇಲ್ಲಿ ಸಿಹಿನೀರಿನ ಸರೋವರಗಳಾದ ಎನಮಕ್ಕಲ್ ಮತ್ತು ಮನಕೊಡಿ ಇವೆ.

ಕೊಚ್ಚಿಗೆ ದಕ್ಷಿಣಕ್ಕಿರುವ ತಿರುವಾಂಕೂರ್‌ನ ಪೂರ್ವಕ್ಕೆ ಪಶ್ಚಿಮಘಟ್ಟಗಳು ಹಬ್ಬಿವೆ, ಈಶಾನ್ಯದಲ್ಲಿ ಅಣ್ಣೈಮುಡಿ ಅತ್ಯುನ್ನತ ಶಿಖರ. ಇದರ ದಕ್ಷಿಣದಲ್ಲಿ ಏಲಕ್ಕಿ ಬೆಟ್ಟಗಳು ಮತ್ತು ಪಿರ್ಮಿಡ್‌ಗಳಿವೆ. ಇವುಗಳ ನಡುವೆ ಪ್ರಸ್ಥಭೂಮಿ ಎತ್ತರ 1700 ಮೀ. ಈ ಭಾಗದಲ್ಲಿ ಆನೇಕ ಶಿಖರಗಳಿವೆ. ಅಗಸ್ತ್ಯಮಲೈ ಮತ್ತು ಮಹೇಂದ್ರ ಗಿರಿ ಇವುಗಳಲ್ಲಿ ಮುಖ್ಯವಾದವು. ತಿರುವಾಂಕರು ಪ್ರದೇಶದಲ್ಲೂ ಪಶ್ಚಿಮಕ್ಕೆ ಆನೇಕ ಹಿನ್ನೀರುಂಟು. ಇಲ್ಲಿಯೂ ಅನೇಕ ನದಿಗಳು. ಹರಿಯುತ್ತಿದ್ದು ಇವುಗಳಲ್ಲಿ ಪೆರಿಯಾರ್ ಅತಿ ಉದ್ದವಾದುದು.

ಪೆರಿಯಾರ್, ಪಂಪಾ, ಭಾರತಿಪುಳ, ಆಲುವಾ, ಚಾಲಕ್ಕುಡಿ, ಪಾನಾಯರ್, ಭವಾನಿ, ಕಪಿಲಾ ಮತ್ತು ರಾಮಪುಳ ಕೇರಳದ ಮುಖ್ಯ ನದಿಗಳು ಇವುಗಳಲ್ಲಿ ಪೆರಿಯಾರ್ ಅತಿ ಉದ್ದವಾದ ನದಿ.

ವಾಯುಗುಣ : ಕೇರಳದ ವಾಯುಗುಣ ಸಮಭಾಜಕೀಯ ವಾಯುಗುಣವನ್ನು ಹೋಲುತ್ತದೆ. ಗರಿಷ್ಠ ಉಷ್ಣತೆ $32^{0}$ಸೆ. ನ್ನು ಮೀರುವುದು ಅಪರೂಪ. ಕನಿಷ್ಠ ಉಷ್ಣತೆ ಸಾಮಾನ್ಯವಾಗಿ $21^{0}$ಸೆ. ಗಿಂತ ಕಡಿಮೆಯಾಗುವುದಿಲ್ಲ. ಪರ್ವತ ಪ್ರದೇಶದಲ್ಲಿ ಮಳೆ ಅಧಿಕ. ಉಳಿದ ಕಡೆ ಉತ್ತರದಿಂದ ದಕ್ಷಿಣಕ್ಕೆ ಹೋದಂತೆ ಕಡಿಮೆಯಾಗುತ್ತದೆ. ಉತ್ತರದಲ್ಲಿ 300 ಸೆಂಮೀ ಮಳೆಯಾದರೆ ತಿರುವನಂತಪುರದ ಬಳಿ ಅದರ ಅರ್ಧದಷ್ಟು. ಇನ್ನೂ ದಕ್ಷಿಣಕ್ಕೆ 2/3 ಕ್ಕೆ ಇಳಿಯುತ್ತದೆ.

ಕೃಷಿ ಮತ್ತು ಇತರ ಕಸುಬುಗಳು: ಕೇರಳದ ಸು. ಶೇ. 20 ಭಾಗ ಅರಣ್ಯಾವೃತವಾದದ್ದು. ಉಳಿದ ಭಾಗ ಕೃಷಿಗೆ ಯೋಗ್ಯವಾದ ಭೂಮಿ ಬಹುತೇಕ ಭಾಗ ಬಳಕೆಯಲ್ಲಿದೆ. ಬತ್ತ ಮುಖ್ಯ ಬೆಳೆ. ಆದರೆ ಅತ್ಯಂತ ದಕ್ಷಿಣದಲ್ಲಿ ಅದಕ್ಕೆ ಉಳಿದೆಡೆಯಲ್ಲಿದ್ದಷ್ಟು ಪ್ರಾಮುಖ್ಯತೆ ಇಲ್ಲ. ನೀರಾವರಿ ಸೌಲಭ್ಯ ಇರುವಲ್ಲಿಗೆ ಅದು ಸೀಮಿತವಾಗಿದೆ. ಹಿನ್ನೀರಿನ ಪ್ರದೇಶಗಳಲ್ಲಿಯ ಮುಖ್ಯ ಸಮಸ್ಯೆಯೆಂದರೆ ಹಿನ್ನೀರಿನ ನಿವಾರಣೆ. ಇದಕ್ಕಾಗಿ ತಲಾ ಸು. 50 ಎಕರೆಗಳ ತುಕಡಿಗಳ ಸುತ್ತ ಕಾಲುವೆ ತೋಡಿ ಅದರ ಆಚೀಚೆ ಬದಿಗೆ ಏರಿ ಕಟ್ಟಲಾಗುತ್ತದೆ. ಜುಲೈಯಿಂದ ಸೆಪ್ಟೆಂಬರ್–ಅಕ್ಟೋಬರ್‌ವರೆಗೆ ಈ ನೆಲ ನೀರಿನಲ್ಲಿ ಮುಳುಗಿರುವುದುಂಟು. ಮಳೆಗಾಲ ಮುಗಿದ ಮೇಲೆ ಜಮೀನಿನ ನೀರನ್ನು ಪರ್ಷಿಯನ್ ಚಕ್ರದ ಅಥವಾ ಪಂಪಿನ ಸಹಾಯದಿಂದ ಕಾಲುವೆಯಲ್ಲಿ ಹರಿಯಿಸಿ ಸಾಗುವಳಿ ಮಾಡಲಾಗುತ್ತದೆ. ಬತ್ತವನ್ನು ಬಿಟ್ಟರೆ ತೆಂಗು ಮುಖ್ಯ ಫಸಲು. ಕರಾವಳಿಯ ಮರಳು ನೆಲದಲ್ಲಿ ಇದು ಸಾಮಾನ್ಯ. ಆದರೆ ಒಳನಾಡಿನಲ್ಲೂ ಇದು ಬೆಳೆಯುತ್ತದೆ. ತಿರುವಾಂಕೂರು ಪ್ರದೇಶದಲ್ಲಿ ಬತ್ತ ಬೆಳೆಯುವಷ್ಟೇ ಜಮೀನು ತೆಂಗಿಗೂ ಮೀಸಲಾಗಿದೆ. ಕೊಲ್ಲಂನಲ್ಲಿ ತೆಂಗು ಪ್ರಧಾನ. ಅಕ್ಕಿಯನ್ನು ಬಿಟ್ಟರೆ ತೆಂಗು ಕೇರಳದ ಜನರ ಮುಖ್ಯ ಆಹಾರ. ನಾರು, ಕೊಬ್ಬರಿಎಣ್ಣೆ, ಹಿಂಡಿ–ಇವು ತೆಂಗಿನ ಕೆಲವು ಉತ್ಪನ್ನಗಳು. ತೆಂಗಿನ ಮರದಕಾಂಡವನ್ನು ಕೊರೆದು ಹಾಕಿ ದೋಣಿಯಾಗಿ ಉಪಯೋಗಿಸುತ್ತಾರೆ. ಅದರ ಗರಿಯೂ ನಾನಾ ಉಪಯೋಗಗಳಿಗೆ ಬರುತ್ತದೆ. ತೆಂಗಿನಿಂದ ಸಕ್ಕರೆ, ಹೆಂಡ, ಸಾರಾಯಿಗಳನ್ನೂ ತಯಾರಿಸುತ್ತಾರೆ. ಕೇರಳದ ಕೈಗಾರಿಕಾ ಕೆಲಸಗಾರರಲ್ಲಿ ಮೂರನೆಯ ಒಂದು ಭಾಗ ತೆಂಗಿನ ಉತ್ಪನ್ನಗಳಿಗೆ ಸಂಬಂಧಿಸಿದ ಉದ್ಯಮಗಳಲ್ಲಿ ಕೆಲಸ ಮಾಡುವರು. ಇವರಲ್ಲಿ ಮೂರನೆಯ ಎರಡು ಭಾಗ ಹೆಂಗಸರು. ತೆಂಗಿನ ಹುರಿ ತಯಾರಿಕೆ ಬಹುತೇಕವಾಗಿ ಗೃಹ ಕೈಗಾರಿಕೆ. ಇದನ್ನು ಚಾಪೆಗಳಾಗಿ ಹೆಣೆಯುವ ಹಲವಾರು ಸಣ್ಣ ಕಾರ್ಖಾನೆಗಳಿವೆ.




ರಬ್ಬರ್, ಚಹ, ಮರಗೆಣಸು, ಮೆಣಸು–ಇವು ಇತರ ಮುಖ್ಯ ಬೆಳೆಗಳು. ರಬ್ಬರ್ ಮತ್ತು ಚಹ ತೋಟಗಳು ಇರುವುದು ಘಟ್ಟಗಳ ಮೇಲೆ. ಅಡಿಬೆಟ್ಟಗಳ ಪ್ರದೇಶದಲ್ಲಿ ಮರಗೆಣಸು ಮತ್ತು ಮೆಣಸು ಬೆಳೆಯುತ್ತವೆ. ಬತ್ತ ಬಿಟ್ಟರೆ ಬೇರೆ ಧಾನ್ಯಗಳ ಬೆಳೆ ಬಲು ಕಡಿಮೆ. ಜೋಳ, ರಾಗಿ, ಬೇಳೆ, ಕಬ್ಬು, ಮೆಣಸಿನಕಾಯಿ–ಇವು ಇತರ ಕೆಲವು ಬೆಳೆಗಳು. ಬತ್ತ ಬೆಳೆಯುವೆಡೆಗಳಲ್ಲಿ ಕೆಲವು ಕಡೆ ಎಳ್ಳನ್ನು ಮೂರನೆಯ ಬೆಳೆಯಾಗಿ ಬೆಳೆಯುವುದುಂಟು. ಬಾಳೆ ಮತ್ತು ಇತರ ಹಣ್ಣುಗಿಡಗಳು ಪ್ರತಿಯೊಂದು ಮನೆಯ ಹಿತ್ತಲಿನಲ್ಲೂ ಬೆಳೆಯುತ್ತವೆ. ಎಳ್ಳು, ವೀಳೆಯದೆಲೆ, ಅಡಕೆ ಬೆಳೆಗಳು ಅಲ್ಲಲ್ಲಿ ಕಾಣಬರುತ್ತದೆ. ಮರಗೆಣಸು ಕೇರಳದಲ್ಲಿ ಬಡವರ ಬೆಳೆ.

ಮತ್ಸ್ಯೋದ್ಯಮ ಕೇರಳದ ಮುಖ್ಯ ಜೀವನೋಪಾಯ. ಆದರೆ ತಾಂತ್ರಿಕವಾಗಿಯೂ ಸಂಘಟನೆಯ ದೃಷ್ಟಿಯಿಂದಲೂ ಇದು ಇನ್ನೂ ಬಹಳ ಹಿಂದುಳಿದಿದೆ. ಇದನ್ನು ಆಧುನಿಕಗೊಳಿಸುವ ಭಾರತ–ನಾರ್ವೇಜಿಯನ್ ಯೋಜನೆಯೊಂದು ಜಾರಿಯಲ್ಲಿದೆ.

ಜೇಡಿ, ಜಂಬುಮಣ್ಣು, ಲಿಗ್ನೈಟ್ ಇವನ್ನು ಬಿಟ್ಟರೆ ಇಲ್ಮೆನೈಟ್, ಮೊನಾಜೈಟ್ ಜಿರ್ಕಾನ್ ಇವು ಕೇರಳದ ಖನಿಜಗಳು. ಕೇರಳದ ಮುಖ್ಯ ಅರಣ್ಯ ಪ್ರದೇಶ ಆ ರಾಜ್ಯದ ಪೂರ್ವದ ಅಂಚಿನಲ್ಲಿ ಘಟ್ಟಗಳ ಬದಿಗೆ ದಕ್ಷಿಣೋತ್ತರವಾಗಿ ಹಬ್ಬಿದೆ. ಮರದ ದಿಮ್ಮಿ, ಸೌದೆ, ಬೊಂಬು, ಜೊಂಡು, ದಂತ, ಇವು ಮುಖ್ಯ ಅರಣ್ಯೋತ್ಪನ್ನಗಳು.

ಕೇರಳದ ಮುಖ್ಯ ವಿದ್ಯುದ್ಯೋಜನೆಗಳು: 1 ಪಳ್ಳಿವಾಸಲ್: ದೇವಿಕೊಳಂನಲ್ಲಿ ಎತ್ತರದ ಪರ್ವತ ಶ್ರೇಣಿಗಳ ನಡುವೆ ನಿರ್ಮಿತವಾಗಿರುವ ಈ ಜಲವಿದ್ಯುತ್‌ಜ್ಜನಕ ಕೇಂದ್ರದ ಸ್ಥಾಪಿತ ಸಾಮರ್ಥ್ಯ 37,500 ಕಿವ್ಯಾ; 2 ಸೆಂಗುಳಂ ವಿದ್ಯುತ್ ಯೋಜನೆ; ಪಳ್ಳಿವಾಸಲ್‌ನ ಕೆಳಗಡೆಗೆ, ವೆಳ್ಳತ್ತುವಲ್‌ನಲ್ಲಿ ಸ್ಥಾಪಿತವಾಗಿರುವ ಈ ಕೇಂದ್ರದ ಸ್ಥಾಪಿತ ಸಾಮರ್ಥ್ಯ 48,000 ಕಿವ್ಯಾ; 3 ಪೆರಿಜ್ಞಲ್ ಕುತ್ತು ಜಲವಿದ್ಯುತ್ ಯೋಜನೆ : ಚಾಲಕ್ಕುಡಿ ನದಿಯ ಮೇಲೆ ಪೆರಿಜ್ಞಲ್ ಕುತ್ತುವಿನಲ್ಲಿ ತ್ರಿಚೂರ್ ಜಿಲ್ಲೆಯಲ್ಲಿ ಸ್ಥಾಪಿತವಾಗಿದೆ. ಸ್ಥಾಪಿತ ಸಾಮರ್ಥ್ಯ 32,000 ಕಿವ್ಯಾ; 4 ನೆರಿಯಮಂಗಲಂ ಜಲವಿದ್ಯುತ್ ಯೋಜನೆ : ಪೆರಿಯಾರ್ ನದಿಯ ಬಲದಂಡೆಯ ಮೇಲೆ ಪನಂಕುಟ್ಟಿಯಲ್ಲಿ ನಿರ್ಮಿತ. ಸ್ಥಾಪಿತ ಸಾಮರ್ಥ್ಯ 45,000 ಕಿವ್ಯಾ; 5 ಪನ್ನಿಯಾರ್ ಯೋಜನೆ : ಮುದಿರಪುಳ ನದಿಯ ಎಡದಂಡೆಯ ಮೇಲೆ ಸೆಂಗುಳಂ ಕೇಂದ್ರಕ್ಕೆ ಎದುರುಬದಿಯಲ್ಲೆ ನಿರ್ಮಿತವಾಗಿದೆ. ಸ್ಥಾಪಿತ ಸಾಮರ್ಥ್ಯ 30,000 ಕಿವ್ಯಾ; 6 ಶಬರಗಿರಿ ಯೋಜನೆ : ಪಂಬ ಮತ್ತು ಕಕ್ಕಿ ನದಿಗಳ ನೀರಿನಿಂದ ವಿದ್ಯುತ್ತನ್ನು ಉತ್ಪಾದಿಸುವುದು ಈ ಯೋಜನೆಯ ಉದ್ದೇಶ. ಸ್ಥಾಪಿತ ಸಾಮರ್ಥ್ಯ 3,00,000 ಕಿವ್ಯಾ. 7. ಇಡಿಕ್ಕಿ ಯೋಜನೆ : ಕೇರಳದಲ್ಲೇ ಅತಿ ದೊಡ್ಡ ಜಲ ವಿದ್ಯುತ್ ಯೋಜನೆ. ಇದಕ್ಕೆ ಕೆನಡದ ನೆರವು ಲಭ್ಯವಾಗಿದೆ. ಸ್ಥಾಪಿತ ಸಾಮರ್ಥ್ಯ 7,80,000 ಕಿವ್ಯಾ ಇರುತ್ತದೆ. ಕೊಟ್ಟಾಯಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಪೆರಿಯಾರ್ ನದಿಯ ದಡದ ಮೇಲೆ ನಿರ್ಮಿತವಾಗಿದೆ. 8 ಕುಟ್ಟಿಯಾಡಿ ಯೋಜನೆ : ಮಲಬಾರ್ ಜಿಲ್ಲೆಯಲ್ಲಿ ಕುಟ್ಟಿಯಾಡಿ ನದಿಯ ಮೇಲೆ ನಿರ್ಮಿಸಲಾಗಿರುವ ವಿದ್ಯುತ್‌ಜನಕ ಕೇಂದ್ರದ ಸ್ಥಾಪಿತ ಸಾಮರ್ಥ್ಯ 75,000 ಕಿವ್ಯಾ ಇರುತ್ತದೆ.

ಮಲಂಪುಳ, ವಾಳಯಾರ್, ಮಂಗಲಂ, ಪಳನಿ ಮತ್ತು ಪೀಚಿ – ಇವು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ನೀರಾವರಿ ಯೋಜನೆಗಳು. ಚಾಲಕ್ಕುಡಿ ಯೋಜನೆಯ ಪ್ರಥಮ ಮತ್ತು ದ್ವಿತೀಯ ಹಂತ ಮುಗಿದಿದೆ.

ಜನಸಂಖ್ಯೆ : 2001ರ ಜನಗಣತಿಯ ಪ್ರಕಾರ ಕೇರಳದ ಜನಸಾಂದ್ರತೆ ಚ.ಕಿಮೀ.ಗೆ 819. ತಿರುವನಂತಪುರ ಮತ್ತು ಆಲಪ್ಪುಳ ಜಿಲ್ಲೆಗಳಲ್ಲಿ ಜನಸಾಂದ್ರತೆ ಅತಿ ಹೆಚ್ಚು. ಜನಸಂಖ್ಯೆಯಲ್ಲಿ ಬಹುಪಾಲು ಗ್ರಾಮೀಣ. ಕೇರಳದ ಬಹುತೇಕ ಪಟ್ಟಣಗಳು ರೇವುಗಳು; ಅಥವಾ ಹಿನ್ನೀರುಗಳ ದಂಡೆಗಳ ಮೇಲೆ ನೆಲಸಿವೆ. ಕಣಾನೂರು ಜಿಲ್ಲೆಯ ತೆಲ್ಲಿಚ್ಚೇರಿಯಿಂದ ಕೊಡಗಿನ ಕಾಫಿಯೂ ಸ್ವಲ್ಪ ಮೆಣಸೂ ಕೊಬ್ಬರಿಯೂ ರಫ್ತಾಗುತ್ತವೆ. ಕೋಳಿಕ್ಕೋಡ್ ಕೂಡ ಇವುಗಳ ರಫ್ತಿನಲ್ಲಿ ಭಾಗವಹಿಸುತ್ತದೆ. ಇವೆರಡು ಬಂದರುಗಳಲ್ಲೂ ಹಡಗುಗಳು ಸಮುದ್ರದಂಡೆಯಿಂದ 3–4 ಕಿಮೀ ದೂರದಲ್ಲಿ ನಿಲ್ಲುತ್ತವೆ.

ಕೊಚ್ಚಿ ಮುಖ್ಯ ಬಂದರು. ಭಾರತದಲ್ಲಿ ಐರೋಪ್ಯರು ನೆಲಸಿದ ಮೊಟ್ಟ ಮೊದಲ ಸ್ಥಳ. ಇದರ ಸನ್ನಿವೇಶ ಅತ್ಯಂತ ಪ್ರಾಮುಖ್ಯವುಳ್ಳದ್ದು. ಇದು ಹಿನ್ನೀರುಗಳ ಪ್ರದೇಶದ ನಡುವೆ ನೆಲಸಿದೆ. ಪಾಲಕ್ಕಾಡು ತೆರವು ಇರುವುದು ಇದರ ಈಶಾನ್ಯಕ್ಕೆ 200 ಕಿಮೀ ದೂರದಲ್ಲಿ. ಏಡನ್ನಿಗೂ ಮುಂಬಯಿಗೂ ಇರುವ ದೂರಕ್ಕಿಂತ ಏಡನ್–ಕೊಚ್ಚಿಗಳ ನಡುವಣ ದೂರ 483 ಕಿಮೀಗಳಷ್ಟು ಕಡಿಮೆ. ಇದು ಕೊಲಂಬೊದೊಂದಿಗೆ ಕೂಡ ಯಶಸ್ವಿಯಾಗಿ ಸ್ಪರ್ಧಿಸಬಲ್ಲುದು. ಸೂಯೆಜ್ ಕಾಲುವೆಯ ಮೂಲಕ ಸಾಗಬಲ್ಲ ಯಾವ ಹಡಗಾದರೂ ಇಲ್ಲಿ ನಿಲ್ಲಲು ಸಾಧ್ಯವಾಗುವಂತೆ ಬಂದರು ನಿರ್ಮಾಣವಾಗಿದೆ. ಹಿನ್ನೀರಿಗೆ ಅಡ್ಡಲಾಗಿ ರೈಲ್ವೆ ಮತ್ತು ರಸ್ತೆ ಸೇತುವೆಗಳಿವೆ. ಪಾಲಕ್ಕಾಡ್–ಕೊಚ್ಚಿ ರೈಲುಮಾರ್ಗದ ಮೂಲಕ ಕೊಚ್ಚಿಯೊಂದಿಗೆ ಅದರ ಹಿನ್ನಾಡಿನ ಸಂಪರ್ಕ ಸಾಧಿಸಿದೆ. ತೆಂಗಿನ ನಾರಿನ ವಸ್ತುಗಳು, ಕೊಬ್ಬರಿ, ಚಹ, ರಬ್ಬರ್, ಗೋಡಂಬಿ ಇವು ಮುಖ್ಯ ನಿರ್ಯಾತಗಳು. ಕೊಚ್ಚಿಯಲ್ಲಿ ಹಡಗು ನಿರ್ಮಾಣ ಕೇಂದ್ರವಿದೆ. ಎರ್ನಾಕುಲಂನಲ್ಲಿ ಸಾಬೂನಿನ ಕಾರ್ಖಾನೆಗಳುಂಟು. ಮಟ್ಟನ್‌ಚೇರಿಯಲ್ಲಿ ಅಕ್ಕಿಗಿರಣಿಗಳಿವೆ. ಈ ಎಲ್ಲಾ ಸ್ಥಳಗಳೂ ಇರುವುದು ಕೊಚ್ಚಿ ವಲಯದಲ್ಲೇ. ಕೊಚ್ಚಿಯ ಜನಸಂಖ್ಯೆ 1355406. ತ್ರಿಚೂರಿನಲ್ಲಿ ಹತ್ತಿ ಗಿರಣಿಗಳೂ ಹೆಂಚಿನ ಕಾರ್ಖಾನೆಗಳೂ ಇವೆ.

ಹಳೆಯ ತಿರುವಾಂಕೂರು ಪ್ರದೇಶದಲ್ಲಿ ಹೆಚ್ಚು ಪಟ್ಟಣಗಳಿಲ್ಲ. ತಿರುವನಂತಪುರ ಕೇರಳದ ರಾಜಧಾನಿ. ಆಲಪ್ಪುಳ ಮತ್ತು ಕೊಲ್ಲಂ ಪುರಾತನ ಪ್ರಸಿದ್ಧ ಬಂದರುಗಳು. ಈಗ ಇವುಗಳ ಪ್ರಾಮುಖ್ಯ ತಗ್ಗಿದೆ. ತಿರುವನಂತಪುರ–ಮಂಗಳೂರು ರೈಲು ಮಾರ್ಗದಲ್ಲಿ ಕೊಲ್ಲಂ ಒಂದು ಸಂಧಿ ಸ್ಥಳ. ಇಲ್ಲಿಂದ ತಮಿಳುನಾಡಿಗೆ ರೈಲ್ವೆ ಸಂಪರ್ಕವುಂಟು. ಕೊಲ್ಲಂನಲ್ಲೂ ಆಲಪ್ಪುಳದಲ್ಲೂ ಗೋಡಂಬಿ ಕಾರ್ಖಾನೆಗಳಿವೆ.

ತಿರುವನಂತಪುರ, ಕೊಲ್ಲಂ, ಕೊಟ್ಟಾಯಂ, ಆಲಪ್ಪುಳ, ತ್ರಿಚೂರ್, ಕಣ್ಣಾನೂರು, ಕೋಳಿಕ್ಕೋಡ್, ಪಾಲಕ್ಕಾಡು, ಎರ್ನಾಕುಲಂ, ಮಲಪ್ಪುರಂ ಇವು ಆಯಾ ಹೆಸರುಗಳ ಜಿಲ್ಲೆಗಳ ಮುಖ್ಯ ಪಟ್ಟಣಗಳು.

ರಾಜ್ಯದಲ್ಲಿ 61,469 ಕಿಮೀ ಉದ್ದದ ರಸ್ತೆಮಾರ್ಗವಿದೆ (2001). ಕೇರಳದ ಹಿನ್ನೀರು ಮತ್ತು ಲಗೂನ್‌ಗಳು ನೌಕಯಾನಕ್ಕೆ ಅನುಕೂಲವಾಗಿವೆ. ಎಲ್ಲಾ ಬಂದರುಗಳು ಒಂದಕ್ಕೊಂದು ಸಂಪರ್ಕಹೊಂದಿವೆ. ಕೊಚ್ಚಿ ದೊಡ್ಡಬಂದರು. ಆಲಪ್ಪುಳ ಕೋಳಿಕ್ಕೋಡ್ಗಳು ಮಧ್ಯಮ ಗಾತ್ರದ ಬಂದರುಗಳು. ತಿರುವನಂತಪುರ, ಕೊಲ್ಲಂ, ಕೋಯಿಲ್ ತೋಟಂ, ಪೊನ್ನಾನಿ, ಬಡಗರ, ತಲಚ್ಚೇರಿ, ಕಣ್ಣಾನೂರು, ಅಳಿಕ್ಕಲ್ ಮತ್ತು ಕಾಸರಗೋಡು ಸಣ್ಣ ಬಂದರುಗಳು.

ರಾಜ್ಯದ ಮುಖ್ಯ ಭಾಷೆ ಮಲಯಾಳಂ, ತಮಿಳು, ಕನ್ನಡ ಭಾಷೆಗಳನ್ನಾಡುವವರೂ ಅಧಿಕ ಸಂಖ್ಯೆಗಳಲ್ಲಿದ್ದಾರೆ. (ಪಿ.ಎಚ್.)

**ಕೈಗಾರಿಕಾ ಕ್ರಾಂತಿ:** ಮಾನವಶಕ್ತಿಯಿಂದ ಚರಕ, ಮಗ್ಗ, ಕುಲುಮೆಗಳನ್ನು ನಡೆಸುವ ಗುಡಿ ಕೈಗಾರಿಕೆಗಳು ಎಲ್ಲೆಲ್ಲೂ ಇದ್ದವು. ಆದರೆ ಮಾನವ ಶಕ್ತಿಯ ಬದಲಿಗೆ ಉಗಿಯ ಯಂತ್ರ ಬಳಕೆಗೆ ಬಂತು. ಉಗಿಯ ಬಲದಿಂದ ಯಂತ್ರಗಳು ಚಲಿಸಿದವು. 10–20ಜನ ಮಾಡುವ ಕೆಲಸವನ್ನು ಯಂತ್ರದ ನೆರವಿನಿಂದ ಒಬ್ಬನೇ ಮಾಡುವಂತಾಯಿತು. ಬ್ರಿಟನ್‌ನಲ್ಲಿ ಈ ಕ್ರಾಂತಿ ಮೊದಲು ಹುಟ್ಟಿತು. ಜೇಮ್ಸ್ ವ್ಯಾಟ್ ಉಗಿಯ ಯಂತ್ರವನ್ನು ನಿರ್ಮಿಸಿ ಬಳಸಲು ಸಾಧ್ಯವೆಂದು ತೋರಿಸಿಕೊಟ್ಟ. ಇದರಿಂದ ಯಂತ್ರ ಮತ್ತು ವಾಹನ ಚಾಲನೆ ಸಾಧ್ಯವಾಯಿತು. ಜೇಮ್ಸ್ ಹಾರ್‌ಗ್ರೀವ್ಸ್ 'ಸ್ಪಿನ್ನಿಂಗ್ ಜನ್ನಿ' ಎಂಬ ಎಂಟಕ್ಕೂ ಹೆಚ್ಚು ಎಳೆ ನೂಲುವ ಚರಕ ತಯಾರಿಸಿದ. ಮುಂದೆ 1769ರಲ್ಲಿ ಹೊಸದೊಂದು ನೂಲಿನ ಚಾಕಟ್ಟನ್ನು ಸಿದ್ಧಪಡಿಸಿದ. ಕ್ರಾಂಪ್ಟನ್ ಈ ಎರಡರ ಒಳ್ಳೆಯ ಅಂಶಗಳನ್ನು ಒಳಗೊಂಡ 'ಮತ್ಯಾಲ್' ಎಂಬ ಯಂತ್ರ ರೂಪಿಸಿದ್ದ. ಇದು ನೂಲುವುದನ್ನು ಯಾಂತ್ರಿಕವಾಗಿ ವೇಗವಾಗಿ ಮಾಡಲು ಸಮರ್ಥವಾಯಿತು. ನೇಯ್ಗೆಗೂ ಇದೇ ರೀತಿ ಯಾಂತ್ರೀಕೃತ ವ್ಯವಸ್ಥೆ ರೂಢಿಯಾಯಿತು. ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಬಂಡವಾಳಗಾರರು ಮುಂದಾದರು. ಬಂಡವಾಳ ಒದಗಿಸಲು ಒಂದು ಕೇಂದ್ರೀಯ ಬ್ಯಾಂಕ್ ಕೂಡ ಇಂಗ್ಲೆಂಡಿನಲ್ಲಿ ಸ್ಥಾಪಿತವಾಯಿತು. ಮ್ಯಾಂಚೆಸ್ಟರ್ ಲಿವರ್ ಪೂಲ್‌ಗಳ ಬಟ್ಟೆ ಕೈಗಾರಿಕೆ ಬೆಳೆದಂತೆ ದಂಡಿಯಲ್ಲಿ ಗೋಣಿ ಕೈಗಾರಿಕೆ ಬೆಳೆಯಿತು. ರಬ್ಬರ್, ರೇಷ್ಮೆ, ಪಾದರಕ್ಷೆಗಳಂತಹ ಉದ್ದಿಮೆಗಳು ಬೆಳೆದವು. ಉಗಿಯನ್ನು ಉತ್ಪಾದಿಸಲು ಕಲ್ಲಿದ್ದಲಿನ ಗಣಿಗಾರಿಕೆಯೂ ಪ್ರಾರಂಭವಾಗಿ ಸಾರಿಗೆಯಲ್ಲಿ ಕ್ರಾಂತಿಯಾಗುವಂತೆ 1801ರಲ್ಲಿ ಉಗಿಯ ರೈಲು ಎಂಜಿನ್ ಅನ್ನು ಇವಾನ್ಸ್, ವಾಟ್ ಮತ್ತು ಪ್ರವ್‌ತಿಕ್ ಸಿದ್ಧಪಡಿಸಿದರು. ವೇಗವಾಗಿ ಹಾಗೂ ಭಾರಿಪ್ರಮಾಣದಲ್ಲಿ, ಕಲ್ಲಿದ್ದಲು, ಕಚ್ಚಾವಸ್ತು ಸಿದ್ಧ ವಸ್ತುಗಳ ಸಾರಿಗೆ ಇದರಿಂದ ಸಾಧ್ಯವಾಯಿತು.

ಕೈಗಾರಿಕಾ ಕ್ರಾಂತಿಯ ಪರಿಣಾಮಗಳು:

1. ಕೈಗಾರಿಕೆ ನಡೆಸುವ ಬಂಡವಾಳಗಾರ ಶ್ರೀಮಂತರು ಹಾಗೂ ದುಡಿಯುವ ಕಾರ್ಮಿಕರು ಎಂಬ ವರ್ಗಗಳ ಸೃಷ್ಟಿಗೆ ಹಾದಿಯಾಯಿತು. ನಗರೀಕರಣ, ನಗರಗಳಿಗೆ ಕೊಳಚೆ ಪ್ರದೇಶಗಳ ಸೃಷ್ಟಿ ಹೆಚ್ಚಿತು. ನಗರೀಕರಣದಿಂದ ಭಾರಿ ಮಧ್ಯಮವರ್ಗ ಬೆಳೆಯಿತು.

2. ಒಬ್ಬನೇ ಶ್ರೀಮಂತನಿಗೆ ಬೃಹತ್ ಕೈಗಾರಿಕೆಗಳಿಗೆ ಬಂಡವಾಳ ಹೂಡುವ ಸಾಮರ್ಥ್ಯ ಇಲ್ಲದಾಗ ಕೂಡು ಬಂಡವಾಳ ಪದ್ಧತಿ ರೂಢಿಗೆ ಬಂತು, ಬಂಡವಾಳ ಹೂಡಿದವರಿಗೂ ಕಾರ್ಮಿಕರಿಗೂ ಸಂಬಂಧವೇ ಇರದಂತೆ ನಿರ್ವಾಹಕರು ಎಂಬ ಹೊಸ ವರ್ಗ ಮೂಡಿತು. ಬ್ಯಾಂಕುಗಳ ಬೆಳವಣಿಗೆಗೆ ಅವಕಾಶವಾಯಿತು.

3. ಉತ್ಪಾದನೆಯಲ್ಲಿ ಶ್ರಮವಿಭಜನೆಯಿಂದ ಸಿದ್ಧವಸ್ತುವಿನ ಒಂದೊಂದು ಭಾಗದ ಉತ್ಪಾದನಾ ಕ್ಷೇತ್ರದಲ್ಲೂ ವಿಶೇಷ ಪರಿಣತಿಗೆ ಅವಕಾಶವಾಗಿ ಉತ್ಪಾದನಾ ವೆಚ್ಚ ತೀರಾ ಕಡಿಮೆಯಾಯಿತು. ಅನೇಕ ವಸ್ತುಗಳು ಅಗ್ಗಬೆಲೆಗೆ ದೊರೆಯುವುದು ಸಾಧ್ಯವಾಯಿತು. ಜೊತೆಗೆ ಶಿಕ್ಷಣದಲ್ಲಿ ತಾಂತ್ರಿಕ ತರಬೇತಿಗೆ ಹೆಚ್ಚಿನ ಮಹತ್ವ ಬಂದಿತು.

4. ಬಂಡವಾಳದಾರ ಮತ್ತು ಕಾರ್ಮಿಕರ ವರ್ಗಗಳ ನಡುವೆ ವೈಮನಸ್ಸುಗಳು ಸೃಷ್ಟಿಯಾದವು. ಕಾರ್ಖಾನೆಯ ನಿರ್ವಾಹಕರು ಲಾಭ ಹೆಚ್ಚಿಸಲು ಕಾರ್ಮಿಕರನ್ನು ಶೋಷಿಸಿದರು. ಇದರಿಂದ ವರ್ಗಕಲಹದ ಕಲ್ಪನೆ ಪ್ರತಿಪಾದಿಸುವ ಸಮಾಜವಾದ ಬೆಳೆಯಿತು. ಸಮಾಜವಾದಿಗಳು ಕಾರ್ಮಿಕ ಸಂಘಟನೆಗೆ ಶ್ರಮಿಸಿದರು. ಸಂಘಟನೆ ಕಾರ್ಮಿಕರಿಂದ ಕ್ರಾಂತಿ ನಡೆಸಿ ವಿಶ್ವದ ಚಿತ್ರಣವನ್ನೇ ಬದಲಿಸುವ ಸಲುವಾಗಿ ಕನಸುಗಳನ್ನು ಕಂಡರು. ಕಾರ್ಲ್‌ಮಾರ್ಕ್ಸ್ (1818–83) ಈ ಕ್ರಾಂತಿಯ ವಿಚಾರಗಳ ಗಣ್ಯ ಪ್ರತಿಪಾದಕ.

ಕೈಗಾರಿಕೆ ಕ್ರಾಂತಿಯಿಂದ ಭಾರತದ ಮೇಲೆ ಪರಿಣಾಮಗಳು: ಬಟ್ಟೆ ನೇಯ್ಗೆಯ ಕೈಗಾರಿಕೆಗಳು ಬಹುಮಟ್ಟಿಗೆ ನಾಶವಾದವು. ಕೋಟಿಗಟ್ಟಲೆ ನೂಲುವ ಹೆಂಗಸರು ಲಕ್ಷಾವಧಿ ನೇಕಾರರು ಉದ್ಯೋಗ ಕಳೆದುಕೊಂಡರು. ಅಪಾರ ನೇಕಾರರು ನಿರುದ್ಯೋಗದಿಂದ ಸತ್ತರೆಂದು ವಿಲಿಯಂಬೆಂಟಿಕ್ ಹೇಳಿದ್ದಾನೆ. ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿ ಆದ ಮೇಲೂ ಅಲ್ಲಿ ಭಾರತದ ಬಟ್ಟೆಗಳಿಗೆ ಬೇಡಿಕೆ ಇತ್ತು. ಆದರೆ ಅಲ್ಲಿ ಭಾರತದ ಆಮದಾದ ಬಟ್ಟೆಗಳ ಮೇಲೆ ದುಬಾರಿಯಾದ ಆಮದು ಸುಂಕ ಹೇರಿದರು. ಭಾರತದ ಬಟ್ಟೆ ಅಲ್ಲಿ ತೀರಾ ತುಟ್ಟಿಯಾಯಿತು. ರಬ್ಬರ್ ಕೈಗಾರಿಕೆಯಿಂದ ಭಾರತದ ಚರ್ಮದ ಕೈಗಾರಿಕೆಗೆ ಹಾನಿಯಾಯಿತು. ಕಾಗದ, ಕಬ್ಬಿಣ, ಉಕ್ಕು ಮತ್ತು ಗುಡಿ ಕೈಗಾರಿಕೆಗಳೂ ಹಾನಿಗೊಳಗಾದವು. (ಪಿ.ಜಿ.)

**ಕೈಗಾರಿಕಾ ಜಡತ್ವ:** ಕೈಗಾರಿಕೆ ತನ್ನ ಅಭಿವೃದ್ಧಿಗೆ ಪೂರಕವಾದ ಅಂಶಗಳು ಒಂದು ಪ್ರದೇಶದಲ್ಲಿ ಇಲ್ಲದಿದ್ದರೂ ಆ ಕೈಗಾರಿಕೆ ಅಭಿವೃದಿ ಹೊಂದುವ ಲಕ್ಷಣವನ್ನು ಕೈಗಾರಿಕಾ ಜಡತ್ವ ಎಂದು ಕರೆಯಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಮತ್ತು ಅನಂತರದ ಸಂದರ್ಭದಲ್ಲಿ ಸಂಪೂರ್ಣವಾಗಿ ಇಲ್ಲದಿದ್ದರೂ ಆ ಒಂದು ಕೈಗಾರಿಕೆ ಅಭಿವೃದ್ಧಿಯಾಗಿ ಮುಂದುವರಿಯುವ ಸ್ಥಿತಿಯನ್ನು ಕೈಗಾರಿಕಾ ಜಡತ್ವ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಕೈಗಾರಿಕಾ ಜಡತ್ವ ಉಂಟಾಗಲು ಪ್ರಮುಖ ಕಾರಣಗಳೆಂದರೆ ಬಾಹ್ಯ ಆರ್ಥಿಕ ಅಂಶಗಳು ಮತ್ತು ಸ್ಥಳೀಯವಾಗಿ ಅಭಿವೃದ್ಧಿಯಾಗುವ ಕೈಗಾರಿಕೆಗಳ ಇತರ ಚಟುವಟಿಕೆಗಳು. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಇತಿಹಾಸವನ್ನು ಕೂಲಂಕಷವಾಗಿ ಗಮನಿಸಿದರೆ ಕೈಗಾರಿಕಾ ಜಡತ್ವದ ಪರಿಕಲ್ಪನೆ ಸ್ಪಷ್ಟವಾಗಿ ತಿಳಿಯುತ್ತದೆ.

ಕೈಗಾರಿಕಾ ಜಡತ್ವ ತತ್ವದ ಆಧಾರದ ಮೇಲೆ ಈಗಲೂ ಮುನ್ನಡೆಯುತ್ತಿರುವ ಗ್ರೇಟ್ ಬ್ರಿಟನ್ನಿನ ಪ್ರಮುಖ ನಗರವಾದ ಮ್ಯಾಂಚೆಸ್ಟರ್ ಉತ್ತಮ ಉದಾಹರಣೆಯಾಗಿದೆ. 19ನೆಯ ಶತಮಾನದ ಮಧ್ಯಭಾಗದಲ್ಲಿ ಇಂಗ್ಲೆಂಡ್ ದೇಶ ಪ್ರಪಂಚದಾದ್ಯಂತ ವಸಾಹತುಗಳನ್ನು ಹೊಂದಿತ್ತು. ಈ ವಸಾಹತುಗಳಿಂದ ಆಮದು ಮಾಡಿಕೊಂಡ ಕಚ್ಚಾಹತ್ತಿ ಮತ್ತು ಸೆಣಬನ್ನು ಸಿದ್ಧವಸ್ತುಗಳನ್ನಾಗಿ ಮಾಡಲು ಇಂಗ್ಲೆಂಡ್ ದೇಶ ಬಂದರು ನಗರವಾಗಿದ್ದ ಮ್ಯಾಂಚೆಸ್ಟರ್‌ನ್ನು ಕೈಗಾರಿಕಾ ನಗರವನ್ನಾಗಿ ಪರಿವರ್ತಿಸಿತು. 20ನೆಯ ಶತಮಾನದ ವೇಳೆಗೆ ಮ್ಯಾಂಚೆಸ್ಟರ್ ನಗರ ಪ್ರಪಂಚದಲ್ಲೇ ಅತೀಹೆಚ್ಚು ಹತ್ತಿ ಗಿರಣಿಗಳನ್ನು ಹೊಂದಿರುವ ಮತ್ತು ಹತ್ತಿ ಬಟ್ಟೆಗಳನ್ನು ತಯಾರಿಸುವ ಕೇಂದ್ರವಾಗಿ ಮಾರ್ಪಟ್ಟಿತ್ತು. ಆದರೆ ದ್ವಿತೀಯ ಮಹಾಯುದ್ಧದ ಅನಂತರದ ಬೆಳವಣಿಗೆಯಲ್ಲಿ ಇಂಗ್ಲೆಂಡ್ ತನ್ನ ಎಲ್ಲಾ ವಸಾಹತುಗಳನ್ನು ಕಳೆದುಕೊಂಡಿತು, ಆದರೂ ಮ್ಯಾಂಚೆಸ್ಟರ್ ನಗರ ಇಂದಿಗೂ ಕೂಡ ಕೈಗಾರಿಕಾ ನಗರವಾಗಿಯೇ ಮುಂದುವರೆದಿದೆ. ಈ ಒಂದು ನಿದರ್ಶನದ ಮೂಲಕ ಕೈಗಾರಿಕಾ ಜಡತ್ವವನ್ನು ಪರಿಣಾಮಕಾರಿಯಾಗಿ ಅರ್ಥೈಸಿಕೊಳ್ಳಬಹುದು. ಕೃತಕ ನೂಲು ಮತ್ತು ಬಟ್ಟೆಗಳಾದ ರೇಯಾನ್, ನೈಲಾನ್ ಮತ್ತು ಪಾಲಿಯೆಸ್ಟರ್‌ಗಳ ಆವಿಷ್ಕಾರದಿಂದ ಮ್ಯಾಂಚೆಸ್ಟರ್ ನಗರ ಕೈಗಾರಿಕಾ ನಗರವಾಗಿ ಉಳಿದುಕೊಂಡಿದೆ.

ಕೈಗಾರಿಕಾ ಜಡತ್ವದ ಮೇಲೆ ಪ್ರಮುಖವಾಗಿ ಆರ್ಥಿಕ ಮತ್ತು ಭೌಗೋಳಿಕಾಂಶಗಳು ನೇರವಾಗಿ ಪರಿಣಾಮ ಬೀರುತ್ತವೆ. ಕರ್ನಾಟಕ ರಾಜ್ಯದಲ್ಲಿ ಪ್ರಮುಖ ಚಿನ್ನದಗಣಿ ಪ್ರದೇಶವಾಗಿದ್ದ ಕೋಲಾರ ನಗರದಲ್ಲಿ ಚಿನ್ನದ ಅದಿರಿನ ಉತ್ಪಾದನೆ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದರೂ, ಕೋಲಾರ ನಗರ ಇಂದಿಗೂ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಮುಂದುವರೆದಿದೆ. ಇದೂ ಕೈಗಾರಿಕಾ ಜಡತ್ವಕ್ಕೆ ಉತ್ತಮ ಉದಾಹರಣೆಯಾಗಿದೆ. ಕೈಗಾರಿಕಾ ಜಡತ್ವ ಉಂಟಾಗಲು ಕಾರಣಗಳೆಂದರೆ ಮೂಲ ಕೈಗಾರಿಕೆಗಳಲ್ಲಿ ಉಂಟಾಗುವ ಬದಲಾವಣೆಗಳು. ಕಚ್ಚಾವಸ್ತುಗಳ ಪೂರೈಕೆಯಲ್ಲಾಗುವ ಏರುಪೇರುಗಳು ಪರ್ಯಾಯ ಕಚ್ಚಾವಸ್ತುಗಳ ಬಳಕೆ, ಕೈಗಾರಿಕಾ ಕ್ಷೇತ್ರದಲ್ಲಿ ಉಂಟಾಗುವ ಹೊಸ ಆವಿಷ್ಕಾರಗಳು, ರಾಜಕೀಯ ಕ್ಷೇತ್ರದಲ್ಲಿ ಉಂಟಾಗುವ ಬದಲಾವಣೆಗಳು ಪ್ರಮುಖವಾಗಿದೆ. (ಪಿ.ಎನ್.ಎಚ್.)

**ಕೈಗಾರಿಕಾ ಸ್ಥಾನೀಕರಣ ಮತ್ತು ಅಂಶಗಳು:** ಕೈಗಾರಿಕೆಗಳು ಎಲ್ಲಾ ಪ್ರದೇಶಗಳಲ್ಲಿಯೂ ಹಂಚಿಕೆಯಾಗಿರುವುದಿಲ್ಲ. ಅವು ಕೆಲವೇ ಪ್ರದೇಶಗಳಲ್ಲಿ ಮಾತ್ರ ಕೇಂದ್ರೀಕೃತವಾಗಿರುತ್ತವೆ. ಅವುಗಳ ಸ್ಥಾಪನೆ ಹಾಗೂ ಅಭಿವೃದ್ಧಿಗಾಗಿ ಎಲ್ಲ ಅನುಕೂಲಗಳನ್ನು ಹೊಂದಿರುವ ಸ್ಥಳಗಳಲ್ಲಿ ಮಾತ್ರ ಸ್ಥಾಪಿಸಲ್ಪಟ್ಟಿರುತ್ತವೆ. ಅನೇಕ ಅಂಶಗಳು ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುತ್ತವೆ. ಕೈಗಾರಿಕೆಗಳ ಸ್ಥಾಪನೆ ಭೌಗೋಳಿಕ, ಆರ್ಥಿಕ, ಐತಿಹಾಸಿಕ, ಸಾಮಾಜಿಕ ಹಾಗೂ ರಾಜಕೀಯ ಅಂಶಗಳನ್ನು ಅವಲಂಬಿಸಿರುತ್ತವೆ. ಕಚ್ಚಾ ವಸ್ತುಗಳು, ಶಕ್ತಿ ಸಾಧನಗಳು, ಮಾರುಕಟ್ಟೆ ಕಾರ್ಮಿಕರ ಸರಬರಾಜು, ನೀರು, ನಿವೇಶನ, ಸಂಚಾರಸೌಲಭ್ಯ, ವಾಯುಗುಣ, ಬಂಡವಾಳ, ಸರ್ಕಾರದ ನೀತಿ ಮುಂತಾದವುಗಳನ್ನು ಅವಲಂಬಿಸಿ ಕೈಗಾರಿಕೆಗಳು ಸ್ಥಾಪನೆಯಾಗಿರುತ್ತವೆ, ಇದನ್ನು ಕೈಗಾರಿಕಾ ಸ್ಥಾನೀಕರಣ ಎಂದು ಕರೆಯುವರು. ಅಂದರೆ ಒಂದೇ ರೀತಿಯ ವಸ್ತುಗಳನ್ನು ಉತ್ಪಾದಿಸುವ ಅನೇಕ ಕಾರ್ಖಾನೆಗಳು ನಿರ್ದಿಷ್ಟ ಸ್ಥಳದಲ್ಲಿ ಕೇಂದ್ರೀಕೃತವಾಗಿರುವುದನ್ನೇ ಕೈಗಾರಿಕೆಯ ಸ್ಥಾನೀಕರಣ ಎನ್ನುವರು, ಉದಾ: ಮುಂಬಯಿಯ ಹತ್ತಿ ಗಿರಣಿಗಳು, ಕೋಲ್ಕತ್ತಾದ ಸೆಣಬು ಗಿರಣಿ, ಇತ್ಯಾದಿ. ವಿವಿಧ ಕೈಗಾರಿಕೆಗಳ ಸ್ಥಾನೀಕರಣದ ಅಂಶಗಳೂ ಏಕರೀತಿಯಾಗಿರದೆ ಅವು ವಿಭಿನ್ನವಾಗಿರುತ್ತವೆ.

ಕಚ್ಚಾವಸ್ತುಗಳು: ಕೈಗಾರಿಕೆಗಳ ಸ್ಥಾನೀಕರಣದಲ್ಲಿ ಕಚ್ಚಾವಸ್ತುಗಳು ಪ್ರಮುಖ ಪಾತ್ರ ವಹಿಸುತ್ತವೆ. ಕಚ್ಚಾವಸ್ತುವನ್ನು ಸಂಸ್ಕರಿಸಿ ಸಿದ್ಧವಸ್ತುವಾಗಿ ಪರಿವರ್ತಿಸುವುದೇ ಕೈಗಾರಿಕೆಯ ಮೂಲ ಉದ್ದೇಶ. ಕೈಗಾರಿಕೆಗೆ ಸಂಬಂಧಿಸಿದ ಕಚ್ಚಾಪದಾರ್ಥಗಳು ಸಾಕಷ್ಟು ಪೂರೈಕೆಯಾಗಬೇಕು. ಕಚ್ಚಾವಸ್ತುಗಳಲ್ಲಿ 2 ವಿಧಗಳಿವೆ;

1. ತೂಕವನ್ನು ಕಳೆದುಕೊಳ್ಳುವ ಅಥವಾ ಅಶುದ್ಧ ಕಚ್ಚಾ ವಸ್ತುಗಳು. ಸಿದ್ಧ ವಸ್ತುಗಳನ್ನು ಉತ್ಪಾದಿಸಲು ಕೈಗಾರಿಕೆಯ ಸಂಸ್ಕರಣದ ಹಂತದಲ್ಲಿ ತಮ್ಮ ತೂಕದ ಬಹುಪಾಲನ್ನು ಕಳೆದುಕೊಳ್ಳುವ ವಸ್ತುಗಳಿಗೆ ಅಶುದ್ಧ ಕಚ್ಚಾವಸ್ತುಗಳೆನ್ನುವರು. ಉದಾ: ಕಬ್ಬು, ಕಬ್ಬಿಣದ ಅದಿರು, ಸೆಣಬು ಇತ್ಯಾದಿ. ಇಂತಹ ವಸ್ತುಗಳನ್ನು ಬಳಸುವ ಕೈಗಾರಿಕೆಗಳು ಸಾಗಾಣಿಕೆ ವೆಚ್ಚವನ್ನು ಉಳಿಸಲು ಸಾಮಾನ್ಯವಾಗಿ ಕಚ್ಚಾವಸ್ತುಗಳು ದೊರೆಯುವ ಪ್ರದೇಶಗಳಲ್ಲೇ ಕೇಂದ್ರೀಕೃತವಾಗಿರುತ್ತವೆ. ಉದಾ: ಉತ್ತರ ಪ್ರದೇಶದ ಸಕ್ಕರೆ ಕೈಗಾರಿಕೆಗಳು, ಕೋಲ್ಕತ್ತದ ಸೆಣಬಿನ ಗಿರಣಿಗಳು ಇತ್ಯಾದಿ.

2. ಸಿದ್ಧವಸ್ತುಗಳನ್ನು ತಯಾರಿಸುವ ಸಂಸ್ಕರಣ ಹಂತದಲ್ಲಿ ಭಾಗಶಃ ತೂಕವನ್ನು ಮಾತ್ರ ಕಳೆದುಕೊಳ್ಳುವುದಕ್ಕೆ ಶುದ್ಧ ಕಚ್ಚಾ ವಸ್ತುಗಳೆನ್ನುವರು. ಉದಾ: ಹತ್ತಿ, ಉಣ್ಣೆ, ರೇಷ್ಮೆ ಇತ್ಯಾದಿ, ಈ ವಸ್ತುಗಳ ಸುಧಾರಿತ ಕೈಗಾರಿಕೆಗಳು ಸಾಮಾನ್ಯವಾಗಿ ಮಾರುಕಟ್ಟೆ, ಸಂಚಾರ ಸೌಲಭ್ಯ, ಕಾರ್ಮಿಕರು ದೊರೆಯುವ ಸ್ಥಳ ಅಥವಾ ಇನ್ನಾವುದೇ ಸೌಲಭ್ಯವಿರುವ ಸ್ಥಳಗಳಲ್ಲಿ ಸ್ಥಾಪನೆಯಾಗಿರುತ್ತದೆ. ಉದಾ: ಮ್ಯಾಂಚೆಸ್ಟರ್ ಮತ್ತು ಅಹಮದಾಬಾದ್ ಹತ್ತಿ ಗಿರಣಿ, ಯಾರ್ಕ್‌ಷೈರ್ ಉಣ್ಣೆ ಕೈಗಾರಿಕೆ ಇತ್ಯಾದಿ.

ಶಕ್ತಿಸಾಧನಗಳು: ಕೈಗಾರಿಕೆಯ ಯಂತ್ರೋಪಕರಣಗಳ ಚಾಲನೆಗೆ ಶಕ್ತಿ ಸಾಧನ ಅತ್ಯಾವಶ್ಯಕ, ಆದ್ದರಿಂದ ಕೈಗಾರಿಕೆಯಸ್ಥಾಪನೆ ಮತ್ತು ಅಭಿವೃದ್ಧಿಗೆ ಸಾಕಷ್ಟು ಶಕ್ತಿ ಸಾಧನಗಳು ದೊರೆಯುವಂತಿರಬೇಕು. ಕಲ್ಲಿದ್ದಲು, ಪೆಟ್ರೋಲಿಯಂ, ಜಲಶಕ್ತಿ ಹಾಗೂ ಸ್ವಾಭಾವಿಕ ಅನಿಲ. ಇವು ಮುಖ್ಯ ಶಕ್ತಿ ಸಾಧನವಾಗಿವೆ, ಕಲ್ಲಿದ್ದಲನ್ನು ಆಧರಿಸಿದ ಕೈಗಾರಿಕೆಗಳು ಕಲ್ಲಿದ್ದಲು ದೊರೆಯುವ ಪ್ರದೇಶದ ಸಮೀಪದಲ್ಲಿ ನೆಲೆಸಿರುತ್ತವೆ. ಉದಾ: ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಪೆಟ್ರೋಲಿಯಂ ಮತ್ತು ವಿದ್ಯುಚ್ಛಕ್ತಿಯನ್ನಾಧರಿಸಿದ ಕೈಗಾರಿಕೆಗಳು ಶಕ್ತಿ ಸಾಧನಗಳು ದೊರೆಯುವ ಪ್ರದೇಶಗಳ ಸಮೀಪದಲ್ಲೇ ನೆಲೆಸುವುದಕ್ಕೆ ಬದಲಾಗಿ ವಿಕೇಂದ್ರಿಕೃತಗೊಂಡಿರುತ್ತವೆ.

ವಾಯುಗುಣ: ಕೈಗಾರಿಕೆಗಳ ಸ್ಥಾನೀಕರಣ ಸ್ವಲ್ಪಮಟ್ಟಿಗೆ ವಾಯುಗುಣದ ಪರಿಸ್ಥಿತಿಯಿಂದಲೂ ನಿರ್ಧರಿಸಲ್ಪಟ್ಟಿರುತ್ತದೆ. ತೇವಾಂಶಭರಿತ ವಾಯುಗುಣ ಹತ್ತಿ ಕೈಗಾರಿಕೆಗೆ ಅನುಕೂಲವಾದ್ದರಿಂದ ಪ್ರಾರಂಭದಲ್ಲಿ ಈ ಕೈಗಾರಿಕೆಗಳು ತೇವಾಂಶವುಳ್ಳ ವಾಯುಗುಣ ಪ್ರದೇಶದಲ್ಲಿ ಸ್ಥಾಪನೆಗೊಂಡಿದ್ದವು. ಉದಾ: ಮುಂಬಯಿ, ಹಿಟ್ಟು ಗಿರಣಿ, ಕೈಗಾರಿಕೆಗಳಿಗೆ ಒಣ ಹವೆಯಿಂದ ಕೂಡಿದ ವಾಯುಗುಣ ಅವಶ್ಯಕ. ಆದರೆ ಇತ್ತೀಚೆಗೆ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯಿಂದಾಗಿ ವಾಯುಗುಣದ ಪ್ರಾಮುಖ್ಯತೆ ಕಡಿಮೆಯಾಗಿದೆ. ಕಾರ್ಖಾನೆಗಳಲ್ಲಿ ಕೃತಕವಾಗಿ ತಂಪಾದ ಹವೆಯನ್ನು ಆಂತರಿಕ ಹವಾಮಾನ ನಿಯಂತ್ರಣಗಳಿಂದ ಪಡೆದುಕೊಳ್ಳಬಹುದು. ಆದರೆ ಅದು ಹೆಚ್ಚು ವೆಚ್ಚದಾಯಕವಾದದ್ದು.

ಆದಾಗ್ಯೂ ವಾಯುಗುಣ ಕಾರ್ಮಿಕರ ಕಾರ್ಯ ಸಾಮರ್ಥ್ಯದ ಮೇಲೆ ತನ್ನ ಪ್ರಭಾವ ಬೀರುತ್ತದೆ. ಅತೀ ಶೀತ ಹಾಗೂ ಉಷ್ಣವಾಯುಗುಣ. ಕಾರ್ಮಿಕರ ಕಾರ್ಯ ಸಾಮರ್ಥ್ಯವನ್ನು ಮಿತಗೊಳಿಸುತ್ತದೆ. ಪರಿಣಾಮವಾಗಿ ಉಷ್ಣವಲಯ ಮತ್ತು ಶೀತವಲಯಗಳಿಗಿಂತ ಸಮಶೀತೋಷ್ಣವಲಯದಲ್ಲಿ ವಾಯುಗುಣ ಪರಿಸ್ಥಿತಿ ಕೈಗಾರಿಕಾ ಚಟುವಟಿಕೆಗಳಿಗೆ ಯೋಗ್ಯವಾಗಿದೆ.

ನೀರು: ಕೈಗಾರಿಕಾ ಸಂಸ್ಕರಣದಲ್ಲಿ ಸಿದ್ಧವಸ್ತುಗಳನ್ನು ತಂಪುಗೊಳಿಸುವುದಕ್ಕೆ ಹಬೆವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಸ್ತುಗಳನ್ನು ತೊಳೆಯಲು, ಬಣ್ಣ ಹಾಕಲು ಕುಡಿಯುವ ನೀರಿಗಾಗಿ, ನೈರ್ಮಲ್ಯತೆಗಾಗಿ, ಶುದ್ಧ ನೀರಿನ ಪೂರೈಕೆ ಸಾಕಷ್ಟಿರಬೇಕು.

ನಿವೇಶನ: ಕಾರ್ಖಾನೆಗಳನ್ನು ನಿರ್ಮಿಸಲು ಕಚ್ಚಾವಸ್ತು ಹಾಗೂ ಸಿದ್ಧವಸ್ತುಗಳನ್ನು ಸಂಗ್ರಹಿಸಿಕೊಳ್ಳಲು ಕಟ್ಟಗಳನ್ನು ನಿರ್ಮಿಸಲು ಸಮತಟ್ಟಾದ ವಿಶಾಲವಾದ ಹಾಗೂ ಸುಲಭ ಬೆಲೆಗೆ ದೊರೆಯುವ ನಿವೇಶನ ಕೈಗಾರಿಕಾ ಸ್ಥಾನೀಕರಣಕ್ಕೆ ಆವಶ್ಯಕ.

ಸಾರಿಗೆ ಸೌಲಭ್ಯ: ಕಚ್ಚಾವಸ್ತುಗಳನ್ನು ಅವುಗಳು ದೊರೆಯುವ ಸ್ಥಳದಿಂದ ಕಾರ್ಖಾನೆಗೆ ಹಾಗೂ ಉತ್ಪಾದಿತ ಸಿದ್ಧವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು ಉತ್ತಮ ಹಾಗೂ ದಕ್ಷ ಸಾರಿಗೆಯ ವ್ಯವಸ್ಥೆ ಇರಬೇಕು. ರಸ್ತೆ ಅಥವಾ ರೈಲು ಮಾರ್ಗಗಳು ಸಂಧಿಸುವ ಹಾಗೂ ಜಲ ಮಾರ್ಗ, ಭೂ ಮಾರ್ಗಗಳು ಸಂಧಿಸುವ ಮತ್ತು ಉತ್ತಮ ಬಂದರುಗಳ ಸಮುಚ್ಚದಲ್ಲಿ ಕೈಗಾರಿಕೆಗಳು ಸ್ಥಾನೀಕರಣಗೊಂಡಿರುತ್ತವೆ. ಕಡಿಮೆ ಸಾಕಾಣಿಕೆ ವೆಚ್ಚ ಉತ್ಪಾದನಾ ವೆಚ್ಚವನ್ನು ಮತ್ತು ಕೈಗಾರಿಕಾ ಸಿದ್ಧವಸ್ತುಗಳ ಬೆಲೆಯನ್ನು ಕುಗ್ಗಿಸುತ್ತದೆ.

ಮಾರುಕಟ್ಟೆ: ಕೈಗಾರಿಕೋತ್ಪನ್ನಗಳಿಗೆ ಮಾರುಕಟ್ಟೆಯ ಲಭ್ಯತೆ ಇರಬೇಕು. ಆದ್ದರಿಂದ ಕೈಗಾರಿಕೆಗಳ ಸ್ಥಾನೀಕರಣ ಮೂಲವಾದ ಹಾಗೂ ಸಮೀಪದ ಮಾರುಕಟ್ಟೆಯಿಂದ ನಿರ್ಧರಿಸಲ್ಪಡುತ್ತದೆ. ದೊಡ್ಡ ನಗರಗಳು ಮತ್ತು ಉನ್ನತ ಜೀವನ ಮಟ್ಟವಿರುವ ಪ್ರದೇಶಗಳು ಉತ್ತಮ ಮಾರುಕಟ್ಟೆಯಾಗಿದ್ದು ಸಾಗಾಣಿಕೆಯ ವೆಚ್ಚವನ್ನು ಕುಗ್ಗಿಸುತ್ತದೆ. ಈ ಕೆಳಗಿನ ಕೈಗಾರಿಕೆಗಳು ಮಾರುಕಟ್ಟೆಗೆ ಸಮೀಪದಲ್ಲಿ ನೆಲೆಗೊಂಡಿರುತ್ತವೆ. ಉದಾ: ಬೇಗ ಕೆಡಬಲ್ಲ ಅಥವಾ ಒಡೆದು ಹೋಗಬಲ್ಲ ಸಿದ್ಧವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳು ಉದಾ: ಬೇಕರಿ ಪದಾರ್ಥಗಳು, ಐಸ್‌ಕ್ರೀಂ, ಗಾಜು ತಯಾರಿಸುವ ಕೈಗಾರಿಕೆಗಳು. ಭಾರವಾದ ಸಿದ್ಧವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳು. ಕಡಿಮೆ ಬೆಲೆಬಾಳುವ ಸಿದ್ಧವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳು ಸಂಪ್ರದಾಯ ಅಥವಾ ಆಧುನಿಕತೆಯ

ಬದಲಾವಣೆಗಳಿಗನುಗುಣವಾಗಿ ಬದಲಾಗುವ ಸಿದ್ಧವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳು. ಉದಾ: ಸಿದ್ಧ ಉಡುಪು ಇತ್ಯಾದಿ. ಶುದ್ಧ ಕಚ್ಚಾ ಪದಾರ್ಥಗಳನ್ನು ಆಧರಿಸಿದ ಕೈಗಾರಿಕೆಗಳು, ಹತ್ತಿ ಬಟ್ಟೆ, ರೇಷ್ಮೆ ಗಿರಣಿ, ಕೈಗಾರಿಕೆಗಳು.

ಕಾರ್ಮಿಕರು: ಕೈಗಾರಿಕೆಯಲ್ಲಿ ಕಡಿಮೆದರದಲ್ಲಿ ದುಡಿಯುವ ಪರಿಣತ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿ ದೊರೆಯುವಂತಿರಬೇಕು. ಕೆಲವು ಕೈಗಾರಿಕೆಗಳು ಅಧಿಕ ಸಂಖ್ಯೆಯ ಪರಿಣತ ಕಾರ್ಮಿಕರನ್ನು ಅವಲಂಭಿಸಿದ್ದು, ಅಂತಹ ಕೈಗಾರಿಕೆಗಳು ಪರಿಣತ ಕಾರ್ಮಿಕರು ದೊರೆಯುವ ಪ್ರದೇಶಗಳಲ್ಲೇ ಕೇಂದ್ರೀಕೃತವಾಗಿರುತ್ತವೆ. ಉದಾ: ಅಲಿಗರ್‌ನ ಬೀಗದ ಕೈಗಾರಿಕೆ, ಚನ್ನಪಟ್ಟಣದ ಕರಕುಶಲ ಕೈಗಾರಿಕೆ ಇತ್ಯಾದಿ. ವಂಶಾನುಕ್ರಮವಾಗಿ ರೂಢಿಸಿಕೊಂಡು ಬಂದ ನಿರ್ದಿಷ್ಟ ಕೈಗಾರಿಕಾ ಪರಿಣತಿಯನ್ನು ಹೊಂದಿದ ಕಾರ್ಮಿಕರು ದೊರೆಯುವ ಪ್ರದೇಶಗಳಲ್ಲಿ ಅದಕ್ಕನುಗುಣವಾದ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು. ಉದಾ: ಮ್ಯಾಂಚೆಸ್ಟರ್‌ನ ಹತ್ತಿಗಿರಣಿ, ಫಿರೋಜಾಬಾದ್‌ನ ಗಾಜಿನ ಕೈಗಾರಿಕೆ, ಫರೂಕಾಬಾದ್‌ನ ಬಣ್ಣ ಮತ್ತು ಮುದ್ರಣ ಕೈಗಾರಿಕೆ ಆದರೆ ಇತ್ತೀಚೆಗೆ ಕಾರ್ಮಿಕರ ಸರಬರಾಜು ಕೈಗಾರಿಕಾ ಸ್ಥಾನೀಕರಣದ ಮೇಲೆ ಅಷ್ಟೊಂದು ಪ್ರಭಾವ ಬೀರಿರಲಾರದು. ಏಕೆಂದರೆ ಕಾರ್ಮಿಕರನ್ನು ಕೈಗಾರಿಕಾ ಕೇಂದ್ರಗಳಿಗೆ ಅವು ದೊರೆಯುವ ಸ್ಥಳಗಳಿಂದ ಸುಲಭವಾಗಿ ಒಯ್ಯಬಹುದಾಗಿದೆ.

ಬಂಡವಾಳ: ಯಾವುದೇ ಆಧುನಿಕ ಕೈಗಾರಿಕೆಯ ನಿರ್ಮಾಣ ಮತ್ತು ನಿರ್ವಹಣೆಗೆ ಸಾಕಷ್ಟು ಬಂಡವಾಳ ಅಥವಾ ಆರ್ಥಿಕ ನೆರವು ಅತ್ಯಾವಶ್ಯಕ, ಬ್ಯಾಂಕುಗಳು, ಸಹಕಾರ ಸಂಘಗಳು ಅಥವಾ ವಿಮಾಸಂಸ್ಥೆಗಳಿರುವ ದೊಡ್ಡ ನಗರ ಪಟ್ಟಣಗಳಲ್ಲಿ ಹಾಗೂ ಅವುಗಳ ಹೊರವಲಯಗಳಲ್ಲಿ ಕೈಗಾರಿಕೆಗಳ ಸ್ಥಾನೀಕರಣವು ಹೆಚ್ಚು. ಉದಾ: ಬೆಂಗಳೂರು, ಮುಂಬಯಿ, ಹೈದರಾಬಾದ್ ಇತರೆ ಕೈಗಾರಿಕಾಸ್ಥಾನೀಕರಣದ ಅಂಶಗಳಿಗಿಂತ ಸುಲಭವಾಗಿ ಬಂಡವಾಳವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ಯಬಹುದಾದ್ದರಿಂದ ಇತ್ತೀಚೆಗೆ ಕೈಗಾರಿಕೆಗಳ ಸ್ಥಾಪನೆಯಲ್ಲಿ ಬಂಡವಾಳ ಅಷ್ಟೊಂದು ಪ್ರಮುಖಪಾತ್ರ ವಹಿಸುವುದಿಲ್ಲ.

ಸರ್ಕಾರದ ನೀತಿ: ಇತ್ತೀಚಿನ ದಿನಗಳಲ್ಲಿ ಯಾವುದೇ ಪ್ರದೇಶದ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿ ಆ ದೇಶದ ಸರ್ಕಾರದ ನೀತಿ ಹಾಗೂ ರಾಜಕೀಯ ಚಟುವಟಿಕೆಗಳನ್ನು ಅವಲಂಭಿಸಿದೆ. ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾದ ಅನುಮತಿ ಆರ್ಥಿಕ ನೆರವು, ತಾಂತ್ರಿಕ ನೆರವು, ನಿವೇಶನ ತೆರಿಗೆ ಹಾಗೂ ರಿಯಾಯಿತಿ ದರದಲ್ಲಿ ಶಕ್ತಿ ಸಾಧನಗಳ ಪೂರೈಕೆ, ಸಾರಿಗೆ ಸೌಲಭ್ಯ ಮುಂತಾದವುಗಳ ಮೂಲಕ ಸರ್ಕಾರವು ಕೈಗಾರಿಕೆಯ ಸ್ಥಾನೀಕರಣವನ್ನು ನಿರ್ಧರಿಸುತ್ತವೆ. ಕೈಗಾರಿಕೆಗಳ ಸಮತೋಲನ ಹಂಚಿಕೆಯಲ್ಲೂ ಸರ್ಕಾರದ ಪಾತ್ರ ಮಹತ್ವವುಳ್ಳದ್ದು. ಸರ್ಕಾರದ ರಾಜಕೀಯ ಧೋರಣೆ, ಕೈಗಾರಿಕಾ ನೀತಿಯೂ ಅವುಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುತ್ತದೆ.

ವೈಯುಕ್ತಿಕ ಒಲವು: ಕೆಲವು ವೇಳೆ ಕೈಗಾರಿಕೆಗಳ ಸ್ಥಾನೀಕರಣ ವೈಯುಕ್ತಿಕ ಒಲವು ಹಾಗೂ ಕೈಗಾರಿಕಾ ವ್ಯವಸ್ಥಾಪಕತ್ವದ ಅಭಿಪ್ರಾಯಗಳಿಂದ ನಿರ್ಧರಿಸಲ್ಪಡುತ್ತದೆ. ಇಲ್ಲಿ ವಾಣಿಜ್ಯ ಮತ್ತು ಆರ್ಥಿಕ ಪರಿಸ್ಥಿತಿಗಳು ಅಷ್ಟೊಂದು ಗಣನೆಗೆ ಬರುವುದಿಲ್ಲ.

ಮೇಲ್ಕಂಡ ಅಂಶಗಳಲ್ಲದೆ ನಿವೇಶನದ ಬೆಲೆ, ಭೂಮೇಲ್ಮೈ ಲಕ್ಷಣ, ಐತಿಹಾಸಿಕ ಹಿನ್ನಲೆ ಭದ್ರತಾ ವ್ಯವಸ್ಥೆಗಳೂ ತಕ್ಕ ಮಟ್ಟಿಗೆ ಕೈಗಾರಿಕಾ ಸ್ಥಾನೀಕರಣವನ್ನು ನಿರ್ಧರಿಸುತ್ತವೆ. (ಪಿ.ಜೆ.)

**ಕೈಗಾರಿಕಾ ಸ್ಥಾನೀಕರಣದ ಸಿದ್ಧಾಂತಗಳು:** ಯಾವುದೇ ಕೈಗಾರಿಕೆಯ ಸ್ಥಾನೀಕರಣ ಕಾರ್ಖಾನೆಯ ಸ್ವರೂಪ, ಅದರ ಪ್ರಮಾಣ, ತಾಂತ್ರಿಕತೆ ಮತ್ತು ಉತ್ಪಾದನೆಗಳನ್ನು ಅವಲಂಬಿಸುತ್ತದೆ.

ಕೈಗಾರಿಕಾ ಸ್ಥಾನೀಕರಣ ಸಿದ್ಧಾಂತಗಳು ಶತಮಾನದ ಪ್ರಾರಂಭದಿಂದಲೇ ಅಭಿವೃದ್ಧಿ ಗೊಂಡಿವೆ. ಹಿಂದೆ ಕೈಗಾರಿಕೆಗಳ ಭೂ ದೃಶ್ಯಾವಳಿ ಅತ್ಯಂತ ಸರಳವಾದ ಪ್ರಕ್ರಿಯೆಯಾಗಿತ್ತು. ಆದರೆ ಇತ್ತೀಚೆಗೆ ಕೈಗಾರಿಕಾ ಭೂದೃಶ್ಯಾವಳಿ ಪ್ರಕ್ರಿಯೆ ಅತ್ಯಂತ ಸಂಕೀರ್ಣವಾದ ವಿಷಯವಾಗಿದೆ. ಇತ್ತೀಚಿನ ದಶಕಗಳಲ್ಲಿ ಅಂತಾರಾಷ್ಟ್ರೀಕರಣ ಉತ್ಪಾದನೆ ಇವುಗಳ ನಡುವಿನ ಸಂಬಂಧ ಅತ್ಯಂತ ಪ್ರಭಾವಿತವಾದುದು.

ಕೈಗಾರಿಕಾ ಸ್ಥಾನೀಕರಣ ಸಿದ್ಧಾಂತಗಳಲ್ಲಿ ಹಲವಾರು ಬಗೆಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

ವೆಬರನ ಕನಿಷ್ಠ ಸಾರಿಗೆ ವೆಚ್ಚ ಮಾದರಿ ಸಿದ್ಧಾಂತ, ಟೋರ್ಡ್ ಪಾಲಂಡರ್, ಎಡ್‌ಗಾರ್ ಹೂವರ್, ಆಗಸ್ಟ್ ಲಾಷ್, ಡೇವಿಡ್ ಸ್ಮಿತ್, ಫಿಟ್ಟರ್ ರವರ ಮಾರುಕಟ್ಟೆ ಪ್ರದೇಶ ಮಾದರಿಯ ಸಿದ್ಧಾಂತ, ಹಾಗೂ ಅಲೆನ್ ಫ್ರೆಡ್ ರವರ ನಡವಳಿಕಾ ಸಿದ್ಧಾಂತ.

ಈ ಎಲ್ಲಾ ಸಿದ್ಧಾಂತಗಳ ಪ್ರಮುಖ ಧ್ಯೇಯಗಳೆಂದರೆ ಕೈಗಾರಿಕೆಗಳನ್ನು ಗುರುತಿಸುವುದು ಮತ್ತು ಈ ಕೈಗಾರಿಕೆಗಳು ಗಳಿಸುವ ಲಾಭದ ಪ್ರಮಾಣವೇ – ಪ್ರಮುಖ ಅಂಶವಾಗಿರುತ್ತದೆ. ವೆಬರನ ಸಿದ್ಧಾಂತ ಸರಕುಗಳು ಮತ್ತು ಅವುಗಳ ನಿರ್ದಿಷ್ಟ ಬೆಲೆ ಮತ್ತು ಮಾರುಕಟ್ಟೆ ಈ ಅಂಶಗಳಿಂದ ಉತ್ಪಾದನೆಯ ಸ್ಥಾನವನ್ನು ಗುರುತಿಸುವುದಾಗಿದೆ. ಆದರೆ ಮಾರುಕಟ್ಟೆ ಪ್ರದೇಶ ಮಾದರಿ ಸಿದ್ಧಾಂತ, ಸ್ಪರ್ಧಾತ್ಮಕ ಪ್ರಪಂಚದಲ್ಲಿ ಸಾರಿಗೆ ವೆಚ್ಚ, ಕಾರ್ಖಾನೆ ವೆಚ್ಚ, ನಿರ್ದಿಷ್ಟ ಪ್ರದೇಶದ ಉತ್ಪಾದನೆ ಮತ್ತು ಒಂದು ನಿರ್ದಿಷ್ಟ ಬೆಲೆಗಳಿಂದ ಉತ್ಪಾದಕ ತನ್ನ ಸರಕುಗಳನ್ನು ಮಾರುವ ಸ್ಥಿತಿಗತಿಗಳನ್ನು ಈ ಸಿದ್ಧಾಂತದಲ್ಲಿ ಕೂಲಂಕಷವಾಗಿ ಚರ್ಚಿಸುತ್ತದೆ. (ಪಿ.ಜೆ.)

**ಕೈಗಾರಿಕೀಕರಣ:** ಕೈಗಾರಿಕೆಗಳು ಒಂದು ದೇಶದ ಶರೀರದ ಅಸ್ಥಿಪಂಜರವಿದ್ದಂತೆ, ಕೈಗಾರಿಕೆಗಳು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ನಿರಂತರವಾಗಿ ಸೃಷ್ಟಿಯಾಗುವ ಉದ್ಯಮಗಳು, ಕಾರ್ಖಾನೆಗಳು, ವಿದ್ಯುತ್‌ಉತ್ಪಾದನೆ, ಗಣಿಗಾರಿಕೆ ಇದರಲ್ಲಿ ಸೇರಿವೆ. ಕೈಗಾರಿಕೀರಣ ಯಾವುದೇ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಯಾವುದೇ ದೇಶದ ತ್ವರಿತ ಅಭಿವೃದ್ಧಿ, ಕೈಗಾರಿಕೀಕರಣದಿಂದ ಮಾತ್ರ ಸಾಧ್ಯವಾಗುತ್ತದೆ. ಪ್ರಪಂಚದಲ್ಲಿ ಇಂದು ಮುಂದುವರಿದ ರಾಷ್ಟ್ರಗಳೆಲ್ಲವೂ ಕೈಗಾರಿಕಾ ರಂಗದಲ್ಲಿ ಮುಂದುವರಿದ ದೇಶಗಳೇ ಆಗಿವೆ. ಕೈಗಾರಿಕೆಗಳಿಲ್ಲದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದು ಅನೇಕ ಹಿಂದುಳಿದ ರಾಷ್ಟ್ರಗಳ ಸ್ಥಿತಿಗಳಿಂದ ಸಾಬೀತಾಗಿದೆ. ವಾಸ್ತವವಾಗಿ ಮುಂದುವರೆದ ಹಾಗೂ ಹಿಂದುಳಿದ ರಾಷ್ಟ್ರಗಳು ಎಂದು ವರ್ಗೀಕರಿಸುವುದೇ ಕೈಗಾರಿಕಾ ಬೆಳವಣಿಗೆಯ ಆಧಾರದ ಮೇಲೆ. ಕೈಗಾರಿಕೆಗಳು ಒಂದು ರಾಷ್ಟ್ರದ ಕಣ್ಣಿದ್ದ ಹಾಗೆ. ಕೈಗಾರಿಕಾಭಿವೃದ್ಧಿಯಲ್ಲದೆ ಯಾವುದೇ ರಾಷ್ಟ್ರದ ಆರ್ಥಿಕಾಭಿವೃದ್ಧಿಯನ್ನು ಊಹಿಸುವುದು ಕಷ್ಟವಾಗುತ್ತದೆ. ಅದರಲ್ಲೂ ಕೃಷಿಪ್ರಧಾನ ರಾಷ್ಟ್ರಕ್ಕೆ ಕೈಗಾರಿಕೆಗಳು ಬೇಕೇ ಬೇಕು. ಒಂದು ದೇಶದ ಭೌತಿಕ ಶ್ರೀಮಂತಿಕೆ ಮತ್ತು ಕೈಗಾರಿಕಾಭಿವೃದ್ಧಿ ಜೊತೆ ಜೊತೆಯಲ್ಲಿ ಸಾಗುತ್ತವೆಂಬುದು ನೈಜ ಸಂಗತಿಯಾಗಿದೆ. ಕೈಗಾರಿಕೀಕರಣ ಇಲ್ಲವೇ ವಿನಾಶ ಎಂದು ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಹೇಳಿರುವ ಮಾತು ಸತ್ಯದ ಮಾತಾಗಿದೆ. ಮಾನವನ ನಾಗರಿಕತೆಯ ಇತಿಹಾಸದಲ್ಲಿ ಈಗಿನದು ಕೈಗಾರಿಕಾ ಪ್ರಧಾನಯುಗ. ಮಾನವನ ತಿಳಿವಿನ ಬೆಳವಣಿಗೆಯಲ್ಲಿ ಹಾಗೂ ನಿಸರ್ಗದ ಮೇಲೆ ಪ್ರಭುತ್ವ ಸಾಧಿಸುವ ಪ್ರಯತ್ನದಲ್ಲಿ ಇದೊಂದು ಪ್ರಮುಖ ಘಟ್ಟ. ಇಂದು ಮಾನವನ ಆಧುನಿಕ ಆರ್ಥಿಕ ವೃತ್ತಿಗಳಲ್ಲಿ ಕೈಗಾರಿಕೋದ್ಯಮ ಅತ್ಯಂತ ಮಹತ್ವವುಳ್ಳದ್ದು. ಯಾವುದೇ ದೇಶದ ಆರ್ಥಿಕ ಪ್ರಗತಿಯ ಮಟ್ಟ ಆ ದೇಶದ ಕೈಗಾರಿಕಾ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆಧುನಿಕ ನಾಗರಿಕತೆಯ ಮೇರುಲಕ್ಷಣ ಮತ್ತು ಮಾನವನ ಆರ್ಥಿಕ ಜೀವನ ವಿಕಾಸದ ಕೊನೆಯ ಹಂತವೇ ಕೈಗಾರಿಕೀಕರಣವಾಗಿದೆ. (ಪಿ.ಜೆ.)

**ಕೈಗಾರಿಕೆಗಳು:** ಮಾನವನು ತನ್ನ ಪ್ರಾಥಮಿಕ ಆರ್ಥಿಕ ವೃತ್ತಿ ಚಟುವಟಿಕೆಗಳಾದ ವ್ಯವಸಾಯ, ಅರಣ್ಯಗಾರಿಕೆ, ಗಣಿಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ ಮುಂತಾದವುಗಳಿಂದ ವಿವಿಧ ಸಂಪನ್ಮೂಲಗಳನ್ನು ಪಡೆಯಬಹುದು. ಅವು ಕಚ್ಚಾವಸ್ತುಗಳ ರೂಪದಲ್ಲಿದ್ದು ಅವುಗಳಿಂದ ಮನುಷ್ಯನ ಬಯಕೆಗಳನ್ನು ಪೂರ್ಣವಾಗಿ ತೃಪ್ತಿಪಡಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಮೂಲ ವೃತ್ತಿಗಳಿಂದ ದೊರೆತ ವಸ್ತುಗಳನ್ನು ಪ್ರಕ್ರಿಯೆಗೆ ಒಳಪಡಿಸಿ ಉಪಯುಕ್ತ ಸಿದ್ಧವಸ್ತುಗಳನ್ನು ಪಡೆದುಕೊಳ್ಳಬೇಕಾಗುವುದು. ಹೀಗೆ ಕಚ್ಚಾವಸ್ತುಗಳನ್ನು ಸಿದ್ಧವಸ್ತುಗಳಾಗಿ ಮಾರ್ಪಡಿಸಿ ಅವುಗಳ ಮೌಲ್ಯ ಹಾಗೂ ಮನುಷ್ಯನ ಬೇಡಿಕೆಯನ್ನು ಪೂರೈಸುವ ಸಾಮರ್ಥ್ಯವನ್ನು ಅಧಿಕಗೊಳಿಸುವ ಕಾರ್ಯ ನಿರ್ವಹಣೆಗೆ ಕೈಗಾರಿಕೆ ಎಂದು ಕರೆಯುವರು.

ಉದಾ: ಕಚ್ಚಾ ಹತ್ತಿಯಿಂದ ಹತ್ತಿ ಬಟ್ಟೆಯನ್ನು, ಕಬ್ಬಿನಿಂದ ಸಕ್ಕರೆಯನ್ನು, ಕಬ್ಬಿಣದ ಅದಿರಿನಿಂದ ಕಬ್ಬಿಣ ಮತ್ತು ಉಕ್ಕನ್ನು ಉತ್ಪಾದಿಸುವುದು. ಅಲ್ಲದೆ ಕೆಲವು ಕೈಗಾರಿಕೆಗಳಿಂದ ದೊರೆತ ಅರೆಸಿದ್ಧ ವಸ್ತುಗಳು ಮತ್ತೊಂದರ ಕಚ್ಚಾ ಪದಾರ್ಥಗಳಾಗಿರುತ್ತವೆ ಅವುಗಳನ್ನು ಪುನಃ ಪ್ರಕ್ರಿಯೆಗೆ ಒಳಪಡಿಸಿ ಅತೀ ಉಪಯುಕ್ತವಾದ ಪದಾರ್ಥಗಳನ್ನು ಪಡೆಯಬೇಕಾಗುವುದು, ಉದಾ: ಮರ ಕಡಿಯುವ ಕೈಗಾರಿಕೆಯಿಂದ ದೊರೆತ ಮರದ ತಿರುಳನ್ನು ಕಾಗದ ತಯಾರಿಕೆಗೂ ಮರದ ದಿಮ್ಮಿಗಳನ್ನು ಗೃಹ ನಿರ್ಮಾಣ ಹಾಗೂ ಪೀಠೋಪಕರಣಗಳನ್ನಾಗಿ ಮಾರ್ಪಡಿಸುವುದು. (ಪಿ.ಜೆ.)

**ಕೈಗಾರಿಕೆಯ ವಿಧಗಳು:** ಕೈಗಾರಿಕೆಗಳನ್ನು ಜವಳಿಉದ್ಯಮ, ಖನಿಜ ಆಧರಿತ ಕೈಗಾರಿಕೆ, ಎಂಜಿನಿಯರಿಂಗ್, ರಾಸಾಯನಿಕ ಕೈಗಾರಿಕೆ, ಕೃಷಿ ಆಧರಿತ, ಅರಣ್ಯ ಆಧರಿತ ಕೈಗಾರಿಕೆ ಇತ್ಯಾದಿಯಾಗಿ ವಿಂಗಡಿಸಲಾಗಿದೆ. ಜವಳಿ ಉದ್ಯಮಗಳು: ಮಾನವನ ಮೂರು ಮೂಲಬಯಕೆಗಳಲ್ಲಿ ಉಡುಪು ಸಹ ಒಂದು. ಉಡುಪನ್ನು ಮಾನವನು ಎಂದಿನಿಂದ ಧರಿಸಲು ಮತ್ತು ಅವುಗಳನ್ನು ತಯಾರಿಸಿಕೊಳ್ಳಲು ಪ್ರಾರಂಭಿಸಿದನೆಂಬುದರ ಬಗ್ಗೆ ನಿಖರವಾಗಿ ತಿಳಿದುಬರುವುದಿಲ್ಲ. ಬೇಟೆ ವೃತ್ತಿಯಲ್ಲಿ ತೊಡಗಿದ ಪುರಾತನ ಕಾಲದಲ್ಲಿ ಪ್ರಾಣಿಗಳನ್ನು ಮತ್ತು ಮೀನುಗಳನ್ನು ಹಿಡಿಯುವುದಕ್ಕಾಗಿ ಕೆಲವು ನಾರುಗಳಿಂದ ಬಲೆಗಳನ್ನು ಹೆಣೆಯುವ ಮೂಲಕ ಬಟ್ಟೆ ನೇಯುವುದು ರೂಢಿಗೆ ಬಂದಿರಬಹುದೆಂದು ಊಹಿಸಲಾಗಿದೆ. ನಾರುಗಳಿಂದ ಉಡುಪನ್ನು ತಯಾರಿಸಿಕೊಳ್ಳುವುದು ಮಾನವನ ಪುರಾತನ ವೃತ್ತಿ ಚಟುವಟಿಕೆಗಳಲ್ಲಿ ಒಂದಾಗಿದೆ. ಇಂದು ಅದೊಂದು ಬೃಹತ್ ಪ್ರಮಾಣದ ಉದ್ಯಮವಾಗಿ ಪರಿಣಮಿಸಿದೆ. ಜವಳಿ ಎಂದರೆ ನೇಯ್ದ ಬಟ್ಟೆ ಅಥವಾ ವಸ್ತ್ರ ಎಂದರ್ಥ. ಬಟ್ಟೆ ತಯಾರಿಸಲು ಅನೇಕ ವಿವಿಧ ನಾರುಗಳನ್ನು ಬಳಕೆಮಾಡಲಾಗುವುದು. ಅವು ನೈಸರ್ಗಿಕವಾದವುಗಳಾಗಿರಬಹುದು ಅಥವಾ ಕೃತಕವಾದವುಗಳಾಗಿರಬಹುದು. ನೈಸರ್ಗಿಕ ನಾರುಗಳಲ್ಲಿ 2 ವಿಧಗಳಿವೆ: 1. ಸಸ್ಯಾಧಾರಿತ ನಾರುಗಳು ಉದಾ: ಹತ್ತಿ, ಸೆಣಬು, ಅಗಸೆ ಪುಂಡಿನಾರು ಇತ್ಯಾದಿ. 2. ಪ್ರಾಣಿಗಳಾಧಾರಿತ ನಾರು ಉದಾ: ಉಣ್ಣೆ ಮತ್ತು ರೇಷ್ಮೆ,

ಈಚೆಗೆ ಕೃತಕನಾರು ಬಳಕೆಯಲ್ಲಿದೆ ಉದಾ: ನೈಲಾನ್, ರೆಯಾನ್ ಇತ್ಯಾದಿ. ಈ ರೀತಿ ವಿವಿಧ ಮೂಲಗಳಿಂದ ಪಡೆಯುವ ನಾರು ಅಥವಾ ಎಳೆಗಳಂತಹ ಕಚ್ಚಾವಸ್ತುಗಳನ್ನು ನೂಲುವ ಹಾಗೂ ನೇಯುವ ಪ್ರಕ್ರಿಯೆಗಳಿಗೆ ಒಳಪಡಿಸಿ ಬಟ್ಟೆ ಅಥವಾ ವಸ್ತ್ರಗಳನ್ನು ತಯಾರಿಸುವುದನ್ನು ಜವಳಿ ಉದ್ಯಮ ಎಂದು ಕರೆಯುವುರು. ಈ ಉದ್ಯಮ ವಿವಿಧ ಬಗೆಯ ಬಟ್ಟೆ ತಯಾರಿಕೆಗಳನ್ನು ಒಳಗೊಂಡಿರುತ್ತದೆ. ಉದಾ: ಹತ್ತಿ ಬಟ್ಟೆ, ಉಣ್ಣೆ ಬಟ್ಟೆ, ರೇಷ್ಮೆ ವಸ್ತ್ರ, ರೇಯಾನ್ ಬಟ್ಟೆ, ಮಿಶ್ರಣ ಬಟ್ಟೆ ಇತ್ಯಾದಿ. ಬಟ್ಟೆ ತಯಾರಿಸಲು ಬಳಸುವ ಕಚ್ಚಾವಸ್ತುಗಳನ್ನಾಧರಿಸಿ ಜವಳಿ ಉದ್ಯಮಗಳನ್ನು ವಿಂಗಡಿಸಲಾಗಿದೆ. ಉದಾ: ಹತ್ತಿ ಬಟ್ಟೆ ಕೈಗಾರಿಕೆ ರೇಷ್ಮೆ ಉದ್ದಿಮೆ, ಸೆಣಬು ಉದ್ದಿಮೆ ಇತ್ಯಾದಿ. ಈ ಉದ್ಯಮಗಳಿಂದ ತಯಾರಿಸಲ್ಪಟ್ಟ ಬಟ್ಟೆಗಳನ್ನು ಉಡುಪು ತಯಾರಿಕೆ, ಸರಕುಗಳನ್ನು ತುಂಬಲು ಸಾಗಿಸಲು, ಸಂರಕ್ಷಿಸಲು ಅಲಂಕಾರ ಪರದೆ ಇತ್ಯಾದಿಗಳಿಗೆ ಬಳಸಲಾಗುವುದು.

ಹತ್ತಿ ಬಟ್ಟೆ ಕೈಗಾರಿಕೆ: ಇದು ಅತ್ಯಂತ ಪುರಾತನವಾದದ್ದು. ಪ್ರ.ಶ.ಪೂ. 3000 ವರ್ಷಗಳ ಹಿಂದೆ ಭಾರತದಲ್ಲಿ ಹತ್ತಿ ಬಟ್ಟೆಯನ್ನು ತಯಾರಿಸುತ್ತಿದ್ದು ಸಿಂಧೂ ಕಣಿವೆ ನಾಗರಿಕತೆಯಿಂದ ತಿಳಿದುಬರುತ್ತದೆ.

ಅನೇಕ ಶತಮಾನಗಳವರೆಗೆ ಕೈಯಿಂದ ನೂಲುವುದು ಮತ್ತು ಕೈಮಗ್ಗಗಳಿಂದ ಹತ್ತಿ ಬಟ್ಟೆಯನ್ನು ನೇಯುವುದು ರೂಢಿಯಲ್ಲಿತ್ತು. ಆದರೆ 18ನೆಯ ಶತಮಾನದ ಕೈಗಾರಿಕಾ ಕ್ರಾಂತಿಯ ಫಲವಾಗಿ ಹತ್ತಿ ಬಟ್ಟೆಯನ್ನು ಯಂತ್ರಗಳ ನೆರವಿನಿಂದ ಸಿದ್ಧಪಡಿಸುವುದು ಪ್ರಾರಂಭವಾಯಿತು. ಕಚ್ಚಾ ಹತ್ತಿಯನ್ನು ಬಟ್ಟೆಯನ್ನಾಗಿ ರೂಪಿಸುವ ಪ್ರಕ್ರಿಯೆಯೇ ಹತ್ತಿ ಜವಳಿ ಉದ್ಯಮವಾಗಿದೆ. ಇದೊಂದು ಪ್ರಮುಖ ಕೃಷಿ ಆಧಾರಿತ ಕೈಗಾರಿಕೆಯಾಗಿದೆ.

ಸೆಣಬಿನ ಕೈಗಾರಿಕೆ: ಪ್ರಪಂಚದ ಮತ್ತೊಂದು ಪ್ರಮುಖ ಕೃಷಿ ಆಧಾರಿತ ಹಾಗೂ ಸೆಣಬು ಆಧಾರಿತ ನಾರು ಜವಳಿ ಉದ್ಯಮ ಇದಾಗಿದೆ. ಹತ್ತಿ ಬಟ್ಟೆ ಕೈಗಾರಿಕೆಗೆ ಹೋಲಿಸಿದಾಗ ಸೆಣಬಿನ ಕೈಗಾರಿಕೆ ವಿಳಂಬವಾಗಿ ಪ್ರಾರಂಭಗೊಂಡ ಉದ್ಯಮವಾಗಿದೆ. 18ನೆಯ ಶತಮಾನದ ಮಧ್ಯಮಾವಧಿಗಿಂತ ಮುಂಚೆ ಸೆಣಬಿನ ಬಳಕೆ ತಿಳಿದಿತ್ತು. 1793ರಲ್ಲಿ ಕೋಲ್ಕತದ ಬಟಾನಿಕಲ್ ಗಾರ್ಡನ್‌ವೊಂದರಲ್ಲಿ ಕ್ಯೂರೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ರಾಕ್ಸ್‌ಬರ್ಗ್ ಎಂಬುವವರು ಸ್ಕಾಟ್ಲೆಂಡಿನ ಡಂಡಿಗೆ ಗಂಗಾ ನದಿ ಮೂಲದ ಭೂಮಿಯಲ್ಲಿ ಬೆಳೆಯುತ್ತಿದ್ದ ಸೆಣಬಿನ ನಾರನ್ನು ಕಳುಹಿಸಿಕೊಟ್ಟು, ಅದರ ಉಪಯೋಗವನ್ನು ತಿಳಿದುಕೊಂಡ. ಅನಂತರವೂ ಅದರ ಬಳಕೆ 3 ದಶಕಗಳವರೆಗೆ ಆಗಿರಲಿಲ್ಲ. 1838ರಲ್ಲಿ ಸ್ಕಾಟ್ಲೆಂಡಿನ ದಂಡಿಯಲ್ಲಿ ಪ್ರಥಮ ಸೆಣಬಿನ ಗಿರಣಿಯೊಂದನ್ನು ಪ್ರಾರಂಭಿಸುವುದರೊಂದಿಗೆ ಆ ಉದ್ಯಮ ಪ್ರಾರಂಭವಾಯಿತು.

ಖನಿಜಾಧಾರಿತ ಕೈಗಾರಿಕೆಗಳು: ಇದೊಂದು ಮಾರುಕಟ್ಟೆ ಕೇಂದ್ರಿತ ಉದ್ಯಮ. ಇದಕ್ಕೆ ಅಗತ್ಯವಾದ ಕಚ್ಚಾವಸ್ತುಗಳು ತೂಕವುಳ್ಳವು ಹಾಗೂ ಹೆಚ್ಚು ಬೆಲೆ ಬಾಳುವಂತಹವೂ ಕೂಡ, ಕಲ್ಲಿದ್ದಲುವಲಯದಲ್ಲಿ ಕೇಂದ್ರೀಕೃತವಾಗಿರುತ್ತದೆ, ಇತ್ತೀಚೆಗೆ ಗಣಿಗಾರಿಕೆ ಪ್ರಗತಿಗೊಳ್ಳುತ್ತಿದ್ದು ಗಣಿಕಾರ್ಯಗಳಿಗೆ ಅಗತ್ಯವಾದಂತಹ ಯಂತ್ರೋಪಕರಣಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ.

ಪ್ರಪಂಚದಲ್ಲಿ ಗಣಿಗಾರಿಕೆ ಯಂತ್ರಗಳನ್ನು ತಯಾರಿಸುವಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟನ್, ರಷ್ಯ, ಪೋಲೆಂಡ್, ಸ್ವೀಡನ್ ದೇಶಗಳು ಪ್ರಮುಖವಾದವು.

ಅಮೆರಿಕ ಸಂಯುಕ್ತ ಸಂಸ್ಥಾನ ಭೂಮಿಯನ್ನು ಅಗೆಯುವ ಸಾಮಾನ್ಯ ಯಂತ್ರಗಳನ್ನು ತಯಾರಿಸುವುದರ ಜೊತೆಗೆ ಇನ್ನೂ ಕೆಲವು ವಿಶೇಷ ರೀತಿಯ ಯಂತ್ರೋಪಕರಣಗಳನ್ನು ತಯಾರಿಸುತ್ತದೆ. ಪೆನ್ಸಿಲ್ವೇನಿಯ, ಓರೆಗಾನ್, ಇಲಿನಾಯ್ ಪ್ರಾಂತ್ಯಗಳಲ್ಲಿ ಈ ಉದ್ಯಮ ಅಭಿವೃದ್ಧಿಗೊಂಡಿರುತ್ತದೆ. ಅಲ್ಲದೆ ತೈಲಭಾವಿಯನ್ನು ತೋಡಲು ಬೇಕಾಗುವಂತಹ ಡ್ರಿಲ್ಲಿಂಗ್ ಹಾಗೂ ಇತರ ವಿಶೇಷ ರೀತಿಯ ಯಂತ್ರಗಳನ್ನು ಟೆಕ್ಸಾಸ್, ಕ್ಯಾಲಿಫೋರ್ನಿಯ, ಒಕ್ಲಹೋಮ ಮತ್ತು ಲೂಸಿಯಾನ ಕೇಂದ್ರಗಳಲ್ಲಿ ತಯಾರಿಸಲಾಗುವುದು.

ಬ್ರಿಟನ್ನಿನ ದಕ್ಷಿಣ ಲಂಕಾಷೈರ್, ಪಶ್ಚಿಮ ಮತ್ತು ದಕ್ಷಿಣ ಯಾರ್ಕ್‌ಷೈರ್‌ಗಳಲ್ಲಿ ಗಣಿಯಂತ್ರಗಳ ಕೈಗಾರಿಕೆ ಕೇಂದ್ರೀಕೃತವಾಗಿದೆ. ಜರ್ಮನಿಯ ರ್‍ಹೂರ್ ನದಿ ಬಯಲು, ಪೋಲೆಂಡ್ ಮತ್ತು ಜೆಕ್ ಗಣರಾಜ್ಯ, ಪೂರ್ವ ಯುರೋಪ್ ಮತ್ತು ವಾಯವ್ಯದಲ್ಲಿ ಸ್ವೀಡನ್ ಗಣಿಗಾರಿಕೆ ಯಂತ್ರ ಕೈಗಾರಿಕೆಯನ್ನು ಹೊಂದಿರುವ ಭಾಗಗಳು.

ರಷ್ಯ ಪ್ರಪಂಚದ ಮತ್ತೊಂದು ಗಣಿಗಾರಿಕೆ ಯಂತ್ರಗಳನ್ನು ತಯಾರಿಸುವ ದೇಶ. ನೋಮೋ ಕ್ರೊಮಾಡರ್‌ಸ್ಕ್ ಕೇಂದ್ರ ಗಣಿಗಾರಿಕೆಯ ಯಂತ್ರಗಳನ್ನು ತಯಾರಿಸುವಲ್ಲಿ ಅತ್ಯಂತ ಮುಖ್ಯ ಕೇಂದ್ರ. ಇದು ನೆಲ ಅಗೆಯುವ ಬೃಹತ್ ಪ್ರಮಾಣದ ಯಂತ್ರಗಳ ತಯಾರಿಕೆಗೆ ಪ್ರಸಿದ್ಧ.

ಭಾರತದಲ್ಲಿ ಗಣಿಗಾರಿಕೆ ಯಂತ್ರ ತಯಾರಿಕೆ ಕೋಲ್ಕತ, ಜೆಮ್‌ಷೆಡ್‌ಪುರ ಮತ್ತು ದುರ್ಗಾಪುರ ಕೇಂದ್ರಗಳಲ್ಲಿ ಕಂಡುಬರುತ್ತದೆ. ಇವುಗಳಲ್ಲಿ ದುರ್ಗಾಪುರ ಅತ್ಯಂತ ಮಹತ್ವವುಳ್ಳದ್ದಾಗಿದೆ. ಸಾಮಾನ್ಯವಾಗಿ ಈ ಉದ್ಯಮ ಗಣಿ ಉದ್ಯಮ ಪ್ರಗತಿ ಹೊಂದಿರುವ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಎಂಜಿನಿಯರಿಂಗ್ ಕೈಗಾರಿಕೆ: ವಿವಿಧತೆಯ ಪ್ರತಿರೂಪವುಳ್ಳ ಯಂತ್ರ ಶಿಲ್ಪ ಕೈಗಾರಿಕೆಯ ಸಮುದಾಯವನ್ನು ಎಂಜಿನಿಯರಿಂಗ್ ಕೈಗಾರಿಕೆಗಳೆಂದು ಕರೆಯುವರು. ಇವುಗಳಲ್ಲಿ ವೈವಿಧ್ಯಮಯವಾದ ಲೋಹವಸ್ತು ಆಧಾರಿತ ಕೈಗಾರಿಕ ಸಮ್ಮಿಲನವನ್ನು ಕಾಣಬಹುದು. ಇವು ಬಹು ಸಂಕೀರ್ಣತೆಯುಳ್ಳವು, ಬಹುವಾಗಿ ಅತ್ಯಾಧುನಿಕ ತಾಂತ್ರಿಕತೆ ಮತ್ತು ಬಂಡವಾಳಗಳನ್ನಾಧರಿಸಿದೆ. ಈ ಕೈಗಾರಿಕೆಗಳ ಅಭಿವೃದ್ಧಿಗಳು ವಿಶೇಷವಾದ ನೈಪುಣ್ಯತೆ, ತರಬೇತಿ, ಹಾಗೂ ನಿಷ್ಕೃಷ್ಟತೆಗಳನ್ನಾಧರಿಸಿವೆ. ಈ ಕೈಗಾರಿಕೆಗಳಲ್ಲಿ ಸೂಜಿಯಿಂದ ಹಿಡಿದು ಬೃಹತ್ ಪ್ರಮಾಣದ ಹಡಗುಗಳನ್ನು ತಯಾರಿಸುವವರೆಗೂ ಸಂಬಂಧಿಸಿರುತ್ತದೆ. ಹೀಗಾಗಿ ಇವು ಪರಸ್ಪರ ಸಂಬಂಧ ಮತ್ತು ಅವಲಂಬನೆಯುಳ್ಳ ವಿಶಿಷ್ಟ ಕೈಗಾರಿಕೆ ಎನ್ನಿಸಿಕೊಳ್ಳುತ್ತವೆ.

ಉದಾ: ಯಂತ್ರೋಪಕರಣಗಳು, ಕೈಗಾರಿಕಾಉಪಕರಣಗಳು, ವಿದ್ಯುತ್ ಉಪಕರಣಗಳು, ವಿಮಾನ ತಯಾರಿಕೆ, ವಾಹನಗಳ ತಯಾರಿಕೆ, ಹಡಗು ನಿರ್ಮಾಣ ಮುಂತಾದವು.

ಎಂಜಿನಿಯರಿಂಗ್ ಕೈಗಾರಿಕೆಗಳು ಬಹುವಾಗಿ ಮೂಲ ಲೋಹ ವಸ್ತುಗಳನ್ನಾಧರಿಸಿರುತ್ತವೆ. ಉದಾ: ಕಬ್ಬಿಣ ಮತ್ತು ಉಕ್ಕು, ಅಲ್ಯೂಮಿನಿಯಂ, ತಾಮ್ರ, ಇತ್ಯಾದಿ. ಈ ಮೂಲ ಲೋಹ ವಸ್ತುಗಳನ್ನು ಪುನಃ ಪ್ರಕ್ರಿಯೆಗೆ ಒಳಪಡಿಸಿ ವೈಶಿಷ್ಟ್ಯತೆಯುಳ್ಳ ವಸ್ತುಗಳನ್ನು ತಯಾರಿಸಲಾಗುವುದು. ಅವು ಬಹುವಾಗಿ ಯಂತ್ರಗಳು ಮತ್ತು ಎಂಜಿನ್‌ಗಳಾಗಿರುತ್ತದೆ.

ಎಂಜಿನಿಯರಿಂಗ್ ಕೈಗಾರಿಕೆಗಳನ್ನು 2 ಪ್ರಮುಖ ಗುಂಪುಗಳಾಗಿ ವಿಂಗಡಿಸಬಹುದು: 1. ಬೃಹತ್ ಪ್ರಮಾಣದ ಎಂಜಿನಿಯರಿಂಗ್ ಕೈಗಾರಿಕೆಗಳು. 2. ಲಘು ಎಂಜಿನಿಯರಿಂಗ್ ಕೈಗಾರಿಕೆಗಳು.

1. ಬೃಹತ್ ಪ್ರಮಾಣದ ಎಂಜಿನಿಯರಿಂಗ್ ಕೈಗಾರಿಕೆಗಳು: ಹೆಚ್ಚು ತೂಕ ಮತ್ತು ಗಾತ್ರವುಳ್ಳವಸ್ತುಗಳನ್ನು ತಯಾರಿಸುವಲ್ಲಿ ತೊಡಗಿರುವ ಯಂತ್ರ ಶಿಲ್ಪ ಉದ್ದಿಮೆ. ಉದಾ: ಹಡಗು ನಿರ್ಮಾಣ, ರೈಲ್ವೆ ಇಂಜಿನ್ ಇತ್ಯಾದಿ. ಇಂತಹ ಉದ್ದಿಮೆಗಳಿಗೆ ಅಧಿಕ ಬಂಡವಾಳ ಮತ್ತು ಕಬ್ಬಿಣ ಮತ್ತು ಉಕ್ಕು ಅವಶ್ಯಕ. ಪರಿಣಾಮವಾಗಿ ಅವುಗಳನ್ನು ಸಾಮಾನ್ಯವಾಗಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕಾ ಕೇಂದ್ರಗಳ ಸಮೀಪದಲ್ಲಿ ಸ್ಥಾಪಿಸಲಾಗುವುದು.

2. ಲಘು ಎಂಜಿನಿಯರಿಂಗ್ ಕೈಗಾರಿಕೆಗಳು: ಹಗುರವೂ ಸೂಕ್ಷ್ಮವೂ ಮತ್ತು ಕಡಿಮೆ ಗಾತ್ರವುಳ್ಳ ಯಂತ್ರಗಳು. ವಿದ್ಯುತ್ ಉಪಕರಣ ಮುಂತಾದವುಗಳನ್ನು ತಯಾರಿಸುವ ಯಂತ್ರ ಶಿಲ್ಪ ಉದ್ಯಮಗಳಿಗೆ ಲಘು ಎಂಜಿನಿಯರಿಂಗ್ ಕೈಗಾರಿಕೆಗಳೆಂದು ಕರೆಯುವರು, ಇಂತಹ ಕೈಗಾರಿಕೆ ಸಾಮಾನ್ಯವಾಗಿ ಅತ್ಯುತ್ತಮ ಪರಿಣತಿಯುಳ್ಳ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿ ದೊರೆಯುವ ಕಡೆ ಅಭಿವೃದ್ಧಿಗೊಂಡಿರುತ್ತದೆ.

ರಾಸಾಯನಿಕ ತಯಾರಿಕೆ: ನೈಸರ್ಗಿಕ ಸಂಪನ್ಮೂಲಗಳಲ್ಲಿ ಮಣ್ಣು ಒಂದಾಗಿದೆ. ಮಣ್ಣಿನ ಸಂಪತ್ತು ಅದರ ಫಲವತ್ತತೆಯನ್ನಾಧರಿಸಿದೆ. ಇದು ಕೃಷಿ ಸಂಪನ್ಮೂಲಗಳ ಮೇಲೆ ಪ್ರಭಾವ ಬೀರುತ್ತದೆ. ಪುರಾತನ ಕಾಲದಿಂದಲೂ ಮಣ್ಣನ್ನು ಸಾಗುವಳಿಗೆ ಬಳಸುತ್ತಾ ಬಂದಿರುವುದರಿಂದ ಅದರ ಫಲವತ್ತತೆ ಕಡಮೆಯಾಗುತ್ತಾ ಬಂದಿದೆ, ಹೀಗಾಗಿ ಪ್ರಪಂಚದ ಅನೇಕ ಕೃಷಿ ಪ್ರಧಾನ ದೇಶಗಳಲ್ಲಿ ಮಣ್ಣಿನ ಫಲವತ್ತತೆಯನ್ನು ಕಾಪಾಡುವುದೊಂದು ಸಮಸ್ಯೆಯಾಗಿದೆ. ಯಾವುದೇ ಕೃಷಿ ಬೆಳೆಯಾದರೂ ಮಣ್ಣಿನ ಸಾರವನ್ನು ಹೀರಿಕೊಳ್ಳುವುದು ಸಹಜ. ಪೂರ್ವಿಕರು ವಿಶ್ರಾಂತಿ ಚಿಕಿತ್ಸೆ ತತ್ವದ ಆಧಾರದ ಮೇಲೆ ನೈಸರ್ಗಿಕವಾಗಿ ಮಣ್ಣಿನ ಫಲವತ್ತತೆಯನ್ನು ಕಾಪಾಡುವ ಕ್ರಮವನ್ನು ಅನುಸರಿಸುತ್ತಿದ್ದರು. ಈಗ ಅದು ಸಾಧ್ಯವಾಗದ ಮಾತು. ಜನಸಂಖ್ಯಾ ಒತ್ತಡವೇ ಇದಕ್ಕೆ ಮುಖ್ಯ ಕಾರಣ. ಭೂಮಿಗೆ ವಿಶ್ರಾಂತಿ ಕೊಡುವುದಕ್ಕೆ ಬದಲಾಗಿ ಅದನ್ನು ವರ್ಷದಲ್ಲಿ ಬಹುಬೆಳೆಗಳ ಬೇಸಾಯಕ್ಕಾಗಿ ಬಳಸಲಾಗುತ್ತಿದೆ. ಪರಿಣಾಮವಾಗಿ ಮಣ್ಣಿನ ಸಾರ ಕುಂದುತ್ತದೆ. ಹೀಗಾಗಿ ಮಣ್ಣಿನ ಫಲವತ್ತತೆಯನ್ನು ಕಾಪಾಡುವುದು ಮತ್ತು ಇಳುವರಿಯನ್ನು ಸುಧಾರಿಸುವುದು ಅವಶ್ಯಕ. ಅದಕ್ಕಾಗಿ ಗೊಬ್ಬರಗಳ ಬಳಕೆ ಮಾಡಬೇಕು, ಇದನ್ನು ನೈಸರ್ಗಿಕ ಗೊಬ್ಬರವೊಂದರಿಂದ ಪೂರೈಸುವುದು ಸಾಧ್ಯವಿಲ್ಲ. ಅದಕ್ಕೆ ಪರ್ಯಾಯವಾದ ರಾಸಾಯನಿಕ ಗೊಬ್ಬರಗಳ ಬಳಕೆ ಅಗತ್ಯವಾಗಿದೆ. ಇತ್ತೀಚೆಗೆ ನೈಸರ್ಗಿಕ ಗೊಬ್ಬರಕ್ಕಿಂತಲೂ ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಾಗಿದೆ.

ಫಲವತ್ತತೆಯನ್ನು ಸುಧಾರಿಸುವುದು ಮತ್ತು ಹೆಚ್ಚಿಸುವುದಕ್ಕೆ ಮಣ್ಣಿನಲ್ಲಿ ಸೇರಿಸುವ ಖನಿಜಾಂಶ ಮತ್ತು ರಾಸಾಯನಿಕ ಯುಕ್ತ ಪದಾರ್ಥಗಳಿಗೆ ರಾಸಾಯನಿಕ ಗೊಬ್ಬರಗಳೆಂದು ಕರೆಯಬಹುದಾಗಿದೆ. ಅವುಗಳು ಸಸ್ಯಗಳ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳನ್ನು ಪೂರೈಸುತ್ತದೆ. ಉದಾ : ಸಾರಜನಕ, ರಂಜಕ, ಸಲ್ಫರ್, ಪೊಟ್ಯಾಷಿಯಂ, ಮೆಗ್ನೀಷಿಯಂ, ಕ್ಯಾಲ್ಸಿಯಂ ಮತ್ತು ಕಬ್ಬಿಣ.

ರಾಸಾಯನಿಕ ಮತ್ತು ಖನಿಜಗಳ ಸಂಯೋಜನೆಯ ಆಧಾರದ ಮೇಲೆ ರಾಸಾಯನಿಕ ಗೊಬ್ಬರಗಳನ್ನು 3 ಪ್ರಮುಖ ವಿಧಗಳಾಗಿ ವಿಂಗಡಿಸಬಹುದಾಗಿದೆ.

ಸಾರಜನಕ ಯುಕ್ತ ರಸಗೊಬ್ಬರ, ರಂಜಕ ಯುಕ್ತ ರಸಗೊಬ್ಬರ, ಪೊಟ್ಯಾಷಿಯಂ ಯುಕ್ತ ರಸಗೊಬ್ಬರ, ಸಾರಜನಕ ಯುಕ್ತ ಗೊಬ್ಬರಗಳಲ್ಲಿ ಯೂರಿಯ ಮತ್ತು ಸೋಡಿಯಂ ನೈಟ್ರೇಟ್ ಅಮೋನಿಯಂ ಸಲ್ಫೇಟ್, ಅಮೋನಿಯಂ ನೈಟ್ರೇಟ್, ಅಮೋನಿಯಂ ಕ್ಲೋರೈಡ್

ಸೇರಿರುತ್ತವೆ. ಈ ವಿಧದ ಗೊಬ್ಬರ ಪ್ರಪಂಚದಲ್ಲಿ ವ್ಯಾಪಕವಾಗಿ ಉತ್ಪಾದನೆಯಾಗುತ್ತದೆ. ಪ್ರಪಂಚದ ಒಟ್ಟು ರಸಗೊಬ್ಬರಗಳ ಉತ್ಪಾದನೆ ಮತ್ತು ಬಳಕೆಯಲ್ಲಿ ಶೇ. 60 ರಷ್ಟು ಸಾರಜನಕ ಗೊಬ್ಬರಗಳಿಂದ ಕೂಡಿರುತ್ತದೆ. ಇಂತಹ ರಸಗೊಬ್ಬರಗಳ ತಯಾರಿಕೆ ಕಲ್ಲಿದ್ದಲು ಮತ್ತು ಜಲವಿದ್ಯುಚ್ಛಕ್ತಿಯ ಲಭ್ಯತೆಯನ್ನು ಆಧರಿಸಿದೆ.

ರಂಜಕ ಯುಕ್ತ ಗೊಬ್ಬರಗಳಲ್ಲಿ ಸೂಫರ್ ಫಾಸ್ಫೇಟ್, ಅಮೋನಿಯಂ ಫಾಸ್ಫೇಟ್, ನೈಟ್ರೇಟ್ ಮತ್ತು ಫಾಸ್ಫೇಟ್‌ಗಳು ಸೇರಿರುತ್ತವೆ. ಈ ಗೊಬ್ಬರಗಳ ತಯಾರಿಕೆಗೆ ಯಥೇಚ್ಛವಾಗಿ ಫಾಸ್ಫೇಟ್ ನಿಕ್ಷೇಪವು ದೊರೆಯಬೇಕು. ಹೀಗಾಗಿ ರಂಜಕ ಗೊಬ್ಬರ ಕಾರ್ಖಾನೆಗಳ ಸ್ಥಾನೀಕರಣವು ಫಾಸ್ಫೇಟ್ ನಿಕ್ಷೇಪವಲಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರಪಂಚದ ಒಟ್ಟು ರಾಸಾಯನಿಕ ಗೊಬ್ಬರಗಳ ಉತ್ಪಾದನೆಯಲ್ಲಿ ಶೇ. 24 ರಷ್ಟು ರಂಜಕ ಗೊಬ್ಬರಗಳಿಂದ ಕೂಡಿರುತ್ತದೆ.

ಪೊಟ್ಯಾಷಿಯಂ ಗೊಬ್ಬರಗಳಲ್ಲಿ ಪೊಟ್ಯಾಷಿಯಂ ಸಲ್ಫೇಟ್, ಪೊಟ್ಯಾಷಿಯಂ ನೈಟ್ರೇಟ್ ಮತ್ತು ಪೊಟ್ಯಾಷಿಯಂ ಕ್ಲೋರೈಡ್‌ಗಳು ಸೇರಿರುತ್ತವೆ. ಮೊದಲೆರಡು ವಿಧಗಳ ಗೊಬ್ಬರದ ಪ್ರಮಾಣದಷ್ಟು ಈ ವಿಧದ ಗೊಬ್ಬರದ ಉತ್ಪಾದನೆ ಕಂಡುಬರುವುದಿಲ್ಲ.

ಕಾಗದ ಕೈಗಾರಿಕೆ: (ಅರಣ್ಯ ಆಧರಿತ ಕೈಗಾರಿಕೆ) ಮಾನವನು ತನ್ನ ಏಳಿಗೆಯ ಬಗ್ಗೆ ಚಿಂತಿಸುವುದು ಮತ್ತು ಆಲೋಚಿಸುವುದು ಸ್ವಾಭಾವಿಕ. ಆತ ಭವಿಷ್ಯತ್ತಿನ ಏಳಿಗೆಗಾಗಿ ತನ್ನ ಸಂಚಿತ ಜ್ಞಾನಾರ್ಜನೆಯ ನಿಧಿಯನ್ನು ಹಸ್ತಾಂತರಿಸಲು ಸದಾ ಬಯಸುವನು. ನಾಗರಿಕತೆ ಸಂಸ್ಕೃತಿಯ ಬೆಳವಣಿಗೆಗಾಗಿ ತನ್ನ ಉಜ್ವಲ ವಿಚಾರಗರ್ಭಿತ ಚಿಂತನೆಗಳು ಹಾಗೂ ಆಲೋಚನೆಗಳನ್ನು ಸುಲಭವಾಗಿ ದಾಖಲಿಸುವುದು ಅವಶ್ಯಕವಾಗಿದೆ, ಆಧುನಿಕ ನಾಗರಿಕತೆಯು ಸಂಚಿತವಾದ ಮಾನವನ ಜ್ಞಾನಾರ್ಜನೆಯನ್ನಾಧರಿಸಿದೆ. ಅಂತಹ ಚಿಂತನೆಗಳು ಮತ್ತು ಜ್ಞಾನಾನುಭವಗಳನ್ನು ದಾಖಲಿಸಲು ಮತ್ತು ಪ್ರಚಾರ ಮಾಡಲು ಮಾಧ್ಯಮವು ಅವಶ್ಯವಾಗಿದೆ. ಮಾನವನಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ವಸ್ತುಗಳಲ್ಲಿ ಕಾಗದವು ಅವಿಸ್ಮರಣೀಯವಾದದ್ದು ಪ್ರಸ್ತುತ ಮಾನವನ ಜೀವನದಲ್ಲಿ ಕಾಗದದ ಬಳಕೆಯು ಯಾರ ಕಲ್ಪನೆಗೂ ಮೀರಿದಂತಹದಾಗಿದೆ. ಪ್ರತಿನಿತ್ಯ ಬಿತ್ತರಿಸಲ್ಪಟ್ಟ ಜಗತ್ತಿನ ವಿವಿಡೆಡೆ ಸಂಭವಿಸಿದ ಘಟನಾವಳಿಗಳ ವಿಚಾರಗಳ ಪ್ರಚಾರ ಮತ್ತು ವಿಚಾರ ವಿನಿಮಯಗಳನ್ನು ಮಾಡಿಕೊಳ್ಳುವಲ್ಲಿ ಕಾಗದದ ಪಾತ್ರವು ಬಹು ಮುಖ್ಯವಾದವು.

ಸಕ್ಕರೆ ಕೈಗಾರಿಕೆ (ಕೃಷಿ ಆಧಾರಿತ) : ಮಾನವನ ಬಳಕೆಯ ಆಹಾರ ವಸ್ತುಗಳಲ್ಲಿ ಸಕ್ಕರೆಯೂ ಸಹ ಒಂದಾಗಿದೆ ಇದನ್ನು ಅನೇಕ ಸಿಹಿತಿಂಡಿಗಳ ತಯಾರಿಕೆ ಮತ್ತು ಪಾನಕಗಳ ತಯಾರಿಕೆಯಲ್ಲಿ ಬಳಸಲಾಗುವುದು ಇದು ಕಾರ್ಬೋಹೈಡ್ರೇಟ್ ಗುಂಪಿಗೆ ಸೇರಿದ ಆಹಾರ ಪದಾರ್ಥವನ್ನು ಹೊಂದಿದೆ, ಇದನ್ನು ಪ್ಲಾಸ್ಟಿಕ್, ಸ್ಫೋಟಕ ವಸ್ತು, ಔಷಧ ಮುಂತಾದವುಗಳ ತಯಾರಿಕೆಯಲ್ಲಿ ಕಚ್ಚಾ ಪದಾರ್ಥವಾಗಿಯೂ ಮತ್ತು ಹಣ್ಣುಗಳ ಸಂಸ್ಕರಣ ಮತ್ತು ಸಂರಕ್ಷಣೆಗೂ ಬಳಸಲಾಗುವುದು.

ಸಕ್ಕರೆಯನ್ನು ಕಬ್ಬು, ಸಕ್ಕರೆ ಗೆಡ್ಡೆ, ಮೆಕ್ಕೆ ಜೋಳ ಹಾಗೂ ವಿವಿಧ ಹಣ್ಣುಗಳಿಂದ ತಯಾರಿಸಬಹುದಾಗಿದೆ, ಆದರೆ ಕಬ್ಬು ಮತ್ತು ಸಕ್ಕರೆ ಗೆಡ್ಡೆಗಳು ಸಕ್ಕರೆಯ ಪ್ರಮುಖ ಮೂಲಗಳಾಗಿವೆ. ಉಷ್ಣವಲಯದ ದೇಶಗಳಲ್ಲಿ ಸಕ್ಕರೆ ಕೈಗಾರಿಕೆಗೆ ಕಬ್ಬು ಪ್ರಮುಖ ಕಚ್ಚಾ ಪದಾರ್ಥವಾದರೆ, ಸಮಶೀತೋಷ್ಣವಲಯದ ದೇಶಗಳಲ್ಲಿ ಸಕ್ಕರೆ ಗೆಡ್ಡೆಯು ಪ್ರಮುಖ ಕಚ್ಚಾ ಪದಾರ್ಥವಾಗಿರುತ್ತದೆ ಇಂದು ಪ್ರಪಂಚದಾದ್ಯಂತ ಉತ್ಪಾದನೆಯಾಗುತ್ತಿರುವ ಸಕ್ಕರೆಯಲ್ಲಿ ಶೇ. 65 ರಷ್ಟು ಕಬ್ಬಿನಿಂದ ತಯಾರಿಸಲ್ಪಟ್ಟಿರುತ್ತದೆ ಉಳಿದದ್ದು ಸಕ್ಕರೆ ಗಡ್ಡೆಯಿಂದ ತಯಾರಿಸಲ್ಪಟ್ಟಿದೆ. (ಪಿ.ಜಿ.)

**ಕೈರೋ:** ಈಜಿಪ್ಟಿನ ರಾಜಧಾನಿ. ನೈಲ್ ನದಿಯ ಪೂರ್ವ ದಂಡೆಯ ಮೇಲೆ ನದೀ ಮುಖಜಭೂಮಿಯ ಅಗ್ರಸ್ಥಳದಿಂದ 20 ಕಿಮೀ ದಕ್ಷಿಣದಲ್ಲಿದೆ. ನದಿಯ ಪಶ್ಚಿಮ ದಂಡೆಯಲ್ಲಿ ಇದರ ಉಪನಗರಗಳು ಬೆಳೆದಿವೆ. ನಗರದ ಪೂರ್ವಕ್ಕಿರುವ ಅಲ್ ಮೊಕತ್ತಂ ಮರಳುಗುಡ್ಡದಿಂದ ಕೈರೋ ನಗರದ, ನದಿಯ ಮತ್ತು ದೂರದ ಗೀಜ಼ದ ಪಿರಮಿಡ್‌ಗಳ ಸುಂದರ ದೃಶ್ಯವನ್ನು ಕಾಣಬಹುದು. ಪಶ್ಚಿಮ ಏಷ್ಯ ಪ್ರದೇಶದಲ್ಲೇ ಮತ್ತು ಇಡೀ ಆಫ್ರಿಕದಲ್ಲೇ ಇದು ಅತ್ಯಂತ ದೊಡ್ಡ ನಗರ. ಜನಸಂಖ್ಯೆ 67,89,479 (1996). ಬಹುತೇಕ ಇಡೀ ವರ್ಷ ಕೈರೋದಲ್ಲಿ ಶುಷ್ಕ ವಾಯುಗುಣವಿರುತ್ತದೆ. ಹಗಲಿನ ಉಷ್ಣತೆ ಜನವರಿಯಿಂದ ಜುಲೈ–ಆಗಸ್ಟ್‌ಗಳವರೆಗೆ $16^0$ ದಿಂದ $36^0$ಸೆ. ಗಳಷ್ಟಿರುತ್ತದೆ. ಏಪ್ರಿಲ್–ಮೇ ತಿಂಗಳುಗಳಲ್ಲಿ ಮರಳುಮಯ ಬಿಸಿಗಾಳಿ ದಕ್ಷಿಣದಿಂದ ಬೀಸಿದಾಗ $37.7^0$ಸೆ. ಗೂ ಹೆಚ್ಚು ಉಷ್ಣತೆ ಇರುವುದುಂಟು. ಬೇಸಗೆಯ ಗರಿಷ್ಠ ಉಷ್ಣತೆ ಸು. $42.2^0$ಸೆ. ವರ್ಷದಲ್ಲಿ ಮೂರು ನಾಲ್ಕು ಬಾರಿ ಮಾತ್ರ–ಅದೂ ಚಳಿಗಾಲದಲ್ಲಿ–ಮಳೆಯಾಗುತ್ತದೆ.

ಪ್ರಪಂಚದ ಯಾವುದೇ ನಗರದಲ್ಲಿಲ್ಲದಷ್ಟು ಅಧಿಕ ಸಂಖ್ಯೆಯ ವಾಸ್ತು ಸಂಪತ್ತು ಕೈರೊನಗರದಲ್ಲಿ ಸಾಂದ್ರೀಕೃತವಾಗಿದೆ. ಜೊತೆಗೆ ಅಪಾರವಾದ ವಸ್ತು ಸಂಗ್ರಹಾಲಯಗಳು, ಐತಿಹಾಸಿಕ ಸ್ಮಾರಕಗಳು, ಮಸೀದಿ, ಕೋಟೆಗಳು, ಕಲೋಪಾಸಕರಿಗೆ ಮತ್ತು ಪ್ರಾಕ್ತನ ಶಾಸ್ತ್ರಜ್ಞರಿಗೆ ಆಕರ್ಷಣೆಯಾಗುವಂತಹ ಬೃಹತ್ ಕಟ್ಟಡಗಳು ಮತ್ತು ಚರ್ಚ್‌ಗಳಿವೆ. ಇದೊಂದು ಪ್ರಸಿದ್ಧ ವಿದ್ಯಾ ಕೇಂದ್ರವೂ ಆಗಿರುತ್ತದೆ. ಕೈರೋ ವಿಶ್ವವಿದ್ಯಾನಿಲಯ. ನಗರದ ಮಧ್ಯಭಾಗದಲ್ಲಿ ಜೆಜೀರ ಕ್ರೀಡಾ ಸಂಘ, ಕುದುರೆ ಪಂದ್ಯ ಮೈದಾನ, ಪೋಲೋ ಮೈದಾನ ಮತ್ತು ಈಜು ಕೊಳಗಳಿವೆ. ಡೇವಿಸ್ ಕಪ್‌ವಲಯ ಪಂದ್ಯಗಳು ನಡೆಯುವ ಟೆನಿಸ್ ಆಟದ ಅಂಗಳಗಳಿವೆ. ಹಲವು ಪ್ರಸಿದ್ಧ ಅರಮನೆ, ಉದ್ಯಾನ ಮತ್ತು ಆಸ್ಪತ್ರೆಗಳಿವೆ.

ಕೈರೋದಲ್ಲಿ ಹಲವು ಬಗೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿವೆ. ಉದಾ: ಸಹಕಾರಿ ತರಬೇತಿ ಕೇಂದ್ರ, ಅರಬ್ಬಿ ಅಕಾಡೆಮಿ, ಅರಬ್ಬಿ ಸಂಗೀತ ಅಕಾಡೆಮಿ ಮತ್ತು ಕಲಾಸಂಘ. ಮುಖ್ಯ ಸಾರಿಗೆ ಕೇಂದ್ರ. ಇಲ್ಲಿ ಅನೇಕ ಕೈಗಾರಿಕೆಗಳು ಅಭಿವೃದ್ಧಿಗೊಂಡಿದೆ. ಉದಾ: ಕಬ್ಬಿಣ ಮತ್ತು ಉಕ್ಕು, ಸಿಮೆಂಟ್, ರಾಸಾಯನಿಕ ಕೈಗಾರಿಕೆಗಳು, ಹೊಗೆಸೊಪ್ಪು ಮತ್ತು ಚರ್ಮ ಹದಗೊಳಿಸುವುದು, ಜವಳಿ ಉದ್ಯಮ ಇತ್ಯಾದಿ. (ಬಿ.ಎಸ್.ಎಚ್.)

**ಕೊಂಕಣ:** ಭಾರತದ ಪಶ್ಚಿಮತೀರದಲ್ಲಿ, ಮಹಾರಾಷ್ಟ್ರದ ಠಾಣೆ (ಥಾನಾ), ಕೊಲಾಬ ಮತ್ತು ರತ್ನಗಿರಿ ಜಿಲ್ಲೆಗಳನ್ನೂ ಗೋವವನ್ನೂ ಒಳಗೊಂಡ ಪ್ರದೇಶವನ್ನು ಸ್ಥೂಲವಾಗಿ ಕೊಂಕಣ ಎಂದು ಕರೆಯುವುದಿದೆ. ಪಶ್ಚಿಮಘಟ್ಟಗಳ ಪಶ್ಚಿಮಕ್ಕಿರುವ ಈ ತಗ್ಗುನೆಲವೆಲ್ಲ ಮೈದಾನವಲ್ಲ. 48–80 ಕಿಮೀ ಅಗಲ ಮತ್ತು 560 ಕಿಮೀ ಉದ್ದ ಇರುವ ಈ ಪ್ರದೇಶದಲ್ಲಿ ನಡುನಡುವೆ ಬೆಟ್ಟಗಳು ಹಬ್ಬಿವೆ. ಉತ್ತರದಲ್ಲಿ ಕಡಲಕರೆಯ ಉದ್ದಕ್ಕೂ ಸಮತಲದ ಮೆಕ್ಕಲುಮಣ್ಣಿನ ಪಟ್ಟಿಯೊಂದುಂಟು. ಇದರ ಅಗಲ 6–11 ಕಿಮೀ. ಇದರ ಬದಿಯಲ್ಲಿ ಸಮಾನಾಂತರವಾಗಿ ಹಬ್ಬಿರುವ ಅನೇಕ ಬೆಟ್ಟಗಳಿವೆ. ಇವುಗಳಲ್ಲಿ ಕೆಲವು ಶ್ರೇಣಿಗಳ ಎತ್ತರ 450–600 ಮೀ. ಮುಂಬಯಿಗೆ ಉತ್ತರದಲ್ಲಿರುವ ಪ್ರದೇಶದ ನದಿಗಳಲ್ಲಿ ವೈತರಣಿ, ಉಲ್ಹಾಸ್ ಮತ್ತು ಅಂಬಾ ಮುಖ್ಯವಾದವು. ಇವು ಬೆಟ್ಟದಿಂದ ಮೈದಾನಕ್ಕೆ ಇಳಿದ ಮೇಲೆ ಸ್ವಲ್ಪ ದೂರ ಕಡಲ ಕರೆಗೆ ಹೆಚ್ಚುಕಡಿಮೆ ಸಮಾಂತರವಾಗಿ ಸಾಗಿ ಕೊನೆಗೆ ಓರೆಯಾಗಿ ಸಮುದ್ರ ಸೇರುತ್ತದೆ.

ಕೊಂಕಣವನ್ನು ಸ್ಥೂಲವಾಗಿ ಉತ್ತರ–ದಕ್ಷಿಣ ಉಪವಿಭಾಗಗಳಾಗಿ ವಿಂಗಡಿಸಬಹುದು. ಮಾಹೀಂ ಪ್ರದೇಶ ಮತ್ತು ಮುಂಬಯಿ–ಕಲ್ಯಾಣ್ ಪ್ರದೇಶ. ದಕ್ಷಿಣ ಕೊಂಕಣವನ್ನು ಮಲ್ವಾಡ್, ರತ್ನಗಿರಿ ಮತ್ತು ಗೋವ ಎಂದು ಮರುವಿಂಗಡಿಸಬಹುದು. ನೈಸರ್ಗಿಕ ಬಂದರನ್ನೊಳಗೊಂಡ ಮುಂಬಯಿ ನಗರ ಇರುವ ಉತ್ತರ ಕೊಂಕಣ ಪ್ರದೇಶ ದಕ್ಷಿಣಕ್ಕಿಂತ ಹೆಚ್ಚು ಮುಂದುವರಿದಿದೆ. ಮುಂಬಯಿಯ ಹತ್ತಿರದಲ್ಲಿ ಕರಾವಳಿ ಅತ್ಯಂತ ಅಗಲವಾಗಿದೆ. ಸಹ್ಯಾದ್ರಿಶ್ರೇಣಿಯಲ್ಲಿರುವ ತಾಲ್‌ಘಾಟ್ ಮತ್ತು ಭೋರ್‌ಘಾಟ್‌ಗಳಿಂದಾಗಿ ಉತ್ತರ ಕೊಂಕಣದೊಂದಿಗೆ ಪೂರ್ವದ ವಿಶಾಲ ಹಿನ್ನಾಡಿನ ಸಂಪರ್ಕ ಏರ್ಪಟ್ಟಿದೆ. ಮುಂಬಯಿ ಭಾರತದ ಪಶ್ಚಿಮದ ಮಹಾದ್ವಾರವಾಗಿ ಪರಿಣಮಿಸಿರುವುದು ಈ ಘಾಟುಗಳಿಂದಾಗಿ.

ಕೊಂಕಣ ಪ್ರದೇಶದಲ್ಲಿ 198–254 ಸೆಂಮೀ ಮಳೆಯಾಗುವುದರಿಂದ ಬತ್ತವೇ ಮುಖ್ಯ ಬೆಳೆ. ಉಳಿದ ಯಾವ ಬೆಳೆಯೂ ಪ್ರಾಮುಖ್ಯದಲ್ಲಿ ಇದರ ಹತ್ತಿರಕ್ಕೆ ಬರುವುದೇ ಇಲ್ಲ. ರಾಗಿ, ದ್ವಿದಳಧಾನ್ಯಗಳು ಇತರ ಬೆಳೆಗಳು. ಸೆಣಬು ಮತ್ತು ಮೆಸ್ತ 1947ರಿಂದೀಚೆಗೆ ಬೆಳೆಯಲ್ಪಡುತ್ತಿವೆ. ದಕ್ಷಿಣದ ಕಡೆಗೆ ಸಾಗಿದಂತೆ ತೆಂಗು ವಿಶೇಷ. ನದಿಗಳ ಅಳಿವೆಗಳಲ್ಲಿ

ಕೈರೋ ನಗರಮ

ಬೆಳೆಯುವ ಗುಲ್ಮ ವೃಕ್ಷಗಳು ಸೌದೆಯಾಗಿ ಉಪಯೋಗಕ್ಕೆ ಬರುತ್ತವೆ. ಲ್ಯಾಟರೈಟ್ ಆವೃತ ಪ್ರದೇಶಗಳಲ್ಲಿ ಹಿಂದೆ ದಟ್ಟವಾಗಿ ಕಾಡು ಬೆಳೆದಿತ್ತು. ಈಗ ಅವೆಲ್ಲ ನಶಿಸಿವೆ. ನೆಲ ಅಷ್ಟೇನೂ ಫಲವತ್ತಲ್ಲ. ಜೋಳ ಮತ್ತು ಇತರ ಕೆಲವು ಧಾನ್ಯಗಳು ಬೆಳೆಯುತ್ತವೆ. ಘಟ್ಟಗಳೂ ಅವುಗಳ ಸನಿಯದ ಬೆಟ್ಟಗಳೂ ಸದಾ ಹಸುರೆಲೆಯ ಕಾಡುಗಳಿಂದ ಕೂಡಿವೆ.

ಗೋವ ಪ್ರದೇಶ ಬಹುಕಾಲದಿಂದ ಪೋರ್ಚುಗೀಸರ ಅಧೀನದಲ್ಲಿದ್ದುದರಿಂದ ವಿಶಿಷ್ಟವಾದದ್ದಾಗಿದೆ. ಮಾರ್ಮಗೋವ ಒಂದು ಮುಖ್ಯ ಬಂದರು. ಮಾಂಡವಿ ಮತ್ತು ರಾಚೋಲ್ ಇಲ್ಲಿಯ ನದಿಗಳು.

ಇವುಗಳಲ್ಲಿ ಮುಖ್ಯವಾಗಿ ಕೊಂಕಣವೆಂದು ಕರೆಯಬಹುದಾಗಿದ್ದ ಭಾಗ ಒಂದೇ. ಚಿಪ್ಲೂನ್ ಸುತ್ತಣ ಪ್ರದೇಶವೇ ಇದಾಗಿರಬಹುದು. ಇತಿಹಾಸದ ಯಾವುದೇ ಕಾಲದಲ್ಲೂ ಕೊಂಕಣ ಒಂದು ರಾಜಕೀಯ ಘಟಕವಾಗಿದ್ದಂತೆ ಕಾಣುವುದಿಲ್ಲ. 9ನೆಯ ಶತಮಾನದಿಂದ 14ನೆಯ ಶತಮಾನದವರೆಗಿನ ಅರಬ್ಬಿ ಭೂಗೋಳಶಾಸ್ತ್ರಜ್ಞರು ಈಗ ಕೊಂಕಣ ಎನಿಸಿಕೊಂಡಿರುವ ಪ್ರದೇಶದ ಪರಿಚಯ ಪಡೆದಿದ್ದರು. ಈ ಪ್ರದೇಶದಲ್ಲಿ ಹಲವಾರು ಸಣ್ಣಪುಟ್ಟ ಆಡಳಿತಗಳು ಇದ್ದದ್ದೂ ಉಂಟು. ಮರಾಠರ ಕಾಲದಲ್ಲಿ ಇಡೀ ಪ್ರದೇಶ ಅವರ ಅಧೀನದಲ್ಲಿತ್ತು. *

**ಕೊಕೊಸ್‌ದ್ವೀಪಗಳು:** ಆಸ್ಟ್ರೇಲಿಯ ದೇಶಕ್ಕೆ ಸೇರಿದ ಪ್ರದೇಶ. ಇದನ್ನು ಕೊಕೊಸ್‌ಕೀಲಿಂಗ್ ದ್ವೀಪಗಳು ಎಂದೂ ಕರೆಯುವರು. ಇದು ಆಸ್ಟ್ರೇಲಿಯದ ವಾಯವ್ಯ ಭಾಗದ ಹಿಂದು ಮಹಾಸಾಗರದಲ್ಲಿದೆ. ಎರಡು ಸಮತಟ್ಟಾದ ಹವಳ ದಿಬ್ಬಗಳು ಹಾಗೂ ಇಪ್ಪತ್ತೇಳು ಹವಳ ದ್ವೀಪಗಳಿಂದ ಕೂಡಿದೆ. ಆಸ್ಟ್ರೇಲಿಯದಿಂದ ಶ್ರೀಲಂಕದವರೆಗೆ ಇರುವ ದೂರದ ಅರ್ಧದಷ್ಟಿದೆ. ಉ.ಅ. $12^0 07'$ ಮತ್ತು ಪೂ.ರೇ. $96^0 54$ ರಲ್ಲಿ ಹರಡಿದೆ. ಇದರ ಭೂ ಪ್ರದೇಶ 14.2 ಚ.ಕಿಮೀ ವಿಸ್ತರಿಸಿ, 2.6 ಕಿಮೀ ತೀರ ಪ್ರದೇಶವನ್ನು ಹೊಂದಿದೆ. ಇಲ್ಲಿಯ ಅತ್ಯಂತ ಎತ್ತರಭಾಗ 5 ಮೀ ಇದೆ. ವಾಯುಗುಣವು ಪ್ರಶಾಂತವಾಗಿದ್ದು, ಆಗ್ನೇಯ ವಾಣಿಜ್ಯ ಮಾರುತಗಳಿಂದ ಪ್ರಭಾವಿತವಾಗಿದೆ. ವರ್ಷದ 9 ತಿಂಗಳು ಸಾಧಾರಣ ಮಳೆ ಬೀಳುತ್ತದೆ. ವರ್ಷದ ಮೊದಲ ಕೆಲವು ತಿಂಗಳಲ್ಲಿ ಆವರ್ತ ಮಾರುತಗಳಿಂದ ಮಳೆಯಾಗುವ ಸಾಧ್ಯತೆ ಇರುವುದು.

ಈ ದ್ವೀಪಗಳ ಗುಂಪನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಉತ್ತರ ಕೀಲಿಂಗ್ ದ್ವೀಪ: ಇದು ಹವಳದಿಂದ ಉಂಟಾದ ಇಂಗ್ಲಿಷ್ **'C'** ಅಕ್ಷರ ಆಕಾರದ ಒಂದು ದಿಬ್ಬ. ಹೆಚ್ಚು ಕಡಿಮೆ ವರ್ತುಲಾಕಾರದಲ್ಲಿದ್ದು ಒಂದು ಭಾಗದಲ್ಲಿ ಮಾತ್ರ ಸಣ್ಣದ್ವಾರವಿದ್ದು ಮಧ್ಯಭಾಗದಲ್ಲಿ ಲಗೂನ್ ಸರೋವರವಿದೆ. ಈ ದ್ವೀಪದ ವಿಸ್ತೀರ್ಣ ಸು. 1.1 ಚ.ಕಿಮೀ. ದ್ವೀಪದಲ್ಲಿ ಜನಸಂಖ್ಯೆ ಅತಿವಿರಳ.

ದಕ್ಷಿಣ ಕೀಲಿಂಗ್ ದ್ವೀಪಗಳು: ಇವು 27 ಸಣ್ಣ ಸಣ್ಣ ಸ್ವತಂತ್ರ ದ್ವೀಪಗಳಿಂದ ಕೂಡಿದೆ. ಇದರ ಭೂ ಪ್ರದೇಶ 13.1 ಚ.ಕಿಮೀ. ಇವುಗಳಲ್ಲಿನ ಹೋಮ್ ದ್ವೀಪ ಮತ್ತು ಪಶ್ಚಿಮ ದ್ವೀಪಗಳು ಮಾತ್ರ ಜನರ ವಾಸಕ್ಕೆ ಯೋಗ್ಯವಾಗಿವೆ. ಈ ದ್ವೀಪಗಳಲ್ಲಿ ಯಾವುದೇ ನದಿ ಅಥವಾ ಸರೋವರಗಳು ಕಂಡುಬರುವುದಿಲ್ಲ. ಸಿಹಿ ನೀರು ಮಳೆಯಿಂದ ಹಾಗೂ ಭೂ ಅಂತರ್ಜಲದಿಂದ ದೊರೆಯುವುದು. ಈ ದ್ವೀಪಗಳ ರಾಜಧಾನಿ ವೆಸ್ಟ್ ಐಲೆಂಡ್, ಅಧಿಕೃತ ಭಾಷೆ ಇಂಗ್ಲಿಷ್, ಜನಸಂಖ್ಯೆ 628 (2004). (ಎಚ್.ಎನ್.)

**ಕೊಚ್ಚಿ:** ಕೇರಳ ರಾಜ್ಯದ ಒಂದು ಮುಖ್ಯ ಬಂದರು ಮತ್ತು ಪಟ್ಟಣ. ಭಾರತದ ಪಶ್ಚಿಮ ಸಮುದ್ರತೀರದಲ್ಲಿ ಸು. 20 ಕಿಮೀ ಉದ್ದ, 2 ಕಿಮೀ ಅಗಲ ಇರುವ ಪ್ರಾಯ ದ್ವೀಪದ ಉತ್ತರದ ಕೊನೆಯಲ್ಲಿ, ಉ.ಅ. $9^0 58' 5''$ ಮತ್ತು ಪೂ.ರೇ. $76^0 11' 55''$ ಮೇಲೆ ಇದೆ. ಪ್ರಪಂಚದ ಅತ್ಯಂತ ಸುಂದರ ನೈಸರ್ಗಿಕ ಬಂದರುಗಳಲ್ಲಿ ಇದೊಂದು. ಜನಸಂಖ್ಯೆ 1355406. ಕೊಚ್ಚಿ ಭಾರತದ ಎಂಟು ಪ್ರಮುಖ ಬಂದರುಗಳಲ್ಲೊಂದು. ಇದು ಸರ್ವಋತು ಬಂದರು. ಪೂರ್ವಕ್ಕೆ ಇರುವ ಮುಖ್ಯ ಭೂಮಿಯನ್ನು ಖಾರಿಯೊಂದು ಬೇರ್ಪಡಿಸುತ್ತದೆ. ದಕ್ಷಿಣೋತ್ತರವಾಗಿ ಆಲಪ್ಪುಳದಿಂದ ಕೊಚ್ಚಿಯವರೆಗೆ ಚಾಚಿರುವ ಖಾರಿ ಸು. 31 ಚ.ಕಿಮೀ ವಿಸ್ತಾರವಾದದ್ದು, ಇದಕ್ಕೆ ವೆಂಬನಾಡ್ ಸರೋವರವೆಂದು ಹೆಸರು. 1920–23ರ ಅವಧಿಯಲ್ಲಿ ಇಲ್ಲಿಯ ಬಂದರನ್ನು ಆಧುನಿಕಗೊಳಿಸುವ ಯೋಜನೆಗಳು ಆರಂಭವಾದುವು. ಇಲ್ಲಿ 150 ಮೀ ಉದ್ದದ ನಾಲ್ಕು ಹಡಗುಗಳು ಒಂದೇ ಕಾಲದಲ್ಲಿ ತಂಗಬಹುದು. ಬಂದರನ್ನೀಗ ಇನ್ನೂ ವಿಸ್ತರಿಸಲಾಗಿದೆ. ಇಲ್ಲೊಂದು ಹಡಗುನಿರ್ಮಾಣ ಕೇಂದ್ರ ಸ್ಥಾಪಿತವಾಗಿದೆ.

ಕೊಚ್ಚಿ ರೇವು ರೈಲ್ವೆಯ ಮೂಲಕ ದಕ್ಷಿಣ ರೈಲ್ವೆಯ ಬ್ರಾಡ್‌ಗೇಜ್ ಮತ್ತು ಮೀಟರ್ ಗೇಜ್ ರೈಲುಮಾರ್ಗಗಳ ಮೂಲಕ ಸಂಬಂಧ ಕಲ್ಪಿಸಲಾಗಿದೆ. ಇಲ್ಲಿ ರಾಸಾಯನಿಕ ಗೊಬ್ಬರದ ಕಾರ್ಖಾನೆಯೂ ತೈಲಪರಿಷ್ಕರಣ ಕೇಂದ್ರವೂ ಇವೆ. ಕೇರಳದ ಆಮದು ರಫ್ತುಗಳು ಬಹಳ ಮಟ್ಟಿಗೆ ಸಾಗುವುದು ಈ ಬಂದರಿನಿಂದ. ಹಿನ್ನಾಡಿನ ಉತ್ಪನ್ನಗಳಾದ ಚಹ, ಕಾಫಿ, ಮೆಣಸು, ತೆಂಗು, ರಬ್ಬರ್, ಮರದ ದಿಮ್ಮಿ, ತೆಂಗಿನ ನಾರಿನ ವಸ್ತುಗಳು, ಗೋಡಂಬಿ, ಸಾಗರಿಕ ಆಹಾರ, ಅದಿರು, ಖನಿಜ ತೈಲೋತ್ಪನ್ನ ಮುಂತಾದವು ಇಲ್ಲಿಂದ ರಫ್ತಾಗುತ್ತವೆ. ಧಾನ್ಯ, ಖನಿಜ ಪದಾರ್ಥಗಳು, ಪೆಟ್ರೋಲಿಯಂ, ರಾಸಾಯನಿಕಗಳು – ಇವು ಇದರ ಮೂಲಕ ಆಮದಾಗುವ ಮುಖ್ಯ ವಸ್ತುಗಳು. ಕೊಚ್ಚಿಯಲ್ಲಿ ಮುಂಗಾರು ಮಳೆ ಹೆಚ್ಚು. ಸಮುದ್ರತೀರದಲ್ಲಿರುವುದರಿಂದ ಇಲ್ಲಿ ಹವಾಗುಣ ಹಿತಕರವಾಗಿರುತ್ತದೆ. (ಎಸ್.ಎನ್.ಎ.ಆರ್.)

**ಕೊಡಗು:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಉತ್ತರ ಅಕ್ಷಾಂಶ $11^0 56'–12^0 50'$ ಮತ್ತು ಪೂರ್ವ ರೇಖಾಂಶ $75^0 22'–76^0 12'$ ನಡುವೆ ಹಬ್ಬಿದೆ. ವಿಸ್ತೀರ್ಣದಲ್ಲಿ ಇದೇ ಅತ್ಯಂತ ಚಿಕ್ಕ ಜಿಲ್ಲೆ. (4,110 ಚ.ಕಿಮೀ). ಕನ್ನಡದ ಕುಡು (ಮಲೆಯ ಪ್ರದೇಶ) ಎಂಬ ಶಬ್ದದಿಂದ ಕೊಡಗು ಶಬ್ದ ಬಂದಿದೆಯೆಂದು ಹೇಳಲಾಗಿದೆ. ಕೊಡಿಮಲೆನಾಡು ಎಂಬುದು ಕೊಡಗು ಆಗಿದೆಯೆಂದು ಇನ್ನು ಕೆಲವರ ವಾದ. ಕೊಡಗಿನ ಸರ್ವೇಕ್ಷಣ ನಡೆಸಿದ ಲೆಫ್ಟಿನೆಂಟ್ ಕಾನಾರ್ ಇದನ್ನು ಲಕ್ಷಾಂತರ ಮಲೆಗಳ ನಾಡು ಎಂದು ಕರೆದಿದ್ದಾನೆ. ಕೊಡಗು ಎಂದರೆ ಪಶ್ಚಿಮಕ್ಕಿರುವ ನಾಡು ; ಈ ಜಿಲ್ಲೆ ಪಶ್ಚಿಮಭಾಗದಲ್ಲಿರುವುದರಿಂದ ಇದಕ್ಕೆ ಈ ಹೆಸರು ಬಂತು–ಎಂಬುದಾಗಿ ಇನ್ನು ಕೆಲವು ಮೂಲಗಳಿಂದ ತಿಳಿದುಬರುತ್ತದೆ. ಕೊಡಗಿನ ಗರಿಷ್ಠ ಉದ್ದ ದಕ್ಷಿಣೋತ್ತರವಾಗಿ 96 ಕಿಮೀ. ಗರಿಷ್ಠ ಅಗಲ ಪೂರ್ವ ಪಶ್ಚಿಮವಾಗಿ 64 ಕಿಮೀ.

ಮೇಲ್ಮೈ ಲಕ್ಷಣ : ಇಡೀ ಕೊಡಗುಪ್ರದೇಶ ಪರ್ವತಮಯ. ಆದರೆ ಸ್ಥಳದಿಂದ ಸ್ಥಳಕ್ಕೆ ಇದರ ಲಕ್ಷಣ ವ್ಯತ್ಯಾಸವಾಗುತ್ತದೆ. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಮಡಿಕೇರಿ ಪ್ರಸ್ಥಭೂಮಿಯ ಎತ್ತರ ಕೋಟೆಯ ಬಳಿಯಲ್ಲಿ ಸಮುದ್ರಮಟ್ಟದಿಂದ 1,270 ಮೀ. ಪೂರ್ವದ ಕುಶಾಲನಗರದ ಬಳಿ 907 ಮೀ. ಸರಾಸರಿ 1,170 ಮೀ ಎತ್ತರವಿರುವ ಈ ಪ್ರಸ್ಥಭೂಮಿ ಮಡಿಕೇರಿಯ ಉತ್ತರಕ್ಕೆ 42 ಕಿಮೀ ದೂರದಲ್ಲಿರುವ ಸೋಮವಾರಪೇಟೆಯವರೆಗೂ ಹಬ್ಬಿದೆ. ಸೋಮವಾರಪೇಟೆಯ ಬಳಿ ಪರ್ವತಗಳು ಅಷ್ಟು ಕಡಿದಾಗಿಲ್ಲ. ಅಲ್ಲಿ ನಡುನಡುವೆ ಹಸುರು ಇಳಿಜಾರುಗಳೂ ದಟ್ಟಕಾಡುಗಳೂ ಉಂಟು. ಮಡಿಕೇರಿಯ ಬಳಿಯ ಬೆಟ್ಟಗಳು ಒತ್ತೊತ್ತು, ಕಡಿದು, ಕಣಿವೆಗಳ ಆಳ ಹೆಚ್ಚು. ಕಾಡು ಬಲು ದಟ್ಟ. ಕುಶಾಲನಗರದ ಬಳಿಗೆ ಸಾಗಿದಂತೆ ಕರ್ನಾಟಕ ಪ್ರಸ್ಥಭೂಮಿಯ ವಿಶಾಲಬಯಲುಗಳು ಆರಂಭವಾಗುತ್ತವೆ. ಇಲ್ಲಿ ನಡುನಡುವೆ ಒಂಟಿಬೆಟ್ಟಗಳುಂಟು. ವಿರಾಜಪೇಟೆಯ ಕಡೆಯಲ್ಲಿ–ಬೆಪ್ಪುನಾಡು ಮತ್ತು ಕದೈಟ್ ನಾಡುಗಳಲ್ಲಿ ಅರಣ್ಯ ದಟ್ಟವಾಗಿಲ್ಲ. ವಿಶಾಲ ಗದ್ದೆಬಯಲುಗಳ ಹೆಗಲ ಮೇಲೆ ಚೆಲುವಾದ ಹುಲ್ಲಿನ ದಿಬ್ಬಗಳನ್ನು ಕಾಣಬಹುದು. ಕೊಡಗಿನ ಪೂರ್ವ ಎಲ್ಲೆಯ ಬಳಿ–ಕಾವೇರಿ ಮತ್ತು ಲಕ್ಷ್ಮಣ ತೀರ್ಥಗಳ ನಡುವೆ–ಎಲೆ ಉದುರಿಸುವ ವೃಕ್ಷಗಳ ವಿಶಾಲ ಕಾಡುಂಟು. ಇದಕ್ಕೆ ಪಶ್ಚಿಮದಲ್ಲಿ ನಿತ್ಯಹಸುರುಕಾಡು ಹಬ್ಬಿದೆ. ಬಿದಿರು ವಿಶೇಷ. ಒಟ್ಟಿನಲ್ಲಿ ಪರ್ವತಶಿಖರಗಳು ಹುಲ್ಲಿನಿಂದಲೂ ಕಣಿವೆಗಳು ಮತ್ತು ಪರ್ವತ ಪ್ರದೇಶದ ತೆರವಾದ ಸ್ಥಳಗಳು ನಿತ್ಯಹಸುರು ಕಾಡುಗಳಿಂದಲೂ ಕೂಡಿವೆ. ಇಡೀ ಕೊಡಗು ಹಸುರುಮಯ. ಇಲ್ಲಿ ನಿಸರ್ಗಸಸ್ಯವೇ ಹೇರಳ. ಅಲ್ಲಲ್ಲಿ ಕಾಫಿ ಮತ್ತು ಇತರ ಬೆಳೆಗಳಿಗಾಗಿ ಇದನ್ನು ತೆಗೆಯಲಾಗಿದೆ.




ಕೊಡಗಿನ ಬೆನ್ನುಮೂಳೆಯಂತಿರುವುದು ಪಶ್ಚಿಮಘಟ್ಟಗಳ ಮುಖ್ಯಶ್ರೇಣಿ. ಇದು ವಾಯವ್ಯದಿಂದ ದಕ್ಷಿಣಕ್ಕೆ, ಸುಬ್ರಹ್ಮಣ್ಯದಿಂದ ಬ್ರಹ್ಮಗಿರಿಯ ಪಶ್ಚಿಮಾಗ್ರದವರೆಗೆ ಹಬ್ಬಿದೆ, ಇದರ ಉದ್ದ 96 ಕಿಮೀ ಗಳಿಗಿಂತಲೂ ಹೆಚ್ಚು. ಇದರಿಂದ ಪೂರ್ವದ ಕಡೆಗೆ ಕೈಬೆರಳುಗಳಂತೆ ಸಾಗಿರುವ ಉನ್ನತಶ್ರೇಣಿಗಳು ಹಲವಾರು. ಸುಬ್ರಹ್ಮಣ್ಯ ಅಥವಾ ಪುಷ್ಪಗಿರಿಯಲ್ಲಿ ಪರ್ವತಹೆಗ್ಗಂಟಿನ ಎತ್ತರ ಸಮುದ್ರಮಟ್ಟಕ್ಕಿಂತ 1,908 ಮೀ. ಈ ಎಡೆಯಿಂದ

ಕವಲೊಡೆಯುವ ಹಲವು ಶ್ರೇಣಿಗಳ ಪೈಕಿ ಅತ್ಯಂತ ಮುಖ್ಯವಾದ್ದು ಕೋಟೆಬೆಟ್ಟ. ಮಡಿಕೇರಿಯಿಂದ 14 ಕಿಮೀ ಉತ್ತರದಲ್ಲಿ ಇದರ ಎತ್ತರ 1,792 ಮೀ. ಮಡಿಕೇರಿಯ ಬಳಿ ಆರಂಭವಾಗಿ ಪಶ್ಚಿಮಕ್ಕೆ ಸಾಗುವುದು ಬೇಂಗುನಾಡ್ ಶ್ರೇಣಿ. ಇದಕ್ಕೂ ಘಟ್ಟಗಳ ಮುಖ್ಯಶ್ರೇಣಿಗೂ ನಡುವೆ ಅತ್ಯಂತ ಕಿರಿದಾದ ಕೋನ ಏರ್ಪಟ್ಟಿದೆ. ಇವೆರಡೂ ಕೂಡುವೆಡೆಯಲ್ಲಿರುವುದೇ ಬ್ರಹ್ಮಗಿರಿ. ಕಾವೇರಿನದಿ ಇಲ್ಲಿ ಉಗಮಿಸುತ್ತದೆ. ಇದಕ್ಕೆ ಉತ್ತರಕ್ಕಿರುವುದು ಸಂಪಾಜೆ ಕಣಿವೆ. ಮಂಗಳೂರು ರಸ್ತೆ ಈ ಮೂಲಕ ಸಾಗುತ್ತದೆ. ಬ್ರಹ್ಮಗಿರಿಯೆಡೆಯಿಂದ ಮುಂದಕ್ಕೆ ಪಶ್ಚಿಮಘಟ್ಟಗಳ ಮುಖ್ಯಶ್ರೇಣಿ ಸಾಗುವುದು ಆಗ್ನೇಯಾಭಿಮುಖವಾಗಿ. ತುಂಬೆಮಲೆ, ಇಗ್ಗುತಪ್ಪದೇವರ ಬೆಟ್ಟ, ತಡಿಯಂಡಮೋಳು ಮತ್ತು ಸೋಮಮಲೆ ಮುಖ್ಯ ಶಿಖರಗಳು. ಈ ಶ್ರೇಣಿಗೆ ದಕ್ಷಿಣದಲ್ಲಿರುವ ಪೆರಿಯಂಬಾಡಿ ಘಾಟಿನ ಮೂಲಕ ಕಣ್ಣಾನೂರಿಗೆ ರಸ್ತೆಯುಂಟು. ಕೊಡಗಿನ ಆಗ್ನೇಯ ತುದಿಯಲ್ಲಿರುವ ಶ್ರೇಣಿ ಮರೆನಾಡು. ಇದೂ ಬ್ರಹ್ಮಗಿರಿಯ ಹೊರಗವಲೂ ಕೊಡಗಿನ ದಕ್ಷಿಣದ ಎಲ್ಲೆಗಳು. ವೈನಾಡಿನಿಂದ ಕೊಡಗನ್ನು ಪ್ರತ್ಯೇಕಿಸುವ ಶ್ರೇಣಿಗಳು ಇವು. ಇಲ್ಲಿರುವ ಅತ್ಯುನ್ನತ ಶಿಖರ ದವಸಿಬೆಟ್ಟ. ಇದರ ಸುತ್ತಣ ಪ್ರದೇಶ ಬಹಳ ಚೆಲುವಾಗಿದೆ. ಅದರ ಹೆಸರು ಉಯ್ಯಾಲೆ.

ಕೊಡಗಿನ ಪಶ್ಚಿಮದ ಎಲ್ಲೆಯ ಬಳಿ ಇರುವ ಶಿಖರಗಳಲ್ಲಿ ಮುಖ್ಯವಾದುವು ಹನುಮನಬೆಟ್ಟ ಮತ್ತು ಪೆರಮಾಲೆಮಲೆ. ಬ್ರಹ್ಮಗಿರಿಯಿಂದ ಕಿಗ್ಗಟ್ಟನಾಡಿನ ಕಡೆಗೆ ಅನೇಕ ಕವಲುಗಳು ಹಬ್ಬಿವೆ. ಇವು ಕಡಿದುಮಲೆಗಳು. ವಿರಾಜಪೇಟೆಯ ಬಳಿಯ ಅಂಬಟೆಬೆಟ್ಟ, ಬಿಟ್ಟಂಗಾಲ, ಕುಂಡದಬೆಟ್ಟ, ಸಿದ್ದೇಶ್ವರಬೆಟ್ಟ, ಮೌಕಲಬೆಟ್ಟ ಇವು ಮುಖ್ಯ. ಇನ್ನು ಕೆಲವು ಕವಲುಗಳು ಪೂರ್ವದ ಕಡೆಗೆ ಜಾರಿ, ಏರಿಳಿದು ಸಾಗಿ, ವಿಶಾಲವಾದ ಬತ್ತದ ಬಯಲುಗಳನ್ನು ಆಲಿಂಗಿಸಿಕೊಂಡಿವೆ. ಬೇಂಗುನಾಡು ಶ್ರೇಣಿ ಮಡಿಕೇರಿಯ ದಕ್ಷಿಣದಲ್ಲಿ ಎರಡು ಕವಲುಗಳಾಗಿ ಮುನ್ನಡೆಯುತ್ತದೆ. ಒಂದು ಕವಲು ನೂರೊಕ್ಕಲುಬೆಟ್ಟದಲ್ಲಿ ಪರ್ಯವಸಾಗೊಂಡರೆ, ಇನ್ನೊಂದು ಕವಲು ಡೊಂಕುಡೊಂಕಾಗಿ ಕುಶಾಲನಗರದ ಕಡೆಗೆ ಸಾಗುತ್ತದೆ. ಇದರ ಉನ್ನತ ಶಿಖರ ಕಲ್ಲೂರುಬೆಟ್ಟ.. ಇಲ್ಲಿ ತೇಗದ ಕಾಡು ವಿಶೇಷ. ಕೋಟೆಬೆಟ್ಟದ ಉತ್ತರಕ್ಕಿರುವವು ಸಂತೆಹಳ್ಳಿಬೆಟ್ಟಗಳು, ಮುಕ್ರಿಬೆಟ್ಟವೇ ಇವುಗಳ ತುದಿ. ಕೊಡಗಿನ ಉತ್ತರದ ಗಡಿಯಿಂದ ಕಾವೇರಿಯ ಕಡೆಗೆ ಒಂದು ಶ್ರೇಣಿ ಹಬ್ಬಿದೆ. ಮಾಲಂಬಿ ಮತ್ತು ಕನಗಲುಬೆಟ್ಟ ಇದರ ಮುಖ್ಯ ಶಿಖರಗಳು.

ಕೊಡಗಿನ ಮುಖ್ಯ ನದಿ ಕಾವೇರಿ : ಬ್ರಹ್ಮಗಿರಿಯಲ್ಲಿ ಇದರ ಉಗಮ. ಇದು ಸಿದ್ಧಾಪುರದವರೆಗೂ ಆಗ್ನೇಯಾಭಿಮುಖವಾಗಿ ಹರಿದು, ಅಲ್ಲಿಂದ ಈಶಾನ್ಯಕ್ಕೆ ದಿಕ್ಕು ಬದಲಾಯಿಸಿ, ಸ್ವಲ್ಪ ದೂರ ಜಿಲ್ಲೆಯ ಪೂರ್ವಗಡಿಯಾಗಿ ಪರಿಣಮಿಸಿ, ಶಿರಂಗಾಲದ ಬಳಿ ಜಿಲ್ಲೆಯನ್ನು ಬಿಡುತ್ತದೆ. ಇದರ ಎರಡು ಮುಖ್ಯ ಉಪನದಿಗಳಾದ ಹೇಮಾವತಿ ಮತ್ತು ಲಕ್ಷ್ಮಣತೀರ್ಥಗಳು ಉತ್ತರದಕ್ಷಿಣ ಕೊಡಗುಗಳಲ್ಲಿ ಹರಿಯುತ್ತವೆ.

ಹೇಮಾವತಿಯೇ ಕೊಡಗಿನ ಉತ್ತರದ ಗಡಿರೇಖೆ. ಕೊಡಗಿನಲ್ಲಿ ಕಾವೇರಿಯನ್ನು ಸೇರುವ ಉಪನದಿಗಳು ಕನ್ನಿಕೆ, ಕಕ್ಕಬೆ, ಕಾಡನೂರು ಹೊಳೆ, ಮುತ್ತಾರುಮುಡಿ, ಚಿಕ್ಕಹೊಳೆ ಮತ್ತು ಹಾರಂಗಿ. ಕಕ್ಕೆಹೊಳೆ, ಚೇರನಹೊಳೆ, ಮಾದಾಪುರ ಮತ್ತು ಹಟ್ಟಿಹೊಳೆ ಇವು ಹಾರಂಗಿಯ ಉಪನದಿಗಳು. ಪಶ್ಚಿಮಕ್ಕೆ ಹರಿಯುವ ಒಂದು ಮುಖ್ಯ ನದಿಯೆಂದರೆ ಬರಪೊಳೆ. ಇದು ನೈಋತ್ಯದಲ್ಲಿ ಮಲಬಾರಿನ ಕಡೆಗೆ ಸಾಗುತ್ತದೆ. ಸಾರತ್, ಕುಮಾರಧಾರ ಮತ್ತು ಪಯಸ್ವಿನಿ ಇತರ ನದಿಗಳು. ಸಾರತ್ 130 ಮೀ ಎತ್ತರದಿಂದ ಧುಮುಕುತ್ತದೆ. ಇಲ್ಲಿ ವಿದ್ಯುತ್ತನ್ನು ಉತ್ಪಾದಿಸುವ ಯೋಜನೆಯೊಂದು ಪರಿಶೀಲನೆಯಲ್ಲಿದೆ, ಕೊಡಗಿನ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ಅವನ್ನು ಸುಲಭವಾಗಿ ದಾಟಬಹುದು.

ವಾಯುಗುಣ : ಕೊಡಗು ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಹಿತಕರ. ಪೂರ್ವಕ್ಕಿಂತ ಪಶ್ಚಿಮಭಾಗ ಹೆಚ್ಚು ತಂಪಾಗಿರುತ್ತದೆ. ಏಪ್ರಿಲ್–ಮೇಗಳಲ್ಲಿ ಗರಿಷ್ಠ ಉಷ್ಣತೆ. ಜನವರಿಯಲ್ಲಿ ಕನಿಷ್ಠ ಮಳೆಯೂ ಪೂರ್ವಕ್ಕಿಂತ ಪಶ್ಚಿಮದಲ್ಲಿ ಅಧಿಕ. ಭಾಗಮಂಡಲದಲ್ಲಿ ವಾರ್ಷಿಕಮಳೆ 600 ಸೆಂಮೀ. ಜಿಲ್ಲೆಯ ಪೂರ್ವದ ಎಲ್ಲೆಯಲ್ಲಿರುವ ಕುಶಾಲನಗರದಲ್ಲಿ 110 ಸೆಂಮೀ. ಜಿಲ್ಲೆಯ ಸರಾಸರಿ ಮಳೆ 267 ಸೆಂಮೀ. ಸರಾಸರಿಯಲ್ಲಿ ವರ್ಷದಲ್ಲಿ 118 ಮಳೆದಿನಗಳು.

ಅರಣ್ಯೋತ್ಪನ್ನ ಮತ್ತು ಕೃಷಿ : ಕೊಡಗು ಜಿಲ್ಲೆಯ ಮೂರನೆಯ ಒಂದು ಭಾಗ ಅರಣ್ಯಾವೃತ. ತೇಗ, ಬೀಟೆ, ಹೊನ್ನೆ, ಗಂಧ ಇವು ಮುಖ್ಯವಾದ ಮರಗಳು. ತೇಗದ ಮರಗಳ ಕಾಡುಗಳನ್ನು ಸರ್ಕಾರದ ಅರಣ್ಯಶಾಖೆ ಅಭಿವೃದ್ಧಿಪಡಿಸುತ್ತಿದೆ. ಬೆಂಕಿಕಡ್ಡಿ ಕೈಗಾರಿಕೆಗೆ ಅವಶ್ಯವಾದ ಮೆದುಮರಗಳನ್ನೂ ನೆಟ್ಟು ಬೆಳೆಸಲಾಗುತ್ತಿದೆ. ಕೊಡಗಿನ ಜನರ ಮುಖ್ಯ ಕಸಬು ಕೃಷಿ. ಬತ್ತ ಮುಖ್ಯ ಬೆಳೆ. ರಾಗಿ ಇನ್ನೊಂದು ಮುಖ್ಯ ಬೆಳೆ. ಕಾಫಿ ಕೊಡಗಿನ ಮತ್ತೊಂದು ಮುಖ್ಯ ಕೃಷಿ ಉತ್ಪನ್ನ, ಲಕ್ಷಾಂತರ ಎಕರೆಗಳಲ್ಲಿ ಕಾಫಿ ತೋಟಗಳಿವೆ. ಕಿತ್ತಳೆ ಬೆಳೆಯೂ ವಿಶೇಷ. ಅಡಕೆ ಇನ್ನೊಂದು ಫಸಲು. ಮಡಿಕೇರಿಯ ಬಳಿ ಚಹ ತೋಟವೂ ಉಂಟು. ಮಾವುಕೂಟ, ಜೋಡುಪಾಲ, ಸಂಪಾಜೆ ಮತ್ತು ಕಡಮಕಲ್ಲುಗಳಲ್ಲಿ ರಬ್ಬರ್ ತೋಟಗಳಿವೆ. ಬೆಟ್ಟದ ಕೆಳಗೆ–ಸಂಪಾಜೆ, ಪೆರಾಜೆ ಮತ್ತು ಚೆಂಬುಗಳಲ್ಲಿ–ತೆಂಗು ಮತ್ತು ಗೇರು ಬೆಳೆಯುತ್ತವೆ.

ಕೈಗಾರಿಕೆಗಳು : ಜೇನುಸಾಕಣೆ ಕೊಡಗಿನ ಒಂದು ಮುಖ್ಯ ಉದ್ಯಮ. ಭಾಗಮಂಡಲದಲ್ಲಿ ಮಧುವನ ಎಂಬ ಜೇನು ಸಾಕಣೆ ಕೇಂದ್ರವಿದೆ. ಕೊಡಗುಜೇನು ಉತ್ಪಾದಕರ ಸಂಘ ಈ ಉದ್ಯಮದ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಭಾಗಮಂಡಲದ ಕೇಂದ್ರದಲ್ಲಿ ಜೇನು ಸಾಕುವ ತರಬೇತು ನೀಡಲಾಗುತ್ತಿದೆ. ಶನಿವಾರಸಂತೆ ಮತ್ತು ಶಿರಂಗಾಲಗಳಲ್ಲಿ ಕೈಮಗ್ಗದ ಬಟ್ಟೆ ತಯಾರಾಗುತ್ತದೆ. ಶನಿವಾರಸಂತೆಯಲ್ಲಿ ನೇಯ್ಗೆಯ ಶಾಲೆಯುಂಟು. ಶಿರಂಗಾಲದಲ್ಲಿ ಕೈಮಗ್ಗ ನೇಕಾರರ ಸಹಕಾರ ಸಂಘ ಸ್ಥಾಪಿತವಾಗಿದೆ. ವಿರಾಜಪೇಟೆ ತಾಲ್ಲೂಕಿನ ಮಲೆನಾಡಿನಲ್ಲಿ ಬೆತ್ತದ ಸಾಮಾನು ಮಾಡುವವರ ಒಂದು ಸಹಕಾರ ಸಂಘವುಂಟು. ಪೊನ್ನಂಪೇಟೆಯ ಬಳಿಯ ಮಡಕೆ ಬೀಡು ಕುಂಭ ಕೈಗಾರಿಕೆಯ ಕೇಂದ್ರ. ಇಲ್ಲಿ ಇದರ ಒಂದು ಶಾಲೆ ಇದೆ. ಮಡಿಕೇರಿಯಲ್ಲಿ ಪ್ಲಾಸ್ಟಿಕ್ ಚೀಲ ತಯಾರಿಸುವ ಕಾರ್ಖಾನೆಯೂ ಹೊಳೆಯುವ ಉಕ್ಕಿನ ಪಾತ್ರೆ ತಯಾರಿಸುವ ಕಾರ್ಖಾನೆಯೂ ಇವೆ. ಕೂಡಿಗೆಯಲ್ಲಿ ಕಾಫಿ ಪರಿಷ್ಕರಣ ಕಾರ್ಖಾನೆಯುಂಟು. ಮಡಿಕೇರಿಯಲ್ಲಿ ಒಂದು ಸರ್ಕಾರಿ ಮುದ್ರಣಾಲಯವೂ ವಾಹನಗಳ ದುರಸ್ತಿ ಕಾರ್ಯಾಗಾರವೂ ಇವೆ.

ಕೊಡಗಿನಲ್ಲಿ ವೃಕ್ಷಸಂಪತ್ತು ವಿಶೇಷವಾಗಿದ್ದರೂ ಮರಕೊಯ್ಯುವ ಕೈಗಾರಿಕೆ ಅಲ್ಲಿ ಬೆಳೆಯದಿರುವುದು ಆಶ್ಚರ್ಯಕರ. 1954ರಲ್ಲಿ ಸರ್ಕಾರ ಮೂರ್ಕಲ್‌ನಲ್ಲಿ ಒಂದು ಮರಕೊಯ್ಯುವ ಕಾರ್ಖಾನೆ ಸ್ಥಾಪಿಸಿತು. ಕೊಡಗಿನ ಒಂದು ಮುಖ್ಯ ಬೆಳೆ ಬತ್ತವಾದ್ದರಿಂದ ಅಲ್ಲಿ ಹಲವು ಅಕ್ಕಿಗಿರಣಿಗಳಿವೆ. ಮಡಿಕೇರಿಯಲ್ಲಿ ನಾಲ್ಕು ಮತ್ತು ವಿರಾಜಪೇಟೆಯಲ್ಲಿ ಮೂರು ಸಣ್ಣ ಎಂಜಿನಿಯರಿಂಗ್ ಕಾರ್ಯಾಗಾರಗಳೂ, ಸೋಮವಾರಪೇಟೆ ಮತ್ತು ಕೂಡಿಗೆಗಳಲ್ಲಿ ಒಂದೊಂದು ವ್ಯವಸಾಯೋಪಕರಣ ಕಾರ್ಖಾನೆಯೂ ಉಂಟು. ಕಾಫಿ ತೋಟಗಳಿಗೆ ಅವಶ್ಯವಾದ ಉಪಕರಣಗಳು ಇಲ್ಲಿ ತಯಾರಾಗುತ್ತವೆ.

ಜನ, ಜೀವನ : 2001ರ ಜನಗಣತಿಯ ಪ್ರಕಾರ ಕೊಡಗಿನ ಜನಸಂಖ್ಯೆ 5,45,322. ಇದರಲ್ಲಿ ಪುರುಷರ ಮತ್ತು ಸ್ತ್ರೀಯರ ಸಂಖ್ಯೆಗಳು ಅನುಕ್ರಮವಾಗಿ 2,73,210 ಮತ್ತು 2,72,112.

ರಾಜ್ಯದ ಇತರ ಜಿಲ್ಲೆಗಳಲ್ಲಿರುವಂತೆ ಕೊಡಗಿನಲ್ಲೂ ಹಲವು ಜಾತಿಮತಗಳ ಜನ ಇದ್ದಾರೆ. ಎರವರು, ಕುಡಿಯರು, ಕುರುಬರು, ತಾಪಾಳರು–ಇವರು ಗಿರಿಜನರು, ಹರಿಜನರೂ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಕೊಡವರು ವಿಶಿಷ್ಟ ಜನ. ಕದಂಬವಂಶದ ಚಂದ್ರವರ್ಮ ಇವರ ಮೂಲಪುರುಷನೆಂದು ಹೇಳುತ್ತಾರೆ. ಶತ್ರುಗಳ ಆಕ್ರಮಣದಿಂದಾಗಿ ಸ್ವಂತರಾಜ್ಯ ತೊರೆದು ಬಂದು ಕೊಡಗಿನಲ್ಲಿ ನೆಲೆಸಿದ ಕದಂಬಸೈನಿಕರು ಇವರ ಮೂಲಪುರುಷರಿರಬಹುದೆಂದು ಹೇಳಲಾಗಿದೆ. ಕೊಡಗಿನ ಜನರ ಸಂಸ್ಕೃತಿ ವಿಶಿಷ್ಟವಾದದ್ದು. ಕತ್ತಿ ಕೋವಿಗಳು ಅವರಿಗೆ ಪ್ರಿಯ. ಹುತ್ತರಿಯ ಕುಣಿತ, ಬೊಳುಕಾಟ, ಕೋಲಾಟ ಮೊದಲಾದವು ಕೊಡಗಿನ ಜನಪದ ನೃತ್ಯಗಳು. ಇವು ವೀರರಸಪ್ರಧಾನ. ಹುತ್ತರಿ ಹಬ್ಬದ ಸಮಯದಲ್ಲಿ ಕೋಲಾಟ ಮುಖ್ಯವಾದ್ದು, ಪರಿಯಕುಳಿ ಎಂಬುದು ಯುದ್ಧನೃತ್ಯ. ಬೊಳುಕಾಟ ಅಖಿಲ ಭಾರತ ಪ್ರಸಿದ್ಧಿ ಪಡೆದಿದೆ. ಕೈಲ್ ಪೋಳ್‌ದ್, ಕಾವೇರಿ ಸಂಕ್ರಮಣ, ಹುತ್ತರಿ, ಶಿವರಾತ್ರಿ, ಉಗಾದಿ, ಷಷ್ಠಿ, ವಿಷುಸಂಕ್ರಮಣ–ಇವು ಕೊಡವರ ಮುಖ್ಯ ಹಬ್ಬಗಳು.

ಕೊಡವರಿಗೆ ಅವರದೇ ಆದ ಭಾಷೆಯಿದೆ. ಅದು ಕೊಡವ ನುಡಿ. ಅದಕ್ಕೆ ಲಿಪಿಯಿಲ್ಲ. ಅದು ಕನ್ನಡ ತಮಿಳು ಮಲಯಾಳ ಶಬ್ದಗಳಿಂದ ಕೂಡಿದೆ. ಕನ್ನಡಮೂಲ ಶಬ್ದಗಳೇ ಅಧಿಕ. ಅಪ್ಪನೆರವಂಡ ಅಪ್ಪಚ್ಚುಕವಿ, ನಡಿಕೇರಿಯಂಡ ಚಿಣ್ಣಪ್ಪ ಇವರು ಕೊಡವ ಭಾಷೆಯ ಮುಖ್ಯಕೃತಿಕಾರರು. ಕನ್ನಡ ಕೊಡಗಿನ ವ್ಯವಹಾರಭಾಷೆ. ಕೊಡಗಿನ ಉಡುಪು ವೈಶಿಷ್ಟ್ಯಪೂರ್ಣ. ಅಲ್ಲಿಯ ಗಂಡಸರು ಹಬ್ಬ ಹರಿದಿನ ವಿವಾಹ ಸಮಯಗಳಲ್ಲಿ ಜರಿಪೇಟ, ಕರಿಯ ಮೇಲಂಗಿ,ಜರಿಯ ನಡುದಟ್ಟಿ ತೊಟ್ಟು ಬಲಗಡೆಗೆ ಬೆಳ್ಳಿಯ ಒರೆಯಲ್ಲಿ ಕತ್ತಿ ಧರಿಸುತ್ತಾರೆ. ಸೆರಗನ್ನು ಹಿಂದಕ್ಕೆ ಬಿಟ್ಟು ವಿಶಿಷ್ಟರೀತಿಯಲ್ಲಿ ಸೀರೆ ಉಡುವುದು ತುಂಬುತೋಳಿನ ರವಿಕೆ ತೊಡುವುದು ಸ್ತ್ರೀಯರ ಕ್ರಮ. ವಿಶೇಷ ದಿನಗಳಲ್ಲಿ ಇವರು ತಲೆಗೆ ಜರಿಹೊದಿಕೆ ಕಟ್ಟುತ್ತಾರೆ.

ಸಾರಿಗೆ, ಸಂಪರ್ಕ : ಕೊಡಗಿನ ಜಿಲ್ಲಾಕೇಂದ್ರವಾದ ಮಡಿಕೇರಿಗೂ ಜಿಲ್ಲೆಯ ಮುಖ್ಯ ಸ್ಥಳಗಳಿಗೂ ಒಳ್ಳೆಯ ರಸ್ತೆಗಳುಂಟು. ಬೆಂಗಳೂರು, ಮೈಸೂರು, ಮಂಗಳೂರು, ಹಾಸನ, ಚಿಕ್ಕಮಗಳೂರು, ಉಡುಪಿ, ತಲಚೇರಿ, ಕಣ್ಣಾನೂರು ಮುಂತಾದ ಕಡೆಗಳಿಗೆ ಬಸ್ ಮಾರ್ಗಗಳಿವೆ. ಕುಶಾಲನಗರದಲ್ಲಿ ಕೊಡಗು ಜಿಲ್ಲೆಯನ್ನು ಪ್ರವೇಶಿಸಿ, ಮಡಿಕೇರಿಯ ಮಾರ್ಗವಾಗಿ ಸಂಪಾಜೆಗೆ ಸಾಗಿ ಮುಂದುವರಿಯುವ ಮೈಸೂರು–ಮಂಗಳೂರು ಹೆದ್ದಾರಿ; ಮಡಿಕೇರಿಯಿಂದ ಸಿದ್ದಾಪುರ–ವಿರಾಜಪೇಟೆಗಳ ಮೂಲಕ ಕಣ್ಣಾನೂರು ತಲುಪುವ ಮಡಿಕೇರಿ–ತಲಚೇರಿ ಹೆದ್ದಾರಿ; ಮಡಿಕೇರಿಯಿಂದ ಮಾದಾಪುರ, ಸೋಮವಾರಪೇಟೆ, ಶನಿವಾರಸಂತೆಗಳ ಮೂಲಕ ಸಾಗುವ ಮಡಿಕೇರಿ–ಕೂಡ್ಲಿಪೇಟೆ ಹೆದ್ದಾರಿ; ಮಡಿಕೇರಿಯಿಂದ ಮೂರ್ನಾಡು ಮೂಲಕ ವಿರಾಜಪೇಟೆ ತಲುಪುವ ದಾರಿ; ಮಡಿಕೇರಿ–ಭಾಗಮಂಡಲ ಮಾರ್ಗ, ವಿರಾಜಪೇಟೆಯಿಂದ ಗೋಣಿಕೊಪ್ಪ, ತಿತಿಮತ್ತಿ ಮತ್ತು ಆನೆಚೌಕೂರು ಮಾರ್ಗ ಹಾಯುವ ವಿರಾಜಪೇಟೆ–ಹುಣಸೂರು ಹೆದ್ದಾರಿ; ಗೋಣಿ ಕೊಪ್ಪದಿಂದ ಪೊನ್ನಂಪೇಟೆ, ಹುದಕೇರಿ, ಕುಟ್ಟಗಳ ಮೂಲಕ ಸಾಗುವ ಗೋಣಿಕೊಪ್ಪ–ಮಾನಂದವಾಡಿ ಹೆದ್ದಾರಿ;

ನಾಪೋಕ್ಲು–ಕಕ್ಕಬ್ಬೆ–ಕಡಂಗ–ಕದನೂರು–ವಿರಾಜಪೇಟೆ ಹೆದ್ದಾರಿ; ಕುಶಾಲನಗರದಿಂದ ಕೂಡಿಗೆಯ ಮೂಲಕ ಮಡಿಕೇರಿ–ಕೂಡ್ಲಿಪೇಟೆ ಹೆದ್ದಾರಿಯನ್ನು ಸೇರುವ ದಾರಿ; ಕೂಡಿಗೆ–ಶಿರಂಗಾಲ ಮಾರ್ಗ–ಇವು ಜಿಲ್ಲೆಯ ಮುಖ್ಯ ರಸ್ತೆಗಳು. ಕೊಡಗಿನಲ್ಲಿ ರೈಲುಮಾರ್ಗವಿಲ್ಲ.

ಮುಖ್ಯ ಸ್ಥಳಗಳು : ಜಿಲ್ಲೆಯ ಕೇಂದ್ರ ಮಡಿಕೇರಿ. ಇದು ಪ್ರವಾಸಿಕೇಂದ್ರ ಕೂಡ. ಹಿಂದಿನ ಅರಸರು ಕಟ್ಟಿಸಿದ ಕೋಟೆಯೂ ಅರಮನೆಯೂ ಇವೆ. ಅರಮನೆಯ ಕಟ್ಟಡದಲ್ಲಿ ಈಗ ಜಿಲ್ಲಾ ಕಚೇರಿಯಿದೆ. ಪ್ರಸ್ಥಭೂಮಿಯ ಮೇಲೆ ಹಬ್ಬಿರುವ ಮಡಿಕೇರಿಯ ಸುತ್ತಣ ನಿಸರ್ಗ ಸುಂದರವಾಗಿದೆ. ಹಿಂದಿನ ರಾಜರು ಕುಳಿತು ನಿಸರ್ಗವನ್ನು ವೀಕ್ಷಿಸುತ್ತಿದ್ದ ಸ್ಥಳ ರಾಜಾಸೀಟ್. ಇದು ಈಗಲೂ ಪ್ರಸಿದ್ಧ. ಲಿಂಗರಾಜ ಕಟ್ಟಿಸಿದ ಓಂಕಾರೇಶ್ವರ ದೇವಾಲಯ, ಕೊಡಗಿನ ಅರಸರ ಸಮಾಧಿಗಳಾದ ಗದ್ದುಗೆಗಳು–ಇವು ಮಡಿಕೇರಿಯ ಇತರ ಪ್ರೇಕ್ಷಣೀಯ ಸ್ಥಳಗಳು. ದಾದಿಯರ ಶಿಕ್ಷಣಕೇಂದ್ರ, ಸಹಕಾರ ತರಬೇತು ಕೇಂದ್ರ, ಕೈಗಾರಿಕಾ ತರಬೇತು ಕೇಂದ್ರ, ಪ್ರಥಮ ದರ್ಜೆ ಕಾಲೇಜು ಇದೆ. ಮಡಿಕೇರಿಯಿಂದ 6 ಕಿಮೀ ದೂರದಲ್ಲಿ ಅಬ್ಬಿ ಜಲಪಾತವಿದೆ.

ತಲಕಾವೇರಿ, ಭಾಗಮಂಡಲ, ರಾಮಸ್ವಾಮಿ ಕಣಿವೆ, ಕೂಡಿಗೆ, ನಾಲ್ಕುನಾಡು ಅರಮನೆ, ಇಗ್ಗುತಪ್ಪದೇವಸ್ಥಾನ, ಚೆಟ್ಟಳ್ಳಿ ಇವು ಇತರ ಪ್ರೇಕ್ಷಣೀಯ ಸ್ಥಳಗಳು. ಕೂಡಿಗೆಯಲ್ಲಿ ವ್ಯವಸಾಯ ಸಂಶೋಧನ ಕ್ಷೇತ್ರ, ಮಾದರಿ ಕೃಷಿಕ್ಷೇತ್ರ, ಪಶುಸಂಗೋಪನೆ ಮತ್ತು ಕ್ಷೀರೋತ್ಪನ್ನ ಕೇಂದ್ರಗಳೂ ಕೋಳಿಸಾಕಣೆ ಕ್ಷೇತ್ರ, ಗ್ರಾಮಸೇವಕರ ತರಬೇತು ಕೇಂದ್ರ ಮತ್ತು ಮೂಲಶಿಕ್ಷಣ ತರಬೇತು ಕಾಲೇಜೂ ಕಾಫಿ ಪರಿಷ್ಕರಣ ಕಾರ್ಖಾನೆಯೂ ಇವೆ. ಕುಶಾಲನಗರ–ಮೈಸೂರು ರಸ್ತೆಯಲ್ಲಿರುವ ಕಾವೇರಿ ನಿಸರ್ಗಧಾಮ ಮತ್ತೊಂದು ಆಕರ್ಷಣೀಯ ಸ್ಥಳ.

ಆಡಳಿತ ದೃಷ್ಟಿಯಿಂದ ಜಿಲ್ಲೆಯನ್ನು ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ ಎಂಬ ಮೂರು ತಾಲ್ಲೂಕುಗಳಾಗಿ ವಿಂಗಡಿಸಿದೆ. (ಆರ್.ಎಂ.ಆರ್.)

**ಕೊಡೈಕ್ಕೆನಾಲ್:** ತಮಿಳುನಾಡಿನ ಮಧುರೈ ಜಿಲ್ಲೆಗೆ ಸೇರಿದ ತಾಲ್ಲೂಕು ಮತ್ತು ತಾಲ್ಲೂಕಿನ ಕೇಂದ್ರ. ತಾಲ್ಲೂಕಿನಲ್ಲಿ ಸಂರಕ್ಷಿತ ಅರಣ್ಯ ಪ್ರದೇಶವೇ ಹೆಚ್ಚಾಗಿದೆ. ಈ ತಾಲ್ಲೂಕಿನಲ್ಲಿ ಸು. 15 ಗ್ರಾಮಗಳಿವೆ. ಇದರ ಪಶ್ಚಿಮಕ್ಕಿರುವ ಪಳನಿ ಬೆಟ್ಟಗಳ ಸಾಲು ತಾಲ್ಲೂಕನ್ನು ಅತಿವೃಷ್ಟಿಯಿಂದ ರಕ್ಷಿಸುತ್ತದೆ. ವಾರ್ಷಿಕ ಮಳೆ ಸುಮಾರು 420 ಸೆಂಮೀ.

ಕೊಡೈಕ್ಕೆನಾಲ್ ಪಟ್ಟಣ ಒಂದು ಚಿಕ್ಕ ಗಿರಿಧಾಮ. ಪಳನಿ ಬೆಟ್ಟಗಳ ಪ್ರದೇಶದಲ್ಲಿ 2,343 ಮೀ ಎತ್ತರದಲ್ಲಿದೆ. ತಾಲ್ಲೂಕಿನಲ್ಲಿ ಇದೊಂದೇ ಪಟ್ಟಣ. ಸಮೀಪದ ರೈಲುನಿಲ್ದಾಣವಾದ ನೀಲಕೊಟ್ಟೈಗೆ ಇಲ್ಲಿಂದ ಒಳ್ಳೆಯ ರಸ್ತೆಯುಂಟು. ಸುತ್ತಣ ಪ್ರಕೃತಿಸೌಂದರ್ಯದ ನೋಟವನ್ನು ಸವಿಯಲೂ ವಿಶ್ರಾಂತಿ ಪಡೆಯಲೂ ಆರೋಗ್ಯ ಸುಧಾರಿಸಿಕೊಳ್ಳಲೂ ಬೇಸಿಗೆಯಲ್ಲಿ ಈ ಗಿರಿಧಾಮಕ್ಕೆ ಬರುವ ಪ್ರವಾಸಿಗಳ ಸಂಖ್ಯೆ ವರ್ಷೇವರ್ಷೇ ಅಧಿಕವಾಗುತ್ತಿದೆ.

ಕೊಡೈಕ್ಕೆನಾಲ್‌ನಲ್ಲಿರುವ ಸೌರವೀಕ್ಷಣಾಲಯ ಭಾರತದಲ್ಲೇ ವಿಶಿಷ್ಟವಾದದ್ದು. ಹಿಂದಿನ ಮದ್ರಾಸ್ ಸರ್ಕಾರ 1792ರಲ್ಲಿ ಸ್ಥಾಪಿಸಿದ್ದ ವೀಕ್ಷಣಾಲಯವನ್ನು 1900ರ ಸುಮಾರಿಗೆ ವಿಸ್ತರಿಸಲಾಯಿತು. ಇಲ್ಲಿ ಭೂಕಂಪವಿಜ್ಞಾನ, ಸೌರ ಭೌತಶಾಸ್ತ್ರ ಮುಂತಾದ ಶಾಸ್ತ್ರಗಳ ಅಧ್ಯಯನಕ್ಕೆ ಅನುಕೂಲತೆಗಳಿವೆ. (ಎನ್.ಎ.)

**ಕೊಪ್ಪಳ:** ಕರ್ನಾಟಕ ರಾಜ್ಯದ ಈ ಜಿಲ್ಲೆ 1998 ಏಪ್ರಿಲ್ 01 ರಂದು ರಚನೆಯಾಯಿತು. ಕರ್ನಾಟಕದ ಈಶಾನ್ಯ ಭಾಗದಲ್ಲಿ ಉತ್ತರದ ಮೈದಾನ ಪ್ರದೇಶದಲ್ಲಿದೆ, ವಿಸ್ತಾರವಾದ ಸಸ್ಯವರ್ಗಗಳಿಲ್ಲದ ಭೂಮಿಯನ್ನು ಒಳಗೊಂಡಿರುವ ಈ ಜಿಲ್ಲೆಯು $15^0 09'$–$16^0 34'$ ಉತ್ತರ ಅಕ್ಷಾಂಶ. $75^0 46'$–$77^0 35'$ ಪೂರ್ವ ರೇಖಾಂಶದಲ್ಲಿದೆ. ಸಮುದ್ರಮಟ್ಟದಿಂದ 400 ಮೀ ಎತ್ತರದಲ್ಲಿದೆ. ಈ ಜಿಲ್ಲೆಯು ಉತ್ತರದಲ್ಲಿ ಬಾಗಲಕೋಟೆ, ದಕ್ಷಿಣದಲ್ಲಿ ಬಳ್ಳಾರಿ, ಪೂರ್ವದಲ್ಲಿ ರಾಯಚೂರು. ಮತ್ತು ಪಶ್ಚಿಮದಲ್ಲಿ ಗದಗ ಜಿಲ್ಲೆಗಳಿಂದ ಸುತ್ತುವರೆದಿದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣ ಸು. 5,559 ಚ.ಕಿಮೀ. ಈ ಜಿಲ್ಲೆಗೆ ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳು ಸೇರಿವೆ. ಈ ಭಾಗವು ಏರಿಳಿತಗಳಿಂದ ಕೂಡಿರುವ ಮೇಲ್ಮೈ ಲಕ್ಷಣವನ್ನು ಹೊಂದಿದೆ. ಕೆಲವು ಪ್ರದೇಶಗಳಲ್ಲಿ ನೀಸ್ ಕಲ್ಲುಗಳಿಂದ ಕೂಡಿರುವ ಗುಡ್ಡಗಳನ್ನು ಕಾಣಬಹುದು. ತುಂಗಭದ್ರಾ ಮತ್ತು ಕೃಷ್ಣ ನದಿಗಳ ನಡುವೆ ಸ್ವಲ್ಪ ಪ್ರಮಾಣದ ಸಮತಟ್ಟಾದ ಪ್ರಸ್ಥಭೂಮಿಯ ಪ್ರದೇಶವಿದೆ. ಇಲ್ಲಿನ ಪ್ರಮುಖ ಬೆಟ್ಟಗಳೆಂದರೆ, ಕರಿಗುಡ್ಡ, ಮಾನ್ವಿ, ಕಬ್ಬನ್‌ಕಲ್, ಮಧುಗಿರಿ, ನೀರಮಾನ್ವಿ, ಗೋಕರಲ್ ಮುಂತಾದವು.

ಈ ಜಿಲ್ಲೆಯಲ್ಲಿ ಕೃಷ್ಣ ಮತ್ತು ತುಂಗಭದ್ರಾ ನದಿಗಳು ಹರಿಯುತ್ತವೆ. ತುಂಗಭದ್ರಾ ಎಡದಂಡೆ ಕಾಲುವೆ ಈ ಜಿಲ್ಲೆಗೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತಿದೆ. ಕೆಂಪು ಮರಳು ಮಿಶ್ರಿತ ಮಣ್ಣು ಹೆಚ್ಚಾಗಿ ಜಿಲ್ಲೆಯನ್ನು ಆವರಿಸಿಕೊಂಡಿದೆ. ಕೆಲವು ಪ್ರದೇಶಗಳಲ್ಲಿ ತಿಳಿ ಬೂದು ಬಣ್ಣದ ಜೇಡಿಮಣ್ಣು ಮತ್ತು ಕೆಂಪು ಮಿಶ್ರಿತ ಕಂದು ಮಣ್ಣು ಹಂಚಿಕೆಯಾಗಿವೆ. ಕಪ್ಪುಮಣ್ಣು ಈ ಜಿಲ್ಲೆಯ ಹೆಚ್ಚಿನ ಭಾಗವನ್ನು ಆವರಿಸಿಕೊಂಡಿದೆ.

ಈ ಜಿಲ್ಲೆಯಲ್ಲಿ ವರ್ಷದ ಹೆಚ್ಚಿನ ಅವಧಿಯಲ್ಲಿ ಅತಿ ಹೆಚ್ಚು ಉಷ್ಣಾಂಶ ಮತ್ತು ಒಣಹವೆಯಿರುತ್ತದೆ. ವಾರ್ಷಿಕ ಮಳೆ ಪ್ರಮಾಣ ಕೇವಲ 57 ಸೆಂಮೀ. ಇಲ್ಲಿಯ ವಾರ್ಷಿಕ ಗರಿಷ್ಠ ಉಷ್ಣಾಂಶ $46^0$ಸೆ. ನಷ್ಟಿರುತ್ತದೆ. ವಾರ್ಷಿಕ ಕನಿಷ್ಠ ಉಷ್ಣಾಂಶ $10^0$ಸೆ. (ಜನವರಿ)




ಉಷ್ಣವಲಯದ ಒಣ ವಾಯುಗುಣವನ್ನು ಹೊಂದಿರುವ ಈ ಜಿಲ್ಲೆಯಲ್ಲಿ ತೆರೆದ ಕುರುಚಲು ಕಾಡುಗಳಿಂದ ಆವರಿಸಿರುವ ಪೊದೆಗಳು ಹೆಚ್ಚಾಗಿ ಕಂಡು ಬರುತ್ತವೆ. ಅಲ್ಲಲ್ಲಿ ಕೆಲವು ಮರಗಳು (ಶೇಷನ್ ಮತ್ತು ಬಬೂಲ್ ಮರಗಳು) ಹಂಚಿಕೆಯಾಗಿವೆ. ಇಲ್ಲಿಯ ಸಾಮಾನ್ಯವಾದ ಅರಣ್ಯ ಸಸ್ಯಗಳೆಂದರೆ, ತಾರ್‌ಮರ, ತೊಗಟೆ, ಬೀಡಿ ಎಲೆ (ತೂಪ್ರ), ಕೋಸ ಹುಲ್ಲು, ಹೊನ್ನೆ, ಮತ್ತಿ, ಹೊಂಗೆ, ಹುಣಸೆ, ಸೀಗೆ ಹಾಗೂ, ಕುರುಚಲು ಗಿಡಗಳು. ಈ ಜಿಲ್ಲೆಯ ಕಲ್ಲು ಗುಡ್ಡಗಳಲ್ಲಿ ಸಿವಂಗಿ, ಚಿರತೆ, ಕಟ್ಟೆಗರ್ಕ, ತೋಳ, ಗುಳ್ಳೆನರಿ, ಜಿಂಕೆಗಳು, ಹಾವು ಮತ್ತು ಪಕ್ಷಿಗಳು ಕಂಡುಬರುತ್ತವೆ.

ಕೃಷಿ ಮತ್ತು ಪಶುಪಾಲನೆ: ಒಟ್ಟು ಭೌಗೋಳಿಕ ಪ್ರದೇಶದಲ್ಲಿನ ಶೇ. 72 ರಷ್ಟು ಭೂ ಪ್ರದೇಶದವು ಕೃಷಿ ಚಟುವಟಿಕೆಗಳಿಗೆ ಯೋಗ್ಯವಾಗಿದೆ. ಇಲ್ಲಿನ ಪ್ರಮುಖ ಬೆಳೆಗಳೆಂದರೆ. ಬತ್ತ, ಜೋಳ, ಸಜ್ಜೆ, ಗೋದಿ, ಹಿಪ್ಪುನೇರಳೆ, ಮುಸುಕಿನ ಜೋಳ ನೆಲಗಡಲೆ, ಸೂರ್ಯಕಾಂತಿ, ಕಡಲೆ, ತೊಗರಿ, ಕಬ್ಬು ಮತ್ತು ಹತ್ತಿ. ರೇಷ್ಮೆ ಕೃಷಿಯು ಪ್ರಮುಖ ಚಟುವಟಿಕೆಯಾಗಿದೆ. ಜಿಲ್ಲೆಯಲ್ಲಿ ಕಾಣಬರುವ ಪ್ರಮುಖ ಸಾಕು ಪ್ರಾಣಿಗಳೆಂದರೆ, ದನಕರುಗಳು, ಎಮ್ಮೆಗಳು, ಕುರಿ, ಆಡು, ಹಂದಿ, ನಾಯಿ, ಮತ್ತು ಕೋಳಿಗಳು, ಸು. 70 ಪಶುವೈದ್ಯಕೀಯ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ.

ನೈಸರ್ಗಿಕ ಸಂಪನ್ಮೂಲಗಳು: ಮುಖ್ಯವಾದ ಖನಿಜಗಳೆಂದರೆ, ಕಬ್ಬಿಣ, ಕ್ವಾರ್ಟ್ಜ್, ಫೆಲ್ಡ್‌ಸ್ಪಾರ್, ಅಭ್ರಕ, ಲೈಮ್‌ನೈಟ್, ಗ್ರಾನೈಟ್, ಆಭರಣಕಲ್ಲುಗಳು ಇತ್ಯಾದಿ.

ಪ್ರಮುಖ ಕೈಗಾರಿಕೆಗಳೆಂದರೆ, ಜವಳಿ ಉದ್ಯಮ, ರಾಸಾಯನಿಕ, ಎಂಜಿನಿಯರಿಂಗ್ ಮತ್ತು ಗುಡಿ ಕೈಗಾರಿಕೆ, ಕೊಪ್ಪಳ ತಾಲ್ಲೂಕು ಆಟಿಕೆ ತಯಾರಿಕೆ ಮತ್ತು ನೇಯ್ಗೆಯ ಅಚ್ಚುಗಳ ತಯಾರಿಕೆಗೆ ಪ್ರಸಿದ್ಧಿ.

ಜಿಲ್ಲೆಯಲ್ಲಿ 55 ಕಿಮೀ ಉದ್ದದ ಬ್ರಾಡ್‌ಗೇಜ್ ರೈಲು ಮಾರ್ಗ 8 ರೈಲ್ವೆ ನಿಲ್ದಾಣಗಳನ್ನು ಹೊಂದಿದ್ದು ಸಾರಿಗೆಗೆ ಸಹಕಾರಿಯಾಗಿದೆ. ಹಾಗೂ 73 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ 270 ಕಿಮೀ ರಾಜ್ಯ ಹೆದ್ದಾರಿ ಮತ್ತು 537 ಕಿಮೀ ಉದ್ದದ ಜಿಲ್ಲಾ ರಸ್ತೆಗಳು ರಾಜ್ಯದ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುವಲ್ಲಿ ಸಹಕಾರಿಯಾಗಿದೆ. ಜಿಲ್ಲೆಯಲ್ಲಿ ವಾಣಿಜ್ಯ, ಗ್ರಾಮೀಣ, ಸಹಕಾರ ಮತ್ತು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು ಕೃಷಿ ಮತ್ತು ವಾಣಿಜ್ಯ ಉದ್ಯಮದ ಬೆಳವಣಿಗೆ ಮತ್ತು ಅಭಿವೃದ್ಧಿಗಳಿಗೆ ಸಹಕಾರಿಯಾಗಿವೆ.

2001ರ ಜನಗಣತಿ ಪ್ರಕಾರ 11,96,089 ಜನಸಂಖ್ಯೆ ಹೊಂದಿದ್ದು ಅತಿ ಹೆಚ್ಚು ಜನಸಂಖ್ಯೆ ಯಲಬುರ್ಗಾ ತಾಲ್ಲೂಕಿನಲ್ಲಿ ಹಾಗೂ ಅತಿ ಕಡಿಮೆ ಜನಸಂಖ್ಯೆ ಗಂಗಾವತಿ ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಜಿಲ್ಲೆಯ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 216 ಆಗಿರುತ್ತದೆ.

ಪ್ರಮುಖ ನಗರ ಪಟ್ಟಣಗಳು: ಗಂಗಾವತಿ ತಾಲ್ಲೂಕಿನ ಕನಕಗಿರಿ, ಆನೆಗುಂದಿ, ಯಲಬುರ್ಗಾ ತಾಲ್ಲೂಕಿನ ಇಟಗಿ, ಕಿನ್ನಾಳ್ (ಕೊಪ್ಪಳ ತಾಲ್ಲೂಕಿನ) ಮುನಿರಾಬಾದ್, ಕೊಪ್ಪಳ ಕೋಟೆ, ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಕೊಪ್ಪಳ ಪ್ರಮುಖ ನಗರಗಳು.

ಕೊಪ್ಪಳ ಪಟ್ಟಣ : ಇದು ತಾಲ್ಲೂಕಿನ ಹಾಗೂ ಜಿಲ್ಲೆಯ ಮುಖ್ಯ ಪಟ್ಟಣ. ತುಂಗಭದ್ರಾ ನದಿಯ ಉಪನದಿಯಾದ ಹಿರೇಹಳ್ಳದ ಎಡದಡದಲ್ಲಿದೆ. ಇದು ಮುಖ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯಾಭ್ಯಾಸ ಕೇಂದ್ರ. ಇಲ್ಲಿ ಪಾಲಿಟೆಕ್ನಿಕ್ ಕಾಲೇಜಿವೆ. ಇಲ್ಲಿ ಕೈಮಗ್ಗದ

ಬಟ್ಟೆಗಳು ತಯಾರಾಗುತ್ತವೆ. ಚರ್ಮ, ಕಾಗದದ ಕೈಗಾರಿಕೆಗಳಿವೆ. 1949ರ ವರೆಗೆ ಇದು ನವಾಬ್ ಸಾಲಾರ್‌ಜಂಗನ ಜಹಗೀರಿಯಾಗಿತ್ತು. ಕೊಪ್ಪಳ ಪಟ್ಟಣ ಒಂದು ಗುಡ್ಡದ ಬುಡದಲ್ಲಿದೆ. ಇದರ ಪಶ್ಚಿಮಕ್ಕೆ ಬೆಟ್ಟಗಳ ಒಂದು ಸಾಲುಂಟು. ಜನಸಂಖ್ಯೆ 56,160. ಇಲ್ಲಿ ಮಳೆಮಲ್ಲೇಶ್ವರ ಗುಡಿ, ಮತ್ತು ಗವಿಸಿದ್ಧೇಶ್ವರ ಮಠಗಳಿವೆ. (ಎಚ್.ಸಿ.ಎಲ್.)

**ಕೊಯಮತ್ತೂರು:** ತಮಿಳುನಾಡು ರಾಜ್ಯದ ಒಂದು ಜಿಲ್ಲೆ ಮತ್ತು ಆ ಜಿಲ್ಲೆಯ ಮುಖ್ಯಪಟ್ಟಣ. ಕೊಯಮತ್ತೂರು ನಗರ ದಕ್ಷಿಣ ಭಾರತದ ಮುಖ್ಯ ಕೈಗಾರಿಕಾ ಮತ್ತು ವ್ಯಾಪಾರ ಕೇಂದ್ರಗಳಲ್ಲೊಂದು. ಜನಸಂಖ್ಯೆ 14,46,036.

ಉತ್ತರದ ನೀಲಗಿರಿ ಮತ್ತು ದಕ್ಷಿಣದ ಅಣ್ಣಾಮಲೈಗಳ ನಡುವೆ, ಪಾಲಕ್ಕಾಡ್ ಕಣಿವೆಯ ಮುಖದ ಬಳಿಯಲ್ಲಿ, ಹತ್ತಿ ಬೆಳೆಯುವ ಪ್ರದೇಶದ ಅಂಚಿನಲ್ಲಿ ನೆಲಸಿರುವ ಈ ನಗರ ಜವಳಿ ಕೈಗಾರಿಕೆಯ ಕೇಂದ್ರ. ಚರ್ಮ ಹದಮಾಡುವುದು, ಸಾಬೂನು ಮತ್ತು ವ್ಯವಸಾಯೋಪಕರಣಗಳ ತಯಾರಿಕೆ, ಕಾಫಿ ಸಂಸ್ಕರಣ ಮತ್ತು ಸಕ್ಕರೆ ಕೈಗಾರಿಕೆಗಳೂ ಇಲ್ಲಿವೆ. ಇದೊಂದು ಶಿಕ್ಷಣ ಕೇಂದ್ರ ಕೂಡ. ಇಲ್ಲಿ ಭಾರತೀಯರ್ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳಿವೆ. ಇದು ದಕ್ಷಿಣ ರೈಲ್ವೆಯ ಒಂದು ಮುಖ್ಯ ಕೂಡುನಿಲ್ದಾಣ. ಹಲವು ರಸ್ತೆಗಳು ಇಲ್ಲಿ ಕೂಡುತ್ತವೆ. ಕೊಯಮತ್ತೂರು ನಗರಕ್ಕೆ 5 ಕಿಮೀ ದೂರದಲ್ಲಿರುವ ಪೆರೂರಿನಲ್ಲಿ ಒಂದು ದೇವಾಲಯವಿದೆ. ಇದರ ಒಂದು ಭಾಗ ಚೋಳರ ಕಾಲದಲ್ಲಿ ನಿರ್ಮಿತವಾದದ್ದು.

ಕೊಯಮತ್ತೂರು ಜಿಲ್ಲೆಯ ವಿಸ್ತೀರ್ಣ 7469 ಚ.ಕಿಮೀ. ಇದರ ಪಶ್ಚಿಮ, ಉತ್ತರ ಮತ್ತು ದಕ್ಷಿಣದ ಭಾಗಗಳು ಬೆಟ್ಟಗಳಿಂದ ಕೂಡಿವೆ. ಪೂರ್ವಭಾಗದ ನೆಲ ಫಲವತ್ತಾದ್ದು. ಇದರ ಎತ್ತರ ಸಮುದ್ರಮಟ್ಟದಿಂದ 270 ಮೀ. ಮಳೆ ಕಡಿಮೆ. ವಾತಾವರಣದಲ್ಲಿ ಹೆಚ್ಚು ತೇವ ಇರುವುದಿಲ್ಲ. ಸೆಕೆ ಹೆಚ್ಚು. ಬೇಸಗೆ ತೀವ್ರವಾದಾಗ ಜಿಲ್ಲೆಯ ಸಣ್ಣ ನದಿಗಳು ಬತ್ತಿ ಹೋಗುತ್ತವೆ. ಪಶ್ಚಿಮ ಮತ್ತು ಉತ್ತರದ ಬೆಟ್ಟಗಳಲ್ಲಿ ಕಾಫಿ ಮತ್ತು ಚಹ ತೋಟಗಳಿವೆ. ಮೈದಾನ ಪ್ರದೇಶದಲ್ಲಿ ಬತ್ತ ಮತ್ತು ಹತ್ತಿ ಮುಖ್ಯ ಬೆಳೆಗಳು. ಹಿಂದೆ ಈ ಜಿಲ್ಲೆ ಈಗಿನ ಸೇಲಂ ಜಿಲ್ಲೆಯ ಭಾಗಗಳೊಡನೆ ಕೂಡಿ ಕೊಂಗುನಾಡು ಎಂದು ಪ್ರಸಿದ್ಧವಾಗಿತ್ತು. 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದಾಗ ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಮೈಸೂರು (ಇಂದಿನ ಕರ್ನಾಟಕ) ರಾಜ್ಯಕ್ಕೆ ವರ್ಗವಾಯಿತು. (ವಿ.ಜಿ.ಕೆ.)

**ಕೊರಕಲು:** ನದಿಯ ದೀರ್ಘಕಾಲದ ಹರಿಯುವಿಕೆಯಿಂದ ಉಂಟಾದ ಆಳವಾದ ಮತ್ತು ಲಂಬ ಬದಿಗಳಿರುವ ಕಮರಿ (ಕ್ಯಾನ್ಯನ್). ನದಿ ಹರಿಯುವಾಗ ಮಣ್ಣು, ಮರಳು, ಕಲ್ಲು ಬಂಡೆ ಎಲ್ಲವನ್ನೂ ಕೊಚ್ಚಿಕೊಂಡು ಮುಂದೆ ನುಗ್ಗುತ್ತದೆ. ಆಗ ನದಿಪಾತ್ರ ಸವೆದು ಪಕ್ಕದ ನೆಲಕ್ಕಿಂತ ಕೆಳಮಟ್ಟಕ್ಕೆ ತಗ್ಗುತ್ತದೆ. ಇದರಿಂದ ನದಿಯ ಇಕ್ಕೆಡೆಗಳಲ್ಲಿ ಎತ್ತರದ ಮತ್ತು ಕಡಿದಾದ ದಂಡೆಗಳು ಉಂಟಾಗುತ್ತವೆ. ಇಂಥ ದೃಶ್ಯಗಳು ಬೆಟ್ಟಗುಡ್ಡಗಳ ಮೂಲಕ ನದಿ ಹರಿಯುವಾಗ ಸಾಮಾನ್ಯ. ನದಿ ಪಾತ್ರ ಮೆದುಮಣ್ಣಿನ ಮೇಲಿದ್ದರೆ ಅಲ್ಲಿ ಸವೆತ ತೀವ್ರಗತಿಯಿಂದ ನಡೆದು ಗಟ್ಟಿ ಬಂಡೆ ಇರುವ ತಳ ಸಿಕ್ಕುವವರೆಗೂ ಅದು ತಗ್ಗುತ್ತಲೇ ಇರುವುದು. ಇದರಿಂದ ದಂಡೆಗಳಿಗೂ ಪಾತ್ರಕ್ಕೂ ಇರುವ ಅಂತರ ಏರುತ್ತದೆ. ಇದು ಯಾವುದೋ ಒಂದು ಮಿತಿಗೆ ಬಂದಾಗ ದಂಡೆಗಳು ಕುಸಿಯುತ್ತವೆ. ನದಿಯನ್ನು ಸೇರಲು ಬರುವ ಕಿರುತೊರೆಗಳು, ಕಾಲುವೆಗಳು, ಮಳೆಗಾಲದ ತೋಡುಗಳು ಮುಂತಾದುವು ದಂಡೆಗಳನ್ನು ಕೊರೆದು ಅವನ್ನು ಇನ್ನಷ್ಟು ಶಿಥಿಲಗೊಳಿಸುತ್ತವೆ. ಆದ್ದರಿಂದ ಒಂದು ನದಿಯ ಪ್ರವಹನದಲ್ಲಿ ಅದರ ಪಾತ್ರ ನಿರಂತರವಾಗಿ ತಗ್ಗುವ ಒಲವನ್ನು ತೋರಿಸುತ್ತಿರುವಾಗಲೇ ದಂಡೆಗಳಿಂದ ಕುಸಿದು ಬಿದ್ದ ಮತ್ತು ಮೇಲಿನಿಂದ ಹಾಗೂ ಬದಿಗಳಿಂದ ತೊಳೆದುಕೊಂಡು ಬಂದು ಸೇರಿದ ಮಣ್ಣು ಕಲ್ಲುಕಸ ಮಡ್ಡಿ ಈ ಪಾತ್ರವನ್ನು ಮೇಲೆತ್ತಲು ಪ್ರಯತ್ನಿಸುತ್ತವೆ. ವಿರುದ್ಧಬಲಗಳ ಅಥವಾ ಒಲವುಗಳ ಈ ನಿರಂತರ ಆಟ ನದಿ ಗಟ್ಟಿ ಬಂಡೆಗಲ್ಲುಗಳಿರುವ ಮರುಭೂಮಿ ಪ್ರದೇಶವನ್ನು ಅಡ್ಡಹಾಯುವಾಗ ಗಮನಾರ್ಹವಾಗಿ ಬದಲಾಗುತ್ತದೆ. ನದಿಯ ಕೊರೆತ ಎಂದಿನಂತೆ ಪಾತ್ರವನ್ನು ತಗ್ಗುಮಟ್ಟಕ್ಕೆ ಕೊಂಡೊಯ್ದಂತೆ ಅದರ ಇಕ್ಕೆಲಗಳಲ್ಲೂ ಕುಸಿಯದ ಮತ್ತು ಕಡಿದಾದ ಗಟ್ಟಿಕಲ್ಲಿನ ದಂಡೆಗಳು ನದಿಪಾತ್ರದಿಂದ ಎತ್ತರ ಎತ್ತರವಾಗಿ ಬೆಳೆಯುತ್ತ ಹೋಗುತ್ತವೆ. ಮರುಭೂಮಿ ವಲಯದಲ್ಲಿ ಮಳೆನೀರಾಗಲೀ ಕಿರು ತೊರೆಗಳಾಗಲಿ ಬದಿಗಳಿಂದ ಹರಿದುಬಂದು ದಂಡೆಗಳನ್ನು ಕೊರೆದು ಶಿಥಿಲಗೊಳಿಸುವ ಸಂಭಾವ್ಯತೆ ಇಲ್ಲ. ಇನ್ನು ಬಿಸಿಲು,ಗಾಳಿ, ಚಳಿ ಮುಂತಾದ ಬಾಹ್ಯಬಲಗಳಿಂದ ಆಗುವ ಪರಿಣಾಮ ಗಮನಾರ್ಹವಲ್ಲ. ಹೀಗಾಗಿ ಒಮ್ಮೆ ರೂಪುಗೊಳ್ಳಲು ತೊಡಗಿದ ಗಟ್ಟಿ ದಂಡೆಗಳು ಚಿತ್ರವಿಚಿತ್ರವಾಗಿ ಬೆಳೆದು ನದಿಯ ದೈನಂದಿನ ನಿರಂತರ ಚಟುವಟಿಕೆಯ ಸಮಗ್ರ ಪ್ರತೀಕವಾಗಿ ನಿಂತಿರುತ್ತವೆ. ದಂಡೆಗಳ ಮೇಲುಮಟ್ಟದಿಂದ ನೂರಾರು ಅಡಿಗಳ ಆಳದಲ್ಲಿ ನದಿ ಅಂಕುಡೊಂಕಾಗಿ ಹರಿಯುತ್ತ ತನ್ನ ಎಂದಿನ ಕಾರ್ಯವನ್ನು ಮುಂದುವರಿಸುತ್ತಿರುತ್ತದೆ. ಇಲ್ಲಿ ಎದುರಾಗುವ ದೃಶ್ಯ ಕಣಿವೆಗಳಿಗಿಂತ ಭಿನ್ನವಾದದ್ದು. ಇದರ ಕಾರಣವೂ ಅದೇ ರೀತಿ ಭಿನ್ನವಾದದ್ದು. ಆದ್ದರಿಂದ ಇದಕ್ಕೆ ಕೊರಕಲು ಎಂಬ ಬೇರೆ ಹೆಸರನ್ನು ನೀಡಲಾಗಿದೆ. ಪ್ರಪಂಚದ ಅತ್ಯಂತ ದೊಡ್ಡ ಕೊರಕಲು ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿದೆ. ಅಲ್ಲಿ ಕೊಲರಾಡೋ ನದಿ ಅರಿಜೋನಾ ಮರುಭೂಮಿಯನ್ನು ಕೊರೆದು ಅಡ್ಡಹಾಯುವ ಪ್ರದೇಶದಲ್ಲಿ ಇದು ರೂಪುಗೊಂಡಿದೆ. ಕೇವಲ ಕೆಲವೇ ಲಕ್ಷ ವರ್ಷಗಳ ಅವಧಿಯಲ್ಲಿ ಈ ನದೀ ಪಾತ್ರ 1877 ಮೀ ಗಳಷ್ಟು ಆಳಕ್ಕೆ ಇಳಿದುಹೋಗಿದೆ. 303 ಮೀ ಗಳಷ್ಟು ಎತ್ತರದ ಲಂಬ ಬದಿಗಳು ಇಲ್ಲಿ ತೀರ ಸಾಮಾನ್ಯ. ಕೊಲರಾಡೊದ ಮಹಾ ಕೊರಕಲು ಎಂದೇ ಇದನ್ನು ಕರೆಯುವುದುಂಟು. ಸು. 480 ಕಿಮೀಗಳ ಉದ್ದದ ಈ ಕೊರಕಲಿನಲ್ಲಿ ಭೂವಿಜ್ಞಾನಿಗಳು ಪೂರ್ವ ಕೇಂಬ್ರಿಯನ್ ಕಲ್ಪದಿಂದ ಇಯೊಸೀನ್ ಕಲ್ಪದವರೆಗಿನ, ಸು. 600 ದಶಲಕ್ಷ ವರ್ಷಗಳ ಕಾಲದ, ಅಮೆರಿಕನ್ ಭೂಚರಿತ್ರೆಯ ಅಧ್ಯಯನ ಕೈಗೊಂಡಿದ್ದಾರೆ. (ಎಂ.ವಿ.)

**ಕೊರಿಯ:** ಪರ್ಯಾಯ ದ್ವೀಪ: ಏಷ್ಯದ ಪೂರ್ವತೀರದ ಮಧ್ಯ ಭಾಗದಲ್ಲಿರುವ ಒಂದು ಪರ್ಯಾಯದ್ವೀಪ; ಉತ್ತರ ದಕ್ಷಿಣ ಕೊರಿಯ ದೇಶಗಳನ್ನೊಳಗೊಂಡಿದೆ. 840 ಕಿಮೀ ಉದ್ದ, 200–320 ಕಿಮೀ ಅಗಲವಾಗಿವೆ. ಮಂಚೂರಿಯ ಮತ್ತು ರಷ್ಯದಿಂದ ದಕ್ಷಿಣಕ್ಕೆ ಚಾಚಿಕೊಂಡಿರುವ ಈ ಪರ್ಯಾಯ ದ್ವೀಪಕ್ಕೆ ಉತ್ತರದಲ್ಲಿ ಯಾಲೂ, ಟೂಮನ್ ನದಿಗಳೂ ದಕ್ಷಿಣದಲ್ಲಿ ಕೊರಿಯ ಜಲಸಂಧಿಯೂ ಪಶ್ಚಿಮದಲ್ಲಿ ಹಳದಿ ಸಮುದ್ರವೂ ಪೂರ್ವದಲ್ಲಿ ಜಪಾನ್ ಸಮುದ್ರವೂ ಮೇರೆಗಳು. 8640 ಕಿಮೀ ಸಮುದ್ರ ತೀರದ ಉದ್ದಕ್ಕೂ ಒಟ್ಟು 3,500 ದ್ವೀಪಗಳಿವೆ. 2,19,020 ಚ.ಕಿಮೀ. ಜನಸಂಖ್ಯೆ ಸು. 69.6 ಮಿಲಿಯನ್.

ಸ್ಥಳೀಯ ಜನ ಕೊರಿಯವನ್ನು ಚೋಸಾನ್ ಎಂದು ಕರೆಯುತ್ತಾರೆ. ಪ್ರಾತಃಶಾಂತಿಯ ಪ್ರದೇಶ ಎಂದು ಇದರ ಅರ್ಥ. ಇದು ಯಿ ವಂಶದ ರಾಜರು ಬಳಸುತ್ತಿದ್ದ ಹೆಸರು (1392–1910). 1910 ರಲ್ಲಿ ಜಪಾನೀಯರು ಕೊರಿಯವನ್ನು ಆಕ್ರಮಿಸಿಕೊಂಡಾಗ ಇದನ್ನು ಚೋಸೆನ್ ಎಂದು ಕರೆದರು. ಕೊರಿಯ ಎಂಬುದು ಪಶ್ಚಿಮದವರಿಟ್ಟ ಹೆಸರು. 935–1392ರಲ್ಲಿ ಕೊರಿಯವನ್ನಾಳಿದ ಕೊರ್‍ಯೊ (ಕೊರ್‍ಯೆ) ರಾಜವಂಶದಿಂದ ಬಂದದ್ದು. ಉತ್ತುಂಗ ಪರ್ವತಗಳ ಹೊಳೆಯುವ ಹೊಳೆಗಳ ನಾಡು ಎಂಬುದು ಕೊರ್‍ಯೊದ ಅರ್ಥ.

ಎರಡನೆಯ ಮಹಾಯುದ್ಧಾನಂತರ ಕೊರಿಯದ ವಿಭಜನೆಯಾಯಿತು. 38ನೆಯ ಅಕ್ಷಾಂಶದ ಉತ್ತರ ದಕ್ಷಿಣ ಪ್ರದೇಶಗಳು ಪ್ರತ್ಯೇಕ ರಾಜ್ಯಗಳಾದುವು.

ಕೊರಿಯದ ಉತ್ತರ ಭಾಗ ಪರ್ವತಗಳಿಂದ ಕೂಡಿದೆ. ಅಲ್ಲಿ ಹರಿಯುವ ಟೂಮನ್ ಮತ್ತು ಯಾಲೂ ನದಿಗಳು ಉಗಮಿಸುವುದು ಪೆಕ್–ಸಾನ್‌ನಲ್ಲಿ. ಅಲ್ಲಿಂದ ದಕ್ಷಿಣಕ್ಕೆ ಪೂರ್ವತೀರದ ಹತ್ತಿರದಲ್ಲಿ ಹಬ್ಬಿರುವ ಒಂದು ಮುಖ್ಯ ಪರ್ವತ ಶ್ರೇಣಿಯ ಕವಲುಗಳು ಪಶ್ಚಿಮಕ್ಕೂ ದಕ್ಷಿಣಕ್ಕೂ ಹರಡಿವೆ. ಆದ್ದರಿಂದ ಇಡೀ ಕೊರಿಯ ಪರ್ವತಮಯ. ಪೂರ್ವತೀರ ಅಂಕುಡೊಂಕು. ಅದು ಹಲವಾರು ಅಳಿವೆಗಳಿಂದಲೂ ಸಮುದ್ರದ ಉಬ್ಬರವಿಳಿತಗಳಿಂದ ಸಂಭವಿಸಿದ ಮಟ್ಟಸ ನೆಲದಿಂದಲೂ ಕೂಡಿದೆ. ಇಲ್ಲಿ ಸಮುದ್ರದ ಭರತ 32–48 ಮೀ ಎತ್ತರಕ್ಕೆ ಏರುವುದುಂಟು. ಆದ್ದರಿಂದ ಇಲ್ಲಿ ಸಮುದ್ರಯಾನ ಕಠಿಣ. ಕೊರಿಯದ ನದಿಗಳು ಪಶ್ಚಿಮ ದಕ್ಷಿಣಾಭಿಮುಖವಾಗಿ ಹರಿಯುತ್ತವೆ. ಇವುಗಳಲ್ಲಿ ಕೆಲವು ನದಿಗಳ ಕೆಳಭಾಗಗಳಲ್ಲಿ ಸಣ್ಣ ದೋಣಿಗಳು ಸಂಚರಿಸಬಹುದು. ಆಗ್ನೇಯದಲ್ಲಿ ಹರಿಯುವ ನ್ಯಾಕ್ಟಾಂಗ್, ಮಧ್ಯಭಾಗದಲ್ಲಿ ಹರಿಯುವ ಹ್ಯಾನ್, ಉತ್ತರದಲ್ಲಿ ಹರಿಯುವ ಟೇಡಾಂಗ್ ಮತ್ತು ಯಾಲೂ ಮುಖ್ಯವಾದುವು. ಆಗ್ನೇಯ ತೀರದಲ್ಲಿ ಅಸಂಖ್ಯಾತ ದ್ವೀಪಗಳೂ ಪುಟ್ಟ ಪರ್ಯಾಯದ್ವೀಪಗಳೂ ತುಂಬಿವೆ.

ಕೊರಿಯದ ವಾಯುಗುಣ ಖಂಡಾಂತರ. ಬೇಸಗೆಯಲ್ಲಿ ಮಳೆ. ಚಳಿಗಾಲದಲ್ಲಿ ಶುಷ್ಕ ಹವೆ. ಕೊರಿಯದ ದಕ್ಷಿಣ ತೀರದಲ್ಲಿ 150 ಸೆಮೀ ಮತ್ತು ಉತ್ತರದ ಒಳನಾಡಿನಲ್ಲಿ 65 ಸೆಮೀ ಮಳೆಯಾಗುತ್ತದೆ. ಆಗಸ್ಟ್‌ನಲ್ಲಿ ಸರಾಸರಿ ಉಷ್ಣತೆ $-40^{0}$ಸೆ. ಗಿಂತ ಅಧಿಕ. ಚಳಿಗಾಲದಲ್ಲಿ ಉತ್ತರದಲ್ಲಿ ನೀರು ಹೆಪ್ಪುಕಟ್ಟುವ ಬಿಂದುವಿಗಿಂತ ಕಡಿಮೆ ಉಷ್ಣತೆ ಇರುತ್ತದೆ.

ಸು. 3,400ಕ್ಕೂ ಹೆಚ್ಚು ಬಗೆಯ ಸಸ್ಯಗಳು ಇಲ್ಲಿವೆ. ಲಾರ್ಚ್, ಸ್ಪ್ರೂಸ್, ಫಿರ್ ಮತ್ತು ಬರ್ಚ್ ಅತ್ಯಂತ ಉತ್ತರದಲ್ಲಿವೆ. ಯಾಲೂ ಕಣಿವೆಯಲ್ಲೂ ಮಧ್ಯ ಕೊರಿಯದಲ್ಲೂ ಮೇಪಲ್, ಬಾಸ್‌ವುಡ್, ಬರ್ಚ್ ಓಕ್, ಪಾಪ್ಲರ್, ಆಷ್,ಎಲ್ಮ್ ಮುಂತಾದವು ಬೆಳೆಯುತ್ತವೆ. ದಕ್ಷಿಣದ ತೀರದಲ್ಲಿ ಸದಾ ಹಸಿರಾದ ಓಕ್ ಮತ್ತು ಲಾರೆಲ್ ಜಾತಿಯ ಮರಗಳೂ ಕ್ಯಾಮಿಲಿಯ ಮತ್ತು ಬೊಂಬುಗಳೂ ಹೇರಳವಾಗಿ ಬೆಳೆಯುತ್ತವೆ. ಕೊರಿಯ ಮತ್ತು ಯುರೋಪಿನ ಪ್ರಾಣಿಗಳಲ್ಲಿ ಬಹಳಮಟ್ಟಿನ ಹೋಲಿಕೆಯಿದೆ. ಜೊತೆಗೆ ಇಲ್ಲಿ ಹುಲಿ, ಹಿಮಚಿರತೆ ಮತ್ತು ಜಿಂಕೆ ಇವೆ. ತೋಳ, ಮೇಕೆ, ಕಾಡುಹಂದಿಗಳೂ ಉಂಟು. ದೇಶೀಯ ಕಾಡುಕೋಳಿಗಳಿವೆ. ಉತ್ತರ ಚೀನ ಮತ್ತು ಯುರೋಪಿನಲ್ಲಿರುವಂತೆ ಇಲ್ಲೂ ನಾನಾ ಬಗೆಯ ಕಾಡುಕಪ್ಪೆಗಳೂ ಹಲ್ಲಿಗಳೂ ಹಾವುಗಳೂ ಉಂಟು. (ಬಿ.ಎಸ್.ಎಚ್.;ಪಿ.ಎಂ.ವಿ.ಎಸ್.)

**ಕೊಲಂಬಸ್, ಕ್ರಿಸ್ಟೋಫರ್:** 1451–1506: ಇಟಲಿ ದೇಶದ ನಾವಿಕ. ಅನ್ವೇಷಕ. ಜಿನೋವದಲ್ಲಿ ಜನಿಸಿದ. ಅಮೆರಿಕ ಖಂಡವನ್ನು ಕಂಡುಹಿಡಿದವನೆಂದು ಪ್ರಸಿದ್ಧನಾಗಿರುವ ಪರಿಶೋಧಕ ಸಾಹಸಿ. ತಾನು ಗುರುತಿಸಿದ ನೆಲ ಅಮೆರಿಕ ಎಂಬ ಪ್ರಜ್ಞೆ ಕೊಲಂಬಸ್‌ನಿಗೆ

ಇರಲಿಲ್ಲ ಎಂಬುದು ಆಶ್ಚರ್ಯದ ಸಂಗತಿ. ಅಂದಿಗೆ ಯುರೋಪಿಗೂ ಏಷ್ಯಾಕ್ಕೂ ಸಂಪರ್ಕವಿದ್ದುದು ಪೂರ್ವದ ಭೂಮಾರ್ಗಗಳಿಂದ ಮಾತ್ರ. ಸಾಂಬಾರ ಪದಾರ್ಥಗಳು, ಶ್ರೀಗಂಧ, ಏಲಕ್ಕಿ, ಮೊದಲಾದವುಗಳ ವ್ಯಾಪಾರವೆಲ್ಲ ಬಹುಪಾಲು ಈ ಮಾರ್ಗಗಳಿಂದಲೇ ನಡೆಯುತ್ತಿದ್ದುವಲ್ಲದೆ ಇವೆಲ್ಲ ಅರಬರ ಕೈಲಿದ್ದುವು. ಆದ್ದರಿಂದ ಪೂರ್ವರಾಷ್ಟ್ರಗಳಿಗೆ ಅದರಲ್ಲೂ ಭಾರತಕ್ಕೆ ಹೊಸದೊಂದು ಮಾರ್ಗವನ್ನು ಕಂಡುಹಿಡಿಯುವುದರ ಕಡೆ ಯುರೋಪಿನ ಸಾಹಸಿಗಳ ಗಮನ ಹರಿದಿತ್ತು. ಭೂಮಿ ಗುಂಡಾಗಿರುವುದರಿಂದ ಅಟ್ಲಾಂಟಿಕ್ ಸಾಗರದಲ್ಲಿ ನೇರವಾಗಿ ಪಶ್ಚಿಮಕ್ಕೆ ಪ್ರಯಾಣ ಮಾಡಿದಲ್ಲಿ ಏಷ್ಯಾದ ತೀರ ಪ್ರದೇಶವನ್ನು ಮುಟ್ಟಬಹುದೆಂಬ ನಂಬಿಕೆಯಿಂದ ಕೊಲಂಬಸ್ ಯಾನ ಮಾಡಿದ. ಆದ್ದರಿಂದಲೇ ತಾನು ಕಂಡ ದ್ವೀಪಗಳನ್ನು ಇಂಡೀಸ್ ಎಂದು ಅಲ್ಲಿನ ಜನರನ್ನು ಇಂಡಿಯನರೆಂದು ಕರೆದ. ತಾನು ನಿರ್ವಹಿಸಿದ ನಾಲ್ಕು ಯಾನಗಳಲ್ಲಿ ಈತ ವೆಸ್ಟ್ ಇಂಡೀಸ್ ಗುಂಪಿನ ಹಲವಾರು ದ್ವೀಪಗಳನ್ನು ಕಂಡುಹಿಡಿದನಲ್ಲದೆ, ಟ್ರಿನಿಡಾಡ್ ಮತ್ತು ಮಧ್ಯ ಅಮೆರಿಕಗಳಲ್ಲಿ ಕಾಲಿಟ್ಟಿದ್ದ.

ಕೊಲಂಬಸ್ ಸ್ಪೇನಿನ ವಲ್ಲಾಡೋಲಿಡ್ ಎಂಬಲ್ಲಿ 1506, ಮಾರ್ಚ್ 30 ರಂದು ನಿಧನನಾದ. ಅವನ ಮೂಳೆಗಳನ್ನು ಸೆವಿಲ್, ಸ್ಯಾಂಟೊಡೋಮಿಂಗೊ ಮತ್ತು ಹವಾನ ನಗರಗಳಿಗೆ ಕೊಂಡೊಯ್ದರು. ತರುವಾಯ 1902ರಲ್ಲಿ ಸೆವಿಲ್‌ನಲ್ಲಿ ಸಮಾಧಿ ಮಂದಿರವನ್ನು ನಿರ್ಮಿಸಿ ಅಲ್ಲಿ ಅವನ ಮೂಳೆಗಳನ್ನು ಹೂತಿಟ್ಟರು. (ಎಂ.ಕೆ.ಬಿ.)

**ಕೊಲಂಬಿಯ:** ದಕ್ಷಿಣ ಅಮೆರಿಕದ ವಾಯವ್ಯದಲ್ಲಿರುವ ಒಂದು ಗಣರಾಜ್ಯ. ಉತ್ತರದಲ್ಲಿ ಕೆರೆಬಿಯನ್ ಸಮುದ್ರ ಮತ್ತು ವೆನಿಜುವೇಲ, ಪೂರ್ವದಲ್ಲಿ ವೆನಿಜುವೇಲ ಮತ್ತು ಬ್ರೆಜಿಲ್, ದಕ್ಷಿಣದಲ್ಲಿ ಬ್ರೆಜಿಲ್, ಪೆರು ಮತ್ತು ಈಕ್ವೆಡಾರ್, ಪಶ್ಚಿಮದಲ್ಲಿ ಈಕ್ವೆಡಾರ್, ಪೆಸಿಫಿಕ್ ಸಾಗರ, ಪನಾಮ ಮತ್ತು ಕೆರೆಬಿಯನ್ ಸಮುದ್ರ ಇವೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ತೀರಗಳು ಇರುವಂಥ ದೇಶ ದಕ್ಷಿಣ ಅಮೆರಿಕ ಖಂಡದಲ್ಲಿ ಇದೊಂದೇ. ಉ.ಅ. $12^0 30'$ – ದ.ಅ. $5^0$ ಹಾಗೂ ಪ.ರೇ. $66^0 50'$ – $79^0$ಗಳ ನಡುವೆ ಇದೆ. ಇದನ್ನು ದಕ್ಷಿಣ ಅಮೆರಿಕದ ಹೆಬ್ಬಾಗಿಲು ಎಂದು ಕರೆಯಲಾಗಿದೆ. ಈ ರಾಜ್ಯದ ಗರಿಷ್ಠ ಉದ್ದ ಉತ್ತರದಿಂದ ದಕ್ಷಿಣಕ್ಕೆ 1740 ಕಿಮೀ. ವಿಸ್ತೀರ್ಣ 11,41,568 ಕಿಮೀ. ಜನಸಂಖ್ಯೆ 42,954,300 (2001). ರಾಜಧಾನಿ ಬಗೋಟ.

ಮೇಲ್ಮೈಲಕ್ಷಣಗಳು: ಆಂಡೀಸ್ ಪರ್ವತಗಳ ಉತ್ತರದ ತುದಿ ಇರುವುದು ಕೊಲಂಬಿಯದಲ್ಲಿ. ಅಲ್ಲಿ ಇವು ಮೂರು ಮುಖ್ಯ ಕವಲುಗಳಾಗಿ ಒಡೆಯುತ್ತವೆ. ಇವುಗಳ ಮಧ್ಯದ ಕವಲು ಅತ್ಯುನ್ನತವಾದ್ದು. ಇದಕ್ಕೂ ಪಶ್ಚಿಮದ ಕವಲಿಗೂ ನಡುವೆ ಕೌಕ ನದಿ ಕಣಿವೆ ಇದೆ.ಮಧ್ಯದ ಮತ್ತು ಪೂರ್ವದ ಕವಲುಗಳ ನಡುವೆ ಮ್ಯಾಗ್ಡಲೀನ ನದಿ ಕಣಿವೆ ಇದೆ. 5405 ಮೀ ಎತ್ತರವಾಗಿರುವ ಹಲವು ಶಿಖರಗಳು ಮಧ್ಯದ ಶ್ರೇಣಿಯಲ್ಲುಂಟು ಇವುಗಳ ಪೈಕಿ ಟಾಲಿಮ ರೊಯಿಝ್ (5533 ಮೀ) ನೆವಾಡೊ ಡೆಲ್ ಹುಯಿಯ (5615 ಮೀ) ಮತ್ತು ನೆವಾಡೊ ಡೆಲ್ ರೂಯೀಝ್ (5507 ಮೀ) ಅಗ್ನಿಪರ್ವತಗಳು. ಪಶ್ಚಿಮದ ಪರ್ವತಶ್ರೇಣಿ ಪೆಸಿಫಿಕ್ ತೀರಕ್ಕೆ ಸಮಾನಾಂತರವಾಗಿ ಸಾಗಿ, ಮೂರು ತಗ್ಗಿನ ಕವಲುಗಳಾಗಿ ಒಡೆದು, ಕೆರೆಬಿಯನ್ ಕಡಲತೀರದ ಬಯಲಿನಲ್ಲಿ ಕಣ್ಮರೆಯಾಗುತ್ತದೆ. ಈ ಶ್ರೇಣಿ ದಟ್ಟವಾದ ಕಾಡುಗಳಿಂದ ಕೂಡಿದ್ದು ಪೆಸಿಫಿಕ್ ಸಾಗರದ ಕಡೆಯ ಮಗ್ಗುಲು ತುಂಬಾ ಕಡಿದು, ತೇವಪೂರಿತ. ಇದರ ಅತ್ಯುನ್ನತ ಶಿಖರ ನೆವಾಡೋ ಡೆ ಕಂಬಾಲ್ (4817 ಮೀ). ಪೂರ್ವದ ಶ್ರೇಣಿ ಉತ್ತರ ಮತ್ತು ಪಶ್ಚಿಮ ಕೊಲಂಬಿಯದ ಪರ್ವತ ಜಿಲ್ಲೆಯನ್ನು ಒಳನಾಡಿನ ತಗ್ಗಿನ ಬಯಲಿನಿಂದ ಬೇರ್ಪಡಿಸುತ್ತದೆ. ಈ ಮೈದಾನ ಕೊಲಂಬಿಯದ ಅರ್ಧಕ್ಕಿಂತ ಹೆಚ್ಚು ವಿಸ್ತಾರವಾದದ್ದು. ಇದರ ದಕ್ಷಿಣಕ್ಕಿರುವ ಪ್ರದೇಶ ದುರ್ಗಮವಾದ ಕಾಡುಗಳಿಂದ ಆವೃತವಾಗಿದೆ. ಇದರಲ್ಲಿ ಎಷ್ಟೋ ಭಾಗವನ್ನು ಇದುವರೆಗೂ ಪರಿಶೋಧಿಸಿಲ್ಲ.

ಕೊಲಂಬಿಯವನ್ನು ಸ್ಥೂಲವಾಗಿ ನಾಲ್ಕು ಭೌಗೋಳಿಕ ಪ್ರದೇಶಗಳಾಗಿ ವಿಂಗಡಿಸಲಾಗಿದೆ. 1. ಕೆರೆಬಿಯನ್ ಕರಾವಳಿಯ ಪ್ರದೇಶ ತಗ್ಗಿನ ಬೆಟ್ಟಗಳಿಂದಲೂ ನದಿ ಮುಖಜಗಳಿಂದಲೂ ಕೂಡಿ ಈಗಲೂ ಹಿಂದುಳಿದಿದೆ. ಈ ಪ್ರದೇಶದ ನದಿಗಳು ವಿಸ್ತಾರವಾಗಿ ಹರಡಿ ಸುತ್ತಣ ನೆಲವನ್ನೆಲ್ಲ ಜವುಗಾಗಿ ಪರಿವರ್ತಿಸಿವೆ. ಈ ವಿಭಾಗದಲ್ಲಿ ಹೆಚ್ಚು ಉಷ್ಣತೆಯ ವಾಯುಗುಣವಿದೆ. ಮಳೆ ಕಡಿಮೆ. ಪೂರ್ವಕ್ಕೆ ಹೋದಂತೆಲ್ಲ ಶುಷ್ಕತೆ ಅಧಿಕವಾಗುತ್ತದೆ. ಈ ಪ್ರದೇಶದ ವಾರ್ಷಿಕ ಮಳೆಯ ಅಂತರ 101 ಸೆಂಮೀ – 25 ಸೆಂಮೀ. ಒಳನಾಡಿಗೆ ಸಾಗಿದಂತೆ ಮಳೆ ಹೆಚ್ಚುತ್ತದೆ. 2. ಪಶ್ಚಿಮ ಪರ್ವತ ಶ್ರೇಣಿಗೂ ಪೆಸಿಫಿಕ್ ಸಾಗರಕ್ಕೂ ನಡುವೆ ಇರುವ ಪ್ರದೇಶ ಬಲು ಕಿರಿದು. ಇಲ್ಲಿ 508 ಸೆಂಮೀ ಗೂ ಹೆಚ್ಚು ಮಳೆಯಾಗುತ್ತದೆ. ನಿತ್ಯ ಹಸಿರುಕಾಡುಗಳಿಂದ ತುಂಬಿದ ಈ ಪ್ರದೇಶದ ನೆಲ ಸಾಗುವಳಿಗೆ ಹೆಚ್ಚು ಅನುಕೂಲವಾಗಿಲ್ಲ. 3. ಪೂರ್ವದ ಮೈದಾನ ಇಡೀ ಕೊಲಂಬಿಯದ ಮೂರನೆಯ ಎರಡು ಭಾಗದಷ್ಟಿದೆಯಾದರೂ ದೇಶದ ಜನಸಂಖ್ಯೆಯ 2% ಜನ ಮಾತ್ರ ಇಲ್ಲಿ ವಾಸಿಸುತ್ತಾರೆ. ಇದು ಪರ್ವತಗಳಿಂದ ಪ್ರತ್ಯೇಕಗೊಂಡಿರುವುದರಿಂದ ಇದರೊಂದಿಗೆ ಜನಸಂಪರ್ಕ ಏರ್ಪಡಲಿಲ್ಲ. ಮಲೇರಿಯ ವ್ಯಾಪಕವಾಗಿತ್ತು. 4.ಆಂಡಿಯನ್ ಪ್ರದೇಶ ಕೊಲಂಬಿಯದಲ್ಲಿ ನಿಸರ್ಗ ಸಂಪದ್ಯುಕ್ತವಾಗಿದೆ. ಇದರಲ್ಲಿ ಹಲವು ಉಪವಿಭಾಗಗಳಿವೆ.




ನದಿಗಳು : ಕೊಲಂಬಿಯದ ನದಿಗಳು ಪೆಸಿಫಿಕ್ ಸಾಗರವನ್ನು ಸೇರುವವು ಒಂದು ವರ್ಗ. ಕೆರೆಬಿಯನ್ ಸಮುದ್ರ ಸೇರುವವು ಇನ್ನೊಂದು ವರ್ಗ. ಉಳಿದವು ಓರಿನೋಕೊ ಮತ್ತು ಅಮೆಜ಼ಾನ್ ನದಿಗಳನ್ನು ಸೇರಿ ಅಟ್ಲಾಂಟಿಕ್ ಸಾಗರವನ್ನು ತಲುಪುತ್ತವೆ. ಮ್ಯಾಗ್ಡಲೀನವೂ ಅದರ ಉಪನದಿಯಾದ ಕಾಕವು ಕೊಲಂಬಿಯದ ಅತ್ಯಂತ ಮುಖ್ಯ ನದಿಗಳು. ಮ್ಯಾಗ್ಡಲೀನ ನದಿ ಬಾರಾಂಕಿಯದ ಬಳಿ ಕೆರೆಬಿಯನ್ ಸಮುದ್ರವನ್ನು ಸೇರುತ್ತದೆ. ಇದರ ಉದ್ದ 1540 ಕಿಮೀ. ಇದು ಹೆಚ್ಚು ಕಡಿಮೆ ಇಡೀ ದೇಶವನ್ನು ಹಾಯ್ದು ಹೋಗುತ್ತದೆ. ಇದರ ನೀರು ಅಲ್ಲಲ್ಲಿ ಹರಡಿ ಹೋಗುತ್ತದೆ. ನದಿಪಾತ್ರ ಸ್ಥಿರವಾಗಿಲ್ಲ. ಇದು ಸಮುದ್ರ ತಲುಪಲು 320 ಕಿಮೀ ಇರುವಾಗ ಕಾಕನದಿ ಇದನ್ನು ಕೂಡಿಕೊಳ್ಳುತ್ತದೆ. ಕಾಕನದಿ ಎರಡು ಕಡೆಗಳಲ್ಲಿ ನೌಕಾಯಾನಕ್ಕೆ ಅನುಕೂಲಕರ. ಕಾಕನದಿಯ ಉಪನದಿಗಳಲ್ಲಿ ರೀಯೂನೆಚಿ ಮುಖ್ಯವಾದದ್ದು. ರೀಯೂ ಅಟ್ರಾಟೊ ಮತ್ತು ರೀಯೂ ಸಿನು ಉತ್ತರ ತೀರಕ್ಕೆ ಹರಿಯುತ್ತವೆ. ಇವುಗಳ ಮೇಲೆ ಸಣ್ಣ ಜಹಜುಗಳು ಸಂಚರಿಸಬಹುದು. ಪೆಸಿಫಿಕ್ ಸಾಗರ ಸೇರುವ ನದಿಗಳು ಅಸಂಖ್ಯಾತ. ಅವು ಬಲು ಸಣ್ಣವು. ಅವುಗಳಲ್ಲಿ ಜಲಪಾತಗಳು ಹೆಚ್ಚು. ಪೂರ್ವ ಮೈದಾನದ ನದಿಗಳು ಓರಿನೋಕೊ ಮತ್ತು ಅಮೆಜ಼ಾನ್ ನದಿಗಳನ್ನು ಸೇರುತ್ತವೆ. ಇವುಗಳಲ್ಲಿ ಕೆಲವು ನೌಕಾ ಸಂಚಾರಕ್ಕೆ ಅನುಕೂಲಕರ.

ವಾಯುಗುಣ : ಕೊಲಂಬಿಯ ದೇಶ ಬಹುತೇಕ ಉತ್ತರ ಉಷ್ಣವಲಯದಲ್ಲಿದೆ. ಆದರೆ ಇಲ್ಲಿಯ ನೆಲದ ಬಹುಭಾಗ ಸಮುದ್ರಮಟ್ಟಕ್ಕಿಂತ ಬಲು ಎತ್ತರದಲ್ಲಿರುವುದರಿಂದಲೂ ಮಾರುತಗಳ ಪ್ರಭಾವದಿಂದಲೂ ಉಷ್ಣವಲಯದ ಬಿರುಸು ಕಡಿಮೆ. ತಗ್ಗಿನ ಪ್ರದೇಶಗಳಲ್ಲಿ–ಮುಖ್ಯವಾಗಿ ಕರಾವಳಿಗಳಲ್ಲಿ ಮತ್ತು ದೊಡ್ಡ ನದಿಗಳ ಬಯಲುಗಳಲ್ಲಿ–ಉಷ್ಣತೆ ಹೆಚ್ಚು.

ಈ ಪ್ರದೇಶಗಳು ತೇವತುಂಬಿದ ವಾತಾವರಣದಿಂದಲೂ ದಟ್ಟವಾದ ಕಾಡುಗಳಿಂದಲೂ ಕೂಡಿದ್ದು, ಅನಾರೋಗ್ಯಕರವಾಗಿದೆ. ಉಷ್ಣವಲಯದ ಪ್ರದೇಶದಿಂದ ಉತ್ತರಕ್ಕೆ ಪರ್ವತಗಳ ಪ್ರದೇಶಗಳಲ್ಲಿ ಕಡಿಮೆ ಉಷ್ಣತೆಯ ವಾಯುಗುಣವಿದೆ. ತಂಪಿನಿಂದ ಅತ್ಯಂತ ಶೀತದವರೆಗೆ ವಿವಿಧ ವಾಯುಗುಣಗಳು ಇಲ್ಲುಂಟು. 450–1801 ಮೀ ಎತ್ತರದ ಪ್ರದೇಶದಲ್ಲಿ ಉಪೋಷ್ಣವಲಯದ ವಾಯುಗುಣವಿದೆ. ಇಲ್ಲಿಯದು ಫಲವತ್ತಾದ ನೆಲ. 1801–3003 ಮೀ ಎತ್ತರದ ಪ್ರದೇಶದಲ್ಲಿ ಸಮಶೀತೋಷ್ಣವಾಯುಗುಣವಿದೆ. 3003–4505 ಮೀ ಎತ್ತರದಲ್ಲಿ ಉಷ್ಣತೆ ಇನ್ನೂ ಕಡಿಮೆ. ಇದಕ್ಕೂ ಎತ್ತರದ ನೆಲ ಹಿಮದಿಂದ ಆವೃತವಾಗಿರುತ್ತದೆ. ಕೊಲಂಬಿಯದ ಮುಖ್ಯ ನಗರಗಳು ಬಹುತೇಕ 900–2700 ಮೀ ಎತ್ತರದ ಪ್ರದೇಶದಲ್ಲಿವೆ.

ವರ್ಷವನ್ನು ಸ್ಥೂಲವಾಗಿ ಚಳಿಗಾಲ ಮತ್ತು ಬೇಸಗೆ ಕಾಲ ಎಂದು ವಿಂಗಡಿಸಲಾಗಿದೆ. ಕೆಲವು ಕಡೆಗಳಲ್ಲಿ ವರ್ಷಕ್ಕೆ ಎರಡು ಮಳೆಗಾಲಗಳೂ ಎರಡು ಒಣಹವೆ ಕಾಲಗಳೂ ಇರುವುದುಂಟು. ಇಡೀ ಕೊಲಂಬಿಯದಲ್ಲಿ–ಬಹುಶಃ ಇಡೀ ದಕ್ಷಿಣ ಅಮೆರಿಕದಲ್ಲಿ–ಅತ್ಯಂತ ಹೆಚ್ಚಿನ ಮಳೆ ಬೀಳುವುದು ಪೆಸಿಫಿಕ್ ಸಾಗರ ತೀರದಲ್ಲಿ ಸ್ಯಾನ್ ವಾನ್–ಅಟ್ರಾಟೊ ಬಳಿ. ಅಲ್ಲಿ ವರ್ಷವೆಲ್ಲ ಮಳೆ ಸುರಿಯುತ್ತಿರುತ್ತದೆ. ವಾರ್ಷಿಕ ಮಳೆಯ ಪರಿಮಾಣ 1016 ಸೆಂಮೀ ಗೂ ಮಿಗಿಲು. ಆಂಡಗೋಯದಲ್ಲಿ 1054 ಸೆಂಮೀ ಮಳೆಯಾಗುತ್ತದೆ.

ಸಸ್ಯವರ್ಗ : ಕೊಲಂಬಿಯದ ಸಸ್ಯಸಂಪತ್ತು ಸಮೃದ್ಧವೂ ವೈವಿಧ್ಯಮಯವೂ ಆಗಿದೆ. ದೇಶದ ಹೆಚ್ಚು ಭಾಗ ಅರಣ್ಯಾವೃತ. ವೆನಿಲ, ಕ್ವಿನೈನ್, ಇಪಿಕ್ಯಾಕ್, ಸಾರ್ಸಪರಿಲ, ಗೋಂದುಮರ, ಗುಗ್ಗುಲ, ರಬ್ಬರ್, ಚರ್ಮ ಹದ ಮಾಡಲು ಉಪಯುಕ್ತವಾದ ಮರಗಳು, ಬಣ್ಣಗಳ ಮರಗಳು, ಟಾಗ್ವ–ಮುಂತಾದ ಹಲವು ಉಪಯುಕ್ತ ಮರಗಳು ಬೆಳೆಯುತ್ತವೆ. ಅರಣ್ಯೋತ್ಪನ್ನಗಳನ್ನು ಇದುವರೆಗೂ ಹೆಚ್ಚು ಲಾಭಪ್ರದವಾಗಿ ಬಳಸಿಕೊಳ್ಳುತ್ತಿಲ್ಲ. 3000 ಮೀ ಎತ್ತರದವರೆಗೂ ತಾಳೆ ಜಾತಿಯ ಮರಗಳು ವಿಶೇಷ. ಕೆರೆಬಿಯನ್ ತೀರದಲ್ಲಿ ಕೋಕೊ ಮರಗಳಿವೆ. ಕಾಡುಗಳಲ್ಲಿ ಆರ್ಕಿಡ್‌ಗಳು ಧಾರಾಳವಾಗಿ ಬೆಳೆಯುತ್ತವೆ. ಅಮೆರಿಕನ್ ಬಿದಿರು–ಗ್ವಾಡ್ವ–ಇನ್ನೊಂದು ಮುಖ್ಯ ಸಸ್ಯ. ಕೊಲಂಬಿಯದ ಸಸ್ಯಗಳು ನೆಲದ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತವೆ. 450–135 ಮೀ ಎತ್ತರದಲ್ಲಿರುವವು ಉಪೋಷ್ಣವಲಯದ ಕಾಡುಗಳು. 1801 ಮೀ ಎತ್ತರದಿಂದ ಸಮಶೀತೋಷ್ಣವಲಯದ ಕಾಡುಗಳು ಪ್ರಾರಂಭವಾಗುತ್ತವೆ. ಈ ನೆಲ ಬೇಸಾಯಕ್ಕೆ ಅತ್ಯುತ್ತಮ. ಇಲ್ಲಿ ಧಾನ್ಯಗಳು, ತರಕಾರಿಗಳು, ಹಣ್ಣುಗಳು ಬೆಳೆಯುತ್ತವೆ. 3000 ಮೀ ನಿಂದ ಮೇಲಕ್ಕೆ ಇರುವ ಎತ್ತರದ ಬೋಳುನೆಲದ ಮೇಲೆ ಕುಬ್ಜ ಸಸ್ಯಗಳುಂಟು. ಇನ್ನೂ ಎತ್ತರದ ಪ್ರದೇಶದಲ್ಲಿ ಆಲ್ಪೈನ್ ಸಸ್ಯಗಳು ಮಾತ್ರ ಕಂಡುಬರುತ್ತವೆ. ಕೊಲಂಬಿಯದ ಸಾಗುವಾನಿ ವೈವಿಧ್ಯಪೂರಿತವಾದದ್ದು. ಮಹಾಗನಿ, ಲಿಗ್ನಂ ವಿಟೇ, ಬ್ರೆಜಿಲ್‌ವುಡ್, ವಾಲ್ನಟ್, ಸಿಡಾರ್, ಓಕ್ ಮುಂತಾದ ಹಲವು ಜಾತಿಗಳು ಇಲ್ಲುಂಟು. ಆಸ್ಟ್ರೇಲಿಯದಿಂದ ತಂದು ಬೆಳೆಸಿದ ನೀಲಗಿರಿ ತೈಲದ ಮರ ಇನ್ನೊಂದು ಉಪಯುಕ್ತ ವೃಕ್ಷ. ಕಾಫಿ ಗಿಡಗಳಿಗೆ ನೆರಳು ಒದಗಿಸುವ ಸಲುವಾಗಿ ಇನ್ಗ, ಆಲ್ಬಿಜ್ಜ ಮುಂತಾದ ಮರಗಳನ್ನೂ ನೆಟ್ಟು ಬೆಳೆಸಲಾಗಿದೆ.

ಪ್ರಾಣಿಗಳು : ಕೊಲಂಬಿಯದಲ್ಲಿ ಉಷ್ಣವಲಯದ ಪ್ರಾಣಿಗಳಿಂದ ಶೀತವಲಯದವುಗಳವರೆಗೆ ನಾನಾ ತೆರನಾದ ಪ್ರಾಣಿಗಳಿವೆ. ಸ್ಲಾತ್, ಒಪೋಸಂ, ಕೋತಿಗಳು, ಟೇಪರ್, ಪೆಕರಿ, ಜಿಂಕೆ ಮೊಲ ಮುಂತಾದವು ಉಷ್ಣವಲಯದ ಕಾಡುಗಳಲ್ಲಿವೆ. ಇವು ಸಸ್ಯಾಹಾರಿಗಳು. ಮಾಂಸಾಹಾರಿಗಳ ಪೈಕಿ ಮುಖ್ಯವಾದವು ಪ್ಯೂಮ, ಜಾಗ್ವರ್, ನರಿ ಮತ್ತು ರ್‍ಯಾಕೂನ್. ಇಲ್ಲಿ 1,500ಕ್ಕೂ ಹೆಚ್ಚಿನ ಜಾತಿ–ಉಪಜಾತಿಗಳ ಹಕ್ಕಿಗಳುಂಟು. ಉರಗಜಾತಿಯ ಪ್ರಾಣಿಗಳೂ ಹಲವಾರು ಇವೆ. ಹಲ್ಲಿ, ಹಾವು, ಮೊಸಳೆಗಳು ಹಲವು ತೆರ. ಉಭಯಜೀವಿಗಳ ಪೈಕಿ ಕೇಸಿಲಿಯನ್, ಬೆಂಕಿಮೊಸಳೆ, ಕಪ್ಪೆಗಳು ಮುಖ್ಯವಾದವು. ಹಲವು ಬಗೆಯ ಮೀನುಗಳೂ ಉಂಟು. ಇಲ್ಲಿರುವ ಬಗೆಬಗೆಯ ಕೀಟಗಳಲ್ಲಿ ಮುಖ್ಯವಾದವೆಂದರೆ ಮಲೇರಿಯ ಮತ್ತು ಹಳದಿ ಜ್ವರ ತರುವ ಸೊಳ್ಳೆಗಳು.

ಕೃಷಿ : ಕೊಲಂಬಿಯದ ಹೆಚ್ಚು ಜನ ಬೇಸಾಯ ಮತ್ತು ಪಶುಪಾಲನೆಗಳನ್ನೇ ಅವಲಂಬಿಸಿದ್ದಾರೆ. 900–3000 ಮೀ ಎತ್ತರದ ನೆಲ ವ್ಯವಸಾಯ ಪ್ರದೇಶ. ಸಾಗುವಳಿಯಾಗಬಹುದಾದ ನೆಲದಲ್ಲಿ ಎಷ್ಟೋ ಇನ್ನೂ ಕೃಷಿಗೆ ಒಳಪಟ್ಟಿಲ್ಲ. 900–1800 ಮೀ ಎತ್ತರದ ಸಮಶೀತೋಷ್ಣ ವಾಯುಗುಣದ ನೆಲದಲ್ಲಿ ಕಾಫಿ ಬೆಳೆಯುತ್ತದೆ. ಇದೇ ಈ ದೇಶದ ಮುಖ್ಯ ಬೆಳೆ. ಕೊಲಂಬಿಯದ ಕಾಫಿ ಸೌಮ್ಯ ಗುಣವುಳ್ಳದ್ದು. ಇದನ್ನು ಬ್ರೆಜಿಲಿನ ಕಾಫಿಯೊಂದಿಗೂ ರೊಬಸ್ಟದೊಂದಿಗೂ ಬೆರೆಸುತ್ತಾರೆ. ಕೊಲಂಬಿಯದ ನಿರ್ಯಾತದಲ್ಲಿ ಮುಕ್ಕಾಲು ಭಾಗ ಕಾಫಿ. ರಬ್ಬರ್, ತೆಂಗು, ಹೊಗೆಸೊಪ್ಪು, ಬಾಳೆ, ಕಬ್ಬು, ಮೆಕ್ಕೆಜೋಳ, ಹತ್ತಿ, ಕೋಕೋ, ಬತ್ತ–ಇವು ಉಷ್ಣವಲಯದ ಬೆಳೆಗಳು. ಉಪೋಷ್ಣ ವಾಯುಗುಣದಲ್ಲಿ ಕಾಫಿಯಲ್ಲದೆ ಬಾಳೆ, ಪೈನಾಪಲ್, ಮಾವು, ಪರಂಗಿ ಕಿತ್ತಳೆ ಮುಂತಾದವು ಬೆಳೆಯುತ್ತವೆ. ಸಮಶೀತೋಷ್ಣ ವಾಯುಗುಣ ಬೇಸಾಯಕ್ಕೆ ಅತ್ಯುತ್ತಮವಾದದ್ದು. ಇಲ್ಲಿ ಗೋದಿ, ಬಾರ್ಲಿ, ಆಲೂಗೆಡ್ಡೆ, ಓಟ್ಸ್, ಕಾಳು, ಹಣ್ಣು ತರಕಾರಿ ಬೆಳೆಯುತ್ತಾರೆ. ಪಶುಪಾಲನೆಯೂ ವ್ಯಾಪಕವಾಗಿದೆ.

ಗಣಿಗಾರಿಕೆ : ಹಿಂದೆ ಚಿನ್ನ ಕೊಲಂಬಿಯದ ಮುಖ್ಯ ಖನಿಜವೆಂದು ಪರಿಗಣಿತವಾಗಿತ್ತು. ಈಗ ಪೆಟ್ರೋಲಿಯಂ ಆದ್ಯತೆ ಗಳಿಸಿದೆ. ಬೆಳ್ಳಿ ಇಲ್ಲಿ ಸಿಗುವ ಇನ್ನೊಂದು ಖನಿಜ. ಈಗ ತಿಳಿದಿರುವ ಮಟ್ಟಿಗೆ ಕೊಲಂಬಿಯವೇ ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ಲಾಟಿನಂ ನಿಕ್ಷೇಪ ಇರುವ ದೇಶ. ಪಚ್ಚೆ ಇನ್ನೊಂದು ಮುಖ್ಯ ಖನಿಜ. ಇದರಲ್ಲಿ ಕೊಲಂಬಿಯಕ್ಕೆ ಪ್ರಪಂಚದಲ್ಲಿ ಅಗ್ರಸ್ಥಾನವಿದೆ. ಮೆಕ್ಸಿಕೋ, ಬ್ರೆಜಿಲ್‌ಗಳಲ್ಲಿ ಇರುವುದಕ್ಕಿಂತಲೂ ಅಧಿಕವಾಗಿ ಕಲ್ಲಿದ್ದಲ ನಿಕ್ಷೇಪ ಕೊಲಂಬಿಯದಲ್ಲಿದೆ. ಕಬ್ಬಿಣದ ಅದಿರನ್ನೂ ಅಧಿಕವಾಗಿ ತೆಗೆಯಲಾಗುತ್ತಿದೆ.

ಕೈಗಾರಿಕೆಗಳು : ಇಪ್ಪತ್ತನೆಯ ಶತಮಾನದಲ್ಲಿ ಕೊಲಂಬಿಯದ ಕೈಗಾರಿಕೆಗಳು ತಕ್ಕಮಟ್ಟಿಗೆ ಬೆಳೆದಿವೆ. ಜವಳಿ, ಪಾದರಕ್ಷೆ, ಸಿಮೆಂಟ್ ಮತ್ತು ಇತರ ಕಟ್ಟಡ ಸಾಮಗ್ರಿಗಳ ವಿಚಾರದಲ್ಲಿ ಕೊಲಂಬಿಯ ಸ್ವಯಂಪೂರ್ಣವಾಗಿದೆ. ಬಗೋಟಾ, ಮೇದೆಯಿನ್, ಕಾಲಿ, ಬಾರಾಂಕಿಯ ಮುಖ್ಯ ಕೈಗಾರಿಕಾ ಕೇಂದ್ರಗಳು. ಪಾಝ್‌ಡೆಲ್ ರೀಯೊದಲ್ಲಿ ಉಕ್ಕಿನ ಕಾರ್ಖಾನೆಯನ್ನು 1954ರಲ್ಲಿ ಸ್ಥಾಪಿಸಲಾಯಿತು.

ಸಾರಿಗೆ : ಕೊಲಂಬಿಯದ ವ್ಯಾಪಾರ ಕೈಗಾರಿಕೆಗಳ ಬೆಳವಣಿಗೆಗೆ ಮುಖ್ಯ ಅಡಚಣೆಯೆಂದರೆ ಸಾರಿಗೆಯ ಸಮಸ್ಯೆ. ಕೊಲಂಬಿಯದ ಜನನಿಬಿಡ ಪ್ರದೇಶಗಳು ಇರುವುದು ಒಳನಾಡಿನಲ್ಲಿ. ಇದು ಪರ್ವತಶ್ರೇಣಿಗಳಿಂದಾಗಿ ಸಮುದ್ರತೀರದಿಂದ ಬೇರ್ಪಟ್ಟಿದೆ. ಕೊಲಂಬಿಯದ ರಾಜಧಾನಿಗೆ ಕೂಡ ಸಮರ್ಪಕ ಸಾರಿಗೆ ಸಂಪರ್ಕವಿಲ್ಲ. ವಿಮಾನ ಮಾರ್ಗಗಳಿಂದಾಗಿ ಪರಿಸ್ಥಿತಿ ಸ್ವಲ್ಪ ಉತ್ತಮ. ಒಳನಾಡಿನಿಂದ ತೀರಪ್ರದೇಶಕ್ಕಿರುವ ಮುಖ್ಯ ರೈಲ್ವೆ ಮತ್ತು ರಸ್ತೆಗಳು ಕಾಲಿ ಮತ್ತು ಬ್ವೇನಾವಂಟೂರಾಗಳ ಮೂಲಕ ಸಾಗುತ್ತವೆ. ಬಹುತೇಕ ರೈಲು ಮಾರ್ಗಗಳು ಮ್ಯಾಗ್ಡಲೀನ ನದಿಯಿಂದ ಒಳನಾಡಿಗೆ ಸಾಗುತ್ತವೆ. ಮ್ಯಾಗ್ಡಲೀನ ನದಿ ದೊಡ್ಡ ಹಡಗುಗಳ ಸಂಚಾರಕ್ಕೆ ಅನುಕೂಲವಾಗಿಲ್ಲ. ಮ್ಯಾಗ್ಡಲೀನದ ಮುಖದ ಬಳಿ ಇರುವ ಬಾರಾಂಕಿಯ ಕೊಲಂಬಿಯದ ಅತ್ಯಂತ ದೊಡ್ಡ ಬಂದರು. ಕಾರ್ಟಜೀನ, ಸಾಂತ, ಮಾರ್ತ, ಬ್ವೇನಾವಂಟೂರಾ ಇತರ ಬಂದರುಗಳು. ಕೊಲಂಬಿಯದ ಸಾರಿಗೆ ವ್ಯವಸ್ಥೆಯ ಒಂದು ವೈಶಿಷ್ಟ್ಯವೆಂದರೆ ಊರ್ಧ್ವ ಕೇಬಲ್‌ಗಳು (ಎರಿಯಲ್ ಕೇಬಲ್ಸ್). ಕೆಲವು ಕಡೆ ಇವುಗಳ ಸಹಾಯದಿಂದ ಸರಕನ್ನೂ ಪ್ರಯಾಣಿಕರನ್ನೂ ಸಾಗಿಸುತ್ತಾರೆ.

ಕೊಲಂಬಿಯದ ರಾಜಧಾನಿ ಬಗೊಟ. ಜನ ಸಂಖ್ಯೆ 7,220,971 (2004), ಇತರ ಪಟ್ಟಣಗಳು ಮೇದೆಯೀನ್, ಕಾಲಿ, ಬಾರಾಂಕಿಯ, ಕಾರ್ಟಜೀನ, ಬೂಕಾರಾಮಾಂಗ ಮತ್ತು ಮ್ಯಾನಿಝಾಲೆಸ್. ಕೊಲಂಬಿಯದ ನಾಣ್ಯ ಪೇಸೋ. ಇದನ್ನು 100 ಸೆಂಟಾಮೋಗಳಾಗಿ ವಿಂಗಡಿಸಲಾಗಿದೆ.

ಜನಾಂಗ: ಇಲ್ಲಿಯ ಮೂಲನಿವಾಸಿಗಳು ಶಬೆಷಾ ಇಂಡಿಯನ್ನರು. ವ್ಯವಸಾಯಗಾರರಾಗಿದ್ದ ಅವರನ್ನು ಸ್ಪೇನ್ ದೇಶದ ಆಕ್ರಮಣಕಾರರು ಸುಲಭವಾಗಿ ಸೋಲಿಸಿ ಇಲ್ಲಿ ಬಂದು ನೆಲಸಿದರು. ಈಗ ಶೇ. ಸು. 58ರಷ್ಟು ಜನ ಸ್ಪ್ಯಾನಿಷ್ ಇಂಡಿಯನ್ ಜನಾಂಗಕ್ಕೆ ಸೇರಿದ ಮೆಸ್ಟಿಜೊಗಳು. ಮಿಕ್ಕವರು ಐರೋಪ್ಯ, ನೀಗ್ರೋ, ಮ್ಯುಲೆಟ್ಟೋ, ಜಾಂಬೊ ಮತ್ತು ಇಂಡಿಯನ್ ಜನ. ಶೇ. 90ರಷ್ಟು ಜನ ರೋಮನ್ ಕೆಥೊಲಿಕ್ ಪಂಥಕ್ಕೆ ಸೇರಿದವರು. ದೇಶಭಾಷೆ ಸ್ಪ್ಯಾನಿಷ್. ಇಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಉಚಿತ. 7 ರಿಂದ 14 ವರ್ಷಗಳೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. 15 ವರ್ಷಗಳಿಗೆ ಮೇಲ್ಪಟ್ಟ ವಿದ್ಯಾವಂತರ ಸಂಖ್ಯೆ ಶೇ. 62.3 ಈ ರಾಷ್ಟ್ರದಲ್ಲಿ 50ಕ್ಕೂ ಮೇಲ್ಪಟ್ಟು ಪ್ರೌಢ ವಿದ್ಯಾಸಂಸ್ಥೆಗಳಿವೆ. 1572ರಲ್ಲಿ ಸ್ಥಾಪಿತವಾದ ಬಗೊಟ ರಾಷ್ಟ್ರೀಯ ವಿಶ್ವವಿದ್ಯಾಲಯ ಅತ್ಯಂತ ಹಳೆಯದು. 18ರಿಂದ 30 ವರ್ಷದೊಳಗಿನ ಯುವಕರೆಲ್ಲರೂ ಒಂದು ವರ್ಷ ಕಡ್ಡಾಯ ಸೈನಿಕ ಶಿಕ್ಷಣ ಪಡೆಯಬೇಕೆಂಬ ನಿಯಮವಿದೆ. ಕೊಲಂಬಿಯ ದೇಶ ಕೆತ್ತನೆ ಕಲೆ, ಶಿಲ್ಪಕಲೆಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿಯ ಮೂಲನಿವಾಸಿಗಳು ಈ ಕಲೆಗಳಲ್ಲಿ ಮತ್ತು ಚಿನ್ನ ಬೆಳ್ಳಿಯ ಆಭರಣಗಳನ್ನು ಮಾಡುವುದರಲ್ಲಿ ಬಹು ಕುಶಲರಾಗಿದ್ದಾರೆ. ಇಲ್ಲಿ ನೆಲಸಿದ ಸ್ಪೇನ್ ಜನ ಅವರ ಕೌಶಲ್ಯದಿಂದ ಬಹುಮಟ್ಟಿಗೆ ಪ್ರಭಾವಿತರಾಗಿದ್ದಾರೆ. ಕೊಲಂಬಿಯ ದೇಶ ತನ್ನ ಕವಿಗಳು, ಗ್ರಂಥಕರ್ತರು, ಪತ್ರಿಕೋದ್ಯಮಿಗಳ ಮೂಲಕವೂ ಸಾಂಸ್ಕೃತಿಕ ಪ್ರಪಂಚಕ್ಕೆ ಕಾಣಿಕೆ ಸಲ್ಲಿಸಿದೆ. (ಎಸ್.ಕೆ.ಎಸ್.;ಪಿ.ಎಂ.ಯು.ಎಸ್.)

**ಕೊಲಂಬೊ:** ಶ್ರೀಲಂಕ ಗಣರಾಜ್ಯದ ರಾಜಧಾನಿ; ಅದರ ಮುಖ್ಯ ರೇವುಪಟ್ಟಣ; ಕೊಲಂಬೊ ಜಿಲ್ಲೆಯ ಆಡಳಿತ ಕೇಂದ್ರ. ಪಶ್ಚಿಮತೀರದಲ್ಲಿ ಕೆಳನಿ ನದೀಮುಖಕ್ಕೆ ದಕ್ಷಿಣದಲ್ಲಿದೆ. ಜನಸಂಖ್ಯೆ 64202 (2001). ನಗರದ ಸುತ್ತಮುತ್ತ ತಗ್ಗುಭೂಮಿ ಇರುವುದರಿಂದ ಪ್ರವಾಹದಿಂದ ರಕ್ಷಣೆಗೆ ಕ್ರಮಕೈಗೊಳ್ಳಲಾಗಿದೆ. ಇಲ್ಲಿಯದು ಉಷ್ಣತೆಯ ವಾಯುಗುಣ. ಹವೆಯಲ್ಲಿ ತೇವದ ಅಂಶ ಹೆಚ್ಚು. ಮಧ್ಯಕ ಉಷ್ಣತೆ $26^0$ ಸೆ. ಸರಾಸರಿ ವಾರ್ಷಿಕ ಮಳೆ 230 ಸೆಂಮೀ. ನಗರದ ಹಳೆಯ ಭಾಗ ಪೇಟೆ, ಎರಡನೆಯ ಮಹಾಯುದ್ಧದ ತರುವಾಯ ವ್ಯಾಪಾರ ವೃದ್ಧಿಯಾಯಿತು. ಈಗಿನ ಬಂದರಿನ ದಕ್ಷಿಣ ತುದಿಯಲ್ಲಿರುವ ಪೋರ್ಚುಗೀಸರು ಕಟ್ಟಿದ ಕೋಟೆಯ ಭಾಗದಲ್ಲಿ ಆಡಳಿತ ಹಾಗೂ ವಾಣಿಜ್ಯ ಕಟ್ಟಡಗಳು ಕೇಂದ್ರೀಕೃತವಾಗಿವೆ. ಕೊಲಂಬೊ ಶ್ರೀಲಂಕದ ಪ್ರಮುಖ ವಿದ್ಯಾಕೇಂದ್ರ. 1942ರಲ್ಲಿ ಇಲ್ಲಿ ಸಿಲೋನ್ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಇಲ್ಲಿಯ ವಿದ್ಯೋದಯ ಮತ್ತು ವಿದ್ಯಾಲಂಕಾರ ಬೌದ್ಧ ವಿದ್ಯಾಪೀಠಗಳು ವಿಶ್ವವಿದ್ಯಾಲಯ ಸ್ಥಾನಮಾನಗಳನ್ನು ಪಡೆದಿರುವ ಸಂಸ್ಥೆಗಳು.

ಕೊಲಂಬೊದಿಂದ ಜಾಫ್ನ, ಟ್ರಿಂಕಾಮಲಿ ಮೊದಲಾದ ನಗರಗಳಿಗೆ ರೈಲ್ವೆ ಸಂಪರ್ಕವುಂಟು. ಕೆಳನಿ ನದಿಗೆ ಅಡ್ಡಲಾಗಿರುವ ವಿಕ್ಟೋರಿಯ ಸೇತುವೆಯ ಮೂಲಕ ಉತ್ತರದಲ್ಲಿರುವ ನೆಗೊಂಬೊ ಮತ್ತು ಜಾಫ್ನಗಳಿಗೂ ವಾಯವ್ಯದಲ್ಲಿರುವ ಕ್ಯಾಂಡಿಗೂ ರಸ್ತೆಗಳಿವೆ. ದಕ್ಷಿಣದ ಮುಖ್ಯ ರಸ್ತೆಗಳು ಸಮುದ್ರದ ಕರೆಯಲ್ಲೇ ಸಾಗಿ ಹಂಬನ್ ತೋಟ ಮತ್ತು ಕೆಳನಿ ಕಣಿವೆಯ ಮೂಲಕ ಅವಿಸ್ಸವೆಲ್ಲಕ್ಕೆ ಹೋಗುತ್ತವೆ. ರತ್ಮಲನ ವಿಮಾನ ನಿಲ್ದಾಣದಿಂದ ರಾಜ್ಯದ ಪ್ರಾಂತೀಯ ಕೇಂದ್ರಗಳಿಗೂ ಭಾರತಕ್ಕೂ ವಿಮಾನಗಳು ಹೋಗಿಬರುತ್ತವೆ. ಕಾಟುನಾಯಕ ವಿಮಾನ ನಿಲ್ದಾಣವಿರುವುದು ಭಾರಿ ವಿಮಾನಗಳಿಗಾಗಿ, ಅದು ನಗರಕ್ಕೆ 27 ಕಿಮೀ ದೂರದಲ್ಲಿದೆ.

ಆಡಮ್ಸ್ ಪೀಕ್ ಅಥವಾ ಶ್ರೀಪದ ಶಿಖರ

ವರ್ಲ್ಡ್ ಟ್ರೇಡ್ ಸೆಂಟರ್, ಕೊಲಂಬೊ

ಕೊಲಂಬೊ ಬಂದರಿಗೆ ಪ್ರಾಮುಖ್ಯ ಪ್ರಾಪ್ತವಾದದ್ದು 1874 ರಿಂದೀಚೆಗೆ. ಅದಕ್ಕೆ ಮುಂಚೆ ಗ್ಯಾಲ್ ಮುಖ್ಯ ಬಂದರಾಗಿತ್ತು. ಕೊಲಂಬೋ ಸದಾ ಚಟುವಟಿಕೆಯಿಂದ ಕೂಡಿದ ರೇವು. ಚಹ, ರಬ್ಬರ್, ಕಕೇಮೊ, ತೆಂಗಿನ ಹುರಿ, ಕೊಬ್ಬರಿ ಮತ್ತು ತೆಂಗು ಇಲ್ಲಿಂದ ರಫ್ತಾಗುತ್ತವೆ. ಅಕ್ಕಿ, ಹತ್ತಿ, ಜವಳಿ, ಸಕ್ಕರೆ ಮತ್ತು ಯಂತ್ರೋಪಕರಣಗಳು ಆಮದು ಸರಕುಗಳು. (ವಿ.ಜಿ.ಕೆ.)

**ಕೊಲರಾಡೊ:** ಅಮೆರಿಕ ಸಂಯುಕ್ತ ಸಂಸ್ಥಾನದ 38ನೆಯ ರಾಜ್ಯ. ಅಮೆರಿಕ ಸ್ವಾತಂತ್ರ್ಯ ಘೋಷಿಸಿಕೊಂಡು 100 ವರ್ಷಗಳು ಆಗಿದ್ದಾಗ ಆ ಒಕ್ಕೂಟವನ್ನು ಸೇರಿಕೊಂಡದ್ದರಿಂದ ಇದಕ್ಕೆ ಶತಾಬ್ದಿ ರಾಜ್ಯವೆಂದು ಹೆಸರು ಬಂದಿದೆ. ವಿಸ್ತೀರ್ಣದ ದೃಷ್ಟಿಯಲ್ಲಿ ಸಮುದ್ರ ಮಟ್ಟದಿಂದ 2075 ಮೀ ಎತ್ತರದಲ್ಲಿರುವ ಈ ರಾಜ್ಯ ದೇಶದಲ್ಲೇ ಅತ್ಯುನ್ನತವಾದದ್ದು, ಉತ್ತರದಲ್ಲಿ ವೀಯೋಮಿಂಗ್ ಮತ್ತು ನೆಬ್ರಾಸ್ಕ, ಪೂರ್ವದಲ್ಲಿ ನೆಬ್ರಾಸ್ಕ ಮತ್ತು ಕ್ಯಾನ್ಸಾಸ್, ದಕ್ಷಿಣದಲ್ಲಿ ಒಕ್ಲಹೋಮ ಮತ್ತು ನ್ಯೂ ಮೆಕ್ಸಿಕೊ, ಪಶ್ಚಿಮದಲ್ಲಿ ಯೂಟಾ– ಇವು ಇದರ ಮೇರೆಗಳು. ವಿಸ್ತೀರ್ಣ 269596 ಚ.ಕಿಮೀ. ರಾಜಧಾನಿ ಡೆನ್‌ವರ್. ಪ್ರಾಂತ್ಯದ ಜನಸಂಖ್ಯೆ 43,01,261 (2001). ಡೆನವರ್ ಜನಸಂಖ್ಯೆ 5,57,917 (2005).

ಮೇಲ್ಮೈಲಕ್ಷಣ: ಭೌಗೋಳಿಕವಾಗಿ ಕೊಲರಾಡೊದಲ್ಲಿ ಮೂರು ಪ್ರತ್ಯೇಕ ವಿಭಾಗಗಳಿವೆ. ಪೂರ್ವದ ಮೈದಾನಪ್ರದೇಶ, ರಾಕಿ ಪರ್ವತಗಳನ್ನೊಳಗೊಂಡ ಮಧ್ಯಪರ್ವತ ಪ್ರದೇಶ ಮತ್ತು ಕಣಿವೆ, ಪ್ರಸ್ಥಭೂಮಿಗಳ ಪಶ್ಚಿಮಭಾಗ. ರಾಜ್ಯದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 2075 ಮೀ. ಅತ್ಯುನ್ನತ ಶಿಖರ ಎಲ್ಬರ್ಟ್ 4399 ಮೀ. 4270 ಮೀ ಗಿಂತ ಎತ್ತರದ 55 ಶಿಖರಗಳನ್ನು ಗುರುತಿಸಿ ಹೆಸರಿಸಲಾಗಿದೆ.

ನದಿಗಳು: ಇಲ್ಲಿಯ ಮುಖ್ಯ ನದಿಗಳೆಂದರೆ: ಕೊಲರಾಡೊ–ರಾಕೀ ಪ್ರರ್ವತಗಳಲ್ಲಿ ಹುಟ್ಟಿ ಮುಖ್ಯ ಉಪನದಿಯೊಡನೆ ಸೇರಿ ಪ್ರಾಂತ್ಯದ ಪಶ್ಚಿಮ ಭಾಗದಲ್ಲಿ ಹರಿದು ಪೆಸಿಫಿಕ್ ಸಾಗರವನ್ನು ಸೇರುತ್ತದೆ. ರೀಯೊಗ್ರಾಂಡ್ ನದಿ ದಕ್ಷಿಣ–ಮಧ್ಯಭಾಗಗಳಲ್ಲಿ ಪ್ರವಹಿಸುತ್ತದೆ; ಅರ್ಕಾನ್ಸ್ ನದಿ ಆಗ್ನೇಯ ಭಾಗದಲ್ಲಿ ಹರಿಯುತ್ತದೆ. ಕೊನೆಯದಾಗಿ ದಕ್ಷಿಣ ಮತ್ತು ಉತ್ತರ ಪ್ಲ್ಯಾಟ್ ನದಿಗಳು ನೈಋತ್ಯ ಭಾಗದಲ್ಲಿ ಪ್ರವಹಿಸುತ್ತವೆ.

ವಾಯುಗುಣ: ವಾಯುಗುಣ ವೈವಿಧ್ಯಪೂರ್ಣವಾದದ್ದು. ಅತಿ ಹೆಚ್ಚಿನ ಉಷ್ಣತೆ $46^{0}$ಸೆ., ಕನಿಷ್ಠ ಉಷ್ಣತೆ $12^{0}$ಸೆ. ವಿವಿಧ ಪ್ರದೇಶಗಳಲ್ಲಿ ವಾಯುಗುಣದಲ್ಲಿ ಬಹಳ ಹೆಚ್ಚಿನ ಅಂತರಗಳಿರುತ್ತವೆ. ವಾರ್ಷಿಕ ಸರಾಸರಿ ಮಳೆ 4 ಸೆಂಮೀ. ಸ್ಯಾನ್ ಲೂಯಿ ಕಣಿವೆ ಪ್ರದೇಶದಲ್ಲಿ 18 ಸೆಂಮೀ ಗಿಂತಲೂ ಕಡಿಮೆಯಾದರೆ ವಾಯವ್ಯ ಭಾಗದಲ್ಲಿ 70 ಸೆಂಮೀ ಮಳೆ ಬೀಳುತ್ತದೆ. ಗೆನಿಸನ್ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಹಿಮ ಬೀಳುತ್ತವೆ. ಇಲ್ಲಿ ಬೀಳುವ ವಾರ್ಷಿಕ ಸರಾಸರಿ ಹಿಮಪಾತ 96 ಸೆಂಮೀ ಬೇಸಗೆಯಲ್ಲಿ ವಾಯುಗುಣ ಹಿತಕರವಾಗಿರುತ್ತದೆ.

ಸಸ್ಯವರ್ಗ: ಕೊಲರಾಡೊದ ಮಣ್ಣು ಬಹಳ ಫಲವತ್ತಾಗಿದೆ. ಹೆಚ್ಚು ಭಾಗ ಅರಣ್ಯ. ಇಡೀ ಸಂಯುಕ್ತಸಂಸ್ಥಾನದ ಶೇ. 8 ಅರಣ್ಯಗಳು ಇಲ್ಲಿವೆ. ವರ್ಷಂಪ್ರತಿ 60,00,000 ಜನ ಇಲ್ಲಿಯ ಅರಣ್ಯಗಳನ್ನು ಸಂದರ್ಶಿಸುತ್ತಾರೆ. ಇಲ್ಲಿ ಸರ್ಕಾರದ 11 ರಕ್ಷಿತಾರಣ್ಯಗಳಿವೆ. ಅನೇಕ ರೀತಿಯ ಉಪಯುಕ್ತ ಮರಗಳು ಇಲ್ಲಿ ಬೆಳೆಯುತ್ತವೆ. ರಾಜ್ಯದ ಅರ್ಧಕ್ಕೂ ಹೆಚ್ಚು ಭಾಗ ಹುಲ್ಲುಗಾವಲು.

ಎತ್ತರಕ್ಕನುಸಾರವಾಗಿ ಇಲ್ಲಿ ಸಸ್ಯಸಂಪತ್ತಿನಲ್ಲಿ ವೈವಿಧ್ಯವುಂಟು. ಸಸ್ಯಸಂಪತ್ತಿನ ಅಧಾರದ ಮೇಲೆ ಐದು ಭಾಗಗಳನ್ನು ಗುರುತಿಸಬಹುದು: 1830 ಮೀ ಎತ್ತರದ ವರೆಗಿನ ಅಲ್ಪ ಮಳೆಯಾಗುವ ಪ್ರದೇಶ. 1830–2440 ಮೀ ಎತ್ತರದ ಅಡಿ ಪ್ರದೇಶ, 2440–3040 ಮೀ ಎತ್ತರದ ಗುಡ್ಡಗಾಡು ಪ್ರದೇಶ, 3040–3500ಮೀ ವರೆಗಿನ ಬೆಟ್ಟ ಪ್ರದೇಶ ಮತ್ತು 3500 ಮೀ ಗೂ ಎತ್ತರದ ಪರ್ವತ ಪ್ರದೇಶ. ಈ ವಿಭಾಗಗಳ ಸಸ್ಯಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ.

ಪ್ರಾಣಿವರ್ಗ: ಇಲ್ಲಿಯ ಮೈದಾನ ಮತ್ತು ಅರಣ್ಯಗಳಲ್ಲಿ ಕಾಡೆಮ್ಮೆ ಮತ್ತು ಜಿಂಕೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ಈಗ ಜಿಂಕೆಗಳು ಮಾತ್ರ ಅಲ್ಪಸಂಖ್ಯೆಯಲ್ಲಿ ಉಳಿದುಕೊಂಡಿವೆ. ಪರ್ವತ ಪ್ರದೇಶಗಳಲ್ಲಿ ಸಿಂಹ ಮತ್ತು ಕರಡಿಗಳು ಈಗಲೂ ಅಲ್ಪಸಂಖ್ಯೆಯಲ್ಲಿ ಉಳಿದುಕೊಂಡಿವೆ. ಕರಿ ಕರಡಿ, ಕಂದುಬಣ್ಣದ ಕರಡಿ, ಮೊಂಡುಬಾಲದ ಬೆಕ್ಕು, ಕೆಂಪು ತೋಳ, ಬೀವರ್ ಮತ್ತು ಕಾಡುಹಂದಿಗಳು ಅಧಿಕವಾಗಿ ವಾಸಿಸುತ್ತವೆ. ರಾಷ್ಟ್ರೀಯ ಪಕ್ಷಿಯೆಂದು ಪರಿಗಣಿತವಾಗಿರುವ ಲಾರ್ಕ್‌ಬಂಟಿಂಗ್, ರಾಬಿನ್, ಮೈದಾನದ ಲಾರ್ಕ್ ಅಥವಾ ಬಾನಾಡಿ, ಮ್ಯಾಗ್‌ಪೈ ಮುಂತಾದ ಅನೇಕ ಜಾತಿಯ ಹಕ್ಕಿಗಳೂ ಗೂಬೆ, ಡೇಗೆ ಮುಂತಾದ ಹಲವು ಬಗೆಯ ಹದ್ದುಗಳೂ ಇಲ್ಲಿ ಕಾಣಬರುತ್ತವೆ. ಒಳಭಾಗದ ಸರೋವರಗಳಲ್ಲೂ ನದಿಗಳಲ್ಲೂ ಅನೇಕ ಜಾತಿಗಳ ಮೀನುಗಳಿವೆ. ಇಲ್ಲಿ ಉರಗ ಜಾತಿಗಳು ವಿರಳ. ಆಮೆ, ಹಾವು, ಹಲ್ಲಿಗಳು ಇವುಗಳಲ್ಲಿ ಮುಖ್ಯವಾದವು.

ಖನಿಜ ಸಂಪತ್ತು: ಕೊಲರಾಡೊದಲ್ಲಿ ಅಮೂಲ್ಯವಾದ ಮತ್ತು ಕೈಗಾರಿಕೆಗೆ ಉಪಯುಕ್ತವಾದ ಖನಿಜಸಂಪತ್ತು ಹೇರಳವಾಗಿದೆ. ಸು. 250 ಬಗೆಯ ಉಪಯುಕ್ತ ಖನಿಜಗಳನ್ನು ಉತ್ಪಾದಿಸಲಾಗುತ್ತಿದೆ. ಅಮೆರಿಕದಲ್ಲಿ ಸಿಕ್ಕುವ ಮಾಲಿಬ್ಡಿನಮ್ ಹೆಚ್ಚು ಇಲ್ಲಿ ದೊರೆಯುತ್ತದೆ. ಯುರೇನಿಯಂ, ರೇಡಿಯಂ, ಟಂಗ್‌ಸ್ಟನ್, ಚಿನ್ನ, ಸೀಸ, ತವರ, ಬೆಳ್ಳಿ ಸತು ಮುಂತಾದ ಅನೇಕ ಲೋಹಗಳು ಹೆಚ್ಚಾಗಿ ಉತ್ಪತ್ತಿಯಾಗುತ್ತವೆ. ಕಲ್ಲಿದ್ದಲು ಮತ್ತು ತೈಲಗಳ ವಿಚಾರದಲ್ಲಿ ಇಡೀ ರಾಷ್ಟ್ರಕ್ಕೆ ಇದು ಪ್ರಥಮ, ಚಿನ್ನ–ಬೆಳ್ಳಿಗಳ ಅಡೆಯಿಂದ ಜನ ಇಲ್ಲಿಗೆ ಮೊದಮೊದಲು ವಲಸೆ ಬರಲಾರಂಭಿಸಿದರು. 1859ರಲ್ಲಿ ಚಿನ್ನದ ನಿಕ್ಷೇಪವನ್ನು ಪತ್ತೆ ಹಚ್ಚಲಾಯಿತು. 1900ರ ವೇಳೆಗೆ 280 ಲಕ್ಷ ಡಾಲರ್ ಮೌಲ್ಯದ ಚಿನ್ನ ಉತ್ಪತ್ತಿಯಾಗುತ್ತಿತ್ತು. ಡೆನ್ವರ್ ಬಳಿಯ ಕಣಿವೆಗಳು ಮತ್ತು ಕ್ರಿಪಲ್ ಕ್ರೀಕ್‌ಗಳಲ್ಲಿ ಪ್ರಮುಖ ಚಿನ್ನದ ನಿಕ್ಷೇಪಗಳಿವೆ. ಲೀಡ್ ಎಲ್, ಔರೆ, ಸಿಲ್ವರ್‌ಟನ್, ಕ್ರೀಡ್ ಮುಂತಾದವು ಬೆಳ್ಳಿ ಉತ್ಪಾದನ ಕೇಂದ್ರಗಳು. 1892ರಲ್ಲಿ 230 ಲಕ್ಷ ಡಾಲರ್ ಮೌಲ್ಯದ ಬೆಳ್ಳಿಯನ್ನು ಉತ್ಪಾದಿಸಲಾಗಿತ್ತು. ಕ್ಯಾನನ್ ನಗರದ ಬಳಿ 1862ರಲ್ಲಿ ತೈಲ ಉತ್ಪಾದನೆ ಆರಂಭವಾಯಿತು. ರ್‍ಯಾಂಗ್ಲೀಯಲ್ಲಿ 1946ರಿಂದೀಚೆಗೆ ತೈಲೋತ್ಪಾದನೆಯಾಗುತ್ತಿದೆ. ಡೆನ್ವರ್–ಜ್ಯೂಲೆಸ್‌ಬರ್ಗ್ ಮತ್ತು ಸಾನ್‌ವಾನ್ ಇತರ ಪ್ರಮುಖ ತೈಲೋತ್ಪಾದನ ನೆಲೆಗಳು.

ಆರ್ಥಿಕತೆ: ಕೃಷಿ ಇಲ್ಲಿಯ ಮುಖ್ಯ ಕಸಬು, ಬಾರ್ಲಿ, ಓಟ್ಸ್, ಗೋದಿ, ಹಣ್ಣುಗಳು, ತರಕಾರಿಗಳು, ಆಲೂಗೆಡ್ಡೆ, ಬೀಟ್‌ರೂಟ್, ದನಗಳ ಮೇವು ಇವು ಪ್ರಮುಖ ಕೃಷಿ ಉತ್ಪನ್ನಗಳು. ಎಲ್ಲ ರೀತಿಯ ಬೇಸಾಯ ಪದ್ಧತಿಗಳೂ ಬಳಕೆಯಲ್ಲಿವೆ. ಪಶುಪಾಲನೆಯಿಂದ ಅಧಿಕ ವರಮಾನ ಬರುತ್ತದೆ. ರಾಜ್ಯದ ಒಟ್ಟು ಆದಾಯದಲ್ಲಿ ಶೇ. 10 ರಷ್ಟು ವ್ಯವಸಾಯದಿಂದ ದೊರಕುತ್ತಿದೆ. ಇದು ದೇಶದ ಜನಸಂಖ್ಯೆಯಲ್ಲಿ ಶೇ. 20 ಮಂದಿಗೆ ಉದ್ಯೋಗ ಕಲ್ಪಿಸಿದೆ. 1870ರ ವರೆಗೆ ಪಶುಪಾಲನೆ ಪ್ರಮುಖ ಕಸಬಾಗಿತ್ತು. ಅಲ್ಲಿ ದೊಡ್ಡ ಮಂದೆಗಳಿರುತ್ತಿದ್ದುವು. 1870ರ ದಶಕದಲ್ಲಿ ಕುರಿಪೋಷಣೆ ಪ್ರಾರಂಭವಾಯಿತು. ಇತ್ತೀಚೆಗೆ ಹಲವು ಪ್ರದೇಶದಲ್ಲಿ ಆಡುಗಳನ್ನು ಸಾಕುತ್ತಾರೆ.

ನೀರಾವರಿ ಯೋಜನೆಗಳು ಸಾಕಷ್ಟು ನಡೆದಿವೆ. 1860ರ ಸುಮಾರಿನಿಂದ ಈ ದಿಕ್ಕಿನಲ್ಲಿ ಪ್ರಯತ್ನಗಳು ನಡೆದುವು. ಈಗ ಸು. 30 ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯವುಂಟು. ಬೀಟ್‌ರೂಟ್ ಬೆಳೆ ನೀರಾವರಿ ಬೆಳೆಗಳಲ್ಲಿ ಮುಖ್ಯವಾದ್ದು. ನೀರಾವರಿ ಕೆಲಸಗಳಿಗಾಗಿ ರಾಜ್ಯವನ್ನು ಏಳು ವಲಯಗಳಾಗಿ ವಿಭಾಗಿಸಲಾಗಿದೆ. ಈಚೆಗೆ 7–8 ಕೇಂದ್ರಗಳಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಿದ್ದರೂ ಅಷ್ಟೇನೂ ಹೆಚ್ಚಿಲ್ಲ. ಕೈಗಾರಿಕೋದ್ಯಮಗಳಲ್ಲಿ ಗಣಿಗಾರಿಕೆಗೆ ಪ್ರಥಮ ಸ್ಥಾನ. ಗಣಿ ಉದ್ಯಮಕ್ಕೆ ಬೇಕಾದ ಯಂತ್ರಸಾಮಗ್ರಿಗಳನ್ನೂ ತಯಾರಿಸಲಾಗುತ್ತಿದೆ. ಪ್ಯೂಬ್ಲೋ ನಗರದಲ್ಲಿರುವ ಕೊಲೊರಾಡೊ ಇಂಧನ ಮತ್ತು ಕಬ್ಬಿಣ ಸಂಸ್ಥೆ ದೇಶದ ಪಶ್ಚಿಮ ಭಾಗದಲ್ಲಿ ಅತ್ಯಂತ ಬೃಹತ್ ಉದ್ಯಮ. ಡೆನ್ವರ್‌ನಲ್ಲಿ ರಬ್ಬರ್ ಉತ್ಪಾದನೆಯಾಗುತ್ತದೆ. ಮಾಂಸ ಸಂಸ್ಕರಣೆ ತಯಾರಿಕೆ, ಹಣ್ಣುಗಳನ್ನು ಒಣಗಿಸಿ ಡಬ್ಬಗಳಲ್ಲಿ ತುಂಬಿ ವ್ಯಾಪಾರಕ್ಕೆ ಸಿದ್ಧಗೊಳಿಸುವುದು–ಇವು ಇತರ ಪ್ರಮುಖ ಕೈಗಾರಿಕೆಗಳು, ರಾಜಧಾನಿ ಡೆನ್ವರ್ ಈ ರಾಜ್ಯದ ಪ್ರಮುಖ ಕೈಗಾರಿಕಾ ಕೇಂದ್ರ.

ಸಾರಿಗೆ: ಬೆಟ್ಟಗುಡ್ಡಗಳ ಈ ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ಕಷ್ಟಸಾಧ್ಯ. ಅನೇಕ ಪ್ರಯೋಗಗಳಾದ ಮೇಲೆ 1870–80ರಿಂದ ಈಚೆಗೆ ಕೆಲವು ರಾಷ್ಟ್ರೀಯ ರೈಲುಮಾರ್ಗಗಳನ್ನು ನಿರ್ಮಿಸಲಾಗಿದೆ. ಇವು ಕೆಲವು ಖಾಸಗಿ ಸಂಸ್ಥೆಗಳಿಗೆ ಸೇರಿವೆ. ಡೆನ್ವರ್–ರೀಯೊಗ್ರಾಂಡ್, ಡೆನ್ವರ್–ಸಾಲ್ಟ್‌ಲೇಕ್, ಯೂನಿಯನ್–ಪೆಸಿಫಿಕ್ ಇವು ಪ್ರಮುಖ ಸಂಸ್ಥೆಗಳಾಗಿವೆ. 1914ರಲ್ಲಿದ್ದ ರೈಲುಮಾರ್ಗದ ಉದ್ದ 9185 ಕಿಮೀ. 20ನೆಯ ಶತಮಾನದ ಮಧ್ಯಕಾಲದಲ್ಲಿದ್ದದ್ದು 6080 ಕಿಮೀ ಮಾತ್ರ, ಇದಲ್ಲದೆ 19200 ಕಿಮೀ ರಾಷ್ಟ್ರೀಯ ಹೆದ್ದಾರಿಗಳೂ 96000 ಕಿಮೀ. ಸ್ಥಳೀಯ ರಸ್ತೆಗಳೂ ನಿರ್ಮಿತವಾಗಿವೆ. 1926ರಲ್ಲಿ ವಿಮಾನಸಾರಿಗೆ ಬಂತು, ಡೆನ್ವರ್ ಪ್ರಮುಖ ವಿಮಾನ ನಿಲ್ದಾಣ; ರಾಷ್ಟ್ರದಲ್ಲಿ ಏಳನೆಯದು. ಏಳು ಪ್ರಮುಖ ಸಂಸ್ಥೆಗಳ ವಿಮಾನಗಳು ಇಲ್ಲಿಗೆ ಬರುತ್ತವೆ.

1860ರಲ್ಲಿ ಸಂಯುಕ್ತಸಂಸ್ಥಾನಗಳೊಡನೆ ಸೇರುವ ಮುನ್ನ ಕೊಲರಾಡೊದ ಜನಸಂಖ್ಯೆ 34,251 ಇದ್ದು, ಅದರಲ್ಲಿ 86.1%ರಷ್ಟು ಮಂದಿ ಗ್ರಾಮಪ್ರದೇಶಗಳಲ್ಲಿ ವಾಸಿಸುತ್ತಿದ್ದರು. 1880ರ ಸುಮಾರಿಗೆ ಇದು ಐದರಷ್ಟು ಹೆಚ್ಚಿತು. ಆಗಿನ ಜನಸಂಖ್ಯೆ 5,39,700 (51.7% ಗ್ರಾಮಸ್ಥರು). 1960ರಲ್ಲಿ ಒಟ್ಟು ಜನಸಂಖ್ಯೆ 17,53,947. 73.7% ರಷ್ಟು ಮಂದಿ ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಕೊಲರಾಡೊವಿನ ಜನತೆಯಲ್ಲಿ ವಿಶೇಷವಾಗಿ ಸ್ಥಳೀಯರೇ ಹೆಚ್ಚು, ವಲಸೆಗಾರರು ಬಹಳ ಕಡಿಮೆ. ನೀಗ್ರೋ ಜನಸಂಖ್ಯೆ ಶೇ. 1ರಷ್ಟು ಮಾತ್ರ. (ಪಿ.ಎಂ.)

**ಕೊಲರಾಡೊ ನದಿ:** ಉತ್ತರ ಅಮೆರಿಕದ ವಯೊಮಿಂಗ್, ಕೊಲರಾಡೊ ಮತ್ತು ಯೂಟಾ ಪರ್ವತಗಳಲ್ಲಿ ಉಗಮಿಸಿ 2304 ಕಿಮೀ ಉದ್ದ ಪ್ರವಹಿಸಿ ಕ್ಯಾಲಿಫೋರ್ನಿಯ ಕೊಲ್ಲಿಯನ್ನು ಸೇರುವ ನದಿ. ಇದರ 6,31,960 ಚ.ಕಿಮೀ ಜಲಾನಯನ ಪ್ರದೇಶ ವಯೊಮಿಂಗ್, ಕೊಲರಾಡೊ, ಯೂಟ್ಹಾ, ನ್ಯೂ ಮೆಕ್ಸಿಕೊ, ನೆವಾಡ, ಅರಿಜೋನ ಮತ್ತು ಕ್ಯಾಲಿಫೋರ್ನಿಯ ಪ್ರದೇಶಗಳಲ್ಲಿ ಹರಡಿದೆ. ಪ್ರವಾಹ ಕಡಿಮೆಯಿದ್ದಾಗ ಒಂದು ಸೆಕೆಂಡಿಗೆ 84.95 ಘನ ಮೀ ನೀರು ಹರಿದರೆ, ಹೆಚ್ಚಿನ ಪ್ರವಾಹವಿದ್ದಾಗ ಇದರ ಘನ ಗಾತ್ರ 2,00,000 ಘನ ಅಡಿಗಳು. ನದಿಯ ಮೇಲ್ಕಣಿವೆ ಅಭಿವೃದ್ಧಿಕಾರ್ಯ ನಡೆಯುತ್ತಿದ್ದು ಅದು ಪೂರ್ಣವಾದಾಗ ನದಿಯ ಪ್ರವಾಹದ ಗಾತ್ರ ಕಡಿಮೆಯಾಗುವ ಸಂಭವವಿದೆ. ಇದು ತನ್ನ ಮುಖಜಭೂಮಿಯಲ್ಲಿ ಮೆಕ್ಕಲು ಮಣ್ಣನ್ನು ತಂದು ಹರಡುತ್ತದೆ. ಗಿಲ ಇದರ ಪ್ರಮುಖ ಉಪನದಿ.

ಕೊಲರಾಡೊ ನದೀ ಬಯಲಿನಲ್ಲಿ ಮೊದಲಿಗೆ ಪ್ಯೂಬ್ಲೋ ಜನ ವಾಸಿಸುತ್ತಿದ್ದರು. ಬಂಡೆಗಲ್ಲುಗಳ ಮೇಲೆ ಉಳಿದು ಬಂದಿರುವ ಹೀರೋಗ್ಲಿಫಿಕ್ ಸಾಂಕೇತಿಕ ಬರೆಹಗಳು, ಅವರ ನೀರಾವರಿ ಪದ್ಧತಿ ಮತ್ತು ಅವರ ನಿವೇಶನಗಳು–ಇವುಗಳ ಅವಶೇಷಗಳು ಮಾತ್ರ ಈಗ ಅಲ್ಲಿವೆ. ಸ್ಪ್ಯಾನಿಷ್ ಪಾದ್ರಿಗಳು ಸ್ಥಾಪಿಸಿದ್ದ ಕೇಂದ್ರಗಳ ಅವಶೇಷಗಳೂ ಅಲ್ಲಲ್ಲಿ ಕಾಣಬರುತ್ತವೆ. ಈ ನದಿಯ ಇಕ್ಕೆಲಗಳಲ್ಲೂ ಪ್ರಕೃತಿಯ ಸೌಂದರ್ಯ ಅವರ್ಣನೀಯವಾಗಿ ಶೋಭಿಸುತ್ತದೆ.

ಆಳವಾದ ಪಾತ್ರದಲ್ಲಿ 1600 ಕಿಮೀ ದೂರ ಹರಿಯುವ ಈ ನದಿಗೆ ಎರಡು ಕಡೆಗಳಿಂದಲೂ ಅನೇಕ ಉಪನದಿಗಳು ಬಂದು ಸೇರುತ್ತವೆ. ಉಪನದಿಗಳ ಸಂಗಮಸ್ಥಾನದಲ್ಲಿ ಸಮತಟ್ಟಾದ ಭೂಪ್ರದೇಶವಿರುವುದರಿಂದ, ಆಳವಾದ ನದೀಪಾತ್ರ ಹಲವು ಶಾಖೆಗಳಾಗಿ ಒಡೆದಿದೆ. ಈ ಉಪನದಿಗಳಿಗೂ ಆಳವಾದ ಪಾತ್ರಗಳುಂಟು. ಈ ಪಾತ್ರಗಳ ಪಾರ್ಶ್ವಗಳಲ್ಲಿ ಮತ್ತು ತಳಭಾಗದಲ್ಲಿ ಬಣ್ಣಬಣ್ಣದ ಶಿಲೆಗಳು ತುಂಬಿ ಮನೋಹರ ದೃಶ್ಯಗಳನ್ನೊದಗಿಸುತ್ತವೆ. ಇದರ ಬಳಿ ಕ್ಯಾಲಿಫೋರ್ನಿಯ ಪ್ರದೇಶದ ಸಾಲ್ಟನ್‌ಬೇಸಿನ್ ಬಳಿ ಕೊಲರಾಡೊ ಮರುಭೂಮಿಯಿದೆ. ಇದು ಕ್ಯಾಲಿಫೋರ್ನಿಯ ಕೊಲ್ಲಿಯಿಂದ ವಾಯವ್ಯಕ್ಕೆ 240 ಕಿಮೀ ದೂರ ಪ್ರಸರಿಸಿದೆ. ಈ ಕೊಲ್ಲಿ ಪ್ರಾಚೀನ ಕಾಲದಲ್ಲಿ ಇನ್ನೂ ದೊಡ್ಡದಾಗಿತ್ತು. ಕ್ರಮೇಣ ನದಿ ಹೊತ್ತು ತಂದ ಮೆಕ್ಕಲು ಮಣ್ಣಿನಿಂದ ಒಂದು ದೊಡ್ಡ ಕಟ್ಟೆ ಏರ್ಪಟ್ಟು ಸಮುದ್ರದ ಸ್ವಲ್ಪ ಭಾಗ ಬೇರ್ಪಟ್ಟಿತ್ತು. ಈ ಕಟ್ಟೆಯನ್ನು ನದಿ ಮತ್ತೆ ಕೊರೆದು ಸಮುದ್ರವನ್ನು ಪ್ರವೇಶಿಸಿತ್ತು. ಹೀಗಾಗಿ ಈ ಪ್ರದೇಶ ಒಳನಾಡು ಸಮುದ್ರಮಟ್ಟದಿಂದ 72 ಮೀ ತಗ್ಗಿನಲ್ಲಿದೆ. ಇದಕ್ಕೆ ಸಾಲ್ಟನ್ ಸಮುದ್ರವೆಂದು ಹೆಸರಾಗಿದೆ. ಇದರ ಜಲಾನಯನ ಪ್ರದೇಶದ ವಿಸ್ತೀರ್ಣ 775 ಚ.ಕಿಮೀ ಕಟ್ಟೆಯಲ್ಲಿ ಒಡಕುಂಟಾದರೆ ಇಡೀ ಇಂಪೀರಿಯಲ್ ಕಣಿವೆ ನೀರಿನಲ್ಲಿ ಮುಳುಗಿ ಹೋಗುವ ಮತ್ತು ಪೆಸಿಫಿಕ್ ಸಾಗರದ ದಕ್ಷಿಣ ಮಾರ್ಗ ಮುಚ್ಚಿಹೋಗುವ ಸಂಭವವಿದ್ದುದರಿಂದ ಸದರನ್ ಪೆಸಿಫಿಕ್ ಕಂಪೆನಿ 2ಲಕ್ಷ ಡಾಲರುಗಳ ವೆಚ್ಚದಲ್ಲಿ ರಕ್ಷಣೆ ಸೇತುವೆಗಳನ್ನು ನಿರ್ಮಿಸಿದೆ.

ಮೆಕ್ಸಿಕೊ ಮತ್ತು ಅಮೆರಿಕಗಳ ನಡುವೆ ಈ ನದಿ ನೀರಿನ ಬಳಕೆಯ ಬಗ್ಗೆ ಒಪ್ಪಂದ ಏರ್ಪಟ್ಟಿದೆ. ಈ ನದಿಯಿಂದ ನೀರಾವರಿ ಮತ್ತು ಜಲ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಧಾರಾಳವಾಗಿ ಅವಕಾಶವುಂಟು. ಸು. 50 ಲಕ್ಷ ಅಶ್ವಸಾಮರ್ಥ್ಯಗಳಿಗೂ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಈ ನದಿಯ ನೀರಿನಿಂದ ಉತ್ಪಾದಿಸುವ ಸಾಧ್ಯತೆಯಿದೆ. ನದಿಸಾಗಿಸಿ ತಂದು ಸಂಚಯಿಸುವ ಮಣ್ಣಿನಿಂದ ಉಂಟಾಗುವ ತೊಂದರೆಗಳನ್ನು ನಿವಾರಿಸಲು ಅಧಿಕ ಹಣವನ್ನು ವ್ಯಯಿಸಬೇಕಾಗಿದೆ. ಈ ತೊಂದರೆಗಳನ್ನು ನಿವಾರಿಸಲು ಮೇಲ್ಕಣಿವೆಯಲ್ಲಿ ಒಂದು ಅಣೆಕಟ್ಟನ್ನು ನಿರ್ಮಿಸಲು ಅಮೆರಿಕ ಸರ್ಕಾರ ಒಪ್ಪಿಗೆ ನೀಡಿದೆ. ಅದರ ವಿವಿಧ ಪ್ರಾಂತ್ಯಗಳ ನೀರಿನ ಹಕ್ಕಿನ ಬಗ್ಗೆ ವಿವಾದಗಳಿರುವುದರಿಂದ 1922ರಲ್ಲಿ ಕೇಂದ್ರ ಸರ್ಕಾರ ಒಂದು ಯೋಜನೆಯನ್ನು ತಯಾರಿಸಿ ಅದರಂತೆ ಕೊಲರಾಡೊ, ನ್ಯೂ ಮೆಕ್ಸಿಕೊ, ಯೂಟಾ, ವಯೊಮಿಂಗ್ ರಾಜ್ಯಗಳಿಗೆ ಮತ್ತು ಅರಿಜೋನ ಮತ್ತು ಕ್ಯಾಲಿಫೋರ್ನಿಯ ಮತ್ತು ನೆವಾಡಗಳಿಗೆ ಸಲ್ಲಬೇಕಾದ ನೀರಿನ ಬಗ್ಗೆ ಇತ್ಯರ್ಥ ಮಾಡಿತು. ಅಣೆಕಟ್ಟಿನ ನಿರ್ಮಾಣಕ್ಕೆ 1928ರಲ್ಲಿ ಅಧ್ಯಕ್ಷ ಹರ್ಬರ್ಟ್ ಹೂವರ್ ಆಜ್ಞೆ ನೀಡಿದ. 1936ರಲ್ಲಿ ಈ ಕಾರ್ಯ ಪೂರ್ಣಗೊಂಡಿತು. 221 ಮೀ ಎತ್ತರ, 190 ಕಿಮೀ ಉದ್ದದ ಲೇಕ್ ಮೀಡ್ ಜಲಾಶಯದಲ್ಲಿ 3,10,47,000 ಎಕರೆ ಘನ ಅಡಿ ನೀರು ನಿಲ್ಲುತ್ತದೆ: ಇಲ್ಲಿ ವಿದ್ಯುದುತ್ಪಾದನ ಕೇಂದ್ರದ ಉತ್ಪಾದನ ಶಕ್ತಿ 13,44,800 ಕಿವಾ. ಇದಕ್ಕೆ ಹೂವರ್ ಅಣೆ ಕಟ್ಟೆ ಎಂದು 1947ರಲ್ಲಿ ಅಧಿಕೃತವಾಗಿ ಹೆಸರಿಡಲಾಯಿತು. ಈ ಯೋಜನೆಯಿಂದ ನೀರಾವರಿ ಮತ್ತು ವಿದ್ಯುತ್ ಸೌಲಭ್ಯ ಹೆಚ್ಚು ದೊರೆಕುತ್ತಿರುವುರಿಂದ ಈ ಪ್ರದೇಶದಲ್ಲಿ ಜನಸಾಂದ್ರತೆ ಹೆಚ್ಚುತ್ತಿದೆ: ಆರ್ಥಿಕವಾಗಿ ಅಭಿವೃದ್ಧಿ ಸಾಧಿಸುತ್ತಿದೆ. (ಪಿ.ಎಂ.)

**ಕೊಲರಾಡೊ ಮರುಭೂಮಿ:** ಉತ್ತರ ಅಮೆರಿಕ ಖಂಡದ ಕ್ಯಾಲಿಫೋರ್ನಿಯದ ಆಗ್ನೇಯ, ಮೆಕ್ಸಿಕೊದ ವಾಯವ್ಯ ಹಾಗೂ ಕ್ಯಾಲಿಫೋರ್ನಿಯ ಕೊಲ್ಲಿಯ ದಕ್ಷಿಣದಲ್ಲಿ ಹರಡಿರುವ ಮರುಭೂಮಿ. ಉತ್ತರ ಮತ್ತು ಈಶಾನ್ಯ ದಿಕ್ಕುಗಳಲ್ಲಿರುವ ಮೊಹಾವೆ ಮರುಭೂಮಿಯಿಂದ ಇದನ್ನು ಸ್ಯಾನ್‌ಬರ್ನಡೀನೋ, ಕಾಟನ್‌ವುಡ್, ಚುಕಾವಾಲಾ ಮತ್ತು ಚಾಕೋಲೇಟ್ ಪರ್ವತಗಳು ಪ್ರತ್ಯೇಕಿಸಿವೆ. ಪಶ್ಚಿಮದಲ್ಲಿ ಪರ್ಯಾಯ ದ್ವೀಪ ಪರ್ವತಶ್ರೇಣಿ ಇದರ ಎಲ್ಲೆ. ಇದರ ಉದ್ದ 260 ಕಿಮೀ, ಅಗಲ 160 ಕಿಮೀ. ವಾಯವ್ಯ ಭಾಗದಲ್ಲಿ ಚಲಿಸುವ ಮರಳು ದಿಬ್ಬಗಳೂ ಪೂರ್ವಭಾಗದಲ್ಲಿ ಅಲ್ಗೊಡೋನ್ಸ್ ಮರಳು ದಿಬ್ಬಗಳೂ ಇವೆ. ಉಪ್ಪುನೀರಿನ ಸಾಲ್ಟನ್ ಸರೋವರವಿರುವುದು ಇದರ ಮಧ್ಯಭಾಗದಲ್ಲಿ. ಇದರ ಆಗ್ನೇಯ ದಿಕ್ಕಿನಲ್ಲಿರುವ ಇಂಪೀರಿಯಲ್ ಕಣಿವೆಯ ಮಣ್ಣು ಬಹಳ ಫಲವತ್ತಾಗಿದ್ದು ನೀರಾವರಿಗಾಗಿ ಕೊಲರಾಡೊ ನದಿಯ ನೀರನ್ನು ಕಾಲುವೆಗಳ ಮೂಲಕ ಇಲ್ಲಿಗೆ ಒಯ್ಯಲಾಗುತ್ತದೆ. ಇದಕ್ಕೆ ಕೊಲರಾಡೊ ಮರುಳ್ಗಾಡೆಂಬ ಹೆಸರು ಇದರಿಂದಾಗಿ ಬಂದಿದೆ.

ಇಲ್ಲಿ ಬೀಳುವ ಮಳೆಯ ವಾರ್ಷಿಕ ಸರಾಸರಿ 8–10 ಸೆಂಮೀ. ಮಳೆ ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುವುದುಂಟು. ಮೇ–ಸೆಪ್ಟೆಂಬರ್ ತಿಂಗಳುಗಳಲ್ಲಿ ಹಗಲಿನ ಉಷ್ಣತೆ $51.6^{0}$ ವರೆಗೂ ಏರುವುದುಂಟು. ಇಲ್ಲಿ ಸಾಧಾರಣವಾಗಿ ಬೆಳೆಯುವ ಸಸ್ಯಗಳೆಂದರೆ ಕ್ರಿಯಾಸೋಟ್ ಕುರುಚಲು ಪೊದೆ ಮತ್ತು ಮುಳ್ಳಿನ ಗಿಡಗಂಟೆಗಳು. (ಪಿ.ಎಂ.)

**ಕೊಸೊವೊ:** ಯುರೋಪ್ ಖಂಡದ ಹಿಂದಿನ ಯೂಗೋಸ್ಲಾವಿಯ ಭಾಗವಾದ ಸರ್ಬಿಯ ದೇಶದ ದಕ್ಷಿಣ ಭಾಗದಲ್ಲಿನ ಒಂದು ಸಣ್ಣ ಪ್ರದೇಶ. ಬಾಲ್ಕನ್ ಪ್ರದೇಶದ ರಾಜಕೀಯ ಕಾರಣ ಹಾಗೂ ಆಂತರಿಕ ಕಲಹಗಳಿಂದ ಕೊಸೊವೊ 1999ರಿಂದ ವಿಶ್ವಸಂಸ್ಥೆಯ ಆಡಳಿತದಲ್ಲಿದೆ. ಕೊಸೊವೊ ಮೇಲೆ ಸ್ವಲ್ಪಮಟ್ಟಿನ ಅಧಿಕಾರ ಸರ್ಬಿಯಕ್ಕೆ ಇರುವುದನ್ನು ವಿಶ್ವಸಂಸ್ಥೆ ಮಾನ್ಯಮಾಡಿದೆ. ಇದರ ಭೂಪ್ರದೇಶ ವಿಸ್ತೀರ್ಣ 10,887 ಚ.ಕಿಮೀ. ಜನಸಂಖ್ಯೆ 2 ದಶಲಕ್ಷ (2003). ಈ ದೇಶದ ರಾಜಧಾನಿ ಪ್ರಿಸ್ಟಿನ್.

ಕೊಸೊವೊವನ್ನು ಸುತ್ತುವರಿದಿರುವ ಸಣ್ಣ ಸಣ್ಣ ದೇಶಗಳು ಮಾಂಟೆನಿಗ್ರೊ, ಆಲ್ಬೇನಿಯ ಮತ್ತು ಮ್ಯಾಸಿಡೋನಿಯ. ಕೊಸೊವೊ ಉ.ಅ. $42^0$ ಮತ್ತು ಪೂ.ರೇ. $20^0$ ಯಲ್ಲಿ ವಿಸ್ತರಿಸಿದೆ. ಈ ಪ್ರದೇಶ ಒರಟಾದ ಭೂ ಪ್ರದೇಶದಿಂದ ಕೂಡಿದೆ. ಸಾರ್ ಎಂಬ ಪರ್ವತ ದಕ್ಷಿಣ ಮತ್ತು ವಾಯವ್ಯ ಭಾಗ ಹಾಗೂ ಮ್ಯಾಸಿಡೋನಿಯ ಗಡಿಯಲ್ಲಿದೆ. ಪಶ್ಚಿಮ ಭಾಗದಲ್ಲಿ ಎರಡು ಮೈದಾನ ಪ್ರದೇಶ ಕಂಡುಬರುವುವು. ಇದರ ವಾಯುಗುಣ ಖಂಡಾಂತರವಾಗಿದ್ದು, ಬೇಸಗೆಯಲ್ಲಿ ಬೆಚ್ಚಗಿದ್ದು, ಚಳಿಗಾಲದಲ್ಲಿ ಶೀತ ಹಾಗೂ ಹಿಮದಿಂದ ಕೂಡಿರುತ್ತದೆ. ಇಲ್ಲಿನ ಅತ್ಯಂತ ಎತ್ತರ ಪರ್ವತ ಜೆರವಿಕ (2656 ಮೀ). ಇದು ನೈರುತ್ಯಭಾಗ ಹಾಗೂ ಆಲ್ಬೇನಿಯ ಮತ್ತು ಮಾಂಟೆನಿಗ್ರೊ ಗಡಿಗಳಿಂದ ಸುತ್ತುವರಿದಿದೆ.

ಇಲ್ಲಿನ ಪ್ರಮುಖ ನದಿಗಳು ವೈಟ್ ಡ್ರಿನ್, ಸಿಟ್ನಿಕ್, ಮೊರವ. ಸರೋವರಗಳು ಬಡೊವಕ್, ಗಜ್ಜಿವೊರ ಸರ್ಬಿಯನ್. ಆಲ್ಬೇನಿಯನ್ ಮತ್ತು ಇಂಗ್ಲಿಷ್ ಪ್ರಮುಖ ಭಾಷೆಗಳು. ಜನಸಂಖ್ಯೆಯ ಶೇ. 88 ಭಾಗ ಆಲ್ಬೇನಿಯನ್ನರು, ಶೇ. 8 ಸರ್ಬಿಯನ್ನರು, ಇತರೆ ಜನಾಂಗದವರು ಶೇ. 4 ಭಾಗ. (ಡಿ.ವೈ.)

**ಕೊಹಿಮ:** ನಾಗಾಲ್ಯಾಂಡಿನ ರಾಜಧಾನಿ ಜಿಲ್ಲೆಯ ಆಡಳಿತಕೇಂದ್ರ. ಕೊಹಿಮ ಜಿಲ್ಲೆಯ ಮುಖ್ಯಪಟ್ಟಣ. ದೀಮಾಪುರ–ಇಂಫಾಲ್ ರಾಷ್ಟ್ರೀಯ ಹೆದ್ದಾರಿ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. 10 ಚ.ಕಿಮೀ ವಿಸ್ತೀರ್ಣವಿರುವ ಇದರ ಜನಸಂಖ್ಯೆ 78,584. ತಕ್ಕಮಟ್ಟಿಗೆ ಸುಯೋಜಿತವಾದ ಈ ಪಟ್ಟಣದ ನಡುಭಾಗದಲ್ಲಿ ಪೇಟೆಯೂ ಸುತ್ತಣ ಬೆಟ್ಟಗಳ ಮೇಲೆ ಜನವಸತಿಯೂ ಸೈನಿಕ ಬಿಡಾರಗಳೂ ಹಬ್ಬಿವೆ. ಕೊಹಿಮಕ್ಕೆ ಅತ್ಯಂತ ಹತ್ತಿರದ ವಿಮಾನ ನಿಲ್ದಾಣ ಇರುವುದು ದೀಮಾಪುರದಲ್ಲಿ, ಇದೇ ಕೊಹಿಮಕ್ಕೆ ಅತ್ಯಂತ ಹತ್ತಿರದ ರೈಲ್ವೆ ನಿಲ್ದಾಣ ಕೂಡ. ಕೊಹಿಮದಿಂದ ಇದು 74 ಕಿಮೀ ದೂರದಲ್ಲಿದೆ.

ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನೀಯರು ಕೊಹಿಮ ನಗರವನ್ನು ಆಕ್ರಮಿಸಲು ಯತ್ನಿಸಿದಾಗ ಇಲ್ಲಿ ಉಗ್ರಕಾಳಗ ನಡೆಯಿತು. ಅದರ ಕುರುಹಾಗಿ ಜಪಾನೀ ಟ್ಯಾಂಕ್ ಒಂದು ಪಟ್ಟಣದ ನಡುವೆ ಮುರಿದುಬಿದ್ದಿದೆ. ಯುದ್ಧದಲ್ಲಿ ಮಡಿದವರ ಸ್ಮಾರಕವೊಂದು ಸ್ಥಾಪಿತವಾಗಿದೆ.

ಕೊಹಿಮ ಜಿಲ್ಲೆಯ ವಿಸ್ತೀರ್ಣ ಸು. 7,200 ಚ.ಕಿಮೀ. ಜನಸಂಖ್ಯೆ 314,366. ಕೊಹಿಮ ಜಿಲ್ಲೆ ಪರ್ವತಮಯ ಪ್ರದೇಶ. ಇಲ್ಲಿ ದೊಡ್ಡ ನದಿಗಳು ಇಲ್ಲ. ಇಲ್ಲಿರುವ ನಾಲ್ಕು ಮುಖ್ಯ ಶಿಖರಗಳು ಇವು; ಜಾಪ್‌ಮೊ (2969 ಮೀ) ಕಾಪು (2798 ಮೀ), ಪವಾನ (2749 ಮೀ) ಮತ್ತು ಕಪಾಮೇಸು (2393 ಮೀ). ಇಲ್ಲಿಯ ವಾರ್ಷಿಕ ಸರಾಸರಿ ಮಳೆ 200 ಸೆಂಮೀ. ಚಳಿಗಾಲದಲ್ಲಿ ನೀರು ಹೆಪ್ಪುಗಟ್ಟುವಷ್ಟು ಶೀತವಿರುತ್ತದೆ. ಡಿಸೆಂಬರ್ ಮತ್ತು ಜನವರಿ ತಿಂಗಳು ಬಲು ಚಳಿ. ಬೇಸಗೆಯ ವಾಯುಗುಣ ಹಿತಕರ. ಇದರಿಂದಾಗಿ ಕೊಹಿಮ ನಗರ ಒಂದು ಆರೋಗ್ಯಧಾಮವಾಗಿದೆ.

ಕೊಹಿಮ ಜಿಲ್ಲೆ ಬಹುತೇಕ ಅರಣ್ಯಪ್ರದೇಶ. ಶೇ. 18ರಷ್ಟು ಅರಣ್ಯ ಸರ್ಕಾರದ ಸ್ವಾಮ್ಯದಲ್ಲಿದೆ. ಕೃಷಿ ಇಲ್ಲಿಯ ಪ್ರಧಾನ ಉದ್ಯೋಗ. ಮೈದಾನ ಪ್ರದೇಶಗಳಲ್ಲಿ ಉಪಯೋಗಿಸುವ ಕೃಷಿ ಉಪಕರಣಗಳು ಇಲ್ಲಿ ಬಳಕೆಯಲ್ಲಿಲ್ಲ. ಜನರೇ ನೆಲವನ್ನು ಅಗೆದು ಹದಗೊಳಿಸುತ್ತಾರೆ. ಇಲ್ಲಿಯ ಪುರಾತನ ಕೃಷಿ ಪದ್ಧತಿಗೆ ಝೂಂ ಎಂದು ಹೆಸರು. ಮರಗಿಡಗಳನ್ನು ಕಡಿದು ಕೃಷಿಗೆ ಯೋಗ್ಯವನ್ನಾಗಿ ಮಾಡಿದ ಮೇಲೆ ಆ ಪ್ರದೇಶದಲ್ಲಿ 6–8 ವರ್ಷಗಳ ಕಾಲ ಬೆಳೆಯನ್ನು ತೆಗೆದು ಅನಂತರ ಅದನ್ನು ಬಿಟ್ಟು ಮುಂದಿನ ಅರಣ್ಯಪ್ರದೇಶಕ್ಕೆ ಬೆಳೆಯೊಡ್ಡಲು ತೆರಳುವರು. ಈಚೆಗೆ ಸುಧಾರಿತ ಕೃಷಿ ಪದ್ಧತಿಗಳು ಜಾರಿಗೆ ಬರುತ್ತಿವೆ. ಇಳಿಜಾರು ನೆಲವನ್ನು ಮೆಟ್ಟಲು ಮೆಟ್ಟಲಾಗಿ ಕಡಿದು ಕೃಷಿ ಮಾಡುವ ವಿಧಾನ ಅನುಸರಿಸಲಾಗುತ್ತಿದೆ. ಬತ್ತ ಮುಖ್ಯ ಬೆಳೆ. ಗೋದಿ ಮತ್ತು ಕಬ್ಬಿನ ಬೆಳೆಗಳೂ ವ್ಯಾಪಕವಾಗುತ್ತಿವೆ. ಪ್ರತಿ ಸಂಸಾರವೂ ಸಾಧಾರಣವಾಗಿ ತನಗೆ ಬೇಕಾಗುವಷ್ಟು ಬತ್ತವನ್ನು ಬೆಳೆದುಕೊಳ್ಳುತ್ತದೆ. ಇಲ್ಲಿ ಕೃಷಿ ಮತ್ತು ಹಾಲಿಗಾಗಿ ದನಕರುಗಳನ್ನು ಸಾಕುವುದು ಬಲು ವಿರಳ. ಅವನ್ನು ಸಾಮಾನ್ಯವಾಗಿ ಮಾಂಸಕ್ಕಾಗಿ ಸಾಕುವರು. ಹಂದಿ ಮತ್ತು ಕೋಳಿಸಾಕುವುದು ಜನರ ಉಪಕಸಬು.

ದೊಡ್ಡ ಕೈಗಾರಿಕೆ ಯಾವುದೂ ಇಲ್ಲಿ ಸ್ಥಾಪಿತವಾಗಿಲ್ಲ. ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರವಾದ ದೀಮಾಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಿದೆ. ಮನೆಗಳಲ್ಲಿ ನಾಗಾಮಹಿಳೆಯರು ಕುಶಲ ಕಲೆಗಳಲ್ಲಿ ಪರಿಣತಿ ಪಡೆದಿರುವರು. ಮಹಿಳೆಯರು ಸಣ್ಣ ಮಗ್ಗಗಳಿಂದ ಶಾಲುಗಳನ್ನು ನೇಯುತ್ತಾರೆ.

ಇಲ್ಲಿಯ ಮಣ್ಣು ಬಹಳ ಮೆದು. ಮಳೆಗಾಲದಲ್ಲಿ ರಸ್ತೆಗಳು ಕುಸಿದು ಸಂಚಾರಕ್ಕೆ ಅಡ್ಡಿಯನ್ನೊಡ್ಡುತ್ತವೆ. ನಾಗಾಲ್ಯಾಂಡ್ ರಾಜ್ಯ ಸ್ಥಾಪನೆಯಾದ ಮೇಲೆ ಒಳ್ಳೆಯ ರಸ್ತೆಗಳ ನಿರ್ಮಾಣವಾಗಿದೆ ಈಗ ಹೆಚ್ಚುಹೆಚ್ಚು ಬಸ್ಸುಗಳು ಕೊಹಿಮದಿಂದ ರಾಜ್ಯದ ಅನೇಕ ಕಡೆಗಳಿಗೆ ಕ್ರಮವಾಗಿ ಸಂಚರಿಸುತ್ತವೆ.

ಜಿಲ್ಲೆಯಲ್ಲಿ ನಾಲ್ಕು ಉಪವಿಭಾಗಗಳಿವೆ. ಒಂದೊಂದು ಉಪವಿಭಾಗವನ್ನೂ ಹಲವು ವೃತ್ತಗಳಾಗಿ ವಿಂಗಡಿಸಲಾಗಿದೆ. ಕೊಹಿಮ ಪಟ್ಟಣದ ಆಡಳಿತಕ್ಕಾಗಿ ನಗರ ಸಮಿತಿಯುಂಟು. ಈ ಸಮಿತಿಯಲ್ಲಿ ಎಂಟು ಚುನಾಯಿತ ಸದಸ್ಯರೂ 4 ನಾಮಕರಣ ಸದಸ್ಯರೂ ಇರುವರು. ಜಿಲ್ಲಾಧಿಕಾರಿ ಇದರ ಅಧ್ಯಕ್ಷ. ಚುನಾಯಿತ ಉಪಾಧ್ಯಕ್ಷ ನಗರಸಮಿತಿಯ ದೈನಂದಿನ ಕಾರ್ಯಗಳನ್ನು ನೋಡಿಕೊಳ್ಳುತ್ತಾನೆ. ಸಮಿತಿಯ ಅಧಿಕಾರಾವಧಿ ಮೂರು ವರ್ಷಗಳು. (ಎಂ.ಆರ್.ಜಿ.)

**ಕೊಳಚೆ ನೀರಿನ ಪರಿಷ್ಕರಣೆ:** ಭೂಮಿಯ ಮೇಲೆ ಶೇ. 71 ಭಾಗ ನೀರಿನಿಂದ ಆವೃತವಾಗಿದ್ದು ಇದರಲ್ಲಿ ಶೇ. 3 ಭಾಗ ಮಾತ್ರ ಶುದ್ಧ ನೀರಾಗಿದ್ದು ಮಾನವನ ಉಪಯೋಗಕ್ಕೆ ಯೋಗ್ಯವಾಗಿದೆ. ಈ ಶೇ. 3 ರಲ್ಲಿ ಕೇವಲ ಶೇ. 01.4 ಮಾತ್ರ ಕುಡಿಯಲು ಯೋಗ್ಯವಾಗಿದೆ. ಈ ಅತ್ಯಲ್ಪವಾಗಿರುವ ಸಿಹಿನೀರನ್ನು ಶುದ್ಧವಾಗಿಡಲು ಸಾಧ್ಯವಾಗದೆ ಮಾನವನ ಅತಿಕ್ರಮಣದಿಂದ ಮಲಿನಗೊಳ್ಳುತ್ತಿದೆ. ಹೀಗೆ ಮಾನವನ ಚಟುವಟಿಕೆಗಳಿಂದ ನೀರಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಲಕ್ಷಣಗಳ ಮಾರ್ಪಾಡಾಗುವಿಕೆಯನ್ನು ಜಲಮಾಲಿನ್ಯ ಎಂದು ಕರೆಯುವರು.

ಬೆಳೆಯುತ್ತಿರುವ ಜನಸಂಖ್ಯೆ, ನಗರೀಕರಣ, ಕೈಗಾರಿಕೀರಣ, ಕೃಷಿಕ್ಷೇತ್ರದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿರುವ ಕೀಟನಾಶಕ ಮತ್ತು ರಾಸಾಯನಿಕ ಗೊಬ್ಬರಗಳು ಜಲಮಾಲಿನ್ಯವಾಗುತ್ತಿರುವುದಕ್ಕೆ ಪ್ರಮುಖ ಕಾರಣವಾಗಿದೆ. ಇದಲ್ಲದೆ ಚರಂಡಿಗಳಿಂದ ಹರಿದು ಬರುವ ಕೊಳಚೆ ನೀರಿನಲ್ಲಿ ಮಾನವನ ಮತ್ತು ಪ್ರಾಣಿಗಳ ಮಲಮೂತ್ರಗಳ ಜೊತೆಗೆ ಆಹಾರದ ಶೇಷಾಂಶಗಳು, ಸಾಬೂನು ಮತ್ತು ಮಾರ್ಜಕ (ಡಿಟರ್ಜೆಂಟ್)ಗಳಿದ್ದು ಇವುಗಳಲ್ಲಿ ಹೆಚ್ಚು ರೋಗಾಣುಗಳಿದ್ದು ಇವು ನದಿ, ಕೆರೆಗಳಿಗೆ, ಸರೋವರ ಮತ್ತು ಸಮುದ್ರಗಳಿಗೆ ಸೇರುವುದರಿಂದ ಸ್ವಾಭಾವಿಕ ಜಲಾಶಯದ ನೀರಿನ ಗುಣಮಟ್ಟ ಕಲುಷಿತಗೊಂಡು ನೀರು ಮಲಿನವಾಗುತ್ತದೆ. ಈ ರೀತಿಯ ಜಲಮಾಲಿನ್ಯದಿಂದ ಮಾನವನಿಗೆ ಕಾಲರ, ಆಮಶಂಕೆ, ವಿಷಮಶೀತ ಜ್ವರ, ಕಾಮಾಲೆ, ರಕ್ತಭೇದಿ ಕಾಯಿಲೆಗಳು ಬರುವುದಲ್ಲದೆ ಈ ನೀರನ್ನು ಸೇವಿಸಿದ ಪ್ರಾಣಿಗಳೂ ಸಹ ಅನೇಕ ರೋಗಗಳಿಗೆ ತುತ್ತಾಗುತ್ತವೆ.

ಈ ಮೇಲ್ಕಂಡ ಕಾರಣಗಳಿಂದ ಉಂಟಾಗುವ ಕೊಳಚೆ ನೀರನ್ನು ನದಿ ಅಥವಾ ಸಾಗರಗಳಲ್ಲಿ ವಿಸರ್ಜಿಸುವ ಮೊದಲು ಅದನ್ನು ಸಂಸ್ಕರಣೆ ಮಾಡಿದರೆ ಕೊಳಚೆ ನೀರಿನ ಮಾಲಿನ್ಯವನ್ನು ತಡೆಗಟ್ಟಬಹುದು. ಈ ಪರಿಷ್ಕರಣೆ ವಿಧಾನವನ್ನು ಕೆಳಕಂಡ 3 ಹಂತಗಳಲ್ಲಿ ಕೈಗೊಳ್ಳಬಹುದು.

1) ಪ್ರಾಥಮಿಕ ಹಂತದ ಪರಿಷ್ಕರಣೆ: ಚರಂಡಿಯ ಕೊಳಚೆ ನೀರಿನಲ್ಲಿ ತೇಲಾಡುವ ಘನರೂಪದ ವಸ್ತುಗಳಾದ ಚಿಂದಿಬಟ್ಟೆ, ಕಸಕಡ್ಡಿ, ಹಣ್ಣುಗಳ ಸಿಪ್ಪೆ ಮುಂತಾದ ತ್ಯಾಜ್ಯ ವಸ್ತುಗಳನ್ನು ಮಾನವನಿಂದ ಅಥವಾ ಯಾಂತ್ರಿಕ ವಿಧಾನದಿಂದ ಹೊರ ತೆಗೆಯುವುದರಿಂದ ನೀರಿನಲ್ಲಾಗುವ ಮಾಲಿನ್ಯವನ್ನು ತಡೆಗಟ್ಟಬಹುದು.

2) ದ್ವಿತೀಯ ಹಂತದ ಪರಿಷ್ಕರಣೆ: ಈ ಹಂತದ ಪರಿಷ್ಕರಣೆಯಲ್ಲಿ ಮಾನವನಿಂದ ಕಲುಷಿತವಾಗುವ ವಸ್ತುಗಳಾದ ಶೇಷಾಂಶಗಳು, ಸಾಬೂನು ಮತ್ತು ಮಾರ್ಜಕ, ಚರಂಡಿಗಳಿಂದ ಹರಿದು ಬರುವ ಕೊಳಚೆನೀರು, ಸಕ್ಕರೆ, ಕಾಗದ, ಬಟ್ಟೆ, ಕಾರ್ಖಾನೆಗಳಿಂದ ಹೊರಸೂಸುವ ತ್ಯಾಜ್ಯ ಪದಾರ್ಥಗಳು, ಆಮ್ಲಗಳು, ಕ್ಷಾರಗಳು ನೀರಿನೊಡನೆ ಮಿಶ್ರಣವಾಗುವುದರಿಂದ ನೀರು ಮಲಿನವಾಗುತ್ತದೆ. ಇಂತಹ ಕೊಳಚೆ ನೀರಿನಲ್ಲಿ ಗಾಳಿ ಹಾಯಿಸುವುದರಿಂದ ಕಾರ್ಬನ್ ಸಂಯುಕ್ತಗಳ ಮೇಲೆ ಬ್ಯಾಕ್ಟೀರಿಯಗಳು ವಿಘಟನೆಗೊಳ್ಳುತ್ತವೆ. ಅನಂತರ ಕ್ಲೋರಿನೀಕರಣ ನಡೆಸಲಾಗುವುದು. ಈ ಕ್ರಿಯೆಯಿಂದ ಉಂಟಾದ ನೀರು ಶುದ್ಧವಾಗಿ ಪರಿಣಮಿಸುವುದರಿಂದ ಹಲವಾರು ಕ್ಷೇತ್ರಗಳಿಗೆ ಬಳಕೆ ಮಾಡಲಾಗುತ್ತದೆ.

3) ತೃತೀಯ ಹಂತದ ಪರಿಷ್ಕರಣೆ: ಇದು ಕೊನೆಯ ಹಂತವಾಗಿದ್ದು ಈ ಹಂತದಲ್ಲಿ ಮಲಿನಗೊಂಡಿರುವ ಕೊಳಚೆ ನೀರಿನಲ್ಲಿ ಮಿಶ್ರಣವಾಗಿರುವ ನೈಟ್ರೇಟ್ ಮತ್ತು ಫಾಸ್ಫೇಟ್ ಪದಾರ್ಥಗಳನ್ನು ಬೇರ್ಪಡಿಸಿ ನೀರನ್ನು ಶುದ್ಧೀಕರಣಕ್ಕೆ ಒಳಪಡಿಸಿ ಸಂಸ್ಕರಿಸಬಹುದು.

ಹೀಗೆ ಈ ಮೇಲ್ಕಂಡ ವಿಧಾನಗಳಿಂದ ಕೊಳಚೆ ನೀರಿನ ಪರಿಷ್ಕರಣೆ ಮಾಡುವುದರಿಂದ ಮಾನವ ಮತ್ತು ಪ್ರಾಣಿಗಳಿಗೆ ತಗುಲುವ ಅನೇಕ ರೋಗಗಳನ್ನು ತಡೆಗಟ್ಟಬಹುದು. (ಜಿ.ಡಿ.)

**ಕೊಳಚೆ ಪ್ರದೇಶಗಳು:** ಕೊಳಚೆ ಪ್ರದೇಶಗಳ ಕಾಯಿದೆ 1956ರ ಪ್ರಕಾರ ಕೊಳಚೆ ಪ್ರದೇಶದ ವ್ಯಾಖ್ಯೆ ಹೀಗಿದೆ: ಶಿಥಿಲಗೊಂಡ, ಕಿಕ್ಕಿರಿದ ಜನಸಂದಣಿಯಿಂದ ಕೂಡಿ, ದೋಷಪೂರ್ಣ ವ್ಯವಸ್ಥೆಯ, ಗಾಳಿ ಬೆಳಕು ಮತ್ತು ನೈರ್ಮಲ್ಯದ ಅಭಾವ ಅಥವಾ ಈ ಎಲ್ಲವೂ ಒಟ್ಟಿಗೆ ಇರುವ ವಸತಿಗಳ ದುಸ್ಥಿತಿಯಿಂದಾಗಿ, ಅಲ್ಲಿ ವಾಸಿಸುವವರ ರಕ್ಷಣೆ, ಆರೋಗ್ಯ ಮತ್ತು ನೈತಿಕ ಬೆಳವಣಿಗೆಗೆ ಧಕ್ಕೆಯೆನಿಸುವ ವಸತಿಗೃಹಗಳಿಂದ ಕೂಡಿದ ಪ್ರದೇಶ. ಸಮಾಜಶಾಸ್ತ್ರಜ್ಞರು ಕಾಲಾನುಕ್ರಮದಲ್ಲಿ ಕೊಳಚೆಪ್ರದೇಶವೆಂಬ ಶಬ್ದವನ್ನು ವಿವಿಧ ರೀತಿಯಾಗಿ ಅರ್ಥೈಸಿರುವರು. ಇದಕ್ಕೆ ಕೊಳಚೆ ಪ್ರದೇಶಗಳ ವೈವಿಧ್ಯತೆ ಮುಖ್ಯಕಾರಣ. ಒಂದೊಂದು ಕೊಳಚೆಪ್ರದೇಶಗಳೂ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಸ್ಥಳದಿಂದ ಸ್ಥಳಕ್ಕೆ ಅವು ವ್ಯತ್ಯಾಸಹೊಂದುತ್ತವೆ. ಅವುಗಳ ಸ್ವಭಾವ, ರಚನೆ, ಸಂಸ್ಕೃತಿ, ಸಮಸ್ಯೆ, ಹುಟ್ಟು–ಬೆಳವಣಿಗೆ ಇತ್ಯಾದಿ ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ನಡುವೆ ವಿಭಿನ್ನತೆಯಿರುತ್ತದೆ.

ಕೊಳಚೆ ಪ್ರದೇಶ ಇತ್ತೀಚಿನ ಸಾರ್ವತ್ರಿಕ ಸಾಮಾಜಿಕ ಸಮಸ್ಯೆಯಾಗಿವೆ. ಕೈಗಾರಿಕೀಕರಣ ಮತ್ತು ನಗರೀಕರಣದ ಫಲವಾಗಿ ಹುಟ್ಟಿದ ಒಂದು ವ್ಯವಸ್ಥೆ. ಇದೊಂದು ಪ್ರಪಂಚದ ಪ್ರಮುಖ ನಾಗರೀಕ ಸಮಸ್ಯೆ. ನ್ಯೂಯಾರ್ಕ್, ಪ್ಯಾರಿಸ್, ಲಂಡನ್, ಮ್ಯೂನಿಚ್, ಬ್ಯಾಂಕಾಕ್, ಮುಂಬಯಿ, ಕೋಲ್ಕತ, ಬೆಂಗಳೂರು ಮುಂತಾದ ಪ್ರಗತಿ ಹೊಂದಿದ ನಗರಗಳಲ್ಲೂ ಕೊಳಗೇರಿಗಳಿವೆ. ಕೈಗಾರಿಕಾ ಕೇಂದ್ರಗಳು ನಗರಗಳಾಗುತ್ತಿರುವುದರಿಂದ ಮತ್ತು ನಗರಗಳಲ್ಲಿ ಕಾರ್ಖಾನೆಗಳು ಹೆಚ್ಚುತ್ತಿರುವುದರಿಂದ, ಲಕ್ಷಾಂತರ ಮಂದಿಗೆ ಉದ್ಯೋಗ ದೊರಕುತ್ತಿದ್ದು, ಜನರು ಹಳ್ಳಿಗಳಿಂದ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಅವರಿಗೆ ಉದ್ಯೋಗ ಸಿಕ್ಕಿ ವಾಸಕ್ಕೆ, ಕಡಿಮೆ ವೆಚ್ಚಕ್ಕೆ, ಮನೆಗಳು ಸಿಗದೆ ಸಮೀಪದಲ್ಲೇ ಸಿಕ್ಕ ಸ್ಥಳಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ನೆಲೆಸಿರುತ್ತಾರೆ. ಅವರು ಗುಡಿಸಲನ್ನು ಬಿದಿರು, ತೆಂಗಿನಗರಿ, ಚಿಂದಿಬಟ್ಟೆ, ಮಣ್ಣು, ಗೋಣಿಚೀಲ, ತಗಡು, ಪ್ಲಾಸ್ಟಿಕ್ ಮುಂತಾದವುಗಳಿಂದ ನಿರ್ಮಿಸಿಕೊಳ್ಳುತ್ತಾರೆ. ಇವು ಕಾರ್ಖಾನೆಯ ಕಾರ್ಮಿಕರು, ದಿನಗೂಲಿಗಳು ಹಾಗೂ ಬಡವರ ನೆಲೆಗಳಾಗಿದ್ದು, ಮೂಲ ಸೌಲಭ್ಯಗಳಿಂದ ವಂಚಿತವಾಗಿರುತ್ತವೆ.

ಕೊಳಚೆ ಪ್ರದೇಶಗಳು ಮೊದಲ ನೋಟಕ್ಕೆ, ಕೊಳಕಾಗಿ ಅಸಹ್ಯವಾಗಿ ಕಾಣುತ್ತವೆ. ನಿವಾಸಿಗರ ಜೋಪಡಿಗಳು ಯಾವ ಕ್ಷಣದಲ್ಲಾದರೂ ಕುಸಿದು ಬೀಳಬಹುದು ಎನ್ನುವಂತಿರುತ್ತವೆ. ಜನಸಾಂದ್ರತೆ ಅತಿಹೆಚ್ಚು. ಎಲ್ಲಾ ವಯೊಮಾನದವರು ಒಟ್ಟಿಗೆ ವಾಸಿಸುತ್ತಾರೆ. ಆರ್ಥಿಕವಾಗಿ ಹಿಂದುಳಿದಿರುತ್ತಾರೆ. ಇಲ್ಲಿ ಹುಟ್ಟು ಸಾವುಗಳು ಹೆಚ್ಚು, ನೈರ್ಮಲ್ಯದ ಪ್ರಜ್ಞೆ ಅತ್ಯಂತ ಕಡಿಮೆ. ಇಲ್ಲಿ ವಾಸಿಸುವ ಜನರ ನೈತಿಕ ಮಟ್ಟ ಬಹಳ ಕಡಿಮೆ. ಅನೈತಿಕ ಚಟುವಟಿಕೆಗಳು ಸಾಮಾನ್ಯ, ಅಪರಾಧ, ಬಾಲಾಪರಾಧ, ವೇಶ್ಯಾವೃತ್ತಿ, ಕೊಲೆ, ಸುಲಿಗೆ, ಮಾನಭಂಗ, ಕಳ್ಳಸಾಗಣೆ, ಕಳ್ಳತನ ಮುಂತಾದ ಎಲ್ಲ ವಿಧವಾದ ಸಮಾಜದ್ರೋಹಿ, ಅಮಾನುಷ ಹಾಗೂ ಅಕ್ರಮ ಚಟುವಟಿಕೆಗಳ ಕೇಂದ್ರಗಳಾಗಿವೆ.

ಕೊಳಚೆ ಪ್ರದೇಶದ ಜನರ ಸಾಂಸ್ಕೃತಿಕ ಜೀವನ ಕೆಳಮಟ್ಟದ್ದು. ಕೊಳಚೆ ಪ್ರದೇಶದ ಜನರು ಹೆಚ್ಚು ಅನಕ್ಷರಸ್ಥರು.

ಕೊಳಚೆ ಪ್ರದೇಶಗಳ ನಿರ್ಮೂಲನೆಯ ಬಗ್ಗೆ ಪ್ರಜ್ಞಾವಂತ ಪ್ರಜೆಗಳಿಗೆ ಅರಿವಿದೆ. ಪೌರಪ್ರಜ್ಞೆಯುಳ್ಳವರು, ಆಡಳಿತಗಾರರು ಹಾಗೂ ಪರಿಸರ ಶಾಸ್ತ್ರಜ್ಞರು ಈ ಸಮಸ್ಯೆಯ ನಿರ್ಮೂಲನೆಗೆ ಆಸಕ್ತಿ ವಹಿಸಿದ್ದಾರೆ. ಈ ಪ್ರದೇಶಗಳ ನಿರ್ಮೂಲನೆ ನಿವಾರಣೋಪಾಯಗಳನ್ನು ಕಂಡುಹಿಡಿವುದಕ್ಕಾಗಿ, ರಾಷ್ಟ್ರೀಯ ಮಟ್ಟದ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನಗಳನ್ನು ನಡೆಸುತ್ತಿದ್ದಾರೆ. ನಗರ ಪುರಸಭೆಯವರಿಂದ ಇವರಿಗೆ ನೈರ್ಮಲ್ಯ, ಗಾಳಿ, ಬೆಳಕುಳ್ಳ ವಸತಿಗಳನ್ನು ನಿರ್ಮಿಸಿಕೊಡಲು ಪ್ರಯತ್ನ ನಡೆಯುತ್ತಿದೆ.

ಕೈಗಾರಿಕೆಗಳನ್ನು ವಿಕೇಂದ್ರೀಕರಣಗೊಳಿಸುವುದು, ಅಲ್ಲಿಯ ಜನರಿಗೆ ವಿದ್ಯಾಭ್ಯಾಸ ಕೊಡಲು ಪ್ರಯತ್ನಿಸುವುದು ಈ ಮೂಲಕ ಜನರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಪ್ರಯತ್ನಿಸಲಾಗುತ್ತಿದೆ. ಮುಂಬಯಿನ ದಾರ್ವಿ, ಭಾರತದ ಹೆಸರಾಂತ ಕೊಳಗೇರಿ. ಜಪಾನ್‌ನಲ್ಲಿ ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿಯೂ ಇಂಥ ಕೊಳಗೇರಿಗಳಿವೆ. (ಎಸ್.ಎಸ್.ಎನ್.)

**ಕೊಳವೆ ಬಾವಿ:** ಭೂಮಿಯ ಮೇಲ್ಮೈಯಿಂದ ಕೆಳಗೆ ಹಲವು ಪದರಗಳಲ್ಲಿ ಹುದುಗಿರುವ ಜಲವನ್ನು ಮೇಲಕ್ಕೆತ್ತುವ ಉದ್ದೇಶದಿಂದ ತೋಡುವ ಕೊಳವೆ ಆಕಾರದ ಬಾವಿ (ಬೋರ್ ವೆಲ್). ಮಳೆಯ ನೀರು ನೆಲದ ಮೇಲೆ ಬಿದ್ದು ಅದರ ಒಂದು ಭಾಗ ನೆಲದೊಳಗೆ ಸೋಸಿ ನೆಲಮಟ್ಟದಿಂದ ಕೆಳಗಿರುವ ಹಲವಾರು ಮರಳು ಪದರಗಳಲ್ಲಿ ಬಹುಮಂದವಾಗಿ ಹರಿಯುತ್ತಿರುತ್ತದೆ. ಇಂಥ ಪದರಗಳು ನೆಲಮಟ್ಟದಿಂದ ಬಹು ಆಳವಾಗಿದ್ದ ಪಕ್ಷದಲ್ಲಿ ಆ ಜಲವನ್ನು ಎಟುಕಿಸಿಕೊಳ್ಳಬೇಕಾದರೆ ಸಾಮಾನ್ಯವಾದ ತೆರೆದ ಬಾವಿಗಳನ್ನು ತೋಡಲು ದುಸ್ಸಾಧ್ಯವೂ ಅತಿ ವೆಚ್ಚವೂ ಆಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ಕೊಳವೆ ಬಾವಿಗಳ ಬಳಕೆಯಿಂದ ಕಾರ್ಯಸಾಧನೆಯಾಗುತ್ತದೆ. ಯಂತ್ರೋಪಕರಣಗಳಿಂದ ಭೂಮಿಯ ಮೇಲ್ಪದರಗಳನ್ನು ಕೊರೆದು ಕೆಳಗಿನ ಜಲಮಯ ಪದರಗಳನ್ನು ಮುಟ್ಟಬಹುದು. ನದಿ ಕಾಲುವೆಗಳಿಂದ ದೂರವಾಗಿರುವ ಪ್ರದೇಶ ಅಥವಾ ಪಟ್ಟಣಗಳಿಗೆ ನೀರಾವರಿ ಅಥವಾ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾದಲ್ಲಿ ಕೊಳವೆ ಬಾವಿಗಳು ಸುಲಭಸಾಧ್ಯವೂ ಉಪಯುಕ್ತವೂ ಆಗುತ್ತವೆ. (ಕೆ.ಎಸ್.ಕೆ.)

**ಕೊಳವೆ ಮಾರ್ಗಗಳು:** ದ್ರವ ಅಥವಾ ಅನಿಲ ವಸ್ತುಗಳನ್ನು ಸಾಗಿಸಲು, ನಿರ್ಮಿತವಾದ ವಿಶಿಷ್ಟ ಮತ್ತು ಅತ್ಯಂತ ಅಗ್ಗದ ಸಾಧನ, ಕೊಳವೆ ಸಾಲು (ಪೈಪ್‌ಲೈನ್ಸ್). ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಾಗಣೆಗೆ ವಿಶೇಷವಾಗಿ ಇವನ್ನು ಬಳಸಲಾಗುತ್ತಿದೆ. ಬಾವಿಗಳಿಂದ ಹೊರಬರುವ ಉತ್ಪನ್ನವನ್ನು ಸಂಗ್ರಹಿಸಿ ಕೊಳವೆಗಳ ಮೂಲಕ ಅದನ್ನು ಪರಿಷ್ಕರಣ ಕೇಂದ್ರಗಳಿಗೋ ಸಂಧಿಬಿಂದುಗಳಿಗೋ ಸಾಗಿಸಲಾಗುತ್ತದೆ. ಪರಿಷ್ಕರಣವಾದ ಉತ್ಪನ್ನವನ್ನು ವಿತರಣೆ ಮಾಡುವುದಕ್ಕೂ ಕೊಳವೆಗಳನ್ನು ಹಾಕಲಾಗುತ್ತದೆ. ಆದ್ದರಿಂದ ಕೊಳವೆ ಮಾರ್ಗಗಳನ್ನು ಸ್ಥೂಲವಾಗಿ ಸಂಗ್ರಹಣ ಮತ್ತು ವಿತರಣ ಮಾರ್ಗಗಳೆಂದೂ ಪ್ರಧಾನ ಮಾರ್ಗಗಳೆಂದೂ ವಿಂಗಡಿಸಬಹುದು. ಉತ್ಪನ್ನ ಮಾರ್ಗ ಮತ್ತು ಕಚ್ಚಾ ಸಾಮಗ್ರಿ ಮಾರ್ಗ ಎಂದೂ ಕೂಡ ಇವನ್ನು ವಿಭಾಗಿಸುವುದುಂಟು. ಪ್ರಪಂಚದ ಪ್ರಮುಖ ತೈಲ ಮತ್ತು ನೈಸರ್ಗಿಕ ಅನಿಲ ಉತ್ಪಾದನಾ ದೇಶಗಳಲ್ಲಿ ಇದು ವ್ಯಾಪಕವಾಗಿ ಬಳಕೆಯಲ್ಲಿದೆ. ಕೊಳವೆ ಮಾರ್ಗ ಅತ್ಯಂತ ಅಗ್ಗದ ಸಾಗಣೆಯ ಸಾಧನವಾದರೂ ಇದರ ನಿರ್ಮಾಣ ಬಹಳ ದುಬಾರಿ. ಅದರ ನಿರ್ಮಾಣದ ಅಗಾಧ ವೆಚ್ಚ ಸಾರ್ಥಕವಾಗಬೇಕಾದರೆ ಕೊಳವೆ ಮಾರ್ಗದಲ್ಲಿ ತೈಲ ಅಥವಾ ಅನಿಲ ಒಂದು ಕನಿಷ್ಠ ಮಿತಿಗಿಂತ ಕಡಿಮೆಯಿಲ್ಲದ ಪರಿಮಾಣದಲ್ಲಿ ಧಾರಾಕಾರವಾಗಿ ಹರಿಯುತ್ತಿರುವುದು ಅವಶ್ಯ.

ಇತ್ತೀಚೆಗೆ ಭಾರತದಲ್ಲಿ ಕೊಳವೆ ಮಾರ್ಗಗಳು ಹೆಚ್ಚು ಬಳಕೆಗೆ ಬರುತ್ತಿವೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಭಾರತದ ಅಸ್ಸಾಮಿನ ದಿಗ್ಬಾಯಿಯಲ್ಲಿ ಒಂದೇ ಒಂದು ತೈಲ ಗಣಿಯಿತ್ತು. ಆದರೆ 1956ರಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಸಮಿತಿ ಮತ್ತು ಆಯಿಲ್ ಇಂಡಿಯ ಲಿಮಿಟೆಡ್ ಸಂಸ್ಥೆಯ ಪ್ರಯತ್ನಗಳಿಂದಾಗಿ ಉತ್ತರ ಅಸ್ಸಾಂ ಮತ್ತು ಗುಜರಾತ್ ಪ್ರದೇಶಗಳಲ್ಲಿ ಹೆಚ್ಚು ತೈಲ ಮತ್ತು ಅನಿಲಗಳನ್ನು ಉತ್ಪಾದಿಸಲು ಸಾಧ್ಯವಾಗಿದೆ. ಪೆಟ್ರೋಲಿಯಂ ಹಾಗೂ ಇತರ ತೈಲ ವಸ್ತುಗಳು ದೇಶದಲ್ಲಿ ಹಲವೆಡೆ ಉತ್ಪಾದನೆಯಾಗುತ್ತಿವೆ. ಈ ಪ್ರದೇಶಗಳಲ್ಲಿ ಕೊಳಚೆ ಮಾರ್ಗಗಳು ಬಳಕೆಯಲ್ಲಿವೆ.

ಭಾರತದಲ್ಲಿ ಈವರೆಗೆ ಜಾರಿಗೆ ಬಂದಿರುವ ಕೊಳವೆ ಮಾರ್ಗ ಕಾಮಗಾರಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು : 1 ನಹರ್‌ಕಟಿಯಾ–ನುನ್ಮತಿ–ಬರೌನಿ ಕಚ್ಚಾ ತೈಲ ಕೊಳವೆ ಮಾರ್ಗ, 2 ಸಿಲಿಗುರಿ ಉತ್ಪನ್ನ ಕೊಳವೆ ಮಾರ್ಗ, 3 ಹಾಲ್ದಿಯಾ–ಬರೌನಿ–ಕಾನ್ಪುರ ಕೊಳವೆಮಾರ್ಗ ಮತ್ತು 4 ಗುಜರಾತ್ ಕೊಳವೆ ವ್ಯವಸ್ಥೆ. ಟ್ರಾಂಬೇ ಮತ್ತು ವಿಶಾಖಪಟ್ಟಣಗಳಲ್ಲಿ ಖಾಸಗಿ ವಲಯಕ್ಕೆ ಸೇರಿದ ಮೂರು ತೈಲ ಪರಿಷ್ಕರಣ ಕೇಂದ್ರಗಳಿವೆ. ಭಾರತ ಸರ್ಕಾರದ ಗೌಹಾತಿ, ಬರೌನಿ, ಕೊಯಾಲಿ, ಕೊಚ್ಚಿ, ಚೆನ್ನೈ ಹಾಗೂ ಹಾಲ್ದಿಯಾಗಳಲ್ಲಿ ತೈಲ ಪರಿಷ್ಕರಣ ಕೇಂದ್ರಗಳಿವೆ. ಕೊಳವೆ ಮಾರ್ಗಗಳನ್ನು ಸರಿಯಾಗಿ ನಿಯಂತ್ರಿಸುವುದು ಅತಿಮುಖ್ಯ ವಿಷಯ. ಇಲ್ಲದಿದ್ದರೆ ಸ್ವತ್ತಿಗೆ ಅಪಾರ ಹಾನಿಯುಂಟಾಗುವುದಲ್ಲದೆ ಅದರಿಂದ ಅನೇಕ ಕೈಗಾರಿಕೆಗಳ ಉತ್ಪಾದನಾಕಾರ್ಯಕ್ಕೆ ತಡೆಯುಂಟಾಗುತ್ತದೆ. ಆಸ್ಫೋಟನೆಯ ಅಪಾಯ ಅಧಿಕ. (ಎಂ.ಎಚ್.)

**ಕೊಳ್ಳೇಗಾಲ:** ಚಾಮರಾಜನಗರ ಜಿಲ್ಲೆಯ ಪೂರ್ವಭಾಗದ ಒಂದು ತಾಲ್ಲೂಕು. ಆ ತಾಲ್ಲೂಕಿನ ಮುಖ್ಯಸ್ಥಳ, ತಾಲ್ಲೂಕು ಉ. ಅ. $11^0 46'–12^0 18'$ ಮತ್ತು ಪೂ. ರೇ. $76^0 59'–77^0 47'$ ನಡುವೆ ಹಬ್ಬಿದೆ. ಇದರ ವಾಯವ್ಯ, ಉತ್ತರ ಪೂರ್ವದ ಅಂಚುಗಳಲ್ಲಿ ಕಾವೇರಿ ನದಿ ಹರಿಯುತ್ತದೆ. ಕಾವೇರಿಯ ಗಗನ ಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳೂ ಶಿವಸಮುದ್ರವೂ ಇರುವುದು ಕೊಳ್ಳೇಗಾಲಕ್ಕೆ ವಾಯವ್ಯದಲ್ಲಿ. ಕೊಳ್ಳೇಗಾಲದ ವಿಸ್ತೀರ್ಣ 2786 ಕಿಮೀ. ತಾಲ್ಲೂಕಿನಲ್ಲಿ 140 ಹಳ್ಳಿಗಳಿವೆ. ಕೊಳ್ಳೇಗಾಲವೊಂದೇ ಪಟ್ಟಣ. ಕೊಳ್ಳೇಗಾಲ ತಾಲ್ಲೂಕು ಮೊದಲು ಮದರಾಸು ರಾಜ್ಯದ ಕೊಯಮತ್ತೂರು ಜಿಲ್ಲೆಗೆ ಸೇರಿತ್ತು. 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದಾಗ ಅದನ್ನು ಮೈಸೂರು ಜಿಲ್ಲೆಗೆ ಸೇರಿಸಲಾಯಿತು. ಇತ್ತೀಚಿನ ಜಿಲ್ಲಾ ಪುನಾ ರಚನೆಯಾದಾಗ ಇದನ್ನು ಚಾಮರಾಜನಗರ ಜಿಲ್ಲೆಗೆ ಸೇರಿಸಲಾಗಿದೆ.

ಕೊಳ್ಳೇಗಾಲ ತಾಲ್ಲೂಕು ಮೈಸೂರು ಪ್ರಸ್ಥಭೂಮಿಯ ಒಂದು ಭಾಗ, ಪೂರ್ವ ಘಟ್ಟಗಳ ದಕ್ಷಿಣದ ಕವಲುಗಳು ತಾಲ್ಲೂಕಿನಲ್ಲಿ ಹಬ್ಬಿವೆ. ಕೊಳ್ಳೇಗಾಲದ ಪಶ್ಚಿಮಕ್ಕಿರುವ ಬಿಳಿಗಿರಿರಂಗನಬೆಟ್ಟ ಈ ಕವಲುಗಳಲ್ಲಿ ಒಂದು. ಇದು ಕೊಳ್ಳೇಗಾಲವನ್ನು ಚಾಮರಾಜನಗರ ತಾಲ್ಲೂಕಿನಿಂದ ಪ್ರತ್ಯೇಕಿಸಿದೆ. ತಾಲ್ಲೂಕಿನ ಪೂರ್ವದಲ್ಲಿರುವ ಬೆಟ್ಟಗಳಲ್ಲಿ ಮಹದೇಶ್ವರ ಬೆಟ್ಟ ಮುಖ್ಯವಾದದ್ದು. ಕೊಳ್ಳೇಗಾಲದ ವಾಯುಗುಣ ಒಟ್ಟಿನಲ್ಲಿ ಮೈಸೂರು ಜಿಲ್ಲೆಯದಕ್ಕಿಂತ ಭಿನ್ನವಾಗಿಲ್ಲ. ಮಳೆಯ ವಾರ್ಷಿಕ ಸರಾಸರಿ 80 ಸೆಂಮೀ. ತಾಲ್ಲೂಕಿನ ಸು. ಅರ್ಧ ಭಾಗ ಕಾಡುಗಳಿಂದ ಕೂಡಿದೆ. ಜನರ ಮುಖ್ಯ ಕಸುಬು ಕೃಷಿ. ರೇಷ್ಮೆ ವ್ಯವಸಾಯವೂ ನಡೆಯುತ್ತದೆ. ಆಲಂಬಾಡಿ ತಳಿಯ ದನ ಪ್ರಸಿದ್ಧವಾಗಿದೆ. ಜನಸಂಖ್ಯೆ 3,36,520.

ಮಹದೇಶ್ವರನ ಬೆಟ್ಟ ಪ್ರಸಿದ್ಧ ಯಾತ್ರಾಸ್ಥಳ. ಇಲ್ಲಿಗೆ ನಾಡಿನ ನಾನಾ ಕಡೆಗಳಿಂದ ಯಾತ್ರಾರ್ಥಿಗಳು ಬರುವರು. ದೀಪಾವಳಿ ಮತ್ತು ಶಿವರಾತ್ರಿ ಸಮಯದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ.

ತಾಲ್ಲೂಕಿನ ಆಡಳಿತ ಕೇಂದ್ರವಾದ ಕೊಳ್ಳೇಗಾಲ ಪಟ್ಟಣ ಉ. ಅ. $12^0 10'$ ಮತ್ತು ಪೂ. ರೇ. $.77^0 7'$ ದಲ್ಲಿದೆ. ಜನಸಂಖ್ಯೆ 52,450. ಇದು ರಾಜ್ಯದ ರೇಷ್ಮೆ ಕೈಗಾರಿಕೆಯ ಒಂದು ಕೇಂದ್ರ. ಇಲ್ಲಿಯ ಜರತಾರಿ ಬಟ್ಟೆಗಳು ಹಿಂದಿನಿಂದಲೂ ಪ್ರಸಿದ್ಧವಾಗಿವೆ. ಪ್ರಾಥಮಿಕದಿಂದ ಪದವಿಯವರೆಗೆ ಶಿಕ್ಷಣ ಸೌಲಭ್ಯವುಂಟು. (ಪಿ.ಎಚ್.)

**ಕೋಕೋ:** ಉಷ್ಣವಲಯದ ಹಾಗೂ ಪ್ರಮುಖ ವಾಣಿಜ್ಯ ಬೆಳೆ. ಇದನ್ನು ಸಮಭಾಜಕವೃತ್ತದಿಂದ $20^0$ ಉತ್ತರ ಮತ್ತು ದಕ್ಷಿಣಗಳಲ್ಲಿ ಮಾತ್ರ ಬೆಳೆಯುತ್ತಾರೆ. ಹೆಚ್ಚು ಕಡಿಮೆ $27^0$ ಸೆಂ. ಸರಾಸರಿ ಉಷ್ಣತೆ ಇದರ ಬೆಳೆಗೆ ಅತ್ಯಾವಶ್ಯಕ. ಹೆಚ್ಚು ಆರ್ದ್ರತೆಯಿದ್ದು ಗರಿಷ್ಠ $38^0$ ಸೆಂ.ಮೀರಿದರೂ ಗಿಡಗಳಿಗೆ ಹಾನಿಯುಂಟಾಗುವುದಿಲ್ಲ. ಆದರೆ ಉಷ್ಣತೆ $18^0$ ಸೆಂ.ಗಿಂತ ಕಡಿಮೆಯಿರಬಾರದು. ಕೋಕೋ ಬೆಳೆಗೆ ವರ್ಷ ಪೂರ್ತಿ ವ್ಯಾಪಿಸಿದಂತೆ

ಕನಿಷ್ಠಪಕ್ಷ 100 ಸೆಂಮೀ ಮಳೆ ಬೀಳಬೇಕು. ನೀರು ಸರಾಗವಾಗಿ ಇಳಿಯಬಲ್ಲ ಹಾಗೂ ಸಸ್ಯಜನ್ಯ ಗೊಬ್ಬರ ಯಥೇಚ್ಛವಾಗಿರುವ ಮಣ್ಣು ಅಗತ್ಯ. ಬಲವಾಗಿ ಬೀಸುವ ಗಾಳಿಯಿಂದ ರಕ್ಷಣೆಯಿರಬೇಕಲ್ಲದೆ ನೆರಳೂ ಅತ್ಯಗತ್ಯ.

ಕೋಕೋವನ್ನು ಅದರ ಸ್ವಾದದ ಆಧಾರದ ಮೇಲೆ ಸಾಮಾನ್ಯ ಮತ್ತು ಉತ್ತಮ ಎಂಬ ಎರಡು ದರ್ಜೆಗಳಾಗಿ ವಿಂಗಡಿಸಲಾಗುತ್ತದೆ. ವರ್ಗೀಕರಣ ಕೋಕೋವಿನ ಮುಖ್ಯ ಬಗೆಗಳಿಗೆ ಸಂಬಂಧಪಟ್ಟುದಾಗಿದೆ. ಕೋಕೋವಿನ ಬಗೆಗಳಾದ ಕ್ರಿಯಲೊ ಮತ್ತು ಟ್ರೈನಿಟೇರಿಯೊ ಎಂಬುವು ಉತ್ತಮ ದರ್ಜೆಯ ಕೋಕೋವನ್ನು ಕೊಡುತ್ತವೆ. ಕೋಕೋ ಉತ್ಪನ್ನದ ಸು. ಶೇ. 10 ಭಾಗ ಈ ದರ್ಜೆಗೆ ಸೇರಿದುದು. ಉಳಿದ ಶೇ. 90 ಭಾಗ ಫೊರ್ಯಾಸ್ಟಿರೊ ಎಂಬ ಬಗೆಯಿಂದ ಬರುವ ಸಾಮಾನ್ಯ ಕೋಕೋ. ಉತ್ತಮ ದರ್ಜೆಯ ಕೋಕೋವನ್ನು ಅರ್ರಿಬ, ಮಾರಕೈಬೊ, ಕ್ಯಾರಕಾಸ್ ಮತ್ತು ಟ್ರೆನಿಡಾಡ್ ಎಸ್ಟೇಟ್ ಎಂಬ ವಾಣಿಜ್ಯ ನಾಮಗಳಿಂದ ಮಾರಲಾಗುತ್ತದೆ. ಈ ವಿವಿಧ ಪ್ರಭೇದಗಳನ್ನು ವೆನಿಜುವೇಲ, ಈಕ್ವೆಡಾರ್, ಶ್ರೀಲಂಕ ಮತ್ತು ಜಾವಗಳಲ್ಲಿ ಬೆಳೆಯಲಾಗುತ್ತದೆ. ಸಾಮಾನ್ಯ ದರ್ಜೆಯ ಕೋಕೋವಿಗೆ ಅತ್ರ ಎಂಬ ವಾಣಿಜ್ಯ ನಾಮ ಇದೆ. ಈ ಬಗೆಯನ್ನು ಘಾನ, ಬ್ರೆಜಿಲ್, ನೈಜೀರಿಯ ಮತ್ತು ಡೊಮಿನಿಕ್‌ನ ರಿಪಬ್ಲಿಕ್‌ಗಳಲ್ಲಿ ಬೆಳೆಯುತ್ತಾರೆ. ಕೋಕೋ ಬಹಳ ಪುಷ್ಟಿದಾಯಕ ಆಹಾರವೆಂದು ಹೆಸರಾಗಿದೆ. ಜೊತೆಗೆ ಉತ್ತೇಜಕವೂ ಹೌದು. ಇದರಲ್ಲಿ ಶೇ. 40.3 ಕಾರ್ಬೊಹೈಡ್ರೇಟ್, ಶೇ. 22 ಕೊಬ್ಬು ಶೇ. 18.1 ಪ್ರೋಟೀನು, ಶೇ. 6.3 ಲವಣಾಂಶ, ಕೊಂಚ ಭಾಗ ನೀರು ಮತ್ತು ನಾರಿನ ಅಂಶ ಇವೆ. ಉತ್ತೇಜನ ಗುಣಕ್ಕೆ ತಿಯೋಬ್ರೋಮಿನ್ (ಶೇ. 2.2) ಮತ್ತು ಕೆಫೀನ್ (ಶೇ. 0.1)ಗಳೇ ಕಾರಣ. ಕೋಕೊವನ್ನು ನೇರವಾಗಿ ಇಲ್ಲವೆ ಚಾಕೊಲೆಟ್ ರೂಪದಲ್ಲಿ ಸಿಹಿತಿಂಡಿ ಐಸ್ ಕ್ರೀಮ್, ಮಾದಕವಲ್ಲದ ಪಾನೀಯ-ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕ್ಯಾಂಡಿಗಳಿಗೆ ಉಪಯೋಗಿಸಲಾಗುವ ಎಲ್ಲ ಬಗೆಯ ಸ್ವಾದ ವಸ್ತುಗಳಿಗಿಂತ ಚಾಕೊಲೆಟ್ ಸ್ವಾದವೇ ಅತಿಹೆಚ್ಚು ಜನಪ್ರಿಯವಾದುದು.

ಉತ್ಪಾದನೆ ಮತ್ತು ವ್ಯಾಪಾರ: ಕೋಕೋ ಉತ್ಪಾದನೆ ವಾರ್ಷಿಕವಾಗಿ ತೀವ್ರವಾದ ಏರಿಳಿತಗಳಿಗೆ ಒಳಗಾಗಿದೆ. 1950ರಲ್ಲಿ ಆಫ್ರಿಕಖಂಡದ ದೇಶಗಳಲ್ಲಿ ಹಲವಾರು ಕೋಕೋ ಗಿಡಗಳನ್ನು ನೆಟ್ಟುದರಿಂದ ಈಗ ಆ ದೇಶಗಳ ಕೋಕೋ ಉತ್ಪನ್ನ ಗಮನಾರ್ಹವಾಗಿ ಅಧಿಕವಾಗಿದೆ. ಕೋಕೋ ಬೀಜಗಳನ್ನು ಉತ್ಪಾದಿಸುತ್ತಿರುವ ಮುಖ್ಯ ದೇಶಗಳು ಘಾನ, ನೈಜೀರಿಯ, ಬ್ರೆಜಿಲ್ ಮತ್ತು ಕ್ಯಾಮರೂನ್ಸ್. ಕೋಕೋ ಉತ್ಪಾದಿಸುವ ಇತರ ದೇಶಗಳು ಕೋಟೆ ಐವರಿ ಟೋಗೊ, ಗಯಾನ, ಮತ್ತು ಶ್ರೀಲಂಕ. ಏಷ್ಯದಲ್ಲಿ ಕೋಕೋ ಬೆಳೆಗೆ ಸೂಕ್ತವಾದ ವಾಯುಗುಣ ಇಲ್ಲವಾದ್ದರಿಂದ ಅಲ್ಲಿ ಇದನ್ನು ಹೆಚ್ಚಾಗಿ ಉತ್ಪಾದಿಸುವುದಿಲ್ಲ. ಫಿಲಿಪ್ಪೈನ್ಸ್, ಶ್ರೀಲಂಕ ಮತ್ತು ಇಂಡೋನೇಷ್ಯಗಳು ಮಾತ್ರ ಇದನ್ನು ಅಲ್ಪ ಪ್ರಮಾಣಗಳಲ್ಲಿ ಉತ್ಪಾದಿಸುತ್ತವೆ. ನ್ಯೂಗಿನಿ, ಪಪುವ ಮತ್ತು ನ್ಯೂ ಹೆಬ್ರಿಡೀಸ್ಗಳಲ್ಲಿ ಕೋಕೋ ಉತ್ಪಾದನೆಗೆ ತಕ್ಕ ವಾಯುಗುಣ ಇದೆಯಾದರೂ ಕಾರ್ಮಿಕರ ಅಭಾವದಿಂದಾಗಿ ಅಲ್ಲಿ ಇದನ್ನು ಹೆಚ್ಚಾಗಿ ಉತ್ಪಾದಿಸುತ್ತಿಲ್ಲ.

ವಿಶ್ವದ ಕೋಕೋ ಸರಬರಾಜಿನಲ್ಲಿ ಶೇ. 40ರಷ್ಟು ಪೂರೈಕೆ ಘಾನದಿಂದ. ಅಲ್ಲಿ ಕೋಕೋ ಬೆಳೆಗೆ ತಕ್ಕ ವಾಯುಗುಣವ ಫಲವತ್ತಾದ ನೆಲವೂ ಇದೆ. ಜೊತೆಗೆ ಅಲ್ಲಿ ಕೋಕೋ ತೋಟಗಾರಿಕೆಯನ್ನು ವ್ಯವಸ್ಥಿತವಾಗಿ ಬೆಳೆಸಲಾಗಿದೆ. ಘಾನ ಹಳೆಯ ವ್ಯಾಪಾರಮಾರ್ಗದ ಮಧ್ಯೆ ಇರುವುದೂ ಅದರ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿ ಅಭಿವೃದ್ಧಿ ಹೊಂದಿರುವುದೂ ಇತರ ಅನುಕೂಲಗಳು. 1850ರಿಂದ 1910ರವರೆಗೆ ಈಕ್ವೆಡಾರ್ ಪ್ರಮುಖ ಕೋಕೋ ಉತ್ಪಾದಕ ದೇಶವಾಗಿತ್ತು. ಅನಂತರ ಅದರ ಪ್ರಾಮುಖ್ಯ ಬ್ರೆಜಿಲ್‌ಗೆ ವರ್ಗವಾಯಿತು. ಆಮೇಲೆ ಪಶ್ಚಿಮ ಆಫ್ರಿಕದ ಕೋಕೋ ಬೆಳೆಯುವ ಪ್ರದೇಶ ಅಭಿವೃದ್ಧಿಯಾಗಿ ಅದಕ್ಕೆ ಅಗ್ರಪಟ್ಟ ಪ್ರಾಪ್ತವಾಯಿತು. ಈಕ್ವೆಡಾರಿನ ವಾಯುಗುಣ ಮತ್ತು ಭೂಮಿ ಕೋಕೋ ಬೆಳೆಗೆ ಅತ್ಯಂತ ಪ್ರಶಸ್ತವಾದದ್ದು. ಆದರೆ ಅನಾರೋಗ್ಯಕರ ಪರಿಸ್ಥಿತಿಯಿಂದಾಗಿ ಅಲ್ಲಿ ಕೋಕೋ ಉತ್ಪಾದನೆ ಕ್ಷೀಣಿಸಿತು.

ಕೋಕೋ ಉತ್ಪಾದಿಸುವ ಮುಖ್ಯ ದೇಶಗಳು ತಮ್ಮ ಬೆಳೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಭಾಗವನ್ನು ರಫ್ತು ಮಾಡುತ್ತವೆ. ಕೋಕೋ ಬಳಸುವ ದೇಶಗಳಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಪ್ರಥಮ ಸ್ಥಾನ. ವಿಶ್ವದ ಒಟ್ಟು ಕೋಕೋ ಬೆಳೆಯಲ್ಲಿ ಸು. 1/3 ಭಾಗ ಆ ದೇಶಕ್ಕೆ ರಫ್ತಾಗುತ್ತದೆ. ಪಶ್ಚಿಮ ಜರ್ಮನಿ, ನೆದರ್ಲೆಂಡ್ಸ್, ಸ್ಪೇನ್ ಮತ್ತು ಫ್ರಾನ್ಸ್ ಇತರ ಮುಖ್ಯ ಗ್ರಾಹಕ ರಾಷ್ಟ್ರಗಳು. ಸ್ಪೇನಿನಲ್ಲಿ ಕೋಕೋ ಒಂದು ಅವಶ್ಯ ವಸ್ತುವೆಂದು ಪರಿಗಣಿತವಾಗಿದೆ. ಸ್ವಿಟ್ಜರ್ಲೆಂಡ್ ಮತ್ತು ನೆದರ್ಲೆಂಡ್ಸ್ ಇದನ್ನು ಮುಖ್ಯವಾಗಿ ಚಾಕೊಲೆಟ್ ತಯಾರಿಕೆಗಾಗಿ ಆಮದು ಮಾಡಿಕೊಳ್ಳುತ್ತವೆ. (ಜಿ.ಬಿ.)

**ಕೋಟೆ ಡಿ ಐವರಿ ಗಣರಾಜ್ಯ:** ಆಫ್ರಿಕದ ಪಶ್ಚಿಮ ತೀರದ ದೇಶ. ಇದು ಸಾಧಾರಣವಾಗಿ ಆಯತಾಕಾರವಾಗಿದ್ದು, ದಕ್ಷಿಣದಲ್ಲಿ ಅಟ್ಲಾಂಟಿಕ್ ಸಾಗರ, ಪೂರ್ವದಲ್ಲಿ ಘಾನ, ಉತ್ತರದಲ್ಲಿ ಬುರ್ಕಿನೊ ಫಾಸೊ ಮತ್ತು ಸುಡಾನ್ (ಮಾಲಿ ಫೆಡರೇಷನ್), ಪಶ್ಚಿಮದಲ್ಲಿ ಗಿನಿಯ ಮತ್ತು ಲೈಬೀರಿಯ ದೇಶಗಳಿಂದ ಸುತ್ತುವರೆದಿದೆ. ಈ ದೇಶ $5^0$–$11^0$ ಉ.ಅ. ಮತ್ತು $4^0$ ಪ. $2^0$ ಪೂ.ರೇ. ದಲ್ಲಿದೆ. ವಿಸ್ತೀರ್ಣ 3,22,462 ಚ.ಕಿಮೀ. ರಾಜಧಾನಿ ಯಮುಸೊಕ್ರೊ. ಜನಸಂಖ್ಯೆ 1,06,786. ಆಡಳಿತ ಕೇಂದ್ರ ಅಬಿಡ್ಜಾನ್. ಭೂಸ್ವರೂಪ: ವಾಯವ್ಯ ಐವರಿ ತೀರ 1200–1500 ಮೀ. ಎತ್ತರದ ಭೂಶಿರವನ್ನು ಹೊಂದಿದೆ. ಮಾನ್ ಪ್ರದೇಶದಿಂದ ಓಡೆನ್ನ ಪ್ರದೇಶದವರೆಗೆ ಹೆಚ್ಚು ಎತ್ತರವಾಗಿದ್ದು ಉಳಿದ ಭಾಗವು ಪ್ರಸ್ಥಭೂಮಿಯಾಗಿದ್ದು ಅಟ್ಲಾಂಟಿಕ್ ಸಾಗರದ ಕಡೆಗೆ ಹಾದಿದೆ. ಘಾನದಿಂದ ಕ್ರಿಸ್ಲೊಮರೆಗೆ ಮಟ್ಟಸವಾದ ಮರಳುಮಯವಾದ ತೀರಪ್ರದೇಶವನ್ನು ಹೊಂದಿದೆ. ತೀರಪ್ರದೇಶದಲ್ಲಿ ಆಳವಾದ ಲಗೂನ್‌ಗಳು, ಒಡಕುಗಳು, ಕಲ್ಲು ಕೊರೆತದ ಶಿಲೆಗಳು, ಪ್ರಪಾತಗಳು ಹರಡಿವೆ. ಮಧ್ಯದ ಪ್ರಸ್ಥಭೂಮಿ, ಬೆಟ್ಟಗಳ ದಟ್ಟ ಅರಣ್ಯ ಪ್ರದೇಶಗಳಾಗಿ ನಿಂಡಾ ಶ್ರೇಣಿ ಮತ್ತು ನಿಂಬಾ ಪರ್ವತ ಅತಿ ಎತ್ತರವಾಗಿದ್ದು 1752 ಮೀ ಎತ್ತರವನ್ನು ಹೊಂದಿದೆ.

ನದಿಗಳು: ಇಲ್ಲಿ 4 ಪ್ರಮುಖ ನದಿಗಳು ಹರಿಯುತ್ತಿದ್ದು ಇವು ಉತ್ತರದಿಂದ ದಕ್ಷಿಣಾಭಿಮುಖವಾಗಿ ಹರಿಯುತ್ತಿವೆ. ಕವಲ್ಲೇ, ಸಾಸೇಂದ್ರ, ಬಂದಾಮ್ ಮತ್ತು ಕೊಟೊಯಿ ಸದಾ ತುಂಬಿ ಹರಿಯುತ್ತಿದ್ದು, ತ್ವರಿತ ಜಲಪಾತಗಳನ್ನು ಹೊಂದಿದ್ದು ರಭಸವಾಗಿ ಹರಿಯುವುದಲ್ಲದೆ ಮಳೆಗಾಲದಲ್ಲಿ ಪ್ರವಾಹವನ್ನು ಉಂಟುಮಾಡುತ್ತವೆ.




ವಾಯುಗುಣ: ಇದು ಉಷ್ಣವಲಯದ ವಾಯುಗುಣವನ್ನು ಹೊಂದಿದೆ. 3 ಪ್ರಮುಖ ವಾಯುಗುಣ ಪ್ರದೇಶವಾಗಿ ವಿಂಗಡಿಸಲಾಗಿದೆ. ತೀರಪ್ರದೇಶ ವಾಯುಗುಣ, ಅರಣ್ಯಗಳ ನಿತ್ಯ ಹರಿದ್ವರ್ಣ ಆರ್ದ್ರ ವಾಯುಗುಣ, ಮತ್ತು ಸವನ್ನಾ ಹುಲ್ಲುಗಾವಲು.

1) ತೀರ ಪ್ರದೇಶಗಳು 200–300 ಸೆಂಮೀ ಮಳೆಯನ್ನು ಪಡೆಯುತ್ತಿದ್ದು, $23^0$ಸೆ. ನಿಂದ $27^0$ಸೆ. ಕನಿಷ್ಠ ಉಷ್ಣಾಂಶವನ್ನು ಪಡೆಯುತ್ತದೆ. ತೀರಗಳೂ ದೀರ್ಘ ಕಾಲದ ಬೇಸಗೆಯನ್ನು ಹೊಂದಿದೆ. ಮೇ ತಿಂಗಳಲ್ಲಿ ಅಧಿಕ ಮಳೆ ಪಡೆಯುತ್ತದೆ. ಅಕ್ಟೋಬರ್‌ನಿಂದ ನವೆಂಬರ್‌ವರೆಗೆ ಅತ್ಯಂತ ಕಡಿಮೆ ಮಳೆ.

2) ಮಧ್ಯದ ಅರಣ್ಯಗಳು ಅಧಿಕ ಉಷ್ಣಾಂಶ, ಅಧಿಕ ಮಳೆಯನ್ನು ಪಡೆಯುತ್ತಿದ್ದು 250 ಸೆಂಮೀ ಗಿಂತ ಹೆಚ್ಚು ಮಳೆ ಮತ್ತು ಆರ್ದ್ರತೆಯಿಂದ ಕೂಡಿರುತ್ತದೆ. ವರ್ಷ ಪೂರ್ತಿ ಏಕ ರೀತಿಯ ವಾಯುಗುಣ ಕಂಡುಬರುತ್ತದೆ.

3) ಸವನ್ನಾ ಪ್ರದೇಶದಲ್ಲಿ ಉಷ್ಣಾಂಶ ಅತ್ಯಧಿಕವಾಗಿದ್ದು $33^0$ಸೆ. ಗಿಂತ ಹೆಚ್ಚಾಗಿದ್ದು, ಜೂನ್‌ನಿಂದ ಅಕ್ಟೋಬರ್‌ವರೆಗೆ ಕಡಿಮೆ ಮಳೆಯನ್ನು ಪಡೆಯುತ್ತದೆ.

ಸಸ್ಯವರ್ಗ: ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು ಕಂಡುಬರುತ್ತವೆ. ಇದನ್ನು ಸೆಲ್ವಾಸ್ ಅಥವಾ ಸದಾ ಹಸುರಾದ ಅರಣ್ಯ ಎನ್ನುತ್ತಾರೆ. ಕವೆಲ್ಲೊ ಮತ್ತು ಕೋಮಾಯ ತೀರಗಳು ದಟ್ಟವಾದ ಅರಣ್ಯವನ್ನು ಒಳಗೊಂಡಿವೆ. 300 ಕ್ಕಿಂತ ಹೆಚ್ಚಿನ ವಿಧಗಳ ಸಸ್ಯಗಳು ಕಂಡುಬಂದು 200 ಕ್ಕಿಂತ ಹೆಚ್ಚು ಜಾತಿಯ ಮರಗಳು ವಾಣಿಜ್ಯ ದೃಷ್ಟಿಯಿಂದ ಉಪಯುಕ್ತವಾಗಿವೆ. ಮಹಾಗನಿ, ಎಬೋನಿ, ಗೊಬ್ಬಳಿ, ತಾಳೆ, ಅಕೇಶಿಯನ್ ಮಾದರಿಯ ಸಸ್ಯವರ್ಗಗಳು, ಬಿದಿರು, ಬೆತ್ತ, ಮತ್ತಿ, ಆಲ, ಹಲಸು, ಬಾಳೆ, ತೆಂಗು ಮುಂತಾದ ಮರಗಳು ಅತ್ಯಧಿಕವಾಗಿವೆ.

ಪ್ರಾಣಿಗಳು: ದಟ್ಟ ಅರಣ್ಯಗಳಿರುವುದರಿಂದ ಅಧಿಕ ಪ್ರಾಣಿಗಳು ಕಂಡುಬರುತ್ತವೆ. ನರಿ, ತೋಳ, ಹೈನಾ, ಚಿರತೆ, ಚಿಂಪಾಂಜಿ, ವೈವಿಧ್ಯಮಯ ಕೋತಿಗಳು, ಆನೆ, ನೀರಾನೆ, ವಿಷಪೂರಿತ ಹಾವುಗಳು, ಹಲ್ಲಿಗಳು, ಅಳಿಲುಗಳು, ಹೆಬ್ಬಾವು, ಕ್ರಿಮಿಕೀಟಗಳು, ಸೊಳ್ಳೆ, ನೊಣ, ಜೇಡ ಮುಂತಾದವುಗಳು ಅಧಿಕವಾಗಿವೆ. ವೈವಿಧ್ಯಮಯ ಪಕ್ಷಿಗಳು, ನೀರಾನೆ, ಆಮೆ, ಮೊಸಳೆ, ನೀರಾವು ಮುಂತಾದ ಪ್ರಾಣಿಗಳು ಕಂಡುಬರುತ್ತವೆ.

ಜನಸಂಖ್ಯೆ: 17,654,843 (2003). ಪ್ರತಿ ಚ.ಕಿ.ಮೀ ಗೆ 48 ಜನ ವಾಸಿಸುತ್ತಿದ್ದಾರೆ. ಅಡಿಡ್‌ಜನ್, ಬೌವಾಕಿ, ಗಾಗ್ನೋಚಾ, ಡಿಂಬೋಕ್ರೋ, ಗ್ರಾಂಡ್ ಬೇಸಮ್ ಮುಂತಾದ ಪ್ರದೇಶಗಳು ದಟ್ಟ ಜನಸಂಖ್ಯೆಯನ್ನು ಹೊಂದಿದ್ದರೆ ಒಳನಾಡ ಅರಣ್ಯಗಳು, ಬೆಟ್ಟಗುಡ್ಡಗಳು ಕಡಿಮೆ ಜನಸಂಖ್ಯೆ ಹೊಂದಿವೆ.

ಜನಾಂಗ: ಅಕನ್, ಮೋಲ್ಟರ್, ಮನೆನಾರ್ಡ, ಕ್ರೌವ್, ಮಾನೆಸುಡ್, ಐವರಿಯನ್ ಮೂಲಜನಾಂಗವಾಗಿದ್ದರೆ ಬೌಲ್ಲಿ, ಅಗ್ನಿ , ಅಬ್ರೊ, ಬೆಬ್, ಗೌರೆ (ಕ್ರಾವ್) ಮಂಡೆ (ಮಲಿಂಕೇ) ಡಿಯೋರೋ ಸೆನೆಫಿ ಡಾನ್–ಗೌರವ್, ಕೋವಾ ಇತರ ಜನಾಂಗಗಳನ್ನು ಒಳಗೊಂಡಿದ್ದು, ಹೆಚ್ಚಾಗಿ ಬುಡಕಟ್ಟು ಜನಾಂಗದವರು ಇದ್ದಾರೆ. ಇವರಲ್ಲಿ ಮೂಲ ನಿವಾಸಿಗಳಾದ ಅಕೆನ್, ಮಾನೇನಾರ್ಡ ಜನಾಂಗ ಪ್ರಮುಖ.

ಭಾಷೆ: ಫ್ರೆಂಚ್ ಆಡಳಿತ ಭಾಷೆಯಾಗಿದೆ. ಆದರೆ 60ಕ್ಕಿಂತಲೂ ಹೆಚ್ಚು ಸ್ಥಳೀಯ (ಆಡು) ಭಾಷೆಯನ್ನಾಡುತ್ತಾರೆ. ಅಗ್ನಿ, ಕ್ರೌವ್, ಮಾಲ್ಲಿಂಕೇ, ಮಾಂಡೇ, ಕೊವಾಕೋವಾ ಪ್ರಮುಖ ಆಡುಭಾಷೆಗಳಾಗಿವೆ.

ವ್ಯವಸಾಯ: ಈ ದೇಶ ವ್ಯವಸಾಯ ಪ್ರಧಾನವಾದುದು. ಮೆಕ್ಕೆಜೋಳ, ನವಣೆ, ಸೊರಗಮ್, ಬತ್ತ, ಸಿಹಿಗೆಣಸು, ಮರಗೆಣಸು, ಕೋಕೋ, ರಬ್ಬರ್, ತಾಳೆ, ಕಾಳುಗಳು, ಕಬ್ಬು, ಕಾಫಿ, ತಂಬಾಕು, ಕಡಲೆ, ತೆಂಗು, ಟೊಮಾಟೋ, ಸಂಬಾರ ಪದಾರ್ಥಗಳು, ವೈವಿಧ್ಯಮಯ ಹಣ್ಣುಗಳು, ಬಾಳೆ, ಮಾವು, ಹಲಸು, ಅನಾನಸ್ ಮುಂತಾದವುಗಳನ್ನು ಬೆಳೆಯುತ್ತಾರೆ. ಅವುಗಳಲ್ಲಿ ಮರಗೆಣಸು, ಕಾಫಿ, ಬತ್ತ, ಕಬ್ಬು ಹೆಚ್ಚು ಬೆಳೆಯಲಾಗುತ್ತದೆ.

ಪಶುಸಂಗೋಪನೆ: ವಿಷಪೂರಿತ ಸೊಳ್ಳೆ, ಅಹಿತಕರ ವಾತಾವರಣದಿಂದಾಗಿ ಪಶುಸಂಗೋಪನೆ ಕಂಡುಬರುವುದಿಲ್ಲ. ಆದರೆ ತೀರ ಪ್ರದೇಶಗಳಲ್ಲಿ ದನಗಳು, ಹಂದಿ, ಕುರಿ, ಮೇಕೆಗಳನ್ನು ಸ್ವಲ್ಪ ಪ್ರಮಾಣದಲ್ಲಿ ಸಾಕುತ್ತಾರೆ.

ಮೀನುಗಾರಿಕೆ: ಅಟ್ಲಾಂಟಿಕ್ ಸಾಗರ ಮತ್ತು ಒಳನಾಡಿನ ಮೀನುಗಾರಿಕೆ ಅಭಿವೃದ್ಧಿ ಹೊಂದಿದ್ದು, ಆಧುನಿಕ ಉಪಕರಣಗಳಿಂದ ಮೀನುಗಾರಿಕೆ ಅಭಿವೃದ್ಧಿ ಹೊಂದಿ ವಾರ್ಷಿಕವಾಗಿ 70000 ಟನ್ ಮೀನುಗಳನ್ನು ಉತ್ಪಾದಿಸುತ್ತದೆ.

ಅರಣ್ಯ ಕೈಗಾರಿಕೆ: ನಿತ್ಯ ಹರಿದ್ವರ್ಣ ಮತ್ತು ಸವನ್ನಾ ಕಾಡುಗಳಿಂದಾಗಿ ಮರ ಕಡಿಯುವ ಉದ್ಯಮ ಅಭಿವೃದ್ಧಿ ಹೊಂದಿದೆ. ಅಲ್ಲದೆ ಸಂಗ್ರಹಣೆ ಹೆಚ್ಚಾಗಿದೆ.

ಗಣಿಗಾರಿಕೆ: ವಜ್ರ, ಚಿನ್ನ, ಕಚ್ಚಾತೈಲ, ಮ್ಯಾಂಗನೀಸ್, ಬಾಕ್ಸೈಟ್, ಕಬ್ಬಿಣದ ಅದಿರು, ತಾಮ್ರ ಮುಂತಾದ ಖನಿಜಗಳು ದೊರೆಯುತ್ತವೆ. ಅದರಲ್ಲೂ ವಜ್ರ, ಚಿನ್ನ ಮತ್ತು ಕಚ್ಚಾ ತೈಲದ ಉತ್ಪಾದನೆ ಪ್ರಮುಖ ಉದ್ಯೋಗವಾಗಿದೆ.

ಕೈಗಾರಿಕೆ: ಜಲ ವಿದ್ಯುಚ್ಛಕ್ತಿ ಉತ್ಪಾದನೆ ಇದೆ. ಅಬಿಡ್‌ಜನ್ ಪ್ರದೇಶವು ಬೃಹತ್ ಕೈಗಾರಿಕ ಪ್ರದೇಶವಾಗಿದೆ. ಮರದ ದಿಮ್ಮಿ ಉತ್ಪಾದಿಸುವುದು, ಇಟ್ಟಿಗೆ, ಹೆಂಚು, ಹಣ್ಣಿನ ರಸ, ಅನಾನಸ್ ಸಂಸ್ಕರಣೆ, ಸೋಪು, ಸಿಮೆಂಟ್, ತಾಳೆಎಣ್ಣೆ, ಹತ್ತಿಬಟ್ಟೆ ಕೈಗಾರಿಕೆ ಪ್ರಮುಖವಾಗಿವೆ.

ಪ್ರಮುಖನಗರ: ಅಬಿಡ್‌ಜನ್, ಬಾವುಕೇ, ಡಾಲೌವ್, ಕೊರೌಂಗೋ, ಯಮೌಸೊಕ್ರೊಂ ಪ್ರಮುಖನಗರಗಳಾಗಿವೆ. ಯುಮೌ ಸಾಕ್ರೂಂ ಮತ್ತು ಅಬಿಡ್‌ಜನ್‌ಗಳು ಪ್ರಮುಖ ಬಂದರುಗಳಾಗಿವೆ. ಸನ್‌ಪೆಡ್ರೋ, ಅಚೋಯಿಸೊ, ಡಿ ಸೌತ್‌ಬಂದಮ್, ಅಗ್ನಬೇ, ಸೌತ್‌ಕೋಮೊಯ್, ವರೋಡೊಗೊಂವ್, ಡೆಂಗೋಲೆ ಮುಖ್ಯ ನಗರಗಳು. ಬಂದಮ್, ಕೋಮೈಗಳು ವಿದ್ಯಾಭ್ಯಾಸದ ಪ್ರದೇಶಗಳಾಗಿವೆ. ಶೇ. 46.8 ಅಕ್ಷರಸ್ಥರಿದ್ದಾರೆ.

ರಾಜಕೀಯ: ಗಣರಾಜ್ಯವಾಗಿದ್ದು ರಾಷ್ಟ್ರಾಧ್ಯಕ್ಷ, ಪ್ರಧಾನ ಮಂತ್ರಿ ಮತ್ತು 175 ಜನರನ್ನು ಹೊಂದಿರುವ ಸಂಸತ್ ಮಂಡಲವನ್ನು ಒಳಗೊಂಡಿದೆ.

ಸಾರಿಗೆ: ರಸ್ತೆ, ರೈಲುಸಾರಿಗೆ ಹೆಚ್ಚು ಅಭಿವೃದ್ಧಿ ಹೊಂದಿಲ್ಲ. ಆದರೆ ಜಲಸಾರಿಗೆ ಮತ್ತು ವಾಯು ಸಾರಿಗೆ ಪ್ರಮುಖನಗರ ಬಂದರುಗಳಲ್ಲಿ ಅಭಿವೃದ್ಧಿ ಹೊಂದಿದೆ. ರೇಡಿಯೊ, ಪತ್ರಿಕೆ, ಟೆಲಿವಿಷನ್, ಟೆಲಿಫೋನ್, ಕಂಪ್ಯೂಟರ್ ಮುಂತಾದ ಆಧುನಿಕ ಸೌಲಭ್ಯಗಳು ನಗರ ಪ್ರದೇಶಗಳಲ್ಲೂ ಇವೆ. (ಎಸ್.ಕೆ.)

**ಕೋನ ದೂರದರ್ಶಕ ಸರ್ವೇಕ್ಷಣೆ ಅಥವಾ ಥಿಯೋಡಲೈಟ್ ಸರ್ವೇ:** ಸರ್ವೇಕ್ಷಣಾ ಕಾರ್ಯದಲ್ಲಿ ಉಪಯೋಗಿಸಲ್ಪಡುವ ಅತ್ಯಂತ ಪ್ರಧಾನವಾದ ಉಪಕರಣ ಕೋನ ದೂರದರ್ಶಕ. ಈ ಉಪಕರಣವು ಕ್ಷೇತ್ರೀಯ ಮತ್ತು ಲಂಬ ದೂರಗಳೆರಡನ್ನೂ ಅಳೆಯಬಲ್ಲದಾಗಿದ್ದು, ದೂರದ ವಸ್ತುಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ಒಂದು ದೂರದರ್ಶಕದೊಂದಿಗೆ ಜೋಡಿಸಲ್ಪಟ್ಟಿರುವ ಉಪಕರಣವಾಗಿರುತ್ತದೆ.

ಕೋನ ದೂರದರ್ಶಕಗಳಲ್ಲಿ ಮುಖ್ಯವಾಗಿ ಎರಡು ಬಗೆಗಳಿವೆ. ಅ) ಟ್ರಾನ್ಸಿಟ್ ಕೋನ ದೂರದರ್ಶಕ ಮತ್ತು ಆ) ನಾನ್ ಟ್ರಾನ್ಸಿಟ್ ಕೋನ ದೂರದರ್ಶಕ. ಟ್ರಾನ್ಸಿಟ್ ದೂರದರ್ಶಕವನ್ನು ಅದರ ಕ್ಷೇತ್ರೀಯ ಅಕ್ಷದ ಮೇಲೆ ಒಂದು ಲಂಬ ಸಮತಲದಲ್ಲಿಯೂ ಸಂಪೂರ್ಣವಾಗಿ ಸುತ್ತಿಸಬಹುದಾಗಿದೆ. ಇದು ಅತೀ ಹೆಚ್ಚು ಬಳಕೆಯಲ್ಲಿರುವ ಉಪಕರಣವಾಗಿದೆ. ನಾನ್ ಟ್ರಾನ್ಸಿಟ್ ಕೋನ ದೂರದರ್ಶಕದಲ್ಲಿ ಅದರ ಕ್ಷೇತ್ರೀಯ ಅಕ್ಷದ ಮೇಲೆ ಒಂದು ಲಂಬ ಸಮತಲದಲ್ಲಿ ಸಂಪೂರ್ಣವಾಗಿ ಸುತ್ತಿಸಲು ಸಾಧ್ಯವಿಲ್ಲ.

ಕೋನ ದೂರದರ್ಶಕ ಈ ಕೆಳಗಿನ ಭಾಗಗಳನ್ನು ಹೊಂದಿರುತ್ತವೆ. ಟ್ರೈವೇಟ್ ಸ್ಟೇಜ್, ಸಮಗೊಳಿಸುವ ತಿರುಪುಮೊಳೆಗಳು, ತ್ರಿಪಾವು ಅಥವಾ ಮೇಲಿನ ತಟ್ಟೆ ಕದಿರುಗಳು, ಕೆಳಗಿನ ತಟ್ಟೆಗಳು, ಮೇಲಿನ ತಟ್ಟೆ, ಆಶ್ರಯಗಳು ರಸಮಟ್ಟಗಳು ಪಟ್ಟಿಮಟ್ಟ, ಕೊಳವೆ ದಿಕ್ಸೂಚಿಗಳು, ದೂರದರ್ಶಕ, ಉದಗ್ರ ವೃತ್ತ ಸೂಚಿಪಟ್ಟಿ ಅಥವಾ T ಕಟ್ಟು.

ಕೋನ ದೂರದರ್ಶಕವನ್ನು ಒಂದು ತ್ರಿಪಾದದ ಮೇಲೆ ಬಹಳ ಎಚ್ಚರಿಕೆಯಿಂದ ಜೋಡಿಸಲಾಗಿರುತ್ತದೆ. ಈ ತ್ರಿಪಾದದ ಕಾಲಿನ ಅಂಚುಗಳು ಮೊನಚಾಗಿದ್ದು ನೆಲದಲ್ಲಿ ಭದ್ರವಾಗಿ ನಿಲ್ಲಿಸಿರಬೇಕು. ಈ ಉಪಕರಣದಿಂದ ಸರ್ವೇಕ್ಷಣಾ ಕಾರ್ಯವನ್ನು ನಡೆಸಲು ಮಧ್ಯೀಕರಣ ಸಮಗೊಳಿಸುವಿಕೆ ಮತ್ತು ಕ್ಷೇತ್ರೀಯ ಕೋನಗಳು ಹಾಗೂ ಲಂಬ ಕೋನಗಳನ್ನು ಓದಿ ಫಲಿತಾಂಶಗಳನ್ನು ಗುರುತು ಮಾಡುವ ಮೂಲಕ ನೆರವೇರಿಸಬೇಕಾಗುತ್ತದೆ.

ಮಧ್ಯೀಕರಣವನ್ನು ಮಾಡಲು ಉಪಕರಣವನ್ನು ಕರಾರುವಾಕ್ಕಾದ ಸ್ಥಾನದಲ್ಲಿ ಸ್ಥಾಪಿಸಬೇಕು. ಒಳಗಿನ ಕದಿರಿಗೆ ಜೋಡಿಸಿರುವ ಕೊಕ್ಕೆಗೆ ತೂಗು ಗುಂಡನ್ನು ನೇತು ಬಿಡಬೇಕು. ತ್ರಿಪಾದದ ಎರಡು ಕಾಲುಗಳನ್ನು ನಿಧಾನವಾಗಿ ಚಲಿಸುತ್ತಾ ತೂಗು ಗುಂಡನ್ನು ಬೇಕಾದ ನಿರ್ದಿಷ್ಟ ಸ್ಥಾನದ ಮೇಲೆ ನಿಲ್ಲಿಸಿ ಮಧ್ಯೀಕರಿಸಬೇಕು.

ಸಮಗೊಳಿಸುವಿಕೆ ಮಾಡುವಾಗ ಕ್ಷೇತ್ರೀಯ ಪಟ್ಟದ ರಸಮಟ್ಟವನ್ನು ಯಾವುದೇ ಎರಡು ಕಾಲು ತಿರುಪುಗಳಿಗೆ ಸಮಾನಾಂತರವಾಗಿ ಮಾಡಿ ಗುಳ್ಳೆಯ ಮಧ್ಯಕ್ಕೆ ಬಂದು ನಿಲ್ಲುವವರೆಗೂ ಕಾಲು ತಿರುಪುಗಳನ್ನು ತಿರುಗಿಸಬೇಕು.

ಕಾಂತ ಉತ್ತರ ದಿಕ್ಕಿಗೆ ಸಂಬಂಧಿಸಿದಂತೆ ಕ್ಷೇತ್ರಿಯ ಕೋನಗಳನ್ನು ಓದುವುದು ಸಾಧ್ಯ. ಯಾವುದಾದರೂ ಒಂದು ಆಶ್ರಯಕ್ಕೆ ಸೇರಿರುವ ನಾಳ ದಿಕ್ಸೂಚಿಯ ನೆರವಿನಿಂದ ಕಾಂತ ಉತ್ತರವನ್ನು ಗುರುತಿಸಬಹುದು. ದಿಕ್ಸೂಚಿಯಲ್ಲಿರುವ ಮುಳ್ಳು ಸಮಾನಾಂತರ ರೇಖೆಗಳ ನಡುವಿಗೆ ಬರುವವರೆಗೂ ಕ್ಷೇತ್ರೀಯ ಪಟ್ಟವನ್ನು ತಿರುಗಿಸಬೇಕು.

ಕೆಳಗಿನ ಪಟ್ಟವನ್ನು ಹಿಡಿಕೆಯಿಂದ ಭದ್ರಪಡಿಸಿ. ಮೇಲಿನದನ್ನು ಸಡಿಲಗೊಳಿಸಿ, ವಸ್ತುವಿನ ಕಡೆಗೆ ದೂರದರ್ಶಕವನ್ನು ಎಡದಿಂದ ಬಲಕ್ಕೆ ತಿರುಗಿಸಿ, ಗನ್ ಸೈಟಿನಿಂದ ವಸ್ತುವನ್ನು ವೀಕ್ಷಿಸಿ ದೂರದರ್ಶಕವನ್ನು ಹಿಡಿಕೆಗಳಿಂದ ಭದ್ರಪಡಿಸಬೇಕು. ನೇತ್ರ ವೀಕ್ಷಕವನ್ನು ನಿಧಾನವಾಗಿ ಚಲಿಸುತ್ತಾ ವಸ್ತುವನ್ನು ನಾಭೀಯನಗೊಳಿಸಬೇಕು.

ಲಂಬ ಕೋನಗಳನ್ನು ಓದುವಾಗ ಕೆಳಗಿನ ಪಟ್ಟವನ್ನು ಹಿಡಿಕೆಗಳಿಂದ ಸಡಿಲಗೊಳಿಸಿ ಲಂಬ ರಸಮಟ್ಟದ ಗುಳ್ಳೆಯು ಯಾವುದಾದರೂ ಎರಡು ಕಾಲು ತಿರುವುಗಳಿಗೆ ಸಮಾನಾಂತರವಾಗುವಂತೆ ತಿರುಪುಗಳನ್ನು ಏಕಕಾಲದಲ್ಲಿ ತಿರುಗಿಸಿ ತರಬೇಕು. ಅನಂತರ ರಸಮಟ್ಟವನ್ನು ಅದರ ಮೊದಲಿನ ಸ್ಥಾನದಿಂದ $90^0$ಗೆ ಬರುವಂತೆ ತಿರುಗಿಸಿ, ಮೂರನೆಯ ಕಾಲು ತಿರುಪಿನ ನೆರವಿನಿಂದ ಗುಳ್ಳೆಯನ್ನು ಸರಿಮಾಡಿ ಈಗ ಲಂಬ ಪಟ್ಟದಲ್ಲಿ ಅನುಶ್ರೇಣೀ ಮಾಪಕದ 0 ದೊಂದಿಗೆ ಸರಿಹೊಂದುವಂತೆ ಮುಖ್ಯ ಮಾಪಕವನ್ನು ಹೊಂದಿಸಿ ದೂರದರ್ಶಕವನ್ನು ಬಿಗಿ ಮಾಡಿ, ಅದನ್ನು ವಸ್ತುವಿನ ಕಡೆಗೆ ಕ್ಷೇತ್ರೀಯವಾಗಿ ಚಲಿಸಿ. ಹಿಡಿಕೆಯನ್ನು ಸಡಿಲಗೊಳಿಸಿ ದೂರದರ್ಶಕವನ್ನು ನೇತ್ರ ವೀಕ್ಷಕದ ಸಹಾಯದಿಂದ ಅದನ್ನು ವಸ್ತುವಿನ ಬುಡಕ್ಕೆ ಕೇಂದ್ರೀಕರಿಸಿ ನಾಭೀಯನಗೊಳಿಸಿ. ಈಗ ಸಿ. ಮತ್ತು ಡಿ. ಅನುಶ್ರೇಣಿಗಳೆರಡರಿಂದಲೂ ಓದಬಹುದು. ಎರಡೂ ಫಲಿತಾಂಶಗಳು (ವಸ್ತುವಿನ ಮೇಲು ಮತ್ತು ಕೆಳಗೆ ಕಂಡು ಬಂದವು) $0^0$ಗಿಂತ ಹೆಚ್ಚು ಕಡಿಮೆಯೇ ಆಗಿದ್ದರೆ ಮೊದಲ ಫಲಿತಾಂಶವನ್ನು ಎರಡನೆಯದ್ದರಿಂದ ಕಳೆದರೆ ಲಂಬಕೋನವು ಸಿಕ್ಕುತ್ತದೆ. ಒಂದು ಫಲಿತಾಂಶವು $90^0$ ಕಡಿಮೆಯಿದ್ದು ಆದರೆ 0 ಗಿಂತ ಹೆಚ್ಚಾಗಿದ್ದರೆ ಎರಡನ್ನೂ ಕೂಡಿಸಿದಾಗ ಲಂಬಕೋನವು ಸಿಕ್ಕುತ್ತದೆ. (ಬಿ.ಸಿ.)

**ಕೋನಮಾಪಕ:** ಕೋನಗಳನ್ನು ಅಳೆಯಲು ಬಳಸುವ ಸಾಧನ. ಹರಳುಗಳ ಕೋನಗಳನ್ನು ಅಳೆಯಲು ಗೋನಿಯೋಮೀಟರ್ ಎಂಬ ಹೆಸರಿನ ಕೋನಮಾಪಕವನ್ನು ಜ್ಯಾಮಿತಿಯಲ್ಲಿ ಕೋನಗಳನ್ನು ಅಳೆಯಲು ಪ್ರೊಟ್ರ್ಯಾಕ್ಟರ್ ಎಂಬ ಹೆಸರಿನ ಕೋನಮಾಪಕವನ್ನೂ ಬಳಸುತ್ತಾರೆ. ಕೋನಮಾಪಕದಲ್ಲಿ ಅರ್ಧವೃತ್ತ ಮತ್ತು ಪೂರ್ಣವೃತ್ತದವುಗಳಿವೆ. ಅರ್ಧವೃತ್ತದ್ದು $180^0$ಗಳನ್ನು, ಪೂರ್ಣವೃತ್ತದ್ದು $360^0$ಗಳನ್ನು ಹೊಂದಿರುತ್ತದೆ. ಜ್ಯಾಮಿತಿಯ ಅಳತೆಗಳಲ್ಲಿ ಸರ್ವೆಯರ್‌ಗಳಿಗೆ ಹಾಗೂ ಎಂಜಿನಿಯರ್‌ಗಳಿಗೆ ಇದು ಅತ್ಯವಶ್ಯಕ. (ಎಂ.ಎಸ್.ಎಸ್.)

**ಕೋಪರ್ನಿಕಸ್, ನಿಕೊಲಾಸ್:** 1473–1543. ಪೋಲೆಂಡಿನ ಖಗೋಳ ಹಾಗೂ ಭೂಗೋಳ ವಿಜ್ಞಾನಿ. ಜನನ ಫೆಬ್ರವರಿ 19, 1473 ಪೋಲೆಂಡಿನ ಥಾರ್ನ್ ಪಟ್ಟಣದಲ್ಲಿ. ಎಳೆವಯಸ್ಸಿನಲ್ಲೇ ಕೋಪರ್ನಿಕಸ್ ತನ್ನ ತಂದೆಯನ್ನು ಕಳೆದುಕೊಂಡು ಬಿಷಪ್ ಆಗಿದ್ದ ಚಿಕ್ಕಪ್ಪನ ಆಸರೆಯಲ್ಲಿ ಬೆಳೆದ. ಕ್ರಾಕೋ ನಗರದಲ್ಲಿ ಗಣಿತವನ್ನು

ವ್ಯಾಸಂಗ ಮಾಡಿ, ಅನಂತರ ಇಟಲಿಯ ಬೊಲೋನಾದಲ್ಲಿ ಕ್ರೈಸ್ತ ಚರ್ಚಿನ ಕಾನೂನನ್ನೂ, ಖಗೋಳಶಾಸ್ತ್ರವನ್ನೂ, ಪಾದು–ವಾದಲ್ಲಿ ವೈದ್ಯಶಾಸ್ತ್ರವನ್ನೂ ವ್ಯಾಸಂಗಮಾಡಿದ. ರೋಮ್ ನಗರದಲ್ಲಿ ಗಣಿತವನ್ನೂ ಖಗೋಳ ಶಾಸ್ತ್ರವನ್ನೂ ಕೆಲವು ಕಾಲ ಕಲಿಸಿ ಪ್ರಷ್ಯಾದ ಫ್ರೌನ್‌ಬರ್ಗ್‌ಗೆ ವಾಪಸಾಗಿ ಅಲ್ಲಿಯ ಕತಿಡ್ರಲಿನಲ್ಲಿ ಪಾದ್ರಿಯಾಗಿ ನೆಲೆಸಿದ. ಆಗ ಪ್ರಚಾರದಲ್ಲಿದ್ದ ಭೂಕೇಂದ್ರವಾದವನ್ನು ಈತ ನಿರಾಕರಿಸಿ ಎಲ್ಲ ಗ್ರಹಗಳೂ ಸೂರ್ಯನನ್ನು ಪರಿಭ್ರಮಿಸುತ್ತವೆಂದೂ ಅವುಗಳ ಪೈಕಿ ಭೂಮಿ ಒಂದೆಂದೂ ಸಾರಿದ. ಆದ್ದರಿಂದ ಕೋಪರ್ನಿಕಸ್ ಸೂರ್ಯಕೇಂದ್ರವಾದವನ್ನು ಪ್ರತಿಪಾದಿಸಿದ ಖಗೋಳಜ್ಞನೆಂದು ಖ್ಯಾತಿ ಪಡೆದಿದ್ದಾನೆ. ಇದಕ್ಕೆ ಸಹಕಾರಿಯಾಗಿ ಭೂಮಿ ತನ್ನ ಅಕ್ಷದ ಸುತ್ತ ಆವರ್ತಿಸುತ್ತದೆಂದೂ ನಕ್ಷತ್ರಗಳು ನಮ್ಮಿಂದ ಅಗಾಧ ದೂರಗಳಲ್ಲಿವೆಯೆಂದೂ ಈತ ಘೋಷಿಸಿದ. ವಿಷುವದ್ಬಿಂದುಗಳ ಅಪ್ರದಕ್ಷಿಣೆ ಮತ್ತು ಇದು ಹೇಗೆ ಋತುಗಳಿಗೆ ಕಾರಣವಾಗುತ್ತದೆಂಬುದನ್ನೂ ಈತ ತನ್ನ ಡಿ ಅರ್ಬಿಯಂ ಸೋಲೆಸ್ಟಿಯಂ ರಿವೊಲ್ಯೂಷನಿಬಸ್ ಗ್ರಂಥದಲ್ಲಿ ವಿವರಿಸಿದ್ದಾನೆ. ಇಷ್ಟಾದರೂ ಗ್ರಹಕಕ್ಷೆಗಳೆಲ್ಲ ಸಂಪೂರ್ಣವೃತ್ತಗಳೆಂದು ನಂಬಿ ಈತ ವೃತ್ತ ಮತ್ತು ಅಧಿವೃತ್ತಗಳ ವಾದವನ್ನೂ ಸಮರ್ಥಿಸಿದ್ದಾನೆ. ಈತನ ಗ್ರಂಥ 1530ರ ಹೊತ್ತಿಗೆ ಸಿದ್ಧವಾಗಿದ್ದರೂ 1540ಕ್ಕೆ ಮುಂಚೆ ಅದರ ಪ್ರಕಟಣೆಗೆ ಇವನು ಒಪ್ಪಲಿಲ್ಲ. ಕಡೆಯಲ್ಲಿ ಅದು ಪ್ರಕಟವಾದದ್ದು 1543ರಲ್ಲಿ ನಿಕೊಲಾಸ್ ಮರಣಶಯ್ಯೆಯಲ್ಲಿದ್ದಾಗ. ಆದರೆ ಕೆಥೊಲಿಕ್ ಚರ್ಚ್ ಕೂಡಲೇ ಗ್ರಂಥಕ್ಕೆ ಬಹಿಷ್ಕಾರ ಮುದ್ರೆ ಹಾಕಿತು. ಇವನು 1543 ಮೇ 24 ರಂದು ನಿಧನನಾದ. (ಆರ್.ಎಲ್.ಎನ್.)



**ಕೋಪೆನ್ ಹೇಗೆನ್:** ಡೆನ್ಮಾರ್ಕಿನ ರಾಜಧಾನಿ ಮತ್ತು ಸ್ಕಾಂಡಿನೇವಿಯದ ದೊಡ್ಡ ಪಟ್ಟಣ. ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರ, ಹಡಗು ನಿಲ್ದಾಣ. ಅಂತಾರಾಷ್ಟ್ರೀಯ ರಫ್ತು ವ್ಯಾಪಾರಕ್ಕೆ ಹೆಸರಾಗಿದೆ. ಪ್ರಾಚೀನವಾದ ಅನೇಕ ದೊಡ್ಡ ಕಟ್ಟಡಗಳು ಇಲ್ಲಿವೆ. ಇದು ಐತಿಹಾಸಿಕವಾಗಿಯೂ ಮಹತ್ತ್ವ ಪಡೆದಿದೆ. ಡೆನ್ಮಾರ್ಕಿಗೆ ಪೂರ್ವತೀರದಲ್ಲಿರುವ ಈ ನಗರದ ಜನಸಂಖ್ಯೆ 4,99,148 (2001). ಮೆಟ್ರೋ ಪ್ರದೇಶದ ಜನಸಂಖ್ಯೆ 10,81,673.

ಕೋಪೆನ್‌ಹೇಗೆನಿನ ಮಧ್ಯ ಭಾಗದಲ್ಲಿ 6,000 ವರ್ಷಗಳಿಂದಲೂ ಜನವಸತಿಯಿತ್ತೆಂಬುದು ಉತ್ಖನನಗಳಿಂದ ಗೊತ್ತಾಗುತ್ತದೆ. 1445ರಲ್ಲಿ ಡೇನಿಷ್ ದೊರೆಗಳು ಇಲ್ಲಿಗೆ ವರ್ಗವಾದ ಮೇಲೆ ನಗರ ಶೀಘ್ರವಾಗಿ ಬೆಳೆಯತೊಡಗಿತು. ಕೋಪೆನ್‌ಹೇಗೆನ್ ವಿಶ್ವವಿದ್ಯಾಲಯ ಸ್ಥಾಪನೆಯಾದದ್ದು 1479ರಲ್ಲಿ. 17ನೆಯ ಶತಮಾನದಲ್ಲಿ ಈ ನಗರ ಮತ್ತಷ್ಟು ವಿಶಾಲವಾಗಿ ಬೆಳೆಯಿತು. ಇದಕ್ಕೆ ಕಾರಣನಾದವನು 4ನೆಯ ಕ್ರಿಶ್ಚಿಯನ್ ದೊರೆ. ವಾಸ್ತು ಶಿಲ್ಪ ಕೆಲಸಗಳ ಬಗ್ಗೆ ತುಂಬ ಅಭಿಮಾನವಿಟ್ಟುಕೊಂಡಿದ್ದ ಈತ ನಗರದಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿದ; ವಿಶಾಲವಾದ ರಾಜಬೀದಿಗಳನ್ನು ನಿರ್ಮಿಸಿದ. 1900ರಿಂದೀಚೆಗೆ ಆಧುನಿಕ ರೀತಿಯಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಶೇ.75 ಜನ ಇವುಗಳಲ್ಲಿ ವಾಸಿಸುತ್ತಾರೆ.

ನಗರದ ಜನಸಂಖ್ಯೆಯಲ್ಲಿ ಸುಮಾರು ಅರ್ಧಭಾಗದಷ್ಟು ಜನ ಕೈಗಾರಿಕೆ ಮತ್ತು ಕುಶಲ ಕೈಗಾರಿಕೆಗಳಲ್ಲಿ ನಿರತರಾಗಿದ್ದಾರೆ. ನೌಕಾ ನಿರ್ಮಾಣ ಮೊದಲಾದ ಕೆಲಸಗಳಲ್ಲಿ ಇವರು ಹೆಸರಾಗಿದ್ದಾರೆ.

ಕೋಪೆನ್‌ಹೇಗೆನ್ ಡೆನ್ಮಾರ್ಕಿನಲ್ಲಿಯೇ ಅತ್ಯಂತ ಪ್ರಮುಖ ವಾಣಿಜ್ಯ ಕೇಂದ್ರ. ಹೊರದೇಶಗಳ ವ್ಯಾಪಾರ ಈ ನಗರದ ಮೂಲಕವೇ ನಡೆಯುತ್ತದೆ. ಡೆನ್ಮಾರ್ಕಿನ ಬಹುತೇಕ ಎಲ್ಲ ಹಡಗು ಕಂಪನಿಗಳ ಮುಖ್ಯ ಕಚೇರಿಗಳೂ ಇಲ್ಲಿವೆ. ನಗರದ ಉತ್ತರ ಭಾಗದಲ್ಲಿ ಬಂದರಿದೆ. ಇದು ಬಾಲ್ಟಿಕ್ ಪ್ರದೇಶದ ಮುಖ್ಯ ಬಂದರುಗಳಲ್ಲೊಂದು. ಇದನ್ನು ಕಟ್ಟಿದ್ದು 1894ರಲ್ಲಿ. ನಗರದಿಂದ ಬೇರೆಬೇರೆ ಸ್ಥಳಗಳಿಗೆ ಸಮುದ್ರಯಾನ ಸೌಕರ್ಯವಿದೆ. ದಕ್ಷಿಣ ಭಾಗದ ಪ್ರಮುಖನಗರಗಳಿಗೆ ರೈಲುಸಂಪರ್ಕವಿದೆ. ಉತ್ತರ ಯುರೋಪಿನ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಕೋಪೆನ್ ಹೇಗೆನಿನಲ್ಲಿರುವುದೂ ಒಂದು.

ಬೇರೆ ಬೇರೆ ದೇಶಗಳಿಂದ ಕಚ್ಚಾಸಾಮಗ್ರಿ ಮತ್ತು ಕೆಲಬಗೆಯ ಯಂತ್ರೋಪಕರಣಗಳು ಈ ನಗರದ ಮೂಲಕ ಆಮದಾಗುತ್ತವೆ. ಆಮದಿಗಿಂತ ರಫ್ತು ಹೆಚ್ಚು. ವ್ಯವಸಾಯೋತ್ಪನ್ನಗಳು, ಯಂತ್ರಗಳು, ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳು ಹಾಗೂ ರಾಸಾಯನಿಕ ವಸ್ತುಗಳು ರಫ್ತಾಗುತ್ತವೆ.

ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಈ ನಗರ ಹೆಸರಾಗಿರುವಂತೆಯೇ ಸಾಂಸ್ಕೃತಿಕ ಸಂಸ್ಥೆಗಳಿಗೂ ಹೆಸರಾಗಿದೆ. ಈ ನಗರದಲ್ಲಿ ವಿವಿಧ ಬಗೆಯ ಸಾಂಸ್ಕೃತಿಕ ಸಂಘ ಸಂಸ್ಥೆಗಳುಂಟು. ರಾಯಲ್ ಡೇನಿಷ್ ಅಕಾಡೆಮಿ ಆಫ್ ಸೈನ್ಸ್; ರಾಯಲ್ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಮೊದಲಾದ ಸಾಂಸ್ಕೃತಿಕ ಸಂಸ್ಥೆಗಳನ್ನು ಹೆಸರಿಸಬಹುದು. ಹಾಗೆಯೇ ಡೆನ್ಮಾರ್ಕಿನ ತಾಂತ್ರಿಕ ಕಾಲೇಜು, ಕೃಷಿ ಕಾಲೇಜು, ಸೀರಂ ಇನ್‌ಸ್ಟಿಟ್ಯೂಟ್–ಇವು ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳು. ಇಲ್ಲೊಂದು ರಾಯಲ್ ಲೈಬ್ರರಿ ಇದೆ. ಅಂತಾರಾಷ್ಟ್ರೀಯ ಖ್ಯಾತಿಯ ವಸ್ತುಸಂಗ್ರಹಾಲಯವೂ ಇಲ್ಲಿದೆ. ಪ್ರಾಚೀನಕಾಲದ ಅನೇಕ ಬಗೆಯ ವಸ್ತುಗಳು, ಶಾಸನಗಳು ಮೊದಲಾದವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿಯ ವಿಶಾಲವಾದ ಉದ್ಯಾನಗಳು ನಗರದ ಸೌಂದರ್ಯವನ್ನು ಹೆಚ್ಚಿಸಿವೆ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಕೋಪೆನ್‌ಹೇಗೆನ್ ನಗರ ಪ್ರಮುಖ ಹಡಗು ನಿರ್ಮಾಣ ಕೇಂದ್ರವೆಂದು ಹೆಸರಾಗಿತ್ತು. (ಯು.ಎಸ್.ಎ.)

**ಕೋರೋಕ್ರೊಮ್ಯಾಟಿಕ್‌ನಕ್ಷೆ:** ನಕ್ಷೆಗಳಲ್ಲಿ ವಿವಿಧ ಅಂಶಗಳನ್ನು ವಿವಿಧ ಬಣ್ಣಗಳಿಂದ ನಿರೂಪಿಸುವುದನ್ನು ಸಾಮಾನ್ಯವಾಗಿ ಕಾಣಬಹುದು. ಉದಾಹರಣೆಗೆ ಭೂಸ್ವರೂಪ ನಕ್ಷೆಗಳಲ್ಲಿ ಪರ್ವತ, ಪ್ರಸ್ಥಭೂಮಿ ಹಾಗೂ ಮೈದಾನಗಳನ್ನು ವಿವಿಧ ಬಣ್ಣಗಳಿಂದ ಸೂಚಿಸಿರುವುದು ಸಾಮಾನ್ಯ. ಹೀಗೆ ವಿವಿಧ ಬಣ್ಣಗಳಿಂದ ವಿವಿಧ ಲಕ್ಷಣಗಳನ್ನು ನಿರೂಪಿಸುವ ನಕ್ಷೆಗಳನ್ನು ಕೋರೋ ಕ್ರೋಮ್ಯಾಟಿಕ್ ನಕ್ಷೆಗಳೆಂದು ಕರೆಯುವರು. (ಆರ್.ಎನ್.)

**ಕೋರೋ ಸ್ಕೀಮ್ಯಾಟಿಕ್‌ನಕ್ಷೆ:** ಕೆಲವು ವೇಳೆ ನಕ್ಷೆಗಳಲ್ಲಿ ವಿವಿಧ ಬಗೆಯ ಚಿಹ್ನೆಗಳನ್ನು ಬಳಸಿ, ಅವುಗಳಲ್ಲಿ ವಿವಿಧ ಅಂಶಗಳ ನಿರೂಪಣೆಯನ್ನು ನೀಡಲಾಗುವುದು. ಉದಾಹರಣೆಗೆ ಬೆಳೆಗಳ ಹಂಚಿಕೆಯನ್ನು ಪ್ರತಿಯೊಂದು ಬೆಳೆಗೆ ಪ್ರತ್ಯೇಕ ಚಿಹ್ನೆಯನ್ನು ನೀಡಿ, ಅವುಗಳನ್ನು ಬೆಳೆಯುವ ಪ್ರದೇಶಗಳನ್ನು ನಿರೂಪಿಸಬಹುದು. ಉದಾ: ಬತ್ತ–R, ಗೋದಿ–W, ಹತ್ತಿ–C, ಕಾಫಿ–Co, ಚಹ–T, ಕಬ್ಬು–S ಇತ್ಯಾದಿ. ಇದೇ ರೀತಿಯಲ್ಲಿ ಖನಿಜಗಳ ಹಂಚಿಕೆಯನ್ನು ಸಹ ಇದೇ ರೀತಿಯಲ್ಲಿ ತೋರಿಸಬಹುದು. ಈ ರೀತಿಯಲ್ಲಿ ಚಿಹ್ನೆಗಳ ಮೂಲಕ ಹಂಚಿಕೆಯನ್ನು ನಿರೂಪಿಸುವ ನಕ್ಷೆಗಳನ್ನು ಕೋರೋ ಸ್ಕೀಮ್ಯಾಟಿಕ್ ನಕ್ಷೆಗಳೆಂದು ಕರೆಯಲಾಗಿದೆ. (ಆರ್.ಎನ್.)

**ಕೋರೋಪ್ಲೆತ್ ವಿಧಾನ:** ಬಣ್ಣದ ವಿಧಾನದಲ್ಲಿ ಹಂಚಿಕೆಯನ್ನು ನಿರೂಪಿಸುವ ವಿಧಾನದಂತೆಯೇ ಇರುವ ಕ್ರಮ. ಈ ವಿಧಾನದಲ್ಲಿಯೂ ಒಂದು ಭೂಪ್ರದೇಶದಲ್ಲಿ ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದ ಅಂಕಿ–ಅಂಶದ ಹಂಚಿಕೆಯ ಸಾಂದ್ರತೆ ಅಥವಾ ತೀವ್ರತೆಯನ್ನು ನಿಭಾಯಿಸಲು ನೇರ, ಅಡ್ಡ ಅಥವಾ ವಕ್ರವಾಗಿ ರೇಖೆಗಳನ್ನು ಎಳೆಯಲಾಗುವುದು.

ನಕ್ಷೆಯಲ್ಲಿ ಬಣ್ಣ ಅಥವಾ ಛಾಯೆಯನ್ನು ಹಂಚಿಕೆಯ ಸಾಂದ್ರತೆಗೆ ಅನುಗುಣವಾಗಿ ನೀಡಲಾಗುವುದು. ಹಂಚಿಕೆಯ ಸಾಂದ್ರತೆ ಅಥವಾ ತೀವ್ರತೆ ಹೆಚ್ಚಾಗಿದ್ದಲ್ಲಿ ಕಡು ಛಾಯೆಯನ್ನೂ (ದಟ್ಟವಾದ) ಅಥವಾ ಕಡಿಮೆಯಿದ್ದಲ್ಲಿ ತೆಳುವಾದ ಛಾಯೆಯನ್ನು ನೀಡಲಾಗುವುದು. ಇದರಿಂದ ಛಾಯೆಯನ್ನು ನೋಡಿಯೇ ಹಂಚಿಕೆಯ ರೀತಿಯನ್ನು ತಿಳಿಯಬಹುದು. ಸಾಮಾನ್ಯವಾಗಿ ಅಂಕಿ–ಅಂಶಗಳು ಆಡಳಿತ ವಿಭಾಗಗಳಿಗೆ ದೊರೆಯುತ್ತದೆ. ಇದರಿಂದ ಆಡಳಿತ ವಿಭಾಗಗಳ ಗಡಿಯನ್ನು ಅನುಸರಿಸಿ ಛಾಯೆಗಳನ್ನು ನೀಡಲಾಗುವುದು. ಹೀಗಾಗಿ ಒಂದು ಆಡಳಿತ ವಿಭಾಗಕ್ಕೆ ಒಂದು ಛಾಯೆಯನ್ನು ನೀಡುವುದರಿಂದ ಇದರಲ್ಲಿ ಕೆಲವು ವ್ಯತ್ಯಾಸಗಳು ಇದ್ದರೂ ಈ ವಿಧಾನದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲ. (ಆರ್.ಎನ್.)

**ಕೋರೋಲಜಿ:** ಪ್ರಾದೇಶಿಕ ಅನುಸಿದ್ಧಾಂತ ಎಂದರ್ಥ. ಕೋರೊ ಎಂಬುದು ಗ್ರೀಕ್ ಪದ. ಇದು ಪ್ರದೇಶ ಎಂಬ ಅರ್ಥವನ್ನು ನೀಡುವುದು. ಭೂಗೋಳಶಾಸ್ತ್ರದ ಅಧ್ಯಯನ ವಿಧಾನಗಳಲ್ಲಿ ಇದು ಅತ್ಯಂತ ಪುರಾತನವಾಗಿದ್ದು ಗ್ರೀಕರ ಕಾಲದಿಂದಲೂ ಬಳಕೆಯಲ್ಲಿದೆ. ರೋಮಿನ ಸ್ಟ್ರಾಬೊ ಪ್ರಾದೇಶಿಕ ವಿಧಾನವನ್ನು ಅನುಸರಿಸಿ ಅಂದು ತಿಳಿದಿದ್ದ ಭೂಭಾಗಗಳನ್ನು ತನ್ನ ಜಿಯೋಗ್ರಾಫಿಕ ಗ್ರಂಥದಲ್ಲಿ ವಿವರಿಸಿದ. ಅನಂತರ ಈ ವಿಧಾನವನ್ನು ಸ್ಪಷ್ಟವಾಗಿ ವಿವರಿಸಿದವನು ವರೇನಿಯಸ್. ಈತ ಭೂಗೋಳ ಶಾಸ್ತ್ರವನ್ನು ಅಧ್ಯಯನ ವಿಧಾನದ ಆಧಾರದ ಮೇಲೆ ಸಾಮಾನ್ಯ ಭೂಗೋಳಶಾಸ್ತ್ರ ಹಾಗೂ ವಿಶೇಷ ಭೂಗೋಳಶಾಸ್ತ್ರವೆಂದು ಎರಡು ಭಾಗಗಳಾಗಿ ವಿಂಗಡಿಸಿದನು. ಭೂಮಿಯ ಯಾವುದಾದರೊಂದು ಭಾಗವನ್ನು ಕುರಿತು ಅಭ್ಯಸಿಸುವ ಕ್ರಮವನ್ನು ವಿಶೇಷ ಭೂಗೋಳಶಾಸ್ತ್ರವೆಂದು ಕರೆದ. ಇದೇ ಪ್ರಾದೇಶಿಕ ಭೂಗೋಳಶಾಸ್ತ್ರ ಅಥವಾ ಕೊರಾಲಜಿ. ಇದನ್ನು ಅನುಸರಿಸಿ ಇಮ್ಯಾನ್ಯುಯೆಲ್ ಕ್ಯಾಂಟ್ ಇತಿಹಾಸ ಮತ್ತು ಭೂಗೋಳಶಾಸ್ತ್ರಗಳನ್ನು ವಿಂಗಡಿಸಿದ. ಈತನ ಪ್ರಕಾರ ಇತಿಹಾಸ ಕ್ರೊನೊಲಾಜಿಕಲ್ ಸೈನ್ಸ್ ಐತಿಹಾಸಿಕ ಘಟನೆಗಳನ್ನು ಕಾಲದ ಆಧಾರದ ಮೇಲೆ ಕ್ರಮಬದ್ಧವಾಗಿ ಜೋಡಿಸಿದರೆ ಅದು ಇತಿಹಾಸವಾಗುವುದು.

ಇದೇ ರೀತಿಯಲ್ಲಿ ಭೂಗೋಳ ಶಾಸ್ತ್ರ ಪ್ರಾದೇಶಿಕ ಅಧ್ಯಯನವಾಗಿರುವುದು (ಕೋರಾಲಜಿ). ಪ್ರಪಂಚದ ವಿವಿಧ ಭೂ ಪ್ರದೇಶಗಳ ಪ್ರಾದೇಶಿಕ ಅಧ್ಯಯನವೇ ಭೂಗೋಳ ಶಾಸ್ತ್ರವೆಂದು ಕ್ಯಾಂಟ್ ವಿವರಿಸಿದ. ಇದನ್ನೇ ಜರ್ಮನ್ನರು ರೀನ್ ಜಿಯೋಗ್ರಾಫಿ ಅಂದರೆ ಭೂಗೋಳವಿಜ್ಞಾನವೆಂದು ಕರೆದಿರುವರು. ಇದೇ ವಿಧಾನವನ್ನು ಹೆಟ್ನರ್ ಹಾಗೂ ರಿಚರ್ಡ್ ಹಾರ್ಟ್ ಶೋರ್ನ್ ಪ್ರತಿಪಾದಿಸಿದರು. ಇದರಿಂದ ಪ್ರಾದೇಶಿಕ ವಿಜ್ಞಾನವನ್ನು ಕ್ಯಾಂಟ್-ಹೆಟ್ನರ್-ಹಾರ್ಟ್‌ಶೋರ್ನ್ ಸಂಪ್ರದಾಯವೆಂದೂ ಸಹ ಕರೆಯಲಾಗಿದೆ. (ಆರ್.ಎಸ್.)

**ಕೋಲಾರ:** ಕರ್ನಾಟಕ ರಾಜ್ಯದ ಆಗ್ನೇಯ ಭಾಗದಲ್ಲಿರುವ ಒಂದು ಜಿಲ್ಲೆ; ಅದರ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ. ಹಿಂದೆ ಇದು ಕುವಲಾಲ ಎಂಬ ಹೆಸರಿನಿಂದ ಗಂಗರಸರ ರಾಜಧಾನಿಯಾಗಿತ್ತು. ಇದನ್ನು ಪಶ್ಚಿಮದಲ್ಲಿ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳು, ಉತ್ತರದಲ್ಲಿ ಮತ್ತು ಪೂರ್ವದಲ್ಲಿ ಅನುಕ್ರಮವಾಗಿ ಆಂಧ್ರಪ್ರದೇಶದ ಅನಂತಪುರ ಮತ್ತು ಚಿತ್ತೂರು ಜಿಲ್ಲೆಗಳು, ದಕ್ಷಿಣದಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಧರ್ಮಪುರಿ ಜಿಲ್ಲೆಗಳು ಸುತ್ತುವರಿದಿವೆ. ಇದರ ವಿಸ್ತೀರ್ಣ 8,236.5 ಚ.ಕಿಮೀ. ಇದು ಇಡೀ ರಾಜ್ಯದ 1/23 ರಷ್ಟಿದೆ, ಜನಸಂಖ್ಯೆ 25,36,069.




ಮೇಲ್ಮೈಲಕ್ಷಣ: ಕೋಲಾರ ಜಿಲ್ಲೆಯಲ್ಲಿ ಅಲ್ಲಲ್ಲಿ ವಿವಿಧ ಎತ್ತರಗಳ ಬೆಟ್ಟಗಳುಂಟು. ನಂದಿದುರ್ಗ ಪರ್ವತಶ್ರೇಣಿ ಮುಖ್ಯವಾದದ್ದು. ನಂದಿಯಿಂದ ಆರಂಭವಾಗಿ ಜಿಲ್ಲೆ ಹೊರಗಿನ ಪೆನುಕೊಂಡ ಮತ್ತು ಧರ್ಮಾವರಂವರೆಗೂ ಈ ಶ್ರೇಣಿ ಹಬ್ಬಿದೆ. ಬೆಂಗಳೂರಿನಿಂದ 50 ಕಿಮೀ ಉತ್ತರಕ್ಕಿರುವ ಚಿಕ್ಕಬಳ್ಳಾಪುರವು ಈಗ ಇದು ಸ್ವತಂತ್ರ ಜಿಲ್ಲೆ. ತಾಲ್ಲೂಕಿನಲ್ಲಿ ಇರುವ ನಂದಿದುರ್ಗದ ಎತ್ತರ 1456 ಮೀ ಚೆನ್ನಕೇಶವಬೆಟ್ಟ ಅಥವಾ ಚೆನ್ನರಾಯ ಬೆಟ್ಟ (1430 ಮೀ) ಚಿಕ್ಕಬಳ್ಳಾಪುರದ ಆಗ್ನೇಯಕ್ಕೆ 8 ಕಿಮೀ ದೂರದಲ್ಲಿದೆ. ನಂದಿದುರ್ಗದ ಉತ್ತರಕ್ಕೆ 8 ಕಿಮೀ ದೂರದಲ್ಲಿರುವ ಸ್ಕಂದಗಿರಿ (1426 ಮೀ). ನಂದಿದುರ್ಗದ ಆಗ್ನೇಯ ದಿಕ್ಕಿನಲ್ಲಿರುವ ಬ್ರಹ್ಮಗಿರಿ (1398 ಮೀ), ನಂದಿದುರ್ಗದ ಉತ್ತರಕ್ಕಿರುವ ಹರಿಹರೇಶ್ವರ ಬೆಟ್ಟ (1237 ಮೀ) ಮತ್ತು ನಂದಿದುರ್ಗದ ದಕ್ಷಿಣದಲ್ಲಿರುವ ದಿಬ್ಬಗಿರಿ-ಇವು ನಂದಿದುರ್ಗ ಶ್ರೇಣಿಯ ಇತರ ಕೆಲವು ಶಿಖರಗಳು. ಈ ಶ್ರೇಣಿಗೆ ಸಮಾಂತರದಲ್ಲಿ 48-64 ಕಿಮೀ ಪೂರ್ವಕ್ಕೆ ಬೆಟ್ಟಗಳ ಇನ್ನೊಂದು ಸಾಲಿದೆ. ಇದು ಗುಮ್ಮನಾಯಕನ ಪಾಳ್ಯದ ಉತ್ತರದಲ್ಲಿ ಜಿಲ್ಲೆಯನ್ನು ಪ್ರವೇಶಿಸಿ, ಚಿತ್ರಾವತಿ ಮತ್ತು ಪಾಪಾಘ್ನಿ ನದಿ ಕಣಿವೆಗಳನ್ನು ಬೇರ್ಪಡಿಸುತ್ತದೆ. ಜಿಲ್ಲೆಯ ಗಡಿಯ ಬಳಿ ಇದರ ಹೆಸರು ದೊಡ್ಡಲಕೊಂಡ ಅಥವಾ ದೊಂಗಲಕೊಂಡ. ದರೋಡೆಕಾರರು ಇಲ್ಲಿ ಆಶ್ರಯ ಪಡೆಯುತ್ತಿದ್ದುದರಿಂದ ಇದಕ್ಕೆ ಈ ಹೆಸರು ಬಂತೆಂದು ಹೇಳಲಾಗಿದೆ. ಈ ಬೆಟ್ಟಗಳ ಸಾಲು ಸ್ವಲ್ಪ ದೂರ ತಗ್ಗಿದ್ದು ಮತ್ತೆ ಅಲ್ಲಲ್ಲಿ ತಲೆಯೆತ್ತಿ ನಿಂತಿದೆ. ಮುರುಗಾಮಲೆ, ಅಂಬಾಜಿದುರ್ಗ (1321 ಮೀ) ಮತ್ತು ರಹಮಾನ್‌ದುರ್ಗ (1284 ಮೀ) ಇವು ಮುಖ್ಯ ಶಿಖರಗಳು. ಅಲ್ಲಿಂದಾಚೆಗೆ ಕೋಲಾರದ ಪಶ್ಚಿಮಕ್ಕೆ ಹಲವು ಬೆಟ್ಟಗಳ ಸರಪಳಿಯಾಗಿ ಪರಿಣಮಿಸಿ ದಕ್ಷಿಣದಲ್ಲಿ ಒಕ್ಕಲೇರಿ ಮತ್ತು ಟೇಕಲ್ ಬೆಟ್ಟಗಳವರೆಗೂ ಮುಂದುವರಿಯುತ್ತದೆ. ಇವೆರಡರ ಜೊತೆಗೆ ತಗ್ಗಿನ ಬೆಟ್ಟಗಳ ಇನ್ನೊಂದು ಶ್ರೇಣಿಯೂ ಕೋಲಾರ ಜಿಲ್ಲೆಯಲ್ಲುಂಟು. ಇದು ಶ್ರೀನಿವಾಸಪುರದ ಬಳಿ ಆರಂಭವಾಗಿ ಕೋಲಾರ ಪಟ್ಟಣದ ಪೂರ್ವದಲ್ಲಿ ಸಾಗಿ, ಬಂಗಾರಪೇಟೆಯ ದಕ್ಷಿಣಾಗ್ರವನ್ನು ಹಾದು ಕುಪ್ಪಂವರೆಗೂ ಮುಂದುವರಿಯುತ್ತದೆ. ಇನ್ನೂ ಪೂರ್ವಕ್ಕಿರುವ ಬೆಟ್ಟಗಳು ಕೆಲವು ಕಡೆ ವೃತ್ತಾಕಾರವಾಗಿ ಬಾಗಿವೆ. ಇವುಗಳ ನಡುವೆ ಇರುವ ಎತ್ತರದ ಕಣಿವೆಗಳಲ್ಲಿ ಹಳ್ಳಿಗಳುಂಟು. ಗ್ರಾನೈಟ್‌ನ ವಿವಿಧ ಆಕಾರ, ಗಾತ್ರಗಳ ಬಂಡೆಗಳ ಚಿತ್ರವಿಚಿತ್ರ ರಾಶಿಗಳು ಕೋಲಾರದ ವೈಶಿಷ್ಟ್ಯ.

ಕೋಲಾರ ಜಿಲ್ಲೆಯಲ್ಲಿ ಸರ್ವಋತು ನದಿಗಳು ಯಾವುವೂ ಇಲ್ಲ. ಬಹುತೇಕ ಸಣ್ಣ ನದಿಗಳಾಗಿವೆ. ಮಳೆಗಾಲದಲ್ಲಿ ಮಾತ್ರ ಇವು ಪ್ರವಹಿಸುತ್ತವೆ. ಪಾಲಾರ್ ಉತ್ತರ ಪಿನಾಕಿನಿ ಅಥವಾ ಉತ್ತರ ಪೆನ್ನಾರ್ ಮತ್ತು ದಕ್ಷಿಣ ಪಿನಾಕಿನಿ ಅಥವಾ ದಕ್ಷಿಣ ಪೆನ್ನಾರ್ ಮುಖ್ಯ ನದಿಗಳು. ಇವುಗಳ ಹಲವು ಉಪನದಿಗಳೂ ಜಿಲ್ಲೆಯಲ್ಲಿ ಹುಟ್ಟಿ ವಿವಿಧ ದಿಕ್ಕುಗಳಲ್ಲಿ ಹರಿಯುತ್ತವೆ. ನಂದಿ ಬೆಟ್ಟದ ತುದಿಯ ಬಳಿ ಬಾವಿಯೊಂದರಲ್ಲಿ ಪಾಲಾರ್ ನದಿ ಉದ್ಭವಿಸುವುದೆಂದೂ ಅಂತರ್ಗಾಮಿನಿಯಾಗಿ ದಕ್ಷಿಣ ಪಿನಾಕಿನಿಯನ್ನು ದಾಟಿ ಹರಿಯುವುದೆಂದೂ ಐತಿಹ್ಯವುಂಟು. ಇದು ನಿಜವಿರಲಾರದೆಂದೂ ಅಂಬಾಜಿದುರ್ಗ ಮತ್ತು ರಹಮಾನ್‌ದುರ್ಗಗಳ ಪಶ್ಚಿಮದ ಕೈವಾರ ಬಳಿಯಲ್ಲಿ ಉಗಮಿಸುವುದೆಂದೂ ಇನ್ನೊಂದು ಅಭಿಪ್ರಾಯವುಂಟು. ಈ ನದಿ ಮೊದಲು ಕಾಣಿಸಿಕೊಳ್ಳುವುದು ಕೈವಾರದ ದಕ್ಷಿಣಕ್ಕಿರುವ ಗೌತಮಗುಡ್ಡದಲ್ಲಿ. ಇದು ಜಂಗಮಕೋಟೆಯಿಂದ ಪೂರ್ವಾಭಿಮುಖವಾಗಿ ಹರಿದು ಕೋಲಾರದಿಂದಾಚೆಗೆ 16 ಕಿಮೀ ದೂರದಲ್ಲಿ ಉಪನದಿಯೊಂದನ್ನು ಕೂಡಿ ದಕ್ಷಿಣ ಮತ್ತು ಆಗ್ನೇಯಾಭಿಮುಖವಾಗಿ ಹರಿದು ಬಂಗಾರಪೇಟೆ ಮೂಲಕ ಬೇತಮಂಗಲ ಮತ್ತು ರಾಮಸಾಗರ ಕೆರೆಗಳಾಗಿ ಪರಿಣಮಿಸಿ ಜಿಲ್ಲೆಯನ್ನು ಬೀಳ್ಕೊಡುತ್ತದೆ. ಉಗಮ ಸ್ಥಳದಿಂದ ಜಿಲ್ಲೆಯನ್ನು ಬಿಡುವವರೆಗೆ ಇದರ ಉದ್ದ 110 ಕಿಮೀ. ಜಿಲ್ಲೆಯಲ್ಲಿ ಈ ನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ 2,700 ಚ.ಕಿಮೀ. ಇಲ್ಲಿ 1615 ಕೆರೆಗಳಿವೆ. ನದಿಯ ಪಾತ್ರದಲ್ಲೇ ಹಲವಾರು ಕೆರೆಗಳಿವೆ. ಉತ್ತರ ಪಿನಾಕಿನಿ ಚೆನ್ನಕೇಶವ ಬೆಟ್ಟದಲ್ಲಿ ಹುಟ್ಟಿ ವಾಯವ್ಯ ದಿಕ್ಕಿನಲ್ಲಿ ಹರಿದು, ಮಂಚೇನಹಳ್ಳಿ ಮತ್ತು ಗೌರಿಬಿದನೂರುಗಳ ಬಳಿಯಲ್ಲಿ ಸಾಗಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ 54 ಕಿಮೀ. ಜಲಾನಯನ ಪ್ರದೇಶದ ವಿಸ್ತೀರ್ಣ 836 ಚ.ಕಿಮೀ. ಇದರ ಜಲೋತ್ಸಾರಣ ನೆಲದಲ್ಲಿ 116 ಕೆರೆಗಳಿವೆ. ಇವುಗಳಲ್ಲಿ ಜಕ್ಕಲಮಡುಗು ಮತ್ತು ಶ್ರೀನಿವಾಸಸಾಗರ ಮುಖ್ಯವಾದವು. ಈ ನದಿ ಕರ್ನಾಟಕ ರಾಜ್ಯದ ಎಲ್ಲೆಯನ್ನು ದಾಟುವುದಕ್ಕೂ ಮುನ್ನ 2 ಕಿಮೀ ದೂರದ ಇದರ ದಡದಲ್ಲಿ ನೆಲಸಿರುವ ಪ್ರಸಿದ್ಧ ಕ್ಷೇತ್ರ ವಿದುರಾಶ್ವತ್ಥ. ಇಲ್ಲಿಯ ಅಶ್ವತ್ಥವೃಕ್ಷವನ್ನು ವಿದುರ ನೆಟ್ಟನೆಂದು ಹೇಳಲಾಗಿದೆ. ಜಿಲ್ಲೆಯ ಇನ್ನೊಂದು ಮುಖ್ಯನದಿ ಪಾಪಾಘ್ನಿ. ಜಿಲ್ಲೆಯನ್ನು ಬಿಟ್ಟಮೇಲೆ ಇದು ಉತ್ತರ ಪಿನಾಕಿನಿಯನ್ನು ಸೇರುತ್ತದೆ. ಚಿಕ್ಕಬಳ್ಳಾಪುರದ ಗುಂಡಲಗುಸ್ಕಿ ಬೆಟ್ಟದಲ್ಲಿ ಇದರ ಉಗಮ. ಇದು ಈಶಾನ್ಯ ದಿಕ್ಕಿನಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಮೂಲಕ ಹರಿದು, ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ 65 ಕಿಮೀ. ಜಲಾನಯನ ಪ್ರದೇಶದ ವಿಸ್ತೀರ್ಣ 856 ಚ.ಕಿಮೀ. ಇಲ್ಲಿ 591 ಕೆರೆಗಳಿವೆ. ಈ ನದಿ ಮತ್ತೆ ಜಿಲ್ಲೆಯನ್ನು ಪ್ರವೇಶಿಸಿ ಮತ್ತೆ ಜಿಲ್ಲೆ ಮುಂದುವರಿಯುತ್ತದೆ. ನೀರು ಕೋಲಾರ ಜಿಲ್ಲೆಯ ಚೇಳೂರು ಗ್ರಾಮದವರೆಗೂ ಹಬ್ಬಿದೆ. ಚಿತ್ರಾವತಿ ಇನ್ನೊಂದು ನದಿ. ನಂದಿ ಬೆಟ್ಟಕ್ಕೆ ಉತ್ತರದಲ್ಲಿ 14 ಕಿಮೀ ದೂರದಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿದು ಹಿಂದೂಪುರವನ್ನು ಪ್ರವೇಶಿಸುತ್ತದೆ. ಇದು ಉತ್ತರ ಪಿನಾಕಿನಿಯ ಒಂದು ಉಪನದಿ. ಜಿಲ್ಲೆಯಲ್ಲಿ ಇದರ ಹರಿವು 48 ಕಿಮೀ. ಇಲ್ಲಿ 206 ಕೆರೆಗಳಿವೆ. ನಂಗ್ಲಿ ಹೊಳೆ ಮುಳಬಾಗಿಲು ಬಳಿಯ ಕುರುಡುಮಲೆಯಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಜಿಲ್ಲೆಯನ್ನು ದಾಟಿ ಹೋಗುತ್ತದೆ. ಇದು ಕೌಂಡಿನ್ಯ ನದಿಯ ಉಪನದಿ. ಕುಮುದ್ವತಿ ನದಿ ಉತ್ತರ ಪಿನಾಕಿನಿಯ ಉಪನದಿ. ಜಿಲ್ಲೆಯಲ್ಲಿ ಹುಟ್ಟಿ ಉತ್ತರಕ್ಕೆ ಹರಿದು ಗೌರಿಬಿದನೂರು ತಾಲ್ಲೂಕಿನಲ್ಲಿ ಸಾಗಿ ಜಿಲ್ಲೆಯ ಎಲ್ಲೆಯನ್ನು ದಾಟುತ್ತದೆ. ಜಿಲ್ಲೆಯಲ್ಲಿ 56 ಕಿಮೀ ಹರಿಯುವ ಈ ನದಿಯ ಜಲಾನಯನ ಪ್ರದೇಶದಲ್ಲಿ 74 ಕೆರೆಗಳಿವೆ. ಕುಶಾವತಿ ಎಂಬ ಹೆಸರಿನ ಎರಡು ಹೊಳೆಗಳು ಈ ಜಿಲ್ಲೆಯಲ್ಲುಂಟು. ಒಂದು ಪಾಪಾಘ್ನಿಯನ್ನೂ ಇನ್ನೊಂದು ಚಿತ್ರಾವತಿಯನ್ನೂ ಸೇರುತ್ತವೆ. ಮಾರ್ಕಂಡೇಯ ಎಂಬುದು ಇನ್ನೊಂದು ಹೊಳೆ. ದಕ್ಷಿಣ ಪಿನಾಕಿನಿ ನದಿ ಚೆನ್ನಕೇಶವಬೆಟ್ಟದಲ್ಲಿ ಹುಟ್ಟುವುದು. ಶಿಡ್ಲಘಟ್ಟದವರೆಗೆ ಪೂರ್ವಾಭಿಮುಖವಾಗಿ ಹರಿದು ದಕ್ಷಿಣಕ್ಕೆ ತಿರುಗಿ ಬೆಂಗಳೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕೋಲಾರಜಿಲ್ಲೆಯಲ್ಲಿ ಇದರ ಉದ್ದ 38 ಕಿಮೀ. ಜಲಾನಯನ ಪ್ರದೇಶ 577 ಚ.ಕಿಮೀ. ಕಾವೇರಿಯ ಉಪನದಿಗಳಲ್ಲಿ ಒಂದಾದ ಅರ್ಕಾವತಿ ಉದಯಿಸುವುದು ನಂದಿದುರ್ಗದಲ್ಲಿ. ಇದು ಬೆಟ್ಟವನ್ನಿಳಿದು ಜಿಲ್ಲೆಯನ್ನು ದಾಟಿ ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕನ್ನು ಸೇರುತ್ತದೆ. ವೃಷಭಾವತಿ ನದಿ ಒಕ್ಕಲೇರಿ ಬೆಟ್ಟದಲ್ಲಿ ಹುಟ್ಟಿ ಬಂಗಾರಪೇಟೆ ತಾಲ್ಲೂಕಿನಲ್ಲಿ ಹಾಯ್ದು ಕೊಪ್ಪ-ದೊಡ್ಡಕೆರೆಗೆ ನೀರು ಒದಗಿಸಿ, ಕಾಮಸಂದ್ರದ ಬಳಿ ದಕ್ಷಿಣಕ್ಕೆ ಹರಿದು ತಮಿಳುನಾಡು ರಾಜ್ಯದ ಧರ್ಮಪುರಿ ಜಿಲ್ಲೆಯ ಹೊಸೂರು ತಾಲ್ಲೂಕನ್ನು ಪ್ರವೇಶಿಸುತ್ತದೆ. ಕಾಮಸಂದ್ರದ ಬಳಿ ಇದಕ್ಕೆ ಕಟ್ಟೆ ಕಟ್ಟಲಾಗಿದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ 57 ಕಿಮೀ. ಜಲಾನಯನ ಪ್ರದೇಶ 347 ಚ.ಕಿಮೀ. ಈ ಪ್ರದೇಶದಲ್ಲಿ 264 ಕೆರೆಗಳಿವೆ.

ವಾಯುಗುಣ: ಜಿಲ್ಲೆಯ ವಾಯುಗುಣ ಹಿತಕರ. ವರ್ಷದಲ್ಲಿ ಸ್ಥೂಲವಾಗಿ ನಾಲ್ಕು ಋತುಗಳಿವೆ: ಡಿಸೆಂಬರ್-ಫೆಬ್ರುವರಿ ಶುಷ್ಕ ಹವಾಗುಣ. ಮಾರ್ಚ್-ಮೇ ಬೇಸಿಗೆ, ಜೂನ್-ಅಕ್ಟೋಬರ್ ಮಳೆಗಾಲ. ನವೆಂಬರಿನಲ್ಲಿ ಮುಂಗಾರು ಹಿಂದೆ ಸರಿಯುತ್ತದೆ. ಕೋಲಾರ ಚಿನ್ನದ ಗಣಿಯ ಉಷ್ಣತೆ ಸ್ಥೂಲವಾಗಿ ಇಡೀ ಜಿಲ್ಲೆಗೆ ಪ್ರಾತಿನಿಧಿಕವಾದದ್ದು.

ನಂದಿ ಬೆಟ್ಟ ಪ್ರಸಿದ್ಧ ಪ್ರವಾಸಿ ಹಾಗೂ ತಂಪಿನ ತಾಣ. ಮೇ ತಿಂಗಳಲ್ಲಿ ವರ್ಷದ ಗರಿಷ್ಠ ಉಷ್ಣತೆ ದಾಖಲಾಗುತ್ತದೆ. ಆಗ ಕೋಲಾರ ಚಿನ್ನದ ಗಣಿಯಲ್ಲಿಯ ಸರಾಸರಿ ದೈನಿಕ ಗರಿಷ್ಠ ಉಷ್ಣತೆ $30^{0}$ಸೆ. ನಂದಿ ಬೆಟ್ಟದ ಮೇಲೆ ಏಪ್ರಿಲ್‌ನಲ್ಲಿ ಹೆಚ್ಚು ಉಷ್ಣತೆ ಇರುತ್ತದೆ. ಡಿಸೆಂಬರ್ ಅತ್ಯಂತ ತಣ್ಣನೆಯ ತಿಂಗಳು. ಆಗ ಕೋಲಾರ ಚಿನ್ನದ ಗಣಿ ಪ್ರದೇಶದ ಸರಾಸರಿ ದೈನಿಕ ಕನಿಷ್ಠ ಉಷ್ಣತೆ $19^{0}$ಸೆ. (ನಂದಿ ಬೆಟ್ಟದ ಮೇಲೆ $18^{0}$ಸೆ.). ಜಿಲ್ಲೆಯ ಮಳೆದಿನಗಳು 47. ನಂದಿಬೆಟ್ಟದಲ್ಲಿ ವರ್ಷದ ಸರಾಸರಿ ಮಳೆ 121 ಸೆಂಮೀ. ಇಡೀ ಜಿಲ್ಲೆಯ ಸರಾಸರಿ ಮಳೆ 73 ಸೆಂಮೀ.

ಸಸ್ಯ, ಪ್ರಾಣಿ : ಜಿಲ್ಲೆಯಲ್ಲಿ ಅನೇಕ ನದಿಗಳು ಹುಟ್ಟಿದರೂ ಕೆಲವು ನದಿಗಳು ಕೆಲವೇ ಕಿಮೀಗಳ ದೂರ ಹರಿದು ಹೊರ ರಾಜ್ಯಕ್ಕೆ ಹೋಗುತ್ತವೆ. ವ್ಯವಸಾಯ ಮತ್ತು ಕಾಡುಗಳು ಬೆಳೆಯುವಷ್ಟು ಮಳೆ ಸಾಮಾನ್ಯವಾಗಿ ಬೀಳುವುದಿಲ್ಲ. ಸ್ವಲ್ಪ ಹೆಚ್ಚು ಮಳೆಯಾಗುವ ಬೆಟ್ಟಗುಡ್ಡಗಳಲ್ಲಿ ಕಾಡುಗಳಿವೆ. ಈ ಕಾಡುಗಳಲ್ಲಿ ಬೇವು, ಹುಣಸೆ, ಗಂಧ, ಹೊಂಗೆ, ಕರಿಜಾಲಿ, ಬಿಳಿಜಾಲಿ, ಕಗ್ಗಲಿ, ಬನ್ನಿ, ಬಿಲ್ವಾರ, ಚುಜ್ಜಲು, ದಿಂಡಿಗ, ನೇರಳೆ, ಚೆನ್ನಂಗಿ, ಪಚರಿ, ನವಿಲಾದಿ, ದೇವದಾರು, ಆಲ, ಬೇಲ, ಮುತ್ತುಗ ಇವು ಬೆಳೆಯುತ್ತವೆ. ಸೌದೆ, ಶ್ರೀಗಂಧ ಮುಖ್ಯ ಉತ್ಪನ್ನಗಳು. ದಟ್ಟವಾದ ಕಾಡುಗಳಿಲ್ಲದಿರುವುದರಿಂದ ಕೋಲಾರ ಜಿಲ್ಲೆಯಲ್ಲಿ ಹುಲಿ, ಆನೆ, ಕಾಡು ಕೋಣ ಮುಂತಾದ ಪ್ರಾಣಿಗಳಿಲ್ಲ. ನಂದಿಬೆಟ್ಟದ ಕಾಡುಗಳಲ್ಲಿ ಕರಡಿಗಳು, ಚಿರತೆ, ಕಾಡುಮೊಲ, ಕಾಡುಹಂದಿಗಳು ಮತ್ತು ಜಿಂಕೆಗಳಿವೆ. ಹಾವುಗಳೂ ಹೆಚ್ಚು. ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರ ಜಿಲ್ಲೆಯ ಕಾಡುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡಿದೆ.

ಬೆಳೆಗಳು: ಜಿಲ್ಲೆಯಲ್ಲಿ ಕೆಂಪು ಮರಳು ಮಿಶ್ರಿತ ಜೇಡಿಮಣ್ಣಿನ ಭೂಮಿ, ಲ್ಯಾಟರೈಟ್ ಮತ್ತು ಅಲ್ಲಲ್ಲಿ ಕಪ್ಪುಮಣ್ಣಿನ ಭೂಮಿ ಉಂಟು. ಇಲ್ಲಿಯ ಮುಖ್ಯ ಬೆಳೆಗಳು ರಾಗಿ, ಬತ್ತ, ಜೋಳ, ಸಜ್ಜೆ, ಕಾಳುಗಳು, ನೆಲಗಡಲೆ, ಕಬ್ಬು, ಆಲೂಗೆಡ್ಡೆ, ಈರುಳ್ಳಿ ಮತ್ತು ಹೊಗೆಸೊಪ್ಪು. ಭೂಮಿ ಉಳಲು, ಸಾಮಾನು ಹೊರಲು, ಎತ್ತುಗಳನ್ನು ಬಳಸಲಾಗುತ್ತದೆ. ಇದರ ಜೊತೆಗೆ ಕುರಿ, ಕೋಳಿ, ಕತ್ತೆ, ಕುದುರೆ, ಮೇಕೆ, ಹಂದಿಗಳನ್ನು ಸಾಕುವರು. ಜಾತ್ರೆ ಮತ್ತು ಸಂತೆಗಳಲ್ಲಿ ಜಾನುವಾರು ಪ್ರದರ್ಶನ ಹಾಗೂ ಮಾರಾಟ ಇರುತ್ತದೆ. ಕೆರೆ, ಕಾಲುವೆ, ಮತ್ತು ಬಾವಿಗಳು ಜಿಲ್ಲೆಯ ನೀರಾವರಿಯ ಮೂಲಗಳು.

ಖನಿಜ ಸಂಪತ್ತು ಹಾಗೂ ಕೈಗಾರಿಕೆಗಳು: ಕೋಲಾರ ಜಿಲ್ಲೆ ಚಿನ್ನಕ್ಕೆ ಹೆಸರಾಗಿತ್ತು. ಭಾರತದ ಒಟ್ಟು ಚಿನ್ನದ ಉತ್ಪಾದನೆಯಲ್ಲಿ ಶೇ. 99ನ್ನು ಕೋಲಾರ ಚಿನ್ನದ ಗಣಿಯಲ್ಲಿ ತೆಗೆಯಲಾಗುತ್ತಿತ್ತು. ಈಗ ಗಣಿಗಾರಿಕೆ ಸಂಪೂರ್ಣ ಸ್ಥಗಿತಗೊಂಡಿದೆ. ಚಿನ್ನದ ಗಣಿ ಪ್ರದೇಶ ಇರುವುದು ಬಂಗಾರಪೇಟೆಗೆ (ಕೆಜಿಎಫ್) 15 ಕಿಮೀ ದೂರದಲ್ಲಿ. ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಆಡಳಿತ ನಿಯಂತ್ರಣಕ್ಕೊಳಪಟ್ಟ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಸಂಸ್ಥೆ ಭಾರಿ ಯಂತ್ರೋಪಕರಣಗಳನ್ನು ತಯಾರಿಸುತ್ತಿದೆ. ಗೌರಿಬಿದನೂರಿನಲ್ಲಿ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿದೆ. ಹಲವು ಸಣ್ಣ ಕೈಗಾರಿಕೆಗಳು ಕೋಲಾರ, ಚಿಂತಾಮಣಿ ಮತ್ತು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿವೆ. ಉಕ್ಕಿನ ಸಾಮಾನುಗಳು, ವ್ಯವಸಾಯೋಪಕರಣಗಳು, ಅಲ್ಯೂಮಿನಿಯಂ ಪಾತ್ರೆಗಳು, ಹೆಂಚು, ಇಟ್ಟಿಗೆ, ಸ್ಲೇಟ್, ಸೀಸದಕಡ್ಡಿ, ಸಾಬೂನು, ಅಂಟು, ಸುಗಂಧ ದ್ರವ್ಯಗಳು, ಔಷಧಿಗಳು, ಕಡ್ಡಿಪೆಟ್ಟಿಗೆ, ಪ್ಲಾಸ್ಟಿಕ್ ಸಾಮಾನುಗಳನ್ನು ಜಿಲ್ಲೆಯಲ್ಲಿ ಉತ್ಪಾದಿಸಲಾಗುತ್ತದೆ. ಕಲ್ಲಿಗೆ ಹೊಳಪು ಕೊಡುವುದು, ಬೀಡಿ ಕಟ್ಟುವುದು, ಊದುಬತ್ತಿ ತಯಾರಿಕೆ, ಕೈಮಗ್ಗದ ಕೈಗಾರಿಕೆ, ಕಂಬಳಿ ತಯಾರಿಕೆ, ಗಾಣ ಮತ್ತು ಯಂತ್ರಗಳಿಂದ ಎಣ್ಣೆ ಉತ್ಪಾದನೆ, ಬೆಲ್ಲ ತಯಾರಿಕೆ ಇವೂ ಇವಕ್ಕೆ ಸಂಬಂಧಪಟ್ಟ ಉತ್ಪಾದನೆ, ಕೈಕಸುಬು ಹಲವು ಜನರಿಗೆ ಉದ್ಯೋಗ ದೊರಕಿಸಿವೆ. ಚರಕದಿಂದ ನೂಲು ತೆಗೆಯುವುದು, ಮಣ್ಣಿನ ಸಾಮಾನುಗಳನ್ನು ತಯಾರಿಸುವುದು, ಚರ್ಮ ಹದ ಮಾಡುವುದು, ಜೇನುಸಾಕಣೆ, ಕೊಟ್ಟಣದ ಅಕ್ಕಿ ತಯಾರಿಕೆ ಇವು ಇತರ ಕೆಲವು ಸಣ್ಣ ಕೈಗಾರಿಕೆಗಳು. ಇವೆಲ್ಲ ಜಿಲ್ಲೆಯಿಂದ ಮಾರಾಟವಾಗುವ ಪದಾರ್ಥಗಳು. ಆಲೂಗೆಡ್ಡೆ, ಮೆಣಸಿನಕಾಯಿ, ಈರುಳ್ಳಿ ಇವನ್ನು ಆಂಧ್ರಪ್ರದೇಶಕ್ಕೂ ಶ್ರೀಲಂಕಕ್ಕೂ ಕಳುಹಿಸುವರು. ಉಣ್ಣೆ ಕಂಬಳಿಗಳೂ ರೇಷ್ಮೆ ಬಟ್ಟೆಗಳೂ ಚರ್ಮದ ವಸ್ತುಗಳೂ ನೆರೆರಾಜ್ಯಗಳಿಗೆ ಹೋಗುತ್ತವೆ. ಆಂಧ್ರಪ್ರದೇಶದಿಂದ ಜಿಲ್ಲೆಗೆ ಅಕ್ಕಿ ಆಮದಾಗುತ್ತದೆ.

ಸಾರಿಗೆ, ಸಂಪರ್ಕ: ಕೋಲಾರ ಜಿಲ್ಲೆ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳ ನೆರೆಯಲ್ಲಿರುವುದರಿಂದಲೂ ಬೆಂಗಳೂರು ಜಿಲ್ಲೆ ಪಕ್ಕದಲ್ಲಿರುವುದರಿಂದಲೂ ಈ ಜಿಲ್ಲೆಯಲ್ಲಿ ಹಲವು ದೊಡ್ಡ ಬೆಟ್ಟಗಳಾಗಲಿ, ನದಿಗಳಾಗಲಿ ಇಲ್ಲದಿರುವುದರಿಂದಲೂ ಇಲ್ಲಿ ರಸ್ತೆ ಸಾರಿಗೆ–ಸಂಪರ್ಕ ತಕ್ಕಮಟ್ಟಿಗೆ ಬೆಳೆದಿವೆ. ರಾಷ್ಟ್ರೀಯ ಹೆದ್ದಾರಿ, ರಾಜ್ಯದ ಮುಖ್ಯ ರಸ್ತೆಗಳು ಇಲ್ಲಿ ಹಾದು ಎಲ್ಲ ನೆರೆರಾಜ್ಯಗಳಿಗೆ ಸಂಪರ್ಕ ಕಲ್ಪಿಸಿವೆ. ಪ್ರತಿ ಹಳ್ಳಿಗೂ ತಾಲ್ಲೂಕಿಗೂ ಜಾಲರಿಯಂತೆ ರಸ್ತೆ ಮಾರ್ಗಗಳು ಹೆಣೆದುಕೊಂಡಿವೆ. ಸರ್ಕಾರಿ ಮತ್ತು ಖಾಸಗಿ ವಾಹನಗಳು ಜನರನ್ನೂ ಸರಕುಗಳನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ಸುಲಭವಾಗಿ ಸಾಗಿಸುತ್ತವೆ. ಹಿಂದೂಪುರ–ಬೆಂಗಳೂರು ರೈಲುಮಾರ್ಗ ಗೌರಿಬಿದನೂರು ಮೂಲಕವೂ ಚೆನ್ನೈ–ಬೆಂಗಳೂರು ರೈಲುಮಾರ್ಗ ಬಂಗಾರಪೇಟೆಯ ಮೂಲಕವೂ ಸಾಗುತ್ತವೆ. ಇನ್ನೊಂದು ರೈಲುಮಾರ್ಗ ಬೆಂಗಳೂರಿನಿಂದ ನಂದಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಕೋಲಾರಗಳ ಮೂಲಕ ಬಂಗಾರಪೇಟೆಗೆ ಸಾಗುತ್ತದೆ. ಬಂಗಾರಪೇಟೆಯಿಂದ ಚಿನ್ನದಗಣಿ ಪ್ರದೇಶಕ್ಕೆ ರೈಲ್ವೆ ಸಂಪರ್ಕವುಂಟು.

ವಿದ್ಯಾಭ್ಯಾಸ, ಸಂಸ್ಕೃತಿ: ಜಿಲ್ಲೆ ಕರ್ನಾಟಕ ರಾಜ್ಯದ ಒಂದು ಪ್ರಮುಖ ವಿದ್ಯಾಭ್ಯಾಸದ ಕೇಂದ್ರವಾಗಿ ಮುಂದುವರಿಯುತ್ತಿದೆ. ಅನೇಕ ಜೂನಿಯರ್ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳೂ ಪ್ರೌಢಶಾಲೆಗಳು ಇವೆ.

ಪ್ರೇಕ್ಷಣೀಯ ಸ್ಥಳಗಳು: ಜಿಲ್ಲೆಯಲ್ಲಿ ಹಲವು ಪ್ರೇಕ್ಷಣೀಯ ಹಾಗೂ ವಿಹಾರಧಾಮಗಳಿವೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ಭೋಗನಂದೀಶ್ವರ ದೇವಾಲಯ 9ನೆಯ ಶತಮಾನದ್ದು. ಮುಳಬಾಗಿಲು ತಾಲ್ಲೂಕಿನ ಆವನಿಯಲ್ಲಿರುವ ರಾಮೇಶ್ವರ ದೇವಾಲಯವೂ ಕೋಲಾರ ನಗರದಲ್ಲಿರುವ ಸೋಮೇಶ್ವರ ದೇವಾಲಯವೂ ಕುರುಡುಮಲೆಯಲ್ಲಿರುವ ಗಣಪತಿ ಮತ್ತು ಸೋಮೇಶ್ವರ ದೇವಾಲಯವೂ ನೋಡತಕ್ಕವು. ದೇವಾಲಯಗಳಲ್ಲಿ ಸುಂದರ ಕೆತ್ತನೆಯುಳ್ಳ ಕಂಬಗಳ ಮಂಟಪಗಳೂ ವಿಗ್ರಹಗಳೂ ಶಿಲ್ಪಕಲಾಚಾತುರ್ಯಕ್ಕೆ ಸಾಕ್ಷಿಗಳಾಗಿವೆ. ಕೋಲಾರದ ಹತ್ತಿರವಿರುವ ಅಂತರಗಂಗೆ, ಗೌರಿಬಿದನೂರಿನ ಹತ್ತಿರವಿರುವ ಹಿರೇಬಿದನೂರಿನ ನ್ಯಾಮತ್ ಬೀ ದರ್ಗ ಅಥವಾ ಹುಸೇನ್–ಷಾ–ಮಿರ್ಜಾ ದರ್ಗ ಪ್ರೇಕ್ಷಣೀಯವಾದವು. ಗೌರಿಬಿದನೂರಿನ ಸಹಕಾರ ಸಕ್ಕರೆ ಕಾರ್ಖಾನೆಯೂ ಮುಖ್ಯ. ಅಂಬಾಜಿದುರ್ಗದ ಮೇಲೆ ಟಿಪ್ಪುಸುಲ್ತಾನ ಕಟ್ಟಿಸಿದ ಕೋಟೆ ಇದೆ. ಮಾಲೂರು ತಾಲ್ಲೂಕಿನಲ್ಲಿರುವ ಚಿಕ್ಕ ತಿರುಪತಿ ಒಂದು ಯಾತ್ರಾಸ್ಥಳ. ಇಲ್ಲಿನ ಶ್ರೀನಿವಾಸ ದೇವಾಲಯದಲ್ಲಿರುವ ಶ್ರೀನಿವಾಸ ವಿಗ್ರಹ ಸುಂದರವಾಗಿದೆ. ಮುಳಬಾಗಿಲಿನಲ್ಲಿರುವ ಆಂಜನೇಯಸ್ವಾಮಿ ದೇವಾಲಯ ಮತ್ತು ಸೋಮೇಶ್ವರ ದೇವಾಲಯ ನೋಡತಕ್ಕವು. ಚಿಂತಾಮಣಿಗೆ 13 ಕಿಮೀ ದೂರದಲ್ಲಿರುವ ಕೈವಾರ ಹಿಂದೆ ಏಕಚಕ್ರಪುರವೆಂದೂ ಭೀಮ ಬಕಾಸುರನನ್ನು ಕೊಂದ ಸ್ಥಳ ಇದೆಂದೂ ಪ್ರತೀತಿ. ಇಲ್ಲಿರುವ ಅಮರನಾರಾಯಣ, ಭೀಮೇಶ್ವರ, ನಕುಲೇಶ್ವರ, ಸಹದೇವೇಶ್ವರ ನೋಡತಕ್ಕ ದೇವಾಲಯಗಳು. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ನಂದಿಬೆಟ್ಟ ಒಂದು ವಿಶ್ರಾಂತಿಧಾಮ. ಬೆಟ್ಟದ ಮೇಲಿನ ಅಮೃತಸರೋವರ, ಗಾಂಧಿಭವನ, ಆಕರ್ಷಕ ತೋಟಗಳು, ತಣ್ಣನೆಯ ಹವೆ, ಯೋಗನಂದೀಶ್ವರ ದೇವಾಲಯ ಮತ್ತು ಟಿಪ್ಪುಪ್ರಪಾತ (ಟಿಪ್ಪೂ ಡ್ರಾಪ್) ಜನರನ್ನು ಆಕರ್ಷಿಸುತ್ತವೆ. ವಿದುರಾಶ್ವತ್ಥ ಒಂದು ಪ್ರಸಿದ್ಧ ಯಾತ್ರಾಸ್ಥಳ. ವಿದುರನು ನೆಟ್ಟ ಎನ್ನಲಾದ ಆರಳಿಮರ ಇಲ್ಲಿ ಪ್ರಸಿದ್ಧವಾಗಿದೆ. ಕೆಜಿಎಫ್ ನಿಂದ 15 ಕಿಮೀ ದೂರದಲ್ಲಿರುವ ಬೇತಮಂಗಲ (ವೇದಮಂಗಳ) ಹಾಗೂ ಬಂಗಾರ ತಿರುಪತಿ ಬೂದಿಕೋಟೆ ನೋಡತಕ್ಕ ಸ್ಥಳಗಳು.

ಕೋಲಾರ ಜಿಲ್ಲೆಯನ್ನು ಆಡಳಿತ ದೃಷ್ಟಿಯಿಂದ ಚಿಕ್ಕಬಳ್ಳಾಪುರಜಿಲ್ಲೆ ಮತ್ತು ಕೋಲಾರ ಎಂಬ ಎರಡು ಉಪವಿಭಾಗಗಳಾಗಿ (ಸಬ್–ಡಿವಿಜನ್) ವಿಂಗಡಿಸಿದೆ. ಈಗ ಚಿಕ್ಕಬಳ್ಳಾಪುರ ಕೋಲಾರದಿಂದ ಬೇರ್ಪಟ್ಟು ಪ್ರತ್ಯೇಕ ಜಿಲ್ಲೆಯಾಗಿದೆ. ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ ಮತ್ತು ಗೌರಿಬಿದನೂರು ತಾಲ್ಲೂಕುಗಳು ಚಿಕ್ಕಬಳ್ಳಾಪುರ ಉಪವಿಭಾಗದಲ್ಲೂ ಕೋಲಾರ ಶ್ರೀನಿವಾಸಪುರ, ಮುಳಬಾಗಲು, ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳು ಕೋಲಾರ ಉಪವಿಭಾಗದಲ್ಲೂ ಇವೆ.

ಕೋಲಾರ ಪಟ್ಟಣ: ಕೋಲಾರ ಜಿಲ್ಲೆಯ ಮುಖ್ಯ ಪಟ್ಟಣ. ಇದು ಉ.ಅ.$13^{0}6'$ ಮತ್ತು ಪೂ.ರೇ.$78^{0}7'$ ಮೇಲಿದೆ. ಬೆಂಗಳೂರಿನಿಂದ 68 ಕಿಮೀ ದೂರ. ಕೋಲಾರದಿಂದ ಬೆಂಗಳೂರಿಗೂ ಬಂಗಾರಪೇಟೆಗೂ ರೈಲುಮಾರ್ಗಗಳಿವೆ. ಜನಸಂಖ್ಯೆ 3,42,593. ಕೋಲಾರ ಪಟ್ಟಣದ ವಿಸ್ತೀರ್ಣ ಸು. 792.9 ಚ.ಕಿಮೀ. ಹಳೆಯ ಕೋಟೆ ಗೋಡೆಯನ್ನು 1850ರ ಸುಮಾರಿನಲ್ಲಿ ಕೆಡವಿ ಸುತ್ತಲಿನ ಕಂದಕವನ್ನು ಮುಚ್ಚಲಾಯಿತು. ಹೈದರ್ ಆಲಿ ತಂದೆಯ ಗೋರಿ ಇರುವ ಮುಕ್ಬಾರ ಒಂದು ಪ್ರೇಕ್ಷಣೀಯ ಸ್ಥಳ. ದೇವಸ್ಥಾನಗಳ ಪೈಕಿ ಕೋಲಾರಮ್ಮ ಮತ್ತು ಸೋಮೇಶ್ವರ ದೇವಾಲಯಗಳು ಮುಖ್ಯವಾದವು. ಆಂಜನೇಯ, ನಂಜುಂಡೇಶ್ವರ, ವೆಂಕಟರಮಣ ಮತ್ತು ಕೋದಂಡರಾಮನ ದೇವಾಲಯಗಳೂ ಇವೆ. ಪಟ್ಟಣದ ಪಶ್ಚಿಮಕ್ಕೆ ಅಂತರಗಂಗೆ ಬೆಟ್ಟ (1209 ಮೀ) ಅಥವಾ ಕೋಲಾರ ಬೆಟ್ಟ. ಇದಕ್ಕೆ ಶತಶೃಂಗ ಪರ್ವತ ಎಂಬ ಹೆಸರೂ ಉಂಟು. ಸುತ್ತ ಬಂಡೆಗಳಿಂದ ತುಂಬಿ ಬರಡಾಗಿ ಕಾಣುವ ಬೆಟ್ಟದ ತುದಿ ಚಪ್ಪಟೆ ಹಾಗೂ ಫಲವತ್ತಾಗಿದೆ. ಇದು ನೀರಾವರಿ ಬೇಸಾಯಕ್ಕೆ ಒಳಪಟ್ಟಿದೆ. ಪೂರ್ವಕ್ಕೆ ಹರಿಯುವ ಅಂತರಗಂಗೆ ಪವಿತ್ರವಾದ ಹಾಗೂ ರಮ್ಯತಾಣ. ಇಲ್ಲಿರುವ ಕಲ್ಲಿನ ಬಸವನ ಬಾಯಿಂದ ನೀರು ಧಾರಾಕಾರವಾಗಿ ಬರುತ್ತದೆ. ರೈಲು ಮಾರ್ಗ ನಿರ್ಮಾಣವಾಗುವ ಮುನ್ನ ಪೂರ್ವದ ಕಣಿವೆ ಮಾರ್ಗಗಳಿಂದ ಬರುತ್ತಿದ್ದ ಮಾರ್ಗಗಳು ಕೋಲಾರದಲ್ಲಿ ಕೇಂದ್ರೀಕರಿಸುತ್ತಿದ್ದುದರಿಂದ ಈ ಮೂಲಕ ಪ್ರವಾಸಿಗಳು ಸತತವಾಗಿ ಹಾದುಹೋಗುತ್ತಿದ್ದರು. ಇದರಿಂದ ಈ ಪಟ್ಟಣ ಪದೇ ಪದೇ ಕಾಲರಾವ್ಯಾಧಿಗೆ ಒಳಗಾಗುತ್ತಿತ್ತು. ಹಿಪ್ಪು ನೇರಳೆ ವ್ಯವಸಾಯ, ಕೋಳಿ ಸಾಕಣೆ, ಕಂಬಳಿ ನೇಯ್ಗೆ ಜನರ ಮುಖ್ಯ ಕಸಬುಗಳು. ಪ್ರತಿ ಗುರುವಾರ ಇಲ್ಲಿ ಸಂತೆ ಸೇರುತ್ತದೆ. **(ಕೆ.ಆರ್.;ಬಿ.ಎಸ್.ಎಚ್.)**

**ಕೋಲ್ಕತ:** ಭಾರತದ ಬೃಹನ್ನಗರ. ಪ್ರಸಿದ್ಧ ವಾಣಿಜ್ಯಕೇಂದ್ರ, ಸಾಂಸ್ಕೃತಿಕ ರಂಗ. ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಕಾಲದಲ್ಲಿ–1773ರಿಂದ 1912ರ ವರೆಗೆ–ಭಾರತಕ್ಕೂ 1947ರ ವರೆಗೆ ಬಂಗಾಲಕ್ಕೂ ರಾಜಧಾನಿಯಾಗಿತ್ತು. ಈಗ ಪಶ್ಚಿಮ ಬಂಗಾಲದ ರಾಜಧಾನಿ. ಗಂಗಾನದಿಯ ಶಾಖೆಗಳಲ್ಲೊಂದಾದ ಹೂಗ್ಲಿಯ ಪೂರ್ವ ದಂಡೆಯ ಮೇಲಿದೆ. ಬಂಗಾಲ ಕೊಲ್ಲಿಯ ಅಗ್ರಭಾಗದಿಂದ ಸು.130 ಕಿಮೀ ದೂರದಲ್ಲಿರುವ ಈ ನಗರ ಸು. 101 ಚ.ಕಿಮೀ ಪ್ರದೇಶದಲ್ಲಿ ಹರಡಿದೆ.

ಕೋಲ್ಕತದ ಪ್ರಾಮುಖ್ಯಕ್ಕೆ ಅದರ ಸನ್ನಿವೇಶವೇ ಪ್ರಧಾನ ಕಾರಣ. ಪಕ್ಕದಲ್ಲಿ ಹರಿಯುವ ಹೂಗ್ಲಿ ನದಿ ತಕ್ಕಮಟ್ಟಿಗೆ ಆಳವಾಗಿದೆ. ಸಾಗರಗಾಮಿ ಹಡಗುಗಳು ನದಿಯಲ್ಲಿ ನಗರದ ಮುಖದವರೆಗೂ ಸುಲಭವಾಗಿ ಸಾಗಬಹುದು. ಕೋಲ್ಕತದ ಉತ್ತರದಲ್ಲಿ ಚಿತ್ಪುರ ಕೊರಕಲೂ ಪೂರ್ವದಲ್ಲಿ ವಿಶಾಲವಾದ ಚೌಳುಮಣ್ಣಿನ ಜವುಗು ನೆಲವೂ ದಕ್ಷಿಣದಲ್ಲಿ ಆದಿಗಂಗಾ ನದಿಯೂ ಇರುವುದರಿಂದ ಪ್ರಕೃತಿಯೇ ಇದಕ್ಕೆ ರಕ್ಷಣೆಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿತ್ತು. ಕೋಲ್ಕತದ ಬೆಳವಣಿಗೆಗೆ ಇದಕ್ಕಿಂತ ಹೆಚ್ಚು ಮುಖ್ಯವಾದ ಕಾರಣವೆಂದರೆ ವಿಶಾಲವೂ ಸಂಪದ್ಭರಿತವೂ ಜನನಿಬಿಡವೂ ಆದ ಹಿನ್ನಾಡು. ಗಂಗಾನದಿಯ ಬಯಲು, ಅಸ್ಸಾಂ ಕಣಿವೆಯ ಪ್ರದೇಶ, ಖನಿಜ ಸಮೃದ್ಧ ಬಿಹಾರ, ಜಾರ್ಖಂಡ್, ಒರಿಸ್ಸ, ಮಧ್ಯಪ್ರದೇಶ, ಛತ್ತೀಸ್‌ಗರ್‌ಗಳೆಲ್ಲ ಕೋಲ್ಕತದ ಹಿನ್ನಾಡಿನಲ್ಲಿವೆ. ಇದು ಭಾರತದ ಪ್ರಧಾನ ವಾಣಿಜ್ಯ ಕೇಂದ್ರವಾಗಿ ಬೆಳೆಯಲು ಇದರ ಸನ್ನಿವೇಶ ಮುಖ್ಯ ಕಾರಣ.

ಕೋಲ್ಕತದ ಕೇಂದ್ರದ ಎತ್ತರ ಸಮುದ್ರಮಟ್ಟದಿಂದ 6 ಮೀ. ನದಿ ದಂಡೆಯಿಂದ ಪೂರ್ವದಲ್ಲಿರುವ ಲವಣ ಸರೋವರದ ಕಡೆಗೆ ನೆಲ ಸ್ವಲ್ಪ ಇಳಿಜಾರಾಗಿದೆ. ಅಲ್ಲಲ್ಲಿ ಹೆಚ್ಚು ಆಳವಿಲ್ಲದ ವಿಶಾಲ ಕೊಳ್ಳಗಳುಂಟು. ಮಳೆಗಾಲದಲ್ಲಿ ಇವೆಲ್ಲ ನೀರಿನಿಂದ ತುಂಬಿರುತ್ತವೆ. ಮಾರ್ಚಿಯಿಂದ ಸೆಪ್ಟೆಂಬರ್‌ವರೆಗೆ ಕೋಲ್ಕತದ ಹವಾಗುಣವು ಹೆಚ್ಚು ತಾಪಯುಕ್ತವಾದದ್ದು. ಆಗಿನ ಮಾಸಿಕ ಉಷ್ಣತೆ $26^0$–$32^0$ಸೆ. ಗಳು ವಾಯುವಿನಲ್ಲಿ ತೇವಾಂಶವು ಹೆಚ್ಚು. ಆದ್ದರಿಂದ ಹವಾಗುಣ ಅತ್ಯಂತ ಹಿತಕರ. ಹೂಗ್ಲಿಯ ಸಮುದ್ರಸಂಗಮದ ಎಡೆಯಿಂದ ಸಂಜೆಯ ವೇಳೆ ಸಾಮಾನ್ಯವಾಗಿ ಬೀಸುವ ಕಡಲ್ಗಾಳಿ ತಂಪೆರೆಯುತ್ತದೆ. ಅಗಿಂದಾಗ್ಗೆ ಇದು ಮಳೆಯನ್ನೂ ತರುವುದುಂಟು. ಜೂನ್ ತಿಂಗಳ ಉತ್ತರಾರ್ಧದಲ್ಲಿ ಮಳೆಗಾಲ ಆರಂಭ. ಮುಂದೆ ಮೂರು ತಿಂಗಳ ಕಾಲ ಆಗಿಂದಾಗ್ಗೆ ಮುಸಲಧಾರೆಯಾಗಿ ಮಳೆ ಸುರಿಯುತ್ತದೆ. ನಡುನಡುವೆ ಸ್ವಲ್ಪ ಕಡಿಮೆಯಾಗುವುದುಂಟು. ಅನಂತರದ ಮೂರು ತಿಂಗಳುಗಳಲ್ಲಿ ಆಗೊಮ್ಮೆ ಈಗೊಮ್ಮೆ ಮಳೆ ಸುರಿಯುವುದುಂಟು. ಜೂನ್–ಸೆಪ್ಟೆಂಬರ್ ಅವಧಿಯಲ್ಲಿ ಮಾಸಿಕ ಮಳೆಯ ಪ್ರಮಾಣ ಸಾಮಾನ್ಯವಾಗಿ 30 ರಿಂದ 35 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ. ಹಿಂಗಾರಿನ ಅನಂತರ ಮಳೆಯಾಗುವುದು ವಿರಳ. ಆಕ್ಟೋಬರಿನಿಂದ ಫೆಬ್ರುವರಿಯವರೆಗಿನ ಹವಾಗುಣ ಹಿತಕರ. ನಡುವಣ ಎರಡು ತಿಂಗಳುಗಳಲ್ಲಿ ರಾತ್ರಿಯ ವೇಳೆ ಕೊರೆಯುವ ಚಳಿ ಇರುತ್ತದೆ.

ವಿಕ್ಟೋರಿಯ ಸ್ಮಾರಕ ಭವನ

ಕೋಲ್ಕತದ ಜನಸಂಖ್ಯೆ ಇಪ್ಪತ್ತನೆಯ ಶತಮಾನದಲ್ಲಿ ಬಲು ವೇಗವಾಗಿ ಬೆಳೆದಿದೆ. 1901ರಲ್ಲಿ ಇದ್ದ ಸಂಖ್ಯೆ 10,00,000. 1951ರ ವೇಳೆಗೆ ಇದು 15,00,000ದಷ್ಟು ಅಧಿಕವಾಯಿತು. 2001ರ ವೇಳೆಗೆ ಅದು 13,216,548 ಹೆಚ್ಚಿತು. ಈ ಅವಧಿಯಲ್ಲಿ ನಗರದ ಪ್ರದೇಶ ಸು. ಶೇ. 50ರಷ್ಟು ಮಾತ್ರ ವಿಸ್ತರಿಸಿದೆ. ಆದ್ದರಿಂದ ನಗರದಲ್ಲಿಯ ಜನಸಂದಣಿ ಅತ್ಯಧಿಕ. ನಗರದ ಜನರ ಮೂರನೆಯೆರಡರಷ್ಟು ಮಂದಿ ಬಂಗಾಲಿಗಳು. ಉಳಿದವರಲ್ಲಿ ಹಿಂದಿ ಮಾತನಾಡುವವರೇ ಹೆಚ್ಚು. ಇಲ್ಲಿರುವ ಐರೋಪ್ಯರಲ್ಲಿ ಬ್ರಿಟಿಷರು ಬಹುಸಂಖ್ಯಾತರು. ಕೋಲ್ಕತದ ಅತ್ಯಂತ ಪ್ರಸಿದ್ಧ ಸ್ಥಳವೆಂದರೆ ವಿಕ್ಟೋರಿಯ ಮೈದಾನ. ಇದರ ವಿಸ್ತೀರ್ಣ 1,238 ಎಕರೆ. ಫೋರ್ಟ್ ವಿಲಿಯಂ (ಕೋಟೆ) ಇದರ ಪಶ್ಚಿಮಕ್ಕೆ ಹೂಗ್ಲಿಗೆದುರಾಗಿ ನಿಂತಿದೆ. ಸು. 10,000 ಸೈನಿಕರು ಇರಬಹುದಾದ ಈ ಕೋಟೆ ಸ್ಥೂಲವಾಗಿ ಅಷ್ಟ ಕೋನಾಕೃತಿಯಲ್ಲಿದೆ. ಇದು ಕೋಲ್ಕತ ನಗರದ ಕೇಂದ್ರಸ್ಥಳವೆನ್ನಬಹುದು. ವಿಕ್ಟೋರಿಯ ಸ್ಮಾರಕಭವನ ಕೋಲ್ಕತದ ಅತ್ಯಂತ ಸುಂದರವಾದ ಕಟ್ಟಡ. ಇದು ಕುದುರೆ ಪಂದ್ಯ ಸ್ಥಳಕ್ಕೆ ಕೂಡಿದಂತಿರುವ ಮೈದಾನದ ಆಗ್ನೇಯಕ್ಕಿದೆ. ಇಲ್ಲೊಂದು ಚಿತ್ರಾಲಯವೂ ವಸ್ತುಸಂಗ್ರಹಾಲಯವೂ ಇವೆ. ಸೇಂಟ್ ಪಾಲನ ಕತೀಡ್ರಲ್ ಇಂಡೊ–ಗಾಥಿಕ್ ಶೈಲಿಯ ಕಟ್ಟಡ. ಇದನ್ನು 1839–41ರಲ್ಲಿ ನಿರ್ಮಿಸಲಾಯಿತು. ಈಡನ್ ಗಾರ್ಡನ್ ನಗರದ ಇನ್ನೊಂದು ಚೆಲುವುದಾಣ. ಆಕಾಶವಾಣಿ ಕಟ್ಟಡವೂ ರಣಜಿ ಕ್ರೀಡಾಂಗಣವೂ ಇಲ್ಲಿವೆ. ರಾಜಭವನ, ವಿಧಾನ ಸಭಾಭವನ, ಉಚ್ಚ ನ್ಯಾಯಾಲಯ, ಪುರಭವನ ಇವು ಇತರ ಮುಖ್ಯ ಕಟ್ಟಡಗಳು. ಪುರಭವನವನ್ನು ಕಟ್ಟಲಾದದ್ದು 1813ರಲ್ಲಿ. ಅರಮನೆಗಳಂಥ ಸೌಧಗಳಿರುವಂಥ ಚೌರಂಘಿ ಒಮ್ಮೆ ಶ್ರೀಮಂತರ ವಾಸಸ್ಥಳವಾಗಿತ್ತು. ಈಗ ಅಲ್ಲಿ ಹೋಟೆಲುಗಳೂ ಅಂಗಡಿಗಳೂ ಕಚೇರಿಗಳೂ ವಸ್ತುಸಂಗ್ರಹಾಲಯಗಳೂ ಇವೆ. ಸುಪ್ರಸಿದ್ಧವಾದ ಭಾರತೀಯ ವಸ್ತುಸಂಗ್ರಹಾಲಯ (ಇಂಡಿಯನ್ ಮ್ಯೂಸಿಯಂ) ಇರುವುದು ಅಲ್ಲಿ. ಕೋಲ್ಕತದ ಹೃದಯ ಸ್ಥಾನ ವಾಣಿಜ್ಯ ಪ್ರಧಾನವಾದದ್ದು . ನಗರದ ವಾಣಿಜ್ಯ ಸಂಸ್ಥೆಗಳೂ ಆಡಳಿತ ಕಚೇರಿಗಳೂ ರಾಜಭವನದ ಉತ್ತರಕ್ಕೆ ಡಾಲ್ ಹೌಸಿ ಚೌಕದ ಸುತ್ತ ಗೊಂಚಲುಗೊಂಚಲಾಗಿವೆ. ಪಶ್ಚಿಮ ಬಂಗಾಲ ಸರ್ಕಾರದ ಆಡಳಿತ ಕಚೇರಿ ಇಲ್ಲಿದೆ. ನೇತಾಜಿ ಸುಭಾಷ್ ರಸ್ತೆಯ ಉದ್ದಕ್ಕೂ ಕೋಲ್ಕತದ ಅನೇಕ ಮುಖ್ಯವಾಣಿಜ್ಯ ಸಂಸ್ಥೆಗಳಿವೆ. ನಖುದಾ ಮಸೀದಿ, ಮಹಾಜಾತಿ ಸದನ, ಅಮೃತಶಿಲೆಯ ಅರಮನೆ ಇವು ಮಧ್ಯ ಕೋಲ್ಕತದ ಮುಖ್ಯ ಕಟ್ಟಡಗಳು. ಶಿಕ್ಷಣ ಸಂಸ್ಥೆಗಳಿರುವುದು ನಗರದ ಉತ್ತರಲ್ಲಿ. ಕೋಲ್ಕತ್ತ ವಿಶ್ವವಿದ್ಯಾಲಯ ಅಲ್ಲಿದೆ. ಉತ್ತರದ ಉಪನಗರಗಳಾದ ಕಾಸಿಪುರ, ಚಿತ್ಪುರಗಳಲ್ಲಿ ಸೆಣಬು ಒತ್ತುವ, ಹತ್ತಿ ಹಿಂಜುವ ಕಾರ್ಖಾನೆಗಳಿವೆ. ಪೂರ್ವದ ಉಪನಗರವಾದ ಮಣಿಕ್ ತಲದ ಬಳಿಯ ಜೈನಮಂದಿರ ಅತ್ಯಂತ ಪ್ರಸಿದ್ಧವಾದದ್ದು. ಈ ಕಡೆ ಅನೇಕ ಕಾರ್ಖಾನೆಗಳೂ ಗಿರಣಿಗಳೂ ಇವೆ. ಪ್ರಾಣಿವನವೂ ಸಸ್ಯಶಾಸ್ತ್ರೀಯ ಉದ್ಯಾನವೂ ಇರುವುದು ಆಲಿಪುರದಲ್ಲಿ. ರಾಷ್ಟ್ರೀಯ ಗ್ರಂಥಾಲಯವೂ ಅಲ್ಲೇ ಇದೆ. ಭವಾನಿಪುರ ದಕ್ಷಿಣದ ಅತ್ಯಂತ ಜನನಿಬಿಡ ಪ್ರದೇಶ.

ಕಾಳಿಘಾಟಿನ ಪ್ರಸಿದ್ಧ ಕಾಳಿಮಂದಿರ ಆದಿಗಂಗೆಯ ಮೇಲಿದೆ. ನಗರದ ಎಲ್ಲೆಯ ಹೊರಗೆ ಹೂಗ್ಲಿಯ ಉದ್ದಕ್ಕೂ ಸು. 200 ಚ.ಕಿಮೀ ವಿಸ್ತಾರದಲ್ಲಿ ವಿಶಾಲ ಕೋಲ್ಕತನಗರ ಬೆಳೆಯುತ್ತಿದೆ. ಹೂಗ್ಲಿ ನದಿಗೆ ಅಡ್ಡಲಾಗಿರುವ ಹೌರ ಸೇತುವೆ ಅತ್ಯಂತ ಪ್ರಸಿದ್ಧವಾದದ್ದು. ಇದು ನಗರದ ಹೆಗ್ಗುರುತುಗಳಲ್ಲೊಂದು. ಹಳೆಯ ನಗರದ ನೆರೆಯ ಹೌರಾದಲ್ಲಿ ಕೈಗಾರಿಕೆಗಳಿವೆ. ಹೂಗ್ಲಿಯ ದಂಡೆಯುದ್ದಕ್ಕೂ ದೂರದಲ್ಲಿ ತಲೆಯೆತ್ತಿರುವ ಟಿಟಾಘರ್ ಮತ್ತು ಭಾತ್‌ಪಾರಗಳು ಕೈಗಾರಿಕ ಕೇಂದ್ರಗಳು. ಅಲ್ಲಿಯ ಜನರಲ್ಲಿ ಶೇ. 65–85 ಮಂದಿ ಕಾರ್ಮಿಕರು ಮತ್ತು ಅವರ ಆಶ್ರಿತರು. ಬಜ್ ಬಜ್‌ನಿಂದ ನೈಹಾತಿಯವರೆಗೆ ಸಣಬು ಗಿರಣಿಗಳು ಉದ್ದಕ್ಕೂ ಹಬ್ಬಿವೆ. ಹತ್ತಿ ಜವಳಿ, ಹೆಣಿಕೆ ವಸ್ತ್ರ, ರೇಷ್ಮೆ ಇವುಗಳ ಕೆಲವು ಗಿರಣಿಗಳುಂಟು. ಅಸನ್ಸೋಲ್–ರಾಣಿಗಂಜ್ ಕಲ್ಲಿದ್ದಲು ಮತ್ತು ಜಮ್‌ಷೆಡ್‌ಪುರದ ಕಬ್ಬಿಣ–ಉಕ್ಕುಗಳಿಂದ ಅನೇಕ ಎಂಜಿನಿಯರಿಂಗ್ ಮತ್ತು ಲೋಹವಸ್ತು ಕೈಗಾರಿಕೆಗಳು ಸಮೃದ್ಧಿಯಾಗಿ ಬೆಳೆದಿವೆ. ಈ ಕೈಗಾರಿಕೆಗಳಲ್ಲಿ ಬಹಳಷ್ಟು ಕೋಲ್ಕತ ಉಪನಗರ ಹಾಗೂ ಹೌರಾದಲ್ಲೂ ಇವೆ.

ಹೌರ ಸೇತುವೆ

ಸಣಬು ಗಿರಣಿಗಳಿಗೆ ಬೇಕಾಗುವ ಯಂತ್ರದ ಬಿಡಿ ಭಾಗಗಳೂ ಹಗುರ ಯಂತ್ರಗಳೂ ತಯಾರಾಗುತ್ತವೆ. ಅಲ್ಯೂಮಿನಿಯಂ ಗಟ್ಟಿಗಳಿಂದ ತಗಡುಗಳನ್ನೂ ಸರಳುಗಳನ್ನೂ ತಯಾರಿಸುವ ಕೈಗಾರಿಕೆ ಈಚೆಗೆ ಬೇಲೂರಿನಲ್ಲಿ ಬೆಳೆದಿದೆ. ರೈಲ್ವೆ ಕಾರ್ಯಾಗಾರ, ಹಡಗು

ದುರಸ್ತಿ, ಮೋಟಾರು ಜೋಡಣೆ ಮುಂತಾದ ಅನೇಕ ಕೈಗಾರಿಕೆಗಳಿಗೆ ಕೋಲ್ಕತವೊಂದು ಮುಖ್ಯ ಕೇಂದ್ರ. ಈ ನಗರದಲ್ಲಿ ಅನೇಕ ಅನುಭೋಗ ವಸ್ತುಗಳ ಕೈಗಾರಿಕೆಗಳಿವೆ. ರಬ್ಬರ್ ಮತ್ತು ರಾಸಾಯನಿಕ ಕೈಗಾರಿಕೆಗಳು, ಅಕ್ಕಿ ಗಿರಣಿಗಳು, ಕಾಗದ ತಯಾರಿಕೆ, ಪಾದರಕ್ಷೆಯ ಕೈಗಾರಿಕೆ, ಗಾಜಿನ ವಸ್ತು ಮತ್ತು ಬೆಂಕಿಕಡ್ಡಿ ತಯಾರಿಕೆಗಳು ಇತರ ಕೈಗಾರಿಕೆಗಳು. ಇಷ್ಟೇ ಅಲ್ಲ. ಪಶ್ಚಿಮ ಬಂಗಾಳದ ಚಹತೋಟ, ಕಲ್ಲಿದ್ದಲು ಗಣಿ ಮತ್ತು ಕೈಗಾರಿಕಾ ಸಂಸ್ಥೆಗಳ ಆಡಳಿತ ಕಚೇರಿಗಳಿರುವುದು ಕೋಲ್ಕತದಲ್ಲೇ. ನಗರದ ವಾಣಿಜ್ಯ ಪ್ರಾಮುಖ್ಯತೆಗೆ ಅದರ ಉತ್ತಮ ಬಂದರೇ ಕಾರಣ. ರೈಲು, ಜಲ ಮತ್ತು ವಿಮಾನ ಮಾರ್ಗಗಳು ಇಲ್ಲಿ ಸಂಧಿಸುತ್ತವೆ. ಗೋಣಿಚೀಲ, ಹೆಂಪ್, ಚಹ, ಲಿನ್ಸೀಡ್, ಕಲ್ಲಿದ್ದಲು, ಬೀಡುಕಬ್ಬಿಣ, ಕಬ್ಬಿಣದ ಮತ್ತು ಮ್ಯಾಂಗನೀಸಿನ ಅದಿರುಗಳು, ಅಭ್ರಕ, ಜಮಖಾನೆ, ಚರ್ಮ ಇವು ಮುಖ್ಯ ನಿರ್ಯಾತಗಳು. ಉಪ್ಪು, ಆಹಾರಧಾನ್ಯ, ಪೆಟ್ರೋಲಿಯಂ, ಕಬ್ಬಿಣ, ಉಕ್ಕು, ಯಂತ್ರ ಮುಂತಾದವು ಆಯಾತಗಳು. ನದಿ ನೀರಿನ ಮಟ್ಟದಲ್ಲಿ ಆಗಾಗ್ಗೆ ಬದಲಾವಣೆಯಾಗುವುದರಿಂದ ಹಡಗು ಸಂಚಾರ ಅಪಾಯಕಾರಿಯಾಗದಂತೆ ಬಂದರು–ಆಡಳಿತ ಎಚ್ಚರಿಕೆ ವಹಿಸುತ್ತದೆ. ಆಳ ಕಡಿಮೆಯಾಗದಂತೆ ಕ್ರಮ ಕೈಕೊಳ್ಳಲಾಗುತ್ತದೆ. ಬಂದರಿಗೆ ವಿಶಿಷ್ಟವಾದ ರೈಲ್ವೆ ವ್ಯವಸ್ಥೆಯಿದೆ. ಪೂರ್ವ ಮತ್ತು ಆಗ್ನೇಯ ರೈಲ್ವೆಗಳಿಗೆ ಇದು ಕೊನೆ ನಿಲ್ದಾಣ. ಬೇರೆ ಕಡೆಗಳಿಂದ ಕೋಲ್ಕತಕ್ಕೆ ಬರುವ ಪ್ರಯಾಣಿಕರು ನಗರದ ಹೊರ ನಿಲ್ದಾಣಗಳಾದ ಹೌರ ಅಥವಾ ಸಿಯಲ್ದದಲ್ಲಿ ಇಳಿಯಬೇಕು. ಪ್ರಪಂಚದ ಎಲ್ಲ ಪ್ರಮುಖ ನಗರಗಳೊಂದಿಗೆ ಕೋಲ್ಕತದ ವಿಮಾನ ಸಂಪರ್ಕ ಹೊಂದಿದೆ. ಕೋಲ್ಕತದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು ಸುಭಾಷ್ ಚಂದ್ರಬೋಸ್. ಕೋಲ್ಕತ ವಿಶ್ವವಿದ್ಯಾಲಯ (1857) ಅತ್ಯಂತ ಹಳೆಯ ವಿಶ್ವವಿದ್ಯಾಲಯ. ರವೀಂದ್ರ ಭಾರತಿ ವಿಶ್ವವಿದ್ಯಾಲಯ 1962ರಲ್ಲಿ ಸ್ಥಾಪಿತವಾಯಿತು. ಉಪನಗರಗಳಲ್ಲೊಂದಾದ ಜಾದವಪುರದಲ್ಲಿ ಅದೇ ಹೆಸರಿನ ವಿಶ್ವವಿದ್ಯಾಲಯವಿದೆ (1955). ಕೋಲ್ಕತದಲ್ಲಿ ಅನೇಕ ಸಂಶೋಧನಾಲಯಗಳಿವೆ. (ಜಿ.ಆರ್.ಆರ್.)

**ಕೋಸ್ಟರಿಕ:** ಮಧ್ಯ ಅಮೆರಿಕದ ಒಂದು ಸ್ವತಂತ್ರರಾಜ್ಯ. ಉತ್ತರಕ್ಕೆ ನಿಕರಾಗುವ, ದಕ್ಷಿಣ ಮತ್ತು ಆಗ್ನೇಯದಲ್ಲಿ ಪನಾಮ, ಪಶ್ಚಿಮದಲ್ಲಿ ಪೆಸಿಫಿಕ್ ಮಹಾಸಾಗರ ಹಾಗೂ ಪೂರ್ವದಲ್ಲಿ ಕೆರೆಬಿಯನ್ ಸಮುದ್ರದಿಂದ ಸುತ್ತುವರಿದಿದೆ. ಮಧ್ಯ ಅಮೆರಿಕದ ಭೂಶಿರ ಮೇಲೆ ಉ.ಅ. $8^{0}0'$ – $11^{0}15'$ ಹಾಗೂ $82^{0}35'$–$85^{0}55'$ ಪ.ರೇ. ಮೇಲಿದೆ. 1290




ಕಿಮೀ ಕರಾವಳಿಯನ್ನು ಹೊಂದಿರುವ ಈ ರಾಜ್ಯದ ವಿಸ್ತೀರ್ಣ 51,100 ಚ.ಕಿಮೀ. ಜನಸಂಖ್ಯೆ 4,228,100 (2005). ರಾಜಧಾನಿ ಸ್ಯಾನ್ ಜೋಸ್ ಇಲ್ಲಿನ ಜನಸಂಖ್ಯೆ 3,15,909 (2002).

ಇಲ್ಲಿನ ಅತ್ಯುನ್ನತ ಶಿಖರ ಸೆರ್ರೊಚಿರಿಪೊ 3810 ಮೀ ಎತ್ತರವಿದೆ. ಇಡೀ ಭೂಭಾಗ ಜ್ವಾಲಾಮುಖಿ ಜನಿತ. ಇಲ್ಲಿನ ಅತ್ಯುನ್ನತ ಜ್ವಾಲಾಮುಖಿ ಶಿಖರ ಇರಾಜು 3431 ಮೀ ಎತ್ತರವಿದೆ. ಅನೇಕ ಜ್ವಾಲಾಮುಖಿ ನಿರ್ಮಿತ ಸರೋವರಗಳಿವೆ. ಅತಿ ದೊಡ್ಡ ಸರೋವರ ಅರೆನಲ್. ಅನೇಕ ದ್ವೀಪಗಳು ಕೋಸ್ಟರಿಕ ರಾಜ್ಯಕ್ಕೆ ಸೇರಿವೆ. ಕೋಕೋಸ್ ದ್ವೀಪ 24 ಚ.ಕಿಮೀ ವಿಸ್ತೀರ್ಣ ಹೊಂದಿದ್ದು ಅತ್ಯಂತ ಪ್ರಮುಖ. ಖಂಡಭೂಮಿಯಿಂದ 500 ಕಿಮೀ ದೂರದಲ್ಲಿದೆ. ಕಲೆರೂ ದ್ವೀಪ 58.5 ಚ.ಕಿಮೀ ವಿಸ್ತೀರ್ಣ ಹೊಂದಿದ್ದು ಅತ್ಯಂತ ದೊಡ್ಡದು. ಇಲ್ಲಿ ಅವನತಿಯ ಅಂಚಿನಲ್ಲಿರುವ ಅನೇಕ ಬಗೆಯ ಜಲಚರಗಳು, ಪಕ್ಷಿಪ್ರಾಣಿಗಳು ಇವೆ. ಈಚೆಗೆ ಇವುಗಳನ್ನು ಸಂರಕ್ಷಿಸಲು ಪ್ರಯತ್ನಗಳು ನಡೆದಿವೆ. ಮಾರ್ಪಾಡು ಹೊಂದಿದ ಉಷ್ಣವಲಯದ ವಾಯುಗುಣವಿದೆ.

ಬೇಸಾಯ ಪ್ರಮುಖ ವೃತ್ತಿಯಲ್ಲ. ಆದರೂ ಉಷ್ಣವಲಯದ ಅನೇಕ ಬಗೆಯ ಹಣ್ಣುಗಳು ಹಾಗೂ ಆಹಾರ ಧಾನ್ಯಗಳ ಉತ್ಪಾದನೆ ಇದೆ. ಅಮೆರಿಕದಿಂದ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುವರು. ದೊಡ್ಡ ನದಿಗಳಿಲ್ಲ. ನೀರಾವರಿ ಸೌಲಭ್ಯಗಳು ವಿರಳ. ಕಾಫಿ, ಬಾಳೆ, ಕಬ್ಬು, ಕೋಕೋ, ಹತ್ತಿ ಬೆಳೆದು ರಫ್ತುಮಾಡುತ್ತಾರೆ. ಇತ್ತೀಚೆಗೆ ಅತ್ಯಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಯಂತ್ರಗಳ ಬಿಡಿಭಾಗಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿ ರಫ್ತುಮಾಡಲಾಗುತ್ತಿದೆ. ಔಷಧಿಗಳು, ವೈದ್ಯಕೀಯ ಸಲಕರಣೆಗಳು, ಅಲ್ಯುಮಿನಿಯಂ ಮತ್ತು ಜವಳಿ ಉದ್ಯಮಗಳು ಪ್ರಗತಿಯಲ್ಲಿವೆ. ಸಿಲಿಕಾನ್ ಉದ್ಯಮಗಳು ದೇಶಕ್ಕೆ ಹೆಚ್ಚಿನ ಆದಾಯವನ್ನು ತರುತ್ತಿವೆ. ಬಹುಪಾಲು ಜನರು ಈ ಉದ್ಯಮಗಳಲ್ಲಿ ತೊಡಗಿದ್ದಾರೆ. ಜೀವನ ಮಟ್ಟ ಸುಧಾರಿಸಿದೆ. ಅಮೆರಿಕ ಹಾಗೂ ವಾಯವ್ಯ ಯುರೋಪಿನ ದೇಶಗಳೊಡನೆ ವ್ಯಾಪಾರ ವ್ಯವಹಾರವಿದೆ. ಶೇ. 96 ರಷ್ಟು ಜನ ವಿದ್ಯಾವಂತರಾಗಿದ್ದಾರೆ. ಒಟ್ಟು ಬಳಕೆಯ ಶೇ. 93 ರಷ್ಟು ಶಕ್ತಿಮೂಲ ವಿದ್ಯುಚ್ಛಕ್ತಿಯಿಂದ ಒದಗುತ್ತದೆ.

ಸೈನ್ಯವನ್ನು ಪೂರ್ಣವಾಗಿ ನಿಷೇಧಿಸಿರುವ ಕೀರ್ತಿ ಕೋಸ್ಟರಿಕ ದೇಶದ್ದು. ನಿರುದ್ಯೋಗ ಸಮಸ್ಯೆ ಇಲ್ಲ. ಇಲ್ಲಿನ ಬಹುಪಾಲು ಜನರು ರೋಮನ್ ಕೆಥೊಲಿಕ್ ಧರ್ಮಕ್ಕೆ ಸೇರಿದವರು ಇವರು. ಶೇ. 80 ರಷ್ಟಿದ್ದಾರೆ. ಪ್ರಾಟೆಸ್ಟಂಟರು ಹಾಗೂ ಇತರರು ಶೇ. 15 ರಷ್ಟಿದ್ದಾರೆ. ಇಲ್ಲಿನ ಹಣ ಕೋಲನ್ ಹಾಗೂ ಡಾಲರ್. ಈ ಪ್ರಜಾತಂತ್ರ ಗಣರಾಜ್ಯ 15 ಸೆಪ್ಟೆಂಬರ್ 1821 ರಲ್ಲಿ ಸ್ವಾತಂತ್ರ್ಯಗಳಿಸಿಕೊಂಡಿತು. ಈಗ ವಿಶ್ವಸಂಸ್ಥೆಯ ಒಂದು ಸದಸ್ಯ ರಾಷ್ಟ್ರವಾಗಿದೆ. ಭಾಷೆ ಸ್ಪಾನಿಷ್. ಅಲಜುವೇಲ ಮತ್ತು ಕಾರ್ಟಗೊ ಮುಖ್ಯನಗರಗಳು. (ಪಿ.ಎಂ.)

**ಕೋಳಿಕ್ಕೋಡ್:** ಕೇರಳ ರಾಜ್ಯದ ಒಂದು ಜಿಲ್ಲೆ ಹಾಗೂ ಆ ಜಿಲ್ಲೆಯ ಮುಖ್ಯ ಪಟ್ಟಣ. ಈ ನಗರ ಮಲಬಾರ್ ಕರಾವಳಿ ತೀರದಲ್ಲಿದೆ. ಜನಸಂಖ್ಯೆ 880,168. ಇದೊಂದು ಸಣ್ಣ ಕೈಗಾರಿಕಾ ಕೇಂದ್ರ. ಮರ ಕೊಯ್ಯುವುದು, ಹೆಂಚು ತಯಾರಿಕೆ, ಕಾಫಿ ಪರಿಷ್ಕರಣೆ, ಹೆಣಿಕೆ ಉಡುಪು ತಯಾರಿಕೆ–ಇವು ಇಲ್ಲಿಯ ಮುಖ್ಯ ಕೈಗಾರಿಕೆಗಳು. ಹಿಂದೆ ಇದು ಹತ್ತಿ ಬಟ್ಟೆಗಳಿಗೆ ಬಹಳ ಪ್ರಸಿದ್ಧವಾಗಿತ್ತೆಂದು, ವಿದೇಶಿಯರು ಈ ಸ್ಥಳವನ್ನು ಕ್ಯಾಲಿಕಟ್ ಎಂದು ಕರೆಯುತ್ತಿದ್ದುದರಿಂದ ಇಲ್ಲಿಯ ಬಟ್ಟೆ ಕ್ಯಾಲಿಕೋ ಎಂದು ಪ್ರಸಿದ್ಧವಾಯಿತೆಂದು ಹೇಳಲಾಗಿದೆ. ಕೋಳಿಕ್ಕೋಡ್ ವಿಶ್ವವಿದ್ಯಾಲಯ ಕೇಂದ್ರ. ಕಲೆ, ವಿಜ್ಞಾನ, ವೈದ್ಯಕೀಯ ಮತ್ತು ಶಿಕ್ಷಕರ ಕಾಲೇಜುಗಳು ಸಾಗರೀಕ ಜೀವ ವಿಜ್ಞಾನ ಸಂಶೋಧನಾ ಸಂಸ್ಥೆಯೂ ಇವೆ.

ಕೋಳಿಕ್ಕೋಡ್ ಬಂದರು ಮಳೆಗಾಲದಲ್ಲಿ ಪ್ರಯಾಣಕ್ಕೆ ಯೋಗ್ಯವಲ್ಲ. ಉಳಿದ ಕಾಲದಲ್ಲೂ ಹಡಗುಗಳು ತೀರದಿಂದ 4.8 ಕಿಮೀ ಆಚೆಗೆ ನಿಲ್ಲುತ್ತವೆ. ಕೋಳಿಕ್ಕೋಡ್ ನಗರದ ದಕ್ಷಿಣದಲ್ಲಿರುವ ಕಲ್ಲಾಯಿ ನದಿ ಮುಖದ ಬಳಿ ಇರುವ ಚೌಬೀನೆ ಕೋಠಿ ಇಡೀ ಭಾರತದಲ್ಲೇ ದೊಡ್ಡದು. ತೆಂಗಿನ ಉತ್ಪನ್ನಗಳು, ಮೆಣಸು, ಶುಂಠಿ, ಕಾಫಿ ಚಹ ಇವು ಕೋಳಿಕ್ಕೋಡ್ ಬಂದರಿನ ಮೂಲಕ ರಫ್ತಾಗುತ್ತವೆ.

ಕೋಳಿಕ್ಕೋಡ್ ಜಿಲ್ಲೆಯ ಜನಸಂಖ್ಯೆ 28,78,498. ವಿಸ್ತೀರ್ಣ 2345 ಚ.ಕಿಮೀ. ಬಡಗರ, ಎರ್ನಾಡು, ಕೋಳಿಕ್ಕೋಡ್, ಕ್ವಿಲಾಂಡಿ, ದಕ್ಷಿಣ ವೈನಾಡು ಮತ್ತು ತಿರೂರು ಇಲ್ಲಿಯ ತಾಲ್ಲೂಕುಗಳು. ಬತ್ತ ಮುಖ್ಯ ಬೆಳೆ. ಬೇಸಾಯದ ಜೊತೆಗೆ ತೆಂಗಿನ ಉತ್ಪನ್ನಗಳು ಮತ್ತು ಅರಣ್ಯೋತ್ಪನ್ನಗಳನ್ನು ಸಿದ್ಧಪಡಿಸುವುದು ಒಂದು ಮುಖ್ಯ ಕಸುಬು. (ಎಸ್.ಎಸ್.ಐ.)

**ಕೌಲಾಲಂಪುರ್:** ಮಲೇಷ್ಯದ ರಾಜಧಾನಿ. ವಾಣಿಜ್ಯ ಕೇಂದ್ರ. ಪರ್ಯಾಯ ದ್ವೀಪದ ಪಶ್ಚಿಮ ತೀರದಿಂದ 40 ಕಿಮೀ ದೂರದಲ್ಲಿ ಕ್ಲಾಂಗ್ ಮತ್ತು ಗೊಂಬರ್ ನದಿಗಳ ಸಂಗಮಸ್ಥಳದಲ್ಲಿದೆ. ಜನಸಂಖ್ಯೆ 1297526 (2001). ಬ್ರಿಟಿಷರು ಇಲ್ಲಿಗೆ ಮೊದಲ ಬಾರಿಗೆ ಬಂದಾಗ ಇದೊಂದು ಹಳ್ಳಿಯಾಗಿತ್ತು. ಇದರ ಸುತ್ತಣ ಪ್ರದೇಶದಲ್ಲಿ ಸತುವಿನ ಗಣಿಗಳು ಆರಂಭವಾದ ಮೇಲೆ ಇದು ಬೆಳೆಯತೊಡಗಿತು. ರೈಲುಮಾರ್ಗಗಳು, ರಸ್ತೆ ನಿರ್ಮಾಣವಾಗಿ ಇದರ ಪ್ರಾಮುಖ್ಯ ಅಧಿಕವಾಯಿತು. ಸಿಂಗಾಪುರಕ್ಕೆ ವಾಯವ್ಯದಲ್ಲಿ 320 ಕಿಮೀ ದೂರದಲ್ಲಿರುವ ಈ ನಗರ ಸೆಲಾಂಗರ ರಾಜಧಾನಿಯಾಗಿದ್ದು, ಅನಂತರ, 1895ರಲ್ಲಿ ಮಲಯ ಸಂಯುಕ್ತ ರಾಜ್ಯದ ರಾಜಧಾನಿಯಾಯಿತು. ಕೌಲಾಲಂಪುರದ

ಕೌಲಾಲಂಪುರ್ ನಗರ

ಬೆಳೆವಣಿಗೆಯ ವೇಗ ಅಧಿಕವಾದದ್ದು ಮಲಯ ಸ್ವತಂತ್ರವಾದ (1957) ಮೇಲೆ ಅಲ್ಲಿ ನೂತನ ವಸತಿಗಳು ನಿರ್ಮಾಣಗೊಂಡುವು. ಒಂದು ವಿಶ್ವವಿದ್ಯಾಲಯವಿದೆ. ಸರ್ಕಾರದ ಮುಖ್ಯ ಕಚೇರಿಗಳಿವೆ.

ಕೌಲಾಲಂಪುರದಲ್ಲಿ ಎರಡು ಕೈಗಾರಿಕಾ ವಲಯಗಳಿವೆ. ಆಗ್ನೇಯದಲ್ಲಿರುವ ಸುಂಗೈ ಬೇಸಯಲ್ಲಿ ಲೋಹದ ಉದ್ಯಮವೂ ಉತ್ತರದಲ್ಲಿರುವ ಸೆಂತುರ್‌ನಲ್ಲಿ ಎಂಜಿನಿಯರಿಂಗ್ ಉದ್ಯಮವೂ ಬೆಳೆದಿವೆ. ಉತ್ತರಕ್ಕೆ ಮುಖ್ಯನಗರ 10 ಕಿಮೀ ದೂರದಲ್ಲಿ ಪೆಟಾಲಿಂಗ್ ಜಯ ಎಂಬ ಉಪನಗರ ಇದೆ. ವನಸ್ಪತಿ ಮತ್ತು ಸಾಬೂನು ತಯಾರಿಕೆ, ಮದ್ಯೋತ್ಪಾದನೆ ಮುಂತಾದ ಕೈಗಾರಿಕೆಗಳು ಅಲ್ಲಿ ಬೆಳೆದಿವೆ. ಕೌಲಾಲಂಪುರ ತವರ ರಬ್ಬರುಗಳ ವ್ಯಾಪಾರಕೇಂದ್ರವಾಗಿದೆ. *

**ಕ್ಯಾಂಟರ್‌ಬೆರಿ:** ಇಂಗ್ಲೆಂಡಿನ ಕೆಂಟ್ ಕೌಂಟಿಯ ಒಂದು ನಗರ. ಕೆಂಟ್‌ನ ಪೌರಸಂಸ್ಥೆ ಇರುವ ಊರು (ಬರೊ) ಎಂಬುದರಿಂದಾಗಿ ಇದಕ್ಕೆ ಕ್ಯಾಂಟರ್‌ಬೆರಿ ಎಂಬ ಹೆಸರು ಬಂತು. ಇದು ಒಂದು ಕ್ರೈಸ್ತ ಕ್ಷೇತ್ರ. ಜನಸಂಖ್ಯೆ 1,35,287 (2001). ಲಂಡನ್ನಿನ ಆಗ್ನೇಯಕ್ಕೆ 88 ಕಿಮೀ ಮತ್ತು ಡೋವರ್‌ನಿಂದ 24 ಕಿಮೀ ದೂರದಲ್ಲಿದೆ. ಪ್ರ.ಶ.ಪೂ.200ರ ವೇಳೆಗಾಗಲೆ ಇಲ್ಲಿ ಜನವಸತಿ ಇತ್ತು. ಚಿಕ್ಕ ಕಣಿವೆಯಲ್ಲಿ ಹರಿಯುವ ಸ್ಟಾರ್ ನದಿ ಈ ಎಡೆಯಲ್ಲಿ ಮೈದಾನವನ್ನು ಪ್ರವೇಶಿಸುತ್ತದೆ. ಕ್ರಿ.ಶ.43ರಲ್ಲಿ ರೋಮನರು ಇದನ್ನು ಆಕ್ರಮಿಸಿಕೊಂಡ ಮೇಲೆ ಇದೊಂದು ಸೇನಾ ನೆಲೆಯಾಯಿತು; ಇಲ್ಲಿ ಕೋಟೆಯ ನಿರ್ಮಾಣವೂ ಆಯಿತು. ರೋಮನರು ಇಲ್ಲೊಂದು ನಾಟ್ಯಮಂದಿರವನ್ನು ನಿರ್ಮಿಸಿದರು. ಬ್ರಿಟನಿನ ರೋಮನ್ ನಾಟ್ಯಮಂದಿರಗಳಲ್ಲೆಲ್ಲ ಇದು ಅತ್ಯಂತ ದೊಡ್ಡದು. ಈ ಕಟ್ಟಡದ ಮತ್ತು 200ರಲ್ಲಿ ರೋಮನ್ನರು ಕಟ್ಟಿದ ಕೋಟೆಯ ಗೋಡೆಗಳ ಕುರುಹುಗಳು ಈಗಲೂ ಉಳಿದಿವೆ.

ಕ್ಯಾಂಟರ್‌ಬೆರಿಯಲ್ಲಿ ಅನೇಕ ಶಾಲಾಕಾಲೇಜುಗಳಿವೆ. ಅವುಗಳಲ್ಲಿ ಪ್ರಸಿದ್ಧವಾದುದು ಕಿಂಗ್ಸ್ ಸ್ಕೂಲ್. 1970ರಲ್ಲಿ ಇಲ್ಲಿ ಕೆಂಟ್ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. (ಜಿ.ಜಿ.ಎಂ.)

**ಕ್ಯಾಂಬೇ:** ಭಾರತದ ಪಶ್ಚಿಮ ರಾಜ್ಯವಾದ ಗುಜರಾತಿನ ತೀರದ ಒಂದು ಖಾರಿ; ಅದೇ ಹೆಸರಿನ ಒಂದು ಪಟ್ಟಣ. ಈ ಖಾರಿಯಲ್ಲಿ ಅರಬ್ಬೀಸಮುದ್ರ ಕೊಂಬಿನ ಆಕಾರದಲ್ಲಿ ಭೂಮಿಯೊಳಕ್ಕೆ ಚಾಚಿಕೊಂಡಿದೆ. ನೈರುತ್ಯ ಮಾನ್ಸೂನ್ ಗಾಳಿಯಿಂದಾಗಿ ಈ ಎಡೆಯಲ್ಲಿ ಸಮುದ್ರದ ಭರತ ವಿಪರೀತ. ಸು. 65 ಮೀ ಎತ್ತರಕ್ಕೆ ಸಮುದ್ರ ಉಬ್ಬರ ಸಂಭವಿಸುವುದಲ್ಲದೆ ಅದರ ವೇಗವೂ ಹೆಚ್ಚಾಗಿರುತ್ತದೆ. ಇದರ ಫಲವಾಗಿ ಖಾರಿಯ ತೀರದಲ್ಲಿರುವ ಬಂದರುಗಳನ್ನೆಲ್ಲ ಗೋಡು ಮುಚ್ಚಿಕೊಂಡಿದೆ. ಕಡಲಕರೆಯ ಬದಿ ಅತ್ಯಂತ ಅಪಾಯಕರ.

ಕ್ಯಾಂಬೆ ಪಟ್ಟಣ ಅದೇ ಹೆಸರಿನ ಖಾರಿಯ ಮೇಲಿದೆ. ಖಂಬಾತ್ ಅಥವಾ ಖಂಬಾಯತ್ ಎಂದೂ ಹೆಸರಾದ ಈ ಪಟ್ಟಣ ಗುಜರಾತಿನ ಕೈರಾ ಜಿಲ್ಲೆಯ ಕ್ಯಾಂಬೆ ತಾಲ್ಲೂಕಿನ ಕೇಂದ್ರ ಕೂಡ. ಕೈರಾ ರೈಲ್ವೆ ನಿಲ್ದಾಣದ ದಕ್ಷಿಣಕ್ಕೆ 50 ಕಿಮೀ ದೂರದಲ್ಲಿ ಕೋಹಿ ನದಿಯ ಮೇಲಿರುವ ಈ ಪಟ್ಟಣ ಹಿಂದೆ ಇದೇ ಹೆಸರಿನ ಸಂಸ್ಥಾನದ ರಾಜಧಾನಿಯಾಗಿತ್ತು. ಇದು ಭಾರತದ ಮುಖ್ಯ ಬಂದರಾಗಿತ್ತೆಂದು ಮರಿನೋ ಸಸುದೋ, ಮಾರ್ಕೊ ಪೋಲೋ ಮುಂತಾದ ವಿದೇಶಿ ಪ್ರವಾಸಿಗಳು ತಿಳಿಸಿದ್ದಾರೆ. 15ನೆಯ ಶತಮಾನದಲ್ಲಿ ಗುಜರಾತಿನ ಮುಸ್ಲಿಂ ದೊರೆಗಳ ಅಧೀನದಲ್ಲಿ ಇಲ್ಲಿಯ ಬಂದರು ಉಚ್ಛ್ರಾಯಸ್ಥಿತಿಯಲ್ಲಿತ್ತು. ಕ್ಯಾಂಬೆ ಖಾರಿಯಲ್ಲಿ ಸಮುದ್ರದ ಗೋಡು ತುಂಬಿ ಬಂದು ಇದರ ಪ್ರಾಮುಖ್ಯ ಕ್ರಮೇಣ ಕುಗ್ಗಿತು.ಈಗ ಇದು ಒಂದು ವ್ಯಾಪಾರಕೇಂದ್ರ. ಜನಸಂಖ್ಯೆ 80,439. ಹತ್ತಿ, ಧಾನ್ಯ, ಹೊಗೆಸೊಪ್ಪು ಇವು ಇಲ್ಲಿಯ ವ್ಯಾಪಾರ ಸರಕುಗಳು. ಉಪ್ಪು; ಜಮಖಾನ, ಕೈಮಗ್ಗದ ಬಟ್ಟೆ; ಕಸೂತಿ ಮತ್ತು ಬೆಂಕಿಪೆಟ್ಟಿಗೆ ಕೈಗಾರಿಕೆ; ಅಗೆಟ್; ಕಾರ್ನೀಲಿಯನ್ ಮುಂತಾದ ಕಲ್ಲುಗಳನ್ನಿಟ್ಟು ಒಡವೆಗಳ ತಯಾರಿಕೆ–ಇವಕ್ಕೆ ಕ್ಯಾಂಬೆ ಪ್ರಸಿದ್ಧವಾಗಿದೆ.

ಖಂಬಾತ್ ಎಂಬ ಹೆಸರು ಕಂಭ ಅಥವಾ ಸ್ತಂಭ ಎಂಬುದರಿಂದ ಬಂತೆಂದು ಹೇಳಲಾಗಿದೆ. ಈ ಪಟ್ಟಣದ ಸುತ್ತ ಇರುವ ಒಂದು ಇಟ್ಟಿಗೆಯ ಕೋಟೆ ಮತ್ತು ಕೋಟೆಯ ಒಳಭಾಗದಲ್ಲಿರುವ ಜಾಮೀ ಮಸೀದಿ ಇಲ್ಲಿಯ ಮುಖ್ಯ ಪ್ರಾಚೀನ ಸ್ಮಾರಕಗಳು. ಜಾಮೀ ಮಸೀದಿಯನ್ನು 1325ರಲ್ಲಿ ಕಟ್ಟಲಾಯಿತು. ಇದು ಗುಜರಾತಿನ ಅತಿಪ್ರಾಚೀನ ಇಸ್ಲಾಮೀ ವಾಸ್ತುಕೃತಿಗಳಲ್ಲೊಂದು. ಇದರಲ್ಲಿ ಹಿಂದೂ ವಾಸ್ತುಶೈಲಿಯ ಅಂಶಗಳೂ ಕಂಡುಬರುತ್ತವೆ. ಈ ಕಟ್ಟಡದಲ್ಲಿನ ಈ ಸಮ್ಮಿಶ್ರಶೈಲಿ ಮುಂದೆ ಗುಜರಾತಿನ ಇಸ್ಲಾಮೀ ವಾಸ್ತುಶೈಲಿಗೆ ಮಾದರಿಯಾಯಿತು. ಅಗೆಟ್, ಕಾರ್ನೀಲಿಯನ್ ಮುಂತಾದ ಶಿಲೆಗಳಿಂದ ವಿವಿಧ ರೀತಿಯ ಮಣಿಗಳನ್ನು ತಯಾರಿಸುವ ಕೈಗಾರಿಕೆ ಇಲ್ಲಿ 3ನೆಯ ಸಹಸ್ರಮಾನಕ್ಕೆ ಸೇರಿದ ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಪ್ರಚಲಿತವಾಗಿದೆಯೆಂಬುದು ಉತ್ಖನನಗಳಿಂದ ತಿಳಿದು ಬರುತ್ತದೆ.

ತೈಲ ಮತ್ತು ನೈಸರ್ಗಿಕ ಅನಿಲಗಳಿಂದಾಗಿ ಕ್ಯಾಂಬೆ ಈಚೆಗೆ ಪ್ರಸಿದ್ಧವಾಗಿದೆ. ಕ್ಯಾಂಬೆಗೆ 12 ಕಿಮೀ ಪಶ್ಚಿಮದಲ್ಲಿರುವ ಲೂನೆಜ್ ಎಂಬ ಹಳ್ಳಿಯ ಬಳಿ 1958ರಲ್ಲಿ ಪ್ರಥಮವಾಗಿ ಎಣ್ಣೆಯ ಸೆಲೆ ಹೊಡೆಯಲಾರಂಭಿಸಿತು. 1968–69ರ ಕೊನೆಯ ವೇಳೆಗೆ ಈ ಪ್ರದೇಶದಲ್ಲಿ ತೋಡಲಾದ ಬಾವಿಗಳ ಸಂಖ್ಯೆ 62. ಕ್ಯಾಂಬೆ ಪ್ರದೇಶದಲ್ಲಿಯ ಅನಿಲೋತ್ಪಾದನ ಸಾಮರ್ಥ್ಯ ದಿನಕ್ಕೆ ಸು. 5 ಕೋಟಿ ಘನ ಮೀ. ಮುಖ್ಯ ಅನಿಲೋತ್ಪಾದನ ಕ್ಷೇತ್ರವಾದ ಕ್ಯಾಂಬೆಯಲ್ಲಿ ತೈಲೋತ್ಪಾದನೆಯನ್ನೂ ಈಚೆಗೆ ಕೈಗೊಳ್ಳಲಾಗಿದೆ. (ಬಿ.ಎನ್.ಸಿ.ಎಚ್.;ಎಸ್.ಎನ್.)

**ಕ್ಯಾಟಲೋನಿಯ:** ಸ್ಪೇನಿನ ಈಶಾನ್ಯ ಭಾಗದಲ್ಲಿರುವ ಒಂದು ಪ್ರಾಂತ್ಯ. ಪಿರನೀಸ್ ಪರ್ವತದ ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರದ ತೀರದಲ್ಲಿದೆ. ಬೆಟ್ಟಗುಡ್ಡಗಳಿಂದ ಕೂಡಿದ್ದರೂ ಅಲ್ಲಲ್ಲಿ ಫಲವತ್ತಾದ ಮೈದಾನಗಳಿವೆ. ದ್ರಾಕ್ಷಾರಸ ಮತ್ತು ಆಲೀವ್ ಎಣ್ಣೆ ಇಲ್ಲಿನ ಮುಖ್ಯ ವ್ಯವಸಾಯೋತ್ಪನ್ನಗಳು. ಬಟ್ಟೆ ಮತ್ತು ಯಂತ್ರಗಳ ತಯಾರಿಕೆ ಮುಖ್ಯ ಕೈಗಾರಿಕೆಗಳು.

ಕ್ಯಾಟಲನ್ ಕಲೆ ಮುಖ್ಯವಾಗಿ ಮಧ್ಯಯುಗೀನ ಮತ್ತು ಬೌದ್ಧಿಕ ಪುನರುತ್ಥಾನ ಯುಗದ ಮತೀಯ ಕಲೆಗೆ ಸಂಬಂಧಿಸಿದ್ದು. ಈ ಕಲೆ ಸು. 15ನೆಯ ಶತಮಾನದ ವೇಳೆಗೆ ಕೊನೆಗೊಂಡಿತೆಂದು ಹೇಳಬಹುದಾದರೂ ಈಗಲೂ ಇಲ್ಲಿನ ಕಲಾವಿದರು ಪ್ರಸಿದ್ಧರಾಗಿದ್ದಾರೆ. ಚರ್ಚುಗಳಲ್ಲಿ ಭಿತ್ತಿಚಿತ್ರಣ, ಕಟ್ಟಡಗಳ ಅಲಂಕರಣಕ್ಕಾಗಿ ತಯಾರಿಸಿದ ಮೂರ್ತಿಶಿಲ್ಪಗಳು ಮತ್ತು ಮತೀಯ ಗ್ರಂಥಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳ ಚಿತ್ರಣ, ಈ ಚಿತ್ರಕಲೆಯ ಪ್ರಮುಖ ಕೊಡುಗೆಗಳು. (ಕೆ.ಆರ್.ಜಿ.;ಎಂ.ಕೆ.ಕೆ.)

**ಕ್ಯಾನ್ಬೆರ:** ಆಸ್ಟ್ರೇಲಿಯ ಕಾಮನ್‌ವೆಲ್ತಿನ ರಾಜಧಾನಿ. ಸಿಡ್ನಿಯಿಂದ ನೈರುತ್ಯಕ್ಕೆ 310 ಕಿಮೀ, ಮೆಲ್ಬೊರ್ನಿನಿಂದ ಆಗ್ನೇಯಕ್ಕೆ 650 ಕಿಮೀ, ಅಡಿಲೇಡ್‌ನಿಂದ ಪೂರ್ವಕ್ಕೆ 1350 ಕಿಮೀ ಮತ್ತು ಪೆಸಿಫಿಕ್ ಕರಾವಳಿಯಿಂದ ಸು. 115 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,53,149 (2001).

ವಾಷಿಂಗ್ಟನ್ ಡಿ.ಸಿ. ಮುಂತಾದ ಕೆಲವು ದೇಶಗಳ ರಾಜಧಾನಿಗಳಂತೆ ಕ್ಯಾನ್ಬೆರವನ್ನು ರಾಜಧಾನಿಯಾಗಲು ಆರಿಸಿ ಯೋಜಿಸಿದಾಗ ಅಲ್ಲಿ ಹೆಚ್ಚು ಜನವಸತಿ ಇರಲಿಲ್ಲ. ಉದ್ದೇಶಪೂರ್ವಕವಾಗಿಯೇ ಅದನ್ನು ಆರಿಸಲಾಯಿತು. ಬಿಳಿಯರು ಈ ಪ್ರದೇಶವನ್ನು ಮೊಟ್ಟಮೊದಲು ಪ್ರವೇಶಿಸಿದ್ದು 1820ರಲ್ಲಿ. ಈ ಪ್ರದೇಶದಲ್ಲಿ ಸಾಕಷ್ಟು ನೀರಿನ ಸೌಲಭ್ಯವೂ ಫಲವತ್ತಾದ ಮೈದಾನವೂ ಸಮೃದ್ಧವಾದ ಕಟ್ಟಡ ಸಾಮಗ್ರಿಯೂ ಇರುವುವೆಂಬುದು ಅವರು ನೀಡಿದ ವರದಿ. 1824ರ ಸುಮಾರಿಗೆ ಸಣ್ಣ ಗುಂಪೊಂದು ಇಲ್ಲಿಗೆ ಬಂದು ಖಾಯಂ ಆಗಿ ನೆಲಸಿತು. ಅಂದಿನಿಂದ ಈ ಪ್ರದೇಶ ಅಭಿವೃದ್ಧಿಯಾಗತೊಡಗಿತು. ಸೇಂಟ್ ಜಾನ್ ಚರ್ಚ್ ಭಾಗಶಃ ನಿರ್ಮಾಣವಾದ್ದು 1845ರಲ್ಲಿ. 19ನೆಯ ಶತಮಾನದ ಕೊನೆಯ ವೇಳೆಗೆ ಇದು ಸಂಪ್ರದಾಯವಂತ ಕಷ್ಟಸಹಿಷ್ಣು ತೃಪ್ತಜೀವಿಗಳ ನೆಲೆಯಾಗಿತ್ತು. ಆಸ್ಟ್ರೇಲಿಯ ಸಂಯುಕ್ತರಾಷ್ಟ್ರ ಸ್ಥಾಪನೆಯಾಗಬೇಕೆಂಬ ಬೇಡಿಕೆ ಹೆಚ್ಚಿದೊಡನೆಯೇ ರಾಷ್ಟ್ರದ ರಾಜಧಾನಿ ಯಾವುದಿರಬೇಕೆಂಬ ಬಗ್ಗೆ ಜನಾಭಿಪ್ರಾಯವನ್ನು ಆಹ್ವಾನಿಸಲಾಯಿತು. ಆಸ್ಟ್ರೇಲಿಯ ಕಾಮನ್‌ವೆಲ್ತ್ ಉದ್ಘಾಟನೆಯಾದ್ದು 1901ರಲ್ಲಿ. 1900 ರಲ್ಲಿ ಅನುಮೋದಿತವಾದ ಕಾಮನ್‌ವೆಲ್ತ್ ಸಂವಿಧಾನ ಕಾನೂನಿನ ಪ್ರಕಾರ ನ್ಯೂ ಸೌತ್ ವೇಲ್ಸಿನಲ್ಲಿ ರಾಜಧಾನಿಯೊಂದನ್ನು ಸ್ಥಾಪಿಸುವುದಕ್ಕೆ ಅವಕಾಶವಿತ್ತಾದರೂ ಅದನ್ನು ಸಿಡ್ನಿಯಿಂದ 160 ಕಿಮೀ ಒಳಗೆ ನಿರ್ಮಿಸುವಂತಿರಲಿಲ್ಲ. ಎರಡು ರಾಯಲ್ ಆಯೋಗಗಳು ರಾಜಧಾನಿಯ ವಿಷಯವನ್ನು ಪರಿಶೀಲಿಸಿ ವರದಿ ಮಾಡಿದುವು. ಈ ಬಗ್ಗೆ ವಿಪುಲವಾಗಿ ಸಾರ್ವಜನಿಕ ಚರ್ಚೆ ನಡೆಯಿತು. ಕೊನೆಗೆ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಕ್ಯಾನ್ಬೆರ ಜಿಲ್ಲೆಯನ್ನು ಇದಕ್ಕಾಗಿ ಆರಿಸಿತು. ಅನಂತರ ನಗರದ ನಿವೇಶನದ ಆಯ್ಕೆ ನಡೆಯಿತಲ್ಲದೆ ಸು. 1350 ಚ.ಕಿಮೀ ಪ್ರದೇಶವನ್ನು ನ್ಯೂ ಸೌತ್ ವೇಲ್ಸಿನಿಂದ ಕಾಮನ್‌ವೆಲ್ತಿಗೆ ವರ್ಗಾಯಿಸಲಾಯಿತು. ರಾಜಧಾನಿಯ ಆಲೇಖ್ಯಕ್ಕಾಗಿ ವಿಶ್ವಾದ್ಯಂತ ಸ್ಪರ್ಧೆಯೊಂದನ್ನು ಏರ್ಪಡಿಸಲಾಯಿತು. ಈ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದಾತ ಶಿಕಾಗೋವಿನ ವಾಲ್ಟರ್ ಬಿ. ಗ್ರಿಫಿನ್ (1876–1937). ರಾಜಧಾನಿಯ ನಿರ್ಮಾಣ 1913ರಲ್ಲಿ ಪ್ರಾರಂಭವಾಯಿತಾದರೂ ಒಂದನೆಯ ಮಹಾಯುದ್ಧದಿಂದಾಗಿ ಅದು ನಿಧಾನವಾಯಿತು. ನಗರ ನಿರ್ಮಾಣದ ಮೇಲ್ವಿಚಾರಣೆಯನ್ನು 1915 ರಿಂದ 1920ರ ವರೆಗೆ ಗ್ರಿಫಿನನೇ ವಹಿಸಿಕೊಂಡಿದ್ದ.

ಕ್ಯಾನ್ಬೆರವನ್ನು ಅಧ್ಯಯನ ಮತ್ತು ಸಂಶೋಧನ ಕೇಂದ್ರವಾಗಿಯೂ ಅಭಿವೃದ್ಧಿಪಡಿಸಲಾಗಿದೆ. ಕ್ಯಾನ್ಬೆರ ವಿಶ್ವವಿದ್ಯಾಲಯದಲ್ಲಿ ಸ್ನಾತಕಪೂರ್ವ ಶಿಕ್ಷಣವನ್ನೆ ಅಲ್ಲದೆ ವೈದ್ಯಶಾಸ್ತ್ರ, ಪೆಸಿಫಿಕ್ ಅಧ್ಯಯನ, ಶರೀರವಿಜ್ಞಾನ, ಸಮಾಜ ವಿಜ್ಞಾನ–ಇವುಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನೂ ಏರ್ಪಡಿಸಲಾಗಿದೆ. ಅರಣ್ಯಶಾಸ್ತ್ರ ಮತ್ತು ಚೌಬೀನೆ ವಿಭಾಗ, ಆಸ್ಟ್ರೇಲಿಯನ್ ಅಂಗರಚನಶಾಸ್ತ್ರ ಸಂಸ್ಥೆ, ಮೌಂಟ್‌ಸ್ಟ್ರಾಮ್ಲೊ ಖಗೋಳವೀಕ್ಷಣಾಲಯ, ಕೃಷಿ ಅರ್ಥಶಾಸ್ತ್ರ ವಿಭಾಗ, ರಾಷ್ಟ್ರೀಯ ಗ್ರಂಥಾಲಯ ಮೊದಲಾದ ಸಂಸ್ಥೆಗಳು ಇಲ್ಲಿವೆ. ಇಲ್ಲಿಂದ ಒಳನಾಡಿಗೆ ರಸ್ತೆಗಳುಂಟು. ನ್ಯೂ ಸೌತ್ ವೇಲ್ಸಿನೊಂದಿಗೆ ರೈಲ್ವೆ ಸಂಪರ್ಕವಿದೆ. ಕ್ಯಾನ್ಬೆರದಿಂದ ಸಿಡ್ನಿ ಮತ್ತು ಮೆಲ್‌ಬರ್ನ್‌ಗಳಿಗೂ ಅಲ್ಲಿಂದ ಆಸ್ಟ್ರೇಲಿಯದ ಇತರ ರಾಜ್ಯಗಳ ರಾಜಧಾನಿಗಳಿಗೂ ಹೋಗಿ ಬರಲು ವಿಮಾನ ಸೌಲಭ್ಯವುಂಟು. *

**ಕ್ಯಾಮರೂನ್:** ಪಶ್ಚಿಮ ಆಫ್ರಿಕದ ಒಂದು ಸಂಯುಕ್ತರಾಜ್ಯ. ಉ.ಅ. $2^0$–$14^0$ ಹಾಗೂ ಪೂ.ರೇ. $8^0$–$16^0$ಗಳ ನಡುವೆ ಇದೆ. ಪೂರ್ವ ಪಶ್ಚಿಮ ಕ್ಯಾಮರೂನ್‌ಗಳನ್ನೊಳಗೊಂಡಿದೆ. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ವಾಯವ್ಯದಲ್ಲಿ ನೈಜೀರಿಯ, ಪೂರ್ವದಲ್ಲಿ ಚಾಡ್ ಮತ್ತು ಮಧ್ಯ ಆಫ್ರಿಕ ಗಣರಾಜ್ಯ, ದಕ್ಷಿಣದಲ್ಲಿ ಕಾಂಗೋ ಗಣರಾಜ್ಯ, ಗ್ಯಾಬಾನ್ ಮತ್ತು ರೀಯೊ ಮೂನಿ–ಇವು ಇದರ ಮೇರೆಗಳು. ಇದರ ಸಮುದ್ರತೀರದ ಉದ್ದ 355 ಕಿಮೀ. ಕ್ಯಾಮರೂನ್ ಸಂಯುಕ್ತರಾಜ್ಯದ ವಿಸ್ತೀರ್ಣ 475,442 ಚ.ಕಿಮೀ. ಜನಸಂಖ್ಯೆ 16,380,005 (2004). ರಾಜಧಾನಿ ಯಾವೂಂಡೆ. ಜನಸಂಖ್ಯೆ 17,80,000 (2005).

ಮೇಲ್ಮೈಲಕ್ಷಣ: ಕ್ಯಾಮರೂನಿನ ಮಧ್ಯ ದಕ್ಷಿಣಭಾಗಗಳು ಪ್ರಸ್ಥಭೂಮಿ ಪ್ರದೇಶ. ಇದರ ವಾಯವ್ಯ ಭಾಗ ಪರ್ವತಮಯ. ಬೇನ್ವಾ ನದಿಗೆ ಉತ್ತರದಲ್ಲಿರುವ ಮ್ಯಾಂಡರ ಪರ್ವತ ಸು. 1600 ಮೀ ಎತ್ತರವಾಗಿದೆ. ದಕ್ಷಿಣಕ್ಕೆ ಬಂದಂತೆ ಇದರ ಎತ್ತರ ಏರುತ್ತದೆ. ಮೋಗೆಲ್ ಮತ್ತು ಮ್ಯಾಂಗಿಲ ಪರ್ವತಗ್ರಂಥಿಗಳು 1,900 ಮೀ ಎತ್ತರವಾಗಿಯೂ ಬಮೆಂಡ 2,700 ಮೀ ಎತ್ತರವಾಗಿಯೂ ಉಂಟು.

ಬಮೆಂಡದಿಂದ ಇನ್ನೊಂದು ಪರ್ವತಶ್ರೇಣಿ ಪೂರ್ವಕ್ಕೆ ಕವಲೊಡೆದು ಪೂರ್ವದ ಗಡಿಯ ಬಳಿ ಯೇಡ್ ಗ್ರಂಥಿಯಾಗಿ ಪರಿಣಮಿಸಿದೆ. ಇದರಲ್ಲೂ 1,900 ಮೀ ಗಿಂತ ಎತ್ತರವಾದ ಶಿಖರಗಳುಂಟು. ಪಶ್ಚಿಮದಲ್ಲಿ ಸಮುದ್ರದ ಬಳಿ ಇರುವ ಶ್ರೇಣಿ ಕ್ಯಾಮರೂನ್ ಪರ್ವತ. ಪಶ್ಚಿಮ ಆಫ್ರಿಕದ ಜೀವಂತ ಜ್ವಾಲಾಮುಖಿ ಇದೊಂದೇ. ಸಮುದ್ರದಿಂದ ಥಟ್ಟನೆ ಮೇಲೇರುವ ಈ ಪರ್ವತ 4,100 ಮೀ ತಲುಪುತ್ತದೆ. ಇದರ ಪಶ್ಚಿಮಭಾಗ ಪ್ರಪಂಚದ ಅತಿ ಹೆಚ್ಚಿನ ಮಳೆ ಪ್ರದೇಶಗಳಲ್ಲೊಂದು. ಇದರ ನೈಋತ್ಯಕ್ಕಿರುವ ಜ್ವಾಲಾಮುಖೀಯ ದ್ವೀಪಗಳ ಪೈಕಿ ಅತ್ಯಂತ ಹತ್ತಿರದಲ್ಲಿರುವುದು ಫರ್ನಾಂಡೊ ಪೊ. ಈ ಪರ್ವತದ ಆಗ್ನೇಯದಲ್ಲಿ ಕ್ಯಾಮರೂನ್ಸ್ ಅಳಿವೆಯಿದೆ. ಇದರ ಗರಿಷ್ಠ ಅಗಲ 32 ಕಿಮೀ.




ಮೇಲೆ ಹೇಳಿದ ಎರಡು ಪರ್ವತಪಂಕ್ತಿಗಳ ನಡುವೆ ಬೇನ್ವಾ ನದಿಯೂ ಲೋಗೋನ್ ನದಿಯ ಕೆಲವು ಉಪನದಿಗಳೂ ಉಗಮಿಸುತ್ತವೆ. ಉತ್ತರಕ್ಕೆ ಹರಿದು ಚಾಡ್ ಸರೋವರವನ್ನು ಸೇರುವ ಲೋಗೋನ್ ನದಿ ಸ್ವಲ್ಪದೂರ ಕ್ಯಾಮರೂನಿನ ಪೂರ್ವದ ಎಲ್ಲೆಯಾಗಿ ಪರಿಣಮಿಸಿದೆ. ಬೇನ್ವಾದ ಒಂದು ಮುಖ್ಯ ಉಪನದಿ ಮೇಯೊ ಕೆಬ್ಬಿ. ದಕ್ಷಿಣದಲ್ಲಿರುವ ನದಿಗಳ ಪೈಕಿ ಮುಖ್ಯವಾದವು ನಿಯಾಂಗ್ ಮತ್ತು ಸಾನಗ, ಆಗ್ನೇಯದ ಕೊನೆಯಲ್ಲಿರುವುದು ಸಾಂಗ ನದಿ ವ್ಯವಸ್ಥೆ.

ವಾಯುಗುಣ: ಕ್ಯಾಮರೂನಿನದು ಉಷ್ಣವಲಯದ ವಾಯುಗುಣ. ಪರ್ವತ ಪ್ರದೇಶದಲ್ಲಿ ಉಷ್ಣತೆ ಕಡಿಮೆ. ಮಧ್ಯಕ ವಾರ್ಷಿಕ ಉಷ್ಣತೆ ದಕ್ಷಿಣದಲ್ಲಿ 23.8 ಸೆ. ಅತ್ಯಂತ ಉತ್ತರದಲ್ಲಿ 26.6 ಸೆ. ಉತ್ತರದಲ್ಲಿ ನವೆಂಬರಿನಿಂದ ಏಪ್ರಿಲ್‌ನವರೆಗೆ ಬೀಸುವ ಈಶಾನ್ಯ ಮಾರುತ ಶುಷ್ಕವಾಗಿಯೂ ತಂಪಾಗಿಯೂ ಧೂಳಿನಿಂದ ಕೂಡಿಯೂ ಇರುತ್ತದೆ. ದಕ್ಷಿಣದಲ್ಲಿ ಈ ಮಾರುತದ ಅವಧಿ ಕಡಿಮೆ. ವರ್ಷದ ಉಳಿದ ಕಾಲದಲ್ಲಿ ನೈಋತ್ಯದಿಂದ ಬೀಸುವ ಗಾಳಿ ಅಟ್ಲಾಂಟಿಕ್ ಸಾಗರದಿಂದ ಮೋಡಗಳನ್ನು ಹೊತ್ತು ತಂದು ಮಳೆ ಸುರಿಸುತ್ತದೆ. ವಾರ್ಷಿಕ ಮಳೆ ವಿಕ್ಟೋರಿಯದಲ್ಲಿ 400 ಸೆಂಮೀ, ಚಾಡ್ ಸರೋವರದ ಬಳಿ 40 ಸೆಂಮೀ. ಕ್ಯಾಮರೂನ್ ಪರ್ವತದ ಪಶ್ಚಿಮದಲ್ಲಿರುವ ಡಿಬುಂಡ್ಜದಲ್ಲಿ 600 ಸೆಂಮೀ ಮಳೆಯಾಗುತ್ತದೆ.

ಸಸ್ಯ, ಪ್ರಾಣಿಗಳು: ಉತ್ತರ ಅಕ್ಷಾಂಶ $4^0$–$6^0$ ಗಳಲ್ಲಿರುವ ಮೈದಾನಗಳು ಮಳೆಗಾಡುಗಳಿಂದ ಆವೃತವಾಗಿವೆ. ಇಲ್ಲಿಯ ಕೆಲವು ಮರಗಳು 120 ಮೀ ವರೆಗೂ ಎತ್ತರವಾಗಿರುವುದುಂಟು. ಜವುಗು ಪ್ರದೇಶದಲ್ಲಿ ತಾಳೆ ಜೊಂಡುಗಳೂ ಕರಾವಳಿಯಲ್ಲಿ ಗುಲ್ಮ ವೃಕ್ಷಗಳೂ ಉಂಟು. 1200 ಮೀ 2400 ಮೀ ಎತ್ತರದ ಪ್ರದೇಶಗಳ ನಿತ್ಯ ಹಸಿರು ವೃಕ್ಷಗಳು ಮೈದಾನಕ್ಕಿಂತ ಭಿನ್ನವಾದವು. ಅವುಗಳ ಎತ್ತರ ಕಡಿಮೆ. ಇನ್ನೂ ಎತ್ತರದಲ್ಲಿ ಇತರ ಬಗೆಯ ಮರಗಳೂ ಹುಲ್ಲೂ ಬಿದಿರೂ ಬೆಳೆಯುತ್ತವೆ. ಮಳೆಗಾಡುಗಳ ಉತ್ತರಕ್ಕೆ ಸವನ್ನಾ ಕಾಡುಗಳುಂಟು.

ದಟ್ಟವಾದ ಮಳೆಗಾಡುಗಳಲ್ಲಿ ಗೊರಿಲ್ಲ, ಚಿಂಪಾಂಜಿ, ಬಗೆಬಗೆಯ ಕೋತಿಗಳು ಇವೆ. ಹುಲ್ಲುಬೆರೆತ ಕಾಡುಗಳಲ್ಲಿ ಆನೆ, ಬಬೂನ್, ಜಿಂಕೆಗಳುಂಟು. ಉತ್ತರದಲ್ಲಿ ಜಿರಾಫೆಗಳನ್ನೂ ಖಡ್ಗಮೃಗಗಳನ್ನೂ ಕಾಣಬಹುದು. ಬಾವಲಿ, ಸಣ್ಣ ಮಾಂಸಾಹಾರಿ

ಪ್ರಾಣಿಗಳು ಮತ್ತು ಬಗೆ ಬಗೆಯ ಹಕ್ಕಿಗಳು ಇವೆ. ಹಾವು, ಹಲ್ಲಿ, ಕಪ್ಪೆಗಳೂ ಕಡಿಮೆಯಿಲ್ಲ. ಅಪಾಯಕಾರಿಗಳಾದ ಟ್ಸೆಟ್ಸೆ ನೊಣಗಳು ಕಾಡುಗಳಲ್ಲೂ ಹುಲ್ಲುಗಾಡುಗಳಲ್ಲೂ ವ್ಯಾಪಕವಾಗಿವೆ. ಅತ್ಯಂತ ಉತ್ತರದಲ್ಲಿ ದನಗಳನ್ನು ಸಾಕುತ್ತಾರೆ. ಕುದುರೆ, ಕತ್ತೆ, ಒಂಟೆಗಳು ಹೇರುಪ್ರಾಣಿಗಳು, ಹುಲ್ಲುಗಾಡುಗಳಲ್ಲಿ ಜೇನು ಒಂದು ವಿಶೇಷ.

ಕೃಷಿ, ಕೈಗಾರಿಕೆ: ಆಫ್ರಿಕದ ಉಷ್ಣವಲಯ ರಾಷ್ಟ್ರಗಳ ಪೈಕಿ ಕ್ಯಾಮರೂನಿನಲ್ಲಿಯ ತಲಾ ವರಮಾನ ಅತ್ಯಂತ ಹೆಚ್ಚು. ಆದರೆ ಅದರ ಅರ್ಥವ್ಯವಸ್ಥೆಗೆ ಈಗಲೂ ಕೃಷಿಯೇ ತಳಹದಿ. ಮುಖ್ಯವಾದ ಆರ್ಥಿಕ ಬೆಳೆಗಳು ಕೋಕೋ, ಕಾಫಿ, ರಬ್ಬರ್ ಮತ್ತು ತಾಳೆ ಎಣ್ಣೆ. ಬಾಳೆ ಬೆಳೆಯು ಮುಖ್ಯವಾಗಿತ್ತು. ಕಳೆದ ಕೆಲವು ವರ್ಷಗಳಲ್ಲಿ ಅದರ ಪ್ರಾಮುಖ್ಯತೆ ಕಡಿಮೆಯಾಗಿದೆ. ಹತ್ತಿಯ ಉತ್ಪಾದನೆಯೂ ಈಚೆಗೆ ಅಭಿವೃದ್ಧಿಯಾಗುತ್ತಿದೆ. ಸಾರ್ಗಂ, ಮೆಕ್ಕೆಜೋಳ, ಬತ್ತ, ಕಬ್ಬು, ನೆಲಗಡಲೆ, ಹುರುಳಿ, ಎಳ್ಳು, ತರಕಾರಿ ಇವು ಇತರ ಬೆಳೆಗಳು. ಪಶ್ಚಿಮ ಕ್ಯಾಮರೂನಿನಲ್ಲಿ ಪ್ಲಾಂಟೇಷನ್ (ನೆಡುತೋಟ) ಬೇಸಾಯ ವೃದ್ಧಿಯಾಗಿದ್ದರೆ ಪೂರ್ವ ಕ್ಯಾಮರೂನಿನಲ್ಲಿ ಕೈಗಾರಿಕೆ ಬೆಳೆಯುತ್ತಿದೆ. ಅಲ್ಯೂಮಿನಿಯಂ ಮತ್ತು ರಾಸಾಯನಿಕ ಕೈಗಾರಿಕೆಗಳು ಮುಖ್ಯವಾದವು. ಈಡೀಯಿ ಅಲ್ಯೂಮಿನಿಯಂ ಆಧಾರಿತ ಕೈಗಾರಿಕಾ ಕೇಂದ್ರ. ಡೌಲ ಮುಖ್ಯ ವಾಣಿಜ್ಯ ಕೇಂದ್ರ.

ಆಡಳಿತ: ಈಗ ಪೂರ್ವ ಕ್ಯಾಮರೂನ್ ಎನಿಸಿಕೊಂಡಿರುವ ಭಾಗ ಹಿಂದೆ ಫ್ರೆಂಚರಿಗೆ ಸೇರಿತ್ತು. 1958ರಲ್ಲಿ ಅದು ಸ್ವಾಯತ್ತೆಯನ್ನೂ 1960ರ ಜನವರಿ 1ರಂದು ಸ್ವಾತಂತ್ರ್ಯವನ್ನೂ ಪಡೆದು, 1960ರ ಮಾರ್ಚ್ 1ರಂದು ಗಣರಾಜ್ಯವಾಯಿತು. 1961ರ ಅಕ್ಟೋಬರ್ 1ರಂದು ಕ್ಯಾಮರೂನ್ ಗಣರಾಜ್ಯದೊಂದಿಗೆ ಬ್ರಿಟಿಷರ ನ್ಯಾಸಪ್ರದೇಶವಾಗಿದ್ದ ದಕ್ಷಿಣ ಕ್ಯಾಮರೂನ್ಸ್ ಮತ್ತು ಬ್ರಿಟಿಷ್ ಆಡಳಿತದಲ್ಲಿದ್ದ ಉತ್ತರ ಕ್ಯಾಮರೂನ್ಸ್ ಇವು ಸೇರಿ ಕ್ಯಾಮರೂನ್ ಸಂಯುಕ್ತ ಗಣರಾಜ್ಯ ಸ್ಥಾಪಿತವಾಯಿತು. ಕ್ಯಾಮರೂನಿನ ಕೇಂದ್ರ ಸರ್ಕಾರದ ಅಧ್ಯಕ್ಷನೂ ಉಪಾಧ್ಯಕ್ಷನೂ ಸಂಯುಕ್ತ ವಿಧಾನಸಭೆಯ ಸದಸ್ಯರೂ ನೇರ ಸಾರ್ವತ್ರಿಕ ಚುನಾವಣೆಗಳಲ್ಲಿ ಆಯ್ಕೆಯಾಗುತ್ತಾರೆ. ಕೇಂದ್ರ ಮಂತ್ರಿಮಂಡಲವನ್ನು ಅಧ್ಯಕ್ಷ ನೇಮಕ ಮಾಡುತ್ತಾನೆ. ಕ್ಯಾಮರೂನಿನ ಪೂರ್ವಪಶ್ಚಿಮ ಪ್ರಾಂತ್ಯಗಳಿಗೆ ಪ್ರತ್ಯೇಕವಾದ ಪ್ರಧಾನಿಗಳೂ ಸಂಪುಟಗಳೂ ವಿಧಾನಸಭೆಗಳೂ ಇರುತ್ತವೆ.

ಸಾರಿಗೆ: ಪೂರ್ವ ಕ್ಯಾಮರೂನಿಗೂ ಫ್ರೆಂಚ್ ಸಮಭಾಜಕ ವೃತ್ತೀಯ ರಾಜ್ಯಗಳಿಗೂ ಸಾರಿಗೆ ಸಂಪರ್ಕವುಂಟು. ಪಶ್ಚಿಮ ಕ್ಯಾಮರೂನಿನ ಮಾರ್ಗಗಳು ನೈಜೀರಿಯದೊಂದಿಗೆ ಸಂಪರ್ಕ ಕಲ್ಪಿಸಿವೆ. ಡೌಲ–ಯಾವೂಂಡೆ ಮತ್ತು ಯಾವೂಂಡೆ–ಬೆಲಾಬೊ ರೈಲುಮಾರ್ಗಗಳು ಮುಖ್ಯವಾದವು. ಬೆಲಾಬೊದಿಂದ ನ್ಗಾಮೊಂಡೇರೆಗೆ ರೈಲುಮಾರ್ಗ ನಿರ್ಮಾಣವಾಗುತ್ತಿದೆ. ಪೂರ್ವ ಪಶ್ಚಿಮ ಪ್ರಾಂತ್ಯಗಳನ್ನು ಸೇರಿಸುವ ಮುಖ್ಯ ರಸ್ತೆಯೊಂದುಂಟು. ಡೌಲ (2,00,000) ಮತ್ತು ವಿಕ್ಟೋರಿಯ ಮುಖ್ಯ ರೇವುಪಟ್ಟಣಗಳು. ಕ್ಯಾಮರೂನಿನ ಹಲವು ಭಾಗಗಳೊಂದಿಗೂ ಇತರ ದೇಶಗಳೊಂದಿಗೂ ಸಂಪರ್ಕ ಕಲ್ಪಿಸುವ ವಿಮಾನ ಸಂಚಾರ ವ್ಯವಸ್ಥೆಯೂ ಇತರ ದೇಶಗಳೊಂದಿಗೂ ಸಂಪರ್ಕ ಕಲ್ಪಿಸುವ ವಿಮಾನ ಸಂಚಾರ ವ್ಯವಸ್ಥೆಯೂ ಉಂಟು.

ಕ್ಯಾಮರೂನ್ ಸಂಯುಕ್ತ ರಾಜ್ಯಕ್ಕೂ ಪೂರ್ವ ಕ್ಯಾಮರೂನಿಗೂ ರಾಜಧಾನಿ ಯಾವೂಂಡೇ (1,10,000). ಪಶ್ಚಿಮ ಕ್ಯಾಮರೂನಿನ ರಾಜಧಾನಿ ಬೂಯೇಯ. (ವಿ.ಎಸ್.ಎ.)

**ಕ್ಯಾಮೆರ ವಿಧಾನ:** ಇದು ಭೂಪಟ ವಿಸ್ತರಣೆ ನ್ಯೂನೀಕರಣೆಯ ಒಂದು ಮುಖ್ಯ ವಿಧಾನ. ಗೋಡೆಗಳಿಗೆ ತೂಗು ಹಾಕುವ ದೊಡ್ಡ ಭೂಪಟಗಳನ್ನು ನ್ಯೂನೀಕರಿಸಲು ಹೆಚ್ಚಾಗಿ ಕ್ಯಾಮೆರಾವನ್ನು ಬಳಸುವರು. ಇದರಲ್ಲಿ ನ್ಯೂನೀಕರಿಸಿದ ಭೂಪಟದ ಚಿತ್ರವನ್ನು ಪಟ್ಟಕದ ಮೂಲಕ ಹಾಳೆಯ ಮೇಲೆ ಬೀಳುವಂತೆ ಮಾಡಿ ಅವುಗಳ ಚಿತ್ರವನ್ನು ಪಡೆಯುವರು. ಬೇಕಾದ ಅಳತೆಗೆ ಭೂಪಟಗಳ ವಿಸ್ತರಣೆ ಮತ್ತು ನ್ಯೂನೀಕರಣಕ್ಕೆ ಸಂಬಂಧಿಸಿದೆ. (ಆರ್.ಎನ್.)

**ಕ್ಯಾಲಿಫೋರ್ನಿಯ:** ಅಮೆರಿಕ ಸಂಯುಕ್ತಸಂಸ್ಥಾನದ ಒಂದು ರಾಜ್ಯ. ಅದರ ನೈಋತ್ಯ ಭಾಗದಲ್ಲಿ, ಪೆಸಿಫಿಕ್ ಸಾಗರ ತೀರದಲ್ಲಿದೆ. ಆರಂಭದಲ್ಲಿ ಏಕಪ್ರಕಾರವಾಗಿ ಇಲ್ಲಿ ಚಿನ್ನ ದೊರೆಯುತ್ತಿದ್ದುದು ಕಂಡು ಚಿನ್ನದ ರಾಜ್ಯವೆಂದೂ ಇದನ್ನು ಕರೆಯುವರು. ಉತ್ತರದಲ್ಲಿ ಒರೆಗನ್, ಪೂರ್ವದಲ್ಲಿ ನೆವಾಡ ಮತ್ತು ಅರಿಜೋನ, ದಕ್ಷಿಣದಲ್ಲಿ ಮೆಕ್ಸಿಕೊದ ಕೆಳ ಕ್ಯಾಲಿಫೋರ್ನಿಯ ಪ್ರದೇಶ, ಪಶ್ಚಿಮಕ್ಕೆ ಪೆಸಿಫಿಕ್ ಸಾಗರ–ಇವು ಇದರ ಮೇರೆಗಳು. ಉ.ಅ.$32^0 30'$–$42^0$ ಮತ್ತು ಪ.ರೇ.$114^0$–$124^0 29'$ ನಡುವೆ ಹಬ್ಬಿರುವ ಈ ರಾಜ್ಯದ ವಿಸ್ತೀರ್ಣ, 5384 ಚ.ಕಿಮೀ. ಇದು ವಿಸ್ತೀರ್ಣದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಮೂರನೆಯ ರಾಜ್ಯ. ಇದಕ್ಕೆ 2822 ಕಿಮೀ ಉದ್ದದ ಕರಾವಳಿ ಇದೆ.

ಮೇಲ್ಮೈಲಕ್ಷಣ: ಕ್ಯಾಲಿಫೋರ್ನಿಯದ ಪಶ್ಚಿಮ ತೀರದಲ್ಲಿ ಪರ್ವತ ಸರಗೊಂದು ಹಾದುಹೋಗಿದೆ. ರಾಜ್ಯದ ಪೂರ್ವಭಾಗದಲ್ಲಿ ಪರ್ವತಶ್ರೇಣಿ ಇದೆ. ಪೆಸಿಫಿಕ್ ತೀರದ ಪರ್ವತಶ್ರೇಣಿಯ ಅಗಲ 32 ರಿಂದ 64 ಕಿಮೀ. ಇಲ್ಲಿ ಹುಟ್ಟುವ ಸಣ್ಣ ನದಿಗಳು ಹರಿದು ಕಂದರಗಳನ್ನು ನಿರ್ಮಿಸುತ್ತವೆ. ಪೂರ್ವಶ್ರೇಣಿಯ ಎತ್ತರ 600–2400 ಮೀ. ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿ ಬಳಿಯಲ್ಲಿಯ ಶಿಖರಗಳು ಸು. 1200 ಮೀ ಎತ್ತರವಾಗಿವೆ. ಅವುಗಳಲ್ಲಿ ಮುಖ್ಯವಾದವು ಡಿಯಾಬ್ಲೊ (1156 ಮೀ.) ಸೇಂಟ್ ಹೆಲೆನಾ (1304 ಮೀ). ಇಲ್ಲಿಂದ ಉತ್ತರಕ್ಕೂ ದಕ್ಷಿಣಕ್ಕೂ ಹಬ್ಬಿರುವ ಶ್ರೇಣಿ ಹೆಚ್ಚು ಎತ್ತರವಾಗಿದೆ. ರಾಜ್ಯದ ಪೂರ್ವಶ್ರೇಣಿ ಸಿಯೆರ ನೆವಾಡ 640 ಕಿಮೀ ಉದ್ದಕ್ಕೆ ಹಬ್ಬಿದೆ. ಪೂರ್ವದ ಶ್ರೇಣಿ ಪಶ್ಚಿಮದ ಶ್ರೇಣಿಗಿಂತ ಉನ್ನತವಾದ್ದು. ಇದರ ನಡುವೆ 600 ಮೀ – 1501 ಮೀ ಆಳದ ಕಮರಿಗಳುಂಟು. ಈ ಶ್ರೇಣಿಯ ಪೂರ್ವದ ಭಾಗ ಬಹಳ ಕಡಿದಾಗಿದೆ. ಕಣಿವೆಗಳು ಕಡಿಮೆ. ಅತ್ಯಂತ ತಗ್ಗಿನ ಕಣಿವೆ ಫ್ರೆಶ್‌ನೋ (2702 ಮೀ). ಟೈಯೋಗಾ ಕಣಿವೆಯಲ್ಲಿ (3303ಮೀ) ಹೆಚ್ಚು ಸಂಚಾರವಿದೆ. ಈ ಶ್ರೇಣಿಯಲ್ಲಿ 4204 ಮೀ ಗಿಂತ ಎತ್ತರವಾಗಿರುವ ಶಿಖರಗಳು ನಾಲ್ಕು. ಅತ್ಯುನ್ನತ ಶಿಖರ ಹ್ವಿಟ್ನಿ (4353 ಮೀ).

ಕ್ಯಾಲಿಫೋರ್ನಿಯದ ಪರ್ವತದೃಶ್ಯ ಅತ್ಯಂತ ರಮಣೀಯವಾದುದು. ಓವೆನ್ಸ್ ಸರೋವರದ ಎದುರಿಗೆ ಹದಿನಾರು ಕಿಮೀ ದೂರದಲ್ಲಿ 3000 ಮೀ ಕೆಳಕ್ಕಿಳಿಯುವ ಗ್ರಾನೈಟ್ ಶೃಂಗಗಳ ಸಾಲು, ಸುತ್ತಲ ಮೈದಾನದಿಂದ 3300 ಮೀ ಮೇಲೆದ್ದು ಎತ್ತರದ ಹಿಮಾಚ್ಛಾದಿತ ಷ್ಯಾಸ್ತ ಶಿಖರ, ಕರಾವಳಿ ಶ್ರೇಣಿಯ ಕಣಿವೆಗಳು, ಕಿಂಗ್ಸ್ ನದಿಯ ದಕ್ಷಿಣ ಕವಲು ಯೂಸೆಮಿಟಿ ಕಣಿವೆಗಳು ರಮ್ಯವಾಗಿವೆ. ಕ್ಯಾಲಿಫೋರ್ನಿಯದ ಪರ್ವತಗಳ ರಮ್ಯ ಸನ್ನಿವೇಶಗಳು ಹಿಂದೊಮ್ಮೆ ಇಲ್ಲಿದ್ದ ಹಿಮನದಿಗಳ ನಗ್ನೀಕರಣ ಕಾರ್ಯಗಳಿಂದ ಸಂಭವಿಸಿದಂಥವು. ಆಳವಾದ ಕಮರಿಗಳು ನದಿಗಳ ಕೊರೆತದ ಫಲ. ಕ್ಯಾಲಿಫೋರ್ನಿಯದಲ್ಲಿ ಅನೇಕ ಸರೋವರಗಳೂ ಉಂಟು. ಇವುಗಳಲ್ಲಿ ಅತ್ಯಂತ ಸುಂದರವಾದದ್ದು ಟಾಹೋ. ಇದು ಸಮುದ್ರಮಟ್ಟದಿಂದ 1891 ಮೀ ಎತ್ತರದಲ್ಲಿದೆ. ಇದರ ಸುತ್ತಲೂ 1200–1500 ಮೀ ಎತ್ತರವಿರುವ ಶೃಂಗಗಳಿವೆ.

ಪರ್ವತಶ್ರೇಣಿಯ ಉತ್ತರ ಭಾಗ ಬಹುತೇಕ ಲಾವದಿಂದ ಆವೃತವಾಗಿದೆ. ಇಲ್ಲಿ ಅನೇಕ ಕುಳಿಗಳೂ ಬೂದಿ ಗುಡ್ಡಗಳೂ ಉಂಟು. ಅಗ್ನಿಪರ್ವತ ಶಿಖರಗಳಲ್ಲಿ ಕೆಲವು ಇತ್ತೀಚಿನವು. ಇವುಗಳಲ್ಲಿ ಷಾಸ್ತ ಶಿಖರ ಒಂದು. ಓವೆನ್ಸ್ ಕಣಿವೆಯಲ್ಲಿ ಲುಪ್ತ ಮತ್ತು ಸುಪ್ತ ಜ್ವಾಲಾಮುಖಿಗಳ ಗುಚ್ಛವೊಂದುಂಟು.

ಕ್ಯಾಲಿಫೋರ್ನಿಯದ ತೀರಪ್ರದೇಶಗಳಲ್ಲಿ ಸಂಭವಿಸಿದ ಭೂಕಂಪದಿಂದ ದಕ್ಷಿಣ ಭಾಗದಲ್ಲಿ ನಷ್ಟವುಂಟಾಯಿತು. 1868ರಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ ನಗರ ಸಂಕಷ್ಟಕ್ಕೀಡಾಯಿತು. 1925ರಲ್ಲಿ ಸ್ಯಾಂಟ ಬಾರ್ಬರ ತೀವ್ರ ಕಂಪನಕ್ಕೊಳಗಾಯಿತು.

ಗೋಲ್ಡನ್ ಗೇಟ್ ಸೇತುವೆ

ಕ್ಯಾಲಿಫೋರ್ನಿಯದ ಮಧ್ಯಭಾಗ ಉತ್ತರ ದಕ್ಷಿಣ ಭಾಗಗಳಲ್ಲಿ ಕೂಡಿಕೊಂಡಂತಿರುವ ಪೂರ್ವ ಪಶ್ಚಿಮ ಪರ್ವತಶ್ರೇಣಿಗಳ ನಡುವಿನ ಪ್ರದೇಶ. ಸ್ಯಾನ್ ಫ್ರಾನ್ಸಿಸ್ಕೋದ ಗೋಲ್ಡನ್ ಗೇಟ್‌ನ ಹಿಂಬದಿಯಲ್ಲಿ ಮಾತ್ರ ಇದು ಹೊರಕ್ಕೆ ತೆರೆದುಕೊಂಡಿದೆ. ಒಳನಾಡಿನ ನೀರೆಲ್ಲ ಹರಿದುಹೋಗಲು ಇರುವ ತೆರವು ಇದೊಂದೇ. ಈ ಕಣಿವೆಯ ಉದ್ದ 720 ಕಿಮೀ. ಸರಾಸರಿ ಅಗಲ 64 ಕಿಮೀ. ಕಣಿವೆ ಪ್ರದೇಶದ ಉತ್ತರ ಭಾಗದಲ್ಲಿ ಸ್ಯಾಕ್ರಮೆಂಟೊ ನದಿಯೂ ದಕ್ಷಿಣ ಭಾಗದಲ್ಲಿ ಸ್ಯಾನ್ ವಾಕೀನ್ ನದಿಯೂ ಹರಿಯುತ್ತವೆ. ಸಮುದ್ರಕ್ಕೆ ಸ್ವಲ್ಪದೂರ ಇರುವಾಗ ಸ್ಯಾಕ್ರಮೆಂಟೊ ನದಿಯನ್ನು ಸ್ಯಾನ್ ವಾಕೀನ್ ಕೂಡಿಕೊಳ್ಳುತ್ತದೆ. ಸಾಗರ ತೀರದ ಪರ್ವತಗಳಿಂದ ನಡುವಿನ ಕಣಿವೆಯತ್ತ ಯಾವ ನದಿಯೂ ಸದಾ ಹರಿಯುವುದಿಲ್ಲ. ರಾಜ್ಯದ ಪೂರ್ವಭಾಗದಿಂದ ಸ್ಯಾಕ್ರಮೆಂಟೊ ಮತ್ತು ಸ್ಯಾನ್ ವಾಕೀನ್ ನದಿಗಳಿಗೆ ಅನೇಕ ನದಿಗಳು ಬಂದು ಕೂಡುತ್ತವೆ. ಸ್ಯಾಕ್ರಮೆಂಟೊದ ಪ್ರಮುಖ ಉಪನದಿ

ಫೆದರ್. ಇದಕ್ಕೆ ಅನೇಕ ನದಿಗಳು ಬಂದು ಕೂಡುತ್ತವೆ. ಇಲ್ಲಿಯ ಅನೇಕ ಉಪನದಿಗಳು ನಡುವೆಯೇ ಬತ್ತಿಹೋಗುತ್ತವೆ; ಇಲ್ಲವೇ ಡೆತ್‌ಕಣಿವೆಯಲ್ಲಿ ಕಂಡುಬರುವಂತೆ ಸ್ವಲ್ಪದೂರ ಭೂಮಿಯೊಳಗೆ ಹರಿದು ಇಂಗಿಹೋಗುತ್ತವೆ.

ಪಾಯಿಂಟ್ ಕನ್‌ಸೆಪ್ಷನ್‌ಗೆ ದಕ್ಷಿಣದ ಕರಾವಳಿ ಫಲವತ್ತಾದ್ದು. ಒಳನಾಡ ಮರುಭೂಮಿಗೂ ಇದಕ್ಕೂ ನಡುವೆ ಉತ್ತುಂಗ ಪರ್ವತಶ್ರೇಣಿಯುಂಟು. 1500–2000 ಮೀ ಎತ್ತರವಿರುವ ಈ ಶ್ರೇಣಿಯಲ್ಲಿ 3000 ಮೀ ಗೂ ಎತ್ತರವಿರುವ ಕೆಲವು ಶಿಖರಗಳುಂಟು. ಇವುಗಳಲ್ಲಿ ಸ್ಯಾನ್ ಬರ್ನಡೀನೋ (3492 ಮೀ), ಸ್ಯಾನ್ ಜಸಿಂಟೋ (3245 ಮೀ), ಸ್ಯಾನ್ ಅಂಟೋನಿಯೋ (3027 ಮೀ) ಮುಖ್ಯವಾದವು. ಈ ಶ್ರೇಣಿಯಲ್ಲಿ ಅನೇಕ ಕಣಿವೆಗಳಿವೆ. ರೈಲುಮಾರ್ಗಗಳು ಈ ಕಣಿವೆಗಳ ಮೂಲಕ ತೀರಪ್ರದೇಶಕ್ಕೆ ಸಾಗುತ್ತವೆ. ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ಬಿಸಿಲು ಹೆಚ್ಚು. ಇಲ್ಲಿಯ ಪ್ರದೇಶ ಬಹುಮಟ್ಟಿಗೆ ಬಂಜರು. ಕೆರ್ನ್, ಲಾಸ್ ಏಂಜಲೀಸ್ ಮತ್ತು ಸಾನ್ ಬರ್ನಡೀನೋ ಪ್ರದೇಶಗಳ ಭಾಗಗಳನ್ನು ಮೊಹಾವೆ ಮರಳುಗಾಡು ಆಕ್ರಮಿಸಿಕೊಂಡಿದೆ. ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ಸಮುದ್ರಕ್ಕೆ ಹರಿಯುವ ನದಿಗಳಿಲ್ಲ. ಸಾನ್ ಡಿಯೇಗೋ, ಇಂಪೀರಿಯಲ್ ಮತ್ತು ರಿವರ್‌ಸೈಡ್ ಪ್ರದೇಶಗಳಲ್ಲಿ ಕೆಲವು ಹೊಳೆಗಳು ಹರಿಯುತ್ತವೆ.

ಡೆತ್ ಕಣಿವೆ ಓವೆನ್ಸ್ ಸರೋವರದ ಪೂರ್ವಕ್ಕೆ 64 ಕಿಮೀ ದೂರದಲ್ಲಿದೆ. ಅಮರ್ಗೋಸಾ ನದಿ ನೆವಾಡ ರಾಜ್ಯದಿಂದ ಈ ಕಣಿವೆಯನ್ನು ಸೇರಿ ಇಲ್ಲಿಯ ಉಪ್ಪುಭೂಮಿಯಲ್ಲಿ ಬತ್ತಿಹೋಗುತ್ತದೆ. ಬೋರ್ಯಾಕ್ಸ್, ನೈಟ್ರೇಟ್ ಆಫ್ ಸೋಡ ಇವು ಇಲ್ಲಿ ಸಿಗುತ್ತವೆ. ಇಡೀ ಖಂಡದ ಅತ್ಯಂತ ತಗ್ಗಿನ ಪ್ರದೇಶ ಡೆತ್ ಕಣಿವೆಯಲ್ಲಿದೆ. ಇದು ಇರುವುದು ಸಮುದ್ರಮಟ್ಟಕ್ಕಿಂತ 84 ಮೀ ಕೆಳಗಿದೆ.

ವಾಯುಗುಣ: ಕ್ಯಾಲಿಫೋರ್ನಿಯದ ವಾಯುಗುಣ ವಿಶಿಷ್ಟವಾದುದು: ತೀರ ಪ್ರದೇಶದಲ್ಲಿ ಉಷ್ಣತೆಯ ಅಂತರ ಕಡಿಮೆ. ಚಳಿಗಾಲದಲ್ಲಿ ಪರ್ವತಪ್ರದೇಶಗಳ ಹೊರತು ಇತರ ಕಡೆಗಳಲ್ಲಿ ಉಷ್ಣತೆ ಬಹಳ ಕಡಿಮೆಯಿರುವುದಿಲ್ಲ. ಸಿಯೆರ ಪರ್ವತ ಭಾಗದಲ್ಲೂ ವಾಯವ್ಯ ಕೌಂಟಿಗಳಲ್ಲೂ 100 ಸೆಂಮೀ ಗಿಂತ ಹೆಚ್ಚು ಮಳೆಯಾಗುತ್ತದೆ. ಇನ್ಯೋ, ಕರ್ನ್, ಸ್ಯಾನ್ ಬರ್ನಡೀನೋ ಮತ್ತು ಇಂಪೀರಿಯಲ್ ಕೌಂಟಿಗಳಲ್ಲಿ ಮಳೆ 25 ಸೆಂಮೀ ಗಿಂತ ಕಡಿಮೆ. ಉಳಿದ ಕಡೆ ಸರಾಸರಿ ಮಳೆ 25–50 ಸೆಂಮೀ. 1800–2110 ಮೀ ಗಿಂತ ಎತ್ತರವಿರುವ ಪರ್ವತಗಳಲ್ಲಿ ಅವಪತನವಾಗುವುದು ಹಿಮರೂಪದಲ್ಲಿ. ಬೇಸಗೆಯಲ್ಲಿ ಇದು ಕರಗಿ ಹರಿದು ನೀರಾವರಿಗೆ ಅನುಕೂಲ ಕಲ್ಪಿಸಿದೆ. ಸ್ಯಾನ್ ಫ್ರಾನ್ಸಿಸ್ಕೋದ ಉತ್ತರದಲ್ಲಿ ಮೇ–ಸೆಪ್ಟೆಂಬರ್ ಅವಧಿಯಲ್ಲಿ ರಾತ್ರಿಯ ವೇಳೆ ಮಂಜು ಬೀಳುತ್ತದೆ. ಇದರ ಆಗ್ನೇಯ ಭಾಗದಲ್ಲಿ ಬಿಸಿಲು ಹೆಚ್ಚು. ಕೊಲರಾಡೋ ಮರುಭೂಮಿ ಹಾಗೂ ಅದರ ಅಂಚಿನ ಆರಿಜ಼ೋನ ರಾಜ್ಯದ ಹೀಲ ಕಣಿವೆ ಅಮೆರಿಕ ಸಂಯುಕ್ತಸಂಸ್ಥಾನದ ಗರಿಷ್ಠ ಉಷ್ಣತೆಯ ಪ್ರದೇಶಗಳು. ಪೆಸಿಫಿಕ್ ಸಾಗರದ ದಕ್ಷಿಣ ಅಂಚಿನ ಉಷ್ಣತೆ $44^0$ಸೆ. – $46^0$ಸೆ. ರಾಜ್ಯದ ಕಡಿಮೆ ಉಷ್ಣತೆ ಇರುವುದು ಟಾಹೋ ಸರೋವರದಲ್ಲಿರುತ್ತದೆ. ಅಲ್ಲಿ ಉಷ್ಣತೆ $-5^0$ $-4^0$ಸೆ.ಇರುವುದುಂಟು.

ಸಸ್ಯ ಹಾಗೂ ಪ್ರಾಣಿಸಂಪತ್ತು: ಕ್ಯಾಲಿಫೋರ್ನಿಯದ ಸಸ್ಯ ಹಾಗೂ ಪ್ರಾಣಿಸಂಪತ್ತು ವೈವಿಧ್ಯಮಯವಾದದ್ದು. ಇಲ್ಲಿಯ ಅರಣ್ಯಗಳಲ್ಲಿ ಪೈನ್ ಮತ್ತು ರೆಡ್‌ವುಡ್ ಮರಗಳು ಯಥೇಚ್ಛವಾಗಿವೆ. ಈ ರಾಜ್ಯದಲ್ಲಿ 400 ಪ್ರಭೇದಗಳ ಸಸ್ತನಿಗಳಿವೆ. ಅವುಗಳಲ್ಲಿ ಪ್ರಮುಖವಾದವು; ಪಾಕೆಟ್ ಗೋಫರ್, ಕರಿಬಾಲದ ಮೊಲ, ಕ್ಯಾಲಿಫೋರ್ನಿಯ ಬ್ಯಾಡ್ಜರ್, ಕಯೋಟ್, ಯನ ಕೂಗರ್, ಕಾಡುಕುರಿ, ಜಿಂಕೆ ಮತ್ತು ಎಲ್ಕ್. ಇಲ್ಲಿಯ ಪಕ್ಷಿಪ್ರಭೇದಗಳು 600. ಕ್ವೇಲ್, ಪಾರಿವಾಳ, ಗೂಬೆ, ಹಮಿಂಗ್‌ಬರ್ಡ್ ಮುಂತಾದ ಅನೇಕ ಬಗೆಯ ಪಕ್ಷಿಗಳುಂಟು.

ಆರ್ಥಿಕತೆ: ನೀರಾವರಿ ಅಭಿವೃದ್ಧಿ, ಉತ್ತಮ ವ್ಯವಸಾಯ ಪದ್ಧತಿ ಮತ್ತು ಸಣ್ಣ ಭೂ ತಾಕುಗಳು–ಇವುಗಳಿಂದಾಗಿ ಕ್ಯಾಲಿಫೋರ್ನಿಯ ರಾಜ್ಯ ಮುಖ್ಯ ಕೃಷಿ ಪ್ರದೇಶವಾಗಿದೆ. ಹಣ್ಣುಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಕೇಂದ್ರ ಕಣಿವೆ ಭಾಗದಲ್ಲಿ ಫ್ರಿಯಾಂಟ್ ಮತ್ತು ಷಾಸ್ತ ಜಲಾಶಯಗಳ ನಿರ್ಮಾಣದಿಂದ ವ್ಯವಸಾಯಕ್ಕೆ ಹೆಚ್ಚು ಅನುಕೂಲವಾಯಿತು. ಹತ್ತಿ, ಬಾರ್ಲಿ, ಗೋದಿ, ಬತ್ತ, ಆಲೂಗೆಡ್ಡೆ, ಸಕ್ಕರೆ ಗೆಡ್ಡೆ, ದ್ರಾಕ್ಷಿ, ಕಿತ್ತಳೆ, ನಿಂಬೆ, ವಾಲ್‌ನಟ್, ಮರಸೇಬು, ಬಾದಾಮಿ, ಸೇಬು, ಅಂಜೂರ ಮುಂತಾದವು ಈ ರಾಜ್ಯದಲ್ಲಿ ಹೇರಳವಾಗಿ ಬೆಳೆಯುತ್ತವೆ. ಮೆಕ್ಸಿಕೊದಿಂದ ವಲಸೆ ಬಂದ ಕೃಷಿ ಕಾರ್ಮಿಕರು ಭೂಮಿಗಳಲ್ಲಿ ಕೆಲಸ ಮಾಡುವುದು. ಕ್ಯಾಲಿಫೋರ್ನಿಯದ ಬೀಜರಹಿತ ಕಿತ್ತಳೆ ಅಮೆರಿಕದಲ್ಲಿ ಪ್ರಸಿದ್ಧವಾಗಿದೆ.

1940–50ರ ದಶಕಗಳಲ್ಲಿ ಕ್ಯಾಲಿಫೋರ್ನಿಯದಲ್ಲಿ ಹತ್ತಿ ವ್ಯವಸಾಯವನ್ನು ಅಭಿವೃದ್ಧಿ ಪಡಿಸಲಾಯಿತು. ಸ್ಯಾನ್ ವಾಕೀನ್ ಕಣಿವೆಯಲ್ಲಿ ಹೆಚ್ಚು ಭೂಮಿಯನ್ನು ಹತ್ತಿಯ ವ್ಯವಸಾಯಕ್ಕೆ ಒಳಪಡಿಸಲಾಗಿದೆ. ಈ ರಾಜ್ಯ ಸ್ಪೇನ್ ಮತ್ತು ಮೆಕ್ಸಿಕೊಗಳ ಅಧೀನದಲ್ಲಿದ್ದಾಗ ಫ್ರಾನ್‌ಸಿಸ್ಕನ್ ಪಾದ್ರಿಗಳು ಇಲ್ಲಿ ಪಶುಪಾಲನೆಯನ್ನು ಪ್ರಾರಂಭಿಸಿದರು.

ಕ್ಯಾಲಿಫೋರ್ನಿಯದ ಕಡಲ ತೀರದಲ್ಲಿ ಆಧುನಿಕ ರೀತಿಯಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ. ಮೀನು ಹಿಡಿಯುವ ಮುಖ್ಯ ರೇವುಗಳು ಯುರೀಕ, ಸ್ಯಾನ್ ಫ್ರಾನ್ಸಿಸ್ಕೋ, ಮಾಂಟೆರೇ, ಸ್ಯಾಂಟ ಬಾರ್ಬರ, ಲಾಸ್ ಏಂಜೆಲೆಸ್ ಮತ್ತು ಸ್ಯಾನ್ ಡಿಯೇಗೋ.

1860ರ ಸಮಯದಲ್ಲಿ ಕ್ಯಾಲಿಫೋರ್ನಿಯಕ್ಕೆ ಅಗತ್ಯವಾಗಿದ್ದ ಬಹುತೇಕ ಎಲ್ಲ ಸರಕುಗಳೂ ಅಮೆರಿಕದ ಪೂರ್ವ ರಾಜ್ಯಗಳಿಂದ ಇಲ್ಲವೆ ಯುರೋಪಿನಿಂದ ಬರುತ್ತಿದ್ದುವು. ಕಲ್ಲಿದ್ದಲ್ಲಿನ ಅಭಾವದಿಂದಾಗಿ ಕೈಗಾರಿಕೆ ಹಿಂದೆ ಬಿದ್ದಿತ್ತು. ವಿದ್ಯುಚ್ಛಕ್ತಿ ಬಂದಮೇಲೆ ಕೈಗಾರಿಕೆಗಳು ಬೆಳೆಯತೊಡಗಿದವು. 1919ರ ವೇಳೆಗೆ ವ್ಯವಸಾಯಕ್ಕಿಂತ ಕೈಗಾರಿಕೆ ಹೆಚ್ಚು ಪ್ರಾಮುಖ್ಯತೆ ಗಳಿಸಿತು. ವಿಮಾನ ಮತ್ತು ಮೋಟಾರು ತಯಾರಿಕೆ, ಹಡಗು ನಿರ್ಮಾಣ ಇವು ಇಲ್ಲಿಯ ಕೈಗಾರಿಕೆಗಳ ಪೈಕಿ ಮುಖ್ಯವಾದವು. ಆಹಾರ ವಸ್ತುಗಳ ಉತ್ಪಾದನೆ, ಮಾಂಸ ಸಂಸ್ಕರಣ, ಮುದ್ರಣ, ಮರಗೆಲಸ, ಹತ್ತಿ ಜವಳಿ ಇವು ಇತರ ಕೆಲವು ಮುಖ್ಯ ಕೈಗಾರಿಕೆಗಳು. ಚೌಬೀನೆ ಉತ್ಪಾದನೆಯಲ್ಲಿ ಕ್ಯಾಲಿಫೋರ್ನಿಯ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಎರಡನೆಯದು. ಹಾಲಿವುಡ್ ಪ್ರಮುಖ ಚಲನಚಿತ್ರ ತಯಾರಿಕಾ ಕೇಂದ್ರ.

ಕ್ಯಾಲಿಫೋರ್ನಿಯದ ಕೆಲವು ಭಾಗಗಳಲ್ಲಿ ಚಿನ್ನವಿದ್ದದ್ದು 1848ಕ್ಕೆ ಹಿಂದೆಯೇ ಜನರಿಗೆ ತಿಳಿದಿತ್ತು. ಸ್ವಲ್ಪಕಾಲ ಇದು ಪ್ರಮುಖ ಸ್ವರ್ಣೋತ್ಪಾದಕ ರಾಜ್ಯವಾಗಿತ್ತು. ಈ ಶತಮಾನದ ನಡುಗಾಲದಿಂದ ಚಿನ್ನದ ಗಣಿಗಾರಿಕೆಯ ಪ್ರಾಮುಖ್ಯತೆ ಬಹಳ ಮಟ್ಟಿಗೆ ತಗ್ಗಿದೆ.

ಪೆಟ್ರೋಲಿಯಂ ಅತ್ಯಾವಶ್ಯಕವಾದ ಮುಖ್ಯ ಖನಿಜ. ಕಚ್ಚಾ ತೈಲ ಉತ್ಪಾದನೆಯಲ್ಲಿ ಈ ರಾಜ್ಯ ಎರಡನೆಯ ಸ್ಥಾನ ಪಡೆದಿದೆ. ಇಡೀ ದೇಶದ ಉತ್ಪಾದನೆಯಲ್ಲಿ ಶೇ. 15 ಕ್ಯಾಲಿಫೋರ್ನಿಯದ ಪಾಲು. ವಿಲ್ಮಿಂಗ್ಟನ್, ಲಾಂಗ್ ಬೀಚ್, ಹಂಟಿಂಗ್ಟನ್ ಬೀಚ್, ಮಿಡ್ವೇ–ಸನ್‌ಸೆಟ್, ಕೆಟ್ಲ್‌ಮನ್ ಬೆಟ್ಟಗಳು, ಕೊಲಿಂಗ–ಇವು ರಾಜ್ಯದ ಪ್ರಮುಖ ತೈಲೋತ್ಪಾದಕ ಪ್ರದೇಶಗಳು. ಬೋರಾನ್, ಯುರೇನಿಯಂ, ಉಪ್ಪು, ಸೀಸ, ಮೆಗ್ನೀಷಿಯಂ, ಜಿಪ್ಸಂ–ಇವು ರಾಜ್ಯದ ಇತರ ಕೆಲವು ಖನಿಜಗಳು.

1869ರಲ್ಲಿ ಸೆಂಟ್ರಲ್ ಪೆಸಿಫಿಕ್ ಮತ್ತು ಯೂನಿಯನ್ ಪೆಸಿಫಿಕ್ ರೈಲುಮಾರ್ಗಗಳನ್ನು ಸೇರಿಸಿದಾಗ ಪೆಸಿಫಿಕ್ ತೀರದಿಂದ ಅಟ್ಲಾಂಟಿಕ್ ತೀರದ ವರೆಗೆ ರೈಲು ಸಾರಿಗೆ ಬಹಳ ಶೀಘ್ರವಾಗಿ ಬೆಳೆಯಿತು.

1919ರ ತರುವಾಯ ಅನೇಕ ಹೆದ್ದಾರಿಗಳು ಅಭಿವೃದ್ಧಿ ಹೊಂದಿದುವು. ಇಲ್ಲಿ ವಾಹನಗಳ ಬಳಕೆ ಇರುವುದರಿಂದ ಇಲ್ಲಿ ಇಬ್ಬರಿಗೆ ಒಂದರಂತೆ ಮೋಟಾರ್ ಕಾರು ಮುಂತಾದ ವಾಹನಗಳಿವೆ.

ಕ್ಯಾಲಿಫೋರ್ನಿಯದ ರೇವುಗಳಿಂದ ಪ್ರಪಂಚದ ವಿವಿಧ ಭಾಗಗಳಿಗೆ ಸಮುದ್ರ ಜಲಸಾರಿಗೆ ಸೌಲಭ್ಯವುಂಟು. ಸ್ಯಾನ್ ಫ್ರಾನ್ಸಿಸ್ಕೋ ಮತ್ತು ಲಾಸ್ ಏಂಜೆಲೆಸ್ ಬಂದರುಗಳಿಂದ ಪ್ರಪಂಚದ ಹಲವು ಕಡೆಗಳಿಗೆ ಹಡಗುಗಳು ಸಂಚರಿಸುತ್ತವೆ. ಸ್ಯಾನ್ ಡಿಯೇಗೋದಲ್ಲಿ ಉತ್ತಮವಾದ ಬಂದರಿದ್ದು, ಅದು ಮುಖ್ಯವಾಗಿ ನೌಕಾಬಲದ ಉಪಯೋಗದಲ್ಲಿದೆ. ಪೆಟ್ರೋಲಿಯಂ, ವಿವಿಧ ಬಗೆಯ ಧಾನ್ಯಗಳು, ಹಣ್ಣು ತರಕಾರಿಗಳು, ಮೀನು ಮತ್ತು ಕೈಗಾರಿಕಾ ಸರಕುಗಳು ಈ ರಾಜ್ಯದಿಂದ ರಫ್ತಾಗುತ್ತವೆ.

ಕ್ಯಾಲಿಫೋರ್ನಿಯದ ಕೆಲವು ದೊಡ್ಡ ನಗರಗಳು ಇವು: ಲಾಸ್ ಏಂಜೆಲೆಸ್, ಲಾಂಗ್ ಬೀಚ್, ಸ್ಯಾನ್ ಫ್ರಾನ್ಸಿಸ್ಕೋ, ಸ್ಯಾಕ್ರಮೆಂಟೋ, ಸ್ಯಾನ್ ಬರ್ನಡೀನೋ, ಸ್ಯಾನ್ ಡಿಯೇಗೋ, ಬೇಕರ್ಸ್ ಫೀಲ್ಡ್, ಬರ್ಕ್‌ಲಿ, ಗ್ಲೆಂಡೇಲ್, ಓಕ್‌ಲೆಂಡ್, ಆಲಮೇಡ, ಪೊಮೋನ, ಪ್ಯಾಸಡೀನ ಮತ್ತು ರಿವರ್‌ಸೈಡ್. ರಾಜಧಾನಿ ಸ್ಯಾಕ್ರಮೆಂಟೋ. ಜನಸಂಖ್ಯೆ 4,07,018 (2001). ರಾಜ್ಯದ ಒಟ್ಟು ಜನಸಂಖ್ಯೆ 3,38,71,648 (2001).

ಕ್ಯಾಲಿಫೋರ್ನಿಯದ ಶಾಲೆಗಳಲ್ಲಿ ಉಚಿತಶಿಕ್ಷಣ ಸೌಲಭ್ಯವಿದೆ. ಶಿಶುವಿಹಾರ ಮತ್ತು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಪುಸ್ತಕಗಳನ್ನು ಉಚಿತವಾಗಿ ಒದಗಿಸುವ ಏರ್ಪಾಡಿದೆ.

ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯ 1858ರಲ್ಲಿ ಸ್ಥಾಪಿತವಾಯಿತು. ಇದರ ಕೇಂದ್ರ ಕಚೇರಿ ಬರ್ಕ್‌ಲಿಯಲ್ಲಿದೆ. ಏಳು ಕಡೆಗಳಲ್ಲಿ ಇದು ಶಿಕ್ಷಣ ನೀಡುತ್ತಿದೆ. ಇದು ರಾಜ್ಯದ ಅತ್ಯಂತ ದೊಡ್ಡ ವಿಶ್ವವಿದ್ಯಾಲಯ. ರಾಜ್ಯದಲ್ಲಿ ತಾಂತ್ರಿಕಶಿಕ್ಷಣ ಶಾಲೆಗಳೂ ಕುರುಡ ಮತ್ತು ಕಿವುಡರ ಶಾಲೆಗಳೂ ಕಲಾ ಶಾಲೆಗಳೂ ಇವೆ. ಪ್ಯಾಲೋ ಆಲ್ಟೋದ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ಲಾಸ್ ಏಂಜೆಲೆಸ್‌ನ ದಕ್ಷಿಣ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯಗಳು ರಾಜ್ಯದ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಅತ್ಯಂತ ದೊಡ್ಡವು. (ವಿ.ಜಿ.ಕೆ.;ಸಿ.ಎಂ.)

**ಕ್ಯಾಲ್ಗೂರ್ಲಿ:** ಪಶ್ಚಿಮ ಆಸ್ಟ್ರೇಲಿಯದ ಒಂದು ಪಟ್ಟಣ. ಕ್ಯಾಲ್ಗೂರ್ಲಿ ಜಿಲ್ಲೆಯ ಮಧ್ಯದಲ್ಲಿದೆ. ಪರ್ತ್‌ಗೆ 604 ಕಿಮೀ ಮತ್ತು ಕೂಲ್ಗಾರ್ಡಿಗೆ 38 ಕಿಮೀ ದೂರದಲ್ಲಿದೆ. ನಗರ ಪ್ರದೇಶದ ಜನಸಂಖ್ಯೆ 28,196 (2005).

ಈ ಪ್ರದೇಶದಲ್ಲಿ 1887–88ರಲ್ಲಿ ಚಿನ್ನ ಪತ್ತೆಯಾಯಿತು. 1892–94ರಲ್ಲಿ ಚಿನ್ನದ ಆಸೆಯಿಂದ ಜನ ಇಲ್ಲಿಗೆ ಧಾವಿಸಿದರು. 1900ರ ವೇಳೆಗೆ ಇಲ್ಲಿಯ ಜನಸಂಖ್ಯೆ 30,000ಕ್ಕೆ ಏರಿತು. ಅಲ್ಲಿಂದೀಚೆಗೆ ಇದರ ಜನಸಂಖ್ಯೆ ಗಣಿ ಉದ್ಯಮದ ಏರಿಳಿತಗಳಿಗೆ ಅನುಗುಣವಾಗಿ ವ್ಯತ್ಯಾಸಗೊಂಡಿದೆ. ಇಲ್ಲಿಯದು ಒಣವಾಯುಗುಣ. ವಾರ್ಷಿಕ ಸರಾಸರಿ ಮಳೆ ಕಡಿಮೆ. ನೀರಿನ ಅಭಾವ ಇಲ್ಲಿನ ಒಂದು ದೊಡ್ಡ ತೊಂದರೆ. ಪರ್ತ್‌ಗೆ 24 ಕಿಮೀ ಪೂರ್ವದಲ್ಲಿ ಹೆಲೆನ ನದಿಯ ಮೇಲಿರುವ ಮುಂಡರಿಂಗ್ ಅಣೆಕಟ್ಟಿಯಿಂದ ಇಲ್ಲಿಗೆ ನೀರು ಸರಬರಾಜು ಮಾಡಲಾಗುತ್ತದೆ. ಕಾಲ್ಗೂರ್ಲಿಯಲ್ಲಿ ಗಣಿಉದ್ಯಮದ ಆರಂಭಕಾಲದಲ್ಲಿ ಚಿನ್ನದ ಉತ್ಪಾದನೆ ತೀವ್ರವಾಗಿ ಮೇಲೇರಿ. 1903 ರಿಂದ ಅದು ಇಳಿಮುಖವಾಗಿ 1920–29ರಲ್ಲಿ ತುಂಬ ಕ್ಷೀಣಿಸಿತ್ತು. ಅಲ್ಲಿಂದೀಚೆಗೆ ಚಿನ್ನದ ಬೆಲೆ ಏರಿರುವುದರಿಂದಲೂ ಆಧುನಿಕ ಗಣಿಗಾರಿಕೆ ವಿಧಾನಗಳ ಅನುಷ್ಠಾನದಿಂದಲೂ ಉದ್ಯಮ ಸ್ಥಾಯಿಕೃತವಾಗಿದೆ. ಇಲ್ಲೊಂದು ಜಿಲ್ಲಾ ಆಸ್ಪತ್ರೆಯೂ ಗಣಿ ಶಾಲೆಯೂ ಇವೆ. (ಎಂ.ಎಸ್.)

**ಕ್ಯೂಬ:** ವೆಸ್ಟ್ ಇಂಡೀಸಿನ ಗ್ರೇಟರ್ ಆಂಟಿಲಿಸ್ ದ್ವೀಪಗಳ ಪೈಕಿ ಅತ್ಯಂತ ದೊಡ್ಡದಾದ ಹಾಗೂ ಹೆಚ್ಚಿನ ಜನಸಂಖ್ಯೆಯುಳ್ಳ ದ್ವೀಪ ರಾಷ್ಟ್ರ. ಅಮೆರಿಕ ಸಂಯುಕ್ತಸಂಸ್ಥಾನದ ಫ್ಲೋರಿಡಕ್ಕೆ ದಕ್ಷಿಣದಲ್ಲಿರುವ ಈ ದ್ವೀಪದ ಉದ್ದ ಪೂರ್ವ–ಪಶ್ಚಿಮವಾಗಿ 1193 ಕಿಮೀ. ಇದರ ಅಗಲ 35 ಕಿಮೀ ಗಳಿಂದ 198 ಕಿಮೀ ವರೆಗೆ ವ್ಯತ್ಯಾಸವಾಗುತ್ತದೆ. ತೀರದ ಬಳಿಯ ಈಸ್ಲಾ ದ ಪಿನೋಸ್ ಮತ್ತು ಸು. 1,600 ಕಿರುದ್ವೀಪಗಳೂ ಸೇರಿ ಇದರ ವಿಸ್ತೀರ್ಣ 1,10,922 ಚ.ಕಿಮೀ. ಜನಸಂಖ್ಯೆ 11,346,700 (2001). ಉ.ಅ. $19^0 49'$–$23^0 15'$ ಮತ್ತು ಪ.ರೇ.$74^0 8'$ ಮತ್ತು $84^0 57'$ ನಡುವೆ, ಮೆಕ್ಸಿಕೊ ಕೊಲ್ಲಿಯ ದ್ವಾರದ ಬಳಿ, ಉತ್ತರಕ್ಕೆ ಬಾಗಿದ ಬಿಲ್ಲಿನಂತೆ ಇರುವ ಕ್ಯೂಬದ ಸನ್ನಿವೇಶ ಮಹತ್ವದ್ದು. ವಸಾಹತು ಯುಗದ ಆದಿಕಾಲದಲ್ಲಿ ಸ್ಪೇನಿನವರು ಇದನ್ನು ಹೊಸ ಜಗತ್ತಿನ ಬೀಗದಕೈ ಎಂದು ವರ್ಣಿಸುತ್ತಿದ್ದರು. ರಾಜಕೀಯವಾಗಿ, ಆರ್ಥಿಕವಾಗಿ ಈಗಲೂ ಇದರ ಆಯಕಟ್ಟಿನ ಸ್ಥಾನ ಮಹತ್ತ್ವ ಕಡಿಮೆಯಾಗಿಲ್ಲ. ಅಮೆರಿಕ ಸಂಯುಕ್ತಸಂಸ್ಥಾನದ ಪೂರ್ವ ರಾಜ್ಯಗಳ ಜನನಿಬಿಡ ಕೇಂದ್ರಗಳಿಗೆ ಸಮೀಪದಲ್ಲಿರುವುದರಿಂದ ಕ್ಯೂಬ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಬೃಹತ್ ರಾಷ್ಟ್ರಗಳ ಗಮನ ಸೆಳೆದಿದೆ.




ಮೇಲ್ಮೈಲಕ್ಷಣ: ಕ್ಯೂಬ ಬಹುತೇಕ ವಿಶಾಲ ಕಣಿವೆಗಳಿಂದ ಕೂಡಿದ ನಾಡು. ಒಟ್ಟು ವಿಸ್ತೀರ್ಣದ ಕಾಲುಭಾಗ ಪರ್ವತಪ್ರದೇಶ. ದೇಶದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಇದು ಹಬ್ಬಿದೆ. ಪರ್ವತಶ್ರೇಣಿಗಳ ನಡುವೆ ವಿಶಾಲವಾದ ಮೈದಾನಗಳಿವೆ. ಕೃಷಿ ಹಾಗೂ ಸಾರಿಗೆ ಬೆಳವಣಿಗೆ ದೃಷ್ಟಿಗಳಿಂದ ಈ ಮೈದಾನಗಳು ಅನುಕೂಲವಾಗಿವೆ.

ಕ್ಯೂಬದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 98 ಮೀ. ಸಿಯೆರಾ ಮೇಸ್ತ್ರ ಶ್ರೇಣಿಯ ಪಿಕೋ ಟರ್ಕ್ವಿನೊ ಅತ್ಯುನ್ನತ ಶಿಖರ (1975 ಮೀ). ಆಗ್ನೇಯ ತುದಿಯ ಪರ್ವತಪ್ರದೇಶದ ಕೆಲವು ಭಾಗಗಳ ಗರಿಷ್ಠ ಎತ್ತರ 600 ಮೀ ಗಿಂತ ಹೆಚ್ಚು. ಕಾಮಾಗ್ವೆಯಿಯ ಬೆಟ್ಟಗಳ ಗರಿಷ್ಠ ಎತ್ತರ ಸು. 3000 ಮೀ. ದಕ್ಷಿಣ ಲಾಸ್ ವಿಲಾಸ್‌ನ ಟ್ರಿನಿಡಾಡ್ ಪರ್ವತಗಳ ಅತ್ಯುನ್ನತ ಶಿಖರ 1141 ಮೀ. ಉತ್ತರ ತೀರದ ಬಳಿಯ ಪೀನಾರ್ ದೆಲ್ ರೀಯೊ ಪ್ರದೇಶದಲ್ಲಿ ಅತ್ಯಂತ ಎತ್ತರದ ಸ್ಥಳ 717 ಮೀ.

ಕ್ಯೂಬದಲ್ಲಿ 200ಕ್ಕೂ ಹೆಚ್ಚು ನದಿಗಳಿವೆ. ಇವುಗಳಲ್ಲಿ ಬಹುತೇಕ ನದಿಗಳು ಉತ್ತರಕ್ಕೂ ದಕ್ಷಿಣಕ್ಕೂ ಹರಿಯುತ್ತವೆ. ಕೆಲವು ನದಿಗಳ ಅಳಿವೆಗಳು ಆಳವಾಗಿಯೂ ಅಗಲವಾಗಿಯೂ ಇರುವುದರಿಂದ ನೌಕಾಸಂಚಾರಕ್ಕೆ ಅನುಕೂಲಕರವಾಗಿವೆ. ಕ್ಯೂಬ ದ್ವೀಪದ ಅಗಲ ಕಿರಿದಾದ್ದರಿಂದ ಬಹುತೇಕ ನದಿಗಳು ಮೊಟಕಾಗಿವೆ. ಅತ್ಯಂತ ಉದ್ದದ ನದಿ ಕಾಟೊ (248 ಕಿಮೀ). ಪಶ್ಚಿಮ ಓರಿಯೆಂಟೆಯ ಅಗಲವಾದ ಮೈದಾನದಲ್ಲಿ ಸಿಯೆರಾ ಮೇಸ್ತ್ರಕ್ಕೆ ಸಮಾನಾಂತರದಲ್ಲಿ ಇದು ಹರಿಯುತ್ತದೆ.

ಕ್ಯೂಬದ ಕಡಲ ಕಿನಾರೆಯ ಉದ್ದ ಸು. 3520 ಕಿಮೀ. ಇದರ ಉದ್ದಕ್ಕೂ ಅನೇಕ ಸರ್ವಋತು ಬಂದರುಗಳಿವೆ.

ಕ್ಯೂಬವನ್ನು ಅದರ ಮೇಲ್ಮೈ ಲಕ್ಷಣಗಳಿಗೆ ಅನುಗುಣವಾಗಿ ನಾಲ್ಕು ಮುಖ್ಯ ಭೌಗೋಳಿಕ ಪ್ರದೇಶಗಳಾಗಿ ವಿಂಗಡಿಸಬಹುದು: 1 ಪಶ್ಚಿಮದ ಮೂರು ಪ್ರಾಂತ್ಯಗಳನ್ನೊಳಗೊಂಡ ಆಕ್ಸಿಡೆಂಟ್; 2 ಕೇಂದ್ರ ಪ್ರಾಂತ್ಯದ ಬಹು ಭಾಗವನ್ನಾವರಿಸಿರುವ ಲಾಸ್ ವಿಲಾಸ್; 3 ಕಾಮಾಗ್ವೆಯಿ ಮತ್ತು ಓರಿಯೆಂಟೆ ಪ್ರಾಂತ್ಯದ ವಾಯವ್ಯಭಾಗ; 4 ಓರಿಯೆಂಟೆಯ ಉಳಿದೆಲ್ಲ ಭಾಗ.

ವಾಯುಗುಣ: ಕ್ಯೂಬದ್ದು ಸಾಮಾನ್ಯವಾಗಿ ಸಾಗರಿಕ ಉಪೋಷ್ಣವಲಯ ವಾಯುಗುಣ. ಕ್ಯೂಬದ ಎಲ್ಲ ಪ್ರದೇಶಗಳು ಸಮುದ್ರದ ಸಮೀಪದಲ್ಲಿರುವುದರಿಂದ ಅದು ಸಮುದ್ರದ ಪ್ರಭಾವಕ್ಕೆ ಒಳಗಾಗಿದೆ. ಜನವರಿಯಲ್ಲಿ ಸರಾಸರಿ ಉಷ್ಣತೆ $20^0$ ಸೆ. ಜುಲೈಯಲ್ಲಿ $28^0$ ಸೆ. ಅಲ್ಲಿ $31^0$ ಸೆ. ಗೂ ಹೆಚ್ಚಿನ ಗರಿಷ್ಠ ಉಷ್ಣತೆ ಕನಿಷ್ಠ ಬರ್ಫ ಬಿಂದುವಿಗಿಂತ ಕೆಳಕ್ಕೆ ಇಳಿಯುವುದುಂಟು. ವರ್ಷವೆಲ್ಲ ಬೀಸುವ ವಾಣಿಜ್ಯಮಾರುತಗಳಿಂದ ತೀರಪ್ರದೇಶ ಹೆಚ್ಚು ತಂಪಾಗಿರುತ್ತದೆ. ಈ ಮಾರುತಗಳು ಚಳಿಗಾಲದಲ್ಲಿ ಈಶಾನ್ಯದಿಂದಲೂ ಬೇಸಗೆಯಲ್ಲಿ ಪೂರ್ವ–ಆಗ್ನೇಯಗಳಿಂದಲೂ ಬೀಸುತ್ತವೆ. ಅಪರೂಪವಾಗಿ ಅಮೆರಿಕ ಸಂಯುಕ್ತಸಂಸ್ಥಾನದ ಖಂಡಪ್ರದೇಶದಿಂದ ಬೀಸುವ ಚಳಿಗಾಳಿಯ ಪ್ರಭಾವಕ್ಕೆ ಉತ್ತರ ತೀರಪ್ರದೇಶ ಒಳಗಾಗುವುದುಂಟು. ಕ್ಯೂಬದಲ್ಲಿ ಮಳೆ ಅಧಿಕ; ವಾರ್ಷಿಕ ಸರಾಸರಿ 137 ಸೆಂಮೀ. ಪೀನ್ ದೆಲ್ ರೀಯೊ ಪರ್ವತಭಾಗದಲ್ಲಿ ಗರಿಷ್ಠ ಮಳೆಯಾಗುತ್ತದೆ (165 ಸೆಂಮೀ). ಓರಿಯೆಂಟೆಯ ದಕ್ಷಿಣ ತೀರದಲ್ಲಿ 76 ಸೆಂಮೀ. ಗಿಂತ ಕಡಿಮೆ. ಮೇ–ನವೆಂಬರ್ ಮಳೆಗಾಲ. ವರ್ಷದ ಮಳೆಯ ಮುಕ್ಕಾಲು ಪಾಲು ಬೀಳುವುದು ಈ ಕಾಲದಲ್ಲಿ. ಕ್ಯೂಬ ಚಂಡಮಾರುತಗಳಿಗೆ ತುತ್ತಾಗುವುದುಂಟು. ಪೂರ್ವಭಾಗದಲ್ಲಿ ಇವುಗಳ ಹಾವಳಿ ಹೆಚ್ಚು. ರಭಸದಿಂದ ಬೀಸುವ ಗಾಳಿ, ಅತಿಯಾದ ಮಳೆ ಮತ್ತು ಪ್ರಬಲ ಸಮುದ್ರ ಅಲೆಯ ಹೊಡೆತಗಳಿಂದ ಹಾನಿಗೊಳಗಾಗುವುದುಂಟು.

ಸಸ್ಯ ಹಾಗೂ ಪ್ರಾಣಿಸಂಪತ್ತು: ಕ್ಯೂಬದ ಸಸ್ಯಸಂಪತ್ತು ವೈವಿಧ್ಯಮಯವಾಗಿದೆ. ವೆಸ್ಟ್ ಇಂಡೀಸ್, ದಕ್ಷಿಣ ಫ್ಲಾರಿಡ, ಮೆಕ್ಸಿಕೊ, ಮಧ್ಯ ಅಮೆರಿಕಗಳ ಪ್ರಭೇದಗಳು ಇಲ್ಲುಂಟು. ಅನೇಕ ಬಗೆಯ ಹೊಸ ಸಸ್ಯಗಳನ್ನು ಬೆಳೆಸಲಾಗುತ್ತಿದೆ. ಕಬ್ಬು, ಕಾಫಿ, ಕಕಾಮೊ, ಬಾಳೆ ಮುಂತಾದವು. ಕ್ಯೂಬದ ಫಲವತ್ತಾದ ಮೈದಾನಗಳಲ್ಲಿ ಹಲವು ಬಗೆಯ ಅಮೂಲ್ಯ ಮರಗಳಿದ್ದು ಬಹುತೇಕ ಅವನ್ನೆಲ್ಲ ಕೃಷಿಗಾಗಿ ಕಡಿಯಲಾಗಿದೆ. ಪರ್ವತಗಳ ಮೇಲೆ ಕಾಡುಗಳು ಉಳಿದುಕೊಂಡಿವೆ. ಕ್ಯೂಬದ ಕಾಲುಭಾಗವನ್ನು ಉಷ್ಣವಲಯದ ಹುಲ್ಲುಗಾವಲು ಆವರಿಸಿದೆ. ತೀರಪ್ರದೇಶದಲ್ಲಿ–ಮುಖ್ಯವಾಗಿ ದಕ್ಷಿಣದ ಕರಾವಳಿಯಲ್ಲಿ ಗುಲ್ಮವೃಕ್ಷಗಳಿವೆ.

ಕ್ಯೂಬದ ಪ್ರಾಣಿಸಂಪತ್ತೂ ಸಹ ವೈವಿಧ್ಯಮಯವಾಗಿದೆ. ಇವುಗಳಲ್ಲಿ ಕಶೇರುಕಗಳಿಗಿಂತ ಅಕಶೇರುಕಗಳು ಅಧಿಕ. ಅನೇಕ ಪ್ರಭೇದಗಳು ಸ್ಥಳೀಯವಾದವುಗಳು. ಬಾವಲಿ ಹಾಗೂ ದಂಶಕಗಳ ಹಲವು ಪ್ರಭೇದಗಳುಂಟು. ದೊಡ್ಡ ಇಲಿಗಳ ಮೂರು ಪ್ರಭೇದಗಳುಂಟು. ನದೀಮುಖಗಳಲ್ಲಿ ಕಡಲ ಹಸುಗಳಿವೆ. ಹಕ್ಕಿಗಳ 297 ಪ್ರಭೇದಗಳೂ ಉಪಪ್ರಭೇದಗಳೂ ಉಂಟು. ಇವುಗಳಲ್ಲಿ 70 ಮಾತ್ರ ದೇಶೀಯವಾದವು. ಉರಗಗಳೂ ಸ್ಥಲ ಜಲೋಭಯ ಜೀವಿಗಳೂ ವಿರಳ. ಇಲ್ಲಿನ ಬಲು ದೊಡ್ಡ ಹಲ್ಲಿ ಇಗ್ವಾನ. ಕೇಮನ್, ಕೊಕೊಡ್ರಿಲೊ ಎಂಬ ಎರಡು ಪ್ರಭೇದಗಳ ಮೊಸಳೆಗಳೂ ಸಿಹಿನೀರಿನ ಆಮೆಗಳೂ ಇವೆ. ಆದರೆ ವಿಷಸರ್ಪಗಳಿಲ್ಲ. ಸಮುದ್ರಮತ್ಸ್ಯಗಳೂ 4,000 ಮೃದ್ವಸ್ಥಿ ಜಂತುಗಳ ಪ್ರಭೇದಗಳೂ ಬಸವನಹುಳುಗಳೂ ಉಂಟು. ಕ್ಯೂಬದ ಕೀಟ ಪ್ರಪಂಚವೂ ವೈವಿಧ್ಯಮಯ. ಹಳದಿ ಜ್ವರ ಹರಡುವ ಸೊಳ್ಳೆಯನ್ನು 1902ರಲ್ಲಿ ಬಹುತೇಕ ನಿರ್ನಾಮ ಮಾಡಲಾಯಿತು.

ಆರ್ಥಿಕತೆ: 20ನೆಯ ಶತಮಾನದ ಆದಿಯಿಂದ ಕ್ಯೂಬದ ಆರ್ಥಿಕತೆ ಮುಖ್ಯವಾಗಿ ಕಬ್ಬಿನ ಬೆಳೆ ಮತ್ತು ಸಕ್ಕರೆ ತಯಾರಿಕೆಯನ್ನೇ ಆಧರಿಸಿದೆ. ಕ್ಯೂಬದಾದ್ಯಂತ ಕಬ್ಬನ್ನು ಬೆಳೆಯಲಾಗುತ್ತದೆ. ಪೂರ್ವಾರ್ಧದಲ್ಲಿ ಇದರ ಬೆಳೆ ಹೆಚ್ಚು. ಕಚ್ಚಾ ಸಕ್ಕರೆ ತಯಾರಿಸುವ 160 ಕಾರ್ಖಾನೆಗಳಿದ್ದರೂ ಅದರ ಪರಿಷ್ಕರಣಕಾರ್ಯ ಅಲ್ಲಿ ಹೆಚ್ಚಾಗಿ ನಡೆಯುತ್ತಿರಲಿಲ್ಲ. ಮೊದಮೊದಲು ಕ್ಯೂಬದ ಸಕ್ಕರೆ ಕೈಗಾರಿಕೆ ಪ್ರವರ್ಧಮಾನಕ್ಕೆ ಬಂತಾದರೂ ಅನಂತರ ಇದರಲ್ಲಿ ಪದೇ ಪದೇ ಏರಿಳಿತಗಳು ಸಂಭವಿಸಿವೆ. ಸಕ್ಕರೆ ಕೈಗಾರಿಕೆಯನ್ನು ಹಲವು ನಿಯಂತ್ರಣಗಳಿಗೆ ಒಳಪಡಿಸಲಾಗಿದೆ. ಇಲ್ಲಿನ ಇತರ ಬೆಳೆಗಳು ಹೊಗೆಸೊಪ್ಪು, ಆಹಾರಧಾನ್ಯಗಳು, ಬಾಳೆ, ಅನಾನಸ್ ಮತ್ತು ಪರಂಗಿ. ಹೊಗೆಸೊಪ್ಪನ್ನು ಚುಟ್ಟಾ ತಯಾರಿಕೆಗೆ ವಿಶೇಷವಾಗಿ ಉಪಯೋಗಿಸಲಾಗುತ್ತದೆ. ಹಲವು ಗಟ್ಟಿ ಮರಗಳನ್ನು ನಿರ್ಯಾತ ಮಾಡಲಾಗುತ್ತಿತಾದರೂ ಈಗ ಅದನ್ನು ನಿಷೇಧಿಸಲಾಗಿದೆ.

ಕ್ಯೂಬದ ಗಣಿಗಾರಿಕೆಯೂ ಮುಖ್ಯವಾದುದ್ದು. ಪಿನಾರ್ ದೇಲ್ ರೀಯೊದಲ್ಲಿ ತಾಮ್ರದ ನಿಕ್ಷೇಪಗಳಿವೆ. ಓರಿಯೆಂಟೆ ಪ್ರಾಂತ್ಯದಲ್ಲಿ ಕಡಿಮೆ ದರ್ಜೆಯ ಕಬ್ಬಿಣದ ಅದುರು ಹೆಚ್ಚಾಗಿದ್ದರೂ. ಅದನ್ನು ಅಭಿವೃದ್ಧಿಪಡಿಸಿಲ್ಲ. ಮೋವ ಕೊಲ್ಲಿ ಪ್ರದೇಶದಲ್ಲಿ ನಿಕ್ಕಲ್ ಸಿಗುತ್ತದೆ. ಗಣಿ ಕೈಗಾರಿಕೆಯನ್ನು ಬಹುತೇಕ ರಾಷ್ಟ್ರೀಕರಣಗೊಳಿಸಲಾಗಿದೆ. ಕ್ಯೂಬದಲ್ಲಿ ಕಲ್ಲಿದ್ದಲು ಇಲ್ಲ. ವಿದ್ಯುತ್ ವಿಭವವೂ ಹೆಚ್ಚಾಗಿಲ್ಲ. ಮನೆಯ ಇಂಧನ ಇದ್ದಿಲು. ಇದನ್ನು ಸೌದೆಯಿಂದ ತಯಾರಿಸಲಾಗುತ್ತದೆ. ಕಬ್ಬಿನ ಸಿಪ್ಪೆಯನ್ನು ಸಕ್ಕರೆ ಕೈಗಾರಿಕೆಯಲ್ಲಿ ಇಂಧನವಾಗಿ ಉಪಯೋಗಿಸಲಾಗುತ್ತದೆ. ಸಕ್ಕರೆಯ ಜೊತೆಗೆ ರಂ ಮತ್ತು ಕೈಗಾರಿಕಾ ಮದ್ಯ ಸಾರ ತಯಾರಾಗುವ ಇತರ ಪದಾರ್ಥಗಳು. ಕೈಗಾರಿಕಾಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಮೀನುಗಾರಿಕೆಯನ್ನು ಹೆಚ್ಚಾಗಿ ಅಭಿವೃದ್ಧಿಪಡಿಸಲು ಸಾಧ್ಯವಿದೆ.

ಸಾರಿಗೆ ಸಂಪರ್ಕ: ರೈಲುಮಾರ್ಗಗಳೂ ರಸ್ತೆಗಳೂ ಕ್ಯೂಬದ ಮುಖ್ಯ ಪಟ್ಟಣಗಳ ಮತ್ತು ಗ್ರಾಮಗಳ ನಡುವೆ ಸಂಪರ್ಕ ಕಲ್ಪಿಸಿವೆ. 4800 ಕಿಮೀ. ರೈಲುಮಾರ್ಗಗಳೂ 8300 ಕಿಮೀ ಸರ್ವಋತು ರಸ್ತೆಗಳೂ ಉಂಟು. ಕ್ಯೂಬ ಭೌಗೋಳಿಕವಾಗಿ ನೌಕಾಯಾನ ಮತ್ತು ವಾಯುಮಾರ್ಗಗಳ ನಾಭಿಯಂತಿದೆ. ಹವಾನ (ಜನಸಂಖ್ಯೆ 2 ಮಿಲಿಯನ್) ರಾಜಧಾನಿ ಹಾಗೂ ಮುಖ್ಯ ವಾಣಿಜ್ಯ ಕೇಂದ್ರ. ಕ್ಯೂಬದ ನಾಣ್ಯ ಪೇಸೋ, ಭಾಷೆ ಸ್ಪಾನಿಷ್.

ಆಡಳಿತ: 1959ರ ಕ್ರಾಂತಿಯ ಅನಂತರ ಕ್ಯೂಬದ ಆಡಳಿತವನ್ನು ಗಣರಾಜ್ಯದ ಮೂಲ ಕಾಯಿದೆಯ ಪ್ರಕಾರ ನಡೆಸಲಾಗುತ್ತಿದೆ. 20 ಮಂತ್ರಿಗಳನೊಳಗೊಂಡ ಮಂತ್ರಿಮಂಡಲದ ಸಹಾಯದಿಂದ ಪ್ರಧಾನಮಂತ್ರಿ ಆಡಳಿತ ನಡೆಸುವನು. ಪ್ರಧಾನಮಂತ್ರಿಯೇ ಅಧ್ಯಕ್ಷನನ್ನು ನೇಮಿಸುವ ವ್ಯವಸ್ಥೆ ಇದೆ. ಆಡಳಿತದ ಅನುಕೂಲಕ್ಕಾಗಿ ದೇಶವನ್ನು ಆರು ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ. (ಜಿ.ಇ.ಪಿ.)

**ಕ್ರಿಟೇಷಸ್:** ಸು. 135 ದಶಲಕ್ಷ ವರ್ಷ ಪ್ರಾಚೀನದಿಂದ ಸು. 65 ದ.ಲ. ವರ್ಷ ಪ್ರಾಚೀನದವರೆಗಿನ ಭೂವೈಜ್ಞಾನಿಕ ಕಲ್ಪದ ಮತ್ತು ಶಿಲಾಸ್ತೋಮಗಳ ಅತ್ಯಾಧುನಿಕ ವ್ಯವಸ್ಥೆಯ ಹೆಸರು. ಕ್ರಿಟೇಷಸ್ ಕಲ್ಪ ಮೀಸೋಜೋಯಿಕ್ ಯುಗದ (ಸು. 225 ದ.ಲ.ವ. ಪ್ರಾಚೀನ–ಸು. 65 ದ.ಲ.ವ. ಪ್ರಾಚೀನ; ಮಧ್ಯಜೀವಯುಗ) ಮೂರನೆಯ ಹಾಗೂ ಕೊನೆಯ ಕಲ್ಪ. ಓಮಲಿಯಸ್ ಡಿ. ಹೆಲಾಯ್ ಕ್ರಿಟೇಷಸ್ ಎಂಬ ಹೆಸರನ್ನು ಮೊದಲು ಸೂಚಿಸಿದ (1822). ಕ್ರೀಟ ಎಂದರೆ ರೋಮನ್ ಭಾಷೆಯಲ್ಲಿ ಚಾಕ್ ಎಂದು ಅರ್ಥ. ಈ ಹೆಸರು ಇಂಗ್ಲಿಷ್ ಕಡಲ್ಗಾಲುವೆಯ ಎರಡು ಕಡೆಗಳಲ್ಲಿಯೂ ಇರುವ ಕಡಿದಾದ ಬಿಳಿ ದಿಬ್ಬಗಳಲ್ಲಿ ಉತ್ಕೃಷ್ಟವಾಗಿ ರೂಪುಗೊಂಡಿರುವ ಚಾಕ್ ನಿಕ್ಷೇಪದಿಂದ ಬಂದಿದೆ. ಕ್ರಿಟೇಷಸ್ ಸ್ತೋಮವನ್ನು ಜುರಾಸಿಕ್ ಮತ್ತು ಆಧುನಿಕ ಜೀವಕಲ್ಪದ ಸ್ತೋಮಗಳಿಂದ ಮೊದಲಬಾರಿಗೆ ಬೇರ್ಪಡಿಸುದುದು ಈ ಕ್ಷೇತ್ರದಲ್ಲಿಯೇ. ಇಲ್ಲಿ ಕ್ರಿಟೇಷಸ್ ಸ್ತೋಮದ ಕೆಳಗೂ ಮೇಲೂ ಸ್ಪಷ್ಟ ಅನನುರೂಪತೆಗಳು ಇರುವುದರಿಂದ ಇದರ ಎಲ್ಲೆಗಳು ನಿಖರವಾಗಿವೆ.

ಕ್ರಿಟೇಷಸ್ ಸ್ತೋಮದ ವಿಶಿಷ್ಟ ಶಿಲೆ ಚಾಕ್ ಆಗಿದ್ದರೂ ಇದರಲ್ಲಿ ಇತರ ಶಿಲೆಗಳು ಕೂಡ ಇವೆ. ಜೇಡುಶಿಲೆ, ಮರಳುಶಿಲೆ ಮತ್ತು ಗಟ್ಟಿ ಸುಣ್ಣಶಿಲೆಗಳು ಅನೇಕ ಪ್ರದೇಶಗಳಲ್ಲಿ ಚಾಕ್‌ಗಿಂತಲೂ ಹೆಚ್ಚು ಮೊತ್ತದಲ್ಲಿವೆ. ಈ ದೃಷ್ಟಿಯಿಂದ ನೋಡಿದರೆ ಕ್ರಿಟೇಷಸ್ ಎಂಬ ಹೆಸರು ಅಸಮಂಜಸವೇ ಸರಿ. ಆದರೆ ಮತ್ತಾವ ಸ್ತೋಮದಲ್ಲೂ ಇಷ್ಟೊಂದು ಮೊತ್ತದಲ್ಲಿ ಚಾಕ್ ಇಲ್ಲದಿರುವುದರಿಂದಲೂ ಈ ಸ್ತೋಮಕ್ಕೆ ಮತ್ತಾವ ಹೆಸರನ್ನು ಸೂಚಿಸಿಲ್ಲವಾದ್ದರಿಂದಲೂ ಕ್ರಿಟೇಷಸ್ ಎಂಬ ಹೆಸರಿಗೆ ಒಮ್ಮತದ ಸಮ್ಮತಿ ದೊರೆತಿದೆ.

ಕ್ರಿಟೇಷಸ್ ಸ್ತೋಮದ ಅನುಮೋದಿತ ವಿಭಜನೆಯನ್ನು ಫ್ರಾನ್ಸ್, ಸ್ವಿಟ್ಜರ್ಲೆಂಡ್, ಇಂಗ್ಲೆಂಡ್, ಜರ್ಮನಿ, ಬೆಲ್ಜಿಯಂ, ಹಾಲೆಂಡ್ ಮತ್ತು ಡೆನ್ಮಾರ್ಕ್ ದೇಶಗಳಲ್ಲಿನ ನಿಕ್ಷೇಪಗಳ ಆಧಾರದ ಮೇಲೆ ಮಾಡಲಾಗಿದೆ.

ಪ್ರಪಂಚದಾದ್ಯಂತ ನಡೆದಿರುವ ಸಮುದ್ರಾಕ್ರಮಣ ಕ್ರಿಟೇಷಸ್ ಕಲ್ಪದ ಮಹತ್ತ್ವದ ಘಟನೆಗಳಲ್ಲಿ ಒಂದು. ಇದನ್ನು ಸಾಮಾನ್ಯವಾಗಿ ಸಿನೊಮೇನಿಯನ್ ಸಮುದ್ರಾಕ್ರಮಣ ಎನ್ನುವುದು ರೂಢಿ. ಇದು ಸಿನೊಮೇನಿಯನ್ ಕಾಲಕ್ಕಿಂತ ಮುಂಚೆಯೇ ಪ್ರಾರಂಭವಾಗಿರುವುದು ಕ್ರಿಟೇಷಸ್ ಸ್ತೋಮಗಳ ಪರಿಶೀಲನೆಯಿಂದ ಗೊತ್ತಾಗುತ್ತದೆ. ಕ್ರಿಟೇಷಸ್ ಕಲ್ಪದ ಅಂತ್ಯದಲ್ಲಿ ಲೆರಮಿಯನ್ ಭೂಚಲನೆ ಉತ್ತರ ಅಮೆರಿಕದಲ್ಲಾಯಿತು. ಗೊಂಡ್ವಾನ ಭೂಭಾಗ ಒಡೆದು ಐದು ಭಾಗಗಳಾಯಿತು. ಪ್ರಪಂಚದ ಅನೇಕ ಕಡೆಗಳಲ್ಲಿ ಈ ಎರಡು ಘಟನೆಗಳ ಕಾಲದಲ್ಲಿ ಅಗಾಧ ಮೊತ್ತದ ಶಿಲಾರಸ ಹೊರಬಂದಿದೆ. ಭಾರತದ ಡೆಕ್ಕನ್ ಟ್ರ್ಯಾಪ್ ಮತ್ತು ಅದಕ್ಕಿಂತ ಪೂರ್ವ ಆಫ್ರಿಕದ ಜ್ವಾಲಾಮುಖಿ ಶಿಲೆಗಳು ಈ ಕಾಲದವು. ಗೊಂಡ್ವಾನ ಖಂಡದ ಛಿದ್ರತೆ ಆಲ್ಪ್ಸ್ ಮತ್ತು ಹಿಮಾಲಯ ಪರ್ವತಗಳ ಉದಯಕ್ಕೆ ಕಾರಣವಾಯಿತು.

ಉತ್ತರ ಅಮೆರಿಕದಲ್ಲಿ ನಡೆದ ಕ್ರಿಟೇಷಸ್ ಕಲ್ಪದ ಸಮುದ್ರಾಕ್ರಮಣ ಭೂ ಇತಿಹಾಸದಲ್ಲೇ ಅತ್ಯಂತ ದೊಡ್ಡ ಪ್ರಮಾಣದ್ದು. ಕ್ರಿಟೇಷಸ್ ಕಲ್ಪದ ಉತ್ತರಾರ್ಧದ ಆದಿಭಾಗದಲ್ಲಿ ಸಮುದ್ರಾಕ್ರಮಣ ಮೆಕ್ಸಿಕೋ ಕೊಲ್ಲಿಯಿಂದ ಪ್ರಾರಂಭಿಸಿ ಮೊದಲು ಟೆಕ್ಸಾಸ್ ಪ್ರಾಂತ್ಯಕ್ಕೆ ವಿಸ್ತರಿಸಿತು. ಅನಂತರ ಅದು ಕಾನ್ಸಸ್, ನೆಬ್ರಾಸ್ಕ ಮತ್ತು ಕೊಲರಾಡೊ ಪ್ರಾಂತ್ಯಗಳ ಮೂಲಕ ಅಯೋವ ಪ್ರಾಂತ್ಯದವರೆಗೆ ವಿಸ್ತರಿಸಿತು. ಇದಾದ ಸ್ವಲ್ಪಕಾಲದಲ್ಲಿಯೇ ಆರ್ಕ್‌ಟಿಕ್ ಸಮುದ್ರ ರಾಕಿಪರ್ವತ ಪ್ರದೇಶಗಳಿಗೆ ನುಗ್ಗಿ ಮೊದಲಿನ ಸಮುದ್ರದೊಡನೆ ಒಂದುಗೂಡಿತು. ಅನಂತರ ಅಟ್ಲಾಂಟಿಕ್ ಸಾಗರ ನ್ಯೂಜರ್ಸಿಯಿಂದ ಟೆಕ್ಸಾಸ್‌ವರೆಗೆ ತೀರಪ್ರದೇಶವನ್ನು ಆಕ್ರಮಿಸಿತು. ಪೆಸಿಫಿಕ್ ಸಾಗರ ಸಹ ಕ್ಯಾಲಿಫೋರ್ನಿಯ, ಒರೆಗಾನ್, ವಾಷಿಂಗ್‌ಟನ್ ಮತ್ತು ಬ್ರಿಟಿಷ್ ಕೊಲಂಬಿಯ ಪ್ರಾಂತ್ಯಗಳನ್ನು ಆಕ್ರಮಿಸಿತು.

ಭಾರತದಲ್ಲಿ ಕ್ರಿಟೇಷಸ್ ಕಲ್ಪದಲ್ಲಿ ಆದಷ್ಟು ವಿವಿಧ ಘಟನೆಗಳು ಮತ್ತಾವ ಕಲ್ಪದಲ್ಲೂ ಆಗಿಲ್ಲ. ಈ ಕಾಲದ ಶಿಲೆಗಳು ಸಾಕಷ್ಟು ವ್ಯಾಪಕವಾಗಿ ಕೂಡ ನಿಕ್ಷೇಪವಾಗಿವೆ. ಅವು ಅನೇಕ ಮುಖಗಳಿಂದ ಕೂಡಿವೆ. ದೀರ್ಘಕಾಲದಿಂದ ಪರ್ಯಾಯ ದ್ವೀಪದ ಉತ್ತರದಲ್ಲಿದ್ದ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡಿದ್ದ ಶಿಲೆಗಳು ಟಿಬೆಟ್, ಉತ್ತರ ಹಿಮಾಲಯ, ಬಲೂಚಿಸ್ತಾನದ ಪೂರ್ವದಲ್ಲಿ ಪಳೆಯುಳಿಕೆಗಳ ಸಹಿತ ಸುಣ್ಣಶಿಲಾ ಮುಖವೂ ಪಶ್ಚಿಮದಲ್ಲಿ ಪಳೆಯುಳಿಕೆರಹಿತ ಮರಳುಶಿಲಾಮುಖವೂ ರೂಪುಗೊಂಡಿವೆ. ಅಲ್ಲದೆ ದೀರ್ಘಕಾಲದಿಂದ ಇದ್ದ ಟೆತಿಸ್ ಸಾಗರದ ನಿರ್ಗಮನ ಅನತಿ ದೂರದಲ್ಲಿದೆ ಎಂಬುದನ್ನೂ ಸಾಗರ ತೀರ ಉತ್ತರಕ್ಕೆ ಕ್ರಮೇಣ ಹಿಂಜರಿಯುತ್ತಿತ್ತೆಂಬುದನ್ನೂ ಸೂಚಿಸುತ್ತದೆ. ಅಷ್ಟೇ ಅಲ್ಲದೆ ಟೆತಿಸ್ ಸಾಗರದ ಒಂದು ಶಾಖೆ ಪರ್ಯಾಯದ್ವೀಪ ಭಾಗವನ್ನು ಹಂಗಾಮಿಯಾಗಿ ಸ್ವಲ್ಪಕಾಲ ಆಕ್ರಮಿಸಿತ್ತು. ಆಗ ರೂಪುಗೊಂಡ ನಿಕ್ಷೇಪಗಳು ನರ್ಮದಾನದಿಯ ಕಣಿವೆಯಲ್ಲಿ ಅನೇಕ ಕಡೆಗಳಲ್ಲಿ ಹೊರಚಾಚಿವೆ. ಬಾಗ್ ಎಂಬಲ್ಲಿ ಅವು ಅತ್ಯುತ್ಕೃಷ್ಟ ರೀತಿಯಲ್ಲಿ ರೂಪುಗೊಂಡಿರುವುದರಿಂದ ಅವುಗಳಿಗೆ ಬಾಗ್ ಪದರಗಳು ಎಂದು ಹೆಸರಾಗಿದೆ. ಪೂರ್ವತೀರದ ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದ ಅಸ್ಸಾಮಿನವರೆಗೆ ಮತ್ತೊಂದು ಸಾಗರ (ದಕ್ಷಿಣ ಸಾಗರ) ಹಂಗಾಮಿಯಾಗಿ ಆಕ್ರಮಿಸಿ ನಿಕ್ಷೇಪಗಳನ್ನು ಸಂಚಯಿಸಿ ಹಿಂಜರಿದಿದೆ. ಈ ನಿಕ್ಷೇಪಗಳು ತಿರುಚಿರಾಪಲ್ಲಿ, ವೃದ್ಧಾಚಲಂ, ಪಾಂಡಿಚೆರಿ, ರಾಜಮಹೇಂದ್ರಿ ಮತ್ತು ಅಸ್ಸಾಂ ಈ ಸ್ಥಳಗಳಲ್ಲಿ ಹೊರಬಂದಿವೆ. ಹೀಗೆ ಒಂದೇ ಕಾಲದಲ್ಲಿ ಎರಡು ಸಾಗರಗಳು ಪರ್ಯಾಯ ದ್ವೀಪವನ್ನು ಆಕ್ರಮಿಸಿ ಒಂದಕ್ಕೊಂದು ಅತಿ ಸಮೀಪದಲ್ಲಿದ್ದುವು. ಆದರೂ ಇವೆರಡು ಸಾಗರಗಳಿಗೆ ಪರಸ್ಪರ ಸಂಪರ್ಕವಿರಲಿಲ್ಲ ಎಂಬುದಕ್ಕೆ ಆಧಾರವಿದೆ. ಭಿನ್ನ ಜೀವರಾಶಿಗಳ ಅವಶೇಷಗಳು ಅವುಗಳಲ್ಲಿ ದೊರೆತಿವೆ. ಮಧ್ಯಪ್ರದೇಶದ ಅನೇಕ ಕಡೆಗಳಲ್ಲಿ ಕ್ರಿಟೇಷಸ್ ಕಲ್ಪದ ನದಿ ಅಳಿವೆಯ ನಿಕ್ಷೇಪಗಳಿವೆ. ಲೆಮಟಾ ಘಾಟಿನಲ್ಲಿ ಉತ್ತಮವಾಗಿ ರೂಪುಗೊಂಡಿರುವುದರಿಂದ ಇವಕ್ಕೆ ಲೆಮಟಾ ಪದರಗಳೆಂದು ಹೆಸರು.

ಕಾರ್ಬಾನಿಫೆರಸ್ ಕಲ್ಪದ (ಸು. 350 ದ.ಲ.ವ. ಗಳ ಪ್ರಾಚೀನದಿಂದ ಸು. 280 ದ.ಲ.ವ. ಗಳ ಪ್ರಾಚೀನದವರೆಗಿನ ಅವಧಿ) ಅಂತ್ಯ ಕಾಲದಲ್ಲಿ ರೂಪುಗೊಳ್ಳಲು ಪ್ರಾರಂಭವಾದ ಗೊಂಡ್ವಾನ ಖಂಡ ಕ್ರಿಟೇಷಸ್ ಕಲ್ಪದಲ್ಲಿ ಆಸ್ಟ್ರೇಲಿಯ, ಭಾರತ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್‌ಟಿಕ ಎಂಬ ಐದು ಭಾಗಗಳಾಗಿ ಒಡೆದು ಇವು ಬೇರೆ ಬೇರೆ ದಿಕ್ಕಿಗೆ ಚಲಿಸಲಾರಂಭಿಸಿದುವು. ಒಡೆದ ಬಿರುಕುಗಳಲ್ಲಿ ಸ್ವಲ್ಪ ಭೂಭಾಗ ಸಮುದ್ರಗಳಲ್ಲಿ ಮುಳುಗಿ ಹೋಗಿರುವುದೇ ಅಲ್ಲದೆ, ಆರ್ಷೇಯ ಕಾಲದಿಂದ ಈಚೆಗೆ ಭೂ ಇತಿಹಾಸದ ಇನ್ನಾವ ಕಾಲದಲ್ಲೂ ಆಗಿಲ್ಲದಷ್ಟು ಅತಿ ಮಹತ್ತರ ಶಿಲಾರಸ ಬಹಿಸ್ಸರಣವಾಯಿತು. ಈ ಶಿಲಾರಸವೇ ಡೆಕ್ಕನ್ ಟ್ರ್ಯಾಪ್ ಶಿಲಾವರ್ಗವಾಗಿದೆ. (ಡಿ.ಆರ್.)

**ಕ್ರಿಮಿಯ:** ಸೋವಿಯೆತ್ ಒಕ್ಕೂಟದ ರಷ್ಯ ಐರೋಪ್ಯ ಭಾಗದ ದಕ್ಷಿಣಕ್ಕಿರುವ ಪರ್ಯಾಯದ್ವೀಪ. ಇಂದು ಉಕ್ರೇನ್ ರಾಜ್ಯಕ್ಕೆ ಸೇರಿದೆ. ಇದರ ಒಟ್ಟು ವಿಸ್ತೀರ್ಣ ಸು. 26,000 ಚ.ಕಿಮೀ. ರಷ್ಯನರು ಇದನ್ನು ಕ್ರಿಮ್ ಎಂದು ಕರೆಯುವರು. ಪೆರಿಕೋಪ್ ಭೂಸಂಧಿಯಿಂದ ಇದು ಉಕ್ರೇನಿನ ಮುಖ್ಯ ಭೂಭಾಗದೊಂದಿಗೆ ಸೇರಿದೆ. ಇದರ ಪಶ್ಚಿಮ ದಕ್ಷಿಣಗಳಲ್ಲಿ ಕಪ್ಪುಸಮುದ್ರವೂ ಈಶಾನ್ಯದಲ್ಲಿ ಅಜ಼ಾಫ್ ಸಮುದ್ರವೂ ಇವೆ.

ಕ್ರಿಮಿಯ ಪರ್ಯಾಯದ್ವೀಪದಲ್ಲಿ ಮೂರು ಮುಖ್ಯ ಸ್ವಾಭಾವಿಕ ವಿಭಾಗಗಳುಂಟು. ಉತ್ತರದ ಮುಕ್ಕಾಲು ಭಾಗ ಅರೆಬೆಂಗಾಡು ಪ್ರದೇಶ. ಆಗ್ನೇಯ ಭಾಗದ ತೀರಪ್ರದೇಶದ ಟರ್ಷಿಯರಿ ಯುಗಕ್ಕೆ ಸೇರಿದ ಯೈಲ ಪರ್ವತಗಳಿಂದ ಆವೃತವಾಗಿದೆ. ಇವನ್ನು ಕ್ರಿಮಿಯನ್ ಆಲ್ಪ್ಸ್ ಎಂದೂ ಕರೆಯುವರು. ಇವುಗಳ ಎತ್ತರ 665–1665 ಮೀ. ಪೂರ್ವಭಾಗದಲ್ಲಿ ಕೆರ್ಚ್ ಪರ್ಯಾಯದ್ವೀಪದ ಸಣ್ಣಸಣ್ಣ ಪರ್ವತಗಳುಂಟು. ಯೈಲ ಪರ್ವತಗಳಿಂದ ಪರಸ್ಪರವಾಗಿ ತೀರ ವಿಭಿನ್ನವಾದ ಎರಡು ವಿಧದ ವಾಯುಗುಣಗಳು ಕಂಡುಬರುತ್ತವೆ. ಉತ್ತರದ ಬೆಂಗಾಡು ಪ್ರದೇಶದ್ದು ವೈಪರೀತ್ಯದ ವಾಯುಗುಣ. ಇಲ್ಲಿ ಮಳೆಯಾಗುವುದು ಬಹುತೇಕ ಬೇಸಗೆಯಲ್ಲಿ. ಪರ್ವತ ಪ್ರದೇಶಕ್ಕೆ ದಕ್ಷಿಣದಲ್ಲಿ ಮೆಡಿಟರೇನಿಯನ್ ವಾಯುಗುಣ ಕಂಡುಬರುತ್ತದೆ. ಉತ್ತರದಿಂದ ಬೀಸುವ ಶೀತ ಮಾರುತಕ್ಕೆ ಯೈಲ ಪರ್ವತಗಳು ತಡೆಯೊಡ್ಡುತ್ತವೆ. ದಕ್ಷಿಣ ಕ್ರಿಮಿಯ ಅನೇಕ ವಿಹಾರಸ್ಥಳಗಳಿಗೂ ಆರೋಗ್ಯಧಾಮಗಳಿಗೂ ಪ್ರಸಿದ್ಧ. ಯೈಲ ಪರ್ವತಪ್ರದೇಶದಲ್ಲಿ ಪರ್ಣಪಾತಿ ಕಾಡುಗಳುಂಟು. ಇಲ್ಲಿ ವಿಶೇಷವಾಗಿ ಓಕ್, ಬೀಚ್, ಮೇಪಲ್ ಮುಂತಾದ ಮರಗಳಿವೆ. ದಕ್ಷಿಣ ತೀರಪ್ರದೇಶದಲ್ಲಿ ಜೂನಿಪರ್ಸ್, ಮ್ಯಾಸ್ಟಿಕ್, ಸೈಪ್ರೆಸ್, ಮ್ಯಾಗ್ನೋಲಿಯ ಮುಂತಾದ ಮೆಡಿಟರೇನಿಯನ್ ಮಾದರಿಯ

ಮರಗಳಿವೆ. ಹುಲ್ಲುಗಾವಲು ವ್ಯಾಪಕವಾಗಿದೆ. ದ್ರಾಕ್ಷಿ, ಒಂದು ಮುಖ್ಯ ವಾಣಿಜ್ಯ ಬೆಳೆ. ಸೇಬು, ಪಿಯರ್ಸ್, ಚೆರಿ, ಬಾದಾಮಿ ಮುಂತಾದವನ್ನು ಹೇರಳವಾಗಿ ಬೆಳೆಯಲಾಗುತ್ತದೆ. ಹೊಗೆಸೊಪ್ಪನ್ನು ಹೆಚ್ಚಾಗಿ ಬೆಳೆಯುವರು.

ಕುರಿ ಸಾಕುವುದು, ಮಧ್ಯಕ್ರಿಮಿಯ ಪರ್ವತಪ್ರದೇಶದಲ್ಲಿ ಜನರ ಮುಖ್ಯ ಕಸಬು. ಹೆರಿಂಗ್ ಜಾತಿಯ ಮೀನುಗಳಿಗೆ ಕೆರ್ಚ್ ಪ್ರಸಿದ್ಧ. ಕೆರ್ಚ್ ಪ್ರದೇಶದಲ್ಲಿ ಕಬ್ಬಿಣದ ಅದುರು ವಿಶೇಷವಾಗಿ ಸಿಗುತ್ತದೆ. ಉತ್ತರ ಕರಾವಳಿಯಲ್ಲಿ ಬ್ರೊಮಿನ್, ಮೆಗ್ನೀಸಿಯಂ ಮುಂತಾದ ಮೂಲವಸ್ತುಗಳಿಂದ ಕೂಡಿದ ಲವಣಗಳ ನಿಕ್ಷೇಪಗಳುಂಟು. ಇಲ್ಲಿ ಅನೇಕ ರಾಸಾಯನಿಕ ಕೈಗಾರಿಕೆಗಳು ಬೆಳೆದಿವೆ.

ಸಿಂಫರಾಪಲ್ ಕ್ರಿಮಿಯದ ದೊಡ್ಡ ಕೈಗಾರಿಕಾ ಪಟ್ಟಣ ಹಾಗೂ ಆಡಳಿತ ಕೇಂದ್ರ ಸೆವಾಸ್ಟೊಪಾಲ್, ಕೆರ್ಚ್, ಫಿಯೋದೊಸಿಯ, ಯೆಫ್‌ಪಾತೋರಿಯ ಮತ್ತು ಯಾಲಟ ಇತರ ಪ್ರಮುಖ ಪಟ್ಟಣಗಳು. (ಎಚ್.ಎಸ್.ಎಚ್.)

**ಕ್ರಿಸ್ಮಸ್ ದ್ವೀಪ[1]:** ಆಸ್ಟ್ರೇಲಿಯ ಖಂಡಕ್ಕೆ ಸೇರಿರುವ ಸಣ್ಣದ್ವೀಪ. ಇದು ಹಿಂದೂ ಮಹಾಸಾಗರದಲ್ಲಿ ದ.ಅ. $10^0 30'$ ಮತ್ತು ಪೂ.ರೇ. $105^0 40'$ ಪರಿಧಿಯಲ್ಲಿ ವಿಸ್ತರಿಸಿದೆ. ಪಶ್ಚಿಮ ಆಸ್ಟ್ರೇಲಿಯದ ಪರ್ತನಿಂದ 2360 ಕಿಮೀ. ಇಂಡೋನೇಷ್ಯದ ಜಕಾರ್ತದಿಂದ 500 ಕಿಮೀ ದೂರದಲ್ಲಿ ಈ ದ್ವೀಪವಿದೆ. ಈ ದ್ವೀಪದ ಒಟ್ಟು ಭೌಗೋಳಿಕ ಪ್ರದೇಶ 135 ಚ.ಕಿಮೀ. ಜನಸಂಖ್ಯೆ 1493 (2006), ರಾಜಧಾನಿ, ಫ್ಲೈಯಿಂಗ್ ಫಿಶ್ ಕೊವ್. ಆಡಳಿತ ಭಾಷೆ ಇಂಗ್ಲಿಷ್. ಇಲ್ಲಿನ ನಾಣ್ಯ ಆಸ್ಟ್ರೇಲಿಯ ಡಾಲರ್. ಜನಸಾಂದ್ರತೆ ಪ್ರತಿ ಚ.ಕಿಮೀ.ಗೆ 11.06. ಸರ್ಕಾರ ಸ್ವತಂತ್ರ ಸಂವಿಧಾನ.

ರಿಚರ್ಡ್‌ರೋ ಎಂಬ ಬ್ರಿಟಿಷ್ ನಾವಿಕ ಈ ದ್ವೀಪವನ್ನು 1615ರಲ್ಲಿ ಗುರುತಿಸಿದ. ಇದು ಬಹು ಸಣ್ಣ ದ್ವೀಪ. ಇದರ ಉದ್ದ 18 ಕಿಮೀ ಕನಿಷ್ಠ ಅಗಲ 7 ಕಿಮೀ. ಪೆಸಿಫಿಕ್ ಸಾಗರದಲ್ಲಿನ ಕ್ರಿಸ್ಮಸ್ ದ್ವೀಪದಂತೆ ಈ ದ್ವೀಪವೂ 1888ರಲ್ಲಿ ಬ್ರಿಟನಿನ ವಶಕ್ಕೆ ಬಂತು. 1900ರಲ್ಲಿ ಸಿಂಗಪುರ ನೆಲಸುನಾಡಿಗೆ ಈ ದ್ವೀಪ ಸೇರಿತು. ಇದು ಆಸ್ಟ್ರೇಲಿಯದ ಆಡಳಿತಕ್ಕೆ 1958ರಲ್ಲಿ ಒಳಪಟ್ಟಿತು. ಕ್ಯಾಲ್ಸಿಯಂ ಫಾಸ್ಫೇಟ್ ನಿಕ್ಷೇಪಗಳು ಹೇರಳವಾಗಿವೆ. ಇಲ್ಲಿಯ ಬಹು ಜನ ಕ್ಯಾಲ್ಸಿಯಂ ಫಾಸ್ಫೇಟ್ ಗಣಿ ಕೆಲಸದಲ್ಲಿ ನಿರತರಾಗಿದ್ದಾರೆ. ಇದು ಈ ದ್ವೀಪದ ಮುಖ್ಯ ನಿರ್ಯಾತ ವಸ್ತುವಾಗಿದೆ.

ಈ ದ್ವೀಪ 138.9 ಕಿಮೀ ಉದ್ದದ ಕರಾವಳಿಯನ್ನು ಹೊಂದಿದೆ. ತಗ್ಗಾದ ಭೂಸ್ವರೂಪವನ್ನು ಹೊಂದಿರುವ ಈ ದ್ವೀಪದ ನಡುಗಡ್ಡೆ ಸು. 4572 ಮೀ ಆಳದ ಸಮುದ್ರದಲ್ಲಿ ಮುಳುಗಡೆಯಾಗಿರುವ ಶಿಖರಗಳನ್ನು ಹೊಂದಿದೆ. ದ್ವೀಪದ ಬಹುತೇಕ ಭೂ ಭಾಗದ ಪೀಠ ಸಮುದ್ರದಲ್ಲಿ 4267 ಮೀ ಮುಳುಗಡೆಯಾಗಿದ್ದು, ಉಳಿದಭಾಗ ಸರಾಸರಿ ಸಮುದ್ರ ಮಟ್ಟದಿಂದ 305 ಮೀ ಎತ್ತರವನ್ನೂ ಹೊಂದಿದೆ. ಈ ಭೂಭಾಗ ಜ್ವಾಲಾಮುಖಿಯಿಂದ ಉಂಟಾಗಿರುವಂತದು. ಕೆಲವು ಬೀಚುಗಳಲ್ಲಿ ಬೆಸಾಲ್ಟ್ ಶಿಲೆಗಳು ಹೊರಚಾಚಿರುವುದನ್ನು ಡಾಲಿಸ್ ಮತ್ತು ಡಾಲಿ ಬೀಚುಗಳಲ್ಲಿ ಕಾಣಬಹುದು.

ವಾಯುಗುಣ: ಉಷ್ಣವಲಯದ ವಾಯುಗುಣದಿಂದ ಕೂಡಿದ್ದು ಅಧಿಕ ಉಷ್ಣತೆ ಮತ್ತು ಆರ್ದ್ರತೆಗಳಲ್ಲಿದ್ದರೂ ವಾಣಿಜ್ಯಮಾರುತಗಳ ಪ್ರಭಾವದಿಂದ ಉಷ್ಣಾಂಶ ತಾಪದಾಯಕವಲ್ಲ. ಕಡಿದಾದ ಇಳಿಜಾರು ದ್ವೀಪದ ಮಧ್ಯಭಾಗದಿಂದ ತೀರದಕಡೆ ಚಾಚಿದೆ. ಸಮುದ್ರಮಟ್ಟದಿಂದ ಎತ್ತರ 361 ಮೀ ಮಾರ್‍ರೇ ಬೆಟ್ಟದಲ್ಲಿ ಕಂಡುಬರುತ್ತದೆ.

ಈ ದ್ವೀಪದ ಜನಸಂಖ್ಯೆ ಸು. 1600 (2006). ಇವರೆಲ್ಲರು ಬದುಕುತ್ತಿರುವುದು **'ವಸತಿ ಪ್ರದೇಶದಲ್ಲಿ'**. ಈ ಭಾಗ ದ್ವೀಪದ ಉತ್ತರದ ತುದಿಯಲ್ಲಿದೆ. ಜನವಸತಿ ಇರುವ ಪ್ರದೇಶಗಳೆಂದರೆ ಫ್ಲೈಯಿಂಗ್ ಫಿಶ್ ಕೊವ್ ಸಿಲ್ವರ್ ಸಿಟಿ, ಕ್ಯಾಮಪೊಂಗ್, ಪೂನ್‌ಸಾನ್ ಮತ್ತು ಡ್ರಂ ಸೈಟ್.

ಈ ದ್ವೀಪದ ವಿಶೇಷತೆಯೆಂದರೆ ಅಲ್ಲಿನ ಮೇಲ್ಮೈಲಕ್ಷಣ. ವಿಜ್ಞಾನಿಗಳಿಗೆ ಮತ್ತು ಪ್ರಕೃತಿ ಆರಾಧಕರಿಗೆ ಆಕರ್ಷಕ. ಇಲ್ಲಿನ ಕೆಲವು ವನಸ್ಪತಿ ಪ್ರಭೇದಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಆಗಾಗ್ಗೆ ರೋಗಲಕ್ಷಣಗಳು ಕಾಣಿಸುತ್ತವೆ. ಇವು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿರುವ ವನಸ್ಪತಿ ಮತ್ತು ಪ್ರಾಣಿ ಸಂಕುಲ. ಮಾನವನ ವಾಸಸ್ಥಳ ಈ ಪ್ರದೇಶಗಳಿಂದ ದೂರದಲ್ಲಿದೆ. ಹಲವು ವರ್ಷಗಳಿಂದ ಈ ದ್ವೀಪದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಲವಣಗಳು ಪ್ರಮುಖ ಆರ್ಥಿಕ ಆದಾಯ. ಕೃಷಿಕರು ಮತ್ತು ಗಣಿ ಕಾರ್ಮಿಕರ ಪಾಲುದಾರಿಕೆಯಲ್ಲಿ ಲವಣಗಣಿಗಾರಿಕೆ ಸಾಗುತ್ತಿದೆ. ಆದರೆ 1993ರಿಂದ ಈ ಉದ್ಯಮ ನಷ್ಟದಲ್ಲಿ ನಡೆಯುತ್ತಿದೆ. ಈ ಗಣಿಗಾರಿಕೆಯ ಪ್ರದೇಶ ಸು. 135 ಚ.ಕಿಮೀ ಪ್ರದೇಶದಲ್ಲಿ ವ್ಯಾಪಿಸಿದೆ. ಇದರಲ್ಲಿ ಶೇ. 65ರಷ್ಟು ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನ್ನಾಗಿ ಪರಿವರ್ತಿಸಲಾಗಿದೆ. ಇಲ್ಲಿ ಇತ್ತೀಚಿನ ಮತ್ತು ಪುರಾತನ ವೃಕ್ಷಗಳಿವೆ. (ಎಚ್.ಎನ್.)

**ಕ್ರಿಸ್ಮಸ್ ದ್ವೀಪ[2]:** ಕ್ರಿಸ್ಮಸ್ ಎಂಬ ಹೆಸರಿನ ಮತ್ತೊಂದು ದ್ವೀಪ ಪೆಸಿಫಿಕ್ ಸಾಗರದಲ್ಲಿದೆ. ಪೆಸಿಫಿಕ್ ಸಾಗರದ ಮಧ್ಯದಲ್ಲಿರುವ ಕ್ರಿಸ್ಮಸ್ ದ್ವೀಪ ಭೂಮಧ್ಯರೇಖೆಯ ಉತ್ತರಕ್ಕೆ ಹವಾಯಿ ದ್ವೀಪಗಳ ದಕ್ಷಿಣಕ್ಕೆ (ಉ.ಅ. $2^0$, ಪ.ರೇ. $157^0$) ಇದೆ. ಇಲ್ಲಿನ ಉಪ್ಪು ಸರೋವರಗಳನ್ನೂ ಸೇರಿಸಿಕೊಂಡಲ್ಲಿ ಒಟ್ಟು ದ್ವೀಪದ ವಿಸ್ತೀರ್ಣ 563 ಚ.ಕಿಮೀ. ಇದು ಪೆಸಿಫಿಕ್ ಸಾಗರದಲ್ಲಿರುವ ಹವಳ ದ್ವೀಪಗಳಲ್ಲೆಲ್ಲ ದೊಡ್ಡದು. ಜೇಮ್ಸ್ ಕುಕ್ 1777ರ ಡಿಸೆಂಬರ್‌ನಲ್ಲಿ ಇದನ್ನು ಗುರುತಿಸಿದ. ಈ ದ್ವೀಪ 1888ರಲ್ಲಿ ಗ್ರೇಟ್ ಬ್ರಿಟನ್ನಿಗೆ ಸೇರಿತು. 1919ರ ನವೆಂಬರ್‌ನಲ್ಲಿ ಗಿಲ್ಬರ್ಟ್ ಮತ್ತು ಎಲಿಸ್ ದ್ವೀಪಗಳ ವಾಸಹತುವಿನೊಂದಿಗೆ ವಿಲೀನಗೊಂಡಿತು. ಈ ದ್ವೀಪ ತನಗೆ ಸೇರಬೇಕೆಂದು ಅಮೆರಿಕ ಸಂಯುಕ್ತ ಸಂಸ್ಥಾನ ಒಂದು ಶತಮಾನದಿಂದಲೂ ಹೇಳುತ್ತಿದೆ. ಆರ್ಥಿಕ ದೃಷ್ಟಿಯಿಂದ ಈ ದ್ವೀಪಕ್ಕೆ ಯಾವ ಮಹತ್ತ್ವವೂ ಇಲ್ಲ. ಇರುವ ಮಹತ್ತ್ವವೆಲ್ಲ ಇದು ನೆಲೆಗೊಂಡಿರುವ ಸ್ಥಳದಿಂದಾಗಿದೆ. ಇಲ್ಲಿ ಗಿಲ್ಬರ್ಟ್ ದ್ವೀಪದ ಕಾರ್ಮಿಕರು ಅಪಾರವಾಗಿ ತೆಂಗನ್ನು ಬೆಳೆಯುತ್ತಿದ್ದಾರೆ. ಇತ್ತೀಚೆಗೆ ಬ್ರಿಟಿಷರು ಈ ಸ್ಥಳವನ್ನು ಪರಮಾಣು ಪರೀಕ್ಷಾಸ್ಫೋಟನೆಯ ನೆಲೆ ಮಾಡಿ ಕೊಂಡಿದ್ದಾರೆ. (ಎಚ್.ಎನ್.)

**ಕ್ರೈಸ್ತಧರ್ಮ:** ಯೇಸುಕ್ರಿಸ್ತನ ಉಪದೇಶದ ಆಧಾರದ ಮೇಲೆ ಹುಟ್ಟಿ ಬೆಳೆದು ಬಂದಿರುವ ಎಲ್ಲ ಕ್ರೈಸ್ತ ಸಿದ್ಧಾಂತಗಳಿಗೂ ಮತ ಸಂಸ್ಥೆಗಳಿಗೂ ಒಟ್ಟಾಗಿ ಅನ್ವಯವಾಗುವ ಪದವಿದು. ಈ ಧರ್ಮವನ್ನು ಅನುಸರಿಸುವವರೆಲ್ಲರನ್ನೂ ಒಟ್ಟಾಗಿ ಕ್ರೈಸ್ತರೆನ್ನಲಾಗಿದೆ. ಎರಡು ಸಾವಿರ ವರ್ಷಗಳ ಹಿಂದೆ ಪ್ಯಾಲಸ್ಟೀನ್ ದೇಶದಲ್ಲಿ ಆರಂಭವಾಗಿ ಈಗ ಪ್ರಪಂಚದಲ್ಲೆಲ್ಲ ಹಬ್ಬಿಕೊಂಡಿರುವ ಕ್ರೈಸ್ತಧರ್ಮ ಸು. 2.1 ಬಿಲಿಯನ್ ಮತಾನುಯಾಯಿಗಳನ್ನೊಳಗೊಂಡಿದೆ. ಪ್ರಪಂಚದ ಧರ್ಮಗಳಲ್ಲೊಂದಾಗಿದ್ದು ಅನೇಕ ಪಂಗಡಗಳಾಗಿ ವಿಭಾಗಿಸಲ್ಪಟ್ಟಿದ್ದು ಬೇರೆ ಬೇರೆ ಸಾಂಸ್ಕೃತಿಕ ಹಿನ್ನೆಲೆಗಳಿರುವ ಜನಾಂಗಗಳ ಮಧ್ಯೆ ಇದೆ.

(ಎ) ಕ್ರೈಸ್ತಧರ್ಮದ ಸಂಸ್ಥಾಪಕ ಯೇಸುಕ್ರಿಸ್ತ, ಆತನ ಜೀವನ, ಮರಣ, ಪುನರುತ್ಥಾನ, ಬೋಧನೆ ಮತ್ತು ದೇವರ ಪ್ರೀತಿಯನ್ನು ಪ್ರಕಟಿಸಿ ಮಾನವ ಕುಲಕ್ಕೆಲ್ಲ ಆತ ತೋರಿದ ರಕ್ಷಣಾಮಾರ್ಗ–ಈ ಅಂಶಗಳ ಮೇಲೆ ಕ್ರೈಸ್ತ ಧರ್ಮ ನಿಂತಿದೆ.

ಯೇಸುಕ್ರಿಸ್ತ ತನ್ನ ಲೋಕಸೇವೆಯನ್ನು ಆರಂಭಿಸುವಾಗ ಹನ್ನೆರಡು ಮಂದಿ ಶಿಷ್ಯರನ್ನು ಆರಿಸಿಕೊಂಡದ್ದರಲ್ಲೇ ಒಂದು ಧಾರ್ಮಿಕ ಸಂಘ ಅಥವಾ ಸಭೆಯನ್ನು ಕಟ್ಟುವ ಉದ್ದೇಶ ಆತನಿಗಿತ್ತೆಂಬುದು ಸ್ಪಷ್ಟವಾಗುತ್ತದೆ. ದೈವ ಪ್ರೀತಿ ಪ್ರಕಟನೆಯೂ ಪಾಪಿ ಮಾನವ ರಕ್ಷಣೆಯೂ ಆತನ ಮುಖ್ಯ ಉದ್ದೇಶವಾಗಿದ್ದುದರಿಂದ, ಜನ ಆತನನ್ನ ಹೆಚ್ಚಾಗಿ ಹಿಂಬಾಲಿಸುತ್ತಿದ್ದರೂ ಅವರನ್ನು ಒಂದು ಸಭೆಯಾಗಿ ಕೂಡಿಸಿ ಕ್ರಮಸೂತ್ರಗಳ ಮೂಲಕ ಸಂಘಟಿಸುವುದಕ್ಕೆ ಆತ ಹೆಚ್ಚಿನ ಗಮನ ಕೊಡಲಿಲ್ಲ. ಆದರೆ ಆತನ ಪುನರುತ್ಥಾನದ ತರುವಾಯ ಶಿಷ್ಯರು ಸುವಾರ್ತಾ ಸಂದೇಶವನ್ನು ಸಾರಿದ್ದರ ಫಲವಾಗಿ ಅನೇಕ ಮಂದಿ ಆತನ ಶಿಷ್ಯರ ಗುಂಪನ್ನು ಸೇರಿದರು. ಈ ಲೇಖನದಲ್ಲಿ ಮುಂದೆ ಧರ್ಮಸಭೆ, ಕ್ರೈಸ್ತ ಸಭೆ, ಸಭೆ, ಧಾರ್ಮಿಕ ಸಂಘ–ಈ ಮಾತುಗಳನ್ನು ಚರ್ಚು ಎಂಬ ಅರ್ಥದಲ್ಲಿ ಬಳಸಿದೆ. ಕಾಲಕ್ರಮೇಣ ಇವರನ್ನು ಕ್ರೈಸ್ತ ಸಭೆಯಾಗಿ ಸಂಘಟಿಸುವ ಅಗತ್ಯ ಸಹಜವಾಗಿ ಬಂದೊದಗಿತು. ಆದಿ ಕ್ರೈಸ್ತ ಸಭೆಯಲ್ಲಿದ್ದ ಪೀಟರ್, ಯೋಹಾನ, ಯಾಕೋಬ ಮತ್ತು ಪಾಲರೇ ಮೊದಲಾದ ಮುಂದಾಳುಗಳು ಈ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಿದರು.

(ಬಿ) ಕ್ರೈಸ್ತ ಸುವಾರ್ತೆಯನ್ನು ಭೂಮಧ್ಯ ಸಮುದ್ರದ ದೇಶಗಳಲ್ಲಿ ಪ್ರಚುರಪಡಿಸಿ ಅನೇಕ ಸಭೆಗಳನ್ನು ಸ್ಥಾಪಿಸಿ ಕ್ರೈಸ್ತಧರ್ಮದ ಚಾರಿತ್ರಿಕ ಮುನ್ನಡೆಗೆ ಬಲವಾದ ಪ್ರೇರಣೆಯನ್ನಿತ್ತು ಅದಕ್ಕಾಗಿ ಕೆಲಸ ಮಾಡಿದಾತ ಅಪೋಸಲರಲ್ಲೊಬ್ಬನಾದ ಪಾಲನೇ. ಪಾಲ್ ಕ್ರಿಸ್ತನಿಗಿಂತ ಮುಂಚೆ ಟಾರ್ಸಸ್ ಎಂಬ ಪಟ್ಟಣದಲ್ಲಿ ಹುಟ್ಟಿದ, ಉತ್ತಮ ಕುಲದ ಒಬ್ಬ ಯೆಹೂದ್ಯ; ರೋಮ್ ಸಾಮ್ರಾಜ್ಯದ ಹಕ್ಕುಳ್ಳ ನಾಗರಿಕ; ಯೆಹೂದ್ಯ ತತ್ತ್ವ ಮತ್ತು ನ್ಯಾಯ ಪ್ರಮಾಣದಲ್ಲಿ ಘನ ಪಂಡಿತನಾಗಿದ್ದ ವ್ಯಕ್ತಿ. ಆರಂಭದಲ್ಲಿ ಕ್ರೈಸ್ತರನ್ನು ನಾನಾ ವಿಧವಾಗಿ ಹಿಂಸೆಗೆ ಗುರಿ ಪಡಿಸಿದರೂ ಕೊನೆಗೆ ತಾನೇ ಯೇಸುಕ್ರಿಸ್ತನ ದರ್ಶನದಿಂದ ಆತನ ಶಿಷ್ಯನಾದವ. ಆಮೇಲೆ ಈ ಶ್ರೇಷ್ಠ ಭಕ್ತ ತನ್ನ ಸಂಪೂರ್ಣ ಜೀವನವನ್ನೇ ಯೇಸುಕ್ರಿಸ್ತನ ಸುವಾರ್ತೆಯನ್ನು ಸಾರುವ ಸೇವೆಗೆ ಮೀಸಲಾಗಿಟ್ಟು ಸುಮಾರು ಮೂವತ್ತು ವರ್ಷಗಳ ಸೇವಾ ಕಾಲದಲ್ಲಿ ಬಹು ಕಷ್ಟ ನಷ್ಟಗಳಿಗೊಳಗಾಗಿ ಅನೇಕ ಸಭೆಗಳನ್ನು ಸ್ಥಾಪಿಸಿದ. ಕ್ರಿಸ್ತಶಕ ಸು. 64ರಲ್ಲಿ ಈತ ಹುತಾತ್ಮನಾದ ಎಂಬ ಪ್ರತೀತಿಯಿದೆ. ಪಾಲನ ತತ್ತ್ವನಿರೂಪಣಾ ರೀತಿ, ಬೋಧನಾ ಕ್ರಮ, ಸಂಘಟನಾಶಕ್ತಿ ಮತ್ತು ಸುವಾರ್ತಾಸೇವೆ–ಇವುಗಳಿಲ್ಲದಿದ್ದರೆ ಕ್ರೈಸ್ತ ಧರ್ಮಯಹೂದ್ಯರಲ್ಲಿ ಒಂದು ಪಂಗಡದ ಮತವಾಗಿ ಉಳಿಯಬಹುದಿತ್ತೇ ಹೊರತು ಸಾರ್ವತ್ರಿಕ ಧರ್ಮವಾಗುತ್ತಿರಲಿಲ್ಲ.

ಯೇಸುಕ್ರಿಸ್ತ ಯಹೂದ್ಯರ ನಿರೀಕ್ಷೆಯನ್ನು ಸಂಪೂರ್ಣಗೊಳಿಸಿದ ಬರೇ ಮೆಸ್ಸೈಯ (ಉದ್ಧಾರಕ) ಮಾತ್ರವಲ್ಲ. ಪುನರುತ್ಥಾನದ ಕರ್ತನೂ ಹೌದು. ಕ್ರೈಸ್ತ ಸಂದೇಶದ ಕೇಂದ್ರಸ್ಥಾನ ಯೇಸುಕ್ರಿಸ್ತನ ಮರಣದಲ್ಲಿದೆ. ಈ ಮರಣ ಮಾನವರ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ದೇವರು ತಾನೇ ಕೈಗೊಂಡ ಮಾರ್ಗ. ಯೇಸುಕ್ರಿಸ್ತ ಯಹೂದ್ಯರ ನ್ಯಾಯಪ್ರಮಾಣವನ್ನು ಸಂಪೂರ್ಣಗೊಳಿಸಿದ್ದರಿಂದ ಇನ್ನು ಮುಂದೆ ಕರ್ಮಮಾರ್ಗದ ಅಗತ್ಯವಿಲ್ಲ. ಕೇವಲ ಕೃಪೆ ಹಾಗೂ ನಂಬಿಕೆಯಿಂದಲೇ ರಕ್ಷಣೆ ದೊರಕುವ ಸಾಧ್ಯತೆ ಇದೆ. ಕ್ರಿಸ್ತ ಮಾನವಕುಲದ ಪರವಾಗಿ ಮರಣ ಹೊಂದಿದ್ದರಿಂದ ಆತನ ಮರಣವನ್ನು ಪ್ರಾಯಶ್ಚಿತ್ತ ಯಜ್ಞವೆಂಬುದಾಗಿ

ತಿಳಿದುಕೊಳ್ಳತಕ್ಕದ್ದು. ಇದು ಪಾಲನ ಬೋಧನೆಯ ಸಾರಾಂಶ. ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತ ನಿಯಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟ. ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತ ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ. ಇಂಥ ಸುವಾರ್ತಾ ಸಂದೇಶವನ್ನೂ ಬೋಧನೆಯನ್ನೂ ಬರಿಯ ತಾತ್ತ್ವಿಕ ದೃಷ್ಟಿಯಿಂದ ಬೋಧಿಸುವುದು ಮಾತ್ರ ಪಾಲನ ಉದ್ದೇಶವಾಗಿರಲಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಕ್ರೈಸ್ತ ಸಭೆಗಳನ್ನು ಸ್ಥಾಪಿಸಿ ಯೋಗ್ಯ ಆಡಳಿತ ಕ್ರಮಗಳ ಮೂಲಕ ಅವನ್ನು ಸಂಘಟಿಸಿದ್ದರಿಂದ ಕ್ರೈಸ್ತ ಧರ್ಮ ರೋಮ್ ಸಾಮ್ರಾಜ್ಯದಲ್ಲಿ ಬಲವಾಗಿ ಬೇರೂರಲೂ ಹಬ್ಬಲೂ ಸಾಧ್ಯವಾಯಿತು. (ಸಿ)ಆದಿ ಕ್ರೈಸ್ತ ಸಭೆಯನ್ನು ಕಟ್ಟುವ ಕೆಲಸದಲ್ಲಿ ಪಾಲನಂತೆ ಇತರರೂ ನೆರವಾಗಿದ್ದರು. ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಮುಂದಾಳುವಾಗಿದ್ದ ಸಿಮೋನ್ ಪೀಟರ್ ಕೂಡ ಇದಕ್ಕಾಗಿ ಹೆಚ್ಚಿನ ಕೆಲಸ ಮಾಡಿದ. ಕ್ರೈಸ್ತಧರ್ಮವನ್ನು ಯಹೂದ್ಯರ ಮಧ್ಯದಲ್ಲಿ ಸ್ಥಾಪಿಸಲು ಮತ್ತು ಯಹೂದ್ಯರ ನ್ಯಾಯಪ್ರಮಾಣಕ್ಕೆ ಕ್ರೈಸ್ತಧರ್ಮ ನಿರೂಪಣೆಯಲ್ಲಿ ತಕ್ಕ ಸ್ಥಾನವನ್ನು ಕೊಡಲು ಪೀಟರ್ ಹೆಚ್ಚಿನ ಪ್ರಯತ್ನ ಮಾಡಿದರೂ ಯಹೂದ್ಯರಲ್ಲದವರಿಗೆ ಕ್ರೈಸ್ತ ಸಂದೇಶವನ್ನು ಸಾರುವುದಕ್ಕೆ ಆತ ಅಡ್ಡಿ ಮಾಡಲಿಲ್ಲ. ಯೇಸುಕ್ರಿಸ್ತನ ಪುನರುತ್ಥಾನದ ಅನಂತರ ಸುವಾರ್ತೆಯನ್ನು ಜನರಲ್ಲಿ ಹರಡಿ, ಸಾವಿರಾರು ಮಂದಿ ಕ್ರೈಸ್ತ ಸಭೆಯಲ್ಲಿ ಸೇರಿಕೊಳ್ಳುವಂತೆ ಮಾಡಿದವರಲ್ಲಿ ಮುಂದಾಳು ಪೀಟರನೇ. ಇದನ್ನರಿತುದರಿಂದಲೇ ಯೇಸು ಪ್ರಭು ಪೀಟರನೆಂಬ ಬುನಾದಿಯ ಮೇಲೆ(ಪೀಟರ ಎಂದರೆ ಕಲ್ಲುಬಂಡೆ ಎಂಬ ಅರ್ಥವೂ ಇದೆ) ತನ್ನ ಸಭೆಯನ್ನು ಕಟ್ಟುವುದಾಗಿ ಹೇಳಿದ.

ರೋಮ್ ಸಾಮ್ರಾಜ್ಯದ ಅರಸನಾದ ಕಾನ್‌ಸ್ಟಂಟೈನ್ ಎಂಬಾತ 312ರಲ್ಲಿ ಕ್ರೈಸ್ತ ಧರ್ಮ ರೋಮ್ ಸಾಮ್ರಾಜ್ಯದ ಅಧಿಕೃತ ಧರ್ಮವೆಂದು ಸಾರಿದ್ದು ಈ ಧರ್ಮದ ಮುನ್ನಡೆಯಲ್ಲಿ ಬಹು ದೊಡ್ಡ ಮೈಲಿಗಲ್ಲು. ಇದರ ಫಲವಾಗಿ ಹೆಚ್ಚು ಮಂದಿ ಕ್ರೈಸ್ತ ಧರ್ಮವನ್ನು ಅಂಗೀಕರಿಸಿದ ಕಾರಣ ಯುರೋಪ್ ಖಂಡದ ಸಂಸ್ಕೃತಿ ಮೇಲೆ ಕ್ರೈಸ್ತ ತತ್ತ್ವಗಳು ಹೆಚ್ಚಿನ ಪ್ರಭಾವವನ್ನು ಬೀರುತ್ತ ಬಂದವು. ಅಂದಿನಿಂದ ಇಂದಿನ ವರೆಗಿನ ಶತಮಾನಗಳಲ್ಲಿ ಈ ಧರ್ಮ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಪ್ರಚುರಗೊಂಡು ಅಲ್ಲಲ್ಲಿನ ಸಾಂಸ್ಕೃತಿಕ ಹಿನ್ನೆಲೆಗಳಿಗೆ ಅನುಸಾರವಾಗಿ ಬೆಳೆಯುತ್ತ ಬಂದಿದೆ.

ಚಾರಿತ್ರಿಕ ಮತ್ತು ತಾತ್ತ್ವಿಕ ದೃಷ್ಟಿಗಳಿಂದ ಜಾಗತಿಕ ಕ್ರೈಸ್ತ ಸಭೆಯಲ್ಲಿ ಮೂರು ಮುಖ್ಯ ವಿಭಾಗಗಳಿವೆ ಎಂದು ಹೇಳಬಹುದು. (1) ರೋಮನ್ ಕೆಥೊಲಿಕ್ ಸಭೆ (2)ಪೌರಸ್ತ್ಯ ಸಾಂಪ್ರದಾಯಿಕ ಸಭೆ (ಈಸ್ಟರ್ನ್ ಆರ್ಥೊಡಾಕ್ಸ್ ಚರ್ಚು) (3) ಪ್ರಾಟೆಸ್ಟಂಟ್ ಸಭೆ. ಸುಧಾರಣೆಯ ಸ್ವಾತಂತ್ರ್ಯವಹಿಸಿರುವ ಪ್ರಾಟೆಸ್ಟಂಟ್ ಸಭೆಗಳಲ್ಲಿ ಎಷ್ಟೋ ಚಿಕ್ಕ ದೊಡ್ಡ ಶಾಖೆಗಳಿವೆ.

(1) ರೋಮನ್ ಕೆಥೊಲಿಕ್ ಸಭೆ : ರೋಮ್ ನಗರದಲ್ಲಿರುವ ಪೋಪರ ಸರ್ವಾಧಿಕಾರವನ್ನು ಒಪ್ಪುವ ಈ ಸಭೆಯಲ್ಲಿ ಸು. 1 ಬಿಲಿಯನ್‌ಗೂ ಅಧಿಕ ಸದಸ್ಯರಿದ್ದಾರೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಯುರೋಪ್ ಖಂಡದ ಜನಾಂಗಗಳ ಚರಿತ್ರೆಯ ಮೇಲೂ ಜನಜೀವನದ ಮೇಲೂ ಈ ಸಭೆ ಹೆಚ್ಚಿನ ಪರಿಣಾಮವನ್ನು ಬೀರಿದೆ. ಕೆಥೊಲಿಕ್ ಎಂಬ ಗ್ರೀಕ್ ಪದದ ಮೂಲ ಅರ್ಥ ಸಾರ್ವತ್ರಿಕ ಎಂದು.

ಯೇಸುಕ್ರಿಸ್ತನ ಮಾತೆಯಾದ ಕನ್ಯಾ ಮೇರಿಗೆ ಈ ಸಭೆಯಲ್ಲಿ ಹೆಚ್ಚಿನ ಮನ್ನಣೆಯಿದೆ.

(ii) ಪೌರಸ್ತ್ಯ ಸಾಂಪ್ರದಾಯಿಕ ಸಭೆ : ಪೌರಸ್ತ್ಯ ದೇಶಗಳಲ್ಲಿ ಅಂದರೆ ಪ್ಯಾಲಸ್ಟೈನ್, ಸಿರಿಯ, ಈಜಿಪ್ಟ್, ಇಥಿಯೋಪಿಯ, ಭಾರತ, ಗ್ರೀಸ್, ರಷ್ಯ ಮೊದಲಾದ ದೇಶಗಳಲ್ಲಿ ಹರಡಿಕೊಂಡಿರುವ ಈ ಸಭೆಗಳ (ಈಸ್ಟರ್ನ್ ಆರ್ಥೊಡಾಕ್ಸ್ ಚರ್ಚ್) ವಿಷಯವಾಗಿ ಸಾಕಷ್ಟು ತಿಳುವಳಿಕೆ ಪಡೆದುಕೊಳ್ಳುವುದು ಅನೇಕ ಸಲ ಕಷ್ಟವಾಗುತ್ತದೆ. ರೋಮ್ ನಗರದಲ್ಲಿ ಕ್ರೈಸ್ತರು ನೆಲೆಸುವ ಮುಂಚೆಯೇ ಈ ದೇಶಗಳಲ್ಲಿ ಕ್ರೈಸ್ತರೂ ಕ್ರೈಸ್ತ ಸಭೆಗಳೂ ಇದ್ದವೆಂಬುದನ್ನು ಮರೆಯಲಾಗದು. ಪೌರಸ್ತ್ಯ ಸಾಂಪ್ರದಾಯಿಕ ಸಭೆಗೆ ಸಂಬಂಧಿಸಿದಂತೆ ಸು. 150 ದಶಲಕ್ಷದ ಕ್ರೈಸ್ತರೂ 35 ಸಾವಿರ ಧರ್ಮಬೋಧಕರೂ 20 ಸಾವಿರ ಸಣ್ಣ ಪುಟ್ಟ ಸಭೆಗಳೂ ಇವೆ. ರೋಮ್ ನಗರದಲ್ಲಿ ಕೇಂದ್ರೀಕೃತವಾದ ಪಾಶ್ಚಾತ್ಯ ರೋಮನ್ ಕೆಥೊಲಿಕ್ ಸಭೆಗೂ ಈ ಸಭೆಗಳಿಗೂ ತಾತ್ತ್ವಿಕ, ಭೌಗೋಳಿಕ ಮತ್ತು ಚಾರಿತ್ರಿಕ ದೃಷ್ಟಿಗಳಿಂದ ಭಿನ್ನಾಭಿಪ್ರಾಯಗಳು ಹುಟ್ಟಿ ಕೊನೆಗೆ 1054ರಲ್ಲಿ ಇವು ರೋಮ್ ಸಭೆಯಿಂದ ಬೇರ್ಪಟ್ಟು ಅಂದಿನಿಂದ ಇಂದಿನವರೆಗೂ ಹಾಗೆಯೇ ಉಳಿದಿವೆ.

(iii). ಪ್ರಾಟೆಸ್ಟಂಟ್ ಸಭೆಗಳು : ಈ ಸಭೆಗಳ ಮೂಲಪಿತೃ ಜರ್ಮನಿ ದೇಶದಲ್ಲಿ ಕ್ರೈಸ್ತ ಮತಸುಧಾರಣೆಯನ್ನು ಆರಂಭಿಸಿದ ಮಾರ್ಟಿನ್ ಲೂಥರ್ (1443-1546). ಈತ ಬಹು ಧೈರ್ಯದಿಂದ ಸಾರಿದ ಧಾರ್ಮಿಕ ಸ್ವಾತಂತ್ರ್ಯದ ಚಳವಳಿ ಬಹುಬೇಗ ಯುರೋಪು ಖಂಡದಲ್ಲಿ ಮಾತ್ರವಲ್ಲದೆ, ಇತರ ದೇಶಗಳಲ್ಲೂ ಹರಡಿತು. ಲೂಥರ್ ಮೊದಲು ರೋಮನ್ ಕೆಥೊಲಿಕ್ ಸಭೆಯಲ್ಲೇ ಸಂನ್ಯಾಸಿಯಾಗಿದ್ದು, ದೇಹದಂಡನೆಯಿಂದಲೂ ಆಳವಾದ ಧ್ಯಾನ, ಅಭ್ಯಾಸಗಳಿಂದಲೂ ಆತ್ಮಶಾಂತಿಯನ್ನು ದೊರಕಿಸಿಕೊಳ್ಳಲು ಬಹುನಿಷ್ಠೆಯಿಂದ ಪ್ರಯತ್ನಿಸುತ್ತಿದ್ದ. ಸ್ವಲ್ಪ ಸಮಯ ಜರ್ಮನಿಯ ಒಂದು ವಿಶ್ವವಿದ್ಯಾನಿಲಯ ಒಂದರಲ್ಲಿ ಮತಧರ್ಮ ಶಾಸ್ತ್ರದ ಪ್ರಾಧ್ಯಾಪಕನೂ ಆಗಿದ್ದ. ಮನಸ್ಸಿಗೆ ಶಾಂತಿ ದೊರಕದೆ ಹೆಚ್ಚಿನ ಒಳತೋಟಿಗೆ ಗುರಿಯಾಗಿ ಕಾಲಕ್ರಮೇಣ ಸತ್ಯವನ್ನು ಕಂಡುಕೊಂಡ. ದೇಹದಂಡನೆಯಿಂದ, ವೈದಿಕ ಆಚಾರಗಳಿಂದ ಅಥವಾ ಕೇವಲ ಕರ್ಮಮಾರ್ಗದಿಂದ ಶಾಂತಿ ಒದಗುವುದಿಲ್ಲ. ಅದು ದೃಢವಿಶ್ವಾಸ ಹೊಂದಿದವನಿಗೆ ಮಾತ್ರ ಯೇಸುಕ್ರಿಸ್ತನ ಮೂಲಕ ದೊರಕುವ ವರಪ್ರಸಾದವದು-ಎಂಬ ಆಳವಾದ ಅನುಭಾವ ಇವನಿಗೆ ಉಂಟಾಯಿತು. ತನ್ನ ನಂಬಿಕೆಗೆ ಆಧಾರಗಳನ್ನೀತ ಸಂತ ಆಗಸ್ಟೀನ್ ಮತ್ತು ಸಂತ ಪಾಲರಲ್ಲಿ ಕಂಡುಕೊಂಡ.

ಪ್ರಾಟೆಸ್ಟಂಟ್ ಸಭೆಗಳ ಅಸ್ತಿತ್ವಕ್ಕೆ ಕಾರಣನಾದ ಲೂಥರ್ ನಿರೂಪಿಸಿದ ಮುಖ್ಯ ಸೂತ್ರಗಳನ್ನು ಹೀಗೆ ಸಂಕ್ಷೇಪವಾಗಿ ಹೇಳಬಹುದು. ಕ್ರಿಸ್ತನ ಬೋಧನೆಗೂ ಜೀವಿತಕ್ಕೂ ಬೈಬಲ್ ಅಲ್ಲದೆ ಬೇರೆ ಯಾವ ಮೂಲವಾಗಲೀ ಆಧಾರವಾಗಲೀ ಇಲ್ಲ. ದೇವರ ವಾಕ್ಯವಾದ ಬೈಬಲ್ಲಿಗೆ ವಿರೋಧವಾಗಿ ಹೋಗುವ ಯಾವ ವಿಷಯಗಳನ್ನೂ ಸ್ವೀಕರಿಸಲಾಗದು.

ಕ್ರೈಸ್ತಧರ್ಮದ ತಿರುಳು : ಜಗತ್ತಿನಲ್ಲಿರುವ ಕ್ರೈಸ್ತಸಭೆಗಳೆಲ್ಲ ಸರ್ವಸಾಧಾರಣವಾಗಿ ಕ್ರೈಸ್ತತತ್ತ್ವದಲ್ಲಿ ಕೆಲವು ಮುಖ್ಯ ವಿಷಯಗಳನ್ನು ಐಕಮತ್ಯದಿಂದ ಸ್ವೀಕರಿಸಿದರೂ ಅವನ್ನು ನಿರೂಪಿಸುವ ರೀತಿಯಲ್ಲಿ ಅನೇಕ ವೇಳೆ ಭಿನ್ನಾಭಿಪ್ರಾಯಗಳು ಕಂಡು ಬರುತ್ತವೆ. ಆದರೂ ಬೈಬಲ್ ಗ್ರಂಥ, ವಿಶ್ವಾಸ ಪ್ರಮಾಣಗಳು, ಸಭೆಯ ಸಾಮೂಹಿಕ ಆರಾಧನೆ, ಪ್ರಪಂಚದಲ್ಲಿ ಕ್ರೈಸ್ತಸಭೆಗಿರುವ ಕರ್ತವ್ಯ ಮತ್ತು ಸ್ಥಾನ-ಇವುಗಳ ವಿಷಯದಲ್ಲಿ ಬಹುಮಟ್ಟಿನ ಸಭೆಯವರು ತಕ್ಕಮಟ್ಟಿಗೆ ಒಮ್ಮತದಿಂದಿದ್ದಾರೆಂದು ಹೇಳಬಹುದು. ಸಾಧಾರಣವಾಗಿ ಅಪೋಸಲರ ಉಪದೇಶಗಳು ಕ್ರೈಸ್ತಸಭೆಯ ನಂಬಿಕೆಗಳನ್ನು ಸಂಕ್ಷಿಪ್ತರೀತಿಯಲ್ಲಿ ನಿರೂಪಿಸುತ್ತವೆಂದು ಹೇಳಬಹುದು. ಅವುಗಳ ಸಾರಾಂಶ ಹೀಗಿದೆ:

'ವಿಶ್ವಸೃಷ್ಟಿಕರ್ತನಾದ, ಸರ್ವಶಕ್ತನಾದ, ತಂದೆಯಾದ ದೇವರನ್ನು ನಂಬುತ್ತೇನೆ. ಆತನ ಕುಮಾರನೂ ನಮ್ಮ ಪ್ರಭುವೂ ಆದ ಯೇಸುಕ್ರಿಸ್ತನನ್ನು ನಂಬುತ್ತೇನೆ. ಈತ ಪರಿಶುದ್ಧಾತ್ಮನಿಂದ ಕನ್ಯೆ ಮೇರಿಯ ಗರ್ಭದಲ್ಲಿ ಧರಿಸಲ್ಪಟ್ಟು, ಆಕೆಯಲ್ಲಿ ಹುಟ್ಟಿ ಪೋಂಟಿಯಸ್ ಪೈಲಟ್‌ನ ಕಾಲದಲ್ಲಿ ಬೆಳೆದು, ಶಿಲುಬೆಗೆ ಆಹುತಿಯಾಗಿ, ಸಮಾಧಿಹೊಂದಿ ಪಾತಾಳಕ್ಕೆ ಇಳಿದುಹೋಗಿ, ಮೂರನೆಯ ದಿನ ಎದ್ದು ಬಂದ. ಪರಲೋಕಕ್ಕೆ ಏರಿ ಹೋಗಿ ಅಲ್ಲಿ ತಂದೆಯಾದ ದೇವರ ಬಲಪಾರ್ಶ್ವದಲ್ಲಿ ಕುಳಿತುಕೊಂಡ. ಅಲ್ಲಿಂದ ತಿರುಗಿ ಬಂದು ಬದುಕಿರುವವರಿಗೂ ಸತ್ತವರಿಗೂ ನ್ಯಾಯ ತೀರ್ಪು ನಡೆಸುತ್ತಲಿದ್ದಾನೆ-ಎಂಬುದನ್ನು ನಂಬುತ್ತೇನೆ'.

'ಪರಿಶುದ್ಧಾತ್ಮರನ್ನು ನಂಬುತ್ತೇನೆ. ಒಂದೇ ಪರಿಶುದ್ಧ ಕ್ರೈಸ್ತಸಭೆಯೂ ಭಕ್ತರ ಅನ್ಯೋನ್ಯತೆಯೂ ಪಾಪದ ಪರಿಹಾರವೂ ದೇಹದ ಪುನರುತ್ಥಾನವೂ ನಿತ್ಯಜೀವವೂ ಉಂಟು ಎಂಬುದನ್ನು ನಂಬುತ್ತೇನೆ'.

ಭಾರತದಲ್ಲಿ ಕ್ರೈಸ್ತಧರ್ಮ: ಕ್ರೈಸ್ತಧರ್ಮದ ಚರಿತ್ರೆಯನ್ನು ವಿಚಾರ ಮಾಡುವಾಗ ಅದು ಭಾರತಕ್ಕೆ ಬಂದ ಬಗೆ ಮತ್ತು ಅದರ ವ್ಯಾಪ್ತಿಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯಕ. ಭರತಖಂಡದಲ್ಲಿ ಹಿಂದೂ ಧರ್ಮ ಬಹು ಪಕ್ಷೀಯ ಧರ್ಮವಾಗಿದ್ದರೂ ಆರಂಭದಿಂದಲೇ ಇತರ ಧರ್ಮಗಳಿಗೂ ಈ ದೇಶದಲ್ಲಿ ಮನ್ನಣೆ ದೊರಕುತ್ತ ಬಂದಿದೆ. ಕ್ರಿಸ್ತಶಕದ ಮೊದಲ ಶತಮಾನದಲ್ಲಿಯೇ ಇಲ್ಲಿಗೆ ಬಂದ ಕ್ರೈಸ್ತಧರ್ಮ ಕ್ರಮೇಣ ಬೇರೂರಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಜೀವನಕ್ಕೆ ಸಹಾಯ ಮಾಡುತ್ತಿದೆ ಎಂಬುದು ಇಲ್ಲಿ ಸಮಾಧಾನದ ಸಂಗತಿ.

ದಕ್ಷಿಣ ಭಾರತದಲ್ಲಿ ಕ್ರೈಸ್ತ ಧರ್ಮದ ಪ್ರಚಾರ ಕಾರ್ಯ ಮೂರೂ ಸಮುದ್ರತೀರಗಳ ರೇವುಗಳಲ್ಲಿ ಆರಂಭವಾಯಿತು. ಪಶ್ಚಿಮ ತೀರದಲ್ಲಿ ಕ್ರಾಂಗನೂರು ಮತ್ತು ಗೋವ, ಪೂರ್ವದಲ್ಲಿ ಟ್ರಾಂಕ್ವಿಬಾರ್-ಈ ಸ್ಥಳಗಳಲ್ಲಿ ಸಿರಿಯನ್, ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಮಿಷನರಿಗಳು ಸುವಾರ್ತಾ ಸೇವೆಯನ್ನು ಆರಂಭಿಸಿದುವು.

ಪಶ್ಚಿಮ ತೀರಕ್ಕೂ ಪೌರಸ್ತ್ಯ ಸಭೆಗಳಿಗೂ ಮೊದಲ ಶತಮಾನದಿಂದಲೇ ಸಂಬಂಧವಿತ್ತೆಂದು ಹೇಳಬಹುದು. ಅಪೋಸಲ ಥಾಮಸ್ ತಾನೇ ಸು. ಕ್ರಿ.ಶ 52ರಲ್ಲಿ ದಕ್ಷಿಣ ಭಾರತಕ್ಕೆ ಬಂದು ಮಲಬಾರಿನ ತೀರದಲ್ಲಿ ಹಲಕೆಲವು ಸಭೆಗಳನ್ನು ಸ್ಥಾಪಿಸಿದನೆಂದು ಕೇರಳದ ಸಿರಿಯನ್ ಕ್ರೈಸ್ತರ ಅಭಿಮತ. ಆ ಮೇಲೆ ಈ ಭಕ್ತಪೂರ್ವ ತೀರಕ್ಕೆ ಹೋಗಿ ಚೆನ್ನೈ ಬಳಿಯಲ್ಲಿ ಕೊಲ್ಲಲ್ಪಟ್ಟನೆಂಬ ಇತಿಹಾಸವಿದೆ. ಒಂದನೆಯ ಶತಮಾನದಲ್ಲೇ ಕ್ರೈಸ್ತಧರ್ಮ ಭಾರತಕ್ಕೆ ಬಂತು. ಆದರೆ ಪ್ರಚಾರಕರು ಸುವಾರ್ತಾ ಸೇವೆಗೆ ಹೆಚ್ಚಿನ ಗಮನ ಕೊಡದಿದ್ದುದರಿಂದ ಅದು ದೇಶದ ಇತರ ಭಾಗಗಳಿಗೆ ಹರಡಲಿಲ್ಲ.

ವ್ಯಾಸ್ಕೊಡಗಾಮ 1498ರಲ್ಲಿ ಕಲ್ಲಿಕೋಟೆಗೆ ಬಂದು ಮುಟ್ಟಿದ್ದು ಯುರೋಪು ಮತ್ತು ಭಾರತಗಳ ಸಂಪರ್ಕದಲ್ಲೇ ದೊಡ್ಡದೊಂದು ಮೈಲಿಗಲ್ಲು ಎಂದು ಹೇಳಬೇಕು. ಆಮೇಲೆ ಬಹು ಬೇಗನೆ ಪೋರ್ಚುಗಲ್ಲಿನಿಂದ ರೋಮನ್ ಕೆಥೊಲಿಕ್ ಪ್ರಚಾರ ತಂಡಗಳು ಮುಖ್ಯವಾಗಿ ಗೋವ, ಕೊಚ್ಚಿ ಮೊದಲಾದ ಸ್ಥಳಗಳನ್ನು ಸೇವಾ ಕೇಂದ್ರಗಳನ್ನಾಗಿ

ಮಾಡಿಕೊಂಡು ತಮ್ಮ ಕೆಲಸವನ್ನು ಆರಂಭಿಸಿದುವು. ಭಾರತದ ಅಪೋಸಲನೆಂದು ಹೆಸರು ಹೊತ್ತು ಫ್ರಾನ್ಸಿಸ್ ಜೇವಿಯರ್ ಎಂಬಾತ ಭಾರತಕ್ಕೆ ಬಂದ ಜೆಸ್ಯೂಟ್ ಪ್ರಚಾರಕರಲ್ಲಿ ಮೊದಲನೆಯವ.

ಇಂದು ಭಾರತದ ಕ್ರೈಸ್ತ ಸಭೆಯಲ್ಲಿ ಸು. 2.5 ದಶಲಕ್ಷಕ್ಕೂ ಹೆಚ್ಚಿನ ಸದಸ್ಯರಿದ್ದಾರೆ. ಭಾರತದ ಭಾಷೆಗಳ ಪ್ರಗತಿಗೆ, ಸಾಹಿತ್ಯ ರಚನೆಗೆ ಅನೇಕ ಪಾದ್ರಿಗಳು ಸ್ಫೂರ್ತಿ, ಸಹಾಯಗಳನ್ನು ನೀಡಿದ್ದಾರೆ, ನೀಡುತ್ತಿದ್ದಾರೆ. ತಮಿಳು ಭಾಷೆಯಲ್ಲಿ ಫಾದರ್ ಬೆಶಿ, ಕನ್ನಡದಲ್ಲಿ ಕಿಟ್ಟೆಲ್, ಬಂಗಾಲಿಯಲ್ಲಿ ಕ್ಯಾರಿ ಮೊದಲಾದವರು ಈ ವಿಷಯದಲ್ಲಿ ಮಾಡಿದ ಸೇವೆ ಗಮನಾರ್ಹವಾಗಿದೆ. ಅಲ್ಲದೆ ದೇಶದ ಬಡಜನ, ಸಾಮಾಜಿಕ ಆರ್ಥಿಕ ದೃಷ್ಟಿಯಿಂದ ಕೀಳ್ಮಟ್ಟದಲ್ಲಿದ್ದವರು. ಬೇರೆ ಬೇರೆ ರೀತಿಯಲ್ಲಿ ಕಷ್ಟಕ್ಕೊಳಗಾದವರು–ಇವರಿಗೆ ನಾನಾ ವಿಧವಾಗಿ ಸೇವೆ ಮಾಡುವವರ ಮೂಲಕ ಪ್ರಚಾರಸಂಸ್ಥೆಗಳು ಎಷ್ಟೋ ಸುಧಾರಣಾ ಕೆಲಸಗಳಿಗೆ ಸ್ಫೂರ್ತಿ ನೀಡಿವೆ ಮಾರ್ಗದರ್ಶನ ಮಾಡಿವೆ. ಆಸ್ಪತ್ರೆಗಳು, ಅನಾಥಾಲಯಗಳು, ಶಾಲೆಗಳು, ವಿಶ್ವವಿದ್ಯಾಲಯಗಳು, ಇನ್ನೂ ಅನೇಕ ಸೇವಾ ಕೇಂದ್ರಗಳು–ಇವುಗಳ ಮೂಲಕ ಕ್ರೈಸ್ತಧರ್ಮವನ್ನು ಪ್ರಚುರಪಡಿಸುವ ಕಾರ್ಯ ಮುಂದುವರಿಯುತ್ತಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಮತ್ತು ಅದೇ ವರ್ಷದಲ್ಲಿ (1947) ದಕ್ಷಿಣ ಭಾರತ ಸಂಘಟಿತ ಸಭೆಯ ಸ್ಥಾಪನೆಯಾದ ಮೇಲೆ ಕ್ರೈಸ್ತ ಜನ ಜೀವನದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಭಾಗವಹಿಸುವಂತಾಯಿತು. ಕ್ರೈಸ್ತಧರ್ಮ, ಪರಧರ್ಮ, ಪಾಶ್ಚಾತ್ಯ ಸಂಸ್ಕೃತಿಯನ್ನವಲಂಬಿಸಿದುದು; ದೇಶಪ್ರೇಮವನ್ನೂ ಜನಾಂಗಿಕ ಜವಾಬ್ದಾರಿಯನ್ನೂ ಅಸಡ್ಡೆ ಮಾಡುತ್ತಿದೆ–ಎಂಬಿವೇ ಮೊದಲಾದ ಆಧಾರವಿಲ್ಲದ ಅಪವಾದಗಳನ್ನು ತೆಗೆದುಹಾಕಲು ನಿರಂತರ ಪ್ರಯತ್ನನಡೆಯುತ್ತಿದೆ. ಕ್ರೈಸ್ತ ತತ್ತ್ವ ನಿರೂಪಣೆಯ ರೀತಿಯಲ್ಲಿಯೂ ಆರಾಧನಾ ಕ್ರಮಗಳಲ್ಲಿಯೂ ಭಾರತೀಯ ಸಾಂಸ್ಕೃತಿಕ ಹಿನ್ನೆಲೆಗೆ ಸಂಬಂಧಿಸಿದ ವಿಷಯಗಳನ್ನು ಉಪಯೋಗಿಸಿಕೊಳ್ಳುವ ಪ್ರಯತ್ನಗಳಾಗುತ್ತಿವೆ. ಅಲ್ಲಲ್ಲಿ ಕ್ರೈಸ್ತ ಆಶ್ರಮಗಳ ಮೂಲಕ ದೇಶೀಯ ಧಾರ್ಮಿಕ ಸಾಧನಗಳನ್ನೂ ಉಪಯೋಗಿಸಿಕೊಂಡು ಕ್ರೈಸ್ತ ಸಂದೇಶವನ್ನೂ ಸರಳ ಜೀವನವನ್ನೂ ರೂಪಿಸಲು ಸಭೆ ಮುಂದೆ ಬರುತ್ತಲಿದೆ. ಜಾತಿ ಮತ ಭೇದಗಳಿಲ್ಲದೆ ಸ್ನೇಹ, ಪ್ರೀತಿ, ಅನ್ಯೋನ್ಯತೆಗಳನ್ನು ಕ್ರಿಸ್ತನ ಸಂದೇಶದ ಆಧಾರದ ಮೇಲೆಕಟ್ಟುವ ಮನಸ್ಸು, ಜನ ಜೀವನದಲ್ಲಿ ಜವಾಬ್ದಾರಿಕೆಯಿಂದ ಭಾಗವಹಿಸುವ ಧೋರಣೆ–ಇವನ್ನು ಭಾರತದ ಸಭೆಯಲ್ಲೀಗ ಹೆಚ್ಚು ಹೆಚ್ಚಾಗಿ ಕಂಡುಕೊಳ್ಳಬಹುದು. ಒಟ್ಟಾರೆ ಹೇಳುವುದಾದರೆ ಕ್ರೈಸ್ತ ಧರ್ಮ ಭಾರತದಲ್ಲಿ ಬೇರೂರಿ ಇತರ ಧರ್ಮಗಳ ಮಧ್ಯೆ ಮನ್ನಣೆಯ ಸ್ಥಾನವನ್ನು ಗಳಿಸಿಕೊಂಡಿದೆ. (ಎಸ್.ಎ.ಕೆ.ಯು.;ಎಚ್.ಎಸ್.)

**ಕ್ರೋಮೈಟ್:** ಕ್ರೋಮಿಯಮ್ ಲೋಹದ ಏಕೈಕ ಅದಿರು. ಬಣ್ಣ ಕಂದು ಮತ್ತು ಕಪ್ಪು, ಅರೆ ಲೋಹದ ಹೊಳಪು, ಕ್ಷೀಣ ಕಾಂತತ್ವ ಇದರ ಲಾಕ್ಷಣಿಕ ಗುಣಗಳು. ನೈಸರ್ಗಿಕವಾಗಿ ರಾಶಿ ರೂಪದಲ್ಲೂ ಅಪ್ರಮುಖ ಎಣ್ಣೆ ಹರಳು ರೂಪದಲ್ಲೂ ಕಣ ರೂಪದಲ್ಲೂ ಲಭ್ಯ. ಇದರ ಶುದ್ಧ ಅದಿರು ಸಾಮಾನ್ಯವಾಗಿ ಶೇ. 50 ರಿಂದ 60 ಭಾಗ ಕ್ರೋಮಿಯಮ್ ಮತ್ತು ಶೇ. 32 ಭಾಗ ಕಬ್ಬಿಣದ ಆಕ್ಸೈಡ್‌ನ ಸಂಯೋಜನೆಯನ್ನು ಹೊಂದಿರುತ್ತದೆ. ಕ್ರೊಮೈಟ್ ಸಮಮಾಪನೀಯ ವ್ಯವಸ್ಥೆಯಲ್ಲಿ ಸ್ಫಟಿಕೀಕರಣಗೊಳ್ಳುತ್ತದೆ.

ಕ್ರೋಮೈಟ್‌ನಿಂದ ಅನೇಕ ಮಿಶ್ರಲೋಹ ಪಡೆಯಲಾಗುತ್ತದೆ. ಕಬ್ಬಿಣ, ನಿಕ್ಕಲ್, ಕೋಬಾಲ್ಟ್, ಟಂಗ್‌ಸ್ಟನ್, ಮಾಲಿಬ್ಡಿನಮ್ ಮುಂತಾದ ಲೋಹಗಳೊಂದಿಗೆ ಬೆರಸಿ ಮಿಶ್ರ ಲೋಹ ತಯಾರಿಸಲಾಗುವುದು, ಈ ಅದಿರಿನ ಉಪಯೋಗಗಳು ಕೆಲವು ಉಕ್ಕಿಗೆ ಕ್ರೋಮಿಯಮ್ ಮಿಶ್ರ ಮಾಡುವುದರಿಂದ ಅದಕ್ಕೆ ಕಾಠಿಣ್ಯ ಒದಗಿ ಕಾಂತತ್ವ ಲಭಿಸುತ್ತದೆ. ಸವೆತವನ್ನು ನಿರೋಧಿಸುತ್ತವೆ ಹಾಗೂ ಮುಕ್ಕಾಗುವುದಿಲ್ಲ. ವಿದ್ಯುದ್ವಾಹಕ ಗುಣ ಲಭಿಸುತ್ತದೆ. ಸಾಮಾನ್ಯವಾಗಿ ಕಡಿಮೆ ಕ್ರೋಮಿಯಮ್ ಇರುವ ಉಕ್ಕನ್ನು ರೈಲು ಹಳಿಗಳ ತಯಾರಿಕೆ, ಯಂತ್ರ ಭಾಗಗಳ ತಯಾರಿಕೆ, ಕಾಠಿಣ್ಯ ಬೇಡುವ ಇತರ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ. ಉಟ್ರಮ್, ಮಾಲಿಬ್ಡಿನಮ್, ಸಿಲಿಕ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಮಧ್ಯಮ ಕ್ರೋಮ್ ಉಕ್ಕನ್ನು ಸವೆತ ಮತ್ತು ಮುಕ್ಕಾಗದಿರುವುದು ಮತ್ತು ಅಧಿಕ ಕಾಠಿಣ್ಯ ಬೇಡುವ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ. ಹೆಚ್ಚು ಕ್ರೋಮಿಯಮ್ ಇರುವ ಉಕ್ಕನ್ನು ತುಕ್ಕು ನಿರೋಧಕ್ಕಾಗಿ, ಉಕ್ಕು ತಯಾರಿಸಲು, ಅಡುಗೆ ಪಾತ್ರೆ ತಯಾರಿಸಲು, ವಿಮಾನದ ಬಿಡಿ ಭಾಗಗಳು ಮತ್ತು ರೈಲು ಯಂತ್ರೋಪಕರಣ ತಯಾರಿಕೆಯಲ್ಲಿ ಬಳಸಲ್ಪಡುತ್ತವೆ. ಇದನ್ನು ಅಗ್ನಿ ನಿರೋಧಕ ವಸ್ತುವಾಗಿಯೂ ಉಪಯೋಗಿಸಲಾಗುತ್ತದೆ. ರಾಸಾಯನಿಕ ಕೈಗಾರಿಕೆ, ಚರ್ಮ ಹದ ಮಾಡಲು, ಬಣ್ಣ ಹಾಕಲು, ಗಾಜು, ಪಿಂಗಾಣಿ ಮುಂತಾದ ಉದ್ಯಮದಲ್ಲೂ ಬಳಸುವರು.

ಕ್ರೊಮೈಟ್ ಖನಿಜ ಅಲ್ಟ್ರಮೆಫಿಕ್ ಶಿಲೆಗಳಾದ ಡೂನೈಟ್, ಪೆರಿಡೋಟೈಟ್ ಮತ್ತು ಅವುಗಳ ರೂಪಾಂತರಣದಿಂದಾದ ಟಾಲ್ಕ್ ಸರ್ಪಂಟಿನೈಟ್ ಶಿಲೆಗಳಲ್ಲಿ ಸಾಮಾನ್ಯವಾಗಿ ರೂಪುಗೊಳ್ಳುತ್ತದೆ. ಎರಡು ಬಗೆಗಳಲ್ಲಿ ಈ ಖನಿಜ ಮೈದಳೆಯುತ್ತದೆ. ಕಣ ರೂಪದಲ್ಲಿ ಅಥವಾ ಸರ್ಪಂಟಿನೈಟ್ ಶಿಲೆಗಳಲ್ಲಿ ಅಲ್ಲಲ್ಲಿ ಚದುರಿದಂತೆ ದೊರೆಯುವುದು.

ಭಾರತದಲ್ಲಿ ಉತ್ಕೃಷ್ಟ ದರ್ಜೆಯ ಕ್ರೋಮೈಟ್ ಅದಿರು ಒರಿಸ್ಸದ ಕಟಕ್, ಡಂಕನಾಲ್, ಕೆಯೋಂಜಾರ್ ಜಿಲ್ಲೆಯಲ್ಲಿ, ಬಿಹಾರದ ಸಿಂಗಭೂಮ್ ಜಿಲ್ಲೆಯಲ್ಲಿ, ಮಹಾರಾಷ್ಟ್ರದ ಭಂಡಾರ, ಸಿಂಧೂದುರ್ಗ, ರತ್ನಗಿರಿ, ನಾಗಪುರ ಜಿಲ್ಲೆಯಲ್ಲಿ ದೊರೆಯುತ್ತದೆ. ಆಂಧ್ರಪ್ರದೇಶದ ಕಮ್ಮಾಮ್ ಮತ್ತು ಕೃಷ್ಣಾ ಜಿಲ್ಲೆ, ಮಣಿಪುರ, ನಾಗಲ್ಯಾಂಡ್, ಕರ್ನಾಟಕದ ಹಾಸನ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಯಲ್ಲಿ ಕ್ರೋಮೈಟ್ ನಿಕ್ಷೇಪವಿದೆ. ಭಾರತ ಕ್ರೋಮೈಟ್‌ನ್ನು ಜಪಾನ್, ಚೀನ, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಜರ್ಮನಿ, ನಾರ್ವೆ, ಸ್ವೀಡನ್ ಮುಂತಾದ ರಾಷ್ಟ್ರಗಳಿಗೆ ರಫ್ತು ಮಾಡುತ್ತದೆ. (ಬಿ.ಸಿ.ಕೆ.)

**ಕ್ರೋಷಿಯ:** ಯುರೋಪ್ ಖಂಡದ ಸ್ವತಂತ್ರ್ಯ ಗಣರಾಜ್ಯ. ಪಶ್ಚಿಮದಲ್ಲಿ ಏಡ್ರಿಯಾಟಿಕ್ ಸಮುದ್ರವನ್ನು ಪೂರ್ವ ಮತ್ತು ಆಗ್ನೇಯದಲ್ಲಿ ಬೋಸ್ನಿಯ ಮತ್ತು ಹರ್ಜೆಗೋವಿನಾವನ್ನು ಹೊಂದಿದ್ದು, ವಾಯವ್ಯ ಮತ್ತು ಉತ್ತರದಲ್ಲಿ ಸ್ಲೋವೇನಿಯ, ಈಶಾನ್ಯದಲ್ಲಿ ಹಂಗರಿ ದೇಶಗಳು, ಪೂರ್ವದಲ್ಲಿ ಸರ್ಬಿಯ ಮತ್ತು ಮಾಂಟನೀಗ್ರೊ ಕಂಡು ಬರುತ್ತವೆ. ಇದರ ಒಟ್ಟು ವಿಸ್ತೀರ್ಣ 56538 ಚ.ಕಿಮೀ. ಇದು ಪಶ್ಚಿಮ ವರ್ಜೀನಿಯಾಗಿಂತಲೂ ಚಿಕ್ಕದಾಗಿದೆ. 5,790 ಕಿಮೀ ಉದ್ದ ತೀರ ಪ್ರದೇಶವನ್ನು ಹೊಂದಿದೆ. $42^0$–$44^0$ ಉ.ಅ. ಹಾಗೂ $14^0$–$18^0$ ಪೂ.ರೇ. ನಡುವೆ ಇದೆ.




ಭೂಸ್ವರೂಪ:– ಇದು ಮೈದಾನವಾಗಿದ್ದು ಏಡ್ರಿಯಾಟಿಕ್ ಸಮುದ್ರತೀರದಲ್ಲಿ ಬೆಟ್ಟ ಗುಡ್ಡಗಳಲ್ಲಿ ದ್ವೀಪಗಳಲ್ಲಿ ಪರ್ವತಗಳನ್ನು ಒಳಗೊಂಡಿದೆ. ಇದು ಐತಿಹಾಸಿಕ ಸ್ಥಳವಾದ ಹಾಲ್ಲೇಷಿಯ, ಇಸ್ಟ್ರಿಯ ಮುಂತಾದ ದ್ವೀಪಗಳನ್ನು ಒಳಗೊಂಡಿದೆ.

ಸಾವ, ಡ್ಯಾನ್ಯೂಬ್, ದ್ರಾವ ಇಲ್ಲಿನ ಪ್ರಮುಖ ನದಿಗಳು. ಉನಾ ನದಿ ಬೊಸ್ನಿಯ ಅಂಚಿನಲ್ಲಿ ಹರಿದರೆ ದ್ರಾವ ನದಿ ಹಂಗರಿಯನ್ನು ಬೇರ್ಪಡಿಸುತ್ತದೆ.

ವಾಯುಗುಣ: ಮೆಡಿಟರೇನಿಯನ್ ಮತ್ತು ಖಂಡಾಂತರ ಮಾದರಿಯ ವಾಯುಗುಣವನ್ನು ಹೊಂದಿದೆ. ಅಧಿಕ ಉಷ್ಣಾಂಶದ ಬೇಸಗೆ, ತಂಪಾದ ಚಳಿಗಾಲವನ್ನು ಹೊಂದಿದೆ. ಬೇಸಗೆಯು ಒಣ ಅಂಶದಿಂದ ಕೂಡಿದ್ದು ತೀರ ಪ್ರದೇಶಗಳು ಬೆಚ್ಚಗಿರುತ್ತವೆ. ಮಳೆ ಸಾಧಾರಣವಾಗಿದ್ದು, ವಾರ್ಷಿಕವಾಗಿ 87 ಸೆಂಮೀ ಪಡೆಯುತ್ತದೆ.

ಸಸ್ಯ ಸಂಪತ್ತು: ಇಲ್ಲಿ ಮೈದಾನವೆ ಹೆಚ್ಚಾಗಿರುವುದರಿಂದ ಸಸ್ಯಸಂಪತ್ತು ಕಡಿಮೆ. ಆದರೆ ಬೆಟ್ಟಗುಡ್ಡ, ತೀರಪ್ರದೇಶ, ದ್ವೀಪಗಳಲ್ಲಿ, ವನೀರ್ ಓಕ್, ಹುಲ್ಲುಗಾವಲುಗಳಲ್ಲಿ ನೀಲಗಿರಿ, ಆಲೀವ್ ಮುಂತಾದ ಮರಗಳು ಕಂಡು ಬರುತ್ತವೆ.

ಇದರ ಒಟ್ಟು ಜನಸಂಖ್ಯೆ 44,95,904 (2002). ರಾಜಧಾನಿ ಜಗ್ರೇಬ್ (ಜನಸಂಖ್ಯೆ 950753) ಸ್ಪ್ಲಿಟ್, ರಿಜೇಕ್, ಓಸಿಜೇಕ್, ಝದರ್, ಲಾಬಿನ್, ಪುಲಕರ್ದಲ್‌ಜೀಮೋ, ಸಿಸಾಕ್, ಸ್ಲೋವಾನ್‌ಸ್ಕಿ ಬ್ರಾಡ್‌ಗಳಲ್ಲಿ ಜನಸಂಖ್ಯೆ ಹೆಚ್ಚು.

ಜನವರ್ಗ: ಕ್ರೊಯೆರ್ಟ್ (78.1%) ಪ್ರಮುಖ ಜನಾಂಗ. ಸರ್ಬ, ಮುಸ್ಲಿಂ, ಸ್ಲೋವಿನ್, ಹಂಗರಿಯನ್, ಇಟಾಲಿಯನ್, ಚೆಕ್, ಅಲ್ಬೆನಿಯನ್, ಮಾಂಟೇನಿಗ್ರೀನ್, ಜಿಪ್ಸ್, ಮಸಿಡೋನಿಯನ್, ಸ್ಲೊವಾಕ್ ಜನಾಂಗದವರಿದ್ದು ಅವರಲ್ಲಿ ಕ್ರೊಯೆರ್ಟ್ ಮೂಲ ಜನಾಂಗವಾಗಿದ್ದಾರೆ. ಸೆರ್ಬೊ – ಕ್ರೊಯೆಷಿನ್‌ರ ಮುಖ್ಯ ಭಾಷೆಯಾಗಿದೆ. ಅಲ್ಲದೆ ರೋಮನ್ ಕೆಥೊಲಿಕ್ ಕ್ರೊಯೆಟ್ಸ್ ಭಾಷೆ ಹೆಚ್ಚು ಬಳಕೆಯಲ್ಲಿದೆ. ಇವರು ಲಾಟಿನ್ ಬರೆಹವನ್ನು ಬಳಸಿದ್ದಾರೆ. ಪೂರ್ವ ಆರ್ಥೋಡಾಕ್ಸ್ ಸೆರ್ಬೊಗಳು ಸಿರಿಲಿಕ್ ಲಿಪಿಯನ್ನು ಬಳಸುತ್ತಾರೆ. ಇಸ್ಲಾಂ ಪ್ರಮುಖ ಧರ್ಮವಾಗಿದ್ದು ಶಿಯಾ ಮತ್ತು ಸುನ್ನಿ ಮುಸ್ಲಿಂರಲ್ಲದೆ ಕ್ರಿಶ್ಚಿಯನ್ ಧರ್ಮ ಮತ್ತೊಂದು ಪ್ರಮುಖ ಧರ್ಮವಾಗಿದೆ. ಕುನಾ ಇಲ್ಲಿನ ಹಣ.

ವ್ಯವಸಾಯ: ಮುಖ್ಯವಾಗಿ ಗೋದಿ, ಮುಸುಕಿನ ಜೋಳ, ಬೀಟ್‌ರೂಟ್, ರೈ, ಓಟ್ಸ್, ಸೋಯಾ ಅವರೆ, ತಂಬಾಕು ವಿವಿಧ ಬಗೆಯ ತರಕಾರಿಗಳನ್ನು ಉತ್ಪಾದಿಸಲಾಗುತ್ತದೆ. ಶೇ. 32 ಬಿತ್ತನೆ ಪ್ರದೇಶವಿದ್ದು ಶೇ. 33 ಪೊದೆ ಹುಲ್ಲುಗಾವಲುಗಳು ಇದೆ. ಕುದುರೆ, ಕತ್ತೆ, ಹೇಸರಗತ್ತೆ, ಕುರಿ, ಹಂದಿ, ಮೇಕೆ, ಕೋಳಿಗಳನ್ನು ಸಾಕುವರು. ಹಂದಿ ಸಾಕಣೆ ಪ್ರಮುಖ ಕಸಬಾಗಿದೆ. ಮೀನುಗಾರಿಕೆಯಿಂದ ಇದು ವಾರ್ಷಿಕವಾಗಿ 28000 ಮೆಟ್ರಿಕ್ ಟನ್ ಮೀನನ್ನು ಉತ್ಪಾದಿಸುತ್ತದೆ.

ಗಣಿಗಾರಿಕೆ: ಕಲ್ಲಿದ್ದಲು, ಪೆಟ್ರೋಲಿಯಂ, ಬಾಕ್ಸೈಟ್, ಸ್ವಲ್ಪ ಕಡಿಮೆ ಗುಣಮಟ್ಟದ ಕಬ್ಬಿಣದ ಅದಿರು, ಸುಣ್ಣಕಲ್ಲು, ಸಿಲಿಕ, ಆಭ್ರಕ, ಜೇಡಿಮಣ್ಣು, ಉಪ್ಪು ಮುಂತಾದವುಗಳನ್ನು ಉತ್ಪಾದಿಸಲಾಗುತ್ತದೆ.

ಕೈಗಾರಿಕೆ: ಬಿಯರ್, ಸ್ಪಿರಿಟ್, ಸಿಗರೇಟ್, ಕಂಬಳಿ, ಚರ್ಮೋತ್ಪನ್ನಗಳು, ಕಾಗದ, ಕಾರ್ಡ್‌ಬೋರ್ಡ್, ರಾಸಾಯನಿಕ ಗೊಬ್ಬರ, ಸಿಮೆಂಟ್, ಟ್ರಾಕ್ಟರ್, ಟ್ಯಾಂಕರ್, ಕಾರ್ಗೋ ಹಡಗು, ಯುದ್ಧದ ಹಡಗು, ವಿದ್ಯುಚ್ಛಕ್ತಿ ಮುಂತಾದವುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತದೆ.

ವ್ಯಾಪಾರ: ಆಹಾರ ವಸ್ತುಗಳು, ಪ್ರಾಣಿಗಳು, ಹಣ್ಣು, ಕಚ್ಚಾ ತೈಲ, ರಾಸಾಯನಿಕಗಳು, ಔಷಧಿ, ಕಚ್ಚಾಹತ್ತಿ, ಕಬ್ಬಿಣ, ಉಕ್ಕು, ಯಂತ್ರ, ಸಾರಿಗೆ ಉಪಕರಣ, ವಿದ್ಯುತ್ ಉಪಕರಣ, ಟೆಲಿವಿಷನ್, ಟೆಲಿಫೋನ್, ರಸ್ತೆ ಉಪಕರಣಗಳು ಮುಂತಾದವುಗಳನ್ನು ಆಮದು ಮಾಡಿಕೊಳ್ಳುವರು. ವಾರ್ಷಿಕವಾಗಿ 8383 ಮಿಲಿಯನ್ ಅಮೆರಿಕನ್ ಡಾಲರ್‌ನಷ್ಟು ಆಮದು ಮಾಡಿಕೊಳ್ಳುತ್ತಿದೆ. ಸಿದ್ಧ ಉಡುಪು, ಪಾದರಕ್ಷೆ, ಕಾಗದ, ಹಡಗುಗಳು, ಮರದ ಸಾಮಾನು, ಬಿರಡೆ, ಹಾಲಿನ ಉತ್ಪನ್ನಗಳು, ಪಾನೀಯಗಳು, ಸುಗಂಧದ್ರವ್ಯ, ಕಬ್ಬಿಣ ರಹಿತ ಖನಿಜಗಳು ಮುಂತಾದವುಗಳನ್ನು ರಫ್ತು ಮಾಡುತ್ತದೆ. ವಾರ್ಷಿಕವಾಗಿ 4541 ಮಿಲಿಯನ್ ಅಮೆರಿಕನ್ ಡಾಲರ್‌ನಷ್ಟು ವಸ್ತುಗಳು ರಫ್ತಾಗುತ್ತವೆ. ಆಸ್ಟ್ರೇಲಿಯ, ಬೆಲ್ಜಿಯಂ, ಬೊಸ್ನಿಯಾ, ಹರ್ಜೆಗೋವಿನ, ಫ್ರಾನ್ಸ್, ಜರ್ಮನಿ, ಇಟಲಿ, ಇರಾನ್, ಇರಾಕ್, ಲಿಬಿಯ, ನೆದರ್ಲೆಂಡ್ಸ್, ರಷ್ಯ, ಸ್ಪೇನ್, ಸ್ವಿಡ್ಜರ್ಲೆಂಡ್, ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ ಮುಂತಾದ ದೇಶಗಳೊಡನೆ ವ್ಯಾಪಾರ ಸಂಪರ್ಕವನ್ನು ಹೊಂದಿದೆ.

ಸಾರಿಗೆ ಸಂಪರ್ಕ: ರಸ್ತೆ, ರೈಲು, ಜಲ ಮತ್ತು ವಾಯು ಸಾರಿಗೆಗಳು ಅಭಿವೃದ್ಧಿ ಹೊಂದಿವೆ. ರೇಡಿಯೋ, ಟೆಲಿವಿಷನ್, ಟೆಲಿಫೋನ್, ಪುಸ್ತಕಗಳು, ಮಾಸಪತ್ರಿಕೆ, ವಾರಪತ್ರಿಕೆ ಮುಂತಾದವುಗಳು ಲಭ್ಯವಿವೆ. (ಎಸ್.ಕೆ.)

**ಕ್ವಾಟರ್ನರಿ:** ಭೂವಿಜ್ಞಾನ ಕಾಲಮಾನದಿಂದ ಈಗ ನಡೆಯುತ್ತಿರುವ ಯುಗ; ಸೀನೋಝೋಯಿಕ್ ಯುಗದ ಅತ್ಯಾಧುನಿಕ ವಿಭಾಗ; ಟರ್ಷಿಯರಿ ಯುಗ ಕೊನೆಗೊಂಡ ಬಳಿಕ ಪ್ರಾರಂಭವಾದ ಯುಗ; ಅಲ್ಲದೆ ಈ ಅವಧಿಯಲ್ಲಿ ಆದ ಸಮಸ್ತ ಭೂವೈಜ್ಞಾನಿಕ ನಿಕ್ಷೇಪಗಳ ಸಾಮೂಹಿಕ ಹೆಸರು. ಚತುರ್ಥಯುಗವೆಂದು ಅರ್ಥ. ಭಾರತದಲ್ಲಿ ಶಿವಾಲಿಕ್ ಪ್ರಸ್ತರಗಳು ಮತ್ತು ಸಿಂಧೂಗಂಗಾ ಬಯಲು ಈ ಯುಗಕ್ಕೆ ಸೇರಿದವು.

ಭೂಚರಿತ್ರೆಯಲ್ಲಿ ಕ್ವಾಟರ್ನರಿ ಬಹು ಮುಖ್ಯವಾದ ಯುಗ. ಕಾರಣ ಮಾನವನ ಉದಯವಾದದ್ದು ಈ ಯುಗದಲ್ಲಿ. ಕ್ವಾಟರ್ನರಿಯಲ್ಲಿ ಉತ್ತರಾರ್ಧ ಗೋಳದ ಬಹುಭಾಗ ದೊಡ್ಡ ಹಿಮನದಿಗಳಿಂದ ಆವೃತವಾಗಿ ಅಲ್ಲಿ ಅತಿಶೀತಲ ವಾಯುಗುಣವಿದ್ದುದರಿಂದ ಇದನ್ನು ಮಹಾ ಹಿಮಯುಗವೆಂದೂ ಕರೆಯುತ್ತಾರೆ. ಈ ಭೂಯುಗದ ಎರಡು ಕಲ್ಪಗಳು ಪ್ಲೀಸ್ಟೊಸೀನ್ ಮತ್ತು ಹೋಲೋಸೀನ್, ಪೂರ್ವಾರ್ಧ ಪ್ಲೀಸ್ಟೊಸೀನ್ ಕಲ್ಪವಾದರೆ ಉತ್ತರಾರ್ಧ ಹೋಲೊಸೀನ್ ಕಲ್ಪ. ಕ್ವಾಟರ್ನರಿಯ ಅವಧಿ ಸು. 1 ದಶಲಕ್ಷ ವರ್ಷ ಪ್ರಾಚೀನದಿಂದ ಆಧುನಿಕ ಕಾಲದ ವರೆಗೆ ಇದೆ.

ಭೂಚರಿತ್ರೆಯಲ್ಲಿ ಕ್ವಾಟರ್ನರಿ ಎಂಬ ಹೆಸರನ್ನು ಮೊತ್ತಮೊದಲಿಗೆ ಡೆಸ್ನಾಯರ್ 1829ರಲ್ಲಿ ಬಳಕೆಗೆ ತಂದ. ಪ್ಯಾರಿಸ್ ಭೂ ಪ್ರದೇಶದಲ್ಲಿ ತೃತೀಯ ಯುಗದ ಶಿಲಾ ಪ್ರಸ್ತರಗಳ ಮೇಲೆ ಹರಡಿದ್ದ ಶಿಲೆಗಳನ್ನು ಚತುರ್ಥಯುಗದ ಪ್ರಸ್ತರಗಳೆಂದು ಕರೆಯಲಾಯಿತು. ಮುಂದೆ ರೆಬೂಲ್ ಈ ಯುಗದ ಪಳೆಯುಳಿಕೆಗಳನ್ನು ವಿಶೇಷ ರೀತಿಯಲ್ಲಿ ಅಭ್ಯಸಿಸಿ ಮೇಲಿನ ಹೆಸರನ್ನು ಸಮರ್ಥಿಸಿದ. ಆದರೂ ಈಚಿನ ಸಂಶೋಧನೆಗಳಿಂದ ಈ ನಾಮಕರಣ ಅಷ್ಟು ಸಮರ್ಪಕವಾಗಿಲ್ಲವೆಂದು ಕಂಡುಬಂದಿದೆ. ಕ್ವಾಟರ್ನರಿ ಯುಗದ ಮುಖ್ಯ ಶಿಲಾವರ್ಗಗಳೆಂದರೆ ಹಿಮನದಿಗಳ ಕಾರ್ಯಾಚರಣೆಯಿಂದಾದ ಡ್ರಿಫ್ಟ್, ಟಿಲ್ಲೈಟ್, ವಾರ್ವ್ ಜೇಡುಶಿಲೆಗಳು, ದೂಳು ಮುಂತಾದವು. ಇವೆಲ್ಲವೂ ಹಿಮನದಿ ಇದ್ದ ಪರಿಸರವನ್ನು ಸೂಚಿಸುತ್ತವೆ.

ಈ ಯುಗದಲ್ಲಾದ ಮುಖ್ಯ ಬದಲಾವಣೆಗಳನ್ನು ಸೂಕ್ಷ್ಮವಾಗಿ ಹೀಗೆ ವಿವರಿಸಬಹುದು. ಯುಗದ ಮೊದಲಲ್ಲೇ ವಿವಿಧ ಪ್ರಾಣಿಗಳಿಗೆ ಮತ್ತು ಸಸ್ಯಗಳಿಗೆ ಶರೀರ ರಚನೆಯಲ್ಲಿ ಶೀತ ವಾಯುಗುಣಕ್ಕೆ ಸರಿಹೊಂದುವ ಮಾರ್ಪಾಡುಗಳು ಆಗತೊಡಗಿದುವು. ಹವೆ ವಿಪರೀತ ಶೀತಲವಾಗಿ ಹಿಮಯುಗ ಕಾಲಿಕ್ಕಿತು. ಇದು ಇಡೀ ಯುಗದ ಉದ್ದಕ್ಕೂ ಏಕಪ್ರಕಾರವಾಗಿ ಹರಡಿರದೆ ಆಗಾಗ ಎಂದರೆ ಸು. ನಾಲ್ಕು ಹಂತಗಳಲ್ಲಿ ಕಾಣಿಸಿಕೊಂಡಿತು. ಪ್ರತಿಯೊಂದು ಹಂತವನ್ನೂ ಹಿಮಯುಗವೆಂದೂ ಅವುಗಳ ನಡುವೆ ಇರುವ ಕಾಲವನ್ನು ಹಿಮಯುಗವಿಳಂಬ ಅಥವಾ ಅಂತರಹಿಮಯುಗವೆಂದೂ ಕರೆಯಲಾಗಿದೆ. ಹಿಮನದಿಗಳಿಂದ ಆವೃತವಾದ ಪ್ರದೇಶಗಳಲ್ಲಿ ಪ್ರಾಣಿಗಳು ಮತ್ತು ಸಸ್ಯಗಳು ಬಹು ವಿರಳವಾಗಿದ್ದುವು. ಹೀಗಾಗಿಯೇ ಹಿಮನದಿಯ ಶಿಲಾಪ್ರಸ್ತರಗಳಲ್ಲಿ ಪಳೆಯುಳಿಕೆಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಆದರೆ ಹಿಮನದಿಗಳ ಹೊರ ಆವರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಪ್ರಾಣಿಗಳು ಮತ್ತು ಸಸ್ಯಗಳಿದ್ದುವು. ಹಲವು ಬಾರಿ ಹವೆಯ ಬದಲಾವಣೆಯನ್ನು ಅನುಸರಿಸಿ ಪ್ರಾಣಿಗಳು ಅನುಕೂಲ ವಾತಾವರಣವಿರುವ ಕಡೆಗೆ ವಲಸೆ ಹೋಗುತ್ತಿದ್ದ ಸಂದರ್ಭಗಳೂ ಉಂಟು.

ಉತ್ತರಾರ್ಧಗೋಳದ ಕೆಲವು ಭೂಪ್ರದೇಶಗಳಲ್ಲಿ ಹಿಮನದಿಗಳ ಹೆಚ್ಚಿನ ತೂಕದ ಪರಿಣಾಮದ ಒತ್ತಡದಿಂದ ಅವುಗಳ ನೆಲಮಟ್ಟದಲ್ಲಿ ಏರುಪೇರುಗಳಾಗಿವೆ. ತೂಕಕ್ಕೆ ಒಳಗಾದ ಪ್ರದೇಶ ಕೆಳಕ್ಕೆ ಕುಗ್ಗಿ ಇದನ್ನು ಸರಿದೂಗಿಸಲು ಅಕ್ಕಪಕ್ಕದ ಪ್ರದೇಶ ಮೇಲಕ್ಕೆ ಒಯ್ಯಲ್ಪಟ್ಟ ನಿದರ್ಶನಗಳು ಹಲವಾರಿವೆ. ಉದಾಹರಣೆಗೆ ಇಂಗ್ಲೆಂಡಿನ ಕರಾವಳಿಯಲ್ಲಿ ಸು. 3.8 ಮೀ ಗಳಷ್ಟು ಮೇಲಕ್ಕೆ ಎತ್ತಲ್ಪಟ್ಟ ಹಿಮಯುಗದ ಮುಂಚಿನ ತೀರಪ್ರದೇಶವನ್ನು ಇಂದಿಗೂ ನೋಡಬಹುದು. ಇದೇ ರೀತಿ ಅತ್ಯಂತ ದೊಡ್ಡ ಹಿಮನದಿಗಳಿದ್ದ ಸ್ಕಾಟ್ಲೆಂಡ್ ಕಡೆಯ ಪಕ್ಷ 30 ಮೀ ಕೆಳಕ್ಕೆ ಕುಸಿದಿರಬಹುದೆಂದು ಭಾವಿಸಲಾಗಿದೆ.

ಈ ಕಾಲದ ಪ್ರಾಣಿಗಳಲ್ಲಿ ಬಹುಮುಖ್ಯವಾದವು ಸ್ತನಿಗಳು. ಪ್ರಾಣಿಗಳನ್ನು ಈ ಕೆಳಗಿನಂತೆ ನಾಲ್ಕು ವರ್ಗಗಳನ್ನಾಗಿ ವಿಭಾಗಿಸಲಾಗಿದೆ: (1) ತಂಡ್ರಾ ವರ್ಗ–ಲೆಮ್ಮಿಂಗ್, ಶೀತವಲಯದ ಮೊಲ, ನರಿ, ಸಾರಂಗ, ಮತ್ತು ಕಸ್ತೂರಿಮೃಗ; (2) ಸ್ಟೆಪ್ಪಿವರ್ಗ–ಜೆರೋಬ, ಮಾರ್ಮಾಟ್, ಕುದುರೆ ಮತ್ತು ಕತ್ತೆ; (3) ದಕ್ಷಿಣ ಖಂಡಗಳ ವರ್ಗ–ಖಡ್ಗಮೃಗ, ಗುಹಾಸಿಂಹ ಮತ್ತು ಗವಿಕತ್ತೆಕಿರುಬ; (4)ಗತವರ್ಗ–ಖಡ್ಗಮೃಗ, ಈಗಿನ ಆನೆಗಳ ಪೂರ್ವಜರಾದ ಎಲೆಫಾಸಿ ಅಂಟಿಕ್ವಸ್ ಮತ್ತು ಎಲಿಫಾಸ್ ಪ್ರೈಮಿಜಿನಿಯಸ್, ಹೀಗೆಯೇ ಸಸ್ಯಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ: (1) ತಂಡ್ರಾಸಸ್ಯಗಳು–ಉನ್ನತ ಪರ್ವತಶ್ರೇಣಿಗಳು ಮತ್ತು ಮೇರುಪ್ರದೇಶಗಳಲ್ಲಿನ ಡ್ರೈಯಾಸ್ ಅಕ್ಟೊಪೆಟಾಲ, ಸ್ಯಾಲಿಕ್ಸ್ ಪೋಲಾರಿಸ್ ಮತ್ತು ಬೆಟುಲಾ; (2) ಸ್ಟೆಪ್ಪಿ ಸಸ್ಯವರ್ಗ–ಹುಲ್ಲು, ಪಾಚಿ, ದೇವದಾರು ಮತ್ತು ಬರ್ಚ್, (3) ವನಸಸ್ಯವರ್ಗ–ನಾರ್ವೆ, ಓಕ್ ಮತ್ತು ಬೀಚ್ ವೃಕ್ಷಗಳು.

ಇವುಗಳಷ್ಟೇ ಮುಖ್ಯವಾದ ಅವಶೇಷಗಳು ಆದಿಮಾನವನ ಪಳೆಯುಳಿಕೆಗಳು ಮತ್ತು ಅವನ ಶಿಲಾಉಪಕರಣಗಳು. ಇವುಗಳ ಅಭ್ಯಾಸದಿಂದ ಮಾನವನನ್ನು ಪಿತಕ್ಯಾಂಥ್ರೋಪಸ್ ಇರೆಕ್ಟಸ್ (ಕಪಿ ಮತ್ತು ಮಾನವನ ನಡುವಿನ ವಿಕಾಸಘಟ್ಟ), ಪಿಲ್ಟ್‌ಡೌನ್ ಮಾನವ, ಹಿಡೆಲ್ ಬರ್ಗ್ ಮಾನವ, ನಿಯಾಂಡರ್ಥೆಲ್ ಮಾನವ ಮತ್ತು ನವೀನ ಮಾನವ ಎಂಬುದಾಗಿ ವರ್ಗೀಕರಿಸಲಾಗಿದೆ. ಹೀಗೆಯೇ ಅವರ ಬೇಟೆಯ ಆಯುಧಗಳು ಮತ್ತು ಇತರ ಉಪಕರಣಗಳನ್ನು ಅನುಸರಿಸಿ ಶಿಲಾಯುಗ, ಕಂಚಿನಯುಗ, ಕಬ್ಬಿಣ ಯುಗ ಎಂದೂ ಹೆಸರಿಸಲಾಗಿದೆ. ಶಿಲಾಯುಗದಲ್ಲಿ ಮಿಸೊಲಿಥಿಕ್, ಪೇಲಿಯೋಲಿಥಿಕ್ ಮತ್ತು ನಿಯೋಲಿಥಿಕ್ ಎಂಬ ಮೂರು ಹಂತಗಳನ್ನು ಗುರುತಿಸಿದ್ದಾರೆ (ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ ಮತ್ತು ನವ ಶಿಲಾಯುಗ). (ಬಿ.ವಿ.ಜಿ.)

**ಕ್ವಿಬೆಕ್:** ಕೆನಡದ ಅತ್ಯಂತ ದೊಡ್ಡ ಪ್ರಾಂತ್ಯ. ನೈಋತ್ಯ ಮತ್ತು ಪಶ್ಚಿಮಗಳಲ್ಲಿ ಆಂಟೇರಿಯೋ ಪ್ರಾಂತ್ಯ, ಜೇಮ್ಸ್ ಮತ್ತು ಹಡ್ಸನ್ ಕೊಲ್ಲಿ, ಉತ್ತರದಲ್ಲಿ ಹಡ್ಸನ್ ಜಲಸಂಧಿ ಮತ್ತು ಅಂಗೇವ ಕೊಲ್ಲಿ, ಪೂರ್ವದಲ್ಲಿ ಲ್ಯಾಬ್ರಡಾರ್ ತೀರ, ಸೇಂಟ್ ಲಾರೆನ್ಸ್ ಖಾರಿ, ದಕ್ಷಿಣದಲ್ಲಿ ಷಲುರ್ ಕೊಲ್ಲಿ, ನ್ಯೂ ಬ್ರನ್ಸ್‌ವಿಕ್ ಪ್ರಾಂತ್ಯ, ಅಮೆರಿಕ ಸಂಯುಕ್ತಸಂಸ್ಥಾನದ ಮೇನ್, ನ್ಯೂ ಹ್ಯಾಂಪ್‌ಷೆರ್, ಇದರ ಮೇರೆಗಳು. ಉ.ಅ. $45^0$–$62^0$ ಮತ್ತು ಪ.ರೇ.$79^0 30'$ ನಡುವೆ ಇರುವ ಕ್ವಿಬೆಕ್‌ನ ವಿಸ್ತೀರ್ಣ 15,22,841 ಚ.ಕಿಮೀ. ಜನಸಂಖ್ಯೆ 74,10,500 (2001). ರಾಜಧಾನಿ ಕ್ವಿಬೆಕ್.

ಮೇಲ್ಮೈಲಕ್ಷಣ: ಕ್ವಿಬೆಕನ್ನು ಮೂರು ಸ್ವಾಭಾವಿಕ ವಿಭಾಗಗಳಾಗಿ ವಿಂಗಡಿಸಬಹುದು. ಕ್ವಿಬೆಕ್‌ನ ಶೇ. 90ಕ್ಕೂ ಹೆಚ್ಚು ಭಾಗ ಕೆನಡಿಯನ್ ಫಲಕಕ್ಕೆ ಸೇರಿದೆ. ಇದು ಪ್ರಸ್ಥಭೂಮಿಸದೃಶ ಪ್ರದೇಶವಾಗಿದ್ದು ಉತ್ತರಕ್ಕೆ ಇಳಿಜಾರಾಗಿದೆ. ಹಡ್ಸನ್ ಜಲಸಂಧಿಯ ಬಳಿ 300 ಮೀ ಆಳದ ಪ್ರಪಾತಗಳು ಸಂಭವಿಸಿವೆ. ವೃಕ್ಷರೇಖೆಯ ದಕ್ಷಿಣದಲ್ಲಿ ವಿಶಾಲ ಪ್ರದೇಶಗಳು ಹಿಮಯುಗಕಾಲದ

ಶೇಖರಣೆಗಳಿಂದ ಆವೃತವಾದವು. ಹಿಮದ ಶೇಖರಣೆಗಳು ಅಸಮವಾಗಿದ್ದುದರಿಂದಲೂ ಅದರಿಂದ ಸಂಭವಿಸಿದ ನಗ್ನೀಕರಣ ಕಾರ್ಯದಿಂದಾಗಿಯೂ ಕೆನಡಿಯನ್ ಫಲಕ ಪ್ರದೇಶಗಳಲ್ಲಿ ಹರಿಯುವ ನದಿಗಳು ಅನೇಕ ಸರೋವರಗಳಿಂದ ಕೂಡಿ ಅವುಗಳೊಳಕ್ಕೆ ರಭಸದಿಂದ ಧುಮುಕಿ ಜಲಪಾತಗಳನ್ನು ನಿರ್ಮಿಸಿವೆ. ದಕ್ಷಿಣ ಭಾಗದ ನದಿಗಳು ಹೆಚ್ಚು ಎತ್ತರದ ಪ್ರಸ್ಥಭೂಮಿಯಿಂದ ದಕ್ಷಿಣದ ಆಳದ ಕಮರಿಗಳೊಳಗೆ ಧುಮುಕುತ್ತವೆ. ಇವುಗಳಲ್ಲಿ ಸ್ಯಾಗೆನೇ, ಸೇಂಟ್ ಮಾರಿಸ್, ಆಟಾವ, ಬರ್ಸೀಮೀ, ಪೆರಿಬಾಂಕ, ಊಟಾರ್ಡ್ ಮತ್ತು ಮ್ಯಾನಿಕ್ವಾನ್ ನದಿಗಳು ಮುಖ್ಯವಾದವು. ಕೆನಡಿಯನ್ ಫಲಕ ಪ್ರದೇಶದಲ್ಲಿ ಚಿನ್ನ, ತಾಮ್ರ, ಸತು ಮುಂತಾದ ಖನಿಜನಿಕ್ಷೇಪಗಳಿವೆ. ಎರಡನೆಯ ಸ್ವಾಭಾವಿಕ ವಿಭಾಗ ಸೇಂಟ್ ಲಾರೆನ್ಸ್ ನದೀ ಬಯಲು. ಇದು ಕೆನಡಿಯನ್ ಫಲಕಕ್ಕಿಂತ ಭಿನ್ನವಾಗಿದೆ. ಸೇಂಟ್ ಲಾರೆನ್ಸ್ ಇಲ್ಲಿಯ ಮುಖ್ಯ ನದಿ. ಅಪಲೇಷಿಯನ್ ಪ್ರಸ್ಥಭೂಮಿ ಮೂರನೆಯ ಸ್ವಾಭಾವಿಕ ವಿಭಾಗ. ಈ ವಿಭಾಗಕ್ಕೆ ಸೇರಿರುವ ಗ್ಯಾಸ್ಪೆ ಪರ್ಯಾಯ ದ್ವೀಪದಲ್ಲಿರುವ ಷಿಕ್‌ಷಾಕ್ ಪರ್ವತದ ಷಾಕ್ ಕ್ಯಾರ್ಟೀ (1249 ಮೀ.) ಕ್ವಿಬೆಕ್ ಪ್ರಾಂತ್ಯದ ಅತ್ಯುನ್ನತ ಶಿಖರ.

ವಾಯುಗುಣ: ಕ್ವಿಬೆಕಿನದು ಖಂಡಾಂತರ ವಾಯುಗುಣ. ಉತ್ತರ ಕ್ವಿಬೆಕಿನ ಮಧ್ಯದಲ್ಲಿ ಬೇಸಗೆಯಿಂದ ಚಳಿಗಾಲಕ್ಕೆ ಉಷ್ಣತೆಯಲ್ಲಿ ಸು. $20^0$ಸೆ. ಅಂತರವಿರುತ್ತದೆ. ಮಾಂಟ್ರಿಯಾಲ್‌ನಲ್ಲಿ ಸರಾಸರಿ ಉಷ್ಣತೆ ಜನವರಿಯಲ್ಲಿ $50^0$ಸೆ.; ಜುಲೈಯಲ್ಲಿ $20^0$ ಸೆ. ಸೇಂಟ್ ಲಾರೆನ್ಸ್ ಕೊಲ್ಲಿಯಲ್ಲಿ ಸಂಭವಿಸುವ ಕಡಿಮೆ ಒತ್ತಡದ ಆವರ್ತ ಮಾರುತಗಳಿಂದ ಪ್ರಾಂತ್ಯದ ದಕ್ಷಿಣ ಭಾಗದಲ್ಲಿ ಮಳೆಯಾಗುತ್ತದೆ. ವಾರ್ಷಿಕ ಮಳೆ ಉತ್ತರದಲ್ಲಿ 38 ಸೆಂಮೀ. ದಕ್ಷಿಣದ ಎಲ್ಲೆಯ ಬಳಿ 101 ಸೆಂಮೀ ಗೂ ಹೆಚ್ಚು. ಕ್ವಿಬೆಕ್ ನಗರದ ಬೆನ್ನಿನ ಕಡೆಗೆ ಇರುವ ಎತ್ತರದ ಪ್ರಸ್ಥಭೂಮಿಯಲ್ಲಿ ಇಡೀ ಖಂಡದಲ್ಲೇ ಅತ್ಯಧಿಕ ಹಿಮ ಬೀಳುತ್ತದೆ (304 ಸೆಂಮೀ).

ಸಸ್ಯ ಹಾಗೂ ಪ್ರಾಣಿಸಂಪತ್ತು: ವೃಕ್ಷರೇಖೆಯ ಉತ್ತರಕ್ಕೆ ಇರುವುದು ತಂಡ್ರ ಪ್ರದೇಶ. ಅದರಿಂದ ದಕ್ಷಿಣಕ್ಕೆ ಬಂದಂತೆ ಸ್ಪ್ರೂಸ್ ಮತ್ತು ತಂಡ್ರ ಮಿಶ್ರಣವೂ ಇನ್ನೂ ದಕ್ಷಿಣಕ್ಕೆ ಉಪಶೀತವಲಯದ ಶಿಲಾವಲ್ಕ ಮತ್ತು ಶಂಕುಧರ ವೃಕ್ಷಗಳೂ ಇವೆ. ಸೇಂಟ್ ಲಾರೆನ್ಸ್ ಮೈದಾನದಲ್ಲಿ ಮಿಶ್ರ ಕಾಡುಗಳಿವೆ. ಪೂರ್ವದ ಪ್ರದೇಶಗಳಲ್ಲೂ ಗ್ಯಾಸ್ಪೆ ಪರ್ಯಾಯದ್ವೀಪದಲ್ಲೂ ಗಟ್ಟಿ ಮರಗಳ ಮತ್ತು ಸಂಮಿಶ್ರ ಜಾತಿಯ ಸಸ್ಯಗಳ ಕಾಡುಗಳಿವೆ. ಕ್ವಿಬೆಕಿನಲ್ಲಿ ವನ್ಯಮೃಗಗಳು ಹೇರಳವಾಗಿವೆ. ಕ್ಯಾರಿಬೂ, ಜಿಂಕೆ, ಬೀವರ್, ಮಿಂಕ್ ಮುಂತಾದ ಪ್ರಾಣಿಗಳೂ ಟ್ರೌಟ್, ಚಾರ್ ಬ್ಯಾಸ್ ಪೈಕ್, ಪಿಕರೆಲ್ ಸಾಲ್ಮನ್ ಮುಂತಾದ ಮೀನುಗಳೂ ಇವೆ. ಕ್ವಿಬೆಕಿನಲ್ಲಿರುವ ಪ್ರಾಂತೀಯ ವನಗಳ ಸಂಖ್ಯೆ ಆರು. ಫೋರ್ಟ್ ಚ್ಯಾಂಬ್ಲಿ, ಫೋರ್ಟ್‌ಲೆನಾಕ್ಸ್ ಇವು ಇತಿಹಾಸ ಪ್ರಸಿದ್ಧವಾದ ರಾಷ್ಟ್ರೀಯ ವನಗಳು.

ಆರ್ಥಿಕತೆ: ಕ್ವಿಬೆಕ್ ಪ್ರಾಂತ್ಯದ ದಕ್ಷಿಣದಲ್ಲಿ ಜನಸಾಂದ್ರತೆ ಬೆಳೆಯುವುದಕ್ಕೆ ಇಲ್ಲಿಯ ಭೂಮಿ ಬೇಸಾಯಕ್ಕೆ ಹೆಚ್ಚು ಅನುಕೂಲಕರವಾಗಿರುವುದೇ ಕಾರಣ. ಸೇಂಟ್ ಲಾರೆನ್ಸ್ ತಗ್ಗಿನ ನೆಲ ಮತ್ತು ಕೆನಡಿಯನ್ ಫಲಕದ ಅಂಚಿನ ಪ್ರದೇಶಕ್ಕೆ ಕೃಷಿ ಸೀಮಿತವಾಗಿದೆ. ಹೈನುಗಾರಿಕೆಯೂ ನಡೆಯುತ್ತದೆ. ಕ್ವಿಬೆಕ್‌ನ ಒಟ್ಟು ಭೂಮಿಯ ಶೇ. 4ರಷ್ಟು ಮಾತ್ರ ಕೃಷಿಭೂಮಿಯಾಗಿದ್ದರೂ ವ್ಯವಸಾಯವೇ ಇಲ್ಲಿಯ ಮುಖ್ಯ ಕಸಬಾಗಿತ್ತು. ಒಂದನೆಯ ಮಹಾಯುದ್ಧದಿಂದೀಚೆಗೆ ಇಲ್ಲಿ ವ್ಯವಸಾಯದ ಯಾಂತ್ರೀಕರಣವಾಗಿ ಎರಡನೆಯ ಮಹಾಯುದ್ಧದಿಂದೀಚೆಗೆ ಕೃಷಿ ಕ್ರಾಂತಿ ಸಂಭವಿಸಿತು. ಆದರೂ ಈಗ ಕೃಷಿಗಿಂತ ಕೈಗಾರಿಕೆ ಹೆಚ್ಚು ಮುಖ್ಯವಾಗಿದೆ. ಗೋದಿ, ಓಟ್ಸ್, ಬಾರ್ಲಿ, ರೈ, ಬಟಾಣಿ, ತಿಂಗಳುಹುರುಳಿ, ಆಲೂಗೆಡ್ಡೆ, ಒಣಹುಲ್ಲು, ಹೊಗೆಸೊಪ್ಪು, ಬೀಟ್‌ರೂಟ್ ಹಣ್ಣುಗಳು ಇವು ಮುಖ್ಯ ಉತ್ಪನ್ನಗಳು.

ಕ್ವಿಬೆಕಿನ ಮೂರನೆಯ ಎರಡಕ್ಕಿಂತ ಹೆಚ್ಚು ಭಾಗ ಕಾಡಿನಿಂದ ಆವೃತವಾಗಿರುವುದರಿಂದ ಇಲ್ಲಿಯ ಅರಣ್ಯೋತ್ಪನ್ನಗಳು ವೈವಿಧ್ಯಪೂರಿತವಾಗಿವೆ. ಸ್ಪ್ರೂಸ್, ಫರ್, ಪೈನ್, ಹೆಮ್ಲಾಕ್, ದೇವದಾರು, ಮೇಪಲ್, ಎಲ್ಮ್, ಆಷ್, ಚೆರಿ, ಓಕ್ ಮುಂತಾದ ಮರಗಳಿವೆ. ಉಣ್ಣೆ ಉತ್ಪಾದನೆ, ಮೀನುಗಾರಿಕೆಗಳೂ ನಡೆಯುತ್ತವೆ.

ಕೈಗಾರಿಕೆಯಲ್ಲಿ ಕ್ವಿಬೆಕ್ ಪ್ರಾಂತ್ಯಕ್ಕೆ ಕೆನಡದಲ್ಲಿ ಎರಡನೆಯ ಸ್ಥಾನ ಲಭ್ಯವಾಗಿದೆ. ಕೆನಡದಲ್ಲಿ ತಯಾರಾಗುವ ಸರಕುಗಳ ಶೇ. 30ರಷ್ಟು ಮೌಲ್ಯದ ಸರಕುಗಳು ಕ್ವಿಬೆಕಿನಲ್ಲಿ ಉತ್ಪಾದನೆಯಾಗುತ್ತವೆ. ಕೆನಡಿಯನ್ ಫಲಕದ ದಕ್ಷಿಣ ಭಾಗದಲ್ಲಿ ಧುಮುಕುವ ನದಿಗಳಿಂದ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯೇ ಇಲ್ಲಿಯ ಕೈಗಾರಿಕೆಗಳಿಗೆ ಮುಖ್ಯ ಆಧಾರ. ಕೆನಡದ ಬೇರಾವ ಪ್ರಾಂತ್ಯದಲ್ಲೂ ಕ್ವಿಬೆಕಿನಲ್ಲಿ ಉತ್ಪಾದನೆಯಾಗುವಷ್ಟು ವಿದ್ಯುತ್ತಿನ ಉತ್ಪಾದನೆಯಾಗುವುದಿಲ್ಲ. ಪ್ರಾಂತ್ಯದ ಅರಣ್ಯ ಮತ್ತು ಖನಿಜಸಂಪತ್ತು ಮತ್ತು ಸೇಂಟ್ ಲಾರೆನ್ಸ್ ನೌಕಾ ಸಾರಿಗೆ ಸೌಲಭ್ಯ–ಇವೂ ಕೈಗಾರಿಕೆಯ ಬೆಳವಣಿಗೆಗೆ ಕಾರಣಗಳು.ಕೆನಡಿಯನ್ ಫಲಕದ ಅಂಚಿನಲ್ಲಿ ಹಲವಾರು ಕೈಗಾರಿಕಾ ನಗರಗಳು ಸ್ಥಾಪಿತವಾಗಿವೆ. ಮರ ಕೊಯ್ಯುವುದು, ಮರದ ತಿರುಳು ಮತ್ತು ಕಾಗದ ತಯಾರಿಕೆ, ನೌಕಾನಿರ್ಮಾಣ, ವಿಮಾನ ತಯಾರಿಕೆ, ರಾಸಾಯನಿಕಗಳು, ಹಿತ್ತಾಳೆ, ತಾಮ್ರ ಉತ್ಪನ್ನಗಳು, ಅಣಿಕಟ್ಟು, ಪಾದರಕ್ಷೆ, ಔಷಧ ಮುಂತಾದ ಕೈಗಾರಿಕೆಗಳಿವೆ. ಗಣಿಗಾರಿಕೆಯಲ್ಲಿ ಕ್ವಿಬೆಕ್ ಪ್ರಾಂತ್ಯ ದೇಶದಲ್ಲಿ ಎರಡನೆಯ ಸ್ಥಾನ ಪಡೆದಿದೆ. ಕೆನಡದ ಗಣಿ ಉತ್ಪನ್ನದ 1/5 ಭಾಗ ಕ್ವಿಬೆಕಿನದು.

ಸೇಂಟ್ ಲಾರೆನ್ಸಿನಿಂದಾಗಿ ಕ್ವಿಬೆಕಿನ ಮುಖ್ಯ ಬಂದರುಗಳಿಗೆ ಸಾಗರ ಸಂಪರ್ಕ ಸಾಧ್ಯವಾಗಿದೆ. ಮಾಂಟ್ರಿಯಾಲ್, ರೈಲ್ವೆ, ಜಲ ಮತ್ತು ವಾಯುಮಾರ್ಗಗಳ ಮುಖ್ಯ ಸಂಧಿಸ್ಥಳ. ಮುಖ್ಯ ಕೈಗಾರಿಕಾ ಮತ್ತು ಬ್ಯಾಂಕಿಂಗ್ ಕೇಂದ್ರ, ಕೆನಡಿಯನ್ ನ್ಯಾಷನಲ್ ಮತ್ತು ಕೆನಡಿಯನ್ ಫೆಸಿಫಿಕ್ ರೈಲ್ವೆ ಮಾರ್ಗಗಳು ಕ್ವಿಬೆಕ್ ಪ್ರಾಂತ್ಯದ ಮೂಲಕ ಹಾದುಹೋಗುತ್ತವೆ. ಮರದ ತಿರುಳು ಮತ್ತು ಕಾಗದ ತಯಾರಿಕೆ ಸಂಸ್ಥೆಗಳಿಗೆ ಸೇರಿದ ರೈಲು ಮಾರ್ಗಗಳೂ ಇವೆ.

ಕ್ವಿಬೆಕ್ ಈ ಪ್ರಾಂತ್ಯದ ರಾಜಧಾನಿ ಮತ್ತು ಅತ್ಯಂತ ಹಳೆಯ ನಗರ. ಇದು ಸೇಂಟ್ ಲಾರೆನ್ಸ್‌ನ ಉತ್ತರ ದಡದ ಮೇಲೆ, ಸೇಂಟ್ ಲಾರೆನ್ಸ್ ಕೂಡುವೆಡೆಯಲ್ಲಿ ಸ್ಥಾಪಿತವಾಗಿದೆ. ಕ್ವಿಬೆಕ್ ನಗರವನ್ನು ಮೇಲುನಗರ, ಕೆಳನಗರ ಎಂದು ವಿಭಾಗಿಸಬಹುದು. ಸೇಂಟ್ ಲಾರೆನ್ಸ್‌ನ ಎಡದಂಡೆಯಾಗಿರುವ ಎತ್ತರದ ಪ್ರಸ್ಥಭೂಮಿಯ ಉತ್ತರದ ಕೊನೆಯಲ್ಲಿ ಮೇಲುನಗರವನ್ನು ನಿರ್ಮಿಸಲಾಗಿದೆ. ಇದರ ಸುತ್ತಲೂ ಕೆಳನಗರವಿದೆ. ಕ್ವಿಬೆಕ್ ನಗರದ ವೈಶಿಷ್ಟ್ಯವೆಂದರೆ ಗೋಡೆಗಳ ನಡುವೆ ನಿರ್ಮಿತವಾಗಿರುವ ಭಾಗ. ಈ ಗೋಡೆಯನ್ನೂ ದುರ್ಗವನ್ನೂ 1823–32ರಲ್ಲಿ ಕಟ್ಟಲಾಯಿತು. ಕ್ವಿಬೆಕ್ ಕೆನಡದ ಅತ್ಯಂತ ಮುಖ್ಯ ಬಂದರಾಗಿತ್ತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಸೇಂಟ್ ಲಾರೆನ್ಸ್ ಪಾತ್ರವನ್ನು ಆಳ ಮಾಡಿದ ಮೇಲೆ ಮಾಂಟ್ರಿಯಾಲ್ ಮುಖ್ಯ ಬಂದರಾಯಿತು. ಕ್ವಿಬೆಕಿನಲ್ಲಿ ಅನೇಕ ಕೈಗಾರಿಕೆಗಳಿವೆ. ಕ್ವಿಬೆಕ್ ನಗರಪ್ರದೇಶದ ಜನಸಂಖ್ಯೆ 6,82,757 (2001).

ಹಲ್, ಷವಿನಿಗ್ಯಾನ್, ಆರ್ವೈಡ, ಗ್ರೈನ್‌ಬಿ, ಷರ್‌ಬ್ರುಕ್, ಮೇಗಾನ್ ಇವು ಕ್ವಿಬೆಳನ ಇತರ ಕೆಲವು ಕೈಗಾರಿಕಾ ನಗರಗಳು. (ಜಿ.ಇ.ಪಿ.)

**ಕ್ವೆಟ್ಟ:** ಪಾಕಿಸ್ತಾನದ ಒಂದು ನಗರ. ಕ್ವೆಟ್ಟ–ಪಿಷಿನ್ ಜಿಲ್ಲೆಯ ಆಡಳಿತ ಕೇಂದ್ರ. ಹಿಂದೆ ಬಲೂಚಿಸ್ತಾನದ ಮುಖ್ಯ ಪಟ್ಟಣವಾಗಿತ್ತು. ಉ.ಅ. $30^0 12'$ ಮತ್ತು ಪೂ.ರೇ. $67^0$ ಮೇಲಿದೆ. ಸಮುದ್ರ ಮಟ್ಟದಿಂದ 1651 ಮೀ ಎತ್ತರದ ಬಯಲಿನಲ್ಲಿದೆ. ಜನಸಂಖ್ಯೆ 565137 (1998). ಇದರ ಸುತ್ತಲೂ 3303 ಮೀ ಎತ್ತರದ ಪರ್ವತಶ್ರೇಣಿಗಳುಂಟು. ವಾಯವ್ಯದಲ್ಲಿರುವ ಖೋಜಾಕ್ ಕಣಿವೆ ಮತ್ತು ಆಗ್ನೇಯದಲ್ಲಿರುವ ಬೋಲನ್ ಕಣಿವೆ ಇವೆರಡನ್ನೂ ಇಲ್ಲಿಂದ ನಿಯಂತ್ರಿಸಬಹುದಾದ್ದರಿಂದ ಕ್ವೆಟ್ಟದ ಮಹತ್ತ್ವ ಹೆಚ್ಚಿದೆ. ಕ್ವೆಟ್ಟದಲ್ಲಿ ಬೇಸಗೆಯಲ್ಲಿ ಹಗಲು ಸೆಕೆ ಹೆಚ್ಚು, ರಾತ್ರಿ ಚಳಿ ಹೆಚ್ಚು. ಚಳಿಗಾಲದಲ್ಲಿ ಉಷ್ಣತೆ–$18^0$ ಸೆ. ಸರಾಸರಿ ಮಳೆ 26 ಸೆಂಮೀ. ಕ್ವೆಟ್ಟಕ್ಕೆ ಹತ್ತಿರದಲ್ಲಿ ಕಲ್ಲಿದ್ದಲು ಸಿಕ್ಕುತ್ತದೆ. ಕರೇಜ್ ಕಾಲುವೆಯ ನೀರಿನಿಂದ ಇದರ ಸುತ್ತ ವ್ಯವಸಾಯ ಸಾಗುತ್ತದೆ. ಈ ಪಟ್ಟಣದಲ್ಲಿ ಶಾಲೆ, ಆಸ್ಪತ್ರೆ, ಗ್ರಂಥಾಲಯ ಮುಂತಾದ ಸೌಕರ್ಯಗಳುಂಟು. ಇಲ್ಲಿ ಪಾಕಿಸ್ತಾನದ ಅತ್ಯಂತ ದೊಡ್ಡ ಸೈನ್ಯ ಠಾಣೆ ಮತ್ತು ಸೈನಿಕ ಶಿಕ್ಷಣಶಾಲೆ ಇವೆ. ಪಶ್ಚಿಮ ಆಫ್ಘಾನಿಸ್ತಾನ, ಪೂರ್ವ ಇರಾನ್‌ಗಳೊಡನೆ ಇಲ್ಲಿಂದ ವ್ಯಾಪಾರ ನಡೆಯುತ್ತದೆ. ಶುದ್ಧ ಮತ್ತು ಒಣಗಿದ ಹಣ್ಣುಗಳು, ಗಿಡಮೂಲಿಕೆಗಳು, ಹದಮಾಡಿದ ಚರ್ಮ–ಇವು ವ್ಯಾಪಾರ ಸರಕುಗಳು. ಆಫ್ಘಾನಿಸ್ತಾನ ಮತ್ತು ಇರಾನ್ ಒಂದಿಗೂ ಪಶ್ಚಿಮ ಪಾಕಿಸ್ತಾನದ ಇತರ ಪಟ್ಟಣಗಳೊಂದಿಗೂ ರಸ್ತೆ–ರೈಲು ಸಂಪರ್ಕವಿದೆ.

1877ರಲ್ಲಿ ಈ ವಿಭಾಗ ಬ್ರಿಟಿಷ್ ಸತ್ತೆಗೆ ಒಳಪಟ್ಟಿತು. 1907ರಲ್ಲಿ ಕ್ವೆಟ್ಟದಲ್ಲಿ ಸೈನಿಕ ಶಿಕ್ಷಣಶಾಲೆ ಸ್ಥಾಪಿತವಾಯಿತು. 1935ರ ಮತ್ತು 1955ರ ಭೂಕಂಪಗಳ ಪರಿಣಾಮವಾಗಿ ಕ್ವೆಟ್ಟ ತುಂಬ ನಷ್ಟಕ್ಕೊಳಗಾಗಿತ್ತು. ಪಾಕಿಸ್ತಾನದ ನಿರ್ಮಾಣವಾದ ಮೇಲೆ ಇದನ್ನು ಬೇಸಿಗೆ ನಿವಾಸಸ್ಥಾನವೆಂದು ಕರೆದುದರಿಂದ ಕ್ವೆಟ್ಟದ ಮಹತ್ತ್ವ ವಿಶೇಷವಾಗಿ ಅಧಿಕವಾಗಿದೆ. (ಕೆ.ಎನ್.ಯು.)

**ಕ್ಷಾಮ:** ಯಾವುದೇ ಪದಾರ್ಥದ ತೀವ್ರ ಅಭಾವವನ್ನು ಆ ಪದಾರ್ಥದ ಕ್ಷಾಮವೆಂದು ಹೇಳುವ ವಾಡಿಕೆಯಿದೆಯಾದರೂ ಹೆಚ್ಚು ಸಂಖ್ಯೆಯ ಜನರು ಹಸಿವು–ಉಪವಾಸಗಳಿಗೆ ಒಳಗಾಗುವ ಮಟ್ಟಿಗೆ ಸಾರ್ವಜನಿಕವಾಗಿ ಸಂಭವಿಸುವ ಆಹಾರಾಭಾವವೇ ಕ್ಷಾಮ (ಫ್ಯಾಮಿನ್).

ಇತಿಹಾಸ: ಕ್ಷಾಮದ ಇತಿಹಾಸ ಬಲು ದೊಡ್ಡದು. ಪ್ರಾಚೀನ ಈಜಿಪ್ಟಿನಲ್ಲಿ ಫೇರೋಗಳ ಕಾಲದಲ್ಲಿ ಕ್ಷಾಮ ಸಂಭವಿಸಿದ್ದ ಬಗ್ಗೆ ಬೈಬಲಿನಲ್ಲಿ ಉಲ್ಲೇಖವಿದೆ. ಪ್ರ.ಶ.ಪೂ. 436ರಲ್ಲಿ ರೋಮಿನಲ್ಲಿ ಕ್ಷಾಮ ಸಂಭವಿಸಿದಾಗ ಹಸಿವನ್ನು ತಡೆಯಲಾರದೆ ಸಾವಿರಾರು ಮಂದಿ ಟೈಬರ್ ನದಿಯೊಳಕ್ಕೆ ಹಾರಿಕೊಂಡರೆಂದು ಹೇಳಲಾಗಿದೆ. ಪ್ರ.ಶ.ಪೂ. 42ರಲ್ಲಿ ಈಜಿಪ್ಟಿನಲ್ಲಿ ಸಂಭವಿಸಿದ ಕ್ಷಾಮವೂ ಭೀಕರವಾದುದ್ದು. ಅಲ್ಲಿ ಪ್ರ.ಶ. 1064–72 ರಲ್ಲಿ ಹಬ್ಬಿದ ಕ್ಷಾಮ ಏಳು ವರ್ಷಗಳ ಬರವೆಂದು ಹೆಸರಾಗಿದೆ. ಇಂಗ್ಲೆಂಡೂ ಸೇರಿದಂತೆ ಯುರೋಪಿನ ಇತಿಹಾಸದಲ್ಲೂ ಕ್ಷಾಮಗಳು ಅನೇಕ ಸಾರಿ ಸಂಭವಿಸಿದ ಬಗ್ಗೆ ದಾಖಲೆಗಳುಂಟು.

ಭಾರತದ ಇತಿಹಾಸದಲ್ಲಿ ಹಲವಾರು ಕ್ಷಾಮಗಳ ಉಲ್ಲೇಖವಿದೆ. 1148–59 ರಲ್ಲಿ ಹನ್ನೊಂದು ವರ್ಷಗಳ ಕಾಲ ಉಗ್ರಕ್ಷಾಮವಿತ್ತು. ಅನಂತರ ಕಾಲಕಾಲಕ್ಕೆ ಸಂಭವಿಸಿದ ಅನೇಕ ಕ್ಷಾಮಗಳ ಉಲ್ಲೇಖವಿದೆ.

ಕಾರಣಗಳು: ಕ್ಷಾಮಗಳಿಗೆ ಮುಖ್ಯವಾದ ಕಾರಣಗಳು ನಾಲ್ಕು: 1 ನೀರಿನ ಅಭಾವದಿಂದ ವ್ಯಾಪಕವಾಗಿ ಫಸಲು ನಷ್ಟವಾಗಿ ಅಭಾವ ಸಂಭವಿಸುತ್ತದೆ. ಉಷ್ಣವಲಯದ ನಾಡುಗಳಲ್ಲಿ ಸಾಮಾನ್ಯವಾಗಿ ಅನಾವೃಷ್ಟಿಯ ಪರಿಣಾಮ ತೀವ್ರವಾದದ್ದು. ಈ ಪ್ರದೇಶಗಳಲ್ಲಿ ನೀರಿನ

ಸಂಗ್ರಹ, ಹಾಳತವಾದ ಬಳಕೆ–ಇದಕ್ಕೆ ಹೆಚ್ಚಿನ ಪ್ರಾಧಾನ್ಯ. ಮಳೆಯನ್ನೇ ನೇರವಾಗಿ ಅವಲಂಬಿಸುವುದನ್ನು ನೀರಾವರಿಯಿಂದಾಗಿ ಭಾಗಶಃ ನಿವಾರಿಸಲಾಗಿದೆ. ಆದರೆ ಮಳೆ ಸಂಪೂರ್ಣವಾಗಿ ಬಾರದೆಯೇ ಹೋದಾಗ ಬೇಸಾಯಕ್ಕೆ ತೊಂದರೆಯಾಗುವುದು ಸಾಮಾನ್ಯ.

2 ಸಮಶೀತೋಷ್ಣ ವಲಯದ ನಾಡುಗಳಲ್ಲಿ ನೀರಿನ ಅಭಾವದಿಂದ ಕ್ಷಾಮ ಒದಗುವುದು ಬಹಳ ವಿರಳ. ಯುದ್ಧ, ದಂಗೆ, ಫಸಲಿನ ಲೂಟಿ ಇವು ಯುರೋಪಿನಲ್ಲಿ ಸಂಭವಿಸಿದ ಕ್ಷಾಮಗಳಿಗೆ ಮುಖ್ಯ ಕಾರಣಗಳು. 16, 17ನೆಯ ಶತಮಾನಗಳಲ್ಲಿ ನಡೆದ ಮತೀಯ ಯುದ್ಧಗಳ ಫಲವಾಗಿ ಅಲ್ಲಿ ಕ್ಷಾಮಗಳು ಪದೇಪದೇ ಒದಗಿದುವು. 20ನೆಯ ಶತಮಾನದಲ್ಲಿ ಅತಿಯಾದ ಫಸಲು ನಷ್ಟವಾಗುವಂಥ ದೀರ್ಘ ಯುದ್ಧಗಳು ಜರುಗಿಲ್ಲ. ಕೈಗಾರಿಕಾ ಪ್ರದೇಶಗಳಲ್ಲಿ ಆಹಾರ ಸರಬರಾಜಿಗೆ ಸುಸೂತ್ರ ಸಾರಿಗೆ ವ್ಯವಸ್ಥೆ ಅತ್ಯಗತ್ಯ. ಇದಕ್ಕೆ ಅಡಚಣೆ ಒದಗಿದಾಗ ಕ್ಷಾಮ ತಲೆದೋರಿರುವುದುಂಟು. ಕೆಲವು ವೇಳೆಗಳಲ್ಲಿ ಒಂದು ಜನಾಂಗವನ್ನು ಅದರ ನೆಲೆಯಿಂದ ಕದಲಿಸಿ ಹೊರದೂಡಲು ಕೃತಕವಾಗಿ ಕ್ಷಾಮ ಪರಿಸ್ಥಿತಿಯನ್ನುಂಟುಮಾಡಿದ್ದುಂಟು. ಎರಡನೆಯ ಮಹಾಯುದ್ಧ ಪೂರ್ವದ ಜರ್ಮನಿಯ ನಾಝಿಗಳು ಯೆಹೂದ್ಯರನ್ನು ಹೊರಗಟ್ಟಲು ಈ ಕ್ರಮ ಅನುಸರಿಸಿದ್ದರು.

3 ರೋಗಗಳಿಂದಲೂ ಕೀಟಗಳಿಂದಲೂ ಬೆಳೆಗೆ ಹಾನಿಯೊದಗಿದಾಗ ಕ್ಷಾಮ ಸಂಭವಿಸಬಹುದು. 19ನೆಯ ಶತಮಾನದಲ್ಲಿ ಐರ್ಲೆಂಡಿನಲ್ಲಿ ಆಲೂಗೆಡ್ಡೆಯ ಬೆಳೆಗೆ ವ್ಯಾಪಕವಾಗಿ ಬೂಷ್ಟು ರೋಗ ತಗಲಿ ಬೆಳೆ ಕೆಟ್ಟು ಕ್ಷಾಮ ಬಂದಿತ್ತು. ಈ ಕಾಲದಲ್ಲಿ 20–30 ಲಕ್ಷ ಮಂದಿ ನಿಧನರಾದರೆ, ಅನೇಕರು ಅಮೆರಿಕಕ್ಕೆ ವಲಸೆ ಹೋದರು. ಎಲ್ಲೆಲ್ಲಿ ಜನರು ಒಂದೇ ಬೆಳೆಯನ್ನು ಹೆಚ್ಚಾಗಿ ಅವಲಂಬಿಸಿರುತ್ತಾರೋ ಅಲ್ಲೆಲ್ಲ ಈ ಬಗೆಯ ಕ್ಷಾಮದ ಅಪಾಯವುಂಟು. ಇಂಥೆಡೆಗಳಲ್ಲಿ ಸತತವಾದ ವೀಕ್ಷಣೆ ಮತ್ತು ನಿವಾರಣಾ ಕ್ರಮಗಳು ಅತ್ಯಗತ್ಯ.

4 ನೈಸರ್ಗಿಕ ಅನಾಹುತಗಳಿಂದಲೂ ಕ್ಷಾಮ ಉಂಟಾಗುತ್ತದೆ. ಭೂಕಂಪ, ಪ್ರವಾಹ, ಬೆಂಕಿ ಮುಂತಾದವುಗಳಿಂದ ಆಹಾರ ದಾಸ್ತಾನಿಗೆ ನಷ್ಟ ತಟ್ಟಬಹುದು. ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಗಬಹುದು.

ಪರಿಹಾರ: ಉಷ್ಣವಲಯದ ನಾಡುಗಳಲ್ಲಿ ನೀರಿನ ಸಂಗ್ರಹ ಮತ್ತು ವಿತರಣೆಯ ಸಂಯೋಜಿತ ವ್ಯವಸ್ಥೆಯಿಂದ ಕ್ಷಾಮವನ್ನು ಬಹಳ ಮಟ್ಟಿಗೆ ತಡೆಗಟ್ಟಲು ಸಾಧ್ಯ. ರಾಜಕೀಯ, ಆರ್ಥಿಕ ಸ್ಥಿರತೆಯಿಂದ ಮಾನವಕೃತ ಕ್ಷಾಮಗಳು ಸಂಭವಿಸದಂತೆ ನೋಡಿಕೊಳ್ಳಬಹುದು. ನೈಸರ್ಗಿಕ ಅನಾಹುತಗಳ ಮೇಲೆ ಮಾನವ ಇದುವರೆಗೂ ಹತೋಟಿ ಹೊಂದಲು ಸಾಧ್ಯವಾಗಿಲ್ಲ. ಭಾರತದಲ್ಲಿ ಕ್ಷಾಮಪರಿಸ್ಥಿತಿಯನ್ನು ಎದುರಿಸುವ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಅನುಭವ ಬಂದಿದೆ. ಭಾರತದ ಅನೇಕ ಕ್ಷಾಮಗಳು ಸ್ಥಳೀಯ ಮಟ್ಟದವು. ಅಕ್ಕಪಕ್ಕದ ಪ್ರದೇಶಗಳಿಂದಲೂ ಹೊರದೇಶಗಳಿಂದಲೂ ಶೀಘ್ರವಾಗಿ ಆಹಾರಸಾಮಗ್ರಿ ತರಲು ಈಚೆಗೆ ಸಾರಿಗೆ ವ್ಯವಸ್ಥೆಯ ಸೌಲಭ್ಯವಿದೆ.

ಕ್ಷಾಮದ ಪರಿಣಾಮಗಳು: ಅಭಾವ ಪರಿಸ್ಥಿತಿಯ ಕಾಲದಲ್ಲಿ ಸಂಭವಿಸುವ ಮರಣಗಳು ಕ್ಷಾಮದ ನೇರ ಫಲ ಹೌದೇ ಅಲ್ಲವೇ ಎಂಬುದು ಆಗಾಗ್ಗೆ ಭಾರತದಲ್ಲಿ ವಾದಕ್ಕೆ ಒಳಗಾಗಿರುವ ವಿಚಾರ. ತಲಾವಾರು 1,600 ಕೆಲೊರಿಗಳಷ್ಟು ಮಾತ್ರ ಆಹಾರ ಲಭ್ಯವಿದ್ದಾಗ ಜನರ ಮೇಲಾಗುವ ಪರಿಣಾಮವೇನೆಂಬುದನ್ನು ಪರಿಶೀಲಿಸಲಾಗಿದೆ. ಆರಂಭದಲ್ಲಿ ಅವರು ಶೀಘ್ರವಾಗಿ ತೂಕ ಕಳೆದುಕೊಳ್ಳುತ್ತಾರೆ. ಕೆಲೊರಿಗಳ ಅಂಶ ಇನ್ನೂ ಕಡಿಮೆಯಾದರೆ ತೂಕ ಬೇಗ ಇಳಿದು ಉಪವಾಸ ಮರಣಗಳ ಸಂಖ್ಯೆ ಹೆಚ್ಚುತ್ತದೆ. ಕ್ಷಾಮ ಕಾಲದಲ್ಲಿ ನೈತಿಕಮಟ್ಟ ಕುಸಿದು, ಕೊಲೆ, ನರಭಕ್ಷಣೆ, ಅನೀತಿ, ಅಪರಾಧಗಳಾಗಿರುವ ವರದಿಗಳಿವೆ. ಜಲೋದರ, ಅತಿಭೇದಿ ಸಾಮಾನ್ಯ. ಕಾಲರ, ಮಲೇರಿಯ, ಹೇನಿನಿಂದ ಹಬ್ಬುವ ಟೈಫಸ್‌ಜ್ವರ, ಉರಿಶೀತ, ಕ್ಷಯ ಮುಂತಾದ ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಕೃಷಿಪ್ರಧಾನವಾದ ಸಮಾಜಗಳ ಕುಟುಂಬಗಳಲ್ಲಿ ಜೀವನ ಛಿದ್ರವಾಗುತ್ತದೆ. (ಎಚ್.ಸಿ.ಕೆ.)

**ಕ್ಷಿಪ್ರ ರವಾನೆ:** ಹೆಚ್ಚು ಜನ ಮತ್ತು ಸರಕುಗಳನ್ನು ಕಡಿಮೆ ಸಮಯದಲ್ಲಿ ದೂರದ ಸ್ಥಳಗಳಿಗೆ ಸಾಗಿಸುವ ವಿಧಾನ. ಸಾಮಾನ್ಯವಾಗಿ ರೈಲು, ಬಸ್ಸು, ವಿಮಾನಗಳು ಈ ಸಂಚಾರ ಸೇವೆಯನ್ನು ಒದಗಿಸುತ್ತವೆ. ಈ ವ್ಯವಸ್ಥೆ ಹೆಚ್ಚಾಗಿ ಉತ್ತರ ಅಮೆರಿಕ ಮತ್ತು ಯುರೋಪಿನ ದೇಶಗಳಲ್ಲಿ ಕಂಡುಬರುತ್ತವೆ. ಇದರಿಂದ ಜನ ಕಡಿಮೆ ಕಾಲದಲ್ಲಿ ನಿಗದಿತ ಸ್ಥಳಕ್ಕೆ ತಲುಪುತ್ತಾರೆ. (ಎಂ.ಎಚ್.)

**ಕ್ಷಿಪ್ರ ವೀಕ್ಷಕಗಳು:** ವಿದ್ಯುಜ್ಜನಿತ ಉಪಕರಣಗಳು (ಸ್ಕ್ಯಾನರ್ಸ್). ದೂರ ಸಂವೇದನೆಯಲ್ಲಿ ಸಂವೇದಕಗಳ ಮೂಲಕ ಅಂಕಿಅಂಶಗಳನ್ನು ಸಂಗ್ರಹಿಸುವ ಈ ಸಂವೇದಕಗಳು ಅಥವಾ ಸ್ಪರ್ಶಕಗಳು ಕಿರಿದಾದ ಭೂಭಾಗವನ್ನು ವೀಕ್ಷಿಸಿ ದ್ವಿಮಿತೀಯ (ಟು ಡೈಮೆನ್ಷನಲ್) ಸಾದೃಶಗಳನ್ನಾಗಿ ಪರಿವರ್ತಿಸುತ್ತವೆ. ಹಲವಾರು ತರಂಗಾಂತರಗಳಲ್ಲಿ ಅಂಕಿಅಂಶಗಳನ್ನು ಶೇಖರಿಸುವ ವ್ಯವಸ್ಥೆಯ ಬಹುರೋಧಕ ಕ್ಷಿಪ್ರ ವೀಕ್ಷಕಗಳು (ಮಲ್ಟಿಸ್ಪೆಕ್ಟ್ರಲ್ ಸ್ಕ್ಯಾನರ್ಸ್). ಕ್ಷಿಪ್ರವೀಕ್ಷಕಗಳಲ್ಲಿ ಎರಡು ಮಾದರಿಗಳಿವೆ.

ಅಡ್ಡಪಥ ಕ್ಷಿಪ್ರ ವೀಕ್ಷಕಗಳು (ಅಕ್ರಾಸ್ ಟ್ರಾಕ್ ಸ್ಕ್ಯಾನರ್ಸ್): ಈ ಸಂವೇದಕಗಳು ಉಪಗ್ರಹದ ಅಥವಾ ವಿಮಾನದ ಚಲನೆಯ ಲಂಬರೇಖೆಗೆ ಅಡ್ಡಲಾಗಿ ವೀಕ್ಷಿಸುವ ವೀಕ್ಷಕಗಳು. ಇವುಗಳಲ್ಲಿ ತಿರುಗುವ ದರ್ಪಣ, ಮೋಟಾರು ಹಾಗೂ ಶೋಧಕಗಳಿರುತ್ತವೆ. ಇವು ಸಂಕೇತಗಳನ್ನು ಅಂಕಿಗಳನ್ನಾಗಿ ಪರಿವರ್ತಿಸಿ ಮುಂದೆ ಗಣಕಯಂತ್ರದಲ್ಲಿ ಪರಿಷ್ಕರಿಸಲು ನೆರವಾಗುತ್ತವೆ. ಚಲನೆಗೆ ಅಡ್ಡಲಾಗಿ ಇವು ವೀಕ್ಷಿಸುವುದರಿಂದ ಇದನ್ನು ದೂಳು ಹೊಡೆಯುವ ಪೊರಕೆಯ ಕ್ಷಿಪ್ರ ವೀಕ್ಷಕಗಳೆಂದೂ ಕರೆಯುವರು.

ಉದ್ದಪಥ ಕ್ಷಿಪ್ರ ವೀಕ್ಷಕಗಳು: (ಅಲಾಂಗ್ ಟ್ರಾಕ್ ಸ್ಕ್ಯಾನರ್ಸ್): ಇವು ಅದರ ಚಲನೆಯ ಗತಿಯಲ್ಲಿಯೇ ಭೂಭಾಗದ ಅಂಕಿ–ಅಂಶಗಳನ್ನು ಶೇಖರಿಸುತ್ತವೆ. ಇವು ಚಲನೆಯ ಗತಿಗೆ ಲಂಬವಾಗಿ ವೀಕ್ಷಿಸುತ್ತವೆ. ಈ ವ್ಯವಸ್ಥೆಯಲ್ಲಿ ದರ್ಪಣಗಳಿಲ್ಲದೆ, ಬದಲಾಗಿ ರೇಖೀಯ ಶೋಧಕಗಳಿರುತ್ತವೆ (ಲೈನರ್ ಡಿಟೆಕ್ಟರ್ಸ್). ಪ್ರತಿಯೊಂದು ಶೋಧಕವೂ ವೀಕ್ಷಿಸಲಾದ ರೇಖೆಯಲ್ಲಿ ದೊರೆಯಬಹುದಾದ ಶಕ್ತಿಯನ್ನು ಅಂಕಿಗಳ ಮೂಲಕ ದಾಖಲಿಸುತ್ತವೆ. ಇವು ಅಡ್ಡಪಥ ವೀಕ್ಷಕಗಳಿಗಿಂತ ಹಲವಾರು ವಿಧಗಳಲ್ಲಿ ಪ್ರಯೋಜನಕಾರಿಯಾಗಿವೆ. ಭೂಭಾಗದ ರೋಹಿತ ಕೋಶಗಳನ್ನು ಹೆಚ್ಚುಕಾಲ ವೀಕ್ಷಿಸಿ ಅಂಕಿ ಅಂಶಗಳನ್ನು ದಾಖಲಿಸುವುದರಿಂದ ರೆಡಿಯೋಮಾಟ್ರಿಕ್ ರೆಸೊಲ್ಯುಷನ್ ಹೆಚ್ಚಾಗಿರುತ್ತದೆ. ಈ ಶೋಧಕಗಳು ಸೂಕ್ಷ್ಮವಿದ್ಯುತ್ ತಂತುಗಳಿಂದ ಮಾಡಿರುವುದರಿಂದ ಹಗುರವೂ ಗಾತ್ರದಲ್ಲಿ ಚಿಕ್ಕವೂ ಕಡಿಮೆ ವಿದ್ಯುತ್ತನ್ನು ಬಳಸುವುದರಿಂದ ಈ ಶೋಧಕಗಳು ಚಲಿಸದೇ ಇರುವುದರಿಂದ ಹೆಚ್ಚುಕಾಲ ಬಾಳಿಕೆಬರುತ್ತವೆ.

ಈ ಎರಡೂ ಕ್ಷಿಪ್ರ ವೀಕ್ಷಕಗಳಿಗಿರುವ ವ್ಯತ್ಯಾಸವೆಂದರೆ ಅಡ್ಡಕ್ಷಿಪ್ರ ವೀಕ್ಷಕಗಳಲ್ಲಿ ತಾಂತ್ರಿಕ ವ್ಯವಸ್ಥೆ ಸಂಕೀರ್ಣವಾಗಿದ್ದು ವಿಸ್ತಾರವಾದ ಪ್ರದೇಶವನ್ನು ಕಡಿಮೆ ಕಾಲದಲ್ಲಿ ವೀಕ್ಷಿಸುತ್ತದೆ. ಆದರೆ ಉದ್ದಪಥ ಕ್ಷಿಪ್ರ ವೀಕ್ಷಕಗಳು ವೀಕ್ಷಿಸುವ ದೃಷ್ಟಿ–ಕೋನವು ಕಿರಿದಾಗಿದ್ದು ತಾಂತ್ರಿಕ ವ್ಯವಸ್ಥೆ ಸರಳವೂ, ಕಡಿಮೆ ಪ್ರದೇಶವನ್ನು ಹೆಚ್ಚುಕಾಲ ವೀಕ್ಷಿಸುವುದರಿಂದ (ಸ್ಪೆಕ್ಟ್ರಲ್ ರೆಸೊಲ್ಯುಷನ್) ಹೆಚ್ಚಾಗಿರುತ್ತದೆ. (ಕೆ.ಎಂ.)

**ಕ್ಷುದ್ರಗ್ರಹಗಳು:** ಮಂಗಳಗ್ರಹದ ಕಕ್ಷೆಗೂ ಗುರುಗ್ರಹದ ಕಕ್ಷೆಗೂ ನಡುವೆ ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಅಸಂಖ್ಯಾತ ಆಕಾಶಕಾಯಗಳು (ಆಸ್ಟಿರಾಯಿಡ್ಸ್; ಮೈನರ್ ಪ್ಲಾನೆಟ್ಸ್). ಸೌರವ್ಯೂಹದ ಇತರ ಸದಸ್ಯರಂತೆ (ಉದಾಹರಣೆಗೆ ಭೂಮಿ, ಚಂದ್ರ ಇತ್ಯಾದಿ) ಕ್ಷುದ್ರಗ್ರಹಗಳು ಸಹ ಜಡವಸ್ತುಗಳೇ (ನಕ್ಷತ್ರಗಳಲ್ಲ ಎನ್ನುವ ಅರ್ಥದಲ್ಲಿ).



ಮಂಗಳ ಮತ್ತು ಗುರುಕಕ್ಷೆಗಳ ನಡುವೆ ಒಂದು ಗ್ರಹ ಸೂರ್ಯನನ್ನು ಪರಿಭ್ರಮಿಸುತ್ತಿರಬಹುದು ಎಂಬ ಊಹೆಯನ್ನು ಮೊದಲು ಮಂಡಿಸಿದವ ಯೋಹಾನ್ ಕೆಪ್ಲರ್ (1571–1630). ಅಂದು ತಿಳಿದಿದ್ದ ಗ್ರಹಗಳು ಕೇವಲ ಆರು–ಬುಧ, ಶುಕ್ರ, ಭೂಮಿ, ಮಂಗಳ, ಗುರು ಮತ್ತು ಶನಿ. 1766ರಲ್ಲಿ ವಿಟ್ಟೆನ್‌ಬರ್ಗಿನ ಟಿಶಿಯಸ್ ಎಂಬಾತ ಈ ಗ್ರಹಗಳ ಸರಾಸರಿ ಸೌರದೂರಗಳನ್ನು ಸನ್ನಿಹಿತವಾಗಿ ಸೂಚಿಸುವ ಒಂದು ಅನುಭವಜನ್ಯ ನಿಯಮವನ್ನು ಪ್ರತಿಪಾದಿಸಿದ. ಬರ್ಲಿನ್ ವೀಕ್ಷಣಾಲಯದ ನಿರ್ದೇಶಕನಾಗಿದ್ದ ಜೆ.ಇ. ಬೋಡ್ (1747–1826) ಇದನ್ನು ಗ್ರಹಿಸಿ ಬೆಳಕಿಗೆ ತಂದ. ಇವನು ಟಿಶಿಯಸಿನ ನಿಯಮವನ್ನು ಪ್ರಸಿದ್ಧಗೊಳಿಸಿ (1772) ಅದರಲ್ಲಿರುವ ಖಾಲಿ ಜಾಗವನ್ನು ಭರ್ತಿಮಾಡುವ ಒಂದು ಗ್ರಹ ಸೌರವ್ಯೂಹದಲ್ಲಿರಬೇಕೆಂದು ಸೂಚಿಸಿದ.

ಕ್ಷುದ್ರಗ್ರಹಗಳ ಸಮಗ್ರ ದ್ರವ್ಯರಾಶಿ ಖಚಿತವಾಗಿ ತಿಳಿದಿಲ್ಲ. ಅದು ಸುಮಾರಾಗಿ ಚಂದ್ರನ 1/20ರಷ್ಟು ಅಥವಾ ಭೂಮಿಯ 1/1600ರಷ್ಟು ಇರಬಹುದೆಂದು ಅಂದಾಜು. ಈ ದೃಷ್ಟಿಯಲ್ಲಿ ಕ್ಷುದ್ರಗ್ರಹಗಳೆಲ್ಲವನ್ನು ಒಂದುಗೂಡಿಸಿ ಒಂದೇ ಗ್ರಹವನ್ನಾಗಿ ಮಾಡಿದರೂ ಅದೊಂದು ಪ್ರಥಮ ದರ್ಜೆಯ ಗ್ರಹವಾಗಲಾರದು. ಆದ್ದರಿಂದ ಸೌರವ್ಯೂಹದ ರಚನೆ ಕಾಲದಲ್ಲೇ ಭೂಮಿ, ಮಂಗಳ ಇವೇ ಮೊದಲಾದ ಗ್ರಹಗಳ ಗಾತ್ರದಲ್ಲೇ ಒಂದು ಗ್ರಹ ಮಂಗಳ ಹಾಗೂ ಗುರು ಕಕ್ಷೆಗಳ ನಡುವೆಯೂ ರಚಿತವಾಗಿದ್ದು ಮುಂದೆ ಅದೇ ಒಡೆದುಹೋಗಿ ಕ್ಷುದ್ರ ಗ್ರಹಗಳಾದುವೆನ್ನುವ ಊಹೆಗೆ ಸರಿಯಾದ ಸಮರ್ಥನೆ ದೊರೆಯುವುದಿಲ್ಲ. ಸೌರವ್ಯೂಹದ ರಚನೆಯ ಕಾಲದ ಅವಶೇಷಗಳೇ ಈ ಭಿನ್ನ ಆಕಾರಗಳ ದ್ರವ್ಯರಾಶಿಗಳ ತುಣುಕುಗಳ ಸಮುದಾಯವಾಗಿರಬೇಕು ಎಂದು ನಂಬಲಾಗಿದೆ. (ಸಿ.ಎನ್.ಎಸ್.)

**ಕ್ಷೇತ್ರ ಮಟ್ಟದ ಯೋಜನೆ:** ವಿಕೇಂದ್ರೀಕೃತ ಯೋಜನಾ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಒಂದು ಯೋಜನೆ. ಒಂದು ನಿರ್ದಿಷ್ಟ ಪ್ರದೇಶವನ್ನು ತನ್ನ ವ್ಯಾಪ್ತಿಯಲ್ಲಿ ಪಡೆದಿರುತ್ತದೆ. ಭಾರತದ ಸಂದರ್ಭದಲ್ಲಿ ಅಭಿವೃದ್ಧಿ ಮತ್ತು ಯೋಜನೆಗೆ ಸಂಬಂಧಿಸಿದಂತೆ ಕ್ಷೇತ್ರ ಎಂಬುದನ್ನು ಒಂದು ತಾಲ್ಲೂಕಿಗೆ ಅನ್ವಯಿಸಿ ಹೇಳಲಾಗುತ್ತದೆ.

ಗ್ರಾಮೀಣ ಅಭಿವೃದ್ಧಿ ಮತ್ತು ಗ್ರಾಮ ಸ್ವರಾಜ್ಯ ಸ್ಥಾಪನೆಗೆ ಕ್ಷೇತ್ರ ಅಥವಾ ತಾಲ್ಲೂಕು ಅತ್ಯಾನುಕೂಲವಾದ ಪ್ರದೇಶವಾಗಿರುತ್ತದೆ. ಇದು ಸುತ್ತಲಿನ ನೂರಾರು ಹಳ್ಳಿಗಳ ಕೇಂದ್ರ ಸ್ಥಾನವಾಗಿದ್ದು, ಆಡಳಿತದ ಕೇಂದ್ರವಾಗಿರುತ್ತದೆ. ಗ್ರಾಮೀಣ ಅಭಿವೃದ್ಧಿಯನ್ನು ಸಾಕಾರಗೊಳಿಸಲು ಕ್ಷೇತ್ರಮಟ್ಟದ ಯೋಜನೆಗಿಂತ ಉತ್ತಮವಾದ ವೇದಿಕೆ ಮತ್ತೊಂದಿರಲಾರದು. ಪ್ರತಿಯೊಂದು ಗ್ರಾಮದ ಆದ್ಯತೆಯನ್ನು ಗುರುತಿಸಲು, ಗ್ರಾಮಮಟ್ಟ ಮತ್ತು ಜಿಲ್ಲಾ ಮಟ್ಟದ ನಡುವೆ ಸಮನ್ವಯವನ್ನು ಸಾಧಿಸಲು, ಮಾನವ ಶಕ್ತಿ, ಸಾಮಗ್ರಿಗಳು ಮತ್ತು ಹಣಕಾಸಿನ ಸಂಪನ್ಮೂಲಗಳ ಸಮರ್ಪಕ ನಿರ್ವಹಣೆಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲು ತಾಲ್ಲೂಕು ಅಥವಾ ಕ್ಷೇತ್ರ, ಅತ್ಯಂತ ಸೂಕ್ತವಾದ ಪ್ರದೇಶವಾಗಿರುತ್ತದೆ.

ಭಾರತದಲ್ಲಿ (1952) ಜಾರಿಗೆ ತರಲಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಮತ್ತು 1953ರಲ್ಲಿ ಅನುಷ್ಠಾನಗೊಳಿಸಲಾದ ರಾಷ್ಟ್ರೀಯ ವಿಸ್ತರಣ ಸೇವೆ ಕ್ಷೇತ್ರಮಟ್ಟದ ಯೋಜನೆಗೆ ಸ್ಪಷ್ಟ ಉದಾಹರಣೆಗಳಾಗಿವೆ.

ಇಡೀ ಸಮುದಾಯದ ಹಿತಾಸಕ್ತಿಯಿಂದ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸರ್ಕಾರ ಮತ್ತು ಜನತೆಯ ಪ್ರಯತ್ನಗಳಿಂದ ಗ್ರಾಮೀಣ ಸಮುದಾಯವನ್ನು ಪ್ರಗತಿಪಥದಲ್ಲಿ ಮುನ್ನಡೆಸುವ ಯೋಜನೆಯನ್ನು ಸಮುದಾಯ ಅಭಿವೃದ್ಧಿ ಕಾರ್ಯಕ್ರಮವೆಂದು ವ್ಯಾಖ್ಯಾನಿಸಬಹುದು. ಈ ಕಾರ್ಯಕ್ರಮವನ್ನು 1952ರ ಅಕ್ಟೋಬರ್ 2 ರಂದು ಪ್ರಾರಂಭಿಸಲಾಯಿತು. ಇದೊಂದು ಜನತೆಯ ಚಳುವಳಿಯಾಗಿದ್ದು, ಜನರ ಸಹಭಾಗಿತ್ವವನ್ನು ಬಯಸುತ್ತದೆ. ಸರ್ಕಾರ ಹಣಕಾಸು ಮತ್ತು ತಾಂತ್ರಿಕ ಸಹಾಯವನ್ನು ನೀಡುತ್ತದೆ. 1952ರಲ್ಲಿ ಸಮುದಾಯ ಅಭಿವೃದ್ಧಿಯ ಉದ್ದೇಶದಿಂದ 55 ಕ್ಷೇತ್ರಗಳನ್ನು ಆಯ್ಕೆ ಮಾಡಲಾಯಿತು. ಪ್ರತಿಯೊಂದು ಕ್ಷೇತ್ರವು ಸು. 300 ಹಳ್ಳಿಗಳು, 1,300 ಚ.ಕಿಮೀ ವಿಸ್ತೀರ್ಣ ಮತ್ತು ಎರಡು ಲಕ್ಷ ಜನರನ್ನು ಒಳಗೊಂಡಿದ್ದಿತು. ಆದರೆ 1958ರಲ್ಲಿ ಈ ರಚನೆಯನ್ನು ಪುನರ್ವಿಮರ್ಶಿಸಲಾಯಿತು. ಅದರಂತೆ ಒಂದು ಕ್ಷೇತ್ರ ಸು. 600 ಚ.ಕಿಮೀ ವಿಸ್ತೀರ್ಣ, 110 ಹಳ್ಳಿಗಳು ಮತ್ತು ಸು. 92,000 ಜನರನ್ನು ಒಳಗೊಂಡಿರುವಂತೆ ವಿಂಗಡಿಸಲಾಯಿತು.

ಕ್ಷೇತ್ರಮಟ್ಟದ ಯೋಜನೆ ಕೈಗೊಳ್ಳುವ ಪ್ರಮುಖ ಕಾರ್ಯಕ್ರಮಗಳು ಇಂತಿವೆ;

ಕೃಷಿ ಮತ್ತು ತೋಟಗಾರಿಕೆಗೆ ಉತ್ತೇಜನ ಮತ್ತು ಅವುಗಳ ಅಭಿವೃದ್ಧಿ; ಭೂ ಸುಧಾರಣೆ ಮತ್ತು ಭೂಸಾರ ಸಂರಕ್ಷಣೆ; ಸಣ್ಣ ನೀರಾವರಿ, ಜಲ ನಿರ್ವಹಣೆ ಮತ್ತು ಜಲಾನಯನ ಅಭಿವೃದ್ಧಿ; ಪಶು ವೈದ್ಯಕೀಯ ಮತ್ತು ಪಶುಸಂಗೋಪನಾ ಸೇವೆಗಳ ನಿರ್ವಹಣೆ; ಮೀನುಗಾರಿಕೆ ಅಭಿವೃದ್ಧಿಗೆ ಉತ್ತೇಜನ ನೀಡುವುದು; ಗ್ರಾಮೀಣ ಮತ್ತು ಗುಡಿಕೈಗಾರಿಕೆಗಳಿಗೆ ಉತ್ತೇಜನ ನೀಡುವಿಕೆ; ಗ್ರಾಮೀಣ ಗೃಹ ನಿರ್ಮಾಣ ಯೋಜನೆಗಳ ಅನುಷ್ಠಾನ ಮತ್ತು ಗ್ರಾಮ ಠಾಣೆಯ ಪರಿಮಿತಿಗಳಾಚೆಯ ಗ್ರಾಮಗಳಲ್ಲಿ ಮನೆ ನಿವೇಶನಗಳ ಹಂಚಿಕೆ; ಗ್ರಾಮೀಣ ನೀರು ಪೂರೈಕೆ ಯೋಜನೆಗಳ ವ್ಯವಸ್ಥೆ, ದುರಸ್ತಿ ಮತ್ತು ನಿರ್ವಹಣೆ, ಗ್ರಾಮೀಣ ನೈರ್ಮಲ್ಯ ಯೋಜನೆಗಳ ಅನುಷ್ಠಾನ; ಸಾಮಾಜಿಕ ಅರಣ್ಯ ನಿರ್ಮಾಣ, ಸೌದೆ, ನೆಡುತೋಪುಗಳು ಮತ್ತು ಮೇವು ಅಭಿವೃದ್ಧಿ ಮತ್ತು ಹೊಲಗದ್ದೆ ಅರಣ್ಯ ನಿರ್ಮಾಣಕ್ಕೆ ಉತ್ತೇಜನ; ಸಾಂಪ್ರದಾಯಿಕವಲ್ಲದ ಶಕ್ತಿಮೂಲಗಳಿಗೆ ಉತ್ತೇಜನ ಮತ್ತು ಅವುಗಳ ಅಭಿವೃದ್ಧಿ; ಬಡತನ ನಿವಾರಣಾ ಕಾರ್ಯಕ್ರಮಗಳ ಅನುಷ್ಠಾನ; ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ಉತ್ತೇಜನ, ರೋಗನಿರೋಧಕ ಮತ್ತು ಲಸಿಕೆ ಕಾರ್ಯಕ್ರಮಗಳಿಗೆ ಉತ್ತೇಜನ; ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಉತ್ತೇಜನ, ಶಾಲಾ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಕಾರ್ಯಕ್ರಮಗಳಿಗೆ ಉತ್ತೇಜನ; ಅತ್ಯಾವಶ್ಯಕ ಸರಕುಗಳ ಸಾರ್ವಜನಿಕ ವಿತರಣೆ; ಗ್ರಾಮೀಣ ಚಟುವಟಿಕೆಗಳಿಗೆ ಉತ್ತೇಜನ; ಸಹಕಾರ ಚಟುವಟಿಕೆಗಳಿಗೆ ಉತ್ತೇಜನ; ಗ್ರಂಥಾಲಯಗಳ ಅಭಿವೃದ್ಧಿ. (ಎಚ್.ಆರ್.ಕೆ.)

**ಕ್ಷೇತ್ರಕಾರ್ಯ:** ಮಾನವನ ಆರ್ಥಿಕ ಸಾಮಾಜಿಕ ವ್ಯವಸ್ಥೆಗಳನ್ನು, ಸಂಸ್ಕೃತಿಯನ್ನು ಕುರಿತಂತೆ ಅವನ ಸಹಜ ನೆಲೆಯಲ್ಲೆ ನಡೆಸುವ ಅಧ್ಯಯನ (ಫೀಲ್ಡ್ ವರ್ಕ್). ಸಮಾಜದ ಅಖಂಡ ದೃಷ್ಟಿಯನ್ನು ಪಡೆಯುವ ಉದ್ದೇಶದಿಂದ ನಡೆಸುವ ಸಮಾಜ ವೀಕ್ಷಣೆ, ಅಂತರಂಗವನ್ನರಿಯುವ ಪ್ರಯತ್ನ. ಮಾನವ ಜೀವಿಯನ್ನು ಪರೀಕ್ಷೆಗೆ ಒಡ್ಡುವ ಜೀವವಿಜ್ಞಾನಿಯಂತೆ ಸಮಾಜವಿಜ್ಞಾನಿ ಸಮಾಜವನ್ನು ವೀಕ್ಷಣೆಗೆ ಒಳಪಡಿಸುತ್ತಾನೆ. ಸಮಾಜವೇ ಅವನಿಗೆ ಅಣಿಯಾಗಿ ಒದಗಿಬರುವ ಪ್ರಯೋಗಾಲಯ.

ಸಾಂಸ್ಕೃತಿಕ ಮಾನವಶಾಸ್ತ್ರಜ್ಞರೂ ಭೂಗೋಳ ವಿಜ್ಞಾನಿಗಳೂ ಬಹಳ ಮಟ್ಟಿಗೂ ಸಮಾಜ ಶಾಸ್ತ್ರಜ್ಞರೂ ಸ್ವಲ್ಪ ಮಟ್ಟಿಗೂ ಕ್ಷೇತ್ರಾಧ್ಯಯನ ಮಾರ್ಗವನ್ನು ಹಿಂದಿನಿಂದಲೂ ಅನುಸರಿಸುತ್ತ ಬಂದಿದ್ದಾರೆ. ಭೂಗೋಳ ವಿಜ್ಞಾನ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಸಮಾಜವಿಜ್ಞಾನ ಕ್ಷೇತ್ರಕಾರ್ಯದ ಇತಿಹಾಸ, ಅದು ತಂದೊಡ್ಡುವ ಸಮಸ್ಯೆಗಳು, ಅದನ್ನು ಅನುಸರಿಸುವ ವಿಧಾನ–ಈ ವಿಚಾರಗಳಲ್ಲಿ ಮಾನವಶಾಸ್ತ್ರಕ್ಕೂ ಸಮಾಜಶಾಸ್ತ್ರವೇ ಮೊದಲಾದ ಶಾಸ್ತ್ರಗಳಿಗೂ ವ್ಯತ್ಯಾಸವುಂಟು. ಆದರೆ ಈಚೆಗೆ ಈ ವ್ಯತ್ಯಾಸ ಕಡಿಮೆಯಾಗುತ್ತಿದೆ. ಸಮಾಜಶಾಸ್ತ್ರಗಳ ಅಧ್ಯಯನದಲ್ಲಿ ಗಣಿತ ಮತ್ತು ಸಂಖ್ಯಾವಿಜ್ಞಾನಗಳ ಉಪಯೋಗ ಹೆಚ್ಚಾಗುತ್ತಿದೆ. ವಿಷಯ ಸಂಗ್ರಹಣ ವಿಧಾನದಲ್ಲಿಯೂ ಹಲವು ಮಾರ್ಪಾಡುಗಳಾಗಿವೆ. ಸಮೀಕ್ಷೆ ಹಾಗೂ ಕ್ಷೇತ್ರ ಅಧ್ಯಯನಗಳ ವಿಷಯ ಸಂಗ್ರಹಣೆಯಲ್ಲಿ ಪ್ರಾಮುಖ್ಯ ಗಳಿಸುತ್ತಿವೆ. ಏಕೆಂದರೆ ಅನೇಕ ಲೇಖನಗಳನ್ನು ಬರೆದ ಗ್ರಂಥಗಳು ಮತ್ತು ಲೇಖನಗಳಿಂದ ಕೂಡಿದ ಗ್ರಂಥಾಲಯಗಳು ಅನುಷಂಗಿಕ ಸಾಮಗ್ರಿಯನ್ನು ಮಾತ್ರ ಒದಗಿಸುತ್ತವೆ. ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳು ಸಂಶೋಧಕರಿಗೆ ಮೂಲ ಸಾಮಗ್ರಿಯನ್ನೊದಗಿಸಿ ಸಂಶೋಧನೆಗೆ ಒಳಗಾದ ಮುನ್ಸೂಚನೆ, ಸಾರ್ವದೇಶಿಕ ಹಾಗೂ ಸಾರ್ವಕಾಲಿಕ ನಿಯಮಗಳ ರಚನೆ ಇವು ಸಾಧ್ಯವಾಗಿರುವುದು ಸಮೀಕ್ಷೆ ಮತ್ತು ಕ್ಷೇತ್ರ ಕಾರ್ಯಗಳಿಂದ.

ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳು ವೈಜ್ಞಾನಿಕ ಅನುಸಂಧಾನದ ಮುಖ್ಯ ವಿಧಾನಗಳಾಗಿವೆ. ಇವು ಆಧಾರಕಲ್ಪನೆಗಳ ಸತ್ಯಾಸತ್ಯತೆಗಳನ್ನು ಪರೀಕ್ಷಿಸುವುದಕ್ಕೂ ಸಾಮಾಜಿಕ ನಡವಳಿಕೆಗಳನ್ನು ಸಂಖ್ಯಾವಿಜ್ಞಾನದ ಅನುಸಂಧಾನದ ಮೂಲಕ ವಿವೇಚಿಸುವುದಕ್ಕೂ ಅನುವಾಗಿ ಒದಗಿಬರುತ್ತವೆ. ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳ ನಡುವೆ ಕೆಲವು ತಾಂತ್ರಿಕ ವ್ಯತ್ಯಾಸಗಳುಂಟು. ಸಮೀಕ್ಷೆಯ ವಿಧಾನದಲ್ಲಿ ಕ್ಷೇತ್ರ ಬಹು ವ್ಯಾಪಕವಾದುದ್ದು. ತನ್ನ ಅಧ್ಯಯನಕ್ಷೇತ್ರಕ್ಕೊಳಪಡದ ಇತರ ಭಾಗಗಳನ್ನು ಅದು ಪ್ರತಿನಿಧಿಸುತ್ತದೆ. ಕ್ಷೇತ್ರ ಅಧ್ಯಯನಕ್ಕೆ ಪ್ರಾತಿನಿಧಿಕತೆಯಿಲ್ಲ. ಬದಲಾಗಿ ಅದು ಒಂದು ನಿರ್ದಿಷ್ಟ ಕ್ಷೇತ್ರದ ಬಗ್ಗೆ ಆಳವಾದ ಅಧ್ಯಯನ ಮಾಡುವ ವಿಧಾನ. ಈ ವಿಧಾನದ ಅನುಸರಣೆಯಿಂದ ವ್ಯಕ್ತಿಯ ಸಂದರ್ಶನ ಮತ್ತು ಸಂಶೋಧನೆಗೆ ಒಳಪಟ್ಟ ಸಮಸ್ಯೆಯ ಪರಿಪೂರ್ಣ ವಿವೇಚನೆಗೆ ಸಾಧ್ಯವಾಗುತ್ತದೆ.

ಕ್ಷೇತ್ರಕಾರ್ಯದಲ್ಲಿ ನಾಲ್ಕು ಹಂತಗಳುಂಟು: 1. ಪೂರ್ವಭಾವಿ ಯೋಜನೆ 2. ರೂಪರೇಖೆಯ ಅಂತಿಮ ರಚನೆ 3. ಕ್ಷೇತ್ರಕಾರ್ಯಾಚರಣೆ ಮತ್ತು 4. ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ.

1. ಪೂರ್ವಭಾವಿ ಯೋಜನೆ: ಕ್ಷೇತ್ರ ಅಧ್ಯಯನಕ್ಕೆ ಇಳಿಯುವವನು ತಾನು ಮಾಡಬೇಕಾಗಿರುವ ಅಧ್ಯಯನದ ಬಗ್ಗೆ ಒಂದು ಪೂರ್ವಭಾವಿ ಯೋಜನೆಯನ್ನು ರಚಿಸುವುದು ಬಹಳ ಆವಶ್ಯಕವಾಗುತ್ತದೆ. ಕ್ಷೇತ್ರ ಅಧ್ಯಯನದ ವ್ಯಾಪ್ತಿ, ಉದ್ದೇಶಗಳು, ಅದಕ್ಕೆ ಬೇಕಾಗುವ ಸಮಯ, ಹಣಕಾಸು ಮತ್ತು ಸಿಬ್ಬಂದಿ–ಇವೇ ಮುಂತಾದವುಗಳ ಬಗ್ಗೆ ತಾತ್ಕಾಲಿಕ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಯೋಜನೆಯನ್ನು ವಿಶ್ವಾಸಾರ್ಹ ಆಧಾರಗಳ ಸಹಾಯದಿಂದ ರೂಪಿಸಲು ಸಾಧ್ಯವಿಲ್ಲದುದರಿಂದ ಕ್ಷೇತ್ರಕಾರ್ಯನಿರತ ವ್ಯಕ್ತಿಗಳು ಯಾವ ಪಕ್ಷಪಾತವೂ ಇಲ್ಲದೆ ವಾಸ್ತವ ಸಂಗತಿಯ ಕಡೆ ಗಮನ ಹರಿಸುವುದು ಮುಖ್ಯ ಕರ್ತವ್ಯ. ಅಧ್ಯಯನದ ಉದ್ದೇಶಗಳೇನೆಂಬ ದೃಷ್ಟಿಯಿಂದ ಕ್ಷೇತ್ರದ ಆಯ್ಕೆ ಮಾಡಿಕೊಳ್ಳಬೇಕು.

2. ರೂಪರೇಖೆಯ ಅಂತಿಮ ರಚನೆ: ಆರಿಸಿದ ಕ್ಷೇತ್ರದಲ್ಲಿ ಪೂರ್ವಭಾವಿ ಯೋಜನೆಗೆ ಅನುಸಾರವಾಗಿ ಅಧ್ಯಯನವನ್ನು ಮುಂದುವರಿಸಿದಂತೆ ಲಭ್ಯವಾಗುವ ನಂಬಲರ್ಹ ಆಧಾರಗಳಿಗೆ ಅನುಗುಣವಾಗಿ ಬಲವಾದ ಪೂರ್ವಭಾವಿ ಯೋಜನೆಯೇ ರೂಪರೇಖೆ. ಕ್ಷೇತ್ರ ಅಧ್ಯಯನದ ವ್ಯಾಪ್ತಿ, ಉದ್ದೇಶಗಳು, ಅಧ್ಯಯನಕ್ಕೆ ಬೇಕಾಗುವ ಹಣಕಾಸು, ಸಿಬ್ಬಂದಿ, ಕ್ಷೇತ್ರಕಾರ್ಯದ ವೇಳಾಪಟ್ಟಿ ಇವೇ ಅಲ್ಲದೆ ಏನನ್ನು ನಿರೀಕ್ಷಿಸಬಹುದು ಮತ್ತು ನಾವು ಯಾವ ರೀತಿ ಕಾರ್ಯನಿರತರಾಗಬೇಕು ಎಂಬುದು ಖಚಿತವಾಗುತ್ತದೆ.

3. ಕಾರ್ಯಾಚರಣೆ: ಕ್ಷೇತ್ರ ಅಧ್ಯಯನವನ್ನು ನಡೆಸುವ ಸಂದರ್ಭದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಬಿಡಿಸುವುದು ಮೂರನೆಯ ಹಂತ. ಸಾಮಾನ್ಯವಾಗಿ ಈ ಸಮಸ್ಯೆಗಳು ಅನುಸಂಧಾನ ಅಥವಾ ವಿಷಯ ಸಂಗ್ರಹಣೆಯ ವಿಧಾನಗಳಿಗೆ ಸಂಬಂಧಪಟ್ಟಿರುತ್ತವೆ. ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂಲ ವಿಷಯವನ್ನು ಸಂಗ್ರಹಿಸುವಾಗ ಕೆಳಗೆ ಕೊಟ್ಟಿರುವ ವಿಧಾನಗಳನ್ನು ಸಾಮಾನ್ಯವಾಗಿ ಅನುಸರಿಸಲಾಗುತ್ತದೆ. 1 ವೈಯಕ್ತಿಕ

ಸಂದರ್ಶನವಿಧಾನ 2 ಅನುಸೂಚಿ ವಿಧಾನ 3 ಪ್ರಶ್ನಾವಳಿ ವಿಧಾನ. ಕ್ಷೇತ್ರ ವಿಷಯವನ್ನು ಸಂಗ್ರಹಿಸಲು ವೈಯಕ್ತಿಕ ಸಂದರ್ಶನ ಒಂದು ಕ್ರಮಬದ್ಧ ವಿಧಾನ. ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟ ಜನರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ವಿಷಯವನ್ನು ಸಂಗ್ರಹಿಸುವುದರಿಂದ ಅನೇಕ ವಾಸ್ತವಾಂಶಗಳು ಬೆಳಕಿಗೆ ಬರುತ್ತವೆ. ಉದಾಹರಣೆಗೆ: ಆರ್ಥಿಕ ಯೋಜನೆ ಮತ್ತು ಇತರ ಅಭಿವೃದ್ಧಿ ಪ್ರಯತ್ನಗಳ ಬಗ್ಗೆ ಜನರ ಮನೋಭಾವವನ್ನು ಸ್ಪಷ್ಟವಾಗಿ ತಿಳಿಯಬಹುದು. ಮೇಲಾಗಿ ವೈಯಕ್ತಿಕ ಸಂದರ್ಶನ ನಡೆಸುವುದರಿಂದ ಒಂದು ಕ್ಷೇತ್ರದ ಆರ್ಥಿಕ ಸ್ಥಿತಿಗಳ ಮತ್ತು ಇತರ ಅಂಶಗಳ–ಇವು ಪ್ರಾಕೃತಿಕ, ಸಾಮಾಜಿಕ ಅಥವಾ ಆರ್ಥಿಕ ಅಂಶಗಳಾಗಿರಬಹುದು–ನಡುವೆ ಸಂಬಂಧ ಕಲ್ಪಿಸಬಹುದು. ಜನರ ಮನೋಭಾವಕ್ಕೆ ಅನುಗುಣವಾಗಿ ಕೇಳಿದ ಪ್ರಶ್ನೆಗಳಿಂದ ದೊರಕುವ ವಿಷಯ ವಿಶ್ವಾಸಾರ್ಹವಾದುದ್ದು. ಇದರಿಂದ ಲಭ್ಯವಾಗುವ ಸ್ವಂತ ಅನುಭವದ ಸಹಾಯದಿಂದ ಕಲ್ಪನೆಗಳ ಸತ್ಯಾಸತ್ಯತೆಗಳನ್ನು ಪರೀಕ್ಷಿಸುವುದು ಸುಲಭವಾಗುತ್ತದೆ. ವೈಯಕ್ತಿಕಸಂದರ್ಶನದ ಜೊತೆಗೆ ಅನುಸೂಚಿಗಳನ್ನು ರಚಿಸಿ ಅವುಗಳ ಸಹಾಯವನ್ನು ಪಡೆಯುವುದು ಸಾಮಾನ್ಯವಾಗಿ ರೂಢಿಯಲ್ಲಿದೆ. ಅನುಸೂಚಿಗಳು ಸಂದರ್ಶನಕಾರ್ಯವನ್ನು ಒಂದು ಪರಿಮಿತಿಗೆ ಒಳಪಡಿಸಿ, ವಿಷಯ ಸಂಗ್ರಹಣೆಯಿಂದ ಕ್ಷೇತ್ರ ಅಧ್ಯಯನದ ಉದ್ದೇಶಗಳು ಪೂರೈಸಲು ನೆರವಾಗುತ್ತವೆ. ಸಂದರ್ಶನದಿಂದ ದೊರಕುವ ಮಾಹಿತಿಗಳನ್ನು ಅನುಸೂಚಿಗಳಲ್ಲಿ ಗುರುತು ಮಾಡಿಕೊಳ್ಳುವುದರಿಂದ ಅನಂತರ ವಿಶ್ಲೇಷಣೆ ಕಷ್ಟವಾಗದು. ಕ್ಷೇತ್ರದ ಜನರಿಗೆ ಅಂಚೆಯ ಮೂಲಕ ಪ್ರಶ್ನಾವಳಿಗಳನ್ನು ಕಳುಹಿಸಿ ವಿಷಯ ಸಂಗ್ರಹಿಸುವುದು ಮತ್ತೊಂದು ವಿಧಾನ. ಅಧ್ಯಯನ ನಡೆಸಬೇಕಾದ ಕ್ಷೇತ್ರ ವಿಸ್ತೃತವಾಗಿದ್ದು, ಅಲ್ಲಿಯ ಜನ ಸುಶಿಕ್ಷಿತರೆಂದು ಕಂಡುಬಂದಾಗ ಈ ವಿಧಾನವನ್ನು ಅನುಸರಿಸಲಾಗುತ್ತದೆ. ಸ್ಪಷ್ಟ ರೀತಿಯಲ್ಲಿ ರಚಿಸಲಾದ ಪ್ರಶ್ನಾವಳಿಗಳಿಂದ ಸಮರ್ಪಕವಾಗಿ ವಿಷಯ ಸಂಗ್ರಹಿಸಬಹುದು ಮತ್ತು ಶ್ರಮ, ಕಾಲ ಹಾಗೂ ಹಣ ವ್ಯಯಗಳನ್ನೂ ಕಡಿಮೆ ಮಾಡಬಹುದು.

4. ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ: ಇವು ಕ್ಷೇತ್ರ ಅಧ್ಯಯನದ ಅಂತಿಮ ಹಂತ. ದೊರಕಿರುವ ವಿವರಗಳನ್ನೆಲ್ಲ ವಿಶ್ಲೇಷಿಸುವುದರಿಂದ ಮುಂದಿರುವ ಸಮಸ್ಯೆಗಳನ್ನು ಬಿಡಿಸಿದಂತಾಗುತ್ತದೆ. ಇಲ್ಲವೆ ಆಧಾರಕಲ್ಪನೆಗಳನ್ನು ಪರೀಕ್ಷಿಸಿದಂತಾಗುತ್ತದೆ. ವಿಷಯ ವಿಶ್ಲೇಷಣೆ ಮತ್ತು ನಿರೂಪಣೆಯಲ್ಲಿ ಸಂಖ್ಯಾವಿಜ್ಞಾನದ ಸಹಾಯದಿಂದ ಹೆಚ್ಚು ನಿಖರತೆಯನ್ನು ಪಡೆಯಬಹುದು. ತತ್ಪರಿಣಾಮವಾಗಿ ಕ್ಷೇತ್ರ ಅಧ್ಯಯನದ ಮುಖ್ಯ ಉದ್ದೇಶದ ಸಾಧನೆಯಾದಂತಾಗುತ್ತದೆ.

ಕ್ಷೇತ್ರ ಅಧ್ಯಯನದ ಕೆಲವು ಮಿತಿಗಳು: ಕ್ಷೇತ್ರ ಅಧ್ಯಯನದಲ್ಲಿ ಕೆಲವು ಮಿತಿಗಳಿವೆ. ಇವು ಸಾಮಾನ್ಯವಾಗಿ ವಿಷಯ ಸಂಗ್ರಹಣ ವಿಧಾನಗಳಲ್ಲಿ ಉಂಟಾಗುವ ಕೆಲವು ನ್ಯೂನತೆಗಳಿಂದ ಉದ್ಭವಿಸುವಂಥವು. ಸಂದರ್ಶಕರು ಕ್ಷೇತ್ರದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳದಿರುವುದು, ಕ್ಷೇತ್ರದ ಜನರ ಮನೋಭಾವವನ್ನನುಸರಿಸಿ ಪ್ರಶ್ನೆಗಳನ್ನು ಕೇಳದಿರುವುದು, ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡದಿರುವುದು ಮುಂತಾದವು ವೈಯಕ್ತಿಕ ಸಂದರ್ಶನ ವಿಧಾನವನ್ನು ವಿಫಲಗೊಳಿಸುತ್ತವೆ. ಇಂಥ ಸನ್ನಿವೇಶದಲ್ಲಿ ಸಂಗ್ರಹಿಸುವ ಮಾಹಿತಿಗಳಂತೂ ಸಂಶಯಾಸ್ಪದವಾಗಿರುತ್ತವೆ. ಅಸಮರ್ಪಕ ರೀತಿಯಲ್ಲಿ ರಚಿಸಲಾದ ಅನುಸೂಚಿಗಳು ಸಂದರ್ಶಕರನ್ನು ತಪ್ಪುದಾರಿಗೆ ಎಳೆದು ಇಡೀ ಕ್ಷೇತ್ರ ಅಧ್ಯಯನವನ್ನೇ ನಿಷ್ಪ್ರಯೋಜನಗೊಳಿಸುತ್ತವೆ. ಇದೇ ರೀತಿ ಸ್ಥಳೀಯ ಭಾಷೆ, ಸರಳತೆ ಹಾಗೂ ಸ್ಪಷ್ಟತೆಗೆ ಗಮನ ಕೊಡದೆ, ಪ್ರಾಮುಖ್ಯತೆಗೆ ತಕ್ಕಂತೆ ಪ್ರಶ್ನೆಗಳನ್ನು ಜೋಡಿಸದೆ ಮತ್ತು ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸದೆ ರಚಿಸಲಾಗುವ ಪ್ರಶ್ನಾವಳಿಗಳು ಕ್ಷೇತ್ರ ಅಧ್ಯಯನವನ್ನು ಫಲಪ್ರದಗೊಳಿಸಲಾರವು. ಕ್ಷೇತ್ರ ಕಾರ್ಯನಿರತರ ಆಲಸ್ಯ ಹಾಗೂ ಜಡತಾ ಮನೋಭಾವ, ಪಕ್ಷಪಾತ ಧೋರಣೆ, ಅಸಮರ್ಪಕ ವಿಷಯವಿಶ್ಲೇಷಣೆ ಮತ್ತು ನಿರೂಪಣೆ ಮುಂತಾದವು ಕ್ಷೇತ್ರ ಅಧ್ಯಯನವನ್ನು ನಿಷ್ಪ್ರಯೋಜಕವನ್ನಾಗಿ ಮಾಡುತ್ತವೆ.

ಕ್ಷೇತ್ರ ಅಧ್ಯಯನದಲ್ಲಿ ಮೇಲೆ ಹೇಳಿರುವ ಮಿತಿಗಳಿದ್ದಾಗ್ಯೂ ಸಂಶೋಧನ ಕಾರ್ಯದಲ್ಲಿ ಅದನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಲಾಗುತ್ತಿದೆ. ಕ್ಷೇತ್ರ ಅಧ್ಯಯನದಿಂದ ಅನೇಕ ಪ್ರಯೋಜನಗಳು ಲಭ್ಯವಾಗುತ್ತವೆ. ಮೇಲೆ ಹೇಳಿದ ಮಿತಿಗಳು ಅನಿವಾರ್ಯವೇನಲ್ಲ. ಕುಶಲರಾದ ಹಾಗೂ ತರಬೇತು ಪಡೆದ ವ್ಯಕ್ತಿಗಳನ್ನು ಸಂದರ್ಶಕರನ್ನಾಗಿ ನೇಮಿಸುವುದರಿಂದಲೂ ಅನುಸೂಚಿ ಮತ್ತು ಪ್ರಶ್ನಾವಳಿಗಳನ್ನು ಜಾಣ್ಮೆಯಿಂದ ರಚಿಸುವುದರಿಂದಲೂ ಕ್ಷೇತ್ರಕಾರ್ಯನಿರತರು ನಿಷ್ಪಕ್ಷಪಾತ ಧೋರಣೆಯನ್ನು ತಳೆಯುವುದರಿಂದಲೂ ಮೇಲಿನ ಮಿತಿಗಳನ್ನು ನಿವಾರಿಸಿ ಕ್ಷೇತ್ರ ಅಧ್ಯಯನವನ್ನು ಯಶಸ್ವಿಗೊಳಿಸಬಹುದು. ಯಶಸ್ವೀಕಾರ್ಯಾಚರಣೆಯಿಂದ ಸಂಶೋಧನ ಕ್ಷೇತ್ರದಲ್ಲಿ ಕ್ಷೇತ್ರ ಅಧ್ಯಯನದ ಮಹತ್ತ್ವ ಅಧಿಕಗೊಂಡಿರುವುದಲ್ಲದೆ ಸಾಮಾಜಿಕ ಶಾಸ್ತ್ರಗಳ ಅಭಿವೃದ್ಧಿಯನ್ನು ಸಾಧಿಸಲು ನೆರವಾಗಿವೆ. (ಜಿ.ಟಿ.ಎಚ್.;ಎಂ.ವಿ.ಜಿ.)

**ಕ್ಷೇತ್ರ ಸ್ವರೂಪ ಸರ್ವೇಕ್ಷಣ ಮತ್ತು ಚಿತ್ರಣ:** ಭೂಮೇಲ್ಮೈಯಲ್ಲಿನ ವಿವಿಧ ಲಕ್ಷಣಗಳನ್ನೂ ವಿನ್ಯಾಸಗಳನ್ನೂ ಅಳೆದು ಅವನ್ನು ಪೂರ್ವವ್ಯಾಖ್ಯಿತ ಮಾನಕ ಹಾಗೂ ಸಂಕೇತಗಳ ಅನುಸಾರ ಕಾಗದದ ಮೇಲೆ ಚಿತ್ರಿಸುವ ಕ್ರಿಯೆ (ಟೋಪೊಗ್ರಾಫಿಕಲ್ ಸರ್ವೇಯಿಂಗ್ ಅಂಡ್ ಮ್ಯಾಪಿಂಗ್). ಪ್ರಕೃತಿದತ್ತ ನದಿ, ಕಣಿವೆ, ಕಾಡು, ಪರ್ವತ, ಸಾಗರ ಇವೇ ಮೊದಲಾದವೂ ಮಾನವನಿರ್ಮಿತ ನಗರ, ಗ್ರಾಮ, ಸೇತುವೆ, ಸುರಂಗ, ರಸ್ತೆ ಇವೇ ಮೊದಲಾದವೂ ಭೂಮೇಲ್ಮೈಯಲ್ಲಿನ ವಿವಿಧ ಲಕ್ಷಣಗಳು. ಇವು ಒಂದಕ್ಕೊಂದು ಸಾಪೇಕ್ಷವಾಗಿ ಕ್ಷೇತ್ರಸ್ವರೂಪ ಎನಿಸಿಕೊಳ್ಳುತ್ತವೆ.

ಕ್ಷೇತ್ರಸ್ವರೂಪ ವಿವರಣೆ ಭೂಮಿಗೆ ಸೀಮಿತವಲ್ಲ. ಸಾಗರತಳದ ಕ್ಷೇತ್ರಸ್ವರೂಪವನ್ನು ಇತ್ತೀಚೆಗೆ ಹೆಚ್ಚು ಆಸಕ್ತಿಯಿಂದ ಮೋಜಣಿ ನಡೆಸುತ್ತಿದ್ದಾರೆ. ಇದರಿಂದ ಸಮುದ್ರತಳದಲ್ಲಿ ಭೂಮಿಯ ಮೇಲ್ಮೊಗಟೆಯಲ್ಲಿರುವಂತೆಯೇ ಏರು ತಗ್ಗುಗಳು, ಸ್ತರಭಂಗ (ಫಾಲ್ಟ್), ಪ್ರಸ್ಥಭೂಮಿ, ಕಣಿವೆ, ಅಗ್ನಿಪರ್ವತದ ದಿಬ್ಬಗಳು ಇತ್ಯಾದಿ ಇವೆ ಎಂದು ತಿಳಿದುಬಂದಿದೆ. ಚಂದ್ರನ ಕ್ಷೇತ್ರ ಸ್ವರೂಪವನ್ನು ಸಹ ಈಚೆಗೆ ವರ್ಣಿಸಲು ಸಾಧ್ಯವಾಗಿದೆ.

ನಿಸರ್ಗದ ಹಾಗೂ ಜೀವಿಗಳ ಪ್ರಭಾವಕ್ಕೆ ಸದಾ ಒಳಪಟ್ಟುಕೊಂಡಿರುವ ಭೂಮಿಯ ಮೇಲಿನ ಯಾವುದೇ ಕ್ಷೇತ್ರಸ್ವರೂಪ ಶಾಶ್ವತವಲ್ಲ. ಈ ರೀತಿಯ ಬದಲಾವಣೆಗಳನ್ನು ಕ್ರಮೇಣವಾದ ಹಂತಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ ನದಿಯ ಕ್ಷೇತ್ರ ಸ್ವರೂಪ ಚರಿತ್ರೆಯನ್ನು ಮೂರು ಹಂತಗಳಲ್ಲಿ ಕಾಣಬಹುದು. ಬಾಲ್ಯ, ಪ್ರೌಢಾವಸ್ಥೆ ಮತ್ತು ವೃದ್ಧಾಪ್ಯ.

ಸರ್ವೇಕ್ಷಣ ವಿಧಾನ: ನೆಲ ಸರ್ವೇಕ್ಷಣ (ಗ್ರೌಂಡ್ ಸರ್ವೇಯಿಂಗ್) ಮತ್ತು ಅಂತರಿಕ್ಷ ಸರ್ವೇಕ್ಷಣ (ಏರಿಯಲ್ ಸರ್ವೇಯಿಂಗ್) ಎನ್ನುವ ಎರಡು ವಿಧಾನಗಳುಂಟು. ಇವುಗಳಲ್ಲಿ ಯಾವುದನ್ನು ಆಯ್ಕೆಮಾಡಬೇಕು ಎನ್ನುವುದು ಅಂತಿಮವಾಗಿ ಆರ್ಥಿಕ ಅಂಶಗಳನ್ನು ಅವಲಂಬಿಸಿದೆ.

ಚಿತ್ರಣ : ಕ್ಷೇತ್ರ ನಕ್ಷೆ ಎಂದರೆ ಭೂಪಟವನ್ನು ತಯಾರಿಸಲು ಹಲವು ನಿಯಮಗಳನ್ನು ಅನುಸರಿಸಬೇಕು. ಮೊದಲನೆಯದು. ಸೂಕ್ತ ಮಾನಕದ ಆಯ್ಕೆ. ಎಷ್ಟು ಭೂಪ್ರದೇಶವನ್ನು ಪಟದ ಎಷ್ಟು ವಿಸ್ತೀರ್ಣದಲ್ಲಿ ಸಂಕುಚಿಸಿ ಅಳವಡಿಸಬೇಕು ಎನ್ನುವ ಅಂಶವನ್ನು ಇದು ಅವಲಂಬಿಸಿದೆ. ಇದರೊಂದಿಗೆ ಪಟದ ಗಾತ್ರ ಉಪಯೋಗಕ್ಕೆ ಅನುಕೂಲವಾಗಿರಬೇಕು. ಒಂದು ದತ್ತ ಪಟದಲ್ಲಿ (ಪಟದ ವಿಸ್ತೀರ್ಣ ಸ್ಥಿರ) ಮಾನಕದ ಪ್ರಮಾಣಮೌಲ್ಯ ಕಿರಿದಾದಷ್ಟೂ ನೆಲದ ಅಧಿಕಾಂಶವನ್ನು ಅಲ್ಲಿ ಚಿತ್ರಿಸುವುದು ಸಾಧ್ಯ. ಆದರೆ ಇಂಥಲ್ಲಿ ಸಹಜವಾಗಿ, ವಿವರಗಳು ಕಡಿಮೆ ಆಗುತ್ತವೆ. ಅದೇ ಪಟದಲ್ಲಿ ಮಾನಕದ ಪ್ರಮಾಣ ಮೌಲ್ಯ ಹಿರಿದಾದಷ್ಟೂ ಚಿತ್ರಣಗೊಳ್ಳುವ ನೆಲದ ಅಂಶಕಡಿಮೆ. ಆದರೆ ಇಲ್ಲಿ ವಿವರಗಳು ಸಹಜವಾಗಿ ಹೆಚ್ಚಾಗಿ ಇರುವುವು. ಉದಾಹರಣೆಗೆ 1ಸೆಂಮೀ = 1 ಕಿಮೀ (1 : 63,360) ಪಟದಲ್ಲಿ ದೊರೆಯುವ ನೆಲದ ವಿಸ್ತೀರ್ಣಕ್ಕಿಂತ ಹೆಚ್ಚು ವಿಸ್ತೀರ್ಣ 1ಸೆಂಮೀ = 6.4 ಕಿಮೀ (1:2,53,440) ಮಾನಕದ ಪಟದಲ್ಲಿ ಪಡೆಯಬಹುದು. ಆದರೆ ಮೊದಲನೆಯದರಲ್ಲಿ ದೊರೆಯುವ ವಿವರಗಳು ಎರಡನೆಯದರಲ್ಲಿ ದೊರೆಯುವವುಗಳಿಗಿಂತ ಅಧಿಕ.

ಎರಡನೆಯದು ಸಮೋನ್ನತಿ ರೇಖೆಗಳು. ಮೂರು ಆಯಾಮಗಳ ಭೂಮಿಯನ್ನು ಎರಡು ಆಯಾಮಗಳ ಪಟದ ಮೇಲೆ ಮೂಡಿಸುವಾಗ ಏರು ತಗ್ಗುಗಳನ್ನು ಅಳವಡಿಸಲು ಬಳಸುವ ತಂತ್ರ ಸಮೋನ್ನತಿ ರೇಖೆಗಳ ಚಿತ್ರಣ. ಸಮುದ್ರಮಟ್ಟದಿಂದ ದತ್ತ ಸಮೋನ್ನತಿಗಳಲ್ಲಿರುವ ಬಿಂದುಗಳನ್ನು ಜೋಡಿಸುವ ವಕ್ರರೇಖೆ ಸಮೋನ್ನತಿರೇಖೆ. ಉದಾಹರಣೆಗೆ ಒಂದು ಬೆಟ್ಟವಿದೆ. ಇದರ ಮೈಮೇಲೆ 20 ಮೀ ಅಂತರಗಳಲ್ಲಿ ಸಮೋನ್ನತಿ ರೇಖೆಗಳನ್ನು ಎಳೆದು ಇವೆಲ್ಲವನ್ನೂ ಬೆಟ್ಟದ ಬುಡದ ಮೂಲಕ ಸಾಗುವ ಸಮತಲದ ಮೇಲೆ ಲಂಬವಿಕ್ಷೇಪಣ ಮಾಡಿದರೆ ಅದರ ಆಕೃತಿ ದೊರೆಯುತ್ತದೆ. 1000 ಮೀ ಎಂದು ಅಂಕಿತವಾಗಿರುವ ರೇಖೆ ಸಮುದ್ರಮಟ್ಟದಿಂದ ಅಷ್ಟು ಎತ್ತರದಲ್ಲಿರುವ ಪ್ರದೇಶಗಳನ್ನು ಒಳಗೊಂಡಿದೆ ಎಂದು ಇದರ ಅರ್ಥ. ವಿಲೋಮವಾಗಿ ಪಟದಲ್ಲಿ ಯಾವ ಪ್ರದೇಶದ ಮೂಲಕ ಈ ರೇಖೆ ಸಾಗುವುದೋ ಆ ಪ್ರದೇಶದ ಎತ್ತರ 1000 ಮೀ ಎಂದು ಅರ್ಥ. ಸಮೋನ್ನತಿ ರೇಖೆಗಳಿಂದ ನೆಲದ ಏರು ತಗ್ಗುಗಳನ್ನು ಚಿತ್ರಿಸಬಹುದು. ಭೂಪಟದಲ್ಲಿ ಸಮೋನ್ನತಿ ರೇಖೆಗಳನ್ನು ಸಾಮಾನ್ಯವಾಗಿ ಕಂದುಬಣ್ಣದ ವಕ್ರರೇಖೆಗಳಿಂದ ಗುರುತಿಸಿರುತ್ತಾರೆ. ಅಲ್ಲದೆ ಸಮೋನ್ನತಿ ರೇಖಾಂತರವನ್ನು (ಉದಾಹರಣೆಗೆ 20 ಮೀ ಎಂದು) ಸ್ಪಷ್ಟವಾಗಿ ನಮೂದಿಸಿರುತ್ತಾರೆ.

ಮೂರನೆಯದು ಸಾಂಪ್ರದಾಯಿಕ ಚಿಹ್ನೆಗಳು (ಕನ್‌ವೆನ್ಷನಲ್ ಸೈನ್ಸ್). ಕೆಲವು ಪ್ರಸಿದ್ಧ ಚಿಹ್ನೆಗಳನ್ನೂ ಅವುಗಳ ವಿವರಣೆಗಳನ್ನೂ ಭೂಪಟದ ಕೆಳಭಾಗದಲ್ಲಿ ಇಕ್ಕೆಡೆಗಳಲ್ಲೂ ಸಾಂಪ್ರದಾಯಿಕ ಚಿಹ್ನೆಗಳ ಯಾದಿಯನ್ನು ಮುದ್ರಿಸುವುದು ವಾಡಿಕೆ. ಇವುಗಳ ನಡುವಿನ ಪ್ರದೇಶದಲ್ಲಿ ಮಾನಕವನ್ನೂ ಸಮೋನ್ನತಿ ರೇಖೆಗಳ ವಿವರಣೆಗಳನ್ನೂ ಪಟಕ್ಕೆ ಸಂಬಂಧಿಸಿದ ಇತರ ವಿವರಗಳನ್ನೂ ಬರೆದಿರುತ್ತಾರೆ.

ನಾಲ್ಕನೆಯದು ಭೂಪಟಕ್ಕೆ ಜಾಲವನ್ನು (ಗ್ರಿಡ್) ಅಳವಡಿಸುವುದು. ದಕ್ಷಿಣೋತ್ತರ ಹಾಗೂ ಪಶ್ಚಿಮಪೂರ್ವ ದಿಕ್ಕುಗಳಲ್ಲಿ ಸಾಗುವ ಊರ್ಧ್ವ ಮತ್ತು ಕ್ಷಿತಿಜೀಯ ಸರಳ ರೇಖೆಗಳಿಗೆ ಜಾಲರೇಖೆಗಳೆಂದು (ಗ್ರಿಡ್ ಲೈನ್ಸ್) ಹೆಸರು. ಭೂಗೋಳದ ಮೇಲಿನ ರೇಖಾಂಶ, ಅಕ್ಷಾಂಶವೃತ್ತಗಳಿಗೆ ಸಂವಾದಿಯಾಗಿ ದೊರೆಯುವ ಸರಳ ಸಮಾನಾಂತರ ರೇಖೆಗಳಿವು. ಇವನ್ನು ಗುರುತಿಸಲು ಸೂಕ್ತ ಸಂಖ್ಯೆಗಳನ್ನು ಅಳವಡಿಸಲಾಗುತ್ತದೆ.

ಈ ಸಂಖ್ಯೆಗಳ ನೆರವಿನಿಂದ ಪಟದ ಮೇಲಿನ ಒಂದು ಬಿಂದುವನ್ನು ಏಕೈಕವಾಗಿ ಬೊಟ್ಟು ಮಾಡಿ ತೋರಿಸಬಹುದು. ವಿಲೋಮವಾಗಿ ಪಟದ ಮೇಲಿನ ಒಂದು ಬಿಂದುವಿನ ಜಾಲಸಂಖ್ಯೆಯನ್ನು ಏಕೈಕವಾಗಿ ನಿರ್ಧರಿಸಬಹುದು.

ಉಪಯೋಗಗಳು: ಖನಿಜಾನ್ವೇಷಣೆ, ಅಂತರ್ಜಲಾನ್ವೇಷಣೆ, ಯುದ್ಧ ಕಾರ್ಯಾಚರಣೆಗಳು, ಭೌಗೋಳಿಕ ವಿದ್ಯಮಾನಗಳ ತಿಳಿವಳಿಕೆ, ಅಂತಾರಾಷ್ಟ್ರೀಯ ಸಮಸ್ಯೆಗಳ ಪರಿಹಾರ, ಇತಿಹಾಸದ ವೈಜ್ಞಾನಿಕ ನಿರೂಪಣೆ ಇವೇ ಮುಂತಾದ ಮಾನವ ಕ್ರಿಯೆಗಳಲ್ಲಿ ಕ್ಷೇತ್ರ ಸ್ವರೂಪ ಜ್ಞಾನಕ್ಕೆ ಉಪಯೋಗಕಾರಿ. (ಟಿ.ವಿ.ಎಸ್.ಎಚ್.)

**ಕ್ಷೇಮಾಭಿವೃದ್ಧಿ ವಿಧಾನ (ವೆಲ್‌ಫೇರ್ ಅಪ್ರೋಚ್):** ಈ ವಿಧಾನ ಭಾವನಾ ರಹಿತವಾದ ಪರಿಮಾಣಾತ್ಮಕ ವಿಧಾನಗಳಿಗೆ ವಿರುದ್ಧವಾಗಿ ಭೂಗೋಳವಿಜ್ಞಾನದಲ್ಲಿ ರೂಢಿಗೆ ಬಂದಿತು. ಪರಿಮಾಣಾತ್ಮಕ ವಿಧಾನ ಆರ್ಥಿಕ ಅಭಿವೃದ್ಧಿ ಹಾಗೂ ಲಾಭಗಳಿಕೆಗೆ ಪ್ರಾಮುಖ್ಯತೆಯನ್ನು ನೀಡಿದ್ದು ಮಾನವ ಈ ದೃಷ್ಟಿಯಿಂದ ವರ್ತಿಸುವನೆಂದು ಪರಿಭಾವಿಸುವುದು. ಆದರೆ ಮಾನವನ ತೀರ್ಮಾನಗಳು ಯಾವಾಗಲೂ ಆರ್ಥಿಕವಾಗಿರುವುದಿಲ್ಲ. ಬದಲಾಗಿ ಎಲ್ಲ ಬಗೆಯ ತೀರ್ಮಾನಗಳ ಉದ್ದೇಶ ಮಾನವನ ಕ್ಷೇಮಾಭಿವೃದ್ಧಿಯಾಗಿರುವುದು ಎಂಬುದೇ ಈ ವಾದದ ಮುಖ್ಯ ತಿರುಳು. ಈ ವಿಧಾನದಲ್ಲಿ ಅಸಮಾನತೆಗಳಿಗೆ ಕಾರಣಗಳನ್ನು ಪರಿಶೀಲಿಸಲಾಗುವುದು. ಅನಂತರ ಅಸಮಾನತೆಯನ್ನು ಕುರಿತು ಕೂಲಂಕಷವಾಗಿ ನಿರೂಪಿಸಲಾಗುವುದು. ಉತ್ಪಾದನೆಯ ವಿಧಾನಗಳು ಹೇಗೆ ಅಸಮಾನತೆಗೆ ಕಾರಣಗಳಾಗಿವೆ, ಪ್ರಾದೇಶಿಕ ಅಭಿವೃದ್ಧಿಯ ಅಸಮಾನತೆ ಹೇಗೆ ಉಂಟಾಗಿದೆ, ಎಂಬುದನ್ನು ಪರಿಶೀಲಿಸಲಾಗುವುದು. ಅಂತಿಮವಾಗಿ ಈ ರೀತಿಯ ಅಸಮಾನತೆಗಳನ್ನು ಸಂಪನ್ಮೂಲಗಳು ಹಾಗೂ ಅವಕಾಶಗಳನ್ನು ಯೋಜಿತವಾಗಿ ಹಂಚುವ ಮೂಲಕ ಹೇಗೆ ಹೋಗಲಾಡಿಸಬಹುದೆಂಬುದನ್ನು ತೀರ್ಮಾನಿಸಲಾಗುವುದು. ಹೀಗೆ ಕ್ಷೇಮಾಭಿವೃದ್ಧಿ ವಿಧಾನ ಅಭಿವೃದ್ಧಿಯ ಜೊತೆಗೆ ಅಭಿವೃದ್ಧಿಯ ಫಲವನ್ನು ಸರಿಯಾಗಿ ಹಂಚಬೇಕು ಎಂಬುದನ್ನು ಕುರಿತು ವಿವರಿಸುವುದು. ಈ ವಿಧಾನ ಡಿ.ಎಂ. ಸ್ಮಿತ್ ರವರ ಅಧ್ಯಯನಗಳಿಂದ ಹೆಚ್ಚು ಪ್ರಗತಿ ಹೊಂದಿತು. (ಆರ್.ಎನ್.)

# ಖ

**ಖಂಡಗಳು ಮತ್ತು ಖಂಡರೂಪಣೆ:** ಭೂಗೋಳದ ಹೊರಚಿಪ್ಪಿನ ಉಬ್ಬಾದ ಭಾಗವೇ ಭೂಖಂಡ (ಕಾಂಟಿನೆಂಟ್). ಇದು ಸಹಸ್ರಾರು ಮಿಲಿಯನ್ ಚದರ ಕಿಲೋಮೀಟರುಗಳಷ್ಟು ವಿಶಾಲವಾಗಿದ್ದು ತೀರದ ಸಮುದ್ರಮಟ್ಟದಿಂದ ಸಾಕಷ್ಟು ಎತ್ತರವನ್ನೂ ಮುಟ್ಟಿರುತ್ತದೆ. ಸಮೀಪದಲ್ಲಿರುವ ದ್ವೀಪಗಳನ್ನೂ ಖಂಡದ ಭಾಗಗಳೆಂದೇ ಪರಿಗಣಿಸಬೇಕು. ಉದಾಹರಣೆಗೆ ಶ್ರೀಲಂಕ. ಗ್ರೀನ್ಲೆಂಡ್ ಮತ್ತು ಬ್ರಿಟಿಷ್ ದ್ವೀಪಗಳು ಅವುಗಳಿಗೆ ಸಮೀಪದಲ್ಲಿರುವ ಖಂಡಗಳಿಗೆ ಸೇರಿದ ಪ್ರದೇಶಗಳು. ಭೂವಿಜ್ಞಾನದ ದೃಷ್ಟಿಯಲ್ಲಿ ಹೇಳುವುದಾದರೆ ಆರು ಪ್ರಮುಖ ಭೂಖಂಡಗಳಿವೆ. ಯುರೇಷ್ಯ, ಆಫ್ರಿಕ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಮತ್ತು ಅಂಟಾರ್ಕ್‌ಟಿಕ. ಭಾರತ ಯುರೇಷ್ಯ ಖಂಡದ ಒಂದು ಭಾಗ. ಭೂಖಂಡ ಮತ್ತು ಅದರ ಪಕ್ಕದಲ್ಲಿರುವ ಸಾಗರ ಇವುಗಳ ಗಡಿರೇಖೆ ಖಂಡದ ತೀರದಿಂದ ಸಮುದ್ರದತ್ತ ಬಹುದೂರದ ವರೆಗೆ ಒಮ್ಮೊಮ್ಮೆ ನೂರಾರು ಕಿಮೀಗಳ ದೂರದಲ್ಲಿರುತ್ತವೆ. ಸಮುದ್ರದಲ್ಲಿ ವ್ಯಾಪಿಸಿರುವ ಖಂಡದ ಇಳಿಜಾರಾದ ಚಾಚುಪ್ರದೇಶ ಹಠಾತ್ತನೆ ಬಹು ಆಳಕ್ಕೆ ಸರಿಯುವ ಪ್ರದೇಶವೇ ಗಡಿರೇಖೆ. ಈ ಆಳ ಒಂದೇ ಸಮನಾಗಿರದೆ ಕೆಲವು ಕಡೆ ಹತ್ತಾರು ಫ್ಯಾದಂಗಳಷ್ಟು ಮತ್ತೆ ಹಲವೆಡೆ ನೂರಾರು ಫ್ಯಾದಂಗಳಷ್ಟಿರುವುದು ಕಂಡುಬಂದಿವೆ.

ಎಲ್ಲ ಭೂಖಂಡಗಳಲ್ಲೂ ಸರಿಸುಮಾರಾಗಿ ಒಂದೇ ಬಗೆಯ ವಿನ್ಯಾಸವನ್ನು ಗುರುತಿಸಲು ಸಾಧ್ಯವೆನಿಸಿದ್ದರೂ ಅವುಗಳ ಲಕ್ಷಣಗಳಲ್ಲಿ ಹಲವಾರು ವೈವಿಧ್ಯಗಳನ್ನು ಕಾಣಬಹುದು. ಪ್ರತಿ ಖಂಡಭಾಗದಲ್ಲೂ ಪ್ರೀ ಕೇಂಬ್ರಿಯನ್ ಶಿಲೆಗಳಿಂದಾದ ಅಡಿಪಾಯ ಉಂಟು. ಈ ಅಡಿಪಾಯದ ಶಿಲಾಸಮೂಹದಲ್ಲಿ ರೂಪಾಂತರ ಹೊಂದಿದ ಜಲಜ ಹಾಗೂ ಜ್ವಾಲಾಮುಖಜ ಶಿಲೆಗಳು ಪ್ರಧಾನವೆನಿಸಿದ್ದರೂ ಹಲವಾರು ಅಗ್ನಿಶಿಲೆಗಳನ್ನು, ಅದರಲ್ಲೂ ಮುಖ್ಯವಾಗಿ ಗ್ರಾನೈಟನ್ನು ಗುರುತಿಸಬಹುದು. ಮೊದಲಿಗೆ ಈ ಅಂತಸ್ಥ ಶಿಲೆಗಳು ನೆಲಮಟ್ಟದಿಂದ ಆಳದಲ್ಲಿ ರೂಪುಗೊಂಡಿದ್ದು ಕ್ರಮೇಣ ಅವನ್ನು ಮುಚ್ಚಿ ಮರೆಮಾಡಿದ್ದ ಭೂಕವಚದ ಸವೆತದಿಂದ ಗೋಚರವಾಗಿವೆ. ತದನಂತರ ಹಲವಾರು ಪ್ರದೇಶಗಳಲ್ಲಿ ಇವುಗಳ ಮೇಲೆ ಒಮ್ಮೊಮ್ಮೆ ಸವೆದ ಗ್ರಾನೈಟುಗಳ ಮೇಲೆ, ಪೇಲಿಯೊಜ಼ೋಯಿಕ್ ಮತ್ತು ಮೀಸೋಜ಼ೋಯಿಕ್ ಯುಗಗಳ ಸಮುದ್ರೀಯ ಸುಣ್ಣಶಿಲೆ, ಜೇಡುಶಿಲೆ ಹಾಗೂ ಮರಳುಶಿಲೆಗಳ ಸ್ತರ ಶ್ರೇಣಿಗಳು ನಿಕ್ಷೇಪಗೊಂಡವು. ಹೀಗಿದ್ದೂ ಪ್ರತಿಭೂಖಂಡದಲ್ಲೂ ಯಾವುದಾದರೊಂದು ಪ್ರದೇಶದಲ್ಲಿ ಅಡಿಪಾಯದ ಶಿಲೆಗಳನ್ನು ವೀಕ್ಷಿಸಲು ಸಾಧ್ಯವಾಗಿದೆ. ಭಾರತದ ಅದರಲ್ಲೂ ಕರ್ನಾಟಕ ರಾಜ್ಯದ ಆರ್ಕೇಯನ್ ಶಿಲಾಸ್ತೋಮ ಮತ್ತು ಉತ್ತರ ಅಮೆರಿಕದ ಕೆನೆಡಿಯನ್ ಶಾಶ್ವತ ಭೂಖಂಡಕ್ಕೆ ಸೇರಿದ ಆರ್ಕೇಯನ್ ಶಿಲಾಸ್ತೋಮಗಳು ಇದಕ್ಕೆ ಅತ್ಯುತ್ತಮ ಉದಾಹರಣೆಗಳು. ಕೆಲವು ಪ್ರದೇಶಗಳಲ್ಲಿ ಜಲಜಶಿಲೆಗಳ ಪ್ರಸ್ತರಗಳಿಂದಾದ ಪ್ರಸ್ಥಭೂಮಿಗಳಿಂದ ಇವು ಮುಚ್ಚಿಹೋಗಿವೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಮಿಸಿಸಿಪಿ ನದಿ ಹರಿಯುವ ವಿಶಾಲ ತಗ್ಗುಪ್ರದೇಶ ಈ ಬಗೆಯದು. ಅನೇಕ ಭೂಖಂಡಗಳಲ್ಲಿ ಮಟ್ಟಸವಾದ ಜಲಜಶಿಲಾಸ್ತರಗಳು ಭೂಚಟುವಟಿಕೆಗಳಿಗೆ ಒಳಗಾಗಿ ವಿಪರೀತವಾಗಿ ಮಡಿಕೆಬಿದ್ದು ಬೃಹತ್ ಪರ್ವತ ಸ್ತೋಮಗಳಿಗೆ ಕಾರಣವೆನಿಸಿವೆ. ಈ ಪರ್ವತಶ್ರೇಣಿಗಳಲ್ಲಿ ಹಲವಾರು ಕಡೆ ಸ್ತರಭಂಗಗಳನ್ನು ಗುರುತಿಸಲಾಗಿದ್ದು ಅಲ್ಲೆಲ್ಲ ಶಿಲಾಸ್ತರಗಳು ಮೇಲಕ್ಕೂ ಕೆಳಕ್ಕೂ ಜಾರಿವೆ.

ಪ್ರತಿ ಖಂಡದ ಅಡಿಯಲ್ಲೂ ಕಡಿಮೆ ಸಾಂದ್ರತೆಯ ಗ್ರಾನೈಟುಗಳೇ ಅಧಿಕವಾಗಿರುವುದನ್ನು ಭೂಕಂಪನಗಳ ಪ್ರಸಾರದಿಂದ ಗುರುತಿಸಲಾಗಿದೆ. ಸಾಗರ ಭಾಗಗಳಲ್ಲಿ ಈ ಕಂಪನಗಳ ಪ್ರಸಾರ ಹೆಚ್ಚು ವೇಗವಾಗಿರುವ ಕಾರಣ ಅವುಗಳ ಅಡಿಯಲ್ಲಿ ಹೆಚ್ಚು ಸಾಂದ್ರತೆಯಿಂದ ಕೂಡಿದ ಬಸಾಲ್ಟ್ ಶಿಲೆ ಇರುವುದೆಂದು ಭಾವಿಸಲಾಗಿದೆ. ಅಲ್ಲದೆ ಖಂಡಭಾಗದ ಗ್ರಾನೈಟ್ ಹೊರಚಿಪ್ಪು ಸಾಗರಭಾಗದ ಹೊರಚಿಪ್ಪಿಗಿಂತ ಹೆಚ್ಚು ಮಂದವಾಗಿದೆಯೆಂದೂ ನಿರ್ಧರಿಸಲಾಗಿದೆ. ಸು. 4.6 ಬಿಲಿಯನ್ ವರ್ಷಗಳ ಹಿಂದೆ ಜನಿಸಿರಬಹುದಾದ ಭೂಗ್ರಹ ಹಲವಾರು ಭೌತ ಹಾಗೂ ರಾಸಾಯನಿಕ ಕ್ರಿಯೆಗಳಿಗೆ ಒಳಗಾಗುವುದರ ಮೂಲಕ ತಿರುಳು, ಹೊದಿಕೆ, ಚಿಪ್ಪು, ಜಲ ಹಾಗೂ ವಾಯುಮಂಡಲಗಳಾಗಿ ರೂಪುಗೊಂಡ ಕಾಲದಲ್ಲೇ ಭೂಖಂಡಗಳು ನಿರ್ದಿಷ್ಟ ರೂಪವನ್ನು ತಳೆದವು. ಆಗ ತಳೆದ ರೂಪ ಭೂಕಾಲಮಾನದುದ್ದಕ್ಕೂ ಏಕರೀತಿಯಾಗಿರಲಿಲ್ಲ. ಈ ಖಂಡರೂಪಣೆ ಕೆಲವು ಭೂಯುಗಗಳಲ್ಲಿ ತೀವ್ರಗತಿಯಲ್ಲೂ ಮತ್ತೆ ಕೆಲವು ವೇಳೆ ಬಹು ಮಂದಗತಿಯಲ್ಲೂ ಉಂಟಾದ ದಾಖಲೆಗಳಿವೆ. ಪ್ರಸಕ್ತ ದೊರೆತಿರುವ ದಾಖಲೆಗಳ ಆಧಾರದ ಮೇಲೆ ಸು. 2.7 ಬಿಲಿಯನ್ ವರ್ಷಗಳ ಹಿಂದೆಯೇ ಖಂಡಗಳು ಸಾಕಷ್ಟು ದೊಡ್ಡವಾಗಿದ್ದವು. ಇವುಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ಸು. ಆರು ಪ್ರಧಾನ ಘಟ್ಟಗಳನ್ನು ಊಹಿಸಲಾಗಿದೆ. ಇವುಗಳಿಗೆಲ್ಲ ವಿಕಿರಣಪಟುತ್ವದಿಂದ (ರೇಡಿಯೊ ಆಕ್ಟಿವಿಟಿ) ಉಂಟಾಗುವ ಉಷ್ಣದ ಶೇಖರಣೆ ಆ ಮೂಲಕ ಉಂಟಾಗುವ ಪೂರ್ಣವಾದ ಅಥವಾ ಭಾಗಶಃ ತಲೆದೋರುವ ಭೂತಿರುಳು ಹಾಗೂ ಹೊದಿಕೆಯ ದ್ರವೀಕರಣ ಇವೇ ಮೂಲ. ಆಳದಲ್ಲಿ ಹೀಗೆ ಜನಿಸಿದ ಮ್ಯಾಗ್ಮ ಅಥವಾ ಮಾತೃಶಿಲಾದ್ರವ ಮೇಲ್ಭಾಗಕ್ಕೆ ಪ್ರವಹಿಸುವುದು ಸ್ವಾಭಾವಿಕ. ಪ್ರವಹಿಸುವಾಗ ಅದರಲ್ಲಿ ಉಂಟಾಗುವ ಭೌತ ಹಾಗೂ ರಾಸಾಯನಿಕ ಬದಲಾವಣೆಗಳ ಕಾರಣ ಸಂಯೋಜನೆಯಲ್ಲೂ ಸಾಕಷ್ಟು ಬದಲಾವಣೆಗಳುಂಟಾಗಿ ವಿವಿಧ ಶಿಲೆಗಳ ಉತ್ಪತ್ತಿಯನ್ನು ಕಾಣಬಹುದು. ಒಮ್ಮೊಮ್ಮೆ ಸಾಕಷ್ಟು ಒತ್ತಡವಿದ್ದು ಅನುಕೂಲಕರವಾದ ಸನ್ನಿವೇಶದಲ್ಲಿ ಮ್ಯಾಗ್ಮ ಹೊರಚಿಪ್ಪಿನ ದ್ವಾರಗಳ ಮೂಲಕ ಹೊರಚಿಮ್ಮಿ ಪ್ರವಹಿಸುತ್ತದೆ. ಆಳದಿಂದ ಮೇಲುಮೇಲಕ್ಕೆ ಏರುತ್ತಿರುವಾಗ ಮ್ಯಾಗ್ಮ ಹಾಗೂ ಅದರ ಅಕ್ಕಪಕ್ಕದಲ್ಲಿರುವ ಮತ್ತು ಅದರ ಉಷ್ಣದಿಂದಲೇ ಕರಗಿ ಮೆತ್ತಗಾದ ಭೂಭಾಗಗಳು, ಮುಖ್ಯವಾಗಿ ಶಿಲೆಗಳು, ಕೋಶ ಸ್ವರೂಪಗಳನ್ನು ತಳೆದು ನೆಲಮಟ್ಟವನ್ನು ಮುಟ್ಟಿ ಅಲ್ಲಿದ್ದ ಖಂಡಭಾಗಗಳನ್ನೂ ಸಾಗರ ಭಾಗಗಳನ್ನೂ ತಮ್ಮೊಡನೆ ಬೇರೆಡೆಗೆ ಒಯ್ಯುತ್ತವೆ. ಗ್ರಾನಿಟಿಕ್ ಸಂಯೋಜನೆಯಿಂದ ಕೂಡಿದ ಮ್ಯಾಗ್ಮಗಳು ಹೊರಬರುವ ಭೂಭಾಗಗಳು ಅಂಕುಡೊಂಕಾಗಿರುವುವಲ್ಲದೆ ಮಂದವಾದ ಜಲಜಶಿಲಾಶ್ರೇಣಿಗಳಿಂದಾದ ಅಸ್ಥಿರ ಪ್ರದೇಶಗಳಾಗಿವೆ. ಇವೇ ಭೂ ಅಭಿನತಿಗಳು (ಜಿಯೋಸಿಂಕ್ಲೈನ್ಸ್). ಭೂಖಂಡಗಳಲ್ಲಿ ಈ ಬಗೆಯ ಹಲವಾರು ಬೃಹತ್ ಇಳುಕಲುಗಳಿದ್ದು ಅವನ್ನು ಅಗ್ನಿಶಿಲೆಗಳೂ ಅವುಗಳಿಗೆ ಸಂಬಂಧಿಸಿದ ರೂಪಾಂತರ ಕ್ರಿಯೆಗಳೂ ಬೆಸೆದಿರುವುದುಂಟು. ಇದೇ ರೀತಿ ಸಾಗರ ತಳದಲ್ಲಿರುವ ಏಣುಗಳು (ರಿಡ್ಜಸ್) ಮತ್ತು ದಿಬ್ಬಗಳ (ರೈಸಸ್) ಮೂಲಕ ಬೆಸಾಲ್ಟಿಕ್ ಮ್ಯಾಗ್ಮ ಹೊರಬಂದು ಎರಡೂ ಕಡೆಯೂ ಹರಡುತ್ತ ಹೋಗುತ್ತದೆ. ಅಲ್ಲದೆ ಈ ಬೆಸಾಲ್ಟಿಕ್ ಶಿಲಾಪ್ರವಾಹ ಭೂ ಖಂಡಗಳ ಹೊರ ಅಂಚುಗಳಲ್ಲಿ ಮತ್ತು ದ್ವೀಪಸ್ತೋಮಗಳ ಇಳುಕಲುಗಳಲ್ಲಿ ಕುಸಿಯುತ್ತದೆ. ಹೀಗಾಗುವುದರಿಂದ ಖಂಡಗಳ ಬೆಳವಣಿಗೆ ಹಾಗೂ ಅಲೆತಗಳುಂಟಾಗುತ್ತವೆ.

ಖಂಡಗಳು ಭೂಗೋಳದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ಮೂರರಲ್ಲಿ ಒಂದರಷ್ಟು ಮತ್ತು ಒಟ್ಟು ದ್ರವ್ಯರಾಶಿಯಲ್ಲಿ 0.3ಕ್ಕಿಂತ ಕಡಿಮೆಯಷ್ಟು ಎಂದು ನಿರ್ಧರಿಸಲಾಗಿದೆ. ಕೆಲವು ಭೂಶಕ್ತಿಗಳ ಪ್ರಭಾವದಿಂದ ಹಲವೆಡೆ ಮಟ್ಟಸವಾಗಿ ಹರಡಿದ್ದ ಜಲಜಶಿಲಾಸ್ತರಗಳು ಸವೆದು ಅಡಿಯಲ್ಲಿದ್ದ ಶಿಲೆ ಗೋಚರವಾಗಿದೆ. ಹೀಗೆ ಹೊರಗೆ ಕಂಡಿರುವ ಶಿಲೆಯಲ್ಲಿ ಬಹುಭಾಗ ಅಂದರೆ ನೂರಕ್ಕೆ 30ರಿಂದ 90ರಷ್ಟು ಗ್ರಾನಿಟಿಕ್ ಸಂಯೋಜನೆಯನ್ನು

ತಳೆದಿರುತ್ತದೆ. ಈ ಸಂಯೋಜನೆಯನ್ನೇ ಕಡೆಯ ಪಕ್ಷ 12ರಿಂದ 15 ಕಿಮೀ ಆಳದವರೆಗೂ ಗುರುತಿಸಲು ಸಾಧ್ಯವಾಗಿದೆ. ಆದರೂ ಅನೇಕ ಭೂಖಂಡಗಳು ಕಾಲುಭಾಗದಿಂದ ಅರ್ಧಭಾಗದವರೆಗೆ ವಿವಿಧ ಜಲಜಶಿಲೆಗಳು ಹಾಗೂ ಮಣ್ಣಿನ ಹೊರಗವಚದಿಂದ ಕೂಡಿರುತ್ತವೆ. ಹಲವು ಪ್ರದೇಶಗಳಲ್ಲಿ ಹೀಗಿರದೆ ಸು. $2\times10^5$ ಚ.ಕಿಮೀ ಗಾತ್ರದ ಬೃಹತ್ ಭೂಭಾಗಗಳ ಕ್ವಾರ್ಟ್ಸೈಟ್, ಬೆಸಾಲ್ಟ್, ಕಾರ್ಬೋನೇಟ್ ಶಿಲೆ, ಅನಾರ್ಥಸೈಟ್ ಹೀಗೆ ನಾನಾ ರೀತಿಯ ಶಿಲೆಗಳಿಂದ ಕೂಡಿದ್ದು ಅವುಗಳ ಪರಸ್ಪರ ಸಂಬಂಧಗಳನ್ನು ವಿವರಿಸುವುದಂತೂ ಬಹು ಕ್ಲಿಷ್ಟ..

ಖಂಡಗಳ 12–15 ಕಿಮೀ ಆಳದ ಭಾಗಗಳಲ್ಲಿ ಮಧ್ಯವರ್ತಿ ಹಾಗೂ ಬೆಸಾಲ್ಟಿಕ್ ಸಂಯೋಜನೆಯ ವಿವಿಧ ಶಿಲೆಗಳಿದ್ದು ಅವುಗಳ ಸಾಂದ್ರತೆ ಗ್ರಾನೈಟಿಗಿಂತ ಅಧಿಕವಾಗಿದೆ ಎಂದು ಊಹೆ. ಭೂಕಂಪನಗಳ ಪ್ರಸಾರ ಹಾಗೂ ಶಿಲೆಗಳ ಮಟಿತತೆಯ ಗುಣಗಳನ್ನು ಕುರಿತ ಪ್ರಯೋಗಗಳೇ ಇದಕ್ಕೆ ಆಧಾರ. ಭೂಖಂಡಗಳ ಹೊರ ಚಿಪ್ಪಿನ ತಳ ಬಹುಮಟ್ಟಿಗೆ ರೂಪಾಂತರಿತ ಬೆಸಾಲ್ಟ್‌ನಿಂದಾದುದೆಂದು ಊಹಿಸಿದ್ದರೂ ಅದರೊಡನೆ ಅಗ್ನಿ ಶಿಲೆಗಳೂ ಇತರ ರೂಪಾಂತರಿತ ಶಿಲೆಗಳೂ ಇರಲು ಸಾಧ್ಯ.

ಹೊರಚಾಚಿರುವ ಖಂಡಗಳೂ 2,000 ಮೀ ಗಿಂತ ಕಡಿಮೆ ಆಳದ ಜಲಭಾಗದಿಂದ ಆವೃತವಾಗಿರುವ ಭೂಚಿಪ್ಪಿನ ಮಂದವೂ ಏಕರೀತಿಯಾಗಿರದೆ 20–60 ಕಿಮೀ ಗಳವರೆಗಿರುವುದಾದರೂ ಅದರ ಸರಾಸರಿ ಮಂದ ಸು. 35 ಕಿಮೀ ಗಳೆಂದು ಹೇಳಬಹುದು. ಈ ಮಂದ ಸಹಜವಾಗಿ ಆ ಭೂಪ್ರದೇಶದ ಮೇಲ್ಮೈ ಲಕ್ಷಣದಲ್ಲಿ ಪ್ರತಿಬಿಂಬಿತವಾಗಿರುವುದನ್ನು ಕಾಣಲು ಸಾಧ್ಯ. ಖಂಡಪ್ರದೇಶಗಳ ಭೂಅಭಿನತಿಗಳ ಹಾಗೂ ಭೂಮಧ್ಯ ಸಮುದ್ರಗಳ ಚಿಪ್ಪು ಸಾಮಾನ್ಯವಾಗಿ ತೆಳುವಾಗಿರುತ್ತದೆ. ಅಲ್ಲದೆ ವಯಸ್ಸಿನಲ್ಲಿ ಕಿರಿಯವೆನಿಸಿದ ಪರ್ವತಶ್ರೇಣಿಗಳಾದ ಹಿಮಾಲಯ, ಸಿಯೆರ ನೆವಾಡ ಮತ್ತು ಆಂಡೀಸ್ ಮುಂತಾದವು ತಮ್ಮ ತಳಗಳನ್ನು (ಬೇರುಗಳನ್ನು) ಭೂಗೋಳದ ಬಹು ಆಳದವರೆಗೆ ಅಂದರೆ ಹೊದಿಕೆಯ (ಮ್ಯಾಂಟಲ್) ತನಕವೂ ಮುಟ್ಟಿಸಿವೆ. ಭೂಮಿಯ ಆಳದಲ್ಲಿ ಮಟಿತತ್ವ ತರಂಗಗಳ ಪ್ರವಾಹವೇಗ ಹಠಾತ್ತನೆ ಏರುಪೇರುಗಳನ್ನು ತೋರುತ್ತದೆ. ಈ ಆಧಾರದ ಮೇಲೆ ಚಿಪ್ಪಿನ (ಕ್ರಸ್ಟ್) ತಳವನ್ನು ಗುರುತಿಸಬಹುದು. ಇದನ್ನು ಮೊಟ್ಟಮೊದಲು ಖ್ಯಾತ ಭೂಭೌತವಿಜ್ಞಾನಿ ಮೋಹೋರೊ ವಿಶಿಕ್ ಗುರುತಿಸಿದ. ಹೀಗಾಗಿ ಈ ಸೀಮಾರೇಖೆಯನ್ನು ಮೋಹೋವಿಚ್ಛಿನ್ನತೆ ಅಥವಾ ಮೋಹೋರೇಖೆ ಅಥವಾ ಮೋಹೋ ಎಂದು ಹೆಸರಿಸಿದ್ದಾರೆ.

ಭೂಖಂಡಗಳ ಮತ್ತು ಸಾಗರಭಾಗಗಳ ಹೊರ ಚಿಪ್ಪುಗಳ ಹಾಗೂ ಅವುಗಳ ತಳದ ಹೊದಿಕೆಯ ನಡುವಣ ಗಡಿಪ್ರದೇಶ ಕೇವಲ ಭೂಕಂಪವಿಚ್ಛಿನ್ನ ಜಾಡಾಗಿರದೆ ಸಮತೋಲದ ಮಟ್ಟವೂ (ಲೆವೆಲ್ ಆಫ್ ಕಾಂಪೆನ್ಸೇಷನ್) ಆಗಿದೆ. ಹೊದಿಕೆಯ ಮೇಲೆ ಚಿಪ್ಪು ಒಂದು ತೆರನಾದ ಸಮತೋಲ ಸ್ಥಿತಿಯಲ್ಲಿದ್ದು ತೇಲುತ್ತಿರುವ ಹಾಗೆ ಭಾವಿಸಲಾಗಿದೆ– ನೀರಿನಲ್ಲಿ ನೀರ್ಗಲ್ಲಿನ ಛಿದ್ರಗಳು ತೇಲುವಂತೆ. ಚಿಪ್ಪು ಮಂದವಾಗಿರುವೆಡೆ ಅಂದರೆ ಖಂಡಭಾಗಗಳು ಕಡಿಮೆ ಸಾಂದ್ರತೆಯನ್ನು ಹೊಂದಿರುವಲ್ಲಿ (ಸು. 2.65) ಅದು ಗ್ರಾನೈಟ್ ಮತ್ತು ಜಲಜಶಿಲಾಸ್ತರಗಳಿಂದ ಕೂಡಿವೆ. ಅಲ್ಲದೆ ಹೆಚ್ಚಿನ ಸವೆತಕ್ಕೂ ಒಳಗಾಗಿದೆ. ಆದರೆ ಸಾಗರಭಾಗಗಳ ಚಿಪ್ಪು ತೆಳುವಾಗಿದ್ದು ಅಧಿಕಸಾಂದ್ರತೆಯ (ಸುಮಾರು 2.90) ಬೆಸಾಲ್ಟ್ ಮೊದಲಾದ ಶಿಲೆಗಳಿಂದಾಗಿದೆ. ಈ ಬಗೆಯ ಏರು ತಗ್ಗುಗಳು ಸಮತೋಲವನ್ನು ಪರಸ್ಪರ ಏರ್ಪಡಿಸಿಕೊಂಡಿವೆ ಎನ್ನಲೂಬಹುದು. ಈ ಸಮತೋಲ ಆಗಾಗ ಏರು ಪೇರಾಗುವುದುಂಟು. ಇದರ ನಿಮಿತ್ತ ತೀವ್ರ ಭೂಚಟುವಟಿಕೆಗಳೂ ತಲೆದೋರಬಹುದು. ಹೀಗಾದ ಸಮಯದಲ್ಲಿ ಅಲ್ಲಿದ್ದ ಪರ್ವತಗಳು ಹಾಗೂ ಪ್ರಸ್ಥಭೂಮಿಗಳು ಮೇಲುಮೇಲಕ್ಕೆ ಏರುವುದರ ಮೂಲಕ ಸಮತೋಲದ ಏರುಪೇರು ಸರಿದೂಗುತ್ತದೆ. ಕೆಲವೆಡೆ ಖಂಡಭಾಗಗಳು 8 ಕಿಮೀ ಎತ್ತರವನ್ನು ಮುಟ್ಟಿರುವುದನ್ನೂ ಕಾಣಲು ಸಾಧ್ಯ. ಈ ಕ್ರಿಯೆಗಳಿಂದ ಖಂಡಗಳು ತಮ್ಮ ಅಡಿಭಾಗಗಳಲ್ಲಿ ಹಾಗೂ ಅಕ್ಕಪಕ್ಕಗಳಲ್ಲಿ ಹೆಚ್ಚು ಹೆಚ್ಚು ಶಿಲಾವಸ್ತುವನ್ನು ಪಡೆಯುವುದರ ಮೂಲಕ ಬೆಳೆಯುತ್ತಿವೆ ಎನ್ನಲಾಗಿದೆ. ಭಾರತದ ಹಿಮಾಲಯ ಶ್ರೇಣಿ ಇದಕ್ಕೆ ಅತ್ಯುತ್ತಮ ಉದಾಹರಣೆ. ಇದರ ಬೆಳವಣಿಗೆಯಿಂದಾಗಿ ಸಮೀಪದ ಗಂಗಾಬಯಲು ಪ್ರದೇಶ ಹಾಗೂ ಅಸ್ಸಾಂ, ಕಾಶ್ಮೀರ ಮುಂತಾದೆಡೆಗಳಲ್ಲಿ ಭೂಕಂಪಗಳು ಆಗಾಗ ತಲೆದೋರುತ್ತಿವೆ.

ಭೂಖಂಡಗಳು ಕಡೆಯಪಕ್ಷ 3.5 ಇಯಾನುಗಳ (1 ಇಯಾನ್ = $10^9$ ವರ್ಷಗಳು) ಹಿಂದೆ ರೂಪುಗೊಂಡುವೆಂದು ಭಾವಿಸಲಾಗಿದೆ. ಆ ವೇಳೆಯಲ್ಲಿ ಬಲುಮಟ್ಟಿಗೆ ಇಂದಿನ ಭೂಸ್ವರೂಪ (ನೆಲ ಜಲಹಂಚಿಕೆ ಇತ್ಯಾದಿ) ಉಂಟಾಯಿತು; ದ್ವೀಪಸ್ತೋಮ ಚಾಪಗಳು, ಸಮುದ್ರ ಇಳುಕಲುಗಳು, ಸಾಗರೀಯ ಚಿಪ್ಪು, ಉಬ್ಬುಗಳು ಹಾಗೂ ಏಣುಗಳೂ ರೂಪುಗೊಂಡವು. ಖಂಡರೂಪಣೆಯಲ್ಲಿ ಇವು ವಿಶಿಷ್ಟ ಪಾತ್ರವನ್ನು ವಹಿಸುವ ಕಾರಣ ಇವನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಸಾಗರೀಯ ಚಿಪ್ಪು: ಭೂಗೋಳದ ಅರ್ಧಭಾಗವನ್ನೂ ಮೀರಿಸಿ ವ್ಯಾಪಿಸಿರುವ ಈ ಹೊರಚಿಪ್ಪು ಕೇವಲ 5–7 ಕಿಮೀ ಮಂದವಾಗಿದ್ದು 4,000 ಮೀ ಮೀರಿದ ನೀರಿನ ಆಳದಲ್ಲಿದೆ. ಇದು ಬಲುಮಟ್ಟಿಗೆ ವಿವಿಧ ರೂಪಾಂತರಗಳಿಗೆ ಒಳಗಾಗಿರುವ ಬೆಸಾಲ್ಟ್ ಮತ್ತು ಕೊಂಚಮಟ್ಟಿಗೆ ಜಲೀಕರಣಗೊಂಡ ಪೆರಿಡೊಟೈಟಿನಿಂದ (ಸರ್ಪಂಟೀಸ್) ಆದುದು. ಬೆಸಾಲ್ಟ್ ಮೇಲೆ ಇದಕ್ಕಿಂತ ಕಿರಿಯ ವಯಸ್ಸಿನ ರಾಡಿ ಹಾಗೂ ಸುಣ್ಣಯುಕ್ತ ನುಸಿಮಣ್ಣು (ಕೆಲ್ಕೇರಿಯಸ್ ಊಸಸ್) ತೆಳುವಾಗಿ ಹರಡಿದೆ. ಈ ಹೊದಿಕೆಯ ಮಂದ ಸು. 1 ಕಿಮೀ ಹಲವೆಡೆ ಸಮುದ್ರಾಂತರ್ಗತ ಲಾವಾಗಳು ಮತ್ತು ಭಗ್ನಾವಶೇಷಪ್ರವಾಹಗಳು ಹೆಣೆದುಕೊಂಡಿರುವುದನ್ನು ಗುರುತಿಸಲಾಗಿದೆ.

ಏಣುಗಳು ಮತ್ತು ಉಬ್ಬುಗಳು: ಇವು ಬಲು ವಿಶಾಲವಾದ ಸಮುದ್ರಾಂತರ್ಗತ ಪರ್ವತಶ್ರೇಣಿಗಳು. ಇವುಗಳಲ್ಲಿ ಅಲ್ಲಲ್ಲೇ ಅಸಂಖ್ಯಾತ ಜ್ವಾಲಾಮುಖಿಗಳಿವೆ. ಭೂಗೋಳವನ್ನೇ ಸುತ್ತುವರಿದಿರುವ ಈ ಶ್ರೇಣಿ ಬಹುಮಟ್ಟಿಗೆ ಸಾಗರಗಳ ಮಧ್ಯಭಾಗದಲ್ಲಿದ್ದು ಸು. 60,000 ಕಿಮೀ ದೂರದ ತನಕ ವ್ಯಾಪಿಸಿದೆ. ಈ ವರ್ಗದ ಪೆಸಿಫಿಕ್ ಸಾಗರದ ಪೂರ್ವಪೆಸಿಫಿಕ್ ಉಬ್ಬು ಕೇಂದ್ರ ಮತ್ತು ಉತ್ತರ ಅಮೆರಿಕದ ಪಶ್ಚಿಮ ಏಣಿನೊಡನೆ ಸೇರಿಕೊಳ್ಳುತ್ತದೆ. ಇದೇ ರೀತಿ ಉತ್ತರ ಅಮೆರಿಕದ ಪಶ್ಚಿಮಭಾಗದ ಬೇಸಿನ್ ಮತ್ತು ರೇಂಜ್ ಪ್ರದೇಶಗಳು ಬಹುಶಃ ಖಂಡದ ತಳಭಾಗದಲ್ಲಿ ಉತ್ತರದತ್ತ ವ್ಯಾಪಿಸಿರುವ ಉಬ್ಬಿನೊಡನೆ ನಿಕಟಸಂಬಂಧವನ್ನು ತಳೆದಿವೆ.

ದ್ವೀಪಸ್ತೋಮ ಚಾಪಗಳು: ಇವು ಹಾಗೂ ಕೆಲವು ಭೂಖಂಡ ತೀರಪ್ರದೇಶಗಳು ಸಾಗರಗಳ ಹಾಗೂ ಖಂಡಗಳ ಹೊರಚಿಪ್ಪುಗಳ ಮಧ್ಯವರ್ತಿಲಕ್ಷಣಗಳನ್ನು ತಳೆದಿವೆ. ಜಪಾನಿನ ಉತ್ತರಕ್ಕಿರುವ ಕ್ಯುರೈಲ್ ದ್ವೀಪಸ್ತೋಮ ಹಾಗೂ ಅಲಾಸ್ಕಾದ ನೈರುತ್ಯಕ್ಕಿರುವ ಅಲ್ಯೂಷಿಯನ್ ದ್ವೀಪಸ್ತೋಮಗಳನ್ನು ವಿಶಿಷ್ಟ ರೀತಿಯಲ್ಲಿ ಮಂದಗಟ್ಟಿರುವ ಸಾಗರೀಯ ಚಿಪ್ಪಿನ ಬಿರಿತಗಳಲ್ಲಿರುವ ಜ್ವಾಲಾಮುಖಿ ಸ್ತೋಮಗಳೆಂದು ಪರಿಗಣಿಸಲಾಗಿದೆ. ಇವುಗಳ ಜಾಡು ಕ್ರಮೇಣ ಭಾಗಶಃ ಅಥವಾ ಪೂರ್ಣ ವಿಕಾಸಗೊಂಡ ದ್ವೀಪಸ್ತೋಮಚಾಪಗಳಾದ ಕಾಮಚಟ್ಕಾ ಹಾಗೂ ನೈರುತ್ಯ ಅಲಾಸ್ಕದ ಪೂರ್ವ ಅಲ್ಯೂಷಿಯನ್ ಜಾಡುಗಳೊಡನೆ ವಿಲೀನಗೊಳ್ಳುತ್ತದೆ. ಇವು ಹಾಗೂ ಇನ್ನಿತರ ಅರ್ಧಚಂದ್ರಾಕೃತಿಯ ಜ್ವಾಲಾಮುಖಿ ಜಾಡುಗಳು ಭೂಖಂಡಗಳೊಳಗೆ ಅಥವಾ ಅವುಗಳ ಹೊರ ಅಂಚುಗಳಲ್ಲಿರುವ ಕಿರಿಯ ಪರ್ವತಶ್ರೇಣಿಗಳೊಡನೆ ಐಕ್ಯ ಹೊಂದುತ್ತವೆ. ಕೆನಡದ ಕೋಸ್ಟ್ ರೇಂಜ್, ದಕ್ಷಿಣ ಅಮೆರಿಕದ ಆಂಡಿಸ್, ಅಂಟಾರ್ಕ್‌ಟಿಕ, ನ್ಯೂಜಿಲೆಂಡ್, ಆಸ್ಟ್ರೇಲಿಯ, ಇಂಡೋನೇಷ್ಯಗಳ ಪರ್ವತಮಯ ತೀರಪ್ರದೇಶಗಳು ಹಾಗೂ ಭಾರತದ ಹಿಮಾಲಯ ಪರ್ವತಶ್ರೇಣಿಗಳು ಇದಕ್ಕೆ ಉತ್ತಮ ಉದಾಹರಣೆಗಳು.

ಖಂಡಗಳ ಬೆಳವಣಿಗೆಯ ದೃಷ್ಟಿಯಿಂದ ವೀಕ್ಷಿಸುವುದಾದರೆ ದ್ವೀಪಸ್ತೋಮ ಚಾಪಗಳು ವಿಶಿಷ್ಟ ಪ್ರಾಮುಖ್ಯ ಪಡೆದಿದ್ದು ಅವುಗಳ ಬೆಳವಣಿಗೆಯಲ್ಲಿ ಒಂದು ವಿಶಿಷ್ಟಹಂತವನ್ನೂ ಸೂಚಿಸುತ್ತವೆ. ಭೂಚಿಪ್ಪಿನೊಡನೆ ಹೋಲಿಸಿದಲ್ಲಿ ಇವು ಮಂದ ಹಾಗೂ ವಯಸ್ಸಿನಲ್ಲಿ ಮಧ್ಯವರ್ತಿಲಕ್ಷಣಗಳನ್ನು ಪಡೆದಿರುವುದೇ ಅಲ್ಲದೆ ಸಾಗರೀಯ ಹಾಗೂ ಭೂಖಂಡಭಾಗಗಳ ಚಿಪ್ಪುಗಳಲ್ಲಿರುವ ಶಿಲೆಗಳಿಂದಲೂ ಕೂಡಿವೆ. ಉದಾಹರಣೆಗೆ ಇವುಗಳಲ್ಲಿರುವ ಆಂಡಿಸೈಟ್ ಹಾಗೂ ಗ್ರೇವಾಕ್ ಮರಳುಶಿಲೆಗಳನ್ನು ಸಾಗರೀಯ ಅಥವಾ ಖಂಡಪ್ರದೇಶಗಳ ವಿಶಿಷ್ಟ ಲಕ್ಷಣಗಳೆನ್ನಲಾಗುವುದಿಲ್ಲ.

ಅನೇಕ ದ್ವೀಪಸ್ತೋಮ ಚಾಪಗಳಲ್ಲಿ ಮತ್ತು ಪೆಸಿಫಿಕ್ ಸಾಗರವನ್ನು ಸುತ್ತುವರಿದಿರುವ ಭೂತೀರ ಪ್ರದೇಶಗಳಲ್ಲಿ ಇದೇ ರೀತಿಯ ಮಧ್ಯವರ್ತಿ ಲಕ್ಷಣಗಳನ್ನು ಗುರುತಿಸಲಾಗಿದೆ. ಬಹುಶಃ ಇವು ಭೂಖಂಡಗಳ ಸಾಗರೀಕರಣವನ್ನೋ ಸಾಗರ ಭಾಗಗಳ ಖಂಡೀಕರಣವನ್ನೋ ಸೂಚಿಸುತ್ತವೆ. ಒಟ್ಟಿನಲ್ಲಿ ಈ ಎರಡೂ ಕ್ರಿಯೆಗಳು ಭೂಚಿಪ್ಪಿನ ರೂಪಣೆಯಲ್ಲಿ ಅರ್ಥಾತ್ ಖಂಡರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಖಂಡಪ್ರದೇಶಗಳಲ್ಲಿ ಅಂತರ್ಗತವಾಗಿರುವ ಸಾಗರೀಯ ಚಿಪ್ಪಿನ ಛಿದ್ರಭಾಗಗಳ ಹಾಗೂ ದ್ವೀಪಸ್ತೋಮಚಾಪಗಳ ಆಧಾರದ ಮೇಲೆ ಸಾಗರ ಭಾಗಗಳನ್ನು ಉಪಯೋಗಿಸಿಕೊಂಡೇ ಭೂಖಂಡಗಳು ಬೆಳೆಯುತ್ತಿವೆ ಎಂದು ಧಾರಾಳವಾಗಿ ಹೇಳಬಹುದು. ಇವೆಲ್ಲಕ್ಕೂ ಸದಾ ವಿಕಾಸಗೊಳ್ಳುತ್ತಿರುವ ಭೂಮಿಯ ಹೊದಿಕೆಯೇ ಮೂಲ.

ಸಮುದ್ರತಳದ ಹರಡುವಿಕೆಯೂ ಈ ದಿಸೆಯಲ್ಲಿ ಒಂದು ಮುಖ್ಯಕ್ರಿಯೆ. ಸಾಗರತಳಗಳಲ್ಲಿ ಜಲಜಶಿಲಾನಿಕ್ಷೇಪಗಳ ಕೊರತೆ ಹಾಗೂ ಹಳೆಯ ಅಂದರೆ 15 ಮಿಲಿಯನ್ ವರ್ಷಗಳಿಗಿಂತ ಹೆಚ್ಚು ವಯಸ್ಸಾದ ಸಾಗರೀಯ ಶಿಲೆಗಳು ಇಲ್ಲದಿರುವಿಕೆ ಇವು ಪ್ರಸಕ್ತ ಸಾಗರಭಾಗಗಳ ಹೊರಚಿಪ್ಪು ಭೂ ಚರಿತ್ರೆಯ ಇತ್ತೀಚಿನ ಯುಗಗಳಲ್ಲಿ ರೂಪಗೊಂಡಿತೆಂದು ಸೂಚಿಸುತ್ತವೆ. ಸಾಗರತಳದ ಕಾಂತ ಅಸಾಂಗತ್ಯಗಳು (ಮ್ಯಾಗ್ನೆಟಿಕ್ ಅನಾಮಲೀಸ್) ನಿರ್ದಿಷ್ಟ ಜಾಡುಗಳಿಗೆ ಸೀಮಿತವಾಗಿದ್ದು ಸಾಗರ ಮಧ್ಯದ ಬೃಹತ್ ಏಣುಗಳಿಗೆ ಸಮಾನಾಂತರವಾಗಿವೆ. ಇವುಗಳಲ್ಲಿರುವ ಬಿರುಕುಗಳ ಮೂಲಕ ಬೆಸಾಲ್ಟ್ ಮಹಾಪ್ರವಾಹಗಳು ಹೊರ ಹೊಮ್ಮುತ್ತಿರುವುದನ್ನೂ ಗುರುತಿಸಿದ್ದಾರೆ. ಸು. ಪ್ರತಿ 5,00,000 ರಿಂದ 20,00,000 ವರ್ಷಗಳಿಗೊಮ್ಮೆ ಭೂಗ್ರಹದ ಕಾಂತದ್ವಿಧ್ರುವ (ಮ್ಯಾಗ್ನೆಟಿಕ್ ಡೈಪೋಲ್) ತಿರುವುಮುರುವಾಗುತ್ತದೆ. ಹೀಗಾದುದನ್ನು ಒಂದು ರೀತಿಯಲ್ಲಿ ಹೊರಹೊಮ್ಮುತ್ತಿರುವ ಬೆಸಾಲ್ಟುಗಳ ಕಾಂತ ಲಕ್ಷಣಗಳು ವ್ಯಕ್ತಪಡಿಸುತ್ತದೆ. ಏಣುಗಳ ಎರಡು ಕಡೆಯೂ ಕಾಂತ ಮಾದರಿಗಳು ಏಕರೀತಿಯಾಗಿದ್ದು ಬೃಹತ್ ಜಾಡುಗಳಲ್ಲಿವೆ. ಏಣಿನಿಂದ ದೂರ ಸರಿದಂತೆ ಬೆಸಾಲ್ಟುಗಳು ವಯಸ್ಸಿನಲ್ಲೂ ಹೆಚ್ಚುವ ಕಾರಣ ಸಮುದ್ರತಳಗಳು ಏಣಿನ ಎರಡೂ ದಿಕ್ಕುಗಳಲ್ಲಿ ಹರಡುತ್ತಿವೆ ಎಂದು ಭಾವಿಸಲಾಗಿದೆ. ಹೀಗೆ ಇವು ಭೂಖಂಡಗಳತ್ತ ಸರಿಯಲು ಭೂಹೊದಿಕೆಯಲ್ಲಿರುವ ನಯನಕೋಶಗಳು (ಕನ್ವೆಕ್ಟಿವ್ ಸೆಲ್ಸ್) ಸಹಾಯಕವಾಗಿವೆ. ಇಂದಿಗೂ ಹೀಗೆ ಖಂಡಭಾಗಗಳನ್ನು ಸೇರಿದ ಸಾಗರಜನ್ಯ ಬೆಸಾಲ್ಟುಗಳನ್ನು ಗುರುತಿಸಬಹುದು. ಇವುಗಳ ಸರಿತದ ವೇಗ ವರ್ಷವೊಂದಕ್ಕೆ 0.2 ರಿಂದ 10 ಸೆಂಮೀ. ಖಂಡಗಳ ಅಲೆತ ಇದಕ್ಕೆ ಪೂರಕವಾದ ಕ್ರಿಯೆಯಾಗಿದೆ.

ಅಸ್ಥಿರ ಭೂಪ್ರದೇಶಗಳಲ್ಲಿ ಕಂಡುಬರುವ ಮಡಿಕೆಬಿದ್ದ ಶಿಲಾಶ್ರೇಣಿಗಳು ಭೂಕಂಪಗಳು, ತೀವ್ರಸವೆತ, ಸ್ತರ ನಿಕ್ಷೇಪಣೆ ಹಾಗೂ ಜ್ವಾಲಾಮುಖಿಗಳು ಅಲ್ಲಿ ಭೂ ಅಭಿನತಿಗಳ ಇರುವಿಕೆಯನ್ನು ಸಾರಿಹೇಳುತ್ತವೆ. ಈ ಇಳುಕಲುಗಳಲ್ಲಿ ಶೇಖರವಾದ ಜಲಜಶಿಲಾಸ್ತರಗಳೊಳಕ್ಕೆ ಅಡಿಯಿಂದ ಗ್ರಾನಿಟಿಕ್ ಬ್ಯಾತೊಲಿತುಗಳು ನುಗ್ಗಿ ಅವನ್ನು ವಿವಿಧ ರೀತಿಯಲ್ಲಿ ಮಡಿಸಿ ಪರ್ವತಪಂಕ್ತಿಗಳೋಪಾದಿಯಲ್ಲಿ ಮೇಲಕ್ಕೆ ಎಸೆಯುತ್ತವೆ. ಇದೇ ಪರ್ವತಜನ್ಯಕ್ರಿಯೆ. ಪರ್ವತಗಳು ಖಂಡಭಾಗಗಳಲ್ಲಿ ಎದ್ದುಕಾಣುವ ಸ್ವರೂಪಗಳು. ಈ ಪರ್ವತಜನ್ಯಕ್ರಿಯೆಗೂ ಭೂ ಅಭಿನತಿಗೂ ನಿಕಟ ಸಂಬಂಧವಿದ್ದು ಇವೆರಡೂ ಖಂಡರೂಪಣೆಯಲ್ಲಿ ತಮ್ಮದೇ ಆದ ವಿಶಿಷ್ಟ ಪಾತ್ರ ವಹಿಸಿವೆ. ಭೂಗೋಳದ ಹಲವಾರು ಕಡೆ ಇವುಗಳ ಕ್ರಿಯೆ ನಿರ್ದಿಷ್ಟ ಕಾಲಗಳಲ್ಲಿ ನಡೆದಿರುವುದು ಗೋಚರವಾಗಿದೆ. ಕ್ರಿಯೆ ನಡೆದ ಕಾಲವನ್ನು ಆ ಪ್ರದೇಶದ ಮಡಿಕೆ ಬಿದ್ದಿರುವ ಶಿಲೆಗಳಲ್ಲಿ ಹುದುಗಿರುವ ಗ್ರಾನೈಟ್‌ನ ಖನಿಜಗಳ ವಯಸ್ಸನ್ನು ಅಳತೆ ಮಾಡುವುದರ ಮೂಲಕ ನಿರ್ಧರಿಸಬಹುದು. ಈ ಬೃಹತ್ ಚಟುವಟಿಕೆಗಳು ಭೂಖಂಡಗಳ ಬೆಳವಣಿಗೆಗೆ ಅತ್ಯಂತ ಸಹಾಯಕವೆಂಬುದನ್ನು ಒತ್ತಿ ಹೇಳಬಹುದು. ಅಲ್ಲದೆ ಕ್ರಿಯೆ ನಡೆಯುವಾಗ ಆ ಪ್ರದೇಶದ ಅಕ್ಕಪಕ್ಕದ ಸಾಗರ ಹಾಗೂ ಖಂಡಭಾಗಗಳಲ್ಲಿರುವ ಶಿಲೆಗಳು ತೀವ್ರ ದರ್ಜೆಯ ಬೃಹತ್ ರೂಪಾಂತರಣಕ್ಕೆ ಒಳಗಾಗುತ್ತವೆ. ಒಮ್ಮೊಮ್ಮೆ ಪುನರ್ದ್ರವೀಕರಣಕ್ಕೂ ಒಳಗಾಗಬಹುದು. ಹೀಗಾಗಿ ಹೊದಿಕೆಯ ವಲಯದಿಂದ ಹೊರಬರುತ್ತಿರುವ ವಸ್ತುವಿನೊಡನೆ ಬೆರೆತು ಹೋಗಿ ಭೂಭಾಗಗಳು, ಖಂಡ ತೀರಪ್ರದೇಶಗಳ ಹಾಗೂ ಖಂಡಗಳಿಗೆ ಮೆತ್ತಿಕೊಂಡಂತಿರುವ ದ್ವೀಪಸ್ತೋಮ ಚಾಪಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಉತ್ತರ ಅಮೆರಿಕ, ಆಸ್ಟ್ರೇಲಿಯ ಮತ್ತು ಅಂಟಾರ್ಕ್‌ಟಿಕ ಖಂಡಗಳ ವಿವಿಧ ಶಿಲೆಗಳ ಹರವನ್ನು ಸೂಚಿಸಲು ತಯಾರಿಸಿರುವ ನಕ್ಷೆಗಳು. ಖಂಡಗಳ ಬೆಳವಣಿಗೆಯನ್ನು ಅರಿಯಲು ಬಲು ಸಹಾಯಕವಾಗಿವೆ. ಉತ್ತರ ಅಮೆರಿಕದ ಶಿಲಾಹರವಿನಲ್ಲಿ ವಿವಿಧ ಶಿಲೆಗಳು ತಮ್ಮ ವಯೋಗತಿಗನುಗುಣವಾಗಿ ಒಂದು ನಿರ್ದಿಷ್ಟಕ್ರಮದಲ್ಲಿ ಹಾಗೂ ದಿಕ್ಕಿನಲ್ಲಿ ವ್ಯತ್ಯಾಸಗೊಳ್ಳುವುದು ಸ್ಪಷ್ಟವಾಗಿ ಕಾಣುತ್ತದೆ. ಅತ್ಯಂತ ಹಳೆಯ ಶಿಲೆಗಳು ಕೇಂದ್ರ ಭಾಗದಲ್ಲಿದ್ದು ಆ ಭಾಗವನ್ನು ಖಂಡದ ಮೂಲದ್ರವ್ಯ ಅಥವಾ ನ್ಯೂಕ್ಲಿಯಸ್ ಎನ್ನಬಹುದು. ಉತ್ತರ ಅಮೆರಿಕದ ಕೇಂದ್ರ ಭಾಗದ ಶಿಲೆಗಳು ಆ ಭಾಗದ ಅಂಚಿನಲ್ಲಿರುವ ಶಿಲೆಗಳಿಗಿಂತ ವಯಸ್ಸಿನಲ್ಲಿ ಐದರಷ್ಟೂ ಪೆಸಿಫಿಕ್ ತೀರದ ಶಿಲೆಗಳಿಗಾಗಿ ಹತ್ತರಷ್ಟೂ ಹಳೆಯವೆನಿಸಿವೆ. ಇದೇ ರೀತಿ ಕೇಂದ್ರ ಏಷ್ಯ, ಪಶ್ಚಿಮ ಆಸ್ಟ್ರೇಲಿಯ, ಅಂಟಾರ್ಕ್‌ಟಿಕದ ತಳಭಾಗಗಳೂ ಆಯಾ ಭೂಖಂಡಗಳ ನ್ಯೂಕ್ಲಿಯಸ್‌ಗಳೆನಿಸಿವೆ.

ಖಂಡಗಳ ಕೇಂದ್ರ ಭಾಗಗಳಲ್ಲಿರುವ ಶಿಲೆಗಳು ಅತ್ಯಂತ ಹಳೆಯವೆನಿಸಿದ್ದು ಸಾಗರತಳಗಳು, ದ್ವೀಪಸ್ತೋಮ ಚಾಪಗಳು ಮತ್ತು ಖಂಡದ ತೀರಪ್ರದೇಶದ ಶಿಲೆಗಳನ್ನೇ ಹೋಲುತ್ತವೆ. ರೂಪುಗೊಂಡು ನೂರಾರು ಮಿಲಿಯನ್ ವರ್ಷಗಳಾದ ಮೇಲೆ ಇವನ್ನೂ ಭೇದಿಸಿ ನುಗ್ಗಿದ ಗ್ರ್ಯಾನಿಟಿಕ್ ಅಂತಸ್ಸರಣ ಸಮುದಾಯಗಳಲ್ಲಿ ಇವು ಸಿಕ್ಕಿಬಿದ್ದು ಪ್ರಸಕ್ತ ಭೂಖಂಡಗಳ ನ್ಯೂಕ್ಲಿಯಸುಗಳೆನಿಸಿವೆ. ಕಾಲಕ್ರಮೇಣ ಇವುಗಳ ಸುತ್ತ ಇತರ ಶಿಲೆಗಳು ಸೇರುತ್ತ ಖಂಡ ವಿಸ್ತಾರಗೊಳ್ಳುತ್ತಹೋಯಿತು. ಹೀಗೆ ಸೇರಿದ ಜಲಜಶಿಲಾಸ್ತರಗಳನ್ನೂ ಶಿಥಿಲಗೊಂಡ ಗ್ರ್ಯಾನೈಟುಗಳನ್ನೂ ಇಂದಿಗೂ ಗುರುತಿಸಬಹುದು.

ಪ್ರಮುಖವಾದ ಭೂ ಅಭಿನತಿ: ಪರ್ವತಜನ್ಯ ಚಕ್ರಗಳು (ಸೈಕಲ್ಸ್) ಹಲವಾರಿದ್ದು ಅವನ್ನು ವಿವಿಧ ಭೂಯುಗಗಳಲ್ಲಿ ಗುರುತಿಸಲಾಗಿದೆ. ಇವು ಅನೇಕ ವೇಳೆ ಹಲವಾರು ಜಲಜಶಿಲಾ–ಜ್ವಾಲಾಮುಖೀಯ ಉಪಚಕ್ರಗಳಿಂದ ಕೂಡಿರುವುದುಂಟು. ಪ್ರತಿ ಚಕ್ರದ ಶಿಲಾಶ್ರೇಣಿಗಳು ಆ ಕಾಲದ ಹೊರಚಿಪ್ಪಿನ ಸ್ವರೂಪ ಹಾಗೂ ಸ್ಥಿರತೆಯನ್ನೂ ಅಡಿಯಲ್ಲಿದ್ದ ಹೊದಿಕೆಯ ಸ್ವರೂಪವನ್ನೂ ಒಂದು ರೀತಿಯಲ್ಲಿ ಪ್ರತಿಬಿಂಬಿಸುತ್ತವೆನ್ನಬಹುದು.

ಭೂಮಿಯ ಹೊರಚಿಪ್ಪಿನ ಶಿಲೆಗಳಲ್ಲಿ ಅತ್ಯಂತ ಪುರಾತನವೆನಿಸಿದ್ದು ಉತ್ತಮ ರೀತಿಯಲ್ಲಿ ಕಾಪಾಡಲಾಗಿರುವ ಭೂ ಇತಿಹಾಸದ ಅದರಲ್ಲೂ ಖಂಡರೂಪಣೆಗೆ ಸಂಬಂಧಿಸಿದ ದಾಖಲೆಯನ್ನು ಜಿಂಬಾಬ್ವೆ–ದಕ್ಷಿಣ ಆಫ್ರಿಕ ಶಾಶ್ವತಖಂಡದ (ಶೀಲ್ಡ್) ಪೂರ್ವ ಟ್ರಾನ್ಸ್‌ವಾಲಿನಲ್ಲಿ ಗುರುತಿಸಿದ್ದಾರೆ. ಈ ಪ್ರದೇಶವನ್ನು ಬ್ಯಾಬರ್ಟನ್ ಪರ್ವತವೆಂದು ಹೆಸರಿಸಲಾಗಿದೆ. ಇಲ್ಲಿನ ಶಿಲೆಗಳಲ್ಲಿ ಅತ್ಯಂತ ಪುರಾತನವಾದುದು. ಸು. 3.2 ಇಯಾನ್ ವರ್ಷ ವಯಸ್ಸಿನ ಬೆಸಾಲ್ಟ್ ಹಾಗೂ ಪೆರಿಡೊಟೈಟ್ ಲಾವಾಗಳು ಹಾಗೂ ಸಿಲ್‌ಗಳು. ಇವೆರಡೂ ಸ್ವಾಸಿಲ್ಯಾಂಡ್ ಶ್ರೇಣಿಯ ತಳಪಾಯದ ಜ್ವಾಲಾಮುಖಿಯ ಹಾಗೂ ಜಲಜಶಿಲಾ ಶ್ರೇಣಿಯ ಅಡಿಯಲ್ಲಿರುವ ಶಿಲೆಗಳಾಗಿದ್ದು ಇಡೀ ಶ್ರೇಣಿ ಗ್ರಾನಿಟಿಕ್ ಅಂತಸ್ಸರಣಗಳ ನಡುವೆ ಸಿಕ್ಕಿಬಿದ್ದಿದೆ. ಲಾವಾಸ್ತರಗಳಲ್ಲಿ ಜಲಾವರಣ ಸನ್ನಿವೇಶದಲ್ಲಿ ರೂಪುಗೊಳ್ಳುವ ದಿಂಬು ಲಾವಾ (ಪಿಲ್ಲೋ ಲಾವಾ) ಮುಂತಾದ ಕೆಲವು ವಿಶಿಷ್ಟ ರಚನೆಗಳಿವೆ. ಇಲ್ಲಿನ ಬೆಸಾಲ್ಟಿಕ್ ಲಾವಾಗಳ ಸಂಯೋಜನೆ ಸಾಗರತಳಗಳಿಂದ ಹೊರಹೊಮ್ಮುತ್ತಿರುವ ಲಾವಾಸ್ತರಗಳಂತಿದೆ. (ಬಿ.ವಿ.ಜಿ.)

**ಖಂಡಾಂತರ ವಾಯುಗುಣ ಪ್ರದೇಶ (ಮಧ್ಯ ಅಕ್ಷಾಂಶ):** ಸಮಶೀತೋಷ್ಣವಲಯದಲ್ಲಿ ದೊಡ್ಡ ಭೂಭಾಗಗಳ ನಡುವೆ ಹಬ್ಬಿರುವ ಸ್ವಾಭಾವಿಕ ಪ್ರದೇಶ. ಸಮುದ್ರದ ಪ್ರಭಾವದಿಂದ ದೂರವಿರುವುದರಿಂದ ಉಷ್ಣತೆಯ ವೈಪರೀತ್ಯಗಳು ಕಾಣಬರುತ್ತವೆ. ಉತ್ತರ ಅಮೆರಿಕದ ಪ್ರೈರಿ (ಹುಲ್ಲುಗಾವಲು) ಈ ಪ್ರದೇಶಕ್ಕೆ ಮಾದರಿಯಾದ್ದರಿಂದ ಇದಕ್ಕೆ ಪ್ರೈರಿ ಪ್ರದೇಶವೆಂಬ ಹೆಸರೂ ಉಂಟು. ಉತ್ತರ ಅಮೆರಿಕದ ಮಧ್ಯಭಾಗ, ರಷ್ಯ ಮತ್ತು ಸೈಬೀರಿಯಗಳ ನಡುಭಾಗ, ಮಂಗೋಲಿಯ ಮತ್ತು ಮಂಚೂರಿಯ ಉತ್ತರಾರ್ಧ ಗೋಳದಲ್ಲೂ ಅರ್ಜೆಂಟೈನದ ಉತ್ತರ ಭಾಗ, ದಕ್ಷಿಣ ಆಫ್ರಿಕದ ಪೂರ್ವ ಮಧ್ಯಭಾಗ, ಆಸ್ಟ್ರೇಲಿಯದ ಮರ್ರೆ–ಡಾರ್ಲಿಂಗ್ ನದಿಕಣಿವೆ ಭಾಗ, ದಕ್ಷಿಣಾರ್ಧ ಗೋಳದಲ್ಲಿಯೂ ಸ್ಥೂಲವಾಗಿ ಈ ವಾಯುಗುಣ ಪ್ರದೇಶಕ್ಕೆ ಸೇರಿವೆ.

ಖಂಡಾಂತರ ವಾಯುಗುಣ ಪ್ರದೇಶದ ಉಷ್ಣತೆಯ ಅಂತರ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಉತ್ತರಾರ್ಧಗೋಳದಲ್ಲಿ ಸಾಮಾನ್ಯವಾಗಿ ಪಶ್ಚಿಮದಿಂದ ಪೂರ್ವಕ್ಕೆ ಸಾಗಿದಂತೆ ಬೇಸಗೆಯೂ ಚಳಿಗಾಲವೂ ತೀವ್ರತರವಾಗುತ್ತವೆ. ದಕ್ಷಿಣಾರ್ಧಗೋಳದಲ್ಲಿ ಖಂಡಗಳು ಹೆಚ್ಚು ಕಿರಿದಾಗಿರುವುದರಿಂದ ಖಂಡಾಂತರ ವಾಯುಗುಣದ ವೈಪರೀತ್ಯಗಳು ಕಾಣುವುದಿಲ್ಲ. ದಕ್ಷಿಣ ಅಮೆರಿಕದ ಪಾಂಪಾಸ್ ಪ್ರದೇಶದ ಮೇಲೆ ಪಶ್ಚಿಮದಿಂದ ಬೀಸುವ ಗಾಳಿಗೆ ಆಂಡೀಸ್ ತಡೆಯೊಡ್ಡುವುದರಿಂದ ಇಲ್ಲಿಯ ವಾಯುಗುಣ ಉತ್ತರಾರ್ಧಗೋಳದ ಖಂಡಾಂತರ ಪ್ರದೇಶಗಳ ವಾಯುಗುಣವನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ದಕ್ಷಿಣ ಆಫ್ರಿಕ ಪ್ರಸ್ಥಭೂಮಿಪ್ರದೇಶದಲ್ಲಿ ಉಷ್ಣತೆ ಸಾಮಾನ್ಯವಾಗಿ ಹೆಚ್ಚು. ಹಿಮ ಬೀಳುವುದು ಅಪರೂಪ. ಆಸ್ಟ್ರೇಲಿಯದ ಮರ್ರೆ ಡಾರ್ಲಿಂಗ್ ನದಿಪ್ರದೇಶದಲ್ಲಿ ಉಷ್ಣತೆ ಸಾಮಾನ್ಯವಾಗಿ ಅಧಿಕವಾಗಿರುವುದಾದರೂ ಬೇಸಗೆ–ಚಳಿಗಾಲದ ಉಷ್ಣತೆಯ ಅಂತರವೂ ಅಧಿಕ.

ಖಂಡಾಂತರ ವಾಯುಗುಣ ಪ್ರದೇಶದಲ್ಲಿ ಮಳೆ 25 ಸೆಂಮೀ ನಿಂದ 75 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ. ಈ ಪ್ರದೇಶದಲ್ಲಿ ಪೂರ್ವಬೇಸಗೆಯಲ್ಲಿ ಬೀಳುವ ಮಳೆಯಿಂದಾಗಿ ಹುಲ್ಲು ಸಮೃದ್ಧಿಯಾಗಿ ಬೆಳೆಯುತ್ತದೆ. ಬೇಸಗೆ ಹೆಚ್ಚು ಚುರುಕಾದಾಗ ಮತ್ತು ಚಳಿಯ ತೀವ್ರತೆಯ ಕಾಲದಲ್ಲಿ ಹುಲ್ಲು ಒಣಗುತ್ತದೆ. ಉತ್ತರಾರ್ಧಗೋಳದ ಚಳಿಪ್ರದೇಶಗಳಲ್ಲಿ ಚಳಿಗಾಲದಲ್ಲಿ ಹಿಮರೂಪದಲ್ಲಿ ಸಂಭವಿಸುವ ಅವಪತನದಿಂದಾಗಿ ಹೆಚ್ಚು ತೇವ ಒದಗಿಬರುತ್ತದೆ.

ಖಂಡಾಂತರ ವಾಯುಗುಣ ಪ್ರದೇಶದ ನೆಲ ಸಾಮಾನ್ಯವಾಗಿ ಕಪ್ಪು ಮಣ್ಣಿನಿಂದ ಕೂಡಿದ್ದು ಫಲವತ್ತಾಗಿರುತ್ತದೆ. ಪ್ರದೇಶದ ಸ್ವಾಭಾವಿಕ ಸಸ್ಯಜೀವನ ವಿಶಿಷ್ಟವಾದದ್ದು. ಇಲ್ಲಿ ವ್ಯಾಪಕವಾಗಿ ಬೆಳೆಯುವ ಸಸ್ಯ ಹುಲ್ಲು. ಎಷ್ಟು ದೂರ ಕಣ್ಣು ಹಾಯಿಸಿದರೂ ಒಂದಾದರೂ ಮರ ಕಾಣಸಿಗುವುದಿಲ್ಲ. ಉತ್ತರಾರ್ಧಗೋಳದಲ್ಲಿರುವ ಈ ಪ್ರದೇಶದ ಉತ್ತರ ಭಾಗವನ್ನು ಚಳಿಗಾಲದಲ್ಲಿ ಸಾಮಾನ್ಯವಾಗಿ ಹಿಮ ಮುಸುಕಿರುತ್ತದೆ. ದಕ್ಷಿಣಾರ್ಧಗೋಳದಲ್ಲಿ ಹಿಮ ಅಪರೂಪ. ಆಸ್ಟ್ರೇಲಿಯದ ಹುಲ್ಲುಗಾವಲುಗಳಲ್ಲಿ ಅಲ್ಲಲ್ಲಿ ನೀಲಗಿರಿ ಮರಗಳೂ ಪೊದೆಗಳೂ ಇರುತ್ತವೆ. ಕೆನಡ ಮತ್ತು ಸಂಯುಕ್ತಸಂಸ್ಥಾನಗಳಲ್ಲಿ ಪ್ರೈರೀಸ್ ಎಂದೂ ರಷ್ಯ, ಸೈಬೀರಿಯಗಳಲ್ಲಿ ಸ್ಟೆಪ್ಪಿ ಎಂದೂ ಅರ್ಜೆಂಟೈನದಲ್ಲಿಯ ಹುಲ್ಲುಗಾವಲುಗಳನ್ನು ಪಾಂಪಾಸ್ ಎಂದೂ ದಕ್ಷಿಣ ಆಫ್ರಿಕದಲ್ಲಿ ವೆಲ್ಡ್ ಮತ್ತು ಆಸ್ಟ್ರೇಲಿಯದಲ್ಲಿ ಡೌನ್ಸ್ ಎಂದೂ ಕರೆಯುತ್ತಾರೆ.

ಇಲ್ಲಿಯ ಸಸ್ಯಹಾರಿ ಪ್ರಾಣಿಗಳಿಗೆ ಸಾಮಾನ್ಯವಾಗಿ ಹುಲ್ಲೇ ಆಹಾರ. ಅದನ್ನು ತಿಂದು ಅನಂತರ ನಿಧಾನವಾಗಿ ಮೆಲುಕು ಹಾಕುವುದು ಇವುಗಳ ಕ್ರಮ. ಇವು ವೇಗವಾಗಿ ಓಡಬಲ್ಲಂಥವು. ಕಾಡುಕುದುರೆ, ಕಾಡುಕತ್ತೆಗಳು ಈ ಗುಂಪಿನ ಪ್ರರೂಪಿ ಪ್ರಾಣಿಗಳು. ಕಾಡುಕತ್ತೆ ಸು. 64 ಕಿಮೀ ವೇಗದಲ್ಲಿ ಸು. 15 ಕಿಮೀ ದೂರ ಓಡಬಲ್ಲದು. ಸಸ್ಯಹಾರಿ ಪ್ರಾಣಿಗಳನ್ನು ತಿಂದು ಬದುಕುವ ಮೃಗಗಳೂ ಇಲ್ಲಿ ಉಂಟು.

ಹುಲ್ಲುಗಾವಲುಗಳಲ್ಲಿ ಆದಿಮಾನವ ಜೀವನವನ್ನಾರಂಭಿಸಿದಾಗ ಮಾಂಸಾಹಾರಿಯಾಗಿದ್ದ. ಅವನು ಆಗ ಮುಖ್ಯವಾಗಿ ಬೇಟೆಗಾರ. ನಾಗರಿಕತೆಯ ಎರಡನೆಯ ಹಂತದಲ್ಲಿ ಅವನು ಪಶುಪಾಲಕನಾದ. ಹೊಸ ಹೊಸ ಮೇವಿನ ಸ್ಥಳಗಳನ್ನರಸುತ್ತ ಅವನು ಪ್ರಾಣಿಗಳ ಮಂದೆಯೊಂದಿಗೆ ಅಲೆದಾಡುತ್ತಿದ್ದ. ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ ಮತ್ತು ಅರ್ಜೆಂಟೈನಗಳ ಹುಲ್ಲುನೆಲಗಳಲ್ಲಿ ಇಂದಿಗೂ ಕುರಿ ಸಾಕುವುದು ಒಂದು ಮುಖ್ಯ ಕಸಬು. ಹುಲ್ಲು ಬೆಳೆಯುವಲ್ಲೆಲ್ಲ ಈತ ಈಗ ಧಾನ್ಯಗಳನ್ನು ಬೆಳೆಯತೊಡಗಿದ್ದಾನೆ. ಈ ಪ್ರದೇಶಗಳು ಈಗ ಪ್ರಪಂಚದ ಧಾನ್ಯದ ಕಣಜಗಳೆನಿಸಿವೆ. ಗೋದಿ, ಬಾರ್ಲಿ, ಓಟ್ಸ್ ಮತ್ತು ರೈ ಪ್ರಮುಖ ಧಾನ್ಯಗಳು. ದಕ್ಷಿಣ ಆಫ್ರಿಕದಲ್ಲಿ ಮಾತ್ರ ಮೆಕ್ಕೆಜೋಳಕ್ಕೆ ಪ್ರಥಮಸ್ಥಾನ. ರಷ್ಯದ ಭಾಗದಲ್ಲಿರುವ ಪ್ರದೇಶ ಇನ್ನೂ ಸಂಪೂರ್ಣವಾಗಿ ಕೃಷಿಗೆ ಒಳಪಟ್ಟಿಲ್ಲ. ಉಳಿದ ಭಾಗಗಳಲ್ಲೆಲ್ಲ ವ್ಯಾಪಕವಾಗಿ ಬೇಸಾಯ ನಡೆಯುತ್ತಿದೆ. (ಎಂ.ಎಸ್.)

**ಖಂಡಾವರಣ ಇಳಿಜಾರು:** ಖಂಡಾವರಣ ಪ್ರದೇಶದಿಂದ ಮುಂದೆ ಕಡಿದಾದ ಸಾಗರ ತಳದ ಇಳಿಜಾರು. ಇದರ ಆಳ 200–400 ಮೀ. ಸಾಗರ ತಳದ ಒಟ್ಟು ವಿಸ್ತೀರ್ಣದಲ್ಲಿನ ಶೇ. 8.5 ರಷ್ಟನ್ನು ಆವರಿಸಿದೆ. ಇದು ಎಲ್ಲಾ ಸಾಗರಗಳಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ. ಅಟ್ಲಾಂಟಿಕ್ ಸಾಗರದಲ್ಲಿ ವಿಶಾಲವಾಗಿದೆ. ಖಂಡಾವರಣ ಇಳಿಜಾರು ಪ್ರದೇಶ ಸಮುದ್ರದ ಅಲೆಗಳು ಮತ್ತು ಸಾಗರ ಪ್ರವಾಹಗಳ ಸವೆತ ಮತ್ತು ಸಂಚಯನದಿಂದ ಹೊರತಾಗಿದೆ. ಪರಿಣಾಮವಾಗಿ ಇವುಗಳ ರಚನೆಯಲ್ಲಿ ಸವೆತ ಮತ್ತು ಸಂಚಯನ ಕಾರ್ಯಗಳ ಪಾತ್ರ ಕಡಿಮೆ. ಈ ವಲಯದಲ್ಲಿ ಜಲಾಂತರ್ಗತ ಕಂದರಗಳು ಮತ್ತು ಕಮರಿಗಳು ಕಂಡುಬರುವುದರಿಂದ ಇಳಿಜಾರುಗಳು ಶಿಲಾಸ್ತರಭಂಗ ಅಥವಾ ಕುಸಿತವಾಗಿರಬಹುದು ಎಂದು ಅಂದಾಜು ಮಾಡಲಾಗಿದೆ. (ಎಂ.ವಿ.)

**ಖಂಡಾವರಣ ಪ್ರದೇಶ:** ಭೂಖಂಡಗಳ ಸುತ್ತಲಿನ ಅಂಚುಗಳು ಸಮುದ್ರದೊಳಗೆ ಚಾಚಿಕೊಂಡಿರುವ ಆಳವಲ್ಲದ ಭಾಗ. ಇದು ಭೂ ಮತ್ತು ಸಾಗರ ಭಾಗಗಳು ಸಂಧಿಸುವ ವಲಯವಾಗಿದೆ. ಇದು ಸಾಗರಗಳ ಕಡೆಗೆ ಬಳಿದಾದ ಇಳಿಜಾರನ್ನು ಹೊಂದಿದ್ದು, 180

ರಿಂದ 365 ಮೀ ಆಳವಾಗಿವೆ. ಸಾಗರ ತಳದ ವಿಸ್ತೀರ್ಣದಲ್ಲಿ ಶೇ. 7.6 ಭಾಗ ಖಂಡಾವರಣ ಪ್ರದೇಶವಾಗಿರುತ್ತದೆ. ಖಂಡಾವರಣ ಪ್ರದೇಶದ ಸರಾಸರಿ ಆಳ ಇಳಿಜಾರಿನ ಪ್ರಮಾಣ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದುವುದು. ಈ ಪ್ರದೇಶದ ಇಳಿಜಾರು $1^0$ ಗಿಂತಲೂ ಕಡಿಮೆ ಅಥವಾ ಅತಿ ಇಳಿದಾಗಿ, ವಿಸ್ತಾರವಾಗಿರುವುದು. ಖಂಡಾವರಣ ಪ್ರದೇಶ ಅಟ್ಲಾಂಟಿಕ್ ಸಾಗರದಲ್ಲಿ ಶೇ. 13.3 ರಷ್ಟು, ಪೆಸಿಫಿಕ್ ಸಾಗರದಲ್ಲಿ ಶೇ. 5.3 ರಷ್ಟು ಮತ್ತು ಹಿಂದೂ ಮಹಾಸಾಗರದಲ್ಲಿ ಶೇ. 4.2 ರಷ್ಟಿರುವುದು. (ಎಚ್.ಎಲ್.ಎಲ್.)

**ಖನಿಜ ತೈಲ:** ಖನಿಜಮೂಲದ ಮತ್ತು ತೈಲಗಳಿಗೆ ವಿಧಿಸಲಾಗಿರುವ ಶ್ಯಾನತ್ವದ (ವಿಸ್ಕಾಸಿಟಿ) ಪರಿಮಿತಿಗಳ ಒಳಗೆ ಇರುವ ದ್ರವ (ಮಿನರಲ್ ಆಯಿಲ್). ಖನಿಜತೈಲಗಳಲ್ಲಿ ಪ್ರಧಾನವಾದದ್ದು ಪೆಟ್ರೋಲಿಯಂ. ಆಧುನಿಕ ಉದ್ಯೋಗ, ವಾಹನ ಮತ್ತು ಯುದ್ಧ ಸಾಧನ ಸಲಕರಣೆಗಳು ಮುಖ್ಯವಾಗಿ ಪೆಟ್ರೋಲಿಯಂನ ಮೇಲೆ ಅವಲಂಬಿಸಿವೆ. ಇದು ದ್ರವರೂಪದಲ್ಲಿರುವುದರಿಂದ ಇದನ್ನು ಭೂಮಿಯಿಂದ ಬಹಳ ಅಗ್ಗವಾಗಿ ಪಡೆಯಬಹುದು. ಇದನ್ನು ಒಯ್ಯುವುದಕ್ಕೂ ವಿತರಿಸುವುದಕ್ಕೂ ಹೆಚ್ಚು ವೆಚ್ಚ ತಗಲುವುದಿಲ್ಲ.

ರಾಸಾಯನಿಕ ಸಂಯೋಜನೆ : ರಚನೆಯಲ್ಲಿ ಪೆಟ್ರೋಲಿಯಂ ಅಲ್ಪ ಮೊತ್ತದಲ್ಲಿ ಆಕ್ಸಿಜನ್, ನೈಟ್ರೊಜನ್ ಮತ್ತು ಸ್ವಲ್ಪ ಗಂಧಕ ಬೆರೆತಿರುವ ಒಂದು ಹೈಡ್ರೊಕಾರ್ಬನ್. ಹೈಡ್ರೊಕಾರ್ಬನ್ ಶ್ರೇಣಿಯ ಅಸಂಖ್ಯಾತ ಸದಸ್ಯರುಗಳಿಗೆ ವಿಧವಿಧವಾದ ರಾಸಾಯನಿಕ ಮತ್ತು ಭೌತಗುಣಗಳು ಇವೆ. ಸಾಮಾನ್ಯ ಉಷ್ಣತಾಮಾನಗಳಲ್ಲಿ ಕೆಲವು ಅನಿಲ ರೂಪದಲ್ಲೂ ಕೆಲವು ದ್ರವರೂಪದಲ್ಲೂ ಇದ್ದರೆ ಮತ್ತೆ ಕೆಲವು ಮೇಣದಂತಿರುತ್ತವೆ. ಆದ್ದರಿಂದ ಯಾವ ಎರಡು ತೈಲಗಳೂ ಒಂದರಂತೆ ಒಂದಿರುವುದಿಲ್ಲ.

ಆಕರ : ಜಲಜಶಿಲೆಗಳು ಪೆಟ್ರೋಲಿಯಂನ ಪ್ರಧಾನ ಆಕರಗಳು. ಮರುಳುಗಳು, ಮರಳುಕಲ್ಲುಗಳು, ಕಂಗ್ಲಾಮರೇಟುಗಳು, ಡಾಲಮೈಟುಗಳು ಮತ್ತು ಅಪೂರ್ವವಾಗಿ ಬಿರುಕುಗಳಿಂದ ಕೂಡಿದ ಶೇಲುಗಳು ವಾಣಿಜ್ಯಕ್ಕೆ ಅರ್ಹವಾದ ಬಾವಿಗಳ ತೈಲಾಕರ ಶಿಲೆಗಳು, ಸಾಗರದ ಪದರಗಳೂ ಜತೆಗೆ ಅವುಗಳಿಗೆ ಸಂಬಂಧಪಟ್ಟ ಭೂಖಂಡಗಳ ಅಧಃಸ್ಥಳಗಳು ತೈಲೋತ್ಪಾದನೆಗೆ ಮುಖ್ಯ ಕ್ಷೇತ್ರಗಳಾಗಿವೆ. ಕೇಂಬ್ರಿಯನ್ ಯುಗದಿಂದ ಪ್ಲಿಯೋಸೀನ್ ಯುಗದವರೆಗಿನ ಶಿಲೆಗಳಲ್ಲಿ ಪೆಟ್ರೋಲಿಯಂ ಸಿಕ್ಕುತ್ತದೆ. ಟರ್ಷಿಯರಿ ಯುಗದ ಶಿಲೆಗಳಲ್ಲಿ ಇದರ ಪರಿಮಾಣ ಅತ್ಯಧಿಕವಾಗಿದೆ. ಪೆಟ್ರೋಲಿಯಂ ಉದ್ಭವಿಸಿದ್ದು ಜೀವಿಗಳಿಂದ ಎಂದು ಈಗ ಎಲ್ಲರೂ ಒಪ್ಪುತ್ತಾರೆ. ಸಂಕ್ಷೇಪವಾಗಿ ಹೇಳುವುದಾದರೆ ಸಮುದ್ರದ ಮಣ್ಣುಗಳಲ್ಲಿ ಹೂತುಹೋದ ಜೀವಿ ವನಸ್ಪತಿ ವಸ್ತುಗಳು ರಾಸಾಯನಿಕ ಪರಿವರ್ತನೆಯನ್ನು ಹೊಂದಿ ಪ್ರಾಕೃತಿಕ ಹೈಡ್ರೊಕಾರ್ಬನ್ನುಗಳಾಗುತ್ತವೆ. ತರುವಾಯ ಇವು ಸರಂಧ್ರ ಶಿಲೆಗಳೆಡೆಗೆ ಚಲಿಸಿ ಅಲ್ಲಿ ಶೇಖರಗೊಂಡು ವಾಣಿಜ್ಯಾರ್ಹ ತೈಲಕೂಪಗಳಾಗಿ ಪರಿಣಮಿಸುತ್ತವೆ. ಸಂಘಟನೆ (ಕಾಂಪೇಕ್ಷನ್), ಲೋಮನಾಳತ್ವ (ಕ್ಯಾಪಿಲ್ಲಾರಿಟಿ), ಉತ್ಪ್ಲವನತೆ (ಬಾಯೆನ್ಸಿ), ಗುರುತ್ವ ಮತ್ತು ಪ್ರವಾಹಗಳು ಮೊದಲಾದ ಕ್ರಿಯೆಗಳು ಒಂದುಗೂಡಿ ಈ ಚಲನೆ ಏರ್ಪಡುವ ಹಾಗೆ ತೋರುತ್ತದೆ. ಅಭಿನತಿಕ ಶಿಲಾಮಡಿಕೆಗಳು (ಸಿಂಕ್ಲೈನಲ್ ಫೋಲ್ಡ್ಸ್), ಸ್ತರ ಭಂಗ ಪಾಶಗಳು, ಲವಣಗುಮ್ಮಟಗಳು, ಬಿರುಕಿನ ಬೆಣೆಗಳು, ಹಣಿಗೆ ಟ್ರ್ಯಾಪುಗಳು ಮತ್ತು ಇವುಗಳ ವಿವಿಧ ಜೋಡಣೆಗಳಲ್ಲಿ ತೈಲ ಸಂಗ್ರಹವಾಗಬಹುದು.

ಜಲಜ ಶಿಲೆಗಳಲ್ಲಿ ತೈಲ ಅಷ್ಟು ಆಳವಿಲ್ಲದ ಜಾಗಗಳಿಂದ ಹಿಡಿದು ಎಂದರೆ ಸು. 1218 ಮೀ ಆಳ, ಸು. 6095 ನಿಂದ 9143 ಮೀ ವರೆಗಿನ ಸ್ಥಳಗಳಲ್ಲಿ ನೆಲೆಗೊಂಡಿವೆ. ಕೊರೆಯುವ ತಂತ್ರಗಳಲ್ಲಿ ಸಾಕಷ್ಟು ಸುಧಾರಣೆ ಆಗಿರುವುದರಿಂದ ಅತ್ಯಧಿಕವಾದ ಆಳಗಳಿಗೆ ಇಳಿದು ಗುರಿಮುಟ್ಟುವುದು ಈಗ ಸಾಧ್ಯವಾಗಿದೆ. ತೈಲ ಸಾಮಾನ್ಯವಾಗಿ ಒಳತಳದಲ್ಲಿ ಸ್ವಲ್ಪ ಒತ್ತಡಕ್ಕೆ ಒಳಪಟ್ಟು ಇರುತ್ತದೆ. ಈ ಒತ್ತಡವೆ ಎಣ್ಣೆಯನ್ನು ಬಾವಿಗೂ ಬಾವಿಯಿಂದ ಮೇಲಕ್ಕೂ ಚಿಮ್ಮಿಬರುವಂತೆ ಮಾಡುತ್ತದೆ. ತೈಲಾಕರದ ಒತ್ತಡಕ್ಕೆ ತೈಲಕ್ಷೇತ್ರದಲ್ಲಿನ ವಿಲೀನಾನಿಲ, ಜಲಸ್ಥಿತಿ ಮೂಲ (ಹೈಡ್ರೊಸ್ಟ್ಯಾಟಿಕ್ ಹೆಡ್), ಪಟಲವಿರೂಪಣ (ಡಯಾಸ್ಟ್ರಾಫಿಸಂ), ಉಷ್ಣತಾ ಏರಿಳಿತ ಪ್ರಮಾಣ (ಟೆಂಪರೇಚರ್ ಗ್ರೇಡಿಯಂಟ್), ದ್ರವಗತಿಕ ಪರಿಸ್ಥಿತಿಗಳು ಮತ್ತು ಖನಿಜ ಪರಿವರ್ತನೆಗಳು ಕಾರಣಗಳು.

ಎಣ್ಣೆಬಾವಿಗಳನ್ನು ಪತ್ತೆಮಾಡುವ ಕೆಲಸ ಭೂಮೇಲ್ಮೈ ಮತ್ತು ಭೂಅಂತರಾಳವನ್ನು ಭೂಶಾಸ್ತ್ರೀಯವಿಧಾನಗಳಿಂದ ನಡೆಸಲಾಗುತ್ತದೆ ಮತ್ತು ಆವೃತ ಕ್ಷೇತ್ರಗಳಲ್ಲಿ ಭೂಭೌತ ಸರ್ವೇಕ್ಷಣಗಳಿಂದ ಈ ಕಾರ್ಯ ಜರುಗುತ್ತದೆ.

ಪ್ರಪಂಚದ ತೈಲನಿಕ್ಷೇಪಗಳು : ಅಂಕಿ ಅಂಶಗಳು ತಿಳಿಸುವ ಹಾಗೆ 1950ರಲ್ಲಿ ಮೂರು ಶತಕೋಟಿ ಬ್ಯಾರೆಲ್ಲುಗಳಷ್ಟು ಎಣ್ಣೆಯ ಉತ್ಪಾದನೆ ಆಗಿದೆ. ಅಧಿಕ ಸಂಖ್ಯೆಯಲ್ಲಿ ತೈಲಕ್ಷೇತ್ರಗಳನ್ನು ಅದರಲ್ಲೂ ಮುಖ್ಯವಾಗಿ ಮಧ್ಯಪ್ರಾಚ್ಯದಲ್ಲಿ ಕಂಡು ಹಿಡಿಯುತ್ತಿರುವ ಹಾಗೆಲ್ಲ ಈ ಉತ್ಪಾದನ ಪರಿಮಾಣ ಕ್ರಮೇಣ ಏರುತ್ತಲೇ ಇದೆ.

ಉಪಯೋಗಗಳು: ಶಕ್ತಿಯ (ಪವರ್) ಉತ್ಪಾದನೆಯಲ್ಲಿ ಮೂಲವಾಗಿಯೂ ಸ್ನೇಹಕ ದ್ರವ್ಯವಾಗಿಯೂ (ಲ್ಯೂಬ್ರಿಕೆಂಟ್) ಖನಿಜತೈಲಗಳ ಉಪಯೋಗ ಉಂಟು. ಮಾನವ ಬಳಸುತ್ತಿರುವ ಪೆಟ್ರೋಲಿಯಂನ ಮೊತ್ತದ ಶೇ. 90 ರಷ್ಟು ಭಾಗ ಈ ಎರಡು ಉಪಯೋಗಗಳಿಗಾಗಿ ವ್ಯಯವಾಗುತ್ತಿದೆ. ಕಚ್ಚಾತೈಲಗಳ ಶುದ್ಧೀಕರಣ ಪ್ರಕ್ರಿಯೆ ಹಲವಾರು ಗೌಣೋತ್ಪನ್ನಗಳಿಗೆ ದಾರಿಮಾಡಿ ಕೊಡುತ್ತದೆ. ಇವುಗಳಲ್ಲಿ ವಿಧವಿಧವಾದ ರಾಸಾಯನಿಕ ವಸ್ತುಗಳು, ಔಷಧಿಗಳು, ದ್ರಾವಕಗಳು (ಸಾಲ್ವೆಂಟ್ಸ್), ರಾಳಗಳು, ಬಣ್ಣಗಳು, ಸ್ಫೋಟಕಗಳು, ಕೀಟನಾಶಕಗಳು, ರಬ್ಬರ್, ಸುಗಂಧಗಳು ಇತ್ಯಾದಿಗಳು ಸೇರಿವೆ. (ಸಿ.ಜಿ.)

**ಖನಿಜ ಮತ್ತು ನಿಕ್ಷೇಪಗಳು:** ವಿವಿಧ ಮೂಲ ಧಾತುಗಳ ರಾಸಾಯನಿಕ ಸಂಯೋಗವೇ ಖನಿಜ. ಸಾಮಾನ್ಯ ಅರ್ಥದಲ್ಲಿ ಗಣಿಗಳಿಂದ ಹೊರ ತೆಗೆಯುವ ಲೋಹಾಂಶವುಳ್ಳ ಅದಿರು, ಖನಿಜ ತೈಲ, ಕಲ್ಲಿದ್ದಲು ಮುಂತಾದವುಗಳಿಗೆ ಖನಿಜಗಳೆನ್ನಲಾಗುವುದು. ಆದರೆ ವೈಜ್ಞಾನಿಕವಾಗಿ ವಿಶೇಷ ರಾಸಾಯನಿಕ ಸಂಕೀರ್ಣತೆಯುಳ್ಳ ಅವೈಜ್ಞಾನಿಕ ವಸ್ತುವಿಗೆ ಖನಿಜ ಎನ್ನುವರು. ಖನಿಜಗಳು ವಿಭಿನ್ನ ಗುಣಲಕ್ಷಣ ಹೊಂದಿವೆ. ಅವುಗಳಲ್ಲಿ ಮುಖ್ಯವಾದವು, ಕಾಠಿಣ್ಯತೆ, ಸಾಪೇಕ್ಷಸಾಂದ್ರತೆ, ವರ್ಣ, ಹೊಳಪು, ಪಾರದರ್ಶಿಕತೆ, ಪಟ್ಟೆ ರೇಖೆಗಳು, ಆಕಾರ, ಸೀಳಿಕೆ, ಸಚ್ಛಿದ್ರತೆ ಇತ್ಯಾದಿ. ಇವುಗಳ ಬಗ್ಗೆ ವೈಜ್ಞಾನಿಕವಾಗಿ ವ್ಯಾಸಂಗ ಮಾಡುವುದಕ್ಕೆ ಖನಿಜ ವಿಜ್ಞಾನ ಎನ್ನುವರು. ಭೂಮಿಯ ಮೇಲ್ಮೈ ಅಥವಾ ಅಂತರಾಳದಿಂದ ಖನಿಜಗಳ ನಿಕ್ಷೇಪವನ್ನು ಹೊರತೆಗೆಯುವ ಕಾರ್ಯಕ್ಕೆ ಗಣಿಗಾರಿಕೆ ಎನ್ನುವರು; ಮಾನವನ ಪ್ರಮುಖ ವೃತ್ತಿಗಳಲ್ಲಿ ಇದು ಒಂದಾಗಿದೆ.

ಖನಿಜಗಳು ಅನೇಕ ಲೋಹಗಳ ಮೂಲಗಳಾಗಿವೆ. ಲೋಹಗಳ ಬಳಕೆ ಪುರಾತನ ಕಾಲದಿಂದಲೂ ಮಾನವನಿಗೆ ತಿಳಿದಿದೆ. ಪ್ರಪ್ರಥಮವಾಗಿ ಮಾನವನು ತಾಮ್ರ ಲೋಹದ ಖನಿಜ ಮತ್ತು ಅದರ ಬಳಕೆಯನ್ನು ಪ್ರಾರಂಭಿಸಿದ. ಐತಿಹಾಸಿಕ ಕಾಲದಿಂದಲೂ ಮಾನವ ಖನಿಜಗಳ ಬಳಕೆಯನ್ನು ಕಂಡುಕೊಂಡು ಅವುಗಳ ಉಪಯುಕ್ತತೆಯನ್ನು ಹಂತಹಂತವಾಗಿ ಅರಿತು ಇಂದು ಅನೇಕ ಖನಿಜಗಳನ್ನು ಉತ್ಪಾದಿಸುತ್ತಿದ್ದಾನೆ.

ಶಿಲಾಪಾಕ ಅನೇಕ ಖನಿಜಗಳ ಮೂಲವಾಗಿದೆ. ಪರಿಣಾಮವಾಗಿ ಅಗ್ನಿಶಿಲೆ ಮತ್ತು ರೂಪಾಂತರ ಶಿಲೆಗಳಲ್ಲಿ ಖನಿಜಗಳು ದೊರೆಯುತ್ತವೆ. ಉಪಯುಕ್ತವಾದ ಹಾಗೂ ಲಾಭದಾಯಕವುಳ್ಳ ಒಂದು ಅಥವಾ ಅನೇಕ ಖನಿಜಗಳನ್ನೊಳಗೊಂಡ ಸಮ್ಮಿಶ್ರಿತ ಶಿಲೆಯನ್ನು ಅದಿರು ಎನ್ನಲಾಗಿದೆ. ಇದು ಅನೇಕ ನಿರುಪಯುಕ್ತ ಮಿಶ್ರಣಗಳಿಂದ ಕೂಡಿರುತ್ತದೆ. ಸಂಸ್ಕರಣ ಕಾರ್ಯದಲ್ಲಿ ಅವುಗಳನ್ನು ಬೇರ್ಪಡಿಸಲಾಗುವುದು.

ನಿಸರ್ಗದಲ್ಲಿ ದೊರೆಯುವ ಸಂಪನ್ಮೂಲಗಳಲ್ಲಿ ಖನಿಜ ಸಂಪನ್ಮೂಲಗಳು ಮಹತ್ವವುಳ್ಳವುಗಳಾಗಿವೆ. ಮಾನವನ ಆಧುನಿಕ ನಾಗರಿಕತೆ ಅನೇಕ ರೀತಿಯಲ್ಲಿ ಖನಿಜ ಸಂಪನ್ಮೂಲಗಳನ್ನು ಅವಲಂಬಿಸಿದೆ. ಒಂದು ದೇಶದ ಆರ್ಥಿಕ ಮತ್ತು ಔದ್ಯೋಗಿಕ ಪ್ರಗತಿ ಆ ದೇಶದಲ್ಲಿ ದೊರೆಯುವ ಖನಿಜಗಳನ್ನವಲಂಬಿಸಿದೆ. ಖನಿಜ ಸಂಪತ್ತು, ಕೃಷಿ, ಸಾರಿಗೆ ಸಂಪರ್ಕ ಹಾಗೂ ಗೃಹಕೃತ್ಯ – ಇವು ನಿತ್ಯಬಳಕೆ ವಸ್ತುಗಳ ತಯಾರಿಕೆಗೂ ಅವಶ್ಯಕ.

ಖನಿಜಗಳ ವರ್ಗೀಕರಣ: ಖನಿಜಗಳನ್ನು ಅವುಗಳ ಉಪಯೋಗಗಳ ಆಧಾರದ ಮೇಲೆ ಈ ಕೆಳಕಂಡಂತೆ ವರ್ಗೀಕರಿಸಬಹುದು:

1. ಲೋಹದ (ಕಬ್ಬಿಣ) ಖನಿಜಗಳು. ಉದಾ: ಕಬ್ಬಿಣ ಅದಿರು.

ಕಬ್ಬಿಣ–ಮಿಶ್ರಲೋಹವುಳ್ಳ ಖನಿಜಗಳು: ಮ್ಯಾಂಗನೀಸ್, ನಿಕ್ಕಲ್, ಕ್ರೋಮಿಯಂ, ಟಂಗ್‌ಸ್ಟನ್ ಇತ್ಯಾದಿ. ಕಬ್ಬಿಣ ರಹಿತ ಖನಿಜಗಳು: ತಾಮ್ರ, ಬಾಕ್ಸೈಟ್, ಸತು, ತವರ, ಸೀಸ. ಅಮೂಲ್ಯ ಖನಿಗಳು: ಚಿನ್ನ, ಬೆಳ್ಳಿ ಮತ್ತು ಪ್ಲಾಟಿನಂ. 2. ಅಲೋಹ (ರಾಸಾಯನಿಕ) ಖನಿಜಗಳು. ಉದಾ: ಸಲ್ಫರ್, ನೈಟ್ರೇಟ್, ಪೊಟ್ಯಾಷ್, ಫಾಸ್ಫೇಟ್, ಉಪ್ಪು.

ಕಟ್ಟಡ ನಿರ್ಮಾಣ ಖನಿಜಗಳು: ಮರಳು, ಜೇಡಿ, ಕಲ್ನಾರು, ಅಮೃತ ಶಿಲೆ, ಸುಣ್ಣ ಕಲ್ಲು, ಗ್ರಾನೈಟ್ ಶಿಲೆ ಇತ್ಯಾದಿ. ಅಮೂಲ್ಯ ಹರಳು: ವಜ್ರ. ಇತರೆ ಖನಿಜಗಳು: ಗ್ರಾನೈಟ್ ಇತ್ಯಾದಿ.

3. ಇಂಧನ ಖನಿಜಗಳು. ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲ.

ಖನಿಜ ನಿಕ್ಷೇಪ: ಶಿಲೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉಪಯುಕ್ತ ಖನಿಜವಿದ್ದು ಹೆಚ್ಚು ಪ್ರಮಾಣದಲ್ಲಿ ಅದನ್ನು ಪಡೆಯಲು ಸಾಧ್ಯವಾಗುವ ಸಂಚಯನಗಳನ್ನು ಖನಿಜ ನಿಕ್ಷೇಪವೆನ್ನುವರು: (ಬಿ.ಸಿ.ಕೆ.)

**ಖರಗ್‌ಪುರ:** ಪಶ್ಚಿಮ ಬಂಗಾಲದ ಮೇದಿನೀಪುರ (ಮಿಡ್ನಾಪುರ) ಜಿಲ್ಲೆಯ ಅತ್ಯಂತ ದೊಡ್ಡ ನಗರ. ಕೋಲ್ಕತದ ನೈರುತ್ಯಕ್ಕೆ 115 ಕಿಮೀ ದೂರದಲ್ಲಿ. ಉ.ಅ. $22^0 20'$ ಮತ್ತು ಪೂ.ರೇ. $87^0 21'$ ಮೇಲಿದೆ. ಜನಸಂಖ್ಯೆ 2,96,323. ಆಗ್ನೇಯ ರೈಲ್ವೇಜಾಲದಲ್ಲಿ ಖರಗ್‌ಪುರ ಒಂದು ಪ್ರಮುಖ ಕೂಡುನಿಲ್ದಾಣ. ಇಲ್ಲಿಂದ ಕೋಲ್ಕತಕ್ಕೆ ಜೋಡಿ ವಿದ್ಯುತ್ ರೈಲುಮಾರ್ಗಗಳಿವೆ. ಮುಂಬಯಿ, ಚೆನ್ನೈಗಳಿಗೆ ರಾಷ್ಟ್ರೀಯ ಹೆದ್ದಾರಿಗಳಿವೆ.

ಖರಗ್‌ಪುರ ನಗರ ಇಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸ್ಥಾಪನೆಯಾದ (1951) ಅನಂತರ ಬೆಳೆದದ್ದು, ಕೇಂದ್ರಸರ್ಕಾರದಿಂದ ಸ್ಥಾಪಿತವಾದ ಈ ಸಂಸ್ಥೆ ಸ್ವತಂತ್ರ ವಿಶ್ವವಿದ್ಯಾಲಯದ ದರ್ಜೆಯದು. ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ತಜ್ಞರನ್ನು ನಿರ್ಮಾಣಮಾಡಲು ಭಾರತ ಸರ್ಕಾರ ಪ್ರಾರಂಭಿಸಿದ ಐದು ತಂತ್ರಜ್ಞಾನ ವಿದ್ಯಾಲಯಗಳಲ್ಲಿ ಮೊದಲನೆಯದು. ಈ ಸಂಸ್ಥೆಯಲ್ಲಿ ಎಂಜಿನಿಯರಿಂಗ್ ಮತ್ತು

ತಂತ್ರಜ್ಞಾನದಲ್ಲಿ ತಜ್ಞರನ್ನು ನಿರ್ಮಾಣಮಾಡಲು ಭಾರತ ಸರ್ಕಾರ ಪ್ರಾರಂಭಿಸಿದ ಐದು ತಂತ್ರಜ್ಞಾನ ವಿದ್ಯಾಲಯಗಳಲ್ಲಿ ಮೊದಲನೆಯದು. ಈ ಸಂಸ್ಥೆಯಲ್ಲಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ, ಶುದ್ಧ ಮತ್ತು ಅನ್ವಯಿಕ ವಿಜ್ಞಾನಗಳಲ್ಲಿ ಪದವಿಗಳನ್ನು ನೀಡಲಾಗುತ್ತಿದೆ.

ಬಿಹಾರದ ಮೊಂಘ್ಯೆರ್ ಜಿಲ್ಲೆಯಲ್ಲೂ ಖರಗ್‌ಪುರ ಎಂಬ ಹೆಸರಿನ ಒಂದು ಪಟ್ಟಣವಿದೆ. ಇದರ ಸುತ್ತಣ ಪ್ರದೇಶದಲ್ಲಿ ಸ್ಫಟಿಕಶಿಲೆ ಸಿಗುತ್ತದೆ. (ಜಿ.ಎಸ್.ಎಸ್.)

**ಖಾರ್ಟೂಮ್:** ಆಫ್ರಿಕದ ಸುಡಾನ್ ಗಣರಾಜ್ಯದ ರಾಜಧಾನಿ. ಖಾರ್ಟೂಮ್ ಪ್ರಾಂತ್ಯದ ಆಡಳಿತ ಕೇಂದ್ರ ನೀಲಿ ಮತ್ತು ಬಿಳಿ ನೈಲ್ ನದಿ ಸಂಗಮ ಸ್ಥಳದಲ್ಲಿದೆ. ವಿಸ್ತೀರ್ಣ 20,715.5 ಚ.ಕಿಮೀ. ಜನಸಂಖ್ಯೆ 9,24,505. ಇಡೀ ಸುಡಾನಿನಲ್ಲೇ ಖಾರ್ಟೂಮ್ ದೊಡ್ಡ ನಗರ ಪ್ರದೇಶವಾಗಿ ಬೆಳೆಯುತ್ತಿದೆ. ನಗರದ ದಕ್ಷಿಣದಲ್ಲಿರುವ ರೈಲ್ವೆ ನಿಲ್ದಾಣದಿಂದ ಎರಡು ಮುಖ್ಯ ರೈಲ್ವೆಮಾರ್ಗಗಳುಂಟು. ನಗರದ ಆಗ್ನೇಯ ಭಾಗದಲ್ಲಿ ಕೈಗಾರಿಕೆಗಳಿವೆ. ಮೇಣ ಮತ್ತು ಹತ್ತಿ ಪರಿಷ್ಕರಣ, ಚರ್ಮ ಸಂಸ್ಕರಣ, ಗಿರಣಿ, ಯಂತ್ರಗೆಲಸ, ಮುದ್ರಣ, ಗಾಜು ತಯಾರಿಕೆ, ಹೆಂಚು, ಹೆಣಿಗೆ ವಸ್ತ್ರ, ಸೌಮ್ಯ ಪಾನೀಯ ಇವು ಮುಖ್ಯ ಕೈಗಾರಿಕೆಗಳು.

ಖಾರ್ಟೂಮ್ ಪ್ರಾಂತ್ಯದ ದಕ್ಷಿಣಕ್ಕೆ ಖಾರ್ಟೂಮ್ ಮತ್ತು ಅಮ್‌ಡರ್ಮಿನ್ ಪಟ್ಟಣಗಳಿವೆ. ಪ್ರಾಂತ್ಯದ ಉತ್ತರಕ್ಕೆ ನೈಲ್ ನದಿಯಿದೆ. ಈ ಪ್ರಾಂತ್ಯ ಸಮುದ್ರ ಮಟ್ಟದಿಂದ 360 ಮೀ ಎತ್ತರದಲ್ಲಿದೆ. ಸೆಪ್ಟೆಂಬರ್‌ನಿಂದ ಜೂನ್‌ವರೆಗೆ ಇಲ್ಲಿ ಒಣಹವೆ ಇರುತ್ತದೆ. ವಾರ್ಷಿಕ ಮಳೆ 17 ಸೆಂಮೀ ಗಿಂತ ಹೆಚ್ಚಿಲ್ಲ. ಹುಲ್ಲು, ಪೊದೆ, ಗಿಡ ಇಲ್ಲಿಯ ಸಸ್ಯವರ್ಗ. ಕುರಿ, ಆಡು ಮತ್ತು ಒಂಟೆ ಮುಖ್ಯ ಸಾಕುಪ್ರಾಣಿಗಳು. ಈ ಪ್ರಾಂತ್ಯದ ಬೆಳೆ ಹುರುಳಿ, ಕಲ್ಲಂಗಡಿ, ಕರಬೂಜ, ಜೋಳ, ಕಬ್ಬು ಮತ್ತು ಹಣ್ಣು ತರಕಾರಿಗಳು.

ಈ ಪ್ರಾಂತ್ಯವನ್ನು ಎರಡು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಒಂದು ಖಾರ್ಟೂಮ್ ಉತ್ತರ ಮತ್ತೊಂದು ಅಮ್‌ಡರ್ಮ್, ಖಾರ್ಟೂಮ್ ಉತ್ತರ ಮುಖ್ಯ ಕೈಗಾರಿಕಾ ಕೇಂದ್ರ. ಇಲ್ಲಿ ಶೇ. 95 ರಷ್ಟು ಜನರು ಅರಬ್ಬಿ ಭಾಷೆ ಮಾತನಾಡುವರು. (ಬಿ.ಎಸ್.ಎಚ್.)

**ಖಾಸಿ ಮತ್ತು ಜೈಂತಿಯ ಬೆಟ್ಟಗಳ ಜಿಲ್ಲೆ:** ಭಾರತದ ಮೇಘಾಲಯ ರಾಜ್ಯದ ಬ್ರಹ್ಮಪುತ್ರ ಮತ್ತು ಸುರ್ಮಾ ಕಣಿವೆಗಳ ನಡುವೆ ಇರುವ ಎರಡು ಬೆಟ್ಟ ಪ್ರದೇಶಗಳನ್ನೊಳಗೊಂಡ ಜಿಲ್ಲೆ. ವಿಸ್ತೀರ್ಣ 14,348 ಚ.ಕಿಮೀ. ಜನಸಂಖ್ಯೆ 12,50,801. ಪೂರ್ವಪಶ್ಚಿಮವಾಗಿ ಹಬ್ಬಿದ ಕಡಿದಾದ ಬೆಟ್ಟಸಾಲುಗಳ ನಡುವೆ ಪ್ರಸ್ಥಭೂಮಿ ಈ ಪ್ರದೇಶದ ಲಕ್ಷಣ ದಕ್ಷಿಣದಲ್ಲಿ ಸುರ್ಮಾ ಕಣಿವೆಯಿಂದ ಮೇಲೇರಿರುವ ಪರ್ವತಗಳು ಸಮುದ್ರಮಟ್ಟದಿಂದ 1200–1800 ಮೀ ಗಳ ಎತ್ತರವಿರುವ ಪ್ರಸ್ಥಭೂಮಿ. ಇದರ ಆಡಳಿತ ಕೇಂದ್ರವಾದ ಷಿಲ್ಲಾಂಗ್ ಈ ಪ್ರಸ್ಥಭೂಮಿಯ ಮೇಲಿದೆ. ಹೆಚ್ಚು ಮಳೆಯಾಗುವ ಚಿರಾಪುಂಜಿ ಹಾಗೂ ಮೌಸಿನ್ ರಾಮ್ ಇರುವುದು ಈ ಜಿಲ್ಲೆಯಲ್ಲೆ. ಉತ್ತರದಲ್ಲೂ ಎರಡು ಪ್ರಸ್ಥಭೂಮಿಗಳಿವೆ. ಇವು ಸ್ವಲ್ಪ ತಗ್ಗು. ಒಟ್ಟಿನಲ್ಲಿ ಇಡೀ ಪ್ರಸ್ಥಭೂಮಿಪ್ರದೇಶ ಹುಲ್ಲಿನಿಂದ ತುಂಬಿ ಹಸಿರಾಗಿದೆ. ಸಸ್ಯ ಸಂಪತ್ತು ವೈವಿಧ್ಯಮಯವಾದ್ದು. ಆರ್ಕಿಡ್‌ಗಳು ವಿಶೇಷ. 900 ಮೀ ಎತ್ತರದಲ್ಲಿ ಪೀತದಾರು ಮರಗಳು ಹೆಚ್ಚಾಗಿ ಬೆಳೆಯುತ್ತದೆ. ಇನ್ನೂ ಎತ್ತರದಲ್ಲಿ ಓಕ್ ಮತ್ತು ಚೆಸ್‌ನಟ್ ಮರಗಳುಂಟು. ಕಬ್ಬಿಣದ ಅದುರು ಮತ್ತು ಕಲ್ಲಿದ್ದಲ ಕೆಲವು ಮಾದರಿಗಳು ಇಲ್ಲಿವೆ.

ಕೃಷಿ ಇಲ್ಲಿಯ ಮುಖ್ಯ ಕಸಬು. ಕೈಗಾರಿಕೆ, ಸೇವಾವೃತ್ತಿ, ವ್ಯಾಪಾರ, ಸರಕುಸಾರಿಗೆ ಮುಂತಾದವುಗಳಲ್ಲಿ ನಿರತರಾದವರೂ ಇದ್ದಾರೆ. ಬತ್ತ ಮುಖ್ಯ ಆಹಾರ. ಬೆಟ್ಟಗಳ ಪಕ್ಕಗಳಲ್ಲೂ ಕಣಿವೆಗಳ ಕೆಳ ಭೂಪ್ರದೇಶಗಳಲ್ಲೂ ಬತ್ತ ಬೆಳೆಯುತ್ತಾರೆ. (ಬಿ.ಎಸ್.ಎಚ್.)

**ಖೈಬರ್ ಕಣಿವೆಮಾರ್ಗ:** ಆಫ್ಘಾನಿಸ್ತಾನಕ್ಕೂ ಪಾಕಿಸ್ತಾನಕ್ಕೂ ನಡುವೆ, ಹಿಮಾಲಯ ಪರ್ವತಶ್ರೇಣಿಯ ಮಧ್ಯ ಇರುವ ಮುಖ್ಯ ಕಣಿವೆ ಮಾರ್ಗ, ಪೆಷಾವರ್‌ಗೆ ಪಶ್ಚಿಮಕ್ಕೆ 16.8 ಕಿಮೀ ದೂರದಲ್ಲಿದೆ. ಈ ಕಣಿವೆ ಮಾರ್ಗ ಇರುವ ಬೆಟ್ಟಗಳಿಗೂ ಖೈಬರ್ ಎಂದೇ ಹೆಸರು. ಪ್ರಪಂಚದ ಬೇರಾವ ಕಣಿವೆಗೂ ಇದಕ್ಕಿರುವ ಪ್ರಾಮುಖ್ಯವಿಲ್ಲ. ರಸ್ತೆ ಮತ್ತು ರೈಲುಮಾರ್ಗಗಳನ್ನು ಕೊರೆದಂತಿರುವ ಈ ಕಣಿವೆ ಮುಂದೆ ಪ್ರಪಾತದಿಂದಲೂ ಹಿಂದೆ 1800 ಮೀ – 3000 ಮೀ ಎತ್ತರದ ಸುಣ್ಣಗಲ್ಲಿನ ಬಂಡೆಗಳಿಂದಲೂ ಕೂಡಿ ಇಕ್ಕಟ್ಟಾಗಿದೆ.

ಕಾಬೂಲಿನ ದಾರಿಯಲ್ಲಿರುವ ಈ ಕಣಿವೆಮಾರ್ಗ ಭಾರತದ ಇತಿಹಾಸದಲ್ಲಿ ಮಹತ್ತರ ಪಾತ್ರ ವಹಿಸಿದೆ. ಬಹು ಪುರಾತನ ಕಾಲದಿಂದ 18ನೆಯ ಶತಮಾನದ ಮಧ್ಯದವರೆಗೆ ಅಲೆಯಲೆಯಾಗಿ ಆರ್ಯರು, ಪರ್ಷಿಯನ್, ಗ್ರೀಕ್, ಸಿಥಿಯನ್, ಹೂಣ ಮತ್ತು ಮುಸ್ಲಿಮ್ ಜನ ಭಾರತಕ್ಕೆ ಬಂದದ್ದು ಈ ಮಾರ್ಗವಾಗಿಯೇ. (ಕೆ.ಟಿ.ಆರ್.)

# ಗ

**ಗಂಗಾ ನದಿ:** ಭಾರತದ ಅತಿ ಉದ್ದ ಹಾಗೂ ಪವಿತ್ರವಾದ ನದಿ. ಇದರ ಜಲಾನಯನ ಪ್ರದೇಶ ಇತರ ನದಿ ವ್ಯವಸ್ಥೆಗಳಿಗಿಂತ ಹೆಚ್ಚು ವಿಸ್ತಾರವಾದುದು. ದೇಶದ ಒಟ್ಟು ಜನಸಂಖ್ಯೆಯ ಶೇ. 30 ಜನ ಈ ನದಿಯ ಉಪಯೋಗವನ್ನು ಪಡೆಯುವರು. ಅಲ್ಲದೆ ಈ ನದಿ ಮೈದಾನ ಅತಿ ಹೆಚ್ಚು ವ್ಯವಸಾಯದ ಭೂಪ್ರದೇಶ.

ಗಂಗಾ ನದಿ ಆರಂಭದಲ್ಲಿ ಎರಡು ನದಿ ಮೂಲಗಳನ್ನು ಒಳಗೊಂಡಿದೆ. ಅವುಗಳೆಂದರೆ ಭಾಗೀರಥಿ ಮತ್ತು ಅಲಕಾನಂದ. ಇವುಗಳಲ್ಲಿ ಭಾಗೀರಥಿ ಮುಖ್ಯವಾಗಿದ್ದು, ಇದು ಟಿಬೆಟ್ಟಿನ ಗಂಗೋತ್ರಿಯ ಬಳಿ ಗೋಮುಖ್ ಎಂಬಲ್ಲಿ ಉಗಮವಾಗುವುದು. ಇದೇ ಗಂಗಾನದಿಯ ಉಗಮ ಕೇಂದ್ರ. ಅನಂತರ ಇದು ದೇವಪ್ರಯಾಗ ಎಂಬಲ್ಲಿ ಅಲಕಾನಂದ ನದಿಯನ್ನು ಸಂಧಿಸುವುದು. ಇಲ್ಲಿಂದ ಮುಂದೆ ಇದನ್ನು ಗಂಗಾನದಿ ಎಂದು ಕರೆಯುವರು. ಇದು ಹರಿದ್ವಾರದ ಬಳಿ ಮೈದಾನವನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಪರಕ್ಕಾ ಅಡ್ಡಕಟ್ಟೆಯವರೆಗೂ (ಪಶ್ಚಿಮ ಬಂಗಾಲ) ಹರಿದು ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಹಲವು ಶಾಖೆಗಳಾಗಿ ಒಡೆಯುವುದು. ಎಡಭಾಗದ ಮುಖ್ಯ ಶಾಖೆಯನ್ನು ಹೂಗ್ಲಿ (ಭಾಗೀರಥಿ) ಎಂದು ಕರೆಯುವರು. ಇದರ ದಡದಲ್ಲಿಯೇ ಕೋಲ್ಕತ ಬಂದರು ಇದೆ. ಬಲಭಾಗದ ಶಾಖೆಯನ್ನು ಪದ್ಮಾ ಎಂದು ಕರೆಯುವರು. ಇದು ಮುಂದುವರೆದು ಬಾಂಗ್ಲಾದೇಶದಲ್ಲಿ ಬ್ರಹ್ಮಪುತ್ರ ನದಿಯನ್ನು ಗೋಲಂಡೋ ಬಳಿ ಸೇರುವುದು. ಅನಂತರ ಮೇಘಾಲಯದಿಂದ ಹರಿದು ಬರುವ ಮೇಘನಾ ನದಿಯನ್ನು ಕೂಡಿದ ಅನಂತರ ಗಂಗಾನದಿಯನ್ನು ಮೇಘನಾ ಎಂಬ ಹೆಸರಿನಿಂದಲೆ ಕರೆಯುವರು. ಅಂತಿಮವಾಗಿ ಗಂಗಾನದಿ ಬಾಂಗ್ಲಾದೇಶದ ನೋಕಾಲಿ ಎಂಬಲ್ಲಿ ಬಂಗಾಲಕೊಲ್ಲಿಯನ್ನು ಸೇರುವುದು.

ಗಂಗಾ ನದಿಯ ಉದ್ದ ಸು. 2671 ಕಿಮೀ. ಭಾರತದಲ್ಲಿ ಇದು 2465 ಕಿಮೀ ದೂರ ಹರಿಯುವುದು. ಇದರ ಒಟ್ಟು ಜಲಾನಯನ ಪ್ರದೇಶ 9,51,600 ಚ.ಕಿಮೀ. ಈ ನದಿ ಬೇಸಾಯಕ್ಕೆ ಮಾತ್ರವಲ್ಲದೆ ಸಮುದ್ರ ತೀರದಿಂದ ಅಲಹಾಬಾದಿನವರೆಗೂ ನೌಕಾಯಾನಕ್ಕೆ ಉಪಯುಕ್ತವಾಗಿದೆ. ಉತ್ತರ ಮೈದಾನದ ಹೆಚ್ಚಿನ ನಗರಗಳು, ಪುಣ್ಯಕ್ಷೇತ್ರಗಳು ಈ ನದಿಯ ದಡದಲ್ಲಿವೆ.




ದೇವಪ್ರಯಾಗ

ಉಪನದಿಗಳು: ಎಡದಂಡೆಯ ಮೂಲಕ ಸೇರುವ ಉಪನದಿಗಳು ರಾಮಗಂಗಾ, ಘಾಗ್ರ, ಗಂಡಕ್, ಬೂರ್ಹಿ ಗಂಡಕ್, ಗೋಮತಿ ಮತ್ತು ಕೋಸಿ. ಬಲದಂಡೆಯ ಮೂಲಕ ಸೇರುವ ಉಪನದಿಗಳೆಂದರೆ ಯಮುನಾ, ಚಂಬಲ್, ಬೆತ್ವ, ಕೆನ್, ಸೋನ್ ಮತ್ತು ದಾಮೋದರ್.

ಯಮುನಾ ನದಿ: ಇದು ಗಂಗಾ ನದಿ ಸೇರುವ ಪ್ರಮುಖವಾದ ಅತಿ ಮುಖ್ಯ ಉಪನದಿ. ಇದನ್ನು ಜಮುನಾ ಎಂದೂ ಕರೆಯುತ್ತಾರೆ. ಇದು ಉತ್ತರಾಂಚಲ ತೆಹ್ರಿ–ಗಡವಾಲ್ ಜಿಲ್ಲೆಯ ಯಮುನೋತ್ರಿ ಎಂಬಲ್ಲಿ ಉಗಮ ಹೊಂದಿ, ಗಂಗಾನದಿಗೆ ಸಮಾನಾಂತರವಾಗಿ ಹರಿದು ಅಲಹಾಬಾದ್ ಬಳಿ ಗಂಗಾನದಿಯನ್ನು ಸೇರುವುದು.

ಇದು ಅನೇಕ ಉಪನದಿಗಳನ್ನು ಹೊಂದಿದ್ದು, ಇವುಗಲ್ಲಿ ಚಂಬಲ್ ಮುಖ್ಯವಾದದ್ದು. ಇತರ ಉಪನದಿಗಳೆಂದರೆ ಬೆಟಾ, ಸಿಂಧ್ ಮತ್ತು ಕೆನ್‌ಟ್ವ. ಯಮುನಾ ನದಿ ದಡದಲ್ಲಿ ಅನೇಕ ಪ್ರಸಿದ್ಧ ನಗರಗಳಿವೆ. ಅವುಗಳಲ್ಲಿ ಮುಖ್ಯವಾದವು ದೆಹಲಿ, ಆಗ್ರ ಮತ್ತು ಮಥುರ.

ರಾಮಗಂಗ: ಇದು ಕೆಳ ಹಿಮಾಲಯದಲ್ಲಿ ನೈನಿತಾಲ್ ಬಳಿ ಉಗಮಹೊಂದಿ ಫರೂಕಾಬಾದ್ ಬಳಿ ಗಂಗಾನದಿಯನ್ನು ಸೇರುವುದು.

ಘಾಗ್ರ: ಇದು ಟಿಬೆಟ್ಟಿನಲ್ಲಿ ಮಾನಸ ಸರೋವರದ ದಕ್ಷಿಣಕ್ಕಿರುವ ಗರ್ಲಾ ಮಂಧಾತ ಎಂಬ ಶಿಖರದಲ್ಲಿ ಉಗಮ ಹೊಂದುವುದು. ಇದನ್ನು ನೇಪಾಲದಲ್ಲಿ ಕರ್ನಾಲಿ ಎಂದು ಕರೆಯುವರು. ಇದು ಬಿಹಾರದ ಚಪ್ರಾ ಬಳಿ ಗಂಗಾನದಿಯನ್ನು ಸೇರುತ್ತದೆ. ಇದರ ಎರಡು ಮುಖ್ಯ ಉಪನದಿಗಳೆಂದರೆ ಕಾಳಿ ಮತ್ತು ರಾಪ್ತಿ. ಕಾಳಿನದಿ ಭಾರತ ಮತ್ತು ನೇಪಾಲದ ಪಶ್ಚಿಮದ ಗಡಿರೇಖೆಯಾಗಿದೆ. ಮೈದಾನದಲ್ಲಿ ಕಾಳಿ ನದಿಯನ್ನು ಶಾರದ ನದಿ ಎಂದು ಕರೆಯುವರು.

ಬೇತ್ವಾ ನದಿ: ಇದು ಭೂಪಾಲ್ ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿ ಗೋಹರ್‌ಗಂಜ್ ಎಂಬಲ್ಲಿ ಉಗಮ ಹೊಂದುವುದು. ಅನಂತರ ಇದು ಯಮುನಾನದಿಯನ್ನು ಹಮೀದ್ ಪುರದ ಬಳಿ ಸೇರುವುದು.

ಕೇನ್ ನದಿ: ಮಧ್ಯಪ್ರದೇಶದ ಬನ್‌ರಲ್ ಶ್ರೇಣಿಯಲ್ಲಿ ಉಗಮಿಸುವ ಸೋನಾರ್ ಮತ್ತು ಬಯರ್ಮಾ ಎಂಬ ತೊರೆಗಳು ಒಟ್ಟುಗೂಡಿ ಕೆನ್ ಎಂಬ ಹೆಸರಿನಿಂದ ಹರಿಯುತ್ತವೆ.

ಸೋನ್ ನದಿ: ಛತ್ತೀಸ್‌ಗರ್ ರಾಜ್ಯದ ಅಮರಕಂಟಕ ಪ್ರಸ್ಥಭೂಮಿಯಲ್ಲಿ ಉಗಮ ಹೊಂದುವುದು. ಇದು ಬುಂದೇಲ್‌ಖಂಡ್ ಪ್ರಸ್ಥಭೂಮಿಯ ಮೂಲಕ ಒಟ್ಟು 780 ಕಿಮೀ ದೂರ ಹರಿದು ಬಿಹಾರದ ದೇಪ್ರಿ ಎಂಬಲ್ಲಿ ಗಂಗಾನದಿಯನ್ನು ಸೇರುವುದು.

ದಾಮೋದರ ನದಿ: ಇದು ಜಾರ್ಖಂಡ್ ರಾಜ್ಯದ ಛೋಟನಾಗಪುರ ಪ್ರಸ್ಥಭೂಮಿಯ ಥೋರಿ ಎಂಬಲ್ಲಿ ಉಗಮ ಹೊಂದುವುದು. ಅನಂತರ ಆಗ್ನೇಯಾಭಿಮುಖವಾಗಿ ಸು.




541 ಕಿಮೀ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಲಗಳ ಮೂಲಕ ಹರಿದು ಕೋಲ್ಕತದ ಬಳಿ ಹೂಗ್ಲಿ ನದಿಯನ್ನು ಸೇರುವುದು. ಇದು ಪ್ರವಾಹಗಳಿಗೆ ಕುಪ್ರಸಿದ್ಧ. ಇದನ್ನೂ ಬಂಗಾಲದ ಕಣ್ಣೀರು ನದಿಯೆಂದು ಕರೆಯುವರು ದಾಮೋದರ ಮತ್ತು ಇದರ ಉಪನದಿಗಳಿಗೆ ಸೇರಿದಂತೆ ದಾಮೋದರ ಕಣಿವೆ ಯೋಜನೆಯನ್ನು ರೂಪಿಸಿಲಾಗಿದೆ. (ಬಿ.ಸಿ.ಕೆ.)

ಗಂಡಕ್: ಈ ನದಿ ಕೇಂದ್ರ ಹಿಮಾಲಯ ಪ್ರದೇಶದಲ್ಲಿ ಉಗಮಿಸಿ ನೇಪಾಲದ ಮೂಲಕ ಹರಿದು ಭಾರತವನ್ನು ಪ್ರವೇಶಿಸುವುದು. ಇದರ ಉದ್ದ 450 ಕಿಮೀ. ಇದು ಗಂಗಾನದಿಯನ್ನು ಬಿಹಾರದ ಹಾಜಿಪುರ್ ಬಳಿ ಸಂಧಿಸುವುದು. ಇದರ ಮುಖ್ಯ ಉಪನದಿಗಳೆಂದರೆ ಕಾಳಿ ಗಂಡಕ್, ಬೂರ್ಹಿ ಗಂಡಕ್ ಮತ್ತು ಕಿಶೂಲಿ.

ಕೋಸಿ ನದಿ: ಇದು ಆರಂಭದಲ್ಲಿ ಹಲವು ಚಿಕ್ಕ ತೊರೆಗಳಿಂದ ಕೂಡಿರುವುದು. ಅವುಗಳಲ್ಲಿ ಅತಿ ಉದ್ದವಾಗಿರುವ ತೊರೆಯು ಟಿಬೆಟ್ಟಿನ ಶೀಷಾ ಪಂಗ್ಮ್ ಶಿಖರದಲ್ಲಿ ಉಗಮವನ್ನು ಹೊಂದುವುದು. ನೇಪಾಲದಲ್ಲಿ ಈ ನದಿಯನ್ನು ಅರುಣ್ ಎಂದು ಕರೆಯುವರು. ಇದು ಗಂಗಾ ನದಿಯನ್ನು ಬಿಹಾರದ ಭಾಗಲ್ಪುರದ ಬಳಿ ಸಂಧಿಸುತ್ತದೆ. ಈ ನದಿ ಪ್ರವಾಹಗಳ ಹಾವಳಿಗೆ ಹೆಸರಾಗಿರುವುದಿರಂದ ಇದನ್ನು ಬಿಹಾರದ ಕಣ್ಣೀರು ಎಂದು ಕರೆಯುವರು. ಇದು ತನ್ನ ಪಾತ್ರವನ್ನು ಆಗಿಂದಾಗ್ಗೆ ಬದಲಾಯಿಸುವುದು.

ದಕ್ಷಿಣದ ಉಪನದಿಗಳು: ಭಾರತ ಪರ್ಯಾಯ ಪ್ರಸ್ಥಭೂಮಿಯ ಕೇಂದ್ರದ ಉನ್ನತ ಪ್ರದೇಶದಲ್ಲಿ ಉಗಮಿಸುವ ಅನೇಕ ನದಿಗಳು ಗಂಗಾನದಿಯನ್ನು ಸೇರುತ್ತವೆ. ಇವುಗಳನ್ನು ದಕ್ಷಿಣದ ಉಪನದಿಗಳೆಂದು ಕರೆಯುವರು. ಇವುಗಳೆಂದರೆ:

ಚಂಬಲ್ ನದಿ: ಇದು ಮಧ್ಯಪ್ರದೇಶದ ವಿಂಧ್ಯಾ ಸರಣಿಯ ಮ್ಹೋ ಎಂಬಲ್ಲಿ ಉಗಮವನ್ನು ಹೊಂದುವುದು. ಇದು 1050 ಕಿಮೀ ದೂರ ಹರಿದು ಇಟಾವ ಜಿಲ್ಲೆಯಲ್ಲಿ ಯಮುನಾ ನದಿಯನ್ನು ಸೇರುವುದು. ಆರಾವಳಿ ಪರ್ವತದಲ್ಲಿ ಉಗಮ ಹೊಂದುವ ಬಿನಾಸ್ ನದಿ ಚಂಬಲ್ ನದಿಯ ಮುಖ್ಯ ಉಪನದಿಯಾಗಿದೆ.

**ಗಂಗೋತ್ರಿ:** ಗಂಗಾನದಿಯ ಶಿರೋಭಾಗದಲ್ಲಿ ಎರಡು ಜಲಮೂಲಗಳನ್ನು ಹೊಂದಿದ ಸ್ಥಳ. ಅವು ಅಲಕಾನಂದ ಮತ್ತು ಭಾಗೀರಥಿ. ಇದರಲ್ಲಿ ಭಾಗೀರಥಿಯು ಪ್ರಮುಖವಾಗಿದ್ದು ಇದರ ಉಗಮ ಸ್ಥಳವಾದ ಗಂಗೋತ್ರಿಯನ್ನೇ ಗಂಗಾನದಿಯ ಉಗಮ ಸ್ಥಳವೆಂದು ಪರಿಗಣಿಸಲಾಗಿದೆ. ಭಾಗೀರಥಿ ಟಿಬೆಟ್ಟಿನ ಗಂಗೋತ್ರಿ ಎಂಬ ಹಿಮನದಿಯಿಂದ ಸು. 28 ಕಿಮೀ ದೂರದಲ್ಲಿರುವ ಗೋಮುಖ್ ಎಂಬಲ್ಲಿ ಸು. 6600 ಮೀ ಎತ್ತರದಲ್ಲಿ ಉಗಮ ಹೊಂದುವುದು.

ಗಂಗೋತ್ರಿ ಗರ್ವಾಲ್ ಸಂಸ್ಥಾನಕ್ಕೆ ಸೇರಿದ ಕೀಗ್ರೀ ಜಿಲ್ಲೆಯಲ್ಲಿರುವ ಇದು ಹಿಂದುಗಳಿಗೆ ಜನರಿಗೆ ಪವಿತ್ರ ಯಾತ್ರಾಸ್ಥಳ. ಉತ್ತರ ಅಕ್ಷಾಂಶ $31^{0}$ ಪೂರ್ವ ರೇಖಾಂಶ $78^{0}$ ಯಲ್ಲಿವೆ. ಇಲ್ಲಿ ಗಂಗಾದೇವಿಯ ದೇವಾಲಯವಿದೆ. ದೇವಾಲಯಕ್ಕೆ ಹತ್ತಿರದಲ್ಲಿಯೇ ಗೌರಿಕುಂಡವೆಂಬಲ್ಲಿ ಕೇದಾರಗಂಗಾ ಎಂಬ ಉಪನದಿ ಭಾಗೀರಥಿ ನದಿಯನ್ನು ಸೇರುತ್ತದೆ.

(ಕೆ.ಕೆ.)

**ಗಂಡಕಿ:** ನೇಪಾಲ ಮತ್ತು ಭಾರತಗಳಲ್ಲಿ ಹರಿಯುವ ಒಂದು ನದಿ, ಗಂಗಾನದಿಯ ಉಪನದಿ. ನೇಪಾಲದ ಹಿಮಾಲಯ ಪರ್ವತಭಾಗದಲ್ಲಿ ಉ.ಅ $27^0 27'$ ಮತ್ತು ಪೂ. ರೇ. $83^0 56'$ ರಲ್ಲಿ ಹುಟ್ಟಿ ನೈರುತ್ಯ ದಿಕ್ಕಿಗೆ ಪ್ರವಹಿಸಿ ಭಾರತವನ್ನು ಪ್ರವೇಶಿಸುತ್ತದೆ. ಇದನ್ನು ನೇಪಾಲದಲ್ಲಿ ಶಾಲಿಗ್ರಾಮಿ ಎಂದೂ ಉತ್ತರ ಪ್ರದೇಶದಲ್ಲಿ ನಾರಾಯಣಿ ಮತ್ತು ಸಪ್ತಗಂಡಕಿ ಎಂದೂ ಕರೆಯುತ್ತಾರೆ. ಗಂಡಕ, ಮಹಾಗಂಡಕ ಎಂದು ಇದಕ್ಕೆ ಹೆಸರುಗಳುಂಟು. ಮಹಾಭಾರತದಲ್ಲಿ ಸದಾನೀರ ಎಂದು ಹೆಸರಿಸಲಾಗಿರುವ ನದಿ ಇದೆ ಎಂಬುದು ಲಾಸೆನ್‌ನ ಅಭಿಪ್ರಾಯ. ಮಳೆಗಾಲದಲ್ಲಿ ಮಳೆಯ ನೀರಿನಿಂದಲೂ ಬೇಸಗೆಯಲ್ಲಿ ಹಿಮ ಕರಗಿದ ನೀರಿನಿಂದಲೂ ಒಟ್ಟಿನಲ್ಲಿ ಸದಾ ಕಾಲವೂ ತುಂಬಿ ಹರಿಯುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಗ್ರೀಸಿನ ಭೂಗೋಳಶಾಸ್ತ್ರಜ್ಞರು ಕೊಂಡೊಚೇಟ್ಸ್ ಎಂದು ಕರೆದಿರುವ ನದಿ ಇದೇ ಎಂದು ಹೇಳಲಾಗಿದೆ. ತ್ರಿಶೂಲ ಗಂಗಾ ಇದರ ಉಪನದಿ. ಬಿಹಾರದ ಚಂಪಾರಣ್, ಸಾರನ್ ಮತ್ತು ಮುಜಫರ್‌ಪುರ ಜಿಲ್ಲೆಗಳ ಮೂಲಕ ಹರಿದು ಕೊನೆಗೆ ಪಟಣದ ಬಳಿ ಇದು ಗಂಗಾನದಿಯನ್ನು ಸೇರಿಕೊಳ್ಳುತ್ತದೆ. ಇದರ ಉದ್ದ ಸು. 307 ಕಿಮೀ. ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಇದು ಬಹುದೂರ ಹರಿಯುತ್ತದೆ. ವಾಸ್ತವವಾಗಿ ಈ ವಲಯದಲ್ಲಿ ಈ ಎರಡು ರಾಜ್ಯಗಳ ನಡುವಣ ಗಡಿ ನಿರ್ಧಾರಕ ನದಿಯಾಗಿದೆ.

ಮಳೆಗಾಲದಲ್ಲಿ ಇದರ ಪ್ರವಾಹ ಸುತ್ತಮುತ್ತಣ ತಗ್ಗು ಪ್ರದೇಶಗಳಿಗೆ ನುಗ್ಗಿ ಅನಾಹುತವನ್ನುಂಟುಮಾಡುತ್ತದೆ. ಇದನ್ನು ತಪ್ಪಿಸಲು ಕೆಲವೆಡೆಗಳಲ್ಲಿ ನದಿಯ ದಡದಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸಲಾಗಿದೆ. ನದಿಯಲ್ಲಿ ವರ್ಷಾದ್ಯಂತವೂ ದೋಣಿ ಸಂಚಾರವುಂಟು. ನೇಪಾಳ ಮತ್ತು ಗೋರಖ್‌ಪುರದ ಕಾಡುಗಳಿಂದ ಮರದ ದಿಮ್ಮಿಗಳನ್ನು ಸಾಗಿಸಲು ಈ ನದಿ ಉಪಯುಕ್ತವಾಗಿದೆ. ಜನವಸತಿಯ ಪ್ರದೇಶವನ್ನು ತಲುಪಿದ ಮೇಲಂತೂ ಕಟ್ಟಡ ಸಾಮಗ್ರಿ, ಧಾನ್ಯ, ಸಕ್ಕರೆ ಮೊದಲಾದ ಸರಕುಗಳು ಈ ಜಲಮಾರ್ಗದ ಮೂಲಕ ಸಾಗುತ್ತವೆ. ಈ ನದಿಯಿಂದ ಸಾರನ್ ಮತ್ತು ಚಂಪಾರಣ್ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ಏರ್ಪಟ್ಟಿದೆ. ಹಾಜಿಪುರ, ಶೋಣಪುರಗಳಿಗೂ ಈ ನದಿಯಿಂದ ಅನುಕೂಲವಾಗಿದೆ. (ಪಿ.ಜಿ.ಡಿ.)

**ಗಣಿಗಾರಿಕೆ:** ಭೂಮಿಯ ಅಂತರಾಳದಲ್ಲಿರುವ ಖನಿಜಗಳನ್ನು ಹೊರ ತೆಗೆಯುವ ಕಾರ್ಯ (ಮೈನಿಂಗ್). ನೆಲದ ಅಡಿಯಲ್ಲಿ ಇರಬಹುದಾದ ಖನಿಜವನ್ನು ಅರಸಲೆಂದು ಮತ್ತು ಖನಿಜ ದೊರೆತಾಗ ಅದನ್ನು ಹೊರತೆಗೆಯಲೆಂದು ತೋಡಿದ ಕೂಪವೇ ಗಣಿ (ಮೈನ್). ಖನಿಜದ ಸ್ವರೂಪ, ಅದು ದೊರೆಯುವ ಆಕರ ಮುಂತಾದವನ್ನು ಆಧರಿಸಿ ಗಣಿ ಅನಾವೃತವಾಗಿರಬಹುದು ಇಲ್ಲವೇ ಭೂಗತವಾಗಿರಬಹುದು ಇಲ್ಲವೇ ಮಿಶ್ರವಾಗಿರಬಹುದು. ಇವನ್ನು ಅನುಸರಿಸಿ ಗಣಿ ಕೆಲಸದಲ್ಲೂ ಮೂರು ಮುಖ್ಯ ಪ್ರಭೇದಗಳು ಇವೆ. 1. ತೆರೆದ ಗಣಿಗಾರಿಕೆ, 2. ಆಳಗಣಿಗಾರಿಕೆ, 3. ಮಿಶ್ರ ಗಣಿಗಾರಿಕೆ. (ಎಂ.ಎಸ್.ಯು.)

ಇದು ಜೈವಿಕವಾದ ಕಲ್ಲಿದ್ದಲು ಹಾಗೂ ಪೆಟ್ರೋಲಿಯಂ ಆಗಿರಬಹುದು ಅಥವಾ ಅಜೈವಿಕವಾದ ಕಬ್ಬಿಣ, ಮ್ಯಾಂಗನೀಸ್, ಸತು, ತವರ, ತಾಮ್ರ ಇತ್ಯಾದಿಗಳಾಗಿರಬಹುದು. ಹಿಂದೆ ಭೂಮಿಯ ಕಡಿಮೆ ಆಳದಲ್ಲಿರುವ ಖನಿಜಗಳನ್ನು ತೆರೆದ ವಿಧಾನದಿಂದ ತೆಗೆಯಲಾಗುತ್ತಿತ್ತು, ಆದರೆ ಆಧುನಿಕ ಗಣಿಗಾರಿಕೆ ವೆಚ್ಚದಾಯಕ ಹಾಗೂ ಸಂಕೀರ್ಣತೆಯಿಂದ ಕೂಡಿದೆ. ಅತಿ ಆಳದಿಂದ ಖನಿಜಗಳನ್ನು ಹೊರತೆಗೆಯುವುದು ಅಪಾಯಕಾರಿಯೂ ಹೌದು. ಗಣಿಗೆ ನೀರು ನುಸುಳಬಹುದು ಅಥವಾ ಮೇಲ್ಛಾವಣಿ ಕುಸಿದು ಗಣಿ ಕಾರ್ಮಿಕರು ಅಪಘಾತದಿಂದ ಸಾಯಲೂ ಬಹುದು. ಇಂದು ಸಾವಿರಾರು ಮೀ ಆಳದಲ್ಲಿ ಖನಿಜಗಳನ್ನು ಹೊರ ತೆಗೆಯಲಾಗುತ್ತಿದೆ. ವೆಚ್ಚದಾಯಕವಾದ ಡ್ರಿಲಿಂಗ್ (ಕೊರೆಯುವುದು), ಬ್ಲಾಸ್ಟಿಂಗ್ (ಸಿಡಿಸುವುದು) ಮುಂತಾದ ವಿಧಾನದಿಂದಲೂ ಖನಿಜಗಳನ್ನು ಹೊರ ತೆಗೆಯಲಾಗುತ್ತಿದೆ.

ಸ್ಥಾನ ನಿರ್ಧರಣೆ: ಒಂದು ಸ್ಥಳದಲ್ಲಿ ಗಣಿ ಕೆಲಸವನ್ನು ಕೈಗೊಳ್ಳಬೇಕಾದರೆ ಮೊದಲು ನಿರ್ಧರಿಸಬೇಕಾದ ಅಂಶಗಳು: ಗಣಿ ಕೆಲಸದ ವೆಚ್ಚ, ಗಣಿಯಿಂದ ತೆಗೆಯುವ ಖನಿಜದಲ್ಲಿರುವ ಉಪಯುಕ್ತ ಅದುರಿನ ಪ್ರಮಾಣ, ಅದಿರನ್ನು ಅದರೊಡನೆ ಬೆರೆತಿರುವ ಕಲ್ಲು, ಮಣ್ಣು ಮೊದಲಾದ ಕಲ್ಮಶಗಳಿಂದ ಬೇರ್ಪಡಿಸಲು ಆಗುವ ವೆಚ್ಚ, ಗಿರಾಕಿಗಳಿಗೆ ಬೇಕಾದ ರೂಪದಲ್ಲಿ ಅದನ್ನು ಸಿದ್ಧಪಡಿಸಲು ಆಗುವ ವೆಚ್ಚ, ಅದಿರನ್ನು ಗಣಿಯಿಂದ ಗಿರಾಕಿಗೆ ತಲುಪಿಸಲು ಆಗುವ ಸಾಗಣೆ ವೆಚ್ಚ ಇತ್ಯಾದಿ.

ಗಣಿಗಾರಿಕೆ ಸಮಸ್ಯೆಯ ಪರಿಹಾರಗಳು: ಗಣಿಗಾರಿಕೆಯ ಸಮಯದಲ್ಲಿ ಕಾರ್ಮಿಕರಿಗೆ ಅಪಾಯವಾಗದಂತೆ ರಕ್ಷಣೆ ನೀಡುವ ಶಿರಸ್ತ್ರಾಣ ಮತ್ತು ಪಾದರಕ್ಷೆಯನ್ನು ಒದಗಿಸಬೇಕು. ಸಿಡಿಮದ್ದನ್ನು ಬಳಸುವಾಗ ನಾನಾ ಅನಿಲಗಳು ಉತ್ಪತ್ತಿಯಾಗುತ್ತವೆ. ಅವುಗಳಿಂದ ಮತ್ತು ಗಣಿಯಲ್ಲಿರುವ ಕೆಟ್ಟ ವಾಯುವಿನಿಂದ ಅಪಾಯವಾಗದಂತೆ ಕೆಲಸಗಾರರು ಶ್ವಾಸ ಶೋಧಕಗಳನ್ನು ಉಪಯೋಗಿಸಬೇಕು, ಭೂಮಿಯಲ್ಲಿ ಆಳ ಹೆಚ್ಚಾದಂತೆ ಉಷ್ಣಾಂಶ ಹೆಚ್ಚಾಗುತ್ತಾ ಹೋಗುತ್ತದೆ. ಅದನ್ನು ತಗ್ಗಿಸುವಂತೆ ತಂಗಾಳಿಯನ್ನು ಒದಗಿಸಬೇಕು. ಸಿಡಿಮದ್ದಿನಿಂದ ಕಲ್ಲು ಚೂರುಗಳು ಕಣ್ಣಿಗೆ ಬೀಳಬಹುದು. ಅದಕ್ಕಾಗಿ ಸುರಕ್ಷಿತ ಕನ್ನಡಕಗಳನ್ನು ಕಾರ್ಮಿಕರು ಉಪಯೋಗಿಸಬೇಕು.

ಗಣಿಗಾರಿಕೆಯಿಂದಾಗುವ ಅಪಘಾತ ಮತ್ತು ರೋಗಗಳಿಂದ ಸುರಕ್ಷತೆಗಾಗಿ ಗಣಿ ಕಾರ್ಮಿಕರಿಗೆ ಪ್ರಥಮ ಚಿಕಿತ್ಸೆ ಸೌಲಭ್ಯ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲಾಗುವುದು.

(ಬಿ.ಪಿ.ಆರ್.;ಎ.ಎನ್.ಎಸ್.ಐ.;ಡಿ.ಎನ್.ಆರ್.)

**ಗಣಿಗಾರಿಕೆ, ಸಮುದ್ರಗತ:** ಸಮುದ್ರದ ನೀರಿನಿಂದಲೂ ಸಮುದ್ರ ತಳದಲ್ಲಿನ ನಿಕ್ಷೇಪಗಳಿಂದಲೂ ಖನಿಜ ಸಂಪತ್ತನ್ನು ಪಡೆಯುವ ಪ್ರಕ್ರಮ (ಮೈನಿಂಗ್ ಅಂಡರ್‌ಸೀ). ಸಮುದ್ರದ ನೀರಿನಲ್ಲೂ ಅದರ ತಳದಲ್ಲೂ ಇರುವ ಅಪಾರ ಖನಿಜಸಂಪತ್ತನ್ನು ಹೊರತೆಗೆಯುವುದು ಅಷ್ಟು ಸುಲಭವಲ್ಲ. ಇಲ್ಲಿ ಎದುರಾಗುವ ಪರಿಸರದ ಅಡ್ಡಿ ಆತಂಕಗಳು ನೆಲದ ಅಡಿಯಿಂದ ಖನಿಜವನ್ನು ಹೊರ ತೆಗೆಯುವಾಗ ಎದುರಾಗುವ ಅಡ್ಡಿ ಆತಂಕಗಳಿಗಿಂತ ಬಹಳ ಹೆಚ್ಚು. ಸಮುದ್ರದಲ್ಲಿರುವ ಖನಿಜನಿಕ್ಷೇಪಗಳು ಒಂದೇ ಭಾಗಕ್ಕೆ ಸೀಮಿತವಾಗಿಲ್ಲ. ಇವುಗಳ ಹರವನ್ನು ಅಧ್ಯಯಿಸಲು ಸಮುದ್ರವನ್ನು ನಾಲ್ಕು ಪ್ರದೇಶಗಳಾಗಿ ವಿಂಗಡಿಸಬಹುದು: ನೀರಿನ ಪ್ರದೇಶ, ಸಮುದ್ರದ ಆಳದ ನೆಲ, ಭೂಖಂಡದ ಮುಂಚಾಚಿನ ಪ್ರದೇಶ ಮತ್ತು ಇಳಿಜಾರು ಹಾಗೂ ತೀರಪ್ರದೇಶ. ಇವುಗಳ ಪೈಕಿ ಸಮುದ್ರದ ನೀರು ಖನಿಜಾಂಶ ಮತ್ತು ಖನಿಜ ಸಂಯೋಜನಗುಣದಲ್ಲಿ ಅತಿಮುಖ್ಯವಾದದ್ದು.

ಸಮುದ್ರದ ಖನಿಜಸಂಪತ್ತು ಮೂರು ಮೂಲ ರೀತಿಗಳಲ್ಲಿದೆ : 1 ಖನಿಜಗಳು ಕರಗಿರುವ ಸಮುದ್ರದ ನೀರು; 2 ಸಮುದ್ರದ ದಂಡೆಯಲ್ಲಿರುವ ಗಟ್ಟಿಯಾದ ಖನಿಜ ನಿಕ್ಷೇಪ, ಭೂಖಂಡದ ಮುಂಚಾಚಿನ ಪ್ರದೇಶದ ಮತ್ತು ಆಳ ಸಮುದ್ರ ನೆಲದ ನಿಕ್ಷೇಪ; 3 ಸಮುದ್ರದಡಿಯ ತಳಬಂಡೆಯಲ್ಲಿರುವ ಗಟ್ಟಿಯಾದ ಖನಿಜ ನಿಕ್ಷೇಪ.

ಈ ಮೂರು ರೀತಿಯ ಸಾಗರ ಸಂಪತ್ತಿನಲ್ಲಿ ಸಿಗುವ ಹಲವಾರು ಖನಿಜಗಳು ಹೀಗಿವೆ: 1 ಮೆಗ್ನೀಷಿಯಂ, ಸೋಡಿಯಂ, ಕ್ಯಾಲ್ಸಿಯಂ, ಬ್ರೋಮೀನ್, ಪೊಟ್ಯಾಷಿಯಂ, ಗಂಧಕ, ಸ್ಟ್ರಾನ್ಷಿಯಂ, ಬೋರಾನ್, ಯುರೇನಿಯಂ ಮತ್ತು ಜಿರ್‌ಕೋನಿಯಂ ಖನಿಜಗಳು ಮತ್ತು ಖನಿಜಲವಣಗಳು. ಇವಲ್ಲದೆ ಯಥೇಚ್ಛವಾದ ಸಿಹಿ ನೀರು.

2. ಭಾರವಾದ ಖನಿಜ ಮರಳು, ಕಬ್ಬಿಣದ ಮರಳು, ಸಿಲಿಕ ಮರಳು, ಸುಣ್ಣದ ಮರಳು, ಮರಳು ಮತ್ತು ನೊರಜು, ಮ್ಯಾಂಗನೀಸ್ ಉಂಡೆಗಳು, ರಂಜಕಯುಕ್ತ ಉಂಡೆಗಳು, ರಂಜಕ ಮರಳು, ಗ್ಲಾಕೊನೈಟ್ ಖನಿಜಗಳು, ಸಮುದ್ರದ ದಂಡೆ ಮತ್ತು ತೀರ ಪ್ರದೇಶದ ಗರಸು ನಿಕ್ಷೇಪಗಳು. ಸಮುದ್ರದ ಅತಿ ಆಳ ಪ್ರದೇಶದ ತಳಭಾಗದಲ್ಲಿ ಕೆಂಪು ಸುದ್ದೆ, ಕ್ಯಾಲ್ಕೇರಿಯಸ್ ಕೆಸರು, ಸಿಲಿಕಾಂಶದ ಕೆಸರು ಮತ್ತು ಲೋಹಾಂಶದ ಕೆಸರು, ಇವೆಲ್ಲ ಗಟ್ಟಿಯಾಗದೆ ಸಮುದ್ರದ ತಳದ ಮೇಲೆ ಸಿಗುವ ಖನಿಜ ನಿಕ್ಷೇಪಗಳು. ಅದೇ ರೀತಿಯಲ್ಲಿ, ಆದರೆ ನದಿಯ ಗರಸು ನಿಕ್ಷೇಪಗಳಲ್ಲಿ ವಜ್ರ, ಚಿನ್ನ, ಪ್ಲಾಟಿನಂ, ತವರ, ಭಾರವಾದ ಖನಿಜಗಳಾದ ಮ್ಯಾಗ್ನಟೈಟ್, ಇಲ್ಮನೈಟ್, ರೂಟೈಲ್, ಜಿರ್‌ಕಾನ್, ಮೊನಜೈಟ್, ಕ್ರೋಮೈಟ್, ಮತ್ತು ವುಲ್‌ಫ್ರಮೈಟ್ ಇತ್ಯಾದಿ ಖನಿಜಗಳು ದೊರೆಯುತ್ತವೆ.

3 ಕಲ್ಲಿದ್ದಲು, ಕಬ್ಬಿಣದ ಅದಿರು, ಸುಣ್ಣಶಿಲೆ, ಮ್ಯಾಂಗನೀಸ್ ಆಕ್ಸೈಡ್, ಕೋಬಾಲ್ಟ್, ನಿಕ್ಕಲ್ ಇತ್ಯಾದಿ ಖನಿಜಗಳು ಹೊರಕಾಣುತ್ತಿರುವ ಪದರ ನಿಕ್ಷೇಪಗಳಾಗಿಯೂ ಚಿನ್ನ, ತವರ, ಗಂಧಕ, ಲವಣಗಳು ಮತ್ತು ಕಲ್ಲಿದ್ದಲು ನೆಲೆ ನಿಕ್ಷೇಪಗಳಾಗಿಯೂ ದೊರೆಯುತ್ತವೆ.

ಸಮುದ್ರದ ಖನಿಜ ನಿಕ್ಷೇಪಗಳನ್ನು ಕಂಡುಹಿಡಿಯುವುದು, ಅವುಗಳ ರೀತಿ, ಮೌಲ್ಯವನ್ನು ಲೆಕ್ಕಾಚಾರ ಮಾಡುವುದು, ಗಣಿಗಾರಿಕೆ ಹಾಗೂ ಉಪಯೋಗಾರ್ಹವಾಗಿ ಅವನ್ನು ಸಂಸ್ಕರಿಸಿ ಮಾರುವವರೆಗಿನ ಕಾರ್ಯದ ಎಲ್ಲ ಹಂತಗಳೂ ಭೂಭಾಗದ ನಿಕ್ಷೇಪಗಳಂತೆಯೇ ನಡೆಯುತ್ತವೆ. ನಿಕ್ಷೇಪಗಳ ಅನ್ವೇಷಣೆಗೆ ಮೊದಲು ಭೂ ಭಾಗದ ಮುಂಚಾಚು ಮತ್ತು ಅದರ ಅಕ್ಕ ಪಕ್ಕದ ತೀರಗಳ ಸೂಕ್ಷ್ಮ ಪರಿಶೀಲನೆ ಮತ್ತು ಭೂವಿಜ್ಞಾನ ವೃತ್ತಾಂತ ಅಲ್ಲದೇ ಖನಿಜಗಳ ಹಂಚಿಕೆಯ ಅರಿವು ಅವಶ್ಯ. ಇದರಿಂದ ಕೆಲವು ಕಡೆ ಸೀಮಿತವಾಗಿರುವ ಖನಿಜ ನಿಕ್ಷೇಪಗಳ ಮತ್ತು ಸ್ಥೂಲ ಪರಿಶೀಲನೆಗೆ ಅವಕಾಶವಾಗುವುದು. ಅನಂತರ ಭೂಭೌತ ಮತ್ತು ಇತರ ರೀತಿಯಲ್ಲಿ ನಿಕ್ಷೇಪಗಳನ್ನು ಪರಿಶೀಲಿಸಬಹುದು. ಅನೇಕ ವೇಳೆ ಸಮುದ್ರದಲ್ಲಿ ಬೇರೆ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿರುವಾಗ ಆಕಸ್ಮಿಕವಾಗಿ ಖನಿಜ ನಿಕ್ಷೇಪಗಳನ್ನು ಕಂಡುಹಿಡಿಯುವುದೂ ಉಂಟು. ಸಮುದ್ರದಲ್ಲಿ ಇವನ್ನು ಕಂಡುಹಿಡಿಯುವುದಕ್ಕೆ ಮೊದಲು ಅಥವಾ ಅನಂತರ ಮೂರು ಮುಖ್ಯ ಕಾರ್ಯಗಳುಂಟು. ಅವು ನೌಕಾಯಾನ, ಸಮೀಕ್ಷೆ ಮತ್ತು ಖನಿಜ ಮಾದರಿಗಳ ಪರಿಶೀಲನೆ. ನಿತ್ಯ ಉಪಯೋಗಿಸುತ್ತಿರುವ ನೌಕೆಗಳಲ್ಲಿಯೇ ಅನ್ವೇಷಕ ಸಾಧನಸಲಕರಣೆಗಳನ್ನು ಅಳವಡಿಸಿ ಕಾರ್ಯ ನಡೆಸಲಾಗುತ್ತದೆ. ಸಾಗರದಲ್ಲಿ ಮುಳುಗಿಸಿ ಕಾರ್ಯನಡೆಸುವ ಸಲಕರಣೆಗಳು ಮುಂದೆ ಹೆಚ್ಚು ಫಲಪ್ರದವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ ಸಲಕರಣೆಗಳು ಇನ್ನೂ ಅಷ್ಟು ಪರಿಷ್ಕಾರವಾಗದಿರುವುದರಿಂದ ಹೆಚ್ಚು ಬಳಕೆಯಲ್ಲಿಲ್ಲ. ಸಾಗರದಡಿಯಲ್ಲಿನ ಖನಿಜನಿಕ್ಷೇಪಗಳನ್ನು ಗುರುತಿಸಲು ಮುಖ್ಯ ಸಾಧನವೆಂದರೆ ವ್ಯವಸ್ಥಿತವಾದ ನೌಕಾಯಾನ. ಖನಿಜನಿಕ್ಷೇಪಗಳನ್ನು ಸಂಪೂರ್ಣವಾಗಿ ನಿರ್ಧರಿಸಬೇಕು. ನಡೆಸಬೇಕಾದ ಸಮೀಕ್ಷೆ ಕಾರ್ಯರೂಪದ ಸ್ಥಿತಿಯನ್ನು ಆಧರಿಸುತ್ತದೆ. ಸಮುದ್ರ ದಾಳವನ್ನು ನಿರ್ಧರಿಸುವಾಗ ಸು.

1000 ಗಳ ವರೆಗಿನ ವ್ಯತ್ಯಾಸವನ್ನು ಆರಂಭದಲ್ಲಿ ಬಿಡಬಹುದು. ಆದರೆ ನಿಕ್ಷೇಪವಿರುವುದು ತಿಳಿದ ಬಳಿಕ 30.5 ಮೀ ಗಳಿಗಿಂತಲೂ ಕಡಿಮೆ ವ್ಯತ್ಯಾಸವಿರುವಂತೆ ನಿರ್ಧರಿಸುವುದು ಅನುಕೂಲ. ಈ ವ್ಯತ್ಯಾಸ ಕೊನೆಗೆ ಸೂಕ್ಷ್ಮ ಪರಿಶೀಲನೆಯಲ್ಲಿ ಕೆಲವು ಅಡಿಗಳಷ್ಟಕ್ಕೆ ನಿಲ್ಲುವುದು.

ನೌಕಾಯಾನಕ್ಕೆ ಹಲವಾರು ಎಲೆಕ್ಟ್ರಾನಿಕ್ ಸಾಧನಗಳಿವೆ. ಇವನ್ನು 1 ಮೀ ನಿಂದ 900 ಮೀ ಆಳದಲ್ಲೂ ನಿಖರವಾಗಿ ಉಪಯೋಗಿಸಬಹುದು. ಪ್ರಪಂಚದ ಹಲವಾರು ಕಡೆ ಇಂಥ ಸಾಧನಗಳನ್ನು ಖಾಯಂ ಆಗಿ ಇರಿಸಲಾಗಿದೆ. ಇದೇ ರೀತಿ ಸಾಗಿಸಲು ಅನುಕೂಲವಾದ ಸಣ್ಣ ಯಂತ್ರಗಳೂ ಇವೆ. ಇವು ಕೂಡ ನಿಖರವಾಗಿ ಕೆಲಸಮಾಡುವಂಥವು. ಇತ್ತೀಚೆಗೆ ಆಳ ಸಾಗರದ ಸಮೀಕ್ಷೆ ನಡೆಸುವ ದಿಶೆಯಲ್ಲಿ ವಿಶೇಷವಾಗಿ ಕೃತಕ ಉಪಗ್ರಹಗಳ ನೆರವನ್ನೂ ಪಡೆಯಲಾಗುತ್ತದೆ. ಇಂಥ ಒಂದು ಸಮೀಕ್ಷಾ ಉಪಗ್ರಹ ಆಕಾಶದಲ್ಲಿ ಒಂದೇ ಕಡೆ ನಿಂತು ಸಮುದ್ರದ ಸೀಮಿತವಲಯವನ್ನು ಸಾಕಷ್ಟು ಕಾಲ ವೀಕ್ಷಿಸಿ ವಿವರಗಳನ್ನು ಸಂಗ್ರಹಿಸಬಲ್ಲುದು.

ಗಣಿಗಾರಿಕೆ ವೇಳೆಯಲ್ಲಿ ನೌಕೆಯನ್ನು ಭದ್ರವಾಗಿ ಒಂದು ಕಡೆ ನಿಲ್ಲಿಸಿರುವುದು ತೀರ ಅಗತ್ಯ. ಕಡಿಮೆ ಅಲುಗಾಟ ಇರುವ ಸಮುದ್ರ ಭಾಗಗಳಲ್ಲಿ ಸೋನಾರ್ ಟ್ರಾನ್ಸ್ ಪಾಂಡರುಗಳನ್ನು ಮುಳುಗಿಸಿ ನೌಕೆಯನ್ನು ನಿಲ್ಲಿಸಬಹುದು. ಅಥವಾ ಸಮುದ್ರ ತೀರದ ತಾಣಗಳಲ್ಲಿಯೇ ಅದನ್ನು ಬಂಧಿಸಿ ಇಡಬಹುದು. ಇಂಥ ಒಂದು ನೌಕೆಯ ಕಾರ್ಯವನ್ನು ಗಣಕಗಳಿಂದ ನಿರ್ದೇಶಿಸುವುದು ಕೂಡ ಸಾಧ್ಯ.

ಸಮುದ್ರ ತಳದಲ್ಲಿ ಖನಿಜನಿಕ್ಷೇಪಗಳ ಅನ್ವೇಷಣೆ ಮಾಡಲು ಮುಖ್ಯ ಸಲಕರಣೆಗಳೆಂದರೆ ಆಳವನ್ನು ಅಳೆಯುವ ಯಂತ್ರಗಳು, ಸಮುದ್ರತಳದ ಹೊರ ರೇಖಾಕೃತಿ ಚಿತ್ರಣಯಂತ್ರಗಳು, ಕಾಂತ ಬಲಮಾಪಕಗಳು ಮತ್ತು ಆಳದಲ್ಲಿನ ನಿಕ್ಷೇಪಮಾದರಿಗಳನ್ನು ತೆಗೆಯುವ ಸಲಕರಣೆಗಳು. ಇವುಗಳ ಉಪಯೋಗ ಅದಿರಿನ ನಿಕ್ಷೇಪವನ್ನು ಅನುಸರಿಸಿರುತ್ತದೆ. ಉದಾಹರಣೆಗೆ, ಭಾರ ಖನಿಜದ ಗರಸು ನಿಕ್ಷೇಪಗಳನ್ನು ಗುರುತಿಸುವಾಗ ಹೊರ ರೇಖಾಚಿತ್ರಣ ಯಂತ್ರಗಳು (ಪ್ರೊಫೈಲರ್ಸ್) ಅತಿಮುಖ್ಯ ಸಾಧನಗಳು. ಕಂಪನ ರೇಖಾಚಿತ್ರಣ ಯಂತ್ರಗಳು ಕಲ್ಲೆಣ್ಣೆಯ ಅನ್ವೇಷಣೆಯಲ್ಲಿ ಉಪಯುಕ್ತವಾಗಿವೆ. ಅದೇ ರೀತಿ ವಿದ್ಯುತ್ ಕಿಡಿ, ಒತ್ತಡಗಾಳಿ, ಅನಿಲಸಿಡಿಕೆ ಮತ್ತು ವಿದ್ಯುದ್ಯಾಂತ್ರಿಕ ಸ್ಫೋಟನೆ ಮುಂತಾದವನ್ನು ಈ ಕಾರ್ಯದಲ್ಲಿ ಬಳಸಲಾಗುತ್ತಿದೆ. ಇದರಿಂದ ಹೊರಟ ಶಕ್ತಿ ಸಮುದ್ರ ತಳವನ್ನು ಸೇರಿ ಅಲ್ಲಿಯ ವಸ್ತುಗಳಿಂದ ಪ್ರತಿಫಲನ ಹೊಂದಿ ಬಂದಾಗ ಅವುಗಳ ನೆಲೆಯನ್ನು ನಿರ್ಧರಿಸಿ ಸಮುದ್ರತಳದಲ್ಲಿರುವ ಮಣ್ಣಿನ ಪದರ, ತಳಬಂಡೆಯ ಬಾಹ್ಯಾಕಾರ, ಸ್ತರಭಂಗಗಳು ಮುಂತಾದ ಲಕ್ಷಣಗಳನ್ನು ಬಹು ಸುಲಭವಾಗಿ ತಿಳಿಯಬಹುದು. ಹಾಗೆಯೇ ಸಮುದ್ರತಳದಲ್ಲಿರುವ ನಿಕ್ಷೇಪಗಳ ಬಗ್ಗೆಯೂ ಮಾಹಿತಿ ದೊರೆಯುತ್ತದೆ. ಈ ರೀತಿಯ ಸ್ಫೋಟನೆಗಳ ಶಕ್ತಿ ಅಲೆ ಅಲೆಯಾಗಿ ಸಮುದ್ರತಳದಿಂದ ಹಲವು ಕಿಮೀ.ಗಳ ವರೆಗೆ ಪ್ರಸರಿಸುತ್ತದೆ.

ಈ ಪ್ರಸರಣೆ ಸಿಡಿತದ ಕಂಪನ ಕಾಲ ಮತ್ತು ಅಲೆಗಳ ಪ್ರಸಾರ ವೇಗವನ್ನು ಆಧರಿಸುತ್ತದೆ. ಮತ್ತೊಂದು ಸಿಡಿತಕ್ಕೆ ಮೊದಲೇ ಪ್ರತಿಫಲನದ ಅಲೆಗಳನ್ನು ಗ್ರಹಿಸಬೇಕು. ಇತ್ತೀಚೆಗೆ ಕಂಡುಹಿಡಿದ ಫ್ಲಕ್ಸ್‌ಗೇಟ್, ಪ್ರೋಟಾನ್ ಪ್ರಿಸೆಷನ್ ಮತ್ತು ರುಬಿಡಿಯಂ ಕಾಂತ ಬಲಮಾಪಕ ಮುಂತಾದವು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗದಲ್ಲಿವೆ.

ಖನಿಜ ನಿಕ್ಷೇಪವನ್ನು ಕಂಡುಹಿಡಿದ ಬಳಿಕ ಮುಂದಿನ ಕಾರ್ಯವೆಂದರೆ ಅದರ ನಮೂನೆ ತೆಗೆಯುವುದು. ಇದರಲ್ಲಿ ಎರಡು ವಿಧಾನಗಳಿವೆ : 1 ಅನ್ವೇಷಣೆ ಅಥವಾ ಗುಣಾತ್ಮಕವಾದ ನಮೂನೆ ಪಡೆಯುವುದು. ಇದರಲ್ಲಿ ಸ್ನಾಪರ್, ಡ್ರಾಪ್ ಕೋರ್ಸ್, ಡ್ರಾಗ್ ಡ್ರೆಡ್ಜರ್ಸ್ ಮತ್ತು ಡೈವರ್ಸ್ ಸಮುದ್ರದಲ್ಲಿ ಮುಳುಗಿ ನಮೂನೆ (ಸ್ಯಾಂಪಲ್) ತರುವುದು. ಮುಂತಾದ ಸುಲಭ ನಮೂನೆ ಪಡೆಯುವ ವಿಧಾನಗಳನ್ನು ಬಳಸುತ್ತಾರೆ. 2 ಗುಣಾತ್ಮಕ ನಮೂನೆ : ಇದಕ್ಕೆ ಆಧುನಿಕ ಯಂತ್ರ ಸಲಕರಣೆ ಇದ್ದರೆ ಉತ್ತಮ. ಈಗಿರುವ ಸಲಕರಣೆಗಳಿಂದಲೇ ಕಾರ್ಯ ನಡೆಸಲೂಬಹುದು. ಸಮುದ್ರತಳದ ಪರಿಸರಕ್ಕೆ ಅನುಸಾರವಾಗಿ ಸಮುದ್ರದಲ್ಲಿ ಮುಳುಗಿ ಪಡೆಯುವ ಸಲಕರಣೆಗಳ ಕಡೆಯೇ ಹೆಚ್ಚು ಗಮನವಿದೆ. ಈ ದಿಶೆಯಲ್ಲಿ ಗೋರುವುದು ಮತ್ತು ಛಾಯಾಗ್ರಹಣೆ ಬಳಕೆಯಲ್ಲಿವೆ.

ಇಲ್ಲಿಯವರೆಗೆ ಸಮುದ್ರಗತ ಗಣಿಗಾರಿಕೆಯಲ್ಲಿ ಹೆಚ್ಚು ಆಸಕ್ತಿ ಉಂಟಾಗಿದ್ದರೂ ಹೊಸಹೊಸ ಚಟುವಟಿಕೆಗಳು ಮಾತ್ರ ಹೆಚ್ಚಾಗಿ ಅನ್ವೇಷಣೆ ಮತ್ತು ಭಾವನಾತ್ಮಕ ಅಧ್ಯಯನದಲ್ಲಿ ಮಾತ್ರ ಇವೆ. ಆದ್ದರಿಂದ ಉತ್ಪಾದನೆಯಲ್ಲಿ ಸ್ವಲ್ಪ ವ್ಯತ್ಯಾಸವೂ ಕಾಣುವುದಿಲ್ಲ. ಇದುವರೆಗೆ ಬಂದಿರುವ ಖನಿಜ ಉತ್ಪಾದನೆಯೆಲ್ಲ ತೀರ ಪ್ರದೇಶದಿಂದ ಸಮುದ್ರದ ನೀರು, ದಡ, ಮತ್ತು ಅಂಚಿನಲ್ಲಿರುವ ಗರಸು ನಿಕ್ಷೇಪ ಮತ್ತು ಸ್ವಲ್ಪ ನೀರನ್ನು ಗಟ್ಟಿಯಾದ ರಾಸಾಯನಿಕವಾಗಿ ಹೆಪ್ಪುಗಟ್ಟಿಸುವುದು, ಶೋಧಿಸುವುದು, ಸೂರ್ಯ ರಶ್ಮಿಯಿಂದ ಆವಿಯಾಗಿಸುವುದು. ಇದರಿಂದ ಮೆಗ್ನೀಷಿಯಂ ಹಾಗೂ ಬ್ರೋಮಿನ್ ಉಪ್ಪುಗಳು ಮತ್ತು ಅಡುಗೆ ಉಪ್ಪುಗಳು ಉತ್ಪಾದನೆಯಾಗುತ್ತವೆ. ಆದರೆ ಇತ್ತೀಚಿನ ಬೃಹತ್ ಪ್ರಮಾಣದ ಕಾರ್ಯವೆಂದರೆ ಸಮುದ್ರದ ನೀರಿನಿಂದ ಸಿಹಿ ನೀರನ್ನು ಉತ್ಪಾದಿಸುವುದು. ಈ ದಿಶೆಯಲ್ಲಿ ಸಂಶೋಧನೆಗಳನ್ನು ನಡೆಸುವಾಗ ಇತರ ಖನಿಜಗಳನ್ನು ಹೊರ ತೆಗೆಯುವುದನ್ನೂ ಸಾಧಿಸಲಾಗಿದೆ.

ಖನಿಜಗಳಲ್ಲೆಲ್ಲ ಸೋಡಿಯಂ, ಮೆಗ್ನೀಷಿಯಂ ಮತ್ತು ಬ್ರೋಮೀನಗಳದೇ ಅಧಿಕ ಉತ್ಪತ್ತಿ. ತೀರದಿಂದ ದೂರದಲ್ಲಿರುವ ಈ ನಿಕ್ಷೇಪಗಳ ಗಣಿಗಾರಿಕೆ, ಸಮುದ್ರಗತ ಗಣಿಗಾರಿಕೆಯಲ್ಲಿ ಅತಿ ಪ್ರಚಲಿತವಾಗಲು ಕಾರಣವೆಂದರೆ ಇಲ್ಲಿ ಸಿಗುವ ಮ್ಯಾಂಗನೀಸ್ ಉಂಡೆಗಳು ಮತ್ತು ನೈಋತ್ಯ ಆಫ್ರಿಕದ ಸಮುದ್ರದೊಳಗಿನಿಂದ ಹೊರತೆಗೆಯಲಾದ ವಜ್ರಗಳು. ಇದರಲ್ಲಿ ಉಪಯೋಗಿಸುವ ಸಾಧನಗಳೆಂದರೆ ಗೋರುವುದು, ಕಾಮ್‌ಶೆಲ್ಸ್, ಗೋರುವ ಬಾಲ್ದಿ, ನೀರಿನ ಒತ್ತಡದ ಗೋರುಯಂತ್ರ ಅಥವಾ ವಾಯುವಿನಿಂದ ಎತ್ತುವ ಯಂತ್ರಗಳು. ಇವುಗಳಿಂದ 60–90 ಮೀ ಆಳದವರೆಗೆ ಅಗೆಯಲು ಸಾಧ್ಯವಾಗಿದೆ. 1968ರಲ್ಲಿ ಶೇ. 70ಕ್ಕೂ ಹೆಚ್ಚು ಗೋರು ಕಾರ್ಯಗಳಲ್ಲಿ ತೀರದಿಂದಾಚೆಗೆ ಗಟ್ಟಿಯಾದ ಮರಳು ಮತ್ತು ನುರುಜು ಹೊರತೆಗೆಯಬೇಕಾಯಿತು. ಈ ಉತ್ಪಾದನೆಯ ಒಟ್ಟು ಖರ್ಚನ್ನು ಭೂಮಿಯ ಮೇಲಿನ ಗಣಿಗಾರಿಕೆಗೆ ಹೋಲಿಸಿದರೆ ಸ್ವಲ್ಪ ಹೆಚ್ಚೆಂದೇ ಹೇಳಬಹುದು. ಆದರೂ ಆದಷ್ಟು ಶೀಘ್ರವಾಗಿ ಈ ನಿಕ್ಷೇಪಗಳನ್ನು ಹೊರತೆಗೆಯಬೇಕಾಗುತ್ತದೆ. ಕಾರಣ ಭೂಮಿಯ ಮೇಲಿನ ಖನಿಜ ಸಂಪತ್ತು ಎಲ್ಲ ದೇಶಗಳಲ್ಲಿಯೂ ಅನಿರ್ಬಂಧಿತವಾಗಿ ಸದಾಕಾಲ ಸಿಗಲು ಸಾಧ್ಯವೇ ಇಲ್ಲ. ಇದಕ್ಕಾಗಿಯೇ ಹಲವಾರು ರಾಷ್ಟ್ರಗಳು ತೀರದಿಂದಾಚೆಗೆ ಸಮುದ್ರತಳದಲ್ಲಿರುವ ನಿಕ್ಷೇಪಗಳ ಅನ್ವೇಷಣೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿವೆ. ಅದಕ್ಕೆ ಅನುಸಾರವಾಗಿ ಹಲವಾರು ಕಾಯಿದೆ ಕಾನೂನುಗಳನ್ನು ಕೂಡ ರೂಪಿಸುತ್ತಿವೆ. ಈಗಲೂ ನಡೆಯುತ್ತಿರುವ ಮುಖ್ಯವಾದ ಉತ್ಪಾದನೆ ವಜ್ರಗಳು. ಪ್ರಪಂಚದ ಶೇ. 70ಕ್ಕೂ ಹೆಚ್ಚು ಭಾಗದ ಭಾರ ಖನಿಜ ಉತ್ಪಾದನೆ ತೀರ ಪ್ರದೇಶದ ನಿಕ್ಷೇಪಗಳಿಂದಾಗಿದೆ. ಇದು ಆಸ್ಟ್ರೇಲಿಯ, ಶ್ರೀಲಂಕ ಮತ್ತು ಭಾರತದ ತೀರಪ್ರದೇಶಗಳಿಂದ. ಇದರಂತೆಯೇ ಇಂಡೋನೇಷ್ಯ, ಥೈಲೆಂಡ್, ಜಪಾನ್, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಐಸ್‌ಲೆಂಡ್, ಬ್ರಿಟನ್, ಫಿನ್‌ಲೆಂಡ್, ನ್ಯೂ ಫೌಂಡ್‌ಲೆಂಡ್, ನೊವಸ್ಕೋಷಿಯ, ತೈವಾನ್ ಮತ್ತು ಟರ್ಕಿದೇಶಗಳೂ ಹಲವಾರು ರೀತಿಯಲ್ಲಿ ಸಮುದ್ರಗತ ಗಣಿಗಾರಿಕೆಯಲ್ಲಿ ಆಸಕ್ತಿ ವಹಿಸುತ್ತಿವೆ.

ಗಟ್ಟಿಯಾದ ಖನಿಜ ನಿಕ್ಷೇಪಗಳಲ್ಲಿ ಬಹು ಮುಖ್ಯವಾದದ್ದು ಕಲ್ಲಿದ್ದಲು. ಜಪಾನಿನ ಕಲ್ಲಿದ್ದಲಿನ ಒಟ್ಟು ಉತ್ಪಾದನೆಯಲ್ಲಿ ಶೇ. 30 ಭಾಗ ಸಮುದ್ರತಳದಿಂದ ಬರುತ್ತಿದೆ. ಬ್ರಿಟನ್ನಿನಲ್ಲಿ ಇದು ಸು. ಶೇ. 10. ಈ ರೀತಿಯ ಉತ್ಪಾದನೆಯಲ್ಲಿ ಹೆಚ್ಚಿನ ಖರ್ಚು ತಗಲುವುದು ಕೇವಲ ಅನ್ವೇಷಣೆಗಾಗಿ ಮಾತ್ರ. ಉಳಿದ ಕಾರ್ಯ ಹಾಗೂ ವೆಚ್ಚ ಭೂಮಿಯ ಮೇಲೆ ಆಗುವಂತೆಯೇ ಇವೆ. ಜಪಾನ್, ನೊವಸ್ಕೋಷಿಯ, ತೈವಾನ್, ಬ್ರಿಟನ್, ಟರ್ಕಿ ರಾಷ್ಟ್ರಗಳು ಕಲ್ಲಿದ್ದಲನ್ನು ಉತ್ಪಾದಿಸಿವೆ. ಫಿನ್‌ಲೆಂಡ್ ಮತ್ತು ನ್ಯೂ ಫೌಂಡ್‌ಲೆಂಡ್ ಕಬ್ಬಿಣದ ಅದುರನ್ನು ಹೊರತೆಗೆದಿವೆ. ಅಮೆರಿಕ ಸಂಯುಕ್ತ ಸಂಸ್ಥಾನ ಗಂಧಕವನ್ನು ಉತ್ಪಾದಿಸಿದೆ. ಸ್ತರ ನಿಕ್ಷೇಪಗಳನ್ನು ಹೊರತೆಗೆಯಲು ಸಾಧಾರಣವಾಗಿ ಗಣಿಯ ಒಳಕ್ಕೆ ಇಳಿಯಲು ತೊಡುದಾರಿಯನ್ನು ಕೊರೆದು ಅಲ್ಲಿಂದ ಅಡ್ಡಲಾಗಿ ಸಮುದ್ರದ ಕೆಳಗಡೆ ನಿಕ್ಷೇಪದವರೆಗೆ ಸುರಂಗ ತೋಡಬೇಕಾಗುತ್ತದೆ. ಹಾಗೆಯೇ ಸಮುದ್ರದಲ್ಲಿ ಕೃತಕ ದ್ವೀಪಗಳನ್ನು ನಿರ್ಮಿಸಿ ಅಲ್ಲಿಂದ ತೋಡುದಾರಿಯನ್ನು ಕೊರೆದು ಗಣಿಗಾರಿಕೆಯನ್ನೂ, ಮಾಡುವುದುಂಟು. ಈ ಎರಡು ಬಗೆಯಲ್ಲೂ ಮೇಲ್ಛಾವಣಿಯ ಭದ್ರತೆ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಬೇಕು; ಇನ್ನುಳಿದ ಗಣಿ ಕಾರ್ಯಗಳೆಲ್ಲ ಭೂಭಾಗದ ವಿಧಾನಗಳಂತಿರುತ್ತವೆ. ತೀರದಿಂದಾಚೆ ನಡೆಸಿರುವ ತೈಲಾನ್ವೇಷಣೆಯ ಕಾರ್ಯಗಳಲ್ಲಿ ಸಾಮಾನ್ಯವಾಗಿ ಕೃತಕ ದ್ವೀಪಗಳನ್ನು ಸೃಷ್ಟಿಸಿ ಅಲ್ಲಿಂದ ಭೂ ಕೊರೆತ ನಡೆಸಿರುವುದೇ ಹೆಚ್ಚು. ಮತ್ತೊಂದು ರೀತಿಯ ತೈಲಾನ್ವೇಷಣೆ ಸಮುದ್ರದ ನೀರಿನ ಮೇಲೆ ತೇಲು ತೆಪ್ಪಗಳನ್ನು ಕಟ್ಟಿ ಅಥವಾ ತೇಲುತ್ತಿರುವ ಭೂಕೊರೆತದ ಯಂತ್ರಗಳಿಂದ ನಡೆಯುತ್ತದೆ. (ಎಂ.ಎನ್.ಎಂ.)

**ಗಣಿಗಾರಿಕೆಯ ಪಾತ್ರ, ರಾಷ್ಟ್ರಗಳ ಆರ್ಥಿಕತೆಯಲ್ಲಿ:** ಭೂಮಿಯ ಮೇಲ್ಮೈಯಲ್ಲಿ ಅಥವಾ ಒಳಗೆ ಅಡಗಿರುವ ಖನಿಜಗಳನ್ನು ಹೊರತೆಗೆದು ಮಾನವನ ಬಳಕೆಗೆ ಉಪಯುಕ್ತವಾದ ವಿವಿಧ ಸರಕುಗಳ ತಯಾರಿಕೆಗೆ ಅವಶ್ಯವಾದ ಕೆಲವು ಕಚ್ಚಾ ಸಾಮಗ್ರಿಗಳನ್ನು ಒದಗಿಸುವ ಕಾರ್ಯಾಚರಣೆಯಾದ ಗಣಿಗಾರಿಕೆಯಲ್ಲಿ ಸ್ಥೂಲವಾಗಿ ಮೂರು ಬಗೆಯ ಪ್ರತ್ಯೇಕ ಕಾರ್ಯಾಚರಣೆಗಳುಂಟು. ಅನೇಕ ವಿಧದ ಮಣ್ಣುಗಳು, ಸುಣ್ಣಕಲ್ಲು ಮತ್ತು ಇತರ ಕಲ್ಲುಗಳು, ಉಪ್ಪು ಇತ್ಯಾದಿಗಳನ್ನು ಸಾಮಾನ್ಯವಾಗಿ ಭೂಮಿಯ ಮೇಲ್ಭಾಗದಿಂದಲೇ ಅಗೆದು ಇತರ ಉತ್ಪಾದನಾ ಕಾರ್ಯಗಳಿಗೆ ಒದಗಿಸಬಹುದು. ಈ ಬಗೆಯ ಕಾರ್ಯಾಚರಣೆಯನ್ನು ತೆರೆದ ಗಣಿಗಾರಿಕೆ ಎಂದು ಹೇಳಬಹುದು. ಬಾವಿ ಮಾರ್ಗಗಳನ್ನೂ ಸುರಂಗ ಮಾರ್ಗಗಳನ್ನೂ ಕಲ್ಪಿಸಿ, ಒಡಲಿನಲ್ಲಿ ಹುದುಗಿರುವ ಖನಿಜಗಳನ್ನು ಬೇರ್ಪಡಿಸಿ, ಮೇಲಕ್ಕೆತ್ತಿ ಪಡೆಯುವ ಕಾರ್ಯ ಭೂಗತ ಗಣಿಗಾರಿಕೆ. ಚಿನ್ನ, ಕಲ್ಲಿದ್ದಲು ಮುಂತಾದವನ್ನು ಪಡೆಯುವುದು ಹೀಗೆ. ವಿವಿಧ ತೈಲಗಳನ್ನು ಭೂಮಿಯ ಆಳದಿಂದ ಪಂಪುಗಳ ಮೂಲಕ ಹೊರಗೆ ಎಳೆದುಕೊಳ್ಳುವುದು ಇನ್ನೊಂದು ವಿಧದ ಗಣಿಗಾರಿಕೆ. ಈ ವಿವಿಧ ಗಣಿ ಉದ್ಯಮಗಳು ಆಧುನಿಕ ಕೈಗಾರಿಕೆಗೆ ಅವಶ್ಯಕವಾದ ಕಚ್ಚಾ ಸಾಮಗ್ರಿಗಳನ್ನೂ ಶಕ್ತಿಮೂಲಗಳನ್ನೂ

ಒದಗಿಸುವುದರಿಂದ ಗಣಿಗಾರಿಕೆಯನ್ನು ಆರ್ಥಿಕ ಚಟುವಟಿಕೆಗಳ ವಿಂಗಡಣೆಯಲ್ಲಿ ಸಾಮಾನ್ಯವಾಗಿ ಮೂಲ ಆರ್ಥಿಕೋದ್ಯಮವೆಂದು ಪರಿಗಣಿಸಲಾಗಿದೆ. ಇತರ ಮೂಲ ಆರ್ಥಿಕ ಉದ್ಯಮಗಳಾದ ಕೃಷಿ, ಅರಣ್ಯಗಾರಿಕೆ, ಮೀನುಗಾರಿಕೆಗಳಂತೆಯೇ ಗಣಿಗಾರಿಕೆಯೂ ಆಧುನಿಕ ಆರ್ಥಿಕ ಜೀವನದ ಅವಶ್ಯ ಸರಕುಸೇವೆಗಳ ತಯಾರಿಕೆಗೆ ಮುಖ್ಯ ತಳಹದಿಯಾಗಿದೆ.

ಆಧುನಿಕ ಕೈಗಾರಿಕಾಯುಗಕ್ಕೆ ಮುನ್ನವೂ ವಜ್ರ, ಚಿನ್ನ, ಬೆಳ್ಳಿ, ತಾಮ್ರ ಮತ್ತು ಇತರ ಅನೇಕ ಉತ್ಪನ್ನಗಳಿಗೆ ಪ್ರಪಂಚದ ಎಲ್ಲ ಭಾಗಗಳಲ್ಲೂ ಪ್ರಾಮುಖ್ಯವಿತ್ತು. ಉಪಕರಣ, ಆಯುಧ, ಪಾತ್ರೆ, ಕಟ್ಟಡ ಇವಕ್ಕೆ ಖನಿಜಗಳನ್ನು ಹಿಂದಿನ ಕಾಲದಲ್ಲೂ ಉಪಯೋಗಿಸಲಾಗುತ್ತಿತ್ತು. ಖನಿಜಗಳ ಈ ಉಪಯೋಗ ಈಗಲೂ ಇರುವುದಾದರೂ ಯಂತ್ರ, ಶಕ್ತಿ, ರಾಸಾಯನಿಕ ಕೈಗಾರಿಕೆಗಳಿಗೆ ಖನಿಜಗಳ ಉಪಯೋಗ ಇಂದು ಹೆಚ್ಚು ಮುಖ್ಯ. ಇಂಗ್ಲೆಂಡಿನಲ್ಲಿ 18ನೆಯ ಶತಮಾನದಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಯ ಕಾಲದಿಂದ ಈಚೆಗೆ ಗಣಿಗಾರಿಕೆಯ ಪ್ರಾಮುಖ್ಯ ಏಕಪ್ರಕಾರವಾಗಿ ಅಧಿಕವಾಗುತ್ತ ಬಂದಿದೆ. ಅಂದಿನ ಕೈಗಾರಿಕಾಕ್ರಾಂತಿ ಬಹುಮಟ್ಟಿಗೆ ಕಲ್ಲಿದ್ದಲು ಹಾಗೂ ಕಬ್ಬಿಣವನ್ನು ಅವಲಂಬಿಸಿತ್ತು. ಇವುಗಳ ಉಪಯೋಗದಿಂದ ಆಧುನಿಕಶಕ್ತಿ ಮತ್ತು ಯಂತ್ರಯುಗದ ಉಗಮವಾಯಿತು. ಅಂದಿನಿಂದ ಕೈಗಾರಿಕೆ, ಸಾರಿಗೆ, ಸಂಪರ್ಕ ಇತ್ಯಾದಿ ಉದ್ಯಮ ಶಾಖೆಗಳು ಬಹುಮುಖವಾಗಿ ಬೆಳೆದಿವೆ. ಈ ಬೆಳವಣಿಗೆಗಳ ಜೊತೆಗೆ ಅನೇಕ ಖನಿಜಗಳಿಗೆ ಹೊಸ ಮೌಲ್ಯ ಉಂಟಾಗಿದೆ. ರೈಲು, ಮೋಟಾರು, ನೌಕೆ, ವಿಮಾನ ಮುಂತಾದ ಸಾರಿಗೆ ಸೌಲಭ್ಯಗಳು ವಿಸ್ತರಿಸಿದುದೂ ಆಧುನಿಕ ನಾಗರಿಕ ಜೀವನಕ್ಕೆ ಅವಶ್ಯವೆನಿಸುವ ವಿವಿಧ ಸರಕು ಸೇವೆಗಳ ಉತ್ಪಾದನೆ ಬೃಹತ್ ಗಾತ್ರದಲ್ಲಿ ಹೆಚ್ಚಿದುದೂ ಎರಡು ಮಹಾಯುದ್ಧಗಳಿಗಾಗಿ ಮತ್ತು ಆತ್ಮರಕ್ಷಣೆಗಾಗಿ ಅನೇಕ ರಾಷ್ಟ್ರಗಳು ಆಯುಧೋಪಕರಣಗಳ ಮತ್ತು ಇತರ ರಕ್ಷಣಾ ಕೈಗಾರಿಕೆಗಳನ್ನು ಬೃಹತ್ತಾಗಿ ಬೆಳೆಸಿಕೊಂಡಿದ್ದೂ ಬಾಹ್ಯಾಕಾಶ ಶೋಧನೆಯ ಕಾರ್ಯಕ್ಕಾಗಿ ಕೆಲವು ರಾಷ್ಟ್ರಗಳು ವಿಸ್ತಾರವಾದ ತಾಂತ್ರಿಕ ವ್ಯವಸ್ಥೆ ನಿರ್ಮಿಸಿಕೊಂಡಿದ್ದೂ ಅನೇಕ ವಿಧದ ಗಣಿ ಉತ್ಪನ್ನಗಳ ಬೇಡಿಕೆ ತೀವ್ರವಾಗಿ ಹೆಚ್ಚಿರುವುದಕ್ಕೆ ಕಾರಣಗಳಾಗಿವೆ. ಆಧುನಿಕ ನಾಗರಿಕತೆಗೆ ಖನಿಜಗಳು ಅತ್ಯಗತ್ಯ ಎಂಬುದನ್ನು ತೋರಿಸಲು ಇವು ನಿದರ್ಶನಗಳು. ಅನೇಕ ಯಂತ್ರೋಪಕರಣಗಳು ಕಬ್ಬಿಣ-ಉಕ್ಕುಗಳನ್ನು ಅವಲಂಬಿಸಿವೆ. ಮುದ್ರಣಾಲಯಗಳಿಗೆ ಆಂಟಿಮನಿ, ಸ್ವಯಂಚಾಲಿತ ಯಂತ್ರೋಪಕರಣಗಳಿಗೆ ಟಂಗ್‍ಸ್ಟನ್, ವೆನೇಡಿಯಂ ಮತ್ತು ಕ್ರೋಮಿಯಂ, ವಿದ್ಯುಚ್ಛಕ್ತಿ, ಕೈಗಾರಿಕೆಗೆ ತಾಮ್ರ, ಬ್ಯಾಟರಿಗಳಿಗೆ ಸೀಸ, ಫೌಂಟನ್‍ಪೆನ್ನುಗಳಿಗೆ ಇರಿಡಿಯಂ, ವಿಮಾನಗಳಿಗೆ ಅಲ್ಯೂಮಿನಿಯಂ ಹೀಗೆ ಆಧುನಿಕ ನಾಗರಿಕ ಜೀವನಕ್ಕೆ ಬೇಕಾದ ಅನೇಕ ಸರಕುಗಳಿಗೆ ವಿವಿಧ ಖನಿಜಗಳು ಅತ್ಯಾವಶ್ಯಕವಾಗಿರುವುದನ್ನು ಗಮನಿಸಿದರೆ ಪ್ರಪಂಚದ ಆರ್ಥಿಕತೆಯಲ್ಲಿ ಖನಿಜಗಳ ಮೂಲಭೂತ ಪ್ರಾಮುಖ್ಯ ಸ್ಪಷ್ಟವಾಗುತ್ತದೆ.

ಚಿನ್ನ, ಬೆಳ್ಳಿ ಇತ್ಯಾದಿ ಅಮೂಲ್ಯ ಲೋಹಗಳಿಗೆ ಪ್ರಾಚೀನ ಕಾಲದಿಂದಲೂ ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯವಿದೆ. ಅನೇಕ ಜನಾಂಗಗಳು ಇವನ್ನು ಆಭರಣಗಳಿಗಾಗಿ ಬಹು ಹಿಂದಿನಿಂದಲೂ ಬಳಸುತ್ತ ಬಂದಿವೆ. ಇದರ ಜೊತೆಗೆ ಬೆಳ್ಳಿ ಮತ್ತು ಚಿನ್ನ ಹಣವಸ್ತುವಾಗಿಯೂ ಹಣಪದ್ಧತಿಗೆ ಆಧಾರವಾಗಿಯೂ ಬಳಕೆಯಲ್ಲಿವೆ. ಆಧುನಿಕ ಯುಗದಲ್ಲಿ ಈ ಅಮೂಲ್ಯ ಲೋಹಗಳ ಪ್ರಾಮುಖ್ಯ ವಿಶೇಷವಾಗಿ ಬೆಳೆದಿದೆ. 19ನೆಯ ಶತಮಾನದಲ್ಲಿ ಪ್ರಪಂಚದ ಅನೇಕ ರಾಷ್ಟ್ರಗಳು ಸ್ವರ್ಣಪ್ರಮಿತಿ ಹಣ ಪದ್ಧತಿಯನ್ನು ಜಾರಿಗೆ ತಂದಿದ್ದರಿಂದ ಚಿನ್ನದ ಗಣಿಗಾರಿಕೆಗೆ ವಿಶೇಷ ಪ್ರಚೋದನೆ ದೊರಕಿತು. ಚಿನ್ನ ಹಾಗೂ ನೋಟುಗಳ ಪರಸ್ಪರ ಪರಿವರ್ತನೆಯ ಅವಕಾಶವನ್ನು ರದ್ದುಗೊಳಿಸಿದ ಅನಂತರವೂ ಚಲಾವಣೆಯ ಹಣಕ್ಕೆ ಚಿನ್ನದ ಬೆಂಬಲವಿದೆಯೆಂಬ ಸಾರ್ವತ್ರಿಕ ನಂಬಿಕೆ ಹಣಪದ್ಧತಿಗೆ ಭದ್ರತೆಯನ್ನು ತಂದಿತು. ಅಂತಾರಾಷ್ಟ್ರೀಯ ಹಣ ನಿಧಿಯ ಸ್ಥಾಪನೆಯಿಂದಾಗಿ ಈಚೆಗೆ ಜಾರಿಯಲ್ಲಿರುವ ಪ್ರಪಂಚದ ಹಣಪದ್ಧತಿಯಲ್ಲಿಯೂ ಚಿನ್ನಕ್ಕೆ ವಿಶೇಷ ಸ್ಥಾನವಿದೆ. ತನಗೆ ಸಲ್ಲಬೇಕಾದ ಹಣವನ್ನು ಚಿನ್ನದ ರೂಪದಲ್ಲಿ ಪಡೆಯಲು ಯಾವ ರಾಷ್ಟ್ರವೂ ಸಾಮಾನ್ಯವಾಗಿ ನಿರಾಕರಿಸುವುದಿಲ್ಲ. ಇಂಥ ಗೌರವಸ್ಥಾನ ಉಳಿಸಿಕೊಂಡಿರುವುದರಿಂದಲೂ, ಆಭರಣ ಹಾಗೂ ಕೆಲವು ಕೈಗಾರಿಕೆಗಳ ದೃಷ್ಟಿಯಿಂದಲೂ ಚಿನ್ನದ ಗಣಿಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯವಿದ್ದೇ ಇದೆ. ಚಲಾವಣೆ ನಾಣ್ಯಗಳಿಗೆ ಬೇಕಾದ ಇತರ ಲೋಹಗಳಿಗೂ ಬೇಡಿಕೆ ಹೆಚ್ಚಿದೆ.

ಸು. 19ನೆಯ ಶತಮಾನದ ಆರಂಭದಿಂದೀಚೆಗೆ ಕೆಲವು ಮುಖ್ಯ ಖನಿಜಗಳ ಪ್ರಾಮುಖ್ಯ ತೀವ್ರವಾಗಿ ಹೆಚ್ಚಿದೆ. ಎಲ್ಲ ಖನಿಜಗಳನ್ನೂ ಒಳಗೊಂಡ ಗಣಿಗಾರಿಕೆಯ ಶೇ. 90ರಷ್ಟು ಕಳೆದ ಸು. 150ವರ್ಷಗಳಲ್ಲಿ ಬೆಳೆದು ಬಂದದ್ದೆಂದು ಅಂದಾಜು ಮಾಡಲಾಗಿದೆ. ಗಣಿ ಉತ್ಪನ್ನಗಳ ಗಾತ್ರ ಹೆಚ್ಚಿರುವುದೇ ಅಲ್ಲದೆ ಈ ಅವಧಿಯಲ್ಲಿ ಇವುಗಳ ಉಪಯೋಗದಲ್ಲಿ ಬಹಳ ಮಿತವ್ಯಯವೂ ಉಂಟಾಗಿದೆ. ಆಧುನಿಕ ಯುಗದಲ್ಲಿ ಖನಿಜಗಳ ಉಪಯೋಗದಿಂದ ಮಾನವ ಶ್ರಮದ ಉತ್ಪಾದಕತೆ ಗಣನೀಯವಾಗಿ ಹೆಚ್ಚಲು ಸಾಧ್ಯವಾಗಿದೆ.

ಆರ್ಥಿಕವಾಗಿ ಮುಂದುವರಿದಿರುವ ರಾಷ್ಟ್ರಗಳಲ್ಲಿ ಹೇಗೋ ಹಾಗೆಯೆ ಆರ್ಥಿಕವಾಗಿ ಹಿಂದುಳಿದಿರುವ ಅನೇಕ ರಾಷ್ಟ್ರಗಳಲ್ಲಿಯೂ ಗಣಿ ಉದ್ಯಮ ಆಧುನಿಕ ರೀತಿಯಲ್ಲಿ ವ್ಯವಸ್ಥಿತವಾಗಿರುವುದೇ ಅಲ್ಲದೆ, ಮುಂದುವರಿದಿರುವ ರಾಷ್ಟ್ರಗಳಿಗಿಂತ ಅವುಗಳ ಆರ್ಥಿಕತೆಗಳಲ್ಲಿ ಗಣಿಗಾರಿಕೆ ಸಾಪೇಕ್ಷವಾಗಿ ಹೆಚ್ಚು ಪ್ರಾಮುಖ್ಯಗಳಿಸಿದೆ. ಆಫ್ರಿಕ, ಏಷ್ಯ ಮತ್ತು ದಕ್ಷಿಣ ಅಮೆರಿಕದ ಅನೇಕ ಅಭಿವೃದ್ಧಿ ಹೊಂದದ ರಾಷ್ಟ್ರಗಳು ಇತ್ತೀಚಿನ ವರ್ಷಗಳವರೆಗೆ ಸಾಮಾನ್ಯವಾಗಿ ಮುಂದುವರಿದ ರಾಷ್ಟ್ರಗಳ ವಸಾಹತುಗಳಾಗಿ ಅಥವಾ ಅಧೀನರಾಷ್ಟ್ರಗಳಾಗಿ ಇದ್ದು, ಅವುಗಳ ಗಣಿ ಉದ್ಯಮಗಳು ಮುಖ್ಯವಾಗಿ ಹಿರಿಯ ರಾಷ್ಟ್ರಗಳ ಅವಶ್ಯಕತೆಗಳ ಪೂರೈಕೆಗಾಗಿ ವಿದೇಶೀ ಉದ್ಯಮ ಸಾಹಸ ಹಾಗೂ ಬಂಡವಾಳಗಳ ಸಹಾಯದಿಂದ ಬೆಳೆದುವು. ಮುಂದುವರಿದ ರಾಷ್ಟ್ರಗಳ ಅನೇಕ ಕೈಗಾರಿಕೆಗಳು ಈ ರಾಷ್ಟ್ರಗಳ ಖನಿಜೋತ್ಪನ್ನಗಳನ್ನು ಅವಲಂಬಿಸಿವೆ. ಬಹುಸಂಖ್ಯೆಯಲ್ಲಿರುವ ಈ ಹಿಂದುಳಿದ ದೇಶಗಳ ರಾಷ್ಟ್ರೀಯ ಉತ್ಪನ್ನದಲ್ಲಿ ಒಂದು ಅಥವಾ ಎರಡು ಖನಿಜಗಳ ಉತ್ಪನ್ನ ಗಣನೀಯವಾಗಿದೆ. ಇವುಗಳಲ್ಲಿ ಕೈಗಾರಿಕೆ ಅಭಿವೃದ್ಧಿಯಾಗಿಲ್ಲ, ಕೃಷಿ ಉತ್ಪಾದಕತೆ ಕೆಳಮಟ್ಟದಲ್ಲಿದೆ. ಸಾರಿಗೆ ಸಂಪರ್ಕ ಹಾಗೂ ಇತರ ಸೇವಾಉದ್ಯಮಗಳು ಬೆಳೆದಿಲ್ಲ. ಆದ್ದರಿಂದ ಇಲ್ಲಿ ಅಭಿವೃದ್ಧಿಯಾಗಿರುವ ಗಣಿಗಾರಿಕೆ ವಲಯ ಇವುಗಳ ಆರ್ಥಿಕತೆಯಲ್ಲಿ ಸಾಪೇಕ್ಷವಾಗಿ ಹೆಚ್ಚು ಮುಖ್ಯಸ್ಥಾನ ಹೊಂದಿದೆ. ಪೆಟ್ರೋಲಿಯಂ, ತವರ, ನೈಟ್ರೇಟು, ತಾಮ್ರ, ಸತು ಮುಂತಾದ ಖನಿಜಗಳಲ್ಲಿ ಒಂದು ಅಥವಾ ಎರಡರಿಂದಲೇ ಈ ರಾಷ್ಟ್ರಗಳು ತಮ್ಮ ವಿದೇಶ ವಿನಿಮಯ ಸಂಪಾದನೆಯ ಬಹುಭಾಗವನ್ನು ಪಡೆಯುತ್ತಿವೆ.

ಖನಿಜಗಳ ಉತ್ಪಾದನೆಯನ್ನು ಹೆಚ್ಚಿಸಲು ಈಚಿನ ದಶಕಗಳಲ್ಲಿ ಅನೇಕ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನಗಳಲ್ಲಿ ತಾಂತ್ರಿಕ ಪ್ರಗತಿ ಮುಖ್ಯವಾದ್ದು. ಗಣಿಗಳಲ್ಲಿ ಬಾವಿಮಾರ್ಗ ತೋಡುವುದು, ಸುರಂಗ ಕೊರೆಯುವುದು, ಅದಿರುತೆಗೆಯುವುದು, ಅದಿರನ್ನು ಹೊರಕ್ಕೆ ಸಾಗಿಸುವುದು ಇತ್ಯಾದಿ ಕಾರ್ಯಾಚರಣೆಗಳಲ್ಲಿ ಬಹುಮಟ್ಟಿಗೆ ಸ್ವಯಂಚಾಲಿತ ಯಂತ್ರಗಳನ್ನು ಬಳಸುವ ತಂತ್ರ ಬೆಳೆದು, ಗಣಿತಂತ್ರದಲ್ಲಿ ಹೊಸ ಕ್ರಾಂತಿಯೇ ಉಂಟಾಗಿದೆ. ಕಡಿಮೆ ದರ್ಜೆ ಅದಿರನ್ನು ಉಪಯೋಗಿಸುವುದರಲ್ಲೂ ಅದಿರನ್ನು ಶುದ್ಧಗೊಳಿಸುವುರಲ್ಲೂ ಖನಿಜಗಳನ್ನು ಬಳಸುವುದರಲ್ಲೂ ಹೆಚ್ಚು ಮಿತವ್ಯಯ ಸಾಧಿಸುವ ಮಾರ್ಗಗಳನ್ನು ಕಂಡುಹಿಡಿಯಲಾಗಿದೆ. ಈ ಕ್ರಮದಿಂದ ಗಣಿಗಾರಿಕೆಯ ಉತ್ಪಾದನೆಯ ದಕ್ಷತೆ ಹೆಚ್ಚಿರುವುದರಿಂದ ಉತ್ಪಾದನವೆಚ್ಚದಲ್ಲಿ ಇಳಿತಾಯವಾಗುವುದು ಸಾಧ್ಯವಾಗಿದೆ. ಕಾಲಕ್ರಮದಲ್ಲಿ ಅನೇಕ ಗಣಿಗಳಲ್ಲಿ ಹೆಚ್ಚು ಆಳದಿಂದ ಅದಿರುಗಳನ್ನು ಅಗೆದು ಹೊರತರಬೇಕಾಗುತ್ತದೆ. ಅಲ್ಲದೆ ಉತ್ತಮದರ್ಜೆಯ ಅದಿರು ಮುಗಿದು ಕಡಿಮೆ ದರ್ಜೆಯ ಅದಿರುಗಳನ್ನು ಉಪಯೋಗಿಸಿಕೊಳ್ಳಬೇಕಾದ ಸಂದರ್ಭ ಒದಗಬಹುದು. ಆಕಸ್ಮಿಕವಾಗಿ ಹೆಚ್ಚು ಉತ್ತಮವಾದ ಅದಿರು ಲಭಿಸಲೂಬಹುದು. ಇದು ಅನಿಶ್ಚಿತ ಅಂಶ. ಸಾಮಾನ್ಯವಾಗಿ ನಿರ್ದಿಷ್ಟ ಕಾಲಾವಧಿಯ ಅನಂತರ ಒಂದು ಪ್ರದೇಶದ ಖನಿಜ ಸಂಪತ್ತು ಬರಿದಾಗುವುದರಿಂದ ಅಲ್ಲಿಯ ಗಣಿಗಳನ್ನು ಮುಚ್ಚಬೇಕಾಗಬಹುದು. ಅಲ್ಲದೆ ಭೂಮಿಯಲ್ಲಿ ಖನಿಜ ಸಂಪತ್ತು ಹುದುಗಿರುವ ಹೊಸ ಪ್ರದೇಶಗಳನ್ನು ಶೋಧಿಸಿ ಸೂಕ್ತ ಸ್ಥಳಗಳಲ್ಲಿ ಹೊಸ ಗಣಿಗಳನ್ನು ನಿರ್ಮಿಸಬೇಕಾಗಬಹುದು. ಖನಿಜಗಳ ಭವಿಷ್ಯ ಸರಬರಾಜು ಪರಿಸ್ಥಿತಿಯ ಬಗ್ಗೆ ನಿರ್ದಿಷ್ಟ ಅಂದಾಜುಗಳನ್ನು ಹಾಕುವುದು ಹೊಸ ತಂತ್ರಜ್ಞಾನದಿಂದ (ದೂರಸಂವೇದಿ ತಂತ್ರಜ್ಞಾನ) ಸಾಧ್ಯವಾಗಿದೆ. ಆದರೆ ಪ್ರಪಂಚದಲ್ಲಿ ಅನೇಕ ಖನಿಜಗಳಿಗೆ-ಮುಖ್ಯವಾಗಿ ಶಕ್ತಿಮೂಲಗಳಾದ ಪೆಟ್ರೋಲಿಯಂ ಮತ್ತು ಅನಿಲಗಳಿಗೂ ಹೊಸ ಲೋಹ ಕೈಗಾರಿಕೆ ಮತ್ತು ಯಂತ್ರ ಕೈಗಾರಿಕೆಗಳಿಗೆ ಬೇಕಾದ ಅಲ್ಯೂಮಿನಿಯಂ, ತಾಮ್ರ, ತವರ ಇತ್ಯಾದಿಗಳಿಗೂ-ಈಗ ಸರಬರಾಜಿಗೂ ಮೀರಿದ ಪ್ರಮಾಣದಲ್ಲಿ ಬೇಡಿಕೆ ಹೆಚ್ಚಿದೆ. ಬರಲಿರುವ ದಶಕಗಳಲ್ಲಿ ಇಂದಿನ ಅನೇಕ ಹಿಂದುಳಿದ ರಾಷ್ಟ್ರಗಳು ಅಭಿವೃದ್ಧಿಯಾಗುವುದರಿಂದ ಈ ಖನಿಜಗಳಿಗೆ ಬೇಡಿಕೆ ಇನ್ನೂ ತೀವ್ರವಾಗಿ ಹೆಚ್ಚುವ ಸಂಭವವಿದೆ. ಹೀಗೆ ಹೆಚ್ಚುತ್ತಿರುವ ಬೇಡಿಕೆಗೆ ಸಮವಾದ ವೇಗದಲ್ಲಿ ಸರಬರಾಜು ಬೆಳೆಯುವಂತೆ ಮಾಡುವುದು ಗಣಿಗಾರಿಕೆಯ ಮುಖ್ಯ ಸಮಸ್ಯೆ. ಆಧುನಿಕ ವೈಜ್ಞಾನಿಕ ಗಣಿ ಶೋಧನ ತಂತ್ರಗಳ ಪ್ರಯೋಗದಿಂದ ವಿವಿಧ ಖನಿಜಗಳ ಸರಬರಾಯಿ ಮೂಲಗಳ ಬಗ್ಗೆ ನಮ್ಮ ತಿಳಿವಳಿಕೆ ಹೆಚ್ಚುತ್ತಿರುವುದರಿಂದಲೂ ಹಳೆಯ ಗಣಿಗಳನ್ನು ಮುಚ್ಚಬೇಕಾಗಬಹುದಾದ್ದರಿಂದಲೂ ಗಣಿ ಫಲವತ್ತತೆ ಬಗ್ಗೆ ಅನಿಶ್ಚಯತೆ ಇರುವುದರಿಂದಲೂ ಗಣಿಗಾರಿಕೆ ವಿಶೇಷತಃ ಗತಿಶೀಲ ಆರ್ಥಿಕ ಚಟುವಟಿಕೆಯಾಗಿದೆ. ಈ ಕಾರಣದಿಂದ ರಾಷ್ಟ್ರಗಳ ಆರ್ಥಿಕತೆಗಳಲ್ಲಿ ಗಣಿಗಾರಿಕೆಯ ಪಾತ್ರ ಆಗಿಂದಾಗ್ಗೆ ಸ್ವಲ್ಪ ವ್ಯತ್ಯಾಸಗೊಳ್ಳಬಹುದಾದ ಸಂಭವವಿದೆ.

ಗಣಿಗಾರಿಕೆ ಹೆಚ್ಚು ಸ್ಥಾನೀಕರಣವಾದ ಉದ್ಯಮ. ಕೃಷಿ ಉದ್ಯಮದಂತೆ ಒಂದೊಂದು ದೇಶದಲ್ಲೂ ವಿಸ್ತಾರವಾಗಿ ಹರಡದೆ, ಗಣಿಗಾರಿಕೆ ಕೇವಲ ಕೆಲವು ಸ್ಥಳಗಳಲ್ಲಿ ಮಾತ್ರ ಸ್ಥಾನೀಕರಣವಾಗಿರುವ ಉದ್ಯಮವಾಗಿದೆ. ಖನಿಜಗಳ ಪ್ರಾಕೃತಿಕ ಹಾಗೂ ಭೌಗೋಳಿಕ ವಿತರಣೆಯ ವಿನ್ಯಾಸ ಇದಕ್ಕೆ ಏಕೈಕ ಕಾರಣ. ಕೈಗಾರಿಕೆಗೆ ಉಪಯುಕ್ತವಾದ ಕೆಲವು ವಿಧದ ಮಣ್ಣುಗಳು ಮತ್ತು ಕಲ್ಲುಗಳನ್ನು ಬಿಟ್ಟರೆ ಅನೇಕ ಖನಿಜಗಳು ದೊರಕುವ ಪ್ರದೇಶಗಳು ಸಾಮಾನ್ಯವಾಗಿ ವಿರಳವಾಗಿವೆ. ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರುಗಳು ಪ್ರಪಂಚದಲ್ಲಿ ಸಾಪೇಕ್ಷವಾಗಿ ಹೆಚ್ಚು ವಿಸ್ತಾರವಾಗಿ ವಿತರಣೆಯಾಗಿರುವ ಗಣಿವಸ್ತುಗಳು. ಆದರೂ ವಿಶ್ವದ ಕಲ್ಲಿದ್ದಲಿನ ಒಟ್ಟು ಉತ್ಪತ್ತಿಯಲ್ಲಿ ಸು. 2/3ರಷ್ಟು ಜರ್ಮನಿ, ಅಮೆರಿಕ

ಸಂಯುಕ್ತಸಂಸ್ಥಾನ ಮತ್ತು ಇಂಗ್ಲೆಂಡಿನಲ್ಲೆ ಆಗುತ್ತದೆ. ಕಬ್ಬಿಣದ ಅದಿರಿನ ಒಟ್ಟು ಉತ್ಪತ್ತಿಯಲ್ಲಿ ಶೇ. 50ರಷ್ಟು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಶೇ. 42ರಷ್ಟು ಫ್ರಾನ್ಸ್, ರಷ್ಯ, ಸ್ವೀಡನ್, ಇಂಗ್ಲೆಂಡ್ ಮತ್ತು ಜರ್ಮನಿಗಳಲ್ಲೂ ಉಳಿದ ಶೇ.8ರಷ್ಟು ಮಾತ್ರ ಪ್ರಪಂಚದ ಇತರ ಕಡೆಗಳಲ್ಲೂ ಆಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳು, ವೆನಿಜುವೇಲ ಮತ್ತು ಪಶ್ಚಿಮ ಏಷ್ಯ ರಾಷ್ಟ್ರಗಳು ಪ್ರಪಂಚದ ಒಟ್ಟು ಪೆಟ್ರೋಲಿಯಂ ಉತ್ಪಾದನೆಯ ಶೇ. 85ಕ್ಕೂ ಹೆಚ್ಚು ಭಾಗಕ್ಕೆ ಕಾರಣವಾಗಿವೆ. ವಜ್ರದ ಸುಮಾರು ಮುಕ್ಕಾಲು ಭಾಗದ ಉತ್ಪಾದನೆ ಕಾಂಗೋ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಆಗುತ್ತದೆ. ಚಿನ್ನದ ಗಣಿಗಳು ಬಹುಮಟ್ಟಿಗೆ ದಕ್ಷಿಣ ಆಫ್ರಿಕ, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಕೆನಡ, ರಷ್ಯ, ಆಸ್ಟ್ರೇಲಿಯಗಳಲ್ಲಿ ಸಾಂದ್ರೀಕೃತವಾಗಿವೆ. ಇವೆಲ್ಲವೂ ಸೇರಿ ಪ್ರಪಂಚದ ಒಟ್ಟು ಚಿನ್ನದ ಸು. 4/5ರಷ್ಟು ಉತ್ಪತ್ತಿಗೆ ಕಾರಣವಾಗಿವೆ. ಇದರಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಬರುವುದು ದಕ್ಷಿಣ ಆಫ್ರಿಕದ ಗಣಿಗಳಿಂದ. ಪ್ಲಾಟಿನಂ ಉತ್ಪಾದನೆ ಕೆನಡ, ದಕ್ಷಿಣ ಆಫ್ರಿಕ, ರಷ್ಯ ಹಾಗೂ ಕೊಲಂಬಿಯಗಳಿಗೆ ಸೀಮಿತವಾಗಿದೆ. ಪ್ರಪಂಚದ ಬೆಳ್ಳಿ ಸರಬರಾಜಿನ ಸು. ಅರ್ಧದಷ್ಟು ಭಾಗ ಮೆಕ್ಸಿಕೋ, ಪೆರು ಮತ್ತು ಬೊಲಿವಿಯಗಳಿಂದಲೂ ಉಳಿದುದರ ಬಹುಭಾಗ ಅಮೆರಿಕದ ಸಂಯುಕ್ತಸಂಸ್ಥಾನಗಳು, ಕೆನಡ, ಆಸ್ಟ್ರೇಲಿಯಗಳಿಂದಲೂ ಬರುತ್ತದೆ. ಬಾಕ್ಸೈಟ್ ಗಣಿಗಳು ಬಹುಮಟ್ಟಿಗೆ ಉತ್ತರ ಹಾಗೂ ದಕ್ಷಿಣ ಅಮೆರಿಕ, ಆಫ್ರಿಕ ಮತ್ತು ದಕ್ಷಿಣ ಐರೋಪ್ಯ ಪ್ರದೇಶಗಳಲ್ಲೂ ತವರ ಉತ್ಪಾದನೆ ಮುಖ್ಯವಾಗಿ ಮಲಯ ಹಾಗೂ ಕೆಲವು ದೂರಪ್ರಾಚ್ಯ ದ್ವೀಪಗಳಲ್ಲೂ ಸಾಂದ್ರೀಕೃತವಾಗಿವೆ. ಸತುವಿನಲ್ಲಿ ಸು. ಅರ್ಧದಷ್ಟು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲೂ ಉಳಿದದ್ದು ಬಹುಮಟ್ಟಿಗೆ ಕೆನಡ, ರಷ್ಯ, ಬೆಲ್ಜಿಯಂ, ಆಸ್ಟ್ರೇಲಿಯ, ಇಂಗ್ಲೆಂಡ್‌ಗಳಲ್ಲಿಯೂ ಉತ್ಪಾದನೆಯಾಗುತ್ತದೆ. ಸೀಸದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳು ಮತ್ತು ಕೆನಡ ಸೇರಿ ಸು. 2/5ರಷ್ಟನ್ನೂ ಆಸ್ಟ್ರೇಲಿಯ, ಮೆಕ್ಸಿಕೊ ಮತ್ತು ರಷ್ಯಗಳು ಉಳಿದದ್ದರಲ್ಲಿ ಬಹುಭಾಗವನ್ನೂ ಉತ್ಪಾದಿಸುತ್ತಿವೆ. ನಿಕ್ಕಲ್, ಮ್ಯಾಂಗನೀಸ್, ಕ್ರೋಮಿಯಂ, ಟಂಗ್‌ಸ್ಟನ್, ಕೋಬಾಲ್ಟ್, ಯುರೇನಿಯಂ ಮುಂತಾದ ಖನಿಜಗಳ ಉತ್ಪಾದನೆಗಳು ಕೂಡ ವಿಶ್ವದ ಕೆಲವೇ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ.

ವಿವಿಧ ಖನಿಜಗಳ ಉತ್ಪಾದನೆ ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ವಿವಿಧ ಪರಿಮಾಣಗಳಲ್ಲಿ ವಿತರಣೆಯಾಗಿರುವುದರಿಂದ ರಾಷ್ಟ್ರಗಳ ಆರ್ಥಿಕತೆಯಲ್ಲಿ ಗಣಿಗಾರಿಕೆಯ ಸ್ಥಾನಮಾನ ಏಕರೀತಿ ಇಲ್ಲ. ಆಯಾ ರಾಷ್ಟ್ರಗಳ ಖನಿಜಗಳ ಮೂಲಗಳು ಯಾವುವೆಂಬುದೂ ಎಷ್ಟರಮಟ್ಟಿಗೆ ಆ ರಾಷ್ಟ್ರಗಳು ಈ ಮೂಲಗಳನ್ನು ಶೋಧಿಸಿ ಗಣಿಗಾರಿಕೆಯನ್ನು ಅಭಿವೃದ್ಧಿಪಡಿಸಿಕೊಂಡಿವೆಯೆಂಬುದೂ ಆ ರಾಷ್ಟ್ರಗಳ ಆರ್ಥಿಕತೆಗಳಲ್ಲಿ ಗಣಿಗಾರಿಕೆಯ ಪಾತ್ರವೇನೆಂಬುದನ್ನು ನಿರ್ಣಯಿಸುತ್ತವೆ. ಗಣಿಗಾರಿಕೆಯಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳ ಸ್ಥಾನ ಗಮನಾರ್ಹವಾದ್ದು. ವಿಶ್ವದ ಒಟ್ಟು ಖನಿಜೋತ್ಪತ್ತಿಯಲ್ಲಿ ಅಮೆರಿಕದ ಪಾಲು ಈ ರೀತಿ ಇದೆ; ಪೆಟ್ರೋಲಿಯಂ ಶೇ. 60 ಕ್ಕಿಂತ ಅಧಿಕ, ಕಬ್ಬಿಣದ ಅದಿರು ಶೇ. 50, ಕಲ್ಲಿದ್ದಲು ಶೇ. 24, ಸತು ಶೇ. 47, ಸೀಸ ಶೇ. 27, ತಾಮ್ರ ಶೇ. 20, ಬೆಳ್ಳಿ ಶೇ. 16, ಚಿನ್ನ ಶೇ. 15. ಇನ್ನೂ ಅನೇಕ ಖನಿಜಗಳನ್ನು ಗಮನಾರ್ಹ ಗಾತ್ರಗಳಲ್ಲಿ ಅಲ್ಲಿ ನೆಲದಿಂದ ತೆಗೆಯಲಾಗುತ್ತಿದೆ. ಪ್ರಪಂಚದ ಗಣಿಗಾರಿಕೆಯಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳಿಗೆ ಹೀಗೆ ಅತ್ಯಂತ ಮುಖ್ಯವಾದ ಸ್ಥಾನವುಂಟು. ಪ್ರಪಂಚದ ಆರ್ಥಿಕತೆಯಲ್ಲಿ ಅಮೆರಿಕಕ್ಕೆ ಪ್ರಾಧಾನ್ಯ ಲಭ್ಯವಾಗಲು ಇದು ಒಂದು ಮುಖ್ಯ ಕಾರಣ.

ಒಂದು ದೇಶದಲ್ಲಿರುವ ಖನಿಜ ನಿಕ್ಷೇಪಗಳ ವೈವಿಧ್ಯ ದೃಷ್ಟಿಯಿಂದ ಅಮೆರಿಕ ಸಂಯುಕ್ತಸಂಸ್ಥಾನಗಳು. ರಷ್ಯ, ಮತ್ತು ಯುರೋಪಿನ ದೇಶಗಳ ಜೊತೆಗೆ ಭಾರತವನ್ನೂ ಸೇರಿಸಬಹುದು. ಹುದುಗಿರುವ ಖನಿಜ ಸಂಪತ್ತನ್ನು ಭಾರತ ಸಾಕಷ್ಟು ಹೊರ ತೆಗೆಯುತ್ತಿಲ್ಲವಾದರೂ ಇಲ್ಲಿ ಅನೇಕ ಬಗೆಯ ಖನಿಜಗಳು ಗಣನೀಯ ಪರಿಮಾಣಗಳಲ್ಲಿವೆ ಎಂಬುದು ಈಚೆಗೆ ನಡೆಸಿರುವ ಶೋಧನೆಗಳಿಂದ ವ್ಯಕ್ತವಾಗುತ್ತದೆ. ಈಚಿನ ಅಂದಾಜಿನ ಪ್ರಕಾರ ಇಲ್ಲಿ ಹುದುಗಿರುವ ಕಬ್ಬಿಣದ ಅದಿರಿನ ಪರಿಮಾಣ ಪ್ರಪಂಚದಲ್ಲಿರುವ ಒಟ್ಟು ನಿಕ್ಷೇಪದ ಕಾಲುಭಾಗದಷ್ಟಿದೆಯೆಂದು ಹೇಳಲಾಗಿದೆ. ಒರಿಸ್ಸ, ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಗೋವಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ಯೋಜನಾನುಗುಣವಾಗಿ ತೀವ್ರವಾಗಿ ಬೆಳೆಯುತ್ತಿದೆ. ದೇಶದ ಉಕ್ಕಿನ ಕೈಗಾರಿಕೆಗೆ ಅದಿರನ್ನು ಒದಗಿಸುವುದೇ ಅಲ್ಲದೆ ಕೆಲವು ರಾಷ್ಟ್ರಗಳಿಗೆ–ಮುಖ್ಯವಾಗಿ ಜಪಾನಿಗೆ–ಕಬ್ಬಿಣದ ಅದಿರನ್ನು ರಫ್ತು ಮಾಡಲಾಗುತ್ತಿದೆ. ಝರಿಯ, ರಾಣಿಗಂಜ್ ಮತ್ತು ಬೊಕಾರೊಗಳಲ್ಲಿ ದೇಶದ ಕಲ್ಲಿದ್ದಲು ಗಣಿಗಾರಿಕೆ ಸ್ಥಾನೀಕರಣವಾಗಿದೆ. ಅಸ್ಸಾಂ, ತ್ರಿಪುರ, ಮಣಿಪುರ, ಪಶ್ಚಿಮ ಬಂಗಾಲ, ಪಂಜಾಬ್, ಹಿಮಾಚಲಪ್ರದೇಶ, ಕ್ಯಾಂಬೇ–ಕಚ್ ಪ್ರದೇಶಗಳಲ್ಲಿ ತೈಲಗಣಿಗಳನ್ನು ಅಭಿವೃದ್ಧಿಪಡಿಸಬಹುದೆಂಬುದು ವ್ಯಕ್ತಪಟ್ಟಿದೆ. ಪ್ರಪಂಚದ ಮ್ಯಾಂಗನೀಸ್ ಉತ್ಪಾದಿಸುವ ರಾಷ್ಟ್ರಗಳಲ್ಲಿ ಭಾರತದ್ದು ಮುಖ್ಯ ಸ್ಥಾನ. ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಗೋವದಲ್ಲಿ ದೇಶದ ಮ್ಯಾಂಗನೀಸ್ ಅದಿರಿನ ಬಹುಭಾಗ ದೊರಕುತ್ತಿದೆ. ದೇಶದಲ್ಲಿ ಬೆಳೆಯುತ್ತಿರುವ ಕೈಗಾರಿಕೆಗೆ ಇದು ಸಹಾಯವಾಗಿರುವುದೇ ಅಲ್ಲದೆ ರಫ್ತು ಮೂಲಕ ವಿದೇಶೀ ವಿನಿಮಯದ ಗಳಿಕೆಗೂ ಸಹಾಯಕವಾಗಿದೆ. ಉತ್ತಮದರ್ಜೆಯ ಅಭ್ರಕ ಉತ್ಪಾದನೆಯಲ್ಲೂ ಪ್ರಪಂಚದಲ್ಲಿ ಭಾರತಕ್ಕೆ ಗಣ್ಯಸ್ಥಾನವುಂಟು. ಪರಮಾಣುಶಕ್ತಿಗೆ ಅವಶ್ಯಕವಾದ ಯುರೇನಿಯಂ ನಿಕ್ಷೇಪ ಭಾರತದಲ್ಲಿ ಉಂಟು. ಇವುಗಳೇ ಅಲ್ಲದೆ ಚಿನ್ನ, ವಜ್ರ, ತಾಮ್ರ, ಸೀಸ, ಸತು, ಬಾಕ್ಸೈಟ್, ಇಲ್ಮೆನೈಟ್, ಜಿಪ್ಸಮ್, ಕ್ರೋಮೈಟ್, ಫ್ಲೂರೈಟ್ ಮುಂತಾದ ವಿವಿಧ ಖನಿಜನಿಕ್ಷೇಪಗಳು ದೇಶದಲ್ಲಿವೆ. ಈಚೆಗೆ ಬೆಳೆಯುತ್ತಿರುವ ಆಧುನಿಕ ಕೈಗಾರಿಕೆಗಳಿಗೆ ಖನಿಜಮೂಲಗಳಿಂದ ಅವಶ್ಯಕವಾದ ಮೂಲ ಸಾಮಗ್ರಿಗಳು ಒದಗುತ್ತಿವೆ. ಭಾರತದ ನಾಲ್ಕು ಪಂಚವಾರ್ಷಿಕ ಯೋಜನೆಗಳಲ್ಲಿ ಗಣಿಗಾರಿಕೆಯ ಅಭಿವೃದ್ಧಿಗಾಗಿ ಹೆಚ್ಚಿನ. ಬಂಡವಾಳ ಹೂಡಲಾಗಿದೆ. ಈ ಯೋಜನೆಗಳಲ್ಲಿ ಅನೇಕ ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇವುಗಳಲ್ಲಿ ಕೆಲವು ತೈಲಶುದ್ಧೀಕರಣ ಕೇಂದ್ರಗಳು, ಭಾರತದ ಯುರೇನಿಯಂ ಕಾರ್ಪೊರೇಷನ್, ನೈವೇಲಿ ಲಿಗ್ನೈಟ್ ಕಾರ್ಪೊರೇಷನ್, ಬೈಲದಿಲ ಹಿಂದುಸ್ತಾನ್ ಸತು ಕಂಪನಿ, ಖೇತ್ರಿ ತಾಮ್ರ ಯೋಜನೆ, ಕೋರ್ಬ ಹಾಗೂ ಕೊಯ್ನಾ ಅಲ್ಯೂಮಿನಿಯಂ ಯೋಜನೆ ಇವು ಮುಖ್ಯವಾದ ಕೆಲವು. ದೇಶದ ಗಣಿಗಾರಿಕೆಯ ಅಭಿವೃದ್ಧಿಗಾಗಿ ಆರ್ಥಿಕ ಯೋಜನಾಯುಗ ಆರಂಭವಾದ ಅನಂತರ ಹೊಸ ವ್ಯವಸ್ಥೆಯೊಂದು ನಿರ್ಮಿತವಾಗಿದೆ. ಭಾರತದ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ ಮತ್ತು ಭಾರತದ ಗಣಿಗಳ ಬ್ಯೂರೊ ಇವು ನಡೆಸುತ್ತಿರುವ ಸರ್ವೇಕ್ಷಣ ಸಂಶೋಧನ, ವ್ಯವಸ್ಥಾಪನ ಕಾರ್ಯಾಚರಣೆಗಳು ಹೆಚ್ಚಾಗಿ ಬೆಳೆದಿವೆ. ರಾಷ್ಟ್ರೀಯ ಖನಿಜ ಅಭಿವೃದ್ಧಿ ಕಾರ್ಪೊರೇಷನ್ ಒಂದನ್ನು 1958ರಲ್ಲಿ ಸ್ಥಾಪಿಸಲಾಯಿತು. ಅನೇಕ ಗಣಿಗಳ ಅಭಿವೃದ್ಧಿಕಾರ್ಯನಿರ್ವಹಣೆ ಈ ಸಂಸ್ಥೆಯ ವ್ಯಾಪ್ತಿಗೆ ಸೇರಿದ್ದು. ತೈಲ ಹಾಗೂ ನೈಸರ್ಗಿಕ ಅನಿಲ ಆಯೋಗ ದೇಶದ ನಾನಾ ಭಾಗಗಳಲ್ಲಿ ಶೋಧನೆಯ ಕಾರ್ಯನಿರ್ವಹಿಸುತ್ತಿದೆ. ಸರ್ಕಾರ ಪ್ರತ್ಯೇಕ ಗಣಿಶಾಖೆಯ ಮೂಲಕ ಗಣಿಗಾರಿಕೆ ಅಭಿವೃದ್ಧಿಯನ್ನು ವೀಕ್ಷಿಸಿ ಸೂಕ್ತ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಿದೆ. ಹೀಗೆ ಯೋಜನೆ ಪ್ರಾರಂಭವಾದಾಗಿನಿಂದ ದೇಶದಲ್ಲಿ ಗಣಿಗಾರಿಕೆಯ ಬಗ್ಗೆ ಕೈಗೊಂಡಿರುವ ಕ್ರಮಗಳ ಫಲವಾಗಿ ಖನಿಜೋತ್ಪನ್ನಗಳ ಒಟ್ಟು ಮೌಲ್ಯ ಗಣನೀಯವಾಗಿ ಹೆಚ್ಚಿದೆ. (ಎ.ಪಿ.ಎಸ್.)

**ಗಣಿತ ವಿಧಾನದ ಭೂಸ್ವರೂಪ ನಿರೂಪಣೆ:** ಚಿತ್ರ ವಿಧಾನಗಳಿಗೆ ಬದಲಾಗಿ ಇಂದು ಭೂಸ್ವರೂಪಗಳ ಎತ್ತರ, ಇಳಿಜಾರು ಹಾಗೂ ವಿಸ್ತಾರವನ್ನು ನಿಖರವಾಗಿ ನಿರೂಪಿಸುವ ಅನೇಕ ಗಣಿತ ವಿಧಾನಗಳು ಬಳಕೆಯಲ್ಲಿವೆ. ಸರ್ವೇಕ್ಷಣೆಯ ಬೆಳವಣಿಗೆ ಹಾಗೂ ನಕ್ಷಾಶಾಸ್ತ್ರದ ಅಭಿವೃದ್ಧಿಯಿಂದಾಗಿ ಭೂಸ್ವರೂಪ ನಿರೂಪಣಾ ವಿಧಾನಗಳೂ ಸಹ ಪರಿಷ್ಕೃತಗೊಂಡಿವೆ. ಗಣಿತ ವಿಧಾನಗಳು ಎಲ್ಲಾ ಬಗೆಯ ಭೂಸ್ವರೂಪ ನಕ್ಷೆಗಳ ರಚನೆಯಲ್ಲಿ ಬಳಕೆಯಲ್ಲಿವೆ. ಇವುಗಳಲ್ಲಿ ಸ್ಥಳದ ಎತ್ತರ, ಬೆಂಚ್ ಮಾರ್ಕ್, ತ್ರಿಕೋನ ಮಿತಿ ಕೇಂದ್ರಗಳು, ಪದರ ಬಣ್ಣ ಹಾಗೂ ಸಮೋನ್ನತಿ ರೇಖಾ ವಿಧಾನಗಳು ಅತಿ ಮುಖ್ಯವಾದವು. (ಆರ್.ಎಸ್.)

**ಗದಗ:** ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ಒಂದು ಜಿಲ್ಲೆ, ತಾಲ್ಲೂಕು ಹಾಗು ಜಿಲ್ಲೆಯ ಆಡಳಿತ ಕೇಂದ್ರ. $15^0 15'$–$15^0 45'$ ಉ. ಅ. ಮತ್ತು $75^0 20'$ ದಿಂದ $75^0 47'$ ಪೂ. ರೇ. ಗಳಲ್ಲಿ ಹರಡಿದೆ. ಇದರ ಉತ್ತರಕ್ಕೆ ಬಾಗಲಕೋಟೆ, ಪೂರ್ವಕ್ಕೆ ಕೊಪ್ಪಳ, ಆಗ್ನೇಯಕ್ಕೆ ಬಳ್ಳಾರಿ, ನೈರುತ್ಯಕ್ಕೆ ಹಾವೇರಿ, ಪಶ್ಚಿಮಕ್ಕೆ ಧಾರವಾಡ, ಹಾಗೂ ವಾಯವ್ಯಕ್ಕೆ ಬೆಳಗಾಂವಿ ಜಿಲ್ಲೆಗಳಿವೆ. 1997ರಲ್ಲಿ ಧಾರವಾಡ ಜಿಲ್ಲೆಯಿಂದ ಬೇರ್ಪಟ್ಟ ಇದರ ವಿಸ್ತೀರ್ಣ 4656 ಚ.ಕಿಮೀ. ಶಿರಹಟ್ಟಿ, ಮುಂಡರಗಿ, ಗದಗ, ನರಗುಂದ ಮತ್ತು ರೋಣ ಐದು ತಾಲ್ಲೂಕುಗಳನ್ನು, 11 ಹೋಬಳಿಗಳನ್ನು, 106 ಗ್ರಾಮ ಪಂಚಾಯಿತಿಗಳನ್ನು ಮತ್ತು 443 ಹಳ್ಳಿಗಳನ್ನು ಒಳಗೊಂಡಿದೆ. ಜಿಲ್ಲೆಯ ಜನಸಂಖ್ಯೆ 9,71,835.

ಭೂಸ್ವರೂಪ: ಈ ಜಿಲ್ಲೆ ಉತ್ತರ ಮೈದಾನದಲ್ಲಿದೆ. ಇದನ್ನು ಬೆಳವಲದ ನಾಡು ಎಂದು ಕರೆಯುತ್ತಾರೆ. ಇಲ್ಲಿ ಗಜೇಂದ್ರಗಡ ಗುಡ್ಡ, ನವಲುಗುಂದ ಗುಡ್ಡ ಮತ್ತು ಕಪ್ಪದ ಗುಡ್ಡಗಳು ಮುಖ್ಯವಾದವುಗಳು. ಕಪ್ಪದ ಗುಡ್ಡ ಗದಗ ನಗರದ ಆಗ್ನೇಯದಲ್ಲಿ 48 ಕಿಮೀ ಉದ್ದವಾಗಿ ಹಬ್ಬಿದೆ. ಇದು ಎರಡು ತುದಿಗಳಲ್ಲಿ ಸು. 6 ಕಿಮೀ ಮತ್ತು ಮಧ್ಯದಲ್ಲಿ ಸು. 16 ಕಿಮೀ ಅಗಲವಾಗಿದೆ. ಕಪ್ಪದ ಗುಡ್ಡ ಸುತ್ತಲಿನ ಪ್ರದೇಶಕ್ಕಿಂತ ಸರಾಸರಿ 122 ಮೀ. ಎತ್ತರವಾಗಿದೆ ಮತ್ತು ಕೆಂಪು ಮತ್ತು ಕಪ್ಪು ಮಣ್ಣಿನಿಂದ ಕೂಡಿದೆ.

ನದಿಗಳು: ತುಂಗಭದ್ರ ನದಿ ಜಿಲ್ಲೆಯ ದಕ್ಷಿಣದಲ್ಲಿ ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳನ್ನು ಸ್ಪರ್ಶಿಸುವಂತೆ ಹರಿಯುತ್ತದೆ. ಈ ನದಿಗೆ ಮುಂಡರಗಿ ತಾಲ್ಲೂಕಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹೀರೇಹಳ್ಳ ಮತ್ತು ಕಪ್ಪಡ ನದಿಗಳು ಸೇರುತ್ತವೆ. ಬೆಣ್ಣೆಹಳ್ಳ ಮತ್ತು ಆಲೂರಹಳ್ಳ ಜಿಲ್ಲೆಯಲ್ಲಿ ಹರಿಯುವ ಇತರ ನದಿಗಳು.

ವಾಯುಗುಣ: ಇದು ಅರೆ ಶುಷ್ಕ ವಾಯುಗುಣ ಹೊಂದಿದೆ. ಏಪ್ರಿಲ್ ತಿಂಗಳಿನಲ್ಲಿ ಅತಿ ಹೆಚ್ಚು ಉಷ್ಣತೆ ಇರುತ್ತದೆ. ಸರಾಸರಿ ದೈನಂದಿನ ಗರಿಷ್ಠ ಉಷ್ಣಾಂಶ $38^0$ ಸೆ. ಮತ್ತು ಸರಾಸರಿ ಕನಿಷ್ಠ ಉಷ್ಣಾಂಶ $23^0$ ಸೆ. ಚಳಿಗಾಲದಲ್ಲಿ ಉಷ್ಣತೆ ಕಡಿಮೆ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 61 ಸೆಂಮೀ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆ ಹೆಚ್ಚು. ಪಶ್ಚಿಮದಿಂದ ಪೂರ್ವಕ್ಕೆ ಮಳೆ ಕಡಿಮೆಯಾಗುತ್ತದೆ.

ಸಸ್ಯವರ್ಗ ಮತ್ತು ಪ್ರಾಣಿವರ್ಗ: ಜಿಲ್ಲೆಯಲ್ಲಿ 32620 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವಿದೆ. ಇಲ್ಲಿ ಹೆಚ್ಚು ಮುಳ್ಳಿನ ಗಿಡ, ಕುರುಚಲು ಕಾಡುಗಳಿವೆ. ಕಪ್ಪತಗುಡ್ಡ, ಗಜೇಂದ್ರಗಡ ಗುಡ್ಡ ಮೊದಲಾದವುಗಳಲ್ಲಿ ಕುರುಚಲು ಸಸ್ಯವರ್ಗವಿದೆ. ಜವುಗು ಭೂಮಿಯಲ್ಲಿ ಈಚಲ ಮರಗಳಿವೆ. ಜಿಲ್ಲೆಯ ಕಾಡುಗಳಲ್ಲಿ ಕರಡಿ, ತೋಳ, ಕಿರುಬ, ನರಿ, ಸಾಂಬಾರ ಜಿಂಕೆ, ಹಾಗೂ ಕೋತಿಗಳು ಕಂಡುಬರುತ್ತವೆ.

ಆರ್ಥಿಕತೆ: ಜಿಲ್ಲೆಯಲ್ಲಿ ಕಂಡು ಬರುವ ನಿರಾವರಿ ಮೂಲವೆಂದರೆ ಕಾಲುವೆ (6,278ಹೆ.), ಕೆರೆ (619ಹೆ.), ಬಾವಿ (3395ಹೆ.) ಹಾಗೂ ಇತರ ಮೂಲಗಳು (4324ಹೆ.). ವ್ಯವಸಾಯ: ಜಿಲ್ಲೆಯ ಒಟ್ಟು ಬಿತ್ತನೆಯ ಪ್ರದೇಶ 398512 ಹೆ. ಗಳು ಮುಖ್ಯ ಬೆಳೆಗಳು ಬತ್ತ, ಗೋಧಿ, ತೊಗರಿ, ಇತರ ದ್ವಿದಳ ಧಾನ್ಯಗಳು ಹಾಗೂ ಜೋಳ ಮುಂತಾದ ಆಹಾರ ಬೆಳೆಗಳು. ಇತರ ಬೆಳೆಗಳೆಂದರೆ ಹತ್ತಿ, ಕಬ್ಬು ತರಕಾರಿ, ನೆಲಗಡಲೆ ಮತ್ತು ಎಣ್ಣೆ ಬೀಜಗಳು.




ಪಶು ಸಂಗೋಪನೆ: ಜಿಲ್ಲೆಯಲ್ಲಿ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆ ಸೌಲಭ್ಯಗಳು ಆರ್ಥಿಕಾಭಿವೃದ್ಧಿಯ ಒಂದು ಅಂಗವಾಗಿವೆ.

ಕೈಗಾರಿಕೆಗಳು: 1997ರಲ್ಲಿ ರಚನೆಯಾದ ಈ ಜಿಲ್ಲೆಯಲ್ಲಿ. ಕೈಗಾರಿಕೆಯು ಹೆಚ್ಚು ಸಾಧನೆ ಕಂಡಿಲ್ಲ. ಇಲ್ಲಿ ರೇಷ್ಮೆ, ಚರ್ಮದ ವಸ್ತುಗಳು, ಎಣ್ಣೆ ತೆಗೆಯುವ ಉದ್ದಿಮೆ, ರಾಸಾಯನಿಕ, ಹಿತ್ತಾಳೆ, ತಾಮ್ರ ಹಾಗೂ ಎಂಜಿನಿಯರಿಂಗ್ ಕೈಗಾರಿಕೆಗಳಿವೆ.

ಸಾರಿಗೆ ಸಂಪರ್ಕ: ಜಿಲ್ಲೆಯಲ್ಲಿ ರೈಲು ಮತ್ತು ರಸ್ತೆ ಸಂಪರ್ಕವಿದೆ. ಜಿಲ್ಲೆಯಲ್ಲಿ 62 ಕಿಮೀ ಉದ್ದದ ಬ್ರಾಡ್‌ಗೇಜ್, 50 ಕಿಮೀ ಉದ್ದದ ಮೀಟರ್ ಗೇಜ್ ರೈಲು ಮಾರ್ಗ ಮತ್ತು 12 ರೈಲು ನಿಲ್ದಾಣಗಳಿವೆ. ಗದಗದಲ್ಲಿ ರೈಲ್ವೆ ಜಂಕ್ಷನ್ ಇದೆ. 2,038 ಕಿಮೀ ರಾಜ್ಯ ಹೆದ್ದಾರಿ, 46 ಕಿಮೀ ರಾಷ್ಟ್ರೀಯ ಹೆದ್ದಾರಿ, 663 ಕಿಮೀ ಇತರೆ ಜಿಲ್ಲಾ ರಸ್ತೆಗಳಿವೆ.

ತಾಲ್ಲೂಕು: ಗದಗ ಜಿಲ್ಲೆಯ ಮಧ್ಯಭಾಗದಲ್ಲಿದೆ. ವಿಸ್ತೀರ್ಣ 1097 ಚ.ಕಿಮೀ. ಇದರ ಉತ್ತರಕ್ಕೆ ರೋಣ, ದಕ್ಷಿಣಕ್ಕೆ ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಿವೆ. ಪಶ್ಚಿಮಕ್ಕೆ ಧಾರವಾಡ ಮತ್ತು ಪೂರ್ವಕ್ಕೆ ಕೊಪ್ಪಳ ಜಿಲ್ಲೆಗಳಿವೆ. ಈ ತಾಲ್ಲೂಕಿನಲ್ಲಿ ಅನೇಕ ಹತ್ತಿ ಗಿರಣಿಗಳಿವೆ, ನೇಯ್ಗೆ ಇಲ್ಲಿಯ ಒಂದು ಪ್ರಮುಖ ಉದ್ಯಮ. ಇತ್ತೀಚೆಗೆ ಯಂತ್ರ ಮಗ್ಗಗಳು ಕಾರ್ಯನಿರತವಾಗಿವೆ. ಎಣ್ಣೆ ತೆಗೆಯುವುದು, ನೂಲು ತೆಗೆಯುವುದು, ಬೀಡಿ ಕಟ್ಟುವುದು ಇಲ್ಲಿಯ ಪ್ರಮುಖ ಉದ್ಯೋಗ. ಹತ್ತಿ ಮತ್ತು ಶೇಂಗ ಬೆಳೆಗೆ ಪ್ರಸಿದ್ಧ. ಜನಸಂಖ್ಯೆ 3,32,011.

ಗದಗ: ತಾಲ್ಲೂಕು ಹಾಗೂ ಜಿಲ್ಲೆಯ ಆಡಳಿತ ಕೇಂದ್ರ. $15^{0}25'$ ಉ. ಅ. ಮತ್ತು $75^{0}35'$ ಪೂ. ರೇ. ದಲ್ಲಿದೆ. ಇದನ್ನು ಕ್ರುತಪುರವೆಂದು ಕರೆಯುತ್ತಿದ್ದರೆಂದು ಇಲ್ಲಿನ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರ ಅರಸರ ಕಾಲದಿಂದ ಗದಗ ಎಂಬ ಹೆಸರು ಹೆಚ್ಚಾಗಿ ಬೆಳಕಿಗೆ ಬಂತು. ಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಗದ್ದುಗೆ ಇರುವುದರಿಂದ ಗದುಗ ಎಂಬ ಹೆಸರು ಬಳಕೆಗೆ ಬಂದಿತು ಎಂದು ಹೇಳಲಾಗಿದೆ.

ಗದಗ ಪಟ್ಟಣ ಅಗಾಧವಾಗಿ ಬೆಳೆದಿದ್ದು, ಇದರ ಸಮೀಪದಲ್ಲಿದ್ದ ಬೆಟಗೇರಿ ಇಂದು ಗದಗದ ಭಾಗವಾಗಿದೆ. ಗದಗ–ಬೆಟಗೇರಿ ಜನಸಂಖ್ಯೆ 1,54,849. ಗದಗದಲ್ಲಿ ಅನೇಕ ದೇವಸ್ಥಾನಗಳಿವೆ. ಇವುಗಳಲ್ಲಿ ತ್ರಿಕೂಟೇಶ್ವರ ಮತ್ತು ವೀರನಾರಾಯಣ ದೇವಸ್ಥಾನಗಳು ಪ್ರಸಿದ್ಧ. (ಬಿ.ಸಿ.ಕೆ.)

**ಗಬಾನ್:** ಆಫ್ರಿಕದ ಒಂದು ಗಣರಾಜ್ಯ. $4^{0}$ದ–$3^{0}$ ಉಅ. ಮತ್ತು $8^{0}$–$16^{0}$ ಪೂರೇ.ದ ನಡುವೆ ಇದೆ. ಗಬಾನ್‌ಗೆ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ಉತ್ತರದಲ್ಲಿ ರಿಯೊಮುನಿ ಮತ್ತು ಕ್ಯಾಮರೂನ್, ಆಗ್ನೇಯದಲ್ಲಿ ಕಾಂಗೊ ಇವೆ. ಗಬಾನಿನ ವಿಸ್ತೀರ್ಣ 2,67,591 ಚಕಿಮೀ. ಜನಸಂಖ್ಯೆ; 1,389,201. ರಾಜಧಾನಿ ಲೀಬ್ರವೀಲ್ಲೆ, ಜನಸಂಖ್ಯೆ 419,596.

ಭೌತಲಕ್ಷಣ: ಗಬಾನ್ ರಾಜ್ಯದ ಕರಾವಳಿ ಕಿರಿದಾಗಿದೆ; ಮರಳುಗಲ್ಲು ಮತ್ತು ಮೆಕ್ಕಲು ಮಣ್ಣಿನಿಂದ ಕೂಡಿದೆ; ಉತ್ತರಕ್ಕೆ ಹೋದಂತೆ ಅಗಲವಾಗುತ್ತದೆ. ಲೋಪೇಜ್ ಭೂಶಿರಕ್ಕೆ ದಕ್ಷಿಣದಲ್ಲಿ ಅಟ್ಲಾಂಟಿಕ್ ಸಾಗರದ ಬೆಂಗ್ಯುಲ ಪ್ರವಾಹದಿಂದಾಗಿ ಮರಳುದಂಡೆಗಳೇರ್ಪಟ್ಟಿವೆ. ಈ ಕಡಲ ಪ್ರವಾಹ ಆಫ್ರಿಕದ ಅಂಚಿನಲ್ಲಿ ಉತ್ತರಾಭಿಮುಖವಾಗಿ ಸಾಗಿ ನದಿಗಳು ಸಾಗರಕ್ಕೆ ಬೀಳುವ ಕಡೆ ಮರಳು ದಂಡೆಗಳು ಸುತ್ತುವರಿದ ಲಗೂನ್‌ಗಳನ್ನು ನಿರ್ಮಿಸಿದೆ. ಲೋಪೇಜ್ ಭೂಶಿರದ ಬಳಿ ತೀರ ಡೊಂಕಾಗಿದೆ. ಗಬಾನ್ ನದಿ ಸಾಗರಕ್ಕೆ ಬೀಳುವ ಕಡೆ ವಿಶಾಲವಾದ ಅಳಿವೆಯುಂಟು. ರಾಜ್ಯದ ಒಳನಾಡಿದ ಮೇಲ್ಮೈ ಸಂಕೀರ್ಣವಾದ್ದು, ಉತ್ತರದಲ್ಲಿ ಸ್ಫಟಿಕಾಕಾರದ ಬಂಡೆಗಳಿಂದ ಕೂಡಿದ ಪರ್ವತಗಳ ನಡುವೆ ಉಲೆಯು, ನಟೆಮ್ ಮತ್ತು ಇವಿಂಡೊ ನದೀ ಬಯಲುಗಳಿವೆ. ದಕ್ಷಿಣದಲ್ಲಿ ಓಗೋವೇ ನದಿ ತಡಿಯಾಕಾರದ ಪರ್ವತಗಳ ನಡುವೆ ಹರಿಯುತ್ತದೆ. ಅಲ್ಲಿ ಮರಳುಗಲ್ಲು ಮತ್ತು ಖನಿಜ ಪದರ ಶಿಲೆಗಳು ಹೆಚ್ಚು; ಲಂಬಾರೇನೇ ಬಳಿ ಬೆಣಚುಕಲ್ಲುಗಳು ಹೇರಳ. ಸಾಗರತೀರದ ದಕ್ಷಿಣ ಭಾಗ ಬೆಟ್ಟ ಸೀಮೆ. ಇದರ ನೆರೆಯ ಬಯಲುಗಳಲ್ಲಿ ನ್ಯಾಂಗ ಮತ್ತು ನ್ಗೌನೀ ನದಿಗಳು ಹರಿಯುತ್ತವೆ. ನ್ಗೌನೀ ನದಿ ಓಗೋವೇಯ ಉಪನದಿ. ನ್ಗೌನೀ ಮತ್ತು ಓಗೋವೇ ನದಿಗಳ ನಡುವಣ ದಟ್ಟ ಪರ್ವತ ಶ್ರೇಣಿಯಲ್ಲಿ 1,725 ಮೀ ಎತ್ತರದ ಇಬೌಂಡ್ಜಿ ಪರ್ವತವಿದೆ. ಇದು ಗಬಾನಿನ ಅತ್ಯಂತ ಎತ್ತರವಾದ ಪರ್ವತ.




ವಾಯುಗುಣ ಮತ್ತು ಸಸ್ಯ ಪ್ರಾಣಿ ವರ್ಗ ಗಬಾನಿನದು ಸಮಭಾಜಕ ವೃತ್ತದ ವಾಯುಗುಣ. ಋತುಗಳ ವ್ಯತ್ಯಾಸ ಅಷ್ಟಾಗಿ ಕಂಡುಬರುವುದಿಲ್ಲ; ಉಷ್ಣತೆಯಲ್ಲೂ ಹೆಚ್ಚು ಬದಲಾವಣೆಗಳಿಲ್ಲ. ಇಡೀ ವರ್ಷ ಮಳೆ ಬೀಳುತ್ತದೆ. ಸಮುದ್ರದ ಬೆಂಗ್ಯುಲ ಶೀತ ಸಾಗರ ಪ್ರವಾಹದಿಂದಾಗಿ ಕರಾವಳಿಯಲ್ಲಿ ಉಷ್ಣತೆ, ಮಳೆ ಕಡಿಮೆ. ಒಳನಾಡಿನಲ್ಲಿ ಇವೆರಡೂ ಹೆಚ್ಚು. ಇಡೀ ರಾಜ್ಯ ನಿತ್ಯಹಸುರಿನ ಕಾಡುಗಳಿಂದ ಕೂಡಿದೆ. ಸು. 3,000 ಪ್ರಭೇದದ ಮರಗಳು ಇಲ್ಲಿವೆ. ಓಕೌಮೆ ಅಥವಾ ಗಬಾನ್ ಮಹಾಗನಿ ವಾಣಿಜ್ಯಮೌಲ್ಯವುಳ್ಳದ್ದು. ಕರಾವಳಿಯಲ್ಲಿ ಗುಲ್ಮ ವೃಕ್ಷಗಳು ಅಧಿಕ. ಕೆಳ ಓಗೋವೇ ಪ್ರದೇಶದ ಸರೋವರದಲ್ಲಿ ಪಪ್ಯೈರಸ್ ಸಾಮಾನ್ಯ. ಬಗೆ ಬಗೆಯ ಕೋತಿಗಳು, ಗೊರಿಲ್ಲ, ಜಿಂಕೆ, ಕಾಡುಕೋಣ, ನೀರುಕುದುರೆ ಇವು ಇಲ್ಲಿನ ವನ್ಯ ಮೃಗಗಳು.

ಜನಜೀವನ: ಗಬಾನಿನಲ್ಲಿ ಅಧಿಕ ಸಂಖ್ಯೆಯ ಐರೋಪ್ಯರಿದ್ದಾರೆ. ಸ್ಥಳೀಯ ಜನರ ಪೈಕಿ ಪಿಗ್ಮಿಗಳು ಸಣ್ಣ ಸಣ್ಣ ಗುಂಪುಗಳಲ್ಲಿ ಕಾಡಿನಲ್ಲಿ ಚದುರಿದ್ದಾರೆ. ಬೇಟೆ, ಆಹಾರ ಸಂಗ್ರಹ – ಇವು ಇವರ ಜೀವನೋಪಾಯ. ಇಲ್ಲಿಯ ಜನರಲ್ಲಿ ತುಂಬ ಮುಂದುವರಿದವರಾದ ಮ್ಪಾಂಗ್ವೇಗಳು ವಿಶೇಷವಾಗಿ ಕರಾವಳಿಯಲ್ಲಿ ವಾಸಿಸುತ್ತಾರೆ. ಇವರು ಫ್ಯಾಂಗ್ ಜನರೊಂದಿಗೆ ಭಾಗಶಃ ಬೆರೆತಿದ್ದಾರೆ. ಈಶಾನ್ಯದಲ್ಲಿ ಬಕೋಟ ಮುಂತಾದ ತಂಡಗಳುಂಟು. ಈ ಜನ ಕ್ಯಾಮರೂನಿನ ಗುಂಪುಗಳೊಡನೆ ಸಂಬಂಧ ಹೊಂದಿದ್ದಾರೆ. ಮಧ್ಯಭಾಗದಲ್ಲಿ ಕಾಂಡ ಜನರಿದ್ದಾರೆ. ಇಲ್ಲಿಯ ಜನ ಮೂಲತಃ ಸರ್ವಚೇತನವಾದಿಗಳು. ಈಚೆಗೆ ಇಲ್ಲಿ ಕ್ರೈಸ್ತಧರ್ಮ ಪ್ರಚಾರಕ್ಕೆ ಬಂದಿದೆ. ನೆಲದ ಒಡೆತನ ಸಾಮೂಹಿಕವಾಗಿದ್ದು, ಗುಂಪುಗಳ ಯಜಮಾನರು ಅದನ್ನು ನಿರ್ವಹಿಸುತ್ತಾರೆ. ಕಾಡುಗಳನ್ನು ಸುಟ್ಟು ಕೃಷಿ ಮಾಡುವ ಪದ್ಧತಿ ಉತ್ತರದಲ್ಲಿ ಬಳಕೆಯಲ್ಲಿವೆ. ಫ್ರೆಂಚ್ ಅಧಿಕೃತ ಭಾಷೆ ಮತ್ತು ಅದೇ ಸದ್ಯಕ್ಕೆ ಶಿಕ್ಷಣ ಮಾಧ್ಯಮ.

ಆರ್ಥಿಕ ಪರಿಸ್ಥಿತಿ: ಕೃಷಿ ಇಲ್ಲಿಯ ಜನರ ಮುಖ್ಯ ಜೀವನೋಪಾಯ. ಬಾಳೆ, ಮರಗೆಣಸು, ಕೆಸವು ಮುಖ್ಯ ಉತ್ಪನ್ನಗಳು. ಸಮುದ್ರತೀರದಲ್ಲಿ ಮೀನುಗಾರಿಕೆಯೂ ಒಂದು ಮುಖ್ಯ ಕಸುಬು. ರಬ್ಬರ್, ಕೋಕೋ – ಇವು ಇಲ್ಲಿಯ ಈಚಿನ ಬೆಳೆಗಳು. ತಾಳೆಎಣ್ಣೆ, ದಂತ, ಮರ ಇವು ಅರಣ್ಯೋತ್ಪನ್ನಗಳು. ಪೋರ್ಟ್ – ಜೆಂಟಿಲಿನಲ್ಲಿ ಪದರ ಹಲಗೆ (ಪ್ಲೈವುಡ್) ಕಾರ್ಖಾನೆಯುಂಟು. ಚಿನ್ನ, ವಜ್ರ, ಕಲ್ಲುಪ್ಪು, ಪೊಟಾಷ್, ಇಲ್ಲಿಯ ಮುಖ್ಯ ಖನಿಜಗಳು. ಲೋಪೆಜ್ ಭೂಶಿರ ಭಾಗದಲ್ಲಿ ಪೆಟ್ರೋಲಿಯಂ ಸಿಗುತ್ತದೆ. ಫ್ರಾನ್ಸ್‌ವೀಲ್ ಬಳಿ ಮ್ಯಾಂಗನೀಸ್ ನಿಕ್ಷೇಪಗಳಿವೆ. ಈಶಾನ್ಯದಲ್ಲಿರುವ ಮೆಕಾಂಬೊದಲ್ಲೂ ನೈಋತ್ಯದ ಟ್ಚಿಬಾಂಗ್ದದಲ್ಲೂ ಕಬ್ಬಿಣದ ಅದಿರು ಉಂಟು. ಫ್ರಾನ್ಸ್‌ವೀಲ್ ಬಳಿ ಮೌನಾನದಲ್ಲಿ ಯುರೇನಿಯಂ ಸಿಗುತ್ತದೆ. ಗಬಾನ್‌ನ ಮುಖ್ಯ ಆಮದುಗಳು– ಆಹಾರ ಮತ್ತು ಯಂತ್ರೋಪಕರಣ, ರಫ್ತುಗಳು ಚೌ ಬೀನೆ, ಪೆಟ್ರೋಲಿಯಂ, ತಾಳೆ ಎಣ್ಣೆ ಮತ್ತು ತಿರುಳು, ಕೋಕೋ. ಗ್ಯಾಬಾನಿನ ರಾಜಧಾನಿ ಲೀಬ್ರವಿಲ್ಲೆ. ಪೋರ್ಟ್ – ಜೆಂಟಿಲ್ ಮುಖ್ಯ ರೇವು ಪಟ್ಟಣ ಮತ್ತು ಕೈಗಾರಿಕಾ ಕೇಂದ್ರ. ನಡ್ಜೋಲೆ, ಮೌಯಿಲ, ಫ್ರಾನ್ಸವೀಲ್ ಮತ್ತು ಲಂಬಾರೇನೇ – ಇವು ಇತರ ಪಟ್ಟಣಗಳು. ಲಂಬಾರೇನೇಯಲ್ಲಿ ಆಲ್ಬರ್ಟ್ ಷ್ವಿಟ್ಜ್‌ಜ್ಞರ್ 1913 ರಲ್ಲಿ ಆಸ್ಪತ್ರೆ ಸ್ಥಾಪಿಸಿದ್ದರು. (ವಿ.ಜಿ.ಕೆ.)

**ಗಯಾ:** ಬಿಹಾರ ರಾಜ್ಯದ ಪಟಣ ವಿಭಾಗದ ಒಂದು ನಗರ. ಅದೇ ಹೆಸರಿನ ಜಿಲ್ಲೆಯ ಕೇಂದ್ರ. ಉ.ಅ. $24^{0}49'$ ಮತ್ತು ಪೂ.ರೇ. $85^{0}1'$ ಮೇಲೆ, ಪೂರ್ವ ರೈಲ್ವೆಯ ಮುಖ್ಯ ಮಾರ್ಗದಲ್ಲಿ ಪಟನ ನಗರಕ್ಕೆ 88 ಕಿಮೀ ದೂರದಲ್ಲಿ ಫಲ್ಗು ನದಿಯ ಪಶ್ಚಿಮ ದಂಡೆಯ ಮೇಲಿದೆ. ಈ ನಗರದ ವಿಸ್ತೀರ್ಣ 29 ಚ.ಕಿಮೀ. ಗಯೆಯ ಸುತ್ತಲೂ ಛೋಟಾನಾಗಪುರ ಪ್ರಸ್ಥಭೂಮಿಯ ಅಂಚಿನ ಬೆಟ್ಟಗಳಿವೆ. ವರ್ಷದಲ್ಲಿ ಬಹುಕಾಲ ಬರಡಾಗಿರುವ ಫಲ್ಗು ನದಿಯ ಮರಳು ಬಿಸಿಲಿನಿಂದ ಕಾಯುವುದರಿಂದ ಗಯಾ ನಗರದಲ್ಲಿ ಉಷ್ಣಾಂಶ ಹೆಚ್ಚು. ಈ ನಗರ ಛೋಟಾನಾಗಪುರ ಪ್ರಸ್ಥಭೂಮಿ ಮತ್ತು ಗಂಗಾ ನದಿಯ ಬಯಲೂ ಕೂಡುವ ಪ್ರದೇಶದಲ್ಲಿದೆ. ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಜನಸಂಖ್ಯೆ: 3,94,185.

ಬೋಧಗಯಾ : ಬೋಧಗಯಾ ಬ್ರಹ್ಮಗಯಕ್ಕೆ 11 ಕಿಮೀ ದೂರದಲ್ಲಿದೆ. ಸಮೀಪದಲ್ಲಿಯೇ ಸು. 2,400 ವರ್ಷಗಳಿಗೂ ಹಳೆಯದೆಂದು ಹೇಳಲಾದ ಬೋಧಿವೃಕ್ಷವಿದೆ. ಇಲ್ಲಿಯೇ ಶಾಕ್ಯವಂಶದ ಸಿದ್ಧಾರ್ಥ ಆರು ವರ್ಷಗಳ ಕಾಲ ಕಠಿಣ ತಪಸ್ಸನ್ನಾಚರಿಸಿ ತನ್ನ ಮೂವತ್ತೈದನೆಯ ವಯಸ್ಸಿನಲ್ಲಿ ಜ್ಞಾನೋದಯ ಪಡೆದು ಬುದ್ಧನಾದ. ಬುದ್ಧನ ಸಂದೇಶವನ್ನು ಪಡೆದ ಮೊದಲಿಗರಲ್ಲಿ ಗಯಾ ನಿವಾಸಿಗರೂ ಸೇರಿದ್ದಾರೆ. ಇಲ್ಲಿಯ ಗುಹೆಯೊಂದರಲ್ಲಿ ಅಶೋಕನ ಶಾಸನವಿದೆ. ಪ್ರ.ಶ. ಮೂರನೆಯ ಶತಮಾನದಲ್ಲಿ ಇಲ್ಲಿಯ ಬೋಧಿವೃಕ್ಷದ ಸಮೀಪದಲ್ಲಿ ಅಶೋಕ ದೊಡ್ಡ ವಿಹಾರವೊಂದನ್ನು ಕಟ್ಟಿಸಿದ. ಅದರ ಅವಶೇಷಗಳನ್ನು ಇಂದೂ ಕಾಣಬಹುದು. ಈಗ ಇಲ್ಲಿರುವ ದೇವಮಂದಿರ 17 ಮೀ ಚೌಕವಾಗಿದ್ದು 53 ಮೀ ಎತ್ತರವಾಗಿದೆ. ಒಳಗಡೆ ಬುದ್ಧನ ದೊಡ್ಡ ವಿಗ್ರಹವಿದೆ. ಮೇಲಿನ ಅಂತಸ್ತಿನಲ್ಲಿ ಮಾಯಾದೇವಿಯ ವಿಗ್ರಹವಿದೆ. 7ನೆಯ ಶತಮಾನದಲ್ಲಿ ಚೀನೀಯಾತ್ರಿಕ ಯುವಾನ್ ಚಾಂಗ್ ಇಲ್ಲಿಗೆ ಬಂದಿದ್ದನೆಂದು ಹೇಳಲಾಗಿದೆ. (ಸಿ.ಕೆ.ವೈ.ಡಿ.;ಜಿ.ಎಚ್.)

**ಗರಿಷ್ಠ ಒತ್ತಡ ಕಾಲ (ಪೀಕ್ ಅವರ್ ಪ್ರೆಷರ್):** ಸಂಚಾರ ವ್ಯವಸ್ಥೆಯಲ್ಲಿ ನಗರದ ಆಂತರಿಕ ರಚನೆಗೆ ಅನುಗುಣವಾಗಿ ರಸ್ತೆಗಳ ಗಾತ್ರ, ಸಂಚರಿಸುವ ಮಾರ್ಗ, ಜನಸಾಂದ್ರತೆ, ವಾಣಿಜ್ಯ ಕೇಂದ್ರಗಳ ರಚನೆ, ಸೇವಾ ಸವಲತ್ತುಗಳ ಬಳಕೆ, ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳು ನಗರದ ಪ್ರಮುಖ ಅಂಶಗಳಾಗಿರುತ್ತವೆ. ಇವು ವಾರದಲ್ಲಿ ಒಂದು ದಿನವನ್ನು ಹೊರತುಪಡಿಸಿ ದಿನದಲ್ಲಿ 10 ರಿಂದ 12 ಗಂಟೆಗಳ ಕಾಲ ಸೇವೆಯನ್ನು ಸಾರ್ವಜನಿಕರಿಗೆ ಸಲ್ಲಿಸುತ್ತವೆ. ಕಛೇರಿಗಳು, ಶಾಲಾಕಾಲೇಜುಗಳು, ಆಡಳಿತ ಸಂಸ್ಥೆಗಳು, ವ್ಯಾಪಾರ ವಹಿವಾಟು, ಅಂಚೆ, ಮಾರುಕಟ್ಟೆ, ಬ್ಯಾಂಕ್ ಇತ್ಯಾದಿಗಳು ತಮ್ಮ ಸೇವೆಗಳನ್ನು ಒಂದು ನಿರ್ದಿಷ್ಟ ಸಮಯದಲ್ಲಿ ಪ್ರಾರಂಭಿಸುತ್ತವೆ. ಕಾರ್ಮಿಕರು, ವಿದ್ಯಾರ್ಥಿಗಳು, ಸರ್ಕಾರಿ, ವಾಣಿಜ್ಯವರ್ತಿಗಳು, ಮೊದಲಾದ ವರ್ಗದವರು ತಮ್ಮ ಸೇವೆಗಳಿಗೆ ನಿರತರಾಗಲು ತಮ್ಮ ಕಾರ್ಯನಿರ್ವಹಿಸುವ ಸ್ಥಳಗಳಿಗೆ ಧಾವಿಸುವುದು ಸಹಜ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ನಿರ್ದಿಷ್ಟ ಮಾರ್ಗಗಳಲ್ಲಿ, ವೃತ್ತಗಳಲ್ಲಿ, ರಸ್ತೆಗಳು ಸಂಧಿಸುವ ಮಾರ್ಗಗಳಲ್ಲಿ ವಾಹನಗಳ ಸಾಂದ್ರತೆಯು ದಿನದ ಯಾವುದೇ ವೇಳೆಗಿಂತ ನಿರ್ದಿಷ್ಟವಾದ ಸಮಯದಲ್ಲಿ ಹೆಚ್ಚಾಗುತ್ತದೆ, ಈ ಪ್ರಕ್ರಿಯೆಯನ್ನು ಗರಿಷ್ಠ ಒತ್ತಡ ಕಾಲ ಎನ್ನುವರು. ವಾಹನ – ಜನ ಗರಿಷ್ಠ ಒತ್ತಡವು ದಿನದ ಎರಡು ಕಾಲಗಳಲ್ಲಿ ಉಂಟಾಗುತ್ತದೆ; ಕಛೇರಿ, ಮಾರುಕಟ್ಟೆ ವಾಣಿಜ್ಯ, ಶಾಲಾಕಾಲೇಜು, ಕಾರ್ಯ ಪ್ರಾರಂಭವಾಗುವ (8–10ಗಂಟೆ) ಹಾಗು ಮುಕ್ತಾಯವಾಗುವ (5.30–6.30 ಗಂಟೆ) ಕಾಲಗಳಲ್ಲಿ ಗರಿಷ್ಠ ಒತ್ತಡಗಳು ನಗರದ ಪ್ರಮುಖ ಮಾರ್ಗಗಳಲ್ಲಿ ಉಂಟಾಗುತ್ತವೆ. ಗರಿಷ್ಠ ಒತ್ತಡದ ಕಾಲದಲ್ಲಿ ರಸ್ತೆಮಾರ್ಗಗಳಲ್ಲಿ ನೂಕುನುಗ್ಗುಲು, ಸಂಚಾರಿ ನಿಯಮಗಳ ಉಲ್ಲಂಘನೆ, ಸಕಾಲಕ್ಕೆ ಕ್ರಮಿಸುವಲ್ಲಿ ಅನಾನುಕೂಲ, ಪರಿಸರ ಮಾಲಿನ್ಯ ಸಂಚಾರಿ ವ್ಯವಸ್ಥೆಯ ಮೇಲೆ ಒತ್ತಡ ಇತ್ಯಾದಿ. ಗರಿಷ್ಠ ಸಂಚಾರಿ ಒತ್ತಡ ಕಾಲಗಳು ಮಹಾನಗರ, ಪ್ರಧಾನ ನಗರ, ಮೆಟ್ರಾಪೊಲಿಸ್‌ಗಳಲ್ಲಿ ತೀಕ್ಷ್ಣವಾಗಿ ಕಂಡುಬರುತ್ತವೆ. (ವಿ.ಎಸ್.ಎ.)

**ಗಲಾಪಗಸ್ ದ್ವೀಪಗಳು:** ಸಮಭಾಜಕೀಯ ಪೆಸಿಫಿಕ್ ಸಾಗರದಲ್ಲಿ, ಈಕ್ವೆಡಾರಿನ ಪಶ್ಚಿಮಕ್ಕೆ 800–1120 ಕಿಮೀ ವರೆಗೆ ಹರಡಿರುವ 14 ದೊಡ್ಡ ಮತ್ತು ಹಲವಾರು ಸಣ್ಣ ದ್ವೀಪಗಳ ಗುಂಪು. ಇವುಗಳ ಒಟ್ಟು ವಿಸ್ತೀರ್ಣ 7643 ಚ.ಕಿಮೀ. ಇವುಗಳಲ್ಲಿ ಅತ್ಯಂತ ದೊಡ್ಡದೂ ಎತ್ತರವಾದದ್ದೂ ಆದ ದ್ವೀಪ ಆಲ್ಬೆಮಾರ್ಲ್. ಗಲಾಪಗಸ್ ದ್ವೀಪಸ್ತೋಮವನ್ನು 1535ರಲ್ಲಿ ಪನಾಮಾದ ಬಿಷಪ್ ತಾಮಸ್ ಡಿ ಬೆರ್ಲಾಂಗ್ ಕಂಡುಹಿಡಿದ. ಈ ದ್ವೀಪಗಳ ಉಗಮ ಹೇಗಾಯಿತೆಂಬುದು ನಿರ್ವಿವಾದವಾಗಿ ಇನ್ನೂ ಸ್ಥಾಪಿತವಾಗಿಲ್ಲ. ಇವು ಅಮೆರಿಕ ಖಂಡದೊಂದಿಗೆ ಎಂದಿಗೂ ಸೇರಿರಲಿಲ್ಲವೆಂದು ಕಾಣುತ್ತದೆ. ಈಗಲೂ ಜೀವಂತವಾಗಿರುವ ಜ್ವಾಲಾಮುಖಿ ಪರ್ವತಗಳು ಕಂಡುಬರುತ್ತವೆ. ಆಲ್ಬೆಮಾರ್ಲ್‌ನ ಒಂದು ಜ್ವಾಲಾಮುಖಿ 1948ರಿಂದ ಈಚೆಗೆ ಮೂರು ಬಾರಿ ಸ್ಫೋಟಗೊಂಡಿತು. ಈ ದ್ವೀಪಸ್ತೋಮ ಉಷ್ಣವಲಯದಲ್ಲಿದ್ದರೂ ಇಲ್ಲಿಯ ವಾಯುಗುಣ ಅನೇಕ ವ್ಯತಿರಿಕ್ತ ಕ್ರಮಗಳಿಂದ ಕೂಡಿದ್ದು, ತೀರಪ್ರದೇಶದಲ್ಲಿ ಮಳೆ ಕಡಿಮೆ. ತಾಪಮಾನ $21^{0}$–$29.5^{0}$ ಸೆ. ಸಮುದ್ರದ ನೀರಿನ ಮೇಲ್ಮೈ ಉಷ್ಣತೆಯೂ $17^{0}2'$–$30^{0}$ಸೆ. ಇದಕ್ಕೆ ಕಾರಣವೆಂದರೆ ಈ ದ್ವೀಪಸ್ತೋಮದ ಸುತ್ತ ಹರಿಯುವ ಶೀತಸಾಗರ ಪ್ರವಾಹ.

ಕಳ್ಳಿ, ಕುರುಚಲು ಮತ್ತು ಕುಬ್ಜ ಪರ್ಣಪಾತಿ ವೃಕ್ಷಗಳು ಕರಾವಳಿಯಲ್ಲಿ ವಿಶೇಷವಾಗಿವೆ. ಒಳನಾಡಿನಲ್ಲಿ ಪೇರಲ ಮತ್ತು ಸೂರ್ಯಕಾಂತಿ ಬೆಳೆಯುತ್ತವೆ. ಇಲ್ಲಿ ನಾನಾ ಜಾತಿಯ ಪಕ್ಷಿಗಳು ಮತ್ತು ಉರಗಗಳು ಉಂಟು. ರಾಕ್ಷಸಾಕಾರದ ಆಮೆ ಮತ್ತು ಇಗ್ವಾನ ಇಲ್ಲಿಯ ಮುಖ್ಯ ಪ್ರಾಣಿಗಳು. ಈ ದ್ವೀಪಗಳ ಪ್ರಾಣಿಗಳ ಸಂರಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ. ಪುರಾತನ ಕಾಲಕ್ಕೆ ಸೇರಿದ ಅನೇಕ ಪ್ರಾಣಿ ಸಂಕುಲಗಳಿವೆ.

ಮೀನುಗಾರಿಕೆ ಮತ್ತು ಚರ್ಮ ಹದಮಾಡುವುದು ಇಲ್ಲಿಯ ಮುಖ್ಯ ಕಸಬುಗಳು. ಚರ್ಮ, ವಸ್ತ್ರ, ಗಂಧಕ ಮತ್ತು ಮೀನು ಇಲ್ಲಿಯ ಮುಖ್ಯ ನಿರ್ಯಾತಗಳು. (ಎಂ.ಎ.ಎಚ್.)

**ಗಲ್ಫ್ ಸ್ಟ್ರೀಮ್:** ಉತ್ತರ ಅಟ್ಲಾಂಟಿಕ್ ಸಾಗರದ ಉಷ್ಣಪ್ರವಾಹ. ಉತ್ತರ ಅಟ್ಲಾಂಟಿಕ್ ಸಮಭಾಜಕ ವೃತ್ತ ಪ್ರವಾಹವು ಆಫ್ರಿಕ ಖಂಡದ ಪಶ್ಚಿಮ ತೀರದಲ್ಲಿರುವ ಕೇಪ್ ವರ್ಡೆಯಿಂದ ಪ್ರಾರಂಭಗೊಂಡು ವಾಣಿಜ್ಯ ಮಾರುತಗಳ ಪ್ರಭಾವದಿಂದ ಪಶ್ಚಿಮಕ್ಕೆ ಹರಿದು ಟ್ರಿನಿದಾದ್ ದ್ವೀಪವನ್ನು ತಲುಪಿದ ಮೇಲೆ ಎರಡು ಶಾಖೆಗಳಾಗಿ ವಿಭಜನೆಗೊಂಡು ಒಂದು ಶಾಖೆ 'ಅಂಟಿಲಾಸ್' ಪ್ರವಾಹವಾಗಿ ವೆಸ್ಟ್‌ಇಂಡಿಸ್ ದ್ವೀಪಗಳ ಪೂರ್ವಭಾಗದ ಮೂಲಕ ಹರಿಯುವುದು. ಮತ್ತೊಂದು ಶಾಖೆ ಕೆರೆಬಿಯನ್ ಸಮುದ್ರದ ಮೂಲಕ ಹರಿದು 'ಕೆರಬಿಯನ್' ಪ್ರವಾಹವಾಗಿ ಮೆಕ್ಸಿಕೊ ಕೊಲ್ಲಿಯನ್ನು ಪ್ರವೇಶಿಸಿ ಅಂಟಿಲಾಸ್ ಶಾಖೆಯನ್ನು ಕೂಡಿಕೊಂಡು ಫ್ಲಾರಿಡ ಜಲಸಂಧಿಯ ಮೂಲಕ ಅಟ್ಲಾಂಟಿಕ್ ಸಾಗರವನ್ನು ಪ್ರವೇಶಿಸುವುದು. ಫ್ಲಾರಿಡ ಜಲಸಂಧಿಯಿಂದ ಹೆಟಿರಾಸ್ ಭೂಶಿರದವರೆಗೆ ಇದನ್ನು ಫ್ಲಾರಿಡ ಪ್ರವಾಹವೆಂದು ಕರೆಯುವರು. ಅಲ್ಲಿಂದ ಮುಂದಕ್ಕೆ ಗ್ರಾಂಡ್‌ಬ್ಯಾಂಕಿನವರೆಗಿನ ಪ್ರವಾಹವನ್ನು ಗಲ್ಫ್‌ಸ್ಟ್ರೀಮ್ ಉಷ್ಣಸಾಗರ ಪ್ರವಾಹವೆಂದು ಕರೆಯುವರು. ಅನಂತರ ಇದು ಪ್ರತಿ ವಾಣಿಜ್ಯ ಮಾರುತಗಳ ಪ್ರಭಾವದಿಂದ ಪೂರ್ವಾಭಿಮುಖವಾಗಿ ಹರಿಯುವುದು.

ಗಲ್ಫ್‌ಸ್ಟ್ರೀಮ್ ಪ್ರವಾಹದ ನೀರಿನ ಲವಣತೆ ಶೇ. 36, ಉಷ್ಣತೆ $26.6^{0}$ಸೆ. ಇದು ಮೆಕ್ಸಿಕೊ ಕೊಲ್ಲಿಯನ್ನು ಬಿಟ್ಟು ಹೊರಡುವಾಗ 80 ರಿಂದ 160 ಕಿಮೀ ಅಗಲವಾಗಿಯೂ ಸು. 600 ಮೀ ಆಳವಾಗಿಯೂ ಇದ್ದು, ದಿನವೊಂದಕ್ಕೆ ಸು. 128 ಕಿಮೀ ವೇಗದಲ್ಲಿ ಪ್ರವಹಿಸುತ್ತದೆ. ಈ ವೇಗ ಮಿಸಿಸಿಪಿ ನದಿ ವೇಗಕ್ಕಿಂತ 1000 ಪಟ್ಟು, ಅಧಿಕ ಅಂಟಾರ್ಕ್‌ಟಿಕ್ ವೃತ್ತದ ಬಳಿಯ ಪ್ರವಾಹವನ್ನು ಬಿಟ್ಟರೆ ಇದೇ ಪ್ರಪಂಚದ ಅತಿ ದೊಡ್ಡ ಸಾಗರೋಢಕ ಪ್ರವಾಹ.

ಗಲ್ಫ್ ಸ್ಟ್ರೀಮ್ ನೌಕಾ ಸಾರಿಗೆಗೂ ನೆರವಾಗುತ್ತದೆ. ದಕ್ಷಿಣ ಅಮೆರಿಕದಿಂದ ಅಟ್ಲಾಂಟಿಕ್ ಕರಾವಳಿಯ ಬಂದರುಗಳತ್ತ ಯಾನ ಮಾಡುವ ತೈಲವಾಹಕ ಮತ್ತು ಅದಿರು ಸಾಗಣೆ

ನೌಕೆಗಳು ತಮ್ಮ ಉತ್ತರಾಭಿಮುಖ ಯಾನದಲ್ಲಿ ಈ ಪ್ರವಾಹ ಪಥವನ್ನೇರುತ್ತವೆ. ಇದರಿಂದ ಯಾನದ ಅವಧಿ ಕಡಿಮೆಯಾಗುತ್ತದೆ. ಇದು ವಾಣಿಜ್ಯ ಹಾಗೂ ವಾಯುಗುಣ ದೃಷ್ಟಿಯಿಂದ ಮಹತ್ತ್ವವನಿಸಿದೆ. (ಪಿ.ಜಿ.ಡಿ.)

**ಗಾಂಗ್‌ಟಾಕ್:** ಭಾರತದ ಉತ್ತರದಲ್ಲಿರುವ ಸಿಕ್ಕಿಂ ರಾಜ್ಯದ ರಾಜಧಾನಿ ಡಾರ್ಜಿಲ್ಲಿಂಗಿನ ಈಶಾನ್ಯಕ್ಕೆ 44.8 ಕಿಮೀ ದೂರದಲ್ಲಿ ಭಾರತ–ಟಿಬೆಟ್ ನಡುವಣ ವ್ಯಾಪಾರ ಮಾರ್ಗದಲ್ಲಿದೆ. ಉ.ಅ. $27^0 20'$ ಪೂ.ರೇ. $88^0 38'$ ಮೇಲೆ ಇದೆ. ಜನಸಂಖ್ಯೆ 29162. ಸಿಕ್ಕಿಂ ರಾಜ್ಯ ಬೆಟ್ಟಗಳಿಂದ ಆವೃತವಾಗಿದ್ದು, 1700 ಮೀ. ಎತ್ತರದಲ್ಲಿದೆ. ಪರ್ವತ ಪ್ರದೇಶವಾಗಿರುವುದರಿಂದ ಇಲ್ಲಿ ಹೆಚ್ಚಿನ ಆಧುನಿಕ ವಾಹನ ಸೌಕರ್ಯಗಳಿಲ್ಲ. 1954 ರಲ್ಲಿ ಸಿಕ್ಕಿಮ್‌ನಲ್ಲಿ ಸಪ್ತವಾರ್ಷಿಕ ಯೋಜನೆ ಜಾರಿಗೆ ಬರುವ ಮುನ್ನ ಗಾಂಗ್‌ಟಾಕ್‌ಗೂ ಬಂಗಾಲ–ಸಿಕ್ಕಿಂ ಗಡಿಯ ಬಳಿಯಲ್ಲಿರುವ ರಂಗ್‌ಪೂಗೂ ನಡುವೆ 48 ಕಿಮೀ ದೂರದ ಮೋಟಾರ್ ಹೆದ್ದಾರಿ ಮಾತ್ರ ಇತ್ತು. 1954ರ ಅನಂತರ ಗಾಂಗ್‌ಟಾಕ್‌ನಿಂದ ದಕ್ಷಿಣಕ್ಕೂ ಉತ್ತರದಲ್ಲಿರವ ಲಾಚೆನ್‌ವರಿಗೆ ಜೀಪ್ ದಾರಿಗಳೂ ಮೋಟಾರು ಹೆದ್ದಾರಿಗಳೂ ನಿರ್ಮಾಣವಾದುವು. ಇದರಿಂದಾಗಿ ಉತ್ತರ ಸಿಕ್ಕಿಂನಿಂದ ರಾಜ್ಯದ ದಕ್ಷಿಣ ಭಾಗಗಳಿಗೆ ಅರಣ್ಯೋತ್ಪನ್ನ, ಸೇಬು, ಆಲೂಗಡ್ಡೆ ಮುಂತಾದವನ್ನು ಸಾಗಿಸುವ ಸೌಲಭ್ಯ ಏರ್ಪಟ್ಟಿತು. ರಿಷಿ, ಜೆಲೆಪ್ಲಗಳಿಂದ ಗಾಂಗ್‌ಟಾಕ್‌ಗೆ ಇದ್ದ ಕುದುರೆಮಾರ್ಗ ಜೀಪ್ ದಾರಿಯಾಗಿ ಪರಿವರ್ತನೆಗೊಂಡಿದೆ. ಗಾಂಗ್‌ಟಾಕ್‌ಗೂ ಸಿಕ್ಕಿಂನ ಇತರ ಸ್ಥಳಗಳಿಗೂ ಈಗ ತಕ್ಕಮಟ್ಟಿನ ರಸ್ತೆ ಸಂಪರ್ಕ ಏರ್ಪಟ್ಟಿದೆ.

ಗಾಂಗ್‌ಟಾಕ್‌ನಲ್ಲಿ ಸಿಕ್ಕಿಂ ರಾಜನ ಅರಮನೆ, ಮಂತ್ರಿಮಂಡಲದ ಸದಸ್ಯರ ನಿವಾಸಗಳು ಮತ್ತು ಸರ್ಕಾರಿ ಸೌಧಗಳಲ್ಲದೆ ಶಾಲಾ ಕಾಲೇಜುಗಳು, ಜೈಲು, ಆಸ್ಪತ್ರೆಗಳು ಉಂಟು. ಇಲ್ಲಿಂದ ನೈಋತ್ಯಕ್ಕೆ 6 ಕಿಮೀ ದೂರದಲ್ಲಿ ರೂಮ್‌ಟಿಮ್‌ನ ಬೌದ್ಧ ಮಠವಿದೆ. ಬೇಳೆ, ಮೆಕ್ಕೆಜೋಳ, ಬತ್ತ ಮತ್ತು ಕಿತ್ತಳೆಹಣ್ಣು–ಇಲ್ಲಿನ ಬೆಳೆಗಳು. *

**ಗಾಂಧೀನಗರ:** ಗುಜರಾತ್ ರಾಜ್ಯದ ರಾಜಧಾನಿ; ಸಾಬರಮತಿ ನದಿಯ ದಡದ ಮೇಲೆ, ಅಹಮದಾಬಾದಿನಿಂದ ಸು. 24 ಕಿಮೀ ಅಂತರದಲ್ಲಿದೆ. ನಗರದ ಜನಸಂಖ್ಯೆ 1,95,891.

ಅಹಮದಾಬಾದಿಗಿಂತ 21 ಮೀ ಹೆಚ್ಚು ಎತ್ತರದಲ್ಲಿರುವ, 5,500 ಹೆ. ವಿಸ್ತಾರವುಳ್ಳ ಗಾಂಧೀನಗರ ನಿವೇಶನ ವಿಶೇಷವಾಗಿ ಫಲವತ್ತಾದ ಉಸುಕಿನ ಪ್ರದೇಶ; ಇದು ಸುಂದರವಾದ ಮಾವಿನ ಮರಗಳ ಸಾಲುಗಳಿಂದ ಕಂಗೊಳಿಸುತ್ತದೆ. ನಗರ ರಚನೆಯ ಅನಂತರವೂ ಇಲ್ಲಿಯ ನಿಸರ್ಗ ಸೌಂದರ್ಯ ಕೆಡದಂತೆ ಎಚ್ಚರಿಕೆ ವಹಿಸಲಾಗಿದೆ. ಈ ನಗರರಚನೆಯಲ್ಲಿ ಮುಖ್ಯವಾದ ಐದು ವಿಭಾಗಗಳಿವೆ: 1. ರಾಜಧಾನಿ ವಿಭಾಗ ಮತ್ತು ಸರ್ಕಾರಿ ಕಾರ್ಯಾಲಯಗಳು. 2. ಔದ್ಯೋಗಿಕ ವಿಭಾಗ, 3. ನಗರ ವಿಭಾಗ, 4. ಸಾರ್ವಜನಿಕ ಸಂಸ್ಥೆಗಳ ವಿಭಾಗ ಮತ್ತು 5. ಮಾರುಕಟ್ಟೆ ಮತ್ತು ದಾಸ್ತಾನು ಮಳಿಗೆಗಳ ವಿಭಾಗ.

ಈ ಹೊಸ ನಗರದ ನಿರ್ಮಾಣಕ್ಕೆ ಕೈಹಾಕುವ ಮುನ್ನ ಇಲ್ಲಿ ವಾಸವಾಗಿದ್ದ 783 ರೈತ ಕುಟುಂಬಗಳ ಬೇಸಾಯದ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡು ಕುಟುಂಬಗಳಿಗೆ ಸೂಕ್ತ ಏರ್ಪಾಡು ಮಾಡಿಕೊಡಬೇಕಾಯಿತು. ಸಾಬರಮತಿ ನದೀಪ್ರದೇಶವನ್ನೂ ಒಳಗೊಂಡು ಒಟ್ಟು 5465 ಹೆ. ಭೂಮಿಯನ್ನು ವ್ಯಾಪಿಸಿದ ಈ ನಗರದ ರಚನೆಯನ್ನು ಅತ್ಯಂತ ಯೋಜನಾಬದ್ಧವಾಗಿ ಕೈಗೊಳ್ಳಲಾಗಿದ್ದು, ಹಳೆಯ ರಾಜಧಾನಿಗೂ ಹೊಸ ರಾಜಧಾನಿಗೂ ಸಜೀವ ಸಂಪರ್ಕವಿರಿಸಿಕೊಳ್ಳುವ ಏರ್ಪಾಡು ಮಾಡಲಾಗಿದೆ. ಅಹಮದಾಬಾದಿನಿಂದ ಗಾಂಧೀನಗರಕ್ಕೆ ಸುಂದರವಾದ ರಸ್ತೆಗಳನ್ನು ರಚಿಸಲಾಗಿದೆ. ಅಹಮದಾಬಾದ್ ವಿಮಾನ ನಿಲ್ದಾಣ ಇರುವುದು ಎರಡು ನಗರಗಳ ಮಧ್ಯದಲ್ಲಿ. ಮುಂಬೈ–ದೆಹಲಿಗಳನ್ನು ಕೂಡಿಸುವ ರಾಷ್ಟ್ರೀಯ ಹೆದ್ದಾರಿಗೆ (ನಂ.8) 5 ಕಿಮೀ ಅಂತರದಲ್ಲಿ ಈ ನಗರವುಂಟು. ಇಲ್ಲಿಂದ ಖೋಡಿಯಾರ್ ರೈಲು ನಿಲ್ದಾಣಕ್ಕೆ ಹೋಗುವ ರಸ್ತೆ ಅಹಮದಾಬಾದ್–ಮೌಂಟ್ ಅಬು ನಡುವಣ ರಾಜ್ಯ ಹೆದ್ದಾರಿಗೂ ಸಂಪರ್ಕ ಕಲ್ಪಿಸುತ್ತದೆ. ನಗರದ ಒಳಗಡೆಯಲ್ಲಿ 45–100 ಮೀ ಅಗಲದ ಸುಯೋಜಿತ ಸುಂದರ ರಸ್ತೆಗಳ ನಕ್ಷೆಯನ್ನೇ ಬರೆದಿರಿಸಿದಂತಿದೆ.

ಗಾಂಧೀನಗರ ಜಿಲ್ಲೆ : ಗಾಂಧೀನಗರ ಮತ್ತು ಸುತ್ತಲಿನ ಸ್ವಲ್ಪ ಪ್ರದೇಶವನ್ನು ಸೇರಿಸಿ ಹೊಸದೊಂದು ಜಿಲ್ಲೆಯನ್ನು ರಚಿಸಲಾಗಿದೆ. ಒಟ್ಟು 58,000 ಹೆ. ವಿಸ್ತಾರವುಳ್ಳ ಈ ಜಿಲ್ಲೆ ನಗರದ ಸುತ್ತಮುತ್ತ ಸು. 13 ಕಿಮೀ ಹರಡಿಕೊಂಡಿದೆ. ಇದರಲ್ಲಿ ಒಟ್ಟು 79 ಗ್ರಾಮಗಳಿವೆ. ನಾಲ್ಕು ಗ್ರಾಮಗಳು ಗಾಂಧೀನಗರದಲ್ಲಿ ಸೇರಿಹೋಗಿವೆ. ಜಿಲ್ಲೆಯ ಒಟ್ಟು ಜನಸಂಖ್ಯೆ 13,39731. *

**ಗಾಂಬಿಯ:** ಪಶ್ಚಿಮ ಆಫ್ರಿಕದ ಒಂದು ದೇಶ. ಆ ಖಂಡದಲ್ಲೇ ಅತ್ಯಂತ ಚಿಕ್ಕದು. ಈ ದೇಶದ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವಿದೆ. ಉಳಿದ ಮೂರು ಕಡೆಯೂ ಸೆನೆಗಲ್ ಗಣರಾಜ್ಯ ಸುತ್ತುವರಿದಿದೆ. ಉ.ಅ. $13^0–14^0$ ಮತ್ತು ಪ.ರೇ. $14^0 30'–17^0$ ನಡುವೆ ಇರುವ ಈ ದೇಶ ಗಾಂಬಿಯ ನದಿಯ ಅಟ್ಲಾಂಟಿಕ್ ಸಾಗರದ ದಿಕ್ಕಿನ ಹರಿವಿನ ಕೊನೆಯ 480 ಕಿಮೀ. ಇಬ್ಬದಿಯಲ್ಲೂ ಸಮಾನಾಂತರವಾಗಿ ಹಬ್ಬಿದೆ. ನದಿ ಭಾಗವೂ ಸೇರಿ ಈ ದೇಶದ ವಿಸ್ತೀರ್ಣ 214970 ಚ.ಕಿಮೀ. ಜನಸಂಖ್ಯೆ 8,08,000. ರಾಜಧಾನಿ ಬಂಜುಲ್. ಜನಸಂಖ್ಯೆ 44,188 (2001).

ಮೇಲ್ಮೈ ಲಕ್ಷಣ: ಗಾಂಬಿಯವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು: 1. ನದೀ ಕಣಿವೆಯ ಪ್ರದೇಶ, ನೆರೆಮಣ್ಣಿನ ಫಲವತ್ತಾದ ಭೂಮಿ. ಮಳೆಗಾಲದಲ್ಲಿ ಇದು ಪ್ರವಾಹದಿಂದ ಆವೃತವಾಗಿರುತ್ತದೆ. 2. ಪ್ರಸ್ಥಭೂಮಿಯ ಕಚ್ಚುಕಚ್ಚಾದ ಏಣಿನ ಪ್ರದೇಶ. ಇದು ಮರಳಿಲ್ಲಿನ ಕಡಿದಾದ ಬೆಟ್ಟಗಳಿಂದಲೂ ನಡುನಡುವೆ ಮರಳಿನ ಕಣಿವೆಗಳಿಂದಲೂ ಕೂಡಿದೆ. 3. ಮರುಳುಗಲ್ಲಿನ ಪ್ರಸ್ಥಭೂಮಿ. ಇದು ಕೆಲವೆಡೆ ಸೆನೆಗಲ್‌ನೊಳಕ್ಕೂ ಚಾಚಿಕೊಂಡಿದೆ. ಇದು ಅಷ್ಟೇನೂ ಫಲವತ್ತಾದ ಪ್ರದೇಶವಲ್ಲ.




ಗಾಂಬಿಯದ್ದು ಉಷ್ಣವಲಯದ ವಾಯುಗುಣ. ಜೂನ್– ಅಕ್ಟೋಬರ್ ಮಳೆಗಾಲ. ಅನಂತರ ಒಣಹವೆ ಉಷ್ಣತೆ ಕಡಿಮೆ. ಆಗ ದೂಳಿನಿಂದ ಕೂಡಿದ ಮಾರುತ ಸಹರ ಮರುಭೂಮಿಯಿಂದ ಈ ದೇಶದ ಮೇಲೆ ಬೀಸುವುದುಂಟು. ವಾರ್ಷಿಕ ಸರಾಸರಿ ಮಳೆ 100 ಸೆಂಮೀ ಕರಾವಳಿಯಿಂದ ಒಳನಾಡಿನವರೆಗೆ ಮಳೆ 60 ಸೆಂಮೀ ರಿಂದ 165 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ. ಆಗಸ್ಟ್ ತಿಂಗಳಲ್ಲಿ ಅತಿ ಹೆಚ್ಚು ಮಳೆ. ಬೇಸಗೆಯಲ್ಲಿ ಉಷ್ಣತೆ $48^0$ಸೆ. ವರೆಗೆ ಏರುವುದುಂಟು. ಒಣಹವೆಯ ಕಾಲದಲ್ಲಿ ಕರಾವಳಿಯ ಬಳಿಯ ಉಷ್ಣತೆ $18^0– 50^0$ಸೆ.

ಇಂಗ್ಲಿಷ್ ಇಲ್ಲಿಯ ಆಡಳಿತ ಭಾಷೆ. ಮಲಿಂಕ ಮತ್ತು ವೋಲೋಫ್ ಪ್ರಮುಖ ಭಾಷೆಗಳು. ಗಾಂಬಿಯದಲ್ಲಿ 12 ನೆಯ ಶತಮಾನದಲ್ಲಿ ಇಸ್ಲಾಮಿನ ಪ್ರಚಾರವಾಯಿತು. ಇಲ್ಲಿಯ ಜನರಲ್ಲಿ ಶೇ. 60 ಕ್ಕೂ ಹೆಚ್ಚಿನ ಮಂದಿ ಮುಸ್ಲಿಮರು, ಶೇ. 10 ಕ್ರೈಸ್ತರು, ಉಳಿದವರು ಸರ್ವಚೇತನ ಪಂಥದವರು.

ವ್ಯವಸಾಯ, ವಾಣಿಜ್ಯ, ಕೈಗಾರಿಕೆ: ಉಷ್ಣವಲಯದ ಒಣಬೇಸಾಯದ ಬೆಳೆಗಳನ್ನು ಇಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ನೆಲಗಡಲೆ ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಸಾವೆ, ಮೆಕ್ಕೆ ಜೋಳಗಳೂ ಅಧಿಕವಾಗಿ ಬೆಳೆಯುತ್ತವೆ. ಬತ್ತವನ್ನು ನದಿ ಪ್ರದೇಶದಲ್ಲಿ ಬೆಳೆಯುತ್ತಾರೆ. ಪಶ್ಚಿಮ ಭಾಗದಲ್ಲಿ ಮಾವು, ಕಿತ್ತಳೆ, ಬಾಳೆ, ನಿಂಬೆ ಬೆಳೆಯಲಾಗುತ್ತದೆ. ಅಟ್ಲಾಂಟಿಕ್ ತೀರದಲ್ಲಿ ಮೀನುಗಾರಿಕೆ ಅಭಿವೃದ್ಧಿಯಾಗಿದೆ. ಇಲ್ಲಿಂದ ರಫ್ತಾಗುವ ವಸ್ತುಗಳು ನೆಲಗಡಲೆ, ಕೊಬ್ಬರಿ, ಮತ್ತು ಒಣ ಮೀನು. ಯಂತ್ರೋಪಕರಣ, ಮೋಟಾರು ವಾಹನ, ಪೆಟ್ರೋಲ್, ಬಟ್ಟೆ, ಔಷಧ, ಸಿಮೆಂಟ್, ಇವು ಆಮದಾಗುವ ಸರಕುಗಳು.

ಸಾರಿಗೆ ಸಂಪರ್ಕ: ಗಾಂಬಿಯದಲ್ಲಿ ಸರ್ವಋತು ರಸ್ತೆಗಳು ಹೆಚ್ಚಾಗಿ ಇಲ್ಲ. ಫ್ರೆಂಚ್ ಸರ್ಕಾರ ನಿರ್ಮಿಸಿದ ಗಾಂಬಿಯಾಂತರ ರಸ್ತೆ ಬಲಿಂಗೊ ಮತ್ತು ಯೆಲಿಟೆಂಡ ಮೂಲಕ ಹೋಗುತ್ತದೆ. ಇದರಿಂದ ಸೆನೆಗಲ್‌ನಿಂದ ಕ್ಯಾಸನಾನ್ಸ್ ನದಿಯವರೆಗೆ ಸಾರಿಗೆ ಸಂಪರ್ಕ ಏರ್ಪಟ್ಟಿದೆ. ಕಿರುದಾರಿಗಳಲ್ಲದೆ, 1168 ಕಿಮೀ ಉದ್ದದ ರಸ್ತೆಗಳಿವೆ. ನೀರಿನಲ್ಲಿ 7.8 ಮೀ. ಇಳಿದು ಚಲಿಸುವ ಸಮುದ್ರನೌಕೆಗಳು ಗಾಂಬಿಯ ಅಳಿವೆಯಿಂದ ಬ್ಯಾತರ್ಸ್ಟ್ ವರೆಗೂ ಇಳಿದು ಸಂಚರಿಸುವ ಹಡಗುಗಳು ಅಲ್ಲಿಂದ ಮುಂದಕ್ಕೆ ಕುಂಟೌರ್‌ವರೆಗೂ ಯಾನಮಾಡುತ್ತದೆ. ಬ್ಯಾತರ್ಸ್ಟ್ ಮುಖ್ಯಬಂದರು. ಇದು ಸೇಂಟ್ ಮೇರಿ ದ್ವೀಪದ ಮೇಲಿದೆ. ಲಂಡನ್, ಲಿಸ್ಬನ್ ಮತ್ತು ಪಶ್ಚಿಮ ಆಫ್ರಿಕನ್ ಪಟ್ಟಣಗಳಿಗೆ ವಿಮಾನ ಸಂಪರ್ಕ ಉಂಟು. (ವಿ.ಜಿ.ಕೆ.;ಟಿ.ಇ.ಎಚ್.)

**ಗಾಂಬಿಯ ನದಿ:** ಪಶ್ಚಿಮ ಆಫ್ರಿಕದ ಒಂದು ನದಿ. ಗಿನಿ ಗಣರಾಜ್ಯದ ಫೂಟ್ ಜಲಾನ್ ಪ್ರಸ್ಥಭೂಮಿಯಲ್ಲಿ ಸಮುದ್ರತೀರಕ್ಕೆ 240 ಕಿಮೀ ದೂರದಲ್ಲಿ ಹುಟ್ಟಿ, ಈಶಾನ್ಯಾಭಿಮುಖವಾಗಿ 1120 ಕಿಮೀ ದೂರ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಅದು ಪಶ್ಚಿಮದ ಕಡೆಗೆ ತಿರುವುಗುವುದು ನೆರಿಚೊ ನದಿಯೊಂದಿಗೆ ಸೇರುವೆಡೆಯಲ್ಲಿ. ಅದರ ಮುಖ್ಯ ಉಪನದಿ ಗ್ರ. ಟೆಂಡಾ ಬೆಟ್ಟಗಳಿಂದ ಉತ್ತರಕ್ಕೆ ಹರಿದು ಗಾಂಬಿಯ ರಾಜ್ಯದ ಎಲ್ಲೆಗೆ 40 ಕಿಮೀ ದೂರದಲ್ಲಿ ಗಾಂಬಿಯ ನದಿಯನ್ನು ಸೇರುತ್ತದೆ. ಜೂನ್ ಮತ್ತು ನವೆಂಬರ್ ತಿಂಗಳುಗಳಲ್ಲಿ ನದಿಯ ಪ್ರವಾಹ ಹೆಚ್ಚಾಗಿರುತ್ತದೆ. ನದಿ ಸಮುದ್ರ ಸೇರುವೆಡೆಯಿಂದ 150 ಕಿಮೀ ದೂರದಲ್ಲಿರುವ ಎಲಿಫೆಂಟ್ ದ್ವೀಪದ ಬಳಿ ಅದು ಮತ್ತೆ ಪಶ್ಚಿಮದ ಕಡೆಗೆ ತಿರುಗುತ್ತದೆ. ಅಲ್ಲಿ ಸಾಮಾನ್ಯವಾಗಿ ನದಿಯ ನೀರು ಉಪ್ಪು. ಮಳೆಗಾಲದಲ್ಲಿ ಸಮುದ್ರದಿಂದ 130 ಕಿಮೀ ದೂರದ ಬಲಿಂಗೊವರೆಗೆ ನೀರು ಉಪ್ಪಾಗಿರುತ್ತದೆ. ಕೆಲವು ವೇಳೆ 240 ಕಿಮೀ ದೂರದ ಕುನ್ತಾರ್‌ವರೆಗೂ ನದಿ ಉಪ್ಪಾಗಿರುವುದುಂಟು. ನದಿಯ ಎರಡು ದಂಡೆಗಳನ್ನೂ ಗುಲ್ಮ ವೃಕ್ಷಗಳು ಆವರಿಸಿಕೊಂಡಿವೆ. ಇಲ್ಲಿ ನದಿಯ ಪಾತ್ರ ಹೆಚ್ಚು ಅಗಲ. ಎಲಿಫೆಂಟ್ ದ್ವೀಪದ ಬಳಿಯಿಂದಲೇ ನದಿಯ ಅಳಿವೆ ಪ್ರಾರಂಭವಾಗುತ್ತದೆನ್ನಬಹುದು. ಅಲ್ಲಿ ಒಂದುವರೆ ಕಿಮೀ ಅಗಲವಿರುವ ನದಿ, ಬ್ಯಾತರ್ಸ್ಟ್‌ನ್ನೊಳಗೊಂಡಿರುವ ಸೇಂಟ್ ಮೇರಿ ದ್ವೀಪವನ್ನು ಸೇರುವ ಹೊತ್ತಿಗೆ ಅಗಲ 4 ಕಿಮೀ ಆಗುತ್ತದೆ. ಈ ನಾಲೆ ಹಡಗು ಸಂಚಾರಕ್ಕೆ ಯೋಗ್ಯವಾಗಿದೆ.

ಟಾಲೆಮಿಗೂ ಅರಬ್ ಭೂಗೋಳ ಶಾಸ್ತ್ರಜ್ಞರಿಗೂ ಗಾಂಬಿಯ ನದಿ ಬಗ್ಗೆ ಗೊತ್ತಿತ್ತು. 1291 ರ ಇಟಲಿಯ ಜಿನೋವ ನಗರದ ನಾವಿಕರು ಗಾಂಬಿಯ ನದಿಯವರೆಗೂ ಬಂದಿದ್ದಿರಬಹುದು. ಪೋರ್ಚುಗೀಸರಂತೂ ಇದನ್ನು ಕಂಡದ್ದು ನಿಜ. ಆದರೆ ಗಾಂಬಿಯ ನದಿಯನ್ನು ಮೊದಲು ಪರಿಶೋಧಿಸಿದವನು (1455) ವೆನಿಸಿನ ಅಲ್ ವಿಸ್ ಕಡ ಮೊಸ್ತೊ. ಅನಂತರ ಒಳನಾಡನ್ನು ಪರಿಶೋಧಿಸಿದವರಲ್ಲಿ ಗಾಂಬಿಯದ ಮುಂಗೊ ಪಾರ್ಕ್ ಪ್ರಮುಖ. ಅತ 1795 ಮತ್ತು 1805 ರಲ್ಲಿ ಕೈಗೊಂಡ ಎರಡು ಪ್ರವಾಸಗಳನ್ನೂ ಈ ನದಿಯಿಂದಲೇ ಆರಂಭಿಸಿದ. ಗಾಂಬಿಯದ ಉಗಮ ಸ್ಥಳವನ್ನು ಪತ್ತೆ ಹಚ್ಚಿದವನು (1818) ಗ್ಯಾಪರ್ಡ್ ಮೋಲೀನ್ ಎಂಬ ಫ್ರೆಂಚ್ ಪ್ರಜೆ. (ಬಿ.ಎಸ್.ಎಚ್.)

**ಗಾಡ್ವಿನ್ ಆಸ್ಟಿನ್ ಶಿಖರ:** ಹಿಮಾಲಯ ಪರ್ವತದ ಶಾಖೆಗಳಲ್ಲೊಂದಾದ ಕಾರಕೋರಂ ಶ್ರೇಣಿಯ ಉನ್ನತ ಶಿಖರಗಳಲ್ಲಿ ಒಂದು. ಇದಕ್ಕೆ $K^2$ (ಕೇಟು) ಶಿಖರ ಎಂದು ಹೆಸರಿದೆ. ಟಿಬೆಟ್ ಭಾಷೆಯಲ್ಲಿ ಇದರ ಹೆಸರು ದಾಪ್ಸಾಂಗ್. ಶ್ರೀನಗರದಿಂದ ಈಶಾನ್ಯಕ್ಕೆ 256 ಕಿಮೀ ದೂರದಲ್ಲಿದೆ. ಪ್ರಪಂಚದಲ್ಲಿ ಇದು ಎರಡನೆಯ ಉನ್ನತ ಶಿಖರ. ಎತ್ತರ 8,611 ಮೀ. ಸದಾ ಮಂಜುಗಡ್ಡೆ ಆವರಿಸಿರುತ್ತದೆ. ಇದರ ನೆತ್ತಿಯನ್ನು ಮುಟ್ಟುವ ದಾರಿ ಅತ್ಯಂತ ದುರ್ಗಮವಾದ್ದು. 1850 ರಲ್ಲಿ ಲೆಫ್ಟಿನೆಂಟ್ ಕರ್ನಲ್ ಹೆನ್ರಿ ಹ್ಯಾವರ್‌ಶ್ಯಾಮ್ ಗಾಡ್ವಿನ್ ಆಸ್ಟಿನ್ (1834 – 1923) ಎಂಬ ಭೂಗೋಳಶಾಸ್ತ್ರಜ್ಞ ಈ ಶಿಖರದ ಸರ್ವೇಕ್ಷಣೆ ಮಾಡಿದ. ಆದ್ದರಿಂದ ಇದಕ್ಕೆ ಅವನ ಹೆಸರನ್ನೇ ಬಳಸಿದೆ. ಬಾಲ್ಟೊರೊ ನೀರ್ಗಲ್ಲು ನದಿ ಇಲ್ಲಿ ಉಗಮಿಸುತ್ತದೆ.

ಈ ಶಿಖರವನ್ನೇರಲು ಇಟಲಿಯ ಪರ್ವತಾರೋಹಣ ತಂಡವೊಂದು 1954 ರಲ್ಲಿ ಪ್ರಥಮವಾಗಿ ಪ್ರಯತ್ನಪಟ್ಟಿತು. ಈ ತಂಡದ ನಾಯಕನಾಗಿದ್ದವ ಮಿಲಾನ್ ವಿದ್ಯಾಪೀಠದ ಭೂವಿಜ್ಞಾನ ಪ್ರಾಧ್ಯಾಪಕ ಅರ್ಡಿಟೊ ಡೇಸಿಓ. ಅವನ ಅನಂತರ 1955 ರಲ್ಲಿ ಜರ್ಮನ್ ಮತ್ತು ಇಂಗ್ಲಿಷ್ ಪರ್ವತಾರೋಹಣ ತಂಡಗಳು ಗಾಡ್ವಿನ್ ಶಿಖರವನ್ನು ಏರಿದ್ದವು. (ಕೆ.ಎನ್.ಯು.)

**ಗಾಮ, ವಾಸ್ಕೋ ಡ:** 1460–1524. ಪೋರ್ಚುಗೀಸ್ ನಾವಿಕ. ಭಾರತಕ್ಕೆ ಸಮುದ್ರಮಾರ್ಗ ಕಂಡುಹಿಡಿದವನು. ಜನನ, ಆಲೆಂತೇಜೂ ಪ್ರಾಂತ್ಯದ ಸ್ಪೆನ್ಸ್‌ನಲ್ಲಿ. ಗಾಮನ ಬಾಲ್ಯದ ಬಗ್ಗೆ ವಿವರಗಳು ತಿಳಿದುಬಂದಿಲ್ಲ. 1492ರಲ್ಲಿ ಕೆಲವು ಫ್ರೆಂಚ್ ಹಡುಗುಗಳನ್ನು ಸೆರೆಹಿಡಿಯುವ ಸೈನ್ಯಕಾರ್ಯಾಚರಣೆಯಲ್ಲಿ ಈತ ಪಾತ್ರವಹಿಸಿದ್ದ. ಭಾರತಕ್ಕೆ ಸಮುದ್ರಮಾರ್ಗವನ್ನು ಕಂಡುಹಿಡಿಯುವ ಕಾರ್ಯದಲ್ಲಿ ಪೋರ್ಚುಗಲ್ಲ ದೊರೆ ಎರಡನೆಯ ಜಾನನಿಂದ ನಿಯುಕ್ತನಾದ. ಈ ಅನ್ವೇಷಣಾ ಯಾತ್ರೆ 1502ರ ಜುಲೈ 8 ರಂದು ಲಿಸ್ಬನಿನಿಂದ ಹೊರಟಿತು. ವಾಸ್ಕೋ ಡ ಗಾಮನ ಅಧೀನದಲ್ಲಿ ನಾಲ್ಕು ಹಡುಗುಗಳಿದ್ದವು.

ಇವನ ಯಾತ್ರೆ ಕ್ಯಾನರೀ ದ್ವೀಪಗಳನ್ನು ತಲಪಿದ್ದು ಜುಲೈ 15 ರಂದು. ನಾವಿಕರ ತಂಡ ಆ ತಿಂಗಳ 26ರಂದು ಕೇಪ್ ವರ್ಡೆ ದ್ವೀಪಗಳನ್ನು ತಲುಪಿತು. ಆಗಸ್ಟ್ 3ರ ವರೆಗೂ ಅಲ್ಲೇ ತಂಗಿದ್ದು, ಗಿನೀ ಕೊಲ್ಲಿಯ ಪ್ರವಾಹಕ್ಕೆ ಸಿಲುಕದಂತೆ ದಕ್ಷಿಣ ಅಟ್ಲಾಂಟಿಕ್ ಮೂಲಕ ಬಳಸು ದಾರಿಯಲ್ಲಿ, ಗುಡ್‌ಹೋಪ್ ಭೂಶಿರದ ಕಡೆಗೆ ಸಾಗಿ, ನವೆಂಬರ್ 7 ರಂದು ಸೇಂಟ್ ಹೆಲೀನ ಕೊಲ್ಲಿ ಸೇರಿತು. ನವೆಂಬರ್ 16ರ ವರೆಗೂ ಬೀಡುಬಿಟ್ಟು ಅನಂತರ ಮುಂದುವರಿದ ಪ್ರಯಾಣ ಪ್ರತಿಕೂಲ ಮಾರುತಗಳಿಂದಾಗಿ ತಡವಾಗಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಮಾಸೆಲ್ ಕೊಲ್ಲಿ ತಲುಪಿ, ಡಿಸೆಂಬರ್ 8 ರಂದು ಅಲ್ಲಿಂದ ಹೊರಟು 25 ರಂದು ನಟ್ಯಾಲ್ ತೀರವನ್ನು ಸೇರಿತು. ಮರುವರ್ಷದ ಮಾರ್ಚ್ 2ರಂದು ಮೊಜಾಂಬಿಕ್ ತಲಪಿತು. ಗಾಮ ಮತ್ತು ಅವನ ಸಹಪ್ರಯಾಣಿಕರು ಮುಸ್ಲಿಮರೆಂದು ನಂಬಿ ಅಲ್ಲಿನ ಸುಲ್ತಾನ ಗಾಮನಿಗೆ ಇಬ್ಬರು ಚಾಲಕರ ನೆರವು ನೀಡಿದ. ಪೋರ್ಚುಗೀಸರು ಕ್ರೈಸ್ತರೆಂಬುದು ತಿಳಿದು ಆ ಚಾಲಕರಲ್ಲೊಬ್ಬ ಅವರನ್ನು ತ್ಯಜಿಸಿದ. ವಾಸ್ಕೋಡಗ್ಯಾಮ ಮೊಂಬಾಸವನ್ನು ತಲುಪಿದ್ದು ಏಪ್ರಿಲ್ 7ರಂದು. ಗಾಮ ಮಲಿಂಡಿಯಲ್ಲಿ ತಂಗಿ, ಕಲ್ಲಿಕೋಟೆಗೆ ಹಾದಿ ಗೊತ್ತಿದ್ದ ಚಾಲಕನೊಬ್ಬನ ನೆರವಿನಿಂದ ಯಾನ ಮುಂದುವರಿಸಿದ. 23 ದಿನಗಳ ಕಾಲ ಹಿಂದೂಮಹಾಸಾಗರದಲ್ಲಿ ಸಾಗಿದ ಮೇಲೆ ಘಟ್ಟಗಳು ಕಾಣಿಸಿದುವು. ಮೇ 20ರಂದು ಗಾಮ ಕಲ್ಲೀಕೋಟೆ ತಲುಪಿದ. ಭಾರತವನ್ನು ತಲಪಿದ್ದರ ಕುರುಹಾಗಿ ಗಾಮ ಅಲ್ಲೊಂದು ಶಿಲಾಸ್ತಂಭ ನೆಟ್ಟ. ಅಲ್ಲಿಯ ಜಾಮೊರಿನ್ ದೊರೆಯಿಂದ ಗಾಮನಿಗೆ ಸ್ವಾಗತ ದೊರಕಿತು. ಆದರೆ ಅಲ್ಲಿಯ ಕೆಲವು ಮುಸ್ಲಿಂ ವ್ಯಾಪಾರಿಗಳ ವಿರೋಧದಿಂದಾಗಿ ದೊರೆಯೊಂದಿಗೆ ಆತ ಯಾವ ಒಪ್ಪಂದವನ್ನೂ ಮಾಡಿಕೊಳ್ಳಲಾಗಲಿಲ್ಲ.

ಆಗಸ್ಟ್ ತಿಂಗಳ ಕೊನೆಯಲ್ಲಿ ವಾಸ್ಕೋ ಡ ಗಾಮ ಭಾರತದಿಂದ ಹಿಂದಕ್ಕೆ ಹೊರಟ. ಅಂಜೆದಿವ ದ್ವೀಪಕ್ಕೆ ಹೋಗಿ ಅಲ್ಲಿಂದ ಮಲಿಂಡಕ್ಕೆ ಪ್ರಯಾಣ ಬೆಳೆಸಿದ. ಮಾರುತಗಳು ಅನುಕೂಲಪ್ರದವಾಗಿರಲಿಲ್ಲವಾದ್ದರಿಂದ ಅರಬ್ಬೀ ಸಮುದ್ರವನ್ನು ದಾಟಲು ಅವನಿಗೆ ಮೂರು ತಿಂಗಳುಗಳ ಕಾಲ ಬೇಕಾಯಿತು. ನಾವಿಕರಲ್ಲಿ ಅನೇಕರು ಕಾಯಿಲೆಯಿಂದ ಸತ್ತರು. ಮರುವರ್ಷ ಮಾರ್ಚ್ ತಿಂಗಳಲ್ಲಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಮುಂದುವರಿಯುವಾಗ ಬಿರುಗಾಳಿಯಿಂದ ತೊಂದರೆಯಾಯಿತು. ಉಳಿದಿದ್ದ ಎರಡು ಹಡಗುಗಳೂ ಪರಸ್ಪರ ಬೇರ್ಪಟ್ಟವು. ಗಾಮ ಟರ್ಸೇಯಿರ ದ್ವೀಪವನ್ನು ತಲುಪಿ ತನ್ನ ಹಡಗನ್ನು ಲಿಸ್ಬನಿಗೆ ಮುಂದಾಗಿ ಕಳಿಸಿದ. ಅವನು ಲಿಸ್ಬನ್ ತಲಪಿದ್ದು ಸೆಪ್ಟೆಂಬರ್ 9ರಂದು. ಟರ್ಸೇಯಿರದಲ್ಲಿ ತೀರಿಕೊಂಡಿದ್ದ ಸೋದರನಿಗಾಗಿ ಶೋಕವನ್ನಾಚರಿಸಿ ಸೆಪ್ಟೆಂಬರ್ 18ರಂದು ಗಾಮ ವಿಜಯೋತ್ಸವ ಮೆರವಣಿಗೆಯಲ್ಲಿ ಲಿಸ್ಬನ್ ಪ್ರವೇಶಿಸಿದ. ದೊರೆ 1ನೆಯ ಮ್ಯಾನ್ಯುಯೆಲ್ ಅವನಿಗೆ ಡಾಂ ಎಂಬ ಬಿರುದನ್ನೂ ವರ್ಷಾಶನವನ್ನೂ ಭೂಮಿಯ ಉಂಬಳಿಯನ್ನೂ ಕೊಟ್ಟು ಗೌರವಿಸಿದ.

ಅನಂತರ ದೊರೆಯ ಆದೇಶದಂತೆ ಕವ್ರಾಲ್ ಭಾರತಕ್ಕೆ ಹೋದ. ಕಲ್ಲಿಕೋಟೆಯಲ್ಲಿ ಕೋಠಿಯೊಂದನ್ನು ಸ್ಥಾಪಿಸಿದ. ಅಲ್ಲಿ ಉಳಿದಿದ್ದ ಪೋರ್ಚುಗೀಸರು ಕವ್ರಾಲನ ನಿರ್ಗಮನಾನಂತರ ಕೊಲೆಗೆ ಈಡಾದರು. ಇದಕ್ಕೆ ಪ್ರತೀಕಾರ ಮಾಡಬೇಕೆಂಬ ಸೂಚನೆಯೊಂದಿಗೆ ದೊರೆ ವಾಸ್ಕೋಡ ಗಾಮನನ್ನು ಭಾರತಕ್ಕೆ ಕಳುಹಿಸಿದ. ಅವನಿಗೆ ಭಾರತ ಸಮುದ್ರದ ಅಡ್ಮಿರಲ್ ಎಂಬ ಬಿರುದು ದತ್ತವಾಯಿತು. ದೊರೆ ಅವನಿಗೆ ಹಲವಾರು ವ್ಯಾಪಾರ ಸವಲತ್ತುಗಳನ್ನೂ ನೀಡಿದ. ಗಾಮ ಭಾರತವನ್ನು ತಲುಪಿದೊಡನೆಯೇ ಕಲ್ಲೀಕೋಟೆಯನ್ನು ಉಡಾಯಿಸಿ,

ಭಾರತದ ಯುದ್ಧನೌಕೆಗಳನ್ನು ನಿರ್ನಾಮ ಮಾಡಿದ. ಅನಂತರ ಕೊಚ್ಚಿಗೆ ಹೋಗಿ ಅಲ್ಲಿ ತನ್ನ ದೇಶಕ್ಕೆ ಅನುಕೂಲವಾದ ವ್ಯಾಪಾರ ಒಪ್ಪಂದ ಮಾಡಿಕೊಂಡು ಸ್ವದೇಶಕ್ಕೆ ಹಿಂದಿರುಗಿದ (1503). ಇವನ ವ್ಯಾಪಾರದಿಂದಾಗಿ ಗಾಮ ಪೋರ್ಚುಗಲ್ಲಿನಲ್ಲಿಯೇ ಅತ್ಯಂತ ಶ್ರೀಮಂತನಾದ. ಇವನು ಅನಂತರ ವಿಶ್ರಾಂತ ಜೀವನ ನಡೆಸಿದರೂ ಭಾರತಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ದೊರೆಗೆ ಸಲಹೆ ನೀಡುತ್ತಿದ್ದ. 1519ರಲ್ಲಿ ಇವನಿಗೆ ಕೌಂಟ್ ಪದವಿ ದೊರಕಿತು. 1524ರಲ್ಲಿ ಈತ ಭಾರತದ ವೈಸ್ ರಾಯ್ ಆದ. 1524ರ ಡಿಸೆಂಬರ್ 24ರಂದು ಕೊಚ್ಚಿನ್ನಿನಲ್ಲಿ ನಿಧನನಾದ. (ಬಿ.ಎಂ.)

**ಗಾರ್ನೆಟ್:** ಸಿಲಿಕೇಟ್ ಖನಿಜಗಳ ಗುಂಪಿಗೆ ಸೇರುತ್ತದೆ. ಸಮಮಾಪನೀಯ ವ್ಯವಸ್ಥೆಯಲ್ಲಿ ಸ್ಫಟಿಕಗೊಳ್ಳುತ್ತವೆ. ರಚನೆ, ಬಾಹ್ಯರೂಪ, ಭೌತ ಲಕ್ಷಣಗಳಲ್ಲಿ ಇವು ಸಮಾನತೆ ತೋರುತ್ತವೆ. ಹೆಚ್ಚು ರೂಪಾಂತರ ಶಿಲೆಗಳು ಹಾಗೂ ಅಗ್ನಿಶಿಲೆಗಳಲ್ಲಿ ದೊರೆಯುತ್ತವೆ. ಇವು ಅರೆ ಅಮೂಲ್ಯ ಖನಿಜಗಳು. ಇವನ್ನು ಆಭರಣ ಮತ್ತು ಕೈಗಡಿಯಾರಗಳ ತಯಾರಿಕೆಯಲ್ಲಿ ಬಳಸುವರು. ಇದಲ್ಲದೆ ಮರ, ಚರ್ಮ, ಪ್ಲಾಸ್ಟಿಕ್, ಲೋಹ ಮತ್ತು ಗಾಜಿಗೆ ಹೊಳಪು ಮಾಡುವ ಕೈಗಾರಿಕೆಗಳಲ್ಲಿ ಬಳಸುವರು. ಗಾರ್ನೆಟ್ ವಿಶೇಷವಾಗಿ ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಚೆಕ್ ಗಣರಾಜ್ಯ, ಭಾರತ, ಮಡಗಾಸ್ಕರ್, ಸ್ಪೇನ್ ಮತ್ತು ದಕ್ಷಿಣ ಆಫ್ರಿಕ ರಾಷ್ಟ್ರಗಳಲ್ಲಿ ದೊರೆಯುವುದು. (ಬಿ.ಸಿ.ಕೆ.)

**ಗಾಲ್:** ಈಗಿನ ಫ್ರಾನ್ಸ್ ಬೆಲ್ಜಿಯಂಗಳು ಜರ್ಮನಿ, ಹಾಲೆಂಡ್, ಸ್ವಿಟ್ಜರ್ಲೆಂಡ್‌ಗಳ ಭಾಗಗಳನ್ನೂ ಒಳಗೊಂಡ ಪ್ರದೇಶದ ಪ್ರಾಚೀನ ನಾಮ. ಉತ್ತರ ಇಟಲಿಯೂ ಸೇರಿದಂತೆ ಈ ಇಡೀ ಭಾಗವನ್ನು ರೋಮನ್ನರು ಗಾಲ್ ಎಂದು ಕರೆಯುತ್ತಿದ್ದರು. ಪ್ರ.ಶ.ಪೂ. 58–51 ರಲ್ಲಿ ನಡೆದ ಗಾಲಿಕ್ ಯುದ್ಧಗಳಲ್ಲಿ ಜೂಲಿಯಸ್ ಸೀಸರ್ ಈ ಭಾಗವನ್ನು ಗೆದ್ದ. ವಿಸ್ತೃತವಾದ ಗಾಲ್ ಪ್ರದೇಶದ ಎರಡು ವಿಭಾಗಗಳ ಪೈಕಿ ಆಲ್ಪ್ಸ್ ಪರ್ವತದ ಉತ್ತರಕ್ಕಿದ್ದ ವಿಭಾಗವನ್ನು ಟ್ರಾನ್ಸ್ ಆಲ್ಪೈನ್ (ಆಲ್ಪ್ಸ್‌ನ ಆಚೆಯ) ಗಾಲ್ ಎಂದೂ ದಕ್ಷಿಣಕ್ಕಿದ್ದ ಜಿಲ್ಲೆಯನ್ನು ಸ್ವಿಸ್‌ಆಲ್ಪೈನ್ (ಆಲ್ಪ್ಸ್‌ನ ಈಚೆಯ) ಗಾಲ್ ಎಂದೂ ಕರೆಯುತ್ತಿದ್ದರು. ಟ್ರಾನ್ಸ್ ಆಲ್ಪೈನ್ ಗಾಲ್ ರೂಢಿಯಲ್ಲಿ ಗಾಲ್ ಎನಿಸಿಕೊಂಡಿತು. ಈಗಿನ ಫ್ರಾನ್ಸನ್ನು ಕೆಲವು ವೇಳೆ ಗಾಲ್ ಎಂದು ಕರೆಯುವುದುಂಟು. *

**ಗಾಳಿ:** ಭೂ ಮೇಲ್ಮೈಗೆ ಸಾಪೇಕ್ಷವಾಗಿ ಚಲಿಸುವ ವಾಯು (ವಿಂಡ್). ಸಾಮಾನ್ಯವಾಗಿ ವಾಯುವಿನ ಕ್ಷಿತಿಜೀಯ ಚಲನೆಗೆ ಹಾಗೂ 1–3 ನಿಮಿಷಗಳವರೆಗೆ ಆಯ್ದ ಅವಧಿಯಲ್ಲಿ ವಾಯುಚಲನೆಯ ಸರಾಸರಿಗೆ ಗಾಳಿ ಎನ್ನುತ್ತೇವೆ. ಆದ್ದರಿಂದ ಸೂಕ್ಷ್ಮಹವಾವೈಜ್ಞಾನಿಕ ಪರಿಚಲನೆಗಳೇ (ಮೈಕ್ರೋ ಮಿಟೀರಿಯಲಾಜಿಕಲ್ ಸರ್ಕ್ಯುಲೇಷನ್ಸ್) ಮುಂತಾದ ಸೂಕ್ಷ್ಮ ವಾಯುಚಲನೆಗಳು ನಮ್ಮ ಪರಿಗಣನೆಯಲ್ಲಿ ಬರುವುದಿಲ್ಲ. 1–3 ನಿಮಿಷದ ಅಂತರದ ಆಯ್ಕೆ ನಮಗೆ ಎರಡು ರೀತಿಯಲ್ಲಿ ಸಮರ್ಪಕವಾಗಿದೆ. 1. ವಾಯುಮಂಡಲದ ಪರಿಚಲನೆಯ ಪ್ರರೂಪದಲ್ಲಿ (ಸರ್ಕ್ಯುಲೇಷನ್ ಪ್ಯಾಟರ್ನ್) ಗಂಟೆಯಿಂದ ಗಂಟೆಗೆ ಮತ್ತು ದಿನದಿಂದ ದಿನಕ್ಕೆ ಆಗುವ ಬದಲಾವಣೆಗಳನ್ನು ಅಧ್ಯಯಿನಿಸಲು. 2. ವಾಯುಮಂಡಲದ ಸಾರ್ವತ್ರಿಕ ಪರಿಚಲನೆಯ ದೊಡ್ಡ ಗಾತ್ರದ ಪರಿಣಾಮಗಳನ್ನು ತಿಳಿಯಲು ಹಾಗೂ ಭೂಮಿಯ ಮೇಲ್ಮೈಯಲ್ಲಿ ಗಾಳಿಯ ಪ್ರತ್ಯಕ್ಷ ಪರಿಣಾಮಗಳಾದ ನೆಲಕೊರೆತ, ಸಸ್ಯಲಕ್ಷಣ, ಕಟ್ಟಡಗಳಿಗೆ ಘಾಸಿ, ಜಲತರಂಗಗಳ ಉತ್ಪಾದನೆ ಇವೇ ಮುಂತಾದವುಗಳನ್ನು ಕಾಣಬಹುದು. ಎತ್ತರಕ್ಕೆ ಸಾಗಿದಂತೆ ವಾಯುವಿಮಾನಗಳ ಚಲನೆ, ಕ್ಷಿಪಣಿಗಳ ಗಮನ, ವಿಕಿರಣಪಟು ಉತ್ಪನ್ನಗಳ ಪ್ರಸರಣ, ಕಾರ್ಖಾನೆಗಳು ಹೊರಸೂಸುವ ಅನಿಲ. ಇವುಗಳ ಮೇಲೆಲ್ಲ ಗಾಳಿ ಗಮನಾರ್ಹವಾಗಿ ಪ್ರಭಾವ ಬೀರುತ್ತದೆ. ಮೋಡಗಳ ಸಂಚಾರ, ಮಳೆಸುರಿತ, ಹವೆ ಮುಂತಾದವುಗಳ ಮೇಲೆ ಕೂಡ ಗಾಳಿಯ ಪ್ರಭಾವ ಉಂಟು. ಗಾಳಿಯ ವೇಗವನ್ನು ಅನುಸರಿಸಿ ಅದರಲ್ಲಿ ಪ್ರಭೇದಗಳನ್ನು ಮಾಡಲಾಗಿದೆ. *

**ಗಾಳಿ ಚಕ್ರ:** ಯಾವುದೊಂದು ಸ್ಥಳದಲ್ಲಿಯ ಗಾಳಿಯ ದಿಕ್ಕು ಮತ್ತು ಸರಾಸರಿ ವೇಗವನ್ನು ತೋರಿಸಲು ರಚಿಸಿದ ರೇಖಾಕೃತಿ. ಇದು ಗಾಳಿ ಬೀಸುವ ದಿಕ್ಕು ಮತ್ತು ಅದರ ವೇಗವನ್ನು ತಿಳಿಸುತ್ತದೆ. ಗಾಳಿ ಚಕ್ರವನ್ನು ರಚಿಸಲು ಬಹುಕಾಲದವರೆಗೆ ಗಾಳಿಯ ದಿಕ್ಕು, ವೇಗಗಳ ವೀಕ್ಷಣೆಯನ್ನು ಮಾಡಬೇಕಾಗುತ್ತದೆ. ಕೇಂದ್ರದಿಂದ ಎಲ್ಲ ದಿಕ್ಕುಗಳಲ್ಲಿ ಹರಡುವಂತೆ ರೇಖೆಗಳನ್ನು ಎಳೆಯಲಾಗುತ್ತದೆ. ಪ್ರತಿಯೊಂದು ರೇಖೆಯು ಅದು ದಿಕ್ಕಿನಿಂದ ನಿರ್ದಿಷ್ಟ ಕಾಲದಲ್ಲಿ ಬೀಸುವ ಗಾಳಿಯ ಕಾಲಾವಧಿಯನ್ನು ನಿರೂಪಿಸುವಂತೆ ಪ್ರಮಾಣಬದ್ಧವಾಗಿ ಎಳೆಯಲ್ಪಟ್ಟಿರುತ್ತದೆ. ಗಾಳಿಯ ಶಾಂತವಿರುವ ದಿನಗಳ ಸಂಖ್ಯೆಗಳನ್ನು ಚಿಕ್ಕವೃತ್ತ ರಚನೆಯ ಮೂಲಕ ತೋರಿಸಲಾಗುತ್ತದೆ. *

**ಗಿನಿ:** ಪಶ್ಚಿಮ ಆಫ್ರಿಕದ ತೀರ ಪ್ರದೇಶದಲ್ಲಿರುವ ಒಂದು ಗಣರಾಜ್ಯ. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಪೋರ್ಚುಗೀಸ್ ಗಿನಿ, ಉತ್ತರದಲ್ಲಿ ಸೆನೆಗಲ್ ಮತ್ತು ಮಾಲಿ, ಪೂರ್ವದಲ್ಲಿ ಐವರಿ ಕೋಸ್ಟ್, ದಕ್ಷಿಣದಲ್ಲಿ ಲೈಬೀರಿಯ ಮತ್ತು ಸೆಯೆರ ಲಿಯೋನ್–ಇವು ಇದರ ಮೇರೆಗಳು. ಗಿನಿ ಗಣರಾಜ್ಯ $6^0$ಉ–$12^0$ಉ. ಅ. ಹಾಗೂ $7^0$ಪ. ರೇ.–$15^0$ ಪ.ರೇ.ವರೆಗೆ ಹಬ್ಬಿದೆ. ವಿಸ್ತೀರ್ಣ 2,45,860 ಚ.ಕಿಮೀ. ಜನಸಂಖ್ಯೆ 61,16,000. ರಾಜಧಾನಿ ಕಾನಕ್ರಿ.

ಭೌಗೋಳಿಕ ಲಕ್ಷಣ: ಗಿನಿ ಸಮುದ್ರತೀರ ಅಂಕುಡೊಂಕಾಗಿ ನದೀ ಅಳಿವೆಗಳಿಂದ ಕೂಡಿದೆ. ತೀರದ ಬಳಿ ಅಲ್ಲಲ್ಲಿ ಜವುಗು ತುಂಬಿದ ದ್ವೀಪಗಳಿವೆ. ಉಳಿದ ಭಾಗವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. 1. ಕರಾವಳಿಯ ಪ್ರದೇಶ. ನೆಲ ಬಹುತೇಕ ಮೆಕ್ಕಲು ಮಣ್ಣಿನಿಂದಲೂ ಜಂಬುಮಣ್ಣಿನಿಂದಲೂ ಆವೃತವಾದ್ದು. ಮೆಲ್ಲಕೋರಿ, ಕಾಂಕೌರಿ, ರೀಯೂ ಕಪಾಟ್ಚೆಝ್, ರೀಯೂ ನೂನೆಝ್, ರೀಯೂ ಕಾಂಪಿನಿ ಅಥವಾ ಕಾಗಾನ್ ಇವು ಇಲ್ಲಿ ಹರಿಯುವ ನದಿಗಳು. 2. ಎತ್ತರದ ಮಧ್ಯಗಿನಿ. ಇಲ್ಲಿರುವ ಫೂಟ ಜ್ಯಾಲಾನ್ ಗುಡ್ಡಗಾಡಿನ ಸರಾಸರಿ ಎತ್ತರ 914 ಮೀ. ಇದರ ಉತ್ತರಕ್ಕೆ ಇರುವ ಲೌರ ಶಿಖರ 1514 ಮೀ ಎತ್ತರವಾಗಿದೆ. ಗ್ಯಾಂಬಿಯ ನದಿ ಉಗಮಿಸುವುದು ಇದರ ಬಳಿಯಲ್ಲೆ. ಪಶ್ಚಿಮದಲ್ಲಿ ಕಾಗಾನ್, ಟಾಮಿನೆ ಮತ್ತು ಫಟಾಲಾ ನದಿಗಳು ಹರಿಯುತ್ತವೆ. 3. ಈಶಾನ್ಯ ಭಾಗದ ಹುಲ್ಲು ತುಂಬಿದ ಮೈದಾನ. ಟಿಂಕಿಸ್ಸೊ ನದಿ ಈ ಮೈದಾನದಲ್ಲಿ ಹರಿದು ಮುಂದೆ ನೈಜರ್ ನದಿಯನ್ನು ಸೇರುತ್ತದೆ. 4. ದಕ್ಷಿಣ ಭಾಗದ ಪ್ರಸ್ಥಭೂಮಿ ಪ್ರದೇಶ. ಬೆಣಚುಕಲ್ಲು ಮತ್ತು ಕಾಚ ಶಿಲೆಗಳ ಗುಡ್ಡಗಳಿಂದ ಕೂಡಿದ ಈ ಪ್ರದೇಶದ ಎತ್ತರ 1850 ಮೀ.




ವಾಯುಗುಣ: ಗಿನಿ ಗಣರಾಜ್ಯ ಉಷ್ಣವಲಯದಲ್ಲಿದೆ. ವರ್ಷದಲ್ಲಿ ಆರು ತಿಂಗಳು (ಜೂನ್–ಡಿಸೆಂಬರ್) ಮಳೆಗಾಲ. ಉಳಿದ ಆರು ತಿಂಗಳು ಶುಷ್ಕ ಹವೆ. ಕರಾವಳಿ ಪ್ರದೇಶದಲ್ಲಿ ಉಷ್ಣತೆ ಮತ್ತು ಮಳೆ ಹೆಚ್ಚು. ಉಷ್ಣತೆ ಒಣಹವೆಯ ಕಾಲದಲ್ಲಿ $16^0$ಸೆ. ನಿಂದ ಮಳೆಗಾಲದಲ್ಲಿ $26^0$ಸೆ. ವರಗೆ ವ್ಯತ್ಯಾಸವಾಗುತ್ತದೆ. ಎತ್ತರವಾದ ಒಳನಾಡಿನಲ್ಲಿ ಮಳೆ ಕಡಿಮೆ. ಉಷ್ಣತೆಯೂ ಕಡಿಮೆ. ಈಶಾನ್ಯದಲ್ಲಿ ಉಷ್ಣತೆಯ ಅಂತರ ಹೆಚ್ಚು ($17^0$ಸೆ.–$40^0$ಸೆ.); ಮಳೆ ಕಡಿಮೆ.

ಕೃಷಿ ಮತ್ತು ಕೈಗಾರಿಕೆ: ಗಿನಿಯ ಶೇ. 95 ಜನರ ಮುಖ್ಯ ಕಸಬು ಕೃಷಿ. ಬಾಳೆ, ತೆಂಗು, ಅನಾನಸ್, ಕಾಫಿ ಮುಖ್ಯ ನಿರ್ಯಾತ ಬೆಳೆಗಳು. ಕಬ್ಬಿಣದ ಅದಿರು, ವಜ್ರ, ಬಾಕ್ಸೈಟ್– ಇವನ್ನು ಗಣಿಗಳಿಂದ ತೆಗೆದು ರಫ್ತು ಮಾಡುತ್ತಾರೆ. ಕ್ಯಾಲ್ಸಿಯಂ ಕಾರ್ಬೈಡ್ ನಿಕ್ಷೇಪಗಳು ಇಲ್ಲಿ ಹೇರಳವಾಗಿವೆ. ಹೊಗೆಸೊಪ್ಪು, ಕ್ವಿನೈನ್, ಚಹ ರಬ್ಬರ್ ಇವೂ ಬೆಳೆಯುತ್ತವೆ. ಬತ್ತ, ಮಿಲೆಟ್‌ಗಳೂ ಮುಖ್ಯ ಬೆಳೆಗಳು. ಮೀನು, ಚರ್ಮ ಇನ್ನೆರಡು ಮುಖ್ಯ ರಫ್ತು ವಸ್ತುಗಳು. ಜವಳಿ, ಪೆಟ್ರೋಲಿಯಂ ಉತ್ಪನ್ನ, ಸಿಮೆಂಟ್ ಇವು ಮುಖ್ಯ ಆಮದುಗಳು.

ಗಿನಿಯ ರಾಜಧಾನಿ ಕಾನಕ್ರಿ. ಜನಸಂಖ್ಯೆ 1,508,000 (2001). ಕಂಕನ್‌ಗೆ 661 ಕಿಮೀ ಉದ್ದದ ರೈಲು ಮಾರ್ಗವಿದೆ. ಗಿನಿಯಲ್ಲಿ ಸು. 16,000 ಕಿಮೀ ಉದ್ದದ ರಸ್ತೆಗಳಿವೆ. ಕಾನಕ್ರಿಯಿಂದ ಮಾಲಿಯ ರಾಜಧಾನಿಯಾದ ಬ್ಯಾಮ್ಯಾಕೋಗೆ ಸಾಗುವ ರಸ್ತೆಯ ಉದ್ದ 933 ಕಿಮೀ. ಸೆನಗಲ್‌ನ ರಾಜಧಾನಿಯಾದ ಡಾಕಾರ್ ಮತ್ತು ಐವರಿ ಕೋಸ್ಟಿನ ರಾಜಧಾನಿ ಆಬಿಜಾನ್ ನಡುವಣ ರಸ್ತೆ ಗಿನಿಯ ಮೂಲಕ ಹಾದುಹೋಗುತ್ತದೆ.

ಗಿನಿಯ ಅಧಿಕೃತ ಭಾಷೆಗಳು ಫ್ರೆಂಚ್. ಎಂಟು ರಾಷ್ಟ್ರೀಯ ಭಾಷೆಗಳಲ್ಲಿ ಸೋಸೋ ಅಥವಾ ಮಾನಿಕವನ್ನು ಅಧಿಕೃತ ಭಾಷೆಯಾಗಿ ಮಾಡಬೇಕೆಂಬ ಉದ್ದೇಶವಿದೆ. ಇಲ್ಲಿಯ ಜನರಲ್ಲಿ ಬಹು ಮಂದಿ ಮುಸ್ಲಿಮರು. (ಎಂ.ಎಸ್.ಎಚ್.ಓ.;ಎಸ್.ಎನ್.ಎ.ಆರ್.ಇ.)

**ಗಿನಿ–ಬಿಸ್ಸಾವು:** ಪಶ್ಚಿಮ ಆಫ್ರಿಕ ತೀರದಲ್ಲಿರುವ ಪೋರ್ಚುಗೀಸ್ ಸಾಗರೋತ್ತರ ಪ್ರಾಂತ್ಯ. ಪೋರ್ಚುಗೀಸ್ ಗಿನಿ ಇದರ ಹಿಂದಿನ ಹೆಸರು. ತ್ರಿಕೋಣಾಕಾರದಲ್ಲಿರುವ ಈ ಪ್ರಾಂತ್ಯವನ್ನು ವಿಶ್ವಸಂಸ್ಥೆ ಸ್ವಯಂ ಆಡಳಿತವಿಲ್ಲದ ಪ್ರದೇಶವೆಂದು ಪರಿಗಣಿಸಿದೆ. ಇದು ಉ.ಅ. $10^{0}52'–12^{0}14'$ ಮತ್ತು ಪ.ರೇ. $13^{0}38'–16^{0}43'$ ನಡುವೆ ಇದೆ. ಇದರ ಉತ್ತರದಲ್ಲಿ ಸೆನಗಾಲ್, ಪೂರ್ವ ಹಾಗೂ ದಕ್ಷಿಣದಲ್ಲಿ ಗಿನಿ ಗಣರಾಜ್ಯ ಮತ್ತು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಇವೆ. ಇದರ ಸಮೀಪದಲ್ಲಿರುವ ಬಿಜಾಗ್ರೋಸ್ ದ್ವೀಪಸ್ತೋಮ ಮತ್ತು ಇತರ ದ್ವೀಪಗಳೂ ಗಿನಿ ಬಿಸ್ಸಾವು ಆಡಳಿತಕ್ಕೆ ಒಳಪಟ್ಟಿವೆ. ವಿಸ್ತೀರ್ಣ 36,125 ಚ.ಕಿಮೀ. ಇದರ ಜನಸಂಖ್ಯೆ ಸು. 1,586,000 (2005); ರಾಜಧಾನಿ ಬಿಸ್ಸಾವು. ಜನಸಂಖ್ಯೆ 200000 (2002); ಆಡಳಿತ ಭಾಷೆ ಪೋರ್ಚುಗೀಸ್. (ಟಿ.ಎಚ್.ಎಚ್.)




**ಗಿರ್ ಅರಣ್ಯ:** ಗುಜರಾತ್ ರಾಜ್ಯದ ಜುನಾಗಡ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಗಿರ್ ಗಿರಿಶ್ರೇಣಿಯ ತಳಭಾಗದಲ್ಲಿರುವ ಅರಣ್ಯ. ಇದು ಅರೆ ಮರುಭೂಮಿಯಿಂದ ಕೂಡಿದೆ. ವಿಸ್ತೀರ್ಣ 1280 ಚ.ಕಿಮೀ. ಅಲ್ಲಲ್ಲಿ ಮುಳ್ಳು ಪೊದೆಗಳುಂಟು. ಇಲ್ಲಿಯ ಮರಗಳು ಅಷ್ಟೇನೂ ಎತ್ತರದವಲ್ಲ. ಇಲ್ಲಿ ತೇಗದ ಮರಗಳಿವೆ. ಅಲ್ಲಲ್ಲಿ ಸಾಗುವಳಿಯಾದ ಹಳ್ಳಿಗಳು ಇವೆ.

ಭಾರತದಲ್ಲಿ ಉಳಿದಿರುವ ಕೆಲವೇ ಸಿಂಹಗಳು ಗಿರ್ ಅರಣ್ಯದಲ್ಲಿರುವುದರಿಂದ ಇದು ಬಹಳ ಪ್ರಸಿದ್ಧವಾಗಿದೆ. ಇದೊಂದು ಅಭಯಾರಣ್ಯ – ಈ ಅರಣ್ಯದಲ್ಲಿರುವ ಸಿಂಹಗಳ ರಕ್ಷಣೆಗೆ ಸರ್ಕಾರ ವಿಶೇಷ ಕ್ರಮ ತೆಗದುಕೊಂಡಿದೆ. ಅರಣ್ಯದಲ್ಲಿ ಆಹಾರ ಸಿಕ್ಕದಿದ್ದಾಗ ಹಳ್ಳಿಗಳಿಗೆ ನುಗ್ಗಿ ದನಕರುಗಳನ್ನು ಕೊಂದು ತಿನ್ನುತ್ತಿದ್ದ ಸಿಂಹಗಳ ಹಾವಳಿಯನ್ನು ತಪ್ಪಿಸಲು ಹಳ್ಳಿಗರು ವಿಷ ಹಾಕಿ ಇವನ್ನು ಕೊಲ್ಲುತ್ತಿದ್ದರು. ಆದ್ದರಿಂದ ಇವುಗಳ ಸಂಖ್ಯೆ ಇತ್ತೀಚೆಗೆ ಕಡಿಮೆಯಾಗಿದೆ. ರಕ್ಷಣೆಗೆ ಸರ್ಕಾರ ವಿಶೇಷ ಕ್ರಮಗಳನ್ನು ರೂಪಿಸಿದೆ.

ಸೌರಾಷ್ಟ್ರದ ದಕ್ಷಿಣ ತೀರಕ್ಕೆ 75 ಮೀ ದೂರದಲ್ಲಿರುವ ಗಿರ್ ಗಿರಿಸಾಲು ಪೂರ್ವ ಪಶ್ಚಿಮವಾಗಿ 180 ಕಿಮೀ ಹಬ್ಬಿದೆ. ಅಲ್ಲಲ್ಲಿ ಕತ್ತರಿಸಿದಂತಿರುವ ಗಿರ್ ಶ್ರೇಣಿಯ ಪಶ್ಚಿಮದಲ್ಲಿ ಓಜಾತ್ ನದಿಯ ಪೂರ್ವದಲ್ಲಿ ಶೆತ್ರುಂಜಿ ನದಿಯೂ ಹರಿಯುತ್ತದೆ. ಓಜಾತ್ ನದಿ ಗಿರ್ ಶ್ರೇಣಿಗೂ ಗಿರ್ನಾರ್ ಶ್ರೇಣಿಗೂ ನಡುವಣ ಗಡಿ ರೇಖೆಯಂತಿದೆ. ಗಿರ್ ಶ್ರೇಣಿಯ ಅತ್ಯುನ್ನತ ಶಿಖರದ ಎತ್ತರ 643 ಮೀ. (ಎಸ್.ಎನ್.ಎ.ಆರ್.ಇ.)

**ಗಿರಿಧಾಮಗಳು:** ಪರ್ವತಗಳು ಮತ್ತು ಬೆಟ್ಟಗಳ ಮೇಲ್ಭಾಗದಲ್ಲಿ ಸಮತಟ್ಟು ಪ್ರದೇಶಗಳಿದ್ದು ವಿಶ್ರಾಂತಿ ಹಾಗೂ ವಿಹಾರಗಳಿಗೆ ಸೂಕ್ತವಾದ ಪ್ರದೇಶಗಳನ್ನು ಗಿರಿಧಾಮಗಳು ಎಂದು ಕರೆಯುತ್ತಾರೆ. ರೋಗದಿಂದ ಆಗತಾನೆ ಚೇತರಿಸಿಕೊಳ್ಳುತ್ತಿರುವ ಜನರೂ ದಣಿದು ವಿಶ್ರಾಂತಿ ಬಯಸುವವರೂ ವಿಹಾರಾಕಾಂಕ್ಷಿಗಳೂ ಇಲ್ಲಿಗೆ ಬಂದು ಕೆಲಕಾಲ ತಂಗಿದ್ದು ಚೇತರಿಸಿಕೊಂಡು ಹಿಂದಿರುಗುತ್ತಾರೆ. ಬೇಸಗೆಯ ದಗೆಯಿಂದ ಪಾರಾಗಲು ಜನ ಈ ಸ್ಥಳಗಳಿಗೆ ಬರುವುದು ಹೆಚ್ಚು. ಹಿಂದೆ ಧರ್ಮದ ಹೆಸರಿನಲ್ಲಿ ಇಂತಹ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ಮಧ್ಯಯುಗದ ಕಾಲದಲ್ಲಿ ಮಧ್ಯ ಯುರೋಪಿನ ಅನೇಕ ಬೆಟ್ಟಗಳಲ್ಲಿ ಚರ್ಚುಗಳನ್ನು ಕಟ್ಟಿದ್ದಾರೆ. ಭಾರತದಲ್ಲಿ ಯಾತ್ರಾಸ್ಥಳಗಳಾದ ತಿರುಪತಿ, ಅಬು, ದೇವರಾಯನದುರ್ಗ ಮುಂತಾದವು ಗಿರಿಧಾಮಗಳಾಗಿರುವುದಲ್ಲದೆ ಭಕ್ತಾದಿಗಳನ್ನು ತಮ್ಮತ್ತ ಸೆಳೆಯುತ್ತಿವೆ.

ಇತ್ತೀಚಿನ ದಿನಗಳಲ್ಲಿ ನಗರ ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದು, ಗಿರಿಧಾಮಗಳ ಬೇಡಿಕೆ ಹೆಚ್ಚುತ್ತಿದೆ. ಹಾಗೆಯೇ ಅಲ್ಲಿನ ಸೌಕರ್ಯಗಳೂ ಹೆಚ್ಚುತ್ತಿವೆ. ರಸ್ತೆ, ವಾಹನ ಮತ್ತು ಕೆಲವು ಭಾಗಕ್ಕೆ ವಿಮಾನ ಸೌಕರ್ಯ ಉಂಟು. ಉದ್ಯಾನವನಗಳನ್ನು ಬೆಳೆಸಲಾಗಿದೆ. ಕ್ರೀಡೆಗೆ ಅವಕಾಶವಿದೆ. ಈಜುಕೊಳ, ನೌಕಾವಿಹಾರ, ಮೀನುಗಾರಿಕೆ, ಸ್ಕೇಟಿಂಗ್ ಮೊದಲಾವುಗಳಿಗೆ ಏರ್ಪಾಟು ಇರುತ್ತದೆ.

ಭಾರತದಲ್ಲಿ ಸಿಮ್ಲ, ಷಿಲ್ಲಾಂಗ್, ಶ್ರೀನಗರ, ಅಬು, ಉದಕಮಂಡಲ, ಕುರ್ಸಿಯಾಂಗ್, ಕುಲು, ನಂದಿ, ಕೂನೂರು, ಕೊಡೈಕೆನಾಲ್, ಎರ್ಕಾಡ್, ಪಂಚಗನಿ, ಮುಸ್ಸೋರಿ, ನೈನಿತಾಲ್ ಮುಂತಾದ ಪ್ರಸಿದ್ಧ ಗಿರಿಧಾಮಗಳಿವೆ. (ಕೆ.ಟಿ.ಕೆ.)

**ಗಿರ್ನಾರ್:** ಗುಜರಾತ್ ರಾಜ್ಯದ ಸೌರಾಷ್ಟ್ರ ವಿಭಾಗದ ದಕ್ಷಿಣ ಭಾಗದಲ್ಲಿರುವ ª ÃÃRå¥ÀèvÀeÉgÀ zÀPÀëvÀeÉzÀ $29^{0}39'$ ಉ. ಅ. ಮತ್ತು $78^{0}42'$ ಪೂ. ರೇ. ದಲ್ಲಿ ಜುನಾಗಢದಿಂದ 16 ಕಿಮೀ ಅಂತರದಲ್ಲಿದೆ. ಇದು ಇತರ ಪರ್ವತಗಳ ಸಾಲಿನಲ್ಲಿರದೆ ಪ್ರತ್ಯೇಕವಾಗಿ ಹಬ್ಬಿದೆ. ಇದನ್ನು ಜ್ವಾಲಾಮುಖಿ ಪರ್ವತವೆನ್ನಲಾಗಿದೆ. ಗುಜರಾತಿನಲ್ಲೇ ಅತ್ಯುನ್ನತವಾದ ಈ ಪರ್ವತದ ಸರಾಸರಿ ಎತ್ತರ 1060 ಮೀ. ಅಂಬಾ, ಗೋರಖ್‍ನಾಥ್, ಕಾಳಿಂಕಾ ಮತ್ತು ಗುರನೇಮಿನಾಥ್ ಇವು ಪ್ರಸಿದ್ಧ ಶಿಖರಗಳು. ಅತ್ಯುನ್ನತ ಶಿಖರ ಗೋರಖ್‍ನಾಥ್ (1117 ಮೀ). ಇಲ್ಲಿನ ಉಷ್ಣತೆ $25^{0}$ಸೆ. – $35^{0}$ಸೆ. ಮತ್ತು ವಾರ್ಷಿಕ ಮಳೆ 60–80 ಸೆಂಮೀ. ಈ ಪರ್ವತದಲ್ಲಿ ಸುವರ್ಣರೇಖಾ, ಗುಡಾಜಲೀ ಮತ್ತು ಕಾಲವೊ ನದಿಗಳು ಉಗಮ ಹೊಂದುತ್ತವೆ.

ಗಿರ್ನಾರ್ ಪ್ರದೇಶದಲ್ಲಿ ದೊರೆತಿರುವ ಶಾಸನಗಳು ಮತ್ತು ಭಗ್ನಾವಶೇಷಗಳಿಂದ ಇದು ಅತ್ಯಂತ ಪ್ರಾಚೀನ ಕಾಲದಿಂದಲೂ ಇತಿಹಾಸ ಪ್ರಸಿದ್ಧ ಸ್ಥಳವಾಗಿತ್ತೆಂದು ತಿಳಿದು ಬರುತ್ತದೆ. ಇಲ್ಲಿ ಹಿಂದು, ಬೌದ್ಧ, ಜೈನ ದೇವಾಲಯ ಮತ್ತು ಗುಹಾಲಯಗಳು ಕಂಡುಬರುತ್ತವೆ. ಗೋಮುಖಿ, ಹನುಮಾನ್, ಧಾರಾ ಮತ್ತು ಕಮಂಡಲು ಎಂಬ ಮೂರು ಜಲಕುಂಡಗಳಿವೆ. ಇಲ್ಲಿ ಎಲ್ಲಾ ಧರ್ಮಗಳ ಸಂಸ್ಕೃತಿ ಪ್ರವಾಹಗಳು ಸಂಗಮಿಸಿವೆ. (ಬಿ.ಆರ್.ಆರ್.)

**ಗುಂತಕಲ್:** ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಗುಟ್ಟಿ ತಾಲೂಕಿನ ಒಂದು ಪಟ್ಟಣ. ಉ. ಅ. $15^{0}9'$ ಮತ್ತು ಪೂ. ರೇ. $72^{0}23'$ ಮೇಲೆ ಇದೆ. ಬಳ್ಳಾರಿ–ಗೂಟಿ ಹೆದ್ದಾರಿಯಲ್ಲಿರುವ ಈ ಪಟ್ಟಣ ದಕ್ಷಿಣ–ಮಧ್ಯ ರೈಲ್ವೆಯ ಪ್ರಮುಖ ಜಂಕ್ಷನ್. ಮುಂಬಯಿ, ಚೆನ್ನೈ, ಬೆಂಗಳೂರು, ಬಳ್ಳಾರಿ, ಸಿಕಂದರಾಬಾದ್, ಗುಂಟೂರು, ಹುಬ್ಬಳ್ಳಿಗಳ ರೈಲು ಮಾರ್ಗಗಳು ಇಲ್ಲಿ ಕೂಡುತ್ತವೆ. ಜನಸಂಖ್ಯೆ; 107592.

ರೈಲು ಮಾರ್ಗ ಬರುವುದಕ್ಕೆ ಮುಂಚೆ ಇದೊಂದು ಸಣ್ಣ ಹಳ್ಳಿಯಾಗಿತ್ತು. ಈಗ ಆ ಭಾಗ ಹಳೆ ಗುಂತಕಲ್ ಎನಿಸಿಕೊಂಡಿದೆ. ಇದು ರಾಯಲಸೀಮೆ ಪ್ರದೇಶದ ಒಂದು ಮುಖ್ಯ ವ್ಯಾಪಾರ ಕೇಂದ್ರ. ಸುತ್ತಣ ಪ್ರದೇಶದಲ್ಲಿ ಬೆಳೆಯುವ ಹತ್ತಿ, ನೆಲಗಡಲೆ, ಎಣ್ಣೆಬೀಜ ಇಲ್ಲಿ ಸಂಗ್ರಹವಾಗುತ್ತವೆ. ಇಲ್ಲಿ ಕಾಟನ್ ಜಿನ್ನಿಂಗ್ ಗಿರಣಿಗಳಿವೆ. (ಬಿ.ಪಿ.ಕೆ.)

**ಗಿಲ್ಗಿಟ್:** ಕಾಶ್ಮೀರದ ವಾಯವ್ಯದಲ್ಲಿರುವ ಒಂದು ನಗರ. ಇದೇ ಹೆಸರಿನ ನದಿಯೊಂದಿದೆ. ಅದರ ದಕ್ಷಿಣಕ್ಕಿರುವ ವಜ್ಞಾರತ್‍ಗೂ ಈ ಹೆಸರಿದೆ. ಗುಪಿಸ್, ಪುನ್ಯಾಲ್, ಅಷ್ಕುಮಾನ್, ಯಾಸಿನ್ ರಾಜಕೀಯ ಜಿಲ್ಲೆಗಳು. ಗಿಲ್ಗಿಟ್ ಆಸ್ಬರ್‌ನ ಉಪವಿಭಾಗಗಳು, ಚಿತ್ರಾಲ್, ಆಫ್ಘಾನಿಸ್ತಾನ್, ಸೋವಿಯತ್ ದೇಶ ಮತ್ತು ಸಿಂಕಿಯಾಂಗ್ (ಚೀನ) ವರೆಗೆ ಈ ಪ್ರದೇಶ ವ್ಯಾಪಿಸಿದೆ. 1947 ರಿಂದ ಈ ಪ್ರದೇಶ ಪಾಕಿಸ್ತಾನದ ಆಕ್ರಮಣಕ್ಕೊಳಗಾಗಿ ಅದರ ಹತೋಟಿಯಲ್ಲಿದೆ. ಆದರೆ ನ್ಯಾಯವಾಗಿ ಇದು ಭಾರತದ ಒಂದು ಭಾಗ.

ಭೌತಲಕ್ಷಣಗಳು: ಈ ಪರ್ವತ ಪ್ರದೇಶ ಹಿಂದೂಕುಷ್ ಮತ್ತು ಕಾರಕೋರಮ್ ಪರ್ವತಗಳು ಸಂಧಿಸುವ ಸ್ಥಳಕ್ಕೆ ಸಮೀಪದಲ್ಲಿದೆ. ನಗರ್ ಪ್ರದೇಶದ ನೀರ್ಗಲ್ಲು ನದಿಗಳು ಈಶಾನ್ಯದ ಮಜ್ಞ್–ತಾಗ್–ಆಟ ಪರ್ವತಶ್ರೇಣಿಗಳ ಮತ್ತು ನೈಋತ್ಯದ ಕಾಶ್ಮೀರದ ಗಡಿ ಶಿಖರಗಳ ನಡುವೆ ಹರಿಯುತ್ತದೆ. ಇದನ್ನು ಬೈಯಾಪೋ ಎಂದು ಕರೆಯುತ್ತಾರೆ. ಹುನಜ ಮತ್ತು ನಗರ್ ಪರ್ವತ ಪ್ರದೇಶದ ಉದ್ದಕ್ಕೂ ಕಣಿವೆಗಳು ಸು. 4545 ಮೀ ಕಡಿಮೆ ಇಲ್ಲದ ಮತ್ತು ಸರಾಸರಿ 6000 ಮೀ ಎತ್ತರವುಳ್ಳ ಪರ್ವತಶ್ರೇಣಿಗಳ ನಡುವೆ ಆಳವಾಗಿ ಹಬ್ಬಿವೆ.

ಇದುವರೆಗೆ ತಿಳಿದಿರುವಂತೆ ಈ ಪ್ರದೇಶದ ಒಂದು ಅತ್ಯಂತ ಪ್ರಾಚೀನ ಮಾರ್ಗವೆಂದರೆ ಗಿಲ್ಗಿಟ್‍ಗೂ ಚಿತ್ರಾಲ್ ಕಣಿವೆಯ ಮಸ್ತೂಜಿಗೂ ಸಂಬಂಧ ಕಲ್ಪಿಸುವ ಹಾದಿ. ಇದು ಈಗ ಚಿತ್ರಾಲ್– ಗಿಲ್ಗಿಟ್ ಹೆದ್ದಾರಿಯಾಗಿದೆ. ಗಿಲ್ಗಿಟ್ ನದಿಯ ಉತ್ತರದ ಒಂದೊಂದು ಕವಲಿನ ಕೊನೆಗೂ ಒಂದೊಂದು ಅಥವಾ ಹಲವಾರು ಕಣಿವೆ ಮಾರ್ಗಗಳಿವೆ. ಇವೆಲ್ಲ ಪಾಮಿರ್ ಪ್ರದೇಶವನ್ನೂ ಪಾಮಿರ್ ಹಾದಿಯ ಉಗಮ ಸ್ಥಳವಾದ ಮೇಲಣ ಯಾರ್ಖಂ ಕಣಿವೆಯನ್ನೂ ಕೂಡಿಕೊಳ್ಳುತ್ತವೆ. ಯಾಸಿನ್ ಕಣಿವೆಯಲ್ಲಿರುವ ದಾರ್ಕೋಟ್ ಕಣಿವೆ ಮಾರ್ಗದ ಎತ್ತರ 4648 ಮೀ. ಅಷ್ಕುಮಾನ್ ಶಿಖರ ಬಳಿ ಗಾಜ್ಹಾರ್ ಮತ್ತು ಕೋರ ಬೋರ್ಟ್ ಕಣಿವೆಮಾರ್ಗಗಳಾಗಿವೆ. ಇವೆಲ್ಲ ವರ್ಷದಲ್ಲಿ ಸ್ವಲ್ಪಕಾಲ ಮಾತ್ರ ಸಂಚಾರಕ್ಕೆ ಅರ್ಹ. ಬುಂಜಿಗೆ ಸ್ವಲ್ಪ ದೂರದಲ್ಲಿ ಗಿಲ್ಗಿಟ್ ನದಿ ಸಿಂಧೂ ನದಿಯನ್ನು ಸೇರುತ್ತದೆ. ಬುಂಜಿಯ ದಕ್ಷಿಣಕ್ಕೆ ಅಸ್ತಾರ್ ನದಿ ಆಗ್ನೇಯದಿಂದ ಹರಿದು ಬಂದು ಸಿಂಧೂವನ್ನು ಸೇರುತ್ತದೆ. ಪಾಕಿಸ್ತಾನಕ್ಕೂ ಗಿಲ್ಗಿಟ್‍ಗೂ ನಡುವಣ ಇನ್ನೊಂದು ಮಾರ್ಗ ಬಾಬುಸಾರ ಕಣಿವೆಯ ಮೂಲಕ ಸಾಗುತ್ತದೆ.

ಗಿಲ್ಗಿಟ್‍ನ ವ್ಯಾಪಕ ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ವಿವಿಧ ಜನಾಂಗಗಳಿವೆ. ಈ ಜನರನ್ನು ದಾರ್ದ ಎಂಬ ಹೆಸರಿನಿಂದ ಸಾಮಾನ್ಯವಾಗಿ ಕರೆಯಲಾಗುತ್ತಿದೆ. ಚಿತ್ರಾಲ್ ಮತ್ತು ಸಿಂಧೂ ನಡುವೆ ಇರುವ ದಾರ್ದಿಸ್ತಾನದ ದಾರ್ದರು ಮುಖ್ಯವಾಗಿ ಅಷ್ಕುನ್ ಅಥವಾ ಯೆಷ್ಕುನ್ ಹಾಗೂ ಷಿನ್ ಜನಾಂಗದವರು. ಸತತ ದಾಳಿಗಳ ಪರಿಣಾಮವಾಗಿ ಅಷ್ಕುನ್ನರೂ ಅನಂತರ ಷಿನ್ನರೂ ಸಿಂಧೂ ಕಣಿವೆಯಿಂದ ಇಲ್ಲಿಗೆ ಬಂದಿರಬೇಕು. ಷಿನ್ ಜನರ ಮೂಲಪುರುಷರು ಹಿಂದುಗಳು. ಇವರು ಉತ್ತರಪೂರ್ವಗಳಲ್ಲಿ ಬಾಲ್ಟಿಸ್ತಾನದವರೆಗೂ ಹರಡಿದ್ದಾರೆ. ಅಲ್ಲಿ ಇವರು ತಾತರ್ ಜನರೊಂದಿಗೆ ಬೆರೆತು ಹೋಗಿದ್ದಾರೆ. ಷಿನ್ನರ ಪ್ರಮುಖ ಭಾಷೆ ಷೀನ ಇಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಇದೊಂದು ಪೈಶಾಚಿಭಾಷೆಯೆಂದು ಹೇಳಲಾಗಿದೆ. ಇರಾನಿಯನ್ ಮತ್ತು ಸಂಸ್ಕøತಗಳ ನಡುವಣ ಆರ್ಯಭಾಷೆಯ ಆರ್ಷೇಯ ರೂಪವಿದು.

ಉತ್ತರದ ಪರ್ವತ ಜಿಲ್ಲೆಗಳ ಜನರ ಮೈಕಟ್ಟು ವೇಷಭೂಷಣಗಳಲ್ಲಿ ವ್ಯತ್ಯಾಸಗಳಿಲ್ಲ. ಇವರು ಗಟ್ಟಿಮುಟ್ಟಾಗಿರುವರಲ್ಲದೆ ಸ್ಫುರದ್ರೂಪಿಗಳು. ಇವರು ಮೊಣಕಾಲನ್ನು ಮುಟ್ಟುವ ದಪ್ಪ ಉಣ್ಣೆ ನಿಲುವಂಗಿಗಳನ್ನೂ ಸಡಿಲ ಪೈಜಾಮುಗಳನ್ನೂ ಕಣಕಾಲುಪಟ್ಟಿ ಮತ್ತು ಬೂಟುಗಳನ್ನೂ ಧರಿಸುತ್ತಾರೆ. ಇವರು ಪೋಲೋ ಆಟಪ್ರಿಯರು, ನೃತ್ಯದಲ್ಲಿ ಆಸಕ್ತರು.

ಅಕ್ಕಿ, ಗೋದಿ ಮತ್ತಿತರ ಆಹಾರಧಾನ್ಯಗಳೂ ಹಣ್ಣುಗಳೂ ವಿಪುಲವಾಗಿ ಗಿಲ್ಗಿಟ್‍ನಲ್ಲಿ ಬೆಳೆಯಲಾಗುತ್ತದೆ. ಅಸ್ತಾರ್‍ನಲ್ಲಿ ಎತ್ತರದ ಬೆಟ್ಟಗುಡ್ಡ ಪ್ರದೇಶದಿಂದಾಗಿ ವ್ಯವಸಾಯ ಕಷ್ಟಕರ, ಉಣ್ಣೆ ನೇಯ್ಗೆ ಪ್ರಮುಖ ಕೈಗಾರಿಕೆ.

ಗಿಲ್ಗಿಟ್ ಪಟ್ಟಣ : ಇದೊಂದು ಚಿಕ್ಕ ಗಿರಿಧಾಮ. ಗಿಲ್ಗಿಟ್ ಪ್ರದೇಶದ ಆಡಳಿತ ಕೇಂದ್ರ ಸಮುದ್ರಮಟ್ಟದಿಂದ 1482 ಮೀ ಎತ್ತರದಲ್ಲಿದೆ ಹಿಂದೂಕುಷ್‍ನ ಕೋಡುಗಲ್ಲುಗಳ ಕೆಳಗೆ ಇರುವ ಈ ಪಟ್ಟಣ ಆಯಕಟ್ಟಿನ ಸ್ಥಳದಲ್ಲಿದೆ. ಪರ್ವತ ಮಾರ್ಗಗಳು ಸುತ್ತಮುತ್ತಲ ಕಣಿವೆಗಳತ್ತ ಸಾಗುತ್ತವೆ. ಹಿಂದುಗಳು ಆಳುತ್ತಿದ್ದಾಗ ಇದಕ್ಕೆ ಸಾರ್ಗಿನ್ ಎಂಬ ಹೆಸರಿತ್ತು. ಅನಂತರ ಇದಕ್ಕೆ ಗಿಲಿಟ್ ಎಂಬ ಹೆಸರು ಬಂತು. ಇದೇ ಕ್ರಮೇಣ ಗಿಲ್ಗಿಟ್ ಆಯಿತು. ಇಲ್ಲಿ ಕೆಲವು ಹಳೆಯ ಕಲ್ಲುಕಟ್ಟಡಗಳೂ ಬೌದ್ಧಶಿಲ್ಪಗಳೂ ಉಂಟು. ಇದು ಹಿಂದೆ ಒಂದು ಬೌದ್ಧ ಕೇಂದ್ರವಾಗಿತ್ತು. (ಎಚ್.ಎಂ.ಎನ್.ಆರ್.)

**ಗಿಲ್ಬರ್ಟ್ ದ್ವೀಪಗಳು:** ಪೆಸಿಫಿಕ್ ಸಾಗರದಲ್ಲಿರುವ ಹದಿನಾರು ಹವಳ ದ್ವೀಪಗಳ ಸಮೂಹ. ಉ.ಅ. $4^0$–ದ.ಅ. $3^0$ ಮತ್ತು ಪೂ.ರೇ. $172^0$–$178^0$ ಮಧ್ಯದಲ್ಲಿ ಇವು ಹರಡಿವೆ. ವಿಸ್ತೀರ್ಣ ಸು. 373 ಚ.ಕಿಮೀ. ಈ ಸಮೂಹದಲ್ಲಿ ಮುಖ್ಯವಾದ ದ್ವೀಪಗಳು ಮಾಕಿನ್ ಅಥವಾ ಬೂಟಾರಿಟಾರಿ, ಅಬೈಯಾಂಗ್, ತರಾವಾ. ಈ ದ್ವೀಪಗಳು ಸಾಮಾನ್ಯವಾಗಿ ತಗ್ಗಾಗಿವೆ. ಇಲ್ಲಿ ತೇವದಿಂದ ಕೂಡಿದ ವಾಯುಗುಣವಿದ್ದು, ಸರಾಸರಿ ವಾರ್ಷಿಕ 100–250 ಸೆಂಮೀ ಮಳೆಯಾಗುತ್ತದೆ. ಕೇದಗೆ, ಹಣ್ಣುಗಳು ಮತ್ತು ತೆಂಗು ಇಲ್ಲಿಯ ಬೆಳೆಗಳು. ಕೊಬ್ಬರಿ ಪರದೇಶಕ್ಕೆ ರಫ್ತಾಗುತ್ತದೆ. ಇಲ್ಲಿಯ ಜನ ಮೈಕ್ರೊನೇಷಿಯನರು. ಗಿಲ್ಬರ್ಟ್ ದ್ವೀಪಗಳನ್ನು ಪರಿಶೋಧಿಸಿದವರು ಜಾನ್ ಬೈರನ್ ಥಾಮಸ್ ಗಿಲ್ಬರ್ಟ್ (1765) ಮತ್ತು ಜಾನ್ ಮಾರ್ಷಲ್ (1788). 1892 ರಲ್ಲಿ ಇವು ಬ್ರಿಟಿಷರ ಆಡಳಿತಕ್ಕೆ ಬಂದವು. 1915 ರಲ್ಲಿ ಈ ದ್ವೀಪಗಳು ಮತ್ತು ಎಲಿಸ್ ದ್ವೀಪಗಳು ಸೇರಿ ಬ್ರಿಟಿಷ್ ವಸಾಹತುಗಳಾದವು. 1914 ರಲ್ಲಿ ಈ ದ್ವೀಪಗಳನ್ನು ಜಪಾನ್ ವಶಪಡಿಸಿಕೊಂಡಿತ್ತು. 1943 ರಲ್ಲಿ ಇವು ಮಿತ್ರಸೇನೆಗಳ ವಶಕ್ಕೆ ಬಂದವು. ಎಲಿಸ್ ದ್ವೀಪಗಳೂ ಸೇರಿದಂತೆ ಇವುಗಳ ಆಡಳಿತ ಈಗ ಬ್ರಿಟಿಷರ ಅಧೀನದಲ್ಲಿದೆ. (ಎಚ್.ಎನ್.)

**ಗೀಸ಼ರ್:** ಅತಿ ಶಾಖವುಳ್ಳ ನೀರು ಮತ್ತು ಹಬೆಗಳು ಒಂದಾದ ಮೇಲೊಂದರಂತೆ ಸ್ತಂಭಾಕೃತಿಯಲ್ಲಿ ಅಂತರಿಕ್ಷಕ್ಕೆ ಚಿಮ್ಮುವುದನ್ನು ಗೀಸ಼ರ್ ಅಥವಾ ಬಿಸಿನೀರಿನ ಊಟೆ ಅಥವಾ ಬುಗ್ಗೆ ಎನ್ನುವರು. ಅತಿ ಆಳದಲ್ಲಿ ಸಂಗ್ರಹಗೊಂಡಿರುವ ಅಂತರ್ಜಲ ಶಿಲಾಪಾಕದ ಸಂಪರ್ಕದಿಂದ ಆವಿಯಾಗುವುದು. ಹೀಗೆ ಸಂಗ್ರಹಗೊಂಡ ಆವಿಯು ಶಿಲಾಬಿರುಕುಗಳಲ್ಲಿ ಒತ್ತರಿಸುತ್ತದೆ. ಒಳ ಒತ್ತಡ ಹೆಚ್ಚಾಗಿ ಬಿರುಕುಗಳೊಳಗಿಂದ ಹೊರ ಚಿಮ್ಮುವುದು. ಅನಂತರ ಬಿಸಿ ನೀರು ಹೊರಬರುವುದು. ಹೀಗೆ ನಿಗದಿತ ಅವಧಿಗೊಮ್ಮೆ ಹಬೆ ಮತ್ತು ನೀರು ಹೊರಚಿಮ್ಮುವ ಮೂಲಕ ಗೀಸ಼ರ್‍ಗಳು ಉಂಟಾಗುವುವು. ಗೀಸ಼ರ್‍ನಿಂದ ನೀರು ಕೆಲವು ಮೀ ಗಳಿಂದ ನೂರಾರು ಮೀ ಗಳಷ್ಟು ಎತ್ತರಕ್ಕೂ ಚಿಮ್ಮುವುದುಂಟು.



ಓಲ್ಡ್ ಫೇತ್‍ಫುಲ್ ಗೀಸರ್

ಅಮೆರಿಕದ ಸಂಯುಕ್ತ ಸಂಸ್ಥಾನಗಳ ವ್ಯೋಮಿಂಗ್‍ನ ಯೆಲ್ಲೋಸ್ಟೋನ್ ರಾಷ್ಟ್ರೀಯ ಉದ್ಯಾನವನ, ನ್ಯೂಜ಼ಿಲೆಂಡ್, ಐಸ್‍ಲೆಂಡ್, ಅಲಾಸ್ಕ, ಚಿಲಿ, ಟಿಬೆಟ್, ಜಪಾನ್ ಮತ್ತು ಇಂಡೊನೇಷ್ಯಗಳಲ್ಲಿ ಗೀಸ಼ರ್‍ಗಳನ್ನು ಕಾಣಬಹುದು. ಇವುಗಳ ಪೈಕಿ, ಯೆಲ್ಲೋ–ಸ್ಟೋನ್ ಪಾರ್ಕ್ ಸುಪ್ರಸಿದ್ಧವಾದುದು. ಅಲ್ಲಿ 100ಕ್ಕೂ ಹೆಚ್ಚು ಗೀಸ಼ರ್‍ಗಳೂ 3000 ಕ್ಕೂ ಹೆಚ್ಚು ಬಿಸಿ ನೀರಿನ ಚಿಲುಮೆಗಳಿವೆ. ಇವುಗಳಲ್ಲಿ ಪಯಿಕ್ ಪಟ್ ಎಂಬ ಹೆಸರಿನ ಗೀಸ಼ರ್ ಪ್ರಸಿದ್ಧವಾದದ್ದು. ಇಲ್ಲಿನ ಓಲ್ಡ್ ಫೇತ್‍ಫುಲ್ ಎಂಬ ಗೀಸ಼ರ್ ಪ್ರತಿ 70 ನಿಮಿಷಗಳಿಗೊಮ್ಮೆ ಸು. 46 ಮೀ ಎತ್ತರಕ್ಕೆ ಚಿಮ್ಮುವುದು. ಇತ್ತೀಚೆಗೆ ಇದರ ಕಾಲದ ಅಂತರ ವ್ಯತ್ಯಾಸವಾಗುತ್ತಿದೆ. ಅದೇ ಪಾರ್ಕಿನಲ್ಲಿರುವ ಕ್ಯಾಸಲ್ ಎನ್ನುವ ಇನ್ನೊಂದು ಗೀಸ಼ರ್‍ನಿಂದ ಹಾರುವ ನೀರು 79 ಮೀ ಮೀರಿದ ಎತ್ತರ ತಲುಪುವುದುಂಟು. ಗೀಸ಼ರ್‍ನಿಂದ ಹೊರಬರುವ ನೀರಿನಲ್ಲಿ ಅನೇಕ ಖನಿಜಾಂಶಗಳು ಮತ್ತು ಲವಣಾಂಶಗಳು ಕರಗಿರುತ್ತವೆ. ಗೀಸರುಗಳ ವಿಚ್ಛೇದಕ ಪ್ರವೃತ್ತಿಯ ಕಾರಣ, ನೆಲದಡಿಯಲ್ಲೇ ಅನತಿ ಆಳದಲ್ಲಿರುವ ಬಲುಕಾವಿನ ಕಲ್ಲುಗಳ



ರಾಶಿ ಎಂದು ಊಹಿಸಲಾಗಿದೆ. ಜ್ವಾಲಾಮುಖಿಗಳು ಇರುವಲ್ಲಿ ಗೀಸರ್‌ಗಳು ಕಂಡುಬರುವುದರಿಂದ ಮೇಲಿನ ಊಹೆಗೆ ಸಮರ್ಥನೆ ನೀಡುವುದು. (ಎ.ಎಸ್.ಸಿ.ಐ.)

**ಗುಂಟೂರು:** ಆಂಧ್ರ ಪ್ರದೇಶದ ಒಂದು ಜಿಲ್ಲೆ ಮತ್ತು ಆ ಜಿಲ್ಲೆಯ ಮುಖ್ಯಪಟ್ಟಣ. ಹೈದರಾಬಾದ್ ನಗರದ ಆಗ್ನೇಯಕ್ಕೆ 400 ಕಿಮೀ ದೂರದಲ್ಲಿದೆ. ಇದು ದಕ್ಷಿಣ ರೈಲ್ವೆಯ ವಿಜಯವಾಡ–ಗುಂತಕಲ್ ಮಾರ್ಗದ ಒಂದು ಮುಖ್ಯ ರೈಲು ನಿಲ್ದಾಣ. ಉಷ್ಣತೆ ಬೇಸಗೆಯಲ್ಲಿ ಸರಾಸರಿ $32^0$ ಸೆಂ., ಚಳಿಗಾಲದಲ್ಲಿ $20^0$ ಸೆಂ. ಇಲ್ಲಿ ಆಂಧ್ರ ವಿಶ್ವವಿದ್ಯಾಲಯದ ಮನ್ನಣೆ ಪಡೆದ ಆರು ಕಾಲೇಜುಗಳಿವೆ. ಸೆಣಬು, ಎಣ್ಣೆ ಮತ್ತು ಅಕ್ಕಿ ಗಿರಣಿಗಳು, ಪಟ್ಟಣಗಳೊಂದಿಗೆ ರೈಲು ಮತ್ತು ರಸ್ತೆ ಸಂಪರ್ಕ ಹೊಂದಿರುವುದರಿಂದ ಇದೊಂದು ಪ್ರಮುಖ ವ್ಯಾಪಾರ ಸ್ಥಳ. ಜನಸಂಖ್ಯೆ 514,707. 18ನೆಯ ಶತಮಾನದ ಉತ್ತರಾರ್ಧದಲ್ಲಿ ಫ್ರೆಂಚರು ಈ ಪಟ್ಟಣವನ್ನು ಸ್ಥಾಪಿಸಿದರೆಂದು ಪ್ರತೀತಿ. ಗುಂಟೂರು ಸ್ವಲ್ಪ ಕಾಲ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು. 1788ರಲ್ಲಿ ಇದು ಬ್ರಿಟಿಷರ ಅಧೀನಕ್ಕೆ ಬಂತು. 1866ರಲ್ಲಿ ಇಲ್ಲಿ ಪೌರಸಭೆ ಸ್ಥಾಪಿತವಾಯಿತು.

ಜಿಲ್ಲೆಯ ವಿಸ್ತೀರ್ಣ 9283 ಚ.ಕಿಮೀ. ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯವುಂಟು. ಬತ್ತ, ಜೋಳ, ಮೆಣಸಿನಕಾಯಿ, ನೆಲಗಡಲೆ, ಹೊಗೆಸೊಪ್ಪು ಇಲ್ಲಿಯ ಬೆಳೆಗಳು. ವನಸ್ಪತಿ, ಜವಳಿ, ಸಿಮೆಂಟ್ ಮತ್ತು ಹೊಗೆಸೊಪ್ಪಿನ ಕಾರ್ಖಾನೆಗಳು ಈ ಜಿಲ್ಲೆಯಲ್ಲಿವೆ. ಜಿಲ್ಲೆಗೆ ಸೇರಿದ ಅಮರಾವತಿ, ನಾಗಾರ್ಜುನಕೊಂಡಗಳು ಬೌದ್ಧರ ಕಾಲದ ಅವಶೇಷಗಳ ನೆಲೆಗಳಾಗಿವೆ. ಜನಸಂಖ್ಯೆ 471051. (ಆರ್.ಪಿ.ಎಸ್.)

**ಗುಂಡ್ಲುಪೇಟೆ:** ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಪಟ್ಟಣ. ಮೈಸೂರು ನಗರದಿಂದ ದಕ್ಷಿಣಕ್ಕೆ 57 ಕಿಮೀ ದೂರದಲ್ಲಿದೆ. ಮೈಸೂರು – ಉದಕಮಂಡಲ ರಸ್ತೆಯಲ್ಲಿ ಗುಂಡಲ್ ನದಿಯ ದಂಡೆಯ ಮೇಲಿರುವ ಈ ಪಟ್ಟಣ ನಂಜನಗೂಡಿನಿಂದ 38 ಕಿಮೀ ದೂರದಲ್ಲಿದೆ. ಜನಸಂಖ್ಯೆ 23,368.

ಊರಿನ ಪ್ರಾಚೀನ ಹೆಸರು ವಿಜಯಪುರ. ಇದು ಒಂದು ಪ್ರಮುಖ ವ್ಯಾಪಾರ ಕೇಂದ್ರ. ತಮಿಳುನಾಡು – ಕೇರಳ ಮತ್ತು ಕರ್ನಾಟಕ ರಾಜ್ಯಗಳ ಮಧ್ಯ ಮಾರ್ಗದಲ್ಲಿದೆ. ಇದು 1887 ರಿಂದಲೂ ತಾಲ್ಲೂಕಿನ ಮುಖ್ಯ ಪಟ್ಟಣವಾಗಿದೆ. ಊರು ಗುಂಡಲ್ ಎಂಬ ಚಿಕ್ಕ ನದಿಯ ದಂಡೆಯಲ್ಲಿದ್ದು ಇದನ್ನು ಗುಂಡ್ಲುಪೇಟೆ ಎಂದು ಕರೆಯಲಾಗಿದೆ. ಇಲ್ಲಿನ ವಿಜಯನಾರಾಯಣ ದೇವಾಲಯ ಪ್ರಸಿದ್ಧವಾದದ್ದು. ಇದನ್ನು ಹೊಯ್ಸಳ ವಿಷ್ಣುವರ್ಧನ ಕಟ್ಟಿಸಿದನೆಂದು ಪ್ರತೀತಿ.

ಗುಂಡ್ಲುಪೇಟೆ ತಾಲ್ಲೂಕಿನ ಪಶ್ಚಿಮಕ್ಕೂ ದಕ್ಷಿಣಕ್ಕೂ ಕಾಡುಗಳುಂಟು. ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆಗೆ ಸಮಾನಾಂತರದಲ್ಲಿ ಹಬ್ಬಿರುವ ಗಿರಿ ಸಾಲುಗಳು ಗೋಪಾಲಸ್ವಾಮಿ ಬೆಟ್ಟದಲ್ಲಿ ಕೂಡುತ್ತವೆ. ಹಂಗಳ ಹೋಬಳಿಗೆ ಉತ್ತರದಲ್ಲಿ ಇನ್ನೊಂದು ಬೆಟ್ಟ ಸಾಲುಂಟು.

ತಾಲ್ಲೂಕಿನ ಮುಖ್ಯ ಬೆಳೆ ಜೋಳ. ರಾಗಿಯನ್ನೂ ತಕ್ಕಮಟ್ಟಿಗೆ ಬೆಳೆಯಲಾಗುತ್ತದೆ. ತೊಗರಿ, ಅವರೆ, ಹರಳು, ಬತ್ತ ಇತರ ಬೆಳೆಗಳು. ಗುಂಡಲ್ ನದಿ ಈ ತಾಲ್ಲೂಕಿನ ನಡುವೆ ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತದೆ. (ಕೆ.ಆರ್.)

**ಗುಜರಾತ್:** ಭಾರತದ ಒಂದು ರಾಜ್ಯ. ಅರಬ್ಬೀ ಸಮುದ್ರ ತೀರದಲ್ಲಿ, ಉ. ಅ. $20^0 1'$ – $24^0 7'$ ಮತ್ತು ಪೂ. ರೇ. $68^0 4'$ – $74^0 4'$ ನಡುವೆ ಇದೆ. ಉತ್ತರದಲ್ಲಿ ಪಾಕಿಸ್ತಾನ, ಈಶಾನ್ಯದಲ್ಲಿ ರಾಜಸ್ತಾನ, ಪೂರ್ವದಲ್ಲಿ ಮಧ್ಯಪ್ರದೇಶ ಮತ್ತು ದಕ್ಷಿಣದಲ್ಲಿ ಮಹಾರಾಷ್ಟ್ರ ಇವೆ. ಗುಜರಾತಿನ ಒಂದು ವೈಶಿಷ್ಟ್ಯವೆಂದರೆ ಅದರ ಕರಾವಳಿ. ಭಾರತದ ಬೇರಾವ ರಾಜ್ಯಕ್ಕೂ ಇಷ್ಟು ಉದ್ದವಾದ ಸಮುದ್ರತೀರವಿಲ್ಲ. ಇದು ಗುಜರಾತಿನ ವಾಯುಗುಣ, ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿದೆ. ಗುಜರಾತಿನ ವಿಸ್ತೀರ್ಣ 1,96,000 ಚ.ಕಿಮೀ. ಭಾರತದ ಒಟ್ಟು ವಿಸ್ತೀರ್ಣದಲ್ಲಿ ಶೇ. 6.1 ರಷ್ಟಿರುವ ಈ ರಾಜ್ಯದ ಜನಸಂಖ್ಯೆ 50,596,992. ಭಾರತದ ಶೇ. 4.8 ರಷ್ಟಿದೆ. ಗುಜರಾತಿನ ಭಾಷೆ ಗುಜರಾತಿ. ರಾಜಧಾನಿ ಗಾಂಧಿನಗರ. ಜನಸಂಖ್ಯೆ 1,95,891.

ಭೌತಲಕ್ಷಣ : ಗುಜರಾತ್ ರಾಜ್ಯವನ್ನು ಪ್ರಾಕೃತಿಕವಾಗಿ ಐದು ಭಾಗಗಳಾಗಿ ವಿಂಗಡಿಸಬಹುದು : 1. ತೀರದ ತಗ್ಗುನೆಲ, ರಣ್ ಪ್ರದೇಶ ಮತ್ತು ಒಳನಾಡಿನ ಸರೋವರಗಳು, 2. ಗುಜರಾತಿನ ಮೈದಾನ, 3. ಸೌರಾಷ್ಟ್ರ ಪ್ರಸ್ಥಭೂಮಿ, 4. ಬೆಟ್ಟಗಳಂಚಿನ ಬರಡು ನೆಲಪಟ್ಟಿ, 5. ಬೆಟ್ಟಗಳ ಪ್ರದೇಶ.

ತೀರದ ತಗ್ಗುನೆಲ ಸಾಮಾನ್ಯವಾಗಿ ಜವುಗಿನಿಂದ ಕೂಡಿದ್ದು, ಸಮುದ್ರತಳದಿಂದ ಈಚೆಗೆ ಮೇಲೆದ್ದ ಈ ಪ್ರದೇಶದ ಜಲೋತ್ಸಾರಣ ಇನ್ನೂ ಕ್ರಮಬದ್ಧವಾಗಿಲ್ಲ. ಇಲ್ಲಿನ ಅನೇಕ ನದಿ ತೊರೆಗಳು ಬಲು ಸಣ್ಣವು. ಕಚ್‌ಗೆ ಉತ್ತರದಲ್ಲೂ ಕಚ್‌ನ ಮತ್ತು ಗುಜರಾತಿನ ಮುಖ್ಯ ಭೂಮಿಯ ನಡುವೆಯೂ ಇರುವ ರಣ್‌ಗಳೂ ಕರಾವಳಿಯ ಜವುಗು ನೆಲದಂತೆ ಉದ್ಭವವಾದಂಥವು. ಕಚ್ ರಣ್‌ದ ವಿಸ್ತೀರ್ಣ 18,130 ಚ.ಕಿಮೀ. ಚಿಕ್ಕ ರಣ್ ಕಿರಿದು. ಇದರ ವಿಸ್ತೀರ್ಣ 4000 ಚ.ಕಿಮೀ ಗಿಂತ ಹೆಚ್ಚಿಲ್ಲ. ಮಳೆಯಿಲ್ಲದಾಗ ಇವೆರಡೂ ಪ್ರದೇಶಗಳೂ ಒಣನೆಲಗಳಾಗಿರುತ್ತವೆ. ಮಳೆಗಾಲದಲ್ಲಿ ನೀರು ಹೋಗದೆ ಇವು ಜಲಾವೃತವಾಗುತ್ತವೆ.




ಕರಾವಳಿಯ ಜವುಗು ನೆಲಕ್ಕೂ ಒಳನಾಡಿನ ಪ್ರಸ್ಥಭೂಮಿ ಮತ್ತು ಪರ್ವತಗಳಿಗೂ ನಡುವೆ ಗುಜರಾತಿನ ಮೈದಾನ ಹಬ್ಬಿದೆ. ಇದು ಸಬರ್ಮತೀ, ಮಾಹೀ, ನರ್ಮದ, ತಾಪಿ ಮತ್ತು ಅವುಗಳ ಉಪನದಿಗಳಿಂದ ಕೂಡಿದ್ದು, ಮಧ್ಯಭಾರತದ ಎತ್ತರದ ನೆಲದಿಂದ ಥಟ್ಟನೆ ಕೆಳಕ್ಕೆ ಇಳಿಯುವ ನದಿಗಳು ಇಲ್ಲಿ ನಿಧಾನವಾಗಿ, ಅಂಕುಡೊಂಕಾಗಿ, ಅಲ್ಲಲ್ಲಿ ನಿಂತು ಸಾಗುತ್ತವೆ. ನದಿಗಳು ತಂದುಹಾಕಿದ ಮೆಕ್ಕಲು ಮಣ್ಣಿನಿಂದ ಮೈದಾನ ಆವೃತವಾಗಿದೆ. ಇಲ್ಲಿಯ ಮಣ್ಣು ವೈವಿಧ್ಯಮಯ.

ಸೌರಾಷ್ಟ್ರ ಪ್ರಸ್ಥಭೂಮಿ 75 ಮೀ ನಿಂದ 300 ಮೀ ವರೆಗೆ ಎತ್ತರವಾಗಿದೆ. ಪಶ್ಚಿಮ ಭಾರತದ ಬಹುಭಾಗವನ್ನು ಒಮ್ಮೆ ಆವರಿಸಿದ್ದ ಲಾವದ ಉಳಿಕೆಯ ನೆಲದಿಂದ ಕೂಡಿದೆ. ಪ್ರಸ್ಥಭೂಮಿ ಸ್ವಲ್ಪ ಸ್ವಲ್ಪವಾಗಿ ಮೇಲೇರಿ, ಮಧ್ಯ ಭಾಗದಲ್ಲಿ ಬೆಟ್ಟಗುಡ್ಡಗಳಾಗಿ ಪರಿಣಮಿಸಿದೆ. ಇದರ ಉತ್ತರದಲ್ಲಿ ಮಂಡ ಬೆಟ್ಟಗಳೂ ದಕ್ಷಿಣದಲ್ಲಿ ಗಿರ್ ಬೆಟ್ಟಗಳೂ ಇವೆ. ಇವೆರಡನ್ನೂ ಕೂಡಿಸುವ ಕಿರಿದಾದ ಪ್ರದೇಶ ಈ ಪ್ರಸ್ಥಭೂಮಿಯ ಉಳಿದ ಭಾಗಕ್ಕಿಂತ ಎತ್ತರವಾಗಿದೆ. ಮಚ್ಛೂ, ಆಜಿ, ಭಾದರ್, ಶತ್ರುಂಜೀ ಮತ್ತು ಭಗವಾ ಇಲ್ಲಿಯ ಮುಖ್ಯ ನದಿಗಳು. ಕಚ್‌ನ ಪ್ರಸ್ಥಭೂಮಿಪ್ರದೇಶ ಪೂರ್ವದಿಂದ ಪಶ್ಚಿಮದ ಕಡೆಗೆ ಇಳಿಜಾರಾಗಿದೆ. ಇಲ್ಲಿಯ ನದಿಗಳು ಕಚ್ ಖಾರಿಯೊಳಕ್ಕೆ ಹರಿಯುತ್ತವೆ.

ರಾಜ್ಯದಿಂದ ಹೊರಕ್ಕೆ ಅಬು ಶಿಖರದ ಗುಂಪಿನಲ್ಲಿ ಗುರುಶಿಖರ ಅತ್ಯಂತ ಎತ್ತರವಾದ್ದು. ಸಸ್ಯರಹಿತವಾದ ಈ ಪ್ರದೇಶದ ಮುಖ್ಯ ಬೆಟ್ಟಗಳು ರತನಮಲ್ ಮತ್ತು ಪಾವಗಡ. ಪಶ್ಚಿಮ ಭಾಗದಲ್ಲಿ ಬನಾಸ್ ನದಿಯೂ ಪೂರ್ವದಲ್ಲಿ ಸಬರ್ಮತಿಯೂ ಹುಟ್ಟುತ್ತವೆ. ಛೋಟಾ ಉದಯಪುರಕ್ಕೆ ದಕ್ಷಿಣಕ್ಕಿರುವ ಶ್ರೇಣಿ ನರ್ಮದ ಮತ್ತು ತಾಪಿ ನದಿಗಳ ಉಗಮ ಪ್ರದೇಶ. ನರ್ಮದೆಯ ಉತ್ತರ ಪ್ರದೇಶ ವಿಂಧ್ಯಪರ್ವತಗಳ ಭಾಗ. ಅದಕ್ಕೆ ವನಮಾಲಾ ಬೆಟ್ಟಗಳೆಂಬ ಹೆಸರಿದೆ. ನರ್ಮದೆಗೆ ದಕ್ಷಿಣದಲ್ಲಿರುವುದು ಸಾತ್ಪುರ ಬೆಟ್ಟಗಳ ಪಶ್ಚಿಮದ ಚಾಚು. ಇದು ರಾಜಪಿಪ್ಲ ಎನಿಸಿಕೊಂಡಿದೆ. ತಾಪಿಗೆ ದಕ್ಷಿಣದ್ದು ಸಹ್ಯಾದ್ರಿಯ ಅಂಚು. ಇಲ್ಲಿಂದ ಹಲವು ಸಣ್ಣ ನದಿಗಳು ಹರಿದು ಬಂದು ನೆಟ್ಟಗೆ ಸಮುದ್ರ ಸೇರುತ್ತವೆ. ಇವುಗಳ ಪೈಕಿ ಪೂರ್ಣಾ,ಅಂಬಿಕಾ, ಪಾರ್ ಮತ್ತು ದಮಣಗಂಗ ಮುಖ್ಯವಾದವು.

ಕಚ್‌ನಲ್ಲಿ ನದಿಗಳು ಮಧ್ಯದ ಎತ್ತರ ಪ್ರದೇಶದಿಂದ ಉತ್ತರಕ್ಕೂ ದಕ್ಷಿಣಕ್ಕೂ ಹರಿಯುತ್ತವೆ. ದಕ್ಷಿಣಕ್ಕೆ ಹರಿಯುವ ನದಿಗಳಲ್ಲಿ ಮುಖ್ಯವಾದವು ಮತೀ, ನಯೀರಾ, ಕನಕಮತೀ ಮತ್ತು ರುಕ್ಮಮತೀ. ಇವಕ್ಕೆ ಉಪನದಿಗಳು ಹೆಚ್ಚಾಗಿಲ್ಲ. ಪ್ರತಿಯೊಂದು ತೊರೆಯೂ ರಣ್‌ನಲ್ಲೋ ಕಚ್ ಖಾರಿಯಲ್ಲೋ ಕೊನೆಗೊಳ್ಳುತ್ತದೆ. ನದಿಗಳು ಬೇಸಗೆಯಲ್ಲಿ ಒಣಗಿಹೋಗುತ್ತವೆ; ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ.

ಸೌರಾಷ್ಟ್ರದಲ್ಲಿ ಮಧ್ಯದ ದಿಣ್ಣೆನೆಲದಿಂದ ಎಲ್ಲ ದಿಕ್ಕುಗಳಿಗೂ ನದಿಗಳು ಪ್ರವಹಿಸುತ್ತವೆ. ಭಾದರ್ ಅತ್ಯಂತ ಉದ್ದವಾದ ನದಿ (260 ಕಿಮೀ). ಇದು ಪಶ್ಚಿಮಕ್ಕೆ ಹರಿದು ಪೋರ್‌ಬಂದರಿನ ಬಳಿಯ ನವೀಬಂದರಿನಲ್ಲಿ ಅರಬ್ಬಿ ಸಮುದ್ರವನ್ನು ಸೇರುತ್ತದೆ.

ಗುಜರಾತ್ ಮೈದಾನದ ನದಿಗಳಲ್ಲಿ ಬನಾಸ್, ಸರಸ್ವತಿ ಮತ್ತು ರೂಪೆನ್ ನದಿಗಳು ಚಿಕ್ಕ ರಣ್ ಅನ್ನು ಸೇರುತ್ತವೆ. ಉಳಿದವು ಸಮುದ್ರ ಸೇರುವುದು ಕ್ಯಾಂಬೇ ಖಾರಿಯಲ್ಲಿ. ಚಿಕ್ಕ ರಣ್ ಸೇರುವ ನದಿಗಳು ಬೇಸಗೆಯಲ್ಲಿ ಒಣಗಿರುತ್ತವೆ.

ಗುಜರಾತಿನ ಅತ್ಯಂತ ಮುಖ್ಯ ನದಿಗಳು ನರ್ಮದ ಮತ್ತು ತಾಪಿ. ಗುಜರಾತಿನಲ್ಲಿ ನರ್ಮದ ನದಿ ಹರಿಯುವ ದೂರ 150 ಕಿಮೀ. ಇದು ಭರೋಚಡದ ಬಳಿ ಕ್ಯಾಂಬೇ ಖಾರಿಯನ್ನು ಸೇರುತ್ತದೆ. ಓರ್ಸಂಗ್, ಕರ್ಜನ್, ಅಮರಾವತಿ, ಭೂಖಿ – ಇವು ನರ್ಮದೆಯ ಮುಖ್ಯ ಉಪನದಿಗಳು.

ವಾಯುಗುಣ : ಉತ್ತರದಲ್ಲಿ ರಾಜಸ್ಥಾನದಿಂದ ದಕ್ಷಿಣದಲ್ಲಿ ಕೊಂಕಣ ಸೀಮೆಯ ವರೆಗೆ ಹಬ್ಬಿರುವ ಗುಜರಾತು ಅತಿ ಹೆಚ್ಚಿನ ಮಳೆ ಪ್ರದೇಶದಿಂದ ಮರುಭೂಮಿಯ ವರೆಗಿನ ನಾನಾ ವಾಯುಗುಣಗಳಿಂದ ಕೂಡಿದ ಭಾಗಗಳನ್ನೊಳಗೊಂಡಿದೆ. ರಾಜ್ಯದ ದಕ್ಷಿಣ ಭಾಗದಲ್ಲಿ 200 ಸೆಂಮೀ ಮಳೆಯಾದರೆ, ಅತ್ಯಂತ ಉತ್ತರದಲ್ಲಿ, ಬನಸ್ಕಂಠಾ ಜಿಲ್ಲೆಯ ಕೆಲವು ಭಾಗಗಳಲ್ಲಿ, 30–40 ಸೆಂಮೀ ಗಳಿಗಿಂತ ಹೆಚ್ಚು ಮಳೆಯಿಲ್ಲ. ಇಡೀ ರಾಜ್ಯ ಮಾನ್ಸೂನ್ ವಲಯದಲ್ಲಿದೆ. ಜೂನ್‌ನಿಂದ ಅಕ್ಟೋಬರ್‌ವರೆಗೆ ನೈರುತ್ಯ ಮಳೆಮಾರುತದಿಂದ ಮಳೆಯಾಗುತ್ತದೆ. ಚಳಿಗಾಲದಲ್ಲಿ ಹವೆ ಶುಷ್ಕವಾಗಿಯೂ ಹಿತವಾಗಿಯೂ ಇರುತ್ತದೆ. ಆದರೆ ಉತ್ತರ ಭಾರತದಲ್ಲಿ ಬೀಸುವ ಶೀತಮಾರುತಗಳು ಗುಜರಾತನ್ನೂ ಒಮ್ಮೊಮ್ಮೆ ಪ್ರವೇಶಿಸುವುದುಂಟು. ವರ್ಷದಲ್ಲಿ ಜನವರಿ ಅತ್ಯಂತ ಶೀತಮಾಸ. ನವೆಂಬರಿನ ಮಧ್ಯದಿಂದ ಫೆಬ್ರವರಿಯ ಮಧ್ಯದವರೆಗೆ ಚಳಿಗಾಲ. ಅಲ್ಲಿಂದ ಮುಂದೆ ಉಷ್ಣತೆ ಏರುತ್ತ ಸಾಗಿ, ಮೇ ತಿಂಗಳಲ್ಲಿ ಗರಿಷ್ಠವಾಗುತ್ತದೆ. ನೈರುತ್ಯ ಮಾನ್ಸೂನ್ ಮಳೆಮಾರುತದ ಆಗಮನದಿಂದಾಗಿ ಜೂನ್ ತಿಂಗಳು ಥಟ್ಟನೆ ತಂಪಾಗುತ್ತದೆ. ಆದರೆ ಮುಖ್ಯವಾಗಿ ಕರಾವಳಿಯಲ್ಲಿ ವಾತಾವರಣದ ತೇವದಿಂದಾಗಿ ಹವೆ ಅಷ್ಟೇನೂ ಹಿತಕರವಾಗಿರುವುದಿಲ್ಲ. ಚಳಿಗಾಲವೇ ಹೆಚ್ಚು ಚೈತನ್ಯದಾಯಕ ಕಾಲ. ರಾಜ್ಯದ ಕೆಲವು ಭಾಗಗಳಲ್ಲಿ ಮೇ ತಿಂಗಳಲ್ಲಿ ಉಷ್ಣತೆ $45^0$ಸೆ. ಮುಟ್ಟುವುದುಂಟು. ರಾಜ್ಯದ ಬಹುಭಾಗ ಉ ಮತ್ತು $42.5^0$ಸೆ. ಸಮಶಾಖರೇಖೆಯ ನಡುವೆ ಬರುತ್ತದೆ. ಕಚ್, ಸೌರಾಷ್ಟ್ರಗಳ ಕರಾವಳಿಯಲ್ಲಿ ಉಷ್ಣತೆ ಕನಿಷ್ಠ. ಇದು ಕಡಲಿನ ಪ್ರಭಾವ. ಸಮುದ್ರದ ಗಾಳಿ ಒಳನಾಡಿನಲ್ಲಿ 30 – 40 ಕಿಮೀ ಬೀಸುವುದುಂಟು. ಜನವರಿಯಲ್ಲಿ ಎಲ್ಲೂ ಗರಿಷ್ಠ ಉಷ್ಣತೆ $30^0$ ಸೆಂ. ನ್ನು ದಾಟುವುದಿಲ್ಲ. ದಕ್ಷಿಣಕ್ಕೆ ಬಂದಂತೆ ಉಷ್ಣತೆ ಅಧಿಕವಾಗುತ್ತದೆ.

ಗುಜರಾತಿನಲ್ಲಿ ಮಳೆಯ ಪರಿಮಾಣ ಒಂದೆಡೆಯಿಂದ ಇನ್ನೊಂದೆಡೆಗೆ ತೀವ್ರವಾಗಿ ವ್ಯತ್ಯಾಸವಾಗುತ್ತದೆ. ದಕ್ಷಿಣದಲ್ಲಿರುವ ಬಲ್ಸಾರ್ ಜಿಲ್ಲೆಯಲ್ಲಿ 200 ಸೆಂಮೀ ಮಳೆ. ಉತ್ತರಕ್ಕೆ ಹೋದಂತೆ ಇದು ಥಟ್ಟನೆ ಇಳಿಯುತ್ತದೆ. ಕೇವಲ 100 ಕಿಮೀ ಉತ್ತರದಲ್ಲಿ (ಉದಾ : ಸೂರತ್) ಇದು 104 ಸೆಂಮೀ ಅಲ್ಲಿಂದ ಮುಂದಕ್ಕೆ ಕ್ರಮಕ್ರಮವಾಗಿ ಕಡಿಮೆಯಾಗುತ್ತದೆ. ಸೌರಾಷ್ಟ್ರದಲ್ಲಿ 50 ಸೆಂಮೀ ಗಿಂತ ಕಡಿಮೆ ಮಳೆ. ಗಿರ್ನಾರಿನಲ್ಲಿ ಮಾತ್ರ 70 ಸೆಂಮೀ. ಮಳೆಯಾಗುತ್ತದೆ. ಅದು ಹಸುರು ತುಂಬಿದ ಪ್ರದೇಶ. ಕಚ್ ಅರೆ – ಮರುಭೂಮಿ. ಅಲ್ಲಿ ಬಹುಭಾಗದಲ್ಲಿ 40 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ. ಭುಜ್‌ನಲ್ಲಿ ಕೇವಲ 34 ಸೆಂಮೀ. ಗುಜರಾತಿನ ಬಯಲುಸೀಮೆಯಲ್ಲಿ ಉತ್ತರಕ್ಕೆ ಹೋದಂತೆ ಮಳೆ ಕಡಿಮೆ. ಬರೋಡದಲ್ಲಿ 91 ಸೆಂಮೀ, ಅಹಮದಾಬಾದಿನಲ್ಲಿ 73 ಸೆಂಮೀ, ಭಾವನಗರದಲ್ಲಿ 50 ಸೆಂಮೀ, ಎಲ್ಲೆಲ್ಲಿ ಬೆಟ್ಟಗಳಿವೆಯೊ ಅಲ್ಲಿ ನೆರೆಯ ಪ್ರದೇಶಕ್ಕಿಂತ ಹೆಚ್ಚು ಮಳೆಯಾಗುತ್ತದೆ. ಬನಾಸ್ಕಂಠಾದಲ್ಲಿ ಆರಾವಳಿ ಮತ್ತು ಅಬು ಶ್ರೇಣಿಗಳ ನೆರೆಯ ಪ್ರದೇಶದಲ್ಲಿ 80 ಸೆಂಮೀ ಗಿಂತ ಹೆಚ್ಚು ಮಳೆಯಾಗುತ್ತದೆ.

ಮುಖ್ಯ ಸ್ಥಳಗಳು : 1411ರಲ್ಲಿ ಸುಲ್ತಾನ್ ಅಹಮ್ಮದ್ ಷಹ ಕಟ್ಟಿಸಿದ ಅಹಮದಾಬಾದ್ ಪಶ್ಚಿಮ ಭಾರತದ ಎರಡನೆಯ ಅತಿ ದೊಡ್ಡ ನಗರ. ಇದು ಬಟ್ಟೆಯ ಉತ್ಪಾದನೆಯ ದೃಷ್ಟಿಯಿಂದ ಭಾರತದ ಮ್ಯಾಂಚೆಸ್ಟರ್ ಎನಿಸಿಕೊಂಡಿದೆ. 1615ರಲ್ಲಿ ಈ ನಗರವನ್ನು ಕಣ್ಣಾರೆ ಕಂಡ ಥಾಮಸ್ ರೋ ಈ ನಗರ ಲಂಡನ್ನಿನಷ್ಟು ದೊಡ್ಡದೆಂದೂ ಹಿಂದೂಸ್ತಾನದಲ್ಲೇ ಅಲ್ಲದೆ ಪ್ರಪಂಚದಲ್ಲೇ ಸುಂದರ ನಗರಗಳಲ್ಲೊಂದೆನಿಸಿದೆಯೆಂದೂ ಅಭಿಪ್ರಾಯ ಪಟ್ಟಿದ್ದಾನೆ. ಇಲ್ಲಿರುವ ಹಿಂದು ಮತ್ತು ಜೈನಮಂದಿರಗಳೂ ಶಿಲ್ಪಕಲಾ ವೈಭವವನ್ನು ಮೆರೆಯುವ ಮಸೀದಿ ಮತ್ತು ಸ್ಮಾರಕಗಳೂ ಮನಸೆಳೆಯುವಂತಿವೆ. ಗಾಂಧಿಯವರು ಸ್ಥಾಪಿಸಿದ ಸಾಬರಮತಿ ಆಶ್ರಮ ಬಳಿಯಲ್ಲೇ ಇದೆ. ಅಹಮದಾಬಾದಿನಿಂದ 80 ಕಿಮೀ ದೂರದಲ್ಲಿರುವ ಲೋಥಾಲ್‌ನಲ್ಲಿ ದೊರೆತ ಅವಶೇಷಗಳು ಗುಜರಾತಿನ ನಾಗರಿಕತೆ ಹರಪ್ಪಾ ನಾಗರಿಕತೆಯಷ್ಟು ಹಿಂದಿನದಿರಬಹುದೆಂದು ಸೂಚಿಸುತ್ತವೆ. ಈ ಬೆಟ್ಟವನ್ನು ಅಗೆದು ತೆಗೆದ ಸುಯೋಜಿತ ನಗರ ರಚನೆ ಮತ್ತು ಬಂದರಿನ ವ್ಯವಸ್ಥೆ ಅಖಿಲಭಾರತ ಮಹತ್ತ್ವ ಪಡೆದಿವೆ. ಇಲ್ಲಿಯ ನಗರಗಳಲ್ಲಿ ಬರೋಡ, ಸೂರತ್, ಜಾಮ್‌ನಗರ, ಭಾವನಗರ, ಖಂಬಾತ, ರಾಜಕೋಟೆ, ಜುನಾಗಢ ಮುಂತಾದವುಗಳು ಮುಖ್ಯವಾದವು. ಗಾಂಧಿನಗರ ಆಧುನಿಕ ರೀತಿಯಲ್ಲಿ ನಿರ್ಮಿತವಾದ ರಾಜಧಾನಿ. (ಡಿ.ಆರ್.;ಬಿ.ಎ.ಎಸ್.)

**ಗುಜ್ರನ್‌ವಾಲಾ:** ಪಾಕಿಸ್ತಾನದ ಲಾಹೋರ್ ವಿಭಾಗದಲ್ಲಿರುವ ಒಂದು ಜಿಲ್ಲೆ; ತಹಸೀಲು; ಲಾಹೋರಿಗೆ 64 ಕಿಮೀ ಉತ್ತರದಲ್ಲಿರುವ ಪಟ್ಟಣ. ಹಿಂದೆ ಈ ಪಟ್ಟಣ ಒಂದು ಹಳ್ಳಿಯಾಗಿತ್ತು. ಇದನ್ನು ಸ್ಥಾಪಿಸಿದವರು ಗುಜರರು. ಇಲ್ಲಿ ನೆಲಸಿದ ಅಮೃತಸರದ ಶಾನ್ಸಿ ಜಾಟರು ಖಾನ್ಪುರವೆಂದು ಇದನ್ನು ಕರೆದರು. ಆದರೂ ಹಳೆಯ ಹೆಸರೇ ಉಳಿಯಿತು. ಸಿಕ್ಖರ ಕಾಲದಲ್ಲಿ ಇದಕ್ಕೆ ಪ್ರಾಮುಖ್ಯ ಬಂತು. ಮಹಾನ್‌ಸಿಂಗನ ಗೋರಿ, ಅವನ ಉದ್ಯಾನ ಇವು ಪ್ರೇಕ್ಷಣೀಯ ಸ್ಥಳಗಳು. ಪಂಜಾಬ್ ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಎರಡು ಕಾಲೇಜುಗಳಿವೆ. ಪೆಷಾವರ್ ರೈಲುಮಾರ್ಗವೂ ಮಹಾ ಹೆದ್ದಾರಿಯೂ ಈ ಮೂಲಕ ಹಾದುಹೋಗುತ್ತವೆ. ಇಲ್ಲಿ ತಿಜೋರಿ ಮತ್ತು ಪಾತ್ರೆಗಳು ತಯಾರಾಗುತ್ತವೆ. ಜವಳಿ, ಹೆಣಿಗೆ, ವಿದ್ಯುತ್‌ಪಂಖ – ಇವು ಇಲ್ಲಿನ ತಯಾರಿಕೆಗಳು.

ಗುಜ್ರನ್‌ವಾಲಾ ಜಿಲ್ಲೆಯ ವಿಸ್ತೀರ್ಣ 5872 ಚ.ಕಿಮೀ. ಜನಸಂಖ್ಯೆ 13 ಮಿಲಿಯನ್ (2000). ಇದು ಭಾರತ ಸ್ವಾತಂತ್ರ್ಯಪೂರ್ವದಲ್ಲಿ ಅಖಂಡ ಪಂಜಾಬ್ ಪ್ರಾಂತ್ಯಕ್ಕೆ ಸೇರಿತ್ತು. 630ರಲ್ಲಿ ಚೀನದ ಬೌದ್ಧಯಾತ್ರಿಕ ಯುವಾನ್ ಚಾಂಗ್ ಈ ಜಿಲ್ಲೆಯ ತಕಾಯಿ ಪ್ರದೇಶಕ್ಕೆ ಭೇಟಿ ನೀಡಿದ್ದ. ಈಗಿನ ಅಸುರಾರ ಗ್ರಾಮದ ಬಳಿ ಇರುವ ಒಡ್ಡು ಗತಕಾಲದ ರಾಜಧಾನಿಯ ಸ್ಥಳವೆಂದು ಪರಿಗಣಿಸಲ್ಪಟ್ಟಿದೆ. ಚರತ್‌ಸಿಂಗ್ ಗುಜ್ರನ್‌ವಾಲಾವನ್ನು ತನ್ನ ಆಡಳಿತಕೇಂದ್ರವನ್ನಾಗಿ ಮಾಡಿಕೊಂಡಿದ್ದ. ಮುಂದೆ ಅವನ ಮೊಮ್ಮಗ ರಣಜಿತ್‌ಸಿಂಗ್ ಇಲ್ಲಿ ಜನಿಸಿ ಮಹಾರಾಜನಾದ. 1847ರಲ್ಲಿ ಈ ಪ್ರದೇಶವನ್ನು ಬ್ರಿಟಿಷರು ಲಾಹೋರಿನಲ್ಲಿ ಸೇರಿಸಿದರು. ಗೋದಿ, ಹತ್ತಿ ಇಲ್ಲಿಯ ಬೆಳೆಗಳು. ಇಲ್ಲಿಯ ಕೃಷಿ ಭೂಮಿಗೆ 1892ರಲ್ಲಿ ಚೀನಾಬ್ ನದಿಯ ಕೆಳಕಾಲುವೆಯಿಂದಲೂ 1912ರಲ್ಲಿ ಮೇಲುಕಾಲುವೆಯಿಂದಲೂ ನೀರಾವರಿ ಸೌಲಭ್ಯ ಒದಗಿಸಲಾಯಿತು. (ಎಸ್.ಎನ್.ಎ.ಆರ್.ಇ.)

**ಗುಡಿ ಕೈಗಾರಿಕೆಗಳು:** ಮನೆಯಲ್ಲಿ ಅಥವಾ ಗುಡಿಸಲಿನಲ್ಲಿ ನಡೆಸುವ ಕೈಗಾರಿಕೆಗಳು ಗುಡಿ ಅಥವಾ ಕುಟೀರ ಕೈಗಾರಿಕೆಗಳು (ಕಾಟೇಜ್ ಇಂಡಸ್ಟ್ರೀಸ್). ಇದು ನಾಗರಿಕತೆಯಷ್ಟೇ ಹಳೆಯದು. ಮನುಷ್ಯ ಸ್ವರಕ್ಷಣೆಗಾಗಿ ಮತ್ತು ಬೇಟೆಗಾಗಿ ಆಯುಧಗಳನ್ನೂ ಉಪಕರಣಗಳನ್ನೂ ತಯಾರಿಸತೊಡಗಿದಾಗ ಈ ಕೈಗಾರಿಕೆಯ ಉದಯವಾಯಿತು. ಅವನು ಮುಂದೆ ಉಡುಪು, ವ್ಯವಸಾಯದ ಉಪಕರಣ ಮುಂತಾದವನ್ನು ಮಾಡಲು ಪ್ರಾರಂಭಿಸಿದಾಗ ಇದು ಬೆಳೆಯಿತು. ಪುರಾತನ ನಾಗರಿಕತೆಗಳಲ್ಲಿ ನಾನಾ ಉಪಯುಕ್ತ ಮತ್ತು ಭೋಗ ವಸ್ತುಗಳ ಕೈಗಾರಿಕೆಗಳಿಗೆ ಬೇಡಿಕೆ ಇತ್ತು. ಅವು ತಯಾರಿಸಿದ ಸರಕುಗಳು ದೂರದ ಮಾರುಕಟ್ಟೆಗಳಲ್ಲಿ ವಿಕ್ರಯವಾಗುತ್ತಿದ್ದುವು. ಆದರೆ ಕೈಗಾರಿಕಾ ಕ್ರಾಂತಿಯಾದ ಮೇಲೆ ಉಂಟಾದ ತ್ವರಿತ ಮತ್ತು ವ್ಯಾಪಕವಾದ ಕೈಗಾರಿಕೀಕರಣ ಗುಡಿ ಕೈಗಾರಿಕೆಗಳ ಕ್ಷೀಣ ದೆಶೆಗೆ ಕಾರಣವಾಯಿತು. ಆದರೂ ಈ ಕೈಗಾರಿಕೆಗಳು ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ. ಕೆಲವು ಕಾರಣಗಳಿಂದಾಗಿ ಅವು ಇಂದಿಗೂ ಉಳಿದುಬಂದಿವೆ. ಕೆಲವು ಉಪಯುಕ್ತ ವಸ್ತುಗಳಿಗೆ ಬೇಡಿಕೆ ಸ್ಥಳೀಯವೂ ಪರಿಮಿತವೂ ಆಗಿರುತ್ತದೆ. ಅಂಥ ವಸ್ತುಗಳನ್ನು ದೊಡ್ಡ ಕೈಗಾರಿಕೆಗಳಲ್ಲಿ ಬೃಹದ್ಗಾತ್ರದಲ್ಲಿ ಉತ್ಪಾದನೆ ಮಾಡುವುದು ಸಾಧ್ಯವಿಲ್ಲ. ಗುಡಿಸಲು ಕೈಗಾರಿಕೆಗಳಲ್ಲಿ ಅವನ್ನು ಸಣ್ಣ ಗಾತ್ರದಲ್ಲಿ ಉತ್ಪಾದಿಸಬಹುದು. ಅದೂ ಅಲ್ಲದೆ ಈ ಕೈಗಾರಿಕೆಗಳು ಜನಗಳ ರುಚಿ ಮತ್ತು ಬೇಡಿಕೆಗಳಿಗೆ ಅನುಗುಣವಾಗಿ ಸರಕುಗಳನ್ನು ತಯಾರಿಸುತ್ತವೆ. ಈ ಕಾರಣಗಳಿಂದಾಗಿ ಗುಡಿ ಕೈಗಾರಿಕೆಗಳು ಈಗಿನ ಬೃಹತ್ ಕೈಗಾರಿಕಾ ಪ್ರಪಂಚದಲ್ಲೂ ಜೀವಂತವಾಗಿ ಉಳಿದಿವೆ. ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಪ್ರವರ್ಧಮಾನವಾಗಿವೆ. ಈಚೆಗೆ ಸರ್ಕಾರಗಳು ಇವಕ್ಕೆ ಉತ್ತೇಜನ ನೀಡುತ್ತಿವೆ. ಇದಕ್ಕೆ ನಾನಾ ಕಾರಣಗಳುಂಟು : 1. ಈ ಕೈಗಾರಿಕೆಗಳು ಕೂಲಿಗಾರರ ಹೆಚ್ಚಳವಿರುವ ಮತ್ತು ಕಡಿಮೆ ಬಂಡವಾಳವಿರುವ ದೇಶಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. 2. ಇವು ಸ್ಥಳೀಯವಾಗಿ ದೊರೆಯುವ ಕಚ್ಚಾಸಾಮಗ್ರಿ ಮತ್ತು ಕುಶಲತೆಯನ್ನು ಉಪಯೋಗಿಸಿಕೊಂಡು ಅನೇಕ ಉಪಯುಕ್ತ ಮತ್ತು ಅನುಭೋಗ ವಸ್ತುಗಳನ್ನು ತಯಾರಿಸುವುದರಿಂದ ದೇಶದ ಆರ್ಥಿಕ ಪ್ರಗತಿಗೆ ಸಹಾಯ ಮಾಡುತ್ತವೆ. 3. ಗುಡಿಸಲು ಕೈಗಾರಿಕೆಗಳು ಮನೆಯಲ್ಲೇ ಇರುವ ಕುಟುಂಬದವರ ಸೇವೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಸಹಾಯಕವಾಗುತ್ತವೆ. 4. ಸಮಾನ ಆರ್ಥಿಕ ಅವಕಾಶ ಕಲ್ಪಿಸುವುದಕ್ಕೂ ರಾಷ್ಟ್ರದ ವರಮಾನ ಮತ್ತು ಸಂಪತ್ತಿನ ಸಮಾನ ಹಂಚಿಕೆಗೂ ಕೆಲವು ದೇಶಗಳು ಗುಡಿ ಕೈಗಾರಿಕೆಗಳನ್ನು ಉತ್ತೇಜಿಸುತ್ತಿವೆ. ಈ ರಂಗಗಳಲ್ಲಿ ಗೃಹಕೈಗಾರಿಕೆಗಳು ವ್ಯಾಪಕವಾಗಿ ಕಂಡುಬರುತ್ತವೆ: ಪುಸ್ತಕಗಳನ್ನು ಹೊಲಿಯುವುದು; ನೂಲಿಗೆ ಬಣ್ಣ ಕಟ್ಟುವುದು; ಬಟ್ಟೆಬರೆಗಳ ತಯಾರಿಕೆ; ಬೀಜಗಳಿಂದ ಎಣ್ಣೆ ತೆಗೆಯುವುದು; ಚಿನ್ನ, ಬೆಳ್ಳಿ ಮತ್ತು ಇತರ ಆಭರಣಗಳ ತಯಾರಿಕೆ; ಚರ್ಮವಸ್ತುಗಳ ತಯಾರಿಕೆ; ಚಾಪೆ ಹೆಣೆಯುವುದು: ಸಂಗೀತ ಸಾಧನಗಳ ತಯಾರಿಕೆ; ವ್ಯವಸಾಯೋಪಕರಣಗಳ ತಯಾರಿಕೆ : ಮಣ್ಣಿನ ಕೆಲಸ ಮತ್ತು ಕುಂಬಾರಿಕೆ; ಬಿದಿರು ಮತ್ತು ಅನೇಕ ಬೆತ್ತದ ಸಾಮಾನುಗಳ ತಯಾರಿಕೆ; ಜಮಖಾನದ ತಯಾರಿಕೆ; ಮಣ್ಣಿನ ಪ್ರತಿಮೆಗಳ ತಯಾರಿಕೆ; ತಾಮ್ರದ ಸಾಮಾನುಗಳ ತಯಾರಿಕೆ; ಗರಿಯಿಂದ ಸಾಮಾನುಗಳ ತಯಾರಿಕೆ; ಆಟದ ಸಾಮಾನುಗಳು ಮತ್ತು ಬೊಂಬೆ ಮಾಡುವುದು; ರಬ್ಬರ್ ವಸ್ತುಗಳು ಮತ್ತು ರಬ್ಬರ್ ಅಚ್ಚುಗಳು, ಕಸೂತಿ ಕೆಲಸ ಇತ್ಯಾದಿ.

ಗುಡಿ ಕೈಗಾರಿಕೆಗಳಲ್ಲಿ ತೊಡಕಿಲ್ಲದ ಮತ್ತು ಸಾಮಾನ್ಯವಾದ ಉತ್ಪಾದನ ತಂತ್ರಗಳನ್ನು ಉಪಯೋಗಿಸುತ್ತಾರೆ. ಅನೇಕ ಕೈಗಾರಿಕೆಗಳಲ್ಲಿ ಹಳೆಯ ಕಾಲದ ಯಂತ್ರ ಸಲಕರಣೆಗಳಿಂದ ಉತ್ಪಾದನ ಕಾರ್ಯ ನಡೆಯುತ್ತಿದೆ. ಕೆಲವರು ಸುಧಾರಿಸಿದ ಉತ್ಪಾದನ ಕ್ರಮ ಮತ್ತು ಉಪಕರಣಗಳನ್ನು ಬಳಸುವುದೂ ವಾಡಿಕೆಯಲ್ಲಿದೆ. ಈ ಕೈಗಾರಿಕೆಗಳು ತಾಂತ್ರಿಕ ಪ್ರಗತಿಯಿಂದ ಸಂಪೂರ್ಣವಾಗಿ ವಂಚಿತವಾಗಿಯೇನೂ ಇಲ್ಲ. ಆದರೆ ನವೀನ ಉತ್ಪಾದನ ವಿಧಾನಗಳನ್ನು

ಅಳವಡಿಸುವುದರಲ್ಲಿ ನಿಧಾನ ಹೆಚ್ಚು. ಕೆಲವು ಕೈಗಾರಿಕೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವುದುಂಟು. ಆಧುನಿಕ ಕಾರ್ಖಾನೆಗಳೊಂದಿಗೆ ಹೊಂದಿಕೊಂಡು ಉತ್ಪಾದನ ಕಾರ್ಯನಿರತರಾದ ಗುಡಿ ಕೈಗಾರಿಕೆಗಳು ಇವೆ. ಗಿರಣಿಯ ನೂಲನ್ನು ಬಳಸಿಕೊಂಡು ಮಗ್ಗದಲ್ಲಿ ಬಟ್ಟೆ ನೇಯುವುದು ಒಂದು ಉದಾಹರಣೆ. ಕಮ್ಮಾರರಲ್ಲಿ ತಿರುಗು ಯಂತ್ರದ ಬಳಕೆ ಹೆಚ್ಚುತ್ತಿದೆ. ಹೀಗೆ ನಿಧಾನವಾಗಿಯಾದರೂ ತಾಂತ್ರಿಕ ಪ್ರಗತಿ ಗುಡಿ ಕೈಗಾರಿಕೆಗಳ ಉತ್ಪಾದನ ಕ್ರಮವನ್ನು ಬದಲಾಯಿಸುತ್ತಿದೆ.

ಅನೇಕ ಗುಡಿ ಕೈಗಾರಿಕೆಗಳಲ್ಲಿ ವಿಶೇಷ ಕುಶಲತೆಯ ಆವಶ್ಯಕತೆಯಿರುವುದಿಲ್ಲ. ಅನೇಕ ಉಪಯುಕ್ತ ಸರಕುಗಳನ್ನು ಸಾಧಾರಣವಾದ ಕುಶಲತೆಯಿಂದಲೇ ಉತ್ಪಾದಿಸಬಹುದು. ಆದರೆ ಕೆಲವು ಕೈಗಾರಿಕೆಗಳಲ್ಲಿ ಉನ್ನತ ಮಟ್ಟದ ಕುಶಲತೆ ಮತ್ತು ಕೆಲಸಗಾರಿಕೆ ಅಗತ್ಯವಾಗುತ್ತದೆ. ವಂಶಪಾರಂಪರ್ಯವಾದ ಕೌಶಲದ ಬಲದಿಂದ ನಡೆಯುವ ಕೈಗಾರಿಕೆಗಳೂ ಉಂಟು. ಕುಶಲ ಕರ್ಮಿ ತನ್ನ ಮಕ್ಕಳಿಗೆ ತರಬೇತಿಕೊಟ್ಟು ಅವರನ್ನು ಆ ಕೆಲಸದಲ್ಲಿ ನಿಪುಣರನ್ನಾಗಿ ಮಾಡುತ್ತಾನೆ. ಈ ಕಾರಣದಿಂದಾಗಿ ಕೆಲವು ಉತ್ಪಾದನ ವಿಧಾನಗಳು ಮತ್ತು ಕೌಶಲಗಳು ಕೆಲವೇ ಕುಟುಂಬಗಳಿಗೆ ಸೀಮಿತವಾಗಿರುತ್ತವೆ. ಈಚಿನ ವರ್ಷಗಳಲ್ಲಿ ಕೆಲವು ವೃತ್ತಿ ಸಂಸ್ಥೆಗಳು ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಮತ್ತು ತೊಡಗುವ ಕೆಲಸಗಾರರಿಗೆ ತರಬೇತಿ ಒದಗಿಸುತ್ತಿವೆ. ಆದಾಗ್ಯೂ ಇದು ಸಾಕಷ್ಟು ವ್ಯಾಪಕವಾಗಿಲ್ಲ. ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಬಹಳ ಜನ ಯಾವ ವಿಧವಾದ ವ್ಯವಸ್ಥಿತ ತರಬೇತಿಯನ್ನೂ ಪಡೆದಿಲ್ಲದಿರುವುದೇ ಸಾಮಾನ್ಯವಾಗಿದೆ.

ಎಲ್ಲ ಗುಡಿ ಕೈಗಾರಿಕೆಗಳಿಗೂ ಸಾಮಾನ್ಯವಾದ ಕೆಲವು ಸಮಸ್ಯೆಗಳುಂಟು. ಬಂಡವಾಳದ ಅಭಾವ ಒಂದು ಮುಖ್ಯ ಸಮಸ್ಯೆ. ಈ ಕೈಗಾರಿಕೆಗಳಿಗೆ ಅಲ್ಪ ಬಂಡವಾಳವೇ ಸಾಕಾದರೂ ಅಷ್ಟು ಬಂಡವಾಳವನ್ನು ಕೂಡ ಅನೇಕ ಉತ್ಪಾದಕರು ಹೊಂದಿಸಿಕೊಳ್ಳಲು ಅಸಮರ್ಥರಾಗಿರುತ್ತಾರೆ. ಬೃಹತ್ ಕೈಗಾರಿಕೆಗಳಂತೆ ಇವಕ್ಕೂ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳು ಬೇಕಾಗುತ್ತವೆ. ಉಪಕರಣಗಳು, ಯಂತ್ರಗಳು ಮತ್ತು ಕಟ್ಟಡಗಳಿಗಾಗಿ ದೀರ್ಘಾವಧಿ ಸಾಲಗಳು ಅಗತ್ಯ. ಕಚ್ಚಾ ಸಾಮಗ್ರಿಯನ್ನು ಕೊಳ್ಳಲು, ತಯಾರಾದ ಪದಾರ್ಥಗಳನ್ನು ಮತ್ತು ತಯಾರಿಕೆಗೆ ಬೇಕಾದ ವಸ್ತುಗಳನ್ನು ಶೇಖರಿಸಲು, ಮಾರಾಟ ಮಾಡಲು ಮತ್ತು ಕೆಲಸಗಾರರಿಗೆ ಕೂಲಿ ಕೊಡಲು ಅಲ್ಪಾವಧಿ ಸಾಲ ಬೇಕಾಗುತ್ತದೆ. ಗುಡಿ ಕೈಗಾರಿಕೆಗಳು ಸಂಘಟಿತ ಉದ್ಯಮಗಳಲ್ಲವಾದ್ದರಿಂದ ಬಂಡವಾಳ ಒದಗಿಸುವುದು ಮತ್ತು ಸಾಲ ಪಡೆಯುವುದು ಸುಲಭವಲ್ಲ. ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳಿಂದ ಹಣ ಪಡೆಯಲು ಇವು ಅಗತ್ಯವಾದ ಆಧಾರ ಮತ್ತು ಆಸ್ತಿ ಒದಗಿಸಲಾರವು. ಈ ಕಾರಣಗಳಿಂದಾಗಿ ಇವು ಸಂಘಟಿತ ಸಂಸ್ಥೆಗಳಿಂದ ಹಣ ಪಡೆಯುವುದು ಕಷ್ಟ. ಗುಡಿ ಕೈಗಾರಿಕೆಗಳಲ್ಲಿ ತೊಡಗಿರುವವರಿಗೆ ಅಗತ್ಯವಾದ ಬಂಡವಾಳ ಬಹುತೇಕ ಒದಗುತ್ತಿರುವುದು ಸಾಹುಕಾರರು ಮತ್ತು ವರ್ತಕರಿಂದ, ಸ್ನೇಹಿತರಿಂದ ಮತ್ತು ಸಂಬಂಧಿಕರಿಂದ ಹಣ ಪಡೆಯುವುದೂ ಸಾಮಾನ್ಯ. ಕೆಲವು ದೇಶಗಳಲ್ಲಿ ಸರ್ಕಾರಗಳು ಪರಿಮಿತ ಗಾತ್ರದಲ್ಲಿ ಈ ಕೈಗಾರಿಕೆಗಳಿಗೆ ಹಣ ಸಹಾಯ ಮಾಡುತ್ತವೆ. ಕೆಲವು ಪರಿಸ್ಥಿತಿಗಳಲ್ಲಿ ಸಹಕಾರ ಸಂಘಗಳು ಹಣವನ್ನೂ ಕಚ್ಚಾ ಸಾಮಗ್ರಿಯನ್ನೂ ಒದಗಿಸುತ್ತವೆ. ಭಾರತದಲ್ಲಿ ಈಗ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಇವಕ್ಕೆ ಹಣ ಒದಗಿಸಲು ಆಸಕ್ತಿ ವಹಿಸುತ್ತಿವೆ. ಇಷ್ಟಾದರೂ ಗುಡಿ ಕೈಗಾರಿಕೆಗಳ ಹಣಕಾಸಿನ ಸ್ಥಿತಿ ತೃಪ್ತಿಕರವಾಗಿಲ್ಲವೆಂದೇ ಹೇಳಬೇಕು.

ಕಚ್ಚಾ ಸಾಮಗ್ರಿಯನ್ನು ಹೊಂದಿಸಿಕೊಳ್ಳುವುದು ಗುಡಿ ಕೈಗಾರಿಕೆಗಳ ಮತ್ತೊಂದು ಮುಖ್ಯ ಸಮಸ್ಯೆ. ವಿವಿಧ ವಸ್ತುಗಳ ತಯಾರಿಕೆಯಲ್ಲಿ ತೊಡಗಿರುವ ಅವಕ್ಕೆ ನಾನಾ ಬಗೆಯ ಕಚ್ಚಾ ಸಾಮಗ್ರಿಗಳು ಬೇಕಾಗುತ್ತವೆ. ಕಚ್ಚಾ ಸಾಮಗ್ರಿ ಕೊಳ್ಳಲು ಮತ್ತು ಸಾಕಷ್ಟು ಶೇಖರಿಸಲು ಹಣ ಇರುವುದಿಲ್ಲ. ಈ ವಿಚಾರದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಿತಿ ಉತ್ತಮವಾದದ್ದು, ಹೆಚ್ಚು ಗಾತ್ರದಲ್ಲಿ ಕಚ್ಚಾ ಸಾಮಗ್ರಿಯನ್ನೂ ತಮಗೆ ಬೇಕಾದ ಇತರ ವಸ್ತುಗಳನ್ನೂ ಕೊಳ್ಳುತ್ತವೆ. ಆದ್ದರಿಂದ ಆ ಕೈಗಾರಿಕೆಗಳಿಗೆ ಅವನ್ನು ಕೊಳ್ಳುವಾಗ ಬೆಲೆಯಲ್ಲಿ ಉಳಿತಾಯವಾಗುತ್ತದೆ. ಗುಡಿ ಕೈಗಾರಿಕೆಯಲ್ಲಿ ಈ ಅವಕಾಶಗಳಿರುವುದಿಲ್ಲ. ಈ ಉತ್ಪಾದಕರು ಕೆಲವು ವಾರಗಳಿಗೆ ಸಾಕಾಗುವಷ್ಟು ಕೂಡ ಕಚ್ಚಾ ಸಾಮಗ್ರಿಯನ್ನು ಕೊಂಡು ಶೇಖರಿಸುವುದಕ್ಕಾಗುವುದಿಲ್ಲ. ಅಲ್ಲದೆ ಇವರು ಅವನ್ನು ಅಲ್ಪ ಪ್ರಮಾಣಗಳಲ್ಲಿ ಕೊಳ್ಳುವುದರಿಂದ ಸಗಟು ಕೊಳ್ಳಿಕೆಯ ಅನುಕೂಲಗಳು ಲಭ್ಯವಾಗುವುದಿಲ್ಲ. ಗುಡಿ ಕೈಗಾರಿಕೆಯ ಉತ್ಪಾದಕರು ತಮಗೆ ಅಗತ್ಯವಾದ ಕಚ್ಚಾ ಸಾಮಗ್ರಿಯನ್ನು ವರ್ತಕರಿಂದಲೋ ದಳ್ಳಾಳಿಗಳ ಮೂಲಕವೋ ಪಡೆಯುತ್ತಾರೆ. ತಾವು ತಯಾರಿಸಿದ ವಸ್ತುಗಳನ್ನು ಸಾಮಾನ್ಯವಾಗಿ ಅವರಿಗೇ ಮಾರುತ್ತಾರೆ. ಕೆಲವು ವೇಳೆ ಕಚ್ಚಾಸಾಮಗ್ರಿಯನ್ನು ಸ್ಥಳೀಯ ವರ್ತಕರಿಂದ ಉದ್ದರಿಯ ಮೇಲೆ ಪಡೆಯುತ್ತಾರೆ. ತಯಾರಿಸಿದ ವಸ್ತುಗಳನ್ನು ಮಾರಿದ ಮೇಲೆ ಅವರಿಗೆ ಹಣ ಸಂದಾಯ ಮಾಡುತ್ತಾರೆ. ಕಚ್ಚಾಸಾಮಗ್ರಿಯ ಮತ್ತು ಉತ್ಪಾದನೆಗೆ ಅಗತ್ಯವಾದ ಇತರ ವಸ್ತುಗಳ ಪೂರೈಕೆ ಸಾಕಾಗದೆ ಗುಡಿ ಕೈಗಾರಿಕೆಗಳ ಉತ್ಪಾದನೆ ಆಗಾಗ್ಗೆ ನಿಲ್ಲುವುದು ಸಾಮಾನ್ಯ.

ಗುಡಿ ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಪದಾರ್ಥಗಳನ್ನು ಮಾರಲು ವ್ಯವಸ್ಥಿತ ಮಾರುಕಟ್ಟೆಗಳಿಲ್ಲ. ಅವುಗಳ ಉತ್ಪಾದಕರು ಬೃಹತ್ ಕೈಗಾರಿಕೆಗಳಂತೆ ತಮ್ಮ ಸರಕುಗಳ ಮಾರಾಟಕ್ಕೆ ಸೂಕ್ತವಾದ ಮತ್ತು ಸಂಘಟಿತವಾದ ಏರ್ಪಾಡು ಮಾಡಲು ಶಕ್ತರಲ್ಲ. ಅನೇಕ ವೇಳೆ ಸರಕುಗಳನ್ನು ನೇರವಾಗಿ ತಾವೇ ತಮ್ಮ ಹಳ್ಳಿಯ ಅಥವಾ ಸುತ್ತಮುತ್ತಲಿನ ಹಳ್ಳಿಗಳ ಗ್ರಾಹಕರಿಗೆ ವಿಕ್ರಯಿಸುತ್ತಾರೆ. ಕೆಲವರು ಹತ್ತಿರದ ಸಂತೆಗಳಿಗೆ ಸರಕುಗಳನ್ನು ತೆಗೆದುಕೊಂಡು ಹೋಗಿ ವಿಕ್ರಯಿಸುತ್ತಾರೆ. ಹಲವೊಮ್ಮೆ ಸರಕುಗಳನ್ನು ಪಟ್ಟಣಗಳಲ್ಲಿಯ ಸಗಟು ವ್ಯಾಪಾರಿಗೋ ಚಿಲ್ಲರೆ ವ್ಯಾಪಾರಿಗೋ ವಿಕ್ರಯಿಸುವುದುಂಟು. ದಳ್ಳಾಳಿಗಳನ್ನು ಅಥವಾ ಬಂಡವಾಳಿಗರನ್ನು ಆಶ್ರಯಿಸುವ ಸಂದರ್ಭಗಳಿಲ್ಲದಿಲ್ಲ. ಅವರಿಂದ ಸಾಲವನ್ನೂ ಕಚ್ಚಾ ಸಾಮಗ್ರಿಯನ್ನೂ ಪಡೆದಿದ್ದು, ತಾವು ಉತ್ಪಾದಿಸಿದ ಸರಕುಗಳನ್ನು ಅವರಿಗೇ ಒಪ್ಪಿಸುವುದುಂಟು. ಅವರು ಆ ಸಾಮಾನುಗಳನ್ನು ಸ್ಥಳೀಯ ಮಾರುಕಟ್ಟೆಗಳಲ್ಲೋ ದೂರದ ಮಾರುಕಟ್ಟೆಗಳಲ್ಲೋ ವಿಕ್ರಯಿಸಿ ಹೆಚ್ಚು ಲಾಭ ಪಡೆಯುವುದುಂಟು. ಗುಡಿ ಕೈಗಾರಿಕೆಗಳ ಸರಕುಗಳ ಮಾರಾಟ ಕಷ್ಟವಿರುವುದರಿಂದ ಕೆಲವು ದೇಶಗಳಲ್ಲಿ ಸರ್ಕಾರಗಳು ಇವುಗಳ ಮಾರಾಟಕ್ಕೆ ಸಂಸ್ಥೆಗಳನ್ನು ಸ್ಥಾಪಿಸಿವೆ. ಸಹಕಾರ ಸಂಘಗಳೂ ಇವುಗಳ ಮಾರಾಟಕ್ಕೆ ಸಹಾಯ ಮಾಡುತ್ತವೆ. ಗುಡಿ ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಹಲವು ಸರಕುಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯುಂಟು.

ಹಿಂದುಳಿದ ದೇಶಗಳಲ್ಲಿ ಮಾತ್ರವಲ್ಲದೆ ಆರ್ಥಿಕಾಭಿವೃದ್ಧಿ ಹೊಂದಿದ ದೇಶಗಳಲ್ಲಿ ಗುಡಿ ಕೈಗಾರಿಕೆಗಳು ವ್ಯಾಪಕವಾಗಿವೆ. ದೊಡ್ಡ ಯಂತ್ರಗಳನ್ನು ಸ್ಥಾಪಿಸಲಾಗದ, ಸಣ್ಣ ಹಾಗೂ ಸೂಕ್ಷ್ಮ ಯಂತ್ರಗಳನ್ನು ಬಳಸಬೇಕಾಗಿರುವ, ಕೌಶಲ್ಯಪೂರ್ಣವಾದ, ಉತ್ಪಾದನಾ ಕ್ಷೇತ್ರಗಳಲ್ಲಿ ಗುಡಿ ಕೈಗಾರಿಕೆಗಳಿವೆ. ಕೆಲವು ಗ್ರಾಹಕರು ಗುಡಿ ಕೈಗಾರಿಕೆಗಳ ವಸ್ತುಗಳನ್ನೇ ಬೇಡುವುದರಿಂದ ಕೆಲವು ವಲಯಗಳಲ್ಲಿ ಈ ಕೈಗಾರಿಕೆಗಳು ಉಳಿದುಕೊಂಡು ಬಂದಿವೆ. ಆರ್ಥಿಕವಾಗಿ ಹಿಂದುಳಿದಿರುವ ದೇಶಗಳಲ್ಲಿ ಕೆಲವು ಮುಖ್ಯ ಕಾರಣಗಳಿಗಾಗಿ ಗುಡಿ ಕೈಗಾರಿಕೆಗಳಿಗೆ ಉತ್ತೇಜನ ಕೊಡಲಾಗುತ್ತಿದೆ. (ಪಿ.ಜಿ.)

**ಗುಣಾಂಕ ಪರಿಣಾಮ:** ಗಣಿತ ವಿಜ್ಞಾನದಲ್ಲಿ ಗುಣಾಂಕವು ಯಾವುದೇ ಒಂದು ಮೊತ್ತವನ್ನು ಬೇರೊಂದು ಮೊತ್ತದ ಸಹಾಯದಿಂದ ಗುಣಾಂಕಗೊಳಿಸುವ ಪ್ರಕ್ರಿಯೆ (ಮಲ್ಟಿ ಪ್ಲಯರ್ ಎಫೆಕ್ಟ್). ಹೀಗೆ ಯಾವುದೇ ಆರ್ಥಿಕತೆಯಲ್ಲಿ ಒಂದು ಶ್ರಮ ನಾಲ್ಕು ಶ್ರಮಗಳ ವೃದ್ಧಿಗೆ ಕಾರಣವಾದರೆ ಆ ಆರ್ಥಿಕತೆಯಲ್ಲಿ ಗುಣಾಂಕ ಪರಿಣಾಮ ನಾಲ್ಕು ಎಂದು ಹೇಳಬಹುದು. ಹೀಗೆ ನಾವು ಒಂದು ರೂಪಾಯಿಯನ್ನು ನಿರ್ದಿಷ್ಟ ಅವಧಿಯಲ್ಲಿ ಖರ್ಚು ಮಾಡಿ ಅಥವಾ ಹೂಡಿಕೆಮಾಡಿ ಅದರಿಂದ ಅಂತಿಮವಾಗಿ 4 ರೂಪಾಯಿಗಳನ್ನು ಗಳಿಸುವುದಾದರೆ ಅಥವಾ ನಾಲ್ಕು ರೂಪಾಯಿಗಳ ವಹಿವಾಟು ನಡೆಸುವುದಾದರೆ ಅಲ್ಲಿ ಬಂಡವಾಳ ಹೂಡಿಕೆಯ ಗುಣಾಂಕದ ಪರಿಣಾಮ ನಾಲ್ಕು (ಇನ್‌ವೆಸ್ಟ್‌ಮೆಂಟ್ ಮಲ್ಟಿಪ್ಲೈಯರ್) ಎಂದು ಕರೆಯಬಹುದು.

ಅರ್ಥಶಾಸ್ತ್ರದಲ್ಲಿ ಗುಣಾಂಕವು ಯಾವುದೇ ಒಂದು ಬದಲಾವಣೆ ಸಂಬಂಧಿಸಿದ ಬೇರೊಂದು ಅಂಶದ ಮೇಲೆ ಅಂದರೆ ಸಾಮಾನ್ಯವಾಗಿ ರಾಷ್ಟ್ರೀಯ ಆದಾಯ ಅಥವಾ ಉದ್ಯೋಗದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ವ್ಯಕ್ತಪಡಿಸುತ್ತದೆ. (ಟಿ.ಎಂ.ಎಂ.)

**ಗುಯಟ್‌ಹಾರ್ಡ್:** 1715–86. ಪ್ರಸಿದ್ಧ ಫ್ರೆಂಚ್ ಭೂವಿಜ್ಞಾನಿ. ಈತ ನದಿಗಳಿಂದ ಪರ್ವತಗಳ ಸವೆತವನ್ನು ಕುರಿತು ಚರ್ಚಿಸಿದವನು. ಇವನ ಪ್ರಕಾರ ನದಿಗಳ ಸವೆತದಿಂದ ದೊರೆತ ಎಲ್ಲ ವಸ್ತುಗಳು ಕೂಡಲೇ ಸಮುದ್ರವನ್ನು ಸೇರುವುದಿಲ್ಲ; ಅವುಗಳಿಂದ ಮಹಾಪೂರ (ಪ್ರವಾಹ) ಮೈದಾನಗಳು ನಿರ್ಮಾಣವಾಗುತ್ತವೆ. ಆದರೆ ಸಮುದ್ರ ನದಿಗಳಿಗಿಂತ ಭೂಮಿಯನ್ನು ಪ್ರಬಲವಾಗಿ ಸವೆಸುವ ಒಂದು ನೈಸರ್ಗಿಕ ಕರ್ತೃವಾಗಿದೆ ಎಂಬುದನ್ನು ಗುರುತಿಸಿದ. ಇವನು ತನ್ನ ಈ ವಿಚಾರದ ಸಮರ್ಥನೆಗಾಗಿ ಉತ್ತರ ಫ್ರಾನ್ಸಿನಲ್ಲಿ ಸುಣ್ಣದ, ಕಡಿದಾದ ಕರಾವಳಿ ಮುಖಗಳು ಅಥವಾ ಶಿಲಾಪ್ರಪಾತ (ಕ್ಲಿಫ್ಸ್) ಸಮುದ್ರದ ಅಲೆಗಳಿಂದ ಹೇಗೆ ತೀವ್ರವಾಗಿ ಸವೆಯುತ್ತವೆಂಬುದನ್ನು ಉಲ್ಲೇಖಿಸಿದ. ವಾಸ್ತವವಾಗಿ ಇವನು ನಗ್ನೀಕರಣದ ಮೂಲ ಸಿದ್ಧಾಂತವನ್ನು ಚೆನ್ನಾಗಿ ತಿಳಿದುಕೊಂಡಿದ್ದ. (ಎಸ್.ಎಸ್.ಎನ್.)

**ಗುರುತ್ವ ಮಾದರಿ:** ನ್ಯೂಟನ್ನನ ಗುರುತ್ವಾಕರ್ಷಣ ಸಿದ್ಧಾಂತದ ಪ್ರಕಾರ ಭೂಮಿಯಿಂದ ಮೇಲೆ ಎಸೆಯಲ್ಪಟ್ಟ ವಸ್ತುಗಳು ಭೂಮಿಯ ಕಡೆಗೆ ಬರಬೇಕು. ಕಾರಣ ಭೂಮಿಗಿರುವ ಗುರುತ್ವಾಕರ್ಷಣ ಶಕ್ತಿ ಆ ವಸ್ತುವನ್ನು ತನ್ನ ಕಡೆಗೆ ಸೆಳೆಯುತ್ತದೆ. ಅಂತೆಯೇ ಎರಡು ಕೇಂದ್ರಸ್ಥಳಗಳ ಕಾರ್ಯಶ್ರೇಣಿಯೂ ನ್ಯೂಟನ್ನನ ಗುರುತ್ವಾಕರ್ಷಣ ಶಕ್ತಿಯಂತೆ ಪರಸ್ಪರ ಸಂಬಂಧಗಳನ್ನು ಹೊಂದಿವೆ. ಎರಡು ಕೇಂದ್ರಸ್ಥಳಗಳ ಅಂತರ ಮತ್ತು ಅವುಗಳ ಜನಸಂಖ್ಯೆ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದನ್ನು ಒಂದು ಸೂತ್ರದ ಮೂಲಕ ರ‍್ಯಾಲೆ ಎಂಬವನು ತನ್ನ ಲಾ ಆಫ್ ರಿಟೇಲ್ ಗ್ರಾವಿಟೇಷನ್ ಸೂತ್ರದಲ್ಲಿ ವಿವರಿಸಿದ್ದಾನೆ. ಆ ಸೂತ್ರ ಈ ಕೆಳಗಿನಂತಿದೆ:

$$MIJ = \frac{Pi\ Pj}{(dij)\ 2}$$

Mij ಎಂದರೆ ಎರಡು ಕೇಂದ್ರಗಳ ಪರಸ್ಪರ ಸಂಬಂಧ

i = ಒಂದು ಕೇಂದ್ರಸ್ಥಳ

j = ಇನ್ನೊಂದು ಕೇಂದ್ರಸ್ಥಳ

Pi = ಜನಸಂಖ್ಯೆ (i ಕೇಂದ್ರಸ್ಥಳ)

Pj = ಜನಸಂಖ್ಯೆ (j ಕೇಂದ್ರಸ್ಥಳ)

(dij)2=ಎರಡು ಕೇಂದ್ರಸ್ಥಳ ಅಂತರ

ಈ ಸೂತ್ರದಲ್ಲಿ ರ‍್ಯಾಲೆ ಎರಡು ಕೇಂದ್ರಸ್ಥಳಗಳ ಪರಸ್ಪರ ಸಂಬಂಧಗಳನ್ನು, ಕೊಡುಕೊಳ್ಳುವಿಕೆಗಳನ್ನು ವಿವರಿಸುತ್ತಾನೆ. ಇವನ ಪ್ರಕಾರ ಒಂದು ಪಟ್ಟಣ ಒಂದಿಷ್ಟು ಜನಸಂಖ್ಯೆಯನ್ನು ತನ್ನತ್ತ ಸೆಳೆದುಕೊಳ್ಳಲು (ಅಂಗಡಿ, ಶೈಕ್ಷಣಿಕ, ಸೇವಾ ಸೌಲಭ್ಯ ಇತ್ಯಾದಿ) ಆ ಪಟ್ಟಣಗಳ ಅಂತರವಷ್ಟೇ ಅಲ್ಲದೆ ಆ ಪಟ್ಟಣದ ಜನಸಂಖ್ಯೆ ಪ್ರಧಾನವಾಗಿರುತ್ತದೆ. ಒಬ್ಬ ವ್ಯಕ್ತಿ ತನಗೆ ಬೇಕಾದ ಸೇವಾ ಸೌಲಭ್ಯ ಪಡೆದುಕೊಳ್ಳಲು ಎರಡು ಪಟ್ಟಣಗಳಲ್ಲಿ ಯಾವ ಪಟ್ಟಣದ ಗಾತ್ರ ಹೆಚ್ಚಿದೆಯೋ ಅಲ್ಲಿಯೇ ಹೋಗುತ್ತಾನೆ. ಯಾಕೆಂದರೆ ಜನಸಂಖ್ಯೆ, ಪಟ್ಟಣದ ಗಾತ್ರ ಆ ವ್ಯಕ್ತಿಯನ್ನು ಹೆಚ್ಚಾಗಿ ಆಕರ್ಷಿಸುತ್ತದೆ. ಇದನ್ನು ರ‍್ಯಾಲೆಯು ಸಂಬಂಧಗಳ ಭೇದನಾಬಿಂದು ಅಥವಾ ಸ್ಥಾನ ಎಂದು ಹೆಸರಿಸಿದ. (ಇಂಟರಾಕ್ಷನ್ ಬ್ರೇಕಿಂಗ್ ಪಾಯಿಂಟ್).

ಈ ಸೂತ್ರವನ್ನು ಪಿ.ಕೊರನವರಸೆ (1949) ಎಂಬುವವನು ನವೀಕರಿಸಿದ. ಇವನು ಎರಡು ಕೇಂದ್ರಸ್ಥಳಗಳ ಭೇದನಾಬಿಂದುವನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಗುರುತಿಸಿ ಈ ಕೆಳಗಿನ ಸೂತ್ರವನ್ನು ನಿರೂಪಿಸಿದನು.

$$Dj = \frac{Dj}{1 + Pi/Pj}$$

ಇಲ್ಲಿ Dj = ಇದು ಭೇದನಾ ಬಿಂದು (ಎರಡು ಪಟ್ಟಣಗಳ ನಡುವೆ)

i = ಇದು j ಗಿರುವ ಅಂತರವನ್ನು ಕಿಮೀ ಗಳಲ್ಲಿ ತೋರಿಸುವುದು.

Dij = i ಮತ್ತು j ಪಟ್ಟಣಗಳ ನಡುವಿನ ಅಂತರ

pi = i ಪಟ್ಟಣದ ಜನಸಂಖ್ಯೆ (ದೊಡ್ಡಪಟ್ಟಣ)

Pj = j ಪಟ್ಟಣದ ಜನಸಂಖ್ಯೆ (ಸಣ್ಣ ಪಟ್ಟಣ)

ಇವನು ಎರಡು ಪಟ್ಟಣಗಳ ಪ್ರಭಾವಿ ವಲಯಗಳನ್ನು ಗುರುತಿಸಿದನು. ಇವನ ಪ್ರಕಾರ ಜನಸಂಖ್ಯೆಯು ತಮಗೆ ಹತ್ತಿರದ ಪ್ರದೇಶಗಳಲ್ಲಿ ತಮ್ಮ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಜನಸಂಖ್ಯೆ ಮತ್ತು ಗಾತ್ರಕ್ಕಿಂತ ಅಂತರ ಹೆಚ್ಚಿನ ಜನಸಂಖ್ಯೆಯನ್ನು ಆಕರ್ಷಿಸುವುದು ಎಂದು ಪ್ರತಿಪಾದಿಸಿದ್ದಾನೆ. (ಕೆ.ಬಿ.)

**ಗುರುತ್ವಾಕರ್ಷಣೆ:** ವಿಶ್ವದಲ್ಲಿರುವ ಸಮಸ್ತ ವಸ್ತುಗಳಲ್ಲೂ ಕಣಗಳನ್ನೂ ಒಳಗೊಂಡಂತೆ ಇರುವ ಪರಸ್ಪರ ಆಕರ್ಷಣೆ (ಗ್ರ್ಯಾವಿಟೇಷನ್). ಒಂದು ವಸ್ತು ಭೂಮಿಗೆ ಬೀಳುವ ಪ್ರವೃತ್ತಿ, ಎಂದರೆ ಅದರ ತೂಕ, ಆ ವಸ್ತುವಿಗೆ ಸಹಜವಾಗಿರುವ ಗುಣ ಎಂದು ಹದಿನೇಳನೆಯ ಶತಮಾನದವರೆಗೂ ಭಾವಿಸಲಾಗಿತ್ತು. ಅಲ್ಲದೆ ಆಕಾಶಕಾಯಗಳ ಚಲನೆಗಳನ್ನು ನಿರ್ಧರಿಸುವ ನಿಯಮಗಳು ಭೂ ವಸ್ತುಗಳ ಚಲನೆಗಳ ನಿರ್ಧರಿಸುವ ನಿಯಮಗಳಿಗಿಂತ ಭಿನ್ನವಾದವೆಂದು ಕೂಡ ನಂಬಲಾಗಿತ್ತು. ಸೌರವ್ಯೂಹವನ್ನು ವೈಜ್ಞಾನಿಕವಾಗಿ ಅರ್ಥ ಮಾಡಿಕೊಳ್ಳಲು ನಡೆಸಿದ ಪ್ರಯತ್ನಗಳು ಕೆಪ್ಲರನ (1571 – 1630) ಸಿದ್ಧಿಯಲ್ಲಿ ಸ್ಪಷ್ಟ ನಿರೂಪಣೆಯನ್ನು ಪಡೆದುವು. ಆತನ ಸುಪ್ರಸಿದ್ಧ ಮೂರು ನಿಯಮಗಳು ಹೀಗಿವೆ.

1. ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ಒಂದು ದೀರ್ಘವೃತ್ತ ಕಕ್ಷೆಯಲ್ಲಿ ಪರಿಭ್ರಮಿಸುತ್ತದೆ; ಸೂರ್ಯ ಈ ದೀರ್ಘವೃತ್ತದ ಒಂದು ನಾಭಿಯಲ್ಲಿದೆ.

2. ಸೂರ್ಯನನ್ನು ಕುರಿತು ಸಮಕಾಲದಲ್ಲಿ ಸಮಸಲೆಯನ್ನು ರೇಖಿಸುತ್ತದೆ ಎಂದರೆ ಗ್ರಹದ ಸಲೆವೇಗ ಸ್ಥಿರವಾಗಿದೆ.

3. ಗ್ರಹದ ಅವಧಿ ಕಾಲದ ವರ್ಗ ಸೂರ್ಯನಿಂದ ಗ್ರಹದ ಸರಾಸರಿ ದೂರದ ಘನದ ಅನುಪಾತದಲ್ಲಿದೆ.

ಸೌರವ್ಯೂಹದ ಮತ್ತು ವಿಶ್ವದ ವಿದ್ಯಮಾನಗಳಿಗೆ ಭೌತವೈಜ್ಞಾನಿಕ ನಿರೂಪಣೆಯನ್ನು ನೀಡಿದವನು ಐಸ್ಯಾಕ್ ನ್ಯೂಟನ್ (1642 – 1727). ಗುರುತ್ವಾಕರ್ಷಣೆಯ ನಿಯಮ ಈತನ ಆವಿಷ್ಕಾರ. ಇದರ ಮೂಲಕ ಕೆಪ್ಲರನ ನಿಯಮಗಳಿಗೆ ನ್ಯೂಟನ್ ಸಮರ್ಥ ವಿವರಣೆ ನೀಡಿದ್ದು ಮಾತ್ರವಲ್ಲ. ಇಡೀ ವಿಶ್ವವನ್ನು ಕುರಿತು ಒಂದು ಸ್ಪಷ್ಟ ಭೌತವೈಜ್ಞಾನಿಕ ಚಿತ್ರವನ್ನು ಸಹ ರೂಪಿಸಿದ.

ಭೂಮಿಯ ಮೇಲಿರುವ ವಿವಿಧ ಸೂಕ್ಷ್ಮದರ್ಶಕೀಯ ವಸ್ತುಗಳ ನಡುವೆ ಉಂಟಾಗುವ ಆಕರ್ಷಣ ಬಲ ಅತಿ ಕಡಿಮೆಯಾದ್ದರಿಂದ ನ್ಯೂಟನನ ಕಾಲದಲ್ಲಿ ಇದನ್ನು ಕಂಡುಹಿಡಿಯಲಾಗಲಿಲ್ಲ. ಆದ್ದರಿಂದ ತನ್ನ ಪರಿಕಲ್ಪನೆಯನ್ನು ಸ್ಥಿರಪಡಿಸಲು ನ್ಯೂಟನ್ ಗ್ರಹಚಲನೆಯ ಮೇಲೆ ಗಮನಹರಿಸಿದ. ಕೆಪ್ಲರನ ನಿಯಮಗಳನ್ನು ನ್ಯೂಟನನ ಗುರುತ್ವಾಕರ್ಷಣ ನಿಯಮ ಮತ್ತು ನ್ಯೂಟನನ ಚಲನೆಯ ನಿಯಮಗಳಿಂದ ಸಾಧಿಸಲು ಸಾಧ್ಯವಾದದ್ದು ನ್ಯೂಟನನ ಪರಿಕಲ್ಪನೆಗಳಿಗೆ ಮಹಾ ಸಿದ್ಧಿಯಾದಂತಾಯಿತು. ಹೀಗೆ ಭೂಮಿಯ ಮೇಲಿರುವ ವಸ್ತುಗಳ ಚಲನೆಗಳನ್ನೂ ಸೌರವ್ಯೂಹದಲ್ಲಿರುವ ಗ್ರಹಗಳ ಚಲನೆಗಳನ್ನೂ ಒಂದೇ ಭಾವರೂಪವುಳ್ಳ ನಿಯಮದಿಂದ ವಿಶದಪಡಿಸಲು ಸಾಧ್ಯವಾಯಿತು.

ಗುರುತ್ವಾಕರ್ಷಣ ನಿಯಮವನ್ನು ಸೌರವ್ಯೂಹಕ್ಕೆ ಅನ್ವಯಿಸಿದಲ್ಲಿ ಕೆಪ್ಲರನ ಎಲ್ಲ ನಿಯಮಗಳಿಗೂ ತತ್ತ್ವಾಧಾರ ಒದಗಿದಂತಾಗುತ್ತದೆ. ಗ್ರಹಗಳ ಮತ್ತು ಅವುಗಳ (ಉಪಗ್ರಹ) (ಸ್ಯಾಟಲೈಟ್ಸ್) ಜಟಿಲ ಚಲನೆಗಳನ್ನು ನಿಖರವಾಗಿ ಕಂಡುಹಿಡಿಯಲು ಗುರುತ್ವಾಕರ್ಷಣ ನಿಯಮದಿಂದ ಸಾಧ್ಯವಾಯಿತು. ಅಲ್ಲದೆ ಸಮುದ್ರದ ಚಲನೆಯಿಂದ ಉಂಟಾಗುವ ಉಬ್ಬರವಿಳಿತಗಳಿಗೆ ಕಾರಣವನ್ನು ಈ ನಿಯಮ ತೋರಿಸಿಕೊಟ್ಟಿತು. ಸೂರ್ಯ ಮತ್ತು ಚಂದ್ರರು ಭೂಮಿಯ ನೀರಿನಮೇಲೆ ಉಂಟುಮಾಡುವ ಆಕರ್ಷಣ ಬಲವೇ ಈ ಉಬ್ಬರವಿಳಿತಕ್ಕೆ ಕಾರಣ ಎಂದು ವಿವರಣೆ ನೀಡಲಾಯಿತು.

ಗೆಲಿಲಿಯೋನ (1564 – 1642) ಕಾಲದವರೆಗೆ ತೂಕವಾದ ವಸ್ತುಗಳು ಹಗುರವಾದ ವಸ್ತುಗಳಿಗಿಂತ ಹೆಚ್ಚು ಬೇಗ ನೆಲಕ್ಕೆ ಬೀಳುತ್ತವೆಂಬ ನಂಬಿಕೆಯಿತ್ತು. ಎಲ್ಲ ವಸ್ತುಗಳೂ (ಬಾಹ್ಯ ನಿರೋಧ ಬಲವನ್ನು ಎದುರಿಸಿದಾಗ, ಅಂದರೆ ನಿರ್ವಾತದಲ್ಲಿ) ಸಮವೇಗದಲ್ಲಿ ಬೀಳುತ್ತವೆಂದು ಗೆಲಿಲಿಯೋ ತೋರಿಸಿದ. ಈ ವಾಸ್ತವಾಂಶದ ಮಹತ್ತ್ವವನ್ನು ಆ ಕಾಲದಲ್ಲಿ ಯಾರೂ ಲಕ್ಷಿಸಲಿಲ್ಲ. ಆದರೆ ಈ ಅಂಶ ಒಂದು ವಸ್ತುವಿನ ತೂಕ ದ್ರವ್ಯರಾಶಿಯ ಅನುಪಾತದಲ್ಲಿರುವುದೆಂದು ಸಿದ್ಧಪಡಿಸುತ್ತದೆ. ಗುರುತ್ವಾಕರ್ಷಣ ನಿಯಮ ಗೆಲಿಲಿಯೋನ ವೀಕ್ಷಣೆಗಳಿಗೆ ಆಧಾರ ನೀಡುವುದು. *

**ಗುರುದಾಸಪುರ:** ಪಂಜಾಬಿನ ಒಂದು ಜಿಲ್ಲೆ ; ಆ ಜಿಲ್ಲೆಯ ಕೇಂದ್ರ. ಜಿಲ್ಲೆಯ ವಿಸ್ತೀರ್ಣ 2953 ಚ.ಕಿಮೀ. ಜಿಲ್ಲೆಯ ಉತ್ತರಕ್ಕೆ ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ, ದಕ್ಷಿಣದಲ್ಲಿ ಅಮೃತಸರ ಜಿಲ್ಲೆ, ಪೂರ್ವಕ್ಕೆ ಕಾಂಗಡಾ ಮತ್ತು ಹೋಶಿಯಾರ್‌ಪುರ ಜಿಲ್ಲೆ ಮತ್ತು ಪಶ್ಚಿಮಕ್ಕೆ ಅಮೃತಸರ ಮತ್ತು ಸಿಯಾಲ್‌ಕೋಟ್ (ಪಾಕಿಸ್ತಾನ) ಜಿಲ್ಲೆಗಳಿವೆ. ಈ ನಗರ ಉ. ಅ. $32^0 63'$ ಮತ್ತು ಪೂ. ರೇ. $75^0 25'$ ಮೇಲಿದೆ. ವಾರ್ಷಿಕ ಸರಾಸರಿ ಮಳೆ 102 ಸೆಂಮೀ. ಇಲ್ಲಿಯದು ಸಮಶೀತೋಷ್ಣ ವಾಯುಗುಣ. ಈ ಜಿಲ್ಲೆಯಲ್ಲಿ ಹರಿಯುವ ರಾವೀ ಮತ್ತು ಬಿಯಾಸ್ ನದಿಗಳು ಅನೇಕ ಸಲ ಮೇರೆ ಮೀರಿ ಹರಿಯುತ್ತವೆ. ಈ ನದಿಗಳಲ್ಲಿ ದೋಣಿ ಸಂಚಾರವುಂಟು.

ಜನರು ವ್ಯಾಪಾರ ಮತ್ತು ಕೃಷಿಯಲ್ಲೂ ಖಾಸಗಿ ಮತ್ತು ಸರ್ಕಾರಿ ಕೆಲಸಗಳಲ್ಲೂ ನಿರತರಾಗಿದ್ದಾರೆ. ಧಾರಿವಾಲ್ ಮತ್ತು ಸುಜಾನ್‌ಪುರಗಳಲ್ಲಿ ಉಣ್ಣೆ, ಜಮಖಾನೆ ಮತ್ತು ಕೃಷಿಯಂತ್ರಗಳ ಕಾರ್ಖಾನೆಗಳುಂಟು. ಬಟಾಲಾ ವ್ಯಾಪಾರ ಕೇಂದ್ರ.

ರಾವಿ ನದಿಯ ದಂಡೆಯ ಮೇಲೆ ಮುಕ್ತೇಶ್ವರದಲ್ಲಿ ಪ್ರಾಚೀನ ಕಾಲದ ಕೆಲವು ಶಿಲ್ಪಕಲಾಕೃತಿಗಳಿವೆ. ಬಟಾಲಾ, ಶಾಹಪುರ ಐತಿಹಾಸಿಕ ಪ್ರಾಮುಖ್ಯ ಪಡೆದಿವೆ. ಪಠಾಣಕೋಟ್‌ನಲ್ಲಿ ಹಿಂದೆ ಹಿಂದುಗಳ ರಾಜ್ಯವಿತ್ತು. ಸೂರ್ ವಂಶದವರಿಂದ ಈ ಭಾಗವನ್ನು ಅಕ್ಬರ್ ಗೆದ್ದುಕೊಂಡ. ಈ ಭಾಗದಲ್ಲಿ ಸಿಖ್ಖರ ಮತ್ತು ಮೊಗಲರ ನಡುವೆ ಅನೇಕ ಯುದ್ಧಗಳು ನಡೆದುವು. ಅದೀನಾ ಬೇಗ್ ಈ ಭಾಗದ ಸುಬೇದಾರನಾಗಿದ್ದ. ಅವನ ಅನಂತರ ಸಿಖ್ಖರ ವರ್ಚಸ್ಸು ಹೆಚ್ಚಾಯಿತು. 1841ರಲ್ಲಿ ಇಡೀ ಜಿಲ್ಲೆ ಇಂಗ್ಲಿಷರ ಆಡಳಿತಕ್ಕೊಳಪಟ್ಟಿತು. (ಕೆ.ಟಿ.ಆರ್.)

**ಗುರ್ನಸೆ:** ನಾರ್ಮಂಡಿ ಕರಾವಳಿಯ ಇಂಗ್ಲಿಷ್ ಕಡಲ್ಗಾಲುವೆಯಲ್ಲಿರುವ ಬ್ರಿಟಿಷ್ ಅಧೀನದ ಆಡಳಿತಕ್ಕೊಳಪಟ್ಟಿರುವ ದ್ವೀಪ. ಇದನ್ನು ಬೈಲಿವಿಕ್ ಆಫ್ ಗುರ್ನಸೆ ಎಂದು ಕರೆಯುತ್ತಾರೆ (ಫ್ರೆಂಚ್: ಬೈಲೇಜ್ ಡಿ ಗುರ್ನಸೇ). ಈ ದ್ವೀಪದ ಸಮೂಹ ದ್ವೀಪಗಳೆಂದರೆ ಆಲ್ಡರ್ನೇ, ಸಾರ್ಕ್, ಹೆರ್ಮ್, ಜೇಥೂ, ಬ್ರೇಕ್ಯೂ, ಬುರ್ಹೊ, ಲಿಹ್ಹೂ ಮತ್ತು ಇತರೆ ಸಣ್ಣ ದ್ವೀಪಗಳು. ಗುರ್ನಸೆ ದ್ವೀಪವನ್ನು 10 ಪ್ರಾಂತ್ಯಗಳನ್ನಾಗಿ ವಿಭಾಗಿಸಲಾಗಿದೆ. ಇಂಗ್ಲಿಷ್ ಕಡಲ್ಗಾಲುವೆಯ ದ್ವೀಪಗಳು ಎಂದು ಕರೆಯಲಾಗುತ್ತದೆ. ಗುರ್ನಸೆ ದ್ವೀಪವನ್ನು ಸಾಮಾನ್ಯ ಸಾರಿಗೆ ಪ್ರದೇಶವೆಂದು ಪರಿಗಣಿಸಲಾಗಿದೆ. ರಾಜಧಾನಿ ಸೇಂಟ್ ಪೀಟರ್ ಪೋರ್ಟ್.

ಗುರ್ನಸೆ ದ್ವೀಪ ಸಮೂಹ ಉ. ಅ. $49^0 28'$ ಮತ್ತು ಪ.ರೇ. $2^0 35'$ ದಲ್ಲಿ ವಿಸ್ತರಿಸಿದೆ. 78 ಚ.ಕಿಮೀ ಭೌಗೋಳಿಕ ಕ್ಷೇತ್ರವನ್ನು ಒಳಗೊಂಡಿದೆ. 50 ಕಿಮೀ ತೀರ ಪ್ರದೇಶವಿರುವ ಗುರ್ನಸೆ ದೊಡ್ಡ ದೀಪ (63 ಚ.ಕಿಮೀ). ಫ್ರಾನ್ಸ್‌ನ ನಾರ್ಮಂಡಿಯಿಂದ 48 ಕಿಮೀ ಪಶ್ಚಿಮಕ್ಕಿದೆ ಹಾಗೂ ಇಂಗ್ಲೆಂಡಿನ ವೈಮೌತ್ ಕೊಲ್ಲಿಯಾದ ಸೇಂಟ್‌ಮಾಲೋ,

ಲಿಹ್ಯೊ, ಆರೋಹಣ ದ್ವೀಪಗಳಿಂದ 121 ಕಿಮೀ ದೂರದಲ್ಲಿದೆ. ದೇಶದ ಜನಸಂಖ್ಯೆ 65,228 (2005). ಜನಸಾಂದ್ರತೆ ಚ.ಕಿಮೀ ಗೆ 836. ಇಲ್ಲಿನ ಹಣ ಪೌಂಡ್‌ಸ್ಟರ್ಲಿಂಗ್. ಅಧಿಕೃತ ಭಾಷೆ ಇಂಗ್ಲಿಷ್.

ಭೂಸ್ವರೂಪ ಬೈಲಿವಿಕ್ (375 ಮೀ) ನಿಂದ ಸಮುದ್ರದ ಕಡೆಗೆ ಹೋದಂತೆ ವ್ಯತ್ಯಾಸವಾಗುತ್ತದೆ. ಅತ್ಯುನ್ನತ ಪ್ರದೇಶ ಗುರ್ನಸೆ ಪ್ರಮುಖ ಪ್ರದೇಶದ ಹೌಟ್ನೆಜ಼ೆ (110 ಮೀ) ಇತರ ಪ್ರದೇಶಗಳು ಆಲ್ಡರ್ನ್ಸ್ ಲೀ ರೌಂಡ್ ಬಟ್ (93 ಮೀ), ಜೀಥೋ (76.5 ಮೀ) ಮತ್ತು ಹೆರ್ನ್ಸ್ (98 ಮೀ).

ಗುರ್ನಸೆ ಪ್ರಧಾನ ದ್ವೀಪ ಎರಡು ಪ್ರಮುಖ ಭೌಗೋಳಿಕ ಪ್ರದೇಶಗಳನ್ನು ಹೊಂದಿದೆ. ಹ್ಯಾರ್ಥಪ್ವಾಸ್ – ದಕ್ಷಿಣದಲ್ಲಿರುವ ಎತ್ತರವಾದ ಪ್ರಸ್ಥಭೂಮಿ ಮತ್ತು ಬಾಸ್‌ಪಾಸ್ ಉತ್ತರದಲ್ಲಿರುವ ತಗ್ಗಾದ ಮರಳು ಪ್ರದೇಶ. ಹ್ಯಾರ್ಥಪಾಸ್ ಗ್ರಾಮಾಂತರ ಪ್ರದೇಶವಾಗಿದೆ, ಬಾಸ್‌ಪಾಸ್ ಕೈಗಾರಿಕೆ ಹಾಗೂ ಮುಖ್ಯ ವಸತಿ ಪ್ರದೇಶವೂ ಆಗಿದೆ. ಇಲ್ಲಿನ ಪ್ರಮುಖ ಬಂದರು ಸೇಂಟ್ ಪೀಟರ್ ಗುರ್ನಸೆ ಪೂರ್ವಭಾಗದಲ್ಲಿದೆ.

ಸಮಶೀತೋಷ್ಣವಲಯದಲ್ಲಿರುವ ಈ ದ್ವೀಪಗಳ ಹವಾಮಾನ ಬೇಸಗೆಯಲ್ಲಿ ತಂಪಾಗಿಯೂ ಚಳಿಗಾಲದಲ್ಲಿ ಶೀತವಾಗಿಯೂ ಇರುತ್ತದೆ. ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಉಷ್ಣಾಂಶ $26^0$ಸೆ. ಇರುತ್ತದೆ. ಫೆಬ್ರವರಿಯಲ್ಲಿ $6^0$ಸೆ. ಹಾಗೂ ವಾರ್ಷಿಕ ಸರಾಸರಿ ಉಷ್ಣಾಂಶ $16^0$ಸೆ. (ಬಿ.ಪಿ.)

**ಗುಲ್ಬರ್ಗ:** ಕರ್ನಾಟಕದ ಒಂದು ವಿಭಾಗ, ಜಿಲ್ಲೆ, ತಾಲ್ಲೂಕು, ಅವುಗಳ ಆಡಳಿತಕೇಂದ್ರ ಮತ್ತು ನಗರ. ಬೀದರ್, ಗುಲ್ಬರ್ಗ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು ಗುಲ್ಬರ್ಗ ವಿಭಾಗಕ್ಕೆ ಒಳಪಟ್ಟಿವೆ. ಗುಲ್ಬರ್ಗ ವಿಭಾಗದ ವಿಸ್ತೀರ್ಣ 45,584 ಚ.ಕಿಮೀ.

ಗುಲ್ಬರ್ಗ ಜಿಲ್ಲೆ ಕರ್ನಾಟಕದ ಉತ್ತರ ಭಾಗದಲ್ಲಿದೆ. 1956ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಮೈಸೂರು ರಾಜ್ಯಕ್ಕೆ ಸೇರಿದ ಮೂರು ಜಿಲ್ಲೆಗಳಲ್ಲಿ ಮಧ್ಯದ್ದು (ಉಳಿದೆರಡು ಜಿಲ್ಲೆಗಳು ಬೀದರ್ ಮತ್ತು ರಾಯಚೂರು). ಉ.ಅ $16^0 12'–17^0 46'$ ಮತ್ತು ಪೂ.ರೇ $76^0–77^0 42'$ ನಡುವೆ ಇರುವ ಗುಲ್ಬರ್ಗ ಜಿಲ್ಲೆಯ ಉತ್ತರದಲ್ಲಿ ಬೀದರ್ ಜಿಲ್ಲೆ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಗಳು ಕಂಡುಬರುತ್ತವೆ. ಗುಲ್ಬರ್ಗ ಜಿಲ್ಲೆಯ ವಿಸ್ತೀರ್ಣ 16,228 ಚ.ಕಿಮೀ. ಜನಸಂಖ್ಯೆ 31,30,922.

ವಿಸ್ತೀರ್ಣದಲ್ಲಿ ಇದು ರಾಜ್ಯದ ಪ್ರಥಮ ಜಿಲ್ಲೆಯಾದರೂ ಜನಸಂಖ್ಯೆಯಲ್ಲಿ ಮೂರನೆಯದು. ಗುಲ್ಬರ್ಗದ ಹಳೆಯ ಹೆಸರು ಕಲಬುರ್ಗಿ. ಈಗಲೂ ಆ ಹೆಸರು ಪ್ರಚಾರದಲ್ಲಿದೆ.




ಗುಲ್ಬರ್ಗ ಜಿಲ್ಲೆಯಲ್ಲಿ ಎತ್ತರವಾದ ಪರ್ವತಗಳಿಲ್ಲ. ಇಡೀ ಜಿಲ್ಲೆ ಸಾಮಾನ್ಯವಾಗಿ ಸಮುದ್ರಮಟ್ಟದಿಂದ 305–609 ಮೀ ಎತ್ತರದಲ್ಲಿದೆ. ಯಾದಗೀರ್ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಕೆಲವು ಭಾಗಗಳು 609 ಮೀ ಗಿಂತ ಎತ್ತರವಾಗಿವೆ. ಅಳಂದ್ ಮತ್ತು ಯಾದಗೀರ್ ತಾಲ್ಲೂಕುಗಳು ದಖನ್ ಪ್ರಸ್ಥಭೂಮಿಯ ಭಾಗವಾಗಿದ್ದು ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಗುಲ್ಬರ್ಗ ಜಿಲ್ಲೆಯ ವಾಯವ್ಯದಲ್ಲಿ ಬೆಟ್ಟಗಳ ಶ್ರೇಣಿಯೊಂದು ಆಗ್ನೇಯಾಭಿಮುಖವಾಗಿ ಸು. 96 ಕಿಮೀ ದೂರ ವಿಸ್ತರಿಸಿದೆ.

ಜಿಲ್ಲೆಯ ಮುಖ್ಯ ನದಿಗಳು ಕೃಷ್ಣ ಮತ್ತು ಭೀಮ. ಬೆಳಗಾವಿ ಜಿಲ್ಲೆಯಲ್ಲಿ ಕರ್ನಾಟಕವನ್ನು ಪ್ರವೇಶಿಸುವ ಕೃಷ್ಣ ನದಿ ಈ ಜಿಲ್ಲೆಯ ದಕ್ಷಿಣ ಎಲ್ಲೆಯಾಗಿ ಹರಿಯುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿ ಈ ನದಿಯ ಉದ್ದ ಸು. 160 ಕಿಮೀ. ಸುರಪುರ ತಾಲ್ಲೂಕಿನ ನಾರಾಯಣಪುರದ ಬಳಿ 66 ಮೀ ಎತ್ತರದ ಜಲಪಾತವಿದೆ. ಭೀಮ ನದಿಯೂ ಮಹಾರಾಷ್ಟ್ರದಿಂದ ಕರ್ನಾಟಕವನ್ನು ಪ್ರವೇಶಿಸಿ ಬಿಜಾಪುರ ಜಿಲ್ಲೆಯಲ್ಲಿ ಸ್ವಲ್ಪ ದೂರ ಹರಿದು ಅನಂತರ ಗುಲ್ಬರ್ಗ ಜಿಲ್ಲೆಯಲ್ಲಿ 215 ಕಿಮೀ ದೂರ ಸಾಗಿ ಕೃಷ್ಣ ನದಿಯನ್ನು ಸೇರುತ್ತದೆ. ಬೋರಿ, ಅಮರಜಿ, ಜಾ, ಕಾಗಿಣಾ, ಬೆಣ್ಣೆತೊರೆ ಮತ್ತು ಮುಲ್ಲಾಮರಿ ಮುಂತಾದ ಉಪನದಿಗಳೂ ಜಿಲ್ಲೆಯಲ್ಲಿ ಹರಿಯುತ್ತವೆ.

ಗುಲ್ಬರ್ಗ ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಶುಷ್ಕವಾಗಿರುತ್ತದೆ. ಫೆಬ್ರವರಿಯಿಂದ ಜೂನ್ ಆರಂಭದವರಗೆ ಬೇಸಗೆ. ಜೂನ್ ನಿಂದ ಸೆಪ್ಟೆಂಬರ್ ಅಂತ್ಯದವರೆಗೆ ಮಳೆಗಾಲ. ಡಿಸೆಂಬರಿನಿಂದ ಫೆಬ್ರವರಿಯವರೆಗಿನದು ಚಳಿಗಾಲ. ವರ್ಷದ ಸರಾಸರಿ ಮಳೆ 71 ಸೆಂಮೀ. ಈ ಕಾಲದ ದೈನಿಕ ಗರಿಷ್ಠ ಉಷ್ಣತೆ $14.8^0$ಸೆಂ, ಮೇ ಅತ್ಯಂತ ಉಷ್ಣತೆಯ ತಿಂಗಳು. ಆಗಿನ ಮಧ್ಯಕ ದೈನಿಕ ಉಷ್ಣತೆ $40.6^0$ಸೆಂ. ಒಮ್ಮೆ ಹಗಲಿನ ಉಷ್ಣತೆ $45^0$ಸೆಂ. ವರೆಗೂ ಏರುವುದುಂಟು. ಜೂನಿನಿಂದ ಮುಂದಕ್ಕೆ ಉಷ್ಣತೆ ಕಡಿಮೆಯಾಗಿ, ಹೆಚ್ಚು ಸಹ್ಯವಾಗುತ್ತದೆ.

ಗುಲ್ಬರ್ಗ ಜಿಲ್ಲೆಯಲ್ಲಿರುವ ಕಾಡುಗಳು ಎರಡು ಬಗೆ. ಈಶಾನ್ಯ ಭಾಗದ ಪರ್ಣಪಾತಿ ಕಾಡು ಒತ್ತಾಗಿದೆ; ತೇಗ, ಬೀಟೆ, ನಲ್ಲಮಡ್ಡಿ ಹುರಗಲ್ಲು ಮರಗಳಿಂದ ಕೂಡಿದೆ. ಆಗ್ನೇಯದ ಭಾಗದಲ್ಲಿರುವುದು ಕುರುಚಲು ಕಾಡು ಸೌದೆಗೆ ಮಾತ್ರ ಉಪಯುಕ್ತ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 691 ಚ.ಕಿಮೀ. ಬಹುಭಾಗ ಚಿಂಚೋಳಿ ತಾಲ್ಲೂಕಿನಲ್ಲೇ ಇದೆ. ಚೌಬೀನೆ ಸೌದೆ, ಮೇಣ, ಹಣ್ಣು, ರಾಳ, ಗೋಂದು, ಹುಳಿ, ಸೀಗೆ – ಇವು ಕೆಲವು ಅರಣ್ಯೋತ್ಪನ್ನಗಳು. ಒಟ್ಟಿನಲ್ಲಿ ಜಿಲ್ಲೆಯ ನೈಸರ್ಗಿಕ ಸಸ್ಯಸಂಪತ್ತು ಅಷ್ಟೇನೂ ಸಮೃದ್ಧವಾಗಿಲ್ಲ.

ತಿಂಥಿಣಿ ಹಳ್ಳಿಯ ಸುತ್ತ ತಾಮ್ರದ ನಿಕ್ಷೇಪಗಳಿವೆ. ಯಾದಗೀರ್, ಸುರಪುರ, ತಾಲ್ಲೂಕುಗಳಲ್ಲಿ ಗಾಜಿನ ಕೈಗಾರಿಕೆಗೆ ಉಪಯುಕ್ತವಾದ ಕಣಶಿಲೆ, ಯಾದಗಿರಿಯಲ್ಲಿ ಅಗೇಟ್ಸ್ ಮತ್ತು ಮರಳು, ಸುರಪುರ ತಾಲ್ಲೂಕಿನಲ್ಲಿ ತೋರಮಲ್ಲಿ, ಗುಲ್ಬರ್ಗದಲ್ಲಿ ಜಿಪ್ಸಂ, ಸುರಪುರ ತಾಲ್ಲೂಕಿನಲ್ಲಿ ಕಾಲ್ಕೇರಿಯಸ್ ಪುಡಿ, ಚಿಂಚೋಳಿ ತಾಲ್ಲೂಕಿನಲ್ಲಿ ಫುಲ್ಲರ್ಸ್ ಅರ್ತ್ ಸಿಗುತ್ತವೆ. ಸಿಮೆಂಟ್ ಕೈಗಾರಿಕೆಗೆ ಉಪಯುಕ್ತವಾದ ಸುಣ್ಣಕಲ್ಲು ಜಿಲ್ಲೆಯ ಹಲವೆಡೆ ಕಂಡುಬರುತ್ತದೆ. ಕಟ್ಟಡಗಳಿಗೆ ಉಪಯೋಗಿಸುವ ಉತ್ತಮವಾದ ಕಲ್ಲು ಜಿಲ್ಲೆಯಲ್ಲಿ ಹೇರಳವಾಗಿ ದೊರಕುತ್ತದೆ.

ಈ ಜಿಲ್ಲೆಯ ಕೆಲವು ಕಡೆಗಳಲ್ಲಿ ಕಪ್ಪು ಮತ್ತು ಕೆಂಪು ಮಣ್ಣುಗಳು ಮಿಶ್ರಿತವಾಗಿವೆ. ಕೃಷ್ಣ ಮೇಲ್ದಂಡೆ ಯೋಜನೆಯಿಂದ ಗುಲ್ಬರ್ಗ ಜಿಲ್ಲೆಗೂ ಪ್ರಯೋಜನವಾಗುತ್ತದೆ. ಚಂದ್ರಂಪಳ್ಳಿ, ಭೀಮನದಿ, ಅಮೀರಜಾ ನದಿ, ಬೆಣ್ಣೆತೊರೆ, ಮುಲ್ಲಾಮರಿ, ಮುಧೋಳ್, ಕಾಗಿಣಾ, ಇಂದನ್ ಕಲ್ – ಇವು ಜಿಲ್ಲೆಯಲ್ಲಿ ಕಾರ್ಯಗತವಾಗಲಿರುವ, ಆಗುತ್ತಿರುವ ಕೆಲವು ನೀರಾವರಿ ಯೋಜನೆಗಳು. ಜೋಳ, ಬತ್ತ, ಗೋದಿ, ಹತ್ತಿ, ಕಡಲೆ, ನೆಲಗಡಲೆ, ಸಜ್ಜೆ, ಬಾರ್ಲಿ, ಮುಸುಕಿನ ಜೋಳ, ರಾಗಿ, ಹೆಸರು, ತೊಗರಿ, ಕಬ್ಬು – ಇವು ಕೆಲವು ಮುಖ್ಯ ಬೆಳೆಗಳು.

ಜಿಲ್ಲೆಯ ಶೇ. 77.8 ಜನ ಬೇಸಾಯವನ್ನವಲಂಬಿಸಿದ್ದಾರೆ. ಇತರ ಉದ್ಯೋಗಸ್ಥರು ಶೇ. 22.2. ಗೃಹೋದ್ಯೋಗಗಳಲ್ಲಿ ನೇಕಾರಿಕೆ ಮುಖ್ಯ. ಯಾದಗಿರಿನಲ್ಲಿ ಕಂಬಳಿಗಳನ್ನು ನೇಯುತ್ತಾರೆ. ಎಣ್ಣೆಯ ಗಾಣಗಳು, ಕಬ್ಬಿನ ಗಾಣಗಳು, ಹಿತ್ತಾಳೆ ಪಾತ್ರೆ, ಸೀಗೆ, ಮಸಾಲೆ, ಗಂಧದೆಣ್ಣೆ, ಬೀಡಿಕಟ್ಟುವುದು – ಇವು ಕೆಲವು ಸಣ್ಣ ಹಳೆಯ ಕೈಗಾರಿಕೆಗಳು. ಶಾಹಬಾದಿನ ಸಿಮೆಂಟ್ ಕಾರ್ಖಾನೆ, ಗುಲ್ಬರ್ಗದ ಜವಳಿ ಗಿರಣಿ, ಎಣ್ಣೆ ಗಿರಣಿ – ಇವು ಕೆಲವು ದೊಡ್ಡ ಕೈಗಾರಿಕೆಗಳು. ಇದಲ್ಲದೆ ಸಣ್ಣ ಗಾತ್ರದ ಅನೇಕ ಆಧುನಿಕ ಉದ್ಯಮಗಳಿವೆ.

ಗುಲ್ಬರ್ಗ ಜಿಲ್ಲೆಯನ್ನು ಗುಲ್ಬರ್ಗ ಮತ್ತು ಯಾದಗೀರ್ ಎಂಬ ಎರಡು ರೆವಿನ್ಯೂ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಗುಲ್ಬರ್ಗ, ಚಿತ್ತಾಪುರ, ಅಫ್‌ಜಲ್‌ಪುರ, ಆಳಂದ್, ಸೇಡಂ, ಯಾದಗೀರ್, ಚಿಂಚೋಳಿ, ಜೇವರ್ಗಿ, ಶಹಪುರ, ಸುರಪುರ – ಇವು ಗುಲ್ಬರ್ಗ ಜಿಲ್ಲೆಯಲ್ಲಿರುವ ತಾಲ್ಲೂಕುಗಳು. ಗುಲ್ಬರ್ಗ ಜಿಲ್ಲೆಯಲ್ಲಿ ಮಧ್ಯ ರೈಲ್ವೆಯ ಎರಡು ಬ್ರಾಡ್‌ಗೇಜ್ ರೈಲುಮಾರ್ಗಗಳಿವೆ.

ಗುಲ್ಬರ್ಗ ನಗರ ಗುಲ್ಬರ್ಗ ವಿಭಾಗದ, ಜಿಲ್ಲೆಯ, ತಾಲ್ಲೂಕಿನ ಮುಖ್ಯ ಸ್ಥಳ. ಇತಿಹಾಸ ಪ್ರಸಿದ್ಧ ನಗರ. ವಿದ್ಯಾಕೇಂದ್ರ. ಚೆನ್ನೈ – ಮುಂಬಯಿ ಬ್ರಾಡ್‌ಗೇಜ್ ರೈಲು ಮಾರ್ಗದಲ್ಲಿದೆ. ಬೆಂಗಳೂರಿನಿಂದ ಗುಲ್ಬರ್ಗಕ್ಕೆ 580 ಕಿಮೀ. ಜನಸಂಖ್ಯೆ 422,569.

ಗುಲ್ಬರ್ಗದಲ್ಲಿ ಕೆಲವು ಗಿರಣಿಗಳೂ ಕಾರ್ಖಾನೆಗಳೂ ಸಣ್ಣ ಕೈಗಾರಿಕೋದ್ಯಮಗಳೂ ಇವೆ. ಗುಲ್ಬರ್ಗದ ಬಸ್‌ನಿಲ್ದಾಣದಿಂದ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೂ ರಾಜ್ಯದ ª ÀÄÄU ÉÆgÀÀ¸À ª ÀÄRå ÀÄÀÄÀÄÉ§¸ ÀÄÀÀ¸ ÀZÀ¸ ÀªÀÉ (ಬಿ.ಎನ್.ಎಸ್.)

**ಗುವಾಂ:** ಅಮೆರಿಕ ಸಂಯುಕ್ತ ಸಂಸ್ಥಾನದ ಆಡಳಿತಕ್ಕೊಳಪಟ್ಟಿರುವ ಪಶ್ಚಿಮ ಪೆಸಿಫಿಕ್ ಮಹಾಸಾಗರದಲ್ಲಿರುವ ದ್ವೀಪ. ಉ.ಅ. $13^0 5'$ ಸೆ ಮತ್ತು ಪೂ.ರೇ. $144^0 5'$ ಸೆ ದಲ್ಲಿ ವಿಸ್ತರಿಸಿದೆ. ಇದರ ಭೌಗೋಳಿಕ ಕ್ಷೇತ್ರ 544 ಚ.ಕಿಮೀ. ಮೈಕ್ರೋನೇಷ್ಯ ದ್ವೀಪ ಸಮೂಹದ ಅತಿ ದೊಡ್ಡ ದ್ವೀಪವಾದ ಮಾರಿಯಾನ್. ದ್ವೀಪಕಲ್ಪದ ದಕ್ಷಿಣ ತುದಿಯಾಗಿರುವ

ಈ ದ್ವೀಪ ಪೆಸಿಫಿಕ್‌ಸಾಗರ ಹಾಗೂ ಫಿಲಿಪೀನ್ ಭೂ ಫಲಕಗಳು ಮುಖಾಮುಖಿ ಘರ್ಷಿಸಿದ ಪರಿಣಾಮವಾಗಿ ಈ ದ್ವೀಪ ಸಮೂಹ ಹುಟ್ಟಿತೆಂದು ನಂಬಲಾಗಿದೆ. ಈ ಸಾಗರದ ಆಳವಾದ ತಗ್ಗು ಮರಿಯಾನ ಈ ದ್ವೀಪ ಸಮೂಹದ ಪೂರ್ವಭಾಗದಲ್ಲಿದೆ. ಪ್ರಪಂಚದ ಅತ್ಯಂತ ಆಳವಾದ ಚಾಲೆಂಜರ್ ತಗ್ಗು (10911 ಮೀ) ಗುವಾಂನ ನೈರುತ್ಯದಲ್ಲಿದೆ. ಈ ದ್ವೀಪವು 74 ಕಿಮೀ ಉದ್ದ ಹಾಗೂ 6 ರಿಂದ 13 ಕಿಮೀ ಅಗಲವಾಗಿದೆ. ಪೆಸಿಫಿಕ್ ಸಾಗರ ಫಲಕದ ಅಂಚಿನಲ್ಲಿರುವುದರಿಂದ ಆಗಾಗ್ಗೆ ಭೂಕಂಪನಗಳು ಸಾಮಾನ್ಯ.

ಗುವಾಂ ದ್ವೀಪದ ಉತ್ತರ ಭಾಗ ಅರಣ್ಯಗಳಿಂದ ತುಂಬಿದೆ. ಹವಳ ದಿಬ್ಬಗಳು ಮತ್ತು ಸುಣ್ಣದ ಪದರು ಶಿಲೆಗಳನ್ನು ಹೊಂದಿರುವ ಪ್ರಸ್ಥಭೂಮಿಯನ್ನು ಹೊಂದಿದೆ. ದಕ್ಷಿಣ ಭಾಗದಲ್ಲಿ ಜ್ವಾಲಾಮುಖಿ ಕ್ರಿಯೆಯಿಂದ ನಿರ್ಮಾಣವಾಗಿರುವ ಶಿಖರಗಳು ಮತ್ತು ವೃಕ್ಷಸಂಪತ್ತಿನಿಂದ ಆವೃತವಾಗಿರುವ ಹುಲ್ಲುಗಾವಲು ಹಂಚಿಕೆಯಾಗಿವೆ. ಹವಳ ದಿಬ್ಬಗಳು ದ್ವೀಪದ ಹೆಚ್ಚಿನ ಭಾಗವನ್ನು ಆವರಿಸಿವೆ. ಕೊಲ್ಲಿಗಳನ್ನು ಹೊರತು ಪಡಿಸಿ ಉಳಿದ ಭಾಗಗಳಲ್ಲಿ ಬೆಟ್ಟಗಳಿಂದ ಕೂಡಿದೆ. ಈ ಭಾಗದ ನದಿಗಳು ಪೆಸಿಫಿಕ್ ಸಾಗರ ಮತ್ತು ಫಿಲಿಪೈನ್ ಸಮುದ್ರವನ್ನು ಸೇರುತ್ತವೆ. ದ್ವೀಪದ ಹೆಚ್ಚಿನ ಜನಸಾಂದ್ರತೆ ಉತ್ತರ ಮತ್ತು ಮಧ್ಯ ಭಾಗದಲ್ಲಿ ಕಂಡುಬರುತ್ತದೆ.

ಈ ದ್ವೀಪದ ಜನಸಂಖ್ಯೆ 1,45,805 (2000). ಶೇ. 57 ಭಾಗ ಸ್ಥಳೀಯರು. ಉಳಿದವರು ಕಾಮೊರೊಸ್, ಫಿಲಿಪಿನೋದವರು ಶೇ. 25.5 ಇದ್ದಾರೆ. ಕಕೇಸಿಯನ್ನರು ಶೇ. 10, ಚೀನಿಯರು, ಜಪಾನೀಯರು, ಕೊರಿಯನ್ನರು ಜನಸಂಖ್ಯೆಯಲ್ಲಿ ಸೇರಿದ್ದಾರೆ. ವಾರ್ಷಿಕ ಜನಸಂಖ್ಯೆ ಬೆಳವಣಿಗೆಯ ದರ ಶೇ. 2.89. ರೋಮನ್ ಕೆಥೊಲಿಕ್ ಪ್ರಮುಖ ಧರ್ಮ (ಶೇ. 85). ಭಾಷೆ ಇಂಗ್ಲಿಷ್ ಮತ್ತು ಚಾಮೊರೋ. ರಾಜಧಾನಿ ಹಗಥ್. ರಾಷ್ಟ್ರೀಯ ಆದಾಯ 3.2 ಬಿ.ಡಾಲರು. ತಲಾ ಆದಾಯ 21,000 ಡಾಲರ್. ಈ ದ್ವೀಪದ ಕರೆನ್ಸಿ ಯು.ಎಸ್. ಡಾಲರ್.

*

**ಗುಹಾವಟಿ:** ಅಸ್ಸಾಮಿನ ಕಾಮರೂಪ ಜಿಲ್ಲೆಯ ಮುಖ್ಯ ಪಟ್ಟಣ ಮತ್ತು ಅಸ್ಸಾಂ ರಾಜ್ಯದ ಸಾಂಸ್ಕೃತಿಕ ಕೇಂದ್ರ. ಇದು 26$^0$10′ ಉ. ಅ. ಮತ್ತು 91$^0$45′ ಪೂರೇ. ದಲ್ಲಿದೆ. ಜನಸಂಖ್ಯೆ 8,14,575. ಬ್ರಹ್ಮಪುತ್ರ ನದಿ ದಡದಲ್ಲಿದೆ. ರೈಲು ಮತ್ತು ರಸ್ತೆ ಸಂಚಾರಕ್ಕೆ ಅನುಕೂಲವಾಗುವಂತೆ ಈ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ದೊಡ್ಡ ಸೇತುವೆಗೆ ಪಾಂಡು ಸೇತುವೆ ಎಂದು ಹೆಸರು. ಈ ನಗರದ ಒಂದು ಕಡೆ ದಟ್ಟ ಅರಣ್ಯ, ಅರ್ಧ ಚಂದ್ರಾಕಾರದ ಬೆಟ್ಟ ಮತ್ತೊಂದು ಕಡೆ ಅಗಲವಾದ ಬ್ರಹ್ಮಪುತ್ರ ನದಿಯ ಪ್ರವಾಹ. ಇದು ಈಶಾನ್ಯ ಭಾರತದ ಹೆಬ್ಬಾಗಿಲಿನಂತಿದೆ.

ಗುಹಾವಟಿ ಪ್ರಮುಖ ವಿದ್ಯಾಕೇಂದ್ರವಾಗಿದ್ದು ಅನೇಕ ಎಂಜಿನಿಯರಿಂಗ್, ಮೆಡಿಕಲ್ ಮತ್ತು ವೆಟರಿನರಿ ಕಾಲೇಜುಗಳಿವೆ. ಇಲ್ಲಿ ಒಂದು ವಸ್ತು ಸಂಗ್ರಹಾಲಯ ಮತ್ತು ಮೃಗಾಲಯವಿದೆ. ಬ್ರಹ್ಮಪುತ್ರ ನದಿಯ ಶಿಲಾ ದ್ವೀಪವೊಂದರಲ್ಲಿ ಉಮಾಕಾಂತ ದೇವಾಲಯವಿದೆ. ಭಾಷೆ ಅಸ್ಸಾಮಿ.

ಇಲ್ಲಿ ಬೇಸಗೆಯಲ್ಲಿ ಹೆಚ್ಚು ಉಷ್ಣಾಂಶ ಚಳಿಗಾಲದಲ್ಲಿ ಬಹಳ ಚಳಿ ಹಾಗೂ ಮಳೆ ಹೆಚ್ಚು. ಈ ಪ್ರದೇಶದ ಮುಖ್ಯ ಬೆಳೆ ಬತ್ತ, ಸೆಣಬು ಮತ್ತು ಎಣ್ಣೆ ಕಾಳುಗಳು ಬ್ರಹ್ಮಪುತ್ರ ನದಿಯಲ್ಲಿ ಮೀನುಗಾರಿಕೆಯಿದೆ.

ಗುಹಾವಟಿ ರಾಜ್ಯದ ಪ್ರಮುಖ ವಾಣಿಜ್ಯ ಕೇಂದ್ರ ಇದಕ್ಕೆ ಭೂ, ಜಲ ಮತ್ತು ವಾಯು ಸಂಪರ್ಕವಿದೆ. ಇದರ ಸಮೀಪ ನೂನ್‌ಮತಿ ಎಣ್ಣೆ ಶುದ್ಧೀಕರಣ ಕೇಂದ್ರವಿದೆ. ಹಾಲಿನ ಕೇಂದ್ರ ಹಾಗೂ ಇತರ ಉದ್ಯೋಗವಾಕಾಶ ಕೊಡುವ ಕೈಗಾರಿಕೆಗಳಿವೆ. 1897ರಲ್ಲಿ ಭೂಕಂಪದಿಂದ ಈ ನಗರ ನಾಶವಾಗಿತ್ತು, ಇದನ್ನು ಪುನಃ ನಿರ್ಮಿಸಲಾಗಿದೆ.

(ಎಂ.ಆರ್.ಜಿ)

**ಗುಹೆ:** ಭೂಮಿಯ ಮೇಲ್ಪದರದ ಶಿಲೆಯಲ್ಲಿನ ಪೊಳ್ಳುಭಾಗ (ಕೇವ್). ಗುಹೆಗಳ ವೈಶಾಲ್ಯ ಮತ್ತು ದ್ವಾರದ ಅಗಲ ಮತ್ತು ಎತ್ತರಗಳಲ್ಲಿ ಬಹಳ ವ್ಯತ್ಯಾಸ ಉಂಟು. ಗುಹೆಗಳನ್ನು ಮಾನವನಿರ್ಮಿತ ಮತ್ತು ಪ್ರಕೃತಿನಿರ್ಮಿತ ಎಂಬುದಾಗಿ ವರ್ಗೀಕರಿಸಬಹುದು. ಪ್ರಕೃತಿಯಲ್ಲಿ ಭೌತ ಮತ್ತು ರಾಸಾಯನಿಕ ಶಿಥಿಲೀಕರಣದಿಂದಲೂ ಜ್ವಾಲಾಮುಖಿಗಳ ಕ್ರಿಯಾವಿಧಿಗಳಿಂದಲೂ ಗುಹೆಗಳು ನಿರ್ಮಾಣವಾಗುತ್ತವೆ.

ಪದರ ಶಿಲೆಗಳಲ್ಲಿ ಗಡಸು ಮತ್ತು ಮೃದು ಶಿಲೆಗಳು ಪರ್ಯಾಯವಾಗಿದ್ದರೆ, ಮಾರುತ ಶಿಥಿಲೀಕರಣದಿಂದ ಮೃದುಶಿಲೆಗಳು ಬೇಗ ಸವೆದು ಗುಹೆಗಳಾಗುವುದುಂಟು. ಇಂಥ ಪ್ರದೇಶಗಳಲ್ಲಿ ನದಿ ಇದ್ದರೆ ಗುಹೆ ನಿರ್ಮಿತವಾಗುವುದು. ಘಟಪ್ರಭಾ ನದಿ ಬೆಳಗಾವಿ ಜಿಲ್ಲೆಯ ಗೋಕಾಕ್ ಎಂಬಲ್ಲಿ 55 ಮೀ. ಎತ್ತರದಿಂದ ಧುಮುಕುತ್ತದೆ. ಇದರ ತಳದಲ್ಲಿ ಹಿಮ್ಮೊಗ ಶಿಥಿಲೀಕರಣವಾಗಿ ಗುಹೆ ನಿರ್ಮಿತವಾಗಿದೆ. ಉತ್ತರ ಅಮೆರಿಕದ ನಯಾಗರ ಜಲಪಾತ ಲಾಳದ ಆಕಾರದಲ್ಲಿದೆ. ನೀರಿನ ಹಿಂದೆ ಇರುವ ಗುಹೆಗಳಲ್ಲಿ ಕುಳಿತು ಜಲಪಾತದ ರಮ್ಯ ದೃಶ್ಯವನ್ನು ನೋಡಲು ಅನುಕೂಲ ಮಾಡಿರುತ್ತಾರೆ. ಇವೆಲ್ಲ ಭೌತ ಶಿಥಿಲೀಕರಣದಿಂದಾದ ಗುಹೆಗಳು.

ಪ್ರಪಂಚದ ಬಹುಪಾಲು ಗುಹೆಗಳು ಸುಣ್ಣಕಲ್ಲಿನ ಪ್ರದೇಶಗಳಲ್ಲಿವೆ. ಇಂಗಾಲದ ಡೈ ಆಕ್ಸೈಡ್ ವಿಲೀನವಾಗಿರುವ ನೀರು ಸುಣ್ಣಶಿಲೆಗಳಲ್ಲಿರುವ ಸೀಳುಗಳ ಮೂಲಕ ಒಳಗಿಳಿಯುತ್ತದೆ. ಈ ಅಂತರ್ಜಲ ಸುಣ್ಣಶಿಲೆಗಳನ್ನು ಸುಣ್ಣದ ಬೈಕಾರ್ಬೋನೇಟಾಗಿ ಪರಿವರ್ತಿಸುತ್ತದೆ. ಇದು ನೀರಿನಲ್ಲಿ ಸುಲಭವಾಗಿ ವಿಲೀನವಾಗುವುದರಿಂದ ಪೊಟರೆಗಳಾಗುತ್ತವೆ. ನೀರು ಸುಣ್ಣಶಿಲೆಗಳ ಬಿರುಕುಗಳ ಮೂಲಕ ಹರಿದಾಗ ಅಂತರಾಳದಲ್ಲಿ ನದಿಗಳು ಗುಪ್ತಗಾಮಿಗಳಾಗಿ ಹರಿಯುತ್ತವೆ. ರಷ್ಯದ ಅನೇಕ ನದಿಗಳು ಇದಕ್ಕೆ ಉದಾಹರಣೆಗಳು. ನೆರೆ ಪ್ರದೇಶಗಳಿಂದ ಹರಿದುಬರುವ ನದಿಗಳು ಸುಣ್ಣಶಿಲಾಪ್ರದೇಶವನ್ನು ತಲುಪಿದ ಬಳಿಕ ರಂಧ್ರಗಳ ಮೂಲಕ ಒಳಹೋಗುವುದನ್ನು ಕಾಣಬಹುದು. ಇವುಗಳಿಗೆ ಮುಳುಗುರಂಧ್ರಗಳೆಂದು ಹೆಸರು. ಈ ರಂಧ್ರಗಳ ಒಳಭಾಗದಲ್ಲಿ ದೊಡ್ಡ ಗುಹೆಗಳಿರುವುವು. ಇಂಗ್ಲೆಂಡಿನ ಇಂಗಲ್‌ಬರೊ ಪ್ರದೇಶದಲ್ಲಿರುವ ಗೇಪಿಂಗ್ ಘಿಲ್ ಎಂಬ ದೊಡ್ಡ ಗುಹೆ 111 ಮೀ ಆಳದಲ್ಲಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೆಂಟುಕಿ ಪ್ರದೇಶದಲ್ಲಿ 60,000 ಮುಳುಗುರಂಧ್ರಗಳಿವೆ. ಇವುಗಳಲ್ಲಿ ದಿ ಗ್ರೇಟ್ ಮ್ಯಾಮತ್ ಕೇವ್ ಎಂಬುದು 48 ಕಿಮೀ ಉದ್ದವಿದೆ. ನ್ಯೂ ಮೆಕ್ಸಿಕೊ ಪ್ರಾಂತದ ಕಾರಲ್ಸ್‌ಬಾಡ್ ಗುಹೆಯಲ್ಲಿ 1213 ಮೀ ಉದ್ದ, 182 ಮೀ ಅಗಲ ಮತ್ತು 91 ಮೀ ಎತ್ತರದ ವಿಶಾಲ ಅಂಕಣ ಉಂಟು. ಇವೆಲ್ಲ ರಾಸಾಯನಿಕ ಶಿಥಿಲೀಕರಣದಿಂದಾದವು. ಈ ಬಗೆಯ ಗುಹೆಗಳ ನೆಲ ಮಟ್ಟಸವಾಗಿರುವುದಿಲ್ಲ. ಇವುಗಳ ಮಾಳಿಗೆಗಳು ಸದಾ ತೇವವಾಗಿರುತ್ತವೆ. ಸಣ್ಣ ಬಿರುಕುಗಳ ಮೂಲಕ ಅಂತರ್ಜಲ ತೊಟ್ಟು ತೊಟ್ಟಾಗಿ ಹೊರಬೀಳುವುದು. ಇವು ಚಿಕ್ಕವಾಗಿದ್ದರೆ ಮಾಳಿಗೆಗಳಲ್ಲಿಯೇ ನೇತಾಡುತ್ತಿರುವುವು. ಕೊನೆಗೆ ಆವಿಯಾಗಿ ವಿಲೀನವಸ್ತು ತೆಳುಪೊರೆಯಾಗಿ ಮಾಳಿಗೆಗೆ ಅಂಟಿಕೊಂಡು ಉಳಿಯುತ್ತದೆ. ಈ ಕ್ರಿಯೆ ಸಾಕಷ್ಟು ಕಾಲ ನಡೆದು ಮಾಳಿಗೆಗಳಿಂದ ಕೆಳಮುಖವಾಗಿ ಸ್ತಂಭಾಕೃತಿಯ ರಚನೆಗಳು ಬೆಳೆಯುವುವು. ಇವಕ್ಕೆ ತೂಗು ತೊಂಗಲುಗಳು (ಸ್ಟಾಲಕ್ಟೈಟ್ಸ್) ಎಂದು ಹೆಸರು. ಇವು ನೆಲಮುಟ್ಟುವವರೆಗೂ ಬೆಳೆಯುವುದುಂಟು. ಮಾಳಿಗೆಯಲ್ಲಿ ಹೊರಬೀಳುವ ನೀರಿನ ತೊಟ್ಟುಗಳ ಗಾತ್ರ ದೊಡ್ಡದಾಗಿದ್ದರೆ, ಅವು ಕೆಳಕ್ಕೆ ಬಿದ್ದು, ಆವಿಯಾಗಿ, ನೆಲದ ಮೇಲೆ ತೆಳು ಖನಿಜದ ಪೊರೆ ಉಳಿಯುವುದು. ಈ ಕ್ರಿಯೆಯಿಂದ ಮೇಲ್ಮುಖವಾಗಿ ಬೆಳೆಯುವ ಸ್ತಂಭಾಕೃತಿ ರಚನೆಗಳಾಗುವುವು. ಇವುಗಳಿಗೆ ನೆಲ ತೊಂಗಲುಗಳು ಎಂದು ಹೆಸರು.

ಸುಣ್ಣಶಿಲಾಪ್ರದೇಶದಲ್ಲಿ ಅಂತರ್ಜಲದ ರಾಸಾಯನಿಕ ಶಿಥಿಲೀಕರಣ ಮುಂದುವರಿದು ಆ ಪ್ರದೇಶದ ಪ್ರಸ್ಥಭೂಮಿಯೆಲ್ಲ ಮಾಯವಾಗಿ ಬೆಟ್ಟಗಳಾಗುತ್ತವೆ. ಇವುಗಳ ಕೆಲವು ಭಾಗಗಳಲ್ಲಿ ಜೇನುಗೂಡಿನ ಹಾಗೆ ಅನೇಕ ಚಿಕ್ಕ ಗವಿಗಳನ್ನು ಕಾಣಬಹುದು. ಈ ಸ್ವರೂಪದ ಬೆಟ್ಟಗಳನ್ನು ದಕ್ಷಿಣ ಅಮೆರಿಕದ ಪೋರ್ಟೊರಿಕೊದಲ್ಲಿ ಪಿಪಿನೊ ಬೆಟ್ಟಗಳೆಂದು ಕರೆಯುವರು. ಇವನ್ನು ಕ್ಯೂಬ ಮತ್ತು ಜಮೈಕಗಳಲ್ಲೂ ಕಾಣಬಹುದು. ಚೀನದ ಯೂನಾನ್ ಪ್ರದೇಶದಲ್ಲಿರುವ ಬೆಟ್ಟಗಳು ಕಂಬಗಳಂತೆ ಕಾಣುವುದರಿಂದ ಅವನ್ನು ಶಿಲಾಕಾಡುಗಳೆಂದು ವರ್ಣಿಸಲಾಗಿದೆ. ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಬೇಟಂಚರ್ಲದ ಹತ್ತಿರ ಸುಣ್ಣ ಶಿಲೆಗಳಲ್ಲಿ ಹಲವು ಗುಹೆಗಳಿವೆ. ಇಲ್ಲಿನ ಸುಣ್ಣಮಿಶ್ರ ಕೆಂಪು ಜೇಡು ಶಿಲೆಯಲ್ಲಿ ಪ್ಲೀಸ್ಟೋಸೀನ್ ಯುಗದ ಸಸ್ತನಿಗಳು, ಸರೀಸೃಪಗಳು ಮತ್ತು ದ್ವಿಚರ ಪ್ರಾಣಿಗಳ ಅವಶೇಷಗಳನ್ನು ಕಾಣಲಾಗಿದೆ. ಅವೆಲ್ಲ ಹಾಲಿ ಜೀವಂತ ಪ್ರಾಣಿ ಜಾತಿಗಳಿಗೆ ಸೇರಿದವು. ಭಾರತದಲ್ಲಿ ಗತವಂಶಿಗಳಾದ ಕೆಲವು ಜಾತಿಗಳೂ ಇವೆ: ಕುದುರೆ ಅಸಿನಸ್, ಕತ್ತೆಕಿರುಬ ಕ್ರೊಕುಟ ಮತ್ತು ಮ್ಯಾನಿಸ್ ಜೈಗ್ಯಾಂಟ. ಆದರೆ ಇವು ಆಫ್ರಿಕದಲ್ಲಿ ಇನ್ನೂ ಜೀವಂತವಾಗಿ ಉಳಿದಿವೆ.

ಜ್ವಾಲಾಮುಖಿಗಳಿಂದ ಹೊರಬಂದ ಶಿಲಾರಸದಿಂದ ನಿರ್ಮಿತವಾದ ಗುಹೆಗಳೂ ಉಂಟು. ಇವು ಹವಾಯಿ ದ್ವೀಪದಲ್ಲಿವೆ. ಶಿಲಾರಸ ಹೊರಹರಿದು ಪದರಗಳಾಗುವುದು ಸರಿಯಷ್ಟೆ. ಪದರದ ತಳ, ಪಕ್ಕಗಳು ಮತ್ತು ಮೇಲ್ಭಾಗಗಳು ಬೇಗ ಆರಿ ಘನೀಭವಿಸುತ್ತವೆ. ಆದರೆ ಒಳಭಾಗದ ಶಿಲಾರಸ ದ್ರವರೂಪದಲ್ಲೇ ಇದ್ದು, ಹರಿದು ಹೋಗಿ ಸುರಂಗ ಪ್ರರೂಪದ ಗುಹೆಗಳಾಗುತ್ತವೆ.

ಕೊನೆಯದಾಗಿ ಮಾನವನಿರ್ಮಿತ ಗುಹೆಗಳೂ ಇವೆ. ಭಾರತದ ಎಲ್ಲೋರ, ಅಜಂತ, ಬಾಜ, ಬೇಡ್ಸಕಾರ್ಲ ಮೊದಲಾದ ಕಡೆ ಪ್ರ.ಶ.ಪೂರ್ವದಲ್ಲಿ ನಿರ್ಮಿತವಾದ ಅನೇಕ ಏಕಶಿಲಾ ಗುಹಾಂತರ್ದೇವಾಲಯಗಳಿವೆ.

ಮಧ್ಯ ಮತ್ತು ದಕ್ಷಿಣ ಯುರೋಪಿನ ಆಲ್ಪ್ಸ್ ಪರ್ವತಗಳಲ್ಲಿ ಪ್ರಸಿದ್ಧ ಗುಹೆಗಳಿವೆ. ಫ್ರಾನ್ಸಿನ ಗ್ರೆನೋಬಲ್ ಹತ್ತಿರದ ಜಿ. ಬರ್‌ಜರ್ ಗುಹೆ ನಮಗೆ ತಿಳಿದಿರುವ ಗುಹೆಗಳಲ್ಲೆಲ್ಲ ಅತ್ಯಂತ ಆಳವಾದದ್ದು (1116 ಮೀ) ಸ್ವಿಟ್ಜರ್ಲೆಂಡಿನ ಹಾಲೋಜ್ ಗುಹೆ ಅತಿ ಉದ್ದವಾದದ್ದು (60 ಕಿಮೀ). ಇದೇ ಪ್ರದೇಶದಲ್ಲಿರುವ ಎಲಿಜಬೆತ್ ಗುಹೆಯ ಉದ್ದ 394 ಮೀ. ಅಗಲ 1516 ಮೀ ಮತ್ತು ಎತ್ತರ 45.5 ಮೀ. ಹಿಮಾಲಯದಲ್ಲೂ ಗುಹೆಗಳಿವೆ. ಭಾರತದಲ್ಲಿ ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆಯ ಗುಹೆಗಳು ಪ್ರಸಿದ್ಧವಾದವು. ಇವುಗಳಲ್ಲಿ ಕೆಲವು 91 ಮೀ ಉದ್ದ 12.1 ಮೀ ಎತ್ತರವಾಗಿದೆ.

(ಡಿ.ಆರ್.)

**ಗೂರ್ಖರು:** ನೇಪಾಲದ ರಾಜಮನೆತನಕ್ಕೆ ನಿರ್ದಿಷ್ಟಾರ್ಥದಲ್ಲೂ ನೇಪಾಲದ ನಿವಾಸಿಗಳಿಗೆ ವ್ಯಾಪಕಾರ್ಥದಲ್ಲೂ ಬಳಸಲಾಗುತ್ತಿರುವ ಪದ. ಗೂರ್ಖ ಎಂಬ ಸಣ್ಣ ರಾಜ್ಯ ಇದ್ದದ್ದು ಸಪ್ತ ಗಂಡಕಿ ಪ್ರದೇಶದಲ್ಲಿ. ನೇಪಾಳದಲ್ಲಿ ಗೂರ್ಖ ಎಂಬ ಜಿಲ್ಲೆಯಿದೆ. ಅದರ ಮುಖ್ಯಸ್ಥಳದ ಹೆಸರೂ ಗೂರ್ಖ. ಈ ಹೆಸರು ಗೋರಖನಾಥ ಎಂಬ ಗುರುವಿನ ನಾಮಪ್ರತೀಕವಾಗಿ ಬಂದಿದ್ದೆಂದು ತಿಳಿದುಬರುತ್ತದೆ. ಗೂರ್ಖರು ಈ ಗುರುವನ್ನು ತಮ್ಮ ಕುಲದ ಗುರುವೆಂದು ಭಾವಿಸಿದ್ದಾರೆ. ಇಲ್ಲಿ ಪ್ರಸಿದ್ಧ ಭವಾನಿ ದೇವಾಲಯವಿದೆ. ಈ ಪ್ರದೇಶವನ್ನು 1559ರಲ್ಲಿ ಆಕ್ರಮಿಸಿಕೊಂಡು ಆಳಲು ತೊಡಗಿದ ದೊರೆಯ ವಂಶದವರು ತಮ್ಮ ಪ್ರಜೆಗಳನ್ನು ಗೂರ್ಖಾಲಿ ಎಂದು ಕರೆದರು. ಕ್ರಮೇಣ ಇಡೀ ನೇಪಾಲ ಈ ರಾಜರ ಅಧೀನಕ್ಕೆ ಬಂತು.

1768ರ ಹೊತ್ತಿಗೆ ಗೂರ್ಖರು ಸುತ್ತಮುತ್ತಲ ಸ್ಥಳೀಯ ಗುಡ್ಡಗಾಡು ಜನರನ್ನು ಸೋಲಿಸಿ ಇಡೀ ನೇಪಾಲವನ್ನೇ ಒಂದು ಆಡಳಿತದ ಅಡಿಗೆ ತಂದರು. ಗೂರ್ಖರು ಆರ್ಯ–ಮಂಗೋಲ್ ಜನಾಂಗದ ಲಕ್ಷಣಗಳನ್ನು ಪಡೆದಿದ್ದಾರೆ. ಅವರ ಕುಬ್ಜವಾದ ಪುಷ್ಟ ದೇಹ, ಚಪ್ಪಟೆಯಾದ ಮುಖ, ಪೀತವರ್ಣ – ಇವು ಮಂಗೋಲ್ ಲಕ್ಷಣಗಳು. ಗೂರ್ಖರು ಪ್ರಧಾನವಾಗಿ ಹಿಂದುಧರ್ಮಕ್ಕೆ ಸೇರಿದವರಾದರೂ ಅವರಲ್ಲಿ ಬೌದ್ಧರೂ ಸಾಕಷ್ಟಿದ್ದಾರೆ. ಹಿಂದುಗಳಾದವರಲ್ಲಿ ವರ್ಣಾಶ್ರಮ ಪದ್ಧತಿಯಿದೆ. ಚಂಡಿ, ದೇವಿ, ದುರ್ಗಿ ಪೂಜೆಗಳು ಅಲ್ಲಿ ಹೆಚ್ಚು ಜನಪ್ರಿಯ. ದಸರ ಮತ್ತು ಇತರ ಮುಖ್ಯ ಹಬ್ಬಗಳನ್ನೂ ಹಿಂದುಗಳು ಆಚರಿಸುತ್ತಾರೆ.

ನೇಪಾಲದಲ್ಲಿ ಮೂರು ಮುಖ್ಯ ಭಾಷಾ ಕುಟುಂಬಗಳಿಗೆ ಸೇರಿದ ಸು. 20 ಭಾಷೆಗಳಿವೆ. ಅವುಗಳಲ್ಲಿ ನೇಪಾಲಿ (ಗೂರ್ಖಾಲಿ) ಮುಖ್ಯ ಭಾಷೆ. ಇದರ ಮೇಲೆ ಹೆಚ್ಚಾಗಿ ಸಂಸ್ಕೃತದ ಪ್ರಭಾವವಿದೆ. (ಡಿ.ಎಸ್.ಜಿ.)

**ಗೇರುಸೊಪ್ಪೆ:** ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಒಂದು ಹಳ್ಳಿ. ಶರಾವತಿ ಜಲಪಾತದಿಂದ 30 ಕಿಮೀ ದೂರದಲ್ಲೂ ಹೊನ್ನಾವರದಿಂದ 26 ಕಿಮೀ ದೂರದಲ್ಲೂ ಇದೆ. ಈ ಭಾಗದನಲ್ಲಿ ಗೇರುಬೀಜದ ಗಿಡಗಳು ಹೇರಳವಾಗಿರುವುದರಿಂದ ಇದಕ್ಕೆ ಗೇರುಸೊಪ್ಪೆ ಎಂಬ ಹೆಸರು ಬಂದಿರಬೇಕೆಂದು ಹೇಳಲಾಗಿದೆ. ಇಕ್ಕೇರಿಯ ನಾಯಕರ ಕಾಲದಲ್ಲಿ ಘಟ್ಟದ ಕೆಳಗಿನ ಸೀಮೆ ಭಟ್ಕಳ, ಶಿರಾಳ, ಚಂದವಾರ, ಗೇರುಸೊಪ್ಪೆ ಮತ್ತು ಮಿರ್ಜಿ ಜಿಲ್ಲೆಗಳೆಂದು ವಿಭಾಗಿಸಲ್ಪಟ್ಟು ಪ್ರತಿಯೊಂದು ಜಿಲ್ಲೆಯೂ ಕರಾವಳಿಯಿಂದ ಹಿಡಿದು ಅರಬ್ಬಿ ಸಮುದ್ರದವರೆಗೆ ವ್ಯಾಪಿಸಿತ್ತು.

ಸು. 400 ವರ್ಷಗಳ ಹಿಂದೆ ಈ ಹಳ್ಳಿ ಗೇರುಸೊಪ್ಪೆ ರಾಜ್ಯದ ಭವ್ಯ ರಾಜಧಾನಿಯಾಗಿತ್ತು. ಗೇರುಸೊಪ್ಪೆ ರಾಜ್ಯವನ್ನು ನಗಿರೆ ರಾಜ್ಯ ಎಂದು ಕರೆಯುತ್ತಿದ್ದರು. ಶರಾವತಿಯ ಒಂದು ದಂಡೆಯಲ್ಲಿರುವ ಗ್ರಾಮವನ್ನು ಗೇರುಸೊಪ್ಪೆ ಎಂದು ಕರೆದರೆ ಆ ಬದಿಯ ಹಳ್ಳಿಯನ್ನು ನಗಿರೆ ಬಸ್ತಿಕೇರಿ ಎಂದು ಕರೆಯುತ್ತಿದ್ದರು. ಅಲ್ಲಿ ಜೈನರ ಬಸದಿಗಳು ಇರುವುದರಿಂದಲೇ ಅದು ಆ ಹೆಸರನ್ನು ಪಡೆಯಿತು. ನಗಿರೆ ಬಸ್ತಿಕೇರಿ 400 ವರ್ಷಗಳ ಹಿಂದೆ ವೈಭವದಿಂದ ಮೆರೆದ ಪಟ್ಟಣವಾಗಿತ್ತು. ಅಲ್ಲಿಯ ರಾಜರು ಕಟ್ಟಿಸಿದ ಜೈನಬಸದಿಗಳು, ದೇವಾಲಯಗಳನ್ನು ಇಂದೂ ನೋಡಬಹುದು. ಕರ್ನಾಟಕದ ಇತರ ಪಾಳೆಯಗಾರರಂತೆ ಗೇರುಸೊಪ್ಪೆಯ ಅರಸರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಅವರ ರಕ್ಷಣೆಯಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳ ಸ್ವಲ್ಪ ಭಾಗಗಳನ್ನು ಒಳಗೊಂಡ ಗೇರುಸೊಪ್ಪೆ ರಾಜ್ಯದ ಅರಸರು ಸಾಳುವ ವಂಶಕ್ಕೆ ಸೇರಿದವರು. ಸು. 200 ವರ್ಷಗಳ ಕಾಲ ವೈಭವದಿಂದ ಮೆರೆದ ಗೇರುಸೊಪ್ಪೆಯ ರಾಜರು ಸಾಹಿತ್ಯ, ಧರ್ಮ ಮತ್ತು ಕಲೆಗೆ ವಿಶೇಷವಾದ ಪ್ರೋತ್ಸಾಹ ನೀಡಿದ್ದಕ್ಕೆ ಸಾಕ್ಷಿಯಾಗಿ ಬಸದಿ, ದೇವಾಲಯಗಳು ಅಲ್ಲಿ ಕಂಡುಬರುತ್ತವೆ. ಗೇರುಸೊಪ್ಪೆಯಲ್ಲಿರುವ ಸುಂದರ ಚತುರ್ಮುಖ ಬಸದಿ ಅಲ್ಲಿಯ ರಾಜರ ಕೊಡುಗೆ. ರಾಣಿ ಭೈರಾದೇವಿ ಈ ಬಸದಿಯನ್ನು ಕಟ್ಟಿಸಿದಳು. ಇದಲ್ಲದೆ, ಅಲ್ಲಿಯ ಜ್ವಾಲಮಾಲಿನಿ ದೇವಾಲಯ, ನೇಮಿನಾಥ ಬಸದಿ, ಅನೇಕ ವೀರಗಲ್ಲುಗಳು ಮತ್ತು ಶಾಸನಗಳು ಅಲ್ಲಿಯ ರಾಜರುಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತವೆ. (ಕೆ.ಟಿ.ಆರ್.)

**ಗೇರುಸೊಪ್ಪೆ ಜಲಪಾತ:** ಶರಾವತಿ ನದಿಯ ಈ ಜಲಪಾತಕ್ಕೆ ಜೋಗಜಲಪಾತ ಎಂದೂ ಕರೆಯುತ್ತಾರೆ. ಕರ್ನಾಟಕದ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗಡಿಯಲ್ಲಿ ಉ.ಅ. $14^0 14'$ ಮತ್ತು ಪೂ.ರೇ. $74^0 50'$ ಮೇಲಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥದಲ್ಲಿ ಹುಟ್ಟುವ ಶರಾವತಿ ನದಿ ಫತ್ತೇಪೇಟ್ ಬಳಿ ವಾಯವ್ಯಕ್ಕೆ ತಿರುಗಿ, ಹರಿದ್ರಾವತಿ ಮತ್ತು ಎಣ್ಣೆಹೊಳೆಗಳನ್ನು ಕೂಡಿಕೊಂಡು ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳ ಗಡಿಯ ಬಳಿ ಪಶ್ಚಿಮಕ್ಕೆ ತಿರುಗಿ, ಗೇರುಸೊಪ್ಪೆ ಪ್ರಪಾತದಲ್ಲಿ ಧುಮುಕುತ್ತದೆ. ಅನಂತರ ನದಿ 28 ಕಿಮೀ ದೂರದಲ್ಲಿರುವ ಗೇರುಸೊಪ್ಪೆ ಗ್ರಾಮದತ್ತ ಸಾಗಿ ಮುಂದೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಈ ಜಲಪಾತ ಶಿವಮೊಗ್ಗದಿಂದ 100 ಕಿಮೀ, ಹೊನ್ನಾವರದಿಂದ 58 ಕಿಮೀ ದೂರದಲ್ಲಿದೆ. ಇದೊಂದು ಸುಂದರವಾದ ಜಲಪಾತ. ಆಲ್ಪ್ಸ್ ಪರ್ವತದಲ್ಲಿರುವ ಸೆರೊಸೊಲಿ (731 ಮೀ), ಎವಾನ್ಸನ್ (365 ಮೀ) ಮತ್ತು ಅರ್ವೆ (335 ಮೀ) – ಇವು ಜೋಗ್ ಜಲಪಾತಕ್ಕಿಂತ (252 ಮೀ) ಎತ್ತರವಾಗಿವೆ. ಆದರೆ ಅವುಗಳಲ್ಲಿ ಜೋಗದಷ್ಟು ನೀರಿಲ್ಲ. ನಯಾಗರ ಜಲಪಾತದ ನೀರಿನ ಮೊತ್ತ ಜೋಗದ್ದಕ್ಕಿಂತ ಅಧಿಕ. ಆದರೆ ಆ ಜಲಪಾತ ಗೇರುಸೊಪ್ಪೆಯಷ್ಟು ಎತ್ತರವಿಲ್ಲ. ನಾಲ್ಕು ಪ್ರತ್ಯೇಕ ಬಿರುಕುಗಳಿಂದ ನದಿ ರಭಸದಿಂದ

ಜೋಗ್ ಜಲಪಾತ

ಕಮರಿಗೆ ಬೀಳುತ್ತದೆ. ಜಲಪಾತದ ನಾಲ್ಕು ಕವಲುಗಳ ಪೈಕಿ ರಾಜಾ ಸು. 253 ಮೀ ಆಳಕ್ಕೆ ಧುಮುಕುತ್ತದೆ. ಈ ಕವಲು ಸಿರಸಿಯ ಸೋದೆ ರಾಜನ ಹೆಸರ ಮೇಲೆ ರಾಜಾ ಎಂದು ಕರೆಯಲಾಗಿದೆ. ರಾಜಾ ಜಲಪಾತದ ಸ್ವಲ್ಪ ಕೆಳಗೆ, ಬಂಡೆಯ ಬಿರುಕಿನಿಂದ ಹರಿದು ಬೀಳುವ ಜಲಪಾತ ರೋರರ್. ಮೂರನೆಯ ಜಲಪಾತ ರಾಕೆಟ್ ಬಂಡೆಯ ಮೇಲಿಂದ ಹಲವು ದಾರೆಗಳಲ್ಲಿ ಚಿಮ್ಮಿ ತಳಕ್ಕೆ ಕುಪ್ಪಳಿಸುತ್ತದೆ. ನಾಲ್ಕನೆಯ ಜಲಪಾತ ರಾಣಿ. ಮಳೆಗಾಲದ ತಿಂಗಳುಗಳಲ್ಲಿ ನದಿಯ ಪ್ರವಾಹ ಸರಿಯಾದ ಗಾತ್ರದಲ್ಲಿರುವುದರಿಂದ ಜಲಪಾತ ನೋಡಲು ರಮ್ಯವಾಗಿರುತ್ತದೆ. ಜಲಪಾತದ ಪೂರ್ಣದೃಶ್ಯವನ್ನು ಶಿವಮೊಗ್ಗ ಗಡಿ ಭಾಗದಿಂದ ಕಾಣಬಹುದು. ಗೇರುಸೊಪ್ಪೆ ಜಲಪಾತವನ್ನು ಅಳೆದು ಮಾಹಿತಿಗಳನ್ನು ಸಂಗ್ರಹಿಸಲು ಮಾರ್ಚ್ 1856 ರಲ್ಲಿ ಬಂದ ಇಬ್ಬರು ಬ್ರಿಟಿಷ್ ನೌಕಾಧಿಕಾರಿಗಳು ಜಲಪಾತದ ಬಗ್ಗೆ ಗಮನಾರ್ಹವಾದ ವರದಿಯನ್ನು ಒಪ್ಪಿಸಿದ್ದಾರೆ. ಪ್ರಪಾತದ ಆಳ 252.67 ಮೀ ಎಂದು ಅವರು ಖಚಿತಪಡಿಸಿದರು. ಅಕ್ಟೋಬರಿನಿಂದ ಫೆಬ್ರವರಿಯ ವರೆಗೆ ಸಹಸ್ರಾರು ಪ್ರವಾಸಿಗಳು ಜಗತ್‌ಪ್ರಸಿದ್ಧವಾದ ಈ ಮನೋಹರ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಜಲಪಾತದ ಬಳಿ ಜೋಗ್ ಎಂಬ ಕಿರುಗ್ರಾಮ, 1958 ರಲ್ಲಿ ಪ್ರಾರಂಭವಾದ ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆಯ ಚಟುವಟಿಕೆಗಳಿಂದ ದೊಡ್ಡದಾಗಿ ಬೆಳೆದುಕೊಂಡಿದೆ. (ವಿ.ಜಿ.ಕೆ.;ಬಿ.ಎಚ್.ಎಸ್.)

**ಗೈಯಾನ:** ಬ್ರಿಟಿಷ್ ಗಿಯಾನವನ್ನು ಇಂದು ಗೈಯಾನ ಎಂದು ಕರೆಯಲಾಗುತ್ತಿದೆ. ಉ.ಅ. $1^0$–$80^0$ ಹಾಗೂ ಪ.ರೇ. $56^0$–$61^0$ ಗಳಲ್ಲಿ ನೆಲಸಿದೆ. ದಕ್ಷಿಣ ಅಮೆರಿಕದ ಈಶಾನ್ಯದಲ್ಲಿ ಅಮೆಝಾನ್, ನೇಗ್ರೊ, ಒರಿನೋಕೋ ನದಿಗಳ ನಡುವೆ ಇರುವ ಈ ಸ್ವತಂತ್ರ ರಾಜ್ಯದ ವಿಸ್ತೀರ್ಣ 2,15,083 ಚ.ಕಿಮೀ. ಜನಸಂಖ್ಯೆ 8,81,932 (2004). ರಾಜಧಾನಿ ಜಾರ್ಜ್‌ಟೌನ್. ಇದರ ಜನಸಂಖ್ಯೆ 2,48,500 (2002).

ಭೂಸ್ವರೂಪ: ಇಡೀ ಗೈಯಾನ ಪ್ರದೇಶ ಅಟ್ಲಾಂಟಿಕ್ ಸಾಗರ ಮತ್ತು ಓರಿನೋಕೋ ನದಿ ಪ್ರದೇಶದಿಂದ ಮೇಲೆದ್ದುನಿಂತ ಪ್ರಸ್ಥಭೂಮಿಯಾಗಿದೆ. ದಕ್ಷಿಣ ಭಾಗದಲ್ಲಿ ಹೆಚ್ಚು ಎತ್ತರವಾದ ಎಲ್ಲೆಯಲ್ಲಿರುವ ರಾರೈಮ ಅತ್ಯುನ್ನತ ಶಿಖರ (2596 ಕಿಮೀ) ತೀರ ಪ್ರದೇಶ

ಜವುಗು ನೆಲದಿಂದ ಕೂಡಿದ್ದು, ಓರಿನೋಕೋ ಮತ್ತು ಅದರ ಉಪನದಿಗಳು ಗೈಯಾನದ ಪಶ್ಚಿಮ ಭಾಗದಲ್ಲಿ ಹರಿಯುತ್ತವೆ. ಫ್ರಾಂಕ್ರೋ ಮತ್ತು ಟ್ರೋಲ್ಮ್‌ಬೇಟಿಸ್ ಇವು ದಕ್ಷಿಣಕ್ಕೆ ಹರಿದು ಅಮೆಜಾನ್ ನದಿಯನ್ನು ಸೇರುತ್ತವೆ. ಉತ್ತರದಲ್ಲಿ ಅಟ್ಲಾಂಟಿಕ್ ಸಾಗರವನ್ನು ಸೇರುವ ನದಿಗಳಲ್ಲಿ ಮುಖ್ಯವಾದವು ಎಸೆಕ್ವಿಬೋ, ಕೊರೆಂಟೈನ್, ಸುರಿನಾಂ ಮತ್ತು ಮರೋನಿ. ಪೊಟಾಕೊನದಿಯ ಕೈಯಿಟೂರ್ ಜಲಪಾತ ಐಪೊಬೆ ನದಿಯ ಮರೀನ ಜಲಪಾತ ಇವು ಮುಖ್ಯವಾದವು.

ವಾಯುಗುಣ: ಇಲ್ಲಿ ಸಮಭಾಜಕೀಯ ವಾಯುಗುಣವಿದೆ. ಈಶಾನ್ಯ ಮಾರುತಕ್ಕೆ ಎದುರಾಗಿರುವ ಈ ಪ್ರದೇಶದಲ್ಲಿ ಸೆಕೆಯೂ ಮಳೆಯೂ ಹೆಚ್ಚು. ಉಷ್ಣಾಂಶ ($8^0$ಸೆ.–$30^0$ಸೆ.), ಎತ್ತರ ಹೆಚ್ಚಿದಂತೆ ಹೆಚ್ಚು ತಂಪಾಗಿದೆ. ಕರಾವಳಿಯಲ್ಲಿ ಸಾಗರಿಕ ಗಾಳಿಯಿಂದಾಗಿ ಹವೆ ತಂಪಾಗಿರುತ್ತದೆ. ಕರಾವಳಿಯಲ್ಲಿ ವಾರ್ಷಿಕ ಮಳೆ 250 ಸೆಂಮೀ. ಉತ್ತರ ಭಾಗದಲ್ಲಿ ಇನ್ನು ಹೆಚ್ಚು. ಒಳನಾಡಿನ ಎತ್ತರದ ಪ್ರಸ್ಥಭೂಮಿ ಮತ್ತು ಕರಾವಳಿ ವಿನಾ ಉಳಿದೆಲ್ಲೆಲ್ಲಾ ದಟ್ಟವಾಗಿ ಕಾಡು ಹರಡಿದೆ. ಕರಾವಳಿಯ ತಗ್ಗು ನೆಲದಲ್ಲಿ ಗುಲ್ಮವೃಕ್ಷಗಳು ಹೆಚ್ಚು. ಕಾಡಿನಲ್ಲಿ ಅನೇಕ ಚೌಬೀನೆ ಮರಗಳೂ ರಬ್ಬರ್ ಮರಗಳೂ ತಾಳೆ, ಬಳ್ಳಿ ಮುಂತಾದವು ಬೆಳೆಯುತ್ತವೆ. ಜಾಗ್ವಾರ್, ಪ್ಯೂಮ, ಟ್ಯಾಪಿರ್, ಕೋತಿ, ಆರ್ಮಡಿಲ್ಲೋ, ಮೊಸಳೆ ಮುಂತಾದ ಪ್ರಾಣಿಗಳು, ವಿವಿಧ ಜಾತಿಯ ಹಾವು ಮತ್ತು ಪಕ್ಷಿಗಳು ವಿಶೇಷವಾಗಿವೆ.

ಇಲ್ಲಿಯ ಭಾಷೆ ಇಂಗ್ಲಿಷ್, ಹಿಂದಿ, ಉರ್ದು. ಸಾಕ್ಷರತೆ ಶೇ. 98.1. ಧರ್ಮ–ಕ್ರೈಸ್ತ ಮತ್ತು ಹಿಂದು. ನಾಣ್ಯ–ಗೈಯಾನ ಡಾಲರ್.

ವ್ಯವಸಾಯ: ಇಲ್ಲಿಯ ಪ್ರಮುಖ ಆರ್ಥಿಕ ಬೆಳೆಗಳೆಂದರೆ: ಕಬ್ಬು, ಬತ್ತ, ತೆಂಗು ಮತ್ತು ಹುಳಿ ಹಣ್ಣುಗಳು. ಚಿನ್ನ ಮತ್ತು ವಜ್ರದ ನಿಕ್ಷೇಪಗಳಿವೆ. ಸಕ್ಕರೆ, ಗಣಿಗಾರಿಕೆ ಮತ್ತು ಜವಳಿ ಇಲ್ಲಿನ ಪ್ರಮುಖ ಕೈಗಾರಿಕೆಗಳು. ಸಕ್ಕರೆ, ಬತ್ತ ಮತ್ತು ಬಾಕ್ಸೈಟ್ ಇಲ್ಲಿನ ಮುಖ್ಯ ರಫ್ತಾಗುವ ಸರಕುಗಳು. (ವಿ.ಎಸ್.ಎ.)

**ಗೋಂಡರು:** ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಆದಿವಾಸಿ ಬುಡಕಟ್ಟಿಗೆ ಸೇರಿದ ಒಂದು ಜನಾಂಗ. ಈ ಜನ ಮಧ್ಯಪ್ರದೇಶದ ವಿಂಧ್ಯ ಮತ್ತು ಸಾತ್ಪುರ ಪರ್ವತಗಳ ಮಧ್ಯದಲ್ಲಿಯೂ ನರ್ಮದಾ ನದಿಯ ಎರಡು ಕಡೆಗಳಲ್ಲೂ ನೆಲೆಸಿದ್ದಾರೆ. ಆಂಧ್ರ ಪ್ರದೇಶ, ಮಹಾರಾಷ್ಟ್ರ, ಒರಿಸ್ಸ ರಾಜ್ಯಗಳಲ್ಲಿಯೂ ಇವರನ್ನು ಕಾಣಬಹುದು. ಇವರು ತಮ್ಮನ್ನು ಕೋಯಿತುರ್ ಎಂದು ಕರೆದುಕೊಳ್ಳುತ್ತಾರೆ. ಇವರು ಆಡುವ ಭಾಷೆ ಗೋಂಡಿ. ಗೋಂಡ ಶಬ್ದ ತೆಲುಗು ಭಾಷೆಯ ಕೊಂಡ ಎಂಬ ಶಬ್ದದಿಂದ ಬಂದದ್ದೆಂದು ಭಾಷಾವಿಜ್ಞಾನಿಗಳ ಅಭಿಪ್ರಾಯ. ಕೊಂಡ ಎಂದರೆ ತೆಲುಗಿನಲ್ಲಿ ಗುಡ್ಡ ಅಥವಾ ಪರ್ವತ ಎಂದು ಅರ್ಥ. ಜನಸಂಖ್ಯೆ 31,07,225.

ಗೋಂಡರು ಸಾಮಾನ್ಯ ಎತ್ತರದವರು. ಬಣ್ಣ ನಸುಕಪ್ಪು ಇವರು ಮೊದಲಿಗೆ ತುಂಬ ಕ್ರೂರಿಗಳಾಗಿದ್ದರಂತೆ. 1565 ರಲ್ಲಿ ಆಳಿದ ರಾಣಿ ದುರ್ಗಾವತಿ ಇವರ ಸಾಮ್ರಾಜ್ಞಿ ಇಂದಿಗೂ ರಾಣಿ ದುರ್ಗಾವತಿಯನ್ನು ಈ ಜನ ಪೂಜಿಸುತ್ತಾರೆ. ಗೋಂಡರ ಉಪಜಾತಿಯಾದ ಬಸ್ತಾರಿನ ಮಾಡಿಯಾ ಎಂಬ ಆದಿವಾಸಿಗಳು ಘೋಟುಲ್ ಎಂಬ

ಗೋಂಡ ಸ್ತ್ರೀಯರ ಪಾರಂಪರಿಕ ನೃತ್ಯ

ನಿದ್ರಾಶಾಲೆಯನ್ನು (ಡಾರ್ಮಿಟರಿ) ನಡೆಸುತ್ತಾರೆ. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಇವರನ್ನು ಹಿಂದುಳಿದ ಜನಾಂಗವೆಂದು ಪರಿಗಣಿಸಿ ಎಲ್ಲ ರೀತಿಯ ಸೌಲಭ್ಯಗಳನ್ನೂ ನೀಡುತ್ತಿದೆ. (ಕೆ.ಪಿ.ಎ.ಎನ್.)

**ಗೋಂಡ್ವಾನ:** ಮಧ್ಯಭಾರತದಲ್ಲಿ ದ್ರಾವಿಡ ಬುಡಕಟ್ಟಿನ ಗೋಂಡ ಜನಾಂಗ ನೆಲೆಸಿದ್ದ ನಾಡು. ತೆಲುಗಿನ ಕೊಂಡ (ಬೆಟ್ಟ) ಎಂಬ ಶಬ್ದದಿಂದ ಗೋಂಡ ಬಂದಿದೆಯೆಂದು ಹೇಳಲಾಗಿದೆ. ಗೋಂಡರು ವಾಸಿಸುತ್ತಿದ್ದ ಗುಡ್ಡಗಾಡು ಗೋಂಡ್ವಾನ (ಗೋಂಡರ ವನ) ಅಥವಾ ಗೊಂಡಾರಣ್ಯ ಎನಿಸಿಕೊಂಡಿತು. 14ನೆಯ ಶತಮಾನದಲ್ಲಿ ಗೋಂಡ್ವಾನ ದಟ್ಟವಾದ ಅರಣ್ಯವಾಗಿತ್ತು. ಉತ್ತರದಲ್ಲಿ ವಿಂಧ್ಯ ಪರ್ವತಗಳಿಂದ ದಕ್ಷಿಣದಲ್ಲಿ ಗೋದಾವರಿಯ ವರೆಗೂ ಪೂರ್ವದಲ್ಲಿ ಪೂರ್ವಘಟ್ಟಗಳವರೆಗೂ ವ್ಯಾಪಿಸಿದ್ದ ಪ್ರದೇಶವನ್ನು, 14ನೆಯ ಶತಮಾನದ ಮುಸ್ಲಿಂ ಚರಿತ್ರಕಾರರು ಗೋಂಡ್ವಾನ ಎಂದು ಕರೆದರು. ಅಕ್ಬರನ ಸಮಕಾಲೀನ ರಾಜ್ಯದ ಭೂಪಟದಲ್ಲಿ ಅದಕ್ಕೆ ವಿಶಿಷ್ಟ ಸ್ಥಾನವಿದೆ. ಅವನ ಆಸ್ಥಾನಿಕ ಅಬುಲ್ ಫಜಲ ವರ್ಣನೆಯ ಪ್ರಕಾರ ಗೋಂಡ್ವಾನ ಅಥವಾ ಗರ್ಹಾ ಕಟಂಕಾ ಪ್ರದೇಶದ ಎಲ್ಲೆಕಟ್ಟು ಪೂರ್ವಕ್ಕೆ ಛೋಟಾನಾಗಪುರಕ್ಕೆ ಸೇರಿದ ರತ್ನಪುರಿ, ಪಶ್ಚಿಮಕ್ಕೆ ಮಾಳವ, ಉತ್ತರಕ್ಕೆ ಪನ್ನಾ, ದಕ್ಷಿಣಕ್ಕೆ ದಖ್ಖನ್ ಪ್ರದೇಶ. 2,54,400 ಚ.ಕಿಮೀ ಪ್ರದೇಶವನ್ನು ಅದು ಒಳಗೊಂಡಿತ್ತು. ಈಗ ಗೋಂಡ್ವಾನದ ಮೇಲ್ನಾಡು ಮತ್ತು ಅರಣ್ಯಗಳು ಇನ್ನೂ ಪರಿಶೋಧನೆಗೆ ಒಳಗಾಗದ ಬಲು ವಿಸ್ತಾರವಾದ ಪ್ರದೇಶವಾಗಿಯೇ ನಮ್ಮ ಭೂಪಟದಲ್ಲಿ ಮರಳ್ಗಾಡಿನ ಊಟೆಯಂತೆ ಅಗೋಚರವಾಗಿವೆ ಎಂದು 1853ರಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿಗೆ ಒಪ್ಪಿಸಿದ ವರದಿಯಲ್ಲಿ ಹೇಳಲಾಗಿದೆ. ಮಾಳವ, ರತ್ನಪುರಿ, ಜಬಲ್ಪುರದ ಬಳಿಯ ತ್ರಿಪುರ (ತೇವಾರ್), ಪಶ್ಚಿಮ ಬಂಗಾಲದ ಪೂರ್ವ ಅಂಚು. ವಾರಂಗಲ್, ಗೋದಾವರಿ ಮತ್ತು ನರ್ಮದಾ ಭಾಗ, ಪೂರ್ವ ಬಿಹಾರಿನಲ್ಲಿ ವರ್ಧಾ ನದಿಯ ಬಲದಂಡೆಯ ಪ್ರದೇಶ ಹಾಗೆ ಸಾತ್ಪುರಾ ಪರ್ವತಶ್ರೇಣಿ– ಇವು ಗೋಂಡ್ವಾನಕ್ಕೆ ಸೇರಿದ್ದುವು. (ವಿ.ಜಿ.ಕೆ.)

**ಗೋಂಡ್ವಾನ ಖಂಡ:** ದಕ್ಷಿಣ ಅಮೆರಿಕ, ಆಫ್ರಿಕ, ಇಂಡಿಯ, ಆಸ್ಟ್ರೇಲಿಯ, ಅಂಟಾರ್ಕ್‌ಟಿಕ್ ಮೊದಲಾದ ಖಂಡಗಳೆಲ್ಲವೂ ದಕ್ಷಿಣಾರ್ಧಗೋಳದಲ್ಲಿ ಒಂದೇ ಭೂಭಾಗವಾಗಿ ಒಗ್ಗೂಡಿದ್ದುವೆಂದು ಭಾವಿಸಿಕೊಂಡು ಆ ಭೂಭಾಗಕ್ಕೆ ಕೊಟ್ಟ ಹೆಸರು. ಪೇಲಿಯೋಜೋಯಿಕ್ ಯುಗದ ಕೊನೆಯಲ್ಲಿ (225 ದಶಲಕ್ಷ ವರ್ಷ ಪ್ರಾಚೀನ) ಗೋಂಡ್ವಾನ ಖಂಡ ಒಡೆಯಲು ತೊಡಗಿ ಭಿನ್ನ ಖಂಡಗಳು ರೂಪುಗೊಂಡು ಕ್ರಮೇಣ ಅವು ದೂರ ದೂರ ಸರಿದು ಈಗಿರುವ ಸ್ಥಳದಲ್ಲಿ ನಿಂತಿವೆ ಎಂದು ಭೂವಿಜ್ಞಾನಿ ತತ್ತ್ವವೊಂದು ಪ್ರತಿಪಾದಿಸುತ್ತದೆ. ಈ ಖಂಡಗಳೆಲ್ಲವೂ ಹಿಂದೊಮ್ಮೆ ಒಟ್ಟುಗೂಡಿದ್ದುವು ಎನ್ನುವುದಕ್ಕೆ ಹಲವಾರು ಸಾಕ್ಷ್ಯಗಳಿವೆ. ಗೋಂಡ್ವಾನ ಖಂಡದ ಭಾಗಗಳಾದ ದಕ್ಷಿಣ ಇಂಡಿಯ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಆಸ್ಟ್ರೇಲಿಯ ಖಂಡಗಳ ಬಹುಭಾಗ ಹಿಮಗಡ್ಡೆಗಳಿಂದ ಮುಚ್ಚಿ ಹೋಗಿದ್ದ ಸೂಚನೆಗಳು ಕಂಡುಬಂದಿವೆ. ಈಗಿರುವ ಸಾಪೇಕ್ಷ ವಿನ್ಯಾಸದಲ್ಲಿಯೆ ಹಿಂದೆಯೂ ಈ ಖಂಡಗಳು ಇದ್ದಿದ್ದರೆ ಈ ವಲಯದಲ್ಲಿ ಹಿಮ ದಟ್ಟವಾಗಿ ಕವಿಯುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಏಕೆಂದರೆ ಈ ಪ್ರದೇಶಗಳಲ್ಲಿನ ಬಹುಭಾಗ ಇಂದು ಉಷ್ಣವಲಯಕ್ಕೆ ಸೇರಿವೆ. ಇವೆಲ್ಲ ಖಂಡಗಳಲ್ಲಿಯೂ ಒಂದು

ಕಾಲದಲ್ಲಿ ಅತಿ ಶೀತದ ವಾತಾವರಣ ಇದ್ದುದಕ್ಕೆ ಕುರುಹುಗಳು ಕಾಣಸಿಗುವುದರಿಂದ ಇವು ಹಿಂದೆ ಸಮಭಾಜಕ ವೃತ್ತದ ದಕ್ಷಿಣಕ್ಕಿದ್ದವೆಂದೂ ದಕ್ಷಿಣ ಮೇರುವಿನ ಬಳಿ ಒಂದುಗೂಡಿದ್ದವೆಂದೂ ಊಹಿಸಲಾಗಿದೆ. ಜರ್ಮನ್ ಭೂ ವಿಜ್ಞಾನಿ ವೆಗ್‌ನರ್ ಎಂಬಾತ ಖಂಡಗಳ ಸರಿತದ ಪರಿಕಲ್ಪನೆಯನ್ನು ಮಂಡಿಸಿದ, ಇದರ ಪ್ರಕಾರ ಭೂಖಂಡಗಳು ದಕ್ಷಿಣ ಮೇರುವಿನ ಬಳಿ ಒಂದುಗೂಡಿದ್ದು (ಪ್ಯಾಂಜಿಯ) ಕ್ರಮೇಣ ಈ ಅಖಂಡ ಭಾಗವು ಒಡೆದು ಖಂಡಗಳು ದೂರ ದೂರ ಸರಿದಿವೆ. ದಕ್ಷಿಣದಲ್ಲಿನ ಖಂಡಗಳೆಲ್ಲವೂ ಒಟ್ಟುಗೂಡಿ ಯಾವ ರೀತಿ ಗೋಂಡ್ವಾನ ಖಂಡವೆಂದು ಪರಿಗಣಿಸಲ್ಪಟ್ಟವೋ ಅದೇ ರೀತಿ ಉತ್ತರದ ಖಂಡಗಳನ್ನು ಲಾರೇಷಿಯ ಎಂಬ ಕೂಟದಲ್ಲಿ ಗುರುತಿಸಲಾಗಿದೆ. ಈ ಬೃಹತ್ ಖಂಡಗಳೆರಡರ ನಡುವೆ ಇದ್ದ ಸಾಗರಕ್ಕೆ (ಪ್ಯಾಂತಾಲಸಾ) ಟೆತಿಸ್ ಮಹಾಸಾಗರ ಎಂದು ಹೆಸರು. ದಕ್ಷಿಣ ಇಂಡಿಯದ ಉತ್ತರದ ಕಡೆ ಜರುಗುತ್ತ ಹೋದಂತೆ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡ ಶಿಲಾಸ್ತರಗಳು ಮಡಿಕೆ ಬಿದ್ದು ನೀರಿನಿಂದ ಮೇಲೆದ್ದು ಉನ್ನತವಾದ ಹಿಮಾಲಯ ಶ್ರೇಣಿಯಾಗಿ ನಿಂತವು. ದಕ್ಷಿಣ ಖಂಡಗಳು (ಗೋಂಡ್ವಾನ ಖಂಡದ ಭಾಗಗಳು) ಉತ್ತರದ ಕಡೆ ಧಾವಿಸಿದಾಗ ಶಿಲೆಗಳ ಮಡಿಕೆ ಬಿದ್ದು ಆಲ್ಪ್ಸ್ ಹಿಮಾಲಯ ಪರ್ವತ ಪಂಕ್ತಿಯಾಗಿ ನಿಂತವು.

ಬಹು ಪ್ರಾಚೀನವಾದ ಈ ಗೋಂಡ್ವಾನ ಖಂಡದ ಭಾಗಗಳನ್ನು ಈಗ ಭಾರತ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ದಕ್ಷಿಣ ಅಮೆರಿಕಗಳಲ್ಲಿ ಗುರುತಿಸಬಹುದು. ಈ ಎಲ್ಲ ಖಂಡಗಳಲ್ಲಿನ ಒಳನಾಡಿನ ಸರೋವರಗಳಲ್ಲಿ ನಿಕ್ಷೇಪಗೊಂಡಿರುವ ಶಿಲಾಪ್ರಸ್ತರಗಳಲ್ಲಿ ಸಸ್ಯಾವಶೇಷಗಳು ಕಾಣಸಿಗುತ್ತವೆ. ಇಲ್ಲಿ ಶಿಲೆಗಳೂ ಅವುಗಳಲ್ಲಿನ ಜೀವ್ಯವಶೇಷಗಳೂ ಒಂದೇ ತೆರನಾದ ಹೋಲಿಕೆಯನ್ನು ತೋರಿಸುತ್ತವೆ. ಎಲ್ಲ ಕಡೆಗಳಲ್ಲಿಯೂ ಯುಗದ ಪ್ರಾರಂಭದಲ್ಲಿ ಹಿಮಗಡ್ಡೆಗಳಿಂದ ಆಚ್ಛಾದಿತವಾದ ಭೂಭಾಗದ ಚಿಹ್ನೆ ಕಾಣುತ್ತದೆ. ಶೀತವಾತಾವರಣ ಕ್ರಮೇಣವಾಗಿ ಕಡಿಮೆಯಾಗುತ್ತ ಉಷ್ಣ ಹೆಚ್ಚಿ ಉಷ್ಣವಲಯವಾಗಿ ಪರಿಣಮಿಸುವುದನ್ನು ಶಿಲೆಗಳಲ್ಲಿ ಗುರುತಿಸಬಹುದಾಗಿದೆ. ದೂರ ದೂರವಿರುವ ಖಂಡ ಭಾಗಗಳೆಲ್ಲದರಲ್ಲಿಯೂ ಈ ಚಿಹ್ನೆಗಳು ತೋರುತ್ತವೆ. ಯುಗ ಕೊನೆಯಾಗುವ ಹೊತ್ತಿಗೆ ಬೃಹತ್ ಖಂಡ ಛಿದ್ರ ಹೊಂದಿ ದೂರ ದೂರ ಸರಿದು ಹೋಗಿದ್ದುದೆ ಅಲ್ಲದೆ ಅತ್ಯಂತ ಅಗಾಧ ಮೊತ್ತದಲ್ಲಿ ಶಿಲಾರಸ ಉಕ್ಕಿ ಬಂದು ಖಂಡದ ಬಹುಭಾಗವನ್ನು ಆಕ್ರಮಿಸಿರುವುದೂ ಕಾಣುತ್ತದೆ. ಈಗ ಬೇರೆ ಬೇರೆಯಾಗಿ ತೋರುವ ಭೂಖಂಡದ ಭಾಗಗಳು ಹಿಂದೆ ಒಟ್ಟುಗೂಡಿ ಗೋಂಡ್ವಾನ ಖಂಡ ಎಂಬ ಬೃಹತ್ ಖಂಡವಾಗಿ ಕೂಡಿಕೊಂಡಿದ್ದುವೆನ್ನುವ ತತ್ತ್ವವನ್ನು ಎಲ್ಲರೂ ಒಪ್ಪುವರಾದರೂ ಈ ಖಂಡ ಯಾವ ರೀತಿ ಒಡೆಯಿತು, ಒಡೆದ ಮೇಲೆ ಹೇಗೆ ಜರುಗುತ್ತ ಹೋಗಿ ಈಗಿರುವಲ್ಲಿ ನಿಂತವು ಎನ್ನುವ ವಿಷಯವಾಗಿ ನಿಖರವಾದ ಸರ್ವಜನಸಮ್ಮತವಾದ ಅಭಿಪ್ರಾಯ ಇನ್ನೂ ರೂಪುಗೊಂಡಿಲ್ಲ. ಭೂವಿಜ್ಞಾನ ಅಧ್ಯಯನದಲ್ಲಿ ಇದು ಜೀವಂತ ಪ್ರಶ್ನೆಯಾಗಿ ಉಳಿದಿದೆ. (ಬಿ.ಪಿ.ಆರ್.)

**ಗೋಂಡ್ವಾನ ವ್ಯವಸ್ಥೆ:** ಮಧ್ಯ ಪ್ರದೇಶ, ಬಿಹಾರ, ಬಂಗಾಲ ಮತ್ತು ಒರಿಸ್ಸ ರಾಜ್ಯಗಳಲ್ಲಿ ಹರಡಿರುವ ಕಲ್ಲಿದ್ದಲಿನ ಸ್ತರಗಳನ್ನೊಳಗೊಂಡ ಶಿಲಾ ಸಮುದಾಯ. ಮಧ್ಯ ಪ್ರದೇಶದ ಗೋಂಡ ಜನಾಂಗದವರು ವಾಸಿಸುತ್ತಿದ್ದ ಕಡೆ ಈ ಶಿಲೆಗಳನ್ನು ಮೊದಲು ಗುರುತಿಸಿದ್ದರಿಂದ ಈ ಹೆಸರು ಬಂದಿದೆ. ಹೆಸರಿಟ್ಟವನು ಮೆಡ್ಲಿ ಕಾಟ್ (1872). ಆದರೆ ಈ ಹೆಸರು ಪ್ರಕಾಶಕ್ಕೆ ಬಂದುದು 1876ರಲ್ಲಿ ಪ್ರಚಾರವಾದ ಫೀಸ್ಟ್ ಮ್ಯಾಂಟಲನ ಬರೆಹದಲ್ಲಿ. ಗೋಂಡ್ವಾನ ಶಿಲೆಗಳನ್ನು ತೋರಿಸುವ ದಕ್ಷಿಣ ಭಾರತ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಅಂಟಾರ್ಕ್‌ಟಿಕ್ ಈ ಎಲ್ಲ ಭೂಖಂಡಗಳೂ ಹಿಂದೆ ಒಟ್ಟುಗೂಡಿದ್ದುವೆಂಬ ವಾದ ಉಂಟು. ಆದ್ದರಿಂದ ಆ ಬೃಹತ್ ಭೂಖಂಡಕ್ಕೆ ಗೋಂಡ್ವಾನ ಖಂಡ ಎಂಬ ಹೆಸರು ಬಂದಿದೆ. ಗೋಂಡ್ವಾನ ವ್ಯವಸ್ಥೆಗೆ ಸೇರಿದ ಶಿಲೆಗಳೆಲ್ಲವೂ ಒಳನಾಡಿನಲ್ಲಿ ನದಿ ಮತ್ತು ಸರೋವರ ತಳಗಳಲ್ಲಿ ರೂಪುಗೊಂಡಿವೆ. ಕಲ್ಲು ಮತ್ತು ಮಣ್ಣು ಶೇಖರವಾದಂತೆ ತಳ ಕುಸಿದುದರಿಂದ ಹೆಚ್ಚು ಶಿಲಾವಸ್ತು ಶೇಖರವಾಗಲು ಅನುಕೂಲವಾಯಿತು. ಸೀಳುಗಳು ನಡುವಿನ ಭಾಗ ಕುಸಿದುದರ ಫಲವಾಗಿ ಕಲ್ಲಿದ್ದಲಿನ ಪದರಗಳನ್ನೊಳಗೊಂಡ ಈ ವರ್ಗದ ಶಿಲೆಗಳು ಕ್ಷಯಿಸಿ ಹೋಗದೆ ಇದುವರೆಗೆ ಉಳಿದುಕೊಂಡು ಬಂದಿವೆ.

ಹರವು: ಗೋಂಡ್ವಾನ ವ್ಯವಸ್ಥೆಯ ಶಿಲೆಗಳು ಮುಖ್ಯವಾಗಿ ಮೂರು ವಲಯಗಳಲ್ಲಿ ಕಂಡುಬರುತ್ತವೆ. ಮೊದಲನೆಯದು ಪೂರ್ವ ಪಶ್ಚಿಮವಾಗಿ ದಾಮೋದರ, ಸೋನ್ ಮತ್ತು ನರ್ಮದಾ ಕಣಿವೆ ಪ್ರದೇಶಗಳನ್ನು ಒಳಗೊಂಡಿದೆ. ಎರಡನೆಯದು ಗೋದಾವರಿ ಕಣಿವೆಯಿಂದ ಈಶಾನ್ಯ– ಆಗ್ನೇಯ ದಿಕ್ಕಿನಲ್ಲಿ ವ್ಯಾಪಿಸಿದೆ. ಮೂರನೆಯದು ಗೋದಾವರಿ ಕಣಿವೆ ಮತ್ತು ರಾಜಮಹಲ್ ಸೇರುವಿಕೆಯಿಂದ ಆಗಿದೆ. ಈ ಮೂರು ವಲಯಗಳಲ್ಲಿ ಅಲ್ಲದೆ ನೇಪಾಳ, ಭೂತಾನ, ಅಸ್ಸಾಂ, ಕಾಶ್ಮೀರ, ಬಲೂಚಿಸ್ತಾನದಲ್ಲಿ ಹಿಮಾಲಯ ಶ್ರೇಣಿಯ ಮುಂದಿನ ಭಾಗದಲ್ಲಿ ಗೋಂಡ್ವಾನ ವರ್ಗದ ಶಿಲೆಗಳು ಅಲ್ಲಲ್ಲಿ ಕಾಣುತ್ತವೆ. ದಕ್ಷಿಣ ಭಾರತದ ಪೂರ್ವ ತೀರದಲ್ಲಿಯೂ ಮೇಲುವರ್ಗದ ಗೋಂಡ್ವಾನ ಶಿಲೆಗಳು ಕಟಕ್, ಚೆನ್ನೈ ಮತ್ತು ಕನ್ಯಾಕುಮಾರಿಯ ಬಳಿಯೂ ಕಾಣುತ್ತವೆ. ಗೋಂಡ್ವಾನ ವ್ಯವಸ್ಥೆ ಹರವಿನಲ್ಲಿ ಕಿರಿದಾಗಿ ಕಂಡರೂ ಸ್ತರಪಂಕ್ತಿ 606–910 ಮೀ ವರೆಗೂ ಮಂದವಾಗಿದೆ. ಕಾಲಾವಧಿ ಕಾರ್ಬಾನಿಫೆರಸ್, ಟ್ರಿಯಾಸಿಕ್, ಜುರಾಸಿಕ್ ಮತ್ತು ಕ್ರಿಟೇಷಸ್ ಯುಗಗಳ ಪರ್ಯಂತ ವ್ಯಾಪಿಸಿದೆ. ಅದೇ ಕಾರಣವಾಗಿ ಗೋಂಡ್ವಾನ ವ್ಯವಸ್ಥೆಯನ್ನು ಪೇಲಿಯೊಜೋಯಿಕ್ (ಪ್ರಾಚೀನ ಜೀವಿಕಲ್ಪ), ಮೀಸೋಜೋಯಿಕುಗಳಂತೆ (ಮಧ್ಯ ಜೀವಿಕಲ್ಪ) ಮುಖ್ಯವಾದ ಶಿಲಾ ವ್ಯವಸ್ಥೆಯನ್ನಾಗಿ ಪರಿಗಣಿಸಲಾಗಿದೆ.

ವಿಭಜನೆ: ಗೋಂಡ್ವಾನ ವ್ಯವಸ್ಥೆಯನ್ನು ಎರಡು ಮುಖ್ಯ ವರ್ಗಗಳನ್ನಾಗಿ ವಿಭಜಿಸಲಾಗಿದೆ. ಕೆಳಗಿನ ವರ್ಗಗಳಲ್ಲಿ ಗ್ಲಾಸಾಪ್ಟರಿಸ್ ಎಂಬ ಸಸ್ಯಜಾತಿಯೂ ಮೇಲಿನ ವರ್ಗದಲ್ಲಿ ಟೈಲೊಫಿಲ್ಲಮ್ ಎಂಬ ರಾಜಮಹಲ್ ತರದ ಸಸ್ಯಜಾತಿಯೂ ಕಂಡುಬರುತ್ತವೆ. ಈ ಮೇಲು ಮತ್ತು ಕೆಳವರ್ಗದ ಗೋಂಡ್ವಾನ ಶಿಲೆಗಳನ್ನು ಮತ್ತೆ ಎರಡು ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಕೆಳವರ್ಗದಲ್ಲಿ ಸೇರಿರುವ ವಲಯಗಳು ಕೆಳಗಿನಿಂದ ಮೇಲಕ್ಕೆ, ತಾಲ್ಚೀರ್, ದಾಮೂದ ಮತ್ತು ಪಾಂಚೆಟ್ ವಲಯಗಳು; ಮೇಲುವರ್ಗದಲ್ಲಿ ಮಹದೇವ, ರಾಜಮಹಲ್ ಮತ್ತು ಜಬಲ್‌ಪುರ ವಲಯಗಳು. ಈ ಪ್ರತಿಯೊಂದು ವಲಯದಲ್ಲಿಯೂ ಮತ್ತೆ ಬೇರೆ ಬೇರೆ ಸ್ತರ ಪಂಕ್ತಿಗಳನ್ನು ಗುರುತಿಸಲಾಗಿದೆ. ಈ ಮುಖ್ಯ ವಲಯಗಳನ್ನೂ ಪಂಕ್ತಿಗಳನ್ನೂ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದೆ.

| ಯುಗ | | ವಲಯ | | ಸ್ತರವರ್ಗ |
|---|---|---|---|---|
| ಕ್ರಿಟೇಷಸ್ | ... | ಜಬಲ್‌ಪುರ | ... | ಉಮಿಯ<br>ಜಬಲ್‌ಪುರ |
| ಜುರಾಸಿಕ್ | ... | ... | ... | ಕೋಟ<br>ರಾಜಮಹಲ್ |
| ಟ್ರಿಯಾಸಿಕ್ | ... | ಮಹದೇವ | ... | ಮಲೇರಿ<br>ಪಚಮಾರ್ಹಿ |
| ಪರ್ಮಿಯನ್ | ... | ದಾಮೂದ | ... | ರಾಣಿಗಂಜ್<br>ಬಂಜೆಸ್ತರ<br>ಬರಕಾರ್<br>ಕಾರ್ ಹಾರ್ ಬಾರಿ |
| ಕಾರ್ಬಾನಿಫೆರಸ್ ... | | ತಾಲ್ಚೀರ್ | ... | ರಿಕ್ತ<br>ತಾಲ್ಚೀರ್<br>ಗುಂಡುಸ್ತರ |

ತಾಲ್ಚೀರ್ ವಲಯ : ಇದು ಗೋಂಡ್ವಾನ ವ್ಯವಸ್ಥೆಯಲ್ಲಿ ಅತಿ ಕೆಳಗಿನದು. ಈ ಸ್ತರವನ್ನು ಒರಿಸ್ಸ ರಾಜ್ಯದ ತಾಲ್ಚೀರ್ ಬಳಿ ಮೊದಲಿಗೆ ಗುರುತಿಸಲಾಯಿತು. ಗುಂಡುಗಳ ರಾಶಿಯಿಂದ ಇದು ಮೊದಲಾಗುತ್ತದೆ. ಇದರ ಮೇಲೆ ಕ್ರಮವಾಗಿ 152–273 ಮೀ ವರೆಗೂ ಮಂದದ ಮರಳುಗಲ್ಲು ಮತ್ತು ಜೇಡುಕಲ್ಲಿನಸ್ತರಗಳು ಕಾಣುತ್ತವೆ. ಗುಂಡು ಕಲ್ಲಿನ ರಾಶಿ 15–200 ಮೀ ವರೆಗೂ ಮಂದವಾಗಿದೆ. ಹಿಮಗಲ್ಲಿನ ನೂಕು ನುಗ್ಗಲಿಗೆ ಒಳಪಟ್ಟು ನುಣುಪಾದಂಥ ನಾನಾ ಬಗೆಯ ಗುಂಡು ಕಲ್ಲುಗಳು ಕಾಣುವುದರಿಂದ ಈ ವಲಯದ ಶಿಲೆಗಳು ಶೇಖರವಾಗುವ ಕಾಲದಲ್ಲಿ ದಕ್ಷಿಣ ಇಂಡಿಯದ ಬಹುಭಾಗ ಹಿಮಗಲ್ಲಿನಿಂದ ಆವೃತವಾಗಿತ್ತೆಂದು ಊಹಿಸಲು ಅವಕಾಶ ಉಂಟು. ಹಿಮ ಕರಗಿ ಹುಟ್ಟಿಕೊಂಡು ವಿಶಾಲ ಸರೋವರಗಳಲ್ಲಿ ದಾಮೂದ ಮತ್ತು ಈಚಿನ ಸ್ತರಗಳು ಶೇಖರವಾದುವು.

ದಾಮೂದ ವಲಯ: ದಾಮೋದರ ನದಿಯ ಕಣಿವೆಯಲ್ಲಿ ಈ ವರ್ಗದ ಶಿಲೆಗಳನ್ನು ಮೊದಲಿಗೆ ಗುರುತಿಸಿದುದರಿಂದ ಈ ಹೆಸರು ಬಂದಿದೆ. ದೇಶದ ಮುಖ್ಯ ಕಲ್ಲಿದ್ದಲಿನ ಪದರಗಳು ಅಡಗಿರುವುದು ಈ ವರ್ಗದ ಶಿಲೆಗಳಲ್ಲಿ. ಇವನ್ನು ನಾಲ್ಕು ಮುಖ್ಯ ಭಾಗಗಳಾಗಿ ವಿಂಗಡಿಸಿದೆ; ಕಾರ್‌ಹಾರ್‌ಬಾರಿ, ಬರಕಾರ್, ಬಂಜೆಸ್ತರ ಮತ್ತು ರಾಣಿಗಂಜ್, ಗೋಂಡ್ವಾನ ವ್ಯವಸ್ಥೆಯಲ್ಲಿ ವಿಶಾಲವಾಗಿ ಹರಡಿರುವ ಸ್ತರವರ್ಗವೆಂದರೆ ಇದೇ.

ಕಾರ್‌ಹಾರ್‌ಬಾರಿ ಸ್ತರ: ಈ ಸ್ತರಗಳು ತಾಲ್ಚೀರ್ ಸ್ತರಗಳ ಮೇಲೆ ತಂಗಿವೆ. ಗಿರಿಧಿ ಕಲ್ಲಿದ್ದಲು ಗಣಿಯ ಬಳಿ ಇವನ್ನು ಕಾಣಬಹುದು. ಕಲ್ಲಿದ್ದಲಿನ ಪದರಗಳಿರುವ ಮೇಲಿನ ಬರಕಾರ್ ಪಂಕ್ತಿಗೂ ಇವಕ್ಕೂ ನಡುವೆ ಮರಳುಗಲ್ಲಿನ ಪದರವಿದೆ. ಈ ಸ್ತರಗಳಲ್ಲಿ ಕೂಡ ಕೆಲವು ಕಲ್ಲಿದ್ದಲಿನ ಪದರಗಳಿವೆ. ಕರನಪುರ, ಹುತಾರ, ದವಲತ್‌ಗಂಜ್, ಉಮೇರಿಯ, ಮೊಹಪಾನಿ ಮತ್ತು ಷಹಪುರ ಕಲ್ಲಿದ್ದಿಲಿನ ಪದರಗಳು ಕಾರ್‌ಹಾರ್‌ಬಾರಿ ಸ್ತರ ಪಂಕ್ತಿಗೆ ಸೇರಿದವು.

ಬರಕಾರ್ : ರಾಣಿಗಂಜ್ ಕಲ್ಲಿದ್ದಲಿನ ಪ್ರದೇಶವನ್ನು ಹಾದು ಹೋಗುವ ಬರಕಾರ್ ನದಿಯ ಬಳಿ 758.33 ಮೀ ಗೂ ಮಂದದ ಈ ವರ್ಗದ ಶಿಲೆಗಳು ಕಾಣುತ್ತವೆ. ಝರಿಯಾ ಕಲ್ಲಿದ್ದಲ ಗಣಿ ಇರುವುದು ಈ ವರ್ಗದ ಶಿಲೆಗಳಲ್ಲಿ. ಇಲ್ಲಿ ಕಲ್ಲಿದ್ದಲಿನ ಸು. 24 ಬೇರೆ ಬೇರೆ ಸ್ತರಗಳನ್ನು ಗುರುತಿಸಲಾಗಿದೆ. ಒಂದೊಂದು ಸ್ತರವೂ 1.21 ಮೀ ಗಳಿಗಿಂತ ಹೆಚ್ಚು ಮಂದವಾಗಿದೆ. ಬರಕಾರ್ ಸ್ತರಗಳು ಭಾರತದಲ್ಲಿ ದೊರೆಯುವ ಎಲ್ಲ ಕಲ್ಲಿದ್ದಲಿಗೂ ಮುಖ್ಯ ಆಧಾರ. ಈ ಸ್ತರಗಳಲ್ಲಿನ ಮರಳುಗಲ್ಲುಗಳಲ್ಲಿ ಗತಕಾಲದ ಮರಗಳ ಬುಡಗಳು ಮತ್ತು ಕೆಳಗೆ ಬಿದ್ದ ದಿಮ್ಮಿಗಳು ಕಾಣುತ್ತವೆ. ಬೊಕಾರೋ ಬಳಿಯ ಕಾರ್ಗಲಿ ಕಲ್ಲಿದ್ದಲಿನ ಸ್ತರ 30.33 ಮೀ ಗೂ ಮಂದವಾಗಿದೆ. ಬರಕಾರ್ ಸ್ತರಗಳು ಒಳನಾಡ ಸರೋವರಗಳಲ್ಲಿ ನಿಕ್ಷೇಪಗೊಂಡಂತೆ ಕಾಣುತ್ತವೆ. ನದಿಗಳು ಕೊಚ್ಚಿತಂದ ಸಸ್ಯವರ್ಗ ಸರೋವರ ತಳದಲ್ಲಿ ಒಟ್ಟು ಗೂಡಿ ಮೇಲೆ ಶೇಖರವಾದ ಮರಳುಗಲ್ಲುಗಳ ಒತ್ತಡದಿಂದ ಗಟ್ಟಿಗೊಂಡು ಕಲ್ಲಿದ್ದಲಿನ ಸ್ತರಗಳಾಗಿ ಮಾರ್ಪಟ್ಟಿದೆ.

ಬಂಜೆ ಸ್ತರಗಳು : ಬರಕಾರ್ ಸ್ತರಗಳ ಮೇಲೆ 607 ಮೀ ಗೂ ಮಂದದ ಕಬ್ಬಿಣ ಸಂಬಂಧದ ಜೇಡುಕಲ್ಲು ಕಾಣುತ್ತದೆ. ಕಲ್ಲಿದ್ದಲಿನ ಸ್ತರಗಳಿರುವ ಕೆಳಗಿನ ಬರಕಾರ್ ವರ್ಗಕ್ಕೂ ಮೇಲಿನ ರಾಣಿಗಂಜ್ ವರ್ಗಕ್ಕೂ ನಡುವೆ ಕಲ್ಲಿದ್ದಲಿನ ಗುರುತೇ ಇಲ್ಲದಂಥ ಈ ಸ್ತರಗಳಿಗೆ ಬಂಜೆ ಸ್ತರಗಳು ಎಂದು ಹೆಸರು. ಕೆಲವು ಕಡೆ ಕಬ್ಬಿಣ ಹೆಚ್ಚಿರುವ ಈ ಜೇಡು ಕಲ್ಲನ್ನು ಕಬ್ಬಿಣದ ಅದಿರಾಗಿ ಉಪಯೋಗಿಸುತ್ತಾರೆ. ಈ ಜೇಡಿನಲ್ಲಿ ಸು. ಶೇ. 35 ರಿಂದ ಶೇ. 40 ರಷ್ಟು ಕಬ್ಬಿಣದ ಅಂಶ ಇದೆ. ಈ ಸ್ತರಗಳನ್ನು, ಝರಿಯಾ ಮತ್ತು ಕರನಪುರ ಕಲ್ಲಿದ್ದಲಿನ ಗಣಿ ಪ್ರದೇಶದಲ್ಲಿ ಗುರುತಿಸಬಹುದು.

ರಾಣಿಗಂಜ್ ಸ್ತರ : ಈ ಸ್ತರಗಳು ಸ್ಪಷ್ಟವಾಗಿ ಗೋಚರಿಸುವುದು ರಾಣಿಗಂಜಿನ ಬಳಿ. ಇವು 910 ಮೀ ಗೂ ಹೆಚ್ಚು ಮಂದವಾಗಿವೆ. ಮುಖ್ಯವಾಗಿ ನುಣ್ಣನೆಯ ಮರಳುಗಲ್ಲುಗಳು, ಜೇಡು ಮತ್ತು ಕಲ್ಲಿದ್ದಲಿನ ಸ್ತರಗಳು ಇಲ್ಲಿ ಕಾಣುತ್ತವೆ. ರಾಣಿಗಂಜ್ ಬಳಿ ಮಾತ್ರ ಮುಖ್ಯ ಕಲ್ಲಿದ್ದಲಿನ ಪದರಗಳು ಇವೆ.

ಪಾಂಚೆಟ್ ಸ್ತರ : ಇವು ರಾಣಿಗಂಜ್ ಸ್ತರಗಳ ಮೇಲೆ ಕಾಣುತ್ತವೆ. ಮುಖ್ಯವಾಗಿ ಮರಳುಗಲ್ಲು, ಜೇಡು ಶಿಲೆಗಳಿಂದ ಕೂಡಿದೆ. ಇದರಲ್ಲಿ ಕಲ್ಲಿದ್ದಲು ಕಾಣುವುದಿಲ್ಲ.

ಮೇಲು ಗೋಂಡ್ವಾನ ಪದರಗಳಲ್ಲಿ ಮುಖ್ಯವಾದವು ಮಹದೇವ ಮತ್ತು ಜಬಲ್‌ಪುರ ಸ್ತರಗಳು. ಈ ಶಿಲೆಗಳಲ್ಲಿ ಸಿಗುವ ಸಸ್ಯಾವಶೇಷಗಳಿಗೂ ಕೆಳಗಿನ ದಾಮೂದ, ತಾಲ್ಚೀರ್ ವರ್ಗದಲ್ಲಿ ದೊರೆಯುವ ಸಸ್ಯಾವಶೇಷಗಳಿಗೂ ವ್ಯತ್ಯಾಸ ಉಂಟು. ಈ ಮೇಲು ಗೋಂಡ್ವಾನ ಪದರಗಳಲ್ಲಿ ಕಲ್ಲಿದ್ದಲಿನ ಸೂಚನೆ ಕಾಣುವುದಿಲ್ಲ. ಕೆಲವು ಕಡೆ ಕಂಡರೂ ಅವು ಸಣ್ಣವು, ಉಪಯೋಗಕ್ಕೆ ಬರತಕ್ಕಂಥವಲ್ಲ.

ಅಗ್ನಿ ಶಿಲೆಗಳು : ಗೋಂಡ್ವಾನ ಸ್ತರಗಳನ್ನು ಭೇದಿಸಿದಾಗ ಕೆಲವು ಅಗ್ನಿ ಶಿಲೆಗಳು ಕಾಣುತ್ತವೆ. ಇವು ಕಲ್ಲಿದ್ದಲನ್ನು ಸುಟ್ಟು ಕರಿಕು (ಕೋಕ್) ಮಾಡಿಬಿಟ್ಟಿವೆ. ಇವನ್ನು ಸ್ಥಳೀಯರು ಯಾಮ ಎಂದು ಕರೆಯುತ್ತಾರೆ.

ಆರ್ಥಿಕ ಪ್ರಾಮುಖ್ಯ : ಗೋಂಡ್ವಾನ ವರ್ಗದ ಶಿಲೆಗಳು ಪ್ರಸಿದ್ಧಿಯಾಗಿರುವುದು ಅವುಗಳಲ್ಲಿರುವ ಕಲ್ಲಿದ್ದಲಿನ ಸ್ತರಗಳಿಂದ. ಭಾರತದಲ್ಲಿ ಪ್ರತಿ ವರ್ಷ 8,50,00,000 ಟನ್ನುಗಳಷ್ಟು ಕಲ್ಲಿದ್ದಲು ಉತ್ಪತ್ತಿಯಾಗುತ್ತದೆ. ಇದರಲ್ಲಿ ಬಹುಭಾಗ ಗೋಂಡ್ವಾನ ವರ್ಗದ ಅದರಲ್ಲೂ ಬರಕಾರ್ ಮತ್ತು ರಾಣಿಗಂಜ್ ವರ್ಗದ ಶಿಲೆಗಳಿಂದ ಬರುತ್ತದೆ. ಕಲ್ಲಿದ್ದಲಿನ ಬಹುಭಾಗದಲ್ಲಿ ಬೂದಿ ಅಂಶ ಹೆಚ್ಚು. ಆದ್ದರಿಂದಾಗಿ ಕಬ್ಬಿಣ ಕರಗಿಸುವುದಕ್ಕೆ ಅದು ಅಷ್ಟಾಗಿ ಉಪಯೋಗವಾಗುವುದಿಲ್ಲ. ಝರಿಯಾ, ಗಿರಿಧಿ ಮತ್ತು ಬೋಕಾರೋ ಬಳಿ ದೊರೆಯುವ ಕಲ್ಲಿದ್ದಲು ಉತ್ತಮ ದರ್ಜೆಯದು. ಕಬ್ಬಿಣ ಕರಗಿಸಲು ಉಪಯೋಗಕ್ಕೆ ಬರುವಂಥದು. ಮಿಕ್ಕಂತೆ ಕಲ್ಲಿದ್ದಲು ಹಬೆಯನ್ನು ಉತ್ಪಾದಿಸುವುದಕ್ಕೆ ಯೋಗ್ಯವಾದುದು. ಆವಿಯಿಂದ ನಡೆಯುವ ರೈಲು ಎಂಜಿನ್ನುಗಳಿಗೂ ವಿದ್ಯುತ್ತನ್ನು ಉತ್ಪಾದಿಸುವುದಕ್ಕೂ ಕಲ್ಲಿದ್ದಲು ವಿಶೇಷವಾಗಿ ಉಪಯೋಗವಾಗುತ್ತದೆ. (ಬಿ.ಪಿ.ಆರ್.)

**ಗೋಕಾಕ:** ಕರ್ನಾಟಕದ ಬೆಳಗಾವಿ ಜಿಲ್ಲೆಯ ಒಂದು ತಾಲ್ಲೂಕು. ವಿಸ್ತೀರ್ಣ 1,54,378 ಚ.ಕಿಮೀ. ಜನಸಂಖ್ಯೆ 525,865. ತಾಲ್ಲೂಕಿನ ಪಶ್ಚಿಮ ಭಾಗ ಗುಡ್ಡಗಾಡು. ಉಳಿದ ಭಾಗ ಸಮತಟ್ಟಾಗಿವೆ. ಗೋಕಾಕ ಪಟ್ಟಣದ ಬಳಿ ಇರುವ ನಾರಾಯಣಗುಡ್ಡ ಆ ತಾಲ್ಲೂಕಿನ ಅತ್ಯಂತ ಎತ್ತರದ ಸ್ಥಳ. ಈ ತಾಲ್ಲೂಕಿನ ನದಿಗಳೆಂದರೆ ಘಟಪ್ರಭಾ ಮತ್ತು ಮಾರ್ಕಂಡೇಯ. ಉಷ್ಣವಾಯುಗುಣ, ವಾರ್ಷಿಕ ಮಳೆ 62.5 ಸೆಂಮೀ. ಹತ್ತಿ ಮತ್ತು ಜೋಳ ಇಲ್ಲಿಯ ಮುಖ್ಯ ಬೆಳೆ. ಘಟಪ್ರಭ ನದಿಯ ಗೋಕಾಕ ಜಲಪಾತ ಗೋಕಾಕ ಪಟ್ಟಣದ ವಾಯವ್ಯಕ್ಕೆ ಸು. 56 ಕಿಮೀ ದೂರದಲ್ಲಿದೆ. ಇಲ್ಲಿ ಘಟಪ್ರಭಾ ನದಿ 51 ಮೀ ಎತ್ತರದಿಂದ ಧುಮುಕುತ್ತದೆ (ಧಬೆಧಬೆ). ಇಲ್ಲಿ ಸಣ್ಣಗಾತ್ರದ ವಿದ್ಯುದುತ್ಪಾದಕ ಕೇಂದ್ರ ಹಾಗೂ ತೂಗು ಸೇತುವೆಯಿದೆ. ಗೋಕಾಕದ ಬಳಿಯಿರುವ ಪಂಚಮಿಗುಡ್ಡದಲ್ಲಿ ಹಲವು ಬಗೆಯ ಶಿಲೆಗಳು ದೊರಕುತ್ತವೆ.

ಗೋಕಾಕ ಪಟ್ಟಣ ತಾಲ್ಲೂಕಿನ ಮುಖ್ಯ ಪಟ್ಟಣ. ಇದು $16^0 40'$ ಉ. ಅ. ಮತ್ತು $74^0 49'$ ಪೂ. ರೇ. ದಲ್ಲಿದೆ. ಗೋಕಾಕದ ಬಣ್ಣದ ಆಟಿಕೆಗಳು, ಕರದಂಟು ಎಂಬ ಖಾದ್ಯ ಪ್ರಸಿದ್ಧವಾದವು. ಇವು ಹೊರದೇಶಕ್ಕೆ ಮುಖ್ಯವಾಗಿ, ಅಮೆರಿಕಕ್ಕೆ ನಿರ್ಯಾತವಾಗುತ್ತದೆ. ಆಟಿಕೆ ಕೈಗಾರಿಕೆ 150 ವರ್ಷ ಹಳೆಯದು. ಜನಸಂಖ್ಯೆ 76,166. (ಎಸ್.ಐ.ಪಿ.ಎಂ.)

**ಗೋಡೆಯ ನಕ್ಷೆಗಳು:** ಅಟ್ಲಾಸ್‌ಗಳಂತಿರುವ ಚಿಕ್ಕ ಅಳತೆಯ ನಕ್ಷೆಗಳು. ಆದರೆ ಅಟ್ಲಾಸ್ ನಕ್ಷೆಗಳಿಗಿಂತ ಸ್ವಲ್ಪ ವಿಸ್ತರಿಸಲ್ಪಟ್ಟಿರುತ್ತವೆ. ಇವು ಸಹ ವಿಸ್ತಾರವಾದ ಪ್ರದೇಶದ ಮುಖ್ಯ ಲಕ್ಷಣಗಳನ್ನು ಮಾತ್ರ ನಿರೂಪಿಸುವುವು. ಆ ಪ್ರದೇಶಗಳ ಭೌಗೋಳಿಕ ಸ್ಥಾನ, ಭೂಸ್ವರೂಪ, ನದಿ ವ್ಯವಸ್ಥೆ, ಸ್ವಾಭಾವಿಕ ಸಸ್ಯವರ್ಗ, ವಾಯುಗುಣ, ಜನಸಂಖ್ಯೆ ಮುಂತಾದವುಗಳ ಹಂಚಿಕೆಯ ನಿರೂಪಣೆ ಹಾಗೂ ಹೋಲಿಕೆಗೆ ಉಪಯುಕ್ತವಾಗಿವೆ. ತರಗತಿಗಳಲ್ಲಿ ಬೋಧನೆಗೆ ಈ ನಕ್ಷೆಗಳು ಅತಿಸೂಕ್ತವಾದವು. (ಆರ್.ಎನ್.)

**ಗೋದಾವರಿ:** ಮಹಾರಾಷ್ಟ್ರದ ಒಂದು ನದಿ. ನಾಸಿಕ್ ಜಿಲ್ಲೆಯ ತ್ರ್ಯಂಬಕೇಶ್ವರದ ಬ್ರಹ್ಮಗಿರಿಯಲ್ಲಿ 1067 ಮೀ ಎತ್ತರದಲ್ಲಿ ಉಗಮಿಸುತ್ತದೆ. ಇದು ದಕ್ಷಿಣ ಭಾರತದಲ್ಲೇ ಅತ್ಯಂತ ಉದ್ದವಾದ ನದಿ (1465 ಕಿಮೀ). ಈ ನದಿ ಕಾಕಿನಾಡದ ಬಳಿ ಬಂಗಾಲಕೊಲ್ಲಿಯನ್ನು ಸೇರುವ ಮುನ್ನ ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಹರಿಯುತ್ತದೆ. ಇದರ ಪ್ರಮುಖ ಉಪನದಿಗಳೆಂದರೆ ಮಂಜ್ರಾ, ಪೆನಗಂಗ, ವೇನ್‌ಗಂಗ, ವಾರ್ಧ, ಪ್ರಾಣಹಿತ, ಇಂದ್ರಾವತಿ ಮತ್ತು ಸಬರಿ. ನದಿಯ ಕೆಳಪಾತ್ರದಲ್ಲಿ ಆಗಿಂದಾಗ್ಗೆ ಪ್ರವಾಹ ಉಂಟಾಗುತ್ತಿರುತ್ತದೆ. ಹಾಗೆಯೇ ಕೆಳಪಾತ್ರದಲ್ಲಿ ನೌಕಾಯಾನಕ್ಕೂ ಯೋಗ್ಯವಾಗಿದೆ. ಗೋದಾವರಿ ನದಿತೀರದಲ್ಲಿ ಅನೇಕ ತೀರ್ಥಕ್ಷೇತ್ರಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಧವಳೇಶ್ವರಂ, ಶ್ರೀರಾಮಭದ್ರಾಚಲಂ, ನಾಸಿಕ ಮತ್ತು ಪೈಠಣ ಇವುಗಳನ್ನು ದಕ್ಷಿಣ ಕಾಶಿಯೆಂದು ಕರೆಯಲಾಗಿದೆ.




ಗೋದಾವರಿ ನದಿ ಅನೇಕ ನೀರಾವರಿ ಮತ್ತು ವಿದ್ಯುದುತ್ಪಾದನ ಯೋಜನೆಗಳನ್ನು ಹೊಂದಿದೆ. ಮಹಾರಾಷ್ಟ್ರದಲ್ಲಿ ಗೋದಾವರಿ ನಾಲೆಗಳು, ಗಂಗಾಪುರ ಯೋಜನೆ, ಪ್ರವಣ ನಾಲೆಗಳು, ಮಧ್ಯಪ್ರದೇಶದಲ್ಲಿ ವೇನಗಂಗಾ ನಾಲೆಗಳು, ಆಂಧ್ರಪ್ರದೇಶದಲ್ಲಿ ಗೋದಾವರಿ ಮುಖಜ ಭೂಮಿ ವ್ಯವಸ್ಥೆ, ನಿಜಾಂ ಸಾಗರ ಯೋಜನೆ, ಮನಾಯಿರ್ ಯೋಜನೆ. ಗೋದಾವರಿ ಉತ್ತರ ನಾಲೆ ಯೋಜನೆ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳೆರಡಕ್ಕೂ ಸೇರಿದಂತೆ ಬಾಗ್ ಯೋಜನೆಗಳು. ಪ್ರಮುಖ ವಿದ್ಯುತ್‌ಉತ್ಪಾದನಾ ಯೋಜನೆಗಳೆಂದರೆ, ಮಚಕುಂಡ್. ಇದು ಆಂಧ್ರ ಮತ್ತು ಒರಿಸ್ಸಗಳ ನಡುವೆ ಹಂಚಿಕೆಯಾಗುತ್ತಿದೆ. ಆಂಧ್ರಪ್ರದೇಶದ ಸಿಲೇರು ಮೇಲ್ದಂಡೆ ಯೋಜನೆ, ಬಿಲಿಮೇಲ ಯೋಜನೆ, ಕೆಳ ಸಿಲೇರು ಯೋಜನೆ ಮತ್ತು ಪೋಚಂಪಾಡ್ ಯೋಜನೆ. (ಎಚ್.ಸಿ.ಕೆ.)

**ಗೋದಾವರಿ ಪೂರ್ವ ಮತ್ತು ಪಶ್ಚಿಮ:** ಆಂಧ್ರ ಪ್ರದೇಶದಲ್ಲಿ ಅಕ್ಕಪಕ್ಕದಲ್ಲಿರುವ ಎರಡು ಜಿಲ್ಲೆಗಳು. ಗೋದಾವರಿ ನದಿಯ ಕೆಳಕಣಿವೆಯ ಆಚೀಚೆ ಸಮುದ್ರದ ಅಂಚಿನವರೆಗೂ ಹಬ್ಬಿರುವ ಈ ಜಿಲ್ಲೆಗಳು ಪರಸ್ಪರವಾಗಿ ಗೋದಾವರಿ ನದಿಯಿಂದ ಪ್ರತ್ಯೇಕಿಸಲ್ಪಟ್ಟು, ಗೋದಾವರಿಯ ಪೂರ್ವಕ್ಕಿರುವ ಭಾಗ ಪೂರ್ವ ಗೋದಾವರಿ ಜಿಲ್ಲೆಯೆಂದೂ ಪಶ್ಚಿಮಕ್ಕಿರುವುದು ಪಶ್ಚಿಮ ಗೋದಾವರಿ ಜಿಲ್ಲೆಯೆಂದೂ ಪ್ರತೀತವಾಗಿದೆ. ಪೂರ್ವ ಗೋದಾವರಿಯ ವಿಸ್ತೀರ್ಣ 4,10,807 ಚ.ಕಿಮೀ; ಜನಸಂಖ್ಯೆ 4,872,622 (2001). ಪಶ್ಚಿಮ ಗೋದಾವರಿ ಜಿಲ್ಲೆ 7742 ಚ.ಕಿಮೀ ವಿಸ್ತಾರವಾಗಿದೆ; ಅದರ ಜನಸಂಖ್ಯೆ 3,796,144. ಪೂರ್ವ ಗೋದಾವರಿಯ ಆಡಳಿತ ಕೇಂದ್ರ ಕಾಕಿನಾಡ. ಜನಸಂಖ್ಯೆ 1,64,172; ಗೋದಾವರಿ ನದಿಯ ಕವಲುಗಳಲ್ಲೊಂದರ ದಡದ ಮೇಲಿದೆ. ಪಶ್ಚಿಮ ಗೋದಾವರಿಯ ಆಡಳಿತ ಕೇಂದ್ರ ಎಲ್ಲೂರು. ಜನಸಂಖ್ಯೆ 2,15,343.

ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳ ಪ್ರದೇಶದ ಸ್ವಾಭಾವಿಕ ಲಕ್ಷಣ ಒಂದೇ ಸಮನಾಗಿಲ್ಲ. ವಾಯವ್ಯ ಭಾಗ ಹೆಚ್ಚು ಫಲವತ್ತಾಗಿಲ್ಲ. ಅದು ಹಿಂದುಳಿದಿದೆ. ಗೋದಾವರಿಯ ಮುಖಜ ಭೂಮಿ ಪ್ರದೇಶ ತುಂಬ ಫಲವತ್ತಾಗಿದೆ. ದಕ್ಷಿಣ ಭಾರತದ ಬತ್ತದ ಕಣಜವೆಂದು ಇದು ಪ್ರಸಿದ್ಧವಾಗಿದೆ. ಈ ಎರಡೂ ಪ್ರದೇಶಗಳ ನಡುವಣ ಭಾಗ ಎತ್ತರವಾಗಿದೆ.

ಸಮುದ್ರದಿಂದ 64 ಕಿಮೀ ದೂರದಲ್ಲಿ ಧವಳೇಶ್ವರದ ಬಳಿ ಗೋದಾವರಿಗೆ ಅಣೆಕಟ್ಟನ್ನು ಕಟ್ಟಲಾಗಿದೆ. ಈ ಅಣೆಕಟ್ಟಿನಿಂದಾಗಿ ಗೋದಾವರಿ ಮುಖಜಭೂಮಿಯ ಪ್ರದೇಶದಲ್ಲಿ ವರ್ಷವಿಡಿ ಬತ್ತದ ಸಾಗುವಳಿ ಸಾಧ್ಯವಾಗಿದೆ. ಇಲ್ಲಿ ಬತ್ತ ಮುಖ್ಯ ಬೆಳೆ. ಇತರ ಆಹಾರ ಧಾನ್ಯಗಳನ್ನೂ ತೊಗರಿ, ಎಣ್ಣೆ ಬೀಜ, ಹೊಗೆಸೊಪ್ಪು ಮತ್ತು ಕಬ್ಬನ್ನೂ ಬೆಳೆಯುತ್ತಾರೆ.

ಕಾಕಿನಾಡ ಒಂದು ಬಂದರು. ಆದರೆ ಗೋದಾವರಿ ನದಿ ಸದಾ ಮಣ್ಣು ಹೊತ್ತು ತಂದು ಸಂಚಯಿಸುವುದರಿಂದ ಹಡಗುಗಳು ದಡದಿಂದ ಬಲು ದೂರದಲ್ಲೇ ನಿಲ್ಲಬೇಕಾಗುತ್ತದೆ. ಪೂರ್ವ ಗೋದಾವರಿಯಲ್ಲಿ ಕಬ್ಬು ಬೆಳೆಯುವ ಪ್ರದೇಶದ ನಡುವೆ ಇರುವ ಸಮಾಲ್ಕೋಟ್‌ನಲ್ಲಿ ಸಕ್ಕರೆ ಉತ್ಪಾದನೆಯಾಗುತ್ತದೆ. ಪಶ್ಚಿಮ ಗೋದಾವರಿಯ ಎಲೂರಿನಲ್ಲಿ ಉಣ್ಣೆ ಜಮಖಾನೆಗಳು ತಯಾರಾಗುತ್ತವೆ. ಪೂರ್ವ ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲಿ ಉತ್ತಮ ಕೈಮಗ್ಗದ ಬಟ್ಟೆಗಳು ತಯಾರಾಗುತ್ತಿದ್ದವು. ರಾಜಮಹೇಂದ್ರಿ ಜನಸಂಖ್ಯೆ 4,08,341. ಒಂದು ತೀರ್ಥಕ್ಷೇತ್ರ. ಹನ್ನೆರಡು ವರ್ಷಗಳಿಗೊಮ್ಮೆ 'ಪುಷ್ಕರಂ' ದಿನದಂದು ಗೋದಾವರಿಯ ನೀರಿನಲ್ಲಿ ಮೀಯಲು ನಾನಾ ಕಡೆಗಳಿಂದ ಹಿಂದು ಆಸ್ತಿಕರು ಇಲ್ಲಿಗೆ ಬರುತ್ತಾರೆ. (ಆರ್.ವಿ.ಎಸ್.)

**ಗೋದಿ:** ಪ್ರಪಂಚದ ಅತ್ಯಂತ ಪ್ರಮುಖವಾದ ಆಹಾರ ಧಾನ್ಯ. ಇದು ಪೋಯೇಸಿ ಎಂಬ ಸಸ್ಯ ಜಾತಿಗೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಟ್ರಿಟಿಕಮ್. ಇದು ಮೂಲತಃ ಸಮಶೀತೋಷ್ಣ ವಲಯದಲ್ಲಿ ಬೆಳೆಯುವ ಹುಲ್ಲಿನ ಜಾತಿಗೆ ಸೇರಿದ ಸಸ್ಯ. ಗೋದಿಯಲ್ಲಿರುವ ಗ್ಲೂಟನ್ ಎಂಬ ಜಿಗುಟಾದ ಅಂಶವು ಗೋದಿ ಧಾನ್ಯವು ಹೆಚ್ಚು ದಿನ ಕೆಡದಂತೆ ಸಂಗ್ರಹಿಸಿಡಲು ನೆರವಾಗಿದೆ. ಗೋದಿಯನ್ನು ಬ್ರೆಡ್, ಕೇಕ್, ಬಿಸ್ಕೆಟ್ಸ್, ಶ್ಯಾವಿಗೆ, ಚಪಾತಿ ಇತ್ಯಾದಿ ಆಹಾರಗಳ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಮದ್ಯ ತಯಾರಿಕೆಗೂ ಬಳಸುವರು. ಗೋದಿಯ ಹುಲ್ಲನ್ನು ದನಕರುಗಳ ಮೇವು, ಪ್ಯಾಕಿಂಗ್ ಮಾಡಲು, ಟೋಪಿ, ರಟ್ಟು ಕಾಗದ ತಯಾರಿಕೆ ಹಾಗೂ ಗುಡಿಸಲುಗಳ ಮೇಲ್ಛಾವಣಿಗೆ ಬಳಸುವರು.

ಗೋಧಿ ಸಮಶೀತೋಷ್ಣ ವಲಯದ ಬೆಳೆಯಾಗಿದ್ದು ಉತ್ತರಾರ್ಧಗೋಳದಲ್ಲಿ $30^0$ ರಿಂದ $50^0$ ಉ. ಅ. ಮತ್ತು ದಕ್ಷಿಣಾರ್ಧಗೋಳದಲ್ಲಿ $20^0$ ರಿಂದ $40^0$ ದ. ಅ. ನಡುವಿನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಬಲ್ಲದು. ಗೋಧಿ ಬೆಳೆಯುವ ಆರಂಭದ ಅವಧಿಯಲ್ಲಿ $10^0$ ಸೆ. ಉಷ್ಣಾಂಶ ಹಾಗೂ ಮಾಗುವ ಕಾಲಕ್ಕೆ $18^0$ ಸೆ. ಉಷ್ಣಾಂಶವಿರಬೇಕು. 50 ರಿಂದ 100 ಸೆಂಮೀ ನಷ್ಟು ವಾರ್ಷಿಕ ಮಳೆ ಬೇಕು. ಮರಳು ಮಿಶ್ರಿತ ಜೇಡಿಮಣ್ಣು ಈ ಬೆಳೆಗೆ ಉತ್ಕೃಷ್ಟ, ಮೆಕ್ಕಲು ಮತ್ತು ಕಪ್ಪು ಮಣ್ಣಿನಲ್ಲೂ ಗೋದಿ ಬೆಳೆಯಬಹುದು. ಗೋದಿ ಗಿಡದ ತಳದಲ್ಲಿ ಹೆಚ್ಚು ನೀರು ನಿಲ್ಲದೆ, ಸರಾಗವಾಗಿ ಹರಿದು ಹೋಗಬಲ್ಲ ಸಾಧಾರಣ ಇಳಿಜಾರಿನಿಂದ ಕೂಡಿದ ಭೂಮಿಯಿರಬೇಕು.

ಗೋದಿಯ ವಿಧಗಳು: ಗೋದಿಯನ್ನು ಬಿತ್ತನೆ ಮತ್ತು ಕಟಾವು ಮಾಡುವ ಆಧಾರದ ಮೇಲೆ ಚಳಿಗಾಲದ ಗೋದಿ ಮತ್ತು ವಸಂತಕಾಲದ ಗೋದಿ ಎಂದು ವಿಂಗಡಿಸಬಹುದು. ಚಳಿಗಾಲದ ಅಂತ್ಯದ ವೇಳೆಯಲ್ಲಿ ಬಿತ್ತನೆ ಮಾಡಿ ಬೇಸಗೆಯಲ್ಲಿ ಕಟಾವು ಮಾಡುವ ಗೋದಿಗೆ ಚಳಿಗಾಲದ ಗೋದಿ ಎನ್ನುವರು. ಇದು ದೀರ್ಘಾವಧಿ ಬೆಳೆ ಇದನ್ನು ಜಗತ್ತಿನಾದ್ಯಂತ ವ್ಯಾಪಕವಾಗಿ ಬೆಳೆಯಲಾಗುತ್ತದೆ. ವಸಂತಕಾಲದಲ್ಲಿ ಬಿತ್ತನೆ ಮಾಡಿ ಬೇಸಗೆಯ ಅಂತ್ಯದ ವೇಳೆಯಲ್ಲಿ ಕಟಾವು ಮಾಡುವ ಗೋದಿಗೆ ವಸಂತ ಕಾಲದ ಗೋದಿ ಎನ್ನುವರು. ಇದು ಬೇಗ ಮಾಗುವುದು. ಆದ್ದರಿಂದ ಇದು ಅಲ್ಪಾವಧಿಯ ಬೆಳೆ. ಗೋದಿಯನ್ನು ವಾಯುಗುಣಕ್ಕನುಗುಣವಾಗಿ ವರ್ಷದ ಎಲ್ಲ ತಿಂಗಳಲ್ಲೂ ಜಗತ್ತಿನ ವಿವಿಧ ಭಾಗಗಳಲ್ಲಿ ಬಿತ್ತನೆ ಮತ್ತು ಕಟಾವು ಮಾಡಲಾಗುತ್ತದೆ.

ಗೋದಿಯ ತಿರುಳಿನ ಆಧಾರದ ಮೇಲೆ ಗಡಸು ಗೋದಿ ಅಥವಾ ಕೆಂಪು ಗೋದಿ ಮತ್ತು ಮೃದುಗೋದಿ ಅಥವಾ ಬಿಳಿಗೋದಿ ಎಂತಲೂ ವಿಂಗಡಿಸಬಹುದು. ಗಡಸು ಗೋದಿ ಗ್ಲೂಟೆನ್ ಅಂಶವನ್ನು ಮತ್ತು ಮೃದು ಗೋದಿ ಪಿಷ್ಟಾಂಶವನ್ನು ಹೆಚ್ಚಾಗಿ ಹೊಂದಿರುತ್ತದೆ. ಗಡಸು ಗೋದಿ ಉಷ್ಣ ವಾಯುಗುಣವುಳ್ಳ ಪ್ರದೇಶ ಮತ್ತು ಮೃದು ಗೋದಿ ತಂಪಾದ ವಾಯುಗುಣವುಳ್ಳ ಪ್ರದೇಶಗಳ ಬೆಳೆ.

ಗೋದಿ ಬೇಸಾಯ ಪ್ರಪಂಚದ ವಿವಿಧ ಭಾಗಗಳಲ್ಲಿ ಹಂಚಿಕೆಯಾಗಿದೆ. ರಷ್ಯ, ಚೀನ, ಅಮೆರಿಕ ಸಂಯುಕ್ತ ಸಂಸ್ಥಾನ, ಭಾರತ, ಫ್ರಾನ್ಸ್, ಕೆನಡ, ಆಸ್ಟ್ರೇಲಿಯ, ಟರ್ಕಿ, ಇಟಲಿ, ಜರ್ಮನಿ, ಪಾಕಿಸ್ತಾನ, ಅರ್ಜೆಂಟೈನ ಇವು ಪ್ರಪಂಚದ ಪ್ರಮುಖ ಗೋದಿ ಉತ್ಪಾದಿಸುವ ರಾಷ್ಟ್ರಗಳು. ಗೋದಿ ಬೆಳೆಯುವ ಇತರ ಮುಖ್ಯ ರಾಷ್ಟ್ರಗಳೆಂದರೆ ಬ್ರೆಜಿಲ್, ಪೋಲೆಂಡ್, ಹಂಗೆರಿ, ರೊಮೇನಿಯ, ಸ್ಪೇನ್, ಚೆಕ್ ಪೂರ್ವ ರಿಪಬ್ಲಿಕ್, ಯೂಗೋಸ್ಲಾವಿಯ, ಅಫ್ಘಾನಿಸ್ತಾನ ಮತ್ತು ಉಕ್ರೈನ್.

ಬತ್ತದಂತೆ ಗೋದಿ ಉತ್ಪಾದನೆಯಲ್ಲೂ ಚೀನ ಪ್ರಸ್ತುತ ಮೊದಲ ಸ್ಥಾನದಲ್ಲಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆ ಪ್ರವೇಶಿಸುವ ಸರಕುಗಳಲ್ಲಿ ಗೋದಿ ಮುಖ್ಯವಾದ ಧಾನ್ಯ. ಇದರ ಒಟ್ಟು ಉತ್ಪಾದನೆಯಲ್ಲಿ ಶೇ. 24 ಭಾಗ ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಪ್ರವೇಶಿಸುವುದು. (ಪಿ.ಟಿ.ಬಿ.)

**ಗೋಮತಿ :** ಭಾರತದ ಉತ್ತರ ಪ್ರದೇಶದಲ್ಲಿ ಹರಿಯುವ ಒಂದು ನದಿ. ಪೀಲಿಭೀತ್‌ನಿಂದ ಪೂರ್ವಕ್ಕೆ 32 ಕಿಮೀ ದೂರದಲ್ಲಿರುವ ಗೋಮತ್ ತಾಲ್‌ನಲ್ಲಿ (ಉ.ಅ.$28^0 35'$; ಪೂ.ರೇ. $80^0 75'$) ಹುಟ್ಟಿ 19.2 ಕಿಮೀ ವರೆಗೆ ಝರಿಯಂತೆ ಹರಿಯುತ್ತದೆ. 56 ಕಿಮೀಗಳ ಅನಂತರ ಜೋಕ್‌ನಾಯಿ ನದಿ ಇದನ್ನು ಸಂಗಮಿಸುತ್ತದೆ. ಅಲ್ಲಿಂದ ಮುಂದೆ ಶಾಶ್ವತವಾದ ಪ್ರವಾಹ ರೂಪದಲ್ಲಿ ಹರಿಯತೊಡಗುತ್ತದೆ. ಸ್ವಲ್ಪ ದೂರದಲ್ಲಿ ಷಹಜಹಾನ್‌ಪುರದಿಂದ ಖೇರಿಗೆ ಹೋಗುವ ಮಾರ್ಗದಲ್ಲಿ ಗೋಮತಿಗೆ 34 ಮೀ ಉದ್ದದ ಸೇತುವೆ ನಿರ್ಮಾಣವಾಗಿದೆ. ಸೇತುವೆಯನ್ನು ದಾಟಿದ ಮೇಲೆ ಮಂದಗತಿಯಿಂದ ಹರಿಯುವ ಈ ನದಿಗೆ ಅನೇಕ ಉಪನದಿಗಳೂ ತೊರೆಗಳೂ ಬಂದು ಸೇರುತ್ತವೆ. ಮಹಮ್ಮದೀಯಿಂದ ಲಖನೌವರೆಗೆ ನದಿಯ ಪಾತ್ರದ ಅಗಲ 30–36 ಮೀ. ಇಲ್ಲಿ ನದಿಯ ದಡಗಳು ತಕ್ಕಮಟ್ಟಿಗೆ ಎತ್ತರವಾಗಿವೆ. ಸೀತಾಪುರ ಜಿಲ್ಲೆಯಲ್ಲಿ ಗೋಮತಿಯನ್ನು ಬಂದು ಸೇರುವ ನದಿಗಳು ಕಥ್‌ನಾ ಮತ್ತು ಸರಾಯಾಣಾ. ಲಖನೌ ನಗರದಲ್ಲಿ ಇದಕ್ಕೆ ಅನೇಕ ಸೇತುವೆಗಳಿವೆ. ಲಖನೌದಿಂದ ಮುಂದೆ ಈ ನದಿ ಬಾರಾಬಂಕಿ, ಸುಲ್ತಾನಪುರ ಮತ್ತು ಜೌನ್‌ಪುರ ಜಿಲ್ಲೆಗಳನ್ನು ದಾಟಿ ಮುಂದುವರೆಯುತ್ತದೆ. ಅಲ್ಲಿ ನದಿಯ ಮಾರ್ಗ ಅಂಕು ಡೊಂಕು; ಪಾತ್ರದ ಅಗಲ 60–78 ಮೀ. ಜೌನ್‌ಪುರದಲ್ಲಿ 16ನೆಯ ಶತಮಾನದಲ್ಲಿ ಕಟ್ಟಿದ 198 ಮೀ ಉದ್ದದ ಶಾಹೀ ಎಂಬ ಕಲ್ಲು ಸೇತುವೆ ತುಂಬ ಪ್ರಸಿದ್ಧವಾದುದು. ಮುಂದೆ ಗೋಮತಿಯನ್ನು ಸೇರುವ ನದಿ ಸಯೀ. ವಾರಾಣಸಿಯಿಂದ ಉತ್ತರಕ್ಕೆ 32 ಕಿಮೀ ದೂರದಲ್ಲಿ ಗೋಮತಿ ನದಿ ಘಾಜಿಪುರದ ಜಿಲ್ಲೆಯ ಸೈದಾಪುರ ಎಂಬ ಊರಿನ ಹತ್ತಿರ ಗಂಗನದಿಯನ್ನು ಸಂಗಮಿಸುತ್ತದೆ.

ಗೋಮತಿ ನದಿ ಮತ್ತು ಅದರ ಉಪನದಿಗಳಿಂದ ಸು. 19200 ಚ.ಕಿಮೀ ಪ್ರದೇಶ ಫಲವತ್ತಾಗಿದೆ. ಅತಿವೃಷ್ಟಿಯಿಂದ ಆಗಾಗ್ಗೆ ನದಿಯಲ್ಲಿ ಅತಿಯಾದ ನೆರೆ ಬರುವುದುಂಟು. ಗೋಮತಿ ನದಿಯಲ್ಲಿ ಮಹಮ್ಮದೀ ವರೆಗೆ ದೋಣಿ ಸಂಚಾರ ಸಾಧ್ಯ. (ಆರ್.ಪಿ.ಎಸ್.)

**ಗೋರಖ್‌ಪುರ:** ಉತ್ತರ ಪ್ರದೇಶದ ಒಂದು ಆಡಳಿತ ವಿಭಾಗ, ಜಿಲ್ಲೆ ಮತ್ತು ಅದರ ಮುಖ್ಯ ಪಟ್ಟಣ. ಗೋರಖ್‌ಪುರ ವಿಭಾಗದಲ್ಲಿ ಗೋರಖ್‌ಪುರ, ದೇವಗಿರಿ, ಬಸ್ತಿ ಮತ್ತು ಅಜಮ್‌ಘರ್ ಜಿಲ್ಲೆಗಳಿವೆ. ವಿಭಾಗದ ವಿಸ್ತೀರ್ಣ 25030 ಚ.ಕಿಮೀ.

ಜಿಲ್ಲೆ : ಗೋರಖ್‌ಪುರ ಜಿಲ್ಲೆಯ ವಿಸ್ತೀರ್ಣ 3325 ಕಿಮೀ. ಜನಸಂಖ್ಯೆ 37,84,720 (2001). ಉತ್ತರ ಪ್ರದೇಶದ ಈಶಾನ್ಯ ದಿಕ್ಕಿನಲ್ಲಿ ಹಿಮಾಲಯದ ದಕ್ಷಿಣದ ತಪ್ಪಲಿನಲ್ಲಿರುವ ಈ ಜಿಲ್ಲೆ ಬಹುತೇಕ ಸಮಭೂಮಿ. ಅಲ್ಲಲ್ಲಿ ಕೆಲವು ಮರಳುಗುಡ್ಡೆಗಳಿವೆ. ರಾಪ್ತಿ, ಅಮಿ ಮತ್ತು ಘಾಗ್ರ ನದಿಗಳು ಇಲ್ಲಿ ಹರಿಯುತ್ತವೆ. ಉತ್ತರದಲ್ಲಿ ಅಲ್ಲಲ್ಲಿ ಕಾಡುಗಳುಂಟು. ಬೇಸಗೆಯಲ್ಲಿ ಹೆಚ್ಚು ಸೆಕೆಯಾಗುವುದಿಲ್ಲ. ವಾರ್ಷಿಕ ಮಳೆ (125 ಸೆಂಮೀ). ನೆಲ ಫಲವತ್ತಾಗಿದೆ. ಆದರೆ ಪದೇ ಪದೇ ಸಂಭವಿಸುವ ಪ್ರವಾಹಗಳಿಂದಾಗಿ ಬೇಸಾಯಕ್ಕೆ ಅಡಚಣೆ ಒದಗುವುದುಂಟು. ಬತ್ತ, ಬಾರ್ಲಿ, ಗೋದಿ ಮತ್ತು ಕಬ್ಬು ಮುಖ್ಯ ಬೆಳೆಗಳು. ಜಿಲ್ಲೆಯಲ್ಲಿ ಹಲವು ಸಕ್ಕರೆ ಕಾರ್ಖಾನೆಗಳಿವೆ. ಬುದ್ಧ ಪರಿನಿರ್ಮಾಣ ಹೊಂದಿದ ಸ್ಥಳವಾದ ಕಾಸಿಯಾ ಎಂಬುದು ಗೋರಖ್‌ಪುರ ನಗರದ ಪೂರ್ವಕ್ಕೆ (54 ಕಿಮೀ) ದೂರದಲ್ಲಿದೆ.

ನಗರ : ಗೋರಖ್‌ಪುರ ನಗರ ವಾರಾಣಸಿಗೆ ಉತ್ತರದಲ್ಲಿ (240 ಕಿಮೀ) ದೂರದಲ್ಲಿದೆ. ಘಾಘ್ರಾದ ಉಪನದಿಗಳಲ್ಲಿ ಒಂದಾದ ರಾಪ್ತಿ ನದಿಯ ದಂಡೆಯ ಮೇಲಿದೆ. ರಾಪ್ತಿ ನದಿಯ ಪಾತ್ರ ಬದಲಾವಣೆಯಾದಂತೆ ನಗರ ಕೂಡ ಉತ್ತರದಿಂದ ದಕ್ಷಿಣಕ್ಕೆ ಸರಿಯುತ್ತ ಬಂತು. ನದಿಗಳ ದಂಡೆಗಳ ಮೇಲೆ ಪ್ರವಾಹವನ್ನು ತಡೆಯಲು ಕಟ್ಟೆಗಳನ್ನು ಕಟ್ಟಲಾಗಿದೆ. ಈ ನಗರವನ್ನು 1400ರಲ್ಲಿ ನಿರ್ಮಿಸಲಾಯಿತೆಂದು ಹೇಳಲಾಗಿದೆ. ಈ ನಗರಕ್ಕೆ ಗೋರಖ್‌ಪುರ ಎಂಬ ಹೆಸರು ಬರಲು ಇಲ್ಲಿಯ ಗೋರಖ್‌ನಾಥ ದೇವಸ್ಥಾನ ಕಾರಣ. ವ್ಯಾಪಾರೋದ್ಯೋಗಗಳಲ್ಲೂ ಈ ನಗರ ಉನ್ನತಿ ಸಾಧಿಸಿದೆ. ಇದಕ್ಕೆ 1885ರಲ್ಲಿ ರೈಲು ಸಂಪರ್ಕ ಏರ್ಪಟ್ಟಿತು. ಈಗ ಈ ನಗರ ಈಶಾನ್ಯ ರೈಲ್ವೆಯ ಮುಖ್ಯ ಕೇಂದ್ರ, ಜಂಕ್ಷನ್. ಇಲ್ಲಿ ಅಧಿಕಾರಿಗಳ ವಾಸಗೃಹಗಳು, ಕಾರ್ಯಾಲಯಗಳು, ಶಿಕ್ಷಣ ಕೇಂದ್ರಗಳು, ಆಸ್ಪತ್ರೆಗಳು ಮತ್ತು ಸೈನಿಕ ಕೇಂದ್ರಗಳು ಇವೆ. ಈಶಾನ್ಯ ರೈಲ್ವೆಯ ದೊಡ್ಡ ಕಾರ್ಯಾಗಾರವೂ ಇದೆ. ಗೋರಖ್‌ಪುರ ಕೈಮಗ್ಗದ ಬಟ್ಟೆ ತಯಾರಿಕೆಗೆ ತುಂಬ ಹೆಸರಾಗಿದೆ. ಕಬ್ಬಿಣ ಪದಾರ್ಥಗಳು, ಕಾಗದ, ಮುದ್ರಣ ಸಾಮಗ್ರಿ, ಖಾದ್ಯ ಪೇಯಗಳು, ತಂಬಾಕು ಮುಂತಾದ ಕೈಗಾರಿಕೆಗಳಿವೆ. ಗೋರಖ್‌ಪುರ ವಿಶ್ವವಿದ್ಯಾಲಯದ ಕೇಂದ್ರ. ನಗರದ ಜನಸಂಖ್ಯೆ 6,24,570. (ಐ.ಎ.)

**ಗೋಲ್ಕೊಂಡ:** ಹೈದರಾಬಾದ್ ನಗರದ ಪಶ್ಚಿಮಕ್ಕೆ 8 ಕಿಮೀ ದೂರದಲ್ಲಿರುವ ಒಂದು ಸ್ಥಳ. 1518–1687ರಲ್ಲಿ ಇದು ಗೋಲ್ಕೊಂಡ ರಾಜ್ಯದ ರಾಜಧಾನಿಯಾಗಿತ್ತು. ಆಗಿನ ಕೋಟೆಗಳೂ ಕೆಲವು ಅರಮನೆಗಳೂ ಮಸೀದಿಗಳೂ ಈಗಲೂ ಇವೆ. ಗ್ರಾನೈಟ್ ಗುಡ್ಡವೊಂದರ ಮೇಲೆ ಕಟ್ಟಲಾದ ಕೋಟೆಯ ಸುತ್ತಳತೆ 5 ಕಿಮೀ. ಅದರೊಳಗಿನ ಕೆಲವು ಕಟ್ಟಡಗಳು ಜೀರ್ಣಸ್ಥಿತಿಯಲ್ಲಿ ಉಳಿದಿವೆ. ಕೋಟೆಗೆ ಸ್ವಲ್ಪ ದೂರದಲ್ಲಿ ಗೋಲ್ಕೊಂಡ ರಾಜ್ಯವನ್ನಾಳಿದ ಕುತುಬ್ ಶಾಹಿ ದೊರೆಗಳ ಗೋರಿಗಳಿವೆ.

ಗೋದಾವರಿ ನದಿಯ ಕೆಳದಂಡೆಯ ಪ್ರದೇಶದಲ್ಲಿ ಬಂಗಾಳಕೊಲ್ಲಿಯವರೆಗೆ ವ್ಯಾಪಿಸಿದ್ದ ರಾಜ್ಯಕ್ಕೆ ಗೋಲ್ಕೊಂಡವೆಂಬ ಹೆಸರಿತ್ತು. ಕಾಕತೀಯರ ರಾಜ್ಯದ ಭಾಗವಾಗಿದ್ದ ಈ ಪ್ರದೇಶವನ್ನು ಅಲಾವುದ್ದೀನ್ ಖಿಲ್ಜಿ 1310ರಲ್ಲಿ ಆಕ್ರಮಿಸಿಕೊಂಡಿದ್ದ. ಇದು 1424–25ರಲ್ಲಿ ಬಹಮನಿಗಳ ವಶವಾಯಿತು. ಬಹಮನಿ ರಾಜ್ಯದ ಪೂರ್ವ ಪ್ರಾಂತ್ಯಕ್ಕೆ ವಾರಂಗಲ್

ಗೋಲ್ಕೊಂಡ ಕೋಟೆ

ರಾಜಧಾನಿಯಾಗಿತ್ತು. ಈ ಪ್ರಾಂತ್ಯದ ಅಧಿಕಾರಿಯಾಗಿದ್ದ ಕುಲಿ ಕುತುಬ್ ಷಾ 1518ರಲ್ಲಿ ಸ್ವತಂತ್ರ ಸುಲ್ತಾನನಾದ. ಗೋಲ್ಕೊಂಡ ಅವನ ರಾಜಧಾನಿಯಾಯಿತು. 1687ರಲ್ಲಿ ಈ ರಾಜ್ಯವನ್ನು ಔರಂಗ್‌ಜೇಬ್ ಗೆದ್ದುಕೊಂಡ. ಗೋಲ್ಕೊಂಡ ಮೊಗಲ್ ಚಕ್ರಾಧಿಪತ್ಯದ ಭಾಗವಾಯಿತು. ಗೋಲ್ಕೊಂಡ ವಜ್ರಗಳಿಗೆ ಪ್ರಸಿದ್ಧವಾಗಿತ್ತು. (ಜಿ.ಆರ್.ಆರ್.)

**ಗೋಲ್ಡ್ ಪೀಟರ್:** ಅಮೆರಿಕ ಸಂಯುಕ್ತ ಸಂಸ್ಥಾನದ ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ. ಇವರು ಮಾನವ ಭೂಗೋಳ ವಿಜ್ಞಾನದಲ್ಲಿ ವರ್ತನಾ ವಿಶ್ಲೇಷಣೆಯ ಪರಿಭಾವನೆಯು ಬೆಳೆವಣಿಗೆ ಹೊಂದಲು ಕೊಡುಗೆಯನ್ನು ನೀಡಿದವರಲ್ಲಿ ಪ್ರಮುಖರು. 1960ರ ದಶಕದಲ್ಲಿದ್ದ ಸ್ಥಾನಿಕ ವಿಶ್ಲೇಷಣೆ (ಲೊಕೇಶನಲ್ ಅನಾಲಿಸಿಸ್) ಹಾಗೂ ಪರಿಮಾಣಾತ್ಮಕ ವಿಧಾನಗಳಿಗೆ ವಿರುದ್ಧವಾಗಿ ವರ್ತನಾ ವಿಶ್ಲೇಷಣೆಯ ವಿಧಾನವನ್ನು ಅನುಸರಿಸಿದರು.



ಮಾನವನ ವರ್ತನೆ ಒಂದು ಪ್ರದೇಶ ಅಥವಾ ಒಂದು ಪರಿಸ್ಥಿತಿಯ ಚಿತ್ರಣ ಆತನ ಮನಸ್ಸಿನಲ್ಲಿ ಮೂಡುವ ಚಿತ್ರದಿಂದ ಉತ್ತೇಜಿತವಾದ ಪರಿಣಾಮವಾಗಿರುವುದು. ಈ ರೀತಿಯ ಚಿತ್ರಣವನ್ನೇ ಮಾನಸಿಕ ನಕ್ಷೆ (ಮೆಂಟಲ್ ಮ್ಯಾಪ್) ಎಂದು ಕರೆಯಲಾಗಿದೆ. ಹೀಗೆ ಮನಸ್ಸಿನಲ್ಲಿ ಮೂಡುವ ಒಂದೇ ಪ್ರದೇಶ ಅಥವಾ ಸನ್ನಿವೇಶದ ಚಿತ್ರಣ ವಿವಿಧ ವ್ಯಕ್ತಿಗಳಲ್ಲಿ ವಿವಿಧ ರೀತಿಯಲ್ಲಿರುವುದು. ಇದರಿಂದಾಗಿ ವರ್ತನೆಯೂ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವುದು ಎಂದು ಪ್ರತಿಪಾದಿಸಿದರು.

ಗೋಲ್ಡ್‌ರವರ ಮುಖ್ಯ ಲೇಖನ ಹಾಗೂ ಗ್ರಂಥಗಳಿವು: ಮ್ಯಾನ್ ಎಗೆನೆಸ್ಟ್ ಎನ್‌ವಿರಾನ್ಮೆಂಟ್; ಎ ಗೇಮ್ ಥಿಯರೆಟಿಕ್ ಫ್ರೇಮ್‌ವರ್ಕ್ (1963). ವೀಟ್ ಆನ್ ಕಿಲಿಮಾಂಜಿರೋ ದಿ ಪರ್ಸೆಪ್ಷನ್ ಆಫ್ ಚಾಯ್ಸ್ ವಿದಿನ್ ಗೇಮ್ ಅಂಡ್ ಲರ್ನಿಂಗ್ ಥಿಯರಿ ಫ್ರೇಮ್‌ವರ್ಕ್ (1965). (ಕೆ.ಎಂ.)

**ಗೋವ:** ದಕ್ಷಿಣ ಭಾರತದ ಪಶ್ಚಿಮ ಕಡಲ ತೀರದಲ್ಲಿರುವ ಅತ್ಯಂತ ಚಿಕ್ಕ ರಾಜ್ಯ. ವಿಸ್ತೀರ್ಣ 3702 ಚ.ಕಿಮೀ. ಇದು 1987 ರಲ್ಲಿ ರಾಜ್ಯವಾಗಿ ರೂಪುಗೊಂಡಿತು, ಜನಸಂಖ್ಯೆ 98,915. ಇದರ ರಾಜಧಾನಿ ಪಣಜಿ.

ಇದು ಉತ್ತರದಲ್ಲಿ ಮಹಾರಾಷ್ಟ್ರದಿಂದಲೂ ಪೂರ್ವ ಮತ್ತು ದಕ್ಷಿಣದಲ್ಲಿ ಕರ್ನಾಟಕದಿಂದಲೂ ಸುತ್ತುವರೆಯಲ್ಪಟ್ಟಿದೆ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರವಿದೆ. ಗೋವದ ಪೂರ್ವಭಾಗ ಮಲೆನಾಡು. ಪೂರ್ವದಿಂದ ಪಶ್ಚಿಮಕ್ಕೆ ಹಲವಾರು ನದಿಗಳು ಹಾಗೂ ತೊರೆಗಳು ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ಮುಖ್ಯವಾದವು ಮಾಂಡವಿ, ಜುವಾರಿ, ತೇರಬೂಲ್, ಚಪೋರ್, ಬೆಕಲ್. ಸಹ್ಯಾದ್ರಿಯ ಕವಲುಗಳು ಗೋವೆಯಲ್ಲಿದೆ. ಇವುಗಳಲ್ಲಿ ಪೂರ್ವಕ್ಕಿರುವ ಸೊಂಸೋಗಡ ಬೆಟ್ಟ ಪ್ರಸಿದ್ಧವಾಗಿದೆ. ಅದರ ಉತ್ತರಕ್ಕೆ ಸತ್ತರೀ ಮಹಾಲದಲ್ಲಿ ವಾಘೇರಿ ಬೆಟ್ಟವಿದೆ. ಮೋರ್ಲೆಗಡ ಸೌಂದರ್ಯ ವೀಕ್ಷಣೆಗೆ ಪ್ರಸಿದ್ಧವೆನಿಸಿದೆ. ಗೋವದ ವಾಯುಗುಣ ತೇವೋಷ್ಣಮಯ. ಉಷ್ಣತೆಯಲ್ಲಿ ಹೆಚ್ಚು ವಾರ್ಷಿಕ ಅಂತರವಿರುವುದಿಲ್ಲ. 100 ಮೀ ಗಿಂತ ಹೆಚ್ಚು ಎತ್ತರವಿಲ್ಲದ ಪೂರ್ವಾರ್ಧ ಭಾಗದಲ್ಲಿ 280–350 ಸೆಂಮೀ ವಾರ್ಷಿಕ ಮಳೆಯಾಗುತ್ತದೆ. ಉಷ್ಣತೆ $22^0$ಸೆ.–$32^0$ಸೆ. ಹೆಚ್ಚು ಎತ್ತರವಾದ ಪ್ರದೇಶವಾದ ಪೂರ್ವಭಾಗದಲ್ಲಿ (120 ಸೆಂಮೀ) ಹೆಚ್ಚು ಮಳೆಯಾಗುತ್ತದೆ (ಗರಿಷ್ಠ 750 ಸೆಂಮೀ). ಇಲ್ಲಿ ಉಷ್ಣತೆಯ ಅಂತರ ಹೆಚ್ಚು.




ಗೋವದ ಶೇ. 29 ಭಾಗದಲ್ಲಿ ಅರಣ್ಯಗಳಿವೆ. ಇತ್ತೀಚೆಗೆ ಅರಣ್ಯ ಸಂರಕ್ಷಣಾ ಕಾರ್ಯ ನಡೆದಿದೆ. ನೀಲಗಿರಿ, ತೇಗ, ಗೋಡಂಬಿ, ರಬ್ಬರ್, ಬಿದಿರು ಮತ್ತು ಮಾವಿನ ಮರಗಳನ್ನು ಬೆಳೆಸಲಾಗುತ್ತಿದೆ.

ಗೋವದ ಮುಖ್ಯ ನೀರಾವರಿ ಯೋಜನೆಗಳೆಂದರೆ ಸಾಂಗೆ ತಾಲ್ಲೂಕಿನ ಸಾತಾಲಿ, ಬಾರ್ದೇಚ್ ತಾಲ್ಲೂಕಿನ ಅಂಜನಾ ಮತ್ತು ಸಾಂಗೆ ತಾಲ್ಲೂಕಿನ ದೂದ್ ಸಾಗರ್. ಬತ್ತ, ಕಬ್ಬು, ತರಕಾರಿ, ತೆಂಗು, ಅಡಿಕೆ, ಗೋಡಂಬಿ ಮತ್ತು ಹಣ್ಣುಗಳು ಇಲ್ಲಿನ ಮುಖ್ಯ ಬೆಳೆಗಳು. ಗೋವದಲ್ಲಿ ಸಾಕಷ್ಟು ಅಳಿವೆಗಳಿದ್ದು ಮೀನುಗಾರಿಕೆಗೆ ಪ್ರಸಿದ್ಧಿಯಾಗಿದೆ.

ಗೋವದಲ್ಲಿ ಜಲವಿದ್ಯುತ್ ಮತ್ತು ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿವೆ. ಖನಿಜ ಸಂಪತ್ತು ಹೇರಳವಾಗಿದೆ. ಕಬ್ಬಿಣದ ಅದಿರು, ಮ್ಯಾಂಗನೀಸ್, ಬಾಕ್ಸೈಟ್ – ಇವು ವಿಶೇಷವಾಗಿ ಕಂಡು ಬರುತ್ತವೆ. ಭಾರತದಿಂದ ರಫ್ತಾಗುವ ಕಬ್ಬಿಣದ ಅದಿರಿನಲ್ಲಿ ಅರ್ಧಭಾಗದಷ್ಟು ಗೋವ ಬಂದರು ಮುಖಾಂತರ ನಿರ್ಯಾತವಾಗುತ್ತದೆ.

ಗೋವದ ಪ್ರಮುಖ ಕೈಗಾರಿಕೆಗಳೆಂದರೆ ಅಕ್ಕಿ ಹಿಟ್ಟು, ಎಣ್ಣೆ ಗಿರಣಿಗಳು, ಮರ ಕುಯ್ಯುವ ಕಾರ್ಖಾನೆ, ಗೋಡಂಬಿ ಕಾರ್ಖಾನೆ, ಇಟ್ಟಿಗೆ ತಯಾರಿಕೆ, ದೋಣಿಯ ನಿರ್ಮಾಣ, ಮಾಂಸ, ಹಣ್ಣು ಮತ್ತು ಮೀನಿನ ಸಂಸ್ಕರಣೆ, ಕೈಮಗ್ಗ ಮತ್ತು ತೆಂಗಿನ ಎಣ್ಣೆಯ ಕಾರ್ಖಾನೆಗಳು, ಮದ್ಯೋತ್ಪಾದನೆ, ಬಿಚೋಲಿನ ಹಿತ್ತಾಳೆಯ ಕೆಲಸ, ದೀವ್‌ನ ದಂತದ ಕೆಲಸ ಬಹು ಪ್ರಸಿದ್ಧ.

ಗೋವದಲ್ಲಿ ಉತ್ತಮ ರಸ್ತೆಮಾರ್ಗಗಳಿವೆ. ಇಲ್ಲಿನ ಒಟ್ಟು ರಸ್ತೆ ಮಾರ್ಗದ ಉದ್ದ 8563 ಕಿಮೀ. ಗೋವದ ನದಿಗಳು ದೋಣಿಗಳ ಸಂಚಾರಕ್ಕೆ ಅನುಕೂಲವಾಗಿದೆ. 100 ಕಿಮೀ ಉದ್ದವಿರುವ ಕರಾವಳಿಯಲ್ಲಿ ಪೂರ್ವಗೋವ ಮುಖ್ಯ ಬಂದರು. ಇಲ್ಲಿನ ಸೇಂಟ್ ಸ್ಟೇವಿಯರ್ ಫ್ರಾನ್ಸಿಸ್‌ನ ಸಮಾಧಿ ಭವನ ಪ್ರಸಿದ್ಧಿಯಾದುದು. ಮಾರ್ಗೋವ ಎರಡನೆ ಮುಖ್ಯ ನಗರ. ಇದು ದಕ್ಷಿಣ ಗೋವದಲ್ಲಿದೆ.

ಇಲ್ಲಿನ ಸುಂದರವಾದ ಕಾಲಾಂಗೂಟೆ, ಕೋಲ್ವ, ದೊನಾಪಾಲಾ, ಸಿರಿದಾವೋ, ವಾಗತೊರೆ, ಮಾಂದೆ ಮತ್ತು ಗೊರ್ಜಿ ಈ ಬೀಚುಗಳಿಗೆ ಪ್ರವಾಸಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಗೋವದಲ್ಲಿ ಹಿಂದು ಮತ್ತು ಕ್ರೈಸ್ತಧರ್ಮಗಳು ಪ್ರಚಾರದಲ್ಲಿವೆ. ಜನಸಾಂದ್ರತೆ ಚ.ಕಿಮೀ ಗೆ 363. ಜನಸಂಖ್ಯೆ 13,43,998. (ಎಚ್.ಎನ್.)

**ಗೋಳ:** ಭೂಗೋಳ ವಿಜ್ಞಾನದಲ್ಲಿ ಬಳಕೆ ಮಾಡುವ, ಭೂಮಿಯನ್ನು ಪ್ರತಿನಿಧಿಸುವ ಒಂದು ನೈಜ ಮಾದರಿ (ಗ್ಲೋಬ್). ಇದು ಭೂಮಿಯ ಆಕಾರ, ಗಾತ್ರ ಹಾಗೂ ಭೂಮೇಲ್ಮೈಯಲ್ಲಿ ಭೂಭಾಗ ಹಾಗೂ ಜಲಭಾಗಗಳ ಸ್ಥಾನ, ವಿಸ್ತಾರ ಮತ್ತು ಆಕಾರಗಳನ್ನು ನೈಜವಾಗಿ ಪ್ರತಿನಿಧಿಸುವುದು. ಗೋಳದ ಮೇಲೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ಸ್ಪಷ್ಟವಾಗಿ ರಚಿಸಿ, ಇವುಗಳ ಆಧಾರದಿಂದ ಭೂಮೇಲ್ಮೈಯಲ್ಲಿ ಭೂ ಅಥವಾ ಜಲಭಾಗಗಳ ಸ್ಥಾನವನ್ನು ಗುರುತಿಸಲಾಗುವುದು. ಮಾಪಕ (ಸ್ಕೇಲ್) ಆಧಾರದ ಮೇಲೆ ಗೋಳದ ಗಾತ್ರ ವ್ಯತ್ಯಾಸವಾಗುತ್ತದೆ.

ಅನುಕೂಲತೆಗಳು: ಭೂಮಿಯ ಆಕಾರ, ಅಕ್ಷಾಂಶ, ರೇಖಾಂಶ ಭೂಮಿಯ ದೈನಂದಿನ ಚಲನೆ ಮುಂತಾದವುಗಳನ್ನು ಪರಿಣಾಮಕಾರಿಯಾಗಿ ಭೂಗೋಳವಿಜ್ಞಾನ ಬೋಧಿಸಲು ಅತ್ಯಾವಶ್ಯಕ.

ಅನಾನುಕೂಲತೆಗಳು: 1. ಗೋಳಗಳು ಸಾಕಷ್ಟು ಚಿಕ್ಕದಾಗಿರುತ್ತವೆ. ಇವು ಭೂಮಿಯ ಯಾವುದಾದರು ಒಂದು ಪ್ರದೇಶವನ್ನು ಪ್ರತಿನಿಧಿಸುವುದಿಲ್ಲ ಬದಲಾಗಿ ಪೂರ್ಣ ಭಾಗವನ್ನು ಪ್ರತಿನಿಧಿಸುತ್ತವೆ. ಇದರಿಂದ ಗೋಳದಲ್ಲಿ ಭೂಮಿಯ ಅತಿ ಪ್ರಧಾನ ಲಕ್ಷಣಗಳನ್ನು ಮಾತ್ರ ನೀಡಬಹುದು. ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನು ನೀಡಲು ಸ್ಥಳಾವಕಾಶದ ಕೊರತೆಯಿರುವುದು. 2. ಗೋಳದಲ್ಲಿ ಒಂದು ಭಾಗವನ್ನು ಮಾತ್ರ ವೀಕ್ಷಿಸಬಹುದು. ಯಾವುದೇ ಇಡೀ ಗೋಳವನ್ನು ಒಂದೇ ಬಾರಿ ವೀಕ್ಷಿಸಿ ಯಾವುದೇ ಲಕ್ಷಣಗಳ ಹಂಚಿಕೆಯನ್ನು ವೀಕ್ಷಿಸುವುದು ಅಸಾಧ್ಯ. ಇದರಿಂದ ಗೋಳಗಳ ಆಧಾರದ ಮೇಲೆ ಹೋಲಿಕೆ ಮತ್ತು ವಿಶ್ಲೇಷಣೆ ಕಷ್ಟಸಾಧ್ಯ. (ಬಿ.ಸಿ.ಕೆ.)

**ಗೌರಿಬಿದನೂರು:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು; ಅದರ ಮುಖ್ಯ ಪಟ್ಟಣ. ಕೋಲಾರ ಜಿಲ್ಲೆಯ ವಾಯವ್ಯದಲ್ಲಿ ಉ.ಅ. $13^{0}25'$–$13^{0}47'$ ಮತ್ತು ಪೂ. ರೇ. $77^{0}22'$–$77^{0}43'$ ರಲ್ಲಿ ಇರುವ ತಾಲ್ಲೂಕಿನ ಮೇರೆಗಳು ಹೀಗಿವೆ: ಪಶ್ಚಿಮದಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳು, ಉತ್ತರದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕು, ಪೂರ್ವದಲ್ಲಿ ಕೋಲಾರ ಜಿಲ್ಲೆಯ ಗುಡಿಬಂಡೆ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳು. ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯ ದೊಡ್ಡ ಬಳ್ಳಾಪುರ ತಾಲ್ಲೂಕು. ಗೌರಿಬಿದನೂರು ತಾಲ್ಲೂಕಿನ ವಿಸ್ತೀರ್ಣ 881.7 ಚ.ಕಿಮೀ. ಜನಸಂಖ್ಯೆ 2,71,068. ಗೌರಿಬಿದನೂರು. ಹೊಸೂರು, ಮಂಚೇನಹಳ್ಳಿ, ನಗರಗೆರೆ, ದಾರಿನಾಯ್ಕನ ಪಾಳ್ಯ, ತೊಂಡೆಭಾವಿ – ಇವು ಇಲ್ಲಿಯ ಹೋಬಳಿಗಳು. ತಾಲ್ಲೂಕಿನಲ್ಲಿ 204 ಗ್ರಾಮಗಳೂ 2 ಪಟ್ಟಣಗಳೂ ಇವೆ. ತಾಲ್ಲೂಕಿನ ಆಗ್ನೇಯ ದಿಕ್ಕಿನಿಂದ ಉತ್ತರ ದಿಕ್ಕಿಗೆ ಉತ್ತರ ಪಿನಾಕಿನಿ (ಪೆನ್ನಾರ್) ನದಿ ಹರಿಯುತ್ತದೆ. ಇಡೀ ತಾಲ್ಲೂಕು ಈ ನದಿ ಕಣಿವೆ ಪ್ರದೇಶ, ಪೂರ್ವದಲ್ಲಿ ನಂದೀದುರ್ಗ ಗಿರಿಶ್ರೇಣಿಯೂ ಪಶ್ಚಿಮದಲ್ಲಿ ಮಾಕಳಿದುರ್ಗದಿಂದ ಆರಂಭವಾಗುವ ಗಿರಿಪಂಕ್ತಿಯೂ ಈ ತಾಲ್ಲೂಕನ್ನು ಹೊಂದಿಕೊಂಡಂತಿವೆ. ಉತ್ತರ ಪಿನಾಕಿನಿಯ ಒಂದು ಉಪನದಿ ಕುಮುದ್ವತಿ ಅಥವಾ ಕುಂದಾರ್. ಇದು ಬೆಂಗಳೂರು ಜಿಲ್ಲೆಯಲ್ಲಿ ಮಾಕಳಿದುರ್ಗದ ಪಶ್ಚಿಮದಲ್ಲಿ ಉಗಮಿಸಿ, ದಕ್ಷಿಣೋತ್ತರವಾಗಿ ತಾಲ್ಲೂಕಿನ ಮೂಲಕ ಹರಿದು, ಮಧುಗಿರಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮಾಕಳಿದುರ್ಗದ ಪೂರ್ವದಿಂದ ಸಣ್ಣ ಹೊಳೆಯೊಂದು ತೊಂಡೆಭಾವಿ ಹೋಬಳಿಯ ಮೂಲಕ ಹರಿದು ಬೊಮ್ಮಸಂದ್ರಕ್ಕೆ ಪೂರ್ವದಲ್ಲಿ ಉತ್ತರ ಪಿನಾಕಿನಿಯನ್ನು ಕೂಡುತ್ತದೆ.

ಈ ತಾಲ್ಲೂಕು ಅಕ್ಕಪಕ್ಕದ ತಾಲ್ಲೂಕುಗಳಿಗಿಂತ ತಗ್ಗಿನಲ್ಲಿದೆ. ನೆಲ ಸಡಿಲ ಮತ್ತು ಫಲವತ್ತು. ಗೌರಿಬಿದನೂರು ಪಟ್ಟಣದ ಬಳಿ ಅಂತರ್ಜಲ ಮೇಲ್ಮಟ್ಟದಲ್ಲಿ ಸಿಗುತ್ತದೆ. ಜೊತೆಗೆ ನದಿ ನಾಲೆಗಳಿಂದ ನೀರಾವರಿ ಸೌಕರ್ಯವಿದೆ. ಬತ್ತ, ಕಬ್ಬು, ಅರಸಿನ, ತೆಂಗು, ಅಡಕೆ ಮುಖ್ಯ ಬೆಳೆಗಳು. ಬೆಟ್ಟ ಪ್ರದೇಶದಲ್ಲಿ ಮರಸೇಬು ವಿಶೇಷ.

ಬೆಂಗಳೂರು – ಗುಂತಕಲ್ ರೈಲುಮಾರ್ಗ ತಾಲ್ಲೂಕಿನ ಮಧ್ಯ ಭಾಗದಲ್ಲಿ ದಕ್ಷಿಣೋತ್ತರವಾಗಿ ತೊಂಡೆಭಾವಿ, ಗೌರಿಬಿದನೂರು ಮತ್ತು ದೊಡ್ಡಕುರುಗೋಡು ಮೂಲಕ ಹಾದುಹೋಗುತ್ತದೆ. ಗೌರಿಬಿದನೂರು ಪಟ್ಟಣದಿಂದ ಗುಡಿಬಂಡೆ, ಚಿಕ್ಕಬಳ್ಳಾಪುರ, ಹಿಂದೂಪುರ ಮುಂತಾದ ಸ್ಥಳಗಳಿಗೂ ತೊಂಡೆಭಾವಿಯಿಂದ ಮಧುಗಿರಿಗೂ ರಸ್ತೆಗಳುಂಟು.

ಗೌರಿಬಿದನೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ಇದು ಕೋಲಾರಕ್ಕೆ ವಾಯವ್ಯದಲ್ಲಿ 90 ಕಿಮೀ ದೂರದಲ್ಲಿ ಉತ್ತರ ಪಿನಾಕಿನಿ ನದಿಯ ಎಡ ದಂಡೆಯ ಮೇಲಿದೆ. ಬೆಂಗಳೂರು – ಗುಂತಕಲ್ ರೈಲುಮಾರ್ಗದಲ್ಲಿ ಇದೊಂದು ನಿಲ್ದಾಣ. ದೊಡ್ಡ ಬಳ್ಳಾಪುರ ಹಿಂದೂಪುರ ರಸ್ತೆ ಇದರ ಮೂಲಕ ಸಾಗುತ್ತದೆ. ಬೆಂಗಳೂರಿನಿಂದ ಇಲ್ಲಿಗೆ 80 ಕಿಮೀ ದೂರ. ಇಲ್ಲಿ ಪುರಸಭೆ ಇದೆ.

ಇದು ಹಿಂದೆ ವಿದುರನ ವಾಸ್ಥಳವಾಗಿತ್ತೆಂದೂ ಆದ್ದರಿಂದ ಇದಕ್ಕೆ ವಿದುರೂರು ಎಂಬ ಹೆಸರಿತ್ತೆಂದು ಹೇಳಲಾಗಿದೆ. ಇಲ್ಲಿಗೆ 64 ಕಿಮೀ ಉತ್ತರದಲ್ಲಿ, ದೊಡ್ಡ ಕುರುಗೋಡು ಬಳಿ ವಿದುರಾಶ್ವತ್ಥವಿದೆ. ಇಲ್ಲಿ ವಿದುರನೇ ನೆಟ್ಟನೆಂದು ನಂಬಲಾದ ಒಂದು ಅಶ್ವತ್ಥವೃಕ್ಷವುಂಟು.

ರೈಲುಮಾರ್ಗ ನಿರ್ಮಾಣವಾದುದರಿಂದ ಗೌರಿಬಿದನೂರು ಪ್ರವರ್ಧಮಾನವಾಗಿದೆ. ಇಲ್ಲೊಂದು ಸಕ್ಕರೆ ಕಾರ್ಖಾನೆಯುಂಟು. ಒಂದು ಕಾಲೇಜು ಸಹ ಇದೆ. ಗೌರಿಬಿದನೂರಿನ ಹೊಸೂರಿನಲ್ಲಿ ಭಾಭಾ ಅಣುಶಕ್ತಿ ಸಂಶೋಧನ ಸಂಸ್ಥೆಗೆ ಸೇರಿದ ಭೂಕಂಪನ ಮಾಪನ ಕೇಂದ್ರವೊಂದುಂಟು. (ಕೆ.ಆರ್.)

**ಗ್ಯಾಬ್ರೊ:** ಕಪ್ಪು ಇಲ್ಲವೇ ನೇರಳೆ ಬಣ್ಣಮಿಶ್ರಿತ ಕಪ್ಪು ಬಣ್ಣದ ಅಗ್ನಿಶಿಲೆ. ಶಿಲಾರಸ ಭೂತಳದಲ್ಲಿರುವ ಬಿರುಕುಗಳಿಗೆ ನುಗ್ಗಿ, ನಿಧಾನವಾಗಿ ಘನೀಕರಿಸಿದಾಗ ಇದು ಉಂಟಾಗುತ್ತದೆ. ಹೀಗಾಗಿ ಇದರ ಖನಿಜಗಳಿಗೆ ವಿಶೇಷತಃ ಪೂರ್ಣಸ್ಫಟಿಕತ್ವದ, ಪೂರ್ಣಾಕಾರದ ಮತ್ತು ಗಾತ್ರದಲ್ಲಿ ಒರಟಾದ ಖನಿಜ ಸಂಯೋಜನೆ ಉಂಟು. ಭೂಮಿಯ ಅಂತರಾಳದಲ್ಲೇ ಶಿಲೆಯಾಗುವ ಅಗ್ನಿಶಿಲೆಗಳನ್ನು ಅಂತರಾಗ್ನಿಶಿಲೆಗಳೆಂದು ಕರೆಯುವುದರಿಂದ ಗ್ಯಾಬ್ರೊಶಿಲೆಯನ್ನು ಈ ಗುಂಪಿಗೆ ಸೇರಿಸುತ್ತಾರೆ. ಈ ಗುಂಪಿನ ಶಿಲೆಗಳು ಹೆಚ್ಚಾಗಿ ಲೊಕೋಲಿತ್ ಅಥವಾ ಡೈಕ್ ಆಕೃತಿಯಲ್ಲಿ ಇರುತ್ತವೆ. ಆರುತ್ತಿರುವ ಶಿಲಾರಸದಿಂದ ಮೊದಲು ಬೇರ್ಪಟ್ಟು ಘನೀಭವಿಸುತ್ತಿರುವ ಶಿಲೆಗಳಲ್ಲಿ ಸಿಲಿಕಾಂಶ ಕಡಿಮೆ ಇರುತ್ತದೆ. ಆಮೇಲೆ ಘನೀಭವಿಸುವ ಶಿಲೆಗಳಲ್ಲಿ ಕ್ರಮೇಣ ಆ ಅಂಶ ಜಾಸ್ತಿಯಾಗುತ್ತದೆ. ಸಿಲಿಕಾಂಶದ ಆಧಾರದ ಮೇಲೆ ಶಿಲೆಗಳನ್ನು ಅತಿಪರ್ಯಾಪ್ತ (ಸಿಲಿಕಾಂಶ ಶೇ. 80 – 60), ಪರ್ಯಾಪ್ತ (ಸಿಲಿಕಾಂಶ ಶೇ. 50 – 48) ಮತ್ತು ಅಪರ್ಯಾಪ್ತ (ಸಿಲಿಕಾಂಶ ಶೇ. 54.5 – 41) ಶಿಲೆಗಳೆಂದು ವಿಂಗಡಿಸುವುದು ವಾಡಿಕೆ. ಇದರ ಪ್ರಕಾರ ಗ್ಯಾಬ್ರೊಶಿಲೆ ಪರ್ಯಾಪ್ತ ಶಿಲಾ ಪಂಗಡಕ್ಕೆ ಸೇರಿರುತ್ತದೆ. ಪರ್ಯಾಪ್ತ ಅಂತರಾಗ್ನಿ ಶಿಲೆಗಳನ್ನು ಗ್ಯಾಬ್ರೊ, ಅನಾರ್ತೊಸೈಟ್, ಪೆರಿಡೊಟೈಟ್ ಮುಂತಾಗಿ ಅವುಗಳ ಖನಿಜಸಂಯೋಜನೆಗೆ ಅನುಗುಣವಾಗಿ ಕರೆಯುತ್ತಾರೆ. ಗ್ಯಾಬ್ರೊ ಶಿಲೆಯಲ್ಲಿ ಪ್ಲೇಜಿಯೋಕ್ಲೇಸ್ ಮತ್ತು ಪೈರಾಕ್ಸೀನ್ ಮುಖ್ಯ ಖನಿಜಗಳು. ಇವುಗಳಲ್ಲದೆ ಬಯೊಟೈಟ್, ಹಾರನ್‌ಬ್ಲಂಡ್, ಇಲ್ಮನೈಟ್, ಮ್ಯಾಗ್ನಟೈಟ್ ಮುಂತಾದ ಖನಿಜಗಳು ಆನುಷಂಗಿಕವಾಗಿ ಇರಬಹುದು. ಕೆಲವು ವೇಳೆ ಗ್ಯಾಬ್ರೊಶಿಲೆಯಲ್ಲಿ ಬೆಣಚುಕಲ್ಲು ಅಥವಾ ಆಲಿವೀನ್ ಖನಿಜಗಳು ಬೆರೆತಿರುವ ಸಾಧ್ಯತೆ ಉಂಟು. ಇಂಥವುಗಳಿಗೆ ಬೆಣಚುಕಲ್ಲು ಗ್ಯಾಬ್ರೊ ಅಥವಾ ಆಲಿವೀನ್ ಗ್ಯಾಬ್ರೊ ಎಂದು ಹೆಸರು. ಗ್ಯಾಬ್ರೊ ಮತ್ತು ಇದರ ಗುಂಪಿಗೆ ಸೇರಿದ ಇತರ ಶಿಲೆಗಳು ವಿಶೇಷವಾಗಿ ಇಂಗ್ಲೆಂಡಿನ ಲೇಕ್ ಡಿಸ್ಟ್ರಿಕ್ಟ್, ಕೆನಡಾದ ನಡ್‌ಬೆರಿ, ಗ್ರೀನ್‌ಲೆಂಡಿನ ಸ್ಕೇಲ್‌ಗಾರ್ಡ್, ದಕ್ಷಿಣ ಆಫ್ರಿಕದ ಬುಷ್‌ವೆಲ್ಡ್ ಹಾಗೂ ಭಾರತದ ಗಿರ್‌ನಾರ್ ಗುಡ್ಡಗಳು ಮತ್ತು ಸೇಲಮ್ ಜಿಲ್ಲೆಯಲ್ಲಿ ದೊರೆಯುತ್ತವೆ. ಈ ಶಿಲೆಗಳಲ್ಲಿರುವ ಪ್ಲೇಜಿಯೋಕ್ಲೇಸ್ (ಲ್ಯಾಬ್ರೊಡರೈಟ್) ಖನಿಜದಿಂದಾಗಿ ಅವುಗಳಲ್ಲಿ ಒಂದು ಬಗೆಯ ನೇರಳೆಬಣ್ಣ ಬರುವುದುಂಟು. ಇದಲ್ಲದೆ ಈ ಖನಿಜದಿಂದಾಗಿ ಗ್ಯಾಬ್ರೊ ಶಿಲೆಯನ್ನು ಬೇರೆ ಬೇರೆ ಕೋನದಿಂದ ನೋಡಿದಾಗ ಬೇರೆ ಬೇರೆ ಬಣ್ಣ ಕಾಣುವುದೂ ಉಂಟು. ಹೀಗಾಗಿ ಗ್ಯಾಬ್ರೊಶಿಲೆಯನ್ನು ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಅಲಂಕಾರ ಶಿಲೆಯಾಗಿ ಉಪಯೋಗಿಸುತ್ತಾರೆ. (ಸಿ.ಎನ್.)

**ಗ್ರನಡ:** ಕೆರೆಬಿಯನ್ ಪ್ರದೇಶದ ಲೆಸ್ಸರ್ ಆಂಟಿಲಿಸ್‌ನಲ್ಲಿರುವ ಒಂದು ದ್ವೀಪ ರಾಷ್ಟ್ರ. ವಿಂಡವರ್ಡ್ ದ್ವೀಪಗಳ ಅತ್ಯಂತ ದಕ್ಷಿಣ ಭಾಗದಲ್ಲಿ ವೆನಿಜುವೇಲದ ಕರಾವಳಿಯ ಅಭಿಮುಖವಾಗಿದೆ. ಇದರಲ್ಲಿ ನೆರೆಯ ಗ್ರನ್‌ಡೈನ್ಸ್ ದ್ವೀಪ ಸಮೂಹದ ಕೆಲವು ಭಾಗಗಳು

ಸೇರಿವೆ. ಉ. ಅ. $12^0$ ಹಾಗೂ ಪ. ರೇ. $61^0$ ಗಳಲ್ಲಿದೆ. ರಾಷ್ಟ್ರದ ಒಟ್ಟು ವಿಸ್ತೀರ್ಣ 344 ಚ.ಕಿಮೀ. ಜನಸಂಖ್ಯೆ 92,502 (2004). ರಾಜಧಾನಿ ಸೇಂಟ್ ಜಾರ್ಜ್ಸ್. ಜನಸಂಖ್ಯೆ 4439 (2004). ಈ ದ್ವೀಪ ಸಮೂಹ ಅನೇಕ ಜ್ವಾಲಾಮುಖಿ ಪರ್ವತ ಶಿಖರಗಳಿಂದ ಕೂಡಿದೆ. ಈ ಪರ್ವತಗಳ ಇಳಿಜಾರುಗಳು ಫಲವತ್ತಾಗಿದ್ದು, ದಟ್ಟವಾದ ಅರಣ್ಯಗಳಿಂದ ಕೂಡಿದೆ. ಉತ್ತರ ದಕ್ಷಿಣಕ್ಕೆ ಹಬ್ಬಿನಿಂತಿರುವ ಪರ್ವತ ಶ್ರೇಣಿಯಲ್ಲಿ ಸೇಂಟ್ ಕ್ಯಾಥರಿನ್ 840 ಮೀ ಎತ್ತರವಾಗಿದ್ದು ಇಲ್ಲಿನ ಅತ್ಯುನ್ನತ ಪ್ರದೇಶವಾಗಿದೆ. ವಾಯುಗುಣ ಅತ್ಯಂತ ಉಷ್ಣತೆಯಿಂದ ಕೂಡಿದ್ದು, ಮಳೆಯೂ ಹೆಚ್ಚು. ದಕ್ಷಿಣದ ಕರಾವಳಿಯುದ್ದಕ್ಕೂ ಅನೇಕ ಕೊಲ್ಲಿಗಳು ಖಾರಿಗಳು ಇವೆ. ಇಲ್ಲಿನ ಮೂಲನಿವಾಸಿಗಳು ಅರಾವಕಿ ಇಂಡಿಯನ್ನರು. ಕೆರಿಬಿಯನ್ ಇಂಡಿಯನ್ನರು ಇವರನ್ನು ಮೂಲೆ ಗುಂಪುಮಾಡಿ ತಾವು ಪ್ರಬಲರಾಗಿದ್ದಾರೆ. ಆಫ್ರಿಕದಿಂದ ಗುಲಾಮರಾಗಿ ಬಂದವರೂ ಇದ್ದಾರೆ. ಫ್ರೆಂಚರು ಮತ್ತು ಬ್ರಿಟಿಷರ ವಸಾಹತುವಾಗಿದ್ದ ಈ ದ್ವೀಪಸ್ತೋಮ 1974ರಲ್ಲಿ ಸ್ವತಂತ್ರವಾಯಿತು.




ಇಲ್ಲಿನ ನೈಸರ್ಗಿಕ ಸಂಪತ್ತೆಂದರೆ, ಫಲವತ್ತಾದ ಭೂಮಿ ಹಾಗೂ ಮೀನು ಉತ್ಪಾದನೆ. ಮುಖ್ಯ ಬೆಳೆ, ಕೋಕೊ, ಜಾಯಿಕಾಯಿ ಮತ್ತು ಬಾಳೆಹಣ್ಣು, ಬೇಸಾಯ ಮತ್ತು ಪ್ರವಾಸೋದ್ಯಮ ಜನರ ಮುಖ್ಯ ಕಸಬು. ಸಕ್ಕರೆ ಉತ್ಪಾದನೆ ಇದೆ. ಅಧಿಕೃತ ಭಾಷೆ ಇಂಗ್ಲಿಷ್. ಹಣ ಈಸ್ಟ್ ಕೆರೆಬಿಯನ್ ಡಾಲರ್. ಜನಸಂಖ್ಯೆಯ ಬಹುಪಾಲು ರೋಮನ್ ಕೆಥೊಲಿಕ್ ಧರ್ಮದವರು. ಸಾಕ್ಷರತೆ 63.2 ರಷ್ಟು. ಪ್ರಮುಖ ನಗರಗಳು ವಿಕ್ಟೋರಿಯ ಮತ್ತು ಗ್ರೀನ್‌ವಿಲ್ಲೆ. (ಕೆ.ವಿ.ಎಸ್.ಯು.)

**ಗ್ರನಾಡ:** ದಕ್ಷಿಣ ಸ್ಪೇನಿನಲ್ಲಿರುವ ಒಂದು ಪ್ರಾಂತ್ಯ. 1833ರಲ್ಲಿ ಅಂಡಾಲೂಸಿಯಕ್ಕೆ ಸೇರಿದ ಜಿಲ್ಲೆಗಳನ್ನು ಒಟ್ಟುಗೂಡಿಸಿ ಗ್ರನಾಡ ಪ್ರಾಂತ್ಯವನ್ನು ರಚಿಸಲಾಯಿತು. ಇದರ ವಿಸ್ತೀರ್ಣ 12,530 ಚ.ಕಿಮೀ. ಜನಸಂಖ್ಯೆ 7,90,515. ಇದರ ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರವಿದೆ. ಪಶ್ಚಿಮ ಹಾಗೂ ವಾಯವ್ಯ ಭಾಗಗಳಲ್ಲಿ ಸಿಯೇರಾನಿವೇಡ ಪರ್ವತಶ್ರೇಣಿಯಿದೆ. ಇಲ್ಲಿಯ ಭೂಮಿ ಫಲವತ್ತಾಗಿದ್ದು ಕಬ್ಬಿನ ಬೇಸಾಯ ಹೆಚ್ಚು ಕಂಡುಬರುತ್ತದೆ. ಕುರಿಸಾಕಣೆಯು ಉಂಟು.

ಗ್ರನಾಡ ಅದೇ ಹೆಸರಿನ ಪ್ರಾಂತ್ಯದ ಒಂದು ನಗರವಾಗಿದೆ. ಇದು ಸಮುದ್ರ ಮಟ್ಟದಿಂದ 655.5 ಮೀ ಎತ್ತರದಲ್ಲಿದೆ. ಜನಸಂಖ್ಯೆ 2,40,661 (2001). ಸಿಯೇರಾ ನಿವೇಡ ಪರ್ವತ ಶ್ರೇಣಿಯ ವಾಯವ್ಯ ಭಾಗದಲ್ಲಿ ಪೆನಿಲ್ ಮತ್ತು ದಾರೋನದಿಗಳ ಸಂಗಮಸ್ಥಾನವಿದ್ದು, ಗ್ರನಾಡ ಮೂಲಕ ಹರಿಯುವ ದಾರೊ ನದಿಯ ಬಲಗಡೆ ಹಳೆಯ ನಗರವಿದೆ. ಗ್ರನಾಡ ಉತ್ತರದ ಕಡೆ ವಿಸ್ತರಿಸಿದೆ. ಆಹಾರ ಪದಾರ್ಥಗಳ ತಯಾರಿಕೆ, ಸಕ್ಕರೆ ಪರಿಷ್ಕರಣ – ಇವು ಇಲ್ಲಿಯ ಮುಖ್ಯ ಉದ್ಯಮಗಳು. (ಕೆ.ವಿ.ಎಸ್.ಯು)

**ಗ್ರಹ:** ಒಂದು ನಕ್ಷತ್ರದ ಸುತ್ತ ಪರಿಭ್ರಮಿಸುತ್ತಿರುವ ಚಿಕ್ಕದಾದ ಘನ ಆಕಾಶಕಾಯ (ಪ್ಲ್ಯಾನೆಟ್). ಈವರೆಗೆ ರೂಢಿಯಲ್ಲಿ ಸೂರ್ಯನಕ್ಷತ್ರವನ್ನು ಪರಿಭ್ರಮಿಸುತ್ತಿರುವ ಬುಧಾದಿಯಾಗಿ ಎಂಟು ಆಕಾಶಕಾಯಗಳಿಗೆ ಗ್ರಹಗಳೆಂದು ಹೆಸರುಂಟು. ಸೂರ್ಯನಿಂದ ಏರುತ್ತಿರುವ ದೂರಗಳಲ್ಲಿ ಇವುಗಳ ಹೆಸರು ಅನುಕ್ರಮವಾಗಿ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್. ಕಳೆದ ನಾಲ್ಕೈದು ವರ್ಷಗಳಿಂದೀಚೆಗೆ ಸೌರಮಂಡಲದ ಕ್ಯೂಪರ್ ಬೆಲ್ಟ್‌ನಲ್ಲಿ ಕಂಡುಬರುವ ಸೇಡ್ನಾ ಕುವೋವಾರ್ ಮತ್ತು ಝೂನಾಗಳಂತಹ ದೊಡ್ಡ ಆಕಾಶಕಾಯಗಳಿಗೂ ಗ್ರಹಗಳ ಸ್ಥಾನ ನಿಡಬೇಕೆಂದು 24 ಆಗಸ್ಟ್ 2006ರಲ್ಲಿ ಚೆಕ್ ಗಣರಾಜ್ಯದ ರಾಜಧಾನಿ ಪ್ರಾಗ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಖಗೋಳ ವಿಜ್ಞಾನ ಸಂಘದ ಮಹಾ ಅಧಿವೇಶನದಲ್ಲಿ ಸಾಕಷ್ಟು ಚರ್ಚೆಯಾಯಿತು. ಇವು ಗ್ರಹಗಳಲ್ಲವೆಂದಾದರೆ ಪ್ಲೂಟೊ ಸಹ ಗ್ರಹವಲ್ಲವೆಂದು ವಿಷಯಮಂಡನೆಯಾಗಿ, ಚರ್ಚೆಯ ನಂತರ ಗ್ರಹದ ಬಗ್ಗೆ ಹೊಸ ವ್ಯಾಖ್ಯೆ ಅಸ್ತಿತ್ವಕ್ಕೆ ಬಂದಿತು. ಗ್ರಹಕ್ಕೆ ಸೂರ್ಯನ ಸುತ್ತ ಪರಿಭ್ರಮಿಸುವ ತನ್ನದೇ ಆದ ಕಕ್ಷೆ ಇರಬೇಕು ಮತ್ತು ಗುರುತ್ವಾಕರ್ಷಣೆ ಶಕ್ತಿಯುಳ್ಳ ಗೋಳಾಕಾರದ ಆಕಾಶಕಾಯವಿರಬೇಕು. ಈ ನಿರ್ಣಯದಿಂದಾಗಿ ಪ್ಲೂಟೊಗ್ರಹಕ್ಕೆ ಗ್ರಹದ ಸ್ಥಾನ ತಪ್ಪಿತು.

**ಲಕ್ಷಣಗಳು :** ಎಲ್ಲ ಗ್ರಹಗಳಿಗೂ ಸಾಮಾನ್ಯವಾದ ಕೆಲವು ಲಕ್ಷಣಗಳಿವೆ.

1. ಅವು ಸೂರ್ಯನ ಸುತ್ತ ಭಿನ್ನ ಕಕ್ಷೆಗಳಲ್ಲಿ ಆದರೆ ಒಂದೇ ದಿಶೆಯಲ್ಲಿ ಪರಿಭ್ರಮಿಸುತ್ತಿವೆ.

2. ಈ ಕಕ್ಷೆಗಳೆಲ್ಲವೂ ದೀರ್ಘವೃತ್ತಗಳು. ಸೂರ್ಯನ ಸ್ಥಾನ ಆಯಾ ದೀರ್ಘ ವೃತ್ತದ ಒಂದು ನಾಭಿಯಲ್ಲಿದೆ (ಇದೇ ಕೆಪ್ಲರನ ಮೊದಲನೆಯ ನಿಯಮ). ಆದ್ದರಿಂದ ಎಲ್ಲ ಗ್ರಹಕಕ್ಷೆಗಳಿಗೂ ಸಾಮಾನ್ಯವಾದ ನಾಭಿಯಲ್ಲಿ ಸೂರ್ಯ ಇದೆ.

3. ಗ್ರಹಗಳ ಕಕ್ಷಾವೇಗ ಸಮಕಾಲಗಳಲ್ಲಿ ಸಮ ಸಲೆಗಳು ಎಂಬ ಸೂತ್ರಾನುಸಾರ (ಕೆಪ್ಲರನ ಎರಡನೆಯ ನಿಯಮ). ಅಂದರೆ ಸೂರ್ಯ–ಗ್ರಹ ರೇಖೆ ಸೂರ್ಯನನ್ನು ಕುರಿತಂತೆ ಸಲೆಯನ್ನು ರೇಖಿಸುವ ದರ ಸ್ಥಿರವಾಗಿದೆ. ಇದರ ಪರಿಣಾಮವಾಗಿ ಸೂರ್ಯನೀಚ (ಪೆರಿಹೀಲಿಯನ್) ಬಿಂದುವಿನಲ್ಲಿ ಗ್ರಹಕ್ಕೆ ಗರಿಷ್ಠ ವೇಗವೂ ಸೂರ್ಯೋಚ್ಚ ಬಿಂದುವಿನಲ್ಲಿ (ಅಪ್‌ಹೀಲಿಯನ್) ಕನಿಷ್ಠ ವೇಗವೂ ಪ್ರಾಪ್ತವಾಗುತ್ತವೆ.

4. ಸೂರ್ಯನನ್ನು ಪರಿಭ್ರಮಿಸಲು ಗ್ರಹ ತೆಗೆದುಕೊಳ್ಳುವ ಅವಧಿಕಾಲವರ್ಗ ಸೂರ್ಯ–ಗ್ರಹ ಸರಾಸರಿ ದೂರದ ಘನದ ಅನುಪಾತದಲ್ಲಿದೆ. ಈ ಅನುಪಾತದ ಸ್ಥಿರಾಂಕ ಪ್ರತಿಯೊಂದು ಗ್ರಹಕ್ಕೂ ಒಂದೇ (ಕೆಪ್ಲರನ ಮೂರನೆಯ ನಿಯಮ).

5. ಸೂರ್ಯ–ಗ್ರಹ ನಡುವಿನ ಬಲಸಂಬಂಧ ವ್ಯಸ್ತವರ್ಗನಿಯಮಾನುಸಾರ (ಇನ್ವರ್ಸ್ ಸ್ಕ್ವೇರ್ ಲಾ) ಇರುವುದರಿಂದ ಗ್ರಹಗಳ ಚಲನೆ ಈ ಮೇಲೆ (2), (3), (4) ರಲ್ಲಿ ವಿವರಿಸಿದಂತೆ ಉಂಟು (ಈ ನಿಯಮವನ್ನು ಆವಿಷ್ಕರಿಸಿದವ ಐಸಾಕ್ ನ್ಯೂಟನ್, 1642–1727).

6. ಎಲ್ಲ ಗ್ರಹಗಳಿಗೂ ಬೆಳಕು, ಉಷ್ಣ ಮುಂತಾದ ಶಕ್ತಿಗಳ ಆಕರ ಸೂರ್ಯನೇ. ಸೂರ್ಯನಿಂದ ತಮ್ಮ ಮೇಲೆ ಪಾತವಾಗುವ ಬೆಳಕನ್ನು ಪ್ರತಿಫಲಿಸಿ ಅವು ಆಕಾಶದಲ್ಲಿ ಬೆಳಗುತ್ತವೆ, ಅಷ್ಟೆ.

7. ಗ್ರಹಗಳಿಗೆ ಉಪಗ್ರಹಗಳು ಇರಬಹುದು, ಇಲ್ಲದೆಯೂ ಇರಬಹುದು.

8. ಭೂಮಿಯನ್ನುಳಿದು ಮಿಕ್ಕ ಯಾವ ಗ್ರಹದಲ್ಲೂ ಜೀವಿಗಳಿರುವುದಕ್ಕೆ ಪುರಾವೆಗಳು ಲಭಿಸಿಲ್ಲ. ಮಂಗಳದಲ್ಲಿ ಏನಾದರೂ ಇದ್ದರೆ ಅದು ತೀರ ಆದಿಮ ಸ್ಥಿತಿಯಲ್ಲಿ ಇರಬಹುದೆಂದು ಅಂದಾಜು ಮಾಡಲಾಗಿದೆ.

ವರ್ಗೀಕರಣ: ಗಾತ್ರಾನುಸಾರ ಎರಡು ಪ್ರಧಾನ ವರ್ಗಗಳಿವೆ. ಬುಧ, ಶುಕ್ರ, ಭೂಮಿ ಮತ್ತು ಮಂಗಳ ಇವು ಕಿರಿಯ ಗ್ರಹಗಳು; ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್– ಇವು ಹಿರಿಯ ಗ್ರಹಗಳು. ಸೂರ್ಯ ಮತ್ತು ಗ್ರಹಗಳನ್ನು ನಾವು ವೀಕ್ಷಿಸುವುದು ಭೂಮಿಯ ಮೇಲಿನಿಂದಾದ್ದರಿಂದ ಬುಧ ಹಾಗೂ ಶುಕ್ರ ಗ್ರಹಗಳನ್ನು ಒಳಗ್ರಹಗಳೆಂದೂ ಮಂಗಳದಿಂದ ಪ್ಲೂಟೋವರೆಗಿನ ಗ್ರಹಗಳನ್ನು ಹೊರಗ್ರಹಗಳೆಂದೂ ಕರೆಯುವುದುಂಟು.

ಸೂರ್ಯನಿಂದ ಗ್ರಹಗಳ ದೂರಗಳು ಮೇಲುನೋಟಕ್ಕೆ ಯಾದೃಚ್ಛಿಕವಾಗಿರುವಂತೆ ತೋರುತ್ತವೆ. ಇವುಗಳಲ್ಲಿ ಒಂದು ಕ್ರಮ ಇರಲಾರದೇ ಎಂಬುದನ್ನು ವಿಜ್ಞಾನಿಗಳು ಪರಿಶೀಲಿಸಿದ್ದಾರೆ. ಇಂಥ ಚಿಂತನೆಯ ಫಲಿತಾಂಶವಾಗಿ ಟೆಶಿಯಸ್–ಬೋಡ್ ನಿಯಮ (ರೂಢಿಯಲ್ಲಿ ಬೋಡ್ ನಿಯಮ ಎಂದೇ ಇದನ್ನು ಕರೆಯುತ್ತಾರೆ) ಪ್ರಸಿದ್ಧಿಗೆ ಬಂದಿದೆ (1772).

ದೈನಂದಿನ ಮತ್ತು ವಾರ್ಷಿಕ ಚಲನೆ: ಪ್ರತಿಯೊಂದು ಗ್ರಹವೂ ತನ್ನ ಅಕ್ಷದ ಮೇಲೆ ಸುತ್ತುತ್ತ ಜೊತೆಯಲ್ಲೇ ಸೂರ್ಯನ ಸುತ್ತ ಸುತ್ತುತ್ತಿರುವುದು. ಮೊದಲನೆಯದಕ್ಕೆ ದೈನಂದಿನ ಚಲನೆ (ರೊಟೇಷನ್) ಎಂದೂ ಎರಡನೆಯದಕ್ಕೆ ವಾರ್ಷಿಕ ಚಲನೆ (ರಿವೊಲ್ಯೂಷನ್) ಎಂದೂ ಹೆಸರು. ಇವು ದೇವಾಲಯಗಳ ಸುತ್ತ ಹೊರಳಿಕೊಂಡೇ ಪ್ರದಕ್ಷಿಣೆ ಮಾಡುವ ಭಕ್ತರ ಉರುಳು ಸೇವೆಯ (ಮಡೆ ಸ್ನಾನ) ಏಕಕಾಲೀನ ದ್ವಿವಿಧ ಚಲನೆಗಳಂತಿವೆ. ಉಪಗ್ರಹಗಳಿಗೆ ಆಯಾ ಮಾತೃಗ್ರಹಗಳನ್ನು ಕುರಿತಂತೆ ಇವೆರಡು ವಿಧದ ಚಲನೆಗಳಿವೆ. ವಾರ್ಷಿಕ ಚಲನೆಯ ದಿಶೆಯಲ್ಲಿಯೇ ದೈನಂದಿನ ಚಲನೆ ದಿಶೆಯೂ ಇದ್ದರೆ ಅದಕ್ಕೆ ಮುನ್ನಡೆ (ಡೈರೆಕ್ಟ್ ಮೋಷನ್) ಎಂದೂ ವಿರುದ್ಧ ದಿಶೆಯಲ್ಲಿ ಇದ್ದರೆ ಅದಕ್ಕೆ ಹಿನ್ನಡೆ (ರಿಟ್ರೊಗ್ರೇಡ್ ಮೋಷನ್) ಎಂದೂ ಹೆಸರು. ಯುರೇನಸ್ ಗ್ರಹದ ಚಲನೆ ಹಿನ್ನಡೆ. ಬಾಕಿ ಎಲ್ಲ ಗ್ರಹಗಳ ಚಲನೆಗಳೂ ಮುನ್ನಡೆಗಳಾಗಿವೆ.

ಒಂದು ಗ್ರಹದ ದೈನಂದಿನ ಚಲನಾವಧಿಯನ್ನು ಈ ಕೆಳಗಿನ ನಾಲ್ಕು ಭಿನ್ನ ವಿಧಗಳಿಂದ ಪಡೆಯುವುದು ಸಾಧ್ಯ:

# ಗ್ರಹ

**ಯಾದಿ–1 ಕೆಲವು ಉಪಯುಕ್ತ ಮಾಹಿತಿಗಳು**

| ಗ್ರಹದ ಹೆಸರು | ಕಕ್ಷೆಯ ಅರ್ಧ ದೀರ್ಘಾಕ್ಷ[1] | ಉತ್ಕೇಂದ್ರತೆ[2] | ಸೂರ್ಯ ನೀಚ ಬಿಂದುವಿನ ರೇಖಾಂಶ[5] 0 ' | ಬಾಗು[4] 0 ' | ಆರೋಹಿಪಾತದ ರೇಖಾಂಶ[5] 0 ' | ನಾಕ್ಷತ್ರಿಕ ಅವಧಿಕಾಲ[6] | ಸಂಯುಕ್ತ ಆವಧಿಕಾಲ[7] | ಅವರ್ತನ ಅವಧಿ ಕಾಲ[8] | ದೃಶ್ಯ ಅಲ್ಬೆಡೊ[9] |
|---|---|---|---|---|---|---|---|---|---|
| | | | | | | ದಿವಸಗಳು | ದಿವಸಗಳು | | |
| ಬುಧ | 0.3871 | 0.2056 | 76 41 | 7 00 | 47 44 | 87.96 | 115.88 | 56 ದಿ | 0.06 |
| ಶುಕ್ರ | 0.7233 | 0.0068 | 130 52 | 3 24 | 76 14 | 224 .70 | 583.92 | 224.70 ದಿ | 0.64 |
| ಭೂಮಿ | 1.0000 | 0.0167 | 102 05 | 0 00 | ––– | 365.26 | ––– | 23 ಗಂ.56 ಮಿ. 4 ಸೆ | 0.40 |
| ಮಂಗಳ | 1.5237 | 0.0933 | 335 08 | 1 51 | 49 10 | 686.98 | 779.94 | 23 ಗಂ.37 ಮಿ 23ಸೆ | 0.13 |
| ಗುರು | 5.2026 | 0.0484 | 13 32 | 1.18 | 99 57 | 4332.60 | 398.88 | 9 ಗಂ 50. ಮಿ –9 ಗಂ. 55 ಮಿ. | 0.37 |
| ಶನಿ | 9.5547 | 0.0557 | 92 05 | 2 29 | 113 14 | 10,759.00 | 378.09 | 16 ಗಂ. 14 ಮಿ. | 0.40 |
| ಯುರೇನಸ್ | 19.2181 | 0.0463 | 172 17 | 0 46 | 73 43 | 30,688.00 | 369.66 | 16 ಗಂ. 45 ಮಿ. | 0.43 |
| ನೆಪ್ಚೂನ್ | 30.1096 | 0.0090 | 47 26 | 1 46 | 131 14 | 60,181.00 | 367.49 | 15 ಗಂ. 29 ಮಿ. | 0.48 |

ಸೂಚನೆ: [1] ಸೆಮಿ ಮೇಜರ್ ಆ್ಯಕ್ಸಿಸ್. [2] ಎಕ್ಸೆಂಟ್ರಿಸಿಟಿ [3] ಲಾಂಜಿಟ್ಯೂಡ್ ಆಪ್ ಪೆರಿಹೀಲಿಯನ್ [4] ಇನ್‌ಕ್ಲಿನೇಷನ್ [5] ಲಾಂಜಿಟ್ಯೂಡ್ ಆಫ್ ಅಸೆಂಡಿಂಗ್ ನೋಡ್ [6] ಸೈಡೀರಿಯಲ್ ಪೀರಿಯಡ್ [7] ಸಿನಾಡಿಕ್ ಪೀರಿಯಡ್ [8] ರೊಟೇಷನ್ ಪೀರಿಯಡ್ [9] ವಿಸಿಬಲ್ ಅಲ್ಬೆಡೊ. ಭೂ ಕಕ್ಷೆಯ ಅರ್ಧದೀರ್ಘಾಕ್ಷದ ಉದ್ದ 149,600,000 ಕಿಮೀ.

**ಯಾದಿ – 2 ಭೌತ ಮೌಲ್ಯಗಳು**

| ಗ್ರಹದ ಹೆಸರು | ಸರಾಸರಿ ವ್ಯಾಸ ಭೂಮಿ =1 | ದ್ರವ್ಯರಾಶಿ ಭೂಮಿ =1 | ಸರಾಸರಿ ಸಾಂದ್ರತೆ ಗ್ರಾಮ್ / ಘ.ಸೆಂಮೀ | ಅತ್ಯಧಿಕ ಪ್ರಕಾಶ ವಿರುವಾಗ ನಾಕ್ಷತ್ರಿಕ ಕಾಂತಿಮಾನ | ಸರಾಸರಿ ಕಕ್ಷಾವೇಗ ಕಿಮೀ / ಸೆ | ವಿಮೋಚನ ವೇಗ ಕಿಮೀ / ಸೆ. |
|---|---|---|---|---|---|---|
| ಬುಧ | 0.380 | 0.0543 | 5.46 | –1.9 | 47.90 | 4.2 |
| ಶುಕ್ರ | 0.961 | 0.8136 | 5.06 | –4.4 | 35.05 | 10.4 |
| ಭೂಮಿ | 1.000 | 1.0000 | 5.52 | ––– | 29.80 | 11.2 |
| ಮಂಗಳ | 0.523 | 0.1069 | 4.12 | –2.8 | 24.14 | 5.0 |
| ಗುರು | 10.970 | 318.3500 | 1.35 | –2.5 | 13.06 | 61.0 |
| ಶನಿ | 9.030 | 95.3000 | 0.71 | –0.4 | 9.65 | 37.0 |
| ಯುರೇನಸ್ | 3.720 | 14.5400 | 1.56 | +5.7 | 6.80 | 22.0 |
| ನೆಪ್ಚೂನ್ | 3.380 | 17.2000 | 2.47 | +7.6 | 5.43 | 25.0 |

**ಸೂಚನೆ : ಭೂಮಿಯ ಸರಾಸರಿ ವ್ಯಾಸ 6,37123 x $10^8$ ಸೆಂಮೀ. ಭೂಮಿಯ ದ್ರವ್ಯರಾಶಿ 5,975 x $10^{27}$ ಗ್ರಾಂ.**

1. ಗ್ರಹ ತಲದಲ್ಲಿರುವ ಶಾಶ್ವತ ಇಲ್ಲವೆ ಅರೆ ಶಾಶ್ವತ ಗುರುತುಗಳನ್ನು ದೂರ ದರ್ಶಕಗಳ ಸಹಾಯದಿಂದ ನೇರವಾಗಿ ವೀಕ್ಷಿಸಿ ಆವರ್ತನಾವಧಿಯ ನಿರ್ಧರಣೆ.

2. ಸಮಭಾಜಕೀಯ ವಿರುದ್ಧ ಅಂಚುಗಳ ವೇಗಗಳಲ್ಲಿನ ವ್ಯತ್ಯಾಸವನ್ನು ರೋಹಿತವೀಕ್ಷಣೆಯಿಂದ ಗಣಿಸಿ ಗ್ರಹದ ರೇಖೀಯವ್ಯಾಸದ ನೆರವಿನಿಂದ ಆವರ್ತನಾವಧಿಯ ನಿರ್ಧರಣೆ.

3. ರಾಡಾರ್‌ವೀಕ್ಷಣೆಯಿಂದ ಆವರ್ತನಾವಧಿಯ ನಿರ್ಧರಣೆ.

4. ಗ್ರಹ ಪ್ರತಿಫಲಿಸುವ ಬೆಳಕಿನಲ್ಲಿ ತಲೆದೋರುವ ಕಲಾ ವ್ಯತ್ಯಾಸಗಳನ್ನು (ಫೇಸ್ ಡಿಫರೆನ್ಸಸ್) ಹಾಗೂ ಏರಿಳಿತಗಳನ್ನು ಅಳೆದು ಆವರ್ತನಾವಧಿಯ ನಿರ್ಧರಣೆ.

**ಗ್ರಹಗಳನ್ನು ಕುರಿತ ಕೆಲವು ಅಂಕಿ ಅಂಶಗಳನ್ನು ಮುಂದಿನ ಯಾದಿಗಳಲ್ಲಿ ಬರೆದಿದೆ**

(ಸಿ.ಎನ್.ಎಸ್.)

**ಗ್ರಹಣ:** ಒಂದು ಆಕಾಶಕಾಯ ಇನ್ನೊಂದು ಆಕಾಶ ಕಾಯದ ಛಾಯೆಯಿಂದ ಆಂಶಿಕವಾಗಿ ಅಥವಾ ಪೂರ್ಣವಾಗಿ ಅಸ್ಫುಟವಾಗುವಿಕೆ (ಎಕ್ಲಿಪ್ಸ್) ಸೂರ್ಯ, ಭೂಮಿ ಮತ್ತು ಚಂದ್ರ ಇವು ಮೂರು ಒಂದೆ ಸರಳ ರೇಖೆಯಲಿದ್ದು, ಅದು ಅಮವಾಸ್ಯೆ ಅಥವಾ ಪೂರ್ಣಿಮೆ ದಿನಗಳಂದು ಅನುಕ್ರಮವಾಗಿ ಸೂರ್ಯ ಮತ್ತು ಚಂದ್ರ ಗ್ರಹಣಗಳು ಸಂಭವಿಸುತ್ತವೆ.




ಸೂರ್ಯ ಗ್ರಹಣ

ಸೂರ್ಯ ಗ್ರಹಣ: ಸೂರ್ಯ, ಚಂದ್ರ ಮತ್ತು ಭೂಮಿ ಇವು ಒಂದೇ ಸರಳ ರೇಖೆಯಲ್ಲಿ ಬಂದಾಗ ಏಕರೇಖಾಸ್ಥಿತಿ ಎನ್ನುತ್ತಾರೆ. ಪೃಥ್ವಿಯ ಮೇಲೆ ಕೋನ ಮಾಡುತ್ತ ಒಂದು ಸೌರಮಾಸದಲ್ಲಿ ಚಂದ್ರ ಎರಡು ಚತುರ್ಥಾಂಶ ಸ್ಥಾನದಲ್ಲಿರುತ್ತಾನೆ. ಚಂದ್ರ, ಸೂರ್ಯ ಮತ್ತು ಭೂಮಿ ಒಂದೇ ಕಡೆಗೆ ಸರಳ ರೇಖೆಯಲ್ಲಿರುವ ಅಮವಾಸ್ಯೆಯ ದಿನ ಚಂದ್ರನ ನೆರಳು ಭೂಮಿಯ ಮೇಲೆ ಬಿದ್ದು ಸೂರ್ಯಗ್ರಹಣ ಉಂಟಾಗುತ್ತದೆ. ಚಂದ್ರನ ನೆರಳು ಭೂಮಿಯ ಮಧ್ಯಭಾಗದಲ್ಲಿ ಪೂರ್ಣವಾಗಿ ಬಿದ್ದಾಗ ಪೂರ್ಣಛಾಯ ಎಂದೂ (ಆಂಬ್ರ) ಅದರ ಸುತ್ತಲೂ ಇರುವ ನೆರಳಿಗೆ ಉಪಛಾಯ (ಪೆನಂಬ್ರ) ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ಸೂರ್ಯನ ಕೆಲವು ಭಾಗ ಮಾತ್ರ ಕಾಣುತ್ತದೆ. ಪೂರ್ಣ ಛಾಯ ಪ್ರದೇಶದಲ್ಲಿರುವ ನಿರೀಕ್ಷಕನಿಗೆ ಸೂರ್ಯ ಗ್ರಹಣ ಸಂಪೂರ್ಣ ಗೋಚರಿಸುತ್ತದೆ. ಇದನ್ನು ಖಗ್ರಾಸ ಸೂರ್ಯಗ್ರಹಣ ಎನ್ನುತ್ತಾರೆ. ಆದರೆ ಉಪಛಾಯ ಪ್ರದೇಶದಲ್ಲಿರುವ ನಿರೀಕ್ಷಕನಿಗೆ ಸೂರ್ಯಗ್ರಹಣ ಆಂಶಿಕವಾಗಿ ಗೋಚರವಾಗುತ್ತದೆ. ಸೂರ್ಯ ಬಿಂಬದ ಮಧ್ಯಭಾಗ ಮಾತ್ರ ಚಂದ್ರನಿಂದ ಮರೆಯಾಗಿ ಸುತ್ತಲೂ ವಲಯಾಕಾರದ ಬೆಳಕು ಕಾಣಿಸುವ ಗ್ರಹಣಕ್ಕೆ ಕಂಕಣ ಗ್ರಹಣ (ಆನ್ಯುಲರ್ ಎಕ್ಲಿಪ್ಸ್) ಎನ್ನುವರು. ಚಂದ್ರನ ಕಕ್ಷಾಪಾತಳಿ ಪೃಥ್ವಿಯ ಕಕ್ಷಾಪಾತಳಿಗೆ $5^0$ ಕೋನ ಮಾಡಿಕೊಂಡಿರುವುದರಿಂದ ಪ್ರತಿ ಅಮಾವಸ್ಯೆಗೆ ಸೂರ್ಯಗ್ರಹಣ ಸಂಭವಿಸುವುದಿಲ್ಲ.




ಚಂದ್ರಗ್ರಹಣ

ಚಂದ್ರಗ್ರಹಣ: ಹುಣ್ಣಿಮೆ ದಿನ ಸೂರ್ಯ, ಚಂದ್ರ ಮತ್ತು ಭೂಮಿ ಒಂದೇ ಸರಳ ರೇಖೆಯಲ್ಲಿ ಬರುವುದಲ್ಲದೆ ಸೂರ್ಯ ಹಾಗೂ ಚಂದ್ರರು ಭೂಮಿಯ ಪರಸ್ಪರ ವಿರುದ್ಧ ಬದಿಗೆ ಇರುತ್ತಾರೆ ಅಂದು ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದರಿಂದ ಚಂದ್ರನು ಪೂರ್ಣ ಛಾಯ ಪ್ರದೇಶದಲ್ಲಿದ್ದಾಗ ಪೂರ್ಣ ಚಂದ್ರ ಗ್ರಹಣವಾಗುತ್ತದೆ. ಚಂದ್ರನು ಉಪಛಾಯ ಪ್ರದೇಶದಲ್ಲಿದ್ದಾಗ ಕೇವಲ ಆಂಶಿಕ ಚಂದ್ರಗ್ರಹಣವಾಗುತ್ತದೆ. ಚಂದ್ರನ ಕಕ್ಷಾಪಾತಳಿ ಪೃಥ್ವಿಯ ಕಕ್ಷಾಪಾತಳಿಗೆ $5^0$ ಕೋನ ಮಾಡುವುದರಿಂದ ಪ್ರತಿ ಹುಣ್ಣಿಮೆಯಂದು ಚಂದ್ರಗ್ರಹಣವಾಗುವುದಿಲ್ಲ. ಚಂದ್ರ ತನ್ನ ಕಕ್ಷೆಯಲ್ಲಿ ಚಲಿಸುವಾಗ ಅದರ ನೆರಳಿನ ಶಂಕು ಭೂಮಿಯ ಮೇಲ್ಮೈಯ ಮೇಲೆ ಹಾಯುವ ಕ್ಷೇತ್ರಕ್ಕೆ ಗ್ರಹಣ ಪಥ ಎಂದು ಹೆಸರು.

ಸೂರ್ಯನ ಪೂರ್ಣ ಗ್ರಹಣವಾದಾಗ (ಖಗ್ರಾಸ) ಭೂಮಿಯ ಮೇಲೆ ಹಗಲಲ್ಲಿ ಕತ್ತಲು ಕವಿಯುತ್ತದೆ. ಸಂಜೆಗತ್ತಲು ಆದಂತೆ ಆಗಿ ಪಕ್ಷಿ ಮತ್ತು ಪ್ರಾಣಿಗಳು ತಮ್ಮ ವಾಸಸ್ಥಾನಗಳಿಗೆ ಧಾವಿಸುತ್ತವೆ. ಭೂಮಿಯ ಮೇಲೆ ಉಷ್ಣತೆಯಲ್ಲಿ ವ್ಯತ್ಯಾಸವಾಗುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಕಾಣಿಸಿಕೊಳ್ಳುತ್ತವೆ. ಆದರೆ ಇವೆಲ್ಲಾ ಕೇವಲ ಐದಾರು ನಿಮಿಷಗಳು. ಇದು ರೇಡಿಯೋ ಅಲೆಗಳ ಪ್ರಸಾರದ ಮೇಲೆ ಪರಿಣಾಮ ಬೀರುತ್ತದೆ.

ಗ್ರಹಣಗಳ ವಿಚಾರವಾಗಿ ಮುನ್ಸೂಚನೆ: ಭೂ ಕೇಂದ್ರದಿಂದ ಸೂರ್ಯ ಮತ್ತು ಚಂದ್ರರ ಸ್ಥಾನ ಸರಿಯಾಗಿ ತಿಳಿದು ಗ್ರಹಣಗಳನ್ನು ಲೆಕ್ಕ ಹಾಕಿ ಹೇಳಲು ಸಾಧ್ಯವಾಗುತ್ತದೆ. ಸರಿಸುಮಾರು 18 ವರ್ಷ $11^1/_3$ ದಿವಸಗಳಿಗೊಮ್ಮೆ ಗ್ರಹಣಗಳಾಗುವ ಚಕ್ರ ಪುನರಾವರ್ತನೆ ಯಾಗುವುದು. ಈ ಕಾಲಾವಧಿಗೆ ಸಾರೋಸ್ ಎಂದು ಹೆಸರು. ಭೂಮಿಯ ಮೇಲೆ ಯಾವುದಾದರೂ ಒಂದು ಸ್ಥಳದಲ್ಲಿ ಐವತ್ತು ವರ್ಷಗಳ ಕಾಲದಲ್ಲಿ ಸರಾಸರಿ 40 ಚಂದ್ರಗ್ರಹಣಗಳು 20 ಪಾರ್ಶ್ವ ಸೂರ್ಯಗ್ರಹಣಗಳು ಕಾಣಿಸಬಹುದು. ಆದರೆ ಸು. 350 ರಿಂದ 400 ವರ್ಷಗಳಲ್ಲಿ ಒಂದು ಪೂರ್ಣ ಸೂರ್ಯಗ್ರಹಣ ಆ ಸ್ಥಳದಲ್ಲಿ ಕಾಣಿಸುತ್ತದೆ. ಭೂಮಿಯ ಮೇಲಿನ ಒಂದು ಸ್ಥಳವನ್ನು ತೆಗೆದುಕೊಳ್ಳದೆ ಒಂದು ಕಾಲಾವಧಿಯಲ್ಲಾಗಬಹುದಾದ ಗ್ರಹಣಗಳನ್ನು ಗಣಿಸಿದರೆ ಚಂದ್ರಗ್ರಹಣಗಳಿಗಿಂತಲೂ ಸೂರ್ಯಗ್ರಹಣಗಳೇ ಹೆಚ್ಚು. (ಬಿ.ವಿ.ಎಸ್.ಆರ್.)

**ಗ್ರಾನೈಟ್:** ಭೂಮಿಯ ಅಂತರಾಳದಲ್ಲಿ ರೂಪುಗೊಂಡಿರುವ ಅಗ್ನಿಶಿಲೆ (ಅಂತರಾಗ್ನಿ). ಭೂಮಿಯ ಹೊರಕವಚದಲ್ಲಿ ಹೆಚ್ಚು ಕಂಡುಬರುತ್ತದೆ. ಸಾಮಾನ್ಯವಾಗಿ ಕೆಂಪು, ಕಪ್ಪು, ಬೂದು ಮತ್ತು ಬಿಳಿ ಬಣ್ಣಗಳಲ್ಲಿರುತ್ತದೆ.

ಗ್ರಾನೈಟ್ ಪದದ ಮೂಲ ಲ್ಯಾಟಿನ್ನಿನ ಗ್ರಾನಮ್ – ಈ ಬಗೆಯ ಕಲ್ಲು ಭೂಮಿಯ ಒಳಗೆ ಅತಿ ಉಷ್ಣದ ಫಲವಾಗಿ ರೂಪುಗೊಳ್ಳುವುದರಿಂದ ಹರಳು ಹರಳಾಗಿರುವುದು. ಸಾಮಾನ್ಯವಾಗಿ ಈ ಶಿಲೆಯಲ್ಲಿ ಆರ್ಥೊಕ್ಲೇಸ್, ಪ್ಲೇಜಿಯೋಕ್ಲೇಸ್, ಕ್ವಾರ್ಟ್ಸ್, ಹಾರ್ನ್‌ಬ್ಲೆಂಡ್ ಮತ್ತು ಬಯೋಟೈಟ್ ಖನಿಜಗಳು, ಕಪ್ಪು ಬಣ್ಣದ ಖನಿಜಗಳು ಮುಖ್ಯವಾಗಿ ಸೇರಿರುತ್ತವೆ. ಕಪ್ಪು ಬಣ್ಣದ ಖನಿಜಗಳಾದ ಹಾರ್ನ್‌ಬ್ಲೆಂಡ್ ಬಯೋಟೈಟ್ – ಇವು ಹೆಚ್ಚಿದ್ದರೆ ಕಲ್ಲು ಕಪ್ಪು ಬಣ್ಣವನ್ನು, ಫೆಲ್ಸ್‌ಫಾರ್ ಖನಿಜವಿದ್ದರೆ ಕಲ್ಲು ಕೆಂಪುಬಣ್ಣವನ್ನು ಹೊಂದಿರುತ್ತದೆ. ರಾಮನಗರದ ಬಳಿ ದೊರೆಯುವ ಗ್ರಾನೈಟ್ ತಿಳಿ ಬೂದುಬಣ್ಣದ್ದು, ಚಾಮುಂಡಿ ಬೆಟ್ಟದಲ್ಲಿ ದೊರೆಯುವ ಗ್ರಾನೈಟ್ ತಿಳಿ ಕೆಂಪು ಬಣ್ಣದ್ದು. ಇದನ್ನು ಚಾಮುಂಡಿ ಗ್ರಾನೈಟ್ ಎಂದೇ ಕರೆಯಲಾಗುವುದು.

ಗ್ರಾನೈಟ್ ಪ್ರಕೃತಿಯಲ್ಲಿ ಬೃಹದಾಕಾರದ ಶಿಲಾ ಸಮೂಹಗಳಾಗಿ ಕಂಗೊಳಿಸುತ್ತದೆ. ಕರ್ನಾಟಕದ ನಂದಿಬೆಟ್ಟ, ಸಾವನದುರ್ಗ, ಶಿವಗಂಗೆ, ಚಾಮುಂಡಿ ಬೆಟ್ಟಗಳು ಪೂರ್ತಿ ಗ್ರಾನೈಟ್ ಶಿಲೆಗಳಿಂದ ರೂಪಿತವಾದವು. ಭೂಚರಿತ್ರೆಯ ಎಲ್ಲ ಕಾಲಗಳಲ್ಲಿಯೂ ಹೊರ ಪದರವನ್ನು ಭೇದಿಸಿ ಗ್ರಾನೈಟ್ ಹೊರಬಂದಿರುವುದು ಕಾಣುತ್ತದೆ. ಆದರೆ ವಿಶೇಷವಾಗಿ ಕಾಣುವುದು ಅತಿ ಪ್ರಾಚೀನವಾದ ಕೇಂಬ್ರಿಯನ್ ಯುಗದ ಶಿಲೆಗಳು ಮಾತ್ರ. ಕರ್ನಾಟಕ ರಾಜ್ಯದ ಬಹುಭಾಗ ಗ್ರಾನೈಟ್ ಸಂಬಂಧವಾದ ಶಿಲೆಗಳಿಂದ ಆವೃತವಾಗಿದೆ. ಗ್ರಾನೈಟ್ ಶಿಲೆಯನ್ನು ಕಟ್ಟಡಗಳ ನಿರ್ಮಾಣದಲ್ಲಿ ವಿಶೇಷವಾಗಿ ಬಳಸಲಾಗುವುದು. ಇದನ್ನು ಸೈಜ್‌ಕಲ್ಲು, ಚಪ್ಪಡಿ, ಕಲ್ಲು, ಕಂಬ, ಹಾಸುಕಲ್ಲು, ಜಲ್ಲಿ ಇತ್ಯಾದಿ ರೂಪದಲ್ಲಿ ಹಾಗೂ ರಸ್ತೆಗಳ ನಿರ್ಮಾಣದಲ್ಲೂ ಬಳಸಲಾಗುವುದು. ಶ್ರವಣಬೆಳಗೊಳದ ಗೊಮ್ಮಟೇಶ್ವರ ಹಾಗೂ ಇತರ ಶಿಲಾಮೂರ್ತಿಗಳು ಮತ್ತು ಕಲಾತ್ಮಕವಾದ ಹಳೇಬೀಡು, ಬೇಲೂರು, ಸೋಮನಾಥಪುರ ದೇವಸ್ಥಾನದ ಕಲಾ ನಿರ್ಮಾಣಗಳು ಗ್ರಾನೈಟ್‌ನಿಂದ ನಿರ್ಮಿತವಾದುವು. (ಬಿ.ಪಿ.ಆರ್.)

**ಗ್ರಾಮ:** ಗ್ರಾಮ ಅಥವಾ ಹಳ್ಳಿ ಮಾನವ ಮೂಲ ನಿವಾಸ ಸ್ಥಳಗಳೆನ್ನಬಹುದು. ಮಾನವ ವಸತಿಯ ವಿಧದಲ್ಲಿ ಪ್ರಮುಖವಾದುವು. ಗ್ರಾಮಗಳು ಎಲ್ಲ ರಾಜಕೀಯ, ಭೌಗೋಳಿಕ, ಸಾಮಾಜಿಕ ಮತ್ತು ಆರ್ಥಿಕ ಪರಿಸರಗಳಲ್ಲಿಯೂ ಕಂಡುಬರುತ್ತವೆ. ಇವುಗಳ ಜನಸಂಖ್ಯೆ ಹಾಗೂ ಆಕಾರಗಳು ವಿವಿಧ ರೀತಿಯಲ್ಲಿರುವುವು. ಇವುಗಳ ಸಾರ್ವಜನಿಕ ಸೌಲಭ್ಯಗಳೂ ಭಿನ್ನತೆಯಿಂದ ಕೂಡಿರುವುವು. ಇವುಗಳಲ್ಲಿ ಕೆಲವೆಡೆ ವಾಸದ ಮನೆಗಳು ಒತ್ತೊತ್ತಾಗಿಯೂ ಕೆಲವು ವೇಳೆ ಚದುರಿದಂತೆ ವಿರಳವಾಗಿಯೂ ನಿರ್ಮಿತವಾಗಿರುತ್ತವೆ. ಇವುಗಳು ಕೆಲವು ಸಾಮಾಜಿಕ ಕಾರ್ಯಗಳನ್ನು ಮಾಡಬೇಕಾಗಿರುತ್ತದೆ. ಗ್ರಾಮಗಳಲ್ಲಿ ದೇವಾಲಯ, ಚರ್ಚು, ಮಸೀದಿ ಹಾಗೂ ಹೋಟೇಲ್, ಶಾಲೆ, ಅಂಚೆ ಕಛೇರಿ, ಪಂಚಾಯಿತಿ

ಕಟ್ಟಡಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಕುಡಿಯುವ ನೀರು ವಿದ್ಯುಚ್ಛಕ್ತಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಗ್ರಾಮಗಳು ವಿವಿಧ ಪ್ರದೇಶಗಳಲ್ಲಿ ವಿವಿಧ ಆವಶ್ಯಕತೆಗನುಗುಣವಾಗಿ ನಿರ್ಮಾಣಗೊಂಡಿವೆ.

ವ್ಯವಸಾಯ ಪ್ರದೇಶಗಳಲ್ಲಿ ವ್ಯವಸಾಯವನ್ನೆ ಮೂಲಭೂತ ಉದ್ಯೋಗವನ್ನಾಗಿ ಹೊಂದಿರುವ ಗ್ರಾಮೀಣ ವಸತಿಗಳು ಪ್ರಪಂಚದಾದ್ಯಂತ ಕಂಡುಬರುತ್ತವೆ. ಸಮುದ್ರ ತೀರ ಪ್ರದೇಶಗಳಲ್ಲಿರುವ ಹಳ್ಳಿಯ ಜನರು ಮೀನುಗಾರಿಕೆಯನ್ನೆ ಮೂಲಕಸುಬನ್ನಾಗಿ ಹೊಂದಿರುವರು. ಇವುಗಳನ್ನು ಮೀನುಗಾರಿಕೆಯ ಹಳ್ಳಿಗಳೆಂದೆ ಕರೆಯುವರು. ಖನಿಜಗಳು ದೊರೆಯುವ ಪ್ರದೇಶಗಳಲ್ಲಿ ಖನಿಜ ನಿಕ್ಷೇಪವನ್ನೆ ಹೊರತೆಗೆಯುವ ಕಸಬನ್ನು ಜನರು ಅವಲಂಬಿಸಿರುವುದರಿಂದ ಇವುಗಳನ್ನು ಗಣಿಗಾರಿಕೆಯ ಹಳ್ಳಿಗಳೆಂದೆ ಕರೆಯುವರು. ದಕ್ಷಿಣ ಭಾರತದ ಪ್ರಸ್ಥಭೂಮಿಯಲ್ಲಿ ದೊರೆಯುವ ಕಲ್ಲು ಒಡೆಯುವ ವೃತ್ತಿಯನ್ನು ಅವಲಂಬಿಸಿ ಜನರು ವಾಸಿಸುವ ಹಳ್ಳಿಗಳನ್ನು ಸಹ ಇದಕ್ಕೆ ಉದಾಹರಣೆ ನೀಡಬಹುದು. (ಎಚ್.ವಿ.ಎಸ್.)

**ಗ್ರಾಮೀಣ ಅಭಿವೃದ್ಧಿ:** ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಉತ್ತಮ ಪಡಿಸುವ ಪ್ರಕ್ರಿಯೆಯನ್ನು ಗ್ರಾಮೀಣ ಅಭಿವೃದ್ಧಿ ಎಂದು ಕರೆಯಲಾಗುತ್ತದೆ. ನೈಸರ್ಗಿಕ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲ ಗ್ರಾಮೀಣ ಅಭಿವೃದ್ಧಿಯಲ್ಲಿ ಮಹತ್ತ್ವವಾದವು. ಗ್ರಾಮೀಣ ಜನರ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯಿಂದ ಮಾತ್ರ ಗ್ರಾಮೀಣ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿ ಸಾಧಿಸಲು ಸಾಧ್ಯ.

ಗ್ರಾಮೀಣ ಅಭಿವೃದ್ಧಿಯಿಂದ ವ್ಯವಸಾಯ, ಗ್ರಾಮೀಣ ಜನರ ಆದಾಯ ಮತ್ತು ಗ್ರಾಮೀಣ ಜನರ ಕಲ್ಯಾಣ ಅಂದರೆ ಆರೋಗ್ಯ, ಶಿಕ್ಷಣ, ಉದ್ಯೋಗ ಮುಂತಾದವುಗಳು ಪ್ರಗತಿ ಹೊಂದುತ್ತವೆ. ಒಟ್ಟಿನಲ್ಲಿ ಗ್ರಾಮೀಣ ಜನರ ಜೀವನಮಟ್ಟವನ್ನು ಹೆಚ್ಚಿಸುವ ಪ್ರಕ್ರಿಯೆಯನ್ನು ಗ್ರಾಮೀಣ ಅಭಿವೃದ್ಧಿ ಎನ್ನಬಹುದಾಗಿದೆ.

ಗ್ರಾಮೀಣ ಅಭಿವೃದ್ಧಿಯ ಪ್ರಾಮುಖ್ಯತೆ: ಭಾರತ ದೇಶ ಹಳ್ಳಿಗಳಿಂದ ಕೂಡಿದ ಗ್ರಾಮೀಣ ಹಿನ್ನಲೆಯುಳ್ಳ ದೇಶವಾಗಿದೆ. ನಿಜವಾದ ಭಾರತ ಗ್ರಾಮೀಣ ಭಾರತ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹೇಳಿರುವುದು ಅರ್ಥಪೂರ್ಣವಾಗಿದೆ. ಗ್ರಾಮೀಣ ಅಭಿವೃದ್ಧಿಯ ಮೂಲಕ ದೇಶವನ್ನು ಕಾಡುತ್ತಿರುವ ಬಡತನ, ನಿರುದ್ಯೋಗ, ಅನಕ್ಷರತೆ, ಆಹಾರದ ಕೊರತೆ ಮುಂತಾದ ಸಮಸ್ಯೆಗಳನ್ನು ಬಗೆಹರಿಸಬಹುದಾಗಿದೆ. ಗ್ರಾಮೀಣ ಅಭಿವೃದ್ಧಿಯ ಮುಖಾಂತರ ಇತರ ವಲಯಗಳಾದ ಕೈಗಾರಿಕೆ, ಸಾರಿಗೆ, ಸಂಪರ್ಕ, ಬ್ಯಾಂಕಿಂಗ್, ವಿಮಾಕ್ಷೇತ್ರ, ಶಿಕ್ಷಣ ಕ್ಷೇತ್ರ ಮುಂತಾದವುಗಳನ್ನು ಅಭಿವೃದ್ಧಿ ಪಡಿಸಬಹುದಾಗಿದೆ. ಗ್ರಾಮೀಣ ಪ್ರದೇಶಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಗ್ರಾಮೀನ ಅಭಿವೃದ್ಧಿಯ ಕಾರ್ಯಕ್ರಮಗಳ ಮುಖಾಂತರ ನೀಡಬಹುದಾಗಿದೆ. ಗ್ರಾಮೀಣ ಅಭಿವೃದ್ಧಿಯು ಗ್ರಾಮೀಣ ಪ್ರದೇಶದ ಸಂಪನ್ಮೂಲಗಳ ಸದ್ಬಳಕೆಗೆ ಅನುವು ಮಾಡಿಕೊಡುತ್ತದೆ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಕೃಷಿವಲಯದ ಜನರಿಗೆ ಆಕರ್ಷಕ ಬದಲಿ ಉದ್ಯೋಗಗಳನ್ನು ಮತ್ತು ಆದಾಯ ಒದಗಿಸುತ್ತದೆ.

ಗ್ರಾಮೀಣಾಭಿವೃದ್ಧಿಯ ವಿಧಾನಗಳು: ಭಾರತ ಸರ್ಕಾರ ಗ್ರಾಮೀಣಾಭಿವೃದ್ಧಿಗೆ ಹಲವಾರು ವಿಧಾನಗಳನ್ನು ಅನುಸರಿಸಿ ತನ್ನ ಪ್ರಯತ್ನವನ್ನು ಸಫಲಗೊಳಿಸುತ್ತಿದೆ. ಪ್ರತಿಯೊಂದು ವಿಧಾನವನ್ನು ಸರಿಪಡಿಸಿ ಉತ್ತಮ ಮಟ್ಟವನ್ನು ಕಾಯ್ದುಕೊಳ್ಳಲಾಗುತ್ತಿದೆ. ಪ್ರತಿಯೊಂದು ವಿಧಾನದಲ್ಲೂ ಗ್ರಾಮೀಣಾಭಿವೃದ್ಧಿಗೆ ಹೊಸ ಪ್ರಯತ್ನ ಮತ್ತು ರೂಪುರೇಷೆಗಳನ್ನು ನೀಡಿ ಆ ಮೂಲಕ ಗುರಿಯನ್ನು ಸಾಧಿಸಲು ಪ್ರಯತ್ನಿಸಲಾಗಿದೆ. ಗ್ರಾಮೀಣಾಭಿವೃದ್ಧಿಯ ಪ್ರಯತ್ನಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು.

1. ವಿವಿಧೋದ್ದೇಶ ಅಭಿವೃದ್ಧಿ ವಿಧಾನ
2. ಪರಿಮಿತಿ ಪ್ರದೇಶಾಭಿವೃದ್ಧಿ ವಿಧಾನ
3. ನಿರ್ದಿಷ್ಟ ಗುರಿ ತಲುಪುವ ವಿಧಾನ
4. ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ವಿಧಾನ
5. ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮ ವಿಧಾನ

1. ವಿವಿಧೋದ್ದೇಶ ಅಭಿವೃದ್ಧಿ ವಿಧಾನ: ಈ ಯೋಜನೆಯ ಪ್ರಮುಖ ಉದ್ದೇಶ ಜನರ ಜೀವನ ಮಟ್ಟವನ್ನು ಹೆಚ್ಚಿಸುವುದು, ಸಾಮಾಜಿಕ ನ್ಯಾಯ ಒದಗಿಸುವುದು. ಸಮುದಾಯದಲ್ಲಿ ಒಗ್ಗಟ್ಟನ್ನು ಮೂಡಿಸುವುದು ಮತ್ತು ಸುಖೀ ಸಮಾಜವನ್ನು ನಿರ್ಮಾಣ ಮಾಡುವುದು. ಪ್ರಜಾಸತ್ತಾತ್ಮಕವಾಗಿ ಜನರ ಸಮಸ್ಯೆಗಳನ್ನು ಬಗೆಹರಿಸುವುದು ಸಹ ಈ ವಿಧಾನದ ಮತ್ತೊಂದು ಉದ್ದೇಶವಾಗಿದೆ.

1952ರಲ್ಲಿ ಪ್ರಾರಂಭಿಸಲಾದ ಸಮುದಾಯ ಅಭಿವೃದ್ಧಿ ಯೋಜನೆ ವಿವಿಧೋದ್ದೇಶ ವಿಧಾನಕ್ಕೆ ಪ್ರಮುಖ ಉದಾಹರಣೆಯಾಗಿದೆ. ಮಾನವ ಜೀವನಕ್ಕೆ ಅಗತ್ಯವಿರುವ ಎಲ್ಲ ಆವಶ್ಯಕತೆಗಳ ಅಭಿವೃದ್ಧಿಗೆ ಈ ವಿಧಾನದಲ್ಲಿ ಅನುವು ಮಾಡಿಕೊಡಲಾಗಿದೆ. ಜೀವನಾಧಾರ ಕಸಬಿನ ಜೊತೆಗೆ ಉಪಕಸಬುಗಳ ಅಭಿವೃದ್ಧಿಗೂ ಪ್ರೋತ್ಸಾಹ ನೀಡುವುದು ವಿವಿಧೋದ್ದೇಶ ವಿಧಾನದ ಮತ್ತೊಂದು ವಿಶೇಷವಾಗಿದೆ. ಉದಾ: ವ್ಯವಸಾಯವನ್ನು ಅಭಿವೃದ್ಧಿ ಮಾಡುವುದರ ಜೊತೆಗೆ ಉಪ ಕಸಬುಗಳಾದ ಮಡಕೆ ತಯಾರಿಕೆ, ಬುಟ್ಟಿ ಹೆಣೆಯುವುದು, ಮರಗೆಲಸ ಮುಂತಾದವುಗಳನ್ನು ಅಭಿವೃದ್ಧಿಪಡಿಸಲಾಗಿದೆ.

2. ಪರಿಮಿತ ಪ್ರದೇಶಾಭಿವೃದ್ಧಿ ವಿಧಾನ: ವಿವಿಧೋದ್ದೇಶ ಅಭಿವೃದ್ಧಿ ವಿಧಾನ ಅಪೇಕ್ಷಿತ ಗುರಿಯನ್ನು ಸಾಧಿಸಲು ಸಂಪೂರ್ಣ ಸಫಲವಾಗಲಿಲ್ಲ. ಹಣಕಾಸಿನ ಕೊರತೆ ಇದಕ್ಕೆ ಪ್ರಮುಖ ಕಾರಣವಾಗಿತ್ತು. ಗ್ರಾಮೀಣ ಜನರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲು ಪರಿಮಿತ ಪ್ರದೇಶಾಭಿವೃದ್ಧಿ ವಿಧಾನ ಎಂಬ ಹೊಸ ವಿಧಾನವನ್ನು ಹುಟ್ಟು ಹಾಕಲಾಯಿತು. ಈ ವಿಧಾನದಲ್ಲಿ ನಿರ್ದಿಷ್ಟ ಪ್ರದೇಶವನ್ನು ಆರಿಸಿಕೊಂಡು ನಿಗದಿತ ಸಮಯದಲ್ಲಿ ಆ ಪ್ರದೇಶವನ್ನು ಸಂಪೂರ್ಣವಾಗಿ ಅಭಿವೃದ್ಧಿಗೊಳಿಸುವುದು. ಪರಿಮಿತ ಪ್ರದೇಶಾಭಿವೃದ್ಧಿ ವಿಧಾನದ ಪ್ರಮುಖ ಉದ್ದೇಶವಾಗಿದೆ. ಉತ್ಕೃಷ್ಟಮಟ್ಟದ ವ್ಯವಸಾಯೋತ್ಪನ್ನಗಳ ಉತ್ಪಾದನೆ ಮತ್ತು ಅವುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು ಈ ಯೋಜನೆಯ ಪ್ರಮುಖ ಲಕ್ಷಣ ಮತ್ತು ಧ್ಯೇಯ. ಈ ವಿಧಾನದಡಿ 1960–61ರಲ್ಲಿ ಪರಿಪೂರ್ಣ ಜಿಲ್ಲಾಮಟ್ಟದ ವ್ಯವಸಾಯ ಅಭಿವೃದ್ಧಿ ಕಾರ್ಯಕ್ರಮವನ್ನು (ಐ.ಎ.ಡಿ.ಪಿ.) ಜಾರಿಗೆ ತರಲಾಯಿತು. ಇದರ ಜೊತೆಗೆ ಪ್ರಮುಖ ಬೆಳೆಗಳಾದ ಹತ್ತಿ, ಸೆಣಬು ಕಬ್ಬು ಮುಂತಾದವುಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು.

3. ನಿರ್ದಿಷ್ಟ ಗುರಿ ತಲುಪುವ ವಿಧಾನ: ಪರಿಮಿತ ಪ್ರದೇಶಾಭಿವೃದ್ಧಿ ವಿಧಾನ ಕೇವಲ ಶ್ರೀಮಂತ ರೈತರಿಗೆ ಮಾತ್ರ ಹೆಚ್ಚು ಸಹಕಾರಿಯಾಯಿತು. ಆದ್ದರಿಂದ ಇದರ ಉಪಯೋಗ ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿತ್ತು. 1960ರ ದಶಕದಲ್ಲಾದ ಹಸುರು ಕ್ರಾಂತಿ ವ್ಯವಸಾಯದ ಸಂಪೂರ್ಣ ಅಭಿವೃದ್ಧಿಗೆ ಸಹಾಯಕವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ಹೊಸದೊಂದು ವಿಧಾನ ಅತ್ಯಗತ್ಯವಾಗಿತ್ತು. ಆದ್ದರಿಂದ ನಿರ್ದಿಷ್ಟ ಗುರಿ ತಲುಪುವ ವಿಧಾನವನ್ನು ರೂಪಿಸಲಾಯಿತು.

ಈ ವಿಧಾನವನ್ನು ಒಂದು ನಿರ್ದಿಷ್ಟ ಸಮೂಹವನ್ನು ಆಯ್ದುಕೊಂಡು, ಅದರ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಅನಂತರ ಆ ಸಮೂಹದ ಶ್ರೇಯೋಭಿವೃದ್ಧಿಗೆ ಕಾರ್ಯಕ್ರಮವನ್ನು ರೂಪಿಸಲಾಯಿತು ಸಣ್ಣ ಭೂ ಹಿಡುವಳಿದಾರರು, ಮಧ್ಯಮ ಭೂ ಹಿಡುವಳಿದಾರರು ಮತ್ತು ಭೂ ರಹಿತ ಕೂಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ದೊಡ್ಡ ಭೂ ಹಿಡುವಳಿದಾರರು ಎದುರಿಸುವ ಸಮಸ್ಯೆಗಳಿಗಿಂತ ಭಿನ್ನವಾಗಿರುತ್ತದೆ. ಎಂಬುದನ್ನು ಮನಗಂಡು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಯಿತು. ಮಕ್ಕಳ ಅಭಿವೃದ್ಧಿಗಾಗಿ ಕಾರ್ಯಕ್ರಮ, ಕೂಲಿಕಾರ್ಮಿಕರ ಅಭಿವೃದ್ಧಿಗೆ ಕಾರ್ಯಕ್ರಮ ಮತ್ತು ಮಹಿಳೆಯರ ಅಭಿವೃದ್ಧಿಗೆ ಕಾರ್ಯಕ್ರಮಗಳು ನಿರ್ದಿಷ್ಟ ಗುರಿ ತಲುಪುವ ವಿಧಾನಕ್ಕೆ ಉತ್ತಮ ಉದಾಹರಣೆಯಾಗಿದೆ.

4. ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ವಿಧಾನ: ಈ ವಿಧಾನದಲ್ಲಿ ದೇಶದ ವಿವಿಧ ಭಾಗಗಳ ತೀರ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಕಾರ್ಯಕ್ರಮ ರೂಪಿಸಲಾಗಿದೆ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶ. ಹಿಂದುಳಿದ ಪ್ರದೇಶಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವುದು ಈ ವಿಧಾನದ ಪ್ರಮುಖ ಧ್ಯೇಯವಾಗಿದೆ. ಜಲಾನಯನ ಅಭಿವೃದ್ಧಿ ಕಾರ್ಯಕ್ರಮ, ಬುಡಕಟ್ಟು ಜನರು ವಾಸಿಸುವ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ, ಮಲೆನಾಡು ಅಭಿವೃದ್ಧಿ ಕಾರ್ಯಕ್ರಮ ಮುಂತಾದವು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ವಿಧಾನಕ್ಕೆ ಉತ್ತಮ ಉದಾಹರಣೆಯಾಗಿದೆ.

5. ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮ ವಿಧಾನ: ಯಾವುದೇ ಪ್ರದೇಶದ ಗ್ರಾಮೀಣಾಭಿವೃದ್ಧಿಗೆ ಭೌಗೋಳಿಕ, ಆರ್ಥಿಕ, ಸಾಮಾಜಿಕ, ತಾಂತ್ರಿಕ ಮತ್ತು ರಾಜಕೀಯ ಕ್ಷೇತ್ರದ ಸಂಪೂರ್ಣ ಮಾಹಿತಿ ದೊರಕಿದ ಮೇಲೆ ಆ ಪ್ರದೇಶವನ್ನು ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟ, ಹೋಬಳಿ ಮಟ್ಟ ಮತ್ತು ಬ್ಲಾಕ್ ಹಂತಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತದೆ.

ಭಾರತದಲ್ಲಿ ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಗಳು ಸಫಲತೆಗಿಂತ ವಿಫಲವಾಗಿರುವುದೇ ಹೆಚ್ಚಾಗಿ ನಾವು ಕಾಣಬಹುದಾಗಿದೆ. ಇದಕ್ಕೆ ಉತ್ತಮ ಉದಾಹರಣೆ, ಐ.ಆರ್.ಡಿ.ಪಿ. ಈ ಕಾರ್ಯಕ್ರಮದಲ್ಲಿ ವ್ಯವಸಾಯ, ಪಶುಪಾಲನೆ, ಮೀನುಗಾರಿಕೆ ಮತ್ತು ತೋಟಗಾರಿಕಾ ಚಟುವಟಿಕೆಯನ್ನು ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮದಡಿ ತರಲಾಯಿತು, ಇದರ ಜೊತೆಗೆ ಸಣ್ಣ ಕೈಗಾರಿಕೆಗಳಿಗೆ ಮತ್ತು ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಯಿತು. ಆದರೆ ಕಾರ್ಯಕ್ರಮವನ್ನು ಜಾರಿಗೊಳಿಸುವ ಹಂತದಲ್ಲಿ ಹಲವಾರು ದೋಷಗಳು ಕಾಣಿಸಿಕೊಂಡು ಅಂತಿಮವಾಗಿ ವಿಫಲವಾಯಿತು.

ಮೇಲೆ ವಿವರಿಸಿದ ಗ್ರಾಮೀಣಾಭಿವೃದ್ಧಿ ವಿಧಾನಗಳು ಎಲ್ಲ ಪ್ರದೇಶಗಳಿಗೆ, ಎಲ್ಲ ಸಮಸ್ಯೆಗಳಿಗೆ, ಎಲ್ಲ ಸಮೂಹಕ್ಕೆ ಮತ್ತು ಎಲ್ಲ ಕಸುಬುಗಳಿಗೆ ಏಕಕಾಲದಲ್ಲಿ ಸಹಾಯಕವಾಗುವುದಿಲ್ಲ. ಆದ್ದರಿಂದ ಪರಿಸ್ಥಿತಿಗೆ ಅನುಗುಣವಾಗಿ, ಲಭ್ಯವಿರುವ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಂಡು, ಶೈಕ್ಷಣಿಕ ಮಟ್ಟವನ್ನು ತಿಳಿದುಕೊಂಡು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

# ಗ್ರಾಮೀಣ ಅಭಿವೃದ್ಧಿ

ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು: ಭಾರತ ಗ್ರಾಮೀಣ ಕ್ಷೇತ್ರದ ಪ್ರಾಬಲ್ಯ ಹೊಂದಿರುವ ದೇಶ. ಶೇ. 70 ಕ್ಕಿಂತ ಹೆಚ್ಚು ಜನರು ಹಳ್ಳಿಗಳಲ್ಲಿ ವಾಸಿಸುತ್ತಿರುವ ನಮ್ಮ ದೇಶದಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯ ಹೊರತು ದೇಶದ ಸರ್ವತೋಮುಖ ಪ್ರಗತಿ ಕೇವಲ ಕನಸಾಗಿ ಉಳಿಯುತ್ತದೆ. ಅಭಿವೃದ್ಧಿ ಎಂಬುದು ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಜನರ ಜೀವನ ಮಟ್ಟವನ್ನು ಸುಧಾರಿಸುವ ಪ್ರಯತ್ನವಾಗಿದೆ. ಹಾಗೆಯೇ ಗ್ರಾಮೀಣ ಅಭಿವೃದ್ಧಿ ಎಂಬ ಕಲ್ಪನೆ ಗ್ರಾಮೀಣ ದುರ್ಬಲ ಜನತೆಯ ಜೀವನದ ಸ್ಥಿತಿಯನ್ನು ಉತ್ತಮ ಪಡಿಸುವ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಅವರ ಸಹಭಾಗಿತ್ವವನ್ನು ಹೆಚ್ಚಿಸುವ ಒಂದು ಮಹತ್ತ್ವದ ಕಾರ್ಯಕ್ರಮವಾಗಿದೆ.

ಪ್ರಾರಂಭದ ಪ್ರಯತ್ನಗಳು: ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ದೇಶದ ವಿವಿಧ ಭಾಗಗಳಲ್ಲಿ ಕೆಲವು ವ್ಯಕ್ತಿಗಳಿಂದ ಮತ್ತು ಸಂಘ ಸಂಸ್ಥೆಗಳಿಂದ ಗ್ರಾಮೀಣ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಹಲವಾರು ಪ್ರಯತ್ನಗಳು ನಡೆದವು. ಬ್ರಿಟಿಷರು ಭಾರತದ ಆಡಳಿತದಲ್ಲಿ ಹೆಚ್ಚು ಆಸಕ್ತರಾಗಿದ್ದರೆ ಹೊರತು ಅಭಿವೃದ್ಧಿಯಲ್ಲಲ್ಲ. ಆದರೆ 1899ರ ಕ್ಷಾಮ ಬ್ರಿಟಿಷರನ್ನು ಗ್ರಾಮೀಣ ಅಭಿವೃದ್ಧಿ ಕುರಿತು ಯೋಚಿಸುವಂತೆ ಮಾಡಿತು. ಅಂದರೆ ಗ್ರಾಮೀಣ ಅಭಿವೃದ್ಧಿ ಮಾನವೀಯತೆಯ ಆಧಾರದ ಮೇಲೆ ತನ್ನ ಸ್ವರೂಪವನ್ನು ರೂಪಿಸಿಕೊಂಡಿತು. ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ 1905ರಲ್ಲಿ ಕೃಷಿ ಇಲಾಖೆಯನ್ನು ಪ್ರಾರಂಭಿಸುವುದರ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಅಡಿಪಾಯ ಹಾಕಿದರು. ಇದಲ್ಲದೆ ಭಾರತೀಯರು ಮತ್ತು ಹಲವು ಸಂಘ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿಯ ದಿಕ್ಕಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸಿದವು ಅವುಗಳಲ್ಲಿ ಪ್ರಮುಖವಾದವುಗಳೆಂದರೆ.

1. ಶ್ರೀನಿಕೇತನದ ಪ್ರಯತ್ನ: ರವೀಂದ್ರನಾಥ್ ಠಾಕೂರ್‌ರವರು 1920ರಲ್ಲಿ ಶ್ರೀನಿಕೇತನ ಗ್ರಾಮೀಣ ಪುನರ್ ನಿರ್ಮಾಣ ಸಂಸ್ಥೆಯನ್ನು ಪ್ರಾರಂಭಿಸಿದರು. ಅರ್ಥಶಾಸ್ತ್ರಜ್ಞನಾದ ಎಲ್ಮ್‌ಹಿರ್ಸ್ಟ್‌ರವರು ಇವರ ಮಾರ್ಗದರ್ಶಕರಾಗಿದ್ದರು. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಇದರಿಂದ ಬಂಗಾಲದ ಹಲವಾರು ಹಳ್ಳಿಗಳು ಅಭಿವೃದ್ಧಿಗೊಂಡವು. ಆದರೆ ಸರಿಯಾದ ಸಂಶೋಧನೆ ಮತ್ತು ಮಾರ್ಗದರ್ಶನವಿಲ್ಲದೆ ಈ ಪ್ರಯತ್ನ ವಿಫಲವಾಯಿತು.

2. ಸೇವಾಗ್ರಾಮ ಪ್ರಯತ್ನ: ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಸಮಾಜದ ಪುನರ್‌ರಚನೆಗಾಗಿ ಹಾಗೂ ಲೋಕ ಕಲ್ಯಾಣಕ್ಕಾಗಿ 1920ರಲ್ಲಿ ಸೇವಾಗ್ರಾಮ ಕಾರ್ಯಕ್ರಮವನ್ನು ರೂಪಿಸಿದರು. ದೀನದಲಿತರು ಹಾಗೂ ಶೋಷಿತರ ಸೇವೆ, ಗ್ರಾಮೀಣ ಸೇವೆ ಮತ್ತು ಗ್ರಾಮೀಣ ಪುನರ್‌ರಚನೆ, ಈ ಯೋಜನೆಯ ಮುಖ್ಯ ಗುರಿಗಳಾಗಿದ್ದವು. ಈ ಗುರಿಗಳನ್ನು ಸಾಧಿಸಲು ಸ್ವಸಹಾಯ, ದುಡಿಮೆಯ ಘನತೆ, ಆತ್ಮಗೌರವ, ಸರಳ ಮತ್ತು ಪ್ರಾಮಾಣಿಕ ಜೀವನ ಮೊದಲಾದ ವಿಶಿಷ್ಟ ಅಂಶಗಳನ್ನು ಅಳವಡಿಸಿಕೊಳ್ಳಲಾಯಿತು.

3. ಮಾರ್ಥಾಂಡಮ್ ಪ್ರಯತ್ನ: ಕೇರಳದ ತಿರುವನಂತಪುರದ ಬಳಿ ಇರುವ ಮಾರ್ಥಾಂಡಮ್ ಎಂಬ ಹಳ್ಳಿಯಲ್ಲಿ 1921ರಲ್ಲಿ ಸ್ಪೆನ್ಸರ್ ಹ್ಯಾಚ್‌ರವರು ನಡೆಸಿದ ಪ್ರಮುಖ ಪ್ರಯತ್ನ ಇದಾಗಿತ್ತು. ಗ್ರಾಮೀಣ ಜನರ ಬೌದ್ಧಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಮಟ್ಟವನ್ನು ಅಭಿವೃದ್ಧಿ ಪಡಿಸುವುದು ಈ ಕಾರ್ಯಕ್ರಮದ ಪ್ರಮುಖ ಗುರಿಯಾಗಿತ್ತು. ಗುಡಿ ಕೈಗಾರಿಕೆಗಳಾದಂತಹ ಮಡಕೆ ಮಾಡುವುದು, ಬುಟ್ಟಿ ಹೆಣೆಯುವುದು, ಜೇನು ಸಾಕಾಣಿಕೆ ಮುಂತಾದವುಗಳನ್ನು ಸಹಕಾರ ತತ್ತ್ವದ ಮೇಲೆ ನಿರೂಪಿಸಲಾಯಿತು.

4. ಗುರ್‌ಗಾಂವ್ ಪ್ರಯತ್ನ: ಎಫ್. ಎಲ್. ಬ್ರೈನೆರವರು 1927 ರಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ಗುರ್‌ಗಾಂವ್ ಯೋಜನೆಯನ್ನು ಪ್ರಾರಂಭಿಸಿದರು. ಗುರ್‌ಗಾಂವ್ ಹರಿಯಾಣದಲ್ಲಿರುವ ಒಂದು ಜಿಲ್ಲೆ ಮತ್ತು ಬ್ರೈನೆರವರು ಗುರ್‌ಗಾಂವ್‌ನ ಜಿಲ್ಲಾಧಿಕಾರಿಯಾಗಿದ್ದರು. ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಪರಿಹರಿಸಿ, ಅಭಿವೃದ್ಧಿ ಸಾದಿಸಲು ಆಸಕ್ತಿ ವಹಿಸಿ ಈ ಯೋಜನೆಯನ್ನು ರೂಪಿಸಲಾಯಿತು. ಕೃಷಿಯ ಉತ್ಪಾದನೆಯನ್ನು ಹೆಚ್ಚಿಸುವುದು, ದುಂದು ವೆಚ್ಚವನ್ನು ತಪ್ಪಿಸುವುದು, ಸ್ವಚ್ಛತೆ ಮತ್ತು ನೈರ್ಮಲ್ಯಗಳ ಮೂಲಕ ಆರೋಗ್ಯದಲ್ಲಿ ಪ್ರಗತಿ ಸಾಧಿಸುವುದು ಈ ಯೋಜನೆಯ ಮುಖ್ಯ ಉದ್ದೇಶಗಳಾಗಿದ್ದವು.

5. ಬರೋಡ ಪ್ರಯತ್ನ: ಬರೋಡ ಪ್ರಾಂತ್ಯವು ಸ್ವಾತಂತ್ರ್ಯ ಪೂರ್ವದಲ್ಲಿ ದೇಶಿಯ ಸಂಸ್ಥಾನವಾಗಿತ್ತು. ಇಲ್ಲಿನ ಮಹಾರಾಜ ಮತ್ತು ದಿವಾನರಾದ ವಿ.ಟಿ. ಕೃಷ್ಣಮಾಚಾರಿಯವರು ಗ್ರಾಮೀಣ ಪ್ರದೇಶದ ಪುನರ್‌ರಚನೆಗಾಗಿ ಒಂದು ಯೋಜನೆಯನ್ನು 1932ರಲ್ಲಿ ರೂಪಿಸಿದರು..

ಬರೋಡ ಪ್ರಯತ್ನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಅ. ಗ್ರಾಮೀಣ ಪ್ರದೇಶದ ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು.

ಆ. ಕುಡಿಯುವ ನೀರಿಗೆ ಬಾವಿ ತೋಡಿಸುವುದು.

ಇ. ಮಲೇರಿಯ ಕಾಯಿಲೆಯ ವಿರುದ್ಧ ಜನಾಂದೋಲನ ನಡೆಸುವುದು.

ಈ. ಸಾಕು ಪ್ರಾಣಿಗಳ ಮೇವಿಗಾಗಿ ಹುಲ್ಲುಗಾವಲುಗಳನ್ನು ಬೆಳೆಸುವುದು.

ಉ. ಉತ್ತಮ ದರ್ಜೆಯ ಬೀಜಗಳನ್ನು ಒದಗಿಸುವುದು.

ಊ. ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು.

ಋ. ಸಹಕಾರ ಸಂಘಗಳನ್ನು ಸ್ಥಾಪಿಸುವುದು.

ಎ. ವ್ಯವಸಾಯದ ಅಭಿವೃದ್ಧಿಗೆ ಗ್ರಾಮೀಣ ಶಾಲೆಗಳನ್ನು ತೆಗೆಯುವುದು.

6. ಫಿರ್ಕಾ (ಪ್ರಾಂತ್ಯ) ಅಭಿವೃದ್ಧಿ ಯೋಜನೆ: ಮದ್ರಾಸ್ ರಾಜ್ಯ (ಇಂದಿನ ತಮಿಳುನಾಡು) 1946ರಲ್ಲಿ ಫಿರ್ಕಾ ಅಭಿವೃದ್ಧಿ ಯೋಜನೆಯನ್ನು ಪ್ರಪ್ರಥಮವಾಗಿ ಜಾರಿಗೆ ತಂದಿತು. ಸಮುದಾಯ ದೃಷ್ಟಿಯಿಂದ ಕಲ್ಯಾಣ ಕಾರ್ಯಕ್ರಮಗಳನ್ನು ಮತ್ತು ಗ್ರಾಮೀಣ ಜನರ ಜೀವನ ಮಟ್ಟವನ್ನು ಉತ್ತಮ ಪಡಿಸುವುದು ಇದರ ಮುಖ್ಯ ಗುರಿಯಾಗಿತ್ತು. ಈ ಯೋಜನೆಯಲ್ಲಿ ಕೃಷಿ, ಕೈಗಾರಿಕೆ, ನೀರಾವರಿ, ಪಶುಪಾಲನೆ ಮೊದಲಾದ ವಿವಿಧ ಇಲಾಖೆಗಳ ನಡುವೆ ಹೆಚ್ಚಿನ ಸಹಕಾರ ಮತ್ತು ಸಹಯೋಗಗಳನ್ನು ಏರ್ಪಾಟು ಮಾಡಿಕೊಳ್ಳಲಾಯಿತು. ಅಭಿವೃದ್ಧಿ ಕೆಲಸಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದ ಫಿರ್ಕಾಗಳು ಅಂದರೆ ಪ್ರಾಂತ್ಯಗಳು ತರಬೇತಿ ಪಡೆದ ಗ್ರಾಮೀಣ ಕಲ್ಯಾಣ ಅಧಿಕಾರಿಗಳ ಮೇಲ್ವಿಚಾರಣೆಗೆ ಒಳಪಟ್ಟಿದ್ದವು. ಈ ಯೋಜನೆ ಯಶಸ್ವಿಯಾಗಿ ಇತರ ರಾಜ್ಯಗಳೂ ಇದನ್ನು ಅಳವಡಿಸಿಕೊಂಡವು.

7. ಇಟಾವಹ್ ಅಗ್ರ ಯೋಜನೆ: ಆಲ್ಬರ್ಟ್ ಮೈರ್ ಮತ್ತು ಹೋರೇನ್ ಹೋಮ್ಸ್‌ರವರು ಇಟಾವಹ್ ಯೋಜನೆಯನ್ನು 1948ರಲ್ಲಿ ಉತ್ತರ ಪ್ರದೇಶದ ಇಟಾವಹ್‌ನಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಕಲ್ಯಾಣದ ಉದ್ದೇಶಕ್ಕಾಗಿ ಪ್ರಾರಂಭಿಸಿದರು. ಕೃಷಿಯಲ್ಲಿ ಪ್ರಗತಿ ಸಾಧಿಸುವುದು, ಸಾಮುದಾಯಿಕ ಜೀವನದ ಭಾವನೆ ಬೆಳಸುವುದು. ಗ್ರಾಮೀಣ ಜನತೆಯಲ್ಲಿ ಸ್ವಸಹಾಯ ಮನೋಭಾವನೆ ಬೆಳಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶಗಳಾಗಿದ್ದವು.

8. ಸರ್ವೋದಯ ಯೋಜನೆ: ಮುಂಬಯಿ ಪ್ರಾಂತ್ಯದಲ್ಲಿ ಜಾರಿಗೆ ತಂದು ಅನಂತರ ದೇಶದ ಇತರ ಭಾಗಗಳಿಗೂ ವಿಸ್ತರಿಸಲಾದ ಪ್ರಮುಖ ಗ್ರಾಮೀಣ ಅಭಿವೃದ್ಧಿಯೋಜನೆ ಇದಾಗಿದೆ. ಆಚಾರ್ಯ ವಿನೋಭಾ ಭಾವೆ ಮತ್ತು ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರು ಈ ಯೋಜನೆಯ ಪ್ರಮುಖ ಶಿಲ್ಪಿಗಳು ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳು.

ಅ. ಖಾದಿಯ ಪ್ರಭಾವ

ಆ. ಅಸ್ಪೃಶ್ಯತಾ ನಿವಾರಣೆ

ಇ. ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ

ಈ. ಮದ್ಯಪಾನ ನಿರೋಧ

ಉ. ವ್ಯವಸಾಯದ ಅಭಿವೃದ್ಧಿ ಮುಂತಾದವು

ಮೇಲೆ ವಿಶ್ಲೇಷಿಸುವ ಎಲ್ಲ ಕಾರ್ಯಕ್ರಮಗಳು ಮತ್ತು ಯೋಜನೆಗಳ ಉದ್ದೇಶ ಉನ್ನತ ಮಟ್ಟದ್ದಾಗಿದ್ದರೂ ಅವು ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಹಣಕಾಸಿನ ಕೊರತೆ, ಗ್ರಾಮೀಣ ಜನತೆಯ ನಿರಾಸಕ್ತಿ ಮತ್ತು ಅನಕ್ಷರತೆ, ಬ್ರಿಟಿಷ್ ಸರ್ಕಾರದ ಜನ ವಿರೋದಿ ನೀತಿ ಮುಂತಾದವು. ಆದರೂ ಗ್ರಾಮೀಣ ಅಭಿವೃದ್ಧಿಗೆ ಈ ಯೋಜನೆಗಳು ಮುಂದಿನ ಸ್ವತಂತ್ರ ಭಾರತಕ್ಕೆ ಉತ್ತಮ ಅಡಿಪಾಯ ಹಾಕಿಕೊಟ್ಟವು ಎಂದು ಹೇಳಿದರೆ ತಪ್ಪಾಗಲಾರದು.

ಸ್ವಾತಂತ್ರ್ಯಾನಂತರದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು:

1. ಸಮುದಾಯ ಅಭಿವೃದ್ಧಿ ಕಾರ್ಯಕ್ರಮ: ಸ್ವಾತಂತ್ರ್ಯಾನಂತರ ಭಾರತದ ರಾಷ್ಟ್ರೀಯ ಯೋಜನೆಗಳಲ್ಲಿ ಗ್ರಾಮೀಣ ಅಭಿವೃದ್ಧಿಗೆ ಮಹತ್ತ್ವಪೂರ್ಣ ಸ್ಥಾನ ಲಭ್ಯವಾಯಿತು. ಸಮುದಾಯ ಅಭಿವೃದ್ಧಿ ಯೋಜನೆಯನ್ನು 1952 ಅಕ್ಟೋಬರ್ 2 ರಂದು ಇಡೀ ರಾಷ್ಟ್ರಾದ್ಯಂತ ಜಾರಿಗೆ ತರಲಾಯಿತು. ಈ ಕಾರ್ಯಕ್ರಮದಡಿ ಒತ್ತು ನೀಡಿದ ಪ್ರಮುಖ ಸೌಲಭ್ಯ, ಆರೋಗ್ಯ, ಗುಡಿ ಮತ್ತು ಸಣ್ಣ ಕೈಗಾರಿಕೆಗಳು, ಸಹಕಾರ ಸಂಘಗಳು, ಸಾಕ್ಷರತೆ ಮತ್ತು ಯುವಕ ಸಂಘಗಳು.

ಈ ಮೇಲೆ ತಿಳಿಸಿದ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಹಾಗೂ ಅನುಷ್ಠಾನಗೊಳಿಸುವಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡುವುದೇ ಇದರ ಮುಖ್ಯ ಉದ್ದೇಶ. ಸರ್ಕಾರ ಹಣಕಾಸು ಮತ್ತು ತಾಂತ್ರಿಕ ಸಹಾಯವನ್ನು ನೀಡುತ್ತದೆ. ಜನತೆ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕಾಗುತ್ತದೆ. ರಾಜ್ಯ ಮಟ್ಟದಲ್ಲಿ ರಾಜ್ಯದ ಅಭಿವೃದ್ಧಿ ಆಯುಕ್ತರು ಈ ಯೋಜನೆಯ ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ.

2. ರಾಷ್ಟ್ರೀಯ ವಿಸ್ತರಣಾ ಸೇವೆ: ಈ ಕಾರ್ಯಕ್ರಮ 1953 ಅಕ್ಟೋಬರ್ 2ರಂದು ಪ್ರಾರಂಭಿಸಲಾಯಿತು. ಸಾಪೇಕ್ಷವಾಗಿ ಕಡಿಮೆ ಅವಧಿಯಲ್ಲಿ ಇಡೀ ದೇಶವನ್ನು ವ್ಯಾಪಿಸುವ ಉದ್ದೇಶದ ಕಾರ್ಯಕ್ರಮವಾಗಿದೆ. ಕೃಷಿ, ಹೈನುಗಾರಿಕೆ, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ ಬೆಳೆ, ಗುಡಿ ಕೈಗಾರಿಕೆ ಮುಂತಾದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿಗಳು ಗ್ರಾಮೀಣ ಪ್ರದೇಶಗಳಿಗೆ ತೆರಳಿ ಜನರಿಗೆ ಅಗತ್ಯ ಮಾಹಿತಿಗಳನ್ನು ಒದಗಿಸಬೇಕೆಂದು ರಾಷ್ಟ್ರೀಯ ವಿಸ್ತರಣಾ ಸೇವೆಯ ಪ್ರಮುಖ ಉದ್ದೇಶ. ಜನರು ಜಿಲ್ಲಾ ಕೇಂದ್ರಗಳಿಗೆ ಮತ್ತು ತಾಲ್ಲೂಕು ಕೇಂದ್ರಗಳಿಗೆ ಬಂದು ಮಾಹಿತಿ ಪಡೆಯುವಂತಹ ಬವಣೆಯನ್ನು ತಪ್ಪಿಸಿ ಸಂಬಂಧ ಪಟ್ಟ ಸಿಬ್ಬಂದಿಗಳೇ ತಮ್ಮ ಸೇವೆಯನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಬೇಕೆಂಬುದು ಇದರ ಸೂಚ್ಯಾರ್ಥವಾಗಿದೆ.

# ಗ್ರಾಮೀಣ ಅಭಿವೃದ್ಧಿ

ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಮತ್ತು ವಿಸ್ತರಣಾ ಕಾರ್ಯಕ್ರಮಗಳು ಈಗ ಅದೇ ಹೆಸರುಗಳಲ್ಲಿ ಅಸ್ತಿತ್ವದಲ್ಲಿರುವುದಿಲ್ಲ ಆದಾಗ್ಯೂ ಈ ಕಾರ್ಯಕ್ರಮಗಳ ಹಿನ್ನಲೆ ಮತ್ತು ಆಧಾರದಲ್ಲಿಯೇ ಅನೇಕ ನೂತನ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಲಾಗಿದೆ.

3. ಪರಿಪೂರ್ಣ ಜಿಲ್ಲಾ ಮಟ್ಟದ ವ್ಯವಸಾಯ ಅಭಿವೃದ್ಧಿ ಕಾರ್ಯಕ್ರಮ (ಐ.ಎ.ಡಿ.ಪಿ): ಅಮೆರಿಕ ಸಂಯುಕ್ತ ಸಂಸ್ಥಾನದ ವ್ಯವಸಾಯ ಅಭಿವೃದ್ಧಿ ತಂಡವಾದ ಫೋರ್ಡ್ ಫೌಂಡೇಷನ್‌ನ ಸಲಹೆಯ ಮೇರೆಗೆ 1959ರಲ್ಲಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿತು ಮತ್ತು 1960–61ರಲ್ಲಿ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿತು.

ಸಂಪೂರ್ಣ ಮತ್ತು ಸಮಗ್ರ ವ್ಯವಸಾಯ ಅಭಿವೃದ್ಧಿ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ನೀರಾವರಿ ಅನುಕೂಲತೆ, ಕಡಿಮೆ ಪ್ರಮಾಣದ ನೈಸರ್ಗಿಕ ವಿಕೋಪ, ಚೆನ್ನಾಗಿ ಅಭಿವೃದ್ಧಿ ಹೊಂದಿದ ಗ್ರಾಮೀಣ ಸಹಕಾರ ಮುಂತಾದ ಅಂಶಗಳ ಆಧಾರದ ಮೇಲೆ ದೇಶದ ಕೆಲವು ಆಯ್ದ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಕೆಲವೇ ವರ್ಷಗಳಲ್ಲಿ ದೇಶದ ಹಲವು ಭಾಗಗಳಲ್ಲಿ ವ್ಯವಸಾಯದ ಚಟುವಟಿಕೆಗಳು ವೇಗವಾಗಿ ಅಭಿವೃದ್ಧಿ ಹೊಂದಿದವು. ಒರಿಸ್ಸ ರಾಜ್ಯದ ಸಂಬಲ್‌ಪುರ ಜಿಲ್ಲೆ ವ್ಯವಸಾಯದಲ್ಲಿ ಸ್ವಯಂ ಪರಿಪೂರ್ಣತೆ ಸಾಧಿಸುವದರ ಜೊತೆಗೆ ಬತ್ತ ಉತ್ಪಾದನೆಯಲ್ಲಿ ಗಣನೀಯ ಸಾಧನೆ ಸಾಧಿಸಿತು.

4. ಸಂಪೂರ್ಣ ವ್ಯವಸಾಯ ಕ್ಷೇತ್ರ ಅಭಿವೃದ್ಧಿ ಕಾರ್ಯಕ್ರಮ(ಇನ್ಟೆನ್ಸೀವ್ ಅಗ್ರಿಕಲ್ಚರ್ ಏರಿಯಾ ಪ್ರೋಗ್ರಾಮ್): 3ನೆಯ ಪಂಚವಾರ್ಷಿಕ ಯೋಜನೆಯಡಿ 1964–65ರಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ವ್ಯವಸಾಯೋತ್ಪನ್ನಗಳ ಉತ್ಪಾದನೆ ಮತ್ತು ರಫ್ತನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ವ್ಯವಸಾಯದ ಒಟ್ಟು ಬಿತ್ತನೆ ಪ್ರದೇಶವನ್ನು ಶೇ. 20 ರಿಂದ 25ರಷ್ಟು ಹೆಚ್ಚಿಸಲು ವ್ಯವಸಾಯ ಕ್ಷೇತ್ರ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ದೇಶದ ಕೆಲವು ಆಯ್ದ ವ್ಯವಸಾಯ ಪ್ರದೇಶಗಳನ್ನು ಗುರುತು ಮಾಡಿ ಆ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು. ಅಂತಿಮವಾಗಿ ಈ ಕಾರ್ಯಕ್ರಮ ಹಸುರು ಕ್ರಾಂತಿಗೆ ನಾಂದಿಯಾಯಿತು. ಅಧಿಕ ಇಳುವರಿ ನೀಡುವ ಬಿತ್ತನೆ ಬೀಜಗಳು, ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆ ಹೆಚ್ಚಾಗಿ ವ್ಯವಸಾಯೋತ್ಪನ್ನಗಳ ಉತ್ಪಾದನೆಯಲ್ಲಿ ಗಣನೀಯ ಏರಿಕೆ ಕಂಡು ಬಂದಿತು.

5. ಅಧಿಕ ಇಳುವರಿ ತಳಿಗಳ ಬಳಕೆ ಕಾರ್ಯಕ್ರಮ (ಹೈ ಯೀಲ್ಡಿಂಗ್ ವೆರೈಟಿಸ್ ಪ್ರೋಗ್ರಾಮ್): ದೇಶದ ಅಭಿವೃದ್ಧಿಯಲ್ಲಿ ವ್ಯವಸಾಯದ ಮಹತ್ತ್ವವನ್ನು ಅರಿತು 1966–67ರ ನೈಋತ್ಯ ಮಾನ್ಸೂನ್ ಕಾಲದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ದೇಶದಾದ್ಯಂತ ಹೊಸದಾಗಿ ಗುರುತಿಸಿದ ವ್ಯವಸಾಯ ಕ್ಷೇತ್ರಗಳಲ್ಲಿ ಅಧಿಕ ಇಳುವರಿ ನೀಡುವ ತಳಿಗಳನ್ನು ಪ್ರಯೋಗಿಸಲಾಯಿತು. ಪ್ರಮುಖವಾಗಿ ಗೋದಿ, ಬತ್ತ, ಜೋಳ, ಮೆಕ್ಕೆ ಜೋಳ ಮತ್ತು ನವಣೆ ಧಾನ್ಯಗಳನ್ನು ಈ ಕಾರ್ಯಕ್ರಮದಡಿ ಸೇರಿಸಲಾಯಿತು. ಜೈವಿಕ ತಂತ್ರಜ್ಞಾನವನ್ನು ಬಳಸಿ ವ್ಯವಸಾಯದ ಅಭಿವೃದ್ಧಿಗೆ ಒತ್ತು ನೀಡಲಾಯಿತು. ಕೀಟಗಳ ಬಾಧೆಯಿಂದ ನಾಶವಾಗುತ್ತಿದ್ದ ಬೆಳೆಗಳನ್ನು ರಕ್ಷಿಸಲು ಕೀಟನಾಶಕಗಳನ್ನು ಬಳಸಲು ಪ್ರೋತ್ಸಾಹ ನೀಡಲಾಯಿತು. ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿದ್ದ ಹಣಕಾಸನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮದಡಿ ಸಹಕಾರ ಬ್ಯಾಂಕುಗಳು ಮತ್ತು ವಾಣಿಜ್ಯ ಬ್ಯಾಂಕುಗಳ ಮುಖಾಂತರ ದೊರಕಿಸಿಕೊಳ್ಳಲಾಯಿತು. ಅಧಿಕ ಇಳುವರಿ ತಳಿಗಳ ಬಳಕೆ ಕಾರ್ಯಕ್ರಮ ಕೇವಲ ಶ್ರೀಮಂತ ಮತ್ತು ಅತಿ ಶ್ರೀಮಂತ ರೈತರಿಗೆ ಮಾತ್ರ ಹೆಚ್ಚು ಉಪಯುಕ್ತವಾಯಿತು. ಈ ಕಾರ್ಯಕ್ರಮ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಅದರಲ್ಲೂ ಗೋದಿ ಉತ್ಪಾದನೆಗೆ ಮಾತ್ರ ಸೀಮಿತವಾಯಿತು.

6. ಸಣ್ಣ ಭೂ ಹಿಡುವಳಿ ರೈತರ ಅಭಿವೃದ್ಧಿ ಕಾರ್ಯಕ್ರಮ (ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್): ಅಖಿಲ ಭಾರತ ಗ್ರಾಮೀಣ ಸಾಲ ಪರಿಶೀಲನೆಯ ಸಮಿತಿಯನ್ನು 1969ರಲ್ಲಿ ಭಾರತೀಯ ರಿಸರ್ವ್‌ಬ್ಯಾಂಕ್ ಸ್ಥಾಪನೆ ಮಾಡಿತು. ಶ್ರೀ ವೆಂಕಟಪ್ಪಯ್ಯನವರು ಈ ಸಮಿತಿಯ ಅಧ್ಯಕ್ಷರಾಗಿದ್ದರು. ಸಮಿತಿ ಹಿಡುವಳಿ ರೈತರ ಅಭಿವೃದ್ಧಿ ಸಂಸ್ಥೆಯನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿತು.

ಸಂಸ್ಥೆಯ ಪ್ರಮುಖ ಕಾರ್ಯಗಳು:

ಎ. ಸಣ್ಣ ಭೂಹಿಡುವಳಿದಾರರನ್ನು ಗುರುತಿಸುವುದು.

ಬಿ. ಸಣ್ಣ ಭೂ ಹಿಡುವಳಿದಾರರಿಗೆ ಸಹಕಾರಿ ಬ್ಯಾಂಕುಗಳ ಮೂಲಕ ಸಾಲನೀಡುವ ವ್ಯವಸ್ಥೆಯನ್ನು ಕಲ್ಪಿಸುವುದು.

ಸಿ. ವ್ಯವಸಾಯಕ್ಕೆ ಅಗತ್ಯವಿರುವ ಕೀಟನಾಶಕ, ರಾಸಾಯನಿಕ ಗೊಬ್ಬರ, ಉಪಕರಣಗಳು ಮುಂತಾದವುಗಳನ್ನು ಒದಗಿಸುವುದು.

ಡಿ. ಕಾರ್ಯಕ್ರಮದಲ್ಲಿ ಭಾಗವಹಿಸುವ ಸಣ್ಣ ಭೂ ಹಿಡುವಳಿದಾರರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ ವ್ಯವಸಾಯೋತ್ಪನ್ನಗಳ ಅಧಿಕ ಉತ್ಪಾದನೆಗೆ ಬಂಡವಾಳ ತೊಡಗಿಸುವುದು.

7. ಬಡ ರೈತರ ಮತ್ತು ಕೃಷಿ ಕಾರ್ಮಿಕರ ಅಭಿವೃದ್ಧಿ ಯೋಜನೆ: ಗ್ರಾಮೀಣ ಸಾಲ ಸೌಲಭ್ಯದ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ 1969ರಲ್ಲಿ ಈ ಕಾರ್ಯಕ್ರಮವನ್ನು ರೂಪಿಸಲಾಯಿತು. ಬಡ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ವ್ಯವಸಾಯದಿಂದ ಗರಿಷ್ಠ ಲಾಭ ಪಡೆಯುವುದರ ಜೊತೆಗೆ ತೋಟಗಾರಿಕೆ, ಪಶು ಸಂಗೋಪನೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಪ್ರೋತ್ಸಾಹ ನೀಡಲಾಯಿತು.

ಪ್ರಮುಖ ಕಾರ್ಯಕ್ರಮಗಳು:

ಎ. ಅರ್ಹತೆ ಹೊಂದಿರುವ ಫಲಾನುಭವಿಗಳನ್ನು ಗುರುತಿಸುವುದು ಮತ್ತು ಅವರ ಸಮಸ್ಯೆಗಳನ್ನು ಪರಿಹರಿಸುವುದು.

ಬಿ. ಆರ್ಥಿಕ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಿ ಉದ್ಯೋಗ ಸೌಲಭ್ಯಗಳನ್ನು ಹೆಚ್ಚಿಸುವುದು.

ಸಿ. ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

ಡಿ. ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.

ಈ ಕಾರ್ಯಕ್ರಮಕ್ಕೆ ಸಹಕಾರಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕುಗಳು ಸಾಲ ಸೌಲಭ್ಯವನ್ನು ಒದಗಿಸಿದವು. ಇದರ ಜೊತೆಗೆ ಫಲಾನುಭವಿಗಳಿಗೆ ಸಬ್ಸಿಡಿ ಸೌಲಭ್ಯವನ್ನು ನೀಡಲಾಯಿತು. ಒರಿಸ್ಸ ರಾಜ್ಯದ ಕಟಕ್ ಮತ್ತು ಕಿಯಾಂಜಾಕ್ ಜಿಲ್ಲೆಗಳಲ್ಲಿ ಶೇ. 70ರಷ್ಟು ಪ್ರಗತಿಯನ್ನು ಈ ಕಾರ್ಯಕ್ರಮ ಸಾಧಿಸಿತು.

8. ಬರಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ: ಬರಪೀಡಿತ ಪ್ರದೇಶಗಳ ಅಭಿವೃದ್ಧಿಯನ್ನು ಪ್ರಮುಖ ವಿಷಯವನ್ನಾಗಿ 1970–71ರಲ್ಲಿ 4ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತರಲಾಯಿತು. ಬರಪೀಡಿತ ಪ್ರದೇಶದಲ್ಲಿನ ಜನರಿಗೆ ಉದ್ಯೋಗ ಒದಗಿಸುವ ಸಲುವಾಗಿ ಸಣ್ಣ ಮತ್ತು ಅತಿ ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣ, ರಸ್ತೆ ನಿರ್ಮಾಣ, ಅರಣ್ಯೀಕರಣ, ಮಣ್ಣಿನ ಸಂರಕ್ಷಣೆ, ಕುಡಿಯುವ ನೀರಿನ ನಿರ್ವಹಣೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಬರಪೀಡಿತ ಪ್ರದೇಶಗಳ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಲು ಕೃಷಿಗೆ ಸಂಬಂಧಿಸಿದ ಹಲವು ಸೌಲಭ್ಯಗಳನ್ನು ಒದಗಿಸಲಾಯಿತು. ಕೃಷಿ ಭೂಮಿಯನ್ನು ಗರಿಷ್ಠ ಲಾಭಕ್ಕೆ ಬಳಸುವುದು. ಮಾನವ ಸಂಪನ್ಮೂಲವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದು. ಪಶುಸಂಗೋಪನೆಯಲ್ಲಿ ವಿವಿಧ ತಳಿಗಳನ್ನು ಅಭಿವೃದ್ಧಿ ಪಡಿಸುವುದು ಮುಂತಾದ ಕಾರ್ಯಕ್ರಮಗಳನ್ನು ಕಡು ಬಡವರ ಉದ್ಧಾರಕ್ಕಾಗಿ ರೂಪಿಸಿದ್ದು ಒಂದು ವಿಶೇಷವಾಗಿತ್ತು. ಮಾನ್ಸೂನ್ ಮಳೆ ತೀರ ಅನಿಶ್ಚಿತತೆಯಿಂದ ಕೂಡಿರುವ ಪ್ರದೇಶಗಳಲ್ಲಿ ಈ ಕಾರ್ಯಕ್ರಮವನ್ನು ಕಟ್ಟುನಿಟ್ಟಿನಿಂದ ಜಾರಿಗೆ ತರಲಾಯಿತು. ಈ ಕಾರ್ಯಕ್ರಮಕ್ಕೆ 4ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ ಹಣದ ಜೊತೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು 50:50ರ ಅನುಪಾತದಲ್ಲಿ ಸಹಾಯ ಧನ ಒದಗಿಸಿದವು.

9. ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿ ಕಾರ್ಯಕ್ರಮ: ಭಾರತ ಆಫ್ರಿಕದ ನಂತರ ಅತಿ ಹೆಚ್ಚು ಬುಡಕಟ್ಟು ಜನ ಸಂಖ್ಯೆಯನ್ನು ಹೊಂದಿರುವ ದೇಶ. ನಮ್ಮ ದೇಶದ ಯೋಜನಾ ಆಯೋಗದ ಪರಿಣಿತರಿಗೆ ಬುಡಕಟ್ಟು ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದು ಪ್ರಮುಖ ಕಾರ್ಯವಾಗಿತ್ತು. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅವರನ್ನು ಮೇಲೆತ್ತಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅದು ನೀರಿಕ್ಷಿತ ಗುರಿ ಸಾಧಿಸಲಿಲ್ಲ. ಆದ್ದರಿಂದ ಬುಡಕಟ್ಟು ಜನರ ಶ್ರೇಯೋಬಿವೃದ್ಧಿಗಾಗಿ ಈ ಕಾರ್ಯಕ್ರಮವನ್ನು 1972ರಲ್ಲಿ ಜಾರಿಗೆ ತರಲಾಯಿತು. 4ನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಕಲ್ಯಾಣಕ್ಕಾಗಿ ಜಿಲ್ಲಾ ಹಂತದ ಪೈಲಟ್ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು.

ಬುಡಕಟ್ಟು ಜನರ ಜನಸಂಖ್ಯೆಯ ಆಧಾರದ ಮೇಲೆ ಬುಡಕಟ್ಟು ಪ್ರದೇಶಗಳನ್ನು ಹೊಸದಾಗಿ ಗುರುತಿಸಿ ಅವುಗಳನ್ನು ಹಿಂದುಳಿದ ಪ್ರದೇಶಗಳ ಪಟ್ಟಿಗೆ ಸೇರಿಸಿದ್ದು ಈ ಕಾರ್ಯಕ್ರಮದ ಪ್ರಮುಖ ಸಾಧನೆಯಾಗಿದೆ. ಒಂದು ಪ್ರದೇಶದ ಒಟ್ಟು ಜನಸಂಖ್ಯೆಯ ಶೇ. 50ಕ್ಕಿಂತ ಹೆಚ್ಚಾಗಿರುವ ಜನಸಂಖ್ಯಾ ಪ್ರದೇಶವನ್ನು ಬುಡಕಟ್ಟು ಪ್ರದೇಶವೆಂದು ಘೋಷಿಸಲಾಯಿತು. ಜನಸಂಖ್ಯೆ ಚದುರಿದಂತೆ ಇದ್ದು ಅರಣ್ಯ ಪ್ರದೇಶವಾಗಿದ್ದರೆ ಅದನ್ನು ಬುಡಕಟ್ಟು ಪ್ರದೇಶವೆಂದು ಸಾರಲಾಯಿತು. ಹೆಚ್ಚು ಹಿಂದುಳಿದ ಮತ್ತು ಹೊರ ಪ್ರಪಂಚದಿಂದ ದೂರ ಉಳಿದಿರುವ ಪಂಗಡಗಳನ್ನು ಬುಡಕಟ್ಟು ಜನರು ಎಂದು ನಾಮಕರಣ ಮಾಡಲಾಯಿತು. ಒಟ್ಟಿನಲ್ಲಿ ಬುಡಕಟ್ಟು ಜನರಿಗಾಗಿ ಆಸ್ಪತ್ರೆ, ಶಾಲೆಗಳು, ನ್ಯಾಯಬೆಲೆ ಅಂಗಡಿಗಳು ಮುಂತಾದ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಲಾಯಿತು.

10. ಜಲಾನಯನ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ: ನೀರಾವರಿಗೆ ಒಳಪಡಿಸುವ ಸಾಮರ್ಥ್ಯವುಳ್ಳ ಪ್ರದೇಶಗಳ ಅಭಿವೃದ್ಧಿಗಾಗಿ 1974-75ರಲ್ಲಿ ಜಲಾನಯನ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ನೀರಾವರಿ ಸೌಲಭ್ಯವನ್ನು ಹೆಚ್ಚಿಸುವುದು, ನೀರಿನ ದುರ್ಬಳಕೆಯನ್ನು ತಡೆಯುವುದು, ನೀರಿನ ನಿರ್ವಹಣೆಯಲ್ಲಿ ಪರಿಣಿತಿಯನ್ನು ಸಾಧಿಸುವುದು. ನೀರಾವರಿ ಸೌಲಭ್ಯದ ಮೂಲಕ ವ್ಯವಸಾಯೋತ್ಪನ್ನಗಳನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳಾಗಿವೆ.

ಜಲಾನಯನ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮದಡಿ ಹೆಚ್ಚು ಪ್ರಾಮುಖ್ಯತೆ ಪಡೆದ ಕ್ಷೇತ್ರಗಳೆಂದರೆ:

ಎ. ಕಾಲುವೆ ಮತ್ತು ಉಪಕಾಲುವೆಗಳ ನಿರ್ಮಾಣ.

ಬಿ. ವಾರಬಂದಿಗಳ ನಿರ್ಮಾಣ ಅಂದರೆ ನೀರಿನ ಹರಿವಿನಲ್ಲಿ ನಿಯಂತ್ರಣ ಮತ್ತು ನೀರಿನ ಪೂರೈಕೆಯಲ್ಲಿ ರೈತರಿಗೆ ನಿಶ್ಚಿತತೆ ಮತ್ತು ಖಚಿತತೆ ನೀಡುವುದು.

ಸಿ. ಸಣ್ಣ ಸಣ್ಣ ಭೂ ಹಿಡುವಳಿಗಳನ್ನು ಒಂದುಗೂಡಿಸಿ ನೀರಾವರಿ ಸೌಲಭ್ಯವನ್ನು ಒದಗಿಸುವುದು.

ಡಿ. ವಿವಿಧ ಬೆಳೆಗಳನ್ನು ಕಾಲಕಾಲಕ್ಕೆ ಬೆಳೆದು ಮಣ್ಣಿನ ಸಂರಕ್ಷಣೆಗೆ ಒತ್ತು ನೀಡುವುದು ಮುಂತಾದ ಅಂಶಗಳಿಗೆ ಹೆಚ್ಚು ಗಮನ ಕೊಡಲಾಯಿತು.

ಬಹುಬೆಳೆಗಳನ್ನು ಬೆಳೆಯುವುದರಿಂದ ಆಗುವ ಅನುಕೂಲಗಳ ಬಗ್ಗೆ ಸಾಕಷ್ಟು ಅರಿವನ್ನು ರೈತರಿಗೆ ಮೂಡಿಸಲಾಯಿತು. ಸಣ್ಣ ಮತ್ತು ಅತೀ ಸಣ್ಣ ರೈತರನ್ನು ಈ ಕಾರ್ಯಕ್ರಮದಡಿ ಸೇರಿಸಿಕೊಂಡಿದ್ದು ವಿಶೇಷವಾಗಿತ್ತು. ಈ ಕಾಯಕ್ರಮದಿಂದ ನಿರೀಕ್ಷಿತ ಗುರಿ ಸಾದಿಸದಿದ್ದರೂ ಜನರಲ್ಲಿ ಅರಿವು ಮೂಡಿಸುವಲ್ಲಿ ಯಶಸ್ವಿಯಾಯಿತು.

11. ಮಾರ್ಪಡಿಸಿದ ಪ್ರದೇಶಗಳ ಅಭಿವೃದ್ಧಿ ಯೋಜನೆ: ಭಾರತದ ಸಂವಿಧಾನದ 46ನೇ ವಿದಿಯ ಪ್ರಕಾರ ಸರ್ಕಾರ ದುರ್ಬಳಕೆ ಮತ್ತು ನಿರ್ಗತಿಕರಿಗೆ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೈಕ್ಷಣಿಕ ಮತ್ತು ಆರ್ಥಿಕ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಅನಾದಿಕಾಲದಿಂದಲೂ ಈ ಜನರನ್ನು ಶೋಷಿಸಿ ಸಾಮಾಜಿಕವಾಗಿ ಬೇರ್ಪಡಿಸಲಾಗುತ್ತದೆ. ಈ ಕಾರಣದಿಂದ ಪಂಡಿತ್ ಜವಾಹರಲಾಲ್ ನೆಹರೂರವರು ಪರಿಶಿಷ್ಟ ಪಂಗಡದ ಪಂಚಶೀಲ ಎಂಬ ಕಾರ್ಯಕ್ರಮವನ್ನು ರೂಪಿಸಿ ಅವರ ಅಭಿವೃದ್ದಿಗಾಗಿ ಶ್ರಮಿಸಿದರು.

ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗಾಗಿ 1978-79ರಲ್ಲಿ ಮಾರ್ಪಡಿಸಿದ ಪ್ರದೇಶಗಳ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಈ ಕಾರ್ಯಕ್ರಮದಡಿ 2 ಹಂತದ ಉಪಯೋಜನೆಗಳನ್ನು ರೂಪಿಸಲಾಗಿದೆ, ಅವುಗಳೆಂದರೆ:

ಅ. ಪರಿಶಿಷ್ಟ ಪಂಗಡದವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವುದು.

ಆ. ಶೊಷಣೆಯ ವಿರುದ್ಧ ರಕ್ಷಣೆ ಒದಗಿಸುವುದು.

ಪರಿಶಿಷ್ಟ ಪಂಗಡದ ಜನಸಂಖ್ಯೆ ಶೇ. 50ಕ್ಕಿಂತ ಹೆಚ್ಚಿರುವ ಪ್ರದೇಶಗಳಲ್ಲಿ ಈ ಕಾರ್ಯಕ್ರಮಕ್ಕೆ ಬದಲಾಗಿ ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಮಾರ್ಪಡಿಸಿದ ಪ್ರದೇಶಗಳ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಕಾರ್ಯಕ್ರಮದಡಿ ಆಯ್ದುಕೊಂಡ ಪ್ರದೇಶಗಳು 10,000 ಜನಸಂಖ್ಯೆ ಹೊಂದಿದ್ದು ಅದರಲ್ಲಿ ಶೇ. 50 ರಷ್ಟು ಬುಡಕಟ್ಟು ಜನರು ಇರಬೇಕು ಎಂಬ ನಿಯಮವನ್ನು ರೂಪಿಸಲಾಯಿತು. ಕುಟುಂಬ ಆಧಾರಿತ ಮತ್ತು ಸಮುದಾಯ ಆಧಾರಿತ ಕಾರ್ಯಕ್ರಮಗಳನ್ನು ತಯಾರಿಸಿ ಬುಡಕಟ್ಟು ಜನರ ಅಭಿವೃದ್ದಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಯಿತು.

12. ಇಪ್ಪತ್ತು ಅಂಶಗಳ ಕಾರ್ಯಕ್ರಮ: ಸ್ವಾತಂತ್ರ ಬಂದ ನಂತರದ ಅವಧಿಯಲ್ಲಿ ಗ್ರಾಮೀಣ ಜನರ ಅಭಿವೃದ್ಧಿಗಾಗಿ ರಾಷ್ಟ್ರೀಯ ವಿಸ್ತರಣಾ ಯೋಜನೆ, ಸಮುದಾಯ ಅಭಿವೃದ್ಧಿ ಯೋಜನೆ, ಪಂಚವಾರ್ಷಿಕ ಯೋಜನೆ ಮೊದಲಾದ ಮಹತ್ವಪೂರ್ಣ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಆದರೆ ದುರದೃಷ್ಟವಶಾತ್ ಈ ಯೋಜನೆಗಳ ಸತ್ಫಲ ಈ ರಾಷ್ಟ್ರದ ಬಹುತೇಕ ಕಡುಬಡವರಿಗೆ, ಬಡವರಿಗೆ, ನಿರ್ಗತಿಕರಿಗೆ ಮತ್ತು ಶೋಷಿತರಿಗೆ ತಲುಪಲೇ ಇಲ್ಲ. ಇದನ್ನು ಮನಗಂಡ ನಮ್ಮ ರಾಷ್ಟ್ರದ ಅಂದಿನ ಪ್ರಧಾನಿ ಇಂದಿರಗಾಂಧಿ 1975ನೆಯ ಇಸವಿ ಜುಲೈ 1 ರಂದು 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಿದರು. ಪರಿಶಿಷ್ಟಜಾತಿ ಮತ್ತು ಬುಡಕಟ್ಟು ಜನರನ್ನು ಒಳಗೊಂಡಂತೆ ಈ ರಾಷ್ಟ್ರದ ವರ್ಗಗಳ ಅಭ್ಯುದಯವನ್ನು ಸಾದಿಸುವ ವಿಷಯದಲ್ಲಿ ಒಂದು ವಿಶೇಷ ಆಯಾಮವನ್ನು ತಂದುಕೊಟ್ಟಿತು. ಇದೇ ಕಾರ್ಯಕ್ರಮವನ್ನು 1982ನೆಯ ಇಸವಿ ಜನವರಿ 4ರಂದು ವಿಶೇಷವಾಗಿ ಪುನರ್ ವಿಮರ್ಶಿಸಿ ನೂತನ 20 ಅಂಶಗಳ ಕಾರ್ಯಕ್ರಮ ಎಂಬ ಹೆಸರಿನಲ್ಲಿ ಜಾರಿಗೊಳಿಸಲಾಯಿತು. ಈ ಕಾರ್ಯಕ್ರಮಗಳ ಗುರಿ ಮತ್ತು ಉದ್ದೇಶಗಳು ಈ ಕೆಳಕಂಡಿಂತಿವೆ:

ಎ. ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸುವುದು.

ಬಿ. ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸುವುದು.

ಸಿ. ಸಮಗ್ರ ಗ್ರಾಮೀಣ ಯೋಜನೆಯನ್ನು ಸಂವರ್ದಿಸುವುದು.

ಡಿ. ಕೃಷಿ ಜಮೀನಿನ ಒಡೆತನವನ್ನು ಮಿತಿಗೊಳಿಸುವುದು ಮತ್ತು ಹೆಚ್ಚುವರಿ ಜಮೀನನ್ನು ಬಡವರಿಗೆ ವಿತರಿಸುವುದು.

ಇ. ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗದಿಪಡಿಸುವುದು.

ಎಫ್. ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸುವುದು.

ಜಿ. ಪರಿಶಿಷ್ಟ ಜಾತಿ ಮತ್ತು ಪಂಗಡ, ಬುಡಕಟ್ಟು ಜನರ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸುವುದು.

ಎಚ್. ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ದೊರಕಿಸುವುದು.

ಐ. ಗ್ರಾಮೀಣ ವಸತಿ ಹೀನರಿಗೆ ನಿವೇಶನ ನೀಡುವುದು ಮತ್ತು ಮನೆಗಳನ್ನು ಕಟ್ಟಿಸಿಕೊಡುವುದು.

ಜೆ. ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡುವುದು.

ಕೆ. ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವುದು.

ಎಲ್. ಅರಣ್ಯ ಸಂವರ್ಧನೆ ಯೋಜನೆಯನ್ನು ಕಾರ್ಯಗತಗೊಳಿಸುವುದು.

ಎಮ್. ಕುಟುಂಬ ಯೋಜನೆಯನ್ನು ಜಾರಿಗೊಳಿಸುವದು.

ಎನ್. ಗ್ರಾಮೀಣ ಪ್ರದೇಶಗಳ ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು.

ಓ. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸುವುದು.

ಪಿ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು 6 ರಿಂದ 14 ವರ್ಷದ ಮಕ್ಕಳಿಗೆ ನೀಡುವುದು.

ಕ್ಯೂ. ಆಧುನಿಕ ಕೈಗಾರಿಕೆಗಳ ಜೊತೆ ಸಣ್ಣ ಮತ್ತು ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು.

ಆರ್. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸರಿಪಡಿಸಿ ಗ್ರಾಮೀಣ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದು.

ಎಸ್. ಕಪ್ಪುಹಣದ ಬೆಳವಣಿಗೆಯನ್ನು ತಡೆಗಟ್ಟಿ ತೆರಿಗೆ ಸಂಗ್ರಹವನ್ನು ಹೆಚ್ಚಿಸುವುದು.

ಟಿ. ಸಾರ್ವಜನಿಕ ಉದ್ದಿಮೆಗಳ ಸಾಮರ್ಥ್ಯವನ್ನು ಹೆಚ್ಚಿಸಿ ಸಂಪನ್ಮೂಲಗಳನ್ನು ಕ್ರೂಡಿಕರಿಸುವುದು.

ಇಪ್ಪತ್ತು ಅಂಶಗಳ ಕಾರ್ಯಕ್ರಮವು ಗ್ರಾಮೀಣ ಸಮಾಜದ ಎಲ್ಲಾ ಜನರ ಉದ್ದಾರವನ್ನು ಮನದಲ್ಲಿಟ್ಟುಕೊಂಡು ರೂಪಿಸಲಾಗಿರುವ ಒಂದು ವಿಶಿಷ್ಟ ಕಾರ್ಯಕ್ರಮ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಯಶಸ್ಸು ಪಡೆದಿಲ್ಲ ಎಂಬುದು ನಿಜವಾದರೂ ಅದು ಗ್ರಾಮೀಣ ಜನರ ಬದುಕನ್ನು ಹಸನಾಗಿಸುವಲ್ಲಿ ಒಂದು ನೂತನ ಚೇತನವನ್ನು ತಂದು ಕೊಟ್ಟಿದೆ.

13. ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವ ಕಾರ್ಯಕ್ರಮ: ಈ ಕಾರ್ಯಕ್ರಮದ ಪ್ರಧಾನ ಅಂಶವೆಂದರೆ ಗ್ರಾಮೀಣ ಜನರ ದಿನನಿತ್ಯದ ಬದುಕಿಗೆ ಕನಿಷ್ಠ ಅವಶ್ಯಕತೆಗಳನ್ನು ಒದಗಿಸುವುದಾಗಿದೆ. ಐದನೆಯ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಅಂದರೆ 1974-78ರಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಬಡಜನರ ಅನುಭೋಗ ಸಾಮರ್ಥ್ಯವನ್ನು ಹೆಚ್ಚಿಸಲು ಹಲವಾರು ಸರ್ಕಾರಿ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳ ಸಹಾಯವನ್ನು ಪಡೆಯಲಾಯಿತು. ಸಾಮಾಜಿಕ ನ್ಯಾಯವನ್ನು ಒದಗಿಸುವುದರ ಜೊತೆಗೆ ಬಡವರು ಮತ್ತು ಶ್ರೀಮಂತರು ಹಾಗೂ ಗ್ರಾಮೀಣ ಜನರು ಮತ್ತು ನಗರವಾಸಿಗಳ ನಡುವೆ ಇರುವ ತಾರತಮ್ಯವನ್ನು ಕಡಿಮೆ ಮಾಡಲು ಈ ಕಾರ್ಯಕ್ರಮ ನಾಂದಿ ಹಾಡಿತು. ಈ ಹಿಂದೆ ಹಾಕಿಕೊಂಡ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರ ನೀಡಿದ ಹಣಕಾಸು ನೆರವಿಗಿಂತ ದುಪ್ಪಟ್ಟು ಹಣವನ್ನು ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವ ಕಾರ್ಯಕ್ರಮಕ್ಕೆ ನೀಡಲಾಯಿತು. ಕಾರ್ಯಕ್ರಮದ ಗುರಿ-ಉದ್ದೇಶಗಳನ್ನು ತಲುಪಲು ಹಾಕಿಕೊಂಡ ಸುಧಾರಣೆಗಳೆಂದರೆ:

ಎ. ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ನೀಡುವುದು.

ಬಿ. ಗ್ರಾಮೀಣ ಆರೋಗ್ಯ ಸೌಲಭ್ಯ ನೀಡುವುದು.

ಸಿ. ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸುವುದು.

ಡಿ. ಗ್ರಾಮೀಣ ರಸ್ತೆಗಳ ನಿರ್ಮಾಣ

ಇ. ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಸೌಲಭ್ಯ ಕಲ್ಪಿಸುವುದು.

ಎಫ್. ಗ್ರಾಮೀಣ ಜನರಿಗೆ ವಸತಿ ಸೌಲಭ್ಯ ಕಲ್ಪಿಸುವುದು.

ಜಿ. ನಗರದ ಕೊಳಚೆ ಪ್ರದೇಶಗಳ ಪರಿಸರವನ್ನು ಸರಿಪಡಿಸುವುದು.

ಎಚ್. ಪೌಷ್ಠಿಕ ಆಹಾರವನ್ನು ಒದಗಿಸುವುದು.

ಏಳನೆಯ ಪಂಚವಾರ್ಷಿಕ ಯೋಜನೆಯ ಅವದಿಯಲ್ಲಿ ಅಂದರೆ 1985–90ರಲ್ಲಿ ಈ ಕಾರ್ಯಕ್ರಮವನ್ನು ಪರಿಷ್ಕರಿಸಿ ಹೊಸ ರೂಪುರೇಷೆಗಳನ್ನು ನೀಡಿ ಇದರ ಮಹತ್ವವನ್ನು ಹೆಚ್ಚಿಸಲಾಗಿದೆ.

14. ಕೂಲಿಗಾಗಿ ಕಾಳು ಕಾರ್ಯಕ್ರಮ: ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ 1977ರ ಏಪ್ರಿಲ್‌ನಲ್ಲಿ ಜಾರಿಗೆ ತಂದಿತು. ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು, ಮೂಲಭೂತ ಸೌಕರ್ಯಗಳನ್ನು ಎಲ್ಲರಿಗೂ ತಲುಪುವಂತೆ ಮಾಡುವುದು, ಗ್ರಾಮೀಣ ಪ್ರದೇಶಗಳಲ್ಲಿ ಶಾಶ್ವತವಾಗಿ ಉಳಿಯುವಂತಹ ನಿರ್ಮಾಣ ಕಾರ್ಯಗಳನ್ನು ಮಾಡುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ ವೇತನ ರೂಪದಲ್ಲಿ ಆಹಾರ ಧಾನ್ಯಗಳನ್ನು ನೀಡಲಾಗಿದೆ.

ಕೂಲಿಗಾಗಿ ಕಾಳು ಕಾರ್ಯಕ್ರಮದ ಪ್ರಮುಖ ಲಕ್ಷಣಗಳೆಂದರೆ:

ಎ. ಉನ್ನತ ಮಟ್ಟದ ಯೋಜನೆಯನ್ನು ರೂಪಿಸಿ ಅದನ್ನು ಕಾರ್ಯಗತಗೊಳಿಸಲು ಅಣಿಯಾಗಬೇಕು.

ಬಿ. ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶೇ. 75 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ನೀಡಬೇಕು.

ಸಿ. ಕಾರ್ಮಿಕರಿಗೆ ಆಹಾರ ಧಾನ್ಯಗಳ ಜೊತೆಗೆ ಇನ್ನಿತರ ವಸ್ತುಗಳನ್ನು ಕೊಂಡುಕೊಳ್ಳಲು ಸ್ವಲ್ಪ ವೇತನವನ್ನು ಹಣದ ರೂಪದಲ್ಲಿ ನೀಡಲಾಗುತ್ತಿದೆ.

ಡಿ. ಸಾಮಾಜಿಕ ಅರಣ್ಯ ಸ್ಥಾಪನೆಗೆ ಮತ್ತು ಅರಣ್ಯ ಸಂವರ್ಧನಾ ಕಾರ್ಯಗಳಿಗೆ ಹೆಚ್ಚು ಒತ್ತು ನೀಡುವುದು.

ಇ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನ ಮಟ್ಟವನ್ನು ಹೆಚ್ಚಿಸಲು ಒಟ್ಟು ಅನುದಾನದ ಶೇ. 10 ರಷ್ಟು ಖರ್ಚು ಮಾಡುವುದು.

ಎಫ್. ಪ್ರತಿಯೊಬ್ಬ ಕಾರ್ಮಿಕನಿಗೆ, ಪ್ರತಿದಿನ 2 ಕೆ.ಜಿ. ಆಹಾರ ಧಾನ್ಯ ನೀಡಲಾಗುವುದು.

ಜಿ. ಸ್ಥಳೀಯ ಸಂಸ್ಥೆಗಳಾದ ಗ್ರಾಮ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರನ್ನು ಈ ಕಾರ್ಯಕ್ರಮದ ಉಸ್ತುವಾರಿಗೆ ನೇಮಿಸಿಕೊಳ್ಳಲಾಗುವುದು.

ಒರಿಸ್ಸ ರಾಜ್ಯವು ಕೂಲಿಗಾಗಿ ಕಾಳು ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿಸದ ರಾಜ್ಯವಾಗಿದೆ. ಆದರೆ ಶಾಶ್ವತ ಉದ್ಯೋಗ ನೀಡಲು ಈ ಕಾರ್ಯಕ್ರಮ ಸಂಪೂರ್ಣ ವಿಫಲಗೊಂಡಿದ್ದು ಮಾತ್ರ ಒಂದು ವಿಪರ್ಯಾಸ. 1980ರ ದಶಕದಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ಕೂಲಿಗಾಗಿ ಕಾಳು ಯೋಜನೆ ಪ್ರೇರಣೆಯಾಗಿದ್ದು ಮಾತ್ರ ಸಂತೋಷದಾಯಕ ವಿಷಯ.

15. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ: ಕೂಲಿಗಾಗಿ ಕಾಳು ಯೋಜನೆಯನ್ನು ಪುನರ್‌ನಿರ್ಮಿಸಿ, ಲೋಪದೋಷಗಳನ್ನು ಸರಿಪಡಿಸಿ 1980 ಅಕ್ಟೋಬರ್ ತಿಂಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಇದು ಕೇಂದ್ರ ಸರ್ಕಾರ ಆಯೋಜಿತ ಕಾರ್ಯಕ್ರಮವಾಗಿದ್ದರೂ ಕೇಂದ್ರ ಮತ್ತು ರಾಜ್ಯಗಳು ಶೇ. 50 : 50 ಅನುಪಾತದಲ್ಲಿ ಅನುದಾನವನ್ನು ನೀಡಬೇಕಾಗಿತ್ತು. ಹೆಚ್ಚಿನ ಪ್ರಮಾಣದ ಉದ್ಯೋಗ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶದಲ್ಲಿ ಒದಗಿಸುವುದು ಈ ಕಾರ್ಯಕ್ರಮದ ಅತೀ ಮುಖ್ಯ ಉದ್ದೇಶವಾಗಿದೆ.

ಈ ಕಾರ್ಯಕ್ರಮದ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಶಾಶ್ವತ ನಿರ್ಮಾಣ ಕೆಲಸಗಳಾದಂತಹ ಕುಡಿಯುವ ನೀರಿನ ಬಾವಿಗಳು ಮತ್ತು ಹೊಂಡಗಳ ನಿರ್ಮಾಣ, ನೀರಾವರಿ ಕಾಲುವೆಗಳ ನಿರ್ಮಾಣ, ಕೆರೆಗಳ ನಿರ್ಮಾಣ, ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳ ನಿರ್ಮಾಣ, ಗ್ರಾಮೀಣ ರಸ್ತೆಗಳ ನಿರ್ಮಾಣ, ಶಾಲಾಕಟ್ಟಡಗಳ ನಿರ್ಮಾಣ, ಪಂಚಾಯತ್ ಕಟ್ಟಡಗಳ ನಿರ್ಮಾಣ ಮುಂತಾದವುಗಳನ್ನು ನಿರ್ಮಿಸಲಾಗುತ್ತದೆ. ಇವುಗಳಲ್ಲದೆ ಈ ಕಾರ್ಯಕ್ರಮ ಕೆಳಕಂಡ ಉದ್ದೇಶಗಳನ್ನು ಒಳಗೊಂಡಿದೆ:

ಎ. ಉದ್ಯೋಗ ಭರವಸೆ ನೀಡುವುದರ ಮೂಲಕ ಗ್ರಾಮೀಣ ಜನರಿಗೆ ಆಹಾರದ ಭದ್ರತೆಯನ್ನು ಒದಗಿಸುವುದು.

ಬಿ. ಆರ್ಥಿಕ ಅಭಿವೃದ್ಧಿಗೆ ಮಾನವ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಳ್ಳುವುದು.

ಸಿ. ಬಡಜನರಿಗೆ ದಿನನಿತ್ಯದ ಅಗತ್ಯವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸುವುದು.

ಡಿ. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಅಭಿವೃದ್ಧಿಗಾಗಿ ಶೇ. 10 ರಷ್ಟು, ಮತ್ತು ಸಾಮಾಜಿಕ ಅರಣ್ಯದ ಅಭಿವೃಧಿಗೆ ಶೇ. 10 ರಷ್ಟು ಹಣವನ್ನು ಖರ್ಚು ಮಾಡಲಾಗುತ್ತದೆ.

1989ರಲ್ಲಿ ಈ ಕಾರ್ಯಕ್ರ ಮವನ್ನು ಜವಾಹರ್ ರೋಜಗಾರ್ ಯೋಜನೆ ಮತ್ತು ಗ್ರಾಮೀಣ ಭೂರಹಿತ ಜನರ ಉದ್ಯೋಗ ಖಾತ್ರಿ ಕಾರ್ಯಕ್ರಮಗಳ ಜೊತೆ ವಿಲೀನಗೊಳಿಸಲಾಯಿತು.

16. ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ನೀಡುವ ಯೋಜನೆ: ದೇಶದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ನೀಡುವ ಭರವಸೆಯೊಂದಿಗೆ 1983–84ರಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು ವಿದ್ಯಾವಂತ ಯುವಕರಲ್ಲಿ ಸ್ವಯಂ ಉದ್ಯೋಗಕ್ಕೆ ಉತ್ತೇಜನ ನೀಡುವ ಮೂಲಕ ದೇಶದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಕೈಗಾರಿಕೆಗಳಲ್ಲಿ, ಸೇವಾ ಕ್ಷೇತ್ರಗಳಲ್ಲಿ ಮತ್ತು ವ್ಯಾಪಾರ, ವಾಣಿಜ್ಯ ಚಟುವಟಿಕೆಗಳಲ್ಲಿ ಸ್ವಯಂ ಉದ್ಯೋಗವನ್ನು ಹೊಂದುವುದಕ್ಕೆ ವಿದ್ಯಾವಂತರಲ್ಲಿ ಪ್ರೇರಣೆ ನೀಡಲಾಯಿತು.

ಈ ಯೋಜನೆ 18 ರಿಂದ 35 ವರ್ಷದೊಳಗಿನ ಎಲ್ಲಾ ಮೆಟ್ರಿಕ್ ಮತ್ತು ಮೆಟ್ರಿಕ್ ಪೂರ್ವ ಹಾಗೂ ಕೈಗಾರಿಕಾ ತರಬೇತಿ (ಐ.ಟಿ.ಐ) ಪಡೆದ ಯುವಕರಿಗೆ ಸ್ವಯಂ ಉದ್ಯೋಗ ಕಲ್ಪಿಸುವಲ್ಲಿ ಪ್ರಮಾಣಿಕ ಪ್ರಯತ್ನ ಮಾಡುತ್ತಿದೆ. ಮಹಿಳೆಯರಿಗೆ ಅದರಲ್ಲೂ ತಂತ್ರಜ್ಞಾನದಲ್ಲಿ ಪದವಿ ಪಡೆದ ಯುವತಿಯರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹಣಕಾಸಿನ ತೊಂದರೆ ಇರುವ, ಸ್ವಂತ ಭೂಮಿ ಇಲ್ಲದ, ಇನ್ನಾವುದೇ ಮೂಲದಿಂದ ವರಮಾನ ಬರದೇ ಇರುವ ಯುವಕರಿಗೆ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಮೇಲೆ ತಿಳಿಸಿದ ಎಲ್ಲಾ ಪ್ರಯತ್ನಗಳು ಗ್ರಾಮೀಣ ಯುವ ಜನರಿಗೆ ಆಶಾಕಿರಣವಾಗಿ ಮಾರ್ಪಟ್ಟಿತ್ತು. ಇದೇ ಯೋಜನೆಯ ಆಧಾರದ ಮೇಲೆ 1986ರ ಸೆಪ್ಟೆಂಬರ್ ತಿಂಗಳಲ್ಲಿ ನಗರದಲ್ಲಿ ವಾಸಿಸುವ ವಿದ್ಯಾವಂತ ಯುವಕರಿಗೆ ಸ್ವಯಂ ಉದ್ಯೋಗ ನೀಡುವ ಯೋಜನೆಯೊಂದನ್ನು ರೂಪಿಸಲಾಯಿತು. ಇದಕ್ಕಾಗಿ ಅಗತ್ಯವಿರುವ ಹಣಕಾಸಿನ ನೆರವನ್ನು ವಾಣಿಜ್ಯ ಬ್ಯಾಂಕುಗಳ ಮೂಲಕ ಒದಗಿಸಲು ಅವಕಾಶ ಮಾಡಿಕೊಳ್ಳಲಾಯಿತು. ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ನೀಡುವ ಕಾರ್ಯಕ್ರಮವನ್ನು 1993ರ ಅಕ್ಟೋಬರ್ 2 ರಂದು ಜಾರಿಯಾದ ಪ್ರಧಾನ ಮಂತ್ರಿ ರೋಜಗಾರ್ ಯೋಜನೆಯ ಜೊತೆ ವಿಲೀನಗೊಳಿಸಲಾಯಿತು.

17. ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ: ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಕಾರ್ಯಕ್ರಮವನ್ನು ಆಗಸ್ಟ್ 15, 1983 ರಂದು ಜಾರಿಗೊಳಿಸಲಾಯಿತು. ಪ್ರಗತಿಗೆ ಸಹಾಯವಾಗುವಂತಹ ಯೋಜನೆಗಳನ್ನು ಕಾರ್ಯಗತಗೊಳಿಸುವುದರ ಮೂಲಕ ಉದ್ಯೋಗ ಒದಗಿಸುವುದು. ಈ ಕಾರ್ಯಕ್ರಮದ ಗುರಿ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಿಸುವುದು ಈ ಕಾರ್ಯಕ್ರಮದ ಇನ್ನೊಂದು ಉದ್ದೇಶ. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ಹಣಕಾಸನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರ ಒದಗಿಸಿತು. ಕೇಂದ್ರ ಸರ್ಕಾರವು ಹಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ನಡುವೆ ಹಣಕಾಸಿನ ಅನುದಾನವನ್ನು ಬಿಡುಗಡೆ ಮಾಡಿತು. ಈ ಕಾರ್ಯಕ್ರಮದ ಪ್ರಮುಖ ಅಂಶಗಳು:

ಎ. ಗ್ರಾಮೀಣ ಸಂಪರ್ಕ ರಸ್ತೆಗಳನ್ನು ನಿರ್ಮಾಣ ಮಾಡುವುದು.

ಬಿ. ನೀರಾವರಿ ಯೋಜನೆಯಡಿ ಕಾಲುವೆ ಮತ್ತು ಉಪಕಾಲುವೆಗಳನ್ನು ನಿರ್ಮಾಣ ಮಾಡುವುದು.

ಸಿ. ವ್ಯವಸಾಯದ ಭೂಮಿ ಅಭಿವೃದ್ಧಿಪಡಿಸುವುದು.

ಡಿ. ಬಂಜರು ಭೂಮಿಯನ್ನು ವ್ಯವಸಾಯಕ್ಕೊಳಪಡಿಸುವುದು.

ಇ. ನೀರಿನ ನಿರ್ವಹಣೆ ಮತ್ತು ಸಂರಕ್ಷಣೆ ಯೋಜನೆಗಳನ್ನು ರೂಪಿಸುವುದು.

1989ರ ಏಪ್ರಿಲ್ ತಿಂಗಳಲ್ಲಿ ಈ ಕಾರ್ಯಕ್ರಮವನ್ನು ಇಂದಿರಾ ಆವಾಸ್ ಯೋಜನೆಯ ಜೊತೆ ವಿಲೀನಗೊಳಿಸಲಾಯಿತು.

18. ಜವಾಹರ್ ರೋಜಗಾರ್ ಯೋಜನೆ: ಈ ಯೋಜನೆಯನ್ನು ಕೇಂದ್ರ ಸರ್ಕಾರ 1989ರ ಏಪ್ರಿಲ್ ತಿಂಗಳಲ್ಲಿ ಜಾರಿಗೆ ತಂದಿತು. ಇಲ್ಲಿಯವರೆಗೆ ಅಸ್ತಿತ್ವದಲ್ಲಿದ್ದ ಎಲ್ಲಾ ಉದ್ಯೋಗಾಧಾರಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (ಎನ್.ಆರ್.ಇ.ಪಿ, ಆರ್.ಎಲ್.ಇ.ಜಿ.ಪಿ)ಗಳನ್ನು ಈ ಕಾರ್ಯಕ್ರಮದ ಜೊತೆ ವಿಲೀನಗೊಳಿಸಲಾಯಿತು. ಭಾರತದ ಪ್ರಥಮ ಪ್ರಧಾನಮಂತ್ರಿ ಜವಹರ್‌ಲಾಲ್ ನೆಹರೂರವರ ನೆನಪಿನಾರ್ಥ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಜವಾಹಾರ್ ರೋಜಗಾರ್ ಯೋಜನೆಯ ಮುಖ್ಯ ಲಕ್ಷಣಗಳೆಂದರೆ.

ಎ. ಈ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾಣೆಯ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಯಿತು.

ಬಿ. ಯೋಜನೆಗೆ ಬೇಕಾದ ಹಣಕಾಸನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 80:20ರ ಅನುಪಾತದಲ್ಲಿ ಒದಗಿಸಿದವು.

ಸಿ. ರಾಜ್ಯಗಳಿಗೆ ಅನುದಾನ ನೀಡುವಾಗ ಕೇಂದ್ರ ಸರ್ಕಾರ ಆಯಾ ರಾಜ್ಯಗಳು ಎದುರಿಸುತ್ತಿರುವ ಬಡತನದ ತೀವ್ರತೆಯನ್ನು ಆಧಾರವಾಗಿಟ್ಟುಕೊಳ್ಳಲಾಯಿತು.

ಡಿ. ಹೆಚ್ಚು ಹಿಂದುಳಿದಿರುವ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮದಡಿ ಹೆಚ್ಚು ಅನುದಾನ ನೀಡಲಾಯಿತು.

ಇ. ಕುಟುಂಬದ ಕನಿಷ್ಠ ಒಬ್ಬ ವ್ಯಕ್ತಿಗೆ ವರ್ಷದಲ್ಲಿ 50 ರಿಂದ 100ದಿನಗಳ ಉದ್ಯೋಗವನ್ನು ಕಲ್ಪಿಸಲಾಯಿತು.

ಎಫ್. ಮಹಿಳೆಯರಿಗೆ ಶೇ. 30ರಷ್ಟು ಉದ್ಯೋಗವನ್ನು ಮೀಸಲಿಡಲಾಯಿತು.

ಜಿ. ಸಬ್ಸಿಡಿ ದರದಲ್ಲಿ ಕನಿಷ್ಠ 2 ಕೆ.ಜಿ. ಆಹಾರ ಧಾನ್ಯವನ್ನು ಪ್ರತಿಯೊಬ್ಬ ಕಾರ್ಮಿಕನಿಗೂ ನೀಡಲಾಯಿತು.

ಎಚ್. ಅನುದಾನದ ಒಟ್ಟು ಹಣದಲ್ಲಿ ಶೇ 60 ರಷ್ಟನ್ನು ವೇತನಕ್ಕಾಗಿ ಖರ್ಚು ಮಾಡಲಾಯಿತು.

ಮೇಲಿನ ಎಲ್ಲಾ ಲಕ್ಷಣಗಳನ್ನು ಮೈಗೂಡಿಸಿಕೊಂಡು ಜವಾಹರ್ ರೋಜಗಾರ್ ಯೋಜನೆ ಸಾಕಷ್ಟು ಯಶಸ್ಸನ್ನು ಸಾಧಿಸಿತು. ಆದರೆ 1999ರಲ್ಲಿ ಕೇಂದ್ರ ಸರ್ಕಾರ ಈ ಕಾರ್ಯಕ್ರಮವನ್ನು ಜವಾಹರ್ ಗ್ರಾಮೀಣ ಸಮೃದ್ಧಿ ಯೋಜನೆಯ ಜೊತೆ ವಿಲೀನಗೊಳಿಸಲಾಯಿತು.

19. ಗ್ರಾಮೀಣ ಯುವಜನರಿಗೆ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮ: 1989ರ ಆಗಸ್ಟ್‌ನಲ್ಲಿ ಆರಂಭಿಸಲಾದ ಗ್ರಾಮೀಣ ಜನರಿಗೆ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮವು ಸಮಗ್ರ, ಗ್ರಾಮೀಣ ಅಭಿವೃದ್ಧಿಗೆ ಒಂದು ಮಹತ್ವಪೂರ್ಣ ಯೋಜನೆಯಾಗಿದೆ. ಗ್ರಾಮೀಣ ನಿರುದ್ಯೋಗ ನಿವಾರಣೆ ಅಂಗವಾಗಿ ಬಡತನ ರೇಖೆಯ ಕೆಳಗಿರುವ ಯುವಕರಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಗುರುತಿಸಿ ಉದ್ಯೋಗ ತರಬೇತಿ ನೀಡುವ ಉದ್ದೇಶ ಈ ಕಾರ್ಯಕ್ರಮದಾಗಿತ್ತು. ಪ್ರತಿಯೊಂದು ಬ್ಲಾಕ್ ಮಟ್ಟದಲ್ಲಿ 40 ಯುವ ಜನರಿಗೆ ಕೌಶಲ್ಯವನ್ನು ಉದ್ಯಮಶೀಲತೆಯನ್ನು ರೂಡಿಸಿಕೊಳ್ಳಲು ತರಬೇತಿ ನೀಡಲಾಗುವುದು.

ಈ ಕಾರ್ಯಕ್ರಮದಲ್ಲಿ ತರಬೇತಿ ಪಡೆಯುವ ಯುವಜನರಲ್ಲಿ ಮೂರರಲ್ಲಿ ಒಂದು ಪಾಲು ಮಹಿಳೆಯರು ಅಂದರೆ ಯುವತಿಯರಿರಬೇಕು ಎಂಬುದನ್ನು ಸೂಚಿಸಲಾಗಿದೆ.

ಪೂರ್ವಭಾವಿ ಕೆಲಸಗಳು:

ಎ. ಪೂರ್ವಭಾವಿ ಪರೀಕ್ಷೆ ನಡೆಸಿ ಪರಿಶಿಲಿಸುವುದು.

ಬಿ. ತರಬೇತಿಗಾಗಿ ಯುವಜನರನ್ನು ಆಯ್ಕೆ ಮಾಡುವುದು.

ಸಿ. ತರಬೇತಿ ಪಡೆದವರಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸುವುದು.

ಡಿ. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸಹಾಯ ಪಡೆಯುವುದು.

ಇ. ತರಬೇತಿ ಪಡೆದವರಿಗೆ ಸಹಕಾರಿ ಬ್ಯಾಂಕುಗಳು ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ಹಣಕಾಸಿನ ಸಾಲ ಸೌಲಭ್ಯ ಒದಗಿಸುವುದು.

ಒಟ್ಟನಲ್ಲಿ ಗ್ರಾಮೀಣ ಯುವಜನರಿಗೆ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮ ಗ್ರಾಮೀಣ ಯುವಕರಲ್ಲಿ ಆಶಾದಾಯಕ ಭವಿಷ್ಯವನ್ನು ರೂಪಿಸುವಲ್ಲಿ ಯಶಸ್ವಿ ಪಾತ್ರ ವಹಿಸುತ್ತಿದೆ.

20. ಗ್ರಾಮೀಣ ಬಡವರ ಆರ್ಥಿಕ ಪುನರ್ವಸತಿ ಕಾರ್ಯಕ್ರಮ: ಒರಿಸ್ಸ ರಾಜ್ಯ ಗ್ರಾಮೀಣ ಬಡಜನತೆಯ ಶ್ರೇಯೋಭಿವೃದ್ಧಿಗಾಗಿ 1980ರ ಜೂನ್‌ನಲ್ಲಿ ಜಾರಿಗೆ ತಂದ ಕಾರ್ಯಕ್ರಮವೇ ಗ್ರಾಮೀಣ ಬಡವರ ಆರ್ಥಿಕ ಪುನರ್ವಸತಿ ಕಾರ್ಯಕ್ರಮ, ರಾಜ್ಯ ಮಟ್ಟದಲ್ಲಿ ಬಡತನ ನಿರ್ಮೂಲನೆ ಮಾಡುವುದು ಈ ಕಾರ್ಯಕ್ರಮದ ಮುಖ್ಯ ಗುರಿ. ಪ್ರತೀ ಹಳ್ಳಿಯಲ್ಲಿ ಕನಿಷ್ಠ 10 ಕುಟುಂಬಗಳಿಗೆ ಸಹಾಯ ನೀಡುವುದು ಈ ಕಾರ್ಯಕ್ರಮದ ಉದ್ದೇಶ. ಈ ಉದ್ದೇಶಕ್ಕಾಗಿ ಆಯ್ದುಕೊಂಡ ಕುಟುಂಬಗಳು ಕಡುಬಡತನದಿಂದ ಕೂಡಿದ್ದು ವಾರ್ಷಿಕ ಆದಾಯ ರೂ. 1200 ಗಳಿಗಿಂತ ಕಡಿಮೆ ಹೊಂದಿದೆ. ಈ ಬಡ ಕುಟುಂಬಗಳ ಉದ್ಧಾರಕ್ಕಾಗಿ ಕೈಗೊಂಡ ಪ್ರಮುಖ ಯೋಜನೆಗಳೆಂದರೆ.

ಎ. ಭೂ ಆಧಾರಿತ ಯೋಜನೆ

ಬಿ. ಪಶು ಸಂಗೋಪನೆ ಆಧಾರಿತ ಯೋಜನೆ.

ಸಿ. ಮೀನುಗಾರಿಕೆ ಯೋಜನೆ.

ಡಿ. ರೇಷ್ಮೆಗಾರಿಕೆ ಯೋಜನೆ.

ಇ. ಇನ್ನಿತರ ಕೃಷಿಯೇತರ ಚಟುವಟಿಕೆಗಳು.

ಗ್ರಾಮೀಣ ಬಡವರ ಆರ್ಥಿಕ ಪುನರ್ವಸತಿ ಕಾರ್ಯಕ್ರಮ ಕೇವಲ ಒರಿಸ್ಸ ರಾಜ್ಯಕ್ಕೆ ಮಾತ್ರ ಸೀಮಿತವಾಗಿದ್ದು, ಈ ಕಾರ್ಯಕ್ರಮದಲ್ಲಿ ಹಲವಾರು ಲೋಪದೋಷಗಳಿದ್ದರೂ ಗ್ರಾಮೀಣ ಬಡತನ ನಿರ್ಮೂಲನೆಗೆ ಪ್ರಾಮಾಣಿಕ ಪ್ರಯತ್ನ ಮೂಡಿತು.

21. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ: ನಮ್ಮ ರಾಷ್ಟ್ರಕ್ಕೆ ಸ್ವತಂತ್ರ ಬಂದ ನಂತರ ಕೇಂದ್ರ ಸರ್ಕಾರ ಆರಂಭದಿಂದಲೂ ಯೋಜನಾಬದ್ಧ ಪ್ರಗತಿಗೆ ಪಣತೊಟ್ಟಿದೆ. ಪಂಚವಾರ್ಷಿಕ ಯೋಜನೆಗಳ ದೇಶದ ಬಡತನ ನಿವಾರಣೆ, ಆರ್ಥಿಕ ಅಸಮಾನತೆಯ ನಿರ್ಮೂಲನೆಗೆ, ಸಾಮಾಜಿಕ ನ್ಯಾಯಕ್ಕೆ ಪ್ರಾಮಾಣಿಕ ಪ್ರಯತ್ನ ಮೊದಲಾಗಿದೆ. ಈ ದಿಸೆಯಲ್ಲಿ 1978–79ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ರೂಪರೇಷೆಗಳನ್ನು ತಯಾರಿಸಲಾಯಿತು. ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳು;

ಎ. ದೇಶದ ಜನರ ಹಸಿವನ್ನು ನೀಗಿಸಿ, ಆರೋಗ್ಯ ರಕ್ಷಣೆ ಹಾಗು ಕಾರ್ಯದಕ್ಷತೆಯನ್ನು ಹೆಚ್ಚಿಸುವುದು.

ಬಿ. ಕೂಲಿಗಾಗಿ ಕಾಳು ಯೋಜನೆಯ ಆಧಾರದ ಮೇಲೆ ವ್ಯಾಪಕವಾಗಿ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು.

ಸಿ. ಕಡ್ಡಾಯ, ತ್ವರಿತ ಮತ್ತು ಸಾರ್ವಜನಿಕ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು.

ಡಿ. ಆಡಳಿತಾತ್ಮಕ ವಿಕೇಂದ್ರೀಕರಣ ಜಾರಿಗೆ ತರುವುದು.

ಇ. ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿ ಜನರು ಪ್ರತ್ಯಕ್ಷವಾಗಿ ಪಾಲ್ಗೊಂಡು ಪಾತ್ರವಹಿಸುವಂತಹ ವಾತಾವರಣ ನಿರ್ಮಿಸುವುದು.

ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವನ್ನು 1980 ಅಕ್ಟೋಬರ್ 2 ರಂದು ಇಡೀ ರಾಷ್ಟ್ರದ ಎಲ್ಲಾ 5100 ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜಾರಿಗೊಳಿಸಲಾಯಿತು. ಈ ಕಾರ್ಯಕ್ರಮದಿಂದ ಉಪಯೋಗ ಪಡೆಯುವುದೆಂದರೆ ಕಡುಬಡವರು, ಸಣ್ಣ ಹಿಡುವಳಿದಾರರು, ಭೂರಹಿತ ಕೃಷಿಕಾರ್ಮಿಕರು, ವಿವಿಧ ಕಸುಬುದಾರರು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು. ಅಂಕಿ ಅಂಶಗಳ ಪ್ರಕಾರ ಈ ಕಾರ್ಯಕ್ರಮದಡಿಯಲ್ಲಿ 1983–84ರವರೆಗೆ 12.57 ದಶಲಕ್ಷ ಕುಟುಂಬಗಳು ಫಲಾನುಭವಿಗಳಾಗಿದ್ದು, 2244 ಕೋಟಿರೂಗಳನ್ನು ಅವುಗಳಿಗಾಗಿ ಒದಗಿಸಲಾಗಿದೆ. ರಾಷ್ಟ್ರೀಯ ವಾಣಿಜ್ಯ ಬ್ಯಾಂಕುಗಳು, ಸಹಕಾರ ಬ್ಯಾಂಕುಗಳು ಈ ಕಾರ್ಯಕ್ರಮಕ್ಕೆ ಹಣಕಾಸಿನ ನೆರವನ್ನು ಒದಗಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದ ಯಶಸ್ಸಿಗೆ ಹಗಲಿರುಳು ಶ್ರಮಿಸುತ್ತಿವೆ.

22. ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಅಭಿವೃದ್ಧಿ ಯೋಜನೆ : ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯನ್ನು 1982–83ರಲ್ಲಿ ಜಾರಿಗೆ ತರಲಾಯಿತು. ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರ ಕಲ್ಯಾಣಕ್ಕಾಗಿ ಹಾಕಿಕೊಂಡ ಕಾರ್ಯಕ್ರಮವೇ ಈ ಯೋಜನೆಯಾಗಿದೆ. ದೀರ್ಘಕಾಲದವರೆಗೆ ಉಪಯೋಗ ಪಡೆಯುವ ಮತ್ತು ಶಾಶ್ವತವಾಗಿ ಉದ್ಯೋಗ ಹೊಂದುವ ಮಹದಾಸೆಯಿಂದ ಗೃಹ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲಾಯಿತು. ಆ ಮೂಲಕ ಉತ್ಪಾದನೆಯಾದ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಡಿ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಹಿಳೆಯರ ಹಲವಾರು ತಂಡಗಳನ್ನು ರಚಿಸಲಾಯಿತು. ಪ್ರತೀ ತಂಡದಲ್ಲಿ 10–15 ಮಹಿಳೆಯರನ್ನು ಆರಿಸಲಾಯಿತು. ತಮ್ಮದೇ ಆದ ಗೃಹ ಕೈಗಾರಿಕೆಗಳನ್ನು ಆರಂಭಿಸಲು ಅಥವಾ ಇನ್ನಿತರ ಸೇವೆಗಳನ್ನು ಪ್ರಾರಂಭ ಮಾಡಲು ಪ್ರತಿ ತಂಡಕ್ಕೆ 15,000 ರೂಪಾಯಿಗಳನ್ನು ನೀಡಲಾಯಿತು. ಈ ಹಣಕಾಸನ್ನು 40:40:20 ರ ಅನುಪಾತದಲ್ಲಿ ಕ್ರಮವಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಯುನಿಸೆಫ್ ಸಂಸ್ಥೆಗಳು ಅನುದಾನದ ರೂಪದಲ್ಲಿ ನೀಡುತ್ತವೆ. ಸರ್ಕಾರೇತರ ಸಂಘ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಲಾಯಿತು. ಕೇಂದ್ರ ಸರ್ಕಾರವು 1995–96ರಲ್ಲಿ ಈ ಕಾರ್ಯಕ್ರಮದಡಿ ಹೊಸದಾಗಿ 2 ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಅವುಗಳೆಂದರೆ ಮಕ್ಕಳ ಕ್ಷೇಮಾಭಿವೃದ್ಧಿ ಚಟುವಟಿಕೆಗಳು ಮತ್ತು ಶಿಕ್ಷಣ, ಸಂಪರ್ಕ ಮತ್ತು ಮಾಹಿತಿ ಚಟುವಟಿಕೆಗಳು.

ಮೇಲೆ ತಿಳಿಸಿದ ಪ್ರಯತ್ನಗಳೊಂದಿಗೆ ಗ್ರಾಮೀಣ ಪ್ರದೇಶದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ನಿಧಾನಗತಿಯಲ್ಲಿ ಪ್ರಗತಿಸಾದಿಸುತ್ತಿದೆ.

23. ಇಂದಿರಾ ವಸತಿ ಯೋಜನೆ: ಈ ಯಾಜನೆಯನ್ನು 1985 ಮೇ ತಿಂಗಳಲ್ಲಿ ಜಾರಿಗೆ ತರಲಾಯಿತು. ಈ ಕಾರ್ಯಕ್ರಮದ ಪ್ರಮುಖ ಉದ್ದೇಶ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಕಡುಬಡವರಿಗೆ ಅಗ್ನಿ ನಿರೋಧಿತ ಮನೆಗಳನ್ನು ನಿರ್ಮಿಸಿಕೊಡುವುದು. ಈ ಕಾರ್ಯಕ್ರಮದ ಫಲಾನುಭವಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಜೀತ ಪದ್ಧತಿಯಿಂದ ಸ್ವತಂತ್ರರಾದ ಕೂಲಿಕಾರ್ಮಿಕರು, ಪ್ರತೀ ಜಿಲ್ಲೆಯ ಬ್ಲಾಕ್ ಮಟ್ಟದಲ್ಲಿ ನೇಮಿಸಲ್ಪಟ್ಟಿರುವ ಪರಿಣಿತಿ ಪಡೆದಿರುವ ತಜ್ಞರಿಂದ ಮನೆಗಳನ್ನು ನಿರ್ಮಿಸಿಕೊಡಲಾಗುತ್ತದೆ. ಫಲಾನುಭವಿಗಳು ಈಗಾಗಲೇ ವಾಸಮಾಡುತ್ತಿರುವ ಮನೆಗಳನ್ನು ಕೆಡವಿ ಅದೇ ಜಾಗದಲ್ಲಿ ನಿರ್ಮಿಸಿಕೊಳ್ಳಬಹುದು. 1989 ರಿಂದ ಜವಾಹರ್ ರೋಜ್‌ಗಾರ್ ಯೋಜನೆಯ ಉಪಯೋಜನೆಯಾಗಿ ಇಂದಿರಾ ವಸತಿ ಯೋಜನೆ ಕಾರ್ಯಗತವಾಗುತ್ತಿದೆ. ಜವಾಹಾರ್ ರೋಜ್‌ಗಾರ್ ಯೋಜನೆಯು ಪ್ರತೀ ವರ್ಷವೂ ಶೇ. 10 ರಷ್ಟು ಅನುದಾನವನ್ನು ಇಂದಿರ ವಸತಿ ಯೋಜನೆಗೆ ನೀಡುತ್ತಿದೆ. ಆದರೆ 1996 ಏಪ್ರಿಲ್‌ನಿಂದ ಇಂದಿರಾ ವಸತಿ ಯೋಜನೆಯು ಸಂಪೂರ್ಣ ಸ್ವತಂತ್ರ ಕಾರ್ಯಕ್ರಮವಾಗಿ ಕಾರ್ಯನಿರ್ವಹಿಸುತ್ತಿದೆ. ಮೈದಾನ ಪ್ರದೇಶಗಳಲ್ಲಿ ಪ್ರತೀ ಅಗ್ನಿ ನಿರೋಧ ಮನೆಗೆ 20,000 ರೂಪಾಯಿಗಳು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ 22,000 ರೂಪಾಯಿಗಳನ್ನು ಈ ಯೋಜನೆಯಡಿ ನೀಡಲಾಗುತ್ತಿದೆ.

24. ಸಮಗ್ರ ಗ್ರಾಮೀಣ ಶಕ್ತಿ ಸಂಪನ್ಮೂಲ ಯೋಜನೆಯ ಕಾರ್ಯಕ್ರಮ: ಗ್ರಾಮೀಣ ಜನರ ಇಂಧನ ಕೊರತೆಯನ್ನು ನೀಗಿಸಲು ಕೇಂದ್ರ ಸರ್ಕಾರ 1986–87ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿತು. ದೇಶವು ಕೆಲವು ಆಯ್ದ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯವಿರುವ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಅಭಿವೃದ್ಧಿಗೆ ಈ ಕಾರ್ಯಕ್ರಮ ಹೆಚ್ಚು ಒತ್ತು ನೀಡಿತು. ದಿನನಿತ್ಯದ ಅವಶ್ಯಕತೆಗಳಿಗೆ ಇಂಧನದ ಅಗತ್ಯತೆಯನ್ನು ಪೂರೈಸುವ ಯೋಜನೆಯಾಗಿ ದೇಶದ ಹಲವು ಭಾಗಗಳಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಯಿತು. ಕೇಂದ್ರ ಸರ್ಕಾರದ ಮತ್ತು ಯೋಜನಾ ಆಯೋಗ ಪ್ರಾಯೋಜಕತ್ವದ ನೆರವಿನಿಂದ ಹೊಸ ಬಗೆಯ ಇಂಧನಗಳ ಅನ್ವೇಷಣೆ ಮತ್ತು ಸಂಶೋಧನೆಯಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಲಾಯಿತು. ಮುಗಿದು ಹೋಗದಿರುವ ಸಂಪನ್ಮೂಲಗಳಾದ ಸೌರಶಕ್ತಿ, ಪವನಶಕ್ತಿ, ಜಲವಿದ್ಯುತ್ ಶಕ್ತಿ ಮತ್ತು ಸಮುದ್ರ ಅಲೆಗಳ ಶಕ್ತಿಯ ಬಗೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಈ ಕಾರ್ಯಕ್ರಮ ಗ್ರಾಮೀಣ ಜನರ ಇಂಧನ ಕೊರತೆಯನ್ನು ನೀಗಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿತು.

25 ಉದ್ಯೋಗ ಭರವಸೆ ಯೋಜನೆ: ಉದ್ಯೋಗ ಭರವಸೆ ಯೋಜನೆಯನ್ನು ಬರಗಾಲ ಪೀಡಿತ ಪ್ರದೇಶ, ಮರುಭೂಮಿ ಪ್ರದೇಶ ಮತ್ತು ಗುಡ್ಡುಗಾಡು ಪ್ರದೇಶಗಳ ಸು. 1772 ಹಿಂದುಳಿದ ಕ್ಷೇತ್ರಗಳಲ್ಲಿ, 1993ರ ಅಕ್ಟೋಬರ್ ತಿಂಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಯಿತು. ಈ ಯೋಜನೆಯೂ ಸಹಾ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಂತೆ ವೇತನ ಉದ್ಯೋಗ ಕಾರ್ಯಕ್ರಮವಾಗಿದೆ. ಈ ಯೋಜನೆಯ ಪ್ರಮುಖ ಉದ್ದೇಶವೆಂದರೆ ಭವಿಷ್ಯದಲ್ಲಿ ಉದ್ಯೋಗ ಮತ್ತು ಅಭಿವೃದ್ಧಿಯನ್ನು ಸಂರಕ್ಷಿಸುವಂತಹ ಸಾಮುದಾಯಿಕ, ಸಾಮಾಜಿಕ ಮತ್ತು ಆಸ್ತಿಪಾಸ್ತಿಗಳನ್ನು ನಿರ್ಮಿಸುವುದೇ ಆಗಿರುವುದು. ಈ ಯೋಜನೆಯ ಎರಡನೆಯ ಪ್ರಮುಖ ಉದ್ದೇಶವೆಂದರೆ ಗ್ರಾಮೀಣ ಬಡಜನರಿಗೆ ದೈಹಿಕ ಶ್ರಮದ ಮೂಲಕ ಹೆಚ್ಚುವರಿ ವೇತನ ಉದ್ಯೋಗಗಳನ್ನು ದೊರಕಿಸಿಕೊಡುವುದಾಗಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಕೇಂದ್ರದ ಯೋಜನಾ ವೆಚ್ಚದಲ್ಲಿ 1998–99 ರಲ್ಲಿ 1990 ಕೋಟಿ ರೂ. ಹಾಗೂ 1999–2000 ರಲ್ಲಿ 2400 ಕೋಟಿ ರೂ. ಹಣವನ್ನು ಒದಗಿಸಲಾಗಿತ್ತು.

ಈ ಕಾರ್ಯಕ್ರಮದ ಪ್ರಕಾರ ಪ್ರತೀ ಕುಟುಂಬದಲ್ಲಿ ಗರಿಷ್ಠ ಇಬ್ಬರು ವಯಸ್ಕರಿಗೆ ಉದ್ಯೋಗವನ್ನು ಒದಗಿಸಲಾಗುವುದು. ಆದರೆ ಆ ಕುಟುಂಬ ಬಡತನ ರೇಖೆಗಿಂತ ಕೆಳಗಿರಬೇಕು. ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗದ ಭರವಸೆಯನ್ನು ಈ ಕಾರ್ಯಕ್ರಮ ನೀಡುತ್ತದೆ.

ಈ ಕಾರ್ಯಕ್ರಮ ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿದಲ್ಲಿ ರಾಜ್ಯಸರ್ಕಾರಗಳು ಅಲ್ಪ ಪ್ರಮಾಣದ ಹಣಕಾಸು ನೆರವನ್ನು ನೀಡಬೇಕಾಗುತ್ತದೆ. ಹಣಕಾಸಿನ ಅನುಪಾತ ಕ್ರಮವಾಗಿ ಕೇಂದ್ರ ಮತ್ತು ರಾಜ್ಯಗಳ 80:20 ರ ಪ್ರಮಾಣದಲ್ಲಿರುತ್ತದೆ. ಆದರೆ ಕೆಲವು ರಾಜ್ಯಗಳ ನಿರಾಸಕ್ತಿ ಮತ್ತು ರಾಜಕೀಯ ಕಾರಣಗಳಿಂದ ಉದ್ಯೋಗ ಭರವಸೆ ಕಾರ್ಯಕ್ರಮ ನಿರೀಕ್ಷಿಸಿದಷ್ಟು ಫಲ ಕಂಡಿಲ್ಲ.

26. ಸ್ವರ್ಣ ಜಯಂತಿ ಗ್ರಾಮ ಸ್ವಉದ್ಯೋಗ ಯೋಜನೆ: ಈ ಕಾರ್ಯಕ್ರಮವನ್ನು 1999ರ ಏಪ್ರಿಲ್‌ನಲ್ಲಿ ಗ್ರಾಮೀಣ ಜನರ ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲು ಆರಂಭಿಸಲಾಯಿತು. ಬಡತನ ನಿರ್ಮೂಲನೆಗೆ ಪ್ರಮುಖವಾಗಿ ಒತ್ತು ನೀಡಲಾಯಿತು. ಈ ಹಿಂದೆ ಜಾರಿಯಲ್ಲಿದ್ದ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ, ಸ್ವಉದ್ಯೋಗಕ್ಕಾಗಿ ಗ್ರಾಮೀಣ ಯುವಜನರ ತರಬೇತಿ ಮತ್ತು ಗ್ರಾಮೀಣ ಭಾಗದ ಮಹಿಳಾ ಮತ್ತು ಶಿಶು ಅಭಿವೃದ್ಧಿ, ಇನ್ನೂ ಮುಂತಾದ ಕಾರ್ಯಕ್ರಮಗಳನ್ನು ಒಂದುಗೂಡಿಸಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು.

ಪ್ರಮುಖ ಉದ್ದೇಶಗಳು:

ಎ. ಗ್ರಾಮೀಣ ಬಡತನ ನಿರ್ಮೂಲನೆಗೆ ಪಣತೊಡುವುದು.

ಬಿ. ಕೃಷಿ ಮತ್ತು ಇತರ ಚಟುವಟಿಕೆಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸುವುದು.

ಸಿ. ಈಗಾಗಲೆ ಅಸ್ತಿತ್ವದಲ್ಲಿರುವ ಕಾರ್ಯಕ್ರಮಗಳ ಲೋಪ ದೋಷಗಳನ್ನು ಸರಿಪಡಿಸುವುದು.

ಈ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 3:1 ಅನುಪಾತದಲ್ಲಿ ಹಣಕಾಸು ಒದಗಿಸುತ್ತವೆ. ಈ ಯೋಜನೆಯಡಿ 1990 ಸೆಪ್ಟೆಂಬರ್‌ವರಿಗೆ ಸು. 96,000 ಕುಟುಂಬಗಳಿಗೆ ನೆರವು ನೀಡಲಾಯಿತು (ಎಸ್.ಜಿ.ಎಸ್.ವೈ.).

27. ಪ್ರಧಾನ ಮಂತ್ರಿಗ್ರಾಮ ಸಡಕ್ (ರಸ್ತೆ) ಯೋಜನೆ (ಪಿ.ಎಮ್.ಜಿ.ಎಸ್.ವೈ.): ಈ ಯೋಜನೆಯ ಶೇ. 100 ರಷ್ಟು ಸರ್ಕಾರದ ಪ್ರಾಯೋಜಕತ್ವದಿಂದ ನಡೆಯುವ ಕಾರ್ಯಕ್ರಮವಾಗಿದ್ದು ಡಿಸೆಂಬರ್ 2000 ದಿಂದ ಜಾರಿಗೆ ಬಂದಿತು. ಗ್ರಾಮೀಣ ಪ್ರದೇಶದಲ್ಲಿ ಇದುವರೆಗೂ ಮುಖ್ಯರಸ್ತೆಗೆ ಸಂಪರ್ಕ ಸಾಧಿಸದೇ ಇರುವ ಮತ್ತು 500 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಹಳ್ಳಿಗಳನ್ನು ರಸ್ತೆ ಮಾರ್ಗದ ಮೂಲಕ ಸೇರಿಸುವ ಕಾರ್ಯಕ್ರಮವೇ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ. ಮರುಭೂಮಿ ಪ್ರದೇಶಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ ಮತ್ತು ಪರ್ವತಮಯ ರಾಜ್ಯಗಳಾದ ಹಿಮಾಚಲಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಸಿಕ್ಕಿಂ ಮತ್ತು ಈಶಾನ್ಯ ರಾಜ್ಯಗಳಲ್ಲಿ ಹಳ್ಳಿಗಳ ಜನಸಂಖ್ಯೆ 250 ಜನರಿದ್ದರೂ ಪ್ರಧಾನ ಮಂತ್ರಿ ಗ್ರಾಮ ರಸ್ತೆ ಯೋಜನೆ ಅನ್ವಯವಾಗುತ್ತದೆ. ಇಲ್ಲಿಯವರಿಗೆ ಸು. 9882 ಕೋಟಿಗಳನ್ನು ಈ ಯೋಜನೆಗೆ ಖರ್ಚು ಮಾಡಲಾಗಿದೆ. ಇತ್ತೀಚಿನ ಅಂದಾಜಿನ ಪ್ರಕಾರ ಸು. 1.72 ಲಕ್ಷ ಸಂಪರ್ಕ ಸಾಧಿಸಿದ ಹಳ್ಳಿಗಳನ್ನು ಕೂಡಿಸುವ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದ್ದು ಇದರ ಪ್ರಕಾರ ಒಟ್ಟು 3,68,000 ಕಿಮೀ ಉದ್ದದ ರಸ್ತೆಯನ್ನು ನಿರ್ಮಾಣ ಮಾಡುವ ಹಂತದಲ್ಲಿದೆ. 2009ರ ವೇಳೆಗೆ ದೇಶದ ಪ್ರತಿಯೊಂದು ಹಳ್ಳಿಯೂ ಉತ್ತಮ ದರ್ಜೆಯ ರಸ್ತೆಯನ್ನು ಹೊಂದಿರಬೇಕೆಂಬುದು ಈ ಯೋಜನೆಯ ಉದ್ದೇಶವಾಗಿದೆ.

ಭಾರತ ಹಳ್ಳಿಗಳಲ್ಲಿ ಜೀವಿಸುತ್ತದೆ ಮತ್ತು ನಿಜವಾದ ಭಾರತವೆಂದರೆ ಗ್ರಾಮೀಣ ಭಾರತ ಎಂಬ ಮಾತುಗಳು ಅಕ್ಷರಶಃ ನಿಜವಾಗಿದೆ. ಶೇ. 70ಕ್ಕಿಂತ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲೇ ವಾಸಿಸುತ್ತಿರುವಾಗ ಸರ್ಕಾರ ಯಾವುದೇ ಕಾರ್ಯಕ್ರಮ ಅಥವಾ ಯೋಜನೆಗಳನ್ನು ಹಾಕಿಕೊಳ್ಳುವಾಗ ಗ್ರಾಮೀಣ ಪ್ರದೇಶವನ್ನೇ ಕೇಂದ್ರೀಕರಿಸಬೇಕಾಗುತ್ತದೆ. ಸ್ವಾತಂತ್ರ್ಯಾನಂತರ ಹಾಕಿಕೊಂಡ ನೂರಾರು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ನಿರೀಕ್ಷಿಸಿದಷ್ಟು ಫಲನೀಡದಿದ್ದರೂ, ಗ್ರಾಮೋದ್ಧಾರಕ್ಕಾಗಿ ಪ್ರಾಮಾಣಿಕ ಪ್ರಯತ್ನಗಳು ನಡೆದಿರುವುದಂತೂ ಯಾವುದೇ ಕಾರಣಕ್ಕೂ ತಳ್ಳಿಹಾಕಲಾಗದು. ಗ್ರಾಮೀಣ ಅಭಿವೃದ್ಧಿ ಒಂದು ಸಂಕೀರ್ಣ ವಿಷಯವಾಗಿದ್ದು, ಅದನ್ನು ಕೇವಲ ಒಂದು ಕಾರ್ಯಕ್ರಮದ ಮೂಲಕ ಅಥವಾ ಒಂದು ಪಂಚವಾರ್ಷಿಕ ಯೋಜನೆಯ ಮೂಲಕ ಅಥವಾ ಕಾಲಮಿತಿಯ ಒಂದು ದಶಕದಲ್ಲಿ ಸಂಪೂರ್ಣ ಯಶಸ್ಸು ಸಾಧಿಸಲಾಗದು, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಪೂರ್ವಭಾವಿ ತಯಾರಿ ನಡೆಸಿ, ಅಲ್ಲಿನ ಜ್ವಲಂತ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಅನಕ್ಷರತೆ, ಮೂಢನಂಬಿಕೆಗಳು ಹೆಚ್ಚು ಒತ್ತಡಕ್ಕೆ ಒಳಗಾಗಿರುವ ಕೃಷಿ ಚಟುವಟಿಕೆಗಳು, ಕೈಗಾರಿಕೆಗಳ ನಿರ್ಲಕ್ಷ್ಯ, ಸೇವಾ ಕ್ಷೇತ್ರದ ವಿಸ್ತರಣೆ ಮುಂತಾದವುಗಳ ಅಭಿವೃದ್ಧಿಗೆ ಯೋಜನಾ ಬದ್ಧವಾಗಿ, ವೈಜ್ಞಾನಿಕವಾಗಿ ಮತ್ತು ಕ್ರಮಬದ್ಧವಾಗಿ ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ.

ಸ್ವಾತಂತ್ರ್ಯ ನಂತರ ದೇಶದಲ್ಲಿ ಜಾರಿಯಾಗಿರುವ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಲೋಪದೋಷಗಳನ್ನು ಕೂಲಂಕಷವಾಗಿ ಪತ್ತೆ ಹಚ್ಚಬೇಕು. ಅನಂತರ ಅವುಗಳನ್ನು ಹೋಗಲಾಡಿಸಲು ಸರಿಯಾದ ಕ್ರಮಗಳನ್ನು ಸೂಚಿಸಬೇಕು. ಆಧುನಿಕ ಜಗತ್ತಿನಲ್ಲಿ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ಗ್ರಾಮೀಣ ಜನರು ಧೈರ್ಯದಿಂದ ತಮ್ಮ ಜೀವನವನ್ನು ನಡೆಸುವಂತಾಗಬೇಕು. ಯೋಜನೆಗಳನ್ನು ರೂಪಿಸುವಾಗ ಕೇಂದ್ರ ಸರ್ಕಾರ ರಾಜ್ಯಗಳ ಜೊತೆ ಸಮಾಲೋಚಿಸಬೇಕು. ಅವುಗಳ ಬೇಡಿಕೆಯನ್ನು ಈಡೇರಿಸುವ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಭಾರತ ಒಕ್ಕೂಟ ವ್ಯವಸ್ಥೆಯ ಸರ್ಕಾರವನ್ನು ಹೊಂದಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಭಿನ್ನಾಭಿಪ್ರಾಯಗಳಿದ್ದಾಗ ಯಾವುದೇ ಕಾರ್ಯಕ್ರಮಗಳು ಯಶಸ್ವಿಯಾಗುವುದಿಲ್ಲ.

21ನೆಯ ಶತಮಾನ ಭಾರತಕ್ಕೆ ಒಂದು ಪೈಪೋಟಿಯಿಂದ ಕೂಡಿದ ಶತಮಾನವಾಗಿದ್ದು ಅದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಗುಂಪಿಗೆ ಸೇರಬೇಕಾದರೆ, ಮೊದಲು ಗ್ರಾಮೀಣ ಜನರ ಮತ್ತು ಪ್ರದೇಶಗಳ ಕ್ಷೇಮಾಭಿವೃದ್ಧಿಯ ಕಡೆ ಗಮನಹರಿಸಬೇಕಾಗುತ್ತದೆ. (ಕೆ.ಜಿ.)

**ಗ್ರಾಮೀಣ ಜನಸಂಖ್ಯೆ:** ಹಳ್ಳಿಗಾಡಿನಲ್ಲಿ ವಾಸಿಸುವ ಜನಸಂಖ್ಯೆಯನ್ನು ಗ್ರಾಮೀಣ ಜನಸಂಖ್ಯೆ ಎಂದು ಅರ್ಥೈಸಲಾಗುತ್ತದೆ. ಗ್ರಾಮೀಣ ಎನ್ನುವ ಪದದ ಅರ್ಥ ದೇಶದಿಂದ ದೇಶಕ್ಕೆ ಬದಲಾಗುತ್ತದೆ. ಭಾರತ ದೇಶಕ್ಕೆ ಸಂಭಂಧಿಸಿದಂತೆ ಯಾವುದೇ ಒಂದು ನಿರ್ದಿಷ್ಟವಾದ ಸ್ಥಳದಲ್ಲಿನ ಜನಸಂಖ್ಯೆಯಲ್ಲಿ ಶೇ. 75ಕ್ಕಿಂತಲೂ ಹೆಚ್ಚು ಪುರುಷ ಜನಾಂಗ ಒಕ್ಕಲುತನ / ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಇತರ ಪ್ರಾಥಮಿಕ ಉದ್ಯೋಗಗಳಲ್ಲಿ ತೊಡಗಿದ್ದರೆ ಅದನ್ನು ಗ್ರಾಮೀಣ ಜನಸಂಖ್ಯೆ ಎಂದು ಕರೆಯಲಾಗುತ್ತದೆ. ಕೃಷಿ ಭೂಮಿಯಲ್ಲಿನ ಮನೆಗಳಲ್ಲಿ ವಾಸಿಸುವ ಜನರು, ಗುಡಿಸಲುಗಳಲ್ಲಿ, ಹಳ್ಳಿ ಅಥವಾ ಗ್ರಾಮಗಳಲ್ಲಿ ಮತ್ತು ಅತೀ ಚಿಕ್ಕ ಪಟ್ಟಣಗಳಲ್ಲಿನ ಜನರು ಗ್ರಾಮೀಣ ಜನಸಂಖ್ಯೆಯಲ್ಲಿ ಸೇರುತ್ತಾರೆ. ಸಾಮಾಜಿಕ, ಆರ್ಥಿಕ ಪರಿಸರ ಮತ್ತು ಭೂ ಉಪಯೋಗ ಎಲ್ಲವೂ ಇಲ್ಲಿ ನಗರ ಪ್ರದೇಶಕ್ಕಿಂತ ಭಿನ್ನವಾಗಿರುತ್ತವೆ. (ಬಿ.ಆರ್.)

**ಗ್ರಾಮೀಣ ನಗರ ಅಂಚಿನ ವಲಯ:** ಯಾವ ಪ್ರದೇಶ ನಗರ ಮತ್ತು ಗ್ರಾಮೀಣ ಲಕ್ಷಣಗಳೆರಡನ್ನು ಒಳಗೊಂಡಿರುತ್ತದೆಯೋ ಅಂತಹ ಪ್ರದೇಶಗಳನ್ನು ಗ್ರಾಮೀಣ ಮತ್ತು ನಗರ ಅಂಚಿನ ವಲಯ ಎಂದು ಕರೆಯಲಾಗುತ್ತದೆ. ಈ ವಲಯ ಹೆಚ್ಚು

ಚಲನಾತ್ಮಕವಾಗಿದ್ದು ನಗರಗಳ ಬೆಳವಣಿಗೆಯನ್ನು ಪಸರಿಸುತ್ತಾ, ಗ್ರಾಮೀಣ ವಲಯಗಳು ನಗರ ಪ್ರದೇಶಗಳಿಗೆ ಒಳಪಡುವಂತೆ ಮಾಡುತ್ತದೆ. ಈ ವಲಯ ನಗರದ ವಿಸ್ತರಣೆಗೆ ಅನುಗುಣವಾಗಿ ಸ್ಪಂದಿಸುತ್ತದೆ. ಇಲ್ಲಿನ ಸಾಮಾಜಿಕ, ಆರ್ಥಿಕ, ಲಕ್ಷಣಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡಕ್ಕೂ ಭಿನ್ನವಾಗಿವೆ.

1962ರಲ್ಲಿ ವಿಸ್ಸಿಂಕ್ ರವರು ಅಮೇರಿಕದ ನಗರಗಳ ಮುನ್ನೋಟ ಎಂಬ ಪುಸ್ತಕದಲ್ಲಿ ಗ್ರಾಮೀಣ ಮತ್ತು ನಗರ ಅಂಚಿನ ವಲಯ ಭೂ ಬಳಕೆಯ ದೃಷ್ಟಿಯಿಂದ ಅತೀ ಹೆಚ್ಚು ಚಲನಾತ್ಮಕವಾಗಿರುವ ಭೂಭಾಗ ಎಂದಿದ್ದಾರೆ. ಈ ವಲಯ ವಾಸಕ್ಕೆ, ವ್ಯವಸಾಯಕ್ಕೆ, ಕೈಗಾರಿಕೆಗೆ, ಹೈನುಗಾರಿಕೆ ಮುಂತಾದ ಉದ್ದೇಶಗಳಿಗಾಗಿ ಉಪಯೋಗವಾಗುತ್ತದೆ. ಜೊತೆಗೆ ಇಲ್ಲಿನ ವೃತ್ತ ರಚನೆ ಭಿನ್ನತೆಯಿಂದ ಕೂಡಿರುತ್ತದೆ ಎಂದಿದ್ದಾರೆ. 1960 ರಲ್ಲಿ ಗೋಲ್ಡ್‌ಜ್ ರವರು ಸಿಡ್ನಿ ನಗರದ ಅಂಚಿನ ವಲಯದ ಬಗ್ಗೆ ಅಧ್ಯಯನ ಮಾಡಿ ಇದು ಭೌಗೋಳಿಕವಾಗಿಯಾದರೂ ನಗರವಲ್ಲದ ಭೂಭಾಗವೆಂದು ವಿವರಿಸುವರು. ಈ ಮೇಲಿನ ಎರಡು ಹೇಳಿಕೆಗಳು ಅಂದಿನ ಪ್ರದೇಶದ ಸಾಮಾನ್ಯ ಪರಿಚಯವನ್ನು ನೀಡುತ್ತವೆ. ಜೊತೆಗೆ ಕೆಲವು ಭಾಗಗಳಲ್ಲಿ ಇದು ಹೆಚ್ಚು ವೇಗವಾಗಿ ಮತ್ತು ಕೆಲವು ಭಾಗಗಳಲ್ಲಿ ನಗರಗಳ ಅಂಚಿನಲ್ಲಿ ಅಭಿವೃದ್ಧಿ ಹೊಂದಿ ಸ್ಥಿರವಾಗಿರುವಂತೆ ಕಂಡುಬರುತ್ತದೆ.

ಈ ವಲಯದಲ್ಲಿ ಭೂ ಬಳಕೆ ವೈವಿಧ್ಯದಿಂದ ಕೂಡಿರುತ್ತದೆ. ಅತೀ ಹಳೆಯದಾದ ಗ್ರಾಮೀಣ ಕಟ್ಟಡಗಳ ಜೊತೆಗೆ ಹೊಸದಾಗಿ ನಿರ್ಮಿತಗೊಂಡ ಭವ್ಯ ಕಟ್ಟಡಗಳು ಕಂಡು ಬರುತ್ತವೆ. ಅಲ್ಲದೆ ವ್ಯವಸಾಯ ಜೀವನಾಧಾರ ವೃತ್ತಿ ಜೊತೆಗೆ ಕೈಗಾರಿಕೆಗಳು ಅಧಿಕವಾಗಿ ಅಭಿವೃದ್ಧಿಯನ್ನು ಹೊಂದಿರುತ್ತವೆ. ವೆಹರ್ ವೀನರವರು ಅ.ಸ.ಸಂ.ದ ನಗರ ಹೊರವಲಯವನ್ನು ಸಾಂಸ್ಥಿಕ ಮರುಭೂಮಿ ಎಂದಿದ್ದಾರೆ. ಏಕೆಂದರೆ ಇಲ್ಲಿ ಅಹಿತಕರ, ಅನಪೇಕ್ಷಿತ ವೃತ್ತಿಗಳಾದ ಖಸಾಯಿಖಾನೆ, ಪೆಟ್ರೋಲಿಯಂ ಸಂಗ್ರಹ, ಅಡಿಗೆ ಅನಿಲ ಸಂಗ್ರಹ ಮುಂತಾದವು ಅಧಿಕವಾಗಿವೆ.

ಸಾಮಾನ್ಯವಾಗಿ ಗ್ರಾಮೀಣ ಮತ್ತು ನಗರ ವಲಯಗಳು ಈ ಕೆಳಕಂಡಂತೆ ಪ್ರಮುಖ ಲಕ್ಷಣಗಳನ್ನು ಒಳಗೊಂಡಿರುತ್ತದೆ.

* ನಗರಗಳಲ್ಲಿ ಉತ್ಪತ್ತಿಯಾದ ಘನ ತ್ಯಾಜ್ಯವಸ್ತುಗಳ ಸಂಗ್ರಾಹಕ ತಾಣಗಳಾಗಿರುತ್ತವೆ.
* ಕೊಳಚೆ ನೀರಿನ ಶುದ್ಧೀಕರಣ ಮತ್ತು ಸ್ಮಶಾನಗಳನ್ನು ಒಳಗೊಂಡಿರುತ್ತದೆ.
* ಕೊಳಚೆ ಪ್ರದೇಶಗಳು ಅಧಿಕವಾಗಿ ತಲೆ ಎತ್ತುತ್ತವೆ.
* ಈ ವಲಯದಲ್ಲಿ ಯಾವ ಉದ್ಯೋಗಗಳೂ ಸಹ ವಿಸ್ತಾರವಾದ ಭಾಗವನ್ನು ಒಳಗೊಂಡಿರುವುದಿಲ್ಲ.
* ಗೋಲ್ಡ್‌ಜ್ ಅವರು ಗ್ರಾಮೀಣ ನಗರ ಅಂಚಿನ ವಲಯಗಳು ಈ ಕೆಳಕಂಡ ಲಕ್ಷಣಗಳಿಂದ ಕೂಡಿರುವುದೆಂದು ತಿಳಿಸಿದ್ದಾರೆ.
* ಭೂ ಬಳಕೆ ನಿರಂತರ ಆಕ್ರಮಣಿಕೆಯಿಂದ ಕೂಡಿರುವುದು.
* ವ್ಯವಸಾಯ ಕ್ಷೇತ್ರಗಳು ಅತೀ ಚಿಕ್ಕದಾಗಿರುವುವು.
* ಬೇಸಾಯ ಕ್ರಮ ಹೆಚ್ಚು ಸಾಂಪ್ರದಾಯಿಕವಾಗಿರುವುದು.
* ಜನಸಾಂದ್ರತೆ ಚಲನಾತ್ಮಕವಾಗಿದ್ದು ಸಾಂದ್ರತೆ ಕಡಿಮೆ ಅಥವಾ ಸಾಧಾರಣವಾಗಿರುವುದು.
* ವಾಸದ ಮನೆಗಳ ನಿರ್ಮಾಣ ಹೆಚ್ಚಾಗಿ ಮುಂದುವರೆದಿರುವುದು.
* ಸೇವೆ ಹಾಗೂ ಸಾರ್ವಜನಿಕ ಸೌಲಭ್ಯಗಳು ಅಪೂರ್ಣವಾಗಿರುವುದು.
* ಮುಂದಿನ ಬೆಲೆಯ ಹೆಚ್ಚಳವನ್ನು ಗಮನಿಸಿ ಕಟ್ಟಡಗಳನ್ನು ನಿರ್ಮಿಸುವುದು ಅಧಿಕ.

ಪಾಹ್ಲರವರು ನಗರ ಅಂಚಿನ ವಲಯ ಈ ಕೆಳಕಂಡ ಲಕ್ಷಣಗಳನ್ನು ಒಳಗೊಂಡಿದೆ ಎಂದಿದ್ದಾರೆ:

ಅ. ಈ ವಲಯ ಪ್ರತ್ಯೇಕ ಮನೆಗಳಿಂದ ಕೂಡಿರುವುದು.

ಆ. ಲಿಂಗಾನುಪಾತ ಹಾಗೂ ವಯೋ ಆಯ್ಕೆ

ಇ. ಒಳವಲಸೆಯನ್ನು ಹೊಂದಿರುವುದು.

ಈ. ಇಲ್ಲಿ ಹೆಚ್ಚು ಆದಾಯದ ಜನರು ನೆಲೆಸಿದ್ದು ದಿನ ನಿತ್ಯ ನಗರಕ್ಕೆ ಪರಿಚಯಿಸುವವರು ಮತ್ತು ಜನರಲ್ಲಿ ಶ್ರೇಣೀಕೃತ ಸಮಾಜ ಕಂಡುಬರುವುದಿಲ್ಲ ಎಂದು ತಿಳಿಸಿದ್ದಾರೆ.

ಉ. ಗ್ರಾಮೀಣ ನಗರ ಅಂಚಿನ ಪ್ರದೇಶಗಳನ್ನು ಅವುಗಳ ಲಕ್ಷಣಗಳ ಆಧಾರದ ಮೇಲೆ 2 ಪ್ರಮುಖ ವಲಯಗಳಾಗಿ ವಿಂಗಡಿಸಬಹುದು.

ನಗರ ಮತ್ತು ಒಳ ಅಂಚಿನ ವಲಯ: ಇದು ನಗರಗಳಿಗೆ ಹೊಂದಿಕೊಂಡಂತಿರುವ ಅದರ ಮುಂದುವರಿದ ಭಾಗವಾಗಿರುವುದು. ಈ ವಲಯದಲ್ಲಿ ಭೂಬಳಕೆ ಗ್ರಾಮೀಣ ಲಕ್ಷಣಗಳಿಂದ ನಗರಗಳ ಭೂ ಬಳಕೆಗೆ ಪರಿವರ್ತನೆಯಾಗಿರುವುದನ್ನು ಕಾಣಬಹುದು. ಹೊಸ ಕಟ್ಟಡಗಳ ನಿರ್ಮಾಣ ಹಾಗೂ ಜನಸಾಂದ್ರತೆ ಅಧಿಕವಾಗಿರುತ್ತದೆ.

ಗ್ರಾಮೀಣ ಅಥವಾ ಹೊರ ಅಂಚಿನ ವಲಯ: ಗ್ರಾಮೀಣ ಪ್ರಕಾರದ ಭೂ ಬಳಕೆ ಅಧಿಕವಾಗಿರುತ್ತದೆ ಮತ್ತು ಅಲ್ಲಲ್ಲಿ ನಗರದ ಭೂ ಬಳಕೆ ಪ್ರಧಾನವಾಗಿರುತ್ತದೆ. (ಟಿ.ಎಂ.ಎಂ.)

**ಗ್ರಾಮೀಣ ನಗರ ವಸತಿಗಳ ಮುಂದುವರಿಕೆ:** ವಸತಿ ಭೂಗೋಳ ವಿಜ್ಞಾನದ ಒಂದು ಮಹತ್ವದ ಅಂಶ ಗ್ರಾಮೀಣ ನಗರ ವಸತಿಗಳ ಮುಂದುವರಿಕೆಯಾಗಿದೆ. ಕೊಪ್ಪಲು ವಾಸಸ್ಥಳಗಳಿಂದ ನಗರಗಳವರೆಗೆ ಜನಜೀವನದಲ್ಲಿ ಮಾರ್ಪಾಡುಗಳಿದ್ದರೂ, ಒಂದು ಕೊನೆಯಲ್ಲಿ ಸಂಪೂರ್ಣ ಗ್ರಾಮೀಣ ಹಿನ್ನೆಲೆಯಿದ್ದರೆ ಇನ್ನೊಂದರಲ್ಲಿ ಪೂರ್ಣವಾಗಿ ನಗರ ಪರಿಸರವನ್ನು ಕಾಣಬಹುದು. ಅಥವಾ ಜನಸಂಖ್ಯೆಯ ಗಾತ್ರ, ಸಾಂದ್ರತೆ ಅವರು ವಾಸಿಸುವ ಪರಿಸರ ಮತ್ತು ಪ್ರಾದೇಶಿಕ ಹಿನ್ನೆಲೆಯನ್ನು ಸೂಚಿಸುತ್ತದೆ. ತಾನು ನೆಲೆ ನಿಂತ ಪರಿಸರಕ್ಕೆ ಮಾನವ ಹೊಂದಿಕೊಂಡು, ಅಂತೆಯೇ ಜೀವನ ನಡೆಸುತ್ತಾನೆ. ಹಳ್ಳಿಯ ಪರಿಸರದಿಂದ ನಗರ ಪ್ರದೇಶಗಳಿಗೆ ವಲಸೆ ಹೋದರೂ ತನ್ನ ಸುತ್ತಲಿನ ಪರಿಸರಕ್ಕೆ ಹೊಂದಿಕೊಂಡು ಜೀವನ ನಡೆಸಿದರೂ ಗ್ರಾಮೀಣ ಹಿನ್ನೆಲೆಯ ಕಿಂಚಿತ್ ಅಂಶವನ್ನಾದರೂ ಅವನು ಮುಂದುವರಿಸಿಕೊಂಡು ಹೋಗಲು ಇಷ್ಟಪಡುತ್ತಾನೆ. ಇದನ್ನೇ ನಾವು ಗ್ರಾಮೀಣ ನಗರ ವಸತಿಗಳ ಮುಂದುವರಿಕೆ ಎನ್ನಬಹುದು. ಲೂಯಿಸ್ ರಿಥ್ (1938) ಎಂಬ ಭೂಗೋಳ ವಿಜ್ಞಾನಿಯು ಗ್ರಾಮೀಣ ಮತ್ತು ನಗರ ವಸತಿಗಳ ಮುಂದುವರಿಕೆಯ ಬಗ್ಗೆ ತನ್ನ ವಿಚಾರಗಳನ್ನು ಸ್ಪಷ್ಟ ಪಡಿಸುತ್ತಾನೆ. ಗ್ರಾಮೀಣ ಸಮಾಜ ಗಟ್ಟಿಯಾಗಿ ತಳವೂರಿದ್ದು ಜನರಿಗೆ ಮಣ್ಣಿನ ವಾಸನೆಯಿದೆ. ಹತ್ತಿರದ ಸಂಬಂಧವಿದೆ, ಆದರೆ, ಇದು ನಗರ ಪ್ರದೇಶಗಳಿಗೆ ಮುಂದುವರಿದಂತೇ ಕಡಿಮೆಯಾಗುತ್ತಾ ಹೋಗುತ್ತದೆ. ವ್ಯಕ್ತಿಗಳ ನಡುವಿನ ಸಂಬಂಧದಲ್ಲಿ ಗಟ್ಟಿತನ ಕಂಡು ಬರುವುದಿಲ್ಲ ಮತ್ತು ಏಕತೆಯ ಕೊರತೆ ಕಂಡುಬಂದು ವ್ಯಕ್ತಿ ಪ್ರಧಾನವಾಗುತ್ತಾ ಹೋಗಿ ಸಮೂಹ, ಸಮಾಜ ಹಿಂದೆ ಬೀಳುತ್ತದೆ. ಇದೊಂದು ಸಾಮಾಜಿಕ ಬದಲಾವಣೆಯೆಂದು ಇವನ ಅಭಿಪ್ರಾಯ.

ಆರ್.ಇ.ಪಾಲ್ (1966) ಇದನ್ನು ಅಲ್ಲಗಳೆದು ಸ್ಥಾನಿಕ ಮತ್ತು ಪ್ರಾದೇಶಿಕ ಮಹತ್ವವುಳ್ಳ ವ್ಯಕ್ತಿಗಳು, ಗುಂಪುಗಳು, ಗ್ರಾಮೀಣ ಅಥವಾ ನಗರ ಪ್ರದೇಶಗಳಲ್ಲಿ ಇರಬಹುದು. ಅಂಥ ವ್ಯಕ್ತಿಗಳು ಸ್ಥಾನಿಕ ಮತ್ತು ಪ್ರಾದೇಶಿಕ ಅಭಿವೃದ್ಧಿಯ ಕಡೆಗೂ ಚಿಂತಿಸುವ ಮನೋಭಾವ ಹೊಂದಿರಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಒಟ್ಟಾರೆ ಗ್ರಾಮೀಣ ನಗರ ವಸತಿಗಳ ಮುಂದುವರಿಕೆಯಲ್ಲಿ ಗಮನಿಸಬೇಕಾದ ಅಂಶಗಳೆಂದರೆ ಗ್ರಾಮೀಣದಿಂದ ನಗರ ಪ್ರದೇಶಗಳಲ್ಲಿ ಧಾರ್ಮಿಕ, ರಾಜಕೀಯ ಗುಣಧರ್ಮ ಮತ್ತು ಸಾಮಾಜಿಕ ರೀತಿ ನೀತಿಗಳಲ್ಲಿ ಬದಲಾವಣೆ ಕಂಡುಬರುತ್ತದೆ. ಮುಂದುವರಿಕೆಯಲ್ಲಿ ಸಾಮಾಜಿಕ ಪರಿವರ್ತನೆ, ಔದ್ಯೋಗಿಕ ಬದಲಾವಣೆ, ಆರ್ಥಿಕ ಮಟ್ಟದ ಬದಲಾವಣೆಯನ್ನು ಸೂಚಿಸುತ್ತದೆಯೇ ಹೊರತು ವಾಸಸ್ಥಳಗಳ ಆಮೂಲಾಗ್ರ ಬದಲಾವಣೆಯನ್ನು ಒತ್ತಿ ಹೇಳುವುದಿಲ್ಲ. (ಕೆ.ಬಿ.)

**ಗ್ರಿಫಿತ್ ಟಾಯ್ಲರ್:** ಆಸ್ಟ್ರೇಲಿಯದ ಭೂಗೋಳವಿಜ್ಞಾನಿ. ಈತ ಪರಿಸರವಾದ ಮತ್ತು ಸಂಭವವಾದ ಎರಡನ್ನೂ ಸಮನ್ವಯಗೊಳಿಸಿ ನವ್ಯಕಲ್ಪನೆಯನ್ನು ರೂಪಿಸಿದ. ಇದನ್ನೇ ನವೀನ ಪರಿಸರವಾದ ಎಂದು ಹೆಸರಿಸಿದ. ಇವನನ್ನು ನವೀನ ಪರಿಸರವಾದದ ಪ್ರವರ್ತಕ ಎನ್ನಲಾಗಿದೆ. ಟಾಯ್ಲರನು ಪರಿಸರವಾದವನ್ನು ಜಿಯೊಕ್ರಾಟಿಕ್ ಎಂದೂ ಹಾಗೂ ಸಂಭವವಾದವನ್ನು ವ್ಹಿಂಟೊಕ್ರಾಟಿಕ್ ಎಂದೂ ಕರೆದಿದ್ದಾನೆ. ಟಾಯ್ಲರನು 1920ರಲ್ಲಿ ಆಸ್ಟ್ರೇಲಿಯಾದ ಕೃಷಿ ಪ್ರದೇಶದ ಮೇಲೆ ಅಧ್ಯಯನ ಮಾಡಿ, ತನ್ನ ಬರಹವನ್ನು ಮಂಡಿಸಿದನು. ಈ ಬರಹದ ಪ್ರಕಾರ ಆಸ್ಟ್ರೇಲಿಯದ ಕೃಷಿ ಪ್ರದೇಶದ ಪರಿಮಿತಿ ಅಲ್ಲಿನ ಭೌತಿಕ ಪರಿಸರದ ಅಂಶಗಳಾದ ಮಳೆ, ಗಾಳಿ, ಉಷ್ಣಾಂಶಗಳ ಹಂಚಿಕೆಯಿಂದ ನಿರ್ಧರಿಸಲ್ಪಟ್ಟಿದೆ ಎಂಬುದಾಗಿದೆ. ಆದರೆ ಈ ವಾದಕ್ಕೆ ತಕ್ಷಣದಲ್ಲಿ ಮಾನ್ಯತೆ ಸಿಗದೆ ಇದ್ದರೂ, ನಂತರ ಮನ್ನಣೆ ಸಿಕ್ಕಿತು. ಈತ ಆಸ್ಟ್ರೇಲಿಯಾವನ್ನು ಕುರಿತು ರಚಿಸಿದ ಕೃತಿಯಲ್ಲಿ ತನ್ನ ಈ ಅಭಿಪ್ರಾಯವನ್ನು ಪುನರ್ವಿಮರ್ಶಿಸಿದನು. ದೇಶದ ಆರ್ಥಿಕ ಯೋಜನೆ ಪ್ರಕೃತಿಯಿಂದ ನಿರ್ಧರಿಸಲ್ಪಡುತ್ತದೆ. ಇದರ ವಿವರಣೆ ನೀಡುವುದು ಭೂಗೋಳ ವಿಜ್ಞಾನಿಗಳ ಕರ್ತವ್ಯ. ದೇಶದ ಅಭಿವೃದ್ಧಿ ತ್ವರಿತವಾಗಿಸಲು, ನಿಧಾನವಾಗಿಸಲು ಅಥವಾ ಸ್ಥಗಿತಗೊಳಿಸಲು ಮಾನವನಿಂದ ಸಾಧ್ಯ. ಆದ್ದರಿಂದ ಮಾನವ ತನ್ನ ಬುದ್ಧಿಮತ್ತೆಯಿಂದ ಪರಿಸರವನ್ನು ಮತ್ತು ಅದರ ಸವಾಲುಗಳನ್ನು ಎದುರಿಸಬೇಕು ಎಂಬ ವಾದವನ್ನು ಮಂಡಿಸಿದ್ದಾನೆ.



ಇದನ್ನೇ ನಿಶ್ಚಯವಾದ ಅಥವಾ ಕಾರ್ಯಾತ್ಮಕ ನಿಶ್ಚಯವಾದ ಎನ್ನಲಾಗಿದೆ. ಇವನ ಈ ವಾದವನ್ನು ಪರಸ್ಪರ ಸಂಬಂಧವುಳ್ಳ ವಿಭಿನ್ನವಾದ (ಮಲ್ಟಿಡಿಸ್‌ಪ್ಲಿನರಿ) ಎನ್ನುವರು. ಇದರಲ್ಲಿ ಬೇರೆ ಬೇರೆ ಅಂಶಗಳು ಒಂದೇ ವಿಷಯದಲ್ಲಿ ಅಡಕವಾಗಿರುತ್ತವೆ. ಉದಾ: ಭೂಗೋಳವಿಜ್ಞಾನ, ಮಣ್ಣುವಿಜ್ಞಾನ, ಭೂಗರ್ಭವಿಜ್ಞಾನ, ಜಲವಿಜ್ಞಾನ, ವಾಯುಗುಣ ವಿಜ್ಞಾನ, ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಭೂಗೋಳವಿಜ್ಞಾನ ಮೊದಲಾದವುಗಳನ್ನು ಒಳಗೊಂಡಂತೆ ಅಧ್ಯಯನ ನಡೆಸುತ್ತದೆ.

ಈತ ಆ ಅವಧಿಯಲ್ಲಿಯೇ ರಚಿಸಿದ್ದಂತಹ ಇಪ್ಪತ್ತನೆಯ ಶತಮಾನದಲ್ಲಿ ಭೂಗೋಳವಿಜ್ಞಾನ ಎಂಬ ಕೃತಿಯಲ್ಲಿ ನವೀನ ಪರಿಸರವಾದವನ್ನು ಸಮರ್ಥಿಸುತ್ತಾ ಪ್ರಕೃತಿಯ ಯೋಜನೆಯು ಸಂಚಾರಮಾರ್ಗವಿದ್ದಂತೆ ಪೂರ್ವ ಯೋಜಿತವಾದುದು. ಭೂಗೋಳವಿಜ್ಞಾನಿಯು ಸಂಚಾರ ನಿಯಂತ್ರಕನಂತಿದ್ದು ಸುರಕ್ಷಿತವಾದ ಮಾರ್ಗವನ್ನು ನಿರ್ದೇಶಿಸಬೇಕು. ಆಗ ಮಾನವ ತನ್ನ ಸಂಚಾರದ ಗತಿ ಬದಲಾಯಿಸುವನೇ ಹೊರತು, ವಾಹನದ ದಿಕ್ಕನ್ನಲ್ಲ. ಇದನ್ನು ನಿಂತು–ಹೊರಡು ನಿರ್ಧಾರ ವಾದ ಎನ್ನಲಾಗಿದೆ. (ಎನ್.ಎಲ್.)

**ಗ್ರೀಕರ ಕೊಡುಗೆಗಳು:** ಭೂಮಿಯ ಪ್ರಾಕೃತಿಕ ಸ್ವರೂಪಗಳನ್ನು ಕುರಿತಂತೆ ಗ್ರೀಕರು ಹೆಚ್ಚು ವಿವರಗಳನ್ನು ನೀಡಿದ್ದಾರೆ. ಭೂಮಿಯ ಗಾತ್ರ, ವಿಸ್ತಾರ, ಅಳತೆ ಮತ್ತು ಸೌರವ್ಯೂಹದಲ್ಲಿ ಭೂಮಿಯ ಸ್ಥಾನ ಕುರಿತ ವಿವರಣೆಗಳನ್ನು ನೀಡಿದ್ದಾರೆ. ಎರಟಾಸ್ತನೀಸ್ (ಪ್ರ.ಶ.ಪೂ. 276–194) ಭೂಮಿ ಕುರಿತ ಜ್ಞಾನವನ್ನು ಜಿಯಾಗ್ರಫಿನ್ ಎಂದು ಕರೆದ. ಗ್ರೀಸಿನ ಪ್ರಸಿದ್ಧ ಕವಿ ಹೋಮರನ ಒಡೆಸ್ಸಿ ಮತ್ತು ಈಲಿಯಡ್ ಮಹಾಕಾವ್ಯಗಳು ಹಾಗೂ ಇತಿಹಾಸದ ಪಿತಾಮಹ ಹೆರೊಡಾಟಸ್ (ಪ್ರ.ಶ.ಪೂ. 485–425) ರವರ ವಿವರಣೆಗಳಲ್ಲಿ ಭೂ ಪ್ರದೇಶದ ವಿವರ ಮತ್ತು ಈಜಿಪ್ಟಿನ ಜನರ ಜೀವನ, ಉಡುಪು, ಆಹಾರ ಮತ್ತು ಧರ್ಮಗಳ ವಿವರಣೆ ನೀಡಿರುವನು. ಮಿಲೆಟಿಸ್‌ನ ಥೇಲ್ಸ್ ರೇಖಾಗಣಿತದ ಪ್ರಮೇಯಗಳನ್ನು ವಿವರಿಸಿದ. ಅನಾಕ್ಸಿಮ್ಯಾಂಡರ್ ಅಂದಿನವರೆಗೆ ತಿಳಿದಿದ ಭೂಪ್ರದೇಶಗಳ ನಕ್ಷೆಯನ್ನು ರಚಿಸಿ ಪ್ರಮುಖ ನಗರಗಳನ್ನು ಗುರುತಿಸಿದ. ಹಿಕೇಟಿಯಸ್ ಜೆಸ್–ಪೆರಿಯೋಡಸ್ ಅಂದರೆ ಭೂವಿವರಣೆ ಎಂಬ ಗ್ರಂಥವನ್ನು ರಚಿಸಿದ. ಮೆಡಿಟರೇನಿಯನ್ ಸಮುದ್ರ ತೀರದ ವಿವರಣೆಯನ್ನು ಒಳಗೊಂಡಿದ್ದುದರಿಂದ ಗ್ರೀಕ್ ಭಾಷೆಯಲ್ಲಿ ಪೆರಿಪ್ಲಸ್ ಅಂದರೆ ತೀರದ ಸರ್ವೇಕ್ಷಣೆಯೆಂದು ಕರೆಯಲಾಗುತ್ತಿತ್ತು. ಪ್ರ.ಶ.ಪೂ. 5ನೆಯ ಶತಮಾನದಲ್ಲಿಯೇ ಗ್ರೀಕರು ಭೂಮಿಯ ಗೋಳಾಕಾರದ ಕಲ್ಪನೆಯನ್ನು ಹೊಂದಿದ್ದರು. ಪ್ರ.ಶ.ಪೂ. 4ನೆಯ ಶತಮಾನದಲ್ಲಿಯೇ ಅರಿಸ್ಟಾಟಲ್ ಸೂರ್ಯ ಕೇಂದ್ರವಾದವನ್ನು ಪ್ರತಿಪಾದಿಸಿದ. ಜೊತೆಗೆ ಇವನ ರಾಜ್ಯಗಳ ಆಡಳಿತ, ನಗರಗಳ ಕಾರ್ಯ ವಿವರಣೆಯು ರಾಜಕೀಯ ಭೂಗೋಳದ ಚಿಂತನೆಗೆ ಕಾರಣವಾಯಿತು. ಎರಟಾಸ್ಥನೀಸ್ ಗ್ರೀಕರಲ್ಲಿ ಮುಖ್ಯನಾಗಿದ್ದು ಜಿಯೋಗ್ರಫಿ ಎಂಬ ಪದವನ್ನು ಮೊದಲಬಾರಿಗೆ ಬಳಸಿ ಭೂಗೋಳಶಾಸ್ತ್ರದ ಪಿತಾಮಹನೆಂದೆನಿಸಿದನು. ಹಿಪ್ಪಾರ್ಕಸ್ ಹಿಂದೆ ರಚಿತವಾಗಿದ್ದ ನಕ್ಷೆಗಳನ್ನು ಪರಿಷ್ಕರಿಸಿ ಆರ್ಥೋಗ್ರಾಫಿಕ್ ಮತ್ತು ಸ್ಟೀರಿಯೋಗ್ರಾಫಿಕ್ ಪ್ರಕ್ಷೇಪಗಳನ್ನು ರಚಿಸಿದ.

ಖಗೋಳವಿಜ್ಞಾನ, ಗಣಿತ ಭೂಗೋಳವಿಜ್ಞಾನ, ನಕ್ಷಾವಿಜ್ಞಾನಿಗಳು ಗ್ರೀಕರಿಂದಲೇ ಆರಂಭಿಸಲ್ಪಟ್ಟವು. ಜಿಯೋ ಎಂದರೆ ಭೂಮಿ, ಕೋರಾ ಎಂದರೆ ಜಿಲ್ಲೆ ಅಥವಾ ಪ್ರದೇಶ ಟೋಪೋಸ್ ಎಂದರೆ ಸ್ಥಳ ಎಂದು ಅರ್ಥ ನೀಡುವ ಪದಗಳು ಗ್ರೀಕರಿಂದ ಬಳಕೆಗೆ ಬಂದವು. (ವೈ.ಪಿ.ಎಲ್.)

**ಗ್ರೀನಿಚ್:** ಗ್ರೇಟ್ ಬ್ರಿಟನ್ ದೇಶದಲ್ಲಿರುವ ಥೇಮ್ಸ್ ನದಿಯ ದಕ್ಷಿಣ ದಂಡೆಯ ಮೇಲಿರುವ ಒಂದು ಪಟ್ಟಣ. ಇದರ ಪೂರ್ವದಲ್ಲಿ ಬೆಕ್ಲಿ, ದಕ್ಷಿಣದಲ್ಲಿ ಬ್ರಾಮ್ಲಿ, ಪಶ್ಚಿಮದಲ್ಲಿ ಲ್ಯೂಯಿಷೆಮ್ ಇವೆ. ಮೂರು ಪಾರ್ಲಿಮೆಂಟರಿ ಕ್ಷೇತ್ರಗಳಿಂದ ಕೂಡಿರುವ ಗ್ರಿನಿಚ್‌ನಲ್ಲಿ ಚಾರಲ್ಟನ್, ಎಲ್‌ಥಾಮ್, ಫ್ಲಸ್ಟೆಡ್, ಕಿಡ್‌ಬ್ರೂಕ್ ಮತ್ತು ಬ್ಲಾಕ್‌ಹೀತ್ ಜಿಲ್ಲೆಗಳಿವೆ.

ಗ್ರೀನಿಚ್‌ನ ದಕ್ಷಿಣ ತುದಿಯಲ್ಲಿ ಅನೇಕ ಆಧುನಿಕ ವಸತಿಗಳು ಬೆಳೆದಿವೆ. ಥೇಮ್ಸಿನ ಉತ್ತರ ದಂಡೆಯ ಪ್ರದೇಶಕ್ಕೆ ಗ್ರೀನಿಚ್‌ನಿಂದ ಸುರಂಗ ಮಾರ್ಗಗಳೂ ದೋಣಿ ಸಂಪರ್ಕವೂ ಉಂಟು. ಗ್ರೀನಿಚ್ ಬ್ರಿಟಿಷ್ ರೈಲ್ವೆಯ ವ್ಯವಸ್ಥೆಗೆ ಒಳಪಟ್ಟಿದೆ.

ಗ್ರೀನಿಚ್‌ನ ಪ್ಯಾರಿಷ್ ಚರ್ಚ್ 1718ರಷ್ಟು ಹಿಂದಿನದು. ಎರಡನೆಯ ಮಹಾಯುದ್ಧದಲ್ಲಿ ಈ ಕಟ್ಟಡಕ್ಕೆ ಹಾನಿ ಉಂಟಾಗಿತ್ತು. ಇದನ್ನು ಪೂರ್ವಸ್ಥಿತಿಗೆ ತರಲಾಗಿದೆ. ಗ್ಲಾಸೆಸ್ಟರಿನ ಡ್ಯೂಕ್ ಉದ್ಯಾನಕ್ಕೆ ಆವರಣ ನಿರ್ಮಿಸಿ, ಒಂದು ಗುಡ್ಡದ ಮೇಲೆ ವೀಕ್ಷಣಾ ಗೋಪುರವೊಂದನ್ನು ನಿರ್ಮಿಸಿದ. ಇದು ಮುಂದೆ ರಾಯಲ್ ಖಗೋಳ ವೀಕ್ಷಣಾಲಯವಾಯಿತು. ಈ ಪಟ್ಟಣದ ಮೇಲೆ ಹಾದು ಹೋಗುವ ರೇಖಾಂಶವನ್ನು ಗ್ರೀನಿಚ್ ರೇಖಾಂಶವೆಂದೂ ಕರೆಯಲಾಗಿದೆ. ಇದು ಸೊನ್ನೆ ಡಿಗ್ರಿ ರೇಖಾಂಶವಾಗಿದ್ದು ರೇಖಾಂಶಗಳ ಎಣಿಕೆ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಈ ಪದ್ಧತಿ ಆರಂಭವಾದದ್ದು 1884ರಲ್ಲಿ. ರಾಯಲ್ ಖಗೋಳ ವೀಕ್ಷಣಾಲಯವನ್ನು 1958ರಲ್ಲಿ ಇಲ್ಲಿಂದ ಹರ್ಸ್ಟ್‌ಮನ್‌ಸ್ಯೂಗೆ ವರ್ಗಾಯಿಸಲಾಯಿತಾದರೂ ರೇಖಾಂಶ ಎಣಿಕೆ ಮಾತ್ರ ಈಗಲೂ ಇಲ್ಲಿಂದಲೇ ಆರಂಭವಾಗುತ್ತದೆ. ಈಗ ಗ್ರೀನಿಚ್‌ನ ಭಾಗವಾಗಿರುವ ವುಲ್ವಿಚ್ ಕೂಡ ಹಳೆಯ ಗ್ರೀನಿಚ್‌ನಂತೆ ಟ್ಯೂಡರ್ ದೊರೆಗಳ ಕಾಲದಲ್ಲಿ ಅಭಿವೃದ್ಧಿ ಹೊಂದಿತು. ಇಲ್ಲಿ ನೌಕಾಕೇಂದ್ರಗಳೂ ಹಡಗು ತಯಾರಿಕಾ ಕೇಂದ್ರಗಳೂ ಸ್ಥಾಪಿತವಾದುವು. 1741ರಲ್ಲಿ ವಾರನ್‌ನಲ್ಲಿ ಸ್ಥಾಪಿತವಾದ ರಾಯಲ್ ಮಿಲಿಟರಿ ಅಕಾಡೆಮಿ 1806ರಲ್ಲಿ ಮುಲ್‌ವಿಚ್‌ಗೆ ವರ್ಗವಾಯಿತು. ಇಲ್ಲಿಯ ರೊಟಂಡೆ ವಸ್ತುಸಂಗ್ರಹಾಲದಲ್ಲಿ ಅಸ್ತ್ರಗಳೂ ಹಡಗುಗಳ ನಮೂನೆಗಳೂ ಇವೆ. (ಎಂ.ಎ.ಎಚ್.)

**ಗ್ರೀನಿಚ್ ಮಾಧ್ಯ ಕಾಲ:** ಮಾಧ್ಯ ಸೂರ್ಯ ಗ್ರೀನಿಚ್ ಮಧ್ಯಾಹ್ನರೇಖೆಯನ್ನು ಪೂರ್ವವಲಯದಿಂದ ಪಶ್ಚಿಮ ವಲಯಕ್ಕೆ ದಾಟುವ ಮುಹೂರ್ತದಿಂದ ಆರಂಭಿಸಿ ಅಳೆಯುವ ಕಾಲ (ಗ್ರೀನಿಚ್ ಮೀನ್ ಟೈಮ್). ನಾಗರಿಕ ಕಾಲ (ಸಿವಿಲ್ ಟೈಮ್) ಗ್ರೀನಿಚ್ ಮಾಧ್ಯಕಾಲಕ್ಕಿಂತ 12 ಗಂಟೆ ಮುಂದೆ ಉಂಟು. ಅಂದರೆ, ನಾಗರಿಕ ಕಾಲದಲ್ಲಿ 12 ಗಂಟೆ ಮಧ್ಯಾಹ್ನವಾಗಿರುವಾಗ ಗ್ರೀನಿಚ್ ಮಾಧ್ಯಕಾಲ 0 ಗಂಟೆ ಆಗಿರುವುದು.

ಗ್ರೀನಿಚ್‌ನ ಖಗೋಳ ವೀಕ್ಷಣಾಲಯ

ವಿವಿಧ ಪ್ರದೇಶಗಳಲ್ಲಿ ವಿತರಣೆಗೊಂಡಿರುವ ರಾಷ್ಟ್ರಗಳ ನಡುವೆ ಕಾಲವಿನಿಮಯದಲ್ಲಿ ನಿರ್ದಿಷ್ಟ ಸೂತ್ರವೊಂದನ್ನು ರೂಪಿಸಲು ಗ್ರೀನಿಚ್ ಮಾಧ್ಯಕಾಲದ ಪರಿಕಲ್ಪನೆಯನ್ನು ಅಂತರಾಷ್ಟ್ರೀಯವಾಗಿ ಒಪ್ಪಿ ಬಳಕೆಗೆ ತರಲಾಗಿದೆ. ವಾಷಿಂಗ್ಟನ್ನಿನಲ್ಲಿ ನಡೆದ ಒಂದು ಸಮ್ಮೇಳನದ ಅನಂತರ ಗ್ರೀನಿಚ್ ಮಧ್ಯಾಹ್ನರೇಖೆಯನ್ನು ಅಂತಾರಾಷ್ಟ್ರೀಯ ಮಧ್ಯಾಹ್ನರೇಖೆ ಎಂದು ಪರಿಗಣಿಸಲಾಯಿತು (1884). ಇದನ್ನು $0^0$ ರೇಖಾಂಶವೆಂದು ಆಯ್ದು ಇದರಿಂದ ಪೂರ್ವಕ್ಕೂ ಪಶ್ಚಿಮಕ್ಕೂ $180^0$ ಗಳ ವರೆಗೆ ರೇಖಾಂಶಗಳನ್ನು ಗುರುತಿಸಿದರು. $180^0$ ಪೂ. ಮತ್ತು $180^0$ ಪ. ರೇಖೆಗಳೆರಡೂ ಐಕ್ಯವಾಗುತ್ತವೆ. ಗ್ರೀನಿಚ್ ರೇಖೆಯಿಂದ ಪೂರ್ವ ಪಶ್ಚಿಮ ಕಡೆಗಳಿಗೆ $7^1/_2{}^0$ ಅಗಲದ ಪ್ರದೇಶವನ್ನು 0 ಗಂಟೆಯ ಕಾಲವಲಯವೆಂದೂ ಅಲ್ಲಿಂದ ಮುಂದಕ್ಕೆ ಪೂರ್ವಾಭಿಮುಖವಾಗಿ $15^0$ಗಳಷ್ಟು ಅಗಲದ ಪಟ್ಟಿಗಳನ್ನು ಅನುಕ್ರಮವಾಗಿ 1, 2, 3..................... 23 ಗಂಟೆಗಳನ್ನು ಗ್ರೀನಿಚ್ ಮಾಧ್ಯಕಾಲಕ್ಕಿಂತ ಮುಂದೆ ಇರುವ ಕಾಲ ವಲಯಗಳೆಂದು ಪರಿಗಣಿಸಲಾಗಿದೆ. ಇನ್ನು ಸ್ಥಳೀಯವಾಗಿ ಆಯಾ ರಾಷ್ಟ್ರ ತನ್ನ ಸೌಕರ್ಯಕ್ಕೆ ಅನುಗುಣವಾಗಿ ಇದರಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಳ್ಳುವುದು ಸಾಧ್ಯ. ಇದರ ಪ್ರಕಾರ ಭಾರತೀಯ ಮಾಧ್ಯಮಕಾಲ ಗ್ರೀನಿಚ್ ಮಾಧ್ಯಕಾಲಕ್ಕಿಂತ (ಅದೇ ರೀತಿ ಭಾರತೀಯ ನಾಗರಿಕ ಕಾಲ ಗ್ರೀನಿಚ್ ನಾಗರಿಕ ಕಾಲಕ್ಕಿಂತ) 5 ಗಂ. 30 ನಿ. ಮುಂದೆ ಇದೆ. (ಎಂ.ಎ.ಎಚ್.)

**ಗ್ರೀನ್‌ಲೆಂಡ್:** ಪ್ರಪಂಚದ ಅತ್ಯಂತ ದೊಡ್ಡ ದ್ವೀಪ; ಡೆನ್ಮಾರ್ಕಿಗೆ ಸೇರಿದೆ. ಬಹುತೇಕ ಉತ್ತರ ಆರ್ಕ್ಟಿಕ್ ವೃತ್ತದಲ್ಲಿದೆ. ಆರ್ಕ್ಟಿಕ್ ಸಾಗರ, ಗ್ರೀನ್‌ಲೆಂಡ್ ಸಮುದ್ರ, ಡೆನ್ಮಾರ್ಕ್ ಜಲಸಂಧಿ, ಅಟ್ಲಾಂಟಿಕ್ ಸಾಗರ, ಬೆಫಿನ್‌ಕೊಲ್ಲಿ, ಡೇವಿಸ್ ಜಲಸಂಧಿಗಳಿಂದ ಸುತ್ತುವರಿಯಲ್ಪಟ್ಟಿರುವ ಗ್ರೀನ್‌ಲೆಂಡ್ ಉ.ಅ. $60^0$–$82^0$ ಮತ್ತು ಪ.ರೇ. $18^0$–$72^0$ ನಡುವೆ ಇದೆ. ಉತ್ತರದ ತುದಿ ಮಾರಿಸ್ ಜೆಸ್ಸಪ್ ಭೂಶಿರ. ದಕ್ಷಿಣದ ಕೊನೆ ಫೇರ್‌ವೆಲ್

ಭೂಶಿರ. 700 ಕಿಮೀ ದೂರದಲ್ಲಿದೆ. ವಿಸ್ತೀರ್ಣ 21,75,600 ಚ.ಕಿಮೀ. ಗ್ರೀನ್‌ಲೆಂಡಿನ ಮಧ್ಯಭಾಗದ ಮೇಲೆ 2133 ಮೀ ದಪ್ಪದ ನೀರ್ಗಲ್ಲು ಹೊದಿಕೆ ಇದೆ. ಕರಾವಳಿ ಮಾತ್ರ ಹಿಮಚ್ಛಾದಿತವಾಗಿಲ್ಲ. ಈ ಪ್ರದೇಶ 80 ಕಿಮೀ ಗಳಿಗಿಂತ ಕಿರಿದಾಗಿದೆ. ನೀರ್ಗಲ್ಲು ಕವಿಯದ ಪ್ರದೇಶದ ಒಟ್ಟು ವಿಸ್ತೀರ್ಣ 2.96.900 ಚ.ಕಿಮೀ. ತೀರದಲ್ಲಿರುವ ದ್ವೀಪಗಳ ವಿಸ್ತೀರ್ಣ 44,800 ಚ.ಕಿಮೀ. ಜನಸಂಖ್ಯೆ 56,600 (2002).

ಭೌತಿಕ ಲಕ್ಷಣ: ಗ್ರೀನ್‌ಲೆಂಡ್ ಆರ್ಕಿಯನ್ ಯುಗದ ಬಂಡೆಗಳಿಂದ ಕೂಡಿದೆ. ಈವಿಗ್ಟೂಟ್ ಬಳಿ ಶೈವಲ ಶಿಲಾಸ್ತರಗಳುಂಟು. ಈ ಪ್ರಾಚೀನ ಸ್ತರಗಳ ಮೇಲೆ ತೃತೀಯ ಭೂಯುಗದ ಸುಣ್ಣಕಲ್ಲು ಪದರಗಳಿವೆ. ತೃತೀಯ ಭೂಯುಗದ ಕಾಲದಲ್ಲಿ ಜೀವಂತ ಜ್ವಾಲಾಮುಖಿಗಳಿದ್ದುವೆಂಬುದು ಈ ದ್ವೀಪದಲ್ಲಿ 1524 ಮೀ ದಪ್ಪಕ್ಕೆ ಹರಡಿರುವ ಅಗ್ನಿಶಿಲಾ ಪದರಗಳಿಂದ ವ್ಯಕ್ತವಾಗುತ್ತದೆ. ಹಿಂದೆ ತೃತೀಯ ಭೂಯುಗದಲ್ಲಿ ಉಷ್ಣತರ ವಾಯುಗುಣ ಇದ್ದು ಸಸ್ಯಗಳ ಬೆಳವಣಿಗೆಗೆ ಅನುಕೂಲವಾಗಿತ್ತೆಂಬುದನ್ನು ಭೂಮಿಯಲ್ಲಿ ಹುದುಗಿರುವ ಕಲ್ಲಿದ್ದಲು ಮತ್ತು ಜೇಡಿಪದರಗಲ್ಲುಗಳು ಸೂಚಿಸುತ್ತವೆ. ಬಿಸಿನೀರಿನ ಊಟೆಗಳು ಯೂನರ್ಟೋಕ್, ಲಿವರ್ಪೂಲ್ ದ್ವೀಪ, ಡಿಸ್ಕೋ ದ್ವೀಪ, ಮೆಲ್ಲೆಮ್ಸ್ ಕೊಲ್ಲಿ ಮತ್ತು ಟರ್ನರ್‌ಲೆಂಡ್‌ಗಳಲಿವೆ. ಇಲ್ಲಿಯ ಹಿಮನದಿಗಳ ಪೈಕಿ ಹಂಬೋಲ್ಟಿನ ಅಗಲ 96 ಕಿಮೀ. ಇದು ಉತ್ತರ ತೀರಕ್ಕೆ ಸಾಗುತ್ತದೆ.

ಗ್ರೀನ್‌ಲೆಂಡಿನ ಉತ್ತರ ಮತ್ತು ನಡುಭಾಗ ಹಿಮಚ್ಛಾದಿತವಾಗಿದ್ದು, ಪಶ್ಚಿಮ, ಪೂರ್ವ ಮತ್ತು ದಕ್ಷಿಣ ತೀರಗಳು ಮಾತ್ರ ಜನಜೀವನಕ್ಕೆ ಯೋಗ್ಯವಾಗಿವೆ. ಪಶ್ಚಿಮ ಭಾಗದಲ್ಲಿ ಪರ್ವತ ಶಿಖರಗಳು 1524 ಮೀ ಎತ್ತರಕ್ಕಿವೆ. ಪೂರ್ವತೀರದ ಪರ್ವತಗಳು ಉನ್ನತವಾದವು. ಅವುಗಳಲ್ಲಿ ಗುನ್‌ಬ್ಯೊರಾಸ್ ಜೆಲ್ಡ್ ಶಿಖರ 3700 ಮೀ ಎತ್ತರವಿದೆ. ಇದೇ ಗ್ರೀನ್‌ಲೆಂಡಿನ ಅತ್ಯುನ್ನತ ಶಿಖರ. ಗ್ರೀನ್‌ಲೆಂಡಿನಲ್ಲಿರುವ ಅನೇಕ ಕೊಲ್ಲಿಗಳ ಭಾಗದಲ್ಲಿ ಹಲವು ಯುಗಗಳಿಂದ ಭೂಸವೆತ ನಡೆದಿರಬೇಕು. ಅನೇಕ ನದಿಗಳು ಈ ಕೊರಕಲುಗಳ ಮೂಲಕ ವೇಗವಾಗಿ ಹರಿದು ಸಮುದ್ರ ಸೇರುತ್ತವೆ.

ಗ್ರೀನ್‌ಲೆಂಡಿಗೆ 40,225 ಕಿಮೀ ಉದ್ದದ ಕಡಲಂಚಿದೆ. ಇದು ಅಂಕುಡೊಂಕು. ಈಶಾನ್ಯ ತೀರ ಅಷ್ಟು ಅಂಕುಡೋಕಾಗಿಲ್ಲ. ತೀರಭಾಗಗಳಲ್ಲಿ ಅನೇಕ ಕಿರುದ್ವೀಪಗಳಿವೆ. ಅವುಗಳಲ್ಲಿ ಅತ್ಯಂತ ದೊಡ್ಡದು ಡಿಸ್ಕೋ (8288 ಚ.ಕಿಮೀ)

ವಾಯುಗುಣ: ಗ್ರೀನ್‌ಲೆಂಡಿನದು ಆರ್ಕ್‌ಟಿಕ್ ವಾಯುಗುಣ. ಹವಾಗುಣ ಅತ್ಯಂತ ಅನಿಶ್ಚಿತ. ಬಿಸಿಲು ಥಟ್ಟನೆ ಹರಿದು ರಭಸದ ಹಿಮಗಾಳಿ ಬೀಸಬಹುದು. ಇದರ ಸರಾಸರಿ ಮಾಸಿಕ ಉಷ್ಣತೆ ಫೆಬ್ರುವರಿಯಲ್ಲಿ $11^0$ಸೆ. ಜುಲೈಯಲ್ಲಿ $-11.1^0$ಸೆ. ಹಿಮಗಾಲದಲ್ಲಿ ಕನಿಷ್ಠ ಉಷ್ಣತೆ $-29.4^0$ಸೆ. ಗರಿಷ್ಠ ಉಷ್ಣತೆ $-3.3^0$ಸೆ. ಹಿಮ ಕವಿದಿರುವ ಪ್ರದೇಶಗಳಲ್ಲಿ ಸರಾಸರಿ 25 ಸೆಂಮೀ. ಅವಪಾತ; ದಕ್ಷಿಣದಲ್ಲಿ ಸರಾಸರಿ 100 ಸೆಂಮೀ. ಡಿಸ್ಕೋ ಕೊಲ್ಲಿಯ ಬಳಿ ಚಳಿಗಾಲದಲ್ಲಿ ಏಳು ವಾರಗಳ ಕಾಲ ಸೂರ್ಯೋದಯವಿಲ್ಲ; ದ್ವೀಪದ ಉತ್ತರದ ತುದಿಯಲ್ಲಿ ಐದು ತಿಂಗಳುಗಳ ಕಾಲ ಸೂರ್ಯ ಕಾಣಿಸುವುದಿಲ್ಲ. ಬೇಸಗೆಯಲ್ಲಿ ಈ ಎರಡು ಸ್ಥಳಗಳ ಮೇಲೆ ಸೂಚಿತವಾದ ಅವಧಿಯಲ್ಲಿ ಮಧ್ಯರಾತ್ರಿಯ ಸೂರ್ಯ ಕಾಣಿಸುತ್ತದೆ.

ಸಸ್ಯ, ಪ್ರಾಣಿಗಳು : ಗ್ರೀನ್‌ಲೆಂಡಿನ ನೈಋತ್ಯ ಭಾಗದಲ್ಲಿ ಕೆಲವು ಸಸ್ಯವರ್ಗ ಕಂಡುಬರುತ್ತದೆ. ತೀರ ಪ್ರದೇಶದಲ್ಲಿ ವಿಲೊ ಮತ್ತು ಬರ್ಚ್ ಜಾತಿಯ ಸಸ್ಯ 3 ಮೀ ಎತ್ತರಕ್ಕೆ ಬೆಳೆಯುತ್ತವೆ; ಒಳನಾಡಿನಲ್ಲಿ ಆಲ್ಡರ್ ಮರಗಳು, ಸಮತಲ ಭೂಭಾಗಗಳಲ್ಲಿ ಬೆಂಗಾಡಿನ ಸಸ್ಯಗಳು, ಬೆಟ್ಟ ಪ್ರದೇಶಗಳಲ್ಲಿ ಪಾಚಿ, ಐಸ್ಲೆಂಡ್ ಪಾಪಿ ಗಿಡಗಳು ಕಂಡುಬರುತ್ತವೆ. ಗೇಕು (ಸೆಜ್) ಮತ್ತು ಕುರುಚಲು ಗಿಡಗಳು ಪಾಚಿ ಕಟ್ಟಿದ ಬಂಡೆಗಳ ನಡುವೆ ಬೆಳೆದರೆ, ಕೆಂಪು ಮೂಲಂಗಿ, ಟರ್ನಿಪ್ ಮತ್ತು ಲೆಟ್ಯೂಸ್ ಬೆಳೆಯುವ ಇತರ ತರಕಾರಿಗಳು.

ಈ ದ್ವೀಪದ ಮುಖ್ಯ ಪ್ರಾಣಿಗಳು ಕಸ್ತೂರಿ ಮೃಗ, ಲೆಮಿಂಗ್, ಎರ್ಮಿನ್, ಹಿಮಸಾರಂಗ, ಆರ್ಕ್‌ಟಿಕ್ ತೋಳ, ಕರಡಿ, ನರಿ ಮತ್ತು ಮೊಲ. ಸಮುದ್ರದಲ್ಲಿ ತಿಮಿಂಗಿಲ ಮತ್ತು ಸೀಲ್ ಪ್ರಾಣಿಗಳಿವೆ. ಡೇಗೆ, ಹದ್ದು, ವಿವಿಧ ಬಗೆಯ ಕಡಲ ಹಕ್ಕಿಗಳು, ಕೆಂಪು ಪಾದದ ಬಾತುಗಳು ಹೇರಳ. ದಕ್ಷಿಣ ತೀರಗಳಲ್ಲಿ ಕುರಿ ಮತ್ತು ದನಗಳನ್ನು ಸಾಕುತ್ತಾರೆ. ನಾಯಿಗಳನ್ನು ಬೇಟೆಗೂ ಸ್ಲೆಡ್ಜ್ ಎಳೆಯಲೂ ಉಪಯೋಗಿಸುತ್ತಾರೆ.

ಎರಿಕ್ ದಿ ರೆಡ್ ಪರಿಶೋಧಕನ ಕಾಲದಿಂದ (982) ಗ್ರೀನ್‌ಲೆಂಡಿನಲ್ಲಿ ಜನವಸತಿಗಳನ್ನು ಸ್ಥಾಪಿಸಲು ಪ್ರಯತ್ನ ನಡೆದಿದೆಯಾದರೂ 1410ರ ಹೊತ್ತಿಗೆ ಇದರೊಂದಿಗೆ ಜನಸಂಪರ್ಕ ಕಡಿದುಹೋಯಿತು. 16 ಮತ್ತು 17ನೆಯ ಶತಮಾನಗಳಲ್ಲಿ ಈ ದ್ವೀಪದೊಡನೆ ಸಂಬಂಧ ಹೊಂದಲು ಡೆನ್ಮಾರ್ಕ್ ಕ್ರಮ ಕೈಗೊಂಡಿತು. 1814ರಲ್ಲಿ ನಾರ್ವೇ ಮತ್ತು ಡೆನ್ಮಾರ್ಕ್ ದೇಶಗಳು ಪ್ರತ್ಯೇಕಗೊಂಡಾಗ ಗ್ರೀನ್‌ಲೆಂಡ್ ವಸಾಹತು ಪ್ರದೇಶಗಳು ಡೆನ್ಮಾರ್ಕಿಗೆ ಸೇರಿದುವು. 1916ರಲ್ಲಿ ಅಮೆರಿಕ ಆ ದ್ವೀಪದ ಮೇಲೆ ಡೆನ್ಮಾರ್ಕಿನ ರಾಜಕೀಯ ಮತ್ತು ಆರ್ಥಿಕ ಹಕ್ಕನ್ನು ಅಂಗೀಕರಿಸಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಡೆನ್ಮಾರ್ಕ್ ಜರ್ಮನಿಗೆ ವಶವಾಗಿತ್ತು 1951ರಲ್ಲಿ ಗ್ರೀನ್‌ಲೆಂಡಿನ ರಕ್ಷಣೆಯ ಬಗ್ಗೆ ಅಮೆರಿಕ ಡೆನ್ಮಾರ್ಕ್ ಒಪ್ಪಂದ ಏರ್ಪಟ್ಟಿತು. 1953ರಲ್ಲಿ ಗ್ರೀನ್‌ಲೆಂಡ್ ಡೆನ್ಮಾರ್ಕಿನಲ್ಲಿ ವಿಲೀನಗೊಂಡಿತು.

ಜನಜೀವನ : 8ನೆಯ ಶತಮಾನದಲ್ಲಿ ಕೆನಡದ ಉತ್ತರ ದ್ವೀಪಸ್ತೋಮಗಳಿಂದ ಎಸ್ಕಿಮೋ ಜನ ಗ್ರೀನ್‌ಲೆಂಡಿಗೆ ಬಂದು ನೆಲಸಿದ್ದರು. ನಾರ್ವೇ ಜನ ವಸತಿಗಳನ್ನು ಸ್ಥಾಪಿಸಿಕೊಂಡ ಕಾಲದಲ್ಲಿ ಇವರು ಪೂರ್ವ ತೀರದತ್ತ ಸಾಗಿ ಅಲ್ಲಿ ನೆಲಸಿದರು. ತರುವಾಯ ಫೇರ್ವೆಲ್ ಭೂಶಿರವನ್ನು ಸುತ್ತಿಕೊಂಡು ಪಶ್ಚಿಮ ತೀರಕ್ಕೆ ಬಂದರು. ಈ ದ್ವೀಪದ ಜನರೆಲ್ಲ ಬಹುಮಟ್ಟಿಗೆ ಯುರೋಪಿನ ಜನರೊಡನೆ ಮಿಶ್ರಗೊಂಡ ಎಸ್ಕಿಮೋ ಜನ. ಅವರನ್ನು ಗ್ರೀನ್‌ಲೆಂಡರ್ಸ್ ಎಂದು ಕರೆಯುತ್ತಾರೆ. ಅತ್ಯಂತ ಉತ್ತರದಲ್ಲಿ ಶುದ್ಧ ಎಸ್ಕಿಮೋ ಜನರನ್ನು ಕಾಣಬಹುದು. ಜನ ಡೇನಿಷ್ ಮತ್ತು ಗ್ರೀನ್‌ಲೆಂಡಿಕ್ ಭಾಷೆಗಳನ್ನಾಡುತ್ತಾರೆ.

ಆರ್ಥಿಕತೆ : ಗ್ರೀನ್‌ಲೆಂಡ್ ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಹಿಂದೆ ಸೀಲ್ ಪ್ರಾಣಿಗಳ ಬೇಟೆ ಹೆಚ್ಚಾಗಿ ನಡೆಯುತ್ತಿತ್ತು. ಇತ್ತೀಚೆಗೆ ಮೀನುಗಾರಿಕೆ ಇಲ್ಲಿಯ ಮುಖ್ಯ ವೃತ್ತಿ. ಇಲ್ಲಿಂದ ಕಾಡ್, ಹ್ಯಾಲಿಬಟ್ ಮೀನುಗಳ ಎಣ್ಣೆ ಹಾಗೂ ವಿವಿಧ ಬಗೆಯ ಮೀನುಗಳು ರಫ್ತಾಗುತ್ತವೆ. ಕ್ರಿಯೊಲೈಟ್ ಲೋಹ ಈವಿಗ್ಟೂಟ್ ನಗರದ ಬಳಿಯೂ ಕಲ್ಲಿದ್ದಿಲು ಕೂಡ್ಲಿಗ್ ಸಾಟ್ ಬಳಿಯೂ ಸಿಗುತ್ತವೆ. ಪೂರ್ವಭಾಗದಲ್ಲಿ ಸೀಸದ ಗಣಿಗಳಿವೆ.

ಗ್ರೀನ್‌ಲೆಂಡಿನ ಮುಖ್ಯ ಬಂದರು ಗಾಟ್ಹಾಪ್. ಫೇರಿಂಗ್‌ಹೇವನ್, ಫ್ರೆಡ್ರಿಕ್ಷಾಬ್ ಮತ್ತು ಸುಕ್ಕೆರ್ಟ್ಹಾಪೆನ್–ಇವು ವರ್ಷವಿಡೀ ತೆರೆದ ರೇವುಗಳು. ಗ್ರೀನ್‌ಲೆಂಡಿನ ವಾಯವ್ಯದಲ್ಲಿರುವ ತ್ಯೂಲಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ನೌಕಾ ಕೇಂದ್ರವುಂಟು. ಡೆನ್ಮಾರ್ಕ್ ಆಡಳಿತಕ್ಕೊಳಪಟ್ಟ ಅಂತಾರಾಷ್ಟ್ರೀಯ ಹವಾಮಾನ ವೀಕ್ಷಣಾ ಕೇಂದ್ರ ಅಟ್ಲಾಂಟಿಕ್ ಸಾಗರದ ಮೇಲೆ ವಿಮಾನ ಸಂಚಾರಕ್ಕೆ ಸಹಾಯಕವಾಗಿವೆ. ಗ್ರೀನ್‌ಲೆಂಡಿನ ಪ್ರಕೃತಿಯ ಅದ್ಭುತ ದೃಶ್ಯಗಳನ್ನು ಕಾಣಲು ಪ್ರವಾಸಿಗಳು ಇಲ್ಲಿಗೆ ಬರುತ್ತಾರೆ. (ವಿ.ಎ.)

ಇಲ್ಲಿಯ ಎಲ್ಲಾ ನಗರಗಳೂ ವಸತಿಗಳೂ ಹಿಮರಹಿತ ತೀರ ಪ್ರದೇಶಗಳಲ್ಲಿ ನೆಲೆಸಿವೆ. ಜನಸಂಖ್ಯೆಯು ಪಶ್ಚಿಮ ತೀರ ಪ್ರದೇಶದಲ್ಲಿ ಹಂಚಿಕೆಯಾಗಿದೆ. ಈಶಾನ್ಯ ಭಾಗದ ಉತ್ತರ ಗ್ರೀನ್‌ಲೆಂಡ್ ಮತ್ತು ಪೂರ್ವಗ್ರೀನ್‌ಲೆಂಡ್ ಯಾವುದೇ ಪುರಸಭೆ ಆಡಳಿತಕ್ಕೆ ಒಳಪಟ್ಟಿಲ್ಲ. ಆದರೆ ಇದು ಪ್ರಪಂಚದ ಅತಿದೊಡ್ಡ ಉದ್ಯಾನವನವಾದ ಈಶಾನ್ಯ ಗ್ರೀನ್‌ಲೆಂಡ್ ರಾಷ್ಟ್ರೀಯ ಉದ್ಯಾನವನ. ಹಿಮದಿಂದ ಆವರಿಸಿರುವ ಈ ದ್ವೀಪದ ಮಧ್ಯ ಭಾಗದಲ್ಲಿ ಕನಿಷ್ಠ ನಾಲ್ಕು ವೈಜ್ಞಾನಿಕ ಅನ್ವೇಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸಿಲಾಗಿದೆ. ವರ್ಷ ಪೂರ್ತಿ ಸಂಶೋಧನೆಗಳನ್ನು ಕೈಗೊಳ್ಳಲು ಒಂದು ಶಾಶ್ವತ ಕೇಂದ್ರವನ್ನು ಸ್ಥಾಪಿಸಲಾಗಿದೆ. ಗ್ರೀನ್‌ಲೆಂಡಿನ ಉತ್ತರ ಭಾಗದ ಪಿಯರೀಲೆಂಡ್ ಹಿಮದಿಂದ ಹೊರತಾದ ಪ್ರದೇಶ. ಇಲ್ಲಿ ವಾತಾವರಣ ಶುಷ್ಕ. ಹೀಗಾಗಿ ಭೂಮೇಲ್ಮೈ ಹಿಮದಿಂದ ಮುಕ್ತವಾಗಿದೆ. ಗ್ರೀನ್‌ಲೆಂಡಿನ ಹಿಮಪದರುಗಳು ಕರಗುವಿಕೆಯಿಂದ ಸುತ್ತಲಿನ ಸಮುದ್ರವು ಸು. 7 ಮೀ ಎತ್ತರಕ್ಕೆ ಏರಬಹುದು ಮತ್ತು ಗ್ರೀನ್‌ಲೆಂಡಿನ ಭೂಭಾಗಗಳು ಮುಳುಗಡೆಯಾಗಿ ಸಣ್ಣ ದ್ವೀಪ ಸಮೂಹವಾಗಬಹುದು.

ಯುರೋಪಿನ ಪವನವಿಜ್ಞಾನಿಗಳು 1989 ಮತ್ತು 1993 ರಲ್ಲಿ ಗ್ರೀನ್‌ಲೆಂಡಿನ ಹಿಮಪದರನ್ನು ರಂಧ್ರಕೊರೆದು ಪರೀಕ್ಷಿಸಿದ್ದರು. ಸು. 3.2 ಕಿಮೀ ಆಳದವರಿಗೂ ಹಿಮಪದರ ಕಂಡುಬಂದಿದೆ. ರಾಸಾಯನಿಕ ವಿಶ್ಲೇಷಣೆಯಿಂದ 1,00,000 ವರ್ಷಗಳ ಹಿಂದೆ ಇಲ್ಲಿನ ಹವಾಮಾನ ಮತ್ತು ಉಷ್ಣಾಂಶದಲ್ಲಿ ಕಾಲಕಾಲಕ್ಕೆ ಪರಿವರ್ತನೆಗಳನ್ನು ಹೊಂದಿದ್ದವು.

ಈಚೆಗೆ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸಲು ಕಾರ್ಯತಂತ್ರಗಳನ್ನು ರೂಪಿಸಲಾಗುತ್ತಿದೆ. ರಾಷ್ಟ್ರೀಯ ಆದಾಯ 1.1 ಬಿ.ಡಾಲರ್ (2001). ತಲಾ ಆದಾಯ; 20,000 ಡಾಲರ್ (2001). ಇಲ್ಲಿನ ಹಣ ಡ್ಯಾನಿಷ್‌ಕ್ರೌನ್. (ವಿ.ಎಸ್.ಕೆ.;ಜೆ.ಇ.ಸಿ.)

**ಗ್ರೀಸ್:** ದಕ್ಷಿಣ ಯುರೋಪಿನ ಬಾಲ್ಕನ್ ಪರ್ಯಾಯದ್ವೀಪದ ದಕ್ಷಿಣ ಭಾಗವನ್ನೊಳಗೊಂಡಿರುವ ದೇಶ. ಮೆಡಿಟರೇನಿಯನ್ ಮತ್ತು ಏಜಿಯನ್ ಸಮುದ್ರಗಳ ನಡುವೆ ಇದೆ. ಗ್ರೀಸಿನ ಉತ್ತರದಲ್ಲಿ ಆಲ್ಬೇನಿಯ, ಯೂಗೊಸ್ಲಾವಿಯ ಮತ್ತು ಬಲ್ಗೇರಿಯವೂ ಪೂರ್ವದಲ್ಲಿ ಟರ್ಕಿಯೂ ಇವೆ. ದಕ್ಷಿಣ ಹಾಗೂ ಆಗ್ನೇಯದಲ್ಲಿ ಗ್ರೀಸಿಗೆ ಸೇರಿದ ಅನೇಕ ದ್ವೀಪಗಳಿವೆ. ಮುಖ್ಯ ಭೂಭಾಗ ಹಾಗೂ ದ್ವೀಪಗಳನ್ನೊಳಗೊಂಡಂತೆ ಉ.ಅ. $6^0$–$12^0$ ಮತ್ತು ಪೂ.ರೇ. $20^0$–$25^0$ ರವರೆಗೆ ವಿಸ್ತರಿಸಿರುವ ಗ್ರೀಸಿನ ವಿಸ್ತೀರ್ಣ 1,31,944 ಚ.ಕಿಮೀ. ರಾಜಧಾನಿ ಅಥೆನ್ಸ್. ಜನಸಂಖ್ಯೆ 10,994,00 (2002).

ಭೌತಲಕ್ಷಣ : ದ್ವೀಪಭಾಗಗಳನ್ನೊಳಗೊಂಡು ಗ್ರೀಸಿನ ಶೇ. 80ರಷ್ಟು ಭಾಗ ಪರ್ವತಪ್ರದೇಶ. ಪ್ರಮುಖ ಪಕ್ಷೀಕೃತ ಪರ್ವತಶ್ರೇಣಿ ಪಿಂಡಸ್. ಗ್ರೀಸಿನ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಈ ಶ್ರೇಣಿಯ ಅತ್ಯುನ್ನತ ಶಿಖರ ಒಲಿಂಪಸ್ (2916 ಮೀ). ಉತ್ತರ ಗ್ರೀಸಿನಲ್ಲಿ ಪಿಂಡಸ್ ಪರ್ವತಶ್ರೇಣಿ ಹೆಚ್ಚು ಮಳೆ ಬೀಳುವ ಪರ್ವತಮಯ ಪಶ್ಚಿಮ ಭಾಗವನ್ನೂ ಕಡಿಮೆ ಎತ್ತರದ ಬೆಟ್ಟಗಳನ್ನುಳ್ಳ ಪೂರ್ವದ ಶುಷ್ಕ ಮೈದಾನ ಪ್ರದೇಶವನ್ನೂ ಬೇರ್ಪಡಿಸುತ್ತದೆ. ಈ ಪರ್ವತಶ್ರೇಣಿ ತೀರಕ್ಕೆ ಸಮಾಂತರವಾಗಿ ಹಬ್ಬಿದೆ. ಪಶ್ಚಿಮದ ಮೈದಾನ ನೇರ ಮತ್ತು ಕಿರಿದು. ಆದರೆ ಪೂರ್ವಭಾಗದಲ್ಲಿ ಬೆಟ್ಟಗಳ ಸಾಲು ಸಮುದ್ರತೀರಕ್ಕೆ ಲಂಬವಾಗಿ ಹಬ್ಬಿರುವುದರಿಂದ ಅಂಕುಡೊಂಕಾದ ಕಡಲಕರೆ ಸಂಭವಿಸಿ ಅನೇಕ ಸ್ವಾಭಾವಿಕ ಬಂದರುಗಳು ಉಂಟಾಗಿವೆ. ಪೂರ್ವದ ಏಜಿಯನ್ ಸಮುದ್ರದಲ್ಲಿ ಸು. 2,000 ದ್ವೀಪಗಳುಂಟು. ಇವು ಯುರೋಪ್ ಮತ್ತು ಏಷ್ಯ ಖಂಡಗಳ ನಡುವಣ

ಸೇತುವೆಗಳಂತಿವೆ. ಈ ಉತ್ತರ ಗ್ರೀಸಿನ ಪೂರ್ವಭಾಗ ತೆಸಲಿ, ಮ್ಯಾಸಿಡೋನಿಯ ಮತ್ತು ತ್ರೇಸ್ ಮೈದಾನಗಳನ್ನು ಒಳಗೊಂಡಿದೆ. ತೆಸಲಿಯ ಮತ್ತು ಪಶ್ಚಿಮ ಮ್ಯಾಸಿಡೋನಿಯದ ಕೆಲವು ಭಾಗಗಳನ್ನು ಬಿಟ್ಟು ದೇಶದ ಯಾವ ಭಾಗವೂ ಸಮುದ್ರದಿಂದ 20 ಕಿಮೀ ಗಳಿಗಿಂತ ಹೆಚ್ಚು ದೂರದಲ್ಲಿಲ್ಲ. ಪರ್ವತಪಂಕ್ತಿಗಳಿಂದ ಬೇರ್ಪಟ್ಟಂತಿರುವ ತೀಬ್ಸ್ ಮೈದಾನ ಪ್ರದೇಶ ಪ್ರಾಚೀನ ಗ್ರೀಸಿನ ನಗರರಾಜ್ಯಗಳ ತೊಟ್ಟಿಲಾಗಿತ್ತು. ದಕ್ಷಿಣ ಗ್ರೀಸ್ ಪರ್ವತಮಯವಾದ್ದು. ಇದು ಕಾರಿಂತ್ ಖಾರಿಯಿಂದಾಗಿ ಮುಖ್ಯ ಭೂಭಾಗದಿಂದ ಬೇರ್ಪಟ್ಟು ನಾಲ್ಕು ಬೆರಳುಗಳಂತೆ ಚಾಚಿರುವ ಪೆಲೊಪಾನೀಸಸ್ ಪರ್ಯಾಯದ್ವೀಪವನ್ನೊಳಗೊಂಡಿದೆ. ಏಜಿಯನ್ ಸಮುದ್ರದಲ್ಲಿ ಸಿಕ್ಲೇಡೀಸ್ ಡೊಡೆಕನೀಸ್ ದ್ವೀಪಸ್ತೋಮಗಳೂ ಯುಬೀಯ ದ್ವೀಪವೂ ದಕ್ಷಿಣದಲ್ಲಿ ಕ್ರೀಟ್ ದ್ವೀಪವೂ ಪಶ್ಚಿಮ ತೀರದಲ್ಲಿ ಐಯೋನಿಯನ್ ದ್ವೀಪಗಳೂ ಇವೆ.

ಗ್ರೀಸ್ ನದಿಗಳು ನೌಕಾಯಾನಕ್ಕೆ ಯೋಗ್ಯವಾಗಿಲ್ಲ. ಇವು ಬೇಸಗೆಯಲ್ಲಿ ಬತ್ತಿ ಮಳೆಗಾಲದಲ್ಲಿ ಬಿರುಸಿನಿಂದ ಹರಿಯುತ್ತವೆ. ನೀರಾವರಿಗೂ ಇವು ಹೆಚ್ಚು ಉಪಯುಕ್ತವಲ್ಲ. ತಕ್ಕಮಟ್ಟಿನ ಪ್ರವಾಹದಿಂದೊಡಗೂಡಿದ ಪ್ರಮುಖ ಜೀವನದಿಗಳು ವಾರ್ಡಾರ್ ಮತ್ತು ಸ್ಟ್ರೂಮ. ಇವುಗಳ ತಗ್ಗುಭಾಗಗಳು ಮಾತ್ರ ಗ್ರೀಸಿನಲ್ಲಿವೆ. ಗ್ರೀಸಿನ ಇತರ ನದಿಗಳಲ್ಲಿ ಮುಖ್ಯವಾದವು ನೆಸ್ಟಾಸ್, ಆಲಿಯಾಕ್ಮಾನ್, ಪಿನಿಯೋಸ್, ಸ್ಪರ್ಕಿಯೋಸ್, ಇವ್ರೋಟಾಸ್, ಆಕರ್ನೇನೀಯ ಮತ್ತು ಇಪೈರಸ್.




ವಾಯುಗುಣ : ಗ್ರೀಸಿನದು ವೈವಿಧ್ಯಮಯವಾದ ವಾಯುಗುಣ. ದಕ್ಷಿಣ ಗ್ರೀಸ್ ಮತ್ತು ದ್ವೀಪಭಾಗಗಳಲ್ಲಿ ಬೆಚ್ಚನೆಯ ಶುಷ್ಕ ಬೇಸಗೆ ಮತ್ತು ಮಳೆಯಿಂದ ಕೂಡಿದ ತಂಪಾದ ಚಳಿಗಾಲವನ್ನುಳ್ಳ ಮೆಡಿಟರೇನಿಯನ್ ವಾಯುಗುಣವಿದೆ. ಉತ್ತರ ಮತ್ತು ಮಧ್ಯ ಗ್ರೀಸ್‌ಗಳಲ್ಲಿ ಬೇಸಗೆ ಮತ್ತು ಚಳಿಗಾಲಗಳ ಉಷ್ಣತೆಗಳಲ್ಲಿ ವಿಶೇಷ ಅಂತರವುಳ್ಳ ಖಂಡಾಂತರವಾಯುಗುಣವನ್ನೂ, ಪರ್ವತಪ್ರದೇಶದಲ್ಲಿ ಆಲ್ಪೈನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಉತ್ತರದ ಪರ್ವತ ಪ್ರದೇಶದಲ್ಲಿ ಚಳಿಗಾಲದಲ್ಲಿ ವಿಶೇಷ ಚಳಿ ಇರುತ್ತದೆ. ಬೇಸಗೆಯಲ್ಲಿ ಕಡಲ್ಗಾಳಿ ಬೀಸುವುದರಿಂದ ವಾಯುಗುಣ ಹಿತಕರವಾಗಿರುತ್ತದೆ. ಉತ್ತರ ಮತ್ತು ಪಶ್ಚಿಮ ಪರ್ವತಭಾಗಗಳಲ್ಲಿ ಮಳೆ ಅಧಿಕ. ಉತ್ತರದಿಂದ ದಕ್ಷಿಣಕ್ಕೆ ಮತ್ತು ಪಶ್ಚಿಮದಿಂದ ಪೂರ್ವಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ. ವಾರ್ಷಿಕ ಮಳೆ ಉತ್ತರದಲ್ಲಿ 50 ಸೆಂಮೀ – 120 ಸೆಂಮೀ, ದಕ್ಷಿಣದಲ್ಲಿ 38–80 ಸೆಂಮೀ. ಅಥೆನ್ಸ್ ನಗರದಲ್ಲಿ ಬೇಸಗೆಯಲ್ಲಿ ಗರಿಷ್ಠ ಉಷ್ಣತೆ $37^{0}$ಸೆ. ಚಳಿಗಾಲದಲ್ಲಿ ಸರಾಸರಿ $17^{0}$ಸೆ.

ಸ್ವಾಭಾವಿಕ ವಿಭಾಗಗಳು: ತ್ರೇಸ್ ಮತ್ತು ಮ್ಯಾಸಿಡೋನಿಯ : ಮ್ಯಾಸಿಡೋನಿಯದ ವಾಯವ್ಯ ಭಾಗವೂ ತ್ರೇಸಿನ ಉತ್ತರ ಭಾಗವೂ ಪೂರ್ಣವಾಗಿ ಪರ್ವತಮಯ ಪ್ರದೇಶ. ಪರ್ವತ ಪಂಕ್ತಿಗಳ ಉತ್ತರಕ್ಕೆ ಅಲ್ಬೇನಿಯ, ಯೂಗೋಸ್ಲಾವಿಯ ಮತ್ತು ಬಲ್ಗೇರಿಯಗಳಿವೆ. ಇವು ನಾಲ್ಕು ನದೀ ಕಣಿವೆಗಳಿಂದ ಸೀಳಲ್ಪಟ್ಟಿವೆ. ವಾರ್ಡಾರ್, ಸ್ಟ್ರೂಮ, ನೆಸ್ಟಾಸ್ ಮತ್ತು ಮೆರಿಟ್ಸ ನದಿಗಳ ಮುಖಜಭೂಮಿ ಪ್ರದೇಶಗಳಲ್ಲಿರುವ ಮೈದಾನಗಳಲ್ಲಿ ವ್ಯವಸಾಯ ಅಭಿವೃದ್ಧಿ ಹೊಂದಿದೆ. ಮ್ಯಾಸಿಡೋನಿಯ ಮತ್ತು ತ್ರೇಸಿನ ಈ ಭಾಗದಲ್ಲಿ ಆಹಾರದ ಬೆಳೆಗಳನ್ನೂ ಹೊಗೆಸೊಪ್ಪನ್ನೂ ಬೆಳೆಯುತ್ತಾರೆ. ಪಶ್ಚಿಮ ಮ್ಯಾಸಿಡೋನಿಯದಲ್ಲಿ ಹಣ್ಣು ಬೆಳೆಗಳು ಮುಖ್ಯ. ಈ ಭಾಗದ ಪ್ರಮುಖ ಬಂದರುಗಳೆಂದರೆ ಅಲೆಗ್ಸಾಂಡ್ರೂಪಾಲ್ಲೀಸ್, ಇವಾಜಿಯನ್, ತೀರದ ಕವ್ವಾಲ ಮತ್ತು ವಾರ್ಡಾರ್ ನದಿಯ ಮುಖದಲ್ಲಿ ಮ್ಯಾಸಿಡೋನಿಯದ ಹೆಬ್ಬಾಗಿಲಿನಂತಿರುವ ಸ್ಯಾಲೊನೀಕ.

ಎಪಿರಸ್: ಪಿಂಡಸ್ ಪರ್ವತದ ಪಶ್ಚಿಮಕ್ಕೆ ಇರುವ ಭಾಗ ಎಪಿರಸ್ ಏಡ್ರಿಯಾಟಿಕ್ ಸಮುದ್ರತೀರದುದ್ದಕ್ಕೂ ಅನೇಕ ಪುಟ್ಟ ಮೈದಾನ ಪ್ರದೇಶಗಳುಂಟು. ಎಪಿರಸಿನ ಹೆಚ್ಚು ಭಾಗ ಪರ್ವತಗಳಿಂದ ಕೂಡಿದ್ದು ಕೆಲವೇ ರಸ್ತೆಗಳಿವೆ. ಇಲ್ಲಿ ಅಲ್ಪ ಸ್ವಲ್ಪ ಧಾನ್ಯ ಬೆಳೆದರೂ ಪರ್ವತ ಪ್ರದೇಶದ ಜನರ ಮುಖ್ಯ ಕಸಬು ಕುರಿಸಾಕಣೆ. ಪಿಂಡಸ್ ಪರ್ವತದ ಇಕ್ಕೆಲದ ಪ್ರದೇಶಗಳಲ್ಲಿರುವ ಮುಖ್ಯ ವ್ಯತ್ಯಾಸವೆಂದರೆ ವಿಭಿನ್ನ ವಾಯುಗುಣ ಪರಿಸ್ಥಿತಿ, ಪಿಂಡಸ್‌ನ ಪಶ್ಚಿಮ ಭಾಗಕ್ಕಿರುವ ಎಪಿರಸ್‌ನಲ್ಲಿ ಪೂರ್ವದಲ್ಲಿ ಬೀಳುವುದಕ್ಕಿಂತ ಹೆಚ್ಚು. ಮಳೆ ಆಗುವುದರಿಂದ ಬೆಳೆಗೆ ಅನುಕೂಲವಾಗಿದೆ.

ತೆಸಲಿ: ಮಧ್ಯ ಗ್ರೀಸಿನ ಪೂರ್ವ ಭಾಗದಲ್ಲಿ ಏಜೀಯನ್ ಸಮುದ್ರಕ್ಕೆ ಹೊಂದಿಕೊಂಡಂತಿದೆ. ಇದು ಪಿಂಡಸ್ ಪರ್ವತಪಂಕ್ತಿಗಳಿಂದಾಗಿ ಎಪಿರಸಿನಿಂದಲೂ ಒಲಿಂಪಸ್ ಪರ್ವತದಿಂದಾಗಿ ಮ್ಯಾಸಿಡೋನಿಯದಿಂದಲೂ ಪ್ರತ್ಯೇಕಿಸಲ್ಪಟ್ಟಿದೆ. ತೆಸಲಿಯ ಮೈದಾನಗಳು ಮ್ಯಾಸಿಡೋನಿಯದಂತೆ ಫಲವತ್ತಾಗಿ ವಿಸ್ತಾರವಾಗಿವೆ. ಗ್ರೀಸಿನ ಇತರ ಭಾಗಗಳಿಗಿಂತ ಇಲ್ಲಿ ಹೆಚ್ಚು ಭೂಮಿ ಬೇಸಾಯಕ್ಕೆ ಒದಗಿಬಂದಿದೆ. ಗೋದಿ, ಬಾರ್ಲಿ, ಮತ್ತು ಹತ್ತಿ ಮುಖ್ಯ ಬೆಳೆಗಳು. ಸಲ್ಯಾಂಬ್ರಿಯ ನದಿಯ ದಡದಲ್ಲಿರುವ ಲರಿಸ ಈ ಪ್ರದೇಶದ ಮುಖ್ಯ ಪಟ್ಟಣ. ವೋಲಾಸ್ ಮುಖ್ಯ ಬಂದರು.

ಮಧ್ಯ ಗ್ರೀಸ್ : ತೆಸಲಿ ಮತ್ತು ಎಪಿರಸ್‌ಗಳ ದಕ್ಷಿಣಕ್ಕೆ ಮತ್ತು ಕಾರಿಂತ್ ಖಾರಿಯ ಉತ್ತರಕ್ಕೆ ಇರುವ ಪ್ರದೇಶವಿದು. ಗ್ರೀಸಿನ ರಾಜಧಾನಿ ಅಥೆನ್ಸ್ ಮತ್ತು ಅದರ ರೇವುಪಟ್ಟಣವಾದ ಪೈರೀಯಸ್ ಇರುವುದು. ಈ ಭಾಗದಲ್ಲಿ ಪರ್ವತ ಪಂಕ್ತಿಗಳಿಂದ ಬೇರ್ಪಟ್ಟ ಅನೇಕ ಮೈದಾನಗಳಿವೆ. ಅವುಗಳಲ್ಲಿ ತೀಬ್ಸ್, ಲೆಬಾಡಿಯ ಮತ್ತು ಲ್ಯಾಮಿಯ ಮುಖ್ಯವಾದವು. ಈ ಮೈದಾನಗಳಲ್ಲೆ ಪ್ರಾಚೀನ ಗ್ರೀಕ್ ಚಕ್ರಾಧಿಪತ್ಯದ ನಗರ ರಾಜ್ಯಗಳು ಹುಟ್ಟಿ ಬೆಳೆದದ್ದು. ಇಲ್ಲಿಯ ವಾಯುಗುಣ ಶುಷ್ಕವಾದ್ದು. ಮೆಡಿಟರೇನಿಯನ್ ಮಾದರಿಯ ಬೆಳೆಗಳು, ಮುಖ್ಯವಾಗಿ ಧಾನ್ಯಗಳು, ದ್ರಾಕ್ಷಿ, ಆಲಿವ್ ಮುಂತಾದವು – ಇಲ್ಲಿ ಬೆಳೆಯುತ್ತವೆ. ಪೈರೀಯಸ್ ಈ ಪ್ರದೇಶದ ಮುಖ್ಯ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ ಹಾಗೂ ಪ್ರಮುಖ ಬಂದರು.

ಪೆಲೋಪಾನೀಸಸ್ : ಕಾರಿಂತ ಕೊಲ್ಲಿಯಿಂದಾಗಿ ಇದು ಮುಖ್ಯ ಭೂಭಾಗದಿಂದ ಬೇರ್ಪಟ್ಟಿದೆ. ಈ ಪ್ರದೇಶದ ವಾಯವ್ಯ ಭಾಗ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದೆ. ಇದು ಗ್ರೀಸಿನ ಅಧಿಕ ಉತ್ಪಾದನೆಯ ಪ್ರದೇಶ. ಪೆಲೊಪಾನೀಸಸಿನ ಅತ್ಯಂತ ದೊಡ್ಡ ಪಟ್ಟಣವಾದ ಪಟ್ರ್ಯಾಸ್ ಪ್ರಮುಖ ರಫ್ತು ವ್ಯಾಪಾರ ಕೇಂದ್ರ. ಈ ಪ್ರದೇಶದ ಪೂರ್ವ ಭಾಗ ಶಿಲಾಮಯವಾದ, ಹಳ್ಳ ತಿಟ್ಟುಗಳಿಂದ ಕೂಡಿದ ಗುಡ್ಡ ಸೀಮೆ. ಕುರಿ ಮೇಕೆಗಳ ಸಾಕಣೆ ಇಲ್ಲಿಯ ಮುಖ್ಯ ವೃತ್ತಿ. ಈ ಭಾಗ ಉಣ್ಣೆ ಮತ್ತು ಮೇಕೆ ಚರ್ಮಕ್ಕೆ ಪ್ರಸಿದ್ಧ. ದಕ್ಷಿಣದ ಮೆಸೀನಿ ಪ್ರದೇಶದ ಫಲವತ್ತಾದ ಮಣ್ಣಿನಲ್ಲಿ ದ್ವೀಪದ್ರಾಕ್ಷಿ. ಅಂಜೂರ, ಕಿತ್ತಲೆ, ನಿಂಬೆ, ಖರ್ಜೂರ, ಆಲಿವ್, ದ್ರಾಕ್ಷಿ ಮುಂತಾದವು ಬೆಳೆಯುತ್ತದೆ.

ದ್ವೀಪಗಳು: ಗ್ರೀಸಿನ ದ್ವೀಪಗಳದು ಒಂದು ಪ್ರತ್ಯೇಕ ವಿಭಾಗ. ಐಯೋನಿಯನ್ ದ್ವೀಪಗಳು ಹೆಚ್ಚು ಜನಸಾಂದ್ರತೆಯಿಂದ ಕೂಡಿವೆ. ದ್ರಾಕ್ಷಿ, ನಿಂಬೆ, ತರಕಾರಿ ಮುಂತಾದ ಬೆಳೆಗಳಿಗೆ ಅವುಗಳ ವಾಯುಗುಣ ಅನುಕೂಲವಾಗಿದೆ. ಗ್ರೀಸ್ ದ್ವೀಪಗಳಲ್ಲೆಲ್ಲ ಅತ್ಯಂತ ದೊಡ್ಡದಾದ ಕ್ರೀಟ್ ಸು. 1257 ಕಿಮೀ ಉದ್ದ, 378 ಕಿಮೀ ಗರಿಷ್ಠ ಅಗಲ ಉಳ್ಳದ್ದಾಗಿದೆ. ಇದರ ಹೆಚ್ಚುಭಾಗ ಪರ್ವತ ಪ್ರದೇಶ. ತೀರದಲ್ಲಿ ಕಿರಿದಾದ ಮೆಕ್ಕಲು ಮೈದಾನಗಳಿವೆ. ದ್ರಾಕ್ಷಿ, ಆಲಿವ್ ಮತ್ತು ತರಕಾರಿ ಮುಖ್ಯ ಬೆಳೆಗಳು. ಅಲ್ಲಿಯ ಹೆಚ್ಚು ಜನ ಮೀನುಗಾರರಾಗಿ, ನಾವಿಕರಾಗಿ ಕೆಲಸಮಾಡುತ್ತಾರೆ.

ಸಸ್ಯ ಪ್ರಾಣಿಜೀವನ: ಸಸ್ಯ ಜೀವನ ಎತ್ತರಕ್ಕನುಸಾರವಾಗಿ ವ್ಯತ್ಯಾಸವಾಗುತ್ತದೆ. ಸಮುದ್ರ ಮಟ್ಟದಿಂದ 457 ಮೀ ವರೆಗಿನ ಎತ್ತರದ ಪ್ರದೇಶಗಳಲ್ಲಿ ಕಿತ್ತಲೆ, ಆಲಿವ್, ಖರ್ಜೂರ, ಬಾದಾಮಿ, ದಾಳಿಂಬೆ, ಅಂಜೂರ, ದ್ರಾಕ್ಷಿ, ಹೊಗೆಸೊಪ್ಪು, ಹತ್ತಿ ಮತ್ತು ಬತ್ತ ಬೆಳೆಯುತ್ತವೆ. ಹೂವು ಮತ್ತು ಸುಗಂಧ ಬಳ್ಳಿಗಳು ಸಮೃದ್ಧ. 457 ಮೀ – 1066 ಮೀ ಎತ್ತರದಲ್ಲಿ ಓಕ್, ಚೆಸ್‌ನಟ್ ಮತ್ತು ಪೈನ್ ಮರಗಳ ಕಾಡುಗಳುಂಟು. 1066 ಮೀ ಗಿಂತ ಎತ್ತರದಲ್ಲಿ ಸಾಮಾನ್ಯವಾಗಿ ಬೀಚ್ ಮತ್ತು ಫರ್ ಮರಗಳಿವೆ.

ಗ್ರೀಸಿನಲ್ಲಿ ವನ್ಯಸಂಪತ್ತು ಅಷ್ಟಾಗಿ ಇಲ್ಲ. ಕರಡಿ, ಕಾಡು ಬೆಕ್ಕು, ತೋಳ, ನರಿ, ಷ್ಯಾಮಾಯ್ ಮುಂತಾದ ಪ್ರಾಣಿಗಳು ಜನಸಂಖ್ಯೆ ಕಡಿಮೆಯಿರುವ ಪ್ರದೇಶಗಳಲ್ಲಿ ಕಂಡುಬರುತ್ತವೆ. ಪರ್ವತ ಪ್ರದೇಶಗಳಲ್ಲಿ ತೋಳಗಳುಂಟು.

ಗ್ರೀಸಿನ ಅಧಿಕೃತ ಭಾಷೆ ಆಧುನಿಕ ಗ್ರೀಕ್. ಇಂಗ್ಲಿಷ್, ಫ್ರೆಂಚ್ ಕೂಡ ಬಳಕೆಯಲ್ಲಿದೆ. ಶೇ. 98 ರಷ್ಟು ಜನರು ಗ್ರೀಕ್ ಮಾತನಾಡುತ್ತಾರೆ.

ಗ್ರೀಸಿನ ನಗರಗಳಲ್ಲಿ ಮುಖ್ಯವಾದವುಗಳೆಂದರೆ, ಅಥೆನ್ಸ್ (ರಾಜಧಾನಿ) ಜನಸಂಖ್ಯೆ 745,514 (2002). ಸ್ಯಾಲೊನೀಕ, ಪೈರೀಯಸ್, ಪಟ್ರ್ಯಾಸ್, ಇರಾಕ್ಲಿಯಾನ್, ಲರಿಸ, ವೋಲಾಸ್ ಕ್ಯಾವಲ, ಕಾರ್ಫೂ ಮತ್ತು ಕೈಯಾಸ್. ಗ್ರೀಸಿನ ನಾಣ್ಯ ಯೂರೋ. (ಕೆ.ಆರ್.)

**ಗ್ರೇಟ್ ಬೇಸಿನ್:** ಅಮೆರಿಕ ಸಂಯುಕ್ತಸಂಸ್ಥಾನಗಳ ಪಶ್ಚಿಮ ಭಾಗದಲ್ಲಿರುವ ಸ್ವಾಭಾವಿಕ ಜಲಾನಯನ ಪ್ರದೇಶ. ತನ್ನ ವಿಶಿಷ್ಟ ಭೂಲಕ್ಷಣದಿಂದಾಗಿ ಪ್ರಸಿದ್ಧವಾಗಿದೆ. ಗ್ರೇಟ್ ಬೇಸಿನ್ ತಳಮೇಲಾದ ತ್ರಿಕೋಣದಂತಿದೆ. ವಿಸ್ತಾರ 302,400 ಚ.ಕಿಮೀ. ಇದು ಉಟಾದ ಪಶ್ಚಿಮದಲ್ಲಿ ಆ ರಾಜ್ಯದ 1/3 ಭಾಗವನ್ನೂ ಇಡೀ ನೆವಾಡವನ್ನೂ ಆವರಿಸಿಕೊಂಡು ಕ್ಯಾಲಿಫೋರ್ನಿಯ, ದಕ್ಷಿಣ ಓರೆಗಾನ್ ಮತ್ತು ಇಡಾಹೊಗಳಲ್ಲೂ ಸ್ವಲ್ಪ ಹಬ್ಬಿದೆ. ಪಶ್ಚಿಮಕ್ಕೆ ಸಿಯೆರ ನೆವಾಡ, ಪೂರ್ವಕ್ಕೆ ವಾಸ್ಯಾಚ್ ಪರ್ವತಶ್ರೇಣಿ ಮತ್ತು ಕೊಲರಾಡೊ ಪ್ರಸ್ಥಭೂಮಿ, ದಕ್ಷಿಣಕ್ಕೆ ಮೊಜಾವೆ ಮರುಭೂಮಿ – ಇವು ಇದರ ಮೇರೆಗಳು.

ಗ್ರೇಟ್ ಬೇಸಿನ್ ಸಂವೃತಪ್ರವಾಹ ಪ್ರದೇಶ; ನೀರಿನ ಪ್ರವಾಹ ಹೊರಕ್ಕೆ ಹರಿದು ಸಮುದ್ರ ಸೇರುವುದಿಲ್ಲ. ಪರ್ವತಶ್ರೇಣಿಗಳು ಇದನ್ನು ವಿಭಾಗಿಸಿವೆ. ಮುಖ್ಯ ಶ್ರೇಣಿಗಳು ದಕ್ಷಿಣೋತ್ತರವಾಗಿ ಹಬ್ಬಿವೆ. ಪರ್ವತಶ್ರೇಣಿಗಳ ನಡುವಣ ಕಣಿವೆಗಳು ವಿಶಾಲವಾಗಿವೆ. ಮೆಕ್ಕಲುಮಣ್ಣಿನಿಂದ ಕೂಡಿವೆ. ಪರ್ವತಾಗ್ರಗಳು ಪಾದದಿಂದ 1,000–1600 ಮೀ ಎತ್ತರದಲ್ಲಿವೆ.

ಕಣಿವೆಗಳಲ್ಲಿ ಹರಿಯುವ ನೀರು ಸರೋವರಗಳನ್ನು ಸೇರುತ್ತವೆ. ಅವುಗಳಲ್ಲಿ ಬಹುತೇಕ ಉಪ್ಪು ನೀರಿನ ಸರೋವರಗಳು. ಅವುಗಳಲ್ಲಿ ಗ್ರೇಟ್ ಸಾಲ್ಟ್ ಲೇಕ್ ಪ್ರಸಿದ್ಧವಾದ್ದು. ಇಲ್ಲಿ ಮಳೆ ವರ್ಷಕ್ಕೆ 10–30 ಸೆಂಮೀ. ಶುಷ್ಕ ವಾಯುಗುಣದಿಂದಾಗಿ ಹೊರಗೆ ಹರಿದು ಹೋಗುವಷ್ಟು ನೀರು ಸಂಗ್ರಹವಾಗುವುದಿಲ್ಲ. ಸರೋವರಗಳು ಬದಲಾಗುತ್ತಿರುತ್ತವೆ.

ಇಲ್ಲಿಯ ಕಣಿವೆಗಳಲ್ಲಿ ಉಪ್ಪು ಹುಲ್ಲು ಮತ್ತು ಗ್ರೀಸ್‌ವುಡ್ ಬೆಳೆಯುತ್ತವೆ. ತಗ್ಗಿನ ನೆಲದಲ್ಲಿ ಹರಿಯುವ ಕೆಲವು ತೊರೆಗಳ ದಂಡೆಗಳ ಮೇಲೆ ಕಾಟನ್‌ವುಡ್ ಮರಗಳಿವೆ. ಇಳಿಜಾರುಪ್ರದೇಶಗಳಲ್ಲಿ ಸೇಜ್‌ಬ್ರಷ್, ಕುರುಚಲು ಓಕ್ ಮತ್ತು ಜೂನಿಪರ್ ಉಂಟು, ದಕ್ಷಿಣದಲ್ಲಿ ಉಪೋಷ್ಣವಲಯದ ಮರುಭೂಮಿ ಸಸ್ಯಗಳಿವೆ. ಎತ್ತರ ಪ್ರದೇಶಗಳಲ್ಲಿ ಪೈನ್, ಸ್ಪ್ರೂಸ್ ಕಾಡುಗಳಿವೆ. ತಾಮ್ರ ಮತ್ತು ಕಬ್ಬಿಣದ ಅದಿರು ಇಲ್ಲಿ ಸಿಗುತ್ತವೆ. ಗಣಿ ಉದ್ಯಮ ಮತ್ತು ಪಶುಸಂಗೋಪನೆ ಮುಖ್ಯ ಜೀವನೋಪಾಯಗಳು. ನಗ್ನೀಕರಣಕ್ಕೆ ಒಳಗಾಗುವ ಒಣಪ್ರದೇಶಗಳ ಸ್ವರೂಪವನ್ನೂ ನಗ್ನೀಕರಣದ ಹಂತಗಳನ್ನೂ ಗ್ರೇಟ್ ಬೇಸಿನಿನಲ್ಲಿ ಕಾಣಬಹುದು. (ಎನ್.ಸಿ.ಜಿ.)

**ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯ:** ಇಂಗ್ಲೆಂಡ್, ಸ್ಕಾಟ್ಲೆಂಡ್, ವೇಲ್ಸ್, ಉತ್ತರ ಐರ್ಲೆಂಡ್ ಇವುಗಳ ರಾಜಕೀಯ ಒಕ್ಕೂಟ. ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್ ಕೂಡಿ ಗ್ರೇಟ್ ಬ್ರಿಟನ್ ಆಗಿದೆ. ಸಂಯುಕ್ತ ರಾಜ್ಯದಲ್ಲಿ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಎರಡೂ ಮುಖ್ಯ ಭಾಗಗಳಾದರೂ ಐರಿಷ್ ಸಮುದ್ರದಲ್ಲಿರುವ ಐಲ್ ಆಫ್ ಮ್ಯಾನ್, ಫ್ರಾನ್ಸಿನ ವಾಯವ್ಯತೀರದ ಬಳಿ ಇರುವ ಚ್ಯಾನಲ್ ದ್ವೀಪಗಳು – ಇವೂ ಅದರಲ್ಲಿ ಸೇರಿವೆ. ಉ. ಅ. $49^0 10'$–$60^0 50'$ ಹಾಗು ಪೂ.ರೇ. $1^0 45'$–$8^0 10'$ ಪ. ರೇ. ಗಳ ನಡುವೆ ಹಬ್ಬಿದೆ.

ಸಂಯುಕ್ತ ರಾಜ್ಯ (ಯು.ಕೆ.) ಎಂಬ ಹೆಸರನ್ನು ಮೊದಲ ಬಾರಿಗೆ ಬಳಸಿದ್ದು 1604 ರಲ್ಲಿ – ಸ್ಕಾಟ್ಲೆಂಡಿನ 6ನೆಯ ಜೇಮ್ಸ್ ದೊರೆ ಇಂಗ್ಲೆಂಡಿನ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ ಮೇಲೆ. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡುಗಳ ಪಾರ್ಲಿಮೆಂಟುಗಳು ಒಂದಾದಾಗ 1707ರಲ್ಲಿ ಸಂಯುಕ್ತ ರಾಜ್ಯ ಎಂಬ ಹೆಸರನ್ನು ಅಧಿಕೃತವಾಗಿ ಬಳಸಲಾಯಿತು.

ಐರ್ಲೆಂಡನ್ನು ಗ್ರೇಟ್ ಬ್ರಿಟನ್ನಿಗೆ ಸೇರಿಸಿದ್ದು 1801ರಲ್ಲಿ. ಆಗ ಈ ಒಕ್ಕೂಟದ ಅಧಿಕೃತ ಹೆಸರು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಸಂಯುಕ್ತ ರಾಜ್ಯ ಎಂದಾಯಿತು. 1922ರಲ್ಲಿ ಐರ್ಲೆಂಡಿನ 26 ಕೌಂಟಿಗಳು ಸಂಯುಕ್ತ ರಾಜ್ಯದಿಂದ ಬೇರ್ಪಟ್ಟು ಆ ಭಾಗ ಸ್ವತಂತ್ರ ರಾಜ್ಯವಾಯಿತು. ಮುಂದೆ ಗಣರಾಜ್ಯವಾಯಿತು. ಆ ಭಾಗ ಪ್ರತ್ಯೇಕವಾದಂದಿನಿಂದ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯ ಎಂದಾಯಿತು.

ಸಂಯುಕ್ತ ರಾಜ್ಯದ ದ್ವೀಪಗಳಲ್ಲಿ ಅತ್ಯಂತ ದೊಡ್ಡದು ಗ್ರೇಟ್ ಬ್ರಿಟನ್. ಇಂಗ್ಲೆಂಡ್, ಉತ್ತರದಲ್ಲಿರುವ ಸ್ಕಾಟ್ಲೆಂಡ್, ಪಶ್ಚಿಮಕ್ಕಿರುವ ವೇಲ್ಸ್ ಇವು ಇದರಲ್ಲಿ ಸೇರಿವೆ. ಪಶ್ಚಿಮ ಯುರೋಪಿನಿಂದ ಇದನ್ನು ದಕ್ಷಿಣದಲ್ಲಿ ಇಂಗ್ಲಿಷ್ ಕಡಲ್ಗಾಲುವೆಯೂ ಪೂರ್ವದಲ್ಲಿ ಉತ್ತರ ಸಾಗರವೂ ಪ್ರತ್ಯೇಕಿಸುತ್ತವೆ. ಇದರ ಉತ್ತರ ಪಶ್ಚಿಮಗಳಲ್ಲಿ ಅಟ್ಲಾಂಟಿಕ್ ಸಾಗರವಿದೆ. ಐರ್ಲೆಂಡ್ ಇರುವುದು ಪಶ್ಚಿಮಕ್ಕೆ. ಗ್ರೇಟ್ ಬ್ರಿಟನ್ನಿಗೂ ಐರ್ಲೆಂಡಿಗೂ ನಡುವೆ ಐರಿಷ್ ಸಮುದ್ರವಿದೆ. ಇದರ ವಿಸ್ತೀರ್ಣ 2,29,957 ಚ.ಕಿಮೀ. ಜನಸಂಖ್ಯೆ 60,609,153 (2002).




ಗ್ರೇಟ್ ಬ್ರಿಟನ್ನಿನ ವಾಯುಗುಣ ಸಮಶೀತೋಷ್ಣದ್ದು. ಇಲ್ಲಿ ಭಾಷೆ ಇಂಗ್ಲಿಷ್. ವೇಲ್ಸಿನಲ್ಲಿ ವೆಲ್ಷ್ ಭಾಷೆ ಹೆಚ್ಚಾಗಿ ಬಳಕೆಯಲ್ಲಿದೆ. ಇಲ್ಲಿಯ ಜನ ವಿಶೇಷವಾಗಿ ಚರ್ಚ್ ಆಫ್ ಇಂಗ್ಲೆಂಡಿಗೆ ನಡೆದುಕೊಳ್ಳುತ್ತಾರೆ. ರೋಮನ್ ಕೆಥೊಲಿಕ್, ಮೆಥಾಡಿಸ್ಟ್, ಪ್ರೆಸ್ಬಟೇರಿಯನ್, ಕಾಂಗ್ರೆಗೇಷನಲ್ ಮತ್ತು ಬ್ಯಾಪ್ಟಿಸ್ಟ್ ಮತಗಳನ್ನು ಅನುಸರಿಸುವವರೂ ತಕ್ಕಮಟ್ಟಿನ ಸಂಖ್ಯೆಗಳಲ್ಲಿದ್ದಾರೆ. ಇಲ್ಲಿ 5 ಲಕ್ಷ ಯಹೂದ್ಯರುಂಟು. ಮುಖ್ಯ ಪಟ್ಟಣ ಹಾಗು ರಾಜಧಾನಿ ಲಂಡನ್. ಜನಸಂಖ್ಯೆ 70,07,091 (2002).

ಐರ್ಲೆಂಡಿನ ಈಶಾನ್ಯದಲ್ಲಿರುವ ಪ್ರದೇಶ ಉತ್ತರ ಐರ್ಲೆಂಡ್, ಇದು ಸಂಯುಕ್ತ ರಾಜ್ಯದ ಭಾಗ. ಆಲ್ಸ್ಟರಿನ ಆರು ಕೌಂಟಿಗಳಾದ ಆಂಟ್ರಿಂ, ಆರ್ಮಾ, ಡೌನ್, ಫರ್ಮ್ಯಾನ, ಲಂಡನ್‌ಡೆರಿ, ಟಿರೋನ್ – ಇವು ಉತ್ತರ ಐರ್ಲೆಂಡಿಗೆ ಸೇರಿವೆ.

ಉತ್ತರ ಐರ್ಲೆಂಡಿನದು ಸಮಶೀತೋಷ್ಣ ವಾಯುಗುಣ. ಭಾಷೆ ಇಂಗ್ಲಿಷ್. ಜನಸಂಖ್ಯೆಯ ಮೂರನೆಯ ಎರಡು ಭಾಗ ಪ್ರಾಟೆಸ್ಟಂಟರು. ಉಳಿದವರು ಬಹುತೇಕ ರೋಮನ್ ಕೆಥೊಲಿಕರು. ª ÄÄRå¥ÀÖ ¨ ËÁ¡ïÖd£ÀÀS ë2,97,200 (2000). (ಎನ್.ಎಸ್.ವಿ.)

**ಗ್ರ್ಯಾಂಡ್ ಐಲೆಂಡ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ನೆಬ್ರಾಸ್ಕ ರಾಜ್ಯದ ಆಗ್ನೇಯ ಭಾಗದಲ್ಲಿರುವ ಒಂದು ನಗರ. ಹಾಲ್ ಕೌಂಟಿಯ ಮುಖ್ಯ ಪಟ್ಟಣ. ಇದು ಲಿಂಕನ್ ನಗರದ ಪಶ್ಚಿಮಕ್ಕೆ 136 ಕಿಮೀ ದೂರದಲ್ಲೂ ಓಮಹಾ ನಗರದ ನೈರುತ್ಯಕ್ಕೆ 224 ಕಿಮೀ ದೂರದಲ್ಲೂ ಇದೆ. ಪ್ಲ್ಯಾಟ್ ನದಿಯಲ್ಲಿರುವ ಮಹಾ ದ್ವೀಪದಿಂದಾಗಿ (ಗ್ರ್ಯಾಂಡ್ ಐಲೆಂಡ್) ಈ ನಗರಕ್ಕೆ ಈ ಹೆಸರು ಬಂತು. ಇಲ್ಲಿಗೆ ಬಂದ ಮೊದಲ ಪರಿಶೋಧಕರು ಈ ದ್ವೀಪವನ್ನು ಒಂದು ಹೆಗ್ಗುರುತಾಗಿ ಪರಿಗಣಿಸಿದ್ದರು. ನಗರದ ಜನಸಂಖ್ಯೆ 25,742. ಉತ್ತಮ ಸಾರಿಗೆ ಸೌಲಭ್ಯಗಳಿರುವ ಈ ನಗರವನ್ನು ಸ್ಥಾಪಿಸಿದವರು ಜರ್ಮನಿಯ ವಲಸೆಗಾರರು (1857). ನಗರದ ಆಧುನಿಕ ಭಾಗವನ್ನು 1866ರಲ್ಲಿ ರಚಿಸಲಾಯಿತು.

ಯೂನಿಯನ್ ಪೆಸಿಫಿಕ್ ಮತ್ತು ಬರ್ಲಿಂಗ್ಟನ್ ರೈಲುಮಾರ್ಗಗಳು ಈ ನಗರದ ಮೂಲಕ ಹಾದುಹೋಗುತ್ತವೆ. ನೆಬ್ರಾಸ್ಕ ರಾಜ್ಯದ ಹೆದ್ದಾರಿಯ ಕೇಂದ್ರವಾಗಿಯೂ ಈ ನಗರ ಅಭಿವೃದ್ಧಿ ಹೊಂದಿತ್ತು. 20ನೆಯ ಶತಮಾನದಲ್ಲಿ ಪ್ಲ್ಯಾಟ್ ನದಿಯನ್ನು ನೀರಾವರಿಗೆ

ಬಳಸಿಕೊಳ್ಳಲಾರಂಭಿಸಿದ ಮೇಲೆ ಈ ನಗರ ನೀರಾವರಿಯ ಕೇಂದ್ರವಾಯಿತು. ಬೀಟ್ ಸಕ್ಕರೆ ಪರಿಷ್ಕರಣ, ಮಾಂಸದ ಡಬ್ಬೀಕರಣ, ಧಾನ್ಯಗಳ ದಾಸ್ತಾನು ಈ ನಗರದ ಮುಖ್ಯ ಉದ್ಯಮಗಳು. (ವಿ.ಜಿ.ಕೆ.)

**ಗ್ರ್ಯಾಂಡ್ ಕ್ಯಾನ್ಯನ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಆರಿಜೋ಼ನ ರಾಜ್ಯದ ಉತ್ತರ ಭಾಗದ ಪ್ರಸ್ಥಭೂಮಿಯಲ್ಲಿ ಕೊಲರಾಡೋ ನದಿಯ ಕೊರೆತದಿಂದ ಸಂಭವಿಸಿರುವ ಆಳವಾದ ಕಮರಿ. ಇದರ ಹೊರಗೋಡೆಗಳ ನಡುವೆ ಹಲವು ವರ್ಣರಂಜಿತ ಶಿಖರಗಳಿವೆ. ಕಮರಿಯೊಳಗೆ ಕಮರಿಗಳು ಕವಲುಕವಲಾಗಿ ಸಾಲು ಸಾಲಾಗಿ ಗುಂಪು ಗುಂಪಾಗಿ ವಿಚಿತ್ರ ವಿನ್ಯಾಸ ಮೆರೆದಿವೆ. ಇದರ ಅಗಲ 6–30 ಕಿಮೀ ಕೆಲವು ಕಡೆ 2 ಕಿಮೀ ಗೂ ಹೆಚ್ಚು ಆಳವಾಗಿದೆ. ಆರಿಜೋ಼ನ ರಾಜ್ಯದ ಉತ್ತರ ಅಂಚಿನಿಂದ ನೆವಾಡದ ಬಳಿಯ ಗ್ರ್ಯಾಂಡ್ ವಾಷ್ ಗುಡ್ಡಗಳ ಸಾಲಿನವರೆಗೆ ಸು. 450 ಕಿಮೀ ಸಾಗಿದೆ. ಕೊಲೊರಾಡೋ ನದಿ ಈ ಕಮರಿಯಲ್ಲಿ 170 ಕಿಮೀ ದೂರ ಸುತ್ತಿ ಬಳಸಿ ಹರಿಯುತ್ತದೆ. ಕಮರಿಯ ಗುಡ್ಡಗಳ ಬಣ್ಣ ಮಾಸಲು ಕೆಂಪು. ಆದರೆ ಒಂದೊಂದು ಪದರಕ್ಕೂ ಪದರಗಳ ಸಮೂಹಕ್ಕೂ ವಿಶಿಷ್ಟ ಬಣ್ಣವುಂಟು. ಮಾಸಲು ಹಳದಿ. ಸಾಧಾರಣ ಹಸುರು, ಎಳೆಗೆಂಪು – ಇಂಥ ಬಣ್ಣಗಳಿಂದ ಇದರ ಗುಡ್ಡಗಳು ಮನಮೋಹಕವಾಗಿವೆ. ಗ್ರ್ಯಾಂಡ್ ಕ್ಯಾನ್ಯನ್‌ಗೆ ಸಾಟಿಯಾದ ಕಮರಿ ಪ್ರಪಂಚದಲ್ಲಿ ಮತ್ತೊಂದಿಲ್ಲ.

ಕಲ್ನಾರು, ತಾಮ್ರ, ಸೀಸ ಮತ್ತು ಯುರೇನಿಯಂ ಇಲ್ಲಿ ಸಿಗುವ ಖನಿಜಗಳು. ಇಲ್ಲಿ ಹಳೆಯ ಯುಗದ ಬಂಡೆಗಳೂ ಸಸ್ಯ ಮತ್ತು ಪ್ರಾಣಿಗಳ ಪಳೆಯುಳಿಕೆಗಳೂ ಹೇರಳವಾಗಿವೆ. ಕಮರಿಯ ಕೆಳಗಿನ ಸ್ತರಗಳಲ್ಲಿಯ ಪ್ರಾಚೀನ ಸಮುದ್ರ ಚಿಪ್ಪುಗಳು; ಟ್ರೈಲೋಬೈಟ್, ಸಮುದ್ರ ಸಂಧಿಪದಿಗಳು, ಒಂಟೆ ಆನೆ, ಕುದುರೆ, ಡೈನೋಸರ್ (ಮೂಳೆ ಮತ್ತು ಹೆಜ್ಜೆ ಗುರುತು); ನೆಲದ ಸ್ಲಾತ್ ಮುಂತಾದ ವಿವಿಧ ಜೀವಿಗಳ ಪಳೆಯುಳಿಕೆಗಳೂ ಇಲ್ಲಿವೆ. ಇವುಗಳಿಂದ ಇಲ್ಲಿ ಹಿಂದೆ ಇದ್ದ ಜೀವಿಗಳ ಪರಿಚಯ ದೊರಕುತ್ತದೆ.

ಸಸ್ಯಪ್ರಾಣಿ ಜೀವನ : ಭೂಗುಣ, ವಾಯುಗುಣ, ಭೂಮಿಯ ಮಟ್ಟ ಇವಕ್ಕೆ ಅನುಗುಣವಾಗಿ ಕ್ಯಾನ್ಯನ್ ಪ್ರದೇಶವನ್ನು ಐದು ಜೀವವಲಯಗಳನ್ನಾಗಿ ವಿಭಜಿಸಿದೆ. ಆದರೆ ಇಲ್ಲಿ ಉಷ್ಣವಲಯದ ಸಸ್ಯಗಳಿಲ್ಲ. ಕಮರಿಯ ಮಧ್ಯಭಾಗ ಸಸ್ಯರಹಿತವಾಗಿ ಮರುಭೂಮಿಯ ಲಕ್ಷಣ ಹೊಂದಿದೆ. ಪ್ರಸ್ಥಭೂಮಿಯ ಭಾಗಗಳಲ್ಲಿ ಪೈನ್, ಫರ್ ಮತ್ತು ಆಸ್ಪಿನ್ ಮರಗಳು ಬೆಳೆಯುತ್ತವೆ. ನೂರು ಬಗೆಯ ಪಕ್ಷಿಗಳೂ 60 ಬಗೆಯ ಸ್ತನಿ ಪ್ರಾಣಿಗಳೂ 25 ಬಗೆಯ ಸರ್ಪಗಳೂ ಇಲ್ಲಿವೆ. ಪ್ರಾಕೃತಿಕ ತಡೆಗಳಿಂದಾಗಿ ಕಮರಿಯ ವಿವಿಧ ಅಂಚುಗಳಲ್ಲಿಯ ಪ್ರಾಣಿಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಕಮರಿಯ ಕೆಲವು ಭಾಗಗಳಲ್ಲಿ ಪ್ರಾಗೈತಿಹಾಸಿಕ ಜನಜೀವನದ ಕುರುಹುಗಳುಂಟು.

1919 ರಲ್ಲಿ 2,58,118 ಹೆ. ವಿಸ್ತೀರ್ಣ ಗ್ರ್ಯಾಂಡ್ ಕ್ಯಾನ್ಯನ್ ನ್ಯಾಷನಲ್ ಪಾರ್ಕ್ ಪ್ರವಾಸ ಕ್ಷೇತ್ರ ಸ್ಥಾಪಿತವಾಯಿತು. ಕ್ಯಾನ್ಯನಿನ ಉತ್ತರದ ಮತ್ತು ದಕ್ಷಿಣದ ಅಂಚುಗಳ ನಡುವೆ ಸಂಬಂಧ ಕಲ್ಪಿಸಲು 347 ಕಿಮೀ ರಸ್ತೆಯನ್ನೂ 34 ಕಿಮೀ ರೈಲು ಮಾರ್ಗವನ್ನೂ ಹಾಕಲಾಗಿದೆ. ರಮ್ಯವಾದ ಈ ಭಾಗದ ಕಮರಿಯ ಎರಡು ಅಂಚುಗಳಲ್ಲೂ ಪ್ರವಾಸಿಗಳಿಗಾಗಿ ವಸತಿಗಳಿವೆ. ಪ್ರಪಾತದೊಳಗೆ ಹೇಸರಗತ್ತೆಯ ಸವಾರಿ ಮಾಡುವುದೂ ನದಿಯ ಮೇಲೆ ಮೋಟಾರ್ ದೋಣಿ ಅಥವಾ ಗಾಳಿ ತುಂಬಿದ ತೆಪ್ಪದ ಮೇಲೆ ಪ್ರಯಾಣ ಮಾಡುವುದೂ ರೋಮಾಂಚಕಾರಿ ಅನುಭವ. ಕಮರಿಯ ದಕ್ಷಿಣದ ಅಂಚು ಇಡೀ ವರ್ಷ ಪ್ರವಾಸಿಗಳಿಗೆ ತೆರೆದಿರುತ್ತದೆ. ಉತ್ತರದ ಅಂಚಿನ ಪ್ರವಾಸಿಮಂದಿರಗಳನ್ನು ಚಳಿಗಾಲದಲ್ಲಿ ಮುಚ್ಚಿರುತ್ತಾರೆ. ಕ್ಯಾನ್ಯನ್ ಭಾಗಕ್ಕೆ ಪ್ರಯಾಣ ಮಾಡಲು ರೈಲು ಮತ್ತು ರಸ್ತೆ ಸೌಲಭ್ಯಗಳುಂಟು. ಹೆಲಿಕ್ಯಾಪ್ಟರ್‌ನಲ್ಲೂ ಕ್ಯಾನ್ಯನ್‌ನ ದೃಶ್ಯವನ್ನು ವೀಕ್ಷಿಸಬಹುದು. (ವಿ.ಜಿ.ಕೆ.)

**ಗ್ರ್ಯಾಂಡ್ ಬ್ಯಾಂಕ್ಸ್:** ಅಟ್ಲಾಂಟಿಕ್ ಸಾಗರದ ಆಗ್ನೇಯ ಭಾಗದಲ್ಲಿರುವ ಖಂಡಾಂತರ ಮುಳುಗುದಡದ (ಕಾಂಟಿನೆಂಟಲ್ ಷೆಲ್ಫ್) ಒಂದು ಭಾಗ. ನ್ಯೂಫೌಂಡ್‌ಲೆಂಡ್‌ನ ಆಗ್ನೇಯದಲ್ಲಿ ಸು. 560 ಕಿಮೀ ದೂರ ಹರಡಿದೆ. ಇದೊಂದು ಅಂತಾರಾಷ್ಟ್ರೀಯ ಮೀನುಗಾರಿಕೆ ಕೇಂದ್ರ. ಗ್ರ್ಯಾಂಡ್ ಬ್ಯಾಂಕ್ಸ್‌ನಲ್ಲಿ ಹಲವು ಮುಳುಗುದಡಗಳಿವೆ. ಇವುಗಳಲ್ಲಿ ಮುಖ್ಯವಾದವು ಗ್ರ್ಯಾಂಡ್ ಬ್ಯಾಂಕ್, ಸೇಂಟ್ ಬ್ಯಾಂಕ್ ಮತ್ತು ಗ್ರೀನ್ ಬ್ಯಾಂಕ್. ಈ ದಡಗಳ ಸರಾಸರಿ ಆಳ 30 ಫ್ಯಾದಂ, ಅನೇಕ ಕಡೆಗಳಲ್ಲಿ 100 ಫ್ಯಾದಂ ಗಳಿಗಿಂತಲೂ ಹೆಚ್ಚು ಆಳವಾಗಿದೆ. ಇದರ ಸಮೀಪದಲ್ಲೆ ಲ್ಯಾಬ್ರಡಾರ್ ಶೀತಸಾಗರ ಪ್ರವಾಹವೂ ಗಲ್ಫ್ ಸ್ಟ್ರೀಂ ಉಷ್ಣಸಾಗರ ಪ್ರವಾಹವೂ ಕೂಡುತ್ತವೆ. ಈ ಪರಸ್ಪರ ವಿರುದ್ಧ ಪ್ರವಾಹಗಳ ಕೂಡುವಿಕೆಯಿಂದಾಗಿ ಆಗಿಂದಾಗ್ಗೆ ದಟ್ಟವಾದ ಮಂಜು ಕವಿಯುತ್ತದೆ. ಹೀಗೆ ಶೈತ್ಯ ಉಷ್ಣ ಪ್ರವಾಹಗಳ ಸಂಮಿಶ್ರಣದಲ್ಲಿ ಸೃಷ್ಟಿಯಾಗುವ ಜೀವರಾಶಿ ಮೀನುಗಳಿಗೆ ಒಳ್ಳೆಯ ಆಹಾರ. ಗ್ರ್ಯಾಂಡ್ ಬ್ಯಾಂಕಿನ ಮತ್ಸ್ಯಸಂಪತ್ತನ್ನು ಜಾನ್ ಕ್ಯಾಬಟ್ ನಾಲ್ಕು ಶತಮಾನಗಳ ಹಿಂದೆ ಕಂಡ. ಇಲ್ಲಿ ಕಾಡ್, ಹ್ಯಾಡಕ್, ಗುಲಾಬಿ ಮೀನು, ಪೊಲಾಕ್, ಚಪ್ಪೆಮೀನು, ಹೆರಿಂಗ್, ಕಡಲಮೀನು ಹೇರಳವಾಗಿವೆ. ಇಲ್ಲಿ ಕೆನಡ, ಅಮೆರಿಕ, ಇಂಗ್ಲೆಂಡ್, ಪೋರ್ಚುಗಲ್, ಸ್ಪೇನ್ ಮತ್ತು ಫ್ರಾನ್ಸಿನಿಂದ ಮೀನು ಹಿಡಿಯಲು ಬಲೆದೋಣಿಗಳು ಬರುತ್ತವೆ. ಮೀನುಗಳ ನಿಬಿಡತೆಯನ್ನು ಅಧ್ಯಯನಮಾಡುವ, ಅವುಗಳ ಸಂಖ್ಯೆ ಕ್ಷೀಣಿಸದಂತೆ ರಕ್ಷಿಸುವ ಉದ್ದೇಶದಿಂದ ಅಂತಾರಾಷ್ಟ್ರೀಯ ಆಯೋಗವೊಂದು 1949ರಲ್ಲಿ ಸ್ಥಾಪಿತವಾಗಿದೆ. (ಎಸ್.ಎನ್.ಎಲ್.ಕೆ.)

**ಗ್ರ್ಯಾಂಡ್ ರ್ಯಾಪಿಡ್ಸ್:** ಅಮೆರಿಕ ಸಂಯುಕ್ತಸಂಸ್ಥಾನಗಳ ಮಿಷಿಗನ್ ರಾಜ್ಯದ ಒಂದು ನಗರ. ಜನಸಂಖ್ಯೆಯ ದೃಷ್ಟಿಯಿಂದ ಈ ರಾಜ್ಯದ ಎರಡನೆಯ ನಗರ. ಗ್ರ್ಯಾಂಡ್ ನದಿಯ ದಡದಲ್ಲಿದೆ. ಜನಸಂಖ್ಯೆ 771,185. 1838ರಲ್ಲಿ ಇದು ಒಂದು ಹಳ್ಳಿಯಾಗಿತ್ತು. 1850ರ ವೇಳೆಗೆ ನಗರವಾಗಿ ಬೆಳೆದಿತ್ತು. 1824ಕ್ಕಿಂತಲೂ ಮೊದಲೇ ಇಲ್ಲಿ ಅನೇಕ ಇಂಡಿಯನ್ ವಸತಿಗಳೂ ವ್ಯಾಪಾರ ಕೇಂದ್ರಗಳೂ ಇದ್ದವು. ಪೀಠೋಪಕರಣ, ರೈಲ್ವೆ ಉಪಕರಣಗಳನ್ನು ತಯಾರಿಸುವ ಬೃಹತ್ ಉದ್ಯಮಗಳಿವೆ. ಎರಕದ ಸರಕುಗಳು, ರೆಫ್ರಿಜಿರೇಟರ್, ಯಂತ್ರಗಳ ಬಿಡಿ ಭಾಗಗಳು, ರೇಡಿಯೊ ಫೋನೋಗ್ರಾಫ್, ಸೀಸದ ಸಾಮಾನು, ರಾಸಾಯನಿಕ ವಸ್ತು, ಗೊಬ್ಬರ, ಬಣ್ಣ, ಕಾಗದ ಮೊದಲಾದವನ್ನು ತಯಾರಿಸುವ ಕೈಗಾರಿಕೆಗಳು ಈ ನಗರದಲ್ಲಿವೆ. ಈ ಸುತ್ತಿನಲ್ಲಿ ಹಣ್ಣುಗಳನ್ನು ಹೇರಳವಾಗಿ ಬೆಳೆಯುತ್ತಾರೆ. ಈ ನಗರದಲ್ಲಿ ಕಲಾವಸ್ತು ಸಂಗ್ರಹಾಲಯ ಮತ್ತು ಪೀಠೋಪಕರಣ ವಸ್ತು ಸಂಗ್ರಹಾಲಯಗಳೂ ರಂಗ ಮಂದಿರಗಳೂ ಇವೆ. ಕಾಲ್‌ವಿನ್ ಕಾಲೇಜೂ ಮಿಷಿಗನ್ ವಿಶ್ವವಿದ್ಯಾಲಯದ ಮತ್ತು ಮಿಷಿಗನ್ ಸ್ಟೇಟ್ ವಿಶ್ವವಿದ್ಯಾಲಯದ ವಿಸ್ತರಣ ಕೇಂದ್ರಗಳೂ ತೋಟಗಾರಿಕೆ ಪ್ರಯೋಗಾಲಯ ಕೇಂದ್ರವೂ ಇಲ್ಲಿವೆ.

ಅಮೆರಿಕದ ಮಿನ್ನೆಸೋಟದಲ್ಲಿ ಇದೇ ಹೆಸರಿನ ಒಂದು ಹಳ್ಳಿ ಇದೆ.

(ಎಸ್.ಎನ್.ಎಲ್.ಕೆ.)

**ಗ್ಲಾಸ್ಟರ್:** ಈ ಹೆಸರಿನ ನಗರಗಳು ಮೂರಿವೆ. ಮೊದಲನೆಯದು, ಇಂಗ್ಲೆಂಡಿನಲ್ಲಿ ಗ್ಲಾಸ್ಟರ್‌ಷೈರಿನ ಕೌಂಟಿ ಪಟ್ಟಣ, ಇದು ಪಶ್ಚಿಮ ಇಂಗ್ಲೆಂಡಿನಲ್ಲಿದೆ. ಕೈಗಾರಿಕಾ ಕೇಂದ್ರ. ವಿಮಾನ, ವ್ಯವಸಾಯೋಪಕರಣ, ರೈಲ್ವೆ ಸಾಧನಸಾಮಗ್ರಿಗಳು, ಪೀಠೋಪಕರಣ, ಬೆಂಕಿಕಡ್ಡಿ, ಚಲನಚಿತ್ರ ಕ್ಯಾಮೆರ ಮುಂತಾದವು ತಯಾರಾಗುತ್ತವೆ. ಮರ ಕೊಯ್ಯುವುದು ಒಂದು ಹಳೆಯ ಉದ್ಯಮ. ರೋಮನ್ ಆಕ್ರಮಣಕಾಲದಲ್ಲಿ ಗ್ಲಾಸ್ಟರ್ ಒಂದು ಪುರವಾಗಿತ್ತು. ಇದರ ಸನ್ನಿವೇಶದಿಂದಾಗಿ ಇಲ್ಲಿ ಸ್ಥಾಪಿತವಾದ ಸೇಂಟ್ ಪೀಟರ್ ಅಬೆಯಿಂದಾಗಿ ಇದು ಬೆಳೆಯಿತು. ಇದು ಪ್ರಾಚೀನ ಆಂಗ್ಲಿಯನ್ ರಾಜ್ಯವಾದ ಮರ್ಷಿಯದ ರಾಜಧಾನಿಯಾಯಿತು. 1ನೆಯ ಜೇಮ್ಸ್ ದೊರೆ ಇದಕ್ಕೆ ನಗರದ ಸ್ಥಾನ ನೀಡಿದ(1605).

ಅಮೆರಿಕ ಸಂಯುಕ್ತ ಸಂಸ್ಥಾನಗಳ ಮ್ಯಾಸಚೂಸೆಟ್ಸ್ ರಾಜ್ಯದ ಈಶಾನ್ಯ ಭಾಗದಲ್ಲಿ ಈ ಹೆಸರಿನ ಒಂದು ನಗರವಿದೆ. ಜನಸಂಖ್ಯೆ 21,789. 1642ರಲ್ಲಿ ಇದು ಒಂದು ಸಣ್ಣ ಊರಾಗಿತ್ತು. ಸ್ಕೂನರ್ ಎಂಬ ಹಡಗನ್ನು ಮೊದಲು ಕಟ್ಟಿದ್ದು ಇಲ್ಲಿ ಎಂದು ಹೇಳಲಾಗಿದೆ. ಸಮುದ್ರದಲ್ಲಿ ಕಳೆದುಹೋದ ಮೀನುಗಾರರ ಸ್ಮಾರಕವಾಗಿ ಇಲ್ಲಿ ಬೆಸ್ತನ ಕಂಚಿನ ಪ್ರತಿಮೆಯೊಂದನ್ನು ಸ್ಥಾಪಿಸಲಾಗಿದೆ. 19ನೆಯ ಶತಮಾನದ ಕೊನೆಯ ವೇಳೆಗೆ ಇದು ಬೇಸಗೆಯ ವಿಹಾರಕೇಂದ್ರವಾಗಿಯೂ ಕಲಾವಿದರ ಕೇಂದ್ರವಾಗಿಯೂ ಅಭಿವೃದ್ಧಿಯಾಯಿತು. ಇಲ್ಲಿ ಸಾಹಿತಿಗಳಿಗೂ ಕಲಾವಿದರಿಗೂ ಅನುಕೂಲಕರವಾದ ವಾತಾವರಣವಿದೆ. ಇಲ್ಲಿರುವ ಹ್ಯಾಮಂಡ್ ವಸ್ತು ಸಂಗ್ರಹಾಲಯದಲ್ಲಿ ಅನೇಕ ಒಳ್ಳೆಯ ಕಲಾಕೃತಿಗಳಿವೆ. ಅನೇಕ ಲೇಖಕರ ಕೃತಿಗಳಲ್ಲಿ ಗ್ಲಾಸ್ಟರಿನ ವರ್ಣನೆಯಿದೆ.

ಅಮೆರಿಕ ಸಂಯುಕ್ತಸಂಸ್ಥಾನಗಳ ನ್ಯೂ ಜರ್ಸಿ ರಾಜ್ಯದ ನೈರುತ್ಯ ಭಾಗದಲ್ಲಿರುವ ಗ್ಲಾಸ್ಟರ್ ನಗರದ ಜನಸಂಖ್ಯೆ 15,511. ಇದು ಡೆಲಾವೇರ್ ನದಿಯ ದಡದಲ್ಲಿದೆ. ಇಲ್ಲಿ 1623ರಲ್ಲಿ ವಸತಿ ಆರಂಭವಾಯಿತು. ಡಚ್ ನೆಲಸುಗಾರರಿಂದ ಇಂಗ್ಲಿಷರು ಇದನ್ನು 1664ರಲ್ಲಿ ವಶಪಡಿಸಿಕೊಂಡರು. ಇದರ ಬಳಿ 1899ರಲ್ಲಿ ಹಡಗು ನಿರ್ಮಾಣ ಉದ್ಯಮ

ಆರಂಭವಾಯಿತು. 20ನೆಯ ಶತಮಾನದಲ್ಲಿ ಇದು ಕೈಗಾರಿಕಾಕೇಂದ್ರವಾಗಿ ಬೆಳೆಯಿತು. ಕಟ್ಟಡ ನಿರ್ಮಾಣ ಸಾಮಗ್ರಿ ಮತ್ತು ರಟ್ಟಿನ ಪೆಟ್ಟಿಗೆಗಳು, ಕಾರ್ಕ್, ಮಕ್ಕಳ ಉಡುಪು ಮತ್ತು ರಾಸಾಯನಿಕ ವಸ್ತುಗಳು ಇಲ್ಲಿ ತಯಾರಾಗುತ್ತವೆ. (ಎಸ್.ಎನ್.ಎಲ್.)

**ಗ್ಲ್ಯಾಸ್ಗೋ:** ಸ್ಕಾಟ್ಲೆಂಡಿನ ಒಂದು ನಗರ ಮತ್ತು ಬಂದರು, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ. ಕ್ಲೈಡ್ ನದಿಯ ಮುಖದಿಂದ 32 ಕಿಮೀ ಮೇಲಕ್ಕೆ, ಅದರ ಎರಡು ದಂಡೆಗಳ ಮೇಲೆ ಇವೆ. ಇಲ್ಲಿಂದ ಎಡಿನ್ ಬರೋ ನಗರಕ್ಕೆ 70.4 ಕಿಮೀ. ಲಂಡನ್ನಿಗೆ 633.6 ಕಿಮೀ. ಜನಸಂಖ್ಯೆ 577689. ನಗರದ ಮುಖ್ಯ ವಾಣಿಜ್ಯ ಮತ್ತು ಆಡಳಿತ ಕಟ್ಟಡಗಳು ಕ್ಲೈಡ್ ನದಿಯ ಉತ್ತರ ದಂಡೆಯ ಮೇಲಿವೆ. ಗ್ಲ್ಯಾಸ್ಗೋದ ಸುತ್ತಲೂ ಹಲವು ಉಪನಗರಗಳಿವೆ.

ಗ್ಲ್ಯಾಸ್ಗೋ ವಿಶ್ವವಿದ್ಯಾಲಯದ ಗ್ರಂಥಭಂಡಾರ ಮತ್ತು ಪೌರಸಭಾ ಸಾರ್ವಜನಿಕ ಗ್ರಂಥಾಲಯ ಪ್ರಸಿದ್ಧವಾದುದು. ಇಲ್ಲಿ ಹಡಗು ನಿರ್ಮಾಣ, ರಾಸಾಯನಿಕ ವಸ್ತು ತಯಾರಿಕೆ, ಕಲ್ಲಿದ್ದಲು ಕಬ್ಬಿಣ ಗಣಿಗಾರಿಕೆ, ಬಟ್ಟೆ, ಕಾಗದ, ಹೊಗೆಸೊಪ್ಪು ಮುಂತಾದ ಕೈಗಾರಿಕೆಗಳಿವೆ. ಗ್ಲ್ಯಾಸ್ಗೋ ನಗರದಲ್ಲಿ ಕ್ಲೈಡ್ ನದಿಗೆ ಹನ್ನೊಂದು ಸೇತುವೆಗಳಿದ್ದು ಸರಕು ಸಾಗಿಸಲು ನದಿ ಉಪಯುಕ್ತವಾಗಿದೆ. *

**ಗ್ವಾಟೆಮಾಲ:** ಮಧ್ಯ ಅಮೆರಿಕದ ಅತ್ಯಂತ ಉತ್ತರದ ಗಣರಾಜ್ಯ. ಉ.ಅ.$13^0 42'$–$17^0 49'$ ಮತ್ತು ಪ.ರೇ $88^0$–$30'$–$92^0 15'$ ನಡುವೆ ಇದೆ. ವಿಸ್ತೀರ್ಣ 108889 ಚ.ಕಿಮೀ. ಮೆಕ್ಸಿಕೊ, ಬಿಲಿಜ್, ಹೊಂಡುರಸ್, ಕೆರೆಬೀಯನ್ ಸಮುದ್ರ, ಎಲ್‌ಸಾಲ್ವಡಾರ್, ಪೆಸಿಫಿಕ್ ಸಾಗರ–ಇವು ಇದರ ಮೇರೆಗಳು. ಪೂರ್ವದಲ್ಲಿ ಇದಕ್ಕೆ 88 ಕಿಮೀ. ಕೆರೆಬಿಯನ್ ಸಮುದ್ರತೀರವೂ ದಕ್ಷಿಣದಲ್ಲಿ 288 ಕಿಮೀ. ಪೆಸಿಫಿಕ್ ಸಾಗರತೀರವೂ ಇವೆ. ಇದರ ಜನಸಂಖ್ಯೆ 11,971,000 (2002). ರಾಜಧಾನಿ ಗ್ವಾಟೆಮಾಲ ನಗರ.




ಮೇಲ್ಮೈಲಕ್ಷಣ : ಗ್ವಾಟೆಮಾಲವನ್ನು ಭೌಗೋಳಿಕವಾಗಿ ಐದು ಪ್ರದೇಶಗಳಾಗಿ ವಿಂಗಡಿಸಬಹುದು. 1. ಪೆಸಿಫಿಕ್ ಕರಾವಳಿಯ ತಗ್ಗು ನೆಲ, 2. ಸಿಯೆರ ಮಾದ್ರೆ ಪರ್ವತ ಶ್ರೇಣಿ, 3. ಈ ಶ್ರೇಣಿಗೆ ಉತ್ತರದಲ್ಲಿರುವ ಪ್ರಸ್ಥಭೂಮಿ, 4. ಅಂಟ್ಲಾಂಟಿಕ್ ಸಾಗರತೀರದ ಇಳಿಜಾರಿನ ಪರ್ವತ ಪ್ರದೇಶ ಮತ್ತು 5. ಪೆಟೇನ್ ಬಯಲು.

1. ಮೆಕ್ಸಿಕೊದ ಚ್ಯಾಪಾಸ್ ಕರಾವಳಿ ಗ್ವಾಟೆಮಾಲದಲ್ಲಿ ಸು. 250 ಕಿಮೀ ಸಾಗಿ ಎಲ್‌ಸಾಲ್ವಡಾರಿನಲ್ಲಿ ಮುಂದುವರಿಯುತ್ತದೆ. ಮೆಕ್ಸಿಕೊ– ಗ್ವಾಟೆಮಾಲ ಗಡಿಯ ಬಳಿ ಇದರ ಅಗಲ 40 ಕಿಮೀ. ಕರಾವಳಿಯ ಅಂಚಿನಲ್ಲಿ ಉದ್ದಕ್ಕೂ ಮರಳ ಪಟ್ಟಿಗಳಿವೆ.

2. ಪೆಸಿಫಿಕ್ ಸಾಗರದ ಅಂಚಿನಲ್ಲಿ ಸಾಗುವ ಸಿಯೆರ ಮಾದ್ರೆ ಪರ್ವತಶ್ರೇಣಿ ಅಕ್ಕಪಕ್ಕದ ಮೆಕ್ಸಿಕೊ ಮತ್ತು ಸಾಲ್ವಡಾರ್ ರಾಜ್ಯಗಳತ್ತ ಚಾಚಿಕೊಂಡಿದೆ. ಹದಿಮೂರು ಪ್ರಮುಖ ನದಿಗಳು ಇಲ್ಲಿ ಉಗಮಿಸುತ್ತವೆ. ಈ ಶ್ರೇಣಿಯ ದಕ್ಷಿಣ ತಪ್ಪಲಲ್ಲಿ ಅಗ್ನಿಪರ್ವತಗಳುಂಟು. ಇವುಗಳಲ್ಲಿ ಮುಖ್ಯವಾದದ್ದು ತಾಹೂಮೂಲ್ಕೊ (4,600 ಮೀ) ಇದು ಮಧ್ಯ ಅಮೆರಿಕದ ಅತ್ಯಂತ ಎತ್ತರದ ಶಿಖರ. ಇತರ ಕೆಲವು ಪರ್ವತಗಳು (4325 ಮೀ) ಅಕಾಟಿನಂಗೊ (4325 ಮೀ) ಫ್ವೇಗೋ (4193 ಮೀ) ಸಾಂತ ಮರಿಯೂ ಕ್ವೆಜಾಲ್ಟಿನಂಗೊ (4123 ಮೀ) ಮತ್ತು ಆಗುವ ಝುನಿಲ್ (3852 ಮೀ) ಅಟಿಲಾನ್ ಮತ್ತು ಪಕಾಯ (2780 ಮೀ) ಒಟ್ಟು 30 ಅಗ್ನಿಪರ್ವತಗಳ ಪೈಕಿ ಎರಡು ಈಗಲೂ ಜೀವಂತವಾಗಿವೆ. ಈ ರಾಜ್ಯದಲ್ಲಿ ಭೂಕಂಪಗಳು ಹೆಚ್ಚು.

3. ಸಿಯೆರ ಮಾದ್ರೆ ಪರ್ವತ ಶ್ರೇಣಿಯ ಉತ್ತರದಲ್ಲಿಯ ಎತ್ತರವಾದ ಪ್ರಸ್ಥಭೂಮಿ ಬೆಟ್ಟಗಳಿಂದ ಆವೃತವಾಗಿದೆ. ಪೆಸಿಫಿಕ್ ಸಾಗರಕ್ಕೆ ಬೀಳುವ ಕೆಲವು ನದಿಗಳು ಇಲ್ಲಿ ಉಗಮಿಸುತ್ತವೆ.

4. ಅಟ್ಲಾಂಟಿಕ್ ಸಾಗರ ತೀರದ ಪರ್ವತಗಳು ಪೂರ್ವಪಶ್ಚಿಮವಾಗಿ ಹಬ್ಬಿ ಮಧ್ಯೆ ದಕ್ಷಿಣಕ್ಕೆ ಚಾಚಿಕೊಂಡಿವೆ. ಸಿಯೆರ ಚಾಮ ಪರ್ವತ ಪೂರ್ವಾಭಿಮುಖವಾಗಿ ಬೆಲಿಜ಼ಿ ರಾಸ್ ರಾಜ್ಯದ ಕಡೆ ಸಾಗಿ ಕಾಕ್ಸ್‌ಕೂಂಬ್ ಪರ್ವತವನ್ನು ಮುಟ್ಟುತ್ತದೆ. ಸಿಯೆರದ ಸಾಂತ ಕ್ರುಜ್, ಪರ್ವತಶ್ರೇಣಿ ಪೂರ್ವದತ್ತ ಪೋಲೊಚೀಕ್ ಮತ್ತು ಸಾರ್ಸ್ಟೂನ್ ನದಿಗಳ ನಡುವೆ ಸಾಗಿ ಕೊಕೋಲಿ ಭೂಶಿರವನ್ನು ಸೇರುತ್ತದೆ. ಮತ್ತೊಂದು ಪರ್ವತಶ್ರೇಣಿ ಸಿಯೆರದ ಲಾಸ್ ಮೀನಾಸ್, ಪೋಲೊಚೀಕ್ ಮತ್ತು ಮೊಟಾಗ್ವಾ ನದಿಗಳ ನಡುವಣ ಪ್ರದೇಶದಲ್ಲಿ ಹಬ್ಬಿದೆ.

5. ಪೆಟೇನ್ ಬಯಲು ಗ್ವಾಟೆಮಾಲ ರಾಜ್ಯದ ದಕ್ಷಿಣ ಭಾಗವನ್ನು ಆವರಿಸಿದೆ. ಇಲ್ಲಿ ಹುಲ್ಲುಗಾವಲು ಮತ್ತು ಅರಣ್ಯಗಳು ಹೆಚ್ಚು. ಭೂಮಿ ಫಲವತ್ತಾಗಿದೆ. ನೀರು ಸಮೃದ್ಧವಾಗಿದೆ. ಪ್ರಾಚೀನ ಮಾಯ ನಾಗರಿಕತೆ ಇಲ್ಲಿ ಹಬ್ಬಿತ್ತು.

ಗ್ವಾಟೆಮಾಲದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳು ಸಣ್ಣವು; ಪೂರ್ವಭಾಗದಲ್ಲಿ ದೊಡ್ಡವು. ಮೊಟಾಗ್ವಾ ನದಿ 400 ಕಿಮೀ ಹರಿದು ಕೆರೇಬಿಯನ್ ಸಮುದ್ರವನ್ನು ಸೇರುತ್ತದೆ. ಅದರ ಮೇಲೆ 144 ಕಿಮೀ ಗಳಷ್ಟು ದೂರ ಹಡಗುಗಳು ಸಂಚರಿಸುತ್ತವೆ. ಪೋಲೊಚೀಕ್ ನದಿಯ ಉದ್ದ 144 ಕಿಮೀ. ಇತರ ನದಿಗಳಪೈಕಿ ಊಸೂಮಾ ಸೀಂಟಾ, ಚಿಕ್ಸಾಯ್, ಮೊಟಾಗ್ವಾ ಮತ್ತು ಸಾರ್ಸ್ಟೂನ್ ಮುಖ್ಯವಾದವು. ಪೆಟೇನ್, ಗಾಲ್ಫೊಡುಲ್ಸೆ, ಆಟಿನಾಲ್– ಇವು ಇಲ್ಲಿಯ ಸರೋವರಗಳು.

ವಾಯುಗುಣ : ಪರ್ವತಮಯವಾದ ಈ ರಾಷ್ಟ್ರದ ವಾಯುಗುಣ ಸಂಕೀರ್ಣವಾದದ್ದು. ಪೆಸಿಫಿಕ್ ತೀರದಲ್ಲೂ ಪರ್ವತ ಪ್ರದೇಶದಲ್ಲೂ ಮಾನ್ಸೂನ್ ವಾಯುಗುಣವಿದೆ; ಬೇಸಗೆಯಲ್ಲಿ (ಮೇ–ಅಕ್ಟೋಬರ್) ಹೆಚ್ಚು ಮಳೆ. ಉಷ್ಣತೆ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಆದರೆ ಅತಿಯಾದ ಚಳಿ ಇಲ್ಲ. ಕರಾವಳಿಯಲ್ಲಿ ವಾರ್ಷಿಕ ಸರಾಸರಿ ಉಷ್ಣತೆ 42.6 ಸೆ. ಚಳಿಗಾಲ–ಬೇಸಗೆ ಕಾಲಗಳ ನಡುವೆ ಹೆಚ್ಚು ವ್ಯತ್ಯಾಸವಿಲ್ಲ. ಪಶ್ಚಿಮ ಗ್ವಾಟೆಮಾಲದ ಎತ್ತರ ಪ್ರದೇಶಗಳಲ್ಲಿ ಉಷ್ಣತೆ ಹಂಚಿಕೆ $30.8^0$ ಸೆ.–$36.9^0$ ಸೆ.

ಜನಜೀವನ : ಈ ರಾಜ್ಯದ ಜನರು ಮುಖ್ಯವಾಗಿ ಇಂಡಿಯನ್ ಜನಾಂಗದವರು. ಮತ್ತು ಅಪ್ಪಟ ಸ್ಪೇನಿಗರು. ಶೇ. 2 ರಷ್ಟು ಕಪ್ಪುಜನ ಮತ್ತು ಶೇ. 8½ ಸಂಮಿಶ್ರ ಜನ. ರಾಜ್ಯದ ಜನಸಾಂದ್ರತೆ ಚ.ಕಿಮೀ ಗೆ 122. ದಕ್ಷಿಣದಲ್ಲಿ ಸಾಂದ್ರತೆ ಹೆಚ್ಚು. ಆಡಳಿತ ಭಾಷೆ ಸ್ಪ್ಯಾನಿಷ್. ಮಾಯ ಇಂಡಿಯನ್ನರಲ್ಲಿ 6 ಮುಖ್ಯ ಭಾಷೆಗಳೂ 21 ಪ್ರದೇಶ ಭಾಷೆಗಳೂ ಇವೆ. ಬಹುತೇಕ ಜನ ರೋಮನ್ ಕೆಥೊಲಿಕರು. ಸು. ಶೇ.4 ಪ್ರಾಟೆಸ್ಟಂಟರು. ವ್ಯವಸಾಯ ಯೋಗ್ಯ ಭೂಮಿಯಲ್ಲಿ $1/3$ ಭಾಗದಷ್ಟು ಭೂಮಿ ಕೃಷಿಗೆ ಒಳಪಟ್ಟಿದೆ. ಮುಖ್ಯ ಬೆಳೆಗಳು ಕಾಫಿ, ಬಾಳೆ, ಹತ್ತಿ, ಕೋಕೋ, ಸೆಣಬು, ಕಾಫಿ ಮೇಲುನಾಡಿನ ಭಾಗಗಳಲ್ಲಿ ಬೆಳೆಯಾಗುತ್ತದೆ; ಬಾಳೆ ಬೆಳೆಯುವುದು ಪೆಸಿಫಿಕ್ ಸಾಗರ ತೀರಗಳಲ್ಲಿ. ಹೈನುಗಾರಿಕೆ ಅಭಿವೃದ್ಧಿಯಾಗುತ್ತಿದೆ. ಪಶ್ಚಿಮದ ಕುರಿ ಸಾಕುವ ಕೇಂದ್ರಗಳಿಂದ ಗ್ವಾಟೆಮಾಲದ ಪ್ರಸಿದ್ಧ ನೇಕಾರರಿಗೆ ಉಣ್ಣೆ ಸರಬರಾಜಾಗುತ್ತದೆ. ಗ್ವಾಟೆಮಾಲದಲ್ಲಿ ಸಿಮೆಂಟ್, ಮೇಣದ ಬತ್ತಿ, ರಾಸಾಯನಿಕ ವಸ್ತುಗಳು, ಸಿಗರೇಟ್, ಆಹಾರ ವಸ್ತುಗಳು, ಟೈರು, ಬಟ್ಟೆ ಕೈಗಾರಿಕೆಗಳಿವೆ. ಸೀಸ, ತವರ, ಕ್ರೋಮ್ ಮತ್ತು ಬೆಳ್ಳಿ ಇಲ್ಲಿಂದ ರಫ್ತಾಗುತ್ತದೆ. ಚಿನ್ನ ವಸಾಹತು ಕಾಲದಲ್ಲಿ ಹೇರಳವಾಗಿತ್ತು. ಈಗ ರಫ್ತಾಗುವಷ್ಟು ಪರಿಮಾಣದಲ್ಲಿ ಉತ್ಪನ್ನವಾಗುತ್ತಿಲ್ಲ.

ಸಾರಿಗೆ–ಸಂಪರ್ಕ : ರೂಸ್ವೆಲ್ಟ್ ಹೆದ್ದಾರಿ ಮತ್ತು ಪೆಸಿಫಿಕ್ ತೀರದ ಹೆದ್ದಾರಿ – ಈ ಎರಡು ಅಂತಾರಾಷ್ಟ್ರೀಯ ಹೆದ್ದಾರಿಗಳು ರಾಜ್ಯವನ್ನು ಹಾದುಹೋಗುತ್ತವೆ. ಗ್ವಾಟೆಮಾಲ ನಗರದಿಂದ ಪ್ವೆರ್ಟೊ ವಾರ್ಯೊಸ್ ಮತ್ತು ಮಾಟಿಯಾಸ್ ದ ಗಾಲ್ವೆಜ಼್ ರೇವುಗಳಿಗೂ ಸಂಪರ್ಕ ಕಲ್ಪಿಸುವ 288 ಕಿಮೀ ಗಳ ಅಟ್ಲಾಂಟಿಕ್ ಹೆದ್ದಾರಿ 1959 ರಲ್ಲಿ ಸಂಚಾರಕ್ಕೆ ತೆರೆಯಿತು. ಈ ದೇಶದಲ್ಲಿ ಸು. 280 ಕಿಮೀ ಗಳಷ್ಟು ರೈಲು ಮಾರ್ಗಗಳಿವೆ. ಕೆಲವು ನದಿಗಳು ಮತ್ತು ಸರೋವರಗಳು ಜಲಸಂಚಾರಕ್ಕೆ ಹಾಗೂ ಸರಕುಗಳ ಸಾಗಣೆಗೆ ಅನುಕೂಲವಾಗಿವೆ. ಗ್ವಾಟೆಮಾಲದ ಮುಖ್ಯ ಬಂದರು ಕೆರಿಬಿಯನ್ ತೀರದಲ್ಲಿರುವ

ಪ್ವೆರ್ಟೋ ವಾರ್ಯೊಸ್, ಸ್ಯಾಂಗ್ ಹೋಸೇ ಇನ್ನೊಂದು ಬಂದರು. ಇದು ಪೆಸಿಫಿಕ್ ತೀರದಲ್ಲಿದೆ. ಪ್ರಮುಖ ವಿಮಾನ ನಿಲ್ದಾಣ ಗ್ವಾಟೆಮಾಲ ನಗರದ ಬಳಿ ಇದೆ. ಇದಲ್ಲದೆ 46 ಸಣ್ಣ ವಿಮಾನ ನಿಲ್ದಾಣಗಳು ಗ್ವಾಟೆಮಾಲದ ಮುಖ್ಯ ನಗರಗಳಲ್ಲಿವೆ.

ಗ್ವಾಟೆಮಾಲದ ಮುಖ್ಯ ನಗರಗಳಲ್ಲಿ ಗ್ವಾಟೆಮಾಲದ ನಗರ, ಜನಸಂಖ್ಯೆ 11,50,452 (2002). ಎಸ್ಕ್ವಿಂಟ್ಲಾ, ಕೆಸಾಲ್ಟೆನಾಂಗೊ, ವಿಟಾಲ್ಯೂಲು, ಕೊವಾನ್, ಪೆರ್ಟೋ ವಾರ್ಯೊಸ್ ಮತ್ತು ಸಾಕಾಪ ಮುಖ್ಯವಾದವುಗಳು. (ವಿ.ಜಿ.ಕೆ.)

**ಗ್ವಾಟೆಮಾಲ ನಗರ:** ಮಧ್ಯ ಅಮೆರಿಕದ ಅತ್ಯಂತ ದೊಡ್ಡ ನಗರ. ಗ್ವಾಟೆಮಾಲದ ರಾಜಧಾನಿ; ಆರ್ಥಿಕ ಸಾಂಸ್ಕೃತಿಕ ಕೇಂದ್ರ; ಗ್ವಾಟೆಮಾಲ ವಿಭಾಗದ ಆಡಳಿತ ಕೇಂದ್ರ ಕೂಡ. ಗ್ವಾಟೆಮಾಲದ ಮಧ್ಯದಲ್ಲಿ ಪರ್ವತಗಳ ನಡುವಿನ ಕಣಿವೆಯಲ್ಲಿ ಸು. 1666 ಮೀ ಎತ್ತರದಲ್ಲಿರುವ ಈ ನಗರ ಪ್ವೆರ್ಟೋ ವಾರ್ಯೊಸ್‌ಗೆ ನೈಋತ್ಯದಲ್ಲಿ 240 ಕಿಮೀ ದೂರದಲ್ಲಿದೆ. ಇದರ ಔನ್ನತ್ಯದಿಂದಾಗಿ ಇಲ್ಲಿಯ ವಾಯುಗುಣ ತಂಪಾಗಿದೆ. ಗ್ವಾಟೆಮಾಲದ ರಾಜಧಾನಿಯಾಗಿದ್ದ ಆಂಟೀಗುವ ನಗರ 1773 ರಲ್ಲಿ ಭೂಕಂಪದಿಂದ ನೆಲಸಮವಾದಾಗ ಅದರ ಬದಲು ಗ್ವಾಟೆಮಾಲ ನಗರ ಸ್ಥಾಪಿತವಾಯಿತು (1776). ಮಧ್ಯ ಅಮೆರಿಕ ಸ್ಪೇನಿನಿಂದ ಸ್ವತಂತ್ರಗೊಂಡ ಮೇಲೆ ಮೆಕ್ಸಿಕನ್ ಚಕ್ರಾಧಿಪತ್ಯದ ಅಡಿಯಲ್ಲಿ ಸ್ಥಾಪಿತವಾದ ಮಧ್ಯ ಅಮೆರಿಕ ಪ್ರಾಂತ್ಯಕ್ಕೂ (1822 – 1823) ಅನಂತರ ಸ್ಥಾಪಿತವಾದ ಮಧ್ಯ ಅಮೆರಿಕ ಒಕ್ಕೂಟಕ್ಕೂ (1823 – 1833). ಆ ಮೇಲೆ ಗ್ವಾಟೆಮಾಲ ರಾಜ್ಯಕ್ಕೂ ಕೊನೆಗೆ ಗ್ವಾಟೆಮಾಲ ಗಣರಾಜ್ಯಕ್ಕೂ ರಾಜಧಾನಿಯಾಯಿತು. ಜನಸಂಖ್ಯೆ 1,150,452 (2004).

1917 – 1918 ರ ಭೀಕರ ಭೂಕಂಪದ ಅನಂತರ ನಗರವನ್ನು ಬಹಳ ಮಟ್ಟಿಗೆ ಪುನರ್ನಿರ್ಮಿಸಲಾಯಿತು. ಉಕ್ಕು ಮತ್ತು ಕಾಂಕ್ರೀಟಿನ ಹಲವು ಭಾರಿ ಕಟ್ಟಡಗಳು ನಿರ್ಮಾಣವಾದುವು. ಹಳೆಯ ನಗರದ ಹೊರವಲಯಗಳಲ್ಲಿ ಆಕರ್ಷಕವಾದ ವಸತಿ ಪ್ರದೇಶಗಳು ಬೆಳೆದಿವೆ.

ಸರ್ಕಾರಿ ಕಚೇರಿಗಳ ಜೊತೆಗೆ ಗ್ವಾಟೆಮಾಲ ನಗರ, ಕೈಗಾರಿಕಾ ವಾಣಿಜ್ಯ ಕಚೇರಿಗಳು ಮತ್ತು ಬ್ಯಾಂಕುಗಳಿಂದ ಕೂಡಿದೆ. ಇಡೀ ರಾಷ್ಟ್ರದ ಕೈಗಾರಿಕೆಗಳಲ್ಲಿ ಅರ್ಧದಷ್ಟು ಗ್ವಾಟೆಮಾಲಾದಲ್ಲೇ ಇವೆ. ಇದೊಂದು ಸಾರಿಗೆ ಹಾಗೂ ವಾಣಿಜ್ಯಕೇಂದ್ರ. ನಗರದಲ್ಲಿ ಆರೋರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇದೊಂದು ಶಿಕ್ಷಣ ಕೇಂದ್ರ ಕೂಡ. ಜನತಾ ವಿಶ್ವವಿದ್ಯಾನಿಲಯ ಮತ್ತು ಸ್ಯಾಂಗ್ ಕಾರ್ಲೋಸ್ ವಿಶ್ವವಿದ್ಯಾಲಯ ಇವೆ. ಪ್ರಾಕ್ತನ ಮತ್ತು ಇತಿಹಾಸ ವಸ್ತು ಸಂಗ್ರಹಾಲಯಗಳು, ಮೇಲು ಕಾಲುವೆ, ಕೇಂದ್ರೀಯ ಮಾರುಕಟ್ಟೆ, 1950ರ ಅಮೆರಿಕನ್ ಒಲಿಂಪಿಕ್ ಕ್ರೀಡೆಗಳಿಗಾಗಿ ಕಟ್ಟಲಾದ ಒಲಿಂಪಿಕ್ ನಗರ–ಇವೂ ಪ್ರಸಿದ್ಧವಾಗಿವೆ. (ವಿ.ಜಿ.ಕೆ.)

**ಗ್ವಾಲಿಯರ್:** ಭಾರತದ ಮಧ್ಯಪ್ರದೇಶ ರಾಜ್ಯದ ಒಂದು ನಗರ: ಅದೇ ಹೆಸರಿನ ಜಿಲ್ಲೆಯ ಮತ್ತು ವಿಭಾಗದ ಆಡಳಿತ ಕೇಂದ್ರ. ನಗರ ಹಿಂದೆ ಗ್ವಾಲಿಯರ್ ಸಂಸ್ಥಾನದ ರಾಜಧಾನಿಯಾಗಿತ್ತು. ಜನಸಂಖ್ಯೆ 865,800. ಉ. ಅ. $26^{0}12'$ ಮತ್ತು ಪೂ.ರೇ. $70^{0}10'$ ಮೇಲಿರುವ ಈ ನಗರ ಆಗ್ರ ನಗರಕ್ಕೆ 115 ಕಿಮೀ. ದಕ್ಷಿಣಕ್ಕೆ ಆಗ್ರ – ಮುಂಬಯಿ ರಾಷ್ಟ್ರೀಯ ಹೆದ್ದಾರಿ ಗ್ವಾಲಿಯರ್ ಮೂಲಕ ಹಾದುಹೋಗುತ್ತದೆ. ಗಂಗಾ ಯಮುನಾ ದೋಆಬ್ ಪ್ರದೇಶಕ್ಕೂ ದಖನ್ ಪ್ರಸ್ಥಭೂಮಿಗೂ ನಡುವೆ ಇರುವ ಈ ನಗರ ಹಿಂದಿನಿಂದಲೂ ಪ್ರಸಿದ್ಧಿಯಾಗಿದೆ. ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ಈ ನಗರಕ್ಕೆ ದೇಶದ ಇತರ ಮುಖ್ಯ ಸ್ಥಳಗಳೊಂದಿಗೆ ರೈಲ್ವೆ ಸಂಪರ್ಕ ಏರ್ಪಟ್ಟಿತು. ಈ ನಗರ ಮೂರು ದಿಕ್ಕಿನಲ್ಲಿ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟಿದೆ.

ಗ್ವಾಲಿಯರಿನ ಹಳೆಯ ನಗರ ಪ್ರದೇಶ ಇರುವುದು ಸು. 90 ಮೀ ಎತ್ತರದ ಬಂಡೆಯೊಂದರ ಮೇಲೆ. ಕೋಟೆಯ ಹೊರಗಡೆ ಇರುವ ಕಟ್ಟಡಗಳಲ್ಲಿ ಮಹಮ್ಮದ್ ಗೌಸ್ ಮತ್ತು ತಾನ್ ಸೇನ್ ಗೋರಿಗಳು ಮುಖ್ಯವಾದುವು.

ಹಳೆಯ ನಗರ ಬಾರಾ ಬಜಾರ್, ದಾಲ್ ಬಜಾರ್, ಮಾಧವ ಗಂಜ್, ಫಾಲ್ಕಾ ಬಜಾರ್, ಜಾನಕ್ ಗಂಜ್‌ಗಳಿಂದ ಕೂಡಿದೆ. ಗ್ವಾಲಿಯರಿನ ಜನಸಂಖ್ಯೆಯಲ್ಲಿ ಶೇ. 40–50 ವಾಸಿಸುವುದು ಈ ಭಾಗದಲ್ಲಿ. ಗ್ವಾಲಿಯರ್ ನಗರ ಶಿಲ್ಪಕಲೆ, ಹೊಳಪಿನ ಹೆಂಚುಗಳು ಮತ್ತು ಆಭರಣಗಳಿಗೆ ಪ್ರಸಿದ್ಧವಾಗಿತ್ತು. ಈಗ ಇದು ಒಂದು ಕೈಗಾರಿಕ ಕೇಂದ್ರ. ಹತ್ತಿ ಮತ್ತು ರೇಷ್ಮೆ ಗಿರಣಿಗಳೂ ಬಿಸ್ಕತ್ತು, ಎಂಜಿನಿಯರಿಂಗ್, ಬೆಂಕಿಕಡ್ಡಿ ಮತ್ತು ಕುಂಭ ಕಾರ್ಖಾನೆಗಳೂ ಇವೆ. ವೈದ್ಯಕೀಯ ಕಾಲೇಜೂ ಕೃಷಿ ಮತ್ತು ಎಂಜಿನಿಯರಿಂಗ್ ಕಾಲೇಜುಗಳೂ ಇವೆ. ಇವು ಆಗ್ರ ವಿಶ್ವವಿದ್ಯಾಲಯಕ್ಕೆ ಸೇರಿವೆ.

ಗ್ವಾಲಿಯರ್ ಜಿಲ್ಲೆ : ಜಿಲ್ಲೆಯ ವಿಸ್ತೀರ್ಣ 3203 ಚ.ಕಿಮೀ. ಜಿಲ್ಲೆಯ ಐದನೆಯ ಒಂದು ಭಾಗ ಅರಣ್ಯಮಯ. ಉಳಿದ ಭಾಗ ಭೂಮಿ ಫಲವತ್ತಾಗಿದೆ. ಗೋದಿ, ಬತ್ತ, ಮುಸುಕಿನ ಜೋಳ, ಕಬ್ಬು ಜಿಲ್ಲೆಯ ಮುಖ್ಯ ಬೆಳೆಗಳು. ಜಿಲ್ಲೆಯಲ್ಲಿ ಕಟ್ಟಡಕ್ಕೆ ಉಪಯುಕ್ತವಾದ ಕಲ್ಲು ಹೇರಳವಾಗಿ ಸಿಗುತ್ತದೆ. ಗ್ವಾಲಿಯರ್ ನಗರದ ಭವ್ಯ ಕಟ್ಟಡಗಳು ಇಲ್ಲಿಯ ಕಲ್ಲುಗಳಿಂದಲೇ ನಿರ್ಮಾಣಗೊಂಡಿವೆ. (ಕೆ.ಆರ್.)

# ಘ

**ಘಟಪ್ರಭಾ:** ಕರ್ನಾಟಕದ ಮುಖ್ಯ ನದಿಗಳಲ್ಲಿ ಒಂದು. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹರಿಯುತ್ತದೆ. ಬೆಳಗಾವಿ ನಗರಕ್ಕೆ 40 ಕಿಮೀ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿಯ ಅಂಚಿನಲ್ಲಿ ರಾಮಘಟ್ಟದಲ್ಲಿ ಉಗಮಿಸಿ, ಸ್ಥೂಲವಾಗಿ ಪೂರ್ವಾಭಿಮುಖವಾಗಿ ಹರಿದು, ಬಿಜಾಪುರ ಜಿಲ್ಲೆಯ ಚಿಮ್ಮಲಗಿಯ ಬಳಿ ಕೃಷ್ಣೆಯನ್ನು ಕೂಡಿಕೊಳ್ಳುವ ಈ ನದಿಯ ಉದ್ದ 300 ಕಿಮೀ ಬೆಳಗಾವಿ ಜಿಲ್ಲೆಯ ಕಾನೂರ, ಅಡಕೂರ, ದಡ್ಡಿ, ವಂಟಮುರ, ಘೋಡಗೇರಿ, ಕೊಣ್ಣೂರ, ಧೂಪದಾಳ, ಗೋಕಾಕ, ಹುಣಶ್ಯಾಳ, ಸುಣದೇಳಿ ಊರುಗಳೂ ಬಾಗಲಕೋಟೆ, ಚಿಮ್ಮಲಗಿಗಳೂ ಈ ನದಿಯ ತೀರದಲ್ಲಿವೆ. ಬೆಳಗಾಂವಿ ಜಿಲ್ಲೆಯಲ್ಲಿ ಮುಧೋಳ ನಗರಕ್ಕೆ ಪಶ್ಚಿಮದಲ್ಲಿ ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸಿ ಮುಧೋಳ ಮತ್ತು ಬಾಗಲಕೋಟೆ ತಾಲ್ಲೂಕುಗಳ ಮೂಲಕ ಸು. 112 ಕಿಮೀ ದೂರ ಪ್ರವಹಿಸುತ್ತದೆ. ಗೋಕಾಕದ ಬಳಿಯ ಜಲಪಾತದ ಎತ್ತರ ಸು. 45 ಮೀ ಅಲ್ಲೊಂದು ಕಟ್ಟೆ ಕಟ್ಟಿ ನದಿಯ ನೀರನ್ನು ಸಾಗುವಳಿಗೂ ವಿದ್ಯುತ್ತಿನ ಉತ್ಪಾದನೆಗೂ ಬಳಸಿಕೊಳ್ಳಲಾಗುತ್ತಿದೆ.

ಘಟಪ್ರಭಾ ಕಣಿವೆ ಅಭಿವೃದ್ಧಿ ಯೋಜನೆ : ಘಟ್ಟ ಪ್ರದೇಶದಲ್ಲಿ ಮಳೆ ನಿರಂತರವಾಗಿಯೂ ವಿಪುಲವಾಗಿಯೂ ಬೀಳುವುದಾದರೂ ನದಿಯ ಪೂರ್ವಭಾಗದ ಬಯಲಿನಲ್ಲಿ ಅದು ತೀರ ಕಡಿಮೆ. ಬೆಳಗಾವಿ ಜಿಲ್ಲೆಯ ಪೂರ್ವಭಾಗ ಹಾಗೂ ಬಿಜಾಪುರ ಜಿಲ್ಲೆಯ ಬಹುಭಾಗ ಅನಾವೃಷ್ಟಿ ಪ್ರದೇಶಗಳಾಗಿರುವುದರಿಂದ ಅವು ಪದೇ ಪದೇ ಕ್ಷಾಮ ಮತ್ತು ಆಭಾವ ಪರಿಸ್ಥಿತಿಗಳಿಗೆ ಒಳಗಾಗುತ್ತವೆ. ಆದರೆ ಅಲ್ಲಿ ಹರಿಯುವ ನದಿತೊರೆಗಳ ಜಲಸಂಪತ್ತನ್ನು ಉಪಯೋಗಿಸಿಕೊಂಡು ಭಾರಿ ಪ್ರಮಾಣದಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲಾಗಿದೆ.

ಘಟಪ್ರಭಾ ಯೋಜನೆಯ ಮೂರು ಹಂತಗಳಿಂದ 2,42,105 ಹೆ. ಭೂಮಿಗೆ ನೀರಾವರಿ ಸೌಲಭ್ಯ ಏರ್ಪಡುತ್ತದೆ. ಈ ಪ್ರದೇಶದ ಬಹುಭಾಗದಲ್ಲಿ ಮುಂಗಾರು ಬೆಳೆಯನ್ನೂ ಕೆಲವು ಕಡೆಗಳಲ್ಲಿ ಹಿಂಗಾರು ಫಸಲನ್ನೂ ಪಡೆಯಬಹುದು. ಆಳದ ಕಪ್ಪು ಮಣ್ಣು ಇರುವೆಡೆಗಳಲ್ಲಿ ಹತ್ತಿ ಬೆಳೆಯುತ್ತದೆ. ಮುಖ್ಯ ಬೆಳೆಗಳು ಜೋಳ, ಮೆಕ್ಕೆಜೋಳ, ಸಜ್ಜೆ, ನೆಲಗಡಲೆ, ಗೋದಿ, ಮತ್ತು ಹತ್ತಿ. ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿದ ಮೇಲೆ ಮಿಶ್ರ ತಳಿಯ ಮೆಕ್ಕೆಜೋಳ, ಸಜ್ಜೆ, ಜೋಳ, ಹತ್ತಿ, ದ್ವಿದಳ ಧಾನ್ಯಗಳು, ನೆಲಗಡಲೆ, ಸೂರ್ಯಕಾಂತಿ, ಗೋದಿ, ಕಬ್ಬು ಬೆಳೆಯಲಾಗುತ್ತಿದೆ. (ಎಸ್.ವಿ.ಪಿ.ಎ.)

**ಘಟ್ಟ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳು :** ಘಟ್ಟ ಪ್ರದೇಶವಂದರೆ ಬೆಟ್ಟಗುಡ್ಡಗಳಿಂದ ಆವರಿಸಿರುವ ಹೆಚ್ಚು ಏರು ತಗ್ಗಿನಿಂದ ಕೂಡಿರುವ ಭೂ ಭಾಗ. ಭಾರತದಲ್ಲಿ ಘಟ್ಟ ಪ್ರದೇಶಗಳು ಅತಿ ಹೆಚ್ಚಾಗಿ ಹಿಮಾಲಯ, ಪೂರ್ವ ಘಟ್ಟಗಳು, ಈಶಾನ್ಯ ಭಾಗ ಹಾಗೂ ಪಶ್ಚಿಮ ಘಟ್ಟಗಳನ್ನು ಒಳಗೊಂಡಿದೆ. ಘಟ್ಟ ಪ್ರದೇಶಗಳು ಭಾರತದ ಒಟ್ಟು ಭೂ ಪ್ರದೇಶದಲ್ಲಿ ಶೇ. 21 ಪ್ರದೇಶವನ್ನು ಆಕ್ರಮಿಸಿವೆ. ಮತ್ತು ಭಾರತದ ಒಟ್ಟು ಜನಸಂಖ್ಯೆಯ ಶೇ. 9 ಜನಸಂಖ್ಯೆಯನ್ನು ಹೊಂದಿವೆ. ಈ ಪ್ರಮಾಣದ ಜನಸಂಖ್ಯೆಗೆ ನೈಸರ್ಗಿಕ ಸಂಪನ್ಮೂಲಗಳು ಮತ್ತು ನಾಜೂಕಿನ ಪರಿಸರ ವ್ಯವಸ್ಥೆಯು ಉತ್ತೇಜನ ನೀಡುತ್ತಿವೆ. ನೈಸರ್ಗಿಕ ಸಂಪನ್ಮೂಲ ಮತ್ತು ಪರಿಸರ ಅದರಲ್ಲೂ ನಾಜೂಕಿನ ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಬೇಕಾಗಿದೆ. ಇದಕ್ಕೋಸ್ಕರ ಕೆಲವು ವೇಳೆ ರಾಷ್ಟ್ರೀಯ ನೀತಿ ಮತ್ತು ಯೋಜನೆಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಘಟ್ಟ ಪ್ರದೇಶ ಅಭಿವೃದ್ಧಿ ಯೋಜನೆಯು (ಹಿಲ್

ಏರಿಯ ಡೆವಲೆಪ್‌ಮೆಂಟ್ ಪ್ರೋಗ್ರಾಂ) 1972–73 ರಲ್ಲಿ ಆರಂಭವಾಯಿತು. ಈ ಯೋಜನೆಯ ಉದ್ದೇಶವೇನೆಂದರೆ ಘಟ್ಟ ಪ್ರದೇಶಗಳ ಸಂಪನ್ಮೂಲಗಳನ್ನು ಭಾಗಶಃ ಬಳಸಿಕೊಳ್ಳುವುದು ಮತ್ತು ವಿಶೇಷವಾಗಿ ರೂಪಿಸಿರುವ ಯೋಜನೆಗಳಿಂದ ತೋಟಗಾರಿಕೆ ಅಭಿವೃದ್ಧಿ, ಮರಗಳ ತೋಪು, ವ್ಯವಸಾಯ, ಪಶುಸಂಗೋಪನೆ, ಅರಣ್ಯೀಕರಣ, ಮಣ್ಣಿನ ಸಂರಕ್ಷಣೆ ಮತ್ತು ಸೂಕ್ತವಾದ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವುದು.

ಘಟ್ಟ ಪ್ರದೇಶಗಳ ನಿರ್ಗತಿಕ ಜನರಿಗೆ ಅವಶ್ಯಕವಾಗಿ ಪ್ಯಾಕೇಜನ್ನು ನೀಡಲಾಗುತ್ತದೆ. ಹಾಗೆಯೇ ಗಿರಿಜನ ಪ್ರದೇಶಗಳಿಗೆ (ಟ್ರೈಬಲ್ ಏರಿಯ) ಹಿಂದುಳಿದ ಸಮತಟ್ಟಾದ ಪ್ರದೇಶ (ಲೆಸ್ ಡೆವಲೆಪ್‌ಮೆಂಟ್ ಪ್ಲೈನ್ ಏರಿಯ) ಗಳಿಗೆ ಕೇಂದ್ರ ಸರ್ಕಾರದಿಂದ ವಿಶೇಷ ಯೋಜನೆಗಳನ್ನು ಯೋಜಿಸಲಾಗುತ್ತದೆ.

ರಾಜ್ಯ ಘಟ್ಟ ಪ್ರದೇಶಗಳ ಯೋಜನೆ ಅಡಿಯಲ್ಲಿ ಪ್ರತ್ಯೇಕ ಸಾಮಾನ್ಯ ನಿಧಿಯನ್ನು, ಪ್ರಾದೇಶಿಕ ಅಸಮತೋಲನ ಮತ್ತು ಇತರ ವಿಶೇಷ ಸಂದರ್ಭಗಳಲ್ಲಿ ವಿಶೇಷ ಕೇಂದ್ರೀಯ ನೆರವಿನಡಿಯಲ್ಲಿ (ಸ್ಪೆಷಲ್ ಸೆಂಟ್ರಲ್ ಅಸಿಸ್ಟೆಂಟ್) ಘಟ್ಟ ಪ್ರದೇಶ ಅಭಿವೃದ್ಧಿ ಯೋಜನೆ, (ಎಚ್.ಎ.ಡಿ.ಪಿ) ರೂಪಿಸಿ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಐದನೆಯ ಪಂಚವಾರ್ಷಿಕ ಯೋಜನೆ 20 ಕೋಟಿ ರೂಪಾಯಿಗಳ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯನ್ನು (ಡಬ್ಲ್ಯೂ.ಜಿ.ಡಿ.ಪಿ) ಒಳಗೊಂಡಂತೆ ಸು. 170 ಕೋಟಿ ರೂಪಾಯಿಗಳನ್ನು ಒಳಗೊಂಡಿತ್ತು. ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ 75 ಕೋಟಿ ರೂಪಾಯಿಗಳನ್ನು ಪಶ್ಚಿಮ ಘಟ್ಟ ಅಭಿವೃದ್ಧಿಯೋಜನೆ ಒಳಗೊಂಡಂತೆ 560 ಕೋಟಿ ರೂಪಾಯಿಗಳಿಗೆ ಏರಿಕೆಯಾಯಿತು.

ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷ ಕೇಂದ್ರೀಯ ನೆರವಿನಡಿಯಲ್ಲಿ 116.50 ಕೋಟಿ ರೂ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ ಸೇರಿದಂತೆ 870 ಕೋಟಿ ರೂಪಾಯಿಗಳನ್ನು ಒಳಗೊಂಡಿತ್ತು.

ಘಟ್ಟ ಪ್ರದೇಶದಲ್ಲಿ ವಾಸಿಸುವ ಪ್ರವರ್ಗಕ್ಕೆ (ಎ) ಶೇ. 90 ರಷ್ಟು ಸಹಾಯಧನ ಶೇ. 10 ರಷ್ಟು ಸಾಲದ ಮಾದರಿಯಲ್ಲಿ ನೆರವು ಅಡಕವಾಗಿದೆ.

ವಿಶೇಷ ಕೇಂದ್ರೀಯ ನೆರವನ್ನು ಎಲ್ಲಾ ರಾಜ್ಯಗಳಿಗೆ ಸಮಾನವಾಗಿ ವಿಸ್ತೀರ್ಣ ಮತ್ತು ಜನಸಂಖ್ಯೆಯ ಆಧಾರದ ಮೇಲೆ ನೀಡಲಾಗುತ್ತದೆ.

ಪ್ರವರ್ಗ (ಬಿ) ಯ ಪ್ರದೇಶದಲ್ಲಿ ನೀಲಗಿರಿ ಜಿಲ್ಲೆಯನ್ನು ಹೊರತುಪಡಿಸಿ (ಯಾವ ಪ್ರದೇಶ ಹೆಚ್ಚು ರೈತರನ್ನು ಒಳಗೊಂಡಿರುವುದು) ವಿಶೇಷ ಕೇಂದ್ರೀಯ ನೆರವನ್ನು ಶೇ. 75 ರಷ್ಟು ವಿಸ್ತೀರ್ಣದ ಆಧಾರದ ಮೇಲೆ ಹಾಗೂ ಶೇ. 25 ರಷ್ಟು ಜನಸಂಖ್ಯೆಯ ಆಧಾರದ ಮೇಲೆ ನೀಡಲಾಗುವುದು.

ಐದನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಘಟ್ಟ ಪ್ರದೇಶಗಳ ಅಭಿವೃದ್ಧಿ ಯೋಜನೆಯ ಫಲಾನುಭವಿಗಳ ಪರವಾದ ವಿಷಯವನ್ನು ಒಳಗೊಂಡಿತ್ತು.

ಆರನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಘಟ್ಟ ಪ್ರದೇಶಾಭಿವೃದ್ಧಿಯ ಜೊತೆಗೆ ಪರಿಸರ ಅಭಿವೃದ್ಧಿಯನ್ನು ಸಹ ಒಳಗೊಂಡಿತ್ತು. ಆದರೆ ಸಾಮಾನ್ಯ ಸ್ವಭಾವ (ಟ್ಯೂನರ್) ಯೋಜನೆ ಮತ್ತು ಸಾಮಾನ್ಯ ರಾಜ್ಯ ಯೋಜನೆ ಇವೆರಡು ಯಾವುದೇ ಮಹತ್ತಿನ ಬದಲಾವಣೆ ಹೊಂದಿರಲಿಲ್ಲ. ಆದರೆ ಹಲವು ಗುಣಲಕ್ಷಣಗಳನ್ನು ಹೊಂದಿದ್ದು ಅವುಗಳೆಂದರೆ ವಲಯ ವಿಧಾನದಲ್ಲಿ ಪರಿಸರವನ್ನು ಯಥಾಸ್ಥಿತಿಗೆ ತರುವುದು (ಸಬ್ ರೀಸ್ಟೋರೇಷನ್) ಪರಿಸರ ಸಂರಕ್ಷಣೆ (ಇಕೋ ಪ್ರಿಸರ್ವೇಶನ್) ಮತ್ತು ಪರಿಸರ ಅಭಿವೃದ್ಧಿ (ಇಕೋ ಡೆವಲೆಪ್‌ಮೆಂಟ್) ಪಡಿಸುವುದಾಗಿರುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಘಟ್ಟ ಪ್ರದೇಶಗಳ ಅಭಿವೃದ್ಧಿ ಕಾರ್‍ಯಕ್ರಮಗಳು ಭಾರತಕ್ಕೆ ಹೆಚ್ಚು ಪ್ರಯೋಜನಕಾರಿಯಾದವು. ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜನೆಗಳು ಅತ್ಯಾವಶ್ಯಕವಾದವುಗಳಾಗಿವೆ. (ಎಚ್.ಆರ್.ವಿ.)

**ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ:** ಅನಗತ್ಯವಾಗಿ ಎಲ್ಲೆಂದರಲ್ಲಿ ಬಿಸಾಡುವ ಘನರೂಪದ ವಸ್ತುಗಳನ್ನು ಘನ ತ್ಯಾಜ್ಯವಸ್ತುಗಳೆಂದು ಕರೆಯುತ್ತಾರೆ. ಪ್ರಪಂಚದಲ್ಲಿ ಜನಸಂಖ್ಯೆ ಹೆಚ್ಚಾಗುವುದರ ಜೊತೆಗೆ ಕೈಗಾರಿಕಾ ಚಟುವಟಿಕೆಗಳು ಹೆಚ್ಚಾದಂತೆ ಘನತ್ಯಾಜ್ಯವಸ್ತುಗಳ ಪ್ರಮಾಣವೂ ಸಹ ಹೆಚ್ಚಾಗುತ್ತದೆ. ಇದರ ಜೊತೆಗೆ ಗೃಹಬಳಕೆ, ಕೈಗಾರಿಕೆ, ಗಣಿ, ಅಣುಸ್ಥಾವರ ಮತ್ತು ಕೃಷಿ ಕ್ಷೇತ್ರಗಳಿಂದ ಅನಗತ್ಯವಾಗಿ ಬಿಸಾಡಿದ ಘನ ತ್ಯಾಜ್ಯ ವಸ್ತುಗಳ ಪ್ರಮಾಣವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆದ್ದರಿಂದ ಈ ತ್ಯಾಜ್ಯ ವಸ್ತುಗಳ ನಿರ್ವಹಣೆಯೊಂದು ಜಟಿಲವಾದ ಸಮಸ್ಯೆಯಾಗಿದ್ದು ಇವುಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕಷ್ಟ ಸಾಧ್ಯವಾಗಿದೆ. ಆದರೆ ಇವುಗಳನ್ನು ನಿಯಂತ್ರಿಸುವುದು, ಸಂಗ್ರಹಿಸುವುದು ಮತ್ತು ಪುನರ್‌ಬಳಕೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ.

ತ್ಯಾಜ್ಯ ವಸ್ತುಗಳ ರಾಶಿಯ ತೀವ್ರತೆಯಿಂದ ಮಣ್ಣಿನ ಉತ್ಪಾದಕ ಸಾಮರ್ಥ್ಯ ಕಡಿಮೆಯಾಗುವುದು, ಅಂತರ್ಜಲ ಮಲಿನವಾಗುವುದು ಹಾಗೂ ಹಲವಾರು ಪ್ಲಾಸ್ಟಿಕ್ ಕೈಗಾರಿಕೆಗಳಲ್ಲಿ ಕಾರ್ಮಿಕರು ವಿವಿಧ ಬಗೆಯ ರೋಗ ರುಜಿನಗಳಿಗೆ ತುತ್ತಾಗುತ್ತಾರೆ. ಹಾಗೆಯೇ ಆಸ್ಪತ್ರೆಗಳಿಂದ ಹೊರಹಾಕುವ ತ್ಯಾಜ್ಯವಸ್ತುಗಳಿಂದ ಹಲವಾರು ರೋಗಗಳು ಹರಡುತ್ತವೆ.

ಘನ ತ್ಯಾಜ್ಯ ವಸ್ತುಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲು ಕಷ್ಟ ಸಾಧ್ಯವಾದರೂ ಅವುಗಳ ಉತ್ಪಾದನಾ ಪ್ರಮಾಣವನ್ನು ಕಡಿಮೆ ಮಾಡಲು ಮತ್ತು ಉತ್ಪಾದಿಸಿದ ವಸ್ತುಗಳನ್ನು ವಿಲೇವಾರಿ ಮಾಡಲು ಈ ಕೆಳಕಂಡ ವಿಧಾನವನ್ನು ಅನುಸರಿಸುವುದರ ಮೂಲಕ ನಿರ್ವಹಣೆ ಮಾಡಬಹುದು.

ಘನ ತ್ಯಾಜ್ಯ ವಸ್ತುಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಒಂದು ನಿಗದಿಪಡಿಸಿದ ಸ್ಥಳದಲ್ಲಿ ವಿಸರ್ಜಿಸುವುದು: ಘನ ತ್ಯಾಜ್ಯ ವಸ್ತುಗಳ ನಿಯಂತ್ರಣ ವಿಧಾನದಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸುವುದು ಅತ್ಯಂತ ಪ್ರಮುಖವಾದುದಾಗಿದೆ. ಅಂದರೆ ಗೃಹ ಬಳಕೆ, ಆಸ್ಪತ್ರೆಗಳ ಮತ್ತು ಇತರ ಕಾರ್ಯಗಳಿಂದ ಹೊರದೂಡಿದ ತ್ಯಾಜ್ಯ ವಸ್ತುಗಳನ್ನು ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಒಂದು ಗೊತ್ತು ಪಡಿಸಿದ ತೊಟ್ಟಿಗಳಲ್ಲಿ ಸಂಗ್ರಹಿಸಿ ನಂತರ ಅವುಗಳನ್ನು ವೈಜ್ಞಾನಿಕ ವಿಧಾನಗಳಿಂದ ಪುನಾರಾವರ್ತನೆಗೆ ಅಳವಡಿಸಬೇಕು. ಈ ವಿಧಾನವನ್ನು ಅಳವಡಿಸುವುದರಿಂದ ರಸ್ತೆ ಬದಿಗಳು ಸ್ವಚ್ಛವಾಗಿರುವುದಲ್ಲದೆ ತ್ಯಾಜ್ಯ ವಸ್ತುಗಳ ಮಾಲಿನ್ಯ ಹಾಗೂ ಇದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ಕಡಿಮೆ ಮಾಡಬಹುದು.

ಘನ ತ್ಯಾಜ್ಯ ವಸ್ತುಗಳ ವಿಸರ್ಜನೆಯ ಸಮಂಜಸ ಮತ್ತು ವೈಜ್ಞಾನಿಕ ವಿಧಾನಗಳು: ಅನುಪಯುಕ್ತ ಘನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಗೊತ್ತು ಪಡಿಸಿದ ಸ್ಥಳದಲ್ಲಿ ಕೂಡಿ ಹಾಕುವುದರಿಂದ ಎಲ್ಲಾ ಪ್ರದೇಶಗಳಿಗೆ ಕಸ ಹರಡುವುದನ್ನು ನಿಯಂತ್ರಿಸುವುದಲ್ಲದೆ ಮಾಲಿನ್ಯವನ್ನೂ ತಡೆಗಟ್ಟಬಹುದು. ತ್ಯಾಜ್ಯ ವಸ್ತುಗಳನ್ನು ತಗ್ಗು ಪ್ರದೇಶಗಳಲ್ಲಿ ತುಂಬಿ ಮಣ್ಣಿನಿಂದ ಮುಚ್ಚುವುದರಿಂದ ಜಲಮಾಲಿನ್ಯ ಕೆಟ್ಟವಾಸನೆ, ಗಾಳಿಯಿಂದ ವಸ್ತುಗಳು ಹರಡುವುದು ಮುಂತಾದ ಸಮಸ್ಯೆಗಳು ಬಗೆ ಹರಿಯುತ್ತವೆ. ಅನುಪಯುಕ್ತ ಪದಾರ್ಥಗಳನ್ನು ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಸಂಗ್ರಹಿಸಿ ಸುಡುವುದರಿಂದ ಸು. 60% ರಷ್ಟು ಘನ ತ್ಯಾಜ್ಯ ವಸ್ತುಗಳ ಸಾಂದ್ರತೆಯನ್ನು ಕಡಿಮೆ ಮಾಡಬಹುದು. ಅನುಪಯುಕ್ತ ವಸ್ತುಗಳೆಂದು ತಿರಸ್ಕರಿಸಿದ ಜೈವಿಕ ಪದಾರ್ಥಗಳಾದ ತರಕಾರಿ, ಗಿಡಮರ, ಎಲೆಗಳು, ಪ್ರಾಣಿ ಮತ್ತು ಮನುಷ್ಯನ ಅನುಪಯುಕ್ತ ವಸ್ತುಗಳನ್ನು ಯಾಂತ್ರಿಕ ವಿಧಾನದಿಂದ ಕೃತಕ ಗೊಬ್ಬರವನ್ನಾಗಿ ಪರಿವರ್ತಿಸುವುದರಿಂದ ತ್ಯಾಜ್ಯ ವಸ್ತುಗಳ ಮಾಲಿನ್ಯವನ್ನು ತಡೆಯಬಹುದಲ್ಲದೆ ವ್ಯವಸಾಯಕ್ಕೆ ಬೇಕಾಗುವ ಕೃತಕ ಗೊಬ್ಬರದ ಕೊರತೆಯನ್ನು ಬಗೆಹರಿಸಬಹುದು. ಅನುಪಯುಕ್ತ ವಸ್ತುವೆಂದು ಎಸೆದಿರುವ ಕೆಲವು ವಸ್ತುಗಳಿಂದ ಕಾಗದ, ಗ್ಲಾಸು, ಪ್ಲಾಸ್ಟಿಕ್ ಮುಂತಾದವನ್ನು ಪುನರ್ ಬಳಕೆ ಮಾಡುವುದರಿಂದ ಕೆಲವು ಅನುಪಯುಕ್ತ ವಸ್ತುಗಳ ವಿಸರ್ಜನೆಯನ್ನು ಕಡಿಮೆ ಮಾಡಬಹುದು ಮತ್ತು ಕಚ್ಚಾವಸ್ತು ಕೊರತೆಗೆ ಪರಿಹಾರ ದೊರೆಯುತ್ತದೆ. ಬಹುತೇಕ ತ್ಯಾಜ್ಯ ವಸ್ತುಗಳಾದ ಕಾಗದ, ರಟ್ಟು ಬಳಸಿ ಶಕ್ತಿ ಉತ್ಪಾದಿಸಬಹುದು. ಈ ಮೇಲ್ಕಂಡ ಕ್ರಮಗಳಿಂದ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆಯಿಂದ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು. (ಜಿ.ಡಿ.)

**ಘರ್ಷಕ ಖನಿಜಗಳು:** ಲೋಹ ಖನಿಜಗಳಷ್ಟೆ ಅಲೋಹ ಖನಿಜಗಳು ಕೈಗಾರಿಕೆಗಳಲ್ಲಿ ಪ್ರಾಶಸ್ತ್ಯ ಪಡೆದಿವೆ. ಇವು ಭೌತಗುಣದಲ್ಲಿ ವಿಶೇಷವಾಗಿ ಅದರಲ್ಲೂ ಕಾಠಿಣ್ಯತೆಯಿಂದಾಗಿ ಘರ್ಷಕ ವಸ್ತುಗಳಾಗಿ ಬಳಸಲು ಸೂಕ್ತವಾಗಿದೆ. ವಿವಿಧ ಲೋಹ ಅಲೋಹ ಪದಾರ್ಥಗಳ ಮೇಲೆ ಲೇಪವಾದ ಕಲ್ಮಶವನ್ನು ತೊಡೆದು ಹಾಕುವುದು, ಉಜ್ಜಿನಯಗೊಳಿಸುವುದು, ಪದಾರ್ಥಕ್ಕೆ ಹೊಳಪು ಕೊಡುವುದು, ಹರಿತ ಉಂಟು ಮಾಡುವುದು, ಇವೆ ಮುಂತಾದ ಕೆಲಸಗಳಿಗೆ ಕೆಲವು ನೈಸರ್ಗಿಕ ಖನಿಜಗಳು ಹೆಚ್ಚು ಬಳಕೆಯಲ್ಲಿವೆ. ಕಲ್ಲು ಕೊಯ್ಯಲು, ಮೆರಗು ನೀಡಲು ಘರ್ಷಕ ವಸ್ತುಗಳನ್ನು ಬಳಸಲಾಗುತ್ತದೆ. ನೈಸರ್ಗಿಕ ಘರ್ಷಕಗಳಷ್ಟೆ ಆಧುನಿಕ ಯುಗದಲ್ಲಿ ಕೃತಕ ಘರ್ಷಕಗಳಿಗೂ ಬೇಡಿಕೆಯಿದೆ. ಕಾಠಿಣ್ಯದ ಜೊತೆಗೆ ಈ ಖನಿಜಗಳು ದೃಢತೆಗಳಿಸಿರಬೇಕು. ಘರ್ಷಕ ಗುಣವುಳ್ಳ ಪ್ರಮುಖ ಖನಿಜಗಳೆಂದರೆ ಜಿಪ್ಸಮ್, ಟೋಪಾಜ್, ಕೊರಂಡಮ್, ಕ್ವಾರ್ಟ್ಸ್, ವಜ್ರ ಮುಂತಾದವು. (ಬಿ.ಸಿ.ಕೆ.)

**ಘಾಘ್ರಾ:** ಗಂಗಾನದಿಯ ಮುಖ್ಯ ಉಪನದಿಗಳಲ್ಲೊಂದು. ಟಿಬೆಟನಲ್ಲಿ ಮಾನಸ ಸರೋವರದ ಬಳಿ ರಕಸ್ ತಾಲ್ ಎಂಬಲ್ಲಿ (ಉ.ಅ. 30° 40′ ಮತ್ತು ಪೂ.ರೇ. 88° 48′) ಹುಟ್ಟಿ ಉತ್ತರ ಪ್ರದೇಶದ ಮೂಲಕ ಹರಿದು, ಬಿಹಾರದಲ್ಲಿ ಛಪ್ರಾ ಬಳಿ ಗಂಗಾ ನದಿಯೊಂದಿಗೆ ಸಂಗಮಿಸುತ್ತದೆ. ಕೈಲಾಸ, ಕಾಮೆಟ್ ಮತ್ತು ಮಾಂಧಾಲ ಶಿಖರಗಳಿಂದಾದ ತ್ರಿಕೋಣದ ನಡುವೆ ಇದರ ಉಗಮ ಸ್ಥಾನವಿದೆ. ಪರ್ವತ ಪ್ರದೇಶದಲ್ಲಿ ಇದಕ್ಕೆ ಕನಿಯಾಲ ಎಂಬ ಹೆಸರುಂಟು. ಕೌರಿಯಾಲ ಎಂಬುದು ಇದರ ನೇಪಾಳಿ ಹೆಸರು. ಹಿಮಾಲಯ

ಮತ್ತು ಸಿವಾಲಿಕ್ ಶ್ರೇಣಿಗಳನ್ನು ಭೇದಿಸಿಕೊಂಡು ಆಳವಾದ ಕಣಿವೆಗಳನ್ನು ಕೊರೆದು, ಖೇರಿ ಮತ್ತು ಬಹ್ರಾಯಿಚ್ ಜಿಲ್ಲೆಗಳ ಮೂಲಕ ಮಧ್ಯ ಗಂಗಾ ಬಯಲನ್ನು ತಲುಪಿದಾಗ ಇದಕ್ಕೆ ಘಾಘ್ರಾ ಎಂಬ ಹೆಸರು ಪ್ರಾಪ್ತವಾಗುತ್ತದೆ. ಘಾಘ್ರಾ ಎಂಬುದೇ ಹೆಚ್ಚು ಪ್ರಚಾರದಲ್ಲಿರುವ ಹೆಸರು. ಮುಂದೆ ಇದಕ್ಕೆ ದೇವೊಹಾ ಎಂಬ ಹೆಸರೂ ಉಂಟು. ಹಿಮಾಲಯದ ವಿಶಾಲವಾದ ಜಲಾನಯನ ಪ್ರದೇಶದಲ್ಲಿ ಇದು ಹಲವು ಚಿಕ್ಕ ದೊಡ್ಡ ಉಪನದಿಗಳೊಂದಿಗೆ ಕೂಡಿಕೊಳ್ಳುತ್ತದೆ. ಶಾರ್ದಾ, ಭೇರಿ, ಸರಯೂ, ರಾಪ್ತಿ, ಛೋಟಿ ಗಂಡಕ್ ಇವು ಇದರ ಮುಖ್ಯ ಉಪನದಿಗಳು.

ಘಾಘ್ರಾ ನದಿ ಸಣ್ಣದೋಣಿಗಳ ಸಂಚಾರಕ್ಕೆ ಉಪಯುಕ್ತವಾಗಿವೆ. ಟಾಂಡಾ ಬರಹಜ್, ರಿಬಿಲ್ ಗಂಜ್ ಇವು ಈ ನದಿಯ ದಂಡೆಯ ಮೇಲಿರುವ ಪ್ರಮುಖ ವ್ಯಾಪಾರ ಸ್ಥಳಗಳು. ಮಳೆಗಾಲದಲ್ಲಿ ಈ ನದಿ ಮೈದಾನದಲ್ಲಿ ತಂದು ತುಂಬುವ ಮೆಕ್ಕಲು ಮಣ್ಣಿನಿಂದಾಗಿ ಇದರ ನೆರೆನಾಡು ಫಲವತ್ತಾಗಿದೆ.

ಈ ನದಿಯ ಪ್ರಮುಖ ಸೇತುವೆಗಳು ಬರ್ಹಾಮ್ ಘಾಟ್ ಬಳಿಯಲ್ಲೂ ಅಯೋಧ್ಯೆಯ ಬಳಿಯಲ್ಲೂ ಇವೆ. ಘಾಘ್ರಾ ಜಲಾಶಯದಿಂದ ನೀರಾವರಿ ಸೌಲಭ್ಯವಿದೆ.

(ಆರ್.ಪಿ.ಎಸ್.)

**ಘಾನ:** ಪಶ್ಚಿಮ ಆಫ್ರಿಕದಲ್ಲಿ ಗಿನಿ ಖಾರಿಯ ಮೇಲಿರುವ ಒಂದು ಗಣರಾಜ್ಯ. ಉ. ಅ. $4^0 45'$ ಮತ್ತು $11^0 10'$, ಪೂ.ರೇ. $1^0 12'$ ಮತ್ತು $3^0 15'$ ನಡುವೆ ಇದೆ. ಪೂರ್ವ, ಉತ್ತರ, ಪಶ್ಚಿಮಗಳಲ್ಲಿ ಕ್ರಮವಾಗಿ ಟೋಗೋ, ಉತ್ತರ ವೋಲ್ಟ ಮತ್ತು ಕೋಟೆ ಡಿ ಐವರಿ ರಾಜ್ಯಗಳೂ ದಕ್ಷಿಣದಲ್ಲಿ ಗಿನಿ ಖಾರಿಯೂ ಇವೆ. ವಿಸ್ತೀರ್ಣ 2,38,536 ಚ.ಕಿಮೀ. ಜನಸಂಖ್ಯೆ 2,00,29,853 (2002). ರಾಜಧಾನಿ ಆಕ್ರ. ಜನಸಂಖ್ಯೆ; 4,78,355 (2001).




ಭೌತಲಕ್ಷಣ : ಘಾನ ರಾಜ್ಯ ಬಹುತೇಕ ತಗ್ಗು ಪ್ರದೇಶ. ನೈಋತ್ಯ, ವಾಯವ್ಯ ಮತ್ತು ಉತ್ತರ ಭಾಗಗಳಲ್ಲಿ 333 ಮೀ ಎತ್ತರದ ನಗ್ನೀಕೃತ ಬಯಲುಗಳಿವೆ. ಇವುಗಳ ಅಂಚಿನ ನೆಲ 666 ಮೀ ವರೆಗೂ ಎತ್ತರವಾಗಿರುವುದುಂಟು. ಘಾನ ರಾಜ್ಯದ ಮಧ್ಯದಲ್ಲಿ ವೋಲ್ಟ ನದಿಯ ಕಣಿವೆಯ ವಿಶಾಲ ಪ್ರದೇಶ ಸಾಮಾನ್ಯವಾಗಿ 166 ಮೀ ಗಿಂತ ಎತ್ತರವಾಗಿಲ್ಲ. ಆದರೆ ಈ ಕಣಿವೆಯ ತುದಿಗಳಲ್ಲಿರುವ ಕ್ವಾಹು ಮತ್ತು ಗಂಬಾಗ ಪ್ರಸ್ಥಭೂಮಿಗಳ ಎತ್ತರ 500–585 ಮೀ ಆಗ್ನೇಯ ಭಾಗದಲ್ಲಿರುವ ಅಣ್ವಪಿಂ–ಟೋಗೋ ಶ್ರೇಣಿಗಳ ಸರಾಸರಿ ಎತ್ತರ 500 ಮೀ ಘಾನದ ಅತ್ಯುನ್ನತ ಶಿಖರಗಳಾದ ಅಫಾಡ್ಜಾಟೊ (970 ಮೀ) ಮತ್ತು ಡ್ಜೆಬೋಬೊ (960 ಮೀ) ಇಲ್ಲಿವೆ. ಕರಾವಳಿ ಸಮತಟ್ಟಾಗಿದ್ದು, ಮರಳಿನಿಂದಲೂ ಲಗೂನುಗಳಿಂದಲೂ ಕೂಡಿದೆ. ಘಾನಕ್ಕೆ 534 ಕಿಮೀ ಉದ್ದದ ಸಮುದ್ರತೀರವುಂಟು. ವೋಲ್ಟ, ಪ್ರಾ ಆಂಕೋಬ್ರ, ಟಾನೊ – ಇವು ಘಾನದ ನದಿಗಳು.

ವಾಯುಗುಣ : ಘಾನ ಉಷ್ಣವಲಯದ ವಾಯುಗುಣ ಹೊಂದಿದೆ. ಈಶಾನ್ಯದಲ್ಲಿ ಸಹಾರ ಮರುಭೂಮಿಯ ಕಡೆಯಿಂದ ದೂಳು ತುಂಬಿದ ಉಷ್ಣ ಬರಿತ ಶುಷ್ಕ ಮಾರುತವೂ ನೈಋತ್ಯದಲ್ಲಿ ಅಟ್ಲಾಂಟಿಕ್ ಸಾಗರದಿಂದ ತೇವಗೂಡಿದ ಮಾನ್ಸೂನ್ ಮಾರುತವೂ ಘಾನದ ಮೇಲೆ ಬೀಸುತ್ತವೆ. ಇವೆರಡೂ ಕೂಡುವೆಡೆಯಲ್ಲಿ ಗುಡುಗಿನಿಂದ ಕೂಡಿದ ಬಿರುಗಾಳಿ ಸಂಭವಿಸುತ್ತದೆ. ಸೂರ್ಯನ ಚಲನೆಗೆ ಅನುಗುಣವಾಗಿ ಋತುಗಳು ವ್ಯತ್ಯಾಸವಾಗುತ್ತವೆ. ಶುಷ್ಕಮಾರುತ ಬೀಸುವೆಡೆಯಲ್ಲಿ ಮಳೆಯಿಲ್ಲ. ಉತ್ತರದಲ್ಲಿ ಮಳೆ ಕಡಿಮೆ. ದಕ್ಷಿಣ ಹಾಗೂ ಪಶ್ಚಿಮದ ಕಡೆ ಹೆಚ್ಚು ಮಳೆಯಾಗುತ್ತದೆ. ಗರಿಷ್ಠ ಮಳೆ 150 ಸೆಂಮೀ. ಉಷ್ಣತೆ ಮಳೆಯಷ್ಟು ವ್ಯತ್ಯಾಸವಾಗುವುದಿಲ್ಲ. $26^0$ ಸೆಂ. – $29^0$ ಸೆಂ. ಉತ್ತರ ಹಾಗೂ ಸಮುದ್ರ ಪ್ರಭಾವಗಳಿರುವೆಡೆ ಉಷ್ಣತೆ ಕಡಿಮೆ.

ಸಸ್ಯ ಪ್ರಾಣಿವರ್ಗ : ದೇಶದ ದಕ್ಷಿಣದ ಬಹುಭಾಗ ಅರಣ್ಯದಿಂದ ಕೂಡಿದೆ. ಮೀಸಲು ಕಾಡುಗಳನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಕಾಡುಗಳನ್ನು ಕಡಿದು ಕೋಕೋ ಮರಗಳನ್ನು ಬೆಳೆಸಲಾಗಿದೆ; ಬಾಳೆ, ತಾಳೆ, ಮುಸುಕಿನ ಜೋಳ ಬೆಳೆಯಲಾಗುತ್ತಿದೆ. ನೆಲ ಫಲವತ್ತಾಗಿಲ್ಲದ ಪ್ರದೇಶಗಳಲ್ಲಿ ಮರಗೆಣಸನ್ನೂ ಹಳ್ಳಿಗಳ ಸುತ್ತ ಜಂಬೀರ ಗಿಡಗಳನ್ನೂ ಬೆಳೆಯಲಾಗುತ್ತದೆ. ಹೆಚ್ಚು ಮಳೆ ಬೀಳದ ಕರಾವಳಿ ಪ್ರದೇಶದಲ್ಲಿ ಕುರುಚಲುಗಿಡ ವಿಶೇಷ.

ಸಿಂಹ, ಚಿರತೆ, ಕಿರುಬ, ಜಿಂಕೆ, ಆನೆ, ಕಾಡೆಮ್ಮೆ, ಕಾಡುನಾಯಿ, ಚಿಂಪಾಂಜಿ, ಕೋತಿ, ಹೆಬ್ಬಾವು, ನಾಗರಹಾವು, ಆಡರ್ ಸರ್ಪ – ಇವು ಇಲ್ಲಿಯ ಕೆಲವು ಪ್ರಾಣಿಗಳು. ನದಿಗಳಲ್ಲೂ ನೀರು ನಿಂತ ಸ್ಥಳಗಳಲ್ಲೂ ಮೊಸಳೆಗಳುಂಟು. ವೋಲ್ಟ ನದಿಯಲ್ಲಿ ನೀರಾನೆಗಳಿವೆ. ವಿವಿಧ ವರ್ಗಗಳ ಹಲ್ಲಿಗಳು, ಆಮೆ, ದೊಡ್ಡ ಆಕಾರದ ಬಸವನ ಹುಳು ಇವು ಸಾಮಾನ್ಯ.

ಜನ: ಘಾನದ ಜನ ನೀಗ್ರೋ ಬುಡಕಟ್ಟಿಗೆ ಸೇರಿದವರು. ಇದರಲ್ಲಿ ಹಲವು ಬಣಗಳಿವೆ, ಆಕಾನ್ ಬಣದಲ್ಲಿ ಟ್ವಿ ಮತ್ತು ಫಾಂಟಿ ಎಂದು ಎರಡು ತಂಡಗಳುಂಟು. ಟ್ವಿಗಳು ಅಶಾಂಟೀ ಮತ್ತು ಮಧ್ಯ ಘಾನದಲ್ಲಿ ವಾಸಿಸುತ್ತಾರೆ. ಫಾಂಟಿಗಳು ಸಮುದ್ರತೀರಗಳಲ್ಲಿ ನೆಲೆಸಿದ್ದಾರೆ. ವೋಲ್ಟ ನದೀಬಯಲಿನಲ್ಲಿ ಗುಅನ್ ಬಣ ನೆಲೆಸಿದೆ. ಆ ನದಿಯ ಪೂರ್ವಕ್ಕೆ ಇವಿ ಜನರಿದ್ದಾರೆ. ಈ ರಾಜ್ಯದಲ್ಲಿ ಐವತ್ತು ಪ್ರಾಂತೀಯ ಭಾಷೆಗಳಿವೆ. ಆಡಳಿತ ಭಾಷೆ ಇಂಗ್ಲಿಷ್.

ಘಾನದ ಜನರಲ್ಲಿ ಶೇ. 42 ಕ್ರೈಸ್ತರು, ಶೇ. 12 ಮುಸ್ಲಿಮರು, ಉಳಿದವರು ಆಫ್ರಿಕದ ಸಾಂಪ್ರದಾಯಿಕ ಸರ್ವಚೇತನ ಪಂಥದವರು.

ಶಿಕ್ಷಣ ಪದ್ಧತಿ : ಘಾನ ಬಹಳ ವರ್ಷಗಳ ಕಾಲ ಬ್ರಿಟಿಷರ ವಸಾಹತು ರಾಜ್ಯವಾಗಿದ್ದ ಕಾರಣ ಅದರ ಶಿಕ್ಷಣ ಪದ್ಧತಿ ಭಾರತದ ಆಧುನಿಕ ಶಿಕ್ಷಣದ ಆರಂಭ ಮತ್ತು ಬೆಳವಣಿಗೆಯನ್ನು ಬಹುಮಟ್ಟಿಗೆ ಹೋಲುತ್ತದೆ. ಸ್ವಾತಂತ್ರ್ಯಾನಂತರ ಏಕಪ್ರಕಾರವಾಗಿ ಅಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಅಗತ್ಯವನ್ನು ಪೂರೈಸಲು ತೀವ್ರಗತಿಯಲ್ಲಿ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸುವುದರ ಜೊತೆಗೆ ಉತ್ತಮ ಬೋಧನೆಯನ್ನೊದಗಿಸಲು ಘಾನ ಶ್ರಮಿಸುತ್ತಿದೆ.

ಆರ್ಥಿಕತೆ: ಘಾನದ ಮುಖ್ಯ ಕಸುಬು ವ್ಯವಸಾಯ. ಸವನ್ನ ಹುಲ್ಲುಗಾವಲುಗಳಲ್ಲದೆ ಶೇ. 22 ಭೂಮಿ ವ್ಯವಸಾಯ ಯೋಗ್ಯವಾಗಿದೆ. ಶೇ. 17 ಅರಣ್ಯ ಪ್ರದೇಶ. ಘಾನದಲ್ಲಿ ಶೇ. 5 ರೈತರು. ಶೇ. 15 ಮಂದಿ ಮಾತ್ರ ಉದ್ಯಮಗಳಲ್ಲಿ ನಿರತರಾಗಿದ್ದಾರೆ. ಕೋಕೋ ಮುಖ್ಯ ಬೆಳೆ. ಈ ದೇಶದ ಇತರ ಬೆಳೆಗಳು ಬತ್ತ, ತೆಂಗು, ನೆಲಗಡಲೆ, ಕಾಫಿ, ರಬ್ಬರ್, ಮರಗೆಣಸು, ಜಂಬೀರ ಫಲಗಳು, ಪೈನಾಪಲ್. ಘಾನ ಮತ್ಸ್ಯೋದ್ಯಮ ಕಾರ್ಪೊರೇಷನ್ ಮೀನುಗಾರಿಕೆಯ ಅಭಿವೃದ್ಧಿಗೆ ಗಮನ ನೀಡುತ್ತಿದೆ.

ಘಾನದ ಅರಣ್ಯಗಳು ಹೆಚ್ಚಾಗಿ ದಕ್ಷಿಣದಲ್ಲಿವೆ. ಅವುಗಳ ಒಟ್ಟು ವಿಸ್ತೀರ್ಣ 82,258 ಚ.ಕಿಮೀ. ವ್ಯವಸಾಯಕ್ಕಾಗಿ ಮರಗಳನ್ನು ಕಡಿಯಬೇಕಾಗಿದ್ದರೂ ಮೀಸಲು ಅರಣ್ಯಗಳಲ್ಲಿ ಮರಗಳನ್ನು ರಕ್ಷಿಸಲಾಗಿದೆ. ಮರಗಳನ್ನು ಪ್ಲೈವುಡ್ ಕಾರ್ಖಾನೆಗಳಲ್ಲಿ ಬಳಸಲಾಗುತ್ತಿರುವುದರಿಂದ ದಿಮ್ಮಿಗಳು ರಫ್ತಾಗುವುದು ಕಡಿಮೆ.

ಘಾನದಲ್ಲಿ ಚಿನ್ನ ಹೆಚ್ಚಾಗಿ ಸಿಗುತ್ತದೆ. ಮ್ಯಾಂಗನೀಸ್, ಬಾಕ್ಸೈಟ್ ಮತ್ತು ವಜ್ರಗಳೂ ಸಿಗುತ್ತವೆ.

ಘಾನದ ಮುಖ್ಯ ಆಮದುಗಳು: ಯಂತ್ರೋಪಕರಣ, ರಾಸಾಯನಿಕ ವಸ್ತುಗಳು, ಹೊಗೆಸೊಪ್ಪು. ರಫ್ತುಗಳು: ಕೋಕೋ, ಅರಣ್ಯೋತ್ಪಾದನಗಳು, ಚಿನ್ನ, ವಜ್ರ, ಮ್ಯಾಂಗನೀಸ್ ಮತ್ತು ಬಾಕ್ಸೈಟ್. ಘಾನದ ನಾಣ್ಯ ಸೀಡಿ (ನೂರು ಪೆಸವಾಗಳು).

ಸಾರಿಗೆ, ಸಂಪರ್ಕ : ಪ್ರಯಾಣಿಕರ ಸಂಚಾರ ಮತ್ತು ಸರಕುಗಳ ಸಾಗಣೆಗೆ ರೈಲು ಮುಖ್ಯ ಸಾಧನ. ಆಕ್ರ, ಕೂಮಾಸಿ ಮತ್ತು ಟಾಕೊರಾಡಿ ನಗರಗಳಿಗೆ ರೈಲ್ವೆ ಸಂಪರ್ಕವಿದೆ. ಘಾನದಲ್ಲಿ 32,000 ಕಿಮೀ ರಸ್ತೆಗಳಿವೆ. ಸಮುದ್ರದ ಅಂಚಿನಲ್ಲಿ ಸ್ವಾಭಾವಿಕ ರೇವುಗಳಿಲ್ಲ. ಸೆಕಂಡೀ–ಟಾಕೊರಾಡಿ ಒಂದು ಕೃತಕ ಬಂದರು. 1920 ರಲ್ಲಿ ನಿರ್ಮಿತವಾದ ಈ ಬಂದರನ್ನು ಎರಡನೆಯ ಮಹಾಯುದ್ಧದ ಕಾಲದಲ್ಲಿ ವಿಸ್ತರಿಸಲಾಯಿತು. 1962 ರಲ್ಲಿ ತೆರೆಯಲಾದ ಕೃತಕ ಬಂದರು ಟೆಮ. ಘಾನದಿಂದ ಆಫ್ರಿಕದ ಪ್ರಮುಖ ಪಟ್ಟಣಗಳಿಗೆ ಮತ್ತು ಲಂಡನ್ ನಗರಕ್ಕೆ ವಿಮಾನ ಸೌಲಭ್ಯವಿದೆ.

(ವಿ.ಜಿ.ಕೆ.)

# ಚ

**ಚಂಡೀಗಢ:** ಪಂಜಾಬ್ ಹರಿಯಾಣ ರಾಜ್ಯಗಳ ರಾಜಧಾನಿ, ಒಕ್ಕೂಟ ಪ್ರದೇಶ. ದೆಹಲಿಗೆ ಉತ್ತರ–ವಾಯವ್ಯದಲ್ಲಿ 242 ಕಿಮೀ ದೂರದಲ್ಲಿದೆ. ವಿಸ್ತೀರ್ಣ 114 ಚ.ಕಿಮೀ. ಒಟ್ಟು ಜನಸಂಖ್ಯೆ 900920. ಚಂಡೀಗಢ ಸುಂದರ ನಗರ. ಇನ್ನೂ ಎರಡು ದಶಕಕೂಡ ತುಂಬದ ಈ ನಗರದ ವಾಸ್ತುಶಿಲ್ಪ ಪ್ರಪಂಚದ ಒಂದು ವೈಶಿಷ್ಟ್ಯ. ನಾರ್ಮ ಎವೆನ್ಸನ್ ಬರೆದಿರುವಂತೆ ಇದರ ಕಲ್ಪನೆಯೇ ಒಂದು ನವ್ಯ ಕವಿತೆಯಿದ್ದಂತೆ. ಇದು ತಂತ್ರವಿಜ್ಞಾನಕ್ಕೂ ವೇಗ–ಚಲನೆಗಳಿಗೂ ಬೆಳಕು ತುಂಬಿದ ಅನಂತ ದೃಷ್ಟಿಪಥಗಳನ್ನು ತೆರೆಯುವ ಮಾನವಕೃತ ವಿಶಾಲ ಆಯಾಮಗಳ ಜಗತ್ತಿಗೂ ಸಲ್ಲಿಸಿದ ಸಂಕೀರ್ತನೆಯಂತಿದೆ.

ಚಂಡೀಗಢದ ಇತಿಹಾಸದ ಆರಂಭ 1947ರಲ್ಲಿ, ಭಾರತದ ವಿಭಜನೆ ಆದಾಗ, ಪಂಜಾಬ್ ಪ್ರಾಂತ್ಯದ ಪಶ್ಚಿಮ ಭಾಗ ಅದರ ರಾಜಧಾನಿಯಾದ ಲಾಹೋರಿನೊಂದಿಗೆ ಪಾಕಿಸ್ತಾನಕ್ಕೆ ಹೋಯಿತು. ಪೂರ್ವಭಾಗ ಭಾರತದ ಪಾಲಿಗೆ ಬಂತು. ಪೂರ್ವ ಪಂಜಾಬ್ ಸರ್ಕಾರ ಸ್ವಲ್ಪ ಕಾಲ ಜಲಂಧರ್‌ನಿಂದ ಆಡಳಿತ ನಡೆಸುತ್ತಿತ್ತು. ಆದರೆ ಕಚೇರಿಗಳನ್ನು ನಡೆಸಲು ಸಾಕಷ್ಟು ಸ್ಥಳಾವಕಾಶವಿಲ್ಲದ್ದರಿಂದ ರಾಜಧಾನಿಯನ್ನು ತಾತ್ಕಾಲಿಕವಾಗಿ ಸಿಮ್ಲಾ ನಗರಕ್ಕೆ ವರ್ಗಾಯಿಸಲಾಯಿತು. ಹೊಸ ಸರ್ಕಾರದ ರಾಜಧಾನಿಯಾಗಲು ಹಲವು ನಗರಗಳು ಮುಂದೆ ಬಂದವು. ಹಳೆಯ ನಗರವೊಂದನ್ನು ಮಾರ್ಪಡಿಸಿಕೊಳ್ಳುವುದಕ್ಕಿಂತ ಹೊಸ ನಗರವೊಂದನ್ನು ನಿರ್ಮಿಸುವುದೇ ಅಗ್ಗವೂ ಸರಳವೂ ಎಂದು ಭಾವಿಸಲಾಯಿತು. ವಿವಿಧ ದೃಷ್ಟಿಗಳಿಂದ ಈಗಿನ ನಗರದ ನಿವೇಶನವನ್ನು ಆರಿಸಲಾಯಿತು. ಪಂಜಾಬಿನ ನಗರಗಳಿಗೂ ದೆಹಲಿಗೂ ಈ ಸ್ಥಳದ ಸಾಮೀಪ್ಯ, ರಸ್ತೆ–ರೈಲು ಸಂಪರ್ಕ, ಅಂತರ್ಜಲದ ಸೌಲಭ್ಯ, ಹಿಮಾಲಯ ಪರ್ವತಗಳ ಭವ್ಯ ಹಿನ್ನೆಲೆ–ಇವು ಈ ಸ್ಥಳವನ್ನು ಆರಿಸಲು ಕೆಲವು ಮುಖ್ಯ ಕಾರಣಗಳು. ಈ ನಗರದಿಂದ 13 ಕಿಮೀ ದೂರದಲ್ಲಿರುವ ಪುರಾತನ ಚಂಡೀ ದೇವಾಲಯದಿಂದಾಗಿ ಇದಕ್ಕೆ ಚಂಡೀಗಢವೆಂಬ ಹೆಸರನ್ನು ನೀಡಲಾಗಿದೆ.

ನಗರದ ಪ್ರಥಮ ನಕ್ಷೆಯನ್ನು ನ್ಯೂಯಾರ್ಕಿನಲ್ಲಿ ಆಲ್ಬರ್ಟ್ ಮೇಯರ್ ಎಂಬವರು ಮ್ಯಾಥ್ಯೂ ನಾವಿಕಿ, ಕಾರ್ಬ್ಯೂಸ್ಯೇಯ ಸೋದರ ಸಂಬಂದಿಪ್ಯೇರ್ ಷಾನ್ರೆ, ಇಂಗ್ಲಿಷ್ ವಾಸ್ತುಶಿಲ್ಪಿಗಳಾದ ಇ. ಮ್ಯಾಕ್ಸ್ ವೆಲ್ ಫ್ರೈ ಮತ್ತು ಜೇನ್ ಬಿ.ಡ್ರ್ಯೂ ಇವರ ಸಹಯೋಗದಿಂದ ರಚನೆಯಾಯಿತು. 1951–65ರಲ್ಲಿ ಚಂಡೀಗಢದಲ್ಲಿ ಬಹುತೇಕ ಸಾರ್ವಜನಿಕ ಹಾಗೂ ಖಾಸಗಿ ಕಟ್ಟಡಗಳು ಇವರ ನೇತೃತ್ವದಲ್ಲಿ ನಿರ್ಮಿತವಾದವು.

ಹೊರ ಹಿಮಾಲಯ ಪರ್ವತಪ್ರದೇಶದಲ್ಲಿ ಮನೋಹರವಾದ ಸಿವಾಲಿಕ್ ಬೆಟ್ಟದ ತಪ್ಪಲಿನಲ್ಲಿ ನಿರ್ಮಿತವಾಗಿರುವ ಈ ನಗರದ ಪೂರ್ವಕ್ಕೆ ಸುಖ್ನಾ ಚೋ ಮತ್ತು ಪಶ್ಚಿಮಕ್ಕೆ ಪಾಟಿಯಾಲಿ ರಾವ್ ನದಿಗಳು ಹರಿಯುತ್ತವೆ. ಇವು ಮಳೆಗಾಲದಲ್ಲಿ ಮಾತ್ರ ಪ್ರವಾಹದಿಂದ ಕೂಡಿರುತ್ತವೆ. ಹೀಗೆ ಈ ನಗರಕ್ಕೆ ಮೂರು ಕಡೆಗಳಲ್ಲಿ ನೈಸರ್ಗಿಕ ಎಲ್ಲೆಕಟ್ಟುಗಳಿವೆ.

ನಗರವನ್ನು 46 ಸೆಕ್ಟರ್ ಅಥವಾ ವಿಭಾಗಗಳಾಗಿ ವಿಂಗಡಿಸಲಾಗಿದೆ. ಈ ನಗರ ಯೋಜನೆಯ ಇನ್ನೊಂದು ಗಮನಾರ್ಹ ಅಂಶವೆಂದರೆ ರಸ್ತೆ ವ್ಯವಸ್ಥೆ. ನಗರದ ಆವಶ್ಯಕತೆ ಹಾಗೂ ಸೌಕರ್ಯಗಳಿಗೆ ಅನುಗುಣವಾಗಿ ಇರುವಂತೆ ಇದನ್ನು ಕಲ್ಪಿಸಿಕೊಂಡು ಸುಂದರವಾಗಿ ವಿನ್ಯಾಸಗೊಳಿಸಲಾಗಿದೆ. ಒಟ್ಟಿನಲ್ಲಿ ಇದರದು ಸರಳು ಚೌಕಟ್ಟಿನ ನಮೂನೆ. ಆದರೆ ಈ ಜಾಲದಲ್ಲಿ ಏಳು ಬಗೆಯ ರಸ್ತೆಗಳಿವೆ. ಇವನ್ನು ಏಳು ಗಿಗಳೆಂದು ಕರೆಯಲಾಗಿದೆ. ಇವುಗಳ ಮೇಲೆ ಸಂಚರಿಸಬಹುದಾದ ವಾಹನಗಳ ಸ್ವರೂಪ ಹಾಗೂ ವೇಗಗಳ ಆಧಾರದ ಮೇಲೆ ಈ ರಸ್ತೆಗಳಲ್ಲಿ ವ್ಯತ್ಯಾಸ ಕಲ್ಪಿಸಲಾಗಿದೆ.

ನಗರದ ಕಾರ್ಯಭಾರ ಆಡಳಿತಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಪ್ರಮುಖ ಶಿಕ್ಷಣಕೇಂದ್ರ ಕೂಡ. ಕೈಗಾರಿಕೆಗಳೂ ಇಲ್ಲಿ ಬೆಳೆದಿವೆ. ಇಲ್ಲಿಯವು ಧೂಮರಹಿತ ಕೈಗಾರಿಕೆಗಳು, ಇವಲ್ಲದೆ ನಗರದ ಹೊರ ಎಲ್ಲೆಯಲ್ಲಿ ಹರಿಯಾಣದ ಪಂಚಕುಲ ಮತ್ತು ಪಂಜಾಬಿನ ಮೋಹಾಲಿ ಕೈಗಾರಿಕಾ ಸ್ಥಾನಗಳಿವೆ. ಪಂಜಾಬ್, ಹರಿಯಾಣ ಮತ್ತು ಹಿಮಾಚಲ ಪ್ರದೇಶಗಳ ಪ್ರಮುಖ ಪಟ್ಟಣಗಳೊಂದಿಗೆ ಚಂಡೀಗಢಕ್ಕೆ ರಸ್ತೆ ಸಂಪರ್ಕವುಂಟು, ಅಂಬಾಲಾ, ದೆಹಲಿ, ಕಲ್ಕಾ ಮತ್ತು ಸಿಮ್ಲಾಗಳಿಗೆ ರೈಲು ಮಾರ್ಗಗಳಿವೆ. (ಜಿ.ಎಸ್.ಜಿ.ಟಿ.)

**ಚಂದ್ರ:** ಭೂಮಿಯ ಏಕೈಕ ಉಪಗ್ರಹ. ಭೂಮಿಗೆ ಸಮೀಪದಲ್ಲಿರುವ ಹಾಗೂ ಮಾನವ ಅಧ್ಯಯನಕ್ಕೆ ನಿಲುಕಬಹುದಾದುದರಿಂದ ಇತರ ಉಪಗ್ರಹಗಳಿಗಿಂತ ಚಂದ್ರ ವಿಶಿಷ್ಟವಾದುದಾಗಿದೆ. ಇದರ ವ್ಯಾಸ 3,480 ಕಿಮೀ. ಇದು ಭೂಮಿಯ ವ್ಯಾಸದ $^{1}/_{4}$ ಭಾಗದಷ್ಟಾಗುವುದು. ಭೂಮಿಯ ದ್ರವ್ಯರಾಶಿಯ ಎಂಬತ್ತೊಂದನೆಯ ಒಂದರಷ್ಟನ್ನು ಹೊಂದಿದೆ. ಭೂಮಿಯಿಂದ 3,85,000 ಕಿಮೀ ಅಂತರದಲ್ಲಿ ಚಂದ್ರ ಪರಿಭ್ರಮಿಸುವನು.

ಚಂದ್ರನು ಭೂಮಿಯ ಸಹಚರನಾಗಿದ್ದು, ಭೂಮಿಯ ಆಕರ್ಷಣ ಶಕ್ತಿಗೊಳಪಟ್ಟು ತನ್ನ ಅಕ್ಷದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಸುತ್ತುತ್ತಾ ಅಂಡಾಕಾರದ ಪಥದಲ್ಲಿ ಸೂರ್ಯನ ಸುತ್ತ ಪರಿಭ್ರಮಿಸುವನು. ಹೀಗೆ ಪರಿಭ್ರಮಿಸುವಾಗ ಚಂದ್ರನು ಕೆಲವು ವೇಳೆ ಭೂಮಿಗೆ ಸಮೀಪದಲ್ಲಿಯೂ ಹಾಗೂ ದೂರದಲ್ಲಿಯೂ ಬರುವನು. ಭೂಮಿಗೆ ಸಮೀಪದ ಸ್ಥಾನವನ್ನು ಚಂದ್ರನ ನೀಚ ಸ್ಥಾನ (ಪೆರಿಜಿ) ಎಂತಲೂ ಮತ್ತು ದೂರದ ಸ್ಥಾನವನ್ನು ಚಂದ್ರನ ಉಚ್ಚಸ್ಥಾನ (ಅಪೋಜಿ) ಎಂತಲೂ ಕರೆಯುವರು. ನೀಚಸ್ಥಾನದಲ್ಲಿದ್ದಾಗ ಭೂ ಕೇಂದ್ರಬಿಂದುಗಳ ನಡುವಣ ಅಂತರ 3,56,000 ಕಿಮೀ ಮತ್ತು ಉಚ್ಚ ಸ್ಥಾನದಲ್ಲಿದ್ದಾಗ ಅಂತರ 4,07,000 ಕಿಮೀ ಗಳಾಗಿರುತ್ತವೆ. ಚಂದ್ರನ ಚಲನೆಯ ವೇಗ ಉಚ್ಚಸ್ಥಾನಕ್ಕಿಂತ ನೀಚ ಸ್ಥಾನದಲ್ಲಿ ಹೆಚ್ಚಾಗಿರುತ್ತದೆ.

ಭೂಮಿಯ ಪಥದ ಸಮತಲಕ್ಕೆ ಚಂದ್ರನ ಪಥ 5.9 ಕೋನಾಂತರದಲ್ಲಿರುತ್ತದೆ. ಈ ರೀತಿ ಚಂದ್ರ ಭೂಮಿಯ ಸುತ್ತ ಒಂದು ಪೂರ್ಣ ಸುತ್ತು ಸುತ್ತಿಬರಲು ವಾಸ್ತವವಾಗಿ 27 ದಿನಗಳು, 7 ಗಂಟೆ, 43 ನಿಮಿಷ ಹಾಗೂ 11.5 ಸೆಕೆಂಡ್ ಕಾಲವನ್ನು ತೆಗೆದುಕೊಳ್ಳುತ್ತದೆ. ಈ ಅವಧಿಯನ್ನು ನಾಕ್ಷತ್ರಿಕ ತಿಂಗಳು ಎಂದು ಪರಿಗಣಿಸಲಾಗಿದೆ. ಆದರೆ ಭೂಗ್ರಹವನ್ನು ಅನುಸರಿಸಿಕೊಂಡು ಸೂರ್ಯನ ಸುತ್ತ ಪರಿಭ್ರಮಿಸುವುದರಿಂದ ಚಂದ್ರ ಭೂಮಿಯ ಸುತ್ತ ಒಂದು ಪೂರ್ಣ ಪ್ರದಕ್ಷಿಣೆ ಹಾಕಲು 29 ದಿನ ಮತ್ತು 12 ಗಂಟೆ ($29^{1}/_{2}$) ಅವಧಿ ಬೇಕಾಗುವುದು. ಈ ಅವಧಿಯನ್ನು ಸೌರಮಾಸವೆಂದು ಕರೆಯುವರು. ಹೀಗೆ ಚಂದ್ರನು ಭೂಮಿಯ ಸುತ್ತ ಒಂದು ಪ್ರದಕ್ಷಿಣೆ ಪೂರೈಸುವ ಆವರ್ತನವನ್ನು ಚಂದ್ರಮಾಸ ಎಂದು ಕರೆಯುವರು. ಈ ಮಾಸದಲ್ಲಿ ಒಂದು ಅಮಾವಾಸ್ಯೆ ಮತ್ತು ಒಂದು ಹುಣ್ಣಿಮೆ ಸೇರಿರುತ್ತದೆ.

ಚಂದ್ರನಿಗೆ ಸ್ವಪ್ರಕಾಶವಿಲ್ಲ. ಅದು ಶಾಖ ಮತ್ತು ಬೆಳಕನ್ನು ಸೂರ್ಯನಿಂದ ಪಡೆದು ಪ್ರತಿಬಿಂಬಿಸುವುದು. ಆದರೆ ಭೂಮಿಗೂ ಮತ್ತು ಚಂದ್ರನಿಗೂ ವ್ಯತ್ಯಾಸವೊಂದಿದೆ. ಏನೆಂದರೆ, ಭೂಮಿ ತನ್ನ ಬಾಹ್ಯವಲಯದಲ್ಲಿ ಎಲ್ಲಾ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಳ್ಳಬಲ್ಲದು. ಆದರೆ ಇಂತಹ ಗ್ರಾಹಕ ಶಕ್ತಿಯನ್ನು ಚಂದ್ರನು ಹೊಂದಿಲ್ಲ. ಆದ ಕಾರಣ ಚಂದ್ರನಿಗೆ ವಾಯುಮಂಡಲವಾಗಲಿ ಅಥವಾ ಜಲಮಂಡಲವಾಗಲಿ ಇರುವುದಿಲ್ಲ.

ಸೂರ್ಯನ ಬೆಳಕನ್ನು ಪ್ರತಿಬಿಂಬಿಸುವುದರ ಮೂಲಕ ಚಂದ್ರನು ಪ್ರಕಾಶಿಸುತ್ತಾನೆ. ಹೀಗೆ ಪ್ರಕಾಶಿಸಲ್ಪಟ್ಟ ಬೆಳಕು ಭೂಮಿಯನ್ನು ತಲುಪಲು 1 $^{1}/_{2}$ ಸೆಕೆಂಡ್ ಅವಧಿ ಬೇಕಾಗುವುದು. ಆಕಾಶದಲ್ಲಿ ನಮಗೆ ಗೋಚರಿಸುವ ಚಂದ್ರನ ಸ್ವರೂಪ ಒಂದು ರಾತ್ರಿಯಿಂದ ಮತ್ತೊಂದು ರಾತ್ರಿಗೆ ವ್ಯತ್ಯಯವಾಗುತ್ತದೆ. ಸೂರ್ಯನಿಗೆ ಎದುರಾದ ಚಂದ್ರನ ಭಾಗವು ಬೆಳಕಿನಿಂದ ಕೂಡಿದ್ದರೆ ಅದಕ್ಕೆ ಮರೆಯಾಗಿರುವ ಕತ್ತಲಾದ ಭಾಗ ಭೂಮಿಗೆ ಎದುರಾಗಿರುತ್ತದೆ. ಆಗ ನಮಗೆ ಅಮವಾಸ್ಯೆಯಾಗಿರುತ್ತದೆ. ಚಂದ್ರನ ಪರಿಭ್ರಮಣೆಯು ಮುಂದುವರಿದಂತೆಲ್ಲಾ ಸೂರ್ಯ–ಚಂದ್ರ–ಭೂಮಿಯ ಕೋನಾಂತರವೂ ಹೆಚ್ಚುತ್ತದೆ. ಇದರಿಂದ ಚಂದ್ರನ ಪ್ರಕಾಶಿತ ಭಾಗವೂ ವೃದ್ಧಿಯಾಗುತ್ತಾ ಹೋಗುತ್ತದೆ. ಇದನ್ನೆ ವೃದ್ಧಿ ಚಂದ್ರ ಎನ್ನುವರು. ಹುಣ್ಣಿಮೆಯ ಮುಂದಿನ ದಿನದ ಚಂದ್ರನ ಪ್ರಕಾಶಿತ ಭಾಗವು ಕಡಿಮೆಯಾಗುತ್ತಾ ಹೋಗುವುದು ಇದನ್ನು ಕ್ಷೀಣ ಚಂದ್ರ ವೆನ್ನುವರು. ಈ ನಿರಂತರ ಕಾರ್ಯಗತಿಯನ್ನು ಚಂದ್ರನ ಕಲೆಗಳು ಎನ್ನುವರು. ಈ ಕಲೆಗಳನ್ನು ಪ್ರಥಮ, ದ್ವಿತೀಯ, (ಹುಣ್ಣಿಮೆ) ಅಂತಿಮ ಮತ್ತು ಅಮವಾಸ್ಯೆಯೆಂದು ಚತುರ್ಥ ವಿಭಾಗಗಳಾಗಿ ವಿಂಗಡಿಸಲಾಗಿದೆ.

ಚಂದ್ರನು ಭೂಮಿಯ ಮೇಲೆ ಸಾಕಷ್ಟು ಪ್ರಭಾವ ಬೀರುವನು. ಚಂದ್ರನ ಆಕರ್ಷಣೆಗೆ ಒಳಗಾಗಿ ಮಹಾಸಾಗರಗಳ ನೀರಿನಲ್ಲಿ ದಿನನಿತ್ಯ ಉಬ್ಬರವಿಳಿತಗಳು ಉಂಟಾಗುತ್ತವೆ. ಇತರ ಆಕಾಶಕಾಯಗಳಿಗಿಂತ ಚಂದ್ರನು ಭೂಮಿಗೆ ಸಮೀಪವಿದ್ದು ಪುರಾತನ ಕಾಲದಿಂದಲೂ ಇದು ಮಾನವನ ಗಮನವನ್ನು ಸೆಳೆದಿದೆ. 1969ನೆಯ ಜುಲೈ 21ರಂದು ಮಾನವನು ಚಂದ್ರನ ಮೇಲೆ ಮೊಟ್ಟಮೊದಲಿಗೆ ಪಾದಾರ್ಪಣೆ ಮಾಡಿದ. (ಜಿ.ಟಿ.ಎನ್.)

**ಚಂದ್ರಗಿರಿ[1]:** ಶ್ರವಣಬೆಳಗೊಳದ ಎರಡು ಬೆಟ್ಟಗಳಲ್ಲಿ ಒಂದು. ಇದನ್ನು ಚಿಕ್ಕ ಬೆಟ್ಟವೆಂದು ಕರೆಯುತ್ತಾರೆ. ಮತ್ತೊಂದು ಬೆಟ್ಟ ಇಂದ್ರಗಿರಿ. ಚಂದ್ರಗಿರಿ ಶಿಖರದ ಎತ್ತರ ಸಮುದ್ರಮಟ್ಟದಿಂದ 924 ಮೀ. ಈ ಬೆಟ್ಟದ ಮೇಲೆ 13 ಬಸದಿಗಳಿವೆ. ಎಲ್ಲವೂ ದ್ರಾವಿಡ ಶೈಲಿಯನ್ನು ಹೊಂದಿವೆ. ಚಂದ್ರಗುಪ್ತ ಮೌರ್ಯ ತನ್ನ ಕೊನೆಗಾಲವನ್ನು ಇಲ್ಲಿಯೇ ಕಳೆದನೆಂದು ನಂಬಲಾಗಿದೆ. ಈ ಬೆಟ್ಟದ ಬಂಡೆಗಳ ಮೇಲಣ ಶಾಸನಗಳು ಕನ್ನಡ ಲಿಪಿಯಲ್ಲಿವೆ. ಭಾಷೆ, ಸಾಹಿತ್ಯ ಕುರಿತ ವಿಚಾರಗಳ ಮೇಲೆ ಈ ಶಿಲಾಶಾಸನಗಳು ವಿಶೇಷವಾದ ಬೆಳಕು ಬೀರುತ್ತವೆ. *

**ಚಂದ್ರಗಿರಿ[2]:** ಆಂಧ್ರಪ್ರದೇಶದ ತಿರುಪತಿಯ ಸಮೀಪದ ಸ್ವರ್ಣಮುಖಿನದಿಯ ಬಲದಂಡೆಯ ಮೇಲಿರುವ ಪಟ್ಟಣ. ಇದು ಉ.ಅ. $13^0$ 25′ ಮತ್ತು ಪೂ.ರೇ. $79^0$ 19′ ಸ್ಥಾನೀಕರಣವಾಗಿದೆ. ಸುತ್ತಣ ಪ್ರದೇಶದಿಂದ ಸು. 182 ಮೀ ಎತ್ತರವಿರುವ ಗ್ರಾನೈಟ್ ಶಿಲೆಯ ಬೆಟ್ಟದ ಮೇಲೆ ಭದ್ರವಾದ ಕೋಟೆಯನ್ನು ಕಟ್ಟಲಾಗಿದೆ.

1646ರಲ್ಲಿ ಇದು ಗೋಲ್ಕೊಂಡ ಸುಲ್ತಾನನ ವಶವಾಯಿತು. 1758ರಲ್ಲಿ ಕರ್ನಾಟಕದ ನವಾಬನ ಸಹೋದರ ಅಬ್ದುಲ್ ವಹಾಬ್‌ಖಾನನ ವಶಕ್ಕೆ ಬಂದ ಇದು 1782ರಲ್ಲಿ ಹೈದರ್ ಅಲಿಯ ಆಡಳಿತಕ್ಕೊಳಪಟ್ಟಿತು. ಮುಂದೆ 1792ರ ಶ್ರೀರಂಗಪಟ್ಟಣದ ಕೌಲಿನ ವರೆಗೂ ಇದು ಹೈದರ್ ಅಲಿಯ ವಶದಲ್ಲೇ ಇತ್ತು. (ಎ.ಎ.ಎ.)

**ಚಂದ್ರಗಿರಿ[3]:** ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಹುಟ್ಟಿ ಕಾಸರಗೋಡು ತಾಲ್ಲೂಕಿನಲ್ಲಿ ಹರಿದು ಕಾಸರಗೋಡಿನ ಬಳಿ ಅರಬ್ಬೀ ಸಮುದ್ರವನ್ನು ಸೇರುವ ಪಯಸ್ವಿನಿ ನದಿಗೆ ಇರುವ ಇನ್ನೊಂದು ಹೆಸರು. ಈ ನದಿಯ ದಂಡೆಯ ಮೇಲೆ ಚಂದ್ರಗಿರಿ ಎಂಬ ಕೋಟೆ ಇದೆ. ಇದನ್ನು ಉತ್ತಮಪಡಿಸಿದವ ವೆಂಕಟಪ್ಪನಾಯಕ, ಕುಂಬಳೆಯ ಅರಸನಾದ ಇಮ್ಮಡಿ ಜಯಸಿಂಹ ಪಾಂಡ್ಯರಾಜನನ್ನು ಸೋಲಿಸಿದ್ದು ಈ ಕೋಟೆಯ ಸಮೀಪದಲ್ಲಿಯೇ. (ಎ.ಎ.ಎ.)

**ಚನ್ನಪಟ್ಟಣ:** ಹಿಂದಿನ ಬೆಂಗಳೂರು ಜಿಲ್ಲೆಯ ಪಶ್ಚಿಮದ ಒಂದು ತಾಲ್ಲೂಕು. ಈಗ ರಾಮನಗರ ಜಿಲ್ಲೆಗೆ ಸೇರಿದೆ. ತುಮಕೂರು ಜಿಲ್ಲೆಯ ಕುಣಿಗಲು, ಬೆಂಗಳೂರು, ರಾಮನಗರಂ (ಈಗ ಜಿಲ್ಲೆ) ಮತ್ತು ಕನಕಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳು ಚನ್ನಪಟ್ಟಣ ತಾಲ್ಲೂಕನ್ನು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 1173 ಚ.ಕಿಮೀ. ಜನಸಂಖ್ಯೆ 2,52,574.

ತಾಲ್ಲೂಕಿನ ಉತ್ತರ ಭಾಗ ಬೆಟ್ಟಗಳಿಂದ ಕೂಡಿದೆ. ದಕ್ಷಿಣ ಭಾಗ ಮೈದಾನ. ತಾಲ್ಲೂಕಿನ ಮುಖ್ಯ ನದಿ ಕಣ್ವ. ಇದು ಮಳೂರಿನ ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಬೆಟ್ಟಗಳಿಂದ ಜಿಗಿದು ವಿಶಾಲವೂ ಹಾಗೂ ಫಲವತ್ತಾದ ಕಣಿವೆ ಪ್ರದೇಶದಲ್ಲಿ ಹರಿಯುತ್ತದೆ. ಅಬ್ಬೂರಿನ ಬಳಿ ಈ ನದಿಗೆ ಅಣೆಕಟ್ಟನ್ನು ಕಟ್ಟಿ ಹಲವು ಕೆರೆಗಳಿಗೆ ಇದರಿಂದ ನೀರನ್ನು ಒದಗಿಸಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಮಣ್ಣು ವೈವಿಧ್ಯಮಯವಾದದ್ದು. ನೀರಿನ ಆಸರೆ ಇರುವಲ್ಲಿ, ಬತ್ತ, ಕಬ್ಬು, ಬಾಳೆ, ತೆಂಗು, ಅಡಕೆ, ಮಾವು ಬೆಳೆಯುತ್ತವೆ. ಕಣ್ವ ನದಿಯ ಕೆಳದಂಡೆಗಳ ಮೇಲೆ ತೆಂಗಿನ ತೋಟಗಳು ಸುಂದರವಾಗಿ ಹಬ್ಬಿವೆ. ಇಲ್ಲಿಯ ಮಣ್ಣು ತೆಂಗಿನ ಬೆಳೆಗೆ ತುಂಬ ಪ್ರಶಸ್ತವಾಗಿದೆ. ನೀರಿನ ಸೌಕರ್ಯ ಹೆಚ್ಚಾಗಿಲ್ಲದ ಪ್ರದೇಶಗಳಲ್ಲಿ ರಾಗಿ, ಜೋಳ ಮುಂತಾದವನ್ನು ಬೆಳೆಯುತ್ತಾರೆ. ರೇಷ್ಮೆ ಹುಳುಗಳನ್ನು ಸಾಕುವುದೂ ಎಲೆ ತೆಗೆಯುವುದೂ ತಾಲ್ಲೂಕಿನ ಜನರ ಒಂದು ಮುಖ್ಯ ಕಸಬು, ರೇಷ್ಮೆ ವ್ಯವಸಾಯಕ್ಕೆ ಇಲ್ಲಿಯ ಹವ ತುಂಬ ಅನುಕೂಲಕರವಾಗಿದೆ. ತಾಲ್ಲೂಕಿನ ಹಲವು ಕಡೆಗಳಲ್ಲಿ ಹತ್ತಿ ಬಟ್ಟೆ ನೇಯುತ್ತಾರೆ.

ಚನ್ನಪಟ್ಟಣದಲ್ಲಿ ಕರ್ನಾಟಕ ಪೊಲೀಸ್ ತರಬೇತಿ ಶಾಲೆ, ತಾಂತ್ರಿಕ ಸಂಸ್ಥೆ, ಗ್ರಾಮೀಣ ಕರಕುಶಲಗಳ ತರಬೇತಿ ಕೇಂದ್ರ ಹಾಗೂ ಸ್ಪನ್ ರೇಷ್ಮೆ ಕಾರ್ಖಾನೆ ಇದೆ.

ನಾಗವಾರ, ಮೈಲನಾಯಕನಹಳ್ಳಿ, ಮಂಗಳವಾರ ಪೇಟೆ, ಅಕ್ಕೂರು, ಇಗ್ಗಲೂರು, ಸೋಗಲ, ಚಕ್ಕೆರೆ, ಬೇವೂರು–ಇವು ತಾಲ್ಲೂಕಿನ ಇತರ ಕೆಲವು ಗ್ರಾಮಗಳು. ತಾಲ್ಲೂಕನ್ನು ಮೂರು ಹೋಬಳಿಗಳಾಗಿ ವಿಂಗಡಿಸಲಾಗಿದೆ. ತಾಲ್ಲೂಕಿನಲ್ಲಿ ಒಟ್ಟು 145 ಗ್ರಾಮಗಳಿವೆ. (ವಿ.ಜಿ.ಕೆ.;ಎ.ಕೆ.)

**ಚನ್ನರಾಯಪಟ್ಟಣ:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಆಡಳಿತ ಕೇಂದ್ರ. ಉತ್ತರದಲ್ಲಿ ಅರಸೀಕೆರೆ ಮತ್ತು ತುಮಕೂರು ಜಿಲ್ಲೆಯ ತಿಪಟೂರು, ಪೂರ್ವದಲ್ಲಿ ತುರುವೇಕೆರೆ ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ, ದಕ್ಷಿಣದಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ, ನೈರುತ್ಯ ಮತ್ತು ಪಶ್ಚಿಮದಲ್ಲಿ ಹೊಳೆನರಸಿಪುರ, ಹಾಸನ ಮತ್ತು ಚನ್ನರಾಯನಪಟ್ಟಣ ತಾಲ್ಲೂಕುಗಳು ಸುತ್ತುವರಿದಿವೆ. ವಿಸ್ತೀರ್ಣ 1041 ಚ.ಕಿಮೀ. ಈ ತಾಲ್ಲೂಕಿನಲ್ಲಿ ಚನ್ನರಾಯಪಟ್ಟಣ, ದಂಡಿಗನಹಳ್ಳಿ, ಬಾಗೂರು, ನುಗ್ಗೇಹಳ್ಳಿ, ಹಿರೇಸಾವೆ ಮತ್ತು ಶ್ರವಣಬೆಳಗೊಳ ಹೋಬಳಿಗಳಿವೆ. ಜನವಸತಿಯಿರುವ ಗ್ರಾಮಗಳ ಸಂಖ್ಯೆ 365. ತಾಲ್ಲೂಕಿನ ಜನಸಂಖ್ಯೆ 2,78,112 ಮತ್ತು ನಗರದ ಜನಸಂಖ್ಯೆ 34,502.

ಈ ತಾಲ್ಲೂಕು ಉತ್ತರದಿಂದ ದಕ್ಷಿಣದ ಕಡೆಗೆ ಹೋದಂತೆ ಇಳಿಜಾರಾಗಿದೆ. ಹೇಮಾವತಿಯ ಕಡೆಗೆ ಹರಿಯುವ ನೀರಿಗೆ ಅಡ್ಡಲಾಗಿ ಅಲ್ಲಲ್ಲಿ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಲಾಗಿದೆ. ಉತ್ತರದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಎತ್ತರದ ಬೆಟ್ಟದ ಶ್ರೇಣಿಯೊಂದು ಹಬ್ಬಿದೆ. ಇವುಗಳಿಂದ ಕೆಲವು ತೊರೆಗಳು ಉತ್ತರಕ್ಕೂ ಪೂರ್ವಕ್ಕೂ ಹರಿದು ಶಿಂಷಾನದಿಯನ್ನು ಸೇರುತ್ತವೆ. ಶ್ರವಣಬೆಳಗೊಳದಲ್ಲಿ ತಕ್ಕಮಟ್ಟಿನ ಎತ್ತರದ ಬೆಟ್ಟಗಳು ಅಲ್ಲಲ್ಲಿ ಕಂಡುಬರುತ್ತವೆ. ಅವುಗಳ ಪೈಕಿ ಇಂದ್ರಗಿರಿ 1,020 ಮೀ ಎತ್ತರವಾಗಿದ್ದು ಇಲ್ಲಿ ಪ್ರಪಂಚ ಪ್ರಸಿದ್ಧವಾದ ಗೊಮ್ಮಟೇಶ್ವರ ವಿಗ್ರಹವಿದೆ. ಮಿಕ್ಕಂತೆ ಈ ತಾಲ್ಲೂಕು ಅಷ್ಟೇನೂ ಎತ್ತರವಾಗಿಲ್ಲ.

ಚನ್ನರಾಯಪಟ್ಟಣ ತಾಲ್ಲೂಕಿನ ಮಣ್ಣು ಸಾಮಾನ್ಯವಾಗಿ ಫಲವತ್ತಾಗಿದೆ. ತರಿ ಮತ್ತು ಖುಷ್ಕಿ ಬೆಳೆಗಳನ್ನು ಸಾಮಾನ್ಯವಾಗಿ ಬೆಳೆಯುತ್ತಾರೆ. ಮರಳಿನಿಂದ ಕೂಡಿದ ತೆಳುಕೆಂಪು ಮಣ್ಣು ಸಾಮಾನ್ಯವಾಗಿ ಕಂಡುಬರುತ್ತದೆ. ಅದರಲ್ಲಿ ಹೆಚ್ಚಿನ ವೈವಿಧ್ಯವೇನೂ ಇಲ್ಲ. ಹೊಳೆನರಸಿಪುರದ ಬಳಿ ಹೇಮಾವತಿಗೆ ಕಟ್ಟಿರುವ ಶ್ರೀರಾಮದೇವರ ಅಣೆಕಟ್ಟಿನ ಉತ್ತರ ನಾಲೆಯಿಂದ ಚನ್ನರಾಯನಪಟ್ಟಣ ತಾಲ್ಲೂಕಿಗೆ ಸ್ವಲ್ಪ ನೀರಾವರಿ ಸೌಲಭ್ಯ ಒದಗಿದೆ. ಈ ನಾಲೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ.

ರಾಗಿ, ಬತ್ತ, ಜೋಳ, ನೆಲಗಡಲೆ, ಕಬ್ಬು ಮುಖ್ಯ ಬೆಳೆಗಳಾದರೆ, ಇತರ ಬೆಳೆಗಳ ಪೈಕಿ ಮೆಣಸಿನಕಾಯಿ, ಹರಳು, ಎಳ್ಳು, ಹತ್ತಿ , ತೆಂಗು, ಅಡಕೆ, ಆಲೂಗೆಡ್ಡೆ ಮುಖ್ಯವಾದವು.

ಚನ್ನರಾಯಪಟ್ಟಣ ತಾಲ್ಲೂಕು: ಚನ್ನರಾಯನಪಟ್ಟಣ – ತಾಲ್ಲೂಕಿನ ಆಡಳಿತ ಕೇಂದ್ರವಾಗಿದ್ದು ಹಾಸನ–ಬೆಂಗಳೂರು ರಸ್ತೆಯಲ್ಲಿ ಹಾಸನದಿಂದ 37 ಕಿಮೀ ಪೂರ್ವಕ್ಕೂ, ಬೆಂಗಳೂರಿನಿಂದ 148 ಕಿಮೀ ದೂರದಲ್ಲಿದೆ. ಇದರ ಹಿಂದಿನ ಹೆಸರು ಕೊಲತೂರು. ಮೈಸೂರಿನಿಂದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗಗಳಿಗೆ ಹೋಗುವ ಬಸ್ಸುಗಳೂ ಬೆಂಗಳೂರಿನಿಂದ ಹಾಸನ, ಮಂಗಳೂರು, ಚಿಕ್ಕಮಗಳೂರು ಕಡೆಗೆ ಹೋಗುವ ಬಸ್ಸುಗಳೂ ಇದರ ಮೂಲಕ ಹೋಗುತ್ತವೆ. ಚನ್ನರಾಯನಪಟ್ಟಣದ ಪುರಸಭೆ 1918ರಲ್ಲಿ ಸ್ಥಾಪಿತವಾಯಿತು.

ಶ್ರವಣಬೆಳಗೊಳ ಈ ತಾಲ್ಲೂಕಿನ ಅತ್ಯಂತ ಪ್ರಸಿದ್ಧ ಸ್ಥಳ. ಇದು ಜೈನರ ಮುಖ್ಯ ಯಾತ್ರಾಸ್ಥಳ. ಚನ್ನರಾಯಪಟ್ಟಣಕ್ಕೆ 13 ಕಿಮೀ ದೂರದಲ್ಲಿದೆ. ಶಾಸನಗಳಲ್ಲಿ ಇದನ್ನು ವೆಳಗೊಳ, ದೇವರಬೆಳಗೂಳ, ಶ್ವೇತಸರೊವರ, ಧವಳಸರೋವರ, ಗೋಮ್ಮಟಪುರ–ಎಂದು ಕರೆಯಲಾಗಿದೆ. ಇದು ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾಗಿದೆ. ಶ್ರವಣಬೆಳಗೋಳ ಊರು ಇಂದ್ರಗಿರಿ ಅಥವಾ ವಿಂದ್ಯಗಿರಿ ಮತ್ತು ಚಂದ್ರಗಿರಿ ಎಂಬ ಎರಡು ಬೆಟ್ಟಗಳ ನಡುವೆ ಇದೆ. ಈ ಬೆಟ್ಟಗಳಿಗೆ ಅನುಕ್ರಮವಾಗಿ ದೊಡ್ಡಬೆಟ್ಟ ಮತ್ತು ಚಿಕ್ಕಬೆಟ್ಟ ಎಂಬ ಹೆಸರುಗಳೂ ಉಂಟು. ದೊಡ್ಡಬೆಟ್ಟದ ಎತ್ತರ ಸುಮುದ್ರಮಟ್ಟದಿಂದ 1020 ಮೀ ಎತ್ತರದ ಗೊಮ್ಮಟನ ಏಕಶಿಲಾವಿಗ್ರಹ ಇರುವುದು ಇದರ ಮೇಲೆಯೇ. ಚಿಕ್ಕಬೆಟ್ಟದ ಎತ್ತರ 930 ಮೀ. ಇದರ ªÆÄ ÉÆª Á§¸ ÀÁUÀ ±Á¸ÀUÀ ÀÁEª É (ವಿ.ಜಿ.ಕೆ.;ಎ.ಕೆ.)

**ಚರ್ಮೋದ್ಯಮ:** ಪ್ರಾಗಿತಿಹಾಸ ಕಾಲದಿಂದಲೂ ಚರ್ಮದ ವಿವಿಧ ರೀತಿಯ ಉಪಯೋಗಗಳನ್ನು ಕಾಣಬಹುದು. ಆದಿಮಾನವ ತನ್ನ ಆಹಾರಕ್ಕಾಗಿ ಕೊಂದ ಪ್ರಾಣಿಗಳ ಚರ್ಮವನ್ನು ಉಡುಪಾಗಿ ಬಳಸಲಾರಂಭಿಸಿದ. ಕ್ರಮೇಣ ಚರ್ಮ ಆದಿವಾಸಿಗಳ ಪಾದರಕ್ಷೆಗಳಾಗಿಯೂ ಅಲಂಕರಣ ಸಾಮಗ್ರಿಗಳಾಗಿಯೂ ಉಪಯೋಗಕ್ಕೆ ಬರತೊಡಗಿತು. ನೀರನ್ನು ಸಂಗ್ರಹಿಸಿಡಲೂ ಚರ್ಮದ ಚೀಲಗಳನ್ನು ಬಳಸಲಾರಂಭಿಸಿದ. ಅವನ ವಾಸಸ್ಥಾನಗಳಿಗೆ ಚರ್ಮ ಹೊದಿಕೆಯಾಯಿತು. ಪ್ರಪಂಚದ ಪ್ರತಿಯೊಂದು ಜನಾಂಗದ ಸಂಸ್ಕೃತಿಯ ಪ್ರಾರಂಭದಲ್ಲೂ ಚರ್ಮದ ವಿವಿಧ ರೀತಿಯ ಬಳಕೆಯನ್ನು ಕಾಣಬಹುದು. ಸು. 3,000 ವರ್ಷಗಳಷ್ಟು ಹಿಂದೆಯೇ ಈಜಿಪ್ಟಿನಲ್ಲಿ ಚರ್ಮದ ಕೆಲಸಗಾರರು ಕೆಲಸದಲ್ಲಿ ನಿರತರಾಗಿದ್ದ ದೃಶ್ಯವನ್ನು ಕೆತ್ತನೆಗಳಲ್ಲಿ ಇಂದೂ ಕಾಣಬಹುದಾಗಿದೆ. ಬ್ರಿಟಿಷ್ ಮ್ಯೂಸಿಯಮ್‌ನಂಥ ವಸ್ತುಸಂಗ್ರಹಾಲಯಗಳಲ್ಲಂತೂ ಅತ್ಯಂತ ಪುರಾತನ ನಮೂನೆಯ ಪಾದರಕ್ಷೆಗಳೇ ಮೊದಲಾದ ಅಪೂರ್ವ ಚರ್ಮದ ವಸ್ತುಗಳು ಉಂಟು. ಚರ್ಮದ ಕೆಲಸ ಪ್ರಚಲಿತವಾಗಿದ್ದ ಒಂದು ಕಲೆ ಹಾಗೂ ವ್ಯಾಪಾರವಾಗಿತ್ತೆಂಬ ಅಂಶವನ್ನು ಯವನದೇಶದ ಅಭಿಜಾತ ಸಾಹಿತ್ಯ ಹಾಗೂ ಇತಿಹಾಸಗಳಲ್ಲಿ ಕಾಣಬಹುದು. ಕೆಲವು ಜಾತಿಯ ಮರಗಳ ತೊಗಟೆಗಳನ್ನು ಬಳಸಿ ಚರ್ಮ ಹದಮಾಡುವುದರ ತಿಳಿವಳಿಕೆ ಚರಿತ್ರಪೂರ್ವ ಮಾನವನಿಗೂ ಇತ್ತೆಂಬುದಕ್ಕೆ ಆಧಾರಗಳಿವೆ. ಸು. 15ನೆಯ ಶತಮಾನದ ಹೊತ್ತಿಗಾಗಲೇ ಚರ್ಮದ ಕೈಗಾರಿಕೆ ಇನ್ನೂ ಚೆನ್ನಾಗಿ ಅಭಿವೃದ್ಧಿಗೊಂಡಿದ್ದು ಪ್ರಮುಖ ನಗರಗಳಲ್ಲಿ ಇದಕ್ಕಾಗಿಯೇ ಹಲವಾರು ಸಂಘಸಂಸ್ಥೆಗಳು ಜನಿಸಿದ್ದುವು. ಸಸ್ಯಸಂಜಾತ ಟ್ಯಾನಿನನ್ನು ಉಪಯೋಗಿಸಿ ಚರ್ಮ ಹದಮಾಡುವ ವಿಶಿಷ್ಟ ಉಪಕರಣಗಳು 18ನೆಯ ಶತಮಾನದ ಹೊತ್ತಿಗಾಗಲೆ ಬಳಕೆಗೆ ಬಂದಿದ್ದವು. ರಾಸಾಯನಿಕ ದೃಷ್ಟಿಯಿಂದ ಟ್ಯಾನಿಕ್ ಆಮ್ಲದ ಪೂರ್ಣ ಪರಿಚಯ ಅಂದಿನ ವಿಜ್ಞಾನಿಗಳಿಗೆ ಇರಲಿಲ್ಲವಾದರೂ ಓಕ್ ಮರದ ತೊಗಟೆ, ಸೂಮಾಕ್, ವೆಲೋನಿಯಾ, ಹೆಮ್ಲಾಕ್ ಮೊದಲಾದ ಸಸ್ಯಸಂಬಂಧವಾದ ಪದಾರ್ಥಗಳನ್ನು ಚರ್ಮ ಹದಮಾಡಲು ಬಳಸಲಾಗುತ್ತಿತ್ತು. 19ನೆಯ ಶತಮಾನದಿಂದೀಚೆಗೆ ವಿದ್ಯುಚ್ಚಾಲಿತ ಯಂತ್ರೋಪಕರಣಗಳು ಬಳಕೆಗೆ ಬಂದುವು. ಚರ್ಮದ ತಂತ್ರಜ್ಞಾನದ ಬಗೆಗೆ ರಾಸಾಯನ, ಜೀವ ಹಾಗೂ ಚರ್ಮ ಸಂಬಂಧವಾದ ಇತರ ಶಾಸ್ತ್ರಗಳು ದೀರ್ಘ ಮತ್ತು ವ್ಯವಸ್ಥಿತವಾದ ಅಧ್ಯಯನಮಾಡಿ ಸಾಕಷ್ಟು ಜ್ಞಾನ ಹಾಗೂ ಮಾಹಿತಿಗಳನ್ನು ಒದಗಿಸಿವೆ. ಚರ್ಮದ ಕೈಗಾರಿಕೆಯಲ್ಲಿ ಕಳೆದ ಶತಮಾನದಲ್ಲೆಲ್ಲ ಆದ ಅತಿ ಮುಖ್ಯ ಬದಲಾವಣೆಯೆಂದರೆ ಕ್ರೋಮ್ ಲವಣಗಳ ಉಪಯೋಗ. ಇದರಿಂದಾಗಿ ಹೆಚ್ಚು ಅವಧಿ ತೆಗೆದುಕೊಳ್ಳುತ್ತಿದ್ದ ಪ್ರಕ್ರಿಯೆಗಳು ಅಲ್ಪ ಅವಧಿಯಲ್ಲೇ ಮುಗಿಯುವಂತಾಯಿತು. ಕೇವಲ ಕೆಲವೇ ಸಿದ್ಧಹಸ್ತರ ಕಲೆಯಾಗಿದ್ದ ಚರ್ಮದ ತಯಾರಿಕೆ ಭಾರಿ ಕೈಗಾರಿಕೆಯಾಗಿ ಅಭಿವೃದ್ಧಿಗೊಂಡಿತು. ಕಚ್ಚಾವಸ್ತುಗಳು ದೊರಕುವೆಡೆಗಳಲ್ಲೆಲ್ಲ ಚರ್ಮದ ಕೈಗಾರಿಕೆಯನ್ನು ಸ್ಥಾಪಿಸುವಂತಾಯಿತು.

ಚರ್ಮವನ್ನು ಸಿದ್ಧಪಡಿಸಿಕೊಂಡ ಬಳಿಕ ಅದನ್ನು ಹದಮಾಡುವರು. ಮೊದಲಿಗೆ ಚರ್ಮ ಹದಮಾಡಲು ಟ್ಯಾನಿನ್ ಅಥವಾ ಟ್ಯಾನಿಕ್ ಆಮ್ಲ ಎಂಬ ಪದಾರ್ಥವನ್ನು ಒಳಗೊಂಡ ಸಸ್ಯಗಳನ್ನು ಬಳಸುತ್ತಿದ್ದರು. ಆದರೆ ಈಚೆಗೆ ಚರ್ಮದ ತಯಾರಿಕೆಯ ತಾಂತ್ರಿಕ ಜ್ಞಾನ ಹೆಚ್ಚಿದಂತೆ ಅನೇಕ ರಾಸಾಯನಿಕಗಳನ್ನೂ ವೈಜ್ಞಾನಿಕ ಪ್ರಕ್ರಿಯೆಗಳನ್ನೂ ಉಪಯೋಗಿಸಿ ಚರ್ಮ ಹದ ಮಾಡಬಹುದಾಗಿದೆ. ಆದರೂ ಕೆಲವು ದರ್ಜೆಯ ಚರ್ಮಗಳನ್ನು ತಯಾರಿಸಲು ಸಸ್ಯಸಂಬಂಧವಾದ ವಿಧಾನವೇ ಹೆಚ್ಚು ಸೂಕ್ತವಾಗಿದೆ. ಕ್ರೋಮ್ ಸಂಯುಕ್ತಗಳನ್ನು ಉಪಯೋಗಿಸಿ ಹದ ಮಾಡುವ ಪ್ರಕ್ರಿಯೆ ಉತ್ಪಾದನೆಯ ಪರಿಮಾಣದ ದೃಷ್ಟಿಯಿಂದ ಅತ್ಯಂತ ಮಹತ್ತ್ವಪೂರ್ಣವಾದುದು. ಹದ ಮಾಡುವ ಆಧುನಿಕ ವಿಧಾನಗಳಲ್ಲಿ ಫೀನಾಲ್ ಹಾಗೂ ಹೈಡ್ರೊಕಾರ್ಬನ್ನುಗಳನ್ನು ಒಳಗೊಂಡ ಅನೇಕ ಸಂಶ್ಲೇಷಿತ ಪದಾರ್ಥಗಳನ್ನು ಬಳಕೆಗೆ ತರಲಾಗುತ್ತಿದೆ.

ಸಾಮಾನ್ಯವಾಗಿ ನಾಲ್ಕು ಭಿನ್ನಭಿನ್ನ ವಿಧಾನಗಳಿಂದ ಚರ್ಮವನ್ನು ಹದ ಮಾಡಬಹುದು. 1 ಸಸ್ಯಸಂಜಾತ ಪದಾರ್ಥಗಳಿಂದ; 2 ಖನಿಜ ಸಂಜಾತ ಪದಾರ್ಥಗಳಿಂದ (ಕ್ರೋಮ್); 3 ಎಣ್ಣೆಯಿಂದ; 4 ವಿಲೇಯಕದಿಂದ.

ಭಾರತದಲ್ಲಿ ಚರ್ಮೋದ್ಯಮ : ಭಾರತದಲ್ಲಿ ವಿದೇಶಿ ವಿನಿಮಯವನ್ನು ಗಳಿಸುವ ಪ್ರಮುಖ ಕೈಗಾರಿಕೆಗಳಲ್ಲಿ ಚರ್ಮದ ಕೈಗಾರಿಕೆ ಬಹುಶಃ ನಾಲ್ಕನೆಯದು. ಉತ್ತರಪ್ರದೇಶ ಭಾರತದಲ್ಲೆಲ್ಲ ಅತ್ಯಂತ ಹೆಚ್ಚು ಚರ್ಮ ಉತ್ಪಾದನೆ ಮಾಡುವ ರಾಜ್ಯ. ವರ್ಷಕ್ಕೆ ಸು. 33 ಲಕ್ಷಕ್ಕಿಂತಲೂ ಹೆಚ್ಚು ಚರ್ಮದ ಪಟ್ಟಿಗಳು ಇಲ್ಲಿ ಸಿದ್ಧವಾಗುತ್ತವೆ. ಉತ್ತರ ಪ್ರದೇಶವನ್ನು ಬಿಟ್ಟರೆ ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ, ರಾಜಸ್ತಾನ ಹಾಗೂ ತಮಿಳುನಾಡು ಅನುಕ್ರಮವಾಗಿ ಮುಖ್ಯವಾದ ಚರ್ಮ ಉತ್ಪಾದಕ ರಾಜ್ಯಗಳು. ಭಾರತದಲ್ಲಿ ತಯಾರಾಗುವ ಬಹಳಷ್ಟು ಚರ್ಮವನ್ನು ಪಾದರಕ್ಷೆಗಳಿಗಾಗಿ ಬಳಸಲಾಗುತ್ತದೆ. ಇದು ಸಣ್ಣ ಗಾತ್ರದ ಕೈಗಾರಿಕೆಯೇ ಆಗಿದ್ದರೂ ಚೆನ್ನೈ, ಕಾನ್ಪುರ, ಕೋಲ್ಕತ ಹಾಗೂ ಮುಂಬಯಿಗಳಲ್ಲಿ ಚರ್ಮ ಹದ ಮಾಡುವ ಕೆಲವು ಬೃಹತ್ ಕೇಂದ್ರಗಳಿವೆ. ಹದ ಮಾಡುವ ಚಿಕ್ಕಪುಟ್ಟ ಕೇಂದ್ರಗಳೆಲ್ಲವನ್ನೂ ಸೇರಿಸಿದರೆ ಭಾರತದಲ್ಲಿ ಇಂದು ಸು. 730ಕ್ಕೂ ಹೆಚ್ಚು ಇವೆ. ಕ್ರೋಮ್ ಹದ ಮಾಡಿದ ಚರ್ಮ, ಆಮ್ಲ ಸಂಸ್ಕರಿತ ಆಡಿನ ಚರ್ಮ, ಹದ ಮಾಡಿದ ಉರಗವರ್ಗದ ಪ್ರಾಣಿಗಳ ಚರ್ಮ, ಆಡುಗಳ ಕೂದಲು ಹಾಗೂ ಹದಮಾಡಲು ಉಪಯೋಗಿಸಲಾಗುವ ಪದಾರ್ಥಗಳ ರಫ್ತಿನಿಂದ ಅಧಿಕ ವಿದೇಶಿ ವಿನಿಮಯದ ಗಳಿಕೆಯಾಗುತ್ತಿದೆ.

ಭಾರತದಲ್ಲಿ ಪಶುಸಂಪತ್ತು ಸು. 20 ಕೋಟಿ (ಅಮೆರಿಕದ ಮೂರರಷ್ಟು). ಇದರಿಂದ ವರ್ಷಕ್ಕೆ ಎರಡು ಕೋಟಿಗಳಷ್ಟು ಸಿದ್ಧಪಡಿಸಿದ ಚರ್ಮದ ಪಟ್ಟಿಗಳು ತಯಾರಾಗುತ್ತವೆ. ಭಾರತದಲ್ಲಿರುವ ಸು. 7.5 ಕೋಟಿ ಆಡು ಹಾಗೂ 4 ಕೋಟಿ ಕುರಿಗಳಿಂದ 3.5 ಕೋಟಿ ಆಡಿನ ಚರ್ಮಗಳೂ 1.7 ಕೋಟಿ ಕುರಿಯ ಚರ್ಮಗಳೂ ಲಭಿಸುತ್ತವೆ. ಇಲ್ಲಿ ಚರ್ಮ ಹದಮಾಡುವಿಕೆ ಒಂದು ಸಣ್ಣ ಕೈಗಾರಿಕೆ ಮಾತ್ರ. ಚರ್ಮದ ಕೈಗಾರಿಕೆ ಬಗ್ಗೆ ತರಬೇತು ನೀಡಲು ಮುಂಬಯಿ, ಚೆನ್ನೈ ಕೋಲ್ಕತ, ರಾಜಕೋಟೆ ಹಾಗೂ ಜಲಂಧರಗಳಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು ಇವೆ. ಚೆನ್ನೈನಲ್ಲಿ ಸೆಂಟ್ರಲ್ ಲೆದರ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ (1953). ವಿವಿಧ ನಮೂನೆಗಳ ಚರ್ಮ ತಯಾರಿಸುವ ಬಗ್ಗೆ, ಚರ್ಮಕ್ಕೆ ಬೇಕಾಗುವ ಇನ್ನಿತರ ವಸ್ತುಗಳನ್ನು ತಯಾರಿಸುವ ಬಗೆಗೆ ಹಾಗೂ ಸಂಬಂಧಪಟ್ಟ ಯಂತ್ರೋಪಕರಣಗಳ ಬಗೆಗೆ ಈ ಸಂಸ್ಥೆ ಸಂಶೋಧನೆ ನಡೆಸುತ್ತದೆ. ಚರ್ಮದ ತಂತ್ರವಿಜ್ಞಾನಕ್ಕೆ ಸಂಬಂಧಿಸಿದಂತೆ ಕೋಲ್ಕತ ವಿಶ್ವವಿದ್ಯಾಲಯದಲ್ಲಿ ಪದವಿ ಹಾಗೂ ಡಿಪ್ಲೊಮ ಶಿಕ್ಷಣಗಳೂ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣವೂ ಉಂಟು. (ಎಸ್.ಎಲ್.ಎ.)

**ಚಹ :** ತೀಯೇಸೀ (ಟರ್ನ್‌ಸ್ಟ್ರೋಮಿಯೇಸೀ) ಕುಟುಂಬದ ಕೆಮಿಲಿಯ ಸೈನೆನ್ಸಿಸ್ ಜಾತಿಯ ನಿತ್ಯಹರಿದ್ವರ್ಣದ ಪುಟ್ಟ ಸಸ್ಯ. ಇದು ಸುಪ್ರಸಿದ್ಧ ಪಾನೀಯ ಬೆಳೆಯಾಗಿದೆ. ಈ ಸಸ್ಯದಲ್ಲಿ ಸು. 45 ಪ್ರಭೇದಗಳಿವೆ. ಇದರಲ್ಲಿರುವ 'ತೀಯೀನ್' ಎಂಬ ಪದಾರ್ಥ ಚಹಸೇವನೆಗೆ ಆಹ್ಲಾದಕತೆ ಮತ್ತು ಉತ್ತೇಜಕತೆ ನೀಡುತ್ತದೆ. ಪ್ರಪಂಚದ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಜನರು ಚಹವನ್ನು ಪಾನೀಯವಾಗಿ ಸೇವಿಸುತ್ತಿದ್ದಾರೆ. ಹೀಗಾಗಿ ಇದು ಪ್ರಪಂಚದ ಜನಪ್ರಿಯ ಪಾನೀಯವೆನಿಸಿದೆ.

ಚಹ ಗಿಡದ ಮೂಲ ಸ್ಥಾನ ಚೀನವೆಂತಲೂ ಭಾರತದ ಅಸ್ಸಾಂ ಹಾಗೂ ಮಯನ್ಮಾರಿನ ಕಾಡುಗಳಲ್ಲಿ ಬೆಳೆಯುತ್ತಿದ್ದ ಪೊದೆಯಂಥ ಹರಿದ್ವರ್ಣದ ಗಿಡ ಮೂಲವೆಂದೂ ಅಭಿಪ್ರಾಯಗಳಿವೆ. ಈ ಗಿಡ ಸು. 9 ರಿಂದ 12 ಮೀ ಎತ್ತರಕ್ಕೆ ಬೆಳೆಯಬಲ್ಲುದು. ಇದನ್ನು 1.2 ರಿಂದ 1.5 ಮೀ ಎತ್ತರಕ್ಕೆ ಆಗಾಗ್ಗೆ ಕತ್ತರಿಸಲಾಗುವುದು. ಚಹ ಗಿಡವನ್ನು ನೆಟ್ಟ ನಾಲ್ಕು ವರ್ಷಗಳ ಅನಂತರ ಇದರಿಂದ ಚಿಗುರು ಎಲೆ ಬಿಡಿಸಲು ಪ್ರಾರಂಭಿಸಲಾಗುವುದು. ಎಲೆಗಳನ್ನು ಪ್ರತಿ ಒಂದು ಅಥವಾ ಎರಡು ವಾರಗಳಿಗೊಮ್ಮೆ ಬಿಡಿಸಲಾಗುವುದು. ಉತ್ತಮ ಚಹಪುಡಿ ತಯಾರಿಸಲು ತುದಿಯ ಮೊಗ್ಗು ಮತ್ತು ಅದರ ತಳದ ಎರಡು ಚಿಗುರೆಲೆಗಳನ್ನು ಬಿಡಿಸುವರು. ಬಿಡಿಸಿದ ಎಲೆಗಳನ್ನು ವಿಶಿಷ್ಟ ವಿಧಾನದಿಂದ, ಹುರಿದು, ಪುಡಿ ಮಾಡಿ ಅದನ್ನು ಪೊಟ್ಟಣಗಳಲ್ಲಿ ತುಂಬಿ ಮಾರುಕಟ್ಟೆಗೆ ಕಳಿಸಲಾಗುವುದು.

ಸಂಸ್ಕರಣದ ಆಧಾರದ ಮೇಲೆ ಚಹವನ್ನು ಕಪ್ಪು, ಹಸುರು ಮತ್ತು ಊಲಾಂಗ್ ಚಹವೆಂದು ವಿಂಗಡಿಸಬಹುದು.

ಸಂಗ್ರಹಿಸಿದ ಚಹದ ಚಿಗುರೆಲೆಗಳನ್ನು ಬಾಡಿಸಿ, ಹುಳಿಸಿ, ಒಣಗಿಸಿ, ಹುರಿದು ಪುಡಿಮಾಡಿದ್ದು ಕಪ್ಪುಚಹ. ಎಲೆಗಳ ಹಸುರು ತೆಗೆಯುವುದರೊಂದಿಗೆ ಟ್ಯಾನಿನ್ ಅಂಶ ಅರ್ಧದಷ್ಟು ಕಡಿಮೆಯಾಗುತ್ತದೆ. ಇದು ಭಾರತ, ಶ್ರೀಲಂಕ, ಬಾಂಗ್ಲಾದೇಶ ಮತ್ತು ಇಂಡೊನೇಷ್ಯಗಳಲ್ಲಿ ವಿಶೇಷ. ಸಂಗ್ರಹಿಸಿದ ಎಲೆಗಳನ್ನು ಹುಳಿಸದೆ ಹಸಿರು ಬಣ್ಣವನ್ನು ಉಳಿಸಿ ಪುಡಿ ಮಾಡಿದುದೇ ಹಸಿರು ಚಹ. ಇದರಿಂದ ಟ್ಯಾನಿನ್ ಅಂಶ ಪೂರ್ಣ ಉಳಿಯುತ್ತದೆ. ಚೀನ, ಜಪಾನ್ ಮತ್ತು ತೈವಾನ್‌ಗಳಲ್ಲಿ ಇದು ವಿಶೇಷ.

ಸಂಗ್ರಹಿಸಿದ ಚಹದ ಎಲೆಗಳನ್ನು ಭಾಗಶಃ ಹುಳಿಸಿ ತಯಾರಿಸಿದ ಚಹವೇ ಊಲಾಂಗ್ ಚಹ. ತೈವಾನಿನಲ್ಲಿ ಇದು ವಿಶೇಷ. ಬಿಲ್ಲೆ ಚಹ ಮತ್ತು ಪರಗ್ವೆ ಚಹವೆಂತಲೂ ವಿಧಗಳುಂಟು.

ಚಹಾ ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ, ಈ ಬೆಳೆಗೆ ಸರಾಸರಿ $21^0$ಸೆ. ಉಷ್ಣಾಂಶವಿರಬೇಕು. $13^0$ಸೆ. ಗಿಂತ ಕಡಿಮೆ $32^0$ ಸೆ. ಗಿಂತ ಹೆಚ್ಚು ಉಷ್ಣಾಂಶ ಹಾನಿಕರ. ಈ ಬೆಳೆಗೆ ಅಧಿಕ ಪ್ರಮಾಣದ ಮಳೆ ಹಂಚಿಕೆ ಅವಶ್ಯಕ. ಮಳೆಯು ವರ್ಷದ ಎಲ್ಲಾ ಕಾಲದಲ್ಲಿಯೂ ಸಮನಾಗಿ ಹಂಚಿಕೆಯಾಗಬೇಕು. ಮಳೆ ರಹಿತ ದೀರ್ಘಾವಧಿಯ ಬೇಸಗೆಯಲ್ಲಿ ತುಂತುರು ನೀರಾವರಿ ಅವಶ್ಯಕ. ಕೊಳೆತ ಜೈವಿಕಾಂಶವನ್ನುಳ್ಳ ಹಾಗೂ ನೀರು ಸುಲಭವಾಗಿ ಇಂಗಿಹೋಗಬಲ್ಲ ಅರಣ್ಯದ ಮಣ್ಣು ಚಹದ ಬೇಸಾಯಕ್ಕೆ ಅತ್ಯಂತ ಸೂಕ್ತ. ಸಸ್ಯಾಂಶ ಹಾಗೂ ಕಬ್ಬಿಣಾಂಶವುಳ್ಳ ಜಂಬಿಟ್ಟಿಗೆ ಮಣ್ಣು ಮತ್ತು ಜೇಡಿಮಣ್ಣು ಚಹದ ಬೇಸಾಯಕ್ಕೆ ಉತ್ಕೃಷ್ಟವಾದುದು.

ಸಮುದ್ರಮಟ್ಟದಿಂದ 1200–2400 ಮೀ ಎತ್ತರವುಳ್ಳ ಬೆಟ್ಟಗಳ ಇಳಿಜಾರು ಚಹದ ಬೇಸಾಯಕ್ಕೆ ಅಗತ್ಯ. ಸೂರ್ಯನ ಕಿರಣ ಮತ್ತು ಬಿರುಗಾಳಿಗಳಿಂದ ರಕ್ಷಣೆಗೆ ಇತರ ಮರಗಳನ್ನು ಬೆಳೆಸಬೇಕು. ಹೆಚ್ಚು ನುರಿತ ಕಾರ್ಮಿಕರು ಬೇಕು.

ಚಹಾ ಉತ್ಪಾದನೆಯಲ್ಲಿ ಆಗ್ನೇಯ ಏಷ್ಯವು ಏಕಸ್ವಾಮ್ಯವನ್ನು ಹೊಂದಿದ್ದು, ಅದು ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಶೇ. 90 ರಷ್ಟನ್ನು ಪೂರೈಸುತ್ತದೆ. ಭಾರತ, ಚೀನ, ಶ್ರೀಲಂಕ, ಜಪಾನ್, ಇಂಡೊನೇಷ್ಯ, ಬಾಂಗ್ಲಾದೇಶ ಮತ್ತು ಮಲೇಷ್ಯ ಪ್ರಪಂಚದ ಪ್ರಮುಖ ಚಹ ಉತ್ಪಾದಿಸುವ ದೇಶಗಳು ಹಾಗೂ ಟಾಂಜೇನಿಯ, ಟರ್ಕಿ, ಕೀನ್ಯ, ಉಗಾಂಡ, ಮೊಜಾಂಬಿಕ್ ಮತ್ತು ಅರ್ಜೆಂಟೈನಗಳು ಇತರ ಚಹ ಬೆಳೆಯುವ ರಾಷ್ಟ್ರಗಳು. ಇವುಗಳಲ್ಲಿ ಭಾರತ ಮತ್ತು ಚೀನಗಳು ಅನುಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳಿಸಿವೆ. ಇವು ಹೆಚ್ಚು ಚಹ ಬೆಳೆಸುವ ದೇಶಗಳೂ ಹೌದು. ಕಾಫಿಯಂತೆ ಚಹವೂ ವಿದೇಶೀ ಮಾರುಕಟ್ಟೆಯ ಪ್ರಮುಖ ಸರಕು. ಆಗ್ನೇಯ ಏಷ್ಯ ದೇಶಗಳು ಪ್ರಮುಖ ಚಹದ ರಫ್ತು ಮಾಡುವುವು. ಯುರೋಪ್ ದೇಶಗಳು ಹೆಚ್ಚು ಆಮದು ಮಾಡಿಕೊಳ್ಳುವುವು. ಉತ್ಪಾದನೆಯಲ್ಲಿ ಶ್ರೀಲಂಕ 3ನೆಯ ಸ್ಥಾನದಲ್ಲಿದ್ದರೂ ರಫ್ತಿನಲ್ಲಿ ಮೊದಲ ಸ್ಥಾನದಲ್ಲಿದೆ. (ಪಿ.ಟಿ.ಬಿ.)

**ಚಳ್ಳಕೆರೆ:** ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು; ಅದರ ಮುಖ್ಯಸ್ಥಳ. ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದೆ. ಈ ತಾಲ್ಲೂಕಿನ ಪೂರ್ವದಲ್ಲಿ ಆಂಧ್ರ ಪ್ರದೇಶ ಮತ್ತು ಪಾವಗಡ ತಾಲ್ಲೂಕು, ದಕ್ಷಿಣದಲ್ಲಿ ಹಿರಿಯೂರು ತಾಲ್ಲೂಕು, ಪಶ್ಚಿಮದಲ್ಲಿ ಜಗಳೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳು ಉತ್ತರದಲ್ಲಿ ಬಳ್ಳಾರಿ ಜಿಲ್ಲೆ ಮತ್ತು ಮೊಳಕಾಲ್ಮೂರು ತಾಲ್ಲೂಕು ಇವೆ. ತಾಲ್ಲೂಕಿನ ವಿಸ್ತೀರ್ಣ 2,067.4 ಚ.ಕಿಮೀ. ತಾಲ್ಲೂಕಿನ ಜನಸಂಖ್ಯೆ 3,24,822. ನಗರದ ಜನಸಂಖ್ಯೆ 49,865.

1882 ರವರೆಗೆ ಇದಕ್ಕೆ ದೊಡ್ಡೇರಿ ತಾಲ್ಲೂಕು ಎಂಬ ಹೆಸರಿತ್ತು. 1825 ರಿಂದ 66ರವರೆಗೆ ಮೊಳಕಾಲ್ಮೂರು ತಾಲ್ಲೂಕಿನ ಪ್ರದೇಶ ಇದಕ್ಕೆ ಸೇರಿತ್ತು. ಈ ತಾಲ್ಲೂಕಿನಲ್ಲಿ ಚಳ್ಳಕೆರೆ, ನಾಯಕನಹಟ್ಟಿ, ಪರಶುರಾಮಪುರ ಮತ್ತು ತಳಕು ಎಂಬ ನಾಲ್ಕು ಹೋಬಳಿಗಳಿವೆ.

ಎತ್ತರವಾದ ಹಾಗೂ ಪ್ರಮುಖವಾದ ಯಾವ ಬೆಟ್ಟಗಳ ಸಾಲೂ ಈ ತಾಲ್ಲೂಕಿನಲ್ಲಿಲ್ಲ. ಚದರಿದಂತೆ ಕೆಲವು ಶಿಲಾಮಯ ಗುಡ್ಡಗಳಿವೆ. ತಾಲ್ಲೂಕಿನ ಉಳಿದ ಭಾಗ ಮೈದಾನ. ಸಣ್ಣ ತೊರೆಗಳ ದಡಗಳಲ್ಲಿ, ಕೆರೆಯಂಗಳ ಮತ್ತಿತರ ತಗ್ಗು ಪ್ರದೇಶಗಳಲ್ಲಿ ಖರ್ಜೂರ ಬೆಳೆಯುತ್ತಾರೆ.

ವೇದಾವತಿ ನದಿ ಅತ್ಯಂತ ದಕ್ಷಿಣದ ಅಂಚಿನಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ, ದಕ್ಷಿಣೋತ್ತರವಾಗಿ ಹರಿದು, ಈಶಾನ್ಯ ದಿಕ್ಕಿಗೆ ತಿರುಗಿ ಘಟಪರ್ತಿ ಎಂಬಲ್ಲಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದರ ಉಪನದಿಗಳು ಗರಣಿ ಮತ್ತು ನಾಯಕನ ಹಳ್ಳ. ಈ ನದಿಯ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ. ತಾಲ್ಲೂಕಿನ ಇನ್ನೊಂದು ನದಿ ಹಗರಿ, ಇದು ವಾಯವ್ಯ ಭಾಗದಲ್ಲಿ ಹರಿಯುತ್ತದೆ.

ಚಿತ್ರದುರ್ಗ ಜಿಲ್ಲೆಯ ಅತ್ಯಂತ ಕಡಿಮೆ ಮಳೆಯ ತಾಲ್ಲೂಕು ಚಳ್ಳಕೆರೆ. ಸರಾಸರಿ ವಾರ್ಷಿಕ ಮಳೆ 45 ಸೆಂಮೀ. ಮೇ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಹೆಚ್ಚಿನ ಮಳೆ.

ನೀರಾವರಿಗೆ ಒಳಪಟ್ಟಿರುವ ಭೂಮಿ ವಿನಾ ಉಳಿದ ನೆಲ ಅಷ್ಟೇನೂ ಫಲವತ್ತಾಗಿಲ್ಲ. ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಸ್ವಲ್ಪಮಟ್ಟಿಗೆ ಉತ್ತಮವಾದ ಕಪ್ಪುಮಣ್ಣಿನ ಪ್ರದೇಶವಿದೆ. ಅನೇಕ ಕಡೆಗಳಲ್ಲಿಯ ಮಣ್ಣು ಲವಣಯುಕ್ತವಾದದ್ದು.

ಬೆಂಗಳೂರು–ಬಳ್ಳಾರಿ ಹೆದ್ದಾರಿಮಾರ್ಗ ಈ ತಾಲ್ಲೂಕಿನಲ್ಲಿ ಉತ್ತರ–ದಕ್ಷಿಣವಾಗಿ ಹಾಯ್ದು ಹೋಗುತ್ತದೆ. ಚಿತ್ರದುರ್ಗದಿಂದ ಬರುವ ರಸ್ತೆಯೊಂದು ಇದನ್ನು ಚಳ್ಳಕೆರೆಯಲ್ಲಿ ಸಂಧಿಸುತ್ತದೆ. ಚಳ್ಳಕೆರೆಯಿಂದ ಪಾವಗಡ ಮತ್ತು ಜಗಳೂರುಗಳಿಗೆ ರಸ್ತೆಗಳುಂಟು. ಈ ತಾಲ್ಲೂಕಿನಲ್ಲಿ ರೈಲುಮಾರ್ಗವಿಲ್ಲ. ಬಹಳ ಹತ್ತಿರದ ರೈಲುನಿಲ್ದಾಣವೆಂದರೆ ಚಿತ್ರದುರ್ಗ.

ಚಳ್ಳಕೆರೆ ಪಟ್ಟಣ ಬೆಂಗಳೂರು–ಬಳ್ಳಾರಿ ರಸ್ತೆಯಲ್ಲಿ ಚಿತ್ರದುರ್ಗದಿಂದ ಈಶಾನ್ಯ ಮೂಲೆಗೆ 28 ಕಿಮೀ ದೂರದಲ್ಲಿ ಉ.ಅ. $14^{0}18'$ ಮತ್ತು ಪೂ.ರೇ. $78^{0}43'$ ಮೇಲೆ ಇದೆ. ಇಲ್ಲೊಂದು ಪುರಸಭೆಯಿದೆ. ಜಿಲ್ಲೆಯ ಎಲ್ಲ ಕಡೆಗಳಿಂದಲೂ, ನೆಲಗಡಲೆ, ಹತ್ತಿ, ಬತ್ತ ಇವು ಇಲ್ಲಿ ವ್ಯಾಪಾರವಾಗುವ ಸರಕುಗಳು. ಚಳ್ಳಕೆರೆ ಪಟ್ಟಣದಲ್ಲಿ ನಿಯಂತ್ರಿತ ಮಾರುಕಟ್ಟೆಯೂ ಉಂಟು. ಇಲ್ಲಿಯ ಮುನಿಸಿಪಲ್ ಪ್ರೌಢಶಾಲೆ ಇಡೀ ಜಿಲ್ಲೆಯಲ್ಲೇ ಹಳೆಯದು. ಚಳ್ಳಕೆರೆ ಪಟ್ಟಣದಲ್ಲೂ ತಾಲ್ಲೂಕಿನ ಅನೇಕ ಕಡೆಗಳಲ್ಲೂ ಹತ್ತಿ ಕೈ ಮಗ್ಗಗಳುಂಟು. *

**ಚಾಂದ್ರಮಾನ:** ಚಂದ್ರನ ಗತಿಯನ್ನನುಸರಿಸಿ ಇರುವ ಒಂದು ವಿಧದ ಕಾಲಗಣನೆ; ಚಾಂದ್ರ, ಸೌರ, ನಾಕ್ಷತ್ರ, ಸಾವನ, ಬಾರ್ಹಸ್ಪತ್ಯವೆಂಬ ಐದು ವಿದ್ಯಮಾನಗಳಲ್ಲಿ ಒಂದು. ತಮ್ಮ ತಮ್ಮ ಕಕ್ಷೆಗಳಲ್ಲಿ ಸಂಚರಿಸುತ್ತಿರುವ ಸೂರ್ಯಚಂದ್ರರು ನಮಗೆ ಒಂದೇ ರೇಖೆಯಲ್ಲಿರುವಂತೆ ಕಾಣುವ ದಿನ ಅಮಾವಾಸ್ಯೆ. ಇದು ಸಾಮಾನ್ಯವಾಗಿ ಮೂವತ್ತು ದಿವಸಗಳಿಗೊಮ್ಮೆ ಸಂಭವಿಸುತ್ತದೆ. ಎರಡು ಅಮಾವಾಸ್ಯೆಗಳ ಮಧ್ಯವರ್ತಿಕಾಲಕ್ಕೆ ಒಂದು ಚಾಂದ್ರಮಾನ ಮಾಸವೆಂದು ಹೆಸರು. ಚಾಂದ್ರಮಾನವರ್ಷ ಚೈತ್ರ ಶುಕ್ಲ ಪ್ರಥಮೆಯ ದಿವಸ ಪ್ರಾರಂಭವಾಗುತ್ತದೆ. ಅಲ್ಲಿಂದ ಹನ್ನೆರಡು ಚಾಂದ್ರಮಾನ ಮಾಸಗಳು ಕ್ರಮವಾಗಿ ಬಂದು ಮತ್ತೆ ಚೈತ್ರಮಾಸ ಬರುತ್ತದೆ. ಈ ಹನ್ನೆರಡು ತಿಂಗಳುಗಳ ಕಾಲಕ್ಕೆ ಒಂದು ಚಾಂದ್ರಮಾನವರ್ಷವೆಂದು ಹೆಸರು. ಈ ವರ್ಷಗಳನ್ನು ಪ್ರಭವ, ವಿಭವ ಮೊದಲಾದ ಅರುವತ್ತು ಹೆಸರುಗಳಿಂದ ಕರೆಯುತ್ತಾರೆ. ಮೂರು ವರ್ಷಗಳಿಗೊಮ್ಮೆ ಚಾಂದ್ರಮಾನ ವರ್ಷದಲ್ಲಿ ಹದಿಮೂರು ತಿಂಗಳುಗಳಿರುತ್ತವೆ. ಅಧಿಕವಾದ ಒಂದು ತಿಂಗಳನ್ನು ಅಧಿಕ ಮಾಸವೆಂದು ಕರೆಯುತ್ತಾರೆ. ಪ್ರತಿಯೊಂದು ಚಾಂದ್ರಮಾನ ತಿಂಗಳಿನಲ್ಲೂ ಸೂರ್ಯನ ರಾಶ್ಯಂತರ ಸಂಕ್ರಮಣವಿರಬೇಕು. ಯಾವ ಚಾಂದ್ರಮಾನ ತಿಂಗಳಿನಲ್ಲಿ ಸೂರ್ಯ ಸಂಕ್ರಮಣವಿರುವುದಿಲ್ಲವೋ ಆ ಮಾಸ ಅಧಿಕವಾಗುತ್ತದೆ. ಹೀಗೆಯೇ ಒಂದು ಚಾಂದ್ರಮಾನ ಮಾಸದಲ್ಲಿ ಎರಡು ಸೂರ್ಯ ಸಂಕ್ರಮಣಗಳು ಬಂದಲ್ಲಿ ಆಗ ಆ ಚಾಂದ್ರಮಾನ ಮಾಸವನ್ನು ಕ್ಷಯಮಾಸವೆಂದು ಕರೆಯುತ್ತಾರೆ. ಈ ಅಧಿಕ ಮತ್ತು ಕ್ಷಯ ಮಾಸಗಳು ಚಾಂದ್ರಮಾನ ಮಾಸಗಣನೆಯಲ್ಲಿ ಮಾತ್ರ ಸಂಭವಿಸುತ್ತವೆ. *

**ಚಾಡ್ :** ಉತ್ತರ ಮಧ್ಯ ಆಫ್ರಿಕದ ಒಂದು ಸ್ವತಂತ್ರ ರಾಷ್ಟ್ರ. ಫ್ರೆಂಚ್ ಸಮುದಾಯಕ್ಕೆ ಸೇರಿದೆ. ಉ.ಅ. $8^{0}–24^{0}$ ಮತ್ತು ಪೂ.ರೇ. $14^{0}–24^{0}$ ನಡುವೆ ಇದೆ. ಚಾಡ್‌ನ ಪೂರ್ವದಲ್ಲಿ ಸೂಡಾನ್, ದಕ್ಷಿಣದಲ್ಲಿ ಮಧ್ಯ ಆಫ್ರಿಕ ಗಣರಾಜ್ಯ, ಪಶ್ಚಿಮದಲ್ಲಿ ಕ್ಯಾಮರೂನ್ ಗಣರಾಜ್ಯ, ನೈಜೀರಿಯ ಮತ್ತು ನೈಜರ್, ಉತ್ತರದಲ್ಲಿ ಲಿಬಿಯ ಇವೆ. ವಿಸ್ತೀರ್ಣ 12,84,000 ಚ.ಕಿಮೀ. ಜನಸಂಖ್ಯೆ 89,97,000 (2002). ರಾಜಧಾನಿ ಎನ್. ಡ್ಜಮೀನ. ಜನಸಂಖ್ಯೆ 529555 (2004).

ಮೇಲ್ಮೈ ಲಕ್ಷಣಗಳು : ಚಾಡ್ ಸರೋವರದ ಉತ್ತರಕ್ಕೆ ಸಹರ ಪ್ರರೂಪಿ ಮರುಭೂಮಿ ಇದೆ. ಈ ಮರುಭೂಮಿಯ ಉತ್ತರ ಮತ್ತು ಪೂರ್ವದಲ್ಲಿ ಟಿಬೆಸ್ಟಿ ಮತ್ತು ಎನ್ನೆಡಿ ಪರ್ವತ ಸ್ತೋಮಗಳಿವೆ. ಇವು ಮರಳುಗಲ್ಲು ಹಾಗೂ ಬೆಣಚುಕಲ್ಲುಗಳಿಂದ ಕೂಡಿವೆ. ಎತ್ತರ 1219–1432 ಮೀ ದಕ್ಷಿಣದಲ್ಲಿ ಮರಳಿನಿಂದ ತುಂಬಿದ ಪ್ರಸ್ಥಭೂಮಿ ಹಾಗೂ ಇಳಿಜಾರು ಪ್ರದೇಶಗಳಿವೆ. ಅನೇಕ ಸ್ಫಟಿಕಾಕೃತಿಯ ಪದರಗಳಿರುವ ಬಂಡೆಗಳಿವೆ. ಎತ್ತರ ಪರ್ವತ ಪಂಕ್ತಿಗಳಲ್ಲಿ ಹರಿಯುವ ಪ್ರಮುಖ ನದಿಗಳೆಂದರೆ ಶಾರಿ ಮತ್ತು ಲೋಗೋನ್. ಜುಲೈ ತಿಂಗಳಿನಿಂದ ನವೆಂಬರ್ ಮಧ್ಯಭಾಗದವರೆಗೆ ಇವು ತುಂಬಿ ಹರಿಯುತ್ತವೆ.

ವಾಯುಗುಣ : ಚಾಡ್ ಸರೋವರದ ಉತ್ತರದಲ್ಲಿ ಸಹರ ಪ್ರರೂಪಿ ವಾಯುಗುಣವಿದೆ. ಬೇಸಗೆಯಲ್ಲಿ ಉಷ್ಣತೆ ಬದಲಾಗುತ್ತಿರುತ್ತದೆ. ವಾರ್ಷಿಕ ಮಳೆ ತೀರ ಕಡಿಮೆ; ಎನ್ನೆಡಿ ಪ್ರಸ್ಥಭೂಮಿಯಲ್ಲಿ 5 ಸೆಂಮೀ ಗಿಂತಲೂ ಕಡಿಮೆ. ದಕ್ಷಿಣಕ್ಕೆ ಹೋದಂತೆ ಮಳೆ ಹೆಚ್ಚು, ಉಷ್ಣತೆ ಕಡಿಮೆ. ಇಲ್ಲಿ ಸೂಡಾನ್ ಪ್ರರೂಪಿ ವಾಯುಗುಣವಿದೆ. ಅತಿ ಮಳೆಯಾಗುವ ಮತ್ತು ಅತ್ಯಂತ ಕಡಿಮೆ ಮಳೆಯ ಪ್ರದೇಶಗಳ ನಡುವಿನದು ಸಾಹೀಲಿಯನ್ ಪ್ರರೂಪಿ ಅರೆಮರುಭೂಮಿ ವಾಯುಗುಣ.

ಸಸ್ಯ ಪ್ರಾಣಿ ವರ್ಗ: ಮರುಭೂಮಿ ಪ್ರದೇಶದಲ್ಲಿ ಕಣಿವೆಗಳಲ್ಲಿ ಪೊದೆಗಳು ಬೆಳೆಯುತ್ತವೆ. ಸಾಹೀಲಿಯನ್ ಪ್ರದೇಶದಲ್ಲಿ ಖರ್ಜೂರ ಮತ್ತು ಇತರ ಮರಗಳಿವೆ. ದಕ್ಷಿಣದ ಸೂಡಾನ್ ಪ್ರರೂಪಿ ವಾಯುಗುಣ ಪ್ರದೇಶದಲ್ಲಿ ವಿಶಾಲವಾದ ಹುಲ್ಲುಗಾವಲುಗಳು ಹಬ್ಬಿವೆ. ಹುಲ್ಲುಗಾವಲಿನ ಪ್ರಾಣಿಗಳು ಆನೆ, ಸಿಂಹ, ಚಿರತೆ ಮತ್ತು ಕಾಡೆಮ್ಮೆ. ಆಮ್ ಟಿಮನ್ ಬಳಿಯಲ್ಲಿರುವ ಜಕೌಮ ಆಫ್ರಿಕದ ಮುಖ್ಯ ಅಭಯಾರಣ್ಯ.




ಜನಜೀವನ : ಜನರ ಹಂಚಿಕೆ ಸಮವಾಗಿಲ್ಲ ಹೆಚ್ಚಿನ ಜನ ಅಲೆಮಾರಿಗಳು, ಕುರುಬರು, ಟಿಬೆಸ್ಟಿಯಲ್ಲಿರುವ ಟೇಡ ಮತ್ತು ಎನ್ನೆಡಿಯಲ್ಲಿರುವ ಡಾಜ ಮುಖ್ಯ ಬುಡಕಟ್ಟುಗಳು. ದಕ್ಷಿಣದಲ್ಲಿ ಸಾಹೆಲ್‌ವರೆಗೂ ಅರಬರು ವಿಸ್ತರಿಸಿದ್ದಾರೆ. ಅವರು ಒಂಟೆ ಮತ್ತು ಜಾನುವಾರುಗಳನ್ನು ಸಾಕುತ್ತಾರೆ. ದಕ್ಷಿಣ ಭಾಗದಲ್ಲಿ ಮೀನು ಹಿಡಿಯುವುದೂ ಒಂದು ಪ್ರಮುಖ ವೃತ್ತಿ. ಬತ್ತ, ರಾಗಿ, ಹತ್ತಿ, ನೆಲಗಡಲೆ ಮತ್ತು ಜೋಳವನ್ನು ಬೆಳೆಯುತ್ತಾರೆ. ಮುಖ್ಯ ಭಾಷೆ ಫ್ರೆಂಚ್. ಸ್ಥಳೀಯ ಭಾಷೆಗಳೂ ಬಳಕೆಯಲ್ಲಿವೆ. ಮೀನು ಮುಖ್ಯ ಆಹಾರ. ಮುಸ್ಲಿಮರೂ ಕ್ರೈಸ್ತರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಬಹುತೇಕ ಜನ ಬಡವರು.

ಸಮುದ್ರದಿಂದ ದೂರ ಇರುವ ಚಾಡ್‌ನ ಮುಖ್ಯ ಸಮಸ್ಯೆಯೆಂದರೆ ಸಾರಿಗೆ ಸಂಪರ್ಕ ತೊಂದರೆ. ಕೆಲವು ನದಿಗಳ ಮೇಲೆ ಮಳೆಗಾಲದಲ್ಲಿ ಸಂಚಾರ ಸಾಧ್ಯ. ಹಲವು ತೊರೆಗಳು ಮಳೆಗಾಲದಲ್ಲಿ ವಿಸ್ತರಿಸಿ ಸಂಚಾರಕ್ಕೆ ಅಡಚಣೆ ಒಡ್ಡುತ್ತವೆ. ಚಾಡ್‌ನಲ್ಲಿ ರೈಲು ಮಾರ್ಗಗಳಿಲ್ಲ. ಫಾರ್‌ಲ್ಯಾಮಿಯಿಂದ ಹೊರದೇಶಗಳಿಗೆ ವಿಮಾನ ಸಂಪರ್ಕವಿದೆ.

ಫಾರ್‌ಲ್ಯಾಮಿ ಅಲ್ಲದೆ ಇತರ ಮುಖ್ಯ ನಗರಗಳು ಸಾರ್, ಮೌಂಡೌ, ಅಬೆಚೆ ಮತ್ತು ಕೌಮ್ರ. (ಎಚ್.ಜಿ.ಎ.)

**ಚಾತುರ್ಯಯುಕ್ತ ನಿರ್ಣಯಿಸುವಿಕೆ:** ಆರ್ಥಿಕಾಭಿವೃದ್ಧಿ ಪ್ರಕ್ರಿಯೆಯಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ಮಹತ್ವಪೂರ್ಣ ನಿರ್ಣಯಗಳು. ಯಾವುದೇ ರಾಷ್ಟ್ರ ಪರಿಣಾಮಕಾರಿಯಾದ ಹಾಗೂ ಅಡಚಣೆರಹಿತ ಆರ್ಥಿಕಾಭಿವೃದ್ಧಿಗೆ ನಾಂದಿಯಾಗಬಲ್ಲ ಮತ್ತು ಸುಗಮ ಜನಜೀವನದ ವಿಕಾಸಕ್ಕೆ ಅನುಕೂಲಕಾರಿಯಾಗಬಲ್ಲ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಇಂತಹ ನಿರ್ಣಯಗಳು ಯುದ್ಧ ತಂತ್ರದ ರೂಪದಲ್ಲಿರಬೇಕಾಗುತ್ತದೆ ಹಾಗೂ ಅವು ದೀರ್ಘಾವಧಿಯ ಪರಿಣಾಮಗಳನ್ನು ಒಳಗೊಂಡಿರುತ್ತವೆ. ಅಲ್ಲದೆ ವ್ಯಾಪಕ ಪರಿಣಾಮಗಳನ್ನು ಬೀರಬಲ್ಲ ಇಂತಹ ನಿರ್ಣಯಗಳನ್ನು ಬಹಳ ಚಾಕಚಕ್ಯತೆಯಿಂದ ಮತ್ತು ಸಕಾಲದಲ್ಲಿ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ.

ಆರ್ಥಿಕಾಭಿವೃದ್ಧಿ ಪ್ರಕ್ರಿಯೆಯಲ್ಲಿ ಅನೇಕ ಸಂದರ್ಭಗಳಲ್ಲಿ ಇಂತಹ ನಿರ್ಣಯಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆ ಉದ್ಭವಿಸುತ್ತದೆ. ಉದಾಹರಣೆಗೆ, ಆರ್ಥಿಕಾಭಿವೃದ್ಧಿಗೆ ಭದ್ರವಾದ ಬುನಾದಿಯನ್ನು ನಿರ್ಮಿಸಬಲ್ಲ ಕಾಮಗಾರಿಗಳ ಮತ್ತು ರಕ್ಷಣೆಯ ನಡುವೆ ಆಯ್ಕೆ ಮಾಡಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ರಾಷ್ಟ್ರ ರಕ್ಷಣೆಗಾಗಿ ಮಾಡುವ ವೆಚ್ಚವು ಅನುತ್ಪಾದಕವಾದ ಲಕ್ಷಣವನ್ನು ಹೊಂದಿದ್ದರೂ ಸಹ ಅದನ್ನು ಅವಶ್ಯಕವಾಗಿ ಭರಿಸಲೇಬೇಕಾಗಿರುತ್ತದೆ. ಆದರೆ ರಕ್ಷಣೆಗೆ ವಿಪರೀತ ಪ್ರಾಶಸ್ತ್ಯ ನೀಡಿದರೆ ಆರ್ಥಿಕಾಭಿವೃದ್ಧಿ ಪ್ರಕ್ರಿಯೆಗೆ ಹಿನ್ನಡೆಯಾಗಬಹುದು. ಆದ್ದರಿಂದ ಅಭಿವೃದ್ಧಿ ಮತ್ತು ರಕ್ಷಣೆ ಎರಡಕ್ಕೂ ಮಾನ್ಯತೆ ನೀಡುವ ರೀತಿಯಲ್ಲಿ ನಿರ್ಣಯವನ್ನು ಮತ್ತು ವೆಚ್ಚವನ್ನು ಕೈಗೊಳ್ಳಬೇಕಾಗುತ್ತದೆ. ನೇರ ಉತ್ಪನ್ನದಾಯಕ ಚಟುವಟಿಕೆಗಳು ಜನರ ಅಸ್ತಿತ್ವಕ್ಕೆ, ಜೀವನೋಪಾಯಕ್ಕೆ ಮತ್ತು ಆರ್ಥಿಕ ಪ್ರಗತಿ ಸಾಧನೆಗೆ ಅತ್ಯಾವಶ್ಯಕವಾಗಿರುತ್ತವೆ. ಅಂತೆಯೇ ಸಾಮಾಜಿಕ ಮೌಲ್ಯೋತ್ಪಾದಕ ಚಟುವಟಿಕೆಗಳು ಅಗಾಧ ಸಂಖ್ಯೆಯ ಉದ್ಯೋಗ ಸೃಷ್ಟಿಗೆ ಹಾಗೂ ನೇರ ಉತ್ಪನ್ನದಾಯಕ ಚಟುವಟಿಕೆಗಳಿಗೆ ಅಗತ್ಯ ಸೇವೆಗಳನ್ನು ಒದಗಿಸಲು ಅತ್ಯಾವಶ್ಯಕವಾಗಿವೆ. ಯಾವ ಪ್ರಮಾಣದಲ್ಲಿ ಈ ಎರಡೂ ರೀತಿಗಳ ಚಟುವಟಿಕೆಗಳಿಗೆ ಪ್ರಾಮುಖ್ಯ ನೀಡಬೇಕು ಮತ್ತು ಅವುಗಳಲ್ಲಿ ಹೂಡಿಕೆಯನ್ನು ಕೈಗೊಳ್ಳಬೇಕು ಎಂಬುವುಗಳ ಬಗ್ಗೆ ಚಾತುರ್ಯಯುಕ್ತವಾಗಿ ನಿರ್ಣಯವನ್ನು ಅನುಸರಿಸಬೇಕಾದ ಅವಶ್ಯಕತೆ ಇರುತ್ತದೆ.

ಆರ್ಥಿಕ ಯೋಜನೆಯ ಈ ಯುಗದಲ್ಲಿಯಂತೂ ಚಾತುರ್ಯಯುಕ್ತ ನಿರ್ಣಯಿಸುವಿಕೆಗೆ ಅಪಾರವಾದ ಮಹತ್ತ್ವವಿದೆ. ಸಂಪನ್ಮೂಲಗಳ ಕ್ರೋಡೀಕರಣ, ಗುರಿಗಳ ನಿರ್ಧಾರ, ಆದ್ಯತೆಗಳನ್ನು ನಿಗದಿಪಡಿಸುವಿಕೆ, ಸಾಧನೆಗಳ ಮೌಲ್ಯಮಾಪನ ಮೊದಲಾದವುಗಳಿಗೆ ಸಂಬಂಧಿಸಿದಂತೆ ಚಾತುರ್ಯಯುಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಆಗ ಮಾತ್ರ ಆರ್ಥಿಕ ಯೋಜನೆಯು ಸಫಲವಾಗಲು ª ÃÁC©üÉ¥ÀªÁÉZÀgÀªÀÁÉÀ¸ÁzÀgÀªÀÉ (ಎಚ್.ಆರ್.ಕೆ.)

**ಚಾಮರಾಜನಗರ:** ಕರ್ನಾಟಕ ರಾಜ್ಯದ ದಕ್ಷಿಣದ ತುತ್ತತುದಿಯಲ್ಲಿರುವ ಈ ಜಿಲ್ಲೆಯು 1997 ರಲ್ಲಿ ಹೊಸದಾಗಿ ರಾಜ್ಯದಲ್ಲಿ ಸ್ಥಾಪಿತವಾದ ಏಳು ಜಿಲ್ಲೆಗಳಲ್ಲಿ ಒಂದಾಗಿದೆ. ಇದು $10^{0}30'$ – $12^{0}15'$ ಉ. ಅಕ್ಷಾಂಶದಲ್ಲೂ, $76^{0}20'$–$79^{0}$ ಪೂ.ರೇ. ಹರಡಿದೆ. ಉತ್ತರಕ್ಕೆ ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳು ಮತ್ತು ದಕ್ಷಿಣಕ್ಕೆ ತಮಿಳುನಾಡು ರಾಜ್ಯವಿದೆ. ವಿಸ್ತೀರ್ಣ 5.69 ಲಕ್ಷ. ಹೆ. ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳಿವೆ. 1. ಚಾಮರಾಜನಗರ 2. ಗುಂಡ್ಲುಪೇಟೆ 3. ಕೊಳ್ಳೇಗಾಲ 4. ಯಳಂದೂರು. ಐದು ನಗರಗಳು ಹಾಗೂ 514 ಹಳ್ಳಿಗಳಿವೆ.




ಭೂಸ್ವರೂಪ: ಜಿಲ್ಲೆಯ ಬಹುಭಾಗ ಗ್ರಾನೈಟ್ ಶಿಲೆಗಳಿಂದ ಕೂಡಿದೆ. ಜಿಲ್ಲೆಯು ದಖನ್ ಪ್ರಸ್ಥಭೂಮಿಯ ಒಂದು ಭಾಗವಾಗಿದ್ದು ಇಲ್ಲಿ ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಸಂಧಿಸುತ್ತವೆ. ಸರಾಸರಿ ಎತ್ತರ 800 ಮೀ. ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟಶ್ರೇಣಿ (1687 ಮೀ) ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಬೆಟ್ಟ ಮುಖ್ಯ ಬೆಟ್ಟ ಶ್ರೇಣಿಗಳಾಗಿವೆ. ಮೊದಲ ಶ್ರೇಣಿ ದಕ್ಷಿಣೋತ್ತರವಾಗಿ 16 ಕಿಮೀ ಉದ್ದವಾಗಿದೆ. ಬಿಳಿಗಿರಿರಂಗಸ್ವಾಮಿ ದೇವಸ್ಥಾನವಿರುವ ಭಾಗ (1279 ಮೀ) ಇದರ ಅತ್ಯುನ್ನತ ಭಾಗ. ಮಹದೇಶ್ವರ ಬೆಟ್ಟ ಶ್ರೇಣಿ (976 ಮೀ) ಎಪ್ಪತ್ತೇಳು ಬೆಟ್ಟಗಳನ್ನು ಹೊಂದಿದೆ. ಅವುಗಳಲ್ಲಿ ಆನೆಮಲೆ, ಕಾಡುಮಲೆ, ಜೇನುಮಲೆ ಮುಂತಾದ ಬೆಟ್ಟಗಳಿವೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಗೋಪಾಲಸ್ವಾಮಿ ಬೆಟ್ಟ (1074 ಮೀ) ಮುಖ್ಯವಾದುದು. ಜಿಲ್ಲೆಯ ಉಳಿದ ಭಾಗ ಸ್ವಲ್ಪ ಏರಿಳಿತ ಹಾಗೂ ಕೆಲವು ಭಾಗದಲ್ಲಿ ಮೈದಾನ ಹಾಗೂ ಚಿಕ್ಕ ಗುಡ್ಡಗಳು ಕಂಡುಬರುತ್ತವೆ.

ನದಿಗಳು: ಜಿಲ್ಲೆಯಲ್ಲಿ ಸುವರ್ಣಾವತಿ ಮತ್ತು ಚಿಕ್ಕಹೊಳೆಗಳು ಮುಖ್ಯವಾದವು. ಸುವರ್ಣಾವತಿ ಅಥವಾ ಹೊನ್ನುಹೊಳೆ ಜಿಲ್ಲೆಯ ಆಗ್ನೇಯ ಭಾಗದಲ್ಲಿರುವ ಗಜ್ಜಲಹಟ್ಟಿ, ಎಂಬಲ್ಲಿ ಹುಟ್ಟಿ ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನಲ್ಲಿ ಹರಿಯುತ್ತದೆ. ಅತ್ತಿಕಡಿಯಲ್ಲಿ ಉಗಮಿಸುವ ನೀರೆದುರ್ಗಿಹಳ್ಳ (32 ಕಿಮೀ) ಮತ್ತು ದಿಂಬಂನಲ್ಲಿ ಉಗಮಿಸುವ ಅರ್ಕೈಕದಿ ಹಳ್ಳಗಳು (19 ಕಿಮೀ) ಸಂಗಮ ಹೊಂದಿ ಸುವರ್ಣಾವತಿ ನದಿಯಾಗಿ ಹರಿಯುತ್ತದೆ. ಇದು ಸು. 19 ಕಿಮೀ ದೂರ ಹರಿದು ಮತ್ತೊಂದು ಉಪನದಿಯಾದ ಚಿಕ್ಕಹೊಳೆಯನ್ನು ಸೇರುತ್ತದೆ. ಅಂತಿಮವಾಗಿ ಈ ನದಿ ಮೈಸೂರು ಜಿಲ್ಲೆಯ ತಲಕಾಡಿನ ಸಮೀಪ ಕಾವೇರಿನದಿಯನ್ನು ಸೇರುತ್ತದೆ. ಚಿಕ್ಕಹೊಳೆ ತಮಿಳುನಾಡಿನ ಅಂಚಿನಲ್ಲಿ ಚಾಮರಾಜನಗರದ ದಕ್ಷಿಣದ ಹಾಸನೂರು ಶ್ರೇಣಿಯಲ್ಲಿ ಉಗಮಿಸುತ್ತದೆ. ಗೋಪಾಲಸ್ವಾಮಿ ಬೆಟ್ಟದಲ್ಲಿ ಗುಂಡ್ಲು ನದಿ ಉಗಮಿಸಿ ನಂಜನಗೂಡಿನ ಬಳಿ ಕಬಿನಿ ನದಿಯಲ್ಲಿ ಸಂಗಮ ಹೊಂದುತ್ತದೆ.

ಅರಣ್ಯ: ಜಿಲ್ಲೆಯು ಸು. 2,75,600 ಹೆ. ಪ್ರದೇಶದಲ್ಲಿ ಅರಣ್ಯ ಹೊಂದಿದೆ. ಬಿಳಿಗಿರಿರಂಗನ ಬೆಟ್ಟ, ಕೊಳ್ಳೇಗಾಲ ಮತ್ತು ಯಳಂದೂರಿನ ಕೆಲವು ಭಾಗಗಳಲ್ಲಿ ನಿತ್ಯಹರಿದ್ವರ್ಣದ ಕಾಡುಗಳಿವೆ. ಮಳೆಯ ನೆರಳಿನ ಪ್ರದೇಶದಲ್ಲಿ ಪೊದೆ ರೀತಿಯ ಸಸ್ಯವರ್ಗ ಹಾಗೂ ಚದುರಿದಂತಹ ಗಿಡಮರಗಳಿವೆ. ಶ್ರೀಗಂಧ, ಬೀಟೆ, ತೇಗ, ಹೊನ್ನೆ, ನಂದಿ, ಮತ್ತಿ ಮತ್ತು ಬಿದಿರು ಇಲ್ಲಿನ ಮುಖ್ಯ ಮರಗಳು.

ಪ್ರಾಣಿವರ್ಗ: ಜಿಲ್ಲೆಯು ಆನೆಗಳ ತವರಾಗಿದೆ. ಆನೆ, ಚಿಗರೆ, ಕಾಡೆಮ್ಮೆ ಮುಖ್ಯ ಪ್ರಾಣಿಗಳಾಗಿವೆ. ಅರಣ್ಯದ ಕೆಲವು ಭಾಗಗಳಲ್ಲಿ ಹುಲಿ ಮತ್ತು ಚಿರತೆಗಳು ಕಂಡುಬರುತ್ತವೆ.

ನೀರಾವರಿ : ಜಿಲ್ಲೆಯ ನಿವ್ವಳ ನೀರಾವರಿ ಕ್ಷೇತ್ರ 48067 ಹೆ. ಕಬಿನಿ ಇಲ್ಲಿಯ ಬೃಹತ್ ಜಲಾಶಯ. ಸುವರ್ಣಾವತಿ ನದಿಗೆ ಚಾಮರಾಜನಗರ ತಾಲ್ಲೂಕಿನ ಅಟ್ಟಿಗುಳಿಪುರದ ಬಳಿ ಅಣೆಕಟ್ಟನ್ನು ಕಟ್ಟಲಾಗಿದೆ. ಮಧ್ಯಮ ಜಲಾಶಯಗಳೆಂದರೆ ಸುವರ್ಣಾವತಿ. ನಲ್ಲೂರು, ಅಮಾನಿಕೆರೆ, ಚಿಕ್ಕಹೊಳೆ ಅಣೆಕಟ್ಟೆಗಳು. ಸುವರ್ಣಾವತಿ ಅಣೆಕಟ್ಟನ್ನು 1967ರಲ್ಲಿ ಕಟ್ಟಲು ಆರಂಭಿಸಲಾಯಿತು. ಇದು 1170 ಮೀ ಉದ್ದ ಹಾಗೂ 25.9 ಮೀ ಎತ್ತರವಿದೆ. ಇದರ ನೀರು ಶೇಖರಿಸುವ ಸಾಮರ್ಥ್ಯ 35.4 ಮಿ.ಘ.ಮೀ ನಿರ್ಮಾಣದ ವೆಚ್ಚ 410 ಲಕ್ಷ ರೂ. ಚಿಕ್ಕಹೊಳೆಗೆ ಅಂಕನಶೆಟ್ಟಿಪುರದ ಹತ್ತಿರ 745 ಮೀ ಉದ್ದ ಹಾಗೂ 24 ಮೀ ಎತ್ತರದ ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ಸು. 1630 ಹೆ. ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಇದನ್ನು 1958 ರಲ್ಲಿ ಪ್ರಾರಂಭಿಸಿ 1969 ರಲ್ಲಿ ಪೂರ್ಣಗೊಳಿಸಲಾಯಿತು. ವೆಚ್ಚ 93 ಲಕ್ಷ ರೂ. ಜಿಲ್ಲೆಯಲ್ಲಿ 5500 ಹೆ. ಪ್ರದೇಶ ಕೆರೆಗಳಿಂದಲೂ 13000 ಹೆ. ಪ್ರದೇಶ ಬಾವಿಯಿಂದಲೂ 16650 ಹೆ. ಪ್ರದೇಶ ಕೊಳವೆ ಬಾವಿ ಮತ್ತು 900 ಹೆ. ಏತ ನೀರಾವರಿಯಿಂದಲೂ ಸೌಲಭ್ಯವನ್ನು ಪಡೆದಿದೆ.

ವ್ಯವಸಾಯ : ಜಿಲ್ಲೆಯ ಶೇ. 86 ಜನರು ಗ್ರಾಮೀಣ ಪ್ರದೇಶದವರಾಗಿದ್ದು, ಕೃಷಿ ಇವರ ಪ್ರಮುಖ ಕಸಬಾಗಿದೆ. ಒಟ್ಟು 48067 ಹೆ. ಪ್ರದೇಶ ವ್ಯವಸಾಯಕ್ಕೆ ಒಳಪಟ್ಟಿದೆ. ಬತ್ತ (18783 ಹೆ), ರಾಗಿ (22897 ಹೆ), ಜೋಳ (25720 ಹೆ), ಸಜ್ಜೆ (677 ಹೆ) ಮತ್ತು ಮುಸುಕಿನ ಜೋಳ (20215 ಹೆ) ಪ್ರಮುಖ ಏಕದಳ ಧಾನ್ಯ ಬೆಳೆಗಳು. ಪ್ರಮುಖ ದ್ವಿದಳ ಧಾನ್ಯಗಳು ಕಡಲೆ (1100 ಹೆ) ಮತ್ತು ತೊಗರಿ (2472 ಹೆ) ಪ್ರಮುಖ ವಾಣಿಜ್ಯ ಬೆಳೆಗಳು ಕಬ್ಬು (15397 ಹೆ) ಸಂಬಾರ ಪದಾರ್ಥಗಳು (3877 ಹೆ) ಹತ್ತಿ (7852 ಹೆ) ಹಣ್ಣು, ತರಕಾರಿ ಮತ್ತು ಎಣ್ಣೆಕಾಳುಗಳು ಜಿಲ್ಲೆಯ ಇತರ ಮುಖ್ಯ ಬೆಳೆಗಳು.

ಪಶುಸಂಗೋಪನೆ ಜಿಲ್ಲೆಯ ಒಂದು ಮುಖ್ಯ ಕಸಬು. ಇಲ್ಲಿ ಒಟ್ಟು 2,70,000 ದನಕರುಗಳಿವೆ. ಇದರಲ್ಲಿ 2,40,000 ಸ್ಥಳೀಯ ತಳಿಗಳಾಗಿವೆ. ಸು. 37,500 ಎಮ್ಮೆಗಳು, 1,16,500 ಕುರಿಗಳು ಮತ್ತು 10,600 ಮೇಕೆಗಳಿವೆ.

ಖನಿಜಗಳು : ಜಿಲ್ಲೆಯಲ್ಲಿ ಕೆಲವು ಖನಿಜಗಳ ನಿಕ್ಷೇಪವನ್ನು ಗುರುತಿಸಲಾಗಿದೆ. ಇಲ್ಲಿ ಸಾಕಷ್ಟು ಗ್ರಾನೈಟ್ ದೊರೆಯುತ್ತಿದ್ದು, ವಿದೇಶಗಳಿಗೂ ರಫ್ತು ಮಾಡಲಾಗುತ್ತಿದೆ.

ಕೈಗಾರಿಕೆಗಳು : ಜವಳಿ ಕೈಗಾರಿಕೆ ಜಿಲ್ಲೆಯಲ್ಲಿ ಪ್ರಮುಖವಾದುದು. ರೇಷ್ಮೆ ಹುಳು ಸಾಕಣೆ, ರೇಷ್ಮೆ ಜವಳಿ ಕೈಗಾರಿಕೆ ಪ್ರಮುಖವಾಗಿದ್ದು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇತರ ಪ್ರಮುಖ ಕೈಗಾರಿಕೆಗಳಾದರೆ, ರಾಸಾಯನಿಕ, ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಮುಂತಾದವು.

ಸಾರಿಗೆ : ರಸ್ತೆ ಸಾರಿಗೆ ಜಿಲ್ಲೆಯಲ್ಲಿ ಪ್ರಮುಖವಾದುದು. 150 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, 95 ಕಿಮೀ ಉದ್ದದ ರಾಜ್ಯ ಹೆದ್ದಾರಿಯು ಸೇರಿದಂತೆ ಒಟ್ಟು 4548 ಕಿಮೀ ರಸ್ತೆ ಮಾರ್ಗವಿದ್ದು, ಅದರಲ್ಲಿ 846 ಕಿಮೀ ಪಕ್ಕಾ ರಸ್ತೆಯಾಗಿದೆ. ಕೇವಲ 18 ಕಿಮೀ ಉದ್ದದ ರೈಲು ಮಾರ್ಗ ಚಾಮರಾಜನಗರ ತಾಲ್ಲೂಕಿನಲ್ಲಿದೆ.

ಜನಸಂಖ್ಯೆ : ಜಿಲ್ಲೆಯ ಒಟ್ಟು ಜನಸಂಖ್ಯೆ 9,64,276.

ಬಿಳಿಗಿರಿರಂಗನ ಬೆಟ್ಟ, ಮಲೆ ಮಹದೇಶ್ವರ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನ, ಬಂಡಿಪುರ ಜಿಲ್ಲೆ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಚಾಮರಾಜನಗರ ತಾಲ್ಲೂಕು : ಇದು ಜಿಲ್ಲೆಯ ಹೆಚ್ಚು ಕಡಿಮೆ ಮಧ್ಯ ಭಾಗದಲ್ಲಿದೆ. ಇದರ ಪೂರ್ವಕ್ಕೆ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳು, ಪಶ್ಚಿಮಕ್ಕೆ ಗುಂಡ್ಲುಪೇಟೆ, ಉತ್ತರಕ್ಕೆ ಮೈಸೂರು ಜಿಲ್ಲೆ ಹಾಗೂ ದಕ್ಷಿಣಕ್ಕೆ ತಮಿಳುನಾಡು ರಾಜ್ಯವಿದೆ. ವಿಸ್ತೀರ್ಣ 1,23,078 ಹೆ. ಜನಸಂಖ್ಯೆ 3.36 ಲಕ್ಷ.

ತಾಲ್ಲೂಕಿನ ಪೂರ್ವ ಮತ್ತು ದಕ್ಷಿಣ ಎಲ್ಲೆಯಲ್ಲಿ ಬಿಳಿಗಿರಿರಂಗನ ಬೆಟ್ಟವಿದೆ. ಈ ಪ್ರದೇಶ ದಟ್ಟವಾದ ಅರಣ್ಯದಿಂದ ಕೂಡಿದೆ. ಮುಖ್ಯನದಿ ಸುವರ್ಣಾವತಿ ಮತ್ತು ಅದರ ಉಪನದಿಯಾದ ಚಿಕ್ಕಹೊಳೆ. ಇಲ್ಲಿ ಕಪ್ಪು, ಕೆಂಪು ಹಾಗೂ ನುರುಜ ಮಿಶ್ರಿತ ಮಣ್ಣು ಕಂಡುಬರುತ್ತದೆ.

ಚಾಮರಾಜೇಶ್ವರ ದೇವಾಲಯ (ಚಾಮರಾಜನಗರ), ಹರಳುಕೋಟೆ ಹನುಮಂತ, ಹರದನಹಳ್ಳಿಯ ದಿವ್ಯಲಿಂಗೇಶ್ವರ, ವೀರಭದ್ರನಗುಡಿಗಳು ಪ್ರಮುಖ ದೇವಸ್ಥಾನಗಳು.

ಚಾಮರಾಜನಗರ : ಜಿಲ್ಲೆ ಮತ್ತು ತಾಲ್ಲೂಕು ಆಡಳಿತ ಕೇಂದ್ರ. 1997 ರಲ್ಲಿ ಚಾಮರಾಜನಗರ ಜಿಲ್ಲೆ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟ ಮೇಲೆ ಜಿಲ್ಲಾ ಆಡಳಿತ ಕೇಂದ್ರವಾಯಿತು. ಇದು ಮೈಸೂರು ನಗರದ ಆಗ್ನೇಯಕ್ಕೆ 57 ಕಿಮೀ ದೂರದಲ್ಲಿದೆ. ಉ. ಅ. $11^{0}55'$ ಮತ್ತು ಪೂ.ರೇ. $70^{0}$ ಮೇಲಿದೆ. ಜನಸಂಖ್ಯೆ 60,810. ನಗರ ತಾಲ್ಲೂಕಿನ ಮಧ್ಯಭಾಗದಲ್ಲಿದೆ. ಚಾಮರಾಜನಗರದ ಹಿಂದಿನ ಹೆಸರು ಅರಿಕೊಠಾರ. ಮುಮ್ಮಡಿ ಕೃಷ್ಣರಾಜ ಒಡೆಯರ ತಂದೆ ಚಾಮರಾಜ ಒಡೆಯರು ಇಲ್ಲಿ ಜನಿಸಿದ್ದರಿಂದ, ಅವರು 1818ರಲ್ಲಿ ಇದಕ್ಕೆ ಚಾಮರಾಜನಗರ ಎಂದು ನಾಮಕರಣ ಮಾಡಿದರು. 1826 ರಲ್ಲಿ ಅವರು ಇಲ್ಲಿ ಚಾಮರಾಜೇಶ್ವರ ದೇವಸ್ಥಾನ ಕಟ್ಟಿಸಿದರು.

ರೇಷ್ಮೆ ಉದ್ಯಮ ಇಲ್ಲಿ ವ್ಯಾಪಕವಾಗಿದೆ. ಇಟ್ಟಿಗೆ, ಹೆಂಚು, ಎಂಜಿನಿಯರಿಂಗ್ ಮತ್ತು ರಾಸಾಯನಿಕ ಕೈಗಾರಿಕೆಗಳಿವೆ. ಇದು ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. (ಬಿ.ಪಿ.ಕೆ.)

**ಚಾಮುಂಡಿ ಬೆಟ್ಟ:** ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಆಗ್ನೇಯಕ್ಕೆ ಪೂರ್ವಪಶ್ಚಿಮವಾಗಿ ಹಬ್ಬಿನಿಂತಿರುವ ಬೆಟ್ಟ ಸಮುದ್ರಮಟ್ಟದಿಂದ 1,163 ಮೀ ಎತ್ತರದಲ್ಲಿದೆ. ಮೈಸೂರು ಒಡೆಯರ ಮನೆದೇವತೆಯಾದ ಚಾಮುಂಡೇಶ್ವರಿ ದೇವಾಲಯ ಈ ಬೆಟ್ಟದ ಮೇಲಿದೆ. ಆದ್ದರಿಂದ ಈ ಬೆಟ್ಟಕ್ಕೆ ಆ ದೇವತೆಯ ಹೆಸರೇ ಬಂದಿದೆ. ಸುತ್ತಲೂ ಬಯಲಿದ್ದು, ಒಂಟಿಯಾಗಿ ನಿಂತಿರುವ ಕಡಿದಾದ ಈ ಬೆಟ್ಟ ಬಹುದೂರದವರೆಗೂ ಗೋಚರಿಸುವುದಲ್ಲದೆ, ಬೆಟ್ಟದ ಮೇಲೆ ನಿಂತು ನೋಡಿದಾಗ ಮೈಸೂರಿನ ಹರವು ಮತ್ತು ಸುತ್ತಲಿನ ಪ್ರಕೃತಿ ಸೌಂದರ್ಯ ರಮ್ಯವಾಗಿ ಕಾಣಿಸುತ್ತದೆ. ಮೈಸೂರಿಗೆ ಬರುವ ಪ್ರವಾಸಿಗಳ ಆಕರ್ಷಣೆಗಳಲ್ಲಿ ಇದೂ ಒಂದು. ಇಲ್ಲಿರುವ ಮಹಾಬಲೇಶ್ವರ ದೇವಸ್ಥಾನ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕಿಂತ ಮುಂಚೆಯೇ ನಿರ್ಮಿತವಾಗಿತ್ತು. ಈ ಕ್ಷೇತ್ರವನ್ನು ಮಬ್ಬಳದ ತೀರ್ಥ ಎಂದು ಕರೆಯಲಾಗಿತ್ತು.



ಹಿಂದಿನ ದೊಡ್ಡಕೆರೆಯ ಒಂದು ನೋಟ

ಮೈಸೂರರಸರು ಬೆಟ್ಟದ ಮೇಲಿದ್ದ ಮಹಿಷಾಸುರಮರ್ದಿನಿಯನ್ನು ಚಾಮುಂಡೇಶ್ವರಿ ಎಂಬ ಹೆಸರಿನಿಂದ ತಮ್ಮ ಮನೆದೇವರಾಗಿ ಸ್ವೀಕರಿಸಿದ ಮೇಲೆ ಮಬ್ಬಳ ತೀರ್ಥಕ್ಕೆ ಚಾಮುಂಡಿ ಬೆಟ್ಟ ಎಂಬ ಹೆಸರು ಬಂದಿರಬೇಕು. ದೊಡ್ಡ ದೇವರಾಜ ಒಡೆಯರು ಬೆಟ್ಟಕ್ಕೆ ಸಾವಿರ ಮೆಟ್ಟಲುಗಳನ್ನು ಕಟ್ಟಿಸಿದರಲ್ಲದೆ, ಬೆಟ್ಟದ ಮೇಲೆ 700ನೆಯ ಮೆಟ್ಟಲಿನ ಹತ್ತಿರ ಬೃಹದಾಕಾರದ ನಂದಿಯನ್ನು ಪ್ರತಿಷ್ಠಾಪಿಸಿದರು. ತಲೆ ಎತ್ತಿ ಕುಳಿತಿರುವ ಈ ನಂದಿಮೂರ್ತಿ 4.8 ಮೀ ಎತ್ತರವಾಗಿದ್ದು, ತನ್ನ ಬೃಹದ್ಗಾತ್ರದಿಂದ ಅತ್ಯಂತ ಆಕರ್ಷಣೀಯವಾಗಿದೆ.

ಚಾಮುಂಡಿ ಬೆಟ್ಟವನ್ನು ಏರುವಾಗ 700ನೆಯ ಮೆಟ್ಟಲಿನ ಬಳಿಯ ಬೃಹದಾಕಾರದ ನಂದಿ

ಚಾಮುಂಡೇಶ್ವರಿ ದೇವಾಲಯ ದ್ರಾವಿಡ ಶೈಲಿಯಲ್ಲಿ ಕಟ್ಟಿರುವ ದೇವಾಲಯ. ಮೂಲ ದೇವಾಲಯದ ನಿರ್ಮಾಣ ಕಾಲವನ್ನು ತಿಳಿಯಲು ಈಗ ಆಧಾರಗಳಿಲ್ಲ. ಮೈಸೂರು ಒಡೆಯರ ಕಾಲದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಇದನ್ನು ನವೀಕರಿಸಿ ಇದರ ಮಹಾದ್ವಾರಕ್ಕೆ ಒಂದು ಸುಂದರವಾದ ಗೋಪುರವನ್ನು ಕಟ್ಟಿಸಿದರು. ಏಳು ಅಂತಸ್ತುಗಳಿಂದ ಇಟ್ಟಿಗೆ ಗಾರೆಯಲ್ಲಿ ಕಟ್ಟಿರುವ ಈ ಗೋಪುರವು ಮೇಲೆ ಹೋದಂತೆ ಕಿರಿದಾಗಿದೆ. ಹೊರಮೈಯಲ್ಲಿ ಒಂದೊಂದು ಅಂತಸ್ತಿನಲ್ಲೂ ಕಿರುಗೋಪುರಗಳು ತುಂಬಿದ್ದು, 7 ಕಳಶಗಳುಳ್ಳ ಶಿಖರವೂ ಇದೆ.

ಅದಕ್ಕೆ ಸೇರಿದಂತೆಯೇ ಬೆಟ್ಟದ ಪೂರ್ವ ತುದಿಯಲ್ಲಿ, ಲಲಿತಾದ್ರಿ ಎಂಬ ತಗ್ಗಾದ ಮೊರಡಿಯಿದೆ. ಪ್ರಶಾಂತ ವಾತಾವರಣದಿಂದ ಕೂಡಿರುವ ಈ ಜಾಗದಲ್ಲಿ ಸುತ್ತಲೂ ಗಿಡಮರಗಳಿಂದಾವೃತವಾದ ಒಂದು ವಿಶ್ರಾಂತಿಗೃಹವಿದೆ.

ಬೆಟ್ಟದ ತುತ್ತತುದಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಕಟ್ಟಿಸಿದ ಒಂದು ಅರಮನೆ ಇದೆ. ಪ್ರವಾಸಿಗಳಿಗೆ ಮತ್ತೊಂದು ಆಕರ್ಷಣೆಯೆಂದರೆ ದೇವಾಲಯಕ್ಕೆ ಹೋಗುವ ದಾರಿಯಲ್ಲಿರುವ 3.6 ಮೀ ಎತ್ತರದ ಮಹಿಷಾಸುರ ವಿಗ್ರಹ. ದೇವಸ್ಥಾನದ ಹತ್ತಿರ ಸಣ್ಣ ಊರೊಂದು ಬೆಳೆದಿದೆ. (ಎಂ.ಎಚ್.;ಕೆ.ಆರ್.ಆರ್.)

**ಚಾರಿತ್ರಿಕ ಭೂಗೋಳ ವಿಜ್ಞಾನ:** ಆರಂಭದಲ್ಲಿ ಯುರೋಪಿನ ಹಲವಾರು ಭೂಗೋಳ ವಿಜ್ಞಾನಿಗಳು ಇತಿಹಾಸ ಹಾಗೂ ಪುರಾತತ್ತ್ವಶಾಸ್ತ್ರದೊಡನೆ ಅತಿ ನಿಕಟ ಸಂಬಂಧ ಹೊಂದಿದ್ದರ ಪರಿಣಾಮವಾಗಿ ಇದು ಪ್ರತ್ಯೇಕ ವಿಭಾಗವಾಗಿ ಬೆಳವಣಿಗೆ ಹೊಂದಿತು. ಹಿಂದಿನ ಭೂಬಳಕೆಯ ಅಧ್ಯಯನ ಅಥವಾ ವಿವಿಧ ಶತಮಾನಗಳ ಅಥವಾ ಕಾಲಾವಧಿಯಲ್ಲಿ ಉಂಟಾಗಿರುವ ನಿರ್ದಿಷ್ಟ ಪ್ರದೇಶದ ಮಾರ್ಪಾಡು ಕ್ರಮದ ಅಧ್ಯಯನವನ್ನು ಇದು ತನ್ನ ಕ್ಷೇತ್ರವನ್ನಾಗಿ ಹೊಂದಿದೆ. ಇದರಿಂದಾಗಿ ಇದರ ನಿರೂಪಣೆ ಪ್ರಾದೇಶಿಕ ಭೂಗೋಳವಿಜ್ಞಾನವನ್ನೇ ಹೋಲುವುದು. ಆದರೆ ಆಯಾ ಪ್ರದೇಶಗಳಲ್ಲಿ ಕಂಡು ಬರುವ ಸಾಂಸ್ಕೃತಿಕ ಲಕ್ಷಣಗಳು ಐತಿಹಾಸಿಕ ಅವಧಿಯಲ್ಲಿ ಹೇಗೆ ನಿರ್ಮಿತವಾಗಿವೆ ಎಂಬುದನ್ನು ಇದು ವಿಶ್ಲೇಷಿಸುವುದು. ಬ್ರಿಟನ್ನಿನ ಡರ್ಬಿ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನದ ಕಾರ್ಲ್ ಸೌರ್‌ರವರಿಂದ ಐತಿಹಾಸಿಕ ಭೂಗೋಳವಿಜ್ಞಾನ ಹೆಚ್ಚು ಅಭಿವೃದ್ಧಿ ಹೊಂದಿತು. (ಆರ್.ಎನ್.)

**ಚಿಕ್ಕಬಳ್ಳಾಪುರ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಇದೇ ಹೆಸರಿನ ತಾಲ್ಲೂಕು ಹಾಗೂ ಆಡಳಿತ ಕೇಂದ್ರ. ಕೋಲಾರಕ್ಕೆ 58 ಕಿಮೀ ದೂರದಲ್ಲಿ ವಾಯವ್ಯ ದಿಕ್ಕಿನಲ್ಲಿದೆ. ಈಗ ಇದರ ವಿಸ್ತೀರ್ಣ 11.65 ಚ.ಕಿಮೀ. ಜನಸಂಖ್ಯೆ 54,938. ನಗರ ಪೌರಸಭೆ ಆಡಳಿತಕೊಳಪಟ್ಟಿದೆ. ಈ ಪಟ್ಟಣ ರೇಷ್ಮೆ ಉದ್ಯಮ ಹಾಗೂ ಕಲ್ಲುಸಕ್ಕರೆ ತಯಾರಿಕೆಗೆ ಪ್ರಸಿದ್ಧ. ಸಣ್ಣ ಕೈಗಾರಿಕೆಗಳ ಬೆಳವಣಿಗೆಗಾಗಿ ಇಲ್ಲಿ ಕೈಗಾರಿಕ ಕ್ಷೇತ್ರವೊಂದು ಸ್ಥಾಪಿತವಾಗಿದೆ. ಇದೊಂದು ವ್ಯಾಪಾರ ಕೇಂದ್ರ. ಪಟ್ಟಣದ ಬಹುತೇಕ ದೇವಾಲಯಗಳು ಈಚಿನವು. ಚನ್ನಕೇಶವ ದೇವಾಲಯ ಅತ್ಯಂತ ಹಳೆಯದು. ಪಟ್ಟಣಕ್ಕೆ 4 ಕಿಮೀ ದೂರದಲ್ಲಿ ಚಿತ್ರಾವತಿ ಎಂಬ ಕೊಳವಿದೆ. ಇದೊಂದು ತೀರ್ಥ. ಇದರ ಸುತ್ತಲ ಹಂತಗಳನ್ನು ದಿವಾನ್ ಪೂರ್ಣಯ್ಯನವರು ಕಟ್ಟಿಸಿದರೆಂದು ಹೇಳಲಾಗಿದೆ. ಈ ಕೊಳಕ್ಕೆ ಹಲಸಮ್ಮನ ಬಾವಿ ಎಂದೂ ಹೆಸರುಂಟು. ಹಲಸಮ್ಮ ಪಾಳೆಯಗಾರನೊಬ್ಬನ ಮಗಳು. ಇದರ ಹತ್ತಿರ ಮಲ್ಲಿಕಾರ್ಜುನ ಚೆನ್ನಪ್ಪನ ಗದುಗೆಯಿದೆ. ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೂ ಜಿಲ್ಲೆಯ ಪ್ರಮುಖ ಸ್ಥಳಗಳಿಗೂ ರಸ್ತೆಗಳುಂಟು. ಬೆಂಗಳೂರು, ಚಿಂತಾಮಣಿ, ಕೋಲಾರಗಳಿಗೆ ರೈಲ್ವೆ ಸಂಪರ್ಕವಿದೆ.

ಮಂಡಿಕಲ್, ನಂದಿ ಮತ್ತು ಚಿಕ್ಕಬಳ್ಳಾಪುರ ಎಂಬ ಮೂರು ಹೋಬಳಿಗಳೂ 210 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 646.4 ಚ.ಕಿಮೀ. ಜನಸಂಖ್ಯೆ 1,84,226. ಪೂರ್ವದಲ್ಲಿ ಶಿಡ್ಲಘಟ್ಟ, ಪಶ್ಚಿಮದಲ್ಲಿ ಗೌರಿಬಿದನೂರು, ಉತ್ತರದಲ್ಲಿ ಗುಡಿಬಂಡೆ ತಾಲ್ಲೂಕುಗಳೂ ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯೂ ಇದರ ಮೇರೆಗಳು. ತಾಲ್ಲೂಕಿನ ವಾರ್ಷಿಕ ಸಾಮಾನ್ಯ ಮಳೆ ಸು. 87 ಸೆಂಮೀ. ಕೆಂಪು ಮತ್ತು ಎರೆಮಣ್ಣಿನಿಂದ ಕೂಡಿದ ಈ ಪ್ರದೇಶದಲ್ಲಿ ರಾಗಿ, ಬತ್ತ, ಕಬ್ಬು ಮತ್ತು ದ್ವಿದಳ ಧಾನ್ಯಗಳನ್ನೂ ಬಾವಿಗಳಿಂದ ಪಂಪುಗಳ ಮೂಲಕ ನೀರನ್ನೆತ್ತಿ ವ್ಯವಸಾಯ ಮಾಡುವುದು ಸಾಮಾನ್ಯ. ಆಲೂಗೆಡ್ಡೆ, ಈರುಳ್ಳಿ, ಉಪ್ಪುನೇರಳೆ, ಮೆಣಸಿನಕಾಯಿ, ತರಕಾರಿ ಮತ್ತು ಹಣ್ಣುಗಳನ್ನೂ ಬೆಳೆಯಲಾಗುತ್ತದೆ. ಮಾವು, ಹುಣಸೆ, ಹೊಂಗೆ ಮತ್ತು ಸರ್ವೆ ತೋಪುಗಳುಂಟು, ವ್ಯವಸಾಯದ ಜೊತೆಗೆ ಪಶುಪಾಲನೆ ಜನರ ಉದ್ಯೋಗವಾಗಿದೆ.

ಪ್ರಸಿದ್ಧ ವಿಶ್ರಾಂತಿಧಾಮ ನಂದಿದುರ್ಗ (1480 ಮೀ) ಈ ತಾಲ್ಲೂಕಿನಲ್ಲಿದೆ. ಚನ್ನರಾಯನಬೆಟ್ಟ (1450 ಮೀ) ಸ್ಕಂದಗಿರಿ 14480, ಬ್ರಹ್ಮಗಿರಿ (1420 ಮೀ) ಮತ್ತು ಹರಿಹರೇಶ್ವರ ಬೆಟ್ಟ (1256 ಮೀ) ಇವು ಈ ಶ್ರೇಣಿಗೆ ಸೇರಿದ ಬೆಟ್ಟಗಳು. ನಂದಿಯ ಈಶಾನ್ಯಕ್ಕಿರುವ ಗುಂಡಲಗುರ್ಕಿ ಬೆಟ್ಟದಲ್ಲಿ ಪಾಪಘ್ನಿ ನದಿ ಹುಟ್ಟಿ ಬಾಗೇಪಲ್ಲಿ ಮುಖಾಂತರ ಮದನಪಲ್ಲಿಯತ್ತ ಹರಿಯುತ್ತದೆ. ಈ ನದಿಗೆ ದೇವನಹಳ್ಳಿಯ ಹತ್ತಿರ ಅಡ್ಡಗಟ್ಟೆಕಟ್ಟಿ ವೆಂಕಟೇಶ ಸಾಗರವನ್ನು ನಿರ್ಮಿಸಲಾಗಿದೆ. ಪಾಪಘ್ನಿ ನದಿ ಕಮಲಾಪುರದ ಹತ್ತಿರ ಉತ್ತರ ಪಿನಾಕಿನಿಯನ್ನು ಸೇರುತ್ತದೆ. ಉತ್ತರ ಪಿನಾಕಿನಿ ನದಿಯ ನೀರನ್ನು ಈ ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 21 ಸಹಕಾರ ಕೈಗಾರಿಕಾ ಸಂಘಗಳುಂಟು. ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಕಾಲೇಜು, ಖಾಸಗಿ ವಾಣಿಜ್ಯ ವಿದ್ಯಾಶಾಲೆಗಳು ಇವೆ. ಆಸ್ಪತ್ರೆ, ಮಕ್ಕಳ ಕಲ್ಯಾಣ ಕೇಂದ್ರ, ಪಶುವೈದ್ಯ ಶಾಲೆಗಳು, ಮತ್ಸ್ಯೋದ್ಯಮ ಸಂಘ ಮುಂತಾದವು ಈ ತಾಲ್ಲೂಕಿನ ಅಭಿವೃದ್ಧಿಯನ್ನು ಪ್ರತಿಬಿಂಬಿಸುತ್ತಿವೆ. ನಂದಿ ಬೆಟ್ಟದ ಮೇಲಿರುವ ಕಬ್ಬನ್ ಹೌಸ್ ಪ್ರವಾಸಿಗರಿಗೆ ಒಂದು ಆಕರ್ಷಣೆ. ಈ ತಾಲ್ಲೂಕಿನಲ್ಲಿ ನಡೆಯುವ ಜಾತ್ರೆಗಳಲ್ಲಿ ನಂದಿಯ ಭೋಗನಂದೀಶ್ವರಸ್ವಾಮಿ ಜಾತ್ರೆ, ಚಿತ್ರಾವತಿಯ ಸುಬ್ರಹ್ಮಣ್ಯಸ್ವಾಮಿ ಜಾತ್ರೆ ಪ್ರಸಿದ್ಧವಾದವು. ಜಾತ್ರೆ ದಿನಗಳಲ್ಲಿ ದನಗಳ ವ್ಯಾಪಾರವೂ ನಡೆಯುತ್ತದೆ.

(ಕೆ.ಎನ್.ಯು.)

**ಚಿಕ್ಕಮಗಳೂರು:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ಈ ಜಿಲ್ಲೆಯ ಒಂದು ತಾಲ್ಲೂಕು; ಜಿಲ್ಲೆ ಮತ್ತು ತಾಲ್ಲೂಕುಗಳ ಆಡಳಿತ ಕೇಂದ್ರ. ಉತ್ತರಕ್ಕೆ ಶಿವಮೊಗ್ಗ, ಪೂರ್ವಕ್ಕೆ ಚಿತ್ರದುರ್ಗ ಹಾಗೂ ತುಮಕೂರು, ದಕ್ಷಿಣಕ್ಕೆ ಹಾಸನ, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಜಿಲ್ಲೆ–ಇವು ಇದರ ಮೇರೆಗಳು. ಪೂರ್ವ–ಪಶ್ಚಿಮವಾಗಿ ಜಿಲ್ಲೆಯ ಗರಿಷ್ಠ ಉದ್ದ 137 ಕಿಮೀ ಉತ್ತರ–ದಕ್ಷಿಣವಾಗಿ ಗರಿಷ್ಠ ಅಗಲ 88 ಕಿಮೀ ಹೊಂದಿದ ಈ ಜಿಲ್ಲೆಯ ವಿಸ್ತೀರ್ಣ 7,199 ಚ.ಕಿಮೀ. ಜನಸಂಖ್ಯೆ 1,139,104.

ಭೌತ ಲಕ್ಷಣಗಳು : ಈ ಜಿಲ್ಲೆಯ ಪರ್ವತಶ್ರೇಣಿಯಿಂದ ಒಳಚಾಚಿ ಮೂಡಿಗೆರೆ, ಕೊಪ್ಪ, ನರಸಿಂಹರಾಜಪುರ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಹಬ್ಬಿರುವ ಶಿಖರಗಳ ಪೈಕಿ ಮುಳ್ಳಯ್ಯನಗಿರಿಯ ಎತ್ತರ ಸಮುದ್ರಮಟ್ಟದಿಂದ 2,123 ಮೀ. ಇದರ ಸಮೀಪದಲ್ಲೇ ಇರುವ ಬಾಬಬುಡನ್ ಗಿರಿ ಮತ್ತು ಕಲ್ಲತ್ತಿಗಿರಿಗಳು ಸಮುದ್ರಮಟ್ಟದಿಂದ ಅನುಕ್ರಮವಾಗಿ 2,071 ಮೀ ಮತ್ತು 2,051 ಮೀ ಎತ್ತರವಾಗಿವೆ. ಪಶ್ಚಿಮಘಟ್ಟದ ಕುದುರೆಮುಖ ಶಿಖರ 2,071 ಮೀ ಎತ್ತರವಾಗಿದೆ. ಕುದುರೆಮುಖದಂತೆ ತೋರುವ ಈ ಶಿಖರ ನಾವಿಕರಿಗೆ ಭೂಮಿಯ ಹೆಗ್ಗುರುತಾಗಿತ್ತು. ಇದೇ ಶ್ರೇಣಿಯಲ್ಲಿ ಬಲ್ಲಾಳರಾಯನ ದುರ್ಗ (1496 ಮೀ), ಗಂಗಾಮೂಲ (1,554 ಮೀ), ಶಕುನಗಿರಿ (1,551 ಮೀ), ಕಂಚಿಕಲ್ ದುರ್ಗ (1,360 ಮೀ) ಮೊದಲಾದ ಶಿಖರಗಳಿವೆ.

ಈ ಜಿಲ್ಲೆಯಲ್ಲಿ ಪೂರ್ವಭಾಗಕ್ಕೆ ಹೋದಂತೆಲ್ಲ ಬಯಲು ನಾಡಿನ ಲಕ್ಷಣಗಳು ಕಂಡು ಬರುತ್ತವೆ. ಬಾಬಾಬುಡನ್ ಗಿರಿಯ ತಪ್ಪಲಿನಿಂದ ಪೂರ್ವಕ್ಕೆ ಥಟ್ಟನೆ ಭೂಮಿಯ ಮಟ್ಟ ಇಳಿಯುತ್ತದೆ. ಮಲೆನಾಡಿನ ಸರಹದ್ದಿನಲ್ಲಿರುವ ಚಿಕ್ಕಮಗಳೂರಿನ ಎತ್ತರ 1,160 ಮೀ. ಆದರೆ ಬಯಲು ಸೀಮೆಯಲ್ಲಿರುವ ಕಡೂರು 851 ಮೀ. ತರೀಕೆರೆ 745 ಮೀ ಎತ್ತರವಾಗಿವೆ.




ಕರ್ನಾಟಕದಲ್ಲಿ ಹರಿಯುವ ಅನೇಕ ನದಿಗಳು ಹುಟ್ಟುವುದು ಈ ಜಿಲ್ಲೆಯಲ್ಲೇ. ಇಲ್ಲಿಯ ಪರ್ವತಗಳು ಇಲ್ಲಿನ ನದಿಗಳನ್ನು ಇಬ್ಭಾಗವಾಗಿ ಒಡೆಯುತ್ತವೆ. ಕಳಸದ ಬಳಿ ಇರುವ ಬಲ್ಲಾಳರಾಯದುರ್ಗದಿಂದ ಹಿಡಿದು ಚಿಕ್ಕಮಗಳೂರು ಪಟ್ಟಣದ ಸಮೀಪವಿರುವ ಬಾಬಾಬುಡನ್ ಗಿರಿಯವರೆಗೂ ಹಬ್ಬಿರುವ ಪರ್ವತ ಶ್ರೇಣಿ ಕರ್ನಾಟಕದ ಉತ್ತರದ ಮತ್ತು ದಕ್ಷಿಣದ ನದಿಗಳನ್ನು ಪ್ರತ್ಯೇಕಿಸುತ್ತದೆ. ವರಾಹ ಪರ್ವತದ ಗಂಗಾಮೂಲದಲ್ಲಿ ಹುಟ್ಟುವ ತುಂಗಾ ಮತ್ತು ಭದ್ರಾ ನದಿಗಳು ಉತ್ತರದಿಕ್ಕಿಗೆ ಹರಿದರೆ, ದಕ್ಷಿಣಭಾಗದಲ್ಲಿ ಮೇಲ್ಬಂಗಾಡಿಯ ಜಾವಳಿಯ ಬಳಿ ಹುಟ್ಟುವ ಹೇಮಾವತಿ ನದಿ ಮೂಡಿಗೆರೆ ತಾಲ್ಲೂಕಿನಲ್ಲಿ ದಕ್ಷಿಣ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತುಂಗಾ ಮತ್ತು ಭದ್ರಾ ನದಿಗಳು ಒಂದೇ ಪ್ರದೇಶದಲ್ಲಿ ಹುಟ್ಟಿದರೂ ಕೊಪ್ಪ ತಾಲ್ಲೂಕಿನಲ್ಲಿ ಎದ್ದಿರುವ ಬೆಟ್ಟಗಳ ಸಾಲು ಅವನ್ನು ಪ್ರತ್ಯೇಕಿಸುತ್ತವೆ. ತುಂಗಾ ನದಿ ಶೃಂಗೇರಿಯವರೆಗೂ ಈಶಾನ್ಯ ದಿಕ್ಕಿಗೆ ಹರಿದು ಅನಂತರ ವಾಯವ್ಯ ದಿಕ್ಕಿಗೆ ತಿರುಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ.

ದಕ್ಷಿಣದ ಕಡೆಗೆ ಹರಿಯುವ ಹೇಮಾವತಿ ನದಿಯನ್ನು ಸ್ವಲ್ಪ ದೂರದಲ್ಲೇ ಸೋಮಾವತಿ ಎಂಬ ಹೊಳೆ ಸೇರುತ್ತದೆ. ಮುಂದೆ ಇದು ಆಗ್ನೇಯ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮುಳ್ಳಯ್ಯನ ಗಿರಿ ಬಳಿ ಹುಟ್ಟುವ ಯಗಚಿ ನದಿ ಚಿಕ್ಕಮಗಳೂರನ್ನು ದಾಟಿ ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದು ಗೊರೂರು ಬಳಿ ಹೇಮಾವತಿಯನ್ನು ಸೇರುತ್ತದೆ.

ಮುಳ್ಳಯ್ಯನಗಿರಿ ಶ್ರೇಣಿಯಲ್ಲಿ ಹುಟ್ಟುವ ಹೊಳೆಯ ಹೆಸರು ವೇದಾ. ಇದು ಕಡೂರಿನ ಮೂಲಕ ಮುಂದುವರಿದು ವೇದಾವತಿ ಎಂಬ ಹೆಸರಿನಿಂದ ಹರಿಯುತ್ತದೆ.

ತಾಲ್ಲೂಕಿನ ಬೆಟ್ಟಪ್ರದೇಶದಲ್ಲಿ ಹೆಚ್ಚಾಗಿ ಕಪ್ಪುಮಣ್ಣು ಕಂಡುಬರುವುದು. ಇದು ಕಾಫಿ ಬೆಳೆಗೆ ಅನುಕೂಲಕರ. ತರೀಕೆರೆ ತಾಲ್ಲೂಕಿನ ಪಶ್ಚಿಮಭಾಗದ್ದು ಮರಳು ಮತ್ತು ಸುಣ್ಣಕಲ್ಲು ಮಿಶ್ರಿತ ನೆಲ. ಮೂಡಿಗೆರೆ ತಾಲ್ಲೂಕಿನ ಬಹುಭಾಗ ಕೆಂಪುಮಣ್ಣಿನಿಂದ ಕೂಡಿದೆ, ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿ ಅಧಿಕ ಮಳೆಯಿಂದಾಗಿ ಗಟ್ಟಿಮಣ್ಣು ಮತ್ತು ಕೆಮ್ಮಣ್ಣು ಕಂಡುಬರುತ್ತವೆ. ಇಲ್ಲಿಯ ನದಿ ಬಯಲುಗಳು ಫಲವತ್ತಾಗಿವೆ. ಅಡಕೆ ಬೆಳೆಗೆ ಇದು ಅನುಕೂಲಕರವಾಗಿದೆ.

ವಾಯುಗುಣ : ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಹಿತಕರವಾದದ್ದು. ಇದರ ಪಶ್ಚಿಮಭಾಗ ಹೆಚ್ಚು ತಂಪು. ಚಳಿಗಾಲದಲ್ಲಿ ಚಳಿ ಹೆಚ್ಚು. ಗರಿಷ್ಠ ಉಷ್ಣತೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ. ತೇವಾಂಶ ಫೆಬ್ರವರಿಯಲ್ಲಿ ಶೇ. 65, ಆಗಸ್ಟ್, ಸೆಪ್ಟಂಬರ್‌ಗಳಲ್ಲಿ ಶೇ. 89.

ಜಿಲ್ಲೆಯಲ್ಲಿ ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಅಧಿಕ ಮಳೆ. ಜುಲೈ ತಿಂಗಳೊಂದರಲ್ಲಿ ವರ್ಷದ ಒಟ್ಟು ಮಳೆಯ ಸು. 1/3 ಭಾಗ ಬೀಳುತ್ತದೆ. ಪೂರ್ವ ಭಾಗದಲ್ಲಿ ಮಳೆ ಕಡಿಮೆ; ಕಡೂರು ತಾಲ್ಲೂಕಿನಲ್ಲಿ ಕನಿಷ್ಠ ಕೊಪ್ಪ, ಮೂಡಿಗೆರೆ, ಶೃಂಗೇರಿಗಳಲ್ಲಿ 1000 ಸೆಂಮೀ ಮಳೆಯಾಗುತ್ತದೆ.

ಸಸ್ಯಸಂಪತ್ತು : ಈ ಜಿಲ್ಲೆಯ ಅರಣ್ಯದಲ್ಲಿ ತೇಗ, ಶ್ರೀಗಂಧ, ಮತ್ತಿ, ನಂದಿ, ಹಲಸು, ದಬ್ಬೆ, ಹೆಬ್ಬಲಸು ನೇರಳೆ, ಸಾಗುವಾನಿ ಮುಂತಾದ ಉಪಯುಕ್ತ ಮರಗಳಿವೆ. ಬಾಬಾಬುಡನ್‌ಗಿರಿ ಗಿಡಮೂಲಿಕೆಗಳಿಗೆ ಹೆಸರುವಾಸಿಯಾಗಿದೆ. ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ವಿಪುಲವಾದ ಬಿದಿರು ಕಾಡುಗಳುಂಟು. ಕಾಗದ ತಯಾರಿಸಲು ಬಿದಿರುಗಳನ್ನು ಇಲ್ಲಿಂದ ಸಾಗಿಸಲಾಗುತ್ತದೆ. ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತೀರ್ಣ 1,75,129 ಹೆಕ್ಟೇರ್.

ಪ್ರಾಣಿಸಂಪತ್ತು : ಪ್ರಾಣಿಸಂಪತ್ತು ಈ ಜಿಲ್ಲೆಯಲ್ಲಿ ಹೇರಳವಾಗಿದೆ. ಇಲ್ಲಿಯ ಕಾಡುಗಳಲ್ಲಿ ಆನೆ, ಹುಲಿ, ಕಾಡುಕೋಣ, ತೋಳ, ಚಿರತೆ, ಹಂದಿ, ಕಡವೆ, ಸಾರಂಗ, ಜಿಂಕೆ, ಮುಸಿಯ, ಕೆಂಜಳಿಲು, ಕರಡಿ, ಮುಳ್ಳುಹಂದಿ, ಕಾಡುಕುರಿ, ಉಡ, ಪುಣುಗ, ಬರ್ಕ, ಮೊಲ, ನರಿ ಮೊದಲಾದ ಮೃಗಗಳು, ಬಾವಲಿ, ರಣಹದ್ದು, ಕಾಡುಕೋಳಿ, ನವಿಲು, ಕೋಗಿಲೆ, ಗವುಜುಗ, ಗಿಡುಗ, ಕಾಜಾಣ, ಬೆಳ್ಳಕ್ಕಿ, ಕೆಂಭೂತ ಪಕ್ಷಿಗಳು ಬಾತು ಜಾತಿಗೆ ಸೇರಿದ ಚರ್ಲೆ, ಕುಂಡಿಮುಳುಗ ಮೊದಲಾದ ನೀರು ಹಕ್ಕಿಗಳೂ, ಹೆಬ್ಬಾವು, ಮಂಡಲ, ಕಟುಗ, ಕಾಳಿಂಗಸರ್ಪ, ನಾಗರ, ಕೇರೆ ಮುಂತಾದ ಹಾವುಗಳೂ ಕೆರೆಗಳಲ್ಲಿ ಕುರಡಿ, ಮುರುಗೊಡವ, ಬಾಳೆ, ಅವಲು, ಕೊಚ್ಚಲು, ಕೊರೆ, ಮಳಲಿ, ಅರ್ಜು ಮುಂತಾದ ಮೀನುಗಳೂ ಮೊಸಳೆಗಳೂ ಇವೆ. ಮೀನುಗಳನ್ನು ಬಲೆ, ಗಾಣ, ಕೂಳಿ ಮುಂತಾದ ಸಾಧನಗಳಿಂದ ಹಿಡಿಯುತ್ತಾರೆ. ಇತ್ತೀಚೆಗೆ ಡೈನಮೈಟ್ ಹಾಕಿ ಮೀನುಗಳನ್ನು ಹಿಡಿಯುವುದೂ ಉಂಟು. ಇದರಿಂದ ಅನೇಕ ಜಲಜೀವಿಗಳು ನಷ್ಟವಾಗುತ್ತಿವೆ. ಇತ್ತೀಚೆಗೆ ಮರಕ್ಕಾಗಿ ಮತ್ತು ಸಾಗುವಳಿಗಾಗಿ ಕಾಡುಗಳು ನಾಶವಾಗುತ್ತಿರುವುದರಿಂದಲೂ ಷಿಕಾರಿಗಳಿಂದಲೂ ವನ್ಯಮೃಗಗಳು ನಶಿಸುತ್ತಿವೆ.

ವ್ಯವಸಾಯ ಮತ್ತು ಕೈಗಾರಿಕೆ : ಇಲ್ಲಿಯ ಮುಖ್ಯ ಕಸಬು ವ್ಯವಸಾಯ. ಕಾಫಿ ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಸು. 1,600 ಚ.ಕಿಮೀ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತಿದೆ. ಕಾಫಿಯನ್ನು ದಕ್ಷಿಣ ಭಾರತಕ್ಕೆ ಮೊಟ್ಟಮೊದಲ ಬಾರಿಗೆ ಬಾಬಾಬುಡನ್ ಎಂಬುವನು ಆಫ್ರಿಕದಿಂದ ತಂದು ಈ ಜಿಲ್ಲೆಯಲ್ಲಿರುವ ಬಾಬಾಬುಡನ್ ಗಿರಿಯಲ್ಲಿ ನೆಟ್ಟನೆಂದೂ ಅದರಿಂದ ಈ ಗಿರಿಗೆ ಅವನ ಹೆಸರೇ ಬಂತೆಂದೂ ಹೇಳಲಾಗಿದೆ. 1820ರ ತರುವಾಯ ಕಾಫಿ ಬೆಳೆ ಯುರೋಪಿಯನ್ ಬೆಳೆಗಾರರಿಂದ ಹೆಚ್ಚು ಪ್ರಚಾರಕ್ಕೆ ಬಂತು. ಸ್ಥಳೀಯ ಬೆಳೆಗಾರರು ಇದರಲ್ಲಿ ಆಸಕ್ತಿ ವಹಿಸಿದುದರಿಂದ ಇದು ಹೆಚ್ಚು ವ್ಯಾಪಕವಾಯಿತು. ಕಾಫಿ ಬೆಳೆಯ ಸಂಶೋಧನೆಗಾಗಿ ಬಾಳೆಹೊನ್ನೂರಿನಲ್ಲಿ ಒಂದು ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಗಿದೆ. ಅತ್ಯಧಿಕ ಮಳೆ ಬೀಳುವ ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ಅರ್‍ಯಾಬಿಕ ಕಾಫಿ ಉತ್ತಮವಾಗಿ ಬೆಳೆಯುತ್ತದೆ. ಉಳಿದಲ್ಲಿ ರೊಬಸ್ಟ ಕಾಫಿ ಚೆನ್ನಾಗಿ ಬೆಳೆಯುತ್ತದೆ. ಏಲಕ್ಕಿ ಇನ್ನೊಂದು ಮುಖ್ಯ ವಾಣಿಜ್ಯ ಬೆಳೆ. ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಮೂಡಿಗೆರೆಯ ಬಳಿ ಒಂದು ಪ್ರಾದೇಶಿಕ ಏಲಕ್ಕಿ ಸಂಶೋಧನಾಲಯವನ್ನು ಸ್ಥಾಪಿಸಲಾಗಿದೆ. ಬೆಲೆ ಕುಸಿತದಿಂದಾಗಿ ಈಗ (2008) ಏಲಕ್ಕಿ ಬೆಳೆಯುವ ಸ್ಥಳಗಳಲ್ಲಿ ಹೆಚ್ಚಾಗಿ ಕಾಫಿ ಬೆಳೆಯುವ ಪ್ರಯತ್ನ ನಡೆಯುತ್ತಿದೆ. ಕಳಸಕ್ಕೆ ಸಮೀಪದಲ್ಲಿ ಕೆಲವು ಚಹ ತೋಟಗಳಿವೆ. ಈ ಜಿಲ್ಲೆಯಲ್ಲಿ ಅಡಕೆಯೂ ಹೆಚ್ಚಾಗಿ ಬೆಳೆಯುತ್ತದೆ. ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಮತ್ತು ಕಳಸದ ಸುತ್ತುಮುತ್ತ ಬಯಲುಸೀಮೆಯಲ್ಲಿ ಕೆಲವೆಡೆ ಅಡಕೆ ತೋಟಗಳಿವೆ.

ಬತ್ತ ಇಲ್ಲಿಯ ಮುಖ್ಯ ಆಹಾರ ಬೆಳೆ. ಕಪ್ಪುಮಣ್ಣಿನಿಂದ ಕೂಡಿದ ಪೂರ್ವ ಭಾಗದಲ್ಲಿ ಅದರಲ್ಲೂ ಬಯಲು ನಾಡಿನ ಭಾಗದಲ್ಲಿ ಬತ್ತದ ಇಳುವರಿ ಹೆಚ್ಚು ; ಅದನ್ನು ಬೆಳೆಯುವ ಪ್ರದೇಶವೂ ಹೆಚ್ಚು. ಮಲೆನಾಡಿನ ಪ್ರದೇಶಗಳಲ್ಲಿ ಬತ್ತದ ಬಯಲುಗಳು ಕಡಿಮೆ. ತರೀಕೆರೆ ತಾಲ್ಲೂಕಿನಲ್ಲಿ ಭದ್ರಾ ನದಿಗೆ ಅಡ್ಡಲಾಗಿ ಲಕ್ಕವಳ್ಳಿ ಅಣೆಕಟ್ಟನ್ನು ಕಟ್ಟಲಾಗಿದೆ. ಇದರ ಹೆಚ್ಚಿನ ನೀರಾವರಿ ಸೌಲಭ್ಯ ಶಿವಮೊಗ್ಗ ಜಿಲ್ಲೆಗೆ ದೊರೆಯುತ್ತದೆ. ಕಬ್ಬನ್ನು ಕೆಲವೆಡೆ ಬೆಳೆಯಲಾಗುತ್ತಿದೆ. ತೆಂಗು ಕಡೂರು ತಾಲ್ಲೂಕಿನ ಮುಖ್ಯ ವಾಣಿಜ್ಯ ಬೆಳೆ.

ಈ ಜಿಲ್ಲೆಯಲ್ಲಿ ಯಾವ ಬೃಹತ್ ಕೈಗಾರಿಕೆಗಳೂ ಇಲ್ಲ. ಕೆಮ್ಮಣ್ಣುಗುಂಡಿಯಲ್ಲಿ ಕಬ್ಬಿಣದ ಅದಿರು ತೆಗೆಯುವ ಉದ್ಯಮ ನೂರಾರು ಜನರಿಗೆ ಉದ್ಯೋಗ ಒದಗಿಸಿದೆ. ಚಿಕ್ಕಮಗಳೂರಿನಲ್ಲಿ ಕಾಫಿ ಹದ ಮಾಡುವ ಕಾರ್ಖಾನೆಗಳಿವೆ. 1920ರಲ್ಲಿ ಕಾಫಿ ಹದ ಮಾಡುವ ಕಾರ್ಖಾನೆಯನ್ನೂ ಸ್ಥಾಪಿಸಲಾಯಿತು. ಈಗ ಜಿಲ್ಲೆಯ ಹಲವಾರು ಕಡೆ ಅಕ್ಕಿಗಿರಣಿಗಳಿವೆ. ಕಾಫಿ ತೋಟಗಳಿಗೆ ಅಗತ್ಯವಿರುವ ಉಪಕರಣಗಳನ್ನು ತಯಾರಿಸುವ 4 ಕಾರ್ಯಾಗಾರಗಳು ಚಿಕ್ಕಮಗಳೂರಿನಲ್ಲಿವೆ. 1911 ರಲ್ಲಿ ಸ್ಥಾಪಿಸಿದ ಒಂದು ಹೆಂಚಿನ ಕಾರ್ಖಾನೆ ಶೃಂಗೇರಿಯಲ್ಲಿದೆ. ಚಿಕ್ಕಮಗಳೂರು, ತರೀಕೆರೆ, ಮೂಡಿಗೆರೆ ಮತ್ತಿತರೆಡೆಗಳಲ್ಲಿ ಮರ ಕೊಯ್ಯುವ ಕಾರ್ಖಾನೆಗಳೂ ಅಜ್ಜಂಪುರ, ಶಿವನಿ, ಬೀರೂರುಗಳಲ್ಲಿ ನೂಲಿನ ಮತ್ತು ಕಂಬಳಿ ತಯಾರಿಸುವ ಮಗ್ಗಗಳು ಉಂಟು.

ಸಾರಿಗೆ ಸಂಪರ್ಕ : ಬೆಂಗಳೂರು–ಪುಣೆ ರೈಲುಮಾರ್ಗ ಕಡೂರಿನ ಮೂಲಕ ಹಾದುಹೋಗುತ್ತದೆ. ಇದಕ್ಕೆ ಕವಲಾಗಿ ಬೀರೂರಿನಲ್ಲಿ ತರೀಕೆರೆಯ ಮೂಲಕ ಶಿವಮೊಗ್ಗಕ್ಕೆ ಒಂದು ರೈಲುಮಾರ್ಗವಿದೆ. ಬೆಂಗಳೂರು–ಮಂಗಳೂರು ಹೆದ್ದಾರಿಯೂ ಜಿಲ್ಲೆಯನ್ನು ಹಾದುಹೋಗುತ್ತದೆ. ಬೆಂಗಳೂರು–ಹೊನ್ನಾವರ ಹೆದ್ದಾರಿ ಕಡೂರಿನ ಮೂಲಕ ಸಾಗುತ್ತದೆ. ಚಿಕ್ಕಮಗಳೂರಿನಿಂದ ಬೆಂಗಳೂರು, ಮೈಸೂರು, ಹಾಸನ, ಶಿವಮೊಗ್ಗ, ಮಡಿಕೇರಿ, ಬೆಳಗಾಂವಿ, ಚಿತ್ರದುರ್ಗ, ಹರಿಹರ, ಉಡುಪಿ, ಮಂಗಳೂರು ಮೊದಲಾದ ಕಡೆಗಳಿಗೆ ಬಸ್ಸುಮಾರ್ಗಗಳಿವೆ.

ಈ ಜಿಲ್ಲೆಯ ಸಾಕ್ಷರತೆ ಶೇ. 34.93. ಜಿಲ್ಲೆಯಲ್ಲಿ 914 ಪ್ರಾಥಮಿಕ ಶಾಲೆಗಳು, 346 ಮಾಧ್ಯಮಿಕ ಶಾಲೆಗಳು, 62 ಪ್ರೌಢಶಾಲೆಗಳು, 4 ಪ್ರಥಮದರ್ಜೆ ಕಾಲೇಜುಗಳು ಇವೆ. ಒಂದು ಪಾಲಿಟೆಕ್ನಿಕ್, ಒಂದು ಶಾಲಾ ಶಿಕ್ಷಕರ ತರಬೇತು ಸಂಸ್ಥೆ ಇವೆ.

ಮುಖ್ಯ ಸ್ಥಳಗಳು : ಈ ಜಿಲ್ಲೆಯ ತಾಲ್ಲೂಕು–ಕೇಂದ್ರಗಳು ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ನರಸಿಂಹರಾಜಪುರ, ಕಡೂರು, ತರೀಕೆರೆ ಮತ್ತು ಶೃಂಗೇರಿ ಈ ತಾಲ್ಲೂಕು ಕೇಂದ್ರಗಳಲ್ಲೂ ಅಜ್ಜಂಪುರ, ಬೀರೂರುಗಳಲ್ಲೂ ಪೌರಸಭೆಗಳಿವೆ. ಕಡೂರು, ಬೀರೂರು, ಅಜ್ಜಂಪುರ ಮತ್ತು ತರೀಕೆರೆಗಳು ರೈಲು ನಿಲ್ದಾಣಗಳು.

ಚಿಕ್ಕಮಗಳೂರು ತಾಲ್ಲೂಕು : ಇದು ಉ.ಅ. $13^{0}11'$–$13^{0}34'$ ಮತ್ತು ಪೂ.ರೇ. $75^{0}29'$–$76^{0}1'$ ನಡುವೆ, ಜಿಲ್ಲೆಯ ಮಧ್ಯಭಾಗದಲ್ಲಿದೆ. ವಿಸ್ತೀರ್ಣ 4123 ಚ.ಕಿಮೀ. ಪಶ್ಚಿಮಘಟ್ಟ ಶ್ರೇಣಿಯಿಂದ ಒಳಚಾಚಿರುವ ಬೆಟ್ಟದ ಸಾಲು ಈ ತಾಲ್ಲೂಕಿನವರೆಗೂ ಹಬ್ಬಿದೆ. ಈ ಬೆಟ್ಟದ ಸಾಲಿನಲ್ಲಿಯೇ ಬರುವ ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್ ಗಿರಿ ಇವು ಕರ್ನಾಟಕದ ಅತ್ಯಂತ ಎತ್ತರದ ಶಿಖರಗಳಾಗಿವೆ. ಇಲ್ಲಿಯ ಮಲೆನಾಡು ಪ್ರದೇಶದ ಬೆಟ್ಟಗಳ ಇಳಿಜಾರು ಕಾಫಿ ಬೆಳೆಗೆ ಪ್ರಶಸ್ತವಾಗಿದೆ. ಚಿಕ್ಕಮಗಳೂರು ಪಟ್ಟಣದ ಸುತ್ತಮುತ್ತಲ ಮತ್ತು ಪೂರ್ವ ಭಾಗಕ್ಕಿರುವ ಬಯಲು ಪ್ರದೇಶಗಳು ಬತ್ತಕಬ್ಬುಗಳನ್ನು ಬೆಳೆಯಲು ಫಲವತ್ತಾಗಿವೆ. ಈ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪವೂ ಹೇರಳವಾಗಿವೆ.

ಚಿಕ್ಕಮಗಳೂರು ಪಟ್ಟಣ: ಉ.ಅ. $13^{0}18$, ಪೂ.ರೇ. $75^{0}51$ ಮೇಲೆ ಇದೆ. 1865ರಲ್ಲಿ ಇದು ಜಿಲ್ಲಾ ಕೇಂದ್ರವಾಯಿತು. ಜನಸಂಖ್ಯೆ 10,10,125.

ಇಲ್ಲಿಯ ಪೌರಸಭೆಯನ್ನು 1870ರಲ್ಲಿ ಸ್ಥಾಪಿಸಲಾಯಿತು. ಹಿರೇಕೊಳಲೆ ಕೆರೆಯಿಂದ ಇಲ್ಲಿಗೆ ನೀರು ಸರಬರಾಜಾಗುತ್ತದೆ. ಜಿಲ್ಲಾಮಟ್ಟದ ಕಚೇರಿಗಳೂ ಸೆಷನ್ಸ್ ಕೋರ್ಟು ಇವೆ. ಚಿಕ್ಕಮಗಳೂರಿನಿಂದ ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾಂವಿಗಳಿಗೆ ನೇರ ಬಸ್ ಸಂಪರ್ಕವುಂಟು. 40 ಕಿಮೀ ದೂರದ ಕಡೂರೇ ಇಲ್ಲಿಗೆ ಅತ್ಯಂತ ಸಮೀಪದ ರೈಲ್ವೆ ನಿಲ್ದಾಣ. (ಡಿ.ಎಸ್.ಜೆ.)

**ಚಿಕ್ಕೋಡಿ:** ಕರ್ನಾಟಕ ರಾಜ್ಯದ ಬೆಳಗಾಂವಿ ಜಿಲ್ಲೆಯ ವಾಯವ್ಯ ಭಾಗದ ಒಂದು ತಾಲ್ಲೂಕು; ಆ ತಾಲ್ಲೂಕಿನ ಕಸಬೆ. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆ ಮತ್ತು ಬೆಳಗಾಂವಿ ಜಿಲ್ಲೆಯ ಅಥಣಿ, ರಾಯಬಾಗ್, ಗೋಕಾಕ್ ಮತ್ತು ಹುಕ್ಕೇರಿ ತಾಲ್ಲೂಕುಗಳೂ ಈ ತಾಲ್ಲೂಕನ್ನು ಬಳಸಿವೆ. ವಿಸ್ತೀರ್ಣ 21.75 ಚ.ಕಿಮೀ. ಇಲ್ಲಿ 141 ಹಳ್ಳಿಗಳಿವೆ. ಜನಸಂಖ್ಯೆ 5,61,671.

ಚಿಕ್ಕೋಡಿ ತಾಲ್ಲೂಕಿನ ಪಶ್ಚಿಮ ಭಾಗವನ್ನು ಮಲೆನಾಡಿನ ಸೆರಗೆಂದು ಕರೆಯುತ್ತಾರೆ. ಈ ತಾಲ್ಲೂಕಿನ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಗುಡ್ಡಗಳು ಬಹಳ. ಉಳಿದ ಭಾಗಗಳಲ್ಲಿ ಅಲ್ಲಲ್ಲಿ ಸಣ್ಣದೊಡ್ಡ ಗಿಡಗಳು ತುಂಬಿವೆ. ಮಧ್ಯಭಾಗ ಉಬ್ಬುಳ್ಳ ಪ್ರದೇಶ.

ತಾಲ್ಲೂಕಿನ ಬಹುಭಾಗವನ್ನು ಗುಡ್ಡಗಳು ಆವರಿಸಿದ್ದರೂ ಮುಖ್ಯವಾಗಿ ಪಶ್ಚಿಮದಿಂದ ಪೂರ್ವಕ್ಕೆ ಹಬ್ಬಿರುವ ಗುಡ್ಡಗಳ ಎರಡು ಸಾಲುಗಳನ್ನು ಕಾಣಬಹುದು. ಮೊದಲನೆಯ ಸಾಲು ಬೆಳಗಾಂವಿಯ ಪಶ್ಚಿಮದಲ್ಲಿ 62 ಕಿಮೀ ಮೇಲೆ ಆರಂಭವಾಗಿ ಘಟಪ್ರಭಾ–ಮಲಪ್ರಭಾ ನದಿಗಳ ಮಧ್ಯದಲ್ಲಿ ಪೂರ್ವ ಮೇರೆಯನ್ನು ದಾಟಿ ಬಿಜಾಪುರ ಜಿಲ್ಲೆಯನ್ನು ಸೇರುತ್ತದೆ. ಎರಡನೆಯ ಸಾಲು ಸಾವಂತವಾಡಿಯ ಭಾಗದಲ್ಲಿ ಆರಂಭವಾಗಿ ಘಟಪ್ರಭಾ–ಕೃಷ್ಣಾ ಇವುಗಳ ಮಧ್ಯೆ ಪೂರ್ವಕ್ಕೆ ಸಾಗಿ ಬಿಜಾಪುರ ಜಿಲ್ಲೆಯನ್ನು ಸೇರುತ್ತದೆ. ಈ ಗುಡ್ಡಗಳ ಮೇಲೆ ಕೆಲವು ಕಡೆ ಪುರಾತನ ಅವಶೇಷಗಳಿಂದ ಕೂಡಿದ ಹಾಳಾದ ಕೋಟೆಗಳನ್ನು ಕಂಡರೆ ಮತ್ತೆ ಕೆಲವು ಕಡೆ ಮರಗಿಡ ಬೆಳೆದಿರುವುದನ್ನು ಕಾಣಬಹುದು. ಮತ್ತೆ ಕೆಲವು ಕಡೆ ಅಡಿಯಿಂದ ಮುಡಿಯವರೆಗೆ ನಾನಾ ಪ್ರಕಾರದ ಬೆಳೆಗಳು ಶೋಭಿಸುತ್ತವೆ.

ನಾಗರಾಳದ ಗುಡ್ಡ ಚಿಕ್ಕೋಡಿಯ ನೆರೆಯಲ್ಲಿರುವ ಅತ್ಯಂತ ಎತ್ತರದ ಪ್ರದೇಶದಲ್ಲಿದೆ. ಇದಲ್ಲದೆ ಮಲ್ಲಪ್ಪನ ಗುಡ್ಡ, ಜೋಗೀಗುಡ್ಡ, ನಿರ್ವಾಣೆಪ್ಪನ ಗುಡ್ಡಗಳು ತಕ್ಕಮಟ್ಟಿಗೆ ಪ್ರಸಿದ್ಧಿ ಪಡೆದಿವೆ. ಈ ಪ್ರದೇಶಗಳಲ್ಲಿ ಹುಲ್ಲು, ಗೋದಿ, ಜೋಳಗಳನ್ನು ಬೆಳೆಯಲಾಗುತ್ತದೆ.

ಈ ತಾಲ್ಲೂಕಿನಲ್ಲಿ ಕೃಷ್ಣಾನದಿ ದೂಧಗಂಗಾನದಿಯೊಡನೆ ಸಂಗಮಿಸಿ ಹರಿಯುತ್ತದೆ. ವೇದಗಂಗೆ ಸಹ್ಯಾದ್ರಿಯಲ್ಲಿ ಹುಟ್ಟಿ ಈ ತಾಲ್ಲೂಕಿನಲ್ಲಿ ಹರಿದು ಬೋಜದ ಹತ್ತಿರ ದೂಧಗಂಗೆಗೆ ಸೇರುತ್ತದೆ. ದೂಧಗಂಗೆಯೂ ಸಹ್ಯಾದ್ರಿಯಲ್ಲಿ ಹುಟ್ಟಿ ಈ ತಾಲ್ಲೂಕಿನಲ್ಲಿ ಹರಿದು ಕಲ್ಲೊಳ್ಳಿಯ ಹತ್ತಿರ ಕೃಷ್ಣೆಯನ್ನು ಸಂಗಮಿಸುತ್ತದೆ. ಈ ಹೊಳೆಗಳ ದಂಡೆಯ ಮೇಲಿನ ಭೂಮಿ

ಹಾಗೂ ತಾಲ್ಲೂಕಿನ ಉತ್ತರ ಭಾಗದ ನೆಲ ಹೆಚ್ಚು ಫಲವತ್ತಾಗಿದೆ. ತಾಲ್ಲೂಕಿನ ಪಶ್ಚಿಮದಲ್ಲಿ ಕೆಂಪು ಮಣ್ಣಿದೆ. ಉಳಿದದ್ದೆಲ್ಲ ಕಪ್ಪು ಭೂಮಿ. ಉಸುಬು ಕೂಡಿದ ಕೆಂಪು ನೆಲ ಕಪ್ಪು ನೆಲದಷ್ಟು ಫಲವತ್ತಾಗಿಲ್ಲ.

ಚಿಕ್ಕೋಡಿ ತಾಲ್ಲೂಕಿನಲ್ಲಿ ನಿಯತವಾಗಿಯೂ ವಿಪುಲವಾಗಿಯೂ ಮಳೆ ಆಗುತ್ತದೆ. ಸರಾಸರಿ 50 ಸೆಂಮೀ. ಇಲ್ಲಿ ಮುಂಗಾರು ಮಳೆ ಸಾಮಾನ್ಯವಾಗಿ ಜೂನ್‌ನಲ್ಲಿ ಆರಂಭವಾಗುತ್ತದೆ. ಅಧಿಕ ಮಳೆಯಿಂದಾಗಿ ಮಲೆನಾಡಿನ ಸೆರಗಿನಲ್ಲಿ ಆರ್ದ್ರತೆಯ ವಾಯುಗುಣ ಇರುತ್ತದೆ. ಈ ಆರ್ದ್ರ ಹವೆಯ ಪರಿಣಾಮವಾಗಿ ಅಲ್ಲಿ ಚಳಿಜ್ವರ, ಸನ್ನಿಪಾತ, ಅಜೀರ್ಣ, ವಿಷಮಜ್ವರ, ನೆಗಡಿ ಕೆಮ್ಮು ಮೊದಲಾದ ರೋಗಗಳ ಭಯವೂ ಬಹಳ.

ಹಳ್ಳಗಳಿಂದಲೂ ಕೆರೆಗಳಿಂದಲೂ ಬಾವಿಗಳಿಂದಲೂ ಕೆಲಮಟ್ಟಿಗೆ ಈ ತಾಲ್ಲೂಕಿನಲ್ಲಿ ನೀರನ್ನು ತೋಟಗಾರಿಕೆಗಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಇಂಥ ಹಳ್ಳಗಳಲ್ಲಿ ಕರೋಸಿ ಹಳ್ಳ ಮತ್ತು ನಿಪ್ಪಾಣಿ ಹಳ್ಳಗಳು ಪ್ರಮುಖವಾದವು. ಪ್ರತಿ 22 ಹೆಕ್ಟೇರ್‌ಸಾಗುವಳಿ ಭೂಮಿಗೆ ಒಂದರಂತೆ ಕೆರೆಗಳನ್ನು ಕಾಣಬಹುದು. ಬಾವಿಗಳೂ ಹೆಚ್ಚು ಸಂಖ್ಯೆಯಲ್ಲಿವೆ.

ಸಾಮಾನ್ಯವಾಗಿ ಇಲ್ಲಿ ಎರಡು ಫಸಲು ತೆಗೆಯಲಾಗುತ್ತದೆ. ಜೋಳ, ಸಜ್ಜೆ, ನವಣೆ, ಬತ್ತ, ಗೋದಿ, ಮೆಕ್ಕೆಜೋಳ, ಜವೆಗೋದಿ, ಹುರುಳಿ, ಅಲಸಂದೆ, ಅಗಸೆ, ಉದ್ದು, ಎಳ್ಳು, ಹತ್ತಿ, ಪುಂಡಿ, ತಂಬಾಕು, ಮೆಣಸಿನಕಾಯಿ, ಕಬ್ಬು ಮುಖ್ಯ ಬೆಳೆಗಳು. ಬಯಲುಸೀಮೆಯಲ್ಲಿ ತೇಗ, ಗಂಧ, ಜಾಲಿ, ಈಚಲು, ಕಳ್ಳಿ, ಮುಳ್ಳುಗಳ್ಳಿ, ಬೇವು, ಬಸಿರೆ, ಹುಣಸೆ, ಅರಳೆ, ಮಾವು, ಮಸಿವಾಳ, ಹುಲಗಲಿ, ದಿಂಡಲ, ಅತ್ತಿ, ಬಣವರಿ ಮುಂತಾದ ಗಿಡಗಳನ್ನು ಕಾಣಬಹುದು. ಇವುಗಳಲ್ಲದೆ ಕಿರುಜಾತಿಯ ಗಿಡಗಳಾದ ಹೊನ್ನವರಿ, ಮದುಗುಣಿಕೆ, ಗೊಳಗೋಲಕೆ ಮೊದಲಾದವನ್ನು ನೋಡಬಹುದು. ನೀರಿನ ಸೌಕರ್ಯ ತಕ್ಕಮಟ್ಟಿಗೆ ಇರುವುದರಿಂದ ಎಲೆಬಳ್ಳಿ, ಬಾಳೆ, ತರಕಾರಿಗಳೂ ಇಲ್ಲಿ ವಿಶೇಷವಾಗಿ ಬೆಳೆಯುತ್ತವೆ.

ಎತ್ತು, ಎಮ್ಮೆ, ಕೋಣ, ಕುರಿ, ಕುದುರೆ, ಆಕಳುಗಳನ್ನು ಹೆಚ್ಚಾಗಿ ಸಾಕುವರು. ಅವುಗಳಿಂದ ಲಾಭವೂ ಉಂಟು. ಅಡವಿಗಳಲ್ಲಿ ಹಂದಿ, ಮೊಲ, ನರಿ, ಚಿರತೆ, ಕತ್ತೆಕಿರುಬ, ಅಡವಿಬೆಕ್ಕು ಮೊದಲಾದ ಪ್ರಾಣಿಗಳಿವೆ.

ಈ ಪ್ರದೇಶದಲ್ಲಿ ಹಬ್ಬಿರುವ ಗುಡ್ಡಗಳ ಒರೆಯಲ್ಲಿ ಚಿನ್ನದ ಮಣ್ಣು ದೊರೆಯುತ್ತದೆ. ಆದರೆ ಪರಿಶ್ರಮಕ್ಕೆ ತಕ್ಕಂತೆ ಅದರಿಂದ ಲಾಭ ಕಡಿಮೆ. ಈ ಭಾಗದಲ್ಲಿ ಹರಿಯುವ ಕೃಷ್ಣಾನದಿಯ ಪ್ರವಾಹದಲ್ಲಿ ಗೋಮೇದಿಕವೆಂಬ ಬೆಲೆಬಾಳುವ ಹರಳುಗಳು ದೊರೆಯುತ್ತವೆ. ಸರವು ಎಂಬಲ್ಲಿ ಅಭ್ರಕದ ನಿಕ್ಷೇಪಗಳಿವೆ.

ತಾಲ್ಲೂಕಿನ ಮುಖ್ಯ ಉದ್ಯೋಗ ಒಕ್ಕಲುತನ. ಕಬ್ಬನ್ನು ಹೆಚ್ಚಾಗಿ ಬೆಳೆಯುವುದರಿಂದ ಬೆಲ್ಲ ಹಾಗೂ ಸಕ್ಕರೆಗಳನ್ನು ಮಾಡುವ ಉದ್ಯಮಗಳೂ ಸಾಕಷ್ಟು ಪ್ರಗತಿಸಾಧಿಸಿವೆ. ತಾಮ್ರ ಹಾಗೂ ಹಿತ್ತಾಳೆಯ ಸಾಮಾನುಗಳ ಕೈಗಾರಿಕೆಯೂ ಉಂಟು. ಸೀರೆ, ಕುಪ್ಪಸ, ರುಮಾಲು, ಹಚ್ಚಡ ಮೊದಲಾದವುಗಳನ್ನು ನೇಯುವ ಉದ್ಯಮವನ್ನು ಇನ್ನೂ ಬೆಳೆಸಲು ಅವಕಾಶಗಳಿವೆ. ಬಂಗಾರದ ಆಭರಣಗಳಲ್ಲಿ ರತ್ನಗಳನ್ನು ಕೂಡಿಸುವ ಉದ್ಯಮ ಜನಪ್ರಿಯವಾಗಿದೆ. ಈ ಕೆಲವು ಉದ್ಯಮಗಳನ್ನು ಬಿಟ್ಟರೆ ಸಾಮಾನ್ಯವಾಗಿ ಎಲ್ಲ ಕಡೆಗೂ ಇರುವಂತೆ ಇಲ್ಲೂ ಬಡಗಿತನ, ಕಮ್ಮಾರಿಕೆ, ಚಮ್ಮಾರಿಕೆ, ಉಪ್ಪಾರಿಕೆ, ಗಾಣಿಗತನ ಮೊದಲಾದ ಉದ್ಯೋಗಗಳು ಉಳಿದುಬಂದಿವೆ. ಒಕ್ಕಲುತನವನ್ನು ಬಿಟ್ಟರೆ ಎರಡನೆಯ ಪ್ರಮುಖ ಉದ್ಯೋಗವೆಂದರೆ ವ್ಯಾಪಾರ. ಹತ್ತಿ, ಬೆಲ್ಲ, ತಂಬಾಕು, ಮೆಣಸಿನ ಕಾಯಿ ನಿಪ್ಪಾಣಿಯಿಂದ ಕೊಂಕಣ, ಕಲಾದಗಿ, ಪುಣೆ ಮೊದಲಾದ ಕಡೆಗಳಿಗೆ ನಿಯಾತವಾಗುತ್ತವೆ. ಏಲಕ್ಕಿ ಮೆಣಸುಗಳು ಕೊಂಕಣದಿಂದ ಆಯಾತವಾಗುವ ವಸ್ತುಗಳಲ್ಲಿ ಪ್ರಮುಖವಾದವು.

ತಾಲ್ಲೂಕಿನಲ್ಲಿ ಪ್ರತಿ 259 ಚ.ಕಿಮೀ ಗೆ 19 ಹಳ್ಳಿಗಳಿವೆ. ಇಲ್ಲಿ ಕನ್ನಡ ಭಾಷೆಯನ್ನು ಆಡುವವರ ಸಂಖ್ಯೆಯೇ ಹೆಚ್ಚು. ಮರಾಠಿ ಮತ್ತು ಉರ್ದು ಆಡುವವರು ಅತ್ಯಲ್ಪ.

ಅಂಕಲಿ, ಬಂಬಲವಾಡ, ಬೆಡಕಿಹಾಳ, ಬೆಳಕೂಡ, ಬೋರಗಾವ, ಚಿಂಚಣಿ, ಗಳತಿಗಿ, ಹತ್ತರವಾಟ, ಹಿರೇಕೋಡಿ, ಕಲ್ಲೋಳ, ಕೆರೂರ, ನಾಗರಮನೋಳಿ, ಸದಲಗಿ, ಎಕ್ಸಂಬ, ಮಾಂಜರಿ, ಶಮನೇವಾಡಿ, ಕರಗಾವ–ಇವು ಈ ತಾಲ್ಲೂಕಿನ ಇನ್ನು ಕೆಲವು ಮುಖ್ಯ ಊರುಗಳು.

(ಎಲ್.ಟಿ.ಎನ್.)

**ಚಿತ್ತಗಾಂಗ್:** ಬಾಂಗ್ಲಾದೇಶದ ಮುಖ್ಯ ರೇವುಪಟ್ಟಣ. ಅದೇ ಹೆಸರಿನ ಜಿಲ್ಲೆ ಹಾಗೂ ವಿಭಾಗದ ಆಡಳಿತ ಕೇಂದ್ರ. ಉ.ಅ.$22^0 2'$ ಮತ್ತು ಪೂ.ರೇ.$91^0 50'$ ಮೇಲೆ, ಕರ್ನಫೂಲಿ ನದೀಮುಖದಿಂದ 18 ಕಿಮೀ ದೂರದಲ್ಲಿದೆ. ಹಸುರು ತುಂಬಿದ ಗುಡ್ಡ ಬಯಲುಗಳ ನಡುವೆ ನಿರ್ಮಿತವಾದ ನಗರ ಸುಂದರವಾಗಿದೆ. ಸಮುದ್ರದ ಮೇಲಿಂದ ಬೀಸುವ ಗಾಳಿಯಿಂದಾಗಿ ಹವ ತಂಪಾಗಿರುತ್ತದೆ. ಇಲ್ಲಿಂದ ಢಾಕಾ ನಗರಕ್ಕೆ ಕೋಮಿಲ್ಲದ ಮೂಲಕ ರೈಲ್ವೆ ಸಂಪರ್ಕವೂ ಢಾಕಾ,ಕಾಕ್ಸ್ ಬಜಾರ್, ರಂಗೂನ್, ಕೋಲ್ಕತಗಳಿಗೆ ವಿಮಾನ ಸಂಪರ್ಕವೂ ಉಂಟು. ಇದೊಂದು ನೈಸರ್ಗಿಕ ಬಂದರಾದ್ದರಿಂದ ಉತ್ತಮವಾಗಿದೆ. ಚಹ, ಸೆಣಬು ಮತ್ತು ಸೆಣಬು ಉತ್ಪನ್ನಗಳು ಇಲ್ಲಿಂದ ರಫ್ತಾಗುತ್ತವೆ. ಏಕಕಾಲದಲ್ಲಿ ಇಪ್ಪತ್ತು ಹಡಗುಗಳು ನಿಲ್ಲಲು ಇಲ್ಲಿ ಸೌಲಭ್ಯವುಂಟು. ಬಂದರಿನ ಪಕ್ಕದಲ್ಲೇ ಚಿತ್ತಗಾಂಗ್ ನಗರ ಬೆಳೆದಿದೆ. ಬಂಗಾಲದಲ್ಲಿ ಮೊಗಲರ ಗವರ್ನರಾಗಿದ್ದ ಷಯಿಸ್ತಾಖಾನ್ ಇದನ್ನು ಕಟ್ಟಿಸಿದ. ಚಿತ್ತಗಾಂಗಿನ ಕೈಗಾರಿಕಾ ವಲಯ ನಗರದ ಉತ್ತರದಲ್ಲಿದೆ. ಇಲ್ಲಿ ಹತ್ತಿ ಮತ್ತು ಸೆಣಬು ಗಿರಣಿಗಳೂ ಚಹ ಮತ್ತು ಬೆಂಕಿಕಡ್ಡಿ ಕಾರ್ಖಾನೆಗಳೂ ಎಂಜಿನಿಯರಿಂಗ್ ಕೈಗಾರಿಕೆಗಳೂ ಇವೆ. ಇದಕ್ಕೆ 16 ಕಿಮೀ ದೂರದಲ್ಲಿ ರೈಲ್ವೆ ಕಾರ್ಯಾಗಾರವಿದೆ. ಚಿತ್ತಗಾಂಗ್ ಬಾಂಗ್ಲಾದೇಶದ ವಿದೇಶಿ ವ್ಯಾಪಾರ ಕೇಂದ್ರ.

1864ರಲ್ಲಿ ಇದು ಪೌರಸಭಾ ನಗರವಾಯಿತು. ಅಸ್ಸಾಂ–ಬಂಗಾಲಗಳ ನಡುವೆ ರೈಲುಮಾರ್ಗ ನಿರ್ಮಾಣವಾದ ಮೇಲೆ ಇದು ಬೆಳೆಯತೊಡಗಿತು. ಭಾರತದ ವಿಭಜನೆಯಾದಾಗ (1947) ಇದು ಪೂರ್ವ ಪಾಕಿಸ್ತಾನದಲ್ಲಿ ಸೇರಿತು. ಬಾಂಗ್ಲಾದೇಶದ ವಿಮೋಚನೆಯಾದ ಮೇಲೆ ಇದು ಆ ದೇಶದ ಮುಖ್ಯ ಬಂದರಾಗಿ ಮುಂದುವರಿಯುತ್ತಿದೆ. d£ÀÄS£É 6 «ÄAiÄÃï (2000).

(ಡಿ.ಎಸ್.ಜೆ.)

**ಚಿತ್ತಾಪುರ:** ಕರ್ನಾಟಕ ರಾಜ್ಯದ ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು. ಆ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಗುಲ್ಬರ್ಗ, ಚಿಂಚೋಳಿ, ಸೇಡಂ ಯಾದಗಿರಿ ಮತ್ತು ಜೇವರಗಿ ತಾಲ್ಲೂಕುಗಳು ಸುತ್ತುವರಿದಿವೆ. ಸಮುದ್ರಮಟ್ಟದಿಂದ 1,471 ಮೀ ಎತ್ತರವಿರುವ ಈ ತಾಲ್ಲೂಕಿನ ವಿಸ್ತೀರ್ಣ 1770 ಚ.ಕಿಮೀ.

ತಾಲ್ಲೂಕಿನ ಬಹುಭಾಗ ಕಪ್ಪುಮಣ್ಣಿನಿಂದ ಕೂಡಿದೆ. ನಾಲವಾರದ ಸುತ್ತಮುತ್ತ ಕೆಂಪುಮಿಶ್ರಿತ ಮಣ್ಣಿದೆ. ತಾಲ್ಲೂಕಿನ ನದಿಗಳೆಂದರೆ ಭೀಮಾ, ಕಾಗಿಣಾ ಮತ್ತು ಬೆಣ್ಣೆತೊರೆ. ಈ ನದಿಗಳಿಂದ ಕುಂಬಾರವಾಡಿಕೆರೆ, ಆಲಹಳ್ಳಿ ಕೆರೆ, ಮುಗಳ ನಾಗಾವಿಯ ಬಸವೇಶ್ವರ ಕೆರೆಗಳಿಂದಲೂ ಚಿಕ್ಕ ನೀರಾವರಿ ಯೋಜನೆಯ ಅಡಿಯಲ್ಲಿ ತೋಡಿಸಿದ ಬಾವಿಗಳಿಂದಲೂ ವ್ಯವಸಾಯಕ್ಕೆ ನೀರು ಒದಗುತ್ತದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 84 ಸೆಂಮೀ. ಜೂನ್‌ನಿಂದ ಅಕ್ಟೋಬರ್‌ವರೆಗೆ ಮಳೆಗಾಲ. ಜೋಳ, ಬತ್ತ, ನೆಲಗಡಲೆ, ತೊಗರಿ, ಕಡಲೆ, ಗೋದಿ, ಮೆಣಸಿನಕಾಯಿ ಮತ್ತು ಕಾಯಿಪಲ್ಲೆ ಇಲ್ಲಿಯ ಬೆಳೆಗಳು.

ತಾಲ್ಲೂಕಿನ ಶೇ. 90ರಷ್ಟು ಜನಕ್ಕೆ ವ್ಯವಸಾಯ ಕಸಬು. ಕೆಲವರ ಕಸಬು ನೇಯ್ಗೆ. ಶಹಾಬಾದಿ ಕಲ್ಲಿನ ಗಣಿಗಳಲ್ಲೂ ಕೆಲವರು ಕೆಲಸ ಮಾಡುವರು. ಈ ಕಲ್ಲುಗಳನ್ನು ಮನೆಗಳ ನೆಲಕ್ಕೆ ಹಾಸುವುದಕ್ಕೂ ಚಾವಣಿಗೆ ಹೊದಿಸುವುದಕ್ಕೂ ಉಪಯೋಗಿಸುವರು. ಈ ಕಲ್ಲುಗಳನ್ನು ಚೌಕವಾಗಿ ಒಡೆಯುವುದರಲ್ಲೂ ಇವನ್ನು ಉಜ್ಜಿ ಮಿಂಚುವಂತೆ ಮಾಡಿ ಒಪ್ಪ ಹಾಕುವುದರಲ್ಲೂ ಇಲ್ಲಿಯ ಜನರು ನಿಷ್ಣಾತರು. ಈ ಉದ್ದಿಮೆಗಳನ್ನು ವಿಶೇಷವಾಗಿ ಒಡ್ಡರೂ ಲಂಬಾಣಿ ಜನರೂ ನೆಚ್ಚಿಕೊಂಡಿರುವರು.

ಶಹಾಬಾದ ಮತ್ತು ವಾಡಿಗಳಲ್ಲಿ ಸ್ಥಾಪಿತವಾಗಿರುವ ಸಿಮೆಂಟ್ ಕಾರ್ಖಾನೆಗಳು ಈ ತಾಲ್ಲೂಕಿನ ಔದ್ಯೋಗಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿವೆ. ಶಹಾಬಾದಿನಲ್ಲಿ ಎಂಜಿನಿಯರಿಂಗ್ ಕಾರ್ಖಾನೆಯೊಂದಿದೆ. ಚಿತ್ತಾಪುರ ಪಟ್ಟಣದಲ್ಲೂ ಒಂದು ಸಿಮೆಂಟ್ ಕಾರ್ಖಾನೆಯನ್ನು ಆರಂಭಿಸುವ ಯೋಜನೆ ಸರ್ಕಾರಕ್ಕೆ ಇದೆ. ಜನಸಂಖ್ಯೆ: 27,006.

(ವಿ.ಕೆ.ಯು.ಎಸ್.)

**ಚಿತ್ತೂರು:** ಆಂಧ್ರಪ್ರದೇಶದ ಒಂದು ಜಿಲ್ಲೆ ಹಾಗೂ ಮುಖ್ಯಪಟ್ಟಣ. ಇದನ್ನು ಉತ್ತರದಲ್ಲಿ ಅನಂತಪುರ, ಕಡಪ ಮತ್ತು ನೆಲ್ಲೂರು ಜಿಲ್ಲೆಗಳೂ ದಕ್ಷಿಣದಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಸೇಲಂ ಜಿಲ್ಲೆಗಳೂ ಪಶ್ಚಿಮದಲ್ಲಿ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯೂ ಬಳಸಿವೆ. ಜಿಲ್ಲೆಯ ವಿಸ್ತೀರ್ಣ 15,164 ಚ.ಕಿಮೀ. ಜನಸಂಖ್ಯೆ 37,35,202. ಜಿಲ್ಲೆಯ ಬಹುಭಾಗ ಬೆಟ್ಟಮಯ. ಪೂರ್ವ ಘಟ್ಟದ ಕವಲುಗಳಿಂದ, ಕಿರಿದಾದ ಕಣಿವೆಗಳಿಂದ ಅಲ್ಲಲ್ಲಿ ಅರಣ್ಯಗಳಿಂದ ಕೂಡಿದೆ. ಕಣಿವೆಗಳು ಫಲವತ್ತಾಗಿದೆ. ಘಟ್ಟಪ್ರದೇಶದಲ್ಲಿ ಕಬ್ಬಿಣ ಮತ್ತು ತಾಮ್ರ ನಿಕ್ಷೇಪಗಳಿವೆ. ಜಿಲ್ಲೆಯ ಮುಖ್ಯ ಬೆಳೆಗಳು ಬತ್ತ, ರಾಗಿ ಮತ್ತು ಎಣ್ಣೆಕಾಳುಗಳು. ಈ ಜಿಲ್ಲೆಯ ಚಂದ್ರಗಿರಿ ತಾಲ್ಲೂಕಿನ ತಿರುಮಲೈ ಬೆಟ್ಟದ ಮೇಲಿರುವ ಶ್ರೀವೆಂಕಟೇಶ್ವರ ದೇವಾಲಯಕ್ಕೆ ದೇಶದ ಎಲ್ಲೆಡೆಗಳಿಂದ ಲಕ್ಷಾಂತರ ಯಾತ್ರಿಕರು ಬರುತ್ತಾರೆ.

ಚಿತ್ತೂರು ಜಿಲ್ಲೆಯ ಮುಖ್ಯಕೇಂದ್ರ ಹಾಗೂ ಪ್ರಮುಖ ವಾಣಿಜ್ಯಕೇಂದ್ರ. ಚೆನ್ನೈಗೆ 130 ಕಿಮೀ ದೂರದಲ್ಲಿದೆ. ಇಲ್ಲಿ ಪೌರಸಭೆಯಿದೆ; ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜು ಮತ್ತು ಶಾಲೆಗಳಿವೆ. ಕಾಕಂಬಿ, ಮಾವಿನಹಣ್ಣು, ನೆಲಗಡಲೆಗಳಿಗೆ ಈ ಊರು ಪ್ರಮುಖ ಮಾರುಕಟ್ಟೆ. ಬಿಸ್ಕತ್, ಮುರಬ್ಬ, ಮಿಠಾಯಿ, ಉಪ್ಪಿನಕಾಯಿಗಳ ತಯಾರಿಕೆಗೆ ಪ್ರಸಿದ್ಧಿವಾಗಿದೆ. ಜನಸಂಖ್ಯೆ : 1,52,966.

ಕೆಂಪು ಚಂದನದ ಮರಗಳಿಂದ ಸುಂದರವಾದ ಗೊಂಬೆಗಳನ್ನು ತಯಾರಿಸಲಾಗುತ್ತದೆ. ಇಲ್ಲಿ ಚರ್ಮ ಹದ ಮಾಡುವ ಕಾರ್ಖಾನೆಗಳುಂಟು. ಗ್ರಾನೈಟ್ ಶಿಲೆಯ ವ್ಯಾಪಾರವೂ ನಡೆಯುತ್ತದೆ.

ಚಿತ್ತೂರಿಗೆ ಚೆನ್ನೈ ಹಾಗೂ ಬೆಂಗಳೂರಿನಿಂದ ನೇರ ಬಸ್ ಹಾಗೂ ರೈಲು ಸಂಪರ್ಕವುಂಟು. ಇಲ್ಲಿಯೇ ಹೈದರ್ ಅಲಿ 1782ರಲ್ಲಿ ನಿಧನನಾದ.

ಕೇರಳದ ತ್ರಿಚೂರಿನಿಂದ 60 ಕಿಮೀ (ಪಾಲಕ್ಕಾಡ್ ಜಿಲ್ಲೆಯಲ್ಲಿ) ಚಿತ್ತೂರು ಎಂಬ ಹೆಸರಿನ ಇನ್ನೊಂದು ಪಟ್ಟಣವಿದೆ. ಜನಸಂಖ್ಯೆ : 31,884. (ಎಚ್.ಜಿ.ಎ.)

**ಚಿತ್ರ ವಿಧಾನ:** ಕೆಲವೊಂದು ಅಂಕಿಅಂಶಗಳನ್ನು ವಿಶಿಷ್ಟ ಅಥವಾ ವಿಶೇಷವಾದ ಚಿತ್ರಗಳಿಂದ ತೋರಿಸುವ ರೇಖಾಕೃತಿಗಳಿಗೆ ಚಿತ್ರ ವಿಧಾನವೆಂದು ಕರೆಯುವರು. ಇದು ಅತ್ಯಂತ ಸರಳ ವಿಧಾನವಾಗಿದೆ.

ಇದು ಸ್ವಯಂ ವಿವರಣಾತ್ಮಕವಾಗಿರುತ್ತದೆ. ಉದಾ: ಭಾರತದ ವಿವಿಧ ರಾಜ್ಯಗಳಲ್ಲಿ ಕಾರುಗಳ ಉತ್ಪಾದನೆಯನ್ನು ತೋರಿಸುವಾಗ ಕಾರಿನ ಚಿತ್ರವನ್ನು , ಜನಸಂಖ್ಯೆಯನ್ನು ತೋರಿಸುವಾಗ ಪುರುಷ ಮತ್ತು ಸ್ತ್ರೀಯರ ಚಿತ್ರಗಳನ್ನು ಉಪಯೋಗಿಸಲಾಗುತ್ತದೆ. ಹೀಗೆ ಯಾವುದೇ ಅಂಕಿಅಂಶಗಳನ್ನು ನಿರೂಪಿಸುವಾಗ ಯೋಗ್ಯ ಚಿತ್ರಗಳನ್ನು ಆಯ್ದುಕೊಳ್ಳಲಾಗುತ್ತದೆ. ಒಂದು ಚಿತ್ರ ಇಂತಿಷ್ಟು ಸಂಖ್ಯೆಗೆ ಸಮನಾಗಿರುತ್ತದೆಂದು ಪ್ರಮಾಣ ನಿಶ್ಚಯಿಸಿಕೊಂಡು ಅಂಕಿ ಅಂಶಗಳನ್ನು ನಿರೂಪಿಸಬೇಕು. ಅಂದರೆ ಚಿತ್ರಗಳನ್ನು ಎಣಿಸಿ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಲು ಅನುಕೂಲವಾಗುತ್ತದೆ. (ಜಿ.ಕೆ.)

**ಚಿತ್ರದುರ್ಗ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ ; ತಾಲ್ಲೂಕು ; ಅವುಗಳ ಆಡಳಿತ ಕೇಂದ್ರ. ಜಿಲ್ಲೆ ಉ.ಅ. $13^{0}34'–15^{0}02'$ ಮತ್ತು ಪೂ.ರೇ $75^{0}37'–77^{0}01'$ ನಡುವೆ ಇದೆ. ಉತ್ತರದಲ್ಲಿ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆ, ಪೂರ್ವದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಆಗ್ನೇಯದಲ್ಲಿ ತುಮಕೂರು ಜಿಲ್ಲೆ, ನೈಋತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ, ವಾಯವ್ಯದಲ್ಲಿ ಧಾರವಾಡ ಜಿಲ್ಲೆ ಮೇರೆಗಳಾಗಿವೆ. ಜನಸಂಖ್ಯೆ 1,510,227.

ಈ ಜಿಲ್ಲೆ ವೇದಾವತಿ ಅಥವಾ ಹಗರಿ ನದೀಕಣಿವೆ ಪ್ರದೇಶದಲ್ಲಿದೆ. ವಾಯವ್ಯದಲ್ಲಿ ತುಂಗಭದ್ರಾ ನದಿ ಹರಿಯುತ್ತದೆ. ದಕ್ಷಿಣ–ಆಗ್ನೇಯದಿಂದ ಉತ್ತರ–ವಾಯವ್ಯದ ಕಡೆಗೆ ಸಮಾಂತರದಲ್ಲಿ ಸಾಗುವ ತಗ್ಗಿನ ಬೆಟ್ಟಗಳ ಸಾಲುಗಳು ಬಹಳಮಟ್ಟಿಗೆ ನಗ್ನಶಿಲಾಮಯ. ಇವುಗಳ ನಡುನಡುವೆ ಕಣಿವೆಗಳುಂಟು. ಪೂರ್ವಸಾಲು ಹಿರಿಯೂರಿನ ಪಶ್ಚಿಮದಿಂದ ಚಿತ್ರದುರ್ಗದ ವರೆಗೆ (1075 ಮೀ) ಹಬ್ಬಿ, ಈ ಸಾಲಿನ ಉನ್ನತ ಶಿಖರಗಳಲ್ಲಿ ಜೋಗಿಮರಡಿ, ಚಿತ್ರದುರ್ಗ ಪಟ್ಟಣಕ್ಕೆ ದಕ್ಷಿಣದಲ್ಲಿದೆ. ಪಶ್ಚಿಮ ಶ್ರೇಣಿ ಹೊಸದುರ್ಗದಲ್ಲಿ (1,075 ಮೀ) ಆರಂಭವಾಗಿ ಮಾಯಕೊಂಡದ ಮೂಲಕ ಅಣಜಿವರೆಗೂ ಹಬ್ಬಿದೆ. ಮೊಳಕಾಲ್ಮೂರಿನಲ್ಲಿರುವ ನುಂಕೆಭೈರವ ಬೆಟ್ಟ (1007 ಮೀ), ಜಟಂಗರಾಮೇಶ್ವರ ಬೆಟ್ಟ (1138 ಮೀ) ಮತ್ತು ಶಾಂತಿಗುಡ್ಡ (865 ಮೀ) ಮುಖ್ಯವಾದವು. ಬೆಟ್ಟಗಳ ಶ್ರೇಣಿಗಳನ್ನು ಬಿಟ್ಟರೆ ಜಿಲ್ಲೆಯ ಉಳಿದ ಭಾಗ ಮಟ್ಟಸವಾದ ಮೈದಾನ. ಇಡೀ ಜಿಲ್ಲೆ ಸಮುದ್ರಮಟ್ಟದಿಂದ ಸರಾಸರಿ 666 ಮೀ ಎತ್ತರದಲ್ಲಿದೆ.

ತುಂಗಭದ್ರಾ ನದಿ ಧಾರವಾಡ ಹಾಗೂ ಚಿತ್ರದುರ್ಗ ಜಿಲ್ಲೆಗಳನ್ನೂ ಬೇರ್ಪಡಿಸುತ್ತದೆ. ಲಕ್ಕವಳ್ಳಿಯ ಭದ್ರಾ ಜಲಾಶಯದ ಎರಡು ನಾಲೆಗಳು ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳಲ್ಲಿ ಸಾಗುತ್ತವೆ. ವೇದಾವತಿ ನದಿಗೆ ಅಡ್ಡಲಾಗಿ ಇಲ್ಲಿ ಕಟ್ಟೆ ಕಟ್ಟಿ ವಾಣಿವಿಲಾಸ ಸಾಗರ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಜಲಾಶಯ ಹಿರಿಯೂರು ತಾಲ್ಲೂಕಿಗೆ ನೀರು ಪೂರೈಸುತ್ತದೆ. ನದಿ ಮುಂದಕ್ಕೆ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಮಳೆ ಕಡಿಮೆ. ಬೇಸಗೆಯ ತಾಪ ಹೆಚ್ಚು; ಚಳಿಗಾಲ ಹಿತಕರ. ಚಳಿಗಾಲದ ಸರಾಸರಿ ಉಷ್ಣತೆ 27.9 ಸೆಂ. ಬೇಸಗೆಯಲ್ಲಿ 36.2 ಸೆಂ. 41ಸೆಂ. ಸರಾಸರಿ ವಾರ್ಷಿಕ ಮಳೆ 40 ಸೆಂಮೀ.

ಚಿತ್ರದುರ್ಗ ಜಿಲ್ಲೆಯಲ್ಲಿ ಕುರುಚಲು ಕಾಡು ಹೆಚ್ಚು. ಮಳೆ ಹೆಚ್ಚಾಗಿಲ್ಲದ ಭಾಗಗಳಲ್ಲಿ ಹುಣಿಸೆ, ಮಾವು, ಹಿಪ್ಪೆ, ಜಾಲಿ ಜಾತಿಯ ಗಿಡಮರಗಳು ಮತ್ತು ಸೀತಾಫಲ ಬೆಳೆಯುತ್ತವೆ. ಮಳೆಗಾಲದ ತಿಂಗಳುಗಳಲ್ಲಿ ಚಳ್ಳಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳ ಅಮೃತ ಮಹಲ್ ಹುಲ್ಲುಗಾವಲುಗಳು ಅಚ್ಚ ಹಸುರಾಗಿರುತ್ತವೆ. ಹೊಸದುರ್ಗ ಬಳಿಯ ವೇದಾವತಿ ಕಣಿವೆ ಸಸ್ಯಸಂಪದ್ಯುಕ್ತವಾದದ್ದು.

ಜಿಲ್ಲೆಯ ಮುಖ್ಯ ಖನಿಜಗಳು ಕಲ್ನಾರು, ಅನ್ಟಿಮೊನಿ, ಬಾಕ್ಸೈಟ್, ತಾಮ್ರ, ಕಬ್ಬಿಣದ ಅದಿರು, ಸುಣ್ಣಕಲ್ಲು, ಮ್ಯಾಂಗನೀಸ್, ಸೀಸ, ಬೆಣಚುಕಲ್ಲು, ಸ್ಫಟಿಕಶಿಲೆ, ಹಾಸುಗಲ್ಲು (ಕಡಪಕಲ್ಲು).

ಕಮಿಷನರ ಆಡಳಿತವನ್ನು ಕೊನೆಗೊಳಿಸಿ ಬ್ರಿಟಿಷರು ಒಡೆಯರ ಆಡಳಿತಕ್ಕೆ ಮೈಸೂರು ಸಂಸ್ಥಾನವನ್ನು ವಹಿಸಿಕೊಟ್ಟಮೇಲೆ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಒಂದಾಗಿದ್ದವು. 1863ರಲ್ಲಿ ಆ ವಿಭಾಗವನ್ನು ರದ್ದುಮಾಡಿ ಚಿತ್ರದುರ್ಗ ಜಿಲ್ಲೆಯನ್ನು ನಗರ ವಿಭಾಗಕ್ಕೆ ಸೇರಿಸಿ, ತುಮಕೂರು ಜಿಲ್ಲೆಯನ್ನು ನಂದಿದುರ್ಗ ವಿಭಾಗಕ್ಕೆ ಸೇರಿಸಲಾಯಿತು. 1879ರಲ್ಲಿ ಈ ವ್ಯವಸ್ಥೆ ರದ್ದಾಯಿತು. 1882ರಲ್ಲಿ ಚಿತ್ರದುರ್ಗವನ್ನು ತುಮಕೂರು ಜಿಲ್ಲೆಗೆ ಸೇರಿಸಿ ಅದನ್ನೊಂದು ಉಪವಿಭಾಗವನ್ನಾಗಿ ಮಾಡಲಾಯಿತು. 1886ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಮತ್ತೆ ಸ್ಥಾಪಿಸಿ ಪಾವಗಡ ತಾಲ್ಲೂಕನ್ನು ತುಮಕೂರು ಜಿಲ್ಲೆಗೆ ಸೇರಿಸಲಾಯಿತು. 1956ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಚಿತ್ರದುರ್ಗ ಜಿಲ್ಲೆ ಬೆಂಗಳೂರು ವಿಭಾಗದ ಅಂಗವಾಯಿತು.




ಜಿಲ್ಲೆಯ ಕಪ್ಪು ಮಣ್ಣು ಫಲವತ್ತಾಗಿದೆ. ಮುಖ್ಯ ಬೆಳೆಗಳು ಹತ್ತಿ, ನೆಲಗಡಲೆ, ಜೋಳ, ತೊಗರಿ, ಬತ್ತ, ನವಣೆ, ಗೋದಿ, ಸಾಸುವೆ, ತಂಬಾಕು, ಬಾಳೆ, ಅಡಕೆ, ತೆಂಗು. ಕೆರೆಗಳು ವ್ಯವಸಾಯಕ್ಕೆ ಮುಖ್ಯ ನೀರಿನ ಆಶ್ರಯವಾಗಿದೆ.

ಹೊಸದುರ್ಗ, ಚಿತ್ರದುರ್ಗ, ಜಗಳೂರು ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಗಣಿಗಳುಂಟು. ಹರಿಹರ ತಾಲ್ಲೂಕಿನಲ್ಲಿ ಕಿರ್ಲೋಸ್ಕರ್ ಕಾರ್ಖಾನೆಯಿದ್ದು ಯಂತ್ರೋಪಕರಣಗಳು ತಯಾರಾಗುತ್ತವೆ. ದಾವಣಗೆರೆಯಲ್ಲಿ, ಹತ್ತಿ ಗಿರಣಿಗಳುಂಟು. ಎಣ್ಣೆ ಗಿರಣಿಗಳು ದಾವಣಗೆರೆ, ಚಳ್ಳಕೆರೆ, ಚಿತ್ರದುರ್ಗ ಮತ್ತು ಹರಿಹರಗಳಲ್ಲಿವೆ. ಜಗಳೂರು ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಕಂಬಳಿ ನೇಯಲಾಗುತ್ತದೆ. ಹಿರಿಯೂರಿನಲ್ಲಿ ಸಕ್ಕರೆ ಕಾರ್ಖಾನೆ ಇದೆ.

ಚಿತ್ರದುರ್ಗ ಜಿಲ್ಲೆಯಲ್ಲಿ 2,080 ಕಿಮೀ ಉದ್ದದ ರಸ್ತೆಗಳುಂಟು. ಅವುಗಳಲ್ಲಿ ರಾಷ್ಟ್ರೀಯ ಹೆದ್ದಾರಿ 180 ಕಿಮೀ. ರಾಜ್ಯ ಹೆದ್ದಾರಿ 328 ಕಿಮೀ. ಬೆಂಗಳೂರು–ಪುಣೆ ರೈಲುಮಾರ್ಗ ಚಿತ್ರದುರ್ಗ ಜಿಲ್ಲೆಯ ಮೂಲಕ ಹಾದುಹೋಗುತ್ತದೆ. ಚಿತ್ರದುರ್ಗ ತಾಲ್ಲೂಕಿನ ವಿಸ್ತೀರ್ಣ 1,366.7 ಚ.ಕಿಮೀ. ಚಿತ್ರದುರ್ಗ, ಹಿರೇಗುಂಟನೂರು, ಭರ್ಮಸಾಗರ, ತುರುವನೂರು ಇವು ಇದರ ಹೋಬಳಿಗಳು.

ಚಿತ್ರದುರ್ಗ ಪಟ್ಟಣ : ಜಿಲ್ಲೆಯ ಆಡಳಿತಕೇಂದ್ರ. ಇದು ಚಿಕ್ಕಜಾಜೂರು ರೈಲ್ವೆ ನಿಲ್ದಾಣದಿಂದ 34 ಕಿಮೀ ದೂರದಲ್ಲಿ, ಬೆಂಗಳೂರಿನ ವಾಯವ್ಯಕ್ಕೆ 200 ಕಿಮೀ ದೂರದಲ್ಲಿದೆ. ಹಿಂದೆ ಇದಕ್ಕೆ ಇದ್ದ ಹೆಸರುಗಳು ಹಿಡಿಂಬಾ ಪಟ್ಟಣ, ಚಿನ್ಮೂಲಾದ್ರಿ, ಬೆಮ್ಮತ್ತನಕಲ್ಲು, ಸೂಳಗಲ್, ಪೆರುಮಾಳೆಪುರ, ಚಿತ್ರಕಲ್‌ದುರ್ಗ, ಮಲ್ಲರಾಯನದುರ್ಗ. ಟಿಪ್ಪುಸುಲ್ತಾನ ಇದಕ್ಕೆ ಕೊಟ್ಟ ಹೆಸರು ಫರೂಕಾಬಾದ್.

ಹಳೆಯ ಪಟ್ಟಣ ಒತ್ತಾದ ಬಂಡೆಗಳ ಮಧ್ಯೆ, ಕೋಟೆಯಿಂದ ಕೂಡಿದ ಈಶಾನ್ಯ ಭಾಗದಲ್ಲಿದೆ. ಕೋಟೆಯ ಏಳು ಸುತ್ತುಗಳಲ್ಲಿ ಮೂರು ಸುತ್ತು ಚಿತ್ರದುರ್ಗ ಬೆಟ್ಟದ ತಳಭಾಗದಲ್ಲಿ ನಾಲ್ಕು ಸುತ್ತು ಬೆಟ್ಟದ ಮೇಲೆ ಇವೆ.

ಚಿತ್ರದುರ್ಗ ಕೋಟೆಯಲ್ಲಿ ಒಟ್ಟು 19 ದ್ವಾರಗಳು, 38ದಿಡ್ಡೀ ಬಾಗಿಲುಗಳು, 35 ಗುಪ್ತದ್ವಾರಗಳು, 4 ಸುರಂಗಮಾರ್ಗಗಳು ಇದ್ದುವೆಂದು ಹೇಳಲಾಗಿದೆ. ಪಾಳೆಯಗಾರರ ಪಾಳುಬಿದ್ದ ಅರಮನೆಗಳ ಅವಶೇಷಗಳನ್ನು ಈಗಲೂ ಕಾಣಬಹುದು. ಈ ಕಲ್ಲಿನ ಕೋಟೆಯನ್ನು ಹೈದರ್ ಮತ್ತು ಟಿಪ್ಪು ಕಟ್ಟಿಸಿದರು. ಜನಸಂಖ್ಯೆ 1,25,170. (ವಿ.ಎಂ.ಕೆ.)

**ಚಿತ್ರವಿಧಾನದ ಭೂಸ್ವರೂಪ ನಿರೂಪಣೆ:** ಭೂಗೋಳವಿಜ್ಞಾನಿಗಳು ಆರಂಭಿಕ ಹಂತದಲ್ಲಿ ಭೂಸ್ವರೂಪಗಳನ್ನು ನಿರೂಪಿಸಲು ಚಿತ್ರ ಮಾದರಿಯನ್ನೇ ಪ್ರಧಾನವಾಗಿ ಬಳಸುತ್ತಿದ್ದರು. ಇದಕ್ಕೆ ಕಾರಣವೆಂದರೆ ಇತರ ಪರಿಷ್ಕೃತ ವಿಧಾನಗಳು ಆವಿಷ್ಕಾರಗೊಂಡಿಲ್ಲದಿದ್ದದು ಹಾಗೂ ಭೂಸ್ವರೂಪಗಳನ್ನು ಕುರಿತ ಸಂಪೂರ್ಣ ಮಾಹಿತಿಯ ಕೊರತೆ. ಇವುಗಳ ಬಳಿಕ ಆಧುನಿಕ ನಕ್ಷಾಶಾಸ್ತ್ರದ ಅಭಿವೃದ್ಧಿಗೊಳ್ಳುವವರೆಗೂ ಹೆಚ್ಚು ಪ್ರಚಲಿತವಾಗಿದ್ದಿತು. ಇಂದು ನಕ್ಷಾಶಾಸ್ತ್ರ ಪ್ರತ್ಯೇಕ ವಿಜ್ಞಾನವಾಗಿ ಅಭಿವೃದ್ಧಿಗೊಂಡಿದೆ. ಅಲ್ಲದೆ ಭೂಸ್ವರೂಪಗಳನ್ನು ನಿರೂಪಿಸುವ ನವೀನ ತಂತ್ರಗಳು ರೂಢಿಗೆ ಬಂದಿವೆ. ಆದರೂ ಕೆಲವು ವೇಳೆ ಅನಿವಾರ್ಯವಾಗಿ ರೂಢಿಗತವಾದ ಚಿತ್ರ ಮಾದರಿಯನ್ನು

ಆಧುನಿಕ ವಿಧಾನಗಳ ಜೊತೆಯಲ್ಲಿ ಸಮ್ಮಿಶ್ರಗೊಳಿಸಿ ಭೂಸ್ವರೂಪಗಳನ್ನು ವಿವರಿಸಲು ಪ್ರಯತ್ನಿಸಲಾಗುವುದು. ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಭೂಮೇಲ್ಮೈ ಲಕ್ಷಣಗಳನ್ನು ಸುಲಭವಾಗಿ ತಿಳಿಯಬಹುದಾಗಿದೆ.

ಇದರಿಂದಾಗಿಯೇ ಇವುಗಳ ಬಳಕೆ ಇಂದಿಗೂ ರೂಢಿಯಲ್ಲಿದೆ. ಹೆಚ್ಯೂರ್, ಸ್ವರೂಪ ರೇಖೆಗಳು ಹಾಗೂ ಬೆಟ್ಟದ ಛಾಯಾ ವಿಧಾನಗಳು ಚಿತ್ರ ಮಾದರಿಯ ಮುಖ್ಯ ಭೂಸ್ವರೂಪ ನಿರೂಪಣಾ ವಿಧಾನಗಳಾಗಿವೆ. (ಆರ್.ಎನ್.)

**ಚಿದಂಬರಂ:** ತಮಿಳುನಾಡು ರಾಜ್ಯದ ದಕ್ಷಿಣ ಆರ್ಕಾಟ್ ಜಿಲ್ಲೆಯ ಒಂದು ಪಟ್ಟಣ. ಚೆನ್ನೈನಿಂದ ದಕ್ಷಿಣ ನೈರುತ್ಯಕ್ಕೆ 200 ಕಿಮೀ ದೂರದಲ್ಲಿ ವೆಳ್ಳಾರ್ ಮತ್ತು ಕೊಲರೂನ್ ನದಿ ಮುಖಗಳ ನಡುವಣ ಬತ್ತದ ಬಯಲಿನಲ್ಲಿ ಬಂಗಾಲ ಕೊಲ್ಲಿಗೆ ಕೆಲವೇ ಕಿಮೀಗಳ ದೂರದಲ್ಲಿದೆ. ಊರಿಗೆ ಅತ್ಯಂತ ಸಮೀಪದಲ್ಲೆ ಪುರಾತನ ತೀರ್ಥಕ್ಷೇತ್ರವೆನಿಸಿದ ಸ್ಥಳದಲ್ಲಿ, 1929ರಲ್ಲಿ ಸ್ಥಾಪಿತವಾದ ಅಣ್ಣಾಮಲೈ ವಿಶ್ವವಿದ್ಯಾಲಯವಿದೆ. ಚಿದಂಬರನಲ್ಲಿ ನೇಕಾರಿಕೆ ಮುಖ್ಯ ಕಸುಬು. ತಮಿಳುನಾಡಿನ ಯತ್ರಾಸ್ಥಳಗಳಲ್ಲಿ ಶ್ರೀರಂಗಂ ಮತ್ತು ಮಧುರೈಗಳನ್ನು ಬಿಟ್ಟರೆ ಇದೇ ಅತ್ಯಂತ ಪ್ರಖ್ಯಾತ ಯಾತ್ರಾಸ್ಥಳ. ಇಲ್ಲಿ ನಟರಾಜನ ದೇವಾಲಯವಿದೆ. ಶೈವಸಾಹಿತ್ಯದಲ್ಲಿ ಇದು ಕೋಯಿಲ್ ಎಂದು ಪ್ರಸಿದ್ಧವಾಗಿದೆ. ಜನಸಂಖ್ಯೆ 58,968. (ಜಿ.ಬಿ.ಆರ್.;ಎಂ.ಎಲ್.ಎಸ್.)

**ಚಿನಾಬ್:** ಸಿಂಧೂ ನದಿಯ ಒಂದು ಉಪನದಿ. ಭಾರತ–ಪಾಕಿಸ್ತಾನಗಳ ಉಭಯ ಪಂಜಾಬ್ ಪ್ರದೇಶಕ್ಕೆ ಆ ಹೆಸರು ಬರಲು ಕಾರಣವಾದ ಪಂಚನದಿಗಳ ಪೈಕಿ ಒಂದು. ಭಾರತದ ಹಿಮಾಚಲ ಪ್ರದೇಶದಲ್ಲಿ ಹಿಮಾಲಯದ ಬಾರಲಾಚಾ ಕಣಿವೆ ಬದಿಯ (4890 ಮೀ) ಆಗ್ನೇಯ ಮತ್ತು ವಾಯವ್ಯಗಳಲ್ಲಿ ಅನುಕ್ರಮವಾಗಿ ಉಗಮಿಸುವ ಚಂದ್ರ ಮತ್ತು ಭಾಗಾ ನದಿಗಳು ಟಂಟಿ ಎಂಬಲ್ಲಿ ಪರಸ್ಪರ ಕೂಡಿಕೊಂಡು ಚಂದ್ರಭಾಗಾ ಅಥವಾ ಚಿನಾಬ್ ನದಿಯಾಗಿ ಪರಿಣಮಿಸುತ್ತವೆ. ಈ ನದಿ ಹಿಮಾಲಯ ಮತ್ತು ಪಿರ್ ಪಂಜಾಲ್ ಶ್ರೇಣಿಗಳ ನಡುವಣ ಕಣಿವೆಯಲ್ಲಿ ಸು. 160 ಕಿಮೀ ದೂರ ವಾಯವ್ಯಾಭಿಮುಖವಾಗಿ ಹರಿದು, ಕಾಶ್ಮೀರದ ಕಿಷ್‌ವಾರ್ ಬಳಿ ದಕ್ಷಿಣಕ್ಕೆ ತಿರುಗಿ ಪೀರ್ ಪಂಜಾಲ್ ಶ್ರೇಣಿಯ ಕೊರಕಲೊಂದರ ಮೂಲಕ ಅಖ್ನೂರ್ ಬಳಿ ಮೈದಾನ ಪ್ರವೇಶಿಸುತ್ತದೆ. ಬಾರಾ ಲಾಚಾದಿಂದ ಅಖ್ನೂರ್ ವರೆಗಿನ 605 ಕಿಮೀ ದೂರದಲ್ಲಿ ನದಿ 4592 ಮೀ ಕೆಳಕ್ಕೆ ಇಳಿಯುತ್ತದೆ.

ಜಮ್ಮು ನಗರದ ಬದಿಯ ತವಿ ಜಂಕ್ಷನ್‌ನ ಕೆಳಭಾಗದಲ್ಲಿ ಇದು ಪಾಕಿಸ್ತಾನದ ಪಂಜಾಬನ್ನು ಪ್ರವೇಶಿಸುತ್ತದೆ. ಟಿಮ್ಮು ಎಂಬಲ್ಲಿ ಝೀಲಂ ನದಿಯೂ ಸಿಂಧೂವಿನ ಬಳಿಯಲ್ಲಿ ರಾವೀ ನದಿಯೂ ಇದನ್ನು ಕೂಡಿಕೊಳ್ಳುತ್ತವೆ. ಅನಂತರ ಇವು ತ್ರಿಮಾಬ್ ಎಂದು ಕರೆಸಿಕೊಳ್ಳುತ್ತದೆ. ಬಿಯಾಸ್ ನದಿಯನ್ನು ಕೂಡಿಸಿಕೊಂಡ ಸಟ್ಲೇಜ್ ನದಿ ಮಾಡ್ವಾಲಾ ಎಂಬಲ್ಲಿ ಚಿನಾಬನ್ನು ಸೇರುತ್ತದೆ. ಅಲ್ಲಿಂದ ಮುಂದೆ ಇದು ಪಂಚನದಿ ಎನಿಸಿಕೊಂಡು ಸಿಂಧೂ ನದಿಯನ್ನು ಸಂಗಮಿಸುತ್ತದೆ. ಪಂಜನದ ಭಾಗವನ್ನು ಬಿಟ್ಟು ಚಿನಾಬ್ ನದಿಯ ಒಟ್ಟು ಉದ್ದ 958 ಕಿಮೀ. ಮಾರ್ಚ್ ತಿಂಗಳಿಂದ ನದಿಯಲ್ಲಿ ಪ್ರವಾಹ ಅಧಿಕವಾಗುತ್ತದೆ. ಗರಿಷ್ಠ ಪ್ರವಾಹ ಜುಲೈ–ಆಗಸ್ಟ್ ಅವಧಿಯಲ್ಲಿ. ಪಂಜಾಬಿನ ಇತರ ನದಿಗಳ ಮಣ್ಣಿನಷ್ಟು ಇದು ಫಲವತ್ತಲ್ಲ. ಪಂಜಾಬಿನ ಇತರ ನದಿಗಳಂತೆ ಈ ನದಿಯೂ ಆಗಿಂದಾಗ್ಗೆ ತನ್ನ ಪಾತ್ರ ಬದಲಿಸುತ್ತದೆ.

ಮೊಗಲರ ಕಾಲದಿಂದಲೂ ಈ ನದೀ ಪ್ರದೇಶದಲ್ಲಿ ಸುಯೋಜಿತ ನೀರಾವರಿ ವ್ಯವಸ್ಥೆ ಉಂಟು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇದು ಮತ್ತಷ್ಟು ಅಭಿವೃದ್ಧಿ ಹೊಂದಿತು. ಚಿನಾಬ್ ಕೆಳದಂಡೆ ಕಾಲುವೆ (1882) ಮತ್ತು ಚಿನಾಬ್ ಮೇಲುದಂಡೆ ಕಾಲುವೆ (1912–15)–ಇವೂ ಇತರ ಕಾಲುವೆಗಳೂ ಇಲ್ಲಿಯ ಬೇಸಾಯದ ಅಭಿವೃದ್ಧಿಗೆ ಕಾರಣವಾಗಿವೆ. ಚಿನಾಬ್ ಮೇಲ್ದಂಡೆ ಕಾಲುವೆಯಿಂದ 2 ಲಕ್ಷ ಹೆ. ಭೂಮಿ ನೀರಾವರಿಗೆ ಒಳಪಟ್ಟಿದೆ. ಚಿನಾಬ್ ವಸತಿ ಪ್ರದೇಶದ ಮುಖ್ಯ ಪಟ್ಟಣ ಲಯಾಲ್‌ಪುರ. ಇದು ಈ ಪ್ರದೇಶದ ಮಹತ್ತ್ವದ ವ್ಯಾಪಾರ ಕೇಂದ್ರ. (ಬಿ.ಎ.ಎಸ್.)

**ಚಿಪ್ಪುಸುಣ್ಣ:** ಅಜೈವಿಕ ಮಿಶ್ರಣವಾದ (ಇನಾರ್ಗ್ಯಾನಿಕ್ ಕಾಂಪೌಂಡ್) ಬಿಳಿ, ಬೂದು ಬಿಳಿಯಿದ್ದು ಘನ ರೂಪದಲ್ಲಿರುತ್ತದೆ. ಚಿಪ್ಪಿನಿಂದ ತೆಗೆದ ಈ ಸುಣ್ಣವನ್ನು ಅನೇಕ ರಾಸಾಯನಿಕ ಕಾರ್ಖಾನೆಗಳಲ್ಲಿ ದೊಡ್ಡ ಕೈಗಾರಿಕೆಗಳಲ್ಲಿ ಬಳಸುತ್ತಾರೆ. ಉಕ್ಕಿನ ಕೈಗಾರಿಕೆಯಲ್ಲಿ ಕಬ್ಬಿಣವನ್ನು ಕರಗಿಸಲು ಹಾಗೂ ಕಿಟ್ಟವನ್ನು ತೆಗೆದು ಹಾಕಲು ಬಳಸಲಾಗುವುದು. ಕಾಗದದ ಕೈಗಾರಿಕೆಯಲ್ಲಿ ಕೀಟನಾಶಕಗಳ ತಯಾರಿಕೆಯಲ್ಲಿ, ಮೋರಿಗಳನ್ನು ಸ್ವಚ್ಛಗೊಳಿಸಲು ಮತ್ತು ಗಾಜು ತಯಾರಿಕೆಯಲ್ಲಿ ಬಳಸಲಾಗುವುದು. ಚಿಪ್ಪು ಸುಣ್ಣಕ್ಕೆ ನೀರು ಸೇರಿಸುವುದರಿಂದ ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಉಂಟಾಗುತ್ತದೆ. ಇದನ್ನು ಪ್ಲಾಸ್ಟಿಕ್, ಸಿಮೆಂಟ್, ಗೋಡೆ ಸುಣ್ಣ ಹಾಗೂ ನೀರನ್ನು ಮೆದುಗೊಳಿಸಲು ಬಳಸಲಾಗುವುದು. (ಬಿ.ಸಿ.ಕೆ.)

**ಚಿರಾಪುಂಜಿ:** ಭಾರತದ ಮೇಘಾಲಯ ರಾಜ್ಯದಲ್ಲಿ ಖಾಸಿ ಮತ್ತು ಜೈಂತಿಯಾ ಬೆಟ್ಟ ಜಿಲ್ಲೆಯಲ್ಲಿರುವ ಒಂದು ಗ್ರಾಮ. ಉ.ಅ. $25^{0}15'$ ಮತ್ತು ಪೂ.ರೇ. $91^{0}44'$ ಮೇಲೆ, ಷಿಲಾಂಗಿಗೆ 51 ಕಿಮೀ ದಕ್ಷಿಣದಲ್ಲಿ ಇದೆ. ಷಿಲಾಂಗ್ ಪ್ರಸ್ಥಭೂಮಿಯ ದಕ್ಷಿಣ ಅಂಚಿನಲ್ಲಿರುವ ಈ ಸ್ಥಳದ ಎತ್ತರ ಸಮುದ್ರಮಟ್ಟದಿಂದ 1500 ಮೀ. ಇದು ಅಧಿಕ ಮಳೆ ಬೀಳುವ ಸ್ಥಳವೆಂದು ಪ್ರಸಿದ್ಧವಾಗಿದೆ. ಇಲ್ಲಿಯ ವಾರ್ಷಿಕ ಸರಾಸರಿ ಮಳೆ 1087 ಸೆಂಮೀ. ವಾಸ್ತವವಾಗಿ ವರ್ಷದಿಂದ ವರ್ಷಕ್ಕೆ ಬಹಳ ವ್ಯತ್ಯಾಸವಾಗುತ್ತಿರುತ್ತದೆ. 1861ರಲ್ಲಿ ಒಟ್ಟು 2,298 ಸೆಂಮೀ. ಜುಲೈ ತಿಂಗಳಲ್ಲೊಂದರಲ್ಲೇ 929 ಸೆಂಮೀ ಮಳೆಯಾಯಿತು. 1876ರಲ್ಲಿ ಕೇವಲ 24 ಗಂಟೆಗಳಲ್ಲಿ 104 ಸೆಂಮೀ ಮಳೆಯಾದ ದಾಖಲೆಯಿದೆ. ಪ್ರಪಂಚದಲ್ಲೇ ಅತ್ಯಧಿಕ ಮಳೆಯಾಗುವ ಸ್ಥಳ ಚಿರಾಪುಂಜಿಗೆ ಹತ್ತಿರದಲ್ಲಿರುವ ಮಾವ್ಸಿನ್ರಾಮ್ ಎಂಬ ಹಳ್ಳಿ. ಅಲ್ಲಿಯ ವಾರ್ಷಿಕ ಸರಾಸರಿ ಮಳೆ 1,397 ಸೆಂಮೀ. ಈ ಸ್ಥಳ ಮಾನ್ಸೂನಿಗೆ ಇದಿರಾಗಿ, ವರ್ತುಲ ಪರ್ವತಪಂಕ್ತಿಯ ಮೇಲಿದೆ.

ಮೊದಲು ಚಿರಾಪುಂಜಿ ಖಾಸಿ ಮತ್ತು ಜೈಂತಿಯಾ ಪರ್ವತಪ್ರದೇಶಗಳ ಆಡಳಿತ ಕೇಂದ್ರವಾಗಿತ್ತು. ಅನಂತರ ಅದನ್ನು ಇಲ್ಲಿಂದ ಷಿಲಾಂಗಿಗೆ ಸ್ಥಳಾಂತರಿಸಲಾಯಿತು. ಇಲ್ಲಿದ್ದ ಸುಂದರವಾದ ಕಟ್ಟಡಗಳೂ ಬಂಗಲೆಗಳೂ 1897ರ ಭೂಕಂಪದಿಂದ ಹಾನಿಗೊಳಗಾದುವು. ಅತಿಶಯವಾದ ಮಳೆಯಿಂದಾಗಿ ವರ್ಷಪೂರ ಇಲ್ಲಿಯ ನಿಸರ್ಗ ರಮಣೀಯವಾಗಿರುತ್ತದೆ. ಈ ಪ್ರದೇಶದಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲು ಮತ್ತು ಸುಣ್ಣದಕಲ್ಲು ದೊರೆಯುತ್ತವೆ. ಇಲ್ಲಿ 1971–72ರಲ್ಲಿ ಸಿಮೆಂಟ್ ಕಾರ್ಖಾನೆಯೊಂದು ಸ್ಥಾಪಿತವಾಯಿತು. ಖಾಸಿ ಬುಡಕಟ್ಟಿನ ಜನ ಇಲ್ಲಿ ವಾಸವಾಗಿದ್ದಾರೆ. ಇವರು ಪ್ರೋಟೋ–ಆಸ್ಟ್ರಲಾಯಿಡ್ ಗುಂಪಿನವರು. ಇವರದು ಮಾತೃಯಾಜಮಾನ್ಯ ಪದ್ಧತಿಯ ಸಮಾಜ.

ಇಲ್ಲಿ ಝೂಮ್ (ಸರದಿ ಬೆಳೆ) ಮತ್ತು ಮೆಟ್ಟಲು ನೆಲ ವ್ಯವಸಾಯ ಜಾರಿಯಲ್ಲಿದೆ. ಮುಖ್ಯ ಬೆಳೆ ಬತ್ತ, ಬಾಳೆ. ಪ್ಲಂ, ಪೈನಾಪಲ್ ಮತ್ತು ಕಿತ್ತಳೆ ಜಾತಿಯ ಹಣ್ಣುಗಳು ಬೆಳೆಯುತ್ತವೆ. ಚಹ ತೋಟಗಳು ಸುತ್ತಮುತ್ತ ಇವೆ. *

**ಚಿಲಿ:** ದಕ್ಷಿಣ ಅಮೆರಿಕದಲ್ಲಿ ಪೆಸಿಫಿಕ್ ಕರಾವಳಿಯಲ್ಲಿರುವ ಒಂದು ದೇಶ. ಉತ್ತರಕ್ಕೆ ಪೆರು, ಪೂರ್ವಕ್ಕೆ ಬೊಲಿವಿಯ ಮತ್ತು ಅರ್ಜೆಂಟೈನ, ಪಶ್ಚಿಮಕ್ಕೆ ಪೆಸಿಫಿಕ್ ಸಾಗರ ಇವೆ. ದ.ಅ. $17^{0}30'$ ನಿಂದ ದ. ಅ. $55^{0}59'$ ವರೆಗೆ ಮತ್ತು ಪ.ರೇ. $68^{0}$–$72^{0}$ ರ ನಡುವೆ 4263 ಕಿಮೀ ಉದ್ದಕ್ಕೆ ದಕ್ಷಿಣೋತ್ತರವಾಗಿ ಚಾಚಿದೆ. ಚಿಲಿಯ ವಿಸ್ತೀರ್ಣ 756026 ಚ.ಕಿಮೀ. ದಕ್ಷಿಣ ಪೆಸಿಫಿಕ್ ಸಾಗರದ ವಾನ್ ಫರ್ನಾಂಡಿಸ್, ಈಸ್ಟರ್ ಮತ್ತು ಇತರ ಹಲವು ದ್ವೀಪಗಳು ಚಿಲಿಗೆ ಸೇರಿವೆ. ಚಿಲಿಯ ಜನಸಂಖ್ಯೆ 15,082,000 (2002). ರಾಜಧಾನಿ ಸ್ಯಾಂಟಿಯಾಗೋ.

ಇದು ಹಿಂದಿನ ಕಾಲದಿಂದಲೂ ಭೂಕಂಪ ಮತ್ತು ಜ್ವಾಲಾಮುಖಿಗಳ ಹಾವಳಿಗೆ ತುತ್ತಾದ ಪ್ರದೇಶ. ಪೂರ್ವದ ಉದ್ದಕ್ಕೂ ಗಗನಚುಂಬಿ ಆಂಡೀಸ್ ಪರ್ವತಶ್ರೇಣಿ, ಪಶ್ಚಿಮತೀರದ ಉದ್ದಕ್ಕೂ ಅಷ್ಟೇ ಆಳವಾದ ಸಮುದ್ರ, ಹೀಗೆ ಅತಿ ಎತ್ತರ, ಅತಿ ಆಳ–ಇವೆರಡರ ಸೀಮಾಪ್ರದೇಶವೇ ಚಿಲಿ ದೇಶ. 16ನೆಯ ಶತಮಾನದಿಂದ ಈಚೆಗೆ ಇಲ್ಲಿ ಸಂಭವಿಸಿದ ಅನೇಕ ಭೂಕಂಪಗಳ ದಾಖಲೆ ಇದೆ. ಇವುಗಳ ಪೈಕಿ ಸು. 100 ಅತ್ಯಂತ ಭೀಕರ ಭೂಕಂಪಗಳು. ಇವುಗಳ ಹಾವಳಿ ಅಪಾರ. 20ನೆಯ ಶತಮಾನದಲ್ಲೇ ತಲೆದೋರಿದ (1906, 1928, 1939, 1960, 1973) ಭೂಕಂಪಗಳಿಂದ ಇಲ್ಲಿಯ ಜನ ತತ್ತರಿಸಿಹೋಗಿದ್ದಾರೆ.

ಭೌತಿಕಲಕ್ಷಣ : ಚಿಲಿಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು: 1 ಉತ್ತರ ಚಿಲಿ 2 ಮಧ್ಯ ಚಿಲಿ 3 ದಕ್ಷಿಣ ಚಿಲಿ. ದಕ್ಷಿಣೋತ್ತರವಾಗಿ ಹಬ್ಬಿರುವ ಆ್ಯಂಡೀಸ್ ಪರ್ವತಶ್ರೇಣಿಗಳು ಚಿಲಿ ದೇಶದ ಕಡೆಗೆ ಹೆಚ್ಚು ಇಳುಕಲಾಗಿವೆ. ಚಿಲಿಯಲ್ಲಿ ಆ್ಯಂಡೀಸಿನ ಉತ್ತರದ ಕೊನೆಯಾದ ಪುನದ ಅಟಕಾಮ ಪ್ರಸ್ಥಭೂಮಿಯ ಎತ್ತರ 5000 ಮೀ. ಮಧ್ಯ ಚಿಲಿಯಲ್ಲಿ ಈ ಶ್ರೇಣಿಗಳು ಗರಿಷ್ಠ ಎತ್ತರ ತಲುಪುತ್ತವೆ. ಆಕಂಕಾಗ್ವ ಶಿಖರದ ಎತ್ತರ 7,610 ಮೀ. ದಕ್ಷಿಣ ಚಿಲಿಯ ರೇವುಪಟ್ಟಣವಾದ ವಾಲ್ಪಾರಾಯೀಸೊಗೂ ಅರ್ಜೆಂಟೈನದ ಮುಖ್ಯ ಪಟ್ಟಣವಾದ ಬ್ಯೂನಸ್ ಐರಿಸ್‌ಗೂ ಸಂಬಂಧ ಕಲ್ಪಿಸುವ ಖಂಡಾಂತರ ರೈಲ್ವೆ ಸುರಂಗಮಾರ್ಗ ಇರುವುದು ಈ ಕಣಿವೆಮಾರ್ಗಕ್ಕೆ ದಕ್ಷಿಣದಲ್ಲಿ. ದಕ್ಷಿಣಕ್ಕೆ ಸಾಗಿದಂತೆ ಈ ಶ್ರೇಣಿಗಳ ಎತ್ತರ ಕಡಿಮೆ. ದಕ್ಷಿಣ ತುದಿಯಲ್ಲಿ ಇವು ಕವಲೊಡೆದು ಸಮುದ್ರದಲ್ಲಿಳಿದು ತೀರವನ್ನು ಅಂಕುಡೊಂಕುಗೊಳಿಸಿವೆಯಲ್ಲದೆ ಹಲವಾರು ದ್ವೀಪಗಳಿಗೆ ಕಾರಣವಾಗಿವೆ. ದಕ್ಷಿಣದ ಹಲವು ಶಿಖರಗಳು ಹಿಮಾಚ್ಛಾದಿತ. ಹಲವು ಶಿಖರಗಳು ಜ್ವಾಲಾಮುಖಿಗಳು. ಅವು ನೋಡಲು ಬಲುಸುಂದರವಾಗಿವೆ. ಉತ್ತರ ಚಿಲಿ ಮರುಭೂಮಿ ಪ್ರಪಂಚದ ಪ್ರಮುಖ ಒಣ ಪ್ರದೇಶಗಳಲ್ಲೊಂದು. ಮಧ್ಯ ಚಿಲಿ ಫಲವತ್ತಾದ ಮೈದಾನವಾಗಿದೆ. ಇಲ್ಲಿ ಚಿಲಿಯ ಶೇ. 90ರಷ್ಟು ಜನ ವಾಸಿಸುತ್ತಾರೆ.

ಆಂಡೀಸಿನಲ್ಲಿ ಹುಟ್ಟಿ ಚಿಲಿಯಲ್ಲಿ ಹರಿದು ಪೆಸಿಫಿಕ್ ಸಾಗರ ಸೇರುವ ನದಿಗಳ ಸಂಖ್ಯೆ ಸು. 30. ಅವುಗಳಲ್ಲಿ ಹಲವು ವೇಗವಾಗಿ ಹರಿಯುತ್ತವೆ. ಉತ್ತರದಲ್ಲಿ ಹೆಚ್ಚು ನದಿಗಳಿಲ್ಲ. ಇಲ್ಲಿ ಹರಿಯುವ ಲೋವಾ ಎಂಬುದು ಚಿಲಿಯ ಅತ್ಯಂತ ಉದ್ದವಾದ ನದಿ (378 ಕಿಮೀ). ಇದು ವರ್ಷವೆಲ್ಲ ಹರಿಯುತ್ತದೆ. ಎರಡನೆಯ ದೊಡ್ಡ ನದಿ ಕೋಪಿಯಾಪೋ (180 ಕಿಮೀ). ಈ ನದಿಯ ನೀರೆಲ್ಲ ವ್ಯವಸಾಯಕ್ಕೆ ಬಳಕೆಯಾಗುತ್ತದೆ. ದಕ್ಷಿಣದಲ್ಲಿ ಅನೇಕ ಸಣ್ಣಮಟ್ಟ ನದಿಗಳಿವೆ. ಇವುಗಳಲ್ಲಿ ನೀರು ಯಥೇಚ್ಛ. ಇವು ವಿದ್ಯುತ್ ಉತ್ಪಾದನೆಗೆ ಅನುಕೂಲವಾಗಿವೆ. ಚಿಲಿಯ ಸರೋವರಗಳು ಪ್ರಪಂಚದ ಅತ್ಯಂತ ಸುಂದರವೆಂದು ಪ್ರಸಿದ್ಧವಾಗಿವೆ, ದಕ್ಷಿಣ ಚಿಲಿಯಲ್ಲಿ ಬೀಯೊ-ವೀಯೊ ನದಿಗೆ ದಕ್ಷಿಣದಲ್ಲಿ ಅನೇಕ ಹಿಮಾನಿ ಸರೋವರಗಳಿವೆ. ಅವುಗಳ ಪೈಕಿ ಯಾಂಗ್‌ಕೀವೆ (852 ಚ.ಕಿಮೀ) ಮತ್ತು ರಾಂಕೊ (406 ಚ.ಕಿಮೀ) ಅತ್ಯಂತ ದೊಡ್ಡದಾದವು.




ವಾಯುಗುಣ : ಚಿಲಿಯ ವಾಯುಗುಣ ವೈಪರೀತ್ಯಗಳಿಂದ ಕೂಡಿದೆ. ಉತ್ತರ ಭಾಗ ಶುದ್ಧ ಮರಳುಗಾಡು. ಮಧ್ಯ ಚಿಲಿಯ ಕಡೆಗೆ ಸಾಗಿದಂತೆ ಮಳೆ ಅಧಿಕವಾಗುತ್ತದೆ. ದಕ್ಷಿಣ ಚಿಲಿಯಲ್ಲಿ ಬೀಳುವಷ್ಟು ಮಳೆ ಉಷ್ಣವಲಯದ ಹೊರಗಿರುವ ಬೇರಾವ ಪ್ರದೇಶದಲ್ಲೂ ಬೀಳುವುದಿಲ್ಲ. ದ. ಅ. 30ರ ಸುಮಾರಿನಲ್ಲಿ ಪೆಸಿಫಿಕ್‌ನಲ್ಲಿ ಶಾಶ್ವತ ಉನ್ನತ ಒತ್ತಡ ಪ್ರದೇಶದಿಂದಾಗಿ ಉತ್ತರದ ಕಡೆಗೆ ಮಾರುತಗಳು ಬೀಸುತ್ತವೆ. ಆದ್ದರಿಂದ ಆ ಪ್ರದೇಶ ಶುಷ್ಕ. ಆ ಉನ್ನತ ಒತ್ತಡ ಪ್ರದೇಶಕ್ಕೆ ದಕ್ಷಿಣ ಭಾಗದಲ್ಲಿ ಚಂಡಮಾರುತಗಳು ಅಧಿಕ. ದಕ್ಷಿಣ ಭಾಗದಲ್ಲಿಯ ಕಡಿಮೆ ಒತ್ತಡದ ಪ್ರದೇಶಗಳ ಪಟ್ಟಿಗಳು ಬಿರುಗಾಳಿಗಳಿಗೆ ಕಾರಣವಾಗಿವೆ. ಪಶ್ಚಿಮದಿಂದ ಬೀಸುವ ಮಾರುತಗಳು ಮಳೆ ತರುತ್ತವೆ. ಉತ್ತರದಲ್ಲಿ ಸರಾಸರಿ ಮಳೆ 1-5 ಸೆಂಮೀ ಕಡಿಮೆ. ದಕ್ಷಿಣಕ್ಕೆ ಸಾಗಿದಂತೆ ಹೆಚ್ಚು. ಲಾ ಸೆರೇನಾದಲ್ಲಿ 14 ಸೆಂಮೀ ವಾಲ್ಪಾರಾಯೀಸೊದಲ್ಲಿ 50 ಸೆಂಮೀ. ಇನ್ನೂ ದಕ್ಷಿಣಕ್ಕೆ ಬಾಲ್ಡೀವಿಯದಲ್ಲಿ 270 ಸೆಂಮೀ ದ. ಅ. $53^0$ ರಲ್ಲಿರುವ ಬಾಹಿಯಾ ಫೆಲಿಕ್ಸ್‌ನಲ್ಲಿ 537 ಸೆಂಮೀ ಮಳೆಯಾಗುತ್ತದೆ. ಕಣಿವೆ ಪ್ರದೇಶಗಳಿಗಿಂತ ಆಂಡೀಸಿನ ಪಶ್ಚಿಮ ಇಳಿಜಾರುಗಳಲ್ಲಿ ಮಳೆ ಅಧಿಕ.

ಪೆರು ಶೀತಸಾಗರ ಪ್ರವಾಹ ಚಿಲಿಯ ತೀರದಲ್ಲೇ ಉತ್ತರಾಭಿಮುಖವಾಗಿ ಹರಿಯುತ್ತದೆ. ಆದ್ದರಿಂದ ಚಿಲಿಯ ಉಷ್ಣತೆ ಸಾಮಾನ್ಯವಾಗಿ ಇರಬೇಕಾದ್ದಕ್ಕಿಂತ ಕಡಿಮೆ. ಉತ್ತರ ಭಾಗದಲ್ಲಿರುವ ಆರೀಕಾದಲ್ಲೂ ಬೇಸಗೆಯಲ್ಲಿ ಸರಾಸರಿ ಉಷ್ಣತೆ $23^0$ ಸೆ. ಗಿಂತ ಹೆಚ್ಚಿರುವುದಿಲ್ಲ. ಇಕೀಕೆಯಲ್ಲಿ ಉಷ್ಣತೆ $18.8^0$ ಸೆ. ವಾಲ್ಪಾರೈಸ ಸರಾಸರಿ ಸೋದಲ್ಲಿ $14.4^0$ ಸೆ. 567 ಮೀ ಎತ್ತರದಲ್ಲಿರುವ ಸ್ಯಾಂಟಿಯಾಗೋದಲ್ಲಿ $35.5^0$ ಸೆ. ಮಧ್ಯದ ಕಣಿವೆಯ ದಕ್ಷಿಣ ಭಾಗದಲ್ಲಿರುವ ಬಾಲ್ಡೀವಿಯದಲ್ಲಿ ಜನವರಿ ಅತ್ಯುಷ್ಣ ಮಾಸ ($8^0$ ಸೆ.) ಜುಲೈ ಅತಿ ಶೀತ ಮಾಸ ($7.2^0$ ಸೆ.). ಮಧ್ಯ ಚಿಲಿ ಪ್ರದೇಶದಲ್ಲಿ ಜನವಸತಿಗೆ ಅತ್ಯಂತ ಹಿತಕರವಾದ ವಾಯುಗುಣವಿದೆ.

ಸ್ವಾಭಾವಿಕ ಸಸ್ಯಪ್ರಾಣಿವರ್ಗ: ಚಿಲಿಯ ಶೇ. 70 ಕ್ಕಿಂತ ಹೆಚ್ಚು ಭಾಗ ಪರ್ವತಮಯ. ಮಳೆಯೇ ಆಗದ ಪ್ರದೇಶಗಳಿಂದ ಹಿಡಿದು, 60 ಸೆಂಮೀ ಗಿಂತ ಹೆಚ್ಚು ಮಳೆ ಆಗುವ ಪ್ರದೇಶಗಳು ಇಲ್ಲಿ ಕಂಡುಬರುವುದರಿಂದ ಇಲ್ಲಿಯ ಸಸ್ಯಗಳಲ್ಲಿ ವಿಶೇಷ ವೈವಿಧ್ಯವನ್ನು ಕಾಣಬಹುದು. ಎತ್ತರ ಹಾಗೂ ವಾಯುಗುಣಕ್ಕೆ ಅನುಗುಣವಾಗಿ ಇಲ್ಲಿ ಮೂರು ಮುಖ್ಯ ಸಸ್ಯವಲಯಗಳಿವೆ. ಪೆರುವಿನ ಎಲ್ಲೆಯಿಂದ ದ. ಅ. 20 ವರೆಗಿನ ತೀರಪ್ರದೇಶ ಮರುಭೂಮಿ. ದ. ಅ. $20^0$ ಯಿಂದ ದಕ್ಷಿಣಕ್ಕೆ ತೀರದ ಬೆಟ್ಟಗಳ ಪ್ರದೇಶ ಮಂಜಿನಿಂದ ಆವೃತವಾಗಿರುತ್ತದೆ. ಆದ್ದರಿಂದ ಇಲ್ಲಿಯ ಸಸ್ಯಗಳು ಎತ್ತರಕ್ಕೆ ತಕ್ಕಂತೆ ಬದಲಾಗುತ್ತವೆ. ಕಡಿಮೆ ಎತ್ತರದ ಈ ಪ್ರದೇಶಗಳಲ್ಲಿ ಹೆಚ್ಚು ಎತ್ತರಕ್ಕೆ ಬೆಳೆಯದ ಗೊಬ್ಬಳಿ ಮರಗಳು ಸಾಮಾನ್ಯ.

ಜನಜೀವನ: ಚಿಲಿಯ ಒಟ್ಟು ಜನಸಂಖ್ಯೆಯಲ್ಲಿ ಶೇ. 90ರಷ್ಟು ಜನ ಮಧ್ಯ ಚಿಲಿಯಲ್ಲಿ ನೆಲೆಸಿದ್ದಾರೆ. ಶೇ. 68.2 ಜನ ಪಟ್ಟಣವಾಸಿಗಳು. ಸಾಂಟಿಯಾಗೋ ರಾಜಧಾನಿ. ಜನಸಂಖ್ಯೆ 4,601,434 (2002). ಇದು ಚಿಲಿಯ ಅತ್ಯಂತ ದೊಡ್ಡ ನಗರ. ಇತರ ನಗರಗಳು ವಾಲ್ಪಾರಾಯೀಸೊ, ಕಾನ್ಸೆಪ್ಸಿಯಾನ್, ಆನ್ಟೊಫಗಸ್ತ, ಟೆಮೂಕೊ, ಟಾಲ್ಕಾ, ಷೀಯಾನ್, ಇಸಾರ್ನೊ ಮತ್ತು ಬಾಲ್ಡೀವಿಯ.

ಚಿಲಿಯ ಜನರಲ್ಲಿ ಶೇ. 68 ಸ್ಪ್ಯಾನಿಷ್-ಇಂಡಿಯನ್ ಮಿಶ್ರ ಸಂತಾನ, ಶೇ. 30 ಐರೋಪ್ಯ, ಶೇ. 2 ಶುದ್ಧ ಇಂಡಿಯನ್, ಬಾಲ್ಡೀವಿಯ ಪ್ವೆರ್ಟೊಮಾಂಟ್ ಪ್ರದೇಶದಲ್ಲಿ 30,000 ಜರ್ಮನರು ಮತ್ತು ಜರ್ಮನ್ ವಂಶಸ್ಥರು ಇದ್ದಾರೆ. ಮೂಲವಾಸಿಗಳಾದ ಆರಾಕೇನಿಯನ್ ಇಂಡಿಯನರು ಬಹುತೇಕ ಅರಣ್ಯವಾಸಿಗಳು.

ಚಿಲಿಯ ರಾಷ್ಟ್ರಭಾಷೆ ಸ್ಪ್ಯಾನಿಷ್. ಜರ್ಮನ್ ಭಾಷೆ ಆಡುವವರು ಸ್ವಲ್ಪ ಜನರುಂಟು. ಆರಾಕೇನಿಯನ್ ಇಂಡಿಯನರು ತಮ್ಮ ಭಾಷೆಯ ಜೊತೆಗೆ ಸ್ಪ್ಯಾನಿಷನ್ನೂ ಆಡುವರು. ಶೇ. 89.5 ಜನ ರೋಮನ್ ಕೆಥೊಲಿಕರು. ಫುಟ್‌ಬಾಲ್ ಇಲ್ಲಿಯ ಜನಪ್ರಿಯ ಕ್ರೀಡೆ. ಸ್ಕೀಯಿಂಗ್, ಮೀನು ಹಿಡಿಯುವುದು-ಇವುಗಳಲ್ಲೂ ಜನರಿಗೆ ಆಸಕ್ತಿ.

ವ್ಯವಸಾಯ, ಪಶುಪಾಲನೆ, ಅರಣ್ಯಗಾರಿಕೆ : ಚಿಲಿಯ ಒಟ್ಟು ವಿಸ್ತೀರ್ಣದಲ್ಲಿ ಕೃಷಿಯೋಗ್ಯವಾದ ಭೂಭಾಗ ಕಡಿಮೆ. ಚಿಲಿಯ ಜನರು ಮುಖ್ಯವಾಗಿ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಕೃಷಿಗೆ ಒಳಪಟ್ಟ ಭೂಮಿ ಬಹುಭಾಗ ಇರುವುದು ಮಧ್ಯ ಚಿಲಿಯಲ್ಲಿ. ಎರಡನೆಯ ಮಹಾಯುದ್ಧದವರೆಗೂ ಆಹಾರ ವಿಚಾರದಲ್ಲಿ ಚಿಲಿ ಸ್ವಾವಲಂಬಿಯಾಗಿತ್ತು. ಅಲ್ಲಿಂದೀಚೆಗೆ ಕೊರತೆ ಉದ್ಭವಿಸಿದೆ. ಆಹಾರ ಆಮದಿನಿಂದಾಗಿ ವಿದೇಶಿ ವಿನಿಮಯ ಸಮಸ್ಯೆ ಉಲ್ಬಣಿಸಿದೆ. ಆಧುನಿಕ ಕೃಷಿ ವಿಧಾನಗಳನ್ನು ಅನುಸರಿಸದಿರುವುದು, ಅನೇಕ ಕೃಷಿಕರು ಇತರರ ಭೂಮಿಯಲ್ಲಿ ಬೇಸಾಯ ಮಾಡಬೇಕಾಗಿರುವುದು-ಇವು ಕಡಿಮೆ ಉತ್ಪನ್ನಕ್ಕೆ ಮುಖ್ಯ ಕಾರಣಗಳು. ಸರಿಯಾಗಿ ಬೇಸಾಯ ಮಾಡಿದರೆ ಚಿಲಿಯ ಭೂಮಿ ಈಗಿನ ಜನಸಂಖ್ಯೆಯ ನಾಲ್ಕರಷ್ಟಕ್ಕೆ ಸಾಕಷ್ಟು ಆಹಾರ ಒದಗಿಸಬಲ್ಲುದು. ಈ ದೃಷ್ಟಿಯಿಂದ ಅಲ್ಲಿ ವ್ಯಾಪಕವಾದ ಭೂಸುಧಾರಣೆಗಳು ಜಾರಿಗೆ ಬಂದಿವೆ. ಚಿಲಿಯ ಮುಖ್ಯ ಬೆಳೆಗಳು ಗೋದಿ, ಬಾರ್ಲಿ, ಓಟ್ಸ್, ರೈ, ಮೆಕ್ಕೆಜೋಳ, ಆಲೂಗೆಡ್ಡೆ, ಹುರುಳಿ, ಲೆಂಟಿಲ್. ಅನೇಕ ಬಗೆಯ ಹಣ್ಣುಗಳನ್ನು ಬೆಳೆಯುವರು. ಗೋದಿ, ಸಕ್ಕರೆ, ಕಾಫಿ, ಚಹ, ಬಾಳೆಹಣ್ಣು, ಹತ್ತಿ ಇವನ್ನು ಚಿಲಿ ಆಮದು ಮಾಡಿಕೊಳ್ಳುತ್ತದೆ. ದ್ರಾಕ್ಷಿ ಒಂದು ಮುಖ್ಯ ಬೆಳೆ. ವೈನ್ ತಯಾರಿಕೆ ಪ್ರವರ್ಧಮಾನವಾಗಿದೆ. ಊಟದ ವೇಳೆಯಲ್ಲಿ ವೈನನ್ನು ಸೇವಿಸುವುದು ಚಿಲಿಯನರ ಪದ್ಧತಿಯಾದ್ದರಿಂದ ದೇಶದಲ್ಲೇ ಇದಕ್ಕೆ ಸ್ಥಿರವಾದ ಬೇಡಿಕೆಯಿದೆ. ಇದು ರಫ್ತೂ ಆಗುತ್ತದೆ.

ಚಿಲಿಯಲ್ಲಿ ನೇಯ್ಗೆ, ಆಹಾರೋತ್ಪಾದನೆ, ಹಡಗು ನಿರ್ಮಾಣ, ಚರ್ಮ ಹದ ಮಾಡುವುದು, ಹಿಟ್ಟಿನ ಗಿರಣಿ, ನೂಲಿನ ಗಿರಣಿ, ಮದ್ಯ, ಚರ್ಮದ ವಸ್ತುಗಳ ತಯಾರಿಕೆ, ಎರಕ, ಲೋಹೋದ್ಯಮ, ಪ್ಲೈವುಡ್, ಕಾಗದ, ಹೆಂಚು, ಗಾಜು, ಕಬ್ಬಿಣ, ಉಕ್ಕು-ಮುಂತಾದ ಹಲವು ಕೈಗಾರಿಕೆಗಳಿವೆ. ಚಿಲಿಯ ಹಲವು ಕೈಗಾರಿಕೆಗಳು ಸಾಂಟಿಯಾಗೋ ಮತ್ತು ವಾಲ್ಪಾರಾಯೀಸೊ ಸುತ್ತ ಸ್ಥಾಪಿತವಾಗಿವೆ. ಕಾನ್ಸೆಪ್ಸಿಯಾನ್ ಇನ್ನೊಂದು ಕೈಗಾರಿಕಾವಲಯ. ಕೈಗಾರಿಕೆಗೆ ಬೇಕಾದ ತೈಲ, ಉತ್ತಮ ಕಲ್ಲಿದ್ದಲು ಹೆಚ್ಚಾಗಿಲ್ಲವಾದ್ದರಿಂದ ಜಲವಿದ್ಯುದುತ್ಪಾದನೆಗೆ ಗಮನ ಕೊಡಲಾಗಿದೆ.

ವ್ಯಾಪಾರ, ಸಾರಿಗೆ, ಸಂಪರ್ಕ : ಚಿಲಿಯ ವ್ಯಾಪಾರ ನಡೆಯುವುದು ಬಹುತೇಕ ಸಮುದ್ರಮಾರ್ಗದ ಮೂಲಕ. ಆಹಾರ ಧಾನ್ಯಗಳು ಮಧ್ಯ ಚಿಲಿಯಿಂದ ಉತ್ತರ ಚಿಲಿಗೆ ಹಡಗುಗಳಲ್ಲಿ ರವಾನೆಯಾಗುತ್ತವೆ. ದಕ್ಷಿಣ ಚಿಲಿಯಿಂದ ಎಣ್ಣೆ, ಕಲ್ಲಿದ್ದಲು, ಮಾಂಸ, ಉಣ್ಣೆ ಮುಂತಾದುವು ಮಧ್ಯ ಚಿಲಿಗೆ ಸಾಗುತ್ತವೆ. ತಾಮ್ರ, ನೈಟ್ರೇಟ್, ಮದ್ಯ, ಹಣ್ಣು, ಕಬ್ಬಿಣದ ಅದಿರು, ಉಣ್ಣೆ, ದ್ರಾಕ್ಷಿ, ಮಾಂಸ ಇವು ಮುಖ್ಯ ನಿರ್ಯಾತ ಸರಕುಗಳು. ತೈಲ, ಯಂತ್ರ, ರೈಲ್ವೆ ಸಲಕರಣೆ, ಹಡಗು, ವಾಹನ, ಸಕ್ಕರೆ, ಹತ್ತಿ, ಕಾಫಿ, ಚಹ, ದನದ ಮಾಂಸ ಇವು ಪ್ರಮುಖ ಆಯಾತ ಸರಕುಗಳೂ ಆಗಿವೆ. (ಎನ್.ಎಸ್.ವಿ.)

**ಚಿಲುಮೆ:** ಸಾಂದ್ರವಾಗಿ ಶೇಖರಗೊಂಡ ಭೂಗತ ನೀರು ನೆಲಮಟ್ಟವನ್ನು ತಲುಪಿದಾಗ ಇಲ್ಲವೇ ಬೇರೆ ಕಡೆ ಮಣ್ಣಿನ ಪದರದಿಂದ ಮುಕ್ತವಾದಾಗ ಹೊರಹೊಮ್ಮುವ ನೀರಿನ ಊಟೆ (ಸ್ಪ್ರಿಂಗ್). ಇಂಥ ಒಂದು ಚಿಲುಮೆಯಿಂದ ನೀರು ಸಾಮಾನ್ಯವಾಗಿ ವರ್ಷದ

ಉದ್ದಕ್ಕೂ ಜಿನುಗುತ್ತಲೋ ಚಿಮ್ಮುತ್ತಲೋ ಸತತವಾಗಿ ಬರುತ್ತಿರುತ್ತದೆ. ಕೆಲವು ಚಿಲುಮೆಗಳು ಬೇಸಗೆಯಲ್ಲಿ ಬತ್ತಿ ಹೋಗುವುದೂ ಉಂಟು. ನೆಲದ ಮೇಲೆ ಬಿದ್ದ ಮಳೆಯ ನೀರಿನಲ್ಲಿ ಕೊಂಚ ಭಾಗ ಇಳಿಜಾರಿನಲ್ಲಿ ಹರಿದು ಹತ್ತಿರದ ತೊರೆಯನ್ನೋ ನದಿಯನ್ನೋ ಕೆರೆಯನ್ನೋ ಸೇರುತ್ತದೆ. ಇನ್ನುಳಿದ ಭಾಗ ಭೂಮಿಯಲ್ಲಿ ಇಂಗಿ ಹೋಗುತ್ತದೆ. ಈ ನೀರು ತನಗೆ ಅಡ್ಡಬಂದ ವಿವಿಧ ಶಿಲೆಗಳ ಮೂಲಕ ಹಾದು ಕೆಳಮಟ್ಟಕ್ಕೆ ಜಿನುಗುತ್ತಿರುತ್ತದೆ. ನೀರಿನ ಜಿನುಗುವಿಕೆಯನ್ನು ಅನುಸರಿಸಿ ಶಿಲೆಗಳನ್ನು ವ್ಯಾಪ್ಯಶಿಲೆ ಮತ್ತು ಅವ್ಯಾಪ್ಯ ಶಿಲೆಗಳೆಂದು ಎರಡು ಮುಖ್ಯ ಗುಂಪಾಗಿ ವಿಂಗಡಿಸಬಹುದು. ವ್ಯಾಪ್ಯಶಿಲೆಗಳಲ್ಲಿ ನೀರು ಮೊದಲಾದ ದ್ರವಗಳು ಅಲ್ಲಿರುವ ಸೂಕ್ಷ್ಮರಂಧ್ರ, ಬಿರುಕು ಮತ್ತು ಸೀಳುಗಳ ಮೂಲಕ ಪ್ರವಹಿಸುತ್ತವೆ. ಮರಳುಶಿಲೆ, ಕಣಶಿಲೆ ಮುಂತಾದವು ಉತ್ತಮ ಬಗೆಯ ವ್ಯಾಪ್ಯಶಿಲೆಗಳು. ಅವ್ಯಾಪ್ಯಶಿಲೆಗಳಲ್ಲಿ ಅಷ್ಟಾಗಿ ರಂಧ್ರಗಳಾಗಲೀ ಸೀಳುಗಳಾಗಲೀ ಇರದೆ ದ್ರವ ಸುಲಭವಾಗಿ ಪ್ರವಹಿಸಲು ಸಾಧ್ಯವಾಗಲಾರದು. ಜೇಡುಶಿಲೆ, ಸುಣ್ಣಶಿಲೆ ಮುಂತಾದುವು ಈ ವರ್ಗಕ್ಕೆ ಸೇರಿದವು. ಹೀಗೆಯೇ ಶಿಲೆಗಳನ್ನು ಸರಂಧ್ರ ಶಿಲೆಗಳು ಮತ್ತು ಅರಂಧ್ರಶಿಲೆಗಳೆಂದೂ ವಿಂಗಡಿಸಲಾಗಿದೆ. ಅರಂಧ್ರಶಿಲೆಗಳಲ್ಲಿ ರಂಧ್ರಗಳು. ಬಹು ಸೂಕ್ಷ್ಮ ಮತ್ತು ವಿರಳ. ಈ ಕಾರಣ ನೀರಾಗಲೀ ಇತರ ದ್ರವವಾಗಲೀ ಸುಲಭವಾಗಿ ಪ್ರವಹಿಸಲಾರದು. ಜೇಡುಶಿಲೆ ಈ ವರ್ಗಕ್ಕೆ ಉತ್ತಮ ಉದಾಹರಣೆ. ಶಿಲೆ ವ್ಯಾಪ್ಯ ಮತ್ತು ಸರಂಧ್ರವಾಗಿದ್ದಲ್ಲಿ ನೀರಿನ ಪ್ರಸರಣ ಅತ್ಯಂತ ಉತ್ತಮ ರೀತಿಯಲ್ಲಿ ಆಗುತ್ತದೆ. ಒಳಗೆ ಇರುವ ನೀರಿನ ಜಿನುಗುವಿಕೆಯಲ್ಲಿ ಈ ಬಗೆಯ ಶಿಲೆಗಳು ಬಹು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಭೂರಚನೆಯಲ್ಲಿ ಮೇಲೆ ವಿವರಿಸಿರುವ ಎರಡು ಬಗೆಯ ಶಿಲೆಗಳ ಪರಸ್ಪರ ಸಂಬಂಧವನ್ನು ಅನುಸರಿಸಿ ಹಲವಾರು ಬಗೆಯ ಚಿಲುಮೆಗಳು ಉಂಟಾಗುತ್ತವೆ.

ಎಲ್ಲ ಚಿಲುಮೆಗಳಲ್ಲೂ ನೀರು ಒಂದೇ ಪ್ರಮಾಣದಲ್ಲಿ ಚಿಮ್ಮುವುದಿಲ್ಲ. ಹಲವು ಚಿಲುಮೆಗಳಲ್ಲಿ ನಿಧಾನವಾಗಿ ತೊಟ್ಟಿಕ್ಕುತ್ತಿದ್ದರೆ ಕೆಲವು ಚಿಲುಮೆಗಳಲ್ಲಿ ಧಾರಾಕಾರವಾಗಿ ಚಿಮ್ಮುತ್ತಿರುತ್ತದೆ. ಕೆಲವು ಚಿಲುಮೆಗಳಲ್ಲಿ ಪ್ರತಿ ನಿಮಿಷಕ್ಕೆ 450 ಗ್ಯಾಲನುಗಳಷ್ಟು ನೀರು ಚಿಮ್ಮುತ್ತದೆ. ಈ ದೃಷ್ಟಿಯಿಂದ ಫ್ರಾನ್ಸಿನ ಫಾಂಟೇನ್ ಡಿ ವಾಕ್ಲೂಸ್ ಚಿಲುಮೆ ಪ್ರಸಿದ್ಧವಾದುದು. ಇಲ್ಲಿ ಪ್ರತಿಯೊಂದು ನಿಮಿಷಕ್ಕೆ 4,000 ಸೆಕೆಂಡ್–ಅಡಿಗಳಿಗೂ ಹೆಚ್ಚಿನ ನೀರು ಚಿಮ್ಮುತ್ತಿರುತ್ತದೆ (1 ಸೆಕೆಂಡ್ 7.48 ಗ್ಯಾಲನ್/ಸೆಕೆಂಡ್). ಆದರೆ ಅನೇಕ ದೊಡ್ಡ ಚಿಲುಮೆಗಳಲ್ಲಿ ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುವುದಿಲ್ಲ. ಅವುಗಳಿಂದ ಸು. 500 ಸೆಕೆಂಡ್–ಅಡಿಗಳಿಗೂ ಹೆಚ್ಚಿನ ನೀರು ಚಿಮ್ಮುತ್ತದೆ. ಚಿಲುಮೆಗಳಿಂದ ಹೊರಬರುವ ನೀರಿನ ಮೊತ್ತವನ್ನು ಅನುಸರಿಸಿ ಮೆಯಿನ್‌ಜರ್ ಎಂಬಾತ ಎಂಟು ಬಗೆಯ ಚಿಲುಮೆಗಳನ್ನು ಗುರುತಿಸಿದ್ದಾನೆ:

| **ವರ್ಗ** | **ಚಿಮ್ಮುವಿಕೆ** |
|---|---|
| 1 | 100 ಸೆಕೆಂಡ್–ಅಡಿ ಅಥವಾ ಅಧಿಕ |
| 2 | 10–100 ಸೆಕೆಂಡ್–ಅಡಿ ಅಥವಾ ಅಧಿಕ |
| 3 | 1–10 ಅಥವಾ ಅಧಿಕ ಸೆಕೆಂಡ್–ಅಡಿ |
| 4 | ಪ್ರತಿ ಒಂದು ನಿಮಿಷಕ್ಕೆ 100ಗ್ಯಾಲನ್–1 ಸೆಕೆಂಡ್–ಅಡಿ |
| 5 | ಪ್ರತಿ ಒಂದು ನಿಮಿಷಕ್ಕೆ 10–100 ಗ್ಯಾಲನ್ |
| 6 | ಪ್ರತಿ ಒಂದು ನಿಮಿಷಕ್ಕೆ 1–10 ಗ್ಯಾಲನ್ |
| 7 | ಪ್ರತಿ ಒಂದು ನಿಮಿಷಕ್ಕೆ 1 ಪಿಂಟಿನಿಂದ 1 ಗ್ಯಾಲನ್ ಅಥವಾ ಪ್ರತಿದಿನ 4ರಿಂದ 40 ಬ್ಯಾರಲುಗಳು |
| 8 | ಪ್ರತಿ ಒಂದು ನಿಮಿಷಕ್ಕೆ ಒಂದು ಪಿಂಟಿಗಿಂತಲೂ ಕಡಿಮೆ. |

ಚಿಲುಮೆಗಳಲ್ಲಿ ಉಂಟಾಗುವ ನೀರಿನ ಪ್ರಮಾಣ ಒಂದು ಪ್ರದೇಶದ ಮಳೆಯ ವಾರ್ಷಿಕ ಪರಿಮಾಣ, ಶಿಲೆಗಳ ವ್ಯಾಪ್ಯ ಸ್ಥಿತಿ, ಭೂಮಿಯ ಮೇಲ್ಮೈ ಲಕ್ಷಣ ಮತ್ತು ಶಿಲಾರಚನೆ ಅಥವಾ ವಿನ್ಯಾಸ ಈ ಅಂಶಗಳು ಬಹು ಪ್ರಮುಖ ಪಾತ್ರವಹಿಸುತ್ತವೆ. ಇವುಗಳ ಆಧಾರದ ಮೇಲೆ ಟಾಲ್‌ಮನ್ ಎಂಬಾತ ಚಿಲುಮೆಗಳನ್ನು ಅನೇಕ ಗುಂಪುಗಳನ್ನಾಗಿ ವರ್ಗೀಕರಿಸಿದ್ದಾನೆ. ತೆಳುವಾದ ಶಿಲಾ ಹೊರಹೊದಿಕೆಗಳಲ್ಲಿನ ಚಿಲುಮೆಗಳು, ಮಂದವಾದ ಶಿಲಾ ಹೊರ ಹೊದಿಕೆಗಳಲ್ಲಿನ ಚಿಲುಮೆಗಳು, ವ್ಯಾಪ್ಯ ಮತ್ತು ಅವ್ಯಾಪ್ಯ ಶಿಲಾಪ್ರಸ್ತರಗಳಲ್ಲಿನ ಚಿಲುಮೆಗಳು, ಶಿಲಾರಂಧ್ರಗಳಿಂದ ಚಿಮ್ಮುವ ಚಿಲುಮೆಗಳು, ಲಾವಾ ಪ್ರವಾಹಗಳ ಬಿರುಕುಗಳಲ್ಲಿನ ಚಿಲುಮೆಗಳು.

ಮೊದಲನೆಯ ಗುಂಪಿನ ಚಿಲುಮೆಗಳನ್ನು ಗುರುತ್ವ ಚಿಲುಮೆಗಳೆನ್ನಬಹುದು. ಏಕೆಂದರೆ ಇವು ಉಂಟಾಗಲು ಭೂಗುರುತ್ವ ಬಹುಮಟ್ಟಿಗೆ ಕಾರಣ. ಇವುಗಳ ಮುಖ್ಯ ಶಿಲಾವಿನ್ಯಾಸವೆಂದರೆ ಅವ್ಯಾಪ್ಯ ಶಿಲೆಯ ಮೇಲೆ ವ್ಯಾಪ್ಯಶಿಲೆಯಿರುವುದು. ಜಲವಾಹಕಶಿಲೆ ಮಟ್ಟಸವಾಗಿರಬಹುದು ಅಥವಾ ಕೊಂಚಮಟ್ಟಿಗೆ ವಾಲಿಕೊಂಡಿರಬಹುದು. ಶಿಲಾ ಪ್ರಸ್ತರಗಳು ಅಷ್ಟು ಮಂದವಾಗಿರುವುದಿಲ್ಲ. ಚಿಲುಮೆ ಇರುವ ಸ್ಥಳವನ್ನು ಅನುಸರಿಸಿ ಎತ್ತರದ ಚಿಲುಮೆ, ತಪ್ಪಲು ಚಿಲುಮೆ, ಬಂಡೆ ಚಿಲುಮೆ, ದಂಡೆ ಚಿಲುಮೆ ಈ ಮುಂತಾದ ಹೆಸರುಗಳಿಂದ ಕರೆಯುವರು. ಸಾಮಾನ್ಯವಾಗಿ ಈ ವರ್ಗದಲ್ಲಿನ ಚಿಲುಮೆಗಳು ಚಿಕ್ಕವು.

ಎರಡನೆಯ ವರ್ಗದ ಚಿಲುಮೆಗಳು ನೆಲಮಟ್ಟವನ್ನು ಜಲಮಟ್ಟ ಛೇದಿಸುವ ಜಾಡಿನಲ್ಲಿ ಕಂಡುಬರುತ್ತವೆ. ಹೀಗಾಗಿ ಇವುಗಳಿಗೆ ಜಲಮಟ್ಟದ ಚಿಲುಮೆಗಳೆಂದು ಹೆಸರುಂಟು. ಇವು ಕಾಣಿಸಿಕೊಳ್ಳುವ ಜಲವಾಹಕ ಶಿಲಾಪ್ರಸ್ತರ ಸಾಕಷ್ಟು ಮಂದವಾಗಿಯೂ ಇರುತ್ತದೆ. ಇವು ಸಾಮಾನ್ಯವಾಗಿ ಮೆಕ್ಕಲುಭೂಮಿ, ನದಿ ಮರಳು ನಿಕ್ಷೇಪಗಳು, ಹಿಮನದಿಗಳಿಂದಾದ ನಿಕ್ಷೇಪಗಳು, ಮರಳು ಶಿಲಾ ಪ್ರಸ್ತರಗಳಲ್ಲಿ ಕಂಡುಬರುತ್ತವೆ. ಈ ಗುಂಪಿನಲ್ಲಿ ಮುಖ್ಯವಾದವೆಂದರೆ ನದಿ ದಂಡೆಗಳಲ್ಲಿನ ಚಿಲುಮೆಗಳು, ಕಣಿವೆಚಿಲುಮೆಗಳು, ಬೆಟ್ಟದ ಇಳಿಜಾರಿನ ಚಿಲುಮೆಗಳು, ಕೊರಕಲು ಚಿಲುಮೆಗಳು ಮತ್ತು ಮೆಕ್ಕಲು ಚಿಲುಮೆಗಳು. ಇವು ಕೂಡ ಗಾತ್ರದಲ್ಲಿ ಅಷ್ಟು ದೊಡ್ಡವಲ್ಲ. ಇವುಗಳ ಗಾತ್ರವನ್ನು ಜಲವಾಹಕ ಪ್ರಸ್ತರದ ಮಂದ ಮತ್ತು ಜಲಮಟ್ಟದ ಇಳಿಪೋರೆ ನಿರ್ಧರಿಸುತ್ತವೆ. ಮೂರನೆಯ ವರ್ಗದ ಚಿಲುಮೆಗಳು ಕಾಣಿಸುಕೊಳ್ಳುವ ಜಲವಾಹಕಶಿಲೆ ಪ್ರಸ್ತರೀ ರಚನೆಯನ್ನು ತೋರಿಸುತ್ತದೆ. ಅಲ್ಲದೆ ಈ ಬಗೆಯ ಪ್ರಸ್ತರ ಮತ್ತು ವ್ಯಾಪ್ಯ ಶಿಲಾಸ್ತರಗಳು ಒಂದರ ಮೇಲೊಂದು ಹರಡಿರುತ್ತವೆ. ಇವು ಮಟ್ಟಸವಾಗಿರಬಹುದು ಅಥವಾ ವಾಲಿಕೊಂಡಿರಬಹುದು. ಹಲವು ಬಾರಿ ಮಡಿಕೆ ಬಿದ್ದಿರುವುದೂ ಉಂಟು ಅಥವಾ ಅವುಗಳ ಹರಿವಿನಲ್ಲಿ ಭಂಗವಾಗಿರುವುದೂ ಉಂಟು. ಜಲವಾಹಕಗಳು ಹೊರದೋರುವ ಸ್ಥಳಗಳಲ್ಲಿ ಈ ಗುಂಪಿನ ಚಿಲುಮೆಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ ಇವನ್ನು ಕಣಿವೆಗಳು, ಬೆಟ್ಟದ ಇಳಿಜಾರು ಅಥವಾ ತಪ್ಪಲುಗಳಲ್ಲಿ ನೋಡಬಹುದು. ಸಾಮಾನ್ಯವಾಗಿ ಇವು ಜಲವಾಹಕದ ಅಡಿಯಿಂದ ಉದ್ಭವವಾಗುತ್ತವೆ. ಅಂದರೆ ಜಲವಾಹಕ ಅವ್ಯಾಪ್ಯ ಶಿಲಾಪ್ರಸ್ತರವನ್ನು ಸೋಕುವ ಜಾಡಿನಲ್ಲಿ ಉಂಟಾಗುತ್ತವೆ. ಆದ್ದರಿಂದ ಇವನ್ನು ಸ್ಪರ್ಶ ಚಿಲುಮೆಗಳೆನ್ನಬಹುದು. ಇವು ತೋರಿಬರುವ ಶಿಲಾಪ್ರಸ್ತರಗಳು ಮಟ್ಟಸವಾಗಿರದೆ ಮಡಿಕೆ ಬಿದ್ದಿರಬಹುದು. ಹೀಗೆ ಉಂಟಾದ ರಚನೆಗೆ ಅನುಗುಣವಾಗಿ ಇವನ್ನು ಬಾಗು ಚಿಲುಮೆ, ಕೆಳಮಡಿಕೆಯ ಚಿಲುಮೆ, ಮೇಲ್ಮಡಿಕೆಯ ಚಿಲುಮೆ, ಸಂಚಯನ ವಿಳಂಬ ಚಿಲುಮೆ ಎಂದು ಹೆಸರಿಸಲಾಗಿದೆ.

ಭಾರತದಲ್ಲಿನ ಚಿಲುಮೆಗಳು : ಭಾರತದ ಭೂವಿಜ್ಞಾನ ಸಂಸ್ಥೆಯ ಮೊದಲನೆಯ ಪರಿಶೀಲನೆಯ ಪ್ರಕಾರ (1882) ದೇಶದ ವಿವಿಧ ಭಾಗಗಳಲ್ಲಿರುವ 300 ಚಿಲುಮೆಗಳ ಪಟ್ಟಿ ಪ್ರಕಟವಾಗಿದೆ. ಅನಂತರದ ಪರಿಶೀಲನೆಯಲ್ಲಿ (1918) 43 ಹೊಸ ಚಿಲುಮೆಗಳನ್ನು ಈ ಪಟ್ಟಿಗೆ ಸೇರಿಸಲಾಯಿತು. ಈಚೆಗೆ ಬಿಹಾರ, ಮಹಾರಾಷ್ಟ್ರ, ಉತ್ತರಪ್ರದೇಶ, ಮಧ್ಯಪ್ರದೇಶ, ಪಂಜಾಬ್ ಮತ್ತು ಪಶ್ಚಿಮ ಬಂಗಾಲಗಳಲ್ಲಿರುವ ಚಿಲುಮೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಲಾಗಿದೆ (1939–41). ಭಾರತದ ಚಿಲುಮೆಗಳು ನಾಲ್ಕು ಜಾಡುಗಳಲ್ಲಿ ಹರಡಿವೆ: 1 ಬಿಹಾರಿನ ರಾಜಗೃಹ ಮತ್ತು ಮಾಂಘೀರ್ ಜಾಡು; ಮತ್ತು ಕಲ್ಲಿದ್ದಲು ಗಣಿ ಪ್ರದೇಶಗಳ ಅಂಚಿಗೆ ಸಮಾಂತರವಾಗಿರುವ ಜಾಡು; 2 ಪಶ್ಚಿಮ ಕರಾವಳಿಯ ರತ್ನಗಿರಿ, ಥಾನ, ಕೊಲಾಬ ಮತ್ತು ಸೂರತ್ ಜಿಲ್ಲೆಗಳನ್ನೊಳಗೊಂಡ ಜಾಡು; 3 ಸಿಂಧ್, ಬಲೂಚಿಸ್ತಾನ ಪ್ರದೇಶ (ಈಗಿನ ಪಾಕಿಸ್ತಾನ); 4 ಹಿಮಾಲಯ ಪ್ರದೇಶ. ಈ ಮುಖ್ಯ ಜಾಡುಗಳಲ್ಲದೆ ಒರಿಸ್ಸದ ಮಹಾನದಿ ಕಣಿವೆ, ಪಶ್ಚಿಮ ಬಂಗಾಲದ ಬೀರ್‌ಭೂಮ್ ಮತ್ತು ಡಾರ್ಜಲಿಂಗ್ ಜಿಲ್ಲೆ, ಅಸ್ಸಾಂ, ಸಿಕ್ಕಿಂ ಮತ್ತು ದಕ್ಷಿಣ ಭಾರತದ ಹಲವಾರು ಪ್ರದೇಶಗಳಲ್ಲೂ ಚಿಲುಮೆಗಳು ಅಲ್ಲಲ್ಲಿ ಚದರಿದಂತೆ ಹರಡಿವೆ. ಇವುಗಳಲ್ಲಿ ಹಲವು ಪ್ರಪಂಚ ಪ್ರಸಿದ್ಧ ಖನಿಜ ಚಿಲುಮೆಗಳಿಗೆ ಸಾಟಿಯಾಗುವಂಥವು. ಬಿಹಾರಿನ ಹಜಾರಿಬಾಗ್ ಜಿಲ್ಲೆಯಲ್ಲಿರುವ ಪಟಾಲ್‌ಸೂರ್ ಮತ್ತು ಪರಾಶ್‌ನಾಥ್ ಚಿಲುಮೆಗಳು ಪ್ರಪಂಚದಲ್ಲಿ ಪ್ರಸಿದ್ಧವಾದ ಫ್ರಾನ್ಸಿನ ಇವಯಾನ್ ಚಿಲುಮೆಗಳಿಗೆ ಸಮವಾಗಿವೆ. (ಬಿ.ವಿ.ಜಿ.)

**ಚಿಲ್ಕಾ ಸರೋವರ:** ಭಾರತದಲ್ಲೇ ಅತ್ಯಂತ ದೊಡ್ಡ ಸರೋವರ. ಒರಿಸ್ಸ ರಾಜ್ಯದಲ್ಲಿದೆ. ಉ.ಅ. $19^{0}28'$–$19^{0}56'$ ಮತ್ತು ಪೂ.ರೇ. $85^{0}6'$–$85^{0}8'$ ನಡುವೆ ಇರುವ ಈ ಸರೋವರದ ಬಹುಭಾಗ ಇರುವುದು ಪುರಿ ಜಿಲ್ಲೆಯ ದಕ್ಷಿಣದಲ್ಲಿ. ಸ್ವಲ್ಪ ಭಾಗ ಗಂಜಾಂ ಜಿಲ್ಲೆಯಲ್ಲಿದೆ. ಹಿಂದೆ ಇದು ಬಂಗಾಲಕೊಲ್ಲಿಯ ಅಳಿವೆಯಾಗಿತ್ತು. ಈಗ ಮರಳು ದಿಬ್ಬಗಳಿಂದ ಬೇರ್ಪಟ್ಟಿದೆ. 64–72 ಕಿಮೀ ಉದ್ದವಾಗಿಯೂ ಸರಾಸರಿ 8 ಕಿಮೀ ಅಗಲವಾಗಿಯೂ ಸಾಮಾನ್ಯವಾಗಿ 1 ರಿಂದ 2 ಮೀ ಆಳವಾಗಿಯೂ ಇದೆ. ಈ ಸರೋವರಕ್ಕೆ ನೀರು ಸುತ್ತಮುತ್ತಲ ಬೆಟ್ಟದ ಸಾಲುಗಳಿಂದ, ಮಹಾನದಿ, ಭಾರ್ಗವೀ, ದಯಾ ಅಥವಾ ದೇವಿ ನದಿಗಳಿಂದ ಬರುತ್ತದೆ. ಡಿಸೆಂಬರ್‌ನಿಂದ ಜೂನ್ ವರೆಗೆ ನೆರೆಯ ಸಮುದ್ರದಿಂದಾಗಿ ಅದರ ನೀರು ಉಪ್ಪಾಗಿರುತ್ತದೆ. ಮಳೆಗಾಲದಲ್ಲಿ ಹರಿದು ಬಂದ ಹೊಸ ನೀರಿನಿಂದಾಗಿ ಅದರ ನೀರು ಸಿಹಿಯಾಗಿರುತ್ತದೆ. ತೀರದ ಉದ್ದಕ್ಕೂ ಉಪ್ಪಿನ ಪಾತಿಗಳುಂಟು. ಆಕಾರದಲ್ಲಿ ಗೇರುಹಣ್ಣನ್ನು ಹೋಲುವ ಈ ಸರೋವರದಲ್ಲಿ ಹಲವಾರು ಸಣ್ಣ ದ್ವೀಪಗಳಿವೆ. ಪಶ್ಚಿಮ ಮತ್ತು ದಕ್ಷಿಣದಲ್ಲಿ ಬೆಟ್ಟದ ಸಾಲುಗಳಿಂದ ಕೂಡಿದ ನಿಸರ್ಗ ರಮಣೀಯವಾದ ಸರೋವರವಿದು. ಚಿಲ್ಕಾ ಸರೋವರದಲ್ಲಿ ಮುಲ್ಲೆಟ್, ಪಾಂಫ್ರೆಟ್ ಮತ್ತು ಸೀಗಡಿ ಮೀನುಗಳೂ ಮೊಸಳೆಗಳೂ ಇವೆ. ಬಾತುಕೋಳಿಯ ಬೇಟೆಗೆ ಮತ್ತು ಮೀನು ಹಿಡಿಯುವುದಕ್ಕೆ ಸೂಕ್ತವಾದ ಸನ್ನಿವೇಶ ಇಲ್ಲಿಯದು. ಸರೋವರ ಸಂದರ್ಶನಕ್ಕೆ ಅನುಕೂಲವಾದ ತಿಂಗಳುಗಳು ಅಕ್ಟೋಬರ್ ಮತ್ತು ಏಪ್ರಿಲ್. (ಎಸ್.ಎನ್.ಎಲ್.)

**ಚೀನ:** ಪೂರ್ವ ಏಷ್ಯದ ಒಂದು ದೇಶ. ಪ್ರಪಂಚದ ಅತ್ಯಂತ ದೊಡ್ಡ ರಾಷ್ಟ್ರಗಳಲ್ಲೊಂದು. ಉ. ಅ. $18^{0}30'$–$55^{0}00'$, ಪೂ.ರೇ. $70^{0}00'$ – $113^{0}00'$ ನಡುವೆ ಇರುವ ಈ ದೇಶ ದಕ್ಷಿಣೋತ್ತರವಾಗಿ ಸು. 4,000 ಕಿಮೀ ಮತ್ತು ಪೂರ್ವ–ಪಶ್ಚಿಮವಾಗಿ ಸು 4,800 ಕಿಮೀ ಹಬ್ಬಿದೆ. ಪಶ್ಚಿಮ, ಉತ್ತರಗಳಲ್ಲಿ ರಷ್ಯ ಮತ್ತು ಮಂಗೋಲಿಯ ಜನತಾ ಗಣರಾಜ್ಯ, ಈಶಾನ್ಯದಲ್ಲಿ ಕೊರಿಯ, ಪೂರ್ವದಲ್ಲಿ ಹಳದಿ ಸಮುದ್ರ, ಪೂರ್ವ ಚೀನ ಸಮುದ್ರ ಮತ್ತು ದಕ್ಷಿಣ ಚೀನ ಸಮುದ್ರ, ದಕ್ಷಿಣ ಮತ್ತು ನೈಋತ್ಯಗಳಲ್ಲಿ ವಿಯೆಟ್ನಾಮ್, ಲಾವೋಸ್, ಮಯನ್ಮಾರ್, ಕಾರಕೋರಮ್ ಮತ್ತು ಹಿಮಾಲಯ ಪರ್ವತಗಳು ಇದರ ಮೇರೆಗಳು. ಈಶಾನ್ಯದಲ್ಲಿರುವ ಯಾಲು ನದೀಮುಖದ ಎಡೆಯಿಂದ ದಕ್ಷಿಣದಲ್ಲಿ ಟಾನ್‌ಕಿನ್ ಕಾರಿಯವರೆಗೆ ಹಬ್ಬಿರುವ ಚೀನಿ ಸಮುದ್ರತೀರ ಒಂದು ಮಹಾಧನುಸ್ಸಿನಂತಿದೆ. ಚೀನತೀರದಲ್ಲಿ ಹಲವಾರು ಸಣ್ಣಪುಟ್ಟ ದ್ವೀಪಗಳಿವೆ. ಚೀನದ ಭೂಗಡಿಯ ಉದ್ದ ಸು. 14,400 ಕಿಮೀ. ಪ್ರತ್ಯೇಕ ಆಡಳಿತಕ್ಕೆ ಒಳಪಟ್ಟ ತೈವಾನ್ ದ್ವೀಪವನ್ನು ಬಿಟ್ಟು ಚೀನದ ವಿಸ್ತೀರ್ಣ 95,61,000 ಚ.ಕಿಮೀ. ಜನಸಂಖ್ಯೆ 1,306,313,812 (2000).




ಭೌತಲಕ್ಷಣ : ಚೀನವನ್ನು ದಕ್ಷಿಣದ ಪರ್ವತಭಾಗ ಮತ್ತು ಉತ್ತರದ ಬಯಲು ಪ್ರದೇಶ ಎಂದು ವಿಭಜಿಸಬಹುದು. ಪಶ್ಚಿಮ ಪೂರ್ವಭಾಗಗಳಲ್ಲಿ ಪ್ರಾದೇಶಿಕ ಭಿನ್ನತೆಗಳು ಎದ್ದುಕಾಣುತ್ತವೆ. ಉತ್ತರಚೀನದ ಬಯಲುನಾಡು ಸಮುದ್ರತೀರದಿಂದ 650 ಕಿಮೀ ವರೆಗೆ ವ್ಯಾಪಿಸಿದೆ. ಅಲ್ಲಿಂದ ಮುಂದಕ್ಕೆ ಷಾನ್‌ಸೀ, ಷೆನ್‌ಸೀ ಮತ್ತು ಕ್ಯಾನ್ಸೂ ಪ್ರಾಂತ್ಯಗಳ ಮೇಲ್ನಾಡು. ವಾಯವ್ಯ ಪ್ರದೇಶದ ಬಹುಭಾಗ ಮೆಕ್ಕಲುಭೂಮಿ. ಬಿರುಗಾಳಿಗಳಿಂದ ತೂರಿಬಂದ ಮೆಕ್ಕಲು ಮಣ್ಣಿನ ಪದರ 17 ಮೀ ಗಳಿಂದ 80 ಮೀ ವರೆಗೆ ದಪ್ಪವಾಗಿ ಹರಡಿ ನೆಲ ಫಲವತ್ತಾಗಿದೆ. ನೀರಿನ ಅನುಕೂಲ ಇರುವ ಕಡೆ ವ್ಯವಸಾಯ ಚೆನ್ನಾಗಿ ನಡೆಯುತ್ತದೆ. ಆದರೆ ಈ ಭಾಗಗಳಲ್ಲಿ ಮಳೆ ಕಡಿಮೆ ಹಾಗೂ ನೀರಿನ ಆಸರೆ ಹೆಚ್ಚಾಗಿಲ್ಲ.

ಪೂರ್ವಭಾಗದಲ್ಲಿ ಉತ್ತರಚೀನ ಬಯಲುನಾಡು ಫಲವತ್ತಾಗಿದ್ದು ವ್ಯವಸಾಯಕ್ಕೆ ಪ್ರಶಸ್ತವಾಗಿದೆ. ಇಲ್ಲಿ ಜನಸಾಂದ್ರತೆ ಹೆಚ್ಚು. ಉತ್ತರಚೀನ ಮತ್ತು ದಕ್ಷಿಣ ಮಂಚೂರಿಯ ಬಯಲಿನ ನಡುವೆ ಸಂಪರ್ಕ ಕಲ್ಪಿಸುವ ಇಕ್ಕಟ್ಟಾದ ತೀರಮಾರ್ಗ ಸಮುದ್ರಕ್ಕೂ ಜೆಹೋಲ್ ಪರ್ವತಗಳಿಗೂ ನಡುವೆ ಇದೆ.

ಮಧ್ಯ ಮತ್ತು ದಕ್ಷಿಣ ಚೀನಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳು ಹೆಚ್ಚು. ಪಶ್ಚಿಮ ಭಾಗದ ಪರ್ವತಗಳಲ್ಲಿ ಕಣಿವೆ ದಾರಿಗಳು ಕಡಿಮೆ. ಪೂರ್ವ ಭಾಗದಲ್ಲಿ ಚಾಂಗ್‌ಜಿಯಾಂಗ್ ನದಿ ಸಮುದ್ರದಿಂದ ಪಶ್ಚಿಮಕ್ಕೆ 438 ಕಿಮೀ ದೂರ ಡೂಂಗ್‌ಟಿಂಗ್ ಸರೋವರದ ವರೆಗೆ ಇಳುಕಲು ನೆಲವನ್ನು ಸೃಷ್ಟಿಸಿದೆ.

ಸ್ವಾಭಾವಿಕ ವಿಭಾಗಗಳು : ಚೀನವನ್ನು ಭೌಗೋಳಿಕವಾಗಿ 10 ಪ್ರಾಂತ್ಯಗಳನ್ನಾಗಿ ವಿಂಗಡಿಸಬಹುದು. 1 ಟಿಬೆಟ್ ಪ್ರಸ್ಥಭೂಮಿ: ಸಮುದ್ರಮಟ್ಟದಿಂದ ಇದರ ಎತ್ತರ 4,000 ಮೀ. ರಾಜ್ಯದ ಸು. ಕಾಲುಭಾಗ ಇದರ ವಿಸ್ತೀರ್ಣ. 2. ಷಿನ್‌ಜಿಯಾಂಗ್ ತಗ್ಗು ಭೂಮಿ: ಟಿಯೆನ್‌ಷಾನ್ ಪರ್ವತಶ್ರೇಣಿಯಿಂದಾಗಿ ಈ ಪ್ರದೇಶ ಎರಡು ಭಾಗಗಳಾಗಿವೆ. ಅವುಗಳಲ್ಲಿ ಉತ್ತರಕ್ಕಿರುವುದು ಜುಂಗಾರಿಯ, ದಕ್ಷಿಣದಲ್ಲಿ ತಾರೀಮ್ ನದಿ ಬಯಲು. 3. ಮಂಗೋಲಿಯ ಪ್ರಸ್ಥಭೂಮಿ : ಈ ಪ್ರದೇಶ ಈಶಾನ್ಯದ ಷಿಂಗಾನ್ ಪರ್ವತಗಳಿಂದ ಷಿನ್‌ಜಿಯಾಂಗ್ ನದಿಯವರೆಗೆ ಹರಡಿದೆ. 4. ಮೆಕ್ಕಲು ಭೂಮಿ : ಇದು ಮಂಗೋಲಿಯ ಬಯಲುನಾಡಿನ ದಕ್ಷಿಣದಲ್ಲಿದೆ. ಷಾನ್‌ಸೀ ಮತ್ತು ಕ್ಯಾನ್ಸೂ ಪ್ರಾಂತ್ಯಗಳ ಸ್ವಲ್ಪಭಾಗ ಇದಕ್ಕೆ ಸೇರಿದೆ. ಭೂಸವೆತದಿಂದಾಗಿ ಈ ಪ್ರದೇಶದಲ್ಲಿ 200 ಮೀ ಆಳದ ಅನೇಕ ದರಿ ಮತ್ತು ಕಮರಿಗಳುಂಟು. 5. ಸಚ್ವಾನ್ ತಗ್ಗು ಪ್ರದೇಶ: ಇದು ಬಹುಮಟ್ಟಿಗೆ ಸಚ್ವಾನ್ ಪ್ರಾಂತ್ಯಗಳನ್ನೊಳಗೊಂಡಿದೆ. ಇಲ್ಲಿಯ ಫಲವತ್ತಾದ ಕಣಿವೆಗಳು ನೆರೆಮಣ್ಣಿನಿಂದ ಕೂಡಿವೆ. 6. ಯುನ್ಯಾನ್ ಗ್ವೇಜೋ ಮಲೆನಾಡು: ಇಲ್ಲಿ ಕಮರಿ ಹಾಗೂ ದರಿಗಳು ಹೆಚ್ಚಾದ ಪ್ರಯುಕ್ತ ಭೂಮಿಯ ಬಹುಭಾಗ ವ್ಯವಸಾಯಕ್ಕೆ ಅನುಕೂಲವಾಗಿಲ್ಲ. 7. ಈಶಾನ್ಯ ಬಯಲುನಾಡು : ಸುಂಗಾರೀ ಮತ್ತು ಲಿಯೌ ನದಿಗಳ ನಡುವಣ ಜಲಾನಯನ ಭೂಮಿಯನ್ನೊಳಗೊಂದಿದೆ. ಇದರ ವಿಸ್ತಾರ ಉತ್ತರದಿಂದ ದಕ್ಷಿಣಕ್ಕೆ 960 ಕಿಮೀ; ಪೂರ್ವದಿಂದ ಪಶ್ಚಿಮಕ್ಕೆ 400 ಕಿಮೀ. 8. ಉತ್ತರ ಚೀನ ಬಯಲುನಾಡು : ಚೀನದ ದೊಡ್ಡ ಬಯಲುಗಳಲ್ಲಿ ಇದು ಎರಡನೆಯದು ; ಷಾನ್‌ಸೀ ಪ್ರಾಂತ್ಯವನ್ನು ಬಿಟ್ಟು ಉತ್ತರ ಚೀನ ಭಾಗವನ್ನು ಆವರಿಸಿದೆ. 9. ಚಾಂಗ್‌ಜಿಯಾಂಗ್‌ದಿಯ ಹರಿವಿನ ನಡುವಣ ಮತ್ತು ಅಂತ್ಯದ ಭಾಗ : ಈ ಪ್ರದೇಶದಲ್ಲಿ ನದಿಯ ಇಬ್ಬದಿಯಲ್ಲೂ ಸಮುದ್ರದವರೆಗೆ ಫಲವತ್ತಾದ ಭೂಮಿ ಇದೆ. 10. ಆಗ್ನೇಯ ಬೆಟ್ಟಗುಡ್ಡ ಪ್ರದೇಶ : ಇದು ಚಾಂಗ್‌ಜಿಯಾಂಗ್ ನದಿಯ ಮಧ್ಯ ಹರಿವಿನ ದಕ್ಷಿಣ ಭಾಗದಲ್ಲಿದೆ.

ಪರ್ವತಗಳು : ಟಿಬೆಟ್ ಪ್ರಾಂತ್ಯದ ಪರ್ವತಗಳನ್ನು ಬಿಟ್ಟರೆ ಚೀನದಲ್ಲಿ ದಟ್ಟವಾಗಿ ಸಾಗುವ ಮತ್ತು ಎತ್ತರ ಶಿಖರಗಳಿಂದ ಕೂಡಿದ ಪರ್ವತಗಳು ಕಡಿಮೆ. ಪರ್ವತಗಳು ಅವಿಚ್ಛಿನ್ನವಾಗಿ ಸಾಗುವ ಕಡೆ ಹವಾಗುಣದ ನಿರ್ಧಾರದಲ್ಲಿ ಅವುಗಳ ಪಾತ್ರ ವಿಶಿಷ್ಟವಾದುದಾಗಿದೆ. ಚೀನದ ಈಶಾನ್ಯಭಾಗದಲ್ಲಿ ಮಹಾ ಷಿಂಗಾನ್ ಪರ್ವತ ಶ್ರೇಣಿ ವ್ಯಾಪಿಸಿದೆ. ಅದರ ಪೂರ್ವಪ್ರದೇಶ ಸಮತಲವಾಗಿದ್ದು ಅಲ್ಲಲ್ಲಿ ಬೆಟ್ಟಗಳಿವೆ. ಈ ಭಾಗ ವ್ಯವಸಾಯಕ್ಕೆ ಅನುಕೂಲ; ಈ ಪರ್ವತದ ಕಡೆ ಕಿರುಬೆಟ್ಟಗಳ ಸಾಲು, ಇಳಕಲು ಭೂಮಿ, ಬಯಲುಗಳು ಇವೆ. ಷಿಂಗಾನ್ ಪರ್ವತಸಾಲು ಬೇಸಿಗೆಯಲ್ಲಿ ಮಾರುತಗಳನ್ನು ತಡೆಯುವುದರಿಂದ ಮಳೆ ಕಡಿಮೆ. ಈ ಭಾಗದಲ್ಲಿ ಬೇಸಾಯಕ್ಕಿಂತ ಪಶುಪಾಲನೆ ಮುಖ್ಯ ಕಸುಬು. ಇನ್‌ಷಾನ್ ಪರ್ವತ ಶ್ರೇಣಿ ಮಂಗೋಲಿಯವನ್ನು ಉತ್ತರ ಚೀನದಿಂದ ಪ್ರತ್ಯೇಕಿಸಿದೆ. ಟೈಹಾಂಗ್ ಪರ್ವತಗಳು ಉತ್ತರ ಚೀನ ಬಯಲು ನಾಡಿಗೂ ಲೂಯೆಸ್ ಪ್ರಸ್ಥಭೂಮಿಗೂ ನಡುವೆ ಇವೆ. ಉತ್ತರಚೀನ ಬಯಲು ಮಂಚೂರಿಯ ಬಯಲಿನಿಂದ ಪ್ರತ್ಯೇಕಗೊಂಡಿರುವುದು ಒಳಮಂಗೋಲಿಯದ ಮಲೆನಾಡಿನಿಂದಾಗಿ, ಚಿನ್‌ಲಿಂಗ್ ಪರ್ವತ ಚೀನವನ್ನು ಎರಡು ಪ್ರತ್ಯೇಕ ಹವಾಗುಣ ಪ್ರದೇಶಗಳನ್ನಾಗಿ ವಿಭಜಿಸಿದೆ. ಈ ಪರ್ವತದ ಉತ್ತರಭಾಗದಲ್ಲಿ ಚಳಿ ಹೆಚ್ಚು, ಭೂಮಿಬಹುತೇಕ ಬಂಜರು. ಪರ್ವತದ ದಕ್ಷಿಣಭಾಗ ಸಮತಲವಾಗಿಲ್ಲ ; ಅಲ್ಲಿ ಬಿಸಿಲು ಮತ್ತು ಮಳೆ ಹೆಚ್ಚು. ಪಶ್ಚಿಮದಲ್ಲಿ ಕ್ಯಾನ್ಸೂ ಪ್ರಾಂತ್ಯದಲ್ಲಿ ಪ್ರಾರಂಭವಾಗುವ ಈ ಪರ್ವತಶ್ರೇಣಿ ಪೂರ್ವಕ್ಕೆ ಸಾಗಿ ಆನ್‌ಹ್ವೇ ಪ್ರಾಂತ್ಯದ ಮಧ್ಯಭಾಗದಲ್ಲಿ ಇಳಿಯುತ್ತ ಬಂದು ಅದೃಶ್ಯವಾಗುತ್ತದೆ. ಮಧ್ಯ ಚೀನದ ವೂಷಾನ್ ಪರ್ವತ ಪೂರ್ವ ಚೀನವನ್ನು ಪಶ್ಚಿಮ ಚೀನದಿಂದ ಪ್ರತ್ಯೇಕಿಸಿದೆ. ಉತ್ತರದಲ್ಲಿ ವಿಶಾಲವಾದ ಹಾಗೂ ಫಲವತ್ತಾದ ಚಾಂಗ್ ಜಿಯಾಂಗ್ ನದಿ ಜಲಾನಯನಭೂಮಿಯೂ ದಕ್ಷಿಣದಲ್ಲಿ ಚೀನದ ಪ್ರಸಿದ್ಧ ಜಲಮಾರ್ಗಗಳೂ ಉಂಟು. ಈ ಪರ್ವತದಿಂದ ಪಶ್ಚಿಮಭಾಗದಲ್ಲಿ ಬೇಸಗೆಯ ಮಳೆಗಳಿಗೆ ಅಡಚಣೆ. ಕುನ್‌ಲುನ್ ಮತ್ತು ಸಚ್ವಾನ್ ಪರ್ವತ ಶ್ರೇಣಿಗಳು ಚಿಂಗ್‌ಹೈ–ಷೀ ಕ್ಯಾಂಗ್–ಟಿಬೆಟ್ ಪ್ರಸ್ಥಭೂಮಿಗೆ ಉತ್ತರ ಹಾಗೂ ಪೂರ್ವ ಅಂಚುಗಳಾಗಿವೆ. ಅದು ಪಶ್ಚಿಮದಲ್ಲಿ ಪಾಮೀರ್ ಪ್ರಸ್ಥಭೂಮಿಯಲ್ಲಿ ಪ್ರಾರಂಭವಾಗಿ ಕುನ್‌ಲುನ್, ಅಲ್ಟಿನ್‌ತಾಗ್, ನಾನ್‌ಷಾನ್, ಮಿನ್ಷಾನ್ ಮೊದಲಾದ ಹೆಸರುಗಳನ್ನು ತಾಳಿ ಯುನಾನ್ ಪ್ರಾಂತ್ಯದ ಪಶ್ಚಿಮ ಅಂಚಿನ ಬಳಿ ಇಳಿದು ಸಾಗಿ ಸದೃಶ್ಯವಾಗುತ್ತದೆ. ಇಲ್ಲಿಯ ಜನರ ವೃತ್ತಿ ಪಶುಪಾಲನೆ. ಹುಲ್ಲು ಬಯಲುಗಳು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಚೀನದ ಪರ್ವತ ಶಿಖರಗಳಲ್ಲಿ ಟಯೆನ್ ಷಾನ್ ಪರ್ವತದ ಟಡಂಗ್ರಿಕಾನ್‌ನ ಎತ್ತರ 7875 ಮೀ. ಚಿನ್‌ಲಿಂಗ್ ಪರ್ವತದ ಎತ್ತರ 4,000 ಮೀ, ಕುನ್‌ಲುನ್ ಪರ್ವತದ ಎತ್ತರ 8340 ಮೀ.

ನದಿಗಳು : ಚೀನದ ನದಿಗಳಲ್ಲಿ ಹ್ವಾಂಗ್ ಹೊ ಚಾಂಗ್‌ಜಿಯಾಂಗ್ (ಯಾಂಗ್‌ಟ್ಸೀ) ಮತ್ತು ಸಿ ಕಿಯಾಂಗ್ ಬಹು ಮುಖ್ಯ ನದಿಗಳು. ಈ ಮೂರು ನದಿಗಳು ಪಶ್ಚಿಮದ ಇಳುಕಲು ಬೆಟ್ಟಗಳಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು ಸಮುದ್ರವನ್ನು ಸೇರುತ್ತವೆ. ಉತ್ತರದಲ್ಲಿ ಹ್ವಾಂಗ್ ಹೊ (ಹಳದಿ ನದಿ), ಮಧ್ಯಭಾಗದಲ್ಲಿ ಯಾಂಗ್‌ಟ್ಸೀ ನದಿ ಮತ್ತು ದಕ್ಷಿಣದಲ್ಲಿ ಸಿಕಿಯಾಂಗ್ ನದಿ ಹರಿಯುತ್ತವೆ.

ಹ್ವಾಂಗ್ ಹೊ (ಉದ್ದ 4800 ಕಿಮೀ) ಚೀನದ ವಾಯವ್ಯ ಭಾಗದ ಬೆಂಗಾಡಿನಲ್ಲಿ ಹರಿದು ಒಳ ಮಂಗೋಲಿಯದ ಆರ್ಡಸ್ ಮರಳ್ಗಾಡಿನಲ್ಲಿ ಬೃಹತ್ ಕುಣಿಕೆಯ ಆಕಾರ ತಾಳಿ ಕೊನೆಗೆ ಅರೆಬೆಂಗಾಡುಪ್ರದೇಶವಾದ ಚೀನ ಬಯಲಿಗೆ ಅಡ್ಡಲಾಗಿ ಯಿನ್‌ಷಾನ್ ಮತ್ತು ಚಿನ್‌ಲಿಂಗ್ ಪರ್ವತಗಳ ನಡುವೆ ಸಾಗಿ ಸಮುದ್ರ ಸೇರುತ್ತದೆ. ನದಿ ತನ್ನ ಪ್ರವಾಹದೊಂದಿಗೆ ಮೆಕ್ಕಲು ಮಣ್ಣನ್ನು ಹೊತ್ತು ತಂದು ಆಗಾಗ್ಗೆ ಪಾತ್ರವನ್ನು ಬದಲಾಯಿಸುವುದರಿಂದ ಇದು ಭಾರಿ ಹಡಗುಗಳ ಸಂಚಾರಕ್ಕೆ ಅನುಕೂಲವಾಗಿಲ್ಲ. ಕಿರಿಯ ಹಡಗುಗಳು ಹ್ಯೂನಾನ್ ಪ್ರಾಂತ್ಯದ ಕೆಲವು ಭಾಗಗಳಲ್ಲಿ, ಪಾವ್‌ಟೌ ಹಾಗೂ ಪಶ್ಚಿಮದ ಲಾಂಜೋ-ಫು ನಗರಗಳ ನಡುವೆ ಸಂಚರಿಸುತ್ತವೆ. ಹ್ವಾಂಗ್ ಹೊ ಗೆ ಚೀನದ ದುಃಖದ ನದಿ ಎಂಬ ಹೆಸರಿದೆ. ಕಳೆದ 3,000 ವರ್ಷಗಳಲ್ಲಿ ನದಿಯ ಅಣೆಕಟ್ಟುಗಳು 15,000 ಬಾರಿ ಒಡೆದಿವೆ; 26 ಸಲ ಅದರ ಹರಿವು ಬದಲಾಗಿದೆ. ಹ್ವಾಂಗ್ ಹೊ ನದಿಯ ಪ್ರವಾಹನಿಯಂತ್ರಣ ಚೀನದ ಪಂಚವಾರ್ಷಿಕ ಯೋಜನೆಯ (1953-57) ಮುಖ್ಯ ಕಾರ್ಯಕ್ರಮವಾಗಿತ್ತು. ಚಾಂಗ್ಜಿಯಾಂಗ್ ನದಿಯ ನೀರನ್ನು ಹ್ವಾಂಗ್ ಹೊ ನದಿಗೆ ತಿರುಗಿಸುವ ಯೋಜನೆಯೂ ಉಂಟು.

ಚಾಂಗ್‌ಜಿಯಾಂಗ್ ನದಿ (5120 ಕಿಮೀ) ಚಿನ್‌ಲಿಂಗ್ ಮತ್ತು ನ್ಯಾನ್‌ಲಿಂಗ್ ಪರ್ವತಗಳ ನಡುವೆ ಮಧ್ಯಚೀನದಲ್ಲಿ ಹರಿದು ಸಮುದ್ರ ಸೇರುತ್ತದೆ. ಇದರ ಜಲಾನಯನಭೂಮಿ 12,10,252 ಚ.ಕಿಮೀ. ಇದು ಪಶ್ಚಿಮ ಏಷ್ಯದ ಅತ್ಯಂತ ದೊಡ್ಡ ನದಿ. ಅದಕ್ಕೆ ದಕ್ಷಿಣದಿಂದ ಬಂದು ಸೇರುವ ನದಿಗಳ ಪೈಕಿ ಷೀಯಾಂಗ್, ವೂ ಮುಖ್ಯವಾದವು. ಉತ್ತರದಿಂದ ಬಂದು ಕೂಡುವ ನದಿಗಳು ಹಾನ್, ಜಿಯಲಿಂಗ್ ಮತ್ತು ಮಿನ್. ಈ ಉಪನದಿಗಳ ಮೇಲೂ ಚೀನಿ ಸರಕುಗಳು ಸಾಗುತ್ತವೆ. ಯಾಂಗ್‌ಟ್ಸೀ ನದಿಯ ಮೇಲೆ ಸಮುದ್ರತೀರದಿಂದ 1008 ಕಿಮೀ ದೂರ ಹ್ಯಾನ್‌ಕೌ ವರೆಗೆ ಕಡಲನೌಕೆಗಳು ಸಂಚರಿಸಬಹುದು. ಅದರ ಉಳಿದ 3200 ಕಿಮೀ ವಿವಿಧ ಜಲಮಾರ್ಗ ಹಾಗೂ ಕಾಲುವೆಗಳಲ್ಲಿ ಕಿರಿಯ ಜಹಜುಗಳು ಮತ್ತು ನಾವೆಗಳು ಸಂಚರಿಸುತ್ತವೆ.

ಸಿಕಿಯಾಂಗ್ ಅಥವಾ ಪಶ್ಚಿಮದ ನದಿ (2115 ಕಿಮೀ) ಚಾಂಗ್‌ಜಿಯಾಂಗ್ ಮತ್ತು ಹ್ವಾಂಗ್ ಹೊ ನದಿಗಳಿಗಿಂತ ಚಿಕ್ಕದು. ಇದು ದಕ್ಷಿಣ ಚೀನದ ಬೆಟ್ಟಗುಡ್ಡಗಳಿಂದ ಸೀಮಿತವಾಗಿದೆ. ಅದರ ಮುಖಭಾಗದಲ್ಲಿರುವ ಕ್ಯಾಂಟನ್ ನಗರದಿಂದ ಒಳನಾಡಲ್ಲಿ 400 ಕಿಮೀ ದೂರ ಜಹಜುಗಳ ಸಂಚಾರವುಂಟು. ಆದರೆ ಯಾಂಗ್‌ಟ್ಸೀಯ ಉಪನದಿಗಳಂತೆ ಈ ನದಿಯ ಉಪನದಿಗಳ ಮೇಲೆ ನೌಕಾಸಂಚಾರ ಸಾಧ್ಯವಿಲ್ಲ.

ಉತ್ತರ ಮಂಚೂರಿಯ ಭಾಗದಲ್ಲಿ ಅಮೂರ್ ನದಿಯನ್ನು ಸೇರುವ ಸುಂಗಾರೀ ಮತ್ತು ಅದರ ಉಪನದಿಗಳು ಎತ್ತರ ಪ್ರದೇಶಗಳಲ್ಲಿ ಹರಿಯುತ್ತವೆ. ಇವುಗಳ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟುತ್ತದೆ. ವಸಂತಕಾಲದಲ್ಲಿ ಇವುಗಳಲ್ಲಿ ಪ್ರವಾಹ ಬರುತ್ತದೆ. ಲಿಯೌ (1428 ಕಿಮೀ) ಒಣ ನೆಲದಲ್ಲಿ ಹರಿಯುವ ನದಿ. ಶೀತ ಕಾಲದಲ್ಲಿ ಹಿಮಗಟ್ಟುತ್ತದೆ. ಹ್ವೈಹೋ (1993 ಕಿಮೀ) ಬೇಸಗೆಯಲ್ಲಿ ಪ್ರವಾಹದಿಂದ ತುಂಬಿ ಹರಿಯುವ ನದಿಯಾಗಿದೆ.

ಚೀನದ ಬೆಟ್ಟಗುಡ್ಡಗಳು ವ್ಯವಸಾಯವನ್ನು ಸೀಮಿತಗೊಳಿಸಿದ್ದರೂ ನದಿ ಕಣಿವೆಗಳು ಫಲವತ್ತಾಗಿವೆ. ನದಿಗಳು ನೀರಾವರಿಗೆ ಹಾಗೂ ಸರಕು ಸಾರಿಗೆಗೆ ಅನುಕೂಲವಾಗಿವೆ. ಚೀನದ ಪಟ್ಟಣಗಳು ನದಿದಂಡೆಗಳ ಮೇಲೇ ಹೆಚ್ಚು. ಅಲ್ಲಿ ಜನಸಾಂದ್ರತೆಯೂ ಅಧಿಕ.

ಕಡಲತೀರ : ಚೀನದ ಕಡಲತೀರ ಚೀನ-ಕೊರಿಯ ಗಡಿ ಬಳಿಯ ಯಾಲೂ ನದಿಯ ಮುಖಭಾಗದಿಂದ ಪ್ರಾರಂಭವಾಗಿ ಚೀನ-ವಿಯೆಟ್ನಾಮ್ ಗಡಿಯ ಪೈಲನ್ ನದಿಯ ಮುಖದ ವರೆಗೆ ಹಬ್ಬಿದೆ. ಹ್ಯಾಂಗ್‌ಚೌ ಕೊಲ್ಲಿಗೆ ಉತ್ತರದಲ್ಲಿ ಕಡಲಂಚು ಹೆಚ್ಚು ಡೊಂಕಿಲ್ಲ; ಇದು ಮರಳಿನಿಂದ ಕೂಡಿದೆ. ಈ ತೀರ ಉಪ್ಪು ತಯಾರಿಕೆ ಹಾಗೂ ಮೀನುಗಾರಿಕೆಗೆ ಪ್ರಸಿದ್ಧವಾಗಿದೆ. ಷ್ಯಾನ್‌ಟಂಗ್, ಲಿಯೌಡಂಗ್ ಪರ್ಯಾಯದ್ವೀಪಗಳಲ್ಲಿ ಹಲವು ಬಂದರುಗಳುಂಟು. ಹ್ಯಾಂಗ್‌ಚೌ ಕೊಲ್ಲಿಯ ದಕ್ಷಿಣಕ್ಕಿರುವ ಕಡಲ ತೀರದ ಉದ್ದಕ್ಕೂ ಖಾರಿಗಳಿದ್ದು, ಇವು ಡೊಂಕಾಗಿವೆ. ಈ ಭಾಗದಲ್ಲಿ ಹಲವು ದ್ವೀಪಗಳುಂಟು. ಇಲ್ಲಿ ಸ್ವಾಭಾವಿಕ ಬಂದರುಗಳೂ ಮೀನುಗಾರಿಕೆ ಕೇಂದ್ರಗಳೂ ಇವೆ. ಚೀನದ ಅತ್ಯಂತ ಮುಖ್ಯ ರೇವುಪಟ್ಟಣ ಷಾಂಗೈ.

ವಾಯುಗುಣ : ಚೀನದ ವಾಯುಗುಣ ವೈವಿಧ್ಯಪೂರ್ಣ. ರಾಜ್ಯದ ಶೇ. 90 ಭಾಗ ಸಮಶೀತೋಷ್ಣ ವಲಯದಲ್ಲಿದೆ. ದಕ್ಷಿಣಭಾಗದಲ್ಲಿ ಉಷ್ಣವಲಯದ ವಾಯುಗುಣ, ಈಶಾನ್ಯದಲ್ಲಿ ಸೈಬೀರಿಯ ಮಾದರಿಯ ವಾಯುಗುಣವಿದೆ. ಟಿಬೆಟ್‌ನಲ್ಲಿ ಸರಾಸರಿ ಉಷ್ಣತೆ $55^0$ ಸೆ.

ಉತ್ತರದಿಂದ ದಕ್ಷಿಣಕ್ಕೆ, ತರುವಾಯ ದಕ್ಷಿಣದಿಂದ ಉತ್ತರಕ್ಕೆ ಬೀಸುವ ಗಾಳಿಯಿಂದ ಚೀನದ ವಾಯುಗುಣ ಋತುವಿಗನುಗುಣವಾಗಿ ನಿಯಂತ್ರಿತವಾಗಿದೆ. ವಾಯುವಿನ ಈ ಚಲನೆ ಉಷ್ಣತೆಯಲ್ಲಿ ವ್ಯತ್ಯಾಸಗಳನ್ನು ತಂದು ಕ್ಲುಪ್ತಕಾಲಿಕ ಮಳೆಗಳನ್ನುಂಟುಮಾಡುತ್ತದೆ. ವಾರ್ಷಿಕ ಮಳೆಯಲ್ಲಿ ಶೇ. 50 ರಷ್ಟು ಮಳೆ ಬೇಸಗೆಯಲ್ಲಿ ಬೀಳುತ್ತದೆ. ಚೀನದ ಸಮುದ್ರದಲ್ಲಿ ಜುಲೈ ಅಕ್ಟೋಬರ್ ವರೆಗೆ ತಲೆದೋರುವ ಚಂಡಮಾರುತಗಳು ಅಲ್ಲಿಯ ವಾಯುಗುಣದ ಮೇಲೆ ಪ್ರಭಾವ ಬೀರಿವೆ.

ಕ್ಯಾಂಟನ್ ಮತ್ತು ಹೈನಾನ್‌ಗಳ ಸರಾಸರಿ ವಾರ್ಷಿಕ ಮಳೆ 203 ಸೆಂಮೀ. ಮಂಗೋಲಿಯದ ಮಧ್ಯ ಭಾಗ ಮತ್ತು ಸಿಂಜಿಯಾಂಗ್ ಪ್ರದೇಶದ ವಾರ್ಷಿಕ ಮಳೆ 25 ಸೆಂಮೀ.

ಚೀನದಲ್ಲಿ 8 ಪ್ರಮುಖ ವಾಯುಗುಣ ಪ್ರದೇಶಗಳಿವೆ : 1 ಉತ್ತರ ಮಂಚೂರಿಯ: ಈ ಭಾಗ ಕಣಿವೆ ಮತ್ತು ಬೆಟ್ಟಗಳಿಂದ ಕೂಡಿದ ಅತಿ ಶೀತ ಪ್ರದೇಶ. ಬೇಸಗೆ ಕಡಿಮೆ. ವ್ಯವಸಾಯಕ್ಕೆ ಅನುಕೂಲವಾಗಿಲ್ಲ. ಹಿಮಗಾಲ ಹೆಚ್ಚು. ಬೇಸಗೆ ವಾಯುಗುಣ ಹಿತಕರ. ವಾರ್ಷಿಕ ಮಳೆ 50 ಸೆಂಮೀ. 2 ವಾಯವ್ಯ ಚೀನ: ಇದು ಹುಲ್ಲುಗಾವಲು, ಮರುಭೂಮಿಗಳಿಂದ ಕೂಡಿದೆ. ಇದು ಕ್ಯಾನ್ಸೂ, ಉತ್ತರ ಷೆನ್‌ಸೀ ಮತ್ತು ಒಳಮಂಗೋಲಿಯ ಭಾಗಗಳನ್ನೊಳಗೊಂಡಿದೆ. ಶುಷ್ಕ ವಾಯುಗುಣ. ವಾರ್ಷಿಕ ಮಳೆ ಸು. 50 ಸೆಂಮೀ. ಕೆಲವು ಕಡೆ 25 ಸೆಂಮೀ ಬೇಸಗೆಯಲ್ಲಿ ಮಳೆ. 3 ಉತ್ತರ ಚೀನ : ಈ ಪ್ರದೇಶಕ್ಕೆ ಮಂಚೂರಿಯ ಬಯಲುನಾಡಿನ ದಕ್ಷಿಣ ಭಾಗ, ಜಿಹೋಲ್ ಮತ್ತು ಟೈಹಾಂಗ್ ಪರ್ವತಗಳು, ಲೊಯೆಸ್ ಮೇಲ್ನಾಡಿನ ಬಹುಭಾಗ ಸೇರಿವೆ. ವ್ಯವಸಾಯಕ್ಕೆ ಅನುಕೂಲವಾದ ಕಾಲ 150-225 ದಿನಗಳು. ಮಧ್ಯ ಮಂಚೂರಿಯ ಮತ್ತು ಜೆಹೋಲ್ ಪರ್ವತ ಭಾಗಗಳಲ್ಲಿ ವಾಷಿಕ ಮಳೆ 76 ಸೆಂಮೀ. ದಕ್ಷಿಣ ಮತ್ತು ವಾಯವ್ಯದಲ್ಲಿ 38 ಸೆಂಮೀ. ಕೆಲವು ಕಡೆ ಅತಿವೃಷ್ಟಿ. ವಾಯುಗುಣ ಹಿತಕರವಾಗಿದ್ದರೆ ಬೆಳೆ ಉತ್ತಮ. 4 ಚಾಂಗ್ಜಿಯಾಂಗ್ ನದಿ ಕಣಿವೆ : ಮಧ್ಯಚೀನದ ಈ ಭಾಗ ದಕ್ಷಿಣಕ್ಕೆ ಹ್ಯಾಂಗ್‌ಚೌ ಕೊಲ್ಲಿಯ ವರೆಗೆ ಹಬ್ಬಿದೆ. ವ್ಯವಸಾಯಕ್ಕೆ 225-240 ದಿನಗಳು ಅನುಕೂಲ. ಚಳಿಗಾಲದಲ್ಲಿ ಕೊರೆಯುವ ಚಳಿ, ಹಿಮ ; ಬೇಸಗೆಯಲ್ಲಿ ಬಿಸಿಲ ತಾಪ. ಜೂನ್-ಜುಲೈಗಳಲ್ಲಿ ಮುಂಗಾರುಮಳೆ. ವಾರ್ಷಿಕಮಳೆ 104 ಸೆಂಮೀ-203 ಸೆಂಮೀ. 5 ದಕ್ಷಿಣ ಚೀನ : ಈ ವಲಯದ ಆಗ್ನೇಯ ತೀರ ಮತ್ತು ದಕ್ಷಿಣದ ಬೆಟ್ಟ ಪ್ರದೇಶಗಳಲ್ಲಿ ಚಳಿಗಾಲ ಚಾಂಗ್ಜಿಯಾಂಗ್ ಕಣಿವೆಯಲ್ಲಿರುವುದಕ್ಕಿಂತ ಹಿತಕರವಾಗಿರುತ್ತದೆ. ಪರ್ವತ ಪ್ರದೇಶ ಹಿಮದಿಂದ ಕೂಡಿರುತ್ತದೆ. ತಗ್ಗುನಾಡಿನಲ್ಲಿ ವ್ಯವಸಾಯಕ್ಕೆ ಇಡೀ ವರ್ಷ ಅನುಕೂಲ. ಬೇಸಗೆ ಕಾಲ ದೀರ್ಘ. ಬಿಸಿಲು ಹೆಚ್ಚು. ಮೇಲ್ನಾಡಿನಲ್ಲಿ ಮತ್ತು ತೀರಪ್ರದೇಶಗಳಲ್ಲಿ ಆಗ ತಂಪು ಹವೆ ಇರುತ್ತದೆ. ಮೇ, ಜೂನ್, ಜುಲೈಗಳಲ್ಲಿ 127-203 ಸೆಂಮೀ ಮಳೆಯಾಗುತ್ತದೆ. ಕಡಲ ತೀರದಲ್ಲಿ ಬೇಸಗೆ ಮತ್ತು ವಸಂತ ಕಾಲಗಳಲ್ಲಿ ಬೀಸುವ ಟೈಫೂನ್ ವಿನಾಶಕಾರಿ. 6 ಸಚ್ವಾನ್ ಮತ್ತು ಉತ್ತರ ಗ್ವೇಜೋ ಪ್ರದೇಶ : ಎತ್ತರ ಪ್ರದೇಶಗಳಲ್ಲಿ ಹಿಮ ಬೀಳುತ್ತದೆ. ಚಿನ್‌ಲಿಂಗ್ ಪರ್ವತ ಉತ್ತರದ ಶೀತಮರುತಗಳನ್ನು ಹಾಗೂ ಟಿಬೆಟ್ ಪ್ರಸ್ಥಭೂಮಿಯಿಂದ ಬಂದ ಪಶ್ಚಿಮಾಭಿಮುಖವಾಗಿ ಬೀಸುವ ಗಾಳಿಯನ್ನು ತಡೆದು ರಕ್ಷಣೆ ನೀಡುತ್ತದೆ. ಚಳಿಗಾಲ ತೀವ್ರವಾಗಿದ್ದು ಬೇಸಗೆ ಹಿತಕರವಾಗಿರುತ್ತದೆ. ವಾರ್ಷಿಕ ಮಳೆ ಉತ್ತರದಲ್ಲಿ 76 ಸೆಂಮೀ. ದಕ್ಷಿಣದಲ್ಲಿ 152 ಸೆಂಮೀ. ನೈಋತ್ಯ ಚೀನ : ಗ್ವೇಜೋ ಪ್ರಾಂತ್ಯದ ಪಶ್ಚಿಮ ಮತ್ತು ದಕ್ಷಿಣಭಾಗ ಹಾಗೂ ಯುನಾನ್ ಪ್ರಸ್ಥಭೂಮಿಗಳಲ್ಲಿ ಚೀನದ ಇತರ ಭಾಗಗಳಲ್ಲಿ ಇಲ್ಲದ ಅತ್ಯಂತ ಹಿತಕರವಾದ ಹವಾಗುಣವಿದೆ. ಈ ಪ್ರದೇಶ ಸಮುದ್ರಮಟ್ಟಕ್ಕೆ ಹೆಚ್ಚು ಎತ್ತರದಲ್ಲಿರುವುದರಿಂದ ಉಷ್ಣತೆ ಕಡಿಮೆ. ಇಡೀ ವರ್ಷದಲ್ಲಿ ವ್ಯವಸಾಯ ಸಾಧ್ಯ. ಚಳಿಗಾಲ ಹಿತಕರ; ಬೇಸಗೆ ತಂಪು. ಜುಲೈ ತಿಂಗಳಲ್ಲಿ ಮಳೆ ಹೆಚ್ಚು. ವಾರ್ಷಿಕ ಮಳೆ ಉತ್ತರದಲ್ಲಿ 101 ಸೆಂಮೀ; ದಕ್ಷಿಣದಲ್ಲಿ 152 ಸೆಂಮೀ. ಮೇಘಸಾಲು ಮತ್ತು ನೀಲಾಕಾಶಕ್ಕೆ ಯುನಾನ್ ಪ್ರಾಂತ್ಯ ಪ್ರಸಿದ್ಧ. ಅದನ್ನು ದಕ್ಷಿಣದ ಮೇಘನಾಡು ಎಂದು ಕರೆಯಲಾಗಿದೆ. 8 ಉಷ್ಣೀಯ ದಕ್ಷಿಣ ತೀರ: ಹೈನಾನ್ ದ್ವೀಪ ಮತ್ತು ಚೀನದ ದಕ್ಷಿಣ ತೀರ ಪ್ರದೇಶ ಈ ವಲಯಕ್ಕೆ ಸೇರಿವೆ. ಇಲ್ಲಿಯದು ಉಷ್ಣವಲಯದ ವಾಯುಗುಣ. ಇಡೀ ವರ್ಷ ವ್ಯವಸಾಯ ನಡೆಯುತ್ತದೆ. ಇಡೀವರ್ಷ ಉಷ್ಣತೆ ಹೆಚ್ಚು. ಎಲ್ಲ ತಿಂಗಳೂ ಮಳೆಯಾಗುತ್ತದೆ. ಮೇ-ಆಗಸ್ಟ್ ನಡುವೆ ಹೆಚ್ಚು ಮಳೆ. ವಾರ್ಷಿಕ ಮಳೆ 114 ಸೆಂಮೀ-216 ಸೆಂಮೀ. ಇಡೀ ವರ್ಷ ಬತ್ತ ಬೆಳೆಯಬಹುದು.

ಸಸ್ಯಗಳು : ಚೀನದಲ್ಲಿ ಉತ್ತರದ ಶಂಕುಪರ್ಣಿ ನಿತ್ಯಹಸುರು ಗಿಡಗಳಿಂದ ಹಿಡಿದು ದಕ್ಷಿಣದ ಮಳೆಗಾಡುಗಳ ವರೆಗೆ, ಬಂಜರುನಾಡ ಕುರುಚಲು ಗಿಡಗಳಿಂದ ಹಿಡಿದು ಮರುಭೂಮಿಯ ಮತ್ತು ಉಷ್ಣವಲಯದ ಹವಳ ದ್ವೀಪೀಯ ಸಸ್ಯಗಳ ವರೆಗೆ ಅನೇಕ ಸ್ವಾಭಾವಿಕ ಗಿಡಮರಗಳಿವೆ. ಇಡೀ ಚೀನವನ್ನು ಎರಡು ಸಸ್ಯಗಾವಲುಗಳನ್ನಾಗಿ ವಿಂಗಡಿಸಬಹುದು. ವಾಯವ್ಯದಿಂದ ದೇಶದ ಅರ್ಧಭಾಗ ಹುಲ್ಲುಗಾವಲು ಹಾಗೂ ಮರಳ್ಗಾಡ ಸಸ್ಯಗಳಿಂದ ಕೂಡಿದೆ. ದೇಶದ ಮಧ್ಯಭಾಗದಿಂದ ಆಗ್ನೇಯ ಅಂಚಿನ ವರೆಗೆ ಅರಣ್ಯಗಳಿವೆ. ಚೀನದ ಅರಣ್ಯಗಳಲ್ಲಿ ಆರು ಬಗೆ : 1 ಗಟ್ಟಿ ಮರಗಳ ಅರಣ್ಯಗಳು ಈಶಾನ್ಯ ಮತ್ತು ಉತ್ತರ ಪ್ರಾಂತ್ಯಗಳಲ್ಲಿವೆ. ಅಲ್ಲಿಯ ಮುಖ್ಯ ಮರಗಳು ಲಿನ್‌ಡನ್ ಮತ್ತು ಬರ್ಚ್. ಅವುಗಳೊಂದಿಗೆ ಅಲ್ಲಲ್ಲಿ ಬಿಳಿ ಪೈನ್, ಓಕ್ ಮತ್ತು ಅಕ್ರೋಟ (ವಾಲ್‌ನಟ್) ಮರಗಳಿವೆ. 2 ಉತ್ತರ ಪ್ರಾಂತ್ಯಗಳ ಪರ್ಣಪಾತಿ ಸಸ್ಯಗಳ ಅರಣ್ಯಗಳು : ಇಲ್ಲಿಯ ಮರಗಳು ಆಷ್, ಹಾರ್ನ್‌ಬೀಮ್, ಎಲ್ಮ್, ಅಕ್ರೋಟ್ ಮತ್ತು ಹ್ಯಾಕ್‌ಬೆರಿ. ಪರ್ವತಶಿಖರಗಳಲ್ಲಿ ಪೈನ್ ಗಿಡಗಳು ಹೇರಳ ; ಇಳಿಭೂಮಿಗಳಲ್ಲಿ ಹುಲ್ಲುಗಾವಲು,

ಪೊದರುಗಳು, ಕಾಡುಗುಲಾಬಿ ಮತ್ತು ಲಿಲಾಕ್‌ಗಳಿವೆ. 3 ಯಾಂಗ್‌ಟ್ಸೀ ಕಣಿವೆಯ ಅರಣ್ಯಗಳಲ್ಲಿ ಅನೇಕ ಬಗೆಯ ನಿತ್ಯಹಸಿರು ಗಿಡಗಳಿವೆ. 4 ದಕ್ಷಿಣ ಮತ್ತು ನೈರುತ್ಯ ಪ್ರಾಂತ್ಯಗಳಲ್ಲಿ ಹಾಗೂ ಟೈವಾನ್ ಮತ್ತು ಹೈನಾನ್ ದ್ವೀಪಗಳಲ್ಲಿ ನಿತ್ಯ ಹಸಿರಿನ ಓಕ್ ಮರಗಳ ಅರಣ್ಯಗಳಿವೆ. ಚಾಂಗ್‌ಜಿಯಾಂಗ್ ನದಿಯ ದಕ್ಷಿಣ ಪ್ರದೇಶಗಳಲ್ಲಿ ಬಿದಿರು ಮೆಳೆಗಳು ಹೆಚ್ಚು. 5 ಯುನಾನ್ ಭಾಗದಿಂದ ಹೈನಾನ್ ಮತ್ತು ಟೈವಾನ್ ದ್ವೀಪಗಳವರೆಗೆ ಮಳೆಗಾಡುಗಳಿವೆ. 6 ಷಿಂಗಾನ್ ಪರ್ವತಶ್ರೇಣಿಗಳಲ್ಲಿ ಶಂಕುಪರ್ಣಿ ಮರಗಳು ಹೆಚ್ಚು. ಕೊರಿಯ ಗಡಿ ಪ್ರದೇಶದಲ್ಲಿ ಸ್ಪ್ರೂಸ್ ಮತ್ತು ಫರ್ ಮರಗಳ ದಟ್ಟ ಅರಣ್ಯಗಳಿವೆ. ಈಶಾನ್ಯ ಪ್ರಾಂತ್ಯಗಳ ಪಶ್ಚಿಮದಿಂದ ಟಿಯೆನ್ ಷಾನ್ ಪರ್ವತಗಳವರೆಗೆ ವಿಶಾಲ ಹುಲ್ಲುಗಾವಲು; ಅವುಗಳ ಮಧ್ಯ ಉಪ್ಪುನೀರಿನ ಸರೋವರಗಳು, ಕಲ್ಲು ಭೂಮಿ, ಮರಳುಗುಡ್ಡೆಗಳು, ಮರಳ್ಗಾಡ ಊಟೆಗಳಿರುವ ಕಡೆ ಎಲ್ಮ್ ಗಿಡಗಳು ಮತ್ತು ಹಣ್ಣಿನ ತೋಟಗಳು ಇವೆ.

ಪ್ರಾಣಿವರ್ಗ : ಪರ್ವತಶ್ರೇಣಿ ಮತ್ತು ದಟ್ಟ ಅರಣ್ಯಗಳ ವೈವಿಧ್ಯದಿಂದ ಇತರ ಕಡೆಗಳಲ್ಲಿ ಕಾಣದಂಥ ಅನೇಕ ಪ್ರಾಣಿಗಳು ಚೀನದಲ್ಲಿ ಉಳಿದುಬಂದಿವೆ. ಯಾಂಗ್‌ಟ್ಸೀ ನದಿಯ ದೊಡ್ಡ ರೆಕ್ಕೆ ಮೀನು, ಮಧ್ಯಚೀನದ ಪೂರ್ವಭಾಗದ ಕಿರು ಜಾತಿಯ ಮೊಸಳೆ ಮತ್ತು ಪಶ್ಚಿಮ ಚೀನದ ಅಗ್ನಿ ಮಕರ ಕೆಲವು ಉದಾಹರಣೆಗಳು. ಟಿಬೆಟ್ ಅಂಚಿನ ಕಣಿವೆಗಳಲ್ಲಿ ದೊಡ್ಡ ಗಾತ್ರದ ಪಾಂಡ ಕಂಡು ಬರುತ್ತದೆ. ದೇಶದ ಎಲ್ಲ ಪರ್ವತ ಪ್ರದೇಶಗಳಲ್ಲಿ ಮೇಕೆ-ಜಿಂಕೆ, ಬಣ್ಣ ಬಣ್ಣದ ಹಕ್ಕಿಗಳು ಇವೆ. ಕಾರ್ಪ್ ಮತ್ತು ಕ್ಯಾಟ್‌ಫಿಷ್ ಜಾತಿಯ ಮೀನುಗಳಿಗೆ ಚೀನ ತವರೆಂಬ ಅಭಿಪ್ರಾಯವಿದೆ. ಚೀನದ ದಕ್ಷಿಣದಲ್ಲಿ ಉಷ್ಣವಲಯದ ಉರಗಗಳು, ಉಭಯಚರ ಜೀವಿ ಕಶೇರುಕಗಳು, ಬಗೆಬಗೆಯ ಡೇಗೆ ಮತ್ತು ಇತರ ಪಕ್ಷಿಗಳು ಮತ್ತು ಸಸ್ತನಿಗಳಿವೆ. ಒಳ ಮಂಗೋಲಿಯ, ಕ್ಯಾನ್ಸೂ, ಷಿನ್‌ಜಿಯಾಂಗ್, ಜಿಂಗ್‌ಹೈ ಪ್ರಾಂತ್ಯದಲ್ಲಿ ಚಮರೀಮೃಗ ಮತ್ತು ಒಂಟೆ ಹೆಚ್ಚು. ಚೀನದಲ್ಲಿ ಸುಮಾರು ಹತ್ತು ಲಕ್ಷ ಒಂಟೆಗಳಿವೆ. ಒಂಟೆ ತುಪ್ಪಟ ಸರಬರಾಜು ಮಾಡುವ ರಾಷ್ಟ್ರಗಳಲ್ಲಿ ಚೀನ ಪ್ರಮುಖವಾದದ್ದು.

ಜನಜೀವನ : ಪ್ರಪಂಚದ ಜನಸಂಖ್ಯೆಯಲ್ಲಿ ಕಾಲುಭಾಗದಷ್ಟು ಜನ ಚೀನದಲ್ಲಿ ವಾಸಿಸುವರು. ಜನಸಂಖ್ಯೆಯಲ್ಲಿ ಇದು ಪ್ರಪಂಚದ ರಾಷ್ಟ್ರಗಳಲ್ಲಿ ಪ್ರಥಮ. ಚೀನದಲ್ಲಿ ವಿವಿಧ ಮಾನವ ಬುಡಕಟ್ಟುಗಳಿವೆ. ಅವುಗಳಲ್ಲಿ ಪ್ರಧಾನವಾದ್ದು ಹನ್ (ಹೂಣ) ಮೂಲಚೀನಿ ಬುಡಕಟ್ಟು. ಇದಲ್ಲದೆ ಚೀನದಲ್ಲಿ 45 ಅಲ್ಪಸಂಖ್ಯಾತ ಬುಡಕಟ್ಟುಗಳುಂಟು. ಆದರೆ ಮೂಲಚೀನೀಯರೊಂದಿಗೆ ಹೋಲಿಸಿದರೆ ಈ ಅಲ್ಪಸಂಖ್ಯಾತ ಬುಡಕಟ್ಟು ಜನರ ಸಂಖ್ಯೆ ತೀರ ಕಡಿಮೆ. ಚೀನದ ಒಟ್ಟು ಪ್ರದೇಶದ ಭಾಗದಲ್ಲಿ ಚೀನೀಯರು ಮತ್ತು ಉಳಿದ ಭಾಗದಲ್ಲಿ ಅಲ್ಪಸಂಖ್ಯಾತ ಬುಡಕಟ್ಟುಗಳ ಜನರು ಹರಡಿದ್ದಾರೆ. ರಷ್ಯದಂತೆ ಸಮತಾವಾದಿ ಚೀನವೂ ಅಲ್ಪಸಂಖ್ಯಾತ ಬುಡಕಟ್ಟುಗಳಿಗೆ ಸ್ವಯಮಾಡಳಿತ ಪ್ರದೇಶಗಳನ್ನು ಕಲ್ಪಿಸಿದೆ.

ಚೀನಿ ಜನರ ಮೂಲ ನೆಲೆ ಹ್ವಾಂಗ್ ಹೊ ಕಣಿವೆ ; ಅದರಲ್ಲೂ ಕಾನ್ಸೂ, ಷೆನ್‌ಸೀ ಮತ್ತು ಚೀನಿ ಮಹಾಬಯಲು. ಚಾಂಗ್‌ಜಿಯಾಂಗ್ ಚೂ ಮತ್ತು ಮಿಂಗ್ ನದಿಗಳ ಕಣಿವೆಗಳಲ್ಲಿ ಮಿಯೌ ಜನರಿದ್ದರು. ಕೌಷಾನ್‌ಗಳು ಟೈಪಾನ್ ದ್ವೀಪದಲ್ಲೂ ಲೀಗಳು ಹೈನಾನ್ ದ್ವೀಪದಲ್ಲೂ ಇದ್ದರು. ವಾಯವ್ಯ ಮತ್ತು ಈಶಾನ್ಯ ಭಾಗದ ಅಲೆಮಾರಿ ಜನರ ದಾಳಿಗಳಿಗೆ ಚೀನ ಪದೇಪದೇ ತುತ್ತಾಗಿದೆ. 13 ಮತ್ತು 14ನೆಯ ಶತಮಾನಗಳಲ್ಲಿ ನಾಗರಿಕತೆಯ ಪರಾಕಾಷ್ಠೆ ಮುಟ್ಟಿದ್ದ ಚೀನ ರಾಜ್ಯವನ್ನು ಮಂಗೋಲರು ಗೆದ್ದರು. ತರುವಾಯ 1664 ರಲ್ಲಿ ಮಂಚು ಜನ ಆಕ್ರಮಿಸಿಕೊಂಡರು. ಅಷ್ಟು ನಾಗರಿಕರಲ್ಲದ ಆಕ್ರಮಣಕಾರರು ಚೀನಿಯರೊಂದಿಗೆ ಬೆರೆತರೂ ಮೂಲಚೀನಿಯರು ತಮ್ಮ ವಿಶಿಷ್ಟ ನಾಗರಿಕತೆಯನ್ನು ಕಳೆದುಕೊಳ್ಳಲಿಲ್ಲ. ತಮ್ಮ ಹಿಂದಿನ ನೆಲೆಗಳ ಅಂಚಿನಲ್ಲೆ ಚೀನಿಯರು ಅಪ್ಪಟ ಚೀನಿ ರಾಜ್ಯವನ್ನು ಸ್ಥಾಪಿಸಿಕೊಂಡರು. ರಾಷ್ಟ್ರದ ಅಲ್ಪ ಸಂಖ್ಯಾತ ಬುಡಕಟ್ಟುಗಳ ಜನ ದೇಶದ ಪರಿಧಿಗಳಲ್ಲಿ ನೆಲೆಸಿದರು. ಇವರಲ್ಲಿ ಕೆಲವು ಸಂಘಟಿತ ಸಮುದಾಯಗಳಿವೆ; ಇನ್ನು ಕೆಲವರು ಸಣ್ಣ ಗುಂಪುಗಳಾಗಿ ಹರಡಿಕೊಂಡಿದ್ದಾರೆ.

ದೇಶದ ಪರಿಧಿಗಳಲ್ಲಿಯ ಅಲ್ಪ ಸಂಖ್ಯಾತ ಬುಡಕಟ್ಟುಗಳು ಹೊರಗಿನ ಸಂಸ್ಕೃತಿಯನ್ನು ಚೀನಕ್ಕೆ ತರಲು ನೆರವಾಗಿವೆ. ಉದಾಹರಣೆಗೆ : ಟಿಬೆಟನ್ ಜನ ಭಾರತದಿಂದ ಬಂದ ಬೌದ್ಧಮತವನ್ನು ಹರಡಲು ಪ್ರಮುಖ ಪಾತ್ರವಹಿಸಿದರು ; ಕಲ್ಲಂಗಡಿ, ಕರಬೂಜ, ದ್ರಾಕ್ಷಿ, ಸೌತೆ, ಕ್ಯಾರೆಟ್, ಬೆಳ್ಳುಳ್ಳಿ ವ್ಯವಸಾಯವನ್ನು ರೂಢಿಸಿದರು. ಭಾಗಶಃ ಅರಬ್ಬಿ ಬುಡಕಟ್ಟಿಗೆ ಸೇರಿದ ಹಯೀ ಜನರು ಚೀನದ ವಿಜ್ಞಾನಿಗಳು ಮತ್ತು ತಂತ್ರಜ್ಞರು. ಇವರು ಪೀಕಿಂಗ್ ನಗರದಲ್ಲಿ ಖಗೋಳ ಸಮೀಕ್ಷಾ ಮಂದಿರವನ್ನು ಕಟ್ಟಿ ಖಗೋಳವಿಜ್ಞಾನಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ. ವೀಗರ್ ಜನರ ಮೂಲಪುರುಷರಾದ ಷಿಯುಂಗ್‌ನು ಜನ ಪ್ರ.ಶ.ಪೂ. 2ನೆಯ ಶತಮಾನದಲ್ಲಿ ವ್ಯವಸಾಯಕ್ಕೆ ಪ್ರಾಣಿಗಳನ್ನು ಬಳಕೆಗೆ ತಂದರು.

ಚೀನದಲ್ಲಿ ಚೀನಿ-ಟಿಬೆಟ್ ಮತ್ತು ಅಲ್ಟಾಯಿಕ್ ಎಂಬ ಎರಡು ಪ್ರಮುಖ ಭಾಷಾ ವರ್ಗಗಳಿವೆ. ಚೀನಿ-ಟಿಬೆಟ್ ವರ್ಗವೇ ದೊಡ್ಡದು.

ಚೀನದ ಜನ ಪಶ್ಚಿಮ ಕರಾವಳಿ, ಪೂರ್ವ ಹಾಗೂ ಆಗ್ನೇಯ ನದಿ ಬಯಲು ಮತ್ತು ತಗ್ಗುನಾಡಿನಲ್ಲಿ ಒಟ್ಟಿಗೆ ಜೀವಿಸುವರು. ದೇಶದ ಸರಾಸರಿ ಜನಸಾಂದ್ರತೆ ಚ.ಕಿಮೀ ಗೆ 69. ಪಶ್ಚಿಮ ಬೆಂಗಾಡಿನಲ್ಲಿ ಜನ ಕಡಿಮೆ. ಅಲ್ಲಿ ಜನಸಾಂದ್ರತೆ ಚ.ಕಿಮೀ ಗೆ 35. ಜಿಂಗ್‌ಹೈ ಮತ್ತು ಷಿನ್‌ಜಿಯಾಂಗ್‌ಗಳಲ್ಲಿ ಚ.ಕಿಮೀ ಗೆ 13-16. ಯಾಂಗ್‌ಟ್ಸೀ ನದಿಯ ದಕ್ಷಿಣಭಾಗ ಅತ್ಯಂತ ಹೆಚ್ಚು ಜನಸಾಂದ್ರತೆಯಿಂದ ಕೂಡಿದ್ದು ಅಲ್ಲಿ ಜಿಯಾಂಗ್‌ಸೀ ಪ್ರಾಂತ್ಯದಲ್ಲಿ ಚ.ಕಿಮೀ 602 ಮಂದಿ ಇದ್ದಾರೆ. ಪೂರ್ವಿಕರ ನೆಲೆಯನ್ನು ಬಿಟ್ಟು ಹೋಗಬಾರದೆಂಬ ಹಳೆಯ ನಂಬಿಕೆ ಜನಸಾಂದ್ರತೆಗೆ ಒಂದು ಕಾರಣ. ಈಗ ಜನ ಇತರ ಪ್ರದೇಶಗಳಲ್ಲೂ ನೆಲೆಸುತ್ತಿದ್ದಾರೆ. ಈಶಾನ್ಯ, ವಾಯವ್ಯ ಹಾಗೂ ಒಳಮಂಗೋಲಿಯ ನಗರಗಳಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದು ಕಂಡುಬಂದಿದೆ.

ಆರ್ಥಿಕತೆ: ವ್ಯವಸಾಯ: ಈ ದೇಶದ ಶೇ. 63 ರಷ್ಟು ಜನರು ತಮ್ಮ ಜೀವನಕ್ಕೆ ವ್ಯಸಾಯವನ್ನು ಅವಲಂಬಿಸಿದ್ದಾರೆ. ದೇಶದ ಶೇ. 11ರಷ್ಟು ಭೂಮಿಯಲ್ಲಿ ವ್ಯವಸಾಯ ಕಂಡುಬರುತ್ತದೆ. ಸೆಚುಯಾನ್ ಬಯಲು ಮತ್ತು ಪೂರ್ವದ ತಗ್ಗು ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯವಿದೆ. ಮುಖ್ಯ ಬೆಳೆಗಳೆಂದರೆ ಬತ್ತ, ಗೋದಿ, ಮುಸುಕಿನ ಜೋಳ, ಮಿಲೆಟ್, ಸೊರ್ಗಮ್, ರಬ್ಬರ್, ಬಟಾಣಿ, ಬೀನ್ಸ್ ಮತ್ತು ಆಲೂಗೆಡ್ಡೆ. ಪ್ರಪಂಚದಲ್ಲಿ ಬತ್ತ, ಗೋದಿ, ಹತ್ತಿ, ಹೊಗೆಸೊಪ್ಪು ಮತ್ತು ಕಚ್ಚಾ ರೇಷ್ಮೆ ಉತ್ಪಾದಿಸುವುದರಲ್ಲಿ ಚೀನ ಪ್ರಥಮ ಸ್ಥಾನದಲ್ಲಿದೆ. ಮುಸುಕಿನ ಜೋಳ ಮತ್ತು ಚಹ ಉತ್ಪಾದನೆಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಹಂದಿ ಮತ್ತು ಕೋಳಿ ಸಾಕಣೆ, ಮೀನುಗಾರಿಕೆ ಮುಖ್ಯ ಉದ್ಯೋಗಗಳಾಗಿವೆ. ಚೀನ ಪ್ರಪಂಚದಲ್ಲೆ ಹಂದಿಮಾಂಸ, ಮಾಂಸ ಮತ್ತು ಮೀನು ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ.

ಖನಿಜ ಸಂಪತ್ತು: ತವರ, ಸತು, ಮ್ಯಾಂಗನೀಸ್, ಕಬ್ಬಿಣದ ಅದಿರು, ಟಂಗ್‌ಸ್ಟನ್, ಆಂಟಿಮನಿ ಚೀನದ ಮುಖ್ಯ ಖನಿಜಗಳು. ಇದು ತವರ, ಸತು, ಆಂಟಿಮ್ ಮತ್ತು ಟಂಗ್‌ಸ್ಟನ್ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲ ಸ್ಥಾನದಲ್ಲಿದೆ. ಕಲ್ಲಿದ್ದಲು ಇಲ್ಲಿನ ಮುಖ್ಯ ಶಕ್ತಿ ಸಂಪನ್ಮೂಲ. ಇದು ಕಾನ್ಸು, ಶಾನ್ಸಿ, ಶೆನ್ಸಿ, ಹೂಪೆ, ಸ್ವೆಸ್‌ವಾನ್, ಹೂಪೆ, ಯುನಾನ್, ಕ್ವೆಬಾ, ಸಿಕಿಯಂಗ್, ಆನ್ವೈ, ಕ್ವಾಂಗಿ, ಹೂನಾನ್, ಕ್ವೆಯಾಂಗ್, ಶಾಮಿಂಗ್ ಮುಂತಾದ ಪ್ರದೇಶಗಳಲ್ಲಿ ದೊರೆಯುತ್ತದೆ.

ಕೈಗಾರಿಕೆ: ಹತ್ತಿ ಬಟ್ಟೆ, ಕಬ್ಬಿಣ ಮತ್ತು ಉಕ್ಕು, ಕಲ್ಲಿದ್ದಲು, ಪೆಟ್ರೋಲಿಯಂ ಶುದ್ಧೀಕರಣ, ರಾಸಾಯನಿಕ ಮತ್ತು ಎಲೆಕ್ಟ್ರಾನಿಕ್ ಉಪಕರಣ ಚೀನದ ಪ್ರಮುಖ ಕೈಗಾರಿಕೆಗಳು. ಈ ದೇಶದ ಕೈಗಾರಿಕೆಯು ಹೆಚ್ಚು ಬೀಜಿಂಗ್-ಟೈನ್‌ಜಿನ್ ಕೈಗಾರಿಕಾ ವಲಯದಲ್ಲಿವೆ. ಶಾಂಘೈ ಚೀನದ ಹಳೆಯ ಕೈಗಾರಿಕಾ ಕೇಂದ್ರ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಆನ್‌ಶಾನ್, ಮುಕ್ಡೆನ್, ಟೈಯನ್, ಹ್ಯಾಂಕಾ, ಶಾಂಘೈ, ಹನ್ಯಾಂಗ್, ಚುಂಗ್‌ಕಿಂಗ್, ಪವ್‌ಬಿವ್, ಕ್ಯಾಂಟನ್, ಸೀಮಗ್‌ಶಾ, ಚಿನ್‌ಲಿಂಗ್ ಚೆನ್ ಮತ್ತು ಯೂಹನ್ಸ್ಗ ಸ್ಥಿಯಲ್ಲಿವೆ. ಹತ್ತಿ ಗಿರಣಿಗಳು ಹೆಚ್ಚು ತೀರ ಪ್ರದೇಶದಲ್ಲಿ ಕೇಂದ್ರಿಕೃತವಾಗಿವೆ. ಶಾಂಘೈ, ಕ್ಯಾಂಟನ್, ಸಿಂಗ್‌ಟಾ, ಟೈನ್‌ಸ್ಟಿನ್ ಮತ್ತು ದೊರೆನ್ ಪ್ರಮುಖ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರಗಳು. ಕರಕುಶಲ ಮತ್ತು ಪೆಟ್ರೋ ರಾಸಾಯನಿಕ ಕೈಗಾರಿಕೆಗಳು ಇವೆ.

ಸಾರಿಗೆ: ಚೀನದ ಪ್ರಥಮ ರೈಲುಮಾರ್ಗ ವೂಸುಂಗ್ (ಷಾಂಘೈ) ಮಾರ್ಗ (1876). ಈಗ 32,000 ಕಿಮೀ ರೈಲುಮಾರ್ಗಗಳಿವೆ. ಈಗ ಟಿಬೆಟ್ ಭಾಗಗಳಿಗೂ ರೈಲ್ವೆ ಸಂಪರ್ಕ ಏರ್ಪಟ್ಟಿದೆ. ಉತ್ತರ-ದಕ್ಷಿಣ ರೈಲ್ವೆ, ಪೂರ್ವ-ಪಶ್ಚಿಮ ರೈಲ್ವೆ ಮತ್ತು ಮಂಚೂರಿಯ ರೈಲ್ವೆ-ಇವು ಚೀನದ 3 ಬೃಹತ್ ರೈಲ್ವೆ ವಲಯಗಳು. ಮುಖ್ಯ ರೈಲ್ವೆಮಾರ್ಗಗಳಿವು; 1 ಪೀಕಿಂಗ್-ಷೆನ್‌ಯಂಗ್ ಮಾರ್ಗ 845 ಕಿಮೀ; 2 ಟಿನ್‌ಟ್ಸಿನ್-ಪೂಕೋ ಮಾರ್ಗ 1,303 ಕಿಮೀ; 3 ಬೀಜಿಂಗ್-ವೂಹಾನ್ ಮಾರ್ಗ 1,218 ಕಿಮೀ. 4 ಗ್ವಾಂಗ್‌ಜೋ-ವೂಹಾನ್ ಮಾರ್ಗ (1094 ಕಿಮೀ); 5 ಹಾರ್ಬಿನ್ ಮಾರ್ಗ (1488 ಕಿಮೀ); ಇದು ಮಂಚೂರಿಯದ ಮುಖ್ಯ ಮಾರ್ಗ; 6 ಲುಂಗ್ ಹೆ ಮಾರ್ಗ 1721 ಕಿಮೀ ಮತ್ತು 7 ಷ್ಯಾಂಗ್‌ಹೈ-ಚೂಚೌ ಮಾರ್ಗ 1,134 ಕಿಮೀ. ಇತ್ತೀಚೆಗೆ ನಿರ್ಮಿತವಾದ ಮಾರ್ಗಗಳಿವು: ಲಾಂಜೋ, ಊರೂಮ್‌ಚಿ, ಟ್ಯಾನ್ ಕಿಯಾಂಗ್-ಹೌ, ವೂಹಾನ್, ಗ್ವೇಯಾಂಗ್ ರೈಲುಮಾರ್ಗಗಳು ಮತ್ತು ಆನ್‌ಹ್ವೆ ಪ್ರಾಂತ್ಯದ ಮೂಲಕ ಸಾಗುವ ಹ್ವಾ-ಘೂ ರೈಲುಮಾರ್ಗ. 1968ರಲ್ಲಿ ಯಾಂಗ್‌ಟ್ಸೀ ನದಿಗೆ ಅಡ್ಡಲಾಗಿ ಭಾರಿ ರೈಲ್ವೆ ಸೇತುವೆ ಕಟ್ಟಲಾಯಿತು.

ಚೀನದಲ್ಲಿರುವ ನದಿ, ಸರೋವರ, ಕಾಲುವೆಗಳ ಒಟ್ಟು ಮಾರ್ಗ 1,03,346. ಅದರಲ್ಲಿ 23,745 ಮಾತ್ರ ಜಹಜುಗಳ ಯಾನಕ್ಕೆ ಅನುಕೂಲ. ಉಳಿದ ಮಾರ್ಗಗಳಲ್ಲಿ ಜಿಂಕ್ ಹಡಗುಗಳ ಮತ್ತು ಸಣ್ಣ ನೌಕೆಗಳ ಸಂಚಾರ ಸಾಧ್ಯ. ನೌಕಯಾನಕ್ಕೆ ಅನುಕೂಲವಾದ ನದಿಗಳು ಯಾಂಗ್‌ಟ್ಸೀ, ಷೀ ಕ್ಯಾಂಗ್, ಹ್ವಾಂಗ್ ಹೋ (ಹಳದಿ ನದಿ) ಮತ್ತು ಸುಂಗಾರಿ. ಚಾಂಗ್ಜಿಯಾಂಗ್ (5,792 ಕಿಮೀ) 2,695 ಕಿಮೀ. ನೌಕಯಾನಕ್ಕೆ ಯೋಗ್ಯವಾಗಿದೆ. ಚೀನದ ಸರಕುಗಳು ಹೆಚ್ಚಾಗಿ ಜಲಮಾರ್ಗಗಳ ಮೂಲಕ ಸಾಗುತ್ತವೆ. ಕಾಲುವೆಗಳ ಪೈಕಿ ಚೀನ ಮಹಾಕಾಲುವೆ ದೊಡ್ಡದು (1,777 ಕಿಮೀ). ಅದು ಬೀಜಿಂಗ್ ನಗರದಿಂದ

ಹಾಂಗ್‍ಕಾಂಗ್ ನಗರದ ವರೆಗೆ ಸಾಗುತ್ತದೆ. ಕ್ಯಾನ್ಸೂ ಮಹಾಕಾಲುವೆ ಇನ್ನೊಂದು ಮುಖ್ಯ ಮಾರ್ಗ. ಕರಾವಳಿ ಹಾಗೂ ವಿದೇಶೀ ಸಂಚಾರ ಹಡಗುಗಳ ನಿಯಂತ್ರಣಕ್ಕೆ ಟಿನ್‍ಟ್ಸಿನ್, ಷಾಂಗ್ಹೈ, ಚಿಂಗ್‍ಡೌ, ಲೂಟ ಮತ್ತು ಕ್ಯಾಂಟನ್‍ಗಳಲ್ಲಿ ಸಮುದ್ರಯಾನ ಕಚೇರಿಗಳಿವೆ.

1964ರಿಂದ ಪೀಕಿಂಗ್, ಕ್ಯಾಂಟನ್ ಮತ್ತು ಷಾಂಗ್ಹೈ ಮುಖ್ಯ ವಿಮಾನ ಕೇಂದ್ರಗಳು. ಬೀಜಿಂಗ್ ನಗರದಿಂದ ಒಳನಾಡಿಗೆ 20 ವಿಮಾನ ಮಾರ್ಗಗಳಿವೆ. ಕೆಲವು ಸಮತಾವಾದಿ ರಾಜ್ಯಗಳು, ಮಯನ್ಮಾರ್, ಫ್ರಾನ್ಸ್, ಕಾಂಬೋಡಿಯ, ಇಂಡೊನೇಷ್ಯ ಮತ್ತು ಪಾಕಿಸ್ತಾನ– ಇವುಗಳಿಗೆ ವಿಮಾನ ಸಂಚಾರವಿದೆ. ಮಾಸ್ಕೋ–ಪೀಕಿಂಗ್ ನಡುವೆ ವಾರಕ್ಕೊಮ್ಮೆ ರಷ್ಯನ್ ವಿಮಾನ ಹಾರಾಟವುಂಟು.

ನಗರಗಳು : 23 ಶತಮಾನಗಳ ಇತಿಹಾಸದಲ್ಲಿ ಚೀನಕ್ಕೆ ರಾಜಧಾನಿಗಳಾಗಿದ್ದ ನಗರಗಳು ಆರು ಅವು ಹ್ವಾಂಗ್‍ಹೋ (ಹಳದಿ ನದಿ) ದಂಡೆಯ ಮೇಲಣ ಲೋಯಾಂಗ್, ಷೀಯಾನ್, ಕೈಫಂಗ್, ಬೀಜಿಂಗ್; ಚಾಂಗ್ಜಿಯಾಂಗ್ ನದಿಯ ದಡದ ಮೇಲಣ ನ್ಯಾನ್‍ಕಿಂಗ್, ಹ್ಯಾಂಗ್‍ಚೌ, ಈಗಿನ ರಾಜಧಾನಿ ಬೀಜಿಂಗ್. ದಕ್ಷಿಣ ಮತ್ತು ಪೂರ್ವ ಭಾಗದ ನದೀತೀರಗಳಲ್ಲಿ ಹಾಗೂ ಕಡಲಂಚಿನಲ್ಲಿ ಜನಸಾಂದ್ರತೆ ಹೆಚ್ಚು. ಅಲ್ಲಿ ದೊಡ್ಡ ಪಟ್ಟಣಗಳು ಬೆಳೆದುವು. ಇಟಲಿಯ ಪ್ರವಾಸಿ ಮಾರ್ಕೋಪೋಲೋ, ಕುಬ್ಲೈಖಾನನ ಆಸ್ಥಾನಕ್ಕೆ ಬಂದಾಗ ಪೀಕಿಂಗ್ ನಗರಕ್ಕೆ ಚುಂಗ್–ಟು ಎಂಬ ಹೆಸರಿತ್ತು. ಮಿಂಗ್ ರಾಜಸಂತತಿಯ ಕಾಲದಲ್ಲಿ (1421) ಅದಕ್ಕೆ ಪೀಕಿಂಗ್ ಎಂಬ ಹೆಸರು ಬಂತು. 1968ರಲ್ಲಿ 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯಿದ್ದ ನಗರಗಳು ಷ್ಯಾಂಗ್ಹೈ, ಪೀಕಿಂಗ್, ಷೆನ್‍ಯಾಂಗ್, ಟಿನ್‍ಟ್ಸಿನ್, ವೂಹಾನ್, ಕ್ಯಾಂಟನ್, ಚಂಗ್‍ಕಿಂಗ್, ಹಾರ್ಬಿನ್, ಲೂಟ, ನ್ಯಾನ್‍ಕಿಂಗ್, ಷೀಯಾನ್, ಚಿಂಗ್–ಡೌ, ಚಂಗ್‍ಡೂ, ಟೈಯೂಯಾಮ್ ಮತ್ತು ಫೂಷುನ್.



ಬೀಜಿಂಗ್ ನಗರ

ವ್ಯಾಪಾರ : ಚೀನದ ವಿದೇಶಿ ವ್ಯಾಪಾರ ಮುಖ್ಯವಾಗಿ ಜಪಾನ್, ಬ್ರಿಟನ್, ಪಾಕಿಸ್ತಾನ, ಪಶ್ಚಿಮ ಜರ್ಮನಿಗಳೊಡನೆ ನಡೆಯುತ್ತದೆ. ರಫ್ತಾಗುವ ಸರಕು ಕಚ್ಚಾ ರೇಷ್ಮೆ, ರೇಷ್ಮೆ ಗೂಡು. ಹತ್ತಿ ಬಟ್ಟೆ, ಚಹ, ಲೋಹಗಳ ಅದಿರು, ಮರದ ಎಣ್ಣೆ, ಹತ್ತಿ, ನೆಲಗಡಲೆ, ಎಣ್ಣೆ ಬೀಜ, ಇದ್ದಿಲು, ಸೋಯಬೀನ್ಸ್ ಚೀನ ಆಮದು ಮಾಡಿಕೊಳ್ಳುವ ಸರಕು ಸೀಮೆ ಎಣ್ಣೆ, ರಾಸಾಯನಿಕ ವಸ್ತುಗಳು, ಯಂತ್ರಗಳು, ಉಣ್ಣೆ, ರಬ್ಬರ್, ಎಲೆಕ್ಟ್ರಾನಿಕ್ ಉಪಕರಣಗಳು, ಆಟದ ಸಾಮಾನುಗಳು ಇತ್ಯಾದಿ. (ಬಿ.ವಿ.ಜಿ.;ವಿ.ಜಿ.ಕೆ.)

**ಚೀನದ ಮಹಾಗೋಡೆ:** ಪ್ರಪಂಚದ ಅದ್ಭುತಗಳಲ್ಲಿ ಒಂದೊಂದು ಹೆಸರಾಗಿರುವ ಮಾನವ ನಿರ್ಮಿತ ಬೃಹತ್ ರಕ್ಷಾಗೋಡೆ. ಹಳದಿ ಸಮುದ್ರದಲ್ಲಿರುವ ಚೀಹ್ಲಿ ಖಾರಿಯಿಂದ ಮಧ್ಯ ಏಷ್ಯದ ವರೆಗೆ ಸು. 6400 ಕಿಮೀ. ಚೀನಿ ಚಕ್ರವರ್ತಿ ಚಿನ್ ಷಿ ಹ್ವಾಂಗ್ ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಇದನ್ನು ನಿರ್ಮಿಸಿದ. ಅವನಿಗೂ ಹಿಂದೆಯೇ, ಕನಿಷ್ಠ 4ನೆಯ ಶತಮಾನದಿಂದಲೆ, ಚೀನದ ದೊರೆಗಳು ರಕ್ಷಣೆಗಾಗಿ ದೇಶದ ಎಲ್ಲೆಗಳಲ್ಲಿ ಗೋಡೆಗಳನ್ನು ನಿರ್ಮಿಸಿದ್ದರು. ಚಿನ್ ಇಂಥ ಹಲವಾರು ಗೋಡೆಗಳನ್ನು ಸೇರಿಸಿ ಮಹಾಗೋಡೆಯನ್ನು ನಿರ್ಮಿಸಿದ. ಉತ್ತರದ ಹೂಣರ ಆಕ್ರಮಣವನ್ನು ತಡೆಗಟ್ಟುವುದೇ ಇದರ ನಿರ್ಮಾಣದ ಉದ್ದೇಶ. ಮಣ್ಣು ಮತ್ತು ಕಲ್ಲುಗಳಿಂದ ಇದನ್ನು ನಿರ್ಮಿಸಲಾಗಿತ್ತು. ಇದರ ಪೂರ್ವಭಾಗಗಳು ಇಟ್ಟಿಗೆಯಿಂದ ನಿರ್ಮಿತವಾಗಿದ್ದುವು. ಅನಂತರದ ಶತಮಾನಗಳಲ್ಲಿ ಇದನ್ನು ಆಗಿಂದಾಗ್ಗೆ ಬದಲಾಯಿಸಲಾಗುತ್ತಿತ್ತು. 15 ಮತ್ತು 16ನೆಯ ಶತಮಾನಗಳಲ್ಲಿ ಇದರ ಆವರಣವನ್ನು ಹಿಂದಿನದಕ್ಕಿಂತ ಕಿರಿದನ್ನಾಗಿಮಾಡಿ ಕಟ್ಟಲಾಯಿತು. 1333 ಮೀ ಎತ್ತರದ ಗುಡ್ಡಗಳ ಮೇಲೂ ಆಳವಾದ ಕಮರಿಗಳಿಗೆ ಅಡ್ಡವಾಗಿಯೂ ಘಟಸರ್ಪದ ಹಾಗೆ ಬಳಸಿ ಸಾಗುವ ಈ ಗೋಡೆಯ ಎತ್ತರ ಸು. 10 ಮೀ. ಇದು ಕೆಳಗೆ 8 ಮೀ ಮತ್ತು ಮೇಲೆ 5 ಮೀ ಅಗಲವಾಗಿದೆ. ಸೈನಿಕರ ಸಾಲು ಅನಾಯಾಸವಾಗಿ ಇದರ ಮೇಲೆ ಸಾಗಲು ಸಾಧ್ಯವಾಗುವಂತೆ ರಸ್ತೆಯನ್ನೂ ಪ್ರತಿ 250 ಮೀ ದೂರಕ್ಕೆ ಒಂದರಂತೆ 13 ಮೀ ಎತ್ತರದ 25,000 ಕಾವಲು ಗೋಪುರಗಳನ್ನೂ ಇವಲ್ಲದೆ 15,000 ಗೋಪುರಗಳನ್ನೂ ಬಹಿರ್ಭಾಗದಲ್ಲಿ 2 ಮೀ ಎತ್ತರದ ಕೋಟೆ ತೆನೆಗಳನ್ನೂ ನಿರ್ಮಿಸಲಾಗಿತ್ತು. ಗೋಡೆಯ ಹೊರಗಡೆ ಒಂದಾದ ಮೇಲೊಂದರಂತೆ ಮೂರು ಕಂದಕಗಳಿವೆ.

ಗೋಡೆಯಲ್ಲಿ 30 ಕೋಟಿ ಸಲೆಗಜ ಕಲ್ಲು ಸೇರಿಸಲಾಗಿದೆಯೆಂದು ಹೇಳಲಾಗಿದೆ. ಬೇರಾವ ಕಾಲದ ಯಾವುದೇ ಕಟ್ಟಡಕ್ಕೂ ಇದಕ್ಕೆ ಬಳಸಿದಷ್ಟು ಸಾಮಾಗ್ರಿ ಬಳಸಿಲ್ಲ. ಸೈನ್ಯ ಸಾಗಾಣಿಕೆ, ಗಾಡಿಗಳ ಓಡಾಟ, ಕಾವಲು ಠಾಣ್ಯಗಳು, ಸೈನಿಕ ನೆಲೆ, ಅಪಾಯದ ವಿರುದ್ಧ ರಕ್ಷಣೆಗಾಗಿ ಕಂದಕಗಳು, ಉಪಗೋಡೆಗಳು, ಆಹಾರ ಮತ್ತು ಯುದ್ಧಸಾಮಗ್ರಿ ಕೋಠಿ ಮುಂತಾದ ಎಲ್ಲ ವ್ಯವಸ್ಥೆಗಳಿಂದಲೂ ಇದು ಕೂಡಿತ್ತು. ಇದು ಬಾಹ್ಯಾಕಾಶದಿಂದ ಗುರುತಿಸಬಹುದಾದ ಏಕಮಾತ್ರ ಮಾನವ ನಿರ್ಮಿತ ಕಟ್ಟಡ. 1987ರಲ್ಲಿ ಇದನ್ನು ಯುನೆಸ್ಕೊದ ಪುರಾತತ್ತ್ವ ಸಂರಕ್ಷಿತ ಪ್ರದೇಶವೆಂದು ಗುರುತಿಸಲಾಯಿತು. (ಎಚ್.ಸಿ.ಕೆ.;ಜಿ.ಆರ್.ಆರ್.)

**ಚೀನ ಸಮುದ್ರ:** ಚೀನದ ತೀರದಿಂದಾಚೆಗೆ ಜಪಾನಿನಿಂದ ಮಲಯ ಪರ್ಯಾಯದ್ವೀಪದ ದಕ್ಷಿಣ ತುದಿಯ ವರೆಗೆ ಹಬ್ಬಿರುವ ಪೆಸಿಫಿಕ್ ಸಾಗರದ ಒಂದು ಭಾಗವಾಗಿರುವ ಸಮುದ್ರ. ತೈವಾನ್ ದ್ವೀಪದಿಂದಾಗಿ ಈ ಕಡಲು, ಪೂರ್ವ ಚೀನ ಸಮುದ್ರ ಮತ್ತು ದಕ್ಷಿಣ ಚೀನ ಸಮುದ್ರ ಎಂದು ಎರಡು ಭಾಗಗಳಾಗಿ ಒಡೆದಿದೆ. ವಿಸ್ತೀರ್ಣ 1,249,157 ಚ.ಕಿಮೀ.

ಪೂರ್ವ ಚೀನ ಸಮುದ್ರ : ಡುಂಗ್‍ಹೈ ಎಂಬುದು ಇದರ ಚೀನಿ ಹೆಸರು. ಇದರ ಪಶ್ಚಿಮಕ್ಕೆ ಚೀನ ಭೂಪ್ರದೇಶ, ದಕ್ಷಿಣಕ್ಕೆ ತೈವಾನ್, ಆಗ್ನೇಯಕ್ಕೆ ರೀಯೂಕ್ಯೂ ದ್ವೀಪಗಳು, ಈಶಾನ್ಯಕ್ಕೆ ಕೀಯೂಷೂ ದ್ವೀಪ ಮತ್ತು ಕೊರಿಯ ಇವೆ. ಹಳದಿ ಸಮುದ್ರ ಇದರ ಒಂದು ಭಾಗ. ಪೂರ್ವ ಚೀನ ಸಮುದ್ರಕ್ಕೆ ಕೊರಿಯ ಜಲಸಂಧಿಯ ಮೂಲಕ ಜಪಾನ್ ಸಮುದ್ರದೊಂದಿಗೂ ಫಾರ್ಮೋಸ ಜಲಸಂಧಿಯ ಮೂಲಕ ಜಪಾನ್ ಸಮುದ್ರದೊಂದಿಗೂ ರೀಯೂಕ್ಯೂ ದ್ವೀಪಗಳ ನಡುವಣ ಹಲವು ಜಲಸಂಧಿಗಳ ಮೂಲಕ ಫಿಲಿಪೈನ್ ಸಮುದ್ರದೊಂದಿಗೂ ಪೆಸಿಫಿಕ್ ಸಾಗರದ ಒಂದು ಭಾಗದೊಂದಿಗೂ ಸಂಪರ್ಕ ಏರ್ಪಟ್ಟಿವೆ.

ಪೂರ್ವಚೀನ ಸಮುದ್ರದ ಬಹುಭಾಗ ಖಂಡಾವರಣ ಪ್ರದೇಶದಿಂದಾವೃತವಾಗಿದೆ. ಅಲ್ಲಿ ಸಮುದ್ರದ ಆಳ ಪಶ್ಚಿಮದಿಂದ ಪೂರ್ವದ ಕಡೆಗೆ ಹೋದಂತೆ 30 ರಿಂದ 180 ಮೀ ವರೆಗೆ ವ್ಯತ್ಯಾಸವಾಗುತ್ತದೆ. ರೀಯೂಕ್ಯೂ ದ್ವೀಪಗಳ ಬಳಿಯಲ್ಲಿ 2782 ಮೀ ಆಳದ ಕಮರಿಯೊಂದು ಇದೆ. ಬೇಸಗೆಯಲ್ಲಿ ಮಳೆ, ಚಳಿಗಾಲ ಶುಷ್ಕ. ಬೇಸಗೆಯಲ್ಲಿ ಚಂಡಮಾರುತಗಳು ಬೀಸುವುದುಂಟು. ಜನವರಿಯಲ್ಲಿ ಉಷ್ಣತೆ ವಾಯವ್ಯದಲ್ಲಿ $22^0$ ಸೆ. ನಿಂದ ಆಗ್ನೇಯದಲ್ಲಿ $33^0$ ಸೆ. ವರೆಗೆ ವ್ಯತ್ಯಾಸವಾಗುತ್ತದೆ. ಜುಲೈ ಸರಾಸರಿ ಉಷ್ಣತೆ $44^0$ ಸೆ. ವಾರ್ಷಿಕ ಅವಪತನ ಪಶ್ಚಿಮದಲ್ಲಿ 115 ಸೆಂಮೀ. ಪೂರ್ವದಲ್ಲಿ 330 ಸೆಂಮೀ. ಮಧ್ಯ ಪೆಸಿಫಿಕ್ ಸಾಗರದ ಉತ್ತರ ಸಮಭಾಜಕೀಯ ಉಷ್ಣಸಾಗರ ಪ್ರವಾಹದ ಉತ್ತರದ ಕವಲು ಈ ಕಡಲಿನ ಪೂರ್ವಭಾಗದ ಮೇಲೆ ಪ್ರಭಾವ ಬೀರುತ್ತದೆ. ಈ ಸಮುದ್ರದ ನೀರಿನ ಲವಣತೆ ಸಾವಿರಕ್ಕೆ 34.5. ಈ ಸಮುದ್ರಕ್ಕೆ ಸೇರುವ ನದಿಗಳಲ್ಲಿ ಚಾಂಗ್ಜಿಯಾಂಗ್

ಮುಖ್ಯ ನದಿ. ಚೀನ, ತೈವಾನ್, ಜಪಾನ್, ಕೊರಿಯಗಳಲ್ಲಿ ಮೀನುಗಾರಿಕೆ ಒಂದು ಮುಖ್ಯ ಉದ್ಯೋಗ. ಇಲ್ಲಿ ಸಿಗುವ ಮೀನುಗಳಲ್ಲಿ ಸಾರ್ಡೀನ್, ಹಾಲುಮೀನು, ಟ್ಯೂನಾ, ಕಡಲ ಬ್ರೀಮ್, ಕ್ರೋಕರ್, ಚಿಪ್ಪುಮೀನು ಮುಖ್ಯವಾದವು. ಈ ಸಮುದ್ರದ ಮೇಲಿರುವ ಮುಖ್ಯ ಬಂದರುಗಳು ಪೂಚೌ, ವೆಂಚೌ, ನಿಂಗ್‌ಪಿ, ಷಾಂಗೈ, ಸಿನ್‌ಹೇಲಿನ್, ಟ್ಸಿಂಗ್‌ಟೋ, ಟನ್‌ಟ್ಸಿನ್, ಚಿನ್–ಹ್ಯಾಂಗ್–ಟೋ, ಡೇರೆನ್, ಚಿನ್ನಾಂಪೊ, ಚೆಮುಉಲ್ಪೊ, ನಾಗಸಾಕಿ ಮತ್ತು ಚಿ–ಲುಂಗ್.

ದಕ್ಷಿಣ ಚೀನ ಸಮುದ್ರ : ನಾನ್ ಹೈ ಎಂಬುದು ಇದರ ಚೀನಿ ಹೆಸರು. ವಿಸ್ತೀರ್ಣ 23,19086 ಚ.ಕಿಮೀ. ಈ ಸಮುದ್ರದ ಪಶ್ಚಿಮಕ್ಕೆ ಆಗ್ನೇಯ ಏಷ್ಯ ಭೂಪ್ರದೇಶ, ದಕ್ಷಿಣಕ್ಕೆ ಬೋರ್ನಿಯೊ, ಪೂರ್ವಕ್ಕೆ ಫಿಲಿಫೈನ್ಸನ ಪಲಾವನ್, ಮಿಂಡೋರೋ ಮತ್ತು ಲೂಝಾನ್, ಈಶಾನ್ಯಕ್ಕೆ ತೈವಾನ್, ಉತ್ತರಕ್ಕೆ ಚೀನದ ಭೂಪ್ರದೇಶ ಇವೆ. ದಕ್ಷಿಣ ಚೀನದ ಷೀ ಚೀಯಾಂಗ್, ಉತ್ತರ ವಿಯಟ್ನಾಮಿನ ಕೆಂಪು ನದಿ, ಲಾವೋಸ್, ಕಾಂಬೋಡಿಯ ಮತ್ತು ದಕ್ಷಿಣ ವಿಯಟ್ನಾಮಿನ ಮೇಕಾಂಗ್ ಮತ್ತು ಥೈಲೆಂಡಿನ ಮೆನಾಮ್ ಚಾವೊ ಫ್ಯಾ ಈ ಸಮುದ್ರವನ್ನು ಸೇರುವ ಪ್ರಮುಖ ನದಿಗಳು. ಸಮುದ್ರದ ಮುಖ್ಯ ಭೂತೀರ ಹೆಚ್ಚು ಅಂಕುಡೊಂಕಾಗಿಲ್ಲ. ಟಾನ್‌ಕಿನ್ ಮತ್ತು ಸೈಯಾಮ್ ಕೊಲ್ಲಿಗಳು ಮಾತ್ರ ಮುಖ್ಯ. ಸಮುದ್ರದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಈ ಸಮುದ್ರದ ಬಹುಭಾಗದ ಆಳ 152 ಮೀ ಗಿಂತ ಹೆಚ್ಚಿಲ್ಲ. ಇದು ಖಂಡಾವರಣ ಪ್ರದೇಶದಿಂದ ಕೂಡಿದ್ದು. ಈಶಾನ್ಯಭಾಗದಲ್ಲಿ ಸಮುದ್ರದ ಆಳ 4570 ಮೀ ಗಿಂತ ಹೆಚ್ಚು. ಪೂರ್ವ ಚೀನ ಸಮುದ್ರದಲ್ಲಿ ದ್ವೀಪಗಳಿಲ್ಲ. ಆದರೆ ಈ ಸಮುದ್ರದಲ್ಲಿ ಅನೇಕ ದ್ವೀಪಗಳೂ ದಿಬ್ಬಗಳೂ ಇವೆ.

ದಕ್ಷಿಣ ಚೀನದ ಸಮುದ್ರ ತಳದಲ್ಲಿ ಅನೇಕ ಭೂಕಂಪಗಳು ಮತ್ತು ಜ್ವಾಲಾಮುಖಿಗಳ ಸ್ಫೋಟಗಳಿಂದಾಗಿ ಅನೇಕ ಬದಲಾವಣೆಗಳಿಗೆ ಒಳಗಾಗಿದೆ. ಪೂರ್ವ ಚೀನ ಸಮುದ್ರದಂತೆ ಇದೂ ಮಾನ್ಸೂನ್ ಪ್ರಭಾವಿತ. ಆದರೆ ಇದು ಸಮಭಾಜಕ ವೃತ್ತಕ್ಕೆ ಹತ್ತಿರದಲ್ಲಿರುವುದರಿಂದ ಚಳಿಗಾಲದ ಉಷ್ಣತೆ ಪೂರ್ವ ಚೀನ ಸಮುದ್ರದಲ್ಲಿರುವುದಕ್ಕಿಂತ ಅಧಿಕ ($33^0$ಸೆ.–$44^0$ಸೆ.). ವಾರ್ಷಿಕ ಅವಪತನ 250 ಸೆಂಮೀ. ಇಲ್ಲಿ ಚಂಡಮಾರುತಗಳು ಹೆಚ್ಚು. ಟ್ಯೂನ, ಚಾನ್–ಚಿಯಾಂಗ್, ಹೈಫಾಂಗ್, ಬ್ಯಾಂಕಾಕ್ ಇವು ಮುಖ್ಯ ಬಂದರುಗಳು. ಯುರೋಪಿನಿಂದ ಸಿಂಗಪುರದ ಮುಖಾಂತರ ದೂರ ಪ್ರಾಚ್ಯಕ್ಕೆ ಹೋಗುವ ಹಡಗುಗಳು zÀQë aÃ£Ã ÀªÀÄÄzÀæzÀ ªÀÄÆ®PÀ ÀAZÀj ÀÄvÀÛªÉ (ಎಂ.ಎ.ಎಚ್.)

**ಚುಂಚನಕಟ್ಟೆ:** ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಒಂದು ಹೋಬಳಿ; ಕುಪ್ಪೆ ಗ್ರಾಮಪಂಚಾಯತಿಗೆ ಒಳಪಟ್ಟ ಒಂದು ಯಾತ್ರಾ ಸ್ಥಳ. ಕಾವೇರಿ ನದಿಯ ದಡದಲ್ಲಿದೆ. ಜನಸಂಖ್ಯೆ 47332.

ಶ್ರೀರಾಮಭಕ್ತನಾದ ಚುಂಚ ಎಂಬ ಋಷಿ ಇಲ್ಲಿದ್ದನೆಂದೂ ಈ ಸ್ಥಳಕ್ಕೆ ಅವನ ಹೆಸರೇ ಬಂದಿದೆಯೆಂದೂ ಶ್ರೀರಾಮ ಅರಣ್ಯವಾಸದಲ್ಲಿದ್ದಾಗ ಸೀತೆ ಲಕ್ಷ್ಮಣ ಸಮೇತನಾಗಿ ಇಲ್ಲಿಗೆ ಬಂದಿದ್ದನೆಂದೂ ಸ್ಥಳಪುರಾಣ. ಚುಂಚನಕಟ್ಟೆಯ ಬಳಿ ಕಾವೇರಿ ನದಿ ಸು. 24 ಮೀ ಎತ್ತರದಿಂದ ಧುಮುಕುತ್ತದೆ. ಪ್ರವಾಹದ ಕಾಲದಲ್ಲಿ ಈ ಜಲಪಾತ ರಮ್ಯವಾಗಿ ಕಾಣುತ್ತದೆ. ಜಲಪಾತದ ಬಳಿಯಲ್ಲೆ, ನದಿಯ ಬಲದಂಡೆಯ ಮೇಲೆ ಶ್ರೀ ಕೋದಂಡರಾಮನ ದೇವಾಲಯವಿದೆ.

ಜಲಪಾತದ ತಲೆಯ ಬಳಿಯಿಂದ ಸ್ವಲ್ಪ ಮೇಲೆ ಕಾವೇರಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲಾಗಿದೆ. ಈ ಸೇತುವೆಗೆ ಉತ್ತರದಲ್ಲಿ ಇರುವುದು 333 ಮೀ ಉದ್ದದ ರಾಮಸಮುದ್ರ ಅಣೆಕಟ್ಟು. ಈ ಅಣೆಕಟ್ಟಿನಿಂದ ಹೊರಡುವ ರಾಮಸಮುದ್ರ ನಾಲೆಯ ಉದ್ದ 60 ಕಿಮೀ. ಇದನ್ನು ಕೃಷ್ಣರಾಜನಗರದವರೆಗೆ ತೋಡಲಾಗಿದೆ. ಇದರ ಅಚ್ಚುಕಟ್ಟು 2,323 ಹೆ. ಅಣೆಕಟ್ಟೆಯನ್ನೂ ನಾಲೆಯನ್ನೂ ಚಿಕ್ಕದೇವರಾಜ ಒಡೆಯರು ನಿರ್ಮಿಸಿದರು. ಸು. 30 ಮೀ ದೂರದಲ್ಲಿ ಇನ್ನೊಂದು ಅಣೆಕಟ್ಟು ಇದೆ. ಇದರ ಎಡದಂಡೆಯಿಂದ ಹೊರಡುವ ಮಿರ್ಲೆ ನಾಲೆ 1.6 ಕಿಮೀ ದೂರ ಪ್ರವಹಿಸಿದ ಅನಂತರ ಮೂಲನಾಲೆ, ಹೊಸನಾಲೆ ಮತ್ತು ಅತ್ತಿಕಟ್ಟೆನಾಲೆ (10 ಕಿಮೀ) ಎಂಬ ಮೂರು ಶಾಖೆಗಳಾಗಿ ಒಡೆಯುತ್ತದೆ. ಮುಂದೆ ಈ ಕವಲುಗಳು ಒಂದು ಕಣಿವೆಯಲ್ಲಿ ಒಂದುಗೂಡುತ್ತವೆ. ಅಲ್ಲಿಂದ ಮುಂದೆ ಇದು ಹಂಪಾಪುರದ ನಾಲೆ ಎಂಬ ಹೆಸರು ಪಡೆದು 26 ಕಿಮೀ ದೂರ ಮುಂದುವರಿದು ಗಳಿಗೆಕೆರೆ ಎಂಬಲ್ಲಿ ಸೇರುತ್ತದೆ. ಬಲ ದಂಡೆಯ ಕಡೆ ಚಾಮರಾಜ ನಾಲೆಯನ್ನು ನಿರ್ಮಿಸಲಾಗಿದೆ.

ಪ್ರತಿವರ್ಷ ಜನವರಿ ತಿಂಗಳಲ್ಲಿ ಚುಂಚನಕಟ್ಟೆಯಲ್ಲಿ ರಾಮದೇವರ ರಥೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ಒಂದು ತಿಂಗಳವರೆಗೆ ದೊಡ್ಡ ಜಾತ್ರೆ ನಡೆಯುತ್ತದೆ. ದನಗಳ ಪರಿಷೆಗೆ ನೂರಾರು ಕಿಮೀ ಗಳಿಂದ ದನಗಳು ಬರುತ್ತವೆ. ಹಳ್ಳಿಕಾರು ಜಾತಿಯ ಹೋರಿಗಳಿಗೆ ಈ ಜಾತ್ರೆ ಪ್ರಸಿದ್ಧ. ಜಾತ್ರೆಗೆ ಸುಮಾರು ಎರಡು ಲಕ್ಷ ಜನ ಸಮಾವೇಶಗೊಳ್ಳುವರು.

ಚುಂಚನಕಟ್ಟೆಯ ಬಳಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಇದೆ. ಇತ್ತೀಚೆಗೆ ಖಾಸಗಿ ಸಂಸ್ಥೆಗೆ ಸೇರಿದ ಜಲವಿದ್ಯುಚ್ಛಕ್ತಿ ತಯಾರಿಕಾಕೇಂದ್ರ ಸ್ಥಾಪನೆಯಾಗಿದೆ. (ಕೆ.ಆರ್.ಆರ್.)

**ಚೆಕ್ ಗಣರಾಜ್ಯ:** ಸನ್ನಿವೇಶ ಮತ್ತು ವಿಸ್ತೀರ್ಣ:–1 ಜನವರಿ 1993 ರಲ್ಲಿ ಚೆಕೊಸ್ಲೊವಾಕಿಯಾದಿಂದ ಪ್ರತ್ಯೇಕಗೊಂಡ ಗಣರಾಜ್ಯ. ಇದು $49^0 0'$ ಉ.ಅ.ದಿಂದ $51^0.33'$ ಉ.ಅಕ್ಷಾಂಶ ಮತ್ತು $12^0 5'$ ಪೂ.ರಿಂದ $19^0 0'$ ಪೂ.ರೇಖಾಂಶಗಳ ನಡುವೆ ವಿಸ್ತರಿಸಿದೆ. ಈ ರಾಷ್ಟ್ರದ ಉತ್ತರ ಮತ್ತು ಈಶಾನ್ಯಕ್ಕೆ ಪೋಲೆಂಡ್, ಪೂರ್ವಕ್ಕೆ ಸ್ಲೋವಾಕಿಯ, ದಕ್ಷಿಣಕ್ಕೆ ಆಸ್ಟ್ರಿಯ ಹಾಗೂ ಪೂರ್ವ ಮತ್ತು ವಾಯವ್ಯಕ್ಕೆ ಜರ್ಮನಿ ದೇಶಗಳಿದ್ದು ಭೂಭಾಗದಿಂದ ಸುತ್ತುವರಿದ ದೇಶಗಳಲ್ಲಿ ಒಂದು. ವಿಸ್ತೀರ್ಣ:78,865 ಚ.ಕಿಮೀ. ಜನಸಂಖ್ಯೆ 13.3 ಮಿ. (2001) ರಾಜಧಾನಿ:ಪ್ರೇಗ್. ಜನಸಂಖ್ಯೆ 1,215,771 (2002).




ಮೇಲ್ಮೈ ಲಕ್ಷಣ: ಚೆಕ್ ಗಣರಾಜ್ಯದ ಬಹಳಷ್ಟು ಪ್ರದೇಶ ಬೊಹೇಮಿಯನ್ ಪರ್ವತ ಪುಂಜದಿಂದ ಆವರಿಸಲ್ಪಟ್ಟಿದೆ. ಇದು ವಿಶಾಲ ಉನ್ನತ ಬಯಲನ್ನು ಹೊಂದಿದ್ದು ಪರ್ವತ ಸರಣಿಗಳಿಂದ ಸುತ್ತುವರೆದಿದೆ. ಸುಮಾವ ಪರ್ವತ (ನೈರುತ್ಯ), ಬೆಕೌಂಕ (ಪಶ್ಚಿಮ), ಓರ್ ಪರ್ವತ (ವಾಯವ್ಯ) ಸುಡೆಟೆನ್ (ಈಶಾನ್ಯ), ಕ್ರೋಕೆನೋಸೆ ಇತ್ಯಾದಿ ಸುಡೆಟೆನ್ ಚೆಕ್ ಮತ್ತು ಪೋಲೆಂಡ್‌ಗಳ ನಡುವಣ ನೈಸರ್ಗಿಕ ಗಡಿಯಂತಿದ್ದು ಎತ್ತರವಾದ ಸರಣಿಗಳಾಗಿವೆ. ಇಲ್ಲಿ ಅತಿ ಎತ್ತರವಾದ ಸ್ನೆಜ್ಕು ಶಿಖರವಿದೆ (1602ಮೀ). ದಕ್ಷಿಣದಲ್ಲಿ ಪ್ರಸಿದ್ಧ ಸುಣ್ಣದಕಲ್ಲು ಪ್ರದೇಶವುಳ್ಳ ಬೋಹೇಮಿಯನ್ –ಮೊರಾವಿಯನ್ ಉನ್ನತ ಭಾಗಗಳಿವೆ.

ನದಿಗಳು: ಚೆಕ್ ಗಣರಾಜ್ಯ ಕೇಂದ್ರ ಯುರೋಪಿನ ಜಲ ವಿಭಾಜಕದಲ್ಲಿ ನೆಲೆಗೊಂಡಿದ್ದು ಅನೇಕ ನದಿ ಜಾಲಗಳನ್ನು ಹೊಂದಿದೆ. ಉದಾ: ಎಲ್ಬ್, ಲ್ಟಾವ, ಓಡರ್, ಮೊರಾವ ಇತ್ಯಾದಿ. ಎಲ್ಬ್ ನದಿಯು ಚೆಕ್ ಮತ್ತು ಪೋಲೆಂಡ್‌ಗಳ ಗಡಿ ಭಾಗದಲ್ಲಿ ಉಗಮಿಸಿ ಬೊಹೇಮಿಯ ಮೈದಾನದ ಮೂಲಕ ನೈಋತ್ಯಕ್ಕೆ ಹರಿಯುತ್ತದೆ. ಅದು ಜರ್ಮನಿಯನ್ನು ಪ್ರವೇಶಿಸುವುದಕ್ಕೆ ಮುಂಚೆ ಜಿಜೇರ, ಲ್ಟಾವ ಮತ್ತು ಓಹು ಉಪನದಿಗಳನ್ನು ಕೂಡಿಕೊಳ್ಳುತ್ತದೆ. ದೇಶದ ಆಗ್ನೇಯ ಭಾಗದಲ್ಲಿ ಮೊರಾವನದಿ ದಕ್ಷಿಣಕ್ಕೆ ಹರಿದು ಡ್ಯಾನ್ಯೂಬ್ ನದಿಯನ್ನು ಸೇರುತ್ತದೆ. ಇಲ್ಲಿ ಅನೇಕ ಚಿಕ್ಕಪುಟ್ಟ ನದಿಗಳು, ಚಿಲುಮೆಗಳೂ ಕಂಡುಬರುತ್ತವೆ.

ಮಣ್ಣು: ಈ ರಾಷ್ಟ್ರದಾದ್ಯಂತ ಕಪ್ಪುಮಣ್ಣು ವ್ಯಾಪಕವಾಗಿ ಹಂಚಿಕೆಯಾಗಿದೆ. ಒಣ ಮತ್ತು ತಗ್ಗು ಪ್ರದೇಶಗಳಲ್ಲಿ ಉತ್ತಮ ದರ್ಜೆಯ ಕಂದು ಮಣ್ಣು, ಅಧಿಕ ಮಳೆಯಾಗುವಲ್ಲಿ ಪೊಡ್ಜೋಲ್ ಮಣ್ಣು, ಪರ್ವತ ಭಾಗಗಳಲ್ಲಿ ಪರ್ವತ ಮಣ್ಣು, ನದಿ ಬಯಲುಗಳಲ್ಲಿ ಮೆಕ್ಕಲು ಹಾಗೂ ದೇಶದ ಪೂರ್ವದಂಚಿನಲ್ಲಿ ಕಡು ಜೇಡಿಮಣ್ಣು ಹಂಚಿಕೆಯಾಗಿದೆ.

ವಾಯುಗುಣ: ಖಂಡಾಂತರ ವಾಯುಗುಣ ಪ್ರಧಾನವಾದುದು. ಪಶ್ಚಿಮದಿಂದ ಪೂರ್ವಕ್ಕೆ ಹೋದಂತೆ ಸಾಗರೀಕ ಪ್ರಭಾವ ದುರ್ಬಲವಾಗುವುದು. ತಗ್ಗು ಪ್ರದೇಶಗಳಲ್ಲಿ ಉಷ್ಣಾಂಶ ಸಮನಾಗಿದ್ದರೂ ಎತ್ತರವಾದ ಭಾಗಗಳಲ್ಲಿ ವ್ಯತ್ಯಾಸಗೊಳ್ಳುತ್ತದೆ. ದೇಶದ ಪಶ್ಚಿಮದಲ್ಲಿ ವಾರ್ಷಿಕ ಸರಾಸರಿ ಉಷ್ಣಾಂಶ $7^0$ಸೆ. ದಕ್ಷಿಣಕ್ಕೆ ಹೋದಂತೆ ಹೆಚ್ಚಾಗುತ್ತದೆ. ಜುಲೈನಲ್ಲಿ ಗರಿಷ್ಠ ಉಷ್ಣಾಂಶವಿರುತ್ತದೆ ($33^0$ ಸೆ.). ಫೆಬ್ರವರಿಯಲ್ಲಿ ಕನಿಷ್ಠ. ಜುಲೈನಲ್ಲಿ ಮಳೆ ಹೆಚ್ಚು ಮತ್ತು ಫೆಬ್ರವರಿಯಲ್ಲಿ ಕಡಿಮೆ. ಸರಾಸರಿವಾರ್ಷಿಕ ಮಳೆ 45 ಸೆಂಮೀ.

ಸಸ್ಯ ಮತ್ತು ಪ್ರಾಣಿವರ್ಗ: ಹಿಂದೆ ಇದ್ದ ವಿಶಾಲವಾದ ಅರಣ್ಯ ಕ್ಷೇತ್ರ ಕೃಷಿ ವಿಸ್ತರಣೆ ಹಾಗೂ ಮರ ಮುಟ್ಟುಗಳ ಬಳಕೆಗಾಗಿ ನಾಶಗೊಂಡಿದೆ. ಪರ್ವತಗಳ ಇಳಿಜಾರುಗಳಲ್ಲಿ ಅರಣ್ಯ ಉಳಿದಿದೆ. ಅಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಓಕ್, ಸ್ಪ್ರೂಸ್, ಮತ್ತು ಬೀಚ್. ಉತ್ತರದ ಎತ್ತರವಾದ ಭಾಗಗಳಲ್ಲಿ ಟೈಗ ಮತ್ತು ತಂಡ್ರ ಮಾದರಿ ಸಸ್ಯವರ್ಗವಿದೆ.

ವೈವಿಧ್ಯಮಯ ಪ್ರಾಣಿ ಸಂಕುಲವಿದೆ. ವನ್ಯಪ್ರಾಣಿಗಳಲ್ಲಿ ಕರಡಿ, ತೋಳ, ಕಾಡು ಬೆಕ್ಕು ಮುಖ್ಯವಾದವು. ಜೊತೆಗೆ ವೈವಿಧ್ಯಮಯ ಪಕ್ಷಿ ಸಂಕುಲವಿದೆ. ಹಲವು ನೈಸರ್ಗಿಕ ಹಿರಿಮೆ ಮತ್ತು ಗರಿಮೆಗಳನ್ನು ದೇಶವು ಕಾಪಾಡುತ್ತಿದೆ.

ವಸತಿಗಳ ವೈವಿಧ್ಯ: ಚೆಕ್ ಗಣರಾಜ್ಯದ ವಸತಿಗಳ ವರ್ಚಸ್ಸಿನ ಮೇಲೆ ಕೈಗಾರಿಕೀಕರಣ ಮತ್ತು ನಗರೀಕರಣಗಳ ಪ್ರಭಾವವಿದೆ. ದಕ್ಷಿಣ ಬೊಹೇಮಿಯ ಮತ್ತು ದ.ಮೊರಾವಿಯಗಳಲ್ಲಿ ಗ್ರಾಮೀಣ ಹಾಗೂ ಸಾಂಪ್ರದಾಯಿಕ ಮತ್ತು ಮರಗಳಿಂದ ನಿರ್ಮಿಸಿದ ವಸತಿಗಳಿವೆ. ಕೆಲವು ಭಾಗಗಳನ್ನು ಹೊರತುಪಡಿಸಿ ದೇಶದಾದ್ಯಂತ ಜನವಸತಿಗಳು ದಟ್ಟವಾಗಿವೆ. ಇದು ಐತಿಹಾಸಿಕ ಹಾಗೂ ಕೈಗಾರಿಕಾ ಕೇಂದ್ರವೂ ಆಗಿದೆ. ಬ್ರಾನೊ ಮತ್ತು ಓಸ್ಟ್ರಾವಗಳು ಇತರ ಪ್ರಮುಖ ನಗರಗಳು.

ಜನಾಂಗ: ಚೆಕ್ ಗಣರಾಜ್ಯದ ಜನಸಂಖ್ಯೆಯಲ್ಲಿ ಶೇ.95 ಭಾಗ ಮೊರಾವಿಯನ್ನರೆಂದು ಪರಿಗಣಿಸಲಾಗಿದೆ. ಉಳಿದ ಅಲ್ಪ ಭಾಗ ಸ್ಲೋವೇಕ್ ಮತ್ತು ಪಾಲಿಸ್ ಗುಂಪಿಗೆ ಸೇರಿದ್ದಾರೆ. ಬೊಹೇಮಿಯದ ಈಶಾನ್ಯ ಭಾಗದಲ್ಲಿ ಸ್ವಲ್ಪ ಜರ್ಮನರಿದ್ದಾರೆ. ಈ ರಾಷ್ಟ್ರ ಜನಸಂಖ್ಯೆಯಲ್ಲಿ ಚೆಕ್ ಭಾಷೆಯನ್ನು ಮಾತನಾಡುವವರ ಸಂಖ್ಯೆ ಹೆಚ್ಚು. ಸ್ವಲ್ಪ ಮಟ್ಟಿಗೆ ಸ್ಲೋವಿಕ್, ಪೋಲಿಷ್, ಜರ್ಮನ್, ರಷ್ಯನ್, ಉಕ್ರೇನ್ ಹಾಗೂ ಹಂಗೇರಿಯನ್ ಭಾಷೆಯವರೂ ಇದ್ದಾರೆ. ಅಂದಾಜೊಂದರ ಪ್ರಕಾರ ಜನಸಂಖ್ಯೆಯಲ್ಲಿ 2/5 ಭಾಗ ರೋಮನ್ ಕೆಥೊಲಿಕ್ ಗುಂಪಿಗೆ ಸೇರಿದವರು. ಉಳಿದವರು ಪೂರ್ವಾಚ್ಚ ಆರ್ಥೊಡಕ್ಸ್ ಹಾಗೂ ಪ್ರಾಟೆಸ್ಟಂಟ್ ಮತಾವಲಂಬಿಗಳಾಗಿದ್ದಾರೆ.

ಕೃಷಿ: ಪೂರ್ವ ಯುರೋಪಿನ ದೇಶಗಳಲ್ಲಿ ಚೆಕ್ ಗಣರಾಜ್ಯ ಕೃಷಿಯಲ್ಲಿ ಮುಂದುವರಿದಿದೆ. ಸಾಕಷ್ಟು ಕೃಷಿ ಭೂಮಿಯಿದೆ. ಏಕದಳ ಧಾನ್ಯ ಬೆಳೆ ಪ್ರಧಾನ. ಉದಾ: ಗೋದಿ, ಬಾರ್ಲಿ, ರೈ, ಓಟ್ಸ್ ಇತ್ಯಾದಿ ಆಲೂಗೆಡ್ಡೆಯನ್ನು ಸಾಕಷ್ಟು ಬೆಳೆಯುವರು. ಕೃಷಿಯೊಂದಿಗೆ ದನಕರು, ಕುರಿ, ಹಂದಿ ಮತ್ತು ಕೋಳಿಸಾಕಾಣೆಯು ರೂಢಿಯಲ್ಲಿದೆ.

ಖನಿಜ ಮತ್ತು ಶಕ್ತಿ ಸಂಪತ್ತು: ಚೆಕ್ ಗಣ ರಾಜ್ಯದಲ್ಲಿ ಲೋಹಾಂಶವುಳ್ಳ ಖನಿಜಗಳ ಕೊರತೆಯಿದೆ. ಪ್ರೇಗ್ ಸುತ್ತಮುತ್ತ ಕಬ್ಬಿಣದ ಅದಿರು ದೊರೆಯುತ್ತದೆ. ಬೊಹೇಮಿಯ ವಲಯದ ಕುತ್ನಹೋರದಲ್ಲಿ ಸೀಸ ಮತ್ತು ಸತುಗಳು ದೊರೆಯುತ್ತವೆ. ಉತ್ತರ ಬೊಹೇಮಿಯ ಭಾಗದಲ್ಲಿ ಯುರೇನಿಯಂ, ಬೊಹೇಮಿಯದ ಮಧ್ಯ ಭಾಗದಲ್ಲಿ ಚಿನ್ನದ ನಿಕ್ಷೇಪವಿದೆ. ಸ್ವಲ್ಪಮಟ್ಟಿಗೆ ಗ್ರಾಫೈಟ್ ಮತ್ತು ಕಯೋಲಿನ್‌ಗಳೂ ದೊರೆಯುತ್ತವೆ.

ಓಸ್ಟ್ರಾವ ಮತ್ತು ಕಾರ್ವಿನಾ ಪ್ರದೇಶದಲ್ಲಿ ಉತ್ತಮ ದರ್ಜೆ ಕಲ್ಲಿದ್ದಲು ದೊರೆಯುತ್ತದೆ. ಅಲ್ಪ ಪ್ರಮಾಣದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳೂ ಸಹ ಹೊಡೋನಿನ್ ಬಳಿ ದೊರೆಯುತ್ತವೆ. ಪರಮಾಣು ವಿದ್ಯುತ್ ಸ್ಥಾವರಗಳೂ ಉಂಟು.

ಕೈಗಾರಿಕೆ: ಎಂಜಿನಿಯರಿಂಗ್ ಕೈಗಾರಿಕೆಗಳು ಪ್ರಮುಖ. ಆದಾಗ್ಯೂ ವಿದ್ಯುದುಪಕರಣ, ರಾಸಾಯನಿಕ, ರಬ್ಬರ್, ಸಿಮೆಂಟ್, ಗಾಜು ತಾಯಾರಿಕೆ ಹಾಗೂ ಆಹಾರ ಸಂಸ್ಕರಣ ಉದ್ಯಮಗಳೂ ಅಭಿವೃದ್ಧಿಗೊಂಡಿವೆ. ಜೊತೆಗೆ ಕಬ್ಬಿಣ ಮತ್ತು ಉಕ್ಕು ಉದ್ಯಮ (ಓಸ್ಟ್ರಾವ) ವಿವಿಧ ಸ್ವಚಾಲಿತ ವಾಹನಗಳ ತಯಾರಿಕೆ (ಬಸ್, ಲಾರಿ, ಕಾರು, ಟ್ರಕ್, ಮೋಟರ್ ಸೈಕಲ್) ವಿಮಾನ ತಯಾರಿಕೆ ಮತ್ತು ರೈಲ್ವೆ ಎಂಜಿನ್‌ಗಳ ತಯಾರಿಕೆಯೂ ಕಂಡು ಬರುತ್ತದೆ. ಇಲ್ಲಿಯ ಹಣ ಕರೂನ.

ಸಾರಿಗೆ: ಭೂ ಸ್ವರೂಪಗಳು, ಆರ್ಥಿಕ ಪ್ರಗತಿ ಮತ್ತು ಸರ್ಕಾರದ ಕ್ರಮಗಳಿಂದಾಗಿ ಸ್ಲೋವೇಕ್‌ಗಿಂತ ಉತ್ತಮ ಸಾರಿಗೆ ಸೌಲಭ್ಯವಿದೆ. ದೇಶದಾದ್ಯಂತ 9,500 ಕಿಮೀ ರೈಲು ಮಾರ್ಗಗಳಿದ್ದರೂ ಇತ್ತೀಚೆಗೆ ಅದರ ಪ್ರಾಮುಖ್ಯತೆ ಕಡಿಮೆಯಾಗಿದೆ. ಬಹಳಷ್ಟು ರೈಲು ಮಾರ್ಗಗಳು ರಾಜಧಾನಿ ಪ್ರೇಗ್‌ನೊಂದಿಗೆ ಸಂಪರ್ಕ ಕಲ್ಪಿಸುತ್ತವೆ. ಸು. 6.6 ಲಕ್ಷ ಕಿಮೀ ರಸ್ತೆ ಮಾರ್ಗಗಳಿವೆ. ದೇಶದ ಪ್ರಮುಖ ನಗರ ಹಾಗೂ ವಾಣಿಜ್ಯ ಕೇಂದ್ರಗಳೊಂದಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತವೆ. ಎಲ್ಬ್ ಮತ್ತು ಲ್ಟಾವ ನದಿಗೆ ಉತ್ತಮ ನೌಕಾಯಾನ ಸೌಲಭ್ಯ ಕಲ್ಪಿಸಿದೆ. ಪ್ರೇಗ್‌ನಿಂದ ದೇಶದ ಪ್ರಮುಖ ನಗರ ಕೇಂದ್ರಗಳು ಮತ್ತು ವಿದೇಶಗಳೊಂದಿಗೆ ವಿಮಾನಯಾನ ಸೌಲಭ್ಯವಿದೆ.

ಚೆಕ್ ಗಣ ರಾಜ್ಯವು ಪೂರ್ವ ಯುರೋಪ್ ರಾಷ್ಟ್ರಗಳೊಂದಿಗೆ ಉತ್ತಮ ವಿದೇಶೀ ವ್ಯಾಪಾರ ಸಂಬಂಧವನ್ನು ಬೆಳೆಸಿಕೊಂಡಿದೆ. ಜರ್ಮನಿಯು ವಾಣಿಜ್ಯ ಪಾಲುದಾರ ರಾಷ್ಟ್ರ. ಯಂತ್ರಗಳು ಮತ್ತು ಸಾರಿಗೆ ಉಪಕರಣಗಳು ಚೆಕ್ ಗಣರಾಜ್ಯದ ಪ್ರಮುಖ ª ÁåÁgÀzÀ ¸ÀgÀPÀÄUÀ¼ÁVª É

(ಪಿ.ಎಂ.)

**ಚೆನ್ನೈ:** ತಮಿಳುನಾಡು ರಾಜ್ಯದ ರಾಜಧಾನಿ, ಒಂದು ಜಿಲ್ಲೆ, ರಾಜ್ಯ ಹಾಗೂ ಜಿಲ್ಲೆಯ ಆಡಳಿತ ಕೇಂದ್ರ ಮತ್ತು ಒಂದು ಕೈಗಾರಿಕಾ ಬಂದರು ನಗರ. ಚೆನ್ನೈ ಜಿಲ್ಲೆಯನ್ನು ಉತ್ತರದಲ್ಲಿ ಆಂಧ್ರಪ್ರದೇಶದ ನೆಲ್ಲೂರು ಮತ್ತು ಚಿತ್ತೂರು ಜಿಲ್ಲೆಗಳೂ ಪಶ್ಚಿಮದಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್, ದಕ್ಷಿಣದಲ್ಲಿ ದಕ್ಷಿಣ ಆರ್ಕಾಟ್ ಜಿಲ್ಲೆಗಳೂ ಪೂರ್ವದಲ್ಲಿ ಬಂಗಾಲಕೊಲ್ಲಿಯೂ ಸುತ್ತುವರಿದಿವೆ. ಈ ಜಿಲ್ಲೆಯ ವಿಸ್ತೀರ್ಣ 174 ಚ.ಕಿಮೀ. ಜನಸಂಖ್ಯೆ 42,16,268 (2000). ಮದರಾಸನ್ನು 1996ರಲ್ಲಿ ಚೆನ್ನೈ ಎಂದು ಮರು ನಾಮಕರಣ ಮಾಡಲಾಯಿತು. ಆದರೂ ಈಗಲೂ ಮದರಾಸು ಎಂದೂ ಕರೆಯಲಾಗುತ್ತದೆ.

ನಗರ ಪ್ರದೇಶ ಚೆನ್ನೈ ಮತ್ತು ಚೆಂಗಲಪಟ್ಟು ಜಿಲ್ಲೆಗಳಲ್ಲಿ ವಿಸ್ತರಿಸಿದೆ. ದಕ್ಷಿಣ ಭಾರತದ ಮೊದಲನೆಯ ಹಾಗೂ ಭಾರತದ ನಾಲ್ಕನೆಯ ದೊಡ್ಡ ನಗರವಿದು. ತಮಿಳಿನಲ್ಲಿ ಈ ನಗರವನ್ನು ಚೆನ್ನಪುರಿ, ಚನ್ನಪಟ್ಟಣ ಮತ್ತು ಚೆನ್ನೈ (ಶೆನ್ನೈ) ಎಂದೂ ಕರೆಯುವುದುಂಟು. ಭಾರತದ ಪೂರ್ವ ತೀರದ ಮುಖ್ಯ ಬಂದರು ನಗರವಾದ ಇದು ಕೋಲ್ಕತ ನೈಋತ್ಯಕ್ಕೆ ಸು. 1368 ಕಿಮೀ ದೂರದಲ್ಲಿ ಬಂಗಾಲಕೊಲ್ಲಿಯ ಪಶ್ಚಿಮದ ಕೋರಮಂಡಲ ತೀರದಲ್ಲಿ ಉ.ಅ.13.4 ಮತ್ತು ಪೂ.ರೇ. 80.14 ನಲ್ಲಿದೆ.

ಚೆನ್ನೈ ಮಹಾನಗರಪಾಲಿಕೆ

ಚೆನ್ನೈ ನಗರದಲ್ಲಿ ಶೇ. 62ರಷ್ಟು ಮಂದಿ ಶಿಕ್ಷಿತರು. ವಿಸ್ತೀರ್ಣ ಹಾಗೂ ಜನಸಂಖ್ಯೆ ದೃಷ್ಟಿಯಿಂದ ಈ ನಗರದಲ್ಲಿ ಮುಂಬಯಿ, ಕೋಲ್ಕತಗಳಲ್ಲಿರುವಷ್ಟು ಸಂದಣಿ ಹಾಗೂ ಒತ್ತಡ ಇಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಭಾರತದ ಇತರ ಬೃಹತ್ ನಗರಗಳಲ್ಲಿ ಕಂಡುಬರುವಷ್ಟು ಇಲ್ಲಿ ಕಾಣಬರುವುದಿಲ್ಲ. ಮುಂಬಯಿ, ಕೋಲ್ಕತಗಳ ವಾಣಿಜ್ಯ ಮತ್ತು ಕೈಗಾರಿಕಾ ಸಮೃದ್ಧಿ ಚೆನ್ನೈಗಿಲ್ಲ. ನವದೆಹಲಿಯಂತೆ ಯೋಜನಾಬದ್ಧ ನಗರವೂ ಇಲ್ಲ. ಪುರಾತನ ಭಾರತದ ಕೆಲವೊಂದು ವಿಶಿಷ್ಟ ಸಂಪ್ರದಾಯ ಮತ್ತು ಆಧುನಿಕತೆಗಳೆರಡನ್ನೂ ಈ ನಗರದಲ್ಲಿ ಕಾಣಬಹುದು. ದಕ್ಷಿಣರೈಲ್ವೆ ಮತ್ತು ಮುಖ್ಯ ರಸ್ತೆಗಳ ಎರಡೂ ಬದಿಗಳಲ್ಲಿ ಬೆಳೆದಿದ್ದ ವಸತಿ ಹಾಗೂ ಕೈಗಾರಿಕಾ ಪ್ರದೇಶಗಳು ವಿಸ್ತೀರ್ಣಗೊಂಡು ಕೂಡಿಕೊಂಡಿವೆ. ಕೂವಮ್ ನದಿ ಈ ನಗರವನ್ನು ಹೆಚ್ಚು ಕಡಿಮೆ ಸಮಾನಾರ್ಧಗಳಲ್ಲಿ ಬೇರ್ಪಡಿಸುತ್ತದೆ. ಇದನ್ನು ದಕ್ಷಿಣದಲ್ಲಿ ಹರಿಯುವ ಅಡ್ಯಾರ್ ನದಿಯೊಂದಿಗೆ ನಗರಮಧ್ಯದಲ್ಲಿ ಹರಡಿರುವ ಬಕಿಂಗ್‌ಹ್ಯಾಮ್ ಕಾಲುವೆ ಜೋಡಿಸುತ್ತದೆ. ಸೇಂಟ್ ಜಾರ್ಜ್ ಕೋಟೆಯ ಉತ್ತರಕ್ಕೆ ನಗರ ಮಧ್ಯದಲ್ಲಿರುವ ಜಾರ್ಜ್ ಟೌನ್ ಮತ್ತು ದಕ್ಷಿಣದಲ್ಲಿ ಟ್ರಿಪ್ಲಿಕೇನ್, ರಾಯಪೇಟಾ, ಮೈಲಾಪುರ, ಮಂದವಳ್ಳಿ ಮೊದಲಾದ ಪ್ರದೇಶಗಳಲ್ಲಿ ಜನವಸತಿ ಹೆಚ್ಚಿದೆ. ತೀರ ದಕ್ಷಿಣದಲ್ಲಿ ಗಾಂಧಿನಗರ, ಕಸ್ತೂರಬಾ ನಗರ, ಪಶ್ಚಿಮದಲ್ಲಿಯ ಅಣ್ಣಾನಗರ ಮೊದಲಾದ ಹೊಸ ಬಡಾವಣೆಗಳೂ ಇವೆ.

ಚೆನ್ನೈನ ಹವಾಗುಣವು ಕೋಲ್ಕತ, ಮುಂಬಯಿಗಳಿಗಿಂತ ಹಿತಕರ. ಮಧ್ಯಾಹ್ನ ಪ್ರಾರಂಭವಾಗುವ ಸಮುದ್ರಗಾಳಿ ಸೆಖೆಯನ್ನು ಶಮನಗೊಳಿಸುತ್ತದೆ. ಸಾಮಾನ್ಯ ಉಷ್ಣತೆ $33^0$ಸೆ ಇರುವ ಅತಿ ಹೆಚ್ಚು ಸೆಖೆ ತಿಂಗಳು ಮೇ. ಮಧ್ಯಮ ಉಷ್ಣತೆ $24^0$ಸೆ. ಇರುವ ತಂಪು ತಿಂಗಳು ಜನವರಿ. ವರ್ಷದಲ್ಲಿ ಸು. 122 ಸೆಂಮೀ ಮಳೆಯಾಗುತ್ತದೆ.

ಸಸ್ಯಗಳು, ಪ್ರಾಣಿಗಳು; ಚೆನ್ನೈ ಸುತ್ತಮುತ್ತಲಿನ ವನ್ಯ ಪ್ರದೇಶಗಳಲ್ಲಿ ಮತ್ತು ನಗರದಲ್ಲಿ ತೆಂಗು, ತಾಳೆ, ಬೇವು, ಹಾಲಿವಾಣ, ಹೊಂಗೆ, ಹುಣಸೆ, ಶಂಕುಫಲಿ ಮತ್ತು ಆಲದ ಮರಗಳನ್ನು ಕಾಣಬಹುದು. ಕೇರೆ, ಹಸುರು, ಮುಂತಾದ ಹಾವುಗಳನ್ನೂ ಮ್ಯಾಗ್ ಪೈ, ಮರಕುಟಕ, ರಾಬಿನ್, ಕಿಂಗ್‌ಫಿಶರ್ ಮೊದಲಾದ ಪಕ್ಷಿಗಳನ್ನೂ, ಮುಂಗುಸಿ, ಮುಳ್ಳುಹಂದಿ ಇತ್ಯಾದಿ ಪ್ರಾಣಿಗಳನ್ನೂ ಕಾಣಬಹುದು. ಇಲ್ಲಿ ಜಿಂಕೆ ಮತ್ತು ಹಾವುಗಳ ರಕ್ಷಿತ ಉದ್ಯಾನಗಳಿವೆ.

ಸಾರಿಗೆ : ನಗರದಲ್ಲಿ ಮೀಟರ್‌ಗೇಜ್ ಮತ್ತು ಬ್ರಾಡ್‌ಗೇಜ್ ರೈಲುಮಾರ್ಗಗಳಿವೆ. ನಗರಕ್ಕೆ ಕೆಲಸಕ್ಕಾಗಿ ದಿನವೂ ಬರುವ ಉಪನಗರವಾಸಿಗಳಿಗೆ ಸಬರ್ಬನ್ ರೈಲುವ್ಯವಸ್ಥೆಯಿದೆ. ಸಾರಿಗೆ ಬಸ್ ವ್ಯವಸ್ಥೆ ರಾಜ್ಯ ಸರ್ಕಾರಕ್ಕೆ ಸೇರಿದೆ. ನಗರದಿಂದ ರಾಜ್ಯದ ಇತರ ಪ್ರದೇಶಗಳಿಗೂ ಹೊರರಾಜ್ಯಗಳಿಗೂ ಬಸ್ ವ್ಯವಸ್ಥೆಯಿದೆ. ಚೆನ್ನೈನಲ್ಲಿ ದಕ್ಷಿಣ ರೈಲ್ವೆಯ ಕೇಂದ್ರ ಆಡಳಿತ ಕಚೇರಿಯಿದೆ. ಇಲ್ಲಿಯ ಕೇಂದ್ರ ರೈಲುನಿಲ್ದಾಣದಿಂದ ಭಾರತದ ಎಲ್ಲ ಭಾಗಗಳಿಗೂ ರೈಲುಗಳ ಸಂಪರ್ಕವುಂಟು. ಮೀನಂಬಾಕಮ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭಾರತದ ಎಲ್ಲದೊಡ್ಡ ನಗರಗಳಿಗೂ ಸಿಂಗಪುರ, ಸಿಡ್ನಿ, ಕೊಲಂಬೊ ಮುಂತಾದ ವಿದೇಶಿ ನಗರಗಳಿಗೂ ವಿಮಾನ ಸಂಪರ್ಕವಿದೆ. ಚೆನ್ನೈಗೆ ಹಡಗುಗಳ ಸಂಪರ್ಕವೂ

ಇದೆ. ಪ್ರಪಂಚದ ಅನೇಕ ರಾಷ್ಟ್ರಗಳ ಹಡಗುಗಳು ಇಲ್ಲಿಗೆ ಬರುತ್ತವೆ. 1876ರಲ್ಲಿ ಪೂರ್ತಿಯಾದ ಚೆನ್ನೈನ ಮಾನವನಿರ್ಮಿತ ಬಂದರು 1881ರಲ್ಲಿ ಸುಂಟರಗಾಳಿಯಿಂದಾಗಿ ನಾಶವಾಗಿ ಮತ್ತೆ 1896ರಲ್ಲಿ ಪುನರ್ನಿರ್ಮಿಸಲ್ಪಟ್ಟಿತು. 1901ರಲ್ಲಿ ಇದರ ವಿನ್ಯಾಸವನ್ನು ನವೀಕರಿಸಲಾಗಿದೆ.

ಪ್ರೇಕ್ಷಣೀಯ ಸ್ಥಳಗಳಲ್ಲಿ ಮೈಲಾಪುರದ ಕಪಾಲೀಶ್ವರ ಹಾಗೂ ಟ್ರಿಪ್ಲಿಕೇನಿನ ಪಾರ್ಥಸಾರಥಿ ದೇವಾಲಯಗಳು ಪ್ರಸಿದ್ಧ. ಬ್ರಿಟಿಷರ ಕಾಲದ ಕಟ್ಟಡಗಳಲ್ಲಿ ದಖ್ಖನ್ ಮಹಮ್ಮದೀಯ ಶೈಲಿಯಲ್ಲಿರುವ ಚೇಪಾಕ್ ಅರಮನೆ ಮತ್ತು ವಿಶ್ವವಿದ್ಯಾಲಯದ ಸೆನೆಟ್ ಹೌಸ್, ಇಂಡೊ ಸಾರ್‌ಸೆನಿಕ ಶೈಲಿಯಲ್ಲಿರುವ ವಿಕ್ಟೋರಿಯ ತಾಂತ್ರಿಕ ಸಂಸ್ಥೆ ಮತ್ತು ಉಚ್ಚನ್ಯಾಯಾಲಯದ ಕಟ್ಟಡಗಳು ಆಕರ್ಷಣೀಯವಾಗಿವೆ.

ಚೆನ್ನೈ ಕೇಂದ್ರ ರೈಲು ನಿಲ್ದಾಣ

ಮೌಂಟ್‌ರೋಡಿನಲ್ಲಿ ವಿಮಾಸಂಸ್ಥೆಯ ಒಂದು ಆಧುನಿಕ ಗಗನಚುಂಬಿ ಕಟ್ಟಡವಿದೆ. ಸು. 49 ಮೀ ಎತ್ತರವಿರುವ ದೀಪಗೃಹ, 16ನೆಯ ಶತಮಾನದ ಇಟಾಲಿಯನ್ ಪುನರುಜ್ಜೀವನ ಪದ್ಧತಿಯಲ್ಲಿರುವ ಪ್ರೆಸಿಡೆನ್ಸಿ ಕಾಲೇಜಿನ ಕಟ್ಟಡ, ದೊಡ್ಡ ಮಸೀದಿ ಇವು ನೋಡತಕ್ಕ ಕಟ್ಟಡಗಳು. ಗಿಂಡಿಗೆ ಸಮೀಪದಲ್ಲಿ ಗಾಂಧಿ ಸ್ಮಾರಕ ಕಟ್ಟಡವಿದೆ.

ಕೈಗಾರಿಕೆ : ಚೆನ್ನೈನಲ್ಲಿ 1874ರಲ್ಲಿ ಸ್ಥಾಪಿತವಾದ ದಿ ಬಕಿಂಗ್ ಹ್ಯಾಮ್ ಅಂಡ್ ಕರ್ನಾಟಕ ಮಿಲ್ಸ್ ಒಂದು ಪ್ರಸಿದ್ಧ ಬಟ್ಟೆ ತಯಾರಿಕಾ ಕಾರ್ಖಾನೆ. ರೈಲ್ವೆ ಡಬ್ಬಿಗಳನ್ನು ನಿರ್ಮಿಸುವ ಇಂಟೆಗ್ರೇಲ್ ಕೋಚ್ ಫ್ಯಾಕ್ಟರಿಯನ್ನು 1953ರಲ್ಲಿ ತೆರೆಯಲಾಯಿತು. ಚಲನಚಿತ್ರಗಳ ಉದ್ಯೋಗ 1930ರಲ್ಲಿ ಪ್ರಾರಂಭವಾಯಿತು. ಇಂದು ಚೆನ್ನೈ ಚಲನಚಿತ್ರ ತಯಾರಿಕೆಯ ವಿವಿಧ ಘಟಕಗಳನ್ನು ಹೊಂದಿರುವ ಮುಖ್ಯನಗರ. ಬೈಸಿಕಲ್ಲುಗಳ ತಯಾರಿಕೆ 1950ರಿಂದ ನಡೆಯುತ್ತಿದೆ. ಸ್ವಯಂಚಾಲಿತ ವಾಹನಗಳ ಮತ್ತು ಮೋಟಾರು ಸೈಕಲ್ಲುಗಳ ಬಿಡಿಭಾಗಗಳನ್ನು ಜೋಡಿಸುವ ಕೈಗಾರಿಕೆಯು 1950ರಿಂದಲೇ ಪ್ರಾರಂಭವಾಯಿತು. ಸಣ್ಣಕೈಗಾರಿಕೆಗಳಿಗೆ ಗಿಂಡಿಯಲ್ಲಿಯೂ ಮಧ್ಯಮವರ್ಗದ ಕೈಗಾರಿಕೆಗಳಿಗೆ ಅಂಬತ್ತೂರಿನಲ್ಲಿಯೂ ವ್ಯವಸ್ಥೆಗಳಿವೆ. ಎಗ್ಮೋರಿನಲ್ಲಿ ತೈಲಶುದ್ಧೀಕರಣದ ಕಾರ್ಖಾನೆಯಿದೆ. ದಕ್ಷಿಣದಲ್ಲಿಯೇ ಹೆಚ್ಚು ಪುಸ್ತಕ ಮತ್ತು ದೈನಿಕ ಹಾಗೂ ನಿಯತಕಾಲಿಕಗಳ ಪ್ರಕಟಣಾ ಸಂಸ್ಥೆಗಳು ಚೆನ್ನೈನಲ್ಲಿವೆ. ಚರ್ಮವನ್ನು ಹದಗೊಳಿಸುವುದೂ ಇಲ್ಲಿ ಒಂದು ಮುಖ್ಯಕೈಗಾರಿಕೆ. ಕೊಡಂಬಾಕಂ, ನುಂಗುಂಬಾಕಂ ಮತ್ತು ಗಿಂಡಿ ಪ್ರಮುಖ ಕೈಗಾರಿಕಾ ವಲಯಗಳು.

ವ್ಯಾಪಾರ ಮತ್ತು ವಾಣಿಜ್ಯ: ಚರ್ಮ, ಕಬ್ಬಿಣದ ಅದಿರು, ಗಿರಣಿ ಮತ್ತು ಕೈಮಗ್ಗ, ಬಟ್ಟೆ, ಅರಳೆಯ ನೂಲು, ನೆಲಗಡಲೆ, ಅಭ್ರಕ, ಈರುಳ್ಳಿ, ಮೆಣಸಿನಕಾಯಿ, ಕಾಫಿ, ಮಾನವ ಕೂದಲು, ತಾಳೆನಾರು ಮತ್ತು ಗಂಧದ ಎಣ್ಣೆ ಇಲ್ಲಿಂದ ರಫ್ತಾಗುವ ಸರಕುಗಳು. ಮುಖ್ಯವಾದ ಆಮದುಗಳೆಂದರೆ ಗೋದಿ, ಯಂತ್ರ ಸಾಮಗ್ರಿ, ಕಬ್ಬಿಣ ಮತ್ತು ಉಕ್ಕು, ಅಮೋನಿಯಮ್ ಸಲ್ಫೇಟ್, ಹತ್ತಿ, ಛಾಪಾಕಾಗದ, ಯೂರಿಯಾ, ಸೋಯಾಬೀನ್ ಎಣ್ಣೆ, ಔಷಧ, ಪೆಟ್ರೋಲಿಯಮ್ ಉತ್ಪಾದನೆಗಳು ಹಾಗೂ ರಾಕ್‌ಫಾಸ್ಫೇಟ್, ದಿ ತಮಿಳುನಾಡು ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಕಾರ್ಪೊರೇಷನ್ ಮೊದಲಾದ ಸಂಸ್ಥೆಗಳು ಮತ್ತು ಸಹಕಾರೀ ಬ್ಯಾಂಕಿಂಗ್ ಸಂಸ್ಥೆಗಳು ಸಣ್ಣ ಹಾಗೂ ದೊಡ್ಡ ವ್ಯಾಪಾರಸ್ಥರಿಗೆ ಸಹಾಯ ಒದಗಿಸುತ್ತವೆ. ದಿ ಮದ್ರಾಸ್ ಛೇಂಬರ್ ಆಫ್ ಕಾಮರ್ಸ್, ದಿ ಆಂಧ್ರ ಛೇಂಬರ್ ಆಫ್ ಕಾಮರ್ಸ್ ಅನೇಕ ಖಾಸಗಿ ಮತ್ತು ರಾಷ್ಟ್ರೀಯ ಬ್ಯಾಂಕುಗಳೂ ಇಲ್ಲಿಯ ವ್ಯಾಪಾರ ಯತ್ನಗಳಿಗೆ ನೆರವು ನೀಡುತ್ತಿವೆ.

ಚೆನ್ನೈ ನಗರದಲ್ಲಿ ರಾಜ್ಯ ಶಾಸನ ಸಭೆ, ಸೆಕ್ರೆಟೇರಿಯಟ್ ಮತ್ತು ಮುಖ್ಯ ಆಡಳಿತ ಕಚೇರಿಗಳಿವೆ. ರಾಜ್ಯಪಾಲರ ವಸತಿ ಗಿಂಡಿಯಲ್ಲಿದೆ. ನುಂಗಂಬಾಕಂನ ಶಾಸ್ತ್ರೀಭವನದಲ್ಲಿ ಸು. 34 ಕೇಂದ್ರ ಸರ್ಕಾರದ ಕಚೇರಿಗಳಿವೆ. ದಕ್ಷಿಣ ರೈಲ್ವೆಯ ಮುಖ್ಯ ಕಾರ್ಯಾಲಯ ಪಾರ್ಕ್‌ಟೌನಿನಲ್ಲೂ ಅಕೌಂಟೆಂಟ್ ಜನರಲ್ ಮತ್ತು ಪೋಸ್ಟ್ ಮಾಸ್ಟರ್ ಜನರಲ್‌ರ ಕಚೇರಿಗಳು ಮೌಂಟ್‌ರೋಡಿನಲ್ಲೂ ಇವೆ. ವರಮಾನ ಮತ್ತು ಕೇಂದ್ರ ಅಬಕಾರೀ ಕಚೇರಿಗಳು ನುಂಗಂಬಾಕಂನಲ್ಲಿವೆ. ಭಾರತೀಯ ಸೈನ್ಯದ ದಕ್ಷಿಣ ಅಧಿಪತ್ಯದ ಮುಖ್ಯ ಕಾರ್ಯಾಲಯ ಸೇಂಟ್‌ಥಾಮಸ್ ಮೌಂಟಿನಲ್ಲಿದೆ. ಆಕಾಶವಾಣಿ ಕೇಂದ್ರವಿದೆ. ನಗರ ಸಭೆಯ ಆಡಳಿತವಿದೆ.

ಚೆನ್ನೈ ನಗರಕ್ಕೆ ವಾಯವ್ಯದಲ್ಲಿ ಸು. 18 ಕಿಮೀ ದೂರದಲ್ಲಿರುವ ರೆಡ್ ಹಿಲ್ಸ್ ಸರೋವರದಿಂದ ನೀರಿನ ಪೂರೈಕೆಯಾಗುತ್ತದೆ. ಸರೋವರಕ್ಕೆ ಕೋರ್ತಲಯಾರ್ ನದಿಯ ಮೇಲಿನ ಪುಂಡಿ ಮತ್ತು ತಾಮ್ರಪಕ್ಕಮ್ ಜಲಾಶಯಗಳ ಕಾಲುವೆಗಳ ಮೂಲಕ ನೀರು ಬರುತ್ತದೆ. ಮಳೆ ಕಡಿಮೆಯಾದ ವರ್ಷಗಳಲ್ಲಿ ನಗರ ನೀರಿನ ತೀವ್ರ ಕೊರತೆಯನ್ನು ಅನುಭವಿಸಬೇಕಾಗುತ್ತದೆ. ಬೇಸಿನ ಬ್ರಿಡ್ಜ್ ಮತ್ತು ಎಗ್ಮೋರ್ ಥರ್ಮಲ್ ಸ್ಟೇಷನ್ನುಗಳು ವಿದ್ಯುತ್ತನ್ನು ಒದಗಿಸುತ್ತವೆ. ನಗರದಲ್ಲಿ ಅನೇಕ ಸರ್ಕಾರಿ ಮತ್ತು ಪುರಸಭಾ ಆಸ್ಪತ್ರೆಗಳಿವೆ. ಸೆಂಟ್ರಲ್ ರೈಲ್ವೆ ಸ್ಟೇಷನ್ನಿನ ಎದುರಿಗೆ ಇರುವ ಮದ್ರಾಸ್ ಜನರಲ್ ಆಸ್ಪತ್ರೆ ಬಲು ಹಿಂದಿನದು, ಬಲು ದೊಡ್ಡದು ಕೂಡ. ರಾಯಪೇಟಾ ಆಸ್ಪತ್ರೆ ಮತ್ತು ಕಿಲ್ಪಾಕ್ ಮೆಡಿಕಲ್ ಕಾಲೇಜ್ ಆಸ್ಪತ್ರೆ ಇವು ಸಹ ದೊಡ್ಡ ಸರ್ಕಾರಿ ಆಸ್ಪತ್ರೆಗಳು. ನಗರದಲ್ಲಿ ಆರೋಗ್ಯ ಇಲಾಖೆಗೆ ಸೇರಿದ ಒಂದು ಸಾಂಕ್ರಾಮಿಕ ರೋಗಿಗಳ ಆಸ್ಪತ್ರೆಯಿದೆ. ನಗರದದಲ್ಲಿ ಸಾಕಷ್ಟು ಅಗ್ನಿಶಾಮಕ ದಳಗಳೂ ಮತ್ತು ಶಾಂತಿ ರಕ್ಷಣೆಗಾಗಿ ಪೊಲೀಸ್ ಸ್ಟೇಷನ್ನುಗಳೂ ಇವೆ. ಈ ಬಗೆಯ ಸಾರ್ವಜನಿಕ ಸೌಕರ್ಯಗಳನ್ನು ಸರ್ಕಾರ ಒದಗಿಸುತ್ತಲೇ ಹೋಗುತ್ತಿದೆ. ಅದರೆ ಈ ನಗರದ ಬೆಳವಣಿಗೆ ತೀವ್ರವಾಗಿರುವಂತೆ ಸೌಕರ್ಯಗಳನ್ನು ಅಷ್ಟೇ ತೀವ್ರವಾಗಿ ಒದಗಿಸಲು ಆಗದೆ ಅದರಲ್ಲಿ ಕೊರತೆ ಇದ್ದೇ ಇರುತ್ತದೆ. ಇದು ಯಾವ ಹಿಡಿತವೂ ಇಲ್ಲದೆ ವಿಸ್ತಾರಗೊಳ್ಳುವ ಎಲ್ಲ ನಗರಗಳ ಪರಿಸ್ಥಿತಿ.

ಶಿಕ್ಷಣ : ಸರ್ಕಾರ, ಪುರಸಭೆ, ಕ್ರೈಸ್ತ ಮತ್ತು ರಾಮಕೃಷ್ಣ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿವೆ. ಪ್ರಾಥಮಿಕ, ಮಧ್ಯಮ ಮತ್ತು ಪ್ರೌಢಶಿಕ್ಷಣ ನೀಡುವ ಅನೇಕ ಶಾಲೆಗಳಿವೆ. ಉಚ್ಚಶಿಕ್ಷಣ ನೀಡುವ ವಿವಿಧ ಕಾಲೇಜುಗಳೂ ವೈದ್ಯಕೀಯ, ಎಂಜನಿಯರಿಂಗ್ ಮತ್ತು ತಾಂತ್ರಿಕ ಕಾಲೇಜುಗಳೂ ವಿಜ್ಞಾನ ಮತ್ತು ಕಲಾ ಕಾಲೇಜುಗಳೂ ಕರ್ನಾಟಕ ಸಂಗೀತ ಕಾಲೇಜು, ಕಲಾಕ್ಷೇತ್ರ (ನಾಟ್ಯಶಾಲೆ) ಕೈಕಸುಬುಗಳ ಕಾಲೇಜು ಮತ್ತು ಶಿಕ್ಷಕರ ತರಬೇತು ಕಾಲೇಜುಗಳೂ ಇವೆ. ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಸಸ್ಯರೋಗ ವಿಜ್ಞಾನ, ಗಣಿತ, ಭೌತವಿಜ್ಞಾನ, ಜೀವಭೌತವಿಜ್ಞಾನ ಮತ್ತು ಭಾರತೀಯ ತತ್ತ್ವಶಾಸ್ತ್ರಗಳಲ್ಲಿ ಮುಂದುವರಿದ ಸಂಶೋಧನೆಗೆ ಅವಕಾಶವಿದೆ. ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೇಂದ್ರ ಧರ್ಮ ಸಂಶೋಧನ ಸಂಸ್ಥೆ ಹಾಗೂ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಸಮಿತಿಯ ಪ್ರಾದೇಶಿಕ ಪ್ರಯೋಗಶಾಲೆಗಳೂ ಇತರ ವೈಜ್ಞಾನಿಕ ಸಂಸ್ಥೆಗಳೂ ಇಲ್ಲಿವೆ. ದಕ್ಷಿಣಭಾರತ ಹಿಂದಿ ಪ್ರಚಾರ ಸಭೆ ಅನೇಕ ಪಠ್ಯಪುಸ್ತಕಗಳನ್ನೂ ಇತರ ಕೃತಿಗಳನ್ನೂ ಪ್ರಕಟಿಸುತ್ತಿದ್ದು ಹಿಂದಿ ಭಾಷೆಯ ಪ್ರಚಾರ ನಡೆಸುತ್ತಿದೆ.

ಸಾಂಸ್ಕೃತಿಕ ಸಂಸ್ಥೆಗಳು: ಮದ್ರಾಸ್ ಸಂಗೀತ ಅಕಾಡೆಮಿಯು ಕರ್ಣಾಟಕ ಸಂಗೀತಕ್ಕೆ ಉತ್ತೇಜನ ನೀಡುತ್ತಿದೆ. ಅಂತಾರಾಷ್ಟ್ರೀಯ ಖ್ಯಾತಿ ಹೊಂದಿರುವ ಅಡ್ಯಾರಿನ ಕಲಾಕ್ಷೇತ್ರ ಅಭಿಜಾತ ನಾಟ್ಯ ಮತ್ತು ಸಂಗೀತ ಕಲೆಗಳ ಕೇಂದ್ರ. ಕೋಡಂಬಾಕಮ್‌ನಲ್ಲಿ ಅನೇಕ ಚಲನಚಿತ್ರ ಸ್ಟುಡಿಯೋಗಳಿವೆ. ಮೌಂಟ್‌ರೋಡಿನಲ್ಲಿರುವ ಜೆಮಿನಿ ಸ್ಟುಡಿಯೋ ಸುಪ್ರಸಿದ್ಧ. ತಮಿಳು, ಕನ್ನಡ, ತೆಲುಗು ಮತ್ತು ಹಿಂದಿ ಚಲನಚಿತ್ರಗಳು ಇಲ್ಲಿ ತಯಾರಾಗುತ್ತವೆ. ಕೋಡಂಬಾಕಂ ಅನ್ನು ದಕ್ಷಿಣ ಭಾರತದ ಹಾಲಿವುಡ್ ಎನ್ನುವುದುಂಟು. ಚಿಲ್ಡ್ರನ್ಸ್ ಥಿಯೇಟರ್, ಅಣ್ಣಾಮಲೈ, ಮನ್ರಮ್ ಮತ್ತು ಮೂಸಿಯಮ್ ಥಿಯೇಟರ್ ಜನಪ್ರಿಯ ನಾಟಕ ಮಂದಿರಗಳು. ಎಗ್ಮೋರಿನಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ತಮಿಳುನಾಡಿನ ಪುರಾತನವಸ್ತು, ಇತಿಹಾಸ, ಸಸ್ಯ ಮತ್ತು ಪ್ರಾಣಿಜೀವನ, ಭೂಗರ್ಭ ಹಾಗೂ ಮಾನವಕುಲಗಳನ್ನು ಚಿತ್ರಿಸುವ ಸಂಗ್ರಹಗಳಿವೆ. ಇಲ್ಲಿರುವ ಕಂಚಿನ ಮೂರ್ತಿಗಳು ಅತ್ಯಾಕರ್ಷಕವಾಗಿವೆ. ಇದರ ಸಮೀಪದಲ್ಲಿ ಚಿತ್ರಶಾಲೆಯೊಂದಿದೆ. ಇದರಲ್ಲಿ ಬೆಲೆಬಾಳುವ ಉತ್ತಮ ಚಿತ್ರಗಳ ಸಂಗ್ರಹವಿದೆ. ಕೋಟೆಯ ವಸ್ತು ಸಂಗ್ರಹಾಲಯದಲ್ಲಿ ಈಸ್ಟ್ ಇಂಡಿಯ ಕಂಪನಿ ಕಾಲದ ವಸ್ತು ವಿಶೇಷಗಳನ್ನು ನೋಡಬಹುದು. ವಿಶ್ವವಿದ್ಯಾಲಯದ ಗ್ರಂಥಾಲಯ ಕನ್ನೆಮರಾ ಸಾರ್ವಜನಿಕ ವಾಚನಾಲಯ ಮುಂತಾದವುಗಳಿವೆ. ಥಿಯೋಸಾಫಿಕಲ್ ಸೊಸೈಟಿಯ ಕೇಂದ್ರ ಕಾರ್ಯಾಲಯ ಅಡ್ಯಾರಿನಲ್ಲಿದೆ. ಅದರ ವಾಚನಾಲಯ ಮತ್ತು ಉದ್ಯಾನವನ ಪ್ರಸಿದ್ಧ. ಈ ಉದ್ಯಾನದಲ್ಲಿರುವ ಒಂದು ದೊಡ್ಡ ಆಲದಮರ ಪ್ರವಾಸಿಗಳನ್ನು ಆಕರ್ಷಿಸುತ್ತಿದ್ದು ಇದು ಭಾರತದಲ್ಲಿ ಗಾತ್ರ ದೃಷ್ಟಿಯಿಂದ ಎರಡನೆಯದೆನ್ನಲಾಗಿದೆ. ಚೆನ್ನೈ ಉಸುಕಿನ ಮರೀನಾ ಕಡಲತೀರ ಪ್ರಪಂಚದಲ್ಲಿರುವ ದೊಡ್ಡ ಸಾಗರ ತೀರಗಳಲ್ಲಿ ಒಂದು. ಅದರ ಒಂದು ತುದಿಗಿರುವ ಅಣ್ಣಾಚೌಕ ಸುಂದರ ಸ್ಮಾರಕ ಉದ್ಯಾನವನ. ಹತ್ತಿರವೇ ಒಂದು ಈಜುಕೊಳ ಮತ್ತು ಜಲಚರ ಪ್ರಾಣಿ ಸಂಗ್ರಹಾಲಯವಿದೆ. ಮರೀನಾ ತೀರ ಸಂಜೆಯ ಸಮಯಕ್ಕೆ ಜನರಿಂದ ತುಂಬಿ ಹೋಗುತ್ತದೆ. ಬೇಸಗೆಯಲ್ಲಂತೂ ಜನಸಂದಣಿ

ವಿಶೇಷವಾಗಿರುತ್ತದೆ. ನಗರ ಪೀಪಲ್ಸ್ ಪಾರ್ಕ್, ನೇಪಿಯರ್ ಪಾರ್ಕ್, ರಾಬಿನ್‌ಸನ್ ಪಾರ್ಕ್ ಮೊದಲಾದ ದೊಡ್ಡ ಉದ್ಯಾನಗಳನ್ನೂ ಹಲವಾರು ಸಣ್ಣ ಸಣ್ಣ ಉದ್ಯಾನಗಳನ್ನೂ ಒಂದು ಪ್ರಾಣಿ ಸಂಗ್ರಹಾಲಯವನ್ನೂ ಹೊಂದಿದೆ. ವಿದೇಶಿ ಕ್ರಿಕೆಟ್ ತಂಡಗಳು ಭಾರತಕ್ಕೆ ಬಂದಾಗಲೆಲ್ಲ ಇಲ್ಲಿಯ ಚೇಪಾಕ್ ಮೈದಾನದಲ್ಲಿ ಒಂದು ಟೆಸ್ಟ್ ಪಂದ್ಯ ನಡೆಯುತ್ತದೆ. ಕ್ರಿಕೆಟ್ ಮತ್ತು ಅನಂತರ ಕ್ರಮವಾಗಿ ಟೆನ್ನಿಸ್, ಫುಟ್‌ಬಾಲ್, ಬ್ಯಾಸ್ಕೆಟ್ ಬಾಲ್, ಮತ್ತು ಹಾಕಿ ಜನಪ್ರಿಯ ಕ್ರೀಡೆಗಳು ಕಾರ್ಪೊರೇಷನ್ ಸ್ಟೇಡಿಯಮ್ ಮತ್ತು ಎಗ್ಮೋರಿನಲ್ಲಿರುವ ಪೊಲೀಸ್ ಸ್ಟೇಡಿಯಮ್‌ಗಳು ಚೇಪಾಕ್ ಸ್ಟೇಡಿಯಂ ಅನಂತರ ಬರುವ ದೊಡ್ಡ ಕ್ರೀಡಾ ರಂಗಗಳು. ಗಿಂಡಿಯಲ್ಲಿ ಕುದುರೆ ಜೂಜು ನಡೆಯುತ್ತದೆ.

ರಾಷ್ಟ್ರೀಯ ದೈನಿಕ ಹಿಂದು, ಇಂಡಿಯನ್ ಎಕ್ಸ್‌ಪ್ರೆಸ್, ಸಾಯಂಕಾಲ ಹೊರಡುವ ಪತ್ರಿಕೆ ಮೇಲ್ ಇಂಗ್ಲಿಷಿನಲ್ಲಿ, ತಮಿಳಿನಲ್ಲಿ ಸ್ವದೇಶಮಿತ್ರನ್, ದಿನಮಣಿ ಮತ್ತು ದಿನತಂತಿ ಮೊದಲಾದ ದೈನಿಕಗಳು ಮತ್ತು ನಿಯತಕಾಲಿಕಗಳಾದ ಆನಂದವಿಕಟನ್, ಕಲ್ಕಿ, ಕುಮುದಮ್ ಮೊದಲಾದವು ಇಲ್ಲಿಂದ ಪ್ರಕಟವಾಗುತ್ತವೆ. (ಜಿ.ಕೆ.ಯು.)

**ಚೌರಸ ವಿಧಾನ– ಭೂಪಟದ ವಿಸ್ತರಣೆ ಹಾಗೂ ಸಂಕುಚೀಕರಣ:** ಈ ವಿಧಾನದಲ್ಲಿ ಯಾವುದಾದರೂ ಮೂಲ ಭೂಪಟವನ್ನು ವಿಸ್ತಾರ ಅಥವಾ ಸಂಕುಚೀಕರಿಸಬೇಕಾದಲ್ಲಿ ಆ ನಕ್ಷೆಯ ಮೇಲೆ ಅನುಕೂಲಕರವಾದ ಉದಾಹರಣೆಗೆ 1 ಸೆಂಮೀ 0.5 ಸೆಂಮೀ ಅಥವಾ 0.5 ಅಂಗುಲ ಅಳತೆಯುಳ್ಳ ಚಚ್ಚೌಕ ಅಥವಾ ಚೌರಸಗಳನ್ನು ಎಳೆಯಬೇಕು. ಇವುಗಳು ಆ ಭೂಪಟವನ್ನು ಸಂಪೂರ್ಣವಾಗಿ ಒಳಗೊಂಡಿರುವಂತೆ ಎಳೆದಿರಬೇಕು. ಅನಂತರ ಮತ್ತೊಂದು ಕಡೆ ಮೊದಲು ಎಳೆದ ಚೌರಸಗಳಿಗಿಂತ ದೊಡ್ಡದಾದ ಅಥವಾ ಚಿಕ್ಕದಾದ ಅಷ್ಟೇ ಸಂಖ್ಯೆಯ ಚೌರಸಗಳನ್ನೆಳೆದು ಪ್ರತಿಯೊಂದು ಮೂಲ ಭೂಪಟದ ವಸ್ತುವಿಷಯವನ್ನು ಹೊಸದಾಗಿ ನಿರ್ಮಿಸಿದ ಚೌರಸಕ್ಕೆ ವರ್ಗಾಯಿಸಿದಂತೆ ಗುರುತಿಸಿದಾಗ ನಮಗೆ ಕ್ರಮವಾಗಿ ವಿಸ್ತರಿಸಿದ ಅಥವಾ ಸಂಕುಚೀಕರಿಸಿದ ಭೂಪಟ ದೊರೆಯುವುದು.

ಸಂಕುಚೀಕರಣ ಉದಾಹರಣೆ: ಒಂದು ಭೂಪಟದ ಅಳತೆ 1 : 1,26,720 ಇದನ್ನು 1:3,80,160 ಅಳತೆಯ ಭೂಪಟವನ್ನಾಗಿ ಸಂಕುಚೀಕರಿಸಬೇಕಾದಾಗ ಕೆಳಗಿನ ವಿಧಾನವನ್ನು ಅನುಸರಿಸಲಾಗುತ್ತದೆ.

ವಿಧಾನ: ಮೂಲ ಭೂಪಟದ ಅಳತೆ 1:126720. ಚಿತ್ರದಲ್ಲಿ ತೋರಿಸಿರುವಂತೆ 1.5 ಸೆಂಮೀ ಅಳತೆಯ ಚೌರಸಗಳನ್ನು ಭೂಪಟವನ್ನು ಪೂರ್ಣವಾಗಿ ಒಳಗೊಳ್ಳುವಂತೆ ಎಳೆಯಿರಿ. ಅನಂತರ ಸಂಕುಚೀಕರಿಸಲು ಬೇಕಾದ ಚೌರಸಗಳ ಅಳತೆಯನ್ನು ಕಂಡು ಹಿಡಿಯಲು ಈ ಕೆಳಗಿನ ಕ್ರಮವನ್ನು ಅನುಸರಿಸಿ.

$$\frac{\text{ರಚಿಸಬೇಕಾದ ನ್ಯೂನೀಕರಣ}}{\text{ಭೂಪಟದ ಚೌರಸಗಳ ಅಳತೆ}} = \frac{\text{ಹೊಸ ಅಳತೆ}}{\text{ಮೂಲ ಅಳತೆ}}$$

$$= \frac{\frac{1}{3,80,160}}{\frac{1}{1,26,720}} = \frac{1}{3,80,160} \div \frac{1}{1,26,720}$$

$$= \frac{1}{3,80,160} \times \frac{1,26,720}{1} = \frac{1}{3} \text{ ಅಂದರೆ}$$

ಮೂಲ ಭೂಪಟದ ಮೇಲೆ ಎಳೆದಿರುವ ಚೌರಸಗಳ ಅಳತೆಯ $1/_3$ ಅಳತೆಯ ಚೌರಸಗಳನ್ನು ಎಳೆಯಬೇಕು. ಮೂಲ ಭೂಪಟದ ಮೇಲಿನ ಚೌರಸಗಳ ಅಳತೆ 1.5 ಸೆಂಮೀ. ಎಳೆಯಬೇಕಾಗಿರುವ ಚೌರಸಗಳ ಅಳತೆ 1.5 = 0.5 ಸೆಂಮೀ.

ಇದರಂತೆ 0.5 ಸೆಂಮೀ ಅಳತೆಯ ಮೂಲಭೂಪಟದ ಮೇಲೆ ಎಳೆಯದಿರುವಷ್ಟೇ ಸಂಖ್ಯೆಯ ಚೌರಸಗಳನ್ನು ಹಾಳೆಯ ಮತ್ತೊಂದು ಭಾಗದಲ್ಲಿ ಎಳೆಯಿರಿ. ಅನಂತರ ಮೂಲ ಚೌರಸಗಳಲ್ಲಿರುವ ವಿವರಗಳನ್ನು ಹೊಸದಾಗಿ ರಚಿಸಿದ ಚೌರಸಗಳಿಗೆ ಕ್ರಮವಾಗಿ ಒಂದೊಂದಾಗಿ ವರ್ಗಾಯಿಸಿ ಇದರಿಂದ ಮೂಲ ಭೂಪಟವನ್ನು $1/_2$ ಭಾಗ ಸಂಕೋಚಿಕರಿಸಿದ ಅಥವಾ ನ್ಯೂನೀಕರಿಸಿದ 1:3,80,160 ಅಳತೆಯ ಭೂಪಟ ನಮಗೆ ದೊರೆಯುವುದು. (ಆರ್.ಎನ್.)

ಮೂಲ ನಕ್ಷೆ 1 : 42,000,00



ನಕ್ಷೆ : ಶ್ರೀಲಂಕ

ಮೂಲ ನಕ್ಷೆ 1 : 42,000,00



ಸಂಕುಚಿಸಿದ ನಕ್ಷೆ

# ಛ

**ಛತ್ತೀಸ್ ಘರ್:** 2000ದ ನವೆಂಬರ್ 1 ರಂದು ಮಧ್ಯಪ್ರದೇಶದಿಂದ ಪ್ರತ್ಯೇಕಗೊಂಡು ರಚನೆಯಾದ ಭಾರತದ 26ನೆಯ ರಾಜ್ಯ. ಇದು $17^0 46'$ ಉ. ಅ. ದಿಂದ $24^0 5'$ ಉ. ಅ. ದವರೆಗೂ $80^0 15'$ ಪೂ. ರೇ. ದಿಂದ $84^0 20'$ ಪೂ. ರೇ. ದವರೆಗೂ ವಿಸ್ತರಿಸಿದೆ. ಇದರ ಪೂರ್ವದಲ್ಲಿ ಒರಿಸ್ಸ, ಪಶ್ಚಿಮ ಮತ್ತು ವಾಯವ್ಯದಲ್ಲಿ ಮಧ್ಯಪ್ರದೇಶ, ಉತ್ತರದಲ್ಲಿ ಉತ್ತರ ಪ್ರದೇಶ, ದಕ್ಷಿಣ ಮತ್ತು ಆಗ್ನೇಯದಲ್ಲಿ ಆಂಧ್ರಪ್ರದೇಶ, ನೈಋತ್ಯದಲ್ಲಿ ಮಹಾರಾಷ್ಟ್ರ ಹಾಗೂ ಈಶಾನ್ಯದಲ್ಲಿ ಜಾರ್ಖಂಡ್ ರಾಜ್ಯಗಳನ್ನೂ ತನ್ನ ನೆರೆಯ ಗಡಿ ರಾಜ್ಯಗಳನ್ನಾಗಿ ಹೊಂದಿದೆ. ಭೌಗೋಳಿಕ ವಿಸ್ತೀರ್ಣ 1,35,191 ಚ.ಕಿಮೀ. ಇದು ರಾಷ್ಟ್ರದ 9ನೆಯ ಅತಿ ದೊಡ್ಡ ರಾಜ್ಯ, ಜನಸಂಖ್ಯೆಯಲ್ಲಿ 17ನೆಯ ಸ್ಥಾನದಲ್ಲಿದೆ. ಈ ರಾಜ್ಯ ದ್ವಿಸದನ ಶಾಸಕಾಂಗವನ್ನು ಹೊಂದಿದೆ. ಒಟ್ಟು 16 ಜಿಲ್ಲೆಗಳನ್ನು ಒಳಗೊಂಡಿದೆ. ಬಸ್ತಾರ್, ಬಿಲಾಸ್‌ಪುರ, ದುರ್ಗ್, ರಾಯ್‌ಘರ್, ರಾಯ್ಪುರ, ರಾಜ್‌ನಂದ್‌ಗಾವ್, ಸರ್ಗುಜ, ಕೊರಿಯ, ಜೋಶ್‌ಪುರ, ಜೂಜ್‌ಗಿರ್, ಚಂಪಾ ಕೊರ್ಬಾ, ಕಂಕೇರ್, ದಾಂಟಿವಾರ, ಮಹಾಸಮುಂಡ್, ಧಾಮ್‌ತರಿ ಕಬೀರ್‌ಧಾಮ್. ಈ ರಾಜ್ಯದ ರಾಜಧಾನಿ ರಾಯ್ಪುರ.

ಮೇಲ್ಮೈ ಲಕ್ಷಣಗಳು: ಈ ರಾಜ್ಯ ಬೆಟ್ಟಗಳು ಮತ್ತು ಮೈದಾನಗಳಿಂದ ಕೂಡಿದೆ. ವಿಂಧ್ಯಾ, ಸಾತ್ಪುರ, ಮೈಕಲ್ ಮತ್ತು ಮಹದೇವ್ತೋಗಳಂತಹ ಎತ್ತರವಾದ ಬೆಟ್ಟ ಸರಣಿಗಳು, ನದಿಗಳ ಅನುಕಂಟಕ ಪ್ರಸ್ಥಭೂಮಿ ಇದೆ. ಸೀಳು ಕಣಿವೆಗಳು ಭಾಗಶಃ ಅಮರ್ ಕಂಟಕ್ ಬುಂದೇಲಖಂಡ, ಬಾಗೇಲಖಂಡ ಹಾಗೂ ಛತ್ತೀಸ್‌ಘರ್ ಪ್ರಸ್ಥಭೂಮಿಗಳು ಇಲ್ಲಿವೆ. ಅಪಾರ ಖನಿಜ ಸಂಪನ್ಮೂಲಗಳನ್ನು ಹೊಂದಿರುವ ಶ್ರೀಮಂತ ರಾಜ್ಯವಾಗಿದೆ.




ಜಲವ್ಯವಸ್ಥೆ: ಮಹಾನದಿ ಈ ರಾಜ್ಯದ ಪ್ರಧಾನ ನದಿ. ಇತರೆ ನದಿಗಳೆಂದರೆ, ಶಿಯೋನಾಥ್, ಹಸ್ದಿಯೋ, ಮಾಂಡ್, ಎಬ್, ಪೈರಿ, ಜೋಂಕ್, ಕೆಲೋ, ಉದಾಂಕಿ, ಇಂದ್ರಾವತಿ ಅರ್ಪ ಮತ್ತು ಮನಿಯಾರಿ ನದಿಗಳು ಪ್ರಮುಖವಾದವು. ಈ ರಾಜ್ಯದಲ್ಲಿ ವ್ಯವಸ್ಥಿತ ಹಾಗೂ ಸಮರ್ಪಕವಾದ ನೀರಾವರಿ ವ್ಯವಸ್ಥೆಯಿಲ್ಲದ ಕಾರಣ ಇಲ್ಲಿನ ರೈತರು ಏಕಬೆಳೆ ಕೃಷಿ ವಿಧಾನವನ್ನು ಅನುಸರಿಸುತ್ತಿದ್ದಾರೆ. ನೀರಾವರಿ ಯೋಜನೆಗಳನ್ನು ವಿಸ್ತರಿಸಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಆ ರಾಜ್ಯ ಸರ್ಕಾರದ ಮೇಲಿದೆ.

ಮಣ್ಣಿನ ಪ್ರಕಾರಗಳು: ರಾಜ್ಯವು ಹಲವು ಬಗೆಯ ಮಣ್ಣುಗಳನ್ನು ಒಳಗೊಂಡಿದೆ. ಇಲ್ಲಿ ಕಂಡು ಬರುವ ಪ್ರಮುಖ ಮಣ್ಣಿನ ವಿಧಗಳೆಂದರೆ, ಕೆಂಪು ಮಣ್ಣು, ಕಪ್ಪು ಮಣ್ಣು, ಜಂಬಿಟ್ಟಿಗೆ ಮಣ್ಣು, ಪರ್ವತಮಣ್ಣು.

ಕೆಂಪು ಮಣ್ಣು: ಈ ಮಣ್ಣು ರೂಪಾಂತರ ಶಿಲೆಗಳ ಶಿಥಿಲೀಕರಣದಿಂದ ನಿರ್ಮಾಣಗೊಂಡು ಹರಳು ಜೇಡಿ ಮತ್ತು ಮರಳು ಮಿಶ್ರ ಲಕ್ಷಣ ಇದರಲ್ಲಿದೆ.

ಕಪ್ಪು ಮಣ್ಣು: ಇದು ಬೆಸಾಲ್ಟ್ ಅಥವಾ ಕಪ್ಪು ಶಿಲೆಯ ಶಿಥಿಲೀಕರಣದಿಂದ ನಿರ್ಮಾಣಗೊಂಡಿದ್ದು, ಈ ರಾಜ್ಯದ ಕೆಲವೇ ಭಾಗದಲ್ಲಿ ಮಾತ್ರ ಕಂಡುಬರುತ್ತದೆ.

ಜಂಬಿಟ್ಟಿಗೆ ಮಣ್ಣು: ಇದು ಜೇಡಿ ಲಕ್ಷಣವುಳ್ಳ ಶಿಲೆಗಳು, ಶುಷ್ಕ ಮತ್ತು ಆರ್ದ್ರ ಎತ್ತರವಾದ ಇಳಿಜಾರು, ಅಧಿಕ ಮಳೆಯ ಪರಿಣಾಮವಾಗಿ ಶಿಲೆಗಳು ಸವಕಳಿ ಹೊಂದಿ ಈ ಮಣ್ಣು ಉಂಟಾಗುತ್ತದೆ.

ಪರ್ವತ ಮಣ್ಣು: ಈ ರಾಜ್ಯದ ವಿಂಧ್ಯಾ ಮತ್ತು ಸಾತ್ಪುರ ಪರ್ವತ, ಮಹದೇವ್ತೋ ಮತ್ತು ಮೈಕಲ್ ಬೆಟ್ಟ ಪ್ರದೇಶಗಳು ಹಾಗೂ ಎತ್ತರವುಳ್ಳ ಅರಣ್ಯಗಳು ಪರ್ವತ ಮಣ್ಣನ್ನು ಹೊಂದಿವೆ.

ವಾಯುಗುಣ: ರಾಜ್ಯದ ವಾಯುಗುಣವು ಉಷ್ಣವಲಯ, ಆರ್ದ್ರ ಮತ್ತು ಉಪ ಆರ್ದ್ರ ವಾಯುಗುಣವನ್ನು ಹೊಂದಿದೆ. ಅಧಿಕ ಉಷ್ಣತೆಯಿಂದ ಕೂಡಿರುತ್ತದೆ. ಕರ್ಕಾಟಕ ಸಂಕ್ರಾಂತಿ ವೃತ್ತದ ಪ್ರಭಾವಕ್ಕೆ ಒಳಪಟ್ಟಿದೆ. ಮೇ ತಿಂಗಳು ಅತಿ ಉಷ್ಣತೆಯುಳ್ಳ ತಿಂಗಳಾದರೆ, ಡಿಸೆಂಬರ್ – ಜನವರಿ ತಿಂಗಳುಗಳು ಅತಿ ಶೀತದಿಂದ ಕೂಡಿರುತ್ತವೆ. ವಾರ್ಷಿಕ ಮಳೆಯು ಸರಾಸರಿ 129 ಸೆಂಮೀ. ಗಳಷ್ಟು ವರ್ಷದಲ್ಲಿ 61 ದಿನಗಳ ಕಾಲ ಮಳೆ ಬೀಳುತ್ತದೆ.

ಸಸ್ಯಸಂಪತ್ತು: ರಾಜ್ಯದ ಒಟ್ಟು ಭೂ ಪ್ರದೇಶದ ಶೇ. 44 ರಷ್ಟು ಭಾಗವು ಅರಣ್ಯಗಳಿಂದ ಕೂಡಿದೆ. 2001ರ ಅಂಕಿ ಅಂಶಗಳ ಪ್ರಕಾರ 59,772 ಚ.ಕಿಮೀ ಪ್ರದೇಶ ಅರಣ್ಯಗಳಿಂದ ಕೂಡಿದೆ. ಅದರಲ್ಲಿ ಮೀಸಲಿಟ್ಟ ಅರಣ್ಯ 25,782 ಚ.ಕಿಮೀ. ಸಂರಕ್ಷಿಸಲ್ಪಟ್ಟ ಅರಣ್ಯವು 24,036 ಚ.ಕಿಮೀ ಹಾಗೂ ವರ್ಗೀಕರಿಸಿದ ಅರಣ್ಯ ಪ್ರಮಾಣ 9,954 ಚ.ಕಿಮೀ. ಇಲ್ಲಿನ ಅರಣ್ಯಗಳು ಹೊನ್ನೆ ಮರಗಳಿಗೆ ಖ್ಯಾತಿ ಪಡೆದಿವೆ. ತೇಗ, ಬಿದಿರು, ಸಾಜ, ಸರಾಯ್, ಹಾಲ್ಡಿ ಇತ್ಯಾದಿಗಳು ಅಪಾರ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಬೀಡಿ ಸುತ್ತಲು ಬಳಸುವ ತೆಂಡು ಎಲೆಗಳ ಉತ್ಪಾದನೆಗೆ ದೇಶದಲ್ಲೇ ಪ್ರಖ್ಯಾತಿ ಪಡೆದಿರುವ ರಾಜ್ಯ ಇದಾಗಿದೆ. ಈ ರಾಜ್ಯ ಅಪಾರವಾದ ಆಹಾರ ಪದಾರ್ಥಗಳು ಹಾಗೂ ಉಪ ಉತ್ಪನ್ನಗಳನ್ನು ಉತ್ಪಾದಿಸುತ್ತಿದೆ. (ಚಿರಂಜಿ, ಹಾರರ್, ಬಹೇಡ, ಮಾವುಲಿ ಹೂವು) ಇಲ್ಲಿನ ಅರಣ್ಯಗಳು ವಾರ್ಷಿಕವಾಗಿ 215.67 ಕೋಟಿ ರೂ. ಗಳಷ್ಟು ಆದಾಯವನ್ನು ಗಳಿಸಿಕೊಡುತ್ತಿವೆ. ಆದರೆ ಇಲ್ಲಿನ ಅರಣ್ಯಗಳು ಪ್ರಸ್ತುತ ನಾಶವಾಗುತ್ತಿರುವುದರಿಂದ ಅಂತಹ ಪ್ರಮಾಣವು ಸಹ ಗಮನಾರ್ಹ ರೀತಿಯಲ್ಲಿ ಆಳಕ್ಕೆ ಸರಿದಿರುವುದು ಅಲ್ಲಿನ ಜನರಿಗೆ ಎಚ್ಚರಿಕೆಯ ಗಂಟೆಯಾಗಿದೆ. ಇಲ್ಲಿ ಎಲೆಯುದುರುವ ಅರಣ್ಯಗಳು, ಕುರುಚಲು ಸಸ್ಯವರ್ಗ ಮತ್ತು ಹುಲ್ಲುಗಾವಲು ಜಾತಿಯ ಸಸ್ಯಗಳು ಕಂಡುಬರುತ್ತವೆ.

ಕೃಷಿ: ಈ ರಾಜ್ಯ ಕೃಷಿ ಮತ್ತು ಗಣಿಗಾರಿಕೆಯನ್ನು ಹೆಚ್ಚಾಗಿ ಅವಲಂಬಿಸಿದೆ. 2001 ರ ದಾಖಲೆಗಳ ಪ್ರಕಾರ ರಾಜ್ಯದ ಒಟ್ಟು ಭೌಗೋಳಿಕ ಭೂ ಬಳಕೆ 1,37,87,000 ಹೆ. ಇತ್ತೀಚೆಗೆ ನೀರಾವರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ವಿಸ್ತರಿಸಲಾಗುತ್ತಿದೆ. ಪರಿಣಾಮವಾಗಿ ನೀರಾವರಿ ಆಧಾರಿತ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ನೀರಾವರಿ, ಉಷ್ಣಾಂಶ, ಮಣ್ಣಿನ ವಿಧ ಹಾಗೂ ಮಳೆಯ ಹಂಚಿಕೆಯನ್ನು ಆಧರಿಸಿದಂತೆ ಬೆಳೆಗಳನ್ನು ಇಲ್ಲಿ ಕಾಣಬಹುದು. ಈ ರಾಜ್ಯದ 37,70,000 ಹೆ. ಪ್ರದೇಶದಲ್ಲಿ ಬತ್ತ, 78,000 ಹೆ. ನಲ್ಲಿ ಗೋದಿ, 4,000 ಹೆ. ನಲ್ಲಿ ಬಾರ್ಲಿ, 93,000 ಹೆ. ನಲ್ಲಿ ಮೆಕ್ಕೆ ಜೋಳ, 10,000 ಹೆ. ನಲ್ಲಿ ಜೋಳವನ್ನು ಬೆಳೆಯಲಾಗುತ್ತಿದೆ. ಹತ್ತಿ ಮತ್ತಿತರ ವಾಣಿಜ್ಯ ಬೆಳೆಗಳಲ್ಲದೇ 64,000 ಹೆ. ಪ್ರದೇಶದಲ್ಲಿ ತೃಣ ಧಾನ್ಯಗಳನ್ನು ಉತ್ಪಾದಿಸಲಾಗುತ್ತಿದೆ. ನೆಲಗಡಲೆ, ಎಣ್ಣೆ ಬೀಜಗಳು ಇಲ್ಲಿನ ಇತರೆ ಕೃಷಿ ಬೆಳೆಗಳಾಗಿವೆ.

ನೈಸರ್ಗಿಕ ಸಂಪನ್ಮೂಲಗಳು: ಈ ರಾಜ್ಯ ರಾಷ್ಟ್ರದಲ್ಲೇ ವೈವಿಧ್ಯಮಯ ಖನಿಜ ಸಂಪನ್ಮೂಲಗಳುಳ್ಳ ಶ್ರೀಮಂತ ರಾಜ್ಯವಾಗಿದೆ. ಇಲ್ಲಿ ಬಹುತೇಕ ಜಿಲ್ಲೆಗಳು ಖನಿಜ ಸಂಪನ್ಮೂಲಗಳ ನಿಕ್ಷೇಪವನ್ನು ಹೊಂದಿವೆ. ರಾಯ್ಪುರ ಜಿಲ್ಲೆಯಲ್ಲಿ ಸುಣ್ಣದಕಲ್ಲು, ವಜ್ರ, ಅಲೆಕ್ಸಾಂಡ್ರೈಟ್, ಗಾರ್ನೆಟ್, ಡಾಲೋಮೈಟ್, ಗ್ರಾನೈಟ್ ಮತ್ತು ಕಬ್ಬಿಣದ ಅದಿರು ನಿಕ್ಷೇಪಗಳೂ ಮಹಾ ಸಮುಂಡ್ ಜಿಲ್ಲೆಯಲ್ಲಿ ಚಿನ್ನ ಮತ್ತು ಫ್ಲೋರೈಡ್, ದುರ್ಗ್ ಜಿಲ್ಲೆಯಲ್ಲಿ ಕಬ್ಬಿಣದ ಅದಿರು, ಸುಣ್ಣದಕಲ್ಲು, ಜಂಜ್‌ಗಿರ್ ಜಿಲ್ಲೆಯಲ್ಲಿ ಸುಣ್ಣದಕಲ್ಲು ಮತ್ತು ಡಾಲೋಮೈಟ್‌ಗಳು, ಕೊರ್ಬಾ ಜಿಲ್ಲೆಯಲ್ಲಿ ಬಾಕ್ಸೈಟ್, ಕಲ್ಲಿದ್ದಲು, ರಾಯ್‌ಘರ್ ಜಿಲ್ಲೆಯಲ್ಲಿ ಸುಣ್ಣದಕಲ್ಲು, ಕಲ್ಲಿದ್ದಲು ಮತ್ತು ಬೆಣಚು ಶಿಲೆಗಳು ಕೊರಿಯ ಜಿಲ್ಲೆಯಲ್ಲಿ ಕಲ್ಲಿದ್ದಲು ಮತ್ತು ಫೈರ್‌ಕ್ಲೇಗಳು, ಬಸ್ತಾರ್ ಜಿಲ್ಲೆಯಲ್ಲಿ ಸುಣ್ಣಕಲ್ಲು, ಡಾಲೋಮೈಟ್, ತವರದ ಅದಿರು ಮತ್ತು ವಜ್ರ, ಡಾಂಟವಾಡ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಮತ್ತು ಕೋರಂಡರಗಳು, ಕಂಕೇರ್ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಮತ್ತು ಬಾಕ್ಸೈಟ್‌ಗಳಂತಹ ಅದಿರುಗಳನ್ನು ಹೊಂದಿದೆ. ಇಲ್ಲಿನ ಖನಿಜ ಸಂಪನ್ಮೂಲಗಳಿಂದ ವಾರ್ಷಿಕವಾಗಿ 414 ಕೋಟಿ ರೂ. ಆದಾಯವನ್ನು ರಾಜ್ಯಗಳಿಸುತ್ತಿದೆ. ಇಲ್ಲಿನ ದೀಬೋಗ್ ವಜ್ರ ಗಣಿಯೊಂದೇ ವಾರ್ಷಿಕವಾಗಿ 2000 ಕೋಟಿ ರೂ. ಆದಾಯ ತರುವ ಸಾಮರ್ಥ್ಯವನ್ನು ಹೊಂದಿದೆ.

2001ರಲ್ಲಿ ಈ ರಾಜ್ಯ 5,02,26,000 ಟನ್ ಕಲ್ಲಿದ್ದಲು, 2,02,77,000 ಟನ್ ಕಬ್ಬಿಣದ ಅದಿರು 1,38,25,000 ಟನ್ ಸುಣ್ಣಕಲ್ಲು, 6,09,000 ಟನ್ ಬಾಕ್ಸೈಟ್, 6,00,000 ಟನ್ ಡಾಲೋಮೈಟ್, 12,979 ಕಿಗ್ರಾಂ ತವರನ್ನು ಉತ್ಪಾದಿಸಿದೆ.

ಇಲ್ಲಿ ಹಲವಾರು ನದಿಗಳು ಹುಟ್ಟಿ ಹರಿದರೂ ಸಹ ಜಲವಿದ್ಯುತ್ ಉತ್ಪಾದನೆಯ ಪ್ರಮಾಣ ಗಮನಾರ್ಹ ರೀತಿಯಲ್ಲಿ ಇಲ್ಲ ಆದುದರಿಂದ, ಇಲ್ಲಿ ಕಲ್ಲಿದ್ದಲು ಅಧಿಕವಾಗಿರುವುದರಿಂದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಸ್ಥಾವರಗಳ ಪ್ರಮಾಣವೇ ಹೆಚ್ಚು.

ಕೈಗಾರಿಕೆಗಳು: ಈ ರಾಜ್ಯದಲ್ಲಿನ ಅಪಾರ ಪ್ರಮಾಣದ ಬತ್ತ ಸುಣ್ಣಕಲ್ಲು ಮತ್ತು ಡಾಲೋಮೈಟ್ ಉತ್ಪಾದನೆ, ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲು ಅಪಾರವಾಗಿರುವುದರಿಂದ ಅಕ್ಕಿ ಗಿರಣಿಗಳು, ಸಿಮೆಂಟ್ ಮತ್ತು ಉಕ್ಕು ಸ್ಥಾವರಗಳು ಸ್ಥಾಪನೆಗೊಂಡಿವೆ. ದುರ್ಗ್, ರಾಯ್ಪುರ, ಕೊರ್ಬಾ, ಮತ್ತು ಬಿಲಾಸ್‌ಪುರಗಳು ಕೈಗಾರಿಕಾಭಿವೃದ್ಧಿಗೆ ಹೆಚ್ಚು ಪೂರಕವಾದ ಜಿಲ್ಲೆಗಳಾಗಿವೆ. ಭಿಲಾಯ್ ಉಕ್ಕು ಸ್ಥಾವರ (ಬಿಎಸ್‌ಪಿ) ದುರ್ಗ್ ಜಿಲ್ಲೆಯಲ್ಲಿದ್ದು, ದೇಶದ ಸಮಗ್ರ ಉಕ್ಕು ಸ್ಥಾವರವನ್ನು ಹೊಂದಿದೆ. 1950 ರಲ್ಲಿ ಭಿಲಾಯ್ ಉಕ್ಕು ಸ್ಥಾವರ ಸ್ಥಾಪನೆಯಾದ ಅನಂತರ ರಾಯ್ಪುರ ಮತ್ತು ಭಿಲಾಯ್ ಪ್ರದೇಶದಲ್ಲಿ ಅಪಾರ ಪ್ರಮಾಣದ ಕೈಗಾರಿಕೆಗಳು ಅಭಿವೃದ್ಧಿಯಾದವು. ರಾಯ್ಪುರ ಜಿಲ್ಲೆ ಅಧಿಕ ಸಂಖ್ಯೆಯ ದೊಡ್ಡ ಮತ್ತು ಸಣ್ಣ ಪ್ರಮಾಣದ ಸಿಮೆಂಟ್ ಕೈಗಾರಿಕೆಗಳನ್ನು ಹೊಂದಿದೆ. ಬಿಲಾಸ್‌ಪುರ ಮತ್ತು ದುರ್ಗ್ ಜಿಲ್ಲೆಗಳು ಬೃಹತ್ ಪ್ರಮಾಣದ ಸಿಮೆಂಟ್ ಕೈಗಾರಿಕೆಗಳನ್ನು ಹೊಂದಿದ್ದರೆ, ಅಲ್ಯೂಮಿನಿಯಂ ಮತ್ತು ಸ್ಫೋಟಕ ಉತ್ಪಾದನಾ ಸ್ಥಾವರಗಳು ಕೊರ್ಬಾ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿವೆ. ಹೆಚ್ಚು ಅಭಿವೃದ್ಧಿ ಹೊಂದಿದ ಕೇಂದ್ರಗಳೆಂದರೆ, ಉರ್ಲಾ ಮತ್ತು ಸಿಲ್ತಾರ (ರಾಯ್ಪುರ ಜಿಲ್ಲೆ) ದುರ್ಗ್ ಜಿಲ್ಲೆಯ ಬೊರಾಯ್ ಮತ್ತು ಬಿಲಾಸ್‌ಪುರ ಜಿಲ್ಲೆಯ ಸಿರ್ಗಿಟ್ಟಿಗಳಾಗಿವೆ.

2001ರಲ್ಲಿ 10.5 ದಶಲಕ್ಷ ಟನ್ ಸಿಮೆಂಟ್, 5 ದಶಲಕ್ಷ ಟನ್ ಕರಗಿಸಿದ ಕಬ್ಬಿಣ 4.4 ದಶಲಕ್ಷ ಟನ್‌ಗಳಷ್ಟು ಉಕ್ಕು ಹಾಗೂ 1.0 ಲಕ್ಷ ಟನ್‌ಗಳಷ್ಟು ಅಲ್ಯೂಮಿನಿಯಂ ಉತ್ಪಾದಿಸಿತ್ತು. ರಾಷ್ಟ್ರದ ಒಟ್ಟು ಉಕ್ಕು ಮತ್ತು ಸಿಮೆಂಟ್ ಉತ್ಪಾದನೆಯ ಶೇ. 21 ರಷ್ಟನ್ನು ಈ ರಾಜ್ಯವು ಉತ್ಪಾದಿಸುತ್ತಿದೆ.

ಸಾರಿಗೆ ಸಂಪರ್ಕ: ಈ ರಾಜ್ಯವು ಹೊಸದಾಗಿ ಉದಯಿಸಿದ್ದರಿಂದ ಸಾರಿಗೆ ಸಂಪರ್ಕ ವ್ಯವಸ್ಥೆಗಳು ಅಭಿವೃದ್ಧಿಯಾಗುತ್ತಿವೆ. ಒಟ್ಟು 35,388 ಕಿಮೀ ಉದ್ದದ ರಸ್ತೆ ಸಂಪರ್ಕವನ್ನು ಹೊಂದಿದೆ. ಅದರಲ್ಲಿ 24,005 ಕಿಮೀ ಉದ್ದದ ಉತ್ತಮ ರಸ್ತೆಗಳು 11,382 ಕಿಮೀ ಉದ್ದದ ಜಲ್ಲಿ ರಸ್ತೆಗಳನ್ನು ಹೊಂದಿದೆ.

ಒಟ್ಟು ರಸ್ತೆಯ 1,827 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು, 2,073 ಕಿಮೀ ಉದ್ದದ ರಾಜ್ಯ ಹೆದ್ದಾರಿಯನ್ನು ಹಾಗೂ 3094 ಕಿಮೀ ಉದ್ದದ ಮುಖ್ಯ ಜಿಲ್ಲಾ ರಸ್ತೆಗಳನ್ನು ಹಾಗೂ 28,392 ಕಿಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಹೊಂದಿದೆ. ಈ ರಾಜ್ಯದಲ್ಲಿ 1000 ಕಿಮೀ ಉದ್ದದ ರೈಲುಮಾರ್ಗವಿದೆ.

ವಾಯು ಸಾರಿಗೆಯು ಅಭಿವೃದ್ಧಿ ಹೊಂದುತ್ತಿದ್ದು ಹಲವಾರು ವಿಮಾನ ನಿಲ್ದಾಣಗಳು ಸ್ಥಾಪನೆಗೊಂಡಿವೆ. ರಾಯ್ಪುರ, ಬಿಲಾಸ್‌ಪುರ, ಭಿಲಾಯ್, ರಾಯ್‌ಘರ್, ಜಗದಾಲ್‌ಪುರ, ಅಂಬಿಕಾಪುರ, ಕೊರ್ಬಾ, ಜೋಶ್‌ಪುರ್‌ನಗರ ಮತ್ತು ರಾಜ್‌ನಂದ್‌ಗಾಂವ್‌ಗಳಲ್ಲಿ ತಾತ್ಕಾಲಿಕ ಹೆಲಿಪ್ಯಾಡ್ ಮತ್ತು ವಿಮಾನ ನಿಲ್ದಾಣಗಳಿವೆ.

ವಾಣಿಜ್ಯ: ರಾಜ್ಯದಲ್ಲಿ ಹಣ ವಿನಿಯೋಗಿಸಲು ಸಾಕಷ್ಟು ಅವಕಾಶಗಳಿವೆ. ಮುಖ್ಯವಾಗಿ ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ತೋಟಗಾರಿಕೆ, ಪುಷ್ಪಕೃಷಿ, ರೇಷ್ಮೆ ಕೃಷಿ, ಮೀನುಗಾರಿಕೆ ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳು, ಬೃಹತ್ ಯೋಜನೆಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳು, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೆಚ್ಚು ಹಣ ವಿನಿಯೋಗಿಸಲು ವಿಪುಲ ಅವಕಾಶಗಳಿವೆ. ಇಲ್ಲಿನ ಪ್ರವಾಸಿ ತಾಣಗಳು, ರಾಷ್ಟ್ರೀಯ ಉದ್ಯಾನವನಗಳು ಹಾಗೂ ಪಟ್ಟಣ ಕೇಂದ್ರಗಳು ವಾಣಿಜ್ಯದ ಅಭಿವೃದ್ಧಿಗೆ ಹೆಚ್ಚು ಪೂರಕವಾಗಿವೆ.

ಜನಸಂಖ್ಯೆ: ರಾಜ್ಯ 2001ರ ಜನಗಣತಿ ಪ್ರಕಾರ 2.79 ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿ 1.45 ಕೋಟಿ ಪುರುಷರು 1.34 ಕೋಟಿ ಮಹಿಳೆಯರಿದ್ದಾರೆ. ಇಲ್ಲಿನ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ 990 ಮಹಿಳೆಯರ ಪ್ರಮಾಣವಿದೆ. 1991–2001 ರ ಜನಸಂಖ್ಯಾ ಹೆಚ್ಚಳದ ದರ ಶೇ. 18.06. ಈ ರಾಜ್ಯದ ಜನಸಂಖ್ಯೆಯಲ್ಲಿ ಶೇ.79.9 ಗ್ರಾಮೀಣ ಜನಸಂಖ್ಯೆ ಹಾಗೂ ಶೇ. 20.1 ನಗರ ಜನಸಂಖ್ಯೆಯಿದೆ. ಒಟ್ಟು ಜನಸಂಖ್ಯೆಯ ಶೇ. 11.6 ರಷ್ಟು ಜನರು ಪರಿಶಿಷ್ಟ ಜಾತಿ. ಈ ರಾಜ್ಯದ ಜನಸಾಂದ್ರತೆ ಪ್ರತಿ ಚ.ಕಿಮೀ 154 ಜನ. ಜನನ ಪ್ರಮಾಣ ಪ್ರತಿ ಸಾವಿರಕ್ಕೆ 26.9 ರಷ್ಟಿದ್ದರೆ, ಮರಣ ಪ್ರಮಾಣವು ಪ್ರತಿ ಸಾವಿರಕ್ಕೆ 9.6 ರಷ್ಟಿದೆ.

ಬುಡಕಟ್ಟು ಜನಾಂಗ: ಛತ್ತೀಸ್‌ಘರ್ ರಾಜ್ಯದಲ್ಲಿ ಒಟ್ಟು 42 ಬುಡಕಟ್ಟು ಜನಾಂಗದವರನ್ನು ಕಾಣಬಹುದು. ಅವರಲ್ಲಿ ಅತಿ ಪ್ರಮುಖರಾದವರೆಂದರೆ, ಗೋಂಡರು ಇವರನ್ನು ಅನುಸರಿಸಿದಂತೆ ಕಾನ್ವಾರ್, ಬ್ರಿಂಜ್ವಾರ್, ಭಾಯ್ನಿ, ಭಾತ್ರ, ಯೂರಾನ್, ಮುಂಡಾ, ಕಮಾರ್, ಹಾಲ್ಬಾ, ಬೈಗಾ, ಸಾನ್ರಾ, ಕೊರ್ವಾ, ಭರಿಯಾ, ನಾಗೇಶಿಯ, ವಂಗ್ವಾರ್, ಖಾರಿಯಾ ಮತ್ತು ಧನ್ವಾರ್ ಜನಾಂಗದವರನ್ನು ಕಾಣಬಹುದು.

ಸಾಕ್ಷರತೆ: ಈ ರಾಜ್ಯದ ಸಾಕ್ಷರತೆಯ ಪ್ರಮಾಣ ಶೇ. 65.12. ಅದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ. 77.86 ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. 52.28.

ಪ್ರಮುಖ ಪಟ್ಟಣ ಮತ್ತು ನಗರಗಳು: ಹಲವಾರು ಕೈಗಾರಿಕಾ, ವಾಣಿಜ್ಯ, ಸಂಪರ್ಕ, ಸಾಂಸ್ಕೃತಿಕ ಪ್ರವಾಸಿ ತಾಣಗಳು ಮತ್ತು ಪ್ರಮುಖ ಕೇಂದ್ರಗಳು ಈ ರಾಜ್ಯದಲ್ಲಿ ಕಂಡು ಬರುತ್ತವೆ. ಇಲ್ಲಿ ಒಟ್ಟು 97 ಪಟ್ಟಣ ಮತ್ತು ನಗರಗಳಿವೆ. ಪ್ರಮುಖ ಪ್ರವಾಸಿ ತಾಣಗಳು ಮತ್ತು ಪಟ್ಟಣಗಳಿವು. ರಾಜಿಂ, ಚಂಪಾರಣ್ಯ, ಸಿರ್ಪುರ, ರತನ್‌ಪುರ, ಭಿಲಾಯ್, ಧೂನ್‌ಗರ್‌ಘರ್, ಆರಾಂಗ್, ಮಾನಿಫತ್, ಶಿಯೋರಿನ್ ನಾರಾಯಣ್ ಟಾಲ, ಭೂರಾಯ್ದಿಯೋ, ಭೀಮ್‌ಖೋಜ್, ತೀರ್ಥಾಘರ್, ಮಂದ್ರಾ, ಚಿತ್ರಧಾರ, ತಮ್ಡಾ, ಧೂಮಾರ್, ದಾಂಟಿವಾಡ, ಜೊತೆಗೆ ಎಲ್ಲಾ ಜಿಲ್ಲಾ ಕೇಂದ್ರಗಳು ಪ್ರಮುಖ ಪಟ್ಟಣ ಮತ್ತು ನಗರ ಕೇಂದ್ರಗಳಾಗಿವೆ. (ಎಚ್.ಎಚ್.)

**ಛಿದ್ರಾಕಾರದ ರಾಷ್ಟ್ರ:** ಪ್ರಪಂಚದಲ್ಲಿ ಹಲವಾರು ರಾಷ್ಟ್ರಗಳ ಗಡಿಭಾಗಗಳು ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಗಗಳಾಗಿ ಹಂಚಿ ಹೋಗಿ ಛಿದ್ರ ಛಿದ್ರ ಭಾಗಗಳಾಗಿ ಹರಡಿಕೊಂಡಿರುತ್ತವೆ. ಉದಾ: ಹಿಂದಿನ ಪಾಕಿಸ್ತಾನವು ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಪಾಕಿಸ್ತಾನ ನಡುವೆ ಭಾರತ ಇತ್ತು. ಈ ಎರಡು ಪಾಕಿಸ್ತಾನದ ಭಾಗಗಳು ಪರಸ್ಪರ 1300 ಕಿಮೀ ಅಂತರವನ್ನು ಹೊಂದಿದ್ದವು. ಅದೇ ರೀತಿ ಇಂಡೋನೇಷ್ಯವೂ 1300 ಸಣ್ಣ ಸಣ್ಣ ನಡುಗಡ್ಡೆಗಳ್ಳಿಂದ ಕೂಡಿದ್ದು ಹಿಂದೂ ಮಹಾಸಾಗರದಿಂದ ಪೆಸಿಫಿಕ್ ಮಹಾಸಾಗರದವರೆಗೆ 4800 ಕಿಮೀ ಉದ್ದ ದೂರದವರೆಗೂ ಛಿದ್ರ ಛಿದ್ರವಾಗಿ ಹರಡಿಕೊಂಡಿವೆ. ಈ ರೀತಿಯ ರಾಷ್ಟ್ರಗಳಿಗೆ ಇನ್ನೂ ಕೆಲವು ಉದಾ: ಜಪಾನ್, ಗ್ರೀಸ್, ಫಿಲಿಫೈನ್ಸ್, ನ್ಯೂಜಿಲೆಂಡ್, ಪಪುವ, ನ್ಯೂಗಿನಿ ಮತ್ತು ಗ್ರೇಟ್‌ಬ್ರಿಟನ್. ಸಾಮಾನ್ಯವಾಗಿ ಇಂಥ ರಾಷ್ಟ್ರಗಳಲ್ಲಿ ಸಾರಿಗೆ ಸಂಪರ್ಕದ ಸಮಸ್ಯೆ ತೀವ್ರವಾಗಿರುತ್ತದೆ. ಬಿಡಿಯಾದ ರಾಷ್ಟ್ರದ ಭಾಗ ಅಥವಾ ನಡುಗಡ್ಡೆಗಳು ವಿವಿಧ ಜನಾಂಗದ ಹಿನ್ನಲೆಯನ್ನು ಹೊಂದಿದ ಜನರನ್ನು ಒಳಗೊಂಡಿರುತ್ತವೆ. ಅಲ್ಲದೆ ಅವರ ಆಶೋತ್ತರಗಳು ಸಹ ಭಿನ್ನವಾಗಿರುತ್ತವೆ. ಆದ್ದರಿಂದ ಇಂತಹ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸುವುದು ಕಷ್ಟ. ರಾಜಧಾನಿಯ ಸ್ಥಳವನ್ನು ಗುರುತಿಸಲು ಸಹ ಈ ಆಕಾರದ ರಾಷ್ಟ್ರಗಳಲ್ಲಿ ಸಮಸ್ಯೆಯಾಗಿರುತ್ತದೆ. ಆ ಕಾರಣದಿಂದಾಗಿ ಈ ರಾಷ್ಟ್ರಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತವೆ. (ಎಸ್.ಎಸ್.ಎಸ್.)

**ಛೋಟಾ ನಾಗಪುರ:** ಭಾರತದಲ್ಲಿರುವ ಜಾರ್ಖಂಡ್ ರಾಜ್ಯದ ಒಂದು ವಿಭಾಗ. ಇದಕ್ಕೆ ಸ್ಥೂಲವಾಗಿ ಸಮಾನ ವ್ಯಾಪಿಯಾಗಿರುವ ಪ್ರಸ್ಥಭೂಮಿಗೂ ಇದೇ ಹೆಸರಿದೆ. ರಾಂಚಿ, ಹಜ್ಹಾರಿಬಾಗ್, ಪಲಮಾವ್, ಸಿಂಘ್‌ಭೂಮ್ ಮತ್ತು ಧನ್‌ಬಾದ್ ಜಿಲ್ಲೆಗಳನ್ನೊಳಗೊಂಡಿರುವ ಛೋಟಾ ನಾಗಪುರ ವಿಭಾಗದ ವಿಸ್ತೀರ್ಣ ಸು. 65,600 ಚ.ಕಿಮೀ.

ಗಂಗಾ, ಸೋನ್ ಮತ್ತು ಮಹಾನದಿ ಬಯಲುಗಳ ನಡುವೆ ಹಬ್ಬಿರುವ ಛೋಟಾ ನಾಗಪುರ ಪ್ರಸ್ಥಭೂಮಿಯ ಸರಾಸರಿ ಎತ್ತರ 1,170 ಮೀ. ಸ್ಫಟಿಕ ಶಿಲೆಯಿಂದ ಕೂಡಿದ ಈ ಪ್ರದೇಶದ ನಡುವೆ ದಾಮೋದರ ಕಣಿವೆಯ ಅವಸಾದೀ ಶಿಲಾಭಾಗವುಂಟು. ಇಡೀ ಪ್ರದೇಶ ತಂಪಾದ ವಾಯುಗುಣದಿಂದ ಕೂಡಿದೆ. ಈ ಪ್ರದೇಶದ ಮಧ್ಯ ಮತ್ತು ಪಶ್ಚಿಮ ಭಾಗಗಳು ಅರಣ್ಯಾವೃತ್ತವಾಗಿವೆ. ಈ ಅರಣ್ಯಕ್ಷೇತ್ರದಲ್ಲಿ ಒಂದು ಕಡೆ ಕುರುಚಲುಗಿಡಗಳ ಕಾಡುಗಳ (ಉದಾ: ಗಿರಿಡೀಹ್ ಮತ್ತು ಧನ್‌ಬಾದ್) ಮತ್ತೊಂದು ಕಡೆ ಸಾಲುವೃಕ್ಷಗಳ ವಿಶಾಲ ಅರಣ್ಯಗಳೂ (ಉದಾ; ಸಿಂಘ್‌ಭೂಮ್) ಇವೆ. ಒಟ್ಟಿನಲ್ಲಿ ಈ ಪ್ರದೇಶ ಅರಣ್ಯ, ಬೆಟ್ಟಗುಡ್ಡ ಹಾಗೂ ಕಣಿವೆಗಳಿಂದ ಕೂಡಿದ್ದು, ಇಲ್ಲಿ ಹರಿಯುವ ಕೋಯೆಲ್, ಸುವರ್ಣರೇಖ, ಸಂಜಯಿ ಮುಂತಾದ ನದಿಗಳು ಇದನ್ನು ಸಂಪದ್ಯುಕ್ತವಾಗಿ ಮಾಡಿವೆ. ಈ ನದಿ ಪಾತ್ರಗಳಲ್ಲಿ ತಿಲೈಯ, ಕೋನಾರ್, ಮೈಥಾನ್, ಪಂಚತ್‌ಹಿಲ್ ಕಟ್ಟೆಗಳನ್ನೂ ಬೊಕಾರೊದಲ್ಲಿ ಒಂದು ಬೃಹತ್ ಉಷ್ಣವಿದ್ಯುತ್ ಕೇಂದ್ರವನ್ನು ನಿರ್ಮಿಸಲಾಗಿದೆ.

ಸೌದೆ ಮತ್ತು ಗಟ್ಟಿಯಾದ ಮರದ ದಿಮ್ಮಿಗಳಿಗೆ ಇಲ್ಲಿಯ ಅರಣ್ಯಗಳು ಹೆಸರುವಾಸಿ. ಕಾಗದದ ಉತ್ಪಾದನೆಗೆ ಅಗತ್ಯವಾದ ಬಿದಿರು ಮತ್ತು ಹುಲ್ಲನ್ನು ಈ ಅರಣ್ಯಗಳು ಒದಗಿಸುತ್ತವೆ. ಭಾರತದಲ್ಲಿ ಉತ್ಪಾದನೆಯಾಗುವ ಅರಗಿನಲ್ಲಿ ಸುಮಾರು ಅರ್ಧಭಾಗ ಇಲ್ಲಿ ದೊರೆಯತ್ತದೆ. ಆದರೆ ಈಚೆಗೆ ರಾಸಾಯನಿಕ ಉತ್ಪನ್ನಗಳು ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವುದರಿಂದಲೂ ಥೈಲೆಂಡ್ ಮುಂತಾದ ರಾಷ್ಟ್ರಗಳು ನೈಸರ್ಗಿಕ ಅರಗು ಉತ್ಪಾದಿಸುತ್ತಿರುವುದರಿಂದಲೂ ಈ ಉದ್ಯಮದ ಪ್ರಗತಿ ಇಳಿಮುಖವಾಗಿದೆ.

ಈ ವಲಯದಲ್ಲಿಯ ಭೂಮಿ ಅಷ್ಟೇನೂ ಫಲವತ್ತಾಗಿಲ್ಲ. ಮರಳುಮಯ ಅಥವಾ ಜೇಡಿಯ ಕೆಂಪು ಮಣ್ಣಿನ ಭೂಮಿಯೇ ಹೆಚ್ಚಾಗಿವೆ. ಬತ್ತ, ಮೆಕ್ಕೆಜೋಳ, ದ್ವಿದಳ ಧಾನ್ಯಗಳೂ, ಎಣ್ಣೆಬೀಜಗಳು, ಸಾಸಿವೆ–ಇವು ಇಲ್ಲಿಯ ಮುಖ್ಯ ಬೆಳೆಗಳು, ಇಲ್ಲಿ 127 ಸೆಂಮೀ ನಿಂದ 152 ಸೆಂಮೀ ವಾರ್ಷಿಕ ಮಳೆಯಾಗುತ್ತದೆ.

ಈ ಪ್ರದೇಶದಲ್ಲಿ ಅನೇಕ ಖನಿಜ ನಿಕ್ಷೇಪಗಳಿವೆ. ಹಜ್ಹಾರಿಬಾಗ್‌ನಲ್ಲಿ ಅಭ್ರಕದ ಗಣಿಗಳು ಹಾಗೂ ದಾಮೋದರ ಕಣಿವೆಯ ಕಲ್ಲಿದ್ದಲಿನ ಗಣಿಗಳು ಮುಖ್ಯವಾದವು. ಪ್ರಪಂಚದ ಅಭ್ರಕದ ಉತ್ಪಾದನೆಯಲ್ಲಿ ಭಾರತಕ್ಕೆ ಪ್ರಥಮ ಸ್ಥಾನಗಳಿಸಿಕೊಟ್ಟಿರುವ ಇಲ್ಲಿನ ಗಣಿಗಳು ಭಾರತದ ಒಟ್ಟು ಉತ್ಪಾದನೆಯ ಶೇ. 40–50ರಷ್ಟು ಅಭ್ರಕ ಉತ್ಪಾದಿಸುತ್ತವೆ. ಗಣಿಗಾರರ ಸಂಖ್ಯೆ 20,000 ಕ್ಕೂ ಹೆಚ್ಚು. ಇದರ ಸಂಸ್ಕರಣ ಪ್ರಕ್ರಿಯೆಗಳಲ್ಲಿ ಇದರ ಮೂರು ಪಟ್ಟು ಹೆಚ್ಚು ಜನ ನಿರತರಾಗಿದ್ದಾರೆ. ಇದರಲ್ಲಿ ತೊಡಗಿರುವ ಮಹಿಳಾ ಕಾರ್ಮಿಕರು ಈ ಕಾರ್ಯದಲ್ಲಿ ಕುಶಲರಾಗಿದ್ದಾರೆಂದರೆ $^1/_{1000}$ ರಷ್ಟು ತೆಳುವಾದ ಅಭ್ರಕದ ಪದರಗಳನ್ನು ಅವರು ಬಿಡಿಸಬಲ್ಲರು. ಇದುವರೆಗೆ ಕಂಡುಹಿಡಿಯಲಾಗಿರುವ ಯಾವ ಯಂತ್ರವೂ ಇಷ್ಟು ಸೂಕ್ಷ್ಮವಾದ ಕಾರ್ಯ ಮಾಡಲಾರದೆಂದು ಹೇಳಲಾಗಿದೆ. ಈ ವಲಯದಲ್ಲಿ ದೊರೆಯುವ ಕಲ್ಲಿದ್ದಲು ಉತ್ಕೃಷ್ಟವಾದದ್ದು. ಭಾರತದ ಕಲ್ಲಿದ್ದಲು ಉತ್ಪಾದನೆಯಲ್ಲಿ ಅರ್ಧ ಇಲ್ಲಿಯದು. ಕಬ್ಬಿಣ, ಕ್ರೋಮಿಯಮ್, ಮ್ಯಾಂಗನೀಸ್, ತಾಮ್ರ, ಸತು, ಸುಣ್ಣಕಲ್ಲು, ಕಲ್ನಾರು, ಕೆವೊಲಿನ್ ಮಣ್ಣು ಮೊದಲಾದ ಅನೇಕ ಖನಿಜ ನಿಕ್ಷೇಪಗಳೂ ದೊರೆಯುತ್ತವೆ.

ರಾಂಚಿ ಇಲ್ಲಿಯ ಶೈಕ್ಷಣಿಕ ಮತ್ತು ಆಡಳಿತ ಕೇಂದ್ರ, ಜನಸಂಖ್ಯೆ; 8,62,850. ಇಲ್ಲಿ ಅರಗು ಸಂಶೋಧನಾಲಯಗಳು, ಬೊಂಬೆಗಳ ಕಾರ್ಖಾನೆಗಳು, ಬೃಹತ್ ಔದ್ಯಮಿಕ ಉಪಕರಣಗಳ ಕಾರ್ಖಾನೆ, ಪಿಂಗಾಣಿ ಕಾರ್ಖಾನೆ ಮೊದಲಾದವು ನೆಲೆಗೊಂಡಿವೆ. ಡಾಲ್ಮಿಯ ನಗರದಲ್ಲಿನ ಸಿಮೆಂಟ್ ಮತ್ತು ಕಾಗದದ ಕಾರ್ಖಾನೆಗಳು, ಜಮ್ಷೆಡ್‌ಪುರದ ಉಕ್ಕಿನ ಸ್ಥಾವರಗಳು, ತಾಮ್ರ ಮತ್ತು ಅಲ್ಯೂಮಿನಿಯಂ ಕಾರ್ಖಾನೆಗಳು, ಸಿಂಧ್ರಿಯ ರಾಸಾಯನಿಕ ಗೊಬ್ಬರ ಕಾರ್ಖಾನೆ, ಗೊಮಿಯದಲ್ಲಿಯ ಸ್ಫೋಟಕ ವಸ್ತುಗಳ ಕಾರ್ಖಾನೆ, ಬೊಕಾರೊದಲ್ಲಿರುವ ಉಕ್ಕಿನ ಕಾರ್ಖಾನೆ ಹಾಗೂ ವಿದ್ಯುತ್ ಸ್ಥಾವರಗಳು ಮುಖ್ಯವಾದವು. (ಪಿ.ಜಿ.ಡಿ.)

# ಜ

**ಜಂಬಿಟ್ಟಿಗೆ:** ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಮುಖ್ಯವಾಗಿ ಕೇರಳ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ, ಘಟ್ಟದ ಮೇಲೆ ಬೆಳಗಾಂವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಟ್ಟಡ ಕಟ್ಟುವುದಕ್ಕೆ ಉಪಯೋಗವಾಗುವ ಮಣ್ಣಿಟ್ಟಿಗೆಯಂತಿರುವ ಕೆಂಪು ಬಣ್ಣದ, ಇಟ್ಟಿಗೆಕಲ್ಲು (ಲ್ಯಾಟರೈಟ್), ಮುರಕಲ್ಲು ಪರ್ಯಾಯನಾಮ. ಲ್ಯಾಟಿನ್ ಭಾಷೆಯಲ್ಲಿ ಇಟ್ಟಿಗೆಗೆ ಲ್ಯಾಟರ್ ಎಂಬ ಪದ ಉಂಟು. ಇದನ್ನು ಮಲಬಾರಿನಲ್ಲಿ ಮೊದಲಿಗೆ ಗುರುತಿಸಿದ ಬುಕನನ್ ಎಂಬ ಶಿಲಾವಿಜ್ಞಾನಿ ಇಟ್ಟಿಗೆಯಂತೆ ಉಪಯೋಗವಾಗುವ ಈ ಕಲ್ಲಿಗೆ ಲ್ಯಾಟರೈಟ್ ಎಂದು ನಾಮಕರಣ ಮಾಡಿದ. ಈ ಬಗೆಯ ಕಲ್ಲನ್ನು ಶ್ರೀಲಂಕ, ಮಯನ್ಮಾರ್, ಇಂಡೋನೇಷ್ಯ ದೇಶಗಳಲ್ಲಿ ವಿಶೇಷವಾಗಿ ಗುರುತಿಸಲಾಗಿದೆ. ಇದು ಹಾಸು ಕಲ್ಲಾಗಿ ಅನೇಕ ಕಡೆ ಕರಾವಳಿಯ ಅಂಚಿನಲ್ಲಿ ಕಾಣುತ್ತದೆ. ಇದನ್ನು ತೆಗೆಯುವಾಗ ಮೆದುವಾಗಿರುತ್ತದೆ. ಆದ್ದರಿಂದ ಇದಕ್ಕೆ ಉಳಿಯ ಸಹಾಯದಿಂದ ಯಾವ ಆಕಾರವನ್ನು ಬೇಕಾದರೂ ಕೊಡಬಹುದು. ಬಿಸಿಲಿನಲ್ಲಿ ಆರಿದ ತರುವಾಯ ಇದು ಕಲ್ಲಿನಂತೆ ಗಡುಸಾಗುತ್ತದೆ. ಮಳೆಗಾಳಿಗಳ ಹೊಡೆತಕ್ಕೆ ಸಿಕ್ಕಿದರು ಕ್ಷಯಿಸುವುದಿಲ್ಲ. ಜಂಬಿಟ್ಟಿಗೆಯಿಂದ ಕಟ್ಟಿದ ಮನೆಗಳು, ನೂರಾರು ವರ್ಷಗಳು ಕಳೆದು ಹೋಗಿದ್ದರು ಶಿಥಿಲವಾಗದೆ ಇನ್ನೂ ನಿಂತಿವೆ.

ಜಂಬಿಟ್ಟಿಗೆ ಮುಖ್ಯವಾಗಿ ಆಫ್ರಿಕ, ಆಸ್ಟ್ರೇಲಿಯ, ಭಾರತ, ಇಂಡೊನೇಷ್ಯ ಮತ್ತು ದಕ್ಷಿಣ ಅಮೆರಿಕ ದೇಶಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಭಾರತದಲ್ಲಿ ಇದು ಹರಡಿರುವುದು ದಕ್ಷಿಣದಲ್ಲಿ ಮಾತ್ರ. ಇಲ್ಲಿಯೂ ಎರಡೂ ಮುಖ್ಯ ವರ್ಗಗಳು ಉಂಟು ; ಒಂದು ಕರಾವಳಿಯ ಅಂಚಿನಲ್ಲಿರುವ ಕೆಳಮಟ್ಟದ ಜಂಬಿಟ್ಟಿಗೆ, ಇನ್ನೊಂದು ಬೆಟ್ಟಗಳ ಮೇಲಿರುವ ಮೇಲುಮಟ್ಟದ ಜಂಬಿಟ್ಟಿಗೆ. ಪೂರ್ವ ಕರಾವಳಿಯಲ್ಲಿ ಕನ್ಯಾಕುಮಾರಿಯಿಂದ ಹಿಡಿದು ವಿಶಾಖಪಟ್ಟಣ, ಒರಿಸ್ಸ, ಮಿಡ್ನಾಪುರ, ವೀರಭೂಮಿ, ಬರ್ದವಾನ್ ಜಿಲ್ಲೆಯವರೆಗೂ ಜಂಬಿಟ್ಟಿಗೆಯ ಹರವನ್ನು ಕಾಣಬಹುದು. ಪಶ್ಚಿಮ ಕರಾವಳಿಯಲ್ಲಿ ಕನ್ಯಾಕುಮಾರಿಯಿಂದ ಹಿಡಿದು ಮುಂಬಯಿಯವರೆಗೂ ಜಂಬಿಟ್ಟಿಗೆಯನ್ನು ಕಾಣಬಹುದು. ಈ ಸ್ಥಳಗಳಲ್ಲಿನ ಕಟ್ಟಡಗಳೆಲ್ಲಕ್ಕೂ ಜಂಬಿಟ್ಟಿಗೆಯನ್ನೇ ಉಪಯೋಗಿಸುತ್ತಾರೆ.

ಜಂಬಿಟ್ಟಿಗೆ ಕಲ್ಲು ಅದರ ಕೆಳಗಿರುವ ಗಡಸು ಕಲ್ಲುಗಳ ಮೇಲೆ ಒಂದು ವಿಧವಾದ ಮೇಲು ಹೊದಿಕೆಯಂತೆ ಹಬ್ಬಿರುತ್ತದೆ. ಇದು ಹೇಗೆ ಉಂಟಾಗುತ್ತದೆ ಎನ್ನುವ ವಿಷಯವಾಗಿ ನಾನಾ ತರದ ಕಾರಣಗಳು ಕೊಡಲ್ಪಟ್ಟಿವೆ. ಮುಖ್ಯವಾಗಿ ಮಳೆಯ ಅವಧಿ ದೀರ್ಘವಾಗಿರುವ ಸ್ಥಳಗಳಲ್ಲಿ ಮಳೆಗಾಲದಲ್ಲಿ ಹೆಚ್ಚು ನೆನೆದು ಮತ್ತೆ ಮುಂದಿನ ಬೇಸಗೆಕಾಲದಲ್ಲಿ ಆರಿ ಒಣಗುತ್ತ ಬರುವಂಥ ವಿರುದ್ಧ ವಾತಾವರಣದಲ್ಲಿ ಎಂಥ ಗಡಸು ಕಲ್ಲು ಕೂಡ ಬೀಳು ಬಿದ್ದು ಮಣ್ಣಾಗುವ ಸಂಭವವುಂಟು. ಹಾಗೇ ಮಣ್ಣಾದರೂ ಕೆಲವು ರಾಸಾಯನಿಕ ಗುಣಗಳ ದೆಸೆಯಿಂದ ಗಡಸುತನವನ್ನು ಪಡೆದು ಕೊಚ್ಚಿ ಹೋಗದೆ ಇದ್ದಲ್ಲಿಯೇ ಶೇಖರವಾಗುವ, ಮಣ್ಣಾದರೂ ಕಲ್ಲಿನಂಥ ಗುಣವನ್ನು ಪಡೆದಿರುವ, ಇಟ್ಟಿಗೆ ಕಲ್ಲೇ ಜಂಬಿಟ್ಟಿಗೆ, ಇದರಲ್ಲಿ ಅಲ್ಯೂಮಿನಿಯಮ್ ಆಕ್ಸೈಡ್ ಅಂಶ ಹೆಚ್ಚಿರುತ್ತದೆ. ಇದು ಶೇ. 40 ಮೀರಿದಾಗ ಅಂಥ ಜಂಬಿಟ್ಟಿಗೆ ಅಲ್ಯೂಮಿನಿಯಂ ಅದಿರಾಗುತ್ತದೆ. ಆಗ ಅದಕ್ಕೆ ಬಾಕ್ಸೈಟ್ ಎಂಬ ಹೆಸರು ಬರುವುದು.

ಜಂಬಿಟ್ಟಿಗೆಗೆ ಬಣ್ಣದಲ್ಲಿ ನಾನಾ ಛಾಯೆಗಳು ಉಂಟು. ಮಣ್ಣು ಕೆಂಪು ಅಥವಾ ಕಂದು ಬಣ್ಣವೇ ಸಾಮಾನ್ಯ. ಅಲ್ಲಲ್ಲಿ ಹಳದಿ ಬಣ್ಣದ ಮಚ್ಚೆಗಳು ಕಾಣುವುದೂ ಉಂಟು. ಒಂದೇ ಕಲ್ಲಿನಲ್ಲಿ ಬಗೆಬಗೆಯ ಬಣ್ಣಗಳನ್ನೂ ಕಾಣಬಹುದು. ಕಬ್ಬಿಣಾಂಶ ಹೆಚ್ಚಿದರೆ ಕೆಂಪು ಅಥವಾ ಕಂದು ಬಣ್ಣವನ್ನು ಪ್ರದರ್ಶಿಸುವುದು. ಅಲ್ಯೂಮಿನಿಯಂ ಮತ್ತು ಸಿಲಿಕಾಂಶ ಹೆಚ್ಚಿದಂತೆ ತಿಳಿ ಹಳದಿ ಅಥವಾ ಬಿಳುಪು ಛಾಯೆಯನ್ನು ತೋರಿಸುತ್ತದೆ. ಕಬ್ಬಿಣಾಂಶ ಹೆಚ್ಚಿದಾಗ ಲ್ಯಾಟರೈಟ್ ಕಬ್ಬಿಣದ ಅದಿರಾಗಿ ಮಾರ್ಪಡುತ್ತದೆ. ಉತ್ತರ ಕನ್ನಡ ಮತ್ತು ಗೋವಗಳಲ್ಲಿ ಲ್ಯಾಟರೈಟ್ ಸಂಬಂಧದ ಕಬ್ಬಿಣದ ಅದಿರನ್ನು ಗಣಿ ತೋಡಿ ವಿದೇಶಗಳಿಗೆ ರಫ್ತು ಮಾಡುತ್ತಾರೆ.

**ಜಂಬಿಟ್ಟಿಗೆ ಮಣ್ಣು :** ಉಷ್ಣವಲಯಗಳಲ್ಲಿರುವ ಒಂದು ಬಗೆಯ ಪ್ರತ್ಯಾಮ್ಲೀಯ ಶಿಲೆಗಳ ಮೇಲೆ ಹೆಚ್ಚು ಮಳೆ ಬಿದ್ದ ಪ್ರತಿಕ್ರಿಯೆಯಿಂದ ಉಂಟಾಗುವ ಮಣ್ಣು. ಲ್ಯಾಟರೈಟ್ ಕಲ್ಲುಗಳಿಂದ ವಿಘಟನೆಯಿಂದ ವಸ್ತುವಿನಿಂದ ಕೂಡಿರುವ ಮಣ್ಣಿಗೆ ಲ್ಯಾಟರೈಟಿಕ್ ಅಥವಾ ಜಂಬಿಟ್ಟಿಗೆ ಮಣ್ಣು ಎಂಬ ಹೆಸರಿದೆ. ಹೆಚ್ಚು ಬಸಿಯುವಿಕೆಯ ಕಾರಣದಿಂದ ಪ್ರತ್ಯಾಮ್ಲಗಳು ಕಳೆದುಹೋಗುತ್ತವೆ. ಹೀಗೆ ಬಸಿಯುವ ನೀರು ಕ್ಷಾರ ಗತಿಯುಳ್ಳದ್ದಾದ್ದರಿಂದ ಸಿಲಿಕ ಕರಗಿ ಕೆಳಮುಖವಾಗಿ ಚಲಿಸಿ, ಮೇಲ್ಮೈಯಲ್ಲಿ ಕಬ್ಬಿಣ ಮತ್ತು ಅಲ್ಯೂಮಿನಿಯಮ್ ಆಕ್ಸೈಡ್ ಶೇಖರಣೆಯಾಗುವುದು. ಈ ಮಣ್ಣುಗಳ ಬಣ್ಣ ಸಾಮಾನ್ಯವಾಗಿ ಕೆಂಪು ಇಲ್ಲವೇ ಹಳದಿ. ಇವು ರಚನೆಯಲ್ಲಿ ಜೇನುಗೂಡನ್ನು ಹೋಲುತ್ತವೆ. ದಟ್ಟವಾಗಿ ಗಟ್ಟಿಯಾಗಿರಬಹುದು. ಅಥವಾ ಕಬ್ಬಿಣ ವಸ್ತುವಿನ ಸಣ್ಣ ಸಣ್ಣ ಗಂಟುಗಳ ಸಡಿಲ ಮೊತ್ತವಾಗಿರಬಹುದು. ದಟ್ಟವಾಗಿ ಗಟ್ಟಿಯಾಗಿರುವ ಮಣ್ಣನ್ನು ಹದವಾದ ತೇವವಿದ್ದಾಗ ಕಿತ್ತು ತೆಗೆದು ಬೇಕಾದ ಅಳತೆಗೆ ಕತ್ತರಿಸಿ ಒಣಗಿಸಿ ಇಟ್ಟಿಗೆಗಳಾಗಿ ಬಳಸುತ್ತಾರೆ. ಒಣಗಿದಾಗ ಇವು ಕಲ್ಲಿನ ಹಾಗೆ ಗಟ್ಟಿಯಾಗುತ್ತವೆ.

ಈ ಮಣ್ಣುಗಳಲ್ಲಿ ಮೂಲ ಜೇಡಿ ಖನಿಜಗಳಿಲ್ಲದಿರುವುದರಿಂದ ನಮ್ಯತೆ, ಜಿಗುಟು, ಕುಗ್ಗುವುದು, ಪ್ರತ್ಯಾಮ್ಲ ವಿನಿಮಯ-ಮುಂತಾದ ಜೇಡಿಯ ಗುಣಗಳು ಅಷ್ಟಾಗಿ ಕಂಡುಬರುವುದಿಲ್ಲ. ಈ ಮಣ್ಣುಗಳ ಆಳ ಕಡಿಮೆ.

ಕರ್ನಾಟಕದಲ್ಲಿ ಮಲೆನಾಡು ಪ್ರದೇಶಗಳಾದ ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಘಟ್ಟದ ಕೆಳಗಿನ ತೀರಪ್ರದೇಶಗಳು ಮತ್ತು ಬೆಂಗಳೂರಿನ ಉತ್ತರಕ್ಕೆ ಕೆಲವೆಡೆ, ಅಲ್ಲದೆ ಬೀದರ್ ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಜಂಬಿಟ್ಟಿಗೆ ಮಣ್ಣು ದೊರೆಯುತ್ತದೆ. ಮಳೆಗೆ ಹೊಂದಿಕೊಂಡಿರುವ ತೋಟದ ಬೆಳೆಗಳಾದ ಕಾಫಿ, ಟೀ, ಏಲಕ್ಕಿ, ಅಡಕೆ, ಕಿತ್ತಲೆ-ಮೊದಲಾದವು ಈ ಪ್ರದೇಶದ ಮುಖ್ಯ ಬೆಳೆಗಳು. ಮಳೆಯ ಆಸರೆಯಿಂದ ಕಣಿವೆಗಳಲ್ಲೂ ಬೆಟ್ಟದ ಇಳಿಜಾರುಗಳಲ್ಲೂ ಬತ್ತವನ್ನು ಸಾಮಾನ್ಯವಾಗಿ ಬೆಳೆಸುತ್ತಾರೆ. ಮೈದಾನದಲ್ಲಿ ಗೋಚರವಾಗುವ ಸಣ್ಣ ಹಿಡುವಳಿಗಳು ಇಲ್ಲಿ ಬಹುಮಟ್ಟಿಗೆ ಕಡಿಮೆ. ಸಮುದ್ರ ತೀರಪ್ರದೇಶದಲ್ಲಿ ತೆಂಗು ಒಂದು ಮುಖ್ಯ ಬೆಳೆ.

ಈ ಮಣ್ಣಿನಲ್ಲಿ ಸುಣ್ಣದ ಅಂಶ ಕಡಿಮೆಯಿರುವುದರಿಂದ pH ಹೆಚ್ಚು ಹುಳಿ ಮುಖವಾಗಿರುತ್ತದೆ. ಎಲೆಗಳು ಉದುರಿ, ಕೊಳೆಯುವುದರಿಂದ ಹ್ಯೂಮಸ್ ಹೆಚ್ಚಾಗಿರುತ್ತದೆ. ಇದರಿಂದ ಸಾರಜನಕ ಅಂಶವೂ ಹೆಚ್ಚಿದ್ದು, ರಂಜಕ ಮತ್ತು ಪೋಟ್ಯಾಷುಗಳ ಕೊರತೆ ಹೆಚ್ಚು. ಸಾರಜನಕ, ರಂಜಕ ಮತ್ತು ಪೊಟ್ಯಾಷುಗಳನ್ನು ಗೊಬ್ಬರದ ಮೂಲಕ ಒದಗಿಸುವುದು ಅವಶ್ಯಕ. ಸುಣ್ಣವನ್ನು ತಕ್ಕ ಪರಿಮಾಣದಲ್ಲಿ ಆಗಾಗ ಕೊಡುವುದರಿಂದ ಮಣ್ಣಿನ ಹುಳಿಯನ್ನು ನಿವಾರಿಸಿ, ಹದವಾದ ಪರಿಸ್ಥಿತಿಯನ್ನು ಉಂಟು ಮಾಡಬಹುದು. (ಬಿ.ವಿ.ವಿ.;ಕೆ.ಆರ್.ಜಿ.ಎ.)

**ಜಗಳೂರು:** ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು; ಅದರ ಕೇಂದ್ರ. ದಾವಣಗೆರೆ ಉಪವಿಭಾಗಕ್ಕೆ ಸೇರಿದೆ. ಉತ್ತರದಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು, ದಕ್ಷಿಣದಲ್ಲಿ ಚಿತ್ರದುರ್ಗ ತಾಲ್ಲೂಕು, ಪಶ್ಚಿಮದಲ್ಲಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕುಗಳ ಇದರ ಮೇರೆಗಳು. 1882ರ ವರೆಗೂ ಇದಕ್ಕೆ ಕನಕುಪ್ಪ ಎಂಬ ಹೆಸರಿತ್ತು. ಜಗಳೂರು, ಸೊಕ್ಕೆ, ಬಿಳಿಚೋಡು ಹೋಬಳಿಗಳೂ 128 ಹಳ್ಳಿಗಳೂ ಒಂದು ಪಟ್ಟಣವೂ ಇರುವ ಈ ತಾಲ್ಲೂಕಿನ ವಿಸ್ತೀರ್ಣ 961.9 ಚ.ಕಿಮೀ. ಜನಸಂಖ್ಯೆ 1,58,829.

ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಅನೇಕ ಸಣ್ಣ ಬೆಟ್ಟಗುಡ್ಡಗಳಿವೆ. ಈ ಭಾಗ ಕುರುಚಲು ಮತ್ತು ಪರ್ಣಪಾತಿ ಮರಗಳಿಂದ ಆವೃತ. ಉಳಿದ ಭಾಗದಲ್ಲಿ ಅಲೆಯಲೆಯಾಗಿ ಏರಿಳಿಯುವ ನೆಲವಿದೆ. ಒಟ್ಟಿನಲ್ಲಿ ಇದು ಮೈದಾನ. ತಾಲ್ಲೂಕಿನ ಕೃಷಿಯೋಗ್ಯ ನೆಲದ ಕಾಲುಭಾಗದಲ್ಲಿ ಕಪ್ಪು ಅಥವಾ ಕಂದು ಬಣ್ಣದ ಮಣ್ಣಿದೆ. ಉಳಿದ ಭಾಗ ಕೆಂಪು ಅಥವಾ ಮರಳು ಭೂಮಿ. ಇದು ಅಷ್ಟೇನೂ ಫಲವತ್ತಾದ್ದಲ್ಲ.

ಚಿತ್ರದುರ್ಗ ತಾಲ್ಲೂಕಿನ ಭೀಮಸಮುದ್ರ ಕೆರೆಯಿಂದ ಹೊರಡುವ ಜನಗುಹಳ್ಳ ಈ ತಾಲ್ಲೂಕಿನ ಪೂರ್ವದ ಕೆಲವು ಗ್ರಾಮಗಳ ಮೂಲಕ ಹರಿಯುತ್ತದೆ. ಇದು ವ್ಯವಸಾಯಕ್ಕೆ ಅನುಕೂಲಕರ. ತಾಲ್ಲೂಕಿನ ಉಳಿದ ಭಾಗಗಳಲ್ಲಿ ನೀರಿನ ಆಸರೆ ಹೆಚ್ಚಾಗಿಲ್ಲ. ಮಳೆ ಕಡಿಮೆ 7-8 ದೊಡ್ಡ ಕೆರೆಗಳೂ ಹಲವು ಸಣ್ಣ ಕೆರೆಗಳೂ ಇವೆ. ತಾಲ್ಲೂಕಿನ ನಡುವೆ ನೈಋತ್ಯದಿಂದ ಈಶಾನ್ಯಕ್ಕೆ ಸಾಗಿರುವ ಉಬ್ಬು ನೆಲದ ನೆತ್ತಿರೇಖೆಯಿಂದ ಆಚೀಚೆ ವಾಯವ್ಯ ಮತ್ತು ಆಗ್ನೇಯಾಭಿಮುಖವಾಗಿ ಹರಿಯುವ ಸಣ್ಣ ಪುಟ್ಟ ಹಳ್ಳಗಳು ಬಾವಿಗಳಿಗೆ ನೀರು ಪೂರೈಸುತ್ತವೆ; ಆಗ್ನೇಯದ ಹಳ್ಳಗಳು ಜನಗುಹಳ್ಳಕ್ಕೆ ನೀರು ಊಡುತ್ತವೆ. ಜನಗುಹಳ್ಳದ

ಅಚೀಚೆ ದಡಗಳ ಮೇಲೆ ತೋಡಿರುವ ಬಾವಿಗಳು ನೀರಾವರಿಗೆ ಸಹಾಯಕ. ಹತ್ತಿ, ಬತ್ತ, ಕಬ್ಬು, ನವಣೆ, ಜೋಳ, ರಾಗಿ, ತೆಂಗು, ಅಡಕೆ ಇಲ್ಲಿಯ ಮುಖ್ಯ ಬೆಳೆಗಳು. ಕೆಲವು ಕಡೆ ವರ್ಷದಲ್ಲಿ ಎರಡು ಫಸಲನ್ನು ತೆಗೆಯುತ್ತಾರೆ.

ಜಗಳೂರು ಪಟ್ಟಣ ಈ ತಾಲ್ಲೂಕಿನ ಕಸಬೆ. ಉ.ಅ. 14°31′ ಮತ್ತು ಪೂ.ರೇ. 76°24′ ಮೇಲೆ ಚಿತ್ರದುರ್ಗದ ವಾಯವ್ಯಕ್ಕೆ 40 ಕಿಮೀ ದೂರದಲ್ಲಿದೆ. ಇದೊಂದು ಪುರಸಭಾ ಪಟ್ಟಣ. ಕನಕುಪ್ಪದಿಂದ ಇಲ್ಲಿಗೆ ತಾಲ್ಲೂಕು ಆಡಳಿತ 1868ರಲ್ಲಿ ವರ್ಗವಾಯಿತು. ಜೋಗಪ್ಪ ಎಂಬ ಋಷಿಯಿಂದ ಇದಕ್ಕೆ ಜಗಳೂರು ಎಂದು ಹೆಸರು ಬಂದಿದೆಯೆಂದು ಹೇಳಲಾಗಿದೆ. ಇಲ್ಲಿ ಜೋಗಪ್ಪನ ದೇವಸ್ಥಾನವೊಂದಿದೆ. ಪಟ್ಟಣಕ್ಕೆ ಎರಡು ಸುರಂಗ ಬಾವಿಗಳಿಂದ ನೀರು ಒದಗಿಸಲಾಗುತ್ತಿದೆ. ವಿದ್ಯುತ್‌ಸೌಕರ್ಯವಿದೆ. ಇಲ್ಲಿ ಒಂದು ಪ್ರೌಢಶಾಲೆ. ಆಸ್ಪತ್ರೆಯಿದೆ. ಜನಸಂಖ್ಯೆ 14,741. (ಎಂ.ಎ.ಎಚ್.)

**ಜಟ್ಲೆಂಡ್:** ಯುರೋಪಿನಲ್ಲಿ ಪಶ್ಚಿಮ ಜರ್ಮನಿಯಿಂದ ಉತ್ತರಕ್ಕೆ ಚಾಚಿ, ಉತ್ತರ ಸಮುದ್ರ ಮತ್ತು ಕ್ಯಾಟಿಗ್ಯಾಟ್ ಕಡಲತೋಳಿನ ನಡುವೆ ವಿಸ್ತರಿಸಿರುವ ಪರ್ಯಾಯದ್ವೀಪ. ಡೇನಿಷ್ ಭೂಪ್ರದೇಶ, ಶ್ಲೆಸ್‌ವಿಗ್–ಹೋಲ್ಸ್ಟೈನ್ ರಾಜ್ಯ, ಪಶ್ಚಿಮ ಜರ್ಮನಿಗಳನ್ನೊಳಗೊಂಡಿದೆ. ರಾಜಕೀಯವಾಗಿ ಡೇನಿಷ್ ಭೂಪ್ರದೇಶಕ್ಕೆ ಮಾತ್ರ ಈ ಹೆಸರು ಅನ್ವಯಿಸುತ್ತದೆ. ಇದು ಲಿಮ್ ಫೋರ್ಡ್ ಉತ್ತರ ದ್ವೀಪಗಳನ್ನು ಒಳಗೊಳ್ಳುತ್ತದೆ. ಒಂದನೆಯ ಮಹಾಯುದ್ಧದ ಸಮಯದಲ್ಲಿ ಈ ಪ್ರದೇಶದ ಪಶ್ಚಿಮ ಕರಾವಳಿಯ ಬಳಿ ನಡೆದ ನೌಕಾಕದನ ಜಟ್ಲೆಂಡ್ ಕದನ ಎಂದು ಪ್ರಸಿದ್ಧವಾಗಿದೆ. (ಎಸ್.ಎನ್.ಎ.ಆರ್.ಇ.)

**ಜನಗಣತಿ ಸಮೀಕ್ಷೆ:** ಭೌಗೋಳಿಕ ಮತ್ತು ಸಾಮಾಜಿಕ ಸಂಶೋಧನ ಪದ್ಧತಿಗಳಲ್ಲಿ ಸಮೀಕ್ಷೆಯು ಒಂದು. ಇದೊಂದು ಮಾಹಿತಿ ಸಂಗ್ರಹಣೆಯ ವಿಧಾನ. ಯಾವುದೇ ವಿಷಯವನ್ನು ಕೂಲಂಕಷವಾಗಿ ಅಧ್ಯಯನ ಮಾಡುವುದೇ ಸಮೀಕ್ಷೆ. ವಸ್ತು, ವ್ಯಕ್ತಿ ಅಥವಾ ಗುಂಪುಗಳ ಸ್ಥಿತಿಗತಿಗಳು ಮತ್ತು ಅವಶ್ಯಕತೆಗಳನ್ನು ವೈಜ್ಞಾನಿಕ ವಿಧಾನಗಳಿಂದ ಅರ್ಥೈಸುವ, ಮಾಹಿತಿ ಸಂಗ್ರಹಣಾ ವಿಧಾನಗಳನ್ನು ಬಳಸಿ ಜನರಿಂದ ಸಮಸ್ಯೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಕ್ರಮ. ಸಮೀಕ್ಷೆ ಎಂಬ ಪದವನ್ನು ಬೇರೆ ಬೇರೆ ವಿಜ್ಞಾನಗಳಲ್ಲಿ ವಿಭಿನ್ನವಾಗಿ ಬಳಕೆ ಮಾಡಲಾಗುತ್ತದೆ. ಪ್ರಾಕೃತಿಕ ವಿಜ್ಞಾನಗಳಲ್ಲಿ ವಸ್ತುಗಳ ಮಾಪನ ಮಾಡುವುದು – ಎಂಬರ್ಥದಲ್ಲಿ ಬಳಸಲಾಗುತ್ತದೆ.

ಜನಗಣತಿ ಮಾಪನ ಅಥವಾ ಸಮೀಕ್ಷೆ ಯಾವುದೇ ಒಂದು ಕ್ಷೇತ್ರದಲ್ಲಿ ಎಲ್ಲಾ ಮೂಲಾಂಶಗಳನ್ನು ಗಣನೆಗೆ ತೆಗೆದುಕೊಂಡು ನಡೆಸಲಾಗುವ ಕ್ರಿಯೆಯನ್ನು ಸರ್ವೆ ಅಥವಾ ಜನಗಣತಿ ಮಾಪನ ಎಂದು ಕರೆಯಲಾಗಿದೆ. 1872 ಭಾರತದಲ್ಲಿ ಪ್ರಪ್ರಥಮವಾಗಿ ಪ್ರಾರಂಭಗೊಂಡ ಜನಗಣತಿಯಲ್ಲಿ ಜನಸಂಖ್ಯೆ ಬೆಳವಣಿಗೆ, ಜನನ ದರ, ಮರಣ ದರ ಮಾಹಿತಿಯನ್ನು ವ್ಯಾಪಕವಾಗಿ ಸಂಗ್ರಹಿಸಲಾಯಿತು. ಅನಂತರ ದಶಕವಾರು ಜನಗಣತಿಗಳಲ್ಲಿ ಜನಸಂಖ್ಯೆ ವಿಷಯಗಳೇ ಅಲ್ಲದೆ ಸಾಮಾಜಿಕ, ಆರ್ಥಿಕ ಅಂಶಗಳು, ವಿವಾಹದ ವಯಸ್ಸು, ಸಾಕ್ಷರತೆ, ವಿವಾಹ ವಿಚ್ಛೇದನೆ, ವಿದ್ಯಾಭ್ಯಾಸ, ಉದ್ಯೋಗ ಮತ್ತು ಆದಾಯದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಯಿತು. 1881 ರಿಂದ 1909 ರ ಅವಧಿಯಲ್ಲಿ 26 ಸಂಪುಟಗಳಲ್ಲಿ ಪ್ರಕಟಗೊಂಡ ಇಂಪಿರಿಯಲ್ ಗೆಜೆಟಿಯರ್ ಬಾಲ್ಯ ವಿವಾಹ, ಶಿಶುಮರಣ, ಮರಣದರ ಮುಂತಾದ ವಿಷಯಗಳನ್ನು ಸಂಗ್ರಹಣೆ ಮಾಡಿತು. ಪಂಜಾಬಿನ ಬೋರ್ಡ್ ಆಫ್ ಎಕನಾಮಿಕ್ ಎನ್‌ಕ್ವೇರಿ, ರಾಯಲ್ ಕಮಿಷನ್ ಆಫ್ ಇಂಡಿಯನ್ ಅಗ್ರಿಕಲ್ಚರ್, ಅರ್ಬನ್ ಸರ್ವೆ, ಸರ್ವೆ ಆಫ್ ಸೊಲ್ಲಾಪುರ್ ಮುಂತಾದವು ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ನಡೆಸಿದ ಕೆಲವು ಪ್ರಯತ್ನಗಳಾಗಿವೆ.

ಸಮೀಕ್ಷೆಗಳಲ್ಲಿ ಹಲವಾರು ಬಗೆಗಳಿವೆ; ಅವುಗಳೆಂದರೆ ಪ್ರತ್ಯಕ್ಷ ಮತ್ತು ಪರೋಕ್ಷ ಸಮೀಕ್ಷೆಗಳು, ಪ್ರಾಥಮಿಕ ಹಾಗೂ ದ್ವಿತೀಯ ಸಮೀಕ್ಷೆ, ಜನಗಣತಿ ಮತ್ತು ಮಾದರಿ ಸಮೀಕ್ಷೆ, ಪ್ರಾರಂಭಿಕ ಮತ್ತು ಪುನರಾವರ್ತಿತ ಸಮೀಕ್ಷೆ, ಅಧಿಕೃತ ಮತ್ತು ಖಾಸಗಿ ಸಮೀಕ್ಷೆ, ನಿರಂತರ ಮತ್ತು ತಾತ್ಕಾಲಿಕ ಸಮೀಕ್ಷೆ ಹಾಗೂ ಸಮಗ್ರಸಮೀಕ್ಷೆ.

ಸಮೀಕ್ಷೆಯ ವಿಷಯವ್ಯಾಪ್ತಿಯನ್ನಾಧರಿಸಿ ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯ ಸಮೀಕ್ಷೆಗಳು ಮತ್ತು ವಿಶೇಷ ಸಮೀಕ್ಷೆಗಳು. ಸಾಮಾನ್ಯ ಸಮೀಕ್ಷೆ ಎಂದರೆ ಸಮಗ್ರ ಸಮುದಾಯದ ಸಾಮಾನ್ಯ ಅಧ್ಯಯನವನ್ನೊಳಗೊಂಡಿರುತ್ತದೆ. ವಿಶೇಷ ಸಮೀಕ್ಷೆ ಒಂದು ಸಮುದಾಯದಲ್ಲಿನ ನಿರ್ದಿಷ್ಟ ಅಂಶದ ಅಧ್ಯಯನವಾಗಿರುತ್ತದೆ. ಸಮೀಕ್ಷೆಯನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ. ಪ್ರತ್ಯಕ್ಷ ಮತ್ತು ಪರೋಕ್ಷ ಸಮೀಕ್ಷೆಗಳು: ಪ್ರತ್ಯಕ್ಷ ಸಮೀಕ್ಷೆಯಲ್ಲಿ ಮಾಹಿತಿಯನ್ನು ಸಾಧ್ಯಾತ್ಮಕವಾಗಿ ಅಳೆಯಲು ಅಥವಾ ಸಂಗ್ರಹಿಸಲು ಸಾಧ್ಯವಿದೆ. ಆದರೆ ಪರೋಕ್ಷ ಸಮೀಕ್ಷೆಯಲ್ಲಿ ಇದು ಸಾಧ್ಯವಿಲ್ಲ. ಸಮೀಕ್ಷಾಕಾರನೇ ಸಹಭಾಗಿಯಾಗಿ ಸ್ವತಃ ಸಮೀಕ್ಷೆಯನ್ನು ನಡೆಸಿ ಆ ಸಮೀಕ್ಷೆಯ ಮೊದಲನೆಯದಾಗಿದ್ದರೆ ಅದನ್ನು ಪ್ರಾಥಮಿಕ ಸಮೀಕ್ಷೆ ಎಂತಲೂ ಈಗಾಗಲೇ ನಡೆದಿರುವ ಸಮೀಕ್ಷೆಯ ಬಗ್ಗೆ ಪುನರ್‌ಸಮೀಕ್ಷೆಯನ್ನು ನಡೆಸಿದರೆ ಮಾಧ್ಯಮಿಕ ಅಥವಾ ಪುನರ್ವಿಮರ್ಶಿತ ಸಮೀಕ್ಷೆ ಎನ್ನುವರು. ಜನಗಣತಿ ಸಮೀಕ್ಷೆಯಲ್ಲಿ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಅಂಶವನ್ನೂ ಪ್ರತ್ಯೇಕವಾಗಿ ಅಧ್ಯಯನಮಾಡಿ ಅನಂತರ ಅದೆಲ್ಲವನ್ನೂ ಕ್ರೋಡೀಕರಿಸಲಾಗುತ್ತದೆ. ಆದರೆ ಮಾದರಿ ಸಮೀಕ್ಷೆಯಲ್ಲಿ ಆಯ್ಕೆ ನಮೂನಾ ಘಟಕಗಳನ್ನು ಮಾತ್ರ ಅಧ್ಯಯನ ಮಾಡಲಾಗುವುದು. ಯಾವುದೇ ವಿಷಯದ ಬಗ್ಗೆ ಮೊಟ್ಟ ಮೊದಲಿಗೆ ಹೊಚ್ಚ ಹೊಸದಾಗಿ ನಡೆಸಿದ ಸಮೀಕ್ಷೆಯು ಪ್ರಾರಂಭಿಕ ಸಮೀಕ್ಷೆ. ಒಂದೇ ಕ್ಷೇತ್ರದ ಬಗ್ಗೆ ಮೂರು ಅಥವಾ ನಾಲ್ಕು ಬಾರಿಗೆ ನಡೆಯುವುದೇ ಪುನರಾವರ್ತಿತ ಸಮೀಕ್ಷೆ. ಸರ್ಕಾರದ ಮೂಲಗಳಿಂದ ನಡೆಸಲ್ಪಡುವ ಸಮೀಕ್ಷೆಗಳನ್ನು ಅಧಿಕೃತ ಅಥವಾ ಸರ್ಕಾರಿ ಸಮೀಕ್ಷೆಗಳೆಂದು, ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುವ ಸಮೀಕ್ಷೆಯನ್ನು ಖಾಸಗಿ ಸಮೀಕ್ಷೆ ಎಂದು ಕರೆಯಲಾಗಿದೆ. ಸರ್ಕಾರವು ನಿಗಧಿತ ಮಧ್ಯಂತರ ಅವಧಿಗಳಲ್ಲಿ ನಡೆಸುವ ಸಮೀಕ್ಷೆಯನ್ನು ನಿರಂತರ ಸಮೀಕ್ಷೆ ಎಂತಲೂ, ನಿಗದಿತ ಉದ್ದೇಶಕ್ಕಾಗಿ ಒಂದೇ ಸಾರಿ ನಡೆಸುವ ಸಮೀಕ್ಷೆಯನ್ನು ತಾತ್ಕಾಲಿಕ ಸಮೀಕ್ಷೆಯೆಂದು ಕರೆಯುತ್ತಾರೆ.

ಪೂರ್ಣ ಪ್ರಮಾಣದ ಸಮೀಕ್ಷೆಯನ್ನು ನಡೆಸುವ ಮೊದಲು ಲೋಪದೋಷಗಳನ್ನು ಕಂಡುಹಿಡಿಯಲು ಸಮೀಕ್ಷಾ ಪೂರ್ವದ ಹಂತದಲ್ಲಿ ನಡೆಸುವ ಸಮೀಕ್ಷೆಗೆ ಸಮಗ್ರ ಸಮೀಕ್ಷೆ ಎನ್ನಲಾಗುತ್ತದೆ. (ಸಿ.ಎಂ.)

**ಜನಸಂಖ್ಯಾ ಅಧ್ಯಯನ:** ಮಾನವ ಸಂಖ್ಯೆಯನ್ನು ಅಭ್ಯಸಿಸುವ ಶಾಸ್ತ್ರಕ್ಕೆ ಜನಸಂಖ್ಯಾಶಾಸ್ತ್ರ ಮತ್ತು ಜನಸಂಖ್ಯಾ ಅಧ್ಯಯನ ಎಂಬ ಎರಡು ಹೆಸರುಗಳಿವೆ. ಇವೆರಡೂ ಪೂರಕ ಪದಗಳಾದರೂ ಇವೆರಡರ ನಡುವೆ ವ್ಯತ್ಯಾಸವನ್ನು ಕೊಡಲಾಗಿದೆ. ಫಿಲಿಪ್‌ಹೌಸರ್ ಮತ್ತು ಡಂಕನ್ ಈ ದಿಸೆಯಲ್ಲಿ ಪ್ರಯತ್ನಿಸಿದ್ದಾರೆ. ಇವರ ಪ್ರಕಾರ ಜನಸಂಖ್ಯಾ ಶಾಸ್ತ್ರದ ವಿಶ್ಲೇಷಣೆಯು ಜನಸಂಖ್ಯೆಯ ಪರಿವರ್ತಕ ಘಟಕಗಳು ಮತ್ತು ಅವುಗಳಲ್ಲಿನ ಬದಲಾವಣೆಗಳ ಅಧ್ಯಯನಕ್ಕೆ ಅನ್ವಯಿಸಿದರೆ ಜನಸಂಖ್ಯಾ ಅಧ್ಯಯನ ಜನಸಂಖ್ಯೆಯ ಪರಿವರ್ತಕ ಘಟಕಗಳು ಮತ್ತು ಇತರ ಸಾಮಾಜಿಕ, ಆರ್ಥಿಕ, ರಾಜಕೀಯ, ಜೈವಿಕ ಮುಂತಾದ ಅಂಶಗಳ ನಡುವೆ ಇರುವ ಸಂಬಂಧ ಹಾಗೂ ಪ್ರಭಾವದ ಅಧ್ಯಯನ ಎಂದು ವಿವರಿಸಲಾಗಿದೆ.

ಜನಸಂಖ್ಯಾ ಅಧ್ಯಯನ ಜನಸಂಖ್ಯೆಯ ಗಾತ್ರ, ರಚನೆ ಲಕ್ಷಣಗಳು, ಪ್ರಾದೇಶಿಕ ಹಂಚಿಕೆ ಮತ್ತು ಅವುಗಳಲ್ಲುಂಟಾಗುವ ಬದಲಾವಣೆಗಳನ್ನು ಮತ್ತು ಅವುಗಳಿಗಿರುವ ಕಾರಣಗಳನ್ನು ಅಭ್ಯಸಿಸುತ್ತದೆ. ಇದು ಜೈವಿಕ, ಸಾಮಾಜಿಕ, ಆರ್ಥಿಕ ಮತ್ತಿತರ ಸನಿವೇಶಗಳಿಗೆ ಅನುಗುಣವಾಗಿ ಜನಸಂಖ್ಯೆಯ ಪ್ರಸಾರವನ್ನು ವಿವರಿಸುತ್ತದೆ. ಜನಸಂಖ್ಯೆಯ ಗಾತ್ರ, ರಚನೆ ಲಕ್ಷಣಗಳು, ಹಂಚಿಕೆ ಹಾಗೂ ಅವುಗಳ ಬದಲಾವಣೆಗಳನ್ನು ಜನಸಂಖ್ಯೆಯ ಅಧ್ಯಯನದ ಪ್ರಕ್ರಿಯೆಗಳಾದ ಜನನ, ಮರಣ, ವಲಸೆ ಮತ್ತು ಸಾಮಾಜಿಕ ಚಲನೆಗಳ ಅಧ್ಯಯನದ ಮೂಲಕ ಅಭ್ಯಸಿಸುತ್ತದೆ. ಜನಸಂಖ್ಯಾ ಅಧ್ಯಯನದಿಂದ ವ್ಯಕ್ತಿಯ ವೈಯಕ್ತಿಕ ಆಸೆ ಮತ್ತು ಪ್ರಯತ್ನಗಳು ಹೇಗೆ ಸಮುದಾಯದ ಮೇಲೆ ವ್ಯಾಪಕವಾದ ಪರಿಣಾಮ ಬೀರಬಲ್ಲವೆಂಬುದನ್ನು ಜನಸಂಖ್ಯಾ ಅಧ್ಯಯನದ ವಿವಿಧ ಹಂತಗಳಾದ ಫಲವತ್ತತೆ, ಮರಣದರ, ವಲಸೆಗಳಲ್ಲುಂಟಾಗುವ ವ್ಯತ್ಯಾಸಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ. ಜನಸಂಖ್ಯೆಯ ಅಧ್ಯಯನದಲ್ಲಿ ವೈವಾಹಿಕ ಅಂತಸ್ತು, ಕೌಟುಂಬಿಕ ರಚನೆ, ಜಾತಿ, ಧರ್ಮ, ಶಿಕ್ಷಣ, ಉದ್ಯೋಗ ಮುಂತಾದ ಅನೇಕ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ವಿಶ್ಲೇಷಣೆಯಲ್ಲದೆ, ನಗರೀಕರಣ ಮತ್ತು ವಲಸೆಯ ರೂಪು ರೇಷೆಗಳನ್ನು ಮತ್ತು ಸಮಸ್ಯೆಗಳನ್ನು ಅಭ್ಯಸಿಸಬಹುದಾಗಿದೆ.

ಡಬ್ಲ್ಯು.ಎಸ್.ಥಾಮ್ಸನ್ ಮತ್ತು ಡೇವಿಡ್ ಲೇವಿಸ್‌ರವರು ತಮ್ಮ ಜನಸಂಖ್ಯಾ ಸಮಸ್ಯೆಗಳು ಎಂಬ ಗ್ರಂಥದಲ್ಲಿ ಜನಸಂಖ್ಯಾ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ ಬಗ್ಗೆ ತಿಳಿಸಿದ್ದಾರೆ. ಇವರ ಪ್ರಕಾರ ಇದರ ವ್ಯಾಪ್ತಿಯು ಮೂರು ವಿಶಾಲ ಕ್ಷೇತ್ರಗಳ ಅಧ್ಯಯನವನ್ನು ಒಳಗೊಂಡಿದೆ. ಅವುಗಳೆಂದರೆ ಜನಸಂಖ್ಯಾಗಾತ್ರ, ಬದಲಾವಣೆಗಳು ಕಾರಣಗಳು; ವಿವಿಧ ಸಮುದಾಯಗಳಲ್ಲಿ ಜನರ ಹಂಚಿಕೆ; ಸಮುದಾಯದಲ್ಲಿ ಕಂಡುಬರುವ ಜನರಗುಂಪುಗಳು ಮತ್ತು ಅವುಗಳಿಗಿರುವ ವ್ಯತ್ಯಾಸಗಳು.

ಜನಸಂಖ್ಯಾ ಅಧ್ಯಯನವನ್ನು ಎರಡು ಹಂತಗಳಲ್ಲಿ ಅಭ್ಯಾಸಿಸಲಾಗುತ್ತದೆ. ಅವುಗಳೆಂದರೆ ಸ್ಥಿರ ಹಂತ ಮತ್ತು ಚರಹಂತ.

ಸ್ಥಿರಹಂತದಲ್ಲಿ ಜನಸಂಖ್ಯಾ ಅಂಕಿ ಅಂಶಗಳ ಸಂಗ್ರಹಣೆ, ಜನಸಂಖ್ಯಾ ಬೆಳವಣಿಗೆ ಮತ್ತು ಜನಸಂಖ್ಯೆಯ ಸ್ಥಿರತೆಯ ಬಗ್ಗೆ ಅಭ್ಯಾಸಿಸಲಾಗುವುದು ಚರಹಂತದಲ್ಲಿ ಜನಸಂಖ್ಯೆಯಲ್ಲುಂಟಾಗುವ ಆಂತರಿಕ ಬೆಳವಣಿಗೆಯ ಅಂಶಗಳನ್ನು ಅಭ್ಯಾಸಿಸಲಾಗುವುದು.

ಒಟ್ಟಾರೆಯಾಗಿ ಜನಸಂಖ್ಯಾ ಅಧ್ಯಯನ ಜನಸಂಖ್ಯಾಗಾತ್ರ, ರಚನೆ, ಲಕ್ಷಣಗಳು, ಹಂಚಿಕೆ ಮತ್ತು ಕಾಲದಿಂದ ಕಾಲಕ್ಕೆ ಅವುಗಳಲ್ಲಿ ಉಂಟಾಗುವ ಬದಲಾವಣೆಗಳ ವಿಶ್ಲೇಷಣೆಯಷ್ಟೆಯಲ್ಲದೆ, ಜನಸಂಖ್ಯೆ ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ, ಭೌಗೋಳಿಕ ಅಂಶಗಳ ನಡುವೆ ಇರುವ ಸಂಬಂಧದ ಕೂಲಂಕಷ ಅಧ್ಯಯನವನ್ನೊಳಗೊಂಡಿದೆ. (ಕೆ.ಎಸ್.)

# ಜನಸಂಖ್ಯಾ ನಿಯಂತ್ರಣ ನೀತಿಗಳು – ಜನಸಂಖ್ಯಾ ಬೆಳವಣಿಗೆ

**ಜನಸಂಖ್ಯಾ ನಿಯಂತ್ರಣ ನೀತಿಗಳು:** ಜನಸಂಖ್ಯಾ ನೀತಿ ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನರೂಪ ಹೊಂದಿರುತ್ತದೆ. ಕೆಲವೊಂದು ರಾಷ್ಟ್ರಗಳು ಜನಸಂಖ್ಯಾ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ನೀತಿಗಳನ್ನು ಅನುಸರಿಸಿದರೆ ಮತ್ತೆ ಕೆಲವು ರಾಷ್ಟ್ರಗಳು ಜನಸಂಖ್ಯೆಯನ್ನು ನಿಯಂತ್ರಿಸುವ ನೀತಿಗಳನ್ನು ಅನುಸರಿಸುತ್ತವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅತ್ಯಧಿಕ ಜನಸಂಖ್ಯೆಯನ್ನು ಹೊಂದಿದ್ದು ಇಂತಹ ದೇಶಗಳಲ್ಲಿ ಹುಟ್ಟುವ ಮಕ್ಕಳ ಪ್ರಮಾಣವನ್ನು ಕಡಿಮೆಗೊಳಿಸಿದರೆ ಜನಸಂಖ್ಯೆ ತನ್ನಿಂದ ತಾನೇ ನಿಯಂತ್ರಣಗೊಳ್ಳುತ್ತದೆ. ಈ ನಿಯಂತ್ರಣಕ್ಕಾಗಿ 2 ಕ್ರಮಗಳನ್ನು ಅನುಸರಿಸಲಾಗುತ್ತಿದೆ.

ನೇರ ಕ್ರಮಗಳು: ಇಲ್ಲಿ ಜನರಿಗೆ ಜನನ ನಿಯಂತ್ರಣದ ಬಗ್ಗೆ ಶಿಕ್ಷಣ ಕೊಡುವುದು, ಕುಟುಂಬ ಯೋಜನಾ ಉಪಕರಣಗಳನ್ನು ಬಳಸುವಂತೆ ಸಲಹೆ ನೀಡುವುದು, ಕಾನೂನು ಬದ್ಧವಾಗಿ ಸ್ತ್ರೀಯರ ವಿವಾಹದ ವಯಸ್ಸನ್ನು ಹೆಚ್ಚಿಸುವುದರ ಮೂಲಕ ಜನಸಂಖ್ಯೆಯನ್ನು ನಿಯಂತ್ರಿಸಬಹುದಾಗಿದೆ.

ಪರೋಕ್ಷ ಕ್ರಮಗಳು: ಇವು ಒಂದು ರೀತಿಯ ಪ್ರೋತ್ಸಾಹ ಹಾಗೂ ನಿರ್ಬಂಧಗಳಾಗಿವೆ.

ಪ್ರೋತ್ಸಾಹ ಬಹುಮಾನಗಳು: ಜನನ ನಿಯಂತ್ರಣವನ್ನು ಅನುಸರಿಸುವ ದಂಪತಿಗಳಿಗೆ ಹಣ ಮತ್ತಿತರ ವಸ್ತುಗಳ ರೂಪದಲ್ಲಿ ಬಹುಮಾನಗಳನ್ನು ನೀಡುವುದರ ಮೂಲಕ ಹಾಗೂ ಉಚಿತ ಶಿಕ್ಷಣ, ವಿದ್ಯಾರ್ಥಿವೇತನ ಇತ್ಯಾದಿ ಸಾಧನಗಳನ್ನು ಒದಗಿಸುವುದರ ಮೂಲಕ ಚಿಕ್ಕ ಕುಟುಂಬವನ್ನು ಪ್ರೋತ್ಸಾಹಿಸಿ ಜನಸಂಖ್ಯೆಯನ್ನು ನಿಯಂತ್ರಿಸಬಹುದಾಗಿದೆ.

ನಿಷೇಧಗಳು: ಅಧಿಕ ಮಕ್ಕಳನ್ನು ಪಡೆಯುವ ಕುಟುಂಬಗಳಿಗೆ ಅನೇಕ ಸವಲತ್ತುಗಳನ್ನು ನಿರಾಕರಿಸಿ ಒತ್ತಡವನ್ನುಂಟುಮಾಡುವುದು.

ಉದಾ: ಹೆಚ್ಚು ಮಕ್ಕಳಾದವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಯ ವೆಚ್ಚವನ್ನೇರಿಸುವುದು. 3 ಅಥವಾ 4 ನೆಯ ಹೆರಿಗೆಗೆ ಸಂಬಳ ಸಹಿತ ರಜೆ ಕೊಡದಿರುವುದು. 3 ಮಕ್ಕಳ ಅನಂತರ ಆದಾಯ ತೆರಿಗೆ ವಿನಾಯಿತಿ ನೀಡದಿರುವುದು. ಬೃಹತ್ ಕುಟುಂಬಗಳಿಗೆ ಯಾವುದೇ ರೀತಿಯ ಸಹಾಯಧನ ಹಾಗೂ ಆದ್ಯತೆ ನೀಡದಿರುವುದು. ಸ್ತ್ರೀಯ ಸ್ಥಾನಮಾನಗಳನ್ನು ಉತ್ತಮ ಪಡಿಸುವುದು: ಉತ್ತಮ ಶಿಕ್ಷಣದಿಂದ ಸ್ತ್ರೀಯ ಆರ್ಥಿಕ ಸ್ಥಿತಿಗತಿಗಳು ಹೆಚ್ಚುವ ಸಾಧ್ಯತೆಗಳಿವೆ ಉದ್ಯೋಗಾವಕಾಶಗಳು ಹೆಚ್ಚುವುದರಿಂದ ಆಕೆ ಹೆಚ್ಚು ಮಕ್ಕಳನ್ನು ಪಡೆಯಲು ಇಚ್ಛಿಸುವುದಿಲ್ಲ. ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಯನ್ನು ಉತ್ತಮಪಡಿಸುವುದು. ಉತ್ತಮ ಆರೋಗ್ಯ ಮತ್ತು ಪೌಷ್ಟಿಕಾಂಶಗಳನ್ನು ಒದಗಿಸುವುದು.

ಸಾಮಾಜಿಕ ರಕ್ಷಣೆ: ಸಮಾಜದ ಹಿರಿಯ ನಾಗರಿಕರ ಹೊರೆ ಹೊರುವ ಜವಾಬ್ದಾರಿಯನ್ನು ಸರ್ಕಾರವು ನಿರ್ವಹಿಸಿದರೆ ರಕ್ಷಣೆಗಾಗಿ ಹೆಚ್ಚು ಮಕ್ಕಳನ್ನು ಪಡೆಯುವ ಹಂಬಲ ಕಡಿಮೆಯಾಗಿ ಜನಸಂಖ್ಯೆ ಕಡಿಮೆಯಾಗುತ್ತದೆ. ಇವುಗಳಲ್ಲದೆ ಕುಟುಂಬ ನಿವೃತ್ತಿ ವೇತನ, ವೃದ್ಧಾಪ್ಯ ವೇತನ, ವೃದ್ಧಾಶ್ರಮ ನಿರ್ಮಾಣ, ಅಪಘಾತಗಳಾದ ಸಂದರ್ಭದಲ್ಲಿ ರಕ್ಷಣೆ ಮತ್ತು ವಿಮಾ ಮುಂತಾದ ಸೌಲಭ್ಯ ಕಲ್ಪಿಸಿ ಜನಸಂಖ್ಯೆಯನ್ನು ನಿಯಂತ್ರಿಸಬಹುದು. (ಕೆ.ಎಸ್.)

**ಜನಸಂಖ್ಯಾ ನೀತಿ:** ಜನಸಂಖ್ಯಾ ನೀತಿ ಮುಖ್ಯವಾಗಿ ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವುದಾಗಿದೆ. ಒಂದು ದೇಶದಲ್ಲಿ ಜನಸಂಖ್ಯಾ ಬೆಳವಣಿಗೆ ಮಿತಿ ಮೀರುತ್ತಿದ್ದರೆ ಅಥವಾ ಕನಿಷ್ಠ ಮಟ್ಟಕ್ಕಿಂತ ಕೆಳಗಿಳಿಯುತ್ತಿದ್ದರೆ ಅದನ್ನು ನಿಯಂತ್ರಿಸಲು ಸರಕಾರವು ಅನೇಕ ನೀತಿ–ನಿಯಮಗಳನ್ನು ಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕಾಗುತ್ತದೆ. ಇಂತಹ ನಿರ್ಣಯಗಳು ಜನಸಂಖ್ಯಾ ನೀತಿಗಳು ಎನಿಸಿಕೊಳ್ಳುತ್ತವೆ. ಉದಾಹರಣೆಗೆ ಭಾರತದಲ್ಲಿ ಜನಸಂಖ್ಯೆ ಮಿತಿಮೀರಿ ಬೆಳೆದು ಅನೇಕ ಸಮಸ್ಯೆಗಳನ್ನು ಸೃಷ್ಟಿಸಿದ್ದರಿಂದ ಭಾರತ ಸರಕಾರವು ಅನೇಕ ಜನಸಂಖ್ಯಾ ನೀತಿಗಳನ್ನು ಜಾರಿಯಲ್ಲಿ ತಂದಿದೆ. ತನ್ನ ಪಂಚವಾರ್ಷಿಕ ಯೋಜನೆಗಳಲ್ಲಿ ಈ ನೀತಿ–ನಿಯಮಗಳನ್ನು ಮಾಡಿದೆ. ಇದರ ಮುಖಾಂತರ ಜನಸಂಖ್ಯಾ ಬೆಳವಣಿಗೆಗೆ ಕಾರಣೀಭೂತವಾದ ಅಂಶಗಳನ್ನು ಸರಿಯಾಗಿ ಗುರುತಿಸಲಾಗುತ್ತದೆ. ಕುಟುಂಬದ ಗಾತ್ರವನ್ನು ಕಡಿತಗೊಳಿಸುವ ಅನೇಕ ತಂತ್ರ–ಪದ್ಧತಿಗಳನ್ನು ಕಂಡುಹಿಡಿಯುವುದು, ಇವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಅವುಗಳನ್ನು ಅಳವಡಿಸಿಕೊಳ್ಳುವಂತೆ ಮಾಡುವುದು, ಸರಕಾರಿ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಇವುಗಳ ಬಗ್ಗೆ ಸೇವೆ ಹಾಗೂ ಮಾಹಿತಿ ಲಭ್ಯವಾಗುವಂತೆ ಮಾಡುವುದು, ಈ ರೀತಿಯ ಜನಸಂಖ್ಯಾನೀತಿಯು ಪ್ರತಿಯೊಂದು ದೇಶಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಅವಶ್ಯಕವಾಗಿರುತ್ತದೆ. (ಎಸ್.ಐ.ಬಿ.)

**ಜನಸಂಖ್ಯಾ ಬೆಳವಣಿಗೆ:** ಜನನ ದರ ಮತ್ತು ಮರಣದರ ಇವುಗಳಿಂದಾಗಿ ಒಟ್ಟು ಜನಸಂಖ್ಯೆಯಲ್ಲಿ ಉಂಟಾಗುವ ವ್ಯತ್ಯಾಸಕ್ಕೆ ಜನಸಂಖ್ಯಾ ಬೆಳವಣಿಗೆ ಎನ್ನಬಹುದು. 20ನೆಯ ಶತಮಾನ 2 ಬಿಲಿಯನ್ ಜನಸಂಖ್ಯೆಯೊಡನೆ ಆರಂಭಗೊಂಡು 6 ಬಿಲಿಯನ್ ಜನಸಂಖ್ಯೆಯೊಡನೆ ಅಂತ್ಯಗೊಂಡಿದೆ. ಒಂದೇ ಶತಮಾನದಲ್ಲಿ ಮೂರು ಪಟ್ಟು ಜನಸಂಖ್ಯೆ ಅಧಿಕಗೊಂಡಿದೆ. ಮಾನವನ ಇತಿಹಾಸದಲ್ಲೇ ಜನಸಂಖ್ಯೆಯ ಅತ್ಯಧಿಕ ಹೆಚ್ಚಳ ಇತ್ತೀಚಿನ ಪ್ರವೃತ್ತಿಯಾಗಿದೆ ಎಂಬುವ ವಿಚಾರವನ್ನು ಕೆಳಗಿನ ಅಂಕಿ ಅಂಶಗಳಿಂದ ತಿಳಿಯಬಹುದು.

| ವರ್ಷ | ಜನಸಂಖ್ಯೆ ದಶಲಕ್ಷಗಳಲ್ಲಿ | ಒಂದು ಬಿಲಿಯನ್ ಜನಸಂಖ್ಯೆಯ ಹೆಚ್ಚಳದ ಅವಧಿ |
|---|---|---|
| ಪ್ರ.ಶ.ಪೂ. 10,000 | 5 ದ.ಲ | – |
| 1 | 200 ದ.ಲ | – |
| 1650 | 500 ದ.ಲ | – |
| 1850 | 1000 ದ.ಲ | – |
| 1930 | 2000 ದ.ಲ | 80 ವರ್ಷ |
| 1962 | 3000 ದ.ಲ | 32 ವರ್ಷ |
| 1975 | 4000 ದ.ಲ | 13 ವರ್ಷ |
| 1987 | 5000 ದ.ಲ | 12 ವರ್ಷ |
| 1999 | 6000 ದ.ಲ | 12 ವರ್ಷ |
| 2011 | 7000 ದ.ಲ (ಅಂದಾಜು) | 12 ವರ್ಷ |
| 2025 | 8000 ದ.ಲ (ಅಂದಾಜು) | 14 ವರ್ಷ |

ಮೇಲಿನ ಪಟ್ಟಿಯಿಂದ ತಿಳಿಯುವ ಅಂಶವೆಂದರೆ 1962–1975ರ ನಡುವೆ ಕೇವಲ 13 ವರ್ಷಗಳ ಅವಧಿಯಲ್ಲಿ ಪ್ರಪಂಚದ ಜನಸಂಖ್ಯೆ 100 ಕೋಟಿಯಷ್ಟು ಅಧಿಕವಾದುದು. ಈ ವೇಗದಲ್ಲಿ ಜನಸಂಖ್ಯೆಯು ಬೆಳವಣಿಗೆ ಹೊಂದಲು ವೈದ್ಯಕೀಯ ಕ್ಷೇತ್ರದಲ್ಲಾದ ಕ್ರಾಂತಿಕಾರಕ ಬದಲಾವಣೆಗಳು. ಸರ್ಕಾರಗಳು ಕೈಗೊಂಡ ಸಮಾಜ ಸೇವಾ ಕಲ್ಯಾಣ ಕಾರ್ಯಕ್ರಮಗಳು, ತಾಯಿ ಶಿಶುವಿನ ಆರೋಗ್ಯ, ಇವುಗಳಿಂದಾಗಿ ಮರಣದಲ್ಲಿ ಇಳಿಕೆ. ಮರಣದರಕ್ಕೆ ತಕ್ಕಂತೆ ಜನನ ದರ ಕಡಿಮೆಯಾಗದೆ ಇರುವುದು ತ್ವರಿತ ಜನಸಂಖ್ಯಾ ಬೆಳವಣಿಗೆಗೆ ಕಾರಣವಾಯಿತು.

ಹಂತಗಳು: ಪ್ರಪಂಚದ ಜನಸಂಖ್ಯಾ ಬೆಳವಣಿಗೆಯು ವ್ಯವಸಾಯ ಮತ್ತು ಕೈಗಾರಿಕೆಗಳ ಅಭಿವೃದ್ಧಿಯೊಂದಿಗೆ ನೇರ ಸಂಬಂಧ ಹೊಂದಿದೆ. ಬೇಟೆ ಮತ್ತು ಅರಣ್ಯ ವಸ್ತುಗಳ ಸಂಗ್ರಹಣೆಯ ವೃತ್ತಿಯನ್ನು ಅವಲಂಬಿಸಿದ್ದ ಹಂತಗಳಲ್ಲಿ ಆಹಾರದ ಪೂರೈಕೆಯೂ ಕಡಿಮೆಯಿತ್ತು. ಇದಕ್ಕೆ ಪೂರಕವಾಗಿ ಜನಸಂಖ್ಯೆಯ ಬೆಳವಣಿಗೆಯೂ ಪ್ರಾಕೃತಿಕವಾಗಿ ನಿಯಂತ್ರಿಸಲ್ಪಟ್ಟಿತ್ತು. ಆದರೆ ವ್ಯವಸಾಯ ಪ್ರಾರಂಭವಾದ ಮೇಲೆ ಮಾನವ ತಾನೇ ಆಹಾರವನ್ನು ಉತ್ಪಾದಿಸ ತೊಡಗಿದ. ಇದರಿಂದ ಪ್ರಾಕೃತಿಕ ಆಹಾರದ ಅವಲಂಬನೆ ಕಡಿಮೆಯಾಯಿತು. ಇದು ಜನ ಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಯಿತು.

ಕೈಗಾರಿಕಾ ಕ್ರಾಂತಿಯಿಂದ ಪ್ರಾರಂಭದಲ್ಲಿ ನಗರಗಳು ಅಹಿತಕರ ಪರಿಸರದಿಂದ ಕೂಡಿ ರೋಗ–ರುಜಿನಗಳು ಅಪಾರ ಪ್ರಮಾಣದಲ್ಲಿ ಮೈದೋರಿ ಆಗಿಂದಾಗ್ಗೆ ಅಪಾರ ಸಾವಿಗೆ ಕಾರಣವಾದರೂ ಅನಂತರದ ಅವಧಿಯಲ್ಲಿ ಆರ್ಥಿಕ ಸುಧಾರಣೆಗಳೊಡನೆ ಜನರ ಜೀವನಮಟ್ಟವೂ ನಿಧಾನವಾಗಿ ಸುಧಾರಣೆಯಾಯಿತು. ಹೀಗೆ ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿನ ಪ್ರಗತಿ ಜನನ–ಮರಣಗಳ ಏರಿಳಿತಕ್ಕೆ ಕಾರಣವಾಗಿ ಜನಸಂಖ್ಯೆಯ ಅತೀವ ಬೆಳವಣಿಗೆಗೆ ಕಾರಣಗಳಾಗಿ ಪರಿಣಮಿಸಿದವು. ಇವುಗಳಲ್ಲದೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಭೌತಿಕ ಅಂಶಗಳೂ ಸಹ ತೀವ್ರತರಹದ ಜನಸಂಖ್ಯಾ ಬಾಹುಳ್ಯಕ್ಕೆ ಕಾರಣಗಳಾಗಿ ಪರಿಣಮಿಸಿವೆ.

ಜನನ, ಮರಣ, ವಲಸೆ ಇವು ಒಂದು ಪ್ರದೇಶದ ಜನಸಂಖ್ಯೆಯ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಅಂಶಗಳು. ಆದ್ದರಿಂದ ಇವುಗಳನ್ನು ಜನಸಂಖ್ಯಾ ಬೆಳವಣಿಗೆಯ ಘಟನೆಗಳೆಂದು ಕರೆಯುತ್ತೇವೆ. ವಲಸೆಯ ಪ್ರಭಾವವು ಕೆಲವೇ ಪ್ರದೇಶಗಳಿಗೆ ಸೀಮಿತವಾಗಿದ್ದರೆ ಜನನ ಮರಣಗಳ ಪ್ರಭಾವವು ಪ್ರಪಂಚ ವ್ಯಾಪಿಯಾಗಿದೆ.

ಸ್ವಾಭಾವಿಕ ಬೆಳವಣಿಗೆ: ಜನನ ಮರಣಗಳ ಅಂತರವನ್ನೇ ಜನಸಂಖ್ಯೆಯ ಸ್ವಾಭಾವಿಕ ಹೆಚ್ಚಳವೆಂದು ಕರೆಯುವರು. ಜನನ ಪ್ರಮಾಣ ಮರಣಕ್ಕಿಂತ ಅಧಿಕವಾಗಿದ್ದರೆ ಇದನ್ನು ಧನಾತ್ಮಕ ಬೆಳವಣಿಗೆ ಎಂದೂ ಇದಕ್ಕೆ ಬದಲಾಗಿ ಜನನದರ ಮರಣಕ್ಕಿಂತ ಕಡಿಮೆಯಾಗಿದ್ದಲ್ಲಿ ಋಣಾತ್ಮಕ ಬೆಳವಣಿಗೆ ಎಂದೂ ಕರೆಯುವರು.

ಜನಸಂಖ್ಯಾ ಬೆಳವಣಿಗೆಯ ಸಿದ್ಧಾಂತಗಳು: ಜನಸಂಖ್ಯಾ ಬೆಳವಣಿಗೆಯನ್ನು ಕುರಿತ ಸಿದ್ಧಾಂತಗಳಲ್ಲಿ ಮಾಲ್ತಸ್ ಥಾಮಸ್ ರಾಬರ್ಟ್‌ರವರ ಸಿದ್ಧಾಂತ ಪ್ರಮುಖವಾಗಿದ್ದು ಇವರು ಜನಸಂಖ್ಯೆ ಯಾವುದೇ ನಿಯಂತ್ರಣವಿಲ್ಲದಿದ್ದರೆ ರೇಖಾಗಣಿತದ (2, 4, 8, 16, 32, 64) ಪ್ರಮಾಣದಲ್ಲೂ ಆಹಾರದ ಉತ್ಪಾದನೆಯು ಅಂಕಗಣಿತದ ಪ್ರಮಾಣದಲ್ಲಿ (1,2,3,4,5,6,7) ಮುಂದುವರಿಯುತ್ತದೆ. ಪ್ರತಿ 20–25 ವರ್ಷಗಳಿಗೊಮ್ಮೆ ಜನಸಂಖ್ಯೆ ದ್ವಿಗುಣಗೊಳ್ಳುತ್ತದೆ.

ಆದರ್ಶ ಜನಸಂಖ್ಯಾ ಸಿದ್ಧಾಂತದ ಪ್ರಕಾರ ಅತ್ಯಧಿಕ ತಲಾದಾಯ ಮತ್ತು ಉತ್ಪಾದನೆಯು ಗರಿಷ್ಠ ಮಟ್ಟವನ್ನು ಮುಟ್ಟಿದಾಗ ಇರುವ ಜನಸಂಖ್ಯೆಯೇ ಆದರ್ಶ ಜನಸಂಖ್ಯೆ. ಒಂದು ದೇಶದ ಜನಸಂಖ್ಯೆ ಈ ಮಟ್ಟವನ್ನು ತಲುಪದಿದ್ದರೆ ಕನಿಷ್ಠ ಜನಸಂಖ್ಯೆ ಇದೆಯೆಂದು ತಿಳಿಯಬಹುದು. ಕನಿಷ್ಠ ಜನಸಂಖ್ಯೆ ಇರುವ ಕಡೆ ಕಾರ್ಮಿಕ ಬಲ ಕಡಿಮೆಯಾಗಿ ನೈಸರ್ಗಿಕ ಸಂಪನ್ಮೂಲಗಳ ಬಳಕೆಯಾಗದೆ ತಲಾದಾಯ ಕಡಿಮೆ ಇರುತ್ತದೆ. ಆದರ್ಶಮಟ್ಟಕ್ಕಿಂತ ಜನಸಂಖ್ಯೆ ಹೆಚ್ಚಾಗಿದ್ದರೆ ಗರಿಷ್ಠ ಜನಸಂಖ್ಯೆ ಎಂದು ಕರೆಯಲಾಗಿದೆ. ಗರಿಷ್ಠ ಜನ ಸಂಖ್ಯೆಯ ಹೊರೆ ಹೆಚ್ಚಾಗಿ ಆದಾಯ ಕಡಿಮೆಯಾಗುತ್ತದೆ. ಆದುದರಿಂದ ದೇಶದ ಜನಸಂಖ್ಯೆ ಬೆಳವಣಿಗೆ ಆ ದೇಶದ ನೈಸರ್ಗಿಕ ಸಂಪನ್ಮೂಲಗಳ ಬಳಕೆಗೆ ಅನುಗುಣವಾಗಿರಬೇಕೆಂದು ಸಿಡ್ನ್‌ವಿಕ್, ಎಡ್ವಿನ್ ಕ್ಯಾನನ್, ರಾಬಿನ್ಸ್ ಡಾಲ್ಟನ್ ಮತ್ತು ಕಾರ್ ಸಾಚರ್ಸ್ ತಿಳಿಸಿದ್ದಾರೆ. (ಕೆ.ಎಸ್.)

**ಜನಸಂಖ್ಯಾ ಭೂಗೋಳ ವಿಜ್ಞಾನ:** ಇದು ಮಾನವ ಭೂಗೋಳ ವಿಜ್ಞಾನದ ಒಂದು ಪ್ರಮುಖ ಶಾಖೆಯಾಗಿದ್ದು ಇದು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ಬೆಳೆಯಲು ಕಾರಣ ಕರ್ತರಾದವರು ತ್ರಿವಾರ್ಥ. ಆದುದರಿಂದಲೇ ತ್ರಿವಾರ್ಥರವರನ್ನು ಜನಸಂಖ್ಯಾ ಭೂಗೋಳ ವಿಜ್ಞಾನದ ಪಿತಾಮಹನೆಂದು ಕರೆಯುವರು. ಇವರು 1953ರಲ್ಲಿ ಅಮೆರಿಕದ ಭೂಗೋಳಶಾಸ್ತ್ರಜ್ಞರ ಸಂಘದ ವಾರ್ಷಿಕ ಸಭೆಯನ್ನು ಉದ್ದೇಶಿಸಿ ಮಾಡಿದ ತಮ್ಮ ಅಧ್ಯಕ್ಷರ ಭಾಷಣದಲ್ಲಿ ಜನಸಂಖ್ಯಾ ಭೂಗೋಳ ವಿಜ್ಞಾನದ ಅಧ್ಯಯನದ ಪ್ರಾಮುಖ್ಯತೆಯನ್ನು ಪ್ರತಿಪಾದಿಸಿದರು.

ವಿವಿಧ ಪ್ರದೇಶಗಳಲ್ಲಿ ವಿವಿಧತೆಯಿಂದ ಕೂಡಿರುವ ಪ್ರಕೃತಿಯ ಪ್ರಭಾವಳಿಗಳಿಗೆ ಅನುಗುಣವಾಗಿ ಕಂಡು ಬರುವ ಜನಸಂಖ್ಯೆಯ ಅಂಶಗಳ ಅಧ್ಯಾಯನವೇ ಇದರ ವಸ್ತು ವಿಷಯವಾಗಿದೆ. ಯಾವುದೇ ಒಂದು ನಿರ್ದಿಷ್ಟ ಪ್ರದೇಶದ ಜನಸಂಖ್ಯಯ ಅಂಶಗಳ ಬಗ್ಗೆ ತಿಳಿಯಬೇಕಾದರೆ ಅಲ್ಲಿನ ಭೌತಿಕ, ಜೈವಿಕ, ಸಾಂಸ್ಕೃತಿಕ, ಪರಿಸರದ ಅಧ್ಯಯನ ತುಂಬಾ ಅಗತ್ಯವಾಗಿದೆ ಎಂದು ಹೇಳಿದರು.

ಜಾನ್ ಕ್ಲಾರ್ಕ್‌ರವರು 1965 ರಲ್ಲಿ ಜನಸಂಖ್ಯಾ ಭೂಗೋಳ ಎಂಬ ಗ್ರಂಥವನ್ನು ಪ್ರಕಟಿಸಿ ಜನಸಂಖ್ಯಾ ಹಂಚಿಕೆ, ಸಂಯೋಜನೆ, ವಲಸೆ ಮತ್ತು ಬೆಳೆವಣಿಗೆಯು ಸ್ಥಾನೀಯವಾಗಿ ವ್ಯತ್ಯಾಸ ಹೊಂದಿರಲು ಆ ಪ್ರದೇಶದ ಪ್ರಾಕೃತಿಕಾಂಶಗಳ ಸ್ಥಾನೀಯ ವ್ಯತ್ಯಾಸವೇ ಕಾರಣವೆಂದು ತಿಳಿಸುವ ಮೂಲಕ ಶಾಸ್ತ್ರದ ಬೆಳವಣಿಗೆ ಕಾರಣರಾದರು.

ಇವರು ಜನಸಂಖ್ಯಾ ಭೂಗೋಳ ವಿಜ್ಞಾನದ ಪರಿಕಲ್ಪನೆ ಮತ್ತು ಅದು ಒಳಗೊಂಡಿರುವ ಅಂಶಗಳನ್ನು 3 ಗುಂಪುಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ:

ಎ) ಜನಸಂಖ್ಯಾ ಭೂಗೋಳ ವಿಜ್ಞಾನ ಅಪಾರ ಅಂಕಿ ಅಂಶಗಳನ್ನು ಒಳಗೊಂಡಿರುತ್ತದೆ.

ಬಿ) ಭೌತಿಕವಾಗಿ ಜನರ ಲಿಂಗ, ವಯಸ್ಸು, ಜನಾಂಗ, ಬುದ್ಧಿವಂತಿಕೆ ಇತ್ಯಾದಿಗಳನ್ನು, ಸಾಮಾಜಿಕವಾಗಿ ಅವರ ಕುಟುಂಬ, ಸಾಕ್ಷರತೆ, ಭಾಷೆ, ಶಿಕ್ಷಣ, ಧರ್ಮ, ರಾಷ್ಟ್ರೀಯತೆ, ಜನಾಂಗೀಯ ಗುಂಪು ಮುಂತಾದವುಗಳು, ಆರ್ಥಿಕವಾಗಿ ಅವರ ವೃತ್ತಿ ಕಸುಬು ಆದಾಯ ಇತ್ಯಾದಿಗಳ ಅಧ್ಯಯನವನ್ನು ಒಳಗೊಂಡಿದೆ.

ಸಿ) ಫಲಿತತೆ, ಮರ್ತ್ಯತೆ, ವಲಸೆ ಇತ್ಯಾದಿ ಜನಸಂಖ್ಯೆಯಲ್ಲಿ ಬದಲಾವಣೆ ತರುವ ಅಂಶಗಳನ್ನು ಒಳಗೊಂಡಿದೆ ಎಂದು ತಿಳಿಸಿದ್ದಾರೆ.

ಜನಸಂಖ್ಯಾಯ ಅಂಶಗಳಾದ ಜನನ, ಮರಣ, ವಲಸೆ, ಲಿಂಗ ಸಂಯೋಜನೆ, ವೃತ್ತಿ ರಚನೆ, ವಯೋರಚನೆ, ಸಾಕ್ಷರತೆ ಮುಂತಾದವುಗಳ ಮೇಲೆ ಪ್ರಾಕೃತಿಕಾಂಶಗಳು ಅತಿ ಹೆಚ್ಚಿನ ಪ್ರಭಾವ ಬೀರುತ್ತವೆ. ಉತ್ತಮ ವಾಯುಗುಣ ಹಾಗೂ ಉದ್ಯೋಗಾವಕಾಶಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಅತ್ಯಧಿಕ ಜನರೂ ಅತಿಶೀತ, ಅತಿಉಷ್ಣ ಅತಿತೇವ ವಾಯುಗುಣ ಹಾಗೂ ಮಾನವನ ವಾಸಕ್ಕೆ ಅನಾನುಕೂಲಕರ ಪರಿಸ್ಥಿತಿಗಳಿರುವ ಕಡೆ ಕಡಿಮೆ ಜನಸಂಖ್ಯೆ ಕಂಡುಬರುತ್ತದೆ.

ಒಂದು ಪ್ರದೇಶದಲ್ಲಿ ಕಂಡುಬರುವ ಪರ್ವತಗಳು ನದಿ, ಮೈದಾನ ಪ್ರದೇಶ, ಮರುಭೂಮಿ, ಪ್ರಸ್ಥಭೂಮಿ, ಹುಲ್ಲುಗಾವಲು, ಅರಣ್ಯ, ಕಣಿವೆ, ಇಳಿಜಾರು ಮುಂತಾದ ಪ್ರಾಕೃತಿಕಾಂಶಗಳು ಹೇಗೆ ಆ ಪ್ರದೇಶದ ಜನಸಂಖ್ಯೆಯ ಸ್ಥಾನೀಯ ಹಂಚಿಕೆಗೆ ಕಾರಣವಾಗುತ್ತವೆ ಮತ್ತು ಈ ಅಂಶಗಳು ಹೇಗೆ ಅಲ್ಲಿನ ಜನರ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಮೇಲೆ ಪ್ರಭಾವ ಬೀರಿ ಆ ಮೂಲಕ ಹೇಗೆ ಜನಸಂಖ್ಯೆಯ ಅಂಶಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯತ್ಯಾಸದಿಂದ ಕೂಡಿರುತ್ತವೆ ಎಂಬುದನ್ನು ಅಧ್ಯಯನ ಮಾಡುವುದೇ ಜನಸಂಖ್ಯಾ ಭೂಗೋಳ ವಿಜ್ಞಾನವಾಗಿದೆ. (ಕೆ.ಎಸ್.)

**ಜನಸಂಖ್ಯಾ ಭೂಗೋಳ ವಿಜ್ಞಾನದ ಅಂಕಿಅಂಶಗಳ ಮೂಲಗಳು:** ಜನಸಂಖ್ಯಾ ಭೂಗೋಳವಿಜ್ಞಾನ ಅಂಕಿ ಅಂಶಗಳನ್ನಾಧರಿಸಿದ ವಿಷಯವಾಗಿದ್ದು. ಜನನ, ಮರಣ ವೃತ್ತಿ, ವಲಸೆ, ಸ್ತ್ರೀ ಪುರುಷರ ಪ್ರಮಾಣ, ಸಾಕ್ಷರತೆ, ಗ್ರಾಮೀಣ ಮತ್ತು ನಗರ ಜನಸಂಖ್ಯಾ ಹಂಚಿಕೆ, ವಯಸ್ಸು, ಧರ್ಮ, ಭಾಷೆ ಮುಂತಾದವುಗಳ ಬಗ್ಗೆ ಅಂಕಿ–ಅಂಶಗಳನ್ನು ಸಂಗ್ರಹಿಸಲಾಗುತ್ತದೆ. ಹೀಗೆ ಸಂಗ್ರಹಿಸಿದ ಅಂಕಿ–ಅಂಶಗಳು ನಿರ್ದಿಷ್ಟವಾಗಿರಬೇಕು ಮತ್ತು ನಂಬಲಾರ್ಹವಾಗಿರಬೇಕು. ಅಂಕಿ–ಅಂಶಗಳನ್ನು ಸಾಮಾನ್ಯವಾಗಿ ಎರಡು ಮೂಲಗಳಿಂದ ಪಡೆಯಲಾಗುತ್ತದೆ. ಪ್ರದೇಶ ಚಿಕ್ಕದಾಗಿದ್ದರೆ ಪ್ರಾಥಮಿಕ ಮೂಲಗಳಿಂದಲೂ ಪ್ರದೇಶ ವಿಸ್ತಾರವಾಗಿದ್ದರೆ ದ್ವಿತೀಯ ಮೂಲಗಳಿಂದಲೂ ಅಂಕಿ–ಅಂಶಗಳನ್ನು ಸಂಗ್ರಹಿಸಲಾಗುತ್ತದೆ. ಸಂಶೋಧಕ ಅಧ್ಯಯನ ಕ್ಷೇತ್ರಕ್ಕೆ ಭೇಟಿ ನೀಡಿ ಜನರಿಂದ ಸ್ವತಃ ಸಂಗ್ರಹಿಸಿದ ಅಂಕಿ ಅಂಶಗಳು ಪ್ರಾಥಮಿಕ ಮೂಲದವು. ಬೇರೊಂದು ಮೂಲದಿಂದ ಸಂಗ್ರಹಿಸಿಟ್ಟಿರುವ ಅಂಕಿಅಂಶಗಳನ್ನು ನಾವು ಉಪಯೋಗಿಸಿದರೆ ಅದನ್ನು ದ್ವಿತೀಯ ಮೂಲಕ ಅಂಕಿಅಂಶಗಳು ಎನ್ನುತ್ತಾರೆ.

ದ್ವಿತೀಯ ಮೂಲಗಳ ಅಂಕಿ ಅಂಶಗಳಲ್ಲಿ ಪ್ರಮುಖವಾದವುಗಳೆಂದರೆ ಜನಗಣತಿ ಮಾದರಿ ಸಮೀಕ್ಷೆಗಳು, ಸಾರ್ವಜನಿಕ ನೋಂದಣಿ, ಅಂಕಿ ಅಂಶಗಳ ವಾರ್ಷಿಕ ಪುಸ್ತಕಗಳು, ಸಂಶೋಧನಾ ವರದಿ ಇತ್ಯಾದಿಗಳು.

**ಜನಗಣತಿ:** ಜನಗಣತಿ ಎಂಬ ಪದ ಸೆನ್ಸಸ್ ಎಂಬ ಆಂಗ್ಲ ಪದದ ಕನ್ನಡದ ಅನುವಾದವಾಗಿದೆ. ಸೆನ್ಸಸ್ ಎಂಬ ಪದ ಸೆನ್ಸೂರ್ ಎಂಬ ಲ್ಯಾಟಿನ್ ಪದದಿಂದ ಉಗಮಗೊಂಡಿದೆ. ಸೆನ್ಸೂರ್ ಎಂದರೆ ಮೌಲ್ಯ ಅಥವಾ ತೆರಿಗೆ ಎಂದರ್ಥ. ಮೊದಲು ಜನಗಣತಿ ಯಾರಿಗೆ ತೆರಿಗೆ ವಿಧಿಸಬಹುದು ಮತ್ತು ಯಾರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಹುದೆಂಬುದರ ಮಾಹಿತಿ ಸಂಗ್ರಹಣೆಗೆ ಸೀಮಿತವಾಗಿತ್ತು. ಆದರೆ ಆಧುನಿಕ ಜನಗಣತಿ ವಿಶಾಲವಾದ ಅರ್ಥ ಮತ್ತು ವ್ಯಾಪ್ತಿಯನ್ನು ಹೊಂದಿದೆ.

ವಿಶ್ವಸಂಸ್ಥೆಯ ವರದಿ ನಿಗದಿತ ಕಾಲದಲ್ಲಿ ಸಮಗ್ರ ಅಥವಾ ಯಾವುದಾದರೊಂದು ಭಾಗದ ಎಲ್ಲಾ ಜನರ ಜನಸಂಖ್ಯೆಯ ಆರ್ಥಿಕ ಹಾಗೂ ಸಾಮಾಜಿಕ ಅಂಕಿ–ಅಂಶಗಳನ್ನು ಸಂಗ್ರಹಿಸುವ ಕ್ರೋಢೀಕರಿಸುವ ಪರಿಶೀಲಿಸುವ, ವಿಶ್ಲೇಷಿಸುವ ಮತ್ತು ಪ್ರಕಟಿಸುವ ಕಾರ್ಯಕ್ಕೆ ಜನಗಣತಿ ಎಂದು ವ್ಯಾಖ್ಯಾನಿಸಿದೆ.

ಜನಗಣತಿ ಜನನದ ಬಗ್ಗೆ ಅಪಾರ ಅಂಕಿ–ಅಂಶಗಳನ್ನು ದೊರಕಿಸಿಕೊಡುವುದರಿಂದ ಜನನದ ನೋಂದಣಿ ಕ್ರಮ ಸಮರ್ಪಕವಾಗಿಲ್ಲದ ಕಡೆ ಜನಗಣತಿಯ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ. ಜನಗಣತಿಯಲ್ಲಿ 2 ವಿಧಗಳಿವೆ (ಕಾಲದ ಆಧಾರ). ಹತ್ತು ವರ್ಷಕ್ಕೊಮ್ಮೆ ಮಾಡುವ ಜನಗಣತಿ; ಐದು ವರ್ಷಕ್ಕೊಮ್ಮೆ ಮಾಡುವ ಜನಗಣತಿ; ಪುರಾತನ ಕಾಲದಲ್ಲಿ ಪ್ರಪ್ರಥಮವಾಗಿ ಪ್ರ.ಶ.ಪೂ. 1491 ರಲ್ಲಿ ಜನಗಣತಿ ಮಾಡಲಾಯಿತು. 1086 ರಲ್ಲಿ ಒಂದನೆಯ ವಿಲಿಯಂ ಎಂಬುವರು ಇಂಗ್ಲೆಂಡಿನಲ್ಲಿ ಪ್ರಥಮವಾಗಿ ಜನಗಣತಿ ಮಾಡಿದರು. ಆದರೆ ಆಧುನಿಕ ರೀತಿಯಲ್ಲಿ ಜನಗಣತಿಯನ್ನು ಪ್ರಾರಂಭಿಸಿದ ಮೊದಲ ದೇಶವೆಂದರೆ ಸ್ವೀಡನ್ (1749 ) ಅನಂತರ ಅನೇಕ ದೇಶಗಳು ಇದೇ ಪದ್ಧತಿಯನ್ನು ಅನುಸರಿಸಿ ಜನಗಣತಿಯನ್ನು ಕೈಗೊಂಡವು. ಅಮೆರಿಕದಲ್ಲಿ 1790 ರಲ್ಲಿ ಇಂಗ್ಲೆಂಡಿನಲ್ಲಿ 1801, ಭಾರತದಲ್ಲಿ 1871 ರಲ್ಲಿ ಆಧುನಿಕ ರೀತಿಯ ಜನಗಣತಿ ಪ್ರಾರಂಭವಾಯಿತು.

**ಜನಗಣತಿಯ ಲಕ್ಷಣಗಳು:**

i) ಜನಗಣತಿ ಯಾವುದೇ ಒಂದು ಪ್ರಾಂತ್ಯ ಅಥವಾ ರಾಜ್ಯಕ್ಕೆ ಸೀಮಿತವಾಗಿರದೆ ಇಡೀ ರಾಷ್ಟ್ರಕ್ಕೆ ಅನ್ವಯಿಸುವ ವಿಷಯವಾಗಿದೆ.

ii) ವ್ಯಕ್ತಿಯೇ ಜನಗಣತಿಯ ಮೂಲ ಘಟಕವಾಗಿರುತ್ತಾನೆ.

iii) ಜನಗಣತಿ ಒಂದು ನಿರ್ದಿಷ್ಟ ಕಾಲಕ್ಕೆ ಮಾತ್ರ ಅನ್ವಯವಾಗುತ್ತದೆ.

iv) ಜನಗಣತಿ ಮಾಡಲು ಅಪಾರ ಜನ ಹಣ ಮತ್ತು ಸಂಪತ್ತನ್ನು ತೊಡಗಿಸಬೇಕಾಗಿರುವುದರಿಂದ ಜನಗಣತಿಯ ಕಾರ್ಯವನ್ನು ಸರ್ಕಾರವೇ ವ್ಯವಸ್ಥೆಗೊಳಿಸಬೇಕು.

v) ಜನಗಣತಿಯಿಂದ ಸಂಗ್ರಹಿಸಿದ ಮಾಹಿತಿಗಳನ್ನು ರಹಸ್ಯವಾಗಿಡುವುದರ ಬಗ್ಗೆ ಜನರಿಗೆ ಖಾತ್ರಿಯಾಗಬೇಕು.

**ಜನಗಣತಿಯ ವಿಧಾನಗಳು:**

ಜನಗಣತಿಯು ಪ್ರತ್ಯಕ್ಷವಾಗಿರಬಹುದು ಅಥವಾ ಪರೋಕ್ಷವಾಗಿರಬಹುದು. ಇಲ್ಲವೇ ಗಣಕ ಸ್ಥಳ ವಿಧಾನ ಅಥವಾ ವಾಸಸ್ಥಳ ವಿಧಾನವಾಗಿರಬಹುದು.

ಡಿ–ಜ್ಯೂರಿ ವಿಧಾನದಲ್ಲಿ ವ್ಯಕ್ತಿ ಇರುವ ಸ್ಥಳದಲ್ಲಿಯೇ ಆತನನ್ನು ಗಣತಿ ಮಾಡಿದರೆ ವಾಸಸ್ಥಳ (ಡಿ ಪ್ಯಾಕ್ಟೊ) ವಿಧಾನದಲ್ಲಿ ವ್ಯಕ್ತಿಯ ವಾಸಸ್ಥಾನದಲ್ಲಿ ಮಾತ್ರ ಆತನನ್ನು ಗಣತಿ ಮಾಡಲಾಗುತ್ತದೆ. ಪ್ರತ್ಯಕ್ಷ ವಿಧಾನದಲ್ಲಿ ವ್ಯಕ್ತಿಯಿಂದ ನೇರವಾಗಿ ಮತ್ತು ವೈಯಕ್ತಿಕವಾಗಿ ಮಾಹಿತಿ ಸಂಗ್ರಹಿಸಿದರೆ ಪರೋಕ್ಷ ವಿಧಾನದಲ್ಲಿ ಮಾಹಿತಿಯನ್ನು ಪ್ರಶ್ನಾವಳಿ ಅಥವಾ ಅನುಸೂಚಿಯ ಮೂಲಕ ಪಡೆಯಲಾಗುತ್ತದೆ. (ಬಿ.ಎನ್.ಎಸ್.)

**ಜನಸಂಖ್ಯಾ ಮುನ್ನಂದಾಜು:** ಜನಸಂಖ್ಯಾ ಬೆಳವಣಿಗೆ ಒಂದು ಪ್ರದೇಶ ಅಥವಾ ದೇಶಕ್ಕೆ ಸಂಭಂಧಿಸಿದಂತೆ ಮುಂದೆ ಭವಿಷ್ಯದಲ್ಲಿ ಹೇಗೆ ಮುಂದುವರಿಯಬಹುದೆಂದು ಅಂದಾಜು ಮಾಡುವುದು. ಜನಸಂಖ್ಯಾ ಅಂದಾಜನ್ನು ಕಡಿಮೆ ಅವಧಿಗೆ ಮಾಡಬಹುದು

ಅಥವಾ ದೀರ್ಘಾವಧಿಗೆ ಮಾಡಬಹುದು. ಇದನ್ನು ಮುಖ್ಯವಾಗಿ ಜನನ, ಮರಣ ಮತ್ತು ವಲಸೆ ಪ್ರಮಾಣಗಳನ್ನು ಅಧ್ಯಯನ ಮಾಡಿ ನಿರ್ಧರಿಸಲಾಗುತ್ತದೆ. ಆದರೆ ಭವಿಷ್ಯದಲ್ಲಿ ಸಂಭವಿಸಬಹುದಾದ ಜನನ ಪ್ರಮಾಣ, ಯುದ್ಧ, ಬರಗಾಲ, ಸಾಂಕ್ರಾಮಿಕ ರೋಗ, ವೈದ್ಯಕೀಯ ವಿಜ್ಞಾನದಲ್ಲಿ ಆಗಬಹುದಾದ ಸಂಶೋಧನೆ ಅಥವಾ ಸಾಮಾಜಿಕ–ಆರ್ಥಿಕ ಸ್ಥಿತಿಗಳಲ್ಲಿ ಆಗುವ ಬದಲಾವಣೆ ಇತ್ಯಾದಿಗಳನ್ನು ಮೊದಲೇ ತಿಳಿಯಲು ಸಾಧ್ಯವಿಲ್ಲದ್ದರಿಂದ ಜನಸಂಖ್ಯಾ ಮುನ್ನಂದಾಜನ್ನು ನಿಖರವಾಗಿ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ ಅಮೆರಿಕ ಸಂಯುಕ್ತ ಸಂಸ್ಥಾನ 1921ರಲ್ಲಿ ದೇಶದ ಜನಸಂಖ್ಯೆ 2000 ಇಸ್ವಿಯಲ್ಲಿ 190 ಮಿ. ಎಂದು ಮುನ್ನಂದಾಜು ಮಾಡಿತ್ತು. ಆದರೆ ಆದೇಶದ ಜನಸಂಖ್ಯೆ 1960 ರಲ್ಲಿಯೇ 190 ಮಿ. ದಾಟಿತ್ತು. ಜನಸಂಖ್ಯಾ ಮುನ್ನಂದಾಜು ಮಾಡಲು ಅನೇಕ ಪದ್ಧತಿಗಳಿವೆ. ದಶಕದ ಜನಸಂಖ್ಯಾ ಬೆಳವಣಿಗೆಯ ಪ್ರಮಾಣದ ಮೇಲೆ ಇದನ್ನು ನಿರ್ಧರಿಸಬಹುದು ಅಥವಾ ಜನನ–ಮರಣ–ವಲಸೆ ಪ್ರಮಾಣಗಳ ಮೇಲೆಯೂ ನಿರ್ಧರಿಸಬಹುದು ಒಂದು ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ಈ ಜನಸಂಖ್ಯಾ ಮುನ್ನಂದಾಜು ಬಹಳ ಉಪಯುಕ್ತವಾಗಿದೆ. (ಎಸ್.ಐ.ಬಿ.)

**ಜನಸಂಖ್ಯಾ ವಿಜ್ಞಾನ:** ಇದು ಅತಿ ತರುಣ ವಿಜ್ಞಾನವಾದರೂ ಪ್ರಪಂಚದಾದ್ಯಂತ ಹೆಚ್ಚು ಪ್ರಾಮುಖ್ಯತೆ ಮತ್ತು ಪ್ರಾಧಾನ್ಯತೆ ಪಡೆಯುತ್ತಿರುತ್ತದೆ. 18ನೆಯ ಶತಮಾನದಿಂದೀಚೆಗೆ ಪ್ರಪಂಚದಾದ್ಯಂತ ಅದರಲ್ಲೂ ಹಿಂದುಳಿದ ಮತ್ತು ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಜನಸಂಖ್ಯಾ ಬೆಳವಣಿಗೆ ತೀವ್ರವಾಗಿ ಹೆಚ್ಚಿ ಅಪಾಯಕಾರಿ ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಗಳು ಉಂಟಾಗುತ್ತಿರುವುದರಿಂದ ಜನಸಂಖ್ಯಾವಿಜ್ಞಾನ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ.

ಜನಸಂಖ್ಯೆಯ ಅಂಶಗಳಾದ ಫಲವತ್ತತೆ, ಮರಣದರ ಮತ್ತು ವಲಸೆಗಳನ್ನು ಕುರಿತಾದ ವೈಜ್ಞಾನಿಕ ಅಧ್ಯಯನಕ್ಕೆ ಆಂಗ್ಲಭಾಷೆಯಲ್ಲಿ ಡೆಮಾಗ್ರಫಿ ಎನ್ನುವರು. ಡೆಮಾಗ್ರಫಿ ಎಂಬ ಪದವನ್ನು ಫ್ರೆಂಚ್‍ನ ಸಂಖ್ಯಾಶಾಸ್ತ್ರಜ್ಞರಾದ ಅಚಿಲ್‍ಗುಲ್ಲಾರ್ಡ್ (1799–1876) ಅವರು ಮೊಟ್ಟಮೊದಲ ಬಾರಿಗೆ 1855 ರಲ್ಲಿ ತಮ್ಮ ಎಲಿಮೆಂಟ್ಸ್ ಆಫ್ ಹ್ಯೂಮನ್ ಸ್ಟ್ಯಾಟಿಸ್ಟಿಕ್ಸ್ ಮತ್ತು ಕಂಪ್ಯಾರಿಟೀವ್ ಡೆಮಾಗ್ರಫಿ ಎಂಬ ಪುಸ್ತಕದಲ್ಲಿ ಬಳಸಿದ್ದಾರೆ.

ಡೆಮಾಗ್ರಫಿ ಎಂಬ ಪದ ಡೆಮಾಸ್ ಮತ್ತು ಗ್ರಫಿನ್ ಎಂಬ ಗ್ರೀಕ್ ಪದಗಳ ಸಂಯೋಜನೆಯಾಗಿದ್ದು ಡೆಮಾಸ್ ಎಂದರೆ ಜನರು ಮತ್ತು ಗ್ರಫಿನ್ ಎಂದರೆ ವಿವರಿಸು ಎಂದರ್ಥ. ಒಟ್ಟಾರೆಯಾಗಿ ಜನ ಸಂಖ್ಯೆಯನ್ನು ಕುರಿತ ವೈಜ್ಞಾನಿಕ ಅಧ್ಯಯನವೇ ಡೆಮಾಗ್ರಫಿ.

ಸಮಾಜ ವಿಜ್ಞಾನದ ಒಂದು ಶಾಖೆಯಾಗಿದ್ದ ಜನಸಂಖ್ಯಾವಿಜ್ಞಾನವು ಇಂದು ಒಂದು ಸ್ವತಂತ್ರ ವಿಜ್ಞಾನವಾಗಿ ಬೆಳೆಯುತ್ತಿದೆ. ಜನಸಂಖ್ಯೆಯನ್ನು ಗುಣವನ್ನಾಧರಿಸಿ ಇಲ್ಲವೇ ಸಂಖ್ಯೆಯನ್ನು ಆಧರಿಸಿ ಎರಡು ರೀತಿಯಲ್ಲಿ ಅಭ್ಯಸಿಸಲಾಗುವುದು. ಗುಣವನ್ನಾಧರಿಸಿ ಜನರನ್ನು ಅಧ್ಯಯನ ಮಾಡುವ ಶಾಖೆಯನ್ನು ಯೂಜೆನಿಕ್ಸ್ (ಸುಸಂತಾನಶಾಸ್ತ್ರ) ಎಂದು ಮತ್ತು ಜನರ ಸಂಖ್ಯೆಯನ್ನಾಧರಿಸಿದ ಅಧ್ಯಯನವನ್ನು ಜನಸಂಖ್ಯಾಶಾಸ್ತ್ರವೆಂದು ಹೆಸರಿಸುವರು. ಯೂಜೆನಿಕ್ಸ್‍ನಲ್ಲಿ ಜನರ ಬುದ್ಧಿವಂತಿಕೆ, ರಕ್ತಶುದ್ಧತೆಗೆ ಪ್ರಾಮುಖ್ಯತೆ ನೀಡಿದರೆ ಜನರ ಸಂಖ್ಯೆಯನ್ನಾಧರಿಸಿ ಅಭ್ಯಸಿಸುವಾಗ ಒಟ್ಟು ಸಂಖ್ಯೆಗೆ ಮಾತ್ರ ಪ್ರಾಮುಖ್ಯತೆ ಕೊಡಲಾಗುವುದು.

ಜನಸಂಖ್ಯಾವಿಜ್ಞಾನಕ್ಕೆ ಸ್ಪಷ್ಟ ಹಾಗೂ ನಿರ್ದಿಷ್ಟ ವ್ಯಾಖ್ಯೆಯನ್ನು ನೀಡಲು ಸಾಧ್ಯವಾಗಿಲ್ಲ ಒಟ್ಟಾರೆಯಾಗಿ ಇದು ಜನಸಂಖ್ಯೆಯ ಗುಣಾಂಶ ಮತ್ತು ಸಂಖ್ಯಾಂಶಗಳನ್ನು ಅಭ್ಯಸಿಸುವಲ್ಲಿ ಆಸಕ್ತಿ ವಹಿಸುತ್ತದೆಂದು ಹೇಳಬಹುದು. (ಎಸ್.ಐ.ಬಿ.)

**ಜನಸಂಖ್ಯಾ ವೃದ್ಧಾಪ್ಯ:** ಜನರ ದೀರ್ಘಾವಧಿ ಜೀವನ ವೃದ್ಧ ಜನಸಂಖ್ಯೆ ಬೆಳವಣಿಗೆಗೆ ಕಾರಣವಾಗುತ್ತದೆ. ಕನಿಷ್ಠ ಜನನದರ ಹಾಗೂ ಇದ್ದ ಜನಸಂಖ್ಯೆಗೆ ಸುಲಭವಾಗಿ ದೊರಕುವ ಸುಧಾರಿತ ಆರೋಗ್ಯ ಹಾಗೂ ವೈದ್ಯಕೀಯ ಸೌಲಭ್ಯಗಳಿಂದಾಗಿ ಜನಸಂಖ್ಯೆಯ ಜೀವನಾವಧಿ ದೀರ್ಘವಾಗುತ್ತದೆ. ಈ ಕಾರಣಗಳಿಂದಾಗಿ ವೃದ್ಧರ ಜನಸಂಖ್ಯೆಯು ಹೆಚ್ಚಾಗುತ್ತದೆ. ಬಹಳಷ್ಟು ಜನ ತಮ್ಮ 60 ರ ವಯಸ್ಸಿನಲ್ಲಿ ಕ್ರಿಯಾಶೀಲ ಕಾರ್ಯಕ್ಷಮತೆಯಿಂದ ನಿವೃತ್ತಿ ಹೊಂದಿ ಅವಲಂಬಿತ ಜನಸಂಖ್ಯೆಯಾಗುತ್ತಾರೆ. ಈ ಪರಿಸ್ಥಿತಿ ನಿವೃತ್ತಿ ವೇತನ ನಿರಂತರತೆಗೆ, ಹಿರಿಯ ನಾಗರಿಕರಿಗೆ ಹೆಚ್ಚಿನ ಆರೋಗ್ಯ ಸೇವಾ ಸೌಕರ್ಯಗಳನ್ನು ಒದಗಿಸಬೇಕಾಗುವ ಪರಿಸ್ಥಿತಿಗೆ ಕಾರಣವಾಗುತ್ತದೆ. ಇದು ಜನರ ಹಾಗೂ ಸರ್ಕಾರದ ಮೇಲಿನ ಆರ್ಥಿಕ ಹೊರೆಯನ್ನು ಹೆಚ್ಚಿಸುತ್ತದೆ. ಈ ಗುಂಪಿನ ಜನಸಂಖ್ಯೆಯನ್ನು ಅವಲಂಬಿತ ಜನಸಂಖ್ಯೆಯಂತಲೂ ಕರೆಯುತ್ತಾರೆ.

ವೃದ್ಧಾಪ್ಯ ಸಾರಸಂಗ್ರಹ ಅನುಭವಾತ್ಮಕ ಕ್ಷೇತ್ರವಾಗಿರುವುದರಿಂದ ವೃದ್ಧರ ಕುರಿತ ಅಧ್ಯಯನ ಇತ್ತೀಚೆಗೆ ಅಗತ್ಯವೆನಿಸಿದೆ. ಇದೇ ಪ್ರಕಾರ ವೃದ್ಧಾಪ್ಯ ಭೂಗೋಳ ವಿಜ್ಞಾನದಲ್ಲಿ ಅಧ್ಯಯನ ಮಾಡುವ ಪ್ರಸ್ತುತ ವಿಷಯವೂ ಆಗಿದೆ. ವೃದ್ಧರ ವಯಸ್ಸು, ಪರಿಮಾಣ, ಲಿಂಗ ಸಂಯೋಜನೆ ಹಾಗೂ ವೃದ್ಧ ಜನಸಂಖ್ಯೆಯ ಕ್ರಿಯಾ ಶೀಲ ಅಂಶಗಳನ್ನು ಪ್ರಾದೇಶಿಕವಾಗಿ ವಿಶ್ಲೇಷಿಸಲು ಸಂಶೋಧನೆಯನ್ನು ಜನಸಂಖ್ಯಾ ಭೂಗೋಳ ವಿಜ್ಞಾನದಲ್ಲಿ ಕೈಗೊಳ್ಳಲಾಗುತ್ತಿದೆ. (ಎಸ್.ಐ.ಬಿ.)

**ಜನಸಂಖ್ಯಾ ಸ್ಥಿತ್ಯಂತರ ಮಾದರಿ:** ಇದನ್ನು ಜನಸಂಖ್ಯಾ ಪರಿವರ್ತನ ಸಿದ್ಧಾಂತವೆಂತಲೂ ಕರೆಯುತ್ತಾರೆ. ಜನಸಂಖ್ಯಾ ಸ್ಥಿತ್ಯಂತರ ಮಾದರಿಯು ಜನಸಂಖ್ಯಾ ಬೆಳವಣಿಗೆಗೆ ಮತ್ತು ಆರ್ಥಿಕಾಭಿವೃದ್ಧಿಗಳ ನಡುವಿನ ಸಂಬಂಧವನ್ನು ವಿವರಿಸುತ್ತದೆ. ಇದು ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳ ಗತಿಯ ಮೇಲೆ ಆರ್ಥಿಕ ಅಭಿವೃದ್ಧಿ ಹೇಗೆ ಪರಿಣಾಮ ಬೀರುತ್ತದೆ ಎನ್ನುವುದನ್ನು ತಿಳಿಸುತ್ತದೆ. ಈ ಸಿದ್ಧಾಂತದ ಪ್ರಕಾರ ಜನಸಂಖ್ಯಾ ಬೆಳವಣಿಗೆಯಲ್ಲಿ ಪ್ರಮುಖವಾಗಿ ನಾಲ್ಕು ಹಂತಗಳನ್ನು ಕಾಣಬಹುದು. ಈ ಸಿದ್ಧಾಂತದ ಪ್ರತಿಪಾದಕರು ನೋಟಸ್ಟೈನ್.

ಅ. ಮೊದಲನೆಯ ಹಂತ: ಈ ಹಂತದಲ್ಲಿ ಆರ್ಥಿಕ ವ್ಯವಸ್ಥೆ ಪ್ರಾಚೀನ ಅಥವಾ ಕೃಷಿ ಪ್ರಧಾನವಾದ ವ್ಯವಸ್ಥೆಯನ್ನು ಹೊಂದಿರುತ್ತದೆ. ಜನನ ಮತ್ತು ಮರಣ ಪ್ರಮಾಣಗಳೆರಡೂ ಅಧಿಕವಾಗಿರುತ್ತವೆ. ಅನಕ್ಷರತೆ, ಅಜ್ಞಾನ, ಬಡತನ ಇತ್ಯಾದಿಗಳು ಅಧಿಕ ಜನನ ಪ್ರಮಾಣಕ್ಕೆ ಕಾರಣಗಳಾಗಿದ್ದರೆ, ಪೌಷ್ಟಿಕ ಆಹಾರದ ಕೊರತೆ, ಸಾಂಕ್ರಾಮಿಕ ರೋಗಗಳು, ವೈದ್ಯಕೀಯ ಸೌಲಭ್ಯಗಳ ಕೊರತೆ ಇತ್ಯಾದಿಗಳು ಅಧಿಕ ಮರಣ ಪ್ರಮಾಣಕ್ಕೆ ಕಾರಣಗಳಾಗಿರುತ್ತವೆ. ಜನನ–ಮರಣ ಪ್ರಮಾಣಗಳೆರಡೂ ಅಧಿಕವಿರುವುದರಿಂದ ಜನಸಂಖ್ಯೆ ಬೆಳವಣಿಗೆ ನಿಧಾನ ಗತಿಯಲ್ಲಿರುತ್ತದೆ. ಅನೇಕ ದಕ್ಷಿಣ ಮತ್ತು ಪೂರ್ವ ಆಫ್ರಿಕ ದೇಶಗಳು ಈ ಹಂತದಲ್ಲಿರುವುವೆಂದು ನಂಬಲಾಗಿದೆ.

ಆ. ಎರಡನೆಯ ಹಂತ: ಈ ಹಂತದಲ್ಲಿ ಮರಣ ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡು ಬಂದು ಜನನ ಪ್ರಮಾಣ ಮಾತ್ರ ಹಾಗೆಯೇ ಅಧಿಕವಾಗಿ ಉಳಿಯುತ್ತದೆ. ಇದರಿಂದ ಜನಸಂಖ್ಯಾ ಬೆಳವಣಿಗೆ ನೈಸರ್ಗಿಕವಾಗಿ ಏರುತ್ತಾ ಹೋಗುತ್ತದೆ. ಈ ಹಂತದಲ್ಲಿ ಕೃಷಿ ಮತ್ತು ಕೈಗಾರಿಕೆಯ ಉತ್ಪಾದನೆ ಹೆಚ್ಚುತ್ತದೆ. ಸಾರಿಗೆ, ಶಿಕ್ಷಣ, ವೈದ್ಯಕೀಯ ಸೇವೆಗಳ ಲಭ್ಯತೆಯಿಂದ ಜೀವನಮಟ್ಟ ಸುಧಾರಿಸುತ್ತದೆ. ಜನಸಂಖ್ಯೆ ಏರುತ್ತಾ ಏರುತ್ತಾ ಸ್ಫೋಟಕ್ಕೆ ಕಾರಣವಾಗುತ್ತದೆ. ಮಯನ್ಮಾರ್, ಕೀನ್ಯ, ಸಿರಿಯ, ಜೋರ್ಡಾನ್ ಮುಂತಾದ ಅಭಿವೃದ್ಧಿಶೀಲ ರಾಷ್ಟ್ರಗಳು ಈ ಹಂತದಲ್ಲಿವೆ ಎಂದು ನಂಬಲಾಗಿದೆ.

ಇ. ಮೂರನೆಯ ಹಂತ: ಈ ಹಂತದಲ್ಲಿ ಮರಣ ಪ್ರಮಾಣದಲ್ಲಿ ಇನ್ನೂ ಇಳಿಕೆ ಕಂಡು ಬರುತ್ತದೆ. ಆದರೆ ಜನನ ಪ್ರಮಾಣದಲ್ಲಿಯೂ ನಿಧಾನವಾಗಿ ಇಳಿಕೆ ಬರುತ್ತದೆ. ಜನಸಂಖ್ಯೆ ಬೆಳವಣಿಗೆಯ ಪ್ರಮಾಣ ಇನ್ನೂ ಹೆಚ್ಚಾಗಿಯೇ ಇರುತ್ತದೆ. ಆದರೆ ಎರಡನೆಯ ಹಂತಕ್ಕಿಂತ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ. ದಕ್ಷಿಣ ಯುರೋಪ್ ಖಂಡದ ದೇಶಗಳು ಸ್ಪೇನ್, ಹಿಂದಿನ ಯೂಗೋಸ್ಲಾವಿಯ, ಪೋರ್ಚುಗಲ್ ಮತ್ತು ಆಸ್ಟ್ರೇಲಿಯ, ನ್ಯೂಜಿಲೆಂಡ್ ಹಾಗೂ ಭಾರತ ದೇಶಗಳು ಈ ಹಂತದಲ್ಲಿವೆ.

ಈ. ನಾಲ್ಕನೆಯ ಹಂತ: ಕೊನೆಯ ಹಂತದಲ್ಲಿ ಜನನ ಮತ್ತು ಮರಣ ಪ್ರಮಾಣಗಳೆರಡೂ ಇಳಿಯುತ್ತವೆ. ಈ ಹಂತದಲ್ಲಿ ಕೈಗಾರಿಕೆ ಬೃಹತ್ ಪ್ರಮಾಣದಲ್ಲಿ ಬೆಳೆದು ಶಿಕ್ಷಣ, ವೈದ್ಯಕೀಯ, ಸಾರಿಗೆ ಇತ್ಯಾದಿ ಸೌಲಭ್ಯಗಳ ಲಭ್ಯತೆ ಹೆಚ್ಚಾಗಿ ಜನರಲ್ಲಿ ಕಾರ್ಯನಿಪುಣತೆ, ತಾಂತ್ರಿಕತೆ ಬೆಳೆಯುತ್ತದೆ. ಹೆಚ್ಚು ಮಕ್ಕಳನ್ನು ಪಡೆಯುವುದು ಆರ್ಥಿಕ ದೃಷ್ಟಿಯಿಂದ ಭಾರ ಎನಿಸುತ್ತದೆ. ಇದು ಕುಟುಂಬದ ಗಾತ್ರವನ್ನು ಕಡಿತಗೊಳಿಸಿ ಜನಸಂಖ್ಯಾ ಬೆಳವಣಿಗೆ ಕಡಿಮೆಯಾಗಲು ಕಾರಣವಾಗುತ್ತದೆ. ಅಭಿವೃದ್ಧಿ ಹೊಂದಿದ ಎಲ್ಲ ರಾಷ್ಟ್ರಗಳು ಈ ಹಂತವನ್ನು ತಲುಪಿವೆ ಎಂದು ತಿಳಿಯಲಾಗಿದೆ. (ಎಸ್.ಐ.ಬಿ.)

**ಜನಸಂಖ್ಯಾ ಹಂಚಿಕೆ:** ಜನಸಾಂದ್ರತೆಯಂತೆ ಜನಸಂಖ್ಯಾ ಹಂಚಿಕೆ ಅತಿ ಮುಖ್ಯವಾದ ವಿಷಯ. ಪ್ರಪಂಚದ ಜನಸಂಖ್ಯೆಯ ಹಂಚಿಕೆಯನ್ನು ಗಮನಿಸಿದಾಗ ವ್ಯತ್ಯಾಸಗಳಿಂದ ಕೂಡಿರುವುದು ಕಂಡುಬರುತ್ತದೆ. ಪ್ರಪಂಚದ ಬಹುಪಾಲು ಜನಸಂಖ್ಯೆ ಕೆಲವೇ ರಾಷ್ಟ್ರಗಳ ಕೆಲವೇ ಭಾಗಗಳಲ್ಲಿ ಕೇಂದ್ರೀಕೃತವಾಗಿದೆ. ಉದಾ: ಚೀನ, ಭಾರತ, ಅಮೆರಿಕ ಸಂಯುಕ್ತ ಸಂಸ್ಥಾನಗಳು ಒಟ್ಟು ಪ್ರಪಂಚದ ಅರ್ಧದಷ್ಟು ಜನಸಂಖ್ಯೆಯನ್ನು ಹೊಂದಿದ್ದರೆ ಉಳಿದ ಅರ್ಧದಷ್ಟು ಜನಸಂಖ್ಯೆ ಪ್ರಪಂಚದ ಇತರೆ ಭಾಗಗಳಲ್ಲಿ ಹರಡಿದೆ.

ಪ್ರಪಂಚದ ಬಹುಪಾಲು ಜನಸಂಖ್ಯೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೇಂದ್ರೀಕೃತವಾಗಿದೆ. ಇವುಗಳು ಪ್ರಪಂಚದ ಜನಸಂಖ್ಯೆಯ ಶೇ. 80.3 ರಷ್ಟನ್ನು ಒಳಗೊಂಡಿದೆ. ಇದರಿಂದಾಗಿಯೇ ಪ್ರಪಂಚದಲ್ಲಿ ಆಹಾರ ಧಾನ್ಯ, ಪೋಷಕಾಂಶಗಳ ಹಂಚಿಕೆ, ಜೀವನ ಮಟ್ಟದಲ್ಲಿ ಅಪಾರ ವ್ಯತ್ಯಾಸ ಹಾಗೂ ವೈಪರೀತ್ಯಗಳನ್ನು ಕಾಣಬಹುದಾಗಿದೆ.

ಪ್ರಪಂಚದ ಜನಸಂಖ್ಯಾ ಹಂಚಿಕೆಯಲ್ಲಿ ಅಧಿಕ ಜನರು ಕೇಂದ್ರೀಕೃತವಾಗಿರುವ ನಾಲ್ಕು ಪ್ರದೇಶಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ:

ಪೂರ್ವ ಏಷ್ಯ, ಆಗ್ನೇಯ ಏಷ್ಯ, ಪಶ್ಚಿಮ ಯುರೋಪ್, ಈಶಾನ್ಯ ಅಮೆರಿಕ.

ಜನಸಂಖ್ಯಾ ಹಂಚಿಕೆ ಪ್ರಪಂಚದಾದ್ಯಂತ ಅಸಮಾನವಾಗಿ ಹಂಚಿಕೆಯಾಗಿರುವುದಕ್ಕೆ ಕಾರಣವಾಗಿರುವ ಅಂಶಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು. ಇವು ಜನ ಸಾಂದ್ರತೆಯ ಮೇಲೂ ಪ್ರಭಾವ ಬೀರುತ್ತವೆ.

ಪ್ರಾಕೃತಿಕಾಂಶಗಳು: ಮೈದಾನಗಳು, ಉತ್ತಮ ವಾಯುಗುಣ ಹೊಂದಿದ ಪ್ರದೇಶಗಳು, ಖನಿಜ ಮತ್ತು ಶಕ್ತಿ ಸಂಪನ್ಮೂಲಗಳನ್ನು ಒಳಗೊಂಡ ಸ್ಥಳಗಳು, ಫಲವತ್ತಾದ ಮಣ್ಣು, ಉತ್ತಮ ನದಿ ವ್ಯವಸ್ಥೆ, ಮೇಲ್ಮಟ್ಟದ ಅಂತರ್ಜಲ ಹೊಂದಿರುವ ಪ್ರದೇಶಗಳು ಅಧಿಕ ಜನಸಂಖ್ಯಾ ಹಂಚಿಕೆಯಿಂದ ಕೂಡಿದ್ದರೆ, ಪರ್ವತ ಪ್ರಸ್ಥಭೂಮಿ, ಅಹಿತಕರವಾದ ವಾಯುಗುಣ, ನೀರು ಮತ್ತು ಸಂಪನ್ಮೂಲಗಳ ಕೊರತೆ ಹೊಂದಿರುವ ಪ್ರದೇಶಗಳು ವಿರಳ ಜನಸಂಖ್ಯಾಯಿಂದ ಕೂಡಿರುತ್ತವೆ.

ಆರ್ಥಿಕಾಂಶಗಳು: ಒಂದು ದೇಶದ ಆರ್ಥಿಕತೆ ಅಲ್ಲಿನ ಪ್ರಾಕೃತಿಕಾಂಶಗಳನ್ನು ಅವಲಂಬಿಸಿರುತ್ತದೆ. ಉತ್ತಮವಾದ ಸಾರಿಗೆ ಸಂಪರ್ಕ ವಿವಿಧ ವೃತ್ತಿಗಳನ್ನು ಕೈಗೊಳ್ಳಲು ಅವಕಾಶ. ಉತ್ತಮ ಜೀವನ ನಡೆಸಲು ಅನುಕೂಲವಿರುವ ಪ್ರದೇಶಗಳಲ್ಲಿ ಅಧಿಕ ಜನಸಂಖ್ಯೆ ಇದಕ್ಕೆ ವಿರುದ್ಧವಾಗಿರುವ ಕಡೆ ವಿರಳ ಜನಸಂಖ್ಯೆ ಹಂಚಿಕೆಯಾಗಿರುತ್ತದೆ.

ರಾಜಕೀಯ ಅಂಶಗಳು: ದೇಶದ ಸರ್ಕಾರಗಳು ಕೈಗೊಳ್ಳುವ ನೀತಿ ನಿಯಮಗಳು ಜನಸಂಖ್ಯಾ ಬೆಳವಣಿಗೆ ಹಾಗೂ ನಿಯಂತ್ರಣದ ಮೇಲೆ ಪ್ರಭಾವ ಬೀರುತ್ತವೆ. ಉದಾ: ಎರಡನೆಯ ಮಹಾಯುದ್ಧದ ಸಮಯದಲ್ಲಿ ಇಟಲಿಯ ಮುಸಲೋನಿ ಹಾಗೂ ಜರ್ಮನಿಯ ಹಿಟ್ಲರನು ತಮ್ಮ ಸೈನ್ಯದ ಸಂಖ್ಯಾ ಬಲವನ್ನು ಹೆಚ್ಚಿಸಲು ಜನಸಂಖ್ಯೆಯ ಬೆಳವಣಿಗೆಯನ್ನು ಪ್ರೋತ್ಸಾಹಿಸಿದರು. ಗಡಿಯೊಳಗೆ ಜನಸಂಖ್ಯೆ ವಲಸೆ ಹೋಗುವಂತೆ ಪ್ರೋತ್ಸಾಹಿಸುವುದು ಸಹ ಪ್ರಮುಖ ರಾಜಕೀಯ ಅಂಶವಾಗಿದೆ.

ಸಾಮಾಜಿಕ ಅಂಶಗಳು: ಸಮಾಜದಲ್ಲಿ ಕಂಡುಬರುವ ಧಾರ್ಮಿಕ ಪದ್ಧತಿ, ಮೂಢನಂಬಿಕೆ, ಸಂಪ್ರದಾಯಗಳು ಜನಸಂಖ್ಯೆಯ ಹಂಚಿಕೆಯ ಮೇಲೆ ಪ್ರಭಾವ ಬೀರುತ್ತವೆ. ಹಿಂದು ಸಮಾಜದ ಬಾಲ್ಯವಿವಾಹ, ಮುಸ್ಲಿಂ ಸಮಾಜದ ಬಹು ಪತ್ನಿತ್ವ ಪದ್ಧತಿಗಳು ಜನಸಂಖ್ಯೆಯ ತೀವ್ರ ಬೆಳವಣಿಗೆಗೆ ಕಾರಣವಾದರೆ, ಚೀನ ದೇಶದ ಒಂದು ಕುಟುಂಬ – ಒಂದು ಮಗು ಕಾರ್ಯಕ್ರಮ– ಹೆಣ್ಣು ಶಿಶುವಿನ ಹತ್ಯೆ ಕಾರಣವಾಗಿದೆ.

ಇತರೆ ಅಂಶಗಳು: ಇತರೆ ಅಂಶಗಳಲ್ಲಿ ಐತಿಹಾಸಿಕ ಹಿನ್ನೆಲೆ, ಸಾಕ್ಷರತೆ, ವಿಜ್ಞಾನ ಮತ್ತು ತಾಂತ್ರಿಕ ಬೆಳವಣಿಗೆ, ವೈದ್ಯಕೀಯ ಪದ್ಧತಿ, ವಲಸೆ ಮೊದಲಾದವುಗಳು ಸಹ ಜನಸಂಖ್ಯೆಯ ಹಂಚಿಕೆಯ ಮೇಲೆ ಪ್ರಭಾವ ಬೀರುತ್ತವೆ. (ಕೆ.ಎಸ್.)

**ಜನಸಂಖ್ಯೆ ಒತ್ತಡ:** ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶದಲ್ಲಿ ಜನಸಂಖ್ಯೆಯ ಒತ್ತಡ ಹೇಗಿದೆ ಎನ್ನುವುದನ್ನು ಆ ಪ್ರದೇಶದ ಜನಸಾಂದ್ರತೆಯ ಆಧಾರದಿಂದ ತಿಳಿದುಕೊಳ್ಳಬಹುದು. ಪ್ರತಿ ಚ.ಕಿಮೀ ಭೂಭಾಗದಲ್ಲಿ ಎಷ್ಟು ಜನರು ವಾಸಿಸುತ್ತಾರೆ ಎನ್ನುವುದೇ ಜನಸಾಂದ್ರತೆಯಾಗಿದೆ. ಜನಸಾಂದ್ರತೆ ಹೆಚ್ಚಾದಂತೆ ಭೂಪ್ರದೇಶದ ಸಂಪನ್ಮೂಲಗಳ ಮೇಲೆ ಜನಸಂಖ್ಯೆಯ ಒತ್ತಡ ಹೆಚ್ಚಾಗುತ್ತಾ ಹೋಗುತ್ತದೆ. ಜನಸಂಖ್ಯೆಯ ಒತ್ತಡ ಒಂದು ನಿರ್ಧಿಷ್ಟವಾದ ಪ್ರದೇಶದಲ್ಲಿ ಕಡಿಮೆ ಇರಬಹುದು, ಸಮತೋಲನದಲ್ಲಿರಬಹುದು ಅಥವಾ ಅತಿ ಹೆಚ್ಚಾಗಿರಬಹುದು. ಇದು ಮುಖ್ಯವಾಗಿ ಆ ಪ್ರದೇಶದಲ್ಲಿನ ಜನನ ಮತ್ತು ಮರಣ ಪ್ರಮಾಣಗಳ ಮೇಲೆ ಅವಲಂಬಿತವಾಗಿರುವುದಲ್ಲದೇ ವಲಸೆಯ ಪ್ರಮಾಣವೂ ಮುಖ್ಯ ಕಾರಣವಾಗಿರುತ್ತದೆ. ಅತಿಯಾದ ಜನಸಂಖ್ಯೆ ಒತ್ತಡ ನಗರ, ಕೈಗಾರಿಕೆ, ತೀಕ್ಷ್ಣ ಕೃಷಿ ಹುಟ್ಟುವಳಿ ಮತ್ತು ಒಳ್ಳೆಯ ಸೇವಾ ಸೌಲಭ್ಯಗಳಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಅಭಿವೃದ್ಧಿ ಹೊಂದದ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಒತ್ತಡ ಕಡಿಮೆ ಇರುತ್ತದೆ. (ಎಸ್.ಐ.ಬಿ.)

**ಜನಸಂಖ್ಯೆ ಗುಣಮಟ್ಟಶಾಸ್ತ್ರ :** ಒಂದು ದೇಶದ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಜನಸಂಖ್ಯೆಯ ಗುಣಾತ್ಮಕ ವಂಶವಾಹಿನಿ ಮಹತ್ವದ್ದಾಗಿದೆ (ಯೂಜೆನಿಕ್ಸ್). ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಂತರವಾಗುವ ಅನುವಂಶಿಕ ಲಕ್ಷಣಗಳ ಅಧ್ಯಯನ, ತಳಿ ವಿಜ್ಞಾನ ಅಥವಾ ಸಂತಾನ ವಿಜ್ಞಾನವಾಗಿದೆ. ಒಂದು ರಾಷ್ಟ್ರದ ಜನಸಂಖ್ಯೆ ಹೊಂದಿರುವ ಜೈವಿಕ ಸಾಮರ್ಥ್ಯಗಳಾದ ರೋಗ ನಿರೋಧಕ ಶಕ್ತಿ, ಪ್ರತಿಭಾಶೀಲತೆ ಉದ್ವೇಗದ ಮಟ್ಟ ಇವೆಲ್ಲವುಗಳು ಗುಣಾತ್ಮಕ ಜನಸಂಖ್ಯೆಯ ಲಕ್ಷಣಗಳಾಗಿವೆ. ಈ ರೀತಿಯ ಜನಾಂಗೀಯ ಅನುವಂಶಿಕ ಲಕ್ಷಣಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತವೆ. ಒಂದು ದೇಶದ ಜನಾಂಗಿಯ ವ್ಯತ್ಯಾಸ ಅಥವಾ ಅಭಿವೃದ್ಧಿಗೆ ಪೂರಕವಾಗುವ ಗುಣಾತ್ಮಕ ಅಂಶಗಳು ಆ ದೇಶದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಪರಿಸರಾತ್ಮಕ ಅಂಶಗಳಿಂದ ನಿರ್ಧರಿಸಲ್ಪಡುತ್ತವೆ. ಉದಾಹರಣೆಗೆ ಆರೋಗ್ಯ ಹಾಗೂ ಪೌಷ್ಠಿಕ ಆಹಾರದ ಮಟ್ಟ, ಶಿಕ್ಷಣ, ಉದ್ಯೋಗಶೀಲತೆ ಹಾಗೂ ಕೃಷಿ ಕಾರ್ಯ ಸಾಮರ್ಥ್ಯಗಳು, ತಂತ್ರಜ್ಞತೆ, ವ್ಯವಸ್ಥಾಪಕ ಹಾಗೂ ಪರಿಣಿತ ಕಾರ್ಯಶೈಲಿ, ನಾಯಕತ್ವ ಇವೇ ಮುಂತಾದವು ಒಂದು ರಾಷ್ಟ್ರದ ಅಭಿವೃದ್ಧಿಗೆ ಕಾರಣವಾಗುವ ಗುಣಾತ್ಮಕ ಜನಾಂಗವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ದೋಷಪೂರಿತ ಜನಸಂಖ್ಯೆ ಅಂದರೆ ಮಾನಸಿಕ ಹಾಗೂ ದೈಹಿಕ ದೌರ್ಬಲ್ಯಯುಕ್ತ ಬುದ್ಧಿಮಾಂದ್ಯರು, ಅಶಕ್ತರು, ಆಲಸಿಗಳು, ಕುರುಡ, ಕುಂಟ ಇತ್ಯಾದಿ ಅಂಗವಿಕಲ ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವುದರ ಮೂಲಕ, ಆರೋಗ್ಯ ಮತ್ತು ದೈಹಿಕ ಸಾಮರ್ಥ್ಯವುಳ್ಳ ಜನಸಂಖ್ಯೆಯ ಬೆಳವಣಿಗೆಯ ಪ್ರೋತ್ಸಾಹಕ್ಕೆ ಈ ತಳಿಶಾಸ್ತ್ರ ಸಂಬಂಧಪಟ್ಟಿದೆ. (ಎಸ್.ಎಂ.ಎಚ್.)

**ಜನಸಂಖ್ಯೆಯ ಲಿಂಗಾನುಪಾತ:** ಜನಸಂಖ್ಯಾ ರಚನೆಯ ಅತಿಮುಖ್ಯ ಅಂಶವಾಗಿದ್ದು ಲಿಂಗ ಸಂಯೋಜನೆಯನ್ನೇ ಲಿಂಗಾನುಪಾತವೆಂತಲೂ ಕರೆಯುವರು (ಸೆಕ್ಸ್ ರೇಶ್ಯೋ). ಪ್ರತಿಸಾವಿರ ಮಹಿಳೆಯರ ಸಂಖ್ಯೆಗಿರುವ ಪುರುಷರ ಸಂಖ್ಯೆ ಅಥವಾ ಪ್ರತಿ ಸಾವಿರ ಪುರುಷರ ಸಂಖ್ಯೆಗಿರುವ ಮಹಿಳೆಯರ ಸಂಖ್ಯೆಯೇ ಲಿಂಗಾನುಪಾತ. ಇದನ್ನು 0/00 ಚಿನ್ಹೆಯ ಮೂಲಕ ತಿಳಿಯಪಡಿಸಲಾಗುವುದು.

ಪರಿಕಲ್ಪನೆಗಳು: ಒಟ್ಟು ಜನಸಂಖ್ಯೆಯಲ್ಲಿ ಸ್ತ್ರೀ ಅಥವಾ ಪುರುಷರ ಸಂಖ್ಯೆಯನ್ನು, ಅಥವಾ ಪುರುಷರ ಸಂಖ್ಯೆಗಿರುವ ಸ್ತ್ರೀಯರ ಪ್ರಮಾಣ ಅಥವಾ ಸ್ತ್ರೀಯರ ಸಂಖ್ಯೆಗಿರುವ ಪುರುಷರ ಪ್ರಮಾಣವನ್ನು ಲಿಂಗಾನುಪಾತದ ಗಣನೆಗೆ ತೆಗೆದುಕೊಂಡು 1000 ದಿಂದ 100 ರಿಂದ ಗುಣಿಸುವುದರ ಮೂಲಕ ಸ್ತ್ರೀ ಪುರುಷರ ಪ್ರಮಾಣವನ್ನು ಕಂಡುಹಿಡಿಯಲಾಗುತ್ತದೆ.

$$\frac{Pm}{Pt} \times 100 \quad \text{or} \quad \frac{Pf}{Pt} \times 100$$

ಇಲ್ಲಿ Pt = ಒಟ್ಟು ಜನಸಂಖ್ಯೆ

Pm= ಸ್ತ್ರೀಯರ ಸಂಖ್ಯೆ

Pf = ಪುರುಸರ ಸಂಖ್ಯೆ

ಅಮೇರಿಕದಲ್ಲಿ ಪ್ರತಿ 100 ಜನ ಪುರುಷರಿಗಿರುವ ಸ್ತ್ರೀಯರ ಪ್ರಮಾಣವನ್ನೂ ನ್ಯೂಜಿಲೆಂಡಿನಲ್ಲಿ ಪ್ರತಿ 100 ಜನ ಮಹಿಳೆಯರಿಗಿರುವ ಪುರುಷರ ಪ್ರಮಾಣವನ್ನೂ ಭಾರತದಲ್ಲಿ ಪ್ರತಿ 1000 ಪುರುಷರಿಗಿರುವ ಸ್ತ್ರೀಯರ ಪ್ರಮಾಣವನ್ನೂ ಕಂಡು ಹಿಡಿಯಲಾಗುವುದು.

| ಅಮೇರಿಕ | ನ್ಯೂಜಿಲ್ಯೆಂಡ್ | ಭಾರತ |
|---|---|---|
| $\frac{Pm}{Pf} \times 100$ | $\frac{Pf}{Pm} \times 100$ | $\frac{Pm}{Pf} \times 1000$ |

ವಿಧಗಳು: ಜನಸಂಖೀಯ ಅಂಶಗಳಲ್ಲಿ ಪ್ರಮುಖವಾದಂತಹ ಲಿಂಗಾನುಪಾತ ಜೈವಿಕ, ಸಾಮಾಜಿಕ, ಆರ್ಥಿಕ ಅಂಶಗಳಿಂದ ಮಾನವನ ಜೀವಮಾನದುದ್ದಕ್ಕೂ ಬದಲಾವಣೆಯನ್ನು ಹೊಂದುತ್ತಿರುತ್ತದೆ. ಇದನ್ನು ಅಧ್ಯಯನದ ಅನುಕೂಲಕ್ಕಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ:

1) ಪ್ರಾಥಮಿಕ ಲಿಂಗ ಪ್ರಮಾಣ
2) ದ್ವಿತೀಯ ಲಿಂಗ ಪ್ರಮಾಣ
3) ತೃತೀಯ ಲಿಂಗ ಪ್ರಮಾಣ

1) ಪ್ರಾಥಮಿಕ ಲಿಂಗ ಪ್ರಮಾಣ: ಇದು ಗರ್ಭಧಾರಣೆಯ ಸಂದರ್ಭದಲ್ಲಿನ ಲಿಂಗ ಪ್ರಮಾಣವಾಗಿದ್ದು ಈ ಬಗ್ಗೆ ನಡೆಸಿದ ಸಂಶೋಧನೆಗಳು 100 ಹೆಣ್ಣು ಮಕ್ಕಳಿಗೆ 125 ರಿಂದ 135 ಗಂಡು ಮಕ್ಕಳು ಎಂದು ಅಂದಾಜು ಮಾಡಿದೆ. ಇದು ಕೆಲವು ದೇಶಗಳಲ್ಲಿ 107 ರಿಂದ 170 ರವರೆಗೆ ವ್ಯತ್ಯಾಸ ಹೊಂದುತ್ತದೆ.

2) ದ್ವಿತೀಯ ಲಿಂಗ ಪ್ರಮಾಣ: ಇದು ಜನನ ಸಮಯದಲ್ಲಿನ ಲಿಂಗ ಪ್ರಮಾಣವಾಗಿದೆ. ಗರ್ಭಧಾರಣೆಯ ಸಮಯದಲ್ಲಿ ಗಂಡು ಮಕ್ಕಳ ಸಂಖ್ಯೆ ಅಧಿಕವಾಗಿರುವುದರಿಂದ ಜನನ ಸಮಯದಲ್ಲಿಯೂ ಗಂಡು ಮಕ್ಕಳ ಸಂಖ್ಯೆ ಅಧಿಕವಾಗಿರುತ್ತದೆ. ಈ ಹಂತದಲ್ಲಿ ವ್ಯತ್ಯಾಸದ ಪ್ರಮಾಣ ಕಡಿಮೆಯಿರುತ್ತದೆ.

3) ತೃತೀಯ ಲಿಂಗಾನುಪಾತ: ಗಣನೆ ಮಾಡುವಾಗಿನ ಲಿಂಗದ ಪ್ರಮಾಣವಾಗಿದ್ದು ವಿವಿಧ ರಾಷ್ಟ್ರಗಳ ವಿವಿಧ ವಿಧಾನಗಳ ಮೂಲಕ ಎಷ್ಟು ಜನ ಪುರುಷ ಅಥವಾ ಸ್ತ್ರೀಯರಿಗೆ ಎಷ್ಟು ಜನ ಪುರುಷ ಅಥವಾ ಸ್ತ್ರೀಯರಿದ್ದಾರೆ ಎಂದು ತಿಳಿಯಲಾಗುವುದು.

ತೃತೀಯ ಲಿಂಗ ಪ್ರಮಾಣ
1) ಜನನದ ಲಿಂಗ ಪ್ರಮಾಣದಿಂದ
2) ಮರಣದ ಲಿಂಗ ಪ್ರಮಾಣದಿಂದ
3) ವಲಸೆಯ ಲಿಂಗ ಪ್ರಮಾಣದಿಂದ
ನಿರ್ಧರಿಸಲ್ಪಡುತ್ತದೆ.

ಜನನ ಲಿಂಗ ಪ್ರಮಾಣ: ಸ್ತ್ರೀಯರಿಗೆ ಹೋಲಿಸಿದರೆ ಗಂಡು ಮಕ್ಕಳ ಜನನವೇ ಹೆಚ್ಚು, ಇದು 10 ರಿಂದ 110 ರವರೆಗೆ ವ್ಯತ್ಯಾಸ ಹೊಂದುತ್ತದೆ ಇದಕ್ಕೆ ಜೈವಿಕ ಅಂಶಗಳು ಕಾರಣ.

ಮರಣದ ಲಿಂಗ ಪ್ರಮಾಣ:– ಸ್ತ್ರೀಯರು ಜೈವಿಕವಾಗಿ ಬಲಿಷ್ಠರಾಗಿದ್ದು ಅವರ ಸಂಖ್ಯೆ ಏರುತ್ತಾ ಹೋಗುತ್ತದೆ. ಆದರೆ ಇದು ರಾಷ್ಟ್ರದಿಂದ ರಾಷ್ಟ್ರಕ್ಕೆ ವ್ಯತ್ಯಾಸದಿಂದ ಕೂಡಿರುತ್ತದೆ. ಮುಂದುವರಿದ ರಾಷ್ಟ್ರಗಳಲ್ಲಿ ಗಂಡು ಮಕ್ಕಳ ಮರಣ ಸಾಮಾನ್ಯವಾಗಿ ಹೆಚ್ಚಾಗಿದ್ದು 4ನೇಯ ವಯಸ್ಸಿನಲ್ಲಿ ಸ್ತ್ರೀ ಪುರುಷರ ಪ್ರಮಾಣದಲ್ಲಿ ಸಮವಾಗಿರುತ್ತದೆ. ಆದರೆ ಮುಂದುವರಿಯುತ್ತಿರುವ ದೇಶಗಳಲ್ಲಿ ಸಾಮಾಜಿಕ, ರಾಜಕೀಯ, ಕೌಟುಂಬಿಕ ಕಾರಣಗಳಿಂದಾಗಿ ಸ್ತ್ರೀಯರ ಮರಣ ಸಂಖ್ಯೆ ಅಧಿಕವಾಗಿದೆ.

ವಲಸೆಗಾರರಲ್ಲಿ ಸ್ತ್ರೀಯರ ಪ್ರಮಾಣ: ವಲಸೆ ಲಿಂಗದ ಆಯ್ಕೆಯಾಗಿದ್ದು ದೇಶೀಯ ಮತ್ತು ಅಂತರದೇಶೀಯ ವಿಧಾನಗಳೆರಡರಲ್ಲಿಯೂ ಸ್ತ್ರೀಯರಿಗಿಂತ ಪುರುಷರ ವಲಸೆ ಅಧಿಕವಾಗುತ್ತದೆ.

ಹದಿಹರೆಯದವರ ಲಿಂಗಾನುಪಾತ (ಜುವೈನಲ್ ಸೆಕ್ಸ್‌ರೇಶ್ಯೊ)

ಹದಿಹರೆಯದವರ ಲಿಂಗಾನುಪಾತವೆಂದರೆ 0–14 ವರ್ಷ ವಯಸ್ಸಿನೊಳಗಿರುವ ಜನಸಂಖ್ಯೆಯಲ್ಲಾಗುವ ಲಿಂಗ ವ್ಯತ್ಯಾಸವಾಗಿದೆ. 0–14 ವರ್ಷದೊಳಗೆ ಹಲವಾರು ಹಂತಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಪ್ರಮಾಣ ವ್ಯತ್ಯಾಸದಿಂದ ಕೂಡಿರುತ್ತದೆ. ಪ್ರಾರಂಭದಲ್ಲಿ ಗಂಡು ಮಕ್ಕಳ ಸಂಖ್ಯೆ ಅಧಿಕವಾಗಿ ಅನಂತರದ ಹಂತದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅಧಿಕವಾಗುತ್ತದೆ. ಆದರೆ ಹಿಂದುಳಿದ ರಾಷ್ಟ್ರಗಳಲ್ಲಿ ಗಂಡು ಮಕ್ಕಳ ಸಂಖ್ಯೆ ಹೆಚ್ಚುತ್ತ ಹೋಗುತ್ತದೆ. ಈ ರೀತಿಯ ವ್ಯತ್ಯಾಸಕ್ಕೆ ಹಲವಾರು ಅಂಶಗಳು ಕಾರಣವಾಗುತ್ತದೆ. ಅವುಗಳಲ್ಲಿ ಮುಖ್ಯವಾದವು: 1) ಜೈವಿಕಾಂಶಗಳು 2) ಸಾಮಾಜಿಕ ಮತ್ತು ಆರ್ಥಿಕಾಂಶಗಳು

1) ಜೈವಿಕಾಂಶಗಳು: ಗರ್ಭಧಾರಣೆಯ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗಿಂತ ಗಂಡುಮಕ್ಕಳ ಸಂಖ್ಯೆ ಅಧಿಕವಾಗಿರುತ್ತದೆ. 100 ಹೆಣ್ಣು ಮಕ್ಕಳಿಗೆ 115 ರಿಂದ 135 ಗಂಡು ಮಕ್ಕಳಿರುತ್ತಾರೆ. ಜನನದ ಸಂದರ್ಭದಲ್ಲಿ 100 ಹೆಣ್ಣು ಮಕ್ಕಳಿಗೆ 107 ರಿಂದ 109 ಗಂಡು ಮಕ್ಕಳಿದ್ದು ಆಗಲೂ ಸಹ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳ ಸಂಖ್ಯೆ ಅಧಿಕವಾಗುತ್ತದೆ. ಆದರೆ ಒಂದು ವರ್ಷದೊಳಗಿರುವ ಮಕ್ಕಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಸಂಖ್ಯೆ ಅಧಿಕವಾಗುತ್ತದೆ ಇದಕ್ಕೆ ಹೆಣ್ಣು ಮಕ್ಕಳಲ್ಲಿರುವ ಜೈವಿಕ ಬಲಿಷ್ಠತೆ ಕಾರಣವಾಗಿದೆ. ಆದ್ದರಿಂದ ಹೆಣ್ಣುಶಿಶು ಮರಣಕ್ಕಿಂತ ಗಂಡುಶಿಶು ಮರಣ ಹೆಚ್ಚಾಗಿರುತ್ತದೆ. ಇದರಿಂದ ಹೆಣ್ಣು ಮಕ್ಕಳ ಸಂಖ್ಯೆ ಏರುತ್ತಾ ಹೋಗುತ್ತದೆ. ಆದರೆ ಈ ಏರುವಿಕೆ ರಾಷ್ಟ್ರದಿಂದ ರಾಷ್ಟ್ರಕ್ಕೆ ವ್ಯತ್ಯಾಸದಿಂದ ಕೂಡಿರುತ್ತದೆ. ಮುಂದುವರಿದ ರಾಷ್ಟ್ರಗಳಲ್ಲಿ ಗಂಡು ಮಕ್ಕಳ ಮರಣದ ಸಂಖ್ಯೆ ಹೆಚ್ಚಾಗಿದ್ದರೆ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಹೆಣ್ಣು ಮಕ್ಕಳ ಮರಣದ ಸಂಖ್ಯೆ ಅಧಿಕವಾಗುತ್ತದೆ. ಇದಕ್ಕೆ ಸಾಮಾಜಿಕ ಮತ್ತು ಆರ್ಥಿಕಾಂಶಗಳು ಕಾರಣಗಳಾಗಿವೆ.

2) ಸಾಮಾಜಿಕ ಮತ್ತು ಆರ್ಥಿಕಾಂಶಗಳು: ಮುಂದುವರಿಯುತ್ತಿರುವ ದೇಶಗಳಲ್ಲಿ 0–14 ವರ್ಷ ವಯಸ್ಸಿನೊಳಗಿನ ಜನಸಂಖ್ಯೆಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ. ಸಾಮಾಜಿಕ ಅಂಶಗಳಾದ ಚಿಕ್ಕವಯಸ್ಸಿನಲ್ಲೇ ಮದುವೆ ಮಾಡುವುದು, ಲಿಂಗತಾರತಮ್ಯ ಮಾಡುವುದು, ಅತಿಯಾದ ಧಾರ್ಮಿಕ ಕಟ್ಟಳೆಗಳನ್ನು ಹೆಣ್ಣು ಮಕ್ಕಳ ಮೇಲೆ ಹೇರುವುದು ಮುಂತಾದವು ಕಾರಣ; ಆರ್ಥಿಕವಾಗಿ ಬಡತನ, ಉತ್ತಮ ಪೌಷ್ಟಿಕ ಆಹಾರದ ಕೊರತೆ ಮುಂತಾದ ಅಂಶಗಳು ಕಾರಣ. (ಎಸ್.ಕೆ.)

**ಜನಸಂಖ್ಯೆಯ ವಯೋರಚನೆ ಮತ್ತು ವಯೋ ಪಿರಮಿಡ್ಡುಗಳು:** ಒಟ್ಟು ಜನಸಂಖ್ಯೆಯಲ್ಲಿ ವಿವಿಧ ವಯಸ್ಸಿನ ಗುಂಪಿನಲ್ಲಿರುವ ಜನರ ಪ್ರಮಾಣವನ್ನೇ ವಯೋರಚನೆ ಎಂದು ಕರೆಯುವರು. ಪ್ರತಿ ವಯಸ್ಸಿನಗುಂಪು ಪುರುಷ ಮತ್ತು ಮಹಿಳೆಯರನ್ನು ಒಳಗೊಂಡಿರುವುದು. ಜನಸಂಖ್ಯೆಯನ್ನು ಸಾಮಾನ್ಯವಾಗಿ 3 ಗುಂಪುಗಳಾಗಿ ವಿಂಗಡಿಸಿ ಅಭ್ಯಸಿಸುವ ಕ್ರಮ ರೂಢಿಯಲ್ಲಿದೆ. ಅವುಗಳೆಂದರೆ; 15 ವರ್ಷದ ಒಳಗಿನ ಮಕ್ಕಳು, 15 ರಿಂದ 65 ವಯಸ್ಸಿನ ವಯಸ್ಕರು, 65 ಕ್ಕಿಂತ ಹೆಚ್ಚು ವಯಸ್ಸಾದ ವೃದ್ಧರು.

ವಯೋರಚನೆ ಒಂದು ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ. ಆದ್ದರಿಂದ ಅದಕ್ಕನುಗುಣವಾಗಿ ಯೋಜನೆ ಮತ್ತು ಸೌಲಭ್ಯಗಳನ್ನು ಅನುಷ್ಠಾನಗೊಳಿಸಬಹುದಾಗಿದೆ.

ಕೆಳಗಿನ ಪಟ್ಟಿಯಿಂದ ಪ್ರಪಂಚದ ಜನಸಂಖ್ಯೆಯ ಶೇಕಡ ವಯೋ ರಚನೆಯನ್ನು ತಿಳಿಯಬಹುದಾಗಿದೆ (1999ರ ಪ್ರಕಾರ).

ಜನನ, ಮರಣ, ವಲಸೆ ಇವು ವಯೋರಚನೆಯ ಮೇಲೆ ಪ್ರಭಾವ ಬೀರುವ ಮೂರು ಮೂಲಭೂತ ನಿರ್ಧಾರಕಗಳಾಗಿವೆ.

ಜನನದ ಪ್ರಭಾವ: ಹೆಚ್ಚಿನ ಜನನ ದರ 0–14 ವಯೋ ಗುಂಪಿನ ಜನಸಂಖ್ಯೆಯನ್ನು ಹೆಚ್ಚಿಸುತ್ತದೆ.

ಮರಣದ ಪ್ರಭಾವ: ಮರಣದ ಪ್ರಮಾಣ ವಿವಿಧ ಗುಂಪುಗಳಲ್ಲಿ ವಿಭಿನ್ನವಾಗಿರುತ್ತದೆ. ಯಾವ ಗುಂಪಿನಲ್ಲಿ ಮರಣದ ಪ್ರಮಾಣ ಅಧಿಕವಾಗಿರುತ್ತದೋ ಅವರ ಸಂಖ್ಯೆ ಕಡಿಮೆ ಇರುತ್ತದೆ.

ವಲಸೆಯ ಪ್ರಭಾವ: ವಲಸೆ ಹೋಗುವವರ ವಯೋಗುಂಪಿನ ಆಧಾರದ ಮೇಲೆ ಮೂಲ ಪ್ರದೇಶ ಮತ್ತು ವಲಸೆ ಹೋದ ಪ್ರದೇಶ ಎರಡರಲ್ಲಿಯೂ ಆಯಾ ಗುಂಪಿನ ವಯೋ ಪ್ರಮಾಣದಲ್ಲಿ ವ್ಯತ್ಯಾಸಗಳಾಗುತ್ತವೆ. ಇವಲ್ಲದೆ ಯುದ್ಧಗಳು ಯುವಕರ ಪ್ರಮಾಣವನ್ನು ಸ್ವಾಭಾವಿಕ ವಿಪತ್ತುಗಳು ಮಕ್ಕಳು ಮತ್ತು ಮುದುಕರ ಪ್ರಮಾಣವನ್ನು ಕಡಿಮೆಗೊಳಿಸಿದರೆ ಸರ್ಕಾರದ ನೀತಿ ನಿಯಮಗಳು ಜನನ ಮರಣ ಹಾಗೂ ವಲಸೆಗೆ ಸಂಬಂಧಿಸಿದಂತೆ ಕೆಲವೊಂದು ಬದಲಾವಣೆಗಳನ್ನು ಉಂಟುಮಾಡುತ್ತವೆ.

| ಭೂ ಪ್ರದೇಶ | 15 ಕ್ಕಿಂತ ಕಡಿಮೆ ವಯಸ್ಸಿನವರು (%) | 15 ರಿಂದ 65 ವರ್ಷ (%) | 65ಕ್ಕಿಂತ ಹೆಚ್ಚು ವಯಸ್ಸಿನವರು (%) |
|---|---|---|---|
| ಆಫ್ರಿಕ | 43 | 54 | 3 |
| ಏಷ್ಯ | 32 | 62 | 6 |
| ಉತ್ತರ ಅಮೆರಿಕ | 21 | 66 | 13 |
| ದಕ್ಷಿಣ ಅಮೆರಿಕ | 32 | 62 | 6 |
| ಮಧ್ಯ ಅಮೆರಿಕ | 36 | 60 | 4 |
| ಯುರೋಪ್ | 18 | 68 | 14 |
| ಆಸ್ಟ್ರೇಲಿಯ ದ್ವೀಪಗಳು | 26 | 64 | 10 |
| **ಪ್ರಪಂಚ** | **37** | **56** | **7** |

ವಯೋಸಂಯೋಜನೆಯ ವಿಶ್ಲೇಷಣಾ ವಿಧಾನಗಳಲ್ಲಿ ವಯೋರಚನೆಯ ಪಿರಮಿಡ್ಡುಗಳು, ವಯಸ್ಸಿನ ಗುಂಪು, ವಯಸ್ಸಿನ ಸೂಚ್ಯಾಂಕಗಳನ್ನು ಅನುಸರಿಸಲಾಗುವುದು.

ವಯೋಪಿರಮಿಡ್‌ಗಳು: ವಯೋರಚನೆಯ ಪಿರಮಿಡ್ಡುಗಳಲ್ಲಿ 2 ಅಕ್ಷಗಳಿರುತ್ತವೆ. ಸಮತಲ ಅಕ್ಷದ ಮೇಲೆ ಲಿಂಗವನ್ನು ಊರ್ಧ್ವಮುಖ ಅಕ್ಷದ ಮೇಲೆ ಆ ವಯೋ ವರ್ಗದ ಒಟ್ಟು ಜನಸಂಖ್ಯೆಯನ್ನು ಶೇಕಡವಾರು ರೀತಿಯಲ್ಲಿ ಪ್ರತಿನಿಧಿಸುವುದಲ್ಲದೇ ಆ ವಯೋ ವರ್ಗದ ಪುರುಷರು ಮತ್ತು ಮಹಿಳಾ ವರ್ಗದ ಜನಸಂಖ್ಯೆಯನ್ನು ಶೇಕಡವಾರು ಪ್ರಮಾಣದಲ್ಲಿ ಪ್ರತಿನಿಧಿಸಲಾಗುವುದು. ವಯೋ ರಚನೆಯ ಪಿರಮಿಡ್ಡುಗಳನ್ನು ಆಕಾರದ ಅಧಾರದ ಮೇಲೆ ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ.

ಹೆಚ್ಚು ವ್ಯತ್ಯಾಸಗಳಿಲ್ಲದ ತಳಭಾಗದಿಂದ ಮೇಲ್ಭಾಗಕ್ಕೆ ಹೋದಂತೆ ಒಂದೇ ರೀತಿ ಅಗಲವಾಗಿರುವ ಪಿರಮಿಡ್ ಸ್ಥಿರ ಜನಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಸ್ಥಿರವಾದ ಪಿರಮಿಡ್ ದೀರ್ಘಕಾಲ ಜನನ ಮತ್ತು ಮರಣ ಪ್ರಮಾಣಗಳಲ್ಲಿ ವ್ಯತ್ಯಾಸಗಳಿಲ್ಲದಿರುವುದನ್ನು ತೋರಿಸುವುದು. ಉದಾ: ಜಪಾನ್– ಈ ರೀತಿಯ ಪಿರಮಿಡ್ ಸಾಧಾರಣ ಜನನ, ಕಡಿಮೆ ಮರಣ ಹಾಗೂ ದೀರ್ಘ ಜೀವಿತಾವಧಿಯನ್ನು ನಿರೂಪಿಸುವುದು.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶೇ. 40 ಬಾಲ್ಯಾವಸ್ಥೆಯ ಜನರು ಕಂಡು ಬರುವುದರಿಂದ ಇದನ್ನು ಅತಿವಿಸ್ತಾರ ತಳಹೊಂದಿರುವ ಪಿರಮಿಡ್ ಪ್ರತಿನಿಧಿಸುತ್ತವೆ. ಇದು ಅಧಿಕ ಜನನ, ಅಧಿಕ ಮರಣ, ಕಡಿಮೆ ಜೀವಿತಾವಧಿಯನ್ನು ಸೂಚಿಸುವುದರಿಂದ ಇದನ್ನು ಹೆಚ್ಚುತ್ತಿರುವ ಜನಸಂಖ್ಯಾ ಪಿರಮಿಡ್ ಎಂದು ಕರೆಯುವರು ಉದಾ: ಭಾರತ ಮತ್ತು ಬಾಂಗ್ಲಾ ದೇಶಗಳ ವಯೋರಚನೆ ಪಿರಮಿಡ್‌ಗಳು.

ನಿರಂತರವಾಗಿ ಕಡಿಮೆಯಾಗುತ್ತಿರುವ ಜನನದ ಪ್ರಮಾಣದಿಂದಾಗಿ ಬಾಲ್ಯಾವಸ್ಥೆಯ ಜನಸಂಖ್ಯೆ ಕಡಿಮೆಯಾಗಿ ಮರಣದ ಸಂಖ್ಯೆಯೂ ಕಡಿಮೆ ಇರುವ ವಯೋರಚನೆಯನ್ನು ಪ್ರತಿನಿಧಿಸುವ ಪಿರಮಿಡ್‌ಗೆ ಇಳಿಕೆಯಾಗುತ್ತಿರುವ ಜನಸಂಖ್ಯೆಯ ಪಿರಮಿಡ್ ಎಂದು ಕರೆಯುವರು. ಉದಾ:ಸ್ವೀಡನ್, ನಾರ್ವೇ, ಫ್ರಾನ್ಸ್‌ಗಳ ವಯೋರಚನೆಯ ಪಿರಮಿಡ್‌ಗಳು.

ಮೇಲಿನ ಯಾವುದೇ ಗುಂಪಿಗೆ ಸೇರದ ಪಿರಮಿಡ್‌ಗಳಿಗೆ ಮಧ್ಯಂತರ ಪ್ರಕಾರದ ಪಿರಮಿಡ್‌ಗಳೆಂದು ಕರೆಯುವರು. (ಕೆ.ಎಸ್.)

**ಜನಸಂಖ್ಯೆಯಲ್ಲಿನ ಫಲವಂತಿಕೆ ಮತ್ತು ಅದರ ಅಳತೆಗಳು:** ಮಾನವ ಸಮಾಜದ ಮುಂದುವರಿಯುವಿಕೆಗೆ ಮಾನವನ ಫಲವಂತಿಕೆ ಮುಖ್ಯ ಕಾರಣ. ಇಡೀ ಪ್ರಪಂಚದ ಜನಸಂಖ್ಯೆಯ ಬೆಳವಣಿಗೆ ಮಾನವ ಫಲವಂತಿಕೆಯನ್ನು ಅವಲಂಬಿಸಿದೆ. ಮರ್ತ್ಯತೆಯಿಂದಾಗಿ ಕ್ಷೀಣಿಸುವ ಜನಸಂಖ್ಯೆಯನ್ನು ಪುನಃ ಭರ್ತಿ ಮಾಡುವ ಮೂಲಕ ಸಮಾಜದ ಸಮತೋಲನವನ್ನು ಕಾಯ್ದುಕೊಳ್ಳುವ ಒಂದು ಶಕ್ತಿಯೇ ಫಲವಂತಿಕೆ.

ಮಾನವ ಫಲವಂತಿಕೆಯನ್ನು ಜೈವಿಕ ಪರಿಮಿತಿಯೊಳಗೆ ಹಲವಾರು ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ, ಆರ್ಥಿಕ, ರಾಜಕೀಯ ಅಂಶಗಳು ನಿರ್ಧರಿಸುವುದು ಕಂಡು ಬಂದಿದೆ. ಈ ಅಂಶಗಳು ಫಲವಂತಿಕೆಯ ಮಟ್ಟ ಮತ್ತು ಫಲವಂತಿಕೆಯ ವ್ಯತ್ಯಾಸಗಳಿಗೆ ಕಾರಣಗಳೆನಿಸಿವೆ.

ಬಹಳ ಹಿಂದಿನಿಂದಲೂ ಫಲವಂತಿಕೆಯ ಬಗೆಗೆ ಆಸಕ್ತಿ ಇತ್ತು, ಅಂದು ಫಲಶಕ್ತಿ ಹೊಂದಿದ ಮಹಿಳೆಯರನ್ನು ಗೌರವಿಸುವ ಮತ್ತು ಬಂಜೆತನವನ್ನು ನಿವಾರಿಸಲು ಪೂಜಾ ವಿಧಾನಗಳನ್ನು ರೂಪಿಸುವ, ಗಿಡಮೂಲಿಕೆ ಮತ್ತು ಆಹಾರ ಪದಾರ್ಥಗಳನ್ನು ಬಳಸುವ ಮಟ್ಟಿಗೆ ಸೀಮಿತವಾಗಿತ್ತು. ಮಹಿಳೆಯರ ಅಧಿಕ ಫಲವಂತಿಕೆಯ ಬಗೆಗೆ ಸಾಕಷ್ಟು ಆಸಕ್ತಿಯನ್ನು ವ್ಯಕ್ತಪಡಿಸುವುದರ ಜೊತೆ ಜೊತೆಯಲ್ಲಿಯೇ ಅಧಿಕ ಫಲವಂತಿಕೆಯಿಂದಾಗಿ ಸಮುದಾಯದ ಕಲ್ಯಾಣ ಹಾಗೂ ಅಸ್ತಿತ್ವವೇ ಅಪಾಯಕ್ಕೊಳಗಾಗುವ ಸಾಧ್ಯತೆಯನ್ನು ಹಲವು ಜನಾಂಗಗಳು ಅನುಭವಿಸಿದವು. ಜನಸಂಖ್ಯಾ ಹೆಚ್ಚಳವನ್ನು ಹತೋಟಿಯಲ್ಲಿಡಲು ವಿಫಲವಾದರೆ ಶಿಶುಹತ್ಯೆ ಅದರಲ್ಲಿಯೂ ಸ್ತ್ರೀ ಶಿಶು ಹತ್ಯೆಯನ್ನು ಮಾಡಲಾಗುತ್ತಿತ್ತು. ಈ ಕ್ರಮ ಮಕ್ಕಳನ್ನು ಹೆರಬಲ್ಲ ಮಹಿಳೆಯರ ಸಂಖ್ಯೆಯನ್ನು ಮಿತಗೊಳಿಸುತ್ತಿತ್ತು. ಜನಿಸಿದ ಎಲ್ಲಾ ಮಕ್ಕಳನ್ನು ಉಳಿಸಿಕೊಳ್ಳಲು ಪ್ರಯತ್ನಗಳನ್ನು ಮಾಡಿದಾಗ್ಯೂ ಅಧಿಕ ಪ್ರಮಾಣದ ಶಿಶು ಮರಣದಿಂದಾಗಿ ಪ್ರತಿ ಮಹಿಳೆಯೂ ಎಷ್ಟು ಸಾಧ್ಯವೋ ಅಷ್ಟು ಸಂಖ್ಯೆಯ ಮಕ್ಕಳನ್ನು ಪಡೆಯುವುದು ಅವಶ್ಯಕವೆಂದು ಜನತೆ ಭಾವಿಸಿತ್ತು.

ಫಲವಂತಿಕೆಯ ಕಾರ್ಯವಿಧಾನಗಳನ್ನು ಅರ್ಥಮಾಡಿಕೊಳ್ಳುವ ಮೊದಲು ಕೆಲವು ಮೂಲಭೂತ ಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು ಅಗತ್ಯ.

ಜನನ ಶಕ್ತಿ ಮತ್ತು ಗರ್ಭಧಾರಣಾಶಕ್ತಿ: ಥಾಂಪ್ಸನ್ ಮತ್ತು ಲೇವಿಸ್ ರವರು ಒಬ್ಬ ಸ್ತ್ರೀ ಅಥವಾ ಸ್ತ್ರೀಯರ ಸಮೂಹದ ಸಂತಾನೋತ್ಪತ್ತಿಯ ಪ್ರಮಾಣವನ್ನು ಫಲವಂತಿಕೆ ಎಂದೂ ಸಂತಾನೋತ್ಪತ್ತಿಯಲ್ಲಿ ಪಾಲ್ಗೊಳ್ಳಲು ಹೊಂದಿರುವ ಶಾರೀರಿಕ ಸಾಮರ್ಥ್ಯವನ್ನು ಗರ್ಭಧಾರಣಾ ಶಕ್ತಿ ಎಂದು ವ್ಯಾಖ್ಯಾನಿಸಿದ್ದಾರೆ.

ಗರ್ಭಧಾರಣಾ ಶಕ್ತಿಯನ್ನು ನೇರವಾಗಿ ಅಳೆಯಲು ಸಾಧ್ಯವಿಲ್ಲ. ಆದರೆ ಜನನ ಪ್ರಮಾಣವನ್ನು ಲೆಕ್ಕ ಹಾಕಬಹುದು. ಗರ್ಭಧಾರಣಾ ಶಕ್ತಿಯನ್ನು ಜೈವಿಕ ಅಂಶಗಳು ಮಾತ್ರ ನಿರ್ಧರಿಸಿದರೆ ಜನನ ಪ್ರಮಾಣವನ್ನು ಕೆಲವು ಶಾರೀರಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಂಶಗಳು ನಿರ್ಧರಿಸುತ್ತವೆ.

ಬಂಜೆತನ : ಸ್ತ್ರೀ ಅಥವಾ ಪುರುಷರು ತಮ್ಮ ಜೀವಿತಾವಧಿಯಲ್ಲಿ ಸಂತಾನ ಪಡೆಯದಿರುವುದಕ್ಕೆ ಬಂಜೆತನ ಎಂಬ ಪದವನ್ನು ಉಪಯೋಗಿಸುವರು.

ಸಂತಾನ ಹರಣ: ಮಕ್ಕಳಿಲ್ಲದಿರುವಿಕೆಯು ಕೃತಕವಾಗಿದ್ದರೆ ಅದಕ್ಕೆ ಸಂತಾನಹರಣವೆಂದು ಕರೆಯುವರು.

ಗರ್ಭಪಾತ : ಪೂರ್ಣವಾಗಿ ಬೆಳೆಯದ ಭ್ರೂಣ ತಾನೇ ತಾನಾಗಿ ಅಥವಾ ಮಾನವ ಪ್ರಯತ್ನದಿಂದ ತಾಯಿಯ ಗರ್ಭದಿಂದ ಹೊರಬರುವುದಕ್ಕೆ ಗರ್ಭಪಾತ ಎನ್ನಲಾಗಿದೆ.

ಗರ್ಭಧಾರಣಾ ಶಕ್ತಿ ಹೀನತೆ: ಮಕ್ಕಳಿಲ್ಲದಿರುವಿಕೆಗೂ ಗರ್ಭಧಾರಣಾ ಶಕ್ತಿ ಹೀನತೆಗೂ ವ್ಯತ್ಯಾಸವಿದೆ. ಮಕ್ಕಳಿಲ್ಲದಿರುವಿಕೆಯ ಸಹಜ ಕ್ರಿಯೆ ಗರ್ಭಧಾರಣಾ ಶಕ್ತಿ ಹೀನತೆಯಾಗಿದೆ. ಇದು ಕೃತಕ ಗರ್ಭಧಾರಣೆಯ ನಿಯಂತ್ರಣದಿಂದ ಅಥವಾ ಗಂಡನ ಸಂತಾನಶಕ್ತಿ ಹರಣದಿಂದ ಅಥವಾ ಸ್ತ್ರೀಯರ ಗರ್ಭಧಾರಣಾ ಶಕ್ತಿ ಹೀನತೆಯಿಂದ ಉಂಟಾಗಬಹುದು.

ತಾರುಣ್ಯ ಬಂಜೆತನ: ಸ್ತ್ರೀಯರ ಋತುಚಕ್ರ ಆರಂಭವಾದ ಎರಡು ಮೂರು ವರ್ಷಗಳವರೆಗೆ ಅಂಡಾಣುವಿನ ಬಿಡುಗಡೆಯ ಚಕ್ರ ವ್ಯವಸ್ಥಿತವಾಗಿಲ್ಲದಿರುವುದರಿಂದ ಈ ಅವಧಿಯಲ್ಲಿ ಸಂತಾನಕ್ರಿಯೆ ಸ್ಥಗಿತಗೊಳ್ಳುವುದೇ ತಾರುಣ್ಯ ಬಂಜೆತನ.

ಜೀವಂತ ಜನನ: ಜೀವಂತ ಲಕ್ಷಣಗಳಾದ ಉಸಿರಾಟ, ನಾಡಿ ಬಡಿತ, ರಕ್ತಪರಿಚಲನೆ, ಹೃದಯ ಬಡಿತ ಮುಂತಾದ ಲಕ್ಷಣಗಳನ್ನುಳ್ಳ ಪರಿಪೂರ್ಣ ಮಗು ಜೀವಂತವಾಗಿ ತಾಯಿಯ ಗರ್ಭದಿಂದ ಹೊರಬರುವುದಕ್ಕೆ ಜೀವಂತ ಜನನ ಎನ್ನಲಾಗಿದೆ.

ಮೃತ ಜನನ: ಗರ್ಭಕೋಶದಿಂದ ಹೊರಬರುವ ಮೊದಲೇ ಭ್ರೂಣ ಸಾವನ್ನಪ್ಪಿದ್ದರೆ ಅದಕ್ಕೆ ಮೃತ ಜನನ ಎನ್ನಲಾಗಿದೆ.

ಕುಟುಂಬದ ಗಾತ್ರ: ಒಂದು ನಿರ್ದಿಷ್ಟ ಅವಧಿಯಲ್ಲಿ ದಂಪತಿಗಳು ಪಡೆದ ಒಟ್ಟು ಮಕ್ಕಳ ಸಂಖ್ಯೆ.

ಜೀವನ ಕ್ರಮ: ಸ್ತ್ರೀಯ ಜೀವಂತ ಮಕ್ಕಳ ಜನನಗಳನ್ನು ಅವುಗಳು ಜನಿಸಿದ ಕ್ರಮಕ್ಕನುಸಾರವಾಗಿ ವರ್ಗೀಕರಿಸುವುದೇ ಜೀವನ ಕ್ರಮ. ಉದಾ: ಮೊದಲನೆಯ ಜನನ, ಎರಡನೆಯ ಜನನ ಇತ್ಯಾದಿ.

ಸಾಮ್ಯ: ಒಂದು ಜೀವಂತ ಮಗುವನ್ನು ಪಡೆದ ತಾಯಿಯನ್ನು ಮೊದಲನೆಯ ಸಾಮ್ಯತಾಯಿ, ಎರಡು ಜೀವಂತ ಮಕ್ಕಳನ್ನು ಪಡೆದ ತಾಯಿಯನ್ನು ಎರಡನೆಯ ಸಾಮ್ಯ ತಾಯಿಯೆಂದು ಹೀಗೆ ಮೂರನೆಯ ನಾಲ್ಕನೆಯ ತಾಯಿಯೆಂದು ಕರೆಯಲಾಗುವುದು.

ಪ್ರಾಥಮಿಕ ಮತ್ತು ಮಾಧ್ಯಮಿಕ ಬಂಜೆತನ: ಜೀವನ ಪೂರ್ತಿ ಮಕ್ಕಳಾಗದಿರುವಿಕೆಗೆ ಪ್ರಾಥಮಿಕ ಬಂಜೆತನ ಎಂದೂ ಒಂದೆರಡು ಮಕ್ಕಳಾದ ಮೇಲೆ ಗರ್ಭಧರಿಸುವ ಪ್ರಕ್ರಿಯೆ ನಿಂತರೆ ಮಾಧ್ಯಮಿಕ ಬಂಜೆತನವೆಂದು ಕರೆಯಲಾಗಿದೆ.

ಸಂತಾನ ನಷ್ಟ: ಸಂತಾನ ನಷ್ಟ ಎಂದರೆ ಗರ್ಭಪಾತ ಮತ್ತು ಮೃತ ಜನನ.

ಮಗುವಿನ ಜನನ ಮೂಲಭೂತವಾಗಿ ಒಂದು ಜೈವಿಕ ಕ್ರಿಯೆಯಾದರೂ ಇದು ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ ಅಂಶಗಳಿಂದಲೂ ನಿರ್ಧಾರವಾಗುತ್ತದೆ.

ಜೈವಿಕ ಅಂಶಗಳು: ಸಂತಾನೋತ್ಪತ್ತಿ ಒಂದು ಮೂಲಭೂತ ಕ್ರಿಯೆಯಾಗಿದ್ದು ಇದು ಅನುವಂಶೀಯತೆ, ವಯಸ್ಸು, ಆರೋಗ್ಯ, ಮಾಸಿಕಸ್ರಾವ, ಋತುಬಂಧ, ಪ್ರೌಢಾವಸ್ಥೆ, ಸಂತಾನೋತ್ಪತ್ತಿಯ ಅವಧಿ ಮುಂತಾದ ಜೈವಿಕ ಅಂಶಗಳಿಂದ ನಿರ್ಧಾರವಾಗುತ್ತದೆ.

ಶಾರೀರಿಕ ಅಂಶಗಳು: ತಾರುಣ್ಯ ಬಂಜೆತನ, ಬಾಣಂತಿತನದ ಬಂಜೆತನ ಮತ್ತು ಜನನಗಳ ಅಂತರ, ಪ್ರಾಥಮಿಕ ಮತ್ತು ಮಾಧ್ಯಮಿಕ ಬಂಜೆತನ ಸಂತಾನ ನಷ್ಟ ಮುಂತಾದ ಶಾರೀರಿಕ ಅಂಶಗಳೂ ಜನನಶಕ್ತಿಯನ್ನು ಪ್ರಭಾವಿಸುತ್ತವೆ.

ಸಾಮಾಜಿಕ ಅಂಶಗಳು: ಸಾಮಾಜಿಕ ಅಂಶಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವೆಂದು 2 ಗುಂಪುಗಳಾಗಿ ವಿಂಗಡಿಸಬಹುದು.

ಪ್ರತ್ಯಕ್ಷ ಅಂಶಗಳು: ವೈವಾಹಿಕ ವಯಸ್ಸು, ಬಹುಪತ್ನಿತ್ವ, ತ್ಯಜಿಸುವಿಕೆ ಅಥವಾ ವಿವಾಹ ವಿಚ್ಛೇದನ ಇತ್ಯಾದಿ. ತ್ಯಜಿಸುವ ಅವಧಿ, ತ್ಯಜಿಸುವಿಕೆಯ ಕಾಲದಲ್ಲಿ ತಂದೆ, ತಾಯಿ ಮತ್ತು ಮಕ್ಕಳ ವಯಸ್ಸು ಪ್ರಭಾವ ಬೀರುತ್ತವೆ.

ಜೀವನ ಪೂರ್ತಿ ಬ್ರಹ್ಮಚರ್ಯಪಾಲಿಸುವುದರಿಂದ ಜನನ ಕಡಿಮೆಯಾಗುತ್ತದೆ.

ಪರೋಕ್ಷ ಅಂಶಗಳು: ಕುಟುಂಬ ಯೋಜನಾ ಕ್ರಮಗಳ ಪಾಲನೆಯೂ ಜನನವನ್ನು ನಿಯಂತ್ರಿಸುತ್ತದೆ. ಇಲ್ಲಿ ಬಳಸುವ ಗರ್ಭ ನಿರೋಧಕ ಮಾತ್ರೆಗಳು, ವಂಕಿ, ಗರ್ಭಪಾತ, ಸಂತಾನ ಹರಣ ಶಸ್ತ್ರ ಚಿಕಿತ್ಸೆ ಕಂಡೋಮ್ ಬಳಕೆ ಮುಂತಾದ ವಿಧಾನಗಳನ್ನು ಕಾಣಬಹುದು.

ಇತರೆ ಅಂಶಗಳು: ಆಹಾರ ಸರಬರಾಜು: ಆಹಾರದ ಅಭಾವವಿರುವ ದೇಶಗಳಲ್ಲಿ ಜನ ಸ್ವಯಂ ಪ್ರೇರಣೆಯಿಂದ ಜನನ ನಿಯಂತ್ರಣವನ್ನು ಅನುಸರಿಸುತ್ತಾರೆಂದು ನಂಬಲಾಗಿದೆ. ಜನಸಂಖ್ಯಾ ಬೆಳವಣಿಗೆಯ ಹಂತಗಳಿಂದ ಇದನ್ನು ತಿಳಿಯಬಹುದು.

ನಗರೀಕರಣ: ನಗರವಾಸಿಗಳು ಸುಶಿಕ್ಷಿತರೂ ವಿಚಾರವಂತರೂ ಆಗಿರುವುದರಿಂದ ನಗರಗಳಲ್ಲಿ ಸ್ಥಳದ ಅಭಾವ ಹಾಗೂ ಆದಾಯ ಕಡಿಮೆ ಇರುವುದರಿಂದ ಹೆಚ್ಚು ಮಕ್ಕಳನ್ನು ಪಡೆಯಲು ಇಚ್ಛಿಸುವುದಿಲ್ಲ.

ಆರ್ಥಿಕ ಸ್ಥಿತಿ: ಬಡತನ ಮತ್ತು ವ್ಯವಸಾಯ ಪ್ರಧಾನ ಕಸಬಾಗಿರುವ ಕಡೆ ಹೆಚ್ಚು ಮಕ್ಕಳನ್ನೂ ಸಿರಿತನ ಹಾಗೂ ನಗರದ ಕೈಗಾರಿಕಾ ಪ್ರಧಾನ ಕುಟುಂಬಗಳು ಕಡಿಮೆ ಮಕ್ಕಳನ್ನು ಹೊಂದಿರುತ್ತಾರೆ.

ಧರ್ಮದ ಪಾತ್ರ: ಬಾಲ್ಯ ವಿವಾಹ ಮತ್ತು ಬಹುಪತ್ನಿತ್ವವನ್ನು ನಿಷೇಧಿಸಿ ಬ್ರಹ್ಮಚರ್ಯೆಯನ್ನು ಪ್ರೋತ್ಸಾಹಿಸುವ ಧರ್ಮಗಳು ಜನನವನ್ನು ನಿಯಂತ್ರಿಸಿದರೆ ಇದಕ್ಕೆ ವಿರುದ್ಧವಾಗಿರುವ ಧರ್ಮಗಳು ಜನನವನ್ನು ಹೆಚ್ಚಿಸುತ್ತವೆ.

ಕುಟುಂಬ ವ್ಯವಸ್ಥೆ: ವಿಭಕ್ತ ಕುಟುಂಬಗಳು ಕಡಿಮೆ ಮಕ್ಕಳನ್ನು ಅವಿಭಕ್ತ ಕುಟುಂಬಗಳು ಹೆಚ್ಚು ಮಕ್ಕಳನ್ನು ಹೊಂದಿರುತ್ತಾರೆ.

ಪರಿವೃತ್ತಿ ಮತ್ತು ಜನನ: ದೈಹಿಕ ಶ್ರಮದಲ್ಲಿ ತೊಡಗಿರುವ ತಂದೆ ತಾಯಿಗಳು ಹೆಚ್ಚು ಮಕ್ಕಳನ್ನು ಮಾನಸಿಕ ಶ್ರಮದಲ್ಲಿ ತೊಡಗಿರುವವರು ಕಡಿಮೆ ಮಕ್ಕಳನ್ನು ಪಡೆಯುತ್ತಾರೆ.

ಸ್ತ್ರೀಯ ಸ್ಥಾನಮಾನ: ಸ್ತ್ರೀಯು ಸುಶಿಕ್ಷಿತ ಹಾಗೂ ಉದ್ಯೋಗಸ್ಥೆಯಾಗಿದ್ದರೆ ಕುಟುಂಬ ಯೋಜನೆಯಲ್ಲಿ ಹೆಚ್ಚು ಆಸಕ್ತರಾಗಿರುತ್ತಾರೆ. ಇದಕ್ಕೆ ವಿರುದ್ಧವಾಗಿ ಅನಕ್ಷರಸ್ಥ, ಮೂಢನಂಬಿಕೆಯುಳ್ಳ ಸ್ತ್ರೀಯರು ಹೆಚ್ಚು ಮಕ್ಕಳನ್ನು ಪಡೆಯುತ್ತಾರೆ.

ವೈಜ್ಞಾನಿಕತೆ: ಮಾನವರಲ್ಲಿ ಮೂಢನಂಬಿಕೆ ಪ್ರಧಾನವಾದಂತೆ ಜನನ ಹೆಚ್ಚಾದರೆ ವೈಜ್ಞಾನಿಕ ಚಿಂತನೆ ಹೆಚ್ಚಿದಂತೆ ಜನನ ದರವೂ ಕಡಿಮೆಯಾಗುತ್ತದೆ.

ಜನನ ಪ್ರಮಾಣವನ್ನು ಅಳೆಯುವ ವಿಧಾನಗಳು:

ಜನನ ಪ್ರಮಾಣವನ್ನು ಅಳೆಯುವ ವಿಧಾನಗಳಲ್ಲಿ ಕೆಲವು ನಿಖರವಲ್ಲದ ವಿಧಾನಗಳಾಗಿವೆ.

1) ಸಹಜ ಜನನ ಪ್ರಮಾಣ: ಒಂದು ನಿರ್ದಿಷ್ಟ ವರ್ಷದಲ್ಲಿ ಮತ್ತು ಪ್ರದೇಶದಲ್ಲಿ ಒಟ್ಟು ಜನಸಂಖ್ಯೆ ಮತ್ತು ನೋಂದಾಯಿಸಿದ ಒಟ್ಟು ಜೀವಂತ ಜನನಗಳ ಪ್ರಮಾಣವನ್ನು 1000 ದಿಂದ ಗುಣಿಸಿದಾಗ ಬರುವ ಭಾಗಲಬ್ದವೇ ಸಹಜ ಜನನ ಪ್ರಮಾಣ.

$$CBR = \frac{B_1}{P} \times 1000$$

CBR = ಸಹಜ ಜನನ ದರ

$B_1$ = ಒಂದು ನಿರ್ದಿಷ್ಟ ಅವಧಿಯಲ್ಲಿ ನೋಂದಣಿಯಾಗಿರುವ ಒಟ್ಟು ಜನನ

P = ಒಟ್ಟು ಜನ ಸಂಖ್ಯೆ

2) ಮಕ್ಕಳು ಸ್ತ್ರೀ ಪ್ರಮಾಣ : ಪುನರುತ್ಪಾದನೆಯ ವಯೋ ಗುಂಪಿನ (15–49) ಎಲ್ಲಾ ಹೆಂಗಸರನ್ನು ಮತ್ತು ಐದು ವರ್ಷ ವಯಸ್ಸಿನೊಳಗಿರುವ ಎಲ್ಲಾ ಮಕ್ಕಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

$$FR = \frac{P_{0.4}}{Pf_{15.49}} \times 1000$$

FR = (ಫಲವಂತಿಕೆ ಪರಿಮಾಣ / ಶಿಶು ಮಾತೃ ಪರಿಮಾಣ)

$P_{0.4}$ : ಐದು ವರ್ಷ ವಯಸ್ಸಿನೊಳಗಿನ ಮಕ್ಕಳ ಸಂಖ್ಯೆ.

$Pf_{15.49}$ : 15–49 ವರ್ಷದೊಳಗಿನ ಸ್ತ್ರೀಯರ ಸಂಖ್ಯೆ.

3) ಸಾಮಾನ್ಯ ಜನನ ಪ್ರಮಾಣ

ಮಕ್ಕಳನ್ನು ಪಡೆಯುವ ವಯಸ್ಸಿನಲ್ಲಿರುವ ಪ್ರತಿ ಸಾವಿರ ಸ್ತ್ರೀಯರಿಗೆ ಒಂದು ವರ್ಷದಲ್ಲಿ ಜನಿಸುವ ಮಕ್ಕಳ ಸಂಖ್ಯೆಯೇ ಸಾಮಾನ್ಯ ಜನನ ದರ

$$GRF = \frac{B_1}{Pf_{15.44}} \times 100$$

$B_1$= ಒಂದು ವರ್ಷದಲ್ಲಿ ನೋಂದಾಯಿಸಲ್ಪಟ್ಟಿರುವ ಒಟ್ಟು ಜನನ

$P_f$ = ಅದೇ ವರ್ಷದಲ್ಲಿ ಸಂತಾನೋತ್ಪತ್ತಿಯ ವಯಸ್ಸಿನಲ್ಲಿರುವ ಸ್ತ್ರೀಯರ ಸಂಖ್ಯೆ

4) ನಿರ್ದಿಷ್ಟ ವಯೋ ಜನನ ಪ್ರಮಾಣ: ಒಂದು ನಿರ್ದಿಷ್ಟ ವಯಸ್ಸಿನ ಪ್ರತಿ ಸಾವಿರ ಸ್ತ್ರೀಯರಿಗೆ ಒಂದು ವರ್ಷದಲ್ಲಿ ಜನಿಸುವ ಜನನ ಸಂಖ್ಯೆಗೆ ನಿರ್ದಿಷ್ಟ ವಯಸ್ಸಿನ ಜನನ ಪ್ರಮಾಣ ಎನ್ನಲಾಗಿದೆ.

$$ABR = \frac{B_{20.24}}{Pf_{20.24}} \times 1000$$

$B_{20.24}$ = 20.24 ವಯಸ್ಸಿನ ತಾಯಂದಿರಿಗೆ ಜನಿಸಿರುವ ಜೀವಂತ ಮಕ್ಕಳ ಪ್ರಮಾಣ

$Pf_{20.24}$= 20.24 ವಯೋವರ್ಗದ ಒಟ್ಟು ಸ್ತ್ರೀಯರ ಸಂಖ್ಯೆ.

5) ನಿವ್ವಳ ಸಂತಾನೋತ್ಪತ್ತಿ ದರ: ಇದು ಹೆಣ್ಣು ಮಕ್ಕಳಿಗೆ ಸೀಮಿತವಾದ ಜನನದರ, ಸಂತಾನೋತ್ಪತ್ತಿ ವಯಸ್ಸಿನ ಸ್ತ್ರೀಯರಿಗೆ ಪ್ರತಿ ವರ್ಷ ಜನಿಸಲಿರುವ ಹೆಣ್ಣು ಮಕ್ಕಳ ಸಂಖ್ಯೆಯೇ ನಿವ್ವಳ ಸಂತಾನೋತ್ಪತ್ತಿ ದರ.

$$GRR \; \frac{Bf}{Pf_{15\text{-}44}} \times 1000$$

Bf= ಹೆಣ್ಣು ಮಕ್ಕಳ ಸಂಖ್ಯೆ

$Pf_{15\text{-}44}$= ಸಂತಾನೋತ್ಪತ್ತಿ ವಯಸ್ಸಿನ ಸ್ತ್ರೀಯರ ಸಂಖ್ಯೆ.

6) ಸಂಚಿತ ಜನನ ದರ: ನಿರ್ದಿಷ್ಟ ವಯಸ್ಸಿನ ಪ್ರತಿ 1000 ಸ್ತ್ರೀಯರಿಗೆ ಜನಿಸಿರುವ ಮಕ್ಕಳ ಸಂಖ್ಯೆಯನ್ನು ಸಂಚಿತ ಜನನ ದರ ಸೂಚಿಸುತ್ತದೆ.

7) ಒಟ್ಟು ಜನನ ಪ್ರಮಾಣ: ಫಲವತ್ತತೆ ವಯಸ್ಸಿನಲ್ಲಿರುವ ಪ್ರತಿ ಸ್ತ್ರೀಯರಿಗೆ ಜನಿಸಿರುವ ಸರಾಸರಿ ಮಕ್ಕಳ ಸಂಖ್ಯೆಯನ್ನು ಒಟ್ಟು ಜನನ ಪ್ರಮಾಣ ಎನ್ನುತ್ತಾರೆ. **(ಕೆ.ಎಸ್.)**

## ಜನಸಂಖ್ಯೆಯಲ್ಲಿನ ಮರಣ ಮತ್ತು ಅದರ ಅಳತೆಯ ಪ್ರಮಾಣಗಳು:

ಜನಸಂಖ್ಯೆ ಅಂಶಗಳಲ್ಲಿ ಜನನ ಮತ್ತು ವಲಸೆಯಂತೆ ಮರಣ ಸಹ ಪ್ರಮುಖವಾದುದಾಗಿದೆ. ಜೀವ ವಿಜ್ಞಾನಿಗಳು ಮರಣವೆಂಬುದಕ್ಕೆ ಕ್ರಿಯಾ ರಹಿತವಾದ, ಚೇತನರಹಿತವಾದ ಅವನತಿ ಹೊಂದುವ ಅವಸ್ಥೆ ಎಂದು ಗುರುತಿಸಿದ್ದಾರೆ. ಜನನ ಸಾಮಾಜಿಕ ಜೀವನದ ಮುಂದುವರಿಕೆಗೆ ಹೇಗೆ ಅವಶ್ಯಕವೋ ಹಾಗೇ ಮರಣ ಸಮಾಜಕ್ಕೆ ಹೊಸ ರೂಪವನ್ನು ಕೊಡುವುದಕ್ಕೆ ಅಗತ್ಯ. ಮರಣವೆಂದರೆ ಜೀವನದ ಕೊನೆ ಎನ್ನಬಹುದು.

ವಿಶ್ವ ಆರೋಗ್ಯ ಸಂಸ್ಥೆಯ ಹುಟ್ಟಿದ ಅನಂತರ ಜೀವದ ಎಲ್ಲಾ ಲಕ್ಷಣಗಳೂ ಶಾಶ್ವತವಾಗಿ ಕಣ್ಮರೆಯಾಗುವುದಕ್ಕೆ ಸಾವು ಎಂದು ವ್ಯಾಖ್ಯಾನಿಸಿದೆ.

ಮರಣದಲ್ಲಿ ಶಿಶು ಮರಣ ಮತ್ತು ತಾಯ್ತನದ ಮರಣ ಎಂಬುದು ಸಹ ಪ್ರಮುಖವಾದ ಅಂಶಗಳು.

ಶಿಶು ಮರಣ: ಮಗು ಒಂದು ವರ್ಷ ತುಂಬುವ ಮೊದಲೇ ಮರಣ ಹೊಂದುವುದಕ್ಕೆ ಶಿಶು ಮರಣ ಎಂತಲೂ 1 ರಿಂದ 4 ವರ್ಷಗಳ ಒಳಗೆ ಮಗು ಮರಣ ಹೊಂದುವುದಕ್ಕೆ ಮಕ್ಕಳ ಮರಣ ಎಂದು ಕರೆಯುವರು.

ತಾಯ್ತನದ ಮರಣ: ಒಂದು ಮಗುವಿಗೆ ಜನ್ಮ ನೀಡಿದ ಮೂರು ತಿಂಗಳ ಒಳಗೆ ಅಥವಾ ಗರ್ಭಧಾರಣೆ ಅವಧಿಯಲ್ಲಿ ಅದರ ತಾಯಿ ಸಾವನ್ನಪ್ಪುವುದಕ್ಕೆ ತಾಯ್ತನದ ಮರಣ ಎನ್ನುವರು.

ಶಿಶು ಮರಣಕ್ಕೆ ಕಾರಣಗಳು: 1) ಸ್ತ್ರೀ ಚಿಕ್ಕವಯಸ್ಸಿನಲ್ಲೇ ಮದುವೆಯಾಗುವುದರಿಂದ ಗರ್ಭಧರಿಸಿ ಹೆಚ್ಚು ಮಕ್ಕಳನ್ನು ಪಡೆಯುವುದರಿಂದ ರೋಗಗ್ರಸ್ತಳಾಗುತ್ತಾಳೆ. ಇದರಿಂದ ಅವಳಿಗೆ ಹುಟ್ಟುವ ಮಕ್ಕಳು ಬಲಹೀನರಾಗಿ ಬೇಗ ಸಾಯುತ್ತಾರೆ. 2) ಗ್ರಾಮೀಣ ಪ್ರದೇಶದಲ್ಲಿ ಆಗುವ ಬಹುತೇಕ ಹೆರಿಗೆಗಳು ವೈದ್ಯರ ನೆರವಿಲ್ಲದೆ ಮನೆಯಲ್ಲಿಯೇ ಆಗುತ್ತವೆ. ಇದರಿಂದ ಕಾಲಕಾಲಕ್ಕೆ ವೈದ್ಯಕೀಯ ಪರೀಕ್ಷೆಗೆ ಒಳಪಡುವುದು ಅತಿ ವಿರಳ ಇದರಿಂದ ಮಕ್ಕಳ ಮರಣ ಹೆಚ್ಚುತ್ತದೆ. 3) ಬಡತನದಿಂದ ಕೃಶಗೊಂಡ ತಾಯಿ ಮಕ್ಕಳಿಗೆ ಸಾಕಷ್ಟು ಎದೆ ಹಾಲುಣಿಸಲಾಗದೆ ಮಕ್ಕಳು ಬೇಗ ಸಾಯುತ್ತವೆ. ಹಾಗೆಯೇ ಹೆರಿಗೆಯ ಅನಂತರ ಮಹಿಳಾ ಕಾರ್ಮಿಕರು ಕೆಲಸಕ್ಕೆ ಹಾಜರಾಗುವುದರಿಂದ ಮಕ್ಕಳು ನಿರ್ಲಕ್ಷ್ಯಕ್ಕೊಳಪಟ್ಟು ಶೀಘ್ರ ಮರಣಕ್ಕೆ ತುತ್ತಾಗುತ್ತವೆ. 4) ಜೈವಿಕ ಕಾರಣಗಳು: ಆಂತರಿಕ ಜೈವಿಕ ಕಾರಣಗಳಾದ ಗರ್ಭಧಾರಣೆಯ ದೋಷ, ಗರ್ಭಪಾತ ಮತ್ತು ಪ್ರಸವ ತೊಂದರೆಗಳೂ ಶೈಶಾವಸ್ಥೆಯ ಮರಣಕ್ಕೆ ಕಾರಣವಾಗಿವೆ. 5) ಸ್ತ್ರೀಯರು ಗರ್ಭಿಣಿಯರಾಗಿದ್ದಾಗ ಆಹಾರದ ಕೊರತೆಯಿಂದಾಗಿ ಮತ್ತು ಮಕ್ಕಳ ಶೈಶಾವಸ್ಥೆಯಲ್ಲಿದ್ದಾಗ ಪೋಷಣೆ ಇಲ್ಲದೆ ಮಕ್ಕಳ ಮರಣ ಉಂಟಾಗುತ್ತದೆ.

ಮದುವೆಯ ವಯಸ್ಸನ್ನು ಏರಿಸುವುದು, ವೈದ್ಯಕೀಯ ಸೌಲಭ್ಯಗಳ ಕೊರತೆಯನ್ನು ನೀಗಿಸುವುದು, ಆರೋಗ್ಯದ ಬಗ್ಗೆ ಶಿಕ್ಷಣ, ಪೌಷ್ಠಿಕ ಆಹಾರ ಒದಗಿಸುವುದು, ಉತ್ತಮ ಪರಿಸರವನ್ನು ಒದಗಿಸುವುದರ ಮೂಲಕ ಶಿಶುಮರಣವನ್ನು ಕಡಿಮೆ ಮಾಡಬಹುದು.

ತಾಯ್ತನದ ಮರಣಕ್ಕೆ ಕಾರಣಗಳು: ಅತಿಯಾದ ಸಂತಾನ, ಸ್ತ್ರೀಯರ ಬಗ್ಗೆ ಅಸಡ್ಡೆ, ಪ್ರಯಾಸದ ದುಡಿಮೆ, ಆರೋಗ್ಯ ಸೌಲಭ್ಯಗಳ ಕೊರತೆ, ಅನಕ್ಷರತೆ, ಹೆರಿಗೆಯ ಪೂರ್ವೋತ್ತರ ಉಪಚಾರವಿಲ್ಲದಿರುವುದು, ಪೌಷ್ಠಿಕ ಆಹಾರದ ಕೊರತೆ, ಮಕ್ಕಳನ್ನು ಪಡೆಯುವಲ್ಲಿ ಅಂತರ ಇಲ್ಲದಿರುವುದು ತಾಯ್ತನದ ಮರಣಕ್ಕೆ ಕಾರಣಗಳಾಗಿವೆ.

ಮರಣವನ್ನು ಅಳೆಯುವ ಪ್ರಮಾಣಗಳು: ಶಿಶು ಮರಣ ದರ: ಅದೇ ತಾನೇ ಹುಟ್ಟಿದ ಶಿಶುಗಳನ್ನೊಳಗೊಂಡು ಮೊದಲ ವರ್ಷದ ಹುಟ್ಟು ಹಬ್ಬ ಆಚರಿಸುವ ಮಕ್ಕಳನ್ನು ಶಿಶುಗಳೆಂದು ಜನ ಸಂಖ್ಯಾವಿಜ್ಞಾನಿಗಳು ಪರಿಗಣಿಸಿದ್ದಾರೆ. ಈ ಶಿಶುಗಳ ಮರಣದರವನ್ನು ಈ ಕೆಳಗಿನ ಸೂತ್ರದ ಮೂಲಕ ಅಳೆಯಬಹುದು.

$$IMR\ (\text{ಶಿಶುಮರಣದರ}) = \frac{\text{Death (ಮರಣ D)}}{\text{Birth (ಜನನ B)}} \times 1000$$

D=ಒಂದು ವರ್ಷ ತುಂಬುವುದರೊಳಗೆ ಮರಣ ಹೊಂದಿದ ಮಕ್ಕಳ ಸಂಖ್ಯೆ

B=ಅದೇ ವರ್ಷ ಜನಿಸಿದ ಒಟ್ಟು ಜೀವಂತ ಮಕ್ಕಳ ಸಂಖ್ಯೆ

2) ಸಹಜ ಮರಣ ದರ: ನಿರ್ದಿಷ್ಟ ವರ್ಷದಲ್ಲಿ ನೋಂದಣಿಯಾಗಿರುವ ಮರಣಗಳನ್ನು ಅದೇ ವರ್ಷದ ಮಧ್ಯಭಾಗದ ಒಟ್ಟು ಜನ ಸಂಖ್ಯೆಯಿಂದ ಭಾಗಿಸಿ ಬಂದ ಭಾಗಲಬ್ಧವನ್ನು ಸಾವಿರದಿಂದ ಗುಣಿಸಿದರೆ ಸಹಜ ಮರಣದರ ಸಿಗುತ್ತದೆ.

$$\text{ಸಹಜ ಮರಣದರ} = \frac{\text{ನಿರ್ದಿಷ್ಟ ವರ್ಷದಲ್ಲಿ ನೋಂದಣಿಯಾದ ಮರಣ ಸಂಖ್ಯೆ}}{\text{ಅದೇ ವರ್ಷದ ಮಧ್ಯಭಾಗದ ಜನ ಸಂಖ್ಯೆ}} \times 1000$$

3) ವಯಸ್ಸು – ಲಿಂಗ – ನಿರ್ದಿಷ್ಟ ಮರಣ ದರ

$$DasR = \frac{Das}{Pas} \times 1000$$

ವಯಸ್ಸು ಮತ್ತು ಲಿಂಗ ಎರಡನ್ನೂ ಗಣನೆಗೆ ತೆಗೆದುಕೊಂಡು ಮರಣದರವನ್ನು ಕಂಡು ಹಿಡಿಯಲಾಗುತ್ತದೆ.

DasR = ಮರಣ, a= ವಯೋಗುಂಪು, S=ಲಿಂಗ, R=ದರ

Das=ನಿರ್ದಿಷ್ಟ ವಯಸ್ಸಿನ ಸ್ತ್ರೀ ಮತ್ತು ಪುರುಷರ ಸತ್ತವರ ಸಂಖ್ಯೆ

Pas = ಸ್ತ್ರೀ ಅಥವಾ ಪುರುಷರ ನಿರ್ದಿಷ್ಟ ವಯಸ್ಸಿನ ಒಟ್ಟು ಜನಸಂಖ್ಯೆ.

**(ಕೆ.ಎಸ್.)**

## ಜನಸಂಖ್ಯೆಯಲ್ಲಿನ ವೃತ್ತಿ ರಚನೆ

**ಜನಸಂಖ್ಯೆಯಲ್ಲಿನ ವೃತ್ತಿ ರಚನೆ:** ಮಾನವ ತನ್ನ ಜೀವನವನ್ನು ಸಾಗಿಸಲು ಪ್ರಥಮ, ದ್ವಿತೀಯ, ತೃತೀಯ ವಲಯದ ಚಟುವಟಿಕೆಗಳನ್ನು ಕೈಗೊಂಡಿರುವನು. ಇವುಗಳಲ್ಲಿ ಯಾವ ವಲಯದಲ್ಲಿ ದುಡಿಯುವ ಶಕ್ತಿ ತೊಡಗಿದೆ ಎಂಬುದನ್ನು ವೃತ್ತಿ ಸಂಯೋಜನೆಯಿಂದ ತಿಳಿಯಬಹುದು.

ಒಂದು ರಾಷ್ಟ್ರದಲ್ಲಿ ಪ್ರಕೃತಿದತ್ತವಾಗಿ ದೊರೆಯುವ ವಿವಿಧ ರೀತಿಯ ಸಂಪನ್ಮೂಲಗಳು ಆ ರಾಷ್ಟ್ರದ ವೃತ್ತಿ ರಚನೆಯನ್ನು ನಿರ್ಧರಿಸುತ್ತವೆ. ಉದಾ: ಅರಣ್ಯ ಸಂಪನ್ಮೂಲಗಳು ಅಧಿಕವಾಗಿದ್ದರೆ ಅರಣ್ಯಗಾರಿಕೆ, ತೀರ ಹಾಗೂ ಕರಾವಳಿ ಪ್ರದೇಶವಿದ್ದರೆ ಮೀನುಗಾರಿಕೆ, ಫಲವತ್ತಾದ ಭೂಮಿಯಿದ್ದರೆ ವ್ಯವಸಾಯ, ಹೇರಳವಾದ ಖನಿಜಗಳಿದ್ದರೆ ಗಣಿಗಾರಿಕೆ ಕಂಡುಬರುತ್ತದೆ. ಪ್ರಾಕೃತಿಕ ಸಂಪನ್ಮೂಲಗಳನ್ನು ವಾಣಿಜ್ಯದ ದೃಷ್ಟಿಯಿಂದ ಬಳಕೆ ಮಾಡಲು ಪ್ರಾರಂಭಿಸಿದಾಗ ಕೈಗಾರಿಕೆಗಳು ಉಗಮವಾಗಿ ವೃತ್ತಿರಚನೆಯಲ್ಲಿ ವ್ಯತ್ಯಾಸ ಉಂಟಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಾಯಿತು. ಇದರಿಂದ ಮತ್ತೆ ವೃತ್ತಿ ರಚನೆಯಲ್ಲಿ ವಿಭಿನ್ನತೆಗಳುಂಟಾಗಿ ವೃತ್ತಿಗಳಲ್ಲಿ ವೈಶಿಷ್ಟ್ಯತೆಗಳುಂಟಾದವು. ಈ ಎಲ್ಲಾ ರೀತಿಯ ವೃತ್ತಿಗಳನ್ನು 3 ವಿಧಗಳಾಗಿ ವರ್ಗೀಕರಿಸಲಾಯಿತು. ವೃತ್ತಿಯ ಮೇಲೆ ಸಮಾಜವನ್ನು ಸಹ ವರ್ಗೀಕರಿಸಲಾಯಿತು.

ಪ್ರಾಥಮಿಕ ನಾಗರಿಕತೆಯ ಸಮಾಜ: ಶೇ. 15 ಕ್ಕಿಂತಲೂ ಕಡಿಮೆ ಜನರು ತೃತೀಯ ಚಟುವಟಿಕೆಗಳಲ್ಲಿ ತೊಡಗಿರುವ ಸಮಾಜವನ್ನು ಪ್ರಾಥಮಿಕ ಸಮಾಜವೆಂದು ಕರೆಯುವರು.

ದ್ವಿತೀಯ ನಾಗರಿಕತೆಯ ಸಮಾಜ: ಇದು ಶೇ. 15 ರಿಂದ ಶೇ. 40 ರಷ್ಟು ಜನರು ತೃತೀಯ ಚಟುವಟಿಕೆಗಳಲ್ಲಿ ತೊಡಗಿರುವ ಸಮಾಜ.

ತೃತೀಯ ನಾಗರೀಕತೆಯ ಸಮಾಜ: ಶೇ. 40ಕ್ಕಿಂತ ಹೆಚ್ಚಿನ ಜನರು ತೃತೀಯ ಚಟುವಟಿಕೆಗಳಲ್ಲಿ ನಿರತರಾಗಿರುವ ಸಮಾಜವಿದು.

ವೃತ್ತಿ ರಚನೆಯ ಆಧಾರದ ಮೇಲೆ ದೇಶದ ಆರ್ಥಿಕತೆಯನ್ನು ಸಹ ನಿರ್ಧರಿಸಲಾಗುವುದು ಶೇ. 60 ಕ್ಕಿಂತ ಹೆಚ್ಚಿನ ಜನರು ಪ್ರಾಥಮಿಕ ವಲಯದ ಚಟುವಟಿಕೆಗಳಲ್ಲಿ ತೊಡಗಿದ್ದರೆ ಅಂತಹ ದೇಶಗಳನ್ನು ಕಡಿಮೆ ಅಭಿವೃದ್ಧಿ ರಾಷ್ಟ್ರಗಳೆಂದೂ

ಶೇ. 35 ಕ್ಕಿಂತ ಹೆಚ್ಚಿನ ಜನರು ಪ್ರಾಥಮಿಕ ವಲಯದ ಚಟುವಟಿಕೆಗಳಲ್ಲಿ ತೊಡಗಿರುವ ದೇಶಗಳಿಗೆ ಅಭಿವೃದ್ಧಿ ರಾಷ್ಟ್ರಗಳೆಂದು, ಶೇ. 35 ರಿಂದ ಶೇ. 60 ಜನರು ಪ್ರಾಥಮಿಕ ವಲಯದ ಚಟುವಟಿಕೆಗಳಲ್ಲಿ ತೊಡಗಿದ್ದರೆ ಮಧ್ಯಂತರ ಅಭಿವೃದ್ಧಿ ರಾಷ್ಟ್ರಗಳೆಂದು ಕರೆಯಲಾಗುವುದು.

ಕಾರ್ಮಿಕ ಶಕ್ತಿ: ಕಾರ್ಮಿಕ ಶಕ್ತಿ ಜನಸಂಖ್ಯೆಯ ಒಂದು ಭಾಗವಾಗಿದೆ. ವೃತ್ತಿಯ ಮೇರೆಗೆ ಜನರನ್ನು ಕೆಲಸಗಾರರು ಮತ್ತು ಕೆಲಸಗಾರರಲ್ಲದವರು ಎಂದು 2 ವಿಧಗಳಾಗಿ ವಿಂಗಡಿಸಲಾಗಿದೆ. ಸಂಪಾದನೆ ಮಾಡುವವರೆಲ್ಲರೂ ಕೆಲಸಗಾರರಲ್ಲ, ದುಡಿದು ಸಂಪಾದಿಸುವವರನ್ನು ಮಾತ್ರ ಕೆಲಸಗಾರರೆಂದು ಕರೆಯುವರು. 1971 ರ ಜನಗಣತಿಯಲ್ಲಿ ಆರ್ಥಿಕ ಉತ್ಪಾದನೆಗೋಸ್ಕರ ದೈಹಿಕ / ಮಾನಸಿಕ ಶ್ರಮವನ್ನು ವಿನಿಯೋಗಿಸುವವರನ್ನು ಕೆಲಸಗಾರರೆಂದು ಪರಿಗಣಿಸಲಾಗಿದೆ. ಇದರೊಂದಿಗೆ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನವನ್ನು ಕಾರ್ಮಿಕಶಕ್ತಿ ಒಳಗೊಂಡಿದೆ. ವೃತ್ತಿ ನಿರತರ ಪ್ರಮಾಣವನ್ನು ಕಂಡು ಹಿಡಿಯುವ ಸೂತ್ರ

$$\text{ವೃತ್ತಿ ನಿರತರ ಪ್ರಮಾಣ:} \quad \frac{\text{ಕೆಲಸಗಾರರ ಒಟ್ಟು ಸಂಖ್ಯೆ}}{\text{ಒಟ್ಟು ಜನ ಸಂಖ್ಯೆ}} \times 100$$

1981 ರ ಜನಗಣತಿಯಲ್ಲಿ ಭಾರತದ ಕಾರ್ಮಿಕ ಶಕ್ತಿಯನ್ನು 4 ಪ್ರಮುಖ ಭಾಗಗಳಡಿಯಲ್ಲಿ ವಿಭಜಿಸಲಾಯಿತು. ಅವುಗಳೆಂದರೆ; ಸಾಗುವಳಿದಾರರು, ಕೃಷಿಕಾರ್ಮಿಕರು, ಗೃಹ ಮತ್ತು ಕೈಗಾರಿಕಾ ಕೆಲಸಗಾರರು, ಇತರೆ ಕೆಲಸಗಾರರು.

ಸಾಗುವಳಿದಾರರು ನೇರವಾಗಿ ಕೃಷಿ ಉತ್ಪಾದನೆಯಲ್ಲಿ ತೊಡಗಿರುತ್ತಾರೆ. ಕೃಷಿ ಕಾರ್ಯ ಚಟುವಟಿಕೆಗಳಲ್ಲಿ ನಿರತರಾಗಿರುವ ಕಾರ್ಮಿಕರಿಗೆ ಕೃಷಿ ಕಾರ್ಮಿಕರೆಂದು ಕರೆಯುವರು. ಗೃಹಕೃತ್ಯದ ಕಾರ್ಯಗಳಲ್ಲಿ ಹಾಗೂ ಕಚ್ಚಾವಸ್ತು ಗಳನ್ನು ಸಿದ್ಧವಸ್ತುಗಳನ್ನಾಗಿ ಪರಿವರ್ತಿಸುವ ಕ್ರಿಯೆಯಲ್ಲಿ ತೊಡಗಿ ಶ್ರಮವನ್ನು ವ್ಯಯ ಮಾಡುತ್ತಿರುವವರಿಗೆ ಗೃಹ ಮತ್ತು ಕೈಗಾರಿಕಾ ಕೆಲಸಗಾರರೆಂದು ಕರೆಯುವರು. ಹಿಂದಿನ ಮೂರು ಕಾರ್ಯಗಳನ್ನು ಬಿಟ್ಟು ಉಳಿದ ರೀತಿಯ ಚಟುವಟಿಕೆಗಳಲ್ಲಿ ತೊಡಗಿರುವವರು ಇತರೆ ಕೆಲಸಗಾರರು.

ಕಾರ್ಮಿಕ ಶಕ್ತಿಯನ್ನು ನಿರ್ಧರಿಸುವ ಅಂಶಗಳು: ಕಾರ್ಮಿಕ ಶಕ್ತಿಯ ಪ್ರಮಾಣ ದೇಶದಿಂದ ದೇಶಕ್ಕೆ ವ್ಯತ್ಯಾಸದಿಂದ ಕೂಡಿರುತ್ತದೆ. ಇದಕ್ಕೆ ಜನಸಂಖ್ಯೆ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಕಾರಣಗಳಾಗಿವೆ.

ಜನಸಂಖ್ಯೆಯ ಅಂಶಗಳು: ಜನನದರ, ನಿರೀಕ್ಷಿತ ಜೀವನ ಅವಧಿ, ವಲಸೆ ಕುಟುಂಬಗಳ ಸರಾಸರಿ ಗಾತ್ರ ಇವುಗಳು ಕಾರ್ಮಿಕ ಶಕ್ತಿಯ ಮೇಲೆ ಪ್ರಭಾವ ಬೀರುತ್ತವೆ. ಜನನ ದರ ಮತ್ತು ಕಾರ್ಮಿಕ ಶಕ್ತಿಯ ನಡುವೆ ವಿರುದ್ಧವಾದ ಸಂಬಂಧವನ್ನು ಕಾಣಬಹುದು. ಜನನದರ ಅಧಿಕವಿದ್ದರೆ ದುಡಿಯುವವರ ಪ್ರಮಾಣ ಕಡಿಮೆಯಿರುತ್ತದೆ.

ನಿರೀಕ್ಷಿತ ಜೀವಿತಾವಧಿ ಹೆಚ್ಚಾಗಿದ್ದರೆ ದುಡಿಯುವವರ ಪ್ರಮಾಣವೂ ಅಧಿಕವಾಗಿರುತ್ತದೆ. ಇಲ್ಲಿ ನಾವು ಧನಾತ್ಮಕ ಸಂಬಂಧವನ್ನು ಕಾಣಬಹುದಾಗಿದೆ. ವಲಸೆಯನ್ನು ಹೆಚ್ಚಾಗಿ ಪ್ರೌಢಾವಸ್ಥೆಯ ದುಡಿಯುವ ಜನರು ಕೈಗೊಳ್ಳುವುದರಿಂದ ಉಗಮ ಪ್ರದೇಶದಲ್ಲಿ ದುಡಿಯುವವರ ಸಂಖ್ಯೆ ಕಡಿಮೆಯಾದರೆ ವಲಸೆ ಹೋದ ಸ್ಥಳದಲ್ಲಿ ಕಾರ್ಮಿಕ ಶಕ್ತಿಯ ಪ್ರಮಾಣ ಹೆಚ್ಚಾಗುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕುಟುಂಬದ ಗಾತ್ರ ಚಿಕ್ಕದಾಗಿದ್ದು ಸ್ತ್ರೀಯರೂ ಕೆಲಸದಲ್ಲಿ ತೊಡಗುವುದರಿಂದ ಕಾರ್ಮಿಕ ಶಕ್ತಿಯ ಪ್ರಮಾಣ ಹೆಚ್ಚಾಗುತ್ತದೆ.

ಸಾಮಾಜಿಕ ಅಂಶಗಳು: ಶಿಕ್ಷಣ ಮತ್ತು ಸ್ತ್ರೀಯರ ಸ್ಥಾನಮಾನ, ಮದುವೆಯ ವಯಸ್ಸು, ಸಾಮಾಜಿಕ ಕೆಲಸಗಳಲ್ಲಿ ಮುಖ್ಯವಾದವುಗಳು. ಶಿಕ್ಷಣದ ಮಟ್ಟ ಹೆಚ್ಚಾಗುವುದರಿಂದ ಕೆಲಸದಲ್ಲಿ ತೊಡಗುವಿಕೆ ತಡವಾಗುತ್ತದೆ. ಕೆಲವು ಸಮಾಜಗಳಲ್ಲಿ ಸ್ತ್ರೀಯರಿಗೆ ಯಾವುದೇ ಸ್ಥಾನಮಾನ ನೀಡದೆ ಇರುವುದರಿಂದ ಇಂತಹ ರಾಷ್ಟ್ರಗಳಲ್ಲಿ ದುಡಿಯುವವರ ಪ್ರಮಾಣ ಕಡಿಮೆಯಿರುತ್ತದೆ. ಕಾರ್ಮಿಕಶಕ್ತಿ ಮತ್ತು ಮದುವೆಯ ವಯಸ್ಸಿನ ನಡುವೆ ವಿರುದ್ಧ ಹಾಗೂ ಸಹ ಸಂಬಂಧವಿದೆ. ಹೇಗೆಂದರೆ ಬೇಗ ಮದುವೆಯಾಗುವುದರಿಂದ ಜನರ ಬಲ ಹೆಚ್ಚಾಗಿ ಅವಲಂಬಿತರ ಪ್ರಮಾಣ ಹೆಚ್ಚಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಬೇಗ ಮದುವೆಯಾಗುವುದರಿಂದ ಜವಾಬ್ದಾರಿ ಹೆಚ್ಚಿ ಕೆಲಸ ನಿರ್ವಹಿಸುತ್ತಾರೆ.

ಆರ್ಥಿಕಾಂಶಗಳು: ಕೈಗಾರಿಕೆಯಲ್ಲಿ ಕೆಲಸ ಮಾಡಲು ಪರಿಣಿತ ಕೆಲಸಗಾರರ ಅಗತ್ಯವಿರುತ್ತದೆ. ಆದರೆ ಕೃಷಿ ಚಟುವಟಿಕೆಯಲ್ಲಿ ಅಷ್ಟೊಂದು ಪರಿಣಿತಿಯ ಅವಶ್ಯಕತೆ ಇಲ್ಲದಿರುವುದರಿಂದ ಕಾರ್ಮಿಕಶಕ್ತಿ ಇಂತಹ ಆರ್ಥಿಕತೆಗಳಲ್ಲಿ ವ್ಯತ್ಯಾಸದಿಂದ ಕೂಡಿರುತ್ತದೆ. ಇವುಗಳಲ್ಲದೆ ಹೆಚ್ಚಿನ ಉದ್ಯೋಗಾವಕಾಶಗಳು ಲಭ್ಯವಿದ್ದರೆ ದುಡಿಯುವ ಶಕ್ತಿ ಪ್ರಮಾಣ ಹೆಚ್ಚು, ಉದ್ಯೋಗಾವಕಾಶ ಕಡಿಮೆಯಿದ್ದರೆ ದುಡಿಯುವವರ ಪ್ರಮಾಣ ಕಡಿಮೆ.

ಅವಲಂಬಿತರ ಪರಿಮಾಣ: ವಯೋರಚನೆಯ ವಿಶ್ಲೇಷಣೆಯಲ್ಲಿ ಅವಲಂಬಿಗಳ ಪ್ರಮಾಣ ಮತ್ತೊಂದು ವಿಧಾನವಾಗಿದೆ. ಈ ಉದ್ದೇಶದಿಂದಲೇ ಜನಸಂಖ್ಯೆಯನ್ನು 0–14 ವರ್ಷಕ್ಕಿಂತ ಕಡಿಮೆ ವಯಸ್ಸಿನವರು 15 ರಿಂದ 59 ವರ್ಷ ವಯಸ್ಸಿನವರು 60 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು ಎಂದು ಇನ್ನೊಂದು ವಿಧದಲ್ಲಿ ಹೇಳುವುದಾದರೆ ಯುವಕರು, ಪ್ರೌಢರು, ವೃದ್ಧರು, ಎಂದು ಮೂರು ವಯೋವರ್ಗಗಳಾಗಿ ವಿಂಗಡಿಸಲಾಗಿದೆ.

ಪ್ರೌಢರಿಗೆ ಹೋಲಿಸಿಕೊಂಡಾಗ ಯುವಕ ಮತ್ತು ವೃದ್ಧರ ಪ್ರಮಾಣವನ್ನು [Y + O] ತಿಳಿಯುವುದರಿಂದ ಅವಲಂಬಿತರ ಪ್ರಮಾಣವನ್ನು ತಿಳಿಯಬಹುದಾಗಿದೆ. 3 ರೀತಿಯಲ್ಲಿ ಅವಲಂಬಿತರ ಪ್ರಮಾಣವನ್ನು ಕಂಡು ಹಿಡಿಯಬಹುದಾಗಿದೆ.

ಕಿರಿಯ ಅವಲಂಬಿಗಳ ಪ್ರಮಾಣ: ಒಟ್ಟು ಪ್ರೌಢರಿಗೆ ಹೋಲಿಸಿಕೊಂಡು ಯುವ ಅಥವಾ ಕಿರಿಯ ಅವಲಂಬಿಗಳ ಪ್ರಮಾಣವನ್ನು ಕಂಡು ಹಿಡಿಯಲಾಗುವುದು.

$$\frac{Y}{A} = \frac{P_{0.14}}{P_{15\text{-}59}} \times 100$$

ವೃದ್ಧಾಪ್ಯ ಅವಲಂಬಿಗಳ ಪ್ರಮಾಣ: ಒಟ್ಟು ಪ್ರೌಢರಿಗೆ ಹೋಲಿಸಿಕೊಂಡು ವೃದ್ಧಾಪ್ಯ ಅವಲಂಬಿತರ ಪ್ರಮಾಣವನ್ನು ಕಂಡು ಹಿಡಿಯಲಾಗುವುದು.

$$\frac{O}{A} = \frac{P_{60+}}{P_{15\text{-}59}} \times 100$$

ಒಟ್ಟು ಅವಲಂಬಿಗಳ ಪ್ರಮಾಣ: ಪ್ರೌಢರಿಗೆ ಹೋಲಿಸಿಕೊಂಡು ಒಟ್ಟು ಅವಲಂಬಿತರ ಪ್ರಮಾಣವನ್ನು ಕಂಡು ಹಿಡಿಯಲಾಗುವುದು

$$\frac{Y+O}{A} = \frac{P_{0.14} + P_{60+}}{P_{15\text{-}59}} \times 100$$

ಇದು ನಂಬಲರ್ಹ ವಿಧಾನಗಳಲ್ಲ. ಏಕೆಂದರೆ ದುಡಿಯುವ ವಯಸ್ಸಿನಲ್ಲಿರುವವರೆಲ್ಲರೂ ಸಂಪಾದಿಸುತ್ತಾರೆಂದು ಮತ್ತು ಅವಲಂಬಿಗಳೆಲ್ಲರೂ ಸಂಪಾದಿಸುವವರಲ್ಲವೆಂದು ಹೇಳಲು ಸಾಧ್ಯವಿಲ್ಲ.

ಆರ್ಥಿಕವಾಗಿ ಕ್ರಿಯಾತ್ಮಕ ಜನಸಂಖ್ಯೆ: ಲಿಂಗ ಮತ್ತು ವಯಸ್ಸಿನ ಸಂಯೋಜನೆಯಂತೆ ಆರ್ಥಿಕ ಸಂಯೋಜನೆಯೂ ಮುಖ್ಯವಾದದ್ದು. ಈ ಆರ್ಥಿಕ ಸಂಯೋಜನೆಯು ಒಟ್ಟು ಜನಸಂಖ್ಯೆಯಲ್ಲಿ ದುಡಿಯುವವರು, ಅವಲಂಬಿತರು, ಅರೆಕಾಲಿಕವಾಗಿ ದುಡಿಯುವವರು, ಶ್ರಮವಹಿಸದೆ ಹಣ ಸಂಪಾದಿಸುವವರನ್ನು ಒಳಗೊಂಡಿದೆ.

ಒಂದು ದೇಶದ ಭೌಗೋಳಿಕ ಎಲ್ಲೆಯೊಳಗೆ ವಾಸಿಸುವ ಜನರ ಸಂಖ್ಯೆಗೆ ಜನಸಂಖ್ಯೆ ಎಂದು ಕರೆಯುವರು. ಈ ಜನಸಂಖ್ಯೆಯಲ್ಲಿ ಯಾವ ವ್ಯಕ್ತಿಗಳು ತಮ್ಮ ದೈಹಿಕ ಮತ್ತು ಮಾನಸಿಕ ಶ್ರಮದಿಂದ ಆರ್ಥಿಕವಾಗಿ ಲಾಭತರುವರೋ ಅವರಿಗೆ ಮಾನವ ಶಕ್ತಿ/ ಸಂಪನ್ಮೂಲ ಎಂದು ಕರೆಯುವರು.

ಮಾನವ ಸಂಪನ್ಮೂಲವನ್ನು ಮತ್ತೆ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ: ಆರ್ಥಿಕವಾಗಿ ಕ್ರಿಯಾತ್ಮಕ ಜನಸಂಖ್ಯೆ; ಆರ್ಥಿಕವಾಗಿ ನಿಷ್ಕ್ರಿಯ ಜನಸಂಖ್ಯೆ.

ಸ್ತ್ರೀ ಮತ್ತು ಪುರುಷರಿಬ್ಬರನ್ನೂ ಒಳಗೊಂಡಂತೆ ಯಾರು ಸರಕು ಸೇವೆಗಳ ಉತ್ಪಾದನೆಯಲ್ಲಿ ನೇರವಾಗಿ ತೊಡಗಿರುವರೋ ಅವರಿಗೆ ಆರ್ಥಿಕ ಕ್ರಿಯಾತ್ಮಕ ಜನಸಂಖ್ಯೆ ಎಂದು ಕರೆಯುವರು. ನೇರವಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದೆ ಇರುವವರನ್ನು ಆರ್ಥಿಕವಾಗಿ ನಿಷ್ಕ್ರಿಯ ಜನಸಂಖ್ಯೆ ಎಂದು ಕರೆಯುವರು.

ಆರ್ಥಿಕವಾಗಿ ಕಾರ್ಯನಿರತರಾಗಿರುವವರ ಅಳತೆಯ ಪ್ರಮಾಣಗಳು:

ಒಂದು ದೇಶದಲ್ಲಿ ಕಾರ್ಯ ನಿರತವಾಗಿರುವ ಜನರ ಪ್ರಮಾಣವನ್ನು ಅನೇಕ ವಿಧಾನಗಳ ಮೂಲಕ ತಿಳಿಯಬಹುದಾಗಿದೆ.

ಕಚ್ಚಾ ಕಾರ್ಯನಿರತರ ಪ್ರಮಾಣ: ದೇಶದ ಒಟ್ಟು ಜನಸಂಖ್ಯೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜನರ ಪ್ರಮಾಣವನ್ನು ತಿಳಿಯುವುದೇ ಕಚ್ಚಾ ಕಾರ್ಯ ನಿರತ ಪ್ರಮಾಣವಾಗಿದೆ.

$$CAR = \frac{EAP}{TP} \times 100$$

ಒಂದು ನಿರ್ದಿಷ್ಟ ವರ್ಷದಲ್ಲಿ ನೋಂದಣಿಯಾಗಿರುವ EAP ಯಿಂದ ಅದೇ ವರ್ಷದ ಒಟ್ಟು ಜನಸಂಖ್ಯೆಯನ್ನು ಭಾಗಿಸಿ ಬಂದ ಭಾಗಲಬ್ಧವನ್ನು ನೂರರಿಂದ ಗುಣಿಸಿದರೆ ಕಚ್ಚಾ ಕಾರ್ಯನಿರತರ ಪ್ರಮಾಣ ದೊರೆಯುತ್ತದೆ.

ಸಾಮಾನ್ಯ ಕಾರ್ಮಿಕ ಶಕ್ತಿ: ನಿರ್ದಿಷ್ಟ ವಯಸ್ಸಿನ ಅನಂತರ ಆರ್ಥಿಕ ಚಟುವಟಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜನರನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಉದಾಹರಣೆ 14 ವರ್ಷ ತುಂಬಿದವರ ಒಟ್ಟು ದುಡಿಯುವ ಜನಸಂಖ್ಯೆಯನ್ನು ಅದೇ ವಯೋ ವರ್ಗದ ಗುಂಪಿನ ಒಟ್ಟು ಜನಸಂಖ್ಯೆಯಿಂದ ಭಾಗಿಸಿ 100 ರಿಂದ ಗುಣಿಸಿದಾಗ ಬರುವ ಬೆಲೆಯೇ ಸಾಮಾನ್ಯ ಕಾರ್ಮಿಕ ಶಕ್ತಿ.

ನಿರ್ದಿಷ್ಟ ವಯೋ ಮತ್ತು ಲಿಂಗಗಳ ಕಾರ್ಮಿಕ ಶಕ್ತಿ ಪ್ರಮಾಣ: ಒಂದು ನಿರ್ದಿಷ್ಟ ವಯಸ್ಸಿನ ಒಳಗೆ ಬರುವ ಒಟ್ಟು ಸ್ತ್ರೀ ಪುರುಷರ ಪ್ರಮಾಣ ಹಾಗೂ ಅದೇ ವಯಸ್ಸಿನ ಕಾರ್ಯನಿರ್ವಹಿಸುತ್ತಿರುವ ಪುರುಷ ಸ್ತ್ರೀಯರ ಪ್ರಮಾಣದ ಸಹಾಯದಿಂದ ಕಂಡುಹಿಡಿಯಲಾಗುತ್ತದೆ.

ಅವಲಂಬಿತರ ಪ್ರಮಾಣ: ಈ ವಿಧಾನದಲ್ಲಿ ಒಟ್ಟು ಅವಲಂಬಿತರ ಪ್ರಮಾಣ, ಕಿರಿಯ ಹಾಗೂ ಹಿರಿಯ ಅವಲಂಬಿತರ ಪ್ರಮಾಣವನ್ನು ತಿಳಿಯುವುದರಿಂದ ಕಾರ್ಯ ನಿರತ ಕಾರ್ಮಿಕ ಶಕ್ತಿಯನ್ನು ಅಂದಾಜು ಮಾಡಬಹುದು.

ಕಾರ್ಯನಿರತರನ್ನು ಉದ್ಯೋಗಸ್ಥ ಮತ್ತು ನಿರುದ್ಯೋಗಸ್ಥ ಕಾರ್ಯ ನಿರತರು ಎಂದು 2 ಭಾಗಗಳಾಗಿ ವಿಂಗಡಿಸಲಾಗಿದೆ. ನಿಗಧಿತ ಜನಗಣತಿಯ ಅವರಿಗೆ ಉದ್ಯೋಗಸ್ಥ ಕಾರ್ಮಿಕ ಶಕ್ತಿಯೆಂದು ಇದಕ್ಕೆ ವಿರುದ್ಧವಾಗಿ ಕೆಲಸ ಹುಡುಕುತ್ತಿರುವವರಿಗೆ ನಿರುದ್ಯೋಗಸ್ಥ ಕಾರ್ಮಿಕರು ಎಂದು ಕರೆಯುವರು.

ಆರ್ಥಿಕವಾಗಿ ನಿಷ್ಕ್ರಿಯ ಜನರು: ಆರ್ಥಿಕ ಚಟುವಟಿಕೆಗಳಲ್ಲಿ ನೇರವಾಗಿ ಪಾಲ್ಗೊಳ್ಳದೆ ಹಣ ಸಂಪಾದನೆ ಮಾಡುತ್ತಿರುವ ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸಿದರೂ ಕೆಲಸವನ್ನು ಸೇವೆಯೆಂದು ತಿಳಿದು ಹಣ ಪಡೆಯದೆ ಇರುವ ಜನರಿಗೆ ಆರ್ಥಿಕವಾಗಿ ನಿಷ್ಕ್ರಿಯ ಜನಸಂಖ್ಯೆ ಎಂದು ಕರೆಯುವರು. ಉದಾ: ಮನೆ ಕೆಲಸಗಳಲ್ಲಿ ತೊಡಗಿರುವ ಹೆಂಗಸರು, ನಿವೃತ್ತರು, ವಿದ್ಯಾರ್ಥಿಗಳು, ಬಾಡಿಗೆ ಹಣದಿಂದ ಜೀವಿಸುವವರು ಇತ್ಯಾದಿ.

ಮನೆಗಳಲ್ಲಿ ಕೆಲಸ ಮಾಡುವ ತಾಯಂದಿರು ಮತ್ತು ಅವರಿಗೆ ಸಹಾಯ ಮಾಡುವವರು, ದೀನದಲಿತರ ಏಳಿಗೆಗಾಗಿ ಶ್ರಮಿಸುತ್ತಿರುವ ಸಮಾಜ ಸೇವಕರು ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೂ ಕೆಲಸವನ್ನು ಸೇವೆಯೆಂದು ತಿಳಿಯುವವರಾಗಿದ್ದಾರೆ.

ಕೆಲಸಗಾರರು: 1971ರ ಜನಗಣತಿಯಲ್ಲಿ ಯಾರು ಆರ್ಥಿಕ ಉತ್ಪಾದನೆಗೋಸ್ಕರ ದೈಹಿಕ ಅಥವಾ ಮಾನಸಿಕ ಶ್ರಮವನ್ನು ವಿನಿಯೋಗಿಸುವರೋ ಅವರಿಗೆ ಕೆಲಸಗಾರರೆಂದು ಪರಿಗಣಿಸಲಾಯಿತು. ಇದರಲ್ಲಿ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡುವವರನ್ನೂ ಸೇರಿಸಲಾಯಿತು.

1981 ರಲ್ಲಿ ಕೆಲಸಗಾರರನು 2 ರೀತಿಯಲ್ಲಿ ವಿಭಾಗಿಸಲಾಯಿತು. ಮುಖ್ಯ ಕೆಲಸಗಾರರು; ಉಪ ಕೆಲಸಗಾರರು.

ಮುಖ್ಯ ಕೆಲಸಗಾರರು: ವರ್ಷದಲ್ಲಿ ಯಾರು ತಮ್ಮ ಅಧಿಕ ಸಮಯ ಅಂದರೆ 183 ದಿವಸಗಳಿಗಿಂತ ಹೆಚ್ಚು ಸಮಯವನ್ನು ಸರಕು ಸೇವೆಗಳ ಉತ್ಪಾದನೆ ಮಾಡುವುದರಲ್ಲಿ ಕಳೆಯುತ್ತಾರೊ ಅವರಿಗೆ ಮುಖ್ಯ ಕೆಲಸಗಾರರೆಂದು ಕರೆಯುವರು. ಉದಾ: ಕೈಗಾರಿಕೆಗಳು, ಬ್ಯಾಂಕುಗಳು, ಆಡಳಿತ ವ್ಯವಸ್ಥೆ, ಶೈಕ್ಷಣಿಕಸಂಸ್ಥೆ ಮುಂತಾದವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು.

ಉಪ ಕೆಲಸಗಾರರು: ಒಂದು ವರ್ಷದ ಅವಧಿಯಲ್ಲಿ ಸರಕು ಸೇವೆಗಳ ಉತ್ಪಾದನೆಯಲ್ಲಿ ಕಡಿಮೆ ಸಮಯವನ್ನು ಅಂದರೆ 183 ದಿನಗಳಿಗಿಂತ ಕಡಿಮೆ ಸಮಯ ವಿನಿಯೋಗಿಸುವರೋ ಅಂತಹ ಕೆಲಸಗಾರರಿಗೆ ಉಪ ಕೆಲಸಗಾರರೆಂದು ಕರೆಯುವರು. ಉದಾ:ಕೃಷಿ ಋತುಮಾನ ಆಧಾರಿತ ಕಸಬಾಗಿರುವುದರಿಂದ ಕೆಲವು ರೈತರು ವರ್ಷದ ಕೆಲವು ತಿಂಗಳು ಮಾತ್ರ ಕೃಷಿ ಕ್ಷೇತ್ರದಲ್ಲಿ ತೊಡಗಿರುತ್ತಾರೆ. **(ಕೆ.ಎಸ್.)**

**ಜನಸಾಂದ್ರತೆ:** ಒಂದು ನಿರ್ದಿಷ್ಟ ಭೂಭಾಗದಲ್ಲಿರುವ ಜನಸಂಖ್ಯೆಯನ್ನು ಅದರ ಭೌಗೋಳಿಕ ಕ್ಷೇತ್ರದಿಂದ ಭಾಗಿಸಿದರೆ ದೊರೆಯುವ ಭಾಗಲಬ್ಧವೇ ಆ ಪ್ರದೇಶದ ಜನಸಾಂದ್ರತೆ. ಇದನ್ನು ಅಂಕಗಣಿತ ಜನಸಾಂದ್ರತೆ ಎಂದೂ ಕರೆಯುವರು. ಇದನ್ನು ಪ್ರತಿ ಚದರ ಮೈಲಿ ಅಥವಾ ಚ.ಕಿಮೀ ಗಳಲ್ಲಿ ತಿಳಿಸುವುದು ಸಾಮಾನ್ಯ. ವಿಶ್ವಸಂಸ್ಥೆಯ ಅಂದಾಜಿನಂತೆ 2001ರಲ್ಲಿ ಜಗತ್ತಿನ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀ 41 ಆಗಿದ್ದು, ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ದೇಶಗಳ ನಡುವೆ ಅದು ವ್ಯತ್ಯಾಸದಿಂದ ಕೂಡಿದೆ.

ಖಂಡವಾರು ಜನಸಾಂದ್ರತೆ (ಪ್ರತಿಚದರ ಕಿಮೀ ಗೆ) 2001.

| ಏಷ್ಯ | ಯುರೋಪ್ | ಉತ್ತರಅಮೆರಿಕ | ದಕ್ಷಿಣಅಮೆರಿಕ | ಆಫ್ರಿಕ | ಸಾಗರಿಕ |
|---|---|---|---|---|---|
| 108 | 101 | 14 | 21 | 20 | 03 |

ಖಂಡವಾರು ಹಂಚಿಕೆಯಲ್ಲಿ ಏಷ್ಯಖಂಡ ಅತ್ಯಧಿಕ ಜನಸಾಂದ್ರತೆವುಳ್ಳದ್ದು (ಓಷಿನಿಯಾ). ಸಾಗರಿಕವಲಯ ಜನಸಾಂದ್ರತೆಯಲ್ಲಿ ಕೊನೆಯ ಸ್ಥಾನದಲ್ಲಿದೆ.

ಜನಸಾಂದ್ರತೆಯನ್ನು ಅಂಕಗಣಿತ ವಿಧಾನದ ಜೊತೆಗೆ ಇತರ ಹಲವಾರು ವಿಧಾನಗಳ ಮೂಲಕವೂ ಅಳೆಯಲಾಗುತ್ತದೆ ಅವುಗಳೆಂದರೆ;

ಪೋಷಕಾಂಶಿಯ ಜನಸಾಂದ್ರತೆ: ವ್ಯವಸಾಯಕ್ಕೆ ಒಳಪಟ್ಟಿರುವ ಪ್ರದೇಶವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಜನಸಾಂದ್ರತೆಯನ್ನು ಕಂಡು ಹಿಡಿಯಲಾಗುವುದು.

$$\text{ಪೋಷಕಾಂಶೀಯ ಜನಸಾಂದ್ರತೆ:} = \frac{\text{ಒಟ್ಟು ಜನಸಂಖ್ಯೆ}}{\text{ಒಟ್ಟು ವ್ಯವಸಾಯ ಕ್ಷೇತ್ರ}}$$

ಕೃಷಿಕ ಜನಸಾಂದ್ರತೆ : ವ್ಯವಸಾಯದಲ್ಲಿ ನಿರತರಾಗಿರುವ ಜನಸಂಖ್ಯೆ ಮತ್ತು ಅದಕ್ಕೆ ಹೊಂದಿಕೊಂಡಂತೆ ಒಟ್ಟು ವ್ಯವಸಾಯಕ್ಕೆ ಒಳಪಟ್ಟಿರುವ ಪ್ರದೇಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ.

$$\text{ಕೃಷಿಕ ಜನಸಾಂದ್ರತೆ:} = \frac{\text{ಒಟ್ಟು ಬೇಸಾಯಗಾರರು}}{\text{ಒಟ್ಟು ವ್ಯವಸಾಯ ಕ್ಷೇತ್ರ}}$$

ಇವುಗಳಲ್ಲದೆ ಜಾರ್ಜ್ ಅವರು ಆರ್ಥಿಕ ಜನಸಾಂದ್ರತೆಯ ಬಗ್ಗೆ ತಿಳಿಸಿದ್ದಾರೆ. ಇಲ್ಲಿ ಒಂದು ಭೂ ಪ್ರದೇಶದ ಉತ್ಪಾದಕತೆಯೊಂದಿಗೆ ಅಲ್ಲಿನ ಜನ ಸಂಖ್ಯೆಯನ್ನು ಹೋಲಿಸಿ ಜನಸಾಂದ್ರತೆಯನ್ನು ಕಂಡು ಹಿಡಿಯಲಾಗುತ್ತದೆ.

$$3.\ \text{ಆರ್ಥಿಕ ಜನಸಾಂದ್ರತೆ:} = \frac{\text{ಜನ ಸಂಖ್ಯೆಯ ಗಾತ್ರ}}{\text{ಭೂ] ಪ್ರದೇಶದ ಉತ್ಪಾದಕತೆ}}$$

ಪ್ರಪಂಚದ ಜನಸಾಂದ್ರತಾ ವಲಯಗಳು: ಪ್ರಪಂಚದ ಬಹುಪಾಲು ಜನಸಂಖ್ಯೆ ಕೆಲವೇ ರಾಷ್ಟ್ರಗಳಲ್ಲಿ ಮತ್ತು ಅವುಗಳ ಕೆಲವೇ ಭಾಗಗಳಲ್ಲಿ ಮಾತ್ರ ಕೇಂದ್ರೀಕೃತವಾಗಿದೆ. ಈ ರೀತಿಯ ಕೇಂದ್ರೀಕರಣವೂ ಸ್ಥಿರವಾದುದಲ್ಲ. ಪ್ರಸ್ತುತ ಕಂಡು ಬರುವ ಜನಸಂಖ್ಯಾ ಹಂಚಿಕೆಯನ್ನು ಆದರಿಸಿ ಪ್ರಪಂಚವನ್ನು ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ;

1) ಅಧಿಕ ಜನಸಾಂದ್ರತೆಯ ವಲಯ: ಪ್ರತಿ ಚ.ಕಿಮೀ ಗೆ 250ಕ್ಕಿಂತ ಹೆಚ್ಚು ಜನರನ್ನು ಹೊಂದಿರುವ ಪ್ರದೇಶಗಳು ಅಧಿಕ ಜನಸಾಂದ್ರತೆಯ ವಲಯಗಳಾಗಿವೆ. ಅವುಗಳೆಂದರೆ ದಕ್ಷಿಣ ಏಷ್ಯ, ಪೂರ್ವ ಏಷ್ಯ, ವಾಯವ್ಯ ಮತ್ತು ಮಧ್ಯ ಯುರೋಪ್ ಅಮೆರಿಕ ಸಂಯುಕ್ತ ಸಂಸ್ಥಾನದ ಈಶಾನ್ಯ ಭಾಗ. ಇಲ್ಲಿ ಅಧಿಕ ಜನಸಂಖ್ಯೆ ಹಂಚಿಕೆಯಾಗಿರಲು ಹಲವಾರು ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಅಂಶಗಳು ಕಾರಣವಾಗಿವೆ.

2) ಸಾಧಾರಣ ಜನಸಾಂದ್ರತೆಯ ವಲಯ: ಪ್ರತಿ ಚ.ಕಿಮೀಗೆ 100–250 ಜನಸಂಖ್ಯೆ ಹೊಂದಿರುವ ಪ್ರದೇಶಗಳು ಈ ಗುಂಪಿನಲ್ಲಿ ಬರುತ್ತವೆ. ಅವುಗಳೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನದ ಕೇಂದ್ರಭಾಗ, ಉಷ್ಣವಲಯದಲ್ಲಿರುವ ಆಫ್ರಿಕದ ಪಶ್ಚಿಮ ಭಾಗ, ಚೀನದ ಕೇಂದ್ರ ಭಾಗ, ಭಾರತದ ದಖನ್ ಪ್ರಸ್ಥಭೂಮಿ, ರಷ್ಯ, ಪೂರ್ವಯುರೋಪ್, ಈಶಾನ್ಯ ಬ್ರೆಜಿಲ್, ಕೇಂದ್ರ ಚಿಲಿ, ಮೆಕ್ಸಿಕೊ ಪ್ರಸ್ಥಭೂಮಿಯ ದಕ್ಷಿಣ ಭಾಗ.

3) ವಿರಳ ಜನ ಸಾಂದ್ರತೆಯ ವಲಯ: ಪ್ರತಿ ಚ.ಕಿಮೀಗೆ 100 ಕ್ಕಿಂತಲೂ ಕಡಿಮೆ ಜನರು ವಾಸಿಸುವ ವಲಯಗಳು ಈ ಗುಂಪಿನಲ್ಲಿ ಕಂಡುಬರುತ್ತವೆ ಅವುಗಳೆಂದರೆ ಸಮಭಾಜಕ ವೃತ್ತದ ಅರಣ್ಯ ಪ್ರದೇಶಗಳು, ಮರುಭೂಮಿಗಳು ಮತ್ತು ಹಿಮಚ್ಛಾದಿತ ಶೀತ ಪ್ರದೇಶಗಳು. (ಕೆ.ಎಸ್.)

**ಜನಾಂಗೀಯ ಸಮೂಹ:** ಜನಾಂಗೀಯ ಸಮೂಹ (ಎಥ್ನಿಕ್ ಗ್ರೂಪ್). ಇದರ ಸಂಸ್ಕೃತಿ ಸಾಮಾನ್ಯವಾಗಿ ವಿಭಿನ್ನವಾಗಿರುತ್ತದೆ. ಒಂದು ಜನಾಂಗೀಯ ಸಮೂಹದ ಸದಸ್ಯರು ಜನಾಂಗ, ರಾಷ್ಟ್ರೀಯತೆ, ಧರ್ಮ ಅಥವಾ ಸಂಸ್ಕೃತಿಯ ಒಂದು ಸಾಮಾನ್ಯ ಬಂಧನದಿಂದ ಬಂಧಿತವಾಗಿರುವರು. ಜನಾಂಗೀಯ ಸಮೂಹಗಳ ಅಸ್ತಿತ್ವ ಪುರಾತನವಾದದ್ದು ಮತ್ತು ವ್ಯಾಪಕವಾದದ್ದು. ಇತ್ತೀಚೆಗೆ ಭೂಗೋಳ ವಿಜ್ಞಾನಿಗಳು ಜನಾಂಗೀಯ ಅಧ್ಯಯನಕ್ಕೆ ವಿಶೇಷವಾಗಿ ಎರಡು ಜನಾಂಗೀಯ ಸಮೂಹಗಳ ನಡುವಣ ಸಂಬಂಧ, ವಸತಿ, ಸಾಮಾಜಿಕ ಪ್ರತ್ಯೇಕತೆ ಮೊದಲಾದ ವಿಷಯಗಳಿಗೆ ಸಾಕಷ್ಟು ಕೊಡುಗೆಯನ್ನಿತ್ತಿದ್ದಾರೆ.

ಸಮ್ಮಿಲನ ಮತ್ತು ಸಂಘಟನಾ ಪ್ರಕ್ರಿಯೆಗಳು ಜನಾಂಗೀಯ ಬಂಧನಗಳ ವೈಶಿಷ್ಟ್ಯತೆ ಮತ್ತು ದೃಢತೆಗಳೊಂದಿಗೆ ನಿಕಟವಾದ ಸಂಬಂಧ ಹೊಂದಿರುತ್ತವೆ. ಕೆಲವೊಂದು ಪ್ರಸಂಗಗಳಲ್ಲಿ ಜನಾಂಗೀಯ ವ್ಯತ್ಯಾಸಗಳ ಸ್ಥಾಯಿತ್ವ ಕೊಳೆಗೇರಿಯ ನಿರ್ಮಾಣಕ್ಕೆ ಮಾರ್ಗದರ್ಶಿಯಾಗಬಹುದು. ಜನಾಂಗೀಯತೆ ನಗರ ಪ್ರದೇಶಗಳ ಕ್ರಮಾನುಗಣಿತ ಪರಿಸರಗಳಲ್ಲಿ ನಿರಂತರವಾದ ಪುನರಾವರ್ತಿಸುವ ಮಹತ್ವದ ಅಂಶವಾಗಿದೆ.

ಜನಾಂಗ ಜನಾಂಗೀಯತೆಯ ಒಂದು ಮೂಲ ನಿರ್ಧಾರಕವಾಗಿದೆ. ವಾಸ್ತವವಾಗಿ ಇದು ಕೆಲವೊಂದು ವ್ಯತ್ಯಾಸಾತ್ಮಕ ಗೌಣ ಗುಣಧರ್ಮಗಳನ್ನು ಹೊಂದಿರುವ ಒಂದೇ ಪ್ರಭೇದದ ಸದಸ್ಯರನ್ನು ವಿಂಗಡಿಸುವ ಪದವಾಗಿದೆ. ಜನಾಂಗೀಯ ವ್ಯತ್ಯಾಸಗಳು ಚರ್ಮದ ಬಣ್ಣದಂತಹ ಬಾಹ್ಯ ಲಕ್ಷಣಗಳಾಗಿರಬಹುದು ಮತ್ತು ವಿವಿಧ ರಕ್ತದ ವಿಧಗಳಂತಹ ಆಂತರಿಕ ಲಕ್ಷಣಗಳಾಗಿರಬಹುದು. ಹೀಗೆ ಬಾಹ್ಯ ಮತ್ತು ಆಂತರಿಕ ಲಕ್ಷಣಗಳ ಆಧಾರ ಮೇಲಿಂದ ಮಾನವ ಜನಾಂಗಗಳನ್ನು ಪ್ರಮುಖವಾಗಿ ಕಕಾಸಾಯ್ಡ್, ಮಂಗೋಲಾಯ್ಡ್ ಮತ್ತು ನೀಗ್ರೋಯಿಡ್‌ಗಳೆಂದು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

ಜನಾಂಗೀಯ ಸಮೂಹಗಳ ಅಸ್ತಿತ್ವವನ್ನು ಕೆಲವೊಂದು ಪ್ರಸಂಗಗಳಲ್ಲಿ ವಲಸೆಯ ಆಧಾರದ ಮೇಲಿಂದ ನಿರ್ಧರಿಸಬಹುದಾಗಿದೆ. ಉದಾಹರಣೆಗೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ವಲಸೆಯ ಶ್ರಮಿತ ಅಲೆಗಳು ನೀಗ್ರೋ, ಹಿಸ್ಪಾನಿಕ್ ಮತ್ತು ಇತರೆ ಜನಾಂಗೀಯ ಸಮೂಹಗಳನ್ನು ಒಂದುಗೂಡಿಸಿವೆ. ಅದರಂತೆ ವಲಸೆ ಸಂಯುಕ್ತ ರಾಜ್ಯ (ಗ್ರೇಟ್ ಬ್ರಿಟನ್) ದಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಲಂಡನ್‌ನಲ್ಲಿ ನೆಲೆಸಿದ ಐರಿಷ್ ಮತ್ತು ಯಹೂದಿ ಸಮೂಹಗಳ ಹಾಗೂ ಏಷ್ಯ ಮತ್ತು ವೆಸ್ಟ್ ಇಂಡೀಸ್‌ಗಳ ವಿಶಿಷ್ಟ ಬಣ್ಣದ ಜನಾಂಗೀಯ ಸಮೂಹಗಳ ಅಸ್ತಿತ್ವಕ್ಕೆ ಕಾರಣವಾಗಿದೆ. (ಎಸ್.ಎಸ್.ಎನ್.)

**ಜಪಾನ್:** ಏಷ್ಯ ಖಂಡದ ಪೂರ್ವದಲ್ಲಿ ಉತ್ತರ ಪೆಸಿಫಿಕ್ ಸಾಗರದಲ್ಲಿರುವ ಒಂದು ದ್ವೀಪಸಮುದಾಯ. ಉ.ಅ. $26^0$–$46'$, ಹಾಗೂ ಪೂ.ರೇ. $128^0$–$146'$ಗಳ ನಡುವೆ ಹಬ್ಬಿದೆ. ಖಂಡದ ಮುಖ್ಯ ಭೂಭಾಗದಿಂದ ಸು. 160 ಕಿಮೀ ದೂರದಲ್ಲಿ ಬಿಲ್ಲಿನಂತೆ ತೋರುವ ಈ ದ್ವೀಪಸಮುದಾಯದಲ್ಲಿ ಹಲವಾರು ಚಿಕ್ಕ ದೊಡ್ಡ ದ್ವೀಪಗಳಿವೆ. ಇವು ಸಮುದ್ರದ ನೀರಿನ ಮೇಲೆ ತಲೆಯೆತ್ತಿ ನಿಂತಿರುವ ಬಂಡೆಕಲ್ಲುಗಳಂತೆ ಕಾಣುತ್ತವೆ. ನಿಪ್ಪನ್ ಎಂಬುದು ಇದರ ಜಪಾನೀ ನಾಮ.

ಜಪಾನನ್ನು ಏಷ್ಯದ ಗ್ರೇಟ್ ಬ್ರಿಟನ್ ಎಂದು ಕರೆಯುತ್ತಾರೆ. ಜಪಾನಿಗೂ ಬ್ರಿಟನ್ನಿಗೂ ಹಲವು ಸಾಮ್ಯಗಳಿರುವುದು ಇದಕ್ಕೆ ಕಾರಣ. ಎರಡೂ ದೇಶಗಳು ಮುಖ್ಯ ಭೂಖಂಡಗಳಿಂದ ಪ್ರತ್ಯೇಕಿಸಲ್ಪಟ್ಟ ದ್ವೀಪಗಳು. ಎರಡೂ ಸಮಶೀತೋಷ್ಣವಲಯದಲ್ಲಿವೆ. ಎರಡು ದೇಶಗಳಲ್ಲೂ ಸಂವಿಧಾನಬದ್ಧ ರಾಜತ್ವವಿದೆ. ಇವುಗಳ ತೀರಗಳು ಅಂಕುಡೊಂಕಾಗಿರುವುದರಿಂದ ಅನೇಕ ಸ್ವಾಭಾವಿಕ ಬಂದರುಗಳಿವೆ. ಎರಡು ದೇಶಗಳ ಜನರೂ ನಾವಿಕ ವೃತ್ತಿಯಲ್ಲಿ ನೈಪುಣ್ಯ ಪಡೆದಿದ್ದಾರೆ. ಈ ದೇಶಗಳ ಸುತ್ತ ಸಾಗರ ಪ್ರವಾಹಗಳು ಹರಿಯುವುದರಿಂದ ವಾಯುಗುಣ ಹಿತಕರ; ಜನರು ಚತುರರು, ಸಾಹಸಿಗಳು ಆಗಿದ್ದಾರೆ. ಜಪಾನಿನ ಸಮುದ್ರ ತೀರದಲ್ಲಿ 45 ದೊಡ್ಡ ಬಂದರುಗಳು ಹಡಗು ಸಂಚಾರಕ್ಕೆ ಅನುಕೂಲವಾಗಿವೆ. ಜಪಾನಿನಲ್ಲೂ ಬ್ರಿಟನ್ನಿನಲ್ಲಿರುವಂತೆಯೇ ನಾನಾ ಬಗೆಯ ಕೈಗಾರಿಕೆಗಳು ಬೆಳೆದಿವೆ. ಜಪಾನ್ ಸಮುದ್ರ ಮತ್ತು ಕೊರಿಯ ಜಲಸಂಧಿಯಿಂದಾಗಿ ಜಪಾನು ಏಷ್ಯ ಖಂಡದಿಂದ ಬೇರ್ಪಟ್ಟಿದೆ. ಹಾಗೆಯೇ ಉತ್ತರದಲ್ಲಿ ಲಾಪೆರೌಸ್ ಜಲಸಂಧಿ ಸ್ಯಾಕಲೀನ್ ದ್ವೀಪವನ್ನು ಜಪಾನಿನಿಂದ ಬೇರ್ಪಡಿಸಿದೆ. ಜಪಾನ್ ದ್ವೀಪಸಮೂಹದಲ್ಲಿ ನಾಲ್ಕು ದೊಡ್ಡ ದ್ವೀಪಗಳಿವೆ. ಹೊಕೈಡೋ, ಹಾನ್‌ಷ, ಶಿಕೋಕು ಮತ್ತು ಕ್ಯೂಷು. ಹಾನ್‌ಷ್ಯೂ ದ್ವೀಪದ ಉತ್ತರಕ್ಕೆ ಇರುವ ದ್ವೀಪ ಹೊಕೈಡೋ. ಹಾನ್‌ಷ್ಯೂ ದ್ವೀಪದ ವಿಸ್ತೀರ್ಣ 2,25,330 ಚ.ಕಿಮೀ ಹಾಕೈಡೋ 93,240 ಚ.ಕಿಮೀ ವಿಸ್ತಾರವಾಗಿವೆ. ಹಾಕೈಡೋ ಮತ್ತು ಹಾನ್‌ಷ್ಯೂ ದ್ವೀಪಗಳನ್ನು ತ್ಸುಗಾರೂ ಜಲಸಂಧಿ ಬೇರ್ಪಡಿಸುತ್ತದೆ. ವಿಸ್ತೀರ್ಣ (ಜಪಾನಿಗೆ ಮರಳಿ ಬಂದ ರೀಯೂಕ್ಯೂ ದ್ವೀಪಗಳೂ ಸೇರಿ) 3,77,829 ಚ.ಕಿಮೀ ಉತ್ತರ ದಕ್ಷಿಣವಾಗಿ ಇರುವ ಸಮುದ್ರ ತೀರ 9426 ಕಿಮೀ. ಜನಸಂಖ್ಯೆ 126,472,000(2002). ಇದರಲ್ಲಿ ಶೇ. 78 ನಗರವಾಸಿಗಳು, 22 ಗ್ರಾಮಸ್ಥರು. ರಾಜಧಾನಿ ಟೋಕಿಯೊ. ಜನಸಂಖ್ಯೆ: 28,025,000 (2002).

ಭೂವಿಜ್ಞಾನ : ಪೆಸಿಫಿಕ್ ಸಾಗರದ ಪಶ್ಚಿಮಭಾಗದಲ್ಲಿ ದಕ್ಷಿಣೋತ್ತರವಾಗಿ ಸೈಬೀರಿಯದ ಕಮ್‌ಚಟ್‌ಕಾ ಪರ್ಯಾಯದ್ವೀಪದ ದಕ್ಷಿಣ ತುದಿಯಿಂದ ಆಗ್ನೇಯ ಏಷ್ಯದವರೆಗೆ ಹರಡಿರುವ ಅನೇಕ ದ್ವೀಪವೃತ್ತಗಳಲ್ಲಿ ಜಪಾನ್ ದ್ವೀಪಸ್ತೋಮ ಬಹಳ ಮುಖ್ಯವಾದ್ದು. ಜಪಾನಿನ ಭೂನಕಾಶೆಯಲ್ಲಿ ವಿವಿಧ ಭೂಕಾಲಗಳಿಗೆ ಸೇರಿದ ಐದು ಪ್ರಮುಖ ಶಿಲಾಸಮುದಾಯಗಳಿವೆ.

1. ಸೀನೋಜ಼ೋಯಿಕ್–ಅಗ್ನಿಶಿಲೆಗಳು, 2. ಸೀನೋಜ಼ೋಯಿಕ್–ಜಲಜಶಿಲೆ, 3. ಅಂತ್ಯಕ್ರಿಟೇಷಸ್ ಯುಗ–ಗ್ರಾನೈಟ್ ಶಿಲೆಗಳು, 4. ಮೀಸೋಜ಼ೋಯಿಕ್–ಮಧ್ಯಜೀವಕಲ್ಪ–ರೂಪಾಂತರ ಹೊಂದಿಲ್ಲದ ಶಿಲೆಗಳು 5. ಅತಿ ಪ್ರಾಚೀನ ಯುಗ–ಪ್ರಿಕೇಂಬ್ರಿಯನ್‌ಯುಗ–ರೂಪಾಂತರ ಶಿಲೆಗಳು.




ಭೂ ಚರಿತ್ರೆಯ ಪ್ರಕಾರ ಜಪಾನ್ ದ್ವೀಪಗಳು ಸಮುದ್ರದ ಮೇಲೆ ಹೊರ ಹೊಮ್ಮಿದವು. ಪ್ರಾಚೀನ ಜೀವಕಲ್ಪಯುಗದಲ್ಲಿ ಭೂಭಾಗದಿಂದ ಸಾಗರವನ್ನು ಸೇರಿದ ಅಗಾಧ ಪ್ರಮಾಣದ ಮೆಕ್ಕಲು ನಿಕ್ಷೇಪ ಕಾಲಾನುಕ್ರಮದಲ್ಲಿ ಅನೇಕ ರೀತಿಯ ಭೂಕ್ರಿಯೆಗಳಿಗೆ ಒಳಗಾಗಿ ಮೇಲಕ್ಕೆತ್ತಲ್ಪಟ್ಟು ಈ ದ್ವೀಪಗಳಾಗಿ ಮಾರ್ಪಟ್ಟವು. ಮೆಕ್ಕಲು ನಿಕ್ಷೇಪದಲ್ಲಿ ದೊರಕುವ ಪಳೆಯುಳಿಕೆ ಆಧಾರದ ಮೇಲೆ ಸೈಲೂರಿಯನ್‌ನಿಂದ ಪರ್ಮಿಯನ್ ಕಾಲದ ವರೆಗಿನ (ಸು.440 ದ.ಲ. ವರ್ಷ ಪ್ರಾಚೀನದಿಂದ 280 ದ.ಲ. ವರ್ಷ ಪ್ರಾಚೀನದ ವರೆಗೆ) ವಿವಿಧ ಸ್ತರಗಳನ್ನು ಗುರುತಿಸಬಹುದು. ಈ ಸ್ತರಗಳೊಡನೆ ದೊರಕುವ ಅಗ್ನಿಶಿಲೆಗಳು ಆ ಕಾಲದ ಅಗ್ನಿಪರ್ವತಗಳ ಚಟುವಟಿಕೆಗಳನ್ನು ವ್ಯಕ್ತಪಡಿಸುತ್ತವೆ. ಇಂದಿನ ಜಪಾನಿನ ಬಹುಭಾಗ ಮಧ್ಯಮ ಹಾಗೂ ಅಂತ್ಯ ಟ್ರಯಾಸಿಕ್ ಕಾಲದ (ಸು.200 ದ.ಲ. ವ. ಪ್ರಾಚೀನ) ಅಕಿರ್‌ಯೋಸ್ಲೋಯಿಕ್ ಪರ್ವತೋದ್ಭವ ಕ್ರಿಯೆಯಿಂದ ಮೇಲಕ್ಕೆತ್ತಲ್ಪಟ್ಟ ಆ ಕಾಲದ ಶಿಲೆಗಳಿಂದ ಆವೃತವಾಗಿವೆ. ಹಾಗೆಯೇ ಜುರಾಸಿಕ್ (190 ದ.ಲ.ವ. ಪ್ರಾಚೀನ) ಮತ್ತು ಆದಿ ಕ್ರಿಟೇಷಸ್ (135 ದ.ಲ. ವ. ಪ್ರಾಚೀನ) ಕಾಲದಲ್ಲಿ ಜಪಾನಿನ ಕೆಲಭಾಗಗಳು ಅಸಾಧಾರಣವಾದ ಭೂಕ್ರಿಯೆಗಳಿಂದ ಭಾಗಶಃ ಮುಳುಗಿಯೂ ಇವೆ. ಕ್ರಿಟೇಷಸ್ ಯುಗದಲ್ಲಿ (135 ದ.ಲ.ವ. ಪ್ರಾಚೀನದಿಂದ 65 ದ.ಲ. ವ. ಪ್ರಾಚೀನದ ವರೆಗೆ) ಅಗಾಧ ಪ್ರಮಾಣದ ಅಂತಸ್ಸರಣಗಳಾಗಿ ಅಗ್ನಿಶಿಲೆಗಳಿಗೆ ಎಡೆಕೊಟ್ಟವೆ. ನವಜೀವಕಲ್ಪದಲ್ಲಿ (ಟರ್ಷಿಯರಿ) ಅಗಾಧವಾದ ಪರ್ವತೋದ್ಭವ ಕ್ರಿಯೆಗಳಿಂದ ಬೃಹತ್ ಮಡಿಕೆಗಳುಂಟಾಗಿ ಬಹು ವ್ಯಾಪಕವಾದ ಬರ್ಹಿಸರಣ ಅಗ್ನಿಶಿಲೆಗಳು ರೂಪುಗೊಂಡವು. ಪ್ಲೀಸ್ಟೋಸೀನ್ ಕಾಲದಲ್ಲಿ ನಡೆದ ಭೂಚಲನವಲನಗಳು ಸಮುದ್ರದಂಚಿನಲ್ಲಿ ಅನೇಕ ಮಾರ್ಪಾಡುಗಳಿಗೆ ಕಾರಣವಾಗಿವೆ.

ಹಾಗೆಯೇ ಭೂಕಾಲದ ಇತ್ತೀಚಿನ ದಿವಸಗಳಲ್ಲಿಯೂ ಉಂಟಾಗುತ್ತಿರುವ ಭೂಕಂಪನಗಳು, ಅಗ್ನಿಪರ್ವತಗಳ ಚಟುವಟಿಕೆಗಳು, ಸಣ್ಣಮಟ್ಟ ಭೂಚಲನೆಗಳು ನಿರಂತರವಾಗಿ ಜಪಾನಿನ ಭೂವಿನ್ಯಾಸದ ವ್ಯತ್ಯಾಸಗಳಿಗೆ ಪೂರಕವಾಗಿವೆ.

ಖನಿಜ ಸಂಪತ್ತು : ಕೈಗಾರಿಕೋದ್ಯಮದಲ್ಲಿ ಅಪಾರ ಪ್ರಗತಿಯನ್ನು ಜಪಾನ್ ಸಾಧಿಸಿದ್ದರೆ ಖನಿಜಕ್ಷೇತ್ರದಲ್ಲಿ ಕೈಗಾರಿಕೆಗಳಿಗೆ ಬೇಕಾಗುವ ಎಲ್ಲ ಖನಿಜಗಳನ್ನು ಪಡೆದಿದೆ ಎಂದು ಹೇಳುವ ಹಾಗಿಲ್ಲ. ಅನೇಕ ಖನಿಜಗಳನ್ನು ಪರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಕಬ್ಬಿಣದ ನಿಕ್ಷೇಪಗಳು ಅಲ್ಪ ಪ್ರಮಾಣದಲ್ಲಿವೆ. ಇವು ಬಹುತೇಕ ಹೊಕ್ಕೈಡೋ ಹಾಗೂ ಉತ್ತರ ಹಾನ್‌ಷ್ಯೂ ಪ್ರದೇಶಕ್ಕೆ ಸೀಮಿತವಾಗಿವೆ. ಈ ಪ್ರದೇಶದ ಅದುರಿನಲ್ಲಿ 35ರಷ್ಟು ಕಬ್ಬಿಣಾಂಶ ಉಂಟು. ಹೊಕ್ಕೈಡೋ ಮತ್ತು ಹಾನ್‌ಷ್ಯೂವಿನ ಸುತ್ತಮುತ್ತ ಸು. 50 ಗಣಿಗಳು ಕಾರ್ಯನಿರತವಾಗಿವೆ. ಪೆಟ್ರೋಲಿಯಮ್ ದೊರಕುವ ಪ್ರದೇಶ ಪಶ್ಚಿಮ ಹೊಕ್ಕೈಡೋನಿಂದ ದಕ್ಷಿಣ ಹಾನ್‌ಷ್ಯೂವಿನ ವರೆಗೂ ಹಬ್ಬಿದೆ. ಆದರೆ ಪೆಟ್ರೋಲಿಯಮ್‌ನ ಉತ್ಪಾದನೆ ಅತ್ಯಲ್ಪ. ಹೀಗಾಗಿ ಜಪಾನ್ ಅಧಿಕ ಪ್ರಮಾಣದಲ್ಲಿ ಪೆಟ್ರೋಲನ್ನು ಆಮದು ಮಾಡಿಕೊಳ್ಳುತ್ತದೆ. ನೈಸರ್ಗಿಕ ಅನಿಲವನ್ನು ಅಧಿಕ ಪ್ರಮಾಣದಲ್ಲಿ ನೀಗಾಟ ಹಾಗೂ ದಕ್ಷಿಣ ಕಾಂಟೋ ಪ್ರದೇಶಗಳಲ್ಲಿ ಹೊರತೆಗೆಯಲಾಗುತ್ತದೆ. ಜಪಾನಿನ ಖನಿಜ ಸಂಪತ್ತಿನಲ್ಲಿ ಕಲ್ಲಿದ್ದಲು ಅತಿಮುಖ್ಯವಾದದ್ದು. ಒಟ್ಟು ಖನಿಜೋತ್ಪಾದನೆಯಲ್ಲಿ ಇದು ಶೇ. 47ರಷ್ಟಾಗುತ್ತದೆ. ಈ ನಿಕ್ಷೇಪ ಸು. 20.79 ಬಿಲಿಯನ್ ಟನ್‌ಗಳಷ್ಟು ಇದೆಯೆಂದು ಅಂದಾಜು ಮಾಡಲಾಗಿದೆ. ಉತ್ತರ ಕೀಯೂಷೂ, ಹೊಕ್ಕೈಡೋ, ಪೂರ್ವ ಹಾನ್‌ಷ್ಯೂ ಮತ್ತು ಪಶ್ಚಿಮ ಹಾನ್‌ಷ್ಯೂ ಕಲ್ಲಿದ್ದಲು ದೊರೆಯುವ ನಾಲ್ಕು ಪ್ರಮುಖ ಪ್ರದೇಶಗಳು. ಲೋಹ ಸಂಬಂಧ ಖನಿಜಗಳಲ್ಲಿ ಕಬ್ಬಿಣವನ್ನು ಬಿಟ್ಟರೆ ತಾಮ್ರ ಅತಿಮುಖ್ಯವಾದ್ದು. ಸು. 200 ತಾಮ್ರ ಗಣಿಗಳಿವೆ. ಅವುಗಳ ಪೈಕಿ 6 ದೊಡ್ಡ ಪ್ರಮಾಣದವು. ಬಹುತೇಕ ಗಣಿಗಳು ಈಶಾನ್ಯ ಹಾನ್‌ಷ್ಯೂ ಹಾಗೂ ಷಿಕೋಕ್ಯೂ ಪ್ರದೇಶದ ಸುತ್ತ ಮುತ್ತ ಪ್ರಸರಿಸಿವೆ. ಸೀಸ ಹಾಗೂ ಸತು ಹೆಚ್ಚಾಗಿ ತಾಮ್ರದ ಅದಿರಿನಲ್ಲಿ ದೊರೆಯುತ್ತವೆ. ಅಲೋಹ ಖನಿಜಸಂಪತ್ತಿನಲ್ಲಿ ಗಂಧಕ ಅತಿಮುಖ್ಯವಾದ್ದು. ಪೈರೈಟ್ ಇದರ ಅತಿಮುಖ್ಯ ಖನಿಜ. ಜಪಾನ್ ಪ್ರಪಂಚದಲ್ಲಿ ಅತಿ ಹೆಚ್ಚು ಪೈರೈಟ್ ಉತ್ಪಾದಿಸುವ ರಾಷ್ಟ್ರ. ಇತರ ಲೋಹ ಹಾಗೂ ಅಲೋಹಗಳಾದ ಚಿನ್ನ, ಬೆಳ್ಳಿ, ನೈಟ್ರೇಟ್ ಮುಂತಾದವು ಅತ್ಯಲ್ಪ ಪ್ರಮಾಣದಲ್ಲಿ ದೊರೆಯುತ್ತವೆ.

ದೇಶೀಯ ಬಳಕೆಯನ್ನು ಆಧಾರವಾಗಿಟ್ಟುಕೊಂಡು, ಜಪಾನಿನ ಖನಿಜ ಸಂಪತ್ತನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು : 1 ದೇಶೀಯ ಬಳಕೆಗೆ ಸಾಕಾಗುವಷ್ಟು ಅಥವಾ ಹೆಚ್ಚು ಕಡಿಮೆ ಸಾಕಾಗುವಷ್ಟು ದೊರೆಯುತ್ತಿರುವ ಖನಿಜಗಳು–ಕ್ರೋಮೈಟ್, ಕಲ್ಲಿದ್ದಲು, ಜಿಪ್‌ಸಮ್, ಸುಣ್ಣಕಲ್ಲು, ಮೆಗ್ನೀಸಿಯಮ್, ಪೈರೈಟ್, ಗಂಧಕ, ಸೀಸ, ಸತು, ತಾಮ್ರ, ಚಿನ್ನ ಮತ್ತು ಬೆಳ್ಳಿ, 2 ದೇಶೀಯ ಬಳಕೆಗೆ ಸಾಲದಷ್ಟು ಪ್ರಮಾಣದಲ್ಲಿ ದೊರೆಯುವ, ಆದ್ದದರಿಂದ ಭಾಗಶಃ ಆಮದು ಮಾಡಿಕೊಳ್ಳಬೇಕಾದ ಖನಿಜಗಳು–ಕಬ್ಬಿಣದ ಅದಿರು, ಆಂಟಿಮನಿ, ಪಾದರಸ, ಮ್ಯಾಂಗನೀಸ್, ತವರ, ಟೈಟೇನೀಯಮ್, ಟಂಗ್‌ಸ್ಟನ್, ಕ್ರೋಮಿಯಮ್ ಹಾಗೂ ವೆನೆಡಿಯಮ್. 3 ಸಂಪೂರ್ಣವಾಗಿ ಆಮದು ಮಾಡಿಕೊಳ್ಳಲೇಬೇಕಾದ ಖನಿಜಗಳು–ನಿಕ್ಕಲ್, ಕೋಬಾಲ್ಟ್, ಅಲ್ಯೂಮಿನಿಯಮ್, ನೈಟ್ರೇಟ್ ಹಾಗೂ ವಿರಳ ಖನಿಜಗಳು.

ತೀರಪ್ರದೇಶ : ಜಪಾನಿನ ತೀರ 26,352 ಕಿಮೀ ಉದ್ದವಿದೆ. ಜಪಾನಿನ ಉದ್ದನೆಯ ತೀರ ಅದರ ಜನಜೀವನ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ತುಂಬ ಪರಿಣಾಮ ಬೀರಿದೆ. ಜಪಾನಿನ ಯಾವ ಪ್ರದೇಶವೂ ಸಮುದ್ರಕ್ಕೆ 120 ಕಿಮೀ ಗಳಿಗಿಂತ ಹೆಚ್ಚು ದೂರದಲ್ಲಿಲ್ಲ. ತೀರಪ್ರದೇಶದಲ್ಲಿ ಮರಳು ದಂಡೆಗಳು ಹಾಗೂ ತಗ್ಗಾದ ದಂಡೆಗಳಿಂದ ಬೇರ್ಪಟ್ಟ ಉಪ್ಪುನೀರಿನ ಹರವುಗಳುಂಟು. ಇಲ್ಲಿಯ ತೀರಪ್ರದೇಶ ಚಳಿಗಾಲದ ಚಂಡಮಾರುತಗಳಿಗೆ ಮತ್ತು ಅಲೆಗಳ ಪರಿಣಾಮಕ್ಕೆ ಒಳಗಾಗುತ್ತದೆ. ಪೆಸಿಫಿಕ್ ತೀರ ಪ್ರದೇಶದಲ್ಲಿ ಅನೇಕ ಒಳಚಾಚುಗಳುಂಟು. ಟೋಕಿಯೊ ಕೊಲ್ಲಿಯ ಬಳಿಯ ಪ್ರದೇಶ ಸಮತಟ್ಟಾದ ಮಣ್ಣಿನಿಂದ ಕೂಡಿದ ಮುಖಜ ಭೂಮಿ, ಸಗಾಮೀ ಕೊಲ್ಲಿಯ ಪೂರ್ವಭಾಗದಲ್ಲಿರುವ ವಿಸ್ತಾರ ಪ್ರದೇಶಗಳಲ್ಲಿ ಮರಳು ದಂಡೆಗಳು ಹಬ್ಬಿವೆ. ಅದರ ಪಶ್ಚಿಮ ಭಾಗ ಕಡಿದು, ಬಂಡೆಗಳಿಂದ ಕೂಡಿದೆ.

ಈಜ಼ೂ ಪರ್ಯಾಯದ್ವೀಪದಲ್ಲಿ ಆಳವಾಗಿ ಸವೆದಿರುವ ಅಗ್ನಿಪರ್ವತಗಳು ಸಮುದ್ರದವರೆಗೂ ಹಬ್ಬಿವೆ. ಬಯಲುಗಳ ಕರಾವಳಿಗಳು ಮರಳಿನಿಂದ ಕೂಡಿದವು. ಬೆಟ್ಟಗಳ ಇಳಿಜಾರುಗಳು ನೇರವಾಗಿ ಸಮುದ್ರಕ್ಕೆ ಇಳಿದಿರುವ ಕಡೆಗಳಲ್ಲಿ ತೀರಗಳು ಶಿಲಾವೃತ. ಕುಮಾನೋ ಸಮುದ್ರಕ್ಕೆ ಎದುರಾಗಿರುವ ಕೀ ಪರ್ಯಾಯ ದ್ವೀಪದಲ್ಲಿ ಮತ್ತು ಕೀಟಾಕಾಮೀ ಪ್ರದೇಶದ ಈಶಾನ್ಯ ಭಾಗದುದ್ದಕ್ಕೂ ಅಧಿಕ ಒಳಚಾಚುಗಳನ್ನು ಕಾಣಬಹುದು. ಕೆಲವು ಕಡೆ ಸಮುದ್ರದಲ್ಲಿರುವ ಎತ್ತರವಾದ ಬಂಡೆಗಳನ್ನು ಆಧರಿಸಿ ನಿಂತಿರುವ ತೀರಸಮತಟ್ಟುಗಳುಂಟು. ಬೋಸೋ ಮತ್ತು ಕೀ ಪರ್ಯಾಯದ್ವೀಪಗಳಲ್ಲಿ ಈ ಲಕ್ಷಣಗಳನ್ನು ಕಾಣಬಹುದು.

ಜಪಾನಿನ ತೀರಪ್ರದೇಶದಲ್ಲಿ ಎರಡು ಬಗೆ. ಒಂದು ಮರಳಿನಿಂದ ಕೂಡಿದ್ದರೆ, ಇನ್ನೊಂದು ಶಿಲಾವೃತ. ಕರಾವಳಿ ಅಂಕುಡೊಂಕು. ಆದ್ದರಿಂದ ಇಲ್ಲಿ ಕೆಲವು ಸ್ವಾಭಾವಿಕ ಬಂದರುಗಳುಂಟು. ಇದರ ಉದ್ದನೆಯ ಕರಾವಳಿ ಸಮುದ್ರಯಾನಕ್ಕೆ ಅನುಕೂಲಕರ. ಆಂತರಿಕ ಸಾರಿಗೆ ಹಾಗೂ ಮೀನುಗಾರಿಕೆ ಉದ್ಯಮಕ್ಕೆ ಇದು ಸಹಾಯಕ.

ಮೇಲ್ಮೈ ಲಕ್ಷಣ: ಜಪಾನಿನ ದ್ವೀಪಗಳು ಪರ್ವತಗಳಿಂದಲೂ ಅನೇಕ ಜ್ವಾಲಾಮುಖಿಗಳಿಂದಲೂ ಕೂಡಿದವು. ಇಲ್ಲಿ ಪದೇಪದೇ ಸಂಭವಿಸುತ್ತಿರುವ ಭೂಕಂಪಗಳನ್ನೂ ಜೀವಂತವಾಗಿರುವ ಜ್ವಾಲಾಮುಖಿಗಳನ್ನೂ ಗಮನಿಸಿದರೆ ಇಲ್ಲಿಯ ಪರ್ವತ ರಚನಾಕ್ರಿಯೆ ಇನ್ನೂ ಮುಂದುವರಿದಿದೆಯೆಂಬುದು ಕಂಡುಬರುತ್ತದೆ. ಇಲ್ಲಿಯ ಪರ್ವತಸ್ತೋಮಗಳನ್ನು ಆರು ಪ್ರಕಾರಗಳಾಗಿ ವಿಂಗಡಿಸಬಹುದು: 1. ಕ್ಯುರೀಲ್ ಅಥವಾ ಚೀಷೀಮಾ ದ್ವೀಪಗಳಿಗೆ ಕಾರಣವಾದ, ಹಾಕ್ಕೈಡೋ ದ್ವೀಪದಲ್ಲಿ ಈಶಾನ್ಯದ ಕಡೆಯಿಂದ ಮುಂದುವರಿದಿರುವ ಪರ್ವತಶ್ರೇಣಿ, 2. ಹಾಕ್ಕೈಡೋವನ್ನು ವಾಯವ್ಯ ಮೂಲೆಯಿಂದ ಪ್ರವೇಶಿಸುವ ಸ್ಯಾಕಲೀನ್ ಅಥವಾ ಕಾರಫ್ಯೂಟೋ ಪರ್ವತಗಳು, 3. ಹಾನ್‌ಷ್ಯೂವಿನ ಉತ್ತರಾರ್ಧ ಭಾಗವನ್ನೂ ಹೋಕ್ಕೈಡೋವಿನ ದಕ್ಷಿಣದ ಪರ್ಯಾಯದ್ವೀಪವನ್ನೂ ಆವರಿಸಿರುವ ಟೋಹೋಕೂ ಅಥವಾ ಈಶಾನ್ಯ ಶ್ರೇಣಿ, 4. ಮಧ್ಯ ಹಾನ್‌ಷ್ಯೂವಿನಿಂದ ನೈಋತ್ಯದ ಕಡೆ ಹಬ್ಬಿ ಚೂಗೋಕೂ ಪರ್ಯಾಯದ್ವೀಪದ ಬೆನ್ನೆಲುಬಾಗಿರುವ ಮತ್ತು ಶಿಕೋಕ್ಯೂ ಪರ್ವತಗಳಾಗಿ ಬಹು ದೂರ ಹಬ್ಬಿರುವ ಸೇನಾನ್ ಅಥವಾ ನೈಋತ್ಯ ಭಾಗದ ಪರ್ವತಶ್ರೇಣಿ, 5. ಪೆಸಿಫಿಕ್ ದ್ವೀಪಸ್ತೋಮದ ಮೂಲಕ ಮಧ್ಯ ಹಾನ್‌ಷ್ಯೂವನ್ನು ದಾಟಿ ಉತ್ತರಕ್ಕೆ ಹಬ್ಬಿರುವ ಷಿಚಿಟೋ–ಮರಿಯಾನ ಶ್ರೇಣಿ, 6. ತೈವಾನದಿಂದ ಉತ್ತರದ ಕಡೆಬಾಗಿ ಕೀಯೂಷೂವನ್ನು ಛೇದಿಸುವ ರೀಯೂಕ್ಯೂ ಶ್ರೇಣಿ. ಪರ್ವತ ಶ್ರೇಣಿಗಳು ಕೂಡುವ ಎಡೆಯಲ್ಲಿ ಉನ್ನತ ಪರ್ವತಗ್ರಂಥಿಗಳೂ ವಿಸ್ತಾರ ಬಯಲುಗಳೂ ಜ್ವಾಲಾಮುಖಿ ಸ್ತೋಮಗಳೂ ರೂಪುಗೊಂಡಿವೆ.

ಹಾನ್‌ಷ್ಯೂವಿನ ಮಧ್ಯಭಾಗದಲ್ಲಿ ಸೇನಾನ್ ಮತ್ತು ಷಿಚಿಟೋ–ಮರಿಯಾನ ಪರ್ವತಶ್ರೇಣಿಗಳು ಸಂಧಿಸುತ್ತವೆ. ಜಪಾನಿನ ಜ್ವಾಲಾಮುಖಿ ಮೂಲದ ಅತ್ಯುನ್ನತ ಪರ್ವತಗಳು ಇರುವುದು ಅಲ್ಲೇ. ಫ್ಯೂಜೀ ಜ್ವಾಲಾಮುಖಿಸ್ತೋಮ ಇರುವುದೂ ಅಲ್ಲೇ. ಈ ಸ್ತೋಮದ ಫ್ಯೂಜೀ, ಆಕೈಷೀ ಮತ್ತು ಹಿಡಾ ಶಿಖರಗಳ ಎತ್ತರ ಅನುಕ್ರಮವಾಗಿ 3756 ಮೀ, 3168 ಮೀ ಮತ್ತು 3164 ಮೀ. ಈ ಎರಡು ಮಹಾಶ್ರೇಣಿಗಳ ಸಂಧಿಸ್ಥಳದಲ್ಲೇ ಜಪಾನಿನ ಅತ್ಯಂತ ದೊಡ್ಡ ಮೈದಾನವಾದ ಕ್ಯಾಂಟೋ ಬಯಲು ಇದೆ.

ಟೋಹೋಕೂ, ಕ್ಯೂರೀಲ್ ಮತ್ತು ಸ್ಯಾಕಲೀನ್ ಪರ್ವತಶ್ರೇಣಿಗಳು ಹೊಕ್ಕೈಡೋನಲ್ಲಿ ಕೂಡುತ್ತವೆ. ಬೃಹತ್ ಜ್ವಾಲಾಮುಖಿಗಳು ಹೆಣೆದುಕೊಂಡಿರುವ ಆ ಪ್ರದೇಶ ಹಾಕ್ಕೈಡೋನ ಚಾವಣಿ. ಜ್ವಾಲಾಮುಖಿಸ್ತೋಮದಿಂದ ಕೂಡಿದ ಇನ್ನೊಂದು ಪರ್ವತಗ್ರಂಥಿ ಇರುವುದು ಕೀಯೂಷೂನಲ್ಲಿ. ಇಲ್ಲಿ ಸೇನಾನ್ ಮತ್ತು ರೀಯೂಕ್ಯೂ ಶ್ರೇಣಿಗಳು ಸಂಧಿಸುತ್ತವೆ. ಇಲ್ಲೂ ಉನ್ನತ ಪರ್ವತ ಗ್ರಂಥಿಗಳೂ ನೆರೆಯಲ್ಲೇ ದೊಡ್ಡ ಪ್ರಸ್ಥಭೂಮಿಗಳೂ ವಿಶಾಲ ಮೈದಾನಗಳೂ ಇವೆ. ಸ್ಯಾಕಲೀನ್ ಪರ್ವತಶ್ರೇಣಿ ಎರಡು ಕವಲಾಗಿ ಒಡೆದು ಹೊಕ್ಕೈಡೋನಿಂದ ಮುಂದೆ ಸಾಗುವಾಗ, ದ್ವೀಪದ ಪೂರ್ವದಲ್ಲಿ ಕೀಟಾಮೀ ಮತ್ತು ಹಿಡಾಕ ಶ್ರೇಣಿಗಳಾಗಿಯೂ ಪಶ್ಚಿಮದಲ್ಲಿ ಟೆಷೀಯೋ ಮತ್ತು ಯೂಬರೀ ಪರ್ವತಗಳಾಗಿಯೂ ಪರಿಣಮಿಸುತ್ತದೆ. ಇವುಗಳ ನಡುವೆ ವಿಶಾಲ ಮೈದಾನಗಳುಂಟು.

ದಕ್ಷಿಣದಲ್ಲಿ ಹಾಕ್ಕೈಡೋನಲ್ಲಿ ವಿಸ್ತರಿಸಿರುವ ಕ್ಯುರೀಲ್ ಶ್ರೇಣಿ ಹಲವು ಜ್ವಾಲಾ ಮುಖಿಗಳಾಗಿ ಪರಿಣಮಿಸಿದೆ. ಇವುಗಳಲ್ಲಿ ಅತ್ಯುನ್ನತವಾದ್ದು ಅಸಾಹೀ–ಡಾಕೇ (2277 ಮೀ.). ಇದು ಮಧ್ಯ ಹಾಕ್ಕೈಡೋನಲ್ಲಿದೆ. ಜಪಾನಿನ ಎರಡನೆಯ ದೊಡ್ಡ ಮೈದಾನವಾದ ಟೋಕಾಚೀ ಇರುವುದು ಹಾಕ್ಕೈಡೋನ ಪಶ್ಚಿಮ ಭಾಗದಲ್ಲಿ–ಕ್ಯುರೀಲ್ ಮತ್ತು ಸಾಕಲೀನ್‌ಗಳು ಸಂಧಿಸುವೆಡೆಯಲ್ಲಿ.

ಹಾಕ್ಕೈಡೋನ ನೈಋತ್ಯ ಪರ್ಯಾಯದ್ವೀಪ ಭಾಗವನ್ನಾವರಿಸಿರುವ ಟೋಹೋಕೂ ಪರ್ವತ ವ್ಯವಸ್ಥೆ ಹಾನ್‌ಷ್ಯೂವಿನ ಮಧ್ಯದ ಪ್ರದೇಶಕ್ಕೆ ಮುಂದುವರಿಯುತ್ತದೆ. ಇಲ್ಲಿ ಮೂರು ಪರ್ವತಶ್ರೇಣಿಗಳೂ ಇವುಗಳ ಅಂಚುಗಳಲ್ಲಿ ಮತ್ತು ನಡುವೆ ಇರುವ ಮೈದಾನಗಳೂ ಟೋಹೋಕೂ ಶ್ರೇಣಿಗೆ ಸಮಾಂತರಗಳಲ್ಲಿವೆ. ಮಧ್ಯದ ಶ್ರೇಣಿ ಅತ್ಯುನ್ನತ. ಇದು ಈ ಪ್ರದೇಶದ ಬೆನ್ನೆಲುಬಿನಂತಿದೆ. ಇದರ ನೆತ್ತಿಯಲ್ಲಿ ಅನೇಕ ಉನ್ನತ ಜ್ವಾಲಾಮುಖಿಗಳುಂಟು. ಪಶ್ಚಿಮದಲ್ಲಿರುವ ದೇವಾ ಶ್ರೇಣಿ ಇದಕ್ಕಿಂತ ಬಲು ತಗ್ಗು. ಇವೆರಡರ ನಡುವೆ ಹರಡಿರುವ ಶ್ರೇಣಿಗಳು ತುಂಡುತುಂಡಾಗಿವೆ. ಅವುಗಳ ನಡುವಣ ನೆಲ ಫಲವತ್ತಾದ್ದು.

ಜಪಾನಿನ ಮುಖ್ಯ ಶ್ರೇಣಿಗಳಲ್ಲಿ ಷಿಚಿಟೋ ಮರಿಯಾನ ಒಂದು. ಪೆಸಿಫಿಕಿನಿಂದ ಹರಿದುಬರುವ ಈ ಶ್ರೇಣಿ ಆರಂಭದಲ್ಲೇ ಏಳು ದ್ವೀಪಗಳನ್ನುಂಟು ಮಾಡಿದೆ. ಇವು ಜ್ವಾಲಾಮುಖಿ ದ್ವೀಪಗಳು. ಇವುಗಳ ಹೆಸರು ಈಜ಼ೂ ಷಿಚಿಟೊ. ಇಲ್ಲಿಂದ ಮುಂದಿನ ಭಾಗವೇ ಈಜ಼ೂ ಪರ್ಯಾಯದ್ವೀಪ. ಇದರ ಬಿಸಿನೀರ ಊಟೆಗಳೂ ಮರಳ ದಂಡೆಯೂ ಪ್ರಸಿದ್ಧವಾದವು. ಇಲ್ಲಿಂದ ಉತ್ತರಕ್ಕೆ ಇರುವ ಪ್ರದೇಶದಲ್ಲಿ ಹಾಕೋನೀ ಜ್ವಾಲಾಮುಖಿ

ಇದೆ. ಆಷಿ ಸರೋವರ ಇರುವುದು ಇದರ ವಿಶಾಲ ಬೋಗುಣಿಯಲ್ಲೆ. ಜಪಾನಿನ ಅತ್ಯಂತ ಎತ್ತರವಾದ ಮತ್ತು ಅತ್ಯಂತ ಸುಂದರವಾದ ಫ್ಯೂಜೀಯಾಮ ಅಗ್ನಿಪರ್ವತ ಇದರ ಬಳಿಯಲ್ಲಿದೆ. ಸೇನಾನ್ ಶ್ರೇಣಿ ಪೂರ್ವಪಶ್ಚಿಮವಾಗಿ ಹಬ್ಬಿದೆ. ಇದರ ಒಂದು ಭಾಗ ಚೂಗೋಕೂ ಪರ್ವತ. ಇದು ಚೂಗೋಕೂ ಪರ್ಯಾಯದ್ವೀಪದ ಬೆನ್ನೆಲುಬಿನಂತಿದೆ. ಬೀವಾ ಸರೋವರಕ್ಕೆ ಪಶ್ಚಿಮದಲ್ಲಿ ಟಂಬ್ಲ ಪ್ರಸ್ಥಭೂಮಿ ಇದೆ. ಚೂಗೋಕೂ ಪರ್ವತದ ಮುಖ್ಯ ಶಿಖರ ಹೊಟಾಕಡಾಕೆ (3072 ಮೀ).

ಜಪಾನಿನ ಪರ್ವತರಚನೆಯಿಂದಾಗಿ ಜನವಸತಿಗೆ ಮತ್ತು ಸಂಪರ್ಕ ಸಾಧನಗಳ ವ್ಯವಸ್ಥೆಗೆ ಅಡಚಣೆಯಾಗಿದೆ. ಆದರೂ ಈ ಪರ್ವತಗಳಲ್ಲಿ ಅಪಾರ ಅರಣ್ಯ ಸಂಪತ್ತುಂಟು. ವಿಪುಲ ಜಲದ ನೆಲೆ ಈ ಪ್ರದೇಶಗಳಲ್ಲಿ ಇರುವುದರಿಂದ ಅನೇಕ ನದಿಗಳ ಉಗಮಕ್ಕೆ ಕಾರಣವಾಗಿದೆ. ಇವು ಸುಂದರ ದೃಶ್ಯಗಳ ಬೀಡುಗಳು.

ಜಪಾನಿನಲ್ಲಿ ಮುಖ್ಯ ಬಯಲುಗಳೆಲ್ಲ ಇರುವುದು ತೀರಪ್ರದೇಶಗಳಲ್ಲಿ. ಬಹುತೇಕ ಅವು ಪರ್ವತಗಳಿಂದ ಹೊತ್ತು ತಂದ ಮೆಕ್ಕಲು ಮತ್ತಿತರ ಗೋಡು ಮಣ್ಣುಗಳಿಂದ ಆದಂಥವು. ಪೆಸಿಫಿಕ್ ತೀರದ ಮಧ್ಯ ಹಾನ್‍ಷ್ಯೂವಿನಲ್ಲಿರುವ ಕ್ವಾನ್‍ಟೋ ಬಯಲಿನ ವಿಸ್ತೀರ್ಣ ಸುಮಾರು 12,950 ಚ.ಕಿಮೀ.

ಜಪಾನಿನಲ್ಲಿ 100ಕ್ಕೂ ಹೆಚ್ಚು ನದಿಗಳಿವೆ. ಅವುಗಳ ಪೈಕಿ ಮೂರು ಮಾತ್ರ 320 ಕಿಮೀಗೂ ಹೆಚ್ಚು ಉದ್ದ: ಷಿನಾನೋ (478 ಕಿಮೀ), ಇಷಿಕಾರೀ (363 ಕಿಮೀ) ಮತ್ತು ಟೋನೇ (320 ಕಿಮೀ). ನದಿಗಳು ಬೆಟ್ಟದ ಇಳಿಜಾರಿನಲ್ಲಿ ರಭಸದಿಂದ ಹರಿಯುವಾಗ ಹೊತ್ತು ತಂದ ಮಣ್ಣಿನಿಂದ ಫಲವತ್ತಾದ ಮೈದಾನಗಳಾಗಿವೆ. ಪರ್ವತಪ್ರದೇಶದಿಂದ ಇಳಿದು ಮೈದಾನದಲ್ಲಿ ಹರಿಯುವಾಗ ಈ ನದಿಗಳ ಮಣ್ಣು ತಳದಲ್ಲಿ ತಂಗಿ ಇವುಗಳ ಪಾತ್ರಗಳು ನೆರೆಯ ನಾಡಿಗಿಂತ ಸಾಮಾನ್ಯವಾಗಿ ಎತ್ತರವಾಗಿರುತ್ತವೆ.

ಜಪಾನಿನ ವ್ಯವಸಾಯಕ್ಕೆ ಬೇಕಾದ ನೀರಿನಲ್ಲಿ ಮೂರನೆಯ ಎರಡು ಭಾಗ ಒದಗುವುದು ನದಿಗಳಿಂದ. ಇವುಗಳಿಂದ ವಿದ್ಯುತ್ತಿನ ಉತ್ಪಾದನೆಯೂ ಆಗುತ್ತಿದೆ.

ವಾಯುಗುಣ: ದಕ್ಷಿಣೋತ್ತರವಾಗಿ ಜಪಾನಿನ ಹರವು 15 ಅಕ್ಷಾಂಶೀಯ ಡಿಗ್ರಿಗಳಷ್ಟು ಇರುವುದರಿಂದ ಇದರ ಉಷ್ಣತೆ ಮತ್ತು ಅವಪಾತಗಳಲ್ಲಿ ಪ್ರಾದೇಶಿಕ ಭಿನ್ನತೆಗಳು ಅಧಿಕ. ದಕ್ಷಿಣದ ಕೀಯೂಷೂ ಉಪೋಷ್ಣವಲಯದಲ್ಲಿದೆ. ಅಲ್ಲಿ ಮಳೆ ಹೆಚ್ಚು. ಉತ್ತರದ ಹಾಕೈಡೋದು ಖಂಡಾಂತರ ವಾಯುಗುಣ. ಸುತ್ತಣ ಸಮುದ್ರ ವಿಶೇಷ ಪ್ರಭಾವ ಬೀರಿದೆ. ಚಳಿಗಾಲದಲ್ಲಿ ಏಷ್ಯದ ಒಳನಾಡಿನ ತೀವ್ರ ಚಳಿಯಿಂದಾಗಿ ಪೂರ್ವ ಸೈಬೀರಿಯದಲ್ಲಿ ಹೆಚ್ಚು ಒತ್ತಡ ಪ್ರದೇಶ ಏರ್ಪಟ್ಟು, ಅಲ್ಲಿಯ ಚಳಿಗಾಳಿ ಪೆಸಿಫಿಕಿನತ್ತ ಹರಿಯುತ್ತದೆ. ಈ ಗಾಳಿ ಜಪಾನ್ ಸಮುದ್ರವನ್ನು ದಾಟುವಾಗ ತೇವವನ್ನು ಸಂಗ್ರಹಿಸಿ, ಜಪಾನಿನ ಮೇಲೆ ಮಳೆ, ಹಿಮ ಸುರಿಸುತ್ತದೆ. ಬೇಸಗೆಯಲ್ಲಿ ಒತ್ತಡದ ಏರುತಗ್ಗು ತೀರುವುಮುರುವಾಗಿ, ಪೆಸಿಫಿಕಿನಿಂದ ಸೈಬೀರಿಯದತ್ತ ಬೀಸುವ ಮಾರುತದಿಂದ ಜಪಾನಿನಲ್ಲಿ ಮಳೆಯಾಗುತ್ತದೆ. ಮಾನ್ಸೂನಿನ ಪರಿಣಾಮದಿಂದಾಗಿ ಜಪಾನಿನಲ್ಲಿ ಅದರ ಅಕ್ಷಾಂಶಗಳಲ್ಲಿ ಇರಬೇಕಾದ್ದಕ್ಕಿಂತ ಚಳಿ ತೀವ್ರತರ; ಬೇಸಗೆಯೂ ತೇವಕರ, ಬೇಸಗೆಯಲ್ಲೂ ಅನಂತರದ ಎರಡು ತಿಂಗಳುಗಳಲ್ಲೂ ಜಪಾನು ಪದೇಪದೇ ಚಂಡಮಾರುತಕ್ಕೆ ಒಳಗಾಗುತ್ತದೆ. ದಕ್ಷಿಣ ಜಪಾನಿಗೆ ಇದರ ಬಾಧೆ ವಿಪರೀತ.

ಡಿಸೆಂಬರಿನಿಂದ ಫೆಬ್ರವರಿಯ ವರೆಗೆ ಜಪಾನಿನ ಹಲವು ಭಾಗಗಳಲ್ಲಿ ನೀರು ಗಡ್ಡೆ ಕಟ್ಟುವುದಕ್ಕಿಂತ ಕಡಿಮೆಯ ಉಷ್ಣತೆ ಇರುತ್ತದೆ. ಉತ್ತರದಿಂದ ದಕ್ಷಿಣಕ್ಕೆ ಬಂಧಂತೆ ಉಷ್ಣತೆ ಅಧಿಕ. ಹಾಕೈಡೋನ ಪಶ್ಚಿಮ ಮಧ್ಯದಲ್ಲಿರುವ ಆಸಾಹೀಗಾವ ನಗರದಲ್ಲಿ ಜನವರಿಯ ಮಾಧ್ಯ (ಮೀನ್) ಉಷ್ಣತೆ $10^0$ ಸೆ.; ಟೋಕಿಯೋದಲ್ಲಿ $28^0$ ಸೆ. ನೈಋತ್ಯದಲ್ಲಿರುವ ಓಸಾಕದಲ್ಲಿ $11^0$ ಸೆ. ಚಳಿಗಾಲದಲ್ಲಿ ಜಪಾನಿನಲ್ಲಿ ಅತ್ಯಧಿಕ ಉಷ್ಣತೆ ಇರುವ ಪ್ರದೇಶ ಕೀಯೂಷೂ. ಅಲ್ಲಿ ಜನವರಿಯ ಮಾಧ್ಯ ಉಷ್ಣತೆ $5.5^0$ ಸೆ.

ಜಪಾನಿನ ಅಕ್ಷಾಂಶೀಯ ವ್ಯಾಪ್ತಿಯಿಂದ ಅದರ ಬೇಸಗೆ ಉಷ್ಣತೆಯ ಮೇಲೆ ಹೆಚ್ಚಿನ ಪರಿಣಾಮವಾಗಿಲ್ಲ. ಆದರೆ ಎತ್ತರಕ್ಕೆ ಅನುಗುಣವಾಗಿ ಅದು ವ್ಯತ್ಯಾಸವಾಗುತ್ತದೆ. ಹಾಕೈಡೋ ಹೆಚ್ಚು ತಂಪು. ಅತ್ಯುಷ್ಣ ತಿಂಗಳಾದ ಆಗಸ್ಟಿನಲ್ಲಿ ಮಾಧ್ಯ ಉಷ್ಣತೆ ಹೀಗಿರುತ್ತದೆ: ಕಾಗಷೀಮ: $26^0$ ಸೆ. ಓಸಾಕ $27^0$ ಸೆ. ಟೋಕಿಯೊ $25^0$ ಸೆ. ಸಪೋರೋ $21^0$ ಸೆ. ಹಾಕೈಡೋದಲ್ಲಿ ವರ್ಷದಲ್ಲಿ 120 ದಿನಗಳು ಹಿಮಮುಕ್ತ, ಕೀಯೂಷೂವಿನಲ್ಲಿ ಇಂಥ ದಿನಗಳ ಸಂಖ್ಯೆ ಎರಡರಷ್ಟು.

ಹೆಚ್ಚು ಮಳೆ ಅಥವಾ ಹಿಮ ಬೀಳದ ಪ್ರದೇಶ ಜಪಾನಿನಲ್ಲಿ ಇಲ್ಲ. ಬೇಸಗೆಯ ಆರಂಭಕಾಲದಲ್ಲಿ ಗರಿಷ್ಠ ಮಳೆ. ಇದಕ್ಕೆ ಅಪವಾದವೆಂದರೆ ಜಪಾನ್ ಸಮುದ್ರದ ನೆರೆಯ ಪ್ರದೇಶ. ಅಲ್ಲಿ ಚಳಿಗಾಲದ ಹಿಮಪಾತ ಹೆಚ್ಚು. ಜಪಾನಿನ ಬಹು ಭಾಗದಲ್ಲಿ 100 ಸೆಂಮೀ ಗಿಂತ ಹೆಚ್ಚು ಮಳೆ ಅಥವಾ ಹಿಮ ಬೀಳುತ್ತದೆ. ಪಶ್ಚಿಮ ಹಾಕೈಡೋ, ಪೂರ್ವ ಹಾನ್‍ಷ್ಯೂ, ಒಳ ಸಮುದ್ರಪ್ರದೇಶದಲ್ಲಿ ವರ್ಷಕ್ಕೆ 100–150 ಸೆಂಮೀ ಅವಪಾತ.

ಜಪಾನಿನಲ್ಲಿ ಅನೇಕ ಸರೋವರಗಳುಂಟು. ಬಹುತೇಕ ಅವು ಸಣ್ಣವು. ಮಧ್ಯ ಹಾನ್‍ಷ್ಯೂವಿನ ಪಶ್ಚಿಮದಲ್ಲಿರುವ ಬೀವಾ ಸರೋವರ (648 ಚ.ಕಿಮೀ) ಅತ್ಯಂತ ದೊಡ್ಡದು.

ವಿದ್ಯುತ್ತು: ಜಪಾನು ಪರ್ವತಪ್ರದೇಶಗಳಿಂದ ಕೂಡಿರುವುದರಿಂದಲೂ ಅಲ್ಲಿಯ ನದಿಗಳು ವರ್ಷದ ಬಹು ಕಾಲ ತುಂಬಿ ಹರಿಯುವುದರಿಂದಲೂ ವಿದ್ಯುತ್ತಿನ ಉತ್ಪಾದನೆಗೆ ವಿಪುಲ ಅವಕಾಶವಿದೆ. ಜಪಾನಿನ ಜಲವಿದ್ಯುತ್ ಕಾರ್ಯಗಾರಗಳಲ್ಲಿ ಶೇ 88ರಷ್ಟು ಕಾರ್ಯಾಗಾರಗಳು 10,000 ಕಿವಾ ವಿದ್ಯುತ್ ಉತ್ಪಾದನೆಗೂ ಕಡಿಮೆ ಸಾಮರ್ಥ್ಯ ಉಳ್ಳವು. ಉಷ್ಣ ವಿದ್ಯುತ್ತೂ ಗಣನೀಯವಾಗಿ ಉತ್ಪಾದಿತವಾಗುತ್ತಿದೆ. ಜಪಾನಿನ ಇಂಧನ ಸಾಮರ್ಥ್ಯದ ಶೇ. 56ರಷ್ಟು ಕಲ್ಲಿದ್ದಲು ಮೂಲವುಳ್ಳದ್ದು; ಶೇ. 33 ಜಲವಿದ್ಯುತ್ತು.

ಅರಣ್ಯ ಸಂಪತ್ತು: ಜಪಾನಿನ ಅರ್ಧಕ್ಕಿಂತ ಹೆಚ್ಚು ಪ್ರದೇಶ ಅರಣ್ಯಾವೃತ. ಒಟ್ಟು ವಿಸ್ತೀರ್ಣವಾದ 36 ಮಿಲಿಯನ್ ಹೆಕ್ಟೇರ್‍ನಲ್ಲಿ 22 ಮಿಲಿಯನ್ ಹೆಕ್ಟೇರ್ ಅರಣ್ಯ ಪ್ರದೇಶ. ಇದರ ಅರ್ಧ ಭಾಗದಲ್ಲಿ ಅಗಲ ಎಲೆಗಳ ಕಾಡು ಶೇ. 29ರಷ್ಟು ಪ್ರದೇಶದಲ್ಲಿ ಶಂಕುಧಾರಿ ಕಾಡು ಇವೆ. ಶೇ. 5ಕ್ಕಿಂತ ಕಡಿಮೆ ಪ್ರದೇಶ ಬಿದಿರು ಕಾಡು. ಇದರ ಜೊತೆಗೆ 60 ಲಕ್ಷ ಎಕರೆ ಪ್ರದೇಶಗಳಲ್ಲಿ ಕುರುಚಲು ಕಾಡಿದೆ. ಜಪಾನ್ ಸಸ್ಯಸಂಪತ್ತಿನಲ್ಲಿ ಸಮೃದ್ಧವಾಗಿರುವುದಕ್ಕೆ ಅಲ್ಲಿ ವರ್ಷದ ಬಹುಭಾಗ ಮಳೆ ಬೀಳುವುದು ಮತ್ತು ಗುಡ್ಡಬೆಟ್ಟಗಳಿಂದ ತುಂಬಿರುವುದೇ ಮುಖ್ಯ ಕಾರಣ.

ಜಪಾನಿನ ಅರಣ್ಯ ಪ್ರದೇಶಗಳನ್ನು ಸ್ಥೂಲವಾಗಿ ಮೂರು ವಲಯಗಳಾಗಿ ವಿಂಗಡಿಸಬಹುದು: 1 ಉತ್ತರವಲಯ: ಹಾಕೈಡೋದ ಮಧ್ಯ ಮತ್ತು ಪೂರ್ವ ಭಾಗ, ಹೊನ್‍ಷ್ಯೂವಿನ ಎತ್ತರ ಪ್ರದೇಶ. ಇಲ್ಲಿ ಹೆಚ್ಚಾಗಿ ಭೂರ್ಜ, ಫರ್, ಲಾರ್ಚ ಮತ್ತು ಸ್ಪ್ರೂಸ್ ಮರಗಳಿವೆ. 2 ಸಮಶೀತೋಷ್ಣವಲಯ: ಮಧ್ಯ ಹಾನ್‍ಷ್ಯೂವಿನ 1636 ಮೀ ಗಿಂತ ಕಡಿಮೆ ಎತ್ತರದ ಪ್ರದೇಶ. ಇಲ್ಲಿಯದು ಮಿಶ್ರ ಅರಣ್ಯ. ಈ ಪ್ರದೇಶದಲ್ಲಿ ಎಲೆ ಉದುರುವ, ಅಗಲ ಎಲೆಯ ವಂಶಕ್ಕೆ ಸೇರಿದ ಬೀಚ್, ಆಷ್, ಚೆಸ್‍ನಟ್ ಮತ್ತು ಓಕ್ ಮರಗಳಿವೆ. ಶಂಕುಧಾರಿ ಜಾತಿಯ ಪೈನ್, ಫರ್ ಮತ್ತು ದೇವದಾರು ಮರಗಳು ಬೆಳೆಯುತ್ತವೆ. 3 ಉಪೋಷ್ಣವಲಯ: ಕೀಯೂಷೂ, ಶಿಕೋಕೂ, ಕ್ವಾಂಟೋ ಮೈದಾನದವರೆಗಿನ ಹಾನ್‍ಷ್ಯೂ ಪ್ರದೇಶ. ಅಗಲ ಎಲೆಗಳ ನಿತ್ಯಹಸುರಿನ ಮತ್ತು ಎಲೆ ಉದುರುವ ಮರಗಳಿವೆ. ಆಲ, ತಾಳೆ, ನೀಲಗಿರಿ ಮುಂತಾದ ವೃಕ್ಷಗಳು ದಕ್ಷಿಣ ಶಿಕೋಕೂ ಮತ್ತು ಕೀಯೂಷೂಗಳಲ್ಲಿವೆ.

ಜಪಾನಿನ ಸರ್ಕಾರಿ ಮತ್ತು ಶ್ರೀಮಂತರ ಕೆಲವು ಕಟ್ಟಡಗಳನ್ನು ಬಿಟ್ಟರೆ ಉಳಿದೆಲ್ಲವನ್ನೂ ಬಹುತೇಕ ಮರದಿಂದಲೇ ಕಟ್ಟಲಾಗಿದೆ. ಮರಗಳು ಹೇರಳವಾಗಿರುವುದು ಒಂದು ಕಾರಣ. ಇಲ್ಲಿ ಆಗಾಗ ಸಂಭವಿಸುವ ಭೂಕಂಪಗಳ ಭಯ ಇನ್ನೊಂದು ಕಾರಣ. ಲೋಹದ ಉಪಕರಣಗಳ ಬದಲಿಗೆ ಸಾಧ್ಯವಾದಗಲ್ಲೆಲ್ಲ ಮರದ ಪಾತ್ರೆಗಳನ್ನೇ ಬಳಸಲಾಗುತ್ತದೆ. ಕಾಗದ, ಕೃತಕ ರೇಷ್ಮೆ ಇವು ಅರಣ್ಯವನ್ನವಲಂಬಿಸಿದ ಎರಡು ಮುಖ್ಯ ಕೈಗಾರಿಕೆಗಳು. ಮರದ ಇದ್ದಿಲನ್ನು ಅಡುಗೆಗೂ ಅನಿಲ ಉತ್ಪಾದನೆಗೂ ಬಳಸಲಾಗುತ್ತದೆ.

ಜಪಾನ್ ಈಗ ಮರದ ದಿಮ್ಮಿಗಳನ್ನು ವಿದೇಶಗಳಿಂದಲೂ ಆಮದು ಮಾಡಿಕೊಳ್ಳುತ್ತಿದೆ. ಆದರೆ ಇನ್ನೂ ದುರ್ಗಮವಾಗಿರುವ ಅದರ ಕಾಡುಗಳನ್ನು ಬಳಸಿಕೊಳ್ಳಬಹುದು ಮತ್ತು ಪುನರ್ನವೀಕರಣದಿಂದ ಅದರ ಬೇಡಿಕೆಯ ಗಣನೀಯ ಭಾಗವನ್ನು ತುಂಬಿಕೊಳ್ಳಬಹುದು.

ಪ್ರಾಣಿ ಸಂಪತ್ತು: ಜಪಾನ್ ಅಪಾರ ಪ್ರಾಣಿಸಂಪತ್ತಿರುವ ದೇಶ. ಇಲ್ಲಿಯ ವಾಯುಗುಣ ಮತ್ತು ಸಸ್ಯಸಂಪತ್ತಿನಂತೆ ಪ್ರಾಣಿಸಂಪತ್ತೂ ವೈವಿಧ್ಯ ಪೂರ್ಣ. ಅಕ್ಷಾಂಶ ಹಾಗೂ ನೆಲದ ಎತ್ತರಕ್ಕೆ ಅನುಗುಣವಾಗಿ ಇದು ವ್ಯತ್ಯಾಸವಾಗುತ್ತದೆ. ಜಪಾನಿನ ನೆಲಪ್ರಾಣಿಗಳು ಬಹುತೇಕ ಸಮಶೀತೋಷ್ಣವಲಯ ಜಾತಿಗಳವು. ಹಾಕೈಡೋದಲ್ಲಿ ಉಪಶೀತವಲಯ ಪ್ರರೂಪಗಳೊಂದಿಗೂ ಇವು ಬೆರೆತುಕೊಂಡಿವೆ. ಚೀನ, ಕೊರಿಯ, ಸೈಬೀರಿಯ ಮತ್ತು ಆಗ್ನೇಯ ಏಷ್ಯದ ಪ್ರಾಣಿ ಜಾತಿಗಳಿಗೂ ಇವಕ್ಕೂ ಸಾದೃಶ್ಯಗಳಿರುವುದರಿಂದ ಇವು ಮೂಲತಃ ಖಂಡಪ್ರದೇಶದಿಂದ ಇಲ್ಲಿಗೆ ಬಂದಿರಬಹುದೆಂದು ಊಹಿಸಬಹುದು. ಸಾಗರಿಕ ಪ್ರಾಣಿಗಳನ್ನೂ ಉತ್ತರ, ಮಧ್ಯ ಮತ್ತು ಉಷ್ಣವಲಯದವೆಂದು ವಿಂಗಡಿಸಬಹುದು. ಆದರೆ ಒಂದು ವ್ಯತ್ಯಾಸ: ಉಷ್ಣವಲಯದ ಜಾತಿಗಳು ಇವೇ ಜಾತಿಗಳ ನೆಲ ಪ್ರಾಣಿಗಳಿರುವುದಕ್ಕಿಂತಲೂ ಉತ್ತರದ ಸಾಗರದಲ್ಲಿವೆ. ಜಪಾನ್ ಉಷ್ಣೋದಕ ಪ್ರವಾಹದಲ್ಲಿ ಟೋಕಿಯೊ ಕೊಲ್ಲಿಯ ಹೊರಗಿರುವ ಬೋಸೋ ಪರ್ಯಾಯ ದ್ವೀಪದವರೆಗೂ ಉಷ್ಣನೀರಿನ ಪ್ರಾಣಿಜಾತಿಗಳು ಪ್ರಸರಿಸಿವೆ.

ಜಪಾನ್ ಮತ್ತು ನೆರೆಯ ಕಡಲುಗಳಲ್ಲಿ ಸು. 140 ಸ್ತನಿಗಳನ್ನು ಗುರುತಿಸಲಾಗಿದೆ. ದಂಶಕ, ತಿಮಿಂಗಿಲ, ಹಂದಿಮೀನು, ಕಡಲಹಂದಿ, ಸಣ್ಣಿಲಿ, ಮುಖಮಲ್ ಹೆಗ್ಗಣ, ಬಾವಲಿ, ಮಕಾಕ್ ಎಂಬ ವಾನರ, ಕರಡಿ, ಬ್ಯಾಡ್ಜರ್, ನೀರುನಾಯಿ, ಅರ್ಮಿನ್, ಮಿಂಕ್, ಮಾರ್ಟೆನ್, ರ್‍ಯಾಕೂನ್, ನರಿ, ತೋಳ, ಸೀಲ್, ವಾಲ್ರಸ್, ಕಾಡುಹಂದಿ, ಜಿಂಕೆ, ಸಾರಂಗ–ಇವು ಕೆಲವು ಪ್ರಾಣಿಗಳು. ಜಪಾನಿನ ಸುತ್ತಣ ಸಮುದ್ರಗಳಲ್ಲಿ ಮೂವತ್ತಕ್ಕೂ ಹೆಚ್ಚು ಬಗೆಯ ತಿಮಿಂಗಿಲವರ್ಗ ಪ್ರಾಣಿಗಳಿವೆ. ಜಪಾನಿನಲ್ಲಿ ಸು. 450 ಜಾತಿಯ ಹಕ್ಕಿಗಳಿವೆ. ಇವುಗಳಲ್ಲಿ ಸುಮಾರು ನೂರೈವತ್ತು ನೀರುಹಕ್ಕಿಗಳು. ಉರಗಗಳಲ್ಲಿ ಮೂವತ್ತು ಜಾತಿ.

ಜಪಾನಿನ ಸಾಕು ಪ್ರಾಣಿಗಳಲ್ಲಿ ದನ, ಕುದುರೆ, ಕುರಿ, ಕೋಳಿ, ಹಂದಿ ಮುಖ್ಯ. ಇಲ್ಲಿ ಸ್ವಾಭಾವಿಕ ಹುಲ್ಲುಗಾವಲುಗಳ ಕೊರತೆ ಇರುವುದರಿಂದ ದನಗಳ ಸಾಕಣೆ ವೆಚ್ಚ ದುಬಾರಿ. ಇಲ್ಲಿಯ ಬೆಟ್ಟದ ಹುಲ್ಲು ಒರಟು, ನಿಸ್ಸಾರ. ಆದ್ದರಿಂದ ದನಗಳ ಮೇವಿನ ಸಮಸ್ಯೆ ತೀವ್ರವಾದದ್ದು. ದನಗಳನ್ನೂ ಕುದುರೆಗಳನ್ನೂ ವ್ಯವಸಾಯಕ್ಕೆ, ನೆಲ ಮಟ್ಟಮಾಡಲು ಮತ್ತು ಗೊಬ್ಬರಕ್ಕಾಗಿ ಸಾಕುತ್ತಾರೆ.

ಜನಜೀವನ: ಇಲ್ಲಿಯ ಜನ ಏಷ್ಯದ ಮುಖ್ಯ ಭೂಭಾಗದಿಂದ ಬಂದು ನೆಲೆಸಿದವರು. ಬಹು ಸಂಖ್ಯಾತರು ಮಂಗೋಲಾಯಿಡ್ ಬುಡಕಟ್ಟಿಗೆ ಸೇರಿದವರು. ಜಪಾನಿನ ಬಹು ಸಂಖ್ಯಾತರು ಆನುವಂಶಿಕವಾಗಿ ಕೊರಿಯನರಿಗೆ, ಟುಂಗುಸ್ ಪಂಗಡಗಳಿಗೆ ಮತ್ತು ಉತ್ತರ ಚೀನಿಗುಂಪುಗಳಿಗೆ ಅತ್ಯಂತ ಸಮೀಪವೆಂದು ಹೇಳಲಾಗಿದೆ. ಇತರ ಮಾಂಗೋಲಾಯಿಡ್ ಗುಂಪುಗಳಿಗಿಂತ ಜಪಾನಿಯರಿಗೆ ಮೈ ಮತ್ತು ಮುಖಗಳ ಮೇಲೆ ಕೂದಲು ಹೆಚ್ಚು; ಮೈಬಣ್ಣ ಹಳದಿಗಿಂತ ಹೆಚ್ಚು ಕಂದು. ಮೈಕಟ್ಟು ಹೆಚ್ಚು ಗಟ್ಟಿಮುಟ್ಟು. ಜಪಾನೀಯರು ಕುಳ್ಳ ಜನಾಂಗವೆನಿಸಿದ್ದರೂ 1900 ರಿಂದೀಚೆಗೆ ಇವರಲ್ಲಿ ಅಸಾಧಾರಣ ದೈಹಿಕ ಬದಲಾವಣೆಗಳಾಗಿವೆ. ಇವರ ಸರಾಸರಿ ಎತ್ತರ 50 ವರ್ಷಗಳಲ್ಲಿ ಸು. 7.5 ಸೆಂಮೀ ಗಳಷ್ಟು ಅಧಿಕವಾಗಿದೆ (1.6 ಮೀ). ಇದು ಸುಧಾರಿತ ಆಹಾರ ಮತ್ತು ವೈದ್ಯ ಸೌಲಭ್ಯಗಳ ಫಲ ಎಂದು ಹೇಳಲಾಗಿದೆ. ಪಟ್ಟಣದ ಜನ ಹಳ್ಳಿಗರಿಗಿಂತ ಹೆಚ್ಚು ಎತ್ತರ. ಜಪಾನಿ ಸುಮೊ ಕುಸ್ತಿಪಟುಗಳ ಮೈಕಟ್ಟು ಅಸಾಧಾರಣ.

ಜಪಾನಿನಲ್ಲಿ ಒಂದು ಪ್ರಮುಖ ಧರ್ಮವಿಲ್ಲ. ಅಲ್ಲಿ ಅನೇಕ ಮತಗಳು ಅರೆ ಮತಗಳು ಜೊತೆಜೊತೆಯಾಗಿವೆ. ರಾಷ್ಟ್ರೀಯ ಮತ್ತು ಸಾಮಾಜಿಕ ಪದ್ಧತಿಗಳು ಷಿಂಟೋ ಮತಕ್ಕೆ ಅನುಗುಣವಾಗಿವೆ. ಸಾರ್ವಜನಿಕ ಹಾಗೂ ಖಾಸಗಿ ನೀತಿನಡವಳಿಕೆಗಳಿಗೆ ಕನ್ಫ್ಯೂಷನಿಸಂ ಆಧಾರ. ತಾತ್ತ್ವಿಕ ವಿಚಾರಗಳಲ್ಲಿ ಬೌದ್ಧಧರ್ಮ ಪ್ರಧಾನ. ಈ ಎಲ್ಲ ಧರ್ಮಗಳೂ ಪರಸ್ಪರ ಪ್ರಭಾವ ಬೀರಿವೆ. ಕ್ರೈಸ್ತ ಧರ್ಮವೂ ವ್ಯಾಪಕವಾಗಿದೆ.

ಆರ್ಥಿಕತೆ: ಕೃಷಿ : ಜಪಾನಿನ ಒಟ್ಟು ಭೂಪ್ರದೇಶದಲ್ಲಿ ಶೇಕಡ 16ರಷ್ಟು ಮಾತ್ರ ಸಾಗುವಳಿಗೆ ಯೋಗ್ಯವಾದದ್ದು. ಇರುವ ಜಮೀನಿನಲ್ಲೂ ಮಣ್ಣಿನಲ್ಲಿ ಆಮ್ಲದ ಲಾವ ಬೆರೆತಿರುವುದರಿಂದ ಅಷ್ಟು ಫಲವತ್ತಾಗಿಲ್ಲ. ಮಳೆಯ ಕಾರಣದಿಂದಾಗಿ ಆಗಾಗ ಮಣ್ಣು ತೊಳೆದುಹೋಗುವುದರಿಂದಲೂ ಅಧಿಕ ತೇವದಿಂದಾಗಿ ಮಣ್ಣಿನ ಸಾರ ಆಳಕ್ಕೆ ಇಳಿಯುವುದರಿಂದಲೂ ಜಮೀನಿನ ಫಲವಂತಿಕೆಯನ್ನು ಶ್ರಮಪೂರ್ವಕವಾಗಿ ಸಂರಕ್ಷಿಸಬೇಕು.

ಜಪಾನಿನ ವಾಯುಗುಣ ಆಹಾರಬೆಳೆಗೆ ಅನುಕೂಲಕರವಾದದ್ದು. ಜಪಾನಿನ ಎಲ್ಲ ಭಾಗಗಳಲ್ಲೂ ಸಾಕಷ್ಟು ಮಳೆಯಾಗುತ್ತದೆ. ಇಲ್ಲಿಯ ಸಾಗುವಳಿ ಭೂಮಿಯ ಶೇಕಡ 30ರಲ್ಲಿ ಎರಡು ಬೆಳೆ ಬೆಳೆಯುತ್ತಾರೆ. ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಚಳಿಗಾಲದಲ್ಲಿ ಬೀಳುವ ಮಂಜು ಮತ್ತು ಅಧಿಕ ಹಿಮದಿಂದಾಗಿ ಎರಡನೆಯ ಬೆಳೆ ಸಾಧ್ಯವಿಲ್ಲ. ಎರಡು ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬೇಸಿಗೆಯಲ್ಲಿ ಬತ್ತ ಬೆಳೆದರೆ ಚಳಿಗಾಲದಲ್ಲಿ ಗೋದಿ ಮತ್ತು ಖುಷ್ಕಿ ಬೆಳೆಗಳನ್ನು ಬೆಳೆಯುತ್ತಾರೆ.

ವ್ಯವಸಾಯಕ್ಕೆ ಕ್ಯಾಂಟೋ, ಇಷಿಕಾರೀ, ಈಚಿಗೋ, ನೊಬಿ ಮೊದಲಾದ ಬಯಲುಗಳು ಪ್ರಸಿದ್ಧವಾಗಿವೆ. ಇಲ್ಲಿಯ ನದಿಗಳು ಬೆಟ್ಟಗುಡ್ಡಗಳು ಮತ್ತು ಕಣಿವೆಗಳಲ್ಲಿ ಹರಿದು ಬಹು ಬೇಗ ಸಮುದ್ರವನ್ನು ಸೇರುವುದರಿಂದ ವಿಶಾಲ ಬಯಲುಗಳಲ್ಲಿ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಿ ನೀರಾವರಿಯನ್ನು ಹೆಚ್ಚಿಸಲು ಕಷ್ಟಕರವಾಗಿದೆ. ಸಾಮಾನ್ಯವಾಗಿ ಈಗಿರುವ ವ್ಯವಸಾಯ ಕ್ಷೇತ್ರದ ಬಹುಭಾಗಕ್ಕೆ ನೀರಾವರಿಯ ಕೊರತೆಯಿಲ್ಲ.

ಮಹಾಯುದ್ಧದಲ್ಲಿ ಕೈಗಾರಿಕೆಗಳು ಮತ್ತು ಭಾರಿ ಉದ್ಯಮಗಳು ನಾಶಹೊಂದಿದಾಗ ಜಪಾನಿನ ಆರ್ಥಿಕ ಆಶ್ರಯವಾಗಿ ಉಳಿದುಕೊಂಡಿದ್ದು ವ್ಯವಸಾಯ ಒಂದೇ. 1860ರ ದಶಕದಲ್ಲಿ ಜಪಾನಿನ ಸು. 80ರಷ್ಟು ಜನ ವ್ಯವಸಾಯವನ್ನು ಅವಲಂಬಿಸಿದರು. 1949ರ ಹೊತ್ತಿಗೆ ವ್ಯವಸಾಯವನ್ನು ಅವಲಂಬಿಸಿದ್ದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಅರ್ಧಕ್ಕೆ ಇಳಿದಿತ್ತು. ಯುದ್ಧೋತ್ತರ ಆರ್ಥಿಕ ಪುನರ್‌ರಚನೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದ ಜಪಾನ್‌ನಲ್ಲಿ 1970ರ ವೇಳೆಗೆ ವ್ಯವಸಾಯದಲ್ಲಿ ನಿರತರಾದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 15ಕ್ಕೂ ಕಡಿಮೆ.

ವ್ಯವಸಾಯ ಪ್ರದೇಶದ ಕೊರತೆಯಿಂದಾಗಿ ಅಲ್ಲಿ ಸಾಂದ್ರ ಬೇಸಾಯಕ್ಕೆ ಹೆಚ್ಚು ಗಮನ ಸಂದಿದೆ. ಬತ್ತದ ಗದ್ದೆಗಳು ಮೆಟ್ಟಿಲುಮೆಟ್ಟಿಲಾಗಿವೆ. ಪ್ರತಿ ಮೆಟ್ಟಿಲಿಗೂ ಮಧ್ಯೆ ಬದು ಹಾಕಲಾಗಿದೆ. ಅನೇಕ ಎತ್ತರದ ಪ್ರದೇಶಗಳನ್ನು ಸಮತಟ್ಟು ಮಾಡಿ ಗಟ್ಟಿ ಮಾಡಲಾಗಿದೆ. ಹಳೆಯ ವ್ಯವಸಾಯ ಪದ್ಧತಿಯನ್ನು ಬಿಟ್ಟು ಭೂಮಿಯ ಸಾರವನ್ನು ಕಾಯ್ದಿರಿಸಲು ಬಹು ಬೆಳೆಗಳನ್ನು ಬೆಳೆಯಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಪಾನಿನಲ್ಲಿ ಸಣ್ಣ ಹಿಡುವಳಿಗಳೇ ಹೆಚ್ಚು. ಆದರೂ ಅತ್ಯಾಧುನಿಕ ವಿಧಾನವನ್ನು ಅನ್ವಯಿಸುವುದರಲ್ಲಿ ಹಿಂದುಳಿದಿಲ್ಲ.

ಜಪಾನಿನಲ್ಲಿ ಯಾಂತ್ರೀಕರಣದ ಬೆಳವಣಿಗೆಯಾಗಿದ್ದರೂ ಪ್ರಾಣಿಗಳನ್ನು ಹೂಡಿ ಬೇಸಾಯ ಮಾಡುವುದು ಹೆಚ್ಚಾಗಿ ಬಳಕೆಯಲ್ಲಿತ್ತು. ಮಾನವಶಕ್ತಿ ಅಗಾಧವಾಗಿರುವುದರಿಂದ ಶ್ರಮ ಮಿಗಿಸುವ ಉಪಕರಣಗಳನ್ನು ಬಳಸುವಲ್ಲಿ ಜಪಾನೀಯರು ಅಷ್ಟು ಮುಂದಾಗಲಿಲ್ಲ. ಆದರೆ ಎರಡನೆಯ ಮಹಾಯುದ್ಧದ ಕಾಲದಿಂದ ವ್ಯವಸಾಯಕ್ಕೆ ವ್ಯಾಪಕವಾಗಿ ತಾಂತ್ರಿಕ ಕ್ರಮ ಅನ್ವಯಿಸಲಾಗಿದೆ. ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಿದೆ. ಕ್ರಿಮಿನಾಶಕಗಳು ಮತ್ತು ಕಳೆನಾಶಕ ವಸ್ತುಗಳನ್ನು ಹೆಚ್ಚಾಗಿ ಬಳಸುತ್ತಾರೆ. ಫಲಸನ್ನು ಹದಮಾಡಲು ಮತ್ತು ಭೂಮಿಯನ್ನು ಉಳಲು ಸಣ್ಣ ಕೈಯಂತ್ರಗಳನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಹಣ್ಣುಗಳು ಮತ್ತು ತರಕಾರಿಗಳ ಬೆಳೆಯನ್ನು ವಿಸ್ತರಿಸಲಾಗಿದೆ.

ಜಪಾನಿನ ವ್ಯವಸಾಯದಲ್ಲಿ ಆಹಾರ ಬೆಳೆಗಳಿಗೇ ಪ್ರಾಧಾನ್ಯ. ಕೃಷಿ ನೆಲದಲ್ಲಿ ಶೇ. 80ರಷ್ಟು ಇದಕ್ಕೆ ಮೀಸಲು. ಅದರಲ್ಲೂ ಬತ್ತಕ್ಕೆ ಅಗ್ರಸ್ಥಾನ. ಬತ್ತದ ಇಳುವರಿಯಲ್ಲಿ ಜಪಾನ್ ಏಷ್ಯದಲ್ಲೇ ಉನ್ನತ ಮಟ್ಟದಲ್ಲಿದೆ. ಶೇ. 55ರಷ್ಟು ಭೂಮಿಯಲ್ಲಿ ಬತ್ತವನ್ನೂ ಶೇ. 40ರಷ್ಟು ಭೂಮಿಯಲ್ಲಿ ಧಾನ್ಯಗಳನ್ನೂ ಬೆಳೆಯಲಾಗುತ್ತದೆ. ಗೋದಿ, ಬಾರ್ಲಿ, ಗೆಣಸು, ಬಿಳಿ ಆಲೂಗೆಡ್ಡೆ, ಹಿಪ್ಪುನೇರಳೆ, ಚಹ, ಹೊಗೆಸೊಪ್ಪು ಮತ್ತು ಮಿಲೆಟ್ಸ್ ಇತರ ಮುಖ್ಯ ಬೆಳೆಗಳು. ಎರಡನೆಯ ಮಹಾಯುದ್ಧದ ಅನಂತರ ಚಹ ಮತ್ತು ಹಿಪ್ಪುನೇರಳೆ ಬೆಳೆಯುವ ಪ್ರದೇಶ ಇಳಿಮುಖವಾಗಿದೆ. ರೇಷ್ಮೆ ಉತ್ಪಾದನೆ 1930ರ ದಶಕದಲ್ಲಿ ಪ್ರಮುಖವಾಗಿತ್ತು.

ಜಪಾನಿನಲ್ಲಿ ಸಣ್ಣ ಹಿಡುವಳಿಗಳೇ ಅಧಿಕ. ಹಿಡುವಳಿಗಳ ಸರಾಸರಿ 1 ಹೆಕ್ಟೇರ್. 1/3 ಭಾಗ ಒಕ್ಕಲುಗಳು 1.2 ಹೆಕ್ಟೇರ್‌ಗಳಿಗಿಂತಲೂ ಕಡಿಮೆ ಹಿಡುವಳಿ ಹೊಂದಿವೆ. 5 ಹೆಕ್ಟೇರ್‌ಗಳಿಗಿಂತ ಹೆಚ್ಚಿನ ವಿಸ್ತೀರ್ಣದ ಹಿಡುವಳಿಗಳು ಶೇ. 10 ಮಾತ್ರ.

ಕೈಗಾರಿಕೆ : ಜಪಾನ್ 19ನೆಯ ಶತಮಾನದ ಪೂರ್ವಾರ್ಧದವರೆಗೂ ವ್ಯವಸಾಯಪ್ರಧಾನ ರಾಷ್ಟ್ರವಾಗಿತ್ತು. ಇದು ಆ ಕಾಲದ ಏಷ್ಯದ ಇತರ ರಾಷ್ಟ್ರಗಳಂತೆ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರವಾಗಿತ್ತು. ಆದರೆ 1868ರಿಂದ ಇದು ಪಾಶ್ಚಾತ್ಯ ನಾಗರಿಕತೆಯ ವಿಧಾನಗಳನ್ನು ತ್ವರಿತವಾಗಿ ಅಳವಡಿಸಿಕೊಂಡಿದ್ದರಿಂದ ಇದರ ಆರ್ಥಿಕ ರಂಗ ಹೊಸ ಶಕೆಗೆ ಕಾಲಿಟ್ಟಿತು. ಜಪಾನ್ ತನ್ನ ಏಕಾಂತತೆಯಿಂದ ಹೊರಬಂದು ವೈಜ್ಞಾನಿಕ ಪ್ರಗತಿಯ ಮಹತ್ತ್ವವನ್ನು ಬಹುಬೇಗ ಗ್ರಹಿಸಿತು. ಇದರ ಪರಿಣಾಮವಾಗಿ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ಇಡೀ ಏಷ್ಯದಲ್ಲೇ ಇದು ಪ್ರಥಮ ಆಧುನಿಕ ರಾಷ್ಟ್ರವೆನಿಸಿತು.

19ನೆಯ ಶತಮಾನದ ಉತ್ತರಾರ್ಧದಲ್ಲಿ ಗಣಿಗಾರಿಕೆ, ಸಂಚಾರ ಮಾರ್ಗಗಳ ನಿರ್ಮಾಣ, ನೌಕಾ ನಿರ್ಮಾಣ, ಶಸ್ತ್ರಾಸ್ತ್ರಗಳ ತಯಾರಿಕೆ, ಸಿಮೆಂಟು, ಗಾಜು, ಕಬ್ಬಿಣ, ಉಕ್ಕು ಮುಂತಾದ ಕಾರ್ಖಾನೆಗಳ, ಬಟ್ಟೆಗಿರಣಿಗಳ, ರೇಷ್ಮೆ ಉದ್ಯಮಗಳ ಸ್ಥಾಪನೆ ಆರಂಭವಾಯಿತು. ವ್ಯವಸಾಯ ಪ್ರಧಾನ ರಾಷ್ಟ್ರವಾಗಿದ್ದ ಜಪಾನ್ ತನ್ನ ಆರ್ಥಿಕ ವ್ಯವಸ್ಥೆಯನ್ನು ಬದಲಿಸಿ ಕೈಗಾರಿಕರಾಷ್ಟ್ರವಾಗಿ ರೂಪುಗೊಂಡಿತು.

ಜಪಾನಿನ ಕಾರ್ಖಾನೆಗಳು ಕಚ್ಚಾ ಸಾಮಗ್ರಿಗಳನ್ನು ಪರದೇಶದಿಂದ ಸಾಮಾನ್ಯವಾಗಿ ಆಮದು ಮಾಡಿಕೊಳ್ಳುತ್ತವೆ. ಆದರೆ ಜನಶಕ್ತಿ ಮತ್ತು ಕಾರ್ಖಾನೆ ನಡೆಸಲು ಬೇಕಾಗುವ ವಿದ್ಯುಚ್ಛಕ್ತಿ ಜಪಾನಿನಲ್ಲೇ ದೊರೆಯುತ್ತದೆ. ಕಾರ್ಖಾನೆಗಳಿಗೆ ಬೇಕಾಗುವ ಕಲ್ಲಿದ್ದಲಿನ ಸ್ವಲ್ಪ ಭಾಗ ಮಾತ್ರ ಜಪಾನಿನಲ್ಲಿಯೇ ದೊರೆಯುತ್ತದೆ ಉಳಿದ ಭಾಗ ಕಲ್ಲಿದ್ದಲನ್ನು ಬೇರೆ ದೇಶಗಳಿಂದ ತರಿಸಿಕೊಳ್ಳುತ್ತಾರೆ. ಇಲ್ಲಿ ದೊರೆಯುವ ಪೆಟ್ರೋಲಿಯಂ ಅದರ ಅಗತ್ಯದ 1/10 ಭಾಗ ಮಾತ್ರ. ಉಳಿದದ್ದನ್ನು ಆಮದು ಮಾಡಿಕೊಳ್ಳಲಾಗುತ್ತದೆ.

ಜಪಾನಿನಲ್ಲಿ ವ್ಯವಸಾಯಯೋಗ್ಯ ಭೂಮಿ ಬಹಳ ಕಡಿಮೆ ಇರುವುದು, ಅಲ್ಲಿ ಹಲವು ಒಳ್ಳೆಯ ಬಂದರುಗಳಿರುವುದು, ಅದು ಕೈಗಾರಿಕೆಯಲ್ಲಿ ಮುಂದುವರಿಯಲು ಕಾರಣವಾದುವು. ಟೋಕಿಯೊದಿಂದ ನಾಗಸಾಕಿವರೆಗಿನ 960 ಕಿಮೀ ಉದ್ದದ ಮಧ್ಯ ಪ್ರದೇಶದಲ್ಲಿ 100 ಕಾರ್ಖಾನೆಗಳಿವೆ. ಇವುಗಳ ಸ್ಥಾಪನೆಗೆ ಮುಖ್ಯವಾಗಿ ಅಲ್ಲಲ್ಲೇ ದೊರೆಯುವ ರೇಷ್ಮೆ ಮತ್ತು ಕಲ್ಲಿದ್ದಲೂ ಅಲ್ಲಿರುವ ಉತ್ತಮ ಬಂದರುಗಳೂ ಕಾರಣ. ಜಪಾನ್ ದೇಶದ ಕೈಗಾರಿಕಾ ಪ್ರದೇಶಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು: 1 ಓಸಾಕ ಕೋಬೆ ಮತ್ತು ಕೀಯೋಟೋ ವಿಭಾಗ : ಇಲ್ಲಿ ಹತ್ತಿ ಗಿರಣಿಗಳು, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು, ಹಡಗು ಕಟ್ಟುವ ಉದ್ಯಮ, ರೇಷ್ಮೆ, ಮಣ್ಣಿನ ಪಾತ್ರೆಗಳ ಕಾರ್ಖಾನೆಗಳಿವೆ. ಕೋಬೆ ಈ ವಿಭಾಗದ ಮುಖ್ಯ ಬಂದರು. 2 ಟೋಕಿಯೊ, ಯೋಕಾಹಾಮ ವಿಭಾಗ: ಇಲ್ಲಿ ರೇಷ್ಮೆ, ಹತ್ತಿ ಜವಳಿ, ಸಣ್ಣ ಗಾತ್ರದ ಕೃಷಿ ಉಪಕರಣ, ವಿದ್ಯುದುಪಕರಣ ಮತ್ತು ಎಣ್ಣೆಶುದ್ಧೀಕರಣ ಕೈಗಾರಿಕೆಗಳಿವೆ. ಯೋಕಹಾಮ ಇಲ್ಲಿಯ ಮುಖ್ಯ ಬಂದರು. ಇಲ್ಲಿ ಹಡಗು ಕಟ್ಟುವ ಉದ್ಯಮವೂ ಇದೆ. 3 ನಗೋಯ ವಿಭಾಗ: ಇಲ್ಲಿ ರೇಷ್ಮೆ, ಹತ್ತಿ, ಉಣ್ಣೆ, ವಿಮಾನ ಮತ್ತು ಕಬ್ಬಿಣ–ಉಕ್ಕು ಕೈಗಾರಿಕೆಗಳಿವೆ. ಮುಖ್ಯ ಬಂದರು ನಗೋಯ. 4 ಉತ್ತರ ಕೀಯೂಷೂ ವಿಭಾಗ: ಮುಖ್ಯ ಕೈಗಾರಿಕೆ ಕಬ್ಬಿಣ ಮತ್ತು ಉಕ್ಕು. ಜಪಾನಿನ ಗೃಹಕೈಗಾರಿಕೆಗಳು ವೈಶಿಷ್ಟ್ಯಪೂರ್ಣವಾದವು. ಪ್ರತಿ ವಸತಿಯೂ ಯಾವುದಾದರೊಂದು ದೊಡ್ಡ ಕೈಗಾರಿಕೆಗೆ ಅವಶ್ಯವಾದ ಭಾಗಗಳನ್ನು ತಯಾರಿಸುತ್ತದೆ. ಇವನ್ನು ಸಹಕಾರ ಸಂಘಗಳು ಶೇಖರಿಸಿ ಕಾರ್ಖಾನೆಗಳಿಗೆ ಒದಗಿಸುತ್ತವೆ. ದಿನಬಳಕೆಯ ಹಲವು ಸರಕುಗಳು ಇಲ್ಲಿ ತಯಾರಾಗುತ್ತವೆ. ರೇಷ್ಮೆ ನೂಲು, ನೇಯ್ಗೆ, ಟೇಪ್, ರಿಬ್ಬನ್, ಬೆಂಕಿಕಡ್ಡಿ, ಬೊಂಬೆ,

ಕಾಗದ, ರಟ್ಟು, ಪೆನ್ಸಿಲ್, ಚಾಪೆ, ಮರದ ಚಪ್ಪಲಿ, ಪಿಂಗಾಣಿ ವಸ್ತುಗಳು, ಛತ್ರಿ, ಫ್ಯಾನ್, ಬೈಸಿಕಲ್, ವಿದ್ಯುದುಪಕರಣ ಮುಂತಾದವು ಮುಖ್ಯವಾದವು. ಜಪಾನಿನಲ್ಲಿ ತಯಾರಾಗದ ಪದಾರ್ಥಗಳೇ ಇಲ್ಲವೆನ್ನಬಹುದು. ಅಂದವಾದ ಅಗ್ಗವಾದ ಹಲವು ಪದಾರ್ಥಗಳು ತಯಾರಾಗುತ್ತವೆ.

ಮೀನುಗಾರಿಕೆ: ಜಪಾನಿನಲ್ಲಿ ಮೀನು ಬಹುಜನರ ಮುಖ್ಯ ಆಹಾರ. ಆಹಾರಕ್ಕೆ ಆಗಿ ಉಳಿದ ಮೀನನ್ನು ಬೇರೆ ದೇಶಗಳಿಗೆ ಕಳುಹಿಸುತ್ತಾರೆ. ಜಪಾನಿನ ಸಮುದ್ರ ತೀರ ಅಂಕುಡೊಂಕಾಗಿ ಹೆಚ್ಚು ಆಳವಿಲ್ಲದೆ ಇರುವುದರಿಂದ ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮೀನುಗಳುಂಟು. ಅಲ್ಲಿ ಹರಿಯುವ ಉಷ್ಣೋದಕ ಮತ್ತು ಶೀತೋದಕ ಪ್ರವಾಹಗಳು ಮೀನುಗಳ ಬೆಳವಣಿಗೆಗೆ ಅನುಕೂಲಕರ. ಜಪಾನ್ ಸಮುದ್ರತೀರದಲ್ಲೆಲ್ಲ ಮೀನುಗಾರಿಕೆ ಒಂದು ಮುಖ್ಯ ಕಸಬು. ಜಪಾನ್ ಸರ್ಕಾರ ಮೀನುಗಾರರಿಗೆ ವಿಶೇಷ ಪ್ರೋತ್ಸಾಹ ನೀಡಿದೆ.

ಸಾರಿಗೆ ಸಂಪರ್ಕ: ಜಪಾನಿನ ಸಾರಿಗೆ ವ್ಯವಸ್ಥೆ ವಿಶಿಷ್ಟವಾದದ್ದು. ಇದು ಪರ್ವತಮಯ ದೇಶವಾದ್ದರಿಂದ ರಸ್ತೆಗಳ ನಿರ್ಮಾಣದಲ್ಲಿ ಜಪಾನ್ ಮೊದಲಿನಿಂದಲೂ ಹೆಚ್ಚಿನ ಪ್ರಗತಿ ಸಾಧಿಸಲಾಗಲಿಲ್ಲ. ರೈಲುಮಾರ್ಗಗಳ ನಿರ್ಮಾಣವೂ ಈ ಸಮಸ್ಯೆಯನ್ನು ಎದುರಿಸುತ್ತದೆ. ಆದರೆ ಜಪಾನು ದ್ವೀಪಸಮೂಹಗಳ ದೇಶವಾಗಿರುವುದರಿಂದ ಅದರ ಆಂತರಿಕ ಸಾರಿಗೆಯ ಬಹುಭಾಗ ಸಮುದ್ರದ ಮೂಲಕವೇ ನಡೆಯುತ್ತದೆ. ಆದ್ದರಿಂದ ಅಲ್ಲಿ ನೌಕಾಸಂಚಾರ ತೀವ್ರ ಅಭಿವೃದ್ಧಿ ಸಾಧಿಸಿದೆ.

ರಸ್ತೆಗಳು: ಜಪಾನಿನ ರಸ್ತೆ ಸಾರಿಗೆ ಪುರಾತನವಾದದ್ದು. ಟೊಂಕಗಾವ ಕಾಲದಲ್ಲಿ ಐದು ಮುಖ್ಯ ಹೆದ್ದಾರಿಗಳನ್ನು ನಿರ್ಮಿಸಲಾಯಿತು. ಇವುಗಳ ಒಟ್ಟು ಉದ್ದ ಸು. 2112 ಕಿಮೀ. ಈ ಮಾರ್ಗಗಳು ಮುಂದೆ ಮೇಜಿ ಪುನಃ ಸ್ಥಾಪನೆಯ ಕಾಲದಲ್ಲಿ ಜಪಾನಿನ ಆಧುನಿಕ ರಸ್ತೆಸಾರಿಗೆ ವ್ಯವಸ್ಥೆಗೆ ಅಡಿಗಲ್ಲಾದುವು.

ನಗರಗಳೆಲ್ಲ ತೀರಪ್ರದೇಶದಲ್ಲಿದ್ದುದರಿಂದಲೂ ರಸ್ತೆ ನಿರ್ಮಾಣ ಕಾರ್ಯ ಕಷ್ಟವಾದ್ದರಿಂದಲೂ ರೈಲುಸಂಚಾರ ಹೆಚ್ಚಿದ್ದರಿಂದಲೂ ಹೆದ್ದಾರಿ ನಿರ್ಮಾಣ ಕಡೆಗಣಿಸಲ್ಪಟ್ಟಿತು. ಜಪಾನಿನ ರಸ್ತೆಗಳಲ್ಲಿ ನಾಲ್ಕು ವರ್ಗಗಳಿವೆ. ರಾಷ್ಟ್ರೀಯ ರಸ್ತೆಗಳು, ಪ್ರಿಫೆಕ್ಚರ್ (ಜಿಲ್ಲೆ) ರಸ್ತೆಗಳು, ಮುನಿಸಿಪಲ್ ರಸ್ತೆಗಳು ಮತ್ತು ಪಟ್ಟಣ ಹಾಗೂ ಹಳ್ಳಿ ರಸ್ತೆಗಳು.

ಜಪಾನ್ ಮೊಟ್ಟಮೊದಲಿಗೆ 1872ರ ಸೆಪ್ಟೆಂಬರ್‌ನಲ್ಲಿ ಟೋಕಿಯೊದಿಂದ ಯೋಕಹಾಮದವರೆಗಿನ ರೈಲುಸಂಪರ್ಕವನ್ನು ಕಲ್ಪಿಸಲಾಯಿತು. ಜಪಾನಿನ ಬಹುತೇಕ ರೈಲುಮಾರ್ಗಗಳು ತೀರಪ್ರದೇಶಗಳಲ್ಲಿವೆ. ಅದಕ್ಕೆ ತೀರ ಪ್ರದೇಶಗಳಲ್ಲಿರುವ ಮುಖ್ಯ ನಗರಗಳು ಕಾರಣ. ಪ್ರಾರಂಭದಲ್ಲಿ ಸರ್ಕಾರಿ, ಖಾಸಗಿ ಈ ಎರಡೂ ಕ್ಷೇತ್ರಗಳಿಂದಲೂ ರೈಲುಮಾರ್ಗಗಳ ನಿರ್ಮಾಣಕಾರ್ಯ ನಡೆಯಿತು.

ನೌಕಾಸಾರಿಗೆಯಲ್ಲಿ ಜಪಾನ್ ಬಹು ಮುಂದಿದೆ. ಇದಕ್ಕೆ ಕೆಲವಾರು ಕಾರಣಗಳಿವೆ. ಜಪಾನಿನಲ್ಲಿ ದೀರ್ಘ ತೀರ ಪ್ರದೇಶವುಂಟು. ದ್ವೀಪಗಳ ನಡುವಣ ಸಮುದ್ರಗಳು ನೌಕಾಸಂಚಾರಕ್ಕೆ ಅನುಕೂಲವಾಗಿವೆ. ಜಪಾನ್ ದ್ವೀಪಸಮೂಹವಾದ್ದರಿಂದ ಜಲ ಸಾರಿಗೆಯೇ ಆರ್ಥಿಕವಾಗಿ ಹೆಚ್ಚು ಅನುಕೂಲಕರ. ಅದರ ಕೈಗಾರಿಕಾ ನಗರಗಳು ತೀರ ಪ್ರದೇಶದಲ್ಲೇ ಹೆಚ್ಚಾಗಿವೆ.

ಜಪಾನ್ ಪ್ರಪಂಚದ ಮುಖ್ಯ ನೌಕಾ ನಿರ್ಮಾಣ ರಾಷ್ಟ್ರಗಳಲ್ಲಿ ಒಂದು. ಇಂದು ನೌಕಾನಿರ್ಮಾಣದಲ್ಲಿ ಅದು ಪ್ರಪಂಚದಲ್ಲೇ ಅಗ್ರಸ್ಥಾನ ಪಡೆದಿದೆ. ಅದರ ನೌಕೆಗಳಿಗೆ ವಿದೇಶಿ ಬೇಡಿಕೆ ಗಮನಾರ್ಹ.

ಜಪಾನಿನಲ್ಲಿ ಮೊಟ್ಟಮೊದಲ ವಿಮಾನ ಹಾರಾಟ 1910ರಲ್ಲಿ ಪ್ರಾರಂಭವಾಯಿತು. ಜಪಾನಿನ ಮಿಲಿಟರಿ ವಿಮಾನಗಳು ಪ್ರಥಮ ಬಾರಿಗೆ 1914ರಲ್ಲಿ ಜರ್ಮನ್ ಸೈನ್ಯದ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದವು. ಕ್ರಮಬದ್ಧ ನಾಗರಿಕ ವಿಮಾನ ಸಾರಿಗೆ ವ್ಯವಸ್ಥೆ 1922ರಲ್ಲಿ ಪ್ರಾರಂಭವಾಯಿತು. ಪ್ರಪ್ರಥಮ ವಿಮಾನ ಅಂಚೆ ಸೇವೆ ಪ್ರಾರಂಭವಾದದ್ದು 1925ರಲ್ಲಿ.

ಜಪಾನಿನ ಮುಖ್ಯ ನಗರಗಳು: ಟೋಕಿಯೊ (ರಾಜಧಾನಿ) 28,447,000, ಒಸಾಕ 10,609,000, ಯೋಕಹಾಮ 4,000,000, ನಗೋಯ 3,377,000. ಇತರೆ ನಗರಗಳೆಂದರೆ: ಕೀಯೋಟೋ, ಕೋಬೆ, ಕೀಟಾ–ಕೀಯೂಷೂ, ಸಪ್ಪೋರೊ, ಕಾವಸಾಕಿ, ಸಾಕ್ಯೆ, ಆಮಗಸಾಕಿ, ಹಿರೋಷಿಮ, ಚೀಬ, ಕೂಮಮೋಟೊ, ನಾಗಸಾಕಿ, ಷಿಜುವೋಕ, ಹಿಮೆಜಿ ಮತ್ತು ಕಾಗಷೀಯ

ಜಪಾನಿನ ನಾಣ್ಯ ಯೆನ್. ಒಂದು ಯೆನ್‌ಗೆ 100 ಸೆನ್, 1,000 ರಿನ್. ಮೆಟ್ರಿಕ್ ಅಳತೆ ತೂಕ ಪದ್ಧತಿ ಜಾರಿಯಲ್ಲಿದೆ. ಜೂಡೋ, ಸೂಮೋ (ಜಪಾನಿ ಕುಸ್ತಿ) ಮತ್ತು ಕೆಂಡೋ (ಕತ್ತಿವರಸೆ) ಪರಂಪರೆಯಿಂದ ಬಂದ ಕ್ರೀಡೆಗಳು. ಬೇಸ್‌ಬಾಲ್, ಈಜು, ಸ್ಕೀಯಿಂಗ್, ಟೇಬಲ್‌ಟೆನಿಸ್ ಇತರ ಪ್ರಮುಖ ಆಟಗಳು. ಗಾಲ್ಫ್ ಜನಪ್ರಿಯವಾಗುತ್ತಿದೆ. 1964ರಲ್ಲಿ ಟೋಕಿಯೊದಲ್ಲಿ ಒಲಿಂಪಿಕ್ ಕ್ರೀಡೆಗಳನ್ನು ಏರ್ಪಡಿಸಲಾಗಿತ್ತು. 1972ರಲ್ಲಿ ಚಳಿಗಾಲದ ಒಲಿಂಪಿಕ್ ಕ್ರೀಡೆಗಳು ಸಪ್ಪೋರೋದಲ್ಲಿ ನಡೆದವು.

ಜಪಾನು ಕಚ್ಚಾ ಹತ್ತಿ, ಕಬ್ಬಿಣದ ಅದಿರು, ಉಣ್ಣೆ, ಬೀಡು ಕಬ್ಬಿಣ, ಪೆಟ್ರೋಲ್ ಮತ್ತು ರಸಾಯನಿಕ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ. ಬಟ್ಟೆ, ರೇಷ್ಮೆ, ರೇಯಾನ್, ಸಿದ್ಧವಸ್ತುಗಳು, ಯಂತ್ರೋಪಕರಣಗಳು ಮತ್ತು ಹದ ಮಾಡಿದ ಮೀನು ರಫ್ತಾಗುತ್ತವೆ.

ಶಿಕುಂಜು, ಹಿಂಬದಿಯಲ್ಲಿ ಮೌಂಟ್ ಫ್ಯೂಜೀ

ಬ್ಯಾಂಕು ವ್ಯವಸ್ಥೆ ಮತ್ತು ಹಣಕಾಸು : ಜಪಾನಿನಲ್ಲಿ ಬ್ಯಾಂಕುಗಳನ್ನು ಅಮೆರಿಕ ಮತ್ತು ಐರೋಪ್ಯ ಮಾದರಿಯಲ್ಲಿ ಸ್ಥಾಪಿಸಿದ್ದರೂ ಅವನ್ನು ಸ್ಥಳೀಯ ಪರಿಸ್ಥಿತಿಗೆ ಹೊಂದಿಸಿಕೊಂಡಿದೆ. 1882ರಲ್ಲಿ ಬೆಲ್ಜಿಯಮ್‌ನ ಕೇಂದ್ರ ಬ್ಯಾಂಕಿನ ಮಾದರಿಯಲ್ಲಿ ಬ್ಯಾಂಕ್ ಆಫ್ ಜಪಾನ್ ಎಂಬ ಕೇಂದ್ರ ಬ್ಯಾಂಕನ್ನು ಸ್ಥಾಪಿಸಲಾಯಿತು. ಇದು ಸರ್ಕಾರ ಮತ್ತು ಖಾಸಗಿ ಬಂಡವಾಳ ಪಡೆದಿದ್ದ ಕೂಡು ಬಂಡವಾಳ ಸಂಸ್ಥೆಯಾಗಿತ್ತು. ಇದಕ್ಕೆ ಮುಂಚೆ ವಾಣಿಜ್ಯ ಬ್ಯಾಂಕುಗಳೇ ನೋಟು ಚಲಾವಣೆಯನ್ನೂ ಮಾಡುತ್ತಿದ್ದುವು. ಆದರೆ ಬ್ಯಾಂಕ್ ಆಫ್ ಜಪಾನ್ ಸ್ಥಾಪನೆಯಾದ ಅನಂತರ ಅದಕ್ಕೆ ನೋಟು ಚಲಾವಣೆಯ ಏಕಸ್ವಾಮ್ಯ ಮತ್ತು ಇತರ ಕೇಂದ್ರ ಬ್ಯಾಂಕಿಂಗ್ ಕಾರ್ಯಭಾರಗಳನ್ನು ವಹಿಸಲಾಯಿತು. 1885ರಲ್ಲಿ ಚಿನ್ನ ಮತ್ತು ನಿರ್ದಿಷ್ಟ ಪ್ರತಿಭೂತಿಗಳ ಆಧಾರವುಳ್ಳ ಪರಿವರ್ತನೀಯ ನೋಟು ಪದ್ಧತಿಯನ್ನು ಜಾರಿಗೆ ತರಲಾಯಿತು. ಕೆಲವು ಮಾರ್ಪಾಟುಗಳ ಅನಂತರ 1950ರಲ್ಲಿ ಒಟ್ಟು ನೋಟುಗಳ ಪರಿಮಾಣವನ್ನು ಸರ್ಕಾರ ಗೊತ್ತುಪಡಿಸಿತು. ಅದನ್ನು ಮೀರಿದಾಗ ಹೆಚ್ಚಿನ ನೋಟುಗಳ ಮೇಲೆ ತೆರಿಗೆ ವಿಧಿಸುವ ಪದ್ಧತಿಯನ್ನು ಆಚರಣೆಗೆ ತರಲಾಯಿತು. ಹಣದ ಉಬ್ಬರವನ್ನು ತಡೆಯುವುದು ಇದರ ಉದ್ದೇಶ. ಜಪಾನಿನ ವಾಣಿಜ್ಯ ಬ್ಯಾಂಕುಗಳು ಐರೋಪ್ಯ ಬ್ಯಾಂಕುಗಳಂತೆ ಮಿಶ್ರ ಬ್ಯಾಂಕಿಂಗ್ ಪದ್ಧತಿಯನ್ನನುಸರಿಸಿವೆ. ಇದರಿಂದ ನಾನಾ ಕ್ಷೇತ್ರಗಳ ಅಭಿವೃದ್ಧಿಗೆ ಬ್ಯಾಂಕುಗಳು ವಿಶೇಷ ಸಹಾಯಕವಾಗಿವೆ. (ಡಿ.ಎಸ್.ಜೆ.)

**ಜಭೂತಿ:** ಆಫ್ರಿಕ ಖಂಡದ ಒಂದು ಸ್ವತಂತ್ರ ರಾಷ್ಟ್ರ. ಹಿಂದೆ ಇದನ್ನು ಫ್ರೆಂಚ್ ಸೋಮಾಲಿ ಎಂದು ಕರೆಯಲಾಗುತ್ತಿತ್ತು. ಫ್ರಾನ್ಸ್‌ನ ಅಫ್ಲಾಕ್ಸ್ ಮತ್ತು ಇಸ್ಸಾಸ್ ಭಾಗಗಳನ್ನು ಒಳಗೊಂಡಿತ್ತು. ಇದು 1977 ಜೂನ್ 26 ರಂದು ಸ್ವತಂತ್ರವಾಯಿತು. ಇದು ಇಥಿಯೋಪಿಯ ಹಾಗೂ ಸೋಮಾಲಿಯ ನಡುವಿನ ಕೆಂಪು ಸಮುದ್ರ ಮತ್ತು ಏಡೆನ್ ಕೊಲ್ಲಿ, ಆಚೆಗೆ ಅರೇಬಿಯ ಪರ್ಯಾಯ ದ್ವೀಪದಿಂದ ಸು. 20 ಕಿಮೀ ದೂರದಲ್ಲಿ ಸ್ಥಾನ ಹೊಂದಿದೆ.

ಭೌಗೋಳಿಕವಾಗಿ $10^{0}55'–12^{0}45'$ ಉತ್ತರ ಅಕ್ಷಾಂಶ ಮತು $41^{0}40'–43^{0}25'$ ಪೂರ್ವ ರೇಖಾಂಶಗಳಲ್ಲಿ ಜಭೂತಿ ಹಂಚಿಕೆಯಾಗಿದೆ. 23000 ಚ.ಕಿಮೀ ಭೂಭಾಗ, 20 ಚ.ಕಿಮೀ (0.09%) ಜಲಭಾಗವನ್ನು ಹೊಂದಿದೆ. ಜನಸಂಖ್ಯೆ 476703 (2002). ರಾಜಧಾನಿ ಜಭೂತಿ. ಜನಸಂಖ್ಯೆ 395000 (2002).

1967 ರಲ್ಲಿ ಫ್ರಾನ್ಸ್ ಈ ಭಾಗವನ್ನು (ಅಫಾಕ್ಸ್ + ಇಸ್ಸಾಸ್) ಅಂತಾರಾಷ್ಟ್ರೀಯ ಗಡಿಭಾಗ ಎಂದು ಸಾರಿ ತನ್ನ ವಶಕ್ಕೆ ತೆಗೆದುಕೊಂಡಿತು. ಅನಂತರ ಈ ಪ್ರದೇಶವನ್ನು ಗುಡ್ಡಗಾಡು ಜನರು ಆಕ್ರಮಿಸಿಕೊಂಡರು. ಈ ಜನರು ಅರಬ್ಬರ ಜೊತೆ ವಾಣಿಜ್ಯ – ವ್ಯಾಪಾರಗಳ ಸಂಪರ್ಕ ಮತ್ತು ಸಂಬಂಧಗಳಿಂದ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.

ಆರ್ಥಿಕತೆ: ಶತಮಾನಗಳಿಗೂ ಹಳೆಯ ಇತಿಹಾಸವನ್ನು ಹೊಂದಿರುವ ಫ್ರೆಂಚ್ ಸೋಮಾಲಿ ಭಾಗವಾದ ಜಭೂತಿ ಹಿಂದಿನಿಂದಲೂ ಸೇವಾಕೇಂದ್ರವಾಗಿತ್ತು (ಸರ್ವೀಸ್ ಆಕ್ಟಿವಿಟೀಸ್). ಈ ರಾಷ್ಟ್ರದ ಅರ್ಥ ವ್ಯವಸ್ಥೆಯು ಈ ಚಟುವಟಿಕೆಯ ಮೇಲೆ ಆಧಾರವಾಗಿದೆ. ಇದಕ್ಕೆ ಅನುಗುಣವಾಗಿ ರಾಷ್ಟ್ರ ಹೊಂದಿರುವ ಭೌಗೋಳಿಕ ಸ್ಥಾನ ಇದಕ್ಕೆ ಪೂರಕವಾಗಿದೆ. ಈಶಾನ್ಯ ಆಫ್ರಿಕದ 2/3 ರಷ್ಟು ಜನ ನಗರವಾಸಿಗಳು, ಉಳಿದವರು ಅಲೆಮಾರಿಜನ, ಅತಿಕಡಿಮೆ ಮಳೆಯಿಂದಾಗಿ ಸಾಕಷ್ಟು ಆಹಾರ ಪದಾರ್ಥಗಳ ಉತ್ಪಾದನೆಯಾಗುತ್ತಿಲ್ಲ, ಹಣ್ಣು ತರಕಾರಿ ಮಾತ್ರ ಬೆಳೆಯುತ್ತಾರೆ. ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತಾರೆ. ಜಭೂತಿ ಮುಕ್ತ ವಾಣಿಜ್ಯವಲಯವಾಗಿದೆ – ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೇವೆ –ಸೌಲಭ್ಯಗಳನ್ನು ಈ ರಾಷ್ಟ್ರ ಒದಗಿಸುವ ಮೂಲಕ

ತನ್ನ ಅರ್ಥ ವ್ಯವಸ್ಥೆಯನ್ನು ಸರಿದೂಗಿಸಿಕೊಳ್ಳುತ್ತದೆ. ಅಂತಾರಾಷ್ಟ್ರಮಟ್ಟದಲ್ಲಿ ಬಂದರು ಸೌಲಭ್ಯ ಒದಗಿಸುವುದರ ಜೊತೆಗೆ ಒಂದು ರಾಷ್ಟ್ರದ ಹಡಗಿನಿಂದ ಮತ್ತೊಂದು ರಾಷ್ಟ್ರದ ಹಡಗಿಗೆ ಹೊತ್ತು ತಂದ ಪದಾರ್ಥಗಳನ್ನು ವರ್ಗಾಯಿಸುವುದು, ಇಂಧನ ಪೂರೈಸುವುದು, ಪದಾರ್ಥಗಳ ಶುಭ್ರತೆಯನ್ನು ಕಾಪಾಡುವುದು, ಕಾರ್ಮಿಕರನ್ನು ಒದಗಿಸುವುದು ಮೊದಲಾದ ಸೇವೆಗಳನ್ನು ನೀಡುತ್ತಿದೆ.




ಅಲ್ಪ ಪ್ರಮಾಣದ ಸ್ವಾಭಾವಿಕ ಸಂಪನ್ಮೂಲಗಳನ್ನು ಹೊಂದಿರುವುದರಿಂದ ಕೈಗಾರಿಕೆಗಳು ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತವೆ. ಇದು ಪ್ರಧಾನವಾಗಿ ಅಂತಾರಾಷ್ಟ್ರೀಯ ಧನಸಹಾಯದ ಮೇಲೆ ಅವಲಂಬಿಸಿದೆ. ಇಲ್ಲಿ ನಿರುದ್ಯೋಗದ ಸಂಖ್ಯೆ ಶೇ. 45 ರಷ್ಟು ಇರುವುದರಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ತೊಡಕಾಗಿದೆ. ಇಲ್ಲಿ ಹಣದುಬ್ಬರ ಹೆಚ್ಚಾಗಿ ಕಂಡುಬರುವುದಿಲ್ಲ. ಈ ರಾಷ್ಟ್ರದ ಚಲಾವಣೆಯಲ್ಲಿರುವ ಕರೆನ್ಸಿ ಜಬೂತಿ ಫ್ರಾಂಕ್ ಹಾಗು ಯು.ಎಸ್. ಡಾಲರ್.

ತಲಾವರು ಆದಾಯ, ಉಪಭೋಗ ಮತ್ತು ಬಳಕೆಯು ತೀವ್ರ ಕುಸಿತಕ್ಕೊಳಗಾಗಿದೆ. ಕಳೆದ 7 ವರ್ಷಗಳಿಂದ ತಲಾವರು ಆದಾಯ ಶೇ. 35 ರಷ್ಟು ಇಳಿಕೆಯಾಗಿದೆ – ಜನಸಂಖ್ಯೆ ಹೆಚ್ಚಳ, ದಂಗೆ, ಅಂತರ್ಯುದ್ಧ, ಸತತವಾಗಿ ನಿರಾಶ್ರಿತರ ಆಗಮನ – ಇಥಿಯೋಪಿಯ ಹಾಗೂ ಏರಿಟ್ರಿಯಾಗಳೊಂದಿಗಿನ ಕದನ, ಆರ್ಥಿಕ ದುರ್ಬಲತೆ, ದೀರ್ಘಕಾಲದಿಂದ ಅಂತಾರಾಷ್ಟ್ರಿಯ ಹಣಕಾಸು ಸಂಸ್ಥೆಯಿಂದ ಸಾಲಕ್ಕೆ ಮನ್ನಣೆ ದೊರೆಯದಿರುವುದು ಕಾರಣಗಳಾಗಿವೆ.

ಸಮಾಜ: ಜನಸಂಖ್ಯೆಯನ್ನು ಎರಡು ಪ್ರಧಾನ ಗುಂಪುಗಳನ್ನಾಗಿ ಕಾಣಬಹುದು. ಇಸ್ಸಾ ಅಥವಾ ಸೋಮಾಲಿ ಜನ– ಇವರು ಶೇ. 60 ರಷ್ಟು ಮತ್ತು ಅಫ಼ಾರ್ ಇವರ ಸಂಖ್ಯೆ ಶೇ. 35 ರಷ್ಟು. ಉಳಿದ ಶೇ. 5 ರಷ್ಟು ಯುರೋಪಿಯನ್ (ಫ್ರಾನ್ಸ್ + ಇಟಲಿ), ಅರಬ್ಬರು, ಮತ್ತು ಇಥಿಯೋಪಿಯನ್ನರು. 1990 ರಲ್ಲಿ ನಡೆದ ಅಂತರ್ಯುದ್ಧಕ್ಕೆ ಈ ಎರಡು ಗುಂಪುಗಳೇ ಕಾರಣ.

ಸೋಮಾಲಿಯದ ಪ್ರಧಾನ ವರ್ಗವೇ ಇಸ್ಸಾ ಜನ, ಇವರೇ ಜಭೂತಿಯ ಪ್ರಮುಖ ಜನಸಂಖ್ಯೆ. ಇವರದು ಪ್ರತ್ಯೇಕ ಗುಂಪು. ಇವರಲ್ಲಿ ಗಡಬೊರ್‌ಸಿ ಮತ್ತು ಇಸ್ಸಾಕ್, ದಿರ್ ವರ್ಗದ ಉಪಪಂಗಡ. ಇದು ಮಾಹಿ, ದಿರ್, ಮೊಹಮ್ಮದ್ ಹಿನಿಫ಼್ ಧಿರಿ ಪಂಗಡಗಳನ್ನೊಳಗೊಂಡಿದೆ. ಜಭೂತಿ ಸೋಮಾಲಿ ಜನರು ಇಥಿಯೋಪಿಯ ಸೋಮಾಲಿ ಪ್ರದೇಶದವರು ಹಾಗೂ ಇವರು ಉತ್ತರ ಸೋಮಾಲಿಯಿಂದ ಬಂದವರು ಇವರೆಲ್ಲಾ ಮುಸ್ಲಿಂ ಧರ್ಮದವರು – ಕ್ರಿಶ್ಚಿಯನ್ನರು ಅಲ್ಪ ಸಂಖ್ಯಾತರು. ಆರೋಗ್ಯ ಶುಭ್ರತೆ, ವಿದ್ಯಾಭ್ಯಾಸಗಳಲ್ಲಿ ಈ ರಾಷ್ಟ್ರ ತುಂಬಾ ಹಿಂದುಳಿದಿದೆ.

ರಾಜಕೀಯ: ಪ್ರಧಾನಮಂತ್ರಿಗಳು ಸಚಿವ ಸಂಪುಟವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಸಚಿವರನ್ನು ರಾಷ್ಟ್ರದ ಅಧ್ಯಕ್ಷರು ನೇಮಿಸುತ್ತಾರೆ. ಪಾರ್ಲಿಮೆಂಟ್‌ನ್ನು ಚೇಂಬರ್ – ಡಿಸ್ – ಡೆಪುಟೀಸ್ ಎಂದು ಕರೆಯಲಾಗುತ್ತದೆ. ಸಂಪುಟವು 65 ಸದಸ್ಯರನ್ನು ಹೊಂದಿರುತ್ತದೆ. ಪ್ರತಿ 5 ವರ್ಷಗಳಿಗೊಮ್ಮೆ ಚುನಾಯಿತರಾಗುತ್ತಾರೆ.

ಜಭೂತಿಯನ್ನು ಆಡಳಿತಾತ್ಮಕವಾಗಿ 5 ಪ್ರಮುಖ ಪ್ರದೇಶಗಳನ್ನಾಗಿ ಮತ್ತು ಒಂದು ನಗರವನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ: ಆಲಿ ಸಾಬಿಚ್ ಪ್ರದೇಶ, ಆರ್ಟ ಪ್ರದೇಶ, ದಿಖ್ಖಿಲ್ ಪ್ರದೇಶ, ಜಭೂತಿನಗರ, ಓಬಾಕ್ ಪ್ರದೇಶ, ಟಡ್‌ಜೂರ್ಹ ಪ್ರದೇಶ.

ಭಾಷೆ: ಇಲ್ಲಿನ ಆಡಳಿತ ಭಾಷೆ ಫ್ರೆಂಚ್ ಹಾಗೂ ಅರೇಬಿಕ್. ಸ್ಥಳೀಯ ಭಾಷೆಗಳಾದ ಅಫ಼ಾರ್ ಹಾಗೂ ಸೋಮಾಲಿಯನ್ನು ಬಳಸುತ್ತಾರೆ. ಆಂಗ್ಲಭಾಷೆಯನ್ನು ವಾಣಿಜ್ಯ ವ್ಯಾಪಾರಿಗಳು, ಫಲಹಾರ ಮಂದಿರ ಮಾಲೀಕರು ಬಳಸುತ್ತಾರೆ. (ವಿ.ಎಸ್.ಎ.)

**ಜಮೈಕ:** ವೆಸ್ಟ್ ಇಂಡೀಸ್ ಗುಂಪಿನಲ್ಲಿರುವ ಸ್ವತಂತ್ರ ದ್ವೀಪ. ಕೆರೆಬಿಯನ್ ಸಮುದ್ರದಲ್ಲಿರುವ ಇದರ ಉತ್ತರಕ್ಕೆ ಕ್ಯೂಬ, ಪೂರ್ವಕ್ಕೆ ಹೈಟಿ ದ್ವೀಪಗಳಿವೆ. ಉ.ಅ. $17^0 43'$ ಮತ್ತು $18^0 32'$ ಹಾಗೂ ಪ.ರೇ. $76^0 11'$ ಮತ್ತು $78^0 21'$ ಮಧ್ಯದಲ್ಲಿದೆ. ಪೂರ್ವಪಶ್ಚಿಮವಾಗಿ ಸು. 235 ಕಿಮೀ ಉದ್ದವಿರುವ ಇದರ ಒಟ್ಟು ವಿಸ್ತೀರ್ಣ 10991 ಚ.ಕಿಮೀ. ಜನಸಂಖ್ಯೆ 2731832 (2001). ರಾಜಧಾನಿ ಕಿಂಗ್‌ಸ್ಟನ್ (538100).




ಜಮೈಕದ ಬಹುಪಾಲು ಪ್ರದೇಶ ಟರ್ಷಿಯರಿ ಯುಗದ ನಿಕ್ಷೇಪಗಳಿಂದ ಕೂಡಿದೆ. ಈಶಾನ್ಯದ ಬ್ಲೂ ಪರ್ವತ ಪ್ರದೇಶದಲ್ಲಿ ಪುರಾತನ ಶಿಲೆಗಳಿವೆ. ಬ್ಲೂ ಪರ್ವತದ ಎತ್ತರ 2256 ಮೀ. ಇದರ ಪೂರ್ವಕ್ಕೆ ಜಾನ್ ಕ್ರೌ (ಬ್ಲೇಕ್) ಪರ್ವತ ಪ್ರದೇಶವಿದೆ. ಇದು ಸುಣ್ಣಶಿಲೆಗಳಿಂದ ಕೂಡಿದ ತಪ್ಪಲು ಪ್ರದೇಶ ಜಮೈಕದ $^3/_4$ ಭಾಗ ಸುಣ್ಣ ಶಿಲೆಗಳ ಪ್ರದೇಶ. ಇಲ್ಲಿ ಸಾಕಷ್ಟು ದಿಣ್ಣೆಗಳು, ಕೊಳ್ಳಗಳು ಹಾಗೂ ಇಂಗುಕುಳಿಗಳು (ಸಿಂಕ್ ಹೋಲ್ಸ್) ಉಂಟು. ದಟ್ಟನೆಯ ಹಸುರು ಕಾಡು ಆವರಿಸಿದ ಜಾನ್ ಕ್ರೌ ಪರ್ವತ ಪ್ರದೇಶದಲ್ಲಿ ಅನೇಕ ಝರಿಗಳು, ನದಿಗಳು, ನೀರಿನ ಬುಗ್ಗೆಗಳು ಇವೆ. ಅಲ್ಲಲ್ಲಿ ಜ್ವಾಲಾಮುಖಿಗಳನ್ನೂ ಬಿಸಿನೀರಿನ ಬುಗ್ಗೆಗಳನ್ನೂ ಕಾಣಬಹುದು. ಜಮೈಕದ ಬಹುಪಾಲು ನದಿಗಳು ಚಿಕ್ಕವು. ಪೋರ್ಟ್ ಮರ್‍ಯಾಂಟ್, ಕಿಂಗ್‌ಸ್ಟನ್, ಓಲ್ಡ್ ಹಾರ್ಬರ್, ಮಾಂಟೀಗೋ ಬೇ, ಫ್ಯಾಲ್‌ಮತ್, ಪೋರ್ಟ್ ಆಂಟೆನಿಯೋ–ಇವು ಇಲ್ಲಿಯ ಕೆಲವು ಪ್ರಸಿದ್ಧ ಬಂದರುಗಳು.

ಉಷ್ಣವಲಯದ ವಾಯುಗುಣವನ್ನು ಹೊಂದಿದೆ. ಜಮೈಕದಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸಗಳುಂಟು. ಸಮುದ್ರ ಪಾತಳಿಯ ಪ್ರದೇಶದಲ್ಲಿ ಉಷ್ಣವಲಯದ ವಾಯುಗುಣ ಇದ್ದರೆ ಎತ್ತರದ ಉತ್ತರ ನಾಡಿನಲ್ಲಿ ಸಮಶೀತೋಷ್ಣ ವಾಯುಗುಣ ಇದೆ. ವಾರ್ಷಿಕ ಸರಾಸರಿ ಉಷ್ಣತೆ $26.7^0$ಸೆ. ಇಲ್ಲಿಯ ವಾರ್ಷಿಕ ಸರಾಸರಿ ಮಳೆ 100 ಸೆಮೀ. ಆದರೆ ಉತ್ತರ ತೀರದಿಂದ ದಕ್ಷಿಣ ತೀರದ ವರೆಗೆ ಮಳೆಯ ಪರಿಮಾಣ ಬಲು ವ್ಯತ್ಯಾಸವಾಗುತ್ತದೆ. ಈಶಾನ್ಯದಲ್ಲಿರುವ ಬ್ಲೂ ಪರ್ವತ ಪ್ರದೇಶದಲ್ಲಿ 500 ಸೆಮೀ. ಆದರೆ, ದಕ್ಷಿಣದ ಕಿಂಗ್‌ಸ್ಟನ್ ಸುತ್ತಣ ಪ್ರದೇಶದ ವಾರ್ಷಿಕ ಮಳೆ ಕೇವಲ 800 ಸೆಮೀ. ಮೇ–ಅಕ್ಟೋಬರ್ ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುವ ಕಾಲ. ಆಗಸ್ಟ್–ನವಂಬರ್‌ಗಳಲ್ಲಿ ಚಂಡಮಾರುತ ಬೀಸುತ್ತದೆ. ಜಮೈಕ ಅನೇಕ ಸಲ ಇದಕ್ಕೆ ಬಲಿಯಾಗಿದೆ.

ಜಮೈಕದಲ್ಲಿಯ ಬಹುಪಾಲು ಕಾಡನ್ನು ಕಡಿದುಹಾಕಲಾಗಿದೆ. ಈಶಾನ್ಯ ಪ್ರದೇಶದಲ್ಲಿ ನೈಸರ್ಗಿಕ ಕಾಡು ಸ್ವಲ್ಪಮಟ್ಟಿಗೆ ಉಳಿದುಬಂದಿದೆ. ಇಲ್ಲಿ ಬಿದಿರು, ಎಬೊನಿ, ಮಹಾಗನಿ, ಕರಿಮರ ಬೆಳೆಯುತ್ತವೆ. ದಕ್ಷಿಣ ಪ್ರದೇಶದಲ್ಲಿ ಒಣನಾಡಿನ ಕುರುಚಲು ಗಿಡಗಳು ಬೆಳೆಯುತ್ತವೆ. ಈಗ ಸರ್ಕಾರ ಮತ್ತೆ ಕಾಡು ಬೆಳೆಸುವುದರ ಕಡೆ ಗಮನವೀಯುತ್ತಿದೆ. ಪ್ರತಿವರ್ಷ ಸು. 500 ಎಕರೆ ಪ್ರದೇಶದಲ್ಲಿ ಕಾಡನ್ನು ವಿಸ್ತರಿಸಲಾಗುತ್ತಿದೆ. ಇಲ್ಲೆಲ್ಲ ಪೈನ್, ನೀಲಗಿರಿ, ದೇವದಾರು ಮತ್ತು ಮಹಾಗನಿ ಗಿಡಗಳನ್ನು ನೆಡಲಾಗುತ್ತಿದೆ. ಕಾಡುಹಂದಿ ಇಲ್ಲಿಯ ಕೆಲವೇ ಮೂಲವಾಸಿ ಸ್ತನಿಗಳಲ್ಲೊಂದು, ಇಲ್ಲಿಯ ಬಹುಪಾಲು ಪ್ರಾಣಿಗಳು ಐರೋಪ್ಯ ವಲಸೆಗಾರರೊಂದಿಗೆ ಬಂದವು. ಉರಗಗಳು, ಹಲ್ಲಿಗಳು ಅಪಾರ ಸಂಖ್ಯೆಯಲ್ಲಿವೆ. ಹಕ್ಕಿಗಳಿಗಂತೂ ಕೊರತೆಯೇ ಇಲ್ಲ.

ಗಣಿ ಉದ್ಯಮದಲ್ಲಿ ಜಮೈಕ ತುಂಬ ಪ್ರಮುಖವಾದ ದೇಶ. ಪ್ರಪಂಚದ ಬಾಕ್ಸೈಟ್ ಅದಿರಿನ ಬಹು ದೊಡ್ಡ ನಿಕ್ಷೇಪ ಇರುವುದು ಇಲ್ಲಿಯೇ. 1963ರಲ್ಲಿ ಜಗತ್ತಿನ ಒಟ್ಟು ಬಾಕ್ಸೈಟ್ ಉತ್ಪಾದನೆಯಲ್ಲಿ ಜಮೈಕದ ಪಾಲೇ ಶೇ. 25 ಆಗಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡದ ಕಂಪನಿಗಳು ಇಲ್ಲಿಯ ಗಣಿ ಉದ್ಯಮದಲ್ಲಿ ಹೆಚ್ಚಿನ ಪಾಲು ಹೊಂದಿವೆ. 1952ರಲ್ಲಿ ಮೊದಲ ಬಾರಿಗೆ ಬಾಕ್ಸೈಟಿನ ರಫ್ತು ಪ್ರಾರಂಭವಾದರೂ ಇಂದು ಈ ಉದ್ಯಮವೇ ದೇಶದ ಆರ್ಥಿಕತೆಯಲ್ಲಿ ಮುಖ್ಯವಾದದ್ದು. ಜಿಪ್ಸಮ್ ಇಲ್ಲಿಯ ಇನ್ನೊಂದು ಮುಖ್ಯ ಅದಿರು. ಬ್ಲೂ ಪರ್ವತ ಪ್ರದೇಶದಲ್ಲಿ ಉತ್ತಮ ಅಮೃತಶಿಲೆ ಸಿಗುತ್ತದೆ. ಇತ್ತೀಚಿಗೆ ತಾಮ್ರ, ಕಬ್ಬಿಣ ಹಾಗೂ ತೈಲ ನಿಕ್ಷೇಪಗಳ ಅನ್ವೇಷಣೆ ಪ್ರಾರಂಭವಾಗಿದೆ. (ಜಿ.ಆರ್.ಆರ್.)

**ಜಮ್ಮು ಮತ್ತು ಕಾಶ್ಮೀರ:** ಭಾರತದ ವಾಯವ್ಯ ಭಾಗದಲ್ಲಿರುವ ಒಂದು ರಾಜ್ಯ. ಉ.ಅ. 32°17′–36°58′. ಪೂ.ರೇ. 73°26′–80°30′ ವರೆಗೆ ವಿಸ್ತರಿಸಿದೆ. ಈ ರಾಜ್ಯವನ್ನು ದಕ್ಷಿಣದಲ್ಲಿ ಹಿಮಾಚಲಪ್ರದೇಶ ಮತ್ತು ಪಂಜಾಬ್‍ರಾಜ್ಯಗಳೂ ಪೂರ್ವ ಮತ್ತು ಉತ್ತರದಲ್ಲಿ ಟಿಬೆಟ್ ಮತ್ತು ಚೀನ, ಹಾಗೂ ಆಫ್ಘಾನಿಸ್ತಾನ, ಪಶ್ಚಿಮದಲ್ಲಿ ಪಾಕಿಸ್ತಾನ ಸುತ್ತುವರೆದಿವೆ. ಈ ರಾಜ್ಯದ ವಿಸ್ತೀರ್ಣ 2,22,236 ಚ.ಕಿಮೀ (ಇದರಲ್ಲಿ 78,114 ಚ.ಕಿಮೀ ಹುಂಜಾ–ಗಿಲ್ಗಿಟ್ ಪ್ರದೇಶವನ್ನು ಪಾಕಿಸ್ತಾನ ನ್ಯಾಯಬಾಹಿರವಾಗಿ ಆಕ್ರಮಿಸಿಕೊಂಡಿದೆ. 5,180 ಚ.ಕಿಮೀ ಅಕ್ಸಾಯ್‍ಚಿನ್ ಪ್ರದೇಶವನ್ನು ಪಾಕಿಸ್ತಾನ ಚೀನ ದೇಶಕ್ಕೆ ನೀಡಿದೆ ಜೊತೆಗೆ ಭಾರತದ 37,555 ಚ.ಕಿಮೀ ಪ್ರದೇಶವನ್ನು ನ್ಯಾಯಬಾಹಿರವಾಗಿ ಚೀನ ಆಕ್ರಮಿಸಿಕೊಂಡಿದೆ. ಜನಸಂಖ್ಯೆ 1,00,69,987 (2001). ರಾಜಧಾನಿ ಶ್ರೀನಗರ, ಜಮ್ಮು ಚಳಿಗಾಲದ ಆಡಳಿತಕೇಂದ್ರ.

**ಭೂವಿಜ್ಞಾನ :** ಈ ಪ್ರದೇಶದ ಆರ್ಷೇಯ ಕಲ್ಪದ ಶಿಲೆಗಳಿಗೆ ಡಿ.ಎನ್. ವಾಡಿಯ ಅವರು ಸಲ್ಕಲ ಶಿಲಾಸಮುದಾಯ ಎಂದು ಹೆಸರು ಕೊಟ್ಟಿದ್ದಾರೆ. ಇವು ಪಿರ್ ಪಂಜಾಲ್ ಮತ್ತು ನಂಗಪರ್ಬಾತ್ ಪ್ರದೇಶಗಳಲ್ಲಿ, ಅತ್ಯುತ್ತಮವಾಗಿ ರೂಪುಗೊಂಡಿವೆ. ಇವು ಸ್ಲೇಟು, ಫಿಲ್ಲೈಟ್, ಬೆಣಚುಶಿಲೆ, ಅಭ್ರಕ ಸಿಸ್ಟ್, ನೈಸ್, ಸುಣ್ಣಶಿಲೆ ಮತ್ತು ಡಾಲೊಮೈಟುಗಳಿಂದ ಕೂಡಿವೆ. ಹಿಮಾಲಯದ ಭೂಚಲನೆಯ ಪರಿಣಾಮವಾಗಿ ಇವು ಮಡಿಚಿ ಮಡಿಕೆಗಳಾಗಿ, ಕಿರಿಯ ಶಿಲೆಗಳಿಂದ ಪರ್ಮೊಕಾರ್ಬಾನಿಫೆರಸ್ ಶಿಲೆಗಳ ಮೇಲೆ ಚಾಚಿವೆ. ಇವು ಪ್ರಾದೇಶಿಕ ಅಂತಸ್ಸರಣ ಕಾರ್ಯಕ್ಕೊಳಗಾಗಿ ಅಧಿಕ ಮಟ್ಟದ ರೂಪಾಂತರವನ್ನು ವ್ಯಕ್ತಪಡಿಸುತ್ತವೆ. ಈ ಶಿಲೆಗಳ ಮೇಲೆ ಸ್ಲೇಟುಗಳಿವೆ. ಇವಕ್ಕೆ ಡೋಗ್ರಾ ಸ್ಲೇಟುಗಳು ಎಂದು ಹೆಸರು. ಇವು ಕಡಪ ಮತ್ತು ವಿಂಧ್ಯನ್ ಶಿಲೆಗಳಿಗೆ ಸರಿಸಮಾನವಾದ ಪುರಾಣಕಲ್ಪದ ಶಿಲೆಗಳು. ಲಿಡ್ಡರ್ ಕಣಿವೆ ಮತ್ತು ಶಾಮ್ಸ್– ಅಬಾರಿ ಪ್ರದೇಶದ ಹುಂಡವಾರ ಮುಂತಾದ ಕಡೆಗಳಲ್ಲಿ, ಡೋಗ್ರಾ ಸ್ಲೇಟುಗಳ ಮೇಲೆ ಜೀವ್ಯವಶೇಷಗಳಿಂದ ಕೂಡಿದ ಪ್ರಾಚೀನ ಕಲ್ಪದ ಶಿಲೆಗಳಿವೆ. ತಳದಲ್ಲಿ ಜೇಡುಶಿಲೆ ಮತ್ತು ಬೆಣಚುಶಿಲೆ ಮತ್ತು ಎರೆಹುಳುಗಳ ಜಾಡುಗಳು ಇವೆ. ಇವು ಕೇಂಬ್ರಿಯನ್ ಯುಗದ ಆದಿಕಾಲದವು. ಮೇಲ್ಭಾಗದಲ್ಲಿ ಟ್ರೈಲೊಬೈಟ ಮತ್ತು ಬಾಹುಪಾದಿ ಗುಂಪಿನ ಪ್ರಾಣಿಗಳ ಅವಶೇಷಗಳಿವೆ. ಇವು ಕೇಂಬ್ರಿಯನ್ ಅಂತ್ಯ ಕಾಲವನ್ನು ಸೂಚಿಸುತ್ತವೆ. ಇವು ಸ್ಪಿಟಿ ಮತ್ತು ಸಾಲ್ಟ್ ರೇಂಜ್ ಪ್ರದೇಶಗಳ ಪ್ರಾಣಿಗಳನ್ನು ಹೋಲದೆ, ಚೀನ ಮತ್ತು ಪರ್ಷಿಯದ ಪ್ರಾಣಿ ವರ್ಗವನ್ನು ಹೋಲುವುವು. ಆರ್ಡೋವಿಯನ್ ಯುಗದ ಶಿಲಾಸಮುದಾಯ ಕೆಲವೇ ಸ್ಥಳಗಳಲ್ಲಿ ಮಾತ್ರ ಕಾಣಬರುತ್ತದೆ. ಆದರೆ ಇದರಲ್ಲಿ ಉತ್ಕೃಷ್ಟ ರೀತಿಯಲ್ಲಿ ರಕ್ಷಿತವಾಗಿರುವ ಅವಶೇಷಗಳಿಲ್ಲ. ಸೈಲೂರಿಯನ್ ಯುಗದ ಶಿಲೆಗಳು ಲಿಡ್ಡರ್ ಕಣಿವೆಯಲ್ಲಿ ವಿಮುಖ ಮಡಿಕೆಯಾಗಿ ಹೊರಕಾಣಿಸಿವೆ. ಇವು ಮರಳು ಮಿಶ್ರ ಜೇಡುಶಿಲೆ ಮತ್ತು ಹಳದಿ ಸುಣ್ಣಶಿಲೆಗಳಿಂದ ಕೂಡಿ, ಶಿಲಾಸಂಯೋಜನೆಯಲ್ಲಿ ಆರ್ಡೋವೀಸಿಯನ್ ಶಿಲೆಗಳನ್ನು ಹೋಲಿದರೂ ಇವುಗಳಲ್ಲಿ ಹೇರಳವಾದ ಜೀವ್ಯವಶೇಷಗಳಿರುವುದರಿಂದ ಇವನ್ನು ಸುಲಭವಾಗಿ ಗುರುತಿಸಬಹುದು. ಈ ಕಾಲದ ಜೀವರಾಶಿ ಉತ್ಕೃಷ್ಟ ರೀತಿಯಲ್ಲಿ ರಕ್ಷಿತವಾಗಿರುವ ಭಾರತದ ಕೆಲವೇ ಪ್ರದೇಶಗಳಲ್ಲಿ ಇದು ಒಂದು. ಆರ್ಥಿಸ್, ಸ್ಟ್ರೋಫೊಮೀನ ಮುಂತಾದ ಬಹುಪಾದಿಗಳು, ಹವಳಗಳು ಮತ್ತುಕ್ರೈನಾಯಿಡುಗಳು ಈ ಶಿಲಾ ಸಮುದಾಯದಲ್ಲಿ ಸಿಕ್ಕುವ ಮುಖ್ಯ ಜೀವ್ಯವಶೇಷಗಳು. ಈ ಶಿಲಾಸಮುದಾಯದ ಮೇಲೆ ಗಡಸು ಸ್ವಭಾವದ ಜೀವ್ಯವಶೇಷರಹಿತ ಬಿಳಿ ಬೆಣಚು ಶಿಲೆಗಳಿವೆ. ಇವಕ್ಕೆ ಮುತ್ ಬೆಣಚುಶಿಲೆಗಳು ಎಂದು ಹೆಸರು. ಇವು ಎಲ್ಲ ರೀತಿಯಲ್ಲಿಯೂ ಸ್ಪಿಟಿ ಪ್ರದೇಶದ ಮುತ್ ಬೆಣಚುಶಿಲೆಗಳನ್ನು ಹೋಲುತ್ತವೆ. ಶಿಲಾಪೇರಿಕೆಯ ಕ್ರಮದಿಂದ ಇವು ಭಾಗಶಃ ಸೈಲೂರಿಯನ್ ಅಂತ್ಯಕಾಲ ಮತ್ತು ಡಿವೋನಿಯನ್ ಯುಗದ ನಿಕ್ಷೇಪಗಳೆಂದು ಹೇಳಬಹುದು. ಲಿಡ್ಡರ್ ಕಣಿವೆಯಲ್ಲಿ ಮುತ್ ಬೆಣಚುಶಿಲೆಗಳ ಮೇಲೆ ಕಾರ್ಬಾನಿಫೆರಸ್ ಯುಗದ ಶಿಲೆಗಳು ನಿಕ್ಷೇಪವಾಗಿವೆ. ಇವನ್ನು ಎರಡು ಭಾಗಗಳನ್ನಾಗಿ ವಿಭಾಗಿಸಬಹುದು. ಇದರ ಕೆಳಭಾಗ ಸುಣ್ಣಶಿಲೆ. ಅದರಲ್ಲಿ ಸಿರಿಂಗೋಥೀರಿಸ್ ಬಹುಪಾದಿಯ ಅವಶೇಷಗಳು ಅಧಿಕವಾಗಿರುವುದರಿಂದ ಅದಕ್ಕೆ ಸಿರಿಂಗೋಥೀರಿಸ್ ಸುಣ್ಣಶಿಲೆ ಎಂದು ಹೆಸರು ಬಂದಿದೆ. ಮೇಲ್ಭಾಗಕ್ಕೆ ಫೆನೆಸ್ಟೆಲಾ ಜೇಡುಶಿಲೆಗಳು ಎಂದು ಹೆಸರು. ಇವೆರಡರ ಮಧ್ಯೆ ಜೀವ್ಯವಶೇಷರಹಿತ ಪದರುಗಳಿವೆ. ಜೀವ್ಯವಶೇಷರಹಿತವಾದ ಈ ಪದರಗಳು ಅನುಕ್ರಮವಾಗಿ ಸ್ಪಿಟಿ ಪ್ರದೇಶದ ಲಿಪಾಕ್ ಮತ್ತು ಪೊ ಶ್ರೇಣಿಗಳ ಸಮಕಾಲೀನ ಶಿಲೆಗಳು.

ಕಾರ್ಬಾನಿಫೆರಸ್ ಯುಗವಾದ ಬಳಿಕ ಒಂದು ಮಹಾಪ್ರಳಯವಾಯಿತು. ಇದಕ್ಕೆ ಹರ್ಸೀನಿಯನ್ ಪ್ರಳಯ ಎಂದು ಹೆಸರು. ಇದು ಕಾಶ್ಮೀರವನ್ನು ಭೂಮಟ್ಟಕ್ಕೆ ತಂದು, ಅದನ್ನು ಜ್ವಾಲಾಮುಖಿಗಳ ಚಟುವಟಿಕೆಯ ಕೇಂದ್ರವನ್ನಾಗಿ ಪರಿವರ್ತಿಸಿತು. ಈ ಕಾರ್ಯ ಮೊದಲು ಸ್ಫೋಟಕ ರೀತಿಯದಾಗಿತ್ತು. ಶಿಲಾಚೂರುಗಳು ಉಗುಳುವಿಕೆ ಪ್ರಾರಂಭವಾಗಿ, ಈ ಕಾರ್ಯ ಪರ್ಮಿಯನ್ ಯುಗದ ಆದಿಯಲ್ಲಿ ತೀವ್ರಗತಿ ಮುಟ್ಟಿದ ಬಳಿಕ, ಕ್ರಮೇಣ ಇಳಿಮುಖವಾಯಿತು. ಒಂದು ಕಡೆ ಜ್ವಾಲಾಮುಖಿಯ ಕಾರ್ಯಾಚರಣೆಯಾಗುತ್ತಿದ್ದರೆ ಮತ್ತೊಂದು ಕಡೆ ಸಾಗರಾಕ್ರಮಣವಾಯಿತು. ಆದ್ದರಿಂದಲೇ ಜ್ವಾಲಾಮುಖಿಜ ಶಿಲೆಗಳು ಮತ್ತು ಸಾಗರಜನಿತ ಶಿಲೆಗಳನ್ನು ಪಕ್ಕಪಕ್ಕದಲ್ಲಿಯೇ ಈ ಪ್ರದೇಶದಲ್ಲಿ ಕಾಣುತ್ತೇವೆ. ಜೊತೆಗೆ ಗೋಂಡ್ವಾನ ನಿಕ್ಷೇಪಗಳೂ ಇವೆ. ಸ್ಫೋಟಕವಸ್ತುಗಳಿಂದಾದ ನಿಕ್ಷೇಪಗಳಿಗೆ ಅಗ್ಲಾಮರಿಟಿಕ್ ಸ್ಲೇಟುಗಳೆಂದೂ ಶಿಲಾರಸದಿಂದಾದವುಗಳಿಗೆ ಪಂಜಾಲ್ ಟ್ರ್ಯಾಪ್ ಎಂದೂ ಹೆಸರು. ಪಂಜಾಲ್ ಟ್ರ್ಯಾಪುಗಳು ಹಸುರು ಅಥವಾ ಊದಾ ಬಣ್ಣದವು. ಇವುಗಳಲ್ಲಿ ನಾನಾ ವಿಧಗಳ ಭಿನ್ನ ಒಳರಚನೆಗಳಿವೆ. ಇವು ಮುಖ್ಯವಾಗಿ ಆಂಡಿಸೈಟ್ ಮತ್ತು ಬೆಸಾಲ್ಟ್ ಶಿಲೆಗಳಿಂದಾಗಿವೆ. ಈ ಶಿಲೆಗಳ ಮಧ್ಯೆ ಕೆಲವೆಡೆ ಗ್ಲಾಸಾಪ್ಟರಿಸ್ ಇಂಡಿಕ ಮತ್ತು ಗಂಗಮಾಪ್ಟರಿಸ್ ಕಾಶ್ಮೀರೆನ್ಸಿಸ್ ಎಂಬ ಸಸ್ಯಾವಶೇಷಗಳಿಂದ ಕೂಡಿದ ಜಲಜಶಿಲೆಗಳಿವೆ. ಇವುಗಳಿಗೆ ಗಂಗಮಾಪ್ಟರಿಸ್ ಪದರುಗಳೆಂದು ಹೆಸರು. ಇವು ಕಾರ್ಬಾನಿಫೆರಸ್ ಅಂತ್ಯ ಮತ್ತು ಪರ್ಮಿಯನ್ ಆದಿಕಾಲವನ್ನು ಸೂಚಿಸುತ್ತವೆ. ಇವುಗಳಲ್ಲಿ ಆರ್ಕಿಗೋಸಾರಸ್ ಆರ್ನಾಟಸ್ ಎಂಬ ದ್ವಿಚರ ಪ್ರಾಣಿ ಮತ್ತು ಆಮ್ಲಿಪ್ಟರಸ್ ಮೀನುಗಳ ಅವಶೇಷಗಳಿವೆ. ಇವುಗಳ ಮೇಲೆ ಝೀವಾನ್ ಮತ್ತು ಬಾರುಸ್ ಎಂಬಲ್ಲಿ ಪ್ರೋಟೊರೆಟಿಫೋರ ಆಮ್ಟ ಮುಂತಾದ ಬ್ರಯೊಜೋವ ಮತ್ತು ಪರ್ಮಿಯನ್ ಯುಗದ ವಿಶಿಷ್ಟ ಬಾಹುಪಾದಿಗಳು ಮತ್ತು ಹವಳಗಳಿಂದ ಕೂಡಿದ ಸಾಗರಶಿಲೆಗಳಿವೆ. ಇವು ಸಾಲ್ಟ್ ರೇಂಜಿನ ಪೊಡಕ್ಟಸ್ ಶಿಲಾಸಮುದಾಯದ ಮೇಲ್ಭಾಗದ ಸಮಕಾಲೀನ ಶಿಲೆಗಳು.

ಕಾಶ್ಮೀರ ಹಜಾರ ಪ್ರದೇಶದಲ್ಲಿ ಡೋಗ್ರಾ ಸ್ಲೇಟುಗಳ ಮೇಲೆ ಮತ್ತು ಟ್ರಯಾಸಿಕ್ ಶಿಲೆಗಳ ಕೆಳಗೆ ಜೀವ್ಯವಶೇಷರಹಿತ ಶಿಲಾರಾಶಿ ಇದೆ. ಇವನ್ನು ಜೀವ್ಯವಶೇಷರಹಿತ ಪ್ರಾಚೀನ ಜೀವಕಲ್ಪ ಶಿಲೆಗಳು ಎಂದು ಕರೆಯಲಾಗಿದೆ. ಇವುಗಳ ಮಧ್ಯೆ ನೀರ್ಗಲ್ಲು ನಿಕ್ಷೇಪ ಗುಂಡುಶಿಲೆ ಇದೆ. ಇದಕ್ಕೆ ತಾನಕ್ಕಿ ಗುಂಡು ಶಿಲೆ ಎಂದು ಹೆಸರು. ಇದರ ಕೆಳಗಿರುವ ಶಿಲೆಗಳಿಗೆ ತನವಾಲ್ ಶಿಲಾಶ್ರೇಣಿ ಎಂದು ಹೆಸರು. ಇದರ ವಯಸ್ಸನ್ನು ನಿಖರವಾಗಿ ನಿರ್ಧರಿಸುವುದು ಕಷ್ಟ. ಇವು ಕೇಂಬ್ರಿಯನ್ ಕಾಲದಿಂದ ಕಾರ್ಬಾನಿಫೆರಸ್ ಮಧ್ಯಕಾಲದವರೆಗಿನ ಯಾವ ಕಾಲವನ್ನಾದರೂ ಪ್ರತಿನಿಧಿಸಬಹುದು. ತಾನಕ್ಕಿ ಗುಂಡುಶಿಲೆಯ ಮೇಲೆ ಸುಣ್ಣಶಿಲೆ ಮತ್ತು ಡಾಲೊಮೈಟುಗಳಿವೆ. ಇದನ್ನು ಇನ್ಫ್ರಟ್ರಯಸ್ ಎಂದು ಕರೆಯಲಾಗಿದೆ. ಟ್ರಯಾಸಿಕ್ ಶಿಲಾಸಮುದಾಯ ಕಾಶ್ಮೀರದ ಭೂಕಡಿತದಲ್ಲೆಲ್ಲ ಅತ್ಯುತ್ತಮವಾಗಿ ರೂಪುಗೊಂಡು ಎದ್ದುಕಾಣುತ್ತದೆ. ಇದರಲ್ಲಿ ನೀಲಿ ಮತ್ತು ಬೂದುಬಣ್ಣದ ಸುಣ್ಣಶಿಲೆಗಳು ಮತ್ತು ಡಾಲೋಮೈಟುಗಳು ಪ್ರಮುಖ ಶಿಲೆಗಳು. ಅವು 915 ಮೀ ಸಂಚಯಿಸಿ ಸ್ಪಿಟಿ ಪ್ರದೇಶದ ಟ್ರಯಾಸಿಕ್ ಶಿಲೆಗಳನ್ನೆಲ್ಲ ಪ್ರತಿನಿಧಿಸುವುದಲ್ಲದೆ ದಪ್ಪದಲ್ಲಿ ಅವನ್ನು ಮೀರಿಸಿವೆ. ಆದರೆ ಜೀವ್ಯವಶೇಷಗಳು ಹೇರಳವಾಗಿಲ್ಲ. ಈ ಶಿಲೆಗಳು ಸಿಂಧ್, ಲಿಡ್ಡರ್ ಮತ್ತು ವಾರ್ಡ್ವಾನ್ ಕಣಿವೆಗಳು. ಗುರೈಲ್ ಮತ್ತು ಲಡಾಕ್ ಪ್ರದೇಶಗಳಲ್ಲಿ ಅತ್ಯುತ್ತಮವಾಗಿ ರೂಪುಗೊಂಡಿವೆ. ಪೀರ್ ಪಂಜಾಲ್ ಮತ್ತು ಹಜಾರಪ್ರದೇಶಗಳಲ್ಲಿ ಮೇಲ್ಭಾಗ ಮಾತ್ರ ರೂಪುಗೊಂಡಿವೆ.

ಕಾಶ್ಮೀರ ಪ್ರಾಂತ್ಯದಲ್ಲಿ ಜುರಾಸಿಕ್ ಯುಗದ ಶಿಲೆಗಳು ಅತಿ ವಿರಳ. ಪಿರ್‌ಪಂಜಾಲ್ ಪ್ರದೇಶದ ಬನಿಹಾಲ್ ಮತ್ತು ಲಡಾಕ್ ಪ್ರದೇಶಗಳಲ್ಲಿ ಟ್ರಯಾಸಿಕ್ ಸ್ತೋಮದ ಮೆಗಲೊಂಡಾನ್ ಸುಣ್ಣಶಿಲೆಯ ಸಂಚಯನ ಜುರಾಸಿಕ್ ಯುಗದ ಆದಿಕಾಲಕ್ಕೂ (ಲಯಾಸಿಕ್) ಮುಂದುವರಿದಿದೆ. ಇವುಗಳ ಮೇಲೆ ಕಪ್ಪುಬಣ್ಣದ ಸ್ಪಿಟಿ ಜೇಡುಶಿಲೆಗಳು ನಿಕ್ಷೇಪವಾಗಿವೆ. ಈ ಶಿಲೆಗಳಲ್ಲಿ ಮ್ಯಾಕ್ರೋಕೆಫಲಸ್ ಇತ್ಯಾದಿ ಅಮ್ಮೊನೈಟುಗಳೂ ಅವಿಕ್ಯುಲ, ಪೆಕ್ಟೆನ್, ಸೆರಿತಿಯಮ್, ನರಿನಿಯ ಮುಂತಾದ ಕಪ್ಪೆಚಿಪ್ಪುಗಳೂ ಇವೆ. ಹಜ್ಹಾರ ಪ್ರದೇಶದಲ್ಲಿ ಜುರಾಸಿಕ್ ನಿಕ್ಷೇಪದ ಎರಡು ಮುಖಗಳನ್ನು ಕಾಣಬಹುದು. ಉತ್ತರ ಭಾಗದಲ್ಲಿರುವ ನಿಕ್ಷೇಪಗಳು ಶಿಲಾ ಸಂಯೋಜನೆ ಮತ್ತು ಜೀವ್ಯವಶೇಷಗಳಲ್ಲಿ ಸ್ಪಿಟಿ ಜೇಡುಶಿಲೆಗಳನ್ನು ಹೋಲುತ್ತವೆ. ದಕ್ಷಿಣ ಭಾಗದ ನಿಕ್ಷೇಪಗಳು ತೀರ ನಿಕ್ಷೇಪಗಳು. ಇವು ಸಾಲ್ಟ್ ರೇಂಜ್ ಪ್ರದೇಶದ ಶಿಲೆಗಳನ್ನು ಹೋಲುತ್ತವೆ. ಜುರಾಸಿಕ್ ಯುಗದ ಶಿಲೆಗಳು ಅತಿವಿರಳವಾದರೆ, ಕ್ರಿಟೇಷಸ್‌ಯುಗದ ಶಿಲೆಗಳು ಅತ್ಯಂತ ವಿರಳ, ಗ್ರಾಫಿಯ ವೆಸಿಕ್ಯುಲೋಸವಿರುವ ಶಿಲೆಗಳು ಬುರ್ಜಿಲ್, ಡ್ರಾಸ್, ಲಡಾಕ್ ಮುಂತಾದ ಕಡೆಗಳಲ್ಲಿರುವುದು ಕ್ರಿಟೇಷಸ್ ಶಿಲೆಗಳು ಇರುವಿಕೆಯ ಕುರುಹು. ಈ ಶಿಲೆಗಳಲ್ಲಿ ಗ್ರಾನೈಟು. ಗ್ಯಾಬ್ರೊ ಮತ್ತು ಪೆರಿಡೊಟೈಟುಗಳು ಅಂತಸ್ಸರಣವಾಗಿರುವುದು ಒಂದು ವಿಶೇಷ ಸಂಗತಿ. ಗ್ರಾನೈಟು ಹಿಮಾಲಯ ಪ್ರದೇಶದಲ್ಲಿ ಸಿಗುವ ಮೂರು ವಿಧಗಳಲ್ಲಿ ಒಂದು. ಆದ್ದರಿಂದ ಈ ಗ್ರಾನೈಟು ನವಜೀವಿಕಲ್ಪದಲ್ಲಿ ರೂಪಗೊಂಡಿತೆಂಬುದು ನಿರ್ವಿವಾದವಾದಂತಾಯಿತು. ಲಡಾಕಿನಲ್ಲಿ ಪೆರಿಡೊಟೈಟ್ ಮತ್ತು ಗ್ಯಾಬ್ರೊಗಳ ಅಂತಸ್ಸರಣದಿಂದ ಕ್ರೋಮೈಟ್ ನಿಕ್ಷೇಪವಾಗಿವೆ. ಈ ಕಾಲದಲ್ಲಿ ಜ್ವಾಲಾಮುಖಿ ಕಾರ್ಯಾಚರಣೆಯೂ ನಡೆದಿದೆ. ಹಜ್ಹಾರ ಪ್ರಾಂತ್ಯದ ಉತ್ತರ ಮತ್ತು ದಕ್ಷಿಣ ಭಾಗಗಳೆರಡರಲ್ಲೂ ಕ್ರಿಟೇಷಸ್ ಯುಗದ ಗುಯಮಲ್ ಮರಳುಶಿಲೆ ಮತ್ತು ಚಿಕ್ಕಿಮ್ ಜೇಡುಶಿಲೆಗಳು ರೂಪುಗೊಂಡಿವೆ. ಇವುಗಳಲ್ಲಿ ಅಮ್ಮೊನೈಟುಗಳು ಹೇರಳವಾಗಿವೆ. ಇವು ಮತ್ತು ಇಯೋಸೀನ್ ಶಿಲೆಗಳ ಮಧ್ಯೆ ಇರುವ ಲ್ಯಾಟರೈಟ್ ನಿಕ್ಷೇಪ ಅನನುರೂಪತೆಯನ್ನು ವ್ಯಕ್ತಪಡಿಸುತ್ತದೆ.

ಟೆತಿಸ್ ಸಾಗರದಲ್ಲಿ ಸಂಚಯಿಸಿದ ನಿಕ್ಷೇಪಗಳೆಲ್ಲ ಭೂಚಲನೆಗೊಳಗಾಗಿ ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಹಿಮಾಲಯ ಪರ್ವತಗಳಾಗಿ ಮೇಲೊಗೆಯಲ್ಪಟ್ಟವು. ಈ ಕಾರ್ಯ ಇಯೋಸೀನ್ ಯುಗದ ಮಧ್ಯದಲ್ಲಿ ನಡೆಯಿತು. ಇದರ ಪರಿಣಾಮವಾಗಿ ಟೆತಿಸ್ ಸಾಗರದ ನೀರು ಟಿಬೆಟ್, ಹಿಮಾಲಯ ಪ್ರದೇಶಗಳಿಂದ ಸಿಂಧ್–ಬಲೂಚಿಸ್ತಾನ ಮತ್ತು ಅಸ್ಸಾಮ್–ಮಯನ್ಮಾರ್ ಖಾರಿಗಳ ಮೂಲಕ ನಿರ್ಗಮಿಸಿತು. ಆದರೆ ಇದು ಲಡಾಕ್, ಹುಂಡೆಸ್, ಕುಮಾಯೂನ್ ಪ್ರದೇಶಗಳಲ್ಲಿ ಸರೋವರಗಳ ರೂಪದಲ್ಲಿ ಉಳಿಯಿತು. ಆದ್ದರಿಂದ ಇಯೋಸೀನ್ ಯುಗದ ಆದಿ ಮತ್ತು ಮಧ್ಯಕಾಲಗಳನ್ನು ಪ್ರತಿನಿಧಿಸುವ ರಾಣಿಕೋಟ್ ಮತ್ತು ಲಾಕಿ ಶಿಲಾಶ್ರೇಣಿಗಳು ಕೋಹಟ್‌ನಿಂದ ಹಜ್ಹಾರ ಪರ್ವತ, ಕಾಶ್ಮೀರಗಳ ಮೂಲಕ ಹಿಮಾಲಯ ಪರ್ವತಗಳ ಮಂಡಿಬಾಗಿಲಿನಲ್ಲಿ ತಿರುಗಿ ಪೀರ್‌ಪಾಂಜಾಲ್‌ವರೆಗೆ ವಿಸ್ತರಿಸಿವೆ. ರಾಣಿಕೋಟ್ ಶಿಲೆಗಳು ನಮ್ಮುಲಿಟಿಕ್ ಸುಣ್ಣಶಿಲೆಯಿಂದ ಕೂಡಿವೆ. ಇವಕ್ಕೆ ಪರ್ವತಸುಣ್ಣಶಿಲೆ ಎಂದು ಹೆಸರು. ಈ ಶಿಲೆಗಳ ಮೇಲೆ ಇಂಗಾಲಯುಕ್ತ ಜೇಡುಶಿಲೆಗಳಿವೆ. ಇವು ಲಾಕಿಶಿಲೆಗಳಿಗೆ ಸಮಕಾಲೀನ ಶಿಲೆಗಳು. ಪಿರ್ ಪಂಜಾಲ್‌ಗೆ ದಕ್ಷಿಣದಲ್ಲಿ ಸಿಮ್ಲಾಶಿಲೆಗಳನ್ನು ಹೋಲುವ ನಿಕ್ಷೇಪಗಳಿವೆ. ಇವನ್ನು ಸುಬತು ಶಿಲಾಶ್ರೇಣಿ ಎನ್ನುತ್ತೇವೆ. ಇವು ಇಯೋಸೀನ್ ನಿಕ್ಷೇಪಗಳ ಎರಡನೆಯ ಮುಖ. ಕಾಶ್ಮೀರ ಪ್ರದೇಶದಲ್ಲಿ ಆಲಿಗೋಸೀನ್ ಕಾಲದ ಶಿಲೆಗಳು ಸಂಚಯಿಸಿಲ್ಲ. ಇನ್ನು ಮುಂದಿನ ಶಿಲೆಗಳು ಜಮ್ಮು ಪ್ರಾಂತ್ಯದಲ್ಲಿ ಮಾತ್ರ ರೂಪುಗೊಂಡಿವೆ. ಇಲ್ಲಿ ಇಯೋಸೀನ್ ಶಿಲೆಗಳ ಮೇಲೆ ಕೆಂಪು ಮತ್ತು ಊದಾ ಬಣ್ಣದ ಮರಳುಶಿಲೆಗಳು ಮತ್ತು ಜೇಡುಶಿಲೆಗಳು ಅನನುರೂಪವಾಗಿ ನಿಕ್ಷೇಪಿಸಿವೆ. ಇವುಗಳಲ್ಲಿ ಪಾಮ್ ಜಾತಿ ಮರಗಳ ಎಲೆಗಳು, ಸಬಲ್ ಮೇಜರ್ ಮುಂತಾದವುಗಳ ಅವಶೇಷಗಳಿವೆ. ಇವು ಇಯೋಸೀನ್ ಯುಗದ ಆದಿಕಾಲದವು. ಇವನ್ನು ಮುರ್ರಿ ಶಿಲಾಶ್ರೇಣಿ ಎಂದು ಕರೆಯಲಾಗಿದೆ.

ಮಯೋಸೀನ್ ಆದಿಕಾಲದ ಬಳಿಕ ಹಿಮಾಲಯದ ಮೇಲೊಗೆತದ ಕಾರ್ಯಾಚರಣೆಯ ಮತ್ತೊಂದು ಹಂತ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಟೆತಿಸ್ ಸಾಗರದಲ್ಲಿ ಸಂಚಯಿಸಿದ್ದ ನಿಕ್ಷೇಪ ಅನೇಕ ಕಡೆಗಳಲ್ಲಿ ಪರ್ವತಗಳ ರೂಪದಲ್ಲಿ ಮೇಲೆದ್ದಿತು. ಜೊತೆಗೆ ಈ ಪರ್ವತಗಳ ಉದ್ದಕ್ಕೂ ಅವುಗಳ ತಪ್ಪಲಲ್ಲಿ ಕಡಿಮೆ ಅಗಲದ ತಗ್ಗು ಉಂಟಾಯಿತು. ಈ ಪರ್ವತಶ್ರೇಣಿಗಳಲ್ಲಿ ಉದಯಿಸಿದ ನದಿ ಮತ್ತು ಉಪನದಿಗಳು ಈ ಪರ್ವತ ಪ್ರದೇಶದ ಶಿಥಿಲೀಕರಿಸಿದ ಮೆಕ್ಕಲನ್ನು ಈ ತಗ್ಗು ಪ್ರದೇಶಕ್ಕೆ ಒಯ್ದು ಹರಡಿದುವು. ಈ ಕಾರ್ಯ ಮಯೋಸೀನ್ ಮಧ್ಯ ಕಾಲದಲ್ಲಿ ಪ್ರಾರಂಭವಾಗಿ ಪ್ಲೀಸ್ಟೋಸೀನ್ ಯುಗದ ಆದಿಯವರೆಗೆ ಮುಂದುವರಿಯಿತು. ಈ ಅವಧಿಯಲ್ಲಿ ನಿಕ್ಷೇಪಗೊಂಡ ಶಿಲಾಸಮುದಾಯಕ್ಕೆ ಶಿವಾಲಿಕ್ ಶಿಲಾ ಸಮುದಾಯವೆಂದು ಹೆಸರು. ಇವು ಜಮ್ಮು ಬೆಟ್ಟ ಪ್ರದೇಶದಲ್ಲಿ ಸು. 38 ಕಿಮೀ ಅಗಲದ ಪ್ರದೇಶದಲ್ಲಿ ರೂಪುಗೊಂಡಿವೆ. ಇವು ಶಿಲಾರಚನೆ, ಜೀವ್ಯವಶೇಷಗಳು ಮುಂತಾದ ಎಲ್ಲ ವಿಚಾರಗಳಲ್ಲಿಯೂ ಮಾದರಿ ಪ್ರದೇಶದ ಶಿವಾಲಿಕ್ ಶಿಲಾಸಮುದಾಯವನ್ನು ಹೋಲುತ್ತವೆ. ಇವನ್ನು ಕೆಳಕಂಡಂತೆ ವಿಭಜಿಸಲಾಗಿದೆ :

ಮೇಲಣ ಶಿವಾಲಿಕ್ : 1830 ಮೀ ಗುಂಡುಶಿಲೆ, ಗ್ರೀಟ್; ಮರಳು ಮತ್ತು ಜೇಡು

ಮಧ್ಯ ಶಿವಾಲಿಕ್ : 1830 ಮೀ ಬೂದು ಮರಳು ಶಿಲೆ ಮತ್ತು ಜೇಡು ಶಿಲೆಗಳು

ಕೆಳ ಶಿವಾಲಿಕ್ : 1525 ಮೀ ಕಂದು ಮರಳು ಶಿಲೆ ಮತ್ತು ಕೆಂಪು ಜೇಡು ಶಿಲೆಗಳು

ಈ ಶಿಲಾಸಮುದಾಯದ ವೈವಿಧ್ಯವೆಂದರೆ, ಅದರಲ್ಲಿರುವ ಹೇರಳವಾದ ಬೆನ್ನೆಲುಬುಳ್ಳ ಪ್ರಾಣಿಗಳ (ಸ್ತನಿಗಳ) ಅವಶೇಷಗಳು. ಮಾಸ್ಟಡಾನ್ (ವಂಶನಷ್ಟ ಆನೆ) ಆನೆ, ಜಿರಾಫೆ, ಒಂಟೆ, ಕುದುರೆ, ನೀರಾನೆ, ಖಡ್ಗಮೃಗ, ಜಿಂಕೆ , ಕಪಿ, ಆಮೆ–ಇವೆಲ್ಲವುಗಳ ಅವಶೇಷಗಳಿವೆ.

ಕಾಶ್ಮೀರದಲ್ಲಿ ಪ್ಲೀಸ್ಟೋಸೀನ್ ಕಾಲದ ಶಿಲಾವರ್ಗ ನದಿ, ಸರೋವರ ಮತ್ತು ನೀರ್ಗಲ್ಲು ನದೀ ನಿಕ್ಷೇಪಗಳಿಂದ ಕೂಡಿದೆ. ಇವಕ್ಕೆ ಕರೆವ ಶಿಲೆಗಳು ಎಂದು ಹೆಸರು. ಇವು ವಾಯವ್ಯದಲ್ಲಿ 13–26 ಕಿಮೀ ಅಗಲವಿದ್ದು, ಸೋಪ್ಯಾನ ಮತ್ತು ಬಾರಾಮುಲದಲ್ಲಿ 80 ಕಿಮೀ ಅಗಲ ಇವೆ. ಈ ನಿಕ್ಷೇಪಗಳಲ್ಲಿ ನೀಲಿ, ಬೂದು ಮತ್ತು ಕಾಕಿ ಬಣ್ಣದ ದುಂಡು ಮರಳು, ಅರೆಗಟ್ಟಿಯಾದ ಗುಂಡುಶಿಲೆ ಮತ್ತು ನೀರ್ಗಲ್ಲು ನದಿಯ ಮುರುಕಲು ಗುಪ್ಪೆಗಳಿವೆ. ಇವುಗಳ ಮಧ್ಯೆ ಲಿಗ್ನೈಟ್ ಪದರಗಳೂ ಇವೆ. ಆದ್ದರಿಂದ ತೀವ್ರ ಶೀತವಾಯು ಗುಣಗಳ ಮಧ್ಯೆ ಸಾಮಾನ್ಯ ವಾಯುಗುಣವನ್ನು ಹೊಂದಿ, ಸಾಕಷ್ಟು ಸಸ್ಯನಿಬಿಡವಾದ ಕಾಲಗಳೂ ಇದ್ದುವೆಂದು ಅರ್ಥವಾಗುವುದು. ತೀವ್ರ ಶೀತವಾಯುಗುಣವಿದ್ದ ಕಾಲಗಳನ್ನು ನೀರ್ಗಲ್ಲುಯುಗಗಳೆಂದೂ ಮತ್ತು ತೇವಭರಿತ ಉಷ್ಣವಾಯು ಗುಣವಿದ್ದ ಕಾಲಗಳನ್ನು ಅಂತರ ನೀರ್ಗಲ್ಲುಯುಗಗಳೆಂದೂ ಕರೆಯಲಾಗುತ್ತದೆ. ಡಿ.ಟೆರ್ರಾರವರು ನಾಲ್ಕು ಕಾಲಗಳ ನೀರ್ಗಲ್ಲು ನದಿ ಮುರುಕಲು ಗುಪ್ಪೆಗಳನ್ನೂ ಅವುಗಳ ನಡುವೆ ಕರವಾ ನಿಕ್ಷೇಪಗಳಿರುವುದನ್ನೂ ವರದಿ ಮಾಡಿದ್ದಾರೆ.

**ಮೇಲ್ಮೈ ಲಕ್ಷಣ :** ಇಡೀ ರಾಜ್ಯ ಬಹುತೇಕ ಪರ್ವತಮಯ. ದಕ್ಷಿಣದ ಹೊರ ಬೆಟ್ಟಗಳ ಅಂಚಿನಲ್ಲಿ ಫಲವತ್ತಾದ ಮೈದಾನವುಂಟು. ಜಮ್ಮು ಮತ್ತು ಕಾಶ್ಮೀರ ರಾಜ್ಯದ ಪ್ರದೇಶ ಸ್ಥೂಲವಾಗಿ ಮೂರು ಅಂತಸ್ತುಗಳ ಮನೆಯಂತಿದೆ. ಶಿವಾಲಿಕ್ ಮತ್ತು ಹೊರಬೆಟ್ಟಗಳನ್ನೊಳಗೊಂಡ ಜಮ್ಮು ಪ್ರದೇಶ ಇದರ ಮೊದಲ ಅಂತಸ್ತು. ಮಧ್ಯ ಹಿಮಾಲಯದ ಎತ್ತರ ಶ್ರೇಣಿಗಳು ಎರಡನೆಯ ಅಂತಸ್ತು. ಅಂಡಾಕಾರದ ಕಾಶ್ಮೀರ ಕಣಿವೆಯನ್ನು ಎತ್ತರದ ಬೆಟ್ಟಗಳು ಸುತ್ತುಗಟ್ಟಿವೆ. ಕಾಶ್ಮೀರ ಕಣಿವೆಯಿಂದಾಚೆಗೆ ಉತ್ತರದಲ್ಲೂ ಪಶ್ಚಿಮದಲ್ಲೂ ಮಹಾಹಿಮಾಲಯ ಶ್ರೇಣಿಗಳು ಹಬ್ಬಿವೆ. ಗಿಲ್ಗಿಟ್ ಮತ್ತು ಲಡಾಕ್ ಜಿಲ್ಲೆಗಳನ್ನೊಳಗೊಂಡ ಈ ಪ್ರದೇಶದಲ್ಲಿ ಸಮುದ್ರ ಮಟ್ಟದಿಂದ 4500 ಮೀ ಎತ್ತರದಲ್ಲೂ ಜನವಸತಿಯಿದೆ. ಇದು ಪ್ರಪಂಚದ ಅತ್ಯಂತ ಎತ್ತರದ ಜನವಸತಿ ಪ್ರದೇಶ.

ಭೌಗೋಳಿಕವಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಏಳು ಪ್ರದೇಶಗಳನ್ನಾಗಿ ವಿಂಗಡಿಸಬಹುದು.

1 ಹೊರ ಮೈದಾನ: ಪಂಜಾಬಿನ ಝೀಲಮ್, ಗುಜರಾತ್, ಸಿಯಲ್ ಕೋಟ್ ಮತ್ತು ಗುರುದಾಸಪುರಗಳಿಂದ ಮುಂದುವರಿದ ಮೈದಾನ 384 ಕಿಮೀ ದೂರ ಹಬ್ಬಿದೆ.

2 ಹೊರಬೆಟ್ಟ ಪ್ರದೇಶ : ಈ ಪ್ರದೇಶ ವೈವಿಧ್ಯಮಯ, ಸಂಕೀರ್ಣ ಉತ್ತರದಲ್ಲಿ ಬಹಳ ಕಡಿದಾಗಿದೆ. ಮಧ್ಯೆ ಮಧ್ಯೆ ಸಣ್ಣ ಕಣಿವೆಗಳುಂಟು. ಬೆಟ್ಟಸಾಲಿನ ಪಶ್ಚಿಮ ಭಾಗ ವಿಶಾಲವಾದದ್ದು. ಭಾರಿ ಉಂಡೆಗಲ್ಲುಗಳೂ ಬಂಡೆಗಳೂ ಜೇಡಿಮಣ್ಣೂ ಹೇರಳವಾಗಿವೆ.

3 ಮಧ್ಯ ಹಿಮಾಲಯ : ಜಮ್ಮು ಮತ್ತು ಕಾಶ್ಮೀರ ರಾಜ್ಯದ ಈ ಪ್ರದೇಶ ಮಧ್ಯ ಹಿಮಾಲಯದ ಅನೇಕ ಶ್ರೇಣಿಗಳಿಂದ ಕೂಡಿ ಅತ್ಯಂತ ಸುಂದರವಾದ ಪ್ರದೇಶವೆನಿಸಿಕೊಂಡಿದೆ. 4575 ಮೀ ಎತ್ತರವಾಗಿರುವ ಶ್ರೇಣಿಗಳು ನಿರಂತರವಾಗಿ ಹಿಮಾಚ್ಛಾದಿತ. ಬ್ರಹ್ಮ ಶಿಖರ 6400 ಮೀ ಎತ್ತರ. ಇಲ್ಲಿಯ ಅನೇಕ ಆಳವಾದ ಪ್ರಪಾತಗಳಲ್ಲಿ ನದಿಗಳು ತುಂಬಿ ಹರಿಯುತ್ತವೆ. ಇಲ್ಲಿ ಬಲು ಸುಂದರವಾದ ಅರಣ್ಯಗಳುಂಟು. ಅವುಗಳ ಉತ್ತರಕ್ಕೆ ಪಿರ್ ಪಂಜಾಲ್ ಪರ್ವತಶ್ರೇಣಿ ಇದೆ. ಈ ಪರ್ವತಶ್ರೇಣಿಯನ್ನು ದಾಟಿದರೆ ಕಾಶ್ಮೀರ ಕಣಿವೆ ಸಿಗುತ್ತದೆ.

4 ಕಾಶ್ಮೀರ ಕಣಿವೆ : ಕಾಶ್ಮೀರ ಕಣಿವೆಯ ವಿಸ್ತೀರ್ಣ ಸು. 15,120.3 ಚ.ಕಿಮೀ (5,838 ಚ.ಮೈ). ಈ ಕಣಿವೆ ಝೀಲಮ್ ಮತ್ತು ಅದರ ಉಪನದಿಗಳಿಗೆ ಜಲಾನಯನ ಭೂಮಿ. ಇಲ್ಲಿಯ ವೂಲಾರ್ ಭಾರತದ ಅತ್ಯಂತ ದೊಡ್ಡ ಸಿಹಿನೀರಿನ ಸರೋವರ. ಫಲವತ್ತಾದ ಭೂಮಿಯೂ ಸಮೃದ್ಧಿಯೂ ಇರುವ ಈ ಎತ್ತರದ ಕಣಿವೆಯಲ್ಲಿ ಜನ ಹೆಚ್ಚಾಗಿ ನೆಲೆಸುತ್ತಿದ್ದಾರೆ. ಬಾರಾಮುಲ್ಲದ ಉತ್ತರಕ್ಕಿರುವ ಮನೋಹರವಾದ ಲೋಲಬ್ ಕಣಿವೆಯಲ್ಲಿ ಅನೇಕ ತೊರೆಗಳು ಹರಿಯುತ್ತವೆ.

5 ಸಿಂಧ್ ಕಣಿವೆ : ಇದು ಝೀಲಮ್ ನದಿಯನ್ನು ಸೇರುವ ಸಿಂಧ್ ನಾಲ ಹರಿಯುವ ಕಣಿವೆ. ಇದರ ಉದ್ದ ಸು. 96 ಕಿಮೀ. ಕಣಿವೆಯ ಪಶ್ಚಿಮಕ್ಕೆ ಮೆಕ್ಕಲು ಮಣ್ಣಿನ ಫಲವತ್ತಾದ ಭೂಮಿಯಿದೆ. ಕಣಿವೆಯ ಗಂದರ್‌ಬಾಲ್ ಎಂಬ ಸ್ಥಳ ಆರೋಗ್ಯಧಾಮ. ಅದರ ಬಳಿಯ ಅಂಚರ್ ಸರೋವರಕ್ಕೆ ಷಾದಿಪುರದಿಂದ ಸಿಂದ್ ನಾಲಾ ಮೂಲಕ

ಜಲಯಾನ ಸಾಧ್ಯ. ದಾಲ್ ಸರೋವರಕ್ಕೂ ರಸ್ತೆ ಸೌಕರ್ಯವುಂಟು. ಸಿಂದ್ ಕಣಿವೆ ಜ್ಹೋಜಿ ಲಾ ಕಣಿವೆ ಮಾರ್ಗದ ಬಳಿ ಹಠಾತ್ತನೆ ಕೊನೆಗೊಳ್ಳುತ್ತದೆ. ಅಲ್ಲಿಂದ ಮುಂದಕ್ಕೆ ಇರುವುದು ಲಡಾಕ್ ಪ್ರದೇಶ.

6 ಲಿಡಾರ್ ಕಣಿವೆ : ಝೀಲಂ ನದಿಯ ಪೂರ್ವಕ್ಕೆ ಇರುವ ಎತ್ತರದ ಕಣಿವೆ ಇದು. ಇಲ್ಲಿ 1980 ಮೀ ಎತ್ತರದ ಪ್ರದೇಶಗಳಲ್ಲಿ ನೀರ್ಗಲ್ಲ ನದಿಗಳು ತಂದು ಹಾಕಿದ ಮುರುಕಲು ಗುಪ್ಪೆಗಳು ಬಂಡೆಗಳ ಮೇಲೆ ತುಂಬಿವೆ. ಅವುಗಳಿಂದ ಬಂಡೆಗಳು ನುಣುಪಾಗಿರುವುದನ್ನು ಪಹಲ್ಗಾಂ ಪ್ರದೇಶದಲ್ಲಿ ಕಾಣಬಹುದು. 3414 ಮೀ ಎತ್ತರದಲ್ಲಿ ಕೊಲಾಹೈ ನೀರ್ಗಲ್ಲ ನದಿ ಹರಿಯುತ್ತದೆ.

7 ಒಳ ಹಿಮಾಲಯ : ಉತ್ತರದಲ್ಲಿ ಕಾಜ್ ನಾಗ್ ಶ್ರೇಣಿಯತ್ತ ಕಾಶ್ಮೀರ ಕಣಿವೆ ಕಿರಿದಾಗಿದೆ. ಗುಲ್ ಮಾರ್ಗ್ ಪಶ್ಚಿಮಕ್ಕೆ ಪಿರ್ ಪಂಜಾಲ್ ಪರ್ವತ ಶ್ರೇಣಿ 96 ಕಿಮೀ ದೂರ ಮುಂದುವರಿಯುತ್ತದೆ. ಇದರ ಎತ್ತರ ಸಮುದ್ರಮಟ್ಟದಿಂದ 2740–3650 ಮೀ. ಉರಿಯಿಂದ ಪುಂಚ್‌ಗೆ ಹೋಗುವ ರಸ್ತೆಯೊಂದು ಹಾಜಿ ಪಿರ್ ಕಣಿವೆಯನ್ನು ದಾಟಿ ಸಾಗುತ್ತದೆ. ಇಲ್ಲಿ ದೇವದಾರು ಅರಣ್ಯಗಳಿಂದ ಕೂಡಿದ ಶ್ರೇಣಿಗಳುಂಟು. ಇಲ್ಲಿ ಹಿಮಾಲಯದ ಮಹಾಶ್ರೇಣಿಗಳು ಹಿಮರೇಖೆಯಿಂದಲೂ ಮೇಲಕ್ಕೆ 6096 ಮೀ ವರೆಗೆ ಏರಿವೆ. ನಂಗ ಪರ್ವತ ಒಂದು ಉನ್ನತ ಶಿಖರ. ಮಧ್ಯ ಹಿಮಾಲಯನ್ ಅಕ್ಷ ಕುಲು ಬಳಿ ಕವಲೊಡೆಯುತ್ತದೆ. ಅದರ ವಾಯವ್ಯ ಶಾಖೆಯೇ ಜಸ್ಕಾರ್ ಶ್ರೇಣಿ. ನುನ್ ಕುನ್‌ನ ಎರಡು ಶಿಖರಗಳು 7055 ಮೀ ಎತ್ತರ ನಿಲುಕುತ್ತವೆ. ಹಿಮಾಲಯದ ಧವಳಧರ ಶ್ರೇಣಿ ಇನ್ನೂ ಆಚೆಗೆ ಹಬ್ಬಿದೆ.

ಹಿಂದೂಕುಷ್ ಮತ್ತು ಕಾರಕೋರಂ ಶ್ರೇಣಿಗಳು ಹಿಂದೂಸಾಗರಕ್ಕೆ ಹರಿಯುವ ಏಷ್ಯದ ನದೀ ವ್ಯವಸ್ಥೆಯ ಜಲವಿಭಾಗ ರೇಖೆಗಳು. ಹಿಮಾಲಯದ ಈಶಾನ್ಯ ಶ್ರೇಣಿಗಳು ಆಳವಾದ ಕಮರಿಗಳಿಂದ ಕೂಡಿವೆ. ಸಸ್ಯಗಳು ಕಡಿಮೆ. ಇದು ಬರಡು ಪ್ರದೇಶ. ಶಿಖರಗಳು ಹಿಮದಿಂದ ಕೂಡಿ ಠೀವಿಯಿಂದ ನಿಂತಿವೆ. ಈ ಭಾಗದಲ್ಲಿ ಪ್ರಪಂಚದ ಎರಡನೆಯ ಅತ್ಯುನ್ನತ ಶಿಖರವಾದ ಗಾಡ್ವಿನ್ ಆಸ್ಟೆನ್ ಶಿಖರವಿದೆ (8615 ಮೀ). ಇಲ್ಲಿ ನೀರ್ಗಲ್ಲ ನದಿಗಳು ಹರಿಯುತ್ತವೆ; ನೀರ್ಗಲ್ಲ ಮೈದಾನಗಳು 129.5 ಚ.ಕಿಮೀ ವ್ಯಾಪಿಸಿವೆ. ಗಿಲ್ಗಿಟ್ ನದಿಯನ್ನು ಸೇರುವ ಹುನ್‌ಜಾ ನದಿ ಇಲ್ಲಿ ಉಗಮಿಸುವುದು. ವಿಶಾಲವಾದ ಲಡಾಕ್ ಪ್ರದೇಶ ಇರುವುದು ಈ ಭಾಗದಲ್ಲೇ. ವಾಯವ್ಯದಲ್ಲಿರುವ ಗಿಲ್ಗಿಟ್ ಸಮುದ್ರಮಟ್ಟದಿಂದ 1525 ಮೀ ಎತ್ತರದಲ್ಲಿರುವ ಕಣಿವೆ.

**ನದಿಗಳು, ಸರೋವರಗಳು :** ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಅನೇಕ ಸರೋವರಗಳೂ ನೀರ್ಗಲ್ಲ ನದಿಗಳೂ ಊಟೆಗಳೂ ಇವೆ.

ರಾವಿ (ಐರಾವತಿ) ನದಿ ಪಿರ್ ಪಂಜಾಲ್ ಶ್ರೇಣಿಯ ದಕ್ಷಿಣ ಇಳಿಜಾರಿನಲ್ಲೂ ಧವಳಧರ ಶ್ರೇಣಿಯ ಉತ್ತರ ಇಳಿಜಾರಿನಲ್ಲೂ ಹರಿದುಬರುತ್ತದೆ. ಬಸೋಲಿಯ ಬಳಿ ಹಿಮಾಲಯವನ್ನು ಬಿಟ್ಟು ಕಾಟುವಾ ಮತ್ತು ಮಾಧೋಪುರ್ ಬಳಿ ಪಂಜಾಬ್ ಬಯಲನ್ನು ಸೇರುತ್ತದೆ. ಇದರ ಉದ್ದ 640 ಕಿಮೀ. ಇದರ ಒಟ್ಟು ಪತನ 2,640 ಕಿಮೀ.

ಚಂದ್ರಾ ನದಿ ಸಮುದ್ರಮಟ್ಟಕ್ಕೆ 6096 ಮೀ ಎತ್ತರದಲ್ಲಿರುವ ಬರಲಾಚ ಪರ್ವತದ ಆಗ್ನೇಯ ಭಾಗದ ವಿಶಾಲ ಮಂಜಿನ ಬಯಲಿನಲ್ಲೂ, ಭಾಗಾ ನದಿ ಬರಲಾಚ ಕಣಿವೆಯ ವಾಯವ್ಯ ಇಳಕಲು ಪ್ರದೇಶದಲ್ಲೂ ಹುಟ್ಟಿ ತಂಡಿ ಎಂಬಲ್ಲಿ ಸಂಗಮವಾಗಿ ಅಲ್ಲಿಂದ (ಚಂದ್ರಭಾಗಾ) ಚೀನಾಬ್ ನದಿಯಾಗಿ ಪರಿಣಮಿಸುತ್ತದೆ. ಅದು ಪಂಗಿ ಕಣಿವೆಯ ಮಾರ್ಗವಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಪ್ರವೇಶಿಸಿ ಕಿಷ್ಟವಾರ್ ಬಳಿ ವಾದ್ವಾನ್ ನದಿಯೊಡನೆ ಕೂಡಿ, ಅಲ್ಲಿಂದ ಮುಂದೆ 288 ಕಿಮೀ ಹರಿದು, ಆಖ್‌ನೂರ್ ಬಳಿ ಹಿಮಾಲಯವನ್ನು ಬಿಟ್ಟು ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ರಾಮ್‌ಬನ್ ಬಳಿ ಈ ನದಿಗೆ ಅಡ್ಡಲಾಗಿ ಸೇತುವೆ ಕಟ್ಟಿದೆ.

ರಾವಿ ಮತ್ತು ಚೀನಾಬ್ ನದಿಗಳ ನಡುವಣ ಪ್ರದೇಶಗಳಲ್ಲಿ ಹರಿಯುವ ಕಿರು ನದಿಗಳು ಉಜ್ ಮತ್ತು ಟಾವಿ. ಉಜ್ ಶಿವಾಲಿಕ್ ಪರ್ವತಗಳಿಂದ ಹರಿದು ಬರುತ್ತದೆ. ತಾವಿ ಜಮ್ಮು ನಗರವನ್ನು ಬಳಸಿ ಹರಿದು ಉಧಮ್‌ಪುರದ ಬಳಿ ಬಾಗಿ ಸಾಗುತ್ತದೆ.

ಝೀಲಮ್ ನದಿ ಪಿರ್ ಪಂಜಾಲ್ ಶ್ರೇಣಿಯಲ್ಲಿ ಹುಟ್ಟುತ್ತದೆ. ರಾಮ್ ಬಿಯಾರ, ರೋಮೂಷಿ, ಸಿಂಧ್ ಇವು ಇದರ ಕೆಲವು ಉಪನದಿಗಳು. ಝೀಲಮ್ ನದಿ ವೂಲಾರ್ ಸರೋವರವನ್ನು ಅದರ ಆಗ್ನೇಯ ದಿಕ್ಕಿನಲ್ಲಿ ಸೇರಿ, ಪಶ್ಚಿಮದಲ್ಲಿ ಅದರಿಂದ ಹೊರಬರುತ್ತದೆ. ವೂಲಾರ್ ಅನ್ನು ಸೇರುವ ಕಿರುನದಿಗಳು ಹರ್‌ಬ್ಬುಜಿ, ಆರಾಪಿ, ಎರಿನ್, ಮೊಹ್ರು ಮತ್ತು ಬಂದಿಪುರ್, ಬಹ್ರಾಂಗುಲ್‌ನಿಂದ ಆಚೆಗೆ ಝೀಲಂ 90 ಮೀಗೂ ಹೆಚ್ಚು ಅಗಲವಿಲ್ಲ. ಅದರ ಆಳ 9 ಮೀಗಿಂತಲೂ ಕಡಿಮೆ. ಅಲ್ಲಿ ನದಿ ಕಡಿದಾದ ಕಮರಿಯ ಮೂಲಕ 128 ಕಿಮೀ ದೂರ ಹರಿದು ಸಾಗುತ್ತದೆ. ಮುಜಫರ್‌ಬಾದ್ ಬಳಿ ಕಿಷನ್‌ಗಂಗಾ ಇದನ್ನು ಸಂಗಮಿಸುತ್ತದೆ.

ಸಿಂಧೂ ನದಿ ಆಗ್ನೇಯದಲ್ಲಿ ಚೀನಿ ಟಿಬೆಟ್ ಗಡಿಯಿಂದ ರಾಜ್ಯವನ್ನು ಪ್ರವೇಶಿಸಿ, ಲೇ ಬಳಿ ಜಸ್ಕಾರ್ ನದಿಯೊಡನೆ ಸಂಗಮವಾಗುತ್ತದೆ. ಅಲ್ಲಿಂದ ಮುಂದೆ ಲಡಾಕ್ ಪ್ರದೇಶದಲ್ಲಿ ಶಿಯೋಕ್ ನದಿಯೊಂದಿಗೆ ಕೂಡಿ ನಂಗಪರ್ವತ ಭಾಗದಲ್ಲಿ ವಾಯವ್ಯಕ್ಕೆ ಹರಿದು, ಅಲ್ಲಿಂದ ಸಾಗಿ ಪಾಕಿಸ್ತಾನದ ಗಡಿಯನ್ನು ಪ್ರವೇಶಿಸುತ್ತದೆ.

ಹಿಮಾಲಯ ಕಣಿವೆಗಳಲ್ಲಿ ಹರಿಯುವ ಮುಖ್ಯ ನದಿಗಳೊಂದಿಗೆ ಸಂಗಮವಾಗುವ ಉಪನದಿಗಳು ಪರ್ವತಗಳ ಅಂಚಿನಲ್ಲಿ ನೂರಾರು ಅಡಿಗಳ ಮೇಲಿರುವ ತೂಗುಕಣಿವೆಗಳಲ್ಲಿ ಹರಿಯುತ್ತವೆ. ನೀರ್ಗಲ್ಲ ನದಿಗಳ ಕ್ರಿಯೆ ಮತ್ತು ಅವು ಹೊತ್ತು ತಂದ ಭೂಸಾರ–ಇವೇ ಈ ಮೇಲು ಕಣಿವೆಗಳ ನಿರ್ಮಾಣಕ್ಕೆ ಕಾರಣ.

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಶಿಗರ್ ನದಿಗೆ ಪೋಷಕವಾದ ಅತ್ಯಂತ ಹಿರಿಯ ನೀರ್ಗಲ್ಲ ನದಿ ಇದೆ. ರಾಜ್ಯದಲ್ಲಿ ಜಲಪಾತಗಳೂ ಊಟೆಗಳೂ ಹೆಚ್ಚು.

ಪ್ರಮುಖ ಸಿಹಿನೀರಿನ ಸರೋವರಗಳಲ್ಲಿ ವೂಲಾರ್ ಮತ್ತು ದಾಲ್ ದೊಡ್ಡವು. ವೂಲಾರ್ ಸರೋವರ 16 ಕಿಮೀ ಉದ್ದ, 9 ಕಿಮೀ ಅಗಲ ಇದೆ. ಮನ್ ಸಾರ್ ಜಮ್ಮು ನಗರಕ್ಕೆ ನೈಋತ್ಯದಲ್ಲಿದೆ. ಇದರ ವಿಸ್ತೀರ್ಣ 15 ಚ.ಕಿಮೀ. ಸುರಿಮ್ ಸಾರ್–ಮನ್‌ಸಾರ್‌ನ ಪಶ್ಚಿಮದಲ್ಲಿದೆ. ಸನಸಾರ್ ಎಂಬುದು ಪಟ್ನಿ ಟಾಪ್‌ಗೆ ಉತ್ತರದಲ್ಲಿದೆ. ಲಡಾಕ್ ಪ್ರದೇಶದ ಪಾಂಗ್ ಕಾಂಗ್ ಉಪ್ಪುನೀರಿನ ಸರೋವರ. ಇದು 64 ಕಿಮೀ ಉದ್ದ, 3–6 ಕಿಮೀ ಅಗಲ ಇದೆ ; ಸಮುದ್ರಮಟ್ಟಕ್ಕೆ 4265 ಮೀ ಎತ್ತರದಲ್ಲಿದೆ. ತ್ಸಿಮೋರಿರಿ ಸರೋವರ 24 ಕಿಮೀ ಉದ್ದ 3–5 ಕಿಮೀ ಅಗಲವಾಗಿದೆ.

**ವಾಯುಗುಣ :** ಕಾಶ್ಮೀರದ ಭೂಭಾಗ ಸಮುದ್ರಮಟ್ಟದಿಂದ 300–8600 ಮೀಗೆ ಏರುತ್ತದೆ. ಇದರಿಂದ ಜಮ್ಮು–ಕಾಶ್ಮೀರ ಪ್ರದೇಶದ ವಾಯುಗುಣದ ಮೇಲೆ ಆಗಿರುವ ಪರಿಣಾಮ ಅಗಾಧ. ಎತ್ತರ, ಪರ್ವತಶ್ರೇಣಿಗಳ ದಿಕ್ಕು, ಗಾಳಿಯ ವೇಗ, ಸೂರ್ಯಕಿರಣಗಳ ಬಾಗು–ಇವು ಈ ರಾಜ್ಯದ ವಿವಿಧ ಭಾಗಗಳ ವಾಯುಗುಣವನ್ನು ನಿರ್ಣಯಿಸುವ ಅಂಶಗಳು.

ಹೊರ ಮೈದಾನ ಮತ್ತು ಹೊರ ಬೆಟ್ಟಗಳನ್ನು ವಾಯುಗುಣದ ದೃಷ್ಟಿಯಿಂದ ಒಂದು ಪ್ರದೇಶವೆಂದು ಪರಿಗಣಿಸಬಹುದು. ಈ ಪ್ರದೇಶದ ಒಟ್ಟು ಮಳೆ 100 ಸೆಂಮೀ. ಉತ್ತರಕ್ಕೆ ಹೋದಂತೆ ಮಳೆ ಅಧಿಕ. ಅಲ್ಲಿ ಚಳಿಗಾಲದಲ್ಲಿ ಮಂಜು ಬೀಳುತ್ತದೆ. ಮಾರ್ಚ್ ತಿಂಗಳಾದ ಮೇಲೆ ಪಂಜಾಬಿನ ಪ್ರದೇಶದಂತೆ ಇಲ್ಲೂ ಉಷ್ಣತೆ ಹೆಚ್ಚುತ್ತದೆ; ಮಳೆಯಾದ ಮೇಲೆ ಇಳಿಯುತ್ತದೆ. ಒಟ್ಟಿನಲ್ಲಿ ಇಲ್ಲಿಯದು ಉಪೋಷ್ಣವಲಯದ ವಾಯುಗುಣ.

ಮಧ್ಯ ಪರ್ವತಗಳ ಮತ್ತು ಕಣಿವೆಗಳ ಪ್ರದೇಶ ಇನ್ನೊಂದು ವಾಯುಗುಣವಲಯ. ಎತ್ತರಕ್ಕೆ ಅನುಗುಣವಾಗಿ ಉಷ್ಣತೆಯೂ ಅವಪತನವೂ ವ್ಯತ್ಯಾಸವಾಗುತ್ತವೆ. ಬೇಸಗೆಯಲ್ಲಿ ಹೊರ ಬೆಟ್ಟಗಳ ವಲಯದಲ್ಲಿ ಮಳೆ ಸುರಿಸುವ ಮುಂಗಾರು ಮಾರುತಗಳು ಮಧ್ಯ ಪರ್ವತಗಳನ್ನೇರುವಾಗ ದುರ್ಬಲವಾಗುತ್ತವೆ. ಚಂದ್ರಭಾಗಾನದಿಯ ಕಣಿವೆಯಲ್ಲಿ ಚಳಿಗಾಲ ದೀರ್ಘ, ತೀವ್ರ, ಬೇಸಗೆ ಹ್ರಸ್ವ, ಚುರುಕು. ಇನ್ನೂ ಎತ್ತರದ ಕಣಿವೆಗಳಲ್ಲಿ ಬೇಸಗೆಯ ಚುರುಕು ಕಡಿಮೆ. ಪರ್ವತಗಳ ನೆತ್ತಿಯಲ್ಲಿ ಬೀಳುವ ಹಿಮ ಏಪ್ರಿಲ್ ತಿಂಗಳಿನಿಂದ ಕರಗತೊಡಗುತ್ತದೆ.

ಉಷ್ಣತೆ, ಅವಪತನ, ತೇವಾಂಶ ಮುಂತಾದ ದೃಷ್ಟಿಗಳಿಂದ ಕಾಶ್ಮೀರ ಕಣಿವೆ ಒಂದು ಪ್ರತ್ಯೇಕ ವಾಯುಗುಣವಲಯ. ಮಾರ್ಚ್‌ವರೆಗೆ ಚಳಿಗಾಲ ತುಂಬ ತೀವ್ರ. ಮೆಡಿಟರೇನಿಯನ್ ಮೇಲಿಂದ ಆಫ್ಘಾನ್ ಗಡಿಯ ಮೂಲಕ ಬೀಸುವ ಮಾರುತದಿಂದ ಹಿಮರೂಪದಲ್ಲಿ ಅವಪತನವಾಗುತ್ತದೆ. ಮಾರ್ಚ್ ತಿಂಗಳಿಂದ ಮೇವರೆಗೆ ವಸಂತಕಾಲ. ಜುಲೈ–ಆಗಸ್ಟ್ ಗರಿಷ್ಠ ಸೆಕೆಯ ತಿಂಗಳುಗಳು. ಕಾಶ್ಮೀರ ಕಣಿವೆಯ ಉತ್ತರ ಪೂರ್ವಗಳ ಉನ್ನತ ಪರ್ವತಗಳ ನದೀ ಕಣಿವೆಗಳು ತಂಪಾಗಿರುತ್ತವೆ. ಪಿರ್ ಪಂಜಾಲ್ ಶ್ರೇಣಿಯ ದಕ್ಷಿಣಕ್ಕೆ ಮುಂಗಾರು ಸ್ತಬ್ಧವಾಗುತ್ತದೆ. ಉ.ಅ.$34^0$ಯ ಮೇಲೆ, ಸಮುದ್ರಮಟ್ಟದಿಂದ 1500 ಮೀ ಎತ್ತರದಲ್ಲಿರುವ ಶ್ರೀನಗರದ್ದು ಸಮಶೀತೋಷ್ಣ ಹಾಗೂ ಮೆಡಿಟರೇನಿಯನ್ ಪ್ರರೂಪಿ ವಾಯುಗುಣ. ಕಾಶ್ಮೀರ ಕಣಿವೆಯಲ್ಲಿ ಜುಲೈ, ಆಗಸ್ಟ್ ತಿಂಗಳುಗಳು ಮಳೆಗಾಲ. ಆ ತಿಂಗಳುಗಳಲ್ಲಿ ಸರಾಸರಿ ಮಳೆ ಅನುಕ್ರಮವಾಗಿ 6 ಸೆಂಮೀ ಮತ್ತು 6.2 ಸೆಂಮೀ ಆಗಸ್ಟ್ ಗರಿಷ್ಠ ಉಷ್ಣತೆಯ ತಿಂಗಳು. ಸರಾಸರಿ ವಾರ್ಷಿಕ ಮಳೆ ಶ್ರೀನಗರದಲ್ಲಿ 70 ಸೆಂಮೀ.

**ಸಸ್ಯ ಸಂಪತ್ತು :** ರಾಜ್ಯದ ಅರಣ್ಯಗಳ ಒಟ್ಟು ವಿಸ್ತೀರ್ಣ 21,240 ಚ.ಕಿಮೀ. ವಾಯುಗುಣ, ಮಳೆ, ಭೂಗುಣ ಹಾಗೂ ಭೂಮಟ್ಟಗಳಿಂದ ಸಸ್ಯವರ್ಗ ಪ್ರಭಾವಿತ. ದಕ್ಷಿಣ ಭಾಗದಲ್ಲಿ ಕುರುಚಲು ಅರಣ್ಯ, ವಿವಿಧ ಜಲಸಸ್ಯಗಳು, ಮಾವು ಇವೆ. ಜಮ್ಮು ಭಾಗದ ಶಿವಾಲಿಕ್ ಬೆಟ್ಟ ಪ್ರದೇಶದಲ್ಲಿ ಕುರುಚಲುಕಾಡು. ಕಾಶ್ಮೀರ ಕಣಿವೆಯ ದಕ್ಷಿಣ ಅಂಚಿನ ಪಿರ್ ಪಂಜಾಲ್ ಕಣಿವೆಯ 288 ಕಿಮೀ ಉದ್ದಕ್ಕೂ ವಿವಿಧ ಮರಗಿಡಗಳೂ ಹುಲ್ಲುಗಾವಲುಗಳೂ ಮೂಲಿಕೆ ಗಿಡಗಳೂ ಉಂಟು. ಕಾಶ್ಮೀರ ಕಣಿವೆಯಲ್ಲಿ ಜೌಗು ಭೂಮಿ ಹೆಚ್ಚು ; ನಾನಾ ತರದ ಕಾಡು ಹೂ, ಹಳದಿ ಐರಿಸ್ ಹೂ ಗಿಡಗಳು ಬೆಳೆಯುತ್ತವೆ. ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಫಿರ್, ಬರ್ಚ್, ಹೇಜಲ್, ಓಕ್,

ಮೇಪಲ್, ಬೀಚ್ ಮೊದಲಾದ ಮರಗಳಿವೆ. ಚೌಬೀನೆಗೆ ಯೋಗ್ಯವಾದ ವೃಕ್ಷಗಳು ಹಾಗೂ ದೇವದಾರು ಮರಗಳು ಹೇರಳ. ಮರದ ದಿಮ್ಮಿಗಳನ್ನು ನದಿಗಳಲ್ಲಿ ಸಾಗಿಸುತ್ತಾರೆ. ಲಡಾಕ್ ಪ್ರದೇಶದಲ್ಲಿ ಸಸ್ಯ ಸಂಕುಲ ಕಡಿಮೆ.

**ಪ್ರಾಣಿಗಳು :** ಅರಣ್ಯಗಳಲ್ಲಿ ಐಬೆಕ್ಸ್, ಕಾಡುಮೇಕೆ, ತೋಳ, ನರಿ, ಕೆಂಪು ಮತ್ತು ಕಪ್ಪು ಕರಡಿ, ಕಾಡುಹಂದಿ, ಕಸ್ತೂರಿಮೃಗ ಕಂಡುಬರುತ್ತವೆ. ಸರೋವರಗಳಲ್ಲಿ ವಿವಿಧ ಬಾತುಗಳು, ಉಲ್ಲಂಗಿ ಹಕ್ಕಿ, ಕೊಕ್ಕರೆ, ಮೀನು. ಆಮೆ, ಇವೆ. ಜೀವಂಜೀವ, ಗವುಜಗ ಮೊದಲಾದ ಹಕ್ಕಿಗಳಿವೆ.

ಸಾಕುಪ್ರಾಣಿಗಳಲ್ಲಿ ಪ್ರಮುಖವಾದವು ಚಮರೀಮೃಗ ಮತ್ತು ಜೆಹೊ. ಜೆಹೊ ಎಂಬುದು ಹಸು ಮತ್ತು ಚಮರೀಮೃಗಗಳ ಅಡ್ಡತಳಿ.

**ಖನಿಜಗಳು :** ಜಮ್ಮು ಜಿಲ್ಲೆಯ ಕಾಲಕೋಟ್, ಚಿನ್‌ಪುರ್, ರಿಯಾಸಿ, ಗೋವ ಬೆರ್, ಸಿಯಾರ್ ಮತ್ತು ಕಾಶ್ಮೀರ ಕಣಿವೆಯ ನಿಚಹೋಮದಲ್ಲಿ ಕಲ್ಲಿದ್ದಲು ನಿಕ್ಷೇಪಗಳಿವೆ. ಪಿಂಗಾಣಿ ಮಣ್ಣು, ಮುಲಾಮು ತಯಾರಿಕೆಯಲ್ಲಿ ಉಪಯೋಗಿಸುವ ಒಚ್ರಿ ಕಾವಿ ಮಣ್ಣು, ತಾಮ್ರ, ಬಾಕ್ಸೈಟ್, ನಿಕ್ಕಲ್, ಸೀಸ, ಕಬ್ಬಿಣದ ಅದಿರು–ಇವೂ ಸ್ವಲ್ಪ ಮಟ್ಟಿಗೆ ಸಿಗುತ್ತವೆ. ಪಚ್ಚೆ, ಕೆಂಪು, ಸ್ಫಟಿಕ ಮೊದಲಾದ ಶಿಲೆಗಳ ಪದರಗಳು ಪರ್ವತಗಳ ಕೆಲವು ಭಾಗಗಳಲ್ಲಿವೆ.

**ಸಂವಿಧಾನ ಮತ್ತು ಸರ್ಕಾರ :** 26ರ ಅಕ್ಟೋಬರ್ 1947ರಂದು ಜಮ್ಮು ಮತ್ತು ಕಾಶ್ಮೀರ ಸಂಸ್ಥಾನ ಭಾರತದಲ್ಲಿ ವಿಲೀನಗೊಂಡಿತು. ರಾಜ್ಯಕ್ಕೆ ಸಂವಿಧಾನವನ್ನು ರಚಿಸಲು 1951ರಲ್ಲಿ ಸಂವಿಧಾನ ಸಭೆ ಏರ್ಪಟ್ಟಿತು. ವಯಸ್ಕರ ಮತದಾನದ ಪ್ರಕಾರ ಚುನಾವಣೆಗಳು ನಡೆದುವು. ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜತ್ವ ರದ್ದಾಗಬೇಕೆಂದೂ ಪ್ರಜಾಸತ್ತಾತ್ಮಕ ರಾಜ್ಯ ಭಾರತಕ್ಕೆ ಸೇರಬೇಕೆಂದೂ ಸಭೆ ಐತಿಹಾಸಿಕ ನಿರ್ಣಯ ಕೈಗೊಂಡಿತು. ನವೆಂಬರ್ 1952ರಲ್ಲಿ ರಾಜಪ್ರಭುತ್ವ ರದ್ದಾಯಿತು. 26 ಜನವರಿ, 1957ರಲ್ಲಿ ಹೊಸ ಸಂವಿಧಾನ ಜಾರಿಗೆ ಬಂತು.

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಶಾಸಕಾಂಗ ದ್ವಿಸದನಗಳಿಂದ ಕೂಡಿದ್ದು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಇರುತ್ತವೆ. ರಾಜ್ಯಕ್ಕೆ ಕೇಂದ್ರ ಸಂಸತ್ತಿನ ಲೋಕಸಭೆ ರಾಜ್ಯಸಭೆಗಳಲ್ಲೂ ಪ್ರಾತಿನಿಧ್ಯವಿದೆ.

ಪರಮೋಚ್ಚ ನ್ಯಾಯಾಲಯದ ಮತ್ತು ಚುನಾವಣಾ ಆಯೋಗದ ಅಧಿಕಾರ ರಾಜ್ಯಕ್ಕೂ ವ್ಯಾಪಿಸುತ್ತದೆ. ಕೇಂದ್ರ ಸರ್ಕಾರದ ಕಾನೂನುಗಳನ್ನು ರಾಜ್ಯ ಸರ್ಕಾರ ಅಳವಡಿಸಿಕೊಂಡಿದೆ.

ರಾಜ್ಯಪಾಲರು ರಾಜ್ಯದ ಆಡಳಿತ ಮುಖ್ಯರು. ಮುಖ್ಯಮಂತ್ರಿಯಿಂದ ಕೂಡಿದ ಮಂತ್ರಿಮಂಡಲವಿದೆ. ಆಡಳಿತ ಜಿಲ್ಲೆಗಳು ಹತ್ತು: ಕಾಟುವಾ, ಜಮ್ಮು, ಉಧಮ್‌ಪುರ, ದೋದಾ, ಅನಂತನಾಗ್, ಶ್ರೀನಗರ, ಬಾರಾಮುಲ, ಪುಂಚ್, ರಾಜೂರಿ ಮತ್ತು ಲಡಾಕ್.

**ಶಿಕ್ಷಣ :** 2001ರ ಜನಗಣತಿಯ ಪ್ರಕಾರ ರಾಜ್ಯದ ಸಾಕ್ಷರತೆ ಸರಾಸರಿ ಶೇ. 54.46 ಗ್ರಾಮೀಣರ ಸಂಖ್ಯೆ ಶೇ. 48.22. 5 ವಿಶ್ವವಿದ್ಯಾನಿಲಯಗಳೂ 41 ಕಾಲೇಜುಗಳು ಇವೆ. 2004ರಲ್ಲಿ 168 ಪ್ರೌಢಶಾಲೆಗಳು, 1030 ಮಾಧ್ಯಮ, 2560. ಪ್ರಾಥಮಿಕ ಶಾಲೆಗಳಿದ್ದವು.

**ವ್ಯವಸಾಯ :** ಪರ್ವತಗಳು, ಕಮರಿಗಳು ಹಾಗೂ ಹಿಮ ಹೆಚ್ಚಾಗಿರುವುದರಿಂದ ಸಾಗುವಳಿಗೆ ಒಳಪಟ್ಟ ಭೂಮಿ ಕಡಿಮೆ. ರಾಜ್ಯದ ಶೇ.80ರಷ್ಟು ಮಂದಿಯ ಕಸಬು ವ್ಯವಸಾಯ. ಬತ್ತ ಮತ್ತು ಮುಸುಕಿನ ಜೋಳ ಮುಖ್ಯ ಬೆಳೆಗಳು. ಪರ್ವತ ಭಾಗಗಳಲ್ಲಿ 2135 ಮೀ ಎತ್ತರದಲ್ಲೂ ಬತ್ತ ಬೆಳೆಯುತ್ತದೆ. ಹೆಚ್ಚಿನ ಗೋದಿ ಬೆಳೆಯುವುದು ಜಮ್ಮು ಪ್ರದೇಶದಲ್ಲಿ. ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತನೆ, ಜೂನ್ ತಿಂಗಳಲ್ಲಿ ಕುಯಿಲು. ಬಾರ್ಲಿ, ಜೋಳ, ಎಣ್ಣೆಬೀಜಗಳು ಸ್ವಲ್ಪಮಟ್ಟಿಗೆ ಬೆಳೆಯುತ್ತವೆ. ಕುಂಕುಮ ಕೇಸರಿ ಕಾಶ್ಮೀರ ಕಣಿವೆಯಲ್ಲಿ ಬೆಳೆಯುತ್ತದೆ. ಇದರಿಂದ ರಾಜ್ಯಕ್ಕೆ ಒಳ್ಳೆಯ ಆದಾಯವುಂಟು.

ರಾಜ್ಯ ಹಣ್ಣಿನ ಬೆಳೆಗೆ ಪ್ರಸಿದ್ಧ. ಸೇಬು, ಮರಸೇಬು, ಪ್ಲಮ್, ಪೀಚಸ್, ಏಪ್ರಿಕಾಟ್, ವಾಲ್‌ನಟ್, ದ್ರಾಕ್ಷಿ, ಮಾವು, ಬಾಳೆ, ಕಿತ್ತಲೆ–ಇವು ಬೆಳೆಯುತ್ತವೆ.

ಪರ್ವತ ಭಾಗಗಳ ಮೇಡುಗಳಲ್ಲಿ ನದಿಗಳು ರಭಸದಿಂದ ಹರಿಯುವುದರಿಂದ ಮತ್ತು ನೀರು ಮಂಜುಗಟ್ಟಿರುವುದರಿಂದ ನೀರಾವರಿ ಕಷ್ಟ. ರಾಜ್ಯದ ಕಣಿವೆಗಳಲ್ಲಿ ನೀರ್ಗಾಲುವೆಗಳು ಹೇರಳ. ರಣಭೀರ್ ನಾಲ, ಪ್ರತಾಪ ನಾಲ, ಬಸಂತಪುರ್ ನಾಲ, ಉಜ್‌ನಾಲ, ಝೀಲಂ ನಾಲ–ಇವು ಬಂಜರು ಪ್ರದೇಶಗಳನ್ನು ಸಾಗುವಳಿಗೆ ತಂದಿವೆ. ರಣಭೀರ್ ನಾಲ 400 ಕಿಮೀ ಹರಿಯುತ್ತದೆ. ಝೀಲಂ ನದಿಯ ಪ್ರವಾಹ 1950, 1953, 1956.1957 ಮತ್ತು 1959ರಲ್ಲಿ ಹೆಚ್ಚು ನಷ್ಟ ಉಂಟುಮಾಡಿತು. ನದಿಗಳ ಪ್ರವಾಹದಿಂದ ಬೆಳೆಗಳನ್ನು ರಕ್ಷಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ.

ಕೈಗಾರಿಕೆ ಮತ್ತು ವಾಣಿಜ್ಯ : ಮುಖ್ಯ ಕೈಗಾರಿಕೆ ಉಣ್ಣೆ ಬಟ್ಟೆ ಮತ್ತು ಕಂಬಳಿ ತಯಾರಿಕೆ, ಪಿಂಗಾಣಿ ಸಾಮಾನು, ಔಷಧವಸ್ತು, ಬೆಂಕಿಕಡ್ಡಿ, ಸಿಮೆಂಟ್, ಚರ್ಮ ಹದಗಾರಿಕೆ, ಕರ್ಪೂರ ತೈಲ, ರೇಷ್ಮೆ–ಇವುಗಳ ಕಾರ್ಖಾನೆಗಳಿವೆ. ಕುಶಲಕಲೆ, ಕೈಕಸಬು, ಕೆತ್ತನೆ ಕೆಲಸಗಳಿಗೆ ರಾಜ್ಯ ಹೆಸರಾಗಿದೆ. ಸುಂದರವಾಗಿ ಕಸೂತಿ ಹಾಕಿದ ಶಾಲುಗಳು, ಕಾಶ್ಮೀರಿ ಜಮಖಾನೆಗಳು, ಕೃತಕ ಆಭರಣಗಳು ತಯಾರಾಗುತ್ತವೆ. ಕಾಗದದ ತಿರುಳಿನಿಂದ ವಿವಿಧ ವಸ್ತುಗಳನ್ನು ತಯಾರಿಸುತ್ತಾರೆ. ವಿಲೋ ಕಡ್ಡಿಗಳಿಂದ ಬುಟ್ಟಿ, ಸೋಫ, ಕುರ್ಚಿ, ಪೆಟ್ಟಿಗೆ ಮೊದಲಾದ ವಸ್ತುಗಳನ್ನು ಚಳಿಗಾಲದಲ್ಲಿ ತಯಾರಿಸುತ್ತಾರೆ. ಈ ವಸ್ತುಗಳನ್ನು ಬೇಸಗೆಯಲ್ಲಿ ಅಲ್ಲಿಗೆ ಬರುವ ಪ್ರವಾಸಿಗರಿಗೆ ಮಾರುತ್ತಾರೆ. 2003–04ರಲ್ಲಿ ಗೃಹ ಕೈಗಾರಿಕೆ 8.21 ಕೋಟಿ ರೂಪಾಯಿಗಳ ಆದಾಯ ತಂದಿತ್ತು. ಸು. 3.40 ಲಕ್ಷ ಮಂದಿಗೆ ಉದ್ಯೋಗ ಒದಗಿಸಿತ್ತು.

ವಿದ್ಯುತ್ ಉತ್ಪಾದನ ಕೇಂದ್ರಗಳಲ್ಲಿ ಮುಖ್ಯವಾದವು ಗಂದರ್‌ಬಲ್‌ನಲ್ಲಿರುವ ಸಿಂದ್‌ನಾಲಾ ಜಲವಿದ್ಯುತ್ ಕೇಂದ್ರ, ಪಹಲ್ಗಾಂ ಬಳಿಯ ಝೀಲಂ ಜಲವಿದ್ಯುತ್ ಕೇಂದ್ರ, ಲಡಾಕ್‌ನ ಕಾರ್ಗಿಲ್ ಮತ್ತು ಲೇ ನಗರಗಳ ವಿದ್ಯುತ್ ಕೇಂದ್ರಗಳು, ಜಮ್ಮು ಪ್ರದೇಶದ ಸಲಾಲ್ ಜಲವಿದ್ಯುತ್ ಕೇಂದ್ರ.

ರಾಜ್ಯ ಆಮದು ಮಾಡಿಕೊಳ್ಳುವ ವಸ್ತುಗಳು ಹತ್ತಿ ಬಟ್ಟೆ, ಸಕ್ಕರೆ, ಚಹ, ಉಪ್ಪು, ಹೊಗೆಸೊಪ್ಪು, ಔಷಧ, ಯಂತ್ರೋಪಕರಣ. ರಾಜ್ಯದಿಂದ ರಫ್ತಾಗುವ ವಸ್ತುಗಳು ಉಣ್ಣೆ ಬಟ್ಟೆ, ಶಾಲು, ಜಮಖಾನೆ, ಚರ್ಮ, ಚೌಬೀನೆ, ರೇಷ್ಮೆ, ಕುಂಕುಮಕೇಸರಿ, ಹಣ್ಣುಗಳು.

**ಸಾರಿಗೆ ಸಂಪರ್ಕ :** ಎತ್ತರದ ಪರ್ವತ ಮಾರ್ಗಗಳಲ್ಲಿ ಚಮರೀಮೃಗ ಮತ್ತು ಮೇಕೆಗಳ ಮೇಲೆ ಸಾಮಾನುಗಳನ್ನು ಹೇರಿ ಪ್ರಯಾಣ ಮಾಡುತ್ತಾರೆ. ತಗ್ಗು ಪ್ರದೇಶಗಳಲ್ಲಿ ಕುದುರೆ ಮತ್ತು ಹೇಸರಗತ್ತೆಗಳ ಉಪಯೋಗ, ಕಡಿದಾದ ಭಾಗಗಳಲ್ಲಿ ಸ್ಲೆಡ್ಜ್ ಮಾದರಿಯ ಚಕ್ರವಿಲ್ಲದ ಬಂಡಿಗಳನ್ನು ಉಪಯೋಗಿಸುತ್ತಾರೆ.

ಪಠಾಣ್‌ಕೋಟ್–ಜಮ್ಮು–ಕಾಶ್ಮೀರ ರಸ್ತೆ ರಾಜ್ಯದ ಬಹು ಮುಖ್ಯ ಹೆದ್ದಾರಿ. ಕಾಶ್ಮೀರ ಕಣಿವೆಯಲ್ಲಿ ರಸ್ತೆಗಳು ಹಾಸುಹೊಕ್ಕಾಗಿ ಸಾಗಿ ಮುಖ್ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುತ್ತವೆ. ಇತರ ಮುಖ್ಯ ರಸ್ತೆ ಮಾರ್ಗಗಳು: ಝೀಲಂ ಕಣಿವೆ ರಸ್ತೆ, ಬನಿಹಾಲ್ ರಸ್ತೆ ಮತ್ತು ಗಿಲ್ಗಿಟ್ ರಸ್ತೆ. ಕೆಲವು ರಸ್ತೆಗಳು ತೀರ ಕಿರಿದಾಗಿವೆ; ಅವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತವೆ. ರಾಜ್ಯದಲ್ಲಿ ನಬಾರ್ಡ್, ಸಿ.ಆರ್.ಎಫ್ ಇವುಗಳ ಮೂಲಕ ವಿವಿಧ ರಸ್ತೆ ನಿರ್ಮಾಣ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ ಲೋಕೋಪಯೋಗಿ ಇಲಾಖೆಯ ಉಸ್ತುವಾರಿಗೆ 15,102 ಕಿಮೀ ರಸ್ತೆ ಸೇರಿದೆ.

ರಾಜ್ಯದಲ್ಲಿ ಒಳನಾಡಿನ ಜಲಮಾರ್ಗಗಳು ಹೆಚ್ಚು, ಅಗ್ಗ ಹಾಗೂ ಅನುಕೂಲಕರ. ಕಾಶ್ಮೀರ ಕಣಿವೆಯಲ್ಲಿ ಖಾನಾಬಾಲ್‌ನಿಂದ ಬಾರಾಮುಲವರೆಗೆ ಜಲಯಾನವಿದೆ. ಶಿಕಾರಾ ಎಂಬ ಪ್ರಯಾಣಿಕ ದೋಣಿಯಲ್ಲಿ ಐವತ್ತು ಪ್ರಯಾಣಿಕರು ಸಂಚರಿಸಬಹುದು. ಸರಕು ಸಾಗಿಸಲು ಡೂಂಗ ಎಂಬ ದೋಣಿಗಳಿವೆ; ಕೆಲವು ಕಡೆ ದೋಣಿಗಳಲ್ಲೇ ಜನ ವಾಸಿಸುತ್ತಾರೆ. ಪ್ರವಾಸಿಗರ ಉಪಯೋಗಕ್ಕೆ ಗೃಹ ದೋಣಿಗಳಿವೆ.

ಜಮ್ಮು–ಸಿಯಾಲ್ ಕೋಟ್ ನಡುವೆ ರೈಲುಮಾರ್ಗವಿದೆ. ಇದು ವಾಯವ್ಯ ರೈಲ್ವೆ ವಿಭಾಗದ ಶಾಖೆ. ಪಠಾಣ್ ಕೋಟ್ ರೈಲುಮಾರ್ಗವನ್ನು ಕಾಟುವಾ ಜಿಲ್ಲೆಗೆ ವ್ಯಾಪಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರ ನಗರಗಳಲ್ಲಿ ವಿಮಾನ ನಿಲ್ದಾಣಗಳು ಇವೆ. ಶ್ರೀನಗರದಿಂದ ದೆಹಲಿ, ಪಠಾಣ್ ಕೋಟ್ ಮತ್ತು ಜಮ್ಮು ನಗರಗಳಿಗೆ ವಿಮಾನ ಸಂಚಾರವುಂಟು.

**ಪ್ರವಾಸ :** ಶ್ರೀನಗರಕ್ಕೆ ಸಮೀಪದಲ್ಲಿ ಮೊಗಲರ ಕಾಲದ ಹಲವು ತೋಟಗಳಿವೆ. ನಗರದ ಸುತ್ತಮುತ್ತಣ ಪ್ರದೇಶದಲ್ಲಿ ಮನೋಹರವಾದ ಸರೋವರಗಳುಂಟು. ದಾಲ್ ಸರೋವರದಲ್ಲಿ ತೆಪ್ಪದ ತೋಟಗಳಿವೆ. ಪ್ರಯಾಣಿಕರ ಸಂಚಾರಕ್ಕೆ ದೋಣಿಗಳು, ತಂಗಲು ಸರೋವರದಲ್ಲಿ ತೇಲುವ ಗೃಹದೋಣಿಗಳು ಉಂಟು. ವೂಲಾರ್ ಸರೋವರ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಗುಲ್ಮಾರ್ಗ್ ರಮಣೀಯವಾದ ಹೂಗಾವಲು ; ಚಳಿಗಾಲದ ಸ್ಕೇಟಿಂಗ್ ಕ್ರೀಡೆಯ ಕೇಂದ್ರ. ಶ್ರೀನಗರಕ್ಕೆ 96 ಕಿಮೀ ದೂರದಲ್ಲಿರುವ ಪಹಲ್ಗಾಂ ಮತ್ತೊಂದು ಸುಂದರ ಸ್ಥಳ. ಅಲ್ಲಿಂದ 46 ಕಿಮೀ ದೂರದಲ್ಲಿರುವ ಅಮರನಾಥ್ ಗುಹಾಲಯವಿದೆ. ಶ್ರೀನಗರದಿಂದ ಈಶಾನ್ಯಕ್ಕೆ 82 ಕಿಮೀ. ದೂರದಲ್ಲಿರುವ ಸೋನಾಮಾರ್ಗ ಪ್ರವಾಸಿಕ್ಷೇತ್ರ. ಶ್ರೀನಗರದ ಬಳಿ ಶಂಕರಾಚಾರ್ಯರ ಬೆಟ್ಟವಿದೆ. ನಗರದಲ್ಲಿ ಪ್ರತಾಪ್‌ಸಿಂಗ್ ವಸ್ತುಸಂಗ್ರಹಾಲಯವುಂಟು.

ಜಮ್ಮು ಜಿಲ್ಲೆಯ ಬಹುಕೋಟೆ, ರಾಂನಗರದ ಅಮರ್‌ಮಹಲ್ ಅರಮನೆ, ಕಪೂರಗಢದ ಕೋಟೆ, ಆಖ್–ನೂರ್ ಮತ್ತು ಸಾಂಬ ಕೋಟೆಗಳು, ಉಧಮ್‌ಪುರದ ಬಳಿಯ ಪ್ರಾಚೀನ ದೇವಾಲಯಗಳು–ಇವು ಆಕರ್ಷಣೀಯ ಸ್ಥಳಗಳು.

ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರ 9,71,357. ಜಮ್ಮು 6,07,642 (2002) ಇನ್ನೊಂದು ಮುಖ್ಯ ನಗರ. ಇದು ಚಳಿಗಾಲದ ರಾಜಧಾನಿ. (ಬಿ.ಎಂ.)

**ಜಮ್ಷೆಡ್‌ಪುರ:** ಬಿಹಾರ ರಾಜ್ಯದ ಸಿಂಘ್‌ಭೂಮ್ ಜಿಲ್ಲೆಯಲ್ಲಿರುವ ಉಕ್ಕು ತಯಾರಿಕೆ ನಗರ. ಮುಂಬಯಿ–ನಾಗಪುರ–ಕೋಲ್ಕತ ರೈಲುಮಾರ್ಗದಲ್ಲಿ, ಕೋಲ್ಕತದಿಂದ ಪಶ್ಚಿಮ–ವಾಯವ್ಯಕ್ಕೆ 250 ಕಿಮೀ ದೂರದಲ್ಲಿ ಖನಿಜ ನಿಕ್ಷೇಪಯುಕ್ತವಾದ ಛೋಟಾ ನಾಗಪುರ ಪ್ರಸ್ಥಭೂಮಿಯ ಆಗ್ನೇಯ ಅಂಚಿನ ಬಳಿ, ಉ.ಅ.22° 44′ ಮತ್ತು ಪೂ.ರೇ. 86° 20′ ಮೇಲೆ ಇದೆ. ಜನಸಂಖ್ಯೆ 1.1 ಮಿಲಿಯನ್. ಇದೊಂದು ಆಧುನಿಕ ಸುಯೋಜಿತ ನಗರ. ಸುವರ್ಣರೇಖಾ, ಖಾರ್‌ಖಾಯಿ ಹಾಗೂ ಸಂಜಯ್ ನದಿಗಳ ಸಂಗಮದ ಬಳಿ 73 ಚ.ಕಿಮೀ ಪ್ರದೇಶದಲ್ಲಿ ನಿರ್ಮಿತವಾಗಿದೆ. ಸಾಕ್ಚಿ ಎಂಬ ಸಣ್ಣ ಹಳ್ಳಿ ಇದ್ದ ಸ್ಥಳದಲ್ಲಿ ಈ

ನಗರ ಬೆಳೆದಿದೆ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಾಗಿ ಸ್ಥಳವನ್ನು ಆರಿಸುವುಕ್ಕೆ ಚಂದಾ ಜಿಲ್ಲೆಯ ಮತ್ತು ಮಧ್ಯ ಪ್ರದೇಶದ ದುರ್ಗ್ ಜಿಲ್ಲೆಯ ಕಬ್ಬಿಣ ಅದಿರಿನ ನಿಕ್ಷೇಪಗಳ ಪ್ರದೇಶಗಳನ್ನು ಪರಿಶೋಧಿಸಲಾಯಿತು. ಆದರೆ ಅವಕ್ಕಿಂತ ಜಮ್‌ಷೆಡ್‌ಪುರದ ನಿವೇಶನ ಎಲ್ಲ ರೀತಿಗಳಲ್ಲೂ ಅನುಕೂಲಕರವೆಂದು ವೇದ್ಯವಾಯಿತು. ಕಿಟ್ಟದ ಕಲ್ಲಿದ್ದಲೇ ಮುಂತಾದವನ್ನು ಕೈಗಾರಿಕಾ ನಿವೇಶನಕ್ಕೆ ಸಾಗಿಸುವುದರ ತೊಂದರೆಯ ದೃಷ್ಟಿಯಿಂದ ಆ ನಿವೇಶನಗಳನ್ನು ಕೈಬಿಡಲಾಯಿತು. 1907ರಲ್ಲಿ ಇಲ್ಲಿ ಟಾಟಾ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸ್ಥಾಪಿತವಾಯಿತು. ಶೀಘ್ರವಾಗಿ ಈ ಕೈಗಾರಿಕೆಯೊ ಇತರ ಸಂಬಂಧಿತ ಕೈಗಾರಿಕೆಗಳೂ ಇಲ್ಲಿ ಬೆಳೆದುವು. ಕಬ್ಬಿಣ–ಉಕ್ಕಿನ ಕಾರ್ಖಾನೆಯ ಸ್ಥಾಪಕರಾದ, ಭಾರತದ ಆದ್ಯಪ್ರವರ್ತಕ ಉದ್ಯಮಪತಿಗಳಾದ ಜಮ್ಷೆಡ್‌ಜಿ ನಸರ್ ವಾಂಜಿ ಟಾಟಾ ಅವರ ಹೆಸರಿನಲ್ಲಿ ಇದಕ್ಕೆ ಜಮ್ಷೆಡ್‌ಪುರ ಎಂಬ ಹೆಸರು ಬಂದಿದೆ. ಅರಣ್ಯಾವೃತ ಹಾಗೂ ವ್ಯವಸಾಯ ಪ್ರದೇಶದ ನಡುವೆ ಜಮ್ಷೆಡ್‌ಪುರ ನಗರ ಒಂದು ಭಾರಿ ಕೈಗಾರಿಕಾ ದ್ವೀಪದಂತಿದೆ. ಬಹುತೇಕ ಆದಿವಾಸಿ ಜನರಿರುವ ಈ ಪ್ರದೇಶ ಬಂಡವಾಳದ ಉದ್ಯಾನದಂತಿದೆ.

ಸನ್ನಿವೇಶದ ದೃಷ್ಟಿಯಿಂದ ಜಮ್ಷೆಡ್‌ಪುರಕ್ಕೆ ಅನೇಕ ಅನುಕೂಲತೆಗಳುಂಟು. ಇಲ್ಲಿಂದ 245 ಕಿಮೀ ದೂರದಲ್ಲಿರುವ ಕೋಲ್ಕತ ಇದರ ಪ್ರಧಾನ ಬಂದರು. ಇದು ಪೂರ್ವತೀರಕ್ಕೆ ಬಹಳ ಹತ್ತಿರದಲ್ಲಿದೆ. ಕಬ್ಬಿಣ ಮತ್ತು ಉಕ್ಕಿನ ವಸ್ತುಗಳಿಗಾಗಿ ವಿಶಾಲ ಹಾಗೂ ಸಿದ್ಧಮಾರುಕಟ್ಟೆಯುಂಟು. ಹೊಸ ಕಾರ್ಖಾನೆಗಳ ಸ್ಥಾಪನೆಗೆ ಅನುಕೂಲವಾದ ಸೂಕ್ತವಾದ ಭೂಮಿ ದೊರೆಯುತ್ತದೆ. ಇಲ್ಲಿ ಕಬ್ಬಿಣದ ಅದಿರಿನ ಗಣಿಗಳುಂಟು. ಕಚ್ಚಾಸಾಮಗ್ರಿಗಳ ದೃಷ್ಟಿಯಿಂದಲೂ ಇದರ ಪ್ರಾಮುಖ್ಯ ಹೆಚ್ಚಿನದು. 110 ಕಿಮೀ ಅಂತರದಲ್ಲೇ ಅವು ಬಹುತೇಕ ಲಭ್ಯವಿವೆ. ಸಿಂಘ್‌ಭೂಮ್‌ನ ಕಬ್ಬಿಣ ಅದಿರಿನ ನಿಕ್ಷೇಪಗಳು ಅಗಾಧ. ಸು. 270 ಕೋಟಿ ಟನ್ ಹೆಮಟೈಟ್ ಇದೆಯೆಂಬುದು ಅಂದಾಜು. ಮಿಶ್ರಣ ಲೋಹಗಳ ಪೈಕಿ ಸ್ಥಳೀಯ ಮ್ಯಾಂಗನೀಸ್ ಹೆಚ್ಚು ವೆಚ್ಚದಾಯಕ. ಇದನ್ನು ಮಧ್ಯ ಪ್ರದೇಶದಿಂದ ತರಿಸಿಕೊಳ್ಳಬೇಕು. ಒರಿಸ್ಸದ ಕ್ರೋಮೈಟ್ ಹೆಚ್ಚು ಅಗ್ಗವಾಗಿ ದೊರಕುತ್ತದೆ. ತಾಪಧಾರಕವಾಗಿ (ರಿಫ್ರಾಕ್ಟರಿ) ಉಪಯುಕ್ತವಾದ ಕೈಯನೈಟ್ ಸ್ಥಳೀಯವಾಗಿ ಲಭ್ಯವಿದೆ. ಅಪಟೈಟೂ ದೊರಕುತ್ತದೆ. ಝೂರಿಯಾದಲ್ಲಿ ಕಾವು ಜೇಡು, ಮನ್‌ಭೂಮ್‌ನಲ್ಲಿ ಸಿಲಿಕ ದೊರಕುತ್ತವೆ. ತಾಮ್ರ ಭಾರತದಲ್ಲಿ ಹೆಚ್ಚಾಗಿ ಉತ್ಪಾದನೆಯಾಗುವುದಿಲ್ಲ, ಅದೊಂದು ಕೊರತೆಯ ಲೋಹ. ಜಮ್ಷೆಡ್‌ಪುರಕ್ಕೆ 56 ಕಿಮೀ ದೂರದಲ್ಲಿ ಸುವರ್ಣರೇಖಾ ನದಿಯ ದಂಡೆಗುಂಟ 2 ತಾಮ್ರ ನಿಕ್ಷೇಪಗಳುಂಟು. ಘಟ್ಸಿಲಾದಲ್ಲಿ ಕರಗಿಸಿ ಮನಭಂದರ್‌ದಲ್ಲಿ ಉರುಳೆಗಳನ್ನಾಗಿ ಮಾಡಲಾಗುತ್ತದೆ. ಉತ್ತರಕ್ಕೆ ಮುರಿಯಲ್ಲಿ ಅಲ್ಯೂಮಿನಿಯಂ ಸ್ಥಾವರ ಇದೆ. ಪುರುಲಿಯದಲ್ಲಿ ಪರಿಷ್ಕರಣ ಕೇಂದ್ರವುಂಟು. ದಕ್ಷಿಣಕ್ಕೆ ಒರಿಸ್ಸದ ಬಾಕ್ಸೈಟ್ ನಿಕ್ಷೇಪಗಳಿವೆ. ಬಾಕ್ಸೈಟನ್ನು ಹಿರಾಕುಡ್ ಜಲವಿದ್ಯುತ್ ಕೇಂದ್ರದಲ್ಲಿ ಕರಗಿಸಲಾಗುತ್ತದೆ. ಕಿಟ್ಟಕಲ್ಲಿದ್ದಲು ಮುಖ್ಯವಾಗಿ ಬರುವುದು ದಾಮೋದರ್ ಕಣಿವೆ ಪ್ರದೇಶದಿಂದ. ಸಾಮಗ್ರಿಗಳ ಲಭ್ಯತೆಯ ದೃಷ್ಟಿಯಿಂದ ಜಮ್ಷೆಡ್‌ಪುರಕ್ಕಿಂತ ಒಳ್ಳೆಯ ಸನ್ನಿವೇಶ ಪಡೆದಂಥ ಸ್ಥಳಗಳೂ ಹೆಚ್ಚಿಲ್ಲ.

ಕೈಗಾರಿಕೆಗೆ ಬೇಕಾದ ಕಾರ್ಮಿಕರು ಸ್ಥಳೀಯ ನಿವಾಸಿಗಳಲ್ಲಿ, ಮುಖ್ಯವಾಗಿ ಸಂತಾಲರಲ್ಲಿ ದೊರಕುತ್ತಾರೆ. ಹೆಚ್ಚು ಕುಶಲ ಕಾರ್ಮಿಕರು ಭಾರತದ ಎಲ್ಲೆಡೆಗಳಿಂದಲೂ ಮುಖ್ಯವಾಗಿ ಬಂಗಾಲ ಬಿಹಾರಗಳಿಂದ, ಬಂದಿದ್ದಾರೆ. ಕಬ್ಬಿಣದ ಉರುಳೆಗಳು, ವ್ಯವಸಾಯ ಉಪಕರಣಗಳು, ಉಕ್ಕಿನ ತಗಡುಗಳು, ಉಕ್ಕಿನ ತಂತಿ, ಹೊರಜಿಗಳು, ಮುಂತಾದ ಅನೇಕ ಕೈಗಾರಿಕೆಗಳ ಸಂಕೀರ್ಣ ಇದು. ತಾತಾ ಗುಂಪಿನ ಕೈಗಾರಿಕೆಗಳಲ್ಲದೆ ಇತರ ಅನೇಕ ಚಿಕ್ಕ–ದೊಡ್ಡ ಕಾರ್ಖಾನೆಗಳು ಇವೆ. ಸಾಮಾನ್ಯ ಮತ್ತು ವೈದ್ಯಕೀಯ ಕಾಲೇಜುಗಳೂ ರಾಷ್ಟ್ರೀಯ ಲೋಹಶಾಸ್ತ್ರ ಪ್ರಯೋಗಶಾಲೆಯೂ ಇವೆ. (ಬಿ.ಜಿ.ಟಿ.ಎ.)

**ಜರ್ಮನಿ:** ಮಧ್ಯ ಯುರೋಪಿನಲ್ಲಿರುವ ಒಂದು ಸ್ವತಂತ್ರ ರಾಷ್ಟ್ರ. ಎರಡನೆಯ ಮಹಾಯುದ್ಧದಲ್ಲಿ ಸೋತ ಜರ್ಮನಿಯನ್ನು ಹಾಗೂ ಅದರ ರಾಜಧಾನಿ ಬರ್ಲಿನನ್ನು ಪೂರ್ವ ಜರ್ಮನಿ, ಪೂರ್ವಬರ್ಲಿನ್ ಹಾಗೇ ಪಶ್ಚಿಮ ಜರ್ಮನಿ ಪಶ್ಚಿಮ ಬರ್ಲಿನ್ ಎಂಬುದಾಗಿ ಎರಡು ಭಾಗವಾಗಿ ವಿಂಗಡಿಸಲಾಗಿತ್ತು. ಮುಂದೆ 1990 ಅಕ್ಟೋಬರ್ 3 ರಂದು ಎರಡೂ ದೇಶಗಳು ಒಂದಾಗಿ ಒಟ್ಟುಗೂಡಿದ ಜರ್ಮನಿ ರಾಷ್ಟ್ರ ಹೊರಹೊಮ್ಮಿತ್ತು. ಉ.ಅ. $43^0$–$55^0$ ಮತ್ತು ಪೂ.ರೇ. $6^0$–$16^0$ ಗಳ ನಡುವೆ ಇದೆ.

ಉತ್ತರದಲ್ಲಿ ಡೆನ್ಮಾರ್ಕ್, ಉತ್ತರ ಸಮುದ್ರ (ನಾರ್ತ್‌ಸೀ) ಮತ್ತು ಬಾಲ್ಟಿಕ್ ಸಮುದ್ರ, ದಕ್ಷಿಣದಲ್ಲಿ ಸ್ವಿಟ್ಜರ್ಲೆಂಡ್, ಆಸ್ಟ್ರಿಯ, ಪೂರ್ವದಲ್ಲಿ ಪೋಲೆಂಡ್, ಚೆಕ್ ಗಣರಾಜ್ಯ ಪಶ್ಚಿಮದಲ್ಲಿ ನೆದರ್ಲೆಂಡ್ಸ್, ಲಕ್ಸಂಬರ್ಗ್, ಬೆಲ್ಜಿಯಮ್ ಮತ್ತು ಫ್ರಾನ್ಸ್ ಸುತ್ತುವರೆದಿವೆ. ಉತ್ತರ ದಕ್ಷಿಣವಾಗಿ 869 ಚ.ಕಿಮೀ, ಪೂರ್ವಪಶ್ಚಿಮವಾಗಿ 628 ಚ. ಕಿ.ಮೀ ಇದ್ದು, 2389 ಕಿಮೀ ಸಮುದ್ರ ತೀರಹೊಂದಿದೆ. ಇದರ ಒಟ್ಟು ವಿಸ್ತೀರ್ಣ 357021 ಚ.ಕಿಮೀ. ಜನಸಂಖ್ಯೆ 82,431,390 (2005). ಇದರಲ್ಲಿ ಶೇ 85 ರಷ್ಟು ನಗರ ವಾಸಿಗಳು. ಶೇ. 15 ಗ್ರಾಮವಾಸಿಗಳಾಗಿದ್ದಾರೆ. ರಾಜಧಾನಿ ಬರ್ಲಿನ್, ಜನಸಂಖ್ಯೆ : 34,71,418 (2003).

**ಭೂವಿಜ್ಞಾನ:** ಪೇಲಿಯೊಝೋಯಿಕ್ ಶಿಲೆಗಳಿಂದ ಜರ್ಮನಿಯ ಭೂಮಿ ರಚಿತವಾಗಿದೆ. ಅದರ ಮೇಲೆ ಅನನುರೂಪ್ಯತೆಯಿಂದ ಸಾಧಾರಣವಾಗಿ ಅತಿ ಸ್ವಲ್ಪ ಕ್ಷೋಭೆಗೊಳಗಾದ ಮೀಸೋಝೋಯಿಕ್ ಸ್ತರಗಳಿವೆ. ಆದರೆ ಹಿಮನದಿ ನಿಕ್ಷೇಪಗಳಿಂದ ಮುಚ್ಚಿರುವ ಉತ್ತರ ಜರ್ಮನಿಯ ಈ ಬಯಲು ಪ್ರದೇಶದಲ್ಲಿ ಹಿಂದಿನ ಸ್ತರಗಳು ಗೋಚರಿಸದೆ ಕೆಲವು ಕಡೆಗಳಲ್ಲಿ ಮಾತ್ರ ಚದುರಿದಂತೆ ಕ್ರಿಟೇಷಸ್ ಸಮುದಾಯದ ಮತ್ತು ತೃತೀಯ ಭೂಕಾಲದ ಸ್ತರಗಳ ಹೊರಶಿಲೆಗಳು ಕಾಣುತ್ತವೆ. ರೈನ್ ಪ್ರಸ್ಥಭೂಮಿಯಲ್ಲಿ ಮತ್ತು ಹಾರ್ಟ್ಸ್‌ಪರ್ವತದ ಮಧ್ಯೆ ಇರುವ ಹರ್ಸಿನಿಯನ್ ಭೂಪ್ರದೇಶದ ಉತ್ತರದ ಅಂಚಿನಲ್ಲಿರುವ ಮೀಸೋಝೋಯಿಕ್ ಕಲ್ಪದ ಅದರಲ್ಲೂ ಮುಖ್ಯವಾಗಿ ಕ್ರಿಟೇಷಸ್ ಸ್ತರಗಳನ್ನು ಮಾರ್ಪಾಡುಮಾಡಿವೆ. ಈ ಮಡಿಕೆಗಳ ಚಟುವಟಿಕೆಗಳು ಜುರಾಸಿಕ್ ಮೇಲ್ಭಾಗದ ಕಾಲದಿಂದ ಪ್ರಾರಂಭವಾಗಿ ಮಯೋಸೀನ್ ಕಾಲದವರೆಗೂ ನಡೆದಿವೆ. ವಿಮುಖಾವನತ ಮತ್ತು ಸಮುಖಾವನತ ಮಡಿಕೆಗಳ ಸವೆತದಿಂದ ಏಣು, ಕೊಡುಗೆರೆ, ಕಣಿವೆ ಮತ್ತು ಕಂದರಗಳು ಉತ್ಪನ್ನವಾಗಿ ಅವುಗಳಲ್ಲಿ ಕೆಲವು ವಿಪರ್ಯಯ ಸ್ಫುಟತ್ವ ಪಡೆದು ಹೊರಭಾಗದಲ್ಲಿ ಕೂಡುಗೆರೆಗಳು ಇಳಿಜಾರನ್ನು ತೋರಿಸುತ್ತವೆ. ಈ ಮಡಿಕೆಗಳು ವಾಯವ್ಯದಿಂದ ಆಗ್ನೇಯದ ಕಡೆ ಮುಂದುವರಿದಿರುವುವಲ್ಲದೆ ತ್ಯುರಿಂಜಿಯದ ಸ್ತರಭಂಗದಿಂದ ಉತ್ಪನ್ನವಾದ ದಿಬ್ಬಗಳು ಇರುವ ದಿಕ್ಕಿಗೆ ಸಮವಾಗಿವೆ. ವೆಸ್ಟ್ ಫೇಲಿಯದ ದಿಬ್ಬಗಳು ವಿಮುಖಾವನತ ಮಡಿಕೆಗಳ ಸವೆತದಿಂದ ಉತ್ಪನ್ನವಾಗಿವೆ. ವಾಯವ್ಯದಿಂದ ಆಗ್ನೇಯದ ಕಡೆ ಮುಂದುವರಿದ ಅನೇಕ ವಿಧವಾದ ಏಣುಗಳಲ್ಲಿ ಕೆಲವು ವಿಪರ್ಯಯ ಸ್ಫುಟತ್ವ ತೋರಿಸುವುವಲ್ಲದೆ ಲೀನ್, ವೀಸರ್ ಮತ್ತು ಹಾರ್ಟ್ಸ್‌ನ ಉತ್ತರ ಗಡಿಯಲ್ಲಿರುವ ಬಂಕೆಮಣ್ಣಿನ ಬಯಲು ಪ್ರದೇಶದಿಂದ ಹೊರಹೊಮ್ಮಿವೆ.




ಜ್ವಾಲಾಮುಖಿತ್ವ ತೃತೀಯ ಕಾಲದ ಭೂಚಲನೆಯಿಂದ ತೊಡಗಿ ಹಿಮಕಾಲದವರೆಗೂ ಮುಂದುವರಿದಿವೆ. ಲಾವಾದಿಂದ ಜನಿಸಿದ ಬೆಸಾಲ್ಟ್ ಮಧ್ಯಫ್ರಾನ್ಸಿನಲ್ಲಿರುವ ಹಾಗೂ ಮಧ್ಯ ಜರ್ಮನಿ ರೋನ್ ಮತ್ತು ಪೋಗೆಲ್ಸ್ ಬರ್ಗ್ ಪ್ರದೇಶದಲ್ಲಿವೆ. ಮಧ್ಯಪ್ರಸ್ಥಭೂಮಿಯ ಅನೇಕ ಭಾಗಗಳಲ್ಲಿ ಇತ್ತೀಚಿನ ಕಾಲದ ಕ್ರೇಟರ್ ಸರೋವರಗಳು ಮತ್ತು ಜ್ವಾಲಾಮುಖಿಯ ಶಂಕು ಹಾಗೂ ಬೆಣೆಯ ಆಕಾರದ ಶಿಲಾರೂಪಗಳು ಇವೆ. ಸೀಬೆನ್‌ಗೆಬಿರ್ಗೆಗಳ ಟ್ರಾಕೈಟ್ ಶಿಲೆಗಳು ಆದರ್ಶಸ್ವರೂಪದವು. ಐಫೆಲ್ ಬೆಟ್ಟಗಳ ಜ್ವಾಲಾಮುಖಿಗಳಲ್ಲಿ ಅನೇಕ ಸುರಕ್ಷಿತಸ್ಥಿತಿಯಲ್ಲಿವೆ. ಅವುಗಳ ಸರಿಯಾದ ಕಾಲ ಗೊತ್ತಿಲ್ಲದಿದ್ದರೂ ಅವು ಖಂಡಿತವಾಗಿಯೂ ತೃತೀಯ ಕಾಲಾನಂತರದವು ಎಂದು ಹೇಳಬಹುದು.

ಉತ್ತರ ಜರ್ಮನಿಯ ಬಹುಭಾಗ ಚತುರ್ಥ ಭೂಯುಗದ ನಿಕ್ಷೇಪಗಳಿಂದ ಮುಚ್ಚಿದೆ. ಈ ನಿಕ್ಷೇಪಗಳಲ್ಲಿ ಕೆಲವು ಹಿಮನದಿಯಿಂದ ಜನಿಸಿ ಸ್ಕಾಂಡಿನೇವಿಯದ ಗುಂಡುಗಳಿಂದ ಕೂಡಿವೆ. ಮತ್ತೆ ಕೆಲವು ನದಿ ಮತ್ತು ವಾಯುನಿಕ್ಷೇಪಗಳು. ಬಂಕೆಮಣ್ಣು ಎಂದು ಕರೆಯಲಾದ ವಾಯುನಿಕ್ಷೇಪಗಳು ಮಧ್ಯ ಪ್ರಸ್ಥಭೂಮಿಯ ಉತ್ತರಗಡಿ, ರಕ್ಷಣೆಹೊಂದಿರುವ ತಗ್ಗುಪ್ರದೇಶ, ಪ್ರಸ್ಥಭೂಮಿಯಲ್ಲಿರುವ ನದಿಗಳ ದಂಡೆಗಳು ಮತ್ತು ದಕ್ಷಿಣ ಜರ್ಮನಿಗಳಲ್ಲಿ ಕಂಡುಬರುತ್ತವೆ. ಚತುರ್ಥ ಭೂಯುಗದ ಸ್ತರಗಳು ತಿರುವು ಮುರುವಾಗಿ ಬಾಸಲಿನಿಂದ ಮೈಂಟ್ಸ್‌ನವರೆಗೆ ಹರಿಯುವ ರೈನ್ ನದಿಯ ವಿಸ್ತಾರವಾದ ತಗ್ಗಿನ ನೆಲವಾಗಿದೆ ಮತ್ತು ಡ್ಯಾನ್ಯೂಬಿನ ಬಯಲಿನ ಬಹುಭಾಗವನ್ನು ಆಕ್ರಮಿಸಿದೆ. ರೈನ್ ನದಿಯ ತಗ್ಗು ಎರಡು ಸ್ತರಭಂಗಗಳಿಂದಾದ ತೊಟ್ಟಿ. ಡ್ಯಾನ್ಯೂಬಿನ ವಿಸ್ತಾರವಾದ ತಗ್ಗು ಆಲ್ಪ್ಸ್ ರೂಪುಗೊಳ್ಳುವುದರಲ್ಲಿ ಸೇರಿ ಮಯೋಸೀನ್ ಕಾಲದ ವಿಭಾಗದಲ್ಲಿ ಸಮುದ್ರದಿಂದ ಆಕ್ರಮಿತವಾಗಿತ್ತು.

ಜರ್ಮನಿಯಲ್ಲಿ ಅನೇಕ ವಿಧದ ಖನಿಜ ನಿಕ್ಷೇಪಗಳು ದೊರೆಯುತ್ತವೆ. ರ್ಯೂರ್ ಕಲ್ಲಿದ್ದಲಿನ ಉತ್ಪಾದನೆಯ ಮುಖ್ಯ ಪ್ರದೇಶ. ಕಲೋನಿಗೆ ನೈಋತ್ಯದಲ್ಲಿರುವ ವಿಲೆಯಲ್ಲಿ ಲಿಗ್ನೈಟಿನ ನಿಕ್ಷೇಪಗಳಿವೆ. ಲೊರೈನನ್ನು ಫ್ರಾನ್ಸಿಗೆ ಸೇರಿಸಿದ ಮೇಲೆ ಜರ್ಮನಿಯಲ್ಲಿ ಕಬ್ಬಿಣದ ಅದಿರು ಇರುವ ಪ್ರದೇಶವೆಂದರೆ ಸಾಲ್ಟ್ಸ್‌ಗಿಟ್ಟರ್ ಮಾತ್ರ. ಪ್ರಪಂಚದ ಮುಖ್ಯ ಉಪ್ಪಿನ ನಿಕ್ಷೇಪಗಳಿಗಿರುವ ಪ್ರದೇಶಗಳಲ್ಲಿ ಒಂದಾದ ಸ್ಟಾಸ್‌ಫರ್ಟ್ ಜರ್ಮನಿಯಲ್ಲಿದೆ. ಇಲ್ಲಿ ಸೋಡಿಯಮ್ ಮತ್ತು ಪೊಟ್ಯಾಸಿಯಮಿನ ಲವಣ ನಿಕ್ಷೇಪಗಳಿವೆ. ತೈಲದ ನಿಕ್ಷೇಪಗಳು ಮತ್ತು ಗಣಿಗಳು ಹ್ಯಾನೋವರ್, ಬ್ರನ್ಸ್‌ವಿಕ್ ಮತ್ತು ಮೈಂಟ್ಸ್‌ನ ಹತ್ತಿರ ಇವೆ. ಸೀಸ ಮತ್ತು ಸತುವಿನ ಸಣ್ಣ ನಿಕ್ಷೇಪಗಳು ಅಲ್ಲಲ್ಲೆ ಕಂಡುಬರುತ್ತವೆ.

**ಮೇಲ್ಮೈ ಲಕ್ಷಣ** : ಜರ್ಮನಿಯನ್ನು ಸ್ಥೂಲವಾಗಿ ನಾಲ್ಕು ಪ್ರಮುಖ ಭೌಗೋಳಿಕ ವಲಯಗಳಾಗಿ ವಿಂಗಡಿಸಲಾಗಿದೆ: 1 ಉತ್ತರ ಜರ್ಮನಿ ಮೈದಾನ, 2 ಮಧ್ಯ ಜರ್ಮನಿ ಪರ್ವತ ಸೀಮೆ, 3 ದಕ್ಷಿಣ ಜರ್ಮನಿ ಇಳಿಜಾರು ಪ್ರದೇಶ ಹಾಗೂ ಮೈದಾನ, 4 ಬವೇರಿಯನ್ ಆಲ್ಪ್ಸ್ ವಲಯ ಹಾಗೂ ಪ್ರಸ್ಥಭೂಮಿ.

1 ಉತ್ತರ ಜರ್ಮನಿ ಮೈದಾನ : ಬರ್ಲಿನ್ ಪ್ರದೇಶಕ್ಕೆ ಪಶ್ಚಿಮದಲ್ಲಿರುವ ಪ್ರದೇಶ ಚಪ್ಪಟೆಯಾಗಿದೆ. ಆದರೆ ಪೂರ್ವದಲ್ಲಿ ಬಾಲ್ಟಿಕ್ ತೀರಕ್ಕೆ ಸಮಾಂತರದಲ್ಲಿ 200 ಮೀ ಗಿಂತ ಎತ್ತರವಾಗಿಲ್ಲದ ಬೆಟ್ಟಗಳಿವೆ. ಇವು ಹಿಮಪ್ರವಾಹ ತಂದು ಒಟ್ಟಿದ ಮುರುಕುಲು ಗುಪ್ಪೆಗಳಿಂದ (ಹಿಮೋಢ) ಸಂಭವಿಸಿದವು. ಪಶ್ಚಿಮ ಭಾಗದಲ್ಲಿ ನೆಲ ತಗ್ಗು. ಕರಾವಳಿಯ ಜವುಗು ಪ್ರದೇಶವು ದನಗಳಿಗೆ ಒಳ್ಳೆಯ ಮೇವು ಒದಗಿಸುತ್ತದೆ. ಅದರಾಚೆಗೆ ಉಸುಬು ನೆಲ, ಇಲ್ಲವೇ ಮರಳು ತುಂಬಿದ ಬಂಜರು ನೆಲ. ಪೂರ್ವ ಭಾಗದಲ್ಲಿ ಹಿಮೋಢಗಳ ಎರಡು ಸಾಲುಗಳಿವೆ. ಉತ್ತರದಲ್ಲಿ ಬಾಲ್ಟಿಕ್ ಕರಾವಳಿಯ ಹಿಮೋಢ ಸಾಲಿನ ಪ್ರದೇಶದಲ್ಲಿ ಅನೇಕ ಸರೋವರಗಳೂ ಅಲ್ಲಲ್ಲಿ ಉಸುಬೂ ಇವೆ. ಉತ್ತರದ ಈ ಎತ್ತರ ಪ್ರದೇಶ ಫ್ಲೆಸ್‌ವಿಗ್‌ನಿಂದ ಪೂರ್ವ ಪ್ರಷ್ಯದವರೆಗೂ ಹಬ್ಬಿದೆ. ದಕ್ಷಿಣದ ಹಿಮೋಢ ಸಾಲಿನ ನೆಲವೂ ಬಂಜರು. ಈ ಎರಡು ಸಾಲುಗಳ ನಡುವೆ ಜವುಗಿನ ಕಣಿವೆಗಳೂ ಹಳೆಯ ಹಿಮಾನಿ ನದಿಗಳಿಂದಾದ ದಿಣ್ಣೆಗಳೂ ಇವೆ. ಮೈದಾನದ ದಕ್ಷಿಣದ ಅಂಚಿನ ನೆಲ ಅಲೆಅಲೆಯಾಗಿ ಹಬ್ಬಿದೆ. ಈ ಪ್ರದೇಶ ಫಲವತ್ತಾದ್ದು. ಪ್ರಾಗಿತಿಹಾಸಕಾಲದಿಂದಲೂ ಇಲ್ಲಿ ಜನ ವಾಸಿಸುತ್ತಿದ್ದಾರೆ.

ಉತ್ತರ ಸಮುದ್ರದ ಕರಾವಳಿಗೂ ಬಾಲ್ಟಿಕ್ ಸಮುದ್ರದ ಕರಾವಳಿಗೂ ಹಲವು ವ್ಯತ್ಯಾಸಗಳುಂಟು. ಉತ್ತರ ಸಮುದ್ರದ ಕರಾವಳಿಯಲ್ಲಿ ಕಡಲು ಸತತವಾಗಿ ನೆಲದ ಮೇಲೆ ದಾಳಿ ಮಾಡುತ್ತಲೇ ಬಂದಿದೆ. ಕಾಲಾನುಕ್ರಮದಲ್ಲಿ ಕಡಲ ದಂಡೆ ಛಿದ್ರವಾಗಿ ಹಲವು ದ್ವೀಪಗಳಾಗಿವೆ. ಹಲವು ದ್ವೀಪಗಳು ಕರಗಿಯೂ ಹೋಗಿವೆ. ಸಮುದ್ರದ ನೀರು ನೆಲದೊಳಕ್ಕೆ ನುಗ್ಗಿ ಹಲವು ಖಾರಿಗಳಾಗಿವೆ. ಡಾಲಾರ್ಟ್ ಖಾರಿ 1276ರಿಂದ ಈಚೆಗೆ ಸಂಭವಿಸಿದ್ದು. ಉತ್ತರ ಸಮುದ್ರತೀರವನ್ನು ಮರಳು ಎಷ್ಟೊಂದು ಆಕ್ರಮಿಸಿದೆಯೆಂದರೆ, ಅಲ್ಲಿಯ ಬಂದರುಗಳಿಗೆ ಚಾಲಕರ ನೆರವಿಲ್ಲದೆ ಪ್ರವೇಶ ಸುಲಭವಿಲ್ಲ. ಸಮುದ್ರದ ದಾಳಿಯಿಂದ ಮುಖ್ಯ ಭೂಭಾಗವನ್ನು ರಕ್ಷಿಸಲು ದಿಂಡುಗಳನ್ನು ಕಟ್ಟಲಾಗಿದೆ. ಬಾಲ್ಟಿಕ್ ಕಡಲ ತೀರದಲ್ಲಿ ಹೆಚ್ಚು ದ್ವೀಪಗಳಿಲ್ಲ. ಅಲ್ಲಿ ವ್ಯಾಪಕವಾಗಿ ಮರಳೂ ಹಬ್ಬಿಲ್ಲ. ಅಲ್ಲಿ ಕಡಲಕರೆಯ ಬಹುಭಾಗ ಚಳಿಗಾಲದಲ್ಲಿ ಹಿಮಾವೃತವಾಗಿರುತ್ತದೆ. ಆದ್ದರಿಂದ ಹಡಗು ಸಂಚಾರಕ್ಕೆ ಅಡಚಣೆಯಾಗುತ್ತದೆ.

ಉತ್ತರ ಮೈದಾನದ ನದಿಗಳಾದ ಎಮ್ಸ್, ವೇಸರ್, ಎಲ್ಬ್, ಓಡರ್ ಇವು ನೌಕಾಸಂಚಾರಕ್ಕೆ ಅನುಕೂಲಕರ. ಪ್ಲೀಸ್ಟೊಸೀನ್ ಯುಗಾನಂತರ ನೆಲ ಕುಸಿದಿರುವುದರಿಂದ ನದೀಮುಖಗಳಿಗಿಂತ ಎತ್ತರದಲ್ಲಿ ಸಮುದ್ರವಿದೆ. ಆದ್ದರಿಂದ ಜರ್ಮನಿಯ ಹಲವು ಬಂದರುಗಳು ನದೀ ಬಂದರುಗಳು. ಇವಕ್ಕೆ ಹೊರ ಬಂದರುಗಳಿವೆ. ಬ್ರೇಮನ್, ಹ್ಯಾಂಬರ್ಗ್, ರಾಸ್ಟಾಕ್ ಉದಾಹರಣೆಗಳು. ಈ ಪ್ರದೇಶದ ನದಿಗಳನ್ನು ಕೂಡಿಸುವ ಹಲವಾರು ಕಾಲುವೆಗಳಿವೆ. ಜರ್ಮನಿಯ ಪೂರ್ವ ತುದಿಯಿಂದ ಪಶ್ಚಿಮ ತುದಿಯ ವರೆಗೆ ಇರುವ ನದೀ–ಕಾಲುವೆ ವ್ಯವಸ್ಥೆಯಿಂದಾಗಿ ಒಳ್ಳೆಯ ಸಂಚಾರ ಸಂಪರ್ಕ ಸಾಧ್ಯವಾಗಿದೆ. ಈ ಮಾರ್ಗಗಳು ಬರ್ಲಿನ್ ಬಳಿ ಸಂಧಿಸುವುದೇ ಆ ನಗರ 17ನೆಯ ಶತಮಾನದಿಂದ ಈಚೆಗೆ ಬಹುವಾಗಿ ಬೆಳೆದಿರುವುದಕ್ಕೆ ಮುಖ್ಯ ಕಾರಣ.

ಮಧ್ಯ ಜರ್ಮನಿ ಪರ್ವತ ಸೀಮೆ: ಇಲ್ಲಿ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಬೆಟ್ಟಗಳ ಸಾಲುಗಳನ್ನು ದಕ್ಷಿಣೋತ್ತರವಾಗಿ ಹರಿಯುವ ನದಿಗಳು ಅಲ್ಲಲ್ಲಿ ಕತ್ತರಿಸಿವೆ. ಇದರ ಪಶ್ಚಿಮ ಭಾಗ ರೈನ್ ಪ್ರಸ್ಥಭೂಮಿ. ಇದನ್ನು ಸೀಳಿ ಹರಿಯುವ ಮುಖ್ಯ ನದಿ ರೈನ್. ಇದರ ಉಪನದಿಗಳಲ್ಲಿ ಮುಖ್ಯವಾದ್ದು ಮೋಸ್‌ಲ್. ರೈನ್ ಪ್ರಸ್ಥಭೂಮಿಗೂ ಟ್ಯುರಿಂಗರ್ ವಾಲ್ಡ್‌ಗೂ ನಡುವೆ ವೇಸರ್ ಮತ್ತು ಲೀ ನದಿಗಳು ಹರಿಯುತ್ತವೆ. ಈ ವಿಶಾಲ ಕಣಿವೆಯ ದಕ್ಷಿಣದ ತುದಿಯಲ್ಲಿ ರನ್ (1039 ಮೀ) ಮತ್ತು ಫೋಗೆಲ್ಸ್‌ಬರ್ಗ್ (846 ಮೀ) ಪರ್ವತ ಶಿಖರಗಳಿವೆ. ಇವು ಜ್ವಾಲಾಮುಖೀಯ ಗಿರಿಗ್ರಂಥಿಗಳು. ವೇಸರ್ ನದೀಕಣಿವೆಗೆ ಪೂರ್ವದಲ್ಲಿರುವ ಟ್ಯುರಿಂಗರ್ ವಾಲ್ಡ್ ವಾಯವ್ಯದಿಂದ ಆಗ್ನೇಯಕ್ಕೆ ಹಬ್ಬಿದೆ. ಇದರಿಂದಾಚೆಗೆ ಹಾರ್ಟ್ಸ್ ಪರ್ವತಗಳಿವೆ.

ಟ್ಯುರಿಂಗರ್ ವಾಲ್ಡ್‌ನ ಆಗ್ನೇಯ ತುದಿಯೂ ಫ್ರಾಂಕೋನೀಯನ್ ಜ್ಯೂರದ ಈಶಾನ್ಯ ತುದಿಯೂ ಪೂರ್ವದ ಉನ್ನತ ಪ್ರದೇಶವೂ ಫಿಕ್ಟಲ್‌ಗೆಬಿರ್ಗೆ (1150 ಮೀ) ಶ್ರೇಣಿಯಲ್ಲಿ ಸಂಧಿಸುತ್ತವೆ. ಇದು ಹಲವು ನದಿಗಳ ಉಗಮಸ್ಥಾನ. ಇಲ್ಲಿಂದ ದಕ್ಷಿಣಾಭಿಮುಖವಾಗಿ ಹರಿದು ಡ್ಯಾನ್ಯೂಬನ್ನು ಸೇರುವ ನದಿ ನಾಪ್. ಮೇನ್ ನದಿ ಪಶ್ಚಿಮಾಭಿಮುಖವಾಗಿ ಹರಿದು ರೈನನ್ನು ಕೂಡುತ್ತದೆ. ಸ್ಯಾಲ ಮತ್ತು ಅದರ ಉಪನದಿಗಳು ಹರಿಯುವುದು ಉತ್ತರದಿಕ್ಕಿಗೆ. ಎಗರ್ ನದಿ ಬೊಹೀಮಿಯದಲ್ಲಿ ಪೂರ್ವಕ್ಕೆ ಹರಿಯುತ್ತದೆ. ಈ ಪರ್ವತಸೀಮೆ ಈಶಾನ್ಯದ ಕಡೆಗೆ ಏರುತ್ತ ನಡೆದು ಬೊಹೀಮಿಯನ್ ಶ್ರೇಣಿಯ ಉತ್ತರ ತುದಿಯಾದ ಎರ್ಟ್ಸ್‌ಬರ್ಗನ್ನು (1345 ಮೀ) ಮುಟ್ಟುತ್ತದೆ. ಅಲ್ಲಿಯ ಕಣಿವೆಯ ಮೂಲಕ ಎಲ್ಬ್ ನದಿ ಚೆಕೊಸ್ಲೊವಾಕಿಯದಿಂದ ಜರ್ಮನಿಯನ್ನು ಪ್ರವೇಶಿಸುತ್ತದೆ. ಅಲ್ಲಿಂದಾಚೆಗೆ ಪರ್ವತಶ್ರೇಣಿ ಆಗ್ನೇಯಾಭಿಮುಖವಾಗಿ ಮುಂದುವರಿಯುತ್ತದೆ. ಇದು ಬೊಹೀಮಿಯನ್ ಶ್ರೇಣಿಯ ಆಗ್ನೇಯ ಭಾಗ.

ದಕ್ಷಿಣ ಜರ್ಮನಿ : ವೋಷ್‌ನಿಂದ ಬೊಹಿಮೀಯನ್ ಅರಣ್ಯದವರೆಗೆ ಮಧ್ಯ ಜರ್ಮನಿ ಪರ್ವತಸೀಮೆಯಿಂದ ದಕ್ಷಿಣದಲ್ಲಿ ಆಲ್ಪ್ಸ್ ವರೆಗೆ ಹಬ್ಬಿರುವ ಪ್ರದೇಶ. ರೈನ್ ನದಿಯೂ ಬಲ ಭಾಗದ ಉಪನದಿಗಳಾದ ಮೈನ್ ಮತ್ತು ನೆಕರ್‌ಗಳೂ ಇಲ್ಲಿ ಹರಿಯುತ್ತವೆ. ಈ ನದಿಗಳ ಜಲಾನಯನ ಪ್ರದೇಶದ ಆಗ್ನೇಯ ಮತ್ತು ಪೂರ್ವದ ಅಂಚುಗಳಲ್ಲಿ ಸ್ವೇಬಿಯನ್ ಜ್ಯುರ ಮತ್ತು ಫ್ರಾಂಕೋನಿಯನ್ ಜ್ಯುರಗಳೂ ಪಶ್ಚಿಮದಲ್ಲಿ ಷ್ವಾರ್ಟ್ಸ್‌ವಾಲ್ಡ್ ಪರ್ವತವೂ ಉತ್ತರದಲ್ಲಿ ಮಧ್ಯ ಜರ್ಮನಿ ಪರ್ವತಸೀಮೆಯೂ ಇವೆ. ಇದು ಜರ್ಮನಿಯ ಅತ್ಯಂತ ಫಲವತ್ತಾದ ಪ್ರದೇಶ.

ಬವೇರಿಯನ್ ಆಲ್ಪ್ಸ್ ಮತ್ತು ಪ್ರಸ್ಥಭೂಮಿ ಪ್ರದೇಶ : ಈ ಪ್ರದೇಶದ ದಕ್ಷಿಣದ ಅಂಚಿನಲ್ಲಿ ಕಾನ್‌ಸ್ಟನ್ಸ್ ಸರೋವರ ಮತ್ತು ಬವೇರಿಯನ್ ಆಲ್ಪ್ಸ್ ಪರ್ವತವೂ ಉತ್ತರದಲ್ಲಿ ಸ್ವೇಬಿಯನ್ ಮತ್ತು ಫ್ರಾಂಕೋನಿಯನ್ ಜ್ಯುರಗಳೂ ಬೋಹೀಮೀಯನ್ ಗ್ರಂಥಿಯ ನೈಋತ್ಯ ಅಂಚೂ ಇವೆ. ಡ್ಯಾನ್ಯೂಬ್ ನದಿ ಷ್ವಾರ್ಟ್ಸ್‌ವಾಲ್ಡ್ ಪರ್ವತದಲ್ಲಿ ಹುಟ್ಟಿ ಈ ಪ್ರಸ್ಥಭೂಮಿಯ ಉತ್ತರದ ಅಂಚಿನಲ್ಲಿ ಹರಿಯುತ್ತದೆ. ಇದರ ಬಲಬಂಡೆಯ ಮುಖ್ಯ ಉಪನದಿಗಳು ಇಲರ್, ಈಸ್ಹಾರ್ ಮತ್ತು ಇನ್, ಡ್ಯಾನ್ಯೂಬ್ ನದಿಯ ದಕ್ಷಿಣದಲ್ಲಿರುವ ಪ್ರದೇಶ ಅಷ್ಟೇನೂ ಫಲವತ್ತಾದ್ದಲ್ಲ. ಅದು ಅರಣ್ಯಾವೃತ. ಆ ಪ್ರದೇಶದ ನಡು ಮತ್ತು ಪೂರ್ವ ಭಾಗದ ಕೆಲವು ಪ್ರದೇಶಗಳು ಫಲವತ್ತಾಗಿವೆ.

ಕಾನ್‌ಸ್ಟನ್ಸ್ ಸರೋವರದಿಂದ ಹಾಲ್ಸೈನ್ ಬಳಿಯವರೆಗೆ ಆಲ್ಪ್ಸ್ ಪರ್ವತದ ಉತ್ತರ ಭಾಗ ಜರ್ಮನಿಗೆ ಸೇರಿದೆ. ಜರ್ಮನಿಯ ಈ ಪರ್ವತದ ಅತ್ಯುನ್ನತ ಶಿಖರ ಟ್ಸುಗ್‌ಸ್ಪಟ್ಸೆ (3080 ಮೀ). ಇದು ಟರೋಲಿನ ಎಲ್ಲೆಯ ಮೇಲೆ ಇದೆ. ಬವೇರಿಯನ್ ಆಲ್ಪ್ಸ್ ಬಲು ಸುಂದರ ಅಲ್ಲಿ ಕೆಲವು ರಮ್ಯವಾದ ಸರೋವರಗಳುಂಟು.

**ನದಿಗಳು, ಬಂದರುಗಳು** : ಜರ್ಮನಿಯ ನದಿಗಳಲ್ಲಿ ಬಹುಪಾಲು ಒಳನಾಡಿನ ಜಲಮಾರ್ಗಕ್ಕೆ ಅನುಕೂಲಕರವಾಗಿವೆ. ಉತ್ತರದಿಕ್ಕಿನಲ್ಲಿ ಹರಿಯುವ ನದಿಗಳು ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಸಮುದ್ರವನ್ನು ಸೇರುತ್ತವೆ. ಮುಖ್ಯವಾಗಿ ರೈನ್, ವೆಸರ್, ಎಲ್ಬ್, ಓಡರ್, ವಿಶ್ಚುಲ ಹಾಗೂ ಇವುಗಳ ಉಪನದಿಗಳನ್ನೊಳಗೊಂಡ ಜರ್ಮನಿಯ ನದೀಜಾಲ ಅದರ ಇಂದಿನ ಆರ್ಥಿಕಾಭಿವೃದ್ಧಿಗೆ ಒಂದು ಮುಖ್ಯ ಕಾರಣ. ಪೂರ್ವದಿಕ್ಕಿಗೆ ಹರಿಯುವ ನದಿಗಳಲ್ಲಿ ಅತ್ಯಂತ ಮುಖ್ಯವಾದ್ದು ಡ್ಯಾನ್ಯೂಬ್. ಷ್ವಾರ್ಟ್ಸ್‌ವಾಲ್ಡ್‌ನಲ್ಲಿ ಹುಟ್ಟುವ ಈ ನದಿ ಬವೇರಿಯದ ಬಹುಭಾಗಕ್ಕೆ ನೀರಾವರಿ ಸೌಲಭ್ಯಗಳನ್ನೊದಗಿಸಿದೆ. ಎರಡನೆಯ ಮಹಾಯುದ್ಧದ ತರುವಾಯ ಜರ್ಮನಿ ವಿಶ್ಚುಲ ನದೀ ಪ್ರದೇಶವನ್ನು ಕಳೆದುಕೊಂಡಿತು. ಸೈನಿಕ ವ್ಯೂಹರಚನೆಯ ದೃಷ್ಟಿಯಿಂದಲೂ ಜರ್ಮನಿಯ ನದಿಗಳಿಗೆ ಎಂಥ ಮಹತ್ತ್ವ ಇತ್ತೆಂದರೆ, 1945ರಲ್ಲಿ ಓಡರ್ ನದಿಯ ದಂಡೆಯ ಬಳಿ, ಮುನ್ನುಗ್ಗಿ ಬರುತ್ತಿದ್ದ ಸೋವಿಯೆತ್ ಸೇನೆಯನ್ನು ತಡೆದು ನಿಲ್ಲಿಸಬಹುದೆಂದು ಹಿಟ್ಲರ್ ಧೃಢವಾಗಿ ನಂಬಿದ್ದ. ಯುದ್ಧಾನಂತರದಲ್ಲಿ ಈ ಪ್ರದೇಶ ಪೋಲೆಂಡ್ ಮತ್ತು ಸೋವಿಯೆತ್ ದೇಶಗಳ ಅಧೀನದಲ್ಲಿತ್ತು. ಜರ್ಮನಿಯ ಕರಾವಳಿಯ ಉದ್ದಕ್ಕೂ ಹರಿದು ಉತ್ತರ ಸಮುದ್ರವನ್ನು ಸೇರುವ ನದಿಗಳಲ್ಲಿ ಮುಖ್ಯವಾದವು ಎಮ್ಸ್, ವೆಸರ್ ಮತ್ತು ಎಲ್ಬ್. ಮೇನ್ ಮತ್ತು ಮೋಸೆಲ್ಲೆ ರೈನ್‌ನ ಉಪನದಿಗಳು. ಎಲ್ಬ್‌ನ

ಉಪನದಿ ಸ್ತಾಲ್. ಜರ್ಮನ್ ಭೂಪ್ರದೇಶದಲ್ಲಿ ಸಮುದ್ರವನ್ನು ಸೇರುವ ಎರಡು ನದಿಗಳು ವೇಸರ್ ಮತ್ತು ಎಲ್ಬ್. ರೈನ್ ನದಿ ಡಚ್ ಬಂದರಾದ ರಾಟರ್‌ಡ್ಯಾಮ್‌ನಲ್ಲಿ ಸಮುದ್ರ ಸೇರುತ್ತದೆ. ಈ ಮೂರು ನದಿಗಳೂ ಮಧ್ಯ ಜರ್ಮನಿಯ ಮೇಲುನಾಡಿನಿಂದ ವಾಯವ್ಯ ದಿಕ್ಕಿಗೆ ಹರಿದು ಉತ್ತರ ಸಮುದ್ರ ಸೇರುತ್ತವೆ. ಮಧ್ಯ ಯುರೋಪಿನಲ್ಲಿ ಸಾಕಷ್ಟು ಮಳೆಯಾಗುವುದರಿಂದಲೂ ಮಧ್ಯ ಜರ್ಮನಿಯ ಹಿಮಪಾತದಿಂದಲೂ ಈ ನದಿಗಳು ತುಂಬಿ ಹರಿಯುತ್ತವೆ. ವಾಣಿಜ್ಯ ದೃಷ್ಟಿಯಿಂದ ಇವು ಉಪಯುಕ್ತವಾದ ನದಿಗಳಾಗಿ ಪರಿಣಮಿಸಿವೆ; ಜೊತೆಗೆ ಕೆಲವು ಉಪನದಿಗಳೂ ಇವಕ್ಕೆ ಬಂದು ಸೇರುತ್ತವೆ. ಹಿಂದಿನ ಖಂಡಾಂತರ ಹಿಮನದಿಗಳ ಪಾತ್ರಗಳಲ್ಲೇ ಈ ನದಿಗಳು ಪ್ರವಹಿಸುತ್ತಿರುವುದರಿಂದ ಇವುಗಳಿಂದ ಕಾಲುವೆಗಳನ್ನು ನಿರ್ಮಿಸುವುದು ಸಾಪೇಕ್ಷವಾಗಿ ಹೆಚ್ಚು ಸುಲಭ. ಜರ್ಮನಿಯ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಅಂದರೆ ರೈನ್‌ನಿಂದ ಎಲ್ಬ್ ವರೆಗೆ ಜಲಯಾನ ಸಾಧ್ಯವಾಗಿದೆ.

ರೈನ್ ನದಿ ಜರ್ಮನಿಯ ಪ್ರಮುಖ ವಾಣಿಜ್ಯ ನದಿ. ಸು. 1280 ಕಿಮೀ ಉದ್ದವಾಗಿದೆ. ಇದರ ಪಾತ್ರ ಹೆಚ್ಚು ಆಳವಾಗಿಲ್ಲ. ಆಗಿಂದಾಗ್ಗೆ ಇದರ ಹೂಳೆತ್ತಿ ನದಿಯ ಪಾತ್ರವನ್ನು ಉಳಿಸಿಕೊಂಡು ಬರಲಾಗಿದೆ. ಒಳನಾಡಿನ ಬಂದರುಗಳಲ್ಲಿ ಎಲ್ಲ ಪರಿವಹನ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಇಪ್ಪತ್ತು ಪ್ರಮುಖ ನಗರಗಳು–ಕಲೋನ್, ಡ್ಯೂಸಲ್‌ಡಾರ್ಫ್, ಎಸನ್, ಹೈಡೆಲ್‌ಬರ್ಗ್ ಮೊದಲಾದವು ಈ ನದಿಯ ತೀರದಲ್ಲಿ ನೆಲೆಗೊಂಡಿರುವುದು ಇದರ ಮಹತ್ತ್ವಕ್ಕೆ ಸಾಕ್ಷಿ. ಯುರೋಪಿನ ಕೆಲವು ಕಬ್ಬಿಣ ಅದಿರಿನ ಹಾಗೂ ಕಲ್ಲಿದ್ದಲ ಗಣಿಗಳು ಈ ನದಿಯ ತೀರದ ಬಳಿಯೇ ಇವೆ. ಈ ಕಾರಣಗಳಿಂದ ಇದನ್ನು ಯುರೋಪ್ ಖಂಡದ ವಾಣಿಜ್ಯ ಆಸ್ತಿ ಎಂದು ಕರೆಯಲಾಗಿದೆ. ಜರ್ಮನರಂತೂ ಇದನ್ನು ಅತ್ಯುತ್ಕೃಷ್ಟ ರಾಷ್ಟ್ರೀಯ ನದಿಯೆಂದು ಭಾವಿಸುತ್ತಾರೆ.

ದಕ್ಷಿಣದ ಗುಡ್ಡಗಾಡುಗಳಲ್ಲಿ ಮತ್ತು ಪರ್ವತಗಳಲ್ಲಿ ಅತ್ಯಂತ ಸುಂದರವಾದ ಸರೋವರಗಳುಂಟು. ಪ್ರಾಚೀನ ಕಾಲದ ಹಿಮನದಿಗಳು ಬಂಡೆಗಳಲ್ಲಿ ಕೊರೆದಿದ್ದ ಸ್ವಚ್ಛವಾದ ಹಾಗೂ ತಂಪಾದ ನೀರಿನ ಸರೋವರಗಳು ರೂಪುಗೊಂಡಿವೆ. ಪರ್ವತಾಗ್ರಗಳಿಂದ ಧುಮುಕಿ ಹರಿಯುವ ನದಿಗಳು ಕಿರುಪಾತ್ರದಲ್ಲಿ ನೊರೆಗಟ್ಟಿ ಹರಿದು ಕೊನೆಗೆ, ಈ ವಿಶಾಲ ಸರೋವರಗಳಲ್ಲಿ ಕಣ್ಮರೆಯಾಗುತ್ತವೆ. ಬವೇರಿಯದಲ್ಲಿಯ ಕೋನಿಗ್ ಸೇ ಸರೋವರಗಳ ಬಳಿಯ ದೃಶ್ಯ ಚೇತೋಹಾರಿ; ರಮ್ಯಸುಂದರ. ಉತ್ತರ ಜರ್ಮನಿಯ ಮೈದಾನದಲ್ಲಿ ಹೆಚ್ಚು ಆಳವಿಲ್ಲದ ಹಲವಾರು ಸರೋವರಗಳುಂಟು. ಉತ್ತರ ಕರಾವಳಿಯಲ್ಲಿ ಕೆಲವೊಂದು ಖಾರಿಗಳೂ ಇವೆ.

ಜರ್ಮನಿಯ ಪ್ರಮುಖ ಬಂದರುಗಳಲ್ಲಿ ಹ್ಯಾಂಬರ್ಗ್ ಒಂದು. ಇದು ಎಲ್ಬ್ ನದೀಮುಖದಲ್ಲಿ ನೆಲೆಗೊಂಡಿದೆ. ಮತ್ತೊಂದು ಪ್ರಮುಖ ಬಂದರಾದ ಬ್ರೆಮೆನ್ ವೇಸರ್ ನದೀಮುಖದಲ್ಲಿ ನೆಲೆಗೊಂಡಿದೆ. ಇವು ಅಂತಾರಾಷ್ಟ್ರೀಯ ಪ್ರಾಮುಖ್ಯವುಳ್ಳ ಬಂದರುಗಳು. ಜರ್ಮನಿಯ ಹಿನ್ನಾಡಿಗೆ ಎಲ್ಬ್ ಹಾಗೂ ಹ್ಯಾಂಬರ್ಗ್ ಜೀವನಾಡಿಗಳು. ವೆಸರ್‌ಗಿಂತ ಎಲ್ಬ್‌ನಲ್ಲಿ ಸಾಗಣೆ–ಸಂಚಾರ ಹೆಚ್ಚು. ಇದು ಹಲವು ರಾಷ್ಟ್ರಗಳಲ್ಲಿ ಹರಿಯುತ್ತಿರುವುದು ಇದರ ಪ್ರಾಮುಖ್ಯಕ್ಕೆ ಇನ್ನೊಂದು ಕಾರಣ. ಚೆಕೊಸ್ಲೊವಾಕಿಯದಲ್ಲಿ ಹುಟ್ಟುವ ಈ ನದಿ ಜರ್ಮನಿಯ ಮೂಲಕ ಹರಿಯುತ್ತದೆ. ಒಮ್ಮೆ ಜರ್ಮನಿಯ ಒಂದು ಭಾಗವಾಗಿದ್ದ ಬೊಹಿಮಿಯ ಮತ್ತು ಆಸ್ಟ್ರಿಯಗಳಿಗೂ ಉತ್ತರ ಸಮುದ್ರಕ್ಕೂ ಸಂಪರ್ಕ ಕಲ್ಪಿಸುವ ಸಾಧನ ಇದು.

**ವಾಯುಗುಣ** : ಸಮಶೀತೋಷ್ಣ ವಲಯದಲ್ಲಿರುವ ಜರ್ಮನಿಯ ವಾಯುಗುಣ ಸಾಗರೀಯ ಹಾಗೂ ಖಂಡಾಂತರ ವಾಯುಗುಣಗಳ ನಡುವಣದು. ದಕ್ಷಿಣದಲ್ಲಿ ಎತ್ತರದ ಪ್ರಸ್ಥಭೂಮಿಗಳು ಮತ್ತು ಪರ್ವತಗಳೂ ಉತ್ತರದಲ್ಲಿ ಮೈದಾನಗಳೂ ಇರುವ ಜರ್ಮನಿಯ ಉಷ್ಣತೆ ಪ್ರಾದೇಶಿಕವಾಗಿ ವ್ಯತ್ಯಾಸವಾಗುತ್ತದೆ. ಅಟ್ಲಾಂಟಿಕ್‌ನಿಂದ ಬೀಸುವ ಬೆಚ್ಚನೆಯ ತೇವಪೂರಿತ ಮಾರುತವನ್ನು ತಡೆಯಬಲ್ಲ ಎತ್ತರದ ಪರ್ವತಗಳು ವಾಯವ್ಯದಲ್ಲಿ ಇಲ್ಲವಾದ್ದರಿಂದ ಆ ಭಾಗ ಅದರ ಪ್ರಭಾವಕ್ಕೆ ಒಳಗಾಗಿದೆ. ಒಮ್ಮೊಮ್ಮೆ ಪೂರ್ವ ಭಾಗಗಳೂ ಅದಕ್ಕೆ ಒಳಗಾಗುವುದುಂಟು. ಚಳಿಗಾಲ ಅಷ್ಟು ತೀವ್ರವಾಗಿಯಾಗಲಿ ಬೇಸಗೆ ಉಗ್ರವಾಗಿಯಾಗಲಿ ಇರುವುದಿಲ್ಲ. ಬೆಳೆಯ ಅವಧಿ ಸಾಕಷ್ಟು ದೀರ್ಘ. ಮೇಘಾವೃತ ಆಕಾಶ, ಕಾವಳ ಕವಿದಿರುವುದು, ಅತಿಯಾದ ಆರ್ದ್ರತೆ ಕಂಡುಬಂದರೂ ಒಟ್ಟಿನಲ್ಲಿ ಮಾನವನ ಚಟುವಟಿಕೆಗಳಿಗೆ ಬಾಧಕವಾಗಿಲ್ಲ. ಮಧ್ಯ ಯುರೋಪೀಯವೆಂದು ಹೇಳಬಹುದಾದ ವಾಯುಗುಣವೇ ಜರ್ಮನಿಯ ಬಹುಭಾಗದಲ್ಲಿ ಕಾಣದೊರೆಯುತ್ತದೆ. ಅತಿಯಿಲ್ಲದ ಉಷ್ಣತೆ, ಸಾಕಷ್ಟು ಮಳೆ–ಇವು ಮುಖ್ಯ ಲಕ್ಷಣಗಳು.

ನೈಋತ್ಯ ಜರ್ಮನಿಯಲ್ಲಿ ಮಧ್ಯ ವಾರ್ಷಿಕ ಉಷ್ಣತೆ ಸುಮಾರು $12^0$ಸೆ. ಆಗಿದ್ದರೆ, ಮಧ್ಯ ಜರ್ಮನಿಯಲ್ಲಿ $9^0$ಸೆ. ನೈಋತ್ಯ ಮತ್ತು ವಾಯವ್ಯ ಜರ್ಮನಿಯ ಮಧ್ಯವಾರ್ಷಿಕ ಉಷ್ಣತೆಗಳ ವ್ಯತ್ಯಾಸ ಸು. $2^0$ಸೆ. ಮೇಲುಭಾಗದಲ್ಲಿರುವ ರೈನ್ ಕಣಿವೆಯಲ್ಲಿ ಚಳಿಗಾಲ ಅತ್ಯಂತ ಸೌಮ್ಯ, ಬೇಸಿಗೆ ಪ್ರಖರ. ವಸಂತಕಾಲದ ಅತ್ಯಂತ ಕಡಿಮೆ ಉಷ್ಣತೆಯ ಪ್ರದೇಶವೆಂದರೆ ಬಾಲ್ಟಿಕ್ ಬಳಿಯದು. ಮಧ್ಯ ಜರ್ಮನಿಯ ಏರ್ಟ್ಸ್‌ಗೆಬರ್ಜಗೆ ಮತ್ತು ಫಿಕ್‌ಟಲ್ ಗೆಬರ್ಜ ಪ್ರಸ್ಥಭೂಮಿಗಳು ಅತ್ಯಂತ ತಣ್ಣನೆಯ ಪ್ರದೇಶಗಳು.

ದಕ್ಷಿಣ ಜರ್ಮನಿಯ ಬವೇರಿಯನ್ ಪ್ರಸ್ಥಭೂಮಿಯಲ್ಲಿ ಚಳಿಗಾಲ ತೀವ್ರವಾಗಿರುತ್ತದೆ. ಬೇಸಗೆ ತಂಪು; ಕಾರ್ಲ್ಸ್‌ರೂಯದಿಂದ ಉತ್ತರಕ್ಕೆ ರೈನ್ ಕಣಿವೆಯ ಪ್ರದೇಶದಲ್ಲೇ ಅತಿ ಹೆಚ್ಚಿನ ಉಷ್ಣತೆ. ನೆಕರ್, ಮೈನ್ ಮತ್ತು ಮೋಸಲ್ ಕಣಿವೆಗಳಲ್ಲೂ ಹೀಗೆಯೇ. ಬೇಸಗೆಯ ಸರಾಸರಿ ಉಷ್ಣತೆ $19^0$ಸೆ. ಜನವರಿಯದು $0^0$ಸೆ. ಗಿಂತ ಅಧಿಕ. ಇದು ದ್ರಾಕ್ಷಿಯ ಬೆಳೆಗೆ ಅನುಕೂಲಕರ.

ವಾಯವ್ಯ ಜರ್ಮನಿಯದು ಸಾಗರೀಕ ವಾಯುಗುಣ–ತಂಪಾದ ಬೇಸಗೆ, ಬೇಸಗೆಯ ಸರಾಸರಿ ಉಷ್ಣತೆ $16^0$ಸೆ. ಚಳಿಗಾಲದಲ್ಲಿ ನೆಲವನ್ನು ಹಿಮ ಕವಿದಿರುವುದು ಸ್ವಲ್ಪಕಾಲ ಮಾತ್ರ. ವೇಸರ್‌ಗೆ ಪಶ್ಚಿಮಕ್ಕಿರುವ ಪ್ರದೇಶದಲ್ಲಿ ಜನವರಿಯ ಸರಾಸರಿ ಉಷ್ಣತೆ $0^0$ ಸೆ. ಗಿಂತ ಹೆಚ್ಚು. ಪೂರ್ವಕ್ಕೆ ಸರಿದರೆ ಇದು $-2^0$ಸೆ. ಗೆ ಇಳಿಯುತ್ತದೆ. ವರ್ಷದಲ್ಲಿ ಹಲವು ತಿಂಗಳುಗಳ ಕಾಲ ಎಲ್ಬ್ ಮತ್ತು ಅದರ ಉಪನದಿಗಳು ಹೆಪ್ಪುಗಟ್ಟಿರುತ್ತವೆ. ಪೂರ್ವಕ್ಕೆ ಸಾಗಿದಂತೆ ಚಳಿಗಾಲ ಮತ್ತು ಬೇಸಗೆಗಳ ನಡುವಣ ವ್ಯತ್ಯಾಸ ಹೆಚ್ಚುತ್ತ ಹೋಗುತ್ತದೆ.

ಜರ್ಮನಿಯಲ್ಲಿ ಎಲ್ಲ ಋತುಗಳಲ್ಲೂ ಮಳೆಯಾಗುತ್ತದೆಯಾದರೂ ಬೇಸಗೆಯಲ್ಲಿ ಅದು ಗರಿಷ್ಠ. ಪಶ್ಚಿಮ ಜರ್ಮನಿಯ ಪ್ರಸ್ಥಭೂಮಿಗಳಲ್ಲಿ ಮಳೆ ಅತ್ಯಂತ ಹೆಚ್ಚು. ಐಫೆಲ್, ಸಾರ್ಲಂಡ್, ಹಾರ್ಟ್ಸ್, ಟ್ಯುರಿಂಗರ್ ವಾಲ್ಡ್, ರನ್, ಫೋಗಲ್ಸ್ ಬರ್ಗ್, ಸ್ಪಸಾರ್ಟ್, ಷ್ವಾರ್ಟ್ಸ್‌ವಾಲ್ಟ್ ಪ್ರದೇಶಗಳಲ್ಲಿ ವಾರ್ಷಿಕ ಸರಾಸರಿ ಮಳೆ 70 ಸೆಂಮೀ ಅಥವಾ ಇನ್ನೂ ಅಧಿಕ. ಆದರೆ ದಕ್ಷಿಣ ಜರ್ಮನಿಯ ಮಧ್ಯಸ್ಥ ಎತ್ತರ ಪ್ರದೇಶಗಳಲ್ಲಿ 40–60 ಸೆಂಮೀ ಮಳೆಯಾಗುತ್ತದೆ. ಜರ್ಮನಿಯ ವಾಯವ್ಯ ಮೈದಾನದಲ್ಲೂ ಬ್ರೆಮನ್ ಮತ್ತು ಹ್ಯಾಂಬರ್ಗ್‌ವರೆಗೆ ಇದೇ ಸರಾಸರಿ. ಪಶ್ಚಿಮ ಜರ್ಮನಿಯಲ್ಲಿ ಪರ್ವತದ ಮಗ್ಗುಲಿನ ತಗ್ಗಿನ ಪ್ರದೇಶದಲ್ಲಿ 50 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ. ಮ್ಯಾನ್‌ಹೈಮ್ ಕೆಳಗಿನ ರೈನ್ ಕಣಿವೆಯ ಮತ್ತು ಮೇನ್ ಕಣಿವೆಯ ದ್ರಾಕ್ಷಿ ಜಿಲ್ಲೆಗಳಲ್ಲಿ 30–40 ಸೆಂಮೀಗಿಂತ ಹೆಚ್ಚು ಮಳೆಯಾಗುವುದಿಲ್ಲ. ಪೂರ್ವ ಜರ್ಮನಿಯಲ್ಲಿ ಟ್ಯುರಿಂಗರ್‌ನಷ್ಟು ದಕ್ಷಿಣದವರೆಗೆ ವಾರ್ಷಿಕ ಮಳೆ 18 ಸೆಂಮೀ.

**ಸಸ್ಯವರ್ಗ** : ಜರ್ಮನಿಯ ಕಾಲುಭಾಗಕ್ಕಿಂತ ಹೆಚ್ಚಿನ ಪ್ರದೇಶ ಅರಣ್ಯಗಳಿಂದ ಆವೃತವಾಗಿದೆ. ಇದರ ಶೇ. 45 ರಷ್ಟು ಭಾಗ ಪೈನ್ ವೃಕ್ಷಗಳಿಂದಲೂ ಶೇ. 4 ರಷ್ಟು ಭಾಗ ಬೀಚ್ ವೃಕ್ಷಗಳಿಂದಲೂ ಶೇ. 8 ರಷ್ಟು ಓಕ್ ವೃಕ್ಷಗಳಿಂದಲೂ ಕೂಡಿದೆ. ಸಂವರ್ಧಿತ ಅರಣ್ಯವೇ ಹೆಚ್ಚು. ನೈಸರ್ಗಿಕ ಅರಣ್ಯಗಳೂ ತಕ್ಕಮಟ್ಟಿಗೆ ಉಳಿದುಕೊಂಡು ಬಂದಿವೆ.

ಜಲೋತ್ಸಾರಣ ಚೆನ್ನಾಗಿರುವ ಸಮಶೀತೋಷ್ಣವಲಯದ ಹಾರ್ಟ್ಸ್ ಪರ್ವತ ಪ್ರದೇಶದಲ್ಲಿ ಸಮುದ್ರಮಟ್ಟದಿಂದ 660 ಮೀ ಎತ್ತರದವರೆಗೆ, ಬವೇರಿಯನ್ ಆಲ್ಪ್ಸ್‌ನಲ್ಲಿ 1,500 ಮೀ ವರೆಗೆ ಬೀಚ್ ಬೆಳೆಯುತ್ತದೆ. ಸಿಲ್ವರ್ ಫರ್, ಸ್ಪ್ರೂಸ್, ಪೈನ್, ಓಕ್ ಇತರ ಮರಗಳು, ಬಿಸಿಲು ಚೆನ್ನಾಗಿದ್ದು ನೆಲ ಫಲವತ್ತಾಗಿರುವಲ್ಲಿ ಡಾಗ್ಸ್ ಮರ್ಕ್ಯುರಿ ಸ್ವೀಟ್ ವುಡ್ರಫ್, ವೈಯೊಲೆಟ್ಸ್ ಮುಂತಾದ ಗಿಡಗಳು ಬೆಳೆಯುತ್ತವೆ. ತೇವ ಹೆಚ್ಚಾಗಿರುವ ಎತ್ತರ ಪ್ರದೇಶದಲ್ಲಿ ಬೆಳೆಯುವ ಗಿಡಗಳು ಬಾಲ್ಸಮ್, ವಿಲೊ ಹರ್ಬ್, ಮಾಂಕ್ಸ್‌ಹೂಡ್, ಆಮ್ಲಯುಕ್ತ ಮಣ್ಣಿನಲ್ಲಿ ಬಿಲ್‌ಬೆರಿ, ಫಾಕ್ಸ್‌ಗ್ಲೋವ್ಸ್ ವೇವಿ ಹೇರ್, ಹುಲ್ಲು ಬೆಳೆಯುತ್ತವೆ.

ಹೆಚ್ಚು ಸಾರಯುಕ್ತವಲ್ಲದ ಹಗುರ ಮಣ್ಣಿನ ನೆಲದಲ್ಲಿ–ಮುಖ್ಯವಾಗಿ ಈಶಾನ್ಯ ಭಾಗದಲ್ಲಿ ಮತ್ತು ಪಲ್ಯಾಟ್‌ನೇಟ್‌ನಲ್ಲಿ–ಸ್ಕಾಟ್ಸ್‌ಪೈನ್ ಅರಣ್ಯಗಳಿವೆ. ಷ್ವಾರ್ಟ್ಸ್‌ವಾಲ್ಟ್ ಪರ್ವತಗಳಲ್ಲಿ 1335 ಮೀ ಎತ್ತರದವರೆಗೂ ಬವೇರಿಯನ್ ಆಲ್ಪ್ಸ್‌ನಲ್ಲಿ 1666 ಮೀ ಎತ್ತರದವರೆಗೂ ಇವನ್ನು ಕಾಣಬಹುದು. ಇವುಗಳಲ್ಲಿ ನೆಟ್ಟು ಬೆಳೆಸಿದ ಮರಗಳೇ ಹೆಚ್ಚು. ಇಲ್ಲಿ ಆಸ್ಟ್ರಿಯನ್ ಪೈನ್ ಮರಗಳನ್ನೂ ನೆಡಲಾಗಿದೆ. ಒಳನಾಡಿನ ಮರಳ ಗುಡ್ಡೆಗಳ ಪ್ರದೇಶದಲ್ಲಿ ಕಾಡುಗಳನ್ನು ಬೆಳೆಸಲಾಗಿದೆ.

ಪ್ರಾಚೀನ ಕಾಲದಿಂದಲೂ ಜರ್ಮನಿ ಅರಣ್ಯಗಳಿಂದ ತುಂಬಿತ್ತು. ಜರ್ಮನಿಯ ಅನೇಕ ಪ್ರಾಚೀನ ಜನಪದ ಕಥೆಗಳು ಮತ್ತು ನಂಬಿಕೆಗಳು ಈ ಅರಣ್ಯಗಳಿಗೆ ಸಂಬಂಧಿಸಿದಂಥವು. ಜರ್ಮನಿ ಆರ್ಥಿಕ ಪ್ರಗತಿಯೊಂದಿಗೆ ನಿಸರ್ಗ ಸಂಪತ್ತನ್ನು ಬಲಿಗೊಟ್ಟಿಲ್ಲ. ಅರಣ್ಯಪಾಲನೆ ಹಾಗೂ ಸಂವರ್ಧನೆಗೆ ಜರ್ಮನ್ನರು ತೀವ್ರ ಗಮನ ಕೊಟ್ಟಿದ್ದಾರೆ. ಭೌತಿಕ ಸಾಧನೆಗೂ ನಿಸರ್ಗಕ್ಕೂ ಸಮತೋಲನ ಉಳಿದುಕೊಂಡು ಬಂದಿದೆ.

**ಪ್ರಾಣಿಸಂಪತ್ತು** : ಯುರೋಪಿನ ಇತರ ಭಾಗಗಳಲ್ಲಿ ಕಾಣದೊರೆಯುವ ಪ್ರಾಣಿ ಸಂಪತ್ತು ಖಂಡದ ಕೇಂದ್ರಭಾಗವಾಗಿರುವ ಜರ್ಮನಿಯಲ್ಲೂ ಕಾಣದೊರೆಯುತ್ತವೆ. ಖಂಡದ ಎಲ್ಲ ದಿಕ್ಕುಗಳಿಂದಲೂ ಪ್ರಾಣಿ ಹಾಗೂ ಪಕ್ಷಿವರ್ಗಗಳು ಇಲ್ಲಿಗೆ ಆಗಮಿಸಿವೆಯೆನ್ನುವುದಕ್ಕೆ ಪಕ್ಷಿಗಳು ಉತ್ತಮ ನಿದರ್ಶನಗಳು. ಪೂರ್ವ ಯುರೋಪಿನ ಕೊನೆಯಲ್ಲಿ ಅಥವಾ ಬಾಲ್ಕನ್ ರಾಷ್ಟ್ರಗಳಲ್ಲಿ ಕಾಣಬರುವ ಪಕ್ಷಿ ವರ್ಗಗಳೂ ಇಲ್ಲಿ

ಕಾಣಸಿಗುತ್ತವೆ. ಅನೇಕ ಸ್ತನಿಗಳ ವಿಚಾರದಲ್ಲಿ ಕೂಡ ಈ ಮಾತು ನಿಜ. ಅರಣ್ಯವಲಯ ಸಮೃದ್ಧವಾಗಿರುವುದರಿಂದ ಬ್ರಿಟನ್ ಅಥವಾ ಯುರೋಪಿನ ಇತರ ಕಡೆಗಳಲ್ಲಿ ಇರುವುದಕ್ಕಿಂತ ಹೆಚ್ಚಾಗಿ ವನ್ಯಜೀವಿಗಳು ಇಲ್ಲಿ ಕಾಣದೊರೆಯುತ್ತವೆ. ಜಿಂಕೆ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳ ಜೊತೆಗೆ ಇತರ ಜೀವಿಗಳ ಸಂವರ್ಧನೆಗೂ ಇಲ್ಲಿಯ ಅರಣ್ಯಗಳು ಅನುವು ಮಾಡಿಕೊಟ್ಟಿವೆ. ಗಂಧ-ಮೂಷಕವನ್ನು ಯಶಸ್ವಿಯಾಗಿ ಸಂವರ್ಧಿಸಿಕೊಂಡಿರುವ ಯುರೋಪಿಯನ್ ರಾಷ್ಟ್ರಗಳಲ್ಲಿ ಜರ್ಮನಿಯೂ ಒಂದು.

ನಾಡಿನ ವಿಶಿಷ್ಟ ಸಸ್ಯ ಹಾಗೂ ಪ್ರಾಣಿಸಂಪತ್ತನ್ನು ಸಂರಕ್ಷಿಸುವ ಸಲುವಾಗಿ ಜರ್ಮನಿಯಲ್ಲಿ ರಾಷ್ಟ್ರೀಯ ಉದ್ಯಾನ, ಮೃಗಾಲಯ ಹಾಗೂ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಲಾಗಿದೆ.

**ಭಾಷೆ :** ಪ್ರಮುಖ ಜರ್ಮ್ಯಾನಿಕ್ ಜನಾಂಗಗಳಿಗೆ 8ನೆಯ ಶತಮಾನದಿಂದ ಜರ್ಮನ್ ಎಂಬ ಹೆಸರಿತ್ತು. ಅನಂತರ ಷಾರ್ಲ್‌ಮೇನನ ಆಡಳಿತ ಕಾಲದಲ್ಲಿ ಈ ಜನಾಂಗಗಳ ಏಕೀಕರಣಕ್ಕೆ ಭಾಷೆ ಒಂದು ಪ್ರಮುಖ ಶಕ್ತಿಯಾಯಿತು. 9ನೆಯ ಶತಮಾನದ ವೇಳೆಗೆ ಏಕತೆಯ ಮನೋಭಾವ ಸದೃಢವಾಗಿ ಬೆಳೆಯಿತು. ಪೂರ್ವ ಫ್ರ್ಯಾಂಕಿಷ್ ಪ್ರದೇಶದ ಸ್ಲಾವಿಕ್ ಜನಾಂಗಗಳಿಗಿಂತ ಭಿನ್ನವಾಗಿ ವಿಶಿಷ್ಟವಾಗಿ ರೂಪು ತಳೆಯಿತು. 10ನೆಯ ಶತಮಾನದಿಂದ ಫ್ರ್ಯಾಂಕರು, ಸ್ಯಾಕ್ಸನರು, ಬವೇರಿಯನರು, ಸೈಬೀರಿಯನರು, ಟ್ಯೂರಿಂಜಿಯನರು ಮತ್ತು ಫ್ರಿಸಿಯನರು ಎನಿಸಿಕೊಳ್ಳತೊಡಗಿದರು. ಜರ್ಮನ್ ಎಂಬ ಹೆಸರಾಗಲಿ ಪರಿಕಲ್ಪನೆಯಾಗಲಿ ಬಂದದ್ದು ಹಳೆಯ ಯಾವ ಪಂಗಡ ಅಥವಾ ಪ್ರದೇಶದಿಂದ ಅಲ್ಲ, ಅಲ್ಲಿಯ ಜನರ ತಾಯಿನುಡಿಯಿಂದ. ಇದು ಯುರೋಪಿನಲ್ಲಿ ಜರ್ಮನಿಯ ವೈಶಿಷ್ಟ್ಯ. ಅಲ್ಲಿಯ ಭಾಷೆ ನಾಗರಿಕತೆಗಳ ಮೇಲೆ ಈ ಅಂಶ ವಿಶೇಷವಾಗಿ ಪರಿಣಾಮ ಬೀರಿದೆ.

**ಜನಾಂಗ ಲಕ್ಷಣಗಳು:** ಜರ್ಮನ್ನರದು ಅಮಿಶ್ರ ಜನಾಂಗವಲ್ಲ. ಇತಿಹಾಸ ಕಾಲದಲ್ಲಿ ಅವರು ನಾನಾ ಜನಾಂಗಗಳೊಂದಿಗೆ ಧಾರಾಳವಾಗಿ ಬೆರೆತಿದ್ದಾರೆ. ಪ್ರಸಕ್ತಶಕಪೂರ್ವ ಕಾಲದಲ್ಲಿ ನೆಲೆಸಿದ ಕೆಲ್ಟರೊಂದಿಗೆ, ಸ್ಲಾವರೊಂದಿಗೆ, ಹೀಗೆ ಹಲವು ಜನಾಂಗಗಳೊಂದಿಗೆ ಇಲ್ಲಿಯವರು ಸಂಕರ ಹೊಂದಿದ್ದರು. ಕನಿಷ್ಠ ಸಾಂಕರ್ಯಕ್ಕೆ ಒಳಗಾದವರು ಕೆಳ ಸ್ಯಾಕ್ಸನಿಯ ಜರ್ಮನರು.

ವಿವಿಧ ಜರ್ಮ್ಯಾನಿಕ್ ಜನಾಂಗಗಳಿಂದ ಜರ್ಮನ್ನರ ಭೌತ ಲಕ್ಷಣಗಳು ರೂಪುಗೊಂಡಿವೆ. ನಸುಗೂದಲು, ಬಿಳಿಮೈ, ತೆಳು ಬಣ್ಣದ ಕಣ್ಣುಗಳು-ಇವು ಅಪ್ಪಟ ಜರ್ಮ್ಯಾನಿಕ್ ಜನರನ್ನು ರೊಮಾನ್ಸ್ ಭಾಷಾಜನರಿಂದ ಪ್ರತ್ಯೇಕಿಸುವ ಲಕ್ಷಣಗಳು. ಮಧ್ಯ ಜರ್ಮನಿಯಲ್ಲಿ ನಸುಹೊಂಗೂದಲ ಜನರದೇ ಅಧಿಕ ಸಂಖ್ಯೆ (ಶೇ. 54). ಇಡೀ ಜರ್ಮನಿಯಲ್ಲಿ ಇವರು ಶೇ. 31.8 ರಷ್ಟಿದ್ದಾರೆ. ಕಂದುಕೂದಲ ಜನರು ಜರ್ಮನಿಯ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಅಧಿಕ. ಮಧ್ಯ ಜರ್ಮನಿಯ ಜನರು ಸುತ್ತಣ ಜನಾಂಗಗಳಿಂದ ಸದಾ ಪ್ರಭಾವಿತರಾಗುತ್ತಿದ್ದಾರೆ. ಇವರು ಮುಖ್ಯವಾಗಿ ಕೃಷಿಕರು. ಇವರು ಅತ್ಯಂತ ಅಭಿಮಾನದಿಂದ ತಮ್ಮ ತನವನ್ನು ಉಳಿಸಿಕೊಂಡಿದ್ದಾರೆ. 19ನೆಯ ಶತಮಾನದಿಂದ ಈಚೆಗೆ-ಕೈಗಾರಿಕೀಕರಣದ ಫಲವಾಗಿ-ಜರ್ಮನಿಯ ಜನರ ರಾಷ್ಟ್ರೀಯ ಗುಣಧರ್ಮಗಳು ಪ್ರಬಲ ಮಾರ್ಪಾಡುಗಳಿಗೆ ಒಳಗಾಗಿವೆ. ಜರ್ಮ್ಯಾನಿಕ್ ಕಾಲದ ಉಡುಗೆ ತೊಡುಗೆಗಳು ಈಗ ಹೆಚ್ಚಾಗಿ ಪ್ರಚಾರದಲ್ಲಿಲ್ಲ. 18 ಮತ್ತು 19ನೆಯ ಶತಮಾನಗಳಿಂದೀಚೆಗೆ ಆಧುನಿಕ ವೇಷಭೂಷಣಗಳು ಬಂದಿವೆ. ಹೆಸ್‌ನ್ಸ್‌ಕ್ಷಾನ್ ಜಿಲ್ಲೆ, ಬೂಕಬುರ್ಗ್ ಪ್ರದೇಶ, ಷ್ವಾರ್ಟ್ಸ್‌ವಾಲ್ಟ್ ಕಣಿವೆಗಳು, ಜರ್ಮನ್ ಆಲ್ಪೈನ್ ಜಿಲ್ಲೆ-ಈ ಪ್ರದೇಶಗಳ ರೈತಜನರಲ್ಲಿ ಹಳೆಯ ಕಾಲದ ಉಡುಪುಗಳನ್ನು ಕಾಣಬಹುದು.

ಜರ್ಮ್ಯಾನಿಕ್ ಕಾಲದಿಂದ ಬಂದ ಅನೇಕ ಪದ್ಧತಿಗಳು ಇಂದಿಗೂ ಉಳಿದಿವೆ; ಸ್ವೇಬಿಯ, ವೆಸ್ಟ್‌ಫೇಲಿಯ, ರೈನ್‌ಲೆಂಡ್‌ಗಳಲ್ಲಿ ಬಹುಮಟ್ಟಿಗೆ ಅಚ್ಚಳಿಯದಿವೆ, ಹಳೆಯ ಜರ್ಮ್ಯಾನಿಕ್ ಸಂಪ್ರದಾಯವನ್ನು ಮದುವೆಗಳಲ್ಲಿ ಕಾಣಬಹುದು. ಮದುವಣಗಿತ್ತಿಯ ಸರಕುಗಳನ್ನು ಗಾಡಿಯೊಂದರಲ್ಲಿ ಸಾಗಿಸಿ ತರುವುದು, ದಾರಿ ತಡೆಯುವುದು, ಬಂದೂಕ ಹಾರಿಸುವುದು, ರಾವುತ ಪರಿಚರರು ಮತ್ತು ಸಂಗೀತಗಾರರೊಂದಿಗೆ ಮದುವಣಗಿತ್ತಿಯ ಮೆರವಣಿಗೆ, ನೃತ್ಯ, ವಧುವಿನ ಕಳವು, ವಿವಾಹ ಭೋಜನ-ಇವೆಲ್ಲ ಹಳೆಯ ಕಾಲದ ನೆನಪು ತರುತ್ತವೆ. ಹುಟ್ಟು, ಸಾವುಗಳ ಸಂದರ್ಭಗಳಲ್ಲಿ ಅನೇಕ ಹಳೆಯ ಪದ್ಧತಿಗಳು ಇಂದಿಗೂ ಆಚರಣೆಯಲ್ಲಿವೆ.

ಪ್ರಸಕ್ತಶಕಪೂರ್ವ ಕಾಲದ ನಿಸರ್ಗದ ಹಬ್ಬಗಳು ಕ್ರೈಸ್ತ ಹಬ್ಬಗಳೊಂದಿಗೆ ಮಿಳಿತವಾಗಿವೆ. ಕ್ರಿಸ್‌ಮಸ್ ಕುಟುಂಬದ ಹಬ್ಬ. ಕ್ರಿಸ್ತಪೂರ್ವದ ಹಲವು ಸಂಪ್ರದಾಯಗಳು ಪರಿವರ್ತನೆಗೊಂಡಿವೆ. ಸುಗ್ಗಿಯ ಹಬ್ಬ ವರ್ಣಮಯ. ಸುಗ್ಗಿಯ ವಿಹಾರ, ಭೋಜನ, ಪರ್ವತಗಾವಲಿನಿಂದ ದನಗಳ ಮೆರವಣಿಗೆ-ಎಲ್ಲವೂ ವಿಶಿಷ್ಟ.

**ಧರ್ಮ:** ಪಶ್ಚಿಮ ಜರ್ಮನಿಯಲ್ಲಿ ಸಂವಿಧಾನದ ಪ್ರಕಾರ ಧರ್ಮ ಸ್ವಾತಂತ್ರ್ಯವುಂಟು. ಅಲ್ಲಿ ಶೇ. 51.1 ಜನ ಪ್ರಾಟೆಸ್ಟಂಟರು; ಶೇ. 41.1 ರೋಮನ್ ಕೆಥೊಲಿಕ್. ಉತ್ತರ ಜರ್ಮನಿಯಲ್ಲೂ ಪಶ್ಚಿಮ ಬರ್ಲಿನಿನಲ್ಲೂ ಪ್ರಾಟೆಸ್ಟಂಟರು ಬಹುಸಂಖ್ಯಾತರು. ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೆಥೊಲಿಕರು ಅಧಿಕ ಸಂಖ್ಯೆಯಲ್ಲಿದ್ದಾರೆ.

**ಸಂಪರ್ಕ ಸಾಧನಗಳು :** ಜರ್ಮನಿಯ ಸಂಪರ್ಕ ಸಾಧನಗಳನ್ನು ಗಮನಿಸಿದಾಗ ಮೊಟ್ಟಮೊದಲಿಗೆ ಎದ್ದು ಕಾಣುವ ಸಂಗತಿಯೆಂದರೆ ಅಲ್ಲಿಯ ಒಳನಾಡು ಜಲಮಾರ್ಗಗಳು. ಇವುಗಳಲ್ಲಿ ಕೆಲವು ಹೊರನಾಡುಗಳಿಗೂ ಸಂಪರ್ಕ ಕಲ್ಪಿಸುತ್ತವೆ. ಕೀಲ್ ಅಥವಾ ಕೈಸರ್ ವಿಲ್‌ಹೆಲ್ಮ್ ಕಾಲುವೆ ಉತ್ತರ ಸಮುದ್ರ ಹಾಗೂ ಬಾಲ್ಟಿಕ್ ಸಮುದ್ರಗಳಿಗೆ ಸಂಪರ್ಕ ಕಲ್ಪಿಸುತ್ತವೆ. ರೈನ್, ವೇಸರ್, ಎಲ್ಬ್ ಮತ್ತು ಓಡರ್ ನದಿಗಳಿಗೆ ಮಿಡಲ್‌ಲ್ಯಾಂಡ್ ಕಾಲುವೆಯೇ ಸಂಪರ್ಕ ಮಾಧ್ಯಮ. ಡಾರ್ಟ್‌ಮಂಟ್-ಎಮ್ಸ್ ಕಾಲುವೆ ಲೂರ್ ಉದ್ಯಮ ಕೇಂದ್ರಗಳಿಗೂ ಉತ್ತರ ಸಮುದ್ರಕ್ಕೂ ಸಂಪರ್ಕ ಕಲ್ಪಿಸುತ್ತದೆ. ಫ್ರಾನ್ಸ್, ಲಕ್ಸಂಬರ್ಗ್ ಹಾಗೂ ಜರ್ಮನಿಯ ಜಲಮಾರ್ಗಗಳಿಗೆ ಸಂಪರ್ಕವನ್ನು ಕಲ್ಪಿಸಿರುವ ಜಲಮಾರ್ಗವೆಂದರೆ ಮೋಸಲ್ ಕಾಲುವೆ. ಮೇನ್ ಮುಖಾಂತರ ರೈನ್ ಮತ್ತು ಡ್ಯಾನ್ಯೂಬ್ ನದಿಗಳಿಗೆ ಸಂಪರ್ಕ ಒದಗಿಸಿರುವ ಮತ್ತೊಂದು ಕಾಲುವೆ ಈಚೆಗೆ ನಿರ್ಮಾಣಗೊಂಡಿದೆ. ಒಟ್ಟಿನಲ್ಲಿ ಜರ್ಮನಿಯಲ್ಲಿ ಸು. 7300 ಕಿಮೀ (2004) ಜಲಮಾರ್ಗಗಳಿವೆ. ಇವು ಹೆಚ್ಚು ವಸ್ತುಗಳನ್ನು ಸಾಗಿಸಲು ನೆರವಾಗುತ್ತವೆ. ಈ ಜಲಮಾರ್ಗವೇ ಅಲ್ಲದೆ ರಸ್ತೆ ಹಾಗೂ ರೈಲುಮಾರ್ಗಗಳೂ ವಾಯುಮಾರ್ಗಗಳೂ ಜರ್ಮನಿಯ ಆರ್ಥಿಕತೆಯಲ್ಲಿ ಪ್ರಧಾನಪಾತ್ರ ವಹಿಸುತ್ತಿವೆ. ರಾಷ್ಟ್ರೀಯ ಹೆದ್ದಾರಿಗಳ ಉದ್ದ ಸು. 230735 ಕಿಮೀ. ರೈಲುಮಾರ್ಗಗಳ ಒಟ್ಟು 46,039 ಕಿಮೀ ಉದ್ದ. ಇದರಲ್ಲಿ 20100 ಕಿಮೀ ವಿದ್ಯುತ್ ರೈಲುಮಾರ್ಗವಿದೆ (2003). ಇವಲ್ಲದೆ ತಾಂತ್ರಿಕವಾಗಿ ಮುಂದುವರೆದ ದೂರವಾಣಿ, ದೂರದರ್ಶನಗಳ ಸಂಪರ್ಕ ಸಾಧನಗಳಿವೆ. ಇಂದು ಜರ್ಮನಿ ಪ್ರಪಂಚದ ಮುಂದುವರೆದ ದೇಶಗಳಲ್ಲಿ ಒಂದಾಗಿದೆ. ಅನೇಕ ಹಡಗು ಕಟ್ಟೆಗಳು ನವೀನ ಬಂದರುಗಳೂ ಹೆಲಿಪ್ಯಾಡ್‌ಗಳೂ ವಿಮಾನ ನಿಲ್ದಾಣಗಳೂ ಇವೆ.

ಖನಿಜ ಸಂಪತ್ತು: ಬಹು ಕಾಲದ ವರೆಗೆ ಲಿಗ್ನೈಟ್ ಒಂದೇ ಪೂರ್ವ ಜರ್ಮನಿಯ ಅತ್ಯಂತ ಪ್ರಮುಖ ಖನಿಜ ಸಂಪನ್ಮೂಲವೆನಿಸಿಕೊಂಡಿತ್ತು, ಆದರೆ, ಈಚಿನ ಶೋಧನೆಗಳು ಈ ನಾಡು ಖನಿಜ ಸಂಪನ್ಮೂಲಗಳ ದೃಷ್ಟಿಯಿಂದ ಶ್ರೀಮಂತವಾಗಿದೆ ಎಂಬುದನ್ನು ತೋರಿಸಿಕೊಟ್ಟಿವೆ. ಕಲ್ಲಿದ್ದಲು, ತಾಮ್ರ, ಕಬ್ಬಿಣ, ಪೊಟ್ಯಾಷ್, ಕೋಬಾಲ್ಟ್, ಆಂಟಿಮನಿ, ಯುರೇನಿಯಮ್, ಬೆಳ್ಳಿ ಮುಂತಾದ ಖನಿಜ ನಿಕ್ಷೇಪಗಳು ಉಂಟು. ಲಿಗ್ನೈಟ್ ಮತ್ತು ಪೊಟ್ಯಾಷ್ ಮುಖ್ಯ ಖನಿಜಗಳು. ಅದರಲ್ಲಿಯೂ ಲಿಗ್ನೈಟ್ ಉತ್ಪಾದನೆಯಲ್ಲಿ ಪೂರ್ವ ಜರ್ಮನಿಗೆ ಪ್ರಪಂಚದಲ್ಲಿ ಪ್ರಥಮ ಸ್ಥಾನ. ರಾಸಾಯನಿಕಗಳು (ರಸಗೊಬ್ಬರವೂ ಸೇರಿದಂತೆ), ಜವಳಿ, ಸಂಶ್ಲೇಷಿತ ರಬ್ಬರ್, ಸಿಮೆಂಟ್-ಇವು ಇಲ್ಲಿಯ ಪ್ರಮುಖ ಉತ್ಪಾದನೆಗಳು. (ಪಿ.ಜಿ.ಡಿ.)

**ಜಲಂಧರ್:** ಪಂಜಾಬ್ ರಾಜ್ಯದ ಒಂದು ನಗರ; ಜಿಲ್ಲೆ ; ಆಡಳಿತ ವಿಭಾಗ. ಪಟ್ಟಣ ಉ. ಅ. $30^{0}20'$ ಮತ್ತು ಪೂ. ರೇ. $75^{0}35'$ ಮೇಲೆ ದೆಹಲಿಗೆ ಉತ್ತರ-ವಾಯವ್ಯಕ್ಕೆ ರೈಲುಮಾರ್ಗದಲ್ಲಿ 478 ಕಿಮೀ ದೂರದಲ್ಲೂ, ಚಂಡೀಗಢದ ವಾಯವ್ಯಕ್ಕೆ ರಸ್ತೆಯಲ್ಲಿ 148 ಕಿಮೀ ದೂರದಲ್ಲೂ ಇದೆ. ಜಲಂಧರ್ ನಗರದ ಜನಸಂಖ್ಯೆ 1.1 ಮಿಲಿಯನ್. ಈ ನಗರದ ಸುತ್ತಲೂ ಬಸ್ತಿಗಳೆಂಬ ಅನೇಕ ಉಪನಗರಗಳುಂಟು. ಜಲಂಧರ್ ದಂಡಿನ ಪ್ರದೇಶ ಇರುವುದು ನಗರದ ದಕ್ಷಿಣಕ್ಕೆ 5 ಕಿಮೀ ದೂರದಲ್ಲಿ. ಪಂಜಾಬ್ ವಿಶ್ವವಿದ್ಯಾಲಯಕ್ಕೆ ಸೇರಿದ ಹಲವು ಕಾಲೇಜುಗಳೂ ಪಂಜಾಬ್ ಸರ್ಕಾರದ ಅನೇಕ ಕಚೇರಿಗಳೂ ಇವೆ. ಇದು ಜಿಲ್ಲೆಯ ಮತ್ತು ವಿಭಾಗದ ಆಡಳಿತ ಕೇಂದ್ರ. ಕ್ರೀಡಾ ಉಪಕರಣಗಳ ತಯಾರಿಕೆ ಇಲ್ಲಿಯ ಒಂದು ಮುಖ್ಯ ಕೈಗಾರಿಕೆ. ಇದೊಂದು ರೈಲ್ವೆ ಸಂಧಿ ಸ್ಥಳ. ಹಲವು ರಸ್ತೆಗಳೂ ಇಲ್ಲಿ ಕೂಡುತ್ತವೆ. ನಗರದ ಪೂರ್ವಕ್ಕೆ 14 ಕಿಮೀ ದೂರದಲ್ಲಿ ವಿಮಾನ ನಿಲ್ದಾಣವುಂಟು.

ಜಲಂಧರ್ ರಜಪೂತ ದೊರೆಗಳ ರಾಜಧಾನಿಯಾಗಿತ್ತು. 1088ರಲ್ಲಿ ಇದು ಘೋರಿ ಇಬ್ರಾಹಿಮ್ ಷಾನ ವಶವಾಯಿತು. ಮೊಗಲ್ ಅರಸರ ಆಳ್ವಿಕೆಯಲ್ಲಿ ಈ ಪಟ್ಟಣ ಒಬ್ಬ ಸರದಾರನ ಆಡಳಿತ ಕೇಂದ್ರವಾಗಿತ್ತು. 1757ರಲ್ಲಿ ಸಿಖ್ಖರು ಈ ನಗರವನ್ನು ಸುಟ್ಟರು. ಅನಂತರ ಇದು ಫೈಜುಲ್ಲಾ ಪುರಿಯ ಸಂಘದ ಖುಶಾಲಸಿಂಗನ ವಶಕ್ಕೆ ಬಂದು 1766ರಲ್ಲಿ ಹೊಸ ರೂಪ ಪಡೆಯಿತು. ಆತನ ಮಗ ಬುದ್ಧಸಿಂಗ್ ಈ ಪಟ್ಟಣವನ್ನು ವಶಪಡಿಸಿಕೊಂಡ. ಮುಂದೆ ಬ್ರಿಟಿಷರ ಕಾಲದಲ್ಲಿ ಇದು ಜಲಂಧರ್ ಆಡಳಿತ ವಿಭಾಗದ ಮುಖ್ಯ ಕೇಂದ್ರವಾಯಿತು. 1846ರಲ್ಲಿ ಇಲ್ಲಿಂದ ಮೂರು ಮೈಲಿಗಳ ದೂರದಲ್ಲಿ ಸೇನಾ ಕೇಂದ್ರವೊಂದು ಸ್ಥಾಪಿತವಾಯಿತು.

ಜಲಂಧರ್ ಜಿಲ್ಲೆ ಉ. ಅ. $30^{0}56'$-$31^{0}37'$ ಮತ್ತು ಪೂ. ರೇ. $75^{0}5'$-$76^{0}16'$ ಮಧ್ಯೆ ಇದೆ. ಜಿಲ್ಲೆಯ ವಿಸ್ತೀರ್ಣ 3,399 ಚ. ಕಿಮೀ. ಜನಸಂಖ್ಯೆ 1953508. ಬಿಯಾಸ್ ಮತ್ತು ಸಟ್ಲೆಜ್ ನದಿಗಳ ನಡುವೆ ಇರುವ ಈ ಜಿಲ್ಲೆ ತ್ರಿಕೋನಾಕಾರವಾಗಿ ವಿಸ್ತರಿಸಿದೆ. ಫಲವತ್ತಾದ ರೇವೆ ಮಣ್ಣಿನ ಈ ಸೀಮೆಯನ್ನು ಪಂಜಾಬಿನ ಉದ್ಯಾನವೆಂದು ಸಿಖ್ಖರು ಕರೆಯುತ್ತಿದ್ದರು. ಇದು ಮಟ್ಟಸವಾದ ಫಲವತ್ತಾದ ಪ್ರದೇಶ. ಜೂನ್ ಮತ್ತು ಜುಲೈ ಅತಿ ಉಷ್ಣತೆಯ ತಿಂಗಳುಗಳು. ಜನವರಿ-ಫೆಬ್ರವರಿಯಲ್ಲಿ ಚಳಿ ಹೆಚ್ಚು ; ಮಂಜು ಬೀಳುತ್ತದೆ. ವಾರ್ಷಿಕ ಸರಾಸರಿ ಮಳೆ 52 ಸೆಂಮೀ. ಜಿಲ್ಲೆಯ ಶೇ. 80ರಷ್ಟು ನೆಲಸಾಗುವಳಿಯಾಗುತ್ತದೆ.

ಇದರಲ್ಲಿ ಶೇ. 56 ನೆಲಕ್ಕೆ ಬಿಸ್ತ್ ಮತ್ತು ದೋಆಬ್ ವ್ಯವಸ್ಥೆಯಿಂದಲೂ ಬಾವಿಗಳಿಂದಲೂ ನೀರಾವರಿ ಸೌಲಭ್ಯ ಉಂಟು. ಮುಖ್ಯ ಬೆಳೆಗಳು ಗೋದಿ, ದ್ವಿದಳ ಧಾನ್ಯ, ಕಬ್ಬು. ರೇಷ್ಮೆ ಉತ್ಪಾದನೆ ಇಲ್ಲಿಯ ಒಂದು ಮುಖ್ಯ ಕಸಬು.

ಸಟ್ಲೆಜ್ ಮತ್ತು ಬಿಯಾಸ್ ನದಿಗಳ ನಡುವೆ ಇರುವ ಪ್ರದೇಶಕ್ಕೆ ಜಲಂಧರ್ ದೋಆಬ್ ಎಂದು ಹೆಸರಿದೆ. (ಬಿ.ಎ.ಎಸ್.;ಕೆ.ಕೆ.)

**ಜಲಗಾಂವ್:** ಮಹಾರಾಷ್ಟ್ರದ ಒಂದು ಜಿಲ್ಲೆ ಮತ್ತು ಆ ಜಿಲ್ಲೆಯ ಮುಖ್ಯ ಪಟ್ಟಣ. f ¯ÉG.C. $20^0$ ಯಿಂದ $21^0$ ಮತ್ತು ಪೂ.ರೇ. $74^0 55'$ ಯಿಂದ $76^0 28'$ ನಡುವೆ ಹಬ್ಬಿದೆ. ಉತ್ತರಕ್ಕೆ ಮಧ್ಯ ಪ್ರದೇಶ, ಪಶ್ಚಿಮಕ್ಕೆ ಧುಲಿಯಾ ಮತ್ತು ನಾಸಿಕ್ ಜಿಲ್ಲೆಗಳು, ಪೂರ್ವಕ್ಕೆ ಬುಲ್ಡಾನಾ ಜಿಲ್ಲೆ, ದಕ್ಷಿಣಕ್ಕೆ ಔರಂಗಾಬಾದ್ ಜಿಲ್ಲೆ–ಇವು ಇದರ ಮೇರೆಗಳು. ಜಿಲ್ಲೆಯ ವಿಸ್ತೀರ್ಣ 7,148 ಚ.ಕಿಮೀ. ಜನಸಂಖ್ಯೆ 3,68,269. ಈ ಜಿಲ್ಲೆಯ ಉತ್ತರಕ್ಕೆ ಸಾತ್ಪುರ ಬೆಟ್ಟಗಳಿವೆ. ಅನೇಕ ನದಿಗಳು ಇದರ ಅಂಚಿನಲ್ಲಿ ಹರಿದು, ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಜಲಗಾಂವ್ ಮತ್ತು ಧುಲಿಯಾ ಜಿಲ್ಲೆಗಳ ನಡುವೆ ಮುಂದುವರಿದು ತಾಪಿ (ತಪತಿ) ನದಿಯನ್ನು ಕೂಡಿಕೊಳ್ಳುತ್ತವೆ. ಪೂರ್ವದಲ್ಲಿ ಇರುವ ಸಣ್ಣಪುಟ್ಟ ಬೆಟ್ಟಗಳೂ ಹಳ್ಳಗಳೂ ವಿದರ್ಭ ಪ್ರದೇಶದ ಇತರ ಜಿಲ್ಲೆಗಳಿಂದ ಈ ಜಿಲ್ಲೆಯನ್ನು ಪ್ರತ್ಯೇಕಿಸುತ್ತವೆ. ದಕ್ಷಿಣದಲ್ಲಿರುವ ಅಜಂತಾ ಅಥವಾ ಸಾತಮಾಲ ಮತ್ತು ಚಂದೋರ್ ಬೆಟ್ಟಗಳು ಮರಾಠವಾಡ ಮತ್ತು ಈ ಜಿಲ್ಲೆಯ ನಡುವಿನ ಸೀಮಾರೇಖೆಗಳಾಗಿವೆ. ಪಂಝ್ರಾ ನದಿ ತಾಪಿಯನ್ನು ಕೂಡಿಕೊಳ್ಳುವ ಮೊದಲು ಈ ಜಿಲ್ಲೆಯ ಪಶ್ಚಿಮದ ಅಂಚಿನಲ್ಲಿ ಹರಿಯುತ್ತದೆ.

ತಾಪಿಯ ಉತ್ತರ ಭಾಗದಲ್ಲಿ ಸಾತ್ಪುರ ಪರ್ವತ ಜಲಗಾಂವ್ ಜಿಲ್ಲೆಯ ಉತ್ತರ ಗಡಿಗುಂಟ ಹಾಕಿದ ಗೋಡೆಯಂತಿದ್ದು, ನರ್ಮದಾ ನದಿಯ ಕಡೆಗೆ ಮತ್ತೆ ಇಳಿಯುತ್ತಾ ಹೋಗಿದೆ. ಅಜಂತಾ – ಸಾತಮಾಲ ಬೆಟ್ಟಗಳು ಸಹ್ಯಾದ್ರಿ ಪರ್ವತದ ಕವಲುಗಳಂತೆ ಒಡೆದು ನಾಸಿಕ ಮತ್ತು ಜಲಗಾಂವ್ ಜಿಲ್ಲೆಗಳನ್ನು ಆವರಿಸಿಕೊಂಡಿವೆ. ಈ ಬೆಟ್ಟಗಳು ಸೃಷ್ಟಿಸೌಂದರ್ಯಕ್ಕೆ ಹೆಸರಾಗಿರುವಂತೆಯೇ ಬಂಡೆಗಲ್ಲುಗಳಲ್ಲಿ ಕೊರೆದ ಬೌದ್ಧಮಂದಿರಗಳು ಮತ್ತು ಅಜಂತ ಗುಹೆಗಳಿಗೆ ಪ್ರಸಿದ್ಧವಾಗಿವೆ.

ಮಧ್ಯಪ್ರದೇಶದ ಮಾರ್ಗವಾಗಿ ಈ ಜಿಲ್ಲೆಯನ್ನು ಸೇರುವ ತಾಪಿ ನದಿಯ ಉದ್ದ ಈ ಜಿಲ್ಲೆಯಲ್ಲಿ 120 ಕಿಮೀ. ಇದರ ಎರಡೂ ಬದಿಗೆ ದಟ್ಟವಾದ ಹಳ್ಳಿಗಳನ್ನು ಹೊಂದಿವೆ. ಮಳೆಗಾಲದಲ್ಲಿ ಮಹಾಪೂರಗಳಿಗೆ ಹೆಸರಾಗಿರುವ ಈ ನದಿ ಬೇಸಾಯದ ದೃಷ್ಟಿಯಿಂದ ತನ್ನ ತಿರುವುಮುರುವುಗಳಲ್ಲಿ ಫಲವತ್ತಾದ ರೇವೆಯ ಮಣ್ಣನ್ನು ಹೇರಳವಾಗಿ ತಂದಿಕ್ಕುತ್ತದೆ. ಬೋಕಾರ, ಸುಕಿ, ಮೋರಾ, ಹರಕೀ, ಮಂಕೀ ಮತ್ತು ಗುಲಿ ಉಪನದಿಗಳು ತಾಪಿಯನ್ನು ಬಲಬದಿಯಿಂದ ಕೂಡಿಕೊಳ್ಳುತ್ತವೆ. ಪೂರ್ಣಾ, ಭೋಗಾವತಿ, ವಾಘುರ, ಗೀರ್ಣಾ, ಬೋರಿ–ಇವು ತಾಪಿಯ ಎಡದಂಡೆಯ ಉಪನದಿಗಳು. ತಾಪಿ ನದಿಯ ಮೇಲೆ ಭುಸಾವಳ ಮತ್ತು ಸಾವಖೇಡ ಬಳಿಗೆ ಮೋಟಾರು ರಸ್ತೆಯ ಸೇತುವೆಗಳೂ, ಭುಸಾವಳದ ಬಳಿಗೆ ರೈಲುಮಾರ್ಗದ ಸೇತುವೆಯೂ ಉಂಟು. ಈ ಜಿಲ್ಲೆಯ ಮತ್ತು ನೆರೆಹೊರೆಯ ಜನಗಳ ಸಾರಿಗೆ–ಸಂಪರ್ಕಕ್ಕೆ ಇವು ಬಲು ಅನುಕೂಲ. ಈ ನದಿಯ ಮೇಲೆ ಅಮ್ಮಳನೇರ, ಜೋಪಡ. ಏದ್ಲಾಬಾದ, ಜಳಗಾಂವ್, ರಾವರ ಮತ್ತು ಯವಾಳಗಳಿಗೆ ದೋಣಿಗಳೂ ಸಂಚರಿಸುತ್ತವೆ.

ಜಲಗಾಂವ್ ನಗರ ಈ ಜಿಲ್ಲೆಯ ಆಡಳಿತ ಕೇಂದ್ರ. ಉ.ಅ. $21^0 1'$ ಮತ್ತು ಪೂ.ರೇ. $75^0 35'$ ಮೇಲಿದೆ. ಇದು ಮುಂಬಯಿಯಿಂದ 412 ಕಿಮೀ ದೂರದಲ್ಲಿ ಮಧ್ಯ ರೈಲ್ವೆಯಲ್ಲಿ ಒಂದು ನಿಲ್ದಾಣ. ಹತ್ತಿ ಹೆಚ್ಚಾಗಿ ಬೆಳೆಯುವುದರಿಂದ ಇಲ್ಲಿ ಹತ್ತಿಬೀಜವನ್ನು ಬೇರೆ ಮಾಡುವ, ನೂಲಿನಿಂದ ಬಟ್ಟೆ ಮಾಡುವ ಅನೇಕ ಗಿರಣಿಗಳಿವೆ. ಹತ್ತಿ, ಎಳ್ಳು ಮತ್ತು ಅವಕ್ಕೆ ಸಂಬಂಧಪಟ್ಟ ಇತರ ಬಗೆಯ ವ್ಯಾಪಾರ ಹೆಚ್ಚಾಗಿ ನಡೆಯುತ್ತದೆ. ಜನಸಂಖ್ಯೆ 4 ಲಕ್ಷ. (ಬಿ.ಎ.ಎಸ್.)

**ಜಲಗೋಳ:** ಸೌರವ್ಯೂಹದ ಗ್ರಹಗಳಲೆಲ್ಲಾ ಭೂಮಿ ಮಾತ್ರ ಅತ್ಯಧಿಕ ಜಲರಾಶಿಯನ್ನು ಹೊಂದಿರುವ ಏಕೈಕ ಗ್ರಹ. ಭೂಮಿಯ ಒಟ್ಟು ವಿಸ್ತೀರ್ಣದ ಶೇ. 70.8 ರಷ್ಟು ಜಲಾವೃತವಾಗಿದ್ದು ಇದನ್ನೇ ಜಲಗೋಳ ಎನ್ನಲಾಗುವುದು. ಭೂಮಿಯ ಒಟ್ಟು ವಿಸ್ತೀರ್ಣದಲ್ಲಿ (510 ದ.ಲ.ಚ.ಕಿಮೀ) ಸು. 381.5 ದ.ಚ.ಕಿಮೀ ಜಲದಿಂದಲೇ ಆವರಿಸಿದೆ. ಇದೊಂದು ಜಲಾವೃತ ಗ್ರಹವಾಗಿದೆ. ಈ ಜಲಗೋಳ ವಿಸ್ತಾರವಾದ ಸಾಗರ, ಸಮುದ್ರ, ಕೊಲ್ಲಿ, ಖಾರಿ ಹಾಗೂ ಸರೋವರಗಳನ್ನು ಒಳಗೊಂಡಿದೆ. ಭೂಮಿಯ ಒಟ್ಟು ಜಲರಾಶಿಯ ವಿಸ್ತೀರ್ಣದಲ್ಲಿ ಶೇ. 57 ರಷ್ಟು ದಕ್ಷಿಣಾರ್ಧಗೋಳದಲ್ಲಿದೆ. ಆದ್ದರಿಂದ ದಕ್ಷಿಣಾರ್ಧಗೋಳವನ್ನು ಜಲಗೋಳಾರ್ಧ ಎನ್ನುವರು. ಭೂಮಿಯ ಉತ್ತರ ಭಾಗದಲ್ಲಿ ಅಧಿಕ ಭೂ ರಾಶಿಯನ್ನು ಹೊಂದಿರುವುದರಿಂದ ಇದನ್ನು ಭೂಗೋಳಾರ್ಧ ಎನ್ನುವರು. ಹೀಗೆ ಅತ್ಯಧಿಕ ಉದಕ ಸಾಮ್ರಾಜ್ಯ ಜೀವಿಗಳಿಗೆ ಜಲಗೋಳವು ಮೂಲವಾಗಿರುವುದು ಮತ್ತೊಂದು ವೈಶಿಷ್ಟತೆಯಾಗಿದೆ. ಪ್ರಪಂಚದ ಅತ್ಯಂತ ದೊಡ್ಡದಾದ ಜಲಭಾಗ ವಿಶಾಲವಾದ ಪೆಸಿಫಿಕ್ ಸಾಗರವಾಗಿದೆ. ಇತರ ಪ್ರಮುಖ ಸಾಗರಗಳೆಂದರೆ ಅಟ್ಲಾಂಟಿಕ್, ಹಿಂದೂ ಮಹಾಸಾಗರ, ಅಂಟಾರ್ಕ್‌ಟಿಕ್ ಮತ್ತು ಆರ್ಕ್‌ಟಿಕ್ ಸಾಗರ ಇತ್ಯಾದಿ. ಜಲಗೋಳದಲ್ಲಿ ಒಟ್ಟು ನೀರಿನಲ್ಲಿ ಶೇ.97 ಭಾಗ ಲವಣಯುಕ್ತವಾಗಿದೆ. ಉಳಿದ ಅಲ್ಪಭಾಗ ಮಾತ್ರ ಸಿಹಿ ನೀರಿನ ಭಾಗವಾಗಿದೆ. (ಎಸ್.ಎಲ್.)

**ಜಲಪಾತ:** ನದೀಪಾತ್ರ ಬಲು ಕಡಿದೂ ಆಳವೂ ಆಗಿರುವೆಡೆಯಲ್ಲಿ ನೀರಿನ ದುಮುಕಾಟ (ವಾಟರ್ ಫಾಲ್). ಕಣಿವೆಯ ಅಂಚು ಬಲು ಕಡಿದಾಗಿದ್ದರೆ ಅಲ್ಲಿ ನೀರು ಅತಿ ರಭಸದಿಂದ ಹರಿಯುವಾಗ, ನೆಲಸಂಪರ್ಕವೇ ಇಲ್ಲದೆ, ಹಲವಾರು ಮೀಗಳ ಆಳಕ್ಕೆ ದುಮುಕಬಹುದು. ಬರೆ ಅಷ್ಟೊಂದು ಕಡಿದಾಗಿರದಿದ್ದರೆ ನೀರು ಅದರ ಮೈಯನ್ನು ತೊಳೆದುಕೊಂಡೇ ವೇಗದಿಂದ ಕೆಳಕ್ಕೆ ಬೀಳುತ್ತದೆ.




ಜಲಪಾತ

ಒಂದು ನದಿಯ ಉಗಮದಿಂದ ಅದು ಕೊನೆಯಾಗುವ ಮುಖದ ವರೆಗಿನ ಅದರ ಪ್ರವಾಹ ಮಾರ್ಗವನ್ನು ಮೇಲ್ಕಣಿವೆ (ಪರ್ವತಭಾಗ), ನಡುಕಣಿವೆ (ಮಧ್ಯಭಾಗ) ಮತ್ತು ಕೆಳಕಣಿವೆ (ಬಯಲು ಭಾಗ) ಎಂಬುದಾಗಿ ವಿಭಾಗಿಸಬಹುದು. ಈ ಮೂರು ವಿಭಾಗಗಳಲ್ಲೂ ನದಿಯ ಚಲನಾತ್ಮಕ ಕ್ರಿಯೆಗಳಾದ ಸವೆತ, ಸ್ಥಾನಾಂತರೀಕರಣ ಮತ್ತು ಸಂಚಯನಗಳು ಆಯಾ ಭಾಗದ ಇಳಿಜಾರು ಮತ್ತು ಶಿಲಾಪ್ರಸ್ತರಗಳ ಲಕ್ಷಣ, ಹವೆ ಮತ್ತು ಇತರ ವೈಶಿಷ್ಟ್ಯಗಳಿಗೆ ಅನುಸಾರವಾಗಿ ಸಾಗುತ್ತವೆ. ನದಿಯ ಮೇಲ್ಕಣಿವೆ ಎತ್ತರವಾದ ಪರ್ವತದಲ್ಲಿರುತ್ತದೆ. ಈ ಭಾಗದಲ್ಲಿ ಕಡಿದಾದ ಇಳಿಜಾರುಗಳು ಸ್ವಾಭಾವಿಕ. ಅಲ್ಲಿ ನದಿ ಅತಿ ವೇಗದಿಂದ ಪ್ರವಹಿಸುವುದರಿಂದ ಅದರ ಪಾತ್ರದ ಕೊರೆತ ಅತ್ಯಧಿಕವಾಗಿಯೂ ತೀವ್ರವಾಗಿಯೂ ನಡೆಯುತ್ತದೆ. ಪ್ರವಾಹದ ಕೊರೆವ ಸಾಮರ್ಥ್ಯ ನೀರಿನ ಮತ್ತು ಅದರಲ್ಲಿರುವ ಇತರ ವಸ್ತುಗಳ ಪರಿಮಾಣ, ಶಿಲಾಪ್ರಸ್ತರಗಳ ಲಕ್ಷಣ ಮತ್ತು ಎತ್ತರಗಳನ್ನು ಅವಲಂಬಿಸಿದೆ. ನದಿಯ ಪ್ರವಾಹಮಾರ್ಗದಲ್ಲಿ ಕಠಿಣ ಮತ್ತು ಮೃದು ಶಿಲಾ ಪ್ರಸ್ತರಗಳು ಪರ್ಯಾಯ ಕ್ರಮದಲ್ಲಿ ರಚನೆಯಾಗಿರುವುದುಂಟು. ಕಠಿಣ ಶಿಲೆಗಳ ಕೊರೆತ ಬಲು ನಿಧಾನ; ಮೃದು ಶಿಲೆಗಳಾದರೋ ಬಲು ಬೇಗನೆ ಶಿಥಿಲಗೊಳ್ಳುತ್ತವೆ. ಆಗ ಕಡಿದಾದ ಇಳಿತವುಂಟಾಗಿ ಮೇಲಿನ ಕಠಿಣಶಿಲೆಯ ಅಡಿಯಲ್ಲಿ ಹಳ್ಳವೊಂದು ನಿರ್ಮಾಣವಾಗುತ್ತದೆ. ಕೊರೆತ ಇನ್ನಷ್ಟು ಮುಂದೊತ್ತಿದಂತೆ ಕಠಿಣ ಶಿಲಾಮುಖ ಲಂಬವಾಗಿ ನಿಂತಂತೆ ಕಾಣುವುದು. ಆಗ ನದಿಯ ನೀರು ಅದರ ಮೇಲಿಂದ ಹರಿಯುತ್ತ ಒಮ್ಮೆಲೆ ಕೆಳಕ್ಕೆ ದುಮುಕಿಬೀಳುವುದು. ಇದೇ ಜಲಪಾತ. ಮೇಲಿನ ಕಠಿಣ ಶಿಲೆಗೆ ಜಲಪಾತಕಾರಿ ಎಂದು ಹೆಸರು. ಕಾಲಕ್ರಮದಲ್ಲಿ ಅದು ಶಿಥಿಲವಾಗುತ್ತ ಹೋದಂತೆ ಜಲಪಾತ ಹಿಮ್ಮೆಟ್ಟುವುದು. ನದಿಹರಿಯುವ ಮಾರ್ಗಕ್ಕೆ ಅಡ್ಡಲಾಗಿ ನಿರೋಧಕ ಶಕ್ತಿಯುಳ್ಳ ಕಠಿಣ ಶಿಲೆಯು ಛೇದಕವಾಗಿದ್ದಾಗ, ನದಿಪಾತ್ರದ ಮಧ್ಯಭಾಗದಲ್ಲಿ ಕ್ರಮಬದ್ಧ ಸ್ತರಭಂಗ (ಫಾಲ್ಟ್) ಉಂಟಾದಾಗ, ಕಡಿದಾದ ಅಂಚುಳ್ಳ ಪ್ರಸ್ಥಭೂಮಿಯಿಂದ ತಗ್ಗಿನ ಕಡೆಗೆ ಹರಿಯುವಾಗ ಹಾಗೂ ಪ್ರಧಾನ ನದಿಗೆ ಅತಿ ಎತ್ತರದಿಂದ ಬಂದು ಸೇರುವ ಉಪನದಿಯಿಂದಲೂ ಜಲಪಾತಗಳು ಸಂಭವಿಸುತ್ತವೆ. ಜಲಪಾತಗಳು

ಹಲವು ಮೀಗಳಿಂದ ನೂರಾರು ಮೀಗಳಷ್ಟು ಆಳದ ವರೆಗೆ ಧುಮುಕುವವು. ಅವುಗಳ ಠೀವಿ ಸಿಡಿಯುವ ತುಷಾರಗಳ ಚೆಲುವು ಬಿಸಿಲಿನಲ್ಲಿ ಚೆಲ್ಲಾಡುವ ಬಣ್ಣಗಳ ಬೆಡಗು, ಭೋರ್ಗರೆಯುವ ಶಬ್ದಗಾಂಭೀರ್ಯ ಮತ್ತು ಪರಿಸರದ ಸೃಷ್ಟಿಸೌಂದರ್ಯ ವೀಕ್ಷಕರ ಕವಿ ಕಣ್ಮನಗಳನ್ನು ಸೂರೆಗೊಳ್ಳುತ್ತವೆ. ಜಲಪಾತಗಳ ಚಲನಾಶಕ್ತಿಯನ್ನು ಉಪಯುಕ್ತವಾಗಿ ಪರಿವರ್ತಿಸಿಕೊಳ್ಳುವುದು ಕೂಡ ಸಾಧ್ಯ.

ಪ್ರಪಂಚದ ಕೆಲವು ಸುಪ್ರಸಿದ್ಧ ಜಲಪಾತಗಳು : 1 ಉತ್ತರ ಅಮೆರಿಕದ ಅತ್ಯದ್ಭುತ ಹಾಗೂ ಚೇತೋಹಾರಿ ದೃಶ್ಯಗಳಲ್ಲೊಂದೆನಿಸಿದ ವಿಶಾಲವಾದ ನಯಾಗರ ಜಲಪಾತ. ಇದು ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಗಡಿಯಲ್ಲಿದೆ. ನಡುವಣ ದ್ವೀಪ ಈ ಜಲಪಾತವನ್ನು ಕೆನಡ ಮತ್ತು ಅಮೆರಿಕದ ವಿಭಾಗಗಳನ್ನಾಗಿ ವಿಂಗಡಿಸುತ್ತದೆ. ಪಂಚ ಮಹಾಸರೋವರಗಳ ಪಂಕ್ತಿಗೆ ಸೇರಿದ ಈರಿ ಸರೋವರದಿಂದ ಆಂಟೇರಿಯೋ ಸರೋವರಕ್ಕೆ ಹರಿಯುವ 160 ಕಿಮೀ ಉದ್ದದ ನಯಾಗರ ನದಿಯಿಂದ ಈ ಜಲಪಾತ ಉಂಟಾಗಿದೆ. ಕೆನಡ ಭಾಗದ ಜಲಪಾತದ ಆಕಾರ ದೊಡ್ಡ ಲಾಳದಂತೆ. 762 ಮೀ ಅಗಲ ಮತ್ತು 47 ಮೀ ಎತ್ತರ. ಅಮೆರಿಕದ ಭಾಗ 305 ಮೀ ಅಗಲ ಮತ್ತು 50.3 ಮೀ ಎತ್ತರವಾಗಿದೆ. ಈ ಜಲಪಾತ ನಿರ್ಮಾಣ ಕಾಲದಿಂದ ಇದುವರೆಗೆ (1974) ಇದರ ಮೇಲಿನ ಶಿಲಾಮುಖ 5 ಕಿಮೀ ಹಿಂದೊತ್ತಿದೆ. ಅದು ವರ್ಷಕ್ಕೆ 1–2 ಮೀ ಗಳಂತೆ ಹಿಮ್ಮೆಟ್ಟುತ್ತಿದೆ ಎಂದು ಅಂದಾಜು ಮಾಡಲಾಗಿದೆ. ಮೇಲಿನ ಎರಡು ರಾಷ್ಟ್ರಗಳಿಗೆ ಸೇರಿರುವ ಈ ಜಲಪಾತದ ಅಗಾಧ ಜಲಸಾಮರ್ಥ್ಯವನ್ನು ಆ ರಾಷ್ಟ್ರಗಳು ಜಲವಿದ್ಯುದುತ್ಪಾದನೆಗಾಗಿ ಬಳಸುತ್ತಲಿವೆ. ಈ ಕಾರಣದಿಂದಲೂ ಹೊಸದಾಗಿ ನಿರ್ಮಿಸಲ್ಪಟ್ಟ ಸೇಂಟ್ ಲಾರೆನ್ಸ್ ಸಮುದ್ರಮಾರ್ಗದಿಂದಲೂ ನಯಾಗರ ಜಲಪಾತದಿಂದ ಇಳಿಯುವ ನೀರಿನ ಗಾತ್ರ ಕುಗ್ಗುತ್ತಲಿದೆ. ಅಮೆರಿಕ ವಿಭಾಗದ ಜಲಪಾತಕ್ಕೆ ಕಾಮನಬಿಲ್ಲು ಸೇತುವೆಯನ್ನು (ರೇನ್‌ಬೊ ಬ್ರಿಜ್) ಕಟ್ಟಿದ್ದಾರೆ.

2 ಆಫ್ರಿಕ ಖಂಡದ ಉತ್ತರ ಮತ್ತು ದಕ್ಷಿಣ ಜ಼ಾಂಬಿಯ ಗಡಿಯಾಗಿ ಹರಿಯುವ ಜ಼ಾಂಬಿಸೀ ನದಿಯ ಮೇಲಿರುವ ಭವ್ಯವಾದ ವಿಕ್ಟೋರಿಯ ಜಲಪಾತ. 1.6 ಕಿಮೀ ಅಗಲ, 108.6 ಮೀ ಎತ್ತರವಿರುವ ಈ ಜಲಪಾತವನ್ನು ಆ ಖಂಡದ ಶೋಧಕರಲ್ಲಿ ಒಬ್ಬನಾದ ಲಿವಿಂಗ್‌ಸ್ಟನ್ ಎಂಬಾತ 1855ರಲ್ಲಿ ಮೊದಲಬಾರಿಗೆ ಕಂಡುಹಿಡಿದ. ಇದರ ನಾಲ್ಕು ವಿಭಾಗಗಳ ಒಂದಕ್ಕೆ ಇಂದ್ರಚಾಪ ಜಲಪಾತವೆಂಬ ಹೆಸರುಂಟು. ಈ ಜಲಪಾತದಿಂದ ಧುಮುಕುವ ನೀರಿನ ಭೋರ್ಗರೆತ ಅಸಾಧಾರಣವಾಗಿದೆ. ಆ ನೀರಿನಿಂದೇಳುವ ತುಷಾರ ರಾಶಿ 48 ಕಿಮೀ ದೂರಕ್ಕೂ ಕಾಣಿಸುತ್ತದೆ. ಮಳೆಗಾಲದಲ್ಲಿ ನೀರು ತುಂಬಿ ಹರಿಯುವಾಗ ಈ ಅಗಾಧ ತುಷಾರ ಸಮೂಹವೇ ಸರ್ವತ್ರ ವ್ಯಾಪಿಸಿ ಜಲಪಾತವನ್ನೇ ಮುಚ್ಚಿ ಬಿಡುವುದು. ಅಷ್ಟು ದೊಡ್ಡಗಾತ್ರದಿಂದ ಕೆಳಕ್ಕಿಳಿವ ಅಪಾರ ಜಲರಾಶಿ ಕೇವಲ 30.5 ಮೀ ಅಗಲದ ತೊರೆಯ ರೂಪದಲ್ಲಿ ಹಲವಾರು ಎಡಬಲ ತಿರುವುಗಳಿಂದ ಪ್ರವಹಿಸಿ ಮುಂದೆ ಸಾಗುತ್ತಿರುವುದು ಇಲ್ಲಿಯ ಇನ್ನೊಂದು ವೈಚಿತ್ರ್ಯ.

3 ಭಾರತದ ಪ್ರಸಿದ್ಧ ಜಲಪಾತಗಳಲ್ಲಿ ಕರ್ನಾಟಕದ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಗಡಿಯಲ್ಲಿ ಹರಿಯುವ ಶರಾವತಿ ನದಿಯ ಜಲಪಾತ (ಗೇರುಸೊಪ್ಪೆ ; ಜೋಗ್) ಅತ್ಯಂತ ರಮಣೀಯವಾದುದು. ಶರಾವತಿ ಇಲ್ಲಿ ರಾಜ, ರೋರರ್, ರಾಕೆಟ್ ಮತ್ತು ಲೇಡಿ (ರಾಣಿ) ಎಂಬ ನಾಲ್ಕು ಭಾಗಗಳಾಗಿ 253 ಮೀ ಎತ್ತರದಿಂದ ಆಕಾಶಗಂಗೆಯಂತೆ ಭೋರ್ಗರೆಯುತ್ತ ಕೆಳಕ್ಕೆ ರಭಸವಾಗಿ ಧುಮುಕುತ್ತದೆ. ಹಾಲಿನ ರಾಶಿಯಂತೆ ನೊರೆಗೂಡಿದ ನೀರಿನ ಪ್ರವಾಹವೂ ಅಂತರಾಳದಲ್ಲಿ ಶೋಭಿಸುವ ವಿವಿಧ ವರ್ಣಗಳ ಸಾವಿರಾರು ಕಾಮನಬಿಲ್ಲುಗಳ ದೃಶ್ಯವೂ ಉಪಮಾತೀತವಾಗಿವೆ. ಇಲ್ಲಿನ ಜಲಸಾಮರ್ಥ್ಯದ ಸಹಾಯದಿಂದ ಜೋಗ್ (ಮಹಾತ್ಮಾಗಾಂಧಿ ಜಲವಿದ್ಯುತ್ ಉತ್ಪಾದನಾಕೇಂದ್ರ) ಮತ್ತು ಶರಾವತಿ ಕಣಿವೆಯ ಹೊಸ ಜಲವಿದ್ಯುಚ್ಛಕ್ತಿ ಯಂತ್ರಾಗಾರಗಳು ನಡೆಯುತ್ತಿವೆ. ಇಲ್ಲಿ ಏಷ್ಯದಲ್ಲೇ ಅತಿ ಕಡಿಮೆ ವೆಚ್ಚದಲ್ಲಿ ಜಲವಿದ್ಯುಚ್ಛಕ್ತಿ ನಿರ್ಮಾಣವಾಗುತ್ತಿದೆ ಎಂಬ ಪ್ರತೀತಿ ಉಂಟು.

ಪ್ರಪಂಚದ ವಿವಿಧ ದೇಶಗಳಲ್ಲಿ ಇನ್ನೂ ಅನೇಕ ನಿಸರ್ಗ ಸುಂದರವೂ ಆಕರ್ಷಣೀಯವೂ ಆದ ಜಲಪಾತಗಳಿವೆ. ದಕ್ಷಿಣ ಅಮೆರಿಕದ ವೆನಿಜ಼ುವೇಲ ಆಗ್ನೇಯ ಭಾಗದಲ್ಲಿ 979 ಮೀ ಎತ್ತರದಿಂದ ಸುಮನೋಹರವಾಗಿ ನರ್ತಿಸುತ್ತ ಧುಮುಕುವ ಏಂಜೆಲ್ ಜಲಪಾತ ಪ್ರಪಂಚದ ಅತಿ ಎತ್ತರದಿಂದ ಧುಮುಕುವ ಜಲಪಾತ. (ಎಂ.ವಿ.)

**ಜಲಭೂವಿಜ್ಞಾನ** : ಅಂತರ್ಜಲದ ಆಕರಗಳು, ಹಂಚಿಕೆ, ಚಲನೆ ಮತ್ತು ಗುಣಗಳ ಬಗೆಗಿನ ಅಧ್ಯಯನ (ಹೈಡ್ರಾಲಜಿ). ಅಂತರ್ಜಲ ಮತ್ತು ಮೇಲ್ಮೈ ಜಲಗಳು ಚಿಲುಮೆ, ನದಿ, ಸರೋವರ ಮತ್ತು ಸಾಗರಗಳ ಮೂಲಕ ಸೌರಶಕ್ತಿಯ ಸಹಾಯದಿಂದ ಉಂಟಾಗುವ ಬಾಷ್ಪೀಭವನ ಮತ್ತು ಸಸ್ಯಗಳ ಬಾಷ್ಪವಿಸರ್ಜನೆಯಿಂದ ಆವಿಯ ರೂಪದಲ್ಲಿ ಆಕಾಶ ಸೇರುತ್ತವೆ. ಅಲ್ಲಿ ಮೋಡಗಳಾಗಿ ಮಳೆಗರೆದಾಗ ಈ ನೀರು ಪುನಃ ಭೂಮಿಯನ್ನು ತಲುಪುವುದು. ಹೀಗೆ ಜಲ ಭೂಮಿ–ಆಕಾಶ ನಡುವೆ ಸದಾ ಚಕ್ರೀಯವಾಗಿ ಸುತ್ತುತ್ತ ಇರುವುದು. ಇದಕ್ಕೆ ಜಲಚಕ್ರ ಎಂದು ಹೆಸರು. ಇದನ್ನು ಮುಖ್ಯವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಬಹುದು. : ಪ್ರಕ್ಷೇಪನ, ಬಾಷ್ಪೀಭವನ ಹಾಗೂ ಸಸ್ಯಗಳ ಬಾಷ್ಪ ವಿಸರ್ಜನ, ಜಲಪ್ರವಹನ, ಅಂತರ್ಜಲ ಸಂಗ್ರಹ. ಭೂಮಿಯ ಬೇರೆ ಬೇರೆ ಪ್ರದೇಶಗಳ ಅಂತರ್ಜಲ ಸಂಚಯನದ ಅಂದಾಜು ಮಾಡಲು ಮತ್ತು ಬಳಕೆಗೆ ಸೂಕ್ತ ನಿವೇಶಗಳನ್ನು ಅರಿಯಲು ಜಲಚಕ್ರದ ಎಲ್ಲ ಹಂತಗಳ ವಿವರವನ್ನೂ ಆ ಪ್ರದೇಶದ ಶಿಲಾಸ್ತೋಮಗಳ ಜಲಧಾರಣ ಯೋಗ್ಯತೆ ಹಾಗೂ ಸ್ವರೂಪವನ್ನೂ ಅರಿಯಬೇಕು. ಇದರ ನೈಜ ಅರಿವು 17ನೆಯ ಶತಮಾನದ ಕೊನೆಯ ಹೊತ್ತಿಗೆ ಮೂಡಲಾರಂಭಿಸಿತು. ಆಗ ಮೊದಲ ಬಾರಿಗೆ ಪ್ರತ್ಯಕ್ಷ ಅವಲೋಕನವನ್ನು ಅವಲಂಬಿಸಿದ ಸಿದ್ಧಾಂತಗಳು ಮತ್ತು ಪ್ರಮಾಣಭೂತ ವಿವರಣೆಗಳ ಆಧಾರಗಳು ಸಂಗ್ರಹಿತವಾದುವು. ಪಿರೆ ಪಿಲಾಲ್ಟನು (1608–80) ಮೂರು ವರ್ಷಗಳ ಮಳೆಯ ಪ್ರಮಾಣವನ್ನು ಅಳೆದು ಆ ಪ್ರದೇಶದ ಪ್ರವಹನಕ್ಕೆ ಹೋಲಿಸಿದಾಗ ಅವನಿಗೆ ಪ್ರಕ್ಷೇಪನಗೊಂಡಿರುವ ಜಲದ ಆರನೆಯ ಒಂದು ಭಾಗ ಮಾತ್ರ ಭೂಮಿಯ ಮೇಲೆ ಪ್ರವಹಿಸುತ್ತದೆ. ಎಂದು ತಿಳಿಯಿತು. 18ನೆಯ ಶತಮಾನದ ಪ್ರಥಮಾರ್ಧದಲ್ಲಿ ಆರ್ಟೀಸಿಯನ್ ಬಾವಿಗಳನ್ನು (ಬುಗ್ಗೆಯ ಬಾವಿಗಳು) ಕೊರೆದು ಪರಿಶೀಲಿಸಲಾಯಿತು. ಫ್ರಾನ್ಸಿನ ಜಲಚಲನಜ್ಞ ಹೆನ್ರಿ ಡಾರ್ಸಿ ಮರಳಿನ ಮೂಲಕ ಜಲದ ಚಲನೆಯ ಬಗ್ಗೆ ಅಧ್ಯಯನ ನಡೆಸಿ ಡಾರ್ಸಿಯ ನಿಯಮ ಎಂಬ ಒಂದು ಅಂತರ್ಜಲ ಚಲನೆಯನ್ನು ವಿವರಿಸುವ ನಿಯಮವನ್ನೇ ನೀಡಿದ.

ಜಲಚಕ್ರ : ವೈಜ್ಞಾನಿಕ ಅಂದಾಜಿನ ಪ್ರಕಾರ ಪ್ರತಿವರ್ಷವೂ ಭೂಗೋಳದ 36 ಮಿಲಿಯನ್ ಎಕರೆ ನೆಲದ ಮೇಲೆ ಸು. 38,400 ಘನ ಕಿಮೀ ಮಳೆ ಸುರಿಯುತ್ತದೆ. ಈ ಭಾರೀ ಪ್ರಮಾಣದ ನೀರು ಮೇಲೆ ಹೇಳಿದಂತೆ ವಿವಿಧ ಹಂತಗಳ ಮೂಲಕ ಬಾಷ್ಪೀಭವನವಾಗುತ್ತದೆ. ಯಾವುದೇ ಹಂತದಲ್ಲಿ ಅದರ ಪ್ರಮಾಣವನ್ನು ಅರಿಯಲು ಇತರ ಹಂತಗಳ ವಿವರವನ್ನು ಚೆನ್ನಾಗಿ ಅರಿಯಬೇಕು.

ಜಲಪ್ರಕ್ಷೇಪನ : ಬೀಸುವ ಗಾಳಿಯಲ್ಲಿ ಉಂಟಾಗುವ ಒತ್ತಡ ಹಾಗೂ ಉಷ್ಣತೆಯ ಬದಲಾವಣೆಗಳು ಗಾಳಿಯನ್ನು ತೇವಭರಿತವಾಗಿಸುತ್ತವೆ. ಗಾಳಿಯಲ್ಲಿ ತೇಲುವ ಸಣ್ಣ ಸಣ್ಣ ದೂಳಿನ ಕಣಗಳ, ಹೂವಿನ ಪರಾಗ ರೇಣುಗಳ ಮತ್ತು ಸಮುದ್ರದಿಂದ ಆವಿಯಾಗಿ ಮೇಲೇರುತ್ತ ಉಂಟಾದ ಉಪ್ಪಿನ ಸೂಕ್ಷ್ಮಕಣಗಳ ಸುತ್ತಲೂ ಈ ತೇವಾಂಶ ಆವರಿಸಿ ಮೋಡಗಳು ಮೈದಳೆಯುತ್ತವೆ. ತೇವಾಂಶ 0.04 ಮಿಮೀ ವ್ಯಾಸದ ಹನಿಗಳಾಗಿ ಮಾರ್ಪಾಡಾದಾಗ ಈ ಸೂಕ್ಷ್ಮತುಂತುರು ಭೂಮಿಯೆಡೆಗೆ ಸಾಗುವ ವೇಗ ಅತಿ ಕಡಿಮೆ. ಇವುಗಳ ಗುಂಪೇ ಮೋಡ. ಮೋಡಗಳ ಸ್ಥಿರತೆ ಗಾಳಿಯಲ್ಲಿನ ಉಷ್ಣತೆ, ಮೋಡಗಳ ಬೇರೆ ಬೇರೆ ಭಾಗಗಳ ಸಾಪೇಕ್ಷ ಚಲನೆ ಮತ್ತು ಹನಿ ಅಂಕುರಿಸಲು ಕಾರಣೀಭೂತವಾದ ಬೀಜಾಣುಗಳನ್ನು ಅವಲಂಬಿಸಿದೆ. ಮೋಡಗಳಲ್ಲಿ ಘನೀಭವನ ಉಷ್ಣತೆಗೂ ಕಡಿಮೆ ಉಷ್ಣತೆಯ ನೀರು ಇರುವುದು. ತೇವಾಂಶಭರಿತ ಗಾಳಿ ಮೇಲೇರಿದಂತೆ ಅದರ ಒತ್ತಡ ಕಡಿಮೆಯಾಗಿ ಉಷ್ಣತೆ ಮತ್ತೂ ಕಡಿಮೆಯಾಗುತ್ತದೆ. ಗಾಳಿಯಲ್ಲಿನ ಸಾಪೇಕ್ಷ ತೇವಾಂಶ ಕ್ರಮೇಣ ಹೆಚ್ಚಿ ದ್ರವರೂಪದಲ್ಲಿರುವ ನೀರಿನ ಶೇ. 100ರಷ್ಟು ಹೆಚ್ಚುತ್ತದೆ. ಆ ಸ್ಥಿತಿಯಲ್ಲಿ ಉಷ್ಣತೆ–$10^0$ಸೆ.–$20^0$ಸೆ.ವರೆಗಿದ್ದು ಬರ್ಫದ ಸ್ಫಟಿಕಗಳು ಹುಟ್ಟಿಕೊಳ್ಳುತ್ತವೆ. ಈ ಎರಡು ಉಷ್ಣತೆಗಳ ನಡುವೆ ನೀರಿನ ತುಂತುರು ಮತ್ತು ಬರ್ಫದ ಸ್ಫಟಿಕಗಳು ಒಟ್ಟಿಗೆ ಇದ್ದು ಬರ್ಫದ ಮೇಲಿನ ಸಂತೃಪ್ತ ಬಾಷ್ಪ ಒತ್ತಡ ನೀರಿನ ಮೇಲಿನದಕ್ಕಿಂತ ಕಡಿಮೆ ಇರುತ್ತದೆ. ಉಷ್ಣತೆ–$11.5^0$ಸೆ. ತಲುಪಿದಾಗ ಈ ಒತ್ತಡದ ವ್ಯತ್ಯಾಸ ಗರಿಷ್ಠ ಆಗುತ್ತದೆ. ಆಗ ಬರ್ಫದ ಮೇಲೆ ತೇವದ ಆವರಣ ಬಹುಬೇಗ ಹೆಚ್ಚಿ ಅವುಗಳ ಬೆಳವಣಿಗೆ ಶೀಘ್ರಗೊಳ್ಳುತ್ತದೆ. ಬೀಜಾಣುವಿನ ಸುತ್ತಲೂ ಉಂಟಾದ ತೇವಾವರಣ ಅದರ ಸುತ್ತಲಿನ ಗಾಳಿಯ ತೇವವನ್ನು ಕಡಿಮೆಗೊಳಿಸಿ ಕ್ರಮೇಣ ಅದರ ತೇವಾಂಶ ಸಂತೃಪ್ತತೆಯನ್ನು ಇಲ್ಲವಾಗಿಸುತ್ತದೆ. ಆಗ ಗಾಳಿಯಲ್ಲಿ ಇನ್ನೂ ಉಳಿದಿರಬಹುದಾದ ನೀರಿನ ತುಂತುರುಗಳೆಲ್ಲವೂ ಬಾಷ್ಪೀಭವಿಸಿ ಬರ್ಫದ ಸ್ಫಟಿಕಗಳ ಮೇಲೆ ಕೂರುವುವು. ಇದರಿಂದಾಗಿ ಸ್ಫಟಿಕಗಳು ಮತ್ತಷ್ಟು ಗಾತ್ರಗೊಂಡು ತಮ್ಮ ಭಾರಕ್ಕೆ ಉದುರಲಾರಂಭಿಸುತ್ತವೆ. ಆಗ ಕೆಳವಾತಾವರಣದ ಗಾಳಿಯಲ್ಲಿನ ಉಷ್ಣತೆಯಿಂದಾಗಿ ಬರ್ಫ ಕರಗಿ ನೀರಾಗಿ ನೆಲಕ್ಕೆ ಬೀಳುತ್ತದೆ. ಇದೇ ಮಳೆ ಅಥವಾ ಜಲಪ್ರಕ್ಷೇಪನ.

ಬಾಷ್ಪೀಭವನ ಮತ್ತು ಸಸ್ಯಗಳ ಬಾಷ್ಪ ವಿಸರ್ಜನೆ : ಸೌರಶಕ್ತಿಗೆ ಹೊರಸೂಸಲ್ಪಟ್ಟ ಜಲ ಅನಿಲರೂಪಕ್ಕೆ ತಿರುಗುವ ಕ್ರಿಯೆ ಬಾಷ್ಪೀಭವನ. ಸಸ್ಯಗಳು ಉಪಯೋಗಿಸಿದ ತರುವಾಯ ಹೊರಬಿಡಲ್ಪಟ್ಟ ನೀರು ಬಾಷ್ಪೀಭವಿಸಿದಾಗ ಅದು ಬಾಷ್ಪ ವಿಸರ್ಜನೆ ಎನ್ನಿಸಿಕೊಳ್ಳುತ್ತದೆ. ಬಾಷ್ಪೀಭವನ ಮತ್ತು ವಿಸರ್ಜನೆಗಳಿಗೆ ಮುಖ್ಯ ಕಾರಣಗಳು ಸೌರ ಉಷ್ಣ, ಗಾಳಿಯ ಬೀಸುವಿಕೆ, ನೀರಿನ ಉಷ್ಣತೆ, ಗಾಳಿಯ ತೇವಾಂಶ, ತೇವಾಂಶದ ಒತ್ತಡ, ಪ್ರದೇಶದ ಔನ್ನತ್ಯ ಮತ್ತು ನೀರಿನ ರಾಸಾಯನಿಕ ಗುಣಗಳು, ಇವೆಲ್ಲವೂ ಪ್ರತಿಯೊಂದು ಕ್ರಿಯೆಯ ಮೇಲೆಯೂ ತಮ್ಮದೇ ಆದ ಪರಿಣಾಮಗಳನ್ನು ಬೀರುತ್ತವೆ. ಕೆಲವೊಮ್ಮೆ ಅವು ಒಂದನ್ನೊಂದು ಅವಲಂಬಿಸಿಕೊಂಡಿರುವುದುಂಟು. ನೀರಿನ ಮೇಲ್ಮೈ ಹಾಗೂ ಸುತ್ತಲಿನ ವಾತಾವರಣ ಸೌರಶಕ್ತಿಯನ್ನು ಹೀರಿಕೊಂಡಾಗ ಅವುಗಳ ಉಷ್ಣತೆ ಏರುತ್ತದೆ;

ಮತ್ತು ಉಷ್ಣದ ಸ್ವಲ್ಪ ಭಾಗ ಮೇಲಿನ ಗಾಳಿಗೆ ಏರುತ್ತದೆ. ಹಾಗೆಯೇ ನೀರಿನ ಆಳಕ್ಕೂ ಇಳಿಯುತ್ತದೆ. ಮೇಲಿನ ಗಾಳಿಗೆ ಏರುವ ಉಷ್ಣದೊಡನೆ ನೀರಿನ ಮೇಲ್ಭಾಗದ ಅಣುಗಳು ಆವಿಯಾಗಿ ಮೇಲೇರುತ್ತವೆ. ಬಾಷ್ಪವಿಸರ್ಜನೆ ಸಸ್ಯವರ್ಗ ಹಾಗೂ ಅವುಗಳ ಎಲೆಗಳ ವೈಶಾಲ್ಯವನ್ನು ಅವಲಂಬಿಸಿದೆ. ಈ ಎಲ್ಲಕ್ಕೂ ಮತ್ತೊಮ್ಮೆ ಆಯಾ ಪ್ರದೇಶದ ಹವಾಗುಣವೇ ಮುಖ್ಯಾಂಶ.

ಜಲ ಪ್ರವಹನ : ನೆಲದ ಮೇಲೆ ಹರಿದು ಸಾಗರದತ್ತ ಸಾಗುವ ನೀರು ಜಲ ಚಕ್ರದ ಎಲ್ಲ ಭಾಗಗಳಿಗೂ ಹಂಚಿ ಉಳಿದ ನೀರಿನ ಭಾಗವನ್ನು ಜಲಪ್ರವಹನ ಎನ್ನಬಹುದು. ಈ ಹಂತದ ನೀರು ಮಾನವನ ಉಪಯೋಗಕ್ಕೆ ನೇರವಾಗಿ ದೊರಕಬಲ್ಲುದು. ಆದರೆ ಅದರ ಹಂಚಿಕೆ ಬೇರೆ ಬೇರೆ ಪ್ರದೇಶಗಳಲ್ಲಿ ಅನಿರ್ದಿಷ್ಟವಾದ್ದರಿಂದ ಅದು ದೊರೆಯಬಹುದಾದ ಪ್ರಮಾಣ ಅನಿಶ್ಚಿತ ಮತ್ತು ಈ ನೀರಿನ ಗುಣ ಅದು ಹರಿಯುತ್ತಿರುವ ಪರಿಸರಕ್ಕೆ ತಕ್ಕಂತಿರುತ್ತದೆ. ಹೊನಲುಗಳಲ್ಲಿ ಕೆಲವಕ್ಕೆ ಅಂತರ್ಜಲದ ಆಧಾರ ಇರಬಹುದು. ಕೆಲವು ಅಂತರ್ಜಲದ ಹೆಚ್ಚಳಕ್ಕೆ ಕಾರಣವಾಗುವುದೂ ಉಂಟು. ಇವುಗಳ ಹರಿಯುವಿಕೆಯನ್ನು ನಿಯತ ಸ್ಥಳಗಳಲ್ಲಿ ಹೊನಲುಮಾನಗಳಿಂದ ಅಳೆದು ಆಯಾ ಪ್ರದೇಶದ ಅಂತರ್ಜಲ ಪಾತ್ರಗಳಲ್ಲಿರುವ ಅಂತರ್ಜಲ ಪ್ರಮಾಣವನ್ನು ಅರಿಯಲು ಅನುಸರಿಸುವ ಸಮೀಕರಣಕ್ಕೆ ಅಳವಡಿಸಿಕೊಳ್ಳಬಹುದು.

ಅಂತರ್ಜಲ ಸಂಗ್ರಹ : ಆಕಾಶದಿಂದ ಪ್ರಕ್ಷೇಪಗೊಂಡ ಜಲ, ಹಿಮ ಅಥವಾ ಆಲಿಕಲ್ಲು ಹೊನಲುಗಳಲ್ಲಿ ಪ್ರವಹಿಸುತ್ತ ಆಯಾ ಪ್ರದೇಶದ ಶಿಲಾಕಣಗಳಿಗೆ ಅನುಗುಣವಾಗಿ ನೆಲದೊಳಕ್ಕೆ ಜಿನುಗುತ್ತ ಅಂತರ್ಜಲ ಹಂತವನ್ನು ಪ್ರವೇಶಿಸುತ್ತದೆ. ಭೂಮಿಯ ಹೊರಪದರದ ಶಿಲೆಗಳ ತೆರಪುಗಳ ಮಧ್ಯೆ ಜಿನುಗುವ ಈ ಜಲವನ್ನು ಭೂಜಲವೆಂದು ಕರೆಯಬಹುದು. ಇಂಥ ಜಲ ಜಿನುಗುವ ವಲಯಗಳನ್ನು ಅವುಗಳ ಸ್ಥಾನಕ್ಕೆ ತಕ್ಕಂತೆ ವಾಯುಭರಿತವಲಯ ಮತ್ತು ಸಂತೃಪ್ತವಲಯವೆಂದು ವಿಂಗಡಿಸಬಹುದು. ವಾಯುಭರಿತ ವಲಯ ನೆಲಮಟ್ಟದಿಂದ ಅಂತರ್ಜಲ ಮಟ್ಟದ ವರೆಗೂ ವಿಸ್ತರಿಸಿಕೊಂಡಿದ್ದು ಈ ಮಟ್ಟದ ಕೆಳಗಿನ ವಲಯವೇ ಸಂತೃಪ್ತವಲಯ. ಇಲ್ಲಿ ಶೇಖರಣಗೊಳ್ಳುವ ಜಲವೇ ಅಂತರ್ಜಲ. ವಾಯುಭರಿತ ವಲಯದ ತೆರಪುಗಳಲ್ಲಿ ಜಲದ ಜೊತೆಗೆ ಅಲ್ಲಲ್ಲಿಯೇ ವಾಯುವೂ ತುಂಬಿಕೊಂಡಿರುತ್ತದೆ. ಈ ವಲಯದ ಮೇಲುಹಂತದಲ್ಲಿ ಸಸ್ಯಗಳು ತಮ್ಮ ಬೆಳೆವಣಿಗೆಗೆ ಬೇಕಾದ ನೀರನ್ನು ಹೀರಿಕೊಳ್ಳಲೋಸ್ಕರ ತಮ್ಮ ಬೇರುಗಳನ್ನು ಹರಡಿಕೊಂಡಿರುತ್ತವೆ. ಈ ಹಂತದ ವೈಶಾಲ್ಯ ಆಯಾ ಪ್ರದೇಶದ ಮಣ್ಣು ಮತ್ತು ಸಸ್ಯವರ್ಗಕ್ಕೆ ತಕ್ಕಂತೆ ಇರುವುದು. ಇದಕ್ಕೆ ಮಣ್ಣುಮಿಶ್ರಿತ ಜಲಹಂತವೆಂದು ಹೆಸರು. ಇದು ಹುಲ್ಲುಗಾವಲುಗಳ ಪ್ರದೇಶಗಳಲ್ಲಿ ಕೇವಲ ಕೆಲವೇ ಅಡಿಗಳ ವರೆಗೆ ಮಾತ್ರ ಇದ್ದು ಅರಣ್ಯ ಪ್ರದೇಶಗಳಲ್ಲಿ ಬಹಳ ಆಳದವರೆಗೂ ಇರುತ್ತದೆ. ವಾಯುಭರಿತ ವಲಯದ ಕೆಳಭಾಗದಲ್ಲಿ ಸಂತೃಪ್ತ ವಲಯದ ನೀರು ಮೇಲಕ್ಕೇರಿರುವುದು. ಇದು ಲೋಮನಾಳಾಕರ್ಷಣ ಹಂತ, ಮಣ್ಣು ಮಿಶ್ರಿತ ಜಲ ಹಂತ ಮತ್ತು ಲೋಮನಾಳಕರ್ಷಣ ಹಂತಗಳ ಮಧ್ಯೆ ಇರುವ ಭಾಗದಲ್ಲಿ ನೀರು ಗುರುತ್ವದಿಂದ ಕೆಳಕ್ಕಿಳಿಯುತ್ತಿರುತ್ತದೆ. ಈ ಹಂತಕ್ಕೆ ಮಧ್ಯಮ ಹಂತ ಎಂದು ಹೆಸರು. ಮಳೆಯ ನೀರು ನೆಲಮಟ್ಟದ ಮಣ್ಣಿನಲ್ಲಿ ಮಿಶ್ರವಾಗಿ ಗುರುತ್ವದಿಂದ ಕೆಳಕ್ಕಿಳಿಯುತ್ತಿರುತ್ತದೆ. ಈ ಹಂತಕ್ಕೆ ಮಧ್ಯಮ ಹಂತ ಎಂದು ಹೆಸರು. ಮಳೆಯ ನೀರು ನೆಲಮಟ್ಟದ ಮಣ್ಣಿನಲ್ಲಿ ಮಿಶ್ರವಾಗಿ ಗುರುತ್ವದಿಂದ ಕೆಳಕ್ಕೆ ಜಿನುಗುತ್ತ ಲೋಮನಾಳಾಕರ್ಷಣ ಹಂತದ ಮೂಲಕ ಸಂತೃಪ್ತ ವಲಯವನ್ನು ಸೇರುವುದು. ಸಂತೃಪ್ತ ವಲಯದ ನಿಶ್ಚಲ ದ್ರವದ ಒತ್ತಡ ವಾತಾವರಣದ ಒತ್ತಡಕ್ಕೆ ಸಮ ಅಥವಾ ಹೆಚ್ಚು ಇರುತ್ತದೆ. ಈ ಎರಡು ಮಟ್ಟಗಳನ್ನು ಬೇರ್ಪಡಿಸುವ ಮಟ್ಟವೇ ಅಂತರ್ಜಲ ಮಟ್ಟ.

ಅಂತರ್ಜಲದ ಆಕರಗಳು : ಅಂತರ್ಜಲ ಸಂಚಯನದ ಯಥೇಚ್ಛತೆ ಆಯಾ ಪ್ರದೇಶದ ಶಿಲಾಸ್ತೋಮಗಳ ಜಲಧಾರಣ ಯೋಗ್ಯತೆಯನ್ನು ಅವಲಂಬಿಸಿದೆ. ಭೂವಿಜ್ಞಾನಿಗಳು ಅಧ್ಯಯನದ ಅನುಕೂಲಕ್ಕಾಗಿ ಅಸಂಘಟಿತ ಮಣ್ಣು, ಜೇಡು ಮರಳು ಹಾಗೂ ಸುಸಂಘಟಿತ ಗ್ರಾನೈಟ್, ಕ್ವಾರ್ಟ್‌ಸೈಟ್ ಇತ್ಯಾದಿಗಳನ್ನೂ ಶಿಲೆಗಳೆಂದೇ ಕರೆಯುತ್ತಾರೆ. ಈ ಕೆಲವು ಶಿಲೆಗಳಲ್ಲಿ ಸಾಕಷ್ಟು ರಂಧ್ರಗಳಿದ್ದು ಅವು ಒಂದನ್ನೊಂದು ಸೇರಿಕೊಂಡು ಸ್ರಾವ್ಯಶೀಲತೆಯನ್ನು ಪಡೆದುಕೊಂಡಿರುತ್ತವೆ. ಮತ್ತೆ ಕೆಲವು ಶಿಲೆಗಳಲ್ಲಿ ಬಿರುಕುಗಳು, ಸೀಳು ಹಾಗು ಗವಿಯಂಥ ಕೊರಕಲುಗಳು ಇದ್ದು ಅಂತರ್ಜಲದ ಚಲನೆ ಮತ್ತು ಶೇಖರಣೆಗೆ ಸ್ಥಳಾವಕಾಶ ಮಾಡಿಕೊಡುತ್ತವೆ. ಸರಂಧ್ರ ಮತ್ತು ಸ್ರಾವ್ಯಶೀಲ ಶಿಲೆಗಳನ್ನು ಜಲಧರಿತ ಶಿಲೆಗಳೆಂದೂ ಕರೆಯಬಹುದು. ಏಕೆಂದರೆ ಈ ಶಿಲೆಗಳು ನೀರನ್ನು ತಮ್ಮಲ್ಲಿರುವ ರಂಧ್ರಗಳ ಹಿಡಿದಿಟ್ಟುಕೊಳ್ಳಬಲ್ಲವೇ ವಿನಾ ಅದರ ಚಲನೆಗೆ ಅವಕಾಶವಿಲ್ಲದೇ ಇದ್ದು ಜಲವ್ಯಾಪ್ಯವಾಗಲಾರವು. ಕೆಲವು ಶಿಲೆಗಳಲ್ಲಿ ಸರಂಧ್ರತೆ ಮತ್ತು ಸ್ರಾವ್ಯಶೀಲತೆ ಎರಡೂ ಇಲ್ಲದಿದ್ದು ಜಲರಹಿತ ಶಿಲೆಗಳೆನಿಸಿಕೊಳ್ಳುತ್ತವೆ. ಜಲಗ್ರಾಹಿ ಮತ್ತು ಜಲಭರಿತ ಶಿಲೆಗಳಿರುವ ಭೂಭಾಗಗಳು ಅಂತರ್ಜಲಾಶಯಗಳಾಗಲು ಯೋಗ್ಯ.

ಭೂಮಿಯ ಎಲ್ಲ ಶಿಲೆಗಳನ್ನು ಅವುಗಳ ಉಗಮಕ್ಕೆ ತಕ್ಕಂತೆ ಮೂರು ವಿಧಗಳನ್ನಾಗಿ ವಿಂಗಡಿಸಬಹುದು ಅವೇ ಅಗ್ನಿಶಿಲೆ, ಅವಸಾದನ (ಜಲಜ) ಶಿಲೆ ಮತ್ತು ರೂಪಾಂತರ ಶಿಲೆ. ಅಗ್ನಿ ಶಿಲೆಗಳು ನಿರ್ಮಾಣಗೊಳ್ಳುವಾಗ ಬಿಸಿದ್ರವ ರೂಪದ ಮ್ಯಾಗ್ಮಾ ತಣ್ಣಗಾಗುತ್ತ ಆಳದಲ್ಲಿ ಘನೀಭವಿಸಿದ್ದಲ್ಲಿ ಅದಕ್ಕೆ ಅಂತಸ್ಸರಣ ಶಿಲೆಯೆಂದೂ ಭೂಗರ್ಭದಿಂದ ಹೊರನುಗ್ಗುತ್ತ ತಣ್ಣಗಾದರೆ ಅದಕ್ಕೆ ಬಹಿಸ್ಸರಣ ಶಿಲೆಯೆಂದೂ ಹೆಸರು. ಬಹಿಸ್ಸರಣ ಶಿಲೆಗಳಲ್ಲಿ ಖನಿಜಗಳು ಬಹು ಸೂಕ್ಷ್ಮವಾಗಿ ಸ್ಫಟಿಕೀಕರಣಗೊಂಡು ಒಡನಿದ್ದ ಅನಿಲಗಳು ಬಿಡುಗಡೆ ಹೊಂದುವಾಗ ಅಲ್ಲಲ್ಲಿ ಕುಳಿಗಳನ್ನು ಉಂಟುಮಾಡಿರುತ್ತವೆ. ಹೀಗೆ ಉಂಟಾದ ಬೆಸಾಲ್ಟ್ ಶಿಲೆಗಳಲ್ಲಿ ಈ ಕುಳಿಗಳೇ ಅಂತರ್ಜಲದ ಚಲನೆಗೆ ಅವಕಾಶ ನೀಡುತ್ತವೆ ಮತ್ತು ಈ ಶಿಲೆ ನಿರ್ಮಾಣಗೊಳ್ಳುವಾಗ ಉಂಟಾಗುವ ಪಂಚಭುಜಾಕೃತಿಯ ಬಿರುಕುಗಳು ಹಾದಿಯಂತೆ ವರ್ತಿಸುತ್ತವೆ. ಶಿಲೆಗಳ ಶಿಥಿಲೀಕರಣದಿಂದ ಉಂಟಾದ ಕಣಗಳು ನದಿಗಳಿಂದ ಸಾಗಿಸಲ್ಪಟ್ಟು ಸಾಗರ ಸರೋವರ ಪಾತ್ರಗಳಲ್ಲಿ ಅಥವಾ ಗಾಳಿಯಿಂದ ಸಾಗಿಸಲ್ಪಟ್ಟು ಬಯಲುಗಳಲ್ಲಿ ಸಂಚಯನಗೊಂಡು ಅವಸಾದನ ಶಿಲೆಗಳು ನಿರ್ಮಾಣವಾಗುತ್ತವೆ. ಈ ಶಿಲೆಗಳು ಹೆಚ್ಚಾಗಿ ಸರೋವರ ಸಾಗರಪಾತ್ರಗಳಲ್ಲಿ ಸಂಚಿತವಾಗುವುದರಿಂದ ಇವಕ್ಕೆ ಜಲಜ ಶಿಲೆಗಳೆಂದೂ ಹೆಸರುಂಟು. ಇವು ವಿಶೇಷವಾಗಿ ಸರಂಧ್ರವಾಗಿರುವುದರಿಂದ ಒಳ್ಳೆಯ ಅಂತರ್ಜಲಾಕರಗಳಾಗಿರಬಲ್ಲವು. ಭೂಮಿಯ ಹೊರಪದರಗಳಲ್ಲಿ ಅವಸಾದನ ಶಿಲೆಗಳು ಕೇವಲ ಶೇ. 5 ರಷ್ಟಿದ್ದರೂ ಇವು ಅಂತರ್ಜಲದ ಶೇ. 95 ಭಾಗವನ್ನು ಅಳವಡಿಸಿಕೊಂಡಿರುತ್ತದೆ. ಭೂಮಿಯ ಅಸಾಧಾರಣ ಉಷ್ಣ ಮತ್ತು ಒತ್ತಡಗಳಿಗೊಳಗಾದಾಗ ಶಿಲೆಗಳು ತಮ್ಮ ಸ್ವರೂಪ ಹಾಗೂ ಖನಿಜ ಸಂಯೋಜನೆಯಲ್ಲಿ ವ್ಯತ್ಯಾಸಗೊಂಡು ರೂಪಾಂತರ ಶಿಲೆಗಳು ಉಂಟಾಗುತ್ತವೆ. ಸಾಮಾನ್ಯವಾಗಿ ಈ ಶಿಲೆಗಳು ಜಲಭರಿತ ಶಿಲೆಗಳಾಗಲು ಯೋಗ್ಯವಲ್ಲ. ಆದರೂ ಅವುಗಳಲ್ಲಿ ಉಂಟಾಗುವ ಬಿರುಕು ಮತ್ತು ಸೀಳುಗಳು ಅಂತರ್ಜಲದ ಚಲನೆಗೆ ಎಡೆಮಾಡಿಕೊಡುತ್ತವೆ. ಅಮೃತಶಿಲೆಯಂಥ ರಾಸಾಯನಿಕ ಶಿಥಿಲೀಕರಣಕ್ಕೆ ಬಹುವಾಗಿ ಒಳಗೊಳ್ಳುವ ಶಿಲೆಗಳಾದರೆ ಅವುಗಳ ಬಿರುಕಿನಲ್ಲಿ ನುಗ್ಗಿದ ನೀರು ಶಿಲೆಯನ್ನು ಕರಗಿಸಿ ದೊಡ್ಡ ದೊಡ್ಡ ಗವಿಯಂಥ ಕೊರಕಲುಗಳನ್ನು ಉಂಟುಮಾಡುವುವು. ಕೆಲವೊಮ್ಮೆ ಹೀಗೆ ಕರಗಿ ಉಂಟಾದ ದ್ರಾವಣಗಳು ಅಲ್ಲಲ್ಲಿಯೇ ತೊಂಗಲುಗಳನ್ನುಂಟು ಮಾಡಿ ನಯನ ಮನೋಹರ ದೃಶ್ಯವನ್ನು ನೀಡುವುದುಂಟು. ಶಿಲೆಗಳಲ್ಲಿ ಅಲ್ಲಲ್ಲೇ ಖನಿಜಗಳಿಂದ ಭರ್ತಿ ಆಗದ ಸ್ಥಳಗಳನ್ನು ನೀರು ಆಕ್ರಮಿಸಬಲ್ಲುದು. ಈ ಸ್ಥಳಗಳಿಗೆ ತೆರಪು ಅಥವಾ ರಂಧ್ರಗಳೆಂದು ಹೆಸರು. ತೆರಪುಗಳು ಅಂತರ್ಜಲದ ಚಲನೆಗೆ ಕೊಳವೆಗಳಂತೆ ಸಹಕರಿಸುತ್ತವೆ. ಇವುಗಳ ಆಕಾರ, ಗಾತ್ರ ಮತ್ತು ಹಂಚಿಕೆಗಳಿಗೆ ತಕ್ಕಂತೆ ಇವುಗಳ ಪ್ರಾಮುಖ್ಯವು ಹೆಚ್ಚುತ್ತದೆ. ಕೆಲವು ತೆರಪುಗಳು ಮತ್ತು ಬಿರುಕುಗಳು ಶಿಲೆಯ ಉಗಮ ಕಾಲದಲ್ಲಿಯೇ ಉಂಟಾಗಿರುತ್ತವೆ. ಇದಕ್ಕೆ ಒಳ್ಳೆಯ ಉದಾಹರಣೆ ಮರಳು ಶಿಲೆ ಮತ್ತು ಬೆಸಾಲ್ಟ್ ಇತ್ಯಾದಿಗಳು. ಮತ್ತೆ ಕೆಲವು ತೆರಪುಗಳು ಶಿಲೆಯ ನಿರ್ಮಾಣದ ಅನಂತರ ಶಿಥಿಲೀಕರಣದಿಂದಾಗಿ ಅಥವಾ ಸ್ತರಪಲ್ಲಟದಿಂದಾಗಿ ಅಥವಾ ದ್ರಾವಗಳಿಂದಾಗುವ ತೆರಪುಗಳು.

ಅಂತರ್ಜಲ ಪಾತ್ರಗಳು : ಒಂದು ಬೃಹತ್ ಜಲಭರಿತ ಶಿಲಾಸ್ತೋಮವುಳ್ಳ ಅಥವಾ ಹಲವಾರು ಜಲಭರಿತ ಶಿಲಾಸ್ತೋಮಗಳನ್ನು ಒಳಗೊಂಡ ಒಂದು ಭೌಗೋಳಿಕ ಪ್ರದೇಶ ಅಂತರ್ಜಲ ಪಾತ್ರವಾಗುತ್ತವೆ. ಎರಡು ಗಿರಿಶ್ರೇಣಿಗಳ ನಡುವಿನ ಕಣಿವೆ ಪ್ರದೇಶದಲ್ಲಿನ ಹೊನಲಿನ ಓರಣದ ಪಾತ್ರವನ್ನು ಅಂದರೆ ಜಲಾನಯನ ಭೂಮಿಯನ್ನು ಅಂತರ್ಜಲ ಪಾತ್ರ ಬಹುವಾಗಿ ಹೊಂದಿಕೊಂಡಿರುತ್ತದೆ. ಅಂತರ್ಜಲ ಪಾತ್ರವನ್ನು ಒಂದು ದೊಡ್ಡ ಭೂಗತ ಜಲಾಶಯವೆಂದು ಮನಗಂಡು ಆಯಾ ಪ್ರದೇಶದ ರೈತರ ಜಮೀನುಗಳ ಮಧ್ಯೆ ಇರುವ ಅಂತರ್ಜಲ ಸಂಬಂಧವನ್ನು ತಿಳಿಯಬಹುದು. ಪ್ರತಿ ಅಂತರ್ಜಲ ಪಾತ್ರಕ್ಕೂ ವಿಶಿಷ್ಟವಾದ ತುಲನಾತ್ಮಕ ಆರ್ಜನೆ, ಶೇಖರಣೆ ಮತ್ತು ವಿಸರ್ಜನೆ ಇವೆ.

ಜಲಭರಿತ ಶಿಲೆಯಲ್ಲಿ ನೀರು ಸೂಕ್ಷ್ಮ ಕೊಳವೆಯಂಥ ರಂಧ್ರಗಳಲ್ಲಿ ವ್ಯಾಪಿಸುವ ವೇಗಕ್ಕೆ ಆ ಶಿಲೆಯ ವ್ಯಾಪ್ಯಶೀಲತೆ ಎಂದು ಹೆಸರು. ಫ್ರಾನ್ಸಿನ ಹೆನ್ರಿ ಡಾರ್ಸಿ ಎಂಬ ಜಲಶಾಸ್ತ್ರಜ್ಞ ಜಲಭರಿತ ಶಿಲೆಯಲ್ಲಿ ವ್ಯಾಪ್ಯಶೀಲತೆ ನೀರಿನ ಚಲನ ಸಾಮರ್ಥ್ಯವೆಂದೂ ಇದು ಆ ಶಿಲೆಯಲ್ಲಿ ಎರಡು ಕೇಂದ್ರಗಳ ನಡುವೆ ಇರುವ ಒತ್ತಡದ ವ್ಯತ್ಯಾಸ ಮತ್ತು ಅವೆರಡರ ನಡುವೆ ತೆಳು ಅಥವಾ ಪ್ರಶಾಂತ ಪ್ರವಾಹದ ವೇಗಕ್ಕೆ ತಕ್ಕಂತೆ ಇರುವುದು ಎಂದೂ ಹೇಳಿದ್ದಾನೆ.

ಅಂತರ್ಜಲಾನ್ವೇಷಣೆ : ವ್ಯವಸಾಯೋದ್ಯಮಗಳಿಗಾಗಿ ಅಂತರ್ಜಲದ ಬೇಡಿಕೆ ಹೆಚ್ಚುತ್ತಲಿದ್ದು ಅದರ ಅನ್ವೇಷಣೆಯ ಅವಶ್ಯಕತೆಯೂ ಹೆಚ್ಚುತ್ತದೆ. ಅನ್ವೇಷಣೆಗಳಲ್ಲಿ ಬಳಕೆಯಲ್ಲಿರುವ ಮುಖ್ಯವಾದ ಎರಡು ಪ್ರಕಾರಗಳಲ್ಲಿ ಮೊದಲನೆಯದು ಭೂವೈಜ್ಞಾನಿಕ, ಎರಡನೆಯದು ಭೂಭೌತ. ಅನ್ವೇಷಿಸಬೇಕಾದ ಪ್ರದೇಶದ ಭೂವೈಜ್ಞಾನಿಕ ನಕ್ಷೆಯನ್ನು ತಯಾರಿಸಿ ಇಚ್ಛಿತ ಸ್ಥಳದ ಛೇದ ಚಿತ್ರವನ್ನು ತಯಾರಿಸಿಕೊಂಡು ಮುಂದುವರಿಯುವುದು ಭೂವೈಜ್ಞಾನಿಕ ಕ್ರಮ. ಆಗ ಯಾವ ಯಾವ ಶಿಲಾಸ್ತೋಮಗಳು ಯಾವ ಯಾವ

ದಿಕ್ಕಿನಲ್ಲಿ ಓಡುತ್ತವೆ ಅವುಗಳ ಸ್ವರೂಪ ಎಂತಹುದು ಎಂದು ತಿಳಿಯಬಹುದು ಮತ್ತು ಆಯಾ ಪ್ರದೇಶಗಳ ಸುತ್ತಮುತ್ತಲಿನ ಬಾವಿಗಳಲ್ಲಿ ರೇಚನಾಪರೀಕ್ಷೆಗಳನ್ನು ನಡೆಸಿದಾಗ ಆ ಶಿಲೆಗಳು ಶೇಖರಿಸಿ ನೀಡಬಹುದಾದ ಜಲಪ್ರಮಾಣವನ್ನು ತಿಳಿಯಬಹುದು. ಭೂಭೌತ ಕ್ರಮದಲ್ಲಿ ಅನೇಕ ವಿಧವಾದ ಸಲಕರಣೆಗಳು ಬಳಕೆಯಲ್ಲಿವೆ. ಅವುಗಳಲ್ಲಿ ಮುಖ್ಯವಾದುವು ವಿದ್ಯುನ್ನಿರೋಧಮಾಪಕ ಮತ್ತು ಭೂಕಂಪಮಾಪಕ. ವಿದ್ಯುನ್ನಿರೋಧಮಾಪಕ ಆಯಾ ಪ್ರದೇಶದ ನೆಲದಲ್ಲಿ ಎಲೆಕ್ಟ್ರೋಡುಗಳನ್ನು ನೆಟ್ಟು ವಿದ್ಯುತ್ತನ್ನು ಪ್ರವಹಿಸಿದಾಗ ಅಲ್ಲಿನ ಶಿಲೆಗಳ ವಿದ್ಯುನ್ನಿರೋಧತೆಯನ್ನು ತಿಳಿಸುತ್ತದೆ. ಜಲಭರಿತ ಶಿಲೆಗಳು ಮತ್ತು ಜಲರಹಿತಶಿಲೆಗಳು ಅವಕ್ಕೆ ತಕ್ಕ ನಿರೋಧತೆಯನ್ನು ಸೂಚಿಸುವುದರಿಂದ ನಿವೇಶನದ ಗುರುತಿಸುವಿಕೆ ಸುಲಭವಾಗುತ್ತದೆ. ಭೂಕಂಪಮಾಪಕದಲ್ಲಿ ಅಪೇಕ್ಷಿತ ಸ್ಥಳದ ನೆಲದಾಳದಲ್ಲಿ ಕೃತಕವಾಗಿ ಸ್ಫೋಟ ಉಂಟುಮಾಡಿದಾಗ ಶಬ್ದದ ಅಲೆಗಳು ಆಯಾ ಶಿಲಾಸ್ತೋಮಗಳಲ್ಲಿ ಅವುಗಳ ಭೌತಿಕ ಗುಣಕ್ಕೆ ತಕ್ಕಂತೆ ವೇಗ ವ್ಯತ್ಯಾಸಗೊಂಡು ಪ್ರವಹಿಸುತ್ತವೆ. ಇಲ್ಲಿ ಉಂಟಾಗುವ ವ್ಯತ್ಯಾಸ ವೈಪರೀತ್ಯಗಳು ಅಪೇಕ್ಷಿತ ನಿವೇಶನವನ್ನು ಸೂಚಿಸುತ್ತವೆ. (ಎಚ್.ಎಲ್.ಎಲ್.)

**ಜಲಮಾರ್ಗಗಳು:** ನೌಕಾಯಾನಕ್ಕೆ ಬಳಸುವ ನೈಸರ್ಗಿಕ ಕಾಲುವೆಗಳು ಮತ್ತು ನೀರಾವರಿ, ಕುಡಿವ ನೀರಿನ ಪೂರೈಕೆ, ಕಸದವಿಲೇವಾರಿ ಮುಂತಾದವುಗಳಿಗಾಗಿ ಬಳಸುವ ನಾಲೆಗಳು. ರೈಲ್ವೆ ಅಸ್ತಿತ್ವದಲ್ಲಿಲ್ಲದಿದ್ದಾಗ ಮತ್ತು ನೆಲ ದಾರಿಗಳು ಸಾಕಷ್ಟು ವೃದ್ಧಿಗೊಂಡಿಲ್ಲದಿದ್ದಾಗ ಒಳನಾಡಿನ ಕಾಲುವೆಗಳೂ ನಾಲೆಗಳೂ ಬಳಕೆಯಲ್ಲಿದ್ದುವು. ಈ ತರಹದ ಸಂಪರ್ಕವ್ಯವಸ್ಥೆ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಇತ್ತೆನ್ನುವುದಕ್ಕೆ ಋಗ್ವೇದದಲ್ಲಿ ಉಲ್ಲೇಖಗಳಿವೆ. ನೈಲ್ ನದಿಯನ್ನೂ ಕೆಂಪು ಸಮುದ್ರವನ್ನೂ ಪ್ರ.ಶ.ಪೂ. 500ರಷ್ಟು ಹಿಂದೆಯೇ ಕಾಲುವೆಯ ಮೂಲಕ ಜೋಡಿಸಲಾಗಿತ್ತು. ಚೀನದಲ್ಲಿ ಪ್ರ.ಶ.ಪೂ. 200ರಲ್ಲಿ ಒಂದು ಕಾಲುವೆಯನ್ನು ತೋಡಲಾಗಿತ್ತು. ತರುವಾಯದ ಶತಮಾನಗಳಲ್ಲಿ, ನಾಗರಿಕತೆ ಬೆಳೆದಂತೆ ಒಳನಾಡಿನ ಜಲಮಾರ್ಗಗಳು ವ್ಯವಸ್ಥಿತವಾಗಿ ರೂಪಗೊಂಡವು.

ಜಲಮಾರ್ಗಗಳಲ್ಲಿ ಎರಡು ವಿಧ : ನೌಕಾಸಂಚಾರ ಯೋಗ್ಯ ಕಾಲುವೆಗಳು ಮತ್ತು ಕಾಲುವೆಗೊಳಿಸಿದ (ಕ್ಯಾನಲೈಸ್ಡ್) ನದಿಗಳು. ದೋಣಿ, ಹರಿಗೋಲು ಮತ್ತು ಹಡಗುಗಳ ಸಂಚಾರಕ್ಕೆ ಸಿದ್ಧವಾದ ಅಂತರ್ದೇಶೀಯ ಕೃತಕ ಜಲಮಾರ್ಗಗಳೇ ನೌಕಾಸಂಚಾರಯೋಗ್ಯ ಕಾಲುವೆಗಳು. ಎರಡನೆಯ ಪ್ರಕಾರವಾದ ಕಾಲುವೆಗೊಳಿಸಿದ ನದಿಗಳಲ್ಲಿ ಜಲಪ್ರವಾಹವನ್ನು ಶೇಖರಿಸಲು ಒಂದು ಅಥವಾ ಹೆಚ್ಚು ಉತ್‌ಪ್ರವಾಹಿ ಅಣೆಕಟ್ಟು ಕಟ್ಟಿ ಆ ನದಿಗಳನ್ನು ನೌಕಾಸಂಚಾರಯೋಗ್ಯವನ್ನಾಗಿ ಮಾಡಲಾಗುತ್ತದೆ. ಪ್ರವಾಹದ ಉಚ್ಚ ಅಥವಾ ಆಲವಿ ಸ್ತರಗಳಲ್ಲೆ ನೌಕೆಗಳು ಚಲಿಸಲು ಅನುಕೂಲವಾಗುವಂತೆ ಜಲಪಾತಗಳನ್ನು ಕಟ್ಟಲಾಗುತ್ತದೆ. ಜಲಪಾತಗಳು ಎರಡೂ ಪ್ರಕಾರದ ಜಲಮಾರ್ಗಗಳಲ್ಲಿ ಇರಬಹುದು, ನೌಕಾಸಂಚಾರಯೋಗ್ಯ ಕಾಲುವೆಗಳು ಕಾಲುವೆಗೊಳಿಸಿದ ಎರಡು ನದಿಗಳನ್ನು ಜೋಡಿಸಬಹುದು. ಅಥವಾ ನದಿಗಳುದ್ದಕ್ಕೂ ಕೆಲ ದೂರದವರೆಗೆ ನಿರ್ಮಾಣಗೊಂಡಿರಬಹುದು. ಅವನ್ನು ಕ್ಷೇತ್ರಸ್ವರೂಪದೊಂದಿಗೆ (ಟೋಪೋಗ್ರಫಿ) ಹೊಂದಾಣಿಕೆ ಮಾಡಲು ಜಲಪಾತಗಳಿಂದ ಜೋಡಿಸಲ್ಪಟ್ಟ ಸ್ತರವಿಸ್ತಾರಗಳ ಸರಣಿಯನ್ನು ಉಪಯೋಗಿಸಲಾಗುತ್ತದೆ.

ಭಾರದಲ್ಲಿ ನೌಕಾಸಂಚಾರಯೋಗ್ಯ ಜಲಮಾರ್ಗ ಸು. 14,000 ಕಿಮೀ. ಇದರಲ್ಲೆ 3,500 ಕಿಮೀ ಯಂತ್ರೀಕೃತ ಹಡಗುಗಳ ಸಂಚಾರಕ್ಕೆ ಯೋಗ್ಯವಾಗಿದೆ. ಅವುಗಳಲ್ಲಿ ಪ್ರಮುಖವಾದವು ಗಂಗಾ ಬ್ರಹ್ಮಪುತ್ರ ಮತ್ತು ಅವುಗಳ ಉಪನದಿಗಳು, ಗೋದಾವರಿ ಕೃಷ್ಣ ಮತ್ತು ಅವುಗಳ ಕಾಲುವೆಗಳು, ಕೇರಳದ ಪಶ್ಚಿಮ ಕರಾವಳಿಯಲ್ಲಿರುವ ಕಾಲುವೆಗಳು, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿಯ ಬಕಿಂಗ್‌ಹ್ಯಾಮ್ ಕಾಲುವೆ, ಒರಿಸ್ಸ ಮತ್ತು ಗೊವಗಳಲ್ಲಿಯ ಡೆಲ್ಟಾ ಕಾಲುವೆಗಳು. ಅಲ್ಲದೇ ದಾಮೋದರ ಕಣಿವೆ ಯೋಜನೆಯಲ್ಲಿ ದುರ್ಗಾಪುರದಿಂದ ತ್ರಿವೇಣಿಯವರೆಗಿನ 137 ಕಿಮೀ. ಎರಡನೆಯ ಕಾಲುವೆ ನೀರಾವರಿಸಹಿತ ನೌಕಾಸಂಚಾರಯೋಗ್ಯ ಕಾಲುವೆಯಾಗಿದೆ. ಫರಕ್ಕ ನೌಕಾಸಂಚಾರ ಬೆಳೆಯುತ್ತಿದೆ. ಜಲಮಾರ್ಗಗಳ ಅಭಿವೃದ್ಧಿಗೆಂದು ಸ್ಥಾಪಿತವಾಗಿರುವ ಕೇಂದ್ರೀಯ ಅಂತರ್ದೇಶೀಯ ಜಲಸಂಚಾರ ಕಾರ್ಪೋರೇಷನ್ ಅಸ್ಸಾಮ್ ಮತ್ತು ಕೋಲ್ಕತಗಳಲ್ಲಿ 1967ರಿಂದ ಕಾರ್ಯ ನಡೆಸಿದೆ.

**ಜಲಸಾರಿಗೆ :** ನೀರಿನ ಮೇಲೆ ಅಥವಾ ನೀರಿನ ಒಳಗೆ ಸರಕು, ಪ್ರಯಾಣಿಕರು, ಅಂಚೆ ಮೊದಲಾದವುಗಳನ್ನು ಸಾಗಿಸುವ ವ್ಯವಸ್ಥೆ. ಇದು ನೆಲ ಸಾರಿಗೆ ಮತ್ತು ವಾಯುಸಾರಿಗೆಗಳಿಗಿಂತ ಅಗ್ಗವಾದದ್ದು. ಅಂತಾರಾಷ್ಟ್ರೀಯ ಸಾರಿಗೆ ಹಾಗೂ ಅಂತಾರಾಷ್ಟ್ರೀಯ ವ್ಯಾಪಾರಗಳಲ್ಲಿ ಜಲಸಾರಿಗೆ ಪ್ರಮುಖ ಪಾತ್ರವಿದೆ. ನೆಲ ಮತ್ತು ವಾಯುಸಾರಿಗೆಗಳು ಊಹೆಗೂ ನಿಲುಕದಷ್ಟು ಪ್ರಗತಿ ಹೊಂದಿದ್ದರೂ ಜಲಸಾರಿಗೆಯ ಪ್ರಾಮುಖ್ಯ ಕಡಿಮೆ ಏನೂ ಆಗಿಲ್ಲ.

ಈಗಿನ ಜಲಸಾರಿಗೆಯಲ್ಲಿ ಬಳಸುವ ಚಾಲಕ ಸಾಮರ್ಥ್ಯ ಅನೇಕ ಬಗೆಯದಾಗಿರಬಹುದು. ಹರಿಯುವ ನೀರಿನ ಸೆಳೆತವೇ ಕೆಲವು ಸಂದರ್ಭಗಳಲ್ಲಿ ಚಾಲಕ ಸಾಮರ್ಥ್ಯವಾಗುತ್ತದೆ. ಬೀಸು ಗಾಳಿ, ಮಾನವ ಸಾಮರ್ಥ್ಯ, ಕಲ್ಲಿದ್ದಲು, ಕಲ್ಲೆಣ್ಣೆ, ಪರಮಾಣು ಶಕ್ತಿ ಮುಂತಾದವು ಚಾಲಕ ಸಾಮರ್ಥ್ಯವಾಗಬಹುದು. ಜಲಸಾರಿಗೆಯಲ್ಲಿ ಚಾಲಕ ಸಾಮರ್ಥ್ಯ ಉಳಿತಾಯವಾಗುತ್ತದೆ. ನೀರಿಗೆ ಪ್ಲವನತೆ (ಬೋಯೆನ್ಸಿ) ಇರುವುದೂ ನೀರಿನ ಮೇಲೆ ವಸ್ತು ಚಲಿಸುವಾಗ ಘರ್ಷಣೆ ಕಡಿಮೆಯಿರುವುದೂ ಇದಕ್ಕೆ ಮುಖ್ಯ ಕಾರಣಗಳು. ಆದರೆ ಜಲ ಸಾರಿಗೆಯಲ್ಲಿ ವೇಗವನ್ನು ಏರಿಸಲು ತಗಲುವ ವೆಚ್ಚ ಇತರ ಸಾರಿಗೆಗಳಿಗಿಂತ ಹೆಚ್ಚಿನದಾಗಿರುತ್ತದೆ.

ನೌಕೆಗಳ, ಅದರಲ್ಲೂ ಸಮುದ್ರಯಾನ ಮಾಡುವ ನೌಕೆಗಳ ಗಾತ್ರಕ್ಕೆ ಮಿತಿಯೇ ಇಲ್ಲವೆನ್ನಬಹುದು. ಅವಕ್ಕೆ ಮಿತಿಯೊಡ್ಡುವ ಅಂಶಗಳೆಂದರೆ ಬಂದರುಗಳ ಸ್ಥಳಮಿತಿ ಮತ್ತು ಕಾಲುವೆಗಳ ಗಾತ್ರ ಮಿತಿ ಮಾತ್ರ. ನೌಕೆ ದೊಡ್ಡದಾದಷ್ಟೂ ನೌಕಾಯಾನ ಸುರಕ್ಷಿತವಾಗುವುದಷ್ಟೇ ಅಲ್ಲದೆ ಅದರಲ್ಲಿ ಸಾಗಿಸುವ ಸರಕಿಗೆ ತಗಲುವ ಸಾರಿಗೆ ವೆಚ್ಚ ಕಡಿಮೆಯೂ ಆಗುತ್ತದೆ. ಸಾಗರ ಸಮುದ್ರಗಳು ಎಲ್ಲ ರಾಷ್ಟ್ರಗಳಿಗೂ ಮುಕ್ತವಾದ ಹೆದ್ದಾರಿಗಳಾಗಿವೆ. ಅವುಗಳ ಬಳಕೆಗೆ ಯಾವ ಬಗೆಯ ತೆರಿಗೆ, ಸುಂಕವನ್ನೂ ಕೊಡಬೇಕಾಗಿಲ್ಲ. ಸಮುದ್ರಯಾನಕ್ಕೆ ಯಾವ ಬಗೆಯ ಮಾರ್ಗ ನಿರ್ಮಾಣ–ನಿರ್ವಹಣೆಗಳ ಅಗತ್ಯವಿಲ್ಲವಾದ್ದರಿಂದ ವೆಚ್ಚ ಕಡಿಮೆಯಾಗುತ್ತದೆ. ಬಂದರುಗಳ ಮತ್ತು ಕಾಲುವೆಗಳ ನಿರ್ಮಾಣಕ್ಕೂ ನಿರ್ವಹಣೆಗೂ ಹೇರಳ ಧನವ್ಯಯವಾಗುವುದಾದರೂ ನೌಕೆಗಳು ಸಾಗಿಸುವ ಸರಕಿನ ಗಾತ್ರಕ್ಕೆ ಹೋಲಿಸಿದಾಗ ಈ ವೆಚ್ಚ ಹೆಚ್ಚಿನದಲ್ಲವೆನಿಸುವುದು.

ಸಮುದ್ರಯಾನದಲ್ಲಿ ಅತ್ಯಗತ್ಯವಾದ ಉತ್ತರಮುಖಿ ಮೊಟ್ಟಮೊದಲು ಚೀನೀಯರಿಗೆ ತಿಳಿದಿತ್ತು. 1,200ರ ವೇಳೆಗೆ ಯುರೋಪಿಯನ್ನರು ಇದನ್ನು ಬಳಸಲಾರಂಭಿಸಿದರು. ಇದನ್ನೂ, ಸ್ಥೂಲ ನಕ್ಷೆಗಳನ್ನೂ ಬಳಸಿ ನಾವಿಕರು ದಿಕ್ಕನ್ನೂ ಅಕ್ಷಾಂಶಗಳನ್ನೂ ತಿಳಿಯುತ್ತಿದ್ದರು. 19ನೆಯ ಶತಮಾನದ ಆದಿ ಭಾಗದಲ್ಲಿ ಅಟ್ಲಾಂಟಿಕ್ ಸಾಗರದ ಮೇಲೆ ಯುರೋಪಿನಿಂದ ಅಮೆರಿಕದ ನಡುವೆ ಜನರನ್ನೂ ಅಂಚೆಯನ್ನೂ ಸಾಗಿಸುವ ನೌಕೆಗಳು ಪ್ರಾಮುಖ್ಯ ಗಳಿಸಿದುವು. ಆ ಶತಮಾನದ ಕೊನೆಯವರೆಗೂ ಹಡಗಿನ ಚಾಲನೆ ಮಾರುತಗಳನ್ನೂ ಮಾನವ ಸಾಮರ್ಥ್ಯವನ್ನೂ ಅವಲಂಬಿಸಿತ್ತು. ನೌಕೆಗಳಲ್ಲಿ ಹುಟ್ಟುಹಾಕಲೆಂದು ಗುಲಾಮರನ್ನೂ ಕೈದಿಗಳನ್ನೂ ಬಳಸುತ್ತಿದ್ದರು.

ಅಮೆರಿಕದ ಜಾನ್ ಫಿಚ್ಚ್ ಟ್ರಿನ್‌ಟನ್ ಚಲಿಸುವ ಮೊದಲ ಉಗಿದೋಣಿಯನ್ನು ನಿರ್ಮಿಸಿದ (1787). ಮೂರುವರ್ಷಗಳ ಬಳಿಕ ಫಿಲಿಡೆಲ್ಫಿಯದಿಂದ ಟ್ರಿನ್‌ಟನ್‌ಗೆ ಅವನದೇ ಉಗಿದೋಣಿಯ ಸೇವೆ ಆರಂಭವಾಯಿತು. ಪ್ರತಿಯೊಂದು ಯಾನದಲ್ಲೂ ಅವನಿಗೆ ನಷ್ಟವುಂಟಾಗುತ್ತಿದ್ದುದರಿಂದ ಅವನು ಜನರ ಕರುಣೆಗೂ ಹಾಸ್ಯಕ್ಕೂ ಪಾತ್ರನಾದ. ರಾಬರ್ಟ್ ಫುಲ್ಟನ್ ಪ್ರಪಂಚದ ಪ್ರಥಮ ಲಾಭದಾಯಕ ಉಗಿದೋಣಿಯನ್ನು ಆರಂಭಿಸಿದ (1867).

ನೌಕೆಯ ನಿರ್ಮಾಣದಲ್ಲಿ ಮರದ ಸ್ಥಾನವನ್ನು ಕ್ರಮೇಣ ಕಬ್ಬಿಣ ಆಕ್ರಮಿಸಿತು. 1880ರ ವೇಳೆಗೆ ಉಕ್ಕು ಇವೆರಡರ ಸ್ಥಾನವನ್ನೂ ಆಕ್ರಮಿಸಲಾರಂಭಿಸಿತು. ಕಲ್ಲಿದ್ದಲು ನೌಕೆಯ ಚಾಲನೆ ಅನೇಕ ಕಾಲ ಸಮರ್ಥವಾಗಿ ಬಳಕೆಯಲ್ಲಿತ್ತು. ಕಲ್ಲೆಣ್ಣೆಯ ಬಳಕೆಯಾರಂಭವಾದ ಬಳಿಕ ಕಲ್ಲಿದ್ದಲ ಬಳಕೆ ಕಡಿಮೆಯಾಯಿತು. ಇತ್ತೀಚೆಗೆ ಯುದ್ಧನೌಕೆಗಳೂ ಜಲಾಂತರ್ಗಾಮಿಗಳೂ ಮಾತ್ರವಲ್ಲದೆ ನಾಗರಿಕಯಾನ ನೌಕೆಗಳೂ ಪರಮಾಣು ಶಕ್ತಿಯನ್ನು ಚಾಲನಸಾಮರ್ಥ್ಯವಾಗಿ ಬಳಸುತ್ತಿವೆ. ಎನ್. ಎಸ್. ಸವನ್ನಾ ಪ್ರಥಮ ಪರಮಾಣು ಶಕ್ತಿ ಚಾಲಿತ ನಾಗರಿಕ ಯಾನ ನೌಕೆಯಾಗಿದೆ. ಸ್ವಯಂಚಾಲಿತ ನೌಕೆಗಳ ಬಳಕೆಯೂ ಆರಂಭವಾಗಿದೆ. ಇಂಥ ನೌಕೆಗಳಲ್ಲಿ ಎಲ್ಲ ಕೆಲಸಗಳನ್ನೂ ಯಂತ್ರಗಳೇ ಮಾಡುತ್ತವೆ. ನೌಕೆಯ ನಾವಿಕರೆಂದರೆ ಈ ಯಂತ್ರಗಳ ಉಸ್ತುವಾರಿ ನಡೆಸುವ ತಜ್ಞರೇ. ನೀರಿಗೆ ಸೋಕಿಯೂ ಸೋಕದಂತೆ ಚಿಮ್ಮಿಕೊಂಡು ಹೋಗುವ ಹೈಡ್ರಾಫಾಯಿಲ್ ದೋಣಿಗಳೂ ಬಳಕೆಗೆ ಬರುತ್ತಿವೆ. ಇವು ಕಡಿಮೆ ದೂರದ ಶೀಘ್ರಯಾನಗಳಿಗೂ ಪ್ರಯಾಣಿಕರ ಸಾಗಾಣಿಕೆಗೂ ಉಪಯುಕ್ತವಾಗಿವೆ. ಹಾರುವಾಹನಗಳ (ಹೋವರ್ ಕ್ರ್ಯಾಫ್ಟ್) ಬಳಕೆಯ ಬಗ್ಗೆಯೂ ಪ್ರಯೋಗಗಳು ಯಶಸ್ವಿಯಾಗಿವೆ. ಈ ವಾಹನಗಳು ಭೂಮಿಯ ಅಥವಾ ನೀರಿನ ಮೇಲ್ಮೈಯಿಂದ $1–1^1/_2$ ಮೀ ಎತ್ತರದಲ್ಲಿ ಸಾಮರ್ಥ್ಯಶಾಲೀ ಪಂಖದಿಂದ ನಿರ್ಮಿತವಾದ ಗಾಳಿಯ ಮೆತ್ತೆಯ ಮೇಲೆ ಚಲಿಸುತ್ತವೆ.

ದೈತ್ಯಾಕಾರದ ಜಲಾಂತರ್ಗಾಮಿಗಳನ್ನು ಟ್ಯಾಂಕರ್ ಮತ್ತು ಸರಕು ನೌಕೆಗಳನ್ನಾಗಿ ಬಳಸಲು ಯತ್ನಗಳು ನಡೆಯುತ್ತಿವೆ. ಇವು ಸಮುದ್ರದ ಆಳದಲ್ಲಿ ಅಲೆಗಳ ಚಂಡಮಾರುತಗಳ ಭಯವಿಲ್ಲದೆಡೆ ಅತಿವೇಗದಲ್ಲಿ ಚಲಿಸಬಲ್ಲವಾಗಿವೆ.

ನೌಕೆನಿರ್ಮಾಣದಲ್ಲಿನ ಇನ್ನೊಂದು ಬೆಳವಣಿಗೆಯೆಂದರೆ ಒಂದೇ ಸರಕಿನ ಸಾಗಾಣಿಕೆಗಾಗಿ ಇಡೀ ನೌಕೆಯನ್ನು ವಿಶೇಷವಾಗಿ ನಿರ್ಮಿಸುವುದು. ಕಲ್ಲಿದ್ದಲು, ಮರದ ದಿಮ್ಮಿ, ಬಾಳೆಹಣ್ಣು, ಗೋಮಾಂಸ, ಇವೆಲ್ಲಕ್ಕಿಂತ ಮಿಗಿಲಾಗಿ ತೈಲ ಇಂಥ ಸರಕನ್ನು

ಸಾಗಿಸಲು ವಿಶಿಷ್ಟ ನೌಕೆಗಳಿವೆ. ತೈಲವನ್ನು ಸಾಗಿಸುವ ಟ್ಯಾಂಕರುಗಳ ಗಾತ್ರ ಬೇರಾವ ನೌಕೆಯ ಗಾತ್ರಕ್ಕಿಂತ ಶೀಘ್ರವಾಗಿ, ದೈತ್ಯಾಕಾರವಾಗಿ ಬೆಳೆಯುತ್ತಿದೆ. ಖಾದ್ಯ ತೈಲ, ಕಾಕಂಬಿ, ತಿಮಿಂಗಿಲದೆಣ್ಣೆ ಇತ್ಯಾದಿಗಳ ಸಾಗಾಣಿಕೆಗೂ ಟ್ಯಾಂಕರುಗಳ ನಿರ್ಮಾಣವಾಗಿದೆ.

ಜಲಸಾರಿಗೆಯನ್ನು ಒಳನಾಡಿನ ಜಲಸಾರಿಗೆ ಮತ್ತು ಸಮುದ್ರಸಾರಿಗೆ ಎಂದು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ನದಿ ಸರೋವರ ಕಾಲುವೆಗಳು ಜಲಾಶಯ ಇಂಥವುಗಳ ಮೇಲೆ ಸಾಗಾಣಿಕೆ ನಡೆಸಿದರೆ ಅದು ಒಳನಾಡಿನ ಜಲಸಾರಿಗೆ; ಸಮುದ್ರ, ಸಾಗರ ಕಡಲುಗಾಲುವೆಗಳ ಮೇಲಿನ ಸಾಗಾಣಿಕೆ ಸಮುದ್ರಸಾರಿಗೆ.

ಸಾರಿಗೆ ನೌಕೆಗಳನ್ನು ಲೈನರ್ ಮತ್ತು ಟ್ರಾಂಪುಗಳೆಂದು ವಿಂಗಡಿಸುವುದು ರೂಢಿ. ಲೈನರುಗಳು ತಮ್ಮ ಯಾನಗಳನ್ನು, ಮೊದಲೇ ನಿಗದಿಪಡಿಸಿ ಪ್ರಚುರಪಡಿಸಿದ ವೇಳಾಪಟ್ಟಿಯ ಮೇರೆಗೆ, ಕೈಗೊಳ್ಳುತ್ತವೆ. ಅವು ಕ್ಲುಪ್ತಕಾಲದಲ್ಲಿ ನಿರ್ದಿಷ್ಟ ಬಂದರುಗಳನ್ನು ತಲಪುವ ಮತ್ತು ಬಿಡುವ ಗೊತ್ತಾದ ಮಾರ್ಗವನ್ನನುಸರಿಸಿಯೋ ಗಮ್ಯಸ್ಥಾನವನ್ನು ಸೇರುವ ನೌಕೆಗಳಾಗಿವೆ. ಇವನ್ನೆಲ್ಲ ಕಟ್ಟುನಿಟ್ಟಾಗಿ ಪಾಲಿಸಲು ಒಂದು ನೌಕಾಕಂಪನಿ ನೌಕಾಸಮೂಹವನ್ನೇ ಇಟ್ಟುಕೊಳ್ಳಬೇಕಾಗುತ್ತದೆ.

ಬೇಕಾದಾಗ ಬೇಕಾದಲ್ಲಿಗೆ ಯಾವ ಸರಕನ್ನಾದರೂ ಒಯ್ಯಲು ಸಿದ್ಧವಿರುವ ನೌಕೆ ಟ್ರಾಂಪ್. ಇದರ ಯಾನಗಳಿಗೆ ನಿರ್ದಿಷ್ಟ ವೇಳಾಪಟ್ಟಿಯಾಗಲಿ ಮಾರ್ಗವಾಗಲಿ ಇರುವುದಿಲ್ಲ. ಯಾರು ಬೇಕಾದರೂ ಈ ನೌಕೆಯನ್ನು ತಮ್ಮದೆ ಉಪಯೋಗಕ್ಕೆಂದು ಬಾಡಿಗೆಗೆ ಪಡೆಯಬಹುದು. (ಡಿ.ಎನ್.ಎಸ್.ಎಂ.;ಸಿ.ಸಿ.ಪಿ.)

**ಜಲಮಾಲಿನ್ಯ:** ಮಾನವನ ಅವಶ್ಯಕ ಮೂಲಭೂತವಾದ ವಸ್ತುಗಳಲ್ಲಿ ನೀರು ಸಹ ಒಂದಾಗಿದೆ. ನಮ್ಮ ಆರೋಗ್ಯಕ್ಕೆ ಶುದ್ಧಗಾಳಿ, ಆಹಾರ ಎಷ್ಟು ಅವಶ್ಯಕವೋ ನೀರು ಸಹ ಅಷ್ಟೇ ಅಗತ್ಯ. 2003ನೆಯ ವರ್ಷವನ್ನು ವಿಶ್ವಸಂಸ್ಥೆಯು ಅಂತಾರಾಷ್ಟ್ರೀಯ ಶುದ್ಧನೀರಿನ ವರ್ಷವೆಂದು ಘೋಷಿಸಿದೆ.

ಭೂಮಿಯ ಶೇ. 71 ಭಾಗ ನೀರಿನಿಂದ ಶೇ. 29 ಭಾಗ ಭೂಖಂಡದಿಂದ ಆವರಿಸಿದೆ. ಶೇ. 71 ನೀರನ್ನು ಶೇ. 100 ಎಂದು ಭಾವಿಸಿದರೆ ಶೇ. 97.2 ರಷ್ಟು ಉಪ್ಪು ನೀರಾಗಿದ್ದು ಉಳಿದ ಶೇ. 2.8 ರಷ್ಟು ಮಾತ್ರ ಸಿಹಿ ನೀರಾಗಿದೆ. ಈ ಸಿಹಿ ನೀರನ್ನು 100 ಎಂದು ಭಾವಿಸಿದರೆ ಇದರ ಶೇ. 77 ಭಾಗ ನೀರು ಹಿಮದ ರೂಪದಲ್ಲಿದ್ದರೆ ಉಳಿದ ಶೇ. 23 ರಷ್ಟು ನದಿ, ಕೆರೆ, ಕಾಲುವೆ, ಸರೋವರ, ಅಂತರ್ಜಲದ ರೂಪದಲ್ಲಿದೆ. ಈ ಅಲ್ಪ ಪ್ರಮಾಣದ ಸಿಹಿ ನೀರಿಗಾಗಿ ಅದೆಷ್ಟು ಬೇಡಿಕೆ. ಸಾಗರದ ಹನಿ ಹನಿ ನೀರು ಆವಿಯಾಗಿ ಪುನಃ ಭೂಮೇಲ್ಮೈಯನ್ನು ತಲುಪಬೇಕಾದರೆ ಎಷ್ಟೆಲ್ಲಾ ಸಮಯಬೇಕು. ಇಂತಹ ನೀರು ಕೂಡ ಇಂದು ಮಾನವನ ವಿವೇಚನಾರಹಿತ ಚಟುವಟಿಕೆಗಳ ಪರಿಣಾಮದಿಂದ ಹಲವಾರು ರೀತಿಯಲ್ಲಿ ಮಲಿನಗೊಂಡಿದೆ. ಈ ನೀರು ಪ್ರಮುಖವಾಗಿ ಘನ, ದ್ರವ, ಅನಿಲರೂಪದಲ್ಲಿ ಕಂಡು ಬರುತ್ತದೆ. ಕೈಗಾರಿಕೆಗಳ ಬೆಳೆವಣಿಗೆಯಿಂದ ನೀರಿನ ಗುಣಮಟ್ಟ ನಾಶವಾಗುತ್ತಿದೆ. ನೀರು ತನ್ನ ಆವರ್ತನ ಕ್ರಮದ ಮೂಲಕ ಸ್ವಯಂ ಶುದ್ಧಿಯಾಗುವ ಲಕ್ಷಣಗಳನ್ನು ಹೊಂದಿದ್ದರೂ ಮಾನವನ ಅತಿಕ್ರಮಣದಿಂದಾಗಿ ಮಲಿನಗೊಳ್ಳುತ್ತಿದೆ. ನಿರ್ಮಲ ಜಲದ ಮೇಲೆ ತ್ಯಾಜ್ಯಗಳ ಒತ್ತಡದ ಹೊಂದಾಣಿಕೆಯು ಮಿತಿಮೀರಿದಾಗ ನೀರು ತನ್ನ ನೈರ್ಮಲ್ಯತೆಯನ್ನೂ ಪರಿಶುದ್ಧತೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತದೆ. ನೈಸರ್ಗಿಕ ಹಾಗೂ ಮಾನವನ ಕೃತ್ಯಗಳಿಂದ ನೀರು ಭೌತಿಕವಾಗಿ (ಬಣ್ಣ, ರೂಪ, ಉಷ್ಣತೆ, ವಾಸನೆ) ರಾಸಾಯನಿಕವಾಗಿ (ಲವಣತೆ, ಆಮ್ಲ, ಕ್ಷಾರ) ಜೈವಿಕವಾಗಿ (ಬ್ಯಾಕ್ಟೀರಿಯ ಆಲ್ಗೆ ಇತ್ಯಾದಿ) ಬದಲಾಗಿ ಮಾನವ, ಸಸ್ಯ ಹಾಗೂ ಪ್ರಾಣಿ ಸಮೂಹಕ್ಕೆ ಅಪಾಯಕಾರಿಯಾಗಿ ಪರಿಣಮಿಸುವುದೇ ಜಲಮಾಲಿನ್ಯ. ಮೂಲಭೂತವಾಗಿ 2 ರೀತಿಯಲ್ಲಿ ಏರ್ಪಡುತ್ತದೆ: 1. ನೈಸರ್ಗಿಕ ಮೂಲಗಳಿಂದ ಮತ್ತು 2. ಮಾನವ ನಿರ್ಮಿತಮೂಲಗಳಿಂದ.

1) ನೈಸರ್ಗಿಕವಾಗಿ ಭೂಸವೆತ, ಭೂಕುಸಿತ, ಕರಾವಳಿ ಮತ್ತು ಸಮುದ್ರದ ದಂಡೆಯಲ್ಲಿರುವ ಬಂಡೆಗಳ ಸವೆತ, ಜ್ವಾಲಾಮುಖಿಯ ಕಾರ್ಯ ಸಸ್ಯ ಮತ್ತು ಪ್ರಾಣಿಗಳ ಕೊಳೆಯುವಿಕೆ, ಮಣ್ಣಿನ ಸಂಚಯನ (ನೀರಿನಲ್ಲಿ) ತಳದ ಭೂಕುಸಿತ ಇತ್ಯಾದಿ.

2) ನೀರು ಮಲಿನಗೊಳ್ಳುವುದೇ ಮಾನವೀಯ ಮೂಲಗಳಿಂದ. ಅವುಗಳೆಂದರೆ ಕೈಗಾರಿಕೆಯಿಂದ ಬರುವ ಕ್ಲೋರೈಡ್, ಸಲ್ಫೈಡ್, ಕಾರ್ಬೋನೇಟ್ಸ್, ಅಮೋನಿಕಲ್ ನೈಟ್ರೋಜನ್, ನೈಟ್ರೇಟ್ಸ್, ಪೋಷಕಗಳು ಭಾರವಸ್ತುಗಳಿಂದ ಪಾದರಸ, ಜಿನ್, ಸತು, ಅರ್ಸೆನಿಕ್ ಇತ್ಯಾದಿ ಜೈವಿಕಗೊಬ್ಬರಗಳು ಅವಯವಗಳು ವಿಕಿರಣಕ್ರಿಯೆಯಿಂದ ಬರುವ ತ್ಯಾಜ್ಯಗಳು ಇತ್ಯಾದಿ. ಅ. ಕೃಷಿಯ ಮೂಲ: ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕೀಟನಾಶಕ ಮತ್ತು ಅನೇಕ ವಿಧವಾದ ಕರಗದ ರಾಸಾಯನಿಕ ವಸ್ತುಗಳಿಂದ ಕಳೆ ಮತ್ತು ಸಸ್ಯಗಳ ಅವಶೇಷಗಳಿಂದ ನೀರು ಮಲಿನಗೊಳ್ಳುತ್ತಿದೆ. ಆ ನಗರ ಮೂಲ: ನಗರಗಳ ಚರಂಡಿಗಳಿಂದ ಹೊರಬರುವ ನೀರು ಹಲವಾರು ರೀತಿಯ ವಸ್ತು ಮತ್ತು ಖನಿಜಗಳಿಂದ ಮಿಶ್ರಣದಿಂದ ಕಲುಷಿತಗೊಂಡಿರುತ್ತದೆ.

ನೀರಿನ ಮಾಲಿನ್ಯದ ಅನೇಕ ವಿಧಗಳು: ಭೂಮೇಲ್ಮೈ ನೀರಿನ ಮಾಲಿನ್ಯ, ಸರೋವರದ ನೀರಿನ ಮಾಲಿನ್ಯ, ಸಮುದ್ರದ ನೀರಿನ ಮಾಲಿನ್ಯ ಮತ್ತು ಅಂತರ್ಜಲ ಮಾಲಿನ್ಯ.

ಭೂಮೇಲ್ಮೈ ನೀರಿನ ಮಾಲಿನ್ಯ: ನೀರಿನ ಮೂಲಗಳಾದ ನದಿ, ಸರೋವರ, ಕೆರೆ, ಬಾವಿ ಇತ್ಯಾದಿಗಳ ನೀರು ಮಾನವ ಹಾಗೂ ನೈಸರ್ಗಿಕ ಕ್ರಿಯೆಗಳಿಂದ ಮಲಿನಗೊಳ್ಳುತ್ತದೆ. ಭೂ ಸವೆತದಿಂದ ಸಂಚಯನಗೊಳ್ಳುವ ವಸ್ತುಗಳಿಂದ ಮತ್ತು ಸರೋವರಗಳನ್ನು ಸೇರುವ ನದಿಗಳ ಮಲಿನತೆಯಿಂದ ಸರೋವರದ ಮಾಲಿನ್ಯ ಉಂಟಾಗುತ್ತದೆ. ತೀರ ಕರಾವಳಿ ಪ್ರದೇಶದ ಕೈಗಾರಿಕೆ ಮತ್ತು ನಗರಗಳ ವಸ್ತುಗಳಿಂದ ಮಲಿನಗೊಂಡ ನದಿಗಳ ನೀರಿನ ಸೇರುವಿಕೆಯಿಂದ ಸಮುದ್ರದ ನೀರು ಮಲಿನಗೊಳ್ಳುತ್ತಿದೆ. ಅಧಿಕ ಇಳುವರಿಗಾಗಿ ಬಳಸುವ ರಾಸಾಯನಿಕ ಗೊಬ್ಬರಗಳು ನೀರಿನಲ್ಲಿ ಬೆರೆಯುತ್ತಿವೆ. ಮಣ್ಣಿನ ಸೋಸುವಿಕೆಯ ಕಾರ್ಯದಿಂದಾಗಿ ಈ ರಾಸಾಯನಿಕಗಳು ಅಂತರ್ಜಲ ಸೇರಿ ಅಲ್ಲಿನ ನೀರು ಮಲಿನಗೊಳ್ಳುತ್ತಿದೆ.

ಪರಿಣಾಮಗಳು: ಮಾಲಿನ್ಯ ಭರಿತ ನೀರಿನ ಸೇವನೆಯಿಂದ ಅನೇಕ ಮಾರಣಾಂತಿಕ ರೋಗಗಳಿಗೆ ಕಾರಣವಾಗಿದೆ. ಜಲಚರಪ್ರಾಣಿಗಳು ಹಾಗೂ ಸಸ್ಯಗಳು ನಾಶವಾಗುತ್ತಿವೆ. ಕೃಷಿ ಬೆಳೆಗಳು ಹಾನಿಗೊಳಗಾಗುತ್ತಿರುವುದಲ್ಲದೆ, ಜಲಮಾಲಿನ್ಯ ಇತರ ಮಾಲಿನ್ಯಗಳಿಗೆ ಪರೋಕ್ಷವಾಗಿ ಕಾರಣವಾಗುತ್ತಿದೆ.

ಜಲಮಾಲಿನ್ಯತೆಯನ್ನು ನಿಯಂತ್ರಿಸುವ ಪರಿಹಾರೋಪಾಯಗಳು: ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಜಲಮಾಲಿನ್ಯವು ಈಗಾಗಲೇ ಬೃಹತ್ ಸಮಸ್ಯೆಯಾಗಿದ್ದು ಮುಂದೊಂದು ದಿನ ಕುಡಿಯುವ ನೀರಿಗಾಗಿಯೇ ಪೃಥ್ವಿಯ ಮೇಲೆ ಯುದ್ಧಗಳು ಸಂಭವಿಸುವುದರಲ್ಲಿ ಸಂದೇಹವೇ ಇಲ್ಲ. ಈ ನಿಟ್ಟಿನಲ್ಲಿ ಜಲ ಮಾಲಿನ್ಯ ನಿಯಂತ್ರಣಕ್ಕಾಗಿ ಕೈಗೊಳ್ಳಬಹುದಾದ ಕೆಲವು ಮಾರ್ಗೋಪಾಯಗಳೆಂದರೆ:

ಚರಂಡಿ ನೀರನ್ನು ಶುದ್ಧಿಗೊಳಿಸುವುದು. ಕೈಗಾರಿಕೆಯ ತ್ಯಾಜ್ಯವಸ್ತುಗಳ ಸರಿಯಾದ ಸಂಸ್ಕರಣೆ, ವಿದ್ಯುತ್ ಸ್ಥಾವರ ಮತ್ತು ಇತರ ಮೂಲಗಳಿಂದ ಹೊರಬರುವ ನೀರು ನದಿ/ಕೆರೆ ಸೇರದಂತೆ ತಡೆಯುವುದು. ನೀರಿನ ಪುನರ್ಬಳಕೆ. ಧಾರ್ಮಿಕ ಮತ್ತು ಮೂಢನಂಬಿಕೆಗಳನ್ನು ಇಟ್ಟುಕೊಂಡು ನದಿಗಳಿಗೆ ಹೆಣಗಳನ್ನು ಹಾಗೂ ಇತರೆ ವಸ್ತುಗಳನ್ನು ಎಸೆಯುವುದನ್ನು ನಿಷೇಧಿಸುವುದು. ಮಾಲಿನ್ಯ ನಿಯಂತ್ರಣ ಕಾನೂನು ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು. ಜನರಲ್ಲಿ ಜಲಮಾಲಿನ್ಯದ ಬಗ್ಗೆ ಅರಿವು ಮೂಡಿಸುವುದು. (ಕೆ.ಎಸ್.)

**ಜಲವಿದ್ಯುಚ್ಛಕ್ತಿ:** ಅತ್ಯಂತ ಎತ್ತರದಿಂದ ರಭಸವಾಗಿ ಧುಮುಕುವ ನೀರನ್ನು ಟರ್ಬೈನು (ತಿರುಬಾನಿ) ಮತ್ತು ಡೈನಮೋಗಳ ಮೂಲಕ ಉತ್ಪಾದಿಸುವ ವಿದ್ಯುಚ್ಛಕ್ತಿ. ಅಂದರೆ ಔನ್ನತ್ಯದಲ್ಲಿ ನೀರಿನ ವಿಭವ ಶಕ್ತಿಯನ್ನು ಚಲನಶಕ್ತಿಯಾಗಿ ಮಾರ್ಪಡಿಸಿ ಅದರ ನೆರವಿನಿಂದ ಉತ್ಪಾದಿಸುವ ಶಕ್ತಿಯಾಗಿ ಪರಿವರ್ತಿಸುವುದನ್ನು ಪ್ರಥಮವಾಗಿ ಇಂಗ್ಲೆಂಡಿನ ಲಾರ್ಡ್ ಆರ್ಮ್‌ಸ್ಟ್ರಾಂಗ್ ಎಂಬಾತ 1879ರಲ್ಲಿ ಕಂಡು ಹಿಡಿದನು. ಸಾರ್ವಜನಿಕ ಬಳಕೆಗೆ ಮೊಟ್ಟಮೊದಲಿಗೆ ಜಲಶಕ್ತಿ ಉತ್ಪಾದನೆ 1882ರಲ್ಲಿ ಸ್ವಿಟ್ಜರ್ಲೆಂಡಿನ ಜೂರಿಕ್ ನಗರದಲ್ಲಿ ಪ್ರಾರಂಭವಾಯಿತು. 1883ರಲ್ಲಿ ದೊಡ್ಡ ಪ್ರಮಾಣದ ಜಲವಿದ್ಯುತ್ ತಯಾರಿಕಾ ಘಟಕವೊಂದು ಪ್ರಾರಂಭಗೊಂಡಿತು. ಇಂದು ಪ್ರಪಂಚದಾದ್ಯಂತ ಜಲವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಬಳಕೆ ವ್ಯಾಪಕವಾಗಿದೆ ಜೊತೆಗೆ ಹೆಚ್ಚು ಪ್ರಚಲಿತ ಹಾಗೂ ಅನಿವಾರ್ಯ ಶಕ್ತಿ ಸಾಧನವೂ ಆಗಿದೆ. ವಿದ್ಯುಚ್ಛಕ್ತಿ ಉತ್ಪಾದಿಸಲು ಬಳಸುವ ಮೂರು ಮುಖ್ಯ ವಿಧಾನಗಳ ಪೈಕಿ ಇದು ಒಂದು. ಉಳಿದ ಎರಡು ವಿಧಾನಗಳೆಂದರೆ ಪಳೆಯುಳಿಕೆ ಇಂಧನ ಜನಿತ ವಿದ್ಯುಚ್ಛಕ್ತಿ, ಮತ್ತು ಪರಮಾಣು (ನ್ಯೂಕ್ಲಿಯರ್) ಇಂಧನ ಜನಿತ ವಿದ್ಯುಚ್ಛಕ್ತಿ.

ಜಲವಿದ್ಯುಚ್ಛಕ್ತಿ ಉತ್ಪಾದನಾ ವಿಧಾನ: ಎತ್ತರ ಪ್ರದೇಶದಲ್ಲಿ ಹರಿಯುತ್ತಿರುವ ನದಿಗೆ ಯೋಗ್ಯ ಸ್ಥಳದಲ್ಲಿ ಅಣೆಕಟ್ಟು ಕಟ್ಟಿ ಜಲಾಶಯವನ್ನು ನಿರ್ಮಿಸಿ ಅದರಲ್ಲಿ ಸಂಗ್ರಹವಾದ ನೀರನ್ನು ಕಾಲುವೆ ಅಥವಾ ಸುರಂಗದ ಮೂಲಕ ಒಂದು ಪ್ರಪಾತದ ಶಿಖರಕ್ಕೆ ಕೊಂಡೊಯ್ಯಲಾಗುವುದು. ಇದು ವಿಭವ ಶಕ್ತಿಯುತ ನೀರಿನ ರಾಶಿ. ಪ್ರಪಾತದ ತಳದಲ್ಲಿ ಕಟ್ಟಿರುವ ವಿದ್ಯುದಾಗಾರದಲ್ಲಿ ತಿರುಬಾನಿಗಳೂ (ಟರ್ಬೈನ್) ವಿದ್ಯುಜ್ಜನಕಗಳೂ ಇರುತ್ತವೆ. ಈಗ, ಪ್ರಪಾತದ ಮೇಲಿನಿಂದ ನೀರು ದೊಡ್ಡ ಕೊಳವೆಗಳ(ಪೆನ್‌ಸ್ಟಾಕ್ ಪೈಪ್ಸ್) ಮೂಲಕ ಕೆಳಕ್ಕೆ ಧಾವಿಸಿ ವಿದ್ಯುದಾಗಾರದಲ್ಲಿರುವ ತಿರುಬಾನಿಗಳನ್ನು ಪ್ರವೇಶಿಸುತ್ತದೆ. ಅಂದರೆ ಈಗ ನೀರಿನ ವಿಭವಶಕ್ತಿ ಚಲನಶಕ್ತಿ ಆದಂತಾಯಿತು. ಇದನ್ನು ತಿರುಬಾನಿಗಳು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತವೆ. ತಿರುಬಾನಿಗಳಿಗೆ ಜೋಡಿಸಿರುವ ವಿದ್ಯುಜ್ಜನಕಗಳಿಂದ ಆಗ ವಿದ್ಯುತ್ತು ಪ್ರವಹಿಸುವುದು. ನೀರು ಮಂದಗತಿಯಿಂದ ಮುಂದಕ್ಕೆ ಹರಿದುಹೋಗುತ್ತದೆ. ವಿದ್ಯುತ್ತನ್ನು ಉತ್ಪಾದಿಸುವ ಈ ವಿಧಾನಕ್ಕೆ ಜಲಸಂಗ್ರಹ ವಿಧಾನ ಎಂದೂ ಹೆಸರು.

ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅಗತ್ಯವಾದ ಅಂಶಗಳು:

ಅಣೆಕಟ್ಟು: ವಿದ್ಯುದುತ್ಪಾದನೆಗೆ ಬೇಕಾಗುವಷ್ಟು ನೀರನ್ನು ಸಂಗ್ರಹಿಸುವುದಕ್ಕೋಸ್ಕರ ನದಿಗೆ ಅಣೆಕಟ್ಟು ಕಟ್ಟಬೇಕಾಗುತ್ತದೆ. ಮೊದಲು ನದಿಯ ಪ್ರವಾಹ ಜಲಾಶಯದೊಳಗೆ ಎಷ್ಟು ನೀರನ್ನು ತರುತ್ತದೆ ಎಂಬುದನ್ನೂ ಅಳತೆಗಳ ಮೂಲಕ ಕಂಡುಕೊಂಡು ವಿದ್ಯುಚ್ಛಕ್ತಿಯ

ಬೇಡಿಕೆಗೆ ಅನುಸಾರವಾಗಿ ತಿರುಬಾನಿಗಳಿಗೆ ಜಲಾಶಯದಿಂದ ಎಷ್ಟು ನೀರು ಒದಗಿಸಬೇಕೆಂಬುದನ್ನೂ ನಿರ್ಧರಿಸಬೇಕು.

ಶಕ್ತಿಕಾಲುವೆ ಅಥವಾ ಸುರಂಗ: ಜಲಾಶಯ ಪ್ರಪಾತಕ್ಕೆ ಬಹಳ ಸಮೀಪವಾಗಿದ್ದು ನಡುವಣ ಪ್ರದೇಶ ಸಮತಟ್ಟಾಗಿದ್ದರೆ, ನೀರನ್ನು ಕಾಲುವೆ ಅಥವಾ ಕೊಳವೆಗಳ ಮೂಲಕ ಪ್ರಪಾತದ ಶಿರಕ್ಕೆ ಕೊಂಡೊಯ್ಯಬಹುದು. ನಡುವಣ ಪ್ರದೇಶ ಬೆಟ್ಟಗುಡ್ಡಗಳಿಂದ ಆವೃತವಾಗಿದ್ದರೆ ಸುರಂಗವನ್ನು ಕೊರೆದು ನೀರನ್ನು ಒದಗಿಸಬೇಕಾಗುವುದು.

ಫೋರ್‌ಬೇ ಮತ್ತು ಪ್ರವೇಶದ್ವಾರ: ಪ್ರಪಾತದ ಶಿರದಲ್ಲಿ ಫೋರ್‌ಬೇ (ಅಗ್ರ ತಟಾಕ) ಎಂಬ ಒಂದು ಸಣ್ಣ ತಟಾಕವಿರುತ್ತದೆ. ಜಲಾಶಯದ ನೀರು ಕಾಲುವೆ ಅಥವಾ ಸುರಂಗದ ಮೂಲಕ ಹರಿದು ಬಂದು, ಅಗ್ರ ತಟಾಕದೊಳಗೆ ಮೊದಲು ತುಂಬಿಕೊಳ್ಳುವಂತೆ ಏರ್ಪಾಡು ಉಂಟು. ತಿರುಬಾನಿಗಳ ಮೇಲಿನ ಹೊರೆ ತ್ವರಿತಗತಿಯಲ್ಲಿ ಏರುಪೇರಾದಾಗ ಸಹ ಅವು ಕೆಲಸ ಮಾಡಲು ಅನುಕೂಲವಾಗುವಂತೆ ಅವುಗಳಿಗೆ ತತ್‌ಕ್ಷಣ ಬೇಕಾಗುವಷ್ಟು ನೀರನ್ನು ಅಗ್ರತಟಾಕ ಒದಗಿಸಬಲ್ಲುದು. ಇದರಲ್ಲಿ ಪ್ರವೇಶದ್ವಾರಗಳ ಮೂಲಕ ನೀರನ್ನು ಕೊಂಡೊಯ್ಯುವ ತೂಬುಕೊಳವೆಗಳು ತಿರುಬಾನಿಯನ್ನು ಪ್ರವೇಶಿಸುತ್ತದೆ. ಪ್ರವೇಶದ್ವಾರಗಳಲ್ಲಿರುವ ಜರಡಿಗಳು ನೀರಿನಲ್ಲಿರಬಹುದಾದ ಕಸಗಡ್ಡಿ ಕಲ್ಲುಚೂರು ಮುಂತಾದ ವಸ್ತುಗಳು ತಿರುಬಾನಿಗೆ ಹೋಗದಂತೆ ತಡೆಯುತ್ತವೆ.

ತೂಬು ಕೊಳವೆಗಳು(ಪೆನ್ ಸ್ಟಾಕ್ ಪೈಪ್ಸ್): ತಿರುಬಾನಿಗಳಿಗೆ ನೀರನ್ನು ಕೊಂಡೊಯ್ಯುವ ಪ್ರಪಾತದ ಇಳಿಜಾರಿನಮೇಲೆ ಹಾಕಿರುವ ದೊಡ್ಡ ಕೊಳವೆಗಳಿವು. ಇವುಗಳ ಮೂಲಕ ಹರಿಯುವ ನೀರಿನ ಒತ್ತಡ ಬಹಳ ಹೆಚ್ಚಾಗಿರುವುದರಿಂದ, ಕೊಳವೆಗಳು ಒಡೆದು ಹೋಗದ ಹಾಗೆ ಇವನ್ನು ಉಕ್ಕಿನಿಂದಲೋ ಇಲ್ಲವೇ ಸಬಲಗೊಳಿಸಿದ ಕಾಂಕ್ರೀಟಿನಿಂದಲೋ ಮಾಡಿರುತ್ತಾರೆ.

ತಿರುಬಾನಿಗಳು: ವಿದ್ಯುಜ್ಜನಕಗಳಿಗೆ ಚಲನ ಶಕ್ತಿಯನ್ನು ಒದಗಿಸುವ ಮೂಲಯಂತ್ರಗಳಿವು. ನೀರಿನ ಎತ್ತರ 50 ಮೀಟರಗಿಂತ ಕಡಿಮೆ ಇದ್ದಲ್ಲಿ, ಲಂಬ ಚಾಲಕ ದಂಡವಿರುವ ಪ್ರತಿಕ್ರಿಯಾ ಮಾದರಿಯ ಫ್ರಾನ್ಸಿಸ್ ತಿರುಬಾನಿಗಳನ್ನು ಬಳಸುವುದಿದೆ. ನೀರಿನ ಎತ್ತರ 50 ಮೀಟರಿಗಿಂತ ಹೆಚ್ಚು ಇರುವ ಮಧ್ಯಮ ಎತ್ತರದ ಯೋಜನೆಗಳಲ್ಲಿ ಮಟ್ಟಚಾಲಕದಂಡವಿರುವ ಫ್ರಾನ್ಸಿಸ್ ತಿರುಬಾನಿಗಳ ಬಳಕೆ ಉಂಟು. 200 ಮೀಟರುಗಳಿಗಿಂತಲೂ ಹೆಚ್ಚಾದ ನೀರಿನ ಎತ್ತರವಿರುವ, ಯೋಜನೆಗಳಲ್ಲಿ ಪೆಲ್ಟನ್ ತಿರುಬಾನಿಗಳನ್ನು ಬಳಸುತ್ತಾರೆ. ಈ ತಿರುಬಾನಿಗಳ ಭ್ರಮಣವೇಗದಲ್ಲಿ ಬದಲಾವಣೆಯಾದರೆ ವಿದ್ಯುಜ್ಜನಕಗಳು ಉತ್ಪಾದಿಸುವ ಪರ್ಯಾಯ ವಿದ್ಯುತ್ತಿನ ಆವರ್ತಾಂಕ ಬದಲಾಗುತ್ತದೆ. ಆದ್ದರಿಂದ ತಿರುಬಾನಿಗಳ ಭ್ರಮಣವೇಗದ ಸ್ಥಿರತೆಯನ್ನು ರಕ್ಷಿಸುವುದಕ್ಕೆ ನಿಯಾಮಕಗಳಿರುತ್ತವೆ. (ಗವರ್ನರ್ಸ್)

ವಿದ್ಯುದಾಗಾರ: ಪ್ರಪಾತದ ಕೆಳಗೆ ನಿರ್ಮಿಸಲಾಗಿರುವ ವಿದ್ಯುದಾಗಾರಗಳಲ್ಲಿ ತಿರುಬಾನಿಗಳಿಗೆ ನೇರವಾಗಿ ಜೋಡಿಸಿರುವ ವಿದ್ಯುಜ್ಜನಕಗಳನ್ನು(ಜನರೇಟರ್ಸ್) ಸ್ಥಾಪಿಸುತ್ತಾರೆ. ದೂರ ಪ್ರದೇಶಗಳಿಗೆ ಸಾಗಿಸಲು ಅನುಕೂಲಿಸುವ ಪರ್ಯಾಯ ವಿದ್ಯುತ್ತನ್ನು ಇವು ಉತ್ಪಾದಿಸುತ್ತವೆ. ವಿದ್ಯುತ್ತಿನ ಸಂಚರಣ ವ್ಯವಸ್ಥೆಗೆ ಬೇಕಾಗುವ ಟ್ರಾನ್ಸ್ ಫಾರ್ಮರುಗಳು, ಸ್ವಿಚ್ಚುಗಳು, ವಿದ್ಯುನ್ಮಾಪಕಗಳು, ಭಾರವಾದ ಯಂತ್ರಭಾಗಗಳನ್ನು ಎತ್ತಬಲ್ಲ ಕ್ರೇನುಗಳು ಮುಂತಾದ ಸಲಕರಣೆಗಳು ಈ ವಿದ್ಯುದಾಗಾರದಲ್ಲಿರುವುವು.

ನೈಸರ್ಗಿಕ ಜಲಪಾತಗಳು: ಇವುಗಳನ್ನು ಸೃಷ್ಟಿಸುವಂತಹ ಪರ್ವತಗಳ ಇಳಿಜಾರು ಅಥವಾ ಭೂ ಸ್ವರೂಪಗಳು ಅಗತ್ಯ.

ನಿರಂತರ ನೀರಿನ ಪೂರೈಕೆ: ವಿದ್ಯುದಾಗಾರ ಅವಿರತವಾಗಿ ಕಾರ್ಯನಿರ್ವಹಿಸಲು ಮತ್ತು ಜಲಶಕ್ತಿ ಉತ್ಪಾದನೆಗಾಗಿ ಸದಾ ನೀರಿನ ಪೂರೈಕೆ ಸಮನಾಗಿರಬೇಕು. ನದಿಗಳ ಮೇಲ್ಹಣಿವೆಯಲ್ಲಿ ಸಾಕಷ್ಟು ಮಳೆ ಬೀಳಬೇಕು. ಹಿಮಪ್ರದೇಶದಿಂದ ಹರಿದು ಬರುವ ನದಿಗಳು ಸೂಕ್ತ. ಆದರೆ ನದಿನೀರು ಹೆಪ್ಪುಗಟ್ಟಬಾರದು.

ಬೇಡಿಕೆ: ಜಲವಿದ್ಯುಚ್ಛಕ್ತಿ ಉತ್ಪಾದಿಸಿ ಹೆಚ್ಚು ಸಂಗ್ರಹಿಸಿಕೊಳ್ಳುವಂತಿಲ್ಲ. ಬಹುದೂರದ ಸ್ಥಳಗಳಿಗೆ ರವಾನಿಸುವುದು ವೆಚ್ಚದಾಯಕ ಮತ್ತು ವಿದ್ಯುಚ್ಛಕ್ತಿ ನಷ್ಟವಾಗುತ್ತದೆ. ಹೀಗಾಗಿ ಸಮೀಪದಲ್ಲೆ ಹೆಚ್ಚು ಬೇಡಿಕೆಯಿರುವ ಮಾರುಕಟ್ಟೆಯಿರಬೇಕು.

ಬಂಡವಾಳ ಮತ್ತು ನಿರ್ಮಾಣ ವಸ್ತುಗಳ ಪೂರೈಕೆ: ವಿದ್ಯುದಾಗರ, ಅಣೆಕಟ್ಟೆ, ಜಲಾಶಯ, ಸಿಮೆಂಟ್, ಕಬ್ಬಿಣ, ತಾಮ್ರ, ಅಲ್ಯೂಮಿನಿಯಂ ತಂತಿ ಇತ್ಯಾದಿ ದೊರೆಯುವಂತಿರಬೇಕು.

ಪ್ರಾಮುಖ್ಯತೆ: 1. ಜಲವಿದ್ಯುಚ್ಛಕ್ತಿ ಪ್ರಕೃತಿಯಿಂದ ವಿಪುಲವಾಗಿ ದೊರೆಯಬಹುದಾದಂತಹ ಮಹತ್ತರದ ಶಕ್ತಿ ಸಂಪನ್ಮೂಲ. 2. ಮುಗಿಯದ ಹಾಗೂ ಪುನಃಶ್ಚೇತನಗೊಳಿಸಬಲ್ಲ ಶಕ್ತಿಸಾಧನ. ಹೀಗಾಗಿ ಇದೊಂದು ಅಕ್ಷಯ ಹಾಗೂ ಅನಂತವಾದ ಶಕ್ತಿ. 3. ಇತರ ಶಕ್ತಿಸಾಧನಗಳಿಗಿಂತ ಸುಲಭಬೆಲೆಗೆ ಲಭ್ಯವಾಗುವಂತಹದು. 4. ಇದನ್ನು ವಿದ್ಯುದಾಗಾರದಿಂದ ಬಳಕೆ ಕೇಂದ್ರಗಳಿಗೆ ಸುಲಭವಾಗಿ ರವಾನಿಸಬಹುದು. ಆದರೆ ಮಿತಿಮೀರಿದ ದೂರದ ಸ್ಥಳಗಳಿಗೆ ರವಾನಿಸುವುದು ಲಾಭದಾಯಕವಲ್ಲ. 5. ಇತರ ಶಕ್ತಿ ಸಾಧನಗಳಿಗಿಂತ ಹೆಚ್ಚು ಉಷ್ಣಜನಕ ಶಕ್ತಿ ಉತ್ಪಾದಿಸುವಂತಾದ್ದು. 6. ಕೈಗಾರಿಕೋದ್ಯಮಗಳ ಬೆಳವಣಿಗೆಗೆ ಅತ್ಯಾವಶ್ಯಕ. 7. ಇದರ ಬಳಕೆಯಿಂದ ಚಲಿಸುವ ಯಂತ್ರಗಳು ಸ್ವಚ್ಛವಾಗಿರುತ್ತವೆ. 8. ಪರಿಸರ ಮಾಲಿನ್ಯ ಸಮಸ್ಯೆ ತಲೆದೋರುವುದಿಲ್ಲ. 9. ಪಳೆಯುಳಿಕೆ ಇಂಧನಗಳು ದೊರೆಯದ ಕಡೆ ಜಲಶಕ್ತಿವರದಾನವಾದುದು. 10. ಕೃಷಿ, ರೈಲು ಸಾರಿಗೆ, ಸಾರ್ವಜನಿಕ ದೀಪ ಹಾಗು ಗೃಹಕೃತ್ಯಗಳು ಜಲ ವಿದ್ಯುಚ್ಛಕ್ತಿಯ ಪಾತ್ರಮಹತ್ವವುಳ್ಳದ್ದು.

**ಪ್ರಪಂಚದಲ್ಲಿ ಪ್ರಮುಖ ದೇಶಗಳ ಜಲಶಕ್ತಿಯ ಸ್ಥಾಪಿತ ಸಾಮರ್ಥ್ಯ ಹಾಗೂ ಉತ್ಪಾದನೆ, 2001.**

| ದೇಶ | ಸ್ಥಾಪಿತ ಜಲಶಕ್ತಿ (000ಕಿವಾ) | ಶೇಕಡ ಪ್ರಮಾಣ | ಉತ್ಪಾದನೆ (ಬಿಲಿಯನ್ ಕಿವಾ) | ಶೇಕಡ ಪ್ರಮಾಣ |
|---|---|---|---|---|
| ಕೆನಡ | 67,407 | 8.8 | 349.9 | 13.0 |
| ಚೀನ | 57,000 | 7.5 | 277.4 | 10.3 |
| ಬ್ರೆಜಿಲ್ | 62,432 | 8.2 | 267.9 | 9.9 |
| ಅ.ಸಂ.ಸಂಸ್ಥಾನ | 98,125 | 12.8 | 222.6 | 8.3 |
| ರಷ್ಯ (ಫೆ) | 44,345 | 5.8 | 175.9 | 6.5 |
| ನಾರ್ವೆ | 28,349 | 3.7 | 127.8 | 4.7 |
| ಜಪಾನ್ | 45,156 | 5.9 | 93.9 | 3.5 |
| ಫ್ರಾನ್ಸ್ | 25,356 | 3.3 | 82.7 | 3.1 |
| ಸ್ವೀಡನ್ | 16,372 | 2.1 | 79.2 | 2.9 |
| ಭಾರತ | 26,308 | 3.4 | 74.0 | 2.7 |
| ಇಟಲಿ | 22,191 | 2.9 | 60.9 | 2.3 |
| ವೆನಿಝುವೇಲ | 13,116 | 1.7 | 60.4 | 2.2 |
| ದಕ್ಷಿಣ ಆಫ್ರಿಕ | 1,096 | 0.4 | 52.0 | 1.9 |
| ಪರಾಗ್ವೆ | 7,410 | 1.0 | 45.4 | 1.7 |
| ಸ್ಪೇನ್ | 17,989 | 2.4 | 43.9 | 1.6 |
| ಸ್ವಿಟ್ಜರ್ಲೆಂಡ್ | 13,919 | 1.8 | 42.7 | 1.6 |
| ಕೊಲಂಬಿಯ | 8,332 | 1.1 | 31.8 | 1.2 |
| ಇತರೆ | 2,08,905 | 27.4 | 609.7 | 22.6 |
| **ಪ್ರಪಂಚ** | **7,63,808** | **100.0** | **2698.1** | **100.0** |

(ಬಿ.ವಿ.ಜಿ.)

**ಜಲವಿಭಾಜಕ:** ಮಳೆಯ ನೀರು ವಿವಿಧ ನದಿ ವ್ಯೂಹಗಳಿಗೆ ವಿಭಾಗವಾಗುವಂತೆ ಪ್ರತ್ಯೇಕಿಸುವ ಎತ್ತರವಾದ ಭೂಭಾಗವೇ ಜಲವಿಭಾಜಕ. ಭಾರತದ ಪಶ್ಚಿಮ ಘಟ್ಟಗಳು ಇದಕ್ಕೆ ಸೂಕ್ತ ಉದಾಹರಣೆ. ಇವು ದಕ್ಷಿಣ ಭಾರತದಲ್ಲಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಹರಿಯುವ ನದಿಗಳ ಜಲಾನಯನ ಪ್ರದೇಶಗಳನ್ನು ಪ್ರತ್ಯೇಕಿಸುವ ವಿಭಾಜಕಗಳಾಗಿವೆ. ಜಲವಿಭಾಜಕದ ಸಮೀಪ ಮಳೆ ನೀರು ಪ್ರಾರಂಭದಲ್ಲಿ ಸಣ್ಣ ಪ್ರವಾಹವಾಗಿ (ಶೀಟ್ ಫ್ಲೋ) ತಗ್ಗಿನ ಕಡೆಗೆ ಹರಿಯುತ್ತ, ಕ್ರಮೇಣ ತೊರೆ, ಹಳ್ಳ, ಝರಿಗಳಾಗಿ ಪರಿಣಮಿಸಿ ನದಿ ರೂಪುಗೊಳ್ಳುವುದು. ಜಲವಿಭಾಜಕ ಎರಡು ವಿರುದ್ಧ ದಿಕ್ಕಿನ ಜಲಾನಯನ ಪ್ರದೇಶ ಅಥವಾ ನದಿ ಬಯಲುಗಳನ್ನು ಪ್ರತ್ಯೇಕಿಸುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಜಲ ವಿಭಾಜಕವು ನದಿ ಬಯಲುಗಳ ಔನ್ನತ್ಯ ಗಡಿರೇಖೆಯಾಗಿರುತ್ತದೆ. ಜಲವಿಭಾಜಕವು ಅಸ್ಥಿರವಾದುದು. ಕಾಲವು




ಗತಿಸಿದಂತೆ ಅದು ಬೇರೆಡೆಗೆ ಸರಿಯುವ ಸಾಧ್ಯತೆಯಿರುತ್ತದೆ. ಜಲವಿಭಾಜಕದ ಒಂದು ಬದಿಯು ಮೃದುವಾದ ಶಿಲಾಸ್ತರದಿಂದ ಕೂಡಿದ್ದು ಕಡಿಮೆ ಇಳಿಜಾರು ಹೊಂದಿದ್ದರೆ, ನದಿ ಪಾತ್ರದ ಮಟ್ಟವು ವಿರುದ್ಧ ಭಾಗಕ್ಕಿಂತ ತಗ್ಗಾಗಿ ಜಲ ವಿಭಾಜಕವು ಸ್ಥಳಾಂತರಗೊಳ್ಳುವುದು.

ಅದೇ ನದಿ ಆಕ್ರಮಣ. ಮೇಲ್ಮೈ ಜಲವಿಭಾಜಕಕ್ಕೂ ಮತ್ತು ನೆಲದ ತಳದಲ್ಲಿರುವ ಜಲ ವಿಭಾಜಕಕ್ಕೂ ಪರಸ್ಪರ ಸಂಬಂಧವಿಲ್ಲ. ಮೇಲ್ಮೈ ಜಲವಿಭಾಜಕದ ತಳದಲ್ಲಿ ಅಂತರ್ಜಲವು ಕಣಶಿಲಾ ಸ್ತರಗಳ ಇಳಿಜಾರನ್ನು ಅನುಸರಿಸಿ ಒಂದು ನದಿ ಬಯಲಿನಿಂದ ಮತ್ತೊಂದು ಕಡೆಗೆ ಸ್ರವಿಸುವ ಸಾಧ್ಯತೆ ಇದೆ. (ಪಿ.ಎಂ.)

**ಜಲಾನಯನ ನಿರ್ವಹಣೆ:** ಯಾವುದೇ ಒಂದು ನದಿಗೆ ಬಂದು ಸೇರುವ ಎಲ್ಲ ಬಗೆಯ ಜಲಧಾರೆಗಳನ್ನು ಒಳಗೊಂಡಿರುವ ತಗ್ಗಾದ ಭೂಭಾಗವನ್ನು ಜಲಾನಯನವೆನ್ನುವರು. ಅಂದರೆ ಮಳೆ ನೀರು ಅನೇಕ ಹರಿವು, ತೊರೆ, ಝರಿ, ನುಗ್ಗು ಹೊನಲು ಹಾಗೂ ಉಪನದಿಗಳೆಲ್ಲವುಗಳ ಮೂಲಕ ಹರಿದು ನದಿ ಸೇರುತ್ತವೆ. ಇವೆಲ್ಲವುಗಳ ವಿಶಾಲ ಪ್ರದೇಶವೇ ಜಲಾನಯನ. ಇದು ಆರ್ಥಿಕ ದೃಷ್ಟಿಯಲ್ಲಿ ಮಹತ್ವವುಳ್ಳದ್ದು. ಆದರೆ ತನ್ನ ನೈಸರ್ಗಿಕ ಸ್ವರೂಪವನ್ನು ಕಳೆದುಕೊಂಡಾಗ ಆರ್ಥಿಕ ಮಹತ್ವ ಕುಸಿಯುತ್ತದೆ. ಇತ್ತೀಚೆಗೆ ಪ್ರಪಂಚದ ಅನೇಕ ಜಲಾನಯನಗಳು ಅವನತಿಯ ಅಂಚಿನಲ್ಲಿವೆ. ಇದಕ್ಕೆ ಅಧಿಕ ಜನಸಂಖ್ಯೆ ಮತ್ತು ವಿವೇಚನಾ ರಹಿತ ಮಿತಿಮೀರಿದ ಶೋಷಣೆ ಕೃತ್ಯಗಳು ಕಾರಣ. ಹೀಗಾಗಿ ಭವಿಷ್ಯತ್ತಿನ ಜೀವಿತಕ್ಕೆ ಜಲಾನಯನ ರಕ್ಷಣೆ ಮತ್ತು ನಿರ್ವಹಣೆ ಅಗತ್ಯ.

ಜಲಾನಯನದ ಮಣ್ಣು, ಸಸ್ಯ, ನೀರು ಹಾಗೂ ಇತರ ನೈಸರ್ಗಿಕ ಸಂಪನ್ಮೂಲಗಳ ಆದರ್ಶ ಬಳಕೆ, ಗರಿಷ್ಠ ಉತ್ಪಾದನೆ, ಬರ ಅಥವಾ ಪ್ರವಾಹಗಳ ನಿಯಂತ್ರಣ ಹಾಗೂ ಸಂರಕ್ಷಣೆ ಜಲಾನಯನ ನಿರ್ವಹಣೆ. ಜಲಾನಯನ ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ, ವೃದ್ಧಿ ಹಾಗೂ ಕೃಷಿ ಪ್ರಗತಿ ದೃಷ್ಟಿಯಲ್ಲಿ ಅದರ ನಿರ್ವಹಣೆ ಗಂಭೀರವಾದ ಅಂಶವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಜಲಾನಯನದ ಮಣ್ಣು, ನೀರು ಮತ್ತು ಸಸ್ಯವರ್ಗ ವಿನಾಶವಾಗುತ್ತಿದೆ. ಶುಷ್ಕ ಮತ್ತು ಅರೆ ಶುಷ್ಕ ಪ್ರದೇಶಗಳ ಜಲಾನಯನಗಳಲ್ಲಿ ಅರಣ್ಯ ಸಸ್ಯವರ್ಗ ನಾಶಗೊಂಡು ಮಣ್ಣಿನ ಸವೆತ ತೀವ್ರಗೊಂಡಿದೆ. ಇದರಿಂದ ಅಲ್ಲಿ ನೀರಿನ ಕೊರತೆ ತಲೆದೋರಿದೆ. ಭಾರತದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. 57 ರಷ್ಟು ಮಿತಿಮೀರಿದ ಜನಸಂಖ್ಯೆ, ಸಸ್ಯವರ್ಗನಾಶ, ಬದಲಾದ ವಾಯುಗುಣಸ್ಥಿತಿ, ಅತಿಯಾದ ಸಂಪನ್ಮೂಲಗಳ ಬಳಕೆ, ಅವೈಜ್ಞಾನಿಕ ಮಣ್ಣಿನ ಬಳಕೆ ಇತ್ಯಾದಿಗಳಿಂದ ಜಲಾನಯನಗಳ ಪರಿಸರದಲ್ಲಿ ಅಸಮತೋಲನವುಂಟಾಗಿದೆ. ಇಂತಹ ಸ್ಥಿತಿಯಲ್ಲಿ ಜಲಾನಯನ ನಿರ್ವಹಣೆ ಅನಿವಾರ್ಯ.

ಉದ್ದೇಶಗಳು: 1) ಸಂಪನ್ಮೂಲಗಳ ನಿರ್ವಹಣೆ – ನೀರು, ಮಣ್ಣು ಮತ್ತು ಪ್ರಾಣಿವರ್ಗಗಳಂತಹ ನೈಸರ್ಗಿಕ ಸಂಪನ್ಮೂಲಗಳನ್ನೊಳಗೊಂಡ ನಿರ್ದಿಷ್ಟ ಜಲಾನಯನ ಪ್ರದೇಶವನ್ನು ಸಂರಕ್ಷಿಸುವುದು, ಪುನರುಜ್ಜೀವನ ಮತ್ತು ವಿವೇಕವುಳ್ಳ ಬಳಕೆ, ತನ್ಮೂಲಕ ಮಾನವ ಸಾಕು ಪ್ರಾಣಿಗಳ ಆಹಾರ, ಗೃಹ ಹಾಗೂ ಕೈಗಾರಿಕೆಗಳಿಗೆ ಪೂರಕ ವಸ್ತುಗಳನ್ನು ಪಡೆಯಲು ಪ್ರಯತ್ನ.

2) ಪರಿಸರ ಸಮತೋಲನ ನಿರ್ವಹಣೆ – ಜಲಾನಯನ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಅನುಸರಿಸುವುದರಿಂದ ಮಣ್ಣಿನ ಸಂರಕ್ಷಣೆ, ಜಲ ಹಾಗೂ ಸಸ್ಯ ರಕ್ಷಣೆ ಸಾಧ್ಯ. ಇದರಿಂದ ನೀರಿನ ಕೊರತೆ ನಿವಾರಣೆಯಾಗುತ್ತದೆ. ಸಸ್ಯ ಮತ್ತು ಕೃಷಿ ಬೆಳೆ ಸಮೃದ್ಧಿ ಸಾಧ್ಯ. ವಾಯು, ಜಲ, ಮಣ್ಣಿನ ಮಾಲಿನ್ಯ ತಡೆಯಬಹುದು. ತನ್ಮೂಲಕ ಪರಿಸರ ಸಮತೋಲನದ ಮರು ಸ್ಥಾಪನೆಗೆ ಪ್ರಯತ್ನ.

3) ಪ್ರವಾಹ ನಿಯಂತ್ರಣ, ಮಣ್ಣಿನ ಸವೆತ ನಿಯಂತ್ರಣ, ಕಾಡ್ಗಿಚ್ಚು ತಡೆ, ಅರಣ್ಯಗಳ ಪುನರ್ ನಿರ್ಮಾಣ, ಜಾನುವಾರುಗಳಿಗೆ ಮೇವು ಸುಧಾರಣೆ, ಅದರಿಂದ ಜಾನುವಾರು ನಿರ್ವಹಣೆ ಅಭಿವೃದ್ಧಿ ಸಾಧ್ಯತೆಗೆ ಅವಕಾಶ.

4) ಬೆಳೆಗಳ ನಿರ್ವಹಣೆ, ಗ್ರಾಮೀಣಾಭಿವೃದ್ಧಿಗೆ ಆದ್ಯತೆ ಮತ್ತು ವಲಸೆ ನಿಯಂತ್ರಣಕ್ಕೆ ಪ್ರಯತ್ನ. ಗ್ರಾಮೀಣರು ಇಂತಹ ಯೋಜನೆಯಲ್ಲಿ ಪಾಲ್ಗೊಳ್ಳುವುದರಿಂದ ಪರಿಸರದ ಬಗ್ಗೆ ಅರಿವು ಮೂಡುವುದು.

5) ಜಲಾನಯನ ಅಭಿವೃದ್ಧಿ ಯೋಜನೆ ಹಮ್ಮಿಕೊಳ್ಳುವುದರಿಂದ ಉದ್ಯೋಗಾವಕಾಶ ಸಾಧ್ಯ. ಭೂರಹಿತ ರೈತ ಕಾರ್ಮಿಕ, ಸಣ್ಣ, ಅತಿ ಸಣ್ಣ ರೈತರಿಗೆ ಜೀವನ ಮಾರ್ಗೋಪಾಯಗಳನ್ನು ಕಲ್ಪಿಸುವ ಪ್ರಯತ್ನ ಮಾಡಬಹುದು.

ಭಾರತದಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ: ಜಲಾನಯನ ನಿರ್ವಹಣೆಯ ಪರಿಕಲ್ಪನೆಗೆ ಹಲವು ಕಾರಣಗಳಿದ್ದರೂ, 1970ರ ದಶಕದಲ್ಲಿ ಮಣ್ಣಿನ ಸವೆತ ಮತ್ತು ಫಲವತ್ತತೆ ಕುಸಿತ, ಬೆಳೆಗಳ ಇಳುವರಿ ಇಳಿತಗಳನ್ನು ನಿಯಂತ್ರಿಸುವ ಯೋಜನೆ ರೂಪುಗೊಂಡ ಸಂದರ್ಭ ಇದಕ್ಕೆ ಮುಖ್ಯ ಕಾರಣ. ಈ ಯೋಜನೆ ಮೊದಲ ಭಾರಿಗೆ ದಾಮೋದರ ನದಿ ಕಣಿವೆಯೊಂದಿಗೆ ಆರಂಭಗೊಂಡಿತು. 1983ರಲ್ಲಿ ಸರ್ಕಾರ ಇಂಥ ಯೋಜನೆಗೆ ಹೆಚ್ಚು ಆದ್ಯತೆ ನೀಡಿತು. 16 ರಾಜ್ಯಗಳಲ್ಲಿ 47 ಜಲ ನಿರ್ವಹಣಾ ಯೋಜನೆಗಳನ್ನು ಸಿದ್ಧಪಡಿಸಲಾಯಿತು. ಕೇಂದ್ರ ಕೃಷಿ ಸಚಿವಾಲಯ, ಭಾರತೀಯ ಕೃಷಿ ಸಂಶೋಧನ ಮಂಡಲಿ, ಹಾಗೂ ಕೃಷಿ ವಿಶ್ವವಿದ್ಯಾಲಯಗಳು ಕೂಡಿ ಇದರ ಕಾರ್ಯ ಯೋಜನೆಯನ್ನು ರೂಪಿಸಿದವು. ಈ ಯೋಜನೆ ತುರ್ತಾಗಿ ಮಳೆ ಆಶ್ರಿತ ಭಾಗಗಳಿಗೆ ಅಗತ್ಯವಿತ್ತು. ಅದಕ್ಕಾಗಿ ಮಳೆ ಆಶ್ರಿತ ಪ್ರದೇಶಗಳಿಗೆ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯನ್ನು (ಎನ್‌ಎನ್‌ಒಪಿಆರ್‌ಎ) ಸ್ಥಾಪಿಸಲಾಗಿದೆ. ಇದನ್ನು 16 ರಾಜ್ಯಗಳ 99 ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಇದರಿಂದ ಶುಷ್ಕ ವಲಯಗಳ ಕೃಷಿ, ಅದನ್ನಾಧರಿತ ಗ್ರಾಮೀಣ ಜನರ ಅಭಿವೃದ್ಧಿಗೆ ಪೂರಕವಾಗುತ್ತದೆ. ಈ ಯೋಜನೆ ಫಲಕಾರಿಯಾಗುವುದಕ್ಕೆ ಪ್ರಾಮಾಣಿಕ ಪ್ರಯತ್ನ ಅವಶ್ಯಕ. ಈ ಯೋಜನೆಗೆ ವಿಶ್ವ ಬ್ಯಾಂಕ್, ಐರೋಪ್ಯ ಆರ್ಥಿಕ ಸಮುದಾಯ (ಈಈಸಿ) ಡ್ಯಾನಿಡ ಮುಂತಾದ ಸಂಸ್ಥೆಗಳು ಆರ್ಥಿಕ ನೆರವನ್ನು ನೀಡಿವೆ.

ಕರ್ನಾಟಕದಲ್ಲಿಯೂ ಜಲಾನಯನ ನಿರ್ವಹಣೆಯನ್ನು ವಿಶ್ವಬ್ಯಾಂಕ್‌ನ ಆರ್ಥಿಕ ನೆರವಿನಿಂದ ಕೆಲವು ಸಂಸ್ಥೆಗಳು ನಿರ್ವಹಿಸುತ್ತಿವೆ. ಉದಾ: ಸುಜಲ ಜಲಾನಯನ ಯೋಜನೆ, ಈಗಾಗಲೇ ಹನ್ನೊಂದು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಜಲಾನಯನ ನಿರ್ವಹಣೆ ಸರ್ಕಾರದಿಂದ ಮಾತ್ರ ಮುಂದುವರಿಸಿದರೆ ಸಾಲದು. ಕೃಷಿ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ ಎಂಜಿನಿಯರಿಂಗ್ ಮುಂತಾದ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವವರು ಅಥವಾ ಸಂಘ ಸಂಸ್ಥೆಗಳು ಮುಂದೆ ಬರಬೇಕು. ಮಿಗಿಲಾಗಿ ಸ್ಥಳೀಯ ಜನರಲ್ಲೂ ಈ ಬಗ್ಗೆ ಅರಿವು ಮೂಡಬೇಕು. ಸರ್ಕಾರದ ಯೋಜನೆಗೆ ಸ್ಪಂದಿಸುವುದಕ್ಕಾಗಿ ಸಹಭಾಗಿತ್ವ ಅತ್ಯಾವಶ್ಯಕ. ಹೀಗಿದ್ದಲ್ಲಿ ಮಾತ್ರ ಈ ಯೋಜನೆ ಫಲಕಾರಿಯಾಗಲು ಸಾಧ್ಯ. (ಪಿ.ಎಂ.)

**ಜಲಾನಯನ ಪ್ರದೇಶ:** ನದಿ ಅಥವಾ ತೊರೆಗೆ ಬಂದು ಸೇರುವ ನೀರಿನ ಭೂವಲಯವನ್ನು ಜಲಾನಯನ ಪ್ರದೇಶವೆಂದು ಕರೆಯುವರು (ಕ್ಯಾಚ್‌ಮೆಂಟ್ ಏರಿಯ). ಅಂದರೆ ಆ ಪ್ರದೇಶದ ನೀರನ್ನು ಆ ನದಿ ಬಳಸುವುದು. ತೊರೆಗೆ ಸುತ್ತಲಿನ ಇತರ ಹಳ್ಳ, ತೊರೆ, ಝರಿಗಳ ನೀರು ಬಂದು ಸೇರಿ ಆ ನದಿ ದೊಡ್ಡದಾಗುತ್ತಾ ಮುಂದುವರಿಯುವುದು. ಹೀಗೆ ಒಂದು ನದಿ ಹೊಂದಿರುವ ನೀರಿನ ಪ್ರಮಾಣ ಅದರ ಜಲಾನಯನ ಪ್ರದೇಶದ ವಿಸ್ತಾರ ಹಾಗೂ ಆ ಪ್ರದೇಶ ಪಡೆಯುವ ಮಳೆಯ ಪ್ರಮಾಣವನ್ನು ಅವಲಂಬಿಸಿರುವುದು. ಜಲಾನಯನ ಪ್ರದೇಶ ವಿಸ್ತಾರವಾಗಿದ್ದು, ಅದು ಹೆಚ್ಚು ಮಳೆಯನ್ನು ಪಡೆಯುತ್ತಿದ್ದಲ್ಲಿ ನದಿ ಪಡೆಯುವ ನೀರಿನ ಪ್ರಮಾಣವೂ ಸಹ ಅಧಿಕ.

ಜಲಾನಯನ ಪ್ರದೇಶ

ಇದಕ್ಕೆ ಬದಲಾಗಿ ಜಲಾನಯನ ಪ್ರದೇಶ ಚಿಕ್ಕದಾಗಿದ್ದಲ್ಲಿ ಅಥವಾ ಅದು ಶುಷ್ಕ ವಾಯುಗುಣ ಪ್ರದೇಶದಲ್ಲಿ ಹರಿಯುತ್ತಿದ್ದಲ್ಲಿ ನದಿಯು ಪಡೆಯುವ ನೀರಿನ ಪ್ರಮಾಣವೂ ಸಹ ಕಡಿಮೆ. ಹಿಮಚ್ಛಾದಿತ ಪ್ರದೇಶಗಳಲ್ಲಿ ಉಗಮಿಸುವ ನದಿಗಳು ವರ್ಷವೆಲ್ಲವೂ ನೀರನ್ನು ಪಡೆಯುತ್ತವೆ. (ಎಚ್.ಸಿ.ಕೆ.;ಜಿ.ಎಸ್.ಎ.)

**ಜಲಾಲಾಬಾದ್:** ಆಫ್ಘಾನಿಸ್ತಾನದ ನಾಂಗರ್‌ಹಾರ್ (ಪೂರ್ವ) ಪ್ರಾಂತ್ಯದ ಮುಖ್ಯಪಟ್ಟಣ. ಇದು ಕಾಬೂಲಿನಿಂದ 134 ಕಿಮೀ ಮತ್ತು ಪೆಷಾವರದಿಂದ 122 ಕಿಮೀ ದೂರದಲ್ಲಿ ಕಾಬೂಲ್ ನದಿಯ ದಕ್ಷಿಣ ದಂಡೆಯ ಮೇಲೆ 585 ಮೀ. ಎತ್ತರದಲ್ಲಿದೆ. ಜಲಾಲಾಬಾದ್ ಮತ್ತು ಪೆಷಾವರಗಳ ನಡುವೆ ಖೈಬರ ಕಣಿವೆಯೂ ಜಲಾಲಾಬಾದ್ ಮತ್ತು ಕಾಬೂಲ್‌ಗಳ ನಡುವೆ ಜಗದಾಲಕ್, ಖುರ್ದ್ ಕಾಬೂಲ್ ಕಣಿವೆಗಳುಂಟು. ಇದು ಆಯಕಟ್ಟಿನ ಸ್ಥಳದಲ್ಲಿದೆ. ಇಲ್ಲೊಂದು ವಿಮಾನ ನಿಲ್ದಾಣವುಂಟು. ಇದು ಸೇನಾಕೇಂದ್ರ ಕೂಡ. ಜನಸಂಖ್ಯೆ 96000 (2002).

ಹಳೆಯ ನಗರದ ಪೇಟೆ ಬೀದಿಗಳೂ ಗೋಡೆಗಳೂ ಈಗ ಇಲ್ಲ. ಆಧುನಿಕ ಪಟ್ಟಣ ಪಶ್ಚಿಮಕ್ಕಿದೆ. ಹಿಂದಿನ ಆಫ್ಘನ್ ದೊರೆಗಳು ತಮ್ಮ ಆಸ್ಥಾನವನ್ನು ಚಳಿಗಾಲದಲ್ಲಿ ಇಲ್ಲಿಗೆ ವರ್ಗಾಯಿಸುತ್ತಿದ್ದರು. ಇಂದೂ ಆಫ್ಘನ್ ಶ್ರೀಮಂತರು ಚಳಿಗಾಲದಲ್ಲಿ ಇಲ್ಲಿ ವಾಸಿಸುತ್ತಾರೆ.

ಇಲ್ಲಿಯ ವಾಯುಗುಣ ಹಿತಕರ. ಸುತ್ತಣ ಪ್ರದೇಶ ಫಲವತ್ತಾದ್ದು, ಕಿತ್ತಳೆ, ಬತ್ತ ಕಬ್ಬು ಬೆಳೆಯುತ್ತವೆ. ಇಲ್ಲಿ ಸಕ್ಕರೆ ಕಾರ್ಖಾನೆಯಿದೆ. ಕುರಿಸಾಕಣೆ ಮತ್ತು ಉಣ್ಣೆಬಟ್ಟೆ ತಯಾರಿಕೆಯೂ ಮುಖ್ಯ ಕಸಬುಗಳು. ಭಾರತ ಪಾಕಿಸ್ತಾನಗಳೊಡನೆ ವ್ಯಾಪಾರ ಸಂಬಂಧವುಂಟು. (ಬಿ.ಎಸ್.ಎ.)

**ಜಲಾಶಯ:** ಜೀವನದಿಯೊಂದಕ್ಕೆ ಅಡ್ಡವಾಗಿ ಕಟ್ಟೆಯನ್ನು ಕಟ್ಟಿದಾಗ ಮೇಲುಭಾಗದಲ್ಲಿ ಸಂಗ್ರಹಗೊಳ್ಳುವ ನೀರಿನ ರಾಶಿ (ರಿಸರ್ವಾಯರ್). ಹರಿವ ಹೊಳೆಗೆ ಅಡ್ಡ ಕಟ್ಟೆಯನ್ನು ಕಟ್ಟಿದಾಗ ಉಂಟಾಗುವ ನೈಸರ್ಗಿಕ ಜಲಾಶಯದ ನೀರನ್ನು ನೀರಾವರಿ ಕಾರ್ಯ, ಕುಡಿಯುವ ನೀರಿನ ಸರಬರಾಜು, ವಿದ್ಯುದುತ್ಪಾದನೆ, ಪ್ರವಾಹನಿಯಂತ್ರಣ ಇವೇ ಮೊದಲಾದ ಬೇರೆ–ಬೇರೆ ಉದ್ದೇಶಗಳಿಗೆ ವಿನಿಯೋಗಿಸುತ್ತಾರೆ. ಜಲಾಶಯದಿಂದ ಹೆಚ್ಚಿನ ಉಪಯುಕ್ತತೆ ಇರುವುದು ನಿಜವಾದರೂ ದೀರ್ಘಕಾಲದಲ್ಲಿ ಕೆಲವು ತೊಂದರೆಗಳು ಸಂಭವಿಸುವುದೂ ಉಂಟು. ಸ್ಥಳೀಯ ಪರಿಸರದ ಮೇಲೆ ಜಲಾಶಯ ಗಮನಾರ್ಹ ಪ್ರಭಾವ ಬೀರಿ ಹೊಸ ಸಮಸ್ಯೆಗಳು ಉದ್ಭವಿಸಲು ಕಾರಣವಾಗಬಹುದು. ಅದೇ ವೇಳೆ ಕೆಳಗಿನ ಪ್ರದೇಶಗಳಲ್ಲಿ ನೀರಿನ ಹರಿವು ಮೊದಲಿದ್ದುದಕ್ಕಿಂತ ಬಲು ಕಡಿಮೆ ಆಗುವುದರಿಂದ ಅಲ್ಲಿನ ಪರಿಸರದಲ್ಲಿ ಬೇರೆ ಸಮಸ್ಯೆಗಳು ತಲೆದೋರಬಹುದು.

ಪ್ರ.ಶ.ಪೂ. 3000ದಷ್ಟು ಹಿಂದೆ ಮೆಸೊಪೊಟೇಮಿಯದಲ್ಲಿ ನದಿಗಳಿಗೆ ಅಡ್ಡ ಮಣ್ಣಿನ ಕಟ್ಟೆಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸಿ ನಾಲೆಗಳಿಂದ ನೀರನ್ನು ಗದ್ದೆಗಳಿಗೆ ಹಾಯಿಸುತ್ತಿದ್ದರು. ಆ ಮೇಲೆ ಬಂದ ಬ್ಯಾಬಿಲೋನಿಯರು ಟೈಗ್ರಿಸ್ ನದಿಗೆ ಅಡ್ಡ ಹಾಕಿದ ಮಣ್ಣಿನ ಕಟ್ಟೆಯಿಂದ 1200 ಮೀ ಅಗಲ, 320 ಮೀ ಉದ್ದವಾದ ನಾಲೆಯನ್ನು ರಚಿಸಿದ್ದರು. ಪ್ರಾಚೀನ ಈಜಿಪ್ಟಿನಲ್ಲಿ ನೈಲ್ ನದಿಗೆ ಅಡ್ಡ ಬ್ಯಾರೇಜುಗಳನ್ನು ಕಟ್ಟಿ ನಾಲೆಗಳಿಂದ ನೀರನ್ನು ವಿಶಾಲವಾದ ಮತ್ತು ಫಲವತ್ತಾದ ಬಯಲುಗಳಿಗೆ ಸಾಗಿಸಿದ್ದರು.

ಆಧುನಿಕ ಕಾಲದಲ್ಲಿ ಈ ರೀತಿಯ ಜಲಾಶಯ ನಿರ್ಮಾಣ ಎಲ್ಲಾ ದೇಶಗಳಲ್ಲೂ ಸಾಮಾನ್ಯವಾಗಿ ಕಂಡು ಬಂದಿದ್ದು ಇದರಿಂದ ನೀರಾವರಿಗೆ ಅನುಕೂಲವಾಗಿದೆ. 1911ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಕಾವೇರಿ ನದಿಗೆ ಅಡ್ಡಕಟ್ಟಿ ಕೃಷ್ಣರಾಜಸಾಗರದ ಜಲಾಶಯ ನಿರ್ಮಿಸಿದರು. ಇದು ಮೈಸೂರು ನಗರದ ವಾಯವ್ಯಕ್ಕೆ 18 ಕಿಮೀ ದೂರದಲ್ಲಿದೆ. ಈ ಕಟ್ಟೆಯನ್ನು ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿಗಳು ಸೇರಿದ ಮೇಲೆ ಕಾವೇರಿ ನದಿಗೆ ಅಡ್ಡ ಕಟ್ಟಿದ್ದಾರೆ. ಜಲಾಶಯದ ಒಟ್ಟು ಜಲಾನಯನ ಭೂಮಿ 10660 ಚ.ಕಿಮೀ. ಇದರಿಂದ ವರ್ಷಕ್ಕೆ ಪ್ರದೇಶಕ್ಕೆ ಸರಾಸರಿ 22 ಲಕ್ಷ ಹೆ. ಪ್ರದೇಶಕ್ಕೆ ನೀರು ಒದಗುತ್ತದೆ. ಈ ಜಲಾಶಯದಲ್ಲಿ ಒಟ್ಟು 4,833 ಕೋಟಿ ಘನ ಅಡಿ ನೀರು ಹಿಡಿಯುತ್ತದೆ. ಈ ಜಲಾಶಯದ ಸರಾಸರಿ ಉದ್ದ 24 ಕಿಮೀ, ಅಗಲ 8 ಕಿಮೀ. (ಎಚ್.ಸಿ.ಕೆ.)

**ಜಲ್ಪೈ ಗುರಿ:** ಪಶ್ಚಿಮ ಬಂಗಾಲದ ಒಂದು ಜಿಲ್ಲೆ ಅದರ ಮುಖ್ಯ ಪಟ್ಟಣ. ಜನಸಂಖ್ಯೆ 34,03,204. ತಿಸ್ತಾ ನದಿಯ ಬಲದಂಡೆಯ ಮೇಲೆ ಡಾರ್ಜಿಲಿಂಗಿಗೆ ಆಗ್ನೇಯದಲ್ಲಿ 80 ಕಿಮೀ ದೂರದಲ್ಲಿದೆ. ಇದೊಂದು ಸುಂದರ ಪಟ್ಟಣ. ಅಗಲವಾದ ರಸ್ತೆಗಳ ಎರಡೂ ಬದಿಗಳಲ್ಲಿ ಹಸುರು ದಟ್ಟೆಲೆಗಳಿಂದ ಕೂಡಿದ ಮರಗಳಿವೆ. ದೂರದಲ್ಲೆ ಹಿಮಾಲಯ ಶ್ರೇಣಿಗಳು ಮಂಜಿನ ಮುಸುಕು ಹೊದ್ದು ಹಬ್ಬಿವೆ. ಇದೊಂದು ರೈಲು ನಿಲ್ದಾಣ ಹಾಗೂ ವ್ಯಾಪಾರ ಸ್ಥಳ. ಇಲ್ಲಿ ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಮೂರು ಕಾಲೇಜುಗಳಿವೆ.

ಜಲ್ಪೈಗುರಿ ಜಿಲ್ಲೆಯ ವಿಸ್ತೀರ್ಣ 6,245 ಚ. ಕಿಮೀ. ಇದರ ಪೂರ್ವದಲ್ಲಿ ಅಸ್ಸಾಂ, ಪಶ್ಚಿಮದಲ್ಲಿ ಬಿಹಾರ, ಉತ್ತರದಲ್ಲಿ ಭೂತಾನ್, ದಕ್ಷಿಣದಲ್ಲಿ ಬಾಂಗ್ಲಾದೇಶದ ಕೊಕಚ್‌ಬಿಹಾರ್ ಜಿಲ್ಲೆಗಳಿವೆ. ರಾಜ್‌ಗಂಜ್, ಜಲ್ಪೈಗುರಿ, ಮಾಲ್, ಮಿಟಿಯಾಲಿ, ಮಯನಗುರಿ, ನಗರಕಾಟಾ, ಧೂಬ್‌ಗುರಿ, ಬೀರ್ಪಾರಾ, ಫಲಕಾಟಾ, ಮಧಾರಿ ಹಟ್, ಅಲೀಪುರ್‌ದ್ವಾರ್, ಕಾಲ್ಚೀನಿ, ಕುಮಾರಗ್ರಾಮ್ ಇವು ಇದರ ತಹಸೀಲುಗಳು. ಭೂತಾನಕ್ಕೂ ಜುಲ್ಪೈಗುರಿ ಜಿಲ್ಲೆಗೂ ನಡುವೆ ಇರುವ ಸಿಂಚುಲಾ ಪರ್ವತ ಶ್ರೇಣಿಯ ಕೆಲವು ಶಿಖರಗಳು ಸು. 2000 ಮೀ ಎತ್ತರವಾಗಿವೆ. ತಿಸ್ತಾ ನದಿಯಿಂದ ಈ ಜಿಲ್ಲೆ ಎರಡು ಭಾಗಗಳಾಗಿ ಪರಿಣಮಿಸಿದೆ. ಒಂದು ಮೊದಲಿನಿಂದಲೂ ಭಾರತದ ಭಾಗವೇ ಆಗಿದ್ದ ವಿಸ್ತಾರವಾದ ಪ್ರದೇಶ. ಮತ್ತೊಂದು 1864–65ರ ಯುದ್ಧದ ಬಳಿಕ ಭೂತಾನದಿಂದ ಈ ಜಿಲ್ಲೆಗೆ ಸೇರಿದೆ. 35 ಕಿಮೀ ಅಗಲವಾಗಿ ಹಿಮಾಲಯದ ಅಡಿಗುಂಟ ವ್ಯಾಪಿಸಿರುವ ಜಿಲ್ಲೆಯ ಈ ಭಾಗವನ್ನು ಪಶ್ಚಿಮ ದ್ವಾರವೆಂದು ಕರೆಯಲಾಗುತ್ತದೆ. ಏಕೆಂದರೆ ಇಲ್ಲಿಂದ ಭೂತಾನಕ್ಕೆ ಹೋಗುವ ಐದು ಕಣಿವೆ ಮಾರ್ಗಗಳುಂಟು. ಈ ಜಿಲ್ಲೆಯು ಚಹ ಬೆಳೆಗೆ ಹೆಸರಾಗಿದೆ. ಚಹದ ಫಸಲಿನ ದೃಷ್ಟಿಯಿಂದ ಈ ಭೂಭಾಗ ಡಾರ್ಜಿಲಿಂಗಿನ ಸೆರಗು ಎನ್ನಬಹುದು. ಕಣ್ಣು ಹಾಯಿಸಿದಲ್ಲೆಲ್ಲ ಚಹ ತೋಟಗಳುಂಟು. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 328 ಸೆ. ಇಲ್ಲಿ ಅಮೂಲ್ಯವಾದ ಮರಗಳೂ ವನ್ಯ ಮೃಗಗಳೂ ಇವೆ. ಬಾಗ್ರಕೋಟ್‌ನಲ್ಲಿ ಆಂಥ್ರಸೈಟ್ ಗಣಿಗಳಿವೆ. (ಬಿ.ಎ.ಎಸ್.)

**ಜಾಂಜಿಬಾರ್ ದ್ವೀಪ:** ತಾಂಜೇನಿಯ ದೇಶಕ್ಕೆ ಸೇರಿದ, ಆಫ್ರಿಕದ ಪೂರ್ವತೀರದಲ್ಲಿ ಹಿಂದೂ ಮಹಾಸಾಗರದಲ್ಲಿರುವ ದ್ವೀಪ. ವಿಸ್ತೀರ್ಣ 1650 ಚ.ಕಿಮೀ. ಜನಸಂಖ್ಯೆ 3,75,539. ತೆಂಗು, ಲವಂಗ ಹಾಗೂ ಕೋಕೋ ಬೆಳೆಗಳಿಗೆ ಪ್ರಸಿದ್ಧಿ ಪಡೆದಿದೆ. ಜಾಂಜಿಬಾರ್ ಇದರ ದೊಡ್ಡನಗರ ಹಾಗೂ ಬಂದರು. ಇದನ್ನು ಲವಂಗದ ದ್ವೀಪವೆಂದೇ ಕರೆಯುವರು. (ಕೆ.ಎಸ್.ಯು.)

**ಜಾಂಜಿಬಾರ್ ಬಂದರು:** ಜಾಂಜಿಬಾರ್ ದ್ವೀಪದ ಪಶ್ಚಿಮ ಭಾಗದ ಮುಖ್ಯ ಬಂದರು ನಗರ. ಪೂರ್ವ ಆಫ್ರಿಕ ತೀರಕ್ಕೆ 35 ಕಿಮೀ ದೂರದಲ್ಲಿದೆ. ಜನಸಂಖ್ಯೆ 157634. ಈ ನಗರ 8ನೆಯ ಶತಮಾನದಿಂದಲೂ ಅಸ್ತಿತ್ವದಲ್ಲಿರುವ ಪುರಾತನವಾದ ನಗರ. ಇಲ್ಲಿಯ ಮಸೀದಿಯ ಕಲಾತ್ಮಕ ಮಿನಾರತುಗಳು ಪ್ರಾಚೀನವಾದವು. ಪೋರ್ಚುಗೀಸರನ್ನು ಓಡಿಸಿದ ತರುವಾಯ ಈ ನಗರದ ಅರಬ್ಬಿ ಕೋಟೆ ಪೋರ್ಚುಗೀಸರ ಚರ್ಚು ಹಾಗೂ ಕಟ್ಟಡಗಳ ವಸ್ತುಗಳಿಂದ ನಿರ್ಮಾಣಗೊಂಡಿತು. ಹಿಂದಿದ್ದ ಗುಲಾಮರ ಮಾರುಕಟ್ಟೆ ನಿವೇಶನದ ಮೇಲೆ ಕ್ರೈಸ್ತ ಚರ್ಚಿನ ಕಟ್ಟಡ, ಒತ್ತಾದ ಬಜಾರು ಪ್ರದೇಶದಲ್ಲಿ ಸೇಂಟ್ ಜೋಸೆಫ್ ಚರ್ಚು ಮತ್ತು ಹಲವಾರು ಮಸೀದಿಗಳು ನಿರ್ಮಾಣವಾಗಿವೆ. ಹಿಂದಿನ ಸುಲ್ತಾನನ ಅರಮನೆ ಮತ್ತು ಅವನ ಅದ್ಭುತಗಳ ಮಹಲು ಸಮುದ್ರಕ್ಕೆ ಎದುರಾಗಿವೆ. ಮಹಲಿನಲ್ಲಿ ಈಗ ಸರ್ಕಾರಿ ಕಚೇರಿಗಳು ನಡೆಯುತ್ತಿವೆ. ನಗರದ ಹಲವು ಭವ್ಯ ಸೌಧಗಳ ಮಹಾದ್ವಾರಗಳು, ತಾಮ್ರದ ದುಂಡು ಗುಬ್ಬಿಮೊಳೆಗಳಿಂದ ಅಲಂಕೃತವಾಗಿವೆ. ಬಾಗಿಲು ಕಿಟಕಿಗಳ ಮೇಲೆ ಅರಬ್ಬಿ ಮತ್ತು ಭಾರತೀಯ ಕಲಾಕೃತಿಗಳುಂಟು.

ಈ ದ್ವೀಪ ಯುನೆಸ್ಕೊ ಗುರುತಿಸಿರುವ ಹೆರಿಟೇಜ್ ಸೈಟ್ ಆಗಿರುವುದು. ಇಲ್ಲಿ ನೈಲ್ ನದಿಯ ಮೂಲವನ್ನು ಶೋಧಿಸಿದ ಡೇವಿಡ್ ಲಿವಿಂಗ್‌ಸ್ಟನ್‌ನ ಮನೆಯಿದೆ. *

**ಜಾಕ್ವಿಸ್ ಕಾರ್ಟಿಯರ್:** 1491–1557. ಫ್ರೆಂಚ್ ನಾವಿಕ. ಇವನು ಕೆನಡದೇಶದ ಸೇಂಟ್‌ಲಾರೆನ್ಸ್ ನದಿ ಮುಖಜಭೂಮಿಯ ಸೇಂಟ್ ಲಾರೆನ್ಸ್ ಕೊಲ್ಲಿಯನ್ನು ಅನ್ವೇಷಿಸಿದ. ಈತ 1491ರಲ್ಲಿ ಸೇಂಟ್ ಮಾಲೋನಲ್ಲಿ ಜನಿಸಿದ. ಈ ಪ್ರದೇಶ ಬ್ರಿಟನಿಯ ಎತ್ತರ ತೀರದಲ್ಲಿದ್ದು 1532 ರಲ್ಲಿ ಫ್ರಾನ್ಸಿಗೆ ಸೇರ್ಪಡೆಯಾಯಿತು. 1534ರಲ್ಲಿ ಈತ ಏಷ್ಯದ ಸಂಪದ್ಭರಿತ ಮಾರುಕಟ್ಟೆಗಳ ಅನ್ವೇಷಣೆಯಲ್ಲಿ ತೊಡಗಿದ. ನ್ಯೂಫೌಂಡ್‌ಲೆಂಡ್‌ನ ಕೆಲವು ಭಾಗಗಳನ್ನು 1534ರ ಮೇ ನಲ್ಲಿ ಕಂಡುಹಿಡಿದ. ಸೇಂಟ್‌ಲಾರೆನ್ಸ್ ನದಿ ಪ್ರದೇಶವನ್ನು ಅನ್ವೇಷಿಸಿ ಹೆಸರಿಸಿದ. ದೇಶವನ್ನು ಕೆನಡ ಎಂದು ಹೆಸರಿಸಿದ. ಈ ಭಾಗ ಮೊದಲ ಯುರೋಪಿಯನ್ ವಸಾಹತುವಾಯಿತು. ಈತ ಅದುವರೆಗೂ ಯಾರೂ ಪ್ರವೇಶಿಸದ ಪ್ರದೇಶಗಳನ್ನು ಅನ್ವೇಷಿಸಿದ. ಸು. 50 ಹೊಸ ಕರಾವಳಿ ಪ್ರದೇಶಗಳನ್ನು ಗುರ್ತಿಸಿದ. ಹೊಸ ಪ್ರಪಂಚ ಹಳೆಯ ಯುರೋಪ್ ಮತ್ತು ಏಷ್ಯಗಳಿಂದ ಬೇರೆಯೇ ಆಗಿದೆ ಎಂದು ತಿಳಿಸಿದ. ಗ್ರಾಂಡ್ ಹರ್‌ಮೈನ್ ಪೆಟ್ಟಟ ಹರ್‌ಮೈನ್, ಎಮಿರಿಲಾನ್ ಇವನು ಬಳಸಿದ ಹಡಗುಗಳು. ಇವನ ಗೌರವಾರ್ಥ ಮಾಂಟ್ರಿಯಲ್‌ನ ಒಂದು ರಾಜಬೀದಿಗೆ, ನದಿ, ಸೇತುವೆ ಹಾಗೂ ಉದ್ಯಾನವನಕ್ಕೆ ಇವನ ಹೆಸರಿಡಲಾಗಿದೆ. ನ್ಯೂ ಫೌಂಡ್‌ಲೆಂಡಿನ ಒಂದು ದ್ವೀಪಕ್ಕೆ ಕಾರ್ಟಿಯರ್‌ನ ಹೆಸರಿದೆ.

(ಕೆ.ಎನ್.ಯು.)

**ಜಾಗತಿಕ ರಾಜಕೀಯ ವರ್ತುಲ:** ಈ ಪರಿಕಲ್ಪನೆಯನ್ನು ಮಾಡೆಲಸ್ಕಿ ಎಂಬ ರಾಜಕೀಯ ತಜ್ಞ 1970ರಲ್ಲಿ ಮಂಡಿಸಿದ್ದಾನೆ. 1500 ಪ್ರ.ಶ.ವ ದಿಂದ ಇಲ್ಲಿಯವರೆಗೆ ಪ್ರಪಂಚ ಮಟ್ಟದಲ್ಲಿ ದೇಶಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡು ಅನಂತರ ಹೊಸ ರಾಜಕೀಯ ವ್ಯವಸ್ಥೆ ಅಥವಾ ಪ್ರಬಲವಾದ ಮತ್ತೊಂದು ರಾಷ್ಟ್ರ ಆ ಜಾಗತಿಕ ಹತೋಟಿಗೆ ಒಳಪಟ್ಟಿರುವುದನ್ನು ಇವನು ತಿಳಿಸಿದ್ದಾನೆ. ಇಲ್ಲಿ ನಾವು ಐದು ರಾಜಕೀಯ ವರ್ತುಲಗಳನ್ನು ಪ್ರ.ಶ.ವ 1500 ರಿಂದ 2000ದವರೆಗೆ ಆಗಿ ಹೋಗಿರುವುದನ್ನು ಕಾಣುತ್ತೇವೆ. ತಮ್ಮ ದೀರ್ಘವಾದ ರಾಜಕೀಯವರ್ತುಲದಲ್ಲಿ – ಪ್ರತಿ ಒಂದು ವರ್ತುಲದಲ್ಲಿ ಪ್ರಮುಖವಾದ ರಾಷ್ಟ್ರ, ಅದು ಒಂದು ಕಾಲದಲ್ಲಿ ನಡೆಸಿದ ಒಂದೆರಡು ಮಹಾಯುದ್ಧಗಳನ್ನು, ಹಾಗೇ ಜಾಗತಿಕ ಹತೋಟಿಯಲ್ಲಿ ಅದು ಇತರೆ ಪ್ರಮುಖ ರಾಷ್ಟ್ರಗಳೊಂದಿಗಿನ ಸಂಧಾನಗಳು;

ಇದೇ ಕಾಲದಲ್ಲಿ ಅದು ಜಾಗತಿಕಮಟ್ಟದಲ್ಲಿ ನಿರ್ಮಿಸಿದ ರಾಜಕೀಯ ಅಥವಾ ಆರ್ಥಿಕ ವ್ಯವಸ್ಥೆ ಮತ್ತು ಇಂತಹ ಆಧಿಪತ್ಯದ ಆಳ್ವಿಕೆಯು ಇಳಿಮುಖವಾಗಲು ಪ್ರಮುಖ ಐತಿಹಾಸಿಕ ಘಟನೆಗಳನ್ನು ಆಧರಿಸಿ ಪರಿಕಲ್ಪನೆಯನ್ನು ವಿವರಿಸಲಾಗಿದೆ.

ಒಂದನೆಯ ಜಾಗತಿಕ ವರ್ತುಲದಲ್ಲಿ ಪೋರ್ಚುಗಲ್ ರಾಷ್ಟ್ರ ಜಾಗತಿಕ ಮಟ್ಟದಲ್ಲಿ 1500ರಿಂದ 1600ರವರೆಗೂ ಇದ್ದು, ಅದರ ಹತೋಟಿಯಲ್ಲಿದ್ದ ಅನೇಕ ರಾಷ್ಟ್ರಗಳನ್ನು ಉಳಿಸಿಕೊಳ್ಳಲು 1494–1517 ವರೆಗೆ ಇಟಲಿಯೊಂದಿಗೆ ಅನೇಕ ಯುದ್ಧಗಳನ್ನು ಮಾಡಿದೆ. ಈ ದಿಶೆಯಲ್ಲಿ ಟಾರ್‌ಡೆಲಿಯಾಸ್ ಎನ್ನುವ ಒಪ್ಪಂದವನ್ನು ಅದು ಮಾಡಿಕೊಂಡಿತ್ತು. ಆ ಕಾಲದಲ್ಲಿ ಜಾಗತಿಕ ಮಟ್ಟದ ನೌಕಾ ಯುದ್ಧದ ಹಾಗೂ ವ್ಯಾಪಾರ ವಾಣಿಜ್ಯಗಳಿಗೆ ಸಹಾಯವಾಗುವ ನೆಲೆಗಳ ಒಂದು ಜಾಲವನ್ನು ಅದು ನಿರ್ಮಿಸಿತ್ತು. 1580ರ ಹೊತ್ತಿಗೆ ತನ್ನ ನೆರೆ ರಾಷ್ಟ್ರವಾದ ಸ್ಪೇನಿನ ಆಕ್ರಮಣಗಳಿಗೆ ತುತ್ತಾಗಿ ಇದರ ಜಾಗತಿಕ ರಾಜಕೀಯದಲ್ಲಿ ಇಳಿಮುಖವಾಗಿರುವುದನ್ನು ಕಾಣುತ್ತೇವೆ.

ಎರಡನೆಯ ಜಾಗತಿಕ ವರ್ತುಲದಲ್ಲಿ (17ನೆಯ ಶತಮಾನ) ಹಾಲೆಂಡ್ ಅಥವಾ ನೆದರ್‌ಲೆಂಡ್ಸ್ ರಾಷ್ಟ್ರ ಜಾಗತಿಕ ಮಟ್ಟದಲ್ಲಿ ದೇಶಗಳ ರಾಜಕೀಯ ಹತೋಟಿ, ವ್ಯಾಪಾರ ವಾಣಿಜ್ಯ ಮುಂತಾದ ಆರ್ಥಿಕ ಅಂಶಗಳಲ್ಲಿ ಮುಂಚೂಣಿಯಲ್ಲಿದ್ದುದನ್ನು ಮಾಡೆಲ್‌ಸ್ಕಿ ವಿವರಿಸುತ್ತಾನೆ. 1579–1609ರಲ್ಲಿ ತನ್ನ ಪ್ರಭುತ್ವ ಸಾಧಿಸಲು ಇದು ಸ್ಪೇನ್ ದೇಶದೊಂದಿಗೆ ಪ್ರಮುಖವಾಗಿ ಯುದ್ಧ ಮಾಡಿತು. 1609ರಲ್ಲಿ ಇದು ಸ್ಪೇನ್‌ನೊಂದಿಗೆ 12 ವರ್ಷಗಳ ಒಂದು ಒಪ್ಪಂದವನ್ನು ಮಾಡಿಕೊಂಡಿತ್ತು. ಡಚ್ಚರು ಪ್ರಮುಖವಾಗಿ ವಾಣಿಜ್ಯ ವ್ಯಾಪಾರಸ್ಥರಾಗಿ ಪ್ರಪಂಚದ ರಾಜಕೀಯ ವ್ಯವಸ್ಥೆಗೆ ಕೈ ಹಾಕಿದವರು. ಈ ದಿಶೆಯಲ್ಲಿ 'ಮೇರೆ ಲಿಬ್ರುಮ್' ಎನ್ನುವ ಜಾಗತಿಕ ಮಟ್ಟದ ಸಂಸ್ಥೆಯನ್ನು ನಿರ್ಮಾಣಮಾಡಿದರು. ಹಾಲೆಂಡಿನ ಜಾಗತಿಕ ಪ್ರಭುತ್ವ ಇಂಗ್ಲೆಂಡಿನಲ್ಲಿ ಆದ ಕ್ರಾಂತಿಗಳಿಂದ ಇಳಿಕೆಯಾಯಿತು

ಮೂರನೆಯ ಜಾಗತಿಕ ವರ್ತುಲದಲ್ಲಿ (18ನೆಯ ಶತಮಾನ) ಹಾಗೂ ನಾಲ್ಕನೆಯ ಜಾಗತಿಕ ವರ್ತುಲದಲ್ಲಿ (19ನೆಯ ಶತಮಾನ) ನಾವು ಇಂಗ್ಲೆಂಡ್ ದೇಶದ ಸಾರ್ವಭೌಮತ್ವ, ಜಾಗತಿಕ ಹತೋಟಿಗಳನ್ನು ಕಾಣುತ್ತೇವೆ. ಜಾಗತಿಕವರ್ತುಲಗಳಲ್ಲೇ ಧೀರ್ಘವಾದ ಹತೋಟಿಯ ಕಾಲ ಇಂಗ್ಲೆಂಡಿನದು. ಈ ನಿಟ್ಟಿನಲ್ಲಿ 1688–1713 ಹಾಗೂ 1792–1815ರಲ್ಲಿ ಫ್ರಾನ್ಸ್ ದೇಶದೊಂದಿಗೆ ಇದು ಸೆಣಸಿರುವುದನ್ನು ಕಾಣುತ್ತೇವೆ. ವಿಸ್ತಾರವಾದ ಬ್ರಿಟಿಷ್ ಸಾಮ್ರಾಜ್ಯ, ಅದರ ವೈವಿಧ್ಯಮಯ ಸಂಪನ್ಮೂಲಗಳ ಹಿಡಿತ, ಪಾಲನೆಗಾಗಿ 1713ರಲ್ಲಿ ಉಟ್ರೆಚೆಟ್ ಮತ್ತು 1814–1815ರಲ್ಲಿ ಪ್ಯಾರಿಸ್ ಮತ್ತು ವಿಯನ್ನ ಒಪ್ಪಂದಗಳನ್ನು ಮಾಡಿಕೊಂಡಿತು. ಇಂಗ್ಲೆಂಡ್ ದೇಶ ಅಪಾರವಾದ ಸಾಗರ ನೌಕಾಬಲವನ್ನು ಹೊಂದಿದ್ದು ಅದರ ಹತೋಟಿಯಲ್ಲಿ ವ್ಯಾಪಾರ ವಾಣಿಜ್ಯಗಳನ್ನು ನೆಡೆಸಿ 'ಮುಕ್ತವ್ಯಾಪಾರ'ದ ವ್ಯವಸ್ಥೆಯನ್ನು ಜಾರಿಗೆ ತಂದಿತು. ಆದರೆ ಇದರ ಪ್ರಾಬಲ್ಯವು ಮೊದಲನೇ ವರ್ತುಲದಲ್ಲಿ 'ಅಮೇರಿಕಾ ಸಂಸ್ಥಾನದ ಸ್ವಾತಂತ್ರ್ಯದಿಂದಾಗಿ ಇಳಿಮುಖವಾಯಿತು. ಹಾಗೆ ನಾಲ್ಕನೆಯ ವರ್ತುಲದಲ್ಲಿ ಹೊಸದಾಗಿ ಹುಟ್ಟಿ ಕೊಂಡ ಬ್ರಿಟಿಷ್ ಸಾಮ್ರಾಜ್ಯ ತತ್ವದಿಂದಾಗಿ ಇದರ ಅವನತಿಗೆ ಕಾರಣವಾಗುತ್ತದೆ.

ಐದನೆಯ ಜಾಗತಿಕ ವರ್ತುಲದಲ್ಲಿ 20ನೆಯ ಶತಮಾನದಲ್ಲಿ ಅಮೇರಿಕ ಸಂಸ್ಥಾನ ಜಾಗತಿಕ ರಾಷ್ಟ್ರವಾಗಿದ್ದನ್ನು ಕಾಣುತ್ತೇವೆ. ಪ್ರಪಂಚದ ರಾಷ್ಟ್ರಗಳನ್ನು ತನ್ನ ಹತೋಟಿಯ ರಾಜಕೀಯ ವ್ಯವಸ್ಥೆಯಲ್ಲಿಟ್ಟುಕೊಳ್ಳಲು ಇದು 1914–45 ರಲ್ಲಿ ಎರಡು ಮಹಾಯುದ್ಧಗಳಲ್ಲಿ ತೊಡಗಬೇಕಾಗಿದ್ದುದನ್ನು ಕಾಣುತ್ತೇವೆ. ವೈಜ್ಞಾನಿಕವಾಗಿ, ಸಂಪರ್ಕಸಾಧನೆಗಳ ಹಾಗೂ ಸಾರಿಗೆಯಲ್ಲಿ ಪ್ರಪಂಚ ಮಟ್ಟದಲ್ಲಿ ಶೀಘ್ರಬದಲಾವಣೆಗಳಾಗಿ ಇದು ಅವುಗಳ ಮುಂಚೂಣಿಯಲ್ಲಿರುವುದನ್ನು ಕಾಣುತ್ತೇವೆ. 1919 ಮತ್ತು 1945 ವರ್ಜೆಲ್ಸ್ ಮತ್ತು ಪಾಟಿಸ್ಡಾಯ್ ನಂತಹ ಮಹತ್ತರ ಒಪ್ಪಂದಗಳನ್ನು ಯುರೋಪಿನಲ್ಲಿ ಮಾಡಿಕೊಂಡಿತು. ಅಮೇರಿಕ ಸಂಯುಕ್ತ ಸಂಸ್ಥಾನ ತನ್ನ ಆರ್ಥಿಕ ವರ್ಚಸ್ಸನ್ನು ಮತ್ತು ರಾಜಕೀಯ ಪ್ರಭುತ್ವಗಳನ್ನು ಉಳಿಸಿಕೊಳ್ಳಲು ಹಾಗೂ ರಷ್ಯದ ಪ್ರಾಬಲ್ಯವನ್ನು ತಡೆಯಲು ವಿಯಟ್ನಾಂ ನಂತಹ ಯುದ್ಧಗಳಲ್ಲಿ ತೊಡಗಿದನ್ನು ಕಾಣುತ್ತೇವೆ. ಇವು ಅದರ ಜಾಗತಿಕ ಮಟ್ಟದ ಪ್ರಾಭಲ್ಯ ಕಡಿಮೆಯಾಗಲೂ ಕಾರಣವಾಗಿವೆ.

ಮುಂದಿನ ಜಾಗತಿಕ ವರ್ತುಲವು ಅನೇಕ ಪ್ರಬಲ ರಾಷ್ಟ್ರಗಳ ಒಕ್ಕೂಟ (ಚೀನ, ಭಾರತ, ಯು.ಎಸ್.ಎ. ಹಾಗೂ ಯುರೋಪಿನ ರಾಷ್ಟ್ರಗಳು) ವನ್ನು ಹೊಂದಿ, ಅಣು ಯುದ್ಧ ತಡೆ, ಪ್ರಗತಿಪರ ಒಪ್ಪಂದಗಳನ್ನು ಮಾಡಿಕೊಳ್ಳಬಹುದು. (ಬಿ.ಇ.)

**ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ:** ಜಿ.ಪಿ.ಎಸ್ ಮತ್ತು ಜಿ.ಪಿ.ಎಸ್. ಮೋಜಣಿ. ಜಿ.ಪಿ.ಎಸ್. (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್) ಇದು ಉಪಗ್ರಹ ಆಧಾರಿತ ಸ್ಥಾನ ನಿರ್ಧಾರ ವ್ಯವಸ್ಥೆ, ಪ್ರಪಂಚದಾದ್ಯಂತ ಇದರ ಕಾರ್ಯಕ್ಷೇತ್ರ ಅಮೇರಿಕ ಸಂಯುಕ್ತ ಸಂಸ್ಥಾನದ ಡಿ.ಓ.ಡಿ ಸಂಸ್ಥೆಯ ಅಧೀನಕ್ಕೆ ಒಳಪಟ್ಟಿರುತ್ತದೆ. ಜಿ.ಪಿ.ಎಸ್. ಶೋಧನೆಯ ಕೀರ್ತಿ ಅಮೇರಿಕಕ್ಕೆ ಸಲ್ಲಬೇಕು. ಮಿಲಿಟರಿ ವ್ಯವಸ್ಥೆಯು ಈ ತಂತ್ರಜ್ಞಾನದಿಂದ ಕಾರ್ಯನಿರ್ವಹಿಸಲ್ಪಡುತ್ತಿದೆ. 1973ರಲ್ಲಿ ಜಿ.ಪಿ.ಎಸ್. ಅನ್ನು ನ್ಯಾವ್‌ಸ್ಟಾರ್ (ನೇವಿಗೇಷನ್ ಸೆಟಲೈಟ್ ಇಮೇಜಿಂಗ್ ಅಂಡ್ ರೇಂಜಿಂಗ್ ಸಿಸ್ಟಮ್) ಎಂದು ಕರೆಯಲಾಗುತ್ತಿತ್ತು. ಅಂದಿನ ದಿನಗಳಲ್ಲಿ ಇದನ್ನು ಪ್ರಮುಖವಾಗಿ ನೌಕಾಯಾನದಲ್ಲಿ ದಿಕ್ಕು, ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಾನ ಮುಂತಾದ ವಿವರಗಳನ್ನು ನಿಖರವಾಗಿ ಗುರುತಿಸಲು ಬಳಸುತ್ತಿದ್ದರು. ಮೇ 2000ಕ್ಕೂ ಮುಂಚೆ ಇದರ ಕಾರ್ಯಕ್ಷೇತ್ರ ಮತ್ತು ಆಡಳಿತಗಳು ಅಮೇರಿಕದ ಮಿಲಿಟರಿಯ ಅಧೀನದಲ್ಲಿತ್ತು. 2000 ಮೇ 01–ರಂದು ಅಮೇರಿಕದ ಅಧ್ಯಕ್ಷರು ಜಿ.ಪಿ.ಎಸ್. ವ್ಯವಸ್ಥೆಯನ್ನು ಇತರ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಅನುಮತಿ ಕೊಟ್ಟರು. ಅಂದಿನಿಂದ ನೌಕಾಯಾನ, ವಿಮಾನಯಾನ ಸಾರಿಗೆ, ನಾಗರಿಕರ ಉಪಯೋಗಕ್ಕೆ, ಸಂಪನ್ಮೂಲಗಳ ನಿರ್ವಹಣೆಗೆ ಹೆಚ್ಚಾಗಿ ಬಳಸಲಾಗುತ್ತಿದೆ. ಇಂದು ವಿಶ್ವದಾದ್ಯಂತ ಇದರ ಜಾಲ ವ್ಯಾಪಕವಾಗಿ ಅಭಿವೃದ್ಧಿಗೊಂಡಿದ್ದು, ಕ್ರಾಂತಿಯ ಅಲೆಯನ್ನು ಸೃಷ್ಟಿಸಿದೆ. ಪ್ರತಿಯೊಂದು ರಾಷ್ಟ್ರ ಈ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿದೆ. ಅದೇ ರೀತಿ, ಗ್ಲೋನೊಸ್ಸ್– ಗ್ಲೋಬಲ್ ಆರ್ಬಿಟಿಂಗ್ ನೇವಿಗೇಷನ್ ಸೆಟಲೈಟ್ ಸಿಸ್ಟಮ್ ಆಫ್ ರಷ್ಯವನ್ನು ರಷ್ಯದೇಶ ಸ್ಥಾಪಿಸಿದೆ. ಇಂದು ಈ ಎರಡು ಜಾಲಗಳು ತುಂಬಾ ಪ್ರಮುಖ್ಯತೆಯನ್ನು ಹೊಂದಿವೆ.

ದಿನದ 24 ಗಂಟೆಗಳ ಕಾಲವೂ ಪ್ರಪಂಚದ ಯಾವುದೇ ಸ್ಥಳದಲ್ಲಿನ ಅಕ್ಷಾಂಶ–ರೇಖಾಂಶಗಳು ಎತ್ತರ, ದಿಕ್ಕು, ಮುಂತಾದ ಮಾಹಿತಿಗಳನ್ನು ಕ್ಷಣಾರ್ಧದಲ್ಲಿ ಕಂಡು ಹಿಡಿಯಲು ಬಳಸಲಾಗುತ್ತಿದೆ. ಅಲ್ಲದೆ ನಿಖರವಾದ ಮಾಹಿತಿಯನ್ನು ಈ ತಂತ್ರಜ್ಞಾನದಿಂದ ಪಡೆಯಬಹುದಾಗಿದೆ. ದಿನದ 24 ಗಂಟೆಗಳ ಕಾಲವೂ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ 24 ಉಪಗ್ರಹಗಳು ಕಾರ್ಯನಿರತವಾಗಿರುತ್ತವೆ. ಪ್ರಸ್ತುತದಲ್ಲಿ 27 ಉಪಗ್ರಹಗಳು ಕಾರ್ಯನಿರ್ವಹಿಸುತ್ತಿವೆ.

ಬರ್ನಾರ್ಡ್ (1992) ಅವರ ಪ್ರಕಾರ ಜಿ.ಪಿ.ಎಸ್. ಎಂದರೆ–ದಿನದ 24 ಗಂಟೆಯಲ್ಲಿ ಪ್ರಪಂಚದ ಯಾವುದೇ ಸ್ಥಳವನ್ನು ನಿಖರವಾಗಿ ಗುರ್ತಿಸಲು ಅದಕ್ಕಾಗಿಯೇ ತಯಾರಿಸಿದ ಗ್ರಾಹಕವನ್ನೊಳಗೊಂಡ ಕೃತಕ ಉಪಗ್ರಹಗಳ ಸಮೂಹ ಮತ್ತು ನಿಯಂತ್ರಣ ವ್ಯವಸ್ಥೆಗೆ ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ ಎನ್ನಲಾಗಿದೆ.

ಕೃತಕ ಉಪಗ್ರಹಗಳನ್ನು ಭೂಮಿಯಿಂದ 1200 ಕಿಮೀ ಎತ್ತರದಲ್ಲಿನ ಭೂ ಕಕ್ಷೆಯಲ್ಲಿ ಸ್ಥಿರಗೊಳಿಸಲಾಗಿದೆ. ಅವು ಪ್ರಪಂಚದ ಯಾವ ಸ್ಥಾನದಿಂದ ವೀಕ್ಷಿಸಿದರೂ ಒಂದೇ ಗಳಿಗೆಯಲ್ಲಿ 4 ಉಪಗ್ರಗಳು ಆ ಸ್ಥಾನದ ಮೇಲ್ಮುಖವಾಗಿ ಗೋಚರಿಸುತ್ತವೆ. ಪ್ರತಿಯೊಂದು ಉಪಗ್ರಹ 1900 ಪೌಂಡ್ ಭಾರವಾಗಿದ್ದು ಏಳುವರೆ ವರ್ಷಗಳ ಕಾಲ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿವೆ. ಒಂದು ಪ್ರಧಾನ ನಿಯಂತ್ರಣ ಕೇಂದ್ರ, ನಾಲ್ಕು ಮಾನಿಟರ್ ಕೇಂದ್ರಗಳು ಮತ್ತು 3 ಅಪ್‌ಲೋಡ್ ಕೇಂದ್ರಗಳು, ಜಿ.ಪಿ.ಎಸ್.ನ ಸುಗಮ ಬಳಕೆಗಾಗಿ ಕಾರ್ಯನಿರ್ವಹಿಸುತ್ತಿವೆ. ದಿನದ 24 ಗಂಟೆಗಳಲ್ಲಿ ಭೂಕಕ್ಷೆಯಲ್ಲಿ ಲಭ್ಯವಿರುವ ಉಪಗ್ರಹಗಳ ಆಧಾರದ ಮೇಲೆ ಆ ಪ್ರದೇಶದ ಸ್ಥಾನಿಯ ಅಂಕಿ–ಅಂಶಗಳನ್ನು ಜಿ.ಪಿ.ಎಸ್. ಮುಖಾಂತರ ದಾಖಲಿಸಿ ಗಣಕಯಂತ್ರಕ್ಕೆ ವರ್ಗಾಯಿಸಿಕೊಳ್ಳಬಹುದು. ಜಿ.ಪಿ.ಎಸ್ ನಿಂದ ಮಾಹಿತಿ ಪಡೆಯಲು ಕನಿಷ್ಠ 3 ಉಪಗ್ರಹಗಳಾದರೂ ನಾವು ಇಚ್ಚಿಸುವ ಸ್ಥಾನದ ಕಕ್ಷೆಯಲ್ಲಿ ಖಚಿತವಾಗಿ ಲಭ್ಯವಿರಬೇಕು. ಹೀಗೆ ಕಕ್ಷೆಯಲ್ಲಿ ಕಂಡುಬರುವ ಉಪಗ್ರಹಗಳು ಆ ಸ್ಥಳದ ಎತ್ತರ ದಿಕ್ಕು, ಅಕ್ಷಾಂಶ ಮತ್ತು ರೇಖಾಂಶ, ಭೂಮಿಯ ಓರೆ ಇತ್ಯಾದಿಗಳನ್ನು ತರಂಗಗಳ ಮೂಲಕ (3ಡಿ ಆಯಾಮಗಳು) ಜಿ.ಪಿ.ಎಸ್. ಯಂತ್ರದಲ್ಲಿ ದಾಖಲಾಗುತ್ತದೆ. ನಮ್ಮ ಅನುಕೂಲಕ್ಕೆ ಹಾಗೂ ಉದ್ದೇಶಕ್ಕೆ ತಕ್ಕಂತೆ ವಿವಿಧ ಬಗೆಯ ಜಿ.ಪಿ.ಎಸ್. ಸೆಟ್ಸ್‌ಗಳನ್ನು ಬಳಸಬೇಕಾಗುತ್ತದೆ. ಇದು ಕೈಯಲ್ಲಿ ಹಿಡಿಯಬಹುದಾದ ಉಪಕರಣ, ಹಾಗೂ ಸಂಚಾರಿ ಉಪಕರಣ. ಸಮತಟ್ಟಾದ ಪ್ರದೇಶಗಳ ನಿಖರತೆಯನ್ನು ನೀಡುವುದರ ಜೊತೆಗೆ 24–50 ಮೀ ಎತ್ತರದ ನಿಖರತೆಯನ್ನು ಇದು ನೀಡುತ್ತದೆ. ಗ್ರಾಹಕ ತನಗೆ ಬೇಕಾದ ಮಾಹಿತಿಯನ್ನು ಪಡೆಯಲು ಇದು ತುಂಬಾ ಪ್ರಯೋಜನಕಾರಿಯಾದ ತಂತ್ರಜ್ಞಾನ. ಏಕೆಂದರೆ ಯಾವುದೇ ಹೊಸ ಸ್ಥಾನದ ಗುರುತನ್ನು ದಾಖಲಿಸಲು, ನೌಕಾಯಾನ, ವಿಮಾನಯಾನಗಳಲ್ಲಿ ಬಳಸಲು ಉಪಯುಕ್ತವೆನಿಸಿ ಈ ಮಾಧ್ಯಮ ನೇರವಾಗಿ ಉಪಗ್ರಹ ಮತ್ತು ಗ್ರಾಹಕನ ವ್ಯವಸ್ಥೆಯಾಗಿದ್ದು ಮೊದಲು ಪ್ರಧಾನ ಕೇಂದ್ರಕ್ಕೆ ತರಂಗಗಳನ್ನು ರವಾನಿಸಿ ನಂತರ ಉಪಗ್ರಹದ ಜೊತೆ ಸಂಪರ್ಕವನ್ನು ಕಲ್ಪಿಸಿ ನಂತರ ಪ್ರಧಾನ ನಿರ್ವಹಣಾ ಕೇಂದ್ರದಿಂದ ಗ್ರಾಹಕನಿಗೆ ಕ್ಷಣಾರ್ಧದಲ್ಲಿ ಮಾಹಿತಿಯನ್ನು ಪೂರೈಸುತ್ತದೆ. ಜಿ.ಪಿ.ಎಸ್. ಸಂಜ್ಞೆಗಳು ಎರಡು ರೀತಿಯಲ್ಲಿ ಹಂಚಿಕೆಯಾಗುತ್ತವೆ. (i) ತರಂಗಾಂತರ 1575.42 ಮೆಗಾಹರ್ಟ್ಸ್, ಲಿಂಕ್ –1 ಮತ್ತು (ii) ತರಂಗಾಂತರ 1227.60 ಮೆಗಾಹರ್ಟ್ಸ್: ಲಿಂಕ್–2. ಒಂದೇ ಬಾರಿಗೆ ಜಿ.ಪಿ.ಎಸ್. ಸಾಧನದಿಂದ ಮಾಹಿತಿ ಪಡೆಯಲು ಗ್ರಾಹಕನಿಗೆ ಕನಿಷ್ಠ 3 ಉಪಗ್ರಹಗಳು ತಮ್ಮ ಸ್ಥಾನದಲ್ಲಿ ಕಾರ್ಯನಿರ್ವಹಿಸಬೇಕು. ಏಕಕಾಲದಲ್ಲಿ 2 ಮೂಲ ಜಿ.ಪಿ.ಎಸ್. ಸ್ಥಾನ ನಿರ್ಧಾರಗಳಾಗುತ್ತವೆ. ಮೊದಲನೆಯದಾಗಿ ಏಕಬಿಂದು ಸ್ಥಾನ ನಿರ್ಧಾರ. ಏಕ ಅಥವ ಸರಳ ಬಿಂದು ಸ್ಥಾನ ನಿರ್ಧಾರವನ್ನು ಸ್ವಯಂಚಾಲಿತ ಅಥವಾ ಸಮಗ್ರ ಸ್ಥಾನ ನಿರ್ಧಾರ ಎಂದು ಕರೆಯಲಾಗುತ್ತದೆ. ಇದರಲ್ಲಿ ನಮಗೆ ತಿಳಿಯದೇ ಇರುವ ಸ್ಥಳದ ಬಿಂದುವನ್ನು

ನೇರವಾಗಿ ಭೂ ಕಕ್ಷೆಯಲ್ಲಿರುವ ಉಪಗ್ರಹದಿಂದ ಮಾಹಿತಿಯ ರೂಪದಲ್ಲಿ ಪಡೆಯಬಹುದಾಗಿದೆ. ಆದರೆ ರಿಲೇಟಿವ್ ಪೊಸಿಷನ್ನಿಂಗ್ (ಸಾಪೇಕ್ಷ ಸ್ಥಾನ ನಿರ್ಧಾರದಲ್ಲಿ) ತಿಳಿಯದೆ ಇರುವ ಸ್ಥಳಗಳ ಬಿಂದುಗಳನ್ನು ನಾವು ಪ್ರಧಾನ ಕೇಂದ್ರದಿಂದ ಪಡೆಯಬಹುದು.

ಜಿ.ಪಿ.ಎಸ್. ಸ್ಥಾನವನ್ನು 2 ರೀತಿಯಲ್ಲಿ ವಿಂಗಡಿಸಲಾಗಿದೆ. ತಟಸ್ಥ ಮತ್ತು ಸಂಚಾರಿ. ಸ್ಥಾನ ನಿರ್ಧಾರದಲ್ಲಿನ ವ್ಯವಸ್ಥೆಯಲ್ಲಿ 2 ರಿಸೀವರ್ ಇರುತ್ತವೆ. ಒಂದು ಪ್ರಧಾನ ನಿಯಂತ್ರಣ ಕೇಂದ್ರದ ಜೊತೆ ಸಂಪರ್ಕವೇರ್ಪಡಿಸಿದರೆ, ಮತ್ತೊಂದು ಗ್ರಾಹಕ ಸಂಚರಿಸುವ ವಸ್ತುವಿನ ಜೊತೆ ಸಂಪರ್ಕವನ್ನು ಪಡೆದಿರುತ್ತದೆ. ಏಕ ಅಥವಾ ಸರಳ ಜಿ.ಪಿ.ಎಸ್.ನಿಂದ 40–100 ಮೀ ದೂರದವರೆಗಿನ ಸ್ಥಾನಿಯ ಅಂಶಗಳನ್ನು ಸ್ಪಷ್ಟವಾಗಿ ಪಡೆಯಬಹುದು.

ಜಿ.ಪಿ.ಎಸ್. ಉಪಕರಣಗಳನ್ನು ಅನೇಕ ಕಂಪನಿಗಳು ತಯಾರಿಸುತ್ತಿವೆ. ಅವುಗಳಲ್ಲಿ ಪ್ರಮುಖವಾದ ಕಂಪನಿಗಳೆಂದರೆ ಟ್ರಿಂಬಲ್, ಮ್ಯಾಗೆಲ್ಲನ್, ಸೋಕಿಯ, ಈಗಲ್ ಮುಂತಾದವು. ಈ ಕಂಪೆನಿಯ ಹ್ಯಾಂಡ್ ಸೆಟ್‌ಗಳನ್ನು ನಾವು ಗೋಳದ ವಾಸ್ತವ ಅಂಕಿ–ಅಂಶಗಳನ್ನು ಪಡೆಯಲು – ರಸ್ತೆ, ಹೊಸ ಮಾರ್ಗಗಳ ಕಾಮಗಾರಿ, ನಕ್ಷಾ ತಯಾರಿಕೆ, ತೋಟಗಾರಿಕೆ, ಅತಿಕ್ರಮಣ ಪ್ರದೇಶ, ಕಾಡ್ಗಿಚ್ಚು ಮುಂತಾದವುಗಳನ್ನು ಕಂಡು ಹಿಡಿಯಲು ಬಳಸಬಹುದಾಗಿದೆ. ಅಲ್ಲದೆ ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ಜಿಲ್ಲಾ ಕೇಂದ್ರವನ್ನು ಸಂಪರ್ಕಿಸುವಂತೆ ಸಂಪರ್ಕ ಜಾಲ ವ್ಯವಸ್ಥೆ ಕಲ್ಪಿಸಬಹುದಾಗಿದೆ.

ಜಿ.ಪಿ.ಎಸ್. ವ್ಯವಸ್ಥೆಯನ್ನು ಈ ಕೆಳಕಂಡ ವಲಯಗಳಲ್ಲಿ ಪ್ರಮುಖವಾಗಿ ಬಳಸಬಹುದಾಗಿದೆ.

1. ಜಿಯೋಡೆಸಿ: ಜಿ.ಪಿ.ಎಸ್. ಜಿಯೋಡೆಸಿ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖವಾದುದು. ಗೋಳಾಕಾರದ ಭೂ ಮೇಲ್ಮೈನ ಸ್ವರೂಪದ ಅಳತೆಗೆ ಇದು ಸೂಕ್ತ. ಒಂದು ಮೀಟರ್‌ಗಿಂತಲೂ ಕಡಿಮೆ ಅಂತರವನ್ನು ನಿಖರವಾಗಿ ಇದರ ಮುಖಾಂತರ ಅಳತೆ ಮಾಡಬಹುದು. ಅಲ್ಲದೆ ಸಾಗರ ತೀರಪ್ರದೇಶಗಳನ್ನು ಅಳೆಯಬಹುದು.

2. ಹವಾಗುಣ : ವಾಯುಮಂಡಲದ ಮೂಲ ಘಟಕಗಳಾದ ತೇವಾಂಶ, ಹವೆ, ಒತ್ತಡ, ಗಾಳಿಯ ದಿಕ್ಕು, ಸಮುದ್ರ ಲಕ್ಷಣ ಹವಾಮಾನದ ಬದಲಾವಣೆ, ಮುನ್ಸೂಚನೆ, ಮುಂತಾದವುಗಳ ಅಧ್ಯಯನದಲ್ಲಿ ಹವಮಾನ ಇಲಾಖೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

3. ವಾಯು ಸಂಚಾರ ಸುರಕ್ಷತೆ: ವಾಯುಯಾನ ಸಾರಿಗೆಯಲ್ಲಿ ಸುರಕ್ಷತೆಯ ದೃಷ್ಟಿಯಿಂದ, ವಿಮಾನಗಳ ಹಾರಾಟದ ದಿಕ್ಕು, ವೇಗ, ಎತ್ತರ ಮುಂತಾದವುಗಳನ್ನು ಕಂಡುಹಿಡಿಯಲು ಮತ್ತು ನಿರ್ದೇಶಿಸಲು ಬಳಸಲಾಗುತ್ತಿದೆ.

4. ವ್ಯವಸಾಯ ಕ್ಷೇತ್ರ: ಜಿ.ಪಿ.ಎಸ್. ತಂತ್ರಜ್ಞಾನದಿಂದ ಪ್ರದೇಶದಲ್ಲಿ ವಿವಿಧ ಬೆಳೆಗಳ ಕ್ಷೇತ್ರ, ಗೊಬ್ಬರಗಳ ಸಮರ್ಪಕ ವಿತರಣೆ, ಕೀಟನಾಶಕ, ಕಳೆ ನಾಶಕಗಳ ಸಿಂಪರಣೆ ಮುಂತಾದ ಕಾರ್ಯವನ್ನು ನಿರ್ವಹಿಸಲು ದೂರ ಸಂವೇದಿ ಉಪಗ್ರಹದ ಜೊತೆಗೆ ಬಳಸಬಹುದಾಗಿದೆ. ಅಂದರೆ ಕೃಷಿ ಪ್ರದೇಶಗಳನ್ನು ಗ್ರಿಡ್ ಅಥವ ಜಾಲವ್ಯೂಹ, ಚೌರಸ ವಿನ್ಯಾಸದಲ್ಲಿಯು ಸಹ ಜಿ.ಐ.ಎಸ್. ಜೊತೆಗೆ ಜಿ.ಪಿ.ಎಸ್. ಬಳಸಬಹುದಾಗಿದೆ, ಭೂ ಬಳಕೆ, ಬೆಳೆಗಳ ಉತ್ಪಾದನೆ, ನಕ್ಷೆಗಳ ತಯಾರಿಕೆಯಲ್ಲಿ ಇದರ ಪಾತ್ರ ಪ್ರಮುಖ.

5. ಸೆಲ್ಲುಲಾರ್ ಸರ್ವಿಸಸ್: ಸಂಚಾರಿ ದೂರವಾಣಿ ಸೇವೆಯಲ್ಲಿ ಇದರ ಬಳಕೆ ಹೆಚ್ಚಾಗಿದೆ. ಪ್ರಪಂಚದ ಶೇ. 95ರಷ್ಟು ಮೊಬೈಲ್ ಸೇವೆ ಜಿ.ಪಿ.ಎಸ್ ವ್ಯವಸ್ಥೆಯಿಂದ ನಿಯಂತ್ರಿತವಾಗಿದೆ. ಪ್ರಮುಖವಾಗಿ ಅಗ್ನಿಶಾಮಕಗಳು, ಆಸ್ಪತ್ರೆ, ಸಾರಿಗೆ–ಸಂಪರ್ಕದಲ್ಲಿ ಇದರ ಸೇವೆ ಹೆಚ್ಚಾಗಿದೆ.

6. ಮೊಬೈಲ್ ಬೇಸ್ಡ್ ಅಪ್ಲಿಕೇಶನ್: ಸಂಚಾರಿ ವ್ಯವಸ್ಥೆಯಲ್ಲಿ ಇದರ ಬಳಕೆ ಅವಿಸ್ಮರಣೀಯ, ಜನಸಂದಣಿ ಪ್ರದೇಶವನ್ನು ಗುರುತಿಸಲು ಅಪಘಾತ ವಲಯಗಳ ಗುರುತಿಸುವಿಕೆ, ವಾಹನಗಳ ವೇಗ ನಿಯಂತ್ರಣ ಮೊದಲಾದ ವಿಭಾಗಗಳಲ್ಲಿ ಜಿ.ಪಿ.ಎಸ್. ಸೇವೆ ಅಮೆರಿಕದಲ್ಲಿ ಅಧಿಕವಾಗಿ ಕಂಡುಬರುತ್ತಿದೆ.

7. ತೆರೆದ ಗಣಿಗಾರಿಕೆ: ತುಂಬಾ ಅಪಾಯಕಾರಿಯಾದ ಗಣಿಕೆಲಸದಲ್ಲಿ ಮಾನವನ ಬದಲಿಗೆ ಯಂತ್ರಮಾನವರ ಮೂಲಕ ಗಣಿಕೆಲಸ ನಿರ್ವಹಿಸಲು ಜಿ.ಪಿ.ಎಸ್. ಅನ್ನು ಬಳಸಲಾಗುತ್ತಿದೆ.

8. ಹಿಮ ಹೊದಿಕೆ ಪ್ರದೇಶಗಳ ಸ್ವಯಂಚಾಲಿತ ತೆರವು ಕಾರ್ಯದಲ್ಲಿ ಇದರ ಬಳಕೆ ಹೆಚ್ಚು. ಸದಾ ಹಿಮ ಸುರಿಯುವ ಪ್ರದೇಶಗಳ ರಸ್ತೆಗಳನ್ನು ಹಿಮದಿಂದ ಬೇರ್ಪಡಿಸಿ ಸಂಚಾರ ಸುಗಮಗೊಳಿಸುವಲ್ಲಿ ಇದರ ಪಾತ್ರ ಅವಿಸ್ಮರಣೀಯ.

9. ಮಕ್ಕಳ ಸುರಕ್ಷತೆ: ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಇದು ಪ್ರಮುಖವಾದುದು. ಅಂದರೆ ಕೈಗಡಿಯಾರದಲ್ಲಿ ಜಿ.ಪಿ.ಎಸ್. ಉಪಕರಣ ಅಳವಡಿಸಿ ಬಳಸುವುದರಿಂದ ಮಕ್ಕಳ ಅಪಹರಣ ಅಥವಾ ಅವರ ಹವ್ಯಾಸಗಳನ್ನು ಗಮನಿಸಬಹುದು.

10. ಸುರಕ್ಷೆ ಮತ್ತು ಸೇವೆಗಳಲ್ಲಿ: ಜಿ.ಪಿ.ಎಸ್. ಉಪಕರಣ ಅಳವಡಿಸಿದ ವಾಹನಗಳನ್ನು ಸ್ಥಳದಿಂದಲೇ ನಿರ್ದೇಶಿಸಬಹುದು. ಸರಕು ಸೇವೆಗಳು ತಲುಪಬೇಕಾದ ಸ್ಥಳದ ಮಾಹಿತಿಯನ್ನು ಪೂರೈಕೆ ಮಾಡುವುದರ ಮೂಲಕ ನಿಖರವಾಗಿ ತಲುಪಿಸಬಹುದು.

11. ಉಪಗ್ರಹ ನಿಯಂತ್ರಣ: ಉಪಗ್ರಹ ಚಾಲನೆ ಅದರ ದೋಷಗಳ ಪತ್ತೆ ಹಚ್ಚುವಿಕೆಯಲ್ಲಿಯು ಇದನ್ನು ಬಳಸುವರು.

ಮೋಜಿಣಿ ಕಾರ್ಯದಲ್ಲಿ ಜಿ.ಪಿ.ಎಸ್. ಬಳಕೆ: ಮೋಜಿಣಿ ಕಾರ್ಯದಲ್ಲಿ (ನಕ್ಷೆಗಳ ತಯಾರಿಕೆಯಲ್ಲಿ) ಆಧುನಿಕ ಕ್ರಾಂತಿ ಎಂದರೆ ಜಿ.ಪಿ.ಎಸ್. ಉಪಕರಣಗಳ ಬಳಕೆ. ನಾನಾವಿಧದ ನಕ್ಷೆಗಳನ್ನು ತಯಾರಿಸಲು, ಭೂ ಮೇಲ್ಮೈ ಸ್ವರೂಪ ಪ್ರದೇಶಗಳ ಆಕಾರ ಮತ್ತು ಅಳತೆ, ಭೂ ಮಾಪನ, ಮುಂತಾದವುಗಳಲ್ಲಿ ಇದು ತಂಬಾ ಪರಿಣಾಮಕಾರಿಯಾದ ಸಾಧನವಾಗಿ ಬಳಕೆಯಲ್ಲಿದೆ. ಪ್ರತಿಯೊಂದು ಸ್ಥಳದ ಅಕ್ಷಾಂಶ, ರೇಖಾಂಶ, ದಿಕ್ಕು, ವಿಸ್ತೀರ್ಣ, ಅಳತೆ, ಎತ್ತರ ಮುಂತಾದವುಗಳನ್ನು ನಿಖರವಾಗಿ ಕಂಡುಹಿಡಿಯಲು ಇದು ಪ್ರಮುಖ ಸಾಧನವಾಗಿದೆ. ಕಕ್ಷೆಯಲ್ಲಿ ಕನಿಷ್ಠವಾಗಿ 3 ಉಪಗ್ರಹಗಳ ಲಭ್ಯವಿದ್ದರೆ ಕಾರ್ಯನಿರ್ವಹಿಸಲು ಸುಲಭ. ಅಂದರೆ ನಾವು ಭೂಮಾಪನ ಅಥವ ಮೋಜಿಣಿ ಮಾಡಬೇಕಾದ ಪ್ರದೇಶದ ಅಳತೆಯನು ನಿಖರವಾಗಿ ಗುರುತಿಸಬಹುದು. ಹಿಂದಿನ ಕಾಲದಲ್ಲಿ ಸರಪಳಿ, ಕಂಪಾಸ್ ಮೋಜಿಣೀಕಾರ್ಯಕ್ಕೆ ಪ್ರಮುಖವಾದ ಸಾಧನಗಳಾಗಿದ್ದವು. ಆದರೆ ಜಿ.ಪಿ.ಎಸ್. ಬಳಕೆಯಿಂದ ಇಂದು ಉತ್ಕೃಷ್ಠ ಫಲಿತಾಂಶಗಳನ್ನು ಪಡೆಯಬಹುದಾಗಿದೆ. ಮೊದಲು ಮೋಜಿಣಿದಾರ ತಾನು ಮೋಜಿಣಿ ಮಾಡಬೇಕಾದ ಪ್ರದೇಶದ ಗುರುತನ್ನು ಮಾಡಿ ಅವುಗಳ ಗಡಿಯನ್ನು ಗುರ್ತಿಸಿ ಅಳತೆಯನ್ನು ಪಡೆದು ಲೆಕ್ಕಾಚಾರ ಮಾಡಿ, ಪಟ್ಟಿಗಳು, ಕೋಷ್ಟಕಗಳು, ಪೃಥಕ್ಕರಣ ಮಾಡಿ ಲಾಗ್ ಟೇಬಲ್ಸ್‌ಗಳನ್ನು ಬಳಸಿ ಶ್ರಮವಹಿಸಿ ಕಾಲ ವ್ಯಯಿಸಿ ಮೋಜಿಣಿಕಾರ್ಯ ನಿರ್ವಹಿಸಿದಾಗಲೂ ಸಹ ಕೆಲವು ನ್ಯೂನತೆಗಳು ಕಂಡು ಬರುತ್ತಿದ್ದವು. ಆದರೆ ಇಂದು ಜಿ.ಪಿ.ಎಸ್. ಬಳಕೆಯಿಂದ ಸಮಯ, ವೆಚ್ಚ, ನಿಖರತೆ, ಉತ್ಕೃಷ್ಠತೆ ಮುಂತಾದವುಗಳನ್ನು ಜಿ.ಪಿ.ಎಸ್. ವ್ಯವಸ್ಥೆಯ ಮೋಜಿಣಿಕಾರ್ಯದಿಂದ ಸುಲಭವಾಗಿ ಪಡೆಯಬಹುದು.

1960ರ ದಶಕದಿಂದಲೂ ವೈಮಾನಿಕ ಛಾಯ ಚಿತ್ರಗಳಿಂದ ಮಾಹಿತಿಗಳನ್ನು ಪಡೆದು ನಕ್ಷೆಗಳ ತಯಾರಿಕೆಗೆ ಬಳಸುತ್ತಿದ್ದಾರೆ. ಈ ವಿಧಾನದಿಂದ ಶೀಘ್ರವಾಗಿ ಮತ್ತು ನಿಖರವಾಗಿ ವೋಜಿಣಿ ವಾಡಲಾಗುತ್ತಿದೆ. ಆದರೂ ವಿವಾನಗಳನ್ನು ಚಾಲಕರೆ ನಿರ್ವಹಿಸಬೇಕಾಗಿರುವುದರಿಂದ ವಿಮಾನದ ದಿಕ್ಕು ಮತ್ತು ಭೂಸ್ಥಾನಿಕ ಅಂಶಗಳಲ್ಲಿ ಕೆಲವೊಂದು ದೋಷಗಳು ವೈಮಾನಿಯ ಛಾಯ ಚಿತ್ರಗಳಲ್ಲಿ ಕಂಡುಬರುತ್ತಿದ್ದವು. ಅಷ್ಟೇ ಅಲ್ಲದೆ ಭೂ ನಿಯಂತ್ರಣ ಕೇಂದ್ರ ಹಾಗೂ ಸ್ಥಾನಗಳನ್ನು ನಿರ್ಧರಿಸಲು ಛಾಯಾಚಿತ್ರ ವಿಧಾನವನ್ನು ಬಳಸಿ ನಿಖರತೆಯನ್ನು ಪಡೆದುಕೊಳ್ಳುತ್ತಿದ್ದರು. ಜಿ.ಪಿ.ಎಸ್. ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯ ಬಳಕೆಯಿಂದಾಗಿ ಭೂ ನಿರ್ದೇಶಾಂಕ ಬಿಂದು ಅಥವ ಭೂ ನಿಯಂತ್ರಣ ಬಿಂದುವನ್ನು ಗುರ್ತಿಸಲು ಸುಲಭ ಹಾಗೂ ಹೆಚ್ಚು ನಿಖರತೆಯನ್ನು ಒಳಗೊಂಡಿರುತ್ತದೆ. ಮೋಜಿಣಿಯಲ್ಲಿ ಇತ್ತೀಚಿನ ತಂತ್ರಜ್ಞಾನದ ಬಳಕೆ ಎಂದರೆ ವೈಮಾನಿಕ ಅಥವಾ ವಿಮಾನದಲ್ಲಿ ಸ್ವಯಂಚಾಲಿತ ಜಿ.ಪಿ.ಎಸ್. ಉಪಕರಣವನ್ನು ಬಳಸುತ್ತಿರುವುದು. ಈ ವಿಧಾನದಲ್ಲಿ–ತೆರೆದಿಡುವ ವೇಳೆ, ತೆರೆದ ಸ್ಥಾನ ಮತ್ತು ವಿಮಾನದ ಪಥ ಇವುಗಳನ್ನು ನಿಖರವಾಗಿ ಗಣಕಯಂತ್ರ ನಿಯಂತ್ರಣ ವ್ಯವಸ್ಥೆಗೆ ಒಳಪಡಿಸಿರುತ್ತಾರೆ. ಹೀಗಾಗಿ ವೈಮಾನಿಕ ಭೂ ಛಾಯ ಚಿತ್ರಗಳು ಗುಣಾತ್ಮಕವಾಗಿ ಲಭ್ಯವಾಗುತ್ತಿವೆ.

ಅತಿ ಚಿಕ್ಕ, ಸೂಕ್ಷ್ಮ ಪ್ರದೇಶಗಳು, ದುರ್ಗಮ ಪ್ರದೇಶ, ಅರಣ್ಯ ಪ್ರದೇಶಗಳಲ್ಲಿ ಮೋಜಿಣಿಕಾರ್ಯ ಕಷ್ಟಸಾಧ್ಯ. ಭಾರತದಲ್ಲಿ ಅರಣ್ಯ ವಲಯಗಳನ್ನು ಗುರುತಿಸಲು ಒಂದು ನಿರ್ಧರಿತ ಕೇಂದ್ರ ಅಥವಾ ಗಡಿಸ್ತಂಭವನ್ನು ದಿಕ್ಸೂಚಿ ಅಥವಾ ಕಾಂತ ಸೂಚಿ ಮತ್ತು ದೂರವನ್ನು ಆಧಾರವಾಗಿ ಪರಿಗಣಿಸುತ್ತವೆ. ಇತರ ಗಡಿಸ್ತಂಭಗಳನ್ನು ಮೊದಲಿನ ಗಡಿಸ್ತಂಭದ ಆಧಾರದ ಮೇಲೆ ಸರಪಳಿ ಮತ್ತು ಕಂಪಾಸ್‌ದಿಂದ ಗುರ್ತಿಸಲು ಕಷ್ಟ ಸಾಧ್ಯವಾಗುತ್ತಿತ್ತು.

ಅರಣ್ಯಗಳನ್ನು ಮೋಜಿಣಿ ಮಾಡಲು ಹಲವಾರು ಅಡೆತಡೆಗಳನ್ನು ಮೋಜಿಣಿದಾರ ಎದುರಿಸಬೇಕಾಗುತ್ತಿತ್ತು.

ಅ) ಮೊದಲನೆಯ ಗಡಿಸ್ತಂಭವನ್ನು ಸ್ಥಾಪಿಸಲು ಹೆಚ್ಚಿನ ವೇಳೆ ಮತ್ತು ಪರಿಶ್ರಮದ ಅಗತ್ಯತೆ ಹೆಚ್ಚಾಗಿತ್ತು.

ಆ) ಅನಂತರದ ಗಡಿಸ್ತಂಭಗಳನ್ನು ಸರಿಯಾದ ಸ್ಥಳದಲ್ಲಿ ಸ್ಥಾಪಿಸಲು ಸರಪಳಿ ಹಾಗು ಕಂಪಾಸ್ ಅನ್ನು ಬಳಸುತ್ತಿದ್ದರೂ ಬೆಟ್ಟಗುಡ್ಡ ಪ್ರದೇಶ, ಕಣಿವೆ ಮುಂತಾದ ಪ್ರದೇಶಗಳಲ್ಲಿ ದೂರವನ್ನು ನಿಖರವಾಗಿ ಅಳೆಯಲು ಆಗದು.

ಇ) ಸರಪಳಿ ಮತ್ತು ಕಂಪಾಸ್ ಮೋಜಿಣಿಯಲ್ಲಿ ಹಲವಾರು ಲೋಪದೋಷಗಳು ಇರುವುದರಿಂದ ಕನಿಷ್ಠ 5 ರಿಂದ 15 ಸೆಂಮೀ ವ್ಯತ್ಯಾಸಗಳು ಕೋನ ಮಾಪಕದಲ್ಲಿ ಗೋಚರಿಸುತ್ತಿದ್ದವು.

ಈ ಮೇಲ್ಕಾಣಿಸಿದ ಲೋಪಗಳಿಂದ ಹೊರಬರಲು ಜಿ.ಪಿ.ಎಸ್. ಮೋಜಿಣಿಯು ಒಂದು ಪರ್ಯಾಯ ವ್ಯವಸ್ಥೆಯಾಗಿದ್ದು ತುಂಬಾ ಸರಳ, ಶೀಘ್ರ, ಹಾಗೂ ಕರಾರುವಾಕ್ಕಾಗಿ ಹಾಗೂ ಕೆಲವೇ ಸೆಂಮೀ ಗಳಷ್ಟು ಅಂತರದ ಪ್ರದೇಶವನ್ನು ಸಹಾ ಸ್ಪಷ್ಟವಾಗಿ ಅಳತೆ ಮಾಡಬಹುದಾಗಿದೆ. ಜಿ.ಪಿ.ಎಸ್. ಮೋಜಿಣಿಯು ಭೂಭಾಗ, ಜಲಭಾಗಗಳು, ಹವಾಮಾನದ ವೈಪರಿತ್ಯ ಮುಂತಾದವುಗಳನ್ನು ತಿಳಿಯಲು ಹೆಚ್ಚಿನ ಅನುಕೂಲತೆಯನ್ನು ಹೊಂದಿದೆ. (ಸಿ.ಎಂ.)

**ಜಾಗತೀಕರಣ:** 20ನೆಯ ಶತಮಾನದ ಅಂತ್ಯಭಾಗದಲ್ಲಿ ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ಉಂಟಾದ ಹೊಸ ಬದಲಾವಣೆ (ಗ್ಲೋಬಲೈಸೇಷನ್).

ಭೌತಿಕವಾಗಿ, ನ್ಯಾಯಯುತವಾಗಿ, ಸಾಂಸ್ಕೃತಿಕವಾಗಿ ಮತ್ತು ಮಾನಸಿಕವಾಗಿ ಜನರು ಒಂದೇ ಜಗತ್ತಿನಲ್ಲಿ,ವ್ಯವಹರಿಸುವುದನ್ನು ಜಾಗತೀಕರಣ ಎಂದು ಕರೆಯಬಹುದಾಗಿದೆ. ಜಾಗತೀಕರಣ ಹಲವಾರು ಕ್ಷೇತ್ರಗಳಲ್ಲಿ ಉಂಟಾಗಿರುವುದನ್ನು ಕಾಣಬಹುದಾಗಿದೆ. ಆರ್ಥಿಕ ಕ್ಷೇತ್ರದಲ್ಲಿ ನೋಡುವುದಾದರೆ ಅಮೆರಿಕ ಸಂಯುಕ್ತ ಸಂಸ್ಥಾನ, ಜರ್ಮನಿ, ಚೀನ ಮುಂತಾದ ದೇಶಗಳಲ್ಲಿ ಉತ್ಪಾದನೆಯಾದ ಹಲವಾರು ವಸ್ತುಗಳು ಪ್ರಪಂಚದಾದ್ಯಂತ ಮಾರುಕಟ್ಟೆ ಸೌಲಭ್ಯವನ್ನು ಪಡೆದುಕೊಂಡಿವೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೇಳುವುದಾದರೆ ಅಮೆರಿಕದ ಡಾಲರ್, ಯುರೋಪಿಯನ್ ಒಕ್ಕೂಟದ ಯುರೋಡಾಲರ್ ಮತ್ತು ಇಂಗ್ಲೆಂಡ್‌ನ ಪೌಂಡ್ ಪ್ರಪಂಚದಾದ್ಯಂತ ಚಲಾವಣೆಯಲ್ಲಿವೆ. ಕೈಗಾರಿಕಾ ಕ್ಷೇತ್ರದಲ್ಲಿ ಉಂಟಾಗಿರುವ ಜಾಗತೀಕರಣವನ್ನು ತಿಳಿಯಪಡಿಸುವುದಾದರೆ ಕೆಲವೇ ಕೆಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಯಾರಿಸುವ ಕೈಗಾರಿಕೋತ್ಪನ್ನಗಳು ಜಗತ್ತಿನ ಮೂಲೆ ಮೂಲೆಗಳಲ್ಲಿ ದೊರೆಯುತ್ತಿರುವುದನ್ನು ಕಾಣಬಹುದಾಗಿದೆ. ವೈದ್ಯಕೀಯ ಕ್ಷೇತ್ರದ ಜಾಗತೀಕರಣ ಅತ್ಯಂತ ಉಪಯುಕ್ತವಾದುದು ಮತ್ತು ಪ್ರಮುಖವಾದುದು. ಜೀವ ರಕ್ಷಕ ಔಷಧಿಗಳೂ ಪಾಶ್ಚಿಮಾತ್ಯ ರಾಷ್ಟ್ರಗಳು ಸಂಶೋಧಿಸಿದ್ದರೂ ಇಡೀ ಪ್ರಪಂಚವೇ ಈ ಔಷಧಿಗಳನ್ನು ಉಪಯೋಗಿಸುತ್ತಿದ್ದು ಜನರ ಆರೋಗ್ಯದಲ್ಲಿ ಒಂದು ದೊಡ್ಡ ಕ್ರಾಂತಿಯೇ ನಡೆಯುತ್ತಿದೆ.

ಜಾಗತೀಕರಣದ ಪ್ರಾರಂಭಿಕ ಹಂತವನ್ನು ಹುಡುಕುತ್ತಾ ಹೋದರೆ ಅದರ ಇತಿಹಾಸ ಮಿಲಿಯನ್ ವರ್ಷದಷ್ಟು ಹಿಂದಕ್ಕೆ ಹೋಗುತ್ತದೆ. ಅರ್ಥಶಾಸ್ತ್ರಜ್ಞರ ಮತ್ತು ಆರ್ಥಿಕ ಭೂಗೋಳ ವಿಜ್ಞಾನಿಗಳ ಪ್ರಕಾರ ಸು. 10 ಸಾವಿರ ವರ್ಷಗಳ ಹಿಂದೆ ಮಾನವನು ಆಫ್ರಿಕದಿಂದ ವಲಸೆಯ ಪ್ರಾರಂಭವೇ ಜಾಗತೀಕರಣದ ಮೊದಲ ಹಂತವಾಗಿದೆ. 15ನೆಯ ಶತಮಾನದಲ್ಲಿ ಉಂಟಾದ ಭೌಗೋಳಿಕ ಅನ್ವೇಷಣೆ ಮತ್ತು ಹೊಸ ಭೂಖಂಡಗಳನ್ನು ಬೆಳಕಿಗೆ ತಂದದ್ದು ಜಾಗತೀಕರಣದ ಪ್ರಮುಖ ಘಟ್ಟವಾಗಿದೆ. 19ನೆಯ ಶತಮಾನದಲ್ಲಿ ಯುರೋಪಿನ ರಾಷ್ಟ್ರಗಳಿಂದ ಉಂಟಾದ ವಸಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಧೋರಣೆ ಜಾಗತೀಕರಣ ವೇಗವಾಗಿ ತನ್ನ ಪ್ರಭಾವವನ್ನು ಬೀರಲು ಸಾಕಷ್ಟು ಸಹಾಯ ಮಾಡಿತು. 20ನೆಯ ಶತಮಾನದ ಅಂತ್ಯ ಭಾಗದಲ್ಲಿ ಉಂಟಾದ ಸಂಪರ್ಕ ಕ್ರಾಂತಿ ಮತ್ತು ಮಾಹಿತಿ ಹಾಗೂ ತಂತ್ರಜ್ಞಾನದ ಕ್ರಾಂತಿ ಜಾಗತೀಕರಣ ಜಗತ್ತಿನಾದ್ಯಂತ ಪ್ರಸರಣವಾಗಲು ಪ್ರಮುಖ ಕಾರಣವಾಯಿತು.

ಜಾಗತೀಕರಣ ಹೇಗೆ ಉಂಟಾಯಿತು ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಸುಲಭದ ಕೆಲಸವಲ್ಲ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರಗಳಾದ ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಗ್ರೇಟ್ ಬ್ರಿಟನ್ ಮತ್ತು ಪಶ್ಚಿಮ ಯುರೋಪಿನ ರಾಷ್ಟ್ರಗಳು ಜಾಗತೀಕರಣದ ಹಿಂದಿರುವ ಪ್ರಮುಖ ಶಕ್ತಿಗಳು. ಆಧುನಿಕ ತಂತ್ರಜ್ಞಾನದ ಆವಿಷ್ಕಾರ ಮತ್ತು ಅದು ಪ್ರಪಂಚದ ಎಲ್ಲಾ ಭಾಗಗಳಿಗೂ ಹರಡಿರುವುದು ಜಾಗತೀಕರಣದ ಹಿಂದಿರುವ ಮತ್ತೊಂದು ಪ್ರಮುಖ ಶಕ್ತಿಯಾಗಿದೆ. ಇದರ ಜೊತೆಗೆ, ಬೆಳೆಯುತ್ತಿರುವ ಆಧುನಿಕತೆ, ಜನರ ಜೀವನ ಶೈಲಿಯಲ್ಲಿ ಆಗುತ್ತಿರುವ ಬದಲಾವಣೆಗಳು, ಲೌಕಿಕ ಜೀವನಕ್ಕೆ ಹೆಚ್ಚುತ್ತಿರುವ ಪ್ರಾಮುಖ್ಯತೆ ಮುಂತಾದವುಗಳು ಜಾಗತೀಕರಣದ ಹಿಂದಿರುವ ಶಕ್ತಿಗಳೆಂದು ಪರಿಗಣಿಸಲಾಗಿದೆ.

ಜಾಗತೀಕರಣದ ಪರಿಣಾಮ : ಸಾಮಾಜಿಕವಾಗಿ, ಆರ್ಥಿಕವಾಗಿ, ಭೌಗೋಳಿಕವಾಗಿ ಮತ್ತು ಧಾರ್ಮಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸುವುದಾದರೆ ಈ ಬದಲಾವಣೆಗಳಲ್ಲಿ ಜಾಗತೀಕರಣದ ಪ್ರಭಾವ ಎದ್ದು ಕಾಣುತ್ತದೆ.

ಆರ್ಥಿಕ ಕ್ಷೇತ್ರದಲ್ಲಿ ಜಾಗತೀಕರಣವು ಬೇಡಿಕೆ, ಉತ್ಪಾದನೆ, ವಿತರಣೆ, ಅನುಭೋಗ ಸಂಘಟನೆ ಮುಂತಾದವುಗಳನ್ನು ಬದಲಾಯಿಸುವತ್ತ ಸಾಗಿದೆ. ಈಗಾಗಲೇ ಹಲವಾರು ಉತ್ಪಾದನಾ ಘಟಕಗಳು ಗೋ ಗ್ಲೋಬಲ್ ಎಂಬ ಘೋಷಣೆಯೊಂದಿಗೆ ಕೆಲಸ ಮಾಡುತ್ತಿವೆ. ಹಲವಾರು ಸಂಸ್ಥೆಗಳು ಒಂದು ಗೂಡಿ ಒಂದೇ ಕಂಪನಿಯ ಹೆಸರಿನಲ್ಲಿ ಕೆಲಸ ನಿರ್ವಹಿಸುತ್ತಿವೆ. ಉದಾ : ಪ್ರಪಂಚದ ಅತೀದೊಡ್ಡ ಉಕ್ಕು ತಯಾರಿಕಾ ಕಂಪನಿಯ ಮಾಲೀಕರಾದ ಲಕ್ಷ್ಮೀ ಮಿತ್ತಲ್ 2006ರ ಜೂನ್ ತಿಂಗಳಲ್ಲಿ ಯುರೋಪಿನ ಅತಿ ದೊಡ್ಡ ಕಂಪನಿಯಾದ ಆರ್ಸೆಲರ್‌ನ್ನು ತನ್ನ ಜೊತೆ ವಿಲೀನಗೊಳಿಸಿಕೊಂಡರು. ಇದು ಜಾಗತೀಕರಣದ ಮತ್ತೊಂದು ಮುಖವಾಗಿದೆ.

ರಾಜಕೀಯ ಕ್ಷೇತ್ರದಲ್ಲಿ ಜಾಗತೀಕರಣದ ಪ್ರಭಾವ ಅತ್ಯಂತ ಹೆಚ್ಚಾಗಿದ್ದು ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದೆ. ರಾಜ್ಯಗಳ ನಡುವೆ ಹಾಗೂ ರಾಷ್ಟ್ರಗಳ ನಡುವೆ ಇರುವ ಕಾನೂನು ಮತ್ತು ರಾಜಕೀಯ ಅಡೆತಡೆಗಳನ್ನು ಜಾಗತೀಕರಣ ಹೊಗಲಾಡಿಸುತ್ತಿದೆ. ಇದರ ಪ್ರಭಾವದಿಂದಾಗಿ ಪಶ್ಚಿಮ ಯುರೋಪಿನ ರಾಷ್ಟ್ರಗಳೆಲ್ಲಾ ಒಂದಾಗಿ ಯುರೋಪಿಯನ್ ಒಕ್ಕೂಟವನ್ನು ರಚಿಸಿಕೊಂಡಿದ್ದಾರೆ. ಇದೇ ರೀತಿ ಆಸಿಯಾನ್, ಸಾರ್ಕ್ ಮುಂತಾದವು ರಾಜಕೀಯ ಎಲ್ಲೆಯನ್ನು ದಾಟಿ ಪ್ರಪಂಚದಾದ್ಯಂತ ಕೆಲಸ ನಿರ್ವಹಿಸುತ್ತಿವೆ. ಈ ರೀತಿಯ ರಾಜಕೀಯ ಜಾಗತೀಕರಣ, ರಾಷ್ಟ್ರಗಳ ಸಾರ್ವಭೌಮತ್ವ, ಪರಮಾಧಿಕಾರ, ಪ್ರಜಾಪ್ರಭುತ್ವ ಮುಂತಾದ ತತ್ತ್ವಗಳನ್ನು ಗಂಡಾಂತರಕ್ಕೆ ತಂದು ನಿಲ್ಲಿಸಿದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಜಾಗತೀಕರಣವನ್ನು ವಿಶ್ಲೇಷಿಸುವುದಾದರೆ ಪ್ರಾಂತ್ಯಗಳ ನಡುವೆ ಮತ್ತು ದೇಶಗಳ ನಡುವೆ ಇರುವ ಸಾಂಪ್ರದಾಯಿಕ ಸಂಬಂಧವನ್ನು ಜಾಗತೀಕರಣ ಏರುಪೇರು ಮಾಡುತ್ತದೆ. ಅಂತಾರಾಷ್ಟ್ರೀಯ ಸಂಬಂಧದಿಂದ ಸಂಸ್ಕೃತಿಯ ವಿಭಿನ್ನ ತಿರುವುಗಳನ್ನು ಪಡೆಯುತ್ತದೆ. ಜನರು ಜನಾಂಗ, ಧರ್ಮ, ಲಿಂಗ, ಹಣಕಾಸಿನ ಮಟ್ಟ, ವಯಸ್ಸು ಮುಂತಾದವುಗಳ ಆಧಾರದ ಮೇಲೆ ತಮ್ಮದೇ ಆದ ಗುಂಪನ್ನು ರಚಿಸಿಕೊಳ್ಳುತ್ತಾರೆ. ಒಂದು ರಾಷ್ಟ್ರದ ಶ್ರೀಮಂತ ಸಂಸ್ಕೃತಿ ಹಾನಿಯಾಗುತ್ತದೆ. ಆದರೆ ಸಂಸ್ಕೃತಿಯ ಹೆಸರಿನಲ್ಲಿರುವ ಮೂಢನಂಬಿಕೆ ಮತ್ತು ಕೆಟ್ಟ ಆಚಾರ ವಿಚಾರಗಳೂ ಮಾಯವಾಗುತ್ತವೆ. ಹಲವು ಸಂದರ್ಭಗಳಲ್ಲಿ ಜಾಗತೀಕರಣಕ್ಕೆ ನೇರವಾಗಿ ಭಾಗವಹಿಸಲು ಸಾಧ್ಯವಿಲ್ಲದವರು ಅಥವಾ ಅರ್ಹತೆ ಇಲ್ಲದವರು ರಾಷ್ಟ್ರೀಯತೆಯ ಹೆಸರಿನಲ್ಲಿ ಕಲೆ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ಜಾಗತೀಕರಣವನ್ನು ವಿರೋಧಿಸುತ್ತಾರೆ.

ಜಾಗತೀಕರಣಕ್ಕೆ ಜನರ ಪ್ರತಿಕ್ರಿಯೆ : ಅರ್ಥಶಾಸ್ತ್ರಜ್ಞರು ಮತ್ತು ಆರ್ಥಿಕ ಭೂಗೋಳ ಶಾಸ್ತ್ರಜ್ಞರು ಜಾಗತೀಕರಣವನ್ನು ಹೊಸ ಮುಕ್ತ ನೀತಿ (ನಿಯೊ ಲಿಬರಲ್ ಪಾಲಿಸಿ) ಎಂದು ನಾಮಕರಣ ಮಾಡಿದ್ದಾರೆ. ಜಾಗತೀಕರಣದ ಯಶಸ್ಸಿಗೆ ಪ್ರತಿಯೊಂದು ರಾಷ್ಟ್ರ ತನ್ನ ಮಾರುಕಟ್ಟೆ ವ್ಯವಸ್ಥೆಯನ್ನು ಅಂತರಾಷ್ಟ್ರೀಯ ಮುಕ್ತ ಮಾರುಕಟ್ಟೆ ಶಕ್ತಿಗಳಿಗೆ ತೆರೆಯಬೇಕಾಗುತ್ತದೆ. ಜಾಗತಿಕ – ಸಾಮಾಜಿಕ ಪ್ರಜಾ ಪ್ರಭುತ್ವ (ಗ್ಲೋಬಲ್ ಸೋಷಿಯಲ್ ಡೆಮಾಕ್ರಸಿ) ಜಾಗತೀಕರಣದ ಹೊಸ ಪ್ರಯೋಗವಾಗಿವೆ. ಬಂಡವಾಳಶಾಹಿ ಆರ್ಥಿಕತೆ ಹೊಂದಿರುವ ಪ್ರಜಾಪ್ರಭುತ್ವ ಸರ್ಕಾರಗಳು ಜಾಗತೀಕರಣವನ್ನು ಪ್ರೋತ್ಸಾಹಿಸುತ್ತಿದ್ದು ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದಿದ ಏಷ್ಯ, ಆಫ್ರಿಕ ಮತ್ತು ಲ್ಯಾಟೀನ್ ಅಮೆರಿಕದ ರಾಷ್ಟ್ರಗಳ ಮೇಲೆ ಜಾಗತೀಕರಣವನ್ನು ಬಲವಂತವಾಗಿ ಹೇರುತ್ತಿವೆ. ಈ ರಾಷ್ಟ್ರಗಳ ಮಧ್ಯಮ ವರ್ಗದ ಜನರು ಜಾಗತೀಕರಣದ ವಿರುದ್ಧ ದೊಡ್ಡ ಸಮರವನ್ನೇ ಸಾರಿದ್ದಾರೆ. ಜಾಗತೀಕರಣ, ಶ್ರೀಮಂತ ಮತ್ತು ಬಡ ರಾಷ್ಟ್ರಗಳನ್ನು ಪರಸ್ಪರ ಎದುರಾಳಿಯನ್ನಾಗಿ ತಂದು ನಿಲ್ಲಿಸಿದೆ. ತೀವ್ರ ತರವಾದ ರಾಷ್ಟ್ರೀಯ ಮನೋಭಾವ, ಧಾರ್ಮಿಕ ಸಂಘರ್ಷ ಪರಿಸರದ ಮೇಲೆ ಆಗುತ್ತಿರುವ ಪರಿಣಾಮ ಮುಂತಾದ ಹೊಸ ಸಮಸ್ಯೆಗಳ ಹುಟ್ಟಿಗೆ ಜಾಗತೀಕರಣ ನಾಂದಿ ಹಾಡುತ್ತಿದೆ. ಆದರೆ ನಿಧಾನವಾಗಿ ಜಗತ್ತಿನ ಎಲ್ಲಾ ರಾಷ್ಟ್ರಗಳು ಹಂತ ಹಂತವಾಗಿ ಜಾಗತೀಕರಣಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿವೆ.

ಭವಿಷ್ಯದ ಚಿತ್ರಣ : ಜಾಗತೀಕರಣ ಭವಿಷ್ಯದ ಚಿತ್ರಣ ಸ್ಪಷ್ಟವಾಗಿ ಗೋಚರವಾಗುತ್ತಿಲ್ಲ. ಆದರೆ 21ನೆಯ ಶತಮಾನದಲ್ಲಿ ಜಾಗತೀಕರಣ ತನ್ನ ವೇಗವನ್ನು ಹೆಚ್ಚಿಸಿಕೊಳ್ಳದಿದ್ದರೂ ಅದು ಮುಂದುವರೆಯುವ ಎಲ್ಲಾ ಲಕ್ಷಣಗಳು ಕಾಣಿಸುತ್ತಿವೆ. ಮತ್ತೊಂದು ದೃಷ್ಟಿಯಲ್ಲಿ ನೋಡುವುದಾದರೆ ಜಾಗತೀಕರಣ ಒಂದು ನಿರ್ದಿಷ್ಟ ಹಂತವನ್ನು ತಲುಪಿದ ಅನಂತರ ತನ್ನ ಪ್ರಭಾವದಲ್ಲಿ ಇಳಿಮುಖವಾಗಬಹುದು ಅಥವಾ ಸಂಪೂರ್ಣವಾಗಿ ನಿಲ್ಲಬಹುದು. ಆವರ್ತ ಪ್ರಕ್ರಿಯೆಯಲ್ಲಿ ಜಾಗತೀಕರಣವನ್ನು ವಿಶ್ಲೇಷಿಸುವುದಾದರೆ ಭವಿಷ್ಯದಲ್ಲಿ ಜಾಗತೀಕರಣ ಸಂಪೂರ್ಣವಾಗಿ ನಿಂತುಹೋಗಬಹುದು ಮತ್ತು ರಾಷ್ಟ್ರಗಳ ನಡುವಿನ ಆರ್ಥಿಕ ಸಂಬಂಧ ಕುಸಿದು ಬೀಳಬಹುದು. ಆದರೆ ಪ್ರಸ್ತುತ ಜಾಗತೀಕರಣದ ಹಿಂದಿರುವ ಶಕ್ತಿಗಳನ್ನು ಗಮನಿಸಿದರೆ ಜಾಗತೀಕರಣದ ಹಿನ್ನಡೆ ಅಸಾಧ್ಯವೆನಿಸುತ್ತದೆ.

ಪ್ರಪಂಚದ ಎಲ್ಲಾ ರಾಷ್ಟ್ರಗಳು (ಕಮ್ಯೂನಿಸ್ಟ್ ಚೀನ ದೇಶವನ್ನು ಒಳಗೊಂಡಂತೆ) ತಮ್ಮ ಮಾರುಕಟ್ಟೆಯ ಬಾಗಿಲನ್ನು ಮುಕ್ತ ಮನಸ್ಸಿನಿಂದ ತೆರೆಯುತ್ತಿರುವುದರಿಂದ ಜಾಗತೀಕರಣ ಇನ್ನಷ್ಟು ವೇಗವಾಗಿ ಪ್ರಬಲಗೊಳ್ಳುವ ಲಕ್ಷಣಗಳನ್ನು ಕಾಣಬಹುದಾಗಿದೆ. (ಪಿ.ಎನ್.ಎಚ್.)

**ಜಾಟರು:** ಆಗ್ರ ಮತ್ತು ಮಥುರ ನಗರಗಳ ಸುತ್ತ ವಾಸಿಸುವ ದೃಢಕಾಯ ಜನ. ಭರತಪುರ ರಾಜ್ಯವನ್ನು ಸ್ಥಾಪಿಸಿದವರು. ರಜಪೂತರಂತೆಯೇ ಇವರೂ ಹೊರಗಿನಿಂದ ಬಂದವರೆಂದು ಹೇಳಲಾಗಿದೆ. ಸ್ವತಂತ್ರ ಮನೋವೃತ್ತಿಯ ಇವರು ಔರಂಗ್‌ಜೇಬನ ಕಾಲದಲ್ಲಿ ಆತನ ರಾಜನೀತಿಗೆ ರೋಸಿ ಅವನ ವಿರುದ್ಧ ದಂಗೆ ಎದ್ದರು. ಇವರನ್ನು ಹತ್ತಿಕ್ಕಲು ಔರಂಗಜೇಬ್ ಬಹಳ ಶ್ರಮಿಸಿದ.

ಇವರು ಒಂದಾಗಿ ಚುರುಮನ್‌ಸಿಂಗ್‌ನ್ನು ತಮ್ಮ ನಾಯಕನಾಗಿ ಆರಿಸಿಕೊಂಡರು. ಈತ ಥುನ್‌ಎಂಬಲ್ಲಿ ಕೋಟೆಯೊಂದನ್ನು ಕಟ್ಟಿ ಸ್ವತಂತ್ರ ರಾಜ್ಯವೊಂದರ ಕನಸನ್ನು ಕಂಡನಾದರೂ 1721ರ ಸುಮಾರಿಗೆ ಈತ ಸೋಲನ್ನನುಭವಿಸಿ ತನ್ನ ಯೋಜನೆಯನ್ನು ಕೈಬಿಟ್ಟ. ಆದರೆ ಈತನ ಸೋದರಳಿಯ ಬದನಸಿಂಹ ಚದುರಿದ ಜಾಟರನ್ನು ಒಟ್ಟುಗೂಡಿಸಿ 1756ರಲ್ಲಿ ಭರತಪುರ ರಾಜ್ಯವನ್ನು ಸ್ಥಾಪಿಸಿದ. (ಜಿ.ಬಿ.ಆರ್.)

**ಜಾತ್ರೆಗಳು:** ಜಾತ್ರೆ ಎನ್ನುವುದು ಯಾತ್ರಾ ಎಂಬ ಸಂಸ್ಕೃತ ಪದದಿಂದ ಬಂದದ್ದು. ಪ್ರಸಿದ್ಧ ಕ್ಷೇತ್ರದರ್ಶನ ಮಾಡಲು ಜನ ಯಾತ್ರೆ ಹೋಗುತ್ತಾರೆ. ವರ್ಷಕ್ಕೊಮ್ಮೆ ಅಂಥ ಸ್ಥಳಗಳಲ್ಲಿ ಜನರ ಜಾತ್ರೆ ಸೇರುತ್ತದೆ. ಪ್ರಸಿದ್ಧ ದೇವರಿಗೆ ವರ್ಷಕ್ಕೊಮ್ಮೆ ನಡೆಯುವ ಮಹೋತ್ಸವ ಕಾಲ ಜಾತ್ರೆಗೆ ಪ್ರಶಸ್ತ ಕಾಲ.

ಜಾತ್ರೆ ಸಾಮಾನ್ಯವಾಗಿ ಒಂದು ದಿನದಿಂದ ಹತ್ತು–ಹದಿನೈದು ದಿನಗಳವರೆಗೂ (ಕೆಲವೊಮ್ಮೆ ತಿಂಗಳು) ನಡೆಯುತ್ತದೆ. ಪ್ರಮುಖ ತೀರ್ಥಕ್ಷೇತ್ರಗಳಲ್ಲಿ ನಡೆಯುವ ಜಾತ್ರೆಗಳೆಂದರೆ: ತಿರುಪತಿಯ ಬ್ರಹ್ಮೋತ್ಸವ, ಪಂಢರಾಪುರದ ಆಷಾಢಶುದ್ಧ ಏಕಾದಶಿ ಜಾತ್ರೆ, ಉಡುಪಿಯ ಪರ್ಯಾಯೋತ್ಸವ, ಮೇಲುಕೋಟೆಯ ವೈರಮುಡಿ, ಬೆಂಗಳೂರು ಕರಗ, ತಲಕಾಡಿನ ಪಂಚಲಿಂಗ ದರ್ಶನ, ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕ, ಪ್ರಯಾಗದ ಕುಂಭಮೇಳ, ಕೋಲ್ಕತದ ನವರಾತ್ರಿಕಾಲದ ಕಾಳಿದೇವಿ ಉತ್ಸವಗಳು, ಶ್ರೀಶೈಲದ ಜಾತ್ರೆ, ಸವದತ್ತಿಯ ಎಲ್ಲಮ್ಮನ ಜಾತ್ರೆ, ಮಹದೇಶ್ವರನ ಬೆಟ್ಟದ ಜಾತ್ರೆ, ಮುಡುಕುತೊರೆ ಚುಂಚನಕಟ್ಟೆ, ನಂಜನಗೂಡು, ಶ್ರೀರಂಗಪಟ್ಟಣ ಮತ್ತು ಮೈಸೂರಿನ ಚಾಮುಂಡೇಶ್ವರಿ ರಥೋತ್ಸವಗಳು. ಇವು ವರ್ಷದ ಆಯಾ ನಿರ್ದಿಷ್ಟ ಕಾಲಗಳಲ್ಲಿ ನಿರ್ದಿಷ್ಟವಾದ ಅವಧಿಯಲ್ಲಿ ವಿಜೃಂಭಣೆಯಿಂದ ಜರುಗುವ ಉತ್ಸವಗಳು.

ಜಾತ್ರೆಗಳನ್ನು ಅವು ನಡೆಯುವ ಊರು ಮತ್ತು ಉತ್ಸವ ನಡೆಯುವ ದೇವರ ಹೆಸರುಗಳಿಂದ ಕರೆಯುತ್ತಾರೆ. ಇದರಂತೆಯೇ ಕೆಲವು ಸಂದರ್ಭಗಳಲ್ಲಿ ಗ್ರಹಯೋಗ ವಿಶೇಷದಿಂದ ಪುಣ್ಯನದಿಗಳ ಸ್ನಾನಕ್ಕಾಗಿ ಜನ ಒಂದೇ ನಿರ್ದಿಷ್ಟ ಕಾಲದಲ್ಲಿ ಒಂದೆಡೆಯಲ್ಲಿಯೇ ಸ್ನಾನದಾನ ಮೊದಲಾದುವನ್ನು ಮಾಡುವುದಕ್ಕಾಗಿ ಸೇರುತ್ತಾರೆ. ಇವೂ ಜಾತ್ರೆಗಳೇ. ಇವನ್ನು ಮೇಳ ಎಂದೂ ಕರೆಯುತ್ತಾರೆ.

ಈ ಜಾತ್ರೆಗಳು ಮತದ ದೃಷ್ಟಿಯಿಂದಲ್ಲದೇ ಸಮಾಜದ ದೃಷ್ಟಿಯಿಂದಲೂ ಮುಖ್ಯವಾಗಿವೆ.

ಜನ ಪರಸ್ಪರ ಕಲೆತು ಅವರ ನಡುವಣ ಸಂಪರ್ಕ ಹೆಚ್ಚಲು ಜಾತ್ರೆಗಳು ಸಹಾಯವಾಗುತ್ತವೆ. ಜಾತ್ರೆಗಳಲ್ಲಿ ಜನರ ಗುಂಪು ಅಧಿಕವಾಗಿರುವುದರಿಂದ ವ್ಯಾಪಾರಿಗಳಿಗೆ ಅದೊಂದು ಒಳ್ಳೆಯ ಕಾಲ. ದನಗಳ ಪ್ರದರ್ಶನ, ಕ್ರಯವಿಕ್ರಯಗಳು ಇಲ್ಲಿ ನಡೆಯುತ್ತವೆ. ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ವ್ಯಾವಹಾರಿಕ ಪ್ರಾಮುಖ್ಯ ಉಳ್ಳವಾಗಿ ಆಯಾ ಸ್ಥಳದ ವಿಶಿಷ್ಟ ಪದಾರ್ಥಗಳು ವಿಲೇವಾರಿಯಾಗಲು ಜಾತ್ರೆಗಳು ಸಹಾಯಕವಾಗಿವೆ. ಹಲವು ಮುಖ್ಯ ಜಾತ್ರೆಗಳು ಒಳ್ಳೆಯ ವ್ಯಾಪಾರ ಕೇಂದ್ರಗಳೆನಿಸಿವೆ. ಹೂವು, ಹಣ್ಣು, ಕಾಯಿ, ಸಕ್ಕರೆ, ಕರ್ಪೂರ, ಚಿತ್ರಗಳು, ಸ್ಥಳಮಹಿಮೆ ಪುಸ್ತಕಗಳು ಇತ್ಯಾದಿಗಳ ವ್ಯಾಪಾರವೇ ಹೆಚ್ಚು. ಇವುಗಳಿಂದ ಸರ್ಕಾರಕ್ಕೆ ಪರೋಕ್ಷ, ಪ್ರತ್ಯಕ್ಷ ತೆರಿಗೆಗಳ ಮೂಲಕ ಅಪಾರ ಆದಾಯ ಉಂಟು.

ಇಂಥ ಜಾತ್ರೆಗಳು ಭಾರತದೇಶಕ್ಕೆ ಮಾತ್ರ ಸೀಮಿತವೇನೂ ಅಲ್ಲ. ಪ್ರಪಂಚದ ನಾನಾ ದೇಶಗಳಲ್ಲೂ ಈ ತೆರನಾದ ಉತ್ಸವಗಳು ಉಂಟು. ಸಿರಿಯ, ಪ್ಯಾಲಸ್ಟೀನ್, ಮೆಸಪೊಟೇಮಿಯ ಕಣಿವೆ, ಈಜಿಪ್ಟ್, ಅರೇಬಿಯಗಳಿಗೆ ಭೇಟಿಕೊಟ್ಟ ವ್ಯಾಪಾರಿಗಳು ಈ ಬಗೆಯ ಜಾತ್ರೆಗಳನ್ನು ಕುರಿತು ಹೇಳಿದ್ದಾರೆ. ಗ್ರೀಸಿನ ಡಿಮಾಸ್ತನೀಸ್ ವರ್ಷಕ್ಕೆ ಆರು ತಿಂಗಳು ದೇವರ ಹೆಸರಿನಲ್ಲಿ ನಡೆಯುವ ಜಾತ್ರೆಗಳ ಬಗ್ಗೆ ಹೇಳಿದ್ದಾನೆ. ಐಸಿಸ್ ದೇವತೆಯ ಹೆಸರಿನಲ್ಲಿ ಐಥೋರಿಯದಲ್ಲಿ ನಡೆಯುವ ಜಾತ್ರೆಗಳನ್ನು ಪಾಸನಿಯಸ್ ಹೇಳಿದ್ದಾನೆ. ಅಲ್ಲಿ ನಡೆಯುವ ಜನಗಳ (ಗುಲಾಮರ), ದನಗಳ, ಬೆಳ್ಳಿ, ಬಂಗಾರ, ವಸ್ತ್ರ ಉಡುಪುಗಳ, ಇತರ ಸರಕುಗಳ ವ್ಯಾಪಾರವನ್ನು ಬಣ್ಣಿಸಿದ್ದಾನೆ. ರೋಮ್, ಜರ್ಮನಿ, ಫ್ರಾನ್ಸ್, ಇಟಲಿ ದೇಶಗಳ ಅತ್ಯಂತ ಪ್ರಾಚೀನತಮ ಜಾತ್ರೆ ಎಂದರೆ ಫೆರಾರ ಎಂದು ಹೇಳಲಾಗಿದೆ. (ಎಸ್.ಎನ್.ಕೆ.)

**ಜಾನ್ ಪ್ಲೆಫೇರ್:** 1748–1819. ಹೆಸರಾಂತ ಗಣಿತ ಹಾಗೂ ತತ್ತ್ವಶಾಸ್ತ್ರ ವಿದ್ವಾಂಸ. ಇವನು ಜೇಮ್ಸ್ ಹಟ್ಟನ್‌ನ ಗೆಳೆಯನಾಗಿದ್ದ. ಹಟ್ಟನ್‌ನ ಮರಣಾನಂತರ 1802ರಲ್ಲಿ ಪ್ರಕಟಿಸಿದ ಪೃಥ್ವಿಯ ಹಟ್ಟೋನಿಯನ್ ಸಿದ್ಧಾಂತದ ಸಚಿತ್ರ ವಿವರಣೆಗಳು ಎಂಬ ತನ್ನ ಗ್ರಂಥದಲ್ಲಿ ಹಟ್ಟನ್‌ನ ತತ್ತ್ವಗಳನ್ನು ವೈಜ್ಞಾನಿಕ ಗದ್ಯ ರೂಪದಲ್ಲಿ ಸವಿಸ್ತಾರವಾಗಿ ವಿವರಿಸಿದ್ದಾನೆ. ಆ ಗ್ರಂಥ ಸ್ಪಷ್ಟತೆ ಮತ್ತು ಅಭಿವ್ಯಕ್ತಿಯ ಸೌಂದರ್ಯಗಳಿಗಾಗಿ ಅಪ್ರತಿಮವಾಗಿದೆ. ಅದು ಹಟ್ಟನ್‌ನ ಗ್ರಂಥಕ್ಕಿಂತ ಚಿಕ್ಕದು ಮತ್ತು ಕಡಿಮೆ ಬೆಲೆಯದ್ದಾಗಿದ್ದರಿಂದ ವ್ಯಾಪಕವಾಗಿ ಓದಲ್ಪಟ್ಟಿತು. ಅದರಲ್ಲಿನ ಹಟ್ಟನ್ ವಿಚಾರ ಮತ್ತು ತೀರ್ಮಾನಗಳು ಸರ್ ಚಾರ್ಲ್ಸ್ ಲೈಲ್ ಮೇಲೆ ಬಹಳ ಪ್ರಭಾವ ಬೀರಿದವು. ಅನಂತರ ಸರ್ ಚಾರ್ಲ್ಸ್ ಲೈಲ್ ಏಕರೂಪತಾವಾದದ ಮಹಾನ್ ಪ್ರತಿಪಾದಕನಾದ. ಇವನು 1802ರಲ್ಲಿ ನದಿಗಳು ತಾವು ಹರಿಯುವ ಕಣಿವೆಗಳನ್ನು ಅಗೆ (ಕೊರೆ)ಯುತ್ತವೆಂಬುದನ್ನು ತಿಳಿದುಕೊಂಡ. ಇವನ ಅನುವರ್ತ ಸಂಗಮದ ನಿಯಮದ ಪ್ರಕಾರ ಉಪನದಿಗಳು ಮುಖ್ಯ ನದಿಯನ್ನು ಸೇರುವ ಸ್ಥಳದ ಮಟ್ಟ ಸ್ಥಳೀಯ ಆಧಾರ ಮಟ್ಟವಾಗಿದೆ. (ಎಸ್.ಎಸ್.ಎನ್.)



**ಜಾನ್ ವೆಸ್ಲೆ ಪಾವೆಲ್:** 1834–1902. ಪ್ರಸಿದ್ಧ ಭೂಗೋಳವಿಜ್ಞಾನಿ, ಮಿಲಿಟರಿ ಅಧಿಕಾರಿ. ಅಮೆರಿಕದ ನ್ಯೂಯಾರ್ಕ್ ರಾಜ್ಯದಲ್ಲಿ ರೋಚೆಸ್ಟರ್ ನಗರದಿಂದ ನೈರುತ್ಯಕ್ಕೆ 54 ಕಿಮೀ ದೂರದಲ್ಲಿ ಜೆನಿಸೀ ನದಿ ತೀರದ ಮೇಲಿನ ಮೌಂಟ್ ಮೊರಿಸ್ ಎಂಬ ಗ್ರಾಮದಲ್ಲಿ 1834 ಮಾರ್ಚ್ 29ರಂದು ಜನಿಸಿದ. ಇವನು ಸೈನ್ಯ ಸೇರಿ ಮೇಜರ್ ಹುದ್ದೇಗೇರಿದ. ಅಮೆರಿಕದ ಆಂತರಿಕ ಯುದ್ಧ (ಸಿವಿಲ್ ವಾರ್)ದಲ್ಲಿ ಒಂದು ಭುಜವನ್ನು ಕಳೆದುಕೊಂಡ. ಅನಂತರ ಇವನು ಏಕಭುಜದ ಅಂತರಯುದ್ಧ ಅನುಭವಿ ಮೇಜರ್ ಪಾವೆಲ್‌ನೆಂದೇ ಹೆಸರು ಪಡೆದ. ಅಲ್ಲದೆ ಇವನು ಕೊಲೊರಾಡೊ ಮಹಾಕಂದರದ ಅಪಾಯಕಾರಿ ರಭಸದ ಕಿರು ಜಲಪಾತಗಳ ಮೊದಲನೆಯ ವಿಜೇತ (1869). ಕೊಲರಾಡೊ ಪ್ರಸ್ಥಭೂಮಿ ಮತ್ತು ಉಟಾ ಪರ್ವತಗಳಲ್ಲಿ ಕೈಕೊಂಡ ತನ್ನ ಶೋಧನ ಕಾರ್ಯದಿಂದ ಅಮೆರಿಕದ ಭೂಸ್ವರೂಪವಿಜ್ಞಾನದ ವಿಚಾರಧಾರೆಗೆ ತಳಪಾಯ ಹಾಕಿದ. ಮೊದಲು ಶೋಧನೆ ಮಾಡಿದಂತಹ ಸುತ್ತಲಿನ ಪರಿಸರದ ಪ್ರೇರಣೆಯಿಂದ ಹೊಸ ಸಿದ್ಧಾಂತಗಳ ಶೋಧನೆ ಮಾಡುತ್ತಿದ್ದ.



ಪಾವೆಲ್‌ನು ಉಟಾ ಪರ್ವತಗಳ ಅಧ್ಯಯನದಿಂದ ಭೂಸ್ವರೂಪಗಳ ವಿಂಗಡಣೆಗೆ ಆಧಾರವಾದ ಭೂರಚನೆಯ ಮಹತ್ವದಿಂದ ಪ್ರಭಾವಿತನಾಗಿ. ಎಕ್ಸ್‌ಪ್ಲೋರೇಷನ್ ಆಫ್ ದಿ ಕೊಲರಾಡೊ ರಿವರ್ ಆಫ್ ದಿ ವೆಸ್ಟ್ ಅಂಡ್ ಇಟ್ಸ್ ಟ್ರಿಬ್ಯುಟರೀಸ್ (1875), ಜಿಯಾಲಜಿ ಆಫ್ ದಿ ಹೆನ್ರಿ ಮೌಂಟನ್ಸ್ (1879) ಎಂಬ ತನ್ನ ಗ್ರಂಥಗಳಲ್ಲಿ ಆಧಾರ ಮಟ್ಟದ ಪರಿಕಲ್ಪನೆಗೆ ಚಾಲನೆಯನ್ನಿತ್ತ. ಇವನ ಸ್ಥಾಯಿ ಆಧಾರ ಮಟ್ಟ ಪರಿಕಲ್ಪನೆ ವ್ಯಾಪಕವಾದ ಮನ್ನಣೆ ಪಡೆಯಿತು.

ಪಾವೆಲ್ ನದಿ ಕಣಿವೆಗಳ ಎರಡು ವಿಂಗಡಣೆಗಳನ್ನು ಪ್ರಸ್ತಾಪಿಸಿದನು. ಅವು: 1) ಕಣಿವೆಗಳು ಮತ್ತು ಪ್ರಸ್ತರಗಳ ನಡುವಣ ಸಂಬಂಧವನ್ನು ಆಧರಿಸಿದ ವಿಂಗಡಣೆ ಹಾಗೂ 2) ಕಣಿವೆಗಳ ಉತ್ಪತ್ತಿಯನ್ನು ಆಧರಿಸಿದ ವಿಂಗಡಣೆ. ಎರಡನೆಯ ವಿಂಗಡಣೆಯಲ್ಲಿ ಅವನು ಕಣಿವೆಗಳನ್ನು ಪೂರ್ವಗಾಮಿ, ಅನುಗಾಮಿ ಮತ್ತು ಅಧ್ಯಾರೋಪಿತ ಕಣಿವೆಗಳೆಂದು ವಿಂಗಡಿಸಿದ. ಅಲ್ಲದೆ ನದಿಗಳ ಜಲವಿಭಾಜಕಗಳು ಸ್ಥಳಾಂತರ ಹೊಂದುತ್ತವೆಂಬ ವಿಚಾರವನ್ನು ವ್ಯಕ್ತಪಡಿಸಿದನು. ಆದರೆ ಈ ವಿಚಾರ ಅಪೂರ್ಣವಾಗಿ ಉಳಿಯಿತು. ಭೂಸ್ವರೂಪಗಳಷ್ಟೇ ಅಲ್ಲದೆ ಜಲಸಂಪನ್ಮೂಲಗಳ ಸಮೀಕ್ಷೆಯನ್ನು ಮಾಡಿದನು ಮತ್ತು ಅವುಗಳ ಜಲಸಂಪನ್ಮೂಲಗಳ ಸಮೀಕ್ಷೆಯನ್ನೂ ಕೈಗೊಂಡ. ಹೀಗೆ ಪಾವೆಲ್‌ನ ಜೀವನದ ಕೊನೆಯ ದಶಕದಲ್ಲಿ ಭೂಗೋಳವಿಜ್ಞಾನ ಅಮೆರಿಕದಲ್ಲಿ ಒಂದು ವೃತ್ತಿ ಕ್ಷೇತ್ರವಾಗಿ ಹೊರಹೊಮ್ಮಿತು. (ಎಸ್.ಎಸ್.ಎನ್.)

**ಜಾನುವಾರು ಗಣತಿ:** ಭಾರತದಲ್ಲಿ ಐದು ವರ್ಷಗಳಿಗೊಮ್ಮೆ ನಡೆಯುತ್ತದೆ. ಇದರಲ್ಲಿ ಸಂಗ್ರಹಿಸಲಾಗುವ ಮಾಹಿತಿಗಳು ಸ್ಥೂಲವಾಗಿ ಹೀಗಿವೆ:

1. ದನಕರುಗಳ ಸಂಖ್ಯೆ: ಗಂಡು, ಹೆಣ್ಣು ಮತ್ತು ಸಣ್ಣಕರು ಎಂದು ವರ್ಗೀಕರಣ ಮಾಡಲಾಗಿದೆ. ಮೂರು ವರ್ಷ ಅಥವಾ ಅದಕ್ಕೊಳಪಟ್ಟಿದ್ದರೆ ಅವನ್ನು ಕರುಗಳೆಂದು ಪರಿಗಣಿಸಲಾಗುತ್ತದೆ. ಇವನ್ನು ಮತ್ತೆ ಈ ರೀತಿ ವಿಭಾಗಿಸಬಹುದು:

(ಅ) ಬೀಜದ ಹೋರಿಗಳು

(ಆ) ಕೆಲಸಕ್ಕೆ ಒದಗುವ ಎತ್ತುಗಳು ಮತ್ತು ದುಡಿಮೆಯ ರಾಸುಗಳು

(ಇ) ಕರಾವು

(ಈ) ಕನ್ಯೆ ಆಕಳು (ಕಡಸು) ಮತ್ತು ಗೊಡ್ಡು ಆಕಳು

(ಉ) ಇತರ ದನಗಳು

2. ಎಮ್ಮೆಗಳ ಸಂಖ್ಯೆ: ಗಂಡು, ಹೆಣ್ಣು ಮತ್ತು ಸಣ್ಣಕರು, ಇವನ್ನು ಕೂಡ ಮೇಲಿನಂತೆ ಐದು ಉಪವಿಭಾಗಗಳಾಗಿ ವಿಭಾಗಿಸಬಹುದು:

3. ಕುರಿಗಳು, ಮೇಕೆಗಳು

4. ಕುದುರೆಗಳು, ಸಣ್ಣ ತಟ್ಟುಗಳು

5. ಕತ್ತೆಗಳು, ಹೇಸರಕತ್ತೆಗಳು ಮತ್ತು ಒಂಟೆಗಳು

6. ಹಂದಿಗಳು
7. ಕೋಳಿಗಳು, ಹುಂಜಗಳು
8. ಬಾತುಕೋಳಿಗಳು–ಗಂಡು, ಹೆಣ್ಣು ಮತ್ತು ಮರಿಗಳು
9. ಹಾಲಿನ ಉತ್ಪಾದನೆ, ಮಾರಾಟವಾಗುವ ಹಾಲಿನ ಪರಿಮಾಣ
10. ಬೆಣ್ಣೆ ಮತ್ತು ತುಪ್ಪದ ಉತ್ಪಾದನೆ
11. ಕೋಳಿಮೊಟ್ಟೆ ಮತ್ತು ಬಾತಿನ ತತ್ತಿಗಳ ಉತ್ಪಾದನೆ
12. ಉಣ್ಣೆ ಮತ್ತು ತುಪ್ಪಳ

ಕಂದಾಯ ಇಲಾಖೆಯವರು ಈ ಗಣತಿಕಾರ್ಯವನ್ನು ನಿರ್ವಹಿಸುವರು ಎಲ್ಲ ರಾಜ್ಯಗಳಲ್ಲಿಯೂ ಜಾನುವಾರು ಗಣತಿಯಕಾಲ ಒಂದೇ ಆಗಿರುವುದು. ಇತ್ತೀಚೆಗೆ 2003 ರಲ್ಲಿ ಜಾನುವಾರು ಗಣತಿಯನ್ನು ನಿರ್ವಹಿಸಿ, ಅಂಕಿ–ಅಂಶಗಳನ್ನು ಪ್ರಕಟಿಸಲಾಗಿದೆ.

ಆಡಳಿತ ಕ್ರಮದಲ್ಲಿ ಒದಗಿ ಬರುವ ಇನ್ನೂ ಹಲವಾರು ಮಾಹಿತಿಗಳನ್ನು ಕೂಡ ಸಂಗ್ರಹಿಸಲಾಗುವುದು. ಪಶುವೈದ್ಯಶಾಲೆಗಳು ಮತ್ತು ಚಿಕಿತ್ಸಾಲಯಗಳಿಗೆ ಸಂಬಂಧಪಟ್ಟ ಅಂಕೆಗಳು, ರೋಗ ತಗಲಿದ ದನಕರುಗಳು, ಚಿಕಿತ್ಸೆ ಪಡೆದ ಪ್ರಾಣಿಗಳ ಸಂಖ್ಯೆ, ಸರ್ಕಾರಿ ಪಶುವೈದ್ಯ ಶಾಲೆಗಳಲ್ಲಿ ಹಿಡಮಾಡಲಾದ ಹೋರಿಗಳು ಮತ್ತು ಕೋಣಗಳು, ಅಂಟುರೋಗಗಳಿಂದ ಮೃತಪಟ್ಟ ದನಕರುಗಳು, ಎಮ್ಮೆಗಳು, ಕುದುರೆಗಳು, ಕುರಿಗಳು, ಮೇಕೆಗಳು, ನಾಯಿಗಳು, ಕೋಳಿಗಳು ಹೀಗೆ ಪ್ರಾಣಿಗಳ ಸಾವುನೋವುಗಳ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಾರೆ. ಪಶುಸಂಗೋಪನ ಇಲಾಖೆಯ ಇನ್ಸ್‌ಪೆಕ್ಟರುಗಳೂ ಇತರ ಸಿಬ್ಬಂದಿಗಳೂ ಹಳ್ಳಿಗಳಿಗೆ ಭೇಟಿಯಿತ್ತು ಚಿಕಿತ್ಸೆ ಮಾಡಿದ ಜಾನುವಾರುಗಳ ಸಂಖ್ಯೆ ಮತ್ತು ಹಿಡಮಾಡಿದ ಹೋರಿಕೋಣಗಳ ಅಂಕಿಅಂಶಗಳನ್ನೂ ಬೇರೆ ಬೇರೆಯಾಗಿ ಸಂಗ್ರಹಿಸುತ್ತಾರೆ. ಮುಂದೆ ಪಶುಸಂಗೋಪನ ಇಲಾಖೆಯವರು ಈ ಅಂಕಿಅಂಶಗಳನ್ನು ಕ್ರೋಡೀಕರಿಸಿ ಪ್ರಚುರಪಡಿಸುವರು. ಇವನ್ನೇ ಕೇಂದ್ರಿಯ ಸಾಂಖ್ಯಿಕ ಸಂಸ್ಥೆಯವರೂ ರಾಜ್ಯದ ಆರ್ಥಿಕ ಮತ್ತು ಸಾಂಖ್ಯಿಕ ಸಂಸ್ಥೆಯವರೂ ತಮ್ಮ ತಮ್ಮ ಸ್ಟ್ಯಾಟಿಸ್ಟಿಕಲ್ ಅಬ್‌ಸ್ಟ್ರಾಕ್ಟಿನಲ್ಲಿ (ಸಂಖ್ಯಾಕಲನೀಯ ಗೋಷ್ವಾರೆ) ಪ್ರಕಟಿಸುವರು. (ಎಂ.ವಿ.ಜಿ.)

**ಜಾನುವಾರು ಪಾಲನೆ (ವಾಣಿಜ್ಯ):** ವಿಸ್ತಾರವಾದ ಭೂ ಪ್ರದೇಶದಲ್ಲಿ ವಾಣಿಜ್ಯ ಮಾದರಿಯಲ್ಲಿ ಜಾನುವಾರುಗಳನ್ನು ಪಾಲನೆ ಮಾಡುವುದು. ಇದು ಸಾಮಾನ್ಯವಾಗಿ ಶುಷ್ಕ ಮತ್ತು ಅತಿ ಶುಷ್ಕ ಪ್ರದೇಶಗಳಲ್ಲಿ ಅದರಲ್ಲೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ವಿರಳ ಸಸ್ಯ ವರ್ಗ ಹಾಗೂ ಮಣ್ಣಿನ ಫಲವತ್ತತೆ ಅತ್ಯಂತ ಕಡಿಮೆ ಇರುವ ಭೂಭಾಗಗಳಲ್ಲಿ ಕಂಡು ಬರುವುದು. ಇದು ವಿಸ್ತಾರವಾದ ಭೂ ಪ್ರದೇಶಗಳನ್ನು ಒಳಗೊಂಡಿದೆ.

ಯುರೋಪಿಯನ್ನರು ಮೊದಲು ತಮ್ಮ ವಸಾಹತುಗಳಲ್ಲಿ ಈ ರೀತಿಯ ಜಾನುವಾರು ಪಾಲನಾ ಕ್ಷೇತ್ರಗಳನ್ನು ಸ್ಥಾಪಿಸಿದರು. ಸ್ಪೇನ್ ಮತ್ತು ಪೋರ್ಚುಗಲ್ ಹೊರತಾಗಿ ಉಳಿದ ಯುರೋಪಿನ ಯಾವುದೇ ಭಾಗದಲ್ಲಿ ಇದು ಕಂಡುಬರುವುದಿಲ್ಲ. ಮೊದಲು ಅಮೆರಿಕಕ್ಕೆ ದನಗಳನ್ನು ಅಥವಾ ಜಾನುವಾರುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಸಾಕುವ ಕ್ರಮ ಕೊಲಂಬಸ್‌ನಿಂದ ಪರಿಚಯವಾಯಿತು. ಏಕೆಂದರೆ ಜಾನುವಾರುಗಳು ಮೇಯಲು ಉತ್ತಮವಾದ ಹುಲ್ಲುಗಾವಲು ಅಮೆರಿಕದಲ್ಲಿತ್ತು. ಅನಂತರ ಅಮೆರಿಕದ ದಕ್ಷಿಣ ಭಾಗ, ಮೆಕ್ಸಿಕೊ ಮತ್ತು ದಕ್ಷಿಣ ಅಮೆರಿಕಾಕ್ಕೆ ಹರಡಿತು. ಅಮೆರಿಕ ಸಂಯುಕ್ತ ಸಂಸ್ಥಾನದ ಪಶ್ಚಿಮ ಭಾಗದಲ್ಲಿ ಜಾನುವಾರು ಪಾಲಕರು ಕಡಿಮೆ ಭೂಮಿಯನ್ನು ಹೊಂದಿದ್ದರೂ ಹೆಚ್ಚು ಜಾನುವಾರುಗಳನ್ನು ಹೊಂದಿದ್ದರು. ಇವರು ಮೇಯಿಸುವ ಪ್ರದೇಶ ಹೆಚ್ಚಾಗಿ ಸರ್ಕಾರಕ್ಕೆ ಸೇರಿತು. ಅವರು ಮೊದಲು ಪೂರ್ವ ಭಾಗದಲ್ಲಿ ಮಾತ್ರ ಇದ್ದು. ಜಾನುವಾರುಗಳ ಸಂಖ್ಯೆ ಹೆಚ್ಚಾದಂತೆ ಪಶ್ಚಿಮದ ವಿಶಾಲವಾದ ಭಾಗಕ್ಕೆ ಹೋದಂತೆಲ್ಲಾ ಅಮೆರಿಕ ಸರ್ಕಾರ ಆ ಪ್ರದೇಶವನ್ನು ರೈತರಿಗೆ ನೀಡಿ ಅಲ್ಲಿ ಆಹಾರ ಬೆಳೆಗಳನ್ನು ಬೆಳೆಯಲು ಸೂಚಿಸಿತು. ಆದರೆ ಜಾನುವಾರು ಪಾಲಕರಿಗೆ ಈ ಭೂಮಿಯಲ್ಲಿ ಯಾವುದೇ ರೀತಿಯ ಪ್ರಾಣಿಯನ್ನು ಮೇಯಿಸುವ ಹಕ್ಕನ್ನು ನೀಡಲಿಲ್ಲ. ರೈತರು ತಮ್ಮ ಜಮೀನಿಗೆ ಬೇಲಿಯನ್ನು ಹಾಕಿಕೊಂಡರು. ಆದರೆ, ಜಾನುವಾರು ಪಾಲಕರು ಬೇಲಿಯನ್ನು ಕತ್ತರಿಸಿ ತಮ್ಮ ಪ್ರಾಣಿಗಳನ್ನು ಮೇಯಿಸತೊಡಗಿದರು. ಇದರಿಂದ ಕೆಲವು ವರ್ಷಗಳ ಕಾಲ ಇವರ ನಡುವೆ ಸಂಘರ್ಷವೇರ್ಪಟ್ಟಿತು. ಅನಂತರ ರೈತರು ಮುಳ್ಳು ತಂತಿಬೇಲಿಯನ್ನು ಹಾಕಿ ಜಾನುವಾರು ಪಾಲಕರನ್ನು ನಿಯಂತ್ರಿಸಿ ಮೊದಲು ವಾಣಿಜ್ಯ ಮಾದರಿಯ ಬೇಸಾಯವನ್ನು 1873 ರಲ್ಲಿ ಕೈಗೊಂಡರು. ಇದರಿಂದಾಗಿ ಜಾನುವಾರು ಪಾಲಕರು ಕೆಲವು ಭೂಮಿಯನ್ನು ಕೊಂಡುಕೊಂಡರು, ಕೆಲವರು ಭೂಮಿಯನ್ನು ಗುತ್ತಿಗೆ ಪಡೆಯುವುದರ ಮೂಲಕ ವಿಸ್ತಾರವಾದ ಜಾನುವಾರು ಸಾಕಾಣಿಕೆಯನ್ನು ಸ್ಥಾಪಿಸಿದರು. ಇಂದಿಗೂ ಸಹ ಶೇ. 60 ರಷ್ಟು ಭೂ ಪ್ರದೇಶವನ್ನು ಅಮೆರಿಕ ಸರ್ಕಾರದಿಂದ ಗುತ್ತಿಗೆಯನ್ನು ಪಡೆದುಕೊಂಡಿದ್ದಾರೆ.

ಜಾನುವಾರುಗಳ ತಳಿಗಳಲ್ಲೂ ಸಹ ಅಭಿವೃದ್ಧಿ ಸಾಧಿಸಲಾಗಿದೆ. ಉತ್ತಮ ತಳಿಯ ಜಾನುವಾರುಗಳನ್ನು ಯುರೋಪಿಯನ್ನರು ಇತರ ಪ್ರದೇಶಗಳಿಗೆ ಪರಿಚಯಿಸಿದರು. ಇದರಿಂದ ಉತ್ತಮ ತಳಿಯ ಜಾನುವಾರುಗಳಿಂದ ಹೆಚ್ಚು ಹಾಲು ಮತ್ತು ಮಾಂಸವನ್ನು ಪಡೆಯತೊಡಗಿದರು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಜಾನುವಾರು ಸಾಕಾಣಿಕೆ ನೀಡಲಾಗಿದ್ದ ಭೂಮಿಯ ಪ್ರಮಾಣ ಕಡಿಮೆಯಾಗತೊಡಗಿದೆ. ವ್ಯವಸಾಯದಲ್ಲಿ ಉಂಟಾದ ಬದಲಾವಣೆಯಿಂದಾಗಿ ಅಂದರೆ ನೀರಾವರಿಯ ವಿಸ್ತರಣೆ, ಯಂತ್ರೋಪಕರಣಗಳ ಬಳಕೆಯಿಂದಾಗಿ ಹುಲ್ಲುಗಾವಲು ಪ್ರದೇಶವನ್ನು ಆಹಾರ ಬೆಳೆಗಳನ್ನು ಬೆಳೆಯಲು ಪರಿವರ್ತಿಸಲಾಗುತ್ತಿದೆ. ಇದರಿಂದ ಇತ್ತೀಚೆಗೆ ಜಾನುವಾರು ಪಾಲನೆ ಕ್ಷೇತ್ರವು ಇಳಿಮುಖವಾಗುತ್ತಿದೆ. ಭಾರತ ಮತ್ತು ಆಗ್ನೇಯ ಏಷ್ಯದ ದೇಶಗಳಲ್ಲಿ ಜಾನುವಾರುಗಳ ಪಾಲನೆಯು ವ್ಯವಸಾಯದೊಡನೆ ಹಾಸುಹೊಕ್ಕಾಗಿದೆ. ಅಲ್ಲದೆ ದೊಡ್ಡ ನಗರಗಳ ಸಮೀಪದಲ್ಲಿ ಜಾನುವಾರು ಪಾಲನೆ ಹಾಲಿನ ಉತ್ಪನ್ನಗಳಿಗಾಗಿ ಅಭಿವೃದ್ಧಿಯಾಗುತ್ತಿದೆ. ಭಾರತ ಪ್ರಪಂಚದಲ್ಲೆ ಅತಿ ಹೆಚ್ಚು ಜಾನುವಾರುಗಳಿರುವ ದೇಶ. (ಡಿ.ಆರ್.)

**ಜಾಫ್ನ:** ಶ್ರೀಲಂಕದ ಎರಡನೆಯ ಅತ್ಯಂತ ದೊಡ್ಡ ನಗರ; ಜಾಫ್ನ ಜಿಲ್ಲೆಯ ಆಡಳಿತ ಕೇಂದ್ರ. ಜಾಫ್ನ ಪರ್ಯಾಯ ದ್ವೀಪದ ತೀರದಲ್ಲಿ ಕೊಲಂಬೋದ ಉತ್ತರಕ್ಕೆ 200 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,45,600. ಜಾಫ್ನ ಪರ್ಯಾಯದ್ವೀಪ ಮತ್ತು ಸಮೀಪದ ದ್ವೀಪಗಳಿಗೆ ಇದೊಂದು ಮುಖ್ಯ ವಾಣಿಜ್ಯ ಕೇಂದ್ರ. ಹಲವು ಶತಮಾನಗಳ ಕಾಲ ಇದು ತಮಿಳು ರಾಜ್ಯದ ರಾಜಧಾನಿಯಾಗಿತ್ತು. 1617ರಲ್ಲಿ ಇದನ್ನು ಪೋರ್ಚುಗೀಸರು ವಶಪಡಿಸಿಕೊಂಡರು. 1658ರಲ್ಲಿ ಇದು ಡಚ್ಚರ ಅಧೀನವಾಯಿತು. ಆ ಕಾಲದಲ್ಲಿ ಇದು ಆಡಳಿತ ಮತ್ತು ವಾಣಿಜ್ಯ ಕೇಂದ್ರವಾಗಿತ್ತು. ಇದರ ಮೂಲಕ ಧಾನ್ಯ, ಮೆಣಸು ಮುಂತಾದವು ರಫ್ತಾಗುತ್ತಿದ್ದುವು. 1795ರಲ್ಲಿ ಬ್ರಿಟಿಷರು ಇದನ್ನು ಆಕ್ರಮಿಸಿಕೊಂಡರು. ಶ್ರೀಲಂಕ ಸ್ವತಂತ್ರವಾಗುವವರೆಗೂ ಇದು ಬ್ರಿಟಿಷರ ವಶದಲ್ಲೇ ಇತ್ತು. ಈಗ ಜಾಫ್ನ ಪ್ರಮುಖ ಬಂದರೇನೂ ಅಲ್ಲ. ಅದರ ಬಳಿಯ ಕಡಲು ಆಳವಿಲ್ಲವಾದ್ದರಿಂದ ದೊಡ್ಡ ಹಡಗುಗಳ ಸಂಚಾರ ಅಸಾಧ್ಯ. ಚಿಕ್ಕ ಹಡಗುಗಳ ಮೂಲಕ ಭಾರತದೊಂದಿಗೆ ವ್ಯಾಪಾರ ಈಗಲೂ ಹೆಚ್ಚಾಗಿ ನಡೆಯುತ್ತದೆ. ಇಲ್ಲಿಂದ ಶ್ರೀಲಂಕದ ಇತರ ಭಾಗಗಳಿಗೆ ರೈಲ್ವೆ ಮತ್ತು ರಸ್ತೆ ಸಂಪರ್ಕವುಂಟು. ಜಾಫ್ನದ ಸುತ್ತ ಹೊಗೆಸೊಪ್ಪು ಹೆಚ್ಚಾಗಿ ಬೆಳೆಯುತ್ತದೆ. ಈ ಬಂದರಿನ ಮುಖಾಂತರ ಧಾನ್ಯ, ತಂಬಾಕು, ತೆಂಗು, ಪನಾಯಿ ನಾರು ಮತ್ತು ಮಾವಿನಹಣ್ಣು ರಫ್ತಾಗುತ್ತವೆ. ಇಲ್ಲಿಯ ಸ್ಥಳೀಯ ಜಲಪ್ರದೇಶಗಳಲ್ಲಿ ಕಡಲಾಮೆ, ಶಂಖಪ್ರಾಣಿ ಮತ್ತು ತ್ರಿಪಾದಿಗಳನ್ನು ಹಿಡಿಯುತ್ತಾರೆ.

ಜಾಫ್ನ ಆಕರ್ಷಕವೂ ವೈಶಿಷ್ಟ್ಯಪೂರ್ಣವೂ ಆದ ನಗರ. ಇಲ್ಲಿ ತಮಿಳು ಸಂಸ್ಕೃತಿ ಪ್ರಧಾನವಾಗಿ ಎದ್ದು ಕಾಣುತ್ತದೆ. ಪೋರ್ಚುಗೀಸ್ ಕಾಲದ ಚರ್ಚುಗಳು ಮತ್ತು ಇತರ ಕಟ್ಟಡಗಳು ಈಗಲೂ ಇವೆ. ರೋಮನ್ ಕೆಥೊಲಿಕ್ ಬಿಷಪ್ ಇದ್ದಾರೆ. ಶಾಲಾಕಾಲೇಜುಗಳೂ ಕಚೇರಿಗಳೂ ಇವೆ.

ಜಾಫ್ನ ಜಿಲ್ಲೆಯಲ್ಲಿ ಜಾಫ್ನ ಪರ್ಯಾಯ ದ್ವೀಪವೇ ಅಲ್ಲದೆ ನೆರೆಯ ದ್ವೀಪಗಳೂ ಸೇರಿವೆ. (ಕೆ.ಆರ್.ಆರ್.)

**ಜಾಮ್‌ನಗರ:** ಭಾರತದ ಗುಜರಾತ್ ರಾಜ್ಯದ ಒಂದು ನಗರ; ಅದೇ ಹೆಸರಿನ ಜಿಲ್ಲೆಯ ಆಡಳಿತ ಕೇಂದ್ರ. ಕಚ್ ಖಾರಿಯ ಬಳಿ, ಬೇಡಿ ಬಂದರಿನ ದಕ್ಷಿಣಕ್ಕೆ, ಸಮುದ್ರತೀರದಿಂದ 10 ಕಿಮೀ ದೂರದಲ್ಲಿ, ರಾಜಕೋಟೆಗೆ ಪಶ್ಚಿಮ–ವಾಯವ್ಯದಲ್ಲಿ 72 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 3,17,362.

ಹಿಂದೆ ಇದು ನವಾನಗರ ಸಂಸ್ಥಾನದ ರಾಜಧಾನಿಯಾಗಿತ್ತು. ಜಾಮ್ ರಾವಲ್, 1540ರಲ್ಲಿ ಜಾಮ್‌ನಗರವನ್ನು ಸ್ಥಾಪಿಸಿದ. 1788ರಲ್ಲಿ ಇದರ ಸುತ್ತ ಕೋಟೆಯನ್ನು ನಿರ್ಮಿಸಲಾಯಿತು. ಹಳೆಯ ನಗರ ಇಕ್ಕಟ್ಟಾದ ಬೀದಿಗಳಿಂದ ಕೂಡಿದೆ. ಲಕೋಠ ವಸ್ತುಸಂಗ್ರಹಾಲಯ, ಕೋಠ ದುರ್ಗ, ಜೈನದೇವಾಲಯಗಳು, ದರ್ಬಾರ್‌ಗಢ ಮುಂತಾದ ಕಟ್ಟಡಗಳು ನಗರದ ಪ್ರಾಚೀನತೆಯನ್ನು ತಿದ್ದಿ ತೋರಿಸುತ್ತವೆ. ಅಲ್ಲಿರುವ ಅರಮನೆಗಳು, ಧನ್ವಂತರಿ ಮಂದಿರ, ವೈದ್ಯಕೀಯ ಕಾಲೇಜು, ಇರ್ವಿನ್ ಆಸ್ಪತ್ರೆ, ರೇಡಿಯಮ್ ಚಿಕಿತ್ಸೆಗಾಗಿ ಸೂರ್ಯಶಾಲೆ–ಇವು ಆಧುನಿಕ ಕಟ್ಟಡಗಳು. ಬಾಂಧನಿ ಕೆಲಸ, ಕಲಾಬತ್ ಲೋಹಕೆಲಸ–ಇವು ಇಲ್ಲಿಯ ಕೆಲವು ಹಳೆಯ ಕೈಕಸಬುಗಳು. ಜಾಮ್ ನಗರದ ವೈಶಿಷ್ಟ್ಯ ನೆಯ್ಗೆ; ಅದರಲ್ಲೂ ರೇಷ್ಮೆ ಕೈಗಾರಿಕೆ. ಹತ್ತಿ, ಉಣ್ಣೆ ಮತ್ತು ಮಿಶ್ರದಾರಗಳಿಂದ ಬಟ್ಟೆ ನೇಯಲಾಗುತ್ತದೆ. ಬಟ್ಟೆ ತಯಾರಿಕೆ ಜಾಮ್‌ನಗರದಲ್ಲಿ ಪ್ರಾರಂಭವಾದಾಗಿನಿಂದ ಇದರ ಸುತ್ತ ಹತ್ತಿ ಬೇಸಾಯ ವಿಸ್ತರಿಸುತ್ತಿದೆ. ತೇಗ ಮತ್ತು ಹಳದಿ–ಕೆಂಪು ಮರಗಳಿಂದಲೂ ಗಂಧದ ಮರಗಳಿಂದಲೂ ಅಲಂಕರಣ ವಸ್ತುಗಳನ್ನೂ ದಿನಬಳಕೆಯ ವಸ್ತುಗಳನ್ನೂ ಮಾಡುತ್ತಾರೆ. ಸಾಲನೀಡಿಕೆ ಮತ್ತು ಕುಶಲಕಲಾ ಶಿಕ್ಷಣಗಳಿಂದ ಗೃಹಕೈಗಾರಿಕೆಗಳು ಬೆಳೆಯತೊಡಗಿವೆ. ಸಿಮೆಂಟ್, ಕುಂಭಕೆಲಸ, ಎಣ್ಣೆ, ಉಪ್ಪು–ಇವು ಇತರ ಕೆಲವು ಮುಖ್ಯಕೈಗಾರಿಕೆಗಳು. ಸರ್ಕಾರಿ ಕಚೇರಿಗಳೂ ಶಾಲಾಕಾಲೇಜುಗಳೂ ಇರುವ ಈ ನಗರ ಒಂದು ವ್ಯಾಪಾರಕೇಂದ್ರ ಕೂಡ. ಇದು ದಕ್ಷಿಣ ಸೌರಾಷ್ಟ್ರದ ಸಾಂಸ್ಕೃತಿಕ, ಆರ್ಥಿಕ ಚಟುವಟಿಕೆಗಳ ಕೇಂದ್ರ. *

ಪೂರ್ವದಲ್ಲಿ ರಾಜಕೋಟೆ, ಪಶ್ಚಿಮದಲ್ಲಿ ದ್ವಾರಕೆಗಳೊಂದಿಗೆ ರಸ್ತೆ ಹಾಗೂ ರೈಲು ಸಂಪರ್ಕವುಂಟು. ಇದು ವಾಧ್ವಾನ್–ರಾಜಕೋಟೆ–ಓಖಾ ರೈಲುಮಾರ್ಗದ ನಡುವೆ ಇರುವುದು ಇದರ ಪ್ರಾಮುಖ್ಯ. ಹಿನ್ನಾಡನ್ನು ಕಡಲಕರೆಯೊಂದಿಗೆ ಕೂಡಿಸುವ ಮುಖ್ಯ ವಾಣಿಜ್ಯಮಾರ್ಗಗಳಲ್ಲಿ ಇದು ಒಂದು. ಇಲ್ಲಿಂದ ಬೇಡಿಗೂ ರೈಲ್ವೆ ಸಂಪರ್ಕ ಉಂಟು.

ಗುಜರಾತ್ ರಾಜ್ಯದ ಕಾಥೇವಾಡ ಪರ್ಯಾಯದ್ವೀಪದ ಜಿಲ್ಲೆಗಳ ಪೈಕಿ ಅತ್ಯಂತ ಪಶ್ಚಿಮದ ಜಿಲ್ಲೆಯಿದು. ಬಾರ್ಡೋ ಬೆಟ್ಟಗಳನ್ನು ಬಿಟ್ಟರೆ ಈ ಜಿಲ್ಲೆ ಬಹುತೇಕ ಮೈದಾನ ಪ್ರದೇಶ. ಈ ಬೆಟ್ಟಗಳ ಮೂರನೆಯ ಎರಡು ಭಾಗ ಈ ಜಿಲ್ಲೆಯಲ್ಲಿ ಹಬ್ಬಿದೆ. ಜಿಲ್ಲೆಯ ಉತ್ತರದಲ್ಲಿ, ಕಚ್ ಖಾರಿಯ ತೀರದ ಉದ್ದಕ್ಕೂ ಗುಲ್ಮ ವೃಕ್ಷಗಳಿವೆ. ಕಚ್ ಖಾರಿಯ ತೀರಪ್ರದೇಶ ಮುಂಗಾರಿನ ಪ್ರಭಾವದಿಂದ ಅಲ್ಪಪ್ರಮಾಣದ ಮಳೆ ಪಡೆಯುವುದು ಆದರೆ ಅದು, ಅನಿಶ್ಚಿತ, ಭೂಮಿ ಅಷ್ಟೇನೂ ಸಾರವತ್ತಾದ್ದಲ್ಲ. ಗೋದಿ, ಹತ್ತಿ, ಜೋಳ, ಬಾಜ್ರ, ಬೇಳೆ, ಆಲೂಗಡ್ಡೆ, ಬತ್ತ ಮುಖ್ಯ ಬೆಳೆಗಳು, ನೇಯ್ಗೆ ಒಂದು ಮುಖ್ಯ ಕಸಬು. ಕರಾವಳಿಯಲ್ಲಿ ಮೀನುಗಾರಿಕೆ ಮುಖ್ಯ. ಜಾಮ್‌ನಗರವಲ್ಲದೆ ದ್ವಾರಕಾ ಮತ್ತು ಓಖಾ ಮುಖ್ಯ ಸ್ಥಳಗಳು. ದ್ವಾರಕಾದ ದೇವಾಲಯಗಳು ಅತ್ಯಂತ ಪ್ರಸಿದ್ಧ. ಓಖಾ ಒಂದು ಬಂದರು. ಇತ್ತೀಚೆಗೆ ಇಲ್ಲಿ ಭಾರತದ ಅತಿದೊಡ್ಡ ತೈಲ ಶುದ್ಧೀಕರಣ ಕೇಂದ್ರವನ್ನು ರಿಲಯನ್ಸ್ ಕಂಪನಿಯು ಸ್ಥಾಪಿಸಿದೆ. (ಎ.ಎನ್.ಆರ್.ಎ.)

**ಜಾರ್ಖಂಡ್ :** ಭಾರತದ 28ನೆಯ ರಾಜ್ಯವಾಗಿ ವಿಧ್ಯುಕ್ತವಾಗಿ ಉಗಮವಾದ್ದು 2000ದ ನವೆಂಬರ್ 15ರಂದು. ಇದು ಬಿಹಾರ ರಾಜ್ಯದಿಂದ ಪ್ರತ್ಯೇಕಗೊಂಡ ರಾಜ್ಯ. ಈ ರಾಜ್ಯ $21^0 58'$ ಉ. ಅ. ದಿಂದ $25^0 16'$ ಉ. ಅ. ದವರೆಗೂ, $83^0 22'$ ಪೂ. ರೇ. ದಿಂದ $87^0 57'$ ಪೂ. ರೇ. ದವರೆಗೂ ವಿಸ್ತರಿಸಿದೆ. ಇದರ ರಾಜಧಾನಿ ರಾಂಚಿ. ಇದರ ಸಮೀಪ ಕಂಕೆ ಎಂಬ ಪ್ರದೇಶದ ಮೂಲಕ ಕರ್ಕಾಟಕ ಸಂಕ್ರಾಂತಿ ವೃತ್ತವು ಹಾದು ಹೋಗಿದೆ. ಈ ರಾಜ್ಯವು ಪೂರ್ವದಲ್ಲಿ ಪಶ್ಚಿಮ ಬಂಗಾಲ, ಪಶ್ಚಿಮದಲ್ಲಿ ಛತ್ತೀಸ್‌ಗಢ ಮತ್ತು ಉತ್ತರ ಪ್ರದೇಶ, ಉತ್ತರದಲ್ಲಿ ಬಿಹಾರ ಹಾಗೂ ದಕ್ಷಿಣದಲ್ಲಿ ಒರಿಸ್ಸ ರಾಜ್ಯಗಳನ್ನು ಮೇರೆಗಳನ್ನಾಗಿ ಹೊಂದಿದೆ. ವಿಸ್ತೀರ್ಣ 79,714 ಚ.ಕಿಮೀ. ದೇಶದ 13ನೆಯ ಜನಭರಿತ ರಾಜ್ಯವಾಗಿದೆ. ಏಕ ಸದನ ರಾಜ್ಯ ಶಾಸಕಾಂಗವನ್ನು ಹೊಂದಿದ್ದು 82 ಶಾಸಕರಿಂದ ಕೂಡಿದೆ. ಈ ರಾಜ್ಯದಲ್ಲಿ 22 ಜಿಲ್ಲೆಗಳಿವೆ.

ಮೇಲ್ಮೈ ಲಕ್ಷಣಗಳು: ರಾಜ್ಯದ ಬಹುತೇಕ ಭಾಗವು ಛೋಟನಾಗಪುರ ಪ್ರಸ್ಥಭೂಮಿಗೆ ಸೇರಿದೆ. ಹಾಗೂ ಸ್ವಲ್ಪ ಭಾಗ ಪಶ್ಚಿಮ ಬಂಗಾಲ, ಛತ್ತೀಸ್‌ಗಢ ಮತ್ತು ಒರಿಸ್ಸ ರಾಜ್ಯದ ಭೂಭಾಗದವರೆಗೂ ವಿಸ್ತರಿಸಿದೆ. ಈ ರಾಜ್ಯವು ಆರ್ಷೇಯನ್ ಪ್ರಾಚೀನ ಗ್ರಾನೈಟ್ ವಿಧದ ಶಿಲೆಗಳಿಂದ ಕೂಡಿದೆ. ಇಲ್ಲಿನ ಪಾರಸ್‌ನಾಥ್ ಬೆಟ್ಟವು 1365 ಮೀ ಎತ್ತರವನ್ನು ಹೊಂದಿದ್ದು ಈ ರಾಜ್ಯದ ಅತಿ ಎತ್ತರವಾದ ಶಿಖರವಾಗಿರುವುದಲ್ಲದೇ ಜೈನರ ಪ್ರಮುಖ ಯಾತ್ರಾ ಸ್ಥಳವಾಗಿದೆ. ಇಲ್ಲಿನ ಬಹುತೇಕ ಭೂಭಾಗ ವೈವಿಧ್ಯಮಯ ಖನಿಜ ಸಂಪತ್ತು ಹೊಂದಿದ್ದು, ಇಲ್ಲಿ ಗಣಿಗಾರಿಕೆ ಸದ್ಯದ ಪ್ರಮುಖ ವೃತ್ತಿಯಾಗಿರುವುದನ್ನು ಕಾಣಬಹುದು.

ಜಲವ್ಯವಸ್ಥೆ: ಈ ರಾಜ್ಯದಲ್ಲಿ ಹಲವು ನದಿ ವ್ಯೂಹಗಳು ಕಂಡು ಬರುತ್ತವೆ. ಇಲ್ಲಿನ ಪ್ರಮುಖ ನದಿಗಳೆಂದರೆ, ರಾಂಚಿ ಪ್ರಸ್ಥಭೂಮಿಯಲ್ಲಿ ಜನಿಸಿ ಉತ್ತರದ ಕಡೆಗೆ ಹರಿದು ಸೋನೆ ನದಿಯೊಡನೆ ಸೇರುವ ಉತ್ತರ ಕೋಯಿಲ್ ನದಿ. ಕೇಂದ್ರದ ಛೋಟಾನಾ ಪ್ರಸ್ಥಭೂಮಿಯಲ್ಲಿ ಜನಿಸಿ, ಶಾಂಖ್ ನದಿಯಲ್ಲಿ ಕೊನೆಗೊಳ್ಳುವ ದಕ್ಷಿಣ ಕೋಯಿಲ್ ನದಿ. ಉತ್ತರ ಛೋಟಾನಾಗ್ಪುರ ಪ್ರಸ್ಥಭೂಮಿಯಲ್ಲಿ ಜನಿಸಿ, ಗಿರಿಧ್ ಮೂಲಕ ಹರಿದು ತಿಲ್ಲೈಯಾ ಅಣೆಕಟ್ಟನ್ನು ಹೊಂದಿರುವ ಬಾರಾಕಾರ್ ನದಿ. ಪಾಲಾಮೌನಲ್ಲಿ ಜನಿಸಿ, ಜಾರ್ಖಂಡ್ ಮತ್ತು ಬಂಗಾಲ ರಾಜ್ಯಗಳಿಗೆ ದುಃಖಕಾರಿ ನದಿಯಾಗಿದ್ದ ದಾಮೋದರ ಇಲ್ಲಿವೆ. ದಾಮೋದರ್ ನದಿ ಕಣಿವೆ ಯೋಜನೆಯ ಅನಂತರ ಅದೊಂದು ವರದಾನವಾಗಿದ್ದು, ಬಂಗಾಲದಲ್ಲಿ ಹೂಗ್ಲಿ ನದಿಯೊಡನೆ ಸೇರುತ್ತದೆ. ಸುವರ್ಣರೇಖಾ ನದಿಯೂ ಸಹ ಛೋಟಾನಾಗ್ಪುರ ಪ್ರಸ್ಥಭೂಮಿಯಲ್ಲಿ ಜನಿಸುತ್ತದೆ. ಇದರ ಮರಳಿನಲ್ಲಿ ಚಿನ್ನದ ನಿಕ್ಷೇಪವನ್ನು ಪತ್ತೆ ಹಚ್ಚಲಾಗಿದೆ. ಇದು ಒರಿಸ್ಸ ರಾಜ್ಯದ ಕಡೆಗೆ ಹರಿಯುತ್ತದೆ.

ಮಣ್ಣಿನ ಪ್ರಕಾರಗಳು: ಈ ರಾಜ್ಯದಲ್ಲಿ ಕಂಡು ಬರುವ ಎಲ್ಲಾ ಮಣ್ಣುಗಳು ಅವಶೇಷ ಮಣ್ಣುಗಳ ಗುಂಪಿಗೆ ಸೇರಿದ್ದು, ಅವುಗಳ ಪ್ರಕಾರ ಮೂಲ ಶಿಲೆಗಳನ್ನಾಧರಿಸಿದೆ. ಜಾರ್ಖಂಡ್ ರಾಜ್ಯದಲ್ಲಿ ಕಂಡುಬರುವ ಪ್ರಮುಖ ಮಣ್ಣುಗಳು ಈ ಕೆಳಕಂಡಂತಿವೆ:

ಕೆಂಪು ಮಣ್ಣು: ದಾಮೋದರ ನದಿ ಕಣಿವೆ ಪ್ರದೇಶ ಮತ್ತು ರಾಜಮಹಲ್ ಬೆಟ್ಟ ಪ್ರದೇಶಗಳಲ್ಲಿ ಕಂಡು ಬರುತ್ತದೆ.

ಅಭ್ರಕಯುಕ್ತ ಮಣ್ಣು: ಈ ಮಣ್ಣಿನಲ್ಲಿ ಅಪಾರ ಪ್ರಮಾಣದ ಅಭ್ರಕದ ಅಂಶವಿದೆ. ಕೊಡೆರ್ಮಾ, ಝೂಮ್ರಿ ತಲ್ಲೈಯಾ, ಮಂದಾರ್ ಮತ್ತು ಬಾರ್ಕಾಗಾಂವ್ ಪ್ರದೇಶದಲ್ಲಿ ಹಂಚಿಕೆಯಾಗಿದೆ.

ಮರಳು ಮಣ್ಣು: ಈ ಪ್ರಕಾರದ ಮಣ್ಣು ಜಾರ್ಖಂಡ್ ರಾಜ್ಯದ ಹಜಾರಿಬಾಗ್ ಮತ್ತು ಧನ್‌ಬಾದ್ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ.

ಜಂಬಿಟ್ಟಿಗೆ ಮಣ್ಣು: ಭೌಗೋಳಿಕವಾಗಿ ಇಳಿಜಾರುಳ್ಳ ಭೂ ಪ್ರದೇಶಗಳಲ್ಲಿ ಈ ಮಣ್ಣು ಹಂಚಿಕೆಯಾಗಿದೆ. ಇಲ್ಲಿನ ಪಶ್ಚಿಮ ರಾಂಚಿ, ಪಲಮಾವು, ಸಂತಾಲ ಪರಗಣ ಮತ್ತು ಸಿಂಘ್‌ಭೂಮ್ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಮಾತ್ರಾ ಈ ಮಣ್ಣು ಹಂಚಿಕೆಯಾಗಿದೆ.

ವಾಯುಗುಣ: ಈ ರಾಜ್ಯ ಉಷ್ಣವಲಯ ವಾಯುಗುಣ ಲಕ್ಷಣವನ್ನು ಹೊಂದಿದೆ. ಅತ್ಯುಷ್ಣವುಳ್ಳ ಬೇಸಗೆ ಮತ್ತು ಶೀತವಾದ ಚಳಿಗಾಲ ಮುಖ್ಯ ಲಕ್ಷಣವಾಗಿದೆ. ಪ್ರಾದೇಶಿಕವಾಗಿ ವಾಯುಗುಣ ಭಿನ್ನತೆಯಿಂದ ಕೂಡಿದೆ. ಅವುಗಳಲ್ಲಿ ರಾಂಚಿ, ನೆಟರಾತ್ ಮತ್ತು ಪಾರಸ್‌ನಾಥ್‌ಗಳು ಬೇಸಗೆ ಅವಧಿಯಲ್ಲಿಯೂ ಸೌಮ್ಯ ವಾಯುಗುಣವನ್ನು ಹೊಂದಿರುತ್ತವೆ. ಈ ರಾಜ್ಯದ ಸರಾಸರಿ ವಾರ್ಷಿಕ ಉಷ್ಣಾಂಶವು $25^0$ಸೆ ಗಳಿದ್ದರೆ, ಗರಿಷ್ಠ ಉಷ್ಣಾಂಶವು $41.8^0$ಸೆ. ರಾಂಚಿಯಲ್ಲಿ ದಾಖಲಾಗಿದೆ. ಸರಾಸರಿ ವಾರ್ಷಿಕ ಮಳೆ 133 ಸೆಂಮೀ ಗಳು. ಜುಲೈನಿಂದ ಸೆಪ್ಟೆಂಬರ್ ತಿಂಗಳುಗಳವರೆಗೆ ಅತ್ಯಧಿಕ ಮಳೆ ಬೀಳುತ್ತದೆ. ಈ ಅವಧಿಯಲ್ಲಿ ವಾರ್ಷಿಕ ಮಳೆಯ ಹಂಚಿಕೆ ಶೇ. 90 ರಷ್ಟು.




ಸಸ್ಯವರ್ಗ ಮತ್ತು ಪ್ರಾಣಿವರ್ಗ: ಈ ರಾಜ್ಯದಲ್ಲಿ ಸಮೃದ್ಧ ಸಸ್ಯವರ್ಗ ಮತ್ತು ಪ್ರಾಣಿವರ್ಗವಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಈ ರಾಜ್ಯವು ಛೋಟಾನಾಗಪುರ ಪ್ರಸ್ಥಭೂಮಿಯ ಒಂದು ಭಾಗವಾಗಿರುವುದೇ ಆಗಿದೆ. ಮುಖ್ಯ ಸಸ್ಯ ವರ್ಗದ ವಿಧಗಳಾದ ತೇವಯುತ ಎಲೆಯುದುರುವ ಮತ್ತು ಶುಷ್ಕ ಎಲೆಯುದುರುವ ಅರಣ್ಯಗಳಿವೆ. ರಾಜ್ಯದ ಒಟ್ಟು ಭೂ ಭಾಗದ ಶೇ. 27.66 ರಷ್ಟು ಭಾಗವು ಅರಣ್ಯಗಳಿಂದ ಕೂಡಿದೆ. ಆದರೆ ಮೊದಲು ಇಲ್ಲಿನ ಅರಣ್ಯ ಪ್ರದೇಶ ಶೇ. 80 ರಷ್ಟಿತ್ತು. ಇತ್ತೀಚೆಗೆ ಇಲ್ಲಿನ ಅರಣ್ಯಪ್ರದೇಶಗಳನ್ನು ಕೃಷಿ ಪ್ರದೇಶವನ್ನಾಗಿ ಪರಿವರ್ತಿಸಿರುವುದರಿಂದ ಅರಣ್ಯ ಪ್ರದೇಶವು ಕಡಿಮೆಯಾಗಿದೆ. ಇಲ್ಲಿನ ಪ್ರಮುಖ ಮರದ ವಿಧಗಳೆಂದರೆ ಹೊನ್ನೆ, ಬಿದಿರು, ಲೇಶಂ, ಮಾಹುಲ ಸೆಮಾಲ್, ಕುಸುಮ್ ಅರಗು ಇತ್ಯಾದಿಗಳಾಗಿವೆ.

ರಾಜ್ಯದಲ್ಲಿ ಕಂಡು ಬರುವ ಪ್ರಮುಖ ಪ್ರಾಣಿವರ್ಗಗಳೆಂದರೆ, ತೋಳ, ಮೊಲ, ಚಿರತೆ, ನೀಲ್‌ಗಾಯ್, ಕೋತಿ, ಆನೆ, ಹುಲಿ, ಜಿಂಕೆ ಮತ್ತು ಸಾರಂಗಗಳು, ಪ್ರಾಣಿ ಮತ್ತು ಅರಣ್ಯ ಸಂರಕ್ಷಣೆ ದೃಷ್ಟಿಯಿಂದ ಸರ್ಕಾರವು ವನ್ಯ ಪ್ರಾಣಿಧಾಮಗಳು ಮತ್ತು ಹಲವು ರಾಷ್ಟ್ರೀಯ ಉದ್ಯಾನವನಗಳನ್ನು ಸ್ಥಾಪಿಸಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

ದಾಲ್ಮ ವನ್ಯಜೀವಿಧಾಮ: ಜೆಂಷೆಡ್ಪುರದಿಂದ 15–20 ಕಿಮೀ ದೂರದಲ್ಲಿರುವ ಈ ವನ್ಯಧಾಮ 1978 ರಲ್ಲಿ ಸ್ಥಾಪನೆಯಾಯಿತು. ಆನೆಗಳನ್ನು ಸಂರಕ್ಷಣೆ ಮಾಡುವುದೇ ಇದರ ಪ್ರಮುಖ ಉದ್ದೇಶವಾಗಿದೆ.

ಮಾಹುಂದಾದ್ ತೋಳಧಾಮ: ಇದು ತೋಳಗಳ ಸಂರಕ್ಷಣೆಗಾಗಿ ಸ್ಥಾಪನೆಗೊಂಡಿದ್ದು ಡಾಲ್ಟೋನ್ ಗಂಜ್‌ನಿಂದ 94 ಕಿಮೀ ದೂರದಲ್ಲಿ ಸ್ಥಾಪನೆಗೊಂಡಿದೆ.

ಬೆಟ್ಲಾ ರಾಷ್ಟ್ರೀಯ ಉದ್ಯಾನವನ: ಈ ಉದ್ಯಾನ 1986 ರಲ್ಲಿ ಸ್ಥಾಪನೆಗೊಂಡು ವ್ಯಾಘ್ರಯೋಜನೆಯನ್ನು ಜಾರಿಗೆ ತಂದಿದೆ. ಆನೆ, ಜಿಂಕೆ, ನೀಲ್‌ಗಾಯ್‌ಗಳು ಇಲ್ಲಿ ಹೆಚ್ಚು ಕಂಡುಬರುತ್ತವೆ.

ಹಜಾರಿಬಾಗ್ ರಾಷ್ಟ್ರೀಯ ಉದ್ಯಾನವನ: ಈ ಉದ್ಯಾನವನ 1976 ರಲ್ಲಿ ಸ್ಥಾಪನೆಯಾಯಿತು. ಇಲ್ಲಿ ಹುಲಿ, ಜಿಂಕೆ, ಕಾಡುಕೋಣ, ಚಿರತೆ ಇತ್ಯಾದಿ ಪ್ರಾಣಿಗಳು ಕಂಡು ಬರುತ್ತವೆ.

ಈ ರಾಜ್ಯದಲ್ಲಿ ಹಲವು ಪಕ್ಷಿಧಾಮಗಳಿವೆ. ಅವುಗಳೆಂದರೆ ತಿಲ್ಲೈಯಾ ಪಕ್ಷಿಧಾಮ, ಲ್ಯಾಗರ್ ಪಕ್ಷಿಧಾಮ, ತೆನುಘಾಟ್ ಪಕ್ಷಿಧಾಮ, ಚಂದ್ರಾಪುರ ಪಕ್ಷಿಧಾಮಗಳು ಪ್ರಮುಖವಾದವುಗಳಾಗಿವೆ.

ಕೃಷಿ: ಕೃಷಿಯನ್ನು ಈ ರಾಜ್ಯದ ಆರ್ಥಿಕತೆಯನ್ನು ನಿರ್ಧರಿಸಬಲ್ಲ ವೃತ್ತಿಯೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಆದರೆ ಇನ್ನೊಂದು ಕಡೆ ರಾಜ್ಯದ ಶೇ. 77 ರಷ್ಟು ಗ್ರಾಮೀಣ ಜನತೆ ಕೃಷಿಯನ್ನು ತಮ್ಮ ಜೀವನ ವೃತ್ತಿಯನ್ನಾಗಿ ಅವಲಂಬಿಸಿದ್ದಾರೆ. ಈ ರಾಜ್ಯ ಖನಿಜ ಸಂಪತ್ತಿನ ತವರಾಗಿದೆ. ಭವಿಷ್ಯದಲ್ಲಿ ಈ ರಾಜ್ಯವು ಕೃಷಿ ಉತ್ಪನ್ನಗಳಿಗಾಗಿ ಬೇರೆ ರಾಜ್ಯಗಳನ್ನು ಅವಲಂಬಿಸಬೇಕಾಗುತ್ತದೆ. ಈ ಕಾರಣದಿಂದಲೇ ಹೊಸ ರಾಜ್ಯ ಸೃಷ್ಟಿಯೊಂದಿಗೆ ರಾಜ್ಯದಲ್ಲಿ ಕೃಷಿ ಅಭಿವೃದ್ಧಿ ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಹಲವಾರು ಹೊಸ ಯೋಜನೆಗಳನ್ನು ಪ್ರಕಟಿಸಲಾಗಿದೆ. ಬತ್ತ ಈ ರಾಜ್ಯದ ಪ್ರಮುಖ ಆಹಾರ ಬೆಳೆಯಾಗಿದ್ದರೆ, ದ್ವಿದಳ ಧಾನ್ಯಗಳು ಮತ್ತು ಗೋದಿ ಇತರೆ ಉತ್ಪನ್ನಗಳಾಗಿವೆ. ಕೃಷಿಯಲ್ಲಿ ಜಾರಿಗೊಳಿಸಿರುವ ಹೊಸ ಕೃಷಿ ನೀತಿಯಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಸುಧಾರಣೆ, ಸಾಗುವಳಿ ಭೂಮಿ ವಿಸ್ತರಣೆ, ನೀರಾವರಿ ಸೌಲಭ್ಯದ ಪ್ರಗತಿ ಹಾಗೂ ಕೃಷಿ ಸಂಬಂಧಿ ವ್ಯಾಪಾರಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ಈ ರಾಜ್ಯದಲ್ಲಿ ದಾಮೋದರ ನದಿ ಕಣಿವೆ ಯೋಜನೆ ಹಾಗೂ ನೀರಾವರಿ ಉದ್ದೇಶಗಳನ್ನೊಳಗೊಂಡ ಹಲವಾರು ಯೋಜನೆಗಳನ್ನು ಸ್ಥಾಪಿಸಲಾಗಿದೆ. ಪ್ರಮುಖವಾದವುಗಳೆಂದರೆ, ತಿಲೈಯೂ, ಕೋನಾರ್, ಮೈಥಾನ್ ಮತ್ತು ಪಂಚೆಟ್ ಹಿಲ್ ಹಾಗೂ ಬೊಕಾರೋ ಅಣೆಕಟ್ಟುಗಳಾಗಿವೆ.

ನೈಸರ್ಗಿಕ ಸಂಪನ್ಮೂಲಗಳು: ಈ ರಾಜ್ಯವು ಖನಿಜ ಸಂಪನ್ಮೂಲಗಳಲ್ಲಿ ಅತಿ ಶ್ರೀಮಂತವಾದುದು. ರಾಷ್ಟ್ರದ ಒಟ್ಟು ಖನಿಜ ನಿಕ್ಷೇಪಗಳಲ್ಲಿ ಶೇ. 35 ರಷ್ಟು ಈ ರಾಜ್ಯದಲ್ಲಿದೆ. ಸುವರ್ಣರೇಖಾ ನದಿಯ ಪ್ರದೇಶವು ಚಿನ್ನದ ನಿಕ್ಷೇಪಕ್ಕೆ ಖ್ಯಾತಿ ಹೊಂದಿದ್ದರೆ, ದಾಮೋದರ ನದಿ ಕಣಿವೆಯು ಕಲ್ಲಿದ್ದಲು ನಿಕ್ಷೇಪವನ್ನು ಹೊಂದಿದೆ. ಇದಲ್ಲದೆ, ತಾಮ್ರ, ಕಬ್ಬಿಣದ ಅದಿರು, ಮ್ಯಾಂಗನೀಸ್, ಬಾಕ್ಸೈಟ್, ಅಭ್ರಕ, ಯುರೇನಿಯಂ ಮುಂತಾದ ಖನಿಜಗಳ ಅಪಾರವಾದ ನಿಕ್ಷೇಪವನ್ನು ಹೊಂದಿದೆ.

ಭಾರತದ ಗಣಿ ನಿರ್ದೇಶನಾಲಯದ 1992ರ ವರದಿಯ ಪ್ರಕಾರ, ಜಾರ್ಖಂಡ್ ಪ್ರದೇಶದ ಅದಿರು ಉತ್ಪಾದನೆಯ ಪ್ರಮಾಣ ರಾಷ್ಟ್ರದ ಪ್ರಮಾಣಕ್ಕೆ ಹೋಲಿಸಿದಾಗ ತಾಮ್ರ – ಶೇ. 33.85, ಕಲ್ಲಿದ್ದಲು – ಶೇ. 32.98, ಕಬ್ಬಿಣ – ಶೇ. 23.22, ಗ್ರಾಫೈಟ್– ಶೇ. 17.19, ಅಭ್ರಕಾ – ಶೇ. 46.51 ಗಳಷ್ಟು ಪ್ರಮಾಣದಲ್ಲಿದೆ.

ಕಬ್ಬಿಣದ ಅದಿರು: ಇಲ್ಲಿನ ಅದಿರು ಶೇ. 60–70 ರಷ್ಟು ಕಬ್ಬಿಣಾಂಶವುಳ್ಳ ಉತ್ತಮದರ್ಜೆಯದು. ಪ್ರಮುಖ ಗಣಿಗಳು ಕಿರಿಬುರು, ನೋಮಂಡಿಗಳಲ್ಲಿವೆ. ಈ ರಾಜ್ಯವು ಉತ್ಪಾದಿಸಿದ ಕಬ್ಬಿಣದ ಅದಿರನ್ನು ಜೆಮ್‌ಷಡ್ಪುರ, ಬೊಕಾರೋ, ದುರ್ಗಾಪುರ ರೂರ್ಕೆಲಾ ಮತ್ತು ಭಿಲಾಯ್ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿಗೆ ಪೂರೈಸಲಾಗುತ್ತಿದೆ.

ಮ್ಯಾಂಗನೀಸ್: ಗಣಿಗಳು ಗುಅ, ನೋಮಂಡಿ, ಜಾಮ್ಡ ಮತ್ತು ಜೈಬಾಸಗಳಲ್ಲಿ ಕಂಡುಬರುತ್ತವೆ.

ಕ್ರೋಮಿಯಂ: ಅದಿರು ಸಿಂಘ್‌ಭೂಮ್‌ನಲ್ಲಿ ಕಂಡು ಬರುತ್ತದೆ.

ತಾಮ್ರ: ಸಿಂಘ್‌ಭೂಮ್ ಜಿಲ್ಲೆಯ ಘಟ್ಸಿಲಾ, ರಾಖಾ, ಮುಸಬಾನಿ, ಪ್ರದೇಶಗಳಲ್ಲಿ ಕಂಡು ಬರುತ್ತದೆ.

ಕಲ್ಲಿದ್ದಲು:– ಕಲ್ಲಿದ್ದಲು ಗಣಿಗಳು ಇಲ್ಲಿನ ಝರಿಯ, ಚಂದ್ರಪುರ, ಬೊಕಾರೋ, ರಾಮ್‌ಗರ್, ಕರನ್‌ಪುರ, ಮಂಡು, ಚಾರ್ಪಿ, ರಾಜಮಹಲ್ ಮತ್ತು ಡಾಲ್ಟನ್ ಗಂಜ್ ಪ್ರದೇಶಗಳಲ್ಲಿ ಕಂಡುಬರುತ್ತವೆ.

ಶಕ್ತಿ ಸಂಪನ್ಮೂಲ: ಈ ರಾಜ್ಯದಲ್ಲಿ ಅಪಾರ ಪ್ರಮಾಣದ ಕಲ್ಲಿದ್ದಲು ನಿಕ್ಷೇಪವಿದೆ. ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಕಡಿಮೆ ಅವಕಾಶವಿರುವುದರಿಂದ ಶಾಖೋತ್ಪನ್ನ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪಾದಿಸಲಾಗುತ್ತಿದೆ. ಇಲ್ಲಿರುವ ಪ್ರಮುಖ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳೆಂದರೆ, ಬೊಕಾರೋ, ಚಂದ್ರಪುರ ಪತ್ರಾಟು, ತೆನುಘಾಟ್, ಸ್ಥಾವರಗಳಲ್ಲದೇ, ಮೈಥಾನ್ ಮತ್ತು ಪಂಚೈಟ್ ಹಿಲ್ ಜಲವಿದ್ಯುಚ್ಛಕ್ತಿ ಉತ್ಪಾದನ ಯೋಜನೆಗಳು ಸ್ಥಾಪನೆಗೊಂಡಿದೆ.

ಕೈಗಾರಿಕೆಗಳು: ಈ ರಾಜ್ಯವು ರಾಷ್ಟ್ರದಲ್ಲೇ ಅತಿ ಹೆಚ್ಚಿನ ಕೈಗಾರೀಕೀಕರಣವನ್ನು ಹೊಂದಿರುವ ಪ್ರದೇಶಗಳನ್ನು ಒಳಗೊಂಡಿದೆ. ರಾಷ್ಟ್ರದಲ್ಲೇ ಅತಿ ದೊಡ್ಡದಾದ ಬೊಕಾರೋ ಉಕ್ಕು ಸ್ಥಾವರ, ಜೆಮ್‌ಷೆಡ್ಪುರದ ಟಾಟಾ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ (ಟಿಸ್ಕೊ), ಟಾಟಾ ಮೋಟರ್ಸ್‌ಗಳಲ್ಲದೆ, ರಾಂಚಿಯಲ್ಲಿ ಭಾರಿ ಎಂಜಿನಿಯರಿಂಗ್ ಕಾರ್ಪೋರೇಷನ್ ಮುಂತಾದ ಕೈಗಾರಿಕೆಗಳು ಇಲ್ಲಿ ಸ್ಥಾಪನೆಗೊಂಡಿವೆ.

ಈ ರಾಜ್ಯದಲ್ಲಿ 1779 ರಲ್ಲಿ ಝರಿಯ ಎಂಬ ಸ್ಥಳದಲ್ಲಿ ಉಕ್ಕನ್ನು ಉತ್ಪಾದಿಸಲು ಪ್ರಥಮ ಪ್ರಯತ್ನವನ್ನು ನಡೆಸಲಾಗಿತ್ತಾದರೂ, ಅದು ಯಶಸ್ವಿಯಾಗದೇ 1907 ರಲ್ಲಿ ಜೆಮ್‌ಷೆಡ್ಪುರದಲ್ಲಿ ಸ್ಥಾಪಿಸಲಾಯಿತು. ಇದು 20 ಲಕ್ಷ ಟನ್‌ಗಳಷ್ಟು ಸಾಮರ್ಥ್ಯದೊಂದಿಗೆ ಜೆ.ಆರ್.ಡಿ ಟಾಟಾ ರವರಿಂದ ಸ್ಥಾಪನೆಯಾಯಿತು.

ಬೊಕಾರೋ ಉಕ್ಕು ಸ್ಥಾವರ: 1967 ರಲ್ಲಿ ರಷ್ಯದ ಸಹಯೋಗದಿಂದ ಸ್ಥಾಪನೆಯಾಯಿತು. ಇದು ಏಷ್ಯ ಖಂಡದಲ್ಲೇ ಅತಿ ದೊಡ್ಡ ಉಕ್ಕು ಸ್ಥಾವರವಾಗಿದೆ.

ಅಲ್ಯೂಮಿನಿಯಂ ಕೈಗಾರಿಕೆ: ಭಾರತೀಯ ಅಲ್ಯೂಮಿನಿಯಂ ಕಂಪೆನಿ ಲಿಮಿಟೆಡ್ ಎಂಬ ಸ್ಥಾವರವು ಮುರಿ ಎಂಬ ಸ್ಥಳದಲ್ಲಿ ಸ್ಥಾಪನೆಗೊಂಡಿದೆ. ಇದರ ಉತ್ಪಾದನಾ ಸಾಮರ್ಥ್ಯ 54,000 ಟನ್‌ಗಳು.

ಇಂಡಿಯನ್ ಕಾಪರ್ ಕಾರ್ಪೋರೇಷನ್: ಇದು ಸಿಂಘ್‌ಭೂಮ್ ಜಿಲ್ಲೆಯ ಘಟ್ಸಿಲಾ ಎಂಬಲ್ಲಿ ಸ್ಥಾಪನೆಗೊಂಡಿದೆ. ಇದರ ಉತ್ಪಾದನಾ ಸಾಮರ್ಥ್ಯ 76,000 ಟನ್‌ಗಳು.

ಕಲ್ಲಿದ್ದಲು ಶುದ್ಧೀಕರಣ ಕೇಂದ್ರಗಳು: ಜಮದೋಬ. ಕಯಾಲಿ, ಕರನ್‌ಪುರ, ಪಶ್ಚಿಮ ಬೊಕಾರೋ ಲೂದ್ನಾ ಮುಂತಾದ ಪ್ರದೇಶಗಳಲ್ಲಿ ಸ್ಥಾಪನೆಗೊಂಡಿವೆ.

ರೈಲ್ವೆ ಎಂಜಿನ್ ಕೈಗಾರಿಕೆಗಳು: 1921 ರಲ್ಲಿ ಸಿಂಘ್‌ಭೂಮ್ ಜಿಲ್ಲೆಯಲ್ಲಿ ಪೆನಿನ್ಸುಲಾರ್ ಲೋಕೋಮೋಟಿವ್ ಕಂಪೆನಿ ಸ್ಥಾಪನೆಗೊಂಡು, 1945 ರಲ್ಲಿ ಟಾಟಾ ಎಂಜಿನಿಯರಿಂಗ್ ಮತ್ತು ಲೋಕೋಮೋಟಿವ್ ಕಂಪೆನಿಯಾಗಿ ಇದು ಪುನರ್ ನಾಮಕರಣಗೊಂಡಿತು. ಇಂದು ಇದು ರೈಲ್ವೆ ಗಾಡಿಗಳು ಮತ್ತು ರೈಲಿನ ಬಿಡಿ ಭಾಗಗಳನ್ನು ಉತ್ಪಾದಿಸುತ್ತಿದೆ.

ಹೆವಿ ಇಂಜಿನಿಯರಿಂಗ್ ಕಾರ್ಪೋರೇಷನ್:– 1958 ರಲ್ಲಿ ರಷ್ಯದ ನೆರವಿನಿಂದ ರಾಂಚಿಯಲ್ಲಿ ಸ್ಥಾಪನೆಯಾಯಿತು. ಇದು ಕೈಗಾರಿಕೆಗಳಿಗೆ ಬೇಕಾದ ಭಾರೀ ಯಂತ್ರಗಳನ್ನು ಉತ್ಪಾದಿಸಲು ಆರಂಭಿಸಿದ್ದರಿಂದ ಭಾರತದಲ್ಲಿನ ಈ ಯಂತ್ರಗಳ ಆಮದಿನ ಪ್ರಮಾಣ ಕಡಿಮೆಯಾಗಲು ಸಹಾಯಕವಾಯಿತು. ಈ ರಾಜ್ಯವು ಮೂರು ಕೈಗಾರಿಕಾ ಪ್ರದೇಶಗಳನ್ನು ಹೊಂದಿದೆ. ಅವುಗಳೇ ಆದಿತ್ಯಪುರ ಕೈಗಾರಿಕಾ ಪ್ರದೇಶ, ರಾಂಚಿ ಕೈಗಾರಿಕಾ ಪ್ರದೇಶ ಮತ್ತು ಬೊಕಾರೋ ಕೈಗಾರಿಕಾ ಪ್ರದೇಶಗಳಾಗಿವೆ.

ಸಾರಿಗೆ ಮತ್ತು ಸಂಪರ್ಕ: ಈ ರಾಜ್ಯವು ಬಿಹಾರ ರಾಜ್ಯದಿಂದ ಪ್ರತ್ಯೇಕವಾದ ನಂತರ ಇಲ್ಲಿನ ರಸ್ತೆ ಮತ್ತು ಸಂಪರ್ಕದ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲಾಗಿದೆ. ಇಲ್ಲಿನ ರಾಜ್ಯ ಹೆದ್ದಾರಿಯ ಒಟ್ಟು ಉದ್ದ 4,662 ಕಿಮೀ ಗಳಷ್ಟಿದ್ದರೆ ರಾಷ್ಟ್ರೀಯ ಹೆದ್ದಾರಿಯ ಉದ್ದ 1,006 ಕಿಮೀ ಗಳಷ್ಟಿದೆ. ಒಟ್ಟು 152 ಪಟ್ಟಣ ಕೇಂದ್ರಗಳು ಈ ರಾಜ್ಯದಲ್ಲಿದೆ.

ಈ ರಾಜ್ಯದ ರಾಂಚಿ, ಜೆಮ್‌ಷೆಡ್ಪುರ, ಬೋಕಾರೋ, ಗಿರಿಢ್, ದಿಯೋಘರ್ ಹಜಾರಿಬಾಗ್, ಡಾಲ್ಟನ್‌ಗಂಜ್ ಮತ್ತು ನೋಮಂಡಿಗಳಲ್ಲಿ ತಾತ್ಕಾಲಿಕ ಹೆಲಿಪ್ಯಾಡ್‌ಗಳು ಮತ್ತು ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲಾಗಿದೆ.

ವಾಣಿಜ್ಯ: ರಾಜ್ಯದಲ್ಲಿ ಹಲವಾರು ಪಟ್ಟಣ ಕೇಂದ್ರಗಳಿವೆ. ಬುಡಕಟ್ಟು ಜನರಿಂದ ತಯಾರಾದ ಕರಕುಶಲ ವಸ್ತುಗಳ ಮಾರಾಟ ಹಾಗೂ ವ್ಯಾಪಾರ ಈ ರಾಜ್ಯದಲ್ಲಿ ಕಂಡು ಬರುತ್ತದೆ. ಇಲ್ಲಿಯೂ ಸಹ ಐತಿಹಾಸಿಕ, ಧಾರ್ಮಿಕ ಕೇಂದ್ರಗಳು, ಜಲಪಾತಗಳು, ನೈಸರ್ಗಿಕ ಪ್ರಾಕೃತಿಕ ತಾಣಗಳು ಇರುವುದರಿಂದ ಪ್ರವಾಸಿ ಸ್ಥಳಗಳು ಪ್ರಖ್ಯಾತಿ ಪಡೆದಿವೆ. ರಾಜ್ಯದ ಆರ್ಥಿಕತೆಯಲ್ಲಿ ಪ್ರವಾಸೋದ್ಯಮದ ಪಾತ್ರ ಪ್ರಮುಖವಾದದ್ದು.

ಜನಸಂಖ್ಯೆ: 2001ರ ಜನಗಣತಿಯ ಪ್ರಕಾರ ರಾಜ್ಯ 2.69 ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿ 1.39 ಕೋಟಿ ಪುರುಷರ ಸಂಖ್ಯೆಯಿದ್ದರೆ, 1.30 ಕೋಟಿ ಮಹಿಳೆಯರ ಪ್ರಮಾಣವಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 22.2 ರಷ್ಟು ನಗರವಾಸಿಗಳು ಮತ್ತು ಶೇ. 77.8 ರಷ್ಟು ಗ್ರಾಮೀಣವಾಸಿಗಳು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 11.9 ರಷ್ಟು ಪರಿಶಿಷ್ಟ ಜಾತಿ ಮತ್ತು ವರ್ಗ ಹಾಗೂ ಶೇ. 26.3 ರಷ್ಟು ಬುಡಕಟ್ಟು ಜನಾಂಗದವರು ಲಿಂಗಾನುಪಾತದ ಪ್ರಮಾಣ 941. ರಾಜ್ಯದ ಜನಸಾಂದ್ರತೆಯು ಪ್ರತಿ ಚದರ ಕಿ.ಮೀಗೆ 338 ರಷ್ಟಿದೆ. 1991–2001ರ ದಶಮಾನಿಕ ಜನಸಂಖ್ಯಾ ಬೆಳವಣಿಗೆಯ ದರ 23.36% ರಷ್ಟಿದೆ.

ಇಲ್ಲಿನ ಪ್ರಮುಖ ಬುಡಕಟ್ಟು ಜನಾಂಗದವರೆಂದರೆ ಸಂತಾಲರು, ಕೊರ್ಬಾ, ಓರಾನ್, ಆಸೂರ್, ಡೌರಿಯಾ, ಪಹರಿಯಾ, ಪಹಾರಿ ಖಾರಿಯಾ, ಖಾರ್ವಾರ್ ಮತ್ತು ಮುಂಡಾಗಳಾಗಿದ್ದಾರೆ. ಕಡಿಮೆ ಸಂಖ್ಯೆಯುಳ್ಳ ಬುಡಕಟ್ಟಿನ ಜನಾಂಗದವರೆಂದರೆ ಮಾಲ್ ಪಹಾರಿಯಾ, ಬಿರ್ಜಿಯಾ, ಕರ್ಮಾಲಿ, ಬಿರ್ಹೋರ್ ಜನಾಂಗದವರು.

ಸಾಕ್ಷರತೆ: ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 54.13 ರಷ್ಟಿದೆ. ಪುರುಷರ ಸಾಕ್ಷರತಾ ಪ್ರಮಾಣವು ಶೇ. 68 ರಷ್ಟಿದ್ದರೆ, ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ. 40 ರಷ್ಟಿದೆ.

ಪ್ರಮುಖ ನಗರ ಮತ್ತು ಪಟ್ಟಣಗಳು: ರಾಂಚಿ, ಬೊಕಾರೋ, ಚತ್ರ ದೇವ್‌ಘರ್, ಧನ್‌ಬಾದ್, ಘರ್ವಾ, ಗಿರಿಢ್, ಗೊಡ್ಡಾ, ಗುಮ್ಲಾ, ಹಜಾರಿಬಾಗ್, ಜಮ್ತಾರ, ಕೊಡರ್ಮಾ ಲತೆಹಾರ್, ಲೋಹರ್ ದಾಗ, ಪಾಕೂರ್, ಡಾಲ್ಟೆನ್‌ಗಾಂಜ್, ಜೈಬಾಸ, ಜೆಮ್‌ಷೆಡ್ಪುರ, ಸಾಹಿಬ್‌ಗಂಜ್, ದುಮ್ಕಾ, ಸಾರೈಕೆಲಾ, ಸಿಮ್ದೇಗ ಪ್ರಮುಖ ಜಿಲ್ಲಾ ಕೇಂದ್ರಗಳಾಗಿವೆ. (ಎಚ್.ಎಚ್.)

# ಜಾರ್ಜ್ ಎವರೆಸ್ಟ್ – ಜಾರ್ಜಿಯ[1]

**ಜಾರ್ಜ್ ಎವರೆಸ್ಟ್ :** 1770–1866. ಭಾರತದ ಹೆಸರಾಂತ ಮೋಜಣಿದಾರ, ಭೂಗೋಳ ವಿಜ್ಞಾನಿ. 1770 ಜುಲೈ 4 ರಂದು ಜನಿಸಿದರು. ದಕ್ಷಿಣ ಭಾರತದಿಂದ ಉತ್ತರದ ನೇಪಾಲದವರೆಗೂ ಸು. 2,400 ಕಿಮೀ ತ್ರಿಕೋನ ಮಿತಿಯ ಮೋಜಣಿ ಮಾಡಿದವರು. ಮೋಜಣಿ ವ್ಯವಸ್ಥೆ 1806 ರಲ್ಲಿ ವಿಲಿಯಂ ಲ್ಯಾಂಬ್ಟನ್‌ನಿಂದ ಆರಂಭವಾಯಿತು. ಅನಂತರ ಆತನ ಉತ್ತರಾಧಿಕಾರಿಯಾದ ತ್ರಿಕೊವೆಲ್ ಸಮೀಪ ಗ್ವೆರ್‌ನ್‌ವೆಲ್ ಮಾನೊರ್‌ನಲ್ಲಿ ಜನಿಸಿದ ಇವರು ವುಲ್‌ವಿಚ್‌ನ ರಾಯಲ್ ಮಿಲಿಟರಿ ಅಕಾಡೆಮಿಯಲ್ಲಿ ಅಭ್ಯಾಸಿಸಿ ಗಣಿತಶಾಸ್ತ್ರದಲ್ಲಿ ಉತ್ತಮ ಸ್ಥಾನ ಪಡೆದರು. 1818ರಲ್ಲಿ ವಿಲಿಯಂ ಲ್ಯಾಂಬಟಿನ್‌ಗೆ ಸಹಾಯಕನಾದ್ದರು. 1823 ರಲ್ಲಿ ಮೋಜಣಿ ಅಧೀಕ್ಷಕನಾಗಿ ನೇಮಕಗೊಂಡರು. 1830–43ರವರೆಗೆ ಭಾರತದ ಸರ್ವೆಯರ್–ಜನರಲ್ ಆಗಿ ಸೇವೆಸಲ್ಲಿಸಿದರು.



ಎವರೆಸ್ಟ್ 1843 ರಲ್ಲಿ ಇಂಗ್ಲೆಂಡ್‌ಗೆ ಹಿಂದಿರುಗಿ, ಅಲ್ಲಿ ರಾಯಲ್ ಜಿಯೋಗ್ರಾಫಿಕ್ ಸೊಸೈಟಿಯ ಸದಸ್ಯರಾದರು. 1862 ರಲ್ಲಿ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿಗೆ ಉಪಾಧ್ಯಕ್ಷನಾಗಿ ಸರ್ ಪದವಿ ಪಡೆದರು. ಪರ್ವತಾರೋಹಣ ಮತ್ತು ಮೋಜಣಿಗೆ ಸಂಬಂಧಿಸಿದ ಇವರ ಕೊಡುಗೆಯನ್ನು ಗಮನಿಸಿ ಪ್ರಪಂಚದ ಅತ್ಯುನ್ನತ ಪರ್ವತ ಶಿಖರಕ್ಕೆ ಇವರ ಹೆಸರನ್ನಿಡಲಾಯಿತು. ಇವರು 1866 ಡಿಸೆಂಬರ್ 1 ರಂದು ನಿಧನರಾದರು.

(ಕೆ.ಎನ್.ಯು.)

**ಜಾರ್ಜ್ ಲೂಯಿಸ್ ಲೆಕ್ಲರ್ ಕಾಮ್ಟ ಡಿ ಬಫೆನ್:** 1707–88. ಫ್ರಾನ್ಸ್ ದೇಶದ ಪ್ರಕೃತಿ ವಿಜ್ಞಾನಿ, ಗಣಿತವಿಜ್ಞಾನಿ, ಜೀವವಿಜ್ಞಾನಿ, ವಿಷೋತ್ಪತ್ತಿ ಮೊದಲಾದ ವಿಷಯಗಳಲ್ಲಿ ಪ್ರಾವೀಣ್ಯ ಪಡೆದಿದ್ದವ. ಈತನ ವಿಚಾರಧಾರೆಗಳು ಎರಡು ತಲೆಮಾರುಗಳ ಕಾಲ ನಿಸರ್ಗವಾದಿಗಳ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿದವು. ಅದರ ಪ್ರಭಾವಕ್ಕೆ ಒಳಗಾದವರಲ್ಲಿ ಜೀನ್ ಬ್ಯಾಪ್ಟಿಸ್ಟ್ ಲಾಮಾರ್ಕ್ ಮತ್ತು ಚಾರ್ಲ್ಸ್ ಡಾರ್ವಿನ್ ಸೇರಿದ್ದಾರೆ. ಡಾರ್ವಿನ್ ತನ್ನ ಗ್ರಂಥ ಆರಿಜಿನ್ ಆಫ್ ಸ್ಪೀಸೀಸ್‌ನ ಆರನೆಯ ಮರು ಮುದ್ರಣದಲ್ಲಿ ಲೇಖಕನ ಸ್ವಾಭಾವಿಕ ಆಯ್ಕೆಯ ಪ್ರಕ್ರಿಯೆ ಬಗ್ಗೆ ಪ್ರಸ್ತಾಪಿಸುತ್ತ ಅರಿಸ್ಟಾಟಲ್ ಬಗ್ಗೆ ತಿಳಿಸುತ್ತ ಆಧುನಿಕ ಕಾಲದ ವೈಜ್ಞಾನಿಕ ಚಿಂತಕನಾದ ಬಫೆನ್‌ಗೆ ಕೃತಿ ಸಮರ್ಪಣೆ ಮಾಡಿದ್ದಾನೆ.

ಬಫೆನ್ ಮಾಂಟೆಬಾರ್ಡ್‌ನಲ್ಲಿ ಜನಿಸಿದ. ಈತ 10 ವರ್ಷದ ಬಾಲಕನಾಗಿದ್ದಾಗ ಜೀಸುಟ್ ಕಾಲೇಜಿಗೆ ಸೇರಿದ ಆನಂತರ ಆಂಗರ್ಸ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿದ. ಈತ ಕಾನೂನು ಶಾಸ್ತ್ರದ ವಿದ್ಯಾರ್ಥಿ. ಆದರೆ ಈತನ ಮನಸ್ಸು ಗಣಿತಶಾಸ್ತ್ರ ಮತ್ತು ವಿಜ್ಞಾನದ ಕಡೆ ಸರಿಯಿತು, ಅಲ್ಲಿಗೆ ವಿಶ್ವವಿದ್ಯಾಲಯದ ವ್ಯಾಸಂಗ ಮುಗಿಸಿ ವಿದೇಶ ಪ್ರವಾಸಕ್ಕೆಂದು ಯುರೋಪಿಗೆ ತೆರಳಿದ, ಈತ ಹಿಂದಿರುಗುತ್ತಿರುವ ಸಮಯದಲ್ಲಿ ಈತನ ತಂದೆ ಬೆಂಜಾಮಿನ್ ಲೆಕ್ಲರ್ ಮರುವಿವಾಹವಾಗಿದ್ದ. ಬಫೆನ್‌ಗೆ ಪಿತ್ರಾರ್ಜಿತ ಬಾಧ್ಯತೆಯ ಹೆದರಿಕೆ ಹುಟ್ಟಿತು.

ಇದಾದ ಅನಂತರ ಲೆಕ್ಲರ್ ಮೊದಲು ಗಣಿತಕ್ಷೇತ್ರದಲ್ಲಿ ಇನ್‌ಟ್ರಡೂಸ್‌ಡ್ ಡಿಫರೆಂಷಿಯಲ್ ಅಂಡ್ ಇಂಟಿಗ್ರಲ್ ಕ್ಯಾಲ್ಕುಲಸ್ ಇನ್‌ಟು ಪ್ರೊಬ್ಯಾಬಿಲಿಟಿ ಥಿಯರಿ ಬರೆದ. ಈ ಅವಧಿಯಲ್ಲಿ ಈತ ಖ್ಯಾತ ಗಣಿತವಿಜ್ಞಾನಿ ಗಬ್ರಿಯಲ್ ಕ್ರಾಮಲ್ ಜೊತೆ ನಿಕಟವಾಗಿದ್ದ. ಅನಂತರ ಫ್ರಾನ್ಸ್ ದೇಶಕ್ಕೆ ತೆರಳಿ ಫ್ರೆಂಚ್ ಅಕಾಡೆಮಿ ಆಫ್ ಸೈನ್ಸ್ ಸೇರಿದ. 1749–78ರ ಅವಧಿಯಲ್ಲಿ ಸು. 45 ಗ್ರಂಥಗಳನ್ನು ಪ್ರಕಟಿಸಿದ.

ಹಿಸ್ಟರಿ ನ್ಯಾಚುರಲಿ, ಜನರಲ್ ಅಂಡ್ ಪರ್ಟಿಕ್ಯುಲರ್ ಎಂಬುದು ಈತನ ಪ್ರಸಿದ್ಧ ಕೃತಿ. ಇದು ಪ್ರಾಕೃತಿಕ ಭೂಗೋಳದ ಬಗ್ಗೆ ಬೆಳಕು ಚೆಲ್ಲುವ ಗ್ರಂಥ.

ಒಂದೇ ರೀತಿಯ ಪರಿಸರದಲ್ಲಿ, ವಿವಿಧ ಪ್ರದೇಶಗಳಲ್ಲಿ ಒಂದೇ ತೆರನಾದ ಸಸ್ಯಗಳು ಮತ್ತು ಪ್ರಾಣಿಗಳಿರುತ್ತವೆ ಎಂದು ಬಫೆನ್ ತಿಳಿಸಿದ. ಅನಂತರ ಇದು ಬಫೆನ್‌ರ ಕಲ್ಪನೆಯ ನಿಯಮ ಎಂದೇ ಪ್ರಖ್ಯಾತಿಯಾಯಿತು. ಇದನ್ನು ಜೈವಿಕ ಭೂಗೋಳಶಾಸ್ತ್ರದ ಮೂಲ ಅಂಶ ಎಂದು ಪರಿಗಣಿಸಲಾಗಿದೆ. ಈತನ ನಿಯಮದ ಪ್ರಕಾರ ಪ್ರಭೇದಗಳು ಸೃಷ್ಟಿಯ ಮೂಲ ಕೇಂದ್ರದಿಂದ ಮುಂದುವರಿದು ಚದುರಿದಂತೆ ಜೀವವರ್ಗಗಳು ಎರಡು ತರದಲ್ಲಿ ಸುಧಾರಣೆ ಮತ್ತು ಅವನತಿಯನ್ನು ಹೊಂದುವುದು ಎಂದು ಪ್ರತಿಪಾದಿಸಿದ. ಹಾಗೆಯೇ ಹವಾಮಾನದ ವೈಪರೀತ್ಯಗಳು ಪ್ರಪಂಚದಾದ್ಯಂತ ಕೇಂದ್ರದಿಂದ ಹಂಚಿಕೆಯಾಗಲು ಸಹಾಯವಾಗಿದೆ ಎಂದು ತಿಳಿಸಿದ.

ಈತ ಮಂಗ ಮತ್ತು ಮಾನವರ ನಡುವಿನ ಸಾಮರಸ್ಯವನ್ನು ಒಪ್ಪಿಕೊಂಡಿದ್ದ, ಈತನ ಗ್ರಂಥಗಳು ಆಧುನಿಕ ಸಸ್ಯವಿಜ್ಞಾನದ ಮೇಲೆ ಪರಿಣಾಮ ಬೀರಿವೆ. ಲಿಸ್ ಎಫೊಕ್ಯುಸ್ ಡಿ ಲಾ ನೇಚರ್ (1778) ಎಂಬ ಗ್ರಂಥದಲ್ಲಿ ಈತ ಸೌರಮಂಡಲದ ಉಗಮದ ಬಗ್ಗೆ ಪ್ರಸ್ತಾಪಿಸಿದ್ದಾನೆ. ಆಶ್ಚರ್ಯದ ವಿಚಾರವೆಂದರೆ ಧೂಮಕೇತುಗಳು ಸೂರ್ಯನನ್ನು ಅಪ್ಪಳಿಸುವುದರಿಂದ ಗ್ರಹಗಳು ರೂಪುಗೊಂಡವು ಎಂದು ತಿಳಿಸಿದ್ದಾನೆ. ಭೂಮಿಯ ವಯಸ್ಸು ಪ್ರ.ಶ.ಪೂ. ದಿಂದ 4004 ವರ್ಷಕ್ಕಿಂತ ಹೆಚ್ಚು ಎಂದು ಸಾರಿದ್ದ ಆರ್ಚ್ ಬಿಷಪ್ ಜೇಮ್ಸ್ ಉಷರ್‌ನ ಪ್ರತಿಪಾದನೆಗೆ ಈತ ಕಾಯಿಸಿದ ಕಬ್ಬಿಣ ತಂಪಾಗುವ ಕಾಲಾವಧಿಯ ಆಧಾರದ ಮೇಲೆ ಭೂಮಿಯ ವಯಸ್ಸನ್ನು ಲೆಕ್ಕಾಚಾರ ಮಾಡಿ ಸು. 75000 ವರ್ಷಗಳು ಎಂದು ತಿಳಿಸಿದ್ದ. ಇದರಿಂದ ಕುಪಿತಗೊಂಡ ಫ್ರಾನ್ಸ್‌ನ ಕೆಥೊಲಿಕರು ಈತನ ಗ್ರಂಥವನ್ನು ಸುಟ್ಟುಹಾಕಿದರು.

ಇವನ ಮೇಧಾಶಕ್ತಿ ಅಪಾರವಾಗಿತ್ತು. ಈತನ ವ್ಯಾಖ್ಯಾನಿತ ಗ್ರಂಥದಲ್ಲಿ ಹೊಸ ವಿಶ್ವದ ರೂಪ ಎಂಬ ಶೀರ್ಷಿಕೆಯಲ್ಲಿ ಹೊಸ ವಿಶ್ವರಾಷ್ಟ್ರಗಳು ಯುರೋಪಿನ ರಾಷ್ಟ್ರಗಳಿಗಿಂತ ಕೀಳು ದರ್ಜೆಯಲ್ಲಿರುತ್ತವೆ ಎಂದಿದ್ದಾನೆ. ಈತನ ಪ್ರಕಾರ ಅಮೆರಿಕ ದೊಡ್ಡ ಹಾಗೂ ಶಕ್ತಿಯುತವಾದದನ್ನು ಸೃಷ್ಟಿಸಲು ಸ್ವಯಂ ಅಶಕ್ತವಾದುದು; ಅಲ್ಲಿಯ ಜನರು ಯುರೋಪಿನ ಜನತೆಗಿಂತ ಪೌರುಷಹೀನರು ಎಂದಿದ್ದಾನೆ.

(ವಿ.ಎಸ್.ಎ.)

**ಜಾರ್ಜಿಯ[1]:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಆಗ್ನೇಯ ಭಾಗದ ಒಂದು ರಾಜ್ಯ. ಪ್ರಥಮವಾಗಿ ಸ್ಥಾಪಿತವಾದ ಅಮೆರಿಕದ 13 ರಾಜ್ಯಗಳಲ್ಲಿ ಒಂದು. ಇಂಗ್ಲೆಂಡಿನ 2 ನೆಯ ಜಾರ್ಜ್ ದೊರೆಯಿಂದ ಸನ್ನದು ಪಡೆದು 1732ರಲ್ಲಿ ವಸಾಹತು ಪ್ರಾಂತ್ಯವಾಗಿ ಇದು ಸ್ಥಾಪಿತವಾಯಿತಾದ್ದರಿಂದ ಇದಕ್ಕೆ ಜಾರ್ಜಿಯ ಎಂಬ ಹೆಸರು ಬಂದಿದೆ. ಉತ್ತರದಲ್ಲಿ ಟೆನೆಸೀ ಮತ್ತು ಉತ್ತರಕೆರೋಲಿನ ರಾಜ್ಯಗಳು, ದಕ್ಷಿಣದಲ್ಲಿ ಫ್ಲಾರಿಡ ರಾಜ್ಯ, ಪೂರ್ವದಲ್ಲಿ ದಕ್ಷಿಣ ಕೆರೋಲಿನ ರಾಜ್ಯ ಮತ್ತು ಅಟ್ಲಾಂಟಿಕ್ ಸಾಗರ, ಪಶ್ಚಿಮದಲ್ಲಿ ಅಲಬಾಮ ರಾಜ್ಯ– ಇವು ಇದರ ಮೇರೆಗಳು. ವಿಸ್ತೀರ್ಣ 152750 ಚ.ಕಿಮೀ. ಜನಸಂಖ್ಯೆ 88,29,383 (2004). ರಾಜಧಾನಿ ಅಟ್ಲಾಂಟ (423019). ಮಿಸಿಸಿಪಿ ನದಿಯ ಪೂರ್ವದಲ್ಲಿರುವ ದೊಡ್ಡರಾಜ್ಯ. ಸರಿಸುಮಾರು ಆಯತಾಕಾರವಾಗಿದ್ದು ಉತ್ತರ – ದಕ್ಷಿಣವಾಗಿ 515 ಕಿಮೀ ಉದ್ದ ಹಾಗೂ ಪೂರ್ವ–ಪಶ್ಚಿಮವಾಗಿ 441 ಕಿಮೀ ಅಗಲವಾಗಿದೆ.

ಮೇಲ್ಮೈಲಕ್ಷಣ : ಜಾರ್ಜಿಯದಲ್ಲಿ ಹಲವು ಭೌಗೋಳಿಕ ವಿಭಾಗಳಿವೆ. ಅಟ್ಲಾಂಟಿಕ್ ತೀರ ಭಾಗ. ಸಾಗರದ ಅಂಚಿನಲ್ಲಿ ಫಲವತ್ತಾದ ಹಲವು ದ್ವೀಪಗಳುಂಟು. ಉತ್ತರದಲ್ಲಿ ಪೀಡ್‌ಮಾಂಟ್ ಪ್ರಸ್ಥಭೂಮಿ ಇದೆ. ಇದು ಅಟ್ಲಾಂಟದ ಕಡೆಗೆ ಎತ್ತರವು ಹೆಚ್ಚಾಗುತ್ತ ಮುಂದುವರಿಯುವುದು. ಈ ಪ್ರಸ್ಥಭೂಮಿಯ ಉತ್ತರಕ್ಕೆ ಮೂರು ಕಿರು ಪರ್ವತಸೀಮೆಗಳುಂಟು. ಅವುಗಳಲ್ಲಿ ಈಶಾನ್ಯಭಾಗದಲ್ಲಿರುವ ಬ್ಲೂರಿಡ್ಜ್ ಪರ್ವತ ಅತ್ಯಂತ ದೊಡ್ಡದು. ಇದು ಅಪಲೇಷಿಯನ್ ಪರ್ವತಶ್ರೇಣಿಯ ಒಂದು ಭಾಗವಾಗಿದ್ದು ಈ ಪರ್ವತಗಳಲ್ಲಿ ಅತಿಹೆಚ್ಚು ಎತ್ತರವಾದುದು. ರಾಜ್ಯದ ವಾಯವ್ಯ ತುದಿಯಲ್ಲಿರುವ ಕಂಬರ್‌ಲ್ಯಾಂಡ್ ಪ್ರಸ್ಥಭೂಮಿ, ಅಲೆಗಾನಿ ಪರ್ವತಶ್ರೇಣಿಗೆ ಸೇರಿದ್ದು, ಈ ಎರಡು ಪ್ರದೇಶಗಳ ನಡುವೆ, ಸೀಡರ್‌ಟೌನ್‌ವರೆಗೆ ಗ್ರೇಟ್ ಕಣಿವೆ ವಿಸ್ತರಿಸಿದೆ. ಜಾರ್ಜಿಯ ಪರ್ವತಗಳು ಕೆನಡದಿಂದ ಅಲಬಾಮ ರಾಜ್ಯದ ಮಧ್ಯಭಾಗದವರೆಗೆ ಹಬ್ಬಿರುವ ಪರ್ವತ ವ್ಯವಸ್ಥೆಯ ಒಂದು ಭಾಗ. ರಾಜ್ಯದಲ್ಲಿರುವ ಅತ್ಯುನ್ನತ ಶಿಖರ ಬ್ರಾಸ್‌ಟೌನ್‌ಬಾಲ್ಡ್. ಇದು ಬ್ಲೂರಿಡ್ಜ್ ಪರ್ವತದಲ್ಲಿದೆ. ಅಟ್ಲಾಂಟದ ಬಳಿ ಪೀಡ್‌ಮಾಂಟ್ ಪ್ರಸ್ಥಭೂಮಿಯ ಮೇಲ್ಭಾಗದಲ್ಲಿರುವ ಸ್ಟೋನ್ ಪರ್ವತ ಬಹುಶಃ ಪ್ರಪಂಚದ ಅತ್ಯಂತ ದೊಡ್ಡ ಅನಾವೃತ ಗ್ರಾನೈಟ್ ಶಿಲೆ.

ರಾಜ್ಯದ ಈಶಾನ್ಯದ ಕೊನೆಯಲ್ಲಿಯ ಬ್ಲೂರಿಡ್ಜ್ ಪರ್ವತದ ಬಳಿಯಿಂದ ರಾಜ್ಯದ ಜಲವಿಭಾಗ ರೇಖೆ ಆರಂಭವಾಗಿ ನೈರುತ್ಯಾಭಿಮುಖವಾಗಿ ಅಟ್ಲಾಂಟದ ಕಡೆಗೆ ಸಾಗುತ್ತದೆ. ಇಲ್ಲಿಂದ ಆಗ್ನೇಯಕ್ಕೆ ಹರಿಯುವ ನದಿಗಳು ಅಟ್ಲಾಂಟಿಕ್ ಸಾಗರವನ್ನೂ ಅದರಿಂದ ಆ

ಕಡೆಯ ನದಿಗಳು ಮೆಕ್ಸಿಕೋ ಖಾರಿಯನ್ನೂ ಸೇರುತ್ತವೆ. ಗ್ರೇಟ್ ವ್ಯಾಲಿ ಕಣಿವೆ ಮತ್ತು ಬ್ಲ್ಯೂ ರಿಡ್ಜ್ ಪರ್ವತಗಳ ಪಶ್ಚಿಮ ಭಾಗದಲ್ಲಿ ಎಟೊವಾ ಮತ್ತು ಊಸ್ಟನಾಲ ನದಿಗಳೂ ಅವುಗಳ ಉಪನದಿಗಳೂ ಹರಿಯುತ್ತವೆ. ಈ ನದಿಗಳು ರೋಮ್ ಬಳಿಯಲ್ಲಿ ಕೂಡಿ ದೊಡ್ಡ ನದಿಯಾಗಿ ಪರಿಣಮಿಸುತ್ತವೆ. ಕಂಬರ್ಲೆಂಡ್ ಪ್ರಸ್ಥಭೂಮಿಯೂ ಬ್ಲ್ಯೂರಿಡ್ಜ್ ಪಶ್ಚಿಮ ಭಾಗವೂ ಟೆನೆಸೀ ಕಣಿವೆಯ ಒಂದು ಭಾಗ. ದಕ್ಷಿಣ ಕರೋಲಿನ ರಾಜ್ಯದ ಗಡಿಯಾಗಿ ಹರಿಯುವ ಸವಾನ, ಜಾರ್ಜಿಯದ ದಕ್ಷಿಣ ಮಧ್ಯ ಭಾಗದಲ್ಲಿ ಕೂಡಿ ಆಲ್ಟಮಹಾ ಆಗಿ ಪರಿಣಮಿಸುವ ಓಕೋನೀ ಮತ್ತು ಓಕ್‍ಮಲ್ಗೀ, ಆಗ್ನೇಯ ಭಾಗದಲ್ಲಿ ಹರಿಯುವ ಸಟಿಲ, ರಾಜ್ಯದ ನೈಋತ್ಯದ ತುದಿಯಲ್ಲಿ ಸಂಗಮಿಸಿ ಆಪಲಾ-ಚಿಕೋಲ ಎಂಬ ಹೆಸರು ಪಡೆಯುವ ಫ್ಲಿಂಟ್ ಮತ್ತು ಚಟ್ಟಹೂಚೀ-ಇವು ಈ ರಾಜ್ಯದ ಮುಖ್ಯ ನದಿಗಳು. ಇವುಗಳಲ್ಲಿ ಸಟಿಲ ನದಿಯ ಹೊರತು ಇತರ ನದಿಗಳು ಪಿಡ್‍ಮಾಂಟ್‍ನ ಮೇಲ್ಭಾಗದಲ್ಲಿ ಹುಟ್ಟಿ ಹರಿಯುತ್ತವೆ. ಅವು ದಕ್ಷಿಣ ಭಾಗದಲ್ಲಿ ಮಾತ್ರ ನೌಕಾಯಾನಕ್ಕೆ ಯೋಗ್ಯ. ರಾಜ್ಯದ ಆಗ್ನೇಯ ಭಾಗದಲ್ಲಿ ಒಕೆಫಿನೋಕೀ ಜವುಗು ಪ್ರದೇಶವಿದೆ. ಇದು ಕೃಷಿಗೆ ಬಹುತೇಕ ಅನುಪಯುಕ್ತ. ಸಮಶೀತೋಷ್ಣ ವಾಯುಗುಣವಿರುವುದು. ಇಲ್ಲಿ ರಾಷ್ಟ್ರೀಯ ಅಭಯಾರಣ್ಯಗಳುಂಟು.

ಆರ್ಥಿಕತೆ : ಎರಡನೆಯ ಮಹಾಯುದ್ಧದವರೆಗೆ ಜಾರ್ಜಿಯದ ಮುಖ್ಯ ಕಸಬು ವ್ಯವಸಾಯವಾಗಿತ್ತು. ಅನಂತರ ಕೃಷಿಯ ಯಾಂತ್ರೀಕರಣದಿಂದ ವ್ಯವಸಾಯಾವಲಂಬಿಗಳ ಸಂಖ್ಯೆ ಕಡಿಮೆಯಾಯಿತು. ಕೈಗಾರಿಕೆ ತ್ವರಿತವಾಗಿ ಅಭಿವೃದ್ಧಿಗೊಂಡಿತು. ಜಾರ್ಜಿಯದ ಮುಖ್ಯ ಬೆಳೆ ಹತ್ತಿ, ಹೊಗೆಸೊಪ್ಪು, ನೆಲಗಡಲೆ, ಪೀಚ್ ಹಣ್ಣು. ಕೋಳಿಸಾಕಣೆ, ಪಶುಪಾಲನೆ, ತೀರಪ್ರದೇಶದಲ್ಲಿ ಮೀನುಗಾರಿಕೆ-ಇವೂ ನಡೆಯುತ್ತವೆ. ಕಯೊಲಿನ್, ಸುಣ್ಣಕಲ್ಲು, ಸಿಮೆಂಟ್, ಬಾಕ್ಸೈಟ್, ಜೇಡಿಮಣ್ಣು ಇಲ್ಲಿಯ ಖನಿಜಗಳು. ಬಟ್ಟೆ ತಯಾರಿಕೆ ಮರಗೆಲಸ-ಇವು ಇಲ್ಲಿಯ ಪ್ರಮುಖ ಕೈಗಾರಿಕೆಗಳು.

ರಾಜ್ಯದ ಹೆಚ್ಚು ಜನಸಂಖ್ಯೆ ಹೊಂದಿರುವ ಮುಖ್ಯನಗರಗಳೆಂದರೆ ಅಟ್ಲಾಂಟ (423019), ಆಗಸ್ಟ (198419), ಕೊಲಂಬಸ್ (185702), ಮಾಕೋನ್ (95267) ಮತ್ತು ಸವಾನ (127573). ಅಟ್ಲಾಂಟ ಇದರ ರಾಜಧಾನಿ, ಪ್ರಮುಖ ರೈಲ್ವೆ ಜಂಕ್ಷನ್. (ವಿ.ಜಿ.ಕೆ.;ಸಿ.ಎಂ.)

**ಜಾರ್ಜಿಯ² :** ಈ ಹಿಂದೆ ಸೋವಿಯತ್ ಸಮಾಜವಾದಿ ಗಣರಾಜ್ಯಗಳ ಒಕ್ಕೂಟಕ್ಕೆ ಸೇರಿದ್ದ 15 ಘಟಕಗಳಲ್ಲಿ ಒಂದು. ಇಂದು ಸ್ವತಂತ್ರ ಗಣರಾಜ್ಯವಾಗಿದೆ. ಉ.ಅ. $41^0$-$43^0$ ಹಾಗು ಪೂ.ರೇ. $40^0$-$47^0$ ಗಳ ನಡುವೆ ಹಬ್ಬಿದೆ. ಪಶ್ಚಿಮ ಟ್ರಾನ್ಸ್‌ಕಕೇಷಿಯ ಭಾಗದಲ್ಲಿದೆ. ಉತ್ತರದಲ್ಲಿ ರಷ್ಯ, ಪೂರ್ವದಲ್ಲಿ ಅಜ಼ರ್‌ಬೈಜಾನ್ ಗಣರಾಜ್ಯ, ದಕ್ಷಿಣದಲ್ಲಿ ಆರ್ಮೇನಿಯನ್ ಗಣರಾಜ್ಯ ಮತ್ತು ಟರ್ಕಿ, ಪಶ್ಚಿಮದಲ್ಲಿ ಕಪ್ಪು ಸಮುದ್ರ-ಇವು ಇದರ ಮೇರೆಗಳು. ವಿಸ್ತೀರ್ಣ 69 ಸಾವಿರ ಚ.ಕಿಮೀ. ಜನಸಂಖ್ಯೆ 5.1 ದಶಲಕ್ಷ (2005). ರಾಜಧಾನಿ ಟಿಬಿಲಿಸೀ. ಜನಸಂಖ್ಯೆ 12,79,000 (2000).




ಮೇಲ್ಮೈ ಲಕ್ಷಣ : ಜಾರ್ಜಿಯದಲ್ಲಿ ಮೂರು ಸ್ವಾಭಾವಿಕ ವಿಭಾಗಗಳಿವೆ: ಉತ್ತರದಲ್ಲಿ ಮಹಾ ಕಾಕಸಸ್ ಶ್ರೇಣಿಯಿದೆ. ಮಧ್ಯದ್ದು ತಗ್ಗು ಪ್ರದೇಶ. ದಕ್ಷಿಣದಲ್ಲಿ ಟ್ರಾನ್ಸ್ ಕಕೇಷಿಯ ಪರ್ವತಗಳಿವೆ. ಷ್‍ಕಾರಾ (5,124 ಮೀ) ಜಂಗಿಟೌ (4,974 ಮೀ), ಕಜ್‍ಬೈಕ್ (4,972 ಮೀ), ಉಷ್ಬಾ (4,640 ಮೀ) -ಇವು ಕಾಕಸಸ್ ಶ್ರೇಣಿಯ ಉನ್ನತ ಶಿಖರಗಳು. ಅನೇಕ ಶಿಖರಗಳು ಹಿಮಾಚ್ಛಾದಿತ. ಇಲ್ಲಿ ಹುಟ್ಟುವ ನದಿಗಳಲ್ಲಿ ಮುಖ್ಯವಾದವುಗಳೆಂದರೆ ಬ್‍ಜಿಬ್, ಕೊಡೊರೀ, ಇನ್‍ಗುರೀ, ಟ್ಸ್ಕೆನಿಸ್-ಟ್ಸಾಲೀ ಮತ್ತು ರೀಯಾನೀ. ಇವು ಕಪ್ಪುಸಮುದ್ರ ಸೇರುವ ನದಿಗಳು. ಕುರ, ಆರಗ್ವಿ, ಐಯೊರಿ, ಆಲಝಾನಿ-ಇವು ಕ್ಯಾಸ್ಪಿಯನ್ ಸಮುದ್ರ ಸೇರುವ ನದಿಗಳು. ಜಾರ್ಜಿಯದ ವಾಯವ್ಯ ಕೊನೆಯಲ್ಲಿರುವ ರಿಟ್ಸ ಸರೋವರ ಪ್ರವಾಸಿಗಳ ಆಕರ್ಷಣೆ.

ಜಾರ್ಜಿಯದ ನಡುವಣ ತಗ್ಗು ಪ್ರದೇಶ ಸುರಾಮ್‍ಸ್ಕಿ ಪರ್ವತಶ್ರೇಣಿಯಿಂದ ಇಬ್ಭಾಗವಾಗಿದೆ. ಪಶ್ಚಿಮಕ್ಕಿರುವುದು ಕೋಲ್ಖಿಡ. ಇಲ್ಲಿಗೆ ರೈಯೊನಿ ಮತ್ತು ಇತರ ಹಲವು ನದಿಗಳು ಅಗಾಧ ಜಲದ ಮತ್ತು ಮಣ್ಣಿನ ರಾಶಿಯನ್ನು ತಂದು ಹಾಕುತ್ತವೆ. ಇದು ಜವುಗು ಪ್ರದೇಶ. ಪೂರ್ವ ಭಾಗ ಸ್ವಲ್ಪ ಎತ್ತರ. ಕುರ ಮತ್ತು ಅದರ ಉಪನದಿಗಳು ಇಲ್ಲಿ ಹರಿಯುತ್ತವೆ.

ದಕ್ಷಿಣದ ಸ್ವಾಭಾವಿಕ ವಿಭಾಗ ಪರ್ವತಗಳಿಂದಲೂ ಪ್ರಸ್ಥಭೂಮಿಗಳಿಂದಲೂ ಕೂಡಿದ್ದು, ಇವನ್ನು ತಗ್ಗು ಕಾಕಸಸ್ ಎಂದು ಕರೆಯಲಾಗಿದೆ. ಮುಖ್ಯ ಶ್ರೇಣಿಗಿಂತ ತಗ್ಗಿನಲ್ಲಿರುವ ಈ ಶ್ರೇಣಿಯ ಉನ್ನತ ಶಿಖರ ಬಾಲ್ ಅಬುಲ್ (3252 ಮೀ). ತಗ್ಗು ಕಾಕಸಸಿನ ಅಂಚಿನ ಕರಾವಳಿ ಜವುಗುಮಯ.

ವಾಯುಗುಣ: ಜಾರ್ಜಿಯದ ವಾಯುಗುಣ ವೈವಿಧ್ಯಪೂರಿತ. ಪಶ್ಚಿಮ ಭಾಗದಲ್ಲಿ ಅತ್ಯಧಿಕ ಮಳೆ. ಪರ್ವತ ಪ್ರದೇಶದಲ್ಲಿ ವರ್ಷಕ್ಕೆ 300 ಸೆಂಮೀ, ಕರಾವಳಿಯಲ್ಲಿ 120 ಸೆಂಮೀ ಮಳೆ ಬೀಳುವುದು. ಇಲ್ಲಿ ಉಪೋಷ್ಣವಲಯದ ಲಕ್ಷಣಗಳಿವೆ. ಚಳಿಗಾಲ ತೀವ್ರವಲ್ಲ. ಬೇಸಗೆ ಬಲು ಬಿಸಿ, ಉಷ್ಣತೆ ಕಡಲ ದೂರ ಅಥವಾ ಎತ್ತರಕ್ಕೆ ಅನುಗುಣವಾಗಿ ಮಾರ್ಪಾಡಾಗುತ್ತದೆ.

ಸಸ್ಯಗಳು : ಎತ್ತರ ಹಾಗೂ ವಾಯುಗುಣ ವೈವಿಧ್ಯದಿಂದಾಗಿ ಮಣ್ಣು ಹಾಗೂ ಸಸ್ಯಗಳಲ್ಲೂ ವೈವಿಧ್ಯವುಂಟು. ಕೋಲ್ಖಿಡ ತಗ್ಗುಪ್ರದೇಶದಲ್ಲಿ ಬಿದಿರು, ತಾಳೆ, ನೀಲಗಿರಿ ಮರಗಳು ಹುಲ್ಲು ಮುಂತಾದವು ಬೆಳೆಯುತ್ತವೆ. ಪರ್ವತಗಳ ಕೆಳ ಇಳಿಜಾರು ಪ್ರದೇಶದಲ್ಲಿ ಓಕ್, ಬೀಚ್ ಐವಿ ಮತ್ತು ಕ್ಲಿಮಾಟಿಸ್ ಬಳ್ಳಿಗಳು ದಟ್ಟವಾಗಿವೆ. ಸ್ವಲ್ಪ ಎತ್ತರದ ಪ್ರದೇಶದಲ್ಲಿ ಎಲೆಮೊನಚಾದ ಕಾಡುಗಳು. ಇಲ್ಲಿ ಫರ್, ಸ್ಪ್ರೂಸ್ ಸಾಮಾನ್ಯ. ಇನ್ನೂ ಎತ್ತರಕ್ಕೆ ಹೋದರೆ ರೋಡೊಡೆಂಡ್ರನ್ ಪೊದೆಗಳು ಕಾಣಸಿಗುವವು. ಅಲ್ಲಲ್ಲಿ ಬರ್ಚ್ ಮತ್ತು ಜೂನಿಪರ್ ಇವೆ. ಅದಕ್ಕೂ ಮೇಲೆ ಆಲ್ಪೈನ್ ಹುಲ್ಲುಗಾವಲುಗಳ ತುತ್ತತುದಿ ಹಿಮಾವೃತ.

ಜಾರ್ಜಿಯದ ಕೃಷಿಪ್ರದೇಶ ಇತ್ತೀಚೆಗೆ ವಿಸ್ತಾರಗೊಂಡಿದೆ. ಕೃಷಿ ದೇಶದ ಅತಿಮುಖ್ಯ ಉದ್ಯೋಗ. ಗೋದಿ, ಸಿಟ್ರಸ್‍ಹಣ್ಣು, ಚಹ, ಜೋಳ, ಹತ್ತಿ, ಹಿಪ್ಪನೇರಳೆ ಇಲ್ಲಿ ಇರುವ ಮುಖ್ಯ ಬೆಳೆಗಳು. ಪಶುಪಾಲನೆಯೂ ಒಂದು ಮುಖ್ಯ ಕಸಬು.

ಆರ್ಥಿಕತೆ: ಜಾರ್ಜಿಯ ಗಣರಾಜ್ಯದಲ್ಲಿ ಅಪಾರವಾದ ಖನಿಜ ಸಂಪತ್ತು ಉಂಟು. ಚೀಯಾತುರ ಮ್ಯಾಂಗನೀಸ್ ಗಣಿ ಪ್ರಪಂಚದಲ್ಲೇ ಅತ್ಯಂತ ದೊಡ್ಡ ಮ್ಯಾಂಗನೀಸ್ ಗಣಿಗಳಲ್ಲೊಂದು. ಟ್ಕಿಬೂಲಿ ಮತ್ತು ಟೆಕ್ವಾರ್ಚಾಲಿ ಸುತ್ತ ಕಲ್ಲಿದ್ದಲು ಗಣಿಗಳಿವೆ. ಪೂರ್ವದಲ್ಲಿ ಮೀರ್ಜಾನಿಯ ಬಳಿ ತೈಲ ನಿಕ್ಷೇಪವುಂಟು. ಬಟೂಮಿ ಮುಖ್ಯ ತೈಲಪರಿಷ್ಕರಣ ಕೇಂದ್ರ. ಕುಟೈಸೀಯ ಬಳಿ ಬೇರಿಯಮ್, ಆಂಡಿಸೈಟ್, ಕಯೊಲಿನ್ ಸಿಗುತ್ತವೆ. ರಸ್ಟಾವೀಯಲ್ಲಿ 1950ರಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ತೆರೆದಾಗಿನಿಂದ ಜಾರ್ಜಿಯದಲ್ಲಿ ಭಾರಿ ಕೈಗಾರಿಕೆಗಳು ಶೀಘ್ರವಾಗಿ ಬೆಳೆದಿವೆ. ಬಾಕುವಿನ ತೈಲಕೈಗಾರಿಕೆಗೆ ಮುಖ್ಯವಾದ ಉಕ್ಕಿನ ಕೊಳವೆಗಳು ವಿಶೇಷವಾಗಿ ರಸ್ಟಾವಿಯಲ್ಲಿ ತಯಾರಾಗುತ್ತವೆ. ಜೆಸ್ಟಾಫೋನಿ ಫೆರೊಅಲಾಯ್ ಕೈಗಾರಿಕಾ ಕೇಂದ್ರ. ಟ್‍ಬಿಲಿಸೀಯಲ್ಲಿ ಯಂತ್ರ ಸಲಕರಣೆಗಳು ತಯಾರಾಗುತ್ತವೆ. ಬಟೂಮೀ, ಟ್‍ಬಿಲಿಸೀ ಮತ್ತು ರಸ್ಟಾವೀಯಲ್ಲಿ ರಾಸಾಯನಿಕ ಕೈಗಾರಿಕೆ ಬೆಳೆದಿದೆ. ಇನ್ಸುಗ್ರೀ ಕಾಗದ ತಯಾರಿಕಾ ಕೇಂದ್ರ. ಟ್‍ಬಿಲಿಸೀ, ವನಿಯರ್ ಮತ್ತು ಮಟ್ಸ್‍ಖೇಟದಲ್ಲಿ ಪೀಠೋಪಕರಣ, ವಾದ್ಯಗಳು ತಯಾರಾಗುತ್ತವೆ. ಜವಳಿ ಮತ್ತು ಆಹಾರ ಕೈಗಾರಿಕೆ ಅನೇಕ ಕಡೆಗಳಲ್ಲಿ ಸ್ಥಾಪಿತವಾಗಿವೆ. ವಿದ್ಯುತ್ತು ಹೇರಳವಾಗಿ ಉತ್ಪಾದನೆಯಾಗುತ್ತದೆ.

ಕಪ್ಪು ಸಮುದ್ರದ ತೀರದಲ್ಲಿ ಟುವಾಪ್ಸೇಯಿಂದ ಸುಕಮೀಯವರೆಗೂ ಅಲ್ಲಿಂದ ಟ್‍ಬಿಲಿಸೀಯವರೆಗೂ ಮುಖ್ಯ ರೈಲುಮಾರ್ಗವುಂಟು. ಇದರಿಂದ ಕವಲೊಡೆಯುವ ರೈಲುಮಾರ್ಗಗಳು ಹಲವಾರು. ಆರ್ಮೇನಿಯದಲ್ಲಿರುವ ಯೆರವಾನ್‍ಗೂ ತುರ್ಕಿ ಇರಾನ್‍ಗಳಿಗೂ, ಬಟೂಮೀ, ಪಾಟೀ, ಟ್‍ಕ್ವಾರ್ಚಲೀ ಮತ್ತು ಚೀಯಾಟುಗೂ ರೈಲು ಮಾರ್ಗಗಳಿವೆ. ಟ್‍ಬಿಲಿಸೀಯಿಂದ ಅರ್ಜಾನಕಿಡ್‍ಜ಼ಕ್ಕೊ, ಕುಟೈಸೀಯಿಂದ ಅರ್ಜಾನಕಿಡ್‍ಜ಼ಕ್ಕೊ, ಸುಕಮೀಯಿಂದ ಚರ್‍ಕೆಸ್‍ಗೂ ಹೆದ್ದಾರಿಗಳುಂಟು. ಟ್‍ಬಿಲಿಸೀ ಮುಖ್ಯ ವಿಮಾನ ನಿಲ್ದಾಣ.

ಜಾರ್ಜಿಯನ್ನರು ಪ್ರಾಚೀನ ಹಾಗೂ ಸುಸಂಸ್ಕೃತ ಜನಾಂಗ. ಇವರು ಒಟ್ಟು ಜನಸಂಖ್ಯೆಯ 3/5ರಷ್ಟು ಇದ್ದಾರೆ. ಇವರಲ್ಲದೆ ರಷ್ಯನರೂ ಆರ್ಮೇನಿಯನರೂ ಉಕ್ರೇನಿಯನರೂ ಅಜ಼ರ್‌ಬೈಜಾನ್ ತುರ್ಕರು ಆಸೀಷಿಯನರು ಇದ್ದಾರೆ. (ಕೆ.ಆರ್.ಆರ್.)

**ಜಾರ್ಜಿಯ ಜಲಸಂಧಿ:** ಕೆನಡದ ಬ್ರಿಟಿಷ್ ಕೊಲಂಬಿಯ ಮತ್ತು ವ್ಯಾಂಕೂವರ್ ದ್ವೀಪದ ಮಧ್ಯೆ ಇರುವ ಜಲಸಂಧಿ. ಉದ್ದ ಸು. 224 ಕಿಮೀ, ಗರಿಷ್ಠ ಅಗಲ 32 ಕಿಮೀ. ಉತ್ತರದಲ್ಲಿ ಕ್ವೀನ್ ಷಾರ್ಲಟ್, ದಕ್ಷಿಣದಲ್ಲಿ ಜುವಾನ್ ಡಿಫ್ಯೂಕ ಜಲಸಂಧಿಗಳ ಮೂಲಕ ಪೆಸಿಫಿಕ್ ಸಾಗರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಜಲಸಂಧಿಯ ಉತ್ತರ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಸಣ್ಣಸಣ್ಣ ದ್ವೀಪಗಳಿರುವುದರಿಂದ ನೌಕಾಯಾನಕ್ಕೆ ಅನುಕೂಲವಿಲ್ಲ. ಮಧ್ಯದಲ್ಲೂ ಅಲ್ಲಲ್ಲಿ ಮುಳುಗಡೆಯಾದ ದ್ವೀಪಗಳಿವೆ. ಜಲಸಂಧಿಯ ಮಧ್ಯಭಾಗದ ಸರಾಸರಿ ಆಳ 300 ರಿಂದ 400 ಮೀ. ಅಲ್ಲಲ್ಲಿ ಇನ್ನೂ ತಗ್ಗುಪ್ರದೇಶಗಳೂ ಇವೆ. (ಆರ್.ಎಸ್.ಇ.)

**ಜಾರ್ಜಿಯನ್ ಕೊಲ್ಲಿ:** ಮಹಾಸರೋವರಗಳಲ್ಲೊಂದಾದ ಹ್ಯುರಾನ್ ಸರೋವರದ ಈಶಾನ್ಯ ಭಾಗ; ಕೆನಡದ ಆಂಟೇರಿಯೊ ಪ್ರಾಂತ್ಯದಲ್ಲಿದೆ. ಮ್ಯಾನಿಟೊಲಿನ್ ದ್ವೀಪ ಮತ್ತು ಸಾಗೀನ್ (ಬ್ರೂಸ್) ಪರ್ಯಾಯದ್ವೀಪ ಇದನ್ನು ಸರೋವರದಿಂದ ಪ್ರತ್ಯೇಕಿಸುತ್ತವೆ. ಇದರ ಉದ್ದ 193 ಕಿಮೀ. ಅಗಲ 82 ಕಿಮೀ. ನೀರಿನ ಆಳ ಸಾಮಾನ್ಯವಾಗಿ 30 ರಿಂದ 100 ಮೀ. ಗರಿಷ್ಠ ಆಳ 165 ಮೀ. ಹ್ಯುರಾನ್ ಸರೋವರಕ್ಕೆ ಸಂಬಂಧ ಕಲ್ಪಿಸುವ ಮುಖ್ಯ ನಾಲೆಯ ಬಳಿಯಲ್ಲಿ ಮ್ಯಾನಿಟೊಲಿನ್ ದ್ವೀಪದ ಉತ್ತರಪಶ್ಚಿಮಗಳಲ್ಲಿರುವ ಉತ್ತರ ಕಾಲುವೆ ಇದನ್ನು ಹ್ಯುರಾನ್ ಸರೋವರದೊಂದಿಗೆ ಸೇರಿಸುತ್ತದೆ. ಈಶಾನ್ಯದಲ್ಲಿರುವ ನಿಪಿಸಿಂಗ್ ಸರೋವರದಿಂದ ಹರಿದು ಬರುವ ಫ್ರೆಂಚ್ ನದಿ, ಮಸ್ಕೋಕ ಸರೋವರದಿಂದ ಹರಿಯುವ ಮಸ್ಕೋಕ ನದಿ, ಮಗನಟಾವನ್ ನದಿ, ಸಿಮ್ಕೋ ಸರೋವರದಿಂದ ಹರಿಯುವ ಸೆವರ್ನ್ ನದಿ, ದಕ್ಷಿಣದಿಂದ ಹರಿದುಬರುವ ನಾಟವಸಾಗ ನದಿ–ಇವು ಈ ಕೊಲ್ಲಿಯನ್ನು ಸೇರುತ್ತವೆ. ಜಾರ್ಜಿಯನ್ ಕೊಲ್ಲಿಯಿಂದ ಆಂಟೇರಿಯೊ ಸರೋವರದಲ್ಲಿರುವ ಕ್ವಿಂಟಿ ಕೊಲ್ಲಿಗೆ ಟ್ರೆಂಟ್ ಕಣಿವೆ ಜಲಮಾರ್ಗದ ಮೂಲಕ ದೋಣಿಗಳು ಸಂಚರಿಸಬಹುದು. ಈ ಎರಡೂ ಕೊಲ್ಲಿಗಳಿಗೂ ನಡುವೆ ಜಲಮಾರ್ಗ ಕಲ್ಪಿಸಲು 1918ರಲ್ಲಿ ಟ್ರೆಂಟ್ ಕಾಲುವೆಯನ್ನು ನಿರ್ಮಿಸಲಾಯಿತು. ಇದು ಈ ಜಲಮಾರ್ಗದ ಒಂದು ಭಾಗ.

ಜಾರ್ಜಿಯನ್ ಕೊಲ್ಲಿಯ ಆಗ್ನೇಯ ತುದಿಯಲ್ಲಿರುವ ಜಾರ್ಜಿಯನ್ ಕೊಲ್ಲಿ ದ್ವೀಪಗಳ ರಾಷ್ಟ್ರೀಯ ಉದ್ಯಾನವನ್ನು 1929ರಲ್ಲಿ ನಿರ್ಮಿಸಲಾಯಿತು. ಕೊಲ್ಲಿಯಲ್ಲಿರುವ 20,000 ಕ್ಕೂ ಹೆಚ್ಚು ದ್ವೀಪಗಳ ಪೈಕಿ 30 ದ್ವೀಪಗಳು ಈ ಉದ್ಯಾನದಲ್ಲಿವೆ. ಈ ಪ್ರದೇಶದಲ್ಲಿ ದಟ್ಟವಾದ ಕಾಡನ್ನು ಬೆಳೆಯಲು ಅನುವು ಮಾಡಿಕೊಡಲಾಗಿದೆ. ಪ್ರತಿವರ್ಷವೂ ಸಾವಿರಾರು ಜನರು ಬೇಸಗೆಯಲ್ಲಿ ವಿಹಾರಾರ್ಥಿಗಳಾಗಿ ಬರುತ್ತಾರೆ. ಅಲ್ಲದೆ ಇದು ಒಳ್ಳೆಯ ಮೀನುಗಾರಿಕೆ ಕೇಂದ್ರ. ಬಿಳಿಯರು ಮೊಟ್ಟಮೊದಲು ನೋಡಿದ ಮಹಾಸರೋವರ ಭಾಗ ಜಾರ್ಜಿಯನ್ ಕೊಲ್ಲಿ. ಅವರು ಒಟ್ಟಾವ ಮತ್ತು ಫ್ರೆಂಚ್ ನದಿಗಳ ಮೂಲಕ ಈ ಕೊಲ್ಲಿಯನ್ನು ತಲುಪಿದರು. (ಆರ್.ಎಸ್.ಇ.;ಕೆ.ಆರ್.ಆರ್.)

**ಜಾವ:** ಇಂಡೋನೇಷ್ಯ ಗಣರಾಜ್ಯದ 13677 ದ್ವೀಪಗಳಲ್ಲಿ ಒಂದು. ವಿಸ್ತೀರ್ಣದಲ್ಲಿ ನಾಲ್ಕನೆಯದು. ಸುಮಾತ್ರಕ್ಕೆ ಆಗ್ನೇಯದಲ್ಲಿ, ಬೋರ್ನಿಯೋಗೆ ದಕ್ಷಿಣದಲ್ಲಿ, ಜಾವ ಸಮುದ್ರ ಮತ್ತು ಹಿಂದೂ ಮಹಾ ಸಾಗರಗಳ ನಡುವೆ ಇದೆ. ಪಶ್ಚಿಮದಲ್ಲಿ ಸುಮಾತ್ರ ದ್ವೀಪದಿಂದ ಸುಂಡದ ಜಲಸಂಧಿ, ಪೂರ್ವದಲ್ಲಿ ಬಾಲಿ ದ್ವೀಪದಿಂದ ಬಾಲಿ ಜಲಸಂಧಿ ಜಾವ ದ್ವೀಪವನ್ನು ಪ್ರತ್ಯೇಕಿಸುತ್ತವೆ. ಜಾವದ ಉತ್ತರದಲ್ಲಿ ಜಾವ ಸಮುದ್ರವೂ ದಕ್ಷಿಣದಲ್ಲಿ ಹಿಂದೂ ಸಾಗರವೂ ಇವೆ. ದ. ಅ. $5^0 52'$–$8^0 47'$ ಮತ್ತು ಪೂ.ರೇ. $105^0 12'$–$114^0 35'$ ನಡುವೆ ಹಬ್ಬಿರುವ ಜಾವ ದ್ವೀಪದ ಉದ್ದ 1057 ಕಿಮೀ. ಅಗಲ 198 ಕಿಮೀ. ಇದರ ವಿಸ್ತೀರ್ಣ 1,26,520 ಚ.ಕಿಮೀ. ಜನಸಂಖ್ಯೆ 107 ದಶಲಕ್ಷಗಳು.

ಜಾವ ಭೌಗೋಳಿಕ ವೈವಿಧ್ಯತೆಗಳಿಂದ ಕೂಡಿದ ಪ್ರದೇಶ. ಇದು ಭೂಮಧ್ಯ ರೇಖೆಯ ಬಳಿ ನೆಲೆಗೊಂಡಿದೆ. ಅಗಾಧವಾಗಿ ಸುರಿಯುವ ಮಳೆಯಿಂದಾಗಿ ಈ ದ್ವೀಪದ ಬಹುಭಾಗದಲ್ಲಿ ಅಮೆಜ಼ಾನ್ ಅಥವಾ ಕಾಂಗೋ ವಲಯದಲ್ಲಿ ಇರುವಷ್ಟು ನಿಬಿಡವಾದ ಉಷ್ಣವಲಯದ ಅರಣ್ಯಗಳುಂಟು. ಇಂಥ ಪ್ರದೇಶಗಳಲ್ಲಿ ಜನಸಂಖ್ಯೆ ಸಾಮಾನ್ಯವಾಗಿ ತೀರ ಕಡಿಮೆಯಾಗಿರುತ್ತದೆ. ಆದರೆ ಜನಭರಿತ ಜಾವಾ ದ್ವೀಪದಲ್ಲಿ ಜನರು ಉದ್ಯಮಶೀಲರೂ, ಸಾಹಸಿಗಳೂ, ಆರೋಗ್ಯವಂತರೂ ಆಗಿದ್ದಾರೆ. ಎರಡನೆಯದಾಗಿ, ಇಂಥ ವಲಯ ಉಚ್ಚ ಸಂಸ್ಕೃತಿಯ ನೆಲೆವೀಡು ಆಗಿರುವುದೂ ವಿಶೇಷ. ಆದರೆ ಪ್ರಾಚೀನ ಭಾರತೀಯ ಸಂಸ್ಕೃತಿಯ ಸಂಪರ್ಕ ಲಭ್ಯವಾಗಿದ್ದುದರಿಂದ ಜಾವ ವೈಶಿಷ್ಟ್ಯಪೂರ್ಣ ಪ್ರಾಚೀನ ಸಂಸ್ಕೃತಿಯ ಆಡುಂಬೊಲವಾಗಿದೆ. ಐರೋಪ್ಯರೊಂದಿಗೆ ಉಂಟಾದ ದೀರ್ಘಕಾಲದ ಸಂಪರ್ಕಗಳು ಈ ಮೂಲಭೂತ ಸಂಸ್ಕೃತಿಯ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿಲ್ಲ. ಪ್ರಪಂಚದ ಪೆಟ್ರೋಲಿಯಂ ಮತ್ತು ರಬ್ಬರ್ ಬೇಡಿಕೆಗಳನ್ನು ಗಮನಾರ್ಹ ಪರಿಮಾಣದಲ್ಲಿ ಪೂರೈಸುತ್ತಿರುವುದರಿಂದ ಇದು ಶ್ರೀಮಂತ ದ್ವೀಪವೂ ಆಗಿ ಪರಿಣಮಿಸಿದೆ. ಮಾನವಶಾಸ್ತ್ರದ ದೃಷ್ಟಿಯಿಂದಲೂ ಜಾವಕ್ಕೆ ಪ್ರಾಧಾನ್ಯವುಂಟು. ಸು. 7,00,000 ವರ್ಷಗಳ ಹಿಂದೆ ಜೀವಿಸಿದ್ದನೆಂದು ನಂಬಲಾಗಿರುವ ಮಾನವ ವರ್ಗದ ಜೀವಿಯ ಅಸ್ಥಿಗಳನ್ನು ಜಾವ ದ್ವೀಪದ ನದಿಯೊಂದರ ದಡದಲ್ಲಿ ಯೂಜಿನ್ ಡೂಬ್ವಾ ಎಂಬ ಡಚ್ ವಿಜ್ಞಾನಿ 1891–92ರಲ್ಲಿ ಪತ್ತೆಹಚ್ಚಿದ. ಈ ಮಾನವನನ್ನು ಪಿಠಿಕ್ಯಾಂತ್ರೋಪಸ್ ಎರೆಕ್ಟಸ್ ಎಂದು ಕರೆದಿದ್ದನಾದರೂ ಇಂದಿನ ವಿಜ್ಞಾನಿಗಳು ಈತನನ್ನು ಹೋಮೋ ಎರೆಕ್ಟಸ್ ಜಾವೆನ್ಸಿಸ್ ಜಾವಮಾನವನೆಂದೇ ಕರೆಯುವುದು ರೂಢಿಯಲ್ಲಿದೆ.

ಭೂಸ್ವರೂಪ: ಈ ಉದ್ದನೆಯ ದ್ವೀಪದ ಸುತ್ತಲೂ ತಗ್ಗು ಕರಾವಳಿ ಮೈದಾನವನ್ನು ಹೊಂದಿರುವ ಪರ್ವತಶ್ರೇಣಿ ಇದೆ. ಈ ಪರ್ವತ ಶ್ರೇಣಿ ಹತ್ತು ಕಣಿವೆಗಳಿಂದ ವಿಚ್ಛಿತ್ರವಾಗಿದೆ. ಈ ಶ್ರೇಣಿಯಲ್ಲಿ ಸು. 112 ಅಗ್ನಿಪರ್ವತಗಳಿವೆಯೆಂಬುದು ಒಂದು ಅಂದಾಜು. ಇವುಗಳಲ್ಲಿ ಕೆಲವು ಇಂದು ನಂದಿಹೋಗಿದ್ದರೂ ಕೆಲವು ಇನ್ನೂ ಜೀವಂತವಾಗಿವೆ. 3676 ಮೀ ಎತ್ತರವಿರುವ ಸಮೇರು ಇಂದಿಗೂ ಜೀವಂತವಾಗಿರುವ ಅಗ್ನಿಪರ್ವತ; ಇದು ಜಾವದಲ್ಲಿ ಅತ್ಯಂತ ಎತ್ತರದ ಪರ್ವತ. ಪಶ್ಚಿಮ ಜಾವದಲ್ಲಿರುವ ಸಲಾಕ್ಸ್ ಅಗ್ನಿಪರ್ವತ (2211 ಮೀ) 1669 ಮತ್ತು 1699ರಲ್ಲಿ ತೀವ್ರ ರೀತಿಯಲ್ಲಿ ಸ್ಫೋಟಿಸಿತ್ತು. ಆದರೆ ಇಂದು ನಂದಿಹೋಗಿದೆ. ಜಕಾರ್ತದ ಆಗ್ನೇಯಕ್ಕಿರುವ ಗೇಡ 1832ರಿಂದ ಈಚೆಗೆ ಹಲವು ಬಾರಿ ಸ್ಫೋಟಿಸಿದೆ. ಪಶ್ಚಿಮ ಜಾವದ ಗಾರೂತ್ ಎಂಬಲ್ಲಿಗೆ 18 ಕಿಮೀ. ನೈಋತ್ಯದಲ್ಲಿರುವ ಪಾಪಾಂಡಾಯಾನ್ ಸುಂದ ಜಲಸಂಧಿಯ ಅಗ್ನಿಪರ್ವತ ದ್ವೀಪವಾದ ಕ್ರಕಟೋವ ಇದರ ಜ್ವಾಲಾಮುಖಿ ಪರ್ವತಗಳಲ್ಲಿ ಮುಖ್ಯವಾದವು. ಆಧುನಿಕ ಕಾಲದಲ್ಲಿ ದಾಖಲೆಯಾಗಿರುವ ಅತ್ಯಂತ ಭಯಂಕರ ಸ್ಫೋಟಗಳಲ್ಲಿ 1883 ರ ಕ್ರಕಟೋವ ಸ್ಫೋಟ ಅತಿಮುಖ್ಯವಾಗಿವೆ. ಈ ಸ್ಫೋಟ ಪಶ್ಚಿಮ ಜಾವದಲ್ಲಿ ಸು. 36,000 ಜನರನ್ನು ಬಲಿ ತೆಗೆದುಕೊಂಡುದಾಗಿ ಅಂದಾಜು ಮಾಡಲಾಗಿದೆ. ಭೂಕಂಪಗಳೂ ಈ ದ್ವೀಪದಲ್ಲಿ ಸಾಮಾನ್ಯ. ಆದರೆ, ಇವುಗಳಲ್ಲಿ ಬಹುಮಟ್ಟಿನವು ತೀವ್ರವಲ್ಲ. ಜ್ವಾಲಾಮುಖಿಯ ಸ್ಫೋಟಕ್ಕೆ ಮೊದಲು ಹಾಗೂ ಅನಂತರ ಭೂಕಂಪಗಳು ಸಂಭವಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ಉಂಟಾಗುವ ಭೂಕಂಪಗಳು ವಿನಾಶಕಾರಿ ಸುನಾಮಿ ಅಲೆಗಳನ್ನು ನಿರ್ಮಿಸಿ ಸುತ್ತಲಿನ ದೇಶಗಳ ಕರಾವಳಿಗಳಲ್ಲಿ ಅಪಾರ ಹಾನಿಯನ್ನುಂಟುಮಾಡಿವೆ. ಲಕ್ಷಾಂತರ ಜನ ಸಾವನ್ನಪ್ಪಿದ್ದಾರೆ.

ಜಾವದ ನದಿಗಳು ಬಹುಮಟ್ಟಿಗೆ ಉತ್ತರಾಭಿಮುಖವಾಗಿ ಹರಿಯುತ್ತವೆ. ಜಾವದ ಎಂಟು ಪ್ರಮುಖ ನದಿಗಳಲ್ಲಿ ಐದು ಜಾವ ಸಮುದ್ರವನ್ನೂ ಮೂರು ಹಿಂದೂ ಸಾಗರವನ್ನೂ ಸೇರುತ್ತವೆ. ಸೋಲೋ ನದಿ ಅತ್ಯಂತ ದೊಡ್ಡದು. ಇದರ ಉದ್ದ 536 ಕಿಮೀ. ಬ್ರಾಂಟಸ್ ಇನ್ನೊಂದು ನದಿ. ಇದರ ಉದ್ದ 312 ಕಿಮೀ. ತಜಿಲಿವುಂಗ್ ನದಿಯ ಉದ್ದ 80 ಕಿಮೀ. ಉಳಿದವು ಕಿರುನದಿಗಳು. ಈ ನದಿಗಳು ಮುಖ್ಯ ಪಾತ್ರಗಳಲ್ಲಿ ಸಾಗಣೆ ಹಾಗೂ ಸಂಚಾರಕ್ಕೆ ಯೋಗ್ಯವಾಗಿವೆಯಾದರೂ, ಬಹುವಾಗಿ ಇವು ನೀರಾವರಿಯ ಉದ್ದೇಶವನ್ನು ಪೂರೈಸುತ್ತವೆ.

ವಾಯುಗುಣ : ಜಾವ ಸಮಭಾಜಕವೃತ್ತದ ನೆರೆಯಲ್ಲಿರುವ ಪ್ರದೇಶವಾದರೂ ಇಲ್ಲಿ ತೀವ್ರ ಉಷ್ಣತೆ ಇಲ್ಲ. ಹಗಲುರಾತ್ರಿಗಳು ಸಮವಾಗಿವೆ. ಪರ್ವತಗಳ, ಸಮುದ್ರಗಾಳಿ, ಗುಡುಗಿನಿಂದ ಕೂಡಿದ ಸುರಿಮಳೆಯ ಪ್ರಭಾವವೂ ಇದೆ. ಅದ್ದರಿಂದ ಇಲ್ಲಿಯ ವಾಯುಗುಣ ತೀರ ಅಹಿತಕರವಲ್ಲ. ಉತ್ತರ ಕರಾವಳಿಯಯಲ್ಲಿ ಗರಿಷ್ಠ ಉಷ್ಣತೆ. ಪರ್ವತ ಪ್ರದೇಶ ತಂಪು. ಸು. 900 ಮೀ ಎತ್ತರದಲ್ಲಿ ಸಮಶೀತೋಷ್ಣ ವಾಯುಗುಣ. ಉನ್ನತ ಪ್ರದೇಶದಲ್ಲಿ $-2.8^0$ಸೆ ಉಷ್ಣತೆ ಇರುವುದುಂಟು. ಜಕಾರ್ತದಲ್ಲಿ ಸರಾಸರಿ ದೈನಿಕ ಉಷ್ಣತೆಯ ಅಂತರ $6.6^0$ಸೆ ಪರ್ವತ ಪ್ರದೇಶದಲ್ಲಿ $21.1^0$ಸೆ ಜಕಾರ್ತದಲ್ಲಿ ಗರಿಷ್ಠ ಉಷ್ಣತೆ $35.8^0$ಸೆ ದಕ್ಷಿಣ ಕರಾವಳಿಯಲ್ಲಿರುವ ಅಸೆಂಬೆಗಸಿನಲ್ಲಿ ಗರಿಷ್ಠ ಉಷ್ಣತೆ $37.2^0$ಸೆ.

ಜಾವದ ಶೇ. 70 ರಷ್ಟು ಭಾಗ ವ್ಯವಸಾಯಕ್ಕೆ ಒಳಪಟ್ಟಿದೆ. ಇದು ಕಾಫಿ, ರಬ್ಬರ್ ಮೊದಲಾದುವುಗಳ ಉತ್ಪಾದನೆಗೆ ಪ್ರಸಿದ್ಧಿ ಪಡೆದಿದೆ. ಇಳಿಜಾರು ಹಾಗೂ ತಗ್ಗು ವಲಯಗಳಲ್ಲಿ ರಬ್ಬರ್, ಹತ್ತಿ, ಕಬ್ಬು ಹೊಗೆಸೊಪ್ಪು ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಎತ್ತರವಾದ ಪ್ರದೇಶಗಳಲ್ಲಿ ಚಹ, ಕಾಫಿ ಮತ್ತು ಕ್ವಿನೈನನ್ನು ಉತ್ಪಾದಿಸಲಾಗುತ್ತಿದೆ. ಪ್ರಪಂಚದ ಒಟ್ಟು ಕ್ವಿನೈನ್‌ನ ಬಹುಭಾಗವನ್ನು ಜಾವ ಒದಗಿಸುತ್ತದೆ. ಮರಗೆಣಸು (ಕ್ಯಸಾವ) ಮತ್ತು ಕಪೋಕ್‌ಗಳ ಉತ್ಪಾದನೆಯಲ್ಲಿ ಇದು ಮುಂದಿದೆ. ಪ್ರಪಂಚದ ಒಟ್ಟು ಉತ್ಪಾದನೆಯ ಬಹುಭಾಗ ಬರುವುದು ಇಲ್ಲಿಂದ. ಇವೆಲ್ಲ ಜಾವದ ರಫ್ತು ಬೆಳೆಗಳು. ವ್ಯವಸಾಯಕ್ಕೆ ಒಳಪಟ್ಟ ನೆಲದ ಸುಮಾರು ಅರ್ಧ ಭಾಗವು ಬತ್ತದ ಉತ್ಪಾದನೆಗೆ ಮೀಸಲು. ಗೆಣಸು, ಹುರುಳಿಕಾಯಿ, ಧಾನ್ಯಗಳು, ಹೊಗೆಸೊಪ್ಪು ಇತರ ಬೆಳೆಗಳು. ಭೂಮಿ ಫಲವತ್ತಾಗಿದ್ದರೂ ಭತ್ತದ ಉತ್ಪಾದನೆಗೆ ಸರ್ಕಾರ ವಿಶೇಷ ಪ್ರೋತ್ಸಾಹ ನೀಡುತ್ತಿದೆಯಾದರೂ ಇದರ ಉತ್ಪಾದನೆ ಅಲ್ಲಿಯ ಅವಶ್ಯಕತೆಗೆ ಸಾಲದಾಗಿ, ಅಕ್ಕಿಯನ್ನು ಆಮದು ಮಾಡಿಕೊಳ್ಳಬೇಕಾಗಿದೆ.

ಕುರಿ, ಮೇಕೆ, ಕೋಳಿ ಮತ್ತು ಜಾನುವಾರುಗಳು ಧಾನ್ಯಾಹಾರಕ್ಕೆ ಪೂರಕವಾಗಿವೆ. ಸಮುದ್ರದಲ್ಲೂ, ನದಿಗಳಲ್ಲೂ ದೊರೆಯುವ ಮೀನುಗಳನ್ನೂ ಅಹಾರವಾಗಿ ಉಪಯೋಗಿಸಲಾಗುತ್ತಿದೆ.

ಖನಿಜಸಂಪತ್ತು : ಜಾವದ ಖನಿಜಸಂಪತ್ತು ಹೆಚ್ಚಿಲ್ಲ. ದ್ವೀಪದ ಅನೇಕ ಕಡೆಗಳಲ್ಲಿ ಕಲ್ಲಿದ್ದಲ ನಿಕ್ಷೇಪಗಳಿವೆಯಾದರೂ ಇವುಗಳ ಪದರಗಳು ತುಂಬ ತೆಳುವಾಗಿರುವುದರಿಂದ ಇದರ ಗಣಿಗಾರಿಕೆ ಆರ್ಥಿಕವಾಗಿ ಲಾಭದಾಯಕವಲ್ಲ. ಸದ್ಯಕ್ಕೆ ಜಕಾರ್ತದಲ್ಲಿ ಮಾತ್ರ ಗಮನಾರ್ಹ ಪ್ರಮಾಣದಲ್ಲಿ ಕಲ್ಲಿದ್ದಲನ್ನು ತೆಗೆಯಲಾಗುತ್ತಿದೆ. ಬ್ಯಾಂಟಮ್ ಮತ್ತು ಇತರ ಕಡೆಗಳಲ್ಲಿ ಲಿಗ್ನೈಟ್ ನಿಕ್ಷೇಪಗಳುಂಟು. ತವರ ತಕ್ಕಮಟ್ಟಿಗೆ ದೊರಕುತ್ತಿದೆ. ಇದನ್ನು ರಫ್ತು ಮಾಡಲಾಗುತ್ತಿದೆ. ರೆಂಬಾಂಗ್, ಸುರಬೈಯ ಹಾಗೂ ಮದುರದಲ್ಲಿ ತೈಲ ನಿಕ್ಷೇಪಗಳುಂಟು. ಜಾವದ ದಕ್ಷಿಣ ಭಾಗದಲ್ಲಿ ಸುಣ್ಣಕಲ್ಲು ಮತ್ತು ಅಮೃತ ಶಿಲೆ ಹೇರಳವಾಗಿ ಲಭ್ಯವಾಗಿವೆ. ಅಲ್ಪ ಪ್ರಮಾಣಗಳಲ್ಲಿ ದೊರೆಯುವ ಇತರ ಖನಿಜಗಳು ಲವಣಗಳು, ಗಂಧಕ, ಆಸ್ಫಾಲ್ಟ್, ನ್ಯಾಫ್ತಾ, ಮ್ಯಾಂಗನೀಸ್ ಮತ್ತು ಜೇಡಿಮಣ್ಣು.

ಇಲ್ಲಿಯ ಮುಖ್ಯನಗರಗಳೆಂದರೆ ಜಕಾರ್ತ, ಯೋಗ್ಯಕರ್ತ, ಬಾಂಡುಂಗ್, ಸಮರಂಗ್, ಸುರಬೈಯ, ಸಿರೆಬೋನ್ ಮೊದಲಾದವು. ಜಕಾರ್ತ ಇಂಡೊನೇಷ್ಯದ ರಾಜಧಾನಿ.

ಕೈಗಾರಿಕೆ : ಕೈಗಾರಿಕೆಗಳ ಬೆಳೆವಣಿಗೆಗೆ ಡಚ್ ಸರ್ಕಾರ ವಿಶೇಷ ಪ್ರೋತ್ಸಾಹ ಕೊಟ್ಟಿತ್ತು. ಪೆಟ್ರೋಲಿಯಂ, ರಬ್ಬರ್, ಹೊಗೆಸೊಪ್ಪು ಮೊದಲಾದವುಗಳ ಸಂಸ್ಕರಣ, ಚರ್ಮ ಹದ ಮಾಡುವುದು, ಜವಳಿ ಹಾಗೂ ಲೋಹವಸ್ತುಗಳ ಉತ್ಪಾದನೆ–ಇವು ಇಲ್ಲಿಯ ಪ್ರಮುಖ ಕೈಗಾರಿಕೆಗಳು. ತೈಲ ಬಾವಿಗಳು ಹಾಗೂ ಸಂಸ್ಕರಣಾಗಾರಗಳು ಉತ್ತರ–ಮಧ್ಯ ಜಾವದಲ್ಲಿ ನೆಲೆಗೊಂಡಿವೆ. ಇತರ ಕೈಗಾರಿಕೆಗಳು ಚದರಿದಂತಿವೆ.

(ಪಿ.ಎಂ.)

**ಜಿ.ಡಿ.ಪಿ (ಒಟ್ಟು ದೇಶೀಯ ಉತ್ಪನ್ನ):** ಒಂದು ದೇಶದ ಆರ್ಥಿಕತೆಯ ಗಾತ್ರವನ್ನು ತಿಳಿಯುವ ಕ್ರಮ. ಒಟ್ಟು ದೇಶೀಯ ಉತ್ಪನ್ನದಲ್ಲಿ ಒಂದು ದೇಶದ ಎಲ್ಲಾ ಸರಕುಗಳ ಕೊನೆಯ ಮಾರುಕಟ್ಟೆ ಬೆಲೆ ಮತ್ತು ಸೇವೆಗಳ ನಿವ್ವಳ ಮೌಲ್ಯವಾಗಿದೆ. ಇದು ಒಂದು ದೇಶದ ನಿಗದಿತ ಅವಧಿಯ ಉತ್ಪನ್ನವಾಗಿರುತ್ತದೆ. ಉತ್ಪನ್ನವಾದ ಒಟ್ಟು ಸರಕುಗಳ ಮಾರುಕಟ್ಟೆ ಮೌಲ್ಯ, ಖಾಸಗಿ ಹಾಗೂ ಸಾಮಾಜಿಕ ಅನುಭೋಗ, ಸರ್ಕಾರಿ ವಸ್ತುಗಳು, ಹೂಡಿಕೆ ಮತ್ತು ರಫ್ತುಗಳನ್ನು ಒಟ್ಟು ದೇಶೀಯ ಉತ್ಪನ್ನವು ಒಳಗೊಂಡಿರುತ್ತದೆ. ಒಟ್ಟು ದೇಶೀಯ ಉತ್ಪನ್ನದಿಂದ ಒಂದು ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ನಿರ್ಧರಿಸಬಹುದು.

(ಎಚ್.ಎಸ್.ಡಿ.)

**ಜಿಂಬಾಬ್ವೆ:** ದಕ್ಷಿಣ ಆಫ್ರಿಕದ ಭೂ ಆವೃತ ಗಣರಾಜ್ಯ. ಹಿಂದಿನ ಹೆಸರು ರೋಡೇಷಿಯ. ಬ್ರಿಟಿಷ್ ವಸಾಹತುಗಳಲ್ಲಿ ಒಂದಾಗಿದ್ದು ನವೆಂಬರ್ 1965 ರಲ್ಲಿ ಸ್ವಾತಂತ್ರ ಪಡೆಯಿತು. ಜಾಂಬೆಸಿ ಮತ್ತು ಲಿಂಪೋಪೊ ನದಿಗಳ ನಡುವೆ ನೆಲಸಿದ್ದು, ಉತ್ತರ ಮತ್ತು ಈಶಾನ್ಯದಲ್ಲಿ ಜಾಂಬಿಯ, ಪೂರ್ವದಲ್ಲಿ ಮೊಜಾಂಬಿಕ್, ದಕ್ಷಿಣದಲ್ಲಿ ದಕ್ಷಿಣ ಆಫ್ರಿಕ ನೈರುತ್ಯ ಮತ್ತು ಪಶ್ಚಿಮದಲ್ಲಿ ಬೋಟ್ಸ್‌ವಾನ ದೇಶಗಳಿಂದ ಸುತ್ತುವರಿದಿದೆ. ದ.ಅ. $14^0$–24′ ಹಾಗೂ ಪೂ.ರೇ. $25^0$–$33^0$ ನಡುವೆ ಹಬ್ಬಿದೆ. ವಿಸ್ತೀರ್ಣ 390,757 ಚ.ಕಿಮೀ. ಜನಸಂಖ್ಯೆ 13,010,000 (2005). ರಾಜಧಾನಿ ಹರಾರೆ. ಇದರ ಜನಸಂಖ್ಯೆ 1,184,169 (2002). ಅಧಿಕೃತ ಭಾಷೆ ಇಂಗ್ಲಿಷ್.

ಮೇಲ್ಮೈಲಕ್ಷಣ ಮತ್ತು ನದಿಗಳು: ಶೋನ ಭಾಷೆಯಲ್ಲಿ ಜಿಂಬಾಬ್ವೆ ಎಂದರೆ ಕಲ್ಲಿನ ಮನೆ (ಹೌಸ್ ಆಫ್ ಸ್ಟೋನ್) ಎಂದರ್ಥ. ದೇಶದ ಬಹಳಷ್ಟು ಭಾಗ ಶಿಲಾಮಯ ಪ್ರಸ್ಥಭೂಮಿ. ಈ ಪ್ರಸ್ಥಭೂಮಿ ನೈರುತ್ಯದಿಂದ ಈಶಾನ್ಯಕ್ಕೆ ಹಬ್ಬಿದೆ. ಎತ್ತರವಾದ ಪ್ರಸ್ಥಭೂಮಿ ಸು. 1220 ಮೀ ಎತ್ತರವಾಗಿದ್ದು ಅದನ್ನು ಉನ್ನತ ವೆಲ್ಡ್ ಎಂದು ಕರೆಯುವರು. ಇದು ದೇಶದ ಭೂಪ್ರದೇಶದಲ್ಲಿ ಶೇ. 25 ಭಾಗವನ್ನಾವರಿಸಿದೆ. ಇನ್ಯಾಂಗನಿ ಎಂಬುದು ದೇಶದ ಅತ್ಯಂತ ಎತ್ತರವಾದ ಶಿಖರ (2,592 ಮೀ) ಬಿಮಾನಿ ಮಣಿ ಎಂಬುದು ಮತ್ತೊಂದು ಶಿಖರ.

ಜಾಂಬೆಸಿ ಜಿಂಬಾಬ್ವೆಯ ಪ್ರಮುಖ ನದಿ. ದಕ್ಷಿಣ ಆಫ್ರಿಕದ ಮಧ್ಯ ಭಾಗದಲ್ಲಿ ಹುಟ್ಟಿ ಸು. 2650 ಕಿಮೀ. ದೂರ ಪೂರ್ವಕ್ಕೆ ಹರಿದು ಮೊಜಾಂಬಿಕ್ ಕಡಲ್ಗಾಲುವೆಯನ್ನು (ಹಿಂದೂಸಾಗರ) ಸೇರುತ್ತದೆ. ತನ್ನ ಪಾತ್ರದ ನಡುವೆ ಪ್ರಸಿದ್ಧ ವಿಕ್ಟೋರಿಯ ಜಲಪಾತವನ್ನು ಸೃಷ್ಟಿಸಿದೆ. ಕರಿಬ ಎಂಬಲ್ಲಿ ಈ ನದಿಗೆ ಅಣೆಕಟ್ಟೆಯನ್ನು ನಿರ್ಮಿಸಿದ್ದು, ಅದರಿಂದ 282 ಕಿಮೀ ಉದ್ದದ ಸರೋವರ ನಿರ್ಮಾಣವಾಗಿದೆ. ಇದರಿಂದ ಅಪಾರವಾದ ಜಲವಿದ್ಯುಚ್ಛಕ್ತಿ ಉತ್ಪಾದಿಸಲಾಗುತ್ತಿದ್ದು, ಅದನ್ನು ಜಿಂಬಾಬ್ವೆ ಮತ್ತು ಜಾಂಬಿಯಗಳು ಬಳಸಿಕೊಳ್ಳುತ್ತಿವೆ.

ವಾಯುಗುಣ: ಜಿಂಬಾಬ್ವೆ ಉಪಉಷ್ಣವಲಯದ ವಾಯುಗುಣವನ್ನು ಹೊಂದಿದೆ. ಎತ್ತರ ಭೂಭಾಗವುಳ್ಳ ವೆಲ್ಡ್ ಪ್ರದೇಶದಲ್ಲಿ ಉಷ್ಣಾಂಶ ಅಕ್ಟೋಬರ್‌ನಲ್ಲಿ $18^0$ಸೆ ಮತ್ತು ಜುಲೈನಲ್ಲಿ $11^0$ಸೆ. ಇದಕ್ಕೆ ಪ್ರತಿಯಾಗಿ ಜಾಂಬೆಸಿ ತಗ್ಗು ಪ್ರದೇಶದಲ್ಲಿ ಉಷ್ಣಾಂಶವು ಅಕ್ಟೋಬರ್ ನಲ್ಲಿ $30^0$ ಸೆ ಮತ್ತು ಜುಲೈನಲ್ಲಿ $20^0$ಸೆ ಗಿಂತಲು ಹೆಚ್ಚು, ವಾರ್ಷಿಕ ಮಳೆ ಇನಿಯಾಂಗರ್‌ನಲ್ಲಿ ಹೆಚ್ಚು (260 ಸೆಮೀ) ಹರಾರೆಯ ಕಡೆಗೆ ಮಳೆ ಕಡಿಮೆಯಾಗುತ್ತದೆ (80 ಸೆಮೀ) ಬೇಸಗೆಯಲ್ಲಿ (ನವೆಂಬರ್–ಮಾರ್ಚ್) ಮಳೆ ಹೆಚ್ಚು.

ಸವನ್ನ ಹುಲ್ಲುಗಾವಲು ದೇಶದ ಮುಖ್ಯ ಸಸ್ಯವರ್ಗ. ಅದು ಎತ್ತರವಾದ ಪರ್ವತ – ಪ್ರಸ್ಥಭೂಮಿಗಳಲ್ಲಿ ಹರಡಿದೆ. ತೇಗ, ಬಾವ್‌ಬಾಬ್ ಮತ್ತು ಮೊಪಾನಿ ಇಲ್ಲಿ ಬೆಳೆಯುವ ಪ್ರಮುಖ ಮರಗಳು. ಹ್ವಾಂಜೆ ರಾಷ್ಟ್ರೀಯ ಉದ್ಯಾನ, ಕರಿಬ ಜಲಾಶಯ ಮತ್ತು ವಿಕ್ಟೋರಿಯ ಜಲಪಾತಗಳು ದೇಶದ ಆಕರ್ಷಣೆಯ ಪ್ರವಾಸಿಕೇಂದ್ರಗಳು.




ಆರ್ಥಿಕತೆ: ಜಿಂಬಾಬ್ವೆಯಲ್ಲಿ ಕೃಷಿ ಪ್ರಮುಖ ವೃತ್ತಿಗಳಲ್ಲಿ ಒಂದಾಗಿದ್ದು, ಬಿಳಿಯರ ಒಡೆತನದಲ್ಲಿರುವ ವ್ಯವಸಾಯ ಪ್ರದೇಶಗಳಲ್ಲಿ ಹಣಗಳಿಕೆ ಅಥವಾ ರಫ್ತಿಗಾಗಿ ಬೆಳೆಯುವ ವಾಣಿಜ್ಯ ಬೆಳೆಗಳು ಸರ್ವೇಸಾಮಾನ್ಯ. ತಂಬಾಕು, ಹತ್ತಿ, ಗೋದಿ, ಕಬ್ಬು, ಮೆಕ್ಕೆಜೋಳ, ತೃಣಧಾನ್ಯ ಮತ್ತು ಸೋರ್ಗಮ್‌ಗಳು ಜಿಂಬಾಬ್ವೆಯ ಪ್ರಮುಖ ಬೆಳೆಗಳು. ಹಿಂದೆ ತಂಬಾಕು ಉತ್ಪಾದನೆ ಪ್ರಧಾನವಾಗಿತ್ತು. ಇತ್ತೀಚೆಗೆ ಅದರ ಪ್ರಮಾಣ ಕಡಿಮೆಯಾಗಿದೆಯಾದರೂ ರಫ್ತುಸರಕುಗಳಲ್ಲಿ ಮುಖ್ಯವಾದುದು. ರಾಷ್ಟ್ರೀಯ ಆದಾಯದಲ್ಲಿ ಕೃಷಿಯ ಪಾಲು ಶೇ. 14.

ವಿಕ್ಟೋರಿಯ ಜಲಪಾತದ ಒಂದು ನೋಟ

ಗ್ರೇಟ್‌ಡೈಕ್ಸ್ ಎಂದೇ ಪ್ರಸಿದ್ಧವಾಗಿರುವ ಜಿಂಬಾಬ್ವೆ ಪರ್ವತ ಸರಣಿ (483 ಕಿಮೀ) ಗಳಲ್ಲಿ ಖನಿಜ ಸಂಪತ್ತು ಸಮೃದ್ಧವಾಗಿದೆ. ತಾಮ್ರ, ಚಿನ್ನ, ನಿಕ್ಕಲ್, ಕ್ರೋಮಿಯಂ ಮತ್ತು ಕಲ್ನಾರು ಪ್ರಮುಖ ಖನಿಜಗಳು. ಕಲ್ಲಿದ್ದಲೂ ಸ್ವಲ್ಪ ಲಭ್ಯವಿದೆ. ಪೆಟ್ರೋಲಿಯಮ್‌ನ

ಕೊರತೆಯಿದೆ. ಜಲವಿದ್ಯುಚ್ಛಕ್ತಿ ದೇಶದ ಪ್ರಮುಖ ಶಕ್ತಿ ಸಾಧನವಾಗಿದೆ. ದೇಶದ ಆದಾಯದಲ್ಲಿ ಶೇ. 6 ಖನಿಜ ಸಂಪತ್ತಿನಿಂದ ದೊರೆಯುತ್ತದೆ. ಕೈಗಾರಿಕೆ ಇತ್ತೀಚೆಗೆ ಅಭಿವೃದ್ಧಿಗೊಂಡಿದ್ದು ದೇಶದ ಆದಾಯದಲ್ಲಿ ಶೇ. 27 ಭಾಗವನ್ನು ಪೂರೈಸುತ್ತದೆ. ಕಬ್ಬಿಣ ಮತ್ತು ಉಕ್ಕು, ಸ್ವಯಂಚಾಲಿತವಾಹನ, ತಂಬಾಕು ಮತ್ತು ಚರ್ಮ ಸಂಸ್ಕರಣೆಗಳು ಮುಖ್ಯವಾದ ಕೈಗಾರಿಕೆಗಳಾಗಿವೆ. ರೈಲು ಸಾರಿಗೆ ಪ್ರಮುಖವಾದುದು. ಇತರೆ ಸಾರಿಗೆ ಮಾಧ್ಯಮಗಳು ಸುಧಾರಣೆಯಾಗಬೇಕಾಗಿದೆ. ರಫ್ತು ಸರಕುಗಳ ಸಾಗಣೆಯಲ್ಲಿ ರೈಲುಸಾರಿಗೆ ಪಾತ್ರಪ್ರಮುಖ. ಇಲ್ಲಿನ ಹಣ ಡಾಲರ್.

ಜನವರ್ಗ: ಜಿಂಬಾಬ್ವೆಯಲ್ಲಿ ವಿವಿಧ ಸಮುದಾಯದ ಜನವರ್ಗವಿದ್ದರೂ ಒಟ್ಟು ಜನಸಂಖ್ಯೆಯಲ್ಲಿ ಶೇ. 98 ಕಪ್ಪು ಜನರು. ಇದರಲ್ಲಿ ಶೇ. 80–84 ಭಾಗ ಶೋನವಂಶಾವಳಿಗೆ ಸೇರಿದ್ದಾರೆ. ಡಿಬೆಲ್ಸ್, ಟಂಟು, ಬಿಳಿಯರು, ಫ್ರೆಂಚ್, ಡಚ್ ಮತ್ತು ಅರ್ಮೇನಿಯ ಮೂಲದವರೂ ಇದ್ದಾರೆ. ಜನಸಾಂದ್ರತೆ ಚ.ಕಿಮೀ ಗೆ 33 ಜನರು. ನಿರೀಕ್ಷಿತ ಆಯಸ್ಸು ಕೇವಲ 37 ವರ್ಷಗಳು. ಎಚ್.ಐ.ವಿ/ ಏಡ್ಸ್ ಪಿಡುಗು ವ್ಯಾಪಕ ಮತ್ತು ದೇಶದ ದೊಡ್ಡ ಸಮಸ್ಯೆ. ಪ್ರಪಂಚದಲ್ಲೇ ಅತಿಹೆಚ್ಚು (ಶೇ. 33.7) ಏಡ್ಸ್ ಸೋಂಕುಳ್ಳ ಜನರಿದ್ದಾರೆ. ಇದರ ನಿಯಂತ್ರಣಕ್ಕಾಗಿ ಸರ್ಕಾರದ ಗಮನವನ್ನು ಸ್ಥಳೀಯ ವೃದ್ಧರು ಸೆಳೆದಿದ್ದಾರೆ. ಶೇ. 75ರಷ್ಟು ಜನರು ಕ್ರಿಶ್ಚಿಯನ್ನರು, ಮೂಲವಾಸಿಗಳು ಶೇ. 24, ಇತರೆ ಶೇ. 1 ರಷ್ಟಿದ್ದಾರೆ. (ಪಿ.ಎಂ.)

**ಜಿದ್ದ :** ಸೌದಿ ಅರೇಬಿಯದ ಮುಖ್ಯ ರೇವುಪಟ್ಟಣ. ಕೆಂಪುಸಮುದ್ರದ ತೀರದಲ್ಲಿದೆ. ಅಲ್ ಹೆಜಾಜ್ ಪ್ರಾಂತ್ಯಕ್ಕೆ ಸೇರಿದೆ. ಜನಸಂಖ್ಯೆ 14.9 ಲಕ್ಷ. ಇದು ರುದ್ರಭೂಮಿ ಎಂಬ ನಂಬಿಕೆ ಹಿಂದೆ ಇದ್ದದ್ದರಿಂದ ಇದಕ್ಕೆ ಜಿದ್ದ ಎಂಬ ಹೆಸರು ಬಂತು. ಜುದ್ದ ಎಂದರೆ ಪೂರ್ವಜೆ. ಈವಳದೆಂದು ಪ್ರಸಿದ್ಧವಾಗಿದ್ದ ಗೋರಿಯನ್ನು ಸೌದಿ ಅರೇಬಿಯ ಸರ್ಕಾರ 1928ರಲ್ಲಿ ನಾಶಮಾಡಿತು. ಇದು ಮೂಢನಂಬಿಕೆಯನ್ನು ಪ್ರೋತ್ಸಾಹಿಸುವುದೆಂಬುದೇ ಕಾರಣ.

ಮುಸ್ಲಿಂ ಯಾತ್ರಾಸ್ಥಳವಾದ ಮೆಕ್ಕ ಇರುವುದು ಇದರಿಂದ ಸು. 80 ಕಿಮೀ ದೂರದಲ್ಲಿ. ಮೆಕ್ಕಕ್ಕೆ ಬರುವ ಯಾತ್ರಿಕರಲ್ಲಿ ಬಹಳ ಮಂದಿ ಈ ರೇವಿನಲ್ಲಿ ಇಳಿದು ಪ್ರಯಾಣ ಮುಂದುವರಿಸುತ್ತಾರೆ. ಆದ್ದರಿಂದ ಈ ನಗರ ಐತಿಹಾಸಿಕ ಪ್ರಾಮುಖ್ಯ ಗಳಿಸಿದೆ. ಬಂದರು 17ನೆಯ ಶತಮಾನದಿಂದ ಈಗಿನ ಸ್ಥಳದಲ್ಲಿದೆ.

ಎರಡನೆಯ ಮಹಾಯುದ್ಧದ ತರುವಾಯ ಈ ನಗರ ಹೆಚ್ಚು ಅಭಿವೃದ್ಧಿ ಹೊಂದಿತು. ಸೌದಿ ಅರೇಬಿಯ ತನ್ನ ಎಣ್ಣೆ ಬಾವಿಗಳಿಂದ ಬರುವ ಆದಾಯವನ್ನು ಈ ನಗರದ ಸೌಂದರ್ಯ ಹಾಗೂ ಸೌಲಭ್ಯಗಳನ್ನು ಹೆಚ್ಚಿಸಲು ಗಣನೀಯವಾಗಿ ವೆಚ್ಚ ಮಾಡುತ್ತಿದೆ. ಮೆಕ್ಕ ಮತ್ತು ಮದೀನಗಳೊಂದಿಗೆ ರೈಲ್ವೆ ಸಂಪರ್ಕ ಏರ್ಪಡಿಸಲೂ ಯೋಜನೆಗಳು ರೂಪುಗೊಂಡಿವೆ. ಇಲ್ಲಿಯ ಹಳೆಯ ಬಜಾರುಗಳೂ ಗೋಡೆಗಳೂ ಈಗ ಅದೃಶ್ಯವಾಗಿವೆ. ಉದ್ಯಾನಗಳು, ಕಾಂಕ್ರೀಟಿನ ಆಧುನಿಕ ಕಟ್ಟಡಗಳು, ಆಧುನಿಕ ಹೋಟೆಲುಗಳು, ಅಂಗಡಿಗಳು ಅಲ್ಲಲ್ಲಿ ನಿರ್ಮಾಣವಾಗಿವೆ. ಹಡಗುಗಳು ತೀರದ ಬಳಿ ಬರಲು ಅನುಕೂಲವಾಗುವಂತೆ ಹಡಗುಕಟ್ಟೆ ಇದೆ. ಯಾತ್ರಾರ್ಥಿಗಳಿಗೆ ವೈದ್ಯಕೀಯ ಸೌಲಭ್ಯದ ವ್ಯವಸ್ಥೆಯುಂಟು. ಕುಡಿಯುವ ನೀರಿನ ಸರಬರಾಜಿನ ಸೌಲಭ್ಯವೂ ಇದೆ.

ಮುಸ್ಲಿಮೇತರರಿಗೆ ಮೆಕ್ಕಕ್ಕೆ ಭೇಟಿ ನೀಡಲು ಅವಕಾಶವಿಲ್ಲ. ಆದ್ದರಿಂದ ಸೌದಿ ಅರೇಬಿಯದ ರಾಜತಾಂತ್ರಿಕ ರಾಜಧಾನಿ ಜಿದ್ದ. ಸೌದಿ ವಿದೇಶಾಂಗ ಸಚಿವಾಲಯವೂ ಎಲ್ಲ ವಿದೇಶೀ ದೂತಾವಾಸಗಳೂ ಇಲ್ಲಿವೆ. ನಗರಾಡಳಿತಕ್ಕಾಗಿ ಪೌರಸಭೆ ಯೊಂದಿದೆ. 1967ರಲ್ಲಿ ಇಲ್ಲಿ ಕಿಂಗ್ ಅಬ್ದುಲ್ ಅಜೀಸ್‌ನ ಖಾಸಗಿ ವಿಶ್ವವಿದ್ಯಾಲಯ ಸ್ಥಾಪಿತವಾಯಿತು.

ಹವಳ, ಹತ್ತಿವಸ್ತುಗಳು, ಕಬ್ಬಿಣದ ಸಾಮಾನುಗಳು, ಕನ್ನಡಿಗಳು, ಚರ್ಮದ ವಸ್ತುಗಳು, ಖರ್ಜೂರ, ಕಾಫಿ, ಜಮಖಾನ–ಇವು ಜಿದ್ದ ಬಂದರಿನ ಮೂಲಕ ಸಾಗುವ ಸರಕುಗಳು. ಮೆಕ್ಕಕ್ಕೆ ಬರುವ ಯಾತ್ರಾರ್ಥಿಗಳಲ್ಲಿ ಮೂರನೆಯ ಎರಡು ಭಾಗದವರು ಸಮುದ್ರ ಮಾರ್ಗವಾಗಿ ಬರುತ್ತಾರೆ. ಉಳಿದವರು ಬರುವುದು ವಿಮಾನದ ಮೂಲಕ. ಜಿದ್ದ ನಗರದ ಬಳಿ ಇರುವ ವಿಮಾನನಿಲ್ದಾಣ ಇತರ ಎಲ್ಲ ಅಂತಾರಾಷ್ಟ್ರೀಯ ವಿಮಾನನಿಲ್ದಾಣಗಳಂತೆ ಸುಸಜ್ಜಿತವಾಗಿದೆ. (ಡಿ.ಎಸ್.ಜೆ.)

**ಜಿನೀವ:** ಸ್ವಿಟ್ಜರ್ಲೆಂಡಿನ ಒಂದು ನಗರ, ಜಿನೀವ ಕ್ಯಾಂಟನಿನ (ಆಡಳಿತ ವಿಭಾಗ) ರಾಜಧಾನಿ. ಇದು ಜಿನೀವ ಸರೋವರದ ಪಶ್ಚಿಮ ಭಾಗದಲ್ಲಿ ರ್‍ಹೋನ್‌ನದಿ ಸರೋವರದಿಂದ ಹೊರಬೀಳುವ ಭಾಗದಲ್ಲಿದೆ. ಜನಸಂಖ್ಯೆ 1,76,000 (2003). ರ್‍ಹೋನ್ ನದಿಯ ಎರಡೂ ದಂಡೆಗಳ ಮೇಲೆ ಜಿನೀವ ನಗರ ಹಬ್ಬಿದೆ. ಜಿನೀವ ಸರೋವರದಿಂದ ದಕ್ಷಿಣಕ್ಕೆ ಹರಿಯುವ ಈ ನದಿಗೆ ಒಂಬತ್ತು ಸೇತುವೆಗಳಿವೆ. ನದಿಯ ಎಡದಂಡೆಯ ಮೇಲೆ ದಕ್ಷಿಣಕ್ಕೆ ಒಂದು ಬೆಟ್ಟವುಂಟು. ಜಿನೀವ ನಗರ ಮೊದಲು ಅದರ ಮೇಲೆ ಸ್ಥಾಪಿತವಾಗಿತ್ತು.

ಈ ನಗರ ಬ್ಯಾಂಕಿಂಗ್, ಹಣಕಾಸಿನ ಸಂಸ್ಥೆಗಳು, ಗಡಿಯಾರ, ಆಭರಣ ವಜ್ರದ ಕೈಗಾರಿಕೆಗಳಿಗೆ ಪ್ರಸಿದ್ಧಿಯಾಗಿದೆ. *

**ಜಿನೀವ ಸರೋವರ:** ಮಧ್ಯ ಯುರೋಪಿನ ಅತ್ಯಂತ ದೊಡ್ಡ ಸರೋವರ. ನೈಋತ್ಯ ಸ್ವಿಟ್ಜರ್ಲೆಂಡಿಗೂ ಆಗ್ನೇಯ ಫ್ರಾನ್ಸಿನ ಓಟ್–ಸವಾಯ್ ವಿಭಾಗಕ್ಕೂ ನಡುವೆ ಇದೆ. ಸಮುದ್ರಮಟ್ಟದಿಂದ 372 ಮೀ ಎತ್ತರದಲ್ಲಿರುವ ಈ ಸರೋವರದ ವಿಸ್ತೀರ್ಣ 55 ಚ.ಕಿಮೀ.

ಈ ಸರೋವರ ಅರ್ಧಚಂದ್ರಾಕಾರದಲ್ಲಿದೆ. ಈ ಸರೋವರವನ್ನು ರ್‍ಹೋನ್ ನದಿ ಇದರ ಪೂರ್ವತುದಿಯಲ್ಲಿ ಪ್ರವೇಶಿಸಿ, ಪಶ್ಚಿಮ ತುದಿಯಿಂದ ಮುಂದುವರಿದು ಜಿನೀವ ನಗರದ ಮೂಲಕ ಹರಿಯುತ್ತದೆ. ಪೂರ್ವದಿಂದ ಪಶ್ಚಿಮಕ್ಕೆ ಇದರ ಉದ್ದ 72 ಕಿಮೀ. ಸರಾಸರಿ ಆಳ 152 ಮೀ. ಪ್ರೊಮೆಂತೂ ಜಲಸಂಧಿಯಿಂದ ಈ ಸರೋವರದಲ್ಲಿ ಎರಡು ಭಾಗಗಳಾಗಿವೆ. ರ್‍ಹೋನ್ ನದಿ ಸೇರುವಲ್ಲಿ ನೀರು ಬಗ್ಗಡವಾಗಿದೆ. ಸರೋವರದ ನೀರು ಒಂದು ದಡದಿಂದ ಇನ್ನೊಂದು ದಡಕ್ಕೆ ತೊಟ್ಟಿಲಂತೆ ತೂಗುವುದರಿಂದ 2–5 ಮಿನಿಟುಗಳಿಗೊಮ್ಮೆ ಜಿನೀವದ ಬಳಿ ನೀರಿನ ಮಟ್ಟದಲ್ಲಿ 0.3 ರಿಂದ 1.2 ಮೀ ಗಳಷ್ಟು ಏರಿಳಿತವುಂಟಾಗುವುದು. ಸ್ವಿಟ್ಝರ್ಲೆಂಡಿನ ಇತರ ಸರೋವರಗಳಲ್ಲಿ ಇರುವಷ್ಟು ಮತ್ಸ್ಯಸಂಪತ್ತು ಈ ಸರೋವರದಲ್ಲಿಲ್ಲ. ಇಲ್ಲಿ ಕೇವಲ 20 ಸ್ಥಳೀಯ ಜಾತಿಗಳ ಮೀನುಗಳಿವೆ. ಸರೋವರದ ಮೇಲೆ ಸ್ಟೀಮರುಗಳ ಸಂಚಾರವುಂಟು. *

**ಜಿನೋವ:** ಇಟಲಿಯ ಲಗುರೀಯ ಸ್ವಯಮಾಡಳಿತ ಪ್ರಾಂತ್ಯದ ರಾಜಧಾನಿ. ಉ.ಅ. $44^0 25'$ ಪೂ.ರೇ. $8^0 55'$ ಮೇಲಿದೆ. ಜನಸಂಖ್ಯೆ 604732 (2002). ಇದು ಇಟಲಿಯ ಪ್ರಮುಖ ಬಂದರು. ಇಟಲಿಯ ದೊಡ್ಡಪಟ್ಟಣಗಳಲ್ಲಿ ಇದು ಐದನೆಯದು. ಇದು ಬಹುಮಟ್ಟಿಗೆ ಅರಮನೆಗಳ ನಗರ. ವಾಸ್ತುಶಿಲ್ಪ ದೃಷ್ಟಿಯಿಂದ ಬಹು ಪ್ರಸಿದ್ಧವಾದ ಅನೇಕ ಅರಮನೆಗಳು ಚರ್ಚುಗಳು ನಗರದ ತುಂಬ ಹರಡಿವೆ. ಪ್ರ.ಶ.ಪೂ. 4ನೆಯ ಶತಮಾನದಲ್ಲೇ ಜಿನೋವ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಇದು ರೋಮಿನ ಮಿತ್ರರಾಷ್ಟ್ರವಾಗಿತ್ತು.

ವಾಸ್ತುಶಿಲ್ಪ ದೃಷ್ಟಿಯಿಂದ ಜಿನೋವ ವಿಶಿಷ್ಟ ಸ್ಥಾನ ಪಡೆದಿದೆ. ನಗರದ ತುಂಬ ಹಳೆಯ ಚರ್ಚುಗಳೂ ಅರಮನೆಗಳೂ ಹರಡಿವೆ. ಪುರಾತನ ಚರ್ಚುಗಳಲ್ಲಿ ಫ್ರೆಂಚ್, ರೋಮನೆಸ್ಕ್ ಮತ್ತು ಪೀಸ ಶೈಲಿಗಳ ಮಿಶ್ರಣ ಕಾಣುತ್ತದೆ. ಇವುಗಳ ಗೋಪುರ ಸಾಮಾನ್ಯವಾಗಿ ಸಣ್ಣದು, ಅಮೃತಶಿಲೆಯ ಕಂಬಗಳು ಬಹಳ ದೊಡ್ಡವು. ಮುಂಭಾಗ ತುಂಬ ಸರಳ, ಗ್ಯಾಲರಿರಹಿತ. ಗೋಡೆಗಂಬಗಳಿಗೆ ಪರ್ಯಾಯವಾಗಿ ಕಪ್ಪು ಮತ್ತು ಬಿಳಿಯ ಅಮೃತಶಿಲೆಯನ್ನು ಬಳಸಲಾಗಿದೆ. ಇದೇ ಶೈಲಿ ಅನಂತರದ ಗಾತಿಕ್ ಶೈಲಿಯ ಚುರ್ಚುಗಳಲ್ಲೂ ಮುಂದುವರಿದಿದೆ.

ಜಿನೋವದಲ್ಲಿ ಪ್ರಸಿದ್ಧವಾದ ಅನೇಕ ಚರ್ಚುಗಳಿವೆ. ಕತೀಡ್ರಲ್ ಆಫ್ ಸ್ಯಾನ್ ಲೊರೆಂಜೋ (1118), ಡೋರಿಯನರ ಪುರಾತನ ಚರ್ಚಾದ ಸ್ಯಾನ್ ಮಾಟೇವೋ (1125), ಮೆಡಿವಲ್ ಚರ್ಚ್ ಆಫ್ ಸ್ಯಾನ್ ಡೋನಾಟೋ (12ನೆಯ ಶ.), 16ನೆಯ ಶತಮಾನದ ಅನನ್ಸಿಯೇಶನ್ ಮತ್ತು ಸೇಂಟ್ ಅಂಬ್ರೋಸ್–ಇವು ಕೆಲವು ಪ್ರಮುಖ ಚರ್ಚುಗಳು. ಜಿನೋವದಲ್ಲಿರುವ ಅರಮನೆಗಳಲ್ಲಿ ಬಹುಪಾಲು 11–17ನೆಯ ಶತಮಾನಗಳಲ್ಲಿ ಕಟ್ಟಿದವು. ಅನೇಕ ಅರಮನೆಗಳು ಅವುಗಳಲ್ಲಿರುವ ಸುಂದರ ಶಿಲ್ಪ, ಚಿತ್ರಗಳಿಗಾಗಿ ಪ್ರಸಿದ್ಧವಾಗಿವೆ. ಕೊಸ ಡಿ ಲಾಂಬ ಡೊರಿಯ ಅರಮನೆ, ವೆನಿಸ್ ಅನ್ನು ಗೆದ್ದ ದಳಪತಿಗೆ ಉಡುಗೊರೆಯಾಗಿ ಕೊಟ್ಟದ್ದು (1298). ಬಂದರಿನ ದಡದಲ್ಲಿರುವ ಪ್ಲಾಸೋ ಡಿ ಸಾನ್ ಜಿಯೋರ್‌ಜಿಯೋ ಎಂಬುದು ಕ್ಯಾಪ್ಟನ್ ಪೊಪೊಲೋನ ವಾಸಸ್ಥಾನವಾಗಿತ್ತು. 16ನೆಯ ಶತಮಾನದಲ್ಲಿ ಕಟ್ಟಿದ ಬಿಳಿಬಣ್ಣದ ಪ್ಲಾಸೊ ಬಿಯಾಂಕೋ, ಕಲಾವಸ್ತುಗಳ, ವೈಜ್ಞಾನಿಕ ಮತ್ತು ಐತಿಹಾಸಿಕ ವಸ್ತುಗಳ ಕೇಂದ್ರ. 17ನೆಯ ಶತಮಾನದ ಪ್ಲಾಸೋ ರೋಸ್ಸೋ ಕೆಂಪು ಬಣ್ಣದ ಕಟ್ಟಡ. ಎರಡನೆಯ ಮಹಾಯುದ್ಧದಲ್ಲಿ ತುಂಬ ನಷ್ಟಕ್ಕೊಳಗಾದ ಇದನ್ನು ರಿಪೇರಿ ಮಾಡಿ 1961ರಲ್ಲಿ ಮತ್ತೆ ತೆರೆಯಲಾಯಿತು. ಇದರ ಗೋಡೆ ಮತ್ತು ಚಾವಣಿಗಳನ್ನು ಪ್ರಸಿದ್ಧ ಚಿತ್ರಕಾರ ಡಿ. ಪೆರಾರಿಯ ಮತ್ತು ಇತರರ ಜಲವರ್ಣ ಚಿತ್ರಗಳಿಂದ ಅಲಂಕರಿಸಲಾಗಿದೆ. ಇಲ್ಲಿ ಪೌರ ಅರಮನೆಯ (ಪಲಾಜೊ ಮುನಿಸಿಪೇಲ್) (1564) ಪ್ರಾಚ್ಯವಸ್ತು ಸಂಗ್ರಹಗಳಲ್ಲಿ ಪ್ರಸಿದ್ಧ ಸಂಗೀತಗಾರ ನೀಕೋಲೋ ಪಾಗಾನೀನಿಯ ಪಿಟೀಲು ಮತ್ತು ಕ್ರಿಸ್ಟೊಫರ್ ಕೊಲಂಬಸನ ಹಸ್ತಾಕ್ಷರಗಳಿರುವ ಎರಡು ಕಾಗದಗಳು ಸೇರಿವೆ. ಬಿಯಾಂಕೊ (1565) ಮತ್ತು ರೋಸ್ಸೋ (1677) ಅರಮನೆಗಳು ಯುದ್ಧದಿಂದ ಹಾಳಾಗಿವೆ. ಡುಕಲ್ ಅರಮನೆ ಮೊದಲು ಪಟ್ಟಣದ ಪ್ರಧಾನ ದಂಡಾಧಿಕಾರಿಯ ವಾಸಸ್ಥಾನವಾಗಿತ್ತು.

ಜಿನೋವ ಇಟಲಿಯ ಪ್ರಮುಖ ಕೈಗಾರಿಕಾ ಕೇಂದ್ರ. ಸ್ವಯಂಚಾಲಿತ ಯಂತ್ರ, ರಾಸಾಯನಿಕ, ಕಾಗದ ತಯಾರಿಸುವ ಅನೇಕ ಕಾರ್ಖಾನೆಗಳು ಇಲ್ಲಿವೆ. ಲೋಹ ಕೈಗಾರಿಕೆ, ತೈಲಶುದ್ಧೀಕರಣ ಕೈಗಾರಿಕೆಗಳು ಇಲ್ಲಿವೆ. ಆಲಿವ್ ಎಣ್ಣೆ, ಮದ್ಯ, ರೇಷ್ಮೆ, ಮಖಮಲ್ಲು,

ಹೂವು, ಸಾಮಾನು, ಮೋಟಾರ್ ಕಾರು, ಹಣ್ಣು, ಅಕ್ಕಿ, ನಾರಿಗಾಗಿ ಬೆಳೆಸುವ ಗಿಡ, ಗಾಂಜಾ, ಶೇವಿಗೆ, ಚೀಸ್, ಕಾಗದ, ಯಂತ್ರೋಪಕರಣ, ಉಕ್ಕು, ಬಟ್ಟೆ ಮುಂತಾದುವುಗಳು ಇಲ್ಲಿಂದ ರಫ್ತಾಗುತ್ತವೆ.

ಜಿನೋವ ನಗರದ ಸುತ್ತಲೂ ಕೋಟೆಗೋಡೆಗಳಿವೆ. ಇದು ಸಮುದ್ರ ಮತ್ತು ಅಪೆನ್ನೈನ್ ಬೆಟ್ಟಗಳ ನಡುವೆ ಇದೆ. ಪಟ್ಟಣ ಹಳ್ಳ ತಿಟ್ಟುಗಳಿಂದ ಕೂಡಿದೆ. ನಗರದ ಅನೇಕ ಹಳೆಯ ರಸ್ತೆಗಳು, ಇಕ್ಕಟ್ಟಾಗಿರುವುದರಿಂದ ಸಂಚಾರಕ್ಕೆ ಯೋಗ್ಯವಾಗಿಲ್ಲ. ನಗರದ ಅನೇಕ ಭಾಗಗಳಿಂದ ಬಂದರಿಗೆ ಸಂಪರ್ಕ ಕಲ್ಪಿಸಲು ಅನೇಕ ಹೊಸ ರಸ್ತೆಗಳನ್ನು ನಿರ್ಮಿಸಲಾಗಿದೆ. ನಗರದ ಹಿಂದಿನ ಬೆಟ್ಟಗಳಲ್ಲಿ ಮೂರು ಸುರಂಗಗಳನ್ನು ಕೊರೆದು ಸಂಪರ್ಕ ವ್ಯವಸ್ಥೆಯನ್ನು ಉತ್ತಮಪಡಿಸಲಾಗಿದೆ. ಸ್ಥಳೀಯ ಸಂಚಾರ ಮುಖ್ಯವಾಗಿ ಬಸ್ ಮತ್ತು ಟ್ರಾಲಿಗಳಿಂದ ನಡೆಯುತ್ತದೆ. ಸಮುದ್ರ ತೀರದ ರೈಲು ಮತ್ತು ರಸ್ತೆಸಾರಿಗೆ ವ್ಯವಸ್ಥೆ ನಗರದ ಮೂಲಕ ಹಾದು ಪಶ್ಚಿಮಕ್ಕೆ ನೀಸ್ ಮತ್ತು ಫ್ರಾನ್ಸಿಗೂ ಪೂರ್ವಕ್ಕೆ ಲೆಗೋರ್ನ್ ಮತ್ತು ರೋಮ್ ನಗರಗಳಿಗೂ ಹೋಗುತ್ತದೆ. ಉತ್ತರದ ರೈಲು ಮತ್ತು ಮೋಟಾರ್ ರಸ್ತೆ ಪೋಲ್ಸೀವೆರ ಕಣಿವೆಯ ಮೂಲಕ ಹಾದು ಟ್ಯುರಿನ್ ಮತ್ತು ಮಿಲಾನ್ ನಗರಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಕ್ರಮಬದ್ಧವಾದ ನೌಕಾಸಂಚಾರ ವ್ಯವಸ್ಥೆಯಿಂದಾಗಿ ಅನೇಕ ಬಂದರು ಪಟ್ಟಣಗಳೊಂದಿಗೆ ಸಂಪರ್ಕ ವ್ಯವಸ್ಥೆ ಇದೆ.

ಜಿನೋವದ ಹಳೆಯ ಬಂದರು ಅರ್ಧವೃತ್ತಾಕಾರವಾಗಿದ್ದು ಇದರ ಕೆಲವು ಭಾಗಗಳು 12ನೆಯ ಶತಮಾನದಲ್ಲಿ ಕಟ್ಟಿದಂತಹವು. 17–18ನೆಯ ಶತಮಾನಗಳಲ್ಲಿ ಇದನ್ನು ವಿಸ್ತರಿಸಲಾಯಿತು. ಇಲ್ಲಿ ಹಡಗಿಗೆ ಸಾಮಾನುಗಳನ್ನು ತುಂಬಲು ಮತ್ತು ಅದರಿಂದ ಇಳಿಸಲು ಅನುಕೂಲವಾಗುವಂತೆಯೂ, ಏಕಕಾಲದಲ್ಲಿ ಅನೇಕ ಹಡಗುಗಳನ್ನು ತಂದು ನಿಲ್ಲಿಸಲೂ ಬಂದರಿನ ಪಕ್ಕದಲ್ಲಿ ಉದ್ದಕ್ಕೂ ಅನೇಕ ಸ್ಥಿರ ಇಳಿದಾಣಗಳನ್ನು ನಿರ್ಮಿಸಲಾಗಿದೆ. ಹೊಸ ಬಂದರು ಪ್ರದೇಶ ಜಿನೋವದ ಪಶ್ಚಿಮಕ್ಕಿರುವ ಹೊರವಲಯ ನಗರವಾದ ಸ್ಯಾಂಪೀರ್ ದೆರೆನ ನಗರದಿಂದ ಪೋಲ್ಸೀವೆರ ನದಿಯ ವರೆಗೂ ಹಬ್ಬಿದೆ.

(ಎಸ್.ಎನ್.ಎಲ್.)

**ಜಿಬ್ರಾಲ್ಟರ್:** ಒಂದು ಜಲಸಂಧಿ; ಒಂದು ಬೆಟ್ಟ; ಒಂದು ಪಟ್ಟಣ. ಜಲಸಂಧಿ ಮೆಡಿಟರೇನಿಯನ್ ಸಮುದ್ರವನ್ನೂ ಅಟ್ಲಾಂಟಿಕ್ ಸಾಗರವನ್ನೂ ಕೂಡಿಸುತ್ತದೆ. ಜಿಬ್ರಾಲ್ಟರ್ ಜಲಸಂಧಿಯ ಪೂರ್ವದ ಕೊನೆಯಲ್ಲಿ ಸುಣ್ಣಕಲ್ಲಿನ ಬೆಟ್ಟ, ಜಿಬ್ರಾಲ್ಟರ್ ಬಂಡೆ ಇದೆ. ಬಂಡೆಯ ಮೇಲೆ ಪಟ್ಟಣವಿದೆ.

ಜಿಬ್ರಾಲ್ಟರ್ ಜಲಸಂಧಿ : ಸ್ಪೇನಿನ ದಕ್ಷಿಣದ ತುದಿಗೂ ಆಫ್ರಿಕದ ಉತ್ತರದ ತುದಿಗೂ ನಡುವೆ ಇದೆ. ಇದರ ಉದ್ದ 57.6 ಕಿಮೀ, ಕನಿಷ್ಠ ಅಗಲ (ಸ್ಪೇನಿನ ನೈಋತ್ಯದಲ್ಲಿ ಟಾರೀಫಾ ರೇವಿನ ಬಳಿ) 14.5 ಕಿಮೀ. ಈ ಜಲಸಂಧಿ ಪ್ಲಿಯೊಸೀನ್ ಯುಗದಲ್ಲಿ ರೂಪುಗೊಂಡಿರಬೇಕೆಂದು ಊಹಿಸಲಾಗಿದೆ. ತಗ್ಗಿನ ಹೊಸಿಲಿನಂತೆ ಉಗಮಗೊಂಡ ಜಲಸಂಧಿಯ ಮೂಲಕ ಅಟ್ಲಾಂಟಿಕ್‌ನಿಂದ ಮೆಡಿಟರೇನಿಯನ್ ಸಮುದ್ರಕ್ಕೆ ನೀರು ಹರಿದಿರಬೇಕು. ಜಲಸಂಧಿಯ ಎರಡು ತುದಿಗಳಲ್ಲೂ ಒಂದೇ ಭೂವೈಜ್ಞಾನಿಕ ಲಕ್ಷಣವಿದೆ. ಅಟ್ಲಾಂಟಿಕ್‌ನಿಂದ ಈಗಲೂ ನೀರು ಹರಿಯುತ್ತದೆ. ಪೂರ್ವ ಮಾರುತಗಳ ಪ್ರಭಾವಕ್ಕೆ ಒಳಗಾಗದಿದ್ದಾಗ ಮೇಲ್ಭಾಗದಲ್ಲಿ 2 ನಾಟ್‌ಗಳ ವೇಗದಲ್ಲಿ ನೀರು ಪ್ರವಹಿಸುತ್ತದೆ (1 ನಾಟ್ = 1,842 ಮೀ). 68 ಫ್ಯಾದಮ್‌ಗಳ ಆಳದಲ್ಲಿ (ಫ್ಯಾದಮ್ = ಆರಡಿ) ಹೆಚ್ಚು ಭಾರವಾದ, ತಣ್ಣನೆಯ, ಅಧಿಕ ಲವಣಯುಕ್ತವಾದ ನೀರು ಪಶ್ಚಿಮಾಭಿಮುಖವಾಗಿ ಹರಿಯುವುದಾದರೂ, ಪೂರ್ವದ ಕಡೆಗೆ ಹರಿಯುವ ನೀರೇ ಅಧಿಕ. ಮೆಡಿಟರೇನಿಯನ್ ಒಂದು ಉಪ್ಪುನೀರಿನ ಸರೋವರವಾಗಿ ಕುಗ್ಗಿ ಹೋಗದೆ ಇರುವುದು ಜಿಬ್ರಾಲ್ಟರ್ ಜಲಸಂಧಿಯಿಂದಾಗಿ.

ಜಿಬ್ರಾಲ್ಟರ್ ಬಂಡೆಯನ್ನು ಸ್ಪೇನ್ ಭೂಭಾಗದೊಂದಿಗೆ ಒಂದು ತಗ್ಗಿನ, ಮರಳಿನಿಂದ ಕೂಡಿದ ಭೂಕಂಠ ಸೇರಿಸುತ್ತದೆ. ಇದು ಜಿಬ್ರಾಲ್ಟರ್ ಕೊಲ್ಲಿಯನ್ನು ಮೆಡಿಟರೇನಿಯನ್‌ನಿಂದ ಪ್ರತ್ಯೇಕಿಸುತ್ತದೆ. ಸಮುದ್ರಕ್ಕೆ ಚಾಚಿಕೊಂಡಿರುವ ಬಂಡೆಗಲ್ಲಿನ ಉದ್ದ 4 ಕಿಮೀ, ಅಗಲ 1.2 ಕಿಮೀ, ಎತ್ತರ 128 ಮೀ. ದಕ್ಷಿಣದ ತುದಿಯಲ್ಲಿರುವ ಯುರೋಪಾ ಬಿಂದುವಿನಲ್ಲಿ ಒಂದು ದೀಪಸ್ತಂಭವನ್ನು ಕಟ್ಟಲಾಗಿದೆ. ಗ್ರೀಕ್ ಪುರಾಣ ಉಕ್ತವಾದ ಹರ್ಕ್ಯುಲೀಸನ ಸ್ತಂಭಗಳಲ್ಲಿ ಜಿಬ್ರಾಲ್ಟರ್ ಬಂಡೆಯ ಒಂದು. ಇಲ್ಲಿ ಬ್ರಿಟಿಷರ ಒಂದು ಕೋಟೆಯು ನೌಕಾ ಮತ್ತು ವಿಮಾನ ನೆಲೆಯು ಇವೆ. ಇದು ಬ್ರಿಟಿಷರ ವಸಾಹತು. ಒಟ್ಟು ಪ್ರದೇಶದ ವಿಸ್ತೀರ್ಣ 5.82 ಚ.ಕಿಮೀ. ಇದು ಯುರೋಪಿನ ಅತ್ಯಂತ ಆಯಕಟ್ಟಿನ ಭಾಗ. ಇದರಿಂದಾಗಿ ಇದರ ಪ್ರಾಮುಖ್ಯತೆ ಹೆಚ್ಚು.

ಡಚ್ ನೌಕಾಪಡೆ ಇದನ್ನು 1704 ರಲ್ಲಿ ಆಕ್ರಮಿಸಿಕೊಂಡಿತು. 1713ರ ಯೂಟ್ರೆಕ್ಟ್ ಕೌಲಿನ ಪ್ರಕಾರ ಇದು ಬ್ರಿಟಿಷರಿಗೆ ಸೇರಿತು. ಇದನ್ನು ಮತ್ತೆ ಪಡೆದುಕೊಳ್ಳಲು ಸ್ಪೇನ್ ಪದೇಪದೇ ಪ್ರಯತ್ನಿಸಿದಾಗ್ಯೂ ಇದು ಬ್ರಿಟಿಷರ ವಶದಲ್ಲೇ ಇದೆ. 5ನೆಯ ಚಾರ್ಲ್ಸನ ಕಾಲದಲ್ಲಿ ಇಲ್ಲಿ ಕೋಟೆ ಕಟ್ಟಲಾಯಿತು. 19ನೆಯ ಮತ್ತು 20ನೆಯ ಶತಮಾನಗಳಲ್ಲಿ ಇದನ್ನು ಇನ್ನೂ ಸುಭದ್ರಗೊಳಿಸಲಾಯಿತು. ಇದು ಪ್ರಪಂಚದಲ್ಲೇ ಅತ್ಯಂತ ಬಲವಾದ ಕೋಟೆ. ಇದು ಬ್ರಿಟನ್ನಿನ ಪೂರ್ವ ಸಾಮ್ರಾಜ್ಯದ ಹೆಬ್ಬಾಗಿಲಿನ ಪಾತ್ರ ನಿರ್ವಹಿಸುತ್ತಿತ್ತು. ಈಗ ಇದರ ಪ್ರಾಮುಖ್ಯ ಕಡಿಮೆಯಾಗಿದೆಯಾದರೂ ಇದು ಆಯಕಟ್ಟಿನ ಸ್ಥಳದಲ್ಲಿದೆ. (ಎಚ್.ಎನ್.)

**ಜಿಯೊಲಾಜಿಕಲ್ ನಕ್ಷೆ:** ಭೂಗೋಳ ವಿಜ್ಞಾನ ಅಧ್ಯಯನಕ್ಕೆ ಭೂ ವಿಜ್ಞಾನದ ನಕ್ಷೆಗಳೂ ಅತಿ ಮುಖ್ಯ. ಈ ನಕ್ಷೆಗಳು ವಿವಿಧ ಬಗೆಯ ಶಿಲೆಗಳು ಹಾಗೂ ಅವುಗಳ ಪದರುಗಳ ಹಂಚಿಕೆಯನ್ನು ಪ್ರತಿನಿಧಿಸುತ್ತವೆ. ಭೂ ಸ್ವರೂಪಗಳು ಹೊಂದಿರುವ ಶಿಲಾರಚನೆ ಮತ್ತು ಭೂ ಸ್ವರೂಪಗಳ ನಿರ್ಮಾಣದಲ್ಲಿ ಅವುಗಳ ಪ್ರಭಾವವನ್ನು ಈ ನಕ್ಷೆಯಿಂದ ವಿಶ್ಲೇಷಿಸಬಹುದು. ಈ ನಕ್ಷೆಗಳಲ್ಲಿಯೂ ವಿವಿಧ ಬಗೆಯ ಚಿಹ್ನೆ ಹಾಗೂ ಬಣ್ಣಗಳನ್ನು ಬಳಸಿ ಅವುಗಳು ಹೆಚ್ಚು ವಿಷಯಗಳನ್ನು ಒಳಗೊಂಡಿರುವಂತೆ ರಚಿಸಲಾಗುವುದು. (ಆರ್.ಎಸ್.)

**ಜಿಲ್ಲಾ ಮಟ್ಟದ ಯೋಜನೆ:** ಜಿಲ್ಲಾಮಟ್ಟದ ಯೋಜನೆಯು ವಿಕೇಂದ್ರೀಕೃತ ಯೋಜನಾ ಪದ್ಧತಿಯ ಒಂದು ಮಹತ್ತ್ವದ ರೂಪವಾಗಿದೆ. ಇದು ಸೂಕ್ಷ್ಮ ಯೋಜನೆಗೆ ಒಂದು ಸ್ಪಷ್ಟ ಉದಾಹರಣೆ. ಕೇಂದ್ರ ಮಟ್ಟದಲ್ಲಿ ಅಥವಾ ರಾಜ್ಯಮಟ್ಟದಲ್ಲಿ ರೂಪಿಸಿ, ಕಾರ್ಯಗತಗೊಳಿಸಲಾಗುವ ಯೋಜನೆಗಳು ಸ್ಥಳೀಯ ಜನರ ಬೇಕು–ಬೇಡಗಳಿಗೆ ಸರಿಯಾಗಿ ಸ್ಪಂದಿಸುವುದಿಲ್ಲ ಮತ್ತು ಅವರ ಆಶೋತ್ತರಗಳನ್ನು ಸಮರ್ಪಕವಾಗಿ ಈಡೇರಿಸುವುದಿಲ್ಲ ಎಂಬ ಅಭಿಪ್ರಾಯದ ಹಿನ್ನಲೆಯಲ್ಲಿ ಜಿಲ್ಲಾಮಟ್ಟದ ಯೋಜನೆಗೆ ಪ್ರಾಮುಖ್ಯತೆ ಬಂದಿದೆ.

ಜಿಲ್ಲಾ ಪಂಚಾಯಿತಿ ಅಥವಾ ಜಿಲ್ಲಾ ಆಡಳಿತವತಿಯಿಂದ ಜಿಲ್ಲಾ ಯೋಜನೆಯನ್ನು ರೂಪಿಸಲಾಗಿದೆ. ಜಿಲ್ಲೆಯಲ್ಲಿರುವ ಜನಸಂಖ್ಯೆ, ಲಭ್ಯವಿರುವ ಸಂಪನ್ಮೂಲಗಳು, ದೊರೆಯಬಹುದಾದ ಹಣಕಾಸು ಮೊದಲಾದವುಗಳನ್ನು ಅಂದಾಜು ಮಾಡಿಕೊಂಡು, ಒದಗಿಸಬೇಕಾಗಿರುವ ಸೌಲಭ್ಯಗಳು ಮತ್ತು ಸಾಧಿಸಬೇಕಾಗಿರುವ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಯನ್ನು ರೂಪಿಸಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುವ ಅನುದಾನದ ಮೂಲಕ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ.

ಸಾಮಾನ್ಯವಾಗಿ ಜಿಲ್ಲಾ ಆಡಳಿತದ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಯೋಜನೆಯು ಇರುತ್ತದೆ. ಕೃಷಿ, ಕೈಗಾರಿಕೆ, ರೇಷ್ಮೆ, ಪಶುಸಂಗೋಪನೆ, ಭೂಸಾರ ಸಂರಕ್ಷಣೆ, ನೀರಾವರಿ, ಲೋಕೋಪಯೋಗಿ ಕಾಮಗಾರಿಗಳು, ಶಿಕ್ಷಣ, ಆರೋಗ್ಯ ಮೊದಲಾದ ಎಲ್ಲಾ ಸೌಲಭ್ಯಗಳಿಗೆ ಮತ್ತು ವಲಯಗಳಿಗೆ ಅನ್ವಯಿಸುವಂತೆ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ದುರ್ಬಲ ವರ್ಗಗಳ ಹಾಗೂ ಗ್ರಾಮೀಣ ಪ್ರದೇಶಗಳ ಜನರಿಗೆ ಸಾಲ ನೀಡಿಕೆಗಾಗಿಯೇ ಒಂದು ಪ್ರತ್ಯೇಕ ಯೋಜನೆ ಅಸ್ತಿತ್ವದಲ್ಲಿರುವುದು ಜಿಲ್ಲಾ ಯೋಜನೆಯ ವೈಶಿಷ್ಟ್ಯ. ಭಾರತದಲ್ಲಿ ಇದನ್ನು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈ ಯೋಜನೆಯ ಯಶಸ್ವೀ ಅನುಷ್ಠಾನಕ್ಕೆ ಹಣಕಾಸಿನ ಸಂಸ್ಥೆಗಳಾದ ವಾಣಿಜ್ಯ ಬ್ಯಾಂಕುಗಳ ಪೂರ್ಣ ಸಹಕಾರ ಮತ್ತು ಬೆಂಬಲ ಅತ್ಯಗತ್ಯವಾಗಿರುತ್ತದೆ. ಈ ಸಂಸ್ಥೆಗಳ ವತಿಯಿಂದಲೇ ಸಾಲ ಪೂರೈಕೆ ಮಾಡಬೇಕಾಗುತ್ತದೆ. ಈ ಯೋಜನೆಯಲ್ಲಿ ಪ್ರಯೋಜನದಾರರಿಗೆ ಸಾಲದ ಜೊತೆಗೆ ಸಹಾಯಧನವನ್ನು ನೀಡಲಾಗುತ್ತದೆ. ಸರ್ಕಾರದಿಂದ ಬಿಡುಗಡೆ ಮಾಡಲಾದ ಸಹಾಯಧನದ ಮೊಬಲಗನ್ನು ಜಿಲ್ಲಾ ಪಂಚಾಯಿತಿಯು ಬ್ಯಾಂಕುಗಳ ಮೂಲಕ ಫಲಾನುಭವಿಗಳಿಗೆ ವಿತರಣೆ ಮಾಡುತ್ತದೆ. ಎಷ್ಟು ಮಂದಿಗೆ ನೆರವು ನೀಡಬೇಕೆಂಬ ಬಗೆಗೆ ವರ್ಷದ ಪ್ರಾರಂಭದಲ್ಲಿಯೇ ಯೋಜನೆಯನ್ನು ರೂಪಿಸಲಾಗುತ್ತದೆ.

ರಸ್ತೆಗಳ ನಿರ್ಮಾಣ ಮತ್ತು ಅಭಿವೃದ್ಧಿ, ಕುಡಿಯುವ ನೀರು ಸರಬರಾಜು, ಶಿಕ್ಷಣ ಸೌಲಭ್ಯ ವಿಸ್ತರಣೆ, ಕೃಷಿ ಅಭಿವೃದ್ಧಿ ಮೊದಲಾದ ವಿಷಯಗಳಿಗೆ ಜಿಲ್ಲಾ ಯೋಜನೆಯಲ್ಲಿ ಆದ್ಯತೆ ಕಲ್ಪಿಸಲಾಗುತ್ತದೆ. ಸ್ಥಳೀಯ ಸಂಪನ್ಮೂಲಗಳ ಬಳಕೆಯ ಮೂಲಕ ಉದ್ಯಮಗಳ ಸ್ಥಾಪನೆ ಮತ್ತು ಹೆಚ್ಚುವರಿ ಉದ್ಯೋಗಾವಕಾಶಗಳ ಕಲ್ಪನೆಗೆ ಪ್ರಾಶಸ್ತ್ಯ ಕೊಡಲಾಗುತ್ತದೆ. ಭಾರತದಲ್ಲಿ 1989ರಿಂದ ಆಚರಣೆಯಲ್ಲಿರುವ ಜವಹರ್ ರೋಜ್ಗಾರ್ ಯೋಜನೆಯನ್ನು ಇಲ್ಲಿ ಉದಾಹರಿಸಬಹುದು. ಸ್ಥಳೀಯ ಜನರಿಗೆ ಉದ್ಯೋಗ ನೀಡಿಕೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸ್ವತ್ತುಗಳ ನಿರ್ಮಾಣವನ್ನು ಗುರಿಯಾಗಿಟ್ಟುಕೊಂಡಿರುವ ಯೋಜನೆಯು ಜಿಲ್ಲಾ ಮಟ್ಟದ ಉಸ್ತುವಾರಿಯಲ್ಲಿ ಕಾರ್ಯಾಚರಣೆಗೊಳ್ಳುತ್ತದೆ.

ಜಿಲ್ಲಾ ಮಟ್ಟದಲ್ಲಿ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸುವುದರಿಂದ ಈ ಕೆಳಗಿನ ಪ್ರಯೋಜನಗಳು ಲಭಿಸುತ್ತವೆ. ಜಿಲ್ಲಾ ಯೋಜನೆಯು ಸ್ಥಳೀಯ ಜನರ ಆಶೋತ್ತರಗಳನ್ನು ಈಡೇರಿಸಲು ಬದ್ಧವಾಗಿರುತ್ತದೆ. ಇದು ಕೆಳಮಟ್ಟದಿಂದ ರೂಪಿಸಿದ ಯೋಜನೆಯಾಗಿರುತ್ತದೆಯೇ ಹೊರತು ಮೇಲ್ಮಟ್ಟದಿಂದ ಹೇರಿದ ಯೋಜನೆಯಾಗಿರುವುದಿಲ್ಲ. ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಪಕವಾಗಿ ಅಂದಾಜು

ಮಾಡಿ ಅವುಗಳನ್ನು ಕಾಮಗಾರಿಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಪ್ರಗತಿ ಸಾಧಿಸಲು ಜಿಲ್ಲಾ ಯೋಜನೆಯಲ್ಲಿ ಸೂಕ್ತ ಅವಕಾಶವಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ವತ್ತುಗಳ ನಿರ್ಮಾಣ, ಉದ್ಯೋಗಾವಕಾಶಗಳ ವಿಸ್ತರಣೆ ಮತ್ತು ಸ್ವಾವಲಂಬನೆಯ ಸಾಧನೆಯ ದಿಸೆಯಲ್ಲಿ ಜಿಲ್ಲಾ ಯೋಜನೆ ಮಹತ್ತರವಾಗಿ ನೆರವಾಗುತ್ತದೆ. (ಎಚ್.ಆರ್.ಕೆ.)

**ಜೀನ್ ಲುಯಿಸ್ ಅಗಾಸಿಜ್:** 1807–1873. ಸ್ವಿಸ್–ಅಮೆರಿಕನ್ ನಿಸರ್ಗವಾದಿ ಮತ್ತು ಭೂವಿಜ್ಞಾನಿ. ಹಿಮನದಿಗಳ ಅಧ್ಯಯನಕ್ಕೆ ಮಹತ್ವದ ಕಾಣಿಕೆ ನೀಡಿದ್ದಾನೆ. ಸ್ವಿಟ್ಸರ್ಲೆಂಡಿನಲ್ಲಿ ಹಿಮನದಿಗಳ ಚಲನೆ ಮತ್ತು ಪರಿಣಾಮಗಳ ಅಧ್ಯಯನದ ಆಧಾರದ ಮೇಲಿಂದ ಹತ್ತೊಂಬತ್ತನೆಯ ಶತಮಾನದಲ್ಲಿ ಅಗಾಸಿಜ್ ಹಿಮಯುಗದ ಸಾಕ್ಷ್ಯಾಧಾರವನ್ನು ಗುರುತಿಸಿದುದು ಯುರೋಪಿನಲ್ಲಿ ಒಂದು ಅತ್ಯಂತ ಮಹತ್ವದ ಸಂಗತಿಯಾಗಿತ್ತು. ಆಲ್ಪೈನ್ ನದಿಗಳು ಒಂದಾನೊಂದು ಕಾಲದಲ್ಲಿ ಬಹಳ ವ್ಯಾಪಕವಾಗಿ ಹರಡಿದ್ದವೆಂದು ನಂಬಿದ್ದ. ಅದಕ್ಕೆ ಇಂದಿನ ಹಿಮನದಿಗಳ ಮುಖದಾಚೆಗಿನ ಕಣಿವೆಗಳಲ್ಲಿ ಮುರುಕುಗುಪ್ಪೆಗಳ ಅಸ್ತಿತ್ವವೇ ಕಾರಣವಾಗಿತ್ತು. ಇದೇ ವಿಚಾರವನ್ನು ಪ್ಲೆಫೇರ್, ವೆನೆಟ್ಸ್, ಎಸ್ಮಾರ್ಕ್ ಮೊದಲಾದ ವಿಜ್ಞಾನಿಗಳು ಸಮರ್ಥಿಸಿದರು.

ಎಟುಡೆಸ್ ಸುರ್ ಲೆಸ್ ಗ್ಲೇಸಿಯರ್ ಎಂಬ ತನ್ನ ಗ್ರಂಥದ ಪ್ರಕಟಣೆಯಿಂದ ಈತ ಚಿಕ್ಕ ವಯಸ್ಸಿನಲ್ಲೇ ಜನಪ್ರಿಯ ಮತ್ತು ಪ್ರಸಿದ್ಧ ವ್ಯಕ್ತಿಯಾದ. ವೆನೆಟ್ಸ್‌ನ ಸಹೋದ್ಯೋಗಿಯಾದ ಜೀನ್ ಡಿ ಚಾರ್ಪೆಂಟಿಯರ್ 1834ರಲ್ಲಿ ವೆನೆಟ್ಸ್‌ನ ವಿಚಾರಗಳೊಂದಿಗೆ ಸಮ್ಮತಿಸಿ ಒಂದು ಲೇಖನವನ್ನು ಪ್ರಸ್ತುತಪಡಿಸಿದ. ಅದರ ಸಾರಾಂಶವನ್ನು 1840ರಲ್ಲಿ ಎಟುಡೆಸ್ ಸುರ್ ಲೆಸ್ ಗ್ಲೇಶಿಯರರ್ಸ್ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದ. ಅದರಲ್ಲಿ ಮಹಾ ಹಿಮಯುಗದ ಇವನ ಪರಿಕಲ್ಪನೆ ವ್ಯಕ್ತವಾಗಿತ್ತು. ಹೀಗೆ ಇವನ ದಣಿವಿಲ್ಲದ ಪ್ರಯತ್ನಗಳ ಫಲದಿಂದ ಅದರ ಸಿಂಧುತ್ವ ವ್ಯಾಪಕವಾಗಿ ಸ್ವೀಕೃತವಾಯಿತು. (ಎಸ್.ಎಸ್.ಎನ್.)

**ಜೀವ ಪರಿಸರ ನೆಲೆ :** ಜೀವ ಪರಿಸರ ವ್ಯವಸ್ಥೆಯಲ್ಲಿ ಪ್ರತಿಯೊಂದು ಜೀವಿಯೂ ಸಹ ಒಂದು ನಿರ್ದಿಷ್ಟ ಪಾತ್ರವನ್ನು ನಿರ್ವಹಿಸುತ್ತಿದ್ದು ಪೋಷಣಾ ಸ್ತರದಲ್ಲಿ ಅದು ನಿರ್ಧಿಷ್ಟ ಸ್ಥಾನದಲ್ಲಿ ಕಂಡುಬರುವುದು. ಉದಾಹರಣೆಗೆ: ಅದು ಭೂಪ್ರದೇಶದ ಸಸ್ಯಾಹಾರಿ ಅಥವಾ ಜಲಭಾಗಗಳಲ್ಲಿ ಮಾಂಸಾಹಾರಿ ಮೊದಲಾದವು. ಹೀಗೆ ಒಂದು ಜೀವಿಯ ಪಾತ್ರ ಹಾಗೂ ಉದ್ಯೋಗವನ್ನು ಅದರ ಜೀವಿ ಪರಿಸರ ಸ್ಥಾನ ಅಥವಾ ಜೀವಿ ಪರಿಸರ ನೆಲೆ (ಇಕಾಲಾಜಿಕಲ್ ನಿಸ್ಚ್) ಎಂದು ಕರೆಯುತ್ತಾರೆ.

ಜೀವಿ ಪರಿಸರ ನೆಲೆ ಆ ಜೀವಿಯು ಎಲ್ಲಿ ವಾಸಿಸುವುದು, ಅದು ಯಾವ ಆಹಾರವನ್ನು ಅವಲಂಬಿಸಿದೆ ಮತ್ತು ಇತರ ಜೀವಿಗಳೊಂದಿಗೆ ಅದು ಹೇಗೆ ವರ್ತಿಸುವುದು ಎಂಬುದನ್ನು ಪ್ರತಿನಿಧಿಸುತ್ತದೆ. ಅಂದರೆ ಒಂದೇ ಜೀವ ಪರಿಸರ ನೆಲೆಯಲ್ಲಿ ಎರಡು ಜೀವಿಗಳಿದ್ದರೆ ಅವುಗಳ ನಡುವೆ ಪೈಪೋಟಿ ಇದ್ದು, ಇವು ಆಹಾರ ಮತ್ತು ಸ್ಥಾನಕ್ಕಾಗಿ ಹೋರಾಡುತ್ತವೆ. ಇದಕ್ಕೆ ಬದಲಾಗಿ ಇವುಗಳ ಜೀವ ಪರಿಸರ ಸ್ಥಾನ ಭಿನ್ನವಾಗಿದ್ದಲ್ಲಿ ಈ ಜೀವಿಗಳ ನಡುವೆ ಯಾವುದೇ ಸಮಸ್ಯೆಗಳು ಕಂಡುಬರುವುದಿಲ್ಲ. ಉದಾ: ಅರಣ್ಯ ಪರಿಸರದಲ್ಲಿ ಹುಲಿ, ನರಿ, ಹದ್ದು ಇವುಗಳು ಮಾಂಸಾಹಾರಿಗಳಾಗಿದ್ದರೂ ಅವುಗಳ ಪಾತ್ರ ಭಿನ್ನವಾಗಿದ್ದು, ಒಂದೇ ಅರಣ್ಯ ಪ್ರದೇಶದಲ್ಲಿ ಭಿನ್ನ ಆಹಾರ ಮೂಲಗಳನ್ನು ಅವಲಂಬಿಸಿ ಜೀವಿಸುವುದನ್ನು ಸ್ಪಷ್ಟವಾಗಿ ಕಾಣಬಹುದು.

ಜೀವ ಪರಿಸರ ನೆಲೆ ಅಥವಾ ಸ್ಥಾನವು ವಿವಿಧ ಸನ್ನಿವೇಶಗಳಲ್ಲಿ ಭಿನ್ನವಾಗಿರುವುದು. ಅವುಗಳೆಂದರೆ,

ಜೀವಿ ವಾಸಸ್ಥಾನದ ನೆಲೆ: ಕೆಲವು ವೇಳೆ ಒಂದೇ ಗುಂಪಿನ ಜೀವಿಗಳೂ ಒಂದೇ ಜೀವಿವಾಸ ಸ್ಥಳಗಳಲ್ಲಿರಬಹುದು. ಉದಾ: ಒಂದು ಮರದ ಕೆಳಗೆ ಎಲೆಗಳನ್ನು ಕೊಳೆಯಿಸುವ ಹಲವಾರು ವಿಘಟಕ ಜೀವಿಗಳು ಒಂದೇ ವಾಸಸ್ಥಳದಲ್ಲಿ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಇದೇ ರೀತಿ ಈ ವಿಘಟಕ ಜೀವಿಗಳು ಮರದ ಕಾಂಡಗಳಲ್ಲಿ, ತೊಗಟೆಯ ಕೆಳಭಾಗದಲ್ಲಿ, ಎಲೆಗಳ ಕೆಳಗೆ, ಮಣ್ಣಿನಲ್ಲಿ ಹೀಗೆ ವಿವಿಧ ಸ್ಥಾನದಲ್ಲಿದ್ದು ಒಂದೇ ಕಾರ್ಯದಲ್ಲಿ ತೊಡಗಿದ್ದು, ಒಂದೇ ಆಹಾರದ ಮೂಲವನ್ನು ಅವಲಂಬಿಸಿರುತ್ತವೆ.

ಪೋಷಣಾ ಸ್ತರದ ನೆಲೆ: ಕೆಲವು ವೇಳೆ ಒಂದೇ ಜೀವಿಸ್ತರದಲ್ಲಿ ಜೀವಿಸುವ ಜೀವಿಗಳು ಬೇರೆ ಬೇರೆ ಪೋಷಣಾಸ್ತರದ ನೆಲೆಯಲ್ಲಿದ್ದು, ಅವುಗಳ ಆಹಾರದ ಮೂಲಗಳು ಬೇರೆ ಬೇರೆಯಾಗಿರುತ್ತವೆ. ಉದಾ: ಅರಣ್ಯದಲ್ಲಿರುವ ಹಲವು ಮಾಂಸಾಹಾರಿ ಜೀವಿಗಳು ಆಹಾರದ ವಿವಿಧ ಮೂಲಗಳನ್ನು ಅವಲಂಬಿಸಿರುತ್ತವೆ. ಸಿಂಹ ಮತ್ತು ಹುಲಿಗಳು ಬೇಟೆಯಾಡಿ ತಮಗೆ ಆಹಾರವನ್ನು ಪಡೆದುಕೊಳ್ಳುತ್ತವೆ. ಹಾಗೆಯೇ ನರಿ, ಹದ್ದು, ಕಾಗೆ ಮೊದಲಾದವು ಸಿಂಹ ಮತ್ತು ಹುಲಿಗಳು ತಿಂದು ಬಿಟ್ಟ ಪ್ರಾಣಿಯ ಉಳಿದಭಾಗವನ್ನು ತಿನ್ನುತ್ತವೆ. (ಪಿ.ಎಂ.)

**ಜೀವ ಪರಿಸರ ಪಿರಮಿಡ್ :** ಜೀವ ಪರಿಸರ ವ್ಯವಸ್ಥೆಯಲ್ಲಿ ಹಲವು ಪರಸ್ಪರ ಪೂರಕ ಮತ್ತು ಅವಲಂಬಿತ ಪೋಷಣಾ ಸ್ತರಗಳಿವೆ. ಅಂದರೆ, ಸಸ್ಯಗಳು ಉತ್ಪಾದಿಸಿದ ಆಹಾರ ಅಥವಾ ಶಕ್ತಿಯು ವಿವಿಧ ಹಂತದ ಜೀವಿಗಳಿಗೆ ವರ್ಗಾವಣೆ ಹೊಂದುವುದು. ಉತ್ಪಾದಕಗಳಿಂದ ಸಸ್ಯಾಹಾರಿಗಳಿಗೆ ಅಥವಾ ಉಭಯ ಆಹಾರಿಗಳಿಗೆ ವರ್ಗಾವಣೆ ಯಾದಾಗ ಶಕ್ತಿಯ ವರ್ಗಾವಣೆಯು ಒಂದು ಪೋಷಣಾ ಸ್ತರದಿಂದ ಮತ್ತೊಂದಕ್ಕೆ ಶೇ.10 ರಷ್ಟು ಮಾತ್ರ ಏರ್ಪಡುವುದು. ಉಳಿದ ಭಾಗವು ನಷ್ಟವಾಗುವುದು. ಈ ಪೋಷಣಾ ಸ್ತರಗಳನ್ನು ಒಂದರ ಮೇಲೊಂದರಂತೆ ಇಟ್ಟಲ್ಲಿ ಅವು ಪಿರಮಿಡ್‌ನಂತೆ ಎತ್ತರಕ್ಕೆ ಹೋದಂತೆ ಕಡಿಮೆಯಾಗುವುದು. ಇದನ್ನೆ ಜೀವ ಪರಿಸರ ಪಿರಮಿಡ್‌ಗಳೆನ್ನುವರು.

ಇದನ್ನು ಮೂರು ಪ್ರಕಾರಗಳನ್ನಾಗಿ ವಿಂಗಡಿಸಬಹುದು: 1) ಸಂಖ್ಯೆಗಳ ಪಿರಮಿಡ್ (ಪಿರಮಿಡ್ ನಂಬರ್ಸ್): ಜೀವಿಗಳು ತಮ್ಮ ಸಂಖ್ಯೆಗಳಿಗನುಸಾರವಾಗಿ ಸಂಬಂಧ ಹೊಂದಿರುವುದನ್ನು ಸಂಖ್ಯಾತ್ಮಕ ಪಿರಮಿಡ್ ತೋರಿಸುತ್ತದೆ. ಹುಲ್ಲುಗಾವಲು ಪರಿಸರ ವ್ಯವಸ್ಥೆಯಲ್ಲಿ ಹುಲ್ಲು ಉತ್ಪಾದಕ ಸ್ಥಾನದಲ್ಲಿರುತ್ತದೆ. ಆದ್ದರಿಂದ ಅವುಗಳ ಸಂಖ್ಯೆ ಗರಿಷ್ಟವಾಗಿರುತ್ತವೆ. ದ್ವಿತೀಯ ಸ್ಥಾನದಲ್ಲಿರುವ ಪ್ರಾಥಮಿಕ ಉಪಭೋಗಿಗಳಿಗಿಂತ ಸಸ್ಯಾಹಾರಿಗಳ ಸಂಖ್ಯೆ ಕಡಿಮೆಯಾಗುತ್ತವೆ. ಉದಾ: ಮೊಲ, ಇಲಿ ಮುಂತಾದವುಗಳ ಸಂಖ್ಯೆ ಹುಲ್ಲಿಗಿಂತ ಕಡಿಮೆ ಇರುವುದು ಸಹಜ. ಎರಡನೆಯ ಉಪಭೋಗಿಗಳಾದ ಹಾವು, ಹಲ್ಲಿ ಮುಂತಾದವುಗಳ ಸಂಖ್ಯೆ ಇಲಿ ಮತ್ತು ಮೊಲಗಳ ಸಂಖ್ಯೆಗಳಿಗಿಂತ ಕಡಿಮೆ ಇರುತ್ತವೆ. ಕೊನೆಯದಾಗಿ, ಅಗ್ರಸ್ಥಾನದಲ್ಲಿರುವ ತೃತೀಯ ಮತ್ತು ಕೊನೆಯ ಉಪಭೋಗಿಗಳಾದ ಪಕ್ಷಿಗಳು ಅತಿ ಕಡಿಮೆ ಸಂಖ್ಯೆಯಲ್ಲಿರುತ್ತವೆ.

2) ಜೀವರಾಶಿ ಪಿರಮಿಡ್ (ಪಿರಮಿಡ್ ಆಫ್ ಬಯೋ ಮಾಸ್): ಪ್ರತಿ ಏಕಮಾನ ಪ್ರದೇಶದಲ್ಲಿ ಜೀವಿಸುವ ಜೀವಿಗಳ ಪ್ರಮಾಣ ಅಥವಾ ಭಾರವೇ ಜೀವರಾಶಿ. ಹುಲ್ಲುಗಾವಲು ಪ್ರದೇಶ ಮತ್ತು ಅರಣ್ಯ ಜೀವರಾಶಿ ಜೀವಿಗಳು ಸಾಮಾನ್ಯವಾಗಿ ಕೆಳಹಂತದಲ್ಲಿರುವ ಉತ್ಪಾದಕಗಳಿಂದ ಪ್ರಾರಂಭವಾಗುವುದರಿಂದ ಅವುಗಳ ಸಂಖ್ಯೆ ಅಪಾರವಾಗಿದ್ದು, ಅಂತಿಮ ಹಂತದಲ್ಲಿ ಬರುವ ಮಾಂಸಾಹಾರಿಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತ ಹೋಗುತ್ತವೆ. ಕೆರೆ, ಸರೋವರದಲ್ಲಿ ಉತ್ಪಾದಕ ಜೀವಿಗಳ ಸಂಖ್ಯೆ ಅಪಾರವಾದದ್ದು.

3) ಶಕ್ತಿ ಪಿರಮಿಡ್ (ಪಿರಮಿಡ್ ಆಫ್ ಎನರ್ಜಿ): ಉತ್ಪಾದಕರನ್ನು ಶಕ್ತಿಯ ಮೂಲವೆಂದು ಪರಿಗಣಿಸಿದರೆ, ಪಿರಮಿಡ್ ಶಕ್ತಿಯು ಹರಿಯುವುದನ್ನು ತೋರಿಸದೆ ಶಕ್ತಿಗೆ ಪರಿವರ್ತಿಸುವಂತಹ ವಿವಿಧ ಜೀವಿಗಳ ಶಕ್ತಿಯ ರಚನೆಯನ್ನು ತೋರಿಸುತ್ತದೆ. ಸಸ್ಯಾಹಾರಿಗಳನ್ನು ಮಾಂಸಾಹಾರಿ ಪ್ರಾಣಿಗಳು ತಿನ್ನುವುದರಿಂದ ಸಸ್ಯಗಳಿಂದ ಸಸ್ಯಹಾರಿಗಳು ಪಡೆದ ಶೇ.10 ರಷ್ಟು ಶಕ್ತಿ ಮಾಂಸಾಹಾರಿ ಜೀವಿಗಳಿಗೆ ವರ್ಗಾವಣೆ ಹೊಂದುವುದು. ಉಳಿದ ಶಕ್ತಿ ನಷ್ಟವಾಗುವುದು. ಹೀಗೆ ಜೀವಿಗಳ ಸಂಖ್ಯೆಯನ್ನು ಪೋಷಿಸುವ ಸಾಮರ್ಥ್ಯ ಪ್ರತಿ ಪೋಷಣಾ ಸ್ತರದಲ್ಲಿ ಕಡಿಮೆಯಾಗಿ ಆಹಾರದ ಗೋಪುರ ಪಿರಮಿಡ್‌ನಂತೆ ಕಂಡುಬರುವುದು. (ಎಲ್.ಟಿ.ಎನ್.)

**ಜೀವ ಪರಿಸರ ವಿಜ್ಞಾನ:** ಜೀವಿಗಳ ಆಂತರಿಕ ಸಂಬಂಧ ಹಾಗೂ ಅವುಗಳ ಪರಿಸರವನ್ನು ಕುರಿತ ಅಧ್ಯಯನ (ಇಕಾಲಜಿ). ಜೀವಿಗಳ ನಡುವೆಯಿರುವ ಸಂಬಂಧ ಹಾಗೂ ಅವು ಬದುಕುವ ಭೌತ, ರಾಸಾಯನಿಕ ಪರಿಸರಕ್ಕೂ ಇರುವ ಸಂಬಂಧಗಳನ್ನು ಕುರಿತ ವಿವರಣೆಯಾಗಿದೆ. ಗ್ರೀಕ್ ಭಾಷೆಯಲ್ಲಿ ಇಕೋ ಅಂದರೆ ಮನೆ; ಇಕಾಲಜಿ ಅಂದರೆ ಮನೆಯ ಅಥವಾ ಜೀವಿಗಳಿಗಿರುವ ಪರಿಸರದ ಅಧ್ಯಯನ ಎಂದರ್ಥ. ಪರಿಸರದಲ್ಲಿ ಹಲವಾರು ಜೀವಿಗಳಿವೆ. ಅವು ಬದುಕಲು ಒಂದನ್ನೊಂದು ಅವಲಂಬಿಸಿವೆ. ಇದರಿಂದ ಪರಿಸರದಲ್ಲಿ ನಾವು ಆಹಾರ ಸರಪಳಿ ಮತ್ತು ಆಹಾರ ಜಾಲಗಳನ್ನು ಕಾಣಬಹುದು. ಇವು ಹಲವಾರು ಭೌತಿಕ ಅಂಶಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅವಲಂಬಿಸಿವೆ. ಇವುಗಳ ಅಧ್ಯಯನವೇ ಜೀವಪರಿಸರವಿಜ್ಞಾನ.

ಜೀವ ಪರಿಸರ ವಿಜ್ಞಾನದಲ್ಲಿ ಜೈವಿಕ ಮತ್ತು ಅಜೈವಿಕ ಅಂಶಗಳ ಸಂಬಂಧವನ್ನು ಅಧ್ಯಯನ ಮಾಡಲಾಗುತ್ತದೆ. ಜೀವ ಸಮುದಾಯ ಹಾಗೂ ಅಜೈವಿಕ ವಲಯದ ಸಂಯೋಜನೆ ಎಂದೂ ಸಹ ಹೇಳಬಹುದು. ಪ್ರಾಣಿ ಪರಿಸರ ವಿಜ್ಞಾನ ಮತ್ತು ಸಸ್ಯ ಪರಿಸರ ವಿಜ್ಞಾನ ಇವು ಜೀವಪರಿಸರದ ಎರಡು ಪ್ರಮುಖ ಶಾಖೆಗಳಾಗಿವೆ. (ಎಚ್.ಎಸ್.ಡಿ.)

# ಜೀವ ಪರಿಸರ ವ್ಯವಸ್ಥೆ – ಜೀವ ಪರಿಸರ ವ್ಯವಸ್ಥೆಯ ಉತ್ಪಾದಕತೆ

**ಜೀವ ಪರಿಸರ ವ್ಯವಸ್ಥೆ:** ಜೀವ ಪರಿಸರ ವ್ಯವಸ್ಥೆ (ಇಕೊ ಸಿಸ್ಟಂ) ಎಂಬ ಪದವನ್ನು ಪ್ರಪ್ರಥಮವಾಗಿ 1935 ರಲ್ಲಿ ಬ್ರಿಟಿಷ್ ಪರಿಸರ ತಜ್ಞ ಎ.ಜಿ.ಟಾನ್ಸ್ಲೆ ಬಳಸಿದ. ಭೂಮಿಯ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಜಲರಾಶಿ ಹಾಗೂ ವಾಯುಮಂಡಲವನ್ನು ಅವಲಂಬಿಸಿ ಕಾರ್ಯನಿರತ ಅಸ್ತಿತ್ವ ಹೊಂದಿರುವ ಅನೇಕ ಜೀವಿಗಳಿವೆ. ಈ ಜೀವಿಗಳು ತಮ್ಮ ಆಹಾರ, ಪಡೆದಿರುವ ಆಶ್ರಯ, ಕುಡಿಯುವ ನೀರು

ಸೇವಿಸುವ ಗಾಳಿ ಮುಂತಾದವುಗಳನ್ನು ಉಪಯೋಗಿಸಿ ತಮ್ಮದೇ ಆದ ಪರಿಸರ ನಿರ್ಮಿಸಿಕೊಂಡು, ಆ ಪರಿಸರದಲ್ಲಿ ತಮ್ಮ ಜೀವನ ಶೈಲಿ ರೂಪಿಸಿಕೊಂಡು ಜೀವಿಸುತ್ತವೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಅಸ್ತಿತ್ವ ಹೊಂದಿರುವ ಜೀವ ಸಮೂಹಕ್ಕೆ ಜೀವ ಮಂಡಲ (ಬಯಾಸ್ಫಿಯರ್) ಎಂದು ಕರೆಯುವರು. ಜೀವ ಮಂಡಲದಲ್ಲಿರುವ ಎಲ್ಲ ಜೀವಿಗಳು ಪರಸ್ಪರ ಅವಲಂಬಿತವಾಗಿದ್ದು, ಕ್ರಿಯಾತ್ಮಕ ಸಂಬಂಧ ಹೊಂದಿರುತ್ತವೆ. ಭೂಮಿಯ ಪ್ರತಿಯೊಂದು ಭಾಗ ತನ್ನದೇ ಆದ ಅತಿ ಸೂಕ್ಷ್ಮ ಪರಿಸರ ವ್ಯವಸ್ಥೆಯಿಂದ (ಕೆರೆ ಪರಿಸರ ವ್ಯವಸ್ಥೆ) ಅತಿ ದೊಡ್ಡದಾದ ಪರಿಸರ ವ್ಯವಸ್ಥೆಯನ್ನು (ಇಡೀ ಭೂಭಾಗ) ಹೊಂದಿರುತ್ತದೆ. ಸಮೀಕ್ಷೆಯೊಂದರ ಪ್ರಕಾರ ಪೃಥ್ವಿಯ ಉಗಮದಿಂದ – ಇಂದಿನದವರೆಗೆ ಜೀವ ಮಂಡಲ ಸು. 15–18 ದಶಲಕ್ಷ ಜೀವರಾಶಿಗಳು ಮತ್ತು 30–40 ದಶಲಕ್ಷ ಸಸ್ಯ ಪ್ರಭೇದಗಳನ್ನು ಒಳಗೊಂಡಿರುತ್ತದೆ. ವಿವಿಧ ಪ್ರಕಾರದ ಸ್ವರೂಪ, ತೆರೆದ ಪ್ರದೇಶಗಳಲ್ಲಿ ಸ್ಥಿರತೆ ಹೊಂದಿರುವ ಜೈವಿಕ ಮತ್ತು ಅಜೈವಿಕ ಅಂಶಗಳನ್ನೊಳಗೊಂಡಿರುವ ಪ್ರತ್ಯೇಕವಾದ ಒಂದು ಭೌತಿಕ ವ್ಯವಸ್ಥೆಯೇ ಜೀವ ಪರಿಸರ ವ್ಯವಸ್ಥೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪರಸ್ಪರ ಸಂಬಂಧ ಹೊಂದಿರುವ ಮತ್ತು ಕ್ರಿಯಾತ್ಮಕ ಗುಣವುಳ್ಳ ಒಂದು ಅಥವಾ ಒಂದಕ್ಕಿಂತ ಹೆಚ್ಚು ಜೀವಿಗಳು ಅಸ್ತಿತ್ವ ಹೊಂದಿರುವ ಒಂದು ವ್ಯವಸ್ಥೆ ಮತ್ತು ಪರಿಣಾಮಕಾರಿ ಜೈವಿಕ ಹಾಗೂ ಭೌತಿಕ ಪರಿಸರವೇ ಜೀವ ಪರಿಸರ ವ್ಯವಸ್ಥೆ.

ಒಂದು ಪ್ರದೇಶದಲ್ಲಿರುವ ಜೀವಿಗಳು ಅಲ್ಲಿಯ ಭೌತಿಕ ಸ್ಥಿತಿಯನ್ನು ಪ್ರತಿಬಿಂಬಿಸುವುದಲ್ಲದೆ, ಜೀವ ಸಮೂಹಗಳ ಸ್ವರೂಪ ಮತ್ತು ಲಕ್ಷಣಗಳನ್ನು ನಿರ್ಧರಿಸುತ್ತವೆ. ಆದ್ದರಿಂದ ಜೀವ ಸಮೂಹಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಇದನ್ನಾಧರಿಸಿ ಪ್ರಪಂಚದ ಜೀವ ಪರಿಸರ ವ್ಯವಸ್ಥೆಯನ್ನು ಎರಡು ವಿಧಗಳನ್ನಾಗಿ ವರ್ಗೀಕರಿಸಬಹುದು: 1. ಭೂಚರ ಪರಿಸರವ್ಯವಸ್ಥೆ. 2. ಜಲಚರ ಪರಿಸರವ್ಯವಸ್ಥೆ.

1. ಭೂಚರ ವ್ಯವಸ್ಥೆ: (ಲ್ಯಾಂಡ್ ಇಕೊ ಸಿಸ್ಟಂ) ಈ ವ್ಯವಸ್ಥೆಯು ಸಸ್ಯಗಳು, ಪ್ರಸ್ಥಭೂಮಿ, ಮೈದಾನ, ಮರುಭೂಮಿ ಮುಂತಾದ ಪರಿಸರಗಳನ್ನು ಒಳಗೊಂಡಿರುತ್ತದೆ. ಈ ವ್ಯವಸ್ಥೆ ಜಲೀಯ ವ್ಯವಸ್ಥೆಗಿಂತ ಸಂಪೂರ್ಣ ಭಿನ್ನವಾಗಿದ್ದು, ಭೂಭಾಗದ ಸು. ಶೇ.29 ರಷ್ಟು ಪ್ರದೇಶ ಆವರಿಸಿಕೊಂಡಿದೆ. ಮಾನವನ ಮೂಲ ಅವಶ್ಯಕತೆಗಳಾದ ಆಹಾರ, ಉಡುಪು, ವಸತಿ ಹಾಗೂ ಇತರ ವಸ್ತುಗಳನ್ನು ಪೂರೈಸುವ ಪ್ರಧಾನ ವ್ಯವಸ್ಥೆ ಇದಾಗಿದೆ. ಭೂಭಾಗದ ಮೇಲಿರುವ ಜೀವ ಸಮೂಹಗಳು ಹೆಚ್ಚು ಹೊಂದಾಣಿಕೆ ಮತ್ತು ತಾಳ್ಮೆ ಹೊಂದಿದ್ದು ಹೆಚ್ಚಿನ ಪೋಷಕಾಂಶ ಪಡೆಯುವುದರಿಂದ ಇವುಗಳು ಹೆಚ್ಚಿನ ಉತ್ಪಾದಕ ಸಾಮರ್ಥ್ಯ ಹೊಂದಿರುತ್ತವೆ. ಈ ಪರಿಸರ ವ್ಯವಸ್ಥೆಯಲ್ಲಿ ಬರುವ ಸಸ್ಯ, ಹುಲ್ಲು, ಗಿಡ ಮರ, ಬಳ್ಳಿ ಮುಂತಾದವುಗಳನ್ನು ಸಸ್ಯಹಾರಿ ಮತ್ತು ಮಾಂಸಹಾರಿ ಪ್ರಾಣಿಗಳು ಉಪಯೋಗಿಸಿ ಜೀವಿಸುತ್ತವೆ. ಸಸ್ಯ ಸಮೂಹಗಳು ಭೂಮಿಯಲ್ಲಿ ದೊರೆಯುವ ಪೋಷಕಾಂಶ, ನೀರು, ಸೂರ್ಯನಶಕ್ತಿ ಮತ್ತು ವಾಯುಮಂಡಲದಲ್ಲಿ ಲಭ್ಯವಿರುವ ಇಂಗಾಲದ ಡೈ ಆಕ್ಸೈಡ್ ಉಪಯೋಗಿಸಿಕೊಂಡು ಪತ್ರ ಹರಿತ್ತು (ಕ್ಲೊರೋಫಿಲ್) ತಯಾರಿಸುವುದರಿಂದ ಸಸ್ಯಗಳ ಎಲೆಗಳಿಗೆ ಹಸುರು ಬಣ್ಣವಿರುತ್ತದೆ. ಸಸ್ಯಗಳಿಗೆ ಹಸುರುವರ್ಣವಿರುವುದರಿಂದಲೇ ಇವು ಆಮ್ಲ ಜನಕ ಸೇವಿಸಿ ಜೀವಿಸಲು ಉಪಯುಕ್ತವಿರುವ ಕಾರ್ಬೊಹೈಡ್ರೇಟ್ ಪದಾರ್ಥ ತಯಾರಿಸುತ್ತವೆ. ಸಸ್ಯಗಳು ಕಾರ್ಬೋಹೈಡ್ರೇಟ್‌ನ್ನು ಸೂರ್ಯನ ಶಕ್ತಿ ಮತ್ತು ನೀರಿನ ಸಹಾಯದಿಂದ ರಾಸಾಯನಿಕ ಶಕ್ತಿಯಾಗಿ ಪರಿವರ್ತನೆ ಮಾಡುವುದರಿಂದ ಸ್ವಯಂ ಆಹಾರ ತಯಾರಿಸಿಕೊಳ್ಳುತ್ತವೆ. ಈ ಕ್ರಿಯೆಗೆ ದ್ಯುತಿ ಸಂಶ್ಲೇಷಣೆ ಕ್ರಿಯೆ (ಫೋಟೋ ಸಿಂತೆಸಿಸ್) ಎಂದು ಕರೆಯುವರು. ಈ ಪ್ರಕಾರವಾಗಿ ಸ್ವಯಂ ಆಹಾರ ತಯಾರಿಸುವ ಸಸ್ಯಗಳನ್ನು ತಿಂದು ಅನೇಕ ಜೀವಿಗಳು ಬದುಕುತ್ತವೆ. ಈ ಸಸ್ಯಹಾರಿ ಪ್ರಾಣಿಗಳನ್ನು ಮತ್ತು ಸೂಕ್ಷ್ಮ ಜೀವಿಗಳನ್ನು ಅನೇಕ ಮಾಂಸಾಹಾರಿ ಪ್ರಾಣಿಗಳು ತಿಂದು ಜೀವಿಸುತ್ತವೆ.

2) ಜಲಚರ ಪರಿಸರ ವ್ಯವಸ್ಥೆ (ಅಕ್ವೇಟಿಕ್ ಇಕೊ ಸಿಸ್ಟಂ): ಜಲರಾಶಿಗಳಲ್ಲಿ ಅಸ್ತಿತ್ವಹೊಂದಿರುವ ಜೀವ ಸಮೂಹಗಳಿಗೆ ಜಲಚರ ಜೀವ ಪರಿಸರ ವ್ಯವಸ್ಥೆ ಎಂದು ಕರೆಯುವರು. ಈ ವ್ಯವಸ್ಥೆಯು ಭೂ ಭಾಗದ ಜೀವ ಪರಿಸರ ವ್ಯವಸ್ಥೆಗಿಂತ ಸಂಪೂರ್ಣ ಭಿನ್ನವಾಗಿದೆ. ಜಲೀಯ ಜೀವ ಪರಿಸರ ವ್ಯವಸ್ಥೆಯನ್ನು ಸಿಹಿನೀರಿನ (ಫ್ರೆಷ್ ವಾಟರ್) ನದಿ, ಹಳ್ಳ, ಝರಿ (ರನ್ನಿಂಗ್ ವಾಟರ್) ಮತ್ತು ನಿಂತ ನೀರು (ಸ್ಟ್ಯಾಂಡಿಂಗ್ ವಾಟರ್) ಸರೋವರ, ಕೆರೆ, ಹೊಂಡ ಪರಿಸರ ವ್ಯವಸ್ಥೆ ಎಂದು ವರ್ಗೀಕರಿಸಬಹುದು. ಜಲಚರ ಜೀವ ಪರಿಸರ ವ್ಯವಸ್ಥೆಯು ಮುಖ್ಯವಾಗಿ ನೀರಿನ ಆಳ, ಸೂರ್ಯನ ಕಿರಣ ಒಳಸೇರುವ ಸಾಮರ್ಥ್ಯ, ಪೋಷಕಾಂಶದ ಲಭ್ಯತೆ ಮತ್ತು ಆಮ್ಲಜನಕದ ಹಂಚಿಕೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಜಲೀಯ ಜೀವ ಪರಿಸರ ವ್ಯವಸ್ಥೆಯಲ್ಲಿ ಮೀನು, ಕಪ್ಪೆ, ಹಾವು, ಜಲಕೀಟ, ಪಾಚಿ, ಪ್ರಾಣಿ ಪ್ಲಾಂಕ್ಟನ್ ಮತ್ತು ಸಸ್ಯ ಪ್ಲಾಂಕ್ಟನ್ ಜೀವಿಗಳು ಒಳಗೊಂಡಿರುತ್ತವೆ. ಈ ಜೀವಿಗಳು ಒಂದನ್ನೊಂದು ಅವಲಂಬಿಸಿ, ನೀರಿನಲ್ಲಿ ದೊರೆಯುವ ಪೋಷಕಾಂಶವನ್ನು ಉಪಯೋಗಿಸಿಕೊಂಡು ಜೀವಿಸುತ್ತವೆ. ಜಲಚರ ವ್ಯವಸ್ಥೆಯಲ್ಲಿರುವ ಅಸಂಖ್ಯ ಕೀಟಗಳು ಮತ್ತು ಪ್ರಾಣಿಗಳು ಸ್ವಯಂ ಆಹಾರ ತಯಾರಿಸುವ ಸಸ್ಯಗಳನ್ನು ತಿಂದು ಬದುಕುತ್ತವೆ. ಈ ಪ್ರಾಣಿಗಳನ್ನು ಜಲರಾಶಿಗಳಲ್ಲಿರುವ ಇನ್ನು ಕೆಲವು ಕಪ್ಪೆ, ದೊಡ್ಡಮೀನು, ಮೊಸಳೆ ಮುಂತಾದವು ತಿಂದು ಜೀವಿಸುತ್ತವೆ. (ಎಲ್.ಟಿ.ಎನ್.)

**ಜೀವ ಪರಿಸರ ವ್ಯವಸ್ಥೆಯ ಉತ್ಪಾದಕತೆ:** ಜೀವ ಪರಿಸರ ವ್ಯವಸ್ಥೆಯ ಉತ್ಪಾದನಾ ಪ್ರಮಾಣಕ್ಕೆ ಉತ್ಪಾದನಾ ಸಾಮರ್ಥ್ಯವೆನ್ನುವರು. ಅಂದರೆ, ನಿರ್ದಿಷ್ಟ ಪ್ರದೇಶದಲ್ಲಿ ಪ್ರತಿ ಏಕಾಂಶ ಅವಧಿಯಲ್ಲಿ ಉತ್ಪಾದನೆಯಾಗುವ ಪದಾರ್ಥಗಳ ಮೊತ್ತಕ್ಕೆ ಉತ್ಪಾದನಾ ಸಾಮರ್ಥ್ಯವೆಂದು ಕರೆಯುವರು. ಉತ್ಪಾದಕತೆಯನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು:

1) ಪ್ರಾಥಮಿಕ ಉತ್ಪಾದಕತೆ: ದ್ಯುತಿಸಂಶ್ಲೇಷಣೆ ಕ್ರಿಯೆಯ ಮೂಲಕ ಸ್ವಯಂ ಆಹಾರ ತಯಾರಿಸಿಕೊಳ್ಳುವ ಉತ್ಪಾದಕಗಳು (ಪ್ರೊಡ್ಯೂಸರ್ಸ್) ಕೆಳ ವರ್ಗದಲ್ಲಿ ಸೇರುತ್ತವೆ. ಹಸುರು ಸಸ್ಯಗಳು, ದೊಡ್ಡ ಸಸ್ಯಗಳು, ಅತಿ ಚಿಕ್ಕ ಸಸ್ಯಗಳು, ಫೈಟೊಪ್ಲಾಂಕ್ಟನ್ ಮತ್ತು ದ್ಯುತಿಸಂಶ್ಲೇಷಣಾ ಬ್ಯಾಕ್ಟೀರಿಯಗಳು ಪ್ರಾಥಮಿಕ ಉತ್ಪಾದಕಗಳಾಗಿರುತ್ತವೆ. ಪ್ರಾಥಮಿಕ ಉತ್ಪಾದನೆಯನ್ನು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು:

ಎ) ಪ್ರಾಥಮಿಕ ಉತ್ಪಾದನೆ (ಗ್ರಾಸ್ ಪ್ರೈಮರಿ ಪ್ರೊಡಕ್ಷನ್): ಉತ್ಪಾದಕಗಳ ಒಟ್ಟಾರೆ ದ್ಯುತಿಸಂಶ್ಲೇಷಣೆ ಕ್ರಿಯೆಯ ಪ್ರಮಾಣಕ್ಕೆ ಸಮಗ್ರ ಪ್ರಾಥಮಿಕ ಉತ್ಪಾದನೆ ಎನ್ನುವರು. ಪ್ರಾಥಮಿಕ ಉತ್ಪಾದನಾ ಪ್ರಮಾಣವನ್ನು ಪತ್ರಹರಿತ್ತು ಪ್ರಮಾಣದ ರೂಪದಲ್ಲಿ ಅಥವಾ ದ್ಯುತಿಸಂಶ್ಲೇಷಣೆ ಸಂಖ್ಯೆಯ ರೂಪದಲ್ಲಿ ಅಂದಾಜು ಮಾಡಲಾಗುವುದು.

ಬಿ) ನಿವ್ವಳ ಪ್ರಾಥಮಿಕ ಉತ್ಪಾದಕತೆ: (ನೆಟ್ ಪ್ರೈಮರಿ ಪ್ರೊಡಕ್ಟಿವಿಟಿ) ಸಸ್ಯಗಳ ಅಂಗಾಂಗಗಳಲ್ಲಿ ಸಂಗ್ರಹಿತ ಸಮಗ್ರ ಪ್ರಾಥಮಿಕ ಉತ್ಪಾದಕತೆಯ ಕೆಲವು ಭಾಗವನ್ನು ಉತ್ಪಾದಕಗಳು ಉಸಿರಾಡಲು ಮತ್ತು ತಮ್ಮ ಶರೀರ ನಿರ್ವಹಣೆಯ ಕಾರ್ಯದಲ್ಲಿ ಉಪಯೋಗಿಸುತ್ತವೆ. ಇನ್ನುಳಿದ ಉತ್ಪಾದನೆಯನ್ನು ಕೂಡಿಟ್ಟುಕೊಂಡು ಸಸ್ಯ ಬೆಳವಣಿಗೆಗೆ ಬಳಸುತ್ತವೆ. ಹೀಗಾಗಿ ಸಮಗ್ರ ಪ್ರಾಥಮಿಕ ಉತ್ಪಾದಕತೆಯ ಮಾಪನದ ಸಮಯದಲ್ಲಿ ಉತ್ಪಾದಕರು ಉಸಿರಾಡಲು ಉಪಯೋಗಿಸಿಕೊಂಡು ಅತಿರೇಖವಾಗಿ ಉಳಿದುಕೊಳ್ಳುವ ಸಾವಯವ ಪದಾರ್ಥಗಳ ಪ್ರಮಾಣಕ್ಕೆ ನಿವ್ವಳ ಪ್ರಾಥಮಿಕ ಉತ್ಪಾದನೆ (ಎನ್‌ಪಿಪಿ) ಎನ್ನುತ್ತಾರೆ. ಸಮಗ್ರ ಪ್ರಾಥಮಿಕ ಉತ್ಪಾದನೆ – ಉಸಿರಾಟ = ನಿವ್ವಳ ಪ್ರಾಥಮಿಕ ಉತ್ಪಾದನೆ (ಜಿಪಿಪಿ– ರೆಸ್ಪಿರೇಶನ್ =ಎನ್‌ಪಿಪಿ).

2) ದ್ವಿತೀಯ ಉತ್ಪಾದಕತೆ (ಸೆಕೆಂಡರಿ ಪ್ರೊಡಕ್ಟಿವಿಟಿ): ಜೀವ ಪರಿಸರ ವ್ಯವಸ್ಥೆಯಲ್ಲಿರುವ ಎಲ್ಲ ಉಪಭೋಗಗಳು ದ್ವಿತೀಯ ಉತ್ಪಾದನೆ ಗುಂಪಿನಲ್ಲಿ ಸೇರಿವೆ. ಉಪಭೋಗಿ ಪೋಷಣಾ ಸ್ತರಗಳಲ್ಲಿ (ಕನ್‌ಸ್ಯೂಮರ್ ಟ್ರಾಫಿಕಲ್ ಲೆವಲ್) ಸಂಗ್ರಹವಾಗುವ ಶಕ್ತಿಯ ಪ್ರಮಾಣವೇ ದ್ವಿತೀಯ ಉತ್ಪಾದಕತೆ. ಪೋಷಣಾಸ್ತರವಾದ ಎರಡನೆಯ ಹಂತದಲ್ಲಿ ಸಸ್ಯಾಹಾರಿಗಳು, ಮೂರನೆಯ ಸ್ತರದಲ್ಲಿ ಮಾಂಸಹಾರಿಗಳು ಹೀಗೆ ಬೇರೆ ಬೇರೆ ಜೀವಿಗಳು ವಿವಿಧ ಸ್ತರಗಳಲ್ಲಿ ಸೇರ್ಪಡೆಯಾಗುತ್ತವೆ.

ಏಕರೂಪಿತ ಉತ್ಪಾದಕತೆಯಿಂದ (ಅಸಿಮಿಲೇಶನ್) ಪಡೆದ ಎಲ್ಲ ಶಕ್ತಿಯು ಬೆಳವಣಿಗೆ, ಅಭಿವೃದ್ಧಿ ಮತ್ತು ಪುನರ್ ಉತ್ಪತ್ತಿಗೆ ಉಪಯೋಗಿಸದೆ, ಇದರ ಅಧಿಕ ಭಾಗವು ಉಸಿರಾಟ, ಶರೀರದ ಉಷ್ಣಾಂಶವನ್ನು ಕಾಪಾಡಲು ಹಾಗೂ ದಿನನಿತ್ಯದ ಚಟುವಟಿಕೆಗಳಿಗೆ ಕಳೆದುಕೊಳ್ಳುತ್ತದೆ. ತದನಂತರ ಇನ್ನುಳಿದ ಶಕ್ತಿಯು ಶರೀರದ ಅಂಗಗಳಲ್ಲಿ ಸಂಗ್ರಹವಾಗುವುದಕ್ಕೆ ದ್ವಿತೀಯ ಉತ್ಪಾದನೆ ಎನ್ನುವರು.

3) ನಿವ್ವಳ ಉತ್ಪಾದಕತೆ (ನೆಟ್ ಪ್ರೊಡಕ್ಟಿವಿಟಿ): ಯಾವುದೇ ಉಪಭೋಗಿಗಳಿಂದ ಉಪಯೋಗಿಸಲ್ಪಡದೆ ಹಾಗೇ ಸ್ಥಿರವಾಗಿ ಉಳಿದುಕೊಳ್ಳುವ ಸಾವಯವ ಪದಾರ್ಥಗಳ ಸಂಗ್ರಹಣೆಯ ಪ್ರಮಾಣಕ್ಕೆ ನಿವ್ವಳ ಉತ್ಪಾದನೆ ಎಂದು ಕರೆಯುವರು. ಈ ಪ್ರಕಾರವಾಗಿ ಸಾವಯವ ಪದಾರ್ಥಗಳನ್ನು ಉಪಭೋಗಿಗಳಿಂದ ಉಪಯೋಗಿಸದೇ ಹಾಗೇ ಉಳಿದುಕೊಳ್ಳುವುದರಿಂದ ಉತ್ಪಾದಕರಲ್ಲಿ ಜೈವಿಕ ರಾಶಿಯ (ಬಯೋ ಮಾಸ್) ಪ್ರಮಾಣವು ಹೆಚ್ಚಾಗುತ್ತದೆ. (ಎಲ್.ಟಿ.ಎನ್.)

**ಜೀವ ಪರಿಸರ ವ್ಯವಸ್ಥೆಯ ರಚನೆ ಅಥವಾ ಮೂಲಾಂಶಗಳು:** ಪರಿಸರದಲ್ಲಿ ಜೀವ ಸಮೂಹಗಳಾದ ಸಸ್ಯ, ಪ್ರಾಣಿ, ಸೂಕ್ಷ್ಮಜೀವಿ, ಪಕ್ಷಿ ಮುಂತಾದವು ಸೇರಿವೆ. ಈ ಜೀವ ಪ್ರಪಂಚಗಳಲ್ಲದೆ, ವಾಯು, ನೀರು, ಮಳೆ, ಕಲ್ಲು, ಪರ್ವತ, ಖನಿಜ ಮುಂತಾದ ನಿರ್ಜೀವ ವಸ್ತುಗಳು ಸಹ ಆಶ್ರಯ ಪಡೆದುಕೊಂಡಿರುತ್ತವೆ. ಸಮಸ್ತ ಜೀವರಾಶಿಗಳು ತಮ್ಮ ಬದುಕಿಗಾಗಿ ಒಂದನ್ನೊಂದು ಅವಲಂಬಿಸಿ, ಪರಸ್ಪರ ವರ್ತಿಸಿ, ಕ್ರಿಯೆ ಮತ್ತು ಪ್ರಕ್ರಿಯೆ ನಡೆಯುತ್ತದೆ. ಜೀವ ಪರಿಸರ ವ್ಯವಸ್ಥೆಯ ಮೂಲಾಂಶಗಳನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು. 1) ಜೈವಿಕ ಅಂಶಗಳು ಮತ್ತು 2) ಅಜೈವಿಕ ಅಂಶಗಳು.

1) ಜೈವಿಕ ಅಂಶಗಳು (ಬಯೋಟಿಕ್ ಎಲಿಮೆಂಟ್ಸ್) ಜೈವಿಕ ಅಂಶಗಳು ಜೀವಂತವಿರುವ ಜೀವಿ ಸಮುದಾಯಗಳು ಮತ್ತು ಅವುಗಳ ಸಂತಾನೋತ್ಪತ್ತಿಯನ್ನು ಒಳಗೊಂಡಿರುತ್ತವೆ. ಜೀವಿಗಳು ನಿರ್ವಹಿಸುವ ಕಾರ್ಯಗಳ ಆಧಾರದ ಮೇಲೆ ಅವುಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

ಎ) ಉತ್ಪಾದಕಗಳು (ಪ್ರೊಡ್ಯೂಸರ್ಸ್ ಅಥವಾ ಆಟೊಟ್ರೋಫಿಕ್ಸ್): ಬದುಕಲು ಅವಶ್ಯವಿರುವ ಶಕ್ತಿಯನ್ನು ಸ್ವತಃ ಉತ್ಪಾದಿಸಿಕೊಳ್ಳುವ ಜೀವಿಗಳಿಗೆ ಉತ್ಪಾದಕವೆನ್ನುವರು ಉದಾ: ಸಸ್ಯಗಳು. ಇವು ಅಜೈವಿಕ ವಸ್ತುಗಳಾದ ಸೌರಶಕ್ತಿಯ ಸಹಾಯದಿಂದ ನೀರು ಮತ್ತು ಇಂಗಾಲದ ಡೈ ಆಕ್ಸೈಡನ್ನು ರಾಸಾಯನಿಕ ಶಕ್ತಿಗಳಾಗಿ ಪರಿವರ್ತನೆ ಮಾಡುತ್ತವೆ. ಪ್ರೋಟಿನ್, ಸಕ್ಕರೆ, ಕಾರ್ಬೋಹೈಡ್ರೇಟ್, ಮೇದಸ್ಸು ಮತ್ತು ಜೀವ ಸತ್ವಗಳಾದ ಇಂಗಾಲ, ಆಮ್ಲಜನಕ, ಜಲಜನಕ, ರಂಜಕ, ಕ್ಯಾಲ್ಸಿಯಂ ಮತ್ತು ಪೊಟ್ಯಾಸಿಯಂ ಜೀವ ಮಂಡಲದಲ್ಲಿಯ ಸಸ್ಯಗಳು ಸೌರಶಕ್ತಿ ಸ್ವೀಕರಿಸಿ ನೀರಿನ ಸಹಾಯದಿಂದ ಹಸುರು ವರ್ಣ ತಯಾರಿಸಿಕೊಳ್ಳುತ್ತವೆ. ಇದಕ್ಕೆ ಪತ್ರ ಹರಿತ್ತು (ಕ್ಲೋರೋಫಿಲ್) ಎಂದು ಕರೆಯುವರು. ಈ ಹಸುರು ವರ್ಣದ ಸಹಾಯದಿಂದ ಸಸ್ಯಗಳು ಸೌರಶಕ್ತಿ ಉಪಯೋಗಿಸಿ, ನೀರು ಮತ್ತು ಇಂಗಾಲದ ಡೈ ಆಕ್ಸೈಡ್‌ನ್ನು ಕಾರ್ಬೋಹೈಡ್ರೇಟ್ ಮತ್ತು ರಾಸಾಯನಿಕ ಶಕ್ತಿಯನ್ನಾಗಿ ಪರಿವರ್ತನೆ ಮಾಡಿ ಸ್ವಯಂ ಆಹಾರ ತಯಾರಿಸಿಕೊಳ್ಳುತ್ತವೆ. ಈ ಕ್ರಿಯೆಗೆ ದ್ಯುತಿಸಂಶ್ಲೇಷಣೆ ಎಂದು ಕರೆಯುವರು. ಹೀಗೆ ಯಾವ ಜೀವಿಗಳು ತಮ್ಮ ಆಹಾರ ತಯಾರಿಸಿ ಜೀವಿಸುತ್ತವೆಯೋ ಅವುಗಳಿಗೆ ಉತ್ಪಾದಕ ಅಥವಾ ಆಟೋಟ್ರಾಪ್ಸ್ ಎಂದು ಕರೆಯುವರು. ಪ್ರಾಥಮಿಕ ಉತ್ಪಾದಕಗಳನ್ನು ಅವುಗಳು ತಯಾರಿಸುವ ಸ್ವಯಂ ಆಹಾರದ ಆಧಾರದ ಮೇಲೆ ಫೋಟೋಟ್ರಾಪ್ಸ್ ಮತ್ತು ಕೆಮೊಟ್ರಾಪ್ಸ್ ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು.

ಬಿ) ಉಪಭೋಗಿಗಳು (ಕನ್‌ಸ್ಯೂಮರ್ಸ್ – ಹೆಟೆರೊಟ್ರೋಫಿಕ್ಸ್): ಪ್ರಾಥಮಿಕ ಉತ್ಪಾದಕಗಳಾದ ಸಸ್ಯಗಳನ್ನು ತಿಂದು ಬದುಕುವ ಪ್ರಾಣಿಗಳಿಗೆ ಉಪಭೋಗಿಗಳೆಂದು ಕರೆಯುವರು. ಉಪಭೋಗಿಗಳು ಬಳಕೆ ಮಾಡುವ ಆಹಾರದ ಆಧಾರದ ಮೇಲೆ ಅವುಗಳನ್ನು ಮೂರು ಉಪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

ಪ್ರಾಥಮಿಕ ಉಪಭೋಗಿಗಳು – (ಪ್ರೈಮರಿ ಕನ್‌ಸ್ಯೂಮರ್ಸ್ ಹರ್‌ಬಿವೋರಸ್) ಸಸ್ಯಾಹಾರಿ ಪ್ರಾಣಿಗಳಿಗೆ ಪ್ರಾಥಮಿಕ ಉಪಭೋಗಿಗಳೆಂದು ಕರೆಯುವರು. ಈ ಪ್ರಾಣಿಗಳು ಸಸ್ಯ ಮತ್ತು ಅವುಗಳ ಉತ್ಪನ್ನಗಳನ್ನು ಆಹಾರವನ್ನಾಗಿ ಉಪಯೋಗಿಸಿ ಜೀವಿಸುತ್ತವೆ. ಉದಾ: ಇಲಿ, ಆಡು, ಕುರಿಗಳು, ಮೊಲ, ದನಕರುಗಳು, ಆನೆ, ಕುದುರೆ ಮುಂತಾದವು.

ದ್ವಿತೀಯ ಉಪಭೋಗಿಗಳು – (ಸೆಕೆಂಡರಿ ಕನ್‌ಸ್ಯೂಮರ್ಸ್ ಕಾರ್ನಿವೋರಸ್) ಮಾಂಸಾಹಾರಿ ಜೀವಿಗಳೇ ದ್ವಿತೀಯ ಉಪಭೋಗಿಗಳು ಇವು ಸಸ್ಯಹಾರಿ ಜೀವಿಗಳನ್ನು ತಿಂದು ಬದುಕುತ್ತವೆ. ಉದಾ: ಹಾವು, ಹುಲಿ, ಸಿಂಹ, ಚಿರತೆ ಇತ್ಯಾದಿ.

ತೃತೀಯ ಉಪಭೋಗಿಗಳು: (ಟರ್ಷಿಯರಿ ಕನ್‌ಸ್ಯೂಮರ್ಸ್ / ಓಮ್ನಿವೋರಸ್) ಸಸ್ಯಾಹಾರಿ ಮತ್ತು ಮಾಂಸಾಹಾರಿ ಜೀವಿಗಳನ್ನು ತಿನ್ನುವ ಜೀವಿಗಳಿಗೆ ತೃತೀಯ ಉಪಭೋಗಿ ಅಥವಾ ಉಭಯಾಹಾರಿಗಳೆಂದು ಕರೆಯುವರು. ಉದಾ: ಡೈನೋಸಾರ್ಸ್, ದೊಡ್ಡ ಮೀನು, ಮಾನವನು ಸಹ ಇದೇ ಗುಂಪಿನಲ್ಲಿ ಬರುತ್ತಾನೆ. ಈತ ಸಸ್ಯ ಮತ್ತು ಪ್ರಾಣಿಗಳನ್ನು ತಿನ್ನುವುದಲ್ಲದೆ, ಅವುಗಳಿಂದ ಉತ್ಪಾದನೆಯಾಗುವ ಹಾಲು, ಬೆಣ್ಣೆ, ತುಪ್ಪ ಮೊಸರು ಮುಂತಾದ ಪದಾರ್ಥಗಳನ್ನು ಸಹ ಉಪಯೋಗಿಸುತ್ತಾನೆ.

ಸಿ) ಪರಿವರ್ತಕರು (ಟ್ರಾನ್ಸ್‌ಫಾರ್ಮರ್ಸ್): ಸತ್ವ, ಆಹಾರ, ಸಸ್ಯರಸಗಳನ್ನು ಬೇರೆ ಬೇರೆ ಜೀವಿಗಳಿಗೆ ವರ್ಗಾವಣೆ ಮಾಡುವ ಜೀವಿಗಳೇ ಪರಿವರ್ತಕರು ಉದಾ: ಬ್ಯಾಕ್ಟೀರಿಯಾಗಳು ಜೈವಿಕ ವಸ್ತುಗಳ ಮೇಲೆ ಆಕ್ರಮಣ ಮಾಡಿ ಜೀವಿಸಲು ಅವಶ್ಯವಿರುವ ಸತ್ವ ಹೀರಿ ಬೇರೆ ಜೀವಿಗಳಿಗೆ ವರ್ಗಾವಣೆ ಮಾಡುತ್ತವೆ.

ಡಿ) ವಿಘಟಕರು (ಡೀಕಂಪೋಸರ್ಸ್):– ಸಸ್ಯ ಮತ್ತು ಪ್ರಾಣಿಗಳು ಗತಿಸಿದಾಗ ಅವುಗಳ ಅವಶೇಷಗಳು ಕೊಳೆಯುವಂತೆ ಮಾಡುವ ಅತಿ ಸೂಕ್ಷ್ಮಜೀವಿಗಳಾದ ಬ್ಯಾಕ್ಟೀರಿಯ, ಶೈವಲ ಮುಂತಾದವುಗಳಿಗೆ ವಿಘಟಕರು ಎನ್ನುವರು. ಸಸ್ಯ ಮತ್ತು ಪ್ರಾಣಿಗಳು ಸತ್ತ ನಂತರ ಅವುಗಳನ್ನು ಕೊಳೆಯುವಂತೆ ಮಾಡಿ, ಅವುಗಳನ್ನು ಆಹಾರವನ್ನಾಗಿ ಉಪಯೋಗಿಸಿಕೊಂಡು ಸಂಯುಕ್ತ ಮೂಲ ವಸ್ತುಗಳಾದ ಇಂಗಾಲ, ಸಾರಜನಕ, ಆಮ್ಲಜನಕ ಮುಂತಾದವುಗಳನ್ನು ಸರಳ ವಸ್ತುಗಳನ್ನಾಗಿ ಪರಿವರ್ತನೆ ಮಾಡಿ ಅವುಗಳನ್ನು ಮರಳಿ ಪರಿಸರ ವ್ಯವಸ್ಥೆಗೆ ಸೇರ್ಪಡೆ ಮಾಡುತ್ತವೆ.

2. ಅಜೈವಿಕ ಅಂಶಗಳು (ಅಬಯೋಟಿಕ್ ಎಲಿಮೆಂಟ್ಸ್) ಜೀವ ಪರಿಸರ ವ್ಯವಸ್ಥೆಯಲ್ಲಿರುವ ಜೀವಿಗಳ ಬದುಕಿಗೆ ಸಹಾಯ ಮಾಡುವ ಅಂಶಗಳೇ ಅಜೈವಿಕ ಅಂಶಗಳು. ಇವುಗಳನ್ನು ಮೂರು ಪ್ರಕಾರಗಳನ್ನಾಗಿ ವಿಂಗಡಿಸಬಹುದು.

ಎ) ನಿರ್ಜೀವ ದ್ರವ್ಯಗಳು (ಇನ್ ಆರ್ಗಾನಿಕ್ ಸಬ್‌ಸ್ಟೆನ್ಸ್): ವಾಯುಮಂಡಲದಲ್ಲಿರುವ ಅನಿಲಗಳು, ಜಲಗೋಳದಲ್ಲಿರುವ ನೀರು ಮತ್ತು ಶಿಲಾಗೋಳದಲ್ಲಿರುವ ಖನಿಜಗಳು ನಿರ್ಜೀವ ದ್ರವ್ಯಗಳ ಗುಂಪಿಗೆ ಸೇರಿವೆ. ಸಾವಯವ ಪದಾರ್ಥಗಳ ಸಂಯೋಜನೆಯಲ್ಲಿ ನಿರ್ಜೀವ ವಸ್ತುಗಳು ಅತಿ ಪ್ರಮುಖವಾಗಿದೆ. ಇದಕ್ಕೆ ನಿರ್ಜೀವ ಪೋಷಕಾಂಶ (ಇನ್ ಆರ್ಗಾನಿಕ್ ನ್ಯೂಟ್ರಿಯೆಂಟ್ಸ್) ಅಥವಾ ಜೀವ ಉತ್ಪತ್ತಿ ಪದಾರ್ಥ (ಬಯೋ ಜೆನೆಟಿಕ್ ಮ್ಯಾಟರ್) ಗಳೆಂದು ಕರೆಯುವರು.

ಬಿ) ಸಾವಯವ ಪದಾರ್ಥಗಳು( ಆರ್ಗಾನಿಕ್ ಸಬ್‌ಸ್ಟೆನ್ಸ್) ಜೀವ ಪರಿಸರ ವ್ಯವಸ್ಥೆಯಲ್ಲಿರುವ ಜೀವಿಗಳು ಅಳಿದ ಬಳಿಕ ಅವುಗಳ ದೇಹದಿಂದ ಅಥವಾ ಅವುಗಳ ಮಲ ಮೂತ್ರ (ಎಕ್ಸ್ಕ್ರಿಯೇಷನ್) ವಿಸರ್ಜನೆಯಿಂದ ಸಾವಯವ ಪದಾರ್ಥಗಳು ಬಿಡುಗಡೆ ಹೊಂದುತ್ತವೆ. ಸಾವಯವ ಪದಾರ್ಥಗಳು ಜೀವ ಪರಿಸರ ವ್ಯವಸ್ಥೆಯ ಜೈವಿಕ ಹಾಗೂ ಅಜೈವಿಕ ಅಂಶಗಳನ್ನು ಜೋಡಣೆ ಮಾಡುತ್ತವೆ.

ಸಿ) ಭೌತಿಕ ಅಂಶಗಳು (ಫಿಸಿಕಲ್ ಫ್ಯಾಕ್ಟರ್ಸ್): ವಾಯುಗುಣ ಮತ್ತು ವಾಯುಸ್ಥಿತಿಯ ಅಂಶಗಳಾದ ಬೆಳಕು, ಉಷ್ಣಾಂಶ, ಆರ್ದ್ರತೆ, ಗಾಳಿ, ಒತ್ತಡ, ಮಳೆ ಭೂ ಸ್ವರೂಪ ಮಣ್ಣು ಮುಂತಾದವು ಭೌತಿಕ ಅಂಶಗಳಾಗಿವೆ. (ಎಲ್.ಟಿ.ಎನ್.)

**ಜೀವ ಪರಿಸರ ವ್ಯವಸ್ಥೆಯಲ್ಲಿ ಶಕ್ತಿಯ ಹರಿವು:** ಆಹಾರ ಸರಪಳಿಯಲ್ಲಿ ಒಂದು ಪೋಷಣಾ ಸ್ತರದಿಂದ ಮತ್ತೊಂದು ಪೋಷಣಾ ಸ್ತರಕ್ಕೆ ಆಗುವ ಶಕ್ತಿಯ ವರ್ಗಾವಣೆಯನ್ನು ಶಕ್ತಿಯ ಹರಿವು ಎಂದು ಕರೆಯುವರು. ಅಂದರೆ ಸಸ್ಯಗಳು

ಸೂರ್ಯನಿಂದ ಶಕ್ತಿ ಪಡೆದು ಅದನ್ನು ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ಉಪಯೋಗಿಸಿಕೊಂಡು ಅದನ್ನು ರಾಸಾಯನಿಕ ಶಕ್ತಿಯನ್ನಾಗಿ ಮಾರ್ಪಾಡು ಮಾಡುತ್ತವೆ. ಇಂತಹ ಶಕ್ತಿಯನ್ನು ಮೊದಲು ಸಸ್ಯಾಹಾರಿ ಜೀವಿಗಳು ಪಡೆಯುತ್ತವೆ. ಸಸ್ಯಹಾರಿಗಳಿಂದ ಮಾಂಸಾಹಾರಿ ಜೀವಿಗಳು ಪಡೆದು ಅಂತಿಮವಾಗಿ ಉಭಯಾಹಾರಿಗಳು ಶಕ್ತಿಯನ್ನು ಪಡೆಯುತ್ತವೆ. ಹೀಗಾಗಿ ನಿಸರ್ಗದ ಶಕ್ತಿಯು ನಾಶಹೊಂದುವುದಿಲ್ಲ. ಬದಲಾಗಿ ಒಂದು ರೂಪದಿಂದ ಮತ್ತೊಂದಕ್ಕೆ ವರ್ಗಾವಣೆ ಹೊಂದುವುದು. ಇದನ್ನೇ ಶಕ್ತಿಯ ಹರಿವು ಎನ್ನುವರು.

ಜೀವಿ ಪರಿಸರ ವ್ಯವಸ್ಥೆಯಲ್ಲಿ ಹರಿಯುವ ಶಕ್ತಿಯನ್ನು 1) ಏಕಮುಖ ಶಕ್ತಿಯ ಹರಿವು 2) ವೈ ಆಕಾರದ ಅಥವಾ ದ್ವಿಮುಖ ಶಕ್ತಿಯ ಹರಿವು ಹಾಗೂ 3) ಉಷ್ಣತೆಯ ಚಲನಾತ್ಮಕ ಹರಿವು ನಿಯಮಗಳಿಂದ ತಿಳಿಯಬಹುದು.

ಏಕಮುಖ ಶಕ್ತಿ ಹರಿವು: ಸೂರ್ಯನಿಂದ ಹೊರಹೊಮ್ಮುವ ವಿಕಿರಣ 118,872 9 $gcal/l\,cm^2/yr$ ಇದರಿಂದ ಸಿಹಿ ನೀರಿನ ಸರೋವರದಲ್ಲಿರುವ ಉತ್ಪಾದಕಗಳು 111 9 $gcal/l\,cm^2/yr$ ದಷ್ಟು ಪಡೆದುಕೊಳ್ಳುತ್ತವೆ. ಆದ್ದರಿಂದ ಸರೋವರದಲ್ಲಿರುವ ಉತ್ಪಾದಕರ ಒಟ್ಟು ಉತ್ಪಾದನೆ (ಗ್ರಾಸ್ ಪ್ರೊಡಕ್ಟಿವಿಟಿ) ಶೇ.93 ರಷ್ಟು. ಇದರಲ್ಲಿ ಶೇ.21 ರಷ್ಟು ನಿರ್ವಹಣೆ ಮತ್ತು ಪುನರ್ ಉತ್ಪಾದನೆಗೆ ಬಳಸಿಕೊಳ್ಳುತ್ತವೆ. ಅನಂತರ ಸಸ್ಯಾಹಾರಿ ಶೇ. 15 ಶಕ್ತಿಯನ್ನು ಪಡೆದುಕೊಳ್ಳುತ್ತವೆ. ವಿಭಜನಾ ಕ್ರಿಯೆಯಲ್ಲಿ ಸಸ್ಯಗಳು ಉತ್ಪಾದಿಸಿದ ಶಕ್ತಿಯ ಶೇ.3.5 ರಷ್ಟು ಉಪಯೋಗವಾಗದೆ ಹಾಗೆ ಉಳಿದು ಸಸ್ಯ ವಸ್ತುಗಳಲ್ಲಿ (ಪ್ಲಾಂಟ್ ಮೆಟೀರಿಯಲ್ಸ್) ಸಂಗ್ರಹವಾಗುತ್ತದೆ. ಹೀಗಾಗಿ ಇದು ಬಳಕೆಯಾಗಲಾರದೆ ಪುನಃ ಭೂಮಿ ಹಾಗೂ ವಾಯುಮಂಡಲವನ್ನು ಸೇರುತ್ತದೆ.

ಸಸ್ಯಾಹಾರಿಗಳಲ್ಲಿ ಶಕ್ತಿಯ ಒಟ್ಟು ಉತ್ಪಾದನೆ ಶೇ.13.51 ರಷ್ಟಿರುವುದು ಇದರಲ್ಲಿ ಶೇ. 30 ರಷ್ಟು ಸಸ್ಯಾಹಾರಿಗಳು ಉಸಿರಾಟದಿಂದ ಕಳೆದುಕೊಳ್ಳುತ್ತವೆ. ವಿಭಜನಕಾರಿಗಳಿಂದ ಶೇ.3.33 ರಷ್ಟು ಉಪಯೋಗವಾಗುತ್ತದೆ. ಶೇ.46 ರಷ್ಟು ಶಕ್ತಿಯು ಉಪಯೋಗಿಸಲಾರದೆ ಹಾಗೇ ಉಳಿಯುತ್ತದೆ. ಅದೇ ರೀತಿಯಾಗಿ ಮಾಂಸಾಹಾರಿ ಜೀವಿಗಳಿಗೆ ಲಭ್ಯವಾಗುವ ಒಟ್ಟು ಶಕ್ತಿಯ ಕೇವಲ ಶೇ.20.0 ರಷ್ಟು. ಇದರಲ್ಲಿ ಶೇ.21 ರಷ್ಟು ಶಕ್ತಿ ಉಪಯೋಗಿಸಲಾರದೆ ಹಾಗೆ ಉಳಿದು ವಾಯುಮಂಡಲಕ್ಕೆ ಮರಳುತ್ತದೆ. ಪ್ರತಿ ಹಂತದ ಜೀವಿ ತಾವುಸೇವಿಸಿದ ಆಹಾರದ ಶೇ.10 ರಷ್ಟು ಶಕ್ತಿಯನ್ನು ಮಾತ್ರ ಪಡೆಯುತ್ತಿವೆ.

ವೈ ಆಕಾರದ ಅಥವಾ ದ್ವಿಮಾರ್ಗ ಶಕ್ತಿ ಹರಿವು ಮಾದರಿ: 1956 ರಲ್ಲಿ ಓಡಂ ಎಂಬ ವಿಜ್ಞಾನಿ ಏಕಮುಖ ಶಕ್ತಿ ಹರಿವಿಗೆ ಬದಲಾಗಿ ದ್ವಿಮಾರ್ಗ ಶಕ್ತಿಯ ಹರಿವನ್ನು ಪ್ರತಿಪಾದಿಸಿರುವನು. ಈ ಮಾದರಿ ವಿಶ್ವವ್ಯಾಪಿ ಮಾದರಿ ಎಂದೂ ಸಹ ಪರಿಗಣಿಸಲ್ಪಟ್ಟಿದ್ದು, ಇದು ಎರಡು ಭಾಗಗಳನ್ನು ಒಳಗೊಂಡಿದೆ.

1) ಮೇಯುವ ಆಹಾರ ಸರಪಳಿಯಲ್ಲಿ ಶಕ್ತಿ ಹರಿವು: (ಎನರ್ಜಿ ಫ್ಲೋ ಇನ್ ಗ್ರೇಜಿಂಗ್ ಫುಡ್ ಚೈನ್) ಮೇಯುವ ಆಹಾರ ಸರಪಳಿಯಲ್ಲಿ ಉತ್ಪಾದಕಗಳು ಸ್ವಯಂ ಆಹಾರ ತಯಾರಿಸುವ ಸಸ್ಯಗಳಿಂದ ಆರಂಭಗೊಂಡು ಮಾಂಸಾಹಾರಿ ಜೀವಿಗಳವರೆಗೆ ಮುಂದುವರೆಯುವುದು. ಸಸ್ಯಗಳು ತಯಾರಿಸಿದ ಆಹಾರವು ಅ) ಉಸಿರಾಟದಲ್ಲಿ ನಷ್ಟವಾಗಬಹುದು. ಆ) ಒಣಗಿದ ಅನಂತರ ನಶಿಸಬಹುದು ಇ) ಸಸ್ಯಹಾರಿಗಳು ತಿಂದ ಅನಂತರ ಮಾಂಸಾಹಾರಿಗಳಿಗೆ ತಲುಪಬಹುದು. ಹೀಗೆ ಮೂರು ವಿಧಗಳಲ್ಲಿ ಯಾವುದಾದರೊಂದು ರೀತಿಯಲ್ಲಿ ಅಂತ್ಯಗೊಳ್ಳಬಹುದು.

2) ನಶಿಸಿದ ಆಹಾರ ಸರಪಳಿಯಲ್ಲಿ ಶಕ್ತಿಯ ಹರಿವು: ಜೈವಿಕ ತ್ಯಾಜ್ಯ ವಸ್ತುಗಳು ಹಾಗೂ ಮೃತ ಅವಶೇಷಗಳು ಒಳಗೊಂಡಿರುವ ಶಕ್ತಿ ನಷ್ಟವಾಗುವುದಿಲ್ಲ. ಬದಲಾಗಿ ನಶಿಸುವ ಅಥವಾ ಕ್ಷಯಿಸುವ ಕ್ರಿಯೆಯಲ್ಲಿ ನಿರತವಾಗಿರುವ ಸೂಕ್ಷ್ಮ ಜೀವಿಗಳಿಗೆ ಆಹಾರವಾಗಿ ಶಕ್ತಿ ಪೂರೈಕೆಯಾಗುವುದು. ಇಂತಹ ಕ್ರಿಯೆಯನ್ನು ನಶಿಸಿದ ಆಹಾರ ಸರಪಳಿಯಲ್ಲಿ ಶಕ್ತಿಯ ಹರಿವು ಎಂದು ಕರೆಯುವರು. ಇಂಥ ಶಕ್ತಿಯ ಹರಿವು ನಿರಂತರವಾಗಿದ್ದು, ಇದರಲ್ಲಿ ಬ್ಯಾಕ್ಟೀರಿಯ, ಫಂಗೈ (ಪ್ರೊಟೋಜೋವ) ಕ್ರಿಮಿಕೀಟ, ಹೇನು,ಗೆದ್ದಲು, ನೆಮಟೋಡ್, ಎರೆಹುಳು ಮೊದಲಾದವು ಭಾಗವಹಿಸುತ್ತವೆ. ಈ ಶಕ್ತಿಯ ಹರಿವು ಕೊಳೆಯುವ ರೂಪದಲ್ಲಿಯೇ ಮುಂದುವರೆಯುವುದು. ಅಂದರೆ, ಜೀವಿಗಳು ತ್ಯಾಜ್ಯ ಮತ್ತು ಮೃತ ಅವಶೇಷಗಳನ್ನು ತಿಂದು ಭಾಗಶಃ ಜೀರ್ಣಿಸಿಕೊಂಡು ಶಕ್ತಿಯನ್ನು ಪಡೆದು ಉಳಿದ ಜೈವಿಕ ವಸ್ತುವನ್ನು ವಿಸರ್ಜಿಸುತ್ತವೆ. (ಎಲ್.ಟಿ.ಎನ್.)

**ಜೀವ ಭೂಗೋಳವಿಜ್ಞಾನ:** ಭೂಮಿಯ ಮೇಲೆ ಸಸ್ಯಗಳು ಹಾಗೂ ಪ್ರಾಣಿವರ್ಗಗಳು ಹಂಚಿಕೆಯಾಗಿರುವ ರೀತಿ, ಅವುಗಳ ಗುಣಲಕ್ಷಣಗಳು, ಪರಿಸರದೊಂದಿಗೆ ಅವುಗಳ ಹೊಂದಾಣಿಕೆ ಮುಂತಾದವುಗಳನ್ನು ವಿವರಿಸುವ ವಿಜ್ಞಾನ. ಇದು ಜೀವಪರಿಸರ ವಿಜ್ಞಾನದೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಇದು ಸಸ್ಯ ಭೂಗೋಳವಿಜ್ಞಾನ ಮತ್ತು ಪ್ರಾಣಿ ಭೂಗೋಳವಿಜ್ಞಾನ ಎಂದು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಇವು ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನಗಳೊಡನೆ ನಿಟಕ ಸಂಬಂಧವನ್ನು ಹೊಂದಿವೆ. ಪರಿಸರ ಬದಲಾವಣೆ ಹಾಗೂ ಮಾಲಿನ್ಯ ಹಾಗೂ ಅದರ ಪರಿಣಾಮಗಳನ್ನು ಇದು ವಿವರಿಸುತ್ತದೆ. (ಪಿ.ಎಂ.)

**ಜೀವ ವೈವಿಧ್ಯತೆಯ ಬಿಸಿತಾಣಗಳು:** ಭೂಮಿಯ ಮೇಲೆ ಅಧಿಕ ಪ್ರಮಾಣದ ಜೀವ ಪ್ರಭೇದಗಳ ವೈವಿಧ್ಯತೆಯಿಂದ ಕೂಡಿರುವ ಹಾಗೂ ಮಾನವ ವಸತಿಗೆ ಸಮೀಪದಲ್ಲಿರುವ ಪ್ರದೇಶಗಳನ್ನು ಜೀವ ವೈವಿಧ್ಯತೆಯ ಮಹಾಕೇಂದ್ರಗಳು ಅಥವಾ ಬಿಸಿತಾಣಗಳು ಎಂದು ಕರೆಯುತ್ತಾರೆ. (ಭಾರತದಲ್ಲಿ) ಭೂಮಿಯ ಮೇಲೆ ಜೀವ ವೈವಿಧ್ಯತೆಯು ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಅವುಗಳಲ್ಲಿ ಸಾವಿರಾರು ಪ್ರಮುಖವಾದ ಜೈವಿಕ ವೈವಿಧ್ಯತೆಗಳು ಸುಮಾರು ಇನ್ನೂರು ಪ್ರಧಾನವಾದ, ಅಪರೂಪದ ಮತ್ತು ವೈಶಿಷ್ಟ್ಯಪೂರ್ಣವಾದ ಸ್ವಾಭಾವಿಕ ಪ್ರದೇಶಗಳಲ್ಲಿ ಕಂಡುಬರುತ್ತವೆ. ಪ್ರಪಂಚದಲ್ಲಿ ಇಂತಹ 18 ಜೈವಿಕ ವೈವಿಧ್ಯತೆಯ ಮಹಾಕೇಂದ್ರಗಳಿರುವುದು ಕಂಡುಬರುತ್ತದೆ. ಸ್ಥಳೀಯ ಪ್ರಭೇದಗಳ ಆಧಾರದ ಮೇಲೆ 1998 ರಲ್ಲಿ ಮೇಯರ್ ಎಂಬ ವಿಜ್ಞಾನಿ ಭೂ ಭಾಗದ ಮೇಲಿರುವ ಜೀವವೈವಿಧ್ಯತೆ ಇರುವ ಸ್ಥಳಗಳನ್ನು ವರ್ಗೀಕರಿಸಿದ್ದಾನೆ. ಈ ಮಹಾಕೇಂದ್ರಗಳಲ್ಲಿ 1,22,935 ಸ್ಥಳೀಯ ಸಸ್ಯ ಪ್ರಭೇಧಗಳನ್ನು ಗುರುತಿಸಲಾಗಿದೆ. ಪ್ರಪಂಚದಲ್ಲಿ ಬಹುಪಾಲು ಜೀವ ವೈವಿಧ್ಯತೆಯ ಬಿಸಿತಾಣಗಳು ಉಷ್ಣವಲಯದ ಆಂಡೀಸ್, ಮೆಸೊ ಅಮೆರಿಕನ್ ಅರಣ್ಯಗಳು, ಪಶ್ಚಿಮ ಸೂಡಾನ್, ಮ್ಯಾಲಗಾಸಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಪ್ರಪಂಚದ 18 ಜೈವಿಕ ವೈವಿಧ್ಯತೆಯ ಬಿಸಿತಾಣಗಳಲ್ಲಿ ಭಾರತದ ಎರಡು ಕೇಂದ್ರಗಳೂ ಸೇರಿದ್ದು, ಈ ಪ್ರದೇಶಗಳನ್ನು ಪ್ರಪಂಚದಲ್ಲಿಯೇ ಅತ್ಯಂತ ಪ್ರಮುಖವಾದ ಜೀವ ವೈವಿಧ್ಯತೆಯ ಬಿಸಿತಾಣಗಳೆಂದು ಗುರುತಿಸಲಾಗಿದೆ. ಅವುಗಳೆಂದರೆ

ಅ) ಪೂರ್ವ ಹಿಮಾಲಯ ಪ್ರದೇಶ: ಜೀವ ವೈವಿಧ್ಯತೆಯ ಬಿಸಿತಾಣಗಳಲ್ಲಿ ಪೂರ್ವ ಹಿಮಾಲಯ ಪ್ರದೇಶ ಅತ್ಯಂತ ವಿಶಿಷ್ಟವಾದುದು. ಇದು ನೇಪಾಲ, ಸಿಕ್ಕಿಂ, ಮೇಘಾಲಯ, ಅರುಣಾಚಲ ಪ್ರದೇಶ, ಅಸ್ಸಾಂ ಹಾಗೂ ಇತರ ಈಶಾನ್ಯ ರಾಜ್ಯಗಳನ್ನು ಒಳಗೊಂಡಿದೆ. ಈ ಪ್ರದೇಶ ಸು. 2,06,000 ಚ.ಕಿಮೀ ಪ್ರದೇಶವನ್ನು ಆವರಿಸಿದ್ದು, ಪೂರ್ವ ಹಿಮಾಲಯ ಪ್ರದೇಶ ಸು. 13,500 ಸಸ್ಯ ಪ್ರಬೇಧಗಳಿಂದ ಕೂಡಿದ್ದು ಇವುಗಳಲ್ಲಿ 7,000 ಸ್ಥಳೀಯ ಸಸ್ಯ ಪ್ರಭೇದಗಳಿವೆ.

ಆ) ಪಶ್ಚಿಮ ಘಟ್ಟಗಳು: ಈ ಪ್ರದೇಶ ಭಾರತದ ಎರಡನೆಯ ಜೀವ ವೈವಿಧ್ಯತೆಯ ಬಿಸಿತಾಣವಾಗಿದ್ದು ಇದು ಹೊಂದಿರುವ ವೈವಿಧ್ಯಮಯ ಭೂಸ್ವರೂಪಗಳ ಪರಿಣಾಮದಿಂದ ಇದರ ವಾಯುಗುಣದ ಸೂಕ್ಷ್ಮವಾಗಿದ್ದು ಹಲವು ಬಗೆಯ ಜೀವ ಸಂಕುಲಗಳಿಗೆ ಆಶ್ರಯ ತಾಣವಾಗಿದೆ. ಈ ಪ್ರದೇಶದಲ್ಲಿ ಸು. 1500 ಬಗೆಯ ಸಸ್ಯ ಪ್ರಭೇದಗಳನ್ನು ಗುರುತಿಸಲಾಗಿದ್ದು ಇವುಗಳಲ್ಲಿ 112 ಸಸ್ಯ ಪ್ರಭೇದಗಳು ಸ್ಥಳೀಯವಾಗಿವೆ. ಇದಲ್ಲದೆ ಸು. 315 ಸ್ಥಳೀಯ ಪ್ರದೇಶದ ಕಶೇರುಕಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 104 ಮೀನು ಪ್ರಭೇದಗಳು, 87 ಬರಹ ಪ್ರಭೇದಗಳು, 87 ಉಭಯವಾಸಿ ಪ್ರಭೇದಗಳು, 13 ಪಕ್ಷಿ ಪ್ರಭೇದಗಳು ಹಾಗೂ 12 ಸ್ತನಿ ಪ್ರಭೇದಗಳು.

ಇವುಗಳಲ್ಲದೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಗುಜರಾತ್ ಕೊಲ್ಲಿ ತೀರ ಪ್ರದೇಶ ಈ ಪ್ರದೇಶಗಳಲ್ಲಿಯೂ ಹಲವು ಜೀವ ಪ್ರಭೇದಗಳು ಕಂಡುಬರುತ್ತವೆ. (ಜಿ.ಡಿ.)

**ಜೀವಕೋಷ್ಟಕ:** ಒಂದು ಕಾಲದ ಮರಣ ಪರಿಸ್ಥಿತಿಯ ಸಾರಾಂಶ ಚಿತ್ರ (ಲೈಫ್ ಟೇಬಲ್). ವಾಸ್ತವವಾಗಿ ಆರಂಭದಲ್ಲಿ ಮರಣಕೋಷ್ಟಕವೇ (ಡೆತ್ ಟೇಬಲ್) ಬಳಕೆಗೆ ಬಂದದ್ದು; ಮುಂದೆ ಇದಕ್ಕೇ ಜೀವಕೋಷ್ಟಕ ಎಂಬ ಹೆಸರು ರೂಢಿಗೆ ಬಂತು. ಇಂಥ ಒಂದು ಮರಣಕೋಷ್ಟಕದ ಕಲ್ಪನೆಯನ್ನು ರೂಪಿಸಿದ ಕೀರ್ತಿ ಇಂಗ್ಲೆಂಡಿನ ಜಾನ್ ಗ್ರಾಂಟನದು. ಈತ ಲಂಡನ್ನಿನ ಮರಣ ಬಿಲ್ಲುಗಳ (ಬಿಲ್ಸ್ ಆಫ್ ಮಾರ್ಟಾಲಿಟಿ) ಆಧಾರದ ಮೇಲೆ 1661ರಲ್ಲಿ ಮರಣಕೋಷ್ಟಕಗಳನ್ನು ನಿರ್ಮಿಸಿದ. ಈ ಮರಣಕೋಷ್ಟಕಗಳಿಗೆ ಕೆಲವು ಕಾಲಾನಂತರ ಜೀವಕೋಷ್ಟಕಗಳೆಂಬ ಹೆಸರು ಬಂತು. ಭಾರತದಲ್ಲಿ ಜನಗಣತಿಯ ಆಧಾರದ ಮೇಲೆ ಜಿ. ಎಫ್. ಹಾರ್ಡಿ, ಟಿ. ಜಿ. ಆಕ್ಲಂಡ್, ಎಚ್, ಜಿ. ಡಬ್ಲ್ಯು. ಮೈಕಲ್, ಎಲ್. ಎಸ್. ವೈದ್ಯನಾಥನ್ ಮತ್ತು ಎಸ್. ಪಿ. ಜೈನ್ ಇವರು ಜೀವಕೋಷ್ಟಕಗಳನ್ನು ರಚಿಸಿದ್ದಾರೆ.

ವಿವಿಧ ಕೋಷ್ಟಕಗಳು: ಜೀವಕೋಷ್ಟಕಗಳಲ್ಲಿ ಮುಖ್ಯವಾಗಿ ಎರಡು ಪ್ರರೂಪಗಳುಂಟು. ಇವು ಜೀವಿತೋತ್ತರ ಸಂಭಾವ್ಯತೆಗಳನ್ನು (ಸರ್ವೈವಲ್ ಪ್ರಾಬೆಬಿಲಿಟೀಸ್) ಗಣಿಸುವ ರೀತಿಯನ್ನು ಅವಲಂಬಿಸಿವೆ:

ಒಂದು ನಿರ್ದಿಷ್ಟ ಜೀವಿಸಮುದಾಯವನ್ನು ಅದು ಜನಿಸಿದಂದಿನಿಂದ ಅದರ ಎಲ್ಲ ವ್ಯಕ್ತಿಗಳೂ ಸಾಯುವವರೆಗೆ ಹಿಂಬಾಲಿಸಿಕೊಂಡು ಆ ಸಮುದಾಯದಲ್ಲಿ ಪ್ರತಿ ವಯಸ್ಸಿನಲ್ಲಿ ಮರಣಹೊಂದಿದ ವ್ಯಕ್ತಿಗಳ ಸಂಖ್ಯೆಯ ಆಧಾರದ ಮೇಲೆ ಪ್ರತಿ ವಯೋಮಿತಿಯಲ್ಲಿ ಮರಣಹೊಂದುವ ಸಂಭಾವ್ಯತೆಯ ಗಣನೆ; ಹೀಗೆ ದೊರೆತ ಸಂಭಾವ್ಯತೆಗಳನ್ನು ಬಳಸಿಕೊಂಡು ಜೀವಕೋಷ್ಟಕಗಳ ನಿರ್ಮಾಣ. ಇಂಥ ಕೋಷ್ಟಕಗಳಿಗೆ ಸಮುದಾಯ ಅಥವಾ ಜನಾಂಗ ಜೀವಕೋಷ್ಟಕಗಳೆಂದು ಹೆಸರು.

ಒಂದು ವರ್ಷದಲ್ಲಿಯ ಮರಣಗಳನ್ನು ವಯೋಮಾನಕ್ಕೆ ಅನುಗುಣವಾಗಿ ವರ್ಗೀಕರಿಸಿ ಆ ವಿತರಣೆಯ ಆಧಾರದ ಮೇಲೆ ಜೀವಿತೋತ್ತರ ಸಂಭಾವ್ಯತೆಗಳ ಗಣನೆಮಾಡಿ

ಜೀವಕೋಷ್ಟಕಗಳ ರಚನೆ ಎರಡನೆಯ ಪ್ರರೂಪವಾಗುತ್ತದೆ. ಇದಕ್ಕೆ ಚಾಲ್ತಿ ಜೀವಕೋಷ್ಟಕ (ಕರೆಂಟ್ ಲೈಫ್ ಟೇಬಲ್) ಎಂದು ಹೆಸರು.

ಸಮುದಾಯ ಜೀವಕೋಷ್ಟಕಕ್ಕೆ ನೂರಾರು ವರ್ಷಗಳ ದಾಖಲೆಗಳು ಅವಶ್ಯ ಎನ್ನುವುದು ಸ್ಪಷ್ಟ. ಆದ್ದರಿಂದ ಸಾಮಾನ್ಯವಾಗಿ ಪ್ರಚಾರದಲ್ಲಿರುವುದು ಚಾಲ್ತಿ ಜೀವಕೋಷ್ಟಕಗಳೇ. ಇವುಗಳಲ್ಲಿ ಬೇರೆಬೇರೆ ಸಮುದಾಯಗಳ ಅನುಭವವಿರುವುದರಿಂದ ಇವನ್ನು ಯಾವ ಸಮುದಾಯದ ಅನುಭವವೆಂದೂ ಹೇಳಲಾಗುವುದಿಲ್ಲ. ಆದರೆ ಈ ಕೋಷ್ಟಕಗಳು ಒಂದು ಕಾಲದ ಸರಾಸರಿ ಮರಣ ಪರಿಸ್ಥಿತಿಯನ್ನು ಸಾರಾಂಶ ರೂಪದಲ್ಲಿ ಸೂಚಿಸುತ್ತವೆ. ಆದ್ದರಿಂದಲೇ ಇವುಗಳ ಬಳಕೆ ಹೆಚ್ಚು.

ಜೀವಕೋಷ್ಟಕಗಳು ಕೊಡುವ ವಿವರಣೆಗಳ ಮೇಲೆಯೂ ಅವನ್ನು ವಿಭಾಗಿಸುವುದುಂಟು. ಜೀವನದ ಒಂದೊಂದು ವರ್ಷಕ್ಕೂ ವಿವರಗಳನ್ನು ಒದಗಿಸುವ ಕೋಷ್ಟಕಗಳಿಗೆ ಪೂರ್ಣ ಜೀವಕೋಷ್ಟಕಗಳೆಂದೂ ವಯೋಮಾನ ಸಮೂಹಗಳಿಗೆ ಮಾತ್ರ ವಿವರಗಳನ್ನು ಒದಗಿಸುವ ವ್ಯವಸ್ಥೆಗೆ ಸಂಕ್ಷಿಪ್ತ ಜೀವಕೋಷ್ಟಕಗಳೆಂದೂ ಹೆಸರು. ಈ ಎರಡು ರೀತಿಯ ಕೋಷ್ಟಕನಿರ್ಮಾಣ ಪದ್ಧತಿಯಲ್ಲಿ ತತ್ತ್ವತಃ ವ್ಯತ್ಯಾಸವಿರುವಂತೆ ಕಂಡುಬರುವುದಿಲ್ಲ.

ಕೋಷ್ಟಕನಿರ್ಮಾಣದಲ್ಲಿಯ ಮೂಲಕಲ್ಪನೆಗಳು: ಜೀವಕೋಷ್ಟಕವೆಂದರೆ ಅದೊಂದು ಏಕಕಾಲಕ್ಕೆ ಜನಿಸಿದ ಕಾಲ್ಪನಿಕ ಸಮುದಾಯವೊಂದರ ಜೀವನಚರಿತ್ರೆ. ಈ ಚರಿತ್ರೆ ಸಮುದಾಯದ ಪ್ರತಿಯೊಂದು ವ್ಯಕ್ತಿಯನ್ನೂ ಅದರ ಜನನದಿಂದ ಮರಣದವರೆಗೆ ಸಮೀಕ್ಷಿಸುತ್ತದೆ. ಅದಕ್ಕೆ ಬೇಕಾದ ಮೂಲಕಲ್ಪನೆಗಳನ್ನು ಕೆಳಗಿನಂತೆ ಸಂಗ್ರಹಿಸಬಹುದು: ವೀಕ್ಷಿಸುವ ಸಮುದಾಯ ಮರಣದಿಂದ ಮಾತ್ರ ಕಿರಿದಾಗುತ್ತ ಹೋಗುತ್ತದೆ. ಅಂದರೆ ಜನವಲಸೆಯಿಂದಾಗಿ ಅದು ವ್ಯತ್ಯಾಸವಾಗುವುದಿಲ್ಲ. ಸಮುದಾಯದಲ್ಲಿನ ವ್ಯಕ್ತಿಗಳು ಮೊದಲೇ ಗಣಿಸಿದ ಜೀವಿತೋತ್ತರ ಸಂಭಾವ್ಯತೆಗಳ ರೀತಿಯಲ್ಲಿ ಮರಣಹೊಂದುತ್ತಾರೆ. ಅಲ್ಲದೆ ಆ ಸಂಭಾವ್ಯತೆಗಳು ವ್ಯತ್ಯಾಸವಾಗುವುದಿಲ್ಲ. ಸಮುದಾಯ ಒಂದು ನಿರ್ದಿಷ್ಟವಾದ ಶಿಷ್ಟ ಜನನಸಂಖ್ಯೆಯಿಂದ (ಸ್ಟ್ಯಾಂಡರ್ಡ್ ನಂಬರ್ ಆಫ್ ಬರ್ತ್ಸ್) ತನ್ನ ಜೀವನಚರಿತ್ರೆಯನ್ನು ಪ್ರಾರಂಭಿಸುತ್ತದೆ. ಈ ಶಿಷ್ಟ ಜನನ ಸಂಖ್ಯೆಯನ್ನು 1000, 10,000, 100,000 ಎಂದು ಇಟ್ಟು ಕೊಳ್ಳುವುದು ರೂಢಿ. ಇದಕ್ಕೆ ರಾಡಿಕ್ಸ್ ಎಂದು ಹೆಸರು. ಹೀಗೆ ಶಿಷ್ಟ ಜನನ ಸಂಖ್ಯೆಯಿಂದ ಪ್ರಾರಂಭಿಸುವುದು ತುಲನಾತ್ಮಕ ವಿವೇಚನೆಗೆ ಹೆಚ್ಚು ಸಹಾಯಕವಾಗುತ್ತದೆ. ಮೊದಲ ಕೆಲವು ವಯೋಮಿತಿಯ ವರ್ಷಗಳನ್ನುಳಿದು ಉಳಿದೆಲ್ಲ ವರ್ಷಗಳಲ್ಲಿ ಒಂದು ಜನ್ಮದಿವಸದಿಂದ ಮುಂದಿನ ಜನ್ಮದಿವಸದವರೆಗೆ ಮರಣಗಳು ಸಮಸಮವಾಗಿ ಹರಡಿವೆ. ಸಮುದಾಯ ಸಾಮಾನ್ಯವಾಗಿ ಸ್ತ್ರೀಯರನ್ನೇ ಅಥವಾ ಪುರುಷರನ್ನೇ ಒಳಗೊಂಡಿರುತ್ತದೆ.

ಕಾಲ್ಪನಿಕ ಜನಸಂಖ್ಯೆಯಲ್ಲಿ ಒಟ್ಟು ಮರಣಗಳ ಸಂಖ್ಯೆ ಜನನ ಸಂಖ್ಯೆಗೆ ಸಮವಾಗಿರುತ್ತದೆ. ಜನನ ದರ ಮತ್ತು ಮರಣ ದರಗಳೆರಡೂ ಒಂದೇ ಆಗಿರುವುದು ಇದರ ಕಾರಣ. ಅದ್ದರಿಂದ ಜನಸಂಖ್ಯಾ ಬೆಳೆವಣಿಗೆಯ ದರ ಸೊನ್ನೆ. ಇಂಥ ಜನಸಂಖ್ಯೆಗೆ ಸ್ತಬ್ಧ ಜನಸಂಖ್ಯೆ ಎಂದೂ ಜೀವಕೋಷ್ಟಕ ಜನಸಂಖ್ಯೆ ಎಂದೂ ಹೇಳುತ್ತಾರೆ.

ಜೀವಕೋಷ್ಟಕವನ್ನು ನಿರ್ಮಿಸುವ ವಿಧಾನಗಳು: ಜೀವಕೋಷ್ಟಕ ನಿರ್ಮಾಣದಲ್ಲಿ ಜೀವಿತೋತ್ತರ ಸಂಭಾವ್ಯತೆಗಳ ಗಣನೆ ಬಲು ಮುಖ್ಯ. ಅದಕ್ಕಾಗಿ ಉಪಯೋಗಿಸುವ ಅಂಕಿ ಅಂಶಗಳನ್ನು ಆಧರಿಸಿ ಗಣನೆಯ ವಿಧಾನಗಳು ಬದಲಾಗುತ್ತದೆ. ಜೀವಿತೋತ್ತರ ಸಾಂಭಾವ್ಯತೆಗಳು ದೊರೆತ ಬಳಿಕ ಉಳಿದ ವಿವರಗಳನ್ನು ಸುಲಭವಾಗಿ ಗಣಿಸಬಹುದು. ಜೀವಕೋಷ್ಟಕ ನಿರ್ಮಾಣ ವಿಧಾನಗಳನ್ನು ಮುಂದೆ ವಿವರಿಸಿದೆ:

ಜನನ ಮರಣ ದಾಖಲೆಗಳ ಮೇಲೆ ಆಧಾರಿತವಾದುದು: ಈ ಪದ್ಧತಿಯಲ್ಲಿ ವಯೋಮಿತಿಯನ್ನು ಅನುಸರಿಸಿ ಮರಣಗಳನ್ನು ವರ್ಗೀಕರಿಸಿದ್ದರೆ ಅವುಗಳ ಸಹಾಯದಿಂದ ಇಡೀ ಜೀವನದ ಪ್ರತಿ ವರ್ಷದಲ್ಲಿ ಅಥವಾ ವರ್ಷಸಮೂಹದಲ್ಲಿ ಮರಣಹೊಂದುವ ಸಂಭಾವ್ಯತೆಯನ್ನು ಕಂಡುಹಿಡಿದುಕೊಂಡು ಆ ಸಂಭಾವ್ಯತೆಗಳನ್ನು ಉಪಯೋಗಿಸಿಕೊಂಡು ಜೀವಕೋಷ್ಟಕವನ್ನು ನಿರ್ಮಿಸುತ್ತೇವೆ. ಇದು ಪ್ರಾಚೀನ ಪದ್ಧತಿ. ಇದರಲ್ಲಿ ವಲಸೆಯಿಂದಾಗಿ ಜನಸಂಖ್ಯೆ ವ್ಯತ್ಯಾಸಗೊಳ್ಳುತ್ತಿಲ್ಲವೆಂದು ಅಂಗೀಕರಿಸಿಕೊಂಡಂತಾಗುತ್ತದೆ. ಈ ವಿಧಾನವನ್ನು ಗ್ರಾಂಟ್ ಹಾಗೂ ಹ್ಯಾಲಿ ಬಳಸಿದ್ದಾರೆ. ಜನನ ಮರಣ ದಾಖಲೆಗಳು ಅನೇಕ ಸಲ ದೋಷಯುಕ್ತವಾಗಿರುತ್ತವಾದ್ದರಿಂದ ಈ ವಿಧಾನ ಅಷ್ಟು ರೂಢಿಯಲ್ಲಿಲ್ಲ.

ಜನಗಣತಿಯ ಮೇಲೆ ಆಧಾರಿತವಾದುದು: ಎರಡು ಜನಗಣತಿಯ ಅಂಕಿ ಅಂಶಗಳು ತಿಳಿದಿದ್ದರೆ ಮೊದಲನೆಯ ಜನಗಣತಿಯಲ್ಲಿ ಒಂದು ವಯೋಮಿತಿಯಲ್ಲಿ ಗಣಿಸಲ್ಪಟ್ಟು ಎರಡನೆಯ ಜನಗಣತಿಯವರೆಗೆ ಬದುಕಿ ಉಳಿದವರು ಆ ವೇಳೆಗೆ ಜನಗಣತಿಗಳ ನಡುವಿನ ವರ್ಷಗಳಷ್ಟು ದೊಡ್ಡವರಾಗಿರುತ್ತಾರೆ. ಆದ್ದರಿಂದ ಎರಡು ಜನಗಣತಿಗಳಲ್ಲಿನ ವಯೋಮಿತಿ ವಿತರಣೆಯ ಆಧಾರದ ಮೇಲೆ ಬೇರೆಬೇರೆ ವಯಸ್ಸಿನ ಜನಗಣತಿಯ ಮಧ್ಯಾಂತರ ವರ್ಷಕಾಲ ಬದುಕಿರಬಹುದಾದ ಸಂಭಾವ್ಯತೆಗಳನ್ನು ಕಂಡುಹಿಡಿಯಬಹುದು.

ಜನನ ಮರಣ ದಾಖಲೆಗಳ ಮೇಲೂ ಜನಗಣತಿಯ ಮೇಲೂ ಆಧಾರಿತವಾದುದು: ಈ ವಿಧಾನದಲ್ಲಿ ಪ್ರಸ್ತುತ ವರ್ಷದಲ್ಲಿಯ ಮರಣಗಳನ್ನು ವಯೋಮಿತಿಗೆ ಅನುಸಾರವಾಗಿ ವರ್ಗೀಕರಿಸಿ ಅದೇ ವರ್ಷದಲ್ಲಿ ಸರಾಸರಿಯಾಗಿ ಆ ವಯೋಮಿತಿಯಲ್ಲಿರುವ ಜನಸಂಖ್ಯೆಯನ್ನು ಜನಗಣತಿಗಳ ಆಧಾರದ ಮೇಲೆ ಕಂಡುಹಿಡಿದು ವಯೋಮಿತಿ ವಿಶಿಷ್ಟ ಮರಣದರಗಳನ್ನು ಗಣಿಸುತ್ತಾರೆ. ಈ ಮರಣದರಗಳಿಂದ ಮರಣ ಸಂಭಾವ್ಯತೆಗಳನ್ನು ಕಂಡುಹಿಡಿದು ಜೀವಕೋಷ್ಟಕವನ್ನು ನಿರ್ಮಿಸುತ್ತಾರೆ.

ಸಂಕ್ಷಿಪ್ತ ಜೀವಕೋಷ್ಟಕಗಳು: ಜೀವಕೋಷ್ಟಕವನ್ನು ನಿರ್ಮಿಸಲು ಬೇಕಾದ ವಿವರಗಳು ವಯಸ್ಸಿನ ಪ್ರತಿಯೊಂದು ವರ್ಷಕ್ಕೆ ದೊರೆಯದ್ದರಿಂದ ಮತ್ತು ಪ್ರಜಾಶಾಸ್ತ್ರಾಧ್ಯಯನದಲ್ಲಿ ಬಹಳ ಸಲ ವಯೋಮಿತಿ ಸಮುದಾಯಗಳನ್ನೇ ಬಳಸುವುದು ಅನುಕೂಲವಾದ್ದರಿಂದ ಪೂರ್ಣ ಜೀವಕೋಷ್ಟಕವನ್ನು ನಿರ್ಮಿಸುವ ಬದಲು ಅನೇಕ ಸಲ ಸಂಕ್ಷಿಪ್ತ ಜೀವಕೋಷ್ಟಕವನ್ನಷ್ಟೆ ಸಿದ್ಧಪಡಿಸುವುದು ರೂಢಿ. ಇದಕ್ಕಾಗಿ ಸುಲಭ ಮಾರ್ಗಗಳನ್ನು ಕಂಡುಹಿಡಿಯಲಾಗಿದೆ. ಇವುಗಳ ಪೈಕಿ ರೀಡ್–ಮೆರೆಲ್ ವಿಧಾನ ಮತ್ತು ಗ್ರೆವಿಲ್ಲನ ವಿಧಾನ–ಇವೆರಡು ಹೆಚ್ಚು ಬಳಕೆಯಲ್ಲಿವೆ. ವಯೋಮಿತಿ ಸಮುದಾಯಗಳಿಗೆ ಮರಣದರಗಳು ತಿಳಿದಿದ್ದಾಗ ಅವನ್ನು ಉಪಯೋಗಿಸಿ ಜೀವಿತೋತ್ತರ ಸಂಭಾವ್ಯತೆಗಳನ್ನು ಕಂಡುಹಿಡಿಯುವ ಸೂತ್ರಗಳನ್ನು ಅವರು ಕೊಟ್ಟಿದ್ದಾರೆ. ರೀಡ್–ಮೆರೆಲ್‌ರು ಮರಣದರಗಳಿಗೆ ಮರಣ ಸಂಭಾವ್ಯತೆಗಳನ್ನು ಒದಗಿಸುವ ಕೋಷ್ಟಕಗಳನ್ನು ತಯಾರಿಸಿದ್ದಾರೆ. ಜೀವಕೋಷ್ಟಕದ ಇತರ ಕಲಮುಗಳನ್ನು ಗಣನೆ ಮಾಡಲು ಸೂತ್ರಗಳು ವಿವರಿಸಲ್ಪಟ್ಟಿವೆ. ಆದರೆ ತತ್ತ್ವತಃ ಸಂಕ್ಷಿಪ್ತ ಜೀವಕೋಷ್ಟಕ ನಿರ್ಮಾಣ ಪೂರ್ಣ ಜೀವಕೋಷ್ಟಕ ನಿರ್ಮಾಣದಲ್ಲಿಯ ತತ್ತ್ವಗಳನ್ನೆ ಒಳಗೊಂಡಿದೆ. ಸಂಕ್ಷಿಪ್ತ ಜೀವಕೋಷ್ಟಕಗಳನ್ನು ನಿರ್ಮಿಸಲು ಜಾರ್ಜ್‌ಕಿಂಗನ ಪದ್ಧತಿ, ಆದರ್ಶಕೋಷ್ಟಕದ ದರಗಳನ್ನು ವೀಕ್ಷಿತ ದರಗಳೊಡನೆ ತುಲನೆ ಮಾಡುವ ಪದ್ಧತಿ ಮುಂತಾದವು ಬಳಕೆಯಲ್ಲಿವೆ.

ಜೀವಕೋಷ್ಟಕಗಳ ಉಪಯೋಗ: ಜೀವಕೋಷ್ಟಕ ಒಂದು ಜನಾಂಗದಲ್ಲಿಯ ಮರಣ ಪರಿಸ್ಥಿತಿಯನ್ನು ಸೂಚಿಸುತ್ತದೆ. ಆದ್ದರಿಂದ ಮಾನವ ಜೀವಿತದ ಮೇಲೆ ಅವಲಂಬಿತವಾದ ಎಲ್ಲ ಯೋಜನೆಗಳಲ್ಲೂ ಅವನ್ನು ಬಳಸಬೇಕಾಗುತ್ತದೆ. ಉದಾಹರಣೆಗೆ ವಿಮಾ ಸಂಸ್ಥೆಯವರಿಗೆ ಈ ಕೋಷ್ಟಕ ಅತ್ಯಗತ್ಯ. ಹಾಗೆಯೇ ರಾಷ್ಟ್ರೀಯ ಜನಸಂಖ್ಯಾ ಮುನ್ನೋಟವನ್ನು ಗಣಿಸಲು ಜೀವಕೋಷ್ಟಕದ ನೆರವು ಬೇಕೇಬೇಕು. ಇದಲ್ಲದೆ ಪ್ರಜಾಶಾಸ್ತ್ರಾಧ್ಯಯನಕ್ಕೆ ಜೀವಕೋಷ್ಟಕ ಅನೇಕ ರೀತಿಗಳಲ್ಲಿ ಉಪಯೋಗವಾಗುತ್ತದೆ. ಸಂತಾನೋತ್ಪತ್ತಿ ಮಾಪನೆಯಲ್ಲಿ, ಅನಾಥಾಶ್ರಮಗಳ ಯೋಜನೆಯಲ್ಲಿ, ವಲಸೆಗಾರರ ಸಂಖ್ಯೆಯನ್ನು ಕಂಡುಹಿಡಿಯುವಲ್ಲಿ, ಅಂಕಿಅಂಶಗಳ ಗುಣದೋಷಗಳನ್ನು ಅರಿಯುವಲ್ಲಿ ಸಹ ಈ ಕೋಷ್ಟಕದ ನೆರವು ಉಂಟು.

ಆಯುರ್ನಿರೀಕ್ಷಾಸೂಚಿ: ಒಂದು ರಾಷ್ಟ್ರದ ಜೀವಕೋಷ್ಟಕವನ್ನು ಆಧರಿಸಿ ಅದರ ಪ್ರಜೆಗಳ ಸರಾಸರಿ ಆಯುಷ್ಯವನ್ನೂ ಪ್ರತಿಯೊಂದು ವಯಸ್ಸಿನಲ್ಲಿನ ಮರಣ ಸಂಭಾವ್ಯತೆಯನ್ನೂ ತಿಳಿಸುವ ಯಾದಿ. ಒಂದು ವರ್ಷ ಗತಿಸಿದ ಮತ್ತು ಅದೇ ವರ್ಷ ಜನಿಸಿದ ಶಿಶುಗಳ ಸಂಖ್ಯೆಗಳ ನಡುವಿನ ನಿಷ್ಪತ್ತಿ ಮೊದಲ ವರ್ಷದ ಶಿಶು ಮರಣದ ಸಂಭಾವ್ಯತೆಯನ್ನು ನೀಡುತ್ತದೆ. ಇದರಿಂದ ಮೊದಲ ವರ್ಷದ ಶಿಶುಗಳ ಆಯುರ್ನಿರೀಕ್ಷಾಸೂಚಿಯನ್ನೂ ತಯಾರಿಸಿಕೊಳ್ಳಬಹುದು. ಇದೇ ಪ್ರಕಾರ ಒಂದು ವರ್ಷ ಯಾವುದೇ ನಿರ್ದಿಷ್ಟ ವಯೋಮಿತಿಯಲ್ಲಿ ಅಳಿದವರ ಹಾಗೂ ಇದ್ದವರ ಸಂಖ್ಯೆಗಳ ನಡುವಿನ ನಿವೃತ್ತಿಯಿಂದ ಆ ವಯಸ್ಸಿನ ವ್ಯಕ್ತಿಗಳ ಆಯುರ್ನಿರೀಕ್ಷಾಸೂಚಿಯನ್ನು ತಯಾರಿಸಬಹುದು.

ಪ್ರಜೆಗಳಲ್ಲಿ ಆಗತಾನೇ ಹುಟ್ಟಿದ ಶಿಶುವಿನಿಂದ ಹಿಡಿದು ನೂರು ವರ್ಷಕ್ಕೂ ಮೇಲ್ಪಟ್ಟು ಬದುಕಿ ಬಾಳುವವರು ಇದ್ದೇ ಇರುತ್ತಾರೆ. ಪ್ರತಿ ವಯಸ್ಸಿನವರಿಗೂ ಒಂದು ನಿರ್ದಿಷ್ಟವಾದ ಮರಣಪ್ರಮಾಣವಿರುತ್ತದೆ. ಉದಾಹರಣೆಗೆ, ಭಾರತದಲ್ಲಿ ಒಂದು ವರ್ಷದಲ್ಲಿ ಒಂದು ಸಾವಿರ ಜನನಗಳಾದರೆ ಆ ವರ್ಷದ ಕೊನೆಯಲ್ಲಿ ಸುಮಾರು ನೂರು ಶಿಶುಗಳು ಅಸುನೀಗಿರುತ್ತವೆ. ಇದು ಶಿಶುಮರಣಪ್ರಮಾಣ. ಇದೇ ರೀತಿ ಪ್ರತಿ ವಯಸ್ಸಿನವರಿಗೂ ಒಂದು ನಿರ್ದಿಷ್ಟವಾದ ಮರಣಪ್ರಮಾಣ ಉಂಟು. ನಿಗದಿಯಾದ ಒಂದು ಅವಧಿಯಲ್ಲಿ ಆಯಾ ವಯಸ್ಸಿಗೆ ತಕ್ಕಂತೆ ಮರಣಪ್ರಮಾಣದ ಪ್ರಕಾರ ಎಷ್ಟು ಮಂದಿ ಅಸು ನೀಗುತ್ತಾರೆ ಎಂಬುದನ್ನು ಗಣನೆಗೆ ತಂದುಕೊಂಡು ಕೊನೆಯ ವ್ಯಕ್ತಿ ಸಾಯುವತನಕ ಈ ಕ್ರಮವನ್ನು ಅನುಸರಿಸಿ ಪ್ರಜೆಗಳೆಲ್ಲರೂ ಯಾವ ರೀತಿಯ ವಿಪತ್ತಿಗೊಳಗಾಗುತ್ತಾರೆ ಎಂಬುದನ್ನು ತಿಳಿಸುವ ಯಾದಿಯೇ ಆಯುರ್ನಿರೀಕ್ಷಾಸೂಚಿ.

ಪ್ರತಿಬಾರಿ ಜನಗಣತಿಯಾದ ಬಳಿಕ (ಹತ್ತು ವರ್ಷಕ್ಕೊಮ್ಮೆ) ಈ ಆಯುರ್ನಿರೀಕ್ಷಾ ಸೂಚಿಗಳನ್ನು ತಜ್ಞರು ಸಿದ್ಧಗೊಳಿಸುವುದು ವಾಡಿಕೆ. ಇದನ್ನು ಸಿದ್ಧಗೊಳಿಸಲು ಹಿಂದಿನ ಹತ್ತು ವರ್ಷಗಳಿಗೆ ಅನ್ವಯಿಸುವ ಮರಣ ಪ್ರಮಾಣಗಳೇ ಆಧಾರ. ಈ ಸೂಚಿಯನ್ನು ಸಿದ್ಧಗೊಳಿಸುವಲ್ಲಿನ ತಾತ್ತ್ವಿಕ ಹಿನ್ನೆಲೆ ಇಷ್ಟು: ಒಂದೇ ದಿನ ಹುಟ್ಟಿದ 100,000 ಶಿಶುಗಳಿಂದ

ಪ್ರಾರಂಭಮಾಡಿ, ಪ್ರತಿವಯಸ್ಸಿನ ಮರಣಪ್ರಮಾಣದ ಪ್ರಕಾರ ಸಾಯುವವರೆಷ್ಟು, ಉಳಿಯುವವರೆಷ್ಟು ಎಂಬುದನ್ನು ಕೊನೆಯ ವ್ಯಕ್ತಿ ಇರುವ ತನಕ ಲೆಕ್ಕ ಹಾಕುತ್ತ ಹೋಗುತ್ತಾರೆ. ಸಾಮಾನ್ಯವಾಗಿ ಪುರುಷರಿಗೆ ಹಾಗೂ ಸ್ತ್ರೀಯರಿಗೆ ಪ್ರತ್ಯೇಕವಾದ ಸೂಚಿಗಳಿರುತ್ತವೆ. (ಎನ್.ಎಲ್.)

**ಜೀವಗೋಳ:** ಜೀವಿಗಳು ವಾಸ ಮಾಡುವ ಭೂಮಿಯ ಹೊರ ಪದರ ಮತ್ತು ವಾತಾವರಣದ ಒಂದು ಭಾಗ. ಜೀವಮಂಡಲದ ಕಲ್ಪನೆಯನ್ನು ಪ್ರಥಮಬಾರಿಗೆ ಸೂಚಿಸಿದವರು ಆಸ್ಟ್ರಿಯ ದೇಶದ ಭೂಗರ್ಭ ವಿಜ್ಞಾನಿ ಎಡ್ವರ್ಡ್ ಸುಯೆಸ್. ಇವರು ಸೂಚಿಸಿದ ಸಂದರ್ಭದಲ್ಲಿ ಇದಕ್ಕೆ ಅಷ್ಟೊಂದು ಪುರಸ್ಕಾರ ದೊರೆಯಲಿಲ್ಲ. ಇಂದು ಜೀವಿಗಳ ಅಳಿವು ಉಳಿವುಗಳನ್ನು ಕುರಿತು ಮಾನವನು ಚಿಂತಿಸುತ್ತಿರುವ ಸಂದರ್ಭದಲ್ಲಿ ಜೀವರಾಶಿಗಳ ಆವಾಸಸ್ಥಾನವಾಗಿರುವ ಜೀವಗೋಳದ ವ್ಯವಸ್ಥೆಯನ್ನು ಕುರಿತ ಶಾಸ್ತ್ರೀಯ ಅಭ್ಯಾಸ ಅಗತ್ಯವಾಗಿದೆ.

ಇದು ಅತಿ ದೊಡ್ಡ ಜೈವಿಕ ವ್ಯವಸ್ಥೆಯಾಗಿದ್ದು ಎಲ್ಲ ಜೈವಿಕ ಮತ್ತು ಅಜೈವಿಕ ಅಂಶಗಳನ್ನು ಒಳಗೊಳ್ಳುತ್ತದೆ. ಹೀಗಾಗಿ ಜೀವಗೋಳವನ್ನು ನೀರು, ಗಾಳಿ ಮತ್ತು ನೆಲಗಳ ಜೊತೆಗೆ ಒಟ್ಟುಗೂಡಿ ವಾಸಿಸುವ ಜೀವಿಗಳ ಗೋಳ ಎಂದು ಕೆಲವೊಮ್ಮೆ ನಿರೂಪಿಸುವುದುಂಟು. ಜೀವಗೋಳದ ಪ್ರತಿಯೊಂದು ಘಟಕಕ್ಕೂ ಕೆಲವು ನಿರ್ದಿಷ್ಟ ಕ್ರಿಯೆಗಳಿವೆ. ಈ ಎಲ್ಲ ಕ್ರಿಯೆಗಳೂ ಒಟ್ಟಾಗಿ ಜೀವಗೋಳಕ್ಕೆ ಒಂದು ಕ್ರಿಯಾರೂಪವನ್ನು ಕೊಡುತ್ತವೆ.

ಜೀವಗೋಳವನ್ನು ಕುರಿತು ವಿವಿಧ ವಿದ್ವಾಂಸರು, ವಿಜ್ಞಾನಿಗಳು ತಮ್ಮ ತಮ್ಮ ವ್ಯಾಖ್ಯೆಗಳನ್ನು ಮಂಡಿಸಿದ್ದಾರೆ.

ಮಾಂಕ್ ಹೌಸ್ (1970) ಅವರ ವ್ಯಾಖೆ: ಭೂಮಿಯ ಮೇಲ್ಮೈ ಮತ್ತು ಅದನ್ನು ಪೊರೆಯಂತೆ ಆವರಿಸಿರುವ ವಾಯುಮಂಡಲವನ್ನೊಳಗೊಂಡಂತೆ ಜೀವಿಗಳು ಅಸ್ತಿತ್ವವನ್ನು ಹೊಂದಿರುವ ವಲಯವೇ ಜೀವಗೊಳ. ಲಾಂಗ್‌ಮನ್ ನಿಘಂಟು ನೀಡುವಂತೆ ಜೀವಿಗಳು ವಾಸಿಸುವ ಪೃಥ್ವಿಯ ಚಿಪ್ಪು ಮತ್ತು ವಾಯುಮಂಡಲದ ಭಾಗ ವೆಬ್‌ಸ್ಟರ್ ನಿಘಂಟಿನಲ್ಲಿ ಶಿಲಾಗೋಳ, ಜಲಗೋಳ ಮತ್ತು ವಾಯುಗೋಳದಲ್ಲಿ ಬದುಕುತ್ತಿರುವ ಜೀವಿಗಳ ವಲಯವೇ ಜೀವಮಂಡಲ ಎಂದು ವ್ಯಾಖ್ಯಾನಿಸಲಾಗಿದೆ.

ಈ ಮೇಲಿನ ವ್ಯಾಖ್ಯಾನಗಳು ಕೇವಲ ವಾಯುಮಂಡಲದ ವ್ಯಾಪ್ತಿಯನ್ನು ಮಾತ್ರ ಸೂಚಿಸುತ್ತವೆಯೇ ಹೊರತು ಅದರ ರಚನೆ ಮತ್ತು ಕ್ರಿಯಾ ತಂತ್ರಗಳನ್ನು ತಿಳಿಸುವಲ್ಲಿ ವಿಫಲವಾಗಿವೆ. ಜೀವ ಗೋಳದ ರಚನೆ ಮತ್ತು ಕ್ರಿಯಾತಂತ್ರಗಳನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಕೆಲವು ಪರಿಕಲ್ಪನೆಗಳನ್ನು ತಿಳಿಯುವುದು ಅಗತ್ಯ.

ಒಂದು ನಿರ್ದಿಷ್ಟ ಪ್ರದೇಶದಲ್ಲಿರುವ ಯಾವುದೇ ಪ್ರಭೇದವೊಂದರ ಸಂಖ್ಯೆ ಅದರ ಜೀವಿ ಸಾಂದ್ರತೆ ಆಗುತ್ತದೆ.(ಉದಾ: ಮಾನವನ ಸಂಖ್ಯೆ) ನಿರ್ದಿಷ್ಟ ಪ್ರದೇಶದಲ್ಲಿರುವ ಬೇರೆ ಬೇರೆ ಜೀವಿಗಳ ಸಾಂದ್ರತೆ ಸೇರಿ ಅಲ್ಲಿನ ಸಮುದಾಯವಾಗುತ್ತದೆ(ಕಮ್ಯೂನಿಟಿ). ಪ್ರಾಣಿ ಮತ್ತು ಸಸ್ಯ ಸಮುದಾಯಗಳು ಮತ್ತು ಅವುಗಳ ಭೌತಿಕ ಪರಿಸರ ಪರಸ್ಪರ ಕ್ರಿಯೆಗಳ ಮೂಲಕ ಒಂದೇ ಕಾರ್ಯಘಟಕದಂತಿರುತ್ತವೆ. ಹೀಗೆ ಜೈವಿಕ ಮತ್ತು ನಿರ್ಜೀವ ಘಟಕಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಪರಸ್ಪರ ಪ್ರಕ್ರಿಯೆ ನಡೆಸುವುದನ್ನು ಪರಿಸರ ವ್ಯವಸ್ಥೆ (ಇಕೋ ಸಿಸ್ಟಂ) ಎಂದು ಕರೆಯುತ್ತಾರೆ. (ಉದಾ: ಕೆರೆ, ಸರೋವರ/ಕಾಡು) ಪರಿಸರ ವ್ಯವಸ್ಥೆ ಜೀವಮಂಡಲದ ಒಂದು ಕಾರ್ಯ ಘಟಕ, ಕೆರೆಗಳು ಮತ್ತು ಸರೋವರಗಳ ಜಲಪರಿಸರ ವ್ಯವಸ್ಥೆಗಳು (ಅಕ್ವೆಟಿಕ್ ಇಕೋ ಸಿಸ್ಟಂ) ಮತ್ತು ಕಾಡುಗಳು ಒಂದು ಭೂಪರಿಸರ ವ್ಯವಸ್ಥೆ. ದೊಡ್ಡ ಭೌಗೋಳಿಕ ಪ್ರದೇಶದಲ್ಲಿರುವ ಬೃಹತ್ ಜೀವಿ ಸಮುದಾಯಗಳು ಅಥವಾ ಪರಿಸರ ವ್ಯವಸ್ಥೆಗಳನ್ನು ಜೀವಸಮೂಹಗಳೆಂದು ಕರೆಯುತ್ತಾರೆ. (ಉದಾ: ಮರುಭೂಮಿ ಜೀವ ಸಮೂಹ ಉಷ್ಣವಲಯದ ಮಳೆಕಾಡುಗಳು)

ಭೂಮಿಯ ಎಲ್ಲ ಜೀವಿ ಸಮುದಾಯಗಳೂ ಪರಸ್ಪರ ಸಂಬಂಧಗಳನ್ನು ಪಡೆದಿವೆ. ಅವು ಒಂದು ದೊಡ್ಡ ಘಟಕದಂತೆ ಪರಸ್ಪರ ಪ್ರತಿಕ್ರಿಯಿಸಿ ಬೃಹತ್ತಾದ, ಸ್ವಪ್ರೇರಿತ ಜೀವಗೋಳವನ್ನು ರೂಪಿಸುತ್ತವೆ. ಇದರಲ್ಲಿ ಎಲ್ಲ ಜೀವಿ, ಸೂಕ್ಷ್ಮ ಜೀವಿ ಸಸ್ಯ, ಪ್ರಾಣಿ ಮತ್ತು ಮಾನವ ಜೊತೆಜೊತೆಗೆ ಇವೆ. (ಕೆ.ಎಸ್.)

**ಜೀವನಮಟ್ಟ:** ಒಬ್ಬ ವ್ಯಕ್ತಿ, ಕುಟುಂಬ ಅಥವಾ ಇಡೀ ರಾಷ್ಟ್ರಕ್ಕೆ ಲಭ್ಯವಿರುವ ಅನುಭೋಗಸರಕುಗಳ ಬಗೆ ಮತ್ತು ಪರಿಮಾಣ ಎಂಬುದು ಜೀವನಮಟ್ಟದ ಸಾಮಾನ್ಯ ಅರ್ಥ. ಇವು ಯಾರಿಗೆ ಧಾರಾಳವಾಗಿ ಲಭ್ಯವಿವೆಯೋ ಅಂಥವರ ಜೀವನಮಟ್ಟ ಉನ್ನತವಾದದ್ದೆಂದು ಭಾವಿಸಲಾಗುತ್ತದೆ. ಆದರೆ ಸಮಾಜವಿಜ್ಞಾನದಲ್ಲಿ ಇದನ್ನು ಇನ್ನೂ ವಿಸ್ತಾರವಾದ ಅರ್ಥದಲ್ಲಿ ಪ್ರಯೋಗಿಸಲಾಗಿದೆ. ಇದು ಅನುಭೋಗಸರಕುಗಳ ಬಳಕೆಯ ಪರಿಮಾಣವನ್ನಲ್ಲದೆ ವಿರಾಮಕಾಲಾವಧಿ, ಕೆಲಸದ ಪರಿಸ್ಥಿತಿ, ಉದ್ಯೋಗ ಮತ್ತು ಸರಕುಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ–ಇವೆಲ್ಲವನ್ನೂ ಒಳಗೊಳ್ಳುತ್ತದೆ. ಒಬ್ಬ ವ್ಯಕ್ತಿಗೆ ಅಥವಾ ಒಂದು ಸಮೂಹಕ್ಕೆ ಸರಕು ಸೇವೆಗಳು ಧಾರಾಳವಾಗಿ ಲಭ್ಯವಿರುವುವೆಂಬುದನ್ನು ಮಾತ್ರವಲ್ಲದೆ, ಆ ವ್ಯಕ್ತಿಯ ಅಥವಾ ಸಮೂಹದ ಆಸೆ ಆಕಾಂಕ್ಷೆಗಳು, ಅವುಗಳ ಪೂರೈಕೆಯ ಪ್ರಬಲ ಇಚ್ಛೆಯನ್ನು ಉಂಟುಮಾಡುವಂಥ ಬಯಕೆಗಳು–ಇವುಗಳಿಂದ ವ್ಯಕ್ತಪಡುತ್ತವೆ. ಒಂದು ದೇಶದ ಜೀವನಮಟ್ಟ ಇನ್ನೊಂದು ದೇಶದ್ದಕ್ಕಿಂತ ಮಿಗಿಲಾದುದೆಂದರೆ, ಮೊದಲನೆಯ ದೇಶದ ನಾಗರಿಕ ಎರಡನೆಯ ದೇಶದವನಿಗಿಂತ ಹೆಚ್ಚಿನ ಪ್ರಮಾಣದ ಹಾಗೂ ಹೆಚ್ಚಿನ ಗುಣಮಟ್ಟದ ಸರಕುಗಳನ್ನು ಅನುಭೋಗಿಸುತ್ತಾನಲ್ಲದೆ ಅವನಿಗೆ ಹೆಚ್ಚಿನ ವಿರಾಮ, ಅನುಕೂಲಕರ ಕೆಲಸದ ಪರಿಸ್ಥಿತಿ, ಸರಕು ಮತ್ತು ಉದ್ಯೋಗಗಳನ್ನು ಆರಿಸಿಕೊಳ್ಳುವಲ್ಲಿ ಹೆಚ್ಚಿನ ಸ್ವಾತಂತ್ರ್ಯ ಇದೆ.

ಯಾವುದೇ ರಾಷ್ಟ್ರದ ಪ್ರಚಲಿತ ಪೂರೈಕೆ ಜೀವನಮಟ್ಟವನ್ನು ನಿರ್ಧರಿಸುವ ಅಂಶಗಳು ಅನೇಕ. ರಾಷ್ಟ್ರದ ಆರ್ಥಿಕತೆ ಯಾವ ಹಂತದಲ್ಲಿದೆ ಎಂಬುದು ಮೊದಲನೆಯದು. ಆರ್ಥಿಕ ದೃಷ್ಟಿಯಿಂದ ಹಿಂದುಳಿದ ರಾಷ್ಟ್ರಗಳಲ್ಲಿ ತಲಾ ವರಮಾನ ಹಾಗೂ ವಿರಾಮಗಳನ್ನು ತನ್ನ ನಾಗರಿಕರಿಗೆ ಕೊಡುವ ಸಾಮರ್ಥ್ಯ ಇರುವುದರಿಂದ ಅವುಗಳಲ್ಲಿ ಜೀವನಮಟ್ಟ ಮೇಲಿನದಾಗಿರುತ್ತದೆ. ಎರಡನೆಯದಾಗಿ, ವೈಜ್ಞಾನಿಕ ಬದಲಾವಣೆಗಳ ಪರಣಾಮವಾಗಿ ಅನುಭೋಗಿಗಳ ಬಯಕೆಗಳನ್ನು ನೂತನ ರೀತಿಯಲ್ಲಿ ಇಲ್ಲವೆ ಅಧಿಕ ಮೊತ್ತದಲ್ಲಿ ಪೂರೈಸುವುದು ಸಾಧ್ಯವಾಗುವುದರಿಂದ ಜೀವನಮಟ್ಟ ಉತ್ತಮಗೊಳ್ಳುತ್ತದೆ. ರಾಷ್ಟ್ರೀಯ ಉತ್ಪಾದನ ಸಾಮರ್ಥ್ಯ ಜನಸಂಖ್ಯೆಯ ಬೆಳೆವಣಿಗೆಗಿಂತ ಅಧಿಕ ದರದಲ್ಲಿ ಹೆಚ್ಚಿದ್ದರೆ ಜೀವನಮಟ್ಟದಲ್ಲಿ ಏರಿಕೆ ಉಂಟಾಗುತ್ತದೆ.

ಜೀವನಮಟ್ಟಗಳನ್ನು ಅಳೆದು ಹೋಲಿಸುವ ಕಾರ್ಯ ಸುಲಭವಲ್ಲ. ರಾಷ್ಟ್ರಗಳ ನಡುವಣ, ಒಂದು ರಾಷ್ಟ್ರದಲ್ಲಿಯ ವ್ಯಕ್ತಿಗಳ ನಡುವಣ ಅನುಭೋಗ ವಿನ್ಯಾಸದಲ್ಲಿ ವ್ಯತ್ಯಾಸ ಇರುವುದು ಇದಕ್ಕೆ ಕಾರಣ. ಆದರೂ ಜೀವನಮಟ್ಟವನ್ನು ಸ್ಥೂಲವಾಗಿ ಅರಿತುಕೊಳ್ಳಲು ಅನುಸರಿಸಬಹುದಾದ ಎರಡು ವಿಧಾನಗಳುಂಟು. ಒಂದನೆಯದಾಗಿ, ವಿನಿಯೋಗದ (ಇಲ್ಲವೆ ವರಮಾನದ) ಅನುಪಾತ ಜೀವನಮಟ್ಟದ ಸೂಚಿಯಾದ್ದರಿಂದ, ಒಬ್ಬ ವ್ಯಕ್ತಿಯ ಅಥವಾ ರಾಷ್ಟ್ರದ ಅನುಭೋಗ ವಿನಿಯೋಗದ ಅನುಪಾತವನ್ನು ಕಂಡುಹಿಡಿಯುವುದರ ಮೂಲಕ ಜೀವನಮಟ್ಟವನ್ನು ಅಳೆಯಬಹುದು. ಈ ಕ್ರಮದಿಂದ ಜೀವನಮಟ್ಟವನ್ನು ಸರಿಯಾದ ರೀತಿಯಲ್ಲಿ ಅಳೆಯಬೇಕಾದರೆ ಮುಖ್ಯವಾಗಿ ಎರಡು ಅಂಶಗಳನ್ನು ಗಮನಿಸಬೇಕು : 1. ರಾಷ್ಟ್ರ ರಾಷ್ಟ್ರಗಳ ಮತ್ತು ಪ್ರದೇಶಗಳ ನಡುವೆ ಜೀವನವೆಚ್ಚದಲ್ಲಿ ಇರುವ ವ್ಯತ್ಯಾಸ, 2. ವ್ಯಕ್ತಿಗಳು ತಮ್ಮ ಆದಾಯವನ್ನು ವಿನಿಯೋಗಿಸದೆಯೇ ಪಡೆಯುವಂಥ ಸರಕು ಸೇವೆಗಳ ಸೌಲಭ್ಯಗಳಲ್ಲಿ ಕಂಡುಬರುವ ವ್ಯತ್ಯಾಸ. ಜೀವನಮಟ್ಟವನ್ನು ಅಳೆದು ಹೋಲಿಸುವುದರಲ್ಲಿ ಪ್ರಯೋಗಿಸಬಹುದಾದ ಎರಡನೆಯ ವಿಧಾನವನ್ನು ಎಂಗೆಲನ ನಿಯಮದಿಂದ ರೂಪಿಸಲಾಗಿದೆ. ವ್ಯಕ್ತಿ ಅಥವಾ ರಾಷ್ಟ್ರದ ವರಮಾನ ಹೆಚ್ಚಿದಂತೆ (ಜೀವನಮಟ್ಟ ಏರಿದಂತೆ) ಆಹಾರಕ್ಕಾಗಿ ವಿನಿಯೋಗಿಸಲ್ಪಡುವ ವರಮಾನದ ಅನುಪಾತ ಕಡಿಮೆಯಾಗುತ್ತ ಹೋಗುತ್ತದೆಂದು ಎಂಗೆಲನ ನಿಯಮ ತಿಳಿಸುತ್ತದೆ. ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳಲ್ಲಿ ಆಹಾರಕ್ಕಾಗಿ ವರಮಾನದ ಕಾಲುಭಾಗದಷ್ಟು ವಿನಿಯೋಗವಾದರೆ ಹಿಂದುಳಿದ ರಾಷ್ಟ್ರಗಳಲ್ಲಿ ಮೂರನೆಯ ಎರಡರಷ್ಟು ವಿನಿಯೋಗವಾಗುತ್ತದೆ. ಆಹಾರಕ್ಕಾಗಿ ವಿನಿಯೋಗಿಸಲ್ಪಡುವ ವರಮಾನ ಜೀವನಮಟ್ಟಕ್ಕೆ ವ್ಯಸ್ತಾನುಪಾತದಲ್ಲಿರುತ್ತದೆ. ಒಂದು ಸಮುದಾಯದಲ್ಲಿ ಆಹಾರಕ್ಕಾಗಿ ವಿನಿಯೋಗಿಸಲಾಗುವ ವರಮಾನದ ಅನುಪಾತವನ್ನು ಕಂಡುಹಿಡಿಯುವುದರಿಂದ ಅವರ ಜೀವನಮಟ್ಟವನ್ನು ಅರಿಯಬಹುದು.

ಜೀವನಮಟ್ಟದ ಪ್ರಭಾವ: ಕೆಲವು ಆರ್ಥಿಕ ಅಂಶಗಳು ಜೀವನಮಟ್ಟದಿಂದ ಪ್ರಭಾವಿತಗೊಳ್ಳುವುವು. ಉದಾಹರಣೆಗೆ, ಅಧಿಕ ಜೀವನಮಟ್ಟದ ನಿರೀಕ್ಷೆಯಿಂದಾಗಿ ವ್ಯಕ್ತಿಗಳು ತಮಗೆ ಬೇಡವೆನಿಸಿದ ಕ್ಷೇತ್ರ ಹಾಗೂ ಉದ್ಯೋಗಗಳಿಗೆ ಆಕರ್ಷಿಸಲ್ಪಡುವುದರಿಂದ ಕಾರ್ಮಿಕರ ಪ್ರಾದೇಶಿಕ ಹಾಗೂ ಔದ್ಯೋಗಿಕ ಚಲನೆ ತೀವ್ರಗೊಳ್ಳುತ್ತದೆ. ಆದ್ದರಿಂದ ಕಾರ್ಮಿಕರ ಚಲನೆಯ ಮೇಲೆ ಜೀವನಮಟ್ಟ ಪ್ರಭಾವ ಬೀರುತ್ತದೆ. ಎರಡನೆಯದಾಗಿ ಜೀವನಮಟ್ಟದಿಂದ ಶ್ರಮದ ಸರಬರಾಜಿನ ಮೇಲೆ ಪ್ರಭಾವ ಉಂಟಾಗುತ್ತದೆ. ಜೀವನಮಟ್ಟ ಏರಿದಂತೆ ವ್ಯಕ್ತಿ ವಿರಾಮದತ್ತ ಹೆಚ್ಚು ಒಲವನ್ನು ತೋರಿಸುವುದರಿಂದ ಶ್ರಮದ ಸರಬರಾಜು ಕಡಿಮೆಯಾಗುತ್ತದೆ. ವ್ಯಾಪಾರ ಆವರ್ತಗಳ ಅಧ್ಯಯನದಲ್ಲಿ ಜೀವನಮಟ್ಟದ ಪರಿಕಲ್ಪನೆ ಸಹಾಯವಾಗುತ್ತದೆ. ವ್ಯಾಪಾರ ಆವರ್ತಗಳ ತಿರುವನ್ನು ಅಧ್ಯಯನ ಮಾಡುವಾಗ, ವರಮಾನಗಳಲ್ಲಿ ಏರಿಳಿತಗಳಾದಾಗ ವ್ಯಕ್ತಿಗಳ ಅನುಭೋಗ ಹಾಗೂ ಉಳಿತಾಯ ನಿಷ್ಪತ್ತಿಗಳಲ್ಲಿ ಯಾವ ಬಗೆಯ ವ್ಯತ್ಯಾಸಗಳುಂಟಾಗುತ್ತವೆ, ವರಮಾನ ಇಳಿಯುವ ಪ್ರವೃತ್ತಿಗೆ ಒಳಗಾದಾಗ ಅನುಭೋಗಿಗಳು ಆಸ್ತಿಗಳನ್ನು ಮಾರಿ ತಮ್ಮ ಪಾರಂಪರಿಕ ಅನುಭೋಗ ಮಟ್ಟವನ್ನು ಹೇಗೆ ಉಳಿಸಿಕೊಂಡು ಬರಲು ಯತ್ನಿಸುತ್ತಾರೆ ಎಂಬುದನ್ನು ಅರಿತುಕೊಳ್ಳಬೇಕು. ಇದಕ್ಕೆ ಜೀವನಮಟ್ಟದ ಹಾಗೂ ಅದನ್ನು ನಿರ್ಧರಿಸುವ ಅಂಶಗಳ ಪರಿಚಯ ಅತ್ಯಾವಶ್ಯಕ.

ಜೀವನಮಟ್ಟ ಹಾಗೂ ಜನಸಂಖ್ಯೆಯ ಬೆಳವಣಿಗೆ: ಜೀವನಮಟ್ಟದಿಂದ ದೀರ್ಘಾವಧಿಯಲ್ಲಿ ಜನನದರ, ಜನಸಂಖ್ಯೆಯ ಬೆಳವಣಿಗೆ ಹಾಗೂ ವಿನಿಯೋಗ ಕಾರ್ಮಿಕರ ಸರಬರಾಜಿನ ಮೇಲೆ ಪರಿಣಾಮ ಉಂಟಾಗುತ್ತದೆಂಬ ಅಭಿಪ್ರಾಯ ಬೆಳೆದು ಬಂದಿದೆ.

ಅಧಿಕ ಜೀವನಮಟ್ಟವಿರುವ ಕುಟುಂಬಗಳಲ್ಲಿ ಜನಸಂಖ್ಯೆ ಕಡಿಮೆಯ ದರದಲ್ಲೂ, ಕಡಿಮೆಯ ಜೀವನಮಟ್ಟ ಇರುವ ಕುಟುಂಬಗಳಲ್ಲಿ ಜನಸಂಖ್ಯೆ ಹೆಚ್ಚಿನ ದರದಲ್ಲೂ ಬೆಳವಣಿಗೆ ಹೊಂದಿ, ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಬಡವರ ಹಾಗೂ ಯೋಗ್ಯಮಟ್ಟದ ವಿದ್ಯೆ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸಿಕೊಳ್ಳುವ ಸಾಮರ್ಥ್ಯ ಉಳ್ಳವರ ನಡುವಣ ನಿಷ್ಪತ್ತಿ (ರೇಷಿಯೋ) ಅಧಿಕವಾಗುತ್ತದೆ.

ಕೆಳಗಿನ ಜೀವನಮಟ್ಟದ ಕುಟುಂಬಗಳ, ಸಮಾಜಗಳ ಜನಸಂಖ್ಯೆ ಅಧಿಕ ದರದಲ್ಲಿ ಏರುವ ಸಂಭವವಿದೆ. ಕಡಿಮೆ ತಲಾ ವರಮಾನವಿರುವ ರಾಷ್ಟ್ರಗಳಲ್ಲಿ ಜನನದರ ಅಧಿಕ ಎಂಬುದು ವಿಶ್ವಸಂಸ್ಥೆಯ ಅನೇಕ ಅಧ್ಯಯನಗಳಿಂದ ವ್ಯಕ್ತಪಟ್ಟಿದೆ. ಕಡಿಮೆ ತಲಾ ವರಮಾನ ಹಾಗೂ ಕೆಳಗಿನ ಜೀವನಮಟ್ಟದ ಸಮಾಜಗಳು ಈಗ ತಮ್ಮ ಜನಸಂಖ್ಯೆಯನ್ನು ಯೋಜಿಸುವುದರಲ್ಲಿ ನಿರತವಾಗಿವೆ. ಅಭಿವೃದ್ಧಿಶೀಲ ದೇಶಗಳಲ್ಲಿ ಜೀವನಮಟ್ಟದ ಏರಿಕೆಯ ದರಕ್ಕಿಂತಲೂ ಜನಸಂಖ್ಯೆಯ ಬೆಳವಣಿಗೆಯ ದರ ಅಧಿಕವಾಗಿದೆಯೆಂಬುದು ಈ ಅಧ್ಯಯನಗಳಿಂದ ವ್ಯಕ್ತಪಟ್ಟಿರುವ ಅಂಶ. ಆರ್ಥಿಕ ಅಭಿವೃದ್ಧಿಯ ಘಟ್ಟಗಳಲ್ಲಿ ಈ ಪ್ರವೃತ್ತಿ ಕಂಡುಬರುತ್ತದೆ.

ಯೋಗ್ಯ ಜೀವನಮಟ್ಟ: ಸಮಾಜದ ಪ್ರತಿ ವ್ಯಕ್ತಿ ಹಾಗೂ ಕುಟುಂಬ ಒಂದು ಯೋಗ್ಯ ಜೀವನಮಟ್ಟವನ್ನು ಅನುಭವಿಸುವುದು ಅತ್ಯಾವಶ್ಯ. ಇದಕ್ಕೆ ಕಾರಣಗಳಿವು: 1. ತೀರ ಕಡಿಮೆ ಜೀವನಮಟ್ಟದಿಂದ ವ್ಯಕ್ತಿ ಯೋಗ್ಯ ಪೋಷಣೆಯನ್ನು ಪಡೆಯಲಾಗದೆ ರೋಗರುಜಿನಗಳಿಗೆ ತುತ್ತಾಗುವ ಸಂಭವವುಂಟು. ಇದರಿಂದ ಅವನ ಕಾರ್ಯ ಸಾಮರ್ಥ್ಯ ಕಡಿಮೆಯಾಗಿ ರಾಷ್ಟ್ರದ ಉತ್ಪತ್ತಿ ಮತ್ತು ಆರ್ಥಿಕ ಮುನ್ನಡೆ ಕುಂಠಿತಗೊಳ್ಳುವುವು. 2. ಕಡಿಮೆ ಜೀವನಮಟ್ಟ ಇರುವ ರಾಷ್ಟ್ರಗಳಲ್ಲಿ ಸಾಕಷ್ಟು ವಿನಿಯೋಗಕ್ಕೆ ಸಾಕಾಗುವಷ್ಟು ವರಮಾನವೂ ಇರುವುದಿಲ್ಲವಾದ್ದರಿಂದ ವಿನಿಯೋಜನೆ (ಇನ್ವೆಸ್ಟ್‌ಮೆಂಟ್) ಮತ್ತು ಉತ್ಪಾದನೆಗೆ ಸಾಕಷ್ಟು ಉತ್ತೇಜನ ಇಲ್ಲದಂತಾಗುತ್ತದೆ. 3. ಒಂದು ಸಮಾಜದಲ್ಲಿ ಕಡಿಮೆ ಜೀವನಮಟ್ಟದ ಜನರ ಅನುಪಾತ ಹೆಚ್ಚಾಗಿದ್ದರೆ ಅದರಿಂದ ರಾಜಕೀಯ ಭದ್ರತೆಗೆ ಧಕ್ಕೆ ಒದಗುವ ಸಂಭವ ಉಂಟು. 4. ಆಧುನಿಕ ಸರ್ಕಾರಗಳು ಕಲ್ಯಾಣ ಸಮಾಜಗಳನ್ನು ಸ್ಥಾಪಿಸಲು ಹೊರಟಿರುವುದರಿಂದ ಅವು ತಮ್ಮ ನಾಗರಿಕರಿಗೆ ಯೋಗ್ಯ ಜೀವನಮಟ್ಟವನ್ನು ನಿಶ್ಚಿತವಾಗಿ ದೊರಕಿಸಿಕೊಡುವ ಧ್ಯೇಯ ಹೊಂದಿರುತ್ತವೆ.

ಈ ಕಾರಣಗಳಿಂದಾಗಿ ಸರ್ಕಾರಗಳು ತಮ್ಮ ನಾಗರಿಕ ಜೀವನಮಟ್ಟವನ್ನು ಏರಿಸುವುದರಲ್ಲಿ ಸಹಾಯವಾಗುವ ಧೋರಣೆಗಳ ಅನುಸರಣೆಯಲ್ಲಿ ಆಸಕ್ತಿ ತೋರಿಸುತ್ತವೆ. ತಮ್ಮ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ, ಜನರ ಆರ್ಥಿಕ ಅಂತರಗಳನ್ನು ಕಡಿಮೆಮಾಡುವ, ಬಡವರಿಗೆ ಧನ ಸಹಾಯ, ವಿದ್ಯೆ, ವೈದ್ಯ ಸೌಲಭ್ಯಗಳೇ ಮುಂತಾದ ಸೇವೆಗಳನ್ನು ಉಚಿತವಾಗಿ ನೀಡುವ ನೀತಿಗಳನ್ನು ಸರ್ಕಾರಗಳು ಅನುಸರಿಸುತ್ತಿವೆ. (ಪಿ.ಎಸ್.ಎಚ್.)

**ಜೀವನಾಧಾರ ಬೇಸಾಯ:** ಬೇಸಾಯಗಾರ ಕೃಷಿ ಉತ್ಪನ್ನಗಳನ್ನು ತನ್ನ ಸ್ವಂತ ಬಳಕೆಗೆ ಉಪಯೋಗಿಸುವ ಬೇಸಾಯ ಕ್ರಮ. ಚಿಕ್ಕ ಭೂ ಹಿಡುವಳಿ, ಪುರಾತನಮಾದರಿ ಕೃಷಿ ಉಪಕರಣಗಳ ಬಳಕೆ, ಹಸುರು ಗೊಬ್ಬರಗಳ ಬಳಕೆ, ಅವೈಜ್ಞಾನಿಕ ಕೃಷಿ ವಿಧಾನ ಅಳವಡಿಕೆ ಮಾನವನ ಶ್ರಮ ಮತ್ತು ಪ್ರಾಣಿಗಳ ಬಳಕೆ ಹೆಚ್ಚು. ಇದರಿಂದಾಗಿ ಕಡಿಮೆ ಇಳುವರಿ ಹಾಗೂ ಕಳಪೆ ಗುಣಮಟ್ಟದ ಕೃಷಿ ಉತ್ಪನ್ನಗಳು ದೊರಕುತ್ತವೆ. ಈ ಪದ್ಧತಿ ಆರ್ಥಿಕವಾಗಿ ಹಿಂದುಳಿದಿರುವ ಏಷ್ಯ, ಆಫ್ರಿಕ ಮತ್ತು ದಕ್ಷಿಣ ಅಮೆರಿಕಗಳಲ್ಲಿ ಹಂಚಿಕೆಯಾಗಿದೆ ಹಾಗೂ ಮಾರುಕಟ್ಟೆಗಳಿಂದ ಅತಿ ದೂರದಲ್ಲಿರುವ ಪ್ರದೇಶಗಳಲ್ಲಿ ರೂಢಿಗೆ ಬಂದಿದೆ.

ಜೀವನಾಧಾರ ಬೇಸಾಯ ಪದ್ಧತಿಯಲ್ಲಿ ಎರಡು ವಿಧಗಳಿವೆ:

1. ಸ್ಥಳಾಂತರ ಅಥವಾ ವರ್ಗಾವಣೆ ಬೇಸಾಯ: ಅರಣ್ಯ ಪ್ರದೇಶದಲ್ಲಿನ ಮರಗಿಡಗಳನ್ನು ಕತ್ತರಿಸಿ, ಅಲ್ಲಿ ಕೆಲಕಾಲ ಬೇಸಾಯ ಮಾಡಿ ಅನಂತರ ಬೇರೊಂದು ಪ್ರದೇಶಗಳಿಗೆ ವಲಸೆ ಹೋಗಿ ಇದೇ ರೀತಿಯ ಬೇಸಾಯವನ್ನು ಆರಂಭಿಸುವ ಕೃಷಿ ವಿಧಾನ. ಇದೊಂದು ಪ್ರಾಚೀನ ಮಾದರಿಯ ಬೇಸಾಯ ಪದ್ಧತಿಯಾಗಿದ್ದು, ಅಧಿಕ ಮಳೆ ಬೀಳುವ ಅರಣ್ಯ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಜನರಲ್ಲಿ ರೂಢಿಯಲ್ಲಿದೆ. ಈ ಬೇಸಾಯವನ್ನು ಪ್ರಪಂಚದ ವಿವಿಧ ಭಾಗಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುವರು. ಉದಾ: ಮಧ್ಯ ಅಮೆರಿಕ ಮತ್ತು ಆಫ್ರಿಕದ ಕೆಲವು ಭಾಗಗಳಲ್ಲಿ ಮಿಲ್ಪ, ವೆನಿಝುವೇಲದಲ್ಲಿ ಕೊನುಕೊ, ಬ್ರೆಜಿಲ್‌ನಲ್ಲಿ ರೊಕೊ ಜೈರ್‌ಯಲ್ಲಿ ಮಾಸೊಲೆ, ಮಲೇಷ್ಯದಲ್ಲಿ ಲಡಂಗ್, ಇಂಡೊನೇಷ್ಯದಲ್ಲಿ ಹುಮ್ಮ, ಫಿಲಿಫೈನ್ಸ್‌ನಲ್ಲಿ ಕಾಯ್ನಜಿನ್, ಮಯನ್ಮಾರ್ ನಲ್ಲಿ ಟಾಂಗ್ಯಾ, ಥೈಲ್ಯಾಂಡ್‌ನಲ್ಲಿ ಟಾಮ್ರೈ, ಶ್ರೀಲಂಕದಲ್ಲಿ ಚೇನ ಹಾಗೂ ಭಾರತದ ಅಸ್ಸಾಂನಲ್ಲಿ ಝೂಮ್, ಕೇರಳದಲ್ಲಿ ಪೋನಮ್, ಆಂಧ್ರಪ್ರದೇಶದಲ್ಲಿ ಪೋಡು, ಕರ್ನಾಟಕದಲ್ಲಿ ಕುಂಬ್ರಿ ಎಂದು ಕರೆಯುತ್ತಾರೆ. ಈ ಬೇಸಾಯ ಉಷ್ಣವಲಯದಲ್ಲಿ ಅದರಲ್ಲೂ ಸಮಭಾಜಕ ವೃತ್ತದ ಇಕ್ಕೆಲಗಳಲ್ಲಿ ಹೆಚ್ಚು ಮಳೆ ಪಡೆಯುವ ಅರಣ್ಯ ಪ್ರದೇಶಗಳಲ್ಲಿ ಹಂಚಿಕೆಯಾಗಿದೆ. ಉದಾಹರಣೆಗೆ: ದಕ್ಷಿಣ ಅಮೆರಿಕದ ಅಮೆಜಾನ್ ನದಿ ಬಯಲು, ಆಫ್ರಿಕದ ಕಾಂಗೋ ನದಿ ಬಯಲು, ಆಗ್ನೇಯ ಏಷ್ಯದ ಮಲೇಷ್ಯ ಮತ್ತು ಇಂಡೋನೇಷ್ಯ ಮುಂತಾದ ಭಾಗಗಳಲ್ಲಿ ಹಂಚಿಕೆಯಾಗಿದೆ. ಇತ್ತೀಚೆಗೆ ಈ ಬೇಸಾಯ ಪ್ರದೇಶ ಕಡಿಮೆಯಾಗಿದೆ. ಏಕೆಂದರೆ ಈ ಬೇಸಾಯ ಕ್ರಮದಿಂದ ಮಣ್ಣು ಸವೆತಕ್ಕೊಳಗಾಗುವುದು. ಈ ಕ್ರಮದಿಂದ ಬೆಳೆಯುವ ಪ್ರಮುಖವಾದ ಬೆಳೆಗಳೆಂದರೆ ಮರಗೆಣಸು, ಆಲೂಗೆಡ್ಡೆ, ಸೌತೆಕಾಯಿ, ಮೆಕ್ಕೆಜೋಳ, ಅವರೆ, ಸಜ್ಜೆ ಮತ್ತು ಬಾಳೆ.

ಸ್ಥಿರ ಜೀವನಾಧಾರ ಬೇಸಾಯ: ಒಂದು ನಿರ್ದಿಷ್ಟವಾದ ಭೂ ಪ್ರದೇಶದಲ್ಲಿ ಶಾಶ್ವತವಾಗಿ ನೆಲೆಸಿ ಕೃಷಿ ಕಾರ್ಯ ನಿರ್ವಹಣೆ ಮಾಡುವುದೇ ಸ್ಥಿರ ಜೀವನಾಧಾರ ಬೇಸಾಯ. ಇದು ವರ್ಗಾವಣಾ ಬೇಸಾಯಕ್ಕೆ ವಿರುದ್ಧವಾದ ಬೇಸಾಯ ಪದ್ಧತಿಯಾಗಿದೆ. ಈ ಬೇಸಾಯ ಸಾಮಾನ್ಯವಾಗಿ ಜನಭರಿತ ಪ್ರದೇಶಗಳಲ್ಲಿ ರೂಢಿಯಲ್ಲಿದ್ದು, ವ್ಯವಸಾಯ ವಿಧಾನ, ಬಳಸುವ ಉಪಕರಣ, ಬೀಜ ಮೊದಲಾದವು ಸಾಂಪ್ರದಾಯಿಕವಾಗಿರುವುದರಿಂದ ಉತ್ಪಾದನೆಯು ಕಡಿಮೆ ಇದ್ದು, ಕೃಷಿ ಉತ್ಪನ್ನಗಳ ಮಾರಾಟ ಪ್ರಮಾಣ ಅತಿ ಕಡಿಮೆ.

ಸ್ಥಿರ ಬೇಸಾಯ ಉಷ್ಣ ವಲಯ, ಸಮಶೀತೋಷ್ಣವಲಯದ ಪ್ರಸ್ಥಭೂಮಿ ಮತ್ತು ಎತ್ತರವಾದ ಭಾಗಗಳು ಹಾಗೂ ಸ್ವಲ್ಪ ಮಟ್ಟಿಗೆ ತಗ್ಗು ಭಾಗಗಳಲ್ಲಿ ರೂಢಿಯಲ್ಲಿದೆ. ಉದಾಹರಣೆಗೆ: ಆಗ್ನೇಯ ಏಷ್ಯದ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಫಿಲಿಫೈನ್ಸ್, ಚೀನ, ಮಯನ್ಮಾರ್, ಥೈಲ್ಯಾಂಡ್, ಲಾವೋಸ್, ಕಾಂಬೋಡಿಯ, ವಿಯೆಟ್ನಾಂ, ಮಲೇಷ್ಯ ಹಾಗೂ ಈಜಿಪ್ಟ್, ಸುಡಾನ್, ಪಶ್ಚಿಮ ಆಫ್ರಿಕ ಮತ್ತು ಬ್ರೆಜಿಲ್. ಈ ಬೇಸಾಯ ಪದ್ಧತಿಯು ವಿಶೇಷವಾಗಿ ಏಷ್ಯ ಖಂಡದ ಪೂರ್ವಾರ್ಧ ಪ್ರದೇಶಗಳಲ್ಲಿ ಹಂಚಿಕೆಯಾಗಿರುವುದರಿಂದ ಇದನ್ನು ಪ್ರಾಚ್ಯ ವ್ಯವಸಾಯ ಪದ್ಧತಿ ಎಂತಲೂ ಕರೆಯುವರು. ಈ ಬೇಸಾಯ ಪದ್ಧತಿಯ ಪ್ರಮುಖ ಬೆಳೆಗಳೆಂದರೆ ಮೆಕ್ಕೆಜೋಳ, ಗೋದಿ, ಜೋಳ, ಅವರೆ, ಗೆಣಸು ಕಬ್ಬು, ಹತ್ತಿ, ಶೇಂಗ, ಸಜ್ಜೆ ಇತ್ಯಾದಿ. (ಡಿ.ಆರ್.)

**ಜುನಾಗಢ:** ಗುಜರಾತಿನ ಒಂದು ಜಿಲ್ಲೆ ಹಾಗೂ ಜಿಲ್ಲಾ ಕೇಂದ್ರ.. ಜಿಲ್ಲೆಯ ವಿಸ್ತೀರ್ಣ 10,607 ಚ.ಕಿಮೀ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಜುನಾಗಢ ಒಂದು ಸಂಸ್ಥಾನವಾಗಿತ್ತು. ಇಲ್ಲಿಯ ನವಾಬ 1807ರಲ್ಲಿ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡು ಅವರ ಆಶ್ರಿತರಾಜನಾದ. ಭಾರತದ ವಿಭಜನೆಯಾದಾಗ ಜನಮತದ ವಿರುದ್ಧ ಈ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಲ್ಲಿಯ ನವಾಬ ವಿಫಲ ಪ್ರಯತ್ನ ಮಾಡಿ ಸೋತು ಕೊನೆಗೆ ತಾನು ಮಾತ್ರ ಪಾಕಿಸ್ತಾನ ಸೇರಿದ.

ಇಲ್ಲಿಯದು ಫಲವತ್ತಾದ ಕಪ್ಪುಮಣ್ಣು. ಹತ್ತಿ, ಗೋದಿ, ತೊಗರಿ, ಎಣ್ಣೆ ಕಾಳು–ಇಲ್ಲಿನ ಪ್ರಮುಖ ಕೃಷಿ ಉತ್ಪನ್ನಗಳು. ಉದ್ದನೆಯ ಕರಾವಳಿಯನ್ನು ಪಡೆದಿರುವ ಈ ಜಿಲ್ಲೆಯಲ್ಲಿ ವೇರಾವಲ್, ನವಬಂದರ್, ಮಂಗ್ರೋಲ್ ಮತ್ತು ಪೋರ್ ಬಂದರ್ ಪ್ರಮುಖ ಬಂದರುಗಳು. ಪ್ರಸಿದ್ಧ ಜೈನಕ್ಷೇತ್ರವಾದ ಗಿರ್ನಾರ್ ಬೆಟ್ಟ ಮತ್ತು ಗಿರ್ ಅರಣ್ಯ ಇರುವುದು ಈ ಜಿಲ್ಲೆಯಲ್ಲಿಯೇ. ಗಿರ್ನಾರ್ ಬೆಟ್ಟ ದೇವಾಲಯಗಳಿಗಲ್ಲದೆ ಪ್ರಾಚೀನ ಶಿಲಾಶಾಸನಗಳಿಗಾಗಿಯೂ ಪ್ರಸಿದ್ಧ. ಇಲ್ಲಿ ಅಶೋಕನ (ಪ್ರ.ಶ.ಪೂ. 250) ಮತ್ತು ರುದ್ರ ದಾಮನ್ನನ (150) ಶಾಸನಗಳಿವೆ. ಘಜ್ನಿ ಮಹಮೂದನ ದಾಳಿಗಳಿಗೆ ತುತ್ತಾದ ಇತಿಹಾಸಪ್ರಸಿದ್ಧ ಸೋಮನಾಥ ದೇವಾಲಯ ಇರುವುದು ಈ ಜಿಲ್ಲೆಯಲ್ಲಿಯೇ.

ಜುನಾಗಢ ಪಟ್ಟಣ ಗಿರ್ನಾರ್ ಬೆಟ್ಟಗಳ ತಪ್ಪಲಿನಲ್ಲಿದೆ. ಇದು ಜಿಲ್ಲೆಯ ಆಡಳಿತ ಕೇಂದ್ರ. ಜನಸಂಖ್ಯೆ 2,52,138. ಹಳೆಯ ಪಟ್ಟಣದಲ್ಲಿ ಕೆಲವು ಬೌದ್ಧಗುಹೆಗಳಿವೆ. ಇಲ್ಲಿರುವ ಕೋಟೆ ಬಹಳ ಪ್ರಾಚೀನವಾದುದು. ಊರಿನಲ್ಲಿ ಕೆಲವು ಐತಿಹಾಸಿಕ ಸ್ಮಾರಕಗಳಿವೆ. (ಸಿ.ಜಿ.ಪಿ.)

**ಜುರ ಪರ್ವತಗಳು:** ಯುರೋಪಿನ ರೈನ್ ಮತ್ತು ರ್‍ಹೋನ್ ನದಿಗಳ ನಡುವೆ ಹಬ್ಬಿರುವ ಪರ್ವತ ಶ್ರೇಣಿ. ಇದರ ಬಹುಭಾಗ ಫ್ರಾನ್ಸಿಗೂ ಸ್ವಲ್ಪ ಭಾಗ ಸ್ವಿಟ್ಜರ್‌ಲೆಂಡ್‌ಗೆ ಸೇರಿದೆ. ಇದರ ಉದ್ದ ಸು. 230 ಕಿಮೀ, ಅಗಲ 61 ಕಿಮೀ. ಈ ಸಮೂಹದಲ್ಲಿ ಉದ್ದಕ್ಕೂ ಅನೇಕ ಸಮಾನಾಂತರ ಶ್ರೇಣಿಗಳ ಏಣುಗಳು ಒತ್ತಾಗಿ ಹರಡಿವೆ. ಅಲ್ಲಲ್ಲಿ ಅಡ್ಡಡ್ಡ ಹಾಯುವ ಕಮರಿಗಳುಂಟು. ಇದು ಪೂರ್ವದ ಕಡೆ ಹೆಚ್ಚು ಕಡಿದು, ಪಶ್ಚಿಮದ ಕಡೆ ಸಾಮಾನ್ಯವಾದ ಇಳಿಜಾರು. ಈ ವ್ಯವಸ್ಥೆಯ ಮುಖ್ಯನದಿಗಳಾದ ಡೂ ಮತ್ತು ಆನ್ ಪಶ್ಚಿಮದ ಕಡೆಗೆ ಹರಿಯುತ್ತವೆ. ಕ್ರೆಡ್ ಲಾ ನೇರ್ಝ್ (1714 ಮೀ), ಲ ಡೋಲ್ (1669 ಮೀ), ಕೊಲಂಬೀರ್ ಡ ಝೆಕ್ (1683 ಮೀ), ರಕ್ಯೂಲೇ (1709 ಮೀ)–ಇವು ಇಲ್ಲಿಯ ಕೆಲವು ಪ್ರಮುಖ ಶಿಖರಗಳು.

ಈ ಶ್ರೇಣಿಯ ಉತ್ತರ ಭಾಗದಲ್ಲಿರುವ ಬೆಲ್‌ಫೋರ್ಟ್ ಕಣಿವೆ ಯುರೋಪಿನ ಮುಖ್ಯ ಭೌಗೋಳಿಕ ಕೇಂದ್ರಗಳಲ್ಲೊಂದು. ಇದು ಝುರ ಮತ್ತು ವೋರ್ಝ್ಸ್ ಪರ್ವತ ಶ್ರೇಣಿಗಳಿಗೆ ಸಂಪರ್ಕ ಕಲ್ಪಿಸುತ್ತದೆ. 1870–71ರ ಫ್ರಾನ್ಸ್–ಪ್ರಷ್ಯ ಯುದ್ಧದಲ್ಲಿ ಈ ಕಣಿವೆ ವಹಿಸಿದ ಪಾತ್ರ ಬಲು ದೊಡ್ಡದು. ಫ್ರೆಂಚರ ಸಾಹಸದ ಫಲವಾಗಿ ಕಣಿವೆ ಫ್ರಾನ್ಸಿನಲ್ಲೇ ಉಳಿಯಿತು.

ಈ ಶ್ರೇಣಿಗಳು ಪಶ್ಚಿಮಕ್ಕಿಂತ ಪೂರ್ವದ ಕಡೆ ಹೆಚ್ಚು ಸಮತಟ್ಟಾಗಿವೆ. ಶ್ರೇಣಿಯ ದಕ್ಷಿಣದ ಕಡೆ ಚಾಚಿಕೊಂಡಿರುವ ಒಂದು ದೊಡ್ಡ ಭೂ ಅಗ್ರ ರ್‍ಹೋನ್ ನದಿಯನ್ನು ಬಳಸಿ ಹರಿಯುವಂತೆ ಮಾಡಿದೆ.

ಝುರ ಪರ್ವತವ್ಯವಸ್ಥೆಯ ಉತ್ತರದ ಇಳಿಜಾರಿನಲ್ಲಿ ಬೆಲ್‍ಫೋರ್ಟ್, ಮಲ್ಹೂಜ್ ಮತ್ತು ಬಾಸೆಲ್‍ಗಳು ಮುಖ್ಯಪಟ್ಟಣಗಳು. ಬಜ್ಯಾನ್‍ಸನ್ ಒಂದು ಪ್ರಮುಖ ಕೈಗಾರಿಕಾ ಕೇಂದ್ರ. ಇದು ಉತ್ತರದ ಡೂ ನದಿಯ ದಡದ ಮೇಲಿದೆ. ಈ ಪರ್ವತವ್ಯವಸ್ಥೆ ಫ್ರಾನ್ಸಿನಿಂದ ಜರ್ಮನಿ, ಸ್ವಿಟ್ಜರ್ಲೆಂಡ್ ಮತ್ತು ಇಟಲಿಗಳಿಗೆ ಹೋಗುವ ಮಾರ್ಗಗಳಲ್ಲಿದೆ. ಈ ಭೌಗೋಳಿಕ ಸನ್ನಿವೇಶ ಇದಕ್ಕೆ ಅಂತಾರಾಷ್ಟ್ರೀಯ ಮಹತ್ತ್ವವನ್ನು ತಂದುಕೊಟ್ಟಿದೆ. (ಡಿ.ಎಸ್.ಜಿ.)

**ಜುರಾಸಿಕ್:** ಮೀಸೋಜೋ಼ಯಿಕ್ (ಮಧ್ಯಜೀವಿಕಲ್ಪ) ಮಧ್ಯಭಾಗದಲ್ಲಿ ನಿಕ್ಷೇಪಗೊಂಡ ಶಿಲಾಸ್ತೋಮ. ಸಾಮಾನ್ಯವಾಗಿ ಇದರ ಕೆಳಗೆ ಟ್ರಯಾಸಿಕ್ ಮತ್ತು ಮೇಲಕ್ಕೆ ಕ್ರಿಟೇಷಸ್ ವ್ಯವಸ್ಥೆ ಉಂಟು. ಸ್ವಿಟ್‍ಜರ್ಲೆಂಡಿನ ಜುರ ಪರ್ವತಗಳಿಂದ ಜುರಾಸಿಕ್ ಪದ ನಿಷ್ಪನ್ನವಾಗಿದೆ. ಹೆಚ್ಚಾಗಿ ಕಣ ಶಿಲೆಗಳೇ (ಜಲಜ) ಇದ್ದರೂ ಜ್ವಾಲಾಮುಖಿ ಶಿಲೆಗಳು ಕೆಲವು ಭಾಗಗಳಿಗೆ ಸೀಮಿತವಾಗಿವೆ: ಉದಾಹರಣೆಗೆ ಉತ್ತರ ಅಮೆರಿಕದ ಕಾರ್ಡಿಲೆರ. ಎಂ. ಹೊವಾರ್ತ್ ಎಂಬಾತನ ಪ್ರಕಾರ ಜುರಾಸಿಕ್ ಕಾಲ ಸು. 13.5 ಕೋಟಿ ವರ್ಷಗಳ ಹಿಂದೆ ಅಂತ್ಯವಾಯಿತು; ಅದು 5.5 ಕೋಟಿ ವರ್ಷಗಳಿಂದ 6 ಕೋಟಿ ವರ್ಷಗಳವರೆಗೆ ವ್ಯಾಪಿಸಿರಬಹುದೆಂದು ಊಹೆ. ಈ ಅವಧಿಯಲ್ಲಿ ಭೂಚಲನೆಯೇ ಆಗಲಿ, ಜ್ವಾಲಾಮುಖಿ ಕಾರ್ಯಾಚರಣೆಯೇ ಆಗಲಿ ಆದಂತೆ ಕಾಣುವುದಿಲ್ಲ. ಇಂಥ ವಿಧ್ವಂಸಕ ಚಟುವಟಿಕೆಗಳು ಪೆಸಿಫಿಕ್ ಸಾಗರದ ಅಂಚು ಪ್ರದೇಶಕ್ಕೆ ಸೀಮಿತಗೊಂಡಿದ್ದುವು. ಜುರಾಸಿಕ್ ಕಾಲ ಅತ್ಯಂತ ಶಾಂತಕಾಲಗಳಲ್ಲಿ ಒಂದು. ಆಗ ಭೂಮಿಯ ಮೇಲ್ಮೈಯಲ್ಲಿ ಕೆಳಮಟ್ಟದ ಮೈದಾನಗಳಿದ್ದುವು. ಆದ್ದರಿಂದ ತೀರಪ್ರದೇಶಗಳೂ ಸಹ ಅಪಾರವಾದ ಸುಣ್ಣಶಿಲಾ ನಿಕ್ಷೇಪವಾಗಿತ್ತು. ಇವುಗಳಲ್ಲಿ ಜೇಡು ಅಂಶ ಅತ್ಯಲ್ಪ ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಇವುಗಳಲ್ಲಿರುವ ಜೀವ್ಯವಶೇಷಗಳು, ಅದರಲ್ಲಿಯೂ ಅಮ್ಮೊನೈಟುಗಳು, ಜುರಾಸಿಕ್ ಸ್ತೋಮವನ್ನು ಅನೇಕ ಶಿಲಾಪಾದಗಳನ್ನಾಗಿ ವಿಂಗಡಿಸಲು ಮತ್ತು ಪ್ರಪಂಚದ ನಾನಾ ಸ್ಥಳಗಳಲ್ಲಿನ ಶಿಲಾಪಾದಗಳನ್ನು ಸರಿದೂಗಲು ಅತ್ಯಂತ ಸಹಕಾರಿಗಳಾಗಿವೆ.

ಜುರಾಸಿಕ್ ಯುಗದಲ್ಲಿ ಪೆಸಿಫಿಕ್ ಸಾಗರ ಉತ್ತರ ಅಮೆರಿಕದ ಕ್ಯಾಲಿಫೋರ್ನಿಯದಿಂದ ಅಲಾಸ್ಕದವರೆಗಿನ ತೀರಪ್ರದೇಶವನ್ನು ಆಕ್ರಮಿಸಿತ್ತು. ಇದು ಜುರಾಸಿಕ್ ಯುಗದ ಅಂತ್ಯದವರೆಗೂ ತೆರವಾಗಲಿಲ್ಲ. ಅದೇ ವೇಳೆ ಅಟ್ಲಾಂಟಿಕ್ ಸಾಗರ ಮೆಕ್ಸಿಕೊ ಕೊಲ್ಲಿಯಿಂದ ನುಗ್ಗಿ ಮೆಕ್ಸಿಕೊ, ಟೆಕ್ಸಾಸ್ ಮತ್ತು ಅರಿಜೋನ ಪ್ರದೇಶಗಳನ್ನು ಆಕ್ರಮಿಸಿತ್ತು. ಆರ್ಕ್‍ಟಿಕ್ ಸಮುದ್ರ ದಕ್ಷಿಣಕ್ಕೆ ಮಾಂಟಾನ, ಇಡಾಹೊ ಮತ್ತು ವೈಯೋಮಿಂಗ್ ವರೆಗಿನ ಪ್ರದೇಶಗಳನ್ನು ಆಕ್ರಮಿಸಿತ್ತು. ಜುರಾಸಿಕ್ ಅಂತ್ಯಕಾಲದಲ್ಲಿ ಆರ್ಕ್‍ಟಿಕ್ ಆಕ್ರಮಣ ಅರಿಜೋನ ಕಾಲರ್‍ಯಾಡೋ ಮತ್ತು ನ್ಯೂ ಮೆಕ್ಸಿಕೊಗಳವರೆಗೆ ವಿಸ್ತರಿಸಿತ್ತು. ಈ ವಿಸ್ತೃತ ಸಮುದ್ರಕ್ಕೆ ಸನ್‍ಡ್ಯಾನ್ಸ್ ಸಮುದ್ರವೆಂದೂ ಅದರಲ್ಲಿ ಸಂಚಯನಗೊಂಡ ನಿಕ್ಷೇಪಗಳಿಗೆ ಸನ್‍ಡ್ಯಾನ್ಸ್ ಶಿಲೆಗಳೆಂದೂ ಹೆಸರುಂಟು. ಪೆಸಿಫಿಕ್ ತೀರಸಮುದ್ರ ಮತ್ತು ಸನ್‍ಡ್ಯಾನ್ಸ್ ಸಮುದ್ರಗಳು ಪ್ರತ್ಯೇಕವಾಗಿಯೇ ಇದ್ದುವು. ಆದರೆ ಕೆಲವು ವೇಳೆ ಅವು ಆರಗಾನ್ ಮತ್ತು ವಾಷಿಂಗ್ಟನ್ ಪ್ರದೇಶಗಳ ಮೂಲಕ ಸಂಪರ್ಕ ಹೊಂದಿದ್ದುದೂ ಉಂಟು. ಈ ಕಾಲದಲ್ಲಿ ರಾಕಿ ಪ್ರದೇಶಗಳಲ್ಲಿ ಪರ್ವತಗಳಿರಲಿಲ್ಲ. ಜುರಾಸಿಕ್ ಯುಗದ ಆದಿ ಮತ್ತು ಅಂತ್ಯ ಕಾಲಗಳಲ್ಲಿ ಈ ಪ್ರದೇಶ ಕೊಳ ಮತ್ತು ಸರೋವರಗಳಿಂದ ತುಂಬಿತ್ತು. ಇವುಗಳಲ್ಲಿ ಸಂಚಯಗೊಂಡಿದ್ದ ಶಿಲೆಗಳಲ್ಲಿ ಸರೋವರವಾಸಿ ಪ್ರಾಣಿಗಳ, ಬೆನ್ನೆಲುಬುಳ್ಳ ಪ್ರಾಣಿಗಳ ಮತ್ತು ಸಸ್ಯಗಳ ಅವಶೇಷಗಳು ಹೇರಳವಾಗಿವೆ. ಜುರಾಸಿಕ್ ಯುಗ, ಅದರಲ್ಲೂ ಮಧ್ಯಕಾಲ, ಜ್ವಾಲಾಮುಖಿಗಳ ಕಾರ್ಯಾಚರಣೆಗೆ ಒಳಗಾಗಿತ್ತು. ಸಾಗರ ನಿಕ್ಷೇಪಗಳ ಮಧ್ಯೆ ಇರುವ ಟ್ರ್ಯಾಪ್ ಮತ್ತು ಜ್ವಾಲಾಮುಖಿ ಬೂದಿ ಪದರುಗಳು ಈ ಅಂಶವನ್ನು ಸಾರುತ್ತವೆ. ಕೊನೆಯದಾಗಿ ಜುರಾಸಿಕ್ ಯುಗದ ಅಂತ್ಯಕಾಲದಲ್ಲಿ ಪೆಸಿಫಿಕ್ ತೀರಪ್ರದೇಶದಲ್ಲಿ ಭೂಚಲನೆಯಾಯಿತು. ಇದಕ್ಕೆ ನಿವೇಡಭೂಚಲನೆ ಎಂದು ಹೆಸರು. ಆಗ ಈ ಪ್ರದೇಶದ ನಿಕ್ಷೇಪಗಳೆಲ್ಲವೂ ಮಡಿಕೆಗಳಾಗಿ ಅನೇಕ ವಿಧಗಳಲ್ಲಿ ಕಲಕಲ್ಪಟ್ಟು, ಪರ್ವತಗಳಾಗಿ ಮೇಲೊಗೆಯಲ್ಪಟ್ಟುವು. ಇದರ ಪರಿಣಾಮವಾಗಿ ಶಿಲಾರಸವು ನಿವೇಡ ಮತ್ತು ಇತರ ಪ್ರದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ ಬ್ಯಾತೊಲಿಕ್ ರೂಪದಲ್ಲಿ ಅಂತಸ್ಸರಣ ಹೊಂದಿದೆ.

ಭಾರತದಲ್ಲಿ ಜುರಾಸಿಕ್ ಸ್ತೋಮಗಳು ಸ್ಪಿಟಿ, ಕುಮಾಯೂನ್, ನೇಪಾಲ, ಕಾಶ್ಮೀರ ಹಜಾರ ಮುಂತಾದ ಹಿಮಾಲಯ ಪರ್ವತ ಪ್ರದೇಶಗಳಲ್ಲಿ, ಬಲೂಚಿಸ್ತಾನ ಮತ್ತು ಸಾಲ್ಟ್‌ರೇಂಜ್ ಪ್ರದೇಶಗಳಲ್ಲಿ; ಕಚ್, ರಾಜಸ್ತಾನ, ರಾಜಮಹಲ್ ಬೆಟ್ಟಗಳು, ಒರಿಸ್ಸದ ಪೂರಿ ಮುಂತಾದ ಕಡೆಗಳಲ್ಲಿ, ದಕ್ಷಿಣದ ಎಲ್ಲೋರ, ಓಂಗಲೆ, ಚೆನ್ನೈ, ತಿರುಚಿರಾಪಲ್ಲಿ ಮುಂತಾದ ಕಡೆಗಳಲ್ಲಿ ನಿಕ್ಷೇಪಗೊಂಡಿವೆ. ಇರಾನ್ ಕಡೆಗಿರುವ ಬಲೂಚಿಸ್ತಾನ್ ಶಿಲಾವರ್ಗ ಸುಣ್ಣಶಿಲೆಗಳಿಂದಲೇ ಕೂಡಿರುವುದು. ಹಿಮಾಲಯ ಪ್ರದೇಶದಲ್ಲಿ ಜೇಡುಶಿಲೆ ಹೆಚ್ಚಾಗಿ ನಿಕ್ಷೇಪಗೊಂಡಿದೆ. ಈ ಯುಗದ ಶಿಲಾಸ್ತೋಮವನ್ನು ಸಾಗರಜನಿತ ಶಿಲಾವರ್ಗ ಮತ್ತು ಸಾಗರಾಕ್ರಮಿತ ಪ್ರದೇಶಗಳ ಶಿಲಾವರ್ಗ ಎಂದು ಎರಡು ಬಗೆಯಾಗಿ ಪರಿಗಣಿಸಬಹುದು. ಹಿಮಾಲಯ ಪ್ರದೇಶಗಳು ಮತ್ತು ಬಲೂಚಿಸ್ತಾನಗಳಲ್ಲಿ ನಿಕ್ಷೇಪಗೊಂಡಿರುವ ಶಿಲೆಗಳು ಮೊದಲನೆಯ ವರ್ಗಕ್ಕೆ ಸೇರಿದವು. ಕಚ್ ಮತ್ತು ದಕ್ಷಿಣ ಭಾರತದ ಶಿಲೆಗಳು ಸಮುದ್ರಾಕ್ರಮಿತ ಪ್ರದೇಶಗಳ ನಿಕ್ಷೇಪಗಳು. ಮೊದಲನೆಯ ಪ್ರದೇಶಗಳಲ್ಲಿ ಜುರಾಸಿಕ್ ಯುಗದ ಕೆಲ್ಲೋವಿಯನ್ ಕಾಲದಲ್ಲಿ ಶಿಲಾನಿಕ್ಷೇಪ ಕಾರ್ಯ ನಿಂತು ಹೋದದ್ದು ಕಂಡುಬರುವುದು. ಈ ಕಾಲದಲ್ಲಿ ಆದ ಶಿಲಾನಿಕ್ಷೇಪ ಕಾರ್ಯದ ನಿಲುಗಡೆ ಪ್ರಪಂಚದ ಅನೇಕ ಕಡೆ ವರದಿಯಾಗಿದೆ. ಕೆಲ್ಲೋವಿಯನ್ ಅನನುರೂಪ್ಯತೆಯ ಪ್ರಮಾಣ ಸ್ಪಿಟಿ ಮುಂತಾದ ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಆಕ್ಸ್‌ಫರ್ಡಿಯನ್ ಕಾಲದವರೆಗೆ ಮಾತ್ರವಿದೆ. ಆದರೆ ಬಲೂಚಿಸ್ತಾನದಲ್ಲಿ ಈ ಅನನುರೂಪತೆಯ ಪ್ರಮಾಣ ಕ್ರಿಟೇಷಸ್ ಯುಗದ ಆದಿಕಾಲದವರೆಗೂ ಮುಂದುವರಿದಿದೆ. ಪಶ್ಚಿಮ ಮತ್ತು ಪೂರ್ವತೀರಗಳಲ್ಲಿ ಸಮುದ್ರಾಕ್ರಮಣ ಕೆಲ್ಲೋವಿಯನ್ ಕಾಲದಲ್ಲಿ ಪ್ರಾರಂಭಿಸಿ, ಜುರಾಸಿಕ್ ಯುಗದ ಕೊನೆಯವರೆಗೆ ಅಥವಾ ಕ್ರಿಟೇಷಸ್ ಯುಗದ ಆದಿಯವರೆಗೆ ಇದ್ದು, ನಿರ್ಗಮಿಸಿರುವುದು ವ್ಯಕ್ತವಾಗುತ್ತದೆ. ಸಾಗರ ತನ್ನ ಸ್ಥಿರ ನೆಲೆಯಲ್ಲಿ ನಿರ್ಗಮಿಸಿ ಬೇರೆಡೆಗಳಲ್ಲಿ ಆಕ್ರಮಣ ಮಾಡಿರುವುದು ಕುತೂಹಲಕಾರಿಯಾಗಿದೆ.

ಪ್ರೀಕೇಂಬ್ರಿಯನ್ ಕಾಲದಿಂದಲೂ ಸಮುದ್ರಾಕ್ರಮಣವನ್ನೇ ಕಾಣದಿದ್ದ ಪರ್ಯಾಯದ್ವೀಪ ಭಾಗ ಜುರಾಸಿಕ್ ಕಾಲದಲ್ಲಿ ಸಮುದ್ರಗಳ ಆಕ್ರಮಣಕ್ಕೆ ಒಳಪಟ್ಟಿತು. ಈ ಕಾಲದವರೆಗೆ ಇದ್ದ ಗೊಂಡ್ವಾನ ಭೂಭಾಗ ಜುರಾಸಿಕ್ ಕಾಲದಲ್ಲಿ ಒಡೆದು ಅದರ ಭಾಗಗಳು ಚಲಿಸಲು ಪ್ರಾರಂಭವಾಗಿದ್ದಂತೆ ಕಾಣುತ್ತದೆ. ಕಾಠಿಯಾವಾಡ್ ಪ್ರದೇಶದ ಉತ್ತರ ಭಾಗದಲ್ಲಿ ಸಮುದ್ರಾಕ್ರಮಣ ಈ ಕಾಲದಲ್ಲಿ ನಡೆಯಿತು. ಆಗ ನಿಕ್ಷೇಪಗೊಂಡ ಶಿಲೆಗಳು ಸು. 1828.8 ಮೀ (6,000 ಅಡಿ) ದಪ್ಪ ಇವೆ. ಅವೆಲ್ಲ ಲಘುವಾಗಿ ಸಮುದ್ರದ ಕಡೆಗೆ ಓರೆಯಾಗಿವೆ. ಈ ಸಮುದ್ರಾಕ್ರಮಣದಿಂದ ಉಂಟಾದ ನಿಕ್ಷೇಪಗಳು ರಾಜಸ್ತಾನದ ಬಿಕನೀರ್, ಜಯಸಲ್ಮೀರ್ ಮುಂತಾದ ಪ್ರದೇಶಗಳಲ್ಲೂ ಕಚ್‍ಗಳಲ್ಲೂ ರೂಪುಗೊಂಡಿವೆ. ಇವುಗಳಲ್ಲೆಲ್ಲ ಕಚ್ ಪ್ರದೇಶದ ನಿಕ್ಷೇಪಗಳು ಅತ್ಯುತ್ತಮವಾಗಿ ರೂಪುಗೊಂಡಿರುವುದರಿಂದ ಇವು ಜುರಾಸಿಕ್ ಸಮುದ್ರಾಕ್ರಮಣ ನಿಕ್ಷೇಪಗಳಿಗೆ ಮಾದರಿ ಪ್ರದೇಶವಾಗಿವೆ. ಈ ಶಿಲಾಪರಂಪರೆಯನ್ನು ಪಚಮ್, ಚಾರಿ, ಕಟ್ರೋಲ್ ಮತ್ತು ಉಮಿಯ ಎಂಬ ನಾಲ್ಕು ಭಾಗಗಳನ್ನಾಗಿ ವಿಭಜಿಸಲಾಗಿದೆ. ಇದು ಜುರಾಸಿಕ್ ಯುಗದ ಬ್ಯಾತೋನಿಯನ್ ಕಾಲದಿಂದ ಕ್ರಿಟೇಷಸ್ ಯುಗದ ನಿಯೊಕೋಮಿಯನ್ ಅಥವಾ ಆಪ್ಸಿಯನ್ ಕಾಲದವರೆಗಿನ ಶಿಲಾನಿಕ್ಷೇಪಗಳಿಂದ ಕೂಡಿದೆ. *

**ಜುರಾಸಿಕ್ ಯುಗದ ಜೀವರಾಶಿ :** ಜುರಾಸಿಕ್ ಯುಗದ ಸಸ್ಯವರ್ಗ ಟ್ರಯಾಸಿಕ್ ಯುಗದ ಅಂತ್ಯದಲ್ಲಿದ್ದ ಸಸ್ಯವರ್ಗದ ನೇರಪೀಳಿಗೆ. ಆದರೆ ಶಂಕು ವೃಕ್ಷ (ಕೋನಿಫೆರ) ಮತ್ತು ತೆರ್ಮೆ (ಫರ್ನ್) ಜಾತಿಯ ಸಸ್ಯಗಳು (ಜರೀಸಸ್ಯಗಳು) ಹೇರಳವಾಗಿಯೂ ವೈವಿಧ್ಯಪೂರಿತವಾಗಿಯೂ ಇದ್ದುದು ಜುರಾಸಿಕ್ ಸಸ್ಯವರ್ಗದ ವೈಶಿಷ್ಟ್ಯ. ಭಾರತದ ರಾಜಮಹಲ್ ಸಸ್ಯವರ್ಗದಲ್ಲಿ ಸೈಕಡಾಯಿಡುಗಳು ಹೇರಳವಾಗಿದ್ದುವು. ನಿಲ್ಸೋನಿಯ, ಟೇನಿಯಾಪ್ಟರಿಸ್, ಓಟೊಜಮೈಟಿಸ್, ಡಿಕ್ಟಿಯೊ ಜಮೈಟಿಸ್ ಮತ್ತು ಟಿಲೋಫಿಲಮ್ ರಾಜಮಹಲ್ ಕಾಲದ ಮುಖ್ಯ ಸೈಕಡಾಯಿಡ್ ಸಸ್ಯಗಳು. ಎಲಟೊಕ್ಲೇಡಸ್ ಮತ್ತು ರೆಟಿನೊಸ್ಪೊರೈಟಿಸ್ ಈ ಕಾಲದ ಶಂಕುವೃಕ್ಷಗಳು. ಇದೇ ಕಾಲದ ಅರಕೇರಿಯ ಮತ್ತು ಸೈಪ್ರಸ್ ಮರಗಳ ಎಲೆಗಳೂ ದೊರೆತಿವೆ. ಅವನ್ನು ಅನುಕ್ರಮವಾಗಿ ಪೇಗಿಯೋಫಿಲ್ಲಮ್ ಮತ್ತು ಬ್ರೇಕಿಫಿಲ್ಲಮ್ ಎಂದು ಕರೆಯಲಾಗಿದೆ. ಗ್ಲೆಕೊಟೈಟಿಸ್, ಕ್ಲ್ಯಾಡೊಫ್ಲೆಬಿಸ್, ಕೋನಿಯಾಪ್ಟರಿಸ್, ಸ್ಫಿನಾಪ್ಟರಿಸ್ ಮತ್ತು ಪೆಕಾಪ್ಟರಿಸುಗಳು ರಾಜಮಹಲ್ ಸಸ್ಯ ವರ್ಗದ ತೆರ್ಮೆಗಳು. ಜಬ್ಬಲಪುರ ಸಸ್ಯವರ್ಗದಲ್ಲಿ ಸೈಕಡಾಯಿಡ್ ಗಿಡಗಳು ಹೇರಳವಾಗಿಯೇ ಇದ್ದುವು. ಆದರೆ ಶಂಕುವೃಕ್ಷಗಳು ಅವುಗಳಿಗಿಂತ ಹೆಚ್ಚಾಗಿದ್ದುದೇ ಗಮನಿಸಬೇಕಾದ ಅಂಶ. ಜುರಾಸಿಕ್ ಯುಗದಲ್ಲಿ ಬೆನ್ನೆಲುಬಿಲ್ಲದ ಸಾಗರವಾಸಿ ಪ್ರಾಣಿಗಳು ಹೇರಳವಾಗಿದ್ದುವು. ಈ ಕಾಲದ ಸ್ತೋಮಗಳಲ್ಲಿ ಹವಳದ ದಿಬ್ಬಗಳು ಉಂಟು. ಆಸ್ಟ್ರೋಯಿನ, ಐಸಾಸ್ಟ್ರಿಯ, ತ್ಯಾಮ್ನಾಸ್ಟ್ರಿಯ, ತಿಕೋಸ್ಮಿಲಿಯ ಮತ್ತು ಮಾಂಟ್ಲಿವಾಲ್ಟಿಯಗಳು ದಿಬ್ಬ ರಚಿಸಿದ ಮುಖ್ಯ ಹವಳಗಳು. ಎಕಿನಾಯಿಡುಗಳು ಸಹ ತುಂಬ ಹೆಚ್ಚಾಗಿದ್ದುವು. ಸಿಡಾರಿಸ್, ಹೆಮಿಸಿಡಾರಿಸ್ ಮೊದಲಾದ ಪಂಚಸಮಸೂತ್ರಿ ಎಕಿನಾಯಿಡುಗಳೂ ಪೈಗಾಸ್ಟರ್, ಹೊಲೆಕ್ಟಿಪಸ್, ನೂಕ್ಲಿಯೊಲೈಟಿಸ್, ಕ್ಲಿಪಿಯಸುಗಳೇ ಮೊದಲಾದ ದ್ವಿಸಮಸೂತ್ರಿ ಎಕಿನಾಯಿಡುಗಳೂ ಮುಖ್ಯವಾದವು. ಕ್ರೈನಾಯಿಡುಗಳು ಅಲ್ಲಲ್ಲಿ ಹೇರಳವಾಗಿದ್ದುವು. ಅವುಗಳಲ್ಲಿ ಪೆಂಟಕ್ರೈನಸ್ ಉಲ್ಲೇಖಾರ್ಹ. ಬ್ರ್ಯಾಕಿಯೊಪೊಡಗಳು ಮುಖ್ಯವಾಗಿ ರಿಂಕೊನೆಲ್ಲಿಡೀ ಮತ್ತು ಟೆರಿಬ್ರಾಟುಲಿಡೆಗಳಿಂದ ಪ್ರತಿನಿಧಿಸಲ್ಪಟ್ಟಿದ್ದುವು. ಸ್ಪಿರಿಫೆರಗಳು ಜುರಾಸಿಕ್ ಆದಿಕಾಲದಲ್ಲಿ ಮಾತ್ರ ಇದ್ದುವು. ಲ್ಯಾಮಲಿಬ್ರ್ಯಾಂಕ್ ಮತ್ತು ಶಂಖುಗಳಿಗೆ ನವೀನ ಲಕ್ಷಣಗಳು ಉಂಟು. ಟ್ರೈಗೋನಿಯ, ಆಸ್ಟ್ರಿಯ ಮತ್ತು ಪೊಲಡೋಮಿಯಯುಗಳು ಮುಖ್ಯವಾದ ಲ್ಯಾಮೆಲಿಬ್ರ್ಯಾಂಕುಗಳು. ನಾಟಿಕ, ಪ್ಲೂರೊಟೋಮ, ಸಿರಿತಿಯಮ್, ಟೆರಿಟೆಲ ಮತ್ತು ನರೀನಿಯಗಳು ಮುಖ್ಯ ಶಂಖುಗಳು.

ಜುರಾಸಿಕ್ ಯುಗದಲ್ಲಿ ಭೂಪ್ರದೇಶವನ್ನು ಸರೀಸೃಪಗಳು ಆಳುತ್ತಿದ್ದುದರಿಂದ ಇದನ್ನು ಸರೀಸೃಪಗಳ ಯುಗ ಎಂದು ಹೇಳಬಹುದು. ಇವು ಭೂಮಿಯ ಮೇಲೆ ಜನಿಸಿದ ಅತ್ಯಂತ ದೊಡ್ಡ ಗಾತ್ರ ಮತ್ತು ತೂಕದ ಪ್ರಾಣಿಗಳು. ಇವುಗಳಲ್ಲಿ ಸಸ್ಯಾಹಾರಿಗಳೇ ಹೆಚ್ಚು. ಇವು

ನಡೆಯುವಾಗ ನಾಲ್ಕು ಕಾಲುಗಳನ್ನು ಊರುತ್ತಿದ್ದುವು. ಶರೀರ ನೆಟ್ಟಗೆ ಅಥವಾ ಸ್ವಲ್ಪ ಬಾಗಿರುತ್ತಿತ್ತು. ಈ ಸರೀಸೃಪಗಳು ಬಲು ವೇಗಗಾಮಿಗಳು, ಬ್ರಾಂಟೊಸಾರಸ್ ಎಂಬ ಡೈನೊಸಾರ್ 65 ಅಡಿ ಉದ್ದವಿತ್ತು. ಮಾಂಸಾಹಾರಿ ಡೈನೊಸಾರಸ್‌ಗಳೂ ಇದ್ದುವು. ಆಲೊಸಾರಸ್ ಇವುಗಳಲ್ಲೆಲ್ಲ ಅತ್ಯಂತ ದೊಡ್ಡದು. ಸ್ಟಿಗೊಸಾರಸ್ ಎಂಬ ಪ್ರಾಣಿಯ ಮೈ ಮೇಲೆ ಎಲುಬು ಫಲಕಗಳ ಕವಚವಿತ್ತು. ಇದು ಜುರಾಸಿಕ್ ಯುಗದ ವಿಶಿಷ್ಟ ಡೈನೊಸಾರ್. ಭೂಪ್ರದೇಶವನ್ನು ಡೈನೊಸಾರುಗಳು ಆಳುತ್ತಿದ್ದರೆ ಕೆಲವು ಸರೀಸೃಪಗಳು ಜಲಪ್ರದೇಶಗಳಿಗೆ ಹಿಂತಿರುಗಿದುವು. ಇವು ಮತ್ಸ್ಯಗಳೊಡನೆ ಜೀವನದಲ್ಲಿ ಸೆಣಸಲು ಬೇಕಾದ ದೇಹ ರಚನೆ ಹೊಂದಿದ್ದವು. ಇಂಥ ಸರೀಸೃಪಗಳಲ್ಲಿ ಇಕ್ತಿಯೊಸಾರಸ್, ಪ್ಲೀಜಿಯೋಸಾರಸುಗಳು ಮುಖ್ಯವಾದವು. ಮೊಸಳೆ, ಆಮೆ ಮೊದಲಾದವು ಸಹ ಇದ್ದವು. ಟೀರೊಸಾರಸ್ ಎಂಬ ಸರೀಸೃಪಕ್ಕೆ ಹಾರುವ ಸಾಮರ್ಥ್ಯವಿತ್ತು. ಬವೇರಿಯದ ಲಿತೋಗ್ರಾಫಿಕ್ ಸುಣ್ಣಶಿಲೆಯಲ್ಲಿ ರಕ್ಷಿಸಲ್ಪಟ್ಟಿರುವ ಅತ್ಯಂತ ಪ್ರಾಚೀನ ಕಾಲದ ಪಕ್ಷಿಗಳ ಅವಶೇಷಗಳು ಎಲ್ಲರ ಲಕ್ಷ್ಯವನ್ನು ಸೆಳೆಯುತ್ತವೆ. ಈ ಪಕ್ಷಿಗೆ ಆರ್ಕಿಯಾಪ್ಟರಿಕ್ಸ್ ಎಂದು ಹೆಸರು. ಇದಕ್ಕೆ ಪಕ್ಷಿ ಲಕ್ಷಣಗಳಿಗಿಂತಲೂ ಸರೀಸೃಪ ಲಕ್ಷಣಗಳೇ ಹೆಚ್ಚಾಗಿವೆ. (ಡಿ.ಆರ್.)

**ಜುಸಮೆನ್ ಹ್ಯಾಂಗ್ ಪರಿಭಾವನೆ:** ಭೂಗೋಳ ವಿಜ್ಞಾನ ಅಧ್ಯಯನ ವಿಧಾನಗಳಲ್ಲಿ ಬಹುಹಿಂದಿನಿಂದಲೂ ರೂಢಿಯಲ್ಲಿರುವ ಕ್ರಮಗಳಲ್ಲಿ ಒಂದು. ಜರ್ಮನ್‌ಭಾಷೆಯಲ್ಲಿ ಜುಸಮೆನ್ ಹ್ಯಾಂಗ್ ಅಂದರೆ ಇಂಗ್ಲೀಷಿನ ಹ್ಯಾಂಗಿಂಗ್ ಟುಗೆದರ್ ಎಂದು ಅರ್ಥನೀಡುವುದು. ಪರಸ್ಪರ ತೂಗಾಡುವುದು, ಒಂದಕ್ಕೊಂದು ತೂಗು ಹಾಕಿಕೊಂಡಿರುವುದು, ಪರಸ್ಪರ ನೇರಸಂಬಂಧ ಹೊಂದಿರುವುದು ಎಂಬುದನ್ನು ಸೂಚಿಸಲು ಈ ಪದವನ್ನು ಬಳಸಲಾಗಿದೆ.

ಭೂಗೋಳ ವಿಜ್ಞಾನದ ಬೆಳವಣಿಗೆಯ ಕ್ಲಾಸಿಕಲ್ ಪಂಥ ಆರಂಭವಾಗುವುದು ಜರ್ಮನಿಯಲ್ಲಿ. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧ ಹಂಬೋಲ್ಟ್ ಮತ್ತು ರಿಟ್ಟರ್ ರವರುಗಳ ಅವಧಿ. ಭೂಗೋಳ ವಿಜ್ಞಾನದ ಆಧುನಿಕ ಬೆಳವಣಿಗೆಯ ಅಸ್ತಿಭಾರ ದೊರೆತುದು ಈ ಇಬ್ಬರ ಮಹತ್ತರ ಕೊಡುಗೆಗಳಿಂದ. ಹಂಬೋಲ್ಟ್ ಅವರಿಂದ ಆರಂಭವಾದ ಜುಸಮೆನ್‌ಹ್ಯಾಂಗ್ ಪರಿಭಾವನೆಯನ್ನು ರಿಟ್ಟರ್ ಹಾಗು ಅನಂತರದ ಎಲ್ಲಾ ಭೂಗೋಳ ವಿಜ್ಞಾನಿಗಳು ಬಳಕೆಮಾಡಿದರು. ಪ್ರಕೃತಿಯ ಹಲವಾರು ಭಾಗಗಳು ಪರಸ್ಪರ ಪೂರಕವಾದವು. ಇವುಗಳು ಒಂದಕ್ಕೊಂದು ನೇರ ಸಂಬಂಧವನ್ನು ಹೊಂದಿರುತ್ತವೆ. ಅಂದರೆ ಪರಸ್ಪರ ತೂಗಾಡುತ್ತವೆ. ಪ್ರಕೃತಿಯ ಭಾಗಗಳಾದ ಭೂಸ್ವರೂಪ, ಮಣ್ಣು, ವಾಯುಗುಣ, ಜಲವ್ಯವಸ್ಥೆ, ಸ್ವಾಭಾವಿಕ ಸಸ್ಯವರ್ಗ, ಪ್ರಾಣಿವರ್ಗ, ಮಾನವನ ಜೀವನ, ಸಂಸ್ಕೃತಿ, ಆರ್ಥಿಕ ಉದ್ಯೋಗ, ಉಡುಪು, ವಸತಿ, ಧರ್ಮ ಈ ಅಂಶಗಳ ಪರಸ್ಪರ ಸಂಬಂಧವನ್ನು ನಿರೂಪಿಸಲು ಈ ಪದವನ್ನು ಬಳಸಲಾಗಿದೆ. ಇದನ್ನೇ ಪ್ರಕೃತಿಯ ಒಕ್ಕೂಟ (ಎನ್‌ಸೆಂಬಲ್) ಎಂದು ಕರೆಯಲಾಗಿದೆ. ಭೂಗೋಳವಿಜ್ಞಾನವು ಈ ಎಲ್ಲಾ ಅಂಶಗಳನ್ನೂ ಒಟ್ಟಾಗಿ ಸಮೀಕ್ಷಿಸಿ, ಆ ಪ್ರದೇಶದ ಸಮಗ್ರ ಲಕ್ಷಣವನ್ನು ನಿರೂಪಿಸುವುದೆಂದು ವಿವರಿಸಲಾಗಿದೆ. ಇವುಗಳು ಆ ಭಾಗದ ವ್ಯಕ್ತಿತ್ವವನ್ನು ರೂಪಿಸಿರುವ ರೀತಿ, ಆ ಭಾಗವು ಇತರ ಭಾಗಗಳಿಗಿಂತ ಭಿನ್ನವಾಗಿರುವುದನ್ನು ಕುರಿತು ವಿವರಿಸುವುದು. (ಆರ್.ಎನ್.)

**ಜೆ.ಮಕಿಂದರ್ ಹಾಲ್‌ಪೋರ್ಡ್:** 1861–1947. ಬ್ರಿಟಿಷ್ ಸ್ಕೂಲ್ ಆಫ್ ಜಿಯೋಗ್ರಫಿಯ ಸಂಸ್ಥಾಪಕ. 1887 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ವೃತ್ತಿ ಆರಂಭಿಸಿದ. ಅನಂತರ 1903–1908 ರ ಅವಧಿಯಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ನಿರ್ದೇಶಕನಾಗಿದ್ದ. 1920 ರಿಂದ 1922ರ ವರೆಗೆ ಇಂಪೀರಿಯಲ್ ಶಿಪ್ಪಿಂಗ್ ಕಂಪನಿಯ ಅಧ್ಯಕ್ಷನಾಗಿದ್ದ. 1922 ರಲ್ಲಿ ಬ್ರಿಟಿಷ್ ಸರ್ಕಾರದ ನೈಟ್‌ಹುಡ್ ಪದವಿಯನ್ನು ಹಾಗೂ 1945ರಲ್ಲಿ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿಯ ಪೇಟ್ರನ್ ಪದಕಗಳಿಸಿದ.

ರಾಜಕೀಯ ಭೂಗೋಳಶಾಸ್ತ್ರವನ್ನು ಪ್ರಾರಂಭಿಸಿದ್ದ. 1904 ರಲ್ಲಿ ತನ್ನ ಪರಿಕಲ್ಪನೆಗಳನ್ನು ಸಮೀಕರಿಸಿ ರಾಜಕೀಯ ಸಿದ್ಧಾಂತವನ್ನು ರೂಪಿಸಿದ. ಇದನ್ನೇ ಹಾರ್ಟ್‌ಲ್ಯಾಂಡ್ ಸಿದ್ಧಾಂತ ಎಂದು ಕರೆಯಲಾಗಿದೆ. ಈ ಸಿದ್ಧಾಂತ ಪ್ರಪಂಚದ ರಾಜಕೀಯವನ್ನು ಮಹತ್ತರವಾಗಿ ಪ್ರಭಾವಿಸಿತು. ಇದನ್ನು ಜಿಯೋಗ್ರಾಫಿಕಲ್ ಪಿವೋಟ್ ಆಫ್ ಹಿಸ್ಟರಿ ಎಂಬ ಲೇಖನದಲ್ಲಿ ವಿವರಿಸಿದೆ. ಇದರಲ್ಲಿ ಯೂರೇಷಿಯ ಆಫ್ರಿಕಗಳನ್ನು ಒಳಗೊಂಡಂತಹ ಖಂಡಗಳನ್ನು ವರ್ಲ್ಡ್ ಐಲ್ಯಾಂಡ್ ಎಂದು ಕರೆದ. ಇದನ್ನೇ ಹಾರ್ಟ್ ಲ್ಯಾಂಡ್ ಎಂದು ಅನಂತರ 1919 ರಲ್ಲಿ ಡೆಮೊಕ್ರಾಟಿಕ್ ಐಡಿಯಲ್ಸ್ ಅಂಡ್ ರಿಯಾಲಿಟಿ ಎಂಬ ಗ್ರಂಥದಲ್ಲಿ ತಮ್ಮ ಸಿದ್ಧಾಂತವನ್ನು ಮಾರ್ಪಾಡು ಮಾಡಿದ. ಮೊದಲಿಗೆ ಪಿವೋಟ್ ಪ್ರದೇಶ ಎಂದು ಕರೆದಿದ್ದ ಭಾಗವನ್ನು ಹಾರ್ಟ್ ಲ್ಯಾಂಡ್ ಎಂದು ಇದರ ಪ್ರವೇಶದ್ವಾರ ಪೂರ್ವ ಯುರೋಪ್ ಎಂದೂ ಹೆಸರಿಸಿದ. ಈ ಗ್ರಂಥ ಪ್ರಪಂಚದ ರಾಜಕೀಯ ಶಕ್ತಿಯನ್ನು ಚರ್ಚಿಸಿತ್ತು. ಅದರಂತೆ: ಯಾರು ಪೂರ್ವಯುರೋಪ್ ಅನ್ನು ಆಳುವರೋ ಅವರು ಹಾರ್ಟ್‌ಲ್ಯಾಂಡನ್ನು ಆಳುವರೋ, ಯಾರು ಹಾರ್ಟ್‌ಲ್ಯಾಂಡನ್ನು ಆಳುವರೋ ಅವರು ಪ್ರಪಂಚ ದ್ವೀಪದ ಪ್ರಭುತ್ವ ಪಡೆಯುವರು. ಯಾರು ಪ್ರಪಂಚ ದ್ವೀಪವನ್ನು ಆಳುವರೋ ಅವರು ಪ್ರಪಂಚದ ಪ್ರಭುತ್ವ ಪಡೆಯುವರು.

ಇವನು 1943 ರಲ್ಲಿ ದಿ ರೌಂಡ್‌ವರ್ಲ್ಡ್ ಅಂಡ್ ದಿ ವಿನ್ನಿಂಗ್ ಪೀಸ್ ಎಂಬ ಲೇಖನವನ್ನು ಫಾರಿನ್ ಅಫೇರ್ಸ್; ಎಂಬ ಸಂಚಿಕೆಯಲ್ಲಿ ಪ್ರಕಟಿಸಿದರು. 1902 ರಲ್ಲಿಯೆ ಇವನು ಬ್ರಿಟನ್ ಅಂಡ್ ದಿ ಬ್ರಿಟಿಷ್ ಸೀಸ್ ಎಂಬ ಪುಸ್ತಕವನ್ನು ಬರೆದಿದ್ದ. ಇದರಲ್ಲಿ ಬ್ರಿಟನ್ ಹಾಗೂ ಅದರ ಸಮೀಪ ಇರುವ ಸಮುದ್ರ ಭಾಗಗಳನ್ನು, ಪ್ರಾದೇಶಿಕ ಪರಿಭಾವನೆಯನ್ನು ಆಧರಿಸಿ ವಿವರಿಸಿದ. ಇವನ ಸಿದ್ಧಾಂತ ನಕಾಶೆಯ ಮೂಲಕ ಸುಲಭವಾಗಿ ಮತ್ತು ಸರಳವಾಗಿ ನಿರೂಪಣೆಗೊಂಡಿತ್ತು. ಇದು ಬೋಧನೆ ಮತ್ತು ಕಲಿಯುವಿಕೆಗೆ ಮಾತ್ರವಲ್ಲದೆ ಪ್ರಪಂಚದ ರಾಜಕೀಯ ಭೂಪಟದ ಮೇಲೆಯೂ ಅಪಾರ ಪ್ರಭಾವ ಬೀರಿತ್ತು. (ಎನ್.ಎಲ್.)

**ಜೆಂಡರ್ ಜಿಯೋಗ್ರಫಿ:** ಪ್ರಪಂಚದಾದ್ಯಂತ ಕಂಡುಬರುವ ಸ್ತ್ರೀತ್ವ/ಹೆಣ್ಣುತನ ಫೆಮಿನಿಸಂನ ಪರಿಣಾಮವಾಗಿ ಭೂಗೋಳವಿಜ್ಞಾನದಲ್ಲಿ ಅಭಿವೃದ್ಧಿಹೊಂದಿದೆ. ಇದು ಮಾನವ ಭೂಗೋಳ ವಿಜ್ಞಾನದಲ್ಲಿ ಇತ್ತೀಚಿನ ಶಾಖೆಯಾಗಿದೆ. 1980ರಲ್ಲಿ ಪ್ರೊಫೆಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಟಿಷ್ ಜಿಯೋಗ್ರಾಫರ್ಸ್ ಸಂಸ್ಥೆಯಲ್ಲಿಯೇ ವುಮೆನ್ ಅಂಡ್ ಜಿಯೋಗ್ರಫಿ ಸ್ಟಡಿಗ್ರೂಪ್ ಆರಂಭವಾಯಿತು. ಇದು 1984ರಲ್ಲಿ ಜಿಯೋಗ್ರಾಫಿ ಅಂಡ್ ಜೆಂಡರ್ ಎಂಬ ಗ್ರಂಥವನ್ನು ಪ್ರಕಟಿಸಿತು. ಇದು ಜೆಂಡರ್ ಜಿಯೋಗ್ರಾಫಿಯ ಆರಂಭ. ಪುರುಷ ಪ್ರಾಧಾನ್ಯತೆಯಿಂದ ಕೂಡಿದ್ದ ಭೌಗೋಳಿಕ ಅಧ್ಯಯನಗಳಿಗೆ ಈ ಪಂಥ ಹೊಸ ಆಯಾಮವನ್ನು ನೀಡಿದೆ. ಇದು ಮಹಿಳೆಯರ ಹಕ್ಕುಬಾಧ್ಯತೆ ಹಾಗೂ ಸಮಸ್ಯೆಗಳನ್ನು ಭೌಗೋಳಿಕವಾಗಿ ಪರಿಶೀಲಿಸುವ ಪಂಥವಾಗಿ ಹೊರಹೊಮ್ಮಿದೆ. (ಆರ್.ಎನ್.)

**ಜೆನರೆ – ಡಿ–ವೀ – ಪರಿಭಾವನೆ:** ಇದೊಂದು ಫ್ರೆಂಚ್ ಭಾಷೆಯ ಶಬ್ದ. ಇದರ ಅರ್ಥ ಜೀವನ ಶೈಲಿ (ಲೈಫ್ ಸ್ಟೈಲ್). ಈ ಪರಿಭಾವನೆಯನ್ನು ನೀಡಿದವನು ವೈಡಾಲ್–ಡಿ–ಲಾ–ಬ್ಲಾಷ್. ಇದನ್ನು ಸಾಧ್ಯತಾವಾದದಲ್ಲಿ ಅಭಿವೃದ್ಧಿಪಡಿಸಿದ. ವೈಡಾಲ್ ಇದನ್ನು ಕುರಿತು ಮಾಡಿದ ಅಧ್ಯಯನ ಭೂಗೋಳವಿಜ್ಞಾನದಲ್ಲಿ ಬೇರೆಯದೇ ಆದ ಪರಿಸರವನ್ನು ಬೆಳೆಸಿತು. ಈತನು ಅಭಿಪ್ರಾಯಪಡುವಂತೆ ಜೀವನ ಶೈಲಿ (ಜೆನರೆ–ಡಿ–ವೀ) ಎಂಬುದು ಉತ್ಪನ್ನ ಹಾಗೂ ನಾಗರಿಕತೆಯನ್ನು ಪ್ರತಿಬಿಂಬಿಸುತ್ತದೆ. ನಿರ್ದಿಷ್ಟ ಪ್ರದೇಶದಲ್ಲಿ ಜೀವಿಸುತ್ತಿರುವ ಮಾನವನಿಗೆ ಸಂಬಂಧಿಸಿದ ಭೌತಿಕ, ಐತಿಹಾಸಿಕ ಮತ್ತು ಸಾಮಾಜಿಕ ಅಂಶಗಳನ್ನು ಸೇರಿಸಿ ಒಟ್ಟಾರೆ ಫಲಿತಾಂಶವನ್ನು ಜೆನರೆ–ಡಿ–ವೀಯ ಪ್ರತಿನಿಧಿಸುತ್ತದೆ. ಇದನ್ನು ಮುಂದುವರೆಸುತ್ತಾ ಒಂದೇ ಪರಿಸರದಲ್ಲಿ ಇರುವ ಗುಂಪುಗಳ ನಡುವಿನ ಭಿನ್ನತೆಯನ್ನು ವಿವರಿಸುವುದೇ ಜೆನರೆ–ಡಿ–ವೀ. ಅವನ ವಿಶ್ಲೇಷಣೆಯಂತೆ ಮನೋಧರ್ಮ, ಮೌಲ್ಯ, ಗುಣಧರ್ಮ, ಹವ್ಯಾಸಗಳಿಂದ ಹೊರಬಂದವುಗಳಾಗಿರುತ್ತವೆ. ಈ ವಿಭಿನ್ನವಾದ ಗುಣಧರ್ಮ ಮತ್ತು ಹವ್ಯಾಸಗಳು ಮಾನವರ ಸಮುದಾಯದಲ್ಲಿ ಅಸಂಖ್ಯಾತ ಸಾಧ್ಯತೆಗಳನ್ನು ಸೃಷ್ಟಿಸಿವೆ ಎಂದು ಹೇಳಿದ್ದಾನೆ.

ಜೆನರೆ–ಡಿ–ವೀ ಪರಿಭಾವನೆ ಸಾಧ್ಯತಾವಾದದ ಮೂಲತತ್ತ್ವವಾಗಿ ಪರಿಣಮಿಸಿತು. ಇದನ್ನು ಫಿಲಾಸಫಿ ಆಫ್ ಪಾಸಿಬಿಲಿಸಂ ಎನ್ನಲಾಗಿದೆ. ಸಾಧ್ಯತಾವಾದದ ಅನುಯಾಯಿಗಳು ಹೇಳಿರುವಂತೆ ಪರಿಸರ ಮಾನವನನ್ನು ನಿರ್ದಿಷ್ಟ ರಸ್ತೆಯಲ್ಲಿ ಚಲಿಸುವಂತೆ ಮಾಡುವುದಿಲ್ಲ. ಆದರೆ ಹಲವಾರು ಅವಕಾಶಗಳನ್ನು ನೀಡುತ್ತದೆ. ಇದರಲ್ಲಿ ಮಾನವ ತನಗೆ ಬೇಕಾದ ಅವಕಾಶವನ್ನು ಆರಿಸಿಕೊಂಡು, ತನ್ನ ಜೀವನಶೈಲಿಯನ್ನು ರೂಪಿಸಿಕೊಳ್ಳಬಹುದು. ಈ ಪರಿಭಾವನೆಯನ್ನು ಪರಿಸರವಾದ ಭೂಗೋಳವಿಜ್ಞಾನ ವರ್ಸಿಸ್ ಸಾಧ್ಯತಾವಾದ ಭೂಗೋಳವಿಜ್ಞಾನದಲ್ಲಿ ವಿವರಣಾತ್ಮಕವಾಗಿ ಅಧ್ಯಯನ ಮಾಡಬಹುದು. (ಎನ್.ಎಲ್.)

**ಜೆರಿಕೋ:** ಪ್ರಾಚೀನ ಅವಶೇಷಗಳಿಗಾಗಿ ಪ್ರಸಿದ್ಧವಾಗಿರುವ ಜೋರ್ಡಾನಿನ ಒಂದು ಪಟ್ಟಣ. ಜೆರೂಸಲೆಮ್‌ನ ಈಶಾನ್ಯಕ್ಕೆ 23 ಕಿಮೀ ದೂರದಲ್ಲಿದೆ. ಇದರ ಅರಬ್ಬೀ ಹೆಸರು ಅರೀಹ. 1967ರಲ್ಲಿ ಇಸ್ರೇಲ್ ಇದನ್ನು ಆಕ್ರಮಿಸಿಕೊಂಡಿತು. ಇದು ಕೆಳ ಜೋರ್ಡನ್ ಕಣಿವೆ ಪ್ರದೇಶದ ಬಹುಮುಖ್ಯ ಆಯಕಟ್ಟು ಪ್ರದೇಶ. ಹಳೆಯ ಒಡಂಬಡಿಕೆಯ ಪುಸ್ತಿಕೆಯಲ್ಲಿ

ಈ ನಗರದ ಉಲ್ಲೇಖ ಬರುತ್ತದೆ. ಪ್ರಾಚೀನ ಜೆರಿಕೋ ನಗರದ ಅವಶೇಷಗಳು ಮೂರು ವಿಭಾಗಗಳಲ್ಲಿವೆ. ಕಾಲಕಾಲಕ್ಕೆ ನಗರ ಸ್ಥಳಾಂತರಗೊಳ್ಳುತ್ತಿದ್ದುದ್ದು ಇದಕ್ಕೆ ಕಾರಣ. ಇಂದಿನ ಜೆರಿಕೋದಿಂದ 2 ಕಿಮೀ ಉತ್ತರಕ್ಕೆ ಅತ್ಯಂತ ಪ್ರಾಚೀನ ಜೆರಿಕೋವಿನ ಅವಶೇಷಗಳಿವೆ.

ಜೆರಿಕೋ ನಗರವನ್ನು ಅನೇಕ ಪುರಾತತ್ತ್ವಜ್ಞರು ಶಾಸ್ತ್ರೀಯವಾಗಿ ಅಗೆದಿದ್ದಾರೆ. ಚಾರ್ಲ್ಸ್ ವಾರೆನ್ 1868ರಲ್ಲೂ ಅರ್ನೆಸ್ಟ್ ಸೆಲಿನ್ 1907ರಲ್ಲೂ ಉತ್ಖನನ ಮಾಡಿದರು. ಅನಂತರ ಜೂನ್ ಗಾರ್ಸ್ಟಾಂಗ್ 1930–36ರ ಅವಧಿಯಲ್ಲಿ ಉತ್ಖನನ ಮಾಡಿ ಈ ನಗರ ಪ್ರ.ಶ.ಪೂ. 1400ರ ವೇಳೆಗೆ ನಾಶವಾಗಿದ್ದಿರಬಹುದೆಂದು ಊಹಿಸಿದರು. ಅಲ್ಲದೆ, ಈ ಸ್ಥಳ ಅತ್ಯಂತ ಪ್ರಾಚೀನವಾದ್ದೆಂದೂ ನವ ಶಿಲಾಯುಗದಲ್ಲೇ ಇಲ್ಲಿ ಮಾನವ ವಾಸಿಸುತ್ತಿದ್ದನೆಂದೂ ಗಾರ್ಸ್ಟಾಂಗ್ ಪ್ರಕಟಿಸಿದರು. ಇದೇ ನಗರದಲ್ಲಿ 1952–58ರ ಅವಧಿಯಲ್ಲಿ ಸಂಶೋಧನೆ ನಡೆಸಿದ ಕ್ಯಾಥಲಿನ್ ಕೆನ್ಯಾನ್ ಎಂಬಾಕೆ ಅನೇಕ ಹೊಸ ವಿಷಯಗಳನ್ನು ಹೊರಗೆಡವಿದಳು. ಇಲ್ಲಿ ದೊರೆತ ಅವಶೇಷಗಳನ್ನು ಕಾರ್ಬನ್–14 ಪರೀಕ್ಷೆಗೆ ಗುರಿಪಡಿಸಲಾಯಿತು. ಈ ಎಲ್ಲ ಸಂಶೋಧನೆಗಳಿಂದ ಜೆರಿಕೋ ಬಗ್ಗೆ ತಿಳಿದುಬಂದಿರುವ ವಿಷಯ ಇಷ್ಟು; ಮಾನವನ ಅತ್ಯಂತ ಪ್ರಾಚೀನ ನೆಲೆಗಳಲ್ಲಿ ಜೆರಿಕೋ ಒಂದು. ಸೂಕ್ಷ್ಮ ಶಿಲಾಯುಗದ (ಪ್ರ.ಶ.ಪೂ. ಸು. 8000) ಮತ್ತು ನವ ಶಿಲಾಯುಗದ ಮೊದಲಹಂತದ (ಪ್ರ.ಶ.ಪೂ. ಸು. 7000) ಅವಶೇಷಗಳು ಇಲ್ಲಿ ಸಿಕ್ಕಿವೆ. ಮಣ್ಣಿನ ಇಟ್ಟಿಗೆಗಳಿಂದ ಕಟ್ಟಿದ ಮನೆಗಳು ಪ್ರಾಥಮಿಕ ನಾಗರಿಕ ಘಟ್ಟಗಳನ್ನು (ಪ್ರ.ಶ.ಪೂ. ಸು. 3200) ಸೂಚಿಸುತ್ತವೆ. ಊರ ಸುತ್ತಲೂ ರಕ್ಷಣೆಗಾಗಿ ಗೋಡೆ ಕಟ್ಟಿದ ಕುರುಹು ಇಲ್ಲಿ ಸಿಕ್ಕಿದೆ. ಇಂಥ ಗೋಡೆಯ ನಿರ್ಮಾಣ ಪ್ರಪಂಚದ ಇದೇ ಅತ್ಯಂತ ಪ್ರಾಚೀನವೆಂದು ಹೇಳಲಾಗಿದೆ.

ಗ್ರಾಮದ ಪಶ್ಚಿಮ ಭಾಗದಲ್ಲಿ ಬಂಡೆಯಿಂದ ಕಡಿಯಲ್ಪಟ್ಟ ಕಂದಕವೊಂದಿತ್ತು. ಇದು 8 ಮೀ ಅಗಲ 2.4 ಮೀ ಆಳ ಇತ್ತು. ಇದರ ಹೊರಭಾಗದಲ್ಲಿ ಕಲ್ಲಿನ ಗೋಪುರದಂಥ ಕಟ್ಟಡ 8 ಮೀ ಎತ್ತರ 10 ಮೀ ಅಗಲವಾಗಿತ್ತು.

ನವ ಶಿಲಾಯುಗದ ಗ್ರಾಮ ಸಾಕಷ್ಟು ದೊಡ್ಡದಾಗಿಯೇ ಇತ್ತು. ಪ್ರ.ಶ.ಪೂ. 4000ದ ವೇಳೆಗೆ ನಗರವಾಸಿಗಳಾಗಿದ್ದ ಜೆರಿಕೋ ಪ್ರಜೆಗಳು ತಾಮ್ರ ಮತ್ತು ಕಂಚಿನ ಉಪಯೋಗವನ್ನು ಕಂಡುಕೊಂಡಿದ್ದರು. ಪ್ರ.ಶ.ಪೂ. 2200ರ ವೇಳೆಗೆ ಸಿರಿಯ ಮತ್ತು ಪ್ಯಾಲಸ್ತೀನ್ ಭಾಗದಿಂದ ಏರಿ ಬಂದ ಜನ ಜೆರಿಕೋ ನಗರವನ್ನು ವಶಪಡಿಸಿಕೊಂಡರು. ಪ್ರ.ಶ.ಪೂ. 1700ರಲ್ಲಿ ಏಷ್ಯದ ಕಡೆಯಿಂದ ಬಂದ ಹಿಕ್ಸೋಸರು ನಗರವನ್ನು ಆಕ್ರಮಿಸಿಕೊಂಡರು. ಇವರೇ ಆ ನಗರದಲ್ಲಿ ಅನೇಕ ಬೃಹದಾಕಾರದ ಕೋಟೆಗಳನ್ನು ನಿರ್ಮಿಸಿದರು. ಊರಿನ ಹೊರವಲಯದಲ್ಲಿ ದೊರೆತ ಅನೇಕ ಮುಚ್ಚಿದ ಸಮಾಧಿಗಳು ಈ ಕಾಲದವೇ. ಈ ಸಮಾಧಿಗಳಲ್ಲಿ ನಿತ್ಯೋಪಯೋಗದ ಅನೇಕ ಹಣಿಗೆ ವಸ್ತುಗಳೂ ನೇಯ್ದ ಬಟ್ಟೆಗಳೂ ಸಿಕ್ಕಿವೆ.

ಒಟ್ಟಿನಲ್ಲಿ ಇಲ್ಲಿ ಮಾನವನ ಪ್ರಥಮವಾಸದಿಂದ ಇಂದಿನವರೆಗಿನ ಎಲ್ಲ ಹಂತಗಳ ಅವಶೇಷಗಳೂ ದೊರೆತು, ಇವು ನಾಗರಿಕತೆಯ ಬೆಳವಣಿಗೆಯನ್ನು ಗುರುತಿಸುವಲ್ಲಿ ಸಹಾಯಕವಾಗಿವೆ. (ಎಂ.ಎಸ್.ಎನ್.ಎ.)

**ಜೆರೂಸಲೆಮ್:** ಪಶ್ಚಿಮ ಏಷ್ಯದ ಒಂದು ಪ್ರಾಚೀನ ನಗರ. 1948ರಲ್ಲಿ ಇಬ್ಭಾಗವಾಗಿ ಇಸ್ರೇಲ್, ಜೋರ್ಡಾನ್‌ಗಳ ನಡುವೆ ಹಂಚಿಹೋಗಿ 1967ರಲ್ಲಿ ನಡೆದ ಇಸ್ರೇಲ್–ಅರಬ್ ಯುದ್ಧದ ಫಲವಾಗಿ ಸಂಪೂರ್ಣವಾಗಿ ಇಸ್ರೇಲಿನ ಆಕ್ರಮಣಕ್ಕೆ ಒಳಗಾಗಿ ಆ ರಾಜ್ಯದಲ್ಲಿ ವಿಲೀನಗೊಂಡಿತು.

3,000 ವರ್ಷಗಳಿಗೂ ಹೆಚ್ಚು ದೀರ್ಘ ಇತಿಹಾಸ ಹೊಂದಿರುವ ಜೆರೂಸಲೆಮ್ ನಗರ ಯಹೂದ್ಯರಿಗೂ ಕ್ರೈಸ್ತರಿಗೂ ಅತ್ಯಂತ ಪವಿತ್ರವಾದ ಯಾತ್ರಾಸ್ಥಳವಾಗಿರುವುದಷ್ಟೇ ಅಲ್ಲ, ಮುಸ್ಲಿಮರಿಗೂ ಇದು ಮೆಕ್ಕ ಮತ್ತು ಮದೀನಗಳ ಅನಂತರ ಅತ್ಯಂತ ಪ್ರಮುಖ ಕ್ಷೇತ್ರ. ಜೂಡಿಯನ್ ಪರ್ವತಸಾಲಿನ ತಪ್ಪಲಿನಲ್ಲಿರುವ ಈ ನಗರ ಮೃತ್ಯು ಸಮುದ್ರದಿಂದ ಸು. 25 ಕಿಮೀ ದೂರದಲ್ಲಿದ್ದು ಸಮುದ್ರಮಟ್ಟದಿಂದ 765 ಮೀ ಎತ್ತರದಲ್ಲಿದೆ. ಆಳವಾದ ಕಿದ್ರನ್ ಮತ್ತು ಹಿನ್ನಮ್ ಕಣಿವೆಗಳ ರಕ್ಷಣೆ ಪಡೆದು, ಸದಾ ಹರಿಯುವ ಚಿಲುಮೆಯನ್ನುಳ್ಳದ್ದಾಗಿ ಪೂರ್ವದಿಂದ ಪಶ್ಚಿಮಕ್ಕೆ ಹಾದು ಹೋಗುವ ಪ್ರಮುಖ ಮಾರ್ಗದ ಆಯಕಟ್ಟಿನ ಸ್ಥಳದಲ್ಲಿರುವ ಈ ಪ್ರದೇಶ ಸ್ವಾಭಾವಿಕವಾಗಿಯೇ ಪ್ರಾಮುಖ್ಯ ಪಡೆದು, ಪ್ರಾಚೀನಕಾಲದಿಂದಲೂ ಇಲ್ಲಿ ಜನ ನೆಲೆಸಲು ಕಾರಣವಾಗಿದೆ. ಪ್ರ.ಶ.ಪೂ. 1800ರ ಸುಮಾರಿನಲ್ಲೇ ಕಂಚಿನ ಯುಗದ ಎರಡನೆಯ ಹಂತದ ಸಂಸ್ಕೃತಿಯನ್ನೊಳಗೊಂಡಿದ್ದ ಪಟ್ಟಣವೂ ಅದನ್ನು ಸುತ್ತುವರಿದ ಕೋಟೆಯೂ ಇದ್ದದ್ದು ಇಲ್ಲಿ ನಡೆಸಿರುವ ಹಲವು ಉತ್ಖನನಗಳಿಂದ ವ್ಯಕ್ತವಾಗಿದೆ. ಚಿಲುಮೆಯ ಮೇಲ್ಭಾಗದಲ್ಲಿಯೂ ಪಶ್ಚಿಮದ ಕಡೆಯೂ ಚಾಚಿರುವ ಓಫೆಲ್ ಎಂಬ ಭೂಭಾಗದಲ್ಲಿ ಈ ಪಟ್ಟಣವಿದ್ದು, ಪರ್ವತಸಾಲಿನ ಪೂರ್ವದ ಇಳಿಜಾರಿನಲ್ಲೂ ಹರಡಿತ್ತು. ಹೀಬ್ರುಗಳು ಇದನ್ನು ಆಕ್ರಮಿಸುವುದಕ್ಕೆ ಮೊದಲು ಇದು ಕನನೈಟರ ಪ್ರಮುಖ ಪಟ್ಟಣವಾಗಿತ್ತು. ಪ್ರ.ಶ.ಪೂ. 1370ರ ಹೊತ್ತಿಗೆ ಇದರ ಹೆಸರು ಉರುಸಲೆಮ್ ಎಂದಿತ್ತೆಂದು ಟೆಲ್–ಎಲ್ ಅಮರ್ನದ ಶಾಸನಗಳಿಂದ ತಿಳಿದುಬರುತ್ತದೆ.

ಪೌರಸ್ತ್ಯ ಸಂಸ್ಕೃತಿಯಲ್ಲಿಯೇ ಬೆಳೆದುಬಂದಿದ್ದ ಜೆರೂಸಲೆಮ್ ನಗರ ಮ್ಯಾಸಿಡೋನಿಯ ದೊರೆ ಅಲೆಗ್ಸಾಂಡರನ ದಂಡಯಾತ್ರೆಯ ಪರಿಣಾಮವಾಗಿ ಪಾಶ್ಚಾತ್ಯರ ರಾಜಕೀಯ ಪ್ರಭಾವಕ್ಕೆ ಒಳಗಾಯಿತು. ರಾಜಕೀಯವಾಗಿ ಹಾಗೂ ಧಾರ್ಮಿಕ ಕಾರಣಗಳಿಂದಾಗಿ ಇತಿಹಾಸದಲ್ಲಿ ಅನೇಕ ತಿರುವುಗಳನ್ನು ಅನುಭವಿಸಿದ ಈ ನಗರ ಲೂಟಿ, ಹಿಂಸಾಚಾರಗಳಿಗೆ ಒಳಗಾಗಿತ್ತು. 1948ರಲ್ಲಿ ಈ ನಗರ ಇಬ್ಭಾಗವಾಗಿ ಉತ್ತರ ಮತ್ತು ಪೂರ್ವದ ಭಾಗಗಳು ಜೋರ್ಡಾನಿಗೂ ಪಶ್ಚಿಮ ಮತ್ತು ದಕ್ಷಿಣ ಭಾಗಗಳು ಇಸ್ರೇಲಿಗೂ ಸೇರಿ ಎರಡು ಭಾಗಗಳೂ ಪ್ರತ್ಯೇಕವಾಗಿಯೇ ಹುರುಪಿನಿಂದ ಅಭಿವೃದ್ಧಿ ಹೊಂದಿದುವು. ಆದರೆ ಪುನಃ 1967ರಲ್ಲಿ ನಡೆದ ಅರಬ್–ಇಸ್ರೇಲಿ ಯುದ್ಧದಲ್ಲಿ ಜಾರ್ಡನಿನ ಭಾಗವನ್ನು ಇಸ್ರೇಲ್ ವಶಪಡಿಸಿಕೊಂಡಿತು.

(ಎಂ.ಎಚ್.)

**ಜೆರ್ಸಿ:** ಫ್ರಾನ್ಸ್ ದೇಶದ ನಾರ್ಮಂಡಿ ಪ್ರಾಂತದ ತೀರದಿಂದ 22 ಕಿಮೀ ದೂರದಲ್ಲಿ ಇಂಗ್ಲಿಷ್ ಕಡಲಗಾಲುವೆಯಲ್ಲಿರುವ ಒಂದು ಸಣ್ಣ ದ್ವೀಪ. ಈ ದ್ವೀಪ ಉ.ಅ. $49^0$ ಮತ್ತು ಪ.ರೇ. $2^0$ರಲ್ಲಿ ಸ್ಥಾನೀಕರಿಸಿ ಸು.116 ಚ.ಕಿಮೀ. ಭೂ ಪ್ರದೇಶದಲ್ಲಿ ವಿಸ್ತರಿಸಿದೆ. ಉತ್ತರ ಸಮಶೀತೋಷ್ಣವಲಯದ ಸಮುದ್ರತೀರದಲ್ಲಿರುವ ದ್ವೀಪವಾಗಿರುವುದರಿಂದ ಈ ಪ್ರದೇಶದಲ್ಲಿ ಕಂಡುಬರುವ ವಾಯುಗುಣ ಸಮಶೀತೋಷ್ಣವಾಗಿದ್ದು ಚಳಿಗಾಲ ಹಿತಕರವಾಗಿಯೂ ಬೇಸಗೆ ತಂಪಾಗಿ ಇರುವುದು. ಇದು ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಇರುವುದರಿಂದ ಇದನ್ನು ಚಾನಲ್ ದ್ವೀಪವೆಂದು ಕರೆಯುತ್ತಾರೆ. ದಕ್ಷಿಣದಲ್ಲಿ ಇಳಿಜಾರಿರುವ ಪ್ರಸ್ಥಭೂಮಿ ಮತ್ತು ಉದ್ದನೆಯ ಮರಳಿನ ಕೊಲ್ಲಿ ಇರುವುದು. ಉತ್ತರದ ಕಡೆಗೆ ಒರಟಾದ ಕಡಿದಾದ ಬೆಟ್ಟದ ಮುಖಗಳು ಕಂಡುಬರುವುದು.

ಆರ್ಥಿಕತೆ ಮತ್ತು ಜನಜೀವನ: ಇಲ್ಲಿಯ ಆರ್ಥಿಕತೆ ಹೆಚ್ಚಾಗಿ ಹಣಕಾಸಿನ ಸೇವೆ, ಪ್ರವಾಸೋದ್ಯಮ, ಎಲೆಕ್ಟ್ರಾನಿಕ್ಸ್ ವಾಣಿಜ್ಯ ಮತ್ತು ವ್ಯವಸಾಯ. ಹಣಕಾಸಿನ ಸೇವೆಯು ಈ ದ್ವೀಪದ ಆರ್ಥಿಕತೆಯಲ್ಲಿ ಸು. ಶೇ. 60 ಭಾಗದಷ್ಟನ್ನು ಒದಗಿಸುತ್ತದೆ. ವ್ಯವಸಾಯದ ಮುಖ್ಯ ಉತ್ಪಾದನೆಗಳು ಆಲೂಗೆಡ್ಡೆ ಮತ್ತು ಹೈನಿನ ಉತ್ಪನ್ನಗಳು. ಜೆರ್ಸಿ ಹಸುವಿನ ಹಾಲು ಉತ್ಪಾದನೆ ಮುಖ್ಯವಾದುದು. ಮಾಂಸದ ಉತ್ಪಾದನೆ ಒಂದು ಮುಖ್ಯ ಕಸಬು. ಈ ದ್ವೀಪ ಬ್ರಿಟನ್ ದೇಶಕ್ಕೆ ಸೇರದಿದ್ದರೂ ದ್ವೀಪದ ರಕ್ಷಣೆಯ ಜವಾಬ್ದಾರಿಯನ್ನು ಬ್ರಿಟನ್ ವಹಿಸಿಕೊಂಡಿದೆ. ಜನಸಂಖ್ಯೆ 88,200 (2005) ಇಲ್ಲಿನ ಹಣ ಪೌಂಡು ಸ್ಟರ್ಲಿಂಗ್. (ಡಿ.ವೈ.)

**ಜೆಸ್ಸೋರ್:** ಬಾಂಗ್ಲಾ ದೇಶದ ಒಂದು ಜಿಲ್ಲೆ; ಅದರ ಆಡಳಿತ ಕೇಂದ್ರ. ಈ ಜಿಲ್ಲೆ ಗಂಗಾನದಿಯ ಮುಖಜಭೂಮಿಯ ಮಧ್ಯಭಾಗದಲ್ಲಿದೆ. ಉತ್ತರದಲ್ಲಿ ನದಿಯಾ, ದಕ್ಷಿಣದಲ್ಲಿ ಖುಲ್ನಾ, ಪಶ್ಚಿಮದಲ್ಲಿ ಭಾರತ (ಪಶ್ಚಿಮ ಬಂಗಾಳ) ಪೂರ್ವದಲ್ಲಿ ಮಧುಮತಿ ಮತ್ತು ಬಾರಾಸಿಯಾ ನದಿಗಳು ಇದರ ಮೇರೆಗಳು. ವಿಸ್ತೀರ್ಣ 9564 ಚ.ಕಿಮೀ. ನಗರದ ಜನಸಂಖ್ಯೆ 1,76,398.

ಇದು ಗಂಗಾನದಿಯ ಮೆಕ್ಕಲು ಮೈದಾನ, ಮುಖಜಭೂಮಿ. ದಕ್ಷಿಣ ಭಾಗ ಜೌಗು, ನದಿ ಮತ್ತು ಜಲಮಾರ್ಗಗಳು ಹಾಸುಹೊಕ್ಕಾಗಿ ಹರಿಯುತ್ತವೆ. ಮಧುಮತಿ ವಿನಾ ಉಳಿದ ನದಿಗಳಲ್ಲಿ ಹೂಳು ತುಂಬಿ ನೀರು ನಿಲ್ಲುವ ಕಾರಣ, ಮಳೆಗಾಲದ ಹೊರತು ಉಳಿದ ಕಾಲಗಳಲ್ಲಿ ಅವು ಸರೋವರಗಳಂತಿರುತ್ತವೆ. ಪೂರ್ವಭಾಗದಲ್ಲಿ ಹರಿಯುವ ಗಾರಿ ಮತ್ತು ಮಧುಮತಿ ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಕುಮಾರ್, ನಭಗಂಗಾ, ಚಿತ್ರಾ, ಕಬಡಕ್, ಬೈರಬ್ ಮತ್ತು ಇಚ್ಛಾಮತಿ–ಇವು ಇಲ್ಲಿಯ ಮುಖ್ಯ ನದಿಗಳು. ನದಿಗಳ ದಂಡೆಗುಂಟ ಉದ್ದಕ್ಕೂ ಮರಳುಮಿಶ್ರಿತ ಮೆಕ್ಕಲು ರಾಶಿ, ಕುರುಚಲು ವನ ಇವೆ. ಜೌಗು ಭಾಗಗಳಲ್ಲಿ ವಿವಿಧ ಜಲಸಸ್ಯಗಳುಂಟು. ಜಿಲ್ಲೆಯಲ್ಲಿ ಅರಣ್ಯಗಳಿಲ್ಲ. ಬಿದಿರು, ಬಾಬೂಲ್, ಆಲ, ಹುಣಿಸೆ ಮರಗಳು ಅಧಿಕ. ಚಿರತೆ, ಕಾಡುಹಂದಿ, ವಿವಿಧ ಜಲಚರಗಳು, ಪಕ್ಷಿಗಳು ಇವೆ.

ಪ್ರಾಚೀನ ಕಾಲದಲ್ಲಿ ಇದು ವಂಗ ರಾಜ್ಯದ ಭಾಗವಾಗಿತ್ತು. ಸು. 15ನೆಯ ಶತಮಾನದಲ್ಲಿ ಈ ಪ್ರದೇಶವನ್ನು ಗೌಳದೇಶದ (ಬಂಗಾಲದ) ಅರಸನಿಂದ ಜಹಗೀರಾಗಿ ಪಡೆದ ಖಾನ್‌ಜ ಅಲಿ, ಸುಂದರಬನ ಪ್ರದೇಶಕ್ಕೂ ಒಡೆಯನಾಗಿದ್ದ. ಅವನ ಕಾಲದಲ್ಲಿ ಕಟ್ಟಿಸಿದ ಮಸೀದಿ ಮತ್ತು ಸಮಾಧಿ ಭವನಗಳು ಈಗಲೂ ಖುಲ್ನಾ ಪ್ರದೇಶದಲ್ಲಿವೆ. 16ನೆಯ ಶತಮಾನದಲ್ಲಿ ಬಂಗಾಲದ ಕೊನೆಯ ಅರಸ ದಾವೂದ್‌ಖಾನನ ಮುಖ್ಯಮಂತ್ರಿ ರಾಜಾವಿಕ್ರಮಾದಿತ್ಯ ಅರಸನಿಂದ ಸುಂದರಬನಗಳ ಒಡೆತನವನ್ನು ಸನ್ನದಿನ ಮೂಲಕ ಪಡೆದು ಅಲ್ಲಿ ಯಶೋಹರ ಎಂಬ ನಗರವನ್ನು ಕಟ್ಟಿಸಿ ನೆಲೆಸಿದ. ಬ್ರಿಟಿಷರ ಆಳಿಕೆಯಲ್ಲಿ ಜೆಸ್ಸೂರ್ 24 ಪರಗಣ ಜಿಲ್ಲೆಗೆ ಸೇರಿತ್ತು. 1947ರಲ್ಲಿ ಇದು ಪೂರ್ವ ಪಾಕಿಸ್ತಾನಕ್ಕೆ ಸೇರಿತು. 1971ರಲ್ಲಿ ಬಾಂಗ್ಲಾದೇಶ ಸ್ಥಾಪನೆಗೊಂಡ ಮೇಲೆ ಅದರ ಒಂದು ಮುಖ್ಯ ಜಿಲ್ಲೆಯಾಗಿದೆ. ಹೊಗೆಸೊಪ್ಪು, ಕಬ್ಬು, ನೀಲಿ, ಬತ್ತ– ಇವು ಜಿಲ್ಲೆಯ ಮುಖ್ಯ ಬೆಳೆಗಳು. ಇಲ್ಲಿ ಈಚಲರಸದಿಂದ ತಾಳೆಬೆಲ್ಲ ತಯಾರಿಸುತ್ತಾರೆ. (ವಿ.ಜಿ.ಕೆ.)

**ಜೇಕೊಬಾಬಾದ್:** ಪಾಕಿಸ್ತಾನದ ಖೈರ್‌ಪುರ್ ವಿಭಾಗದ ಒಂದು ಜಿಲ್ಲೆ; ಜಿಲ್ಲಾ ಕೇಂದ್ರ. ಜನಸಂಖ್ಯೆ 14,25,572 (2000). ಜಿಲ್ಲೆಯ ಬಹುಭಾಗ ಸಿಂಧೂ ನದಿಯ ಪೂರ್ವತೀರದ ಇಳಿಜಾರು ಪ್ರದೇಶದಲ್ಲಿದ್ದು ಮೆಕ್ಕಲುಮಣ್ಣನ್ನು ಒಳಗೊಂಡಿದೆ. ಕಾಶ್ಮೀರ್ ಒಡ್ಡು ಈ ಪ್ರದೇಶವನ್ನು ಪ್ರವಾಹಗಳಿಂದ ರಕ್ಷಿಸುತ್ತದೆ. ನದಿಯ ಎರಡು ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯ ಪಡೆದು ಬೇಸಾಯ ಮಾಡುತ್ತಾರೆ. ಇಲ್ಲಿಯ ಸರಾಸರಿ ವಾರ್ಷಿಕ ಮಳೆ 10 ಸೆಂಮೀ.

ಜೇಕೊಬಾಬಾದ್ ಪಟ್ಟಣ ಇದೇ ಹೆಸರಿನ ತಾಲ್ಲೂಕಿನ ಕೇಂದ್ರ, ಜನಂಖ್ಯೆ 175162 (2000). ಇದಕ್ಕೆ ಒಂದು ಪೌರಸಭೆ ಇದೆ. ಪ್ರತಿವರ್ಷ ಇಲ್ಲಿಯ ಉಷ್ಣತೆ ಗರಿಷ್ಠಮಾನವನ್ನು ಮುಟ್ಟುವುದರಿಂದ ಈ ಪಟ್ಟಣ ಪ್ರಸಿದ್ಧವಾಗಿದೆ. ಇಂಗ್ಲಿಷರ ಆಡಳಿತದ ಕಾಲದಲ್ಲಿ ಸಿಂಧ್ ಅಶ್ವದಳದ ನಾಯಕನಾಗಿದ್ದ ಜನರಲ್ ಜೇಕಬ್ ಎಂಬಾತ 1847ರಲ್ಲಿ ಖಾನ್‌ಘರ್ ಎಂಬ ಹಳ್ಳಿಯ ಬಳಿ ಸ್ಥಾಪಿಸಿದ ಪಟ್ಟಣವೇ ಇಂದಿನ ಜೇಕಬಾಬಾದ್. ಈ ಅಧಿಕಾರಿಯ ನೆನಪಿಗಾಗಿ ಪ್ರತಿವರ್ಷ ಜನವರಿಯಲ್ಲಿ ಇಲ್ಲಿ ಅಶ್ವಪ್ರದರ್ಶನ ನಡೆಸಲಾಗುತ್ತದೆ. (ಕೆ.ಆರ್.ಆರ್.)

**ಜೇಡು:** ಶಿಲೆಗಳಲ್ಲಿರುವ ಫೆಲ್ಡ್‌ಸ್ಪಾರ್ ಮೊದಲಾದ ಅಲ್ಯುಮಿನೊ ಸಿಲಿಕೇಟ್ ಖನಿಜಗಳು ಶಿಥಿಲಹೊಂದಿ ರಾಸಾಯನಿಕ ಬದಲಾಣೆಗಳಿಗೆ ಒಳಗಾದಾಗ ದೊರೆಯುವ ಉತ್ಪನ್ನ (ಕ್ಲೇಸ್). ಕೆಲವೊಮ್ಮೆ ಆಳದಿಂದ ಹೊರ ಹೊಮ್ಮುತ್ತಿರುವ ಕಾದ ನೀರು, ಆವಿ ಮತ್ತು ಇತರ ಉಷ್ಣದ್ರವಗಳು ಶಿಲೆಯನ್ನು ಆವರಿಸಿ ಅದರಲ್ಲಿರುವ ಅಲ್ಯುಮಿನೊ ಸಿಲಿಕೇಟ್ ಖನಿಜಗಳನ್ನು ರಾಸಾಯನಿಕ ಬದಲಾವಣೆಗೆ ಒಳಪಡಿಸಿದಾಗಲೂ ಜೇಡು ಉತ್ಪತ್ತಿಯಾಗುತ್ತದೆ. ವಾಸ್ತವವಾಗಿ ಜೇಡು ಖನಿಜವಲ್ಲ. ಹಲವಾರು ಖನಿಜಗಳ ಹಾಗೂ ಕಲಾಯ್ಡಲ್ ಕಣಗಳ ಸಮೂಹವದು. ಈ ಸಮೂಹದ ಸಂಯೋಜನಾ ಘಟಕಗಳು ಬಹು ಸೂಕ್ಷ್ಮ. ಇವು ಎಲೆಕ್ಟ್ರಾನ್ ಸೂಕ್ಷ್ಮ ದರ್ಶಕದ ಮೂಲಕ ವೀಕ್ಷಿಸಿದಾಗ ಸ್ಪಷ್ಟಗೊಳ್ಳುತ್ತವೆ. ಇಲ್ಲವೆ ಎಕ್ಸ್‌ಕಿರಣ ಅಥವಾ ಡಿ.ಟಿ.ಎ. (ವ್ಯತ್ಯಾಸಾತ್ಮಕ ಉಷ್ಣತಾವಿಶ್ಲೇಷಣೆ) ವಿಧಾನಗಳಿಂದಲೂ ಇವನ್ನು ಗುರುತಿಸಲು ಸಾಧ್ಯ. ಹೀಗೆ ಗುರುತಿಸಿರುವ ಖನಿಜಗಳು ಈ ಮುಂದಿನವು:

ಅ. ಕಯೊಲಿನೈಟ್ ಸಮೂಹ : ಕಯೊಲಿನೈಟ್, ಡಿಕೈಟ್, ನ್ಯಾಕ್ರೈಟ್, ಅನೌಕ್ಸೈಟ್, ಹ್ಯಾಲಾಯ್‌ನೈಟ್, ಎಂಡೆಲೈಟ್.

ಆ. ಮಾಂಟ್‌ಮೊರಿಲೊನೈಟ್ ಸಮೂಹ : ಮಾಂಟ್‌ಮೊರಿಲೊನೈಟ್, ನಾನ್ ಟ್ರೊನೈಟ್, ನ್ಯಾಪೊನೈಟ್, ಬೀಡೆಲೈಟ್, ಹೆಕ್ಟೊರೈಟ್.

ಇ. ಜಲೀಯ ಮೈಕಾಗಳು : ಇಲ್ಲೈಟ್

ಈ. ಇತರೆಯವು : ಅಟ್ಟಾಪಲ್ಗೈಟ್, ಸೆಪಿಯೊಲೈಟ್, ಆ್ಯಲೊಫೇನ್.

ಉಪಯೋಗದ ಗುಣಗಳ ಆಧಾರದ ಮೇಲೆ ಜೇಡುನಿಕ್ಷೇಪಗಳ ವರ್ಗೀಕರಣವನ್ನು ಹೀಗೆ ಸೂಚಿಸಿದ್ದಾರೆ : ಕಯೊಲಿನ್ –ಚೀನಜೇಡು; ಕಾಗದಜೇಡು; ಚಂಡುಜೇಡು; ಬೆಂಕಿಜೇಡು, ಇಟ್ಟಿಗೆಜೇಡು; ಔಷಧೀಯ ಜೇಡು ಇತ್ಯಾದಿ. ಪ್ರಾಥಮಿಕ ಜೇಡು ಬಣ್ಣದಲ್ಲಿ ಬಿಳುಪಾಗಿದ್ದರೂ ದ್ವಿತೀಯಕ ಜೇಡಿಗಿಂತ ನಮ್ಯತೆ ಹಾಗೂ ಉಷ್ಣನಿರೋಧಕ ಗುಣಗಳಲ್ಲಿ ಉತ್ತಮವೆನಿಸುವುದಿಲ್ಲ.

**ಮುಖ್ಯ ಜೇಡುನಿಕ್ಷೇಪಗಳು :** ಇಂಗ್ಲೆಂಡಿನ ಕಾರ್ನವಾಲ್ ಮತ್ತು ಡೆವಾನ್ ಷೈರಿನ ಜೇಡುನಿಕ್ಷೇಪಗಳು ಬಹು ಪ್ರಸಿದ್ಧವಾದವು. ಈ ಪ್ರದೇಶದ ಗ್ರ್ಯಾನೈಟ್ ಜಲೋಷ್ಣಕ್ರಿಯೆಗಳಿಗೆ ಒಳಗಾಗುವುದರ ಮೂಲಕ ಉತ್ತಮ ಜೇಡುನಿಕ್ಷೇಪಗಳು ಉತ್ಪತ್ತಿಯಾಗಿವೆ. ಕೆಲವು ಗಣಿಗಳು 100 ಮೀ ಆಳವನ್ನೂ ಮುಟ್ಟಿವೆಯೆಂದರೆ ಈ ಕ್ರಿಯೆಯ ವ್ಯಾಪ್ತಿ ಅರ್ಥವಾಗುತ್ತದೆ.

ಹೀಗೆಯೇ ಚೆಕೊಸ್ಲೊವಾಕಿಯದ ನಿಕ್ಷೇಪಗಳು ಇಡೀ ಯುರೋಪು ಖಂಡದಲ್ಲೇ ಹೆಸರುವಾಸಿ. ಇಲ್ಲಿಯ ಜೆಟ್‌ಲಿಟ್ಸ್ ಮತ್ತು ಪಿಲ್ಸನ್ ನಿಕ್ಷೇಪಗಳನ್ನು ಹೆಸರಿಸಲೇಬೇಕು. ಜೆಟ್‌ಲಿಟ್ಸ್ ಪ್ರಾಂತ್ಯದ ಇಳಕಲು ಪ್ರದೇಶವೊಂದರಲ್ಲಿ ಲಿಗ್ನೈಟ್ ಹಾಗೂ ಬೆಸಾಲ್ಟ್ ಲಾವಾಸ್ತರಗಳ ಟರ್ಷಿಯರಿ ಯುಗದ ನಿಕ್ಷೇಪಗಳ ಅಡಿಯಲ್ಲಿ ಸು. 18ಮೀ ಆಳದವರೆಗೆ ಕಯೊಲಿನ್ (ಸುದ್ದೆಮಣ್ಣು) ವ್ಯಾಪಿಸಿರುವುದು ಗೋಚರವಾಗಿದೆ. ಸಾಮಾನ್ಯ ಶಿಥಿಲೀಕರಣ ಹಾಗೂ ಲಿಗ್ನೈಟ್ ಮೂಲಕ ಸ್ರವಿಸಿದ ದ್ರಾವಣಗಳು ಕಯೊಲಿನೀಕರಣಕ್ಕೆ ಮುಖ್ಯ ಕಾರಣವೆನಿಸಿವೆ. ಪಿಲ್ಸನ್ ಪ್ರದೇಶದಲ್ಲಿ ಕಾರ್ಬಾನಿಫೆರಸ್ ಯುಗಕ್ಕೆ ಸೇರಿದ ಫೆಲ್ಡ್‌ಸ್ಪಾತಿಕ್ ವಸ್ತುವಿನಿಂದಾದ ಆರ್ಕೋಸಿಕ್ ಮರಳುಶಿಲೆಗಳೇ ಕಯೊಲಿನ್ನಿನ ಉತ್ಪತ್ತಿಗೆ ಮೂಲ ಆಗರವೆನಿಸಿವೆ. ಇಲ್ಲಿಯ ಸುದ್ದೆಮಣ್ಣು ಬಲುಶ್ರೇಷ್ಠ ದರ್ಜೆಯದು. ಈ ನಿಕ್ಷೇಪದ ಮೇಲೆ ವ್ಯಾಪಿಸಿರುವ ಪೀಟಿನ ಶಿಥಿಲೀಕರಣದಿಂದ ಸ್ರವಿಸಿದ ದ್ರಾವಣಗಳೇ ಕಯೊಲಿನ್ನಿನ ಉತ್ಪತ್ತಿಗೆ ಮೂಲ ಕಾರಣವೆನಿಸಿವೆ. ಜರ್ಮನಿಯ ಸ್ಯಾಕ್ಸನಿ ಮತ್ತು ಬವೇರಿಯ ಪ್ರಾಂತ್ಯಗಳಲ್ಲೂ ಉತ್ತಮ ನಿಕ್ಷೇಪಗಳಿವೆ. ಇಲ್ಲಿಯೂ ಸಸ್ಯಾಂಗಾರದ ಸ್ತರಗಳ ಮೂಲಕ ಸ್ರವಿಸಿದ ಆಮ್ಲೀಯ ದ್ರಾವಣಗಳು ಕಯೊಲಿನಿನ ಉತ್ಪತ್ತಿಗೆ ಮೂಲಕಾರಣವಾಗಿವೆ. ಚೀನದಲ್ಲೂ ಬಲು ದೊಡ್ಡ ಸುದ್ದೆಮಣ್ಣಿನ ನಿಕ್ಷೇಪಗಳಿವೆ. ಇಲ್ಲಿಯ ಚಿಮೆನ್ ಪ್ರಾಂತ್ಯದ ಸುದ್ದೆಮಣ್ಣು ಅತ್ಯುತ್ತಮವಾದುದು. ಇದರಿಂದ ಮಾಡುವ ಪಿಂಗಾಣಿ ಸಾಮಾನುಗಳು ಪ್ರಪಂಚದಲ್ಲೇ ಹೆಸರುವಾಸಿಯಾದವು. ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಉತ್ತರ ಕರೋಲೀನ, ವರ್ಜೀನಿಯ ಮತ್ತು ಜಾರ್ಜಿಯ ಪ್ರಾಂತಗಳಲ್ಲಿ ಉತ್ತಮ ಬಿಳಿಜೇಡು ನಿಕ್ಷೇಪಗಳಿವೆ. ಇವು ಬಲುಮಟ್ಟಿಗೆ ಪೆಗ್ಮಟೈಟ್ ಒಡ್ಡುಗಳಲ್ಲಿ ಉತ್ಪತ್ತಿಯಾದವು. ಭಾರತದ ಹಲವಾರು ರಾಜ್ಯಗಳಲ್ಲಿ ಸಾಕಷ್ಟು ಉತ್ತಮ ದರ್ಜೆಯ ಜೇಡು ಹಾಗೂ ಸುದ್ದೆಮಣ್ಣಿನ ನಿಕ್ಷೇಪಗಳಿವೆ. ಬೆಂಗಳೂರು, ಹಾಸನ, ತುಮಕೂರು, ಬಳ್ಳಾರಿ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಉತ್ತಮ ದರ್ಜೆಯ ಸುದ್ದೆಮಣ್ಣಿನ ನಿಕ್ಷೇಪಗಳುಂಟು. ಬಳ್ಳಾರಿ ಜಿಲ್ಲೆಯ ಹಾಲುವಾಗಲು ಬಳಿಯ ನಿಕ್ಷೇಪ ಬಲು ವಿಸ್ತಾರವಾಗಿದೆ. ಇದು ನೆಲಮಟ್ಟದಿಂದ 6 ಮೀ ಆಳದವರೆಗೆ ವ್ಯಾಪಿಸಿದೆ. ಇಲ್ಲಿ ಸು. 1,80,000 ಟನ್ ಬಿಳಿಜೇಡು ಸಿಗಬಹುದು. ಹರಪನಹಳ್ಳಿಯ ಕೊಂಗನ ಹೊಸೂರು ಬಳಿ ಸು. 1,00,000 ಟನ್ನುಗಳ ಮತ್ತೊಂದು ಭಾರಿ ನಿಕ್ಷೇಪವಿದೆ. ಬೆಂಗಳೂರು ಜಿಲ್ಲೆಯ ಗೊಲ್ಲಹಳ್ಳಿ, ಯಶವಂತಪುರ, ಪೀಣ್ಯ, ಮುತ್ತಾನಲ್ಲೂರು, ಸೋಲದೇವನಹಳ್ಳಿ, ನಂದಗುಡಿ ಮುಂತಾದೆಡೆಗಳಲ್ಲಿ ಸುದ್ದೆ ಹಾಗೂ ಜೇಡಿಮಣ್ಣು ದೊರೆಯುತ್ತವೆ. ಹಾಸನಜಿಲ್ಲೆಯ ಬಾಗೇಶಪುರ, ನಂದಿಹಳ್ಳಿಯ ಸುತ್ತಲ ಪ್ರದೇಶಗಳಲ್ಲಿ ಸು. 2,50,000 ಟನ್ನುಗಳಷ್ಟು ಸುದ್ದೆಮಣ್ಣು ದೊರೆಯುವ ನಿರೀಕ್ಷೆ ಉಂಟು. ಅಲ್ಲದೆ ಕಾರವಾರ ಜಿಲ್ಲೆ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರಗಳ ಸುತ್ತಮುತ್ತ ಗಣಿಕೆಲಸಕ್ಕೆ ಯೋಗ್ಯವಾದ ಹಲವಾರು ನಿಕ್ಷೇಪಗಳಿವೆ.

**ಉಪಯೋಗಗಳು :** ಜೇಡಿಮಣ್ಣಿನ ಉಪಯೋಗಗಳು ಹಲವಾರು. ಇವುಗಳಲ್ಲಿ ಕೆಲವನ್ನು ಮಾತ್ರ ಹೆಸರಿಸಲಾಗಿದೆ. ದಿನಬಳಕೆಯ ಮಡಿಕೆ, ಕುಡಿಕೆಗಳು, ಇಟ್ಟಿಗೆ ಹೆಂಚು ಇವುಗಳ ತಯಾರಿಕೆಗಂತೂ ಜೇಡು ಬಹು ಅವಶ್ಯಕ. ಉತ್ತಮ ದರ್ಜೆಯ ಸುದ್ದೆಮಣ್ಣನ್ನು ದ್ರವಬಣ್ಣಗಳು, ವಿದ್ಯುದುಪಕರಣಗಳು, ಶಾಖ ನಿರೋಧಕ ಇಟ್ಟಿಗೆಗಳು, ಕಾಗದ, ಕುಂಭಕಲೆ, ಪಿಂಗಾಣಿ ಸಾಮಾನುಗಳು ಇವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಸುದ್ದೆಮಣ್ಣಿಗೆ ಹಲವಾರು ಔಷಧೀಯ ಗುಣಗಳೂ ಉಂಟು. (ಬಿ.ವಿ.ಜಿ.)

**ಜೇಡುಶಿಲೆ:** ಸೂಕ್ಷ್ಮಕಣಗಳಿಗಿಂತಲೂ ಸೂಕ್ಷ್ಮವಾದ ಆದರೆ ನಿರ್ದಿಷ್ಟವಾದ ಸ್ತರಗಳನ್ನೂ ವಿಶಿಷ್ಟ ಸೀಳುಪದರುಗಳನ್ನೂ ಪಡೆದಿರುವ ಒಂದು ಬಗೆಯ ಮಡ್ಡಿಶಿಲೆ (ಷೇಲ್). ಜೇಡುಶಿಲೆಯಲ್ಲಿ ಪ್ರಮುಖವಾಗಿ ಬೆಣಚು, ಜೇಡುಗಳು ಮತ್ತು ಇನ್ನಿತರ ಖನಿಜಗಳು ಸಾಮಾನ್ಯವಾಗಿ ಸಮ ಸಮವಾಗಿ ಬೆರೆತಿರುತ್ತವೆ. ಕ್ಯಾಲ್ಸಿಯಮ್ ಕಾರ್ಬೊನೇಟಿನ ಪ್ರಮಾಣ ಅರ್ಧಕ್ಕಿಂತ ಹೆಚ್ಚಾದರೆ ಆಗ ಅದನ್ನು ಮಾರ್ಲ್ ಎಂದು ಕರೆಯುತ್ತಾರೆ. ರಾಸಾಯನಿಕವಾಗಿ ಸಾಮಾನ್ಯ ಜೇಡುಶಿಲೆಯಲ್ಲಿ ಇತರ ಲೋಹಗಳ ಆಕ್ಸೈಡುಗಳು ಉಂಟು. ಜೇಡುಶಿಲೆಯ ರಾಸಾಯನಿಕ ಸಂಯೋಜನೆ ಕಣಗಳ ಅಳತೆ ಮತ್ತು ಶಿಲೆಯ ಬಣ್ಣಗಳೊಡನೆ ನಿಕಟ ಸಂಬಂಧ ಪಡೆದಿದೆ. ಜೇಡುಶಿಲೆಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಸೂಕ್ಷ್ಮಪರ್ಣಗಳನ್ನಾಗಿ ಸೀಳಬಹುದು. ಶಿಲೆಯಲ್ಲಿ ಇರುವ ಸೂಕ್ಷ್ಮ ಹಾಗೂ ಫಲಕಾಕಾರದ (ಪ್ಲೇಟ್) ಖನಿಜಗಳು ಒಂದಕ್ಕೊಂದು ಸಮಾಂತರವಾಗಿ ಹಾಗೂ ತಮ್ಮ ನೀಳ ಅಕ್ಷಗಳನ್ನು ಈ ದಿಕ್ಕಿನಲ್ಲಿ ಹೊಂದಿಸಿಕೊಂಡಿರುವುದೇ ಇದರ ಕಾರಣ.

ಜೇಡುಶಿಲೆಗಳನ್ನು ವರ್ಗೀಕರಿಸುವ ರೀತಿಗೆ ವಿಜ್ಞಾನಿಗಳಲ್ಲಿ ಒಮ್ಮತವಿಲ್ಲ. ಕೆಲವರು ಅವುಗಳ ಖನಿಜಗಳನ್ನು ಆಧರಿಸಿ, ಕೆಲವರು ಅವುಗಳ ಬಣ್ಣಗಳನ್ನು ಆಧರಿಸಿ ವರ್ಗೀಕರಿಸುತ್ತಾರೆ. ಈ ಶಿಲೆಯ ಅತಿಸೂಕ್ಷ್ಮ ಕಣಗಳನ್ನು ಮತ್ತು ವ್ಯವಸ್ಥಿತವಾದ ಸ್ತರಗಳನ್ನು ಗಮನಿಸಿದರೆ ಜೇಡುಶಿಲೆಗಳು ಹೆಚ್ಚು ಶಾಂತವಾದ ಮತ್ತು ಕನಿಷ್ಠ 15 ಮೀಟರುಗಳಿಗಿಂತಲೂ ಹೆಚ್ಚು ಆಳವಾದ ಸಾಗರದ ತಳದಲ್ಲಿ ಸಂಚಯನಗೊಂಡಿರಬೇಕೆಂಬುದನ್ನು ಬಹುಶಃ ಎಲ್ಲ ವಿಜ್ಞಾನಿಗಳೂ ಒಪ್ಪುತ್ತಾರೆ. ಜೇಡುಶಿಲೆ ಅವ್ಯಾಪ್ಯ ಶಿಲೆ. ಆದ್ದರಿಂದ ಇದು ಅಂತರ್ಜಲ ಸಂಗ್ರಹಕ್ಕೆ ತುಲನಾತ್ಮಕವಾಗಿ ಯೋಗ್ಯವಾದ ಶಿಲೆ ಅಲ್ಲ; ಆದರೆ ಈ ಅವಗುಣವೇ ಕಲ್ಲೆಣ್ಣೆಯ ಸಂಗ್ರಹಕ್ಕೆ ಅಪೇಕ್ಷಾರ್ಹ ಗುಣವಾಗಿದೆ. ಬಹುಸಂಖ್ಯಾತ ಕಲ್ಲೆಣ್ಣೆಯ ಸಂಗ್ರಹಣಾ ರಚನೆಗಳಲ್ಲಿ ಜೇಡುಶಿಲೆ ಶಿರೋಶಿಲೆಯಾಗಿದೆ. ಇದು ನೈಸರ್ಗಿಕ ತೈಲ ಮತ್ತು ಅನಿಲಗಳ ಸಂಗ್ರಹಕ್ಕೆ ಬಲು ಸಹಕಾರಿಯಾಗಿದೆ. (ಎಚ್.ಸಿ.ಎಸ್.)

**ಜೇಮ್ಸ್ ರೆನ್ನೆಲ್:** 1742–1830. ಇಂಗ್ಲೆಂಡಿನ ಪ್ರತಿಭಾವಂತ ಭೂಗೋಳಶಾಸ್ತ್ರಜ್ಞ, ಚರಿತ್ರಕಾರ ಹಾಗೂ ಸಾಗರ ವಿಜ್ಞಾನಿ. ಇವರು ಇಂಗ್ಲೆಂಡಿನ ಡೆವೆನ್ ಪ್ರಾಂತ್ಯದ ಚುಡ್ಲಿಯಲ್ಲಿ 1742ರಲ್ಲಿ ಜನಿಸಿದರು. ಇವರು ಹುಟ್ಟಿದ ಕೆಲವೇ ದಿನಗಳಲ್ಲಿ ಇವರ ತಂದೆ ಫಿರಂಗಿ ಧಾಳಿಯಲ್ಲಿ ನಿಧನರಾದರು. ರೆನ್ನೆಲ್ ಅವರು1756ರಲ್ಲಿ ಹಡಗಿನ ಮೇಲ್ವಿಚಾರಕರಾಗಿ ನೌಕಾಪಡೆಯನ್ನು ಸೇರಿದರು. ಏಳುವರ್ಷಗಳ ನಿರಂತರ ಸೇವೆಯ ಅನಂತರವೂ ಇವರಿಗೆ ಯಾವ ಬಡ್ತಿಯೂ ಸಿಗದಿದ್ದರಿಂದ ಹತಾಶಗೊಂಡ ಇವರು 1764ರಲ್ಲಿ ಬಂಗಾಲದ ಈಸ್ಟ್ ಇಂಡಿಯ ಕಂಪನಿಯಲ್ಲಿ ಮೋಜಣಿದಾರರಾಗಿ ಸೇರಿಕೊಂಡರು. ಈ ಹುದ್ದೆಯಲ್ಲಿ ಇವರು 13 ವರ್ಷಗಳನ್ನು ಕಳೆದರು. 1766ರಲ್ಲಿ ಬಂಗಾಲದ ಕೆಲವು ಧರ್ಮಾಂಧ ಸನ್ಯಾಸಿಗಳ ಜೊತೆ ನಡೆದ ಸಂಘರ್ಷದಲ್ಲಿ ತೀವ್ರಗಾಯಗೊಂಡರು. 1777 ರಲ್ಲಿ ಇವರು ಮೇಜರ್ ಆಗಿ ನಿವೃತ್ತಿ ಹೊಂದಿದರು.

ಇವರ ಜೀವಿತದ ಉಳಿದ 53 ವರ್ಷಗಳನ್ನು ಲಂಡನ್ನಿನಲ್ಲಿ ಭೌಗೋಳಿಕ ಸಂಶೋಧನೆಯಲ್ಲಿ ಕಳೆದರು. ಈಸ್ಟ್ ಇಂಡಿಯ ಕಂಪನಿಯಲ್ಲಿ ಕೆಲಸಮಾಡುವಾಗ ಕಲೆಹಾಕಿದ ಅಂಕಿ ಅಂಶಗಳ ಆಧಾರದ ಮೇಲೆ ಇವರು ಅನೇಕ ಸಂಶೋಧನೆಗಳನ್ನು ನಡೆಸಿದರು. ಇವರು 1779ರಲ್ಲಿ ರಚಿಸಿದ ಬಂಗಾಲದ ಅಟ್ಲಾಸ್, 1783ರಲ್ಲಿ ರಚಿಸಿದ ಹೆಚ್ಚು ನಿಖರವಾದ ಮೊದಲನೆಯ ಭಾರತದ ಭೂಪಟ. ಅಲ್ಲದೆ 1831ರಲ್ಲಿ ಪಶ್ಚಿಮ ಏಷ್ಯದ ತೌಲನಿಕ ಭೂಗೋಳ ವಿಜ್ಞಾನಕ್ಕೆ ನೀಡಿದ ಕೊಡುಗೆ–ಇವು ಮುಖ್ಯವಾದವುಗಳು. ಇವರು ಉತ್ತರ ಆಫ್ರಿಕದ ಭೌಗೋಳಿಕ ಅಂಶಗಳ ಮೇಲೂ ಅನೇಕ ಗ್ರಂಥಗಳನ್ನು ಬರೆದರು.



ಭೌಗೋಳಿಕ ಹಾಗೂ ಐತಿಹಾಸಿಕ ವಿಷಯಗಳ ಸಮಗ್ರ ಅಧ್ಯಯನದ ಹೊರತಾಗಿ ಇವರು ಜಲರಾಶಿವಿವರಣಾಶಾಸ್ತ್ರಕ್ಕೆ ನೀಡಿದ ಕೊಡುಗೆ ಈ ಹೊತ್ತಿಗೂ ಅತ್ಯಂತ ಮಹತ್ತರವಾಗಿದೆ. ಅಟ್ಲಾಂಟಿಕ್ ಹಾಗೂ ಹಿಂದೂ ಮಹಾಸಾಗರಗಳ ಮೇಲೆ ನಡೆಸಿದ ಇವರ ಅಂತಿಮ ಸಂಶೋಧನೆಗಳು ಹಾಗೂ ಇವರ ಕಾಲಾನಂತರ ಇವರ ಮಗಳು 1832ರಲ್ಲಿ ಪ್ರಕಟಿಸಿದ ಅಟ್ಲಾಂಟಿಕ್ ಮಹಾಸಾಗರದ ಪ್ರವಾಹಗಳು ಎಂಬ ಕೃತಿ 1936ರವರೆಗೂ ಒಂದು ದಾಖಲೆಯಾಗಿತ್ತು. ರೆನ್ನೆಲ್ ಅವರು ನಿವೃತ್ತಿಯ ತರುವಾಯ ಭಾರತದಿಂದ ಇಂಗ್ಲೆಂಡಿಗೆ ಸಂಸಾರದೊಂದಿಗೆ ಹಡಗಿನಲ್ಲಿ ವಾಪಸ್ಸಾಗುವ ಸಮಯದಲ್ಲಿ ಕಲೆಹಾಕಿದ ಅಂಕಿ ಅಂಶಗಳ ಆಧಾರದ ಮೇಲೆ ಕೇಪ್ ಆಫ್ ಗುಡ್‌ಹೋಪ್ ಭೂಶಿರದ ಅಧಿಕೃತ ನಕ್ಷೆಯನ್ನು ತಯಾರಿಸಿದರಲ್ಲದೆ ಅಗುಲ್ಲಾದ ಪ್ರವಾಹಗಳು ಹಾಗೂ ತೀರಗಳು ಎಂಬ ಗ್ರಂಥವನ್ನು 1778ರಲ್ಲಿ ಪ್ರಕಟಿಸಿದರು. ಇದು ಸಾಗರ ವಿಜ್ಞಾನಕ್ಕೆ ನೀಡಿದ ಅತ್ಯಂತ ಮಹತ್ವದ ಕೊಡುಗೆ.

ಇವರು 1781ರಲ್ಲಿ ರಾಯಲ್ ಸೊಸೈಟಿಯ ಸದಸ್ಯರಾಗಿ ಆಯ್ಕೆಗೊಂಡರು. 1791ರಲ್ಲಿ ಇದೇ ಸಂಸ್ಥೆಯು ಕೊಪ್ಲೆ ಚಿನ್ನದ ಪದಕವನ್ನೂ 1825ರಲ್ಲಿ ರಾಯಲ್ ಸೊಸೈಟಿ ಆಫ್ ಲಿಟರೇಚರ್ ಚಿನ್ನದ ಪದಕವನ್ನೂ ನೀಡಿ ಗೌರವಿಸಿತು. (ಪಿ.ಎಂ.)

**ಜೇಮ್ಸ್ ಹಟ್ಟನ್:** 1726–1797. ಸ್ಕಾಟ್ಲೆಂಡಿನ ಭೂವಿಜ್ಞಾನಿ. 1726 ಜೂನ್ 3 ರಂದು ಎಡಿನ್‌ಬರ್ಗ್‌ನಲ್ಲಿ ಜನಿಸಿದ. ಈತನನ್ನು ಆಧುನಿಕ ಭೂ ವಿಜ್ಞಾನದ ಪಿತಾಮಹ ಎಂದು ಕರೆಯಲಾಗುತ್ತದೆ. ರಾಯಲ್ ಹೈಸ್ಕೂಲಿನಲ್ಲಿ ಶಿಕ್ಷಣ ಪಡೆದು ಕಾನೂನುಶಾಸ್ತ್ರ ಮತ್ತು ವೈದ್ಯಶಾಸ್ತ್ರದಲ್ಲಿ ತರಬೇತಿ ಪಡೆದ. ಪ್ರಾಕೃತಿಕ ವಿಜ್ಞಾನ, ಭೂಗರ್ಭಶಾಸ್ತ್ರದ ಕಡೆ ಆಕರ್ಷಿತನಾಗಿದ್ದ. ಭೂಸಾದೃಶ್ಯಗಳು ಹಾಗೂ ಶಿಲೆಯ ನಿರ್ಮಾಣದ ಬಗ್ಗೆ ಚಿಂತನೆ ನಡೆಸಿದ. ಎಡಿನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಪ್ರವೇಶಪಡೆದು ಸ್ಕಾಟಿಷ್ ಮೇಧಾವಿಗಳ ಪರಿಚಯದಿಂದ ಜ್ಞಾನ ದಾಹವನ್ನು ಹೆಚ್ಚಿಸಿಕೊಂಡ. ತತ್ವಶಾಸ್ತ್ರಜ್ಞ ಡೇವಿಡ್ ಹ್ಯೂಮ್ ಮತ್ತು ಅರ್ಥಶಾಸ್ತ್ರಜ್ಞ ಆಡಂ ಸ್ಮಿತ್‌ರ ಒಡನಾಟದಲ್ಲಿ ಹೆಚ್ಚಿನ ಜ್ಞಾನಸಂಪಾದಿಸಿದ. ಇವನ ಪ್ರಮುಖ ಭೂ ವಿಜ್ಞಾನದ ಕೊಡುಗೆ ಪ್ರಸ್ತುತ ಭೂತಕಾಲದ ಕೀಲಿಕೈ ಎಂದು ಇದು ಹಟ್ಟನ್ ಅರಿತ ಪರಮ ಸತ್ಯ.

ಸ್ಕಾಟಿಷ್ ಹೈಲೆಂಡ್ ಪ್ರದೇಶದಲ್ಲಿ ಈತ ಗ್ರಾನೈಟ್ ಶಿಲೆಗಳು ರೂಪಾಂತರ ಶಿಲೆಗಳನ್ನು ಭೇದಿಸಿರುವ ಶಿಷ್ಟಗಳನ್ನು ವೀಕ್ಷಿಸಿದ. ಈ ಗ್ರಾನೈಟ್ ಶಿಲೆಗಳು ಒಂದೊಮ್ಮೆ ದ್ರವರೂಪದಲ್ಲಿದ್ದು, ದ್ರವರೂಪವು ಕ್ರಮೇಣ ತಣ್ಣಗಾಗಿ, ಶಿಲೆಯಾಗಿರುವುದನ್ನು ಗಮನಿಸಿದ. ಗ್ರಾನೈಟ್ ಶಿಲೆ ಶಿಷ್ಟ ಶಿಲೆಗಿಂತ ಎಳೆಯದಾಗಿತ್ತು, ಇದೇ ಪ್ರಕಾರದಲ್ಲಿ ಜಲಜಶಿಲೆಗಳಲ್ಲಿ ಜ್ವಾಲಾಮುಖಿ ಶಿಲೆಗಳು ಭೇದಿಸಿರುವುದನ್ನು ಎಡಿನ್‌ಬರ್ಗ್‌ನ ಸಲಿಸ್‌ಬರಿ ಕ್ರಾಗ್ಸ್ ಹಾಗೂ ಅದರ ಸನಿಹದ ಆರ್ಥರ್ಸ್ ಸೀಟ್ ಪ್ರದೇಶದಲ್ಲಿ ಗುರುತಿಸಿದ. ಅದನ್ನು ಹಟ್ಟನ್ ವಿಭಾಗ ಎಂದೇ ಕರೆಯಲಾಗುತ್ತದೆ.

ಇದೇ ಪ್ರಕಾರವಾಗಿ ಎಡಿನ್‌ಬರ್ಗ್‌ನಿಂದ ಸು. 50 ಕಿಮೀ ದೂರದಲ್ಲಿ ಡುನ್‌ಬಾರ್ ಮತ್ತು ಐಮೌತ್‌ಗಳ ನಡುವಿನ ಕಡಿದಾದ ತಗ್ಗುಭಾಗದ ಬಂಡೆಗಳಲ್ಲಿ ಶಿಲಾ ಪದರುಗಳು ಕಂದುಬಣ್ಣದ ಶೆಲ್ ಊರ್ಧ್ವವಾಗಿ ಬಾಗಿರುವುದನ್ನು ಗಮನಿಸಿದ. ಇವುಗಳ ಮಧ್ಯ ಮತ್ತು ತಳಪದರುಗಳು ಕಡಿದಾದ ಬಂಡೆಗಳಾಗಿದ್ದವು ಎಂಬುದನ್ನು ಹಟ್ಟನ್ ಗುರ್ತಿಸಿ ಹಲವು ಆವರ್ತನಗಳಿಂದ ಜಲಜಕಣ ಸಂಗ್ರಹಣೆ ಹೀಗಾಗಿರುತ್ತವೆ ಎಂದು ತಿಳಿಸಿದ, ಹಾಗೆಯೆ ಪ್ರತಿ ಆವರ್ತ ಪದರ ಸಮುದ್ರತಳಭಾಗದಲ್ಲಿ ರೂಪುಗೊಂಡಿರಬಹುದು ಎಂದು ಅಭಿಪ್ರಾಯಪಟ್ಟ. 1786ರಲ್ಲಿ ಸಿಸರ್ ಪ್ರದೇಶದಲ್ಲಿ ಭೂ ಕಾಲಘಟ್ಟಕ್ಕೆ ಸಂಬಂಧಿಸಿದ ಈ ಪ್ರಕಾರದ ಸ್ಥಳವನ್ನು ಗುರ್ತಿಸಿದ ಈ ಕುರುಹು ಶಿಲೆಗಳ ಪ್ರಾರಂಭಿಕ ವ್ಯವಸ್ಥೆಯನ್ನು ವಿವರಿಸುತ್ತದೆ. ಆದರೆ ನಿರೀಕ್ಷೆಯ ಅಂತ್ಯವನ್ನಲ್ಲ ಎಂದು ತಿಳಿಸಿದ. 1788ರಲ್ಲಿ ಈತನ ಮಿತ್ರರಾದ ಜೇಮ್ಸ್ ಹಾಲ್ ಮತ್ತು ಜಾನ್ ಪ್ಲೆಫೇರ್‌ರವರ ಜೊತೆ ಈ ಪ್ರದೇಶದ ಪದರು ಶಿಲೆಗಳನ್ನು ವೀಕ್ಷಿಸಿದ. ಕಾಲದ ಆಳವನ್ನು ಗಮನಿಸಿದರೆ ಜ್ಞಾನ ಪರಿಭ್ರಮಿಸುತ್ತ ವಿಕಸಿಸುತ್ತದೆ ಎಂದು ವ್ಯಾಖ್ಯಾನಿಸಿದ. ಈತನ ಮಹತ್ತರವಾದ ಕೊಡುಗೆ ಏಕರೂಪತಾತತ್ವ. ಅಥವಾ ಡಾಕ್ಟ್ರೀನ್ ಆಫ್ ಯೂನಿಫಾರ್ಮಿಟೇರಿಯಾನಿಸಂ. ಇದರ ಅರ್ಥ ಭೂಮಿಯ ಮೇಲಿನ ಎಲ್ಲಾ ಭೂಸಾದೃಶ್ಯಗಳು ಕಾಲಕ್ರಮದಲ್ಲಿ ಒಂದೇ ರೂಪವನ್ನು ಪಡೆಯುತ್ತವೆ. ಹಾಗೂ ಅವುಗಳ ಮೇಲ್ಮೈ ಸ್ವಾಭಾವಿಕ ಕತೃಗಳ ಪ್ರಭಾವಕ್ಕೆ ಸಿಕ್ಕು ಒಂದೇ ತೆರನಾಗುತ್ತಿವೆ. ಭೂಮಿಯ ಮೇಲ್ಮೈಯಲ್ಲಿ ಹಠಾತ್ತಾಗಿ ಮತ್ತು ತೀವ್ರವಾಗಿ ಸಂಭವಿಸುವ ಬದಲಾವಣೆಗಳಾದ ಸಂಯೋಜನೆ ದ್ರವೀಭವನ ಅಥವಾ ವಿಭಜನೆ ಮತ್ತು ಪುನಃ ಯಥಾಸ್ಥಿತಿಗೆ ಭೂ ಮೇಲ್ಮೈ ಪರಿವರ್ತನೆಗೊಳ್ಳುವ ಅಂಶವನ್ನು ಏಕರೂಪತಾತತ್ವ ವಿವರಿಸುತ್ತದೆ.

(ಎಸ್.ಎಸ್.ಎನ್.)

**ಜೇವರಗಿ:** ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು; ಅದರ ಮುಖ್ಯ ಸ್ಥಳ. ಮೊದಲು ಇದನ್ನು ಆಂದೋಲಾ ಎಂದು ಕರೆಯಲಾಗುತ್ತಿತ್ತು. ತಾಲ್ಲೂಕಿನ ಮುಖ್ಯಸ್ಥಳವಾದ ಜೇವರಗಿಯಲ್ಲಿ ಅನೇಕ ಬಸದಿಗಳಿವೆ. ಇದು ಜೈನರ ಯಾತ್ರಾಸ್ಥಳ. ಈ ಪಟ್ಟಣದ ಉತ್ತರಕ್ಕೆ ಭೀಮಾನದಿ ಹರಿಯುತ್ತದೆ. ಗುಲ್ಬರ್ಗ–ಬಿಜಾಪುರ ಮಾರ್ಗ ಜೇವರಗಿ ಪಟ್ಟಣದ ಮೂಲಕ ಹಾಯ್ದು ಹೋಗುತ್ತದೆ.

ಜೇವರಗಿ ತಾಲ್ಲೂಕಿನ ವಿಸ್ತೀರ್ಣ 1,932.6 ಚ.ಕಿಮೀ. ಜನಸಂಖ್ಯೆ 2,34,825. ತಾಲ್ಲೂಕಿನಲ್ಲಿ ಐದು ಉಪವಿಭಾಗಗಳಿವೆ – ಜೇವರಗಿ, ಇಜೇರಿ, ನೆಲೋಗಿ, ಯಡ್ರಾಮಿ ಮತ್ತು ಆಂದೋಲಾ. ತಾಲ್ಲೂಕಿನಲ್ಲಿರುವ ಹಳ್ಳಿಗಳು 162. ಫೆಬ್ರವರಿ ಅಂತ್ಯದಿಂದ ಜೂನ್ ತಿಂಗಳ ಮೊದಲ ವಾರದವರೆಗೆ ಅತಿಹೆಚ್ಚು ಬಿಸಿಲು. ವಾರ್ಷಿಕ ಸರಾಸರಿ ಮಳೆ 60 ಸೆಂಮೀ. ತಾಲ್ಲೂಕಿನದು ಆರೋಗ್ಯಕರವಾದ ಶುಷ್ಕ ವಾಯುಗುಣ. ಈ ತಾಲ್ಲೂಕಿನಲ್ಲಿ ಸುಣ್ಣದ ಕಲ್ಲು ಹೇರಳವಾಗಿ ಸಿಗುತ್ತದೆ. ಅದನ್ನು ವಾಡಿ ಹಾಗೂ ಶಾಹಬಾದ್ ಸಿಮೆಂಟ್ ಕಾರ್ಖಾನೆಗಳಿಗೆ ಕಳಿಸುತ್ತಾರೆ. ಇಲ್ಲಿಯದು ಫಲವತ್ತಾದ ಕಪ್ಪುಭೂಮಿ. ಜನರ ಪ್ರಧಾನ ಕಸಬು ಕೃಷಿ. ಜೋಳ, ಸಜ್ಜೆ, ಗೋದಿ, ಮೆಣಸಿನಕಾಯಿ, ಹತ್ತಿ, ಎಣ್ಣೆಕಾಳುಗಳು–ಇವು ಇಲ್ಲಿಯ ಕೃಷಿ ಉತ್ಪನ್ನಗಳು, ತಾಲ್ಲೂಕಿನ ಉತ್ತರ ಭಾಗದಲ್ಲಿ ಭೀಮಾನದಿಯ ನೀರನ್ನು ಸ್ವಲ್ಪಮಟ್ಟಿಗೆ ಬಳಸಿಕೊಳ್ಳುತ್ತಾರೆ. ತಾಲ್ಲೂಕಿನ ಬಹುಭಾಗದಲ್ಲಿ ಮಳೆಯನ್ನೇ ಆಶ್ರಯಿಸಿ ಬೆಳೆ ತೆಗೆಯುತ್ತಾರೆ. ಗುಲ್ಬರ್ಗ ಜಿಲ್ಲೆಯ ಇತರ ಭಾಗಗಳಂತೆ ಇದೂ ಅನೇಕ ಬಾರಿ ಅಭಾವ ಪರಿಸ್ಥಿತಿಗೆ ಒಳಗಾಗಿದೆ. ಇಲ್ಲಿ ಪುರಸಭೆಯಿದೆ. ಜನಸಂಖ್ಯೆ 19,174.

(ಎಸ್.ಎನ್.ಎ.ಆರ್.ಇ.)

**ಜೈನಧರ್ಮ:** ಪ್ರಪಂಚದ ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದು. ಜೈನ ಮತ್ತು ಜೈನೇತರ ಗ್ರಂಥಗಳು ಶಿಲಾ ಲೇಖನಗಳು, ಪ್ರಾಚ್ಯ ವಸ್ತುಗಳು, ಸ್ಮಾರಕಗಳು, ಮೊಹೆಂಜೋದಾರೊ, ಹರಪ್ಪ – ಈ ಪ್ರಾಚೀನ ನಗರಗಳ ಅವಶೇಷಗಳಲ್ಲಿ ದೊರೆತ ಪ್ರತಿಮೆಗಳು ಮತ್ತು ಅವುಗಳ ಪೀಠದಲ್ಲಿ ಕೆತ್ತಿರುವ ಶಾಸನಗಳು ಇವೆಲ್ಲವೂ ಜೈನಧರ್ಮದ ಪ್ರಾಚೀನತೆಯನ್ನು ತಿಳಿಸುತ್ತವೆ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಗೌತಮ ಬುದ್ಧನ ಸಮಕಾಲೀನನಾದ ಮಹಾವೀರಸ್ವಾಮಿಯ ಕಾಲದಿಂದ ಜೈನ ಸಾಮ್ರಾಜ್ಯದ ಇತಿಹಾಸ ಪ್ರಾರಂಭವಾಗಿದೆ. ಈಗ ಚಂಪಾರಣ್ಯ, ಮುಜಫರ್‌ಪುರ, ದರ್ಭಾಂಗ ಮತ್ತು ಛಪರಾ ಜಿಲ್ಲೆಗಳಿಗೆ ಸೇರಿದ ಭಾಗಕ್ಕೆ ಪ್ರಾಚೀನ ಕಾಲದಲ್ಲಿ ವಜ್ಜಿಯೋ ದೇಶ ಅಥವಾ ಲಿಚ್ಛವಿಯರ ನಾಡು ಎಂದು ಹೆಸರಿತ್ತು. ಈ ದೇಶದ ರಾಜಧಾನಿಯಾದ ವೈಶಾಲಿ – ಈಗಿನ ಬಸಾಥ – ನಗರ ಪ್ರಾಚೀನ ಕಾಲದಲ್ಲಿ ಬಹು ಪ್ರಸಿದ್ಧವಾಗಿತ್ತು. ಈ ನಗರದ ಮಧ್ಯದಲ್ಲಿ ಗಂಡಕೀ ನದಿ ಹರಿಯುತ್ತಿತ್ತು. ಆ ನದಿಯ ಎರಡು ತೀರಗಳಲ್ಲಿ ವೈಶಾಲಿಯ ಎರಡು ಉಪನಗರಗಳಿದ್ದವು. ಅವುಗಳಲ್ಲಿ ಒಂದು ಕ್ಷತ್ರಿಯ ಕುಂಡ ಗ್ರಾಮ. ಈ ಗ್ರಾಮಕ್ಕೆ ಸಿದ್ಧಾರ್ಥ

ಗಣರಾಜನಾಗಿದ್ದ. ಇಂಥ ಕೆಲವು ಜನ ಗಣರಾಜನ ನೇತೃವೆನಿಸಿ ಚೇಟಕ ಮಹಾರಾಜ ಅಧಿರಾಜನಾದನು. ಇವನ ಹಿರಿಯ ಮಗಳಾದ ತ್ರಿಶಲಾದೇವಿಯನ್ನು ಸಿದ್ಧಾರ್ಥನಿಗೆ ಕೊಟ್ಟಿತ್ತು. ಈ ದಂಪತಿಗಳ ಮಗನೇ ಭಗವಾನ್ ಮಹಾವೀರ (ವರ್ಧಮಾನ).

ಸಿದ್ಧಾರ್ಥ ತ್ರಿಶಲಾದೇವಿಯವರು ಪಾರ್ಶ್ವನಾಥ ತೀರ್ಥಂಕರರ ಶ್ರಮಣ ಪರಂಪರೆಯ ಅನುಯಾಯಿಗಳಾಗಿದ್ದರು. ವರ್ಧಮಾನ ಚಿಕ್ಕವಯಸ್ಸಿನಲ್ಲಿಯೇ ವ್ಯಾಕರಣ ಸಾಹಿತ್ಯ ಮೊದಲಾದ ವಿಷಯಗಳಲ್ಲಿ ಜ್ಞಾನಿಯೆನಿಸಿದ. ಆಮೇಲೆ ಮಹಾವೀರ ಹನ್ನೆರಡು ವರ್ಷಗಳ ಕಾಲ ದೀರ್ಘತಪಸ್ಸನ್ನು ಕಠೋರ ರೀತಿಯಿಂದ ಆಚರಿಸಿದ. ಅನಂತರ ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ಸುತ್ತಾಡಿದ. ಒಂದು ದಿನ ಜಂಭಿಯಾ ಗ್ರಾಮದ ಹೊರಗೆ, ಋಜುವಾಲಿಕಾ ನದಿಯ ತೀರದಲ್ಲಿ ಸಾಲವೃಕ್ಷಗಳ ನೆರಳಲ್ಲಿ ಧ್ಯಾನಮಗ್ನನಾಗಿ ಕುಳಿತಾಗ ವೈಶಾಖ ಶುಕ್ಲ ದಶಮಿಯ ದಿನ ಕೇವಲ ಜ್ಞಾನ ಪ್ರಾಪ್ತಿಯಾಯಿತು.

ಭಗವಾನ್ ಮಹಾವೀರ ತೀರ್ಥಂಕರನಾಗಿ ಜೈನಧರ್ಮದ ಪ್ರಚಾರಕ್ಕಾಗಿ ದೇಶದ ವಿವಿಧ ಭಾಗಗಳಲ್ಲಿ ಮೂವತ್ತು ವರ್ಷಗಳವರೆಗೆ ವಿಹರಿಸಿದ. ಇವನು ಅಹಿಂಸಾ ಸಂಯಮಗಳು ತಪಗಳಲ್ಲಿ ಉತ್ಕೃಷ್ಟ ಧರ್ಮಗಳೆಂದು ಹೇಳಿದ್ದಾನೆ. ಉಪದೇಶ ಮಾಡುತ್ತ ಮಹಾವೀರ ವಿಹರಿಸಿ, ಕೊನೆಗೆ ಬಿಹಾರದಲ್ಲಿರುವ ಪಾವಾಪುರಿಗೆ ಬಂದ. ಅಲ್ಲಿ ನಾಲ್ಕು ತಿಂಗಳವರೆಗೆ ಇದ್ದು ಧರ್ಮೋಪದೇಶ ಮಾಡಿದ. ಕಾರ್ತಿಕ ಕೃಷ್ಣ ಚತುರ್ದಶಿಯ (ಪ್ರ.ಶ.ಪೂ. 527) ಕೊನೆಯ ಜಾವದಲ್ಲಿ ನಿರ್ವಾಣವನ್ನು ಹೊಂದಿದ.

ಸಂಘಸ್ಥಾಪನೆ : ಭಗವಾನ್ ಮಹಾವೀರ ತನ್ನ ಸಿದ್ಧಾಂತದ ಪ್ರಚಾರ ಮಾಡಲಿಕ್ಕೆಂದು– ತನ್ನ ಉಪದೇಶವನ್ನು ಜನಸಾಮಾನ್ಯರಿಗೆ ಮುಟ್ಟಿಸಲಿಕ್ಕೆಂದು–ಸಾಲದು, ಸಾಧ್ವಿ, ಶ್ರಾವಕ, ಶ್ರಾವಿಕಾ ಈ ಪ್ರಕಾರ ಚತುರ್ವಿಧ ಸಂಘವನ್ನು ಸ್ಥಾಪಿಸಿದ. ಇದಕ್ಕೆ ಜೈನಸಂಘ ಎಂದು ಹೆಸರು. ಇದರಲ್ಲಿ ಸಾಧು ಸಾಧ್ವಿಗಳಿಗೆ ಮುನಿ ಆರ್ಯಿಕೆಯರೆಂದೂ ಹೆಸರಿದೆ. ಈ ಮುನಿ ಆರ್ಯಿಕೆಯರು ಗೃಹತ್ಯಾಗಿಗಳು, ಶ್ರಾವಕ ಶ್ರಾವಕಿಯರು ಗೃಹಜೀವನದವರು, ಸಂಘದ ಇವೆರಡೂ ವಿಭಾಗಗಳು ಒಂದಕ್ಕೊಂದು ಪರಸ್ಪರ ಪೋಷಕವಾಗಿದೆ.

ಉಚ್ಚ ಆಧ್ಯಾತ್ಮಿಕ ಮೆಟ್ಟಲನ್ನೇರಿದ ಮುನಿಗಳು ನಿರ್ಗ್ರಂಥರಾಗಿರುವರು. ಇವರಿಗೆ ದಿಗಂಬರ ಸಾಧುಗಳೆಂದೂ ಹೇಳುವರು. ಈ ದಿಗಂಬರತ್ವವನ್ನು ಆಚರಿಸಲಿಕ್ಕೆ ಸಾಧ್ಯವೆನಿಸದೆ ಕೆಲವು ಜನ ಸಾಧುಗಳು ಕಾಲಕ್ರಮದಲ್ಲಿ ಬಿಳಿಯ ಬಟ್ಟೆಗಳನ್ನು ಧರಿಸಿದವರಾಗಿರುತ್ತಿದ್ದರು. ಇಂತವರಿಗೆ ಶ್ವೇತಾಂಬರ ಸಾಧುಗಳೆನ್ನುತ್ತಿದ್ದರು. ಆರಂಭದಲ್ಲಿ ಮುನಿಗಳಲ್ಲಿ ಮಾತ್ರ ಈ ದಿಗಂಬರ, ಶ್ವೇತಾಂಬರ ಎಂದು ಎರಡು ವರ್ಗಗಳು ಇದ್ದುವು. ಬರಬರುತ್ತ ಪ್ರ.ಶ.ಪೂ. ಸು. 320 ರ ಸುಮಾರಿಗೆ ಜೈನ ಸಂಘದಲ್ಲಿ ಸ್ಪಷ್ಟ ಎರಡು ವಿಭಾಗಗಳು ಕಂಡುಬರಹತ್ತಿದವು. ಶ್ರಾವಕರಲ್ಲಿ ದಿಗಂಬರತ್ವವನ್ನು ಮನ್ನಿಸುವವರು, ಶ್ವೇತಾಂಬರತ್ವವನ್ನು ಸ್ವೀಕರಿಸುವವರು ಎಂದು ಎರಡು ಪಂಗಡಗಳಾದವು. ಮೂಲ ತಾತ್ತ್ವಿಕ ಮತಭೇದಗಳಿಲ್ಲದಿದ್ದರೂ ಈ ಎರಡು ಪಂಗಡಗಳು ಜೈನಸಂಘದಲ್ಲಿ ಇಂದಿಗೂ ಅಸ್ತಿತ್ವದಲ್ಲಿವೆ.

ಪ್ರಪಂಚದಲ್ಲಿ ಈಗ ಧರ್ಮದ ಅನುಯಾಯಿಗಳ ಸಂಖ್ಯೆ ಸು. 44 ಲಕ್ಷ (2005).

(ಕೆ.ಎಸ್.ಡಿ.)

**ಜೈಪುರ:** ಭಾರತದ ರಾಜಸ್ತಾನ ರಾಜ್ಯದ ರಾಜಧಾನಿ; ಜೈಪುರ ಜಿಲ್ಲೆಯ ಆಡಳಿತ ಕೇಂದ್ರ. ರೈಲುಮಾರ್ಗದಲ್ಲಿ ಮುಂಬಯಿಯಿಂದ 1113 ಕಿಮೀ ಈಶಾನ್ಯಕ್ಕೆ, ದೆಹಲಿಯಿಂದ 305 ಕಿಮೀ ನೈಋತ್ಯಕ್ಕೆ ಇದೆ. ಜನಸಂಖ್ಯೆ 2,324,319.

ಸಮುದ್ರಮಟ್ಟದಿಂದ 428 ಮೀ ಎತ್ತರದಲ್ಲಿರುವ ಜೈಪುರ ಭಾರತದ ಸುಂದರ ನಗರಗಳಲ್ಲಿ ಒಂದು. ಇಲ್ಲಿಯ ಹಲವು ಕಟ್ಟಡಗಳ ಬಣ್ಣ ಪಾಟಲ (ಪಿಂಕ್). ಆದ್ದರಿಂದ ಇದು ಪಾಟಲನಗರವೆಂದು ಪ್ರಸಿದ್ಧವಾಗಿದೆ. 1727ರಲ್ಲಿ ಮಹಾರಾಜ ಸವಾಯಿ ಜಯಸಿಂಹನಿಂದ ಸ್ಥಾಪಿತವಾದ ಈ ನಗರದ ರಚನಾಕೌಶಲ ವಿಶಿಷ್ಟವಾದದ್ದು. ನಗರವನ್ನು ಚತುರಸ್ರಾಕಾರದ ಆರು ವಿಭಾಗಗಳಾಗಿ ರಚಿಸಲಾಗಿದೆ. ಈ ವಿಭಾಗಗಳ ನಡುವೆ ವಿಶಾಲ ರಸ್ತೆಗಳಿವೆ. ನಗರದ ಸುತ್ತ ಎಂಟು ದ್ವಾರಗಳ ಕೋಟೆ ಇದೆ. (ಬಿ.ಎ.ಎಸ್.)

**ಜೈವಿಕ ಕೃಷಿ:** ಆಧುನಿಕ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆಗೆ ಬದಲಾಗಿ ಸಾವಯವ ವಸ್ತುಗಳಾದ ಸಗಣಿ, ಗೊಬ್ಬರ, ಹಿಂಡಿ, ಹಸುರುಗೊಬ್ಬರ, ಹಿಕ್ಕೆ, ಎರೆಹುಳು, ಸಸ್ಯಗಳ ಅವಶೇಷ ಮೊದಲಾದವುಗಳನ್ನು ಬಳಕೆ ಮಾಡಿ ನಿರ್ವಹಿಸುವ ಸಾಗುವಳಿ. ಪರಿಸರ ಪೂರಕ ಕೃಷಿ ಎಂದೂ ಕರೆಯುವರು. ನಾಗಾಲೋಟದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯಿಂದುಂಟಾದ ಆಹಾರದ ಸಮಸ್ಯೆಯನ್ನು ನೀಗಿಸಲು ಮಾನವ ಮಾಡಿದ ಪ್ರಯತ್ನದ ಫಲವಾಗಿ ಕಳೆದ ಶತಮಾನದ 60ರ ದಶಕದಲ್ಲಿ ಹಸುರು ಕ್ರಾಂತಿಯಾಗಿ ಆಹಾರದ ಸಮಸ್ಯೆ ಸ್ವಲ್ಪವಾದರೂ ನೀಗಿತಾದರೂ ವಿವೇಚನಾರಹಿತವಾದ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಆರೋಗ್ಯಕರವಾದ ಆಹಾರದ ಉತ್ಪಾದನೆ ಸಾಧ್ಯವಾಗಿಲ್ಲ. ಏಕೆಂದರೆ ರಾಸಾಯನಿಕಗೊಬ್ಬರ, ಕೀಟನಾಶಕಗಳ ಬಳಕೆಯಿಂದಾಗಿ ಆಹಾರವು ಪ್ರತಿಯೊಂದು ಹಂತದಲ್ಲೂ ಮಲಿನಗೊಂಡು, ಮಾನವನ ಹೊರಗಿನ ಪರಿಸರ ಮಾತ್ರವಲ್ಲದೆ ಅವನ ದೈಹಿಕ ಪರಿಸರ ಹಲವು ರೀತಿಯ ರಾಸಾಯನಿಕಗಳ ಸಂಗ್ರಹಣೆಯಿಂದಾಗಿ ರಾಸಾಯನಿಕ ಔಷಧಿಗಳ ನೆಲೆಬೀಡಾಗಿದೆ. ಈ ವ್ಯವಸ್ಥೆಯಿಂದ ಹೊರಬರಲು ನೋಡಿದಾಗ ಅವನ ಅರಿವಿಗೆ ಬಂದದ್ದು ಪುರಾತನಕಾಲದಲ್ಲಿ ಬಳಕೆಯಲ್ಲಿದ್ದಂತಹ ಸಾವಯವ ಕೃಷಿ ಪದ್ಧತಿ. ಇದರ ಹೊಸ ಆವಿಷ್ಕಾರವೇ ಜೈವಿಕ ಕೃಷಿ.

ಬೆಳೆಗಳ ಪರ್ಯಾಯ ಪದ್ಧತಿ, ಹಸುರುಗೊಬ್ಬರದ ಬಳಕೆ, ಜೈವಿಕ ಕ್ರಿಮಿ ನಾಶಕಗಳ ಬಳಕೆ (ಬೇವಿನ ಎಣ್ಣೆ, ಗೋಮೂತ್ರ ಇತ್ಯಾದಿ) ಮುಂತಾದವುಗಳ ಬಳಕೆಯನ್ನೂ ಜೈವಿಕ ಕೃಷಿ ಒಳಗೊಂಡಿವೆ. ಇವುಗಳು ಸುಲಭವಾಗಿ ಭೂಮಿಯಲ್ಲಿ ಕರಗುವುದರಿಂದ ಅಥವಾ ಮಣ್ಣಿನಲ್ಲಿ ಬೆರೆಯುವುದರಿಂದ ಪರಿಸರ ಮಲಿನಗೊಳ್ಳದೆ ಸುಸ್ಥಿರ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಇದರಿಂದ ಪರಿಸರಕ್ಕೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಉಂಟಾಗದಿರುವುದರಿಂದಲೇ ಇದಕ್ಕೆ ಪರಿಸರಪೂರಕ ಕೃಷಿ ಎಂದು ಕರೆಯುವರು. ಜೈವಿಕ ಕೃಷಿಯಲ್ಲಿ ಹಾಕಿದ ಬಂಡವಾಳದಿಂದ ಪಡೆಯುವ ಇಳುವರಿಯು ಅಧಿಕವಾಗಿರುತ್ತದೆ. ಆದರೆ ಈ ಅಧಿಕತೆಯು ಪ್ರಮಾಣಕ್ಕಿಂತ ಗುಣದಲ್ಲಿಯು ಅಧಿಕತೆಯಿದೆ. ಜೈವಿಕ ಕೃಷಿಯಲ್ಲಿ ರೈತರು ತಮ್ಮ ಸುತ್ತಮುತ್ತಲ ಪರಿಸರದಲ್ಲೇ ದೊರೆಯುವ ವಸ್ತುಗಳನ್ನು ಬಳಕೆಮಾಡುವುದರಿಂದ ಇದನ್ನು ಶೂನ್ಯ ಬಂಡವಾಳ ಕೃಷಿ ಎಂದೂ ಕರೆಯಬಹುದಾಗಿದೆ. ಕರ್ನಾಟಕದಲ್ಲಿ ಈ ಕೃಷಿಯನ್ನು ಅಭಿವೃದ್ಧಿಪಡಿಸಿದ ಕೀರ್ತಿ ಸುಭಾಷ್ ಪಾಳೇಕರ್ ಅವರಿಗೆ ಸಲ್ಲುತ್ತದೆ. ಆದ್ದರಿಂದಲೇ ಅವರಿಗೆ ನೈಸರ್ಗಿಕ ಕೃಷಿಯ ಹರಿಕಾರನೆಂದು ಕರೆಯುವರು.

ಜೈವಿಕ ಕೃಷಿಯಲ್ಲಿ ಬಳಸುವ ವಸ್ತುಗಳು: ಸಗಣಿ ಮತ್ತು ಗಂಜಳ, ಹಸುರೆಲೆಗಳು, ಎರೆಹುಳುವಿನಗೊಬ್ಬರ, ಬೇವಿನ ಎಣ್ಣೆ, ರೋಗ ನಿಯಂತ್ರಣಕ್ಕಾಗಿ ಕೆಲವೊಂದು ಕೀಟಗಳು ಉದಾ: ಕಬ್ಬಿನಲ್ಲಿ ಕಂಡುಬರುವ ಜೇನುರೋಗದ ನಿಯಂತ್ರಣಕ್ಕಾಗಿ ಒಳ ಸಾಕಿರುವ ಕೀಟಗಳು. ನೀಲಿ ಹಸುರು ಶೈವಲಗಳು ಹಾಗೂ ಅಜೋಲಾ, ದೇಶೀಯ ತಳಿಗಳ ಬಳಕೆ.

ಜೈವಿಕ ಕೃಷಿಯಿಂದ ಉತ್ಪತ್ತಿಯಾದ ವಸ್ತುಗಳು ಮಾಲಿನ್ಯ ರಹಿತವಾಗಿರುವುದರಿಂದ ವಿಶ್ವ ಮಾರುಕಟ್ಟೆಯಲ್ಲಿ ಅವುಗಳಿಗೆ ಅಧಿಕ ಬೇಡಿಕೆಯಿದೆ. ಇದರಿಂದ ರೈತ ಅಧಿಕ ಇಳುವರಿ ಪಡೆಯಬಹುದಾಗಿದೆ. (ಕೆ.ಎಸ್.)

**ಜೈವಿಕ ವೈವಿಧ್ಯತೆ:** ಒಂದು ಪ್ರದೇಶದಲ್ಲಿ ಹಂಚಿಕೆಯಾಗಿರುವ ಸಸ್ಯ ಮತ್ತು ಪ್ರಾಣಿಗಳ ವೈವಿಧ್ಯಮಯವಾದ ಪ್ರಭೇದ. ಜೈವಿಕ ವೈವಿಧ್ಯತೆ ಎಂಬ ಪದವನ್ನು 1986 ರಲ್ಲಿ ಕೀಟಶಾಸ್ತ್ರಜ್ಞರಾದ ಇ.ಕು ಡಿ. ವಿಲ್ಸನ್ ಮೊದಲ ಬಾರಿಗೆ ಬಳಸಿದರೂ ಇದರ ಕುರುಹನ್ನು ಭಾರತದ ಆಯುರ್ವೇದದ ಪಿತಾಮಹನಾದ ಚರಕನ ಚರಕ ಸಂಹಿತೆಯಲ್ಲಿ ಕಾಣಬಹುದಾಗಿದೆ. ಈತ ತನ್ನ ಗ್ರಂಥದಲ್ಲಿ 200 ಪ್ರಾಣಿ ಪ್ರಭೇದಗಳು ಮತ್ತು 340 ಸಸ್ಯ ಪ್ರಭೇದಗಳಿವೆ ಎಂದು ತಿಳಿಸಿದ್ದಾನೆ. ಜೈವಿಕ ವೈವಿಧ್ಯತೆ ಎಂಬ ಪದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚಾ ವಿಷಯವಾಗಿ ರೂಪುತಳೆದದ್ದು 1992ರ ರಿಯೋಡಿ ಜನೈರೋ ಸಮ್ಮೇಳನದಲ್ಲಿ. ಈ ಸಮ್ಮೇಳನದಲ್ಲಿ ಜೈವಿಕ ವೈವಿಧ್ಯತೆ ಎಂದರೆ ಒಂದು ಭೂಭಾಗ ಸಾಗರ ಹಾಗೂ ಇತರ ಜಲಭಾಗಗಳಲ್ಲಿ ಕಂಡುಬರುವ ಜೀವ ಪರಿಸರ ವ್ಯವಸ್ಥೆಗಳ ಎಲ್ಲಾ ವಿಧದ ಜೀವಿಗಳ ಸಮೂಹ ಎಂದು ಅರ್ಥೈಯಿಸಲಾಯಿತು.

ಸಸ್ಯಪ್ರಾಣಿ ಮತ್ತು ಸೂಕ್ಷ್ಮಾಣು ಜೀವಿಗಳೆಲ್ಲವೂ ಒಂದೇ ರೀತಿಯಲ್ಲಿ ಕಂಡು ಬರುವುದಿಲ್ಲ. ಇಷ್ಟೇ ಅಲ್ಲದೆ ಸಸ್ಯಗಳಿಗೂ ಪ್ರಾಣಿಗಳಿಗೂ ಭಿನ್ನತೆ ಕಂಡುಬರುತ್ತದೆ. ಒಂದೇ ಜಾತಿಗೆ ಸೇರಿದ ಸಸ್ಯಗಳಲ್ಲಿಯೂ ಭಿನ್ನತೆ ಕಂಡು ಬರುತ್ತದೆ ಉದಾ: ಆಲದ ಮರ. ಒಂದು ಆಲದ ಮರದ ಹಾಗೇ ಮತ್ತೊಂದು ಆಲದ ಮರದ ರಂಬೆಗಳು, ಬೇರುಗಳು ಇರುವುದಿಲ್ಲ. ಒಂದು ಸಸ್ಯ ಅಥವಾ ಪ್ರಾಣಿಯ ಆಂತರಿಕ ಮತ್ತು ಬಾಹ್ಯ ಲಕ್ಷಣಗಳು ಅವುಗಳ ಕಾರ್ಯ ಸಾಮರ್ಥ್ಯ, ಜೀವಿತಾವಧಿ, ಉಗಮ, ಪರಿಸರಕ್ಕೆ ಹೊಂದಿಕೊಳ್ಳುವಿಕೆ, ಪುನರುತ್ಪಾದನಾ ಸಾಮರ್ಥ್ಯ, ಅವುಗಳ ಸಂಸ್ಕೃತಿ ಜೀವ ನಿರ್ವಹಣೆ, ಮನೋಭಾವನೆಗಳು ಒಂದೇ ರೀತಿಯಾಗಿರದೆ ಭಿನ್ನವಾಗಿರುತ್ತವೆ. ಈ ಭಿನ್ನತೆ ಅಥವಾ ವೈವಿಧ್ಯತೆಯು ಸ್ವಾಭಾವಿಕವಾದಂತಹ ವಸ್ತು ಅಥವಾ ಜೀವಿಗಳಲ್ಲಿ ಮಾತ್ರ ಕಂಡುಬರುತ್ತದೆ. ಮಾನವ ನಿರ್ಮಿತ ವಸ್ತು ಜೀವಿಗಳಲ್ಲಿ ಕಂಡುಬರುವುದಿಲ್ಲ. ಉದಾ: ಕುರಿಯ ಕ್ಲೋನಿಂಗ್, ಬೆಕ್ಕಿನ ಕ್ಲೋನಿಂಗ್. ಕ್ಲೋನಿಂಗ್ ಒಂದೇ ರೀತಿಯ ಹೋಲಿಕೆಯುಳ್ಳ ಜೀವಿಗಳನ್ನು ಸೃಷ್ಟಿಸಬಹುದೇ ವಿನಃ ವೈವಿಧ್ಯತೆಯನ್ನು ಸೃಷ್ಟಿಸಲು ಸಾಧ್ಯವಾಗುತ್ತಿಲ್ಲ. ಇದು ಮಾನವನ ಆಧುನಿಕ ಬೆಳವಣಿಗೆಯ ಗುರುತಾದರೂ ಇದರಲ್ಲಿ ಹೆಚ್ಚು ಯಶಸ್ಸನ್ನು ಕಾಣಲಾಗುವುದಿಲ್ಲ ಎಂದು ಹೇಳಬಹುದು. ಆಹಾರ ಬೆಳೆಗಳ ಬಗ್ಗೆ ಹೇಳುವುದಾದರೆ ರಾಗಿ, ಬತ್ತ, ಜೋಳ, ಇತ್ಯಾದಿಗಳೆಲ್ಲವೂ ಎರಡು ಬೇರೆ ಬೇರೆ ರೀತಿಯ ಸಸ್ಯಗಳಿಂದ ಬೆಳವಣಿಗೆಯಾದವುಗಳಾಗಿವೆ. ಇದನ್ನು ನ್ಯಾಚುರಲ್ ಹೈಡ್ರೇಶನ್ ಎನ್ನುತ್ತಾರೆ. ಉದಾ: ಆಫ್ರಿಕ ಮತ್ತು ಭಾರತದ ಎರಡು ಸಸ್ಯಗಳಿಂದ ಇಂದು ರಾಗಿ ಬೆಳವಣಿಗೆಯಾಗಿದೆ ಎಂದು ತಿಳಿದುಬಂದಿದೆ.

## ಜೈವಿಕ ಸಂರಕ್ಷಣ ವಲಯ – ಜೈವಿಕ –ಭೂ ರಾಸಾಯನಿಕ ಆವರ್ತಗಳು

ಜೀವ ವೈವಿಧ್ಯತೆಗೆ ಕಾರಣಗಳು: ಜೀವ ವೈವಿಧ್ಯತೆಗೆ ಭೌಗೋಳಿಕ ಕಾರಣವನ್ನು ನೀಡಬೇಕಾಗುತ್ತದೆ. ಕಾರಣ ಪ್ರಪಂಚದಾದ್ಯಂತ ಭೌಗೋಳಿಕ ಅಂಶಗಳು ಒಂದೇ ರೀತಿಯಾಗಿರದೇ ವಿಭಿನ್ನವಾಗಿರುತ್ತವೆ. ಭೂಮಿಯಲ್ಲಿ ಸಮತಲವಾದ ವೈವಿಧ್ಯತೆ ಕಂಡುಬರುವುದರ ಜೊತೆಗೆ ಊರ್ಧ್ವಮುಖವಾಗಿ ಹೋದಂತೆಯೂ ವ್ಯತ್ಯಾಸವಾಗುವುದರಿಂದಲೇ ಜೀವಿಗಳ ವೈವಿಧ್ಯತೆ ಅಸ್ತಿತ್ವಕ್ಕೆ ಬರಲು ಕಾರಣವಾಗುತ್ತದೆ.

ಜೀವ ವೈವಿಧ್ಯತೆಗೆ ಭೌಗೋಳಿಕ ಅಂಶಗಳೇ ಪ್ರಮುಖ ಕಾರಣವಾಗಿದ್ದರೂ ಈ ವೈವಿಧ್ಯತೆಯಲ್ಲಿ ವಂಶವಾಹಿಯು ಪ್ರಭಾವ ಬೀರುವುದನ್ನು ಕಾಣಬಹುದು. ಈ ವಂಶವಾಹಿಯ ಪ್ರಭಾವದಿಂದಾಗಿಯೇ ಇಂದು ಸಮರೂಪವುಳ್ಳವರಲ್ಲಿಯೂ ವೈವಿಧ್ಯತೆಯನ್ನು ಹಾಗೂ ವೈವಿಧ್ಯಮಯವಾದ ಜೀವರಾಶಿಯನ್ನು ನೋಡಲು ಸಾಧ್ಯವಾಗಿದೆ. ವಂಶವಾಹಿಯಿಂದಾಗಿಯೇ ಹುಟ್ಟಿ ಬಂದ ಒಂದು ಜೀವಿಯು ಕೇವಲ ಒಂದು ಲಕ್ಷಣವನ್ನು ಮಾತ್ರ ಹೊಂದಿರದೇ ಅದು ತನ್ನ ಜನನಕ್ಕೆ ಕಾರಣವಾದ ವಸ್ತುಗಳೆರಡನ್ನು ಪ್ರತಿಬಿಂಬಿಸುತ್ತದೆ. ಹೀಗಾಗಿ ಒಂದು ಜೀವಿ ಮತ್ತೊಂದು ಜೀವಿಗಿಂತ ಭಿನ್ನ. ಇದು ಮಿಶ್ರಗುಣ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಜೊತೆಗೆ ಒಬ್ಬ ವ್ಯಕ್ತಿಯ ಹಾಗೆ ಮತ್ತೊಬ್ಬ ವ್ಯಕ್ತಿ ಕಂಡುಬರಲು ಸಾಧ್ಯವೇ ಇಲ್ಲ. ಇಲ್ಲಿ ವಂಶವಾಹಿ ಪ್ರಭಾವ ಬೀರುವುದನ್ನು ಕಾಣಬಹುದು.

ಜೈವಿಕ ವೈವಿಧ್ಯತೆಯಲ್ಲಿ ಮೂರು ಪ್ರಮುಖ ಪ್ರಕಾರಗಳಿವೆ: 1) ವಂಶವಾಹಿ ವೈವಿಧ್ಯತೆ: ಒಂದೇ ಪ್ರಭೇದದ ಜೀವಿಗಳಲ್ಲಿಯೂ ವಂಶವಾಹಿಗಳು ಭಿನ್ನವಾಗಿರುತ್ತವೆ. ಇದರಿಂದಾಗಿ ಅವುಗಳ ಬಣ್ಣ, ಎತ್ತರ ಮೊದಲಾದವುಗಳಲ್ಲಿ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಕಾಣಬಹುದು ಉದಾ:ಮಾನವನು ಹೊಮೋಸೆಪಿಯನ್ ಎಂಬ ಒಂದೇ ಪ್ರಭೇದಕ್ಕೆ ಸೇರಿದ್ದರೂ ವಂಶಾಣುಗಳಿಂದ ಅವನದೇ ಮಾರ್ಪಾಡು, ನಡವಳಿಕೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸದಿಂದ ಕೂಡಿದೆ. 2) ಪ್ರಭೇದಗಳ ವೈವಿಧ್ಯತೆ: ವಿವಿಧ ಬಗೆಯ ಜೀವಿ ಪರಿಸರ ವ್ಯವಸ್ಥೆಯಲ್ಲಿ ಹಾಗೂ ಪ್ರತಿಯೊಂದು ಜೀವ ಪ್ರಭೇದ ಸಮುದಾಯಗಳಲ್ಲಿ ಕಂಡು ಬರುವ ವ್ಯತ್ಯಾಸಗಳಿಗೆ ಪ್ರಭೇದಗಳ ವೈವಿಧ್ಯತೆ ಎನ್ನುವರು. ಇದರಿಂದಾಗಿ ಒಂದೇ ಜಾತಿಯ ಪ್ರಾಣಿ ಅಥವಾ ಸಸ್ಯಗಳಲ್ಲಿಯೇ ವ್ಯತ್ಯಾಸಗಳನ್ನು ಕಾಣಬಹುದು. ಉದಾ:ವೆಲಿಸ್ ಎಂಬ ಜಾತಿಗೆ ಸೇರಿದ ಪ್ರಾಣಿಗಳಿಂದ ಹುಲಿ, ಬೆಕ್ಕು, ಸಿಂಹ, ಚಿರತೆ ಇತ್ಯಾದಿ ಪ್ರಾಣಿಗಳ ಗಾತ್ರ, ಎತ್ತರ, ಚಲನವಲನ ಇತ್ಯಾದಿಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು.

3) ಜೀವ ಪರಿಸರ ವೈವಿಧ್ಯತೆ: ಪೃಥ್ವಿಯ ಮೇಲ್ಭಾಗದಲ್ಲಿ ಕಂಡುಬರುವ ವೈವಿಧ್ಯಮಯವಾದ ಸನ್ನಿವೇಶಗಳು, ಸಸ್ಯ ಮತ್ತು ಪ್ರಾಣಿಗಳ ಸಂಖ್ಯೆ ಈ ವರ್ಗಕ್ಕೆ ಸೇರಿದೆ. ಒಂದೇ ಭೂಭಾಗದಲ್ಲಿ ವಿವಿಧ ಪೋಷಣಾ ಸ್ತರದಲ್ಲಿರುವ ಹಲವು ಬಗೆಯ ಜೀವಿಗಳು ಕಂಡುಬರುತ್ತವೆ. ಇವುಗಳಲ್ಲಿ ಆಹಾರ ಉತ್ಪಾದಕರು, ಆಹಾರ ಅನುಭೋಗಿಗಳು ಮತ್ತು ವಿಘಟಕ ಜೀವಿಗಳು ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸುತ್ತವೆ. (ಎಚ್.ಎಸ್.ಡಿ.)

**ಜೈವಿಕ ಸಂರಕ್ಷಣ ವಲಯ:** ತೊಂದರೆಗೀಡಾಗಿರದ ಜೀವ ಸಮುದಾಯ ವಾಸಿಸುವ ಪ್ರದೇಶಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು, ಅದೇ ರೀತಿಯ ಕ್ಷೋಭೆಗೊಳಗಾಗಿರುವ ಪ್ರದೇಶಗಳನ್ನು ನಿಯಂತ್ರಿಸಿ ಸಂರಕ್ಷಿಸುವುದಕ್ಕೆ ಸಂರಕ್ಷಿಸಲ್ಪಟ್ಟ ಜೀವಗೋಳವೆನ್ನುವರು. ಸಾಮಾನ್ಯವಾಗಿ ಇಂತಹ ಪ್ರದೇಶಗಳನ್ನು ಜೀವ ಪರಿಸರ (ಇಕಾಲಾಜಿಕಲ್) ಸಂಶೋಧನೆ ಮಾಡಲು ಮತ್ತು ಜೀವನೆಲೆ (ಹ್ಯಾಬಿಟೇಟ್) ಸಂರಕ್ಷಿಸಲು ಕಾಯ್ದಿರಿಸಲಾಗುತ್ತದೆ. ಈ ದಿಶೆಯಲ್ಲಿ 1968ರಲ್ಲಿ ಯೂನೆಸ್ಕೋ ದಲ್ಲಿ ಜೀವ ಮಂಡಲ ಸಮ್ಮೇಳನ (ಬಯೋಸ್ಫಿಯರ್ ಕಾನ್‌ಫರೆನ್ಸ್) ಜರುಗಿತು. ಮುಂದೆ 1971 ನವೆಂಬರ್ 9 ರಂದು ಅಂತಾರಾಷ್ಟ್ರೀಯ ಸುಸಂಘಟಿತ ಸಭೆಯು ಪ್ಯಾರಿಸ್‌ನಲ್ಲಿ ಸೇರಿ ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಸುಸ್ಥಿರ ಉಪಯೋಗ ಮತ್ತು ಮಾನವನ ನಡುವಿನ ಸಂಬಂಧ ಅಭಿವೃದ್ಧಿಗೊಳಿಸಲು ಕಾರ್ಯಕ್ರಮಗಳ ಜಾಲ ರೂಪಿಸಲಾಯಿತು. ಜೈವಿಕ ಮಂಡಲದ ಸಂರಕ್ಷಣಾ ವಲಯದ ಉದ್ದೇಶಗಳು ಈ ಕೆಳಗಿನಂತಿವೆ:

1) ನೈಸರ್ಗಿಕ ಮತ್ತು ಅರೆ ನೈಸರ್ಗಿಕ ಜೀವ ಪರಿಸರ ವ್ಯವಸ್ಥೆಯ ಜೈವಿಕ ವೈವಿಧ್ಯತೆಗಳನ್ನು ಅವುಗಳ ಮೂಲ ವಾಸ ಸ್ಥಳಗಳಲ್ಲೆ ಸಂರಕ್ಷಣೆ ಮಾಡುವುದು.

2) ಜೈವಿಕ ಸಂರಕ್ಷಣಾ ವಲಯಗಳಲ್ಲಿ ಹಾಗೂ ಅದರ ಸುತ್ತಲೂ ನೆಲೆಸಿರುವ ಜನರ ಸುಸ್ಥಿರ ಆರ್ಥಿಕ ಅಭಿವೃದ್ಧಿಯ ಕಡೆಗೆ ನಿಗಾವಹಿಸುವುದು.

3) ಜೀವ ಪರಿಸರ ಅಧ್ಯಯನ ಮಾಡುವವರಿಗೆ, ಪರಿಸರದ ಬಗ್ಗೆ ಶಿಕ್ಷಣ ಮತ್ತು ತರಬೇತಿ ನೀಡುವವರಿಗೆ ಸ್ಥಳೀಯ, ರಾಷ್ಟ್ರೀಯ ಮತ್ತು ಭೂ ಮಂಡಲದ ಜೈವಿಕ ಸಂರಕ್ಷಣೆಯ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತು ಸಂಶೋಧನೆ ಮಾಡುವವರಿಗೆ ಧನ ಸಹಾಯ ನೀಡುವುದು.

ಪ್ರಪಂಚದ 65 ರಾಷ್ಟ್ರಗಳಲ್ಲಿ ಸು. 358 ಜೀವ ಮಂಡಲ ಸಂರಕ್ಷಣಾ ವಲಯಗಳನ್ನು ಸ್ಥಾಪಿಸಲಾಗಿದೆ. ಇವುಗಳು ಒಟ್ಟಾರೆ 115 ದಶಲಕ್ಷ ಕಿಮೀ ಪ್ರದೇಶ ಆವರಿಸಿಕೊಂಡಿವೆ. ಜೈವಿಕ ಸಂರಕ್ಷಣಾ ವಲಯಗಳು ಸಸ್ಯ ಮತ್ತು ಪ್ರಾಣಿಗಳ ವಂಶವಾಹಿ ಗುಣಗಳನ್ನು ಮಾತ್ರವಲ್ಲದೆ ಆ ಪ್ರದೇಶದ ಎಲ್ಲ ಜೀವ ಪರಿಸರ ವ್ಯವಸ್ಥೆಯ ಒಕ್ಕೂಟವನ್ನು ಸೂಕ್ಷ್ಮಾಣುಗಳೊಂದಿಗೆ ಸಂರಕ್ಷಿಸುವ ಉದ್ದೇಶ ಹೊಂದಿವೆ. ಭಾರತದಲ್ಲಿ ಸು. 13 ಜೈವಿಕ ಮಂಡಲ ಸಂರಕ್ಷಣಾ ವಲಯಗಳು ಚಾಲನೆಯಲ್ಲಿದ್ದು, ಇನ್ನೂ 13 ಜೀವ ಮಂಡಲ ಸಂರಕ್ಷಣಾವಲಯಗಳು ಚಾಲನೆಯಲ್ಲಿವೆ. ಕರ್ನಾಟಕ, ತಮಿಳುನಾಡುಗಳ ನೀಲಗಿರಿ, ನಂದಾದೇವಿ (ಉತ್ತರಾಂಚಲ), ನೊಕ್ರೆಕ್ (ಮೇಘಾಲಯ), ಗ್ರೇಟ್ ನಿಕೋಬಾರ್ (ಅಂಡಮಾನ್ ಮತ್ತು ನಿಕೋಬಾರ್), ಮನ್ನಾರ ಅಖಾತ (ತಮಿಳುನಾಡು), ಮನಾಸ್ (ಅಸ್ಸಾಂ), ದಿಹಾಂಗ್ ದಿಬಾಂಗ್ (ಅರುಣಾಚಲ ಪ್ರದೇಶ), ಪಚ್‌ಮಾರಿ (ಮಧ್ಯ ಪ್ರದೇಶ), ಕಾಂಚನಜುಂಗ (ಸಿಕ್ಕಿಂ), ಅಗಸ್ತ್ಯ ಮಲೈ (ಕೇರಳ) ಮುಂತಾದವು ಭಾರತದಲ್ಲಿ ಚಾಲನೆಯಲ್ಲಿರುವ ಜೀವಮಂಡಲ ಸಂರಕ್ಷಣಾ ವಲಯಗಳು. (ಎಚ್.ಎಸ್.ಡಿ.)

**ಜೈವಿಕ –ಭೂ ರಾಸಾಯನಿಕ ಆವರ್ತಗಳು (ಬಯೋ–ಜಿಯೋ–ಕೆಮಿಕಲ್ ಸೈಕಲ್):** ಜೀವ ಪರಿಸರ ವ್ಯವಸ್ಥೆಯಲ್ಲಿ ಜೀವಿ ಜೀವಿಗಳ ನಡುವೆ ಸಂಬಂಧವಿರುವಂತೆ ಅವುಗಳ ಭೌತಿಕ ಪರಿಸರದೊಡನೆಯೂ ನೇರ ಸಂಬಂಧವಿದೆ. ಭೂ ಮೇಲ್ಮೈ ಒಳಗೊಂಡಿರುವ ಪೋಷಕಾಂಶಗಳು, ಸಸ್ಯಗಳು ಹಾಗೂ ಪ್ರಾಣಿಗಳು ಅಂತಿಮವಾಗಿ ಪುನಃ ಭೂಮಿಯನ್ನು ತಲುಪುತ್ತವೆ. ಅಂದರೆ ಜೀವಿ ಪರಿಸರ ವ್ಯವಸ್ಥೆಯಲ್ಲಿನ ಪೋಷಕಾಂಶ ಪರಿಸರದಿಂದ ಜೀವಿಗಳಿಗೂ ಮತ್ತು ಪುನಃ ನೇರವಾಗಿ ಜೀವಿಗಳಿಂದ ಪರಿಸರಕ್ಕೂ ಆವರ್ತ ರೂಪದಲ್ಲಿ ಪರಿಚಲಿಸುವ ಕ್ರಮಕ್ಕೆ ಜೈವಿಕ–ಭೂ–ರಾಸಾಯನಿಕ ಆವರ್ತಗಳೆಂದು ಕರೆಯುವರು, ಜೀವ ಪರಿಸರ ವ್ಯವಸ್ಥೆಯ ನಿರ್ವಹಣೆ ಹಾಗೂ ಪರಿಸರ ಸಮತೋಲನ ಕಾಪಾಡಿಕೊಳ್ಳಲು ಆವರ್ತಗಳು ಅತಿ ಮುಖ್ಯವಾಗಿರುತ್ತವೆ. ಇದರ ಪರಿಣಾಮದಿಂದಲೇ ಜೈವಿಕ ಮಂಡಲ ಸಮತೋಲನ ಸ್ಥಿತಿಯಲ್ಲಿದ್ದು, ಪರಿಸರದಲ್ಲಿ ಸುಸ್ಥಿತಿ ಕಂಡುಬರುತ್ತವೆ. ಜೀವಿಗಳ ಬೆಳವಣಿಗೆಗೆ ಕನಿಷ್ಠ 25 ರಿಂದ 30 ಮೂಲ ಪದಾರ್ಥಗಳಾದ ಇಂಗಾಲ, ಜಲಜನಕ, ಸಾರಜನಕ, ಆಮ್ಲಜನಕ, ರಂಜಕ, ಗಂಧಕ, ಕ್ಯಾಲ್ಸಿಯಂ, ಕಬ್ಬಿಣ, ಮೆಗ್ನೀಷಿಯಂ, ಬೋರಾನ್,ಕ್ಲೋರಿನ್, ಕೋಬಾಲ್ಟ್, ಅಯೋಡಿನ್, ಫ್ಲೋರಿನ್ ಮುಂತಾದವು ಅವಶ್ಯವಾಗಿರುತ್ತವೆ. ಜೈವಿಕ ಭೂ ರಾಸಾಯನಿಕ ಆವರ್ತಗಳನ್ನು ಹಲವು ಪ್ರಕಾರಗಳನ್ನಾಗಿ ವರ್ಗೀಕರಿಸಬಹುದು.

1) ಜಲಾವರ್ತ (ಹೈಡ್ರೊ ಸೈಕಲ್): ಜಲಾವರ್ತ ಭೂ ಮೇಲ್ಮೈ ಮತ್ತು ವಾಯುಮಂಡಲಗಳ ನಡುವೆ ನೈಸರ್ಗಿಕ ಮಳೆ ಮತ್ತು ಭಾಷ್ಪಿ ಭವನ ಮೂಲಕ ನಡೆಯುವ ನೀರಿನ ಆಂತರಿಕ ಪರಿವರ್ತನಾ ಕ್ರಿಯೆಯಾಗಿರುತ್ತದೆ. ಸಾಗರಗಳು, ಸರೋವರಗಳು, ನದಿಗಳು ಕೆರೆ ಮುಂತಾದವುಗಳಿಂದ ನೀರು ಸೂರ್ಯನ ಶಾಖದಿಂದ ಬಾಷ್ಪೀಭವನಹೊಂದಿ ನೀರಾವಿಯಾಗಿ ವಾಯುಮಂಡಲ ಸೇರುತ್ತದೆ. ವಾಯುಮಂಡಲದಲ್ಲಿ ಸೇರಿದ ನೀರಿನ ಆವಿ ಘನೀಭವಿಸಿ, ಮೋಡಗಳಾಗಿ ವೃಷ್ಟಿ ರೂಪದಲ್ಲಿ ಪುನಃ ಭೂಮಿಯನ್ನು ಸೇರುವ ಆವರ್ತನ ಮಾರ್ಗವನ್ನು ಜಲಾವರ್ತ ವೆನ್ನುವರು. ಇದು ಭೂಮಿ, ಗಾಳಿ, ಸಾಗರ, ಸಮುದ್ರ, ಸಸ್ಯ ಹಾಗೂ ಪಕ್ಷಿಗಳ ನಡುವೆ ನೀರಿನ ಹಂಚಿಕೆಗೆ ಕಾರಣವಾಗುತ್ತದೆ. ಸೂರ್ಯನಿಂದ ಪಡೆಯುವ ಒಟ್ಟು ಶಕ್ತಿಯ ಸು. 1/3 ರಷ್ಟು ಜಲಾವರ್ತ ನಿರ್ವಹಣೆಯಲ್ಲಿ ಬಳಕೆಯಾಗುತ್ತದೆ. ವೃಷ್ಟಿ ರೂಪದಲ್ಲಿ ಭೂಮಿಯ ಮೇಲೆ ತಲುಪುವ ನೀರಿನ ಕೆಲ ಭಾಗ ಪುನಃ ಸಾಗರ, ಸಮುದ್ರ, ಸರೋವರ, ನದಿಗಳಲ್ಲಿ ಹರಿದು ಸೇರುವುದು. ಮತ್ತೆ ಕೆಲ ಭಾಗ ಭೂಮಿಯಲ್ಲಿ ಇಂಗಿ ಅಂತರ್ಜಲವಾಗುವುದು. ಹೀಗೆ ವಾಯುಮಂಡಲದ ಚೈತನ್ಯಗಳಿಗೆ ನೀರಾವಿ ಕಾರಣವಾಗಿದೆ.

2) ಇಂಗಾಲ ಆವರ್ತ (ಕಾರ್ಬನ್ ಸೈಕಲ್): ಜಲಾವರ್ತದ ಹಾಗೆ ಇಂಗಾಲಾವರ್ತ ಸಹ ಎಲ್ಲ ಜೀವಕ್ಕೂ ಅವಶ್ಯಕವಾದ ಮೂಲವಸ್ತು ಸ್ವಪೋಷಕ ಹಸುರು ಸಸ್ಯಗಳಿಗೆ ಕಾರ್ಬನಿಕ್ ಪದಾರ್ಥಗಳನ್ನು, ಅದರಲ್ಲಿಯೂ ಶರ್ಕರಗಳನ್ನು ಉತ್ಪಾದಿಸಲು ಅಗತ್ಯವಾದ ಇಂಗಾಲ ಮೂಲವಾಗಿ ವಾತಾವರಣಕ್ಕೆ ಇಂಗಾಲದ ಡೈ ಆಕ್ಸೈಡ್ ಒದಗುತ್ತದೆ. ಜಲ ಪರಿಸರ ವ್ಯವಸ್ಥೆಗಳಲ್ಲಿ ನೀರಿನಲ್ಲಿ ಕರಗಿರುವ ಕಾರ್ಬೋನೇಟ್‌ಗಳು ಮತ್ತು ಬೈಕಾರ್ಬೋನೇಟ್‌ಗಳು ಇಂಗಾಲದ ಮೂಲವಾಗಿರುತ್ತವೆ. ಪೋಷಕ ಮೂಲಕ್ಕೆ ಇಂಗಾಲ ಸ್ಥಿರೀಕರಣಗೊಳ್ಳುವುದಕ್ಕೆ ದ್ಯುತಿಸಂಶ್ಲೇಷಣೆ ಕ್ರಿಯೆಯು ಕಾರಣವಾಗುತ್ತದೆ.

ಸಸ್ಯಗಳು ಉತ್ಪಾದಿಸಿದ ಆಹಾರದಲ್ಲಿರುವ ಕಾರ್ಬೋನಿಕ್ ಪದಾರ್ಥಗಳು ಪ್ರಾಣಿಗಳಿಗೆ ಇಂಗಾಲದ ಮೂಲಕವಾಗಿ ಒದಗುತ್ತವೆ. ಆಹಾರ ಸರಪಳಿಯ ಮೂಲಕ ಇಂಗಾಲವು ಸಸ್ಯಗಳಿಂದ ಸಸ್ಯಾಹಾರಿ ಪ್ರಾಣಿಗಳಿಗೆ ಹಾಗೂ ಮಾಂಸಾಹಾರಿ ಪ್ರಾಣಿಗಳಿಗೆ ವಿನಿಮಯ ರೂಪದಲ್ಲಿ ಸಂಚಾರಗೊಳ್ಳುತ್ತದೆ. ಬ್ಯಾಕ್ಟೀರಿಯ, ಶಿಲೀಂದ್ರ, ಸಸ್ಯಗಳು ಹಾಗೂ ಪ್ರಾಣಿಗಳ ಉಸಿರಾಟ ಕ್ರಿಯೆಯಲ್ಲಿ ಬಿಡುಗಡೆಯಾಗುವ ಮೂಲಕ ಇಂಗಾಲದ ಡೈ ಆಕ್ಸೈಡ್‌ನ ಬಹುಭಾಗ ವಿನಿಮಯ ಮೂಲದಿಂದ ಸಂಗ್ರಹವಾಗಿ ವಾಯುವನ್ನು ಸೇರುತ್ತದೆ. ಜೊತೆಗೆ ಬ್ಯಾಕ್ಟೀರಿಯ ಮತ್ತು ಶಿಲೀಂದ್ರಗಳ ವಿಘಟನೆ ಕ್ರಿಯೆಯಿಂದ ಸ್ವಲ್ಪ ಭಾಗ ಇಂಗಾಲ ಹಿಂತಿರುಗುತ್ತದೆ.

3) ಸಾರಜನಕ ಆವರ್ತ (ನೈಟ್ರೋಜನ್ ಸೈಕಲ್): ಸಾರಜನಕ ವಾಯುಮಂಡಲದ ಶುಷ್ಕ ವಾಯುವಿನಲ್ಲಿ ಶೇ.78.03 ರಷ್ಟಿರುತ್ತದೆ. ಈ ಅನಿಲವನ್ನು ಜೈವಿಕ ಮಂಡಲದಲ್ಲಿರುವ ಜೀವಿಗಳು ನೇರವಾಗಿ ಪಡೆದುಕೊಳ್ಳದೆ, ಸಸ್ಯಗಳು ಮಣ್ಣಿನಲ್ಲಿರುವ ನೈಟ್ರೇಟ್ಸ್ ಮೂಲಕ ಪಡೆದುಕೊಳ್ಳುತ್ತವೆ. ವಾಯುಮಂಡಲದಲ್ಲಿರುವ ಸಾರಜನಕ ಅನಿಲವನ್ನು ಜೀವಿಗಳು ಎರಡು ವಿಧಾನಗಳಿಂದ ಪಡೆದುಕೊಳ್ಳುತ್ತವೆ. ಮೊದಲನೆಯದಾಗಿ, ಸೌರಶಕ್ತಿಯಿಂದ ವಾಯುಮಂಡಲದಲ್ಲಿರುವ ಸಾರಜನಕ ದಹನವಾಗಿ ನೈಟ್ರೇಟ್ ಆಗಿ ಪರಿವರ್ತನೆಯಾಗುತ್ತದೆ. ಎರಡನೆಯದಾಗಿ ಮಣ್ಣಿನಲ್ಲಿರುವ ಸಾರಜನಕದ ಸ್ಥಿರೀಕರಣವನ್ನು ಬ್ಯಾಕ್ಟೀರಿಯ ಪಡೆದುಕೊಳ್ಳುತ್ತವೆ. ಈ ಬ್ಯಾಕ್ಟೀರಿಯಗಳಲ್ಲಿ ಮೂರು ಪ್ರಕಾರ. ಕೆಲವು ಬ್ಯಾಕ್ಟೀರಿಯಗಳು ಮಣ್ಣಿನಲ್ಲಿ ಸ್ವತಂತ್ರವಾಗಿ ಜೀವಿಸುತ್ತವೆ. ಇನ್ನೂ ಕೆಲವು ದ್ವಿದಳ ಧಾನ್ಯ ಬೆಳೆಗಳ ಬೇರುಗಳಲ್ಲಿ ಸಿಂಬಯಾಟಿಕ್ ಮತ್ತು ಪರಸ್ಪರ ಸಂಯೋಜನೆಯಿಂದ ಸಾರಜನಕ ಸ್ಥಿರೀಕರಣ ಮಾಡುತ್ತವೆ. ಮೂರನೆಯವು ಫೋಟೋಸಿಂಥೆಟಿಕ್ ಸಾಯನೋ ಬ್ಯಾಕ್ಟೀರಿಯ ನೀಲಿ, ಹಸುರು ಪಾಚಿಗಳಿಂದ ಸಾರಜನಕದ ಸ್ಥಿರೀಕರಣವನ್ನುಂಟುಮಾಡುತ್ತವೆ. ಈ ಎಲ್ಲ ಬ್ಯಾಕ್ಟೀರಿಯಗಳು ಸಾರಜನಕವನ್ನು ಅಮೋನಿಯ ಇಲ್ಲವೆ ನೈಟ್ರೇಟ್ ರೂಪದಲ್ಲಿ ಸಾರಜನಕ ಸ್ಥಿರೀಕರಣ ಮಾಡುತ್ತವೆ. ಹಲವು ಸಸ್ಯಗಳು ನೈಟ್ರೇಟ್‌ನ್ನು ತೆಗೆದುಕೊಂಡು ಅದನ್ನು ಅಮಿನೋ ಆಮ್ಲ ಸಸ್ಯಗಳಿಂದ ಪಡೆದುಕೊಳ್ಳುತ್ತವೆ. ಪ್ರಾಣಿಗಳು ತಮಗೆ ಅಗತ್ಯವಿರುವ ಅಮಿನೋ ಆಮ್ಲಗಳನ್ನು ಸಸ್ಯಗಳಿಂದ ಪಡೆದುಕೊಳ್ಳುತ್ತವೆ. ಪ್ರಾಣಿಗಳು ಮತ್ತು ಸಸ್ಯಗಳು ಸತ್ತ ಅನಂತರ ಬ್ಯಾಕ್ಟೀರಿಯಗಳು ಅವುಗಳನ್ನು ಕೊಳೆಯುವಂತೆ ಮಾಡಿ ಸಾರಜನಕವನ್ನು ವಾಯುಮಂಡಲಕ್ಕೆ ಬಿಡುಗಡೆ ಮಾಡುತ್ತವೆ.

ಸಸ್ಯ ಮತ್ತು ಪ್ರಾಣಿಗಳು ಸತ್ತ ಅಥವಾ ನಶಿಸಿದ ಅನಂತರ ಅವುಗಳು ಮಣ್ಣಿನಲ್ಲಿ ಸಂಯೋಜನೆಯಾಗಿ ಸಾರಜನಕ ಅಮೋನಿಯ ರೂಪದಲ್ಲಿ ಹೊರಹೊಮ್ಮುತ್ತದೆ. ಅಮೋನಿಯ ವಿಷಕಾರಿ ಅನಿಲ, ಆದರೆ ಸುದೈವದಿಂದ ಮಣ್ಣಿನಲ್ಲಿ ಮತ್ತು ನೀರಿನಲ್ಲಿರುವ ನೈಟ್ರೀಕರಣಗೊಳಿಸುವ ಬ್ಯಾಕ್ಟೀರಿಯಗಳು ಅಮೋನಿಯ ಲವಣಗಳನ್ನು ಉತ್ಕರ್ಷಿಸಿ ನೈಟ್ರೇಟ್‌ಗಳಾಗಿ ಪರಿವರ್ತಿಸುತ್ತವೆ. ನೈಟ್ರೇಟ್ ಕೂಡಲ್ಪಟು ವಿಷಕಾರಿಯಾಗಿರುತ್ತವೆ. ಆದರೆ, ಇನ್ನುಳಿದ ನೈಟ್ರೋಬ್ಯಾಕ್ಟರ್ ಮುಂತಾದ ಬ್ಯಾಕ್ಟೀರಿಯಗಳು ಇವನ್ನು ನೈಟ್ರೇಟುಗಳಾಗಿ ಪರಿವರ್ತಿಸುತ್ತವೆ. ಈ ನೈಟ್ರೇಟ್‌ಗಳನ್ನು ಸಸ್ಯಗಳು ಉಪಯೋಗಿಸುವುದರಿಂದ ಸಾರಜನಕ ಆವರ್ತ ನಿರಂತರವಾಗಿ ನಡೆಯುತ್ತದೆ.

4) ಆಮ್ಲಜನಕ ಆವರ್ತ (ಆಕ್ಸಿಜನ್ ಸೈಕಲ್): ಜೈವಿಕ ಮಂಡಲದಲ್ಲಿರುವ ಎಲ್ಲ ಜೀವಿಗಳ ಉಸಿರಾಟಕ್ಕೆ ಆಮ್ಲಜನಕ ಅತ್ಯಾವಶ್ಯಕ ಆಮ್ಲಜನಕ ಇಂಗಾಲದ ಡೈಆಕ್ಸೈಡ್, ಕಾರ್ಬೋ ಹೈಡ್ರೇಟ್ ಮತ್ತು ನೀರಿನಲ್ಲಿ ಎರಡು ಅಂಶಗಳ ರೂಪದಲ್ಲಿ ದೊರೆಯುತ್ತದೆ. ಆಮ್ಲಜನಕ ನೀರಿನಲ್ಲಿಯೂ ಕರಗಿದ ಸ್ಥಿತಿಯಲ್ಲಿರುತ್ತದೆ. ಆದ್ದರಿಂದ ಅನೇಕ ಜಲಜೀವಿಗಳು ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ಬಳಸಿಕೊಳ್ಳುತ್ತವೆ. ಕೆಳ ಕಂತು ಎಡೆಬಿಡದೆ ನಡೆಯುವಾಗ ಆಮ್ಲಜನಕ ಬಿಡುಗಡೆಯಾಗಿ ವಾಯುಮಂಡಲದಲ್ಲಿ ಸೇರ್ಪಡೆಯಾಗುತ್ತದೆ. ಮತ್ತೆ ಕೆಳ ಕಂತು ಆಮ್ಲಜನಕವನ್ನು ಜೀವಿಗಳು ಸೇವಿಸುತ್ತವೆ. ಹೀಗೆ ಆಮ್ಲಜನಕ ಆವರ್ತ ಏರ್ಪಡುತ್ತದೆ. ಸಸ್ಯಗಳು ದ್ಯುತಿಸಂಶ್ಲೇಷಣೆಯ ಕಾರ್ಯದಲ್ಲಿ ಇಂಗಾಲದ ಡೈಆಕ್ಸೈಡ್ ಉಪಯೋಗಿಸಿಕೊಂಡು ಆಮ್ಲಜನಕ ಬಿಡುಗಡೆಯಾಗುತ್ತದೆ. ಇದಕ್ಕೆ ಬದಲಾಗಿ ಎಲ್ಲ ಪ್ರಾಣಿಗಳು ಉಸಿರಾಟದ ಕ್ರಿಯೆಯಲ್ಲಿ ಆಮ್ಲಜನಕವನ್ನು ಬಳಸಿಕೊಂಡು ಇಂಗಾಲದ ಡೈ ಆಕ್ಸೈಡನ್ನು ಬಿಡುಗಡೆ ಮಾಡುತ್ತವೆ.

5) ರಂಜಕ ಆವರ್ತ (ಫಾಸ್ಫರಸ್ ಸೈಕಲ್): ರಂಜಕ ಸಂಚಯನ ಆವರ್ತವಾಗಿದ್ದು, ಇದು ಉಳಿದೆಲ್ಲ ಪೋಷಕಾಂಶ ಆವರ್ತಗಿಂತ ಸರಳವಾಗಿರುತ್ತದೆ. ರಂಜಕ ಸಸ್ಯಗಳಿಗೆ ಅವಶ್ಯಕವಿರುವ ಪೋಷಕಾಂಶ. ಫಾಸ್ಫೇಟ್ ರೂಪದಲ್ಲಿ ದೊರೆಯುತ್ತದೆ. ಭಾರವಾದ ಅಣು ಬೇರೆ ಖನಿಜ ಪೋಷಕಾಂಶಗಳ ಹಾಗೆ ವಾಯುಮಂಡಲದಲ್ಲಿ ಸಂಯೋಜನೆಯಾಗದೆ, ಸೂಕ್ಷ್ಮಜೀವಿಗಳ ದೇಹದಲ್ಲಿ ಸಂಗ್ರಹವಾಗುತ್ತದೆ. ರಂಜಕ ಮುಖ್ಯವಾಗಿ ಶಿಲೆಗಳು ಮತ್ತು ಪ್ರಾಚೀನ ಕಾಲದಲ್ಲಿ ಸಂಚಯನವಾದ ನಿಕ್ಷೇಪಗಳಲ್ಲಿ ದೊರೆಯುವುದಲ್ಲದೆ, ನೀರಿನಲ್ಲಿ ಕೂಡ ಕರಗಿರುತ್ತದೆ. ರಂಜಕ ಸಂಯೋಜಿತ ಶಿಲೆಗಳು ನೀರಿನಿಂದ ಶಿಥಿಲೀಕರಣ ಹೊಂದಿದಾಗ ರಂಜಕ ನೀರಿನಲ್ಲಿ ಕರಗಿ ಹರಿದು ಹೋಗಿ ಜಲರಾಶಿಗಳ ತಳದಲ್ಲಿ ಸಂಚಯನವಾಗಿ ಶಿಲೆಗಳು ನಿರ್ಮಾಣಹೊಂದುತ್ತವೆ. ಇಂತಹ ರಂಜಕವನ್ನು ಉತ್ಪಾದಕಗಳು (ಆಟೋ ಟ್ರಾಪ್ಸ್) ವಿವಿಧ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತವೆ. ರಂಜಕ ಜೀವಕೋಶಗಳಲ್ಲಿ ಡಿ.ಎನ್.ಎ ಹಾಗೂ ಆರ್.ಎನ್.ಎ ಯಲ್ಲಿ ಎಟಿಪಿ (ಅಡೆನೊಸಿನ್ ಟ್ರೈಫೋಸ್ಫೈಟ್) ರೂಪದಲ್ಲಿ ದೊರೆಯುತ್ತವೆ. ಪ್ರಾಣಿಗಳು ಸಸ್ಯಗಳ ಸೇವೆಯಿಂದ ರಂಜಕ ಪಡೆದುಕೊಂಡು ತಮ್ಮ ಮೂಳೆ ಮತ್ತು ಹಲ್ಲುಗಳಿಗೆ ಉಪಯೋಗಿಸಿಕೊಳ್ಳುತ್ತವೆ. ಸಸ್ಯಗಳು ಮತ್ತು ಪ್ರಾಣಿಗಳು ನಶಿಸಿದ ಅಥವಾ ಸತ್ತ ಬಳಿಕ ಅವುಗಳ ಅವಶೇಷಗಳು ಕೊಳೆತು ಬಳಿಕ ರಂಜಕ ಪುನಃ ಮಣ್ಣು ಮತ್ತು ನೀರಿನಲ್ಲಿ ಸೇರುತ್ತವೆ.

6) ಗಂಧಕ ಆವರ್ತ (ಸಲ್ಫರ್ ಸೈಕಲ್): ಗಂಧಕದ ಆವರ್ತ ನೀರು, ವಾಯು ಮತ್ತು ಮಣ್ಣಿಗೆ ಜೋಡಣೆಯಾಗಿರುತ್ತದೆ. ಗಂಧಕ ಬ್ಯಾಕ್ಟೀರಿಯ ಚಟುವಟಿಕೆಗಳಿಂದ ಸಲ್ಫೈಟ್ ಬಿಡುಗಡೆಯಾಗಿ ಮಣ್ಣಿನಲ್ಲಿರುವ ಗಂಧಕ ಸಸ್ಯಗಳಿಗೆ ದೊರೆಯುತ್ತದೆ. ಪಳೆಯುಳಿಕೆ ಇಂಧನಗಳ (ಫಾಸಿಲ್ ಫ್ಯುಯಲ್) ದಹನದಿಂದ ಸ್ವಲ್ಪ ಪ್ರಮಾಣದ ಗಂಧಕ ವಾಯುಮಂಡಲ ಸೇರುತ್ತದೆ. ಅನಂತರ ಗಂಧಕದ ಡೈ ಆಕ್ಸೈಡ್ ಮತ್ತು ಜಲಜನಕದ ಸಲ್ಫೈಡ್ ಮಳೆಯ ನೀರಿನೊಂದಿಗೆ ಸಲ್ಫೈಟ್ ಅಥವಾ ಸಲ್ಫ್ಯೂರಿಕ್ ಆಮ್ಲದ ರೂಪದಲ್ಲಿ ಪುನಃ ಮಣ್ಣಿಗೆ ಸೇರ್ಪಡೆಯಾಗುತ್ತದೆ. (ಎಲ್.ಟಿ.ಎನ್.)

**ಜೈಸಲ್ ಮೇರ್:** ಹಿಂದಿನ ರಜಪುತಾನದ ಒಂದು ಸಂಸ್ಥಾನವಾಗಿದ್ದ ಇದು ಈಗ ರಾಜಸ್ತಾನದ ಒಂದು ಜಿಲ್ಲೆ. ವಿಸ್ತೀರ್ಣ 38,401 ಕಿಮೀ. ಜನಸಂಖ್ಯೆ 5,07,999. ಈ ಜಿಲ್ಲೆಯ ಬಹುಭಾಗ ಬರಡುಭೂಮಿ, ಮರಳುಗಾಡು. ಇಲ್ಲಿಯ ಹೊಳೆ ಹಳ್ಳಗಳು ಹರಿಯುವುದು ಮಳೆಗಾಲದಲ್ಲಿ ಮಾತ್ರ. ಈ ಜಿಲ್ಲೆಯ ಒಂದೇ ಒಂದು ನದಿ ಕಕನಿ. ಸು. 45 ಕಿಮೀ ದೂರ ನಿಧಾನವಾಗಿ ಹರಿದು ಮುಂದೆ ಬಯಲುಸೀಮೆಯಲ್ಲಿ ವಿಸ್ತಾರಗೊಂಡು ಭುಜ್ ಸರೋವರವಾಗಿ ಮಾರ್ಪಟ್ಟಿದೆ. ಈ ಪ್ರದೇಶದ ವಾಯುಗುಣ ಶುಷ್ಕ, ಆರೋಗ್ಯಕರ.

ಕೃಷಿಯಲ್ಲಿ ಈ ಜಿಲ್ಲೆ ಬಹಳ ಹಿಂದುಳಿದಿದೆ. ಮಳೆಗಾಲದಲ್ಲಿ ಮಾತ್ರವೇ ಸಣ್ಣ ಕಾಳುಗಳ ಅಲ್ಪಸ್ವಲ್ಪ ಬೆಳೆ ತೆಗೆಯುವುದು ಇಲ್ಲಿಯ ವಾಡಿಕೆ. ಜೋಳ, ಗೋದಿ, ಬಾರ್ಲಿಗಳಂಥ ಹಿಂಗಾರಿ ಬೆಳೆಗಳು ವಿರಳ. ಒಂದು ಕಡೆ ನೆಲೆನಿಂತು ಬೇಸಾಯ ಅಥವಾ ಕೈಕಸಬು ಕೈಗೊಂಡು ಹೊಟ್ಟೆ ತುಂಬಿಸಿಕೊಳ್ಳುವುದು ಸಾಧ್ಯವಾಗದೆ ಇಲ್ಲಿಯ ಬಹುಸಂಖ್ಯೆಯ ಜನ ಅಲೆಮಾರಿ ಬದುಕು ಸಾಗಿಸುತ್ತಾರೆ. ತಮ್ಮ ದನಕರುಗಳ ಮತ್ತು ಕುರಿಹಿಂಡುಗಳ ಪಾಲನೆಯೇ ಅವರಿಗೆ ಮುಖ್ಯ. ಹುಲ್ಲುಗಾವಲು ಪ್ರದೇಶಗಳ ಮೇಲೆಯೇ ಅವರ ಗಮನ. ಉಣ್ಣೆಯ ಕೆಲಸ, ತುಪ್ಪದ ತಯಾರಿಕೆ, ಒಂಟೆ ಮತ್ತಿತರ ದನಕರುಗಳ ಮಾರಾಟ– ಇವೇ ಇಲ್ಲಿಯ ಜನರ ಮುಖ್ಯ ಉದ್ಯೋಗಗಳು. ಊರಿಂದೂರಿಗೆ ಹೋಗಿ ಬರಲು ಮುಖ್ಯ ವಾಹನವೆಂದರೆ ಒಂಟೆ.

ಜೈಸಲ್‌ಮೇರ್ ಪಟ್ಟಣ ಜಿಲ್ಲೆಯ ಆಡಳಿತಕೇಂದ್ರ. ಪಟ್ಟಣದ ಸುತ್ತಲೂ 3–4.5 ಮೀ ಎತ್ತರ, 1.5 ಮೀ ದಪ್ಪ ಇರುವ ಗೋಡೆ ಇದೆ. ಇಲ್ಲಿಯ ಹಳದಿ ಬಣ್ಣದ ಉಸುಕಿನ ಶಿಲೆಗಳಿಂದ ನಿರ್ಮಾಣಗೊಂಡ ಮನೆ ಮಹಲುಗಳೂ, ಜೈನಮಂದಿರಗಳೂ ಅರಮನೆ ಮತ್ತು ಕೋಟೆಗಳೂ ಸುಂದರವಾಗಿವೆ. ಮಹಾರಾವಲನ ಅರಮನೆ ಇಲ್ಲಿಯ ಪ್ರಮುಖ ಪ್ರೇಕ್ಷಣೀಯ ಕಟ್ಟಡ. ನಗರದ ಜನಸಂಖ್ಯೆ 78,000. (ಬಿ.ಎ.ಎಸ್.;ಬಿ.ಎನ್.ಸಿ.ಎಚ್.)

**ಜೊಹಾನ್ಸ್‌ಬರ್ಗ್:** ದಕ್ಷಿಣ ಆಫ್ರಿಕ ಗಣರಾಜ್ಯದ ಅತ್ಯಂತ ದೊಡ್ಡ ನಗರ. ವೈಟ್ ವಾಟರ್ಸ್ ರಾಂಡ್ ಇಳುಕಲಿನ ದಕ್ಷಿಣ ಭಾಗದಲ್ಲಿ ಸಮುದ್ರಮಟ್ಟಕ್ಕೆ 1755 ಮೀ ಎತ್ತರದಲ್ಲಿದೆ. ವಾಯುಗುಣ ಹಿತಕರ, ಜುಲೈ ತಿಂಗಳಲ್ಲಿ 10.2$^{0}$ಸೆ., ಜನವರಿಯಲ್ಲಿ 20.2$^{0}$ಸೆ. ಜನಸಂಖ್ಯೆ 1480530 (1996).

ವೈಟ್ ವಾಟರ್ಸ್ ರಾಂಡ್ ಇಳುಕಲು ಪ್ರದೇಶದ ಬಂಡೆಯ ಸಾಲುಗಳಲ್ಲಿ ಚಿನ್ನದ ಪದರಗಳು ಸಿಕ್ಕಿ (1886), ಜನರಹಿತವಾಗಿದ್ದ ಆ ಸ್ಥಳ ಪ್ರಪಂಚದ ದೊಡ್ಡ ಚಿನ್ನದ ಗಣಿ ಪ್ರದೇಶವಾಗಿ ಬೆಳೆಯಿತು. ಅಲ್ಲಿ ಸರ್ವೇಕ್ಷಣೆ ನಡೆಸಿದ ಜೊಹ್ಯಾನ್ ರಿಸಿಕ್ ಎಂಬಾತನಿಂದ ಅಥವಾ ಹೊಸ ಚಿನ್ನದ ಗಣಿಗಳ ಆಡಳಿತ ವಹಿಸಿದ್ದ ಜೊಹ್ಯಾನಿಸ್ ಮೆಯರ್ ಎಂಬಾತನಿಂದ ನಗರಕ್ಕೆ ಈ ಹೆಸರು ಬಂದಿರಬಹುದು. ಇದರ ಆಡಳಿತಕ್ಕಾಗಿ ನಗರಸಭೆ ಇದೆ.

ನಗರದ ಮುಖ್ಯ ಕಟ್ಟಡಗಳು ಎಲಾಫ್ ಬೀದಿಯಲ್ಲಿವೆ. ಇದು ಮುಖ್ಯ ವ್ಯಾಪಾರಸ್ಥಳ. ಕಮೀಷನರ್ ಸ್ಟ್ರೀಟ್, ಮಾರ್ಕೆಟ್ ಸ್ಟ್ರೀಟ್, ಫಾಕ್ಸ್ ಸ್ಟ್ರೀಟ್–ಇವು ಇತರ ವಾಣಿಜ್ಯ ಕೇಂದ್ರಗಳು. ನಗರದ ಈ ಭಾಗದಲ್ಲಿರುವ ಕಟ್ಟಡಗಳೆಂದರೆ : ಸ್ಟಾಕ್ ಎಕ್ಸ್‌ಚೇಂಜ್ (1961), ಪುರಭವನ (1915), ಆಫ್ರಿಕಾನಾ ಮ್ಯೂಸಿಯಂ (1935), ಭೂವಿಜ್ಞಾನ ವಸ್ತುಸಂಗ್ರಹಾಲಯ (1890), ವೈಟ್ ವಾಟರ್ಸ್ ರಾಂಡ್ ತಾಂತ್ರಿಕ ಕಾಲೇಜು (1904), ನ್ಯಾಯಾಲಯಗಳು (1910), ಅಂಚೆಕಚೇರಿ (1935), ಆಂಗ್ಲಿಕನ್ ಚರ್ಚ್ (1926) ಮತ್ತು ಪ್ರಸಿದ್ಧ ಹೋಟೆಲುಗಳು. ನಗರದ ಈ ಭಾಗಕ್ಕೆ ಈಶಾನ್ಯದಲ್ಲಿ ಕಲಾಭವನ (1915) ಮತ್ತು ಜೋಬರ್ಟ್ ಪಾರ್ಕ್ ಇವೆ. ಉತ್ತರದಲ್ಲಿ ಆಸ್ಪತ್ರೆಗಳು, ಜೊಹಾನ್ಸ್ ಬರ್ಗ್ ಶಿಕ್ಷಣ ಕಾಲೇಜು ಮತ್ತು ನಾಟಕಶಾಲೆ (1962) ಇವೆ.

ಮಿಲ್ನರ್ ಪಾರ್ಕ್‌ನಲ್ಲಿ ವೈಟ್ ವಾಟರ್ಸ್ ರಾಂಡ್ ವಿಶ್ವವಿದ್ಯಾಲಯವಿದೆ (1922). ಪ್ರಾಣಿಸಂಗ್ರಹಾಲಯ ಮತ್ತು ದಕ್ಷಿಣ ಆಫ್ರಿಕ ರಾಷ್ಟ್ರೀಯ ಸಮರ ವಸ್ತುಸಂಗ್ರಹಾಲಯ ಎಕ್ಸ್‌ಟೀನ್ ಪಾರ್ಕಿನಲ್ಲಿವೆ. ನಗರದಲ್ಲಿ ಖಗೋಳ ವೀಕ್ಷಣಾಲಯವೊಂದಿದೆ. ಜಾರ್ಜ್ ಹ್ಯಾರಿಸನ್ ಪಾರ್ಕ್ ನಗರದ ಪಶ್ಚಿಮ ಸರಹದ್ದಿನಲ್ಲಿದೆ. 1886ರಲ್ಲಿ ಚಿನ್ನದ ಪದರಗಳ ಬಂಡೆಗಳನ್ನು ಈ ಪ್ರದೇಶದಲ್ಲಿ ಕಂಡುಹಿಡಿದ ಆಸ್ಟ್ರೇಲಿಯದ ಗಣಿತಜ್ಞ ಹ್ಯಾರಿಸನ್ನನ ಹೆಸರನ್ನೇ ಈ ಪಾರ್ಕಿಗೆ ಇಡಲಾಗಿದೆ. ನಗರದ ದಕ್ಷಿಣದಲ್ಲಿ ಟರ್ಫಾಂಟೀನ್ ರೇಸ್‌ಕೋರ್ಸ್,

ಆಟದ ಬಯಲು, ಚಿನ್ನದ ಗಣಿಗಳ ಮಣ್ಣಿನ ರಾಶಿ ಇವೆ. ದಕ್ಷಿಣ ಆಫ್ರಿಕದ ಅರಣ್ಯ ಪುಷ್ಪಗಳ ಉದ್ಯಾನ ಮತ್ತು ಮೆಲ್‌ರೋಸ್ ಪಕ್ಷಿಧಾಮ ನಗರದ ಉತ್ತರದಲ್ಲಿ ಇವೆ. ಪಕ್ಷಿಧಾಮದಲ್ಲಿ 100 ಬಗೆಯ ಪಕ್ಷಿಗಳಿವೆ.

ಈ ನಗರ ಪ್ರಮುಖ ಕೈಗಾರಿಕಾ ಕೇಂದ್ರ. ರಾಸಾಯನಿಕ ವಸ್ತುಗಳು, ಬಟ್ಟೆ ಹಾಗೂ ಚರ್ಮದ ವಸ್ತುಗಳು ಇಲ್ಲಿ ತಯಾರಾಗುತ್ತವೆ. ಇದು ರಾಂಡ್ ಚಿನ್ನದ ಗಣಿಗಳ ಕೇಂದ್ರ.

ಹಲವಾರು ಮುಖ್ಯಸ್ಥಳಗಳಿಂದ ಬರುವ ಹೆದ್ದಾರಿಗಳು ಈ ನಗರದಲ್ಲಿ ಸಂಧಿಸುತ್ತವೆ. ಇಲ್ಲಿಂದ ಪ್ರಿಟೋರಿಯ 58 ಕಿಮೀ, ಬ್ಲೂಮ್‌ಫ್ಯಾಂಟೇನ್ 422 ಕಿಮೀ, ಕೇಪ್‌ಟೌನ್ 1450 ಕಿಮೀ, ಡರ್ಬನ್ 650 ಕಿಮೀ ದೂರದಲ್ಲಿವೆ. ನಗರದ ಆಧುನಿಕ ರೈಲ್ವೆ ಜಂಕ್ಷನ್‌ನಿಂದ ದಿನವಹಿ 1,60,000 ಪ್ರಯಾಣಿಕರ ಸಂಚಾರವಿದೆ. ಜಾನ್ ಸ್ಮಟ್ಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (1947) ನಗರದಿಂದ ಈಶಾನ್ಯಕ್ಕೆ 24 ಕಿಮೀ ದೂರದಲ್ಲಿದೆ. (ವಿ.ಜಿ.ಕೆ.)

**ಜೋಧಪುರ:** ರಾಜಸ್ತಾನದ ಒಂದು ಜಿಲ್ಲೆ; ಆಡಳಿತ ಕೇಂದ್ರ. ವಿಸ್ತೀರ್ಣ 22,860 ಚ.ಕಿಮೀ. ಜನಸಂಖ್ಯೆ 28,80,777. ರಾಜಸ್ತಾನದ ಶೇ. 6.6 ಭಾಗವನ್ನು ಆವರಿಸಿರುವ ಈ ಜಿಲ್ಲೆ ವಿಸ್ತಾರದಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ನಾಲ್ಕನೆಯದು. ಅಲ್ಲಲ್ಲಿ ಮರಳು ದಿಣ್ಣೆಗಳಿಂದ ಕೂಡಿರುವ ಈ ಪ್ರದೇಶದಲ್ಲಿ ಕಂದು ಮತ್ತು ಬೂದು ಬಣ್ಣದ ಮರಳು ಹರಡಿಕೊಂಡಿದೆ. ವಾರ್ಷಿಕ ಸರಾಸರಿ ಮಳೆ 64 ಸೆಂಮೀ. ಶುಷ್ಕ ಹವಾಗುಣ. ಉಷ್ಣತೆ ಸು. $12.5^0$ಸೆ ನಿಂದ ಸು. $32.5^0$ ಸೆ ವರೆಗೆ. ವಿಶಾಲವಾದ ಥಾರ್ ಮರುಭೂಮಿಯ ಭಾಗವಾಗಿರುವ ಈ ಪ್ರದೇಶದಲ್ಲಿ ಅಲ್ಲಲ್ಲಿ ಕಪ್ಪು ಬಣ್ಣದ ಮರಳುಗಲ್ಲು ರಾಶಿಗಳು ಕಾಣಸಿಗುತ್ತವೆ. ಫಿದುಸಾರದ ಹತ್ತಿರ ಮರಳುಗಲ್ಲುಗಳ ಗಣಿಗಳಿವೆ. ಮನೆಗಳ ಚಾವಣಿಗೆ ಹಾಸಲು ಇವನ್ನು ಬಳಸುತ್ತಾರೆ. ಪಿಪಾರ ಪಟ್ಟಣದ ಬಳಿ ಬಿಳಿ ಮಣ್ಣು, ಬಿಲಾರಾ ತಹಸೀಲಿನಲ್ಲಿ ಸುಣ್ಣದ ಕಲ್ಲು, ಚಿರೀ ಮತ್ತು ಮೋಟಾಯಿ ಗ್ರಾಮಗಳ ಬಳಿ ಜಿಪ್ಸಮ್ ಹುಡಿ ಹೇರಳವಾಗಿ ದೊರೆಯುತ್ತವೆ.

ಗೋದಿ, ಜೋಳ, ಸಜ್ಜೆ, ಎಣ್ಣೆಕಾಳು ಇಲ್ಲಿಯ ಮುಖ್ಯ ಬೆಳೆಗಳು. ನೆಯ್ಗೆ, ಹಿತ್ತಾಳೆ ಪಾತ್ರೆಗಳ ತಯಾರಿಕೆ, ದಂತದ ಕುಸುರಿ ಮತ್ತು ಅಮೃತಶಿಲೆಯ ಆಟಿಕೆಗಳಿಗೆ ಈ ಜಿಲ್ಲೆ ಪ್ರಸಿದ್ಧವಾಗಿದೆ.

ಜೋಧಪುರ ನಗರ ಜಿಲ್ಲೆಯ ಆಡಳಿತ ಕೇಂದ್ರ. ಇದು ಹಿಂದೆ ಜೋಧಪುರ ಸಂಸ್ಥಾನದ ರಾಜಧಾನಿಯಾಗಿತ್ತು. ರಾಜಸ್ತಾನ ರಾಜ್ಯದ ಎರಡನೆಯ ದೊಡ್ಡ ನಗರ. ಜನಸಂಖ್ಯೆ 8,56,034. ಪುಷ್ಕರ ಸರೋವರದ ಹತ್ತಿರ ಉಗಮ ಹೊಂದಿ ಕಚ್ಛ್ ರಣದ ಕಡೆಗೆ ಹರಿಯುವ ಲೂನೀ ನದಿಯ ಆಚೀಚೆ ದಂಡೆಗಳ ಮೇಲೆ ಜೋಧಪುರ ನಗರ ಹಬ್ಬಿದೆ. ನಗರದ ಸುತ್ತಲೂ ಕಲ್ಲಿನ ಗೋಡೆ ಇದೆ. ಸು. 10 ಕಿಮೀ ಉದ್ದದ ಈ ಗೋಡೆಗೆ ಏಳು ದ್ವಾರಗಳಿವೆ. ಅವುಗಳಲ್ಲಿ ಸಾಗೋರಿ, ಸಜೋತಿ, ಮೇರ್ತಿಯಾ, ಜಾಲೋರಿ ಮತ್ತು ಶಿವಾಂಚಿ ದ್ವಾರಗಳು ಮುಖ್ಯವಾದುವು. ಈ ವಿಶಾಲವಾದ ಕೋಟೆಯೊಳಗೆ ಒಂದು ಕೋಟೆಯುಂಟು. ಅದರಲ್ಲಿ ವಿಶಾಲವಾದ ಬಂಡೆಗಲ್ಲಿನ ಮೇಲೆ ಒಂದು ಅರಮನೆ ಇದೆ. ಜಯಪೋಲ, ಲೋಹಾಪೋಲ, ಫತೇಹಪೋಲ ಎಂಬ ಮೂರು ಮಹಾದ್ವಾರಗಳುಳ್ಳ ಸೂರಸಿಂಗ್ ಕಟ್ಟಿಸಿದ ಮೋತೀ ಮಹಲ್, ಮತ್ತು ಅಭಯಸಿಂಗ್ ಕಟ್ಟಿಸಿದ ಪೂಲ್ ಮಹಲ್ ಸುಂದರವಾಗಿವೆ. ನಗರದಲ್ಲಿರುವ ಸಿಂಗಫರ್ ಚೌಕ್, ಫತೇಹ ಮಹಲ್, ಗುಲಾಬ್ ಸಾಗರ ತೀರದಲ್ಲಿರುವ ರಾಜಮಹಲ್ ಮತ್ತು ತಲ್ಹಾಟಿಕಾ ಮಹಲ್‌ಗಳೂ ಭವ್ಯವಾಗಿವೆ. ಚಿತಾರಗುಡ್ಡದ ಮೇಲೆ ಸುಯೋಜಿತವಾದ ಉದ್ಯಾನ, ಈಜುಕೊಳ ಮತ್ತು ಮಹಾದ್ವಾರಗಳನುಳ್ಳ ಉಮೇಡ್ ಭವನ ಇಲ್ಲಿಯ ಇನ್ನೊಂದು ಒಳ್ಳೆಯ ಕಟ್ಟಡ. ಸಾರ್ವಜನಿಕ ವಾಚನಾಲಯ, ಸರ್ದಾರ್ ವಸ್ತುಸಂಗ್ರಹಾಲಯ, ಜಸವಂತ್‌ಥಾರ ಸ್ಮಾರಕ ಇವು ಪ್ರೇಕ್ಷಣೀಯ. ಇಲ್ಲಿ ಅನೇಕ ಕಾಲೇಜುಗಳೂ ಒಂದು ವಿಶ್ವವಿದ್ಯಾಲಯವೂ (1962) ಇವೆ. ಚುಂದ್ರಿಸೀರೆ, ನಕ್ಷೆಗಳಿರುವ ಹಿತ್ತಾಳೆ ಪಾತ್ರೆ, ಬಟ್ಟೆಯ ಮೇಲೆ ನಕಾಸೆ, ಚರ್ಮದ ಪಟ್ಟೆ, ರುಮಾಲು, ಬಗೆಬಗೆಯ ನಕಾಸೆಗಳ ಪಾದರಕ್ಷೆ ಇವುಗಳಿಗೆ ಈ ನಗರ ಪ್ರಸಿದ್ಧ. (ಬಿ.ಎ.ಎಸ್.)

**ಜೋನಾಸ್ಸನ್‌ನ ಮಾದರಿ:** ಸ್ವೀಡಿಷ್ ಭೂಗೋಳ ವಿಜ್ಞಾನಿ. ಈತ ವಾನ್‌ತ್ಯೂನನ್ನನ ಮಾದರಿಯನ್ನು ಪರಿಷ್ಕರಿಸಿ ಹೊಸ ಕೃಷಿ ಸ್ಥಾನೀಕರಣ ಸಿದ್ಧಾಂತ ಮಾದರಿಯನ್ನು ರಚಿಸಿದ. ವಾನ್‌ತ್ಯೂನನ್ನನ ಮಾದರಿ ಭೂಮಿಯ ಆರ್ಥಿಕ ಗೇಣಿ, ಮಾರುಕಟ್ಟೆ ಮತ್ತು ಸಾರಿಗೆಯ ವಿಧಕ್ಕೆ ಸಂಬಂಧಿಸಿದೆ. ಜೋನಾಸ್ಸನ್ 1925 ರಲ್ಲಿ ಯುರೋಪಿನಲ್ಲಿ ಈ ಮಾದರಿಯನ್ನು ಕೃಷಿ ಭೂ ಬಳಕೆಗಾಗಿ ಅಳವಡಿಸಿದ. ಯುರೋಪ್ ಮತ್ತು ಉತ್ತರ ಅಮೆರಿಕದಲ್ಲಿ ಕೈಗಾರಿಕಾ ಕೇಂದ್ರಗಳ ಸುತ್ತ ಕೃಷಿ ಪ್ರದೇಶವು ಸುತ್ತುವರೆದಿರುವುದನ್ನು ಗಮನಿಸಿದನು. ಅತನು ವಿವರಿಸಿರುವ 7 ವಲಯಗಳು ಈ ಕೆಳಕಂಡಂತಿವೆ:

ವಲಯ 1 : ನಗರ ಮತ್ತು ಅದಕ್ಕೆ ಹೊಂದಿಕೊಂಡ ಸುತ್ತಲಿನ ಪ್ರದೇಶ ಹಸುರುಮನೆ ಮತ್ತು ಪುಷ್ಪಕೃಷಿಯಿಂದ ಸುತ್ತುವರಿದಿರುವುದು. ಸಮೀಪದ ಪ್ರದೇಶ, ಹಸುರು ಮನೆ ಮತ್ತು ಹೂವಿನ ಕೃಷಿ.

ವಲಯ 2 : ಟ್ರಕ್ ಉತ್ಪನ್ನಗಳು, ಹಣ್ಣುಗಳು, ಆಲೂಗಡ್ಡೆ ಮತ್ತು ತಂಬಾಕು ಹಾಗೂ ಕುದುರೆ ಸಾಕಣೆ.

ವಲಯ 3 : ಕ್ಷೀರೋತ್ಪನ್ನಗಳು, ಮಾಂಸಕ್ಕಾಗಿ ದನ, ಕುರಿ ಮೇವು, ಓಟ್ಸ್, ನಾರಿಗಾಗಿ ಅಗಸೆ ಬೆಳೆ.

ವಲಯ 4: ಸಾಮಾನ್ಯ ಕೃಷಿ ಧಾನ್ಯ, ಮೇವು, ಸಾಕು ಪ್ರಾಣಿಗಳು

ವಲಯ 5: ರೊಟ್ಟಿ ತಯಾರಿಕೆಗೆ ಅಗತ್ಯವಾದ ಏಕದಳ ಧಾನ್ಯಗಳು ಮತ್ತು ಎಣ್ಣೆಗೆ ಬೇಕಾಗುವ ಅಗಸೆಬೆಳೆ.

ವಲಯ 6: ದನಕರುಗಳು, ಕುದುರೆ ಮತ್ತು ಕುರಿ ಉಪ್ಪೂರಿಸಿದ ಹಾಗೂ ಹಬೆಯಾಡಿಸಿದ ಮತ್ತು ಡಬ್ಬಿಯಲ್ಲಿ ತುಂಬಿಸಿದ ಮಾಂಸ, ಮೂಳೆ, ಚರಬಿ, ತೊಗಲು.

ವಲಯ 7: ಅರಣ್ಯವುಳ್ಳ ಅತ್ಯಂತ ಹೊರವಲಯ.

ಈ ಎರಡು ಖಂಡಗಳಲ್ಲೂ ಹೆಚ್ಚು ತೀವ್ರವಾದ ಕೃಷಿ ಅಭಿವೃದ್ಧಿಯು, ಮೇವು ಮತ್ತು ಹುಲ್ಲುಗಾವಲುಗಳಿಂದ ಕೂಡಿದ್ದು ಅಲ್ಲಿ ಕೈಗಾರಿಕಾ ಕೇಂದ್ರಗಳು ನೆಲಗೊಂಡಿದ್ದವು. ಸುತ್ತಲೂ ಧಾನ್ಯ ಬೆಳೆ ವಲಯ, ಹುಲ್ಲುಗಾವಲು ಮತ್ತು ಅರಣ್ಯಗಳು ಕ್ರಮಬದ್ಧವಾದ ಭೂಬಳಕೆಯು ಸಮಕೇಂದ್ರಗಳಾಗಿ ವ್ಯವಸ್ಥೆಗೊಂಡಿವೆ. ಜೋನಾಸ್ಸನ್ ಕೂಡ ವಾನ್‌ತ್ಯುನಿನ್ ರೀತಿಯಲ್ಲಿಯೇ ಯುರೋಪಿನ ಊಹಾತ್ಮಕ ಪ್ರತ್ಯೇಕನಗರದ ಸುತ್ತಮುತ್ತಲಿನ ಪ್ರದೇಶವನ್ನೆ ತನ್ನ ಮಾದರಿಗೆ ಬಳಸಿರುವನು. ಜೋನಾಸ್ಸನ್ ಅಮೇರಿಕ ಸಂಯುಕ್ತ ಸಂಸ್ಥಾನದ ಟೆಕ್ಸಾಸ್ ಪ್ರಾಂತ್ಯದ ಎಡ್‌ವರ್ಡ್ ಪ್ರಸ್ಥಭೂಮಿಯ ಸುತ್ತಲಿನ ವಲಯಗಳ ಹಂಚಿಕೆಯನ್ನು ಕಂಡುಕೊಂಡನು. 1952 ರಲ್ಲಿ ವಾಲ್ಕೆನ್‌ಬರ್ಗ್ ಎಂಬುವವನು ಯುರೋಪಿನ ಕೃಷಿ ಸಾಂದ್ರತೆಗೆ ಸಂಬಂಧ ನಕ್ಷೆಯೊಂದನ್ನು ತಯಾರಿಸುವಾಗ ಜೋನಾಸನ್ ಮಾದರಿಯನ್ನು ಬಳಸಿಕೊಂಡನು. ಈ ನಕ್ಷೆ ಯುರೋಪಿನ ಎಕರೆವಾರು ಉತ್ಪಾದಕತೆಯನ್ನು ಬಿಂಬಿಸುತ್ತದೆ. ಇಲ್ಲಿ ವಾಲ್ಕೆನ್‌ಬರ್ಗ್ ಪ್ರಮುಖವಾಗಿ ಬೆಳೆದ ಎಂಟು ಬೆಳೆಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಅವುಗಳೆಂದರೆ ಗೋದಿ, ರೈ, ಬಾರ್ಲಿ, ಓಟ್ಸ್, ಮೆಕ್ಕೆಜೋಳ, [illegible] (ಪಿ.ಟಿ.ಬಿ.)

**ಜೋರ್ಡಾನ್:** ಇದು ಪಶ್ಚಿಮ ಏಷ್ಯದ ಒಂದು ಅರಬ್ ರಾಷ್ಟ್ರ. ಅಲ್ ಮಮ್ಲುಕಾ ಅಲ್ ಉರ್ದೂನಿಯಾ ಅಲ್ ಹಷೀಮಿಯಾ ಎಂಬುದು ಅರಬ್ಬೀ ಹೆಸರು. ಉ.ಅ. $28^0$–$33^0$ ಹಾಗು ಪೂ.ರೇ. $35^0$–$39^0$ ಗಳ ನಡುವೆ ಇದೆ. ಇದು ಹಿಂದಿನ ಬ್ರಿಟಿಷ್ ಪ್ರಾಧಿಕಾರ ಪ್ರದೇಶವಾಗಿದ್ದ ಟ್ರಾನ್ಸ್‌ಜೋರ್ಡಾನ್ ಮತ್ತು ಪೂರ್ವ ಪ್ಯಾಲಸ್ಟೀನಿನ ಒಂದು ಭಾಗವನ್ನು ಒಳಗೊಂಡಿದೆ. ಉತ್ತರಕ್ಕೆ ಸಿರಿಯ, ಪೂರ್ವಕ್ಕೆ ಇರಾಕ್, ಪಶ್ಚಿಮಕ್ಕೆ ಇಸ್ರೇಲ್, ದಕ್ಷಿಣಕ್ಕೆ ಸೌದಿ ಅರೇಬಿಯ–ಇವು ಇದರ ಮೇರೆಗಳು. ನೈರುತ್ಯದಲ್ಲಿ ಇದಕ್ಕೆ ಅಖಾಬ ಖಾರಿಯ 19 ಕಿಮೀ ಉದ್ದದ ಸಮುದ್ರತೀರವಿದೆ. ಇದು ಪ್ರಪಂಚದಲ್ಲಿ ಅತಿಕಡಿಮೆ ಉದ್ದದ ತೀರವನ್ನು ಹೊಂದಿರುವ ರಾಷ್ಟ್ರ. ಇಲ್ಲಿರುವ ಅಖಾಬ ಈ ದೇಶದ ಏಕೈಕ ಬಂದರು. ಜೋರ್ಡಾನಿನ ವಿಸ್ತೀರ್ಣ 94,500 ಚ.ಕಿಮೀ. ಜನಸಂಖ್ಯೆ 5.3 ದ.ಲ. (2005). ರಾಜಧಾನಿ ಅಮ್ಮಾನ್. ಜನಸಂಖ್ಯೆ 9,63,490 (2002).

ಭೂಸ್ವರೂಪ : ಜೋರ್ಡಾನಿನ ಭೂಸ್ವರೂಪಗಳಲ್ಲಿ ಅತ್ಯಂತ ಪ್ರಮುಖವಾದುದು. ಗ್ಯಾಲಿಲೀ ಸಮುದ್ರದಿಂದ ಅಖಾಬ ಕೊಲ್ಲಿಯವರೆಗಿನ ಸೀಳುಕಣಿವೆ. ಸುಣ್ಣಕಲ್ಲುಗಳು ಮತ್ತು ಉಸುಕು ಕಲ್ಲುಗಳಿರುವ ಹೊರ ಮೈ ಹಳ್ಳತಿಟ್ಟುಗಳಿಂದ ಕೂಡಿದೆ. ಸೀಮೆಸುಣ್ಣದ ಮೇಲ್ಮೈಯುಳ್ಳ ಪ್ರದೇಶಗಳು ಅಲೆಯಲೆಯಾಗಿವೆ. ಇಲ್ಲಿಯ ಬೆಟ್ಟಗಳ ಅತ್ಯುನ್ನತ ಶಿಖರ ತಾಲ್ ಅಸುರ್ 1268 ಮೀ. ಗ್ಯಾಲಿಲೀ ಸಮುದ್ರದಿಂದ ಮೃತ್ಯು ಸರೋವರ ದಂಡೆಗೆ ಭೂಪ್ರದೇಶ ಇಳಿಜಾರಾಗಿದೆ. ಸಮುದ್ರಮಟ್ಟದಿಂದ 232 ಮೀ ಕೆಳಗೆ ಗ್ಯಾಲಿಲೀ ಸಮುದ್ರವಿದೆ. ಮೆಡಿಟರೇನಿಯನ್ ಸಮುದ್ರದ ಮಟ್ಟದಿಂದ 400 ಮೀ ತಗ್ಗಿನಲ್ಲಿ ಮೃತ್ಯು ಸರೋವರವಿದೆ. ಇದು ಪ್ರಪಂಚದಲ್ಲಿ ಅತ್ಯಂತ ತಗ್ಗಾದ ಕಣಿವೆ ಪ್ರದೇಶ. ಮೃತ್ಯು ಸರೋವರದಿಂದ ದಕ್ಷಿಣಕ್ಕೆ ವಾಡಿ ಅರಬಾ ಎನ್ನಿಸಿಕೊಳ್ಳುವ ಶುಷ್ಕ ಕಣಿವೆ ಕ್ರಮವಾಗಿ ಏರುತ್ತ ಸಾಗಿ ಮೃತ್ಯುಸರೋವರದ ದಕ್ಷಿಣದ ತುದಿಗೂ ಅಖಾಬ ಖಾರಿಗೂ ಮಧ್ಯದಲ್ಲಿ ಸಮುದ್ರಮಟ್ಟವನ್ನು ಮುಟ್ಟುತ್ತದೆ. ಜೋರ್ಡಾನ್ ನದಿಯ ಪೂರ್ವಕ್ಕೆ ಇರುವ ಟ್ರಾನ್ಸ್‌ಜೋರ್ಡಾನಿಯನ್ ಪ್ರಸ್ಥಭೂಮಿಗಳ ಸರಾಸರಿ ಎತ್ತರ 1000 ಮೀ. ಜೋರ್ಡಾನ್ ನದಿಯ ಪೂರ್ವ ದಂಡೆಯ ಬಹು ಭಾಗ ಮರಳುಗಾಡು.

ಜೋರ್ಡಾನಿನ ಮುಖ್ಯ ನದಿ ಜೋರ್ಡಾನ್. ಇದು ಇಸ್ರೇಲಿನಿಂದ ಈ ದೇಶವನ್ನು ಉತ್ತರದಲ್ಲಿ ಪ್ರವೇಶಿಸಿ, ದಕ್ಷಿಣಾಭಿಮುಖವಾಗಿ ಹರಿದು ಮೃತ್ಯು ಸರೋವರವನ್ನು ಸೇರುತ್ತದೆ. ಇದರ ಮುಖ್ಯ ಉಪನದಿ ಯಾರ್ಮೂಕ್. ಸು. 88 ಕಿಮೀ ಉದ್ದವಾಗಿಯೂ 16 ಕಿಮೀ ಅಗಲವಾಗಿಯೂ ಇರುವ ಮೃತ್ಯುಸರೋವರ ಭೂಮಿಯ ಅತ್ಯಂತ ತಗ್ಗಿನ ಪ್ರದೇಶ. ಇದರ ಅತ್ಯಂತ ಆಳದ ಸ್ಥಳ ಸಮುದ್ರ ಮಟ್ಟದಿಂದ 866 ಮೀ ಕೆಳಗೆ ಇದೆ.

ವಾಯುಗುಣ : ಜೋರ್ಡಾನ್ ನದಿಯ ಪಶ್ಚಿಮ ದಂಡೆಯ ಪ್ರದೇಶದಲ್ಲಿ ಮಾರ್ಪಾಡು ಹೊಂದಿದ ಮೆಡಿಟರೇನಿಯನ್ ವಾಯುಗುಣವಿದೆ. ಚಳಿಗಾಲದಲ್ಲಿ ಮಳೆ ಸಾಧಾರಣ. ಬೇಸಗೆ ಹೆಚ್ಚು ಉಷ್ಣ, ಹೆಚ್ಚು ಶುಷ್ಕ, ಜೋರ್ಡಾನ್ ಕಣಿವೆಯಲ್ಲಿ ಮಳೆ ಅತ್ಯಲ್ಪ. ಚಳಿಗಾಲ ಹಿತಕರ. ಪೂರ್ವ ದಂಡೆಯಲ್ಲಿ ಮಳೆ ಕಡಿಮೆ, ಬೇಸಗೆ ಅತಿಹೆಚ್ಚು ಉಷ್ಣಾಂಶದಿಂದ ಕೂಡಿದೆ. ಮರುಭೂಮಿ ಪ್ರದೇಶ ಬಲು ತಾಪಕರ; ಅಲ್ಲಿಯದು ಒಣ ಹವೆ. ಮಳೆ ಇಲ್ಲವೇಇಲ್ಲವೆನ್ನಬಹುದು. ದೈನಂದಿನ ಹಾಗೂ ವಾರ್ಷಿಕ ಉಷ್ಣಾಂಶದ ವ್ಯತ್ಯಾಸ ಅತಿಹೆಚ್ಚು. ವಾರ್ಷಿಕ ಮಳೆ ಉತ್ತರದಲ್ಲಿ 90 ಸೆಂಮೀ ಪೂರ್ವದಲ್ಲಿ 60 ಸೆಂಮೀ ಗಳಷ್ಟಿದ್ದು, ದಕ್ಷಿಣದ ಜೋರ್ಡಾನ್ ಕಣಿವೆಯಲ್ಲಿ ಕೇವಲ 10 ಸೆಂಮೀ ಮಾತ್ರ. ಪೂರ್ವದ ಮರುಭೂಮಿಯಲ್ಲಿ ವರ್ಷಗಟ್ಟಲೆ ಮಳೆಯೇ ಬೀಳುವುದಿಲ್ಲ.




ಸಸ್ಯ-ಪ್ರಾಣಿ ವರ್ಗಗಳು : ವಾಯುಗುಣಕ್ಕೆ ಅನುಸಾರವಾಗಿ ಸಸ್ಯವರ್ಗ ವ್ಯತ್ಯಾಸವಾಗುತ್ತದೆ. ನೈಸರ್ಗಿಕ ಸಸ್ಯವರ್ಗ ಅನೇಕ ಕಡೆಗಳಲ್ಲಿ ಸಂಪೂರ್ಣವಾಗಿ ಮಾರ್ಪಾಡು ಹೊಂದಿದೆ. ಜಾಬಲ್ ಅಜಲೂನ್ ಪ್ರದೇಶ ಪ್ರಮುಖವಾದ ಅರಣ್ಯಪ್ರದೇಶ. ಆರ್ದ್ರತೆಯುಳ್ಳ ಬೆಟ್ಟಸೀಮೆಗಳಲ್ಲಿ ಮಾತ್ರ ಅರಣ್ಯ ಕಂಡುಬರುತ್ತದೆ. ಇಲ್ಲಿಯ ಪ್ರಮುಖ ಸಸ್ಯವರ್ಗವೆಂದರೆ ಹುಲ್ಲುಗಾವಲು. ಇದು ಮಳೆಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ವಸಂತಕಾಲದಲ್ಲಿ ಉತ್ತರ ಭಾಗಗಳ ದಿಣ್ಣೆಗಳಲ್ಲಿ ಹಸಿರು ಮತ್ತು ಹೂಗಿಡಗಳು ತುಂಬಿರುತ್ತವೆ. ತಾಳೆಯ ಜಾತಿಯ ಮರಗಳು ಮರುಭೂಮಿಯಲ್ಲಿ ಸಾಮಾನ್ಯ. ತಗ್ಗುಪ್ರದೇಶಗಳಲ್ಲಿ ಚಕ್ಕೋತಸೊಪ್ಪಿನ ಜಾತಿಯ ಗಿಡಗಳ ಪೊದೆಗಳಿವೆ. ಜೋರ್ಡಾನಿನಲ್ಲಿ 600ಕ್ಕಿಂತ ಹೆಚ್ಚು ಬಗೆಯ ಕಶೇರುಕಗಳುಂಟು. ಹೈರಾಕ್ಸ್, ಕತ್ತೆಕಿರುಬ, ಗೆಜ಼ೆಲ್, ಮುಖಮಲ್ ಹೆಗ್ಗಣ, ಮರುಭೂಮಿಯ ನರಿ, ಮುಂಗಸಿ-ಇವು ಇಲ್ಲಿಯ ಪ್ರಾಣಿಗಳಲ್ಲಿ ಹಲವು. ನವಿಲು, ರಣಹದ್ದು, ಬುಲ್‍ಬುಲ್ ಮುಂತಾದ ಪಕ್ಷಿಗಳುಂಟು.

ಆರ್ಥಿಕತೆ : ಜೋರ್ಡಾನ್ ಪರಂಪರೆಯಾಗಿ ವ್ಯವಸಾಯವನ್ನು ಅವಲಂಬಿಸಿದ ದೇಶ. ದೇಶದ ಒಟ್ಟು ಭೂಮಿಯಲ್ಲಿ ಶೇ.4.8 ರಷ್ಟು ಭೂಮಿ ಮಾತ್ರ (4,352 ಚ.ಕಿಮೀ) ಸಾಗುವಳಿಗೆ ಒಳಪಟ್ಟಿದೆ. 25,600 ಹೆಕ್ಟೇರ್‍ಗೆ ನೀರಾವರಿ ಸೌಲಭ್ಯವುಂಟು. 41,121 ಹೆಕ್ಟೇರ್ ಜಮೀನು ಸಾಗುವಳಿ ಮಳೆಯನ್ನೇ ಅವಲಂಬಿಸಿದೆ. ಪೂರ್ವದ ಘೋರ್ ನೀರಾವರಿ ಯೋಜನೆ 1958ರಲ್ಲಿ ಆರಂಭವಾಯಿತು. ಇದು ಅತ್ಯಂತ ದೊಡ್ಡ ನೀರಾವರಿ ಯೋಜನೆ. ಯಾರ್ಮೂಕ್ ನದಿಯ ನೀರನ್ನು ಬಳಸಿಕೊಳ್ಳಲು 69 ಕಿಮೀ ಉದ್ದದ ಕಾಲುವೆ ತೋಡಲಾಗಿದೆ. ಈ ಯೋಜನೆಯಿಂದ ಸಾಕಷ್ಟು ನೀರಾವರಿ ಸೌಲಭ್ಯ ಒದಗಿದೆ. ಪಶ್ಚಿಮಘೋರ್‍ನಲ್ಲಿ ವಾಡಿ ಅಲ್ ಫರಿಯಾದಿಂದ ಸ್ವಲ್ಪ ಭೂಮಿ ನೀರಾವರಿಗೆ ಒಳಪಟ್ಟಿದೆ. ದೇಶದ ಜನಸಂಖ್ಯೆಯ ಅವಶ್ಯಕತೆಯ ದೃಷ್ಟಿಯಿಂದ ಇಲ್ಲಿ ಸಾಗುವಳಿಯ ಭೂಮಿ ಬಹಳ ಕಡಿಮೆ. ದೇಶದ ಬಹುಭಾಗ ಮರುಭೂಮಿ. ಗೋದಿ, ಬಾರ್ಲಿ, ಅವರೆಕಾಳು, ಗೋವಿನಜೋಳ, ಚನ್ನಂಗಿ ಕಾಳು, ಎಳ್ಳು, ತಂಬಾಕು, ಹತ್ತಿ, ಸಾರ್ಗಂ-ಇವು ಮುಖ್ಯ ಬೆಳೆಗಳು. ಪಶ್ಚಿಮ ಜೋರ್ಡಾನಿನಲ್ಲಿ ದ್ರಾಕ್ಷಿ, ಆಲಿವ್, ಅಂಜೂರ ಬೆಳೆಯುತ್ತವೆ. ಬಾಳೆ, ನಿಂಬೆ, ಕಿತ್ತಳೆ, ಹೇರಳೆ ಮುಂತಾದವು ನೀರಾವರಿ ಇದ್ದಲ್ಲಿ ಚೆನ್ನಾಗಿ ಬೆಳೆಯುತ್ತವೆ.

ಜೋರ್ಡಾನಿನ ಮುಖ್ಯ ಖನಿಜಸಂಪತ್ತು ಪೊಟ್ಯಾಷ್ ಮತ್ತು ರಂಜಕ. ಪೊಟ್ಯಾಷ್ ಮೃತ್ಯು ಸರೋವರದಲ್ಲಿ ಹೇರಳವಾಗಿ ಸಿಗುತ್ತದೆ. ಉತ್ತಮ ದರ್ಜೆಯ ರಂಜಕವನ್ನು ಇಟಲಿ, ಚೆಕೊಸ್ಲೊವಾಕಿಯ, ಜಪಾನ್ ಮತ್ತು ಭಾರತ ದೇಶಗಳಿಗೆ ರಫ್ತು ಮಾಡುವರು. ತಾಮ್ರ ಮತ್ತು ಮ್ಯಾಂಗನೀಸ್ ಸ್ವಲ್ಪ ಪ್ರಮಾಣಗಳಲ್ಲಿ ದೊರಕುತ್ತವೆ. ಇಲ್ಲಿ ದೊರೆಯುವ ಕಬ್ಬಿಣದ ಅದಿರು ಉತ್ತಮ ದರ್ಜೆಯದಾದರೂ ಇದು ಚದರಿಹೋಗಿದೆ. ಇದನ್ನು ಕರಗಿಸಲು ಇಂಧನ ದೊರಕುವುದಿಲ್ಲ. ಕೆಲವು ತೈಲ ಶುದ್ಧೀಕರಣ ಕೇಂದ್ರಗಳೂ ಜೋರ್ಡಾನಿನಲ್ಲಿ ಸ್ಥಾಪಿತವಾಗಿವೆ. ಸಂಗಮವರಿ ಕಲ್ಲನ್ನು ತೆಗೆಯುವ ಮತ್ತು ಅದನ್ನು ಹೊಳಪುಮಾಡುವ ಉದ್ಯಮವೂ ಉಂಟು. ಹಿಟ್ಟಿನಗಿರಣಿ, ಆಲಿವ್ ಎಣ್ಣೆಯ ಗಿರಣಿ, ಸಾಬೂನು ಕಾರ್ಖಾನೆ, ನೂಲಿನ ಗಿರಣಿ ಮತ್ತು ಕಟ್ಟಡಕ್ಕೆ ವಸ್ತು ತಯಾರಿಸುವ ಕಾರ್ಖಾನೆ ಮತ್ತು ಚರ್ಮ ಹದ ಮಾಡುವ ಕಾರ್ಖಾನೆಗಳು ಇವೆ.

ರಾಜಧಾನಿಯಾದ ಅಮ್ಮಾನ್ ನಗರಕ್ಕೆ ಎಲ್ಲ ಪ್ರಮುಖ ಪಟ್ಟಣಗಳಿಂದಲೂ ರಸ್ತೆಗಳಿವೆ. ಅಮ್ಮಾನ್‍ನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಪಶ್ಚಿಮ ಏಷ್ಯದ ಇತರ ರಾಷ್ಟ್ರಗಳಿಂದ ಈ ದೇಶಕ್ಕೆ ನಿತ್ಯವೂ ವಿಮಾನಗಳು ಸಂಚರಿಸುತ್ತವೆ.

ವ್ಯಾಪಾರ : ಹಣ್ಣುಹಂಪಲುಗಳು, ಆಲಿವ್ ಎಣ್ಣೆ, ತರಕಾರಿ ಇವು ಪ್ರಮುಖ ನಿರ್ಯಾತ ವಸ್ತುಗಳು. ಗೊಬ್ಬರ, ಸಂಗಮವರಿ ಕಲ್ಲು, ಸುಣ್ಣ ಮತ್ತು ಸಿಮೆಂಟ್ ಇಲ್ಲಿಂದ ನೆರೆಯ ಅರಬ್ ರಾಷ್ಟ್ರಗಳಿಗೆ ರಫ್ತಾಗುತ್ತವೆ. ನೂಲು, ಉರುವಲು, ಎಣ್ಣೆ, ಮೋಟಾರು ವಾಹನಗಳು ಮತ್ತು ಅವುಗಳ ಬಿಡಿಭಾಗಗಳು, ಯಂತ್ರಗಳು, ಕಬ್ಬಿಣ-ಉಕ್ಕು, ಆಹಾರ ಧಾನ್ಯ-ಇವು ಈ ದೇಶದ ಮುಖ್ಯ ಆಮದುಗಳು. ಜೋರ್ಡಾನಿನ ನಾಣ್ಯ ಜೋರ್ಡನಿಯನ್ ದೀನಾರ್. (ಎಂ.ಎಸ್.ಕೆ.)

**ಜೋರ್ಡಾನ್ ನದಿ:** ಪಶ್ಚಿಮ ಏಷ್ಯದ ಒಂದು ಚಿಕ್ಕ ನದಿ. ಸು. 360 ಕಿಮೀ ಉದ್ದವಿರುವ ಈ ನದಿ ಸಿರಿಯದಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿದು ಮೃತ್ಯು ಸಮುದ್ರವನ್ನು ಅದರ ಉತ್ತರದ ತುದಿಯಲ್ಲಿ ಸೇರುತ್ತದೆ. ಜೋರ್ಡಾನ್ ಎಂದರೆ ಇಳಿದು ಬರುವ ನದಿ ಅಥವಾ ಡನ್ ಪ್ರದೇಶದ ನದಿ ಎಂದು ಅರ್ಥ. ಇದನ್ನು ನಹ್ರ್-ಅಲ್ ಉರ್ದೂನ್ (ದಂಡಿನ ನದಿ) ಎಂದೂ ಏಷ್-ಷೇರಿಯಾ (ನೀರುದಾಣ) ಎಂದೂ ಕರೆಯುತ್ತಾರೆ. ಇದು ನೈರುತ್ಯ ಏಷ್ಯ ಮೈನರ್‍ನಲ್ಲೇ ಅತ್ಯಂತ ದೊಡ್ಡ ನದಿ. ಪ್ರಪಂಚದ ಅತ್ಯಂತ ಪ್ರಸಿದ್ಧ ನದಿಗಳಲ್ಲಿ ಇದೂ ಒಂದು. ಇದಕ್ಕೆ ಕಾರಣ ಇದು ಕೆಲವು ಮತಧರ್ಮಗಳೊಂದಿಗೆ ಅತ್ಯಂತ ನಿಕಟಸಂಬಂಧ ಹೊಂದಿರುವುದು ಹಾಗೂ ಇದರ ಭೌಗೋಳಿಕ ವೈಶಿಷ್ಟ್ಯ. ಬೈಬಲಿನ ಹಳೆಯ ಮತ್ತು ಹೊಸ ಒಡಂಬಡಿಕೆಗಳಲ್ಲಿ ಈ ನದಿಯ ಹೆಸರು ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತದೆ. ಇಸ್ಲಾಂ, ಯಹೂದ್ಯ ಮತ್ತು ಕ್ರೈಸ್ತಧರ್ಮದ ಇತಿಹಾಸಗಳು ಈ ನದಿಯ ನೀರನ್ನು ಪವಿತ್ರವೆಂದೂ ಪಾಪಹರವೆಂದೂ ಮುಕ್ತಿಪ್ರದಾಯಕವೆಂದೂ ಭಾವಿಸಿವೆ. ಕ್ರೈಸ್ತಧರ್ಮ ಉಗಮಗೊಂಡದ್ದು ಜೋರ್ಡಾನ್ ನದಿ ಕಣಿವೆಯಲ್ಲಿ. ಯಹೂದ್ಯರ ಇತಿಹಾಸದ ಅನೇಕ ಗಮನಾರ್ಹ ಘಟನೆಗಳು ಸಂಭವಿಸಿದ್ದೂ ಇಲ್ಲೇ. ಈ ನದಿ ಹರಿದು ಹೋಗುವ ಗ್ಯಾಲಿಲೀ ಸಮುದ್ರ ಪ್ರದೇಶ ಬೈಬಲಿನಲ್ಲಿ ಉಕ್ತವಾಗುವ ಹಲವು ಘಟನೆಗಳ ತಾಣ. ಈಸ್ಟರ್ ಹಾಗೂ ಕ್ರಿಸ್ತನ ತೋರ್ಕೆಯ (ಜನವರಿ 6) ದಿನಗಳಂದು ಬಿಳಿಯ ವಸ್ತ್ರಗಳಿಂದ ಅಲಂಕೃತರಾದ ಕ್ರೈಸ್ತ ಯಾತ್ರಿಕರು ಮೆರವಣಿಗೆಯಲ್ಲಿ ಸಾಗಿ ಈ ನದಿಯಲ್ಲಿ ಸ್ನಾನ ಮಾಡುತ್ತಾರೆ. ದೀಕ್ಷಾಧಿಕಾರಿಯಾದ ಜಾನ್ ಈ ನದಿಯಲ್ಲೇ ಏಸುಕ್ರಿಸ್ತನಿಗೆ ದೀಕ್ಷಾಸ್ನಾನ ಮಾಡಿಸಿದನೆಂದು ಹೇಳಲಾಗಿದೆ. ಈ ಜನಶ್ರುತಿಯಿಂದಾಗಿಯೇ ಕ್ರೈಸ್ತ ಯಾತ್ರಿಕರು ಅಪಾರ ಸಂಖ್ಯೆಯಲ್ಲಿ ಇಲ್ಲಿಗೆ ಧಾವಿಸುತ್ತಾರೆ. ಒಟ್ಟಿನಲ್ಲಿ ಈ ನದಿವಲಯದ ಸೀಸರಿಯ ಫಿಲಿಪ್ಪಿ (ತಪಸ್ಸಾಧನೆಯ ಏಕಾಂತ ಸ್ಥಳ); ಬೆತ್ ಸೈದಾ (ಉಪದೇಶ ನೀಡಿಕೆಯ ಸ್ಥಳ) ಮತ್ತು ಬೆತಬರ (ದೀಕ್ಷಾ ಸ್ಥಳ) ನಗರಗಳು ಕ್ರಿಸ್ತನ ಜೀವನದೊಂದಿಗೆ ಅವಿನಾಭಾವ ಸಂಬಂಧ ಹೊಂದಿವೆ. ಈ ನದಿಬಯಲಿನಲ್ಲಿ, ಅದರಲ್ಲೂ ಪೂರ್ವದ ಕಡೆ, ಪ್ರಶ.ಪೂ. ಸು. 3500ರಷ್ಟು ಹಳೆಯವಾದ ಅನೇಕ ಪ್ರಾಚೀನ ನಿವೇಶನಗಳು 1930ರಲ್ಲಿ ನೆಲ್ಸನ್ ಗ್ಲೂಯೆಕ್ ನಡೆಸಿದ ಅನ್ವೇಷಣೆಗಳಿಂದ ಬೆಳಕಿಗೆ ಬಂದಿವೆ. ಸಮುದ್ರಮಟ್ಟದಿಂದ 420 ಮೀ ಎತ್ತರದಲ್ಲಿ ಕಾಣಿಸಿಕೊಳ್ಳುವ ಈ ನದಿ ಸು. 360 ಕಿಮೀ ಉದ್ದದ ಹರಿವಿನಲ್ಲಿ ಸಮುದ್ರಮಟ್ಟದಿಂದ 431 ಮೀ ಕೆಳಕ್ಕೆ ಇಳಿಯುತ್ತದೆ. ಈ ಕಡಿದಾದ ತಗ್ಗಿನ ದೃಷ್ಟಿಯಿಂದಲೂ ಇದಕ್ಕೆ ಭೌಗೋಳಿಕ ಮಹತ್ತ್ವ ದೊರೆತಿದೆ. ಹೀಗೆ ಇದು ಪೌರಾಣಿಕವಾಗಿ, ಐತಿಹಾಸಿಕವಾಗಿ ಹಾಗೂ ಭೌಗೋಳಿಕವಾಗಿ ತುಂಬ ಮಹತ್ತ್ವದ ನದೀಕಣಿವೆ.

ಸಿರಿಯದ ಅಂತಿಲಿಬನಸ್ ಪರ್ವತದ ದಕ್ಷಿಣದ ತುದಿಯಲ್ಲಿಯ ಹಲವಾರು ಮೂಲಗಳಿಂದ ಹಾಗೂ ಹರ್ಮನ್ ಪರ್ವತದ ಕೆಲವು ಮೂಲಗಳಿಂದ ಈ ನದಿ ರೂಪುಗೊಳ್ಳುತ್ತದೆ. ಹರ್ಮನ್ ಪರ್ವತ ಪ್ರದೇಶದ ಹಸ್ಬಿಯ ಎಂಬ ಹಳ್ಳಿಯ ಬಳಿಯದು ಇಂಥ ಒಂದು ಮೂಲ. ಆದ್ದರಿಂದ ಹಸ್ಬನಿ ಎಂಬ ಹೆಸರಿನಿಂದ ಇದರ ಹರಿವು ಪ್ರಾರಂಭವಾಗುತ್ತದೆ. ಇದೇ ಪರ್ವತದ ಬೇರೆ ಎರಡು ಮೂಲಗಳಿಂದ ಉಗಮಿಸುವ ನಹ್ರ್‌ಬನಿಯಾಸ್ ಮತ್ತು ನಹ್ರ್‌ಲೆದ್ದಾನ್ ಇವು ಹಸ್ಬಿಯದೊಡನೆ ಒಂದುಗೂಡುವ ಮೊದಲೇ ಸಂಗಮಿಸುತ್ತವೆ. ಬಹ್ರ್‌ಎಲ್ ಹುಲೆ ಅಥವಾ ಮೆಹೋಮ್ ಸರೋವರಕ್ಕೆ ಬಂದು ಸೇರುವ ಹೊತ್ತಿಗೆ ಇದು ಒಂದು ದೊಡ್ಡ ನದಿಯ ರೂಪ ಪಡೆದಿರುತ್ತದೆ. ಇಲ್ಲಿಂದ

ಮುಂದಕ್ಕೆ ಇದನ್ನು ಜೋರ್ಡಾನ್ ಎಂದು ಕರೆಯುತ್ತಾರೆ. ಇದು ಮೊದಲು 27 ಮೀ ಅಗಲ ಮತ್ತು 1.1 ಮೀ ಆಳದ ಕಿರಿದಾದ ಪಾತ್ರದಲ್ಲಿ ಪ್ರಬಲ ಪ್ರವಾಹದ ರೂಪದಲ್ಲಿ ಬರುತ್ತದೆ. ದಕ್ಷಿಣ ದಿಕ್ಕಿನಲ್ಲಿ ಸು. 16 ಕಿಮೀ ದೂರ ಹರಿದ ಮೇಲೆ ಇದು ಗ್ಯಾಲಿಲೀ ಸಮುದ್ರ ಸೇರುತ್ತದೆ. ಹುಲೆ ಸರೋವರದಿಂದ ಗ್ಯಾಲಿಲೀ ವರೆಗಿನ 16 ಕಿಮೀ ಹರಿವಿನಲ್ಲಿಯೇ ಈ ನದಿ ಸು. 230 ಮೀಗಳಷ್ಟು ಕೆಳಗೆ ಇಳಿಯುವುದು. ಈ ಸರೋವರದ ದಕ್ಷಿಣ ತುದಿಯನ್ನು ಬಿಟ್ಟು ಹೊರಟ ತರುಣದಲ್ಲೇ, ಎಡದಂಡೆಯಲ್ಲಿ, ನಹರೈಮ್ ಎಂಬಲ್ಲಿ ಯಾರ್ಮೂಕ್ ಉಪನದಿ ಜೋರ್ಡಾನನ್ನು ಸೇರುತ್ತದೆ. ಮುಂದೆ ಇದು 104 ಕಿಮೀ ದೂರದ ಫಲವತ್ತಾದ ಕಣಿವೆಯ ಮೂಲಕ ಹಾದುಹೋಗುತ್ತದೆ. ಈ ಕಣಿವೆಯಲ್ಲಿ ಎರಡು ಸ್ತರಗಳುಂಟು. ಮೇಲುಸ್ತರಕ್ಕೆ ಘೋರ್ ಎಂದೂ ಕೆಳಸ್ತರಕ್ಕೆ ಜೋರ್ ಎಂದೂ ಹೆಸರು. ಮೇಲುಸ್ತರ ಬಿರುಕುಗಲ್ಲಿನ ಪ್ರದೇಶವಾದರೆ, ಕೆಳಸ್ತರ ಒಂದೂವರೆ ಕಿಮೀ ಅಗಲದ ಇಳಿಜಾರು ಪ್ರದೇಶ. ಬೈಬಲಿನಲ್ಲಿ ಉಲ್ಲೇಖವಾಗಿರುವ ಮೈದಾನವೇ ಘೋರ್ ಕಣಿವೆ. ಬೈಬಲಿನ ಕಾಲದಲ್ಲಿ ಈ ಕಣಿವೆಯಲ್ಲಿ ಸಿಂಹಗಳೂ ತೋಳಗಳೂ ನರಿಗಳೂ ವಾಸವಾಗಿದ್ದುವೆಂದು ಹೇಳಲಾಗಿದೆ. ಘೋರ್ ವಲಯ ಗುಡ್ಡಗಾಡಿನಿಂದ ಕೂಡಿದ ಶುಷ್ಕ ಹಾಗೂ ಬಂಜರುಭೂಮಿ. ಆದರೆ ಕೆಳಕ್ಕೆ ಇಳಿಯುತ್ತ ಬಂದಂತೆ ಈ ಕಣಿವೆ ಸಮತಲವುಳ್ಳದ್ದೂ ಫಲವತ್ತಾದ್ದೂ ಆಗಿ ಪರಿಣಮಿಸುತ್ತದೆ. ಜೆರ್ಕಾದ ಬಳಿ ಬಂದಂತೆ ವ್ಯವಸಾಯ ಚಟುವಟಿಕೆ ಹಾಗೂ ಜನಸಂದಣಿ ತೀವ್ರವಾಗುತ್ತದೆ. ಕಣಿವೆ ಪ್ರದೇಶ ಚೌಳುಮಣ್ಣಿನಿಂದ ಕೂಡಿರುವುದರಿಂದ ವಿಕ್ಷಾರೀಕರಣ ಮತ್ತು ಸಾಗುವಳಿಗೆ ಹೆಚ್ಚು ನೀರು ಅಗತ್ಯ. ಬಾಳೆ, ಕಿತ್ತಳೆ, ನಿಂಬೆ ಮೊದಲಾದ ಹಣ್ಣುಗಳು, ತರಕಾರಿಗಳು, ಸಕ್ಕರೆ ಬೀಟ್ ಮತ್ತು ಹತ್ತಿ ಇಲ್ಲಿಯ ಮುಖ್ಯ ಬೆಳೆಗಳು. ಇಲ್ಲಿ ನದಿಯ ನೀರು ಬಗ್ಗಡವಾಗಿದ್ದು ಕಿರುಮೀನುಗಳಿಂದ ತುಂಬಿರುವುದರಿಂದ ಇಲ್ಲಿ ಸ್ವಲ್ಪಮಟ್ಟಿಗೆ ಮೀನುಗಾರಿಕೆಯೂ ಉಂಟು.

ಗ್ಯಾಲಿಲೀ ಸಮುದ್ರದಿಂದ ಮೃತ್ಯು ಸಮುದ್ರದವರೆಗಿನ ಪಯಣದಲ್ಲಿ ಈ ನದಿಗೆ ಹಲವಾರು ಝುರಿಗಳೂ ಸಾಕಷ್ಟು ದೊಡ್ಡವಾಗಿರುವ ಕೆಲವೊಂದು ಉಪನದಿಗಳೂ ಬಂದು ಸೇರುತ್ತವೆ. ಅರಬ್, ತೈಯಿಬೇಹ್, ಜಿಗ್‌ಲಾಬ್, ಜುರ್ಮ್, ಯಾಬೀಸ್, ಕುಫ್ರೆಂಜಿ, ರಾಹಿಬ್, ಜಬ್ಬೋಕ್ (ಜೆರ್ಕಾ), ಕುಫ್ರೈನ್, ನಿಮ್ರೀನ್ ಮತ್ತು ರಮೇಹ್ ಪೂರ್ವದಂಡೆಯ ಉಪನದಿಗಳು; ಜಲೂದ್, ಬೀರಾ ಮಾಲಿಹ್ ಪರಿಯಾ ಮತ್ತು ಕೆಲ್ಟ್ ಪಶ್ಚಿಮ ದಂಡೆಯಲ್ಲಿ ಬಂದು ಸೇರುವ ಉಪನದಿಗಳು. ಮೋಅಬ್ ಮೈದಾನವನ್ನು ಬಂದುಸೇರುವ ಹೊತ್ತಿಗೆ ಕಣಿವೆಯ ಗರಿಷ್ಠ ಅಗಲ 22 ಕಿಮೀ ಆಗುತ್ತದೆ. ಈ ಮೈದಾನದ ದಕ್ಷಿಣದಲ್ಲಿ ಮೃತ್ಯು ಸಮುದ್ರವನ್ನು ಸೇರಿ ಈ ನದಿ ಅಂತಿಮವಾಗಿ ಅದೃಶ್ಯವಾಗುತ್ತದೆ.

ಈ ನದಿಯ ಕಡಿದಾದ ಇಳಿಜಾರಿನಿಂದ ಕಣಿವೆಯಿರುವ ಆಳವಾಗಿರುವ ಹಲವೆಡೆಗಳಲ್ಲಿ ಸುಳಿಗಳಿರುವುದರಿಂದಲೂ ನೀರು ಕಡಿಮೆಯಿರುವುದರಿಂದ ಇದನ್ನು ಜಲಮಾರ್ಗವಾಗಿ ಬಳಸಿಕೊಳ್ಳುವುದು ಸಾಧ್ಯವಿಲ್ಲ. ಗ್ಯಾಲಿಲೀ ಸಮುದ್ರದಿಂದ ಮುಂದಕ್ಕೆ ಇದರ ಪಾತ್ರದ ಬಹುಭಾಗ ಅಂಕುಡೊಂಕು. ಪ್ರವಾಹಕಾಲವಾದ ಮಾರ್ಚ್ ತಿಂಗಳಲ್ಲಿ ಹರ್ಮನ್ ಪರ್ವತದಿಂದ ಕರಗಿ ಬರುವ ಹಿಮದಿಂದ ನದಿ ತುಂಬಿ ಹರಿಯುತ್ತದೆ. ಉಳಿದ ಕಾಲದಲ್ಲಿ ಇದು 1.5 ಮೀ ಗಿಂತ ಹೆಚ್ಚಾಗಿ ಎಲ್ಲೂ ಆಳವಾಗಿರುವುದಿಲ್ಲ. ಅಗ ನದಿಯ ಪಾತ್ರದಲ್ಲಿರುವ ಕಲ್ಲುಗಳ ಮೇಲೆ ಕಾಲಿರಿಸಿಕೊಂಡು, ಕಾಲು ಒದ್ದೆಯಾಗದಂತೆ ಈ ನದಿಯನ್ನು ದಾಟಬಹುದು.

ಈ ನದಿಯ ನೀರಾವರಿ ಮತ್ತು ವಿದ್ಯುತ್ ಯೋಜನೆಗಳು ಸಂಬಂಧಪಟ್ಟ ರಾಷ್ಟ್ರಗಳ ನಡುವಣ ಭಿನ್ನಾಭಿಪ್ರಾಯ ಹಾಗೂ ವೈಷಮ್ಯಗಳಿಂದಾಗಿ ಕಾರ್ಯರೂಪಕ್ಕೆ ಬರದೆ ಹೋಗಿವೆ. ಈ ಮಧ್ಯೆ ಇಸ್ರೇಲ್ ಏಕಪಕ್ಷೀಯವಾಗಿ ಈ ನದಿಯ ನೀರಿನ ಬಳಕೆಗೆ ಕೆಲವು ಕ್ರಮಗಳನ್ನು ಕೈಗೊಂಡಿದೆ.

ಜೋರ್ಡಾನ್ ನದಿ ಎಂದೂ ರಾಜಕೀಯ ಅಥವಾ ಆರ್ಥಿಕ ಮೇರೆಯಾಗಿ ಪರಿಣಾಮಕಾರಿಯಾದ ಪಾತ್ರ ನಿರ್ವಹಿಸಿಲ್ಲವೆಂದೇ ಹೇಳಬೇಕು. 1918 ರಿಂದ 1948ರವರೆಗೆ ಬ್ರಿಟಿಷ್ ಕರಾರಿನ ಮೇರೆಗೆ ಇದು ಪ್ಯಾಲಸ್ತೀನಿನ ಪೂರ್ವದ ಗಡಿಯಾಗಿತ್ತು. ಇಸ್ರೇಲ್ ಅಸ್ತಿತ್ವಕ್ಕೆ ಬಂದಮೇಲೆ ಯಾರ್ಮೂಕ್ ಸಂಗಮಸ್ಥಳದ ದಕ್ಷಿಣಕ್ಕಿರುವ ಜೋರ್ಡಾನ್ ನದಿಭಾಗ ಇಸ್ರೇಲಿನ ಅಧಿಪತ್ಯಕ್ಕೊಳಪಟ್ಟಿದೆ. ಇಲ್ಲಿಂದ ಉ.ಅ. $32^0 22'$ ವರೆಗಿನ ಪ್ರದೇಶದಲ್ಲಿ ಇದು ಇಸ್ರೇಲ್ ಮತ್ತು ಜೋರ್ಡಾನ್‌ಗಳ ನಡುವಣ ಗಡಿಯಾಗಿ ಪರಿಣಮಿಸಿದೆ. ಇದು ಅಂತಾರಾಷ್ಟ್ರೀಯ ಗಡಿಯಾಗಿ ಮಾರ್ಪಟ್ಟಿರುವುದರಿಂದಲೂ ಇದರ ಹಾಗೂ ಇದರ ಉಪನದಿಗಳ ನೀರು ಮೂರು ನಿಸ್ಸೇನೀಕೃತ ವಲಯುಗಳ ಅಧಿಕಾರಕ್ಕೆ MÀ¼ÀUÁUÀÄªÀAvÉ Ä«ª ÁzÀAvÉ ÀAiÀiÁV G½zÉ (ವಿ.ಜಿ.ಡಿ)

**ಜೋವನ್ ಸಿವಿಜಿಕ್:** 1865–1927. ಸರ್ಬಿಯನ್ ಭೂಗೋಳವಿಜ್ಞಾನ. ಸರ್ಬಿಯನ್ ರಾಯಲ್ ಅಕಾಡೆಮಿ ಆಫ್ ಸೈನ್ಸ್‌ನ ಅಧ್ಯಕ್ಷ ಹಾಗೂ ಬೆಲ್ಗ್ರೇಡ್ ವಿಶ್ವವಿದ್ಯಾನಿಲಯದ ರೆಕ್ಟರಾಗಿ ಸೇವೆ ಸಲ್ಲಿಸಿದ ದಾರ್ಶನಿಕ. ಯುಗೊಸ್ಲಾವಿಯದ ಲೋಜನಿಕ ನಿವಾಸಿ ಮಾಂಟೆ ನೀಗ್ರೊ ವ್ಯಾಪಾರಿಯಾದ ಟೋಡೋರ್ ಸಿವಿಜಿ ಮತ್ತು ಮರಿಯ ದಂಪತಿಗಳ ಪುತ್ರ. ಜನನ 1865 ಅಕ್ಟೋಬರ್ 11. ಇವರ ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರು ಲೋಜನಿಕಾದಲ್ಲಿ. ಪದವಿ ವ್ಯಾಸಂಗ ಬೆಲ್ಗ್ರೇಡ್ ವಿಶ್ವವಿದ್ಯಾನಿಲಯದಲ್ಲಿ. ಪದವಿ ಅನಂತರ (1884) ಹೊರ ದೇಶದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುವ ಆಸೆ. ಆದರೆ ವಿದ್ಯಾರ್ಥಿವೇತನ ದೊರೆಯದ ಕಾರಣ ಆಸೆ ಸಫಲವಾಗಲಿಲ್ಲ. ಹಿರಿಯ ಪ್ರಾಧ್ಯಾಪಕರೊಬ್ಬರಾದ ದ ವ್ಲಾಡಿಮಿರ್ ಕಾರಿಕ್ ರ ಸಲಹೆ ಮೇರೆಗೆ ಬೆಲ್ಗ್ರೇಡ್‌ನ ಗ್ರೇಟ್ ಸ್ಕೂಲ್‌ನಲ್ಲಿ ಭೂಗೋಳಶಾಸ್ತ್ರದಲ್ಲಿ ತರಬೇತಿ. 1888 ರಲ್ಲಿ ವ್ಯಾಸಂಗ ಮುಗಿಸಿ ಒಂದು ವರ್ಷದ ಮಟ್ಟಿಗೆ ಉಪನ್ಯಾಸಕರಾಗಿ ಸೇವೆ. ತರುವಾಯ (1889) ವಿಯೆನ್ನ ವಿಶ್ವವಿದ್ಯಾನಿಲಯದಲ್ಲಿ ಪ್ರಾಕೃತಿಕ ಭೂಗೋಳಶಾಸ್ತ್ರ ಮತ್ತು ಭೂವಿಜ್ಞಾನಗಳಲ್ಲಿ ಪದವಿ (1892) ಪಡೆದು 1893ರಲ್ಲಿ ಅದೇ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು. ಅನಂತರ ಪ್ರಾಧ್ಯಾಪಕರಾಗಿ ನೇಮಕಗೊಂಡು ಖ್ಯಾತಿ ಗಳಿಸಿದರು.

ವಿದ್ಯಾರ್ಥಿ ದಿಸೆಯಲ್ಲೇ ಭೂಗೋಳವಿಜ್ಞಾನದಲ್ಲಿ ವೈಜ್ಞಾನಿಕ ಚಿಂತನೆ ಹೊಂದಿದ್ದು, ಭೌಗೋಳಿಕ ಪರಿಭಾಷೆ ಬಗ್ಗೆ ಅನುಬಂಧವೊಂದನ್ನು ಬರೆದಿದ್ದರು. ಪ್ರಾಧ್ಯಾಪಕ ಸೇವಾವಧಿಯಲ್ಲಿ ಸರ್ಬಿಯ ಪೂರ್ವಭಾಗ, ಇಸ್ಟ್ರಿಯ, ಏಡ್ರಿಯಾಟಿಕ್ ಹಾಗೂ ಬಾಲ್ಕನ್ ಪರ್ಯಾಭಾಗಗಳಲ್ಲಿ ಸ್ವತಃ ಸಂಚರಿಸಿ ಸಂಗ್ರಹಿಸಿದ ಮಾಹಿತಿಗಳನ್ನಾಧರಿಸಿ ಹಲವು ಬರಹಗಳನ್ನು ಭೂಗೋಳವಿಜ್ಞಾನದ ಸಾರಸ್ವತ ಲೋಕಕ್ಕೆ ನೀಡಿದರು. ಭೂವಿಜ್ಞಾನ ಮತ್ತು ಭೂಸ್ವರೂಪ ರಚನಾ ಶಾಸ್ತ್ರಗಳಿಗೂ ಇವರ ಕೊಡುಗೆ ಅಪಾರವಾದುದು. ಭೂಗೋಳಶಾಸ್ತ್ರ ಕುರಿತ ಯಾವುದೇ ಅಧ್ಯಯನದಲ್ಲಿ ಭೂವಿಜ್ಞಾನದ ಸಮ್ಮಿಲನತೆ ಸರ್ವೇಸಾಮಾನ್ಯ. ಭೂಸ್ವರೂಪ ರಚನೆಯನ್ನು ಕುರಿತು ಬರೆದಿರುವ ಇವರ ಎರಡು ಕೃತಿಗಳು ಆಧುನಿಕ ಸಂಶೋಧನ ಅಡಿಪಾಯ ಹೊಂದಿದ್ದು, ಇಂದಿಗೂ ಅವು ಗುಣಾತ್ಮಕವೆನಿಸಿಕೊಂಡಿವೆ.

ಇವರು ವಿವಿಧ ಶೈಕ್ಷಣಿಕ ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ವಿಸ್ತರಿಸಿಕೊಂಡಿದ್ದರು. ಜಿಯಾಗ್ರಫಿ ಕಾಲೇಜ್ ಆಫ್ ಫಿಲೊಸಫಿ ಫ್ಯಾಕಲ್ಟಿಯಲ್ಲಿ ಮುಖ್ಯಾಧಿಕಾರಿಯಾಗಿ (1893–1927) ಆಯ್ಕೆಯಾಗಿದ್ದಲ್ಲದೆ ಸರ್ಬಿಯನ್ ಜಿಯಾಗ್ರಫಿಕ್ ಸೊಸೈಟಿಯಲ್ಲಿ ತಮ್ಮ ಜೀವಿತಾವಧಿವರೆಗೆ ಅಧ್ಯಕ್ಷರಾಗಿ ದುಡಿದರು. ಜೊತೆಗೆ ಬೆಲ್ಗ್ರೇಡ್ ವಿಶ್ವವಿದ್ಯಾಲಯಕ್ಕೆ ಎರಡು ಭಾರಿ ರೆಕ್ಟರ್ ಆಗಿ ಆಯ್ಕೆ, ಸರ್ಬಿಯನ್ ರಾಯಲ್ ಅಕಾಡೆಮಿ (1921), ಸೋವಿಯತ್ ಸೈನ್ಸ್ ಅಕಾಡೆಮಿ, ಯೂಗೋಸ್ಲಾವಿಯ ಅಕಾಡೆಮಿ, ಅಥೆನ್ಸ್ ಸೈನ್ಸ್ ಸೊಸೈಟಿ ಮುಂತಾದ ಶೈಕ್ಷಣಿಕ ಸಂಸ್ಥೆಗಳಲ್ಲಿ ಕೆಲಸಮಾಡಿದ್ದಾರೆ. ತಮ್ಮ ಸಾಧನೆಗಳಿಗಾಗಿ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಬಾಲ್ಕನ್ ಪರ್ಯಾಯ ದ್ವೀಪ ಇವರ ಅತ್ಯುತ್ತಮ ಕೃತಿಗಳಲ್ಲೊಂದು. ಕಟ್ಟಡಗಳ ಮಾದರಿಯಲ್ಲಿ ವಾಯುಗುಣ ಮತ್ತು ಇತರ ಭೌಗೋಳಿಕಾಂಶಗಳ ಪ್ರಭಾವ ಕುರಿತ ವಿಶ್ಲೇಷಣೆ ಆದರ್ಶವಾದುದು. ಮಾನವಶಾಸ್ತ್ರ, ಸಮಾಜದ ಸ್ವಗೋತ್ರ – ಪರಗೋತ್ರಗಳಲ್ಲಿ ವಿವಾಹ ಪದ್ಧತಿ, ವೃತ್ತಿರಚನೆ, ಜನಾಂಗೀಯ ಮನೋವೈಜ್ಞಾನಿಕ ಗುಣಲಕ್ಷಣಗಳ ಮೇಲೆ ಪರಿಸರದ ಪ್ರಭಾವಗಳನ್ನು ಕುರಿತು ಬರೆದ ಇವರ ಕೃತಿಗಳು ಯುರೋಪಿನ ಹಲವು ಭಾಷೆಗಳಲ್ಲಿ ಪ್ರಕಟಗೊಂಡಿದ್ದವು. ಹಲವೆಡೆ ಇವರ ನೆನಪಿನ ಸಂಗ್ರಹಾಲಯಗಳು, ಶಾಲಾ ಕಾಲೇಜುಗಳು, ಸಂಘ ಸಂಸ್ಥೆಗಳು ಹಾಗೂ ಹೆದ್ದಾರಿಗಳಿವೆ. ಇವರು 1927, ಜನವರಿ 16 ರಂದು ತೀರಿಕೊಂಡರು. (ಪಿ.ಎಂ.)

**ಜೋಸೆಫ್ ಬೀಟೆ ಜ್ಯೂಸ್:** 1811–69. ಹೆಸರಾಂತ ವಿದ್ವಾಂಸ. 1811 ಅಕ್ಟೋಬರ್ 10ರಂದು ಇಂಗ್ಲೆಂಡಿನ ಬರ್ಮಿಂಗ್ ಹ್ಯಾಮ್‌ನಲ್ಲಿ ಜನಿಸಿದ. 1842ರಿಂದ 1846ರವರೆಗೆ ಮರಿಟೈಮ್ ಸರ್ವೆ ಆಫ್ ಆಸ್ಟ್ರೇಲಿಯ ತಂಡದ ಸದಸ್ಯನಾಗಿ ಆಸ್ಟ್ರೇಲಿಯಕ್ಕೆ ಭೇಟಿಯನ್ನಿತ್ತ. ಅನಂತರ 1862ರಲ್ಲಿ ದಕ್ಷಿಣ ಐರ್ಲೆಂಡಿನ ನದಿಗಳ ಬಗ್ಗೆ ಒಂದು ವೈಜ್ಞಾನಿಕ ಲೇಖನವನ್ನು ಪ್ರಕಟಿಸಿದ. ಇವನು ನದಿಗಳನ್ನು ಅಡ್ಡನದಿ ಮತ್ತು ನೀಳ ನದಿಗಳೆಂದು ಎರಡು ವಿಧಗಳಾಗಿ ವಿಂಗಡಿಸಿದ. ಅಡ್ಡ ನದಿಗಳು ಭೂರಚನೆಗೆ ಅಥವಾ

ಶಿಲಾಸ್ತರಗಳ ನೆಲೆಲಂಬಕ್ಕೆ ಸಮಾಂತರವಾಗಿ ಹರಿಯುತ್ತವೆ. ಮೊದಲು ಅಡ್ಡ ನದಿಗಳ ಕಣಿವೆಗಳು ಹಾಗೂ ಅನಂತರ ನೀಳ ನದಿಗಳ ಕಣಿವೆಗಳು ನಿರ್ಮಾಣವಾಗುತ್ತವೆ. ಆದ್ದರಿಂದ ನೀಳ ನದಿಗಳನ್ನು ಸಹಾಯಕ ನದಿಗಳೆಂದು ಪರಿಗಣಿಸಬೇಕೆಂದು ಹೇಳಿದ ಈತ ನದಿ ಅಪಹರಣದ ಪ್ರಕ್ರಿಯೆಯ ಬಗ್ಗೆಯೂ ತಿಳಿದುಕೊಂಡಿದ್ದ. ನದಿ ವ್ಯವಸ್ಥೆಯ ಅಧ್ಯಯನದಲ್ಲಿ ಈಗ ಈ ವಿಚಾರ ಆಧಾರಭೂತ ಸಿದ್ಧಾಂತವಾಗಿ ಪರಿಣಮಿಸಿದೆ. ಈತ 1869 ಜುಲೈ 29ರಂದು ಐರ್ಲೆಂಡಿನ ಡಬ್ಲಿನ್‌ನಲ್ಲಿ ನಿಧನಹೊಂದಿದ. (ಎಸ್.ಎಸ್.ಎನ್.)

**ಜೋಹನ್ ಆಗಸ್ಟ್ ಜಿಯೂನಿ:** ಹೆಸರಾಂತ ವಿದ್ವಾಂಸ. 1808ರಲ್ಲಿ ಪ್ರಕಟವಾದ ಜಿಯಾ: ವೆರ್ಷುಚ್ ಐನರ್ ವಿಸ್ಸೆನ್ ಶ್ಯಾಫ್ಟ್ ಲಿಷೆನ್ ಎರಡ್ಬೆಸ್‌ಕ್ರೀಬಂಗ್ ಎಂಬ ಪ್ರಸಿದ್ಧ ಗ್ರಂಥದ ಲೇಖಕ. ಇವನು ಅನೇಕ ವರ್ಷಗಳಿಂದ ನದಿ ಕಣಿವೆಗಳ ನಿರ್ಮಾಣದ ಬಗ್ಗೆ ಆಸಕ್ತಿ ಹೊಂದಿದ್ದ. ಈತ ಯುರೋಪ್ ಖಂಡವನ್ನು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಿದ. ಇವನ ಪ್ರಕಾರ ದಕ್ಷಿಣ ಯುರೋಪ್ ಪಿರನೀಸ್, ಆಲ್ಪೈನ್ ಮತ್ತು ಬಾಲ್ಕನ್ ಪರ್ಯಾಯ ದ್ವೀಪಗಳನ್ನೂ ಮಧ್ಯ ಯುರೋಪ್ ಕಾರ್ಪಾಥಿಯನ್, ಹರ್ಸೀನಿಯನ್ ಮತ್ತು ಸೆವೆನ್ನೆಸ್‌ಗಳನ್ನು ಒಳಗೊಂಡಿವೆ. (ಎಸ್.ಎಸ್.ಎನ್.)

**ಜೋಳ:** ಪ್ರಪಂಚದಲ್ಲಿ ಬಳಕೆಯಲ್ಲಿರುವ ಮುಖ್ಯ ಆಹಾರ ಧಾನ್ಯಗಳಲ್ಲಿ ಒಂದು. ವೈಜ್ಞಾನಿಕ ಹೆಸರು ಸಾರ್ಗಮ್ ವಲ್‌ಗೆರೆ. ಆಹಾರ ಪೂರೈಕೆಯಲ್ಲಿ ಗೋದಿ ಮತ್ತು ಬತ್ತವನ್ನು ಬಿಟ್ಟರೆ ಇದೇ ಮುಖ್ಯವಾದುದು. ಆಫ್ರಿಕ ಮತ್ತು ಏಷ್ಯಗಳ ಹಲವಾರು ಮಿಲಿಯನ್ ಜನಗಳ ಜೀವನಾಧಾರವೆನಿಸಿದೆ. ಜೋಳದ ಹಿಟ್ಟಿನಿಂದ ತೆಳ್ಳನೆಯ ರೊಟ್ಟಿಗಳನ್ನು, ಮುದ್ದೆಗಳನ್ನು ತಯಾರಿಸುತ್ತಾರೆ. ಜೋಳದ ಹಿಟ್ಟನ್ನು ವಿವಿಧ ಪ್ರಮಾಣಗಳಲ್ಲಿ ಗೋದಿ ಹಿಟ್ಟಿನೊಡನೆ ಬೆರೆಸಿ ಮಿಠಾಯಿಗಳನ್ನು ತಯಾರಿಸುವುದುಂಟು. ಆಫ್ರಿಕದ ಅನೇಕ ಸ್ಥಳಗಳಲ್ಲಿ ಕೆಲವು ತಳಿ ಕಾಳುಗಳಿಂದ ಸರಾಯಿಯನ್ನು ತಯಾರಿಸುತ್ತಾರೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕಾಳನ್ನು ಸಂಸ್ಕರಿಸಿ, ಅದರಿಂದ ಪಿಷ್ಟ, ಡೆಕ್ಸ್‌ಟ್ರೋಸ್ ಸಿರಪ್, ಖಾದ್ಯ ಎಣ್ಣೆ ಮತ್ತು ಬ್ಯೂಟೈಲ್ ಆಲ್ಕೊಹಾಲ್‌ಗಳನ್ನು ತಯಾರಿಸುವರು. ಬೀಜದ ಮೇಲೆ ಇರುವ ಮೇಣದ ಪದಾರ್ಥದಿಂದ ಪಾದರಕ್ಷೆ ಹಾಗೂ ಮರದ ಸಾಮಾನುಗಳಿಗೆ ಹಾಕುವ ಮೆರಗನ್ನು ಪಡೆಯಬಹುದು. ಜೋಳದ ಕಡ್ಡಿ ದನಗಳಿಗೆ ಒಳ್ಳೆಯ ಮೇವು. ತೆನೆ ಬಿಟ್ಟ ಕೂಡಲೆ ಇನ್ನೂ ಹಸುರಾಗಿರುವ ಬೆಳೆಯನ್ನು ಕತ್ತರಿಸಿ ನೇರವಾಗಿ ದನಗಳಿಗೆ ತಿನ್ನಿಸುತ್ತಾರೆ.

ಬೆಳೆಯಲು ಬೇಕಾಗುವ ಪರಿಸರಗಳು: ಇದು ವಿಶೇಷವಾಗಿ ಉಷ್ಣವಲಯದ ಬೆಳೆ. ಸಾಮಾನ್ಯವಾಗಿ ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಇದಕ್ಕೆ ಶುಷ್ಕ ಹವಾಮಾನವನ್ನು ತಡೆದುಕೊಳ್ಳುವ ಸಾಮರ್ಥ್ಯವಿದೆ. ಇದನ್ನು ಒಣ ಮತ್ತು ನೀರಾವರಿ ಬೇಸಾಯಗಳೆರಡರಲ್ಲೂ ಬೆಳೆಯುತ್ತಾರೆ. ಇದಕ್ಕೆ $27^{0}$ಸೆ ನಿಂದ $32^{0}$ಸೆ ನಷ್ಟು ಉಷ್ಣಾಂಶ ಬೇಕು. ಮೊಳೆಯುವ ಕಾಲದಲ್ಲಿ $16^{0}$ಸೆ ಉಷ್ಣಾಂಶವಿರಬೇಕು. ಮಳೆ 30–100 ಸೆಂಮೀ. ಅತಿ ಹೆಚ್ಚು ಆರ್ದ್ರತೆಯನ್ನಾಗಲಿ ಅಥವಾ ಶುಷ್ಕತೆಯನ್ನಾಗಲಿ ಇದಕ್ಕೆ ತಡೆದುಕೊಳ್ಳುವ ಸಾಮರ್ಥ್ಯವಿಲ್ಲ. ಇದನ್ನು ವಿವಿಧ ಮಣ್ಣುಗಳಲ್ಲಿ ಬೆಳೆಯುವರು. ಆದರೆ ಹಗುರವಾದ ಹಾಗೂ ದಟ್ಟವಾದ ಮೆಕ್ಕಲು ಮಣ್ಣು, ಕಪ್ಪು ಜೇಡಿ ಮಿಶ್ರಿತ ಕೆಂಪು ಮತ್ತು ಬೂದು ಮರಳು ಮಿಶ್ರಿತ ಮಣ್ಣು ಸೂಕ್ತವಾದುದು.

ಹಂಚಿಕೆ: ಪ್ರಪಂಚದಲ್ಲಿ ಜೋಳದ ಬೇಸಾಯ ಆಫ್ರಿಕ, ಭಾರತ, ಚೀನ, ಮಂಚೂರಿಯ, ಮತ್ತು ಅಮೆರಿಕಗಳಲ್ಲಿ ಕಂಡುಬರುತ್ತದೆ. ಇರಾನ್, ಟರ್ಕಿ, ಏಷ್ಯ ಮೈನರ್, ಈಸ್ಟ್ ಹಾಗೂ ವೆಸ್ಟ್ ಇಂಡೀಸ್‌ನ ಕೆಲವು ದ್ವೀಪಗಳಲ್ಲಿ ಜೋಳದ ಬೇಸಾಯವುಂಟು. ಜೋಳದ ತವರು ಆಫ್ರಿಕ ಎಂಬ ಅಭಿಪ್ರಾಯವಿದೆ. ಪ್ರ.ಶ.ಪೂ. 1500ರ ಅನಂತರ ಭಾರತದಲ್ಲಿ ಜೋಳದ ಬೇಸಾಯ ರೂಢಿಗೆ ಬಂದಿರಬೇಕೆಂದು ಭಾವಿಸಲಾಗಿದೆ.

ಭಾರತದಲ್ಲಿ ಜೋಳವನ್ನು ಹಿಂಗಾರು ಮತ್ತು ಮುಂಗಾರು ಬೆಳೆಯನ್ನಾಗಿ ಬೆಳೆಯಲಾಗುವುದು. ಉತ್ತರ ಭಾರತದಲ್ಲಿ ಜೋಳದ ಬೇಸಾಯ ಸ್ವಲ್ಪಮಟ್ಟಿಗೂ ದಕ್ಷಿಣ ಭಾರತದಲ್ಲಿ ವಿಶೇಷವಾಗಿಯೂ ಕಂಡುಬರುತ್ತದೆ. ಇದರ ಬೇಸಾಯ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ, ಗುಜರಾತ್ ಮತ್ತು ರಾಜಸ್ಥಾನದಲ್ಲಿ ಕಂಡುಬರುತ್ತದೆ. ಮಹಾರಾಷ್ಟ್ರ: ಜೋಳದ ಉತ್ಪಾದನೆಯಲ್ಲಿ ರಾಷ್ಟ್ರದಲ್ಲೇ ಪ್ರಥಮ ಸ್ಥಾನ ಪಡೆದಿದೆ. ಇಲ್ಲಿನ ಬುಲ್ಡಾನ, ಅಕೋಲ, ಯೆವಟ್‌ಮಾಲ, ಸತಾರ, ಅಹಮದ್‌ನಗರ, ಷೋಲಾಪುರ, ನಾನ್‌ದಾದ್, ಜಲ್‌ಗಾಂವ್, ಉಸ್ಮಾನಾಬಾದ್, ಬಿರ್, ಸಾಂಗ್ಲಿ, ಪ್ರಬಾನಿ ಅಮ್ರಾಟಿ, ನಾಗಪುರ ಮತ್ತು ವಾರ್ದ ಜಿಲ್ಲೆಗಳಲ್ಲಿ ಜೋಳದ ಬೇಸಾಯ ಕಂಡು ಬರುತ್ತದೆ. ಕರ್ನಾಟಕ; ಜೋಳದ ಉತ್ಪಾದನೆಯಲ್ಲಿ ರಾಷ್ಟ್ರದಲ್ಲೇ ದ್ವಿತೀಯ ಸ್ಥಾನ ಪಡೆದಿದೆ. ವಾರ್ಷಿಕ ಇದು 12.2 ಲಕ್ಷ ಟನ್ (2002–03) ಜೋಳ ಉತ್ಪಾದಿಸಿತು. ಜೋಳದ ಬೇಸಾಯ ಹೆಚ್ಚು (ಶೇ. 91) ಉತ್ತರ ಭಾಗದಲ್ಲಿ ಕಂಡುಬರುತ್ತದೆ. ಕರ್ನಾಟಕದಲ್ಲಿ ಗುಲ್ಬರ್ಗ ಹೆಚ್ಚು ಜೋಳ ಉತ್ಪಾದಿಸುವ ಜಿಲ್ಲೆಯಾಗಿದೆ. ಇತರ ಜೋಳ ಉತ್ಪಾದಿಸುವ ಜಿಲ್ಲೆಗಳೆಂದರೆ, ಬಿಜಾಪುರ, ಬೆಳಗಾವಿ, ರಾಯಚೂರು, ಬಾಗಲಕೋಟೆ, ಬಳ್ಳಾರಿ, ದಾವಣಗೆರೆ, ಬೀದರ್, ಹಾವೇರಿ, ಮತ್ತು ಗದಗ ಜಿಲ್ಲೆಗಳು. ದಕ್ಷಿಣ ಕರ್ನಾಟಕದಲ್ಲಿ ಮೈಸೂರು, ಚಾಮರಾಜನಗರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲೂ ಜೋಳದ ಉತ್ಪಾದನೆ ಕಂಡುಬರುತ್ತದೆ. ಆಂಧ್ರಪ್ರದೇಶದಲ್ಲಿನ ಮೆಹಬೂಬ್‌ನಗರ, ಕರ್ನೂಲ್, ನಲ್‌ಗೊಂಡ, ಅದಿಲಾಬಾದ್, ಅನಂತಪುರ, ವಾರಂಗಲ್, ಮೇದಕ್ ಮತ್ತು ಗುಂಟೂರ್ ಜಿಲ್ಲೆಗಳಲ್ಲಿ ಜೋಳ ಬೇಸಾಯವಿದೆ. ಮಧ್ಯಪ್ರದೇಶದಲ್ಲಿ ಪಶ್ಚಿಮ ನಿಮೂರ್, ಮಂದಾಸಾರ್, ರಾಜಗರ್, ಶಾಜಗರ್, ಪೂರ್ವ ನಿಮಾಲ್, ಬಿದ್ವಾರ, ದೇವಾಸ್, ದಾರ್, ಗುಣ ಮತ್ತು ಸೆಹೊರೆ ಜಿಲ್ಲೆಗಳಲ್ಲೂ ಗುಜರಾತಿನ ಮೆಹಸನ, ಸುರೇಂದ್ರನಗರ, ವಡೋರ, ಬ್ರೋಚ್, ಬನಾಸ್‌ಕಾಂತ, ಜಾಮನಗರ, ರಾಜ್‌ಕೋಟ್ ಭಾವನಗರ, ಸೂರತ್ ಮತ್ತು ಅಹಮದಾಬಾದ್ ಜಿಲ್ಲೆಗಳಲ್ಲೂ ರಾಜಸ್ತಾನದ; ಅಜ್ಮೀರ್, ಟೂಂಕ್, ನಾಗಪುರ, ಪಾಲಿ, ಬಾಲವಾರ, ಚಿತ್ತೋರ್‌ಗರ್, ಮತ್ತು ಜೈಪುರ ಜಿಲ್ಲೆಗಳಲ್ಲಿ ಜೋಳದ ಬೇಸಾಯ ಕಂಡುಬರುತ್ತದೆ. (ಬಿ.ಸಿ.ಕೆ.)

**ಜೌಗು ನೆಲ:** ಪ್ರಧಾನವಾಗಿ ಸೊಪ್ಪುಸದೆಗಳಿಂದ ಆವೃತವಾಗಿ ಆಗಾಗ ನೀರು ಬಸಿದು ತೇವವಾಗಿರುವ ಭೂಮಿ (ಮಾರ್ಷ್). ಇದನ್ನು ವಸ್ತಿನೆಲವೆಂದೂ ಕರೆಯುವುದುಂಟು. ಸಮುದ್ರದ ಅಲೆಗಳಿಗೆ ಸಿಲುಕಿ ನೆಲ ಹೀಗಾಗಿರಬಹುದು. ಇಲ್ಲವೇ ನದಿ, ಕೆರೆ ಬಯಲುಗಳಲ್ಲಿ ನಿಂತ ನೀರಿನಿಂದಾಗಿ ಆಗಿರಬಹುದು. ಕಾಲುವೆ ನೀರಾವರಿ ಪ್ರದೇಶಗಳಲ್ಲಿ ಕೆಳಗಿನ ನೆಲದಿಂದ ನೀರು ಹೊರಹೋಗಲು ಆಗದೆ ಹೀಗಾಗಿರಬಹುದು. ಮರಳು, ನುರುಜು ಜೇಡಿ ಮುಂತಾದ ವಿವಿಧ ಗಾತ್ರದ ಕಣಗಳಿಂದ ಕೂಡಿ ಮಣ್ಣು ಉಂಟಾಗುತ್ತದೆ. ಈ ಕಣಗಳು ಒಟ್ಟುಗೂಡಿ ಕಾಳುಗಳಾಗುವುದಲ್ಲದೆ ತಮ್ಮ ನಡುವೆ ಸೂಕ್ಷ್ಮ ರಂಧ್ರ ಅಥವಾ ಕಣಾಂತರಗಳನ್ನು ಒಳಗೊಂಡಿರುತ್ತವೆ. ಭೂಮಿಯ ಮೇಲೆ ಬಿದ್ದ ನೀರು ಈ ಅವಕಾಶಗಳ ಮೂಲಕ ಇಳಿದು ಅಂತರ್ಜಲವನ್ನು ಸೇರುತ್ತದೆ. ಅಲ್ಲದೆ ಸಸ್ಯ ಬೆಳವಣಿಗೆಯ ದೃಷ್ಟಿಯಿಂದ ಉಪಯುಕ್ತವಾದ ನೀರು ಸಹ ಇಂಥ ಅವಕಾಶಗಳಲ್ಲಿ ಸಂಗ್ರಹಗೊಂಡಿರುವುದು. ಈ ನೀರಿಗೆ ಲೋಮನಾಳ ನೀರು ಎಂದು ಹೆಸರು. ಜೌಗು ನೆಲದಲ್ಲಿರುವ ಇಂಥ ಎಲ್ಲ ಅವಕಾಶಗಳೂ ಗಾಳಿಸಂಚಾರಕ್ಕೆ ಅವಕಾಶವಿಲ್ಲದಂತೆ ನೀರಿನಿಂದ ತುಂಬಿರುತ್ತದೆ. ಇದರಿಂದಾಗಿ ಸಸ್ಯಬೇರುಗಳಿಗೆ ವಾಯುವಿನ ಪೂರೈಕೆ ಆಗದೆ ಹೋಗಿ ಸಸ್ಯದ ಬೆಳವಣಿಗೆ ಕುಂಠಿತವಾಗುತ್ತದೆ. ಹೆಚ್ಚಾಗಿ ಈ ನೀರನ್ನು ಹೊರ ಹೊರಡಿಸದೆ ಜಮೀನಿನ ಸಾಗುವಳಿ ಸಾಧ್ಯವಾಗುವುದಿಲ್ಲ. ಇದನ್ನು ಆಗಮಾಡಿಸಲು ಕೆಲವು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಫಲವತ್ತಾದ ಭೂಮಿ ಜೌಗುನೆಲವಾಗದಂತೆ ತಡೆಯಲು ಹೆಚ್ಚಿಗೆ ನೀರನ್ನು ಬಸಿಯುವ ವ್ಯವಸ್ಥೆ ಮಾಡುವುದು ಬಹಳ ಆವಶ್ಯಕ. ಮಣ್ಣಿನಲ್ಲಿರುವ ನೀರು ಬಸಿದು ಹೋದಾಗ ಖಾಲಿಯಾದ ಜಾಗದಲ್ಲಿ ವಾಯು ಸಂಗ್ರಹಗೊಂಡು ಸಸ್ಯಗಳಿಗೆ ಒದಗುತ್ತದೆ. ಸಾವಯವ ವಸ್ತುಗಳನ್ನು ಮತ್ತು ರಾಸಾಯನಿಕ ಗೊಬ್ಬರಗಳನ್ನು ಸಸ್ಯಗಳಿಗೆ ಉಪಯುಕ್ತವಾಗುವ ರೂಪಕ್ಕೆ ಬದಲಾಯಿಸಲು ಬೇಕಾಗುವ ಬ್ಯಾಕ್ಟೀರಿಯಗಳಿಗೆ ಈ ವಾಯು ಹಾಗೂ ಉಷ್ಣತೆ ಬೇಕಾಗುತ್ತದೆ. ಹೆಚ್ಚಾದ ನೀರು ಬಸಿದುಹೋಗುವಂತೆ ಮಾಡಲು ತೆರೆದ ಬಸಿಗಾಲುವೆಗಳನ್ನೊ ಮುಚ್ಚಿದ ಬಸಿಗಾಲುವೆಗಳನ್ನೊ (ಹೆಂಚಿನ ಬಸಿಗಾಲುವೆಗಳು) ತೋಡಬೇಕಾಗುತ್ತದೆ. ತೆರೆದ ಬಸಿಗಾಲುವೆಗಳು ಜಮೀನಿನ ಕೆಲಭಾಗಗಳನ್ನು ಆಕ್ರಮಿಸುವುದಲ್ಲದೆ, ಬೇಸಾಯದ ಯಂತ್ರೋಪಕರಣಗಳು ಹಾದುಹೋಗಲು ಅಡ್ಡಿಯುಂಟುಮಾಡುತ್ತವೆ. ಇದಲ್ಲದೆ ಇವು ಆಗಾಗ ತುಂಬಿ ಹೋಗುವುದರಿಂದ, ಚೊಕ್ಕಟ ಮಾಡುವುದು ಅವಶ್ಯವಾಗುತ್ತದೆ. ಹೆಚ್ಚಿನ ಬಸಿಗಾಲುವೆಗಳು ಬೇಸಾಯ ಕಾರ್ಯಗಳಿಗೆ ಅಡ್ಡಿಬರುವುದಿಲ್ಲ. ಇವುಗಳಲ್ಲಿ ನೀರು ಸರಿಯಾಗಿ ಬಸಿದುಹೋಗುವುದರಿಂದ ಬೆಳೆಗಳ ಬೇರುಗಳು ಸರಿಯಾಗಿ ಹರಡಲು ಅವಕಾಶವಾಗುತ್ತದೆ. ಇಂಥ ಕಾಲುವೆಗಳಿಗೆ ಪ್ರಾರಂಭಿಕ ವೆಚ್ಚ ಹೆಚ್ಚು. ಬಸಿಗಾಲುವೆಗಳನ್ನು ತೋಡುವ ಮೊದಲು ಆ ಪ್ರದೇಶದ ಸ್ಥಿತಿಗನುಗುಣವಾಗಿ ತೋಡಬೇಕಾದ ಬಸಿಗಾಲುವೆ ಯಾವ ಬಗೆಯದು ಎಂಬುದನ್ನು ನಿರ್ಧರಿಸಬೇಕು. ಒಂದು ಸ್ಥಳಕ್ಕೆ ಸೂಕ್ತವಾದ ಬಗೆ, ಇನ್ನೊಂದು ಸ್ಥಳಕ್ಕೆ ಹೊಂದದೆ ಹೋಗಬಹುದು. ಮಣ್ಣು, ನೆಲದ ಇಳಿಜಾರು, ಬೆಳೆ ಮತ್ತು ಜಮೀನಿನ ಮೌಲ್ಯ–ಇವೆಲ್ಲವನ್ನೂ ಪರಿಗಣಿಸಬೇಕು.

ಬಸಿಗಾಲುವೆ ತೋಡಲು ಪ್ರಾರಂಭಿಸುವ ಮೊದಲು ಒಂದು ನಕ್ಷೆ ತಯಾರಿಸಿ, ಅದರಲ್ಲಿ ಮುಂದೆ ಕಾಣಿಸಿರುವ ಅಂಶಗಳನ್ನು ಗುರುತಿಸಬೇಕು. 1. ಬಸಿದು ಹೋಗುವಿಕೆಯ ಅಗತ್ಯವಿರುವ ಪ್ರದೇಶಗಳ ಎಲ್ಲೆ ಮತ್ತು ಇಳಿಜಾರು 2. ಪ್ರಸ್ತುತ ಇರುವ ಬಸಿಗಾಲುವೆಗಳು 3. ಎಲ್ಲೆ ದಿಣ್ಣೆಗಳು, ನೀರು ಹರಿಯುವ ಪಾತ್ರಗಳು ಮತ್ತು ದಿಂಡುಗಳ ಎತ್ತರ ಹಾಗೂ ಸ್ಥಾನ ನಿರ್ದೇಶನ. 4. ವ್ಯವಸ್ಥೆಯ ಪ್ರತಿಯೊಂದು ಭಾಗದಲ್ಲಿಯೂ ಬಸಿದುಹೋಗುವ ಪ್ರದೇಶ. ಎಲ್ಲ ಬಸಿಗಾಲುವೆಗಳ ನೀರು ಹೊರಗೆ ಹೋಗಲು ಅನುಕೂಲವಾಗುವಂತೆ ಹೊರದಾರಿ ದೊಡ್ಡದಾಗಿರಬೇಕಲ್ಲದೆ ಬಂದ ನೀರನ್ನೆಲ್ಲ ಒಯ್ಯುವಂತಿರಬೇಕು. ಹೊರದಾರಿ ಬಸಿಗಾಲುವೆಗಳಿಗಿಂತ ಆಳವಾಗಿರುವುದೂ ಅಗತ್ಯ. (ಬಿ.ವಿ.ವಿ.;ಕೆ.ಆರ್.ಜಿ.ಎ.)

**ಜೌನ್‌ಪುರ:** ಉತ್ತರ ಪ್ರದೇಶದ ಒಂದು ಜಿಲ್ಲೆ; ಜಿಲ್ಲಾ ಕೇಂದ್ರ. ಜಿಲ್ಲೆಯ ವಿಸ್ತೀರ್ಣ 4,040 ಚ.ಕಿಮೀ. ಗಂಗಾನದಿಯ ಬಯಲು ಪ್ರದೇಶದಲ್ಲಿ ಹರಡಿದ ಜಿಲ್ಲೆಯ ಬಹುಭಾಗ ಮೆಕ್ಕಲು ಮಣ್ಣಿನಿಂದ ಕೂಡಿದೆ. ಜಿಲ್ಲೆಯ ಮಧ್ಯದಲ್ಲಿ ಗಂಗಾನದಿಯ ಉಪನದಿಯಾದ ಗೋಮತಿ ನದಿ ಹರಿಯುತ್ತದೆ. ಸಕ್ಕರೆ ಇಲ್ಲಿಯ ಮುಖ್ಯ ಉತ್ಪನ್ನ. ಜನಸಂಖ್ಯೆ 39,11,678.

ಜೌನ್‌ಪುರ ಪಟ್ಟಣ ವಾರಾಣಸಿಯಿಂದ ವಾಯವ್ಯಕ್ಕೆ 54 ಕಿಮೀ ದೂರದಲ್ಲಿ ಗೋಮತಿ ನದಿಯ ಎಡದಂಡೆಯ ಮೇಲೆ ಇದೆ. ಇದು ಜಿಲ್ಲೆಯ ಆಡಳಿತ ಮತ್ತು ಶೈಕ್ಷಣಿಕ ಕೇಂದ್ರ. ಗುಲಾಬಿಯ ಸುಗಂಧದ್ರವ್ಯ ಮತ್ತು ಎಣ್ಣೆಗಿರಣಿಗಳಿಗೆ ಇದು ಪ್ರಸಿದ್ಧವಾಗಿದೆ. ಇಲ್ಲಿ ಅನೇಕ ಐತಿಹಾಸಿಕ ಸ್ಮಾರಕಗಳುಂಟು.

ಪ್ರಾಚೀನ ಕಾಲದಲ್ಲಿ ಇದು ಅಯೋಧ್ಯೆಯ ಒಂದು ಭಾಗವಾಗಿದ್ದಂತೆ ತಿಳಿದುಬರುತ್ತದೆ. ಬನಾರಸಿನ ಅರಸನ ಕೈಗೆ ಬಂದಮೇಲೆ ಮಾತ್ರ ಇದರ ಖಚಿತ ಇತಿಹಾಸವನ್ನು ಹೇಳಬಹುದು. 1194 ರಲ್ಲಿ ಇದು ಮುಸ್ಲಿಮರ ವಶವಾಗಿ ಅನಂತರ ತುಘಲಕ್ ವಂಶದ ಆಳ್ವಿಕೆಯಲ್ಲಿತ್ತು. 1394ರಲ್ಲಿ ಇಲ್ಲಿಯ ಆಡಳಿತಗಾರ ಮಲ್ಲಿಕ್ ಸರ್‌ವರ್ ಸ್ವತಂತ್ರನಾಗಿ ಸುಲ್ತಾನ್–ಉಲ್–ಶರ್ಕ್ (ಪೂರ್ವದ ಸಮ್ರಾಟ) ಎಂಬ ಬಿರುದಿನಿಂದ ಆಳತೊಡಗಿದ. ಇವನೂ ಇವನ ಅನಂತರ ಆಳಿದ ಅರಸರೂ ಶರ್ಕೀ ರಾಜರೆಂದೇ ಪ್ರಸಿದ್ಧರಾದರು. 1475ರಲ್ಲಿ ಇದು ಬಹಲೋಲ್ ಲೋದಿಯ ಕೈಗೆ ಹೋಗಿ, 1775ರಲ್ಲಿ ಈಸ್ಟ್ ಇಂಡಿಯ ಕಂಪನಿಗೆ ಸೇರಿತು. ಜೌನ್‌ಪುರದ ಈ ಇತಿಹಾಸಕ್ಕೆ ಸಾಕ್ಷಿಯಾಗಿ ಅನೇಕ ಕಟ್ಟಡಗಳು ನಿಂತಿವೆ.

ಜೌನ್‌ಪುರ ಮೊದಲು ಭವ್ಯವಾದ ದೇವಾಲಯಗಳಿಂದ ಕೂಡಿದ ಹಿಂದು ನಗರವಾಗಿತ್ತು. ಈ ದೇವಾಲಯಗಳನ್ನೆಲ್ಲ ಮಹಮ್ಮದೀಯರು ಕೆಡವಿ ಮಸೀದಿಗಳನ್ನು ಕಟ್ಟಲು ಆ ಸಾಮಗ್ರಿಗಳನ್ನು ಉಪಯೋಗಿಸಿದರು. ಆದ್ದರಿಂದ ಆ ಕಾಲದ ಹಿಂದು ದೇವಾಲಯಗಳು ಉಳಿದುಬಂದಿಲ್ಲ. ಇಲ್ಲಿನ ವಾಸ್ತು ಶೈಲಿಯಲ್ಲಿ ತುಘಲಕ್ ಶೈಲಿಯ ಪ್ರಭಾವಗಳು ವಿಶೇಷವಾಗಿ ಕಂಡುಬಂದರೂ ಅದರವೇ ಆದ ಕೆಲವು ಲಕ್ಷಣಗಳೂ ಇವೆ. ಮೇಲೆ ಹೋಗುತ್ತ ಕಿರಿದಾಗುವ ಸ್ತಂಭಗೋಪುರಗಳು ಮತ್ತು ಹೆಬ್ಬಾಗಿಲುಗಳು, ಗಾರೆಯ ಅಲಂಕಾರ, ಕಮಾನು ಹಾದಿ ಮುಂತಾದವು ಗಮನ ಸೆಳೆಯುತ್ತವೆ. ಮಸೀದಿಯಲ್ಲಿರುವ ಕಂಬಗಳು ವಿಶೇಷ ಅಲಂಕಾರವಿಲ್ಲದೆ ಚೌಕಾಕಾರವಾಗಿರುತ್ತವೆ. ಒಟ್ಟಿನಲ್ಲಿ ಶರ್ಕೀ ಶೈಲಿಯ ಕಟ್ಟಡಗಳು ತುಘಲಕ್ ಶೈಲಿಯ ಕಟ್ಟಡಗಳಿಗಿಂತ ಹೆಚ್ಚು ಅಲಂಕಾರಯುಕ್ತವಾಗಿವೆ. (ಎ.ವಿ.ಎನ್.)

**ಜ್ಯೋತಿರ್ವರ್ಷ:** ಸೆಕೆಂಡಿಗೆ ಸು. 2,99,792 ಕಿಮೀ ಗಮಿಸುವ ಬೆಳಕಿನ ಕಿರಣ ಒಂದು ವರ್ಷದಲ್ಲಿ ಸಂಚರಿಸುವ ದೂರ (ಲೈಟ್–ಇಯರ್). ಬೆಳಕಿನ ವರ್ಷ ಪರ್ಯಾಯನಾಮ. ಆಕಾಶದ ಮಹಾ ದೂರಗಳನ್ನು ಅಳೆಯುವಾಗ ಬಳಸುವ ಮಾನದಂಡಗಳಲ್ಲಿ ಜ್ಯೋತಿರ್ವರ್ಷವೂ ಒಂದು. ಉಳಿದವು ಖಗೋಳಮಾನ (= 500 ಬೆಳಕಿನ–ಸೆಕೆಂಡುಗಳು, ಸರಿಸುಮಾರು) ಮತ್ತು ಪಾರ್ಸೆಕ್ (= 206265 ಖ. ಮಾ. =3.262 ಜ್ಯೋತಿರ್ವರ್ಷ = $3.086 \times 10^{18}$ ಸೆಂಮೀ) ನಮ್ಮ ಅನುಭವದ ಮಿತಿಯಿಂದ ಜ್ಯೋತಿರ್ವರ್ಷದ ಮಾನದಂಡ ಊಹಾತೀತವೆನಿಸುವಷ್ಟು ದೊಡ್ಡದಾಗಿದ್ದರೂ ಆಕಾಶದ ಮಹಾ ವಿಸ್ತಾರಗಳಿಗೆ ಹೋಲಿಸಿದಾಗ ಇದು ಕೂಡ ಅತ್ಯಲ್ಪವಾದ ಮಾನಕ ಎನ್ನಿಸುತ್ತದೆ. ಉದಾಹರಣೆಗೆ ಸಮೀಪತಮ ನಕ್ಷತ್ರವಾದ ಪ್ರಾಕ್ಸಿಮಾ ಸೆಂಟಾರಿಯದ ದೂರ 4.1 ಜ್ಯೋತಿರ್ವರ್ಷಗಳು; ಧ್ರುವನಕ್ಷತ್ರದ ದೂರ 1085 ಜ್ಯೋತಿರ್ವರ್ಷಗಳು. (ಕೆ.ಎನ್.ಯು.)

**ಜ್ವಾಲಾನಿಲರಂಧ್ರ:** ಜ್ವಾಲಾಮುಖಿವಲಯದಲ್ಲಿ (ಅದರಲ್ಲೂ ಸಾಧಾರಣವಾಗಿ ಲಾವಾದಲ್ಲಿ) ಇರುವ ಮತ್ತು ನೆಲದಡಿಯ ಅತ್ಯುಷ್ಣತೆಯ ಅನಿಲಗಳಿಗೂ ತೇವಗಳಿಗೂ ಹೊರಹೊಮ್ಮಲು ಬಾಯಿಯಂತಿರುವ ರಂಧ್ರ. ಅತೀವ ಉಷ್ಣಮಯವಾದ ಭೂಗರ್ಭದ ಅಂತರಾಳದ (ಮ್ಯಾಗ್ಮಾವಲಯ) ಚಲನವಲನದಿಂದ ಭೂಮಿಯ ಮೇಲ್ಭಾಗದಲ್ಲಿ ಕೆಲವು ಘಟನೆಗಳಾಗುವುವು. ಅವುಗಳಲ್ಲಿ ಜ್ವಾಲಾಮುಖಿಗಳು ಮುಖ್ಯವಾದವು. ಇವು ನಿಜಕ್ಕೂ ಭೂಕವಚದ ಅಡಿಯಲ್ಲಿರುವ ಮ್ಯಾಗ್ಮಾವಲಯಕ್ಕೂ ಹೊರಭಾಗಕ್ಕೂ ಸಂಪರ್ಕವನ್ನು ಏರ್ಪಡಿಸುವ ಕೊಳವೆಗಳಂತಿವೆ. ಇವುಗಳ ಮೂಲಕ ಕೆಲವೊಮ್ಮೆ ಶಿಲಾಪ್ರವಾಹ (ಲಾವಾರಸ), ಕೆಲವೊಮ್ಮೆ ಬಗೆಬಗೆಯ ಅನಿಲಗಳು ಹೊರಬರುವುವು. ಕೊಳವೆಯ ರಂಧ್ರ ಮುಚ್ಚುತಡೆಯಾಗಿದ್ದರೆ ಒಳಗಿನ ಅನಿಲಗಳ ಒತ್ತಡದಿಂದ ಜ್ವಾಲಾಮುಖಿಯ ಸ್ಫೋಟನವಾಗುವುದು. ಶಿಲಾಪ್ರವಾಹಕ್ಕಿಂತ ಅನಿಲಗಳೇ ಜ್ವಾಲಾಮುಖಿಯ ಸ್ಥಿರಲಕ್ಷಣವೆಂಬುದು ಖಚಿತವಾಗಿದೆ. ಜ್ವಾಲಾಮುಖಿಗಳಲ್ಲಿ ಕೆಲವು ಆಗಾಗ್ಗೆ ತಮ್ಮ ಚೇತನ ಸ್ವಭಾವವನ್ನು ವ್ಯಕ್ತಗೊಳಿಸಿ ಸಜೀವವಾಗಿದ್ದರೆ ಬೇರೆ ಕೆಲವು ದೀರ್ಘಕಾಲಾವಧಿಯಲ್ಲಿ ಒಮ್ಮೊಮ್ಮೆ ಮಾತ್ರ ಜಾಗೃತವಾಗುವ ಸುಪ್ತಜಾತಿಯವೂ ಇವೆ. ಹೀಗೆ ಜ್ವಾಲಾಮುಖಿಗಳು ಸುಪ್ತವಾದಾಗ ಅಲ್ಲಿಯ ಭೂಗರ್ಭದೊಳಗಿನ $700^0$ ಸೆ ಉಷ್ಣತೆ ಇರುವ ನೀರಾವಿ ಮತ್ತು ಅನಿಲಗಳು ಸುತ್ತಲಿನ ಶಿಲೆಗಳ ಬಿರುಕುಗಳಿಂದ ಹೊರನುಗ್ಗಲು ಯತ್ನಿಸುವುವು. ಈ ಬಗೆಯ ಬಿರುಕುಗಳೇ ಜ್ವಾಲಾನಿಲರಂಧ್ರಗಳು. ಇವುಗಳಿಂದ ಹೊರಹೊಮ್ಮುವ ಹೊಗೆಯಾಕಾರದ ಅನಿಲಗಳಲ್ಲಿ ನೀರಾವಿಯೇ (ಉಗಿ) ಶೇ. 99 ರಷ್ಟಿದೆ; ಉಳಿದ ಅನಿಲಗಳೆಂದರೆ ಇಂಗಾಲಾಮ್ಲ, ಹೈಡ್ರೋಕ್ಲೋರಿಕ್ ಆಮ್ಲ, ಹೈಡ್ರೋಜನ್ ಸಲ್ಫೈಡ್ ಮುಂತಾದವು. ಗಂಧಕಾನಿಲವನ್ನೇ ಪ್ರಾಮುಖ್ಯವಾಗಿ ಹೊರಚೆಲ್ಲುವ ರಂಧ್ರಗಳನ್ನು ಗಂಧಕಾನಿಲರಂಧ್ರ ಎಂದು ಕರೆಯುವರು. ಕೆಲವು ರಂಧ್ರಗಳಿಂದ ಕಬ್ಬಿಣ, ತಾಮ್ರ ಸೀಸ ಮತ್ತು ಇತರ ಲೋಹಾಂಶಗಳಿರುವ ಅನಿಲಗಳೂ ಹೊರಚಿಮ್ಮುವುವು. ಮ್ಯಾಗ್ಮಾಜನ್ಯವಾದ ಈ ಅನಿಲಗಳು ಕ್ಲೋರಿನ್ ಮತ್ತು ಫ್ಲೋರಿನ್ನುಗಳೊಂದಿಗೆ ಮಿಶ್ರವಾಗಿ ಬೇಗನೆ ಆವಿಯಾಗುವ ರೂಪದಲ್ಲಿರುತ್ತವೆ. ಈ ಲೋಹಾಂಶಗಳು ಭೂಮಿಯ ಹೊರ ಭಾಗವನ್ನು ಸಮೀಪಿಸಿದಂತೆ ರಂಧ್ರಗಳು ಮುಖದ ಇಕ್ಕೆಡೆಗಳಲ್ಲಿ ಖನಿಜಗಳಾಗಿ ಸಂಗ್ರಹವಾಗುವುವು. ಕಬ್ಬಿಣದ ಅದಿರಾಗಿರುವ ಹೆಮಟೈಟ್ ಈ ರೀತಿಯಲ್ಲಿ ಸಂಚಯನವಾಗುವ ಖನಿಜ. ವೆಸೂವಿಯಸ್ ಜ್ವಾಲಾಮುಖಿಯ ಒಂದು ಸ್ಫೋಟನಕಾಲದಲ್ಲಿ ಒಂದು ಮೀಟರ್ ಅಗಲದ ಬಿರುಕಿನಲ್ಲಿ ಹೀಗೆ ಹೆಮಟೈಟ್ ಸಂಗ್ರಹವಾಯಿತು. ವೆಸೂವಿಯಸ್‌ನ ಜ್ವಾಲಾನಿಲರಂಧ್ರಗಳಿಂದ ಹೊರಚಿಮ್ಮಿದ ಅನಿಲಗಳಿಂದ ಆಗಾಗ ಗಲೆನಾ (ಸೀಸದ ಅದಿರು) ನಿರ್ಮಾಣವಾಗುತ್ತದೆ. ಇದರಿಂದಾಗಿ ಪ್ರಪಂಚದ ಅದಿರುಗಳ ನಿಕ್ಷೇಪಗಳೆಲ್ಲ ಮ್ಯಾಗ್ಮಾ ಮೂಲದವೆಂಬ ಭಾವನೆ ದೃಢಗೊಂಡಿದೆ.

ಅಲಾಸ್ಕದ ಕಟಮಾಯಿ ಜ್ವಾಲಾಮುಖಿ (1912ರಲ್ಲಿ ಸ್ಫೋಟಗೊಂಡುದು) ವಲಯದ ಕಣಿವೆಯಲ್ಲಿ ಇಂಥ ಅನೇಕ ಜ್ವಾಲಾನಿಲರಂಧ್ರಗಳಿವೆ. ಆದ್ದರಿಂದ ಆ ಕಣಿವೆಗೆ ಸಾವಿರ ಹೊಗೆಗಳ ಕಣಿವೆ ಎಂಬ ಹೆಸರು ಬಂದಿದೆ. ಇಟಲಿ ಮತ್ತು ಐಸ್ಲೆಂಡ್‌ಗಳಲ್ಲಿನ ಜ್ವಾಲಾನಿಲರಂಧ್ರಗಳಲ್ಲಿನ ಅತ್ಯುಷ್ಣವಾದ ನೀರಾವಿಯ ಶಕ್ತಿಯನ್ನು ವಿದ್ಯುದುತ್ಪಾದನೆಗಾಗಿ ಉಪಯೋಗಿಸಿಕೊಳ್ಳಲಾಗಿದೆ. (ಎಂ.ವಿ.)

**ಜ್ವಾಲಾಮುಖಿಗಳು:** ಭೂಮಿಯ ಅಂತರಾಳದಿಂದ ಕುದಿಯುತ್ತಿರುವ ಲಾವಾರಸ ಇತರ ಘನ ಮತ್ತು ಅನಿಲ ವಸ್ತುಗಳನ್ನು ಹೊರಕ್ಕೆ ಉಗುಳುವುದಕ್ಕೆ ಈ ಹೆಸರಿದೆ. ವಲ್ಕೆನೊಗಳೆಂದೂ ಕರೆಯುತ್ತಾರೆ. ವಲ್ಕೆನೊ ಎಂಬ ಹೆಸರು ಬಂದದ್ದು ಸಿಸಿಲಿ ದ್ವೀಪದ ಉತ್ತರಕ್ಕಿರುವ ವಲ್‌ಕನ್ ಎಂಬ ದ್ವೀಪದಿಂದ. ಪ್ಲೇಟೊ, ಅರಿಸ್ಟಾಟಲ್, ಸ್ಟ್ರಾಬೊ ಮೊದಲಾದವರು ಇವುಗಳ ಚಟುವಟಿಕೆಗಳನ್ನು ವರ್ಣಿಸಿದ್ದಾರೆ. ಆದರೆ ಮೊಟ್ಟಮೊದಲ ವೈಜ್ಞಾನಿಕವರ್ಣನೆ ಸಿಕ್ಕುವುದು 79ರಲ್ಲಿದ್ದ ಇಟಲಿಯ ಕಿರಿಯ ಪ್ಲಿನಿಯ ಗ್ರಂಥದಲ್ಲಿ. ಈತ ಪ್ರಕೃತಿಯ ಉಪಾಸಕ. ಇಟಲಿ ದೇಶದ ಹರ್ಕುಲೇನಿಯಂ ಮತ್ತು ಪಾಂಪೆ ನಗರಗಳನ್ನು ನೆಲಸಮ ಮಾಡಿದ ವೆಸೂವಿಯಸ್ ಅಗ್ನಿಪರ್ವತ ಕಾಯ್ದ ಪದಾರ್ಥಗಳನ್ನು ಕಾರುತ್ತಿರುವಾಗ ಈತ ಬಹು ಸಮೀಪದ ದೃಶ್ಯವನ್ನು ನೋಡಲು ಹೋಗಿ ಅದರಿಂದ ಹೊರಹೊರಟ ವಿಷವಾಯುವಿನಿಂದ ಮೃತಪಟ್ಟ. ವೆಸೂವಿಯಸ್ ಜ್ವಾಲಾಮುಖಿ ಚಟುವಟಿಕೆ, ಹೊರಬಂದ ಪದಾರ್ಥಗಳ ವಿವರ ಇತ್ಯಾದಿಗಳನ್ನು ಈತ ಶಾಸ್ತ್ರೀಯವಾಗಿ ವರ್ಣಿಸಿದ್ದಾನೆ. ಅನಂತರ 1774ರಲ್ಲಿ ಸರ್ ವಿಲಿಯಂ ಹ್ಯಾಮಿಲ್‌ಟನ್ ಕಣ್ಣಾರೆ ಕಂಡು ಅನುಭವಿಸಿದ ವೆಸೂವಿಯಸ್ ಮತ್ತು ಎಟ್ನಾ ಜ್ವಾಲಾಮುಖಿಗಳ ದೃಶ್ಯಗಳನ್ನು ಚಿತ್ರಿಸಿದ್ದಾನೆ. ಅಲ್ಲಿಂದ ಈಚೆಗೆ 1820ರವರೆಗೆ ಹಲವು ಶಾಸ್ತ್ರಜ್ಞರು ಈ ಬಗ್ಗೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ.



ಜ್ವಾಲಾಮುಖಿ ಜನಿತ ಪರ್ವತ

ಭೂಮಿಯ ಮೇಲುಭಾಗದಿಂದ ತಳಭಾಗಕ್ಕೆ ಹೋದಂತೆಲ್ಲ ಉಷ್ಣಾಂಶ ಸಾಧಾರಣವಾಗಿ ಪ್ರತಿ 32 ಮೀ ಆಳಕ್ಕೆ $1^0$ ಸೆ. ನಂತೆ ಹೆಚ್ಚುತ್ತ ಹೋಗಿ, ತಳಭಾಗದಲ್ಲಿ ಅತ್ಯುಷ್ಣತೆ ಕಂಡುಬರುತ್ತದೆ. ಹೀಗೆ ಹೆಚ್ಚುವ ಉಷ್ಣತೆಗೆ ಎರಡು ಕಾರಣಗಳುಂಟು. ಭೂಮಿ ಅನಿಲರೂಪದಿಂದ ದ್ರವರೂಪಕ್ಕೆ ಕುಗ್ಗಿ, ಅನಂತರ ಘನೀಭೂತವಾಗಿ, ಗೋಲವಾಗಿರುವುದರಿಂದ ಅತಿ ಉಷ್ಣ ಅದರ ಅಂತರಾಳದಲ್ಲಿ ಅಡಗಿದೆ. ಇದೇ ಮೂಲೋಷ್ಣ. ಜೊತೆಗೆ ಅಂತರಾಳದಲ್ಲಿ ಶಿಲಾಸಮೂಹಗಳೊಡನೆ ಥೋರಿಯಂ, ಯುರೇನಿಯಂ, ಹೀಲಿಯಂ ಇತ್ಯಾದಿ ವಿದ್ಯುತ್ ವಿಕಿರಣಶಕ್ತಿಯುಳ್ಳ ಖನಿಜಗಳು ಸಂಗ್ರಹವಾಗಿರುತ್ತವೆ. ಇವುಗಳ ಶಾಖ ಮೂಲೋಷ್ಣದ ಜೊತೆಗೆ ಸೇರಿ, ಭೂಮಿಯ

ಅಂತರಾಳದಲ್ಲಿ ಹುದುಗಿರುವ ಅತಿ ಉಷ್ಣತೆಗೆ ಪೂರಕವಾಗುತ್ತದೆ. ಘನರೂಪದ ಶಿಲಾಸಮೂಹ, ಸಂಗ್ರಹವಾದ ಉಷ್ಣತೆಯಿಂದ ದ್ರವರೂಪಕ್ಕೆ ಪರಿವರ್ತನೆಯಾಗಿ, ಒತ್ತಡದ ಆಧಿಕ್ಯ ಮಿತಿಮೀರಿದಾಗ ಭೂಚಿಪ್ಪನ್ನು ಭೇದಿಸಿಕೊಂಡು ಹೊರಗೆ ಬರುತ್ತದೆ. ಇದೇ ಶಿಲಾರಸ (ಲಾವಾ), ಜೊತೆಗೆ ಕಲ್ಲು, ಮಣ್ಣು, ಅನಿಲಗಳು ಸಹ ಹೊರಬರುತ್ತವೆ. ಹೀಗೆ ಭೂಮಿಯ ಅಂತರಾಳದಿಂದ ಬಿರುಕುಗಳ ಮೂಲಕ, ಕಾದು ಕರಗಿರುವ ಪದಾರ್ಥಗಳನ್ನು ಉಗುಳುವ ಮಾರ್ಗಗಳೇ ಜ್ವಾಲಾಮುಖಿಗಳು.

ಜ್ವಾಲಾಮುಖಿ ಸ್ಫೋಟನೆಯಿಂದ ಹೊರಬಂದ ವಸ್ತುಗಳ ಸಂಚಯದಿಂದ ನಿರ್ಮಾಣಗೊಂಡ ಶಂಕಾಕಾರದ ಭೂಸ್ವರೂಪವನ್ನು ಅಗ್ನಿ ಪರ್ವತಗಳೆನ್ನುವರು. ಅಗ್ನಿಪರ್ವತ ಕೇವಲ ಕೆಲವು ಮೀಟರ್ ಅಡ್ಡಳತೆಯುಳ್ಳ ಒಂದು ಸಣ್ಣ ದಿಬ್ಬವಾಗಿರಬಹುದು ಅಥವಾ ಸಮುದ್ರಮಟ್ಟಕ್ಕೆ 6000 ಮೀ ಮೇಲ್ಮಟ್ಟದಲ್ಲಿರುವ ದೊಡ್ಡ ಪರ್ವತವಾಗಿರಬಹುದು (ಆಫ್ರಿಕದ ಕಿಲಿಮಂಜಾರೊ). ಸಾಮಾನ್ಯವಾಗಿ ಇದು ತಲೆಕೆಳಗಾದ ಬುಗುರಿಯಾಕೃತಿಯಾಗಿರುತ್ತದೆ. ಶಿಖರದಲ್ಲಿ ಕಂಡುಬರುವ ಕುಳಿಯೇ ಅಗ್ನಿಪರ್ವತದ ಬಾಯಿ ಅಥವಾ ಕುಂಡ (ಕ್ರೇಟರ್). ಭೂಗರ್ಭದಿಂದ ಪದಾರ್ಥಗಳೆಲ್ಲವೂ ಹೊರಬರುವುದು ಮುಖ್ಯವಾಗಿ ಈ ಕುಂಡದ ಮೂಲಕವೇ. ಒತ್ತಡ ಬಲು ಹೆಚ್ಚಾದಾಗ, ದ್ರವಪದಾರ್ಥಗಳು ಪ್ರಧಾನದ್ವಾರದಿಂದ ಹೊರಬರುತ್ತವೆ. ಇದಲ್ಲದೆ ಶಿಲಾರಸ ಅಂತಸ್ಸರಣವಾಗಿ ನೇರವಾಗಿಯೋ (ಡೈಕ್) ಸಮತಲವಾಗಿಯೋ (ಸಿಲ್) ಮರದ ಕೊಂಬೆಗಳೋಪಾದಿಯಲ್ಲಿ ಅನೇಕ ಬೀಳುಬಿರುಕುಗಳಲ್ಲಿ ಹರಡಿಕೊಳ್ಳುತ್ತದೆ.

ಚಟುವಟಿಕೆಯ ದೃಷ್ಟಿಯಿಂದ ಜ್ವಾಲಾಮುಖಿಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಶಿಲಾರಸಾದಿಗಳನ್ನು ಉಗುಳಿ, ಹಾವಳಿ ಮಾಡುತ್ತ ಸದಾ ಚಟುವಟಿಕೆಯಿಂದಿರುವುವು ಜಾಗೃತ ಜ್ವಾಲಾಮುಖಿಗಳು (ಆ್ಯಕ್ಟಿವ್). ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುವು ಸುಪ್ತಜ್ವಾಲಾಮುಖಿಗಳು (ಡಾರ್‌ಮೆಂಟ್). ಚಟುವಟಿಕೆಗಳೆಲ್ಲವನ್ನೂ ಮುಗಿಸಿಕೊಂಡು, ಪೂರ್ಣವಾಗಿ ನಿಶಬ್ದವಾಗಿರುವುವು ಲುಪ್ತ ಜ್ವಾಲಾಮುಖಿಗಳು (ಎಕ್ಸ್‌ಟಿಂಗ್ಟ್). ಸಾಮಾನ್ಯವಾಗಿ ಜ್ವಾಲಾಮುಖಿಗಳು ಕೇವಲ ಶಿಲಾರಸಾದಿಗಳನ್ನೇ ಹೊರಸೂಸದೆ, ಬಿಸಿನೀರನ್ನೋ ಅಥವಾ ಕಾಯ್ದ ನುಣುಪಾದ ಬರಿಯ ಮಣ್ಣನ್ನೋ ಹೊರಚಿಮ್ಮಬಹುದು. ಅಂಥವನ್ನು ಬಿಸಿನೀರಿನ ಊಟೆ (ಗೀಸರ್)ಗಳೆಂದೂ ಮೃತ್ತಿಕಾಗ್ನಿಪರ್ವತಗಳೆಂದೂ ಕರೆಯುತ್ತಾರೆ. ಕೆಲವು ಜ್ವಾಲಾಮುಖಿಗಳು ನೀರಾವಿ ಇಂಗಾಲ, ಜಲಜನಕ ಮುಂತಾದ ಅನಿಲಗಳನ್ನು ಹೊರಸೂಸುವುದುಂಟು. ಅಂಥವು ಅನಿಲರೂಪದ ಜ್ವಾಲಾಮುಖಿಗಳು. ಇವಕ್ಕೂ ಮತ್ತು ಬಿಸಿನೀರಿನ ಊಟೆಗಳಿಗೂ ನಿಕಟವೂ ಸಹಜವೂ ಆದ ಸಂಬಂಧವಿರುತ್ತದೆ. ಬೇಸಗೆ ಕಾಲದಲ್ಲಿ ಜಲಾಂಶ ಕಡಿಮೆಯಾಗುವುದರಿಂದ, ಬಿಸಿ ನೀರಿನ ಊಟೆಗಳು ಅನಿಲರೂಪದ ಜ್ವಾಲಾಮುಖಿಗಳಾಗಿಯೂ ಚಳಿಗಾಲ ಅಥವಾ ಮಳೆಗಾಲಗಳಲ್ಲಿ ಜಲಾಂಶ ಹೆಚ್ಚಾಗುವುದರಿಂದ ಅನಿಲರೂಪದ ಅಗ್ನಿಪರ್ವತಗಳು ಬಿಸಿ ನೀರಿನ ಊಟೆಗಳಾಗಿಯೂ ಪರಿವರ್ತನೆ ಹೊಂದುತ್ತವೆ. ಊಟೆಗಳು ಭೂಮಿಯ ಅಂತರಾಳದ ವಿಶೇಷವಾದ ಒತ್ತಡದಿಂದ ನೀರನ್ನು ನೂರಾರು ಅಡಿಗಳ ಎತ್ತರಕ್ಕೆ ಚಿಮ್ಮುತ್ತವೆ. ಅಮೆರಿಕದ ಎಲ್ಲೋಸ್ಟೋನ್ ರಾಷ್ಟ್ರೀಯ ಉದ್ಯಾನದಲ್ಲಿಯೂ ಐಸ್‌ಲೆಂಡ್ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿಯೂ ಇವನ್ನು ಹೆಚ್ಚು ಕಾಣಬಹುದು. ನೀರನ್ನು ಚಿಮ್ಮುವ ಕಾಲ ಎಡೆಬಿಡದೆ ಐದು ಮಿನಿಟ್‌ಗಳಾದರೂ ಆಗಬಹುದು ಅಥವಾ ಐದು ವರ್ಷಗಳೇ ಆಗಬಹುದು. ಯಲ್ಲೋಸ್ಟೋನ್ ಉದ್ಯಾನದಲ್ಲಿರುವ ಓಲ್ಡ್ ಫೇತ್‌ಫುಲ್ ಎಂಬುದು 66 ನಿಮಿಷಗಳಿಗೊಮ್ಮೆ ನೀರನ್ನು 35–50 ಮೀ ಎತ್ತರಕ್ಕೆ ಹೊರಚಿಮ್ಮುತ್ತದೆ.




**ಜ್ವಾಲಾಮುಖಿಯ ಸ್ವರೂಪಗಳು**

1) ಜ್ವಾಲಾಮುಖಿಯ ಬಾಯಿ 2) ಬೂದಿಯ ಪದರ 3) ಶಿಲಾರಸ ಪದರ 4) ಶಿಲಾರಸ ಪ್ರವಾಹ 5) ಉಪಶಂಕು 6) ಡೈಕ್ 7) ಲಾವಾ ನಾಳ 8) ಭೂ ಕವಚ 9) ಹೊರಚೆಲ್ಲಲ್ಪಟ್ಟ ಅನಿಲ, ಹೊಗೆ ಮತ್ತು ಶಿಲಾರಸ ಗುಂಡು.

ಮೃತ್ತಿಕಾಗ್ನಿಪರ್ವತಗಳು ಭೂಮಂಡಲದಲ್ಲಿ ದ್ವಾರಗಳನ್ನು ಕಲ್ಪಿಸಿಕೊಂಡು, ಕೆಸರು ಮಣ್ಣುಗಳನ್ನು ಹೊರಕ್ಕೆ ಎರಚುತ್ತವೆ. ಈ ಕೆಸರುಮಣ್ಣು ಒಂದೇ ಕಡೆ ರಾಶಿಯಾಗಿ ಸಣ್ಣಗುಡ್ಡಗಳಾಗಿಯೋ ಬೆಟ್ಟಗಳಾಗಿಯೋ ಪರಿಣಮಿಸುತ್ತದೆ. ಒಂದು ವೇಳೆ ಗಾಳಿಯ ಹೊಡೆತ ಜಾಸ್ತಿಯಾಗಿದ್ದಲ್ಲಿ ಧೂಳು ಬಹು ದೂರಕ್ಕೆ ಒಯ್ಯಲ್ಪಡುತ್ತದೆ. 1779ರಲ್ಲಿ ವೆಸೂವಿಯಸ್ ಜ್ವಾಲಾಮುಖಿಯಿಂದ ಹೊರಬಂದ ಧೂಳು ಪಾಂಪೆ ನಗರದಲ್ಲಿ 6 ರಿಂದ 7 ಮೀ ಎತ್ತರದಷ್ಟು ಭರ್ತಿಯಾಗಿ, ಪೂರ್ತಿ ನಗರವೇ ಮುಚ್ಚಿಹೋಯಿತು. ಹೀಗೆ ಹೊರಬೀಳುವ ಧೂಳು ಸಾಮಾನ್ಯವಾಗಿ ಇತರ ಲವಣಗಳೊಡನೆ ಸಂಯೋಜಿತವಾಗಿರುವುದರಿಂದ ವಿವಿಧಬಣ್ಣಗಳ ಮಣ್ಣಾಗಿ ಹೊರಬೀಳುತ್ತದೆ. ಇದರಿಂದಲೇ ಅಂಥ ಕಡೆ ಮೃತ್ತಿಕಾಗ್ನಿಪರ್ವತಗಳನ್ನು ಭೂತದ ಬಣ್ಣದ ಪೆಟ್ಟಿಗೆ ಎಂಬುದಾಗಿ ಕರೆಯುವ ವಾಡಿಕೆಯಿದೆ. ಮಯನ್ಮಾರ್, ಬಲೂಚಿಸ್ತಾನಗಳಲ್ಲಿ ಇವು ಕಂಡುಬರುತ್ತವೆ.

ಜ್ವಾಲಾಮುಖಿಗಳಿಂದ ಹೊರಬೀಳುವ ವಸ್ತುಗಳನ್ನು ಅನಿಲ, ದ್ರವ ಮತ್ತು ಘನವಸ್ತುಗಳೆಂದು ಮೂರು ಭಾಗಗಳಾಗಿ ಪ್ರತ್ಯೇಕಿಸಬಹುದು. ಇವು ಸಾಮಾನ್ಯವಾಗಿ ಒಂದಾದ ಮೇಲೊಂದು ಕ್ರಮವಾಗಿ ಹೊರ ಹೊಮ್ಮುತ್ತವೆ. ಅನಿಲಗಳಲ್ಲಿ ನೀರಿನ ಆವಿಯೇ ಹೆಚ್ಚು. ಈ ಆವಿ ಕೆಲವು ಕಡೆ ಮಳೆಯ ರೂಪದಲ್ಲಿ ಬೀಳುತ್ತದೆ. ಅನಿಲಗಳ ಜೊತೆಗೆ ಕಾರ್ಬನ್ ಮಾನಾಕ್ಸೈಡ್, ಕ್ಲೋರಿನ್, ಸಾರಜನಕ, ಅಮೋನಿಯ ಮತ್ತು ಗಂಧಕದ ವಿವಿಧ ಸಂಯುಕ್ತ ಅನಿಲಗಳು ಇರುತ್ತವೆ.

ದ್ರವವಸ್ತುವಿನ ಪೈಕಿ ಶಿಲಾರಸವೇ ಮುಖ್ಯವಾದದ್ದು. ಇದರ ಸ್ವಭಾವ, ಚಹರೆ, ಬಣ್ಣ ಇತ್ಯಾದಿಗಳು ಮುಖ್ಯವಾಗಿ ರಾಸಾಯನಿಕ ಸಂಯೋಜನೆಯನ್ನನುಸರಿಸುತ್ತವೆ. ರಾಸಾಯನಿಕ ದೃಷ್ಟಿಯಿಂದ ಶಿಲಾರಸಗಳಲ್ಲಿ ಎರಡು ವಿಧ. ಶೇ. 60 ಕ್ಕಿಂತಲೂ ಹೆಚ್ಚು ಸಿಲಿಕ ಸಂಯೋಜಿತವಾಗಿರುವವುಗಳನ್ನು ಆಮ್ಲ ಶಿಲಾರಸಗಳೆಂದೂ (ಆ್ಯಸಿಡಿಕ್) ಶೇ. 40 ಕ್ಕಿಂತಲೂ ಕಡಿಮೆ ಸಿಲಿಕ ಸಂಯೋಜಿತವಾಗಿರುವವುಗಳನ್ನು ಪ್ರತ್ಯಾಮ್ಲ ಶಿಲಾರಸಗಳೆಂದೂ (ಬೇಸಿಕ್) ವಿಂಗಡಿಸಿದ್ದಾರೆ. ಆಮ್ಲಶಿಲಾರಸಗಳು ಬಿಳಿ ಅಥವಾ ಬೂದು ಮಿಶ್ರವಾಗೂ ಪ್ರತ್ಯಾಮ್ಲ ಶಿಲಾರಸಗಳು ತೀರ ಕಪ್ಪಗೂ ಇರುತ್ತವೆ. ಶಿಲಾರಸದ ಉಷ್ಣತೆಯನ್ನು ನಿರ್ದಿಷ್ಟವಾಗಿ ಕಂಡುಹಿಡಿಯುವುದು ಅಷ್ಟಾಗಿ ಸುಲಭವಲ್ಲ. ಆದರೂ ಜ್ವಾಲಾಮುಖಿ ಕುಂಡದಿಂದ ಆಗ ತಾನೇ ಹೊರಚಿಮ್ಮಿದ ಶಿಲಾರಸದ ಉಷ್ಣಾಂಶ ಸು. $1500^{0}$–$1600^{0}$ಸೆ. ಇರಬೇಕೆಂದು ನಿರ್ಧರಿಸಲಾಗಿದೆ. ಶಿಲಾರಸಗಳ ಚಹರೆ ಹಲವು ಬಗೆಯಾಗಿರುತ್ತದೆ. ಕೆಲವು ಶಿಲಾಪ್ರವಾಹಗಳ ಮೇಲುಭಾಗ ನೊರೆಗಟ್ಟಿರುತ್ತದೆ. ದ್ರವತ್ವ ಕಡಿಮೆಯಿದ್ದಲ್ಲಿ ಇನ್ನೂ ಕೆಲವು ಗಟ್ಟಿಯಾದ ತಾರಿನಂತೆ ಹಗ್ಗದೋಪಾದಿಯಲ್ಲಿ ರೂಪುಗೊಳ್ಳುತ್ತವೆ. ರಸ ಕ್ರಮೇಣ ತಣ್ಣಗಾಗುತ್ತಾ ಬಂದಹಾಗೆಲ್ಲ ಮಿಲನವಾಗಿದ್ದ ಅನಿಲಗಳೆಲ್ಲವೂ ಸಣ್ಣ ಸಣ್ಣ ರಂಧ್ರಗಳ ಮೂಲಕ ಹೊರಹೊರಟು ರಂಧ್ರಗಳು ಹಾಗೆಯೇ ಪೊಳ್ಳು ಪೊಳ್ಳಾಗಿ ಉಳಿದು, ಗಟ್ಟಿಯಾದ ಮೇಲೆ ಸ್ಪಂಜಿನಂತೆ ಉಳಿದ ಕೆಲವು ಹಗುರಾಗುತ್ತವೆ. ಜ್ವಾಲಾಮುಖಿಯಿಂದ ಹೊರಬರುವ ಘನಾಂಶವನ್ನು ಅಗ್ನಿಶಿಲಾಛಿದ್ರಗಳೆಂದು ಕರೆಯುತ್ತಾರೆ. ಇವುಗಳ ಗಾತ್ರ ಸಣ್ಣ ಕಣಗಳಿಂದ ಹಿಡಿದು ದೊಡ್ಡ ಬಂಡೆಗಳವರೆಗೂ ಇರುತ್ತದೆ. ಧೂಳು ಅಥವಾ ಬೂದಿ, ಶಿಲಾರಸದಗಟ್ಟಿ, ಶಿಲಾರಸದ ಮುದ್ದೆ ಮತ್ತು ಶಿಲಾರಸದ ಗುಂಡು ಎಂದು ಇವನ್ನು ವಿಭಾಗಿಸಬಹುದು.

ಭೂವಿಜ್ಞಾನದ ರೀತ್ಯ, ಹಲವು ಪರ್ವತಶ್ರೇಣಿಗಳು ಇತ್ತೀಚೆಗೆ ಉದ್ಭವವಾದುವು. ಇಂಥವುಗಳ ಸ್ಥಿರತೆ ಕಡಿಮೆಯಾದ್ದರಿಂದ ಇವು ಜ್ವಾಲಾಮುಖಿಗಳಿಗೆ ಆವಾಸಸ್ಥಾನವಾಗಿರುತ್ತವೆ. ಆಲ್ಪ್ಸ್ ಮತ್ತು ಹಿಮಾಲಯ ಪರ್ವತಶ್ರೇಣಿ, ರಾಕಿ ಮತ್ತು ಆಂಡೀಸ್ ಪರ್ವತಶ್ರೇಣಿಗಳು ಈ ಗುಂಪಿಗೆ ಸೇರಿದುವು. ಜೊತೆಗೆ ಪೆಸಿಫಿಕ್ ಮತ್ತು ಮೆಡಿಟರೇನಿಯನ್ ಸಮುದ್ರತೀರಗಳು ಕೆಲವು ಪ್ರಸ್ಥಭೂಮಿಗಳು ಕೂಡ ಜ್ವಾಲಾಮುಖಿಗಳ ತವರು. ಇವಲ್ಲದೆ ಯಾವ ವಿವರಣೆಗೂ ಸೇರದ ಕೆಲವು ಜ್ವಾಲಾಮುಖಿಗಳು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿವೆ.

ಜಾಗೃತ ಜ್ವಾಲಾಮುಖಿಗಳ ವಯಸ್ಸಿನ ಪ್ರಮಾಣ ಒಂದರಿಂದ ಮತ್ತೊಂದಕ್ಕೆ ವ್ಯತ್ಯಾಸಗೊಳ್ಳುತ್ತದೆ. ಸಿಸಿಲಿ ದ್ವೀಪದ ಎಟ್ನ ಜ್ವಾಲಾಮುಖಿ ಕಳೆದ 2500 ವರ್ಷಗಳಿಂದಲೂ ಜೀವಂತವಾಗಿದೆ. ಕೆಲವು ಸುಪ್ತಪರ್ವತಗಳ ವಿರಾಮಾವಧಿ ನೂರು ವರ್ಷಕ್ಕೂ ಮೀರಿರಬಹುದು.

ಜ್ವಾಲಾಮುಖಿಗಳು ನಿದ್ರಾವಸ್ಥೆಯಿಂದ ಜಾಗೃದವಸ್ಥೆಗೆ ಮಾರ್ಪಡುವ ಮುನ್ನ ಕೆಲವು ಸೂಚನೆಗಳು ತೋರಿಬರುತ್ತವೆ. ಸಾಮಾನ್ಯವಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಶಾಖ ಹೆಚ್ಚಾಗುತ್ತದೆ. ಹತ್ತಿರದಲ್ಲಿ ಹಿಮಗಡ್ಡೆಗಳಿದ್ದರೆ ಕರಗಿ ನೀರಾಗುತ್ತವೆ. ಬಾವಿಗಳಲ್ಲಿ ಮತ್ತು ಕೆರೆ ಕೊಳಗಳಲ್ಲಿ ನೀರು ಬತ್ತಿ ಹೋಗುತ್ತದೆ. ಪೈರುಪಚ್ಚೆಗಳು ಶಾಖದಿಂದ ಒಣಗಿ ಹೋಗುತ್ತವೆ. ಅಗ್ನಿಪರ್ವತದ ಕುಂಡದಲ್ಲಿನ ನೀರು ಇಂಗಿ ಹೋಗುತ್ತದೆ. ಇವುಗಳೆಲ್ಲದರ ಜೊತೆಗೆ ಕೆಲವು ಕಡೆ ಭೂಮಿ ಹಠಾತ್ತನೆ ನಡುಗಲು ಪ್ರಾರಂಭವಾಗುತ್ತದೆ.

ಜ್ವಾಲಾಮುಖಿ ಸಂಭವಿಸಿದಾಗ ಮಾನವಕುಲಕ್ಕೆ ವಿಪರೀತವಾದ ಪ್ರಾಣ ಮತ್ತು ಧನಹಾನಿ ಉಂಟಾಗುತ್ತದೆ. ಪ್ರಪಂಚದಲ್ಲಿ 270ಕ್ಕೂ ಹೆಚ್ಚು ಜಾಗೃತಜ್ವಾಲಾಮುಖಿಗಳಿದ್ದು, ಆಯಾ ಪ್ರದೇಶಗಳಲ್ಲಿ ಹೆಚ್ಚು ಕಡಿಮೆ ನಷ್ಟವುಂಟಾಗುತ್ತಲೇ ಇರುತ್ತದೆ. ಇಷ್ಟಾದರೂ ಮಾನವವರ್ಗಕ್ಕೆ ಇವುಗಳಿಂದ ಮತ್ತೊಂದು ರೀತಿಯಲ್ಲಿ ಉಪಯೋಗವಾಗಿದೆ. ಪ್ರಕೃತಿಯಲ್ಲಿ ದೊರೆಯುವ ಗಂಧಕ, ನವಸಾಗರ, ಬೋರಿಕ್ ಆಸಿಡ್ ಇವು ಒದಗುವುದು ಅಗ್ನಿಪರ್ವತಗಳ ಮೂಲಕವೇ. ಇದಲ್ಲದೆ ಐಸ್ಲೆಂಡ್ ಮತ್ತು ಅಮೆರಿಕಗಳಲ್ಲಿ ಬಿಸಿನೀರಿನ ಊಟೆಗಳಿಂದ ಬರುವ ನೀರನ್ನು ಅಡಿಗೆ ಮಾಡುವುದಕ್ಕೂ ಮತ್ತು ಬಟ್ಟೆ ಒಗೆಯುವುದಕ್ಕೂ ಉಪಯೋಗಿಸುತ್ತಾರೆ. ಕೆಲವು ಕಡೆ ಅತಿ ಆಳವಿಲ್ಲದ ಬಿಸಿನೀರಿನ ಊಟೆಗಳಿಂದ ಬರುವ ಆವಿಯನ್ನು ಕೈಗಾರಿಕೆಗಳಿಗೆ ಬಳಸುತ್ತಾರೆ. ಜ್ವಾಲಾಮುಖಿಗಳಿಂದ ಹೊರಬರುವ ಹಬೆಯನ್ನುಪಯೋಗಿಸಿಕೊಂಡು ವಿದ್ಯುಚ್ಛಕ್ತಿ ಉತ್ಪಾದನಾಕೇಂದ್ರಗಳನ್ನು ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ಸ್ಥಾಪಿಸಲಾಗಿದೆ. ಇಲ್ಲಿ ಬಳಸಲಾಗುವ ತಿರುಬಾನಿ ಯಂತ್ರಗಳನ್ನು ನಡೆಸಲು ಜ್ವಾಲಾಮುಖಿಗಳಿಂದ ಹೊರ ಬರುವ ಅಧಿಕ ಉಷ್ಣದ ಅನಿಲವನ್ನೇ ಬಳಸಿಕೊಳ್ಳುತ್ತಾರೆ. ಜ್ವಾಲಾಮುಖಿ ಮಣ್ಣು ಅತ್ಯಂತ ಫಲವತ್ತಾದುದಾಗಿದೆ. (ಎಂ.ಎನ್.ಟಿ.)

**ಜ್ವಾಲಾಮುಖಿಜನ್ಯ ಶಿಲೆಗಳು:** ಅಗ್ನಿಶಿಲೆಯ ಒಂದು ಬಗೆ. ಜ್ವಾಲಾಮುಖಿ ಆಸ್ಫೋಟನೆಗೊಂಡಾಗ ಹೊರಕ್ಕೆ ಹರಿದ ಶಿಲಾರಸ ಭೂಮೇಲ್ಮೈಯಲ್ಲಿ ತಂಪಾಗಿ ಘನೀಕರಿಸಿ ಉತ್ಪತ್ತಿಯಾದ ಶಿಲೆಗಳನ್ನು ಜ್ವಾಲಾಮುಖಿಜನ್ಯ ಶಿಲೆಗಳೆನ್ನುವರು. ಇವು ಬಹಿಸ್ಸರಣ ಅಗ್ನಿಶಿಲೆಗಳು. ಇವು ಸೂಕ್ಷ್ಮ ಕಣಗಳ ರಚನೆ ಅಥವಾ ಗಾಜಿನಂಥ ವಿನ್ಯಾಸವುಳ್ಳವು. ಏಕೆಂದರೆ ಭೂಗರ್ಭದಿಂದ ಹೊರಬಂದ ಅತ್ಯುಷ್ಣತೆಯುಳ್ಳ ಶಿಲಾಪಾಕ ವಾಯುಮಂಡಲದ ಪರಿಸ್ಥಿತಿಯಿಂದ ಭೂಮಿಯ ಮೇಲೆ ಬೇಗ ತಂಪಾಗುವುದು ಮತ್ತು ಘನಸ್ಥಿತಿ ತಾಳುವುದು. ಹರಳುಗಳ ಉತ್ಪತ್ತಿಗೆ ಕಾಲಾವಕಾಶವಿರುವುದಿಲ್ಲ. ಇಂಥ ಶಿಲೆಗೆ ಬಸಾಲ್ಟ್ ಶಿಲೆ ಅತ್ಯುತ್ತಮ ಉದಾಹರಣೆ.

ಉತ್ಪತ್ತಿ ಮತ್ತು ಅಸ್ತಿತ್ವಗಳನ್ನಾಧರಿಸಿ ಜ್ವಾಲಾಮುಖಿ ಶಿಲೆಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಎ. ಆಸ್ಫೋಟಕ ವಿಧ ಬಿ. ನಿಶಬ್ದ ವಿಧ. ಎ. ಜ್ವಾಲಾಮುಖಿ ಸ್ಫೋಟನೆಗೊಂಡಾಗ ಹೊರಹೊಮ್ಮುವ ಇತರ ಜ್ವಾಲಾಮುಖಿ ವಸ್ತುಗಳೊಂದಿಗೆ ಶಿಲಾರಸ ಮಿಶ್ರಣಗೊಂಡು ಉತ್ಪತ್ತಿಯಾದ ಶಿಲೆಗಳು. ಶಿಲಾಗುಂಡು, ಲಾಪಿಲ್ಲಿ, ಬ್ರಾಸಿಯಾ, ಸೂಕ್ಷ್ಮಧೂಳಿನ ಹಾಗೂ ಮರಳು – ಮಣ್ಣಿನ ಕಣಗಳು ಇತ್ಯಾದಿಗಳೊಂದಿಗೆ ಶಿಲಾಪಾಕ ಸಾಂದ್ರಿ ಕೃತವಾಗಿರುತ್ತದೆ. ಇಂತಹ ಶಿಲೆಗಳು ಸುಲಭವಾಗಿ ನಗ್ನೀಕರಣಕ್ಕೊಳಗಾಗುತ್ತವೆ.

ಬಿ. ಚಿಕ್ಕ ಬಿರುಕುಗಳ ಮೂಲಕ ಶಿಲಾರಸ ಹೊರಹರಿಯುವುದನ್ನು ಲಾವಾಪ್ರವಾಹವೆನ್ನುವರು. ಹೀಗೆ ಭೂಮೇಲ್ಮೈಗೆ ಹರಿದ ಶಿಲಾರಸ ತಂಪಾಗಿ ಘನಸ್ಥಿತಿ ತಾಳುವುದರಿಂದ ಶಿಲೆಗಳು ಉತ್ಪತ್ತಿಯಾಗುತ್ತವೆ. ಯಾವುದೇ ಆಸ್ಫೋಟನೆ ಇಲ್ಲ. ಈ ರೀತಿಯ ಶಿಲಾರಚನೆಯಿಂದ ಪ್ರಸ್ಥಭೂಮಿ ಅಥವಾ ಲಾವಾ ಮೈದಾನಗಳು ಜನ್ಮತಾಳುತ್ತವೆ. ಹೀಗಾಗಿ ಇಂಥ ಬಸಾಲ್ಟ್ ಶಿಲೆಗಳ ಸ್ತರಗಳು ಕಂಡುಬರುತ್ತವೆ. ಉದಾ: ಭಾರತದ ಪರ್ಯಾಯ ಪ್ರಸ್ಥಭೂಮಿ, ಉತ್ತರ ಅಮೆರಿಕದ ಕೊಲಂಬಿಯ, ದಕ್ಷಿಣ ಅಮೆರಿಕದ ವಾರಾನಾ ಪ್ರದೇಶ ಇತ್ಯಾದಿ. (ಎಚ್.ಸಿ.ಎಸ್.)

**ಝಾಂಬಿಯ:** ಮಧ್ಯ ಆಫ್ರಿಕದ ಒಂದು ಗಣರಾಜ್ಯ. ಝಾಂಬಿಜಿ ನದಿ ಹಾಗೂ ಕಾಂಗೋ ನದಿ ಪ್ರದೇಶದ ದಕ್ಷಿಣದ ಅಂಚಿಗೂ ಮಧ್ಯೆ, ದ. ಅ. $9^0$–$18^0$ ಮತ್ತು ಪೂ.ರೇ. $23^0$–$34^0$ ನಡುವೆ ಹಬ್ಬಿದೆ. ಸಂಪೂರ್ಣವಾಗಿ ಭೂಭಾಗಗಳಿಂದಲೇ ಸುತ್ತುವರಿಯಲ್ಪಟ್ಟಿರುವ ಝಾಂಬಿಯದ ಖಂಡಾಂತರ ಸ್ಥಾನದ ಮೇರೆಗಳು ಉತ್ತರದಲ್ಲಿ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ ಈಶಾನ್ಯದಲ್ಲಿ ಟಾಂಜಾನಿಯ, ಪೂರ್ವದಲ್ಲಿ ಮಲಾವೀ ಮತ್ತು ಮೊಝಾಂಬಿಕ್, ದಕ್ಷಿಣದಲ್ಲಿ ಜಿಂಬಾಬ್ವೆ ಮತ್ತು ಬೋಟ್‌ಸ್ವಾನ ಹಾಗೂ ಪಶ್ಚಿಮದಲ್ಲಿ ಅಂಗೋಲ. ಇದರ ವಿಸ್ತೀರ್ಣ 7,52,621 ಚ.ಕಿಮೀ. ಜನಸಂಖ್ಯೆ 10.4 ದ.ಲ.ಗಳು (2005). ರಾಜಧಾನಿ ಲುಸಾಕ. ಜನಸಂಖ್ಯೆ 1084703 (2000).

ಝಾಂಬಿಯದ ಭೂ ಇತಿಹಾಸ ನಿರಂತರ ಹಾಗೂ ಸಂಪೂರ್ಣವಾದುದಲ್ಲ. ಆರ್ಷೇಯ ಮತ್ತು ಪೂರ್ವಕೇಂಬ್ರಿಯನ್ ಕಲ್ಪಗಳ ಅನಂತರ ಈ ಪ್ರದೇಶ ಸಮುದ್ರಾಕ್ರಮಣಕ್ಕೆ ಒಳಪಟ್ಟಂತೆ ಕಾಣುವುದಿಲ್ಲ. ಆದ್ದರಿಂದ ಕೇಂಬ್ರಿಯನ್ ಯುಗೋತ್ತರ ಕಾಲವನ್ನು ಪ್ರತಿನಿಧಿಸುವ ಸಾಗರಶಿಲೆಗಳೇ ಇದ್ದಂತಿಲ್ಲ. ಕಾರ್ಬಾನಿಫೆರಸ್ ಯುಗದ ಅಂತ್ಯದಲ್ಲಿ ಹರ್ಸೀನಿಯನ್ ಮಹಾಪ್ರಳಯವಾಯಿತು. ಆಗ ಪ್ರಪಂಚದ ಎಲ್ಲ ಭೂಖಂಡಗಳನ್ನು ಒಳಗೊಂಡಿದ್ದ ಪ್ಯಾಂಜಿಯಾ ಭೂ ರಾಶಿಯು ಒಡೆದು ಉತ್ತರ ಮತ್ತು ದಕ್ಷಿಣ ಮಹಾಖಂಡಗಳಾಗಿ ವಿಂಗಡಣೆಯಾಗಿ ಇವುಗಳ ನಡುವೆ ಟೆತಿಸ್ ಸಾಗರ ಉಂಟಾಯಿತು. ದಕ್ಷಿಣ ಖಂಡಕ್ಕೆ ಗೊಂಡವಾನ ಖಂಡ ಎಂದು ಹೆಸರು. ಝಾಂಬಿಯ ಈ ಖಂಡದ ಒಂದು ಭಾಗವಾಗಿತ್ತು. ಇತರ ಪ್ರದೇಶಗಳ ಹಾಗೆ ಇದು ಸಹ ನೀರ್ಗಲ್ಲು ನದಿಗಳಿಂದ ಮುಚ್ಚಿತ್ತು. ಅನೇಕ ಸ್ತರಭಂಗಗಳಿಂದಾಗಿ, ಕೆಲವು ಭಾಗಗಳು ದಿಬ್ಬಗಳು ಮತ್ತು ಕೆಲವು ಭಾಗಗಳು ತಗ್ಗುಗಳಾಗಿ ಮಾರ್ಪಟ್ಟು ತಗ್ಗುಗಳಲ್ಲಿ ನದಿ ನಿಕ್ಷೇಪಗಳು ರೂಪುಗೊಂಡವು. ಇವಕ್ಕೆ ಕೆರೂ ಶಿಲಾಸಮುದಾಯ ಎಂದು ಹೆಸರು. ಕ್ರಿಟೇಷಸ್ ಯುಗದಲ್ಲಿ ಗೊಂಡವಾನ ಖಂಡ ಒಡೆಯಿತು. ಈ ಶಿಲೆಗಳು ಶಿಥಿಲೀಕರಿಸಿ ಕ್ರಿಟೇಷಸ್ ಅಂತ್ಯದಲ್ಲಿ ಸವೆತದ ತಳಮಟ್ಟವನ್ನು ಮುಟ್ಟಿದುವು. ಆಗ ಈ ಪ್ರದೇಶ ಮೇಲೆತ್ತಲ್ಪಟ್ಟು ಮತ್ತೊಮ್ಮೆ ಶಿಥಿಲೀಕರಣದ ಕಾರ್ಯ ಪ್ರಾರಂಭವಾಗಿ ಮಯೋಸೀನ್ ಯುಗದಲ್ಲಿ ತಳಮಟ್ಟವನ್ನು ಮುಟ್ಟಿದುವು. ಈಚೆಗೆ ಪುನಃ ಮೇಲೆತ್ತಲ್ಪಟ್ಟು ಈ ಕಾರ್ಯ ಮುಂದುವರಿಯುತ್ತಿದೆ. ಈ ಸವೆತದ ಮಟ್ಟಗಳನ್ನು ಗುರುತಿಸಲಾಗಿದೆ.

ಮೇಲ್ಮೈ ಲಕ್ಷಣ : ಝಾಂಬಿಯದ ಬಹುಭಾಗ ಸಮುದ್ರಮಟ್ಟಕ್ಕಿಂತ 1175 ಮೀ ಗಳಿಂದ 1300 ಮೀ ಎತ್ತರದ ಪ್ರಸ್ಥಭೂಮಿ. ಈಶಾನ್ಯದಲ್ಲಿರುವ ಮುಚಿಂಗ ಪರ್ವತವು 2300 ಮೀ ಗಳಿಗಿಂತ ಹೆಚ್ಚು ಎತ್ತರವಾಗಿದೆ. ಕಣಿವೆಗಳ ಎತ್ತರ 700 ಮೀ ಗಳಿಗಿಂತ ಕಡಿಮೆ. ಈಶಾನ್ಯ ಮತ್ತು ಪೂರ್ವ ಭಾಗದ ಪ್ರಸ್ಥಭೂಮಿ ಪ್ರದೇಶ ಆಳವಾದ ಲೂವಾಂಗ್ವಾ ನದಿಯ ಕಮರಿಯಿಂದ ಛಿದ್ರವಾಗಿದೆ. ಪಶ್ಚಿಮಭಾಗದಲ್ಲಿ ಕಫೂಯೀ ನದಿ ಹರಿಯುತ್ತದೆ. ಇವೆರಡೂ ಮೇಲಣ ಝಾಂಬಿಜಿಯ ಉಪನದಿಗಳು. ಝಾಂಬಿಜ್ಜಿಯೇ ಈ ಇಡೀ ಪ್ರದೇಶದ ಮುಖ್ಯ ನದಿ ಮಾರ್ಗ. ಝಾಂಬಿಜಿ ನದಿಯಲ್ಲಿ ನಡುನಡುವೆ ಜಲಪಾತಗಳುಂಟು. ಅಲ್ಲಲ್ಲಿ ನದಿ ವೇಗವಾಗಿ ಹರಿಯುತ್ತದೆ. ಕರೀಬ ಕಂದರದ ಬಳಿ ನದಿಗೆ ಕಟ್ಟೆ ಕಟ್ಟಿ ವಿದ್ಯುದುತ್ಪಾದನೆ ಮಾಡಲಾಗುತ್ತದೆ. ಪಶ್ಚಿಮ ಪ್ರಾಂತ್ಯದಲ್ಲಿ ಕಾಂಗೋ ಗಡಿಯ ಬಳಿ ತಾಮ್ರ ನಿಕ್ಷೇಪವುಂಟು. ಝಾಂಬಿಯದ ಸಂಪತ್ತಿಗೆ ಇದು ಮುಖ್ಯ ಕಾರಣ.




ಝಾಂಬಿಯದಲ್ಲಿ ಬ್ಯಾಂಗ್ವೀಯೂಲೂ, ಮವೇರು ಮತ್ತು ಟ್ಯಾಂಗನೀಕ ಎಂಬ ಮೂರು ದೊಡ್ಡ ನೈಸರ್ಗಿಕ ಸರೋವರಗಳುಂಟು. ಇವು ಮೂರೂ ಇರುವುದು ಉತ್ತರ ಭಾಗದಲ್ಲಿ. ಬ್ಯಾಂಗ್ವೀಯೂಲೂ ಮತ್ತು ಅದರ ದಕ್ಷಿಣದ ಜವುಗು ಪ್ರದೇಶ ಸು. 1,538 ಚ.ಕಿಮೀ ವಿಸ್ತಾರವಾಗಿವೆ.

ಭೂಸ್ವರೂಪಗಳನ್ನು ಆಧರಿಸಿ ಝಾಂಬಿಯವನ್ನು ಐದು ವಿಭಾಗಗಳಾಗಿ ವಿಂಗಡಿಸಬಹುದು. ಇವುಗಳೆಂದರೆ: 1. 1300 ಮೀಗಳಿಗಿಂತ ಎತ್ತರವಿರುವ ಪ್ರದೇಶ. ಮುಚಿಂಗ ಪರ್ವತದವರೆಗಿರುವ ಇಡೀ ಲಂಡ ಪ್ರಸ್ಥಭೂಮಿ ಮತ್ತು ಬೆಂಬ ಪ್ರಸ್ಥಭೂಮಿ ಈ ಭಾಗಕ್ಕೆ ಸೇರಿವೆ. 2. 700 ರಿಂದ 1300 ಮೀ ಎತ್ತರದ ಪ್ರದೇಶ. ಇದು ಮಧ್ಯ ಪ್ರಾಂತ್ಯದ ಪಶ್ಚಿಮ ಮತ್ತು ಮಧ್ಯ ಭಾಗಗಳು. 3. ಲೂವಾಂಗ್ವಾ–ಲೂವಾನೋಗಳ ಕಣಿವೆ ಪ್ರದೇಶ. 4. ಕಾಲಹಾರಿ ಮರಳುಗಾಡಿನ ಪ್ರದೇಶ; ಬರಾಟ್ಸೆ ಪ್ರಾಂತ್ಯ. 5. ತಗ್ಗಿನ ಪ್ರದೇಶ: ಲೂವಪೂಲ ನದೀ ಕಣಿವೆ, ಮವೇರು ಮತ್ತು ಟಾಂಗನೀಕ ಸರೋವರಗಳ ನಡುವಣ ಮವೇರು–ವಾಂಟಿಪ ಸ್ತರಭಂಗ ಪ್ರದೇಶ. ಇದು ನಗ್ನೀಕರಣ, ನಿಕ್ಷೇಪೀಕರಣ ಮತ್ತು ಭೂರಚನೆಯ ಪ್ರಕ್ರಿಯೆಗಳಿಗೆ ಒಳಗಾಗಿದೆ.

ವಾಯುಗುಣ: ಝಾಂಬಿಯ ಉಷ್ಣವಲಯದಲ್ಲಿ ಇರುವ ದೇಶವಾದರೂ ಅದರ ಬಹುಭಾಗ ಎತ್ತರವಾಗಿರುವುದರಿಂದ ಅಲ್ಲಿಯ ವಾಯುಗುಣ ಹಿತಕರವಾದುದು. ಅದರಿಂದ ಉಷ್ಣತೆ, ಮಳೆ ಎರಡೂ ಪ್ರಭಾವಿತವಾಗಿವೆ. ಆದರೆ ಝಾಂಬಿಜಿ, ಲೂವಾಂಗ್ವಾ ಮತ್ತು ಕಫೂಯೀ ಕಣಿವೆಗಳಲ್ಲೂ ಟಾಂಗನೀಕ, ಮವೇರು ಮತ್ತು ಬ್ಯಾಂಗ್ವೀಯೂಲೂ ಸರೋವರ ತೀರಗಳಲ್ಲೂ ಉಷ್ಣತೆ ಅತ್ಯಧಿಕ.

ಉಷ್ಣತೆ ಹಾಗೂ ಮಳೆ ಋತುಮಾನಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತವೆ. ಇದು ಉಷ್ಣವಲಯದ ಹುಲ್ಲುಗಾವಲು–ಸವನ್ನಾ–ಮಾದರಿಯ ವಾಯುಗುಣವನ್ನು ಹೊಂದಿದೆ. ಮಳೆ ಬೀಳುವ ಮುನ್ನ ಉಷ್ಣತೆ ಗರಿಷ್ಠ. ಅಕ್ಟೋಬರ್ ಅತ್ಯುಷ್ಣತೆಯ

ತಿಂಗಳು. ಆಗ ವಾತಾವರಣದಲ್ಲಿ ತೇವಾಂಶ ಹೆಚ್ಚು. ಪೂರ್ವದಿಂದ ಬೀಸುವ ಗಾಳಿ ಮೋಡವನ್ನೂ ಗುಡುಗುಮಿಂಚುಗಳನ್ನೂ ತರುತ್ತದೆ. ನವೆಂಬರ್ ತಿಂಗಳ ಮಧ್ಯಭಾಗದಲ್ಲಿ ಮಳೆಗಾಲ ಆರಂಭ. ಏಪ್ರಿಲ್ ವರೆಗೂ ಮಳೆಗಾಳಿಯ ಬಿರುಸು. ಪ್ರಸ್ಥಭೂಮಿಯ ಉತ್ತರಭಾಗಗಳಲ್ಲಿ 120–150 ಸೆಂಮೀ ಮಳೆಯಾಗುತ್ತದೆ. ದಕ್ಷಿಣಕ್ಕೆ ಬಂದಂತೆ ಮಳೆ ಕಡಿಮೆ. ಲುಸಾಕದಲ್ಲಿ ಸರಾಸರಿ ಮಳೆ 90 ಸೆಂಮೀ. ಮೇ ನಿಂದ ಆಗಸ್ಟ್ ನಡುವಣವರೆಗಿನದು ತಂಪಿನ ಕಾಲ. ಆಮೇಲೆ ಉಷ್ಣತೆ ಏರತೊಡಗುತ್ತದೆ. ಇಡೀ ದೇಶದಲ್ಲಿ ಚಳಿಗಾಲದ ಉಷ್ಣತೆ $16^0 - 27^0$ ಸೆ. ಬೇಸಗೆಯಲ್ಲಿ $27^0$–$38^0$ಸೆ.

ಸಸ್ಯ–ಪ್ರಾಣಿ ಜೀವನ : ಝಾಂಬಿಯದ ಬಹುಭಾಗ ಪ್ರಸ್ಥಭೂಮಿ. ಇಲ್ಲಿಯ ಸಸ್ಯ ಪ್ರರೂಪ ಉಷ್ಣವಲಯದ ಹುಲ್ಲುಗಾವಲು. ಅಕೇಷಿಯ ಮತ್ತು ಬಾವೊಬಾಬ್ ಮರಗಳೂ ಮುಳ್ಳು ಮರ ಪೊದೆಗಳೂ ಉದ್ದನೆಯ ಸಾರ್ವಕಾಲಿಕ ಹುಲ್ಲೂ ವ್ಯಾಪಕ. ದಕ್ಷಿಣದ ಶುಷ್ಕತರ ಪ್ರದೇಶಗಳಲ್ಲಿ ಇವು ಒರಟೂ ವಿರಳವೂ ಆಗುತ್ತವೆ. ಉತ್ತರದಲ್ಲೂ ಪೂರ್ವದಲ್ಲೂ ತೆಳುವಾದ ಕಾಡುಗಳುಂಟು. ಬರಾಟ್ಸೆಲ್ಯಾಂಡ್‌ನಲ್ಲಿ ರೋಡೀಷಿಯನ್ ತೇಗ ಬೆಳೆಯುತ್ತದೆ.

ಜನವಸತಿಯಿಂದಾಗಿ ವನ್ಯಮೃಗಗಳಿಗೆ ಗಂಡಾಂತರ ಒದಗಿದೆ. ಅವನ್ನು ರಾಷ್ಟ್ರೀಯ ವನಗಳಲ್ಲೂ ಅಭಯಾರಣ್ಯಗಳಲ್ಲೂ ಕಾಪಾಡಲು ಯತ್ನಿಸಲಾಗಿದೆ. ಝಾಂಬಿಯದ ವಿಶಿಷ್ಟವಾದ ಎರಡು ಪ್ರಾಣಿಗಳು ಕುಕ್ಸನ್ ವೈಲ್ಡ್ ಬೀಸ್ಟ್ ಮತ್ತು ಸೆಂಗ ಕಾಬ್. ಅಲ್ಲಿ ನಾನಾ ಬಗೆಯ ಕಡವೆಗಳೂ ಇಂಪಾಲ, ಡೂಯಿಕರ್ ಮತ್ತು ಸ್ಟೆನ್ ಜಿಂಕೆಗಳೂ ಉಂಟು. ಲೂವಾಂಗ್ವಾ ಕಣಿವೆಯಲ್ಲಿ ಜಿರಾಫೆ, ಹೇಸರಗತ್ತೆ, ಖಡ್ಗಮೃಗ, ಆನೆ ಇವೆ. ಬಬೂನ್ ಕೋತಿ, ಕತ್ತೆ ಕಿರುಬ, ತೋಳ, ಚಿರತೆ, ಸಿಂಹಗಳನ್ನೂ ಕಾಣಬಹುದು. ಸೆರ್ವಾಲ್, ಪುನುಗುಬೆಕ್ಕು ಜೆನೆಟ್, ಗುಳ್ಳೆನರಿ ಇವೂ ವಿರಳವಾಗಿ ಉಂಟು. ಜೇನು ಬ್ಯಾಡ್ಜರ್, ಆರ್ಡ್ ವಾರ್ಕ್, ಪೈಕ, ನರಹುಲಿ ಹಂದಿ, ಪೊದೆಹಂದಿ–ಇವು ಇತರ ಪ್ರಾಣಿಗಳು.

ಝಾಂಬಿಯದಲ್ಲಿ ವಿಶೇಷ ಪಕ್ಷಿಸಂಪತ್ತು ಉಂಟು. ಅವುಗಳಲ್ಲಿ 658 ಜಾತಿಗಳಿವೆ. ಹದ್ದು, ಕಡಲ್ಕಾಗೆ, ಟರ್ನ್, ಮಿಂಚುಳ್ಳಿ, ಬಾನಕ್ಕಿ, ಕೆಂಪು ರೆಕ್ಕೆಯ ಫ್ರಾಂಕೋಲಿನ್, ಲಾವಕ್ಕಿ (ಉಳ್ಳೀಶಿಂಡ), ತರಗೆಲೆ ಹಕ್ಕಿ, ಸೂರಕ್ಕಿ, ತಾಳೆಗುಬ್ಬಿ, ಕೆಂಪು ಕೊಕ್ಕಿನ ಕ್ವೆಲಿಯ, ಬಕ, ವರಟೆ, ಟಿಟಕಾಕ, ಸ್ಕಿಮರ್, ಕಳ್ಳಿಪೀರ (ಗುಂಗುರು ಪಂಚ), ದಾಸರ ಹಕ್ಕಿ, ಗುಬ್ಬಚ್ಚಿ, ಅಂಬರದ ಹಕ್ಕಿ (ಕವಲು ತೋಕೆ), ತ್ರಷ್, ಕಳಿಂಗ, ಪಿಕಲಕ್ಕಿ, ಪಾರಿವಾಳ, ನತ್ತಿಂಗ ಮತ್ತು ಉಷ್ಟ್ರಪಕ್ಷಿಗಳುಂಟು. ಅಭಯಾರಣ್ಯಗಳಲ್ಲಿ ಬಿಳಿ ಪೆಲಿಕನ್, ರಾಜಹಂಸ, ನಾರಾಯಣಿ, ಐಬಿಸ್ ಮತ್ತು ಕಿರೀಟಿಸಾರಸ ಇವೆ. ಝಾಂಬಿಯದಲ್ಲಿ 150 ಕ್ಕಿಂತ ಹೆಚ್ಚು ಉರಗ ಜಾತಿಗಳುಂಟು. ಮೀನುಗಳು ಹಲವಾರು ಬಗೆ. ಸಾವಿರಾರು ಬಗೆಯ ಕೀಟಗಳಿವೆ.

ಜನಜೀವನ: ಹಲವಾರು ಆಫ್ರಿಕನ್ ಜನಾಂಗಗಳು ಬಂಟು ಬುಡಕಟ್ಟುಗಳಿಗೆ ಸೇರಿವೆ. ಬಂಟುಗಳು ನೀಗ್ರೋ, ಹಳೆಯ ಹಳದಿಯ ದಕ್ಷಿಣ ಆಫ್ರಿಕನ್–ಈ ಎರಡು ಮೂಲ ಮಾನವಕುಲ ಪ್ರರೂಪಗಳ ಮಿಶ್ರಣ. ಝಾಂಬಿಯದ ಉತ್ತರ ಪ್ರಾಂತ್ಯದಲ್ಲಿ ಬೆಂಬಾಗಳಿದ್ದಾರೆ. ಇವರ ಸಂಖ್ಯೆ 1,80,000. ಇತರ ಬುಡಕಟ್ಟುಗಳು ಕಸೆಂಬೆ, ಲುಂಡ, ಬಿಸ, ಚೇವ, (1,26,000), ಲಂಬ (70,000), ಟೋಂಗಾ (2,43,000), ನ್ಸೆಂಗ (97,000), ಕಾವೊಂಡೆ (46,000), ಲಾಲ (75,000), ಚೋಕ್ವೆ , ಲೋಜ಼ (1,80,000), ನ್ಗೋನಿ (88,000). ನ್ಗೋನಿಗಳು 19ನೆಯ ಶತಮಾನದಲ್ಲಿ ಝಾಂಬಿಯಕ್ಕೆ ವಲಸೆ ಬಂದ ಝೂಲುಗಳ ವಂಶಜರು. ಒಟ್ಟಿನಲ್ಲಿ ಝಾಂಬಿಯದಲ್ಲಿ 73 ವಿವಿಧ ಬುಡಕಟ್ಟು ವರ್ಗೀಕರಣಗಳಿವೆ. ಇದಲ್ಲದೆ ಯುರೋಪಿಯನ್ ಹಾಗೂ ಏಷ್ಯನ್ ಮತ್ತು ಮಿಶ್ರ ಜನರೂ ಇರುವರು. ಯುರೋಪಿಯನ್ನರು ಬಹುತೇಕ ಬ್ರಿಟಿಷ್ ಮೂಲದವರು. ಡಚ್, ಇಟಾಲಿಯನ್, ಗ್ರೀಕ್ ಮುಂತಾದ ಮೂಲಗಳ ಜನರೂ ಉಂಟು.

ಝಾಂಬಿಯದಲ್ಲಿ 40 ವಿವಿಧ ಬಂಟು ಭಾಷೆಗಳು, ನಾನಾ ಉಪಭಾಷೆಗಳು ಪ್ರಚಲಿತವಾಗಿವೆ. ಆದರೆ ಆಡಳಿತ ಮತ್ತು ಶಿಕ್ಷಣ ಉದ್ದೇಶಗಳಿಗಾಗಿ ಈ ಐದು ಮುಖ್ಯ ಭಾಷೆಗಳಿಗೆ ಮನ್ನಣೆ ನೀಡಲಾಗಿದೆ: ಬೆಂಬ, ಲೋಜಿ, ಲೂವಾಲೆ, ಟಾಂಗ ಮತ್ತು ನ್ಯಾಂಜಾ. ಉತ್ತರ ಝಾಂಬಿಯದಲ್ಲಿ ಬೆಂಬ ಮತ್ತು ಅದರ ಹಲವು ಉಪಭಾಷೆಗಳು ವಿಶೇಷವಾಗಿ ಬಳಕೆಯಲ್ಲಿವೆ. ತಾಮ್ರನಿಕ್ಷೇಪದ ಪ್ರದೇಶದಲ್ಲೂ ಇದೇ ಆಡುಭಾಷೆ. ದಕ್ಷಿಣ ಪ್ರಾಂತ್ಯದಲ್ಲಿ ಇಲಾ ಮತ್ತು ಟಾಂಗ ಭಾಷೆಗಳು ಪ್ರಮುಖವಾಗಿವೆ. ಇಂಗ್ಲಿಷ್ ಅಧಿಕೃತ ಭಾಷೆ. ಆಫ್ರಿಕಾನ್ಸ್ ಭಾಷೆಯನ್ನು ಜನ ವ್ಯಾಪಕವಾಗಿ ಆಡುತ್ತಾರೆ.

ಝಾಂಬಿಯದಲ್ಲಿ ಕ್ರೈಸ್ತ ಧರ್ಮೀಯರು ಅಧಿಕ. ಅಲ್ಲಿರುವ ಏಷ್ಯನರಲ್ಲಿ ಮೂರನೆಯ ಎರಡು ಭಾಗ ಮುಸ್ಲಿಮರು. ಉಳಿದವರು ಹಿಂದುಗಳು.

ಆರ್ಥಿಕತೆ: ಝಾಂಬಿಯದ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖವಾದ್ದು ತಾಮ್ರ ಗಣಿಗಾರಿಕೆ. ದೇಶದ ಆದಾಯದ ಮುಖ್ಯಮೂಲ ತಾಮ್ರದ ಗಣಿಗಾರಿಕೆ ಮತ್ತು ರಫ್ತು. ಇದೇ ಪ್ರಧಾನ ವಿದೇಶಿ ವಿನಿಮಯ ಸಂಪಾದನೆಯ ಮೂಲ.

ಕೃಷಿ: ಝಾಂಬಿಯದ ಜನರಲ್ಲಿ ಬಹುಸಂಖ್ಯಾತರು ಕೃಷಿಕರು. ವ್ಯವಸಾಯ ಅವರ ಜೀವನಾಧಾರ. ಒಟ್ಟು ಉತ್ಪನ್ನದಲ್ಲಿ ಶೇ. 85ರಷ್ಟು ವಾಣಿಜ್ಯೇತರ, ಜೀವನಾಧಾರ ಬೆಳೆ ಮೆಕ್ಕೆಜೋಳ. ಇತರ ಧಾನ್ಯಗಳು ರಾಗಿ, ಸಾವೆ ಮುಂತಾದವು. ಮುಖ್ಯ ಆರ್ಥಿಕ ಬೆಳೆಗಳೆಂದರೆ ಮೆಕ್ಕೆಜೋಳ, ನೆಲಗಡಲೆ, ತಂಬಾಕು ಮತ್ತು ಹತ್ತಿ. ರೈಲುಮಾರ್ಗಗಳ ಬಳಿಯ ಪ್ರದೇಶಗಳಲ್ಲಿ ಮುಖ್ಯ ನಗರಿಯ ಸ್ಥಳಗಳಲ್ಲೂ ಹಣ್ಣು ತರಕಾರಿ ಬೆಳೆಯುತ್ತಾರೆ. ಸ್ಥಳೀಯ ಮಾರುಕಟ್ಟೆಗಳಲ್ಲಿ ಬಿಕರಿಯಾಗುವ ಫಸಲುಗಳು ಅಕ್ಕಿ, ಬೇಳೆ, ಜೋಳ, ರಾಗಿ, ಸಾವೆ, ಹುರುಳಿ ಅವರೆ, ಸೋಯಬೀನ್, ಸೂರ್ಯಕಾಂತಿ, ಅಪಸೆಣಬು, ಕಾಫಿ, ದನಮೇವು, ಹಸುರುಗೊಬ್ಬರ, ಗೋದಿ, ಕಾಫಿ ಮತ್ತು ಕಬ್ಬುಗಳ ಬೇಸಾಯಕ್ಕೆ ನೀರಾವರಿ ಬಳಸಿಕೊಳ್ಳಲಾಗುತ್ತದೆ. ತಂಬಾಕು ಬೆಳೆ ಮುಖ್ಯವಾಗಿ ಪೂರ್ವಪ್ರಾಂತ್ಯದಲ್ಲಿ ಹಾಗೂ ಮೆಕ್ಕೆಜೋಳ ದಕ್ಷಿಣ, ಮಧ್ಯ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ವಿಶೇಷ.

ಟ್ಸೆಟ್ಸೆ ನೊಣದಿಂದಾಗಿ ದನಗಳ ಸಾಕಣೆ ಕೆಲವು ಪ್ರದೇಶಗಳಿಗೆ ಸೀಮಿತವಾಗಿದೆ. ಇಲ್ಲಿನ ದನಗಳ ಮೂರು ಮುಖ್ಯ ತಳಿಗಳೆಂದರೆ ನ್ಗೋಮಿ, ಬರಾಟ್ಸೆ ಮತ್ತು ಟೋಂಗ. ದಕ್ಷಿಣ ಪ್ರಾಂತ್ಯಗಳಲ್ಲಿ ಮತ್ತು ಬರಾಟ್ಸೆ ಲ್ಯಾಂಡಿನಲ್ಲಿ ದನಗಳೂ ವಿಶೇಷವಾಗಿವೆ.

ಮೀನುಗಾರಿಕೆ: ಝಾಂಬಿಯದ ನದಿಗಳು ಮತ್ತು ಸರೋವರಗಳಲ್ಲಿ ಮೀನುಗಾರಿಕೆ ಬೆಳೆದಿದೆ. ಬ್ಯಾಂಗ್ವೀಯೂಲೂ ಮತ್ತು ಮದೇರು ಸರೋವರಗಳಲ್ಲೂ ಕಫೂಯೀ, ಲೂವಪೂಲ ಮತ್ತು ಝಾಂಬಿಜಿ ನದಿಗಳಲ್ಲೂ ಮೀನುಗಳು ಹೇರಳವಾಗಿ ದೊರಕುತ್ತವೆ. ಟ್ಯಾಂಗನೀಕ ಮತ್ತು ಕರೀಬ ಸರೋವರಗಳಲ್ಲೂ ಮೀನುಗಾರಿಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.

ಅರಣ್ಯಗಾರಿಕೆ: ಝಾಂಬಿಯದ ಅರ್ಧಕ್ಕಿಂತ ಹೆಚ್ಚು ನೆಲ ಅರಣ್ಯಾವೃತ. ಶೇ. 7 ರಷ್ಟು ನೆಲವನ್ನು ಮೀಸಲು ಕಾಡುಗಳಿಗಾಗಿ ಕಾಯ್ದಿಡಲಾಗಿದೆ. ದಕ್ಷಿಣ ಬರಾಟ್ಸೆಲ್ಯಾಂಡಿನ ರೋಡೀಷಿಯನ್ ತೇಗದ ಕಾಡಿನಲ್ಲೂ ತಾಮ್ರನಿಕ್ಷೇಪ ಪ್ರದೇಶದಲ್ಲೂ ವಾಣಿಜ್ಯೋದ್ದೇಶದಿಂದ ಮರ ಕಡಿಯಲಾಗುತ್ತದೆ. ಉಷ್ಣವಲಯದ ಪೀತದಾರು ಮತ್ತು ನೀಲಗಿರಿ ಸಸ್ಯಗಳನ್ನು ಹೆಚ್ಚಾಗಿ ನೆಡಲಾಗುತ್ತಿದೆ.

ಗಣಿಗಾರಿಕೆ: ಪ್ರಪಂಚದಲ್ಲಿ ತಾಮ್ರದ ರಫ್ತಿನ ರಾಷ್ಟ್ರಗಳಲ್ಲಿ ಝಾಂಬಿಯದ್ದು ಮೂರನೆಯ ಸ್ಥಾನ. ಇಲ್ಲಿ 70 ಕೋಟಿ ಟನ್‌ಗಳಿಗಿಂತಲೂ ಅಧಿಕ ತಾಮ್ರ ನಿಕ್ಷೇಪಗಳಿವೆಯೆಂದು ಅಂದಾಜು ಮಾಡಲಾಗಿದೆ. ಝಾಂಬಿಯದಲ್ಲಿ ಆರು ತಾಮ್ರ ಗಣಿಗಳುಂಟು. ಇತರ ಖನಿಜೋತ್ಪನ್ನಗಳು ಸಿಮೆಂಟ್, ಸತು, ಸೀಸ. ಕರೀಬ ಸರೋವರದ ಬಳಿಯ ಎನ್ಕಾಂಡಾಬ್ವೇ ಗಣಿಯಲ್ಲಿ ಕಲ್ಲಿದ್ದಲು ತೆಗೆಯಲಾಗುತ್ತಿದೆ. ಗ್ವಾಂಬೆ ಕಣಿವೆಯಲ್ಲೂ ಕಲ್ಲಿದ್ದಲು ನಿಕ್ಷೇಪಗಳುಂಟು. ಕಲ್ಲಿದ್ದಲಿನ ವಿಚಾರದಲ್ಲಿ ಝಾಂಬಿಯ ಸ್ವಾವಲಂಬಿಯಾಗಬಹುದೆಂದು ನಿರೀಕ್ಷಿಸಲಾಗಿದೆ. ಬೆಳ್ಳಿ, ಚಿನ್ನ, ಸೆಲೆನಿಯಂ, ಕ್ಯಾಡ್ಮಿಯಂ, ವನಾಡಿಯಂ, ಜಿಪ್ಸಂ– ಇವೂ ಅಲ್ಪಸ್ವಲ್ಪ ಉತ್ಪಾದನೆಯಾಗುತ್ತವೆ.

ಗಣಿಗಾರಿಕೆಗೆ ಅಗತ್ಯವಾದ ವಿದ್ಯುತ್ತನ್ನು ಗಣಿಕಂಪನಿಗಳೇ ಉಷ್ಣ ವಿದ್ಯುಜ್ಜನಕಗಳಿಂದ ಉತ್ಪಾದಿಸಿಕೊಳ್ಳುತ್ತಿದ್ದವು. ಆದರೆ ಕಲ್ಲಿದ್ದಲು ಸಾಗಣೆಯಲ್ಲಿ ಉಂಟಾದ ತೊಂದರೆಯಿಂದಾಗಿ ಜಲವಿದ್ಯುತ್ತಿನ ಉತ್ಪಾದನೆಗೆ ಹೆಚ್ಚು ಗಮನ ನೀಡಲಾಯಿತು. ಕರೀಬ ಜಲವಿದ್ಯುತ್‌ಕೇಂದ್ರ ಈಗಿನ ಬೇಡಿಕೆಗಳನ್ನು ಪೂರೈಸುತ್ತಿದೆ. ಕಫೂಯೀ ಫ್ಲಾಟ್ ಜಲವಿದ್ಯುತ್ ಯೋಜನೆ ಇನ್ನೊಂದು.

ಕೈಗಾರಿಕೆ: ಕೈಗಾರಿಕಾಕರಣಕ್ಕೆ ಅಗತ್ಯವಾದ ಅನೇಕ ಖನಿಜಗಳು ಝಾಂಬಿಯದಲ್ಲಿ ಲಭ್ಯವಿದ್ದರೂ ಅದು ಮುಖ್ಯವಾಗಿ ಕಚ್ಚಾ ಸಾಮಗ್ರಿ ನಿರ್ಯಾತದಾರ ದೇಶ. ತಾಮ್ರ ಪರಿಷ್ಕರಣವಲ್ಲದೆ ಇತರ ಮುಖ್ಯ ಕೈಗಾರಿಕೆಗಳು ಕಬ್ಬಿಣ–ಉಕ್ಕು, ಸರಕು, ಮರಕೊಯ್ತ, ಮರಗೆಲಸ, ಟೈರ್ ಪುನರ್ ತ್ರೆಡೀಕರಣ, ಆಹಾರ ಪಾನೀಯ ಸಂಸ್ಕರಣ, ಸಿಮೆಂಟ್ ಮತ್ತು ಅದರ ಉತ್ಪನ್ನಗಳ ತಯಾರಿಕೆ.

ಸಾರಿಗೆ: ದಕ್ಷಿಣದ ಲಿವಿಂಗ್‌ಸ್ಟನ್‌ನಿಂದ ಲುಸಾಕದ ಮೂಲಕ ಉತ್ತರದ ತಾಮ್ರ ಗಣಿ ಪ್ರದೇಶಕ್ಕೆ ರೈಲುಮಾರ್ಗವನ್ನು ನಿರ್ಮಿಸಲಾಗಿದೆ. ಮೋಝಾಂಬಿಕ್‌ನಲ್ಲಿರುವ ಹಿಂದೂಸಾಗರ ಬಂದರುಗಳಾದ ಬೇರ ಮತ್ತು ಲರೆಂಟ್ಸೋಗಳಿಗೆ ಜಿಂಬಾಬ್ವೆಯ ಮೂಲಕ ರೈಲು ಸಂಪರ್ಕವುಂಟು. ಆದರೆ ಜಿಂಬಾಬ್ವೆ ದೇಶದ ಬಿಳಿಯರು ಏಕಪಕ್ಷೀಯವಾಗಿ ಸ್ವಾತಂತ್ರ್ಯ ಸಾರಿಕೊಂಡಾಗಿನಿಂದ (1965) ಆ ದೇಶದೊಂದಿಗೆ ಝಾಂಬಿಯಕ್ಕೆ ವಿರಸ ಉಂಟಾಗಿ ಅದು ಸಮುದ್ರಕ್ಕೆ ಇತರ ಹೊರಮಾರ್ಗಗಳನ್ನು ಅನ್ವೇಷಿಸುತ್ತಿದೆ. ಮಹಾಪೂರ್ವ ರಸ್ತೆಯನ್ನು ಮಲಾವೀಗೆ ವಿಸ್ತರಿಸುವುದರಿಂದ ಜಿಂಬಾಬ್ವೆಯನ್ನು ಪ್ರವೇಶಿಸದೆ ಸರಕು ಸಾಗಿಸುವುದು ಸಾಧ್ಯ. ಕಟಾಂಗ (ಷಾಬ) ಮತ್ತು ಬೆಂಗ್ವೇಲ ರೈಲ್ವೆಗಳ ಮೂಲಕ ಆಂಗೋಲದ ಲೋಬೀಟೋ ಕೊಲ್ಲಿಗೆ ಸಂಪರ್ಕವಿದೆ. ಇದು ಅಟ್ಲಾಂಟಿಕ್ ಸಾಗರಕ್ಕೆ ತೆರವು. ಟ್ಯಾನ್‌ಝಾನಿಯದ ದಾರ್ ಎಸ್ ಸಲಾಮ್‌ಗೂ ತಾಮ್ರ ಗಣಿ ಪ್ರದೇಶಕ್ಕೂ ಟಾನ್‌ಝಾಮ್ ರೈಲುಮಾರ್ಗವನ್ನು ನಿರ್ಮಿಸಲಾಗಿದೆ.

ಝಾಂಬಿಯದಲ್ಲಿ 35,200 ಕಿಮೀ ರಸ್ತೆಗಳುಂಟು. ಮುಖ್ಯ ರಸ್ತೆಗಳಿವು: ಲಿವಿಂಗ್‌ಸ್ಟನ್‌ನಿಂದ ಕಾಬ್ವೇ ಮುಖಾಂತರ ಉತ್ತರಕ್ಕೆ ಟ್ಯಾನ್‌ಝಾನೀಯಕ್ಕೆ ಸಾಗುವ ಮಹಾ ಉತ್ತರ ರಸ್ತೆ (1152 ಕಿಮೀ), ಲುಸಾಕದಿಂದ ಚಿಪಾಟಕ್ಕೆ ಸಾಗುವ ಮಹಾ ಪೂರ್ವ ರಸ್ತೆ (576 ಕಿಮೀ). ಕಪಿರಿ ಮೋಷಿಯಿಂದ ತಾಮ್ರ ಗಣಿ ಪ್ರದೇಶದ ಮೂಲಕ ಕಟಾಂಗಕ್ಕೆ ಹರಿಯುವ ಕಾಂಗೋ ಸರಹದ್ದು ರಸ್ತೆ ಮತ್ತು ಕಫೂಯೀ–ಸಾಲ್ಸ್‌ಬರೀ (ರೋಡೀಷಿಯ) ರಸ್ತೆ, ಝಾಂಬಿಝಿ ನದಿಯೂ ಅಲ್ಲಲ್ಲಿ ಯಾನಯೋಗ್ಯ. ಲಿವಿಂಗ್‌ಸ್ಟನ್ನಿಂದ ಬರಾಟ್ಸೆಲ್ಯಾಂಡಿನ ಮಾಂಗೂವರೆಗೆ ನದೀ–ರಸ್ತೆ ವ್ಯವಸ್ಥೆಯುಂಟು. ಮಪ್ಲುಂಗ ಒಂದು ಒಳನಾಡು ಬಂದರು. ಅದು ಟ್ಯಾಂಗನೀಕ ಸರೋವರದ ದಡದಲ್ಲಿದೆ. ಟ್ಯಾನ್‌ಝಾನೀಯದ ಮೂಲಕ ಬರುವ ಸರಕುಗಳನ್ನು ಅದು ಸ್ವೀಕರಿಸುತ್ತದೆ. ಕರೀಬ ಸರೋವರದ ದಂಡೆಯಲ್ಲಿ ಅನೇಕ ಮೀನುಗಾರಿಕೆ ರೇವುಗಳುಂಟು.

ಝಾಂಬಿಯವನ್ನು ಎಂಟು ಪ್ರಾಂತ್ಯಗಳಾಗಿ ವಿಭಾಗಿಸಲಾಗಿದೆ. ಪ್ರತಿಯೊಂದು ಪ್ರಾಂತ್ಯದಲ್ಲೂ ಹಲವು ಜಿಲ್ಲೆಗಳುಂಟು. ಝಾಂಬಿಯದ ಮುಖ್ಯ ನಗರಗಳು ಇವು : ಲುಸಾಕ (ರಾಜಧಾನಿ), ಕೀಟ್ವೇ, ಎನ್ಡೋಲ, ಚಿಂಗೋಲ, ಮೂಫಲಿರ, ಲೂವಾನ್ಶಾ, ಕಾಬ್ವೇ, ಚಿಲಿಲಕಾಂಬ್ವೆ, ಲಿವಿಂಗ್‌ಸ್ಟನ್. ಝಾಂಬೀಯದ ನಾಣ್ಯ ಝಾಂಬೀಯನ್ ಕ್ವಾಚ. 100 ಎನ್‌ಗ್ವೀ=1 ಝಾಂಬೀಯನ್ ಕ್ವಾಚ. (ಎಸ್.ಎಸ್.ವಿ.)

**ಝಾಂಬೆಝಿ:** ದಕ್ಷಿಣ ಮಧ್ಯ ಮತ್ತು ಆಗ್ನೇಯ ಆಫ್ರಿಕದ ಒಂದು ನದಿ. ಇದು ಝಾಂಬೀಯದಲ್ಲಿ ಉಗಮಿಸಿ ಹಿಂದೂ ಸಾಗರವನ್ನು ಸೇರುತ್ತದೆ. ಇದರ ಉದ್ದ 2,740 ಕಿಮೀ. ಅಂಗೋಲ, ಝಾಂಬಿಯ, ಜಿಂಬಾಬ್ವೆ, ಮಲಾವೀ ಮತ್ತು ಮೊಝಾಂಬಿಕ್‌ಗಳಲ್ಲಿ 8,00,000 ಚ.ಕಿಮೀ ಪ್ರದೇಶದ ಜಲಾನಯನ ಪ್ರದೇಶವನ್ನು ಇದು ಹೊಂದಿದ್ದು ಆಫ್ರಿಕದ ಮುಖ್ಯನದಿಗಳಲ್ಲಿ ಒಂದಾಗಿದೆ. ಝಾಂಬಿಯದ ವಾಯವ್ಯ ಭಾಗದಲ್ಲಿ ಉಗಮಿಸಿ, ಪೂರ್ವ ಅಂಗೋಲದಲ್ಲಿ ಹರಿದು, ಪಶ್ಚಿಮ ಜಾಂಬಿಯದ ಬರಾಟ್ಸೆಲ್ಯಾಂಡನ್ನು ದಾಟಿ, ನೈಋತ್ಯ ಆಫ್ರಿಕದ ಕ್ಯಾಪ್ರೀವೀ ಭೂಪಟ್ಟಿಗೂ ಝಾಂಬಿಯಕ್ಕೂ ಗಡಿಯಾಗಿ ಪರಿಣಮಿಸುತ್ತದೆ. ಅನಂತರ ಝಾಂಬಿಯ ಮತ್ತು ಜಿಂಬಾಬ್ವೆಗಳ ಗಡಿಯಲ್ಲಿ ಸಾಗಿ ಮೊಝಾಂಬಿಕನ್ನು ಪ್ರವೇಶಿಸಿ ಆಗ್ನೇಯಾಭಿಮುಖವಾಗಿ ಹರಿದು ಮೊಜಾಂಬಿಕ ಕಡಲ್ಗಾಲುವೆಯನ್ನು ಸೇರುತ್ತದೆ.

ವಿಕ್ಟೋರಿಯ ಜಲಪಾತ

ಝಾಂಬಿಯದಲ್ಲಿ ಇದನ್ನು ಕ್ವಾಂಡೋ, ಲುಂಬೆ ಮತ್ತು ಇನ್ನೂ ಹಲವು ಉಪನದಿಗಳು ಕೂಡುತ್ತವೆ. ಇದರ ಬಲದಂಡೆಯ ಉಪನದಿಗಳಲ್ಲಿ ಚೋಬೀ ಎಂಬುದು ಬೋಟ್ಸ್ವಾನದ ಗಡಿಯಲ್ಲಿ ಸಾಗಿ ಬಂದು ಇದನ್ನು ಸೇರುತ್ತದೆ. ಕಫೂಯಿ ಎಂಬುದು ಎಡದಂಡೆಯ ಒಂದು ಮುಖ್ಯ ಉಪನದಿ. ಮಧ್ಯ ಝಾಂಬಿಯದ ನೀರನ್ನು ಬಸಿಯುವ ನದಿ ಇದು. ಎಡದಂಡೆಯ ಇನ್ನೊಂದು ಮುಖ್ಯ ಉಪನದಿ ಲೂವಾಂಗ್ವಾ. ಇದು ಝಾಂಬಿಯ–ಮೊಝಾಂಬಿಕ್ ಗಡಿಯಲ್ಲಿ ಹರಿದುಬರುತ್ತದೆ. ನ್ಯಾಸ ಸರೋವರದಿಂದ ಹರಿದು ಬರುವ ಉಪನದಿ ಷಿಯರ್. ಇದು ಝಾಂಬಿಝಿ ನದಿಯನ್ನು ಕರಾವಳಿಯ ಮೈದಾನದಲ್ಲಿ ಕೂಡುವುದು.

ಝಾಂಬೆಝಿ ನದಿ ಅಲ್ಲಲ್ಲಿ ಬಲು ವೇಗವಾಗಿ ಹರಿಯುತ್ತದೆ. ಅದರಲ್ಲಿ ಹಲವು ಜಲಪಾತಗಳುಂಟು. ಆದ್ದರಿಂದ ನೌಕಾ ಸಂಚಾರ ದೃಷ್ಟಿಯಿಂದ ನದಿಯ ಉಪಯುಕ್ತತೆ ಕಡಿಮೆ. ಈ ಉದ್ದವಾದ ನದಿಯ ಮೇಲೆ ಅಲ್ಲಲ್ಲಿ, ಅಲ್ಪ ದೂರ ಮಾತ್ರ, ಸಣ್ಣ ಪುಟ್ಟ ಸ್ಥಳೀಯ ನಾವೆಗಳು ಸಂಚರಿಸುತ್ತವೆ. ನೌಕಾಸೌಲಭ್ಯ ಇರುವ ಮುಖ್ಯ ಭಾಗವೆಂದರೆ ಟೇಟೆಯಿಂದ ಸಮುದ್ರದವರೆಗೆ. ಹೊಸದಾಗಿ ನಿರ್ಮಿತವಾದ ಕರೀಬ ಸರೋವರವೂ ಈ ದೃಷ್ಟಿಯಿಂದ ಮುಖ್ಯವಾದ್ದು. ಝಾಂಬೆಝಿ ಬಹುತೇಕ ಆಳವಾದ ಕಮರಿಗಳಲ್ಲಿ ಹರಿಯುತ್ತದೆ. ಆದ್ದರಿಂದ ಜಲವಿದ್ಯುತ್ತಿನ ಉತ್ಪಾದನೆಗೆ ಕಟ್ಟೆಗಳನ್ನು ಕಟ್ಟುವುದು ಸುಲಭ. ಆದರೆ ಸಂಪರ್ಕ ವ್ಯವಸ್ಥೆ ಏರ್ಪಡಿಸುವುದು ಕಠಿಣ. ಸುಲಭವಾದ ಕಣಿವೆ ಮಾರ್ಗಗಳಿಲ್ಲ. ರೈಲುಮಾರ್ಗಗಳನ್ನು ನಿರ್ಮಿಸಲು ಸೇತುವೆಗಳನ್ನು ನಿರ್ಮಿಸಬೇಕಾಗುತ್ತದೆ. ಇದೂ ಕಷ್ಟಕರ. ಅಲ್ಲದೆ ಇದಕ್ಕೆ ವೆಚ್ಚ ಹೆಚ್ಚು. ಮೊಝಾಂಬಿಕ್‌ನ ಸೇನ ಎಂಬಲ್ಲಿ, ಬೇರದಿಂದ 360 ಕಿಮೀ ದೂರದಲ್ಲಿ, ಹೊಸ ಸೇತುವೆಯನ್ನು ಕಟ್ಟಲಾಗಿದೆ. ಲಿವಿಂಗ್ಸ್ಟನ್ ಬಳಿಯ ಕಮರಿಯ ಮೇಲೆ ಕಟ್ಟಲಾದ ಸೇತುವೆ 1904ರಷ್ಟು ಹಳೆಯದು. ಇದೂ ರೈಲ್ವೆ ಸೇತುವೆ. ಟೇಟಿ ಮತ್ತು ಕರೀಬಗಳಲ್ಲಿ ರಸ್ತೆ ಸೇತುವೆಗಳುಂಟು.

ಝಾಂಬೆಝಿಯ ಮುಖ್ಯ ಜಲಪಾತಗಳು ಇವು: ಅಂಗೋಲದಲ್ಲಿರುವ ಲೂವಪಾಮ, ಬರಟ್ಸೆಲ್ಯಾಂಡಿನಲ್ಲಿರುವ ಗೋನ್ಯ, ವಿಕ್ಟೋರಿಯ ಮತ್ತು ಕೆಬ್ರಬಾಸ– ಪ್ರಸ್ಥಭೂಮಿಯನ್ನು ಬಿಟ್ಟು ಮೈದಾನವನ್ನು ನದಿ ಪ್ರವೇಶಿಸುವಾಗ 80 ಕಿಮೀ ದೂರ ಇರುವ ತ್ವರಿತ ಪ್ರವಾಹ ಕೊನೆಯದು. ಅತ್ಯಂತ ದೊಡ್ಡದಾದ ಮತ್ತು ಪ್ರಸಿದ್ಧವಾದ ಜಲಪಾತ ವಿಕ್ಟೋರಿಯ. ನದಿ ಸಮುದ್ರವನ್ನು ಸೇರುವೆಡೆಯಿಂದ ಮೇಲಕ್ಕೆ 1450 ಕಿಮೀ ದೂರದಲ್ಲಿದೆ. ಅದರ ಮುಂದೆ 72 ಕಿಮೀ ದೂರ ಕಮರಿಯಿದೆ. ಝಾಂಬೆಝಿಯದ ಇನ್ನೊಂದು ಪ್ರಮುಖ ತಾಣವೆಂದರೆ ಕರೀಬ ಸರೋವರ. ಇದನ್ನು ನಿರ್ಮಿಸಲು ಕಟ್ಟಿರುವ ಕಟ್ಟೆಯ ಎತ್ತರ 130 ಮೀ, ಸರೋವರ 280 ಕಿಮೀ ಉದ್ದವಾಗಿದೆ. ಅದರ ವಿಸ್ತೀರ್ಣ 3200 ಚ.ಕಿಮೀ. *

**ಝೂಲೂ ಲ್ಯಾಂಡ್:** ದಕ್ಷಿಣ ಆಫ್ರಿಕ ಗಣರಾಜ್ಯದ ನೇಟಾಲ್ ಪ್ರಾಂತ್ಯದಲ್ಲಿ ಅದರ ಈಶಾನ್ಯ ಭಾಗದಲ್ಲಿರುವ ಪ್ರದೇಶ. ಆಫ್ರಿಕ ಖಂಡದ ಆಗ್ನೇಯದಲ್ಲಿದೆ. ಉತ್ತರದಲ್ಲಿ ಮೊಝಾಂಬಿಕ್, ದಕ್ಷಿಣ ಹಾಗೂ ನೈಋತ್ಯದಲ್ಲಿ ಬಫಲೊ ಮತ್ತು ಟೂಗೇಲ ನದಿಗಳು ಪೂರ್ವದಲ್ಲಿ ಹಿಂದೂ ಸಾಗರ, ಪಶ್ಚಿಮದಲ್ಲಿ ಸ್ವಾಝೀಲೆಂಡ್ ಮತ್ತು ಎನ್ಗೋಟ್ಷೆ, ಫ್ರೈಹೇಟ್, ಬಾಬಾನಾಂಗೋ, ಯೂಟ್ರೆಕ್ಟ್, ನ್ಯಾಯಾಧಿಕಾರ ಜಿಲ್ಲೆಗಳು. ವಿಸ್ತೀರ್ಣ 26,838 ಚ.ಕಿಮೀ.

ಮೇಲ್ಮೈಲಕ್ಷಣ: ಇದು ಕರ್ರೂ ಪ್ರಸ್ಥಭೂಮಿಯ ಪ್ರದೇಶ, ಸಮುದ್ರಮಟ್ಟಕ್ಕೆ 915 ರಿಂದ 1215 ಮೀ ಎತ್ತರದಲ್ಲಿದೆ. ತೀರ ಪ್ರದೇಶ ಸಮತಲ. ಅಲ್ಲಿಯ ತೃತೀಯ ಭೂಯುಗದ ಭೂಸ್ತರಗಳು ಮೊಝಾಂಬಿಕ್ ಮಹಾಬಯಲಿನ ಅಂಚಿನವರೆಗೆ ವ್ಯಾಪಿಸಿವೆ. ರಭಸದಿಂದ ಹರಿಯುವ ನದಿಗಳು ಸವೆಸಿದ ಬಂಡೆಗಳಿಂದ ಪ್ರಕೃತಿಗೆ ವಿಶಿಷ್ಟ ರೂಪ ಬಂದಿದೆ.

ಸರಾಸರಿ ಉಷ್ಣತೆ 29$^{0}$ಸೆ. ವಾರ್ಷಿಕ ಸರಾಸರಿ ಮಳೆ 200–300 ಸೆಂಮೀ. ಒಳ ನಾಡಿನಲ್ಲಿ ಕುರುಚಲು ವನ; ಸವನ್ನಾ ಹುಲ್ಲುಗಾಡು. ಅಲ್ಲಲ್ಲಿ ಉಷ್ಣವಲಯದ ಅರಣ್ಯಗಳೂ ತೀರದಲ್ಲಿ ನಿತ್ಯಹಸುರಿನ ಪೊದೆಗಳೂ ಇವೆ. ಈ ಪ್ರದೇಶ ಉತ್ತರ ಮತ್ತು ದಕ್ಷಿಣ ಆಫ್ರಿಕ ನಡುವೆ ಇರುವುದರಿಂದ ಮೃಗಪಕ್ಷಿಗಳು ವೈಶಿಷ್ಟ್ಯಪೂರ್ಣ. ಟ್ಸೆಟ್ಸೆ ನೊಣದ ಕಡಿತದಿಂದ ದನಕರುಗಳು ಸಾಯುವುದುಂಟು. ಚಿಪ್ಪಿಗ ಇರುವೆ, ನೀರಾನೆ, ಬಿಳಿ ಮತ್ತು ಕರಿಯ ಖಡ್ಗಮೃಗ, ನೇಲ ಮತ್ತು ಸೂಸಿ ಎಂಬ ಎರಡು ಬಗೆಯ ಜಿಂಕೆಗಳು ಇವೆ. ಹಾರ್ನ್‌ಬಿಲ್, ಟ್ರೊಗೋನ್, ಉಷ್ಣವಲಯದ ಬಾರ್ಬೆಟ್, ಗಿಣಿ ಮೊದಲಾದ ಪೂರ್ವ ಆಫ್ರಿಕನ್ ಪಕ್ಷಿಗಳು ಸಮುದ್ರತೀರದಲ್ಲಿ ವಿವಿಧ ಕಡಲ ಹಕ್ಕಿಗಳು ಕಡಲಿನಲ್ಲಿ ಹುಲಿ ಪಟ್ಟೆಯ ಮೀನುಗಳು ಉಂಟು. ಹ್ಲೂಹೂ ಉಂಫ್ಲೋಜಿ, ಎನ್‌ಕೂಜ್ವಿ, ಎನ್‌ಡುಮು– ಇವು ಅಭಯಾರಣ್ಯಗಳು. ಚಿನ್ನ, ಬೆಳ್ಳಿ, ಸೀಸ, ಕಲ್ಲಿದ್ದಲು, ಕಲ್ನಾರು – ಇವು ಖನಿಜಗಳು.

ಝೂಲೂಗಳು ನಿಗ್ರಾಯಿಡ್ ಜನ. ಇವರದು ನ್ಗುನಿ ಗುಂಪಿನ ಒಂದು ವಿಶಿಷ್ಟ ಬಣ. ಬಹುಶಃ 17ನೆಯ ಶತಮಾನದ ಕೊನೆಯಲ್ಲಿ ಆಫ್ರಿಕದ ಆಗ್ನೇಯ ಭಾಗದಲ್ಲಿ ಇವರು ನೆಲೆಸಿರಬಹುದು. ಝೂಲು ಇತಿಹಾಸದಲ್ಲಿ ಚೌಕಾ, ಡಿಂಗಾನೆ ಮತ್ತು ಸೆಟ್ಷ್‌ವಾಯೊ–ಇವರ ಹೆಸರು ಪ್ರಸಿದ್ಧ. ಜಾನುವಾರು ಸಾಕಣೆ, ಕಬ್ಬು ಹಾಗೂ ಇತರ ಬೆಳೆ, ನಿಂಬೆಜಾತಿ ಹಣ್ಣುಗಳ ಬೇಸಾಯ ಇಲ್ಲಿಯ ಜನರ ಮುಖ್ಯ ವೃತ್ತಿಯಾಗಿದೆ. (ವಿ.ಜಿ.ಕೆ.)

# ಝ

**ಝಾನ್ಸಿ:** ಉತ್ತರ ಪ್ರದೇಶ ರಾಜ್ಯದ ಒಂದು ಐತಿಹಾಸಿಕ ನಗರ; ಜಿಲ್ಲೆ; ವಿಭಾಗ. ನಗರ ಕಾನ್ಪುರಕ್ಕೆ ನೈಋತ್ಯದಲ್ಲಿ 208 ಕಿಮೀ ದೂರದಲ್ಲಿ ಬೇಟ್ವಾ ನದಿಯ ತೀರದಲ್ಲಿ ಶಿಲಾಗುಡ್ಡವೊಂದರ ಮೇಲಿದೆ. 'ಬಲವಂತ'ನಗರವೆಂದೂ ಇದಕ್ಕೆ ಹೆಸರುಂಟು. ಇದರ ಜನಸಂಖ್ಯೆ 5,04,292. ಇಲ್ಲಿರುವ ಕೋಟೆಯನ್ನು ಆಗ್ರದ ರಾಜ ಬೀರ್‌ಸಿಂಗ್ ದೇವ್ 1613 ರಲ್ಲಿ ಕಟ್ಟಿಸಿದ. ಬುಂದೇಲ ದೊರೆ ಛತರ್‌ಸಾಲ್ ತನ್ನ ರಾಜ್ಯದ ಮೂರನೆಯ ಒಂದು ಭಾಗವನ್ನು ಮರಾಠರಿಗೆ ಒಪ್ಪಿಸಿದಾಗ (1732) ಅವರು ಝಾನ್ಸಿ ನಗರವನ್ನು ನಿರ್ಮಿಸಿದರು. 1806ರ ವರೆಗೂ ಝಾನ್ಸಿ ಪೇಷ್ವೆಗಳ ಆಳ್ವಿಕೆಯಲ್ಲಿತ್ತು. ಅನಂತರ ಬ್ರಿಟಿಷರ ಹಿಡಿತಕ್ಕೆ ಒಳಗಾಯಿತು. 1817ರಲ್ಲಿ ಅಲ್ಲಿಯ ಪೇಷ್ವೆಯೊಂದಿಗೆ ಬ್ರಿಟಿಷರು ಒಪ್ಪಂದವೊಂದನ್ನು ಮಾಡಿಕೊಂಡು ಬುಂದೇಲಖಂಡದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದರು. 1853ರಲ್ಲಿ ಪೇಷ್ವೆ ಗಂಗಾಧರರಾಯ ಸಂತತಿಯಿಲ್ಲದೆ ಮರಣಹೊಂದಿದಾಗ ಝಾನ್ಸಿ ಸಂಸ್ಥಾನವನ್ನು ಬ್ರಿಟಿಷರು ಸಂಪೂರ್ಣವಾಗಿ ತಮ್ಮ ಕೈಗೆ ತೆಗೆದುಕೊಂಡರು. ಪೇಷ್ವೆಯ ಪತ್ನಿ, ಝಾನ್ಸಿಯ ರಾಣಿ ಲಕ್ಷ್ಮೀಬಾಯಿಗೆ ಅವರು 6,000 ಪೌಂಡ್ ವರ್ಷಾಶನ ನೀಡಿದರು. ಲಕ್ಷ್ಮೀಬಾಯಿ ತನ್ನ ಇಚ್ಛೆಯಂತೆ ದತ್ತು ತೆಗೆದುಕೊಳ್ಳಲು ಅನುಮತಿ ನೀಡಲು ಬ್ರಿಟಿಷ್ ಪ್ರಭುತ್ವ ನಿರಾಕರಿಸಿತು. ಇದರಿಂದ ಆಕೆ ಬಹಳವಾಗಿ ವ್ಯಥೆಗೊಂಡು ತನ್ನ ಸ್ವಾತಂತ್ರ್ಯವನ್ನು ಪ್ರಕಟಿಸಲು ಯತ್ನಿಸಿದಳು. 1857ರಲ್ಲಿ ಬ್ರಿಟಿಷರ ವಿರುದ್ಧ ನಡೆದ ಸಂಗ್ರಾಮದಲ್ಲಿ ಭಾಗವಹಿಸಿದಳು. 1858 ಏಪ್ರಿಲ್ 4ರಂದು ಬ್ರಿಟಿಷ್ ಸೈನ್ಯಾಧಿಕಾರಿ ಹ್ಯೂ ರೋಸ್ ಝಾನ್ಸಿ ಕೋಟೆ ಹಾಗೂ ನಗರವನ್ನು ಆಕ್ರಮಿಸಿಕೊಂಡ. ಲಕ್ಷ್ಮೀಬಾಯಿ ಗ್ವಾಲಿಯರ್ ಕದನದಲ್ಲಿ ಶೌರ್ಯದಿಂದ ಹೋರಾಡಿ ವೀರಮರಣವನ್ನಪ್ಪಿದಳು.

ಮೆಮೋರಿಯಲ್ ಗಾರ್ಡನ್ಸ್, ರಾಜಾ ಗಂಗಾಧರರಾವ್ ಛತಾರಿ, ಲಕ್ಷ್ಮೀ ತಟಾಕ, ಹತಿಯಾಲ್‌ನಲ್ಲಿರುವ ರಾಧಾಭಾಯಿ ಛತಾರಿ – ಇವು ಝಾನ್ಸಿಯ ಕೆಲವು ಪ್ರೇಕ್ಷಣೀಯ ಸ್ಥಳಗಳು. ಇಲ್ಲಿ ಕಾಲೇಜುಗಳು, ಆಯುರ್ವೇದ ಔಷಧಿ, ಪರಿಮಳ ದ್ರವ್ಯ, ಸಾಬೂನು, ಬೀಡಿ, ಎಣ್ಣೆ ಮತ್ತು ಫಲಸಾರ ಕೈಗಾರಿಕೆಗಳು ಲಕ್ಷ್ಮೀ, ದುರ್ಗಾ ಹಾಗೂ ಸಿದ್ಧೇಶ್ವರ ಮಂದಿರಗಳು, ತಾಂತ್ರಿಕ ಶಿಕ್ಷಣ ಶಾಲೆಗಳು, ಆಸ್ಪತ್ರೆಗಳು, ಕ್ಷಯರೋಗ ಚಿಕಿತ್ಸಾಕೇಂದ್ರ ಮುಂತಾದವು ಇವೆ. ಝಾನ್ಸಿ ಮಧ್ಯ ರೈಲ್ವೆಯ ಒಂದು ಮುಖ್ಯ ಜಂಕ್ಷನ್. ಇಲ್ಲಿಂದ ಗ್ವಾಲಿಯರ್ ಮತ್ತು ಆಗ್ರ, ಕಾನ್ಪುರ, ಅಲಹಾಬಾದ್, ಭೂಪಾಲದ ಮೂಲಕ ಮುಂಬಯಿ ಮುಂತಾದ ಸ್ಥಳಗಳಿಗೆ ರೈಲ್ವೆ ಸಂಪರ್ಕವಿದೆ.

ಝಾನ್ಸಿ ವಿಭಾಗದಲ್ಲಿ ಝಾನ್ಸಿ, ಜಾಲೌನ್, ಹಮೀರಪುರ ಮತ್ತು ಬಂಡಾ ಜಿಲ್ಲೆಗಳಿವೆ. ದೇವಘರಿನಲ್ಲಿರುವ ಗುಪ್ತರ ಸುಪ್ರಸಿದ್ಧ ದೇವಸ್ಥಾನಗಳೂ ಚಂದೇಲರ ಕಾಲದ (11ನೆಯ ಶತಮಾನ) ಜೀರ್ಣ ಕೋಟೆಗಳೂ ತಟಾಕಗಳೂ ಈ ವಿಭಾಗದ ಐತಿಹಾಸಿಕ ಅವಶೇಷಗಳು.

(ಎಸ್.ವಿ.ಎಸ್.ಬಿ.;ಎಚ್.ಜಿ.ಎ.)

**ಝೀಲಮ್ :** ಭಾರತ ಪಾಕಿಸ್ತಾನಗಳಲ್ಲಿ ಹರಿಯುವ ಒಂದು ನದಿ; ಝೀಲಮ್ ನದಿ ಪಂಜಾಬಿನ ಐದು ನದಿಗಳಲ್ಲೊಂದು. ಭಾರತದ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಬನಿಹಾಲ್ ಕಣಿವೆಗೆ ಈಶಾನ್ಯದಲ್ಲಿ ಉಗಮಿಸುತ್ತದೆ. ಇದರ ಇನ್ನೊಂದು ಮೂಲ ಶೇಷನಾಗ್ ಸರೋವರ. ಅದ್‌ಪಾತ್, ಬ್ರಿಂಗ್ ಮತ್ತು ಸಂದ್ರನ್‌ಗಳು ಒಂದಾಗಿ ಒಂದು ತೊರೆಯಾಗಿ, ಝೀಲಮ್ ನದಿಯ ಬಲದಂಡೆಯಲ್ಲಿ ಲಿಡ್ಡಾರ್ ಅನಂತನಾಗ್ ಬಳಿ ಅದನ್ನು ಸೇರುತ್ತದೆ. ಅಲ್ಲಿಂದ ಈ ನದಿ ವಾಯವ್ಯ ದಿಕ್ಕಿನಲ್ಲಿ ಕಾಶ್ಮೀರ ಕಣಿವೆಯ ಮೂಲಕ ಹರಿದು, ಶ್ರೀನಗರವನ್ನು ದಾಟಿ, ವೂಲಾರ್ ಸರೋವರವನ್ನು ಸೇರುತ್ತದೆ. ಅಲ್ಲಿಂದ ಹೊರಬಂದು ಪಿರ್ ಪಂಜಲ್ ಶ್ರೇಣಿಗೆ ಅಡ್ಡಲಾಗಿ 36 ಕಿಮೀ ದೂರ ಹರಿದು ಉರಿಗೆ ಬರುತ್ತದೆ. ಬಾರಮುಲದ ಬಳಿ ಸು. 2330 ಮೀ ಆಳದ ಕಂದರದಲ್ಲಿ ಹರಿದು, ಉರಿಯಿಂದ ವಾಯವ್ಯಾಭಿಮುಖವಾಗಿ ಮುಜಫರಬಾದ್‌ಗೆ ಪ್ರವಹಿಸಿ ಕೃಷ್ಣ ಗಂಗದೊಂದಿಗೆ ಕೂಡಿಕೊಂಡು ದಕ್ಷಿಣಕ್ಕೆ ತಿರುಗಿ ಮುಂದುವರಿಯುತ್ತದೆ. ಅನಂತರ ಬಂಡೆಯಿಂದ ಕೂಡಿದ ಪಾತ್ರದಲ್ಲಿ ಈ ನದಿ ಹರಿದು ಕಾಶ್ಮೀರ ಮತ್ತು ಪಾಕಿಸ್ತಾನಗಳ ನಡುವಣ ಗಡಿಯಾಗಿ ಪರಿಣಮಿಸುತ್ತದೆ. ಮಂಗ್ಲಾ ಬಳಿ ಮೇಲಣ ಝೀಲಮ್ ನಾಲೆಗೆ 3.2 ಕಿಮೀ ಉತ್ತರದಲ್ಲಿ ಶಿವಾಲಿಕ್ ಶ್ರೇಣಿಯನ್ನು ದಾಟಿ ಮೈದಾನವನ್ನು ಸೇರುತ್ತದೆ. ಅಲ್ಲಿ ನದಿಗೆ ಅಡ್ಡಲಾಗಿ ಕಟ್ಟೆಯೊಂದನ್ನು ಕಟ್ಟಲಾಗಿದೆ. ಮೇಲಣ ಝೀಲಮ್ ನಾಲೆ ಮಂಗ್ಲಾ ಬಳಿಯೂ ಕೆಳ ಝೀಲಮ್ ನಾಲೆ ರಾಸಲ್ ಬಳಿಯೂ ಆರಂಭವಾಗುತ್ತವೆ. ಸ್ವಲ್ಪ ದೂರ ಹೋದಮೇಲೆ ಬಹುತೇಕ ದಕ್ಷಿಣಾಭಿಮುಖವಾಗಿ ಹರಿದು ಟ್ರಿಮ್ಮು ಬಳಿ ಚೀನಾಬ್ ನದಿಯಲ್ಲಿ ಸಂಗಮಿಸುತ್ತದೆ. ನದಿಯ ಉದ್ದ ಸು. 720 ಕಿಮೀ. ಇದರ ಜಲಾನಯನ ಪ್ರದೇಶದ ವಿಸ್ತೀರ್ಣ 28490 ಚ.ಕಿಮೀ. ಪಂಜಾಬಿನ ಇತರ ನದಿಗಳಿಗಿಂತ ಮುಂಚೆ, ಮಾರ್ಚ್‌ನಲ್ಲಿ, ಈ ನದಿಯಲ್ಲಿ ಪ್ರವಾಹ ಆರಂಭವಾಗುತ್ತದೆ. ಮಳೆಗಾಲದಲ್ಲಿ ನದಿ ದಡಮೀರಿ ಹರಿದು ನೆರೆಯ ಪ್ರದೇಶವನ್ನೆಲ್ಲ ತುಂಬುತ್ತದೆ. ಇದು ವ್ಯವಸಾಯಕ್ಕೆ ಅನುಕೂಲಕರ. ಸೆಪ್ಟೆಂಬರಿನಲ್ಲಿ ನೆರೆಯ ಪ್ರವಾಹ ಇಳಿದಾಗ ರಾಬಿ ಬೆಳೆಯ ಬಿತ್ತನೆ ಮಾಡಲಾಗುತ್ತದೆ. ಝೀಲಂ ನದಿಯ ದಡದಲ್ಲಿಯೇ ಇದೇ ಹೆಸರಿನ ಚಿಕ್ಕ ಪಟ್ಟಣವು ಪಾಕಿಸ್ತಾನದ ರಾವಲ್ಪಿಂಡಿಯಲ್ಲಿದೆ. (ಎ.ಎಸ್.ಆರ್.ಎ.)

# ಟ

**ಟಬಾಸ್ಕೋ:** ಆಗ್ನೇಯ ಮೆಕ್ಸಿಕೊದಲ್ಲಿರುವ ಒಂದು ರಾಜ್ಯ. ಟಬಾಸ್ಕೋ ಎಂಬುದು ಇಂಡಿಯನ್ ಹೆಸರು. ತೇವದ ನೆಲ ಎಂದು ಇದರ ಅರ್ಥ. ಇದು 1824ರಲ್ಲಿ ಒಂದು ರಾಜ್ಯವಾಯಿತು. ಪಶ್ಚಿಮದಲ್ಲಿ ವೆರ ಕ್ರೂಜ್ ರಾಜ್ಯ, ದಕ್ಷಿಣದಲ್ಲಿ ಚಿಯಾ ಪಾಸ್ ರಾಜ್ಯ, ಪೂರ್ವದಲ್ಲಿ ಕ್ಯಾಂಪೀಚೀ ರಾಜ್ಯ, ಆಗ್ನೇಯದಲ್ಲಿ ಗ್ವಾಟಮಾಲ ದೇಶ, ಉತ್ತರದಲ್ಲಿ ಕ್ಯಾಂಪೀಚೀ ಕೊಲ್ಲಿ–ಇವು ಇದರ ಮೇರೆಗಳು. ವಿಸ್ತೀರ್ಣ 24,661 ಚ.ಕಿಮೀ. ಜನಸಂಖ್ಯೆ 19,89,969 (2005). ರಾಜಧಾನಿ ವೀಯಎರ್ಮೋಸ. ಟಬಾಸ್ಕೋದ ಭೂಪ್ರದೇಶ ಚಿಯಾಪಾಸ್ ಪ್ರದೇಶದಿಂದ ಕ್ಯಾಂಪೀಚೀ ಕೊಲ್ಲಿಯ ಕಡೆಗೆ ಇಳಿಜಾರಾಗಿದೆ. ಇಲ್ಲಿ ಅನೇಕ ಸರೋವರಗಳೂ ಜವುಗು ನೆಲಗಳೂ ಇವೆ. ತೀರಪ್ರದೇಶ ಅನೇಕ ವಿಶಾಲವಾದ ಲಗೂನ್‌ಗಳಿಂದ ಕೂಡಿದೆ.

ಟಬಾಸ್ಕೋದಲ್ಲಿ ಬಹಳ ಹೆಚ್ಚಿನ ಮಳೆಯಾಗುವುದರಿಂದ (240 ಸೆಂಮೀ) ರಾಜ್ಯದಲ್ಲಿ ದಟ್ಟವಾದ ಉಷ್ಣವಲಯ ಕಾಡುಗಳಿವೆ. ಈ ರಾಜ್ಯದ ಎರಡು ಮುಖ್ಯ ನದಿಗಳು ಗ್ರೀಹಾಲ್ವ ಮತ್ತು ಊಸಮಸಿಂಟ. ಗ್ರೀಹಾಲ್ವಕ್ಕೆ ಟಬಾಸ್ಕೋ ನದಿಯೆಂದೂ ಹೆಸರಿದೆ. ಸು. 100 ಕಿಮೀ ದೂರದವರೆಗೆ ಇದು ಯಾನಯೋಗ್ಯ. ಊಸಮಸಿಂಟ ನದಿಯ ಮೇಲೆ 50 ಕಿಮೀ ದೂರ ನೌಕೆಗಳು ಸಂಚರಿಸಬಹುದು. ಟಬಾಸ್ಕೋದಲ್ಲಿ ಹೆಚ್ಚು ರಸ್ತೆಗಳಿಲ್ಲ. ನದಿಗಳೇ ಮುಖ್ಯ ಸಂಚಾರಮಾರ್ಗಗಳು. 1950ರಲ್ಲಿ ನಿರ್ಮಿಸಲಾದ ರೈಲುಮಾರ್ಗ ರಾಜ್ಯದ ಪೂರ್ವದಿಂದ ಪಶ್ಚಿಮದ ಕಡೆಗೆ ಸಾಗಿದೆ. ರಾಜಧಾನಿ ವೀಯಎರ್ಮೋಸ ಗ್ರೀಹಾಲ್ವ ನದಿಯದಡದ ಮೇಲಿದೆ. ಇದು ಮುಖ್ಯವಾಗಿ ಜಾನುವಾರು ಹಾಗೂ ಬಾಳೆಹಣ್ಣಿನ ವ್ಯಾಪಾರಕೇಂದ್ರ. ಇಲ್ಲಿ ವಿಮಾನ ನಿಲ್ದಾಣವಿದೆ. ಇದು ರಾಜ್ಯದ ಎರಡನೆಯ ದೊಡ್ಡ ಪಟ್ಟಣ. ಮುಖ್ಯ ಬಂದರು ಫ್ರಂಟೇರ. ಇದು ಗ್ರೀಹಾಲ್ವ ನದಿಗೆ 5 ಕಿಮೀ ದೂರದಲ್ಲಿದೆ. ಹಿಂದೆ ಇದಕ್ಕೆ ಆಲ್ವರೋ ಓಬ್ರಿಗಾನ್ ಎಂಬ ಹೆಸರಿತ್ತು.

ರಾಜ್ಯದ ಜನರ ಮುಖ್ಯ ಕಸಬು ವ್ಯವಸಾಯ. ಕೊಬ್ಬರಿ, ಬಾಳೆ, ಕೋಕೋ, ಕಾಫಿ, ಬತ್ತ, ಕಬ್ಬು, ರಬ್ಬರ್, ವೆನಿಲ, ಹಣ್ಣುಗಳು, ಮುಸುಕಿನ ಜೋಳ ಮುಖ್ಯ ಬೆಳೆಗಳು. ದನಗಳನ್ನು ಸಾಕುತ್ತಾರೆ. ರಬ್ಬರ್ ಮತ್ತು ಚೌಬೀನೆ ಮುಖ್ಯ ಅರಣ್ಯೋತ್ಪನ್ನಗಳು. ತೈಲ ವಿನಾ ಬೇರಾವ ಖನಿಜನಿಕ್ಷೇಪಗಳೂ ಇಲ್ಲಿ ಇಲ್ಲ.

ವಾನ್ ಡ ಗ್ರೀಹಾಲ್ವ 1518ರಲ್ಲಿ ಈ ಪ್ರದೇಶವನ್ನು ಪರಿಶೋಧಿಸಿದ. ಮುಂದಿನ ವರ್ಷಗಳಲ್ಲಿ ಸ್ಪ್ಯಾನಿಷರು ಇಲ್ಲಿಯ ಇಂಡಿಯನರೊಂದಿಗೆ ಯುದ್ಧಮಾಡಿ ಕ್ರಮೇಣ ಈ ಪ್ರದೇಶವನ್ನು ಆಕ್ರಮಿಸಿಕೊಂಡರು. (ಆರ್.ಎಸ್.)

**ಟರ್ಕಿ:** ಪಶ್ಚಿಮ ಏಷ್ಯ ವಲಯದ ಒಂದು ದೇಶ. ಇದರ ಒಂದು ಭಾಗ ಆಗ್ನೇಯ ಯುರೋಪಿನಲ್ಲೂ ಇನ್ನೊಂದು ಭಾಗ ನೈಋತ್ಯ ಏಷ್ಯದಲ್ಲೂ ಇದೆ. ಎರಡೂ ಖಂಡಗಳಲ್ಲಿ ಹಂಚಿಕೆಯಾಗಿದ್ದು ಅದು ದೇಶದ ಇತಿಹಾಸ, ಸಂಸ್ಕೃತಿ ಮತ್ತು ರಾಜಕಾರಣದ ಮೇಲೆ ವಿಶೇಷ ಪ್ರಭಾವ ಬೀರಿದೆ. ಇದು ಪೂರ್ವ ಪಶ್ಚಿಮಗಳ ನಡುವಣ ಸೇತುವೆಯೆಂದು ಅನೇಕ ವೇಳೆ ಹೇಳುವುದುಂಟು. ಇದರ ಉತ್ತರದಲ್ಲಿ ಕಪ್ಪುಸಮುದ್ರ, ಈಶಾನ್ಯದಲ್ಲಿ ಜಾರ್ಜಿಯ, ಪೂರ್ವದಲ್ಲಿ ಇರಾನ್ ಮತ್ತು ಆರ್ಮೇನಿಯ, ಆಗ್ನೇಯದಲ್ಲಿ ಇರಾಕ್, ದಕ್ಷಿಣದಲ್ಲಿ ಮೆಡಿಟರೇನಿಯನ್ ಸಮುದ್ರ ಹಾಗೂ ಸಿರಿಯ, ಪಶ್ಚಿಮದಲ್ಲಿ ಏಜಿಯನ್ ಸಮುದ್ರ ; ಉ.ಅ. $35^0 50'$ ರಿಂದ $42^0 –05'$ ಹಾಗೂ ಪೂ.ರೇ. $25^0 –40'$ ರಿಂದ $44^0 –50'$ ಗಳ ನಡುವೆ ವಿಸ್ತರಿಸಿದೆ. ವಿಸ್ತೀರ್ಣ 779452 ಚ.ಕಿಮೀ. ಇದರಲ್ಲಿ ಏಜಿಯನ್ ಸಮುದ್ರದಲ್ಲಿರುವ ಇಮ್ರಾಜ್ ಮತ್ತು ಬೋಜ್‌ಜಾದಾ ದ್ವೀಪಗಳೂ ಟರ್ಕಿಗೆ ಸೇರಿವೆ. ಟರ್ಕಿಯ ವಿಸ್ತೀರ್ಣದಲ್ಲಿ ಒಳನಾಡಿನ 8387 ಚ.ಕಿಮೀ ಜಲ ಹಾಗೂ ಜವುಗು ಭಾಗವೂ ಸೇರಿವೆ. ಜನಸಂಖ್ಯೆ 7,31,93,000 (2005). ಜನಸಾಂದ್ರತೆ ಪ್ರತಿ ಚ.ಕಿಮೀಗೆ 93 ಜನರು. ರಾಜಧಾನಿ ಅಂಕಾರ. ಜನಸಂಖ್ಯೆ 28,90,025 (2002).

ಬಾಸ್ಪೊರಸ್ ಜಲಸಂಧಿ, ಮಾರ್ಮರ ಸಮುದ್ರ, ಡಾರ್ಡನಲ್ಸ್ ಜಲಸಂಧಿ–ಇವು ಯುರೋಪಿಯನ್ ಟರ್ಕಿಯನ್ನು ಏಷ್ಯನ್ ಭಾಗವಾದ ಅನಟೋಲಿಯದಿಂದ ಪ್ರತ್ಯೇಕಿಸುತ್ತವೆ. ಕಪ್ಪು ಸಮುದ್ರಕ್ಕೂ ಮೆಡಿಟರೇನಿಯನ್‌ಗೂ ನಡುವೆ ಸಮುದ್ರ ಮಾರ್ಗ ಇರುವುದು ಇವುಗಳ ಮೂಲಕ ಮಾತ್ರವೇ.

ಭೂರಚನೆ : ಭೂವೈಜ್ಞಾನಿಕ ದೃಷ್ಟಿಯಿಂದ ಟರ್ಕಿಯಲ್ಲಿ ಸಾಕಷ್ಟು ವೈವಿಧ್ಯವಿದೆ. ಪುರಾತನ ಕೇಂಬ್ರಿಯನ್ ಯುಗದ ಶಿಲೆಗಳಿಂದ ಹಿಡಿದು ಈಚಿನ ಶಿಲಾನಿಕ್ಷೇಪಗಳ ವರೆಗೆ ಎಲ್ಲವನ್ನೂ ಇಲ್ಲಿ ಗುರುತಿಸಲು ಸಾಧ್ಯವಾಗಿದೆ. ಅಲ್ಲದೆ ಭೂ ಇತಿಹಾಸದ ವಿವಿಧ ಹಂತಗಳಲ್ಲಿ ನಡೆದ ಪರ್ವತಜನ್ಯ ಕಾರ್ಯಾಚರಣೆಗಳನ್ನೂ ಈ ಶಿಲೆಗಳಲ್ಲಿ ಕಾಣಬಹುದು. ಹಲವಾರು ಅಗ್ನಿ ಶಿಲಾಂತಸ್ತರಣಗಳಿಂದ ಭೇದಿತವಾಗಿರುವ ಪದರುಶಿಲೆಗಳನ್ನು ದೇಶದ ಅತ್ಯಂತ ಹಳೆಯ ಶಿಲಾವರ್ಗಗಳೆಂದು ಗುರುತಿಸಲಾಗಿದೆ. ಇವುಗಳ ಮೇಲೆ ಅಲ್ಲಲ್ಲಿ ಆರ್ಡೋವಿಷಿಯನ್ ಹಾಗೂ ಸೈಲೂರಿಯನ್ ಕಲ್ಪಗಳ (ಸು. 500 ರಿಂದ 400 ದ.ಲ.ವ. ಪ್ರಾಚೀನದ ತನಕ) ಸಣ್ಣಪುಟ್ಟ ನಿಕ್ಷೇಪಗಳಿವೆ. ಆದರೆ ದೇಶದ ಪಶ್ಚಿಮ ಹಾಗೂ ಉತ್ತರ ಭಾಗಗಳಲ್ಲಿ ವಿಸ್ತಾರವಾಗಿ ಹರಡಿರುವ ಡೆವೋನಿಯನ್ ಶಿಲಾಸ್ತರಶ್ರೇಣಿಗಳನ್ನು




(ಸು. 400 ರಿಂದ 280 ದ.ಲ.ವ. ಪ್ರಾಚೀನದ ತನಕ) ಕಾಣಬಹುದು. ಕಾರ್ಬಾನಿಫೆರಸ್ ಶಿಲಾನಿಕ್ಷೇಪಗಳು (ಸು. 350 ರಿಂದ 280 ದ. ಲ. ವ. ಪ್ರಾಚೀನದ ತನಕ)ಕೂಡ ಬಹು ವಿಸ್ತಾರವಾಗಿ ವ್ಯಾಪಿಸಿವೆ. ಇವುಗಳಲ್ಲಿ ಕೆಳ ಕಾರ್ಬಾನಿಫೆರಸ್ ಮತ್ತು ಮೇಲಿನ ಕಾರ್ಬಾನಿಫೆರಸ್ ಎಂಬ ಎರಡು ಉಪಶ್ರೇಣಿಗಳುಂಟು. ಕೆಳಹಂತದಲ್ಲಿ ಸಮುದ್ರ ನಿಕ್ಷೇಪಗಳಾದ ಸುಣ್ಣಶಿಲೆ ಮತ್ತು ಜೇಡುಶಿಲಾಸ್ತರಗಳೂ ಮೇಲಿನ ಹಂತದಲ್ಲಿ ಅಸಂಖ್ಯಾತ ಕಲ್ಲಿದ್ದಲಿನ ಸ್ತರಗಳಿಂದ ಕೂಡಿದ ಜೇಡು ಹಾಗೂ ಮರಳು ಶಿಲಾಸ್ತರಗಳೂ ಇವೆ. ಪರ್ಮಿಯನ್ ಕಲ್ಪದ (ಸು. 280 ರಿಂದ 225 ದ.ಲ.ವ. ಪ್ರಾಚೀನದ ತನಕ) ಈ ಕಾಲದಲ್ಲಿ ತಲೆದೋರಿದ ಭೂಆಂತರಿಕ ಪ್ರಕ್ರಿಯೆಗಳಿಂದ ಶಿಲಾಸ್ತರಗಳು ಹಲವಾರು ಕಡೆ ಮಡಿಕೆಗೊಂಡಿರುವುವು. ಉತ್ತಮ ಶಿಲಾಮಡಿಕೆಗಳನ್ನು ಜೋಂಗಲ್ ಡಕ್ ಮತ್ತು ಮರಾಸ್ ಪ್ರದೇಶಗಳಲ್ಲಿ ಕಾಣಬಹುದು. ಸತತ ಭೂಸವೆತದ ಕಾರಣ ಆಳದಲ್ಲಿ ಹುದುಗಿದ್ದ ಹಲವಾರು ಅಗ್ನಿ ಶಿಲಾ ಸಮುದಾಯಗಳು ಹೊರಕಂಡಿವೆ. ಇವುಗಳಲ್ಲಿ ಬಹು ಮುಖ್ಯವಾದವು–ರ್‍ಹೊಡೋಪ್, ಸ್ಕೈಕ್ಲೇಡ್ಸ್, ಅಲ್ದಿನ್ ಮುಂತಾದ ಬೆಟ್ಟಗಳು. ದೇಶದ ಉತ್ತರ ಭಾಗದಲ್ಲಿರುವ ಟ್ರಯಾಸಿಕ್ ಶ್ರೇಣಿಯಲ್ಲಿ (ಸು. 225 ರಿಂದ 190 ದ.ಲ.ವ. ಪ್ರಾಚೀನದ ತನಕ) ಗುಂಡುಶಿಲಾಸ್ತರಗಳು, ಮರಳು ಶಿಲಾಸ್ತರಗಳು, ಜೇಡುಶಿಲಾಸ್ತರಗಳು ಮತ್ತು ಸುಣ್ಣಶಿಲಾಸ್ತರಗಳಿವೆ. ಸುಣ್ಣಶಿಲೆಯಲ್ಲಿ ಡಿಪ್ಲೊಪೋರಾ ಅವಶೇಷಗಳು ಅಸಂಖ್ಯಾತ. ಮುಂದೆ ಜೂರಾಸಿಕ್ ಕಲ್ಪದಲ್ಲಿ (ಪ್ರಾಚೀನದ ತನಕ) ದೇಶದ ಉತ್ತರ ಮತ್ತು ಪಶ್ಚಿಮ ಭಾಗಗಳು ಮುಳುಗಡೆಯಾಗಿ ಸುಣ್ಣಶಿಲೆ ಮತ್ತು ಜೇಡುಶಿಲಾಸ್ತರಗಳು ನಿಕ್ಷೇಪಗೊಂಡವು. ಇದೇ ಭೂಕಾಲದ ವಿಶೇಷ ರೀತಿಯ ಶಿಲಾಸ್ತರಗಳನ್ನು ಟಾರಸ್ ಪರ್ವತಪ್ರದೇಶದಲ್ಲಿ ಕಾಣಬಹುದು. ಈ ಶ್ರೇಣಿಯಲ್ಲಿ ಕೆಂಪುಚರಟಶಿಲೆ, ಸುಣ್ಣಶಿಲೆ ಹಾಗೂ ಜ್ವಾಲಾಮುಖಿಜ ಟುಫ್ ಮತ್ತು ಲಾವಾಸ್ತರಗಳಿವೆ. ಆದರೆ ಯಾವ ಶಿಲಾಸ್ತರದಲ್ಲಿಯೂ ಉತ್ತಮ ಜೀವ್ಯವಶೇಷಗಳಿಲ್ಲದಿರುವುದು ಅತ್ಯಂತ ಕುತೂಹಲಕಾರಿಯಾದ ಅಂಶವೆನಿಸಿದೆ. ಕ್ರಿಟೇಷಸ್ ಕಲ್ಪದ (ಸು. 135 ರಿಂದ 65 ದ.ಲ.ವ. ಪ್ರಾಚೀನದ ತನಕ) ಮೊದಲ ಹಂತದಲ್ಲೇ ಉತ್ತರ ಟರ್ಕಿಯಲ್ಲಿ ಸಾಮಾನ್ಯ ಪರಿಸ್ಥಿತಿ ಇದ್ದ ಕುರುಹುಗಳಿವೆ. ಈ ಕಲ್ಪದ ಮಧ್ಯಭಾಗದಲ್ಲಿ ಪರ್ವತಜನ್ಯ ಕ್ರಿಯೆ ನಡೆದು ಮುಂದೆ ಕಲ್ಪಾಂತ್ಯದ ವೇಳೆಗೆ ದೇಶದ ಬಹುಭಾಗ ಸಮುದ್ರಾಕ್ರಮಣಕ್ಕೆ ಒಳಗಾಗಿತ್ತು.

ಮೇಲ್ಮೈಲಕ್ಷಣ: ಯುರೋಪಿಯನ್ ಟರ್ಕಿ ಸ್ಥೂಲವಾಗಿ ತ್ರಿಕೋಣಾಕಾರದಲ್ಲಿದೆ. ಅದರ ಶೃಂಗಭಾಗ ಬಾಸ್ಫೊರಸ್ ಜಲಸಂಧಿಯ ಕಡೆ ಇದೆ. ಉತ್ತರ ಮತ್ತು ದಕ್ಷಿಣ ಅಂಚುಗಳಲ್ಲಿ ಕ್ರಮವಾಗಿ ಇಸ್ಟ್ರಾಂಜ ಡಾಗ್ಲರೀ ಮತ್ತು ತೆಕಿರ್ ದಾಗ್ ಪರ್ವತ ಶ್ರೇಣಿಗಳಿವೆ. ಮಧ್ಯಭಾಗ ಅಲೆಅಲೆಯಾಗಿ ಏರಿಳಿಯುವ ಬಯಲು. ಇದರ ಮೂಲಕ ಎರ್ಗನೀ ಮತ್ತು ಅದರ ಉಪನದಿಗಳು ಹರಿಯುತ್ತವೆ. ಎರ್ಗನೀ ನದಿ ಪಶ್ಚಿಮದಲ್ಲಿ ಮರಿಟ್ಸ್ ನದಿಯನ್ನು ಸೇರುತ್ತದೆ. ಇನ್ನೊಂದು ಉಪನದಿ ತುಂಜಾ. ಇವುಗಳ ಪೂರ್ವಕ್ಕಿರುವ ತಗ್ಗುಭೂಮಿಯೊಂದೇ ಪಶ್ಚಿಮದಿಂದ ಇಸ್ತಾನ್‌ಬುಲ್ ನಗರಕ್ಕೆ ಇರುವ ಸಂಪರ್ಕ ಮಾರ್ಗ. ಇಸ್ತಾನ್‌ಬುಲ್‌ನಿಂದ ಪಶ್ಚಿಮಕ್ಕೆ 40 ಕಿಮೀ ದೂರದಲ್ಲಿರುವ 183 ಮೀ ಎತ್ತರದ ಬೆಟ್ಟಸಾಲು ಪರ್ಯಾಯದ್ವೀಪಕ್ಕೆ ಅಡ್ಡಲಾಗಿ ಹಬ್ಬಿದೆ.

ಏಷ್ಯನ್ ಟರ್ಕಿ (ಅನಟೋಲಿಯ) ಸ್ಥೂಲವಾಗಿ ಚತುರ್ಭುಜಾಕಾರದಲ್ಲಿದೆ. ಇದರ ಮಧ್ಯದಲ್ಲಿರುವ ಪ್ರಸ್ಥಭೂಮಿಯ ಸರಾಸರಿ ಎತ್ತರ 900 ಮೀ. ಇದು ಈ ಪರ್ಯಾಯದ್ವೀಪದ ಬಹುಭಾಗವನ್ನಾಕ್ರಮಿಸಿಕೊಂಡಿದೆ. ಇದರ ತಗ್ಗಾದ ಜವುಗು ಪ್ರದೇಶಗಳಲ್ಲಿ ಗುಂಪಾದ ಸರೋವರಗಳಿವೆ. ಇಲ್ಲಿಯ ಅತ್ಯಂತ ದೊಡ್ಡ ಸರೋವರವೆಂದರೆ ತುಜ್‌ಸರೋವರ ಅಂಕಾರ ನಗರದ ದಕ್ಷಿಣಕ್ಕೆ 97 ಕಿಮೀ ದೂರದಲ್ಲಿ, ಪ್ರಸ್ಥಭೂಮಿಯ ಮಧ್ಯದಲ್ಲಿರುವ ಪ್ರದೇಶ ಅಲೆಅಲೆಯಾಗಿ ಏರಿಳಿಯುತ್ತದೆ. ಇದು ಸಮುದ್ರಮಟ್ಟದಿಂದ 1,070–1370 ಮೀ ಎತ್ತರವಾಗಿದೆ. ಸು. 1830 ಮೀ ಎತ್ತರದ ಶಿಖರಗಳುಂಟು. ಅಂಕಾರದ ದಕ್ಷಿಣ ಮತ್ತು ಪೂರ್ವದಲ್ಲಿ ನಂದಿತ ಜ್ವಾಲಾಮುಖಿಗಳಿವೆ. ಅಲ್ಲಿಯ ಎರ್ಜೀಯಾಸ್‌ದಾಗೀ ಶಿಖರದ ಎತ್ತರ 3916 ಮೀ. ಉತ್ತರ ಮತ್ತು ಈಶಾನ್ಯದಲ್ಲಿ ಸಿವಾಸ್ ನಗರದ ಕಡೆಗೆ ಪ್ರಸ್ಥಭೂಮಿ ಏರುತ್ತದೆ. ಆಮಸಿಯ ಕಡೆಗೆ ಮುಂದುವರಿದಂತೆ ಮತ್ತೆ ತಗ್ಗುತ್ತದೆ.

ಬಾಸ್ಫೊರಸ್ ಜಲಸಂಧಿಗೂ ಆರ್ಮೇನಿಯಾ ದೇಶದ ಗಡಿಗೂ ನಡುವಣ ಕಪ್ಪುಸಮುದ್ರ ಕರಾವಳಿಯ ಉದ್ದ ಸು. 1200 ಕಿಮೀ. ಇದರ ಪಶ್ಚಿಭಾಗದಲ್ಲಿರುವ ಆಡಪಾಜ್ಹರೀ ಬಯಲು ಪ್ರದೇಶದಲ್ಲಿ ಇಜ್‌ಮಿತ್ ಖಾರಿಗೂ ಕಪ್ಪುಸಮುದ್ರಕ್ಕೂ ನಡುವೆ ಸಕಾರ್ಯನೆಹ್ರಿನದಿ ಹರಿಯುತ್ತದೆ. ಎರೆಗ್ಲೀ ಈನೆಬೊಲೂ ಇವುಗಳ ನಡುವಣ ಪರ್ವತ 914 ಮೀ ವರೆಗೂ ಎತ್ತರವಾಗಿದೆ. ಈ ನೆಬೊಲೂಗೆ ಪೂರ್ವದಲ್ಲಿ ಕರಾವಳಿ ಪರ್ವತ ಶ್ರೇಣಿ ಕಡಲಿನಿಂದ ತುಂಬ ಕಡಿದಾಗಿ ಏರಿ, 48 ಕಿಮೀ ಆಚೆಗೆ ಒಳನಾಡಿಗೆ ಥಟ್ಟನೆ ಇಳಿಯುತ್ತದೆ. ಬಾಫ್ರಾ ಬಳಿ ಕಿಜ಼ಿಲ್ ಇರ್ಮಾಕ್ ನದಿ ಸಮುದ್ರ ಸೇರುತ್ತದೆ. ಇದೂ ಸಾಮ್ಸೂನ್ ಪ್ರಾಂತ್ಯವೂ ನದೀಮುಖಜೀಯ ಮೈದಾನಗಳು. ಆರ್ಡೊವಿನಿಂದ ಪೂರ್ವಕ್ಕೆ ಸೋವಿಯತ್ ಗಡಿಯ ವರೆಗಿನ ಕರಾವಳಿ ಪರ್ವತ ಶ್ರೇಣಿ 3,000–4,000 ಮೀ ಎತ್ತರವಾಗಿದೆ. ಕರಾವಳಿ ಶ್ರೇಣಿಗೂ ಅದಕ್ಕೆ ದಕ್ಷಿಣದಲ್ಲಿರುವ ಜ್ವಾಲಾಮುಖಿಯ ಶ್ರೇಣಿಗಳಿಗೂ ನಡುವೆ ಕೆಲ್ಕೀಟ್ ಮತ್ತು ಕೋರುಕ್ ನದಿಗಳು ಹರಿಯುತ್ತವೆ.

ಪೂ. ರೇ. $30^0$ಗೆ ಪಶ್ಚಿಮದಲ್ಲಿರುವ ಪ್ರದೇಶವೇ ಪಶ್ಚಿಮ ಅನಟೋಲಿಯ. ಏಜೀಯನ್ ಕರಾವಳಿಯಿಂದ ಮಧ್ಯ ಪ್ರಸ್ಥಭೂಮಿಯ ವರೆಗಿನ ಪ್ರದೇಶವಿದು. ಇಲ್ಲಿಯ ಸಮುದ್ರತೀರ ತುಂಬ ಅಂಕುಡೊಂಕಾಗಿದೆ. ಮಾರ್ಮರ ಸಮುದ್ರದ ದಕ್ಷಿಣಕ್ಕಿರುವ ಪ್ರದೇಶ ಹೆಚ್ಚು ತಗ್ಗು. ಪೂರ್ವದ ಪ್ರದೇಶ ಹೆಚ್ಚು ಎತ್ತರ. ಇಲ್ಲಿ ಬುರ್ಸಾ ಬಯಲಿನ ನಡುವೆ ಎದ್ದು ನಿಂತಿರುವ ಊಲ ದಾಗ್ ಪರ್ವತ ಶಿಖರದ ಎತ್ತರ 2543 ಮೀ. ಕರಾವಳಿಯ ಬರ್ಗಾಮ ಬಯಲು ಫಲವತ್ತಾದ್ದು. ಇಜ್‌ಮಿರ್‌ಗೆ ಪೂರ್ವದ ಪ್ರದೇಶದ ಆಚೀಚೆ ಎರಡು ಪರ್ವತ ಶ್ರೇಣಿಗಳಿವೆ. ಬಯುಕ್ ಮೆಂಡರಸ್ ನದಿಯ ದಕ್ಷಿಣಕ್ಕಿರುವ ಪ್ರದೇಶ ಪರ್ವತಮಯ.

ಮಧ್ಯ ಪ್ರಸ್ಥಭೂಮಿಯ ದಕ್ಷಿಣದ ಅಂಚಿನ ಹಿಂಬದಿಯಲ್ಲಿ ವಿಶಾಲ ವೃತ್ತದಂತೆ ಸಾಗುವ ಆಫ್ಯೋಂಕಾರಹಿಸಾರ್ – ಕಾನ್ಯಾ– ಕಾರಮಾನ್– ಕೈಸೆರೀ ರೈಲು ಮಾರ್ಗಕ್ಕೂ ಸಮುದ್ರಕ್ಕೂ ನಡುವೆ ಇರುವ ಪರ್ವತ ಶ್ರೇಣಿ ಟಾರಸ್. ಪಶ್ಚಿಮದಲ್ಲಿರುವ ಡಾಲಮಾನ್

ನದೀ ಕಣಿವೆಗೂ ಇದಕ್ಕೆ ಪೂರ್ವದಲ್ಲಿರುವ ಸಿಲೀಷ್ಕೀ ಪಟ್ಟಣಕ್ಕೂ ನಡುವೆ ಅಲ್ಲಲ್ಲಿ ಬೇರೆಬೇರೆಯಾದ ಪರ್ವತಗಳ ಸಮೂಹವಿದೆ. ಸೆಹಾನ್– ಜೇಹಾನ್ ನದಿಗಳ ಮುಖಜಭೂಮಿಯ ಬಳಿ ಎತ್ತರವಾಗಿ ಮೇಲೆದ್ದಿವೆ. ಈ ಶ್ರೇಣಿಯನ್ನು ವಿಭಜಿಸುವ ಕ್ಯಾಕಿಟ್ ಕಂದರದ ಮೂಲಕ ಮಧ್ಯಪ್ರಸ್ಥಭೂಮಿಯಿಂದ ಸಮುದ್ರಕ್ಕೆ ಮಾರ್ಗ ಏರ್ಪಟ್ಟಿದೆ. ಈ ಕಂದರದ ಈಶಾನ್ಯದಲ್ಲಿ ಟಾರಸ್ ಶ್ರೇಣಿ 3600 ಮೀ ಗೂ ಹೆಚ್ಚು ಎತ್ತರವಾಗಿದೆ. ಸೇಹಾನ್– ಜೇಹಾನ್ ಮುಖಜಭೂಮಿಗಿಂತ ಆಚೆ ಟಾರಸ್ ಪರ್ವತ ಎರಡು ಸೀಳಾಗಿ ಒಡೆಯುತ್ತದೆ. ಇದರಲ್ಲಿ ಒಂದು ಈಶಾನ್ಯಾಭಿಮುಖವಾಗಿ ಪೂರ್ವ ಅನಟೋಲಿಯದ ಮಧ್ಯಕ್ಕೆ ಹಬ್ಬಿದೆ. ಇದರ ಹೆಸರು ಪೂರ್ವ ಟಾರಸ್. ಇನ್ನೊಂದು ಶಾಖೆ ಆಗ್ನೇಯ ಟಾರಸ್ ಅಥವಾ ಆಂಟಿ –ಟಾರಸ್.

ಆಗ್ನೇಯ ಟರ್ಕಿಯಲ್ಲಿ ಟಾರಸ್ ಶ್ರೇಣಿ ಇವೆ. ಈ ಶ್ರೇಣಿಯಲ್ಲಿ ಟೈಗ್ರಿಸ್ ಮತ್ತು ಅದರ ಉಪನದಿಗಳು ಉಗಮಿಸುತ್ತವೆ. ಇದರ ಪಶ್ಚಿಮಕ್ಕೆ ಅಲೆಯಲೆಯಾಗಿ ಏರಿಳಿಯುವ ಪ್ರಸ್ಥಭೂಮಿಯಲ್ಲಿ ಯೂಫ್ರಟೀಸ್ (ಫಿರಾತ್ ನೇಹ್‌ರೀ) ಹರಿಯುತ್ತದೆ. ಈ ನದಿಗೂ ಟೈಗ್ರಿಸ್ ಕಣಿವೆಗೂ ನಡುವೆ ಇರುವ ಪ್ರದೇಶ ಸುಣ್ಣಕಲ್ಲಿನ ಬೋಳು ದಿಣ್ಣೆ. ಇದರ ಉನ್ನತ ಬಿಂದುವೆಂದರೆ ಕಾರಜ ದಾಗ್ ಶಿಖರ ತುದಿ 1850 ಮೀ. ಟೈಗ್ರಿಸ್‌ಗೆ ಪೂರ್ವದ ನೆಲ ಕ್ರಮವಾಗಿ ಮೇಲೇರಿ, 4,000 ಮೀ ಗಿಂತ ಎತ್ತರದ ಶಿಖರಗಳಿರುವ ಪರ್ವತರಾಶಿಯಾಗಿ ಪರಿಣಮಿಸುತ್ತವೆ. ಇದು ಇರಾನಿನಲ್ಲಿ ಜ್ಯಾಗ್ರೋಸ್ ಪರ್ವತವಾಗಿ ಮುಂದುವರಿಯುತ್ತದೆ ಆಗ್ನೇಯ ಕೊನೆಯಲ್ಲಿ ಹರಿಯುವ ಗ್ರೇಟ್ ಝಾಬ್ ನದಿ ಆಳವಾದ ಕಂದರದಲ್ಲಿ ಹರಿದು ಇರಾಕನ್ನು ಪ್ರವೇಶಿಸುತ್ತದೆ.

ಆಗ್ನೇಯ ಟರ್ಕಿಗೆ ಉತ್ತರದಲ್ಲಿರುವ ಪೂರ್ವ ಟರ್ಕಿ ಪ್ರದೇಶವೇ ಪೂರ್ವ ಅನಟೋಲಿಯ. ಇದು ಕೆಲ್ಕಿಟ್ ಮತ್ತು ಕೋರ್ ನದಿ ಕಣಿವೆಗಳವರೆಗೆ ಹಬ್ಬಿರುವ ಪ್ರದೇಶ. ಇದು ಜ್ವಾಲಾಮುಖೀಯ ಪ್ರದೇಶ. ಕೆಲವು ಅಗ್ನಿಪರ್ವತ ಶಿಖರಗಳು 3353 ಮೀ ಗಳಿಗೂ ಎತ್ತರವಾಗಿವೆ. ಅಲ್ಲಲ್ಲಿ ಜ್ವಾಲಾಮುಖೇತರ ಮೂಲದ ಶ್ರೇಣಿಗಳೂ ಉಂಟು. ಈ ಪ್ರದೇಶ ಟರ್ಕಿಯ ಚಾವಣಿಯಂತಿದೆ. ಇದರ ಸರಾಸರಿ ಎತ್ತರ 1829 ಮೀ. ವ್ಯಾನ್‌ಗಲೂಗೆ (ಸರೋವರ) ಉತ್ತರದಲ್ಲಿ ಅರರಾತ್ ಶಿಖರದ ಸನಿಹದಲ್ಲಿ ಮುರಾತ್ ನೇಹ್‌ರೀ ನದಿ ಉಗಮಿಸುತ್ತದೆ. ಈ ನದಿ 400 ಕಿಮೀ ಹರಿದು ಯುಫ್ರೇಟೀಸನ್ನು ಸೇರುತ್ತದೆ. ಅರರಾತ್ ಶಿಖರ ಹಿಮಾವೃತ. ಇದರ ಎತ್ತರ 5,165 ಮೀ. ಟರ್ಕಿಯ ಅತ್ಯುನ್ನತ ಶಿಖರ ಇದು. ವ್ಯಾನ್ ಸರೋವರ 1,720 ಮೀ ಎತ್ತರದಲ್ಲಿದೆ. ಇದು ಭೂ ಆವೃತ. ಇದರಲ್ಲಿ ಸೋಡದ ಅಂಶ ಅಧಿಕ.

ವಾಯುಗುಣ : ಟರ್ಕಿಯ ದಕ್ಷಿಣ ಕರಾವಳಿಯದು ಮೆಡಿಟರೇನಿಯನ್ ವಾಯುಗುಣ. ಏಜೀಯನ್ ಕರಾವಳಿಯಲ್ಲೂ ಉತ್ತರದಲ್ಲಿರುವ ಇಝ್‌ಮಿರ್ ವರೆಗಿನ ಪ್ರದೇಶದಲ್ಲೂ ಬಹಳಮಟ್ಟಿಗೆ ಇದೇ ವಾಯುಗುಣವಿದೆ. ಈ ಪ್ರದೇಶದ ಸರಾಸರಿ ಉಷ್ಣತೆ $17^{0}$– $20^{0}$ಸೆ.; ವಾರ್ಷಿಕ ಮಳೆ 70–110 ಸೆಂಮೀ. ಉತ್ತರ ಏಜೀಯನ್ –ಮಾರ್ಮರ ಪ್ರದೇಶ ಹೆಚ್ಚು ತಂಪು; ಹೆಚ್ಚು ಆರ್ದ್ರ. ಇಲ್ಲಿಯ ಸರಾಸರಿ ಉಷ್ಣತೆ $14^{0}$–$17^{0}$ಸೆ. ; ವಾರ್ಷಿಕ ಮಳೆ 55–70 ಸೆಂಮೀ. ಕಪ್ಪು ಸಮುದ್ರತೀರ ಪ್ರದೇಶದ ಉಷ್ಣತೆಯೂ ತೀವ್ರವಾಗಿಲ್ಲ. ($14^{0}$–$15^{0}$ಸೆ.). ಇಲ್ಲಿ ಮಳೆ ಹೆಚ್ಚು 70–250 ಸೆಂಮೀ. ಮಧ್ಯ ಅನಟೋಲಿಯನ್ ಪ್ರಸ್ಥಭೂಮಿಯಲ್ಲಿ ಬೇಸಗೆಯಲ್ಲಿ ಸೆಕೆ ಹೆಚ್ಚು ; ಶುಷ್ಕತೆಯೂ ಅಧಿಕ. ಚಳಿಗಾಲದಲ್ಲಿ ಹೆಚ್ಚು ಚಳಿ. ಉಷ್ಣತೆ $8^{0}$–$12^{0}$ಸೆ.; ಮಳೆ 30–75 ಸೆಂಮೀ. ಪೂರ್ವಟರ್ಕಿಯಲ್ಲಿ ಶೈತ್ಯ ಹೆಚ್ಚು ($4^{0}$–$9^{0}$ಸೆ.). ಕಣಿವೆಗಳು ಮಾತ್ರ ಬೆಚ್ಚಗಿವೆ. ಇಲ್ಲಿ ಮಳೆ $40^{0}$–$50^{0}$ಸೆಂಮೀ.

ಸಸ್ಯ ಮತ್ತು ಪ್ರಾಣಿವರ್ಗ: ಟರ್ಕಿಯ ಸಸ್ಯರಾಶಿ ವೈವಿಧ್ಯಮಯವಾದ್ದು. ಉಪೋಷ್ಣವಲಯದ ಸಸ್ಯಗಳಿಂದ ಸಮಶೀತೋಷ್ಣ ವಲಯದವುಗಳ ವರೆಗೆ, ಮರುಭೂಮಿ ಸಸ್ಯಗಳಿಂದ ಆಲ್ಪೈನ್ ಸಸ್ಯಗಳ ವರೆಗೆ ನಾನಾ ಬಗೆಯ ಮರ ಗಿಡಗಳು ಇಲ್ಲಿವೆ. ದಕ್ಷಿಣ, ವಾಯವ್ಯ ಮತ್ತು ಉತ್ತರ ಟರ್ಕಿಯ ಪರ್ವತಗಳಲ್ಲಿ ವಾಣಿಜ್ಯ ಪ್ರಾಮುಖ್ಯವುಳ್ಳ ಸೂಚಿಪರ್ಣ ವೃಕ್ಷಗಳ ಕಾಡುಗಳು ವ್ಯಾಪಕವಾಗಿಯೂ ಎಲೆಉದುರುವ ಮರಗಳ ಕಾಡುಗಳು ಸ್ವಲ್ಪಮಟ್ಟಿಗೂ ಇವೆ. ಅತಿಮಧುರ, ವ್ಯಾಲೊನಿಯ, ಓಕ್, ಕಾಡು ಆಲಿವ್ – ಇವು ಆಗ್ನೇಯದಲ್ಲಿ ಬೆಳೆಯುತ್ತವೆ. ಇಲ್ಲಿರುವ ಮುಖ್ಯ ವನ್ಯ ಮೃಗಗಳು ಜಿಂಕೆ, ಮಾರ್ಫಲಾನ್, ಮಾರ್ಟಿನ್, ಲಿಂಕ್ಸ್, ನೀರು ನಾಯಿ, ಕಾಡುಹಂದಿ, ಮೊಲ, ಟರ್ಕಿ ಚಿರತೆ, ಕಂದು ಕರಡಿ, ತೋಳ, ಕೆಂಪುನರಿ, ಗಜ್ಹಲ್, ಮಾರ್ಟಿನ್, ಕಾಡುಬೆಕ್ಕು, ಲಿಂಕ್ಸ್ ಮತ್ತು ಬ್ಯಾಡ್ಜರ್. ಹಕ್ಕಿಗಳು ಹಿಮಗೌಜಲ, ಸಿಪ್ಲೆ ಹಕ್ಕಿ, ಗುನಾ ಹದ್ದು, ಕಾಡುಕೋಳಿ, ಉಲ್ಲಂಗಿ, ಹುಂಡುಕೋಳಿ, ಬಾತುಕೋಳಿ, ಪಾರಿವಾಳ ಮುಂತಾದವು. ಮೂವತ್ತು ಬಗೆಯ ಹಾವುಗಳು ಇವೆ. ಜೇನನ್ನೂ ರೇಷ್ಮೆ ಹುಳುಗಳನ್ನೂ ಜನ ಸಾಕುತ್ತಾರೆ.

ಜನತೆ: ಟರ್ಕಿಯ ಆದಿಕಾಲದ ಆಕ್ರಮಣಕಾರರು ಬಹುಶಃ ಯುರೇಷ್ಯದ ಗುಡ್ಡಗಾಡುಗಳಿಂದ ಬಂದಿರಬೇಕು. ಪ್ರ.ಶ.ಪೂ. 1800 ರಲ್ಲಿ ಮೆಸಪೊಟೋಮಿಯ ಮತ್ತು ಅನಟೋಲಿಯದಲ್ಲಿ ಸ್ಥಾಪಿತವಾಗಿದ್ದ ಹಿಟೈಟ್ ಸಾಮ್ರಾಜ್ಯದ ಅವನತಿಯ ತರುವಾಯ ಫ್ರಿಜಿಯದ ಆಕ್ರಮಣಕಾರರು ಹಾಗೂ ಗ್ರೀಸಿನ ನಿರಾಶ್ರಿತರು ಬಂದು ನೆಲೆಸಿದರು. ತರುವಾಯ ನೆಲಸಿದವರು ಪರ್ಷಿಯನ್ನರು, ಮ್ಯಾಸಿಡೋನಿಯದವರು, ರೋಮನರು, ಅರಬರು ಹಾಗೂ ಸೆಲ್ಜುಕ್ ತುರ್ಕರು. ಇಲ್ಲಿಯ ಜನ ಸಾಮಾನ್ಯವಾಗಿ ಗಟ್ಟಿಮುಟ್ಟಾಗಿರುತ್ತಾರೆ. ಇವರದು ದುಂಡು ತಲೆ, ಕಂದು ಕಣ್ಣು, ನೀಳ ಮೂಗು.

ಇಲ್ಲಿಯ ಪ್ರಮುಖ ಭಾಷೆ ಆಟೋಮನ್ ಟರ್ಕಿ ಭಾಷಾಗುಂಪಿಗೆ ಸೇರಿದ ಟರ್ಕಿ. ಈ ಭಾಷೆಗೆ 1928 ರಲ್ಲಿ ಅರಬ್ಬಿ ಲಿಪಿಯ ಬದಲು ರೋಮನ್ ಲಿಪಿಯನ್ನು ಅಳವಡಿಸಿಕೊಳ್ಳಲಾಯಿತು.

ರಾಷ್ಟ್ರದ ಜನಸಂಖ್ಯೆಯ ಮುಕ್ಕಾಲುಭಾಗ ಜನ ಗ್ರಾಮವಾಸಿಗಳು. ಕೈಗಾರಿಕಾನಗರಗಳು ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿವೆ. ಗ್ರಾಮಗಳಲ್ಲಿ ವ್ಯವಸಾಯ, ಮೀನುಗಾರಿಕೆ, ಪಶುಪಾಲನೆ ಮುಖ್ಯ ಕಸಬುಗಳು. ಜನಸಾಂದ್ರತೆ ಹೆಚ್ಚಾಗಿರುವ ಪ್ರದೇಶಗಳು ಕಪ್ಪು ಸಮುದ್ರದ ಪೂರ್ವ ಭಾಗ, ಮಾರ್ಮರ್ ಸಮುದ್ರ ತೀರದ ಬಯಲು, ಏಜಿಯನ್ ಕರಾವಳಿ ನಗರಗಳು, ಆಡನ ಹಾಗೂ ಅಂಟಕ್ಯಾ ಪ್ರಸ್ಥಭೂಮಿ. ಇತರ ಪ್ರದೇಶಗಳೊಂದಿಗೆ ಹೋಲಿಸಿದಾಗ ಟರ್ಕಿಯ ಜನಸಾಂದ್ರತೆ ಹೆಚ್ಚೇನೂ ಅಲ್ಲ. 20ನೆಯ ಶತಮಾನದ ಉತ್ತರಾರ್ಧದ ಒಂದು ಮುಖ್ಯ ಪ್ರವೃತ್ತಿಯೆಂದರೆ ಗ್ರಾಮಪ್ರದೇಶದಿಂದ ಪಟ್ಟಣಗಳಿಗೆ ಜನರ ವಲಸೆ. ಇದು ಕೈಗಾರೀಕರಣದ ಪರಿಣಾಮ.

ಇಲ್ಲಿನ ಜನಸಂಖ್ಯೆಯಲ್ಲಿ ಶೇ.99 ಕ್ಕಿಂತ ಹೆಚ್ಚು ಮಂದಿ ಮುಸಲ್ಮಾನರಿದ್ದಾರೆ; ಸುನ್ನಿ ಪಂಗಡದವರು ಅಧಿಕ. 1923ರಲ್ಲಿ ಗಣರಾಜ್ಯ ಸ್ಥಾಪನೆಯಾದ ಮೇಲೆ ಮತವನ್ನು ರಾಜ್ಯದಿಂದ ಪ್ರತ್ಯೇಕಗೊಳಿಸಲಾಯಿತು. ರೋಮನ್ ಕೆಥೊಲಿಕರೂ ಪ್ರಾಟೆಸ್ಟಂಟರೂ ಯಹೂದ್ಯರೂ ಇಸ್ತಾನ್‌ಬುಲ್ ಹಾಗೂ ಇಝ್‌ಮಿರ್ ನಗರಗಳಲ್ಲಿ ಹೆಚ್ಚು.

ಟರ್ಕಿ ಗಣರಾಜ್ಯ. 1961ರ ಸಂವಿಧಾನದ ಪ್ರಕಾರ ರಾಜ್ಯಾಧಿಕಾರ ನಿಹಿತವಾಗಿರುವುದು ಮಹಾ ರಾಷ್ಟ್ರೀಯ ಸಭೆಯಲ್ಲಿ. ಇದು ದ್ವಿಸನದ ಸಭೆ. ಕೆಳಮನೆ ರಾಷ್ಟ್ರೀಯ ಸಭೆ. ಇದರ ಸದಸ್ಯರ ಸಂಖ್ಯೆ 450. ಮೇಲ್ಮನೆ ಸೆನೆಟ್. ಇದರಲ್ಲಿ 165 ಸದಸ್ಯರಿರುತ್ತಾರೆ. ಇವರಲ್ಲಿ 150 ಜನ ಚುನಾಯಿತ ಸದಸ್ಯರು. ಉಳಿದ 15 ಸದಸ್ಯರು ಗಣರಾಜ್ಯಾಧ್ಯಕ್ಷನಿಂದ ನಾಮಕರಣ ಹೊಂದಿದವರು.

ದೇಶವನ್ನು 67 ಪ್ರಾಂತ್ಯಗಳಾಗಿ (ಇಲೆರ್ ಅಥವಾ ವಿಲಾಯೆತ್) ವಿಂಗಡಿಸಲಾಗಿದೆ. ಪ್ರತಿ ಪ್ರಾಂತ್ಯವೂ ಜಿಲ್ಲೆಗಳಾಗಿಯೂ ಪ್ರತಿ ಜಿಲ್ಲೆಯೂ ಕಮ್ಯೂನುಗಳಾಗಿಯೂ ವಿಂಗಡವಾಗಿವೆ.

ಟರ್ಕಿಯ ಮುಖ್ಯ ಪಟ್ಟಣಗಳು ಇವು : ಅಂಕಾರ 28,90,025 (2002), ಇಸ್ತಾನ್ ಬುಲ್, ಇಝ್‌ಮಿರ್, ಆಡನ, ಬುರ್ಸಾ, ಎರ್ಜ಼ರೂಮ್, ಸಾಮ್ಸೂನ್, ಸೀವಾಸ್, ಬಾಲಿಕೆಸೀರ್, ಜಾಂಗಲ್‌ಡಾಕ್, ಮಾನಸಾ ಮತ್ತು ಕಾರ್ಸ್.

ಆರ್ಥಿಕತೆ : ಟರ್ಕಿಯ ಶೇ.80 ಜನರ ಕಸಬು ವ್ಯವಸಾಯ. ಆದರೆ ರಾಷ್ಟ್ರದಲ್ಲಿ ಕೃಷಿಗೆ ಲಭ್ಯವಾಗುವ ಭೂಮಿ ಶೇ.23 ಮಾತ್ರ. ಬದಲಾಗಿ ಬಹುಭಾಗ ಪರ್ವತಮಯ. ಸಮುದ್ರದಂಚುಗಳಿಗೂ ಜ್ವಾಲಾಮುಖೀಯ ಪ್ರದೇಶಕ್ಕೂ ಫಲವತ್ತಾದ ಭೂಮಿ ಸೀಮಿತವಾಗಿದೆ. ಈಶಾನ್ಯ ಹಾಗೂ ಪೂರ್ವ ಭಾಗಗಳಲ್ಲಿ ಚಳಿಗಾಲ ತುಂಬಾ ತೀವ್ರವಾಗಿದೆ.

ಟರ್ಕಿಯ ಮುಖ್ಯ ಬೆಳೆ ಗೋದಿ. ಇದು ಏಜಿಯನ್ ಕರಾವಳಿ ಹಾಗೂ ಯುರೋಪ್ ಭಾಗದ ಟರ್ಕಿಯಲ್ಲಿ ಹೆಚ್ಚು ಬೆಳೆಯುತ್ತದೆ. ರೈ, ಓಟ್ಸ್ ಮತ್ತು ಬತ್ತವನ್ನು ಕಪ್ಪುಸಮುದ್ರ ಹಾಗೂ ಮೆಡಿಟರೇನಿಯನ್ ತೀರಗಳಲ್ಲಿ ಬೆಳೆಯುತ್ತಾರೆ. ದ್ರಾಕ್ಷಿ ಹಾಗೂ ನಿಂಬೆ ಜಾತಿಯ ಹಣ್ಣುಗಳೂ ಬೆಳೆಯುತ್ತವೆ. ವಾಣಿಜ್ಯ ಬೆಳೆಗಳು ಹತ್ತಿ, ಎಳ್ಳು, ಅಗಸೆ, ಸೂರ್ಯಕಾಂತಿ, ಚಹ. ಚರ್ಮ ಹದ ಮಾಡಲು ವಲೋನಿಯ ಎಣ್ಣೆಯನ್ನು ತೆಗೆಯಲು ಓಕ್ ಜಾತಿಯ ಮರಗಳು ಟರ್ಕಿಯಲ್ಲಿ ಹೇರಳವಾಗಿವೆ. ಪ್ರಪಂಚದ $^{1}/_{2}$ ಭಾಗದಷ್ಟು ಅಫೀಮು ಟರ್ಕಿಯಲ್ಲಿ ಉತ್ಪಾದನೆಯಾಗುತ್ತದೆ.

ಮೀನುಗಾರಿಕೆ: ಇಝ್‌ಮಿರ್, ಬಾಸ್ಫೊರಸ್ ಹಾಗೂ ಕಪ್ಪುಸಮುದ್ರದ ಪೂರ್ವತೀರದಲ್ಲಿ ಪ್ರಮುಖ ಮೀನುಗಾರಿಕೆ ಕೇಂದ್ರಗಳಿವೆ. ಮೀನುಗಳ ಡಬ್ಬೀಕರಣ ಕಾರ್ಖಾನೆಗಳು ಸಕೇ, ಕರ್ಟಲ್ ಹಾಗೂ ಟ್ರ್ಯಾಬ್‌ಜಾನ್ ನಗರಗಳಲ್ಲಿವೆ.

ಖನಿಜಗಳು : ದಾರು ಕಲ್ಲಿದ್ದಲು (ಲಿಗ್ನೈಟ್) ಅಂಕಾರಕ್ಕೆ ಪಶ್ಚಿಮದಲ್ಲಿ 350ಕಿಮೀ ದೂರದಲ್ಲಿರುವ ಕೂಟಾಯ ನಗರದ ಬಳಿ ಸಿಗುತ್ತದೆ. ಟರ್ಕಿಯ ಪೂರ್ವ ಹಾಗೂ ಪಶ್ಚಿಮ ಭಾಗಗಳಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ. ಟರ್ಕಿಯ ಇತರ ಖನಿಜಗಳು ಕ್ರೋಮ್, ತಾಮ್ರ, ಸೀಸ, ತವರ ಮತ್ತು ಮ್ಯಾಂಗನೀಸ್, ರಮನ್‌ದಾಗಿ ಪರ್ವತಗಳ ಬಳಿ ತೈಲನಿಕ್ಷೇಪಗಳಿವೆ. ಬಾತ್‌ಮನ್ ತೈಲ ಶುದ್ಧೀಕರಣ ಕೇಂದ್ರ.

ಕೈಗಾರಿಕೆಗಳು : ಟರ್ಕಿಯಲ್ಲಿ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿವೆ. ಕಾರಬೂಕ್, ಮುಖ್ಯ ಕಬ್ಬಿಣ ಉತ್ಪಾದನ ಕೇಂದ್ರ. ಆಡನ, ಟಾರ್ಸಸ್, ಇಝ್‌ಮೀರ್, ಇಸ್ತಾನ್‌ಬುಲ್ ಕೈಸರೀಗಳಲ್ಲಿ ಹತ್ತಿ ಗಿರಣಿಗಳಿವೆ. ಉಣ್ಣೆ ಗಿರಣಿಗಳು ಇಸ್ತಾನ್‌ಬುಲ್, ಬರ್ಸ ಮತ್ತು ಇಝ್‌ಮೀರ್ ನಗರಗಳಲ್ಲಿವೆ. ಜಾಂಗಲ್‌ದಾರ್ ಹಾಗೂ ಕಾರಬೂಕ್ ನಗರಗಳಲ್ಲಿ ರಾಸಾಯನಿಕ ಮತ್ತು ರತ್ನಗಂಬಳಿ ಕೈಗಾರಿಕೆಗಳಿವೆ. ಸಿಗರೇಟ್, ಚುಟ್ಟ, ಗಾಜಿನ ವಸ್ತು, ಕಾಗದ, ಹಣ್ಣುಗಳ ಡಬ್ಬೀಕರಣ ಮೊದಲಾದ ಕೈಗಾರಿಕೆಗಳು ಟರ್ಕಿಯಲ್ಲಿ ಬೆಳೆದಿವೆ.

ವಾಣಿಜ್ಯ : ಹೊಗೆಸೊಪ್ಪು, ಹಣ್ಣು, ಕಚ್ಚಾಹತ್ತಿ, ಕ್ರೋಮ್, ತಾಮ್ರ, ಆಫೀಮು – ಇವು ಮುಖ್ಯ ನಿರ್ಯಾತಗಳು. ಯಂತ್ರೋಪಕರಣ, ಮೋಟಾರ್ ವಾಹನ, ಪೆಟ್ರೋಲ್, ರಾಸಾಯನಿಕ ಗೊಬ್ಬರ, ಹತ್ತಿ ಬಟ್ಟೆ – ಇವು ಅದರ ಮುಖ್ಯ ಆಯಾತಗಳು.

ಸಾರಿಗೆ–ಸಂಪರ್ಕ : ಟರ್ಕಿಯ ರೈಲ್ವೆಗಳನ್ನು 1924 ರಲ್ಲಿ ರಾಷ್ಟ್ರೀಕರಿಸಲಾಯಿತು. ಅಲ್ಲಿರುವ ರೈಲು ಮಾರ್ಗಗಳ ಉದ್ದ 8,500 ಕಿಮೀ. ಹೊಸ ರೈಲು ಮಾರ್ಗಗಳು ಎರ್ಝಲೀ, ಜೊಂಗಾಲ್‍ದಕ್ ನಗರಗಳಿಂದ ಅಂಕಾರ, ಕೈಸರೀ ಹಾಗೂ ಆಡನ ನಗರಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಜನಸಾಂದ್ರತೆ ಹೆಚ್ಚಾಗಿರುವ ಕಪ್ಪುಸಮುದ್ರ ತೀರದಲ್ಲಿ ಹಲವಾರು ರೈಲು ಮಾರ್ಗಗಳಿವೆ. ಅನಟೋಲಿಯನ್ ಪ್ರಸ್ಥಭೂಮಿಯ ಸುತ್ತ ಉಂಗುರದಂತೆ ಹಬ್ಬಿರುವ ರೈಲು ಮಾರ್ಗಗಳಿಂದ ಹೊರವಲಯಗಳಿಗೆ ಶಾಖೆಗಳಿವೆ.

ಸರ್ವಋತು ರಸ್ತೆಗಳ ಉದ್ದ 59,200 ಕಿಮೀ. ಅದರಲ್ಲಿ 20,800 ಕಿಮೀ, ಕಾಂಕ್ರೀಟ್. ಉಳಿದವು ಜಲ್ಲಿ ಅಥವಾ ಮ್ಯಕಡಮ್ ರಸ್ತೆಗಳು. ಮುಖ್ಯವಾದ ಹೆದ್ದಾರಿಗಳಿಗೆ ಮಧ್ಯ ಅನಟೋಲಿಯದ ಅಂಕಾರ, ಪಶ್ಚಿಮದ ಇಸ್ತಾನ್‍ಬುಲ್ ಮತ್ತು ಇಜ್ಮಿರ್ ಮತ್ತು ಪೂರ್ವದ ಎರ್ಜ್ಹರೂಮ್ ಹಾಗೂ ದಿಯಾರ್ ಬಕೀರ್‌ಗಳು ಕೇಂದ್ರಗಳು.

ಟರ್ಕಿಯ ಕರಾವಳಿಯ ಉದ್ದ 4,800 ಕಿಮೀ. ಹಡಗು ವ್ಯವಸ್ಥೆ ಅಷ್ಟೇನೂ ಬೆಳೆದಿಲ್ಲ. ವ್ಯಾಪಾರ ನೌಕೆಯ ನಿವ್ವಳ ತೂಕ 7,14,000 ಟನ್. ಇದರಲ್ಲಿ ಶೇ.80 ತೈಲ ಟ್ಯಾಂಕರುಗಳು ಅಥವಾ ಸರಕು ಸಾಗಣೆ ಹಡಗುಗಳು. ದೇಶದ ಆಯಾತದ ಶೇ.50 ಕ್ಕಿಂತ ಹೆಚ್ಚು ಭಾಗ ಮತ್ತು ನಿರ್ಯಾತದ ಶೇ.11 ರಷ್ಟು ಭಾಗ ಇಸ್ತಾನ್‍ಬುಲ್ ಮೂಲಕ ಸಾಗುತ್ತದೆ. ಇಜ್ಮಿರ್‌ಗೆ ಎರಡನೆಯ ಸ್ಥಾನ (ನಿರ್ಯಾತದ ಶೇ. 35). ಇತರ ಮುಖ್ಯ ರೇವುಗಳು ಮರ್ಸಿನ್, ಇಸ್ಕೆಂದರೂನ್, ಸಾಮ್ಸುನ್, ಟ್ರ್ಯಾಬ್‌ಜ್ಹಾನ್ ಮತ್ತು ಝಾಂಗಾಲ್‍ದಾಕ್. ಒಳನಾಡಿನ ಜಲಯಾನ ಹೆಚ್ಚಿಲ್ಲ. ವ್ಯಾನ್ ಸರೋವರದ ಮೇಲೆ ಮಾತ್ರ ನೌಕಾ ಸಂಚಾರ ಉಂಟು.

ಟರ್ಕಿಯಲ್ಲಿ ಪರ್ವತಗಳು ಹೆಚ್ಚಾಗಿರುವುದರಿಂದ ವಿಮಾನ ಸಂಚಾರಕ್ಕೆ ಪ್ರಾಶಸ್ತ್ಯವಿದೆ. ಟರ್ಕಿ ವಿಮಾನ ಸಂಸ್ಥೆ ಸರ್ಕಾರಿ ಒಡೆತನದಲ್ಲಿದೆ. ಅಂಕಾರದಿಂದ ಇಸ್ತಾನ್‍ಬುಲ್, ಇಜ್ಮೀರ್, ಆಡನ, ಎರ್ಜ್ಹುರೂಮ್, ವ್ಯಾನ್, ಸಾಮ್ಸುನ್, ಟರ್‌ಬ್ಯಾಬ್‌ಝಾನ್‌ಗಳಿಗೆ ವಿಮಾನಗಳು ಹಾರುತ್ತವೆ. ದೇಶೀಯ ವಿಮಾನ ಮಾರ್ಗಗಳಿಗೆ ಅಂಕಾರ ಪ್ರಧಾನ ಕೇಂದ್ರವಾದರೆ, ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಪ್ರಮುಖ ಕೇಂದ್ರ ಇಸ್ತಾನ್‍ಬುಲ್, ಇಜ್ಮಿರ್ ಮೂರನೆಯ ಮುಖ್ಯ ವಿಮಾನ ಕೇಂದ್ರ.

ಇಲ್ಲಿಯ ಪ್ರಮುಖ ಚಲಾವಣೆಯ ನಾಣ್ಯ ಟರ್ಕಿ ಲೀರಾ (T.L.) ಅಥವಾ ಪೌಂಡ್. ಇದನ್ನು 100 ಕುರುಸ್‌ಗಳಾಗಿ ವಿಂಗಡಿಸಲಾಗಿದೆ. ದೇಶದಲ್ಲಿ ಮೆಟ್ರಿಕ್ ತೂಕ ಮತ್ತು ಅಳತೆ ಪದ್ಧತಿ ಜಾರಿಯಲ್ಲಿದೆ. (ಎಸ್.ವಿ.)

**ಟರ್ಕ್ಸ್ ಮತ್ತು ಕೈಕಾಸ್ ದ್ವೀಪಗಳು:** ಬ್ರಿಟಿಷ್ ಅಧೀನದಲ್ಲಿರುವ, ಅರ್ಧ ಚಂದ್ರಾಕೃತಿಯಲ್ಲಿರುವ ದ್ವೀಪ ಸಮೂಹ. ಈ ದ್ವೀಪಗಳು ಎರಡು ಗುಂಪುಗಳಲ್ಲಿ ಹಂಚಿಕೆಯಾಗಿವೆ. ಉತ್ತರ ಅಟ್ಲಾಂಟಿಕ್ ಸಾಗರದ ಆಗ್ನೇಯ ಭಾಗದ ಬಹಮಾಸ್ ಮತ್ತು ಉತ್ತರದಲ್ಲಿರುವ ಹಿಸ್ಪಾನಿಯೋಲ ದ್ವೀಪಗಳು. ಮಿಯಾಮಿಯಿಂದ 914 ಕಿಮೀ zAgÀÀeÉF ¢ÃWÀÁG.C. 21$^0$45′ ಮತ್ತು ಪ.ರೇ. 71$^0$35′ ಮಧ್ಯ ವಿಸ್ತರಿಸಿದೆ. ರಾಜಧಾನಿ ಕಾಕ್‍ಬರ್ನ್ ಟೌನ್. ಜನಸಂಖ್ಯೆ 33,306 (2006). ಜನಸಾಂದ್ರತೆ: ಚ.ಕಿಮೀಗೆ 61. ಆಡಳಿತ ಭಾಷೆ ಇಂಗ್ಲಿಷ್. ಇಲ್ಲಿನ ಹಣ ಯು.ಎಸ್.ಡಾಲರ್.

ಟರ್ಕ್ಸ್ ಮತ್ತು ಕೈಕಾಸ್ ದ್ವೀಪಗಳು ಬಹಮಾಸ್ ದ್ವೀಪಗಳ ಒಂದು ಭಾಗ, ರಾಜಕೀಯವಾಗಿ ಪ್ರತ್ಯೇಕವಾಗಿವೆ. ಈ ದ್ವೀಪಗಳು ಕೈಕಾಸ್ ಜಲಸಂಧಿಯಿಂದ ಬಹಮಾಸ್, ಮಾಯಾಗುಣ ಮತ್ತು ಗ್ರೇಟ್ ಇನಾಗುವ ದ್ವೀಪಗಳ ಸಮೀಪದಲ್ಲಿದೆ.

ಈ ದ್ವೀಪ ಸಮೂಹದ 8 ಪ್ರಮುಖ ದೊಡ್ಡ ದ್ವೀಪಗಳು, 20 ಕ್ಕೂ ಹೆಚ್ಚು ಸಣ್ಣದ್ವೀಪಗಳು ಸೇರಿ 616.3 ಚ.ಕಿಮೀ ಭೂ ಪ್ರದೇಶವನ್ನು ಹೊಂದಿವೆ. ತಗ್ಗಾದ, ಸುಣ್ಣದಕಲ್ಲಿನ, ಜೌಗು ತುಂಬಿದ ಮ್ಯಾಂಗ್ರೂವ್ ಸಸ್ಯವರ್ಗ ಸು. 345 ಕಿಮೀ ತೀರ ಪ್ರದೇಶವನ್ನು ಒಳಗೊಂಡಿದೆ. ಈ ದ್ವೀಪಗಳ ವಾಯುಗುಣ ಅಧಿಕ ಉಷ್ಣತೆಯಿಂದ ಮತ್ತು ಸಾಪೇಕ್ಷ ಒಣಹವೆಯಿಂದ ಕೂಡಿರುತ್ತದೆ. ಚಂಡಮಾರುತಗಳು ಈ ಭಾಗದಲ್ಲಿ ಸಾಮಾನ್ಯ. ಈ ದ್ವೀಪಗಳಲ್ಲಿ ಸಿಹಿನೀರಿನ ಕೊರತೆ ಹೆಚ್ಚು, ಆದಕಾರಣ ಮಳೆನೀರನ್ನು ಸಂಗ್ರಹಿಸಿ ಕುಡಿಯಲು ಉಪಯೋಗಿಸುತ್ತಾರೆ. ಇಲ್ಲಿನ ಜಲಸಂಪತ್ತೆಂದರೆ ಸೀಗಡಿಮೀನು, ಕೊಂಚ್, ಚಿಪ್ಪು ಮೀನು. ಕೈಕಾಸ್‌ನ ಬೃಹತ್ ದ್ವೀಪಗಳು ಶೇ. 96 (589.5 ಚ.ಕಿಮೀ) ಭೂಭಾಗವನ್ನು, ಶೇ. 82 ಜನಸಂಖ್ಯೆಯನ್ನು ಹೊಂದಿವೆ. ಪ್ರಮುಖ ದ್ವೀಪಗಳೆಂದರೆ ಉತ್ತರ ಕೈಕಾಸ್, ಮಧ್ಯ ಕೈಕಾಸ್, ಪೂರ್ವ ಕೈಕಾಸ್, ದಕ್ಷಿಣ ಕೈಕಾಸ್ ಮತ್ತು ಪಶ್ಚಿಮ ಕೈಕಾಸ್ ಎಂದು ವಿಭಾಗಿಸಲಾಗಿದೆ. ಇವುಗಳಲ್ಲಿ ಪಶ್ಚಿಮ ಮತ್ತು ದಕ್ಷಿಣ ಕೈಕಾಸ್ ದ್ವೀಪಗಳು ಕಿರಿದಾಗಿವೆ. ಟರ್ಕ್ಸ್ ದ್ವೀಪಗಳು ಮತ್ತು ಜಲಸಂಧಿಯ ಉತ್ತರ ಭಾಗದ ದ್ವೀಪ ಗ್ರ್ಯಾಂಡ್ ಟರ್ಕ್ಸ್. ಈ ದ್ವೀಪಗಳ ರಾಜಧಾನಿ ಅಧಿಕೃತವಾಗಿ ಹೆಸರಿಸಿಲ್ಲ (ಆಡಳಿತ ಕೇಂದ್ರ ಇಲ್ಲದ ಕಾರಣ). ಆದರೆ ಕಾಕ್‍ಬರ್ನ್ ಟೌನ್ ರಾಜಧಾನಿ ಎಂದು ಕರೆಯಲಾಗುತ್ತದೆ. ಇದು ಇರುವುದು ಕೈಕಾಸ್ ದ್ವೀಪ ಸಮೂಹದ ನಡುಗಡ್ಡೆಯಲ್ಲಿ. ಇದು ಸು. 3,700 ಚ.ಕಿಮೀ ಕ್ಷೇತ್ರವನ್ನು ಹೊಂದಿದೆ.

ಇಲ್ಲಿನ 30 ದ್ವೀಪಗಳಲ್ಲಿ ಕೇವಲ 8 ದ್ವೀಪಗಳು ಮಾತ್ರ ವಾಸಕ್ಕೆ ಯೋಗ್ಯವಾಗಿವೆ. ಒಟ್ಟು ಜನಸಂಖ್ಯೆಯಲ್ಲಿ ಕಪ್ಪು ವರ್ಣೀಯರು ಮತ್ತು ಪ್ರಾಟೆಸ್ಟಂಟರು ಹೆಚ್ಚಾಗಿದ್ದಾರೆ. 2/5 ರಷ್ಟು ಬ್ಯಾಪ್ಟಿಸ್ಟರು, 1/5 ಮೆತೋಡಿಸ್ಟ್ 1/5 ಆಂಗ್ಲಿಕನ್ನರು, ಶೇ. 2 ರಷ್ಟು ಸೆವೆಂತ್ ಡೇ ಅಡ್ವಂಟಿಸ್ಟರು.

ಆರ್ಥಿಕತೆ: ಪ್ರವಾಸೋದ್ಯಮ, ಮೀನುಗಾರಿಕೆ, ತೀರಪ್ರದೇಶದಲ್ಲಿ ಹಣಕಾಸಿನ ಸೇವೆಗಳು. ಆಹಾರ ಪದಾರ್ಥಗಳ ಆಮದು ಇತ್ಯಾದಿ. ಪ್ರವಾಸಿಗರು ಅಮೆರಿಕ ಮತ್ತು ಕೆನಡದಿಂದ ಇಲ್ಲಿಗೆ ಬರುತ್ತಾರೆ. *

**ಟರ್ಷಿಯರಿ ಯುಗ:** ಸು. 65 ದ.ಲ.ವರ್ಷಗಳಿಂದ ಒಂದು ದಶಲಕ್ಷ ವರ್ಷದ ಪ್ರಾಚೀನ ಕಾಲ. ಇದಕ್ಕೆ ಭೂಮಿಯ ತೃತೀಯ ಯುಗವೆಂದೂ ಹೇಳಲಾಗಿದೆ. ಈ ಯುಗದಲ್ಲೇ ಮಾನವನ ವಿಕಾಸವಾಗಿರುವುದರಿಂದ ಜೀವವಿಕಾಸದ ದೃಷ್ಟಿಯಿಂದ ಇದೊಂದು ಮಹತ್ತ್ವದ ಯುಗವೆಂದು ಪರಿಗಣಿಸಲಾಗಿದೆ.

ಟರ್ಷಿಯರಿ ಯುಗದ ಪ್ರಾರಂಭದಲ್ಲಿ ಭೂಖಂಡಗಳು ಬಲುಮಟ್ಟಿಗೆ ತಮ್ಮ ಈಗಿನ ಆಕಾರವನ್ನು ತಳೆದಿದ್ದುವು. ಅಲ್ಲಲ್ಲಿ ಸಣ್ಣಪುಟ್ಟ ಭೂ ಸಮುದ್ರಗಳಿದ್ದುವು. ಟೆತಿಸ್ ಸಾಗರವೇ ಈ ಯುಗದ ಪ್ರಮುಖ ಭೂ ಒಳಮಡಿಕೆ (ಜಿಯೊಸಿಂಕ್ಲೈನ್). ಇಂದಿನ ಅನೇಕ ಪರ್ವತಗಳು, ಮೈದಾನಗಳು, ಸಮುದ್ರಗಳು, ಸರೋವರಗಳು ಈ ವೇಳೆಗಾಗಲೆ ಮೈದಳೆದು ನೆಲ ಜಲದ ಹಂಚಿಕೆ ಪ್ರಸಕ್ತ ಸ್ವರೂಪದತ್ತ ಸಾಗಿತ್ತು. ಪೆಸಿಫಿಕ್ ಸಾಗರದ ತೀರಪ್ರದೇಶಗಳು ಹಾಗೂ ಟೆತಿಸ್ ಸಮುದ್ರ ಭಾಗಗಳಲ್ಲಿ ಅತ್ಯಂತ ತೀವ್ರಬದಲಾವಣೆಗಳು ತಲೆದೋರಿದುವು. ಭೂಮಿಯ ಇತರೆಡೆಗಳಲ್ಲೂ ಇದೇ ರೀತಿಯ ಲಕ್ಷಣಗಳು ಉಂಟಾದುವು.

ಕ್ರಿಟೇಷಸ್ ಯುಗದ (135 ದ.ಲ.ವ. ಪ್ರಾ–65 ದ.ಲ.ವ. ಪ್ರಾ) ಅಂತ್ಯದಿಂದೀಚೆಗೆ ಪ್ರಮುಖ ಜಲಭಾಗಗಳಲ್ಲಿ ಹೆಚ್ಚಿನ ಬದಲಾವಣೆಗಳಾಗಿಲ್ಲ. ಆದರೆ ಭೂಖಂಡಗಳ ಅಂಚಿನಲ್ಲಿದ್ದ ಹಲವಾರು ಪ್ರದೇಶಗಳು ಮೇಲಕ್ಕೆ ಎತ್ತಲ್ಪಟ್ಟವು. ಇಲ್ಲವೆ ಕೆಳಕ್ಕೆ ದೂಡಲ್ಪಟ್ಟವು. ಜ್ವಾಲಾಮುಖಿ ದ್ವೀಪಗಳೂ ನಿರ್ಮಿತವಾದುವು; ಹಲಕೆಲವು ನೆಲಭಾಗಗಳು ಸವೆತಕ್ಕೂ ಒಳಗಾದುವು. ಹಲವೆಡೆ ದೊಡ್ಡ ದೊಡ್ಡ ಭೂಖಂಡಗಳನ್ನು ಪರಸ್ಪರ ಬಂಧಿಸುವ ನೆಲಸೇತುವೆಗಳ ನಿರ್ಮಾಣ ಕೂಡ ಆಯಿತು. ಪೂರ್ವ ಮತ್ತು ಉತ್ತರ ಆಸ್ಟ್ರೇಲಿಯಗಳ ಪಕ್ಕದ ಪೆಸಿಫಿಕ್ ಸಾಗರಪ್ರದೇಶದಲ್ಲಿ ಇಡೀ ಟರ್ಷಿಯರಿ ಯುಗದುದ್ದಕ್ಕೂ ಬೃಹತ್ ಮೇಲ್ಮಡಿಕೆಗಳು, ತಗ್ಗುಗಳು, ಜ್ವಾಲಾಮುಖಿ ಸ್ತೋಮಗಳು ಇತ್ಯಾದಿ–ಗೋಚರವಾಗುತ್ತಲೇ ಇದ್ದುವು. ಇದೇ ರೀತಿ ವೆಸ್ಟ್ ಇಂಡೀಸ್–ಕೆರೆಬಿಯನ್ ಸಮುದ್ರ–ಈ ಭೂಭಾಗದಲ್ಲೂ ನಿರಂತರ ಬದಲಾವಣೆಗಳಾಗುತ್ತಲೇ ಇದ್ದವು.

ಉತ್ತರ ಮತ್ತು ದಕ್ಷಿಣ ಅಮೆರಿಕಗಳು ಈಗಿನಂತೆ ಒಂದುಗೂಡಿರಲಿಲ್ಲ. ಆದರೂ ಪ್ರಸಕ್ತ ಆಕಾರವನ್ನೇ ಬಲುಮಟ್ಟಿಗೆ ತಳೆದಿದ್ದುವು. ಬೃಹತ್ ಪರ್ವತ ಸ್ತೋಮಗಳಾದ ಅಪಲೇಷಿಯನ್, ರಾಕಿ ಮತ್ತು ಆಂಡಿಸ್ ಈ ವೇಳೆಗಾಗಲೆ ಮೈದೋರಿದ್ದುವು; ಮಿಸಿಸಿಪಿ ತೀರದುದ್ದಕ್ಕೂ ಸು. 960 ಕಿಮೀ ತನಕ ನೆಲಭಾಗವನ್ನು ನೀರು ಆವರಿಸಿತ್ತು. ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಕೆನಡಗಳ ಪೆಸಿಫಿಕ್ ಕರಾವಳಿ ಉದ್ದಕ್ಕೂ ಜಲಜಶಿಲಾಸ್ತರಗಳು ಮೇಲಕ್ಕೆ ಎತ್ತಲ್ಪಟ್ಟು ಇಂದಿನ ಕೋಸ್ಟ್ ರೇಂಜ್ ಪರ್ವತಪಂಕ್ತಿಗಳ ಉದಯವಾಯಿತು. ಇದೇ ವೇಳೆ ವಿಸ್ತಾರ ಪ್ರದೇಶದಲ್ಲಿ ಲಾವಾಸ್ತರಗಳು ಹೊರಹೊಮ್ಮಿ ಕ್ಯಾಸ್ಕೇಡ್ ಶ್ರೇಣಿಯೂ ಮೈದಳೆಯಿತು. ಆದರೆ ದಕ್ಷಿಣ ಅಮೆರಿಕದಲ್ಲಿ ಅರ್ಜಂಟೀನದ ದಕ್ಷಿಣ ಬಯಲು ಪ್ರದೇಶಗಳು ಹಲವಾರು ಬಾರಿ ನೀರಿನಲ್ಲಿ ಮುಳುಗಿದ ದಾಖಲೆಗಳಿದ್ದು ಆಂಡೀಸ್ ಪರ್ವತಶ್ರೇಣಿ ಸತತವಾಗಿ ಮೇಲಕ್ಕೆ ಒಯ್ಯಲ್ಪಟ್ಟ ದಾಖಲೆಗಳೂ ಇವೆ; ಹಾಗೂ ಸತತವಾಗಿ ಹೊರ ಚಿಮ್ಮುತ್ತಿದ್ದ ಜ್ವಾಲಾಮುಖಜ ವಸ್ತುಗಳ ಶೇಖರಣೆಯಿಂದ ಇವು ಇನ್ನೂ ಹೆಚ್ಚಿನ ಎತ್ತರವನ್ನು ಮುಟ್ಟಿದುವು. ಆದರೆ ಈ ಭೂ ಚಟುವಟಿಕೆಗಳು ಅಷ್ಟು ತೀವ್ರಗತಿಯಲ್ಲಿರಲಿಲ್ಲ. ಇದಕ್ಕೆ ವಿರುದ್ಧವಾಗಿ ಯುರೋಪ್ ಮತ್ತು ದಕ್ಷಿಣ ಏಷ್ಯಗಳಲ್ಲಿ ತೀವ್ರಗತಿಯ ಭೂ ವ್ಯತ್ಯಾಸಗಳು ಕಾಣಿಸಿಕೊಂಡವು. ಅದರಲ್ಲೂ ಟರ್ಷಿಯರಿ ಯುಗದ ಮಧ್ಯಭಾಗದ ವೇಳೆಗೆ ಬಹುವಿಸ್ತಾರವಾದ ಭೂಪ್ರದೇಶದಲ್ಲಿ ಅತ್ಯಂತ ತೀವ್ರಗತಿಯ ಭೂಚಟುವಟಿಕೆಗಳು ತಮ್ಮ ಮುದ್ರೆಯನ್ನು ಒತ್ತಿರುವುದು ಗಮನಾರ್ಹ. ಯುರೇಷಿಯ ಭೂಭಾಗ ಕ್ರಮೇಣ ಮೇಲಕ್ಕೆ ಒಯ್ಯಲ್ಪಟ್ಟು ಟೆತಿಸ್ ಸಾಗರ ಕಿರಿದಾಯಿತು. ಪೂರ್ವ ಸೈಬೀರಿಯ ಹಾಗೂ ಉತ್ತರ ಮೇರುವಿನತ್ತ ಕಿರಿದಾದ ಸಮುದ್ರಚಾಚನ್ನು ಕಾಣಬಹುದು. ಮತ್ತೆ ಇಯೊಸೀನ್ ಉಪಯುಗದ ವೇಳೆಗೆ ಜಲಭಾಗಗಳ ಅಗಲ ಅಧಿಕವಾಗಿ ಟೆತಿಸ್ ಮಹಾಸಾಗರವೂ ಬಹು ವಿಸ್ತಾರಗೊಂಡಿತು. ಆಲಿಗೊಸೀನ್ ಹಂತದಲ್ಲಿ ವಿಸ್ತಾರ ನೆಲಭಾಗಗಳು ಪ್ರವಾಹಕ್ಕೆ ಒಳಗಾದ ದಾಖಲೆಗಳನ್ನು ದಕ್ಷಿಣ ಯುರೋಪ್ ಮತ್ತು ಆಗ್ನೇಯ ಏಷ್ಯದ ಹಲವಾರು ಕಡೆ

ಗುರುತಿಸಬಹುದು. ಮಯೊಸೀನ್ ಉಪಯುಗವೇ ಆಲ್ಪ್ಸ್–ಹಿಮಾಲಯ ಪರ್ವತಗಳ ಜನನ ಕಾಲ. ಇದನ್ನು ಭೂ ಇತಿಹಾಸದಲ್ಲಿ ಆಲ್ಪೈನ್ ಪರ್ವತಜನನ ಕಾಲವೆನ್ನುವರು. ಟೆತಿಸ್ ಮಹಾಸಾಗರದಲ್ಲಿ ನಿಕ್ಷೇಪಗೊಂಡಿದ್ದ ಬೃಹತ್ ಜಲಜಶಿಲಾಸ್ತರಗಳು ಭೂ ಚಟುವಟಿಕೆಗಳಿಂದಾಗಿ ಮಡಿಕೆಬಿದ್ದು ಮೇಲಕ್ಕೆ ಎತ್ತಲ್ಪಟ್ಟು ಮೇರುಪರ್ವತಗಳಾದವು. ಬಹುಶಃ ಪ್ಲಿಯೋಸೀನ್ ಉಪಯುಗದ ವೇಳೆಗೆ ಇಡೀ ಟೆತಿಸ್ ಸಾಗರ–ಈಗಿನ ಮೆಡಿಟರೇನಿಯನ್ ಸಮುದ್ರ ಪ್ರದೇಶವನ್ನು ಹೊರತುಪಡಿಸಿ–ನೆಲಭಾಗವಾಗಿ, ಪರ್ವತಶ್ರೇಣಿಗಳಾಗಿ ಮಾರ್ಪಟ್ಟಿತು. ಟರ್ಷಿಯರಿ ಯುಗದ ಉದ್ದಕ್ಕೂ ಆಲ್ಪ್ಸ್–ಹಿಮಾಲಯ ಪರ್ವತಪಂಕ್ತಿ ನಿರಂತರವಾಗಿ ಮೇಲಕ್ಕೆ ಏರುತ್ತಲೇ ಇದೆ. ಈ ಪರ್ವತಸ್ತೋಮಗಳ ಉದಯ ಈ ಕಾಲದಲ್ಲಿ ತಲೆದೋರಿದ ಅತ್ಯಂತ ಮಹತ್ತ್ವಪೂರ್ಣ ಘಟನೆಯೆನಿಸಿದ್ದು ಮುಂದೆ ಇಡೀ ಭೂಗೋಳದ ಮೇಲೆ ಕಾಣಿಸಿಕೊಂಡ ಜೀವರಾಶಿಗಳ ಇತಿಹಾಸದಲ್ಲಿ ತನ್ನ ಮಹತ್ತರ ಪ್ರಭಾವವನ್ನು ಬೀರಿದೆ. ಹೀಗೆ ಉದಯಿಸಿದ ನವೀನ ಪರ್ವತಗಳ ತಪ್ಪಲುಗಳಲ್ಲಿ ಆದಿಮಾನವ ನೆಲೆಗೊಂಡದ್ದು ಮತ್ತೊಂದು ಮಹತ್ತರ ಘಟನೆ. ಭಾರತ ಪರ್ಯಾಯ ದ್ವೀಪದಲ್ಲಿ ಇಯೊಸೀನ್ ಶಿಲೆಗಳು ಹಲವಾರು ಕಡೆ ಕಂಡುಬಂದಿದ್ದರೂ ಸಿಂಧ್ ಪ್ರಾಂತದಲ್ಲಿ (ಈಗಿನ ಪಾಕಿಸ್ತಾನ) ಅವು ಅತ್ಯುತ್ತಮವಾದರೀತಿಯಲ್ಲಿ ಪ್ರಕ್ಷೇಪಗೊಂಡಿವೆ. ಈ ಶಿಲಾಶ್ರೇಣಿಯನ್ನು ರಾಣಿಕೋಟ್, ಲಾಕಿ ಮತ್ತು ಕಿರ್ಥಾರ್ ಎಂದು ಮೂರು ಹಂತಗಳಾಗಿ ವಿಭಜಿಸಿದ್ದಾರೆ. ಇದೇ ಶಿಲೆಗಳನ್ನೇ ಅಸ್ಸಾಮ್, ಮಯನ್ಮಾರ್, ಟಿಬೆಟ್, ರಾಜಸ್ಥಾನ್ ಮತ್ತು ಗುಜರಾತ್‌ಗಳಲ್ಲಿ ವಿವಿಧ ಹೆಸರುಗಳಿಂದ ಗುರುತಿಸಲಾಗಿದೆ.

ಅಲಿಗೋಸೀನ್ ಉಪಯುಗದಲ್ಲಿ (40–25 ದ. ಲ. ವರ್ಷಗಳಲ್ಲಿ) ಹಿಮಾಲಯ ಪರ್ವತಗಳ ಉದ್ಭವದ ಮೊದಲ ಮತ್ತು ಎರಡನೆಯ ಹಂತಗಳನ್ನು ಭೂವಿಜ್ಞಾನಿಗಳು ಗುರುತಿಸಿದ್ದಾರೆ. ಟೆತಿಸ್ ಮಹಾಸಾಗರ ಬಲುಮಟ್ಟಿಗೆ ಪರ್ವತಪಂಕ್ತಿಗಳಾಗಿ ಈಗಿನ ಬಲೂಚಿಸ್ತಾನ ಮತ್ತು ಸಿಂಧ್ ಪ್ರಾಂತಗಳಿಗಷ್ಟೇ ಸೀಮಿತವಾಗಿತ್ತು. ಪೂರ್ವದ ಕಡೆ ಅಸ್ಸಾಮ್ ಮತ್ತು ಮಯನ್ಮಾರ್‌ಗಳ ದಕ್ಷಿಣದ ಕೆಲವು ಪ್ರದೇಶಗಳನ್ನು ಮಾತ್ರ ಟೆತಿಸ್ ಚಾಚು ಆವರಿಸಿತ್ತು. ಹಲವಾರು ಕಡೆ (ದಕ್ಷಿಣ ಭಾರತ ಇತ್ಯಾದಿ) ಸಮುದ್ರಾಕ್ರಮಣವೂ ನಡೆಯಿತು. ಮಯೊಸೀನ್ ಶಿಲೆಗಳು ಭಾರತದ ಹಲವಾರು ಕಡೆ ದೊರೆತಿವೆ. ಸಿಂಧ್ ಪ್ರಾಂತ್ಯದ ನಾಮ್ ಮತ್ತು ಗಾಜ್ ಶಿಲಾಸ್ತರಗಳು, ಕಾಶ್ಮೀರದ ಮರ್ರಿ ಶ್ರೇಣಿ, ಸಿಮ್ಲಾದ ಡಾಗ್‌ಷಾಯ್ ಮತ್ತು ಕಸೌಲಿ ಹಾಗೂ ಅಸ್ಸಾಮಿನ ಬರೈಲ್ ಶಿಲಾಸ್ತರಗಳನ್ನು ಉಲ್ಲೇಖಿಸಬಹುದು. ಕೇರಳ ತೀರದ ವರ್ಕಲಾ ಮತ್ತು ತಮಿಳುನಾಡಿನ ಕಡಲೂರು ಶಿಲಾನಿಕ್ಷೇಪಗಳೂ ಈ ಕಾಲದವೇ. ಹಿಮಾಲಯವೂ ಮತ್ತ ಮೇಲೇರಿತು. ಪರ್ವತಶ್ರೇಣಿಗಳ ದಕ್ಷಿಣ ಅಂಚಿನುದ್ದಕ್ಕೂ ದೊಡ್ಡ ಕೊರಕಲೊಂದು ತಲೆದೋರಿ ಹಿಮಾಲಯದ ನದಿಗಳು ಹೊತ್ತುತಂದ ಮೆಕ್ಕಲು ಹಾಗೂ ಶಿಲಾಛಿದ್ರಗಳು ಈ ತಗ್ಗಿನಲ್ಲಿ ನಿಕ್ಷೇಪಗೊಂಡವು. ಸಿಂಧೂ ನದಿಯಿಂದ ಮೊದಲಾಗಿ ಬ್ರಹ್ಮಪುತ್ರ ನದಿಯ ತನಕ ವ್ಯಾಪಿಸಿರುವ ಈ ಶಿಲಾನಿಕ್ಷೇಪ ಹರಿದ್ವಾರದ ಬಳಿ ಇರುವ ಶಿವಾಲಿಕ್ ಬೆಟ್ಟಗಳಲ್ಲಿ ಅತ್ಯಂತ ಉತ್ತಮವಾದ ರೀತಿಯಲ್ಲಿ ನಿಕ್ಷೇಪಗೊಂಡಿರುವ ಕಾರಣ ಇವನ್ನು ಶಿವಾಲಿಕ್ ನಿಕ್ಷೇಪಗಳೆಂದೇ ಹೆಸರಿಸಿದ್ದಾರೆ. ಇವುಗಳಲ್ಲಿ ಹುದುಗಿರುವ ಅಸಂಖ್ಯಾತ ಪಳೆಯುಳಿಕೆಗಳು ಅದರಲ್ಲೂ ಸಸ್ತನಿಗಳು ಬಹುಮುಖ್ಯವಾದವು.

ಟರ್ಷಿಯರಿ ಜೀವರಾಶಿಗಳು: ಈ ಯುಗದ ಜೀವರಾಶಿಗಳ ವೈಶಿಷ್ಟ್ಯಗಳಿಗೆ ಕಾರಣ ಅಂದಿನ ಪರಿಸರ. ಎತ್ತರ ಹಾಗೂ ಕಡಿದಾದ ಭೂಭಾಗಗಳು ವಾಯುಗುಣದ ವೈಪರೀತ್ಯ. ಹೀಗಾಗಿ ಜೀವರಾಶಿಗಳು ಈ ಸನ್ನಿವೇಶಗಳಿಗೆ ಹೊಂದಿಕೊಂಡು ಜೀವಿಸುವ ಸಾಮರ್ಥ್ಯವನ್ನು ಪಡೆಯಬೇಕಾಯಿತು. ಎಲ್ಲ ಪ್ರಮುಖ ಸಸ್ಯವರ್ಗಗಳ ಅವಶೇಷಗಳೂ ಈ ಯುಗದ ಶಿಲೆಗಳಲ್ಲಿವೆ. ಬಲುಮೃದುಸಸ್ಯಗಳಾದ ಪಾಚಿ, ಬೂಷ್ಟು, ಮೋಲ್ಡ್ ಮತ್ತು ಬ್ಯಾಕ್ಟೀರಿಯಗಳ ಅವಶೇಷಗಳನ್ನು ಸಹ ಇಲ್ಲಿಯ ಶಿಲೆಗಳಲ್ಲಿ ಕಾಣಬಹುದು. ಗತಕಾಲದ ಪ್ರಮುಖ ಸಸ್ಯವರ್ಗಗಳಾದ ಕ್ಲಬ್ ಮೊಸಸ್, ಕುದುರೆ ಬಾಲಗಳು, ಜರೀಗಿಡಗಳು, ಗಿಂಗ್ಕೋಗಳು ಮತ್ತು ಸೈಕ್ಯಾಡುಗಳ ಹಲವಾರು ಅವಶೇಷಗಳಿವೆ. ಇವೆಲ್ಲಕ್ಕೂ ಮಿಗಿಲಾಗಿ ಶಂಕುಧಾರಿಗಳು (ಕಾನಿಫರ್ಸ್) ಮತ್ತು ಹೂಬಿಡುವ ಸಸ್ಯವರ್ಗದವು ಹೇರಳವಾಗಿದ್ದುವು. ಇಂದಿನ ಹೂಬಿಡುವ ಸಸ್ಯವರ್ಗದ ಪ್ರಭೇದಗಳೆಲ್ಲವೂ ಮಯೊಸೀನ್ ಕಾಲದಲ್ಲಿ (25–11 ದ. ಲ. ವರ್ಷಗಳು) ಪ್ರವರ್ಧಮಾನಕ್ಕೆ ಬಂದಿದ್ದುವು. ಇವುಗಳ ಕಾಂಡ, ರೆಂಬೆಗಳು, ಎಲೆಗಳು, ಹೂಗಳು ಮತ್ತು ಪರಾಗ, ಬೀಜಾಣುಗಳ ಅಸಂಖ್ಯಾತ ಅವಶೇಷಗಳಿವೆ. ಸೂಕ್ಷ್ಮಸನ್ನಿವೇಶವಿದ್ದ ಪ್ರದೇಶಗಳಲ್ಲಿ ಈ ಸಸ್ಯರಾಶಿ ಕಲ್ಲಿದ್ದಲಿನ ನಿಕ್ಷೇಪಗಳಾಗಿ ಪರಿವರ್ತಿತವಾಗಿದೆ. ಹಲವಾರು ಸಸ್ಯವರ್ಗಗಳು ವಾಯುಗುಣಕ್ಕೆ ಅನುಗುಣವಾಗಿ ವಲಸೆ ಹೋದ ಪ್ರಸಂಗಗಳೂ ಉಂಟು. ಈ ತೆರನಾದ ಪ್ರಸಾರ ಆಲ್ಪ್ಸ್–ಹಿಮಾಲಯ ಶ್ರೇಣಿಯ ಜನನದಿಂದ ಪ್ರಭಾವಿತವಾಗಿತ್ತು. (ಬಿ.ವಿ.ಜಿ.)

**ಟಹೀಟಿ:** ದಕ್ಷಿಣ ಪೆಸಿಫಿಕ್ ಸಾಗರದ ಮಧ್ಯದಲ್ಲಿ ಫ್ರೆಂಚ್ ಪಾಲಿನೇಷ್ಯಕ್ಕೆ ಸೇರಿದ ಸೊಸೈಟಿ ದ್ವೀಪಗಳ ಪೂರ್ವಗುಂಪಿನ (ವಿಂಡ್ವರ್ಡ್ ಐಲೆಂಡ್ಸ್) ಒಂದು ದ್ವೀಪ. ದಕ್ಷಿಣ ಪೆಸಿಫಿಕ್‌ನಲ್ಲಿ ಫ್ರೆಂಚರಿಗೆ ಸೇರಿದ ದ್ವೀಪಗಳ ಪೈಕಿ ಅತ್ಯಂತ ದೊಡ್ಡದು, ಮುಖ್ಯವಾದದ್ದು. ದ.ಅ. $17^0 40'$ ಮತ್ತು ಪ.ರೇ. $149^0 22'$ ಮೇಲಿರುವ ಈ ದ್ವೀಪ ವಾಯವ್ಯದಿಂದ ಆಗ್ನೇಯಕ್ಕೆ ಚಾಚಿ ಘಂಟಾಪಾತ್ರದ ಅಥವಾ 8ರ ಆಕಾರದಲ್ಲಿದೆ. ಇದರ ದೊಡ್ಡ ಭಾಗಕ್ಕೆ ಟಹೀಟಿ ನುಯೀ, ಚಿಕ್ಕದಕ್ಕೆ ಟಹೀಟಿ ಇಟೀ ಅಥವಾ ಟೈ ಅರಪೊ ಎಂಬ ಹೆಸರುಗಳಿವೆ. ಜನಸಂಖ್ಯೆ 1,69,674 (2002). ಇವೆರಡನ್ನೂ ಸೇರಿಸುವ ಭೂಕಂಠ ಟರವಾವೋ. ಈ ದ್ವೀಪದ ಉದ್ದ ಸು. 53 ಕಿಮೀ. ವಿಸ್ತೀರ್ಣ 1,005 ಚ.ಕಿಮೀ. ರಾಜಧಾನಿ ಪಾಪೀಯೇಟೀ. (ಪಿ.ಜಿ.ಡಿ.)

**ಟಾಂಗನಿಕ ಸರೋವರ:** ಪೂರ್ವ ಆಫ್ರಿಕದಲ್ಲಿರುವ ಒಂದು ಸರೋವರ. ಸಮುದ್ರಮಟ್ಟದಿಂದ 773.17 ಮೀ ಎತ್ತರದಲ್ಲಿದೆ. ವಿಸ್ತೀರ್ಣ 32,900 ಚ.ಕಿಮೀ ವಾಯುವ್ಯ–ಅಗ್ನೇಯವಾಗಿ ಇದರ ಉದ್ದ ಸು. 692.3 ಕಿಮೀ. ಪ್ರಪಂಚದ ಸರೋವರಗಳಲ್ಲಿ ಇದು ಅತ್ಯಂತ ಉದ್ದವಾದ್ದು. ಆಳದಲ್ಲಿ ಇದು ಎರಡನೆಯದು. ಇದರ ಗರಿಷ್ಠ ಆಳ 1470 ಮೀ. ಪಶ್ಚಿಮದಲ್ಲಿ ಕಾಂಗೋ, ಪೂರ್ವದಲ್ಲಿ ಟಾಂಜಾನಿಯ ಗಣರಾಜ್ಯ, ಈಶಾನ್ಯದಲ್ಲಿ ಬುರುಂಡಿ ಮತ್ತು ದಕ್ಷಿಣದಲ್ಲಿ ಜಾಂಬಿಯಗಳು ಇದನ್ನು ಸುತ್ತುವರಿದಿವೆ. ಅನೇಕ ಹೊಳೆ ಹಳ್ಳಗಳೇ ಇದಕ್ಕೆ ನೀರಿನ ಆಕರಗಳಾಗಿವೆ. ಅವುಗಳಲ್ಲಿ ಮಲಾಗರಾಸೀ ನದಿಯೂ ಇದೆ. ಜಾನ್ ಸ್ಪೆಕ್ ಮತ್ತು ರಿಚರ್ಡ್ ಬರ್ಟನ್ 1858ರಲ್ಲಿ ಈ ಸರೋವರವನ್ನು ಮೊದಲ ಬಾರಿಗೆ ಗುರುತಿಸಿದರು. ಡೇವಿಡ್ ಲಿವಿಂಗ್‌ಸ್ಟನ್ ಮತ್ತು ಹೆನ್ರಿ ಸ್ಟ್ಯಾನ್ಲೀ ಅವರು 1870 ರಲ್ಲಿ ಹೆಚ್ಚಿನ ಪರಿಶೋಧನೆ ಮಾಡಿ ಈ ತಿಳಿಗೊಳದ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದರು. ಸರೋವರದ ನೀರು ಕಪ್ಪಾದರೂ ಕುಡಿಯಲು ತಕ್ಕುದಾಗಿದೆ. ಮಳೆ ಮತ್ತು ಬೇಸಗೆಯ ಕಾಲಗಳಲ್ಲಿ ಸರೋವರ ಪಾತಳಿ ವಿಪರೀತವಾಗಿ ಏರಿಳಿಯುವುದುಂಟು. ಈ ಸರೋವರದಲ್ಲಿ ನೌಕಾಯಾನ ಕಷ್ಟಕರ. (ಬಿ.ಎ.ಎಸ್.)

**ಟಾಂಜಾನಿಯ:** ಆಫ್ರಿಕ ಖಂಡದ ಪೂರ್ವಭಾಗದಲ್ಲಿನ ಸ್ವತಂತ್ರ ದೇಶ. ಇದು $29^0$ ಪೂ. ರೇ. ದಿಂದ $41^0$ ಪೂ. ರೇ. ದವರೆಗೆ ಹಾಗೂ $1^0$ ದ. ಅ. ದಿಂದ $12^0$ ದ. ಅ. ದವರೆಗೆ ಹಬ್ಬಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ 8.85,987 ಚ.ಕಿಮೀ. ಈಗಿನ ಟಾಂಜಾನಿಯ 1964ರಲ್ಲಿ ಟಾಂಗನೀಕ ಮತ್ತು ಜಾಂಜೀಬಾರ್ ಒಟ್ಟುಗೂಡಿ ನಿರ್ಮಾಣವಾಯಿತು. ಟಾಂಜ಼ನಿಯದ ದಕ್ಷಿಣಕ್ಕೆ ಮೊಜ಼ಾಂಬಿಕ್, ಮಲಾವಿ ಹಾಗೂ ಜಾಂಬಿಯ, ಪಶ್ಚಿಮಕ್ಕೆ ಕಾಂಗೊ ಪ್ರಜಾತಂತ್ರ ಗಣರಾಜ್ಯ, ಬುರಂಡಿ ಹಾಗೂ ರುವಾಂಡ, ಉತ್ತರಕ್ಕೆ ಉಗಾಂಡ ಹಾಗೂ ಕೀನ್ಯ ಮತ್ತು ಪೂರ್ವಕ್ಕೆ ಹಿಂದೂ ಮಹಾಸಾಗರಗಳು ಹಂಚಿಕೆಯಾಗಿವೆ. ಇದು ಪೂರ್ವ ಆಫ್ರಿಕದ ರಾಷ್ಟ್ರಗಳಲ್ಲೆ ದೊಡ್ಡದು. ಭೌಗೋಳಿಕವಾಗಿ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಇದರ ವಾಣಿಜ್ಯ ರಾಜಧಾನಿ ಹಾಗೂ ದೊಡ್ಡ ನಗರ ದರ್–ಎ–ಸಲಾಂ. ಜನಸಂಖ್ಯೆ 13,60,850 (2002). ದೋಡಮೊ ಟಾಂಜಾನಿಯದ ಮಧ್ಯದಲ್ಲಿದ್ದು ಹೊಸ ರಾಜಧಾನಿಯಾಗಿದೆ. ಜನಸಂಖ್ಯೆ 1,45,807 (2002).

ಟಾಂಜಾನಿಯವನ್ನು ಆಡಳಿತಾತ್ಮಕವಾಗಿ 26 ಪ್ರಾದೇಶಿಕ ವಿಭಾಗಗಳಾಗಿ ಮತ್ತು ಇವನ್ನು 98 ಉಪವಿಭಾಗಗಳಾಗಿ (ವಲಯ) ವಿಂಗಡಿಸಲಾಗಿದೆ.

ಮೇಲ್ಮೈಲಕ್ಷಣಗಳು: ಟಾಂಜಾನಿಯ ವೈವಿಧ್ಯತೆಯಿಂದ ಕೂಡಿದ ಭೂಸ್ವರೂಪಗಳನ್ನು ಹೊಂದಿದೆ. ಅವುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ, ಪೂರ್ವ ಭಾಗದ ದ್ವೀಪಗಳು ಹಾಗೂ ಕರಾವಳಿ ಮೈದಾನ, ಒಳನಾಡಿನ ಕಟ್ಟೆಯಾಕಾರದ ಪ್ರಸ್ಥಭೂಮಿ ಮತ್ತು ಎತ್ತರ ಭೂಭಾಗ. ಪ್ರಧಾನ ಸೀಳು ಕಣಿವೆ ಆಫ್ರಿಕದ ಈಶಾನ್ಯ ದಿಕ್ಕಿನಿಂದ ಟಾಂಜಾನಿಯದ ಮಧ್ಯಭಾಗದಲ್ಲಿ ಹಾದು ಹೋಗಿದ್ದು, ಅದರ ಪ್ರಾಕೃತಿಕ ದೃಶ್ಯವನ್ನು ಹೆಚ್ಚು ಮಾಡಿದೆ. ಇದು ಪ್ರಾಚೀನ ಮರಳಿನ ದಡಗಳನ್ನು ಮತ್ತು ಆಫ್ರಿಕ ಖಂಡದ ಅತ್ಯಂತ ಎತ್ತರವಾದ ಹಾಗೂ ಹಿಮದಿಂದಾವೃತವಾದ ಪರ್ವತ, ಮೌಂಟ್ ಕಿಲಿಮಾಂಜಿರೊವನ್ನು ಹೊಂದಿದೆ. ಮೌಂಟ್ ಕಿಲಿಮಾಂಜಾರೋ ಪರ್ವತದ ಎತ್ತರ 5,895 ಮೀ. ಮತ್ತೊಂದು ಪರ್ವತ ಮೌಂಟ್ ಮೆರು 4,566 ಮೀ ಎತ್ತರವಿದೆ.

ಜಲವ್ಯವಸ್ಥೆ: ಆಫ್ರಿಕ ಖಂಡದಲ್ಲೇ ದೊಡ್ಡದಾದ ವಿಕ್ಟೋರಿಯ ಸರೋವರ ಟಾಂಜ಼ಾನಿಯದ ಪಶ್ಚಿಮ ಭಾಗದಲ್ಲಿದೆ. ಇಲ್ಲಿ ನೈಲ್ ನದಿಗೆ ಅಣೆಕಟ್ಟೆ ಕಟ್ಟಲಾಗಿದೆ. ಇದರ ನೈರುತ್ಯಕ್ಕೆ ಉದ್ದವಾದ ಹಾಗೂ ಆಳವಾದ ಟಾಂಗನೀಕ ಸರೋವರವಿದೆ.

ವಾಯುಗುಣ: ಟಾಂಜಾನಿಯದ ಕರಾವಳಿ ತೀರ ಉಷ್ಣ ಹಾಗೂ ಆರ್ದ್ರ ವಾಯುಗುಣವನ್ನು ಹೊಂದಿದ್ದರೆ, ಅದರ ಮಧ್ಯಭಾಗ ಹಾಗೂ ಎತ್ತರ ಭಾಗ ಶೀತ ವಾಯುಗುಣವನ್ನು ಹೊಂದಿರುತ್ತದೆ. ಇಲ್ಲಿ ಮಳೆಗಾಲ ನವೆಂಬರ್‌ನಿಂದ ಜನವರಿ ಮೊದಲ ವಾರದವರೆಗೆ ಮತ್ತು ಮಾರ್ಚಿಯಿಂದ ಮೇ ತಿಂಗಳವರೆಗೆ ಕಂಡುಬರುತ್ತದೆ. ಒಣ ವಾಯುಗುಣ ಜೂನ್‌ನಿಂದ ಅಕ್ಟೋಬರ್ ತಿಂಗಳವರೆಗೆ ಕಂಡುಬರುತ್ತದೆ.

ಜನಸಂಖ್ಯೆ 3,67,66,356 (2002). ಜನಸಂಖ್ಯೆ ಹಂಚಿಕೆ ಪ್ರಾದೇಶಿಕವಾಗಿ ಅಸಮಾನತೆಯಿಂದ ಕೂಡಿದೆ. ಜನಸಾಂದ್ರತೆ ಶುಷ್ಕ ಪ್ರದೇಶಗಳಲ್ಲಿ 1 ಚ.ಕಿಮೀಗೆ 1 ರಿಂದ 51 ಜನರು. ಪ್ರಮುಖ ನೀರಾವರಿಗೆ ಒಳಪಟ್ಟಿರುವ ಪ್ರದೇಶಗಳಲ್ಲಿ ಪ್ರತಿ

ಚ.ಕಿಮೀ ಗೆ 51 ಜನರಿಂದ 134 ಜನ. ಶೇ. 80 ಕ್ಕಿಂತ ಹೆಚ್ಚು ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ.

ಅರ್ಥವ್ಯವಸ್ಥೆ: ಟಾಂಜಾನಿಯದ ಅರ್ಥವ್ಯವಸ್ಥೆ ಪ್ರಮುಖವಾಗಿ ವ್ಯವಸಾಯವನ್ನೇ ಅವಲಂಬಿಸಿದೆ. ರಾಷ್ಟ್ರ ಆದಾಯದ ಶೇ. 50 ಭಾಗ ವ್ಯವಸಾಯದಿಂದ ಬರುತ್ತಿದೆ. ಶೇ. 85 ರಷ್ಟು ರಫ್ತು ವ್ಯವಸಾಯ ಉತ್ಪನ್ನಗಳಾಗಿದ್ದು, ಶೇ. 90 ರಷ್ಟು ಜನರು ವ್ಯವಸಾಯವನ್ನು ಅವಲಂಬಿಸಿದ್ದಾರೆ.

ಟಾಂಜಾನಿಯ ದೇಶ ದೊಡ್ಡ ಪ್ರಮಾಣದ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದೆ. ಅದರಲ್ಲಿ ಚಿನ್ನದ ಅದಿರು ಪ್ರಮುಖವಾದುದು. ಚಿನ್ನದ ಅದಿರಿನ ನಿಕ್ಷೇಪ ಸು. 5,00,000 ಔನ್ಸ್‌ಗಳಷ್ಟಿದೆ ಎಂದು ಅಂದಾಜಿಸಲಾಗಿದೆ. ಇಲ್ಲಿ ಅಷ್ಟೊಂದು ಅಭಿವೃದ್ಧಿ ಹೊಂದಿಲ್ಲದ ರಾಷ್ಟ್ರೀಯ ಉದ್ಯಾನವನಗಳು ಹಂಚಿಕೆಯಾಗಿವೆ. 1991 ರಿಂದ 1999 ರವರೆಗೆ ಕೈಗಾರಿಕಾ ಉತ್ಪನ್ನಗಳು, ಗಣಿಗಾರಿಕೆಯ ಉತ್ಪನ್ನಗಳು ಹೆಚ್ಚುತ್ತಾ ಬಂದಿವೆ. (ಟಿ.ಎಚ್.ಎಚ್.)

**ಟಾರ್ಗಿಯೋನಿ-ಟೋಜೆಟಿ:** ಇಟಲಿಯ ಹೆಸರಾಂತ ಭೂವಿಜ್ಞಾನಿ. ನದಿಯ ಸವೆತದ ಶಕ್ತಿಯನ್ನು ಗುರುತಿಸಿದವನು. ಇವನ ಪ್ರಕಾರ ನದಿಗಳ ಅನಿಯಮಿತ ಮಾರ್ಗಗಳು ನದಿ ತಳದ ಶಿಲೆಗಳ ರಚನೆಯೊಂದಿಗೆ ಸಂಬಂಧ ಹೊಂದಿರುತ್ತವೆ. ನದಿ ತಳದ ಮೃದು ಶಿಲೆಗಳು ತೀವ್ರವಾಗಿ ಸವೆಯುವುದರಿಂದ ಅಲ್ಲಿ ಅಗಲವಾದ ಕಣಿವೆಗಳು ನಿರ್ಮಾಣವಾಗುತ್ತವೆ ಮತ್ತು ಗಡಸು ಶಿಲೆಗಳು ನಿಧಾನವಾಗಿ ಸವೆಯುವುದರಿಂದ ಕಡಿಮೆ ಅಗಲವಾದ ಕಣಿವೆಗಳು ಮತ್ತು ಸರ್ಪಾಕಾರದ ಮಾರ್ಗಗಳು ನಿರ್ಮಾಣವಾಗುತ್ತವೆ.

ಇದನ್ನಾಧರಿಸಿ ಇವನು ವಿವಿಧ ಬಗೆಯ ಭೂಗರ್ಭಿತ ವಸ್ತುಗಳಿಗೆ ಮತ್ತು ಭೂರಚನೆಗಳಿಗೆ ಸಂಬಂಧಿಸಿದ ವ್ಯತ್ಯಾಸಾತ್ಮಕ ಸವೆತದ ಸಿದ್ಧಾಂತವನ್ನು ಪ್ರತಿಪಾದಿಸಿದ. (ಕೆ.ಎನ್.ಯು.)

**ಟಾರ್ಡ್ ಪಲಾಂಡರ್:** ಸ್ವೀಡನ್ ದೇಶದ ಅರ್ಥಶಾಸ್ತ್ರಜ್ಞ. ಕೈಗಾರಿಕಾ ಸ್ಥಾನೀಕರಣದ ಸಿದ್ಧಾಂತಗಳನ್ನು ಪ್ರತಿಪಾದಿಸಿದವರಲ್ಲಿ ಪ್ರಮುಖರಾದವರು. 1935 ರಲ್ಲಿ ಇವರು ಪ್ರಕಟಿಸಿದ ಬಿಲ್‌ರೇಜ್ ಜ಼ುರ್ ಸ್ಟ್ಯಾಂಡೋರ್ಟ್ಸ್ ತೋರಿ ಪುಸ್ತಕದಲ್ಲಿ ಕೈಗಾರಿಕಾ ಸ್ಥಾನೀಕರಣದ ಮೇಲೆ ಸಿದ್ಧಾಂತವನ್ನು ಮಂಡಿಸಿದ್ದಾರೆ. ಈ ಸೈದ್ಧಾಂತಿಕ ಮಾರ್ಗಗಳನ್ನು ಹುಡುಕುವಾಗ ಇವರು ಕೆಲವು ಮೂಲಭೂತವಾದ ಪ್ರಶ್ನೆಗಳನ್ನು ಮುಂದಿಡುತ್ತಾರೆ.

ಬೆಲೆ, ಸ್ಥಾನ ಮತ್ತು ಸರಕುಗಳು ಸ್ಥಿರವಾಗಿದ್ದಲ್ಲಿ ಎಲ್ಲಿ ಉತ್ಪಾದನೆಯನ್ನು ಕೈಗೊಳ್ಳಬೇಕು ಎಂಬ ಪ್ರಶ್ನೆಯನ್ನು ವೆಬರ್ ತಮ್ಮ ಸಿದ್ಧಾಂತದಲ್ಲಿ ಉತ್ತರಿಸಲು ಪ್ರಯತ್ನಿಸಿದರು. ಉತ್ಪಾದನೆಯ ಸ್ಥಾನ, ಪೈಪೋಟಿ, ಕೈಗಾರಿಕೆಯ ವೆಚ್ಚ ಮತ್ತು ಸಾರಿಗೆ ದರಗಳು ಸ್ಥಿರವಾಗಿದ್ದಾಗ ಇವು ಹೇಗೆ ಒಂದು ವಸ್ತುವಿನ ಬೆಲೆಯ ಮೇಲೆ ಪರಿಣಾಮ ಬೀರುತ್ತವೆ ಹಾಗೂ ಉತ್ಪಾದಕ ತನ್ನ ಸರಕನ್ನು ಯಾವ ಪ್ರದೇಶದವರೆಗೆ ವಿಸ್ತರಿಸಬಲ್ಲ ಎಂಬ ಪ್ರಶ್ನೆಗೆ ಪಲಾಂಡರ್ ತನ್ನ ಸಿದ್ಧಾಂತದಲ್ಲಿ ಉತ್ತರವನ್ನು ಕಂಡುಕೊಳ್ಳುತ್ತಾರೆ.

ಇವರು ಮುಖ್ಯವಾಗಿ ತಮ್ಮ ಸಿದ್ಧಾಂತದಲ್ಲಿ ಮಾರುಕಟ್ಟೆಯ ಪ್ರದೇಶದ ಬಗ್ಗೆ ವಿವರಿಸಿದ್ದಾರೆ. ಎರಡು ಮಾರುಕಟ್ಟೆಯ ಪ್ರದೇಶವನ್ನು ನಿರ್ಧರಿಸುವಲ್ಲಿ ಒಂದೇ ತರಹದ ವಸ್ತುವನ್ನು ತಯಾರಿಸುವ ಎರಡು ಕೈಗಾರಿಕಾ ಘಟಕಗಳು ತಮ್ಮ ಮಾರುಕಟ್ಟೆಯ ಗಡಿಯನ್ನು ಹೇಗೆ ನಿರ್ಧರಿಸಿಕೊಳ್ಳುತ್ತವೆ ಎಂಬುದು ಈ ಕೆಳಗಿನ ಚಿತ್ರದ ಸಹಾಯದಿಂದ ತಿಳಿಯಬಹುದು.

ಚಿತ್ರದಲ್ಲಿ ತೋರಿಸಿದಂತೆ ಎ ಮತ್ತು ಬಿ ಘಟಕಗಳು ಒಂದೇ ತರಹದ ವಸ್ತುಗಳನ್ನು ಉತ್ಪಾದಿಸುತ್ತಿದ್ದು ಅವುಗಳು ಕ್ರಮವಾಗಿ ಎಎ ಮತ್ತು ಬಿಬಿ ಬೆಲೆಯನ್ನು ವಿಧಿಸುತ್ತವೆ. ಎ ಮತ್ತು ಬಿ ಬಿಂದುವಿನಿಂದ ದೂರ ಹೋದಂತೆ ಅನುಭೋಗಿಯು ಸಾರಿಗೆ ವೆಚ್ಚದಿಂದಾಗಿ ಹೆಚ್ಚು ಬೆಲೆಯನ್ನು ತೆರಬೇಕಾಗುತ್ತದೆ.

ಎ ಘಟಕಕ್ಕಿಂತ ಬಿ ಘಟಕದ ಉತ್ಪಾದನಾ ವೆಚ್ಚ ಕಡಿಮೆ ಇದ್ದು ಸಾಗಣೆ ದರದಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ.

ಅನುಭೋಗಿಗಳು ಎ ಮತ್ತು ಬಿ ಘಟಕಗಳಿಂದ ದೂರ ಹೋದಂತೆ ನಿಗದಿತ ಘಟಕದ ವೆಚ್ಚದೊಡನೆ ವ್ಯತ್ಯಾಸಗೊಳ್ಳುವ ಸಾರಿಗೆ ವೆಚ್ಚವನ್ನೂ ಸೇರಿಸಿ ತೆರಬೇಕಾಗಿರುತ್ತದೆ. ಹಾಗಾಗಿ ಈ ಎರಡೂ ಘಟಕಗಳ ಸಾರಿಗೆ ವೆಚ್ಚ ರೇಖೆಗಳು ಸಂಧಿಸುವ ಬಿಂದುವೇ x ಆಗಿದೆ. ಇದು ಈ ಎರಡೂ ಘಟಕಗಳ ಮಾರುಕಟ್ಟೆಯ ಪ್ರದೇಶವನ್ನು ನಿರ್ಧರಿಸುವ ಬಿಂದು ಕೂಡ ಆಗಿರುತ್ತದೆ. ಈ ಬಿಂದುವಿನಲ್ಲಿ ವಿಧಿಸಲಾದ ಎರಡೂ ಉತ್ಪಾದಕರ ವಸ್ತುವಿನ ಬೆಲೆಯು ಸಮನಾಗಿದ್ದು, ಅನುಭೋಗಿಗಗಳಲ್ಲಿ ಯಾವ ಘಟಕದ ವಸ್ತುಗಳನ್ನು ಕೊಳ್ಳಬೇಕೆಂಬುದರ ಬಗ್ಗೆ ಗೊಂದಲವಿರುತ್ತದೆ.

ಪಲಾಂಡರ್ ತಮ್ಮ ಸಿದ್ಧಾಂತದಲ್ಲಿ ವ್ಯತ್ಯಾಸಗೊಳ್ಳುವ ಘಟಕ ಬೆಲೆ ಮತ್ತು ಸಾರಿಗೆ ವೆಚ್ಚಗಳ ಬೇರೆ ಬೇರೆ ಸ್ಥಿತಿಗಳಲ್ಲಿ ಮಾರುಕಟ್ಟೆಯ ಪ್ರದೇಶವನ್ನು ಹೇಗೆ ನಿರ್ಧರಿಸಲಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ಒಂದೊಮ್ಮೆ ಎರಡು ಘಟಕಗಳು ಸಮಾನಬೆಲೆ ಹಾಗೂ ಸಮಾನ ಸಾರಿಗೆ ವೆಚ್ಚವನ್ನು ಹೊಂದಿದ್ದರೆ, ಈ ಎರಡೂ ಘಟಕಗಳ ಮಧ್ಯ ದೂರವೇ ಈ ಎರಡೂ ಘಟಕಗಳ ಮಾರುಕಟ್ಟೆಯನ್ನು ಬೇರ್ಪಡಿಸುವ ಬಿಂದುವಾಗಿರುತ್ತದೆ. ಒಂದೊಮ್ಮೆ ಎ ಮತ್ತು ಬಿ ಎರಡೂ ಘಟಕಗಳ ಸಾರಿಗೆ ದರ ಸಮನಾಗಿದ್ದು ಬಿ ಘಟಕದ ಬೆಲೆ ಸಿ ಗಿಂತ ಕಡಿಮೆಯಿದ್ದರೆ ಬಿ ನ ಮಾರುಕಟ್ಟೆಯ ಪ್ರದೇಶ ಎ ಗಿಂತ ಹೆಚ್ಚಾಗಿರುತ್ತದೆ. ಒಂದೊಮ್ಮೆ ಯಾವುದಾದರೊಂದು ಘಟಕದ ಘಟಕ ಬೆಲೆ ಕಡಿಮೆಯಿದ್ದು ಸಾರಿಗೆ ವೆಚ್ಚ ಹೆಚ್ಚಾಗಿದ್ದರೆ ಎ ಘಟಕದ ಮಾರುಕಟ್ಟೆಯ ಪ್ರದೇಶವನ್ನು ಅದು ನಿಯಂತ್ರಿಸುತ್ತದೆ. ಬಿ ಘಟಕದ ಕಡಿಮೆ ಸಾರಿಗೆ ವೆಚ್ಚದಿಂದಾಗಿ ಎ ಗಿಂತ ಬಿ ಹೆಚ್ಚು ಮಾರುಕಟ್ಟೆಯ ಪ್ರದೇಶವನ್ನು ನಿಯಂತ್ರಿಸುತ್ತದೆ.

ಒಂದು ಘಟಕ ಗಳಿಸುವ ಲಾಭದ ಪ್ರಮಾಣ ಅದರ ಮಾರುಕಟ್ಟೆಯ ಕ್ಷೇತ್ರ ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ. ಹಾಗೆಯೇ ಒಂದು ಕೈಗಾರಿಕೆಯ ಉತ್ಪಾದನಾ ವೆಚ್ಚ ಮತ್ತು ಲಾಭಾಂಶ ಅದು ಮಾರಾಟ ಮಾಡುವ ಸರಕುಗಳ ಒಟ್ಟು ಗಾತ್ರದ ಮೇಲೆ ನಿಂತಿದೆ. ಅಲ್ಲದೆ ಈ ಮೇಲಿನ ಎಲ್ಲ ಅಂಶಗಳು ಕೈಗಾರಿಕೆಯ ಸ್ಥಾನ ಹಾಗೂ ಮಾರುಕಟ್ಟೆಗೆ ಇರುವ ದೂರವನ್ನು ಅವಲಂಬಿಸಿರುತ್ತದೆ. (ಪಿ.ಜಿ.)

**ಟಾಲಮಿ ಕ್ಲಾಡಿಯಸ್:** ಪ್ರ.ಶ.ಪೂ. 127-151. ಪ್ರಸಿದ್ಧ ಗ್ರೀಕ್ ಖಗೋಳವಿಜ್ಞಾನಿ. ಮೂಲತಃ ಇವನು ಈಜಿಪ್ಟ್ ದೇಶದವನೆಂದು ತಿಳಿದುಬರುತ್ತದೆ. ಅಲ್ಲಿನ ಅಲೆಕ್ಸಾಂಡ್ರಿಯ ಪಟ್ಟಣದಲ್ಲಿ ತನ್ನ ಜೀವನವನ್ನು ಕಳೆದನೆಂಬುದನ್ನು ಬಿಟ್ಟು ಇವನ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲ.

ಟಾಲಮಿ ತನ್ನ ಹೊಸ ಆವಿಷ್ಕಾರಗಳಿಂದ ಪ್ರಸಿದ್ಧನಾದವನಲ್ಲ. ಜ್ಯಾಮಿತಿಯ ಬಗ್ಗೆ ಅಲ್ಲಿಯವರೆಗೆ ತಿಳಿದ ವಿಷಯಗಳನ್ನೆಲ್ಲ ಕ್ರೋಡೀಕರಿಸಿ, ವಿಷಯಗಳನ್ನೆಲ್ಲ ಕ್ರಮಬದ್ಧವಾಗಿ ಒಂದು ಪುಸ್ತಕದ ರೂಪದಲ್ಲಿ ಯೂಕ್ಲಿಡ್ (ಪ್ರ.ಶ.ಪೂ. ಸು. 300) ಹೇಗೆ ರೂಪಿಸಿದನೋ ಹಾಗೆ ಖಗೋಳವಿಜ್ಞಾನಕ್ಕೆ ಸಂಬಂಧಿಸಿದಂತೆ ತನ್ನ ಕಾಲದವರೆಗೆ ಆಗಿದ್ದ ಆವಿಷ್ಕಾರಗಳನ್ನೆಲ್ಲ

ಕ್ರೋಡೀಕರಿಸಿ ಆಲ್ಮಜೆಸ್ಟ್ ಎಂಬ ಪುಸ್ತಕ ರೂಪದಲ್ಲಿ ತಂದ ಕೀರ್ತಿ ಟಾಲಮಿಯದು. ವಿಷಯ ಪ್ರತಿಪಾದನೆಯಲ್ಲಿ ಈತ ತೋರಿಸುವ ಕೌಶಲ ಮತ್ತು ಶಾಸ್ತ್ರೀಯ ನಿಷ್ಕೃಷ್ಟತೆಗಳಿಂದಾಗಿ ಈ ಗ್ರಂಥ ಶತ ಶತಮಾನಗಳವರೆಗೆ ಎಂದರೆ ಕೋಪರ್ನಿಕಸ್ (1473–1543) ಮತ್ತು ಕೆಪ್ಲರನ (1571–1630) ಕಾಲದವರೆಗೂ ವಿಜ್ಞಾನಿಗಳ ಆದರ್ಶ ಗ್ರಂಥವಾಗಿತ್ತು. ಪ್ರ.ಶ.ಪೂ.ಸು. 120ರಲ್ಲಿದ್ದ ಹಿಪ್ಪಾಕ್ರಾಟ್ ಎಂಬ ಪ್ರಸಿದ್ಧ ಗ್ರೀಕ್ ವಿಜ್ಞಾನಿಯ ಆವಿಷ್ಕಾರಗಳನ್ನೆಲ್ಲ ಟಾಲಮಿ ತನ್ನ ಆಲ್ಮಗಸ್ಟ್ ಗ್ರಂಥದಲ್ಲಿ ಅಳವಡಿಸಿದ್ದಾನೆ. ಹಿಪೊಕ್ರಾಟ್ ಖಗೋಳಶಾಸ್ತ್ರದ ಬಗ್ಗೆ ಆಳವಾದ ಅಧ್ಯಯನವನ್ನು ನಡೆಸಿದ್ದ. ಆದರೆ ಆತನ ಆವಿಷ್ಕಾರಗಳ ಬಗ್ಗೆ ತಿಳಿಯಲು ಅವನ ಹೆಸರಿನಲ್ಲಿರುವ ಯಾವ ಗ್ರಂಥವೂ ಈಗ ಲಭಿಸಿಲ್ಲ. ಹೀಗಾಗಿ ಅವನ ಅಧ್ಯಯನದ ಬಗ್ಗೆ ಎಲ್ಲ ವಿಷಯಗಳನ್ನೂ ಟಾಲಮಿಯ ಆಲ್ಮಜೆಸ್ಟ್ ಗ್ರಂಥದಿಂದಲೇ ತಿಳಿಯಬೇಕಾಗಿದೆ.

ಟಾಲಮಿ ಸಿದ್ಧಾಂತ: ತನ್ನ ಕಾಲದವರೆಗೆ ಬೆಳೆದು ಬಂದಿದ್ದ ಖಗೋಳಜ್ಞಾನ, ನಂಬಿಕೆ ಮುಂತಾದವನ್ನು ಕ್ರೋಡೀಕರಿಸಿ ಈ ನಿರೂಪಣೆ ಮಾಡಿದ್ದಾನೆ. ಇದರ ಸಾರಾಂಶವಿಷ್ಟು: ಭೂಮಿ ಸಮಸ್ತವಿಶ್ವದ ಕೇಂದ್ರದಲ್ಲಿದೆ; ಭೂಮಿ ಸ್ಥಿರವಾಗಿದೆ; ಭೂಮಿಯ ಸುತ್ತ ಚಂದ್ರ, ಗ್ರಹ, ಸೂರ್ಯ, ನಕ್ಷತ್ರಗಳು ಪರಿಭ್ರಮಿಸುತ್ತಿವೆ; ಭೂಮಿಯಿಂದ ತೊಡಗಿ ಏರುತ್ತಿರುವ ದೂರಗಳಲ್ಲಿ ಚಂದ್ರ, ಬುಧ, ಶುಕ್ರ, ಸೂರ್ಯ, ಮಂಗಳ, ಗುರು, ಶನಿ ಮತ್ತು ಅತಿದೂರದಲ್ಲಿ ನಕ್ಷತ್ರಗಳು ಪ್ರಮುಖ. ಹಿಪೊಕ್ರಾಟ್‌ನ ಅನುಪಲಬ್ಧ ಗ್ರಂಥಗಳನ್ನು ಆಧರಿಸಿ ಟಾಲಮಿ ಈ ವಿವರಣೆಯನ್ನು ನೀಡಿರುವನೆಂದು ಭಾವಿಸಲಾಗಿದೆ. ಕೋಪರ್ನಿಕಸನ ಸೂರ್ಯಕೇಂದ್ರವಾದ (ಅಂದರೆ ಸೌರವ್ಯೂಹದಲ್ಲಿ ಸೂರ್ಯ ಕೇಂದ್ರಸ್ಥಾನದಲ್ಲಿ ಉಂಟು, ಅದರ ಸುತ್ತ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ ಗ್ರಹಗಳು ಪರಿಭ್ರಮಿಸುತ್ತಿವೆ ಎಂಬ ವಿವರಣೆ) ಮಂಡನೆ ಆಗುವವರೆಗೂ ಟಾಲಮಿಯ ಭೂಕೇಂದ್ರಿತ ಸೌರವ್ಯೂಹದ ಅಭಿಪ್ರಾಯವೇ ಪ್ರಚಲಿತವಾಗಿತ್ತು.



ಭೂಪಟ

ಭೂಮಿ ಸ್ಥಿರವಾಗಿದ್ದರೂ ಅದು ತನ್ನ ಅಕ್ಷದ ಸುತ್ತ ಒಂದು ಬಾರಿ ಸುತ್ತುವುದೆಂದು ಭಾವಿಸಿದಾಗ, ಪ್ರಯೋಗಗಳಿಂದ ತಿಳಿದು ಬಂದ ಗ್ರಹಗತಿಗಳ ಸತ್ಯಾಂಶಕ್ಕೆ ತಾತ್ತ್ವಿಕವಾದ ಆಧಾರವನ್ನು ಕೊಡಬಹುದೆಂದು ಟಾಲಮಿ ತನ್ನ ಗ್ರಂಥದಲ್ಲಿ ಬರೆದಿರುವುದು ಸೋಜಿಗದ ಸಂಗತಿ. ಈ ವಿಷಯ ಈಗ ಸತ್ಯವೆಂದು ದೃಢಪಟ್ಟಿದ್ದರೂ ಆಗಿನ ಕಾಲದ ಖಗೋಳವಿಜ್ಞಾನಿಗಳಿಗೆ ತಿಳಿದಿರಲಿಲ್ಲ. ಟಾಲಮಿಯೂ ಸ್ವಂತವಾಗಿ ಖಗೋಳವಿಜ್ಞಾನದ ಬಗ್ಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಅಂಕಿ ಅಂಶಗಳಿಗಿಂತ ಹಿಪ್ಪರ್ಕಸನ ಅಂಕಿ ಅಂಶಗಳಲ್ಲೇ ನಾವು ಹೆಚ್ಚಾಗಿ ವಿಶ್ವಾಸವನ್ನಿಡಬೇಕಾಗುವುದು. ಟಾಲಮಿ ಹಿಪ್ಪರ್ಕಸ್ ತೋರಿಸಿದ ವಿಧಾನದಿಂದ ಭೂಮಿಯ ಒಂದು ನಕ್ಷೆಯನ್ನು ತಯಾರಿಸಿದ. ನಕ್ಷತ್ರಗಳನ್ನು ಅವುಗಳ ಕಾಂತಿಗೆ ಅನುಗುಣವಾಗಿ ವಿಂಗಡಿಸುವ ಕ್ರಮಕ್ಕೆ ಟಾಲಮಿ ಹಾಕಿ ಕೊಟ್ಟ ಮಾರ್ಗವನ್ನು ಇಂದಿಗೂ ಅನುಸರಿಸಲಾಗುತ್ತಿದೆ. ಈತನನ್ನು ನಕ್ಷಾಶಾಸ್ತ್ರದ ಪಿತಾಮಹನೆಂದು ಪರಿಗಣಿಸಲಾಗಿದೆ.

ಭೂಗೋಳ, ಸಂಗೀತ ಮತ್ತು ಜ್ಯೋತಿಶಾಸ್ತ್ರ – ಇವುಗಳ ಮೇಲೆಯೂ ಟಾಲಮಿ ಗ್ರಂಥಗಳನ್ನು ಬರೆದಿದ್ದ. ಇವನ ಭೂಗೋಳದಲ್ಲಿ ಕೆಲವು ದ್ವೀಪಗಳ ಮತ್ತು ದೇಶಗಳ ಮಾಹಿತಿಗಳನ್ನು ಕೊಟ್ಟಿದ್ದಾನೆ. ಯೂಕ್ಲಿಡನ ಸಮಾನಾಂತರ ರೇಖೆಗಳ ಆಧಾರ ಭಾವನೆಯ ಮೇಲೆ ಒಂದು ಗ್ರಂಥವನ್ನು ಬರೆದ. ಇವನು ಬರೆದ ಗ್ರಂಥಗಳನ್ನು ಅನಂತರ ಅರಬ್ಬೀ ಭಾಷೆಗೆ ತರ್ಜುಮೆ ಮಾಡಲಾಯಿತು. (ವೈ.ಪಿ.ಸಿ.)

**ಟಿಬೆಟ್:** ಚೀನದ ಸಮಾಜವಾದಿ ಗಣರಾಜ್ಯದ ಒಂದು ಸ್ವಯಮಾಡಳಿತ ಪ್ರದೇಶ. ಮಧ್ಯ ಏಷ್ಯದಲ್ಲಿ ಸ್ಥೂಲವಾಗಿ ಉ.ಅ. 27°–37° ಮತ್ತು ಪೂ.ರೇ. 74°–100° ನಡುವೆ ಹಬ್ಬಿರುವ ಪ್ರಸ್ಥಭೂಮಿಯ ಮೇಲೆ ಇದೆ. ಉತ್ತರದಲ್ಲಿ ಷಿಂಜೀಯಾಂಗ್ ವೀಗುರ್ ಹಾಗೂ ಚಿಂಗೈ, ಪೂರ್ವದಲ್ಲಿ ಸಿಚುವಾನ್, ಆಗ್ನೇಯದಲ್ಲಿ ಯೂನಾನ್ ಮತ್ತು ಮಯನ್ಮಾರ್, ದಕ್ಷಿಣದಲ್ಲಿ ಭಾರತ, ನೇಪಾಲ ಮತ್ತು ಭೂತಾನ, ಪಶ್ಚಿಮದಲ್ಲಿ ಭಾರತ–ಇವು ಇದರ ಮೇರೆಗಳು. ಇದರ ವಿಸ್ತೀರ್ಣ 12,21,601 ಚ.ಕಿಮೀ. ಜನಸಂಖ್ಯೆ 26,20,000 (2000). ರಾಜಧಾನಿ ಲಾಸ ಜನಸಂಖ್ಯೆ: 2,50,000 (2000).

ಭೂರಚನೆ: ಟಿಬೆಟ್ ಪ್ರಸ್ಥಭೂಮಿ ಮೆಸೊಜೋಯಿಕ್ ಮತ್ತು ಸೀನೊಜೋಯಿಕ್ ಭೂಯುಗಗಳಲ್ಲಿ ರೂಪುಗೊಂಡ ಪ್ರದೇಶ ; ಭೂವೈಜ್ಞಾನಿಕವಾಗಿ ಈಚಿನದು. ಲಕ್ಷಾಂತರ ವರ್ಷಗಳ ಹಿಂದೆ ಪರ್ವತಗಳಿರಲಿಲ್ಲ. ಇಡೀ ಪ್ರದೇಶ ವಿಶಾಲ ಸಮುದ್ರವಾಗಿತ್ತು. ಬಹು ದೀರ್ಘಕಾಲಾವಧಿಯಲ್ಲಿ ಹಿಮಾಲಯ ಪರ್ವತಶ್ರೇಣಿಗಳು ಮೇಲೆದ್ದುವು. ಈಗಲೂ ಇವು ಬೆಳೆಯುತ್ತಿವೆ. ಮುದುಡಿದ ಶಿಲೆಯ ಸಮತಲ ಸ್ತರಗಳು ಕಾಲಗತಿಯಲ್ಲಿ ಒತ್ತಡಕ್ಕೆ ಒಳಗಾದ ಉರುಟುಕಲ್ಲುಗಳಿಂದಲೂ ಸಾಗರಿಕ ಪಳೆಯುಳಿಕೆಗಳಿಂದ ಕೂಡಿದ ಸುಣ್ಣಕಲ್ಲುಗಳಿಂದಲೂ ರಚಿತವಾಗಿವೆ. ಚಾನ್ ಡಾಂಗ್ ಪ್ರದೇಶದ ಸರೋವರಗಳು ಪ್ರಾಚೀನ ಸರೋವರದ ಶೇಷಗಳು. ಕುನ್‌ಲುನ್ ಪರ್ವತ ಸಂಕೀರ್ಣ ಹಿಮಾಲಯ ಪರ್ವತ ವ್ಯವಸ್ಥೆಗಿಂತ ಪ್ರಾಚೀನವಾದದ್ದು. ಇದು ಪೇಲಿಯೊಜೋಯಿಕ್ ಯುಗದ್ದು. ಹಿಮಾಲಯದ ರೂಪಾಂತರಿತ ಸುಣ್ಣಕಲ್ಲುಗಳೂ ಬೆಣಚುಕಲ್ಲುಗಳೂ ಜುರಾಸಿಕ್ ಯುಗದವು. ಹಿಮನದೀ ಅವಧಿಗಳಲ್ಲಿ ಇಡೀ ಉನ್ನತ ಪ್ರದೇಶವನ್ನು ನೀರ್ಗಲ್ಲ ಫಲಕಗಳು ಕವಿದಿದ್ದಿರಬಹುದು. ಪ್ಲೀಸ್ಟೋಸೀನ್ ಸಂಚಯನಗಳು ಹಲವು ಎಡೆಗಳಲ್ಲಿ ಅತೀವ ಮಂದವಾಗಿವೆ.

ಮೇಲ್ಮೈ ಲಕ್ಷಣ: ಟಿಬೆಟ್ ಒಂದು ಉನ್ನತ ಪ್ರಸ್ಥಭೂಮಿ. ಅದರ ಸುತ್ತಲೂ ಉನ್ನತ ಪರ್ವತರಾಶಿಗಳು. ಟಿಬೆಟ್ಟಿನಲ್ಲಿ ಪರ್ವತಗಳು ವಾಯವ್ಯದಿಂದ ಆಗ್ನೇಯಕ್ಕೆ ಹಬ್ಬಿವೆ. ಅವುಗಳ ನಡುವೆ ಆಳವಾದ ಇಲ್ಲವೇ ತಟ್ಟೆಯಾದ ಅನೇಕ ಕಣಿವೆಗಳಿವೆ. ಉನ್ನತ ಹಿಮಾಲಯ ಶ್ರೇಣಿಗಳು ಟಿಬೆಟ್ಟಿನ ದಕ್ಷಿಣದಲ್ಲಿ ಉದ್ದಕ್ಕೂ ಹಬ್ಬಿ , ಹಿಂದು ಸಾಗರದ ಉಷ್ಣ ಮಾನ್ಸೂನ್ ಮಾರುತವನ್ನು ತಡೆಯುತ್ತವೆ. ಹಿಮಾಲಯದ ಉತ್ತರಕ್ಕೆ ಟಿಬೆಟ್ಟಿನಲ್ಲಿ ಹಬ್ಬಿರುವ ಶ್ರೇಣಿಗಳು ನಾಲ್ಕು : ಲಡಾಕ್, ಕೈಲಾಸ್, ಕಾರಕೋರಂ ಮತ್ತು ಕುನ್‌ಲುನ್. ಲಡಾಕ್ ಶ್ರೇಣಿಯ ಅತ್ಯುನ್ನತ ಶಿಖರ ಗುರ್ಲಮಾಂಧಾತ ಅಥವಾ ಕ್ವಾಲಾಮಾಂಟಾಟ (7730 ಮೀ). ಇದು ಮಾನಸಸರೋವರದಿಂದ 20 ಕಿಮೀ ದೂರದಲ್ಲಿದೆ. ಮಾನಸಸರೋವರಕ್ಕೆ ಉತ್ತರದಲ್ಲಿರುವ ಕೈಲಾಸ ಶ್ರೇಣಿಯಲ್ಲಿ ಹಲವು ಶಿಖರಗಳ ಗೊಂಚಲೇ ಇದೆ. ಅವುಗಳಲ್ಲಿ ಹಲವು ಶಿಖರಗಳು 6100 ಮೀ ಗೂ ಎತ್ತರವಾಗಿವೆ. ಪೂ.ರೇ. 77°ಯಿಂದ 93° ವರೆಗೆ ಹಬ್ಬಿರುವ ಕುನ್‌ಲುನ್ ಶ್ರೇಣಿ ಟಿಬೆಟ್ ಪ್ರಸ್ಥಭೂಮಿಯ ಉತ್ತರದ ಅಂಚಿನಲ್ಲಿದೆ. ಪೂರ್ವ ಟಿಬೆಟ್ಟಿನ ಪರ್ವತಗಳು ದಕ್ಷಿಣೋತ್ತರವಾಗಿ ಹಬ್ಬಿವೆ. ಇವು ಬಹುಕಾಲ ಚೀನೀ ಸಂಸ್ಕೃತಿಯ ಸಂಪರ್ಕಕ್ಕೆ ಅಡ್ಡಿಯಾಗಿ ಪರಿಣಮಿಸಿದ್ದುವು. ಆದರೆ ದಕ್ಷಿಣದ ಆರ್ದ್ರ ಮಾರುತಗಳು ಇಲ್ಲಿಯ ನದಿಕಣಿವೆಗಳ ಮೂಲಕ ಉತ್ತರಾಭಿಮುಖವಾಗಿ ಬೀಸಲು ಅಡ್ಡಿಯುಂಟಾಗಿಲ್ಲ.

ನದಿಗಳು: ಏಷ್ಯದ ಮಹಾನದಿಗಳಲ್ಲಿ ಹಲವು ಹುಟ್ಟುವುದು ಟಿಬೆಟ್ಟಿನ ಪರ್ವತ ಸೀಮೆಯಲ್ಲಿ. ಯಾಂಗ್ಟ್ಸೀ ನದಿ ಉಲಾನ್ ಊಲದಲ್ಲಿ ಉಗಮಿಸುತ್ತದೆ. ಮೀಕಾಂಗ್ ಮತ್ತು ಹಳದಿ ನದಿಗಳು ಡಾಂಗ್–ಲಾ ಶ್ರೇಣಿಯಲ್ಲಿ ಉಗಮಿಸುತ್ತವೆ. ಸಾಲ್ವೀನ್ ನದಿಯ ಹುಟ್ಟು ಲಾಸದ ಉತ್ತರಕ್ಕೆ ನ್ಯಾಚುಕದ ಬಳಿಯಲ್ಲಿ. ಇರವಾಡೀ ನದಿ ಕೈಲಾಸಪರ್ವತದ ಪೂರ್ವ ಅಂಚಿನಲ್ಲಿ ಹುಟ್ಟುತ್ತದೆ. ಸಿಂಧು, ಸಟ್ಲೆಜ್ ಮತ್ತು ಬ್ರಹ್ಮಪುತ್ರ ನದಿಗಳು ಕೈಲಾಸಪರ್ವತದ ದಕ್ಷಿಣದಲ್ಲಿ ಮಾನಸಸರೋವರದ ಬಳಿ ಹುಟ್ಟುತ್ತವೆ. ಟಿಬೆಟ್ಟಿನ ಅತ್ಯಂತ ಉದ್ದದ ನದಿ ಬ್ರಹ್ಮಪುತ್ರ ಅಥವಾ ಟ್ಸಾಂಗ್ ಪೋ ಭಾರತವನ್ನು ಪ್ರವೇಶಿಸುವುದಕ್ಕೆ ಮೊದಲು ಅಲ್ಲಿ 1200 ಕಿಮೀ ದೂರ ಹರಿಯುತ್ತದೆ. ಅದರ ಅನೇಕ ಉಪನದಿಗಳ ಪೈಕಿ ಮುಖ್ಯವಾದವು ಕ್ಯೀ–ಚೂ ಅಥವಾ ಲೂಸಾ, ಷಾಮ್‌ಡ, ನ್ಯಾಂಗ್ ಚೂ, ಯಿಗ್ರಾಂಗ್ ಮತ್ತು ನಾಗಾಂಗ್.

ಕೈಲಾಸ ಮತ್ತು ಕುನ್‌ಲೂನ್ ಶ್ರೇಣಿಗಳ ನಡುವೆ ಇರುವ ಚಾಂಗ್ ಕಾಂಗ್ ಪ್ರದೇಶದಲ್ಲಿ ಅಸಂಖ್ಯಾತ ಸರೋವರಗಳಿವೆ. ಆದರೆ ಟಿಬೆಟ್ಟಿನ ಅತ್ಯಂತ ದೊಡ್ಡ ಸರೋವರಗಳ ಪೈಕಿ ಮೂರು–ಚಿಂಗ್‌ಹೈ (ಕೋ–ಕೋ ನೋರ್), ಮಾನಸಸರೋವರ ಮತ್ತು ಯಾಮ್‌ಡ್ರಾಕ್ ಟ್ಸಾ (ಯಾಂಗ್ – ಜೋ – ಯುಂಗ್)– ಈ ಪ್ರದೇಶದ ಹೊರಗಡೆ ಇವೆ.

ಭೌಗೋಳಿಕ ಪ್ರದೇಶಗಳು : ಟಿಬೆಟ್ಟನ್ನು ಸ್ಥೂಲವಾಗಿ ಐದು ಭೌಗೋಳಿಕ ಪ್ರದೇಶಗಳಾಗಿ ವಿಂಗಡಿಸಲಾಗಿದೆ : 1. ವೇ ಪ್ರದೇಶ ಟಿಬೆಟ್ಟಿನ ಮಧ್ಯ ಭಾಗ, ಆಧುನಿಕ ಟಿಬೆಟ್ಟಿನ ಸಾಂಸ್ಕೃತಿಕ ಹಾಗೂ ರಾಜಕೀಯ ಕೇಂದ್ರ. ಬ್ರಹ್ಮಪುತ್ರದ ಉಪನದಿಗಳಾದ ಕ್ಯೀ ಚ್ಯೂ (ಲಾಸ) ಮತ್ತು ಯಾರ್ಲಂಗ್‌ಗಳ ಬಯಲುಗಳು ಈ ಪ್ರದೇಶಕ್ಕೆ ಸೇರಿವೆ. ಲಾಸ, ಟಿಬೆಟ್ಟಿನ ರಾಜಧಾನಿ ಯಾರ್ಲಂಗ್– ಇವು ವೇ ಪ್ರದೇಶದಲ್ಲಿವೆ. 2. ವೇ ಪ್ರದೇಶಕ್ಕೆ ಪಶ್ಚಿಮದಲ್ಲಿರುವುದು ಟ್ಸಾಂಗ್ ಜಿಲ್ಲೆ. ಅದರ ಮುಖ್ಯ ಪಟ್ಟಣ ಷಿಗಾಟ್ಸೆ. ಇದಕ್ಕೆ ಉತ್ತರದಲ್ಲಿ ಟಿಬೆಟ್ ಜನರ ಧಾರ್ಮಿಕ ಹಾಗೂ ರಾಜಕೀಯ ಕೇಂದ್ರವಾದ ಟ್ರಿಷಿ ಲ್ಹುಂಪೊ ಇದೆ. 3. ಇನ್ನೂ ಪಶ್ಚಿಮಕ್ಕೆ ಇರುವುದು ಎನ್ಗಾರಿ ಪರ್ವತಸೀಮೆ. ಹಿಮಾಚ್ಛಾದಿತ ಶೃಂಗಗಳಿಂದಲೂ ಆಳವಾದ ನದಿಕಮರಿಗಳಿಂದಲೂ ಕೂಡಿದ ಈ ಪ್ರದೇಶದಲ್ಲಿ ಹೆಚ್ಚು ಜನಸಾಂದ್ರತೆಯಿಲ್ಲ. ಇಲ್ಲಿಯ ಅಲೆಮಾರಿ ಜನರು ತಮ್ಮ ಸಾಕುಪ್ರಾಣಿಗಳಿಗೆ ಮೇವನ್ನು ಅರಸುತ್ತ ಕಣಿವೆಯಿಂದ ಕಣಿವೆಗೆ ಸಂಚರಿಸುತ್ತಿರುತ್ತಾರೆ. 4. ಜಾಂಗ್ ಡಾಂಗ್ ಪ್ರದೇಶ ಉತ್ತರದ ವಿಶಾಲ ಬಯಲು. ಇದು ಹಿಮಗಟ್ಟಿದ ಬಂಜರು. ಇಲ್ಲಿ ಜನಸಂಖ್ಯೆ ಬಹು ವಿರಳ. 5. ಟಿಬೆಟ್ಟಿನ ಅತ್ಯಂತ ಫಲವತ್ತಾದ ನೆಲವೆಂದರೆ ಪೂರ್ವಭಾಗದ ಖಾಮ್ ಪ್ರದೇಶ. ಇಲ್ಲಿ ಜನಸಾಂದ್ರತೆ ಅತ್ಯಧಿಕ. ಇದು ಇತರ ಪ್ರದೇಶಗಳಿಗಿಂತ ತಗ್ಗಿನಲ್ಲಿದೆ. ಇಲ್ಲಿ ಮಳೆಯೂ ಹೆಚ್ಚು. ಇಲ್ಲಿಯ ನದಿಗಳ ಕಮರಿಗಳ ಅಂಚಿನಲ್ಲಿ ದಟ್ಟಡವಿಗಳಿವೆ. ನದಿಗಳ ಕೆಳದಂಡೆ ಪ್ರದೇಶಗಳು ಸಾಗುವಳಿಗೆ ಉಪಯುಕ್ತ.

ವಾಯುಗುಣ : ಸಮುದ್ರದಿಂದ ಇರುವ ದೂರದಿಂದಾಗಿ ಟಿಬೆಟ್ಟಿನಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹೋದಂತೆ ಮಳೆ ಕಡಿಮೆ. ಹಿಮಾಲಯ ಪರ್ವತಗಳು ಮಾನ್ಸೂನ್ ಮೋಡಗಳನ್ನು ತಡೆದು ಅಲ್ಲೇ ಬಹುತೇಕ ಮಳೆ ಸುರಿಸುತ್ತವೆ. ಹಿಮಾಲಯದ ದಕ್ಷಿಣ ಪಾರ್ಶ್ವಗಳಲ್ಲಿ ವಾರ್ಷಿಕ ಮಳೆ 500 ಸೆಂಮೀ. ಕಣಿವೆಗಳಲ್ಲಿ ಮುಂದೆ ಸಾಗಿದ ಅಳಿದುಳಿದ ಮೋಡಗಳು ಕೈಲಾಸ ಪರ್ವತಗಳ ಮೇಲೆ ಮಳೆ ಸುರಿಸುತ್ತವೆ. ಅಲ್ಲಿಂದಾಚೆಗೆ ಶುಷ್ಕ ವಾಯುಗುಣ. ಟಿಬೆಟ್ಟಿನ ಬಹುಭಾಗದಲ್ಲಿ ವಾರ್ಷಿಕವಾಗಿ 20 ಸೆಂಮೀಗಿಂತ ಕಡಿಮೆ ಮಳೆ ಅಥವಾ ಹಿಮ. ಔನತ್ಯದಿಂದಾಗಿ ಉಷ್ಣತೆ ಕಡಿಮೆ. ವಾಯುಗುಣ ಬಹಳ ತೀವ್ರ. ವರ್ಷದ ಬಹುಕಾಲ ಅತ್ಯಂತ ಬಲವಾಗಿ ಬೀಸುವ ಗಾಳಿಯಿಂದ ಶೈತ್ಯ ಕೊರೆಯುತ್ತದೆ. 24 ಗಂಟೆಗಳಲ್ಲಿ ಉಷ್ಣತೆ ಬಹಳ ತೀವ್ರವಾಗಿ ವ್ಯತ್ಯಾಸವಾಗುತ್ತದೆ. ವರ್ಷವೆಲ್ಲ ವಾಯುಗುಣ ಬದಲಾಗುತ್ತಲೇ ಇರುತ್ತದೆ. ಬೆಳಗು ಮತ್ತು ಸಂಜೆ ಕೊರೆಯುವ ಚಳಿ. ಉಷ್ಣತೆ ಸಾಮಾನ್ಯವಾಗಿ– $18^0$ಸೆ. ಇಳಿಯುತ್ತದೆ. ಮಧ್ಯಾಹ್ನ ಅದು $38^0$ಸೆ. ಗೆ ಏರಬಹುದು. ಆಗ ಬಿಸಿಲು ಬಲು ಚುರುಕು. ಟಿಬೆಟ್ ಪ್ರಸ್ಥಭೂಮಿಯಲ್ಲಿ ವರ್ಷಕ್ಕೆ 3-4 ತಿಂಗಳುಗಳು ಮಾತ್ರ ಹಿಮಹೆಪ್ಪುಗಟ್ಟುವುದಿಲ್ಲ. ಬೇಸಗೆಯಲ್ಲೂ ಹಿಮ ಬೀಳುವುದುಂಟು. 3650 ಮೀ ಕಡಿಮೆ ಮಟ್ಟದಲ್ಲಿ, ನದಿಕಣಿವೆಗಳಲ್ಲಿ ಮತ್ತು ದಕ್ಷಿಣ ಟಿಬೆಟ್ಟಿನಲ್ಲಿ ವಾಯುಗುಣ ಹಿತಕರವಾಗಿರುತ್ತದೆ. ಗಾಳಿ ಶುಷ್ಕ. ದೂಳಿನ ಬಿರುಗಾಳಿ ಇಲ್ಲದ್ದರಿಂದ ಆಕಾಶ ಶುಭ್ರವಾಗಿರುತದೆ.

¸ÀkÁÀeÀÄ : n¨ÉÉÀ 2/3 ಭಾಗವನ್ನು ಆಕ್ರಮಿಸಿಕೊಂಡಿರುವ ಉತ್ತರದ ಮೈದಾನದಲ್ಲಿ ಮರಗಳಿಲ್ಲ. ಅಲ್ಲಿ ಮಳೆ ಇಲ್ಲ. ಒಣ ಗಾಳಿ ಬೀಸುತ್ತದೆ. ಬಹಳ ಚಳಿ. ಇದು ಸರಾಸರಿಯಲ್ಲಿ ಸಮುದ್ರಮಟ್ಟದಿಂದ 4575 ಮೀ ಎತ್ತರದಲ್ಲಿದೆ. ಎನ್‌ಗಾರಿ ಜಿಲ್ಲೆಯ ಸಟ್ಲೆಜ್ ನದಿ ಬಯಲು, ದಕ್ಷಿಣದ ಚುಂಬಿ ಕಣಿವೆ–ಈ ಪ್ರದೇಶಗಳಲ್ಲಿ ದಟ್ಟ ಅರಣ್ಯಗಳಿವೆ. ಮೊನಚು ಎಲೆಯುಳ್ಳ ದೈತ್ಯಸ್ವರೂಪಿ ಮರಗಳು, ಓಕ್, ಅಕ್ರೋಟು, ಮೇಪಲ್, ಪಾಪ್ಲರ್, ಸ್ಪ್ರೂಸ್, ತಾಳೇ ಮುಂತಾದ ಮರಗಳಿವೆ. ಕಾಡುಗಳಲ್ಲಿ ಪೈಮು (ಹೃದಯವಿಷ), ಹರಿಕುಶ, ರೇವಲ್‌ಚಿನ್ನಿ, ಕೇಸರಿ, ಬಜೆ ಮುಂತಾದ ಮೂಲಿಕೆಗಳುಂಟು.

ಟಿಬೆಟ್ಟಿನ ಸಾಕುಪ್ರಾಣಿಗಳು ಕುರಿ, ಮೇಕೆ, ಯಾಕ್, ಕುದುರೆ, ಕತ್ತೆ. ಯಾಕ್ ಭಾರಹೊರುವ ಪ್ರಾಣಿ. ಅದು ಕಡಿದಾದ ಪರ್ವತಭಾಗಗಳಲ್ಲಿ ಪ್ರಯಾಣಮಾಡಬಲ್ಲದು. ಆದರೆ ಅದು ವ್ಯವಸಾಯಕ್ಕೆ ಯೋಗ್ಯವಲ್ಲ. ಹಿಂದೆ ಪ್ರಸಿದ್ಧವಾಗಿದ್ದ ಕುದುರೆಗಳು ಈಗ ಟಿಬೆಟ್ಟಿನಲ್ಲಿಲ್ಲ. ಸವಾರಿ ಕುದುರೆಗಳನ್ನು ಚೀನದ ಚಿಂಗ್‌ಹೈ ಪ್ರಾಂತ್ಯದಿಂದ ತರಿಸಿಕೊಳ್ಳುತ್ತಾರೆ. ಟಿಬೆಟ್ಟಿನ ವನ್ಯಮೃಗಗಳು ಕಾಡುಯಾಕ್, ಕಾಡುಕುದುರೆ, ಕಾಡುಕತ್ತೆ, ಹಿಮಚಿರತೆ, ಲಿಂಕ್ಸ್, ಕಂದು ಅಥವಾ ಕರಿಕರಡಿ, ಗೆಜ಼ೆಲ್, ಸಾರಂಗ, ಮಾರ್ಮಾಟ್, ಜಿಂಕೆ, ಕಸ್ತೂರಿಮೃಗ, ಬಾತುಕೋಳಿ, ಉಳಿಸಿಂಡ, ಮರಕುಟಿಗ, ಪಾರಿವಾಳ, ಗುಬ್ಬಚ್ಚಿ ಮುಂತಾದವು. ಟಿಬೆಟ್ಟಿನ ಪೂರ್ವಭಾಗದಲ್ಲಿ ಸುಂದರವಾದ ಜೀವಂಜೀವಗಳಿವೆ.

ಜನ, ಭಾಷೆ, ಉಡುಪು ಹಾಗೂ ಆಹಾರ: ಟಿಬೆಟಿಯನ್ನರು ಪಶ್ಚಿಮ ಚೀನ ಪರ್ವತಪ್ರದೇಶಗಳಲ್ಲಿ ವಾಸಿಸುವ ಆದಿವಾಸಿಗಳಿಗೆ ಬಹಳ ಹತ್ತಿರದ ಸಂಬಂಧ ಹೊಂದಿದವರು. ಟಿಬೆಟಿಯನ್ ಭಾಷೆಗೂ ಉತ್ತರ ಮಯನ್ಮಾರ್ ಕೂಕಿ ಮತ್ತು ಷಾನ್ ಜನ ಆಡುವ ಭಾಷೆಗಳಿಗೂ ಹೋಲಿಕೆಗಳಿವೆ. ಟಿಬೆಟಿಯನ್ನರ ಪ್ರಧಾನ ಲಕ್ಷಣಗಳು ಕಪ್ಪು ಕೂದಲು, ಕಂದು ಬಣ್ಣ ಮತ್ತು ಕಂದುಕಣ್ಣು. ಲಡಖ್ ಭಾಗದಿಂದ ಹಿಡಿದು ಚೀನದ ವಾಯವ್ಯ ಪ್ರಾಂತ್ಯದವರೆಗೆ ಈ ಜನ ಅಲ್ಲಲ್ಲಿ ಹರಡಿದ್ದಾರೆ. ಇವರಲ್ಲಿ ಮೂರು ಪ್ರಮುಖ ಬಣಗಳಿವೆ: ಟಿಬೆಟ್ಟಿನ ಮಧ್ಯ ಮತ್ತು ಪಶ್ಚಿಮ ಭಾಗಗಳಲ್ಲಿರುವ ಬೋದ್‌ಪೋ, ಪೂರ್ವ ಟಿಬೆಟ್ಟಿನ ಖಂಪ, ವಾಯವ್ಯ ಚೀನದ ಅಮ್‌ದೊ. ಎಲ್ಲರೂ ಬೌದ್ಧಧರ್ಮೀಯರು. ಅವರ ಭಾಷೆ ಒಂದೇ. ಪೂರ್ವ ಟಿಬೆಟ್ಟಿನವರು ಉಳಿದವರಿಗಿಂತ ಸ್ವಲ್ಪ ಎತ್ತರವಾಗಿರಬಹುದು.



ಪೊಟಾಲ ಅರಮನೆ, ಲ್ಹಾಸ

ಬಾಹ್ಯ ಪ್ರಪಂಚದಿಂದ ದೂರವಾದ, ಪರ್ವತಗಳ ನಡುವಣ, ಟಿಬೆಟ್‌ನಲ್ಲಿ ವಿಶಿಷ್ಟ ಪದ್ಧತಿಗಳಿವೆ. ಜನ ಉದ್ದ ತೋಳಿನ ನಿಲುವಂಗಿ, ಕುರಿ ಚರ್ಮದ ಅಂಗಿ, ತಲೆಗೆ ವಿವಿಧ ಆಕಾರಗಳ ಹ್ಯಾಟ್ ಧರಿಸುತ್ತಾರೆ. ಪುರುಷರು ಸರ ಮತ್ತು ಕರ್ಣಾಭರಣಗಳನ್ನು ತೊಡುವುದುಂಟು. ಸ್ತ್ರೀಯರು ವಿವಿಧ ಆಭರಣಗಳನ್ನು ಧರಿಸುತ್ತಾರೆ. ಅವರಿಗೆ ಶಿರಾಭರಣಗಳೂ ಇವೆ. ಕೂದಲನ್ನು ಹಲವಾರು ಕಿರುಜಡೆಗಳಾಗಿ ಹೆಣೆದು ಒಟ್ಟಿಗೆ ಸೇರಿಸಿ ಶೃಂಗರಿಸಿಕೊಳ್ಳುವ ಶೈಲಿ ಇವರದು. ಲಾಮ ಪುರೋಹಿತರು ಮಂತ್ರಿಸಿಕೊಡುವ ತಾಯಿತಗಳನ್ನು ಕೊರಳಲ್ಲಿ ಧರಿಸುತ್ತಾರೆ. ವಿವಾಹಿತ ಸ್ತ್ರೀಯರಿಗೆ ಹೆಚ್ಚು ಗೌರವವಿದೆ. ಆದರೆ ಧರ್ಮಾಚರಣೆಗಳಲ್ಲಿ ಅವರಿಗೆ ಸ್ಥಾನವಿಲ್ಲ. ಜೆಲುಗ್ವ ಸಂನ್ಯಾಸಿಗಳ ಹೊರತು ಇತರ ಲಾಮಗಳು ವಿವಾಹಮಾಡಿಕೊಳ್ಳಬಹುದು. ಬಹುಪತಿ ವಿವಾಹ ರೂಢಿಯಲ್ಲಿದೆ. ಸಹೋದರರು ಒಬ್ಬಳನ್ನೇ ವಿವಾಹಮಾಡಿಕೊಳ್ಳುತ್ತಾರೆ.

ಶ್ರೀಮಂತರ ಭವನಗಳು ಕಲಾಕೃತಿಗೆ ಪ್ರಸಿದ್ಧವಾಗಿವೆ. ಸಾಮಾನ್ಯರ ಮನೆಗಳ ಚಾವಣಿ ಮಣ್ಣಿನದು. ಹಿಂದೆ ಗೋವಳರು ಯಾಕ್ ಪ್ರಾಣಿಯ ಕೂದಲಿನಿಂದ ತಯಾರಿಸಿದ ಉಣ್ಣೆಯ ಡೇರೆಗಳಲ್ಲಿ ವಾಸಿಸುತ್ತಿದ್ದರು.

ಜನರ ಆಹಾರ ಯಾಕ್ ಪ್ರಾಣಿಯ ಮಾಂಸ, ಬಾರ್ಲಿ, ಬೆಣ್ಣೆ, ಚಹ. ಇವರು ಮೀನು ಮತ್ತು ಕೋಳಿ ತಿನ್ನುವುದಿಲ್ಲ. ಮೊಟ್ಟೆಗೆ ಅಭ್ಯಂತರವಿಲ್ಲ. ತಗ್ಗು ಪ್ರದೇಶದ ಜನರ ಆಹಾರ ಅಕ್ಕಿ, ಹಣ್ಣು, ತರಕಾರಿ, ಗೋದಿ. ಬಾರ್ಲಿಯಿಂದ ಮದ್ಯ ತಯಾರಿಸುತ್ತಾರೆ.

ಆರ್ಥಿಕತೆ : ಟಿಬೆಟ್ಟಿನ ಬಹುಭಾಗ ಬಂಜರು ಮತ್ತು ಹಿಮಾವೃತ ನೆಲ. ನದಿಗಳ ಜಲಾನಯನ ಪ್ರದೇಶಗಳಲ್ಲಿ ಹಾಗೂ ಆಗ್ನೇಯದ ಫಲವತ್ತಾದ ತಗ್ಗು ನೆಲದಲ್ಲಿ ವ್ಯವಸಾಯ ನಡೆಯುತ್ತದೆ. ಮುಖ್ಯ ಬೆಳೆಗಳು ಬಾರ್ಲಿ, ಟರ್ನಿಪ್, ಗೋದಿ ಇತರ ಧಾನ್ಯಗಳು. ಆಗ್ನೇಯದಲ್ಲಿ ಬತ್ತವನ್ನು ಬೆಳೆಯುತ್ತಾರೆ. ಬ್ರಹ್ಮಪುತ್ರ ಕಣಿವೆ ಟಿಬೆಟ್ಟಿನ ಕಣಜ. ಅಲ್ಲಿಯ ವ್ಯವಸಾಯೋತ್ಪನ್ನ ಶೇ. 60 ಜನರಿಗೆ ಆಧಾರವಾಗಿದೆ. 1950 ರಲ್ಲಿ ಚೀನೀ ವಿಜ್ಞಾನಸಂಸ್ಥೆ ಪರಿಶೋಧನೆ ನಡೆಸಿ ಭೂಮಿ ಮತ್ತು ವಾಯುಗುಣಗಳಿಗೆ ಅನುಗುಣವಾದ ಬೆಳೆಗಳ ಬಗ್ಗೆ ಸಲಹೆ ನೀಡಿತು.

1950ರ ತರುವಾಯ ಟಿಬೆಟ್ಟಿನಲ್ಲಿ ಖನಿಜ ನಿಕ್ಷೇಪಗಳ ಪರಿಶೋಧನೆ ನಡೆದಿದೆ. ಇಲ್ಲಿ ತೈಲ, ಕಲ್ಲಿದ್ದಲು, ಕಬ್ಬಿಣ, ಮ್ಯಾಂಗನೀಸ್, ಉಪ್ಪು, ಸೋಡ, ಟಿಂಕಣ, ಗಂಧಕ, ಸ್ಫಟಿಕ, ಅಭ್ರಕ, ಗ್ರಾಫೈಟ್, ಜಿಪ್ಸಂ, ಜೇಡು ಶಿಲೆ, ಪಿಂಗಾಣಿ ಮಣ್ಣು ಮುಂತಾದ ಖನಿಜಗಳ ನಿಕ್ಷೇಪಗಳಿವೆ. ಮಿಕಾಂಗ್ ನದಿಯ ಅಂಚಿನಲ್ಲಿ 40 ಕಿಮೀ ದೂರ ಪ್ರದೇಶದಲ್ಲಿ ಕಬ್ಬಿಣದ ಅದಿರು ಸಿಕ್ಕಿದೆ. ಎನ್ಗಚೂಕ ಪ್ರದೇಶದಲ್ಲಿ ಕಲ್ಲಿದ್ದಲು ಹಾಗೂ ಕಬ್ಬಿಣ ಅದಿರು ತೆಗೆಯಲಾಗುತ್ತಿದೆ.

ಟಿಬೆಟ್ ಗೃಹಕೈಗಾರಿಕೆ ಹಾಗೂ ಕುಶಲಕಲೆಗಳಿಗೆ ಪ್ರಸಿದ್ಧವಾಗಿದೆ. ಈಚೆಗೆ ಜವಳಿ,

ಕಬ್ಬಿಣ, ಉಕ್ಕು, ವಿದ್ಯುತ್ತು ಮುಂತಾದ ದೊಡ್ಡ ಉದ್ಯಮಗಳು ಟಿಬೆಟ್ಟಿನಲ್ಲಿ ಸ್ಥಾಪಿತವಾಗಿವೆ. ಟಿಬೆಟ್ಟಿನ ಮುಖ್ಯ ನಿರ್ಯಾತ ವಸ್ತುಗಳು ಉಣ್ಣೆ, ಬೋರಾಕ್ಸ್, ಉಪ್ಪು, ಮೂಲಿಕೆಗಳು, ಪ್ರಾಣಿಮೂಲವಸ್ತುಗಳು. ಚಹ, ರೇಷ್ಮೆ, ಯಂತ್ರಸರಕು ಆಮದಾಗುತ್ತವೆ.

ಹಿಂದೆ ಟಿಬೆಟ್ಟಿನಲ್ಲಿ ಸಾರಿಗೆಸೌಲಭ್ಯಗಳಿರಲಿಲ್ಲ. ಜನರು ಕಾಲುನಡಿಗೆಯಿಂದ ಅಥವಾ ಪ್ರಾಣಿಗಳ ಮೇಲೆ ದಾರಿ ಕ್ರಮಿಸಬೇಕಾಗಿತ್ತು. ಕಮ್ಯೂನಿಸ್ಟ್ ಆಡಳಿತದಲ್ಲಿ ಹಲವು ಮೋಟಾರು ರಸ್ತೆಗಳನ್ನು ನಿರ್ಮಿಸಲಾಗಿದೆ. ಚಿಂಗ್‌ಹೈ ಮತ್ತು ಷೀಕಾಂಗ್ ಹೆದ್ದಾರಿಗಳು ಮುಖ್ಯವಾದವು. 1956 ರಲ್ಲಿ ವಿಮಾನ ಸಂಚಾರ ಪ್ರಾರಂಭವಾಯಿತು. ಲಾಸ ಮತ್ತು ಜೆಂಷೋ ನಡುವೆ ವಿಮಾನಗಳು ಹಾರುತ್ತವೆ. ಚಾಮ್‌ಡೊ, ಷಿಗಾಟ್ಸೆ ಮತ್ತು ಗಾರ್ಟೋಕ್‌ಗಳಲ್ಲಿ ಸೈನಿಕ ವಿಮಾನ ನಿಲ್ದಾಣಗಳಿವೆ.

ಇತ್ತೀಚೆಗೆ ಟಿಬೆಟ್-ಬೀಜಿಂಗ್ ಸಂಪರ್ಕಿಸುವ ರೈಲುಮಾರ್ಗವನ್ನು ನಿರ್ಮಿಸಲಾಗಿದೆ. ಈ ರೈಲು ಮಾರ್ಗ ಸಮುದ್ರಮಟ್ಟಕ್ಕೆ ಸರಾಸರಿ 3,650 ಮೀ ಎತ್ತರದಲ್ಲಿ ಸಾಗುತ್ತದೆ.

(ವಿ.ಜಿ.ಕೆ.;ಆರ್.ಪಿ.ಎಸ್.)

**ಟೀಯೆರ-ಡೆಲ್-ಫ್ಯೂಗೊ:** ದಕ್ಷಿಣ ಅಮೆರಿಕದ ದಕ್ಷಿಣ ತುದಿಯಿಂದ ಆಚೆಗೆ ಇರುವ ದ್ವೀಪಸ್ತೋಮ. ಮೆಗಲನ್ ಜಲಸಂಧಿಗೆ ದಕ್ಷಿಣದಲ್ಲಿ ದ.ಅ. $52^0 27'–55^0 59'$ ಮತ್ತು ಪ.ರೇ. $63^0 43'–74^0 44'$ ನಡುವೆ ಇದೆ. ಮೆಗಲನ್ ಜಲಸಂಧಿ ಈ ದ್ವೀಪಸ್ತೋಮವನ್ನು ಮೂಲ ಭೂಖಂಡದಿಂದ ಪ್ರತ್ಯೇಕಿಸಿದೆ. ಈ ದ್ವೀಪಸ್ತೋಮಕ್ಕೂ ದಕ್ಷಿಣ ಧ್ರುವದ ದ್ವೀಪಸ್ತೋಮಗಳಿಗೂ ನಡುವೆ ಡ್ರೇಕ್ ಜಲಸಂಧಿಯಿದೆ. ಸ್ತೋಮದ ಪ್ರಮುಖ ದ್ವೀಪವಾದ ಈಸ್ ಲ ಗ್ರಾಂಡೀ ಡೇ ಟೀಯೆರ-ಡೆಲ್-ಫ್ಯೂಗೋ ತ್ರಿಕೋಣಾಕಾರವಾಗಿದೆ. ಈ ದ್ವೀಪಸ್ತೋಮದ ಪಶ್ಚಿಮ ಮತ್ತು ದಕ್ಷಿಣ ಭಾಗ ಚಿಲಿಗೆ ಸೇರಿದ್ದು, ಮೆಗಲನಸ್ ಪ್ರಾಂತ್ಯದ ಟೀಯೆರ-ಡೆಲ್-ಫ್ಯೂಗೋ ಡಿಪಾರ್ಟ್‌ಮೆಂಟ್ (ಆಡಳಿತ ವಿಭಾಗ) ಆಗಿದೆ. ಪೂರ್ವಭಾಗ ಅರ್ಜೆಂಟೈನ ರಾಷ್ಟ್ರಕ್ಕೆ ಸೇರಿದ್ದು, ಟೀಯೆರ-ಡೆಲ್-ಫ್ಯೂಗೋ ಪ್ರಾಂತ್ಯವಾಗಿದೆ. 1881ರ ಒಪ್ಪಂದವೊಂದರ ಪ್ರಕಾರ ಚಿಲಿ ಮತ್ತು ಅರ್ಜೆಂಟೈನ ಭಾಗಗಳ ನಡುವಣ ಎಲ್ಲೆ ಪ.ರೇ. $68^0 36' 38''$ ನೇರಕ್ಕೆ ಹರಿಯುತ್ತದೆ. ಕಿರುದ್ವೀಪಗಳ ಪೈಕಿ ಲಾಸ್ ಎಸ್ತಾದೋಸ್ ಮೊದಲಾದ ಪೂರ್ವ ಭಾಗದ ದ್ವೀಪಗಳು ಅರ್ಜೆಂಟೈನಕ್ಕೆ ಸೇರಿವೆ. ಹೋಸ್ಟೇ, ನ್ಯಾವರೀನೋ, ವಲಸ್ಟನ್, ಡ್ಯೇಗೋ ರಾಮೀರೆಸ್ ಮೊದಲಾದ ಪಶ್ಚಿಮ ದ್ವೀಪಗಳು ಚಿಲಿಗೆ ಸೇರಿವೆ. ಈ ಸ್ತೋಮಕ್ಕೆ ಸೇರಿದ ಕೆಲವು ದ್ವೀಪಗಳ ಒಡೆತನದ ಬಗ್ಗೆ ಎರಡೂ ದೇಶಗಳ ನಡುವೆ ವಿವಾದವುಂಟು. ದ್ವೀಪಸ್ತೋಮದ ವಿಸ್ತೀರ್ಣ 73,643 ಚ. ಕಿಮೀ. ಜನಸಂಖ್ಯೆ 1,14,000 (2000).

ಮೇಲ್ಮೈ ಲಕ್ಷಣ : ಈಸ್ ಲ ಗ್ರಾಂಡಿಗೆ ಉತ್ತರದಲ್ಲಿ ತೃತೀಯ ಭೂಯುಗದಷ್ಟು, ಜ್ವಾಲಾಮುಖಿಜನ್ಯ ಮುರುಕಲುಗುಪ್ಪೆಗಳು ಹರಡಿವೆ. ಹಿಮದ ಸರೋವರಗಳಿವೆ. ಇನೂಟೀಲ್ ಕೊಲ್ಲಿಯ ಉತ್ತರ ಭಾಗ ಫಲವತ್ತಾದ ಭೂಮಿ. ಉತ್ತರ ಭಾಗದ ನದಿಗಳು ಈ ಬಯಲಲ್ಲಿ ಹರಿಯುತ್ತವೆ. ಈ ಪ್ರಮುಖ ದ್ವೀಪದ ಅಟ್ಲಾಂಟಿಕ್ ಹಾಗೂ ಮೆಗಲನ್ ಜಲಸಂಧಿಯ ತೀರಗಳೂ ತೀರ ತಗ್ಗು. ಇಲ್ಲಿಯ ಹಲವು ಶಿಖರಗಳು 2130 ಮೀ ಗಿಂತ ಹೆಚ್ಚು ಎತ್ತರ. ಪರ್ವತಗಳಲ್ಲಿ ಹಿಮ ನದಿಗಳಿವೆ. ಅತ್ಯಂತ ಎತ್ತರವಾದ ಶಿಖರಗಳು ಸೆರ್‍ಮ್ಯೆಂಡೊ (2235 ಮೀ) ಹಾಗೂ ಡಾರ್ವಿನ್ (2132 ಮೀ) ಮೆಗಲನ್ ಜಲಸಂಧಿಯ ಪಶ್ಚಿಮದ ಅಂಚಿನಲ್ಲಿ ಕಡಿದಾದ ಪ್ರಪಾತಗಳೂ ಕಡಲ ಚಾಚುಗಳೂ ಇವೆ. ಹಾರ್ನ್ ಭೂಶಿರವೇ ದಕ್ಷಿಣ ಅಮೆರಿಕದ ತುತ್ತತುದಿಯೆಂದು ಪರಿಗಣಿಸಲಾಗಿದೆ. ಆದರೆ ಅದಕ್ಕೆ ನೈಋತ್ಯದಲ್ಲಿ 96 ಕಿಮೀ ದೂರದಲ್ಲಿ ಡ್ಯೇಗೋ ರಾಮೀರೆಜ಼್ ದ್ವೀಪಸ್ತೋಮವಿದೆ.

ವಾಯುಗುಣ : ಚಳಿಗಾಲದಲ್ಲಿ ಚಳಿ ಅಧಿಕ. ಬೇಸಗೆಯಲ್ಲಿ ಬಿಸಿಲ ತಾಪವಿಲ್ಲ. ಜುಲೈ ಸರಾಸರಿ ಉಷ್ಣತೆ $11^0$ಸೆ ಪಶ್ಚಿಮ ಹಾಗೂ ಪೂರ್ವ ಭಾಗಗಳಲ್ಲಿ ಮಳೆಯಲ್ಲಿ ಅಂತರವುಂಟು. ಡೆಸೋಲೇಷಸ್ ದ್ವೀಪದ ಬಾಹಿಯ ಫಿಲಿಕ್ಸ್ ಬಳಿ ವಾರ್ಷಿಕ ಸರಾಸರಿ ಮಳೆ 50 ಸೆಂಮೀ. ಅರ್ಜೆಂಟೈನಕ್ಕೆ ಸೇರಿದ ರೀಯೊ ಗ್ರಾಂಡ್ ಬಳಿ ಕೇವಲ 5ಸೆಂಮೀ ಮಳೆಯಾಗುತ್ತದೆ.

ಸಸ್ಯಗಳು ಮತ್ತು ಪ್ರಾಣಿಗಳು : ಮಳೆ ಹೆಚ್ಚಾಗಿರುವ ದಕ್ಷಿಣ ಹಾಗೂ ಪಶ್ಚಿಮ ಪ್ರದೇಶಗಳಲ್ಲಿ ಪಾಚಿ ಮತ್ತು ಗಿಡ್ಡಮರಗಳೂ ಫಲವತ್ತಾದ ದಡಗಳಲ್ಲಿ ಹಾಗೂ ಇನೂಟೀಲ್ ಕೊಲ್ಲಿಯ ಭಾಗದಲ್ಲಿ ಬೀಜ್ ಮರಗಳೂ ಉತ್ತರದಲ್ಲಿ ಹುಲ್ಲುಗಾವಲೂ ಇವೆ. ಭೂಭಾಗದಲ್ಲಿ ಗ್ವಾನಾಕೊ, ಟುಕು-ಟುಕು ಮೊದಲಾದ ತುಪ್ಪುಳು ಪ್ರಾಣಿಗಳೂ ಕಡಲಲ್ಲಿ ವಿವಿಧ ಮೀನುಗಳೂ ಸೀಲ್, ನೀರು ನಾಯಿ (ಓಟರ್) ಮೊದಲಾದ ಜಲಚರ ಪ್ರಾಣಿಗಳೂ ಕಡಲ ಪಕ್ಷಿಗಳೂ ಉಂಟು.

ಜನ : ಟೀಯೆರ-ಡೆಲ್-ಫ್ಯೂಗೋ ದ್ವೀಪದ ಆದಿವಾಸಿಗಳು ಓನ ಹಾಗೂ ಯಹಗಾನ್ ಇಂಡಿಯನರು. ಓನ ಬಣದವರ ವಾಸ ಈಸ್ ಲ ಗ್ರಾಂಡೀ ದ್ವೀಪದ ಉತ್ತರಭಾಗದ ಅರಣ್ಯಗಳಲ್ಲಿ ; ಗ್ವಾನಾಕೊ ಮೊದಲಾದ ತುಪ್ಪುಳು ಪ್ರಾಣಿಗಳ ಬೇಟೆಯೆ ಇವರ ಕಸಬು. ಯಹಗಾನ್ ಬಣದವರ ವಾಸ ಬೀಗಲ್ ನಾಲೆಯ ಅಂಚು ಹಾಗೂ ಕಿರುದ್ವೀಪಗಳಲ್ಲಿ ಇವರ ಜೀವನೋಪಾಯ ಚಿಪ್ಪುಮೀನು, ಸೀಲ್, ನೀರುನಾಯಿ ಮೊದಲಾದ ಕಡಲಪ್ರಾಣಿಗಳ ಬೇಟೆಯಿಂದ. ಅಲಕಲುಫ್ ಬಣದ ಒಂದು ತಂಡ ಮೆಗಲನ್ ಜಲಸಂಧಿಯ ಪಶ್ಚಿಮದಿಂದ ವಾಯವ್ಯ ನಾಲೆಗಳ ಕಡೆ ಹೋಗಿ ನೆಲೆಸಿತು. ಯುರೋಪ್ ಜನರ ವಲಸೆ ಹಾಗೂ ಅವರು ತಂದು ಹರಡಿದ ರೋಗರುಜಿನಗಳಿಂದ ಆದಿವಾಸಿಗಳು ಬಹುತೇಕ ನಾಶಹೊಂದಿದರು. ಈಗ ಉಳಿದುಕೊಂಡಿರುವವರ ಸಂಖ್ಯೆ ತೀರ ಕಡಿಮೆ. ಪ್ರಮುಖ ದ್ವೀಪದಲ್ಲಿ ಜನಸಾಂದ್ರತೆ ಉಳಿದೆಡೆಗಳಲ್ಲಿರುವುದಕ್ಕಿಂತ ಅಧಿಕ. ಕುರಿ ಸಾಕುವ ಜನ ನವರಿನೋ ದ್ವೀಪದಲ್ಲಿದ್ದಾರೆ.

ಆರ್ಥಿಕತೆ : ಕುರಿಸಾಕಣೆ, ಪೆಟ್ರೋಲ್ ಗಣಿಗಾರಿಕೆ ಇಲ್ಲಿಯ ಪ್ರಮುಖ ಆರ್ಥಿಕ ಮೂಲಗಳು. ಉತ್ತರ ಭಾಗದಲ್ಲಿ ಬೃಹತ್ ಕುರಿಸಾಕಣೆ ಕ್ಷೇತ್ರಗಳಿವೆ. ಕೆಲವು ಕ್ಷೇತ್ರಗಳಿಗೆ ಸಾವಿರಾರು ಎಕರೆ ಹುಲ್ಲುಗಾವಲುಗಳಿವೆ. 1938 ಮತ್ತು 1957ರಲ್ಲಿ ಈ ಭೂಮಿಗಳ ಕೆಲವು ಗೇಣಿ ಕರಾರುಗಳು ಮುಕ್ತಾಯವಾದುವು. ಭೂಮಿಯನ್ನು ವಿಭಜಿಸಿ ಜನರನ್ನು ಹೆಚ್ಚಾಗಿ ನೆಲೆಗೊಳಿಸುವ ವ್ಯವಸ್ಥೆಯಾಯಿತು. ಚಿಲಿ ಭಾಗದಲ್ಲಿ 1945ರಲ್ಲಿ ಪೆಟ್ರೋಲ್ ಸಿಕ್ಕಿತು. ಬೀಗಲ್ ನಾಲೆಯ ಹಾಗೂ ಮೆಗಲನ್ ಸಂಧಿಯ ಅಂಚಿನ ಅರಣ್ಯಗಳಲ್ಲಿ ಮರಗಳನ್ನು ಕಡಿದು ದಿಮ್ಮಿಗಳನ್ನು ಸಾಗಿಸುತ್ತಾರೆ. ಊಸ್ವೇಯ ಮತ್ತು ಪೋರ್ವೆನಿರ್ ನಗರಗಳಲ್ಲಿ ಮೀನು ಸಂವೇಷ್ಟನ ಉದ್ಯಮವಿದೆ. ದ್ವೀಪಗಳ ಕೆಲವು ಭಾಗಗಳಲ್ಲಿ ತುಪ್ಪುಳು ಸಂಗ್ರಹಕ್ಕಾಗಿ ತುಪ್ಪುಳು ಪ್ರಾಣಿಗಳ ಬೇಟೆಯಾಡುತ್ತಾರೆ. ಕುರಿಮಾಂಸ ಡಬ್ಬೀಕರಣ ಕಾರ್ಖಾನೆಗಳು ರೀಯೋಗ್ರಂಡಿ ನಗರದಲ್ಲಿವೆ.

ಸಾರಿಗೆ ಮತ್ತು ಸಂಪರ್ಕ : ದ್ವೀಪಸ್ತೋಮದಲ್ಲಿ ರಸ್ತೆ ವ್ಯವಸ್ಥೆ ಸಮರ್ಪಕವಾಗಿಲ್ಲ. ರೈಲುಮಾರ್ಗಗಳಿಲ್ಲ. ಚಿಲಿ ಮತ್ತು ಅರ್ಜೆಂಟೈನ ಭಾಗಗಳಿಗೆ ರೀಯೊ ಗಲೆಗೋಸ್ ಹಾಗೂ ಪುಂಟ ಅರೆನಾಸ್ ನಗರಗಳಿಂದ ವಿಮಾನಗಳು ಹಾರಾಡುತ್ತವೆ. ಈ ದ್ವೀಪಸ್ತೋಮದಲ್ಲಿ ಜಲಮಾರ್ಗಗಳೂ ಮುಖ್ಯವಾಗಿವೆ. ಪೋರ್ವೆನಿರ್ ನಿಂದ ಪುಂಟ ಅರೆನಾಸ್ ರೇವಿಗೆ ವೇಳಾಬದ್ಧವಾಗಿ ಹಡಗುಗಳು ಸಂಚರಿಸುತ್ತವೆ. ನವರಿನೋ ಮತ್ತು ಊಸ್ವೇಯ ರೇವುಗಳಿವು ಸಾರಿಗೆ ಹಡಗುಗಳು ಬರುತ್ತವೆ. *

**ಟುವಾಲು:** ಪಶ್ಚಿಮ ಶಾಂತಸಾಗರದಲ್ಲಿನ ಒಂದು ಪುಟ್ಟ ದ್ವೀಪರಾಜ್ಯ. ಹಿಂದಿನ ಹೆಸರು ಎಲ್ಲಿಸ್ ಐಲೆಂಡ್ಸ್. ಚದುರಿದಂತಿರುವ ಒಂಭತ್ತು ಹವಳ ದಿಬ್ಬಗಳನ್ನೊಳಗೊಂಡ ಪ್ರಪಂಚದ ಅತಿ ಚಿಕ್ಕಸ್ವತಂತ್ರ ರಾಷ್ಟ್ರ. 1975 ರಲ್ಲಿ ಬ್ರಿಟಿಷರಿಗೆ ಸೇರಿದ್ದ ಎಲ್ಲೈಸ ಮತ್ತು ಗಿಲ್ಬರ್ಟ್ ದ್ವೀಪ ವಸಾಹತುಗಳಿಂದ 1978 ಅಕ್ಟೋಬರ್ 1 ರಂದು ಸ್ವತಂತ್ರವಾಯಿತು. ದ.ಅ. $8^0$ ಮತ್ತು ಪೂ.ರೇ. $178^0$.ಗಳಲ್ಲಿ ಸನ್ನಿವೇಶಗೊಂಡಿದೆ. ವಿಸ್ತೀರ್ಣ 26 ಚ.ಕಿಮೀಗಳು. ಜನಸಂಖ್ಯೆ 11,636 (2001). ರಾಜಧಾನಿ ಪುನಾಪುಟಿ. ಜನಸಂಖ್ಯೆ 3900. ಹಣ ಆಸ್ಟ್ರೇಲಿಯದ ಡಾಲರ್. ಸಂಸದ ಮಾದರಿಯ ಪ್ರಜಾತಂತ್ರ ವ್ಯವಸ್ಥೆಯಿದೆ. ಸೆಪ್ಟೆಂಬರ್ 2000 ದಲ್ಲಿ 189 ನೆಯ ದೇಶವಾಗಿ ವಿಶ್ವ ಸಂಸ್ಥೆಗೆ ಸೇರ್ಪಡೆಯಾಯಿತು.




ಈ ದ್ವೀಪಗಳ ಉತ್ತರಭಾಗದಲ್ಲಿ ಫ಼ಿಜಿ ದ್ವೀಪ ಮತ್ತು ಪೂರ್ವಕ್ಕೆ ಸಾಲೋಮನ್ ದ್ವೀಪಗಳು ಹಂಚಿಕೆಯಾಗಿವೆ. ಈ ಹಿಂದೆ ಟುವಾಲು ದ್ವೀಪವನ್ನು ಇಲ್ಲಿಸ್ ದ್ವೀಪಗಳು ಎಂದು ಕರೆಯುತ್ತಿದ್ದರು. ಟುವಾಲು ದ್ವೀಪ ಸಮೂಹದ ಇತರೆ ದ್ವೀಪಗಳೆಂದರೆ ನ್ಯೂಲಾಕಿಬ, ನ್ಯೂಕುಲ್ಯಾಲ, ಫುನ್ನಾಫುಟಿ (ರಾಜಧಾನಿ) ನ್ಯೂಕುಫ಼ಿಟೌ, ವೈಟಾಪು, ನ್ಯೊಯಿ, ನ್ಯೊಯಿಟೌ, ನಾನುಮ್ಯಾಗ ಮತ್ತು ನಾನುಮಿಯ. 1975ರಲ್ಲಿ ಈ ದ್ವೀಪಗಳು ಸ್ವತಂತ್ರ ರಾಷ್ಟ್ರವಾಗಿ ರೂಪುಗೊಂಡವು.

ಈ ದ್ವೀಪಗಳಲ್ಲಿ ಕಂಡುಬರುವ ಮಣ್ಣು ಸತ್ತ್ವರಹಿತವಾಗಿರುವುದರಿಂದ ಕೃಷಿಗೆ ಪೂರಕವಾಗಿಲ್ಲ. ಧಾನ್ಯಗಳ ಉತ್ಪಾದನೆ ಕೇವಲ ಗೃಹ ಬಳಕೆಗಾಗಿ ಮಾತ್ರ ಸೀಮಿತವಾಗಿದೆ. ಇಲ್ಲಿನ ಪ್ರಮುಖ ಬೆಳೆ ತೆಂಗು, ಅಲ್ಪಪ್ರಮಾಣದಲ್ಲಿ ಬಾಳೆ ಮತ್ತು ಹಣ್ಣುಗಳನ್ನು ಬೆಳೆಯಲಾಗುತ್ತಿದೆ. ಈ ರಾಷ್ಟ್ರದ ಪ್ರಮುಖ ಕೈಗಾರಿಕೆಗಳೆಂದರೆ ತೆಂಗಿನ ನಾರಿನ ಉತ್ಪನ್ನಗಳು, ಮತ್ಸ್ಯೋದ್ಯಮ, ಒಣಕೊಬ್ಬರಿ ಸಂಸ್ಕರಣೆ, ಪ್ರವಾಸೋದ್ಯಮ ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗಿದೆ.

ಇಲ್ಲಿನ ಅಧಿಕೃತ ಭಾಷೆ ಟುವಾಲುವನ್ ಮತ್ತು ಇಂಗ್ಲಿಷ್. ಕ್ರೈಸ್ತ ಧರ್ಮೀಯರೇ ಅಧಿಕ ಸಂಖ್ಯೆ. ಈ ರಾಷ್ಟ್ರದ ತಲಾವಾರು ಆದಾಯ 450 ಡಾಲರ್. ರಾಷ್ಟ್ರದ ಆದಾಯ

ಆಮದು ಮತ್ತು ರಫ್ತಿನಿಂದ, ವಾಣಿಜ್ಯ ಸುಂಕವು ಹೆಚ್ಚಿನ ವಿದೇಶಿ ವಿನಿಮಯವನ್ನು MzÀV ÀwÚÉM PÉÆßj ¥ÀæÃÀR gÀÁµÀÖ xÀ. (ವಿ.ಎಸ್.ಎ.)

**ಟೂರ್‍ಯಾಂಟೊ :** ಅಮೆರಿಕ ಸಂಯುಕ್ತ ಸಂಸ್ಥಾನಗಳ ಪೈಕಿ ಓಹೈಯೊ ರಾಜ್ಯದ ಜಫರ್‌ಸನ್ ಜಿಲ್ಲೆಯ ನಗರ. ಓಹೈಯೊ ನದಿಯ ದಂಡೆಯ ಮೇಲಿದೆ. ಜನಸಂಖ್ಯೆ 5670 (2001). ಉಕ್ಕಿನ ಫಲಕ. ಟಿಟಾನಿಯಂ ಮತ್ತು ಕಾಗದದ ಕೈಗಾರಿಕೆಗಳಿವೆ. ಹೈನುಗಾರಿಕೆಯೂ ಉಂಟು. (ಡಿ.ವೈ.)

**ಟೆಕ್ಸಾಸ್:** ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಸೇರಿದ, ಅದರ ಪಶ್ಚಿಮದಲ್ಲಿರುವ ಒಂದು ರಾಜ್ಯ. ಪ.ರೇ. 93°31′–106°38′ ಮತ್ತು ಉ.ಅ. 25°50′–36°30′ ನಡುವೆ ಹಬ್ಬಿದೆ. ಇಂಡಿಯನ್ ಹೆಸರಾದ ಟೆಕ್ಸಿಯ ಎಂಬುದರಿಂದ ಟೆಕ್ಸಾಸ್ ಎಂಬ ಹೆಸರು ಬಂದಿದೆ. ನೈಋತ್ಯದಲ್ಲಿ ಮೆಕ್ಸಿಕೊ ಗಣರಾಜ್ಯ, ಪಶ್ಚಿಮದಲ್ಲಿ ನ್ಯೂ ಮೆಕ್ಸಿಕೊ ರಾಜ್ಯ, ಉತ್ತರದಲ್ಲಿ ಓಕ್ಲಹಾಮ, ಈಶಾನ್ಯದಲ್ಲಿ ಅರ್ಕಾನ್‌ಸಿಸ್, ಪೂರ್ವದಲ್ಲಿ ಲುಸಿಯಾನ ರಾಜ್ಯ, ಆಗ್ನೇಯದಲ್ಲಿ ಮೆಕ್ಸಿಕೊ ಖಾರಿ–ಇವು ಇದರ ಮೇರೆಗಳು. ಈ ರಾಜ್ಯದ ವಿಸ್ತೀರ್ಣ 6,92,410 ಚ.ಕಿಮೀ. ಇದು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಎರಡನೆಯ ದೊಡ್ಡ ರಾಜ್ಯ. ಜನಸಂಖ್ಯೆ 2,08,51,820 (2002). ರಾಜಧಾನಿ ಹ್ಯೂಸ್ಟನ್ ಜನಸಂಖ್ಯೆ 20,16,582 (2005).

ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳೆರಡರಿಂದ ಸಮಾನ ದೂರದಲ್ಲಿರುವ ಈ ರಾಜ್ಯಕ್ಕೆ 1000 ಕಿಮೀ ಗಳ ಸಮುದ್ರತೀರವುಂಟು. ಇದೊಂದು ವೈಪರೀತ್ಯಗಳ ನಾಡು. ರಾಜ್ಯವೆನ್ನುವುದಕ್ಕಿಂತ ಇದೊಂದು ಪ್ರದೇಶದಂತಿದೆಯೆನ್ನಬಹುದು. ಭಾಷೆ, ಪ್ರಧಾನ ಮತ ಮತ್ತು ನಾಗರಿಕತೆಗಳಲ್ಲಿ ಭಿನ್ನವಾಗಿರುವ ಅನ್ಯರಾಷ್ಟ್ರವೊಂದರೊಡನೆ (ಮೆಕ್ಸಿಕೋ) ಗಡಿ ಹೊಂದಿರುವ ಟೆಕ್ಸಾಸ್ ರಾಜ್ಯ ಅಮೆರಿಕ ಸಂಯುಕ್ತ ಸಂಸ್ಥಾನಗಳ ಇತರ ರಾಜ್ಯಗಳಿಗಿಂತ ಅನೇಕ ರೀತಿಯಲ್ಲಿ ಭಿನ್ನವಾದ್ದು. ಸ್ವತಂತ್ರರಾಷ್ಟ್ರವಾಗಿದ್ದು ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸೇರಿದ ರಾಜ್ಯ ಇದೊಂದೇ. 1836ರಲ್ಲಿ ಇದು ಮೆಕ್ಸಿಕೊದಿಂದ ಸ್ವತಂತ್ರವಾಗಿ ಗಣರಾಜ್ಯವಾಗಿತ್ತು. 1845ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸೇರ್ಪಡೆ ಹೊಂದಿತು.

ಮೇಲ್ಮೈಲಕ್ಷಣ : ಪಶ್ಚಿಮ ಪರ್ವತಗಳಿಗೆ ಒರಗಿಸಿ ನಿಲ್ಲಿಸಿದಂತೆ ಟೆಕ್ಸಾಸ್ ರಾಜ್ಯ ಆಗ್ನೇಯದ ಕಡೆಗೆ ಇಳಿಜಾರಾಗಿದೆ. ಆದ್ದರಿಂದ ಟೆಕ್ಸಾಸಿನ ನದಿಗಳು ವಾಯವ್ಯದಿಂದ ಆಗ್ನೇಯಕ್ಕೆ, ಒಂದಕ್ಕೊಂದು ಬಹುತೇಕ ಸಮಾನಾಂತರಗಳಲ್ಲಿ ಹರಿಯುತ್ತವೆ. ಸಬೀನ್, ನೆಚೆಸ್, ಟ್ರಿನಿಟೀ, ಬ್ರ್ಯಾಜಸ್, ಕೊಲರಾಡೊ, ಗ್ವಾಡ್ಲೂಪ್, ಸ್ಯಾನ್ ಆಂಟೋನಿಯೋ, ನುವೇಸ್, ರೀಯೊ ಗ್ರಾಂಡ್–ಇವು ಮೆಕ್ಸಿಕೊ ಖಾರಿಯನ್ನು ಸೇರುತ್ತವೆ. ಇವುಗಳಲ್ಲಿ ಅತ್ಯಂತ ಉದ್ದವಾದ್ದು ರೀಯೊ ಗ್ರಾಂಡ್. ಇದು ಟೆಕ್ಸಾಸಿನ ನೈಋತ್ಯ ಗಡಿಯಾಗಿ ಪರಿಣಮಿಸಿದೆ. ರೆಡ್ ನದಿ ಉದ್ದದಲ್ಲಿ ಎರಡನೆಯದು. ಇದೂ ಸಬೀಸ್ ನದಿಯೂ ಅನುಕ್ರಮವಾಗಿ ಭಾಗಶಃ ಉತ್ತರ ಮತ್ತು ಪೂರ್ವ ಗಡಿಗಳಾಗಿವೆ. ರಾಜ್ಯದ ಇತಿಹಾಸ, ಸಂಸ್ಕೃತಿ, ಆರ್ಥಿಕತೆಗಳ ಮೇಲೆ ಅಸಾಧಾರಣ ಪರಿಣಾಮ ಬೀರಿರುವ ನೈಸರ್ಗಿಕ ವಿಭಾಗ ರೇಖೆಯೆಂದರೆ ಬಾಲ್ಕೋನ್ಸ್ ಸ್ತರಭಂಗ, ಇದು ಟೆಕ್ಸಾಸನ್ನು ಎರಡು ಭಾಗಗಳಾಗಿ ವಿಭಜಿಸಿದೆ. ರೀಯೊ ಗ್ರಾಂಡ್ ನದಿಯಿಂದ ಸ್ಯಾನ್ ಆಂಟೋನಿಯೋವರೆಗೆ ಪೂರ್ವಾಭಿಮುಖವಾಗಿ ಸಾಗಿ ಅನಂತರ ಆಸ್ಟಿನ್ ನಗರದ ವರೆಗೆ ಈಶಾನ್ಯ ದಿಕ್ಕಿನಲ್ಲಿ ಮುಂದುವರಿದು, ಅಲ್ಲಿ ಪಶ್ಚಿಮಕ್ಕೆ ಉಬ್ಬಿ ಅನಂತರ ಮತ್ತೆ ಈಶಾನ್ಯಾಭಿಮುಖವಾಗಿ ರೆಡ್ ನದಿಯನ್ನು ತಲುಪುವ ಈ ರೇಖೆಯ ಪೂರ್ವಕ್ಕೆ ಇರುವ ಪ್ರದೇಶ ಇಡೀ ರಾಜ್ಯದ ಶೇ.40 ರಷ್ಟಿದೆ. ಎಲ್ ಪ್ಯಾಸೋವನ್ನು ಉಳಿದು ರಾಜ್ಯದ ಎಲ್ಲ ಜನಭರಿತ ನಗರಗಳೂ ಬಹುತೇಕ ಸಂಪತ್ತೂ ಇರುವುದು ಈ ಪ್ರದೇಶದಲ್ಲಿ. ಇಲ್ಲಿ ಮಳೆಯೂ ಅಧಿಕ. ಪಶ್ಚಿಮ ಭಾಗದಲ್ಲಿ ಮಳೆ ಕಡಿಮೆ; ನೀರಾವರಿ ಸೌಲಭ್ಯ ಇರುವಲ್ಲಿ ಮಾತ್ರ ವ್ಯವಸಾಯ ಪ್ರಗತಿ ಹೊಂದಿದೆ; ತೈಲ ಇರುವ ಪ್ರದೇಶಗಳು ಮುಂದುವರಿದಿವೆ.

ಭೌತಿಕವಾಗಿ ಟೆಕ್ಸಾಸ್ ರಾಜ್ಯದಲ್ಲಿ ನಾಲ್ಕು ವಿಭಾಗಗಳಿವೆ: 1. ಖಾರಿಯ ಬಳಿಯ ಕರಾವಳಿ ಬಯಲು: ಇದು ಬಾಲ್ಕೋನ್ಸ್ ಸ್ತರಭಂಗ ರೇಖೆಯ ಪೂರ್ವದ ಪ್ರದೇಶದ ಶೇ. 40 ಭಾಗವನ್ನೊಳಗೊಂಡಿದೆ. ಸಮುದ್ರಮಟ್ಟದಿಂದ 244 ಮೀ ವರೆಗೆ ಉನ್ನತವಾಗುತ್ತ ಸಾಗುವ ಪ್ರದೇಶವೆಲ್ಲ ಇದರಲ್ಲಿ ಸೇರುತ್ತದೆ. 2. ಮಧ್ಯದ ತಗ್ಗು ನೆಲ; ಪೂರ್ವದ ಕರಾವಳಿ ಬಯಲಿಗೂ ಪಶ್ಚಿಮ ಮತ್ತು ದಕ್ಷಿಣದ ಮಹಾ ಮೈದಾನಕ್ಕೂ (ಗ್ರೇಟ್ ಪ್ಲೇನ್ಸ್) ನಡುವೆ 320 ಕಿಮೀ ಅಗಲಕ್ಕೆ ಹಬ್ಬಿರುವ ಪ್ರದೇಶವಿದು. ಇದರ ಪೂರ್ವ ಅಂಚು ಸಮುದ್ರಮಟ್ಟದಿಂದ 245 ಮೀ ಎತ್ತರವಾಗಿದೆ. ಪಶ್ಚಿಮದ ಮಹಾ ಮೈದಾನದ ಬಳಿ ಇದರ ಎತ್ತರ 762 ಮೀ ಇಡೀ ಪ್ರದೇಶ ಇಳಿಜಾರಾಗಿದೆ. 3. ಮಹಾ ಮೈದಾನ; ಮಧ್ಯದ ತಗ್ಗು ನೆಲದ ಪಶ್ಚಿಮ ಮತ್ತು ದಕ್ಷಿಣಕ್ಕೆ ಮತ್ತು ಖಾರಿಯ ಕರಾವಳಿ ಬಯಲಿನ ಪಶ್ಚಿಮಕ್ಕೆ ಇರುವ ಪ್ರದೇಶ ರಾಕೀ ಪರ್ವತಗಳ ಪೂರ್ವ ಇಳಿಜಾರಿನವರೆಗೂ ವಿಸ್ತರಿಸಿದೆ. ಪೂರ್ವದ ಎಲ್ಲೆಯ ಬಳಿ 760 ಮೀ ಎತ್ತರದಿಂದ ಥಟ್ಟನೆ ಮೇಲೇರುವ ಈ ಪ್ರದೇಶ ನ್ಯೂ ಮೆಕ್ಸಿಕೊ ರಾಜ್ಯದ ಎಲ್ಲೆಯಲ್ಲಿ 7360 ಮೀ ಎತ್ತರವಾಗಿದೆ. 4. ರಾಕೀ ಪರ್ವತಗಳು: ಇದು ಟೆಕ್ಸಾಸಿನ ಅತ್ಯಂತ ಬರಡು ಪ್ರದೇಶವಾದರೂ ಹಲವು ಬಗೆಯಲ್ಲಿ ಸ್ವಾರಸ್ಯಕರ. ಇದು ಮರುಭೂಮಿಗಳಿಂದಲೂ ರಾಜ್ಯದ ಅತ್ಯುನ್ನತ ಶಿಖರಗಳಿಂದಲೂ ಬಿಗ್ ಬೆಂಡ್ ರಾಷ್ಟ್ರೀಯ ವನದ ವೈವಿಧ್ಯಮಯ ಸೌಂದರ್ಯದಿಂದಲೂ ಕೂಡಿದೆ. ಇದರ ಎತ್ತರ 610–2500ಮೀ. ಟೆಕ್ಸಾಸಿನ ಪಶ್ಚಿಮದ ಅಂಚಿನಲ್ಲಿರುವ ಎಲ್ ಪಾಸೋ ನಗರಪ್ರದೇಶವನ್ನು ಬಿಟ್ಟರೆ ಉಳಿದ ಭಾಗದಲ್ಲಿ ಜನಸಂಖ್ಯೆ ವಿರಳವಾಗಿದೆ.

ವಾಯುಗುಣ : ಟೆಕ್ಸಾಸ್ ಮಧ್ಯಮ ಉಷ್ಣತೆಯ ಪ್ರದೇಶದಲ್ಲಿದೆ. ಚಳಿಗಾಲದಲ್ಲಿ ಕೆಲವೊಮ್ಮೆ ಇಡೀ ಟೆಕ್ಸಾಸ್ ರಾಜ್ಯದಲ್ಲಿ ತೀವ್ರವಾದ ಚಳಿಯೂ ಬೇಸಗೆಯಲ್ಲಿ ಉದ್ದಕ್ಕೂ ತೀವ್ರ ತಾಪವೂ ಇರುತ್ತವೆ. ಉತ್ತರದ ತುದಿಯಲ್ಲಿ ಮಧ್ಯ ವಾರ್ಷಿಕ ಉಷ್ಣತೆ $13^0$ಸೆ. ದಕ್ಷಿಣದ ಕೊನೆಯಾದ ರೀಯೊ ಗ್ರಾಂಡ್ ಬಳಿ $23^0$ಸೆ. ರಾಜ್ಯದ ಅತ್ಯಂತ ಪೂರ್ವದಲ್ಲಿ ವಾರ್ಷಿಕ ಸರಾಸರಿ ಮಳೆ 140 ಸೆಂಮೀ. ಪಶ್ಚಿಮಕ್ಕೆ ಸಾಗಿದಂತೆ ಇದು ಕಡಿಮೆಯಾಗುತ್ತದೆ. ಎಲ್ ಪ್ಯಾಸೋದಲ್ಲಿ 10ಕ್ಕಿಂತ ಕಡಿಮೆ. ವಾರ್ಷಿಕ ಸರಾಸರಿ ಹಿಮಪಾತ ಉತ್ತರದಲ್ಲೂ ಉನ್ನತ ಪರ್ವತ ಪ್ರದೇಶದಲ್ಲೂ ಕಡಿಮೆ. ಉಳಿದ ಪ್ರದೇಶದಲ್ಲಿ ಹೆಚ್ಚಿಲ್ಲ. ಚಳಿಗಾಲದಲ್ಲೂ ಅದಕ್ಕೆ ಮುಂದು ಹಿಂದಿನ ದಿನಗಳಲ್ಲೂ ಟೆಕ್ಸಾಸಿನ ಮೇಲೆ ಉತ್ತರದಿಂದ ತೀವ್ರ ಚಳಿಗಾಳಿ ಬೀಸಿ, ಕೇವಲ 2–3 ಗಂಟೆಗಳಲ್ಲಿ ರಾಜ್ಯದ ಉಷ್ಣತೆ $11^0$ಸೆ. ಇಳಿಯುವುದುಂಟು. ಆದರೆ $0^0$ಸೆ. ಗಿಂತ ಕಡಿಮೆ ಉಷ್ಣತೆ ಹೆಚ್ಚುಕಾಲ ಇರುವುದಿಲ್ಲ. ಟೆಕ್ಸಾಸಿನ ಹವಾಗುಣ ಆಗಾಗ್ಗೆ ತೀವ್ರ ಬದಲಾವಣೆಗಳಿಗೆ ಒಳಗಾಗುತ್ತದೆ. ಜುಲೈನಿಂದ ಸೆಪ್ಟೆಂಬರ್ ವರೆಗಿನ ಕಾಲದಲ್ಲಿ ಆಗಿಂದಾಗ್ಗೆ ಚಂಡಮಾರುತ ಬೀಸಿ ಜನಕ್ಕೂ ಆಸ್ತಿಗೂ ತೀವ್ರ ಅಪಾಯಕಾರಿಯಗಿ ಪರಿಣಮಿಸುತ್ತದೆ.

ಸಸ್ಯ ಪ್ರಾಣಿ ಜೀವನ : ಇಲ್ಲಿಯ ವಾಯುಗುಣ ಪರಿಮಿತಿಯಲ್ಲಿ ಬಹುತೇಕ ಎಲ್ಲ ಬಗೆಯ ಸಸ್ಯಗಳೂ ಇವೆ. 360 ಲಕ್ಷಎಕರೆಗಳಷ್ಟು ನೆಲ ಕಾಡಿನಿಂದ ಆವೃತವಾಗಿದೆ. ಇದರಲ್ಲಿ 110 ಲಕ್ಷ ಎಕರೆಗಳಲ್ಲಿ ವಾಣಿಜ್ಯೋಪಯುಕ್ತವಾದ ಚೌಬೀನೆಯುಂಟು. ಪೈನ್, ಓಕ್ ಹೇರಳವಾಗಿ ಬೆಳೆಯುತ್ತವೆ. ಟೆಕ್ಸಾಸ್ ನಲ್ಲಿ ಮರಗಳ ಸು. 225 ಪ್ರರೂಪಗಳುಂಟು. ಪೂರ್ವ ಟೆಕ್ಸಾಸ್ ನ ದಕ್ಷಿಣ ಭಾಗದಲ್ಲಿರುವ ಬಿಗ್ ತಿಕೆಟ್ ಎಂಬುದು ಸಸ್ಯವಿಜ್ಞಾನ ದೃಷ್ಟಿಯಿಂದ ಗಮನಾರ್ಹವಾದ ವನ. ನೈಋತ್ಯದಲ್ಲಿ ಮರುಭೂಮಿ ಸಸ್ಯಗಳಿವೆ. ಉತ್ತರ ಅಮೆರಿಕದಲ್ಲಿರುವ ಪಕ್ಷಿಪ್ರರೂಪಗಳಲ್ಲಿ ಮೂರನೆಯ ಎರಡರಷ್ಟು ಪ್ರರೂಪಗಳು ಟೆಕ್ಸಾಸಿನಲ್ಲಿವೆ. 800 ಬಗೆಗಳಲ್ಲಿ 42 ಬಗೆಯವು ಇಲ್ಲಿಯೇ ವಾಸಿಸುವುವು; 225 ಬಗೆಯ ಪಕ್ಷಿಗಳು ಚಳಿಗಾಲದಲ್ಲೂ 70 ಬಗೆಯ ಪಕ್ಷಿಗಳು ಬೇಸಗೆಯಲ್ಲೂ ಇಲ್ಲಿ ವಾಸಿಸುತ್ತವೆ. ಇಲ್ಲಿ ಅನೇಕ ರಾಷ್ಟ್ರೀಯ ಪಕ್ಷಿ ಧಾಮಗಳೂ ಉಂಟು. ಹೂಪಿಂಗ್ ಕೊಕ್ಕರೆ ಟೆಕ್ಸಾಸಿಗೆ ವಿಶಿಷ್ಟವಾದ ಹಕ್ಕಿ. ಇದು ಬಹುತೇಕ ನಶಿಸಿಹೋಗಿದೆ. ಪ್ರೈರಿ ಕೋಳಿಯಿರುವ ಪ್ರದೇಶಗಳನ್ನೆಲ್ಲ ಬತ್ತ ಬೆಳೆಯಲು ಬಳಸಿಕೊಳ್ಳುತ್ತಿರುವುದರಿಂದ ಅದರ ಅಸ್ತಿತ್ವಕ್ಕೂ ಅಪಾಯ ಒದಗಿ ಬಂದಿದೆ. ಅಮೆರಿಕದ ಕಾಡು ಸೀಮೆಕೋಳಿಗಳಲ್ಲಿ ಸುಮಾರು ಅರ್ಧದಷ್ಟು ಇರುವುದು ಟೆಕ್ಸಾಸಿನಲ್ಲಿ. ಬಾತು, ವರಟೆ, ಲಾವುಗೆಗಳೂ ಇವೆ. ಜಿಂಕೆ, ಪ್ರೈರಿ ನಾಯಿ, ಕಯೋಟ್, ಕಾಡೆಮ್ಮೆ, ಕುರಿ ಕೆಲವು ಮುಖ್ಯ ಪ್ರಾಣಿಗಳು. ಕೆಂದಲೆ ಹಾವು, ಬುಡುಬುಡುಕೆ ಹಾವು, ಕೊಂಬಿನ ನೆಲಗಪ್ಪೆ ಮುಂತಾದವೂ ಇವೆ. ಚಿಪ್ಪಿ, ಸಿಂಪಿ, ಕೆಮ್ಮೀನು, ಟ್ರೌಟ್, ಗ್ರೌಪರ್ ಮುಂತಾದ ಮೀನುಗಳು ಕಡಲಲ್ಲಿ ದೊರಕುತ್ತವೆ. ಟೆಕ್ಸಾಸಿನಲ್ಲಿ ಅನೇಕ ಅಭಯಾರಣ್ಯಗಳೂ ಉದ್ಯಾನಗಳೂ ಉಂಟು.

ಜನಸಂಖ್ಯೆ : ಈಗಿನ ಟೆಕ್ಸಾಸ್ ಪ್ರದೇಶದ ಜನಸಂಖ್ಯೆ 19ನೆಯ ಶತಮಾನದ ಆರಂಭದಲ್ಲಿ 6–7 ಸಾವಿರ ಇತ್ತೆಂದು ಅಂದಾಜಿಸಲಾಗಿದೆ. ಹಿಂದೆ ಟೆಕ್ಸಾಸಿನಲ್ಲಿ ಗ್ರಾಮವಾಸಿಗಳ ಸಂಖ್ಯೆಯೇ ಅಧಿಕವಾಗಿತ್ತು. 1960ರಲ್ಲಿ ನಗರವಾಸಿಗಳು ಒಟ್ಟು ಜನಸಂಖ್ಯೆಯ ಶೇ. 75 ಇದ್ದರು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಶೇ. 69.9.

ಕೃಷಿ, ಕೈಗಾರಿಕೆ : ಈ ರಾಜ್ಯದ ಮುಖ್ಯ ಬೆಳೆಗಳು ಹತ್ತಿ, ಬತ್ತ, ಗೋದಿ, ಸೋರ್ಗಂ, ಕುರಿ ಮತ್ತು ದನಕರುಗಳ ಸಾಕಣೆ ನಡೆಯುತ್ತದೆ. ದ್ರಾಕ್ಷಿ ಮತ್ತು ಕಿತ್ತಳೆಹಣ್ಣು, ಅನೇಕ ಬಗೆಯ ತರಕಾರಿಗಳನ್ನು ಬೆಳೆಯಲಾಗುತ್ತದೆ.

ಸಾರಿಗೆ ಉಪಕರಣ, ವಿಮಾನೋಪಕರಣ, ಅಲ್ಯೂಮಿನಿಯಂ, ರಾಸಾಯನಿಕ, ಪ್ಲಾಸ್ಟಿಕ್, ಕೃತಕ ರಬ್ಬರ್ ಇವು ಮುಖ್ಯ ಕೈಗಾರಿಕಾ ಉತ್ಪನ್ನಗಳು. ಉಕ್ಕಿನ ಕೈಗಾರಿಕೆಯೂ ಬೆಳೆದಿದೆ. ಹ್ಯೂಸ್ಟನ್ ನಗರ, ಕೈಗಾರಿಕೆಗಳ ಕೇಂದ್ರ.

ಖನಿಜ ಸಂಪತ್ತು : ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಈ ರಾಜ್ಯದ ಮುಖ್ಯ ಖನಿಜ ಸಂಪತ್ತು. ಅಮೆರಿಕ ಸಂಯುಕ್ತಸಂಸ್ಥಾನಗಳ ಒಟ್ಟು ಉತ್ಪನ್ನದಲ್ಲಿ ಅರ್ಧ ಭಾಗದಷ್ಟು ಇಲ್ಲಿ ಉತ್ಪತ್ತಿಯಾಗುತ್ತದೆ. ಟೆಕ್ಸಾಸ್‌ನ ಎರಡನೆಯ ಪ್ರಮುಖ ಖನಿಜ ಗಂಧಕ. ಟೆಕ್ಸಾಸ್ ಮತ್ತು ಲೂಸೀಯಾನದಲ್ಲಿ ಉತ್ಪತ್ತಿಯಾಗುವ ಗಂಧಕ, ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಶೇ. 70. ಪೊಟಾಷ್, ಕಬ್ಬಿಣ ಅದಿರು, ಲಿಗ್ನೈಟ್, ಮ್ಯಾಂಗನೀಸ್ ಈ ರಾಜ್ಯದ ಇತರ ಖನಿಜಗಳು.

ಸಾರಿಗೆ, ಸಂಪರ್ಕ : ಟೆಕ್ಸಾಸ್ ರಾಜ್ಯದಲ್ಲಿ ಅನೇಕ ಪ್ರಮುಖ ರಸ್ತೆ ಮತ್ತು ರೈಲುಮಾರ್ಗಗಳಿವೆ. 32 ಲಕ್ಷ ಕಿಮೀ. ಸಾರ್ವಜನಿಕ ರಸ್ತೆಯಲ್ಲಿ 96,000 ಕಿಮೀ ಗಳ ಉದ್ದ ಹೆದ್ದಾರಿಗಳಿವೆ. ರೈಲುಮಾರ್ಗಗಳು 33,600 ಕಿಮೀ. ರಾಜ್ಯದಲ್ಲಿ ಸು. 700 ವಿಮಾನ ನಿಲ್ದಾಣಗಳಿವೆ.

ಟೆಕ್ಸಾಸ್ ರಾಜ್ಯದ ತೀರಪ್ರದೇಶಗಳಲ್ಲಿ 13 ಬಂದರುಗಳುಂಟು. ಹ್ಯೂಸ್ಟನ್. ಗಾಲ್ವೆಸ್ಟನ್, ಕಪೋರ್ಟ್ ಆರ್ತರ್ , ಬೋಮಾಂಟ್. ಆರೆಂಜ್, ಕಾರ್ಪಸ್ ಕ್ರಿಸ್ಟೀ, ಬ್ರೌನ್ಸ್ ಮಿಲ್, ಟೆಕ್ಸಾಸ್ ಸಿಟಿ, ಫ್ರೀಪೋರ್ಟ್ ಮುಖ್ಯ ಬಂದರುಗಳು. (ಎಂ.ಎ.ಎಚ್.)

**ಟೆತಿಸ್ ಸಮುದ್ರ:** ಪುರಾತನ ಕಾಲದ ಸಮುದ್ರ.. ಆಧುನಿಕ ಮೆಡಿಟರೇನಿಯನ್ ಸಮುದ್ರದ ಪೂರ್ವಜ. ಪರ್ಮಿಯನ್ ಕಲ್ಪದ ತರುಣದಲ್ಲಿ ಅಂದರೆ ಸು. 280 ದಶಲಕ್ಷ ವರ್ಷಗಳಷ್ಟು ಪ್ರಾಚೀನ ಇದರ ಅಸ್ತಿತ್ವ. ಪೆಸಿಫಿಕ್ ಹಾಗೂ ಆರ್ಕ್‌ಟಿಕ್ ಸಾಗರಗಳ ನಡುವಿನ ಸಂಯೋಜಕವಾಗಿಯೂ ಉತ್ತರದಲ್ಲಿ ಅಂಗಾರ ಮತ್ತು ದಕ್ಷಿಣದಲ್ಲಿ ಗೊಂಡವಾನ ಭೂಖಂಡಗಳನ್ನು ಪ್ರತ್ಯೇಕಿಸುವ ಜಲರಾಶಿಯಾಗಿಯೂ ಇತ್ತು. ಕಾರ್ಬಾನಿಫೆರಸ್ ಕಲ್ಪದ (350 ದ.ಲ.ವ. –280 ದ.ಲ.ವ.) ಅಂತ್ಯಕಾಲದಲ್ಲಿ ಮಹತ್ತರ ಬದಲಾವಣೆಗಳಾದವು. ನೆಲಜಲಗಳ ಪುನರ್ವರ್ಗೀಕರಣವಾಯಿತು. ಈ ಕಾರ್ಯಕ್ಕೆ ಸಂಬಂಧಿಸಿದಂತೆ ಪರ್ವತ ರಚನಾ ಕಾರ್ಯವೂ ನಡೆಯಿತು. ಆಗ ಉದಯಿಸಿದ ಪರ್ವತಗಳಲ್ಲಿ ಹರ್ಸೀನಿಯನ್ ಪರ್ವತ ಮುಖ್ಯವಾದದ್ದು. ಆದ್ದರಿಂದ ಈ ಪರ್ವಕಾಲಕ್ಕೆ ಹರ್ಸೀಯನ್ ಪ್ರಳಯವೆಂಬ ಹೆಸರು ಬಂದಿದೆ. ಇದರ ತರುವಾಯ ಪ್ರಪಂಚದ ಭೂಭಾಗಗಳು ಎರಡು ದೊಡ್ಡ ಖಂಡಗಳಾಗಿದ್ದುವು. ಇವೆರಡರ ಮಧ್ಯೆ, ಹೆಚ್ಚು ಕಡಿಮೆ ಭೂಮಧ್ಯ ಭಾಗದಲ್ಲಿ, ಇದ್ದ ಜಲರಾಶಿಯೇ ಟೆತಿಸ್ ಸಮುದ್ರ.

ಟೆತಿಸ್ ಸಮುದ್ರದಲ್ಲಿ ಶಿಲಾನಿಕ್ಷೇಪ ಕಾರ್ಯ ಕಾರ್ಬಾನಿಫೆರಸ್ ಯುಗದ ಅಂತ್ಯಕಾಲದಿಂದ ಇಯೊಸೀನ್ ಕಲ್ಪದವರೆಗೆ (280 ದ.ಲ.ವ. ಪ್ರಾ.–60 ದ.ಲ.ವ.) ನಡೆಯಿತು. ಇಷ್ಟು ಅಗಾಧವಾದ ಶಿಲಾರಾಶಿ ನಿಕ್ಷೇಪಗೊಳ್ಳುತ್ತಿದ್ದಾಗ ಸಾಗರದ ತಳ ಕ್ರಮೇಣ ಕುಸಿಯುತ್ತ ಹೋಗಿರಬೇಕು. ಈ ಕುಸಿತದ ಪ್ರಮಾಣ ಶಿಲಾನಿಕ್ಷೇಪದ ಪ್ರಮಾಣಕ್ಕೆ ಹೆಚ್ಚು ಕಡಿಮೆ ಸಮವಾಗಿರಬೇಕೆಂದು ಭೂವಿಜ್ಞಾನಿಗಳ ಅಭಿಪ್ರಾಯ. ಇಂಥ ವಿಶಾಲವಾದ ಮತ್ತು ಯುಗಯುಗಾಂತರಗಳ ವರೆಗೆ ನೆಲೆಸಿದ್ದ ಸಾಗರ ತಗ್ಗು ಪ್ರದೇಶಗಳಿಗೆ ಭೂಅಭಿನತಿ ಅಥವಾ ಭೂ ಒಳಮಡಿಕೆ (ಜಿಯೊಸಿಂಕ್ಲೈನ್ಸ್) ಎಂದು ಹೆಸರು. ಟೆತಿಸ್ ಸಮುದ್ರ ಆಲ್ಪ್ಸ್, ಕಾರ್ಪೇತಿಯ, ಕಾಕಸಸ್, ಎಲ್ ಬುರ್ಜ್, ಜಾಗ್ರೋಸ್ ಮತ್ತು ಹಿಮಾಲಯ ಪ್ರದೇಶಗಳನ್ನೆಲ್ಲ ಆವರಿಸಿಕೊಂಡು ಪಶ್ಚಿಮಕ್ಕೆ ಸ್ಪೇನ್ ಮತ್ತು ಆಫ್ರಿಕದ ವಾಯವ್ಯ ಭಾಗಗಳಿಗೂ ಪೂರ್ವದಲ್ಲಿ ಮಯನ್ಮಾರ್, ಇಂಡೊನೇಷ್ಯಗಳ ಮೂಲಕ ನ್ಯೂಗಿನಿಯವರೆಗೂ ವಿಸ್ತರಿಸಿತ್ತು. ಭಾರತದಲ್ಲಿ ಈ ಸಾಗರ ಹಿಮಭರಿತವಾದ ಹಿಮಾಲಯ ಪರ್ವತಪ್ರದೇಶವನ್ನು ಆಕ್ರಮಿಸಿಕೊಂಡಿದ್ದುದಲ್ಲದೆ ಪಶ್ಚಿಮದಲ್ಲಿ ಇದರ ಒಂದು ಶಾಖೆ ಬಲೂಚಿಸ್ತಾನ ಮತ್ತು ಸಾಲ್ಟ್ ರೇಂಜ್ ಪ್ರದೇಶಗಳಿಗೂ ಪೂರ್ವದಲ್ಲಿ ಮತ್ತೊಂದು ಶಾಖೆ ಮಯನ್ಮಾರ್‌ನ ಕೆಲವು ಭಾಗಗಳಿಗೂ ವಿಸ್ತರಿಸಿದ್ದುವು.

ಕ್ರಿಟೇಷಸ್ ಕಲ್ಪದ ಕೊನೆಯಲ್ಲಿ (65 ದ.ಲ.ವ.) ಮಹತ್ತರ ಬದಲಾವಣೆಗಳಾದವು. ಆಧುನಿಕ ಕಾಲದ ಮೇಲ್ಮೈ ಲಕ್ಷಣಗಳು ಮೈದಳೆದದ್ದು ಆಗಲೇ. ಅದುವರೆಗೂ ಒಂದಾಗಿದ್ದ ಗೊಂಡವಾನ ಭೂಭಾಗ ಇಂಡಿಯ, ಆಸ್ಟ್ರೇಲಿಯ, ಆಫ್ರಿಕ ಮತ್ತು ದಕ್ಷಿಣ ಅಮೆರಿಕ ಮುಂತಾದ ಖಂಡಗಳಾಗಿ ಬೇರ್ಪಟ್ಟಿತು. ಹೀಗೆ ಬೇರ್ಪಟ್ಟ ಖಂಡಗಳ ಚಲನೆಯಿಂದ ಆ ಕಾಲದಲ್ಲಿ ಭೂ ಮಧ್ಯ ಪ್ರದೇಶದಲ್ಲಿ ಬಹುಕಾಲದಿಂದಿದ್ದ ಇಂದಿನ ಟೆತಿಸ್ ಸಮುದ್ರ ನಿರ್ಗಮಿಸಬೇಕಾಯಿತು. ಇದರಲ್ಲಿ ನಿಕ್ಷೇಪವಾಗಿದ್ದ ಜಲಜಶಿಲೆಗಳು ಭೂಚಲನೆಗಳ ಒತ್ತಡಕ್ಕೆ ಸಿಕ್ಕಿ ಅಟ್ಲಾಸ್, ಪಿರನೀಸ್, ಆಲ್ಪ್ಸ್ ಮತ್ತು ಹಿಮಾಲಯ ಪರ್ವತಗಳಾಗಿ ಮೇಲಕ್ಕೆದ್ದುವು. (ಡಿ.ಆರ್.)

**ಟೆನೆಸಿ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ರಾಜ್ಯಗಳಲ್ಲೊಂದು. ಉತ್ತರದಲ್ಲಿ ಕೆಂಟಕೀ ಹಾಗೂ ವರ್ಜೀನಿಯ; ಪೂರ್ವದಲ್ಲಿ ಉತ್ತರ ಕೆರೊಲಿನ, ದಕ್ಷಿಣದಲ್ಲಿ ಜಾರ್ಜಿಯ, ಅಲಬಾಮ ಹಾಗೂ ಮಿಸಿಸಿಪಿ ರಾಜ್ಯ, ಪಶ್ಚಿಮದಲ್ಲಿ ಮಿಸಿಸಿಪಿ ನದಿ–ಇವು ಇದರ ಮೇರೆಗಳು. ಸ್ಥೂಲವಾಗಿ ಇದು ಉ.ಅ. $35^{0}$–$36^{0}41'$ ಮತ್ತು ಪ.ರೇ. $81^{0}41'$–$90^{0}18'$ ನಡುವೆ ಇದೆ. ಪಶ್ಚಿಮದಿಂದ ಪೂರ್ವಕ್ಕೆ ರಾಜ್ಯದ ಗರಿಷ್ಠ ಉದ್ದ 695 ಕಿಮೀ ಗರಿಷ್ಠ ಅಗಲ 180 ಕಿಮೀ ವಿಸ್ತೀರ್ಣ 1,09,412 ಚ.ಕಿಮೀ. ಇದರಲ್ಲಿ 1250 ಚ.ಕಿಮೀ ಜಲಾವೃತ. ವಿಸ್ತೀರ್ಣದಲ್ಲಿ ಇದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಪೈಕಿ 34ನೆಯ ರಾಜ್ಯ. ಇದು ಅಮೆರಿಕ ಒಕ್ಕೂಟಕ್ಕೆ ಸೇರಿದ (1796ರ ಜೂನ್ 1) 16ನೆಯ ರಾಜ್ಯ. ಜನಸಂಖ್ಯೆ 56,89,283 (2000). ರಾಜಧಾನಿ ನಾಷವಿಲಿ, ಜನಸಂಖ್ಯೆ 5,49,110 (2002).

ಮೇಲ್ಮೈಲಕ್ಷಣ : ಇದನ್ನು ಪೂರ್ವ, ಮಧ್ಯ ಹಾಗೂ ಪಶ್ಚಿಮ ಟೆನೆಸಿ ಎಂಬ ಮೂರು ಭಾಗಗಳಾಗಿ ವಿಂಗಡಿಸುವ ವಾಡಿಕೆಯಿದೆ. ಉತ್ತರ ಕರೋಲಿನ ಅಂಚಿನಲ್ಲಿರುವ ಯುನಾಕ ಪರ್ವತಶ್ರೇಣಿಯಿಂದ ಕಂಬರ್ಲೆಂಡ್ ಪ್ರಸ್ಥಭೂಮಿಯ ಮೇಲಿನ ವರೆಗೂ ಪೂರ್ವ ಟೆನೆಸಿ ವ್ಯಾಪಿಸಿದೆ. ಕಂಬರ್ಲೆಂಡ್ ಪ್ರಸ್ಥಭೂಮಿಯ ಪಶ್ಚಿಮ ಭಾಗದಿಂದ ಟೆನೆಸಿ ನದಿಯ ವರೆಗಿನದು ಮಧ್ಯ ಟೆನೆಸಿ. ಟೆನೆಸಿ ನದಿಯಿಂದ ಮಿಸಿಸಿಪಿ ನದಿಯ ವರೆಗೆ ಪಶ್ಚಿಮ ಟೆನೆಸಿ ಹಬ್ಬಿದೆ. ಟೆನೆಸಿ ನದಿಯ ಪಶ್ಚಿಮಕ್ಕಿರುವ ಪ್ರಸ್ಥಭೂಮಿಯೂ ಮಿಸಿಸಿಪಿ ನದಿ ಬಯಲೂ ಇದರಲ್ಲಿ ಸೇರಿವೆ. ಉತ್ತರ ಕರೋಲಿನ ರಾಜ್ಯದ ಗಡಿಯ ಬಳಿಯ ಕ್ಲಿಂಗ್ ಮನ್ಸ್ ಡೋಮ್ (2025 ಮೀ) ಟೆನೆಸಿ ರಾಜ್ಯದ ಅತ್ಯುನ್ನತ ಶಿಖರ. ಸವಿಯರ್ ಕೌಂಟಿಯಲ್ಲಿರುವ ಆ ಶಿಖರಪ್ರದೇಶದಿಂದ, ಷೆಲ್ಬಿ ಕೌಂಟಿಯಲ್ಲಿ ಮಿಸಿಸಿಪಿ ನದಿಯ ಬಯಲಿನ (55 ಮೀ)ವರೆಗೆ ನೆಲ ಇಳಿಜಾರಾಗಿದೆ. ರಾಜ್ಯದ ಪೂರ್ವ ಗಡಿಯ ಉದ್ದಕ್ಕೆ 13 ಕಿಮೀ ಅಗಲವಾಗಿ ಹಬ್ಬಿರುವ ಯುನಾಕ ಪರ್ವತದ ಅತ್ಯುನ್ನತ ಶಿಖರದ ಎತ್ತರ 1916 ಮೀ. ಟೆನೆಸಿ ರಾಜ್ಯದಲ್ಲಿರುವ ಅಪಲೇಷಿಯನ್ ಕಣಿವೆಯ ಭಾಗಕ್ಕೆ ಪೂರ್ವ ಟೆನೆಸಿ ಕಣಿವೆಯೆಂದು ಹೆಸರು. ಟೆನೆಸಿ ಮಧ್ಯಭಾಗ ಬಹುತೇಕ ಸಮತಲ; ಕೆಲವು ಕಡೆಗಳಲ್ಲಿ ನದಿಕಣಿವೆಗಳಿವೆ. ಮರ್ ಫ್ರೀಸ್ ಬರೋ ಮತ್ತು ನ್ಯಾಷ್ ವಿಲ್ ನಗರಗಳು ಈ ಭಾಗದಲ್ಲಿವೆ. ಟೆನೆಸಿ ಮಧ್ಯ ಬಯಲಿಗೂ ತಳಗಣ ಟೆನೆಸಿ ನದಿಗೂ ನಡುವೆ ಪಶ್ಚಿಮ ಹೈಲೆಂಡ್ ಶ್ರೇಣಿಯಿದೆ. ಕೆಳ ಟೆನೆಸಿ ನದಿಯಿಂದ ಪಶ್ಚಿಮಕ್ಕೆ ನೆಲ ತೀವ್ರವಾಗಿ ಏರುತ್ತ ಸಾಗಿ ಅನಂತರ ಇಳಿಜಾರಾಗಿ ಮಿಸಿಸಿಪಿ ದಂಡೆಯ ಮೈದಾನದ ಬಳಿ ಥಟ್ಟನೆ ಇಳಿಯುತ್ತದೆ. ಈ ದಿಬ್ಬಕ್ಕೂ ಮಿಸಿಸಿಪಿಗೂ ನಡುವೆ ಜೌಗು ನೆಲವೂ ಹೊಂಡಗಳೂ ಇವೆ. ಉತ್ತರ ಭಾಗದಲ್ಲಿ ರೀಲ್ ಫುಟ್ ಸರೋವರವಿದೆ. 1811ರ ಭೂಕಂಪದಲ್ಲಿ ಸಂಭವಿಸಿದ ಭೂಕುಸಿತ ಪ್ರದೇಶದಲ್ಲಿರುವ ಈ ಸರೋವರದ ಉದ್ದ 29 ಕಿಮೀ; ಅಗಲ 5 ಕಿಮೀ. ಟೆನೆಸಿಯ ಇತರ ಪ್ರಮುಖ ಸರೋವರಗಳು ವಾಟ್ಸ್, ಚಿಕಮಾಗ, ಡಗ್ಲಾಸ್ ಹಾಗೂ ಚೆರಕೀ. ಟೆನೆಸಿ ಮತ್ತು ಕಂಬರ್ಲೆಂಡ್ – ಇವು ಟೆನೆಸಿ ರಾಜ್ಯದ ಮುಖ್ಯ ನದಿಗಳು. ಇವುಗಳಿಗೆ ಹಲವು ಉಪನದಿಗಳಿವೆ.

ವಾಯುಗುಣ : ಬೇಸಗೆಯ ಸರಾಸರಿ ಉಷ್ಣತೆ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಯುನಕ ಪರ್ವತದ ಮೇಲೆ $17^{0}$ಸೆ. ಕಂಬರ್ಲೆಂಡ್ ಪ್ರಸ್ಥಭೂಮಿಯ ಮೇಲೆ $20^{0}$ಸೆ. ಟೆನೆಸಿ ನದಿಯ ಪೂರ್ವದ ಕಣಿವೆಯಲ್ಲಿ $20.8^{0}$ಸೆ. ಮಧ್ಯ ಕಣಿವೆಯಲ್ಲಿ $21.8^{0}$ಸೆ. ಪಶ್ಚಿಮ ಟೆನೆಸಿಯ ಪೂರ್ವ ಗಲ್ಫ ಮೈದಾನದಲ್ಲಿ $21.7^{0}$ಸೆ. ಈ ಪ್ರದೇಶಗಳ ಚಳಿಗಾಲದ ಸರಾಸರಿ ಉಷ್ಣತೆ ಸಾಮಾನ್ಯವಾಗಿ $10.6^{0}$ಸೆ. ವಾರ್ಷಿಕ ಸಾಮಾನ್ಯ ಉಷ್ಣತೆ ಪೂರ್ವ ಟೆನೆಸಿಯದಲ್ಲಿ $15.8^{0}$ಸೆ. ಮಧ್ಯ ಟೆನೆಸಿಯಲ್ಲಿ $15.8^{0}$ಸೆ., ಪಶ್ಚಿಮ ಟೆನೆಸಿಯಲ್ಲಿ $16.7^{0}$ಸೆ. ವಾರ್ಷಿಕ ಮಳೆ 127 ಸೆಂಮೀ. ಹಿಮಪಾತ 20 ಸೆಂಮೀ. ದಕ್ಷಿಣ ಅಥವಾ ಆಗ್ನೇಯ ದಿಕ್ಕಿನಿಂದ ಬೀಸುವ ಬಿಸಿ ಮಾರುತಗಳು ಉತ್ತರದಿಂದ ಬೀಸುವ ಶೀತಮಾರುತಗಳೊಂದಿಗೆ ಸೇರಿ ಪಶ್ಚಿಮ ಅಥವಾ ಪೂರ್ವಾಭಿಮುಖ ಮಾರುತಗಳಾಗಿ ಮಾರ್ಪಡುತ್ತವೆ.

ಸಸ್ಯ–ಪ್ರಾಣಿವರ್ಗ: ಹಿಂದೆ ರಾಜ್ಯದ ಬಹುಭಾಗ ಅರಣ್ಯಾವೃತವಾಗಿತ್ತು. ಈಗ ಶೇ.10 ಭಾಗ ಮಾತ್ರ ಅರಣ್ಯಪ್ರದೇಶ. ಅರಣ್ಯಗಳಲ್ಲಿ ನೈಸರ್ಗಿಕವಾಗಿ ಬೆಳೆದ ಓಕ್, ಎಲ್ಮ್, ಬೀಚ್ ವೃಕ್ಷಗಳು ಈಗಲೂ ಇವೆ. ಸಿಕಮೋರ್, ಬ್ಯಾಸ್ ವುಡ್, ಚೆರಿ, ಹಿಕರಿ, ಲೋಕಸ್ಟ್, ಸ್ಪ್ರೂಸ್, ಪಾಪ್ಲರ್, ಮೇಪಲ್ ಮರಗಳು ರಾಜ್ಯದಲ್ಲೆಲ್ಲ ಸಾಮಾನ್ಯ. ಪೂರ್ವ ಟೆನೆಸಿಯಲ್ಲಿ ಹೆಮ್ಲಾಕ್, ಬಾಲ್ಸಂ, ಪೈನ್, ಸ್ಪ್ರೂಸ್ ಮರಗಳು ಯಥೇಚ್ಛವಾಗಿವೆ. ಪಶ್ಚಿಮದ ಜೌಗು ಪ್ರದೇಶದಲ್ಲಿ ಸೈಪ್ರೆಸ್, ಪೆಕನ್, ಟ್ಯೂಪೆಲೋ ಮುಂತಾದವು ಬೆಳೆಯುತ್ತವೆ. ರಾಜ್ಯದಲ್ಲಿ 150ಕ್ಕೂ ಹೆಚ್ಚು ವೃಕ್ಷಪ್ರಭೇದಗಳಿವೆ.

ಪಾಶ್ಚಾತ್ಯರ ವಲಸೆ ಆರಂಭವಾದ ಕಾಲದಲ್ಲಿ ಕಾಡುಕೋಣ, ಎಲ್ಕ್ (ಕಡವೆ), ವರ್ಜಿನಿಯ ಜಿಂಕೆ, ಕಪ್ಪು ಕರಡಿ, ತೋಳ, ಚಿರತೆ, ಲಿಂಕ್ಸ್–ಈ ಪ್ರಾಣಿಗಳು ಹೆಚ್ಚಾಗಿದ್ದುವು. ಈಗ ವರ್ಜಿನಿಯ ಜಿಂಕೆ, ಕರಡಿ, ಲಿಂಕ್ಸ್ – ಇವು ಪರ್ವತ ಹಾಗೂ ಅರಣ್ಯಭಾಗಗಳಲ್ಲಿವೆ. ತುಪ್ಪುಳ ಪ್ರಾಣಿಗಳು, ನರಿ, ಸ್ಕಂಕ್, ಒಪಾಸಂ, ರಕೂನ್, ಮಿಂಕ್, ಪುನುಗು ಬೆಕ್ಕು, ಮೊಲ, ಅಳಿಲು, ವೀಸಲ್. ರಷ್ಯನ್ ಕಾಡುಹಂದಿ ಪೂರ್ವ ಟೆನೆಸಿಯಲ್ಲಿ ವಿಶೇಷವಾಗಿವೆ. ಪಕ್ಷಿಗಳಲ್ಲಿ ಮುಖ್ಯವಾದವು ಪ್ಯಾಸೆಂಜರ್ ಪಾರಿವಾಳ, ಕ್ಯಾರಲೈನ ಗಿಳಿ, ಬಿಳಿಕೊಕ್ಕಿನ

ಮರಕುಟಕ, ಪ್ರೈರಿ ಕುಕ್ಕುಟ. ಕೆಲವು ಬಗೆಯ ಡೇಗೆ ಹಾಗೂ ಹದ್ದುಗಳು ಕಂಬರ್ಲೆಂಡ್ ಪ್ರದೇಶದಲ್ಲೂ ಬಂಗಾರದ ಹದ್ದು ಅಪಲೇಶಿಯನ್ ಶ್ರೇಣಿಯ ಸ್ಮೋಕಿ ಪರ್ವತದಲ್ಲೂ ಇವೆ. ಜಲಚರ ಪಕ್ಷಿಗಳು ನೀಲಿಕೊಕ್ಕರೆ ಮತ್ತು ಹಸುರುಕೊಕ್ಕರೆ. ಬೇಟೆಯ ಪಕ್ಷಿಗಳು ಕಾಡು ಟರ್ಕಿ ಕೋಳಿ, ಜೀವಂಜೀವ, ಗೌಸ್, ಕ್ವಿಲ್, ಬಾಬ್ ವೈಟ್, ಪಾರಿವಾಳ, ನದಿ, ತೊರೆಗಳಲ್ಲಿ ಸಿಗುವ ಮೀನುಗಳು ಕ್ಯಾಟ್‌ಫಿಷ್, ಹಂದಿಮೀನು, ಬಾಸ್, ಸಾಲ್ಮನ್ ಇತ್ಯಾದಿ. ಉರಗಗಳಲ್ಲಿ ಬುಡಬುಡಕೆಹಾವು, ಕಾಪರ್ ಹೆಡ್ ಮತ್ತು ಕಾಟನ್ ಮೌತ್ ಪ್ರಮುಖವಾದವು. ರಾಜ್ಯದಲ್ಲಿ ಅನೇಕ ರಾಷ್ಟ್ರೀಯ ಉದ್ಯಾನಗಳೂ ಅಭಯಾರಣ್ಯಗಳೂ ಇವೆ. ಅವುಗಳಲ್ಲಿ ಅತ್ಯಂತ ದೊಡ್ಡದು ಪಶ್ಚಿಮ ಟೆನೆಸೀಯ ನಾಚಜ಼್ ಟ್ರೇಸ್ ರಾಜ್ಯ ಉದ್ಯಾನ 17000 ಹೆ. ನಷ್ಟು ದೊಡ್ಡದು.

ಜನಜೀವನ : ಚೆರಕೀ, ಕ್ರೀಕ್ಸ್ ಮೊದಲಾದ ರೆಡ್ ಇಂಡಿಯನರು ಟೆನೆಸಿಯ ಮೂಲನಿವಾಸಿಗಳು. ಕಾಲಕ್ರಮದಲ್ಲಿ ಫ್ರೆಂಚರು, ಇಂಗ್ಲಿಷರು ಹಾಗೂ ಇತರ ಯುರೋಪಿಯನ್ ಜನರು ಇಲ್ಲಿ ನೆಲೆಸಿದರು. ಈಗಿನ ನೀಗ್ರೋ ಜನರ ಪೂರ್ವಿಕರು ಗುಲಾಮರಾಗಿ ಬಂದವರು. ಜನಸಾಂದ್ರತೆ ಚ.ಮೈ.ಗೆ 90. ಪ್ರಮುಖ ಜನಭರಿತ ನಗರಗಳು ಮೆಂಫಿಸ್, ಚ್ಯಾಟನೂಗ, ನಾಕ್ಸ್ ವಿಲ್, ನ್ಯಾಷ್‌ವಿಲ್ ಹಾಗೂ ಜ್ಯಾಕ್‌ಸನ್.

ಇಲ್ಲಿ ಕ್ರೈಸ್ತಧರ್ಮ ಪ್ರಧಾನವಾಗಿದೆ. ಜನರಲ್ಲಿ ಬ್ಯಾಪ್ಟಿಸ್ಟ್ ಪಂಥದವರ ಸಂಖ್ಯೆ ಅಧಿಕ. ಮೆತಾಡಿಸ್ಟ್ ಹಾಗೂ ನೀಗ್ರೊ ಬ್ಯಾಪ್ಟಿಸ್ಟ್ ಪಂಥದವರೂ ಇದ್ದಾರೆ. ನೀಗ್ರೋ–ಬಿಳಿಯರ ನಡುವೆ ವಿವಾಹನಿಷೇಧವನ್ನು ಸಂವಿಧಾನವಿರುದ್ಧವೆಂದು ಅಮೆರಿಕದ ಸುಪ್ರೀಂ ಕೋರ್ಟು ಘೋಷಿಸಿದೆ (ಜೂನ್ 1967).

ಆರ್ಥಿಕತೆ : ಟೆನೆಸಿಯ ಮುಖ್ಯ ಬೆಳೆಗಳು ಹೊಗೆಸೊಪ್ಪು, ಸೋಯಾಬೀನ್ಸ್, ಮೆಕ್ಕೆಜೋಳ, ಹತ್ತಿ. ಅರಣ್ಯಗಳಲ್ಲಿ ಚೌಬೀನೆಗೆ ಯೋಗ್ಯವಾದ ಗಟ್ಟಿಮರಗಳಿವೆ. ದನ, ಹಂದಿ, ಕೋಳಿಗಳನ್ನು ಅಧಿಕ ಸಂಖ್ಯೆಯಲ್ಲಿ ಸಾಕುತ್ತಾರೆ. ರಾಜ್ಯದಲ್ಲಿ ಅನೇಕ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿವೆ. ಮುಖ್ಯ ಉತ್ಪಾದನೆ ಸಿಮೆಂಟ್, ರಾಸಾಯನಿಕ ವಸ್ತುಗಳು, ಹತ್ತಿ ಹಾಗೂ ರೆಯಾನ್ ಬಟ್ಟೆಗಳು, ವಿದ್ಯುತ್ ಯಂತ್ರಗಳು, ಗಾಜಿನ ಸಾಮಾನುಗಳು. ರಾಜ್ಯದಲ್ಲಿ ಕಲ್ಲಿದ್ದಲು ಹಾಗೂ ಫಾಸ್ಫೇಟ್ ನಿಕ್ಷೇಪಗಳಿವೆ. ತವರ, ಜೇಡಿಮಣ್ಣು, ತಾಮ್ರ, ಅಭ್ರಕ ಮತ್ತು ಸುಣ್ಣಕಲ್ಲುಗಳು ದೊರೆಯುತ್ತವೆ.

ರಾಜ್ಯದಲ್ಲಿ 5,600 ಕಿಮೀ ರೈಲುಮಾರ್ಗಗಳೂ 1,19,200 ಕಿಮೀ ಸಿಮೆಂಟ್ ಕಾನ್‌ಕ್ರೀಟ್ ರಸ್ತೆಗಳೂ ಇವೆ. ಹೆದ್ದಾರಿಗಳ ಉದ್ದ 1,23,491 ಕಿಮೀ 11 ಪ್ರಮುಖ ವಿಮಾನ ಮಾರ್ಗಗಳೂ 71 ವಿಮಾನ ನಿಲ್ದಾಣಗಳೂ ಇವೆ. (ವಿ.ಜಿ.ಕೆ.)

**ಟೆನೆಸಿ ಕಣಿವೆ ಪ್ರಾಧಿಕಾರ:** ಟೆನೆಸಿ ನದಿ ಮತ್ತು ಅದರ ಉಪನದಿಗಳ ಪ್ರವಾಹವನ್ನು ನಿಯಂತ್ರಿಸಲು, ಅವುಗಳಲ್ಲಿ ನೌಕಾಯಾನ ಸೌಲಭ್ಯವನ್ನು ಹೆಚ್ಚಿಸಲೂ ಮತ್ತು ವಿದ್ಯುತ್ತನ್ನು ಉತ್ಪಾದಿಸಲೂ ಅಮೆರಿಕ ಸಂಯುಕ್ತ ಸಂಸ್ಥಾನ ಸರ್ಕಾರ 1933 ರಲ್ಲಿ ನಿರ್ಮಿಸಿದ ಸಂಸ್ಥೆ (ಟೆನೆಸಿ ವ್ಯಾಲಿ ಅಥಾರಿಟಿ). ಇದು ಅಮೆರಿಕ ಸಂಯುಕ್ತ ಸಂಸ್ಥಾನ ಸರ್ಕಾರದ ಅಭಿಕರಣ ಸಂಸ್ಥೆಯಾಗಿ (ಏಜೆನ್ಸಿ) ಅಂದಿನ ಅಮೆರಿಕಾಧ್ಯಕ್ಷ ರೂಸ್‌ವೆಲ್ಟ್‌ನ ಸಹಿಯೊಂದಿಗೆ ಸ್ಥಾಪಿತವಾಯಿತು. ಇದೊಂದು ಸಾರ್ವಜನಿಕ ನಿಗಮ (ಕಾರ್ಪೊರೇಷನ್). ಟೆನೆಸಿಯ ನಾಕ್ಸ್‌ವಿಲ್‌ನಲ್ಲಿ ಇದರ ಪ್ರಧಾನ ಕಚೇರಿ ಇದೆ. 15,000 ಕ್ಕೂ ಹೆಚ್ಚು ಮಂದಿ ನೌಕರರನ್ನು ಇದು ನೇಮಕ ಮಾಡಿಕೊಂಡಿತ್ತು. ಈ ಸಂಸ್ಥೆಯ ಅಧಿಕಾರವ್ಯಾಪ್ತಿ ಸಾಮಾನ್ಯವಾಗಿ ಟೆನೆಸಿ ನದಿಯ ಜಲಾನಯನ ಪ್ರದೇಶಕ್ಕೆ ಸೀಮಿತವಾಗಿದೆ. ಆದರೆ ಅದರ ಕೆಲವು ಚಟುವಟಿಕೆಗಳು ಈ ಪ್ರದೇಶದಿಂದ ಆಚೆಗೂ ವಿಸ್ತರಿಸಿವೆ. ಜಲಾನಯನ ಪ್ರದೇಶದ ವಿಸ್ತೀರ್ಣ ಸು. 99,800 ಚ.ಕಿಮೀ. ಇದು ಅಲಬಾಮ, ಜಾರ್ಜಿಯ, ಕೆಂಟಕೀ, ಮಿಸಿಸಿಪಿ, ಉತ್ತರ ಕ್ಯಾರಲೈನ, ಟೆನೆಸಿ ಮತ್ತು ವರ್ಜೀನಿಯ ರಾಜ್ಯಗಳ ಭಾಗಗಳನ್ನೊಳಗೊಂಡಿದೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಏಳನೆಯ ನದಿಯೆನಿಸಿದ ಟೆನೆಸಿ 1800 ರಷ್ಟು ಹಿಂದೆಯೇ ಪಶ್ಚಿಮಾಭಿಮುಖ ವಲಸೆಗಾರರ ನೌಕಾಯಾನ ಮಾಧ್ಯಮವಾಗಿತ್ತು. ಆದರೆ ಮಸಲ್ ಷೋಲ್ಸ್ ಬಳಿಯ ವೇಗದ ಹರಿವು ನೌಕಾಯಾನಕ್ಕೆ ಇದ್ದ ಒಂದು ದೊಡ್ಡ ಅಡಚಣೆ. ಇದನ್ನು ನಿವಾರಿಸಿ ಸುಸೂತ್ರವಾದ ನೌಕಾಯಾನ ಸೌಲಭ್ಯ ಕಲ್ಪಿಸಲು ಮಾಡಿದ ಮೊದಮೊದಲ ಖಾಸಗಿ ಪ್ರಯತ್ನಗಳು ಫಲಪ್ರದವಾಗಲಿಲ್ಲ. ರಾಷ್ಟ್ರದ ಗಮನ ಅದರತ್ತ ಹರಿದದ್ದು ಒಂದನೆಯ ಮಹಾಯುದ್ಧದ ಸಮಯದಲ್ಲಿ. ನೈಟ್ರೇಟುಗಳಿಗಾಗಿ ಚಿಲಿ ಮತ್ತು ಜರ್ಮನಿಗಳನ್ನು ದೇಶ ಅವಲಂಬಿಸಬೇಕಾಗಿದ್ದ ಪರಿಸ್ಥಿತಿಯನ್ನು ತಪ್ಪಿಸುವ ಉದ್ದೇಶದಿಂದ ಆಗ ಸರ್ಕಾರ ಮಸಲ್ ಷೋಲ್ಸ್‌ನಲ್ಲಿ ಎರಡು ನೈಟ್ರೇಟ್ ಕಾರ್ಖಾನೆಗಳನ್ನು ಸ್ಥಾಪಿಸಿತು. ಇವಕ್ಕೆ ಅಗತ್ಯವಾದ ಜಲವಿದ್ಯುತ್ತಿನ ಉತ್ಪನ್ನಗಾಗಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನೂ ಆರ್ಥಿಕ ವಿದ್ಯುತ್ತಿಗಾಗಿ ಒಂದು ಹಬೆ ವಿದ್ಯುತ್ ಉತ್ಪಾದನಾಗಾರವನ್ನೂ ನಿರ್ಮಿಸಲು ನಿರ್ಧರಿಸಿತು.

ಟೆನೆಸಿ ಕಣಿವೆಯ ನಿಸರ್ಗ ಸಂಪತ್ತಿನ ಅಭಿವೃದ್ಧಿಗಾಗಿ ನೇಮಕವಾದ ಸಂಯುಕ್ತ ಸರ್ಕಾರದ ಇಲಾಖೆಯೆಂಬಂತೆ ಇದು ರೂಪಿತವಾಯಿತು. ಇದಕ್ಕೆ ಅಂಥ ಅಸಾಧಾರಣವಾದ ಅಧಿಕಾರಗಳೇನೂ ಇರಲಿಲ್ಲ. ಆ ವೇಳೆಗಾಗಲೇ ಟೆನೆಸಿಯಲ್ಲೂ ಇತರ ಎಡೆಗಳಲ್ಲೂ ಹಲವು ಇಲಾಖೆಗಳು ಸಾಧಿಸುತ್ತಿದ್ದ ಕಾರ್ಯಗಳನ್ನೇ ಅದು ಕೈಗೊಂಡಿತು. ಆದರೆ ಒಂದು ನದಿಯ ಜಲಾನಯನ ಪ್ರದೇಶಕ್ಕೆ ಸಂಬಂಧಿಸಿದಂತೆ, ಒಂದೇ ಸಂಸ್ಥೆಯಲ್ಲಿ ಈ ವಿವಿಧ ಕಾರ್ಯಗಳೆಲ್ಲ ಸಾಂದ್ರೀಕೃತವಾದದ್ದೇ ಇದರ ವೈಶಿಷ್ಟ್ಯ. ಇದೊಂದು ಹೊಸ ಪ್ರಯೋಗವಾಗಿತ್ತು.

ಟೆನೆಸಿ ಕಣಿವೆ ಪ್ರಾಧಿಕಾರಕ್ಕೆ ಸ್ಥೂಲವಾಗಿದ್ದ ಮೂರು ಮೂಲಭೂತ ಅಧಿಕಾರಗಳು ದತ್ತವಾಗಿದ್ದುವು: ನದಿಯ ಪ್ರವಾಹ ನಿಯಂತ್ರಣ, ನದಿಯ ಮೇಲೆ ನೌಕಾಸಂಚಾರ ಅಭಿವೃದ್ಧಿ, ವಿದ್ಯುತ್ತಿನ ಉತ್ಪಾದನೆ ಮತ್ತು ಮಾರಾಟ.

ಅಂತಿಮವಾಗಿ ಟಿವಿಎಯ ನಿರ್ವಹಣೆಗೆ ಒಳಪಟ್ಟ ಮುಖ್ಯ ಕಟ್ಟೆಗಳು 32. ಇವುಗಳ ಪೈಕಿ 9 ಟೆನೆಸಿ ನದಿಗೂ ಉಳಿದ 23 ಅದರ ಉಪನದಿಗಳಿಗೂ ನಿರ್ಮಿಸಲಾದ ಕಟ್ಟೆಗಳು. ಇವುಗಳಲ್ಲಿ 21ನ್ನು ಸದರಿ ಸಂಸ್ಥೆಯೇ ನಿರ್ಮಿಸಿತು. ಕೆಲವನ್ನು ಖಾಸಗಿ ಕಂಪನಿಯಿಂದ ಕೊಂಡುಕೊಂಡಿತು. ಪ್ರವಾಹ ನಿಯಂತ್ರಣ ಪ್ರಥಮ ಉದ್ದೇಶ. ಇದನ್ನು ಬಹುಮಟ್ಟಿಗೆ ಸಾಧಿಸಲಾಯಿತು. ನೌಕಾ ಸಂಚಾರ ಎರಡನೆಯ ಉದ್ದೇಶ. ಒಂಬತ್ತು ಮುಖ್ಯ ಕಟ್ಟೆಗಳಿಗೂ ನೀರಿನ ಮಟ್ಟ ಬದಲಾವಣೆ ವ್ಯವಸ್ಥೆಗಳನ್ನು ನಿರ್ಮಿಸಲಾಯಿತು. ಇದರಿಂದ ನೌಕಾ ಸಾರಿಗೆ ಸಾಧ್ಯತೆ ಹೆಚ್ಚಾಯಿತು. ವಿದ್ಯುತ್ತಿನ ಉತ್ಪಾದನೆ ಮತ್ತು ಮಾರಾಟ ಮೂರನೆಯ ಉದ್ದೇಶ. ಇದಕ್ಕೆ ಖಾಸಗಿ ವಿದ್ಯುತ್ ಕಂಪನಿಗಳ ವಿರೋಧ ಪ್ರಬಲವಾಗಿತ್ತು. ಟಿವಿಎ ಸಂಸ್ಥೆ ಪೌರಸಭೆಗಳೊಂದಿಗೂ ಸಹಕಾರ ಸಂಸ್ಥೆಗಳೊಂದಿಗೂ ವಿದ್ಯುತ್ತಿನ ಸರಬರಾಜಿಗೆ ಒಪ್ಪಂದ ಮಾಡಿಕೊಂಡು, ಅವುಗಳ ಸಹಕಾರದೊಡನೆ ಏಕೀಕೃತ ವ್ಯವಸ್ಥೆ ಏರ್ಪಡಿಸಿತು. ಆ ಪ್ರದೇಶದ ವಿದ್ಯುತ್ ಬೇಡಿಕೆ ಏರಿದಂತೆ, ಪರಮಾಣುಶಕ್ತಿ ಆಯೋಗವೇ ಮುಂತಾದ ರಕ್ಷಣಾಕಾರ್ಯಗಳ ಬೇಡಿಕೆ ಹೆಚ್ಚಿದಂತೆ ಜಲವಿದ್ಯುತ್ತಿನ ಸರಬರಾಜು ಸಾಲದಾಗಿ, ಹಬೆ ವಿದ್ಯುತ್ತನ್ನು ಉತ್ಪಾದಿಸುವ ಆವಶ್ಯಕತೆ ಬಂದಿತು. 1960ರ ವೇಳೆಗೆ ಟಿವಿಎ ವಿದ್ಯುತ್ ವ್ಯವಸ್ಥೆಯಲ್ಲಿ 48 ಕಟ್ಟೆಗಳೂ ಹಲವು ಹಬೆ ವಿದ್ಯುದಾಗರಗಳೂ ಇದ್ದವು.

ಮಸಲ್ ಷೋಲ್ಸ್ ನ ನೈಟ್ರೇಟ್ ಕಾರ್ಖಾನೆಗಳ ನಿರ್ವಹಣೆ, ಅರಣ್ಯೀಕರಣ, ಮನರಂಜನೆ, ಮಲೇರಿಯ ನಿಯಂತ್ರಣ ಮುಂತಾದ ಜನಾರೋಗ್ಯ ಕಾರ್ಯಕ್ರಮಗಳು ಈ ಸಂಸ್ಥೆಗೆ ಸೇರಿವೆ. ಇವನ್ನೂ ಅದು ನಿರ್ವಹಿಸಿದೆ. ಈ ಪ್ರದೇಶದ ಕೈಗಾರಿಕೆಗಳ ಬೆಳವಣಿಗೆಗೆ ಇದು ಬಹಳ ಮಟ್ಟಿಗೆ ಕಾರಣವಾಗಿದೆ.

ಟಿವಿಎ ವ್ಯವಸ್ಥೆ ಪ್ರಪಂಚದ ಅನೇಕ ದೇಶಗಳ ಗಮನ ಸೆಳೆದಿದೆ. ಪ್ರತಿವರ್ಷವೂ ಇದನ್ನು ಸಂದರ್ಶಿಸಲು ಹಲವು ದೇಶಗಳ ಸರ್ಕಾರಗಳ ಉನ್ನತಾಧಿಕಾರಿಗಳೂ ಇತರರೂ ಅಲ್ಲಿಗೆ ಬರುತ್ತಾರೆ. ಭಾರತದ ದಾಮೋದರ ಕಣಿವೆ ಯೋಜನೆ ಹಾಗೂ ಕೊಲಂಬಿಯದ ಕಾಕಾ ನದಿ ಯೋಜನೆಗಳನ್ನು ಟಿವಿಎ ಮಾದರಿಯಲ್ಲಿ ರಚಿಸಲಾಗಿದೆ. ಆದರೆ ಅಮೆರಿಕದಲ್ಲಿ ಇಂಥ ವ್ಯವಸ್ಥೆ ಇದೊಂದೇ. (ಕೆ.ಜಿ.ಒ.)

**ಟೆನೆಸಿ ನದಿ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಹಾಯೊ ನದಿಯ ಅತ್ಯಂತ ದೊಡ್ಡ ಉಪನದಿ. ಟೆನೆಸಿ ರಾಜ್ಯದ ಪೂರ್ವ ಭಾಗದಲ್ಲಿ ನಾಕ್ಸ್ ವಿಲ್ ನಗರದಿಂದ 7 ಕಿಮೀ ದೂರದಲ್ಲಿ ಹೋಲ್ ಸ್ಟನ್ ಮತ್ತು ಫ್ರೆಂಚ್ ಬ್ರಾಡ್ ನದಿಗಳ ಸಂಗಮದಿಂದ ಆಗಿದೆ. ಕ್ಲಿಂಚ್, ಟೆನೆಸಿ, ಪ್ಯಾವುಲ್– ಇವು ಇದರ ಪ್ರಮುಖ ಉಪನದಿಗಳು. ಈ ಉಪನದಿಗಳು ಅಪಲೇಷಿಯನ್ ಪರ್ವತಶ್ರೇಣಿಯಲ್ಲಿ ಹುಟ್ಟುತ್ತವೆ. ಟೆನೆಸಿ ರಾಜ್ಯದ ಪೂರ್ವಭಾಗದಲ್ಲಿ ಈ ನದಿ ಕಂಬರ್‌ಲ್ಯಾಂಡ್ ಮತ್ತು ದಿ ಗ್ರೇಟ್ ಸ್ಮೋಕೀ ಪರ್ವತಶ್ರೇಣಿಯ ಮಧ್ಯದ ಫಲವತ್ತಾದ ಕಣಿವೆಯ ಮೂಲಕ ಹರಿಯುತ್ತದೆ. ಲಿಟ್ಲ್ ಟೆನೆಸಿ ನದಿಮುಖದಲ್ಲಿರುವ ಚೆರಕೀ ಇಂಡಿಯನ್ನರ ಗ್ರಾಮವಾದ ಟೆನೇಸ್ (ಟೆನಾಸಿ) ಎಂಬುದರಿಂದ ಇದಕ್ಕೆ ಈ ಹೆಸರು ಬಂದಿರಬಹುದು.

ಟೆನೆಸಿಯ ಉದ್ದ 1,049 ಕಿಮೀ. ನಾಕ್ಸ್ ವಿಲ್ ನಿಂದ ಚಾಟ ನೂಗದವರೆಗೆ ನೈರುತ್ಯಾಭಿಮುಖವಾಗಿ ಹರಿದ ನದಿ ಅಲ್ಲಿ ಪಶ್ಚಿಮಕ್ಕೆ ತಿರುಗಿ ಕಂಬರ್‌ಲ್ಯಾಂಡ್ ಪ್ರಸ್ಥಭೂಮಿಯ ಮೂಲಕ ಅಲಬಾಮ ರಾಜ್ಯದ ಉತ್ತರ ಭಾಗದಲ್ಲಿ ಪ್ರವಹಿಸುತ್ತದೆ. ಅಲಬಾಮ ಮತ್ತು ಮಿಸಿಸಿಪಿ ರಾಜ್ಯಗಳ ಗಡಿಯಲ್ಲಿ ಉತ್ತರಕ್ಕೆ ತಿರುಗಿ ಟೆನೆಸಿ ಮತ್ತು ಕೆಂಟಕಿ ರಾಜ್ಯಗಳಲ್ಲಿ ಹರಿದು ಪಡೂಕ ಎಂಬಲ್ಲಿ ಒಹಾಯೊ ನದಿಯನ್ನು ಸೇರುತ್ತದೆ.

ನದಿಯ ನೀರಿನ ಮಟ್ಟ ಆಯಾ ಋತುಗಳಿಗೆ ಅನುಗುಣವಾಗಿ ಬದಲಾಯಿಸುತ್ತಿತ್ತು. ಮಳೆಗಾಲದಲ್ಲಿ ಉಪನದಿಗಳಿಂದ ಹೆಚ್ಚು ನೀರು ಹರಿದು ಉಳಿದ ಕಾಲದಲ್ಲಿ ಸಾಕಷ್ಟು ನೀರಿಲ್ಲದೆ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಕಂಬರ್‌ಲ್ಯಾಂಡ್ ಪ್ರದೇಶದಲ್ಲಿ ನದಿಯಲ್ಲಿ ಸುಳಿಗಳು ಹೆಚ್ಚಾಗಿದ್ದವು. ನದಿಯ ಮೇಲುಭಾಗ ಹೆಚ್ಚು ಆಳವಿಲ್ಲದೆ ಪ್ರವಾಹ ರಭಸವಾಗಿದ್ದುದ್ದರಿಂದ ಚಪ್ಪಟೆದೋಣಿಗಳಿಂದ ಮಾತ್ರ ಸಂಚಾರ ಸಾಧ್ಯವಿತ್ತು. ಉತ್ತರ ಅಲಬಾಮದಲ್ಲಿ ಹರಿಯುವ ನದಿಯ ಭಾಗದಲ್ಲಿ ಮಸಲ್ ಷೋಲ್ಸ್ ಎಂಬ ಸೆಳವಿನಿಂದ ಕೂಡಿದ ಕಡಿದಿಳಿತದ ಸಾಲುಗಳು ಸು. 60 ಕಿಮೀ ಚಾಚಿಕೊಂಡಿದ್ದು ಇದನ್ನು ನೌಕೆಗಳು ದಾಟಲಾಗುತ್ತಿರಲಿಲ್ಲ. ಅಮೆರಿಕ ಸರ್ಕಾರ 1890 ರಲ್ಲಿ ಇದರ ಸುತ್ತಲೂ ಕಾಲುವೆ ತೋಡಿ ಸಂಚಾರಕ್ಕೆ ಅನುವುಮಾಡಿತು.

1895ರಲ್ಲಿ ಈ ನದಿಯ ಮೂಲಕ ನಾಕ್ಸ್‌ವಿಲ್ ನಿಂದ ನ್ಯೂ ಆರ್ಲಿಯನ್ಸ್‌ಗೆ ವ್ಯಾಪಾರನೌಕೆಗಳು ಸಂಚರಿಸಲಾರಂಭಿಸಿದವು. ಪಶ್ಚಿಮದ ಮಾರುಕಟ್ಟೆಗಳಿಗೆ ಈ ಜಲಮಾರ್ಗ ಬಳಸಾದರೂ ಉಪಯುಕ್ತವಾಗಿತ್ತು. ಈ ಮಾರ್ಗದ ಮೂಲಕ ಹಿಟ್ಟು, ಹಂದಿಯ ಒಣಮಾಂಸ, ವಿಸ್ಕಿ ಇತರ ಪದಾರ್ಥಗಳನ್ನು ಒಹಾಯೊ, ಮಿಸಿಸಿಪಿ ಮತ್ತು ನ್ಯೂ ಆರ್ಲಿಯನ್ಸ್‌ಗೆ ಚಪ್ಪಟೆದೋಣಿಗಳ ಮೂಲಕ ಸಾಗಿಸುತ್ತಿದ್ದರು. ಕೆಲವು ಕಾಲದವರೆಗೆ ನಾಕ್ಸ್ ವಿಲ್ ಮತ್ತಿತರ ಕಡೆಗಳಲ್ಲಿರುವ ಕಲ್ಲುಗಣಿಗಳಿಂದ ಅಮೃತಶಿಲೆಗಳನ್ನು ಪೂರ್ವದ ಕಡೆಗೆ ಸಾಗಿಸಲು ಈ ಜಲಮಾರ್ಗವನ್ನು ಉಪಯೋಗಿಸಲಾಗುತ್ತಿತ್ತು. 1840ರ ಅನಂತರ ರೈಲುಮಾರ್ಗದ ನಿರ್ಮಾಣವಾದ ಮೇಲೆ ಸಾರಿಗೆಗಾಗಿ ಈ ನದಿಯ ಪ್ರಾಮುಖ್ಯ ಕಡಿಮೆಯಾಯಿತು.

ನಾಕ್ಸ್‌ವಿಲ್, ಚಾಟನೂಗ – ಇವು ಟೆನೆಸಿ ನದಿಯ ತೀರದಲ್ಲಿರುವ ದೊಡ್ಡ ಪಟ್ಟಣಗಳು. ಗಂಟರ್ಸ್ ವಿಲ್, ಡಿ ಕೇಟರ್, ಫ್ಲಾರನ್ಸ್, ಷೆಫೀಲ್ಡ್ ಮುಂತಾದವು ಸಣ್ಣ ಪಟ್ಟಣಗಳು.

ಈ ನದಿಯ ಪ್ರವಾಹದಿಂದ ಆಗುವ ಹಾನಿಯನ್ನು ತಡೆಗಟ್ಟಲು ಮತ್ತು ನದಿಯ ಸಂಪೂರ್ಣ ಉಪಯೋಗ ಪಡೆಯಲು 1933 ರಲ್ಲಿ ಟೆನೆಸಿ ಕಣಿವೆ ಪ್ರಾಧಿಕಾರವನ್ನು ರಚಿಸಲಾಯಿತು.

ಇಂದು ಟೆನೆಸಿ ನದಿ ಪ್ರದೇಶದಲ್ಲಿ ಅಣೆಕಟ್ಟುಗಳಿಂದ ರೂಪುಗೊಂಡ ಅನೇಕ ಜಲಾಶಯಗಳಿವೆ. ಟೆನೆಸಿ ನದಿಗೆ ಕಟ್ಟಿದ ಪ್ರಮುಖವಾದ ಒಂಬತ್ತು ಕಟ್ಟೆಗಳು ಇವು: ಕೆಂಟಕೀ ರಾಜ್ಯದಲ್ಲಿ ಕೆಂಟಕೀ (1944), ಟೆನೆಸಿ ರಾಜ್ಯದಲ್ಲಿ ಪಿಕ್‌ವಿಕ್ ಲ್ಯಾಂಡಿಂಗ್ (1938), ಗಂಟರ್ಸ್‌ವಿಲ್ (1939), ನಿಕಜ್ಯಾಕ್ (1968), ಚಿಕಮಾಗ (1940), ವ್ಯಾಟ್ಸ್ ಬಾರ್ (1942), ಫೋರ್ಟ್ ಲೌಡನ್ (1943), ಅಲಬಾಮ ರಾಜ್ಯದಲ್ಲಿ ವಿಲ್ಸನ್ (1925), ವೀಲರ್ (1936).

ಇವಲ್ಲದೆ ಟೆನೆಸಿ ನದಿಯ ಉಪನದಿಗಳಿಗೂ ಅನೇಕ ಅಣೆಕಟ್ಟುಗಳನ್ನು ಕಟ್ಟಿದ್ದಾರೆ. ಎಲ್ಲ ಅಣೆಕಟ್ಟುಗಳಲ್ಲೂ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತಾರೆ. ಇದರಿಂದ ಈ ಪ್ರದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ತುಂಬ ಅನುಕೂಲವಾಗಿದೆ. (ಜೆ.ಎಸ್.ಎಸ್.)

**ಟೆರ್ರಾ ಇನ್‌ಕಾಗ್ನಿಟಾ:** ಅಪರಿಚಿತ ಭೂ ಪ್ರದೇಶಗಳನ್ನು ಈ ಹೆಸರಿನಿಂದ ಕರೆಯುವುದಿದೆ. ಈ ಶಬ್ದ ಗ್ರೀಕ್ ಭಾಷೆಯಿಂದ ಬಂದದ್ದು. ತಿಳಿಯದಿರುವ ಪ್ರದೇಶ ಎಂದು ಇದರ ಅರ್ಥ. ಪ್ರಾರಂಭದ ಕಾಲದಲ್ಲಿ ಜನರಿಗೆ ಮೆಡಿಟರೇನಿಯನ್ ಸುತ್ತಲಿನ ಭೌಗೋಳಿಕ ಜ್ಞಾನ ಮಾತ್ರವಿತ್ತು. ಭೂಮಿಯ ಇನ್ನುಳಿದ ಪ್ರದೇಶಗಳ ಜ್ಞಾನದ ಬಗ್ಗೆ ಹೆಚ್ಚು ಅರಿವಿರಲಿಲ್ಲ ಹಾಗೂ ಊಹಾ ಪೋಹಗಳನ್ನು ಹೊಂದಿದ್ದರು.

ಟೆರ್ರಾ ಇನ್‌ಕಾಗ್ನಿಟಾ ಶಬ್ದವೂ ಗ್ರೀಕ್ ಭಾಷೆಯಿಂದ ಬಂದಿದ್ದು. ಇದರ ಅರ್ಥ ತಿಳಿಯದಿರುವ ಪ್ರದೇಶ ಎಂದಾಗುತ್ತದೆ. ಇದರ ಹೆಚ್ಚಿನ ಜ್ಞಾನವನ್ನು ಕಾಲಾಂತರದಲ್ಲಿ ಗ್ರೀಕ್ ರೋಮನ್ನರಿಂದ ಪಡೆಯಲಾಯಿತು. (ಎಂ.ಆರ್.ಎಚ್.)

**ಟೆಲ್ ಅವೀವ್–ಜ್ಯಾಫ:** ಇಸ್ರೇಲಿನ ಅತ್ಯಂತ ದೊಡ್ಡ ಪಟ್ಟಣ. ಜೆರುಸಲೆಮ್‌ನ ವಾಯವ್ಯಕ್ಕೆ 56 ಕಿಮೀ ದೂರದಲ್ಲಿ ಮೆಡಿಟರೇನಿಯನ್ ಸಮುದ್ರದ ದಂಡೆಯ ಮೇಲಿದೆ. 1909ರಲ್ಲಿ ಜ್ಯಾಫಪಟ್ಟಣದ ವಿಸ್ತರಣೆಯಾಗಿ ಟೆಲ್ ಅವೀವನ್ನು ಸ್ಥಾಪಿಸಲಾಯಿತು. ಬಹು ಬೇಗ ಈ ನಗರ ಬೆಳೆದು, 1921ರಲ್ಲಿ ಜ್ಯಾಫಕ್ಕೆ ಅಧೀನವಾದ ಪುರಸಭೆಯನ್ನೂ, 1934ರಲ್ಲಿ ಸ್ವತಂತ್ರ ಪುರಸಭೆಯನ್ನೂ ಪಡೆಯಿತು. ಬಂದರಾಗಿ, ಕೈಗಾರಿಕಾ ನಗರವಾಗಿ ಬೆಳೆದ ಟೆಲ್ ಅವೀವ್ ಕ್ರಮೇಣ ಮುಖ್ಯನಗರವಾಗಿ ಬೆಳೆಯಿತು. ಇಸ್ರೇಲಿನ ಹಂಗಾಮಿ ರಾಜಧಾನಿಯಾಗಿ (1948–50) ಇದು ಆಯ್ಕೆಯಾದಾಗ ಇದರ ಮಹತ್ತ್ವ ಇನ್ನೂ ಹೆಚ್ಚಿತು. ಅನಂತರ ಇದೇ ಪ್ರಧಾನ ನಗರವಾಗಿ, ಜ್ಯಾಫವನ್ನು ಇದಕ್ಕೆ ಸೇರಿಸಲಾಯಿತು (1949).

ನಗರದ ಸುತ್ತಣ ಪ್ರದೇಶವನ್ನು ವ್ಯವಸಾಯಕ್ಕಾಗಿ ಉತ್ತಮಪಡಿಸಲಾಗಿದೆ. ಇಲ್ಲಿ ಗೋದಿ, ತರಕಾರಿಗಳು, ಕಿತ್ತಳೆ, ಕಲ್ಲಂಗಡಿ ಮುಂತಾದವನ್ನು ಹೇರಳವಾಗಿ ಬೆಳೆಯುತ್ತಾರೆ. ಕುರಿಸಾಕಣೆಯೂ ಹೆಚ್ಚಾಗಿದೆ. ಮೀನುಗಾರಿಕೆ ಸ್ಥಳೀಯ ಉದ್ಯಮವಾಗಿ ಬೆಳೆದಿದೆ. ಟೆಲ್ ಅವೀವ್‌ನಲ್ಲಿ ಹೊಸ ಬಂದರು ನಿರ್ಮಾಣವಾದ ಮೇಲೆ ನಗರದ ಪ್ರಾಮುಖ್ಯ ಹೆಚ್ಚಾಯಿತು. ಆದರೆ ಹೈಫದಲ್ಲಿ ಇನ್ನೂ ದೊಡ್ಡ ಬಂದರು ನಿರ್ಮಾಣವಾದ ಮೇಲೆ ವಾಣಿಜ್ಯದೃಷ್ಟಿಯಿಂದ ಇದರ ಪ್ರಾಮುಖ್ಯ ಕಡಿಮೆಯಾಯಿತು.

ಇಂದು ಟೆಲ್ ಅವೀವ್–ಜ್ಯಾಫ ಒಂದು ದೊಡ್ಡ ನಗರ. ನಗರದ ದಕ್ಷಿಣ ಭಾಗದಲ್ಲೇ ಹೆಚ್ಚಾಗಿ ಕೈಗಾರಿಕಾ ಸ್ಥಾವರಗಳು, ವಾಣಿಜ್ಯೋದ್ಯಮ ಸಂಸ್ಥೆಗಳು ಇವೆ. ಉತ್ತರಭಾಗ ಸುಂದರವಾದ ಆಧುನಿಕ ವಸತಿಗೃಹಗಳಿಂದ ಕೂಡಿದ ಪ್ರದೇಶವಾಗಿದೆ. ಇಸ್ರೇಲಿನ ಅನೇಕ ರಾಷ್ಟ್ರೀಯ ಸಂಸ್ಥೆಗಳು ಇರುವುದು ಇಲ್ಲೇ. ಇಲ್ಲಿಯ ಸುಂದರ ಕಡಲದಂಡೆ ಮತ್ತಿತರ ಆಕರ್ಷಣೆಗಳಿಂದಾಗಿ ಈಗ ಇದು ಪ್ರವಾಸಿಕೇಂದ್ರವಾಗಿ ಬೆಳೆದಿದೆ. *

**ಟೆಲ್ ಎಲ್ ಅಮಾರ್ನ :** ಪ್ರ.ಶ.ಪೂ. 1375ರಲ್ಲಿ ಈಜಿಪ್ಟಿನ ದೊರೆ 4ನೆಯ ಆಮೆನ್ ಹೋಟೆಪ್ (ಆಖೆನಾಟನ್) ಕಟ್ಟಿಸಿದ ರಾಜಧಾನಿ ಆಖೆನಾಟನ್ ನಗರದ ಅವಶೇಷಗಳ ನಿವೇಶನ. ಕೈರೋದ ದಕ್ಷಿಣಕ್ಕೆ 305 ಕಿಮೀ ದೂರದಲ್ಲಿ ನೈಲ್ ನದಿಯ ಪೂರ್ವತೀರದಲ್ಲಿದೆ. ಸೂರ್ಯದೇವತೆಯನ್ನು (ಅಟಾನ್) ಆರಾಧಿಸುವ ಹೊಸ ಮತವೊಂದರ ಪ್ರವರ್ತಕನಾದ ಆಮೆನ್ ಹೋಟೆಪ್, ಅದಕ್ಕೆ ಅನುಗುಣವಾಗಿ ತನ್ನ ಹೆಸರನ್ನು ಆಖೆನಾಟನ್ ಎಂದು ಬದಲಾಯಿಸಿಕೊಂಡು, ರಾಜಧಾನಿಯನ್ನು ತೀಬ್ಸಿನಿಂದ ಅಮಾರ್ನಕ್ಕೆ ಬದಲಾಯಿಸಿದ. ಇವನ ಹೊಸ ರಾಜಧಾನಿಗೂ ಆಖೆನಾಟನ್ ಎಂದು ಹೆಸರಾಯಿತು. ಅಲ್ಲಿ ಅವನು 15 ವರ್ಷಗಳ ಕಾಲ ಆಡಳಿತ ನಡೆಸಿ ಮರಣಹೊಂದಿದ. ಜನ ಮತ್ತೆ ಹಳೆಯ ಮತದ ಅನುಯಾಯಿಗಳಾದರು. ಮತ್ತೆ ತೀಬ್ಸ್ ರಾಜಧಾನಿಯಾಯಿತು. ಹೊಸ ರಾಜಧಾನಿ ಪಾಳುಬಿತ್ತು.

ಈ ಪ್ರದೇಶದಲ್ಲಿ ಈಚೆಗೆ ನಡೆದ ಉತ್ಖನನಗಳಲ್ಲಿ ಅರಮನೆಗಳ, ದೇವಾಲಯಗಳ, ವಸತಿಗಳ ಅವಶೇಷಗಳೂ ಮೂರ್ತಿಶಿಲ್ಪಗಳೂ ದೊರೆತಿವೆ. ಅನೇಕ ಭಿತ್ತಿಚಿತ್ರಗಳು ಮತ್ತು ಅಲಂಕೃತ ಹಜಾರಗಳನ್ನು ಒಳಗೊಂಡ ಇಲ್ಲಿಯ ಅರಮನೆಯ ಮತ್ತು ಗ್ರಂಥಾಗಾರದ ಅವಶೇಷಗಳು ಬಹಳ ಪ್ರಸಿದ್ಧವಾದವು. ಆ ಕಾಲದ ಪಟ್ಟಣಗಳ ವಿನ್ಯಾಸ, ಕಟ್ಟಡ ರಚನೆ, ಶಿಲ್ಪ ಮತ್ತು ಚಿತ್ರಕಲೆಗಳಿಗೆ ಅಮಾರ್ನ ಒಂದು ಒಳ್ಳೆಯ ನಿದರ್ಶನ. *

**ಟೆಹರಾನ್:** ಇರಾನಿನ ರಾಜಧಾನಿ, ಓಸ್ತಾನಿನ (ಪ್ರಾಂತ್ಯ) ಮುಖ್ಯನಗರ. ಮಧ್ಯ ಪ್ರಸ್ಥಭೂಮಿಯ ಉತ್ತರದ ಅಂಚಿನ ಮೇಲೆ ಎಲ್‌ಬುರ್ಜ್ ಪರ್ವತಗಳಿಂದ 16 ಕಿಮೀ ಮತ್ತು ಕ್ಯಾಸ್ಪಿಯನ್ ಸಮುದ್ರದಿಂದ ಸು. 105 ಕಿಮೀ ದಕ್ಷಿಣದಲ್ಲಿ, ಸಮುದ್ರಮಟ್ಟದಿಂದ ಸರಾಸರಿ 3.800 ಮೀ ಎತ್ತರದಲ್ಲಿ, ಉತ್ತರದ ಕಡೆಗೆ ಲಘುವಾಗಿ ಏರುತ್ತ ಸಾಗುವ ನೆಲದ ಮೇಲೆ ಇದೆ. ಜನಸಂಖ್ಯೆ 73,80,000 (2002). ಈ ನಗರದಲ್ಲಿ ಬಿಸಿಲಿನ ಬೇಗೆ ಅತಿಯಾಗಿರುತ್ತದೆ. ಜುಲೈ ತಿಂಗಳ ಗರಿಷ್ಠ ಉಷ್ಣತೆ $55^{0}$ಸೆ. ಜನವರಿಯಲ್ಲಿ $24^{0}$ಸೆ. ಬೇಸಗೆಯ ತಾಪದಿಂದ ತಪ್ಪಿಸಿಕೊಳ್ಳಲು ಅನೇಕರು ವಾರಾಂತ್ಯಗಳಲ್ಲಿ ಹಾಗೂ ರಜಾದಿನಗಳಲ್ಲಿ ಉತ್ತರ ಹಾಗೂ ಈಶಾನ್ಯ ದಿಕ್ಕುಗಳಿಂದ ತಂಪಿನ ಉನ್ನತ ಪರ್ವತವಲಯಗಳತ್ತ ಧಾವಿಸುತ್ತಾರೆ. ಜೊತೆಗೆ ಅಲ್ಲಿಯ ನಿಸರ್ಗಸೌಂದರ್ಯವೂ ಅವರನ್ನು ಆಕರ್ಷಿಸುತ್ತದೆ.

ಟೆಹರಾನ್ ನಗರ ಪಾಶ್ಚಾತ್ಯ ಮಾದರಿಯಲ್ಲಿ ಬೆಳೆದಿದ್ದರೂ ತನ್ನ ಪ್ರಾಚೀನ ವೈಶಿಷ್ಟ್ಯಗಳನ್ನೂ ಉಳಿಸಿಕೊಂಡಿದೆ. ಈ ನಗರಕ್ಕೆ ಆರು ದಿಡ್ಡಿಬಾಗಿಲುಗಳಿವೆ. ಈ ಬಾಗಿಲುಗಳಿಂದ ಆರು ಪ್ರಮುಖ ರಸ್ತೆಗಳು ಹೊರಟು ನಗರದ ಮಧ್ಯಭಾಗದ ವ್ಯಾಪಾರಕೇಂದ್ರದಲ್ಲಿ ಕೂಡುತ್ತವೆ. ಅವುಗಳ ಎಡಬಲಗಳಲ್ಲಿರುವ ಕಿರಿಯ ರಸ್ತೆಗಳು ಸುತ್ತುಬಳಸಿನ ಸಂದಿಗೊಂದಿಗಳು.

ಈ ನಗರದಲ್ಲಿ ಪ್ರಾಚೀನ ಮತ್ತು ಐತಿಹಾಸಿಕ ಕಟ್ಟಡಗಳು ವಿರಳ. ಬಹಳ ಪ್ರಮುಖವಾಗಿರುವ ಕಟ್ಟಡವೆಂದರೆ ಆರ್ಕ್. ಇದರಲ್ಲಿ ಅರಮನೆ ಮತ್ತು ಕೋಟೆಗಳ ನಿರ್ಮಾಣ – ಶೈಲಿಗಳ ಸಂಗಮವನ್ನು ಕಾಣಬಹುದಾಗಿದೆಯಾದರೂ ವಾಸ್ತುಶಿಲ್ಪ ಹಿರಿಮೆಯೇನೂ ಇಲ್ಲ. ಅಲಂಕರಣವೂ ಯಾದೃಚ್ಛಿಕ. ಗುಲಿಸ್ತಾನ್ ಅರಮನೆಯ ಷಾಹೀವಸ್ತುಸಂಗ್ರಹಾಲಯದಲ್ಲಿ ಅಮೂಲ್ಯ ರತ್ನಗಳೂ ರತ್ನಖಚಿತ ಚಿನ್ನದ ಗೋಳವೂ ತೈಮೂರನ ಖಡ್ಗವೂ 1739 ರಲ್ಲಿ ನಾದಿರ್‌ಷಾ ದೆಹಲಿಯಿಂದ ತಂದನೆನ್ನಲಾದ ಮಯೂರಾಸನವೂ ಸೂಸಾ ಮತ್ತು ಇತರ ಪ್ರಾಚೀನ ನಿವೇಶನಗಳಲ್ಲಿ ದೊರೆತಿರುವ ಅವಶೇಷಗಳೂ ಕಾಜ಼ರ್ ಅವಧಿಯ ಕಲಾತ್ಮಕ ಸಂಗ್ರಹಗಳೂ ಇವೆ. ನಗರದ ಕೇಂದ್ರಭಾಗದಲ್ಲಿರುವ ಮೈದಾನೀ ಸಿಪಾಹ್‌ನಲ್ಲಿ (ಸೈನಿಕರ ಮೈದಾನ) ಶಹ್ರದರಿ (ಪುರಭವನ) ಇದೆ. ಹತ್ತಿರದಲ್ಲೇ ವಿವಿಧ ಸಚಿವಾಲಯಗಳ ಕಟ್ಟಡಗಳೂ ಇದೆ. ಆಖಮೇನಿಯನ್ ಶೈಲಿಯಲ್ಲಿ ನಿರ್ಮಿಸಲಾದ ಪೊಲೀಸ್ ಕೇಂದ್ರ ಕಚೇರಿಯೂ ಇದೆ. ಜೊತೆಗೆ ಮಸೀದಿ, ವಿಶ್ವವಿದ್ಯಾಲಯ, ಶಾಲಾ ಕಾಲೇಜು ಕಟ್ಟಡಗಳಿವೆ.

ಟೆಹರಾನ್ ನಗರ ಇರಾನಿನ ರೈಲ್ವೆ ಮತ್ತು ರಸ್ತೆಗಳ ಸಂಧಿಸ್ಥಳ. ಈ ಮಾರ್ಗಗಳು ನದಿಮುಖ ಹಾಗೂ ಕರಾವಳಿಗಳೊಡನೆಯೂ ಇರಾಕ್, ಟರ್ಕಿ ಹಾಗೂ ಸೋವಿಯತ್ ಗಡಿಗಳೊಂದಿಗೂ ಸಂಪರ್ಕ ಕಲ್ಪಿಸುತ್ತವೆ. ನಗರದ ಪಶ್ಚಿಮಕ್ಕೆ ಸು. 8 ಕಿಮೀ ದೂರದಲ್ಲಿರುವ ಮೆಹ್ರಬಾದಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಇದೆ. ಕಾಜ್‌ವೀನ್, ತಬ್ರೀಜ್, ಆವಾಜ್, ಕಾರ್ಮಾನ್‌ಷಾ, ಇಸ್ಫಹಾನ್, ಯಾಜ್ದ್, ಜ್ಞಾಹಿದಾನ್ ಮೊದಲಾದವುಗಳೊಂದಿಗೆ ಟೆಹರಾನ್ ನಗರದಿಂದ ಸಾರಿಗೆಸಂಪರ್ಕ ವ್ಯವಸ್ಥೆಯಿದೆ.

ಟೆಹರಾನ್ ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರ. ಜವಳಿ, ಸಿಮೆಂಟ್, ಸಿಗರೇಟ್, ಬೆಂಕಿಪೊಟ್ಟಣ, ಸಾಬೂನು, ಗಾಜು, ಸಣ್ಣಪುಟ್ಟ ಶಸ್ತ್ರಾಸ್ತ್ರಗಳು, ಚರ್ಮದ ಉಪಕರಣಗಳು – ಇವೇ ಮೊದಲಾದುವುಗಳಿಗೆ ಸಂಬಂಧಿಸಿದ ಅನೇಕ ಉದ್ಯಮಗಳು ಈ ನಗರದಲ್ಲಿವೆ.

ಟೆಹರಾನ್ ಓಸಾನ್: ಟೆಹರಾನ್ ಓಸಾನ್ ಅಥವಾ ಮಧ್ಯ ಪ್ರಾಂತ್ಯ ಎಲ್ಬರ್ಜ್ ಪರ್ವತಗಳ ಬಹುಭಾಗವನ್ನೂ ಒಳನಾಡಿನ ಬೆಟ್ಟಸೀಮೆಯ ಹಲವು ಜಿಲ್ಲೆಗಳನ್ನೂ ಮಹಾ ಮಧ್ಯ ಬಯಲಿನ ವಾಯವ್ಯದ ಅಂಚನ್ನೂ ದಾರ್ಯಾಚಯ – ನಮಾಕ್ ಮರುಭೂಮಿ

ಒಂದು ಭಾಗವನ್ನು ಒಳಗೊಂಡಿದೆ. ಇದು ಹನ್ನೆರಡು ಷಹರೀಸ್ತಾನ್‌ಗಳಾಗಿ ವಿಭಾಗವಾಗಿದೆ. ಇದರ ವಿಸ್ತೀರ್ಣ 93.600 ಚ.ಕಿಮೀ. ಇರಾನಿನ ಪ್ರಮುಖ ರೈಲುಮಾರ್ಗಗಳೂ ರಸ್ತೆಗಳೂ EzgÀ ÀÆ®PÀ ÁUÀvÀÛÉEgÀ£À Ã ¹/₃ ಕೈಗಾರಿಕೆಗಳು ಈ ಪ್ರಾಂತ್ಯದಲ್ಲಿವೆ. ಜವಳಿ, ಸಕ್ಕರೆ, ಕಲ್ಲಿದ್ದಲು, ಗಣಿಗಾರಿಕೆ, ಆಬದಾನ್ ತೈಲಶುದ್ಧೀಕರಣ ಕೇಂದ್ರದಿಂದಲೂ ಕೋಮ್ ಬಳಿಯ ಅರ್‌ಬೋರ್ಜ್ ತೈಲಗಣಿಯಿಂದಲೂ ಇಲ್ಲಿಗೆ ತೈಲ ಕೊಳವೆಗಳಿವೆ. ಕರಾಜ್ ಮತ್ತು ಲಾತಿಯ ಕಟ್ಟೆಗಳಿಂದ ನೀರಾವರಿ ಮತ್ತು ವಿದ್ಯುತ್ ಸೌಲಭ್ಯಗಳು ಏರ್ಪಟ್ಟಿವೆ. (ಪಿ.ಎಂ.)

**ಟೇಬಲ್ ಪರ್ವತ:** ದಕ್ಷಿಣ ಆಫ್ರಿಕದಲ್ಲಿ ಕೇಪ್ ಟೌನಿಗೆ ದಕ್ಷಿಣದಲ್ಲಿ ಮೇಜಿನಂತಿರುವ ಚಪ್ಪಟೆ ತಲೆಯ ಪರ್ವತ. ಎತ್ತರವಾದ ಬಂಡೆಗಳಿಂದ ಕೂಡಿದ ಕೇಪ್ ಪರ್ಯಾಯ ದ್ವೀಪದ ಉತ್ತರ ತುದಿ. ಇದರ ಮರಳುಗಲ್ಲಿನ ಗಟ್ಟಿಯಾದ ಮತ್ತು ದಟ್ಟವಾದ ಬಂಡೆಯಿಂದಾಗಿ ಇದಕ್ಕೆ ಮೇಜಿನ ಆಕಾರ ಬಂದಿದೆ. ನೀರಿನ ಹಾಗೂ ಗಾಳಿಯ ತೀವ್ರ ಕೊರೆತದಿಂದ ಇದರ 3.22 ಕಿಮೀ ಉದ್ದದ ಉತ್ತರಮುಖ ಗೋಡೆಯಂತೆ ಕಡಿದಾಗಿ ಪರಿಣಮಿಸಿದೆ. ಈ ಪರ್ವತ ಪ್ರಸ್ಥಭೂಮಿಯ ಎತ್ತರ ಸು. 1,065 ಮೀ. ಇದರ

ಹಿಂಬದಿಯಲ್ಲಿ ಅಲ್ಲಲ್ಲಿ ಆಳವಾಗಿ ಕತ್ತರಿಸಲ್ಪಟ್ಟ ಸ್ವಲ್ಪ ತಗ್ಗಿನ ಪ್ರಸ್ಥಭೂಮಿ ಇದೆ. ಟೇಬಲ್ ಪರ್ವತದ ಅತ್ಯುನ್ನತ ಸ್ಥಳ ಮ್ಯಾಕ್ಲಿಯರ್ ಬೀಕನ್ 1,087 ಮೀ. ಭೂಸವೆತದಿಂದಾಗಿ ಮುಖ್ಯ ಪರ್ವತಭಾಗದಿಂದ ಪ್ರತ್ಯೇಕವಾಗಿರುವ ಎರಡು ಶಿಖರಗಳಲ್ಲಿ ಒಂದು ಡೆವಿಲ್ಸ್ ಶಿಖರ 997 ಮೀ. ಇದು ಈಶಾನ್ಯದಲ್ಲಿದೆ. ವಾಯವ್ಯಕ್ಕಿರುವುದು ಲೈಯನ್ ಹೆಡ್ ಶಿಖರ 664ಮೀ. (ಕೆ.ಎನ್.ಯು.)

**ಟೈ–ಪೇ:** ಟೈವಾನಿನ ರಾಜಧಾನಿ. 1708ರಲ್ಲಿ ಸ್ಥಾಪಿತವಾಯಿತು. 19ನೆಯ ಶತಮಾನದ ಮಧ್ಯದ ಅನಂತರ ಸಾಗರಾಂತರ ವ್ಯಾಪಾರದ ಪ್ರಮುಖ ಕೇಂದ್ರವಾಯಿತು. ಹೊರ ಬಂದರಾದ ಡಾನ್ ಷ್ವೇ ಮೂಲಕ ಇದರ ವಿದೇಶಿ ವ್ಯಾಪಾರ ನಡೆಯುತ್ತದೆ. ಜನಸಂಖ್ಯೆ 26,30,872 (2006). ಉತ್ತರ ಟೈವಾನಿನ ವಿಶಾಲ ಕೃಷಿ ಪ್ರದೇಶದ ನಡುವೆ ಇರುವ ಟೈ–ಪೇ ಕೈಗಾರಿಕಾ ವಲಯದ ಕೇಂದ್ರ ಕೂಡ. ಹಗುರ ಮತ್ತು ಭಾರಿ ಕೈಗಾರಿಕೆಗಳು, ಹತ್ತಿ ಮತ್ತು ಕೃತಕ ತಂತು ಬಟ್ಟೆ, ವಿದ್ಯುದುಪಕರಣ, ಪಾನೀಯ, ರಬ್ಬರ್ ಸರಕು, ಲೋಹವಸ್ತು, ರಾಸಾಯನಿಕ ಮುಂತಾದ ಕೈಗಾರಿಕೆಗಳಿವೆ. ಟೈ–ಪೇ ಮುಖ್ಯ ಸಾರಿಗೆ ಕೇಂದ್ರ ಕೂಡ. ಇಲ್ಲೊಂದು ಅಂತಾರಾಷ್ಟ್ರೀಯ ವಿಮಾನನಿಲ್ದಾಣವಿದೆ. ರಾಷ್ಟ್ರೀಯ ಟೈವಾನ್ ವಿಶ್ವವಿದ್ಯಾಲಯವೂ ಹಲವು ವೃತ್ತಿಶಿಕ್ಷಣ ಸಂಸ್ಥೆಗಳೂ ಇವೆ. ಚೀನದ ಮುಖ್ಯ ಭೂಪ್ರದೇಶದ ಅನೇಕ ಜನ ಇಲ್ಲಿದ್ದಾರೆ. ಚಹ, ತಂಬಾಕು, ಮರದ ದಿಮ್ಮಿ, ಕರ್ಪೂರ ಇಲ್ಲಿಂದ ರಫ್ತಾಗುತ್ತವೆ. (ಕೆ.ಎನ್.ಯು.)

**ಟೈಗ್ರಿಸ್:** ಆಗ್ನೇಯ ಟರ್ಕಿಯಲ್ಲಿ ಹುಟ್ಟಿ ಇರಾಕಿನ ಮೂಲಕ ಪರ್ಷಿಯನ್ ಕೊಲ್ಲಿಯತ್ತ ಹರಿಯುವ ಒಂದು ನದಿ. ಯಮಳ ನದಿಗಳಲ್ಲಿ ಒಂದು (ಇನ್ನೊಂದು ನದಿ ಯುಫ್ರೇಟೀಸ್). ಉದ್ದ ಸು. 2720 ಕಿಮೀ. ಪೂರ್ವ ಆನಟೋಲಿಯದ ಪರ್ವತಪ್ರದೇಶದಲ್ಲಿ ಹಲವು ತೊರೆಗಳ ಕೂಡಿಕೆಯಿಂದ ಉದ್ಭವಿಸುವ ಟೈಗ್ರಿಸ್ ನದಿ ಊಟೆಗಳ ನೀರಿನಿಂದಲೂ ಹಿಮಕರಗಿದ ನೀರಿನಿಂದಲೂ ತುಂಬಿ ಸ್ಥೂಲವಾಗಿ ಆಗ್ನೇಯ ದಿಕ್ಕಿಗೆ ಹರಿಯುತ್ತದೆ. ಉಗಮಸ್ಥಾನದಿಂದ ಸು. 1150 ಕಿಮೀ ದೂರ. ಇದು ಟರ್ಕಿಯ ನದಿ ಇರಾಕನ್ನು ಪ್ರವೇಶಿಸುವುದಕ್ಕೆ ಮುಂಚೆ 32 ಕಿಮೀ ದೂರ ಸಿರಿಯದ ಎಲ್ಲೆಯಾಗಿ ಪರಿಣಮಿಸಿದೆ. ಮೋಸೂಲ್ ಬಳಿಯಲ್ಲಿ ಜಬ್–ಅಲ್–ಕಬೀರ್ ನದಿಯೂ ತಿಕ್ರಿತ್ ಬಳಿಯಲ್ಲಿ ಜಬ್–ಅಲ್–ಅಸ್‌ಘಲ್ ನದಿಯೂ ಬಾಗ್ದಾದ್ ಬಳಿಯಲ್ಲಿ ದಿಯಾಲ್ ನದಿಯೂ ಅನಂತರ ಶತ್–ಅಲ್–ಅದ್ ಹೈಮ್ ನದಿಯೂ ಪೂರ್ವ ದಡದಲ್ಲಿ ಇದನ್ನು ಸೇರುತ್ತವೆ. ಉಗಮದ ಎಡೆಯಿಂದ ಸು. 1700 ಕಿಮೀ ಹರಿದ ಮೇಲೆ ಯುಫ್ರೇಟೀಸನ್ನು ಕೂಡಿ ಷಟ್–ಅಲ್ ಅರಬ್ ಎನಿಸಿಕೊಂಡು ಸು. 172 ಕಿಮೀ ದೂರ ಹರಿದು ಫ್ಯಾವು ರೇವು ಪಟ್ಟಣದ ಬಳಿ ಪರ್ಷಿಯನ್ ಖಾರಿಯನ್ನು ಸೇರುತ್ತದೆ. (ಪಿ.ಜಿ.ಡಿ.)

**ಟೈಟೇನಿಯಮ್:** ಅತಿ ಬಿಳುಪು ಲೋಹ, ಬಣ್ಣ ತಯಾರಿಕೆಯಲ್ಲಿ ಇದಕ್ಕೆ ಹೆಚ್ಚು ಮಹತ್ತ್ವವಿದೆ. ಇತರ ವರ್ಣಗಳೊಂದಿಗೆ ಬೆರೆಸಿದಾಗ ಇದರ ಬಣ್ಣ ಮತ್ತಷ್ಟು ಪಾರಕವಾಗುತ್ತದೆ. ಇದು ಹೆಚ್ಚು ಕಠಿಣ ಲೋಹ. ಆದ್ದರಿಂದ, ಆಧುನಿಕ ಕೈಗಾರಿಕೆಯಲ್ಲಿ ಈ ಲೋಹಕ್ಕೆ ಹೆಚ್ಚು ಬೇಡಿಕೆಯಿದೆ. ಇದನ್ನು ವಿಮಾನದ ಬಿಡಿ ಭಾಗಗಳನ್ನು ತಯಾರಿಸಲು ಬಳಸುತ್ತಾರೆ. ಕಾರ್ಬನ್ ಉತ್ಪಾದನೆಯಲ್ಲಿ ಈ ಲೋಹ ಅತ್ಯಾವಶ್ಯಕ. ಇದು ರೂಟೈಲ್ ಮತ್ತು ಇಲ್ಮೆನೈಟ್ ಎಂಬ ಎರಡು ಆಕ್ಸೈಡ್ ರೂಪದ ಖನಿಜಗಳ ಮಿಶ್ರಣ. ಇವು ಸಾಮಾನ್ಯವಾಗಿ ಅಗ್ನಿಶಿಲೆ ಮತ್ತು ರೂಪಾಂತರ ಶಿಲೆಗಳಲ್ಲಿ ದೊರೆಯುತ್ತವೆ. ಸಮುದ್ರ ತಡೆಯ ಮರಳಿನಲ್ಲಿ ಇತರ ಭಾರವಾದ ಖನಿಜಗಳೊಂದಿಗೆ ಇವು ಸಂಗ್ರಹವಾಗಿರುತ್ತವೆ. ಇದು ಭಾರತದಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಒರಿಸ್ಸ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕಂಡುಬರುತ್ತದೆ. (ಬಿ.ಸಿ.ಕೆ.)

**ಟೈರ್:** ಪ್ರಾಚೀನ ಫಿನಿಷಿಯದ ಒಂದು ರೇವುಪಟ್ಟಣ. ಈಗಿನ ಲೆಬನಾನಿನಲ್ಲಿ ಬೇರೂತ್‌ನ ದಕ್ಷಿಣದಲ್ಲಿರುವ ಸೂರ್ ಎಂಬಲ್ಲಿದೆ. ಸಮುದ್ರ ತೀರದ ಸಣ್ಣ ದ್ವೀಪವೊಂದರ ಮೇಲೆ (ಈಗ ಇದು ಪರ್ಯಾಯದ್ವೀಪವಾಗಿದೆ) ಈ ಪಟ್ಟಣ ನಿರ್ಮಿತವಾಗಿತ್ತು. ಇಲ್ಲಿ ಎರಡು ಸರ್ವಋತು ಬಂದರುಗಳಿದ್ದುದರಿಂದ ಇದೊಂದು ಸುರಕ್ಷಿತ ವ್ಯಾಪಾರಕೇಂದ್ರವಾಗಿತ್ತು. ಪ್ರ.ಶ.ಪೂ. 14–13ನೆಯ ಶತಮಾನಗಳಲ್ಲಿ ಇದು ಈಜಿಪ್ಟಿನ ರಕ್ಷಣೆಯಲ್ಲಿತ್ತು. ಸಾಲೊಮನ್ನನ ಕಾಲದಲ್ಲಿ (ಪ್ರಶ.ಪೂ. 10ನೆಯ ಶತಮಾನ) ಇದು ಇಸ್ರೇಲಿನೊಂದಿಗೆ ನಿಕಟ ವ್ಯಾಪಾರಸಂಪರ್ಕ ಹೊಂದಿತ್ತು. ಸಾಗರೋತ್ತರ ವ್ಯಾಪಾರ ಚಟುವಟಿಕೆಯಲ್ಲಿ ಫಿನಿಷಿಯನರು ಪ್ರಮುಖರಾಗಿದ್ದರು. ಅಸ್ಸಿರಿಯನರ ದಾಳಿಗಳಿಂದಲೂ ಒಳಜಗಳಗಳಿಂದಲೂ ಇವರಲ್ಲಿ ಗುಂಪುಗುಳಿತನ ಹೆಚ್ಚಿದಾಗ, ಒಂದು ಗುಂಪಿನವರು ಪ್ರ.ಶ.ಪೂ. 814ರಲ್ಲಿ ಉತ್ತರ ಆಫ್ರಿಕಕ್ಕೆ ವಲಸೆ ಹೋಗಿ ಸಮುದ್ರತೀರಗಳಲ್ಲಿ ಕಾರ್ತೇಜ್ ನಗರವನ್ನು ಸ್ಥಾಪಿಸಿದರು. ಅಸ್ಸಿರಿಯನ್ ದೊರೆ ಸೆನಾಚೆರಿಬ್ ಈ ನಗರವನ್ನು ಮುತ್ತಿದಾಗ ಇಲ್ಲಿಯ ಜನರು ತೀರಪ್ರದೇಶವನ್ನು ಪೂರ್ಣವಾಗಿ ತ್ಯಜಿಸಿ ತಮ್ಮ ದ್ವೀಪಕ್ಕೂ ಮುಖ್ಯಭೂಭಾಗಕ್ಕೂ ನಡುವೆ ಇದ್ದ ಸೇತುವೆಯನ್ನು ನಾಶಪಡಿಸಿ ದ್ವೀಪದಲ್ಲಿ ಆಶ್ರಯ ಪಡೆದರು. ಅನಂತರ ಬ್ಯಾಬಿಲೋನಿನ ದೊರೆ 2ನೆಯ ನೆಬುಕಡ್‌ನೆಜ಼ರ್ 13 ವರ್ಷಗಳ ಕಾಲ (ಪ್ರಶ.ಪೂ. 585–573) ಇದಕ್ಕೆ ಮುತ್ತಿಗೆ ಹಾಕಿದ್ದ. ಟಿರಿಯನರು ಬ್ಯಾಬಿಲಾನಿಯನ್ ಆಧಿಪತ್ಯವನ್ನು ಒಪ್ಪಿಕೊಳ್ಳಬೇಕಾಯಿತು. ಟೈರ್ ಮತ್ತೆ ಪ್ರಗತಿಪಥದಲ್ಲಿ ಸಾಗಿತು. ಅಲೆಗ್ಸಾಂಡರ್ ಮಹಾಶಯ ಈ ದ್ವೀಪಕ್ಕೆ ಸೇತುವೆ ನಿರ್ಮಿಸಿ ಇದನ್ನು ಸದೆಬಡಿದ. ಸೆಲ್ಯೂಸಿಡ್ ಗ್ರೀಕರ ಮತ್ತು ರೋಮನರ ಆಶ್ರಯದಲ್ಲಿ ಟೈರ್ ಪುನಃ ಉಚ್ಛ್ರಾಯ ಹೊಂದಿತು. ಕ್ರೈಸ್ತ ಕೇಂದ್ರವಾಗಿದ್ದ ಟೈರ್ ನಗರವನ್ನು ಪ್ರ.ಶ.ಪ್ರ. 636ರಲ್ಲಿ ಅರಬರು ಗೆದ್ದರು. ಧರ್ಮಯುದ್ಧಗಳ ಕಾಲದಲ್ಲಿ ಮುಸ್ಲಿಮರು ಈ ನಗರವನ್ನು ಕ್ರೈಸ್ತರಿಂದ ಗೆದ್ದುಕೊಂಡು ನಾಶಗೊಳಿಸಿದರು. (1291). (ಬಿ.ಸಿ.ಕೆ.)

**ಟೈವಾನ್:** ಸನ್ನಿವೇಶ ಮತ್ತು ವಿಸ್ತೀರ್ಣ : $21^0 45'$–$25^0 38'$ ಉ.ಅ. ಮತ್ತು $120^0 122'$ ಪೂ.ರೇ.ಗಳಲ್ಲಿ ಟೈವಾನ್ ಸನ್ನಿವೇಶಗೊಂಡಿದ್ದು ದೇಶವು ಪೂರ್ವ ಏಷ್ಯದಲ್ಲಿನ ಮಧ್ಯಮ ಗಾತ್ರದ ದ್ವೀಪಗಳ ಸಮೂಹವಾಗಿದ್ದು ಕರ್ಕಾಟಕ ಸಂಕ್ರಾಂತಿ ವೃತ್ತದಲ್ಲಿ ಹಂಚಿಕೆಯಾಗಿದೆ. ಇದರ ಒಟ್ಟು ವಿಸ್ತೀರ್ಣ 35980 ಚ.ಕಿಮೀ ಇದ್ದು ಅದರಲ್ಲಿ 32260 ಚ.ಕಿಮೀ ಭೂಭಾಗ ಮತ್ತು 3720 ಚ.ಕಿಮೀ ಪ್ರಾಂತೀಯ ಜಲಭಾಗವನ್ನೊಂದಿದೆ. ಇದು 394 ಕಿಮೀ ಉದ್ದ ಮತ್ತು 144 ಕಿಮೀ ಅಗಲವಾಗಿದ್ದು 1,566.3 ಕಿಮೀ ಉದ್ದದ ಕರಾವಳಿಯನ್ನೊಂದಿದೆ.

ಟೈವಾನ್‌ನ ಹೆಚ್ಚಿನ ಪ್ರಾಂತ್ಯಗಳು ಚೀನ ಗಣರಾಜ್ಯದ ನಿಯಂತ್ರಣದಲ್ಲಿರುತ್ತವೆ. ಶೇ. 98 ರಷ್ಟು ಮಹಾ ಮೈದಾನದಲ್ಲಿ ಟೈವಾನ್ ದ್ವೀಪವಿದ್ದು ಉಳಿದ ಶೇ. 2 ರಷ್ಟು ಸಣ್ಣಸಣ್ಣ ದ್ವೀಪಗಳಿಂದ ಕೂಡಿದ ಪ್ರದೇಶಗಳು ಚೀನ ಗಣರಾಜ್ಯದ ಭಾಗವಾಗಿದೆ. ಇವುಗಳಲ್ಲಿ ಲಾನ್ಯು, ಎಸ್ಕಡೋರ್ಸ್ ಮತ್ತು ಲ್ಯುಚ್ಯು ಮುಖ್ಯವಾದ ದ್ವೀಪಗಳಾಗಿವೆ.

ಟೈವಾನ್ ದ್ವೀಪ ಮತ್ತು ಚೀನ ಮೈದಾನದ ನಡುವೆ ಟೈವಾನ್‌ಕೊಲ್ಲಿ ಇದ್ದು ಚೀನದ ಮಹಾ ಮೈದಾನದಿಂದ ಬೇರ್ಪಟ್ಟು ದಕ್ಷಿಣ ಚೀನ ಸಮುದ್ರ ಮತ್ತು ದಕ್ಷಿಣದಲ್ಲಿ ಫಿಲಿಪೈನ್ಸ್ ಸಮುದ್ರ, ಉತ್ತರದಲ್ಲಿ ಪೂರ್ವ ಚೀನ ಸಮುದ್ರ ಮತ್ತು ಪಶ್ಚಿಮದಲ್ಲಿ ಪೆಸಿಫಿಕ್ ಸಾಗರದಿಂದ ಸುತ್ತುವರಿಯಲ್ಪಟ್ಟಿದೆ.

ಮೇಲ್ಮೈಲಕ್ಷಣ : ಟೈವಾನ್ ಎರಡು ರೀತಿಯ ಭೂಮೇಲ್ಮೈ ಲಕ್ಷಣವನ್ನು ಹೊಂದಿದ್ದು ಸಾಮಾನ್ಯ ಇಳಿಜಾರಿನಿಂದ ಕೂಡಿದ ಮೈದಾನ ಪ್ರದೇಶ ದೇಶದ ಪಶ್ಚಿಮ ದಿಕ್ಕಿನಲ್ಲಿದ್ದು ಈ ಭಾಗದಲ್ಲಿ ಶೇ. 90 ರಷ್ಟು ಜನಸಂಖ್ಯೆಯು ಕಂಡುಬರುತ್ತದೆ. ದೇಶದ ಪೂರ್ವ ಭಾಗದಲ್ಲಿ

$^{1}/_{3}$ ಭಾಗದಷ್ಟು ಪರ್ವತಗಳು ಮತ್ತು ಅರಣ್ಯಗಳಿಂದಾವೃತವಾದ ಪ್ರದೇಶವಿದೆ. ಇಲ್ಲಿನ ಅತಿ ಹೆಚ್ಚು ಎತ್ತರದ ಪ್ರದೇಶವು ಜೇಡ್ ಪ್ರದೇಶವಾಗಿದ್ದು ಸಮುದ್ರ ಮಟ್ಟದಿಂದ ಸು. 3997 ಮೀ ಎತ್ತರವಿದೆ.

ವಾಯುಗುಣ : ಟೈವಾನ್ ವಾಯುಗುಣ ಸಾಮಾನ್ಯವಾಗಿ ಸಾಗರಿಕ ವಾಯುಗುಣವಾಗಿದ್ದು ಜೂನ್‌ನಿಂದ ಆಗಸ್ಟ್‌ವರೆಗೆ ಮಳೆಗಾಲವಾಗಿದ್ದು ಈ ಅವಧಿಯಲ್ಲಿ ಮಾನ್‌ಸೂನ್ ಮಾರುತಗಳು ಮಳೆಯನ್ನು ತರುತ್ತವೆ. ದೇಶದ ಉತ್ತರ ಭಾಗದಲ್ಲಿ ಮೋಡಗಳಿಂದಾವೃತವಾದ ಹವಾಮಾನವಿದ್ದು ವರ್ಷಪೂರ್ತಿ ಇದೇ ಪರಿಸ್ಥಿತಿ ಇರುತ್ತದೆ. ದಕ್ಷಿಣ ಭಾಗದಲ್ಲಿ ಬೇಸಗೆಯ ಕಾಲದಲ್ಲಿ ಮಳೆಯು ಬೀಳುತ್ತಿದ್ದು ಶೇ. 90 ರಷ್ಟು ಮಳೆಯು ಈ ಅವಧಿಯಲ್ಲಿಯೇ ಉಂಟಾಗುತ್ತದೆ. ಸರಾಸರಿ ವಾರ್ಷಿಕ ಮಳೆಯು 250 ಸೆಂಮೀ ಗಿಂತ ಹೆಚ್ಚಾಗಿದೆ.




ಸಸ್ಯ ಮತ್ತು ಪ್ರಾಣಿ ಸಂಪತ್ತು : ಟೈವಾನ್‌ನಲ್ಲಿನ ಅರಣ್ಯ ಪ್ರದೇಶ 21,02,400 ಹೆ. ದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇ. 58.53 ರಷ್ಟು ಅರಣ್ಯ ಆಕ್ರಮಿಸಿದೆ. ಅರಣ್ಯೇತರ ಭೂಭಾಗ ಶೇ. 41.47 ರಷ್ಟಿದೆ. ಸೂಚಿಪರ್ಣ ಅರಣ್ಯ ಶೇ. 20.86 ಸೂಚಿಪರ್ಣ ಮತ್ತು ಕಠಿಣ ಮರಗಳು ಶೇ. 18.61 ಮರಗಳು ಶೇ. 53.29 ಮತ್ತು ಬಿದಿರು ಶೇ. 7.24 ರಷ್ಟು ಕಂಡುಬರುತ್ತದೆ.

ದ್ವೀಪದ ಅರಣ್ಯ ಪ್ರದೇಶದ ಬಹುಭಾಗದ ಸಾಕಷ್ಟು ಎತ್ತರದ ಪ್ರದೇಶಗಳಲ್ಲಿ ಶಂಕುಧಾರಿ ಮರಗಳು ಬೆಳೆಯುತ್ತವೆ. ದೇವದಾರು, ಸೈಪ್ರಸ್, ಜೂನಿಯರ್, ಮೇಪಲ್ ಮುಂತಾದ ಮರಗಳು ಬೆಳೆಯುತ್ತವೆ. ಕರ್ಪೂರದ ಗಿಡಗಳೂ ಇಲ್ಲಿ ಅಧಿಕ. ತಗ್ಗು ಭೂಮಿಯಲ್ಲಿ ಬಿದಿರು, ನಿತ್ಯಹರಿದ್ವರ್ಣದ ವೃಕ್ಷಗಳು ಹಾಗೂ ತೆಂಗು ಜಾತಿಯ ಮರಗಳು ಹೆಚ್ಚಾಗಿ ಬೆಳೆಯುತ್ತವೆ. ಹುಲಿ. ಚಿರತೆ. ಕಾಡುಹಂದಿ, ಕಾಡುಮೇಕೆ, ಜಿಂಕೆ, ಮೊಲ ಮೊದಲಾದ ಪ್ರಾಣಿಗಳು ಇಲ್ಲಿವೆ. ಮಡಿವಾಳ, ಕೊಕ್ಕರೆ ಮೊದಲಾದುವು ಇಲ್ಲಿಯ ಪಕ್ಷಿಗಳು. ಎಮ್ಮೆಯನ್ನು ಹೇರುಪ್ರಾಣಿಯಾಗಿ ಬಳಸುತ್ತಾರೆ.

ನದಿವ್ಯವಸ್ಥೆ : ಇಲ್ಲಿನ ನದಿಗಳು ಸಾಮಾನ್ಯವಾಗಿ ಚುಂಗ್–ಯಾಂಗ್–ಷಾನ್–ಮೊ ಎಂಬ ಪ್ರದೇಶದಲ್ಲಿ ಹುಟ್ಟಿ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಎಲ್ಲ ಸಣ್ಣ ಪ್ರಮಾಣದ ನದಿಗಳಾಗಿದ್ದು ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆಗೆ ಪೂರಕವಾಗಿಲ್ಲ. ಅಲ್ಲದೆ ಪ್ರಕೃತಿ ವಿಕೋಪಗಳಾದ ಬಿರುಗಾಳಿ (ಚಂಡಮಾರುತ), ಸಮುದ್ರದ ಅಲೆಗಳು, ಅಬ್ಬರದ ಮಳೆ ಮುಂತಾದುವುಗಳಿಂದ ಪ್ರವಾಹಗಳುಂಟಾಗಿ ಮೈದಾನದ ಪ್ರದೇಶಗಳನ್ನು ಹಾನಿಗೊಳಿಸುತ್ತವೆ. ಟಾನ್–ಶುಯಿ–ಹೊ, ಚೋ–ಶುಯಿ,–ಹ್ಸಿ ಮತ್ತು ಕವೋಪಿಂಗ್ ಮುಖ್ಯವಾದ ನದಿಗಳಾಗಿವೆ.

ಮಣ್ಣು: ಇಲ್ಲಿನ ಮಣ್ಣುಗಳು ಸಾಮಾನ್ಯವಾಗಿ ಮೆಕ್ಕಲು ಮಣ್ಣಾಗಿದ್ದು ಮೈದಾನ ಪ್ರದೇಶಗಳು ಮತ್ತು ಕಣಿವೆ ಪ್ರದೇಶಗಳಲ್ಲಿ 1/4 ಭಾಗದಷ್ಟು ಹಂಚಿಕೆಯಾಗಿವೆ. ಅಲ್ಲದೆ ಈ ಮಣ್ಣು ಕೃಷಿಗೆ ಮೂಲಾಧಾರವಾಗಿದ್ದು ಈ ದ್ವೀಪ ರಾಷ್ಟ್ರದ ಪ್ರಮುಖ ಸಂಪನ್ಮೂಲಗಳಲ್ಲೊಂದಾಗಿದೆ. ಎತ್ತರದ ಪ್ರದೇಶಗಳಲ್ಲಿ ಮಣ್ಣಿನ ಸವಕಳಿ, ತೊಳೆಸುವಿಕೆ, ಕ್ಷಾರೀಯ ಲಕ್ಷಣಗಳು ಕಂಡುಬರುತ್ತವೆ.

ಕೃಷಿ : ಟೈವಾನಿನ $^{1}/_{4}$ ಭಾಗದಷ್ಟು ಭೂಮಿ ಸಾಗುವಳಿಗೆ ಯೋಗ್ಯವಾಗಿದ್ದು ತೀವ್ರಗತಿಯ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಕೆಲವು ಪ್ರದೇಶಗಳು ವಾರ್ಷಿಕ 2–3 ಬೆಳೆಗಳನ್ನು ಬೆಳೆಯಲು ಸೂಕ್ತವಾಗಿವೆ. ಆದರೆ ಕೃಷಿ ಉತ್ಪಾದನೆಯು ಕೈಗಾರಿಕಾ ಉತ್ಪಾದನಾ ಮಟ್ಟಕ್ಕಿಂತ ಮಂದಗತಿಯಲ್ಲಿ ಬೆಳೆಯುತ್ತಿದೆ. ಟೈವಾನ್‌ನ ಒಟ್ಟು ಅನುಭೋಗಿ ಉತ್ಪಾದನೆಯಲ್ಲಿನ ಶೇ. 2.69 ರಷ್ಟು ಕೃಷಿ ಉತ್ಪಾದನೆಯಾಗಿದೆ. ಇಲ್ಲಿನ ಮುಖ್ಯಬೆಳೆಗಳು ನೆಲಗಡಲೆ, ಹತ್ತಿ, ಕಬ್ಬು, ಹಣ್ಣುಗಳು ಮತ್ತು ತರಕಾರಿಗಳಾಗಿವೆ. ಇದು ಬತ್ತ ಉತ್ಪಾದನೆಯಲ್ಲಿ ಸ್ವಾವಲಂಬಿ ರಾಷ್ಟ್ರವಾಗಿದ್ದು ಗೋದಿಯನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತದೆ. ಪ್ರಪಂಚದ ಒಟ್ಟು ಕರ್ಪೂರದ ಅರ್ಧದಷ್ಟು ಇಲ್ಲಿ ಉತ್ಪತ್ತಿಯಾಗುತ್ತದೆ.

ಆರ್ಥಿಕತೆ : ಟೈವಾನ್ ಆರ್ಥಿಕಾಭಿವೃದ್ಧಿಯಲ್ಲಿ ಚೇತರಿಸಿಕೊಳ್ಳುತ್ತಿದ್ದು ಕೆಲವು ಸರ್ಕಾರಿ ಬ್ಯಾಂಕುಗಳು ಮತ್ತು ಕೈಗಾರಿಕಾ ಘಟಕಗಳು ಖಾಸಗೀಕರಣಗೊಳ್ಳುತ್ತಿವೆ. ಪ್ರಸ್ತುತ ಟೈವಾನಿನ ಆರ್ಥಿಕತೆಯು ಆಧುನಿಕ ತಾಂತ್ರಿಕತೆ ಮತ್ತು ಸೇವಾ ವಿಭಾಗಗಳಲ್ಲಿ ಪ್ರಗತಿ ಸಾಧಿಸಲು ಪ್ರಯತ್ನಿಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಇದು ಅಮೆರಿಕದ ವ್ಯಾಪಾರಿ ಮಾರುಕಟ್ಟೆಗಳು ಮತ್ತು ರಫ್ತಿನ ಪಾಲುದಾರಿಕೆಯನ್ನು ಶೇ. 49ರಿಂದ ಶೇ. 20 ಕ್ಕೆ ಇಳಿಸಿದೆ. ಹಾಗೂ ಆಗ್ನೇಯ ಏಷ್ಯ ಮತ್ತು ಯುರೋಪಿನ ಮಾರುಕಟ್ಟೆಗಳಲ್ಲಿ ತನ್ನ ಉತ್ಪನ್ನಗಳನ್ನು ಪೂರೈಸುವತ್ತ ಗಮನ ಹರಿಸಿದೆ. ಭವಿಷ್ಯದ ಆರ್ಥಿಕ ಜಾಗತೀಕರಣದಲ್ಲಿ ಏಷ್ಯ ಮತ್ತು ಪೆಸಿಫಿಕ್ ರಾಷ್ಟ್ರಗಳ ಪ್ರಾದೇಶಿಕ ಚಟುವಟಿಕೆಗಳ ಕೇಂದ್ರವಾಗಿ ಮಾರ್ಪಡಲು ಪ್ರಯತ್ನಿಸುತ್ತಿದೆ. ಇಲ್ಲಿ ಬಡತನ ರೇಖೆಯ ಕೆಳಗಿನವರ ಸಂಖ್ಯೆಯು ಶೇ.0.9 ಇದ್ದು, ಸೇವಾಕ್ಷೇತ್ರದಲ್ಲಿ ಶೇ.58.2, ಕೈಗಾರಿಕಾರಂಗದಲ್ಲಿ ಶೇ.35.8 ಮತ್ತು ಕೃಷಿ ಕ್ಷೇತ್ರದಲ್ಲಿ ಶೇ.6 ರಷ್ಟು ಶ್ರಮದ ಹಂಚಿಕೆಯಾಗಿದೆ.

ವ್ಯಾಪಾರ ಮತ್ತು ವಾಣಿಜ್ಯ : ಕಳೆದ 40 ವರ್ಷಗಳಲ್ಲಿ ಇಲ್ಲಿನ ವಿದೇಶೀ ವ್ಯಾಪಾರವು ಪ್ರಸ್ತುತ ರಫ್ತು ಆಧಾರಿತ ಆರ್ಥಿಕತೆಯಾಗಿದೆ. ವಿದೇಶೀ ವ್ಯಾಪಾರ ರಫ್ತು ಪ್ರಮಾಣದಲ್ಲಿ ಕೃಷಿ ಉತ್ಪನ್ನಕ್ಕಿಂತ ಕೈಗಾರಿಕಾ ಉತ್ಪನ್ನದ ಭಾಗ ಶೇ. 98 ರಷ್ಟು ಇದ್ದು, ಎಲೆಕ್ಟ್ರಾನಿಕ್ಸ್ ಕ್ಷೇತ್ರ ಪ್ರಧಾನ ಕೈಗಾರಿಕಾ ಉತ್ಪನ್ನವಾಗಿದೆ. ಅಲ್ಲದೆ ಗಣಕಯಂತ್ರ (ಪಿ.ಸಿ.) ತಯಾರಿಕೆ ಮತ್ತು ರಫ್ತು ರಂಗದಲ್ಲಿ ಪ್ರಪಂಚದ ಅತಿ ದೊಡ್ಡ ರಾಷ್ಟ್ರವಾಗಿದೆ. ಇದು ಜನವರಿ 2002ರಲ್ಲಿ ವಿಶ್ವವ್ಯಾಪಾರ ಸಂಘದ ಸದಸ್ಯ ರಾಷ್ಟ್ರವಾಯಿತು.

ಆಮದು ಮತ್ತು ರಫ್ತು : ಯಂತ್ರೋಪಕರಣಗಳು, ಎಲೆಕ್ಟ್ರಾನಿಕ್ಸ್ ಬಿಡಿ ಭಾಗಗಳು, ಖನಿಜಗಳು ಮತ್ತು ಗಣಕ ಯಂತ್ರದ ಬಿಡಿಭಾಗಗಳು ಮೊದಲಾದವುಗಳು ಟೈವಾನಿನ ಆಮದು ವಸ್ತುಗಳಾಗಿವೆ. ಆಮದು ವ್ಯವಹಾರವು ಜಪಾನ್ (ಶೇ. 25.3), ಅಮೆರಿಕ (ಶೇ. 11.6), ಚೀನ (ಶೇ. 11) ಮತ್ತು ದಕ್ಷಿಣ ಕೊರಿಯ (ಶೇ. 7.3) ದೊಂದಿಗೆ ಇದ್ದು 2005ರಲ್ಲಿ 181.6 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟಿತ್ತು.

ಗಣಕಯಂತ್ರ ಉತ್ಪನ್ನಗಳು, ಲೋಹಗಳು, ಬಟ್ಟೆ, ಪ್ಲಾಸ್ಟಿಕ್, ರಬ್ಬರ್ ಉತ್ಪನ್ನಗಳು, ರಾಸಾಯನಿಕ ವಸ್ತುಗಳು ಟೈವಾನಿನ ರಫ್ತು ವಸ್ತುಗಳಾಗಿವೆ. ಅಲ್ಲದೆ ಕೃಷಿ ಉತ್ಪನ್ನಗಳು, ಮೀನು, ಸಾಗರೋತ್ಪನ್ನಗಳು, ಕಾಳುಗಳು ಮತ್ತು ತರಕಾರಿಗಳು ಸಹ ರಫ್ತಾಗುತ್ತವೆ. ಪ್ರಸ್ತುತ ಟೈವಾನ್ 60 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ತನ್ನ ವ್ಯಾಪಾರ ಕೇಂದ್ರಗಳನ್ನು ತೆರೆದಿದೆ. ಅಲ್ಲದೆ ಏಷ್ಯದ ಅಭಿವೃದ್ಧಿ ಬ್ಯಾಂಕ್‌ನ ಸದಸ್ಯ ರಾಷ್ಟ್ರವಾಗಿದೆ.

ಸಂಪನ್ಮೂಲಗಳು : ಇಲ್ಲಿನ ದ್ವೀಪಗಳಲ್ಲಿ ಸಣ್ಣ ಪ್ರಮಾಣದಲ್ಲಿ ಚಿನ್ನ, ತಾಮ್ರ, ಕಲ್ಲಿದ್ದಲು, ಸ್ವಾಭಾವಿಕ ಅನಿಲ, ಸುಣ್ಣಕಲ್ಲು, ಅಮೃತ ಶಿಲೆ ಮತ್ತು ಕಲ್ನಾರುಗಳು ಪ್ರಮುಖ ಖನಿಜ ಸಂಪನ್ಮೂಲಗಳಾಗಿವೆ. ಶಕ್ತಿ ಸಂಪನ್ಮೂಲಗಳಲ್ಲಿ ವಿದ್ಯುಚ್ಛಕ್ತಿ ಸ್ವಾಭಾವಿಕ ಅನಿಲ, ಮತ್ತು ಕಲ್ಲಿದ್ದಲುಗಳು ಮುಖ್ಯವಾಗಿವೆ.

ಜನಸಂಖ್ಯೆ: ಟೈವಾನ್‌ನ ಒಟ್ಟು ಜನಸಂಖ್ಯೆ ಸು. 2,27,49,838 (2004). ಜನಸಂಖ್ಯೆ ಬೆಳವಣಿಗೆಯ ದರ ಶೇ 0.64 ರಷ್ಟಿದೆ. ಇಲ್ಲಿನ ಮರಣ ದರ ಪ್ರತಿ 1000 ಜನಸಂಖ್ಯೆಗೆ 6.29 ಮತ್ತು ಲಿಂಗಾನುಪಾತ 1.04 ರಷ್ಟಿದೆ. ಇಲ್ಲಿ ಮುಖ್ಯವಾಗಿ ಟೈವಾನೀಸ್ ಶೇ. 84, ಮಹಾ ಮೈದಾನದ ಚೀನೀಯರು ಶೇ. 14 ಮತ್ತು ಮೂಲನಿವಾಸಿಗಳು ಶೇ. 2 ರಷ್ಟು ನೆಲೆಸಿದ್ದಾರೆ.

ಶಿಕ್ಷಣ : ಇಲ್ಲಿ 1979 ರಿಂದಲೂ 9 ವರ್ಷದ ಕಡ್ಡಾಯ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿದೆ. ಟೈವಾನ್ 2001ರ ಹಣಕಾಸು ವರ್ಷದ ಬಜೆಟ್‌ನಲ್ಲಿ ಪರಿಣಾಮಕಾರಿ ಶಿಕ್ಷಣಕ್ಕೆ ಒತ್ತು ನೀಡಿ ಶೇ. 16 ರಷ್ಟು ಧನ ವಿನಿಯೋಗಿಸಿತ್ತು. ಇಲ್ಲಿನ ಸಾಕ್ಷರತೆಯು ಶೇ.86 ಇದ್ದದ್ದು 1998 ರ ವೇಳೆಗೆ ಶೇ.93 ರಷ್ಟಾಯಿತು. 2003 ರಲ್ಲಿ ಶೇ.96.1 ಇತ್ತು.

ಭಾಷೆ : ಮ್ಯಾಂಡರಿನ್ ಚೀನಿ ಭಾಷೆ ಅಧಿಕೃತ ಭಾಷೆಯಾಗಿದ್ದು ಟೈವಾನೀಸ್ ಮತ್ತು ಹಕ್ಕು ಭಾಷೆಗಳು ಪ್ರಮುಖವಾಗಿವೆ.

ಧರ್ಮ : ಇಲ್ಲಿ ಬೌದ್ಧರು, ಕನ್‌ಫ್ಯೂಷಿಯಸ್ ಮತ್ತು ತಾವೋ ಧರ್ಮೀಯರು ಶೇ.93 ಕ್ರೈಸ್ತರು ಶೇ.4.5 ಮತ್ತು ಇತರ ಧರ್ಮೀಯರು ಶೇ.2.5 ರಷ್ಟಿದ್ದಾರೆ.

ಕರೆನ್ಸಿ : ಟೈವಾನಿನ ಕರೆನ್ಸಿ ನ್ಯೂ ಟೈವಾನ್ ಡಾಲರ್.

ಸಾರಿಗೆ ಸಂಪರ್ಕ : ಟೈವಾನಿನ ಸಾರಿಗೆಯು ಪ್ರಗತಿಯ ಪಥದಲ್ಲಿದ್ದು ರಸ್ತೆ, ರೈಲು, ಜಲ ಮತ್ತು ವಾಯು ಮಾರ್ಗಗಳು ಅಸ್ತಿತ್ವದಲ್ಲಿವೆ. ರೈಲು ಮಾರ್ಗ 35.931 ಕಿಮೀ ಇದ್ದು ಪ್ರಮುಖ ರಸ್ತೆ ಹೆದ್ದಾರಿಗಳೂ ಇವೆ. ಜಲ ಮಾರ್ಗಗಳು ಮತ್ತು ಹಲವಾರು ಬಂದರುಗಳೂ ಕಂಡುಬರುತ್ತವೆ. ವಾಯುಯಾನಕ್ಕೆ ಪೂರಕವಾಗಿ ಇಲ್ಲಿ ಸು. 40

ವಿಮಾನ ನಿಲ್ದಾಣಗಳಿವೆ. ಇಲ್ಲಿನ ಸಂಪರ್ಕ ಮಾಧ್ಯಮಗಳಾಗಿ ಪತ್ರಿಕೆಗಳು, ರೇಡಿಯೋ, ಟೆಲಿವಿಷನ್ ಮತ್ತು ಅಂತರ್ಜಾಲ ಮಾಧ್ಯಮಗಳು ಅಸ್ತಿತ್ವದಲ್ಲಿವೆ.

ಪ್ರಮುಖ ನಗರಗಳು : ಟೈಪೆ 2630515 (2007) ಟೈವಾನಿನ ರಾಜಧಾನಿಯಾಗಿದ್ದು ಟೈ–ಚುಂಗ್, ಚಾಂಗ್–ಹುವ, ಟೈವಾನ್, ಕವೊ–ಹ್ಸಿಂಗ್, ತೈನಾನ್, ಸು–ಅವೋ, ಚಿ–ಲುಂಗ್ ಮತ್ತು ಮಾಕುಂಗ್ ಮುಖ್ಯನಗರಗಳಾಗಿವೆ. (ವಿ.ಜಿ.ಕೆ.)

**ಟೊಂಗ:** ದಕ್ಷಿಣ ಪೆಸಿಫಿಕ್ ಸಮುದ್ರದಲ್ಲಿನ ದ್ವೀಪಗಳ ಸಮೂಹವಾಗಿದೆ. ಇಲ್ಲಿ ಹವಳ ಮತ್ತು ಜ್ವಾಲಾಮುಖಿ ಜನ್ಯ 172 ದ್ವೀಪಗಳಿದ್ದು 36 ದ್ವೀಪಗಳಲ್ಲಿ ಮಾತ್ರ ಜನವಸತಿ ಕಂಡುಬರುತ್ತದೆ. ಇದು $22^0$ ದ. ಅ. ಮತ್ತು $173^0$ ಪೂ. ರೇ.ದ ಮೇಲಿದ್ದು ವಿಸ್ತೀರ್ಣ 748 ಚ.ಕಿಮೀ. ಭೂಭಾಗ 718 ಚ.ಕಿಮೀ ವಿಸ್ತೀರ್ಣ ಹಾಗೂ ಜಲಭಾಗ 30 ಚ.ಕಿಮೀ ನಿಂದ ಆವೃತ್ತವಾಗಿದ್ದು, ಗಾತ್ರದಲ್ಲಿ ವಾಷಿಂಗ್ಟನ್ ಡಿ.ಸಿ. ನಗರದ 4 ಪಟ್ಟು ದೊಡ್ಡದಾಗಿದೆ. ಈ ದ್ವೀಪ ಸಮೂಹದಲ್ಲಿ 3 ಪ್ರಧಾನವಾದ ದ್ವೀಪಗಳಿದ್ದು ಅವುಗಳಲ್ಲಿ ಟೊಂಗಟಾಪು ದೊಡ್ಡ ದ್ವೀಪವಾಗಿದೆ. ನುಕು–ಅ–ಲೋಫ ಟೊಂಗದ ರಾಜಧಾನಿಯಾಗಿದ್ದು ಅತಿಹೆಚ್ಚು ಜನಸಂಖ್ಯೆಯಿಂದ ಕೂಡಿದೆ. ಜನಸಂಖ್ಯೆ 1,02,600 (2006). ಇದರ ದಕ್ಷಿಣದಲ್ಲಿ ಯುಅ, ಕೇಂದ್ರಭಾಗದಲ್ಲಿ ಅಪಾಯಿ ಮತ್ತು ಉತ್ತರದಲ್ಲಿ ವಾವಾ ದ್ವೀಪಗಳಿವೆ. 1970 ರ ಜೂನ್ 4 ರಂದು ಇದು ಅಧಿಕೃತವಾಗಿ ಸ್ವತಂತ್ರ್ಯ ರಾಷ್ಟ್ರವಾಯಿತು.




ವಾಯುಗುಣ : ಟೊಂಗ ಸಾಮಾನ್ಯವಾಗಿ ಪೆಸಿಫಿಕ್ ದ್ವೀಪಗಳಲ್ಲೇ ಏಕೈಕವಾದ ತಂಪಾದ ವಾಯುಗುಣವನ್ನು ಹೊಂದಿದ ರಾಷ್ಟ್ರವಾಗಿದೆ. ಇಲ್ಲಿ ವಾಣಿಜ್ಯ ಮಾರುತಗಳ ಪ್ರಭಾವದಿಂದಾಗಿ ಮಿತವಾದ ಆರ್ದ್ರತೆ ಮಾದರಿಯ ವಾಯುಗುಣ ಕಂಡುಬರುತ್ತದೆ. ಇಲ್ಲಿನ ವಾರ್ಷಿಕ ಸರಾಸರಿ ಗರಿಷ್ಠ ಉಷ್ಣಾಂಶ $27^0$ಸೆ. ಕನಿಷ್ಠ $15^0$ಸೆ. ಸರಾಸರಿ ದೈನಂದಿನ ಆರ್ದ್ರತೆ ಶೇ. 80 ರಷ್ಟಿರುತ್ತದೆ. ಇಲ್ಲಿನ ಸರಾಸರಿ ಮಳೆಯ ಪ್ರಮಾಣ 190 ಸೆಂಮೀ.

ಮೇಲ್ಮೈ ಲಕ್ಷಣ : ಟೊಂಗ ದ್ವೀಪ ಸಮೂಹ ಸಾಮಾನ್ಯವಾಗಿ ಉತ್ತರ ದಕ್ಷಿಣವಾಗಿ ಹೆಚ್ಚು ಹವಳ ದಿಣ್ಣೆಗಳಿಂದ ನಿರ್ಮಿತವಾಗಿದ್ದು ಸುಣ್ಣಕಲ್ಲಿನಿಂದ ಕೂಡಿದ ಪ್ರದೇಶವಾಗಿದೆ. ಕೆಲವು ಭಾಗಗಳಲ್ಲಿ ಜ್ವಾಲಾಮುಖಿಗಳಿಂದ ನಿರ್ಮಿತವಾದ ಪ್ರದೇಶಗಳಿವೆ. ಕವೋ ದ್ವೀಪ ಇಲ್ಲಿನ ಅತ್ಯಂತ ಎತ್ತರದ ಪ್ರದೇಶವಾಗಿದ್ದು ಸಮುದ್ರ ಮಟ್ಟದಿಂದ 1,033 ಮೀ ಎತ್ತರವಾಗಿದೆ.

ಟೊಂಗ ದ್ವೀಪಗಳ ಮಣ್ಣು ಹವಳ ದಿಣ್ಣೆಗಳು ಮತ್ತು ಜ್ವಾಲಾಮುಖಿಯ ಬೂದಿಯಿಂದ ಕೂಡಿದ ಮಿಶ್ರಣವಾಗಿದೆ. ಇಲ್ಲಿನ ಮಣ್ಣುಗಳು ಹೆಚ್ಚು ಫಲವತ್ತತೆಯಿಂದ ಕೂಡಿದ್ದು ಸರಳವಾಗಿ ಬೇಸಾಯ ಮಾಡುಬಹುದಾಗಿದೆ. ಅಲ್ಲದೇ ಯುಆ ದ್ವೀಪ ಪ್ರದೇಶದಲ್ಲಿ ವಿಶಾಲವಾದ ಅರಣ್ಯಗಳಿದ್ದು ಕೆಲವು ಕಡೆ ತೋಟಗಾರಿಕೆಯೂ ಕಂಡುಬರುತ್ತದೆ.

ಭೂ ಉಪಯೋಗ ಮತ್ತು ಕೃಷಿ : ಟೊಂಗದ ಭೂಪ್ರದೇಶದ ಹೆಚ್ಚಿನಭಾಗ ಬೆಟ್ಟಗುಡ್ಡಗಳಿಂದ ಕೂಡಿದ್ದು, ಇಳಿಜಾರು ಮತ್ತು ತಗ್ಗಾದ ಪ್ರದೇಶಗಳಲ್ಲಿ ಬೇಸಾಯ ಮಾಡಲಾಗುತ್ತದೆ. ಇಲ್ಲಿನ ಒಟ್ಟು ಭೂಮಿಯಲ್ಲಿ ಶೇ. 24 ಬೀಳುಭೂಮಿಯಾಗಿದ್ದು ಶೇ. 43ರಷ್ಟು ಭೂಪ್ರದೇಶದಲ್ಲಿ ಬೆಳೆ ಬೆಳೆಯಲಾಗುತ್ತದೆ. ಖಾಯಂ ಗೋಮಾಳ ಶೇ. 6 ಅರಣ್ಯ ಪ್ರದೇಶ ಶೇ. 11, ಮತ್ತು ಇತರೇ ಭೂಪ್ರದೇಶದಲ್ಲಿ ಕೋಕೋ, ಕಾಫಿ, ಶುಂಠಿ ಮತ್ತು ಕರಿಮೆಣಸು ಬೆಳೆಯುತ್ತಾರೆ. ಕೃಷಿ ಉತ್ಪನ್ನದ ವಸ್ತುಗಳು ದೇಶದ ಒಟ್ಟು ರಫ್ತಿನ $^1/_3$ ಭಾಗದಷ್ಟಾಗುತ್ತವೆ.

ಆರ್ಥಿಕತೆ : ದಕ್ಷಿಣ ಪೆಸಿಫಿಕ್‌ನ ಅರ್ಥವ್ಯವಸ್ಥೆಯಲ್ಲಿ ಮುಕ್ತವಾದ ಮತ್ತು ಸಣ್ಣ ಪ್ರಮಾಣದ ಅರ್ಥವ್ಯವಸ್ಥೆಯನ್ನು ಹೊಂದಿದೆ. ಕೃಷಿ ಉತ್ಪಾದನಾ ವಸ್ತುಗಳು ರಫ್ತು ವಸ್ತುಗಳಲ್ಲಿ ಪ್ರಧಾನವಾಗಿವೆ. ಕೃಷಿಯ ಅನಂತರ ಇಲ್ಲಿನ ಎರಡನೆಯ ಪ್ರಮುಖ ಉದ್ಯೋಗ ಪ್ರವಾಸೋದ್ಯಮವಾಗಿದೆ. ಇಲ್ಲಿನ ಸರ್ಕಾರ ಖಾಸಗಿ ಕ್ಷೇತ್ರಗಳ ಅಭಿವೃದ್ಧಿಯ ಕಡೆಗೆ ಸಾಕಷ್ಟು ಗಮನ ಹರಿಸುತ್ತಿದ್ದು ಬಂಡವಾಳ ಹೂಡಿಕೆ ಶಿಕ್ಷಣ ಮತ್ತು ಆರೋಗ್ಯದ ಕ್ಷೇತ್ರಗಳ ಮೇಲೆ ತೊಡಗಿಸುವುದರಲ್ಲಿ ಆಸಕ್ತಿವಹಿಸುತ್ತಿದೆ.

ಟೊಂಗದ ಸಂಪನ್ಮೂಲಗಳಲ್ಲಿ ಮೀನು ಪ್ರಮುಖವಾಗಿದೆ. ಅಲ್ಲದೆ ಇಲ್ಲಿ ಮೀನುಗಾರಿಕೆಯನ್ನುಳಿದು ಇತರೇ ಕೈಗಾರಿಕೆಗಳು ಗಮನಾರ್ಹವಾಗಿ ಪ್ರಗತಿ ಹೊಂದಿಲ್ಲ.

ಟೊಂಗದ ಜನಸಂಖ್ಯೆ 1,12,422 (2005). ಶೇ. 90 ಭಾಗ ಪಾಲಿನೇಷಿಯನರು ಇದ್ದಾರೆ. ಇಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯ ದರ ತೀರಾ ಕಡಿಮೆ, ಶೇ. 0.8 ರಷ್ಟಿದ್ದು ಇಲ್ಲಿನ ಜನರು ಟೊಂಗದಿಂದ ಬೇರೆ ಭಾಗಗಳಿಗೆ ವಲಸೆ ಹೋಗುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಇಲ್ಲಿ ಆಂತರಿಕ ಮತ್ತು ಬಾಹ್ಯವಲಸೆಗಳೆರಡೂ ಸರ್ವೇಸಾಮಾನ್ಯವಾಗಿದ್ದು ಜನರು ತಮ್ಮ ಆರ್ಥಿಕ ಸ್ಥಿತಿಗತಿಯ ಅಭಿವೃದ್ಧಿಗಾಗಿ ಮತ್ತು ಉತ್ತಮ ಶಿಕ್ಷಣವನ್ನು ಅರಸಿ ವಲಸೆ ಹೋಗುತ್ತಿದ್ದಾರೆ. ಇಲ್ಲಿನ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 135 ಇದ್ದು, ಜನನ ದರ ಪ್ರತಿ 1000 ಜನಸಂಖ್ಯೆಗೆ 25.18 ಮತ್ತು ಮರಣ ದರ 5.35. ಒಟ್ಟು ಜನಸಂಖ್ಯೆಯಲ್ಲಿ ಶೇ. 38 ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಉಳಿದ ಶೇ. 62 ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ್ದಾರೆ. ಲಿಂಗಾನುಪಾತ 0.99 ಇದ್ದು ಗರಿಷ್ಠ ವಯೋಮಾನ 72.14 ವರ್ಷಗಳು. ಇಲ್ಲಿನ ಸಾಕ್ಷರತಾ ಮಟ್ಟ ಶೇ. 98.9 ರಷ್ಟಿದೆ.

ಧರ್ಮ : ಇಲ್ಲಿ ಮುಖ್ಯವಾಗಿ ಪಾಲಿನೇಷ್ಯನ್ ಮತ್ತು ಯುರೋಪಿಯನ್ನರು ವಾಸಿಸುತ್ತಿದ್ದು ಕ್ರೈಸ್ತಧರ್ಮ ಪ್ರಧಾನವಾಗಿದೆ.

ಪ್ರಮುಖ ನಗರಗಳು : ಟೊಂಗಟಾಪು ದೇಶದ ದೊಡ್ಡನಗರವಾಗಿದ್ದು ಹೆಚ್ಚಿನ ಪಾಲು ಜನರು ಈ ನಗರದಲ್ಲಿ ವಾಸಿಸುತ್ತಿದ್ದಾರೆ. ನಾಕೊಲೋ, ಲಾಂಗೋಚೈನ್, ನುಕುನುಕು, ಪೊಲೊಅ, ಒನೇವಾ, ಫಾಫಾ ಮತ್ತು ಮೋಟು ಟಾಪು ಇತರ ಮುಖ್ಯ ನಗರಗಳಾಗಿವೆ. (ಕೆ.ಎಲ್.ಪಿ.)

**ಟೊರಾಂಟೊ:** ಕೆನಡದ ಆಂಟೇರಿಯೋ ಪ್ರಾಂತ್ಯದ ರಾಜಧಾನಿ, ಹಾಗೂ ಜಿಲ್ಲೆಯ ಆಡಳಿತ ಕೇಂದ್ರ. ಕೆನಡದ ಮಹಾನಗರಗಳಲ್ಲಿ ಎರಡನೆಯದು. ಆಂಟರಿಯೋ ಸರೋವರದ ವಾಯವ್ಯ ಅಂಚಿನ ಮೈದಾನದಲ್ಲಿದೆ. ಸು. 5.2 ಚ.ಕಿಮೀ ಇರುವ ಟೊರಾಂಟೊ ಕೊಲ್ಲಿಯೂ. ನಗರದ ದಕ್ಷಿಣದಲ್ಲಿರುವ ದ್ವೀಪಗಳೂ ಸೇರಿ ಟೊರಾಂಟೊದ ವಿಸ್ತೀರ್ಣ 104 ಚ.ಕಿಮೀ ಸುತ್ತಣ ಜನವಸತಿಗಳೂ ಸೇರಿದ ಮಹಾನಗರಪ್ರದೇಶದ ಜನಸಂಖ್ಯೆ 46,57,000 (2002). ಟೊರಾಂಟೊ ಎಂಬುದು ಹ್ಯೂರಾನ್ ಇಂಡಿಯನ್ನರು ತಮ್ಮ ನಾಡಿಗೆ ಇಟ್ಟ ಹೆಸರು: ಸಮೃದ್ಧವಾದ ನಾಡು ಎಂಬುದು ಅದರ ಅರ್ಥ.

ಟೊರಾಂಟೊ ನಗರದಲ್ಲಿ ಮಹಾನಗರಪಾಲಿಕೆ ಮತ್ತು ಅದರ 12 ಉಪನಗರಗಳ ಪೌರ ಸಭೆಗಳ ಒಕ್ಕೂಟವನ್ನು ಏರ್ಪಡಿಸಿ ಮೆಟ್ರೋಪಾಲಿಟನ್ ಟೊರಾಂಟೊ ಅಥವಾ ಮೆಟ್ರೋ ಎಂಬ ಹೊಸ ಪುರಸಭೆಯನ್ನು ರಚಿಸಲಾಯಿತು. ಟೊರಾಂಟೊ ಮತ್ತು ಇತರ 13 ಪುರಸಭೆಗಳನ್ನು ಒಂದುಗೂಡಿಸಿ ಟೊರಾಂಟೊ, ನಾರ್ತ್‌ಯಾರ್ಕ್, ಎಟೋಬಿಕೋಕ್ ಮತ್ತು ಸ್ಕಾರ್‌ಬರೊ ಎಂಬ ನಾಲ್ಕು ನಗರಗಳಾಗಿ ಪುನರ್ ವಿಂಗಡಿಸಬೇಕೆಂದು ಆಯೋಗವೊಂದು ಶಿಫಾರಸು ಮಾಡಿದೆ.

ನಗರದಲ್ಲಿ ಟೊರಾಂಟೊ (1827), ವಿಕ್ಟೋರಿಯ (1836) ಹಾಗೂ ಯಾರ್ಕ್ (1959) ವಿಶ್ವವಿದ್ಯಾಲಯಗಳೂ ಅನೇಕ ಕಾಲೇಜುಗಳೂ ಇವೆ. ಯಂಗ್ ಮತ್ತು ಕ್ವೀನ್ ರಸ್ತೆಗಳು ಪ್ರಮುಖ ವ್ಯಾಪಾರಸ್ಥಳಗಳು. ಹೊಸ ಪುರಭವನ 1965ರಲ್ಲಿ ನಿರ್ಮಾಣವಾಯಿತು. ಟೊರಾಂಟೊ ವಿಶ್ವವಿದ್ಯಾಲಯದ ಅಂಚಿನಲ್ಲಿ ಕ್ವೀನ್ಸ್ ಪಾರ್ಕ್ ಇದೆ. ನಗರದ ವಸ್ತುಪ್ರದರ್ಶನಾಲಯದಲ್ಲಿ ಪ್ರತಿವರ್ಷ ಕೆನಡದ ರಾಷ್ಟ್ರೀಯ ವಸ್ತುಪ್ರದರ್ಶನ ನಡೆಯುತ್ತದೆ.

ಟೊರಾಂಟೊ ಒಂದು ಮುಖ್ಯ ಸಾರಿಗೆ ಕೇಂದ್ರ. ಸರೋವರ ರೇವಿನಿಂದ ಧಾನ್ಯ, ಜಾನುವಾರು, ಮಾಂಸ ಇತ್ಯಾದಿ ಸಾಗುತ್ತವೆ. ನಗರದ ಮುಖ್ಯ ಉದ್ಯಮಗಳು ವಿದ್ಯುತ್ ಉಪಕರಣ, ಕಬ್ಬಿಣ ಮತ್ತು ಉಕ್ಕಿನ ಸರಕು, ವ್ಯವಸಾಯ, ಯಂತ್ರ ಮತ್ತು ವಿಮಾನ ತಯಾರಿಕೆ, ಮುದ್ರಣ ಕೆಲಸ ಹಾಗೂ ಗ್ರಂಥ ಪ್ರಕಟಣೆ. *

**ಟೋಕಿಯೊ:** ಜಪಾನಿನ ರಾಜಧಾನಿ. ದೇಶದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಚಟುವಟಿಕೆಗಳ ಕೇಂದ್ರ. ಹಾನ್ಷೂ ದ್ವೀಪದ ಆಗ್ನೇಯದಲ್ಲಿ, ಟೋಕಿಯೊ ಕೊಲ್ಲಿಯ ವಾಯವ್ಯ ತೀರದಲ್ಲಿ ಉ.ಅ. $35^0$–$40'$ ಮತ್ತು ಪೂ.ರೇ. $139^0$–$45'$ ಗಳಲ್ಲಿದೆ. ಈ ನಗರ ಸುಮೀಡ ನದಿಯ ಮುಖದಲ್ಲಿ ನೆಲೆಗೊಂಡಿರುವುದರಿಂದ ಇದಕ್ಕೆ ಹಿಂದೆ ಎಡೋ (ಅಳಿವೆ) ಎಂಬ ಹೆಸರಿತ್ತು. 1868ರಲ್ಲಿ ಇದನ್ನು ಆ ದೇಶದ ರಾಜಧಾನಿಯಾಗಿ ಘೋಷಿಸಿದಾಗ ಟೋಕಿಯೊ (ಪೂರ್ವದ ರಾಜಧಾನಿ) ಎಂದು ಕರೆಯಲಾಯಿತು. ಸುಮೀಡ ನದಿ ಈ ನಗರವನ್ನು ಎರಡು ಅಸಮ ಭಾಗಗಳನ್ನಾಗಿ ವಿಭಜಿಸುತ್ತದೆ. ಅನೇಕ ಕಾಲುವೆಗಳು ವೃತ್ತಾಕಾರದಲ್ಲಿ ಈ ನಗರವನ್ನು ಛೇದಿಸುತ್ತವೆ. ಮಹಾಟೋಕಿಯೊ ಪ್ರಪಂಚದಲ್ಲಿ 15ನೆಯ ಜನನಿಬಿಡ ನಗರ. ನಗರದ ಜನಸಂಖ್ಯೆ 82,94,200 (2005)

29 ಕಿಮೀ ದೂರದಲ್ಲಿರುವ ಯೋಕೊಹಾಮ ರೇವುಪಟ್ಟಣ ಟೋಕಿಯೊದ ಮುಖ್ಯ ಬಂದರು. ಟೋಕಿಯೊ ನಗರವನ್ನು ಭೂವಿನ್ಯಾಸದ ಪ್ರಕಾರ ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಮೊದಲನೆಯದು 15–45 ಮೀ ಎತ್ತರದ ದಿಣ್ಣೆಯ ಭಾಗ. ಇದು ನಗರದ ಉತ್ತರ ಮತ್ತು ಪಶ್ಚಿಮ ವಲಯಗಳನ್ನೊಳಗೊಂಡಿದೆ. ಇದಕ್ಕೆ ಯಾಮನೋಟೆ (ಮೇಲ್ನಗರ) ಎಂದು ಹೆಸರು. ತಗ್ಗಾದ ಭಾಗ ಸುಮೀಡ ನದಿಯ ಇಕ್ಕೆಲಗಳಲ್ಲಿ ಹರಡಿ ಅನೇಕ ನೀರ್ಗಾಲುವೆಗಳಿಂದ ಕೂಡಿದೆ. ಈ ಭಾಗಕ್ಕೆ ಷಿತಾಮಾಚಿ (ಕೆಳನಗರ) ಎಂದು ಹೆಸರು. ಈ ಭಾಗದಲ್ಲಿರುವ ಅನೇಕ ಸೇತುವೆಗಳಲ್ಲಿ ನಿಹಾನ್‌ಕಾಷಿ ಮತ್ತು ಬ್ರಿಡ್ಜ್ ಆಫ್ ಜಪಾನ್ (ಜಪಾನಿನ ಸೇತುವೆ) ಬಹಳ ಪ್ರಸಿದ್ಧವಾಗಿವೆ. ಕೆಳನಗರ ವ್ಯವಹಾರ ಮತ್ತು ಕೈಗಾರಿಕೋದ್ಯಮಗಳ ವಲಯ. ಮೇಲ್ನಗರದಲ್ಲಿ ಭವ್ಯ ವಾಸಗೃಹಗಳಿವೆ. ಮೇಲ್ನನಗರದಲ್ಲಿ ಉಷ್ಣತೆ ಕೆಳನಗರದಕ್ಕಿಂತ ಕಡಿಮೆ. ಟೋಕಿಯೊ ಮಧ್ಯಭಾಗದಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $14^0$ಸೆ. ಆಗಸ್ಟ್ ಅತ್ಯಂತ ಹೆಚ್ಚಿನ ಉಷ್ಣತೆಯ ತಿಂಗಳು. ಆಗಿನ ಸರಾಸರಿ ಉಷ್ಣತೆ $26.4^0$ ಸೆ. ಜೂನ್‌ನಿಂದ ಸೆಪ್ಟೆಂಬರ್ ವರೆಗೆ ಸರಾಸರಿ ಉಷ್ಣತೆ $20^0$ಸೆ. ಸಾಪೇಕ್ಷ ತೇವಾಂಶ ಶೇ. 80. ವರ್ಷದಲ್ಲಿ ಸರಾಸರಿ 101.8 ಅವಪಾತ ದಿನಗಳು. 13 ದಿನ ಹಿಮ ಬೀಳುತ್ತದೆ. ಮೇಲ್ನಗರದಲ್ಲಿ ರಾತ್ರಿಯ ವೇಳೆಯಲ್ಲಿ ಕೆಳನಗರದಲ್ಲಿರುವುದಕ್ಕಿಂತ ಸಾಮಾನ್ಯವಾಗಿ $5^0$ ಸೆ. ಕಡಿಮೆ ಉಷ್ಣತೆ ಇರುತ್ತದೆ. ಜ್ವಾಲಾಮುಖಿ, ಭೂಕಂಪ, ಎರಡನೆಯ ಮಹಾಯುದ್ಧದ ವಿಮಾನದಾಳಿ–ಇವುಗಳಿಂದ ನಾಶಹೊಂದಿದಾಗಲೆಲ್ಲ ನಗರವನ್ನು ಪುನರ್ನಿರ್ಮಿಸುವುದರಿಂದ ಇದು ಪ್ರಪಂಚದ ಅತ್ಯಾಧುನಿಕ ನಗರಗಳಲ್ಲಿ ಒಂದಾಗಿದೆ.

ರೈನ್‌ಬೋ ಸೇತುವೆ

ಟೋಕಿಯೊ ನಗರದ ರಸ್ತೆವ್ಯವಸ್ಥೆ, ಸುರಂಗಮಾರ್ಗ, ವಿದ್ಯುತ್ ರೈಲು, ಬಸ್ಸು, ವಿದ್ಯುತ್ ಕಾರು, ವಿದ್ಯುತ್ ಮತ್ತು ಡೀಸೆಲ್ ರೈಲು ಮುಂತಾದವು ಅತ್ಯಂತ ಆಧುನಿಕವೂ ಸಮರ್ಪಕವೂ ಆದವು. ಜಪಾನಿನ ಮೊದಲನೆಯ ಮಾನೋ ರೈಲು ವ್ಯವಸ್ಥೆ 1964 ರಲ್ಲಿ ಆರಂಭವಾಯಿತು. ಇದು 13 ಕಿಮೀ ದೂರದಲ್ಲಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಟೋಕಿಯೊದೊಂದಿಗೆ ಸೇರಿಸುತ್ತದೆ. ಟೋಕಿಯೊ ಸುರಂಗಮಾರ್ಗ 117.5 ಕಿಮೀ ಉದ್ದವಾಗಿದೆ. 1964ರಂದು ಟೋಕಿಯೊದಲ್ಲಿ ನಡೆಯಲಿದ್ದ ಒಲಿಂಪಿಕ್ ಕ್ರೀಡಾಸ್ಪರ್ಧೆಗಳ ವೇಳೆಗೆ ಸರಿಯಾಗಿ ನಿರ್ಮಾಣವಾದ ಮೋಟಾರಿನ ಬಾಟಾ ಮಾರ್ಗಗಳು ನಗರದ ಹೃದಯ ಪ್ರದೇಶಕ್ಕೂ ಉಪನಗರಗಳಿಗೂ ವಿಮಾನನಿಲ್ದಾಣಕ್ಕೂ ಸಂಪರ್ಕ ಕಲ್ಪಿಸುತ್ತವೆ. ಈ ಮಾರ್ಗಗಳಲ್ಲಿ ಕೆಲವು ಭಾಗಗಳು ಈಗ ಉಪಯೋಗದಲ್ಲಿಲ್ಲದ ನಾಲೆಗಳ ಮೇಲೆ ಎರಡು ಮೂರು ಅಂತಸ್ತುಗಳ ಎತ್ತರದಲ್ಲಿ ಸಾಗುತ್ತವೆ. ಈ ಕಾಲುವೆಗಳನ್ನು ಪುರಾತನ ಎಡೋದ ರಕ್ಷಣೆಗಾಗಿ ನಿರ್ಮಿಸಲಾಗಿತ್ತು. ಎತ್ತರದ ಮಾರ್ಗಗಳ ಕೆಳಗೆ ಸಣ್ಣ ಕಚೇರಿಗಳೂ ಅಂಗಡಿಗಳೂ ಇವೆ.

ನಗರದ ಮಧ್ಯದಲ್ಲಿ ಅರಮನೆ ಇವೆ. ಎರಡನೆಯ ಮಹಾಯುದ್ಧದ ಬಾಂಬು ದಾಳಿಯಿಂದ ಇದು ನಾಶವಾಗಿತ್ತು. ಇದನ್ನು ಪುನರ್ನಿರ್ಮಿಸಲಾಗಿದೆ. ಅನೇಕ ಮುಖ್ಯ ಸರ್ಕಾರಿ ಭವನಗಳು ಈ ಅರಮನೆಯ ಸುತ್ತಲೂ ಇವೆ. ಜಪಾನಿ ಸಂಸತ್ ಭವನ (ಡೈಯಟ್), ಅದರ ಸನಿಹದಲ್ಲೆ ಶ್ರೇಷ್ಠ ನ್ಯಾಯಾಲಯ, ಪ್ರಧಾನಮಂತ್ರಿಯ ಸರ್ಕಾರಿ ಭವನ, ಅನೇಕ ಸರ್ಕಾರಿ ಕಚೇರಿಗಳು ಹಾಗೂ ಸಚಿವಾಲಯಗಳು ಇವೆ. ಟೋಕಿಯೊ ನಗರಾಡಳಿತ ಭವನವೂ ಪೋಲಿಸ್ ಕಚೇರಿಯೂ ಇಲ್ಲೇ ಇವೆ. ಹಲವು ಗ್ರಂಥಾಲಯಗಳಿಂದಲೂ ವಸ್ತುಸಂಗ್ರಹಾಲಯಗಳಿಂದಲೂ ಕೂಡಿರುವ ಟೋಕಿಯೊ ನಗರ ಜಪಾನಿನ ಸಂಸ್ಕೃತಿಯ ಕೇಂದ್ರ. ಇಲ್ಲಿ ಐದು ರಾಷ್ಟ್ರೀಯ ವಿಶ್ವವಿದ್ಯಾಲಯಗಳೂ ನಾಲ್ಕು ಖಾಸಗಿ ವಿಶ್ವವಿದ್ಯಾಲಯಗಳೂ ಏಳು ತಾಂತ್ರಿಕ ವಿಶ್ವವಿದ್ಯಾಲಯಗಳೂ ಇವೆ.

ಟೋಕಿಯೊ ರಾಷ್ಟ್ರೀಯ ವಸ್ತುಸಂಗ್ರಹಾಲಯ, ಕಲಾ ವಸ್ತುಸಂಗ್ರಹಾಲಯ, ಮೆಟ್ರೋಪಾಲಿಟನ್ ಫೈನ್ ಆರ್ಟ್ ಗ್ಯಾಲರಿ, ಬ್ರಿಡ್ಜ್‌ಸ್ಟನ್ ಗ್ಯಾಲರಿ, ಒಕುರ ಪ್ರಾಚೀನ ವಸ್ತುಸಂಗ್ರಹಾಲಯ ಹಾಗೂ ಜಾನಪದ ವಸ್ತುಸಂಗ್ರಹಾಲಯಗಳಿವೆ. ದಿನವೂ ಸಾವಿರಾರು ಮಂದಿ ವಿದೇಶಿಯರು ಇವನ್ನು ವೀಕ್ಷಿಸುತ್ತಾರೆ. ಅನೇಕ ವಿಜ್ಞಾನ ವಸ್ತು ಸಂಗ್ರಹಾಲಯಗಳೂ ಇವೆ. ದೊಡ್ಡ ಇಲಾಖಾ ಮಳಿಗೆಗಳಲ್ಲಿ ಪ್ರಾಚೀನ ಹಾಗೂ ಸಮಕಾಲೀನ ವಸ್ತುಗಳನ್ನು ಪ್ರದರ್ಶಿಸಲಾಗಿದೆ.

ಟೋಕಿಯೊ ನಗರದಲ್ಲಿ ನಾಲ್ಕು ಬಗೆಯ ನಾಟಕ ಮಂದಿರಗಳುಂಟು : ಇವುಗಳಲ್ಲಿ ನೋ ಮತ್ತು ಕಬೂಕಿ ಪ್ರಾಚೀನವಾದವು. ಇವುಗಳಲ್ಲಿ ನಾಟಕ ಮತ್ತು ಚಲನಚಿತ್ರ ಮಂದಿರಗಳೂ ಉಂಟು. ಟೋಕಿಯೊ ನಗರದಲ್ಲಿ 25ಕ್ಕೂ ಹೆಚ್ಚು ಉದ್ಯಾನಗಳೂ ಪ್ರಾಣಿಸಂಗ್ರಹಾಲಯವೂ ಇವೆ.

ಟೋಕಿಯೊ ನಗರವನ್ನು 23 ವಿಭಾಗಗಳನ್ನಾಗಿ ಮಾಡಲಾಗಿದೆ. ಇವುಗಳಲ್ಲಿ ಹದಿನೈದು ವಿಭಾಗಗಳನ್ನು 1932 ರಲ್ಲಿ ನಗರಕ್ಕೆ ಸೇರಿಸಲಾಯಿತು. ನಗರದ ಆಡಳಿತ ನಡೆಸಲು ಒಬ್ಬ ರಾಜ್ಯಪಾಲ 120 ಸದಸ್ಯರಿಂದ ಕೂಡಿದ ನಗರಮಂಡಲಿ ಉಂಟು. (ಕೆ.ಆರ್.)

**ಟೋಗೊ:** ಪಶ್ಚಿಮ ಆಫ್ರಿಕದ ಒಂದು ಗಣರಾಜ್ಯ. ಇದನ್ನು ಉತ್ತರದಲ್ಲಿ. ಉತ್ತರ ವೋಲ್ಟ, ದಕ್ಷಿಣದಲ್ಲಿ ಬೆನಿನ್ ಕೊಲ್ಲಿ. ಪಶ್ಚಿಮದಲ್ಲಿ ಘಾನ–ಇವು ಸುತ್ತುವರಿದಿವೆ. ಉ.ಅ. $5^0$–$11^0$ ಹಾಗೂ ಪೂ.ರೆ. $0^0$–$2^0$ಗಳ ನಡುವೆ ಇದೆ. ಈ ಸಣ್ಣ ರಾಜ್ಯ ದಕ್ಷಿಣದ ಗಿನಿ ಖಾರಿಯಿಂದ ಉತ್ತರಕ್ಕೆ ಸು. 544 ಕಿಮೀ ವ್ಯಾಪಿಸಿದೆ. ಇದಕ್ಕೆ ಸೇರಿದ ಕಡಲತೀರದ ಕೇವಲ 56 ಕಿಮೀ ನಾಡಿನ ಗರಿಷ್ಠ ಅಗಲ ಸು. 112 ಕಿಮೀ ವಿಸ್ತೀರ್ಣ 56785 ಕಿಮೀ ಜನಸಂಖ್ಯೆ 56,81,519 (2002). ಆಡಳಿತ ಕೇಂದ್ರ ಲೋಮೆ. ಇದರ ಜನಸಂಖ್ಯೆ: 3,66,476 (2002).




ಇದರ ದಕ್ಷಿಣದ ತೀರಪ್ರದೇಶ ತಗ್ಗು ಹಾಗೂ ಜೌಗು. ಕಡಲಂಚಿನಲ್ಲಿ ಮರಳುದಿಬ್ಬಗಳಿಂದ ಕೂಡಿದ ಲಗೂನ್‌ಗಳು ಹೆಚ್ಚಾಗಿವೆ. ಕರಾವಳಿಯಿಂದ ಉತ್ತರಕ್ಕೆ ಜಂಬುಮಣ್ಣಿನ ಗುಡ್ಡ ಸಾಲುಗಳು 30–60 ಕಿಮೀ ದೂರ ವ್ಯಾಪಿಸಿವೆ. ಇವುಗಳಾಚೆ ಸ್ಫಟಿಕಶಿಲೆಯ ಬೆಟ್ಟಗಳು ಹಾಗೂ ಜೇಡಿಮಣ್ಣಿನ ಸಮತಲಭೂಮಿ ಹರಡಿದೆ. ಅಟಕೋಟ ಪರ್ವತಶ್ರೇಣಿ ನೈಋತ್ಯದಿಂದ ಈಶಾನ್ಯಕ್ಕೆ ಹಬ್ಬಿದೆ. ಈ ಶ್ರೇಣಿಯ ಪಶ್ಚಿಮದ ನದಿಗಳು ವೋಲ್ಟ ನದಿಯನ್ನೂ ಪೂರ್ವದ ನದಿಗಳು ಗಿನಿ ಖಾರಿಯನ್ನು ಸೇರುತ್ತವೆ. ಉತ್ತರದಲ್ಲಿ ಓಟಿ ನದಿ ಹರಿದು ವೋಲ್ಟ ನದಿಯನ್ನು ಸೇರುತ್ತದೆ. ದಕ್ಷಿಣಕ್ಕೆ ಹರಿದು ಗಿನೀ ಖಾರಿಯನ್ನು ಸೇರುವ ನದಿ ಮಾನೋ. ಇದು ಟೋಗೊದ ಮುಖ್ಯನದಿ. ಇದರ ಹರಿವಿನಲ್ಲಿ ಜಲಪಾತಗಳು ಅಧಿಕ. ಆದ್ದರಿಂದ

ಇದು ಸಂಚಾರಕ್ಕೆ ಉಪಯುಕ್ತವಲ್ಲ. ಕಾರ ಮೋಹಾಹೋ, ಸಿಯೋ–ಇವು ಇತರ ಕೆಲವು ನದಿಗಳು. ಇಲ್ಲಿ ಫಾಸ್ಫೇಟ್ ಮತ್ತು ಬಾಕ್ಸೈಟ್ ಗಣಿಗಳಿವೆ. ಲೋಮೇ ಬಂದರಿನ ಮೂಲಕ ಬಹುಪಾಲು ಅದಿರು ರಫ್ತಾಗುತ್ತದೆ.

ಇಲ್ಲಿಯ ಉಷ್ಣತೆ $19^0$ಸೆ.–$22^0$ಸೆ. ವಾರ್ಷಿಕ ಮಳೆ ಉತ್ತರದಲ್ಲಿ 80 ಸೆಂಮೀ; ಪರ್ವತ ಶ್ರೇಣಿಗಳಲ್ಲಿ 105 ಸೆಂಮೀ.

ಮೊದಲು ಅರಣ್ಯ ಸಂಪತ್ತಿಗಾಗಿ ಟೋಗೊ ಬಹಳ ಪ್ರಸಿದ್ಧವಾಗಿತ್ತು. ಅತಿಬಳಕೆಯಿಂದಾಗಿ ಬಹುಪಾಲು ಅರಣ್ಯ ಹಾಳಾಗಿದೆ. ಇಲ್ಲಿ ಜರ್ಮನರು ತಂದು ಬೆಳೆಸಿದ ತೇಗದ ಮರಗಳ ಅರಣ್ಯಗಳಿವೆ. ಉತ್ತರದ ಹುಲ್ಲುಗಾವಲುಗಳನ್ನು ಅಲ್ಲಲ್ಲಿ ಸುಟ್ಟು ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ. ಮೊದಲಿನ ವಸಾಹತುಗಾರರು ತಂದು ಬೆಳೆಸಿದ ತೆಂಗಿನ ತೋಪುಗಳಿಂದ ಅಲ್ಲಿಯ ಸ್ವಾಭಾವಿಕ ಸಸ್ಯಗಳು ನಾಶವಾಗಿವೆ. ತೆಂಗಿನ ಮರಗಳನ್ನೂ ಹೆಚ್ಚಾಗಿ ನೆಡಲಾಗುತ್ತಿದೆ. ಮಾನೋ ನದಿ ಹರಿಯುವ ಪ್ರಸ್ಥಭೂಮಿಯಲ್ಲಿ ಮೆಕ್ಕೆಜೋಳ, ಮರಗೆಣಸು, ಹತ್ತಿ ಮತ್ತು ಬತ್ತ ಮುಖ್ಯ ಬೆಳೆಗಳು. ಪರ್ವತಗಳ ದಕ್ಷಿಣಕ್ಕಿರುವ ಅರಣ್ಯಗಳಲ್ಲಿ ಕೋಕೋ ಮತ್ತು ಕಾಫಿ, ಒಳನಾಡಲ್ಲಿ ತೆಂಗು ಹಾಗೂ ಕಬ್ಬು, ಉತ್ತರದ ಹುಲ್ಲುಗಾವಲುಗಳಲ್ಲಿ ನೆಲಗಡಲೆ ಮತ್ತು ಬೂರುಗಹತ್ತಿ ಬೆಳೆಯುತ್ತವೆ.

ಟೋಗೊದಲ್ಲಿ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಾಲಾ ಶಿಕ್ಷಣ ಜಾರಿಯಲ್ಲಿದೆ. ಲೋಮೇ ನಗರದಲ್ಲಿ ಬಿನಿನ್ ವಿಶ್ವವಿದ್ಯಾಲಯವಿದೆ. ತಾಂತ್ರಿಕ ಶಿಕ್ಷಣ ಕಾಲೇಜು ಸೂಕೊಡೇ ನಗರದಲ್ಲಿದೆ.

ಟೋಗೊದ ದಕ್ಷಿಣಭಾಗದಲ್ಲಿ ವಿವಿಧ ಭಾಷೆಗಳನ್ನಾಡುವ ಸುಮಾರು 27 ಬಣಗಳಿವೆ. ಆವಾ, ಮಿನ, ಡಗೋಬ, ಕಬ್ರೆ ಹಾಗೂ ಔವಚ್ಚಿ–ಇವು ಇಲ್ಲಿಯ ಪ್ರಮುಖ ಭಾಷೆಗಳು. ಫ್ರೆಂಚ್ ಇಲ್ಲಿಯ ಅಧಿಕೃತ ಆಡಳಿತ ಭಾಷೆ.

ಲೋಮೇ ನಗರದ ಬಳಿ ಟೊಕೆಯಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಸೂಕೊಡೇ, ಸ್ಯಾನ್‌ಸ್ಯಾನ್–ಮ್ಯಾಂಗೋ ದಪ್ಯಾಂಗೋ ಮುಂತಾದೆಡೆಯಲ್ಲೂ ವಿಮಾನ ಇಳಿದಾಣಗಳುಂಟು. (ವಿ.ಜಿ.ಕೆ.)

**ಟ್ಯಾಂಜಿಯರ್:** ಜಿಬ್ರಾಲ್ಟರ್ ಜಲಸಂಧಿಯ ಪಶ್ಚಿಮ ತುದಿಯಲ್ಲಿರುವ ಮೊರಾಕೋಗೆ ಸೇರಿದ ಸರ್ವಋತು ಬಂದರು. ಪೂರ್ವಕಾಲದಿಂದಲೂ ವ್ಯಾಪಾರಮಾರ್ಗದ ಕೇಂದ್ರವಾದ ಇದನ್ನು ಪಡೆಯಲು ಅನೇಕ ದೇಶಗಳು ಕಾದಾಡಿವೆ. ಮೊದಲು ರೋಮನ್ನರ ವಶದಲ್ಲಿದ್ದ ಇದು ಕ್ರಮವಾಗಿ ವ್ಯಾಂಡಲ್, ಬಿಜ಼ಾಂಟೀನ್ ಮತ್ತು ಅರಬ್ ಜನರ ಕೈಗೆ ಹೋಯಿತು. ಅನಂತರ ಪೋರ್ಚುಗೀಸರ ವಶದಲ್ಲಿದ್ದ ಇದು 1662ರಲ್ಲಿ ಇಂಗ್ಲಿಷರ ವಶಕ್ಕೆ ಹೋಯಿತು. ಅವರು ಇದನ್ನು ಮೂರರಿಗೆ ಒಪ್ಪಿಸಿದರು (1684).ಇಂಗ್ಲೆಂಡ್, ಫ್ರಾನ್ಸ್ ಮತ್ತು ಸ್ಪೇನ್ ಇದನ್ನು ಅಂತಾರಾಷ್ಟ್ರೀಯ ವಲಯವನ್ನಾಗಿ ಮಾಡಬೇಕೆಂದು ಸಮಾಲೋಚನೆ ನಡೆಸುತ್ತಿದ್ದಾಗ (1913) ಒಂದನೆಯ ಮಹಾಯುದ್ಧ ಪ್ರಾರಂಭವಾಗಿ ಆ ಯೋಚನೆ ಅಲ್ಲಿಗೆ ನಿಂತುಹೋಯಿತು. 1923ರಲ್ಲಿ ಈ ರಾಷ್ಟ್ರಗಳು ಇದಕ್ಕೆ ಹೊಸ ಸಂವಿಧಾನವನ್ನು ಜಾರಿಗೆ ತಂದುವು. ಇದು ಮೊರಾಕೋ ಸುಲ್ತಾನನ ಪ್ರಭುತ್ವಾಧಿಕಾರಕ್ಕೆ ಒಳಪಟ್ಟ ಶಾಶ್ವತ ಅಂತಾರಾಷ್ಟ್ರೀಯ ತಟಸ್ಥವಲಯವಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಇದನ್ನು ಸ್ಪೇನ್ ವಶಪಡಿಸಿಕೊಂಡಿತ್ತು. 1945ರಲ್ಲಿ ಪುನಃ ಇದು ಅಂತಾರಾಷ್ಟ್ರೀಯ ಆಡಳಿತಕ್ಕೆ ಒಳಪಟ್ಟಿತು. 1956ರಲ್ಲಿ ಇದು ಮೊರಾಕೋಗೆ ಸೇರಿಹೋಯಿತು. ಈ ಬಂದರಿನ ಮೂಲಕ ಉತ್ತರ ಮೊರಾಕೋವಿನ ಕೃಷಿ ಉತ್ಪನ್ನಗಳನ್ನು ರಫ್ತುಮಾಡುತ್ತಿದ್ದಾರೆ. ಇಲ್ಲಿ ಸಾಬೂನು, ತಂಬಾಕು, ಜವಳಿ ಮುಂತಾದ ಉದ್ಯಮಗಳು ಬೆಳೆದಿವೆ. ಈಗ ಇದು ಮೊರಾಕೋವಿನ ಬೇಸಗೆಯ ರಾಜಧಾನಿಯಾಗಿದೆ. ಜನಸಂಖ್ಯೆ 1,30,000 (2005). *

**ಟ್ಯುನೀಶಿಯ:** ಉತ್ತರ ಆಫ್ರಿಕದ ಒಂದು ಗಣರಾಜ್ಯ. ಉ.ಅ. $29^0 54'$–$7^0 21'$ ಪೊ.ರೇ. $37^0 33'$–$11^0 38'$ ಮತ್ತು ಮಧ್ಯೆ ಇದೆ. ಉತ್ತರ ಮತ್ತು ಪೂರ್ವದಲ್ಲಿ ಮೆಡಿಟರೇನಿಯನ್ ಸಮುದ್ರ. ಪಶ್ಚಿಮ ಮತ್ತು ನೈಋತ್ಯದಲ್ಲಿ ಆಲ್ಜೀರಿಯ, ಆಗ್ನೇಯದಲ್ಲಿ ಲಿಬಿಯ ಇದರ ಮೇರೆಗಳು. ಜಾಲಿಟಾ, ಕರ್ಕೇನ ಮತ್ತು ಜರ್ಬ ದ್ವೀಪಗಳೂ ಇದಕ್ಕೆ ಸೇರಿವೆ. ಉತ್ತರ ಮತ್ತು ಪೂರ್ವದ ಕಡಲ ತೀರದ ಒಟ್ಟು ಉದ್ದ ಸು. 2,304 ಕಿಮೀ ವಿಸ್ತೀರ್ಣ 1,54,530 ಚ.ಕಿಮೀ. ಜನಸಂಖ್ಯೆ 1,01,02,000 (2005).ರಾಜಧಾನಿ ಟ್ಯೂನಿಸ್.

ಭೂರಚನೆ : ಟ್ಯುನೀಶಿಯದ ರೂಪರೇಖೆ ಕ್ರಿಟೇಷಸ್ ಯುಗದ ವೇಳೆಗೆ ಮೂಡಿ ಬಂದಿರಬೇಕು. ಆಗ ಸಿನೋಮೇನಿಯನ್ ಸಮುದ್ರ ಈ ಪ್ರದೇಶವನ್ನು ಆವರಿಸಿತ್ತು. ಉತ್ತರದ ಅಟ್ಲಾಸ್ ಪರ್ವತಶ್ರೇಣಿ ಉದ್ಭವಿಸಿದ್ದು ಟರ್ಷಿಯರಿ ಯುಗದಲ್ಲಿ. ಅಲ್ಲಲ್ಲಿ ಭೂಕುಸಿತದಿಂದ ಉಂಟಾದ ತಗ್ಗುಗಳಲ್ಲಿ ಸುಣ್ಣಶಿಲೆ ರೂಪುಗೊಂಡಿದೆ. ಉಳಿದೆಡೆಗಳಲ್ಲಿ ಕಾರ್ಬಾನಿಫೆರಸ್ ಯುಗದ ಸಸ್ಯಾವಶೇಷಗಳನ್ನೊಳಗೊಂಡ ಶಿಲಾಪ್ರಸ್ತರಗಳು ಹೇರಳವಾಗಿವೆ. ಅನೇಕ ಕಡೆ ಶಿಲಾಪದರಗಳು ಮಡಿಸಿಕೊಂಡಿವೆ. ಕೆಲವು ಕಡೆ ವೃತ್ತಾಕಾರದ ಮತ್ತು ಅಂಡಾಕಾರದ ಉಬ್ಬುಗಳು (ಡೋಮ್) ಕಾಣಬರುತ್ತವೆ. ಇವು ಬಹುಪಾಲು ಮಯೋಸೀನ್ ಕಾಲದವು. ಪಶ್ಚಿಮದ ಟ್ಯುನೀಶಿಯನ್ ಸಹರ ಮರುಭೂಮಿಯಲ್ಲಿ ಮರಳು ಶಿಲೆಯ ಅಟ್ಟಳಿಗಳು (ಟೆರೇಸ್) ಹೇರಳವಾಗಿವೆ. ಸೀಸ, ಸತು, ಕಬ್ಬಿಣ, ಫಾಸ್ಫೇಟ್ ಅದಿರುಗಳು ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತವೆ.

ಮೇಲ್ಮೈಲಕ್ಷಣ ಮತ್ತು ನದಿಗಳು : ಟ್ಯುನೀಶಿಯದ ಬಹುಭಾಗ ಸಮುದ್ರ ಮಟ್ಟದಿಂದ ಸು. 305 ಮೀ ಎತ್ತರದಲ್ಲಿದೆ. ಕೆಲವು ಕಡೆಗಳಲ್ಲಿ 1220 ಮೀ ಎತ್ತರವಾಗಿರುವುದುಂಟು. ಎತ್ತರದ ನಾಡು ಪೂರ್ವದ ಕಡೆಗೆ ಇಳಿಜಾರಾಗುತ್ತ ಹೋಗುತ್ತದೆ. ಅಟ್ಲಾಸ್ ಪರ್ವತಶ್ರೇಣಿಗಳು ಈ ದೇಶವನ್ನು ಎರಡು ಸ್ಪಷ್ಟ ಪ್ರದೇಶಗಳಾಗಿ ವಿಂಗಡಿಸುತ್ತವೆ. ಈ ಶ್ರೇಣಿಗಳಿಗೆ ಟ್ಯುನೀಶಿಯದಲ್ಲಿ ಡೋರ್ಸಲ್ ಪರ್ವತಗಳೆಂದು ಹೆಸರು. ಈ ಪರ್ವತಗಳ ಉತ್ತರಕ್ಕಿರುವುದು ತೇವದ ಪ್ರದೇಶ; ದಕ್ಷಿಣದ್ದು ಅರೆ ಮರುಭೂಮಿ. ಉತ್ತರದ ಪ್ರದೇಶವನ್ನು ವಾಯವ್ಯ, ಉತ್ತರ–ಮಧ್ಯ ಮತ್ತು ಈಶಾನ್ಯ ಉಪವಿಭಾಗಗಳಾಗಿ ಮತ್ತೆ ವಿಂಗಡಿಸಬಹುದು. ದಕ್ಷಿಣ ಪ್ರದೇಶದ ಮಧ್ಯಭಾಗ ಪ್ರಸ್ಥಭೂಮಿ. ಅತ್ಯಂತ ದಕ್ಷಿಣದ ಭಾಗ ಮರುಭೂಮಿ. ಇದು ಸಹರ ಮರುಭೂಮಿಯಲ್ಲಿ ಲೀನವಾಗುತ್ತದೆ. ಈ ಪ್ರದೇಶದಲ್ಲಿ ಅಲ್ಲಲ್ಲಿ ಓಯಸಿಸ್‌ಗಳೂ ಉಪ್ಪುನೀರಿನ ಸರೋವರಗಳೂ ಇವೆ. ಕ್ರೌಮೆರಿಯಿಂದ ಬಿಝರ್ಟೀವರೆಗೆ ಹಬ್ಬಿರುವ ಮಜೆರ್ಡವೂ ದಕ್ಷಿಣ ಪ್ರದೇಶದಲ್ಲಿರುವ ಟಿಬೆಸವೂ ಎರಡು ಮುಖ್ಯ ಪರ್ವತಶ್ರೇಣಿಗಳು. ಟ್ಯುನೀಶಿಯದ ಮುಖ್ಯ ನದೀವ್ಯವಸ್ಥೆ ಮಜೆರ್ಡ. ಇದು ಆಲ್ಜೀರಿಯದಲ್ಲಿ ಉಗಮಿಸುತ್ತದೆ.

ವಾಯುಗುಣ : ಮೆಡಿಟರೇನಿಯನ್ ಸಮುದ್ರದಿಂದಲೂ ಸಹರ ಮರುಭೂಮಿಯಿಂದಲೂ ಟ್ಯುನೀಶಿಯದ ವಾಯುಗುಣ ಪ್ರಭಾವಿತವಾಗಿದೆ. ಮೆಡಿಟರೇನಿಯನ್ ಸಮುದ್ರ ಉಷ್ಣತೆಯನ್ನು ತಗ್ಗಿಸುತ್ತದೆ ; ಮಳೆಯನ್ನು ತರಿಸುತ್ತದೆ. ಸಹರ ಮರುಭೂಮಿಯಿಂದ ಬಿಸಿಯಾದ ಒಣಗಾಳಿ ಬೀಸುತ್ತದೆ. ಜೊತೆಗೆ ಟ್ಯುನೀಶಿಯದ ಎರಡು ವಾಯುಗುಣ ಪಟ್ಟಿಗಳಿವೆ. ಉತ್ತರದಲ್ಲಿ ಮೆಡಿಟರೇನಿಯನ್ ಪ್ರಭಾವವಿದೆ. ದಕ್ಷಿಣದಲ್ಲಿ ಸಹರದ ಪ್ರಭಾವವುಂಟು. ಕರಾವಳಿ ಉದ್ದಕ್ಕೂ ಉಷ್ಣತೆ ಮಧ್ಯಸ್ಥ. ದಕ್ಷಿಣ ಒಳನಾಡಿನಲ್ಲಿ ಅಧಿಕ. ಉತ್ತರದಲ್ಲಿ ಮೇ ನಿಂದ ಸೆಪ್ಟೆಂಬರ್ ವರೆಗೆ, ಬೇಸಗೆ ಕಾಲದಲ್ಲಿ ವಾಯುಗುಣ ಬಿಸಿಯಾಗಿಯೂ ಶುಷ್ಕವಾಗಿಯೂ ಇರುತ್ತದೆ; ಅಕ್ಟೋಬರ್‌ನಿಂದ ಏಪ್ರಿಲ್‌ವರೆಗೆ ಚಳಿಗಾಲದ ವಾಯುಗುಣ ಹಿತಕರವಾಗಿರುತ್ತದೆ. ಆಸಮಯದಲ್ಲಿ ಪದೇಪದೇ ಮಳೆಯಾಗುತ್ತದೆ.

ಸಸ್ಯ ಮತ್ತು ಪ್ರಾಣಿವರ್ಗ: ಟ್ಯುನೀಶಿಯದಲ್ಲಿ ನಾನಾ ಬಗೆಯ ಮರಗಳಿವೆ. ಕಾರ್ಕ್ ಓಕ್, ಪೈನ್, ಎಲಚಿ ಮತ್ತು ನೀಲಗಿರಿ ಮರಗಳ ಕಾಡುಗಳು ವಾಯವ್ಯ ಭಾಗದಲ್ಲಿ ಅಧಿಕ. ಉತ್ತರ ಮಧ್ಯಭಾಗ ಹುಲ್ಲುಗಾವಲು. ಈಶಾನ್ಯ ಭಾಗದಲ್ಲಿ, ಟ್ಯೂನಿಸ್‌ನಿಂದ ಕ್ಯಾಪ್ ಬಾನ್ ವರೆಗೆ ಇರುವ ಪ್ರದೇಶದಲ್ಲಿ ಜಂಬೀರ ಫಲಗಳ ಗಿಡಮರಗಳುಂಟು.ದೇಶದ

ಕಾಲುಭಾಗಕ್ಕಿಂತ ಹೆಚ್ಚು ಪ್ರದೇಶದಲ್ಲಿ ಎಸ್ಪಾರ್ಟೋ ಹುಲ್ಲು ಬೆಳೆಯುತ್ತದೆ. ಇದು ಸ್ಟೆಪಿ ಹುಲ್ಲುಗಾವಲಿನ ಪ್ರರೂಪಿ ಸಸ್ಯ. ದಕ್ಷಿಣದಲ್ಲಿ ಓಯಸಿಸ್ ಬಳಿಯಲ್ಲಿ ಖರ್ಜೂರ ಮರಗಳುಂಟು.

ಟ್ಯುನೀಶಿಯದಲ್ಲಿ ನರಿ, ಕಾಡುಹಂದಿ ಮತ್ತು ಗೆಜ಼ೆಲ್ ಹೇರಳವಾಗಿವೆ. ಕತ್ತೆ ಕಿರುಬ ವಿರಳ. ಸಹರದಲ್ಲಿ ಶೃಂಗಮಂಡಲ ಹಾವುಗಳೂ ಚೇಳುಗಳೂ ಸಾಮಾನ್ಯ. ಸ್ಲೀವ್ ಮೌಫ್ಲನ್ ಎಂಬ ಒಂದು ಬಗೆಯ ಕಾಡುಕುರಿ ಪರ್ವತಪ್ರದೇಶದಲ್ಲಿದೆ. ಆಫ್ರಿಕಾನೋ–ಬ್ರೆಜೀಲಿಯನ್ ಜಾತಿಯ ಮೀನುಗಳುಂಟು.

ಜನಜೀವನ : ಸರಾಸರಿ ಜನಸಾಂದ್ರತೆ ಚ.ಕಿಮೀಗೆ 62. ದಕ್ಷಿಣದಲ್ಲಿ ಜನಸಾಂದ್ರತೆ ಕಡಿಮೆ ಉತ್ತರದಲ್ಲಿ ಹೆಚ್ಚು. 1911–1956ರ ಅವಧಿಯಲ್ಲಿ ಜನಸಂಖ್ಯೆ ಇಮ್ಮಡಿಸಿತು. ಹೆಚ್ಚು ಜನರು ರಾಜಧಾನಿಯಾದ ಟ್ಯೂನಿಸಿನಲ್ಲಿ ವಾಸಿಸುತ್ತಾರೆ. ಜನಸಂಖ್ಯೆ 8,87,800 (2002). ಇತರ ದೊಡ್ಡ ಪಟ್ಟಣಗಳೆಂದರೆ: ಸ್ಫಾಕ್ಸ್, ಸೂಸ್, ಬಿಜ಼ರ್ಟ, ಕೆರ್ವಾನ್, ಗಾಬ್‌ಸ್, ಮಾನಸ್ಟಿರ್ ಮತ್ತು ಮೆನ್‌ಜ಼ೆಲ್ ಬುರ್ಗೀಬ.

ಟ್ಯುನೀಶಿಯದ ಜನರು ಅರಬ್, ಬರ್ಬರ್ ಮತ್ತು ಟರ್ಕಿ ವಂಶದವರು. ಟ್ಯುನೀಶಿಯನ್ ಯಹೂದ್ಯರೂ ಐರೋಪ್ಯರೂ ಇದ್ದಾರೆ. 1964ರಲ್ಲಿ ಜಮೀನನ್ನು ರಾಷ್ಟ್ರೀಕರಿಸಿದ ಫಲವಾಗಿ ವಿದೇಶಿಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿದೆ.

ಟ್ಯುನೀಶಿಯದ ಅಧಿಕೃತ ಭಾಷೆ ಅರಬ್ಬೀ. ಆಡಳಿತ ಮತ್ತು ವಾಣಿಜ್ಯದಲ್ಲಿ ಫ್ರೆಂಚ್ ಭಾಷೆಯೂ ಸ್ವಲ್ಪ ಬಳಕೆಯಲ್ಲಿದೆ. ಕೆಲವು ಮಂದಿ ಬರ್ಬರ್ ಭಾಷೆಯನ್ನಾಡುತ್ತಾರೆ.

ಬಹುತೇಕ ಟ್ಯುನೀಶಿಯನರು ಸುನ್ನಿ ಮುಸ್ಲಿಮರು. ಇಸ್ಲಾಂ ರಾಜ್ಯಧರ್ಮವಾದರೂ ಟ್ಯುನೀಶಿಯನರು ಇತರ ಧರ್ಮಗಳ ವಿಚಾರದಲ್ಲಿ ಸಹಿಷ್ಣುಗಳು. ಯುರೋಪಿಯನರು ರೋಮನ್ ಕೆಥೊಲಿಕರು. ಉಳಿದವರು ಗ್ರೀಕ್ ಸಂಪ್ರದಾಯವಾದಿಗಳು, ಫ್ರೆಂಚ್ ಪ್ರಾಟೆಸ್ಟಂಟ್ ಮತ್ತು ಆಂಗ್ಲಿಕನ್ ಧರ್ಮೀಯರು.

ವ್ಯವಸಾಯ : ದೇಶದ ಮುಕ್ಕಾಲು ಜನ ಕೃಷಿ ಅವಲಂಬಿತರು. ಮುಖ್ಯ ಬೆಳೆಗಳು ಮುಸುಕಿನ ಜೋಳ ಮತ್ತು ಗೋದಿ. ಇವು ಚಳಿಗಾಲದ ಬೆಳೆಗಳು. ಇವನ್ನು ಮುಖ್ಯವಾಗಿ ಟೆಲ್ ಪ್ರದೇಶದಲ್ಲಿ ಬೆಳೆಯುತ್ತಾರೆ. ಸ್ಟೆಪಿ ಹುಲ್ಲುಗಾವಲಿನ ಬೆಳೆ ಬಾರ್ಲಿ. ಈಶಾನ್ಯದಲ್ಲಿ, ವಿಶೇಷವಾಗಿ ಮೆಡಿಟರೇನಿಯನ್ ತೀರದಲ್ಲೂ ಸಫಾಕಿನ್ ಸುತ್ತಮುತ್ತಲೂ ಆಲಿವ್ ಮರಗಳು ಬೆಳೆಯುತ್ತವೆ. ನಿಂಬೆ ಜಾತಿಯ ಹಣ್ಣುಗಳು, ಅಂಜೂರ, ಖರ್ಜೂರ, ಬಾದಾಮಿ ಹಾಗೂ ದಾಳಿಂಬೆ ವಿಶೇಷವಾಗಿವೆ. ದ್ರಾಕ್ಷಿ ಬಳ್ಳಿಗಳು ಟ್ಯೂನಿಸ್ ಮತ್ತು ಅಲ್ ವತನ್ ಅಲ್ ಕಿಬ್ಲಿ ವಿಲಾಯತ್‌ನಲ್ಲಿ ಬೆಳೆಯುತ್ತವೆ. ಹೊಗೆಸೊಪ್ಪು ಒಂದು ವಾಣಿಜ್ಯ ಬೆಳೆ.

ಟೆಲ್ ಪ್ರದೇಶ ಮತ್ತು ಹುಲ್ಲುಗಾವಲುಗಳಲ್ಲಿ ಕುರಿ ಸಾಕುತ್ತಾರೆ. ಬೆಟ್ಟಸೀಮೆಯಲ್ಲಿ ಆಡುಗಳನ್ನೂ ಹೆಚ್ಚು ನೀರಿನ ಸೌಕರ್ಯ ಇರುವ ಉತ್ತರ ಭಾಗದಲ್ಲಿ ದನಗಳನ್ನೂ ಸಾಕುವುದುಂಟು. ಕುದುರೆ, ಹೇಸರಗತ್ತೆಗಳನ್ನು ಸಾಕುವುದು ಕಡಿಮೆಯಾಗುತ್ತಿದೆ. ಕತ್ತೆಗಳನ್ನೂ ಒಂಟೆಗಳನ್ನೂ ಸಾಕುತ್ತಾರೆ.

ಅರಣ್ಯ ಸಂಪತ್ತು : ದೇಶದ ಶೇ. 9 ಭಾಗ ಭೂಮಿ ಅರಣ್ಯಾವೃತ. ಕಾರ್ಕ್, ಇದ್ದಿಲು, ಸಾಗುವಾನಿ ಮುಖ್ಯ ಉತ್ಪನ್ನಗಳು. ಎತ್ತರದ ಸ್ಟೆಪಿ ಹುಲ್ಲುಗಾವಲಿನ ಎಸ್ಪಾರ್ಟೋ ಹುಲ್ಲು ವಿಶೇಷವಾಗಿ ಬ್ರಿಟನ್ನಿಗೆ ರಫ್ತಾಗುತ್ತದೆ.

ಮೀನುಗಾರಿಕೆ : ದೇಶದಲ್ಲಿ ಸು. 7,000 ಬಡಕುಟುಂಬಗಳು ಮೀನುಗಾರಿಕೆಯನ್ನೇ ಅವಲಂಬಿಸಿವೆ. ಗಾಬಸ್ ಖಾರಿಯಲ್ಲಿ ಈ ಚಟುವಟಿಕೆ ವಿಶೇಷ. ವರ್ಷಕ್ಕೆ ಸರಾಸರಿ 20 ರಿಂದ 30 ಸಾವಿರ ಟನ್ ಮೀನು ಹಿಡಿಯಲಾಗುತ್ತದೆ. 120–300 ಟನ್ ಸ್ಪಂಜು ಸಿಗುತ್ತದೆ.

ಗಣಿಗಾರಿಕೆ : ಕಪ್ಸಾ, ಟೆಲ್ ಮತ್ತು ಅಲ್ ಕಲಾ ಅಲ್ ಜಾರ್ದ ಪ್ರದೇಶಗಳಲ್ಲಿ ಫಾಸ್ಫೇಟ್ ದೊರಕುತ್ತದೆ. ಇದರಲ್ಲಿ ಬಹುಭಾಗ ರಫ್ತಾಗುತ್ತದೆ. ಉಳಿದದ್ದನ್ನು ಟ್ಯುನಿಸ್‌ನಲ್ಲಿ ರಾಸಾಯನಿಕ ಗೊಬ್ಬರದ ತಯಾರಿಕೆಗೆ ಉಪಯೋಗಿಸಲಾಗುತ್ತದೆ. ಟ್ಯುನೀಶಿಯದಲ್ಲಿ ಮುಖ್ಯವಾಗಿ ಆ ಕೆಫ್ ಬಳಿಯ ಜೈರಿಸ್ಸದಲ್ಲಿ ಮತ್ತು ಕಪ್ಸಾದಲ್ಲಿ ಕಬ್ಬಿಣ ಅದಿರು ದೊರಕುತ್ತದೆ. ಟೆಲ್ ಪ್ರದೇಶದಲ್ಲಿ ಅಲ್ಲಲ್ಲಿ ಸೀಸ ಮತ್ತು ಸತು ಸಿಗುತ್ತವೆ.

ವಿದ್ಯುಚ್ಛಕ್ತಿ : ಟ್ಯುನೀಶಿಯದಲ್ಲಿ ಕಲ್ಲಿದ್ದಲಾಗಲೀ ಪೆಟ್ರೋಲಿಯಂ ಆಗಲಿ ದೊರಕುವುದಿಲ್ಲ. ನೈಸರ್ಗಿಕ ಅನಿಲವುಂಟು. ಥರ್ಮಲ್ ವಿದ್ಯುತ್‌ಕೇಂದ್ರಗಳಿಂದಲೇ ವಿಶೇಷವಾಗಿ ಶಕ್ತಿಯನ್ನು ತಯಾರಿಸಲಾಗುತ್ತದೆ. ಇದಕ್ಕೆ ಬೇಕಾದ ಇಂಧನವನ್ನು ಆಮದು ಮಾಡಿಕೊಳ್ಳಬೇಕು. ವಾಡೀ ಮಲ್ಲಾಕ್ ಮತ್ತು ವಾಡೀ ಮಜರ್ದಾ ನದಿಗಳಿಂದ ನಿಬ್ಬಾರ್ ಮತ್ತು ಟಾಲಾರ್‌ವಿಲ್‌ನಲ್ಲಿ ಜಲವಿದ್ಯುತ್ತನ್ನು ಉತ್ಪಾದಿಸುತ್ತಾರೆ. ವಿದ್ಯುತ್ ವಿತರಣ ವ್ಯವಸ್ಥೆ ರಾಷ್ಟ್ರೀಕೃತವಾಗಿದೆ.

ಕೈಗಾರಿಕೆ : ಟ್ಯುನೀಶಿಯದಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಬೆಳೆದಿಲ್ಲ. ಇದಕ್ಕೆ ಬಂಡವಾಳದ, ತಂತ್ರಜ್ಞರ ಮತ್ತು ಕುಶಲಕಾರ್ಮಿಕರ ಅಭಾವ ಮುಖ್ಯ ಕಾರಣ. ಹಿಟ್ಟಿನ ಗಿರಣಿ, ಆಲಿವ್ ಎಣ್ಣೆ, ಮೀನಿನ ಡಬ್ಬೀಕರಣ ಮುಂತಾದ ಕೆಲವು ಆಹಾರ ಕೈಗಾರಿಕೆಗಳೂ ಇವೆ. ಸೂಸ, ಕಸರ್ ಹಲ್ಲಾಲ್ ಮತ್ತು ಆಲ್ ಮುನಾಸ್ಟಿರ್‌ನಲ್ಲಿ ಜವಳಿ ಗಿರಣಿಗಳೂ ಬಿಜ಼ರ್ಟೀಯಲ್ಲಿ ನೌಕಾನಿರ್ಮಾಣ ಕೈಗಾರಿಕೆಯೂ ಮನ್‌ಜ಼ಿಲ್ ಬೂ ರುಕಾಬಾದಲ್ಲಿ ಲೋಹ ಕೈಗಾರಿಕೆಯೂ ಬಾಜಾದಲ್ಲಿ ಸಕ್ಕರೆ ಕೈಗಾರಿಕೆಯೂ ಆಲ ಕಸ್ರೇನ್‌ನಲ್ಲಿ–ಸೆಲ್ಯುಲೋಸ್ ಕಾರ್ಖಾನೆಯೂ ಟ್ಯೂನಿಸ್, ಬಿಜ಼ರ್ಟೀಗಳಲ್ಲಿ ಸಿಮೆಂಟ್ ಕಾರ್ಖಾನೆಗಳೂ ಇವೆ. ಅಲ್ಲದೆ ಚರ್ಮ ಹದ ಮಾಡುವ, ರಾಸಾಯನಿಕಗಳ ತಯಾರಿಕೆ. ಉಪ್ಪು, ಎಣ್ಣೆ, ಸಾಬೂನು ಕಾರ್ಖಾನೆಗಳು ಕೆಲವೆಡೆ ಇವೆ.

ವಿದೇಶಿ ವ್ಯಾಪಾರ : ಟ್ಯುನೀಶಿಯದಿಂದ ರಫ್ತಾಗುವ ಪದಾರ್ಥಗಳಲ್ಲಿ ಮೂರನೆಯ ಎರಡು ಭಾಗ ಆಹಾರ ಮತ್ತು ಕಚ್ಚಾ ಖನಿಜಸಾಮಗ್ರಿ. ಆಮದಿನಲ್ಲಿ ಮುಕ್ಕಾಲು ಭಾಗ ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಕೈಗಾರಿಕಾ ಸಿದ್ಧವಸ್ತುಗಳು. ಸುಮಾರು ಅರ್ಧದಷ್ಟು ವ್ಯಾಪಾರ ಫ್ರಾನ್ಸಿನೊಂದಿಗೆ ನಡೆಯುತ್ತದೆ.

ಟ್ಯುನೀಶಿಯನ್ ದಿನಾರ್ ಇಲ್ಲಿಯ ನಾಣ್ಯ. ಇದನ್ನು 1,000 ಮಿಲ್ಲೈಮ್‌ಗಳಾಗಿ ವಿಂಗಡಿಸಲಾಗಿದೆ.

ಸಾರಿಗೆ : ಟ್ಯುನೀಶಿಯದ ರೈಲ್ವೆಯನ್ನು ರಾಷ್ಟ್ರೀಕರಿಸಲಾಗಿದೆ. ದೇಶದ ಉತ್ತರ ಭಾಗದಲ್ಲಿ 450 ಕಿಮೀ; ಟ್ಯೂನಿಸ್‌ನಿಂದ ದಕ್ಷಿಣ ಮತ್ತು ಪಶ್ಚಿಮಕ್ಕೆ 1102 ಕಿಮೀ; ಸ್ಫ್ಯಾಕ್ಸ್‌ನಿಂದ ಫಾಸ್ಫೇಟ್ ಗಣಿಗಳಿಗೆ 440 ಕಿಮೀ–ಇದು ಟ್ಯುನೀಷಿಯದ ರೈಲ್ವೆ ವ್ಯವಸ್ಥೆ. ದೇಶದಲ್ಲಿ 19,200 ಕಿಮೀ ಉದ್ದದ ರಸ್ತೆಗಳಿವೆ.

ಟ್ಯುನೀಶಿಯದ ಮುಖ್ಯ ರೇವುಗಳು ಟ್ಯುನಿಸ್, ಸ್ಫ್ಯಾಕ್ಸ್, ಬಿಜ಼ರ್ಟೀ ಮತ್ತು ಸೂಸ. ಟ್ಯುನಿಸ್ ನಗರದ ಬಳಿಯ ಅಲ್ ಉವೇನಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. *

**ಟ್ರಯಾಸಿಕ್:** ಮೀಸೋಜೋ಼ಯಿಕ್ ಯುಗದ (225 ದ.ಲ.ವ. ಪ್ರಾಚೀನದಿಂದ 65 ದ.ಲ.ವ. ಪ್ರಾಚೀನದ ವರೆಗಿನ ಕಾಲ) ಪ್ರಥಮ ಕಲ್ಪದ ಶಿಲಾವ್ಯವಸ್ಥೆ. ಇದು ನಿಕ್ಷೇಪಗೊಂಡ ಕಾಲಕ್ಕೂ ಟ್ರಯಾಸಿಕ್ ಎಂದೇ ಹೆಸರು. ಇದರ ಕಾಲಾವಧಿ 225 ದ.ಲ.ವ. ಪ್ರಾಚೀನದಿಂದ 190 ದ.ಲ.ವ. ಪ್ರಾಚೀನದವರೆಗೆ. ಜರ್ಮನಿಯ ನೈಋತ್ಯ ಭಾಗದಲ್ಲಿ, ಪರ್ಮಿಯನ್ ಶಿಲಾಸ್ತೋಮದ ಮೇಲೆ ಮೀಸೋಜ಼ೋಯಿಕ್ ಯುಗದ ಆದಿಭಾಗವನ್ನು ಪ್ರತಿನಿಧಿಸುವ ಶಿಲೆಗಳು ನಿಕ್ಷೇಪಗೊಂಡಿವೆ. ಜರ್ಮನಿಯ ಎಲ್ಲ ಭಾಗಗಳಲ್ಲಿಯೂ ಈ ಶಿಲೆಗಳನ್ನು ಮೂರು ನಿರ್ದಿಷ್ಟ ಭಾಗಗಳನ್ನಾಗಿ ವಿಭಜಿಸಬಹುದು. ಆದ್ದರಿಂದ ಎಸ್. ಫಾನ್ ಅಲ್ಬರ್ಟಿ ಎಂಬಾತ ಈ ಶಿಲೆಗಳನ್ನು ಟ್ರಯಾಸಿಕ್ ಶಿಲಾಸ್ತೋಮಗಳು ಎಂದು ಹೆಸರಿಸಿದ (1834).

ಟ್ರಯಾಸಿಕ್ ಕಲ್ಪದ ಜೀವರಾಶಿ : ಈ ಕಲ್ಪದ ಜೀವರಾಶಿಯ ಪ್ರಾಚೀನ ಜೀವಯುಗ ಮತ್ತು ಮಧ್ಯಜೀವಯುಗಗಳ ಜೀವಪರಂಪರೆಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆಯಾಗಿದೆ. ಆದರೆ ಸಸ್ಯಗಳಲ್ಲಿ ಮಧ್ಯಜೀವಯುಗದ ಅಚ್ಚು ಸ್ಪಷ್ಟವಾಗಿ ಕಾಣುತ್ತದೆ. ಪ್ರಾಚೀನ ಜೀವಯುಗ ಸಸ್ಯಗಳಾದ ಕ್ಯಾಲಮೈಟಿಸ್, ಲೆಪಿಡೊಡೆಂಡ್ರಾನ್ ಮತ್ತು ಸಿಜಿಲೇರಿಯಗಳು (ಸಿಜಿಲೇರಿಯಗಳು ವಿರಳವಾಗಿ ಪ್ರತಿನಿಧಿಸಲ್ಪಟ್ಟಿವೆ) ಗತವಂಶಿಗಳಾಗಿವೆ. ಪ್ರಾಚೀನ ಜೀವಯುಗದ ವಿಶಿಷ್ಟ ಸಸ್ಯ ವರ್ಗವಾದ ಟೆರಿಡೊಸ್ಪರ್ಮ್‌ಗಳೂ ನಷ್ಟ ವಂಶಗಳಾಗಿವೆ. ಮಧ್ಯಜೀವಯುಗದ ಸಸ್ಯಗಳು ಇನ್ನೂ ಬಲವಾಗಿ ಬೇರೂರಿರಲಿಲ್ಲ. ಭೂವಿಜ್ಞಾನಿಗಳಿಗೆ ಪರಿಚಿತವಾದ ಟ್ರಯಾಸಿಕ್ ಸಸ್ಯವರ್ಗ ಆ ಕಲ್ಪದ ಅಂತ್ಯಕಾಲದ್ದು. ಈ ಸಸ್ಯಾಭಾವಕ್ಕೆ ಟ್ರಯಾಸಿಕ್ ಕಲ್ಪದಲ್ಲಿ ಸರ್ವಸಾಮಾನ್ಯವಾಗಿ ವ್ಯಾಪಿಸಿದ್ದ ಮರುಭೂಮಿ ವಾಯುಗುಣದ ಪ್ರಭಾವವೇ ಕಾರಣವಾಗಿರಬೇಕು. ಟ್ರಯಾಸಿಕ್ ವನಗಳಲ್ಲಿ ಸೈಕ್ಯಾಡ್ ಮತ್ತು ಕೋನಿಫೆರಸ್ ಮರಗಳೇ ಹೆಚ್ಚು. ವನಗಳ ನೆಲ ಫರ್ನ್ ಮತ್ತು ಹಾರ್ಸ್‌ಟೈಲ್ ಸಸ್ಯಗಳಿಂದ ಮುಚ್ಚಿತ್ತು. ಗೊಂಡವಾನ ಖಂಡದಲ್ಲಿ ಗ್ಲಾಸಾಪ್ಟರಿಸ್ ಗಿಡಗಳೂ ಉತ್ತರ ಖಂಡದಲ್ಲಿ ಟಿರೋಫಿಲ್ಲಮ್ ಎಂಬ ಸೈಕ್ಯಾಡ್ ಮತ್ತು ವಾಲ್ಟ್‌ಜಿಯ ಎಂಬ ಕೋನಿಫೆರ ಗಿಡಗಳೂ ಮುಖ್ಯವಾದವು. ಗ್ಲಾಸಾಪ್ಟರಿಸ್, ಸೈಜೊನ್ಯೂರ, ನೊಯಗರತಿಯಾಪ್ಸಿಸ್ ಮತ್ತು ತಿನ್ನೆಲ್ದಿಯಗಳು ಮುಖ್ಯ ಸಸ್ಯಗಳು.

ಟ್ರಯಾಸಿಕ್ ಕಲ್ಪದ ಆರಂಭದಲ್ಲಿ ಪ್ರಾಣಿವರ್ಗಗಳಲ್ಲಿ ತೀವ್ರ ಬದಲಾವಣೆಗಳಾಗಿರುವುದು ಸೂಚಿತವಾಗಿದೆ. ಟ್ರೈಲೊಬೈಟುಗಳು ಬ್ಲಾಸ್ಟಾಯಿಡುಗಳು ಮತ್ತು ಪ್ರಾಚೀನ ಜೀವಯುಗದ ಎಲ್ಲ ಎಕೈನೊಡರ್ಮ್ ಶಾಖೆಗಳು ಸಂಪೂರ್ಣವಾಗಿ ವಂಶನಷ್ಟ ಹೊಂದಿದವು. ಆದರೆ ಎನ್‌ಕ್ರೈನಿಡೆ ಮತ್ತು ಪೆಂಟಕ್ರೈನಿಡೆ ಎಂಬ ಎರಡು ಜಾತಿಯ ಕ್ರೈನಾಯಿಡುಗಳು ಹೇರಳವಾಗಿದ್ದವು. ರೂಗೋಸ ಹವಳಗಳು ಸಂಪೂರ್ಣವಾಗಿ ವಂಶನಷ್ಟ ಹೊಂದಿದುವು. ಅವುಗಳ ಸ್ಥಾನವನ್ನು ಷಟ್‌ಭಿತ್ತಿ ಹವಳಗಳು ಹಿಡಿದುಕೊಂಡವು. ಥ್ಯಾಮ್ನಾಸ್ಟ್ರಿಯ, ಐಸಾಸ್ಟ್ರಿಯ, ಥೀಕೊಸ್ಮಿಲಿಯ, ಸ್ಟೈಲಿನ, ಮಾಂಟ್ಲಿವಾಲ್ಸಿಯ ಮೊದಲಾದ ಷಟ್‌ಭಿತ್ತಿ ಹವಳಗಳು ದಿಬ್ಬಗಳನ್ನು ರಚಿಸಿದುವು. ಬ್ರ್ಯಾಕಿಯೋಪೊಡಗಳು ತೆತಿಸ್ ಸಾಗರದಲ್ಲಿ ಹೇರಳವಾಗಿದ್ದುವು. ಆದರೆ ಇನ್ನುಳಿದ ಕಡೆಗಳಲ್ಲಿ ಅವು ಭಾರಿ ಆಘಾತಕ್ಕೊಳಗಾದುವು. ಅದರಿಂದ ಪುನಃ ಚೇತರಿಸಿಕೊಳ್ಳಲೇ ಇಲ್ಲ. ಪ್ರಾಚೀನ ಜೀವಯುಗದ ಬ್ರ್ಯಾಕಿಯೊಪೊಡಗಳಲ್ಲಿ ಅನೇಕ ವಿಧಗಳು ಗತವಂಶಿಗಳಾದವು. ಉಳಿದವು ಅತಿವಿರಳವಾಗಿದ್ದುವು. ಅತಿರಿಸ್ ಮತ್ತು ಸ್ಪೊಪ್ರೊಮೀನಗಳು ಟ್ರಯಾಸಿಕ್ ಸ್ತೋಮದಲ್ಲಿ ಕೊನೆಯ ಬಾರಿಗೆ ಕಾಣಿಸಿಕೊಂಡಿವೆ.

ರಿಂಕೊನೆಲ್ಲಿಡೆ ಮತ್ತು ಟೆರಿಬ್ರಾಟುಲಿಡೆ ಜಾತಿಯ ಬ್ರ್ಯಾಕಿಯೊಪೊಡಗಳು ಮಾತ್ರ ಉನ್ನತ ಸ್ಥಿತಿಯಲ್ಲಿದ್ದವು. ಲೆಮಲಿಬ್ರ್ಯಾಂಕ್ ಮತ್ತು ವಿವಿಧ ಜಾತಿಯ ಶಂಖಗಳು ಹೇರಳವಾಗಿದ್ದುವು. ಮಯೊಪೋರ ಈ ಕಲ್ಪದ ವಿಶಿಷ್ಟ ಲೆಮಲಿಬ್ರ್ಯಾಂಕ್. ಆದರೆ ಪೆಕ್ಟನ್, ಹ್ಯಾಲೋಬಿಯ, ದಯೊನೆಲ್ಲಾ, ಮಾನಟಿಸ್, ಮೆಗಲೊಡಾನ್ ಮೊದಲಾದವು ಹೆಚ್ಚು ಸಂಖ್ಯೆಯಲ್ಲಿ ಇದ್ದುವು.

ಈ ಕಲ್ಪದ ಪ್ರಾಣಿವರ್ಗಗಳಲ್ಲಿ ಎಲ್ಲರ ಲಕ್ಷ್ಯವನ್ನು ಸೆಳೆಯುವಂತಹವುಗಳೆಂದರೆ ಅಮ್ಮೊನೈಟುಗಳು. ಅವು ಈ ಯುಗದಲ್ಲಿ ಪ್ರಭಾವ ಸ್ಥಾನಕ್ಕೇರಿದುವು. ಪ್ರಾಚೀನ ಜೀವಯುಗದಲ್ಲಿದ್ದ ಗೋನೆಯೋಟೈಟಿಸ್ ಎಂಬ ಜಾತಿ ವಂಶನಷ್ಟ ಹೊಂದಿ ಅವುಗಳ ಸ್ಥಾನದಲ್ಲಿ ಸೆರಟೈಟಸ್ ಮತ್ತು ಟಿರೊಲೆಸ್ಪಿಸ್‌ಗಳು ಕಾಣಿಸಿಕೊಂಡವು. ಈ ಅಮ್ಮೊನೈಟುಗಳು ಪ್ರಪಂಚ ವ್ಯಾಪ್ತಿಯನ್ನು ಪಡೆದಿರುವುದೇ ಅಲ್ಲದೆ, ಅನೇಕ ಅಲ್ಪಾಯುಪ್ರಕಾರ ಪರಂಪರೆಯಿಂದಲೂ ಕೂಡಿವೆ. ಓಟೊಸೆರಾಸ್, ಓಪಿಸೆರಾಸ್, ಮೀಕೊಸೆರಾಸ್, ಕ್ಷೀನೊಡಿಸ್ಕಸ್, ಹಿಡೆನ್‌ಸ್ಟ್ರೋಮಿಯ, ಫ್ಲೆಮಿಂಗೈಟಿಸ್, ಕೊನಿಂಕೈಟಿಸ್, ಕೈಸರ್‌ಲಿಂಗೈಟಿಸ್, ಸಿಬ್ರೈಟಿಸ್, ಟಿಕೈಟಿಸ್, ಜೆಮ್ಮೈಟಿಸ್ ಮತ್ತು ಟ್ರೊಪೈಟಿಸ್‌ಗಳು ಇಂಡಿಯದ ಮುಖ್ಯ ಸೆರಟೈಟಿಸ್ ಪ್ರಕಾರಗಳು. ಇವುಗಳ ಆಧಾರದ ಮೇಲೆ ಟ್ರಯಾಸಿಕ್ ಸ್ತೋಮದ ವಿಭಜನೆಯನ್ನು ಪರಿಪೂರ್ಣವಾಗಿ ಮಾಡಲು ಸಾಧ್ಯವಾಗಿದೆ. (ಡಿ.ಆರ್.)

**ಟ್ರಾನ್ಸ್‌ನಿಸ್ಟ್ರಿಯ:** ಮಾಲ್ಡೋವದ ಜೊತೆ ಕಾನೂನು ಬದ್ಧ ಅಂತಸ್ತನ್ನು ಹೊಂದಿರುವ ಒಂದು ದೇಶ. ತಾನೊಂದು ಸ್ವತಂತ್ರ ಗಣರಾಜ್ಯವೆಂದು ಘೋಷಿಸಿಕೊಂಡಿದೆ. 1990 ಸೆಪ್ಟೆಂಬರ್ 2 ರಂದು ಸೋವಿಯತ್ ಒಕ್ಕೂಟದಲ್ಲಿದ್ದ ಮಾಲ್ಡೋವದಿಂದ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಇದನ್ನು ಪ್ರಿಡ್ನಿಸ್ಟ್ರೋವಿ ಅಂತಲೂ ಕರೆಯುತ್ತಾರೆ. ಯಾವುದೇ ಅಂತಾರಾಷ್ಟ್ರೀಯ ಅಥವಾ ರಾಜ್ಯಗಳು ಇದರ ಸ್ವಾತಂತ್ರ್ಯವನ್ನು ಒಪ್ಪಿಕೊಂಡಿಲ್ಲ. ಇದು ಉಕ್ರೇನ್ ಮತ್ತು ನೀಸ್ಟರ್ ನದಿಯ ಪೂರ್ವದಡದಲ್ಲಿದೆ. ತನ್ನದೇ ಆದ ಸರ್ಕಾರ, ಪಾರ್ಲಿಮೆಂಟ್, ಪೊಲೀಸ್ ಹಾಗೂ ಮಿಲಿಟರಿ ವ್ಯವಸ್ಥೆಯನ್ನು ಹೊಂದಿದೆ.

ಇದರ ಪಶ್ಚಿಮದಲ್ಲಿ 411 ಕಿಮೀ ಉದ್ದದ ಬೆಸರಬಿಯದ ಗಡಿಯನ್ನು, ಪೂರ್ವದಲ್ಲಿ (405 ಕಿಮೀ) ಉಕ್ರೇನ್ ದೇಶದಗಡಿಯನ್ನೊಳಗೊಂಡಿದೆ. ಉತ್ತರ–ದಕ್ಷಿಣವಾಗಿ ಚಾಚಿಕೊಂಡ ನೀಸ್ಟರ್ ನದಿ ಕಣಿವೆಯನ್ನು ಹೊಂದಿದೆ. ಟೈರಸ್‌ಪೂಲ್ ದೊಡ್ಡ ಪಟ್ಟಣ ಹಾಗೂ ರಾಜಧಾನಿ. ಜನಸಂಖ್ಯೆ 1,59,163 (2006). ನದಿಯ ಎಡದಂಡೆಯಲ್ಲಿರುವ ಒಂಬತ್ತು ಪ್ರಾಂತ್ಯಗಳು ಮಾಲ್ಡೋವ ಸರ್ಕಾರದ ಅಧೀನದಲ್ಲಿದ್ದು ದುಬಸಾರಿ ಜಿಲ್ಲೆಯ ಭಾಗವಾಗಿವೆ. ಪಶ್ಚಿಮ ದಂಡೆಯಲ್ಲಿರುವ ಟೈಘಿನ ಪಟ್ಟಣ ಮತ್ತು ಆರು ಹಳ್ಳಿಗಳು ಟ್ರಾನ್ಸ್‌ನಿಸ್ಟ್ರಿಯದ ಅಧೀನದಲ್ಲಿವೆ.

ಇಲ್ಲಿಯ ಜನರು ಮಾಲ್ಡಿವಿಯನ್, ರಷ್ಯನ್ ಹಾಗೂ ಉಕ್ರೇನ್ ಭಾಷೆಗಳನ್ನಾಡುತ್ತಾರೆ. ವಿಸ್ತೀರ್ಣ 4,163 ಚ.ಕಿಮೀ. ಜನಸಂಖ್ಯೆ 5,55,347 (2004). (ಕೆ.ಎಂ.)

**ಟ್ರಾನ್ಸ್‌ವಾಲ್:** ದಕ್ಷಿಣ ಆಫ್ರಿಕ ಗಣರಾಜ್ಯದ ಅತ್ಯಂತ ಉತ್ತರದ ಪ್ರಾಂತ್ಯ. ಇದರ ಪೂರ್ವದ ಗಡಿ ಲೆಬೊಂಬೋ ಪರ್ವತದ ನೆತ್ತಿಗೆರೆ. ಉತ್ತರ ಪಶ್ಚಿಮಗಳಲ್ಲಿ ಲಿಂಪೋಪೋ ನದಿಯೇ ಇದರ ಮೇರೆ. ದಕ್ಷಿಣದ ಅಂಚಿನಲ್ಲಿ ವಾಲ್ ನದಿ ಹರಿಯುತ್ತದೆ. ಟ್ರಾನ್ಸ್‌ವಾಲ್‌ನ ವಿಸ್ತೀರ್ಣ 2,83,920 ಚ.ಕಿಮೀ. ಜನಸಂಖ್ಯೆ 29,21,560 (2006).

ಇದರ ಬಹುಭಾಗ ಪರ್ವತದ ತಪ್ಪಲುಪ್ರದೇಶ. ಹುಲ್ಲುಗಾವಲಿನಿಂದ ಕೂಡಿದೆ. ಈ ಪ್ರಾಂತ್ಯದ ಒಟ್ಟು ಪ್ರದೇಶದ 1/3 ಭಾಗ ಸಮುದ್ರಮಟ್ಟದಿಂದ ಸರಾಸರಿ 1525–1950ಮೀ ಎತ್ತರದಲ್ಲಿದೆ. ಕಮಾಟೀ, ಪಾಂಗೋಲ ಮುಂತಾದ ಮುಖ್ಯ ನದಿಗಳು ಪೂರ್ವಾಭಿಮುಖವಾಗಿ ಹರಿದು ಹಿಂದೂ ಸಾಗರವನ್ನು ಸೇರುತ್ತವೆ. ಎತ್ತರಕ್ಕೆ ಅನುಗುಣವಾಗಿ ವಾಯುಗುಣ ವ್ಯತ್ಯಾಸವಾಗುತ್ತದೆ. ಚಳಿಗಾಲದ ಅತ್ಯಂತ ಕಡಿಮೆ ಉಷ್ಣತೆ ಇರುವುದು ಹೈ ವೆಲ್ಡ್‌ನ ಪೂರ್ವಭಾಗದಲ್ಲಿ. ಅಲ್ಲಿ ಜುಲೈನ ಸರಾಸರಿ ಉಷ್ಣತೆ $7^0$ಸೆ. ಪೂರ್ವದ ಲೋ ವೆಲ್ಡ್ ಮತ್ತು ಲಿಂಪೋಪೋ ಕಣಿವೆಯಲ್ಲಿ ಅತ್ಯಂತ ಹೆಚ್ಚಿನ ಉಷ್ಣತೆ ಇರುತ್ತದೆ. ವಾರ್ಷಿಕ ಮಳೆ 40–130 ಸೆಂಮೀ ಪ್ರದೇಶದಿಂದ ಪ್ರದೇಶಕ್ಕೆ ಇದು ವ್ಯತ್ಯಾಸವಾಗುತ್ತದೆ.

ಮುಸುಕಿನ ಜೋಳ ಈ ಪ್ರದೇಶದ ಪ್ರಮುಖ ಬೆಳೆ. ದಕ್ಷಿಣ ಆಫ್ರಿಕದ ಒಟ್ಟು ಬೆಳೆಯಲ್ಲಿ ಶೇ. 50 ಭಾಗ ಇಲ್ಲಿಯೇ ಬೆಳೆಯುತ್ತದೆ. ಈ ಪ್ರಾಂತ್ಯದ ದಕ್ಷಿಣಭಾಗ ಅತ್ಯಂತ ಫಲವತ್ತಾದ ಪ್ರದೇಶ. ಗೋದಿ, ತಂಬಾಕು ಮುಂತಾದವನ್ನು ಇಲ್ಲಿ ಬೆಳೆಯುತ್ತಾರೆ. ಆಫ್ರಿಕದ ಒಟ್ಟು ತಂಬಾಕಿನ ಬೆಳೆಯಲ್ಲಿ ಶೇ. 85 ಭಾಗ ಇಲ್ಲಿ ಬೆಳೆಯುತ್ತದೆ. ಇವಲ್ಲದೆ ಕಿತ್ತಳೆ ಮುಂತಾದ ನಿಂಬೆ ಜಾತಿಯ ಹಣ್ಣುಗಳನ್ನೂ ಇಲ್ಲಿ ಹೇರಳವಾಗಿ ಬೆಳೆಯುತ್ತಾರೆ. ಹುಲ್ಲುಗಾವಲು ಪ್ರದೇಶ ಹೇರಳವಾಗಿರುವುದರಿಂದ ಹೈನು ಉದ್ಯಮ ಚೆನ್ನಾಗಿ ಬೆಳೆದಿದೆ.

ಹೇರಳವಾಗಿ ದೊರೆಯುವ ಖನಿಜಸಂಪತ್ತಿನಿಂದಾಗಿ ಟ್ರಾನ್ಸ್‌ವಾಲ್ ತುಂಬ ಪ್ರಸಿದ್ಧವಾಗಿದೆ. ಜೋಹ್ಯಾನ್ಸ್‌ಬರ್ಗ್ ಸಮೀಪವಿರುವ ವಿಟ್‌ವಾಟರ್ಸ್‌ರ್ಯಾಂಡ್ ಚಿನ್ನದ ಗಣಿ ಪ್ರಪಂಚದಲ್ಲೇ ಅತ್ಯಂತ ಪ್ರಖ್ಯಾತವಾದದ್ದು. ಈ ಪ್ರಾಂತ್ಯದ ರಾಜಧಾನಿಯಾದ ಪ್ರೀಟೋರೀಯದ ಸಮೀಪದಲ್ಲೆ ಅಮೂಲ್ಯವಾದ ವಜ್ರದ ಗಣಿಗಳಿವೆ. ಇವಲ್ಲದೆ ಕಲ್ಲಿದ್ದಲು, ಕಬ್ಬಿಣ, ಬೆಳ್ಳಿ, ಪ್ಲಾಟಿನಂ ಮುಂತಾದ ಖನಿಜಗಳೂ ಈ ಪ್ರಾಂತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ.

ಇಲ್ಲಿ ಬಂಟು ಮತ್ತು ಹೊಟೆಂಟೋಪ್ ಸಮುದಾಯದವರು ಹೆಚ್ಚಾಗಿ ನೆಲಸಿದ್ದರು. ಅನಂತರ ಝೂಲೂ ಸಮುದಾಯದವರು ವಲಸೆ ಬಂದರು. ಜೊತೆಗೆ ಬೋಯರರು, ಬಿಳಿಯರು ಮತ್ತು ಏಷ್ಯನ್ನರು ಗಣನೀಯ ಸಂಖ್ಯೆಯಲ್ಲಿದ್ದಾರೆ.

ಈ ಪ್ರಾಂತ್ಯವನ್ನು ಆಡಳಿತದ ಅನುಕೂಲಕ್ಕಾಗಿ 53 ಜಿಲ್ಲೆಗಳನ್ನಾಗಿ ವಿಭಾಗಿಸಲಾಗಿದೆ. ಪ್ರಾಂತ್ಯದಲ್ಲಿ ನಾಲ್ಕು ವಿಶ್ವವಿದ್ಯಾಲಯಗಳಿವೆ. ಬಿಳಿಯರಿಗೆ ಪ್ರತ್ಯೇಕವಾದ ಶಾಲಾ–ಕಾಲೇಜುಗಳಿವೆ. ಬಂಟೂ ಜನಾಂಗದವರಿಗೂ ಏಷ್ಯನರಿಗೂ ಪ್ರತ್ಯೇಕವಾದ ಶಿಕ್ಷಣ ಸಂಸ್ಥೆಗಳು ಇವೆ. ಪ್ರಿಟೋರೀಯ ಟ್ರ್ಯಾನ್ಸ್‌ವಾಲಿನ ರಾಜಧಾನಿ. ಜರ್ಮಿಸ್ಟನ್, ಸ್ಪ್ರಿಂಗ್ಸ್, ಬೆನೋನಿ–ಇವು ಇಲ್ಲಿಯ ಪ್ರಮುಖ ಪಟ್ಟಣಗಳು. ದಕ್ಷಿಣ ಆಫ್ರಿಕದ ಅತ್ಯಂತ ದೊಡ್ಡ ಪಟ್ಟಣವಾದ ಜೋಹ್ಯಾನ್ಸ್‌ಬರ್ಗ್ ಇರುವುದೂ ಈ ಪ್ರಾಂತ್ಯದಲ್ಲೇ. (ಎಂ.ವಿ.ಎಸ್.ಆರ್.;ಎಚ್.ಆರ್.ಆರ್.ಬಿ.)

**ಟ್ರಿನಿಡ್ಯಾಡ್ ಮತ್ತು ಟೊಬ್ಯಾಗೊ:** ಕೆರಿಬಿಯನ್ ದ್ವೀಪಗಳ ಪೈಕಿ ಅತ್ಯಂತ ದಕ್ಷಿಣದಲ್ಲಿರುವ ಎರಡು ದ್ವೀಪಗಳು. ಉ. ಅ. $10^0 2'–11^0 21'$ ಮತ್ತು ಪೂ. ರೇ. $60^0 30'–61^0 56'$ ನಡುವೆ ಇದೆ. ಇವೆರಡೂ ಸೇರಿ ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿರುವ ಒಂದು ಸ್ವತಂತ್ರ ದೇಶ. ಟ್ರಿನಿಡ್ಯಾಡ್ ದ್ವೀಪ ಟೊಬ್ಯಾಗೊಗಿಂತ ದೊಡ್ಡದು ; ವೆನಿಜ಼ುವೇಲದ ತೀರಕ್ಕೆ 11 ಕಿಮೀ ದೂರದಲ್ಲಿದೆ. ಟ್ರಿನಿಡ್ಯಾಡ್‌ಗೆ ಈಶಾನ್ಯದಲ್ಲಿ 32 ಕಿಮೀ ದೂರದಲ್ಲಿ ಟೊಬ್ಯಾಗೊ ಇದೆ. ಈ ದ್ವೀಪಗಳ ತೀರಗಳಲ್ಲಿ ಹದಿನಾರು ಸಣ್ಣ ದ್ವೀಪಗಳಿವೆ. ಟ್ರಿನಿಡ್ಯಾಡ್ ಮತ್ತು ಟೊಬ್ಯಾಗೊದ ಒಟ್ಟು ವಿಸ್ತೀರ್ಣ 513 ಚ.ಕಿಮೀ. ಜನಸಂಖ್ಯೆ 13,04,000 (2004). ರಾಜಧಾನಿ ಪೋರ್ಟ್ ಆಫ್ ಸ್ಪೇನ್. ಜನಸಂಖ್ಯೆ 52,451 (2004).




ಭೌತಲಕ್ಷಣ: ಪರೀಯ ಖಾರಿಯೂ ಡ್ರ್ಯಾಗನ್ ಮೌತ್ ಕಡಲ್ಗಾಲುವೆಯೂ ಟ್ರಿನಿಡಾಡ್ ದ್ವೀಪವನ್ನು ವೆನಿಜ಼ುವೇಲದಿಂದ ಪ್ರತ್ಯೇಕಿಸುತ್ತವೆ. ಸು. 160 ಕಿಮೀ ಉದ್ದ ಮತ್ತು 64 ಕಿಮೀ ಅಗಲ ಇರುವ ಈ ದ್ವೀಪ ಆಯತಾಕಾರದಲ್ಲಿದೆ. ಭೂಮಿ ಬಹುತೇಕ ಚಪ್ಪಟೆ. ಕೆಲವು ಕಡೆ ಅಲ್ಪ ಏರು–ತಗ್ಗುಗಳಿವೆ. ಅಲ್ಲಲ್ಲಿ ಜೌಗು ಪ್ರದೇಶಗಳಿವೆ. ಈ ದ್ವೀಪ ವೆನಿಜ಼ುವೇಲ ಭೂಭಾಗದ ಮುಂದುವರಿಕೆ. ಇದರ ಮೇಲ್ಮೈ ಲಕ್ಷಣ ವೆನಿಜ಼ುವೇಲದ ಓರಿನೋಕೊ ವಿಭಾಗದ್ದನ್ನು ಹೋಲುತ್ತದೆ. ದ್ವೀಪದ ಉತ್ತರ, ಮಧ್ಯ ಮತ್ತು ದಕ್ಷಿಣಗಳಲ್ಲಿ ಮೂರು ಗಿರಿಶ್ರೇಣಿಗಳು ಪೂರ್ವ–ಪಶ್ಚಿಮವಾಗಿ ಹಬ್ಬಿವೆ.

ಉತ್ತರದ ಶ್ರೇಣಿಯಲ್ಲಿ ಅತ್ಯುನ್ನತ ಶಿಖರ ಎಲ್ ಸೆರ್ರೊ ಡೆಲ್ ಅರಿಪೊ (940 ಮೀ). ಮಧ್ಯದ ಶ್ರೇಣಿ ಸು. 300 ಮೀ ಎತ್ತರ ಇದೆ. ದಕ್ಷಿಣದ ಶ್ರೇಣಿ ಇನ್ನೂ ತಗ್ಗು. ಈ ಶ್ರೇಣಿಗಳ ನಡುವೆ ಹಲವು ಸಣ್ಣ ತೊರೆಗಳು ಹರಿಯುತ್ತವೆ. ಪೂರ್ವ, ದಕ್ಷಿಣ ಮತ್ತು ಪಶ್ಚಿಮ ಕರಾವಳಿಯಲ್ಲಿ ವಿಸ್ತಾರವಾದ ಜೌಗು ನೆಲಗಳಿವೆ. ಕೆಲವು ಕಡೆ ಗುಲ್ಮವೃಕ್ಷಗಳಿವೆ.

ಟೊಬ್ಯಾಗೊ ವೈಜ್ಞಾನಿಕವಾಗಿ ಲೆಸ್ಸರ್ ಆಂಟಿಲೀಸ್ ದ್ವೀಪಗಳ ಭಾಗ. ಇದರ ಮೇಲ್ಮೈಯ ಲಕ್ಷಣ ಟ್ರಿನಿಡಾಡಿನದಕ್ಕಿಂತ ಹೆಚ್ಚು ಏರುತಗ್ಗುಗಳಿಂದ ಕೂಡಿದ್ದು, ಉತ್ತರದಲ್ಲಿರುವ ಗ್ರೆನಾಡ, ಸೇಂಟ್ ವಿನ್ಸೆಂಟ್ ಮತ್ತು ಇತರ ಜ್ವಾಲಾಮುಖೀಯ ದ್ವೀಪಗಳನ್ನು ಇದು ಹೋಲುತ್ತದೆ. ದ್ವೀಪದ ನಡುವಿನ ಜ್ವಾಲಾಮುಖೀಯ ಬೆಟ್ಟ 600 ಮೀ ಎತ್ತರವಿದೆ.

ಇದು ದ್ವೀಪದ ಬಹುಭಾಗವನ್ನು ಆವರಿಸಿಕೊಂಡಿದೆ. ಹಲವೆಡೆಗಳಲ್ಲಿ ಸಮುದ್ರದೊಳಕ್ಕೂ ಹರಡಿದೆ. ಕರಾವಳಿಯಲ್ಲಿ ಅಲ್ಲಲ್ಲಿ ಕಿರಿದಾದ ಮೈದಾನವುಂಟು. ಇದು ನೈಋತ್ಯ ಅಂಚಿನಲ್ಲಿ ಹೆಚ್ಚು ವಿಶಾಲ.

ವಾಯುಗುಣ : ಟ್ರಿನಿಡಾಡ್ ದ್ವೀಪ ಕೆರಿಬಿಯನ್ ಚಂಡಮಾರುತದ ವಲಯಕ್ಕೆ ದಕ್ಷಿಣದಲ್ಲಿರುವುದರಿಂದ ಚಂಡಮಾರುತದ ಅಪಾಯವಿಲ್ಲ. ಇಲ್ಲಿಯದು ಉಷ್ಣವಲಯ ವಾಯುಗುಣ. ಉಷ್ಣತೆ ವರ್ಷವೆಲ್ಲ ಹೆಚ್ಚು ಕಡಿಮೆ ಒಂದೇ ರೀತಿ ಇರುತ್ತದೆ. ಮಧ್ಯ ವಾರ್ಷಿಕ ಉಷ್ಣತೆ ಎಲ್ಲೆಡೆಯಲ್ಲೂ $21^0$ ಸೆ. ಗಿಂತ ಹೆಚ್ಚು. ಪೋರ್ಟ್ ಆಫ್ ಸ್ಪೇನ್‌ನಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $26^0$ ಸೆ. ಗರಿಷ್ಠ ಉಷ್ಣತೆಯ ತಿಂಗಳು ಜುಲೈ. ಕನಿಷ್ಠ ಉಷ್ಣತೆ ಜನವರಿಯಲ್ಲಿ. ಇವೆರಡು ತಿಂಗಳುಗಳ ಉಷ್ಣತೆಗಳ ಅಂತರ ಕೇವಲ $3^0$ ಸೆ. ಟ್ರಿನಿಡಾಡಿನ ಉತ್ತರದ ಗಿರಿಶ್ರೇಣಿಯಲ್ಲಿ ಎತ್ತರಕ್ಕೆ ಹೋದಂತೆ ಉಷ್ಣತೆ ಸ್ವಲ್ಪ ಮಟ್ಟಿಗೆ ತಗ್ಗುತ್ತದೆ. ರಾತ್ರಿಯ ವೇಳೆ ತಂಪಾಗಿರುತ್ತದೆ. ಸರಾಸರಿ ವಾರ್ಷಿಕ ಮಳೆ 100 ಸೆಂಮೀ.

ಸಸ್ಯಪ್ರಾಣಿಜೀವನ : ಟ್ರಿನಿಡ್ಯಾಡಿನ ಭೂರಚನೆಯಂತೆ ಅಲ್ಲಿಯ ಸಸ್ಯಪ್ರಾಣಿ ಜೀವನವೂ ನೆರೆಯ ವೆನಿಜ಼ುವೇಲದ್ದನ್ನೇ ಹೋಲುತ್ತದೆ. ಟೊಬ್ಯಾಗೊದು ಲೆಸರ್ ಆಂಟಿಲೀಸಿನದನ್ನು ಹೋಲುತ್ತದೆ. ಎರಡೂ ದ್ವೀಪಗಳಲ್ಲಿ ಎತ್ತರಕ್ಕೆ ಅನುಗುಣವಾಗಿ ನೈಸರ್ಗಿಕ ಸಸ್ಯಸಂಪತ್ತು ವ್ಯತ್ಯಾಸವಾಗುತ್ತದೆ. ದ್ವೀಪಗಳ ಉನ್ನತ ಗಿರಿಪ್ರದೇಶದಲ್ಲಿ ನಿತ್ಯಹಸುರಿನ ಉಷ್ಣವಲಯದ ಮಳೆಕಾಡುಗಳಿವೆ. ಟ್ರಿನಿಡಾಡಿನ ಮಧ್ಯ ಮತ್ತು ದಕ್ಷಿಣ ಗಿರಿಶ್ರೇಣಿಗಳಲ್ಲಿ ಎಲೆ ಉದುರುವ ಉಷ್ಣವಲಯದ ಕಾಡುಗಳುಂಟು. ಅಲ್ಲಲ್ಲಿ ಸವನ್ನ ಹುಲ್ಲುಗಾವಲು ಇದೆ. ಕರಾವಳಿಯಲ್ಲಿ ಸಮುದ್ರದಿಂದ ಪ್ರಭಾವಿತವಾದ ಕಾಡುಗಳಿವೆ. ಜವುಗು ನೆಲದಲ್ಲಿ ಗುಲ್ಮ ವೃಕ್ಷಗಳಿವೆ.

ಶಿಕ್ಷಣ: 6–12 ವರ್ಷಗಳ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವಿದೆ. ಸೆಕೆಂಡರಿ ಶಿಕ್ಷಣ ಸರ್ಕಾರಿ ಹಾಗೂ ಖಾಸಗಿ ವಿದ್ಯಾಸಂಸ್ಥೆಗಳ ಮೂಲಕ ನಡೆಯುತ್ತದೆ. ಸೇಂಟ್ ಆಗಸ್ಟೀನಿನಲ್ಲಿ ವೆಸ್ಟ್ ಇಂಡೀಸ್ ವಿಶ್ವವಿದ್ಯಾಲಯವಿದೆ.

ಜನಜೀವನ : ರಾಜ್ಯದ ಜನಸಂಖ್ಯೆಯಲ್ಲಿ ಕಕೇಷಿಯನರು, ನೀಗ್ರೋಗಳು, ಭಾರತೀಯ ಸಂಜಾತರು, ಸಿರಿಯನರು, ಚೀನಿಯರು ಇದ್ದಾರೆ. ಟ್ರಿನಿಡ್ಯಾಡಿನಲ್ಲಿ ಶೇ. 43 ನೀಗ್ರೋಗಳು, ಶೇ. 36 ಭಾರತೀಯರು, ಶೇ. 3 ಐರೋಪ್ಯರು, ಶೇ. 2 ಚೀನೀಯರು ಮತ್ತು ಶೇ. 16 ಇತರರು. ಟೊಬ್ಯಾಗೊದಲ್ಲಿ ನೀಗ್ರೋಗಳೇ ಅಧಿಕ. ನಗರ ಪ್ರದೇಶಗಳಲ್ಲೂ ತೈಲ ಗಣಿಗಳಲ್ಲೂ ಅಷ್ಟು ಫಲವತ್ತಾಗಿಲ್ಲದ ವ್ಯವಸಾಯ ಭೂಮಿಗಳಲ್ಲೂ ನೀಗ್ರೋಗಳು ಹೆಚ್ಚು. ಫಲವತ್ತಾದ ಪ್ರದೇಶಗಳಲ್ಲಿ ಭಾರತೀಯರಿದ್ದಾರೆ. ವಾಣಿಜ್ಯ, ಕೈಗಾರಿಕೆ ಮತ್ತು ಹಲವು ವೃತ್ತಿಗಳಲ್ಲಿ ಭಾರತೀಯರು ಯಶಸ್ವಿಯಾಗಿದ್ದಾರೆ. ನೀಗ್ರೋಗಳೂ ಭಾರತೀಯರೂ ತಂತಮ್ಮ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಉಳಿಸಿಕೊಂಡಿದ್ದಾರೆ.

ಆರ್ಥಿಕತೆ : ಇಲ್ಲಿಯ ಮುಖ್ಯ ಬೆಳೆಗಳು ಕಬ್ಬು, ಬತ್ತ, ಕೋಕೋ, ತೆಂಗು, ನಿಂಬೆ ಜಾತಿಯ ಹಣ್ಣುಗಳು. 1953ರಿಂದ ವಿಶಿಷ್ಟ ಜಾತಿಯ ಹುಲ್ಲು ಬೆಳೆಯುತ್ತಿರುವುದರಿಂದ ಪಶುಪಾಲನೆ ಹಾಗೂ ಹೈನುಗಾರಿಕೆ ಅಭಿವೃದ್ಧಿ ಹೊಂದಿವೆ. ಮುಖ್ಯ ಖನಿಜೋತ್ಪನ್ನಗಳು ಆಸ್ಫಾಲ್ಟ್, ಪೆಟ್ರೋಲ್ ಹಾಗೂ ನೈಸರ್ಗಿಕ ಅನಿಲ. ಕರಾವಳಿಯಲ್ಲಿ ಮೀನುಗಾರಿಕೆ ಒಂದು ಮುಖ್ಯ ಕಸುಬು. ಉಷ್ಣವಲಯದ ವಿಶೇಷ ಬೆಳೆಗಳನ್ನು ಮುಖ್ಯವಾಗಿ ರಫ್ತಿಗಾಗಿ ಬೆಳೆಯುತ್ತಾರೆ. ಕೈಗಾರಿಕಾ ಸರಕುಗಳು ಆಮದಾಗುತ್ತವೆ.

ಸಾರಿಗೆ : ಪೋರ್ಟ್ ಆಫ್ ಸ್ಪೇನಿನಿಂದ ಪಶ್ಚಿಮ ಮತ್ತು ಮಧ್ಯ ಟ್ರಿನಿಡ್ಯಾಡಿಗೆ 170 ಕಿಮೀ ಉದ್ದದ ರೈಲುಮಾರ್ಗಗಳಿದ್ದುವು. ಈಗ ಪೋರ್ಟ್ ಆಫ್ ಸ್ಪೇನಿನಿಂದ ಅರೀಮಕ್ಕೆ ಪ್ರಯಾಣಿಕ ರೈಲುಗಳು ಮಾತ್ರ ಓಡುತ್ತವೆ. ನಷ್ಟಕರವಾದ ಮಾರ್ಗಗಳನ್ನು ಮುಚ್ಚಲಾಗಿದೆ. ರಸ್ತೆ ವ್ಯವಸ್ಥೆ ಅಭಿವೃದ್ಧಿ ಹೊಂದಿದೆ. ಪೋರ್ಟ್ ಆಫ್ ಸ್ಪೇನ್ ಮುಖ್ಯ ಬಂದರು. ಇಲ್ಲಿಂದ ಟೊಬ್ಯಾಗೊದ ಸ್ಕಾರ್‌ಬರಾಗೆ ತೀರಮಾರ್ಗದಲ್ಲಿ ಹಡಗುಗಳು ಸಂಚರಿಸುತ್ತವೆ. ದೇಶದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪೀಯಾರ್ಕೋ. ಇಲ್ಲಿನ ಎರಡು ದೊಡ್ಡ ಪಟ್ಟಣಗಳು ಸ್ಯಾನ್ ಫರ್ನಾಂಡೋ ಮತ್ತು ಅರೀಮ. (ಕೆ.ಎನ್.ಯು.)

**ಟ್ರಿಪೋಲಿ[1]:** ಉತ್ತರ ಆಫ್ರಿಕದಲ್ಲಿರುವ ಲಿಬ್ಯ ದೇಶದ ಪ್ರಮುಖ ರೇವು ಪಟ್ಟಣ ಮತ್ತು ಜಂಟಿ ರಾಜಧಾನಿ (ಇನ್ನೊಂದು ರಾಜಧಾನಿ ಬೆಂಗಾಸಿ). ಸಿಸಿಲಿಯ ದಕ್ಷಿಣಕ್ಕೆ, ಮೆಡಿಟರೇನಿಯನ್ ಸಮುದ್ರತೀರದಲ್ಲಿ, ಬಂಡೆಯಿಂದ ಕೂಡಿದ ಭೂಶಿರದ ಮೇಲೆ, ಬೆಂಗಾಸಿಯಿಂದ ಪಶ್ಚಿಮಕ್ಕೆ 644 ಕಿಮೀ ದೂರದಲ್ಲಿ ಇದೆ. ಟ್ಯುನೀಶಿಯದ ಗಡಿ ಇಲ್ಲಿಗೆ 160 ಕಿಮೀ ದೂರದಲ್ಲಿದೆ. ಜನಸಂಖ್ಯೆ 16,82,000 (2005).

ಟ್ರಿಪೋಲಿಯ ಪಶ್ಚಿಮದ ಅಂಚಿನವರೆಗೂ ಮರುಭೂಮಿ ಚಾಚಿಕೊಂಡಿದೆ. ಪೂರ್ವದಲ್ಲಿರುವ ಓಯಸಿಸ್ ಫಲವತ್ತಾಗಿಯೂ ಸುಂದರವಾಗಿಯೂ ಇದೆ. ಅಲ್ಲಿ ಕಾರಮಾನ್ಲಿಯನ್ ಸುಲ್ತಾನರ ಗೋರಿಗಳಿವೆ. ಸಮುದ್ರತೀರದ ಉದ್ದಕ್ಕೂ ಗೋಡೆಯೂ ತಾಳೆಮರಗಳ ಸಾಲುಗಳಿಂದ ಕೂಡಿದ ವಿಶಾಲವಾದ ರಸ್ತೆಯೂ ಇವೆ. ಸಮುದ್ರದ ಎಡೆಯಿಂದ ನೋಡಿದಾಗ 16ನೆಯ ಶತಮಾನದ ಸ್ಪ್ಯಾನಿಷ್ ಕೋಟೆ ಎದ್ದು ಕಾಣುತ್ತದೆ.

ಹಳೆಯ ಪಟ್ಟಣದಲ್ಲಿ ಅನೇಕ ಪ್ರಾಚೀನ ಕಟ್ಟಡಗಳುಂಟು. ಇವುಗಳಲ್ಲಿ ಪ್ರಮುಖವಾದುವು ಗುರ್ಗಿ ಮಸೀದಿ (1883) ಮತ್ತು ಅಷ್ಟಕೋನಾಕೃತಿಯ ಮಿನರೇಟುಗಳಿಂದ ಕೂಡಿದ ಕಾರಾಮನ್ಲಿ ಮಸೀದಿ (1736). ಷಾಮಿಲಿ ಮಸೀದಿ 10ನೆಯ ಶತಮಾನದಲ್ಲಿ ನಿರ್ಮಿತವಾಯಿತು. 17ನೆಯ ಶತಮಾನದಲ್ಲಿ ಇದು ಪುನರ್ನಿರ್ಮಾಣವಾಯಿತು. ಸುಂದರವಾದ ಕೆತ್ತನೆ ಕೆಲಸಗಳಿಂದ ಕೂಡಿದ ಬಿಳಿ ಅಮೃತಶಿಲೆಯ ಮಾರ್ಕಸ್ ಆರೀಲಿಯಸ್ ವಿಜಯ ಕಮಾನು (163)ಇರುವುದು ಬಂದರಿನ ಹತ್ತಿರ.

ಹಳೆಯ ಪಟ್ಟಣದ ನೈಋತ್ಯಕ್ಕಿರುವ ಹೊಸ ಪಟ್ಟಣ ವಿಶಾಲವಾದದ್ದು. ಇದು ಉದ್ಯಾನಗಳಿಂದಲೂ ವಾಸಗೃಹಗಳಿಂದಲೂ ಕೂಡಿದೆ. ಇದರ ಮಧ್ಯಭಾಗದಲ್ಲಿ ರೋಮನ್ ಕೆಥೊಲಿಕ್ ಚರ್ಚು, ನಗರದ ಹೊರವಲಯದಲ್ಲಿ ಇಂಗ್ಲಿಷ್ ಚರ್ಚು ಇವೆ. ಹಲವು ಕಚೇರಿಗಳೂ ರಂಗಮಂದಿರಗಳೂ ಹೋಟೆಲುಗಳೂ ಆಡ್ರಿಯಾನ್ ಪೆಲ್ಟ್ ಮಾರ್ಗದಲ್ಲಿ ಇವೆ. ಲಿಬ್ಯ ಸ್ವತಂತ್ರವಾದಾಗ ಟ್ರಿಪೋಲಿಯಲ್ಲಿದ್ದ ವಿಶ್ವಸಂಸ್ಥೆಯ ಡಚ್ ಪ್ರತಿನಿಧಿ ಪೆಲ್ಟನ ಹೆಸರನ್ನೇ ಈ ಮಾರ್ಗಕ್ಕೆ ಇಡಲಾಗಿದೆ.

ಗೋಪುರಗಳಿಂದ ಕೂಡಿದ, ಮೂರ್ ಶೈಲಿಯ ಮುಂಭಾಗವುಳ್ಳ ಇಲ್ಲಿನ ಶ್ವೇತ ಅರಮನೆ ಅತ್ಯಂತ ಸುಂದರವಾದ್ದು. ಹಲವು ರಸ್ತೆಗಳು ಇಲ್ಲಿ ಸಂಧಿಸುತ್ತವೆ. ಪೂರ್ವದಿಂದ ಪಶ್ಚಿಮಕ್ಕೆ ಒಂದು ರೈಲುಮಾರ್ಗ ಇದರ ಮೂಲಕ ಸಾಗುತ್ತದೆ. ವಿಮಾನನಿಲ್ದಾಣ ಇರುವುದು ನಗರಕ್ಕೆ 34 ಕಿಮೀ ದಕ್ಷಿಣದಲ್ಲಿ, ಇಡ್ರಿಸ್ ಎಲ್ ಅವಲ್‌ನಲ್ಲಿ. ಇಲ್ಲಿ ಬ್ರಿಟಿಷ್ ವಾಯುಸೇನಾ ನೆಲೆಯಿದೆ. ಹ್ವೀಲಸ್ ಫೀಲ್ಡಿನಲ್ಲಿ 1950ರಿಂದ ಅಮೆರಿಕದ ಮಿಲಿಟರಿ ನೆಲೆಯಿದೆ.

ನಗರದ ಆರ್ಥಿಕತೆಗೆ ಕೃಷಿ, ಪಶುಪಾಲನೆ ಮತ್ತು ಮೀನುಗಾರಿಕೆಗಳೇ ಆಡಿಪಾಯ. ತೀರದ ಉದ್ದಕ್ಕೂ ಸಿಗುವ ಉಪ್ಪನ್ನು ಚರ್ಮ ಹದಮಾಡಲು ಬಳಸುತ್ತಾರೆ; ಇದರಲ್ಲಿ ಸ್ವಲ್ಪ ಭಾಗ ರಫ್ತಾಗುತ್ತದೆ. ಸಿಗರೇಟ್ ತಯಾರಿಕೆ, ಜಮಖಾನೆ ಮತ್ತು ರಗ್ಗುಗಳ, ನೇಯ್ಗೆ ಇವು ಎರಡು ಸಣ್ಣ ಕೈಗಾರಿಕೆಗಳು. ಎಸ್ಪಾರ್ಟೊ ಹುಲ್ಲು, ನೆಲಗಡಲೆ, ಆಲಿವ್ ಎಣ್ಣೆ, ಮೀನು, ಹಣ್ಣು–ಇವು ರಫ್ತುಗಳು. ಸಕ್ಕರೆ, ಆಹಾರ ಪದಾರ್ಥ, ಬಟ್ಟೆ, ಮೋಟಾರು, ಕೃಷಿ ಉಪಕರಣ ಆಮದಾಗುತ್ತವೆ. ಲಿಬ್ಯದ ವಿದೇಶಿ ವ್ಯಾಪಾರದಲ್ಲಿ ಮುಕ್ಕಾಲು ಭಾಗ ನಡೆಯುವುದು ಟ್ರಿಪೋಲಿಯ ಮೂಲಕ. (ಬಿ.ಪಿ.ಕೆ.)

**ಟ್ರಿಪೋಲಿ[2]:** ಲೆಬನಾನ್ ಗಣರಾಜ್ಯದ ಒಂದು ನಗರ. ಮೆಡಿಟರೇನಿಯನ್ ತೀರದಲ್ಲಿರುವ ರೇವುಪಟ್ಟಣ, ಉತ್ತರ ಲೆಬನಾನ್ ಮುಹಾಫಜ಼ಾದ (ಪ್ರಾಂತ್ಯ) ಆಡಳಿತ ಕೇಂದ್ರ. ಬೇರೂತ್ ನಗರದ ಈಶಾನ್ಯಕ್ಕೆ 64 ಕಿಮೀ ದೂರದಲ್ಲಿದೆ. ಜನಸಂಖ್ಯೆ 11,60,000 (2000). ನಗರದಲ್ಲಿ ಎರಡು ವಿಭಾಗಗಳಿವೆ. ಮುಖ್ಯವಾದ ಪಟ್ಟಣದ ವಿಭಾಗದ ನಡುವೆ ಅಬು ಅಲಿ ನದಿ ಹರಿಯುತ್ತದೆ. ಅಲ್ ಮಿನ ರೇವುಪಟ್ಟಣದ್ದು ಇನ್ನೊಂದು ವಿಭಾಗ. ಕಿತ್ತಳೆ ವನಗಳ ಮೂಲಕ ಸಾಗುವ ವಿಶಾಲ ರಸ್ತೆಗಳು ಇವೆರಡು ಭಾಗಗಳನ್ನು ಕೂಡಿಸುತ್ತವೆ. ಟೈಲಾನ್ ಮಸೀದಿ (1336), ಸೇಂಟ್ ಮೇರಿ ದ ಲ ಟ್ಯೂಟ್ ಚರ್ಚಿನ ಅವಶೇಷದ ಮೇಲೆ ನಿರ್ಮಿಸಲಾದ ದೊಡ್ಡ ಮಸೀದಿ (1305). ಬಹುಶಃ 15ನೆಯ ಶತಮಾನದ ಅಂತ್ಯದಲ್ಲಿ ಬಂದರಿನ ರಕ್ಷಣೆಗಾಗಿ ಕಟ್ಟಿದ ಕಾವಲು ಗೋಪುರ–ಇವು ಇಲ್ಲಿಯ ಕೆಲವು ಪ್ರಮುಖ ಕಟ್ಟಡಗಳು.

ಇಲ್ಲಿಯ ಪ್ರಮುಖ ಉದ್ಯಮಗಳು ತೈಲಶುದ್ಧೀಕರಣ, ಸಾಬೂನು ತಯಾರಿಕೆ, ಸ್ಪಂಜ್ ಮೀನುಗಾರಿಕೆ, ನೇಯ್ಗೆ, ಚರ್ಮ ಹದಗಾರಿಕೆ, ಹೊಗೆಸೊಪ್ಪು ಮತ್ತು ಹಣ್ಣು ಬೇಸಾಯ. ಇರಾಕ್ ದೇಶದ ಕಿರ್ಕುಕ್‌ನಿಂದ ಬರುವ ಎಣ್ಣೆ ಕೊಳವೆ ಈ ನಗರದಲ್ಲಿ ಕೊನೆಗೊಳ್ಳುತ್ತದೆ. ಇಲ್ಲಿ ದೊಡ್ಡ ತೈಲಶುದ್ಧಿಕರಣ ಕೇಂದ್ರವಿದೆ. ಕಿತ್ತಳೆ, ನಿಂಬೆ ಮೊದಲಾದ ಹಣ್ಣುಗಳು, ಸಾಬೂನು, ಚರ್ಮ, ಉಣ್ಣೆ, ಹತ್ತಿ, ಮೊಟ್ಟೆ ಮೊದಲಾದವು ಇಲ್ಲಿಂದ ರಫ್ತಾಗುತ್ತವೆ. (ಬಿ.ಪಿ.ಕೆ.)

**ಟ್ರಿಪೋಲಿ[3]:** ಜೇಡಿಮಣ್ಣು ಅಥವಾ ಸುಣ್ಣದ ಕಲ್ಲನ್ನು ಹೋಲುವ, ಸುಲಭವಾಗಿ ಪುಡಿಯಾಗುವ, ಸಣ್ಣ ರಂಧ್ರಗಳಿಂದ ಕೂಡಿದ ಸಿಲಿಕಾ ಶಿಲೆ. ಇದು ಹೊರನೋಟಕ್ಕೆ ಉತ್ತರ ಅಮೆರಿಕದ ಟ್ರಿಪೊಲಿಟಾನಿಯದಲ್ಲಿ ಸಿಗುವ ಟ್ರಿಪೊಲೈಟಿನಂತೆ ಕಾಣುವುದರಿಂದ ಇದಕ್ಕೆ ಟ್ರಿಪೋಲಿ ಎಂಬ ಹೆಸರು ಬಂದಿದೆ. ಲಿಬಿಯದ ಟ್ರಿಪೋಲಿಯಲ್ಲಿ ಇದನ್ನು ಮೊದಲು ವ್ಯಾಪಾರಕ್ಕಾಗಿ ಬಳಸಿದುದರಿಂದ ಟ್ರಿಪೋಲಿ ಎಂಬ ಹೆಸರು ಬಂದಿತೆಂದು ಕೆಲವರ ಅಭಿಪ್ರಾಯ. ಇದು ಅಮೆರಿಕದ ಮಿಸ್ಸೋರಿ ಮತ್ತು ಇಲಿನಾಯ್ಸ್ ರಾಜ್ಯಗಳಲ್ಲಿ ಹೇರಳವಾಗಿಯೂ ಆರ್ಕಾನಸ್, ಜಾರ್ಜಿಯ ಮತ್ತು ಟೆನೆಸೀ ಕಣಿವೆಯಲ್ಲಿ ಕೆಲಮಟ್ಟಿಗೂ ದೊರೆಯುತ್ತದೆ. ಟ್ರಿಪೋಲಿಯನ್ನು ಉತ್ತರ ಅಮೆರಿಕದಿಂದ ಇಂಗ್ಲೆಂಡಿಗೆ ವಿಶೇಷವಾಗಿ ರಫ್ತು ಮಾಡುತ್ತಾರೆ. ಯುರೋಪ್, ಏಷ್ಯ ಮತ್ತು ದಕ್ಷಿಣ ಅಮೆರಿಕದ ದೇಶಗಳಿಗೂ ರಫ್ತಾಗುತ್ತದೆ. ಇದರಲ್ಲಿ ಶೇ. 95 ಸಿಲಿಕಾ ಇದ್ದು ಇದರ ಪುಡಿಯೂ ಬಹಳ ಗಟ್ಟಿಯಾಗಿರುತ್ತದೆ. ಇದರ ಪುಡಿಯನ್ನು ಲೋಹಗಳ, ಅಮೃತಶಿಲೆಯ ಮತ್ತು ಗಾಜಿನ ವಸ್ತುಗಳಿಗೆ ಹೊಳಪು ನೀಡಲು ಉಪಯೋಗಿಸುತ್ತಾರೆ. (ಬಿ.ಪಿ.ಕೆ.)

**ಟ್ರಿಸ್ಟೇನ್ ಡ ಕುನ್ಹ:** ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿರುವ ದ್ವೀಪಕಲ್ಪ. ಈ ದ್ವೀಪ ಸಮೂಹ ದಕ್ಷಿಣ ಆಫ್ರಿಕದಿಂದ 2,816 ಕಿಮೀ ಹಾಗೂ ದಕ್ಷಿಣ ಅಮೆರಿಕದಿಂದ ಸು. 3,360 ಕಿಮೀ ದೂರದಲ್ಲಿವೆ. ಈ ದ್ವೀಪಗಳು ದ.ಅ. $37^0 6' 44''$ ಮತ್ತು ಪ.ರೇ. $12^0 16' 56''$ ಗಳಲ್ಲಿ ವಿಸ್ತರಿಸಿವೆ. ಇವು 201 ಚ.ಕಿಮೀ ಭೂ ಪ್ರದೇಶವನ್ನು ಹೊಂದಿವೆ. ರಾಜಧಾನಿ ಎಡಿನ್‌ಬರ್ಗ್. ಅಧಿಕೃತ ಭಾಷೆ ಇಂಗ್ಲೀಷ್. ಜನಸಂಖ್ಯೆ 269. ಇಲ್ಲಿನ ಹಣ ಪೌಂಡ್ ಸ್ಟರ್ಲಿಂಗ್.

ಈ ದ್ವೀಪಗಳು ಬ್ರಿಟನ್ನಿನ ಸಮುದ್ರಾಚೆಯ ಆಡಳಿತಕ್ಕೊಳಪಟ್ಟಿರುವ ಅಧೀನ ಸರ್ಕಾರವನ್ನು ಹೊಂದಿವೆ. ಸೆಂಟ್ ಹೆಲಿನ ದ್ವೀಪ 2,161 ಕಿಮೀ ಉತ್ತರದಲ್ಲಿದೆ. ಮುಖ್ಯ ದ್ವೀಪದ ಗಡಿಗಳು ಟ್ರಿಸ್ಟಾನ್ ಡ ಕುನ್ಹಾ (98 ಚ.ಕಿಮೀ) ಹಾಗೂ ಹಲವಾರು ಜನವಸತಿಯಿಲ್ಲದ ದ್ವೀಪಗಳು, ಜನವಸತಿ ಇರುವ ದ್ವೀಪಗಳು, ನೈಟಿಂಗೇಲ್ ದ್ವೀಪಗಳು ಗೊಹ್ ದ್ವೀಪಗಳು ಮುಖ್ಯದ್ವೀಪದಿಂದ ಆಗ್ನೇಯ ದಿಕ್ಕಿನಲ್ಲಿ ಸು. 395 ಕಿಮೀ ದೂರದಲ್ಲಿವೆ. ಈ ದ್ವೀಪ ಪ್ರಪಂಚದ ಬಹುದೂರದ ಮಾನವ ವಾಸದ ದ್ವೀಪ ಸಮೂಹವೆಂದು ಪ್ರಸಿದ್ಧಿಯಾಗಿದೆ. ಇನ್‌ಅಕ್ಸಿಸಿಬಲ್ ದ್ವೀಪ ಮತ್ತು ನೈಟಿಂಗೇಲ್ ದ್ವೀಪಗಳು ಮುಖ್ಯದ್ವೀಪದಿಂದ ಸು. 35 ಕಿಮೀ ದೂರದಲ್ಲಿವೆ.

ಮುಖ್ಯದ್ವೀಪ ಬೆಟ್ಟಗುಡ್ಡಗಳಿಂದ ಪರ್ವತಮಯವಾಗಿದ್ದು, ದ್ವೀಪದ ರಾಜಧಾನಿ ಇಡನ್‌ಬರ್ಗ್ ವಾಯವ್ಯ ಕರಾವಳಿಯಲ್ಲಿ ಸಮತಟ್ಟಾದ ಪ್ರದೇಶದಲ್ಲಿದೆ. ದ್ವೀಪದ ಉನ್ನತ ಭಾಗ ಕ್ವೀನ್ ಮೇರಿ ಶಿಖರ (ಜ್ವಾಲಾಮುಖಿ) 2,062 ಮೀ ಎತ್ತರವಿದೆ. ಚಳಿಗಾಲದಲ್ಲಿ ಹಿಮದಿಂದ ಆವರಿಸಿರುತ್ತದೆ. ವಾಯುಗುಣ ಸಾಗರೀಕ ಉಪಉಷ್ಣವಲಯವಾಗಿದ್ದು ಬೇಸಗೆ ಮತ್ತು ಚಳಿಗಾಲದಲ್ಲಿ ಉಷ್ಣಾಂಶದಲ್ಲಿ ಹೆಚ್ಚಿನ ವ್ಯತ್ಯಾಸಗಳಿರುವುದಿಲ್ಲ.

ಇಲ್ಲಿನ ಆರ್ಥಿಕ ವ್ಯವಸ್ಥೆ ವಿದೇಶಿ ವಿನಿಮಯಗಳಿಕೆಯ ಮೇಲೆ ಆಧಾರಿತವಾಗಿದೆ ಇಲ್ಲಿನ ಪ್ರಮುಖ ಕೈಗಾರಿಕೆ ಸಿಗಡಿ ಮೀನಿನ ಸಂಸ್ಕರಣೆ, ವಿದೇಶಿ ಅಂಚೆ ಚೀಟಿಗಳು ಮತ್ತು ನಾಣ್ಯಗಳನ್ನು ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಮಾರುವುದು. ಇಲ್ಲಿನ ಜನರು ಇಬ್ಬಗೆಯ ಕಸಬುದಾರರು: ಸ್ಥಳೀಯ ಸರ್ಕಾರಿ ನೌಕರಿ ಮತ್ತು ಕೃಷಿ, ಅಧಿಕ ಸಂಖ್ಯೆಯ ನಿವಾಸಿಗಳು ಹಿಡುವಳಿದಾರರು. ಆಲೂಗೆಡ್ಡೆಯನ್ನು ಬೆಳೆಯುತ್ತಾರೆ. ಈ ದ್ವೀಪ ಹೆಚ್ಚು ದೂರದಲ್ಲಿರುವುದರಿಂದ ಸಾರಿಗೆ ಮತ್ತು ಸಂಪರ್ಕವನ್ನು ಪ್ರಪಂಚದ ಇತರೆ ಭಾಗಗಳಿಗೆ ಸಾಧಿಸಲು ತೊಂದರೆಗಳಿವೆ. ದ್ವೀಪಗಳನ್ನು ಕ್ರಮಿಸಲು ದೋಣಿಗಳೆ ಮುಖ್ಯ ಮಾಧ್ಯಮ. ದಕ್ಷಿಣ ಆಫ್ರಿಕದ ಮೀನು ಹಿಡಿಯುವ ಹಡಗುಗಳು ಇಲ್ಲಿಗೆ ಸಂಪರ್ಕ ಕಲ್ಪಿಸುತ್ತವೆ. ವಿಮಾನ ನಿಲ್ದಾಣ, ರೈಲು ಸಾರಿಗೆ ಇತ್ಯಾದಿಗಳು ಇಲ್ಲಿ ಕಂಡುಬರುವುದಿಲ್ಲ. ಇಲ್ಲಿ ಕ್ರೈಸ್ತಧರ್ಮ ಪ್ರಧಾನವಾಗಿದೆ. ಕುಲದಲ್ಲಿಯೇ ವಿವಾಹ ಮಾಡಿಕೊಳ್ಳುವ ಪದ್ಧತಿ ವ್ಯಾಪಕವಾಗಿರುವುದರಿಂದ ಅನುವಂಶಿಕ ವ್ಯಾಧಿಗಳಾದ ಆಸ್ತಮ, ಕಣ್ಣಿನ ರೋಗ ಇತ್ಯಾದಿಗಳು ಹೆಚ್ಚಿವೆ.

(ಕೆ.ಎಂ.)

# ಡ

**ಡಂಪಿ ಮಟ್ಟಮಾಪಕ:** ಒಂದು ನಮೂನೆಯ ಮೋಜಣಿ ಉಪಕರಣ (ಡಂಪಿ ಲೆವೆಲ್). ಭೂಪ್ರದೇಶದ ವಿವಿಧ ಭಾಗಗಳ ಏರುತಗ್ಗುಗಳನ್ನು ನಿಖರವಾಗಿ ನಿರ್ಧರಿಸಲು ಇದನ್ನು ಬಳಸುವುದಿದೆ. Y–ಮಟ್ಟಮಾಪಕ, ಕುಕ್ ಪರಾವರ್ತನಶೀಲ ಮಟ್ಟಮಾಪಕ (ಕುಕ್ ರಿವರ್ಸಿಬಲ್). ಕುಷಿಂಗನ ಮಟ್ಟಮಾಪಕ–ಹೀಗೆ ವಿವಿಧ ಬಗೆಯ ಉಪಕರಣಗಳು ಬಳಕೆಯಲ್ಲಿವೆ. ಇವೆಲ್ಲವುಗಳಲ್ಲಿಯೂ ಸರ್ವಸಾಮಾನ್ಯವಾಗಿರುವ ಭಾಗಗಳು ಇವು: 1. ಮಟ್ಟಮಾಡುವ ಆಧಾರಶೀರ್ಷ (ಲೆವೆಲಿಂಗ್ ಹೆಡ್), 2. ಅಂಗ (ಲಿಂಬ್), 3. ದೂರದರ್ಶಕ(ಟೆಲಿಸ್ಕೋಪ್), 4. ಮಟ್ಟಗೊಳವೆ(ಲೆವೆಲ್ ಟ್ಯೂಬ್) ಅಥವಾ ಗುಳ್ಳೆನಾಳ

(ಬಬಲ್ ಟ್ಯೂಬ್). ಈ ಉಪಕರಣದ ಆಧಾರಕ್ಕೆ ಹೊಂದಿಸಲಾಗಿರುವ ದೂರದರ್ಶಕವನ್ನು ಅದರ ನೀಳ ಅಕ್ಷದ (ಲಾಂಜಿಟ್ಯೂಡಿನಲ್ ಆಕ್ಸಿಸ್) ಮೇಲೆ ತಿರುಗಿಸಲು ಸಾಧ್ಯವಿಲ್ಲ. ಬದಲಾಗಿ ನೇರ ಅಕ್ಷದ ಸುತ್ತ ತಿರುಗಿಸಲು ಸಾಧ್ಯವುಂಟು. ಆಧಾರದಿಂದ ದೂರದರ್ಶಕವನ್ನು ಹೊರತೆಗೆಯುವುದೂ ಆಗದು. ಇದಕ್ಕೆ Y–ಮಟ್ಟಮಾಪಕಕ್ಕಿಂತ ಹೆಚ್ಚಿನ ದೃಢತೆ ಇದೆ.

(ಎನ್.ಎನ್.ಎಂ.)

**ಡಟ್ಟನ್, ಸಿ.ಇ. :** 1841–1912. ಅಮೆರಿಕದ ಭೂ ವಿಜ್ಞಾನಿ. ಐಸೊಸ್ಟಸಿ ಎಂಬ ಪದವನ್ನು 1889ರಲ್ಲಿ ಮೊಟ್ಟಮೊದಲು ಬಳಸಿದ. ಐಸೊಸ್ಟಸಿ ಅಂದರೆ ಸಮತೋಲನದ ಸ್ಥಿತಿ. ಪೃಥ್ವಿಯ ಮೇಲ್ಮೈ ಮೇಲಿನ ಎತ್ತರವಾದ ದೊಡ್ಡ ಪ್ರದೇಶ ಮತ್ತು ಪಕ್ಕದ ತಗ್ಗುಭೂಮಿಗಳ ನಡುವೆ ಸಮತೋಲನ ಸ್ಥಿತಿ ಅಸ್ತಿತ್ವದಲ್ಲಿರುತ್ತದೆಂದು ಡಟ್ಟನ್ ಭಾವಿಸಿದ. ಅವುಗಳ ಕೆಳಗೆ ಸಾಪೇಕ್ಷವಾದ ಹಗುರ ಶಿಲಾವಸ್ತುಗಳ ಅಸ್ತಿತ್ವದಿಂದ ಅವರೆಡೂ ಪ್ರದೇಶಗಳು ಸಮತೋಲನ ಕಾಯ್ದುಕೊಂಡು ಹೋಗುತ್ತವೆ. ಇಂತಹ ಪ್ರದೇಶಗಳಲ್ಲಿ ಹೊರಚಿಪ್ಪು (ಕ್ರಸ್ಟ್) ತಿರುಗುವ ಪೃಥ್ವಿಯ ಮೇಲೆ ಯಾಂತ್ರಿಕ ಸ್ಥಿರತೆಯಲ್ಲಿರುವುದು ಅವಶ್ಯವಾಗಿದೆ. ಸಮಾನ ಮೇಲ್ಮೈ ಕ್ಷೇತ್ರದ ಕೆಳಗೆ ಸಮಾನ ದ್ರವ್ಯರಾಶಿ ಇರುತ್ತದೆ.

ಕೊಲರಾಡೊ ಪ್ರಸ್ಥಭೂಮಿಯಲ್ಲಿ ಈಗಿನ ಮಹಾಕಂದರಗಳ ನಿರ್ಮಾಣಕ್ಕಿಂತ ಪೂರ್ವದಲ್ಲಿ ಡಟ್ಟನ್ ಭೂಮೇಲ್ಮೈ ಸವೆಯುವ ಕಾಲವನ್ನು ಗುರುತಿಸಿದ. ಅವನು ಈ ಭೂಸವೆತದ ಕಾಲವನ್ನು ಮಹಾನಗ್ನೀಕರಣ ಕಾಲ ಎಂದು ಕರೆದ. ಕೊಲರಾಡೊ ಪ್ರಸ್ಥಭೂಮಿಯಲ್ಲಿ ಈ ಬಗೆಯ ಭೂ ಸವೆತದ ಸಾಕ್ಷ್ಯಾಧಾರವನ್ನು ಗುರುತಿಸುವಿಕೆಗಾಗಿ ಅವನನ್ನು ಸ್ಮರಿಸಲಾಗುತ್ತದೆ. ಅವನು ಕೊಲರಾಡೊ ಪ್ರಸ್ಥಭೂಮಿಯಲ್ಲಿ ವೀಕ್ಷಿಸಿದ ಆಧಾರ ಮಟ್ಟದ ಅನೇಕ ಉದಾಹರಣೆಗಳ ಸಹಾಯದಿಂದ ಡೇವಿಸ್‌ನು ಪೆನಿಪ್ಲೇನೇಷನ್ ಅಥವಾ ಸಮತಲೀಕರಣದ ವಿಚಾರವನ್ನು ಪ್ರಸ್ತುತಪಡಿಸಿದ.

(ಎಸ್.ಎಸ್.ಎನ್.)

**ಡಮ್ ಡಮ್:** ಪಶ್ಚಿಮ ಬಂಗಾಲದ ಇಪ್ಪತ್ನಾಲ್ಕು ಪರಗಣ ಜಿಲ್ಲೆಯ ಒಂದು ಪಟ್ಟಣ. ಕೋಲ್ಕತದ ಈಶಾನ್ಯಕ್ಕೆ 8 ಕಿಮೀ ದೂರದಲ್ಲಿದೆ. ಕೋಲ್ಕತದ ವಿಮಾನ ನಿಲ್ದಾಣ ಇಲ್ಲಿದೆ. ಇದು ಡಮ್ ಡಮ್, ಉತ್ತರ ಡಮ್ ಡಮ್ ಮತ್ತು ದಕ್ಷಿಣ ಡಮ್ ಡಮ್ ಎಂದು ಮೂರು ಪೌರಾಡಳಿತ ಪ್ರದೇಶಗಳಾಗಿ ವಿಗಂಡವಾಗಿದೆ. ಉತ್ತರ ಡಮ್ ಡಮ್‌ನಲ್ಲಿ ಈಗಲೂ ದೊಡ್ಡ ಗ್ರಾಮಗಳು ಅಡಕವಾಗಿವೆ. ದಕ್ಷಿಣ ಡಮ್ ಡಮ್ ಮೇಲೆ ಕ್ರಮಗಳಿಂದ ಕೋಲ್ಕತದ ನಾಗರಿಕ ಜೀವನ ತನ್ನ ಮುದ್ರೆಯೊತ್ತಿದೆ. 1783ರಲ್ಲಿ ನಿರ್ಮಿತವಾದ ಡಮ್ ಡಮ್ ದಂಡಿನ ಪ್ರದೇಶ 1853ರ ವರೆಗೂ ಬಂಗಾಲ ಕಾಲ್ದಳದ ಠಾಣ್ಯವಾಗಿತ್ತು. ಅದೀಗ ಕೋಲ್ಕತದ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಒಂದು; ಅನೇಕ ಎಂಜಿನಿಯರಿಂಗ್ ಕಾರ್ಖಾನೆಗಳು ಈ ಭಾಗದಲ್ಲಿವೆ. ಇಲ್ಲಿಯ ಮದ್ದು ಗುಂಡುಗಳ ಕಾರ್ಖಾನೆ ಪ್ರಸಿದ್ಧವಾದದ್ದು. ಇಲ್ಲಿ ಪ್ರಥಮವಾಗಿ ತಯಾರಾದ ಡಮ್ ಡಮ್ ಅರಳುವ ಗುಂಡು (ಎಕ್ಸ್‌ಪ್ಯಾಂಡಿಂಗ್ ಬುಲೆಟ್) ಇತಿಹಾಸ ಪ್ರಸಿದ್ಧವಾದದ್ದು. ಡಮ್ ಡಮ್ ಈಗ ಬೃಹತ್ ಕೋಲ್ಕತ ವಲಯದಲ್ಲಿ ಸೇರಿಹೋಗಿದೆ. ಇಲ್ಲಿ ಕೋಲ್ಕತ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳೂ ಸುಂದರವಾದ ಸೇಂಟ್ ಸ್ಟೀಫನ್ ಚರ್ಚು ಇವೆ.

(ಬಿ.ವಿ.ಎಸ್.)

**ಡಮಾಸ್ಕಸ್:** ಸಿರಿಯನ್ ಅರಬ್ ಗಣರಾಜ್ಯದ ರಾಜಧಾನಿ ಹಾಗೂ ಈ ಗಣರಾಜ್ಯದ ಒಂದು ಜಿಲ್ಲೆ. ಡಮಾಸ್ಕಸ್ ನಗರ ಆಂಟಿ–ಲೆಬನನ್ ಪರ್ವತ ಶ್ರೇಣಿಯ ಪೂರ್ವಕ್ಕೆ, ಕಾಸ್ಯುಮ್ ಶಿಖರದ ಬುಡದಲ್ಲಿ, ಸಮುದ್ರಮಟ್ಟದಿಂದ ಸು. 680 ಮೀ ಎತ್ತರದಲ್ಲಿದೆ. ಲೆಬನನ್‌ನ ರಾಜಧಾನಿಯಾದ ಬೇರೂತ್ ನಗರ ಡಮಾಸ್ಕಸ್‌ಗೆ ವಾಯವ್ಯದಲ್ಲಿ 90 ಕಿಮೀ ದೂರದಲ್ಲಿದೆ. ಬಾರದ ಮತ್ತು ಆವಾಜ್ ನದಿಗಳ ಮೇಲಿರುವುದರಿಂದಲೂ

ಹಲವು ಮಾರ್ಗಗಳು ಕೂಡುವಲ್ಲಿರುವುದರಿಂದಲೂ ಡಮಾಸ್ಕಸ್ ನಗರ ಬೆಳೆದು ಪ್ರಾಮುಖ್ಯ ಗಳಿಸಿದೆ. ಇದು ಸಿರಿಯದ ಅತ್ಯಂತ ದೊಡ್ಡ ನಗರ. ಈ ನಗರದ ಜನಸಂಖ್ಯೆ 1549932 (2002).

ಮೆಕ್ಕ ನಗರಕ್ಕೆ ಭೂಮಾರ್ಗವಾಗಿ ಯಾತ್ರೆ ಹೋಗುವವರು ಹಿಂದೆ ಡಮಾಸ್ಕಸ್ ಮೂಲಕವೇ ಪ್ರಯಾಣ ಮಾಡಬೇಕಾಗಿತ್ತು. ನಗರ ಬೆಳೆಯಲು ಇವರೂ ಕಾರಣ. ಇಲ್ಲಿಂದ ಲೆಬನನ್‌ನ ಬೇರೂತ್ ಮತ್ತು ಜೋರ್ಡನಿನ ಅಮ್ಮಾನ್‌ಗೆ ಸರ್ವಋತು ರಸ್ತೆಗಳಿವೆ. ಇರಾಕಿನ ಬಾಗ್ದಾದ್ ನಗರಕ್ಕೆ ಇಲ್ಲಿಂದ ಮರುಭೂಮಿಯ ಮೂಲಕ ಸಾಗುವ ದಾರಿಯಿದೆ. ಬೇರೂತ್, ಅಲೆಪ್ಪೋಗಳಿಗೂ ಜೋರ್ಡನ್ ಗಡಿಯ ಮೇಲಣ ಪಟ್ಟಣವಾದ ದಾರಕ್ಕೂ ರೈಲುಮಾರ್ಗಗಳುಂಟು. ನಗರಕ್ಕೆ ಹತ್ತಿರದಲ್ಲೇ ಅಲ ಮಜ಼ಾ ವಿಮಾನನಿಲ್ದಾಣವಿದೆ.

ಡಮಾಸ್ಕಸ್‌ನಲ್ಲಿ ಅನೇಕ ಹಳೆಯ ಗೃಹಕೈಗಾರಿಕೆಗಳುಂಟು. ಜಮಖಾನೆ, ಚರ್ಮ, ಚಿತ್ರ ಹಿದ್ದಿಸಿದ (ಇನ್ಲೇ) ಮರಗೆಲಸ, ಲೋಹಗೆಲಸ, ಉಕ್ಕು ಉಪಕರಣ ಮುಂತಾದವು ಹಳೆಯ ಸಣ್ಣ ಕೈಗಾರಿಕೆಗಳು. ಸಕ್ಕರೆ, ಗಾಜು, ಪೀಠೋಪಕರಣ, ಬೆಂಕಿಕಡ್ಡಿ, ಜವಳಿ, ಸಿಮೆಂಟ್ ಮುಂತಾದ ದೊಡ್ಡ ಕೈಗಾರಿಕೆಗಳಿವೆ. ಇಲ್ಲಿಯ ಗುಲ್ಬನ್, ಸಿಹಿ ತಿಂಡಿ, ಬರ್ಫಕೆನೆ (ಐಸ್‌ಕ್ರೀಂ) ಬಹು ಪ್ರಸಿದ್ಧ. ಇದೊಂದು ವ್ಯಾಪಾರ ಸ್ಥಳ ಕೂಡ. ಗೋದಿ, ಹೊಗೆಸೊಪ್ಪು, ಜಾನುವಾರು, ಚರ್ಮ, ಒಣ ಮತ್ತು ಹಸಿ ಹಣ್ಣುಗಳು ಇಲ್ಲಿಂದ ರಫ್ತಾಗುವ ಸರಕುಗಳು. ಯಂತ್ರ, ಮೋಟರು, ಕಬ್ಬಿಣ–ಉಕ್ಕು, ಇಂಧನ ತೈಲ, ಔಷಧ ಆಮದಾಗುತ್ತವೆ. (ಪಿ.ಬಿ.)

**ಡರ್ಬನ್:** ದಕ್ಷಿಣ ಆಫ್ರಿಕ ಗಣರಾಜ್ಯದ ಮುಖ್ಯ ರೇವುಪಟ್ಟಣ, ಮೂರನೆಯ ದೊಡ್ಡ ನಗರ. ನಟಾಲ್ ಪ್ರಾಂತ್ಯದ ನಗರಗಳಲ್ಲಿ ಅತ್ಯಂತ ದೊಡ್ಡದು. ಆಗ್ನೇಯ ತೀರದಲ್ಲಿ ಹಿಂದೂಸಾಗರಕ್ಕೆ ಅಭಿಮುಖವಾಗಿದೆ. ಉಮ್ಗೇನೀ ಮತ್ತು ಉಮ್ಲಾಸ್ ನದಿಗಳ ನಡುವೆ ಇದೆ. ಜನಸಂಖ್ಯೆ 2117650 (1996). ಡರ್ಬನ್ ದ. ಅ. $30^0$ಯ ಒಳಗೇ ಇದೆ. ಮೊಜ಼ಾಂಬಿಕ್ ಉಷ್ಣೋದಕ ಪ್ರವಾಹ ದಕ್ಷಿಣಾಭಿಮುಖವಾಗಿ ಇದರ ಬಳಿ ಹರಿಯುತ್ತದೆ. ಇಲ್ಲಿಯದು ಉಪೋಷ್ಣವಲಯದ ವಾಯುಗುಣ. ಜುಲೈ ಮತ್ತು ಜನವರಿಗಳ ಸರಾಸರಿ ಉಷ್ಣತೆ ಅನುಕ್ರಮವಾಗಿ $16^0$ ಸೆ. ಮತ್ತು $24^0$ ಸೆ. ಸರಾಸರಿ ಮಳೆ 100 ಸೆಂಮೀ ಡರ್ಬನ್ ನಗರದ ದಕ್ಷಿಣದಲ್ಲಿ ಹಸುರು ತುಂಬಿದ ಮರಳು ದಿಣ್ಣೆಯೊಂದು ಸಮುದ್ರವನ್ನು ಬಂದರಿನ ಕೊಲ್ಲಿಯಿಂದ ಬೇರ್ಪಡಿಸಿದೆ.

ಈ ನಗರ ಉದ್ಯಾನಗಳಿಗೆ ಪ್ರಸಿದ್ಧವಾದದ್ದು. ಇಲ್ಲಿಯ ಸರ್ಪೋದ್ಯಾನದಲ್ಲಿ ನೈಸರ್ಗಿಕ ಪರಿಸರದಲ್ಲಿ ಅನೇಕ ಬಗೆಯ ಹಾವುಗಳುಂಟು. ಸಾಗರಜೀವಿ ಸಂಗ್ರಹಾಲಯವೂ ಇದೆ. ಸಸ್ಯಶಾಸ್ತ್ರಕ ಉದ್ಯಾನಗಳಿವೆ. ದಕ್ಷಿಣ ಆಫ್ರಿಕ ಮತ್ತು ಜಿಂಬಾಬ್ವೆಯವರಿಗೆ ಹಬ್ಬಿರುವ ಈ ನಗರ ರಜಾದಿನದ ವಿಹಾರ ಸ್ಥಳ.

ಡರ್ಬನ್ ದಕ್ಷಿಣ ಆಫ್ರಿಕದ ಸಕ್ಕರೆ ಉದ್ಯಮದ ಕೇಂದ್ರ. ಹತ್ತಿಬಟ್ಟೆ, ಸಾಬೂನು, ರಬ್ಬರ್, ಗೊಬ್ಬರ, ಬಣ್ಣ, ರಾಸಾಯನಿಕಗಳು, ಬೆಂಕಿಕಡ್ಡಿ, ಟೈರು, ಗಾಜು, ಪ್ಲಾಸ್ಟಿಕ್ ಮೊದಲಾದವುಗಳನ್ನು ತಯಾರಿಸುವ ಕಾರ್ಖಾನೆಗಳಿವೆ. ಇಲ್ಲಿ ರೈಲು ಕಾರ್ಯಾಗಾರವೂ ಎಣ್ಣೆಶುದ್ಧೀಕರಣ ಕಾರ್ಯಾಗಾರಗಳೂ ಇವೆ.

ಡರ್ಬನಿಗೆ ದಕ್ಷಿಣ ಆಫ್ರಿಕದ ಎಲ್ಲ ಭಾಗಗಳಿಂದಲೂ ರೈಲು ಮತ್ತು ರಾಷ್ಟ್ರೀಯ ಹೆದ್ದಾರಿ ಸಂಪರ್ಕವುಂಟು. ಇಲ್ಲಿಗೆ 150 ಕಿಮೀ ದಕ್ಷಿಣಕ್ಕೆ ಅಂತಾರಾಷ್ಟ್ರೀಯ ವಿಮಾನನಿಲ್ದಾಣವಿದೆ. ರ್‍ಯಾಂಡ್ ಮತ್ತು ಉತ್ತರದ ಆರೆಂಜ್ ಫ್ರೀ ಸ್ಟೇಟ್‌ನ ಗಣಿ ಉದ್ಯಮ ಮತ್ತು ಕೈಗಾರಿಕೆಗಳಿವೆ. ಇದು ಅತಿ ಹತ್ತಿರದ ಬಂದರು. ಅದಿರುಗಳು, ಮ್ಯಾಂಗನೀಸ್, ಧಾನ್ಯ, ಸಕ್ಕರೆ, ಕಲ್ಲಿದ್ದಲು, ಉಣ್ಣೆ, ಚರ್ಮ–ಇವು ಮುಖ್ಯ ರಫ್ತುವಸ್ತುಗಳು. ಪೆಟ್ರೋಲಿಯಂ, ಇಂಧನ, ಮರಮುಟ್ಟು–ಇವು ಮುಖ್ಯ ಆಮದು ವಸ್ತುಗಳು.

ಮಹಾತ್ಮ ಗಾಂಧಿಯವರು 1893ರಲ್ಲಿ ಡರ್ಬನಿನಲ್ಲಿ ವಕೀಲಿಯನ್ನು ಪ್ರಾರಂಭಿಸಿದರು. ಅವರು ಅಲ್ಲಿ ವರ್ಣಭೇದ ನೀತಿಯ ವಿರುದ್ಧ ಸತ್ಯಾಗ್ರಹ ಚಳವಳಿ ನಡೆಸಿ ಯಶಸ್ವಿಯಾದರು. 1915ರಲ್ಲಿ ಅವರು ಭಾರತಕ್ಕೆ ಮರಳಿದರು. (ಕೆ.ಎನ್.ಯು.)

**ಡರ್ಬಿಷೈರ್:** ಉತ್ತರ ಇಂಗ್ಲೆಂಡಿನ ಮಧ್ಯಭಾಗದಲ್ಲಿರುವ ಒಂದು ಕೌಂಟಿ (ಆಡಳಿತ ವಿಭಾಗ). ವಿಸ್ತೀರ್ಣ 2613 ಚಕಿಮೀ. ಡರ್ಬಿಷೈರ್‌ನ ಉತ್ತರ ಭಾಗ ಉನ್ನತ ಸೀಮೆ; ಪೆನ್ನೈನ್ ಪರ್ವತಗಳ ದಕ್ಷಿಣ ತುದಿ. ದಕ್ಷಿಣದಲ್ಲಿ ಡರ್ಬಿಯ ಸುತ್ತಣ ಪ್ರದೇಶ ಮೈದಾನ. ಭೂಸವೆತಕ್ಕೆ ಒಳಗಾಗಿರುವ ಉತ್ತರ ಭಾಗದ ಮಧ್ಯದಲ್ಲಿ ಕಾರ್ಬನಿಫೆರಸ್ ಸುಣ್ಣಕಲ್ಲಿನ ಪ್ರದೇಶವಿದೆ. ಈ ಪ್ರಸ್ಥಭೂಮಿ ಪ್ರದೇಶದ ಸರಾಸರಿ ಎತ್ತರ 300 ಮೀ ಇಲ್ಲಿ ಹರಿಯುವ ವೈ ಮತ್ತು ಡೌ ನದಿಗಳು ಟ್ರೆಂಟ್ ನದಿಯ ಉಪನದಿಗಳು. ದಕ್ಷಿಣದ ತಗ್ಗಾದ ಮೈದಾನ ಟ್ರೆಂಟ್ ನದೀ ಕಣಿವೆಯ ಭಾಗ. ಇಲ್ಲಿ ಹರಿಯುವ ಡರ್ವೆಂಟ್ ಮತ್ತು ಎರ್‌ವಾಷ್ ನದಿಗಳು ಟ್ರೆಂಟ್ ನದಿಯನ್ನು ಸೇರುತ್ತವೆ. ರೋತರ್, ಗಾಯ್ಟ್ ಇನ್ನೆರಡು ನದಿಗಳು.

ಉತ್ತರದ ಉನ್ನತ ಪ್ರದೇಶದಲ್ಲಿ ಚಳಿಗಾಲ ತೀವ್ರ, ಮಳೆಯೂ ಅಧಿಕ. ಸರಾಸರಿ ಮಳೆ ಉತ್ತರದ ವೂಡ್‌ಹೆಡ್‌ನಲ್ಲಿ 125 ಸೆಂಮೀ.

ಕೌಂಟಿಯ ಆಡಳಿತಕೇಂದ್ರ ಡರ್ಬಿ. ಡರ್ಬಿಷೈರ್‌ನಲ್ಲಿರುವ ಮುನಿಸಿಪಲ್ ಬರೋಗಳು ಬಕ್‌ಸ್ಟನ್, ಚೆಸ್ಟರ್‌ಫೀಲ್ಡ್, ಗ್ಲಾಸಪ್ ಮತ್ತು ಇಲ್ಕಸ್ಟನ್. ಈ ಕೌಂಟಿಯಲ್ಲಿ 16 ಜಿಲ್ಲೆಗಳೂ 9 ಗ್ರಾಮಾಂತರ ಜಿಲ್ಲೆಗಳೂ ಇವೆ.

ಈ ಕೌಂಟಿಯಲ್ಲಿ ಹಿಂದಿನಿಂದಲೂ ಗಣಿಗಾರಿಕೆ ಮತ್ತು ಕೈಗಾರಿಕೆ ಮುಖ್ಯವಾಗಿವೆ. ರೋಮನರ ಕಾಲದಲ್ಲಿ ಸೀಸದ ಗಣಿಗಳಿದ್ದುವು. ಕಬ್ಬಿಣವನ್ನು ಹಿಂದಿನಿಂದಲೂ ಉತ್ಪಾದಿಸಲಾಗುತ್ತಿದೆ. 14ನೆಯ ಶತಮಾನದಿಂದ ಕಲ್ಲಿದ್ದಲನ್ನು ತೆಗೆಯಲಾಗುತ್ತಿದೆ. ಉಣ್ಣೆ ಕೈಗಾರಿಕೆ ಹಳೆಯದು. ಪಿಂಗಾಣಿ, ಕಾಗದ, ರಾಸಾಯನಿಕ ವಸ್ತುಗಳು, ಎಂಜಿನಿಯರಿಂಗ್ ವಸ್ತುಗಳು–ಇವು ಇತರ ಮುಖ್ಯ ಕೈಗಾರಿಕೆಗಳು. ಬಕ್‌ಸ್ಟನ್, ಮ್ಯಾಟ್ಲಾಕ್ ಮತ್ತು ಬೇಕ್‌ವೆಲ್‌ನಲ್ಲಿರುವ ಖನಿಜಜಲ ಚಿಲುಮೆಗಳು ಪ್ರಸಿದ್ಧವಾದವು. ಡರ್ಬಿ ಒಂದು ಮುಖ್ಯ ರೈಲ್ವೆ ಕೇಂದ್ರ. ಇಲ್ಲಿ ಒಂದು ದೊಡ್ಡ ರೈಲ್ವೆ ಕಾರ್ಯಾಗಾರವುಂಟು. ಜನಸಂಖ್ಯೆ 734581 (2001).

(ಎಸ್.ಕೆ.ಆರ್.;ಆರ್.ಸಿ.ಎಚ್.)

**ಡಾನ್:** ರಷ್ಯ ದೇಶದ ಒಂದು ನದಿ. ಟೂಲ ಪಟ್ಟಣದ ಆಗ್ನೇಯದಲ್ಲಿ ಉಗಮಿಸಿ, ಆಗ್ನೇಯಾಭಿಮುಖವಾಗಿ, ಬಿಲ್ಲಿನಂತೆ ಬಾಗಿ, ವೋಲ್ಗ ನದಿಗೆ 76 ಕಿಮೀ ಹತ್ತಿರದವರೆಗೆ ಹರಿದು, ನೈಋತ್ಯ ದಿಕ್ಕಿಗೆ ತಿರುಗಿ, ಟ್ಯಾಗನ್‌ರಾಗ್ ಖಾರಿಯಲ್ಲಿ ಅಜ಼ಾಫ್ ಸಮುದ್ರವನ್ನು ಸೇರುವ ಈ ನದಿಯ ಉದ್ದ 1958 ಕಿಮೀ. ಉಗಮದಿಂದ ಸಂಗಮದವರೆಗೆ ನದಿಯ ಮಟ್ಟದಲ್ಲಿ ಆಗುವ ಇಳಿತ 207 ಮೀ ಮಾತ್ರ. ಆದ್ದರಿಂದ ನದಿ ಬಲು ನಿಧಾನವಾಗಿ ಹರಿಯುತ್ತದೆ. ಫಲವತ್ತಾದ ಕಪ್ಪುನೆಲದ ಪ್ರದೇಶದ ಪೂರ್ವಭಾಗದಲ್ಲಿ ಹರಿಯುವ ಈ ನದಿಯಲ್ಲಿ ಮೀನುಗಳು ಹೇರಳವಾಗಿವೆ. ಇದರ ದಂಡೆಯ ಮೇಲೆ ಉದ್ದಕ್ಕೂ ಹಲವು ಮೀನುಗಾರ ಹಳ್ಳಿಗಳುಂಟು.

ಈ ನದಿ ಪ್ರಾರಂಭದಲ್ಲಿ ಕಿರಿದಾದ ಕಣಿವೆಯ ಮೂಲಕ ಹರಿಯುತ್ತದೆ. ಮಧ್ಯದಲ್ಲಿ ಇದರ ಪಾತ್ರ ಸು. 40 ಕಿಮೀ ಅಗಲವಾಗಿರುವುದುಂಟು. ಕೆಲವು ಕಡೆಗಳಲ್ಲಿ ನದಿಯ ಆಳ 90–130 ಮೀ ನದಿಯಲ್ಲಿ ಅನೇಕ ಮರಳು ದಿಬ್ಬಗಳಿವೆ. ವೋಲ್ಗದ ಬಳಿಯ ಮಹಾತಿರುವಿನಲ್ಲಿ ಟ್ಸಿಮ್ಲ್ಯಾನ್ಸ್ಕಿ ಜಲಾಶಯದೊಳಕ್ಕೆ ಇದು ಹರಿಯುತ್ತದೆ. ಸು. 320 ಕಿಮೀ ಉದ್ದವಿರುವ ಈ ಜಲಾಶಯವನ್ನು ವೋಲ್ಗ–ಡಾನ್ ಕಾಲುವೆ ನಿರ್ಮಾಣದ ಅಂಗವಾಗಿ 1950–51ರಲ್ಲಿ ನಿರ್ಮಿಸಲಾಯಿತು. ಈ ನದಿಯ ಬಲದಂಡೆ ಎತ್ತರವೂ ಕಡಿದೂ ಆಗಿದೆ. ಅಲ್ಲಲ್ಲಿ ಇದು ಕಮರಿಗಳಿಂದ ಛೇದಿಸಲ್ಪಟ್ಟಿದೆ. ಇದರ ಎಡದಂಡೆ ತಗ್ಗು; ಆ ಬದಿಯಲ್ಲಿ ವಿಶಾಲವಾದ ಬಯಲುಗಳಿವೆ. ವಸಂತಕಾಲದಲ್ಲಿ ಹಿಮ ಕರಗಿದಾಗ ಈ ನೆಲ ಪ್ರವಾಹದಿಂದ ಕೂಡಿರುತ್ತದೆ. ಟ್ಸಿಮ್ಲ್ಯಾನ್ಸ್ಕಿ ಜಲಾಶಯದಿಂದಾಗಿ ಕೆಳದಂಡೆಯಲ್ಲಿ ನದಿಯ ಪ್ರವಾಹ ನಿಯಂತ್ರಿತವಾಗಿರುತ್ತದೆ. ನವೆಂಬರ್ ಆದಿಭಾಗದಿಂದ ಮಾರ್ಚ್ ಉತ್ತರಾರ್ಧದವರೆಗೆ ನದಿಯ ನೀರು ಗಡ್ಡೆ ಕಟ್ಟಿರುತ್ತದೆ.

ಡಾನ್‌ಗೆ ಅನೇಕ ದೊಡ್ಡ ಉಪನದಿಗಳುಂಟು. ಬಲದಂಡೆಯ ದೊಡ್ಡ ಉಪನದಿಗಳು ಸಸ್ನಾ, ಟಿಕಾಯ ಸಸ್ನಾ, ಚಿರ್ ಮತ್ತು ಡನೆಟ್ಸ್. ಎಡದಂಡೆಯ ಮುಖ್ಯ ಉಪನದಿಗಳು ವರಾನಿಷ್, ಕಪ್ಯಾರ್, ಮೆಡ್ವೆಡಟ್ಸ, ಸಾಲ್ ಮತ್ತು ಮನಿಚ್.

ಡಾನ್ ನದಿಯ ಮುಖದಿಂದ ಹಿಡಿದು ವರಾನಿಷ್‌ನ ಉತ್ತರಕ್ಕೆ 80 ಕಿಮೀ ದೂರದಲ್ಲಿರುವ ಖ್ಲೆಬ್ನೋಯೆವರೆಗೂ ನೌಕಾಯಾನ ಸಾಧ್ಯ. ಆದರೆ ಟ್ಸಿಮ್ಲ್ಯಾನ್ಸ್ಕಿ ಜಲಾಶಯದಿಂದ ಮೇಲಿನ ಪಾತ್ರದಲ್ಲಿ ಮರಳು ದಿಬ್ಬಗಳಿರುವುದರಿಂದ ಅಡಚಣೆಗಳು ಅಧಿಕ. ಜಲಾಶಯದಲ್ಲೂ ಅದರಿಂದ ಕೆಳಗೂ ನೌಕಾಯಾನ ಗಮನಾರ್ಹವಾಗಿದೆ. ಸರಕನ್ನೂ ಪ್ರಯಾಣಿಕರನ್ನೂ ಹೊತ್ತು ಸಾಗುವ ಸಮುದ್ರಗಾಮಿ ನೌಕೆಗಳು ಸಂಚರಿಸುತ್ತವೆ. ಮರ, ಪೆಟ್ರೋಲಿಯಂ, ಕಲ್ಲಿದ್ದಲು ಮತ್ತು ಧಾನ್ಯ ಮುಖ್ಯ ಸರಕುಗಳು ವೋಲ್ಗ–ಕಾಮ–ಕ್ಯಾಸ್ಪಿಯನ್ ಜಲಮಾರ್ಗ ವ್ಯವಸ್ಥೆಗೆ ವೋಲ್ಗ–ಡಾನ್ ಕಾಲುವೆಯೂ ಸೇರಿದ ಡಾನ್ ನದೀವ್ಯವಸ್ಥೆ ಮುಖ್ಯವಾದ ಹೆದ್ದಾರಿಯಂತಿದೆ. ಡಾನ್ ವ್ಯವಸ್ಥೆ ಬಲು ಹಿಂದಿನಿಂದಲೂ ಒಂದು ಮುಖ್ಯ ಸಂಪರ್ಕ ಮಾಧ್ಯಮ.

ಡಾನ್ ನದಿಯ ದಂಡೆಯಲ್ಲಿರುವ ಮುಖ್ಯ ನಗರಗಳು ವರಾನಿಷ್ ಮತ್ತು ರಸ್ಟಾಫ್–ನಾ–ಡಾನು. ವೋಲ್ಗ–ಡಾನ್ ಕಾಲುವೆಯ ತುದಿಯ ಬಳಿ ಇರುವ ಪಟ್ಟಣ ಕಲಾಚ್. ಟ್ಸಿಮ್ಲ್ಯಾನ್ಸ್ಕಿ ಜಲಾಶಯದಿಂದ ಜಲವಿದ್ಯುತ್ ಉತ್ಪಾದನೆಯಾಗುತ್ತದೆ. ಅದು ಡಾನ್ ಕೆಳದಂಡೆಯ ದ್ರಾಕ್ಷಿ ಮತ್ತು ತರಕಾರಿ ತೋಟಗಳಿಗೆ ನೀರುಣಿಸುತ್ತದೆ.

ಡಾನ್ ಎಂಬ ಹೆಸರಿನ ಇನ್ನೆರಡು ನದಿಗಳು ಉಂಟು. ಅವುಗಳಲ್ಲಿ ಒಂದು (132 ಕಿಮೀ) ಸ್ಕಾಟ್ಲೆಂಡಿನಲ್ಲೂ ಇನ್ನೊಂದು (112 ಕಿಮೀ) ಇಂಗ್ಲೆಂಡಿನಲ್ಲೂ ಇವೆ. (ಡಿ.ಎಸ್.ಜಿ.)

**ಡಾಲರೈಟ್:** ಭಾರವಾದ ಕಪ್ಪುಬಣ್ಣದ ಅಗ್ನಿಶಿಲೆ. ಇದರಲ್ಲಿರುವ ಮುಖ್ಯ ಖನಿಜಗಳೆಂದರೆ ಪ್ಲೇಜಿಯೋಕ್ಲೇಟ್ ಫೆಲ್‌ಸ್ಪಾರ್ ಮತ್ತು ಅಗೆಟ್, ಡಯಾಪ್ಸೈಡ್, ಕಬ್ಬಿಣದ ಆಕ್ಸೈಡ್. ಇದು ಸಾಮಾನ್ಯವಾಗಿ ಪ್ರಪಂಚದ ಎಲ್ಲ ಭಾಗದಲ್ಲೂ ಹೇರಳವಾಗಿ ದೊರೆಯುತ್ತದೆ. ಇತರ ಶಿಲೆಗಳನ್ನು ಅಡ್ಡಹಾಯ್ದು ಇದು ಅಂತಸ್ಸರಣ ಡೈಕ್ ಶಿಲೆಯರೂಪದಲ್ಲಿರುವುದು.

ಕಪ್ಪು ಬೂದು ಛಾಯೆಯಿಂದ ಕಪ್ಪುವರ್ಣದವರೆಗೆ ವ್ಯತ್ಯಾಸವಾಗುವ ಈ ಡೈಕುಗಳನ್ನು ಕೆಲವೆಡೆ ಕಟ್ಟಡಗಳಿಗಾಗಿ ಉಪಯೋಗಿಸುವುದುಂಟು. ಅದರಲ್ಲಿಯೂ ವಿದೇಶಗಳಲ್ಲಿ ಇದನ್ನು ಅಲಂಕಾರ ಕಟ್ಟಡಶಿಲೆಯಾಗಿ ಉಪಯೋಗಿಸುತ್ತಾರೆ. ಭೂಮಿಯ ಮೇಲ್ಭಾಗದಲ್ಲಿ ಇಂಥ ಡೈಕುಗಳು ದಪ್ಪದಪ್ಪ ಗುಂಡುಗಳ ಉದ್ದಸರಣಿ ಅಥವಾ ಏರಿಗಳಂತೆ ಕಂಡುಬರುತ್ತವೆ. ಗುಂಡುಗಳ ಮೇಲ್ಭಾಗದಲ್ಲಿ ಸಾಧಾರಣವಾಗಿ ಒಂದೆರಡು ಇಂಚು ದಪ್ಪವಿರುವ ಹಳದಿಕಂದುಬಣ್ಣದ ಸಹಜ ಆಕ್ಸೈಡಿನ ಶಿಥಿಲೀಕರಣಕ್ಕೆ ಒಳಗಾಗದ ಶುಭ್ರ ಡೈಕ್ ಶಿಲೆಯಿರುತ್ತದೆ. ಇದಕ್ಕೆ ಮೆರುಗಿಟ್ಟರೆ ಚೆನ್ನಾಗಿ ಹೊಳಪಿನಿಂದ ಮಿರುಗುತ್ತದೆ. ಫೆಲ್ಸ್‌ಪಾರಿನ ಬೃಹತ್ ಸ್ಫಟಿಕಗಳಿರುವ ಡಾಲರೈಟುಗಳನ್ನು ಮೆರುಗಿಟ್ಟಲ್ಲಿ ಅವುಗಳಲ್ಲಿರುವ ಫೆಲ್ಸ್‌ಪಾರ್ ಹರಳುಗಳು ಪ್ರಕಾಶಮಾನವಾಗಿ ಹೊಳೆಯುತ್ತವೆ. ಕರ್ನಾಟಕದಲ್ಲೂ ಇಂಥ ಡೈಕುಗಳು ಅನೇಕ ಕಡೆಗಳಲ್ಲಿವೆ. ಉತ್ತಮ ಬಗೆಯ ಗ್ರ್ಯಾನೈಟ್ ಮತ್ತು ನೈಸ್ ಶಿಲೆಗಳು ಹೇರಳವಾಗಿ ದೊರೆಯುವುದರಿಂದ ಡಾಲರೈಟಿನ ಉಪಯೋಗ ಕಡಿಮೆ. (ಟಿ.ಟಿ.)

**ಡಾಲೊಮೈಟ್:** ಮೆಗ್ನೀಷಿಯಮ್ ಹಾಗೂ ಕ್ಯಾಲ್ಸಿಯಮ್ ಕಾರ್ಬೊನೇಟುಗಳ ಸಂಮಿಶ್ರಣ ಸಂಯೋಜನೆಯುಳ್ಳ [CaMg(co3)2] ಖನಿಜ ಅಥವಾ ಶಿಲೆ. ಇದನ್ನು 1791ರಲ್ಲಿ ಮೊದಲ ಬಾರಿಗೆ ಆವಿಷ್ಕರಿಸಿದ ಕೌಂಟ್ ಡಾಲಾಮ್ಯ (1750–1801) ಎಂಬ ಫ್ರೆಂಚ್ ಭೂವಿಜ್ಞಾನಿಯ ಗೌರವಾರ್ಥ ಇದಕ್ಕೆ ಡಾಲೊಮೈಟ್ ಎಂದು ಹೆಸರಿಡಲಾಯಿತು. ಈ ಹೆಸರನ್ನು ಖನಿಜ ಮತ್ತು ಶಿಲೆ ಇವೆರಡಕ್ಕೂ ಉಪಯೋಗಿಸಲಾಗುತ್ತದೆ. ಇದರಿಂದಾಗಿ ವ್ಯಾಖ್ಯೆಯಲ್ಲಿ ಉಂಟಾಗುವ ತೊಡಕನ್ನು ನಿವಾರಿಸಲು ಕೆಲ ವಿಜ್ಞಾನಿಗಳು ಬಗೆ ಬಗೆಯ ಸೂಚನೆಗಳನ್ನು ನೀಡಿದ್ದಾರೆ. ಆದರೆ ಪೆಟ್ಟಿ ಜಾನ್ ಎಂಬಾತ ನೀಡಿರುವ ವ್ಯಾಖ್ಯೆಯೇ ಹೆಚ್ಚು ಸಮರ್ಪಕವಾಗಿದೆ. MgCo3ರ ಪ್ರಮಾಣ ಶೇ. 5–10, ಶೇ. 10–50, ಶೇ. 50–90 ಮತ್ತು ಶೇ. 90 ಕ್ಕಿಂತ ಹೆಚ್ಚಾಗಿದ್ದರೆ ಅನುಕ್ರಮವಾಗಿ ಮೈಗ್ನೀಷಿಯಂ ಯುಕ್ತ ಸುಣ್ಣಕಲ್ಲು, ಡಾಲೊಮೈಟ್‌ಯುಕ್ತ ಸುಣ್ಣಕಲ್ಲು, ಕ್ಯಾಲ್ಸೈಟ್‌ಯುಕ್ತ ಡಾಲೊಮೈಟ್ ಮತ್ತು ಡಾಲೊಮೈಟ್ ಎಂದು ಕರೆಯಬೇಕೆಂದು ಆತ ಸೂಚಿಸಿದ. ಕ್ಯಾಲ್ಸಿಯಮ್ ಮತ್ತು ಮೆಗ್ನೀಷಿಯಂಗಳ ಕಾರ್ಬೊನೇಟುಗಳಲ್ಲದೆ ಡಾಲೊಮೈಟಿನಲ್ಲಿ ಸಿಲಿಕ, ಅಲ್ಯುಮಿನ, ಕಬ್ಬಿಣದ ಆಕ್ಸೈಡ್ ಇತ್ಯಾದಿ ಕಲ್ಮಷಗಳಿರುತ್ತವೆ. (ಎಚ್.ಸಿ.ಎಸ್.;ಕೆ.ಜಿ.ಎಸ್.)

**ಡಿ ಮಾಯ್ನ್ ನದಿ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಐಯೊವ ರಾಜ್ಯದ ಅತ್ಯಂತ ಉದ್ದವಾದ ನದಿ. ಪಶ್ಚಿಮದಿಂದ ಮಿಸಿಸಿಪಿಯನ್ನು ಸೇರುವ ಒಂದು ಮುಖ್ಯ ಉಪನದಿ. ಮಿನಿಸೋಟದ ನೈಋತ್ಯ ಭಾಗದಲ್ಲಿ ಪೈಪ್‌ಸ್ಟೋನ್ ಪಟ್ಟಣದ ಬಳಿ ಉಗಮಿಸಿ ಆಗ್ನೇಯಭಿಮುಖವಾಗಿ ಹರಿದು ಐಯೊವ ರಾಜ್ಯದ ಆಗ್ನೇಯ ಭಾಗದಲ್ಲಿ ಕೀಯಕಕ್ಕ ಪಟ್ಟಣಕ್ಕೆ 3 ಕಿಮೀ ದೂರದಲ್ಲಿ ಮಿಸಿಸಿಪಿಯನ್ನು ಸೇರುತ್ತದೆ. ಮಧ್ಯ ಐಯೊವದಲ್ಲಿರುವ ಹಂಬೋಲ್ಟ್ ನಗರದಿಂದ ಮೇಲಕ್ಕೆ ಈ ನದಿಗೆ ವೆಸ್ಟ್ ಫೋರ್ಕ್ ಎಂಬ ಹೆಸರುಂಟು. ಈಸ್ಟ್ ಫೋರ್ಕ್, ರ‍್ಯಾಕೂನ್–ಇವು ಇದರ ಎರಡು ಮುಖ್ಯ ಉಪನದಿಗಳು. ಉಗಮದಿಂದ ಸಂಗಮದವರೆಗೆ ಈ ನದಿ 413 ಮೀ ಇಳಿಯುತ್ತದೆ. ಇದರ ಜಲಾನಯನ ಭೂಮಿಯ ವಿಸ್ತೀರ್ಣ 41098 ಚ.ಕಿಮೀ. ಇದರಲ್ಲಿ ಆಗಾಗ ಅತಿಯಾದ ಪ್ರವಾಹ ಬಂದು ನದಿಯ ಕೆಳದಂಡೆಯ ಪ್ರದೇಶಗಳಿಗೆ ಹಾನಿ ಸಂಭವಿಸುವುದುಂಟು. ಈ ನದಿಯ ದಡದ ಮೇಲಿದ್ದ ಹಳ್ಳಿಯೊಂದರಲ್ಲಿ ಡೊಮಿಂಗ್ವೀನ ಇಂಡಿಯನರಿದ್ದರೆಂದೂ ಡೊಮಿಂಗ್ವೀನ ಎಂಬ ಹೆಸರೇ ಬದಲಾಗಿ ಡಿ ಮಾಯ್ನ್ ಆಗಿ ಈ ನದಿಯ ಹೆಸರಾಯಿತೆಂದೂ ಹೇಳಲಾಗಿದೆ.

(ಆರ್.ಸಿ.ಎಚ್.)

**ಡಿಗ್ರಿ:** ಒಂದು ಕ್ರಿಯೆಯನ್ನು ನಿರ್ವಹಿಸುವಾಗ ಅನುಸರಿಸುವ ಹಂತಗಳ ಇಲ್ಲವೇ ಘಟ್ಟಗಳ ಶ್ರೇಣಿಯಲ್ಲಿ ಯಾವುದೇ ಒಂದು ಅಳತೆಯ ಒಂದು ಏಕಮಾನ. ಜ್ಯಾಮಿತಿಯಲ್ಲಿ ವೃತ್ತಕೇಂದ್ರದಲ್ಲಿನ ಪೂರ್ಣ ಕೋನದ 360 ಸಮಭಾಗಗಳ ಪೈಕಿ ಒಂದು ; ಪರ್ಯಾಯವಾಗಿ ವೃತ್ತಪರಿಧಿಯ 360ನೆಯ ಒಂದು ಭಾಗ ಕೇಂದ್ರದಲ್ಲಿ ರಚಿಸುವ ಕೋನ. ಇದನ್ನು $1^\circ$ ಎಂದು ಬರೆದು ಒಂದು ಡಿಗ್ರಿ ಎಂದು ಓದುತ್ತೇವೆ. $90^\circ$ ಗಳಿಗೆ ಲಂಬಕೋನವೆಂದೂ $180^\circ$ ಗಳಿಗೆ ಸರಳ ಕೋನವೆಂದೂ (=2 ಲಂಬಕೋನಗಳು) $360^\circ$ ಗಳಿಗೆ 4 ಲಂಬ ಕೋನಗಳೆಂದೂ ಹೆಸರು. $1^\circ$ ಯನ್ನು 60 ಸಮಭಾಗಿಸಿ ಒಂದೊಂದನ್ನು 1 ಮಿನಿಟ್ ($1'$) ಎಂದೂ $1'$ ನ್ನು 60 ಸಮಭಾಗಿಸಿ ಒಂದೊಂದನ್ನು 1 ಸೆಕೆಂಡ್ ($1''$) ಎಂದು ಕರೆದಿದೆ.

ಉಷ್ಣತೆಯನ್ನು (ಉಷ್ಣದ ಮಟ್ಟವನ್ನು) ಅಳೆಯುವಾಗ ಬಳಸುವ ಡಿಗ್ರಿ ಅಣ್ವಕ ಚಟುವಟಿಕೆಯನ್ನು ಪ್ರತಿನಿಧಿಸುವುದು. ಏಕೆಂದರೆ ಉಷ್ಣತೆ ಈ ಚಟುವಟಿಕೆಯನ್ನು ಅವಲಂಬಿಸಿದೆ. ಅನಿಲದ ಅಥವಾ ದ್ರವದ ವ್ಯಾಕೋಚನ ಶೀಲತೆಯನ್ನು ಆಧರಿಸಿದ ಉಷ್ಣತೆಯನ್ನು ಅಳೆಯುವುದು ವಾಡಿಕೆ. ಇಲ್ಲಿ ಅಳತೆಯ ಏಕಮಾನ ಉಷ್ಣತೆಯ ಡಿಗ್ರಿ. ಹೆಚ್ಚು ಬಳಕೆಯಲ್ಲಿರುವ ಎರಡು ಮಾನಕಗಳೆಂದರೆ ಫಾರೆನ್‌ಹೀಟ್ ಮತ್ತು ಸೆಲ್ಸಿಯಸ್ (ಮೊದಲು ಇದನ್ನು ಸೆಂಟಿಗ್ರೇಡ್ ಎನ್ನುತ್ತಿದ್ದರು). ಉಷ್ಣತಾಮಾಪಕವನ್ನು ಮೊದಲು ಕರಗುತ್ತಿರುವ ಹಿಮದ ಉಷ್ಣತೆಗೆ ಒಡ್ಡಿ ಸೂಚ್ಯಂಕದಲ್ಲಿ ದ್ರವದ (ಅನಿಲದ) ಎತ್ತರವನ್ನು ಗುರುತಿಸಲಾಗುವುದು ; ಮತ್ತೆ ಕುದಿಯುತ್ತಿರುವ ನೀರಿನ ಉಷ್ಣತೆಗೆ ಒಡ್ಡಿ ಸೂಚ್ಯಂಕದಲ್ಲಿ ದ್ರವದ (ಅನಿಲದ) ಎತ್ತರವನ್ನು ಗುರುತಿಸಲಾಗುವುದು. ಇವೆರಡು ಕ್ರಿಯೆಗಳನ್ನೂ ನಡೆಸುವುದು ವಾಯುಮಂಡಲದ ಸಂಯಮದಲ್ಲೇ. ತರುವಾಯ ಈ ಎರಡು ಗುರುತುಗಳ ನಡುವಿನ ಅಂತರವನ್ನು 180 ಸಮಭಾಗಗಳಾಗಿ ವಿಭಾಗಿಸಿ ಒಂದೊಂದು ವಿಭಾಗವನ್ನು 1 ಡಿಗ್ರಿ ಫಾರೆನ್‌ಹೀಟ್ ($1^\circ$.ಈ) ಎಂದು ಕರೆಯುತ್ತೇವೆ ; ಹೀಗಲ್ಲದೆ ಈ ಅಂತರವನ್ನು 100 ಸಮಭಾಗಗಳಾಗಿ ವಿಭಾಗಿಸಿದಾಗ ಈ ಒಂದೊಂದು ವಿಭಾಗಕ್ಕೂ 1 ಡಿಗ್ರಿ ಸೆಲ್ಸಿಯಸ್ ($1^\circ$.ಅ) ಎಂದು ಹೆಸರಿದೆ. *

**ಡಿಜಿಟಲ್ ಕಾರ್ಟೋಗ್ರಫಿ :** ಗಣಕಯಂತ್ರದ ಸಹಾಯದಿಂದ ನಕ್ಷೆಗಳನ್ನು ತಯಾರಿಸುವ ಪದ್ಧತಿ (ತಂತ್ರಾಂಶಿ ನಕ್ಷಾಶಾಸ್ತ್ರ). ಲಭ್ಯವಿರುವ ಮೂಲ ಸ್ಥಳ ಸ್ವರೂಪ ನಕ್ಷೆ, ದೂರ ಸಂವೇದನೆಯ ಚಿತ್ರಗಳಿಂದ, ವೈಮಾನಿಕ ಛಾಯಾ ಚಿತ್ರಗಳಿಂದ ಹಾಗೂ ಛಾಯಾಚಿತ್ರಗಳನ್ನು ಗಣಕ ಯಂತ್ರಕ್ಕೆ ಸಂಪರ್ಕ ಒದಗಿಸಿ ಅವುಗಳ ಮೂಲ ಮಾಹಿತಿಗಳನ್ನು ತಂತ್ರಾಂಶಕ್ಕೆ ಪರಿವರ್ತಿಸಿ ಅಗತ್ಯಕ್ಕೆ ತಕ್ಕಂತೆ ಬಿಂದು ರೇಖೆ ಹಾಗೂ ಬಹುಭುಜಗಳ ಸಹಾಯದಿಂದ ಕರಾರುವಕ್ಕಾಗಿ, ಅಕ್ಷಾಂಶ ಮತ್ತು ರೇಖಾಂಶ, ದಿಕ್ಕು, ಅಳತೆ, ಪ್ರಮಾಣ ಮುಂತಾದವುಗಳನ್ನು ಆಧಾರವಾಗಿಟ್ಟುಕೊಂಡು ವಿಶೇಷವಾಗಿ ವಿನ್ಯಾಸಗೊಳಿಸಿರುವ ಸಾಫ್ಟ್‌ವೇರ್‌ಗಳಾದ ಕ್ಯಾಡ್, ಸರ್ಫರ್, ಮ್ಯಾಪ್ ಮೇಕರ್, ಆರಿಜಿನ್, ಎಸ್.ಪಿ.ಎಸ್.ಎಸ್. ಗ್ರಾಮ್ ++ ಮೊದಲಾದ ವಿಧಾನಗಳನ್ನು ಬಳಸಿ ಗೋಳದ ವಾಸ್ತವ ಆಕಾರ, ಕ್ಷೇತ್ರ, ವಿಸ್ತೀರ್ಣಕ್ಕೆ ಅನುಗುಣವಾಗಿ ನಕ್ಷೆಗಳನ್ನು ತಯಾರಿಸುವ ಕಲೆಯಾಗಿದೆ. ಇದರಲ್ಲಿ ಪ್ರಮುಖವಾಗಿ ಉಪಯೋಗಿಸುವ ಉಪಕರಣಗಳೆಂದರೆ– ಸ್ಕ್ಯಾನರ್, ಡಿಜಿಟೈಸರ್, ಮೌಸ್, ಕೀ ಬೋರ್ಡ್, ಜಾಯ್ ಸ್ಟಿಕ್, ಪ್ರಿಂಟರ್, ಪ್ಲಾಟರ್ ಹಾಗೂ ಗಣಕಯಂತ್ರ ಸಾಫ್ಟ್‌ವೇರ್ ಹಾಗೂ ಬುದ್ಧಿ ಕೌಶಲ್ಯತೆ.

ವಾಸ್ತವ ಸ್ಥಾನಿಯ ದತ್ತಾಂಶಗಳನ್ನು ಚೌರಸ ವಿಧಾನದಲ್ಲಿ ಡಿಜಿಟೈಸರ್ ಅಥವಾ ತಿದ್ದುವುದೆ ಅಥವಾ ನಕಲು ಮಾಡುವುದೇ ಈ ಕಾರ್ಯವಾಗಿರುತ್ತದೆ.

ಅಸ್ಪಷ್ಟವಾದ ಛಾಯ ಚಿತ್ರ ಅಥವಾ ನಕ್ಷೆಗಳನ್ನು ಗಣಕಯಂತ್ರ ಕೌಶಲ್ಯತೆಯ ಮೂಲಕ ಸಾಫ್ಟ್‌ವೇರ್ ಪತಿಗೆ ಅಳವಡಿಸಿ ನಕ್ಷೆಗಳನ್ನು ಮೌಸ್ ಮೂಲಕ ಬಹುಭುಜಾಕೃತಿಯ ಸಹಾಯದಿಂದ ನಕಲು ಮಾಡಿ ಮಾಹಿತಿಯನ್ನು ಒದಗಿಸಿ ಅಗತ್ಯವಿರುವ ನಕ್ಷೆಗಳನ್ನು ಪಡೆಯಬಹುದು. ಇದು ತುಂಬಾ ಸುಲಭ, ಶೀಘ್ರ, ಬೇಕಾದಷ್ಟು ಪ್ರತಿಗಳನ್ನು ಈ ತಂತ್ರಜ್ಞಾನದಿಂದ ಪಡೆಯಬಹುದಾಗಿದೆ. (ಕೆ.ಎಂ.)

**ಡಿಟ್ರಾಯಿಟ್:** ಅಮೆರಿಕದ ಮಿಷಿಗನ್ ರಾಜ್ಯದ ಅತ್ಯಂತ ದೊಡ್ಡ ನಗರ. ವೇನ್ ಕೌಂಟಿಯ ಆಡಳಿತ ಕೇಂದ್ರ. ರಾಜ್ಯದ ಆಗ್ನೇಯ ಭಾಗದಲ್ಲಿ ಸೇಂಟ್ ಕ್ಲೇರ್ ಮತ್ತು ಈರೀ ಸರೋವರಗಳನ್ನು ಕೂಡಿಸುವ ಡಿಟ್ರಾಯಿಟ್ ನದಿಯ ದಂಡೆಯ ಮೇಲೆ ಇದೆ. ನಗರದ ಬಳಿ ಈ ನದಿ ಅಮೆರಿಕವನ್ನು ಕೆನಡದಿಂದ ವಿಭಜಿಸಿದೆ. ನದಿಯ ದಕ್ಷಿಣದಲ್ಲಿ ಕೆನಡದ ಆಂಟೇರಿಯೋ ಪ್ರಾಂತ್ಯದಲ್ಲಿರುವ ವಿಂಡ್ಸರ್ ನಗರ ಈ ನಗರಕ್ಕೆ ನೇರ ಎದುರಿನಲ್ಲಿದೆ. ಅಂಬಾಸಡರ್ ಸೇತುವೆ, ವಾಹನ ಸುರಂಗ, ರೈಲ್ವೆ ಸುರಂಗ ಮತ್ತು ರೈಲ್ವೆ ರಸ್ತೆ ಮತ್ತು ಮೋಟರ್ ವಾಹನಗಳ ದೋಣಿ ಸೇತುವೆ ಇವು ಕೆನಡದೊಂದಿಗೆ ಸಂಪರ್ಕ ಕಲ್ಪಿಸಿವೆ. 176 ಮೀ ಎತ್ತರದಲ್ಲಿರುವ ಡಿಟ್ರಾಯಿಟ್ ಅಮೆರಿಕದ ಮುಖ್ಯ ರೇವುಗಳಲ್ಲೊಂದು. ಜನವರಿಯ ಸರಾಸರಿ ಉಷ್ಣತೆ –4.4 ಸೆ. ಜುಲೈ ಸರಾಸರಿ ಉಷ್ಣತೆ $23^0$ ಸೆ. ವಾರ್ಷಿಕ ಸರಾಸರಿ ಮಳೆ ಸು. 80 ಸೆಂಮೀ ಜನಸಂಖ್ಯೆ 951270 (2000).

ನದಿಯ ದಂಡೆಯ ಮೇಲೆ ಸಾಲುಗಟ್ಟಿದಂತೆ ಹಡಗುಕಟ್ಟೆಗಳು, ಮಳಿಗೆಗಳು, ರೈಲ್ವೆನಿಲ್ದಾಣಗಳು ಹಾಗೂ ಕಾರ್ಖಾನೆಗಳು ಇವೆ. ನಗರದ ಕಟ್ಟಡಗಳಲ್ಲಿ ವಿಶಿಷ್ಟವಾದ್ದು ವೆಟರನ್ಸ್ ಮೆಮೋರಿಯಲ್ ಎಂಬ ಯೋಧರ ಸ್ಮಾರಕ ಭವನ. ಅಲ್ಲಿ ವಿವಿಧ ಪರಿಣತ ಸಂಸ್ಥೆಗಳ ಸಭೆ ಸೇರುತ್ತವೆ. ಸರ್ಕಾರಿ ಕಚೇರಿಗಳು 20 ಅಂತಸ್ತುಗಳ ಕಟ್ಟಡದಲ್ಲಿವೆ. 12,500 ಮಂದಿ ಕೂಡುವ ವೃತ್ತಾಕಾರದ ಸಭಾಂಗಣ, 3,000 ಪ್ರೇಕ್ಷಕರಿಗೆ ಸ್ಥಳಾವಕಾಶವಿರುವ ಹೆನ್ರಿ ಮತ್ತು ಎಡ್ಸೆಲ್ ಫೋರ್ಡ್‌ಭವನ, 3.5 ಹೆ. ವಿಸ್ತೀರ್ಣದ ಕೋಜೊಹಾಲ್ ಎಂಬ ವಸ್ತುಪ್ರದರ್ಶನ–ಇವು ನಗರದ ಇನ್ನು ಕೆಲವು ಆಕರ್ಷಣೆಗಳು.

ನಗರದ ಉದ್ಯಾನಗಳಿಗೆ ಮೀಸಲಾಗಿರುವ ಭೂಮಿಯ ಒಟ್ಟು ವಿಸ್ತೀರ್ಣ 2280 ಹೆ. ಡಿಟ್ರಾಯಿಟ್ ನದಿಯ ಬೆಲ್ ದ್ವೀಪದಲ್ಲಿ ಮಕ್ಕಳಿಗಾಗಿ ಪ್ರಾಣಿ ಸಂಗ್ರಹಾಲಯವಿದೆ. ವೃಕ್ಷರಾಶಿಯಿಂದ ಕೂಡಿದ 4000 ಹೆ. ಈ ಉದ್ಯಾನ ದ್ವೀಪ ಒಂದು ಸುಂದರ ತಾಣ. (ವಿ.ಜಿ.ಕೆ.)

**ಡಿವೋನಿಯನ್:** ಪೇಲಿಯೊಜೋಯಿಕ್ ಯುಗದ (ಪ್ರಾಗ್ಜೀವ ಯುಗ) ನಾಲ್ಕನೆಯ ಅವಧಿ. ಇದರ ಕಾಲ ಸು. 400 ದಶಲಕ್ಷ ವರ್ಷ ಪ್ರಾಚೀನದಿಂದ 350 ದ.ಲ.ವ. ಪ್ರಾಚೀನದವರೆಗೆ ಇತ್ತು. ಈ ಕಲ್ಪದ ಇಕ್ಕೆಲಗಳಲ್ಲಿ ಸೈಲೂರಿಯನ್ (440–400 ದ.ಲ.ವ. ಪ್ರಾಚೀನ) ಹಾಗೂ ಕಾರ್ಬಾನಿಫೆರಸ್ (350–280 ದ.ಲ.ವ. ಪ್ರಾಚೀನ) ಕಲ್ಪಗಳು ಇದ್ದುವು. ಡಿವೋನಿಯನ್ ರೂಪಗಳ ಪೈಕಿ ಅತ್ಯುತ್ತಮವಾಗಿ ಪ್ರಕಾಶಕ್ಕೆ ಬಂದಿರುವಂಥವು ಪ್ರಾಯಶಃ ವೇಲ್ಸ್, ಉತ್ತರ ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವಾಯವ್ಯ ಸೋವಿಯೆತ್ ಒಕ್ಕೂಟದ ಹಳೆ ಕೆಂಪು ಮರಳು ಶಿಲೆಗಳು. ಇವು ಕಾರ್ಬಾನಿಫೆರಸ್ ಕಲ್ಪದ ಶಿಲಾಸ್ತೋಮಗಳ ಕೆಳಗೆ ನಿಕ್ಷೇಪಗೊಂಡಂಥವು; ಮೇಲೆ ನಿಕ್ಷೇಪಗೊಂಡಂಥವುಗಳಿಗೆ ಹೊಸ ಕೆಂಪು ಮರಳು ಶಿಲೆಗಳು ಎಂದು ಹೆಸರು. ವೇಲ್ಸ್–ಬೆಲ್ಜಿಯಮ್ ದಿಬ್ಬ ಕೆಲೆಡೋನಿಯನ್ ಪರ್ವತ ಸ್ತೋಮಗಳ ದಕ್ಷಿಣ ಸರಹದ್ದು. ಇದು ಪೂರ್ವ–ಪಶ್ಚಿಮಾಭಿಮುಖವಾಗಿದೆ. ಇದರ ದಕ್ಷಿಣಕ್ಕೆ ಡಿವೋನಿಯನ್ ಸಾಗರ ನಿಕ್ಷೇಪಗಳು ಹೊರಹೊಮ್ಮಿವೆ. ಇವೇ ಡಿವೋನಿಯನ್ ಶಿಲಾಸ್ತೋಮಗಳು. ವೇಲ್ಸ್‌ನಿಂದ ಬೆಲ್ಜಿಯಮ್ ವರೆಗೂ ಈ ಸ್ತೋಮಗಳಿಗೆ ಒಂದೇ ರೀತಿಯ ಶಿಲಾಸಂಯೋಜನೆ ಇರುವುದರಿಂದ ಈ ಪ್ರದೇಶದಲ್ಲೆಲ್ಲ ಒಂದೇ ರೀತಿಯ ಶಿಲಾಸಂಯೋಜನೆ ವ್ಯಾಪಿಸಿತ್ತು.

ಡಿವೋನಿಯನ್ ಶಿಲಾಸ್ತೋಮಗಳು : ಕಾರ್ನ್‌ವಾಲ್ ಮತ್ತು ಡಿವೋನ್‌ಷೈರ್ ಪ್ರಾಂತಗಳಲ್ಲಿ ಸಾಗರನಿಕ್ಷೇಪಗಳು ಹೊರಹೊಮ್ಮಿವೆ. ಇವು ಮಡಿಕೆಗಳಾಗಿ ಕಲಕಿಕೊಂಡಿರುವುದರಿಂದಲೂ ಇವುಗಳಲ್ಲಿ ಸಸ್ಯಾವಶೇಷಗಳು ಅತಿ ವಿರಳವಾಗಿರುವುದರಿಂದಲೂ ಇವನ್ನು ಬಲುಕಾಲದವರೆಗೆ ಕೇಂಬ್ರಿಯನ್ ಕಲ್ಪದ ಶಿಲೆಗಳೆಂದೇ ಭಾವಿಸಲಾಗಿತ್ತು. ಲ್ಯಾನ್ಸ್‌ಡೇಲ್ ಎಂಬಾತ ಇವುಗಳಲ್ಲಿರುವ ಹವಳಗಳು ಸೈಲೂರಿಯನ್ ಮತ್ತು ಕಾರ್ಬಾನಿಫೆರಸ್ ಕಲ್ಪಗಳ ಮಧ್ಯಕಾಲವನ್ನು ಸೂಚಿಸುತ್ತವೆ ಎಂಬುದನ್ನು ತೋರಿಸಿ, ಈ ಶಿಲೆಗಳು ಕೆಂಪು ಮರಳು ಶಿಲೆಗಳ ಸಮಕಾಲೀನ ಶಿಲೆಗಳೆಂದು ದೃಢಪಡಿಸಿದ. ಮರ್ಚಿಸನ್ ಮತ್ತು ಸೆಡ್ಜ್‌ವಿಕ್‌ರವರು ಈ ಅಭಿಪ್ರಾಯವನ್ನು ಒಪ್ಪಿಕೊಂಡು, ಇವನ್ನು ಡಿವೋನಿಯನ್ ಶಿಲಾಸ್ತೋಮಗಳು (ಡಿವೋನ್‌ಷೈರಿನಲ್ಲಿ ಉತ್ತಮ ರೀತಿಯಲ್ಲಿ ಹೊರ ಕಾಣಿಸಿರುವುದರಿಂದ) ಎಂದು ಕರೆದರು. ಈ ಶಿಲಾಸ್ತೋಮದಲ್ಲಿ ಮುಖ್ಯವಾಗಿ ಗ್ರೇವೇಕ್ ಶಿಲೆಯೇ ಪ್ರಧಾನವಾಗಿದೆ. ಜೇಡುಶಿಲೆ, ಸುಣ್ಣಶಿಲೆ ಮತ್ತು ಜ್ವಾಲಾಮುಖಿಜ ಶಿಲೆಗಳೂ ಇವೆ.

ಡಿವೋನಿಯನ್ ಶಿಲಾಸ್ತೋಮದಲ್ಲಿ ಶಿಲೆ ನಿಕ್ಷೇಪಗಳೂ ಆಳಪ್ರದೇಶದ ನಿಕ್ಷೇಪಗಳೂ ಇವೆ. ತೀರ ನಿಕ್ಷೇಪಗಳಲ್ಲಿ ಮರಳಿನ ಅಂಶ ಹೆಚ್ಚು. ಅವು ಉತ್ತರ ಡಿವೋನ್‌ಷೈರಿನಲ್ಲಿ ನಿಕ್ಷೇಪಗೊಂಡಿವೆ. ಆಳಪ್ರದೇಶದ ನಿಕ್ಷೇಪಗಳು ಡಿವೋನ್‌ಷೈರಿನ ದಕ್ಷಿಣಭಾಗದಲ್ಲಿ ನಿಕ್ಷೇಪಗೊಂಡಿವೆ. ಇವುಗಳಲ್ಲಿ ಸುಣ್ಣದ ಅಂಶವೇ ಹೆಚ್ಚು. ಈ ಎರಡು ಬಗೆಯ ನಿಕ್ಷೇಪಗಳಲ್ಲಿರುವ ಅವಶೇಷಗಳು ಸ್ವಾಭಾವಿಕವಾಗಿ ಭಿನ್ನ ರೀತಿಯವು. ಸಾಗರ ನಿಕ್ಷೇಪಗಳ ಮಧ್ಯೆ ಮೂರು ಅಂತರಗಳಲ್ಲಿ ಹಳೆ ಕೆಂಪು ಮರಳು ಶಿಲೆಯ ಪದರಗಳು ನಿಕ್ಷೇಪಗೊಂಡಿವೆ. ಯುರೋಪ್ ಖಂಡದಲ್ಲಿ ಫ್ರಾನ್ಸ್, ಬೆಲ್ಜಿಯಮ್, ರ್ಹೈನ್‌ಲೆಂಡ್, ಜರ್ಮನಿ ಸ್ಕಾಟ್ಲೆಂಡ್, ಮುಂತಾದ ಕಡೆ ಡಿವೋನಿಯನ್ ಶಿಲಾಸ್ತೋಮಗಳ ಅತ್ಯುತ್ತಮ ರೀತಿಯಲ್ಲಿ ರೂಪುಗೊಂಡಿವೆ. ಉತ್ತರ ಅಮೆರಿಕದ ಕೆಲವು ಕಡೆಗಳಲ್ಲಿ, ಭಾರತದ ಕಾಶ್ಮೀರದ ಕಣಿವೆಗಳಲ್ಲಿ ಈ ಶಿಲೆಗಳು ಕಾಣಸಿಗುತ್ತವೆ. (ಡಿ.ಆರ್.)

**ಡುಕುಚೇವ್:** 1846–1903. ಸೈಂಟ್ ಪೀಟರ್ಸ್ ಬರ್ಗನಲ್ಲಿ ರಷ್ಯದ ಪ್ರಪ್ರಥಮ ಭೂಗೋಳವಿಜ್ಞಾನ ಪ್ರಾಧ್ಯಾಪಕರಾಗಿ ನಿಯೋಜಿಸಲ್ಪಟ್ಟರು (1885). ಈತ ಮಣ್ಣಿನ ವಿಜ್ಞಾನ (ಶಾಸ್ತ್ರ) ಕುರಿತು ಹೆಚ್ಚಿನ ಸಂಶೋಧನೆ ನಡೆಸಿ ಗಮನ ಸೆಳೆದರು. ಮಣ್ಣಿನ ವಿವಿಧ ಪ್ರಕಾರಗಳನ್ನು ಮಣ್ಣಿನ ಹೊರಮೈಯನ್ನು ಸೂಕ್ಷ್ಮವಾಗಿ ಬರಿಗಣ್ಣಿನಿಂದ ಗಮನಿಸಿರುವುದರ ಮೂಲಕ ಅವುಗಳ ರಚನೆ ಕಾರ್ಯ ವಿಧಾನದ ಆಧಾರದ ಮೇಲೆ ಗುರುತಿಸಬಹುದಾಗಿದೆ ಎಂದು ತಿಳಿಸಿದರು. ವಾಯುಗುಣ, ಇಳಿಜಾರು, ಸಸ್ಯ ಮತ್ತು ಪ್ರಾಣಿ ಹಾಗೂ ಆ ಪ್ರದೇಶದ ಭೂಮಿಯ ಅಂತರಾಳದಿಂದ ಹೊರಭಾಗದಲ್ಲಿರುವ ಮೂಲ ಶಿಲೆಗಳಿಗೂ ಇರುವ ಸಂಕೀರ್ಣವಾದ ಸಂಬಂಧವನ್ನು ಆಯಾ ಪ್ರದೇಶದ ಮಣ್ಣಿನ ಲಕ್ಷಣಗಳು ಪ್ರತಿನಿಧಿಸುತ್ತವೆ ಎಂದು ಪ್ರತಿಪಾದಿಸಿದರು. (ಬಿ.ಪಿ.)

**ಡುರಾಂಡ್ ರೇಖೆ:** ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನಗಳ ನಡುವಿನ 2640 ಕಿಮೀ ಉದ್ದದ ಗಡಿರೇಖೆ. ಬ್ರಿಟಿಷರು ಆಫ್ಘಾನಿಸ್ತಾನದೊಡನೆ ನಡೆಸಿದ ಎರಡು ಅಸಫಲ ಯುದ್ಧಗಳ ಅಂತ್ಯದಲ್ಲಿ 1893ರಲ್ಲಿ ಈ ಗಡಿರೇಖೆಯನ್ನು ಬ್ರಿಟಿಷ್ ಇಂಡಿಯ ಮತ್ತು ಆಫ್ಘಾನಿಸ್ತಾನಗಳ ನಡುವೆ ಅಂದಿನ ನಾರ್ಥ್‌ವೆಸ್ಟ್ ಫ್ರಾಂಟಿಯರ್ ಪ್ರಾವಿನ್ಸ್ ಹಾಗೂ ಆಫ್ಘನ್ ಬುಡಕಟ್ಟು ಪ್ರದೇಶ ಮತ್ತು ಬಲೂಚಿಸ್ತಾನಗಳನ್ನು ಪ್ರತ್ಯೇಕವಾಗಿ ಗುರುತಿಸಲಾಯಿತು. ಸರ್ ಡುರಾಂಡ್ (ಇವರ ಹೆಸರೇ ಈ ರೇಖೆಗೆ) ಬ್ರಿಟಿಷ್ ಇಂಡಿಯದಲ್ಲಿ ವಿದೇಶಾಂಗ ಕಾರ್ಯದರ್ಶಿಯಾಗಿದ್ದು ಆಫ್ಘಾನಿಸ್ತಾನದ ಎಮಿರ್ ಅಬ್ದುಲ್ ರೆಹಮಾನ್ ಖಾನ್‌ರೊಡನೆ ಈ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಬ್ರಿಟಿಷರು ಈ ಗಡಿರೇಖೆಯನ್ನು ಉದ್ದೇಶಪೂರ್ವಕವಾಗಿಯೇ, ಆಫ್ಘನ್ ಬುಡಕಟ್ಟು ಜನರು ವಾಸಿಸುತ್ತಿರುವ ಪ್ರದೇಶಗಳ ನಡುವೆಯೆ ಎಳೆದು, ಬುಡಕಟ್ಟು ಪ್ರದೇಶಗಳನ್ನು ಇಬ್ಭಾಗ ಮಾಡಿದರು. ಇದಕ್ಕೆ ಕಾರಣ ಆಫ್ಘನ್ ಬುಡಕಟ್ಟು ಜನರ ಬಗ್ಗೆ ಬ್ರಿಟಿಷರಿಗಿದ್ದ ಹೆದರಿಕೆ. ಹಾಗಾಗಿ ಇವರನ್ನು ಒಡೆದರೆ ತಮ್ಮ ಆಡಳಿತಕ್ಕೆ ಧಕ್ಕೆಯುಂಟಾಗದೆಂಬ ಲೆಕ್ಕಾಚಾರ. ಈಗ ಸು. 28 ಮಿಲಿಯನ್ ಫಕ್ತೂನರು, ಪಾಕಿಸ್ತಾನದ ಭಾಗದಲ್ಲಿಯೂ ಇದರ ಶೇ. 50 ರಷ್ಟು ಜನರು ಡುರಾಂಡ ರೇಖೆಯ ಆಚೆಕಡೆ ಆಫ್ಘಾನಿಸ್ತಾನದ ಭಾಗದಲ್ಲಿಯೂ ಇದ್ದಾರೆ.

ಅನೇಕ ಸಂದರ್ಭಗಳಲ್ಲಿ ಈ ಡುರಾಂಡ್ ರೇಖೆಯನ್ನು ಶೂನ್ಯ ರೇಖೆ ಎಂಬುದಾಗಿಯೂ ಸಂಬೋಧಿಸಲಾಗುತ್ತದೆ. $66^0 15'$ ದಕ್ಷಿಣ ಪಶ್ಚಿಮದ ಮರುಭೂಮಿ ಪ್ರದೇಶವನ್ನು ಹೊರತುಪಡಿಸಿದರೆ ಸು. ಶೇ. 84 ರಷ್ಟು ಭೂ ಹಾಗೂ ಜಲಭಾಗಗಳನ್ನು ಈ ಗಡಿರೇಖೆ ನಿಖರವಾಗಿ ನಿರ್ಧರಿಸುತ್ತದೆ. (ಕೆ.ಎನ್.ಯು.)

**ಡೆಕ್ಕನ್ ಟ್ರ್ಯಾಪ್:** ಭಾರತದ ದಖನ್ ಪ್ರದೇಶದಲ್ಲಿ ವಿಶಾಲವಾಗಿಯೂ ಹಂತಹಂತವಾಗಿಯೂ ಹರಡಿರುವ ಪ್ರಸ್ಥಭೂಮಿ ಬೆಸಾಲ್ಟ್ (ಡೆಕ್ಕನ್ ಟ್ರ್ಯಾಪ್). ಮಧ್ಯ ಜೀವಿಕಲ್ಪದ ಅಂತ್ಯ ಕಾಲದಲ್ಲಿ ಭೂಮಿಯ ಎಲ್ಲ ಭಾಗಗಳಲ್ಲಿ ಭೂ ಮೇಲ್ಪದರದ ಕ್ಷೋಭೆ ಉಂಟಾಯಿತು. ಆಗ ಭೂಖಂಡದ ಭಾಗಗಳಲ್ಲಿ ಚಲನೆ, ಪರ್ವತಗಳ ರಚನೆ ಮತ್ತು ಅಗ್ನಿಶಿಲಾ ಚಟುವಟಿಕೆ ಮೊದಲಾದ ಮಾರ್ಪಾಡುಗಳು ಕಂಡುಬಂದವು. ಅದೇ ವೇಳೆ ಗೊಂಡ್ವಾನಾ ಭೂಪ್ರದೇಶ ಛಿದ್ರವಾಗಿ, ಕೆಲ ಪ್ರದೇಶ ಕುಸಿದು, ಬಹಳಷ್ಟು ಶಿಲಾರಸ ಹೊರಹೊಮ್ಮಿ ದಕ್ಷಿಣ ಮತ್ತು ಪಶ್ಚಿಮ ಭಾರತದ ವಿಶಾಲ ಪ್ರದೇಶವನ್ನು ಆವರಿಸಿತು. ಭೂಮಿಯ ಮೇಲ್ಪದರದಲ್ಲಿರುವ ಅನೇಕ ಬಿರುಕುಗಳಿಂದ ಈ ಶಿಲಾರಸ ಹರಿದು ಉಕ್ಕಿತು. ಇದಕ್ಕೆ ಸೀಳು ಅಗ್ನಿಪರ್ವತದ ಹೊರ ಚೆಲ್ಲುವಿಕೆ ಎಂದು ಹೆಸರು. ಬೆಸಾಲ್ಟ್ ಶಿಲಾ ಸಮೂಹವಿದ್ದು ಮಟ್ಟವಾದ ಮೇಲ್ಭಾಗ ಪ್ರಸ್ಥಭೂಮಿಯ ಲಕ್ಷಣವಿರುವ ಇಂಥ ಪ್ರದೇಶವನ್ನು ಪ್ರಸ್ಥಭೂಮಿ ಬೆಸಾಲ್ಟ್ ಎಂದು ಕರೆಯುವರು. ಇಲ್ಲಿಯ ಶಿಲೆಗಳ ಹೊರಸ್ತರಗಳು ಹಂತ ಹಂತವಾಗಿರುವುದರಿಂದ ಇವನ್ನು ಟ್ರ್ಯಾಪ್ ಶಿಲೆಗಳು ಎಂದೂ ಕರೆಯುವುದುಂಟು. ಮೂಲವಾಗಿ ಸ್ಕ್ಯಾಂಡಿನೇವಿಯ ದೇಶದ ಭಾಷೆಯಲ್ಲಿ ಟ್ರ್ಯಾಪ್ ಎಂದರೆ ಹಂತ ಎಂದಾಗುವುದು.

ದಕ್ಷಿಣ ಮತ್ತು ಪಶ್ಚಿಮ ಭಾರತದ ವಿಶಾಲವಾದ ಪ್ರದೇಶದಲ್ಲಿ ಡೆಕ್ಕನ್ ಟ್ರ್ಯಾಪ್ ಶಿಲೆಗಳು ಹರಡಿವೆ. ಸು. 3,21,869 ಚ.ಕಿಮೀ ವಿಸ್ತೀರ್ಣದ ಡೆಕ್ಕನ್ ಟ್ರ್ಯಾಪ್ ಮುಂಬೈ, ಕಾಥೇವಾಡ, ಮಧ್ಯಪ್ರದೇಶ, ಮಧ್ಯಭಾರತ, ಡೆಕ್ಕನ್ ಪ್ರದೇಶ, ಬೆಳಗಾಂವಿ (ಕರ್ನಾಟಕ) ಮೊದಲಾದ ಮೂಲ ಪ್ರದೇಶಗಳನ್ನು ಒಳಗೊಂಡು ಅಂಧ್ರದ ರಾಜಮಹೇಂದ್ರಿ, ಸಿಂಧ್ ಮತ್ತು ಜಾರ್ಖಂಡ್ ವರೆಗೆ ಹಬ್ಬಿರಬಹುದೆಂದು ಅಂದಾಜಿಸಲಾಗಿದೆ. ಡೆಕ್ಕನ್ ಟ್ರ್ಯಾಪ್ ಶಿಲಾ ಸಮೂಹ ಪದರಗಳಲ್ಲಿ ಹರಡಿದೆ. ಒಮ್ಮೆ ಹೊರಹೊಮ್ಮಿದ ಶಿಲಾರಸ ಹರಡಿ, ಘನೀಭವಿಸಿದ ಬಳಿಕ ಇನ್ನೊಮ್ಮೆ ಪ್ರವಾಹ ಹೊರಹೊಮ್ಮಿ, ಪಸರಿಸಿ, ಆರಿ ಶಿಲಾಸಮೂಹವನ್ನು ಪದರಪದರಗಳಲ್ಲಿ ಮಾರ್ಪಡಿಸಿತು. ಪದರ ರೂಪುಗೊಂಡ ಮೇಲೆ ಇನ್ನೊಂದು ಪದರ ಹರಿದು ಬರುವುದಕ್ಕೆ ಮುಂಚೆ ಸಾಕಷ್ಟು ಕಾಲವಿದ್ದುದರಿಂದ ಅಲ್ಲಲ್ಲಿ ಸೇರಿದ ಸಿಹಿನೀರಿನ ತಂಗುಗಳಲ್ಲಿ ಮೆಕ್ಕಲು ಕೂಡಿಬಿದ್ದು ಜಲಜಶಿಲೆಗಳು ರೂಪುಗೊಂಡವು. ಇದನ್ನು ಅಂತರ್ ಟ್ರ್ಯಾಪ್ ಸ್ತರ ಎಂದು ಕರೆಯುವರು. ಈ ಸ್ತರಗಳಲ್ಲಿ ಜೀವ್ಯವಶೇಷಗಳು ಕಂಡುಬಂದಿದ್ದು ಇವು ಡೆಕ್ಕನ್ ಪ್ರದೇಶದಲ್ಲಿ ಅಗ್ನಿಶಿಲಾ ಚಟುವಟಿಕೆಯ ಕಾಲವನ್ನು ನಿರ್ಧರಿಸುವಲ್ಲಿ ಬಹಳಷ್ಟು ಸಹಕಾರಿಯಾಗಿವೆ. ಅಂತರಟ್ರ್ಯಾಪ್ ಸ್ತರಗಳು ಡೆಕ್ಕನ್ ಶಿಲಾ ಸಮೂಹದ ಮೇಲೆ ಮತ್ತು ತಳಭಾಗದಲ್ಲಿರುವ ಪದರಗಳ ಮಧ್ಯದಲ್ಲಿವೆ.

ಟ್ರ್ಯಾಪ್ ಶಿಲಾವರ್ಗದ ಬಹುಭಾಗ ಆರ್ಷೇಯಕಲ್ಪದ ಶಿಲಾಪ್ರದೇಶದ ಮೇಲ್ಭಾಗದಲ್ಲಿ ರೂಪುಗೊಂಡಿದೆ. ಆದರೆ ಕೆಲವು ಪ್ರದೇಶದಲ್ಲಿ ಆರ್ಷೇಯ ಕಲ್ಪವಾದ ಮೇಲೆ ರೂಪುಗೊಂಡ ಮತ್ತು ಜಲಜಶಿಲಾಸ್ತರಗಳ ಮೇಲೆ ಹರಡಿರುವ ಇವನ್ನು ಟ್ರ್ಯಾಪ್ ಕೆಳಸ್ತರಗಳು ಎಂದು ಕರೆಯುವರು. ಕೆಳ ಪ್ರದೇಶದಲ್ಲಿ ಟ್ರ್ಯಾಪ್ ಶಿಲೆಗಳು ರೂಪುಗೊಂಡ ಬಳಿಕ ಅವುಗಳ ಕೆಲವು ಭಾಗಗಳು ಸಮುದ್ರದ ಭಾಗವಾಗಿದ್ದುದರಿಂದ ಅವುಗಳ ಮೇಲೆ ಜಲಜ ಶಿಲೆಗಳು ಸಂಚಯನವಾದವು. ಇಂಥ ಶಿಲಾಸ್ತರಗಳನ್ನು ಟ್ರ್ಯಾಪ್ ಮೇಲುಸ್ತರ ಎಂದು ಕರೆಯುವರು. ಅಗ್ನಿಶಿಲಾ ಚಟುವಟಿಕೆ ಕ್ರಿಟೇಷಸ್ ಯುಗದ ಅಂತ್ಯದಲ್ಲಿ ಪ್ರಾರಂಭವಾಯಿತು. ಈ ವಿಶಾಲವಾದ ಡೆಕ್ಕನ್ ಪ್ರದೇಶದ ಅಗ್ನಿಶಿಲಾ ಚಟುವಟಿಕೆ ನಾಗಪುರ ಚಿಂದ್ವಾರ ಪ್ರದೇಶದಲ್ಲಿರುವ ಟ್ರ್ಯಾಸ್ ಶಿಲೆಗಳು ಮೊತ್ತಮೊದಲು ಹರಿದು ಬಂದ ಶಿಲಾರಸದಿಂದ ಆಗಿರಬಹುದೆಂದು ಮತ್ತು ಮುಂಬೈ ಪ್ರದೇಶ, ಮಲಬಾರ್ ಪರ್ವತ, ವರ್ಲಿಯ ಶಿಲಾಪದರಗಳು ಕೊನೆಯಲ್ಲಿ ರೂಪುಗೊಂಡವು ಎಂಬುದನ್ನು ಖಚಿತಗೊಳಿಸಲಾಗಿದೆ.

ಡೆಕ್ಕನ್ ಟ್ರ್ಯಾಪ್ ಪ್ರದೇಶದಲ್ಲಿ ಅಲ್ಲಲ್ಲಿ ಮಟ್ಟ ಮಟ್ಟವಾದ ಮೇಲ್ಭಾಗವಿರುವ ಪರ್ವತ ಶ್ರೇಣಿಗಳು, ಹಂತಹಂತವಾಗಿರುವ ದಂಡೆಗಳೂ ಇವೆ. ಕೆಲವು ಪ್ರದೇಶಗಳಲ್ಲಿ ಟ್ರ್ಯಾಪ್

ಶಿಲೆಗಳು ಸ್ತಂಭಾಕೃತಿಯ ಸೀಳು ರಚನೆಯನ್ನು ಪಡೆದಿವೆ. ಡೆಕ್ಕನ್ ಟ್ರ್ಯಾಪ್ ಪ್ರದೇಶದ ಸುತ್ತಲೂ ಶಿಲಾರಸದ ಹೊರಹೊಮ್ಮಿಕೆಗೆ ಸಂಬಂಧಿಸಿದ ಅನೇಕ ಡೈಕುಗಳು ಮತ್ತು ಸಿಲ್‌ಗಳು ಇವೆ. ಡೈಕುಗಳು ಹೇರಳವಾಗಿವೆ. ಒಂದೇ ಸಮವಾಗಿ ಹರಡಿಲ್ಲ.

ಡೆಕ್ಕನ್ ಟ್ರ್ಯಾಪ್ ಪ್ರದೇಶ, ಎಚ್. ಎಸ್. ವಾಷಿಂಗ್‌ಟನ್ (1922) ಎಂಬಾತ ಪ್ರಸ್ಥಭೂಮಿ ಬೆಸಾಲ್ಟ್ ಎಂದು ಹೆಸರಿಸಿರುವ ಬೆಸಾಲ್ಟ್ ಶಿಲಾವಿಧದಿಂದ ಕೂಡಿದೆ. ಇಲ್ಲಿರುವ ಶಿಲಾವಿಧಗಳ ಧಾತು ಸಮೂಹ ಈ ವಿಶಾಲ ಪ್ರದೇಶದ ಬಹು ಭಾಗದವರೆಗೆ ಒಂದೇ ಸಮವಾಗಿದೆ. ಅದು ಬೆಸಾಲ್ಟ್ ಅಥವಾ ಡಾಲೆರೈಟನ್ನು ಹೋಲುತ್ತದೆ. ಈ ಶಿಲೆಗಳ ಬಣ್ಣ ಆಮ್ಲಿತ ವಿಧಗಳಲ್ಲಿ ಕೆನೆ ಮತ್ತು ಬೂದಿ ಬಣ್ಣದ್ದಾಗಿಯೂ ಇತರ ವಿಧಗಳಲ್ಲಿ ಕಪ್ಪು, ಬೂದು ಮತ್ತು ಕಪ್ಪು ಆಮ್ಲಿತ, ಹಸುರು ಬಣ್ಣದ್ದಾಗಿಯೂ ಇದೆ. ಮುಂಬೈ, ಕಾಥೇವಾಡ, ಕಚ್ಛ್ ಪ್ರದೇಶಗಳಲ್ಲಿ ಆಮ್ಲಿತ, ಮಧ್ಯವರ್ತಿ ಮತ್ತು ಪ್ರತ್ಯಾಮ್ಲಿತ ಶಿಲಾವಿಧಗಳಿವೆ. ಇವುಗಳಲ್ಲಿ ಲಿಂಬರ್ಗೈಟ್, ಅಂಡೆಸೈಟ್, ಅಬ್ಸಿಡಿಯಾನ್, ಪಿಚ್ ಸ್ಟೋನ್ ಮೊದಲಾದ ಜ್ವಾಲಾಮುಖಜ ಶಿಲೆಗಳೂ ಲ್ಯಾಂಪ್ರೊಫೈರ್, ಪಾರ್ಫರೈಟ್, ಗ್ರ್ಯಾನೊಫೈರ್ ಮುಂತಾದ ಮಧ್ಯಂತರ ಶಿಲೆಗಳೂ ಇವೆ.

ಬೆಸಾಲ್ಟ್‌ಶಿಲೆಗಳನ್ನು ಕಟ್ಟಡ ನಿರ್ಮಿಸುವಲ್ಲಿ ಉಪಯೋಗಿಸುವರು. ಇದಲ್ಲದೆ ಪ್ಲೇಜಿಯೋಕ್ಲೇಸ್, ಫೆಲ್‌ಸ್ಪಾರ್, ಪೈರಾಕ್ಸೀನ್ ಆಲಿವಿನ್, ಮ್ಯಾಗ್ನಟೈಟ್, ಹಿಮಟೈಟ್, ಅಪಟೈಟ್ ಮತ್ತು ಲೂಕಾಕ್ಸಿನ್ ಮೊದಲಾದ ಉಪಯುಕ್ತ ಖನಿಜ ಸಮುದಾಯವಿದೆ.

(ಕೆ.ಎಸ್.ಯು.)

**ಡೆಡ್‌ಹಾರ್ಟ್ ಪ್ರದೇಶ:** ಅತಿ ದೊಡ್ಡ ನಗರಗಳಲ್ಲಿನ ಕೇಂದ್ರ ವಾಣಿಜ್ಯ ಪ್ರದೇಶವನ್ನು ಈ ಹೆಸರಿನಿಂದ ಕರೆಯುವುದು ರೂಢಿಯಲ್ಲಿದೆ. ಇದನ್ನು ಡೌನ್‌ಟೌನ್ ಎಂತಲೂ ಕರೆಯುವರು.

ಈ ವಲಯ ನಗರಗಳ ಹೃದಯ ಭಾಗ. ಭೂಮಿಯ ಮೌಲ್ಯ ಅತಿ ಹೆಚ್ಚು, ಬಹು ಮಹಡಿ ಕಟ್ಟಡಗಳ ಜೊತೆಗೆ ನೆಲಮಾಳಿಗೆಯನ್ನು ಈ ಕಟ್ಟಡಗಳು ಹೊಂದಿರುತ್ತವೆ. ಭೂಮಿಯನ್ನು ಹೆಚ್ಚು ಸಾಂದ್ರಯುತವಾಗಿ ಬಳಕೆ ಮಾಡುವುದು ಇದರ ಮುಖ್ಯ ಉದ್ದೇಶ. ಹಗಲಿನ ವೇಳೆ ಹಾಗೂ ಮಧ್ಯರಾತ್ರಿಯವರೆಗೆ ಅತ್ಯಂತ ಹೆಚ್ಚು ಜನನಿಬಿಡವಾಗಿದ್ದು, ವಾಣಿಜ್ಯ ಚಟುವಟಿಕೆಗಳನ್ನು ಹೊಂದಿರುವ ಈ ಭಾಗವನ್ನು ರಾತ್ರಿಯಾಗುತ್ತಿದ್ದಂತೆ ನಿಧಾನವಾಗಿ ನಿಶಬ್ದವು ಆವರಿಸುವುದು ಹಗಲಿನ ವೇಳೆಯಲ್ಲಿ ವಾಣಿಜ್ಯೋದ್ಯಮದಲ್ಲಿ ತೊಡಗುವ ಜನರು ಈ ವಲಯದಿಂದ ಹೊರಗಿರುವ ತಮ್ಮ ವಸತಿಗಳಿಗೆ ತೆರಳುವರು. ಇದರಿಂದ ಈ ಕೇಂದ್ರ ಭಾಗದಲ್ಲಿ ಸ್ಮಶಾನ ಮೌನವಿದ್ದು, ಇದನ್ನೇ ಡೆಡ್ ಹಾರ್ಟ್ ಪ್ರದೇಶ ಎಂದು ಕರೆಯಲಾಗಿದೆ.

(ಎಸ್.ಎನ್.)

**ಡೆನ್ಮಾರ್ಕ್:** ವಾಯವ್ಯ ಯುರೋಪಿನ ಒಂದು ರಾಜಪ್ರಭುತ್ವ. ಸ್ಕ್ಯಾಂಡಿನೇವಿಯನ್ ರಾಜ್ಯಗಳಲ್ಲಿ ಅತ್ಯಂತ ಚಿಕ್ಕದು. ಇದು $63^0 21'$–$66^0 32'$ ಉ. ಅ. ಹಾಗೂ $13^0 30'$–$24^0 30'$ ಪೂ.ರೇ. ಗಳ ನಡುವೆ ಸನ್ನಿವೇಶಗೊಂಡಿದೆ. ತಗ್ಗಾದ ಜಟ್ಲಂಡ್ ಪರ್ಯಾಯದ್ವೀಪದಿಂದಲೂ ಎರಡು ದ್ವೀಪಸ್ತೋಮಗಳಿಂದಲೂ ಕೂಡಿದೆ. ವಿಸ್ತೀರ್ಣ 43074 ಚ.ಕಿಮೀ. ಪೂರ್ವದಲ್ಲಿ ಸ್ಕ್ಯಾಗರ್‌ರ್ಯಾಕ್ ಮತ್ತು ಬಾಲ್ಟಿಕ್ ಸಮುದ್ರಗಳ ನಡುವೆ ಇರುವ ದ್ವೀಪಸ್ತೋಮದಲ್ಲಿ 482 ದ್ವೀಪಗಳಿವೆ. ಇವುಗಳ ಪೈಕಿ ಅತ್ಯಂತ ಪೂರ್ವದಲ್ಲಿ ಒಂಟಿಯಾಗಿರುವ ದ್ವೀಪ ಬಾರ್ನ್‌ಹೋಮ್. ಇನ್ನೊಂದು ದ್ವೀಪಸ್ತೋಮವಾದ ಫ್ಯಾರೋ (1,399 ಚ.ಕಿಮೀ) ಇರುವುದು ಅಟ್ಲಾಂಟಿಕ್‌ನಲ್ಲಿ 1200 ಕಿಮೀ ದೂರದ ಐಸ್ಲೆಂಡ್ ಮಾರ್ಗದಲ್ಲಿ. 1953ರ ವರೆಗೆ ಡೆನ್ಮಾರ್ಕಿನ ವಸಾಹತಾಗಿದ್ದ ಗ್ರೀನ್ಲೆಂಡ್ ಈಗ ಅಧಿಕೃತವಾಗಿ ಡೆನ್ಮಾರ್ಕಿನ ಭಾಗ. ಡೆನ್ಮಾರ್ಕಿನ ಮುಖ್ಯ ಭೂಭಾಗ ಮೂರು ಕಡೆಗಳಲ್ಲಿ ಸಮುದ್ರದಿಂದ ಆವೃತವಾಗಿದೆ. ಜಟ್ಲಂಡ್ ಪರ್ಯಾಯ ದ್ವೀಪದ ಬಹುಭಾಗ ಡೆನ್ಮಾರ್ಕಿನಲ್ಲಿದೆ. ಉಳಿದ ದ್ವೀಪಗಳೆಂದರೆ ಷಲಾನ್, ಫಿನ್, ಫಾಲ್‌ಸ್ಟರ್, ಲಾಲೆಂಡ್, ಲಾಂಗಲಾನ್. ರಾಜಧಾನಿ ಕೋಪೆನ್‌ಹೇಗೆನ್. ಜನಸಂಖ್ಯೆ 1,339,395 (2002).

ಭೂ ಲಕ್ಷಣಗಳು: ಡೆನ್ಮಾರ್ಕಿನ ಮೇಲ್ಮೈ ಲಕ್ಷಣ ಪ್ಲೀಸ್ಟೋಸೀನ್ ಕಲ್ಪದಲ್ಲಿ ತಲೆದೋರಿದ ಹಿಮಯುಗದಿಂದ ರೂಪುತಳೆಯಿತು.

ಡೆನ್ಮಾರ್ಕಿನಲ್ಲಿ ಭೂಯುಗದ ಅತ್ಯಂತ ಹಳೆಯ ಕಾಲವೆನಿಸಿದ ಪ್ರಿಕೇಂಬ್ರಿಯನ್ ಕಲ್ಪದ ನೈಸ್ (ಗೀರುಶಿಲೆ) ಮತ್ತು ಇತರ ರೂಪಾಂತರ ಶಿಲೆಗಳು ಹಾಗೂ ಗ್ರಾನೈಟುಗಳಿವೆ. ಇವುಗಳ ಸವೆತದಿಂದಾದ ಶಿಲಾಛಿದ್ರಗಳು ನಿಕ್ಷೇಪಗೊಂಡು ನೆಕ್ಸೋಮರಳು ಶಿಲಾಸ್ತರಗಳು ಉಂಟಾಗಿವೆ. ಇವುಗಳ ಮೇಲೆ ಬೂದು ಹಾಗೂ ಬಿಳಿಯ ಕ್ವಾರ್ಟ್ಸೈಟುಗಳು ಹರಡಿವೆ. ಟ್ರಯಾಸಿಕ್ ಕಾಲದ ಕೆಂಪು ಹಾಗೂ ಹಸುರು ಜೇಡುಶಿಲೆ ಮತ್ತು ಮರಳು ಶಿಲಾಸ್ತರಗಳೂ ಜುರಾಸಿಕ್ ಕಾಲದ ಸಾಗರ, ನದಿ ಮತ್ತು ನದಿಮುಖಜ ಪ್ರದೇಶಗಳಲ್ಲಿ ನಿಕ್ಷೇಪಗೊಂಡ ಕಲ್ಲಿದ್ದಲು ಸ್ತರಗಳೂ ಕಾವುಜೇಡು ನಿಕ್ಷೇಪಗಳೂ ಅಲ್ಲಲ್ಲಿ ಕಂಡುಬರುತ್ತವೆ.

ಇದೇ ರಾಜ್ಯದ ಗ್ರೀನ್‌ಲೆಂಡ್ ಪ್ರಪಂಚದಲ್ಲೇ ಅತ್ಯಂತ ದೊಡ್ಡ ದ್ವೀಪ. ಇದರ ಬಹುಭಾಗ ಇಂದಿಗೂ ಮಂದವಾದ ಹಿಮದ ಹಾಳೆಗಳಿಂದ ಮುಚ್ಚಿಹೋಗಿದೆ. ಉತ್ತರ ಮತ್ತು ಪೂರ್ವ ಕರಾವಳಿಗಳಲ್ಲಿ ಭೂಇತಿಹಾಸದ ವಿವಿಧಕಾಲಗಳ ಉತ್ತಮ ಜಲಜಶಿಲಾಶ್ರೇಣಿಗಳಿವೆ. ಪಶ್ಚಿಮ ಕರಾವಳಿಯ ನುಗ್‌ಸೌಕ್ ಮತ್ತು ಸ್ವಾರ್ಟೆನ್ ಹುಕ್ ಪರ್ಯಾಯ ದ್ವೀಪಭಾಗಗಳು ಮತ್ತು ಡಿಸ್ಕೊದ್ವೀಪದಲ್ಲಿ ಕ್ರಿಟೇಷಸ್ ಮತ್ತು ಟರ್ಷಿಯರಿ ಕಲ್ಪಗಳಿಗೆ ಸೇರಿದ ಜಲಜಶಿಲಾನಿಕ್ಷೇಪಗಳಿವೆ.




ಮೇಲ್ಮೈಲಕ್ಷಣ : ಡೆನ್ಮಾರ್ಕಿನ ಕಡಲ ತೀರದ ಉದ್ದ 7,438 ಕಿಮೀ. ಜಟ್ಲಂಡ್ ಮತ್ತು ಅದರ ಬಳಿಯ ದ್ವೀಪಸ್ತೋಮ ಉತ್ತರ ಯುರೋಪ್ ಬಯಲಿನ ಭಾಗ. ಅದರ ಅತ್ಯುನ್ನತ ಬಿಂದು 160 ಮೀಟರ್ ಆಗ್ನೇಯ ಜಟ್ಲಂಡಿನಲ್ಲಿದೆ. ಈ ಪ್ರದೇಶದ ಅರ್ಧಭಾಗದ ಎತ್ತರ ಸಮುದ್ರ ಮಟ್ಟದಿಂದ 35 ಮೀ ಕಡಿಮೆ. ಡೆನ್ಮಾರ್ಕಿನ ಸರಾಸರಿ ಎತ್ತರ 30 ಮೀ. ಇಲ್ಲಿ ಎರಡು ಬಗೆಯ ಭೂಲಕ್ಷಣಗಳಿವೆ. ಜಟ್ಲಂಡಿನ ಪಶ್ಚಿಮ ತೀರದಲ್ಲಿರುವ ನಿಸಮ್ ಕಡಲ ತೋಳಿನಿಂದ ಪೂರ್ವಾಭಿಮುಖವಾಗಿ ವೀಬಾರ್ಗ್ ಕೌಂಟಿಯ ಕಡೆಗೂ ಅಲ್ಲಿಂದ ದಕ್ಷಿಣಾಭಿಮುಖವಾಗಿ ಅಬನ್ರಾಗೆ ಮತ್ತು ಜರ್ಮನಿಯಲ್ಲಿರುವ ಫ್ಲೆನ್ಸ್‌ಬರ್ಗ್ ನಗರಕ್ಕೆ ಗೆರೆಯೊಂದನ್ನೆಳೆದರೆ (ಭೂಪಟದಲ್ಲಿ A—B ರೇಖೆ) ಅದು ಜಟ್ಲಂಡನ್ನು ಎರಡು ಸ್ವಾಭಾವಿಕ ವಿಭಾಗಗಳನ್ನಾಗಿ ವಿಂಗಡಿಸುತ್ತದೆ. ಕೊನೆಯ ಹಿಮಾಚ್ಛಾದನೆಯ ಕಾಲದಲ್ಲಿ ಪಶ್ಚಿಮಾಭಿಮುಖವಾಗಿ ಇಲ್ಲಿಯವರೆಗೆ ಹಿಮ ಹರಡಿತ್ತು. ಈ ಎಲ್ಲೆಯ ಪಶ್ಚಿಮ ಮತ್ತು ದಕ್ಷಿಣಕ್ಕೆ ತಗ್ಗಿನ, ಮರಳು ತುಂಬಿದ ಬಂಜರು ನೆಲ ಏಕಪ್ರಕಾರವಾಗಿ ಹಬ್ಬಿದೆ. ಪೂರ್ವದ ಕಡೆಯ ನೆಲ ಹೆಚ್ಚು ವೈವಿಧ್ಯಮಯ. ದುಂಡು ಬೆಟ್ಟಗಳೂ ಸರೋವರಗಳೂ ತೆರೆದ ಕಣಿವೆಗಳೂ ಕಿರಿದಾದ ಬಯಲುಗಳೂ ಇವೆ. ಇಲ್ಲಿ ಕಾಡುಗಳು ತಕ್ಕಮಟ್ಟಿಗೆ ಇವೆ. ಜನವಸತಿಯೂ ಹೆಚ್ಚು.

ಡೆನ್ಮಾರ್ಕಿನಲ್ಲಿ ದೊಡ್ಡ ನದಿಗಳಿಲ್ಲ. ಸಂಚಾರಯೋಗ್ಯವಲ್ಲದ ಕೆಲವು ಚಿಕ್ಕನದಿಗಳುಂಟು. ಸರೋವರಗಳೂ ಚಿಕ್ಕವು; ಉತ್ತರ ಸಮುದ್ರಕ್ಕೆ ಅಭಿಮುಖವಾಗಿರುವ ತೀರದಲ್ಲಿ ಸಾಲಾಗಿ ಮರಳುದಿಬ್ಬಗಳಿವೆ. ಇನ್ನು ಉತ್ತರದಲ್ಲಿ ಅಳಿವೆಗಳಿಗೆ ಅಡ್ಡಲಾಗಿ ಮರಳು ಚಾಚಿಕೊಂಡು ಕಿರಿ ಆಳದ ಲಗೂನುಗಳು ಸಂಭವಿಸಿವೆ. ಎಸ್ಬೀಯರ್ಗ್ ಒಂದೇ ತಕ್ಕಮಟ್ಟಿಗೆ ಉತ್ತಮವಾದ ಬಂದರು. ಬಾಲ್ಟಿಕ್ ತೀರಕ್ಕೆ ಈಗಿನ ಸ್ವರೂಪ ಬಂದಿರುವುದು ಹಿಮನದಿಗಳ ಕ್ರಿಯೆಯಿಂದಾಗಿ.

ವಾಯುಗುಣ : ಉತ್ತರ ಸಮುದ್ರದ ಪೂರ್ವದ ಅಂಚಿನಲ್ಲಿರುವ ಡೆನ್ಮಾರ್ಕಿನದು ಆರ್ದ್ರ ವಾಯುಗುಣ. ಸಾಮಾನ್ಯವಾಗಿ ಇದು ಸಾಗರದ ಪ್ರಭಾವಕ್ಕೆ ಒಳಗಾಗಿರುವುದಾದರೂ ಚಳಿಗಾಲದಲ್ಲಿ ಪೂರ್ವ ಯೂರೋಪಿನ ಖಂಡಾಂತರ ವಾಯುಗುಣದ ಪ್ರಭಾವಕ್ಕೆ ಇದೂ ಒಳಗಾಗಿ, ಬಾಲ್ಟಿಕ್ ಸಮುದ್ರದ ನೀರು ಗಡ್ಡೆಕಟ್ಟಬಹುದು. ಪೂರ್ವಕ್ಕೆ ಹೋದಂತೆ ಚಳಿಗಾಲದಲ್ಲಿ ಉಷ್ಣತೆ ಹೆಚ್ಚು ತಗ್ಗುತ್ತದೆ, ಬೇಸಗೆಯಲ್ಲಿ ಹೆಚ್ಚು ಏರುತ್ತದೆ. ವಾರ್ಷಿಕ ಮಧ್ಯ ಉಷ್ಣತೆ $8^0$ ಸೆ. ಜನವರಿ–ಫೆಬ್ರವರಿಗಳ ಸರಾಸರಿ $0^0$ ಸೆ. ಜುಲೈ ಗರಿಷ್ಠ ಉಷ್ಣತೆಯ ತಿಂಗಳು. ಆಗಿನ ಸರಾಸರಿ ಉಷ್ಣತೆ $16^0$ ಸೆ. ಪಶ್ಚಿಮದಲ್ಲಿ ಅಕ್ಟೋಬರ್–ಏಪ್ರಿಲ್ ನಡುವೆ 75 ದಿನಗಳಲ್ಲಿ ಮಂಜು ಮುಸುಕಿರುತ್ತದೆ. ಬೇಸಗೆಯಲ್ಲಿ ಸಿಡಿಲು–ಗುಡುಗುಗಳೊಂದಿಗೆ ಮಳೆ ಸುರಿಯುತ್ತದೆ. ಆಗಸ್ಟ್ ಆರ್ದ್ರತಮ ತಿಂಗಳು. ವರ್ಷದಲ್ಲಿ 20–40 ದಿನಗಳಲ್ಲಿ ಹಿಮ ಬೀಳುತ್ತದೆ. ವಾತಾವರಣದ ಒತ್ತಡಕ್ಕೆ ಅನುಗುಣವಾಗಿ ಗಾಳಿಯ ದಿಕ್ಕು ಬದಲಾಗುತ್ತದೆ.

ಸಸ್ಯ ಪ್ರಾಣಿವರ್ಗ : ಡೆನ್ಮಾರ್ಕಿನ ಬಹುಭಾಗ ಮಿಶ್ರ ಓಕ್ ಕಾಡುಗಳಿಂದ ಆವೃತವಾಗಿದೆ. ಶಂಕುಧಾರಿ ಮರಗಳೇ ಹೆಚ್ಚು.

ಮಧ್ಯ ಯುರೋಪಿನ ವನ್ಯಮೃಗಗಳು ಇಲ್ಲೂ ಸಾಮಾನ್ಯ. ಜಿಂಕೆ, ನರಿ, ಮೊಲ ಹೇರಳವಾಗಿವೆ. ಕುಂದಿಲಿಗಳು ಫ್ಯಾನರ್ ದ್ವೀಪಕ್ಕೆ ಸೀಮಿತ. ಸಿಹಿ ನೀರು ಮೀನು ಮತ್ತು ಈಲ್‌ಗಳು ಅನೇಕ ನದಿಗಳಲ್ಲೂ ಸರೋವರಗಳಲ್ಲೂ ಇವೆ.

ಜನತೆ : ಡೆನ್ಮಾರ್ಕಿನ ಜನ ನಾರ್ಡಿಕ್ ಜನಾಂಗಕ್ಕೆ ಸೇರಿದವರು. ಆದರೆ ಸ್ಕ್ಯಾಂಡಿನೇವಿಯದ ಉತ್ತರಭಾಗದ ಜನರಿಗಿಂತ ಇಲ್ಲಿಯವರು ಇತರ ಜನಾಂಗಗಳೊಂದಿಗೆ ಹೆಚ್ಚು ಮಿಶ್ರಗೊಂಡಿದ್ದಾರೆ. ಡೆನ್ಮಾರ್ಕಿನಲ್ಲಿ ಜಟ್ಲೆಂಡ್ ಪರ್ಯಾಯದ್ವೀಪವಲ್ಲದೆ ಸುಮಾರು ಐನೂರು ದ್ವೀಪಗಳಿರುವುದರಿಂದ ಉಪಭಾಷೆಗಳಿವೆ. ಜನಸಂಖ್ಯೆ: 5,432,335.

ಆರ್ಥಿಕತೆ : ಡೆನ್ಮಾರ್ಕ್ ವ್ಯವಸಾಯಕ್ಕೆ ಪ್ರಸಿದ್ಧವಾಗಿದೆ. ಅದರ ಭೂಮಿಯ ಉತ್ಪನ್ನದ ಮಟ್ಟ ಹೆಚ್ಚಿನದು. ವ್ಯವಸಾಯಕ್ಕೆ ಅನುಕೂಲಕರವಾದ ತೀರಪ್ರದೇಶ ಮತ್ತು ನೀರಾವರಿ ಯೋಜನೆಗಳಿಂದ ಅಲ್ಲಿ ಸಾಗುವಳಿಗೆ ಬಹಳಷ್ಟು ಪ್ರದೇಶ ದೊರೆತಿದೆ. ಕಚ್ಚಾ ಸಾಮಗ್ರಿಯ ಕೊರತೆ ಇದ್ದರೂ ಕೈಗಾರಿಕೀಕರಣ ಶೀಘ್ರವಾಗಿ ಬೆಳೆಯುತ್ತಿದೆ. ಕೃಷಿಗಿಂತ ಕೈಗಾರಿಕೆಯನ್ನು ಹೆಚ್ಚು ಜನ ಈಗ ಅವಲಂಬಿಸಿದ್ದಾರೆ.

1875ರಿಂದ ಕೃಷಿ ಉತ್ಪಾದನೆ ಸತತವಾಗಿ ಹೆಚ್ಚುತ್ತಿದೆ. ಸಾಗುವಳಿಯ ಪ್ರದೇಶದ ವಿಸ್ತರಣೆಯ ಜೊತೆಗೆ ಉತ್ತಮ ತಳಿ ಬೀಜದ ಬಳಕೆ, ವೈಜ್ಞಾನಿಕ ವ್ಯವಸಾಯ ಮತ್ತು ಯಾಂತ್ರೀಕರಣದಿಂದ ಈ ಹೆಚ್ಚಳ ಸಾಧ್ಯವಾಗಿದೆ. ಧಾನ್ಯ, ಆಲೂಗೆಡ್ಡೆ, ಮೇವಿನ ಗೆಣಸು, ಸಿಹಿ ಗೆಣಸು, ಬೀಜಗಳು ಮತ್ತು ಹಸಿರುಮೇವು ಮುಖ್ಯ ಬೆಳೆಗಳು. ಧಾನ್ಯಗಳಲ್ಲಿ ಬಾರ್ಲಿ ಮತ್ತು ಓಟ್ಸ್ ಮುಖ್ಯ.

ಬೆಳೆಗಳ ಉತ್ಪನ್ನದಲ್ಲಿ ವೃದ್ಧಿ, ಪೋಷಕ ಆಹಾರಗಳ ಆಮದು–ಇವುಗಳಿಂದ ಪಶುಸಂಗೋಪನೆಗೆ ಸಹಾಯವಾಗಿದೆ. ಮೊದಲನೆಯ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ವ್ಯವಸಾಯದ ಅಭಿವೃದ್ಧಿಗೆ ಬಹಳ ಹಾನಿಯಾಯಿತು. ಆದರೆ ಇಂದು ಈ ಕ್ಷೇತ್ರದಲ್ಲಿ ಶೀಘ್ರ ಅಭಿವೃದ್ಧಿಯಾಗಿದೆ. ಸಾಕುಪ್ರಾಣಿಗಳ ಹೊಸಹೊಸ ತಳಿಗಳ ಸಂಶೋಧನೆ ಮತ್ತು ಅವುಗಳ ಸಾಕಣೆಯ ವಿಧಾನದಲ್ಲಿ ಸುಧಾರಣೆ ಹಾಗೂ ಯಂತ್ರಗಳ ಉಪಯೋಗದಿಂದ ಡೆನ್ಮಾರ್ಕ್ ಹೈನು ಉತ್ಪನ್ನದಲ್ಲಿ ಪ್ರಪಂಚದಲ್ಲೇ ಉತ್ತಮ ಸ್ಥಾನಗಳಿಸಿರುವ ರಾಷ್ಟ್ರಗಳಲ್ಲಿ ಒಂದಾಗಿದೆ.

ಸಹಕಾರ ಚಳವಳಿ: ಡೆನ್ಮಾರ್ಕಿನಲ್ಲಿ 18ನೆಯ ಶತಮಾನದಲ್ಲಿ ಸಹಕಾರ ಚಳವಳಿ ಪ್ರಾರಂಭವಾಯಿತು. ಡೇನಿಷ್ ರೈತ ಸಂಘಗಳ ಮಹಾಸಂಘ ಮತ್ತು ಡೇನಿಷ್ ಸಹಕಾರ ಸಂಘಗಳ ಮಹಾಸಂಘ ಸೇರಿ ವ್ಯವಸಾಯ ಪರಿಷತ್ತನ್ನು ಸ್ಥಾಪಿಸಿದುವು. ಮುಂದೆ ಪ್ರಥಮ ಹೈನು ಸಹಕಾರ ಸಂಘವನ್ನು ಸ್ಥಾಪಿಸಲಾಯಿತು (1882).

ಮೀನುಗಾರಿಕೆ: ಡೆನ್ಮಾರ್ಕ್ ಮೀನುಗಾರಿಕೆಗೆ ಪ್ರಸಿದ್ಧವಾಗಿದೆ. ಸು. ಶೇ. 0.4 ಜನ ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಹೆಚ್ಚಿನ ಮೀನುಗಾರಿಕೆ ಸಂಘಗಳು ಜಟ್ಲೆಂಡಿನ ಉತ್ತರದ ತುದಿಯ ಸ್ಕಾಗನ್‌ನಲ್ಲಿವೆ.

ಕೈಗಾರಿಕೆ: ಇಲ್ಲಿ ಸಣ್ಣ ಗಾತ್ರದ ಕೈಗಾರಿಕೆಗಳು ಹೆಚ್ಚಾಗಿವೆ. 1870ರಲ್ಲಿ ಡೆನ್ಮಾರ್ಕಿನಲ್ಲಿ ಕೈಗಾರಿಕಾ ಕ್ರಾಂತಿ ಪ್ರಾರಂಭವಾಯಿತು. ನೇಯ್ಗೆ, ನೂಲ್ಗೆ, ಮದ್ಯ ತಯಾರಿಕೆ, ಬ್ರೆಡ್ಡು ತಯಾರಿಕೆ, ಬಟ್ಟೆ ಹೊಲಿಯುವುದು ಮೊದಲಾದ ಕಾರ್ಯಗಳಿಗೆ ಯಂತ್ರಗಳನ್ನು ಅಳವಡಿಸಲಾಯಿತು. ಎರಡನೆಯ ಮಹಾಯುದ್ಧದ ತರುವಾಯ ಕೈಗಾರಿಕಾ ಕ್ಷೇತ್ರದಲ್ಲಿ ತೀವ್ರ ಬೆಳವಣಿಗೆಯಾಯಿತು. ಕಬ್ಬಿಣ ಮತ್ತು ಲೋಹವಸ್ತುಗಳೇ ಇಲ್ಲಿಯ ಕೈಗಾರಿಕಾ ಉತ್ಪಾದನೆಗಳಲ್ಲಿ ಮುಖ್ಯವಾದವು. ಅವುಗಳಲ್ಲಿ ಡೀಸೆಲ್ ಯಂತ್ರಗಳು, ಯಂತ್ರಹಡಗುಗಳು, ಹಾಲಿನ ಮತ್ತು ವ್ಯವಸಾಯ ಯಂತ್ರಗಳು, ರೆಫ್ರಿಜಿರೇಟರುಗಳು, ಸಿಮೆಂಟ್ ಯಂತ್ರಗಳು, ವಿದ್ಯುತ್ ಉಪಕರಣಗಳು ಹಾಗೂ ಮೋಟರ್ ಯಂತ್ರಗಳು ಮುಖ್ಯವಾದವು. ಇವುಗಳ ಜೊತೆಗೆ ರಾಸಾಯನಿಕ, ಮರಮುಟ್ಟು, ಸಿಮೆಂಟ್, ಬೀರ್, ಪಿಂಗಾಣಿ ಸರಕು, ಪೀಠೋಪಕರಣ, ಸಕ್ಕರೆ, ಹತ್ತಿಬಟ್ಟೆ ಮೊದಲಾದವುಗಳಿಗೆ ಸಂಬಂಧಿಸಿದ ಕಾರ್ಖಾನೆಗಳಿವೆ. ದೋಣಿ ಮತ್ತು ಹಡಗು ಕಟ್ಟುವ ಕೈಗಾರಿಕೆ ಗಣ್ಯಸ್ಥಾನಪಡೆದಿದೆ.

ಸಾರಿಗೆ, ಸಂಪರ್ಕ: ದೇಶದ ಮುಖ್ಯ ರಸ್ತೆಗಳ ಉದ್ದ 8,512 ಕಿಮೀ. ಸರ್ಕಾರ ನಡೆಸುತ್ತಿರುವ ರೈಲ್ವೆ 2,443 ಕಿಮೀ. 1,576 ಕಿಮೀ ರೈಲ್ವೆ ಖಾಸಗಿ ವಲಯದಲ್ಲಿದೆ. ಕೋಪೆನ್‌ಹೇಗೆನ್‌ನಿಂದ ಎಸ್‌ಬೀಯರ್ಗ್‌ಗೆ ಹೆದ್ದಾರಿಯೂ ರೈಲ್ವೆಯೂ ಇವೆ.

ಕೋಪೆನ್‌ಹೇಗೆನ್‌ನಿಂದ ಪಶ್ಚಿಮ ಯುರೋಪಿನ ಎಲ್ಲ ಮುಖ್ಯನಗರಗಳಿಗೆ ಮತ್ತು ಆಸ್ಟ್ರೇಲಿಯವನ್ನು ಬಿಟ್ಟು ಉಳಿದ ಎಲ್ಲ ಖಂಡಗಳಿಗೆ ನಿಯತವಿಮಾನ ಸಾರಿಗೆಯುಂಟು. ಆಂತರಿಕ ವಿಮಾನಸಾರಿಗೆ ವ್ಯವಸ್ಥೆಯೂ ಇದೆ. ಕೋಪೆನ್‌ಹೇಗೆನ್‌ನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. (ಬಿ.ವಿ.ಜಿ.;ಡಿ.ಎಸ್.ಜೆ.)

**ಡೆನ್ವರ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೊಲರಾಡೊ ರಾಜ್ಯದ ಮುಖ್ಯಪಟ್ಟಣ. ಪ್ರಮುಖ ವಾಣಿಜ್ಯನಗರ, ಡೆನ್ವರ್ ಕೌಂಟಿಯ ಆಡಳಿತಕೇಂದ್ರ. ಸೌತ್ ಪ್ಲ್ಯಾಟ್ ನದಿಯ ದಡದಲ್ಲಿ ಉ.ಅ. $39^0 44' 53''$ ಮತ್ತು ಪ.ರೇ. $104^0 50' 43''$ ಮೇಲೆ ಇದೆ. ಜನಸಂಖ್ಯೆ 554636 (2000). ಇದು ರಾಕೀ ಪರ್ವತದ ತಪ್ಪಲಿನಿಂದ 18 ಕಿಮೀ ಪೂರ್ವಕ್ಕೆ ಸಮುದ್ರಮಟ್ಟದಿಂದ 1586 ಮೀ ಎತ್ತರದಲ್ಲಿರುವುದರಿಂದ ಇದರ ವಾಯುಗುಣ ಹಿತಕರವಾದ್ದು. ವಾತಾವರಣದ ಆರ್ದ್ರತೆ ಕಡಿಮೆ (ಸರಾಸರಿ ಶೇ.52). ವಾರ್ಷಿಕ ಮಳೆ 40 ಸೆಂಮೀ. ವರ್ಷದಲ್ಲಿ 249 ದಿನ ಬಿಸಿಲು ಇರುತ್ತದೆ. ಮಹಾಬಯಲಿನ ಪಶ್ಚಿಮದ ಅಂಚಿನಲ್ಲಿರುವ ಈ ನಗರ ಈ ಪ್ರದೇಶದ ಬಹುಭಾಗಕ್ಕೆ ವಾಣಿಜ್ಯ, ಹಣಕಾಸು ಹಾಗೂ ಸಾರಿಗೆಯ ಕೇಂದ್ರ. ಮಿಸೂರಿ ನದಿಯಿಂದ ಪೆಸಿಫಿಕ್ ತೀರದ ರಾಜ್ಯಗಳ ವರೆಗಿನ ಪ್ರದೇಶದಲ್ಲಿ ಇದೇ ಅತ್ಯಂತ ದೊಡ್ಡ ಉತ್ತರ ಅಮೆರಿಕನ್ ನಗರ. ಸುತ್ತಮುತ್ತಣ ಗಣಿಸಂಸ್ಥೆಗಳ ಕೇಂದ್ರ ಕಚೇರಿಗಳು ಇಲ್ಲಿ ಸ್ಥಾಪಿತವಾಗಿವೆ. ಇದು ದನಕುರಿಗಳ ದೊಡ್ಡ ಮಾರುಕಟ್ಟೆ. ಮಾಂಸ, ಹಣ್ಣು ಮತ್ತು ತರಕಾರಿಗಳ ಡಬ್ಬೀಕರಣ ಕೈಗಾರಿಕೆ ಅಭಿವೃದ್ಧಿ ಹೊಂದಿದೆ. ಗಣಿ ಹಾಗೂ ಇತರ ಕೈಗಾರಿಕೆಗಳಿಗೆ ಅಗತ್ಯವಾದ ಯಂತ್ರೋಪಕರಣಗಳ ಮಾರಾಟಕೇಂದ್ರವಿದು, ನಗರದ ನೆರೆಹೊರೆಯಲ್ಲಿ ಹೈನುಗಾರಿಕೆ ಮತ್ತು ಕೋಳಿಸಾಗಣೆ ನಡೆಯುತ್ತದೆ; ಬೀಟ್ ಸಕ್ಕರೆ ಕಾರ್ಖಾನೆಗಳು ಇವೆ. (ಎ.ಜಿ.ಕೆ.)

**ಡೆರ್‌ವೆಂಟ್ ವೈಟಲ್‌ಸೆ:** 1890–1956. ಪ್ರಸ್ತುತ ಭೌಗೋಳಿಕ ಅಂಶಗಳನ್ನು ತಿಳಿಯಲು ಚಾರಿತ್ರಿಕ ಭೌಗೋಳಿಕ ಅಂಶಗಳನ್ನು ಪರಿಶೀಲಿಸುವುದು ಅಗತ್ಯ ಎಂಬುದು ಇವರ ಅಭಿಮತ. ಇದಕ್ಕಾಗಿ ಎಲ್ಲ ಚಾರಿತ್ರಿಕ ಘಟನೆಗಳ ಸರಣಿಗಳಿಗೆ ಬದಲಾಗಿ, ಪ್ರಸ್ತುತವಿರುವ ಸಾಂಸ್ಕೃತಿಕ ದೃಶ್ಯಾವಳಿಯ ಮೇಲಿನ ಕುರುಹು ಅಥವಾ ಗುರುತುಗಳನ್ನು ಮೂಡಿಸಿರುವ ಘಟನಾವಳಿಗಳನ್ನು ಪರಿಶೀಲಿಸಿ ಪ್ರಸ್ತುತ ಸಂದರ್ಭದವರೆಗೆ ಆ ದೃಶ್ಯಾವಳಿ ವಿಕಾಸಗೊಂಡಿರುವ ರೀತಿಯನ್ನು ವಿವರಿಸುವುದು ಅಗತ್ಯವೆಂದು ಪ್ರತಿಪಾದಿಸಿದರು. ಈ ಅಧ್ಯಯನ ಕ್ರಮವನ್ನು ಕ್ರಮಾನುಗತ ಆಕ್ರಮಿಕೆಯ ಪರಿಭಾವನೆಯೆಂದು ಇವರು ವಿವರಿಸಿರುವರು (1929). ಇವರು ಪ್ರಪಂಚದ ಪ್ರಮುಖ ವ್ಯವಸಾಯ ಪ್ರದೇಶಗಳನ್ನು ಪ್ರಥಮ ಬಾರಿಗೆ ವಿಂಗಡಿಸಿದರು. ಇವರು ಭೂಗೋಳ ವಿಜ್ಞಾನಕ್ಕೆ ಕಾಂಪೇಜ್ ಎಂಬ ಶಬ್ದವನ್ನು ಮೊಟ್ಟ ಮೊದಲ ಬಾರಿಗೆ ಪ್ರಾದೇಶಿಕ ಭೂಗೋಳ ವಿಜ್ಞಾನ ಕೆಲವು ವಿಷಯಾಂಶಗಳಿಗೆ ಖಚಿತತೆ ನೀಡಲು ಪರಿಚಯಿಸಿದರು (1956). ಈ ಶಬ್ದದ ವಿಚಾರಾರ್ಥವೇನೆಂದರೆ ಪ್ರಾಕೃತಿಕ, ಜೈವಿಕ ಮತ್ತು ಸಾಮಾಜಿಕ ಪರಿಸರದ ಎಲ್ಲ ವೈಶಿಷ್ಟ್ಯತೆಗಳು ಹಾಗೂ ಲಕ್ಷಣಗಳು ಮಾನವನ ಭೂಮಿ ಆಕ್ರಮಿಕೆಯೊಡನೆ ಕಾರ್ಯ ಸಂಬಂಧವನ್ನು ಹೊಂದಿದೆ ಎನ್ನುವುದಾಗಿದೆ. (ಬಿ.ಸಿ.)

**ಡೆಲಗೋವ ಕೊಲ್ಲಿ:** ಆಗ್ನೇಯ ಆಫ್ರಿಕ ತೀರದ ಒಂದು ಕೊಲ್ಲಿ. ಮೊಜಾಂಬಿಕ್‌ನ ಆಗ್ನೇಯ ತುದಿಯಲ್ಲಿ ದಕ್ಷಿಣ ಆಫ್ರಿಕ ಗಣರಾಜ್ಯದ ಗಡಿಯ ಬಳಿ, ಸ್ಥೂಲವಾಗಿ ದ.ಅ. $26^0$ಯ ಮೇಲಿವೆ. ಹಿಂದೂಮಹಾಸಾಗರಕ್ಕೆ ಸೇರಿದ ಈ ಕೊಲ್ಲಿಯ ಉದ್ದ 30 ಕಿಮೀ, ಅಗಲ 26 ಕಿಮೀ. ಯುರೋಪಿಯನ್ ನಾವಿಕರು ಗೋವದಿಂದ ಹಿಂದಿರುಗುವಾಗ ಇಲ್ಲಿ ತಂಗಿ ಮುಂದುವರಿಯುತ್ತಿದ್ದುದರಿಂದ ಇದಕ್ಕೆ ಈ ಹೆಸರು ಬಂತೆಂದು ಹೇಳಲಾಗಿದೆಯಾದರೂ ಬೆಯಾ ದ ಲಗೂನ್ (ಲಗೂನಿನ ಕೊಲ್ಲಿ) ಎಂಬುದರಿಂದ ಬಹುಶಃ ಇದು ಬಂದಿರಬೇಕು ಎನ್ನಲಾಗಿದೆ.

ಈ ಕೊಲ್ಲಿಯ ದಕ್ಷಿಣ ತುದಿಯಲ್ಲಿ ಇನ್ಯಕ ಪರ್ಯಾಯದ್ವೀಪವೂ ಇನ್ಯಕ ದ್ವೀಪವೂ ಇವೆ. ಇನ್ಯಕ ದ್ವೀಪವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ದ್ವೀಪದ ಉತ್ತರದಲ್ಲಿ ಮರಳುದಿಣ್ಣೆಗಳು ಒಳಕೊಲ್ಲಿಯನ್ನು ಹಿಂದೂಮಹಾಸಾಗರದಿಂದ ಬೇರ್ಪಡಿಸಿವೆ. ಈ ಒಳಕೊಲ್ಲಿ 12 ಕಿಮೀ ಉದ್ದ, 2 ಕಿಮೀ ಅಗಲವಾಗಿದೆ. ಲೊರೆನ್ಸೊ ಮಾರ್ಕೆಸ್ ರೇವುಪಟ್ಟಣ ಇರುವುದು ಇಲ್ಲಿಯೆ. ಇದು ಮೊಜಾಂಬಿಕ್‌ನ ಮುಖ್ಯಪಟ್ಟಣ. ಮೊಜಾಂಬಿಕ್ ಮತ್ತು ಅದರ ಸುತ್ತಣ ಪ್ರದೇಶಗಳಿಂದ ಸರಕು ಇದರ ಮುಖಾಂತರ ಸಾಗುತ್ತದೆ. ಮಟೋಲ, ಟೆಂಬೆ ಮತ್ತು ಉಂಬೆಲೂಜಿ ನದಿಗಳ ನೀರು ಕೂಡಿ ಅಳಿವೆಯಾಗಿ ಪರಿಣಮಿಸಿ ಒಳಕೊಲ್ಲಿಯೊಳಕ್ಕೆ ಹರಿಯುತ್ತದೆ. ಮಪೂಟೋ ಮತ್ತು ಕಮಾಟೀ ನದಿಗಳು ಹೊರಕೊಲ್ಲಿಗೆ ಸೇರುತ್ತವೆ. (ಆರ್.ಸಿ.ಎಚ್.)

**ಡೆಲವೇರ್:** ಅಮೆರಿಕದ ಒಂದು ರಾಜ್ಯ. ರೋಡ್ ಐಲೆಂಡನ್ನು ಬಿಟ್ಟರೆ ಇದೇ ಅಮೆರಿಕದ ಅತ್ಯಂತ ಸಣ್ಣ ರಾಜ್ಯ. ವಿಸ್ತೀರ್ಣ 5348 ಚ.ಕಿಮೀ. ಅದರಲ್ಲಿ 275 ಚ.ಕಿಮೀ ಜಲಭಾಗ. ಜನಸಂಖ್ಯೆ 783600 (2000). ರಾಜಧಾನಿ ಡೋವರ್.

ಭೌತಿಕಲಕ್ಷಣ : ಡೆಲವೇರ್ ರಾಜ್ಯ ಅಟ್ಲಾಂಟಿಕ್ ಕರಾವಳಿಯಲ್ಲಿದೆ. ಇದು ಬಹುತೇಕ ಮೈದಾನ. ಸಮುದ್ರಮಟ್ಟದಿಂದ ಸರಾಸರಿ 20 ಮೀ ಎತ್ತರದಲ್ಲಿದೆ. ಹ್ವೈಟ್ ಕ್ಲೇ ಮತ್ತು ಕ್ರಿಸ್ಟಿನ ಕೊರಕಲುಗಳ ಉತ್ತರ ಭಾಗದಲ್ಲಿ ನೆಲ ಏರಿಳಿಯುತ್ತದೆ. ಅಲ್ಲಲ್ಲಿ ಖಚಿತವಾಗಿ ಮೇಲೆದ್ದ ಬೆಟ್ಟಗಳೂ ತಕ್ಕಮಟ್ಟಿಗೆ ಆಳವಾದ ಕಣಿವೆಗಳೂ ಉಂಟು; ದಕ್ಷಿಣದಲ್ಲಿ ನೆಲ ಸಾಮಾನ್ಯವಾಗಿ ಸಮತಟ್ಟಾಗಿದೆ.

ರಾಜ್ಯದ ಪ್ರಮುಖನದಿಗಳು ನ್ಯಾಂಟಿಕೋಕ್ ಮತ್ತು ಕ್ರಿಸ್ಟಿನ. ಇವಲ್ಲದೆ ಸ್ಮರ್ನ, ಲೀಪ್ಸಿಕ್, ಸೇಂಟ್ ಜೋನ್ಸ್, ಮರ್ಡರ್ ಕಿಲ್, ಮಿಸ್ಪಿಲನ್, ಇಂಡಿಯನ್ ಮುಂತಾದ ಹೊಳೆಗಳಿವೆ.

ರಾಜ್ಯದಲ್ಲಿ 50ಕ್ಕೂ ಹೆಚ್ಚಿನ ಸರೋವರಗಳುಂಟು. ಡೆಲವೇರ್‌ನ ಮುಖ್ಯ ಬಂದರುಗಳು ವಿಲ್ಮಿಂಗ್ಟನ್, ನ್ಯೂ ಕ್ಯಾಸಲ್ ಮತ್ತು ಲೂಯಿಸ್.

ವಾಯುಗುಣ : ರಾಜ್ಯದ್ದು ಸಮಶೀತೋಷ್ಣ ಆರ್ದ್ರ ವಾಯುಗುಣ. ಬೇಸಗೆ ಬೆಚ್ಚಗೂ ಚಳಿಗಾಲ ಸೌಮ್ಯವಾಗಿಯೂ ಇರುತ್ತವೆ. ವಾರ್ಷಿಕ ಮಳೆ ಉತ್ತರದಲ್ಲಿ 110 ಸೆಂಮೀ ಇಂದ ದಕ್ಷಿಣದಲ್ಲಿ 120 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ.

ಸಸ್ಯ, ಪ್ರಾಣಿವರ್ಗ : ಯುರೋಪಿನ ಜನ ನೆಲೆಸುವುದಕ್ಕೆ ಹಿಂದೆ ಡೆಲವೇರ್ ಪ್ರದೇಶದಲ್ಲಿ ಪೈನ್, ಓಕ್, ವಾಲ್‌ನಟ್, ಹಿಕರಿ ಮುಂತಾದ ಮರಗಳ ದಟ್ಟ ಅರಣ್ಯಗಳಿದ್ದುವು. ವಸತಿ ಬೆಳೆದಂತೆ ಕಾಡುಗಳನ್ನು ಕಡಿಯಲಾಯಿತು. ಬಿಳಿ ಓಕ್ ಮರಗಳನ್ನು ಈಗಲೂ ರಕ್ಷಿಸಲಾಗಿದೆ. ಇತರ ಮರಗಳು ಬೀಚ್, ಕೆಂಪು ಓಕ್, ಆಷ್, ಸೈಕಮೋರ್, ಮೇಪಲ್. ಅಲ್ಲಲ್ಲಿ ಚೆರಿ ಹಾಗೂ ಸಿಡಾರ್ ಮರಗಳಿವೆ.

ಜನಜೀವನ : ಇಲ್ಲಿಯ ಜನರು ವಸಾಹತುಕಾಲದಿಂದ ನೆಲೆಸಿರುವ ವಿವಿಧ ಯುರೋಪಿಯನ್ನರ ಸಂಮಿಶ್ರಣ. ಇಡೀ ರಾಜ್ಯದಲ್ಲಿ ಚದುರಿದಂತೆ ನೀಗ್ರೋಗಳು ವಾಸಿಸುತ್ತಾರೆ. ಅವರ ಸಂಖ್ಯೆ ರಾಜ್ಯದ ಜನಸಂಖ್ಯೆಯ 1/5 ಭಾಗ. ಕ್ರೈಸ್ತಧರ್ಮ ಪ್ರಮುಖವಾದ್ದು. ಗ್ರಾಮಪ್ರದೇಶದಲ್ಲಿ ಮೆತಾಡಿಸ್ಟ್ ಪಂಥದವರೂ ನಗರಗಳಲ್ಲಿ ಕೆಥೊಲಿಕರೂ ಹೆಚ್ಚಾಗಿದ್ದಾರೆ. ಇವರಲ್ಲದೆ ಎಪಿಸ್ಕೋಪಿಯನರೂ ಪ್ರೆಸ್ಬಿಟೇರಿಯನರೂ ಉಂಟು. ಹೆಚ್ಚು ಜನರ ಕಸಬು ಕೈಗಾರಿಕೆ; ಉಳಿದವರದು ವ್ಯವಸಾಯ, ಮೀನುಗಾರಿಕೆ, ಪಶುಪಾಲನ ಹಾಗೂ ಕೋಳಿಸಾಕಣೆ.

ಆರ್ಥಿಕತೆ: ವ್ಯವಸಾಯ: ಡೆಲವೇರ್ ಪ್ರಧಾನವಾಗಿ ಕೈಗಾರಿಕಾ ರಾಜ್ಯ, ವ್ಯವಸಾಯಕ್ಕೆ ದ್ವಿತೀಯ ಸ್ಥಾನವಿದೆ. ಸಾಗುವಳಿಯ ಜೊತೆಗೆ ಪಶುಪಾಲನೆ, ಕೋಳಿ ಸಾಕಣೆ ಮತ್ತು ಹೈನುಗಾರಿಕೆಗಳೂ ನಡೆಯುತ್ತವೆ. ಮೆಕ್ಕೆಜೋಳ, ಗೋದಿ, ಸೋಯಾಬೀನ್ಸ್, ಹಣ್ಣು, ತರಕಾರಿ, ಆಲೂಗಡ್ಡೆ ಮುಖ್ಯ ಬೆಳೆಗಳು. ಡೆಲವೇರ್ ಕೊಲ್ಲಿ ಹಾಗೂ ಅಟ್ಲಾಂಟಿಕ್ ಸಾಗರ ತೀರದಲ್ಲಿ ಮೀನುಗಾರಿಕೆ ಅಭಿವೃದ್ಧಿ ಹೊಂದಿದೆ.

ಕೈಗಾರಿಕೆ : ವಿಲ್ಮಿಂಗ್ಟನ್‌ನಲ್ಲಿ ರಾಸಾಯನಿಕ, ಮೋಟರು, ವಿಮಾನ ಹಾಗೂ ನೌಕಾನಿರ್ಮಾಣ ಕೈಗಾರಿಕೆಗಳಿವೆ. ಜವಳಿ, ಆಹಾರ ಪದಾರ್ಥ ಹಾಗೂ ಕೋಳಿಮಾಂಸದ ಡಬ್ಬೀಕರಣದ ಕಾರ್ಖಾನೆಗಳು ಅನೇಕ ನಗರಗಳಲ್ಲಿವೆ. ಲೂಯಿಸ್ ನಗರದಲ್ಲಿ ಮೀನೆಣ್ಣೆ ಹಾಗೂ ಮೀನಿನ ಗೊಬ್ಬರ ತಯಾರಾಗುತ್ತವೆ. ರಾಜ್ಯದ ಮುಖ್ಯ ಕೈಗಾರಿಕೆ ಪಟ್ಟಣಗಳು ವಿಲ್ಮಿಂಗ್ಟನ್, ನ್ಯೂಆರ್ಕ್, ಡೋವರ್, ಎಲ್ಸ್‌ಮಿಯರ್, ಮಿಲ್‌ಫರ್ಡ್ ಮತ್ತು ನ್ಯೂ ಕ್ಯಾಸಲ್.

ಸಾರಿಗೆ ಸಂಪರ್ಕ : ಉತ್ತರದಲ್ಲಿ ಬಾಲ್ಟಿಮೋರ್, ಒಹೈಯೊ ಮತ್ತು ರೀಡಿಂಗ್ ರೈಲುಮಾರ್ಗಗಳು ಹಾದುಹೋಗುತ್ತವೆ. ಒಟ್ಟು 480 ಕಿಮೀ ರೈಲುಮಾರ್ಗಗಳಿವೆ; 7100 ಕಿಮೀ ರಸ್ತೆಗಳಿವೆ. 1951ರಲ್ಲಿ ಆರಂಭವಾದ ಡೆಲವೇರ್ ತೂಗುಸೇತುವೆ 3232 ಮೀ ಉದ್ದವಾಗಿದೆ. ಪ್ರಪಂಚದ ಅತ್ಯಂತ ದೊಡ್ಡ ಸೇತುವೆಗಳಲ್ಲಿ ಇದೊಂದು. ಇದನ್ನು ನ್ಯೂ ಕ್ಯಾಸಲ್ ನಗರದ ಉತ್ತರದಲ್ಲಿ ಡೆಲವೇರ್ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ರಾಜ್ಯದಲ್ಲಿ ಒಟ್ಟು 20 ವಿಮಾನ ನಿಲ್ದಾಣಗಳಿವೆ. ವಿಲ್ಮಿಂಗ್ಟನ್ ಪ್ರಮುಖ ವಿಮಾನ ನಿಲ್ದಾಣ. (ಸಿ.ಎಂ.;ವಿ.ಜಿ.ಕೆ.)

**ಡೆಲವೇರ್ ನದಿ:** ಅಮೆರಿಕದ ಪೆನ್ಸಿಲ್ವೇನಿಯ ಮತ್ತು ಡೆಲವೇರ್ ರಾಜ್ಯಗಳಲ್ಲಿ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುವ ಒಂದು ನದಿ. ನದಿಯ ಶಿರೋಭಾಗದ ಮುಖ್ಯವಾದ ಪಶ್ಚಿಮ ಶಾಖೆ. ನ್ಯೂಯಾರ್ಕಿನ ಷೋಹಾರೀ ಕೌಂಟಿಯಲ್ಲಿ ಸಮುದ್ರಮಟ್ಟದಿಂದ 566 ಮೀ ಎತ್ತರದಲ್ಲಿ ಹುಟ್ಟಿ, ಕ್ಯಾಟ್ಸ್‌ಕಿಲ್ ಪರ್ವತಗಳಿಂದ ಇಳಿದು ಬರುತ್ತದೆ. ಇತರ ಶಾಖೆಗಳು ನ್ಯೂಯಾರ್ಕಿನ ಗ್ರೀನ್ ಹಾಗೂ ಡೆಲವೇರ್ ಕೌಂಟಿಗಳಲ್ಲಿ ಹುಟ್ಟಿ ಪಶ್ಚಿಮ ಶಾಖೆಯನ್ನು ಕೂಡಿಕೊಂಡು ಆಗ್ನೇಯಕ್ಕೆ ಹರಿದು ಪೆನ್ಸಿಲ್ವೇನಿಯ–ನ್ಯೂಯಾರ್ಕ್, ನ್ಯೂ ಜರ್ಸಿ–ಪೆನ್ಸಿಲ್ವೇನಿಯ ಮತ್ತು ಡೆಲವೇರ್–ನ್ಯೂ ಜರ್ಸಿಗಳ ಭಾಗಶಃ ಗಡಿಯಾಗಿ ಹರಿಯುತ್ತದೆ. ನದಿಯ ಶಿರೋಭಾಗದ ಅತ್ಯಂತ ಉದ್ದವಾದ ಶಾಖೆಯ ಉಗಮಸ್ಥಳದಿಂದ ಇದರ ಉದ್ದ 650 ಕಿಮೀ. ನದಿಯ ಜಲಾನಯನ ಭೂಮಿಯ ವಿಸ್ತೀರ್ಣ 37980 ಕಿಮೀ ನದಿಯ ಮೇಲ್ದಂಡೆಯ ಪ್ರದೇಶ ಬೆಟ್ಟಕಾಡುಗಳಿಂದ ಕೂಡಿ ಸುಂದರವಾಗಿದೆ. ಪರ್ವತವನ್ನೂ ಪ್ರಸ್ಥಭೂಮಿಯನ್ನೂ ದಾಟಿದ ಮೇಲೆ ನದಿ ವಿಶಾಲವಾದ ಅಪಲೇಷಿಯನ್ ಕಣಿವೆಗಳ ಮೂಲಕ ಹಾದು, ಹೊಲ ಕಾಡುಗಳಿಂದ ಕೂಡಿದ ಪ್ರಶಾಂತ ಪ್ರದೇಶದಲ್ಲಿ ಮುಂದುವರಿದು ಈಸ್ಟನ್‌ನಲ್ಲಿ ಮತ್ತೆ ಪರ್ವತಸೀಮೆಯನ್ನು ಪ್ರವೇಶಿಸುತ್ತದೆ. ಅಲ್ಲಲ್ಲಿ ಜಲಪಾತಗಳಿಂದ ಕೂಡಿ ಮುಂದುವರಿಯುತ್ತದೆ. ಟ್ರೆಂಟನ್ ಬಳಿಯಲ್ಲಿ 2.5 ಮೀ ಕೆಳಕ್ಕೆ ಧುಮುಕುತ್ತದೆ. ಟ್ರೆಂಟನಿನಿಂದ ಮುಂದಕ್ಕೆ ಇದು ವಿಶಾಲವಾದ ಅಳಿವೆಯಾಗಿ ಪರಿಣಮಿಸಿ ಡೆಲವೇರ್ ಕೊಲ್ಲಿಯನ್ನು ಸೇರುತ್ತದೆ. ಡೆಲವೇರ್ ನದಿಯ ಪ್ರಮುಖ ಉಪನದಿಗಳು ಮೊಂಗಾಪ್, ನೆವರ್‌ಸಿಂಕ್, ಕ್ಯಾಲಿಕೂನ್, ಲ್ಯಾಕವ್ಯಾಕ್ಸನ್, ಲೀಹೈ, ಸ್ಕೂಲ್ಕಿಲ್, ಕಾಂಕೋಕಾಸ್, ಮಸ್ಕನೆಟ್ಕಾಂಗ್ ಹಾಗೂ ಮಾರಿಸ್. (ವಿ.ಜಿ.ಕೆ.)

**ಡೆಸ್ಮರೆಸ್ಟ್ :** 1725–1815. ಪ್ರಸಿದ್ಧ ಫ್ರೆಂಚ್ ಭೂವಿಜ್ಞಾನಿ. ಇವನು ಫ್ರಾನ್ಸಿನಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿದ. ಅನಂತರ ಮಧ್ಯ ಫ್ರಾನ್ಸಿನಲ್ಲಿ ಕಂಡುಬರುವ ನದೀ ಕಣಿವೆಗಳನ್ನು ಅಲ್ಲಿ ಈಗ ಹರಿಯುವ ನದಿಗಳೇ ಕೊರೆದು ನಿರ್ಮಿಸಿವೆ ಎಂದು ತಿಳಿಸಿದನು. ಇವನು ವಿಕಾಸದ ಕ್ರಮತಿ ಅವಸ್ಥೆಗಳ ಮೂಲಕ ಭೂದೃಶ್ಯ (ಭೂಸ್ವರೂಪ) ಬೆಳವಣಿಗೆ ಹೊಂದುವುದನ್ನು ಗುರುತಿಸಲು ಪ್ರಯತ್ನಿಸಿದವರಲ್ಲಿ ಮೊದಲಿಗ. ಡೇವಿಸ್‌ನ ಸವೆತ ಚಕ್ರದ ವಿಚಾರ ಅವನಿಗೆ ಅಸ್ಪಷ್ಟವಾಗಿ ಹೊಳೆದಿತ್ತು. ಜೇಮ್ಸ್ ಹಟ್ಟನ್ ಭೂಸ್ವರೂಪಗಳನ್ನು ಸವೆಸುವ ಭೌತಿಕ ಮತ್ತು ರಾಸಾಯನಿಕ ಪ್ರಕ್ರಿಯೆಗಳಿಂದ ಪ್ರಭಾವಿತನಾಗಿದ್ದ. ಇದನ್ನು ಇತರರು ಗಮನಿಸಿದ್ದರು. ಆದರೆ ಅವರು ಡೆಸ್ಮರೆಸ್ಟ್‌ನ ಹೊರತಾಗಿ ಹಟ್ಟನ್‌ನು ಆಲೋಚಿಸಿದ ಇಂಗೀತಾರ್ಥಗಳನ್ನು ತಿಳಿದುಕೊಳ್ಳಲು ವಿಫಲರಾದರು. (ಎಸ್.ಎಸ್.ಎನ್.)

**ಡೆಹ್ರಾಡೂನ್:** ಉತ್ತರಾಂಚಲ ರಾಜ್ಯದ ರಾಜಧಾನಿ. ಸಮುದ್ರಮಟ್ಟದಿಂದ 660 ಮೀ ಎತ್ತರದಲ್ಲಿದೆ. ಉತ್ತರ ರೈಲ್ವೆಯ ಹರಿದ್ವಾರ–ಡೆಹ್ರಾ ಡೂನ್ ರೈಲುಮಾರ್ಗದ ಕೊನೆಯ ನಿಲ್ದಾಣವಿದು. ಹರಿದ್ವಾರದಿಂದ ಉತ್ತರ–ವಾಯವ್ಯಕ್ಕೆ 50 ಕಿಮೀ ದೂರದಲ್ಲಿದೆ. ಮೈದಾನ ಪ್ರದೇಶದೊಂದಿಗೆ ಮಸೂರಿಯನ್ನು ಸೇರಿಸುವ ರಸ್ತೆ ಡೆಹ್ರಾ ಡೂನ್ ಮುಖಾಂತರ ಹಾದು ಹೋಗುತ್ತದೆ. ನಗರದ ಜನಸಂಖ್ಯೆ 527859. ಸರ್ವೆ ಆಫ್ ಇಂಡಿಯ ಮತ್ತು ಅರಣ್ಯ ಇಲಾಖೆಯ ಮುಖ್ಯ ಕಚೇರಿಗಳು, ವೃಕ್ಷ ಪೋಷಣೆಗೆ ಸಂಬಂಧಿಸಿದ ಅರಣ್ಯ ಸಂಶೋಧನ ಸಂಸ್ಥೆ ಮತ್ತು ಪುರಾತತ್ವ ರಸಾಯನವಿಜ್ಞಾನ ಪ್ರಯೋಗಶಾಲೆ, ಸೇನೆಯ ಮೂರೂ ಸೇವೆಗಳಿಗೆ ಸಂಬಂಧಿಸಿದಂತೆ ಭಾರತ ಸೈನಿಕ ಕಾಲೇಜು. ರಾಷ್ಟ್ರೀಯ ರಿಮೋಟ್‌ಸೆನ್ಸಿಂಗ್ ಸಂಸ್ಥೆ, ರಾಷ್ಟ್ರೀಯ ಭಾರತೀಯ ಮಿಲಿಟರಿ ಅಕಾಡೆಮಿ – ಇವು ಇಲ್ಲಿರುವ ಕೆಲವು ಮುಖ್ಯ ಸಂಸ್ಥೆಗಳು.

ಡೆಹ್ರಾ ಡೂನ್ ಜಿಲ್ಲೆಯ ವಿಸ್ತೀರ್ಣ 3,008 ಚ.ಕಿಮೀ. ಜನಸಂಖ್ಯೆ 1279083. ಶಿವಾಲಿಕ್ ಪರ್ವತ ಮತ್ತು ಹಿಮಾಲಯದ ಆರಂಭದ ಗಿರಿಗಳ ಮಧ್ಯೆ ಕೊಳ್ಳದಲ್ಲಿ ಡೆಹ್ರಾಡೂನ್ ಜಿಲ್ಲೆ ಸ್ಥಾಪಿತವಾಗಿದೆ. ಪೂರ್ವಭಾಗದಲ್ಲಿ ಗಂಗಾ, ಪಶ್ಚಿಮದಲ್ಲಿ ಯಮುನಾ ನದಿಗಳು ಹರಿಯುತ್ತವೆ. ಕ್ಲೆಮೆಂಟ್ ಟೌನ್, ಹೃಷಿಕೇಶ ಮತ್ತು ಮಸೂರಿ, ಇವು ಜಿಲ್ಲೆಯ ಪ್ರಮುಖ ಪಟ್ಟಣಗಳು. ಅಕ್ಕಿ, ಗೋದಿ ಮತ್ತು ದ್ವಿದಳ ಧಾನ್ಯಗಳು ಇಲ್ಲಿಯ ಮುಖ್ಯ ಕೃಷಿ ಉತ್ಪನ್ನಗಳು. ಪರ್ವತಗಳ ಕೆಳಗಿನ ತೆವರಿಯಲ್ಲಿ ಚಹ, ಬಾರ್ಲಿ, ಮೆಕ್ಕೆ ಜೋಳ, ಎಣ್ಣೆಕಾಳುಗಳು, ಮಾವು ಮತ್ತು ಸಾಗುವಾನಿ ಬೆಳೆಯುತ್ತಾರೆ. ಶಿವಾಲಿಕ್ ಬೆಟ್ಟಗಳಲ್ಲಿ ಆನೆಗಳು ಕಂಡುಬರುತ್ತವೆ. ಅರಣ್ಯದಲ್ಲಿ ಹುಲಿ, ಚಿರತೆ, ಕರಡಿ, ಮಂಗ, ಚಿಗರೆಗಳು ಹೇರಳವಾಗಿವೆ. ಕೊಳ್ಳಪ್ರದೇಶದಲ್ಲಿ ವಾಯುಗುಣ ತಂಪಾಗಿದೆ. *

**ಡೈಕ್:** ಶಿಲಾಪಾಕ ಸ್ಥಳೀಯ ಶಿಲೆಗಳ ಸೀಳುಗಳ ಮೂಲಕ ಭೇದಿಸಿಕೊಂಡು ಹೊರಬಂದು ಘನೀಭವಿಸಿದಾಗ ಉಂಟಾಗುವ ಗೋಡೆಯ ಆಕಾರದ ರಚನೆ. ಸ್ಕಾಟಿಷ್ ಭಾಷೆಯಲ್ಲಿ ಡೈಕ್ ಎಂದರೆ ಗೋಡೆ ಎಂದರ್ಥ. ಪದರ ಅಥವಾ ಸ್ಥರ ರೂಪದ ಪ್ರಸ್ತರೀ ಶಿಲೆಗಳನ್ನು ಭೇದಿಸಿದಾಗ ಇದರ ಆಕೃತಿ ಚೆನ್ನಾಗಿ ಕಾಣಿಸುತ್ತದೆ. ಉದಾಹರಣೆಗೆ, ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನಲ್ಲಿ ಕಪ್ಪು ಹಾರ್ನ್‌ಬ್ಲೆಂಡ್ ಡೈಕುಗಳು, ಬೆಂಗಳೂರು ತಾಲೂಕಿನಲ್ಲಿರುವ ಕಗ್ಗಲೀಪುರಕ್ಕೆ ದಕ್ಷಿಣದಲ್ಲಿ ಹೈಪರ್‌ಸ್ಥೀನ್ ಖನಿಜದಿಂದ ಕೂಡಿದ ನೋರೈಟ್ ಡೈಕುಗಳು ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆಯ ಸುತ್ತಲೂ ಫೆಲ್‌ಸೈಟ್ ಹಾಗೂ ಪಾರ್ಫಿರಿಗಳಂಥ ಆಮ್ಲಶಿಲೆಗಳಿಂದ ಕೂಡಿದ ಡೈಕುಗಳ ಸಮುದಾಯಗಳಿವೆ. ಇದೇ ಬಗೆಯ ಡೈಕುಗಳ ಸಮೂಹ ಅರಸೀಕೆರೆ ಮತ್ತು ಬಾಣಾವರದ ಹತ್ತಿರ ಕೂಡ ಉಂಟು.

ಆಮ್ಲ ಶಿಲೆಗಳಾದ ಪೆಗ್ಮಟೈಟ್, ಪಾರ್ಫಿರಿ, ಅಪ್ಲೈಟ್, ಫೆಲ್ಸೈಟ್ ಮತ್ತು ಕ್ಷಾರಶಿಲೆಗಳಾದ ಡಾಲೊರೈಟ್, ಲ್ಯಾಂಪ್ರೋಫೈರ್ ಮುಂತಾದವು ಈ ತರಹ ಡೈಕ್ ರೂಪದಲ್ಲಿಯೇ ಸಿಕ್ಕುತ್ತವೆ.*

**ಡೊಮಿನಿಕ:** ಕೆರಿಬಿಯನ್ ಸಮುದ್ರದ ಲೆಸ್ಸರ್ ಅಂಟಿಲೀಸ್‌ನಲ್ಲಿರುವ ಜ್ವಾಲಾಮುಖಿ ಪರ್ವತಗಳಿಂದ ಕೂಡಿದ ದ್ವೀಪಗಳ ದಕ್ಷಿಣ ಭಾಗದಲ್ಲಿರುವ ದೇಶ. ಉತ್ತರ ಅಕ್ಷಾಂಶ $15^0$ ಹಾಗೂ ಪೂ.ರೇ. $61^0$ಗಳಲ್ಲಿ ಸನ್ನಿವೇಶಗೊಂಡಿದೆ. ಒಟ್ಟು ವಿಸ್ತೀರ್ಣ 750 ಚ.ಕಿಮೀ. ಜನಸಂಖ್ಯೆ 69029 (2006). ರಾಜಧಾನಿ ರೋಸಯು. ಜನಸಂಖ್ಯೆ 20,000 ಪೋರ್ಟ್ಸ್ ಮೌತ್ ಇತರೆ ಪ್ರಮುಖ ನಗರ. ಉಷ್ಣವಲಯದ ಹವಾಗುಣ, ಅಧಿಕಮಳೆ, ಚಂಡಮಾರುತಗಳ ಹಾವಳಿ ಇದೆ. ದೇಶದ ಮಧ್ಯಭಾಗದಲ್ಲಿ ಬೆನ್ನೆಲುಬಿನಂತಿರುವ ಪರ್ವತಸಾಲುಗಳು. ಹಾಗೂ ಅವುಗಳ ಇಕ್ಕೆಲುಗಳಲ್ಲಿ ಹುಟ್ಟಿ ಹರಿದು ಕಣಿವೆಗಳನ್ನು ಸೇರುವ ಅನೇಕ ನದಿಗಳಿವೆ. ಇವುಗಳಲ್ಲಿ ಮುಖ್ಯವಾದವು ಕ್ಲೈಡ್, ಪಗುವಾ, ರೊಸೆಯ್, ರೊಸೆಲಿ ಮತ್ತು ಲಾಯೂ, ಮೋರ್ನ್ ಡಯಾಬ್ಲಾಟಿನ್ (1448 ಮೀ) ಎತ್ತರ ಭಾಗದಲ್ಲಿನ ಅತಿ ಎತ್ತರವಾದ ಶಿಖರ. ದಕ್ಷಿಣದಲ್ಲಿ ಬಿಸಿನೀರಿನ ಚಿಲುಮೆಗಳಿಂದುಂಟಾದ ಸರೋವರವಿದೆ. ಪರ್ವತ ಪಾರ್ಶ್ವಗಳಲ್ಲಿ ಜಲಪಾತಗಳೂ ದಟ್ಟವಾದ ಅರಣ್ಯಗಳೂ ಇವೆ. ಜಲಭಾಗ ಸಂಮೃದ್ಧವಾಗಿದ್ದು ಬೇಸಾಯಕ್ಕೆ

ಹೆಚ್ಚು ಅನುಕೂಲಕರವಾಗಿದೆ. ಜ್ವಾಲಾಮುಖಜ ಮಣ್ಣು ಹೆಚ್ಚು ಫಲವತ್ತಾಗಿದ್ದು ಇದಕ್ಕೆ ಪೂರಕವಾಗಿದೆ. ತೋಟಗಾರಿಕೆ ಬೇಸಾಯ ಲಾಭದಾಯಕ ಹಾಗೂ ಜನರ ಪ್ರಮುಖ ಉದ್ಯೋಗ. ತೆಂಗು, ಬಾಳೆಹಣ್ಣು, ಕಕಾವೋ ಗೆಣಸು ಹಾಗೂ ಅನೇಕ ಬಗೆಯ ಹಣ್ಣುಗಳನ್ನು ಉತ್ಪಾದಿಸಿ ರಫ್ತುಮಾಡಲಾಗುತ್ತಿದೆ.




ಕೈಗಾರಿಕೆಗಳ ಬೆಳೆವಣಿಗೆಗೆ ಬೇಕಾದ ಸೌಲಭ್ಯಗಳಿಲ್ಲ. ಪ್ರವಾಸೋದ್ಯಮ ಪ್ರಮುಖ ಉದ್ಯೋಗ. ಜನಸಂಖ್ಯೆಯ ಶೇ. 92ಭಾಗ ಕ್ರಿಶ್ಚಿಯನ್ನರು. ಇಂಗ್ಲಿಷ್, ಫ್ರೆಂಚ್ ಮತ್ತು ಪಟೋಯಿಸ್ ಭಾಷೆಗಳು ರೂಢಿಯಲ್ಲಿವೆ. ಹಣ ಈಸ್ಟ್ ಕೆರಿಬಿಯನ್ ಡಾಲರ್. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವ್ಯವಸ್ಥೆಯಿದೆ. ಸಾಕ್ಷರತೆ ಶೇ. 80ರಷ್ಟಿದೆ. (ವಿ.ಎಸ್.ಎ.)

**ಡೊಮಿನಿಕನ್ ಗಣರಾಜ್ಯ:** ವೆಸ್ಟ್ ಇಂಡೀಸ್ ದ್ವೀಪಸ್ತೋಮದಲ್ಲಿರುವ ಹಿಸ್ಪಾನಿಯೋಲ ದ್ವೀಪದ ಪೂರ್ವದ 2/3 ಭಾಗವನ್ನೊಳಗೊಂಡ ಗಣರಾಜ್ಯ. ಈ ದ್ವೀಪದ ಪಶ್ಚಿಮದ 1/3 ಭಾಗ ಹೈಟೀ ಗಣರಾಜ್ಯಕ್ಕೆ ಸೇರಿದೆ. ಸನ್ನಿವೇಶ $17^0$–$19^0$ ಉ.ಅ. $68^0$–$72^0$ ಪ.ರೇ. ವಿಸ್ತೀರ್ಣ 48,422 ಚ.ಕಿಮೀ. ಜನಸಂಖ್ಯೆ 8950034 (2004). ರಾಜಧಾನಿ ಸ್ಯಾಂಟೊಡೆಮಿಂಗೋ.

ಭೌತಿಕಲಕ್ಷಣ: ಗಣರಾಜ್ಯದ ಪೂರ್ವ ತುದಿಯಲ್ಲಿ ಎಂಗಾನೋ, ಉತ್ತರ ತೀರದಲ್ಲಿ ಇಜ಼ಾಬೆಲ ಮತ್ತು ಫ್ರಾನ್ಸೆಸ್ ಮೈಜೋ ಮತ್ತು ನೈಋತ್ಯದಲ್ಲಿ ಬೇಯಾಟ ಭೂಶಿರಗಳಿವೆ. ಕೆಲವು ಕೊಲ್ಲಿ, ಖಾರಿಗಳ ವಿನಾ ತೀರ ಹೆಚ್ಚು ಡೊಂಕಾಗಿಲ್ಲ. ಉತ್ತರದ ವೇಗ ರೇಯಾಲ್ ಕಣಿವೆ ಫಲವತ್ತಾದದ್ದು. ಇಲ್ಲಿ ಎರಡು ನದಿಗಳು ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಹರಿಯುತ್ತವೆ. ದೇಶದ ಮಧ್ಯಭಾಗದಲ್ಲಿ ಮೂರು ಪರ್ವತಶ್ರೇಣಿಗಳು ಅಡ್ಡಲಾಗಿ ಹಬ್ಬಿವೆ. ಅವುಗಳಲ್ಲಿ ಮುಖ್ಯವಾದದ್ದು ಕೊರಿಲಿರ ಸೆಂಟ್ರಲ್ ಶ್ರೇಣಿ. ಅತ್ಯುನ್ನತ ಶಿಖರ ಡ್ವಾರ್ಟೀ (3127 ಮೀ). ಗಣರಾಜ್ಯದ ನೈಋತ್ಯದಲ್ಲಿ ಎನ್ರಿಕೀಯೋ ಸರೋವರವಿದೆ. ದೇಶದ ಮುಖ್ಯ ನದಿಗಳು ಯಾಕ್ವಿಡೆಲ್ ನಾರ್ಟೀ, ಯೂನೋ, ಓಜಾಮ ಮತ್ತು ಯಾಕ್ವಿಡೆಲ್ ಸುರ್.

ವಾಯುಗುಣ: ಇಲ್ಲಿಯದು ಉಪೋಷ್ಣವಲಯದ ವಾಯುಗುಣ. ಚಳಿಗಾಲದಲ್ಲಿ ಈಶಾನ್ಯದಿಂದಲೂ ಬೇಸಗೆಯಲ್ಲಿ ಆಗ್ನೇಯದಿಂದಲೂ ಬೀಸುವ ವಾಣಿಜ್ಯ ಮಾರುತಗಳಿಂದ ವಾಯುಗುಣ ಪ್ರಭಾವಿತವಾಗಿದೆ. ಜನವರಿ–ಫೆಬ್ರವರಿಯ ಸರಾಸರಿ ಉಷ್ಣತೆ $22^0$ಸೆ. ಜುಲೈ ಆಗಸ್ಟ್ ಗಳದು $28^0$ಸೆ. ವಾರ್ಷಿಕ ಮಳೆ 135 ಸೆಂಮೀ ಕೆರಿಬಿಯನ್ ಸಮುದ್ರದಲ್ಲಿ ಆಗಾಗ ಬೀಸುವ ಚಂಡಮಾರುತಗಳಿಂದ ಈ ರಾಜ್ಯಕ್ಕೂ ನಷ್ಟ ಸಂಭವಿಸುವುದುಂಟು.

ಸಸ್ಯ ಪ್ರಾಣಿವರ್ಗ: ಇಲ್ಲಿ ಅರಣ್ಯಗಳು ಹೆಚ್ಚು. ಅಲ್ಲಲ್ಲಿ ಹುಲ್ಲುಗಾವಲುಗಳಿವೆ. ತೆಂಗಿನ ಮರಗಳು ತೀರಭಾಗಗಳಲ್ಲಿ ಅಧಿಕ. ಅರಣ್ಯಗಳಲ್ಲಿ ಮಹಾಗನಿ, ದೇವದಾರು, ಲಿಗ್ನಂ ಮರಗಳಿವೆ. ಸಮುದ್ರದಂಚಿನಲ್ಲಿ ಗುಲ್ಮವೃಕ್ಷಗಳಿವೆ. ಡೊಮಿನಿಕನ್ ಗಣರಾಜ್ಯದಲ್ಲಿ ಸಸ್ತನಿಗಳು ಕಡಿಮೆ. ವಿವಿಧ ಕೀಟಗಳು ಹಾಗೂ ಪಕ್ಷಿಗಳಿವೆ. ಕಡಲ ತೀರದಲ್ಲಿ ಹಲವು ಬಗೆಯ ಮೀನುಗಳುಂಟು.

ಜನಜೀವನ : ಇಲ್ಲಿರುವವರಲ್ಲಿ ಬಹುಸಂಖ್ಯಾತರು ಸ್ಪ್ಯಾನಿಷ್ ಹಾಗೂ ನೀಗ್ರೋ ಮಿಶ್ರ ವಂಶಸ್ಥರು. (ಮೆಸಟಿಜೊ). ಹಿಸಪಾನಿಯೋಲ ದ್ವೀಪದ ಮೂಲ ನಿವಾಸಿಗಳು ಮುಖ್ಯವಾಗಿ ಆರವಾಕ್ ಮತ್ತು ಕ್ಯಾರಬ್ ಗುಂಪುಗಳಿಗೆ ಸೇರಿದ್ದವರು. ಯುರೋಪಿಯನ್ ಆಕ್ರಮಣ ಕಾಲದಲ್ಲಿ ಬಹುಮಂದಿ ಮೂಲವಾಸಿಗಳು ಕೊಲ್ಲಲ್ಪಟ್ಟರು. ಯುರೋಪಿಯನ್ನರ ಸಂಪರ್ಕದಿಂದ ಹಲವರು ರೋಗರುಜಿನಗಳಿಗೆ ತುತ್ತಾದರು. ಈಗ ಅವರ ಸಂಖ್ಯೆ ಬಲು ಕಡಿಮೆ. ಮೆಸ್ಟಿಜೊ (ಮುಲಿಟ್ಟೊ) ಜನರೇ ಸು. ಶೇ. 70ರಷ್ಟಿದ್ದಾರೆ. ಯುರೋಪಿಯನರಲ್ಲಿ ಸ್ಪೇನ್ ದೇಶೀಯರು ಅಧಿಕ. ದುಡಿಮೆಗಾಗಿ ಹಿಂದೆ ಇಲ್ಲಿಗೆ ತರಲಾದ ನೀಗ್ರೋಗಳು ಅಲ್ಪ ಸಂಖ್ಯೆಯಲ್ಲಿದ್ದಾರೆ. ಇಲ್ಲಿಯ ಜನರ ಹಾಗೂ ಆಡಳಿತದ ಭಾಷೆ ಸ್ಪ್ಯಾನಿಷ್. ಪ್ರಧಾನ ಮತ ರೋಮನ್ ಕೆಥೋಲಿಕ್. ಪ್ರಾಟೆಸ್ಟಂಟರೂ ಇದ್ದಾರೆ.




ಆರ್ಥಿಕತೆ : ಶೇ. 55 ಮಂದಿ ಕೃಷಿಯಲ್ಲಿ ತೊಡಗಿದ್ದಾರೆ. ಕಬ್ಬು, ಬತ್ತ, ಮುಸುಕಿನ ಜೋಳ, ನೆಲಗಡಲೆ, ಮರಗೆಣಸು, ಗೆಣಸು, ಕಾಫಿ, ಕೋಕೋ, ತಂಬಾಕು, ಬಾಳೆ, ತೆಂಗು ಮುಖ್ಯಬೆಳೆಗಳು. ಬಟ್ಟೆ, ಸಿಮೆಂಟ್, ಕಾಗದ, ಬಣ್ಣ, ಸಿಗರೇಟ್, ವನಸ್ಪತಿ, ಎಣ್ಣೆ ಇವು ಪ್ರಮುಖ ಕೈಗಾರಿಕೆಗಳು. ನಿಕ್ಕಲ್ ಕಾರ್ಖಾನೆಗಳಿವೆ. ಆಹಾರ ಧಾನ್ಯಗಳಲ್ಲಿ ರಾಷ್ಟ್ರ ಸ್ವಯಂಪೂರ್ಣವಾಗಿದೆ. ದೇಶದಿಂದ ರಫ್ತಾಗುವ ಸರಕುಗಳು ಅಕ್ಕಿ, ಸಕ್ಕರೆ, ಕಾಫಿ, ಕೋಕೋ, ಹೊಗೆಸೊಪ್ಪು, ಹಾಗೂ ಬಾಕ್ಸೈಟ್. ಆಮದುಗಳು ಗೋದಿ, ಮೋಟಾರು ಹಾಗೂ ಔಷಧಿಗಳು.

ದೇಶದ ನಾಣ್ಯ ಡೊಮಿನಿಕನ್ ಗಣರಾಜ್ಯ. ಪೀಸೊ 1 ಪೀಸೊ=100 ಸೆಂಟಾವೊ.

ಸಾರಿಗೆ ಸಂಪರ್ಕ : ಕಬ್ಬಿನ ಸಾಗಣೆಗಾಗಿ ಖಾಸಗಿ ಮಾಲೀಕತ್ವದ 1600 ಕಿಮೀ ರೈಲುಮಾರ್ಗಗಳಿವೆ. ಸಾನ್ವೆಜ ಹಾಗೂ ಲವೇಗ ನಗರಗಳ ನಡುವೆ 220 ಕಿಮೀ ರೈಲುಮಾರ್ಗ ಸರ್ಕಾರಿ ನಿಯಂತ್ರಣದಲ್ಲಿದೆ. ಉತ್ತಮ ರಸ್ತೆಗಳ ಉದ್ದ 5760. ಸ್ಯಾಂಟ ಡಮಿಂಗೋ ಬಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಡೊಮಿನಿಕನ್ ಗಣರಾಜ್ಯದ ಪ್ರಮುಖ ರೇವುಪಟ್ಟಣ ಸ್ಯಾಂಟ ಡಮಿಂಗೋ. (ವಿ.ಎಸ್.ಎ.)

**ಡೋರ್ಟ್‌ಮುಂಡ್:** ಜರ್ಮನಿಯ ನೋರ್ಡ್‌ರೈನ್ ವೆಸ್ಟ್ ಫಾಲೆನ್ (ಉತ್ತರ ರೈನ್ ವೆಸ್ಟ್ ಫೇಲಿಯ) ರಾಜ್ಯದ ಒಂದು ನಗರ. ಡೋರ್ಟ್‌ಮುಂಡ್ ನಗರ ಎಸನ್‌ನಿಂದ ಸು. 32 ಕಿಮೀ ಪೂರ್ವಕ್ಕೆ, ಡೋರ್ಟ್ ಮುಂಡ್–ಎಮ್ಸ್ ಕಾಲುವೆಯ ತಲೆಯ ಬಳಿ ಇದೆ. ಇದು ಈ ರಾಜ್ಯದ ಅತ್ಯಂತ ದೊಡ್ಡ ನಗರ; ಕೈಗಾರಿಕೆ, ಗಣಿಗಾರಿಕೆ ಮತ್ತು ವಾಣಿಜ್ಯಕೇಂದ್ರ; ರ್‍ಹೂರ್ ಕೈಗಾರಿಕಾ ಪ್ರದೇಶದ ಪ್ರಮುಖ ನಗರ. ಜನಸಂಖ್ಯೆ 589200 (2002).

ಕಲೋನ್–ಹ್ಯಾನೋವರ್, ರೂರ್‌ಷೆಲ್‌ವೇಕ್ ಮತ್ತು ಕಲೋನ್–ಲೇವರ್‌ಕೂಸೆನ್–ಕಾಮೆನ್ ಹೆದ್ದಾರಿಗಳೂ ಡೋರ್ಟ್‌ಮುಂಡ್ ಮೂಲಕ ಹಾದುಹೋಗುತ್ತವೆ. ರ್‍ಹೂರ್ ವಲಯದ ಪ್ರಮುಖ ಸ್ಥಳಗಳಿಗೆ ಇಲ್ಲಿಂದ ವಿದ್ಯುತ್ ರೈಲುಗಳಿವೆ, ಗಡಿಯಾಚೆಯ ರೈಲುಮಾರ್ಗಗಳು ಓಸ್ಟೆಂಟ್ ಮತ್ತು ಪ್ಯಾರಿಸ್‌ಗಳೊಂದಿಗೆ ಸಂಪರ್ಕ ಕಲ್ಪಿಸುತ್ತವೆ. ಬ್ರಸೆಲ್ಸ್ ಮೂಲಕ ಪ್ಯಾರಿಸಿಗೆ ಹೆಲಿಕಾಪ್ಟರ್‌ಗಳು ಹಾರುತ್ತವೆ. ಡೋರ್ಟ್‌ಮುಂಡ್‌ನ ಅಧಿಕ ಬೆಳೆವಣಿಗೆಗೆ ಸಹಕಾರಿಯಾಗಿರುವ ಜಲಮಾರ್ಗ ಡಾರ್ಟ್‌ಮುಂಡ್–ಎಮ್ಸ್ ಕಾಲುವೆ. ಉಕ್ಕು, ಕಲ್ಲಿದ್ದಲು, ಬೀರ್–ಇವು ಡೋರ್ಟ್‌ಮುಂಡ್‌ನ ಪ್ರಮುಖ ಉತ್ಪಾದನೆಗಳು. ಇದು ಹಣ್ಣು ತರಕಾರಿಗಳ ಒಂದು ದೊಡ್ಡ ಸಗಟುವ್ಯಾಪಾರ ಕೇಂದ್ರ. ಡೋರ್ಟ್‌ಮುಂಡ್‌ನಲ್ಲಿ ಪ್ರಪಂಚಾದ್ಯಂತ ಪ್ರಖ್ಯಾತವಾದ ಸೇತುವೆ ನಿರ್ಮಾಣ ಸಂಸ್ಥೆಗಳ ಪ್ರಧಾನ ಕಚೇರಿಗಳಿವೆ. (ಎಸ್.ಕೆ.ಆರ್.)

**ಡೋವರ್[1]:** ಇಂಗ್ಲೆಂಡಿನ ಕೆಂಟ್‌ನಲ್ಲಿರುವ ಒಂದು ರೇವುಪಟ್ಟಣ, ಮುನಿಸಿಪಲ್ ಮತ್ತು ಪಾರ್ಲಿಮೆಂಟರಿ ವಿಭಾಗ (ಬರೊ). ಡೋವರ್ ಜಲಸಂಧಿಯ ದಡದಲ್ಲಿ ಲಂಡನ್ನಿನಿಂದ ಪೂರ್ವ–ಆಗ್ನೇಯಕ್ಕೆ ರಸ್ತೆಯ ಮೂಲಕ 11 ಕಿಮೀ ದೂರದಲ್ಲಿ ಇದೆ. ಇದು ಸುಣ್ಣಕಲ್ಲಿನ ಎತ್ತರದ ನೆಲದ ನಡುವಣ ಕಣಿವೆಯಲ್ಲಿದೆ. ಇದು ಯುರೋಪಿನಿಂದ ಅತ್ಯಂತ ಸಮೀಪದ ಇಂಗ್ಲಿಷ್ ಬಂದರು. ಇಲ್ಲಿಂದ ಫ್ರಾನ್ಸಿನ ಕ್ಯಾಲೇಗೆ ಕೇವಲ 35 ಕಿಮೀ. ಡೋವರ್‌ನಲ್ಲಿ ಹಿತಕರವಾದ ವಾಯುಗುಣವಿರುವುದರಿಂದ ಇದು ಜನಪ್ರಿಯ ವಿಶ್ರಾಂತಿಧಾಮ ಮತ್ತು ವಿಹಾರಸ್ಥಳವಾಗಿದೆ. ಜನಸಂಖ್ಯೆ 34000 (1995).

ಡೋವರ್ ಇಂಗ್ಲೆಂಡಿನ ಪ್ರಮುಖ ಬಂದರುಗಳಲ್ಲೊಂದು. ಇಲ್ಲಿಂದ ಯರೋಪಿನ ಅನೇಕ ದೇಶಗಳಿಗೆ ಯಾನ ಸೌಲಭ್ಯವಿದೆ. ಇದಲ್ಲದೆ ವಿದೇಶಗಳೊಡನೆ ವ್ಯಾಪಾರವೂ ನಡೆಯುತ್ತದೆ. 260 ಹೆ. ನೀರಿನ ಪ್ರದೇಶವೂ ಸೇರಿ ರೇವು 340 ಹೆ. ವಿಸ್ತಾರವಾಗಿದೆ. (ಜೆ.ಎಸ್.ಎಸ್.)

**ಡೋವರ್[2]:** ಅಮೇರಿಕ ಸಂಯುಕ್ತ ಸಂಸ್ಥಾನಗಳ ನ್ಯೂ ಹ್ಯಾಂಪ್‌ಷೈರ್ ರಾಜ್ಯದ ಅತ್ಯಂತ ಹಳೆಯ ಪಟ್ಟಣ ಮತ್ತು ಸ್ಟ್ರಾಫರ್ಡ್ ಕೌಂಟಿಯ ಮುಖ್ಯ ಪಟ್ಟಣ. ಪೋರ್ಟ್ಸ್‌ಮತ್‌ಗೆ ವಾಯವ್ಯದಲ್ಲಿ 16 ಕಿಮೀ ದೂರದಲ್ಲಿ ಸಮುದ್ರ ಮಟ್ಟಕ್ಕೆ 23 ಮೀ ಎತ್ತರದಲ್ಲಿದೆ. ಪಟ್ಟಣದ ಮಧ್ಯದಲ್ಲಿ ಹರಿಯುವ ಕೋಚಿಕೋ ನದಿಯ 11 ಮೀ ಎತ್ತರದ ಜಲಪಾತದಿಂದ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ. ಇಲ್ಲಿ ತಯಾರಾಗುವ ಸರಕುಗಳು ಬಟ್ಟೆ, ಪಾದರಕ್ಷೆ, ಮುದ್ರಣ ಮತ್ತು ರಾಸಾಯನಿಕ ವಸ್ತುಗಳು, ಪ್ಲಾಸ್ಟಿಕ್, ಎಲೆಕ್ಟ್ರಾನಿಕ್ ಉಪಕರಣ ಇತ್ಯಾದಿ. ಜನಸಂಖ್ಯೆ 34288 (2005). *

**ಡೋವರ್[3]:** ಅಮೇರಿಕ ಸಂಯುಕ್ತ ಸಂಸ್ಥಾನಗಳ ಡೆಲವೇರ್ ರಾಜ್ಯದ ರಾಜಧಾನಿ ಮತ್ತು ಕೆಂಟ್ ಕೌಂಟಿಯ ಮುಖ್ಯಪಟ್ಟಣ. ಸೇಂಟ್ ಜೋನ್ಸ್ ಅಥವಾ ಡೋವರ್ ನದಿಯ ದಂಡೆಯ ಮೇಲೆ ವಿಲ್ಮಿಂಗ್ಟನ್‌ನ ದಕ್ಷಿಣಕ್ಕೆ 64 ಕಿಮೀ ದೂರದಲ್ಲಿ ಸಮುದ್ರಮಟ್ಟಕ್ಕೆ 11 ಮೀ ಎತ್ತರದಲ್ಲಿದೆ. ಇದು ಕೆಂಟ್ ಕೌಂಟಿ ಮತ್ತು ಸುತ್ತಮುತ್ತಲಿನ ವ್ಯವಸಾಯ ಪ್ರದೇಶದ ವ್ಯಾಪಾರ ಕೇಂದ್ರವಾಗಿದೆ. ಇಲ್ಲಿ ಸಣ್ಣ ಕೈಗಾರಿಕೆಗಳೇ ಹೆಚ್ಚು. ಆಹಾರ ಪದಾರ್ಥಗಳ ಡಬ್ಬೀಕರಣ, ಲೋಹದ ಎರಕ, ಬಟ್ಟೆ ಮತ್ತು ರಬ್ಬರ್ ಪದಾರ್ಥಗಳ ತಯಾರಿಕೆ ಮುಂತಾದ ಕೈಗಾರಿಕೆಗಳಿವೆ. ಜನಸಂಖ್ಯೆ 1,04,430 (2002). (ಜೆ.ಎಸ್.ಎಸ್.)

**ಡ್ಯಾನ್ಯೂಬ್:** ಮಧ್ಯ ಮತ್ತು ಆಗ್ನೇಯ ಯುರೋಪಿನ ಅತ್ಯಂತ ಮುಖ್ಯ ನದಿ. ಜರ್ಮನಿಯ ಷ್ವಾರ್ಟ್ಸ್ ವಾಲ್ಟ್ ಪರ್ವತಪ್ರದೇಶದಲ್ಲಿ ಉಗಮಿಸಿ 2842 ಕಿಮೀ ಹರಿದು ಕಪ್ಪು ಸಮುದ್ರ ಸೇರುತ್ತದೆ. ಕಾರ್ಪೇತಿಯನ್ ಪರ್ವತ ಮತ್ತು ಟ್ರಾನ್ಸಿಲ್ವೇನಿಯನ್ ಆಲ್ಪ್ಸ್ ಪರ್ವತಗಳ ಕಡೆಯಿಂದಲೂ ಅನೇಕ ಉಪನದಿಗಳು ಬಂದು ಈ ನದಿಯನ್ನು ಕೂಡುತ್ತವೆ. ಇದರ ಒಟ್ಟು ಜಲಾನಯನ ಪ್ರದೇಶ 88,86,200 ಚಕಿಮೀ. ಇದು ಜರ್ಮನಿ, ಆಸ್ಟ್ರಿಯ, ಜೆಕೊಸ್ಲೊವಾಕಿಯ, ಹಂಗರಿ, ಯೂಗೊಸ್ಲಾವಿಯ, ರೊಮೇನಿಯ, ಬಲ್ಗೇರಿಯ ಮತ್ತು ಉಕ್ರೇನ್‌ಗಳಲ್ಲಿ ಹರಿಯುತ್ತದೆ.

ಈ ನದಿಯನ್ನು ಮೇಲ್ಭಾಗ, ಮಧ್ಯಭಾಗ ಮತ್ತು ಕೆಳಭಾಗ ಎಂದು ಮೂರು ಭಾಗಗಳನ್ನಾಗಿ ಮಾಡಬಹುದು. ಜೆಕೊಸ್ಲೊವಾಕಿಯ ಬ್ರಾಟಿಸ್ಲಾವದಿಂದ ಮೇಲಕ್ಕೆ ಇರುವುದು ಮೇಲ್ಭಾಗ, ಅಲ್ಲಿಂದ ರೊಮೇನಿಯದ ಕಬ್ಬಿಣ ದ್ವಾರದವರೆಗಿನದು ಮಧ್ಯಭಾಗ, ಅಲ್ಲಿಂದ ಮುಂದಿನದು ಕೆಳಭಾಗ. ಈ ನದಿಯ ಪಾತ್ರಗಳು ಉಗಮಸ್ಥಾನದಿಂದ ಸಮುದ್ರ ಕೂಡುವ ವರೆಗೆ ಅನೇಕ ಕಡೆಗಳಲ್ಲಿ ಭೂಸ್ವರೂಪಗಳ ವಿಚ್ಛಿನ್ನತೆಯ ಕಾರಣದಿಂದ ತನ್ನ ದಿಕ್ಕನ್ನು ಬದಲಾಯಿಸುತ್ತ ಸಾಗಿ ಬೇರೆ ಬೇರೆ ಭಾಗಗಳಲ್ಲಿ ನದಿಯ ದಂಡೆಯುದ್ದಕ್ಕೂ ಬರುವ ಪಟ್ಟಣಗಳಿಗೆ ಮತ್ತು ವ್ಯವಸಾಯಕ್ಕೆ ನಾನಾ ಬಗೆಯಲ್ಲಿ ಉಪಯುಕ್ತವಾಗಿವೆ. ಅಲ್ಲದೆ ಅನೇಕ ದೇಶಗಳಿಗೆ ಅಂತಾರಾಷ್ಟ್ರೀಯ ಗಡಿಯಾಗಿ ಪರಿಣಮಿಸಿದೆ.

ಡ್ಯಾನ್ಯೂಬ್ ನದೀ ಮುಖಜಭೂಮಿ. ಸು. 25,600 ಚ.ಕಿಮೀ ವಿಸ್ತಾರವಾಗಿದೆ.

ಡ್ಯಾನ್ಯೂಬ್ ನದಿಯ ಜಲಾನಯನ ಪ್ರದೇಶವನ್ನು ನಾಲ್ಕು ವಿಭಾಗಗಳಾಗಿ, ವಿಂಗಡಿಸಬಹುದು. ಮೊದಲನೆಯ ವಿಭಾಗ 240 ಕಿಮೀ ಉದ್ದ 200 ಕಿಮೀ ಅಗಲವಾಗಿದೆ. ಸಮುದಮಟ್ಟದಿಂದ 504 ಮೀ ಎತ್ತರದಲ್ಲಿದೆ. ಇದನ್ನು ಪರ್ವತಗಳು ಸುತ್ತುವರಿದಿವೆ. ಇಲ್ಲಿಯ ನೆಲ ಫಲವತ್ತಾದದ್ದು. ಇಲ್ಲಿ ಹೆಚ್ಚು ಜನವಸತಿಯಿದೆ. ಎರಡನೆಯ ವಿಭಾಗ ವಿಯೆನ್ನ ನಗರದ ಸುತ್ತಣ ಪ್ರದೇಶ. ಇದನ್ನೂ ಪರ್ವತಗಳು ಸುತ್ತುವರಿದಿವೆ. ಇದು ಸುಂದರವಾದ ಪ್ರದೇಶ; ಖನಿಜ ಸಂಪತ್ತಿನಿಂದ ಕೂಡಿದೆ. ಯೂರೋಪ್ ಖಂಡದಲ್ಲೇ ಉತ್ತಮವಾದ ವಾಯಗುಣ ಇಲ್ಲಿದೆ. ಮೂರನೆಯ ವಿಭಾಗ ಹಂಗರಿ ಮತ್ತು ಟ್ರಾನ್ಸಿಲ್ವೇನಿಯ ಭಾಗಗಳನ್ನೊಳಗೊಂಡಿದ್ದು ಸಮುದ್ರಮಟ್ಟದಿಂದ ಸು. 121 ಮೀ ಎತ್ತರದಲ್ಲಿದೆ. ನಾಲ್ಕನೆಯ ವಿಭಾಗ ರುಮೇನಿಯ, ಬಲ್ಗೇರಿಯ ಮತ್ತು ಬೆಸರೇಬಿಯಗಳನ್ನೊಳಗೊಂಡಿದೆ. ಇನ್, ಡ್ರಾವ, ತೀಸ್, ಸ್ವಾವ, ಪ್ರೂತ್– ಇವು ಇದರ ಪ್ರಮುಖ ಉಪನದಿಗಳು, ಡ್ಯಾನ್ಯೂಬ್ ನದಿಯ ದಂಡೆಯ ಪ್ರಮುಖ ನಗರಗಳು ಉಲ್ಮ್, ವಿಯೆನ್ನ, ರೇಜೆನ್ಸ್ ಬರ್ಗ್, ಬುಡಾಪೆಸ್ಟ್ ಮತ್ತು ಬೆಲ್ ಗ್ರೇಡ್. ಸಾರಿಗೆಯ ಪ್ರಮುಖ ಮಾರ್ಗಗಳಲ್ಲೊಂದಾದ ಡ್ಯಾನ್ಯೂಬ್ ಹಲವು ಸಂಸ್ಕೃತಿಗಳ ಕೊಂಡಿಯಂತಿದೆ. (ಜೆ.ಎಸ್.ಎಸ್.)

**ಡ್ಯಾಲಸ್:** ಅಮೇರಿಕದ ಟೆಕ್ಸಸ್ ರಾಜ್ಯದ ಒಂದು ನಗರ; ಡ್ಯಾಲಸ್ ಕೌಂಟಿಯ ಆಡಳಿತಕೇಂದ್ರ. ಟ್ರಿನಿಟಿ ನದಿಯ ದಂಡೆಯ ಮೇಲೆ ಓಕ್ಲಹೋಮ ರಾಜ್ಯದ ಗಡಿಗೆ 72 ಕಿಮೀ. ದಕ್ಷಿಣದಲ್ಲಿ, ಲೂಸಿಯಾನ ರಾಜ್ಯದ ಪಶ್ಚಿಮಕ್ಕೆ 278 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 2305454 (2005). ಡ್ಯಾಲಸ್ ನಗರದ ನೆರೆಯ ಕಪ್ಪು ಮಣ್ಣು ಹತ್ತಿ ಬೆಳೆಗೆ ಯೋಗ್ಯವಾದ್ದು. ನಗರದ ಸುತ್ತಮುತ್ತ ತೈಲ ಬಾವಿಗಳಿವೆ. ಇದು ಪ್ರಸಿದ್ಧ ವಾಣಿಜ್ಯಕೇಂದ್ರ. ಅಮೆರಿಕದ ಮಾರುಕಟ್ಟೆಗಳಲ್ಲಿ ಒಂದು ಪೆಟ್ರೋಲ್ ಉತ್ಪಾದನೆ, ಮಾಂಸದ ಡಬ್ಬೀಕರಣ, ಹತ್ತಿ ಹಿಂಜುವುದು, ರಾಸಾಯನಿಕ ವಸ್ತು ಉತ್ಪಾದನೆ, ಹತ್ತಿಬಟ್ಟೆ ಮತ್ತು ಚರ್ಮದ ವಸ್ತುಗಳ ತಯಾರಿಕೆ, ವಿಮಾನ, ವಿಮಾನದ ಬಿಡಿ ಭಾಗಗಳು ಹಾಗೂ ರೆಫ್ರಿಜಿರೇಟರ್ ಯಂತ್ರ ತಯಾರಿಕೆ– ಇವು ಇಲ್ಲಿರುವ ಪ್ರಮುಖ ಕೈಗಾರಿಕೆಗಳು, ಸ್ತ್ರೀಯರ ಉಡುಪುಗಳೂ ತಯಾರಾಗುತ್ತವೆ.

ಡ್ಯಾಲಸ್ ನಗರದಲ್ಲಿ ಸು. 100 ಉದ್ಯಾನಗಳಿವೆ. ಇಲ್ಲಿನ ವಾರ್ಷಿಕ ವಸ್ತು ಪ್ರದರ್ಶನ ಅಮೇರಿಕದಲ್ಲಿ ಅತ್ಯಂತ ದೊಡ್ಡದು. ಇದು ವ್ಯಾಪಾರಿಗಳನ್ನೂ ಜನರನ್ನೂ ಆಕರ್ಷಿಸುತ್ತದೆ. ನಗರದ ಕಾಟನ್ ಬೌಲ್ ಕ್ರೀಡಾಂಗಣದಲ್ಲಿ 75,000 ಪ್ರೇಕ್ಷಕರು ಕೂಡಲು ಅವಕಾಶವಿದೆ. ಜಲಚರಪ್ರಾಣಿ ಸಂಗ್ರಹಾಲಯ ಮತ್ತು ವಸ್ತುಸಂಗ್ರಹಾಲಯ ಪ್ರಸಿದ್ಧವಾದವು. ಇಲ್ಲಿ ಮೆಥಾಡಿಸ್ಟ್ (1911) ಮತ್ತು ಡ್ಯಾಲಸ್ (1956) ವಿಶ್ವವಿದ್ಯಾಲಯಗಳಿವೆ. ಅನೇಕ ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಚರ್ಚುಗಳಿವೆ.

1841ರಲ್ಲಿ ಜಾನ್ ನೀಲಿ ಬ್ರೈಯಾನ್ ಎಂಬವನು ಈಗಿನ ನಗರವಿರುವ ಎಡೆಯಲ್ಲಿ ಮರದ ದಿಮ್ಮಿಗಳಿಂದ ಹಟ್ಟಿಯೊಂದನ್ನು ನಿರ್ಮಿಸಿ ನೆಲಸಿದ. ಈಗ ಡ್ಯಾಲಸ್ ನಗರಕ್ಕೆ ಟೆಕ್ಸಸ್ ರಾಜ್ಯದಲ್ಲಿ ಎರಡನೆಯ ಸ್ಥಾನವಿದೆ. ಅಮೆರಿಕದ ಉಪಾಧ್ಯಕ್ಷನಾಗಿದ್ದ ಜಾರ್ಜ್ ಮಿಫ್ಲಿನ್ ಡ್ಯಾಲಸನ (1792–1864) ಹೆಸರು ಈ ನಗರಕ್ಕೆ ಬಂದಿದೆ. 1855ರಲ್ಲಿ ಸುಮಾರು 350 ಮಂದಿ ಫ್ರೆಂಚ್ ಬುದ್ಧಿಜೀವಿಗಳು ನಗರದ ನೈಋತ್ಯ ಭಾಗದಲ್ಲಿ ಸಮಾಜವಾದಿ ವಸಾಹತನ್ನು ಸ್ಥಾಪಿಸಲು ಪ್ರಯತ್ನಿಸಿ ವಿಫಲರಾದರು. ಅಮೆರಿಕನ್ ಅಂತರ್ಯುದ್ಧದ (1891–65) ತರುವಾಯ, ಆಗ್ನೇಯ ರಾಜ್ಯಗಳಲ್ಲಿ ನಷ್ಟಕ್ಕೊಳಗಾದ ಹತ್ತಿ ತೋಟಗಾರರ ವಲಸೆಯಿಂದ ನಗರದ ಜನಸಂಖ್ಯೆ ಹೆಚ್ಚಿತು. 1870ರಲ್ಲಿ ರೈಲುಮಾರ್ಗಗಳು ಏರ್ಪಟ್ಟು ನಗರ ಮತ್ತಷ್ಟು ತ್ವರಿತವಾಗಿ ಬೆಳೆಯಿತು. 1908ರಲ್ಲಿ ಟ್ರಿನಿಟಿ ನದಿಯ ಪ್ರವಾಹದಿಂದ ನಗರಕ್ಕೆ ಭಾರಿ ನಷ್ಟವುಂಟಾಯಿತು. ಅನಂತರ ಯೋಜಿತ ರೀತಿಯಲ್ಲಿ ನಗರದ ನಿರ್ಮಾಣವಾಯಿತು. ಎರಡನೆಯ ಮಹಾಯುದ್ಧದ ತರುವಾಯ ನಗರ ಆಧುನಿಕ ರೀತಿಯಲ್ಲಿ ವಿಸ್ತರಿಸಿದೆ. ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ 1963ರಲ್ಲಿ ಕೊಲೆಯಾದದ್ದು ಈ ನಗರದಲ್ಲಿ.

ಡ್ಯಾಲಸ್ ಪ್ರಮುಖ ರೈಲ್ವೆ ಜಂಕ್ಷನ್. ಹೆದ್ದಾರಿಗಳು ಇದರ ಮೂಲಕ ಹಾದು ಹೋಗುತ್ತವೆ. ಟೆಕ್ಸಸ್ ಮತ್ತು ಪೆಸಿಫಿಕ್ ರೈಲ್ವೆಯ ಆಡಳಿತ ಕೇಂದ್ರವಿದು. ವೆಸ್ಟರ್ನ್ ಯೂನಿಯನ್ ಟೆಲಿಗ್ರಾಫ್ ಕಂಪನಿ ಮತ್ತು ಸೌತ್‌ವೆಸ್ಟರ್ನ್ ಬೆಲ್ ಟಲಿಫೋನ್ ಕಂಪನಿಯ ಪ್ರಧಾನ ಕಛೇರಿಗಳು ಇಲ್ಲಿವೆ. ಡ್ಯಾಲಸ್‌ನಲ್ಲಿ ವಿಮಾನ ನಿಲ್ದಾಣವಿದೆ. (ವಿ.ಜಿ.ಕೆ.)

**ಡ್ಯಾಲ್ಮೇಷಿಯ:** ದಕ್ಷಿಣ ಯುರೋಪಿನ ಏಡ್ರಿಯಾಟಿಕ್ ಸಮುದ್ರತೀರದ ಬಾಲ್ಕನ್ ಪರ್ಯಾಯದ್ವೀಪದ ಒಂದು ಪ್ರದೇಶ. ಈಗ ಈ ಪ್ರದೇಶ ಯೂಗೊಸ್ಲಾವಿಯದ ಕ್ರೊವೇಷಿಯ, ಬೋಸ್ನಿಯ, ಹರ್ಟ್ಸಗೋವಿನ, ಮಾಂಟೆನೀಗ್ರೋಗಳಲ್ಲಿ ಹಬ್ಬಿದೆ. ದಕ್ಷಿಣದ ಅಲ್ಬೇನಿಯದ ಅಂಚಿನಿಂದ ಉತ್ತರಕ್ಕೆ ಜಾದಾರ್‌ವರೆಗೆ ವ್ಯಾಪಿಸಿರುವ ಈ ಪ್ರದೇಶ ಹಲವು ದ್ವೀಪಗಳನ್ನೂ ಒಳಗೊಂಡಿದೆ. ಇದರ ಉದ್ದ 320 ಕಿಮೀ. ವಿಸ್ತೀರ್ಣ 12287.5 ಕಿಮೀ.

ಡ್ಯಾಲ್ಮೇಷಿಯ ತೀರ ಡೊಂಕಾಗಿಯೂ ಕಡಿದಾಗಿಯೂ ಇದೆ. ಸಮುದ್ರದಂಚಿನಲ್ಲಿರುವ ದ್ವೀಪಗಳಲ್ಲಿ ಪ್ರಮುಖವಾದವು ಪಾಗ್, ಡೂಗೀ ಓಟಾಕ್, ಕಾರ್ಚೂಲಾ, ಮಲ್ಯೆಟ್, ವೀಸ್, ಷೋಲ್ಟ. ಕಡಿದಾದ ಬರಡಾದ ಡಿನಾರಿಕ್ ಆಲ್ಪ್ಸ್ ಪರ್ವತದಿಂದಾಗಿ ಇದು ಬೋಸ್ನಿಯ – ಹರ್ಟ್ಸಗೋವಿನದಿಂದ ಪ್ರತ್ಯೇಕಗೊಂಡಿದೆ. 500 ಮೀ ನಿಂದ 2610 ಮೀ ವರೆಗಿನ ಹಲವು ಶಿಖರಗಳಿಂದ ಕೂಡಿದ ಈ ಶ್ರೇಣಿಯಲ್ಲಿ ಎರಡು ಮುಖ್ಯ ಕಣಿವೆ ಮಾರ್ಗಗಳುಂಟು. ಡ್ಯಾಲ್ಮೇಷಿಯ ತೀರದಲ್ಲಿ ಹಲವು ನೈಸರ್ಗಿಕ ಕೊಲ್ಲಿಗಳೂ ರೇವುಗಳೂ ಇವೆ. ಪರ್ವತ ಶ್ರೇಣಿಯಿಂದ ಕೂಡಿದ ಭೂಪ್ರದೇಶಗಳು ಮುಳುಗಡೆ ಹೊಂದುವುದರಿಂದ ರೂಪಿತವಾಗುವ ತೀರಗಳಿಗೆ ಡಾಲ್ಮೇಷಿಯನ್ ತೀರವೆಂದೇ ಕರೆಯಲಾಗುವುದು.

ಡ್ಯಾಲ್ಮೇಷಿಯದ ವಾಯುಗುಣ ತೀವ್ರವಲ್ಲ. ಬೇಸಗೆಯಲ್ಲಿ ಮಳೆಯಿಲ್ಲ. ಶರತ್ಕಾಲದಲ್ಲೂ ಚಳಿಗಾಲದಲ್ಲೂ ಧಾರಾಳವಾಗಿ ಮಳೆ ಸುರಿಯುತ್ತದೆ. ಹಿಮ ಬಹಳ ಕಡಿಮೆ. ಇಲ್ಲಿಯ ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಆದರೆ ಆಲಿವ್, ತರಕಾರಿ, ದ್ರಾಕ್ಷಿಬಳ್ಳಿ ಚೆನ್ನಾಗಿ ಬೆಳೆಯುತ್ತವೆ. ಓಟ್ಸ್, ಬಾರ್ಲಿ, ಮೆಕ್ಕೆಜೋಳ, ರೈ, ಗೋದಿ, ಆಲೂಗಡ್ಡೆ ಇವೂ ಬೆಳೆಯುತ್ತವೆ. ಇಲ್ಲಿ ಬಾಕ್ಸೈಟ್, ಕಲ್ಲಿದ್ದಲು, ಲಿಗ್ನೈಟ್ ಮತ್ತು ಸುಣ್ಣಕಲ್ಲು ನಿಕ್ಷೇಪಗಳಿವೆ. ಅಲ್ಯೂಮಿನಿಯಂ, ಸಿಮೆಂಟ್, ಹಡಗುನಿರ್ಮಾಣ, ಆಲಿವ್ ಎಣ್ಣೆ ಮತ್ತು ರಾಸಾಯನಿಕ ಕೈಗಾರಿಕೆಗಳಿವೆ. ನದಿಗಳು ಯಾನಕ್ಕೆ ಯೋಗ್ಯವಲ್ಲ. ಆದರೆ ಇವುಗಳ ಜಲಪಾತಗಳು ವಿದ್ಯುತ್ತಿನ ಉತ್ಪಾದನೆಗೆ ಉಪಯುಕ್ತವಾಗಿವೆ. ಇಲ್ಲಿಯ ಭೂದೃಶ್ಯ ಸುಂದರವಾಗಿದ್ದು, ದ್ವೀಪಗಳು ಭವ್ಯವಾಗಿವೆ. ಪ್ರಾಚೀನ ನಗರಗಳಲ್ಲಿ ಹಲವು ಐತಿಹಾಸಿಕ ಸ್ಮಾರಕಗಳಿವೆ. ಆದ್ದರಿಂದ ಬೇಸಗೆಯಲ್ಲಿ ಪ್ರವಾಸಿಗಳು ಇಲ್ಲಿಗೆ ಅಧಿಕಸಂಖ್ಯೆಯಲ್ಲಿ ಬರುತ್ತಾರೆ.

ಇಲ್ಲಿ ಬಹುಮಟ್ಟಿಗೆ ಕ್ರೋವೇಷಿಯನ್ ಹಾಗೂ ಸರ್ಬ್ ಜನ ಇದ್ದಾರೆ. ಸಮುದ್ರತೀರದ ನಗರಗಳಲ್ಲಿ, ವಿಶೇಷವಾಗಿ ಜಾದಾರ್ ನಗರದಲ್ಲಿ ಇಟಲಿಯನ್ನರಿದ್ದಾರೆ. ಜನಸಂಖ್ಯೆಯ $^1/_6$ ಭಾಗ ರೋಮನ್ ಕೆಥೊಲಿಕ್. ಸರ್ಬೊಕ್ರೊವೇಷಿಯನ್ ಪ್ರಧಾನ ಭಾಷೆ. ಪ್ರಮುಖ ನಗರಗಳು ಸ್ಲೀಯಟ್, ಡ್ಯೂಬ್ರಾವ್ನಿಕ್, ಷೀಬೆನಿಕ್, ಜಾದಾರ್, ಟ್ರೋಗಿರ್. ಕಾರ್ಚುಲಾ ಮತ್ತು ಕೋಟಾರ್. (ವಿ.ಜಿ.ಕೆ.)

**ಢಾಕಾ:** ಬಾಂಗ್ಲಾದೇಶದ ರಾಜಧಾನಿ. ಒಂದು ಜಿಲ್ಲೆ ಹಾಗೂ ವಿಭಾಗ. ಧಾಲೇಶ್ವರಿಯ ಒಂದು ಉಪನದಿಯಾದ ಬುರಿ ಗಂಗಾದ ದಂಡೆಯ ಮೇಲೆ, ನದೀ ಬಂದರಾದ ನಾರಾಯಣಗಂಜ್‌ನಿಂದ 16 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 6,724,976 (2007).

ಢಾಕಾ ನಗರದಲ್ಲಿ ಅನೇಕ ಸುಂದರವಾದ ಐತಿಹಾಸಿಕ ಸ್ಮಾರಕಗಳಿವೆ. ಈ ನಗರದ ಹಿಂದೂ ದೇವಾಲಯಗಳಲ್ಲಿ ಪ್ರಸಿದ್ಧವಾದದ್ದು 17ನೆಯ ಶತಮಾನದಲ್ಲಿ ನಿರ್ಮಿತವಾದ ಢಾಕೇಶ್ವರಿ ದೇವಾಲಯ. ಉಚ್ಚ ನ್ಯಾಯಾಲಯ, ಕಾಲೇಜುಗಳು, ಢಾಕಾ ವಿಶ್ವವಿದ್ಯಾಲಯ, ಸರ್ಕಾರಿ ಕಚೇರಿಗಳು, ಆಧುನಿಕ ಶೈಲಿಯ ಕಟ್ಟಡಗಳು, ಇವಲ್ಲದೆ ಇಲ್ಲಿ ವಸ್ತುಸಂಗ್ರಹಾಲಯವೂ ಕ್ರೀಡಾಂಗಣವೂ ಇವೆ.

ಬಾಂಗ್ಲಾದೇಶದ ಪ್ರಮುಖ ಪಟ್ಟಣಗಳೊಡನೆ ಈ ನಗರಕ್ಕೆ ರಸ್ತೆ, ರೈಲು ಮತ್ತು ಜಲಮಾರ್ಗ ಸಂಪರ್ಕವಿದೆ. ಢಾಕಾದಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಢಾಕಾ ಪ್ರದೇಶದಲ್ಲಿ ವಿಪುಲವಾಗಿದ್ದ ಮುತ್ತುಗದ ಮರಗಳಿಂದಾಗಿ (ಢಾಕ್) ಇದಕ್ಕೆ ಢಾಕಾ ಎಂಬ ಹೆಸರು ಬಂದಿದೆಯೆಂಬುದು ಒಂದು ಅಭಿಪ್ರಾಯ. ಈ ನಗರದ ಪಶ್ಚಿಮ ಭಾಗದಲ್ಲಿರುವ ಢಾಕೇಶ್ವರಿಯ ದೇವಾಲಯದಿಂದಾಗಿ ಇದಕ್ಕೆ ಢಾಕಾ ಎಂಬ ಹೆಸರು ಬಂದಿದೆಯೆಂಬುದು ಇನ್ನೊಂದು ಅಭಿಪ್ರಾಯ. 1842 ರಲ್ಲಿ ಸ್ಥಾಪಿತವಾದ ಢಾಕಾ ಕಾಲೇಜು ಮುಂದೆ ಢಾಕಾ ವಿಶ್ವವಿದ್ಯಾಲಯವಾಗಿ ಬೆಳೆಯಿತು. 1947 ರಲ್ಲಿ ಪಾಕಿಸ್ತಾನದ ನಿರ್ಮಾಣವಾದಾಗ ಇದು ಪೂರ್ವ ಬಂಗಾಲಕ್ಕೂ ಅನಂತರ ಪೂರ್ವ ಪಾಕಿಸ್ತಾನಕ್ಕೂ ರಾಜಧಾನಿಯಾಗಿತ್ತು. ಸ್ವತಂತ್ರ ಬಾಂಗ್ಲಾದೇಶದ ಉದಯವಾದಾಗ (1971) ಢಾಕಾ ಅದರ ರಾಜಧಾನಿಯಾಯಿತು.

ಢಾಕಾ ಜಿಲ್ಲೆಯ ವಿಸ್ತೀರ್ಣ 7378 ಚ.ಕಿಮೀ. ಈ ಜಿಲ್ಲೆಯ ವಿಸ್ತಾರವಾದ ಬಯಲಿನ ಮೂರು ಕಡೆಗಳಲ್ಲಿ ಮೇಘ್ನಾ, ಗಂಗಾ (ಪದ್ಮಾ) ಮತ್ತು ಜಮುನಾ (ಬ್ರಹ್ಮಪುತ್ರಾ) ನದಿಗಳಿವೆ. ಜಿಲ್ಲೆಯಲ್ಲಿ ಧಾಲೇಶ್ವರಿ, ಬುರಿ ಗಂಗಾ, ಲಾಖ್ಯಾ ಮುಂತಾದ ನದಿಗಳ ಒಂದು ಜಾಲವೇ ಸೃಷ್ಟಿಯಾಗಿದೆ. ಸೆಣಬು, ಬತ್ತ ಇಲ್ಲಿನ ಮುಖ್ಯ ಬೆಳೆಗಳು. ಸಾಸಿವೆ ಮತ್ತು ಎಳ್ಳನ್ನೂ ಬೆಳೆಯುತ್ತಾರೆ. ಇಲ್ಲಿಯ ಕೈಗಾರಿಕೆಗಳಲ್ಲಿ ಮುಖ್ಯವಾದವು ನೇಯ್ಗೆ, ಸೆಣಬಿನ ದಾರ ತಯಾರಿಕೆ, ಕಪ್ಪೆಚಿಪ್ಪಿನಿಂದ ಬಳೆಗಳ ತಯಾರಿಕೆ, ಮಣ್ಣಿನ ಮಡಕೆ ಮತ್ತು ಚಿನ್ನಬೆಳ್ಳಿ ಕೆಲಸ, ಸಾಬೂನು, ಮುತ್ತಿನ ಗುಂಡಿ ಮತ್ತು ಕೊಂಬಿನ ಬಾಚಣಿಗೆಯ ತಯಾರಿಕೆ. ನಾರಾಯಣಗಂಜ್ ಈ ಜಿಲ್ಲೆಯ ಮುಖ್ಯ ಬಂದರು. ಇದು ಸೆಣಬಿನ ಕೈಗಾರಿಕೆ ಮತ್ತು ಜಲಮಾರ್ಗಗಳ ಕೇಂದ್ರವಾಗಿದೆ. ಹೆಚ್ಚುಪಾಲು ಸಾರಿಗೆ ಸಂಪರ್ಕ ಜಲಮಾರ್ಗಗಳ ಮೂಲಕ ನಡೆಯುತ್ತದೆ. ಢಾಕಾ ವಿಭಾಗ ಬಾಂಗ್ಲಾದೇಶದ ಮಧ್ಯಭಾಗದಲ್ಲಿದೆ. (ಬಿ.ಎಸ್.ಎ.)

# ತ

**ತಂಜಾವೂರು:** ತಮಿಳುನಾಡು ರಾಜ್ಯದ ಒಂದು ಪಟ್ಟಣ; ಅದೇ ಹೆಸರಿನ ಜಿಲ್ಲೆಯ ಆಡಳಿತ ಕೇಂದ್ರ, ಕಾವೇರಿ ನದೀ ಮುಖಜ ಭೂಮಿಯ ಪಶ್ಚಿಮ ಭಾಗದಲ್ಲಿದೆ. ಚೆನ್ನೈನಿಂದ 351 ಕಿಮೀ ದೂರದಲ್ಲಿದೆ. ಜನಸಂಖ್ಯೆ 215727. 10 ನೆಯ ಶತಮಾನದಿಂದ ಇದು ದಕ್ಷಿಣ ಭಾರತದ ಪ್ರಮುಖ ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ, ಧಾರ್ಮಿಕ, ಕೇಂದ್ರಗಳಲ್ಲೊಂದಾಗಿ ಬೆಳೆದು ಬಂದಿದೆ. ಇದಕ್ಕೆ ಪರಾಶರ ಕ್ಷೇತ್ರವೆಂಬ ಹೆಸರೂ ಉಂಟು. ಹಿಂದೆ ಇದು ತಂಜನ್ ಎಂಬ ರಾಕ್ಷಸನ ವಾಸಸ್ಥಾನವಾಗಿತ್ತೆಂದೂ ಅವನನ್ನು ಮಹಾವಿಷ್ಣು ಸಂಹರಿಸುವಾಗ ಆತ ಈ ನಗರ ತನ್ನ ಹೆಸರಿನಲ್ಲಿ ಪ್ರಸಿದ್ಧವಾಗಬೇಕೆಂದು ಕೇಳಿಕೊಂಡಿದ್ದರಿಂದ ನಗರಕ್ಕೆ ತಂಜಪುರವೆಂಬ ಹೆಸರು ಬಂತೆಂದೂ ಐತಿಹ್ಯ. ನಗರದಲ್ಲಿ 18ಕ್ಕೂ ಹೆಚ್ಚು ದೇವಾಲಯಗಳಿವೆ. ಇವುಗಳಲ್ಲಿ ಪ್ರಮುಖವಾದ್ದು 11 ನೆಯ ಶತಮಾನದಲ್ಲಿ ನಿರ್ಮಾಣವಾದ ಬೃಹದೀಶ್ವರ ದೇವಾಲಯ. ರಾಜರಾಜ ಚೋಳ ನಿರ್ಮಿಸಿದ್ದರಿಂದ ಈ ದೇವಾಲಯಕ್ಕೆ ರಾಜರಾಜ ದೇವಾಲಯವೆಂಬ ಹೆಸರೂ ಇದೆ.

ಬೃಹದೀಶ್ವರ ದೇವಾಲಯದ ಉತ್ತರದಲ್ಲಿ ಹಳೆಯ ಅರಮನೆಯುಂಟು. ಇದರೊಳಗೆ ಕಲಾ ಗ್ಯಾಲರಿ, ಸರಸ್ವತಿ ಮಹಲ್, ಪುಸ್ತಕ ಭಂಡಾರ, ದರ್ಬಾರ್ ಹಾಲ್, ಆಯುಧಶಾಲೆ, ಪ್ರತೀಕ್ಷಾ ಗೋಪುರ ಹಾಗೂ ಸಂಗೀತಮಹಲುಗಳಿವೆ. ನಾಯಕ ಹಾಗೂ ಮರಾಠಾ ಪ್ರಭುಗಳ ಆಸಕ್ತಿಯಿಂದಾಗಿ ಬೆಳೆದ ಪುಸ್ತಕ ಭಂಡಾರದಲ್ಲಿ 30,000ಕ್ಕೂ ಹೆಚ್ಚು ಸಂಪುಟಗಳಿವೆ. ಇವುಗಳಲ್ಲಿ 8,000 ಕೃತಿಗಳು ಅಪೂರ್ವವಾದ ತಾಳೆಯೋಲೆಯ ಹಸ್ತಪ್ರತಿಗಳು. ಖಗೋಳವಿಜ್ಞಾನ, ವೈದ್ಯ, ಜ್ಯೋತಿಷ ಮೊದಲಾದ ಹಲವು ವಿಷಯಗಳಿಗೆ ಸಂಬಂಧಿಸಿದ ತಮಿಳು, ತೆಲುಗು, ಮರಾಠಿ, ಸಂಸ್ಕೃತ ಹಾಗೂ ಇತರ ಭಾಷೆಗಳ ಗ್ರಂಥಗಳು ಇಲ್ಲಿವೆ. ಶಿವಗಂಗಾ ಸರೋವರ, 1778ರಲ್ಲಿ ಸಿ. ಎಫ್. ಷ್ವಾಟ್ಸ್ ಎಂಬ ಪಾದ್ರಿ ನಿರ್ಮಿಸಿದ ಸ್ವಾಟ್ಸ್ ಚರ್ಚ್, ಜನತಾ ಉದ್ಯಾನ–ಇವು ಇಲ್ಲಿನ ಇತರ ಆಕರ್ಷಣೆಗಳು.

ಇದು ತಮಿಳುನಾಡು ರಾಜ್ಯದ 8ನೆಯ ದೊಡ್ಡ ನಗರ. ಈ ನಗರದ ಸು. ಶೇ. 85 ಜನ ಹಿಂದುಗಳು ಉಳಿದವರು ಕ್ರೈಸ್ತರು, ಮುಸಲ್ಮಾನರು ಹಾಗೂ ಜೈನರು. ಹಿಂದೆ EzÂHËÉå¯ÃsÀÄ ¥ÀæÁgÀPÉÃzÀæÀÁVÀÛ (ಎಚ್.ಜಿ.ಎ.)

**ತಂಬಾಕು:** ಸೊಲನೇಸೀ ಕುಟುಂಬಕ್ಕೆ ಸೇರಿದ ನಿಕೋಶಿಯಾನ ಟಬೇಕಮ್ ಎಂಬ ಶಾಸ್ತ್ರೀಯ ಹೆಸರಿನ ಗಿಡ (ಟೊಬ್ಯಾಕೊ). ಗಿಡಕ್ಕೂ ಅದರ ಒಣಗಿಸಿದ ಅಥವಾ ಒಣಗಿಸಿ ಹದಗೊಳಿಸಿದ ಎಲೆಗೂ ಈ ಹೆಸರು ಅನ್ವಯವಾಗುವುದು. ಇದರ ಉತ್ತೇಜಕ ಗುಣದಿಂದಾಗಿ ಚಟವುಳ್ಳವರು ಇದರ ಹೊಗೆಯನ್ನು ಅಥವಾ ಪುಡಿಯನ್ನು ಸೇದುವುದುಂಟು. ಕೆಲವರು ಅಡಕೆ ಎಲೆಯೊಂದಿಗೆ ತಿನ್ನುವರು. ಬೀಡಿ, ಸಿಗರೇಟು, ಚುಟ್ಟ, ಹುಕ್ಕ ಮತ್ತು ಚಿಲುಮೆ ಇವು ಹೊಗೆಯನ್ನು ಸೇದುವ ಬಗೆಗಳು. ಈಗ ಅಡಕೆ ಮತ್ತು ತಂಬಾಕು ಬೆರೆಸಿದ ಗುಟ್ಕಾ ಬಂದಿದೆ.

ಉಗಮ ಮತ್ತು ಇತಿಹಾಸ : ತಂಬಾಕಿನ ಉಗಮ ಮತ್ತು ಪೂರ್ವೇತಿಹಾಸದ ಬಗ್ಗೆ ಭಿನ್ನಮತಗಳಿದ್ದರೂ ಇದು ಮೂಲತಃ ಅಮೆರಿಕ ಖಂಡದ ದಕ್ಷಿಣ, ಮಧ್ಯ ಪ್ರದೇಶಗಳಲ್ಲಿ ಜನಿಸಿ ಪ್ರಪಂಚದಲ್ಲೆಲ್ಲ ಪಸರಿಸಿತೆಂದು ಸಸ್ಯಸಂಶೋಧಕರು ಸಿದ್ಧಪಡಿಸಿರುವರು. ಅಮೆರಿಕದ ಆದಿವಾಸಿಗಳಾದ ರೆಡ್ ಇಂಡಿಯನ್ ಜನ ತಂಬಾಕಿನ ಹೊಗೆಯನ್ನು ಚಿಲುಮೆಯ ರೂಪದ ಕಚ್ಚಿಗೆಯ ನಳಿಗೆಯಿಂದ ಸೇದಿ ಮೂಗಿನಿಂದ ಹೊಗೆಯನ್ನು ಬಿಡುತ್ತಿದ್ದರೆಂದೂ ಅದನ್ನು ನೋಡಿದ ಪಾಶ್ಚಾತ್ಯ ಪ್ರಯಾಣಿಕರು ಚಿಲುಮೆಯ ಹೆಸರಾದ ಟೊಬ್ಯಾಕೊ ಎಂಬುದನ್ನೇ ಸೇದುವ ಎಲೆಗೆ ಅನ್ವಯಿಸಿದರೆಂದೂ ಹೇಳಲಾಗಿದೆ. ಸ್ಪೇನಿನಿಂದ ಮೆಕ್ಸಿಕೊ ದೇಶಕ್ಕೆ ಹೋದ ವೈದ್ಯನೊಬ್ಬ ತಂಬಾಕನ್ನು 1560ರಲ್ಲಿ ಮೊಟ್ಟಮೊದಲು ಯುರೋಪ್ ಖಂಡಕ್ಕೆ ತಂದ. ಜೀನ್ ನಿಕೊಟ್ ಎಂಬ ಫ್ರೆಂಚ್ ರಾಯಭಾರಿ ಲಿಸ್ಬನ್ ಪಟ್ಟಣದಲ್ಲಿ ತಂಬಾಕಿನ ಬಗ್ಗೆ ಮಾಹಿತಿಯನ್ನು ಪಡೆದು ಈ ಗಿಡವನ್ನು ಫ್ರೆಂಚ್ ಅರಮನೆಯ ತೋಟದಲ್ಲಿ ಬೆಳೆಸಲಾರಂಭಿಸಿದ. ಆದ್ದರಿಂದ ಈ ಗಿಡದ ಜಾತಿಗೆ ನಿಕೋಶಿಯಾನ ಎಂಬ ಹೆಸರು ಬಂದಿತು. ಪ್ರಪಂಚದ ಒಟ್ಟು ಉತ್ಪಾದನೆ ಸು. 6195,000 ಟನ್. ಪ್ರಮುಖ ಉತ್ಪಾದನಾ ಪ್ರದೇಶಗಳು, ಚೀನ, ಬ್ರೆಜಿಲ್, ಭಾರತ, ಅಮೆರಿಕ ಸಂಯುಕ್ತ ಸಂಸ್ಥಾನ, ಟರ್ಕಿ ಇತ್ಯಾದಿ.

ತಂಬಾಕನ್ನು 17ನೆಯ ಶತಮಾನದ ಪ್ರಾರಂಭದಲ್ಲಿ ಪೋರ್ಚುಗೀಸರು ಭಾರತಕ್ಕೆ ತಂದರು. ಇತರ ದೇಶಗಳಂತೆ ಭಾರತದಲ್ಲಿ ಕೂಡ ತಂಬಾಕಿನ ಬಗ್ಗೆ ತಿರಸ್ಕಾರವಿದ್ದುದಲ್ಲದೆ ಬಹಿಷ್ಕಾರವನ್ನೂ ಹಾಕಲಾಗಿತ್ತು. ಆದರೂ ದಿನ ಹೋದಂತೆ ಅದು ಜನಪ್ರಿಯವಾಗುತ್ತ ಹೋಗಿ ದೇಶದ ತುಂಬ ಪಸರಿಸಿತು. ಮೊದಲು ಒಂದು ಶತಮಾನದ ವರೆಗೆ ಹಿಂದಿನ ಮುಂಬಯಿ ರಾಜ್ಯದ ಮಹಾರಾಷ್ಟ್ರ ಮತ್ತು ಗುಜರಾತ್ ವಿಭಾಗಗಳಲ್ಲಿ ಮಾತ್ರ ಇದರ ಸಾಗುವಳಿಯೂ ವ್ಯಾಪಾರವೂ ನಡೆಯುತ್ತಿದ್ದವು. ಬಳಿಕ ಇತರ ಪ್ರಾಂತಗಳಿಗೂ ಇದು ಹರಡಿತು. ಸಿಗರೇಟುಗಳಲ್ಲಿ ಉಪಯೋಗಿಸುವ ವರ್ಜೀನಿಯ ತಂಬಾಕಿನ ಬೆಳೆವಣಿಗೆಯನ್ನು ಇಂಡಿಯನ್ ಲೀಫ್ ಡೆವಲೆಪ್‌ಮೆಂಟ್ ಕಂಪನಿಯವರು ಆಂಧ್ರ ಪ್ರದೇಶದಲ್ಲಿ ಸು. 35 ವರ್ಷಗಳ ಹಿಂದೆ ಆರಂಭಿಸಿದರು. ಇದು ಈ ಪ್ರಾಂತದಲ್ಲೆ ದೊಡ್ಡ ಪ್ರಮಾಣದಲ್ಲಿ ಪ್ರಸಾರ ಹೊಂದಿದೆಯಲ್ಲದೆ ಈಗ ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳಲ್ಲಿಯೂ ಹರಡಿದೆ.

ಭಾರತದ ಒಟ್ಟು ಸಾಗುವಳಿ ಕ್ಷೇತ್ರದಲ್ಲಿ ತಂಬಾಕಿನ ವಿಸ್ತೀರ್ಣ ಕೇವಲ ಶೇ. 0.3 ಅಂದರೆ 3938,000 (2003) ಹೆಕ್ಟೇರುಗಳು. ತಂಬಾಕಿನ ಬೆಳೆಯಲ್ಲಿ ಆಂಧ್ರಪ್ರದೇಶ ಮೊದಲನೆಯದು (ಶೇ. 33.42), ಗುಜರಾತ್ ಎರಡನೆಯದು, ಉತ್ತರ ಪ್ರದೇಶ (ಶೇ. 20.6). ಮೂರನೆಯದು ಕರ್ನಾಟಕ (ಶೇ. 14.13). ನಾಲ್ಕನೆಯದು (ಶೇ. 8.02 ಅಂದರೆ 41,700 ಹೆಕ್ಟೇರು). ಇಡೀ ದೇಶದಲ್ಲಿ ತಂಬಾಕಿನ ಉತ್ಪನ್ನ 7.36 ಲಕ್ಷಟನ್‌ಗಳು.

ಇದರಲ್ಲಿ ಆಂಧ್ರಪ್ರದೇಶದ್ದು ಶೇ. 41.3. ಕೃಷಿ ಕ್ಷೇತ್ರ ತೀರ ಕಡಿಮೆ ಇದ್ದರೂ ದೇಶದ ಆರ್ಥಿಕ ದೃಷ್ಟಿಯಿಂದ ತಂಬಾಕು ಬಹಳ ಮಹತ್ತ್ವದ ಬೆಳೆ ಆಗಿದೆಯೆಂಬುದು ಈ ಕೆಳಗಿನ ಅಂಶಗಳಿಂದ ತಿಳಿಯುತ್ತದೆ.

ತಂಬಾಕಿನ ವ್ಯವಸಾಯದಲ್ಲಿ ತೊಡಗಿದವರ ಒಟ್ಟು ಸಂಖ್ಯೆ 30 ಲಕ್ಷ. ತಂಬಾಕಿನಿಂದ ವಾರ್ಷಿಕ ಉತ್ಪನ್ನ ಸುಮಾರು 50 ಕೋಟಿ ರೂಪಾಯಿಗಳು. ತಂಬಾಕಿನ ಮೇಲಿನ ಕರದಿಂದ ಸರ್ಕಾರಕ್ಕೆ ವಾರ್ಷಿಕ ಉತ್ಪನ್ನ 53.7 ಕೋಟಿ ರೂಪಾಯಿಗಳು.

ಭಾರತದಿಂದ ತಂಬಾಕು 50ಕ್ಕಿಂತ ಹೆಚ್ಚು ದೇಶಗಳಿಗೆ ನಿರ್ಯಾತವಾಗುತ್ತಿದ್ದು ಅದರಲ್ಲಿ ಸಿಗರೇಟಿಗೆ ಉಪಯೋಗಿಸುವ ವರ್ಜೀನಿಯ ತಂಬಾಕಿನ ಪ್ರಮಾಣ ಶೇ. 75–80 ರಷ್ಟು ಇದೆ. ದೊಡ್ಡ ಪ್ರಮಾಣದಲ್ಲಿ ಭಾರತದ ತಂಬಾಕನ್ನು ಗ್ರೇಟ್ ಬ್ರಿಟನ್, ರಷ್ಯ, ಬೆಲ್ಜಿಯಮ್ ಮತ್ತು ನೆದರ್ಲೆಂಡ್ಸ್ ದೇಶಗಳು ಆಮದು ಮಾಡಿಕೊಳ್ಳುತ್ತವೆ.

ಸಸ್ಯಶಾಸ್ತ್ರೀಯ ವಿವರಣೆ : ನಿಕೋಶಿಯಾನ ಜಾತಿಯನ್ನು ಸ್ವೀಡನ್ನಿನ ಸಸ್ಯವಿಜ್ಞಾನಿ ಲಿನೀಯಸ್ 1753ರಲ್ಲಿ ಮೊತ್ತಮೊದಲು ವರ್ಣಿಸಿದ. ಇದರಲ್ಲಿ ಸುಮಾರು 60 ಪ್ರಭೇದಗಳಿವೆಯಾದರೂ ಟಬೇಕಮ್ ಮತ್ತು ರಸ್ಟಿಕ ಎಂಬ ಎರಡು ಮಾತ್ರ ಮಾನವನ ಉಪಯೋಗಕ್ಕಾಗಿ ಬೆಳೆಸಲ್ಪಡುತ್ತಿವೆ. ಸಿಲ್ವೆಸ್ಟ್ರಿಸ್ ಮತ್ತು ಏಲೇಟ ಎಂಬವನ್ನು ಚೆಲುವಿನ ಹೂಗಿಡಗಳಾಗಿ ಬೆಳೆಸುವುದುಂಟು. ಟಬೇಕಮ್ ಎಂಬುದು ಸಿಲ್ವೆಸ್ಟ್ರಿಸ್ ಮತ್ತು ಟೊಮೆಂಟೋಸಿಫಾರ್ಮಿಸ್ ಎಂಬ ಪ್ರಭೇದಗಳ ನಡುವೆ ಉಂಟಾದ ಸ್ವಾಭಾವಿಕ ಸಂಕರದಿಂದ ಅರ್ಜಂಟೀನದ ಈಶಾನ್ಯ ಭಾಗದಲ್ಲೂ ರಸ್ಟಿಕ ಎಂಬುದು ಅಂಡ್ಯುಲೇಟ ಮತ್ತು ಪೆನಿಕ್ಯುಲೇಟ ಇವುಗಳ ಸಂಕರದಿಂದ ಪೆರು, ಬೊಲೀವಿಯ ಮತ್ತು ಈಕ್ವೆಡಾರ್‌ಗಳ ಗುಡ್ಡಗಾಡು ಪ್ರದೇಶಗಳಲ್ಲೂ ಉದ್ಭವಿಸಿದವೆಂದು ಸಂಶೋಧನೆಗಳಿಂದ ಗೊತ್ತುಪಡಿಸಲಾಗಿದೆ. ಈ ಎರಡೂ ಪ್ರಭೇದಗಳಲ್ಲಿ 48 ಬಗೆಗಳಿವೆ.

ವರ್ಗೀಕರಣ : ವರ್ಗೀಕರಣಕ್ಕೆ ತಳಹದಿಯಾಗಿರುವ ಎಲೆ ಮತ್ತು ಹೂಗಳ ಲಕ್ಷಣಗಳಲ್ಲಿ ಅತಿಶಯ ವ್ಯತ್ಯಾಸವಿರುವುದರಿಂದಲೂ ತಂಬಾಕಿನಲ್ಲಿ ಕಾಡುಜಾತಿಗಳಿಲ್ಲವಾದ್ದರಿಂದಲೂ ವಾಣಿಜ್ಯ ಜಾತಿಗಳನ್ನಷ್ಟೇ ವರ್ಣಿಸುವುದು ಸಾಧ್ಯವಾಗಿದೆ.

ಸಾಗುವಳಿ, ಹವೆ ಮತ್ತು ಮಣ್ಣು : ತಂಬಾಕು ಮೂಲತಃ ಉಷ್ಣವಲಯದ ಬೆಳೆ. ಆದ್ದರಿಂದ ಇದು ಉಷ್ಣಹವೆಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ಆದರೂ ಇದನ್ನು ಸಮಶೀತೋಷ್ಣ ಮತ್ತು ಶೀತವಲಯಗಳಲ್ಲಿ ಸಹ ಬೆಳೆಸುತ್ತಾರೆ. ಇದು ಉತ್ತರ ಅಕ್ಷಾಂಶ $60^0$ ಯಲ್ಲಿರುವ ಮಧ್ಯ ಸ್ವೀಡನ್ನಿನಿಂದ ದಕ್ಷಿಣದಲ್ಲಿ $40^0$ ಅಕ್ಷಾಂಶದ ನ್ಯೂಜಿಲೆಂಡ್ ವರೆಗೆ ಬೆಳೆಯುತ್ತದೆ. ಟಬೇಕಮ್ ಪ್ರಭೇದ ಪ್ರಪಂಚದ ಬಹುಶಃ ಎಲ್ಲ ದೇಶಗಳಲ್ಲಿ ಹರಡಿದ್ದು ರಸ್ಟಿಕ ಮಾತ್ರ ಏಷ್ಯಮೈನರ್, ರಷ್ಯ, ಭಾರತ ಮತ್ತು ಅನೇಕ ಯುರೋಪಿಯನ್ ದೇಶಗಳಲ್ಲಿ ಪಸರಿಸಿದೆ.

ಭಾರತದಲ್ಲಿ ತಂಬಾಕು ಬೆಳೆಸುವ ಪ್ರದೇಶಗಳ ಉಷ್ಣತೆ ಸು. $31^0$–$37^0$ ಸೆ. $38^0$ ಸೆ. ಗಿಂತ ಹೆಚ್ಚು ಉಷ್ಣತೆಯಿದ್ದರೆ ಇಲ್ಲವೆ ಮಂಜು ಬೀಳುತ್ತಿದ್ದರೆ ಎಲೆಗಳಿಗೆ ಪೆಟ್ಟು ತಗಲುತ್ತದೆ. ಪೈರು ಪಕ್ವವಾಗುವಾಗ ದೊಡ್ಡ ಮಳೆಯಾದರೆ ಎಲೆಗಳ ಮೇಲಿನ ಮೇಣಗಳೂ ಸರಿಗಳೂ ತೊಳೆದುಹೋಗಿ ಎಲೆಗಳು ಕಾಗದದಂತೆ ತೆಳ್ಳಗಾಗುತ್ತವೆ. ಬಿರುಗಾಳಿಯೂ ಆಲಿಕಲ್ಲುಮಳೆಯೂ ಹಾನಿಕರವಾದವು. ತಂಬಾಕಿನ ಬೆಳೆವಣಿಗೆಗೆ ಆರ್ದ್ರತೆ ಬಹಳ ಮಹತ್ತ್ವದ್ದು. ಆರ್ದ್ರತೆ ಕಡಿಮೆಯಿದ್ದಾಗ ಬೆಳೆದ ತಂಬಾಕಿನಲ್ಲಿ ನೈಟ್ರೊಜನ್ ಮತ್ತು ನಿಕೋಟೀನ್ ಇವೆರಡೂ ಹೆಚ್ಚಾಗಿರುತ್ತವೆ. ಬೆಳೆಯುವಾಗ ನೀರಿನ ಪೂರೈಕೆ ಬಹಳ ದಿನ ಕಡಿಮೆಯಾದರೆ ಎಲೆಗಳು ದಪ್ಪವೂ ಅಚ್ಚಹಸುರು ಬಣ್ಣದವೂ ಆಗಿ ಅವುಗಳ ಮೇಲೆ ಬಹಳ ಅಂಟಿನ ಆಚ್ಛಾದನವುಂಟಾಗುತ್ತದೆ. ಆದ್ದರಿಂದ ಅವು ಚೆನ್ನಾಗಿ ಹುದುಗಟ್ಟುವುದಿಲ್ಲ; ಉರಿಯುವುದಿಲ್ಲ ಹಾಗೂ ಅವುಗಳ ಸ್ವಾದ ಮತ್ತು ವಾಸನೆ ಕೆಡುತ್ತವೆ.

ವಿದೇಶಗಳಲ್ಲೆಲ್ಲ ಸಿಗರೇಟ್ ತಂಬಾಕನ್ನು ಬರಿಯ ಮರಳು ಇಲ್ಲವೆ ಮರಳು ಪ್ರಧಾನ ಮಣ್ಣಿನ, ಸಾವಯವ ಪದಾರ್ಥಗಳು ಕಡಿಮೆ ಇರುವ, ಆಮ್ಲೀಯ ಹೊಲಗಳಲ್ಲಿ ಬೆಳೆಸುತ್ತಾರೆ. ಭಾರತದಲ್ಲಿ ಮಾತ್ರ ತಂಬಾಕಿನ ಸಾಗುವಳಿಯನ್ನು ಆಂಧ್ರ ಪ್ರದೇಶದಲ್ಲಿ ಕ್ಷಾರೀಯ ಮಣ್ಣಿನಲ್ಲಿ ಮಾಡುತ್ತಾರೆ. ಇದರಿಂದಾಗಿ ಫಸಲಾಗಲೀ ಎಲೆಯ ಗುಣವಾಗಲಿ ಉತ್ತಮವಾಗಿರುವುದಿಲ್ಲ. ಕರ್ನಾಟಕದಲ್ಲಿ ಕೆಂಬಣ್ಣದ ಗೋಡುಮಣ್ಣಿನಲ್ಲಿ ಬೆಳೆಯುವ ಸಿಗರೇಟ್ ತಂಬಾಕು ಮೈಕಟ್ಟಿನಲ್ಲಿಯೂ ವಾಸನೆಯಲ್ಲಿಯೂ ಹೆಚ್ಚು ಚೆನ್ನಾಗಿರುತ್ತದೆ. ಚೌಳು ಹೊಲಗಳಲ್ಲೂ ಕ್ಷಾರಯುಕ್ತ ಹೊಲಗಳಲ್ಲೂ ಬೆಳೆದ ತಂಬಾಕಿನ ಬಣ್ಣ ಬಹುಬೇಗ ಕಡಿಮೆಯಾಗುತ್ತದೆ. ಅಲ್ಲದೆ ಅದು ಚೆನ್ನಾಗಿ ಉರಿಯುವುದಿಲ್ಲ.

ತಂಬಾಕಿನಲ್ಲಿರುವ ರಾಸಾಯನಿಕಗಳು : ನಿಕೊಟಿನ್ ಇದು ಟಬೇಕಮ್ ಮತ್ತು ರಸ್ಟಿಕಗಳೆರಡಲ್ಲೂ ಇರುವ ಉತ್ತೇಜಕ ರಾಸಾಯನಿಕ. ಮ್ಯಾಲಿಕ್, ಸಿಟ್ರಿಕ್ ಇತ್ಯಾದಿ ಆಮ್ಲಗಳೊಂದಿಗೆ ಇದು ಸೇರಿಕೊಂಡಿದೆ. (ಎನ್.ಆರ್.ಬಿ.)

**ತಟಸ್ಥ ರಾಷ್ಟ್ರ:** ಶಾಂತಿಪ್ರಿಯ ಚಿಕ್ಕರಾಷ್ಟ್ರಗಳು ಅನುಸರಿಸುವ ಒಂದು ರಾಜಕೀಯ ನೀತಿ (ಬಫರ್ ಸ್ಟೇಟ್). ಸ್ಪೈಕ್‌ಮೆನ್ ಇದನ್ನು ಎರಡು ದೊಡ್ಡ ರಾಷ್ಟ್ರಗಳ ಮಧ್ಯವಿರುವ ಚಿಕ್ಕ ರಾಜಕೀಯ ಘಟಕವೆಂದು ವ್ಯಾಖ್ಯಾನಿಸಿರುವನು. ಕ್ರಿಸ್ಟೋಫ್ ಮತಾನುಸಾರ ತಟಸ್ಥ ರಾಷ್ಟ್ರ ಅಂತಾರಾಷ್ಟ್ರೀಯ ರಾಜನೀತಿಯಲ್ಲಿ ಸಂಪೂರ್ಣವಾಗಿ ಒಂದು ಯಾಂತ್ರಿಕ ಮಾಧ್ಯಮವಾಗಿದ್ದು ಎರಡು ಬಲಿಷ್ಠ ರಾಷ್ಟ್ರಗಳನ್ನು ಭೌತಿಕವಾಗಿ ಪ್ರತ್ಯೇಕಿಸುತ್ತದೆ ಮತ್ತು ಅವುಗಳ ನಡುವಣ ಘರ್ಷಣೆಯನ್ನು ತಡೆಯುತ್ತದೆ. ತಟಸ್ಥ ರಾಷ್ಟ್ರ ಎರಡೂ ಕಡೆಯ ಪ್ರಬಲ ರಾಷ್ಟ್ರಗಳ ರಾಜಕೀಯ ಮತ್ತು ಸಾಂಸ್ಕೃತಿಕ ಲಕ್ಷಣಗಳ ಸಮ್ಮಿಶ್ರ ಪ್ರದೇಶ. ತಟಸ್ಥ ರಾಷ್ಟ್ರ ಸಾಮಾನ್ಯ ಆಸಕ್ತಿಗಳನ್ನು ಹೊಂದಿರುವುದು ಅವಶ್ಯವಿಲ್ಲ. ಪ್ರಬಲ ರಾಷ್ಟ್ರಗಳು ಮತ್ತು ತಟಸ್ಥ ರಾಷ್ಟ್ರ ಪರಸ್ಪರ ವಿರೋಧಾತ್ಮಕ ಆಸಕ್ತಿಗಳನ್ನು ಹೊಂದಿರಬಹುದು. ಆದರೆ ತಟಸ್ಥ ರಾಷ್ಟ್ರ ಎರಡೂ ಬದಿಗಳ ಬಲಿಷ್ಠ ರಾಷ್ಟ್ರಗಳ ಬೆಂಬಲದಿಂದ ಬದುಕುತ್ತದೆ. ತಟಸ್ಥ ರಾಷ್ಟ್ರದ ಅಸ್ತಿತ್ವದ ಉದ್ದೇಶಗಳು ಕೆಳಗಿನಂತಿವೆ:

1) ಪಕ್ಕದ ರಾಜಕೀಯ ಘಟಕ ಅಥವಾ ಪ್ರದೇಶಗಳನ್ನು ಲೀನಗೊಳಿಸುವುದು ಮತ್ತು ಅವುಗಳನ್ನು ಸಂಘಟಿಸುವುದು. 2) ಸೀಮಾ ವಿವಾದಗಳನ್ನು ಬಗೆಹರಿಸುವುದು. 3) ಎರಡು ಪ್ರಬಲ ಅಥವಾ ಪ್ರತಿದ್ವಂದ್ವಿ ರಾಷ್ಟ್ರಗಳ ನಡುವೆ ಸಂಭವಿಸಬಹುದಾದ ಯುದ್ಧವನ್ನು ತಡೆಯುವುದು. 4) ಎರಡೂ ಪ್ರಬಲ ರಾಷ್ಟ್ರಗಳ ವಿಸ್ತರಣಾ ನೀತಿಯನ್ನು ನಿಯಂತ್ರಿಸುವುದು.

ತಟಸ್ಥ ರಾಷ್ಟ್ರದ ಪರಿಕಲ್ಪನೆ ಹತ್ತೊಂಬತ್ತನೆಯ ಶತಮಾನದ ಐರೋಪ್ಯ ಪ್ರಾದೇಶಿಕ ರಾಜಕೀಯ ಬುದ್ಧಿಜನ್ಯ ವಿಷಯವಲ್ಲ. ಅದು ಒಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ (830–870) ಲ್ಯಾಟಿನ್ ಮತ್ತು ಜರ್ಮನ್ ಸಂಸ್ಕೃತಿಗಳ ಮಧ್ಯೆ ಉದ್ಭವಿಸಿದ ಹಳೆಯ ಪರಿಕಲ್ಪನೆ. ಈ ತಟಸ್ಥ ವಲಯದಲ್ಲಿ ನೆದರ್ಲೆಂಡ್ಸ್, ಬೆಲ್ಜಿಯಂ, ಲಕ್ಸಂಬರ್ಗ್, ಅಲ್ಸೆಸ್–ಲೊರೇನ್ (ಫ್ರಾನ್ಸ್‌ನ ಭಾಗ) ಮತ್ತು ಪಶ್ಚಿಮ ಸ್ವಿಟ್ಜರ್ಲೆಂಡ್‌ಗಳಿದ್ದವು. ಇವು ಬಹುಕಾಲ ಖಂಡಾಂತರ ಶಕ್ತಿಗಳ ನಡುವಣ ಹೋರಾಟದ ಪ್ರಚ್ಛನ್ನ ತಟಸ್ಥ ಪ್ರದೇಶಗಳಾಗಿ ಕಾರ್ಯನಿರ್ವಹಿಸಿದವು. ಅದರಂತೆ ದಕ್ಷಿಣ ಅಮೆರಿಕದಲ್ಲಿ ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಸಾಮ್ರಾಜ್ಯಶಾಹಿಗಳು ವೆನಿಜುವೇಲ (ಸ್ಪ್ಯಾನಿಷ್) ಮತ್ತು ಬ್ರೆಜಿಲ್ (ಪೋರ್ಚುಗೀಸ್) ರಾಷ್ಟ್ರಗಳ ನಡುವೆ ಮೂರು ಐರೋಪ್ಯ ರಾಜಕೀಯ ಘಟಕ (ಈಗಿನ ಫ್ರೆಂಚ್ ಗಯಾನ, ಗುಯಾನ ಮತ್ತು ಸುರಿನಾಮ್) ಗಳನ್ನು ಸ್ಥಾಪಿಸಿದವು. ಹೀಗೆ ಐರೋಪ್ಯ ಶಕ್ತಿಕೂಟಗಳು ಆಫ್ರಿಕ ಮತ್ತು ಏಷ್ಯ ಖಂಡಗಳಲ್ಲೂ ತಮ್ಮ ವಸಾಹತು ರಾಷ್ಟ್ರಗಳ ಮಧ್ಯೆ ಘರ್ಷಣೆ ತಪ್ಪಿಸಲು ತಟಸ್ಥ ರಾಷ್ಟ್ರಗಳ ವಲಯಗಳನ್ನು ಭೌಗೋಳಿಕ ಅವಶ್ಯಕತೆ ಎಂದು ಪರಿಗಣಿಸಿ ಸ್ಥಾಪಿಸಿದವು.

ತಟಸ್ಥ ವಲಯ ಸದಾ ಕಾಲ ಹೋರಾಟದ ವಲಯವಾಗಿರಬೇಕೆಂದಿಲ್ಲ. ಅದು ಸಂಪರ್ಕ ವಲಯವಾಗಿ ಕಾರ್ಯ ನಿರ್ವಹಿಸಬಹುದು. ಹತ್ತೊಂಬತ್ತನೆಯ ಶತಮಾನ ಮತ್ತು ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ಥೈಲೆಂಡ್, ಆಗ್ನೇಯ ಏಷ್ಯದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ವಸಾಹತುಗಳನ್ನು ಪ್ರತ್ಯೇಕಿಸುವ ಅತ್ಯಂತ ದೊಡ್ಡ ತಟಸ್ಥ ರಾಷ್ಟ್ರವಾಗಿತ್ತು. ಅದರಂತೆ ಉತ್ತರದಲ್ಲಿ ಯುರೇಷಿಯನ್ ಖಂಡಾಂತರ ಸಮತಾವಾದಿ ಶಕ್ತಿಕೂಟ ಹಾಗೂ ದಕ್ಷಿಣದಲ್ಲಿ ಅಸಮತಾವಾದಿ ಸಾಗರಿಕ ಶಕ್ತಿ ಕೂಟಗಳ ನಡುವೆ ಲಾವೋಸ್ ದೇಶವನ್ನು ಕೃತಕ ತಟಸ್ಥ ವಲಯವನ್ನಾಗಿ ರಚಿಸಲಾಯಿತು. ಅದು 1975ರ ವರೆಗೆ ತಟಸ್ಥ ರಾಷ್ಟ್ರವಾಗಿ ಕಾರ್ಯ ನಿರ್ವಹಿಸಿತು.

ಏಷ್ಯದಲ್ಲಿ ಸೋವಿಯತ್ ಒಕ್ಕೂಟ ಮತ್ತು ಚೀನ ದೇಶಗಳ ನಡುವೆ ಮಂಗೋಲಿಯವನ್ನು ತಟಸ್ಥ ರಾಷ್ಟ್ರವನ್ನಾಗಿ ಮಾಡಲಾಯಿತು. ಅಫ್ಘಾನಿಸ್ತಾನ ಮತ್ತು ಪರ್ಷಿಯ (ಇರಾನ್) ದೇಶಗಳು 19ನೆಯ ಮತ್ತು 20ನೆಯ ಶತಮಾನದಲ್ಲಿ ದಕ್ಷಿಣದಲ್ಲಿ ಬ್ರಿಟಿಷ್ ಏಷ್ಯ ಮತ್ತು ಉತ್ತರದಲ್ಲಿ ಸೋವಿಯತ್ ಒಕ್ಕೂಟಗಳ ನಡುವೆ ತಟಸ್ಥ ರಾಷ್ಟ್ರಗಳಾಗಿದ್ದವು. ಬ್ರಿಟಿಷ್ ಭಾರತ ಮತ್ತು ಚೀನಗಳ ನಡುವೆ ಟಿಬೆಟ್ 1905 ರಿಂದ 1947ರ ವರೆಗೆ ತಟಸ್ಥ ವಲಯವಾಗಿ ಕಾರ್ಯ ನಿರ್ವಹಿಸಿತು. ಕಾಶ್ಮೀರ ಭಾರತದ ಒಂದು ರಾಜ್ಯವಾಗಿದೆಯಲ್ಲದೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಹೋರಾಟದ ಸಂಕೀರ್ಣ ತಟಸ್ಥ ವಲಯವಾಗಿದೆ. ಆಕ್ರಮಿತ ಲಡಾಖ್, ಭಾರತ ಮತ್ತು ಟಿಬೆಟ್ (ಚೀನ) ನಡುವೆ ಹಾಗೂ ಆಕ್ರಮಿತ ಕಾಶ್ಮೀರ ಭಾರತ ಮತ್ತು ಪಾಕಿಸ್ತಾನಗಳ ನಡುವೆ ತಟಸ್ಥ ಪ್ರದೇಶಗಳಾಗಿ ವರ್ತಿಸುತ್ತವೆ. ನೇಪಾಲ ಮತ್ತು ಭೂತಾನಗಳನ್ನೊಳಗೊಂಡ ಹಿಮಾಲಯ ಪರ್ವತ ಪ್ರದೇಶ ಚೀನ ಮತ್ತು ಭಾರತಗಳ ನಡುವೆ ತಟಸ್ಥ ವಲಯವಾಗಿದೆ.

ಒಂದನೆಯ ಮಹಾಯುದ್ಧದ ಅನಂತರ ಜರ್ಮನಿ ಮತ್ತು ಸೋವಿಯತ್ ಒಕ್ಕೂಟಗಳ ನಡುವೆ ಪೋಲೆಂಡ್ ತಟಸ್ಥ ರಾಷ್ಟ್ರವಾಗಿತ್ತು. ಎರಡನೆಯ ಮಹಾಯುದ್ಧಕ್ಕಿಂತ ಮೊದಲು 1939 ರಲ್ಲಿ ಜರ್ಮನಿ ಪೋಲೆಂಡಿನ ಮೇಲೆ ಆಕ್ರಮಣ ಮಾಡಿತು. ಸೋವಿಯತ್ ಒಕ್ಕೂಟ 1945 ರಲ್ಲಿ ಜರ್ಮನಿಯನ್ನು ಸೋಲಿಸಿ ಪೋಲೆಂಡನ್ನು ವಶಪಡಿಸಿಕೊಂಡಿತು. 1947ರಿಂದ ಪೋಲೆಂಡ್ ಸೋವಿಯತ್ ಒಕ್ಕೂಟದ ನಿಯಂತ್ರಣಕ್ಕೊಳಪಟ್ಟಿತು.

ಎರಡನೆಯ ಮಹಾಯುದ್ಧದ ಅನಂತರ ಸೋವಿಯತ್ ಒಕ್ಕೂಟ ಪೂರ್ವ ಯುರೋಪಿಯನ್ ರಾಷ್ಟ್ರಗಳಾದ ಪೋಲೆಂಡ್, ಚೆಕೊಸ್ಲೊವಾಕಿಯ, ಬಲ್ಗೇರಿಯ, ಆಸ್ಟ್ರಿಯ, ಯೂಗೋಸ್ಲಾವಿಯ, ಹಂಗೇರಿ ಮತ್ತು ರೊಮೇನಿಯಗಳನ್ನು ತನ್ನ ರಾಜಕೀಯ

ಪ್ರಭಾವಕ್ಕೊಳಪಡಿಸಿಕೊಂಡು ಪೂರ್ವ ಯುರೋಪ್ ಮತ್ತು ಪಶ್ಚಿಮ ಯುರೋಪ್‌ಗಳ ನಡುವೆ ವಿಶಾಲವಾದ ಯುರೋಪಿಯನ್ ತಟಸ್ಥ ವಲಯವನ್ನು ಸ್ಥಾಪಿಸಿತು.

ಆಫ್ರಿಕದಲ್ಲಿ ಚಿಕ್ಕ ಸಹರ ದೇಶಗಳು, ಉತ್ತರದಲ್ಲಿ ಮೆಡಿಟರೇನಿಯನ್ ಆಫ್ರಿಕದ ದೇಶಗಳು ಮತ್ತು ದಕ್ಷಿಣದಲ್ಲಿ ಕಪ್ಪು ಜನರ ದೇಶಗಳ ನಡುವೆ ಸಾಂಸ್ಕೃತಿಕ ರಾಜಕೀಯ ತಟಸ್ಥ ವಲಯವನ್ನು ನಿರ್ಮಿಸಿದವು.

ತಟಸ್ಥ ರಾಷ್ಟ್ರಗಳು ಇತ್ತೀಚೆಗೆ ಈ ಮುಂದೆ ಕಾಣಿಸಿದ ಕಾರಣಗಳಿಂದ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಲಿವೆ.

ಪ್ರಬಲ ಅಥವಾ ಪ್ರತಿದ್ವಂದ್ವಿ ನೆರೆಹೊರೆಯ ರಾಷ್ಟ್ರಗಳ ನಡುವೆ ಹೆಚ್ಚುತ್ತಿರುವ ದ್ವೇಷದ ಪರಮಾವಧಿ ಅಂತ್ಯ; 1991 ರಲ್ಲಿ ಸೋವಿಯತ್ ಒಕ್ಕೂಟದ ಛಿದ್ರೀಕರಣದ ಅನಂತರ ಸಮಾಜವಾದ ಸಮಾಪ್ತಿ ಹೊಂದಿದ್ದರಿಂದ ರಷ್ಯ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಆದ್ದರಿಂದ ಇಂದು ಪ್ರಪಂಚದಲ್ಲಿ ಬಲಾಢ್ಯ ರಾಷ್ಟ್ರಗಳ ನಡುವಣ ಪೈಪೋಟಿ ಕಡಿಮೆಯಾಗಿದೆ; ಶೀತಲಯುದ್ಧದ ಸಮಾಪ್ತಿ; ಪ್ರಾದೇಶಿಕ ರಾಜಕೀಯ/ಆರ್ಥಿಕ ಸಹಕಾರ ಮತ್ತು ಜಾಗತಿಕ ವ್ಯವಸ್ಥೆಗಳ ಅಭಿವೃದ್ಧಿ; ಉಪಗ್ರಹ ಭೂರಾಜಕೀಯ ಯುಗದಲ್ಲಿ ಕಡಿಮೆಯಾಗುತ್ತಿರುವ ಶಕ್ತಿ ಸಮತೋಲನ ಪರಿಕಲ್ಪನೆಯ ಮಹತ್ತ್ವ; ವಿಮಾನ, ಖಂಡಾಂತರ ಕ್ಷಿಪಣಿ ಮೊದಲಾದ ರಕ್ಷಣೆಯ ತಾಂತ್ರಿಕ ವ್ಯವಸ್ಥೆಗಳ ಅಭಿವೃದ್ಧಿ. ಬಹಳಷ್ಟು ಸದಸ್ಯ ರಾಷ್ಟ್ರ ಒಕ್ಕೂಟಗಳ ಉದಯ. ಮೇಲ್ಕಾಣಿಸಿದ ಕಾರಣಗಳಿಂದ ಬಲಿಷ್ಠ ರಾಷ್ಟ್ರಗಳ ನಡುವಣ ದ್ವೇಷ ಕಡಿಮೆಯಾಗುತ್ತಲಿದೆ. ಆದ್ದರಿಂದ ರಷ್ಯ ಮತ್ತು ಚೀನ ದೇಶಗಳ ನಡುವಣ ಮಂಗೋಲಿಯ ತನ್ನ ತಟಸ್ಥ ಸ್ವರೂಪವನ್ನು ಕಳೆದುಕೊಂಡಿದೆ. ಪೂರ್ವ ಯುರೋಪಿಯನ್ ತಟಸ್ಥ ವಲಯದ ಅವನತಿಯ ಕಾರಣ ರಷ್ಯ ಮತ್ತು ಅದರ ಉಪ ರಾಷ್ಟ್ರಗಳು ಐರೋಪ್ಯ ಒಕ್ಕೂಟದ ಸದಸ್ಯತ್ವ ಪಡೆಯಲು ಹವಣಿಸುತ್ತಿವೆ. ಅದರಂತೆ ಚೀನ ಮತ್ತು ಭಾರತಗಳ ನಡುವಣ ಸುಧಾರಿಸಿದ ಸಂಬಂಧ ನೇಪಾಲ ಮತ್ತು ಭೂತಾನ ದೇಶಗಳ ತಟಸ್ಥ ಸ್ವರೂಪವನ್ನು ಕಡಿಮೆಮಾಡಿದೆ. ಪಶ್ಚಿಮ ಏಷ್ಯದಲ್ಲಿ ಆಫ್ಘಾನಿಸ್ತಾನ ಮತ್ತು ಇರಾಕ್ ರಾಷ್ಟ್ರಗಳ ಸ್ವಾತಂತ್ರ್ಯ ಹಾಗೂ ಆಗ್ನೇಯ ಏಷ್ಯದಲ್ಲಿ ಹೆಚ್ಚುತ್ತಿರುವ ಚೀನ ಮತ್ತು ಅಮೆರಿಕ ಸಂಸ್ಥಾನಗಳ ಸಹಕಾರ ನೆರೆಹೊರೆಯ ರಾಷ್ಟ್ರಗಳ ಮಧ್ಯ ಸೌಹಾರ್ದತೆಯನ್ನು ಹೆಚ್ಚಿಸಿ ತಟಸ್ಥ ವಲಯದ ಮಹತ್ತ್ವವನ್ನು ಕಡಿಮೆಮಾಡಿವೆ. (ಎಸ್.ಎಸ್.ಎನ್.)

**ತಪತಿ:** ಪಶ್ಚಿಮ ಭಾರತದ ಒಂದು ಪ್ರಮುಖ ನದಿ. ತಾಪ ಎಂಬ ಸಂಸ್ಕೃತ ಪದದಿಂದ ತಪತಿ ಎಂಬ ಹೆಸರು ಬಂದಿದೆಯೆಂಬುದು ಪುರಾಣ ಕತೆ. ಸೂರ್ಯ ತನ್ನ ತಾಪವನ್ನು ತಾನೇ ಸಹಿಲಾರದೆ, ಅದರಿಂದ ರಕ್ಷಣೆ ಪಡೆಯುವ ಉದ್ದೇಶದಿಂದ ತಪತಿ ನದಿಯನ್ನು ಸೃಷ್ಟಿಸಿದನೆಂದು ಹೇಳಲಾಗಿದೆ. ಸಾತ್ಪುರ ಶ್ರೇಣಿಯಲ್ಲಿ ಮೂಲ್ತಾಯ್ (ಮೂಲತಾಪಿ) ಸರೋವರದಲ್ಲಿ ಈ ನದಿ ಉಗಮಿಸಿ ಪಶ್ಚಿಮಾಭಿಮುಖವಾಗಿ ಹರಿದು ನಿಮಾರ್‌ನ ಕಾಲಿಬೆಟ್ ಮತ್ತು ಬೀರಾರಿನ ಚಿಕಲ್ದಾ ಶ್ರೇಣಿಗಳ ನಡುವೆ ಸಾತ್ಪುರ ಬೆಟ್ಟಗಳ ಕಡಿದಾದ ಬಂಡೆಗಳ ಮೇಲಿಂದ ದುಮುಕಿ ಮುಂದುವರಿಯುತ್ತದೆ. ನದಿಯ ಆಚೀಚೆ ಕಡಿದಾದ ದಂಡೆಗಳೂ ಮೇಲೆ ಎತ್ತರದಲ್ಲಿ ದಟ್ಟವಾದ ಕಾಡುಗಳೂ ಇವೆ. ಬಂಡೆಗಲ್ಲಿನ ಕಿರಿದಾದ ಪಾತ್ರದಲ್ಲಿ ಹರಿಯುವ ನದಿ ತನ್ನ ಉಗಮದಿಂದ 192 ಕಿಮೀ ದೂರದಲ್ಲಿ ಮಧ್ಯ ಪ್ರದೇಶದ ಖಾಂಡ್ವಾ ಮತ್ತು ಖಾರ್ಗೋನೆ ಜಿಲ್ಲೆಯ ನಿಮಾರ್ ಪ್ರದೇಶವನ್ನು ಪ್ರವೇಶಿಸುತ್ತದೆ. ಮುಂದೆಯೂ ಸು. 48 ಕಿಮೀ ದೂರ ಇದು ಕಿರಿದಾದ ಕಣಿವೆಯಲ್ಲಿ ಹರಿಯುತ್ತದೆ. ಬರ್ಹಾನ್‌ಪುರಕ್ಕೆ ಕೆಲವು ಕಿಮೀ ಮೇಲೆ ನದಿಯ ಪಾತ್ರ ವಿಶಾಲವಾಗುತ್ತದೆ. ಸಾತ್ಪುರ ಬೆಟ್ಟಗಳ ಶ್ರೇಣಿಯನ್ನು ಬಿಟ್ಟು ಫಲವತ್ತಾದ ಮೆಕ್ಕಲುಮಣ್ಣಿನ ಮೈದಾನವನ್ನು ಪ್ರವೇಶಿಸುತ್ತದೆ. 32 ಕಿಮೀ ಅಗಲದ ಈ ಮೈದಾನದ ನಡುವೆ ತಪತಿ ನದಿ ಹರಿದು, ಬರ್ಹಾನ್‌ಪುರ ಮತ್ತು ಜೈನಾಬಾದ್ ಪಟ್ಟಣಗಳನ್ನು ದಾಟಿ ಮಹಾರಾಷ್ಟ್ರದ ಖಾಂದೇಶ ಪ್ರದೇಶದಲ್ಲಿ ಮುಂದುವರೆಯುತ್ತದೆ.

ಇಲ್ಲಿ ಎಡದಂಡೆಯಲ್ಲಿ ತಪತಿಯನ್ನು ಸೇರುವ ಉಪನದಿ ಪೂರ್ಣಾ. ಅನಂತರ ಇದು ಬೀರಾರಿನ ಬೆಟ್ಟಗಳಿಂದ 240 ಕಿಮೀ ದೂರ ಹರಿದು ಸಾತ್ಪುರ ಮತ್ತು ಸತ್ಮಾಲ ಶ್ರೇಣಿಗಳ ನಡುವಣ ವಿಶಾಲ ಹಾಗೂ ಫಲವತ್ತಾದ ಕಣಿವೆಯಲ್ಲಿ ಮುಂದೆ ಸಾಗುತ್ತದೆ. ಅನಂತರ ನದೀಕಣಿವೆ ಕಿರಿದಾಗುತ್ತದೆ. ಮುಂದೆ ನದಿ 96 ಕಿಮೀ ದೂರ ಅರಣ್ಯ ಪ್ರದೇಶದಲ್ಲಿ ಸಾಗಿ ಸೂರತ್ ಜಿಲ್ಲೆಯ ಮೆಕ್ಕಲು ಮಣ್ಣಿನ ನೆಲದ ಮೂಲಕ ದಕ್ಷಿಣಾಭಿಮುಖವಾಗಿ ಹರಿದು ಸಮುದ್ರವನ್ನು ಸೇರುತ್ತದೆ. ನದಿಯ ಕೊನೆಯ 48 ಕಿಮೀ ದೂರ ಅದು ಸಮುದ್ರದ ಭರತಕ್ಕೆ ಒಳಗಾಗುತ್ತದೆ. ನದಿಯ ದಂಡೆಗಳು 27 ರಿಂದ 54 ಮೀ ಗಳಷ್ಟು ಎತ್ತರವಾಗಿರುವುದರಿಂದ ಇದು ನೀರಾವರಿಗೆ ಅಷ್ಟೇನೂ ಉಪಯುಕ್ತವಾಗಿಲ್ಲ. ನದಿಯ ಪಾತ್ರದಲ್ಲಿ ಅಲ್ಲಲ್ಲಿ ಬಂಡೆಗಳು ಅಡ್ಡಹಾಯ್ದಿವೆ. ಸಮುದ್ರದಿಂದ 32 ಕಿಮೀ ದೂರ ಮಾತ್ರ ಈ ನದಿ ಯಾನಯೋಗ್ಯವಾಗಿದೆ.

ತಪತಿ ನದಿ ಸಾತ್ಪುರ ಬೆಟ್ಟಗಳ ತಪ್ಪಲಿನ ಸನಿಹದಲ್ಲೇ ಹರಿಯುವುದರಿಂದ ಅದರ ಬಲದಂಡೆಯ ಉಪನದಿಗಳೆಲ್ಲ ಬಲು ಸಣ್ಣವು. ಆದರೆ ಎಡದಂಡೆಯಲ್ಲಿ ಪೂರ್ಣಾ ನದಿಯ ಸಂಗಮದ ಅನಂತರ ಇನ್ನು ಕೆಲವು ಉಪನದಿಗಳು ಇದರೊಂದಿಗೆ ಕೂಡಿಕೊಳ್ಳುತ್ತವೆ. ಅವುಗಳ ಪೈಕಿ ಗಿರ್ನಾದ ಉದ್ದ 240 ಕಿಮೀ. ಇದು ಬಗ್ಲಾನ್ ಬೆಟ್ಟದಿಂದ ಹರಿದು ಬರುತ್ತದೆ. ಇತರ ಮುಖ್ಯ ಉಪನದಿಗಳು ಬೋರಿ, ಪಂಝ್ರಾ ಮತ್ತು ಬೋರಾಯ್. ಇವು ಪಶ್ಚಿಮ ಘಟ್ಟಗಳ ಉತ್ತರದ ತಲೆಯ ಭಾಗದಿಂದ ಹರಿದುಬರುತ್ತದೆ. ಗಿರ್ನಾ ಮತ್ತು ಪಂಝ್ರಾ ನದಿಗಳಿಗೆ ಹಲವು ಎಡೆಗಳಲ್ಲಿ ನೀರಾವರಿಗಾಗಿ ಅಣೆಕಟ್ಟು ಕಟ್ಟಲಾಗಿದೆ.

ತಪತಿ ನದಿಯ ಉದ್ದ 670 ಕಿಮೀ. ಕೆಳದಂಡೆ ಪ್ರದೇಶಗಳಲ್ಲಿ ಇದರ ಪ್ರವಾಹದಿಂದ ಆಗಾಗ್ಗೆ ಅನಾಹುತಗಳಾಗುವುದುಂಟು. ಸೂರತ್ ನಗರ ಹಲವು ಬಾರಿ ಇದರಿಂದ ಅಪಾಯಕ್ಕೆ ಒಳಗಾಗಿದೆ. ತಪತಿಯನ್ನು ಆ ಪ್ರದೇಶದ ಜನರು ಪವಿತ್ರ ನದಿಯೆಂದು ಪರಿಗಣಿಸುವರು. ಚಾಂಗದೇವ್, ಭೋಧಾನ್–ಇವು ಈ ನದಿಯ ದಡದಲ್ಲಿರುವ ಎರಡು ಪ್ರಮುಖ ಯಾತ್ರಾಸ್ಥಳಗಳು. ತಾಲ್ನೇನ್ ಕೋಟೆ ಮತ್ತು ಸೂರತ್ ನಗರ ಇವು ಈ ನದಿಯ ದಂಡೆಯ ಮೇಲಿರುವ ಎರಡು ಐತಿಹಾಸಿಕ ಪ್ರಾಮುಖ್ಯವುಳ್ಳ ಸ್ಥಳಗಳು. ನದಿಯ ಮುಖದಲ್ಲಿದ್ದ ಸುವಾಳಿ (ಸ್ವಾಳಿ) ಬಂದರು ಹಿಂದೆ ಪ್ರಸಿದ್ಧವಾಗಿತ್ತು. ಈ ಸ್ಥಳದಲ್ಲಿ ಬ್ರಿಟಿಷರಿಗೂ ಪೋರ್ಚುಗೀಸರಿಗೂ ನಡುವೆ ನೌಕಾಕದನ ನಡೆದಿತ್ತು. ಆದರೆ ಈಗ ಈ ಬಂದರು ಮಣ್ಣಿನಲ್ಲಿ ಹೂತುಹೋಗಿರುವುದರಿಂದ ನಿರ್ಜನವಾಗಿದೆ. (ಎಸ್.ಎಸ್.ಎ.ಆರ್.)

**ತಮಿಳುನಾಡು:** ಭಾರತ ಗಣರಾಜ್ಯದ ದಕ್ಷಿಣ ಭಾರತದ ಒಂದು ರಾಜ್ಯ. ಪರ್ಯಾಯ ದ್ವೀಪದ ಆಗ್ನೇಯ ತುದಿಯಲ್ಲಿ, ಉ. ಅ $8^{0}5'$–$13^{0}3'$ ಪೂ. ರೇ. $76^{0}15'$–$80^{0}20'$ ನಡುವೆ ಇದೆ. ಉತ್ತರದಲ್ಲಿ ಆಂಧ್ರಪ್ರದೇಶ, ಪೂರ್ವದಲ್ಲಿ ಬಂಗಾಲ ಕೊಲ್ಲಿ, ದಕ್ಷಿಣದಲ್ಲಿ ಹಿಂದೂ ಸಾಗರ, ಪಶ್ಚಿಮದಲ್ಲಿ ಕೇರಳ, ವಾಯವ್ಯದಲ್ಲಿ ಕರ್ನಾಟಕ_ಇವು ಇದರ ಮೇರೆಗಳು. ಪಶ್ಚಿಮದ ಅಂಚಿನಲ್ಲಿ ಪಶ್ಚಿಮ ಘಟ್ಟಗಳು ಹಬ್ಬಿವೆ. ಇದಕ್ಕೆ ಸು. 998 ಕಿಮೀ ಉದ್ದದ ಕಡಲ ತೀರವಿದೆ. ಇದರ ವಿಸ್ತೀರ್ಣ 1,29,966 ಚ.ಕಿಮೀ ಜನಸಂಖ್ಯೆ 6,424,624. ಹಳೆಯ ಮದರಾಸು ಪ್ರಾಂತ್ಯದಲ್ಲಿ ತಮಿಳು ಭಾಷೆಯಾಡುವ ಜನರಿದ್ದ ಪ್ರದೇಶವನ್ನು 1956ರ ರಾಜ್ಯ ಪುನರ್ವಿಂಗಡಣೆಯ ಅಧಿನಿಯಮದ ಪ್ರಕಾರ ಪ್ರತ್ಯೇಕಿಸಿ ಈ ರಾಜ್ಯವನ್ನು ನಿರ್ಮಿಸಲಾಯಿತು. ವಿಸ್ತೀರ್ಣದಲ್ಲಿ ಇದು ಭಾರತದ ಹತ್ತನೆಯ ರಾಜ್ಯ, ಜನಸಂಖ್ಯೆಯಲ್ಲಿ ಇದಕ್ಕೆ ಐದನೆಯ ಸ್ಥಾನ. ರಾಜಧಾನಿ ಚೆನ್ನೈ. ಜನಸಂಖ್ಯೆ, 6,424,624.

ಮೇಲ್ಮೈಲಕ್ಷಣ : ತಮಿಳು ನಾಡನ್ನು ಸ್ಥೂಲವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು: 1. ಪೂರ್ವತೀರಪ್ರದೇಶ: ಇದು ಮೈದಾನ. 2. ಉತ್ತರ ಮತ್ತು ಪಶ್ಚಿಮ ಪ್ರದೇಶ, ಇದು ಉನ್ನತ ಭೂಮಿ ಮೈದಾನವನ್ನು ಮತ್ತೆ ಮೂರು ಭಾಗಗಳಾಗಿ ವಿಂಗಡಿಸಬಹುದು: 1. ಚೆಂಗಲ್ ಪಟ್ಟು ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳನ್ನೊಳಗೊಂಡ ಕೋರಮಂಡಲ ಮೈದಾನ, ತಿರುಚ್ಚಿರಾಪಳ್ಳಿ ಮತ್ತು ತಂಜಾವೂರು ಜಿಲ್ಲೆಯ ಕಾವೇರಿ ಬಯಲು 3. ಮದುರೈ ಮತ್ತು ರಾಮನಾಥಪುರಂ ಜಿಲ್ಲೆಗಳನ್ನೊಳಗೊಂಡ ದಕ್ಷಿಣದ ಬಯಲು. ಈ ಮೂರರಲ್ಲಿ ಕಾವೇರಿ ಬಯಲೇ ಹೆಚ್ಚು ಅಗಲವಾದದ್ದು. ಪೂರ್ವ ಘಟ್ಟಗಳು ಹಲವು ಬಿಡಿ ಬೆಟ್ಟಗಳ ರೂಪದಲ್ಲಿ ಈ ರಾಜ್ಯದೊಳಕ್ಕೆ ವಿಸ್ತರಿಸಿವೆ. ಇವುಗಳಲ್ಲಿ ಮುಖ್ಯವಾದವು ಜವಾದಿ, ಷೆವರಾಯ್, ಕಲ್ರೈ ಮಲೈ ಮತ್ತು ಪಚ್ಚೈ ಮಲೈ. ಈ ಬೆಟ್ಟಗಳ ಸಾಲು ಮುಂದೆ ಇನ್ನೂ ದಕ್ಷಿಣಕ್ಕೆ ಸಾಗಿ ಮಧುರೈ ಜಿಲ್ಲೆಯಲ್ಲಿ ಏಲಕ್ಕಿ ಬೆಟ್ಟಗಳನ್ನು ಸೇರುತ್ತದೆ. ಪೂರ್ವ ಘಟ್ಟಗಳು ಸೋಪಾನದೋಪಾದಿಯಲ್ಲಿರುವುದರಿಂದ ಇವಕ್ಕೆ ಘಟ್ಟಗಳೆಂದು ಹೆಸರು ಬಂದಿದೆ. ಇವು ಸ್ಥೂಲವಾಗಿ ದಕ್ಷಣೋತ್ತರವಾಗಿ ಹಬ್ಬಿವೆ.

ಪಶ್ಚಿಮದಲ್ಲಿರುವ ಪಶ್ಚಿಮ ಘಟ್ಟಗಳು ಪೂರ್ವಘಟ್ಟಗಳಿಗಿಂತ ತೀರ ಭಿನ್ನವಾದವು. ಅವು ಏಕಪ್ರಕಾರವಾಗಿ ಹಬ್ಬಿರುವ ಶ್ರೇಣಿಗಳು. ಬೃಹತ್ತಿನಲ್ಲಿಯೂ ಮಹತ್ತಿನಲ್ಲಿಯೂ ಅವುಗಳ ಮುಂದೆ ಪೂರ್ವಘಟ್ಟಗಳು ಬಲು ಕುಬ್ಜ. ಪಾಲಕ್ಕಾಡ್ ಬಳಿಯ ಘಾಟಿನ ಅಗಲ ಸು. 8. ಕಿಮೀ ಈ ಘಾಟಿನಿಂದ ದಕ್ಷಿಣಕ್ಕೆ ಪಶ್ಚಿಮ ಘಟ್ಟಗಳು ಮತ್ತೆ ಏರಿ, ಅಣ್ಣಾಮಲೈ ಬೆಟ್ಟಗಳಾಗಿ ಪರಿಣಮಿಸುತ್ತವೆ. ಇವುಗಳ ಪೂರ್ವ ಶಾಖೆಯೇ ಪಳನಿ ಬೆಟ್ಟ. ಇದರಲ್ಲಿರುವ ಕೋಡೈಕೆನಾಲ್ ಒಂದು ಬೇಸಗೆ ಗಿರಿಧಾಮ. ಅಲ್ಲಲ್ಲಿ 1800 – 2100 ಮೀ ಎತ್ತರಕ್ಕಿರುವ ಪಶ್ಚಿಮ ಘಟ್ಟಗಳಿಗೆ ಪಾಲಕ್ಕಾಡ್ ಮತ್ತು ಷೆನ್‌ಕೊಟ್ಟಾ ಬಳಿ ಮಾತ್ರ ತೆರಪುಗಳವೆ. ಪೂರ್ವ ಪಶ್ಚಿಮ ಘಟ್ಟಗಳು ನೀಲಗಿರಿ ಜಿಲ್ಲೆಯಲ್ಲಿ ಸಂಧಿಸಿ ಒಂದು ಪರ್ವತ ಗ್ರಂಥಿಯಾಗಿ ಪರಿಣಮಿಸಿವೆ. ತಮಿಳು ನಾಡಿನಲ್ಲಿರುವ ಶಿಖರಗಳು ದೊಡ್ಡ ಬೆಟ್ಟ (2620 ಮೀ) ಮಾಕುರ್ತಿ (2516 ಮೀ) ಮತ್ತು ಆನೈ ಮುಡಿ (2653 ಮೀ). ಇವುಗಳಲ್ಲಿ ಮೊದಲನೆಯ ಎರಡು ನೀಲಗಿರಿ ಬೆಟ್ಟಗಳಲ್ಲೂ ಕೊನೆಯದು ಅಣ್ಣಾಮಲೈ ಬೆಟ್ಟಗಳಲ್ಲೂ ಇವೆ.

ವೈಗೈ, ತಾಮ್ರಪರ್ಣಿ ಮುಂತಾದ ಮುಖ್ಯ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹುಟ್ಟುತ್ತವೆ. ಪಾಲಾರ್, ಪೊನ್ನೈಯಾರ್, ಕಾವೇರಿ–ಇವು ಅಂತರರಾಜ್ಯ ನದಿಗಳು. ಸ್ಥಳೀಯ ಪ್ರಾಮುಖ್ಯವುಳ್ಳ ನದಿಗಳು ಅರಣಿಯಾರ್, ಕೋರ್ತಲಿಯಾರ್, ಕೂವಮ್, ಗ್ಡಿಲಾಮ್, ಗೋಮುಖಿ, ಮಣಿಮುಕ್ತ, ಉತ್ತರವೆಲ್ಲಾರ್, ಅಗ್ನಿಯಾರ್, ದಕ್ಷಿಣ ವೆಲ್ಲಾರ್, ದಕ್ಷಿಣ ಪಾಲಾರ್, ವೈಪ್ಪಾರ್, ಚಿತ್ತಾರ್, ಕೋಡೈಯಾರ್ ಮತ್ತು ಪಟಿಯಾರ್, ಕೋಡೈಯಾರ್ ಮತ್ತು ಪಟಿಯಾರ್‌ಗಳನ್ನುಳಿದು ಎಲ್ಲ ನದಿಗಳೂ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿದು ಬಂಗಾಲ ಕೊಲ್ಲಿ ಸೇರುತ್ತವೆ. ಈ ನದಿಗಳ ಮೇಲ್ದಂಡೆಗಳು ಬಂಡೆಗಲ್ಲು ಪ್ರದೇಶಗಳಾದ್ದರಿಂದ ಅಲ್ಲಿ ಜಲೋತ್ಸರಣ ಮಾಡಿಕೊಂಡು ಹರಿಯುವುದರಿಂದ ಕೆಳದಂಡೆಗಳ ಮೈದಾನ ಹಾಗೂ ಕರಾವಳಿಗಳಲ್ಲಿ ಅವಕ್ಕೆ ಕಟ್ಟೆಗಳನ್ನು ಕಟ್ಟಿ ನೀರಾವರಿಗೂ ವಿದ್ಯುತ್ತಿನ ಉತ್ಪಾದನೆಗೂ ನೀರನ್ನು ಬಳಸಿಕೊಳ್ಳಲಾಗಿದೆ. ತಮಿಳು ನಾಡಿನ ಅತ್ಯಂತ ದೊಡ್ಡ ನದಿ ಕಾವೇರಿ. ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಹುಟ್ಟುವ ಈ ನದಿ ಆಗ್ನೇಯಾಭಿಮುಖವಾಗಿ ಹರಿದು ಶಿವನಸಮುದ್ರದ ಜಲಪಾತಗಳಿಂದ ಕೆಳಕ್ಕೆ ತಮಿಳು ನಾಡನ್ನು ಪ್ರವೇಶಿಸುತ್ತದೆ. ಭವಾನಿ, ನೊಯ್ಯಾಲ್, ಅಮರಾವತಿ–ಇವು ತಮಿಳು ನಾಡಿನಲ್ಲಿ ಕಾವೇರಿಯ ಮುಖ್ಯ ಉಪನದಿಗಳು. ಜೂನ್‌ನಿಂದ ಸೆಪ್ಟೆಂಬರ್ ವರೆಗೆ ಕಾವೇರಿಯಲ್ಲಿ ಪ್ರವಾಹ ವಿಶೇಷವಾಗಿರುತ್ತದೆ.




ವಾಯುಗುಣ : ತಮಿಳು ನಾಡಿನದು ಮೂಲಭೂತವಾಗಿ ಉಷ್ಣವಲಯದ ವಾಯುಗುಣ. ಉಷ್ಣತೆಯಲ್ಲಿ ಅತಿಯಾದ ಏರಿಳಿತಗಳಿಲ್ಲ. ಗರಿಷ್ಠ ಉಷ್ಣತೆ $43^0$ಸೆ ನ್ನು ಸಾಮಾನ್ಯವಾಗಿ ಮೀರುವುದಿಲ್ಲ. ಕನಿಷ್ಠ ಉಷ್ಣತೆ $18^0$ ಸೆ ಗಿಂತ ಕೆಳಕ್ಕೆ ಇಳಿಯುವುದು ಅಪರೂಪ. ಅತ್ಯಂತ ಕಡಿಮೆ ಉಷ್ಣತೆ ದಾಖಲಾಗುವುದು ಡಿಸೆಂಬರ್ ಮತ್ತು ಜನವರಿಗಳಲ್ಲಿ: ಅತ್ಯಂತ ಹೆಚ್ಚಿನ ಉಷ್ಣತೆ ಏಪ್ರಿಲ್ ನಿಂದ ಜೂನ್ ವರೆಗೆ. ರಾಜ್ಯದಲ್ಲಿ ಆಗ್ನೇಯ ಮತ್ತು ಈಶಾನ್ಯ ಮಾನ್ಸೂನುಗಳ ಕಾಲದಲ್ಲಿ ಮಳೆಯಾಗುತ್ತದೆ. ಇವೆರಡರ ನಡುವೆ ಸುಮಾರು ಆರು ವಾರಗಳ ಅಂತರ ಇರುತ್ತದೆ. ಸಾಮಾನ್ಯವಾಗಿ ಆಗ್ನೇಯ ಮಾನ್ಸೂನ್ ಮಳೆ ಕ್ರಮಪ್ರಾಪ್ತವಾದುದ್ದು. ಈಶಾನ್ಯ ಮಾನ್ಸೂನ್ ಕೆಲಮೊಮ್ಮೆ ಮಳೆ ತಾರದಿರುವುದುಂಟು. ಎರಡರಿಂದ ಐದು ವರ್ಷಗಳವರೆಗೆ ಹೀಗಾಗಬಹುದು. ಒಂದೇ ವರ್ಷದಲ್ಲಿ ಎರಡೂ ಮಾನ್ಸೂನ್‌ಗಳ ನಿರಾಶೆಗೊಳಿಸುವುದು ಬಲು ವಿರಳ. ಒಟ್ಟು ವಾರ್ಷಿಕ ಮಳೆಯಲ್ಲಿ ಈಶಾನ್ಯ ಮಾನ್ಸೂನಿನ ಪಾಲು ಕರಾವಳಿ ಜಿಲ್ಲೆಗಳಲ್ಲಿ ಶೇ. 60. ಒಳನಾಡಿನಲ್ಲಿ ಶೇ. 40. ಅಕ್ಟೋಬರ್ ನಿಂದ ನವೆಂಬರ್ ವರೆಗಿನ ಅವಧಿಯಲ್ಲೇ ಬಹುತೇಕ ಮಳೆ. ಒಳನಾಡಿನಲ್ಲಿ ಅಕ್ಟೋಬರ್‌ನಲ್ಲಿ ಹೆಚ್ಚು ಮಳೆಯಾದರೆ, ಕರಾವಳಿ ಜಿಲ್ಲೆಗಳಲ್ಲಿ ನವೆಂಬರಿನಲ್ಲಿ ಹೆಚ್ಚು ಮಳೆ. ಈಶಾನ್ಯ ಮಾನ್ಸೂನ್ ಮಳೆ ಎಲ್ಲ ಜಿಲ್ಲೆಗಳಲ್ಲೂ ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುತ್ತಿರುತ್ತದೆ. ಕರಾವಳಿ ಜಿಲ್ಲೆಗಳಲ್ಲಿ ಮಳೆ ಬಹಳ ಮಟ್ಟಿಗೆ ಅವನಮನ (ಡಿಪ್ರೆಷನ್) ಮತ್ತು ಚಂಡಮಾರುತಗಳನ್ನು ಅವಲಂಬಿಸಿರುತ್ತದೆ. ಮಾರ್ಚ್–ಮೇ ತಿಂಗಳುಗಳಲ್ಲಿ ಗುಡುಗಿನಿಂದ ಕೂಡಿದ ಮಳೆ 5 ಸೆಂಮೀ ನಿಂದ 15 ಸೆಂಮೀ ವರಗೆ ನೀಲಗಿರಿ ಮತ್ತು ಇತರ ಬೆಟ್ಟಸೀಮೆಗಳಲ್ಲಿ ಮಳೆ ಆಗುವುದು. ರಾಮನಾಥಪುರಂ ಮತ್ತು ತಿರುನೆಲ್ವೇಲಿ ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ ಮಳೆ.

ಸಸ್ಯಮತ್ತು ಪ್ರಾಣಿಸಂಪತ್ತು: ತಮಿಳು ನಾಡಿನ ಸಸ್ಯ ಅಲ್ಲಿಯ ವಾಯುಗುಣ ಮತ್ತು ಮಣ್ಣಿಗೆ ಅನುಗುಣವಾದದ್ದು. ರಾಜ್ಯದ ಶೇ. 15 ಭಾಗ ಅರಣ್ಯಾವೃತ. ನೀಲಗಿರಿ , ಅಣ್ಣಾಮಲೈ ಮತ್ತು ಪಳನಿ ಬೆಟ್ಟಗಳ ಉನ್ನತ ಭಾಗಗಳಲ್ಲಿ ಉಪ ಆಲ್ಪೈನ್ ಸಸ್ಯ ಬೆಳೆಯುತ್ತದೆ. ಪಶ್ಚಿಮ ಘಟ್ಟಗಳ ಪೂರ್ವ ಪಾರ್ಶ್ವದಲ್ಲೂ ಉತ್ತರ ಮತ್ತು ಮಧ್ಯ ಜಿಲ್ಲೆಗಳ ಬೆಟ್ಟಗಳ ಪ್ರದೇಶದಲ್ಲೂ ನಿತ್ಯ ಹಸುರಿನ ಮತ್ತು ಪರ್ಣಪಾತಿ ಸಸ್ಯಗಳೂ ಕುರುಚಲುಗಳೂ ಇವೆ. ಕೆಳ ಕಾವೇರಿ ಕಣಿವೆಯಲ್ಲಿ ಅತ್ಯಂತ ಸಮೃದ್ಧವಾದ ನಿತ್ಯ ಹಸುರಿನ ಆರ್ದ್ರ ಅರಣ್ಯಗಳುಂಟು. ನಾನಾ ಸ್ತರಗಳಿಂದ ಕೂಡಿದ ಸಸ್ಯಜಾತಿಗಳನ್ನಿಲ್ಲಿ ಕಾಣಬಹುದು. ಮಧ್ಯಕಣಿವೆಯ ಕಾಡುಗಳನ್ನೆಲ್ಲ ಕಡಿದು ಇಲ್ಲಿಯ ಭೂಮಿಯನ್ನೆಲ್ಲ ವ್ಯವಸಾಯಕ್ಕೆ ಬಳಸಿಕೊಂಡಿರುವುದರಿಂದ ಮೂಲ ನೈಸರ್ಗಿಕ ಸಸ್ಯ ಇಲ್ಲಿ ಕಾಣುವುದಿಲ್ಲ. ಅಲ್ಲಲ್ಲಿ ಕುರುಚಲೂ ನೀರಿನ ಹರಿವಿನ ಬಳಿಯಲ್ಲಿ ಮತ್ತು ತಗ್ಗಿನ ನೆಲೆಗಳಲ್ಲಿ ಕಾಡುಗಳೂ ಇವೆ .

ರಾಜ್ಯದ ಜಲಪಕ್ಷಿಗಳ ವೈವಿಧ್ಯವನ್ನು ವೇದಾಂತಂಗಳ್ ಪಕ್ಷಿಧಾಮದಲ್ಲೂ ಇತರ ವನ್ಯಜೀವಿಗಳ ಬಗೆಗಳನ್ನು ಮುದು ಮಲೈ ಅಭಯಾರಣ್ಯದಲ್ಲೂ ಕಾಣಬಹುದು. ತಮಿಳುನಾಡಿನ ಮುಖ್ಯ ಅಭಯಾರಣ್ಯಗಳು ಇವು (ಇವುಗಳ ವಿಸ್ತೀರ್ಣಗಳನ್ನು ಹೆಕ್ಟೇರುಗಳಲ್ಲಿ ಆವರಣಗಳೊಳಗೆ ಕೊಟ್ಟಿದೆ) : 1. ಮುದುಮಲೈ (32,116), 2. ಮುಂಡನ್ ತುರೈ (5,180), 3. ಪಾಯಿಂಟ್ ಕ್ಯಾಲಿಮಿಯರ್ (1,729), 4. ವೇದಾಂತಂಗಳ್ (30). 5. ಗಿಂಡಿ ಉದ್ಯಾನ (241) ಮತ್ತು ಅಣ್ಣಾಮಲೈ (95,800).

ಜನಸಂಖ್ಯೆ: ತಮಿಳುನಾಡಿನ ಜನಸಂಖ್ಯೆ 14,124 ಗ್ರಾಮಗಳಲ್ಲೂ 443 ಪಟ್ಟಣಗಳಲ್ಲೂ ಹಂಚಿಕೆಯಾಗಿದೆ. ಶೇ. 27 ಜನ ಪಟ್ಟಣವಾಸಿಗಳು. ಪ್ರತಿ 1,000 ಪುರುಷರಿಗೆ 978 ಸ್ತ್ರೀಯರು. ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 317.

ರಾಜ್ಯದ ಜನಸಂಖ್ಯೆಯಲ್ಲಿ ಶೇ. 89.01 ಮಂದಿ ಹಿಂದುಗಳು ಶೇ. 5.75 ಕ್ರೈಸ್ತರು ಶೇ. 5.11 ಮುಸ್ಲಿಮರು, ಶೇ. 0.10 ಜೈನರು, ಶೇ. 0.01 ಸಿಖ್ಖರು, ಇತರ ಧರ್ಮಗಳವರೂ ತಮ್ಮ ಮತಗಳನ್ನು ತಿಳಿಸದವರೂ ಶೇ. 0.02.

ತಮಿಳು ಮಾತನಾಡುವವರು ಒಟ್ಟು ಜನಸಂಖ್ಯೆಯ ಶೇ. 84.51 ಇದ್ದಾರೆ. ಎರಡನೆಯ ದೊಡ್ಡ ಭಾಷಾಗುಂಪು ತೆಲುಗು (ಶೇ. 8.74). ಕನ್ನಡಿಗರು ಶೇ. 2.56, ಉರ್ದು, ಮಲಯಾಳಂ ಮತ್ತು ಇತರ ಭಾಷೆಗಳನ್ನಾಡುವವರು ಅನುಕ್ರಮಾಗಿ ಶೇ. 1.84, ಶೇ. 1.36 ಮತ್ತು ಶೇ. 0.99, ಕನ್ನಡ ಆಡುವವರಲ್ಲಿ ಅಧಿಕ ಸಂಖ್ಯೆಯ ಜನ ಇರುವುದು ಕೊಯಮತ್ತೂರು ಮತ್ತು ನೀಲಗಿರಿ ಜಿಲ್ಲೆಗಳಲ್ಲಿ.

ಆರ್ಥಿಕತೆ : ಕೃಷಿ : ತಮಿಳುನಾಡಿನ ಜನರ ಮುಖ್ಯ ಕಸುಬು ವ್ಯವಸಾಯ. ಶೇ. 61.54 ಕ್ಕಿಂತ ಮಂದಿ ಕೃಷಿಯನ್ನು ಅವಲಂಬಿಸಿದ್ದಾರೆ. ರಾಜ್ಯದ ಮುಖ್ಯ ವಾಣಿಜ್ಯ ಬೆಳೆಗಳು–ಅವನ್ನು ಬೆಳೆಯುವ ನೆಲದ ವಿಸ್ತೀರ್ಣಕ್ಕೆ ಅನುಗುಣವಾಗಿ– ನೆಲಗಡಲೆ, ಹತ್ತಿ, ಕಬ್ಬು, ಎಳ್ಳು, ತೆಂಗು, ಮರಗೆಣಸು ಮತ್ತು ಹರಳು. ರಾಜ್ಯದ ಮುಖ್ಯ ಆಹಾರ ಬೆಳೆಗಳು ಬತ್ತ ಮತ್ತು ಇತರ ಧಾನ್ಯಗಳು, ಕಾಳುಗಳು, ಈರುಳ್ಳಿ, ಆಲೂಗಡ್ಡೆ, ಗೆಣಸು, ಮರಗೆಣಸು, ಮತ್ತು ಬಾಳೆ. ಕ್ವಿನೈನ್ ಉತ್ಪಾದಿಸುವ ಭಾರತದ ಎರಡು ರಾಜ್ಯಗಳ ಪೈಕಿ ತಮಿಳುನಾಡು ಒಂದು. ಸಾಗುವಳಿಗೆ ಒಳಪಟ್ಟಿರುವ ಒಟ್ಟು ಭೂಮಿಯ ವಿಸ್ತೀರ್ಣ 59,34,000 ಹೆಕ್ಟೇರ್. ಇದರಲ್ಲಿ 23,99,000 ಹೆಕ್ಟೇರ್ ನೀರಾವರಿಗೆ ಒಳಪಟ್ಟಿದೆ. ಹೆಚ್ಚು ಇಳುವರಿಯ ತಳಿಗಳನ್ನು ಬಳಸಲಾರಂಭಿಸಿದ್ದರಿಂದ ರಾಜ್ಯದ ಸಂಪ್ರದಾಯ ಬದ್ಧ ಬೇಸಾಯಕ್ರಮದಲ್ಲಿ ಅಗಾಧ ಬದಲಾವಣೆಗಳಾಗಿವೆ. ಒಂದು ಬೆಳೆ ತೆಗೆಯುತ್ತಿದ್ದ ಅನೇಕ ರೈತರು ಎರಡು–ಮೂರು ಬೆಳೆ ತೆಗೆಯಲಾರಂಭಿಸಿದ್ದಾರೆ.

ನೀರಾವರಿ, ವಿದ್ಯುತ್ತು : ರಾಜ್ಯದ ಮುಖ್ಯ ನೀರಾವರಿ ಕಾಮಗಾರಿಗಳು ಮೆಟ್ಟೂರ್ (ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳು), ಕೆಳ ಭವಾನಿ (ಕೊಯಮತ್ತೂರು ಮತ್ತು ತಿರುಚಿ ಜಿಲ್ಲೆಗಳು), ಅರಣಿಯಾರ್ (ಚೆಂಗಲ್ಪಟ್ಟು ಜಿಲ್ಲೆ), ಅಮರಾವತಿ (ಕೊಯಮತ್ತೂರು ಜಿಲ್ಲೆ), ಸಾತನೂರ್ (ಉತ್ತರ ಮತ್ತು ದಕ್ಷಿಣ ಆರ್ಕಾಟ್). ನೀರಾವರಿಗೆ ಒಳಪಟ್ಟ ಒಟ್ಟು ನಿವ್ವಳ ವಿಸ್ತೀರ್ಣ 27,09,676 ಹೆಕ್ಟೇರುಗಳು.

ರಾಜ್ಯದ ಮುಖ್ಯ ವಿದ್ಯುತ್ ಉತ್ಪಾದನ ಕಾಮಗಾರಿಗಳು: 1. ಪೆರಿಯಾರ್ ಜಲ ವಿದ್ಯುತ್ ಯೋಜನೆ, 2. ಪೈಕಾರ ಜಲವಿದ್ಯುತ್ ಯೋಜನೆ, 3. ಮೋಯರ್ ಜಲವಿದ್ಯುತ್ ಯೋಜನೆ, 4. ಮದರಾಸು ಶಾಖ ವಿದ್ಯುತ್ ಯೋಜನೆ, 5. ಪಾಪನಾಶಂ ವಿದ್ಯುತ್ ವ್ಯವಸ್ಥೆ, 6. ಮೆಟ್ಟೂರ್ ಜಲ ವಿದ್ಯುತ್ ಯೋಜನೆ. ರಾಜ್ಯದ ಅತ್ಯಂತ ದೊಡ್ಡ ವಿದ್ಯುತ್ ಯೋಜನೆಯೆಂದರೆ ಕುಂದಾ ವಿದ್ಯುತ್ ವ್ಯವಸ್ಥೆಯದು. ಕೊಲೊಂಬೋ ಯೋಜನೆಯ ಅಡಿಯಲ್ಲಿ ಕೆನಡದ ನೆರವಿನಿಂದ ಈ ಯೋಜನೆಯನ್ನು ಆರಂಭಿಸಲಾಯಿತು. ನೀಲಗಿರಿ ಬೆಟ್ಟಗಳ ನಡುವೆ ಈ ವಿದ್ಯುತ್ ಕೇಂದ್ರ ನೆಲೆಗೊಂಡಿದೆ. ಗ್ರಾಮೀಣ ವಿದ್ಯುದೀಕರಣದಲ್ಲಿ ತಮಿಳು ನಾಡು ಇತರ ರಾಜ್ಯಗಳಿಗಿಂತ ಮುಂದೆ ಇದೆ.

ಮತ್ಸ್ಯೋದ್ಯಮ : ಮೀನು ಉತ್ಪಾದಿಸುವುದು ಒಂದು ಪ್ರಮುಖ ಕಸಬು. ಹಿಂದಿನಿಂದ ರೂಢಿಯಲ್ಲಿರುವ ಕಟ್ಟಮರಾನ್‌ಗಳ ನೆರವಿನಿಂದ ಸಮುದ್ರದಲ್ಲಿ ಮತ್ಸ್ಯೋದ್ಯಮವನ್ನು ಬೆಳೆಸಲು ಈ ರಾಜ್ಯ ಹಿಂದಿನಿಂದಲೂ ಶ್ರಮಿಸುತ್ತಿತ್ತು. ಯಂತ್ರೀಕೃತ ದೋಣಿಗಳನ್ನು ಬಳಕೆಗೆ ತರುವ ಯೋಜನೆಯನ್ನು 1955ರಲ್ಲಿ ಸರ್ಕಾರ ಜಾರಿಗೆ ತಂದಿತು. ಇದು ವಿಶೇಷವಾಗಿ ಪ್ರಗತಿ ಹೊಂದಿದೆ. ಮೀನುಗಾರರಿಗೆ ತರಬೇತನ್ನೂ ನೀಡಲಾಗುತ್ತಿದೆ. ಎಲ್ಲ ಮೀನುಗಾರಿಕೆ ಕೇಂದ್ರಗಳಲ್ಲೂ ಬರ್ಫ ಯಂತ್ರಗಳನ್ನೂ ಶೈತ್ಯಾಗಾರಗಳನ್ನೂ

ಸ್ಥಾಪಿಸಲಾಗಿದೆ. ಒಳನಾಡಿನ ಮೀನುಗಾರಿಕೆಯಲ್ಲೂ ತಮಿಳು ನಾಡು ವಿಶೇಷ ಪ್ರಗತಿ ಸಾಧಿಸಿದೆ. ಭವಾನಿ ಸಾಗರದ ಒಳನಾಡಿನ ಮೀನುಗಾರಿಕೆ ಸಂಶೋಧನ ಕೇಂದ್ರ ಮತ್ತು ಎನ್ನೋರ್, ಕನ್ಯಾಕುಮಾರಿ, ತೂತ್ತುಕುಡಿ ಮತ್ತು ಮದ್ರಾಸ್ ಸಮುದ್ರ ಮೀನುಗಾರಿಕೆ ಸಂಶೋಧನ ಕೇಂದ್ರಗಳು ಮೀನುಗಾರಿಕೆ ಅಭಿವೃದ್ಧಿಯಲ್ಲಿ ಮಹತ್ತ್ವದ ಪಾತ್ರವಹಿಸಿವೆ.

ಅರಣ್ಯಸಂಪತ್ತು : ರಾಜ್ಯದ ಮೀಸಲು ಅರಣ್ಯಗಳ ವಿಸ್ತೀರ್ಣ 17,258 ಚ.ಕಿಮೀ ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 15.5 ಭಾಗ ಅರಣ್ಯಾವೃತ. ಸಾಗುವಾನಿ, ಸೌದೆ, ಬಿದಿರು, ಶ್ರೀಗಂಧ, ಚರ್ಮಹದಕ್ಕೆ ಬೇಕಾದ ತೊಗಟೆ ಮುಂತಾದವು ಅರಣ್ಯೋತ್ಪನ್ನಗಳು. ಪಶ್ಚಿಮದ ಕಾಡುಗಳಲ್ಲಿ ತೇಗ, ಬೀಟೆ ಮುಂತಾದ ಸಾಗುವಾನಿ ಮರಗಳೂ ಸಿಗುತ್ತವೆ. ಸಾಗುವಾನಿ ಮರಗಳ ಕಾಡುಗಳು ಬಹುತೇಕ ಪಶ್ಚಿಮ ಘಟ್ಟಗಳ ಹೆಚ್ಚು ಮಳೆ ಬೀಳುವ ಪ್ರದೇಶಗಳಿಗೆ ಸೀಮಿತವಾಗಿವೆ. ಕೊಯಮತ್ತೂರು, ಮದುರೈ ಮತ್ತು ತಿರುನೆಲ್ವೇಲಿ ಜಿಲ್ಲೆಗಳ ಕಾಡುಗಳಲ್ಲಿ ನಲವತ್ತಕ್ಕಿಂತ ಹೆಚ್ಚಿನ ಸಂಖ್ಯೆಯ ಸಾಗುವಾನಿ ಜಾತಿಗಳಿವೆ. ತೇಗದ ಆನಂತರ ಅತ್ಯಂತ ಪ್ರಮುಖವಾದ ಅರಣ್ಯೋತ್ಪನ್ನವೆಂದರೆ ಶ್ರೀಗಂಧ.

ಖನಿಜ ಸಂಪತ್ತು : ತಮಿಳು ನಾಡಿನಲ್ಲಿ ಕಬ್ಬಿಣದ ಅದಿರು, ಬಾಕ್ಸೈಟ್, ಜಿಪ್ಸಂ, ಅಭ್ರಕ, ಸುಣ್ಣಕಲ್ಲು, ಪಿಂಗಾಣಿ ಮಣ್ಣು, ಮ್ಯಾಗ್ನೆಸೈಟ್, ಲವಣ, ಇಲ್ಮೆನೈಟ್, ಮೊನಾಜೈಟ್, ಜಿರ್ಕಾನ್ ಮುಂತಾದ ಖನಿಜಗಳ ನಿಕ್ಷೇಪಗಳಿವೆ. ತಿರುನೆಲ್ವೇಲಿ ಮತ್ತು ಕನ್ಯಾಕುಮಾರಿ ಜಿಲ್ಲೆಗಳ ಕರಾವಳಿಯಲ್ಲಿ ಅಲೆಗಳ ಪ್ರಕ್ರಿಯೆಯಿಂದಾಗಿ ಸಂಗ್ರಹವಾಗಿರುವ ಮರಳಿನಲ್ಲಿ ತೋರಿಯಂ ಸಿಗುತ್ತದೆ. ಕಾವೇರಿ ಜಲಾನಯನ ಭೂಮಿಯ ಪ್ರಥಮ ಯುಗೀಣ ಸಂಕೀರ್ಣದಲ್ಲಿ ಭಿನ್ನಸ್ತರಶಿಲೆ, ಗ್ರಾನೈಟ್, ನೀಸ್ ಮುಂತಾದವು ಇವೆ. ಸೇಲಂ–ಕೊಯಮತ್ತೂರು ವಲಯ ಖನಿಜಸಂಪದ್ಯುಕ್ತವಾದದ್ದು. ತಲಮೈ, ಕಂಜಮಲೈ, ಗೋಡುಮಲೈಗಳಲ್ಲಿ ಶೇ.60ಕ್ಕಿಂತ ಹೆಚ್ಚು ಕಬ್ಬಿಣಾಂಶ ಇರುವ ಕಬ್ಬಿಣ ಅದಿರುಗಳಿವೆ. ಜಲವಿದ್ಯುತ್ ಶಕ್ತಿಯಿಂದ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯನ್ನು ಸ್ಥಾಪಿಸಲು ವಿಶೇಷ ಅವಕಾಶವುಂಟು. ತಮಿಳು ನಾಡಿನಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳಿಲ್ಲ. ಆದರೆ ನೈವೇಲಿಯ ಬಳಿ 200 ಕೋಟಿ ಟನ್ ಲಿಗ್ನೈಟ್ ನಿಕ್ಷೇಪಗಳಿವೆ.

ತಮಿಳುನಾಡಿನ ಪ್ರಮುಖ ಕೈಗಾರಿಕೆಗಳು ಜವಳಿ, ವಿದ್ಯುತ್, ಅನಿಲ, ಮೋಟಾರ್‌ವಾಹನಗಳು. ವಿದ್ಯುತ್ ಯಂತ್ರಗಳು, ರೈಲ್ವೆ ಸರಂಜಾಮುಗಳು, ಮುದ್ರಣ ರಸಗೊಬ್ಬರ, ಸಕ್ಕರೆ ಕಾರ್ಖಾನೆಗಳು, ಕಬ್ಬಿಣ – ಉಕ್ಕು, ರಾಸಾಯನಿಕ ಉತ್ಪನ್ನಗಳಾದ ಸಿಮೆಂಟ್, ಯಂತ್ರ ಸಾರಿಗೆ ಸರಂಜಾಮುಗಳು, ಚರ್ಮಹದಗಾರಿಕೆ, ಮೋಟರ್‌ಸೈಕಲ್ ಇವಲ್ಲದೆ, ಹೊಗೆಸೊಪ್ಪು, ಬೆಂಕಿಕಡ್ಡಿ, ಎಣ್ಣೆ ತೆಗೆಯುವುದು, ಇಟ್ಟಿಗೆ, ಹೆಂಚು, ಸುಣ್ಣ, ಕುಂಭ, ಹತ್ತಿ ಹಿಂಜುವುದು, ಹೆಣಿಗೆ, ರೇಷ್ಮೆ, ಮೂಳೆ ಗೊಬ್ಬರ, ಬಣ್ಣ, ಸಾಬೂನು, ಕಾಗದ, ಗಾಜು, ಮರಕೊಯ್ತ, ಹಗ್ಗ ಮುಂತಾದ ಕೈಗಾರಿಕೆಗಳೂ ಇವೆ.

ಗಿಂಡಿಯ ಬಳಿ ಹಿಂದೂಸ್ತಾನ್ ಟೆಲಿಪ್ರಿಂಟರ್ಸ್ ಲಿ. ತಿರುಚ್ಚಿರಾಪಳ್ಳಿಯಲ್ಲಿ ಅಧಿಕ ಒತ್ತಡದ ಬಾಯಿಲರ್ ಕಾರ್ಖಾನೆ, ಉದಕಮಂಡಲದಲ್ಲಿ ಕಚ್ಚಾ ಫಿಲಂ ಕಾರ್ಖಾನೆ. ಆವಡಿಯಲ್ಲಿ ಭಾರಿ ವಾಹನಗಳ (ಟ್ಯಾಂಕ್) ಕಾರ್ಖಾನೆ, ಪೆರಂಬೂರಿನ ಇಂಟೆಗ್ರಲ್ ಕೋಚ್ (ರೈಲ್ವೆ ಗಾಡಿ) ಕಾರ್ಖಾನೆ, ನೈವೇಲಿಯ ಲಿಗ್ನೈಟ್ ಕಾರ್ಪೋರೇಷನ್ ಇವು ಕೇಂದ್ರ ಸರ್ಕಾರದ ಕೊಡ್ಡ ಕೈಗಾರಿಕಾ ಸಂಸ್ಥೆಗಳು. ತಮಿಳು ನಾಡು ಸರ್ಕಾರದ ಅಧೀನದಲ್ಲಿರುವ ಎರಡು ದೊಡ್ಡ ಕಾರ್ಖಾನೆಗಳು ಮದ್ರಾಸ್ ರಸಗೊಬ್ಬರ ಕಾರ್ಖಾನೆ ಮತ್ತು ಉಣ್ಣೆ ಪರಿಷ್ಕರಣ ಕೇಂದ್ರವೂ ಇವೆ.

ತಮಿಳುನಾಡಿನ ಗೃಹಕೈಗಾರಿಕೆಗಳು ಪ್ರಾಚೀನವಾದವು. ಚರ್ಮೋತ್ಪನ್ನಗಳು, ಕುಂಭ ಕಲೆ, ಛತ್ರಿ, ಹಿತ್ತಾಳೆ ಸಾಮಾನು, ಕೈಮಗ್ಗ, ಕಲ್ಲಿನ ಪಾತ್ರೆಗಳು, ಗಾಜಿನ ಬಳೆ, ಬೆಂಕಿಕಡ್ಡಿ, ಜರತಾರಿ, ಅಲ್ಯೂಮಿನಿಯಂ ಪದಾರ್ಥಗಳು, ದಂತ ಕೆಲಸ, ಕಲ್ಲು ಹಲಗೆ, ಮರಗೊರೆತ, ಖಾದಿ, ತಾಳೆಬೆಲ್ಲ, ಚಾಪೆ, ತೆಂಗಿನನಾರಿನ ಸರಕು ಮುಂತಾದವು ಹಳೆಯ ಗೃಹಕೈಗಾರಿಕೆಗಳು.

ವ್ಯಾಪಾರ : ಬಹಳ ಪ್ರಾಚೀನ ಕಾಲದಿಂದಲೂ ತಮಿಳು ನಾಡು ವಿದೇಶಗಳೊಂದಿಗೆ ವ್ಯಾಪಾರ ನಡೆಸುತ್ತ ಬಂದಿದೆ. ಅದರ ಅನೇಕ ನೈಸರ್ಗಿಕ ಸರಕುಗಳಿಗೆ ಹಿಂದಿನಿಂದಲೂ ವಿದೇಶಿ ಬೇಡಿಕೆಯಿದೆ. ಮೆಣಸು, ಮುತ್ತು, ದಂತ, ಲವಂಗ, ಶ್ರೀಗಂಧ, ತೇಗ, ಬೀಟೆ, ಕುರುಂದ–ಇವು ಕೆಲವು ಸರಕುಗಳು. ಪ್ರಾಚೀನ ಮೆಸಪೊಟೇಮಿಯಕ್ಕೆ ತಮಿಳು ನಾಡಿನಿಂದ ಅಕ್ಕಿ ರಫ್ತಾಗುತ್ತಿತ್ತು ಎಂಬುದಕ್ಕೆ ಸಾಕ್ಷ್ಯಾಧಾರಗಳಿವೆ. (ಡಿ.ಬಿ.)

**ತರಿಖ್ ಅಲ್–ಯಾಕೂಬಿ:** ಪ್ರಸಿದ್ಧ ಅರಬ್ ಇತಿಹಾಸಕಾರ. ಇವನು ಬರೆದ ತರಿಖ್ ಯಾಕೂಬಿ (ಅರೇಬಿಕ್) ಎಂಬ ಪ್ರಸಿದ್ಧವಾದ ಇಸ್ಲಾಮಿಕ್ ಇತಿಹಾಸ ಗ್ರಂಥ. ಇದರಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಇಸ್ಲಾಂಪೂರ್ವದ ಮತ್ತು ಇಸ್ಲಾಂರಲ್ಲದ ಜನರ ಧರ್ಮ ಮತ್ತು ಸಾಹಿತ್ಯಗಳ ಸಮಗ್ರ ವಿವರಣೆ ಇದೆ. ಭಾರತದ ವಿವರಣೆಯಲ್ಲಿ ಕಲಿಲಾ, ದಿಮ್ನಾ ಮತ್ತು ಸಿನ್‌ಬಾದ ಕಥೆಗಳ ಪ್ರಸ್ತಾಪ ಮಾಡಿದವರಲ್ಲಿ ಈಗ ಮೊದಲಿಗ. ಎರಡನೆಯ ಭಾಗ 872ರ ವರೆಗೆ ಇಸ್ಲಾಂ ಇತಿಹಾಸವನ್ನು ಒಳಗೊಂಡಿದೆ. ಅದರಲ್ಲಿ ಅರ್ಮೀನಿಯ ಮತ್ತು ಖೊರಾಸನ್‌ಗಳಂತಹ ಕೆಲವು ಪ್ರಾಂತಗಳ ಸವಿಸ್ತಾರವಾದ ವರ್ಣನೆ ಕಂಡುಬರುತ್ತದೆ. ಪ್ರಾಯೋಗಿಕ ಭೂವಿಜ್ಞಾನದ ವಸ್ತುಸಂಗ್ರಹಾಲಯದಲ್ಲಿ 1863ರ ವರೆಗೆ ಇವನು ನೀಡಿದ ಉಪನ್ಯಾಸಗಳೇ ಈತನ ಫಿಜಿಕಲ್ ಜಿಯಾಲಜಿ ಮತ್ತು ಜಿಯಾಗ್ರಫಿ ಆಫ್ ಗ್ರೇಟ್ ಬ್ರಿಟನ್ ಎಂಬ ಗ್ರಂಥದ ಕೇಂದ್ರಭಾಗವಾಗಿದ್ದವು. 1862ರಲ್ಲಿ ಎಡಿನ್‌ಬರ್ಗ್‌ದ ರಾಯಲ್ ಸೊಸೈಟಿಯ ನೀಲ್ ಪ್ರಶಸ್ತಿ ಮತ್ತು 1871ರಲ್ಲಿ ಲಂಡನ್ನಿನ ಜಿಯಾಲಜಿಕಲ್ ಸೊಸೈಟಿಯ ವೊಲ್ಲಸ್ಟಾನ್ ಪದಕ ಪಡೆದ. ಈತನು ಬ್ಯೂಮನ್ಸಿನಲ್ಲಿ ನಿಧನ ಹೊಂದಿದನು. (ಎಸ್.ಎಸ್.ಎನ್.)

**ತರೀಕೆರೆ:** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು : ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕು ಉ.ಅ. $13^0 30'$– $13^0 54'$ ಮತ್ತು ಪೂ.ರೇ $75^0 35'$ – $76^0 9'$ ನಡುವೆ ಇದೆ. ಉತ್ತರದಲ್ಲಿ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಮತ್ತು ಚನ್ನಗಿರಿ ತಾಲ್ಲೂಕುಗಳು, ಪಶ್ಚಿಮದಲ್ಲಿ ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕುಗಳು, ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 1240 ಚ.ಕಿಮೀ. ಜನಸಂಖ್ಯೆ 2,60,500. ಅಜ್ಜಂಪುರ, ಅಮೃತಾಪುರ, ಲಕ್ಕವಳ್ಳಿ, ಲಿಂಗದಹಳ್ಳಿ, ಶಿವನಿ ಮತ್ತು ತರೀಕೆರೆ ಹೋಬಳಿಗಳಿವೆ. ತಾಲ್ಲೂಕಿನಲ್ಲಿರುವ ಗ್ರಾಮಗಳ ಸಂಖ್ಯೆ 247.

ಈ ತಾಲ್ಲೂಕು ಭಾಗಶಃ ಮೈದಾನ ಮತ್ತು ಭಾಗಶಃ ಬೆಟ್ಟಸೀಮೆ. ತಾಲ್ಲೂಕಿನ ಪಶ್ಚಿಮಭಾಗ ಅರೆಮಲೆನಾಡು. ತಾಲ್ಲೂಕಿನ ಉತ್ತರದಲ್ಲಿರುವ ಉಬ್ರಾಣಿ ಬೆಟ್ಟದ ಕವಲುಗಳು ಅಲ್ಲಲ್ಲಿ ಮೈದಾನದೊಳಕ್ಕೂ ಚಾಚಿವೆ. ಈ ಬೆಟ್ಟಗಳ ಪ್ರದೇಶದಲ್ಲಿ ಹಿಂದೆ ದಟ್ಟವಾದ ಬಿದಿರು ಕಾಡುಗಳಿದ್ದವು. ತಾಲ್ಲೂಕಿನ ನೈರುತ್ಯದಲ್ಲಿ ಬಾಬಾಬುಡನ್ ಶ್ರೇಣಿಯ ಒಂದು ಭಾಗ ಹಬ್ಬಿದೆ. ಈ ಶ್ರೇಣಿಯ ಪಾರ್ಶ್ವಗಳು ಕಾಡಿನಿಂದ ಕೂಡಿವೆ. ಇದನ್ನು ಅಲ್ಲಲ್ಲಿ ತೆರಪುಮಾಡಿ ಕಾಫಿ ತೋಟಗಳನ್ನು ಬೆಳೆಸಲಾಗಿದೆ.

ಮೇಲ್ಮೈಲಕ್ಷಣಕ್ಕೆ ಅನುಗುಣವಾಗಿ ಈ ತಾಲ್ಲೂಕಿನ ವಾಯುಗುಣ ವ್ಯತ್ಯಾಸವಾಗುತ್ತದೆ. ಪಶ್ಚಿಮ ಭಾಗದಲ್ಲಿ ಹೆಚ್ಚು ಮಳೆ. ಜುಲೈ ಅತ್ಯಂತ ಹೆಚ್ಚಿನ ಮಳೆಯ ಕಾಲ. ಅಜ್ಜಂಪುರದ ಸುತ್ತ, ತಾಲ್ಲೂಕಿನ ಪೂರ್ವಗಡಿಯವರೆಗೆ ಕಪ್ಪು ಹತ್ತಿ ಮಣ್ಣು ಇದೆ. ಇಲ್ಲಿಯ ಬೆಳೆಗಳು ಹತ್ತಿ, ಕಡಲೆ ಮುಂತಾದವು. ಈ ಪ್ರದೇಶದಲ್ಲಿ ಹೆಚ್ಚು ಕಾಡುಗಳಿಲ್ಲ. ತಾಲ್ಲೂಕಿನ ಉಳಿದ ಭಾಗದಲ್ಲಿ ಕೆಂಪು ಮರಳು ಮತ್ತು ಗರಸು ಮಣ್ಣುಗಳಿವೆ. ಇಲ್ಲಿ ರಾಗಿ, ಜೋಳಕಾಳು ಮುಂತಾದವನ್ನು ಬೆಳೆಯಲಾಗುತ್ತದೆ.

ಉಬ್ರಾಣ ಬೆಟ್ಟದ ಪ್ರದೇಶದಲ್ಲೂ ಬಾಬಾಬುಡನ್ ಶ್ರೇಣಿಯ ತಪ್ಪಲಿನಲ್ಲೂ ಕಬ್ಬಿಣದ ಅದಿರು ನಿಕ್ಷೇಪಗಳಿವೆ. ಅಜ್ಜಂಪುರದ ಬಳಿ ಚಿನ್ನ ತೆಗೆಯಲಾಗುತ್ತಿತ್ತು.

ತರೀಕೆರೆ ತಾಲ್ಲೂಕಿನ ಜನಸಾಂದ್ರತೆ ಚ.ಕಿಮೀ ಗೆ 210. ಗ್ರಾಮವಾಸಿಗಳು 1,22,522, ಪಟ್ಟಣವಾಸಿಗಳು 26,738. ತಾಲ್ಲೂಕಿನಲ್ಲಿರುವ 1,20,337 ಹೆಕ್ಟೇರ್ ಭೂಮಿಯಲ್ಲಿ ವ್ಯವಸಾಯದ ನಿವ್ವಳ ಭೂಮಿ 43,409 ಹೆ., ಪಾಳುನೆಲ 13,469 ಹೆ., ಕಾಡು 43,463 ಹೆ., ವ್ಯವಸಾಯಕ್ಕೆ ಸಿಗದ ನೆಲ 8,311 ಹೆ., 7,187 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವಿದೆ. ನಾಲೆಗಳಿಂದ 3,068 ಹೆ., ಕೆರೆಗಳಿಂದ 3,624 ಹೆ., ಬಾವಿಗಳಿಂದ 387 ಹೆ., ಸಾಗುವಳಿಯಾಗುತ್ತದೆ.

ತಾಲ್ಲೂಕಿನ ಮುಖ್ಯ ಸ್ಥಳ ತರೀಕೆರೆ ಪಟ್ಟಣ. ಇದು ಉ.ಅ. $13^0 43'$ ಮತ್ತು ಪೂ.ರೇ. $75^0 49'$ ಮೇಲೆ, ಚಿಕ್ಕಮಗಳೂರು ಪಟ್ಟಣದಿಂದ ಉತ್ತರಕ್ಕೆ 56 ಕಿಮೀ ದೂರದಲ್ಲಿದೆ. ಇದು ಬೀರೂರು–ಶಿವಮೊಗ್ಗ ರೈಲುಮಾರ್ಗದ ಒಂದು ನಿಲ್ದಾಣ. ಬೆಂಗಳೂರು–ಶಿವಮೊಗ್ಗ ರಸ್ತೆ ತರೀಕೆರೆಯ ಮೂಲಕ ಹಾದು ಹೋಗುತ್ತದೆ. ಜನಸಂಖ್ಯೆ 34,074. (ಎಸ್.ಎನ್.ಎಲ್.)

**ತಲಕಾಡು:** ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ಪಟ್ಟಣ, ಹಿಂದುಗಳ ಪುಣ್ಯಕ್ಷೇತ್ರ, ಹೋಬಳಿ ಕೇಂದ್ರ. ಇದು ಗಂಗ ಅರಸರ ರಾಜಧಾನಿಯಾಗಿತ್ತು. ಕಾವೇರಿ ನದಿಯ ಎಡದಂಡೆಯ ಮೇಲೆ, ಉ. ಅ. $12^0 11'$ ಮತ್ತು ಪೂ. ರೇ. $77^0 2'$ ನಲ್ಲಿ, ಮೈಸೂರಿನ ಆಗ್ನೇಯಕ್ಕೆ 45 ಕಿಮೀ ದೂರದಲ್ಲಿದೆ. 1968ರ ವರೆಗೂ ಇದು ತಲಕಾಡು ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಅನಂತರ ತಿರುಮಕೂಡಲು ನರಸೀಪುರ ಆಡಳಿತ ಕೇಂದ್ರವಾಯಿತು.

ತಲಾ ಮತ್ತು ಕಾಡ ಎಂಬ ಕಿರಾತ ಸೋದರರಿಂದ ಈ ಸ್ಥಳಕ್ಕೆ ತಲಕಾಡು ಎಂಬ ಹೆಸರು ಬಂದಿದೆ ಎಂದೂ ಆನೆಯ ಜನ್ಮಪಡೆದಿದ್ದ ಸೋಮದತ್ತನೆಂಬ ಋಷಿಯೂ ಅವನ ಶಿಷ್ಯರೂ ಇಲ್ಲಿ ಮೋಕ್ಷ ಪಡೆದುದರಿಂದ ಗಜಾರಣ್ಯಕ್ಷೇತ್ರವಾಯಿತೆಂಬ ಪುರಾಣದ ಕಥೆಯಿದೆ. ತಲವನಪುರ ಎಂಬುದು ಇದರ ಮತ್ತೊಂದು ಹೆಸರು.

ಮರಳು ರಾಶಿ: ತಲಕಾಡಿನಲ್ಲಿರುವ ದೇವಾಲಯಗಳ ಪ್ರಸಿದ್ಧಿಯಷ್ಟೇ ಇಲ್ಲಿನ ಮರಳರಾಶಿಯ ಬಗ್ಗೆಯೂ ಕುತೂಹಲವಿದೆ. ತಲಕಾಡು ಊರು ಸೇರಿದಂತೆ ಸು. 2.5 ಚ.ಕಿಮೀ. ವಿಸ್ತೀರ್ಣ ಹಾಗೂ 20 ಮೀ. ಎತ್ತರವಿರುವ ಮರಳು ರಾಶಿಗಳಿವೆ. ಇವುಗಳ

ಪೂರ್ವ ಭಾಗದ ಇಳಿಜಾರು ಕಡಿದು. ಮರಳು ಗುಡ್ಡಗಳು ಒತ್ತಿಬರುವುದರಿಂದ ಆಗಾಗ್ಗೆ ಇಲ್ಲಿನ ದೇವಾಲಯಗಳು ಮರಳಿನಿಂದ ಹೂತುಹೋಗುತ್ತವೆ. ಮರಳು ದಿಬ್ಬಗಳು ಆಗಾಗ್ಗೆ ಚಲಿಸುವುದಕ್ಕೆ ಇದು ನಿದರ್ಶನ. ಕಾವೇರಿ ನದಿ ತನ್ನ ಪಾತ್ರದಲ್ಲಿ ಬೇರೆಲ್ಲಿಯೂ ಈ ಪ್ರಮಾಣದ ಮರಳು ದಿಬ್ಬಗಳನ್ನು ನಿರ್ಮಿಸಿಲ್ಲ. ತಲಕಾಡಿನ ಬಳಿ ನಿರ್ಮಿಸಿರುವುದು ವೈಜ್ಞಾನಿಕವಾಗಿಯೂ ಕುತೂಹಲಕಾರಿ. ಇದನ್ನು ತಿಳಿಯಲು ತಲಕಾಡಿನ ಸುತ್ತಣ ಭಾಗದ ಭೂಮೇಲ್ಮೈ ಲಕ್ಷಣಗಳು, ನದಿಪಾತ್ರ,ಇಲ್ಲಿನ ನೆಲದಲ್ಲಿರುವ ಶಿಲೆಗಳು ಮುಂತಾದ ಅಂಶಗಳನ್ನು ಪರಿಶೀಲಿಸಬೇಕು.

ಭೂರಚನೆ: ತಲಕಾಡು ಪ್ರದೇಶ ದಕ್ಷಿಣ ಕರ್ನಾಟಕದ ಮೈಸೂರು ಪ್ರಸ್ಥಭೂಮಿಯ ಒಂದು ಭಾಗ. ಇದು ಮೈದಾನವೆಂದು ಸಾಮಾನ್ಯವಾಗಿ ಹೇಳಲಾದರೂ ಅಲ್ಲಲ್ಲೇ ಮೇಲೆತ್ತಲ್ಪಟ್ಟ ಪ್ರತ್ಯೇಕಿತ ಕೆಲವು ಗುಡ್ಡಗಳೂ ಸುತ್ತಮುತ್ತ ಮೈದಳೆದಿವೆ. ಉದಾ: ಉತ್ತರದಲ್ಲಿ ಬೆಟ್ಟದಳ್ಳಿ (737 ಮೀ) ದಕ್ಷಿಣದಲ್ಲಿ ಕುಂತೂರುಬೆಟ್ಟ (746 ಮೀ) ಇವುಗಳಲ್ಲಿ ಕೆಲವು. ಆಗ್ನೇಯ, ಪೂರ್ವ ಹಾಗೂ ಈಶಾನ್ಯಕ್ಕೆ ತಲಕಾಡು ಪ್ರಸ್ಥಭೂಮಿ ಬಿಳಿಗಿರಿರಂಗನ ಬೆಟ್ಟದಿಂದ ಆವೃತವಾಗಿದೆ. ತಲಕಾಡಿನ ಸುತ್ತಮುತ್ತ ಮೈದಳೆದಿರುವ ಶಿಲೆಗಳು ಸರಗೂರು ಗುಂಪಿಗೆ ಸೇರಿದ ಬಹು ಪುರಾತನ ಶಿಲೆಗಳು. ನೈಸ್ ಎಂದು ಕರೆಯುವ, ದಕ್ಷಿಣ ಭಾರತದಾದ್ಯಂತ ಬಹು ದೊಡ್ಡ ಪ್ರಮಾಣದಲ್ಲಿ ರೂಪುಗೊಂಡಿರುವ ರೂಪಾಂತರಿಕ ಶಿಲೆಗಳೂಡನೆ ಗ್ರಾನೈಯುಕ್ತ ಆಂಫಿಬೋಲೈಟ ಎಂಬ ಶಿಲೆಗಳು ಬಹುತೇಕ ಇಲ್ಲಿ ಸಣ್ಣ ಸಣ್ಣ ಗುಡ್ಡ – ಬೆಟ್ಟಗಳಾಗಿ ಕಂಡುಬರುತ್ತವೆ; ಸಿಲಿಕಾ ಪ್ರಧಾನವಾಗಿರುವ ಶಿಲೆಗಳಿವು. ಹಾಗೆಯೇ ಸುಲಭವಾಗಿ ಶಿಥಿಲೀಕರಣಕ್ಕೆ ತುತ್ತಾಗಿ ಸವೆಯುತ್ತಿವೆ.

ನದಿ: ತಿರುಮಕೂಡಲು ನರಸೀಪುರ ಮತ್ತು ತಲಕಾಡಿನ ನಡುವೆ ಕಾವೇರಿನದಿ ಬಳಸು ಮಾರ್ಗ ಅನುಸರಿಸುತ್ತದೆ. ಈ ದಿಕ್ಕಿನಲ್ಲಿ ಈ ಚ್ಯುತಿ ಮೊದಲು ಕಂಡುಬರುವುದು ಬೆಟ್ಟಹಳ್ಳಿಯ ಪಶ್ಚಿಮ ಭಾಗದಲ್ಲಿ. ಇಲ್ಲಿ ಕಾವೇರಿನದಿಗೆ ಬೆಟ್ಟದ ಹಳ್ಳಿಯ ಗುಡ್ಡ ಎದುರಾಗಿದೆ. ಈ ಗುಡ್ಡವನ್ನು ಕೊರೆದು ಪಾತ್ರ ನಿರ್ಮಿಸುವಷ್ಟು ಕಾವೇರಿ ಶಕ್ತವಲ್ಲ. Z ಆಕಾರದ ಭಾಗನ್ನು ತಳೆದು ಪೂರ್ವವಾಹಿ ಕಾವೇರಿ ದಕ್ಷಿಣಕ್ಕೆ ತಿರುಗಿದೆ. ನದಿಯ ತಿರುವಿಗೆ ಇನ್ನೂ ಕೆಲವು ಅಂಶಗಳು ಪೂರಕವಾಗಿವೆ. ತಿರುಮಕೂಡಲಿನಲ್ಲಿ ಕಪಿಲನದಿ ಕೂಡಿಕೊಂಡಿದುದರಿಂದ ನೀರಿನ ಪ್ರಮಾಣ ಹೆಚ್ಚಾಗಿದೆ. ಜೊತೆಗೆ ಇಲ್ಲಿನ ನೆಲದ ಇಳುಕಲು ಅನುಕ್ರಮವಾಗಿದೆ. ಅಲ್ಲದೆ ನದಿ ನೀರು ಸಾಗಿಸುವ ಹೊರೆಯು ತುಂಬ ಲಘುವಾದದ್ದು. ದೊಡ್ಡ ದೊಡ್ಡ ಬಂಡೆ ಗುಂಡುಗಳು ನದಿ ಪಾತ್ರದಲ್ಲಿ ಕಂಡುಬರುವುದಿಲ್ಲ. ಬದಲಾಗಿ ಸಣ್ಣಸಣ್ಣ ಮರಳನ್ನು ನಾಡಶಿಲೆಯಿಂದ ಕೊಚ್ಚಿ ಸಾವಧಾನವಾಗಿ ಹಾಗೂ ನಿರಂತರವಾಗಿ ಸಾಗಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ನದಿ ಸುತ್ತು ಬಳಸಿ ಹರಿಯುವುದು ಸರ್ವಸಾಮಾನ್ಯ. ಬೆಟ್ಟದ ಹಳ್ಳಿಯ ಒಳಭಾಗದ ನದಿ ದಡದಲ್ಲಿ ನದಿ ತಳ ಆಳವಾಗಿದ್ದು ಮುಂದೆ ಕೆಳಪಾತ್ರದಲ್ಲಿ ಕಟ್ಟೇಪುರ. ಹೊಸ ಹೆಮ್ಮಿಗೆ ಭಾಗದಲ್ಲಿ ಹೊರಭಾಗದ ಮರಳು ಗುಡ್ಡೆ ಉಂಟಾಗಿದೆ. ಹೆಮ್ಮಿಗೆ ಮತ್ತು ಮಾಲಂಗಿ ನಡುವೆ ನದಿ ಪಾತ್ರದಲ್ಲಿ ಹೆಚ್ಚು ಕೊರೆತವಾಗಿದೆ. ಇಲ್ಲಿ ನೀರಿನ ವೇಗವೂ ಹೆಚ್ಚು, ಎಂದೇ ಸವೆತದ ಪ್ರಮಾಣವೂ ಹೆಚ್ಚು. ತಲಕಾಡಿನ ಕಡೆಗಿರುವ ಹೊರಭಾಗದ ದಡದ ಭಾಗದಲ್ಲಿ ನೀರಿನ ಹರಿವಿನ ವೇಗ ಕಡಿಮೆ. ಹೀಗಾಗಿ ಆ ಭಾಗದಲ್ಲಿ ಮರಳು ದಂಡೆಗಳು ಸಂಚಯನವಾಗಲು ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗಿದೆ; ಮೊದಲು ನದಿಯ ದಡದಲ್ಲೇ ನಿರ್ಮಿಸಲಾಗಿದ್ದ ದೇವಾಲಯಗಳು ನದಿ ಪಾತ್ರದ ಸ್ಥಳಾಂತರದಿಂದಾಗಿ ಈಗ ದಡದಿಂದ ದೂರ ಉಳಿದಿವೆ. ಗಂಗರ ಕಾಲದಲ್ಲಿ ತಲಕಾಡು ಊರಿಗೆ ಸಮೀಪದಲ್ಲೇ ನದಿ ಹರಿಯುತ್ತಿತ್ತೆಂಬುದಕ್ಕೆ ಸಾಕ್ಷಿಗಳಾಗಿ ಹಳೆಯ ತಲಕಾಡಿನ ಉತ್ಖನನ ಮಾಡಿದಾಗ ಅಲ್ಲಿ ತಳಗಲ್ಲು ಸಿಕ್ಕಿದೆ, ನದಿ ಸಂಚಯಿಸಿದ ಹೂಳು–ಮರಳು ಕಂಡುಬಂದಿದೆ. ಪದೇ ಪದೇ ನದಿ ಪಾತ್ರದಲ್ಲಾಗುತ್ತಿದ್ದ ಪ್ರವಾಹ ನುರುಜು ಮತ್ತು ಮರಳನ್ನು ಸಾಕಷ್ಟು ಪ್ರಮಾಣದಲ್ಲಿ ಒಯ್ದು, ಸಂಚಯಿಸಿ ತನ್ನ ಪಾತ್ರಕ್ಕೆ ಅಡ್ಡಿಪಡಿಸಿಕೊಂಡಿದ್ದರಿಂದ ಪಶ್ಚಿಮದತ್ತ ನದಿಪಾತ್ರ ಸರಿಯುವಂತಾಯಿತು. ವಾಸ್ತವವಾಗಿ ತಲಕಾಡು ಪ್ರದೇಶವನ್ನು ಪ್ರವಾಹದ ಬಯಲು ಎನ್ನಬಹುದು.

ಮರಳು ದಿಣ್ಣೆ: ಮರಳುದಿಬ್ಬಗಳು ಬಹುತೇಕ ಹಳೆಯ ತಲಕಾಡಿನ ಪಶ್ಚಿಮದಲ್ಲಿ ಹೆಚ್ಚು ಕಂಡುಬರುತ್ತವೆ. ವಕ್ರರೇಖಾತ್ಮಕವಾಗಿ ವಾಯವ್ಯ, ಆಗ್ನೇಯ ದಿಕ್ಕಿಗೆ ಓರಣಗೊಂಡಿವೆ. ಕಾವೇರಿ ನದಿಯ ಈ ಭಾಗದ ಎಡ ದಂಡೆಯಲ್ಲಿ ಮೈದಳೆದಿರುವ ಉದ್ದುದ್ದನೆಯ ಮರಳ ದಂಡೆಗಳೇ ತಲಕಾಡಿನ ಮರಳ ದಿಬ್ಬಗಳ ಮೂಲ ಆಕರ. ಚಕ್ರಕಾರವಾಗಿ ಸಂಚಯಿಸಿರುವ ಮರಳು ದಿಬ್ಬಗಳು ಬಹುತೇಕ ದಪ್ಪಕಣಗಳಿಂದಾಗಿವೆ. ಸಣ್ಣಮರಳಿನ ಕಣಗಳು ಗಾಳಿಯಿಂದಾಗಿ ತೂರಿಹೋಗಿವೆ. ಮರಳು ದಂಡೆಗಳ ಮೇಲೆ ಬೀಸಿದ ಬಲವಾದ ಗಾಳಿ ಮತ್ತೆಮತ್ತೆ ಮರಳನ್ನು ಕೇರುವುದು, ತೂರುವುದು. ಅತಿ ಸಣ್ಣ ಕಣಗಳನ್ನು ತಲಕಾಡಿನೆಡೆ ಸಾಗಿಸಿ ಸಂಚಯಿಸುವುದು ನಿರಂತರವಾಗಿ ನಡೆಯುತ್ತಲೇ ಇದೆ.

ತಲಕಾಡಿನ ಬಳಿಯ ಮರಳ ದಿಬ್ಬಗಳನ್ನು ಸೂಕ್ಷ್ಮವಾಗಿ ಗಮನಿಸದರೆ ಅದರಲ್ಲಿ ಬಹುತೇಕ ಸಣ್ಣ ಮರಳಿನ ಕಣಗಳಿರುವುದು ಕಂಡುಬರುತ್ತದೆ. ಗಾಳಿಬೀಸುವ ಕಡೆಗಿನ ದಿಬ್ಬಗಳಲ್ಲಿ – ವೈದ್ಯನಾಥೇಶ್ವರ ದೇವಾಲಯದ ಮುಂಭಾಗದಿಂದ ಸ್ನಾನದ ಘಟ್ಟಕ್ಕೋಗುವ ಭಾಗದಲ್ಲಿ ವಿಶೇಷವಾಗಿ ಕಾವೇರಿ ನದಿಯ ಎಡದಡದಲ್ಲಿ – ಮರಳಿನಲ್ಲಿ ಅಡ್ಡ ಸ್ತರದ ಗುರುತುಗಳು ಸ್ಪಷ್ಟವಾಗಿ ಮೂಡಿವೆ. ಈ ಒಂದೊಂದು ಸ್ತರದ ನಡುವಿನ ಕೋನ $30^0$. ಬೇರೆ ಬೇರೆ ದಿಕ್ಕಿನಿಂದ ಗಾಳಿ ಬೀಸಿದಾಗ ಈ ಬಗೆಯ ಸ್ತರ ವಿನ್ಯಾಸ ರೂಪುಗೊಳ್ಳುತ್ತದೆ. ಹಿಂದೊಮ್ಮೆ ಇಲ್ಲಿ ಮೂವತ್ತು ದೇವಾಲಯಗಳಿದ್ದುವೆಂದು ತಿಳಿದುಬಂದಿದೆ. ಒತ್ತಿ ಬಂದ ಮರಳು ಅನೇಕ ದೇವಾಲಯಗಳನ್ನು ಮುಚ್ಚಿತ್ತು. ಈ ಪೈಕಿ ವೈಕುಂಠನಾರಾಯಣ ಮತ್ತು ರಾಜರಾಜೇಶ್ವರ ದೇವಾಲಯಗಳು ಸಂಪೂರ್ಣವಾಗಿ ಹೂತು ಹೋಗಿವೆಯೆಂದು ನರಸಿಂಹಾಚಾರ್ 1950ರಲ್ಲೇ ವರದಿಮಾಡಿದ್ದಾರೆ. ಈಗ್ಗೆ ಸುಮಾರು ನಾಲ್ಕು ದಶಕಗಳ ಹಿಂದೆ ಮರಳು ಒತ್ತಿ ಬಂದು ದೇವಾಲಯಗಳು ಮುಚ್ಚದಂತೆ ರಕ್ಷಣೆ ಮಾಡಲು ಗೋಡೆಯನ್ನು ನಿರ್ಮಿಸಲಾಯಿತು.

ತಲಕಾಡು ಪಂಚಲಿಂಗ ದೇವಸ್ಥಾನಗಳು.

20ನೆಯ ಶತಮಾನದಲ್ಲಿ ಅನೇಕ ಬಾರಿ ಮರಳನ್ನು ತೆಗೆದು ಈ ದೇವಾಲಯಗಳ ಪುನರುಜ್ಜೀವನ ಮಾಡಲಾಗಿದೆ. 1986ರಲ್ಲಿ ಕೊನೆಯ ಬಾರಿಗೆ ಹೀಗೆ ಮರಳಿನಿಂದ ಅನಾವೃತಗೊಳಿಸಲಾಗಿತ್ತು. ಮರಳು ದಿಬ್ಬಗಳ ಜಾರುವ ಮುಖ ಪೂರ್ವಕ್ಕಿರುವುದರಿಂದ ಈ ಬಗೆಯ ಮರಳಿನ ಅತಿಕ್ರಮ ಆಗಾಗ ಆಗುತ್ತಿರುತ್ತದೆ. ಈ ದೇವಾಲಯಗಳು ಇದಕ್ಕೆ ಮೂಕ ಸಾಕ್ಷಿಗಳಾಗಿವೆ. ಮರಳಿನ ದಿಬ್ಬಗಳಾಗಲು ಮೂರು ಬಗೆಯ ಸ್ಥಿತಿಗಳು ನಿರ್ಮಾಣವಾಗಬೇಕು. 1. ಬೀಸುವ ಗಾಳಿ ಮರಳಿನ ಕಣಗಳನ್ನು ಒಯ್ಯುವ ಸಾಮರ್ಥ್ಯ ಪಡೆದಿರಬೇಕು 2. ಮೂಲದಲ್ಲಿ ಮರಳಿನ ಸಾಕಷ್ಟು ಕಣಗಳಿರಬೇಕು. 3. ಸಾಗುತ್ತಿರುವ ಮರಳಿಗೆ ಅಡೆ ತಡೆಯಿಂದಾಗಿ ಅದು ಸಂಚಯನವಾಗುವಂತಿರಬೇಕು. ತಲಕಾಡಿನಲ್ಲಿ ಕಾವೇರಿನದಿಗೆ ಈ ಬಗೆಯ ವಾತಾವರಣ ನಿರ್ಮಾಣವಾಗಿದೆ.

ತಲಕಾಡಿನ ಭೂರಚನೆ ಮತ್ತು ಇತಿಹಾಸ ಎರಡನ್ನೂ ಅಧ್ಯಯನ ಮಾಡಿದಾಗ ಇಲ್ಲಿ ಮರಳ ದಿಬ್ಬಗಳ ಉಗಮದ ಬಗ್ಗೆ ವೈಜ್ಞಾನಿಕವಾದ ವಿವರಣೆ ಕೊಡಬಹುದು.

ಪ್ರ.ಶ. 500ರಲ್ಲಿ ಇಲ್ಲಿ ಮರಳಿನ ದಿಬ್ಬಗಳಿರಲಿಲ್ಲವೆಂಬ ಅಂಶ ಅದರ ಚರಿತ್ರೆಯಿಂದ ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಆಡಳಿತದ ಸಮಯದಲ್ಲೂ ಇಲ್ಲಿ ದೇವಾಲಯಗಳ ನಿರ್ಮಾಣ ನಡೆದೇ ಇತ್ತು ಎಂಬುದನ್ನು ಪರಿಗಣಿಸಿದಾಗ 14ನೆಯ ಶತಮಾನದ ಉತ್ತರಾರ್ಧದಲ್ಲೂ ಇಲ್ಲಿ ಮರಳಿನ ದಿಬ್ಬಗಳು ಮೈದಳೆದಿರಲಿಲ್ಲ. ವಿಜಯನಗರ ಪ್ರತಿನಿಧಿ ತಿರುಮಲರಾಯ 1610ರಲ್ಲಿ ಶ್ರೀರಂಗಪಟ್ಟಣವನ್ನು ತೊರೆದು ತಲಕಾಡಿಗೆ ಬಂದ. ಆತನ ಮಡದಿ ಅಲುಮೇಲಮ್ಮ ಮೈಸೂರರಸರಿಗೆ ಶಾಪರೂಪದಲ್ಲಿ ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ ಮೈಸೂರರಸರಿಗೆ ಮಕ್ಕಳಾಗದಿರಲಿ ಎಂಬ ಶಾಪಕೊಟ್ಟು ಮಾಲಂಗಿ ಮಡುವಿಗೆ ಆಭರಣಗಳ ಸಮೇತ ಬಿದ್ದಳೆಂಬ ನಂಬಿಕೆ ಪ್ರಚಲಿತವಿದೆ. ಈ ನಂಬಿಕೆಯ ಸತ್ಯಾಸತ್ಯತೆ ಏನೇ ಇರಲಿ ತಲಕಾಡಿನಲ್ಲಿ ಮರಳು ದಿಬ್ಬಗಳು ಆಗ ಮೈದಳೆದಿದ್ದವು ಎನ್ನುವುದಕ್ಕೆ ಇದೊಂದು ಪ್ರಾಥಮಿಕ ವರದಿಯಾಗುತ್ತದೆ. 1610ರಲ್ಲಿ ಮರಳುಗುಡ್ಡೆಗಳಾಗುವ ಪ್ರಕ್ರಿಯೆ ಪ್ರಾರಂಭವಾಯಿತು. ಅಂದರೆ ತಲಕಾಡಿನ ಮರಳು ಈಗ್ಗೆ 400 ವರ್ಷಗಳ ಹಿಂದೆ ಉಂಟಾದದ್ದು ಎನ್ನಬಹುದು.

ಹಳೆಯ ತಲಕಾಡಿನ ವ್ಯಾಪ್ತಿ ಬಹುದೊಡ್ಡದು. 400 ವರ್ಷ ಹಿಂದೆಯೇ ಮರಳು ದೊಡ್ಡ ಪ್ರಮಾಣದಲ್ಲಿ ಹಬ್ಬಿ ಕೆಲವೆಡೆ 10 ಮೀ ಗುಡ್ಡಗಳು ಬೆಳೆದಿದ್ದವು. ಮರಳಿನ ಗುಡ್ಡಗಳಿಗೆ ಮೂಲ ಇಲ್ಲಿನ ದಟ್ಟ ಅರಣ್ಯವನ್ನು ನಾಶಪಡಿಸಿದ್ದು. ವಿಜಯನಗರ ಸಾಮ್ರಾಜ್ಯದ ಮಂತ್ರಿ ಮಾಧವಮಂತ್ರಿ 1346ರಲ್ಲಿ ತಲಕಾಡಿನ ಬಳಿ ಕಾವೇರಿಗೆ ಅಡ್ಡವಾಗಿ ಕಟ್ಟೆ ಕಲ್ಪಿಸಿದುದೇ ಮರಳು ಮತ್ತಷ್ಟು ಹೆಚ್ಚು ಉತ್ಪಾದನೆಯಾಗುವುದಕ್ಕಾಗಿ ಕಾರಣವಾಯಿತೆಂದು ಊಹಿಸಲಾಗಿದೆ.

ಮರಳು–ಮಾರುತ: ಕಾವೇರಿ ನದಿಪಾತ್ರದಲ್ಲಿ ಹೂಳುತುಂಬುವುದು ಸಾಮಾನ್ಯವಾಗಿ ಪ್ರವಾಹ ಉನ್ನತ ಮಟ್ಟದಲ್ಲಿದ್ದಾಗ ನದಿ ಹೊತ್ತು ತಂದ ಈ ಸಂಚಯನಗಳು ನೀರಿನ ಹರಿವು ಕಡಿಮೆ ಇದ್ದಾಗ ವಾತಾವರಣಕ್ಕೆ ತೆರೆದುಕೊಳ್ಳುತ್ತವೆ. ಗಾಳಿ ಬೀಸಲು ತೊಡಗಿದಾಗ ಕಣಗಳು ಸಾಗಲು ಪ್ರಾರಂಭಿಸುತ್ತವೆ. ಈ ದೃಷ್ಟಿಯಿಂದ ಹೆಮ್ಮಿಗೆ ಬಳಿ ಮಾಧವಮಂತ್ರಿ ನಿರ್ಮಿಸಿದ ಕಟ್ಟೆ ನದಿಯ ಕೆಳ ಹರಿವನ್ನು ಸಾಕಷ್ಟು ಹಾನಿ ಮಾಡಿದೆ. ಹೆಚ್ಚು ಪ್ರದೇಶ ತೆರೆದುಕೊಂಡು ಶೇಖರಣೆಯಾದ ಮರಳು ಗಾಳಿಯ ಹೊಡೆತದಲ್ಲಿ ಸಾಗಣೆಯಾಗಿ ಮರಳಿನ ದಿಬ್ಬಗಳು ಹುಟ್ಟಲು ಅನುವುಮಾಡಿಕೊಟ್ಟಿದೆ.

ತಲಕಾಡಿನಲ್ಲಿ ಗಾಳಿಬೀಸುವ ದಿಕ್ಕನ್ನು ಅಧ್ಯಯನ ಮಾಡಿದರೆ ಮತ್ತೊಂದು ಅಂಶವೂ ಸ್ಪಷ್ಟವಾಗುತ್ತದೆ. ಇಲ್ಲಿ ಮಾನ್ಸೂನ್ ಮಾರುತ ಈಶಾನ್ಯ – ನೈರುತ್ಯ ದಿಕ್ಕಿನಲ್ಲಿ ಬೀಸುತ್ತದೆ. ಇದರ ಲಂಬಕೋನದಲ್ಲಿ ಅಂದರೆ ವಾಯವ್ಯ–ಆಗ್ನೇಯ ದಿಕ್ಕಿನಲ್ಲೂ ಮಾರುತಬೀಸುವುದುಂಟು. ಆಗ್ನೇಯ ದಿಕ್ಕಿನಲ್ಲಿ ಕೊಳ್ಳೇಗಾಲದ ಬೆಟ್ಟ ಸಾಲಿನಲ್ಲಿ ತೆರಪಿರುವುದರಿಂದ ಈ ಭಾಗದಲ್ಲಿ ಮಾರುತ ಜೋರಾಗಿ ಬೀಸುತ್ತದೆ. ಇನ್ನೊಂದು ಭೌಗೋಳಿಕ ಅಂಶ ಇಲ್ಲಿ ಗಮನಾರ್ಹವಾದುದ್ದು. ತಲಕಾಡಿಗೆ ಈಶಾನ್ಯಭಾಗದಲ್ಲಿ ಯಾವುದೇ ದೊಡ್ಡದಾದ ಬೆಟ್ಟಗಳಾಗಲಿ, ಮೇಲ್ಮೈ ಏರಿಳಿತವಾಗಲಿ ಕಂಡುಬರುವುದಿಲ್ಲ. ಅಂದರೆ ಈಶಾನ್ಯ ಅಥವಾ ಆಗ್ನೇಯ ದಿಕ್ಕಿನ ಮಾರುತಕ್ಕೆ ಅಡೆತಡೆಗಳಿಲ್ಲ. ಇಲ್ಲಿರುವ ದೇವಾಲಯಗಳು ಅಲ್ಲಲ್ಲೇ ಹಂಚಿಹೋಗಿದುದರಿಂದ ಗಾಳಿಗೆ ಅಲ್ಪಸ್ವಲ್ಪ ತಡೆಯಾಗಬಹುದೇ ವಿನಾ ಸ್ವತಃ ಅವೇ ದೊಡ್ಡ ತಡೆಗೋಡೆಗಳಾಗಿ ವರ್ತಿಸುವುದಿಲ್ಲ. ತಲಕಾಡಿನ ಭಾರಿ ಮರಳುಗುಡ್ಡೆಗಳನ್ನು ಸೃಷ್ಟಿಸಿರುವುದು. ನೈರುತ್ಯ – ಈಶಾನ್ಯ ದಿಕ್ಕಿನಲ್ಲಿ ಬೀಸುವ ಮಾನ್ಸೂನ್ ಮಾರುತ. ಇದು ಕಾವೇರಿ ನದಿಯ ಎಡದಂಡೆಯಲ್ಲಿರುವ ಮರಳುದಂಡೆಯನ್ನೂ ಕೇರಿ–ತೂರಿ ಸಾಗಿದೆ. ಅಡೆತಡೆ ಇರುವೆಡೆ ಸಂಚಯಿಸುತ್ತ ಬಂದಿದೆ. ಇದರ ಜೊತೆಗೆ ವಾಯವ್ಯ ಈಶಾನ್ಯದ ಗಾಳಿ ಅಡ್ಡಬೀಸಿ ಮರಳಿನ ಸಂಚಯನಕ್ಕೆ ನೆರವಾಗಿದೆ. ಮರಳುರಾಶಿ ಮತ್ತಷ್ಟು ಮುನ್ನುಗ್ಗುವುದನ್ನು ತಡೆಯಲು ಅರಣ್ಯ ಇಲಾಖೆ ಗೇರು ಹಾಗೂ ನೀಲಗಿರಿ ಸಸ್ಯಗಳನ್ನು ಬೆಳೆಸಿದೆ.

ತಲಕಾಡಿನ ನೈಸರ್ಗಿಕ ಮರಳುರಾಶಿಯನ್ನು ಕಟ್ಟಡ ನಿರ್ಮಾಣಗಳಿಗೆ ಬಳಸುವ ಉದ್ದೇಶದಿಂದ ಹಿಂದೆ ಅದನ್ನು ಖಾಸಗಿ ಗುತ್ತಿಗೆದಾರರು ಸಾಗಿಸಲು ಪ್ರಯತ್ನಿಸಿದಾಗ ಸ್ಥಳೀಯರು – ಪರಿಸರ ಪ್ರೇಮಿಗಳು ಅದನ್ನು ವಿರೋಧಿಸಿದರು. ನಿಸರ್ಗದ ಈ ಅನುಪಮ ಸೃಷ್ಟಿ ಕಣ್ಮರೆಯಾಗುವುದು ತಪ್ಪಿತು. ತಲಕಾಡಿನ ಮರಳುರಾಶಿ ಒಂದು ಅಪೂರ್ವ ರಚನೆ. ಇದನ್ನು ರಾಷ್ಟ್ರೀಯ ಸ್ಮಾರಕವೆಂದು ಪರಿಗಣಿಸಿ ಸಂರಕ್ಷಣೆ ಮಾಡುವ ಅಗತ್ಯವಿದೆ. ತಲಕಾಡು ಒಂದು ಪ್ರಾಗೈತಿಹಾಸಿಕ ನೆಲೆಯಾಗಿದ್ದು ಇಲ್ಲಿ ಅನೇಕ ಉತ್ಖನನಗಳು ನಡೆದಿವೆ. (ಪಿ.ಎಂ.ಯು.ಎಸ್.)

**ತಲಕಾವೇರಿ:** ದಕ್ಷಿಣಭಾರತದಲ್ಲಿ ಹರಿಯುವ ಕಾವೇರಿ ನದಿಯ ಉಗಮ ಸ್ಥಾನ. ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲದ ಪಶ್ಚಿಮಕ್ಕೆ, ಪಶ್ಚಿಮ ಘಟ್ಟಗಳಲ್ಲಿರುವ ಬ್ರಹ್ಮಗಿರಿಯ ಇಳಿಜಾರಿನಲ್ಲಿ (ಉ.ಅ. $12^0 25'$, ಪೂ. ರೇ. $75^0 34'$) ಇದೆ. ಮಡಿಕೇರಿಯಿಂದ 39 ಕಿಮೀ ದೂರದಲ್ಲಿರುವ ಭಾಗಮಂಡಲಕ್ಕೂ ತಲಕಾವೇರಿಗೂ 8 ಕಿಮೀ ಉದ್ದದ ವಾಹನಯೋಗ್ಯ ರಸ್ತೆಯಿದೆ, ಕಾವೇರಿಯ ಉಗಮಸ್ಥಾನ 1 x 1 ಮೀ ಒಂದು ಪುಟ್ಟ ಕೊಳ. ಇದನ್ನು ಕುಂಡಿಗೆ ಎನ್ನುತ್ತಾರೆ. ಇದರ ಪಕ್ಕದಲ್ಲಿ ಉತ್ತರಕ್ಕೆ $1\frac{1}{2}$ ಅಡಿ ಎತ್ತರದ ಒಂದು ಮಂಟಪವಿದೆ. ಕುಂಡಿಗೆಯ ಮುಂದೆ ಒಂದು ಸಣ್ಣ ಕೊಳವಿದೆ. ಕುಂಡಿಗೆಯಿಂದ ಹೊರಟ ನೀರು ಸಣ್ಣ ಕೊಳ ಸೇರಿ ಅಂತರ್ಗಾಮಿಯಾಗಿ ಹರಿದು ಇನ್ನೊಂದು ಕೊಳವನ್ನು ತುಂಬುತ್ತದೆ. ಪುನಃ ನೀರು ಅಂತರ್ಗಾಮಿಯಾಗಿ ಹರಿದು ಕಣಿವೆಯಲ್ಲಿ ಕಾಣಿಸಿಕೊಂಡು ಮುಂದೆ ಹರಿಯುತ್ತದೆ. ಕುಂಡಿಗೆಯಲ್ಲಿ ಕಾವೇರಿ ತೀರ್ಥ ಉದ್ಭವವಾಗುವುದೆಂದು ನಂಬಿಕೆಯಿದೆ. ಪ್ರತಿವರ್ಷ ತುಲಾ ಸಂಕ್ರಮಣದಂದು ಬೆಳಗಿನ ನಿಶ್ಚಿತ ಮುಹೂರ್ತದಲ್ಲಿ ಆ ಕುಂಡಿಗೆಯಿಂದ ನೀರು ಉಕ್ಕಿ ಹರಿಯುತ್ತದೆ. ಆ ಸಮಯಕ್ಕೆ ದೇಶದ ಅನೇಕ ಕಡೆಗಳಿಂದ ಹಿಂದೂ ಯಾತ್ರಾರ್ಥಿಗಳು ಇಲ್ಲಿಗೆ ಸಂದರ್ಶಿಸುವರು. ಇಲ್ಲಿಂದ ಸು. 91 ಮೀ ಎತ್ತರದ ಬ್ರಹ್ಮಗಿರಿಯ ನೆತ್ತಿಯ ಮೇಲೆ ಸಪ್ತಋಷಿಗಳು ಹೋಮ ಮಾಡಿದರೆಂದು ಹೇಳಲಾದ ಏಳು ಸಣ್ಣ ಗುಂಡಿಗಳಿವೆ. ಆಕಾಶ ಶುಭ್ರವಾಗಿರುವಾಗ ಬ್ರಹ್ಮಗಿರಿಯ ತುದಿಯಿಂದ ಬೆಟ್ಟದಪುರದ ಬೆಟ್ಟವೂ ನೀಲಗಿರಿಯೂ ಉತ್ತರದ ಕುದುರೆಮುಖ ಶಿಖರಗಳೂ ಪಶ್ಚಿಮದಲ್ಲಿ ಘಟ್ಟದ ಕೆಳಗಿನ ಕರಾವಳಿಯಲ್ಲಿ ಹಾವುಗಳಂತೆ ಹರಿಯುವ ನದಿಗಳೂ ಅವುಗಳಿಂದಾಚೆಗೆ ಅರಬ್ಬಿ ಸಮುದ್ರವೂ ಕಾಣುತ್ತವೆ.

ಪರ್ವತ ಶ್ರೇಣಿಗಳು, ಕಣಿವೆ–ಕಂದರಗಳು, ಅವುಗಳನ್ನಾವರಿಸಿರುವ ಹಸುರುಕಾಡು, ಬತ್ತದ ಬಯಲು, ಕಾಫಿ–ಏಲಕ್ಕಿ ತೋಟಗಳ ನಡುವೆ ಇರುವ ತಲಕಾವೇರಿ ಒಂದು ರಮ್ಯವಾದ ತಾಣ. ಇದರ ಸುತ್ತಮುತ್ತ ತಲಕಾವೇರಿ ವನ್ಯಧಾಮ ವಿಸ್ತರಿಸಿದೆ. (ಆರ್.ಎಂ.ಆರ್.)

**ತಲೈಚ್ಚೇರಿ:** ಕೇರಳ ರಾಜ್ಯದ ಕಣ್ಣಾನೂರು ಜಿಲ್ಲೆಯ ಕರಾವಳಿಯಲ್ಲಿರುವ ಒಂದು ಸಾಧಾರಣ ರೇವುಪಟ್ಟಣ. ಜನಸಂಖ್ಯೆ 1,25,000. ಇದು ಕೋಳಿಕ್ಕೊಡ್ ಪಟ್ಟಣದಿಂದ ಈಶಾನ್ಯಕ್ಕೆ 72 ಕಿಮೀ ದೂರದಲ್ಲಿದೆ. ಇಲ್ಲಿ ಅನೇಕ ಚರ್ಚುಗಳೂ ಕಾಲೇಜುಗಳೂ ಕಟ್ಟಡಗಳೂ ಇವೆ. ಈ ರೇವುಪಟ್ಟಣದಿಂದ ಏಲಕ್ಕಿ, ಮೆಣಸು, ತೆಂಗು, ಕಾಫಿ, ಶ್ರೀಗಂಧದಮರ ಮೊದಲಾದವು ವಿದೇಶಗಳಿಗೆ ರಫ್ತಾಗುತ್ತವೆ. ಹಿಂದೆ ಬ್ರಿಟಿಷರು ಭಾರತಕ್ಕೆ ಬಂದಾಗ ಪಶ್ಚಿಮ ತೀರದ ಈ ಸ್ಥಳದಲ್ಲಿ ನೆಲೆಸಿದ್ದರು. ಇಲ್ಲಿ 1683ರಲ್ಲಿ ಈಸ್ಟ್ ಇಂಡಿಯ ಕಂಪೆನಿಯವರು ಒಂದು ವ್ಯಾಪಾರ ಕೋಠಿಯನ್ನು ಸ್ಥಾಪಿಸಿದ್ದರು. (ಎಸ್.ಎನ್.ಆರ್)

**ತಾಜಿಕಿಸ್ತಾನ:** ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟಕ್ಕೆ ಸೇರಿದ ಒಂದು ಗಣರಾಜ್ಯವಾಗಿತ್ತು. 1929 ರಲ್ಲಿ ಸ್ಥಾಪಿತವಾದ ಈ ಗಣರಾಜ್ಯ ಏಷ್ಯದ ಪರ್ವತ ಪ್ರದೇಶದಲ್ಲಿದೆ. 1991ರಲ್ಲಿ ಸೋವಿಯತ್ ದೇಶದಿಂದ ಬೇರ್ಪಟ್ಟು ಈಗ ಒಂದು ಸ್ವತಂತ್ರ ರಾಷ್ಟ್ರವಾಗಿದೆ. ಸೋವಿಯತ್ ದೇಶದ ದಕ್ಷಿಣದಲ್ಲಿ ಉ.ಅ. $37^0$–$41^0$ ಮತ್ತು ಪೂ. ರೇ. $65^0 20'$–$76^0 00'$ ನಡುವೆ ಇದೆ. ಪಶ್ಚಿಮ ಹಾಗೂ ಉತ್ತರದಲ್ಲಿ ಉಜ್ಬೆಕ್ ಮತ್ತು ಕಿರ್ಗಿಜ್‌ಸ್ತಾನ, ದಕ್ಷಿಣದಲ್ಲಿ ಆಫ್ಘಾನಿಸ್ತಾನ, ಪೂರ್ವದಲ್ಲಿ ಚೀನ – ಇವು ಇದರ ಮೇರೆಗಳು. ವಿಸ್ತೀರ್ಣ 1,43,100 ಚ.ಕಿಮೀ ಜನಸಂಖ್ಯೆ 63,27,000 (2002). ರಾಜಧಾನಿ ದೂಷನ್ಬೆ.




ಭೌತಿಕ ಭೂವಿವರಣೆ : ತಾಜಿಕ್ ಗಣರಾಜ್ಯ ಪರ್ವತಗಳ ನಾಡು. ಇದರ ಅರ್ಧಕ್ಕಿಂತ ಹೆಚ್ಚು ಭಾಗ 2900 ಮೀ ಎತ್ತರದಲ್ಲಿದೆ. ಪೂರ್ವ ಭಾಗವೆಲ್ಲ ಎತ್ತರದ ಕಣಿವೆಗಳಿಂದ (ಪಾಮಿರ್‌ಗಳು) ಕೂಡಿದೆ. ರಾಜ್ಯದಲ್ಲಿ ಹಲವಾರು ಪರ್ವತಶ್ರೇಣಿಗಳುಂಟು. ಇವು ಸಾಮಾನ್ಯವಾಗಿ ಪೂರ್ವ – ಪಶ್ಚಿಮವಾಗಿ ಹಬ್ಬಿವೆ. ಪಶ್ಚಿಮದಲ್ಲಿ ಜರಾಫ್ ಷಾನ್‌ಸ್ಕಿ, ಗಿಸಾರ್‌ಸ್ಕಿ ಮತ್ತು ಪಾಮಿರ್‌ಗಳಲ್ಲಿ ಪೆಟ್ರಾಪೆರ್ವೋಗೊ. ಟ್ರಾನ್ಸ್ ಅಲೈ ಹಾಗೂ ಉತ್ತರ ಹಾಗೂ ದಕ್ಷಿಣ ಅಲಿಚುರ್‌ಸ್ಕಿ ಪರ್ವತಗಳಿವೆ. ಉತ್ತರದಿಂದ ದಕ್ಷಿಣಕ್ಕೆ ಹಬ್ಬಿರುವ ಸಾರಿಕೋಲ್‌ಸ್ಕಿ ಪರ್ವತ ಶ್ರೇಣಿ ಈ ರಾಜ್ಯದ ಪೂರ್ವ ಗಡಿಯಾಗಿದೆ. ಪಾಮಿರ್‌ಗಳ ಉತ್ತರದಲ್ಲಿರುವ ಕಮ್ಯೂನಿಸಂ ಶಿಖರದ ಎತ್ತರ 7,450 ಮೀ. ಹಿಂದೆ ಇದಕ್ಕೆ ಸ್ಟಾಲಿನಾ ಶಿಖರವೆಂಬ ಹೆಸರಿತ್ತು. ಲೆನಿನ್ ಶಿಖರದ ಎತ್ತರ 2150 ಮೀ. ಇದೂ ಪಾಮಿರ್‌ಗಳ ಉತ್ತರದಲ್ಲಿದೆ. ಕಾರ್ಲ್ ಮಾರ್ಕ್ಸ್ ಶಿಖರ (6685 ಮೀ) ದಕ್ಷಿಣದಲ್ಲಿದೆ. ಇವೆಲ್ಲವೂ ಹಿಂದಿನ ಸೋವಿಯತ್ ದೇಶದಲ್ಲೇ ಅತ್ಯುನ್ನತವಾದ ಶಿಖರಗಳು.

ಕಮ್ಯೂನಿಸಂ ಶಿಖರದ ದಕ್ಷಿಣದಲ್ಲಿ ಪ್ರಪಂಚದ ಅತ್ಯಂತ ದೊಡ್ಡ ಖಂಡೀಯ ಹಿಮ ನದಿ ಲೆಡ್ನಿಕ್ ಫೆಡ್ ಚೆಂಕೋ (80 ಕಿಮೀ) ಇದೆ. ಫರ್ಗಾನ ಕಣಿವೆಯಲ್ಲಿ ಹರಿಯುವ ಸಿರ್– ದಾರ್ಯ ನದಿಯನ್ನೂ ಬಖಾರ ಬಳಿ ಉಜ್ಬೆಕ್ ಮರುಭೂಮಿಯಲ್ಲಿ ಬತ್ತಿಹೋಗುವ ಜೆರಾಫ್ ಷಾನ್ ನದಿಯನ್ನೂ ಸಿಂಕಿಯಾಂಗ್‌ಗೆ ಹರಿಯುವ ಮಾರ್ಕಾನ್ಸೂ ನದಿಯನ್ನೂ ಬಿಟ್ಟರೆ ಎಲ್ಲ ಹಿಮಪೋಷಿತ ನದಿಗಳೂ ಅಮೂದಾರ್ಯ (ಆಕ್ಸಸ್) ನದಿಯನ್ನು ಅದರ

ಬಲದಂಡೆಯಲ್ಲಿ ಕೂಡುತ್ತವೆ. ಅಮೂದಾರ್ಯ ನದಿ ಆಫ್ಘನ್ ಭಾಗದ ಹಿಂದೂ ಕುಷ್ ಪರ್ವತದಲ್ಲಿ ಹುಟ್ಟಿ, ಆಫ್ಘಾನಿಸ್ತಾನ ಹಾಗೂ ತಾಜಿಕ್ ಗಣರಾಜ್ಯಗಳ ನಡುವೆ ಬಹುಭಾಗದ ಗಡಿಯಾಗಿ ಪರಿಣಮಿಸಿ, ಕಿರ್ಗಿಜ್ ಗಣರಾಜ್ಯದಲ್ಲಿ ಹುಟ್ಟುವ ರಾಕ್ಷ ನದಿಯನ್ನು ಕೂಡಿಕೊಂಡು ಮುಂದುವರಿಯುತ್ತದೆ.

ಪಾಮಿರ್‌ಗಳಲ್ಲಿ ಅನೇಕ ಸರೋವರಗಳುಂಟು. ಇವು ಹಿಮನದಿಗಳಿಂದಲೋ ಭೂಕಂಪಗಳಿಂದ ಭೂಮಿ ಕುಸಿದೋ ಸೃಷ್ಟಿಯಾದವು. ಹಿಮನದಿಯಿಂದ ರೂಪುಗೊಂಡ ಅತ್ಯಂತ ದೊಡ್ಡ ಸರೋವರ ಕಾರ–ಕಲ್ . ಅದರ ವಿಸ್ತೀರ್ಣ 364 ಚ.ಕಿಮೀ ಆಳ 238 ಮೀ ಭೂಕುಸಿತದಿಂದ ಸೃಷ್ಟಿಯಾದ ಅತ್ಯಂತ ಈಚಿನ (1911) ಮತ್ತು ಅತ್ಯಂತ ದೊಡ್ಡ ಸರೋವರ ಸೀರ್ ಸಾರೆಜ್ ಕೋಯೆ ಓಜರೋ. ಅದರ ಉದ್ದ 61 ಕಿಮೀ ಆಳ 505 ಮೀ.

ತಾಜಿಕ್ ರಾಜ್ಯದಲ್ಲಿ ಮೂರು ಪ್ರಕಾರಗಳ ವಾಯುಗುಣ ಇದೆ. ತಗ್ಗು ಪ್ರದೇಶದಲ್ಲಿ ಒಣ ಹವೆ ; ಉಷ್ಣತೆ ಹೆಚ್ಚು. ವಾರ್ಷಿಕ ಸರಾಸರಿ ಮಳೆ 25 ಸೆಂಮೀ ಉಷ್ಣತೆ ಜುಲೈನಲ್ಲಿ $31^0$ ಸೆ. ಜನವರಿಯಲ್ಲಿ $3^0$ಸೆ. ತಪ್ಪಲು ಬೆಟ್ಟಗಳಲ್ಲಿ ಮಳೆ ಹೆಚ್ಚು ; ಆ ಪ್ರದೇಶ ಹೆಚ್ಚು ತಂಪಾಗಿರುತ್ತದೆ. 3030 ಮೀ ಗಳಿಗಿಂತ ಹೆಚ್ಚು ಎತ್ತರವಿರುವ ಪರ್ವತಗಳ ಮೇಲೆ ವಾರ್ಷಿಕ ಅವಪತನ ಕೇವಲ 7.5 ಸೆ. ವಾರ್ಷಿಕ ಸರಾಸರಿ ಉಷ್ಣತೆ, ನೀರು ಗಡ್ಡೆಕಟ್ಟುವ ಬಿಂದುವಿಗಿಂತ ಕೆಳಗೆ ಇರುತ್ತದೆ.

ವಾಯವ್ಯದ ತಗ್ಗಿನ ಇಳಿಜಾರು ಪ್ರದೇಶಗಳು ಕಾಡುಗಳಿಂದ ಆವೃತವಾಗಿವೆ. ಇಲ್ಲಿಯ ಸಸ್ಯ ವೈವಿಧ್ಯಮಯ. ಅನುಕ್ರಮವಾಗಿ ಕುರುಚಲು, ಹುಲ್ಲುಗಾಡು ಪರ್ಣಪಾತಿ ಮತ್ತು ಶಂಕುಧಾರಿ ಕಾಡು, ಆಲ್ಪೈನ್ ಹುಲ್ಲುಗಾವಲು ಇವೆ. ಪ್ರಾಣಿಗಳಲ್ಲೂ ವೈವಿಧ್ಯವುಂಟು. ದಕ್ಷಿಣದ ತಗ್ಗಿನ ಪ್ರದೇಶದಲ್ಲಿ ಹುಲಿ, ಜಿಂಕೆ, ಹಲವು ಬಗೆಯ ಜಲಪಕ್ಷಿಗಳು ಉಂಟು. ಎತ್ತರದ ಪ್ರಸ್ಥಭೂಮಿಗಳಲ್ಲಿ ಜಿಂಕೆಗಳೂ ದೊಡ್ಡ ಹಲ್ಲಿಗಳೂ ಇವೆ. ಪಾಮಿರ್‌ಗಳಲ್ಲಿ ಕರಡಿಗಳೂ ಕಾಡುಕುರಿಗಳೂ ಇವೆ.

ಆರ್ಥಿಕತೆ : ತಾಜಿಕಿಸ್ತಾನದ ಮುಖ್ಯ ಬೆಳೆಗಳು ಹತ್ತಿ, ಗೋದಿ, ಬಾರ್ಲಿ, ಸೆಣಬು, ನೆಲಗಡಲೆ, ಸಕ್ಕರೆ ಬೀಟ್, ಬತ್ತ ಮತ್ತು ಮುಸುಕಿನ ಜೋಳ. ಹಣ್ಣಿನ ಕೃಷಿ ಹೆಚ್ಚು. ಬೇಸಾಯ ಪದ್ಧತಿ ಸಾಮಾನ್ಯ. ಪಶುಪಾಲನೆ, ಕುರಿಸಾಕಣೆ ಪ್ರಧಾನವಾಗಿವೆ. ಅನೇಕ ನೀರಾವರಿ ಕಾರ್ಯಕ್ರಮಗಳು ಜಾರಿಗೆ ಬಂದಿವೆ.

ಇಲ್ಲಿಯ ಮುಖ್ಯ ಕೈಗಾರಿಕೆಗಳು ಹತ್ತಿ ಜವಳಿ, ರಾಸಾಯನಿಕ ಟ್ರಾಕ್ಟರ್ ಮತ್ತು ಮೋಟಾರು ಬಿಡಿಭಾಗಗಳ ತಯಾರಿಕೆ. ರೇಷ್ಮೆ ನೂಲುವ ಹಾಗೂ ಉಣ್ಣೆ ಬಟ್ಟೆ ತಯಾರಿಕೆಯ ಗಿರಣಿಗಳಿವೆ. ಹಣ್ಣುಗಳ ಸಂಸ್ಕರಣವೂ ಒಂದು ಮುಖ್ಯ ಕೈಗಾರಿಕೆ. ಸೊಗಸಾದ ಟರ್ಕಿ ಜಮಖಾನೆಗಳಿಗೆ ಈ ರಾಜ್ಯ ಪ್ರಸಿದ್ಧವಾಗಿದೆ. ಕೈಗಾರಿಕೆಯ ಮುಖ್ಯ ನಗರಗಳು ದೂಷನ್ಬೆ, ಲೆನಿನಾಬಾದ್, ಕುರ್ಗಾನ್–ಟ್ಯುಬೇ, ಉರ–ಟ್ಯುಬೇ, ಕನಿಬಾದಾನ್.

ರಾಜ್ಯದಲ್ಲಿ ಸೀಸ, ತವರ, ಕಲ್ಲಿದ್ದಲು, ಪೆಟ್ರೋಲ್, ಚಿನ್ನ, ಬೆಳ್ಳಿ, ಕಟ್ಟಡಗಲ್ಲು ನಿಕ್ಷೇಪಗಳಿವೆ.

ರಾಜ್ಯದಲ್ಲಿ ಸು. 700 ಕಿಮೀ ರೈಲು ಮಾರ್ಗಗಳುಂಟು. ಟರ್ಮೆಜ್‌ನಿಂದ ಅರ್ಜಾನಿಕಿಡ್ಜಾಬಾದ್ ವರೆಗಿರುವುದು ರಾಷ್ಟ್ರೀಯ ರೈಲ್ವೆ ವ್ಯವಸ್ಥೆಯೊಂದಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರೈಲು ಮಾರ್ಗ, ದೂಷನ್ಬೆಯಿಂದ ವಾಕ್ಷ್ ಕಣಿವೆಗೂ ಅಲ್ಲಿಂದ ಕುಲ್ಯಾಬ್‌ಗೂ ನ್ಯಾರೋ ಗೇಜ್ ರೈಲು ಮಾರ್ಗವುಂಟು. ದೂಷನ್ಬೆ–ಕರೋಗ್, ಕರೋಗ್–ಆಷ್, ದೂಷನ್ಬೆ–ಉರ–ಟ್ಯುಬೇ, ಕುರ್ಗಾನ್–ಟ್ಯುಬೇ–ಕುಲ್ಯಾಬ್ ರಸ್ತೆಗಳು ಹೆದ್ದಾರಿಗಳು. ಫೈಜಾಬಾದ್‌ದಿಂದ ಕೆಳಕ್ಕೆ ಆಮೂ–ದಾರ್ಯನದಿ ನೌಕಾಯಾನ ಯೋಗ್ಯವಾಗಿದೆ. ರಾಜ್ಯದಲ್ಲಿ ವಿಮಾನ ಸಾರಿಗೆಗೆ ಹೆಚ್ಚಿನ ಪ್ರಾಮುಖ್ಯವುಂಟು. ದೂಷನ್ಬೆಯಿಂದ ಮಾಸ್ಕೋ, ತಾಷ್‌ಕೆಂಟ್, ಬಾಕು ಮತ್ತು ಇತರ ನಗರಗಳಿಗೆ ವಿಮಾನ ಸೌಲಭ್ಯವಿದೆ. (ವಿ.ಜಿ.ಕೆ.)

**ತಾತ್ಕಾಲಿಕ ಪ್ರದೇಶ:** ಹೆಸರೇ ಸೂಚಿಸಿರುವಂತೆ ಒಂದು ಪ್ರದೇಶವನ್ನು ಕೆಲವೇ ಉದ್ದೇಶ ಮತ್ತು ನಿಯಮಿತ ಕಾಲಕ್ಕೆ ಗುರುತಿಸಿದರೆ, ಆ ಪ್ರದೇಶವನ್ನು ತಾತ್ಕಾಲಿಕ ಪ್ರದೇಶವೆಂದು ಹೇಳಬಹುದು. ಎಲ್ಲಿಯವರೆಗೆ ಯೋಜನೆಗಳು ಮತ್ತು ಕಾರ್ಯಕ್ರಮಗಳು ಅನುಷ್ಠಾನದಲ್ಲಿರುವುದೊ ಅಲ್ಲಿಯವರೆಗೆ ತಾತ್ಕಾಲಿಕ ಪ್ರದೇಶಗಳು ಗುರುತಿಸಲ್ಪಡುತ್ತವೆ. ಪ್ರಾದೇಶಿಕ ಶಾಸ್ತ್ರಜ್ಞರು ತಾತ್ಕಾಲಿಕ ಪ್ರದೇಶವನ್ನು ಒಪ್ಪಿಕೊಳ್ಳುವುದಿಲ್ಲ. ತಾತ್ಕಾಲಿಕ ಪ್ರದೇಶಗಳು ಕೆಲವು ಪ್ರಯೋಗವನ್ನು ಪರೀಕ್ಷಿಸಲು ಸಹಕಾರಿಯಾಗಿರುತ್ತವೆ. ಸಾಮಾನ್ಯವಾಗಿ ಸಾಂದ್ರೀಕೃತ ವ್ಯವಸಾಯ ಪ್ರಯೋಗಕ್ಕಾಗಲೀ ಅಥವಾ ರಾಸಾಯನಿಕ ಗೊಬ್ಬರವನ್ನು ಪರೀಕ್ಷಿಸಲು ಹಾಗೂ ಕೃಷಿ ಸಂಬಂಧದ ಚಟುವಟಿಗೆಯನ್ನು ಪರೀಕ್ಷಿಸುವುದಕ್ಕೆ ತಾತ್ಕಾಲಿಕ ಪ್ರದೇಶವನ್ನು ಗುರುತಿಸುತ್ತಾರೆ. ಮಂಡ್ಯ ಜಿಲ್ಲೆಯ ಕೆಲವು ಪ್ರದೇಶಗಳು ತಾತ್ಕಾಲಿಕ ಪ್ರದೇಶಕ್ಕೆ ಒಳಪಟ್ಟಿತ್ತು. ತಾತ್ಕಾಲಿಕ ಪ್ರದೇಶ ಒಂದು ದೊಡ್ಡ ಯೋಜನೆಯ ಉಪಯುಕ್ತತೆಯನ್ನು ಪರೀಕ್ಷಿಸಲು ಸಣ್ಣ ಪ್ರಮಾಣದ ಪ್ರಾಯೋಗಿಕ ಯೋಜನೆಯನ್ನು ನಡೆಸಲು ಸಹಕಾರಿಯಾಗುತ್ತದೆ. ಉದಾಹರಣೆಗೆ ಕುದುರೆಮುಖ ಅದಿರು ಪ್ರದೇಶ ಒಂದು ತಾತ್ಕಾಲಿಕ ಪ್ರದೇಶ. ಕೆಮ್ಮಣ್ಣುಗುಂಡಿ, ತಾತ್ಕಾಲಿಕ ಪ್ರದೇಶದ ಉಳಿಯುವಿಕೆ, ಹೊಸ ಚಟುವಟಿಕೆ (ಉದ್ಯೋಗ ಸೃಷ್ಟಿಸುವ ಕೈಗಾರಿಕೆ ಅಥವಾ ಇನ್ನಿತರ ಕಾರ್ಯಕ್ರಮಗಳು)ಯನ್ನು ಅಳವಡಿಸುವುದರ ಮೇಲೆ ಅವಲಂಬಿಸುತ್ತದೆ. ಇಲ್ಲದಿದ್ದಲ್ಲಿ ಹಿಂದುಳಿದ ಪ್ರದೇಶ ಅಥವಾ ನಿರ್ಲಕ್ಷ ಪ್ರದೇಶವೆಂದು ಘೋಷಿಸಲ್ಪಡುತ್ತದೆ. (ಎನ್.ಎಸ್.)

**ತಾಮ್ರ:** ಮಾನವನಿಂದ ಮೊಟ್ಟಮೊದಲು ಉಪಯೋಗಿಸಲ್ಪಟ್ಟ ಖನಿಜಗಳಲ್ಲಿ ಒಂದು. ಕಬ್ಬಿಣ ಲೋಹವು ಬಳಕೆಗೆ ಬರುವುದಕ್ಕೂ ಬಹಳ ಹಿಂದೆಯೇ ತಾಮ್ರ ಲೋಹವು ಮಾನವನಿಂದ ಬಳಕೆಯಾಗುತ್ತಿತ್ತೆಂದು ಪ್ರ.ಶ.ಪೂ. 5000 ವರ್ಷಗಳ ಹಿಂದೆಯೇ ತಾಮ್ರ ಲೋಹದ ತಯಾರಿಕೆ ಈಜಿಪ್ಟಿನವರಿಗೆ ತಿಳಿದಿತ್ತೆಂದು ಕೆಲವು ಉಲ್ಲೇಖಗಳಿಂದ ತಿಳಿದುಬರುತ್ತದೆ.

ಗುಣ ಮತ್ತು ಉಪಯೋಗ: ಇದು ಕಬ್ಬಿಣೇತರ ಲೋಹಗಳಲ್ಲಿ ಅತ್ಯಂತ ಪ್ರಮುಖವಾದದು. ಬಣ್ಣ ಕೆಂಪು, ಮೃದು ಹಾಗೂ ಮೆದುತನ ಉಳ್ಳದ್ದು. ಇದರ ಪತ್ರರೂಪ ಕ್ಷಮತ್ವ ಮತ್ತು ಕಾಂತತೆ ಗುಣಗಳಿಂದಾಗಿ ತಾಮ್ರವನ್ನು ಸುಲಭವಾಗಿ ನವುರಾದ ಮತ್ತು ತೆಳುವಾದ ತಗಡುಗಳಾಗಿ ಮಾಡಬಹುದಾಗಿದೆ. ಹಾಗೆಯೇ ಸಣ್ಣ ತಂತಿಗಳಾಗಿ ಎಳೆಯಬಹುದಾಗಿದೆ. ಇಂದು ಇದು ಲೋಹಾಧಾರಿತ ಕೈಗಾರಿಕೆಗಳಲ್ಲಿ ಹೆಚ್ಚು ಬಳಕೆಯಾಗುತ್ತಿದೆ. ಬೆಳ್ಳಿಯ ತರುವಾಯ ತಾಮ್ರ ಅತ್ಯುತ್ತಮವಾದ ವಿದ್ಯುದ್ವಾಹಕ. ಆದ್ದರಿಂದ ಇದನ್ನು ವಿದ್ಯುಚ್ಛಕ್ತಿ ರವಾನೆ ಹಾಗೂ ವಿದ್ಯುದುಪಕರಣದ ಉದ್ಯಮಗಳಲ್ಲಿ ವ್ಯಾಪಕವಾಗಿ ಬಳಸಲಾಗುವುದು. ಉದಾ: ತಾಮ್ರದ ತಂತಿ, ವಿದ್ಯುತ್ ಮೋಟಾರ್, ಟ್ರಾನ್ಸ್‌ಫಾರ್ಮರ್ ಮತ್ತು ಜನರೇಟರ್‌ಗಳ ತಯಾರಿಕೆ. ಪ್ರಪಂಚದ ತಾಮ್ರದ ಉತ್ಪಾದನೆಯಲ್ಲಿ ಶೇ. 45ರಷ್ಟನ್ನು ರೇಡಿಯೋ ಮತ್ತು ದೂರದರ್ಶನಗಳು, ರೆಫ್ರಿಜರೇಟರ್ ಹಾಗೂ ಇತರ ಸೂಕ್ಷ್ಮ ವಿದ್ಯುದುಪಕರಣಗಳ ತಯಾರಿಕೆಗೆ ಬಳಸಲಾಗುತ್ತಿದೆ. ಇದನ್ನು ಇತರ ಲೋಹಗಳೊಡನೆ ಮಿಶ್ರಮಾಡಿ ವಿಶೇಷ ಲೋಹವನ್ನು ಪಡೆಯಬಹುದಾಗಿದೆ. ಸತುವಿನೊಡನೆ ಬೆರೆಸಿ ಹಿತ್ತಾಳೆಯನ್ನು, ತವರದೊಡನೆ ಬೆರೆಸಿ ಕಂಚನ್ನು, ಸತು ಮತ್ತು ನಿಕ್ಕಲ್‌ನೊಡನೆ ಬೆರೆಸಿ ಜರ್ಮನ್ ಸಿಲ್ವರ್ ಮುಂತಾದವುಗಳನ್ನು ಪಡೆಯಬಹುದು. ಇಂತಹ ಲೋಹವನ್ನು ಆಭರಣ, ಪ್ರತಿಮೆಗಳು, ಅಡಿಗೆ ಪಾತ್ರೆ, ನಾಣ್ಯಗಳು ಅಲಂಕಾರದ ವಸ್ತುಗಳು ಇತ್ಯಾದಿಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ.

ಅದಿರು: ಇದು ಪ್ರಕೃತಿಯಲ್ಲಿ ಶುದ್ಧಲೋಹ ಮತ್ತು ಅದಿರು ಎರಡೂ ರೂಪದಲ್ಲೂ ದೊರೆಯುವುದು. ಆದರೆ ಅಗ್ನಿ ಶಿಲೆ ಮತ್ತು ರೂಪಾಂತರ ಶಿಲಾಸ್ತರಗಳಲ್ಲಿ, ತಾಮ್ರ, ಕಬ್ಬಿಣ, ಗಂಧಕ ಹಾಗೂ ಇತರ ಖನಿಜಗಳೊಂದಿಗೆ ಸಂಯುಕ್ತವಾಗಿ ಅದಿರಿನ ರೂಪದಲ್ಲಿ ದೊರೆಯುವುದು. ತಾಮ್ರದ ಆಕ್ಸೈಡ್, ಸಲ್ಫೈಡ್ ಮತ್ತು ಕಾರ್ಬೋನೇಟ್‌ಗಳಾಗಿ ದೊರೆಯುವುದು. ತಾಮ್ರದ ಆಕ್ಸೈಡ್ ಸು. ಶೇ. 88ರಷ್ಟು ತಾಮ್ರದ ಅಂಶವನ್ನು ಹೊಂದಿರುತ್ತದೆ. ಇದರ ಹಂಚಿಕೆ ಬಹು ಮಿತವಾದುದು. ತಾಮ್ರದ ಪ್ರಮುಖ ಅದಿರುಗಳು: ಪೈರಟಿಸ್, ಮಾಲಕೈಟ್, ಚಾಕೋಲೇಟ್ ಮತ್ತು ಕೋವಲೆಟ್.

ಹಂಚಿಕೆ ಮತ್ತು ಉತ್ಪಾದನೆ: ಪ್ರಪಂಚದಲ್ಲಿ ಸು. 650 ಮಿ. ಟನ್ನು ತಾಮ್ರದ ನಿಕ್ಷೇಪವಿದೆಯೆಂದು ಅಂದಾಜು ಮಾಡಲಾಗಿದೆ. ಇದು ದೊರೆಯುವ ಪ್ರಮುಖ ರಾಷ್ಟ್ರಗಳೆಂದರೆ; ಚಿಲಿ, ಅಮೆರಿಕ ಸಂಯುಕ್ತ ಸಂಸ್ಥಾನ, ಇಂಡೋನೇಷ್ಯ, ಆಸ್ಟ್ರೇಲಿಯ, ಕೆನಡ, ರಷ್ಯ ಚೀನ, ಪೋಲೆಂಡ್, ಮೆಕ್ಸಿಕೊ ಮತ್ತು ಕಜಕ್‌ಸ್ತಾನ.

ಚಿಲಿ ಪ್ರಪಂಚದ ಅತ್ಯಧಿಕ ತಾಮ್ರ ಉತ್ಪಾದಿಸುವ ರಾಷ್ಟ್ರ. ಅತಿ ಹೆಚ್ಚು ತಾಮ್ರ ನಿಕ್ಷೇಪವನ್ನು ಹೊಂದಿದೆ. ಚಿಲಿಯಲ್ಲಿ ತಾಮ್ರ ಎಲ್.ಟೆಯೆಂಟೆ, ಬ್ರಾಡೆನ್, ಪ್ರೊಟ್ರೆರಿಲ್ಲೋಸ್ ಪ್ರದೇಶಗಳಲ್ಲಿ ವ್ಯಾಪಕವಾಗಿದೆ. ಚುಗು ಕುಮಾಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಾಮ್ರದ ನಿಕ್ಷೇಪ ಹೊಂದಿದ್ದು ರಾಷ್ಟ್ರದಲ್ಲೇ ಹಾಗೂ ಪ್ರಪಂಚಕ್ಕೆ ಅತಿ ದೊಡ್ಡ ತಾಮ್ರದ ಗಣಿ ಪ್ರದೇಶವೆನಿಸಿದೆ. ಇದು ತಾಮ್ರ ರಫ್ತಿನಲ್ಲಿ ಎರಡನೆಯ ಸ್ಥಾನ ಪಡೆದಿದೆ. ಅಮೆರಿಕ ಸಂಯುಕ್ತ ಸಂಸ್ಥಾನ ತಾಮ್ರ ಉತ್ಪಾದನೆಯಲ್ಲಿ ದ್ವಿತೀಯ ಸ್ಥಾನ ಪಡೆದಿವೆ. ಉತ್ಪಾದಕ ಪ್ರದೇಶಗಳು ಮಾಂಟಾನಾ, ಮಿನೆಸೂಟ, ಮಿಶಿಗನ್, ಟೆನೆಸ್ಸಿ, ಉಟ್ಟಾ, ಅರಿಜೋನ, ಕಾಲರಾಡೊ, ನೆವಾಡ ಮತ್ತು ನ್ಯೂ– ಮೆಕ್ಸಿಕೊ. ಇದು ಚಿಲಿ, ಕೆನಡ, ಪೆರು ಮತ್ತು ಆಫ್ರಿಕದಿಂದ ತಾಮ್ರ ಆಮದು ಮಾಡಿಕೊಳ್ಳುತ್ತದೆ. ಪೆರು: ಇದು ದಕ್ಷಿಣ ಅಮೆರಿಕದ ಎರಡನೆಯ ಪ್ರಮುಖ ತಾಮ್ರ ಉತ್ಪಾದಿಸುವ ರಾಷ್ಟ್ರ ಆಂಡೀಸ್ ಶ್ರೇಣಿಯ ಕಾರ್ಡಿಲೆಗ್ರಾಸ್ ಪ್ರದೇಶದಲ್ಲಿ ತಾಮ್ರದ ನಿಕ್ಷೇಪ ಹಂಚಿಕೆಯಾಗಿದೆ.

ಕೆನಡ: ಇಲ್ಲಿನ ಅಂಟೇರಿಯೊ, ಸಸ್ಕಾಚೆವಾನ್ ನೊರೆಂಡ, ಕ್ವಿಬೆಕ್ ಮಾನಿಟೂಬ ಮತ್ತು ಬ್ರಿಟಿಷ್ ಕೊಲಂಬಿಯದಲ್ಲಿ ತಾಮ್ರ ಉತ್ಪಾದಿಸಲಾಗುತ್ತದೆ. ಆಸ್ಟ್ರೇಲಿಯ: ಇಲ್ಲಿನ ಗೂನುಂಬ ಮತ್ತು ಓಸ್ಲೋರನ್‌ನಲ್ಲಿ ತಾಮ್ರ ಹೊರ ತೆಗೆಯಲಾಗುತ್ತಿದೆ. ಇಂಡೋನೇಷ್ಯ: ಇದು ಇತ್ತೀಚೆಗೆ ತಾಮ್ರ ಉತ್ಪಾದಕ ರಾಷ್ಟ್ರವಾಯಿತು. ಗ್ರಾಸ್‌ಬರ್ಗ್ ಮತ್ತು ಇರಿಯನ್‌ಜಯದಲ್ಲಿ ತಾಮ್ರ ಉತ್ಪಾದಿಸಲಾಗುತ್ತಿದೆ.

ಆಫ್ರಿಕ: ಜಾಂಬಿಯ, ಕಾಂಗೊ ಗಣರಾಜ್ಯ, ಆಫ್ರಿಕ ಖಂಡದಿಂದ ಪ್ರಮುಖ ತಾಮ್ರ ಉತ್ಪಾದಿಸುವ ರಾಷ್ಟ್ರಗಳಾಗಿವೆ. ಕಲಾಂಗ್ ಜಾಂಬಿಯ ವಲಯ ಸು. 480 ಕಿಮೀ ದೂರ ಹರಡಿರುವ ತಾಮ್ರ ವಲಯವಾಗಿದೆ. ಚೀನ: ಇದು ಏಷ್ಯಖಂಡದಲ್ಲಿ ತಾಮ್ರ ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ. ಶಾನ್ಸಿ, ಯುನಾನ್‌ಗಳಲ್ಲಿ ಇತ್ತೀಚೆಗೆ ಉತ್ಪಾದನೆ ಹೆಚ್ಚಿದೆ.

ಏಷ್ಯ ಖಂಡದಲ್ಲಿ ಇತರ ತಾಮ್ರ ಉತ್ಪಾದಿಸುವ ರಾಷ್ಟ್ರಗಳೆಂದರೆ ಜಪಾನ್, ಫಿಲಿಫೈನ್ಸ್, ಟರ್ಕಿ ಮತ್ತು ಭಾರತ. ಭಾರತದಲ್ಲಿ ಸು. 334 ಮಿ. ಟನ್ನುಗಳಷ್ಟು ತಾಮ್ರದ ನಿಕ್ಷೇಪವಿದೆಯೆಂದು ಅಂದಾಜು ಮಾಡಲಾಗಿದೆ. ಭಾರತೀಯರಿಗೆ ತಾಮ್ರದ ಉತ್ಪಾದನೆ ಪುರಾತನ ಕಾಲದಿಂದಲೂ ತಿಳಿದಿತ್ತು. ಪ್ರ.ಶ.ಪೂ. 1000 ಅವಧಿಯಲ್ಲಿ ಜಾರ್ಖಂಡ್‌ನಲ್ಲಿ ತಾಮ್ರದ ಗಣಿ ಇದ್ದದ್ದು ತಿಳಿದುಬಂದಿದೆ. ಭಾರತದಲ್ಲಿ ತಾಮ್ರದ ಗಣಿಗಳು ಜಾರ್ಖಂಡಿನ ಸಿಂಘ್‌ಭೂಮ್ ಮಧ್ಯಪ್ರದೇಶದ ಬಾಲ್‌ಘಟ್, ರಾಜಸ್ತಾನದ ಅಲ್ವಾರ್ ಮತ್ತು ಜೂನಿಜ್ಞೂಮ ಜಿಲ್ಲೆಗಳಲ್ಲಿ ಕಂಡುಬರುತ್ತವೆ.

ಅಂತಾರಾಷ್ಟ್ರೀಯ ವ್ಯಾಪಾರ: ಕೈಗಾರಿಕಾ ರಾಷ್ಟ್ರಗಳಿಗೆ ತಾಮ್ರ ಹೆಚ್ಚು ಅವಶ್ಯಕ, ಅಮೆರಿಕ ಸಂಯುಕ್ತ ಸಂಸ್ಥಾನ, ಚಿಲಿ, ಜಾಂಬಿಯ, ಕಾಂಗೊ ಪ್ರಜಾತಂತ್ರ ಗಣರಾಜ್ಯ ಕೆನಡ ಮತ್ತು ಪೆರು ತಾಮ್ರ ರಫ್ತು ಮಾಡುವ ರಾಷ್ಟ್ರಗಳು. ಬ್ರಿಟನ್, ಜರ್ಮನಿ, ಬೆಲ್ಜಿಯಂ, ಫ್ರಾನ್ಸ್, ಮತ್ತು ಭಾರತ ತಾಮ್ರ ಆಮದು ಮಾಡಿಕೊಳ್ಳುತ್ತವೆ. (ಸಿ.ಎಸ್.ಎಚ್.)

**ತಾಷ್ಕೆಂಟ್:** ಉಜ್ಬೆಕ್ ಗಣರಾಜ್ಯದ ರಾಜಧಾನಿ; ಒಂದು ಅಬ್ಲಾಸ್ಟ್ (ಆಡಳಿತ ವಿಭಾಗ). ಕಾಜಾಕ್, ಕಿರ್ಗಿಜ್ ಮತ್ತು ತಾಜಿಕ್ ಗಣರಾಜ್ಯಗಳಿಗೆ ಸೇರಿಕೊಂಡಂತೆ ಇರುವ ಈ ಅಬ್ಲಾಸ್ಟಿನ ವಿಸ್ತೀರ್ಣ 15,600 ಚ.ಕಿಮೀ ಇದು ಟಿಯೆನ್– ಷಾನ್ ಪರ್ವತದ ವಾಯವ್ಯ ಅಂಚಿನಲ್ಲಿ, ಸಿರ್– ದಾರ್ಯ, ನದಿಯ ನಡುದಂಡೆಯ ಪ್ರದೇಶದಲ್ಲಿದೆ. ಇದರ ಹೆಚ್ಚು ಭಾಗ ಸಿರ್– ದಾರ್ಯ. ಆಂಗ್ರೆನ್ ಮತ್ತು ಚಿರ್‌ಚೀಕ್ ನದಿಗಳಿಂದಾದ ಮೈದಾನ. ಸಿರ್– ದಾರ್ಯ ಈ ಪ್ರದೇಶದ ನೈಋತ್ಯ ಎಲ್ಲೆಯಲ್ಲಿದೆ. ಇದರ ಈಶಾನ್ಯಭಾಗ ಪರ್ವತಮಯ. ಅಲ್ಲಿ 4,311 ಮೀ ವರೆಗೂ ಎತ್ತರವಾಗಿರುವ ಶಿಖರಗಳುಂಟು. ನೈಋತ್ಯ ಭಾಗ ಮೈದಾನ. ಇಲ್ಲಿಯದು ಖಂಡಾಂತರ ವಾಯುಗುಣ. ಚಳಿಗಾಲ ತೀವ್ರವಲ್ಲ, ಬೇಸಗೆ ಬಲು ದೀರ್ಘ, ಶುಷ್ಕ, ತೀವ್ರ ಉಷ್ಣತೆಯಿಂದ ಕೂಡಿದ್ದು. ವಾರ್ಷಿಕ ಅಪಪಾತ 30 ರಿಂದ 70 ಸೆಂಮೀ ವರೆಗೆ ಸ್ಥಳಾನುಗುಣವಾಗಿ ವ್ಯತ್ಯಾಸವಾಗುತ್ತದೆ.

ಈ ಪ್ರದೇಶದಲ್ಲಿ ಒಟ್ಟು 1,55,000 ಹೆಕ್ಟೇರ್ ಭೂಮಿ ವ್ಯವಸಾಯಕ್ಕೆ ಒಳಪಟ್ಟಿದೆ. ಪ್ರಮುಖ ಬೆಳೆಗಳು ಹತ್ತಿ, ಸೆಣಬು, ತರಕಾರಿ, ಹಣ್ಣು ಮತ್ತು ನಾರು. ಉಜ್‌ಬೆಕ್‌ನ ಒಟ್ಟು ಹತ್ತಿಯಲ್ಲಿ ಶೇ. 20ರಷ್ಟು ಇಲ್ಲಿ ಬೆಳೆಯುತ್ತದೆ. ಪರ್ವತ ಪಾರ್ಶ್ವಗಳಲ್ಲೂ ಅಡಿಬೆಟ್ಟಗಳಲ್ಲೂ ರೇಷ್ಮೆ ಸಾಕಣೆ ಮತ್ತು ಪಶುಪಾಲನೆ ನಡೆಯುತ್ತವೆ. ಮರುಭೂಮಿ ಮತ್ತು ಅರೆಮರುಭೂಮಿ ಪ್ರದೇಶಗಳಲ್ಲಿ ಕುರಿ ಸಾಕುವರು.

ಇದು ಕೈಗಾರಿಕೆಯಲ್ಲಿ ಹೆಚ್ಚು ಪ್ರಗತಿ ಸಾಧಿಸಿದೆ. ತಾಷ್ಕೆಂಟ್ ನಗರದಲ್ಲಿರುವ ಯಂತ್ರ ನಿರ್ಮಾಣ, ಆಹಾರ ಸಂಸ್ಕರಣ ಮುಂತಾದ ಅನೇಕ ಕೈಗಾರಿಕೆಗಳ ಜೊತೆಗೆ ಈ ಅಬ್ಲಾಸ್ಟಿನಲ್ಲಿ ಗಣಿಗಾರಿಕೆಯೂ ಬೆಳೆದಿದೆ. ಆಂಗ್ರೆನ್‌ನಲ್ಲಿ ಕಲ್ಲಿದ್ದಲನ್ನೂ ಕಾಸ್ಸುಲಾಕ್‌ನಲ್ಲಿ ಚಿನ್ನವನ್ನೂ ತೆಗೆಯಲಾಗುತ್ತದೆ. ಕುರಾಮ ಪರ್ವತಗಳಲ್ಲಿ ತಾಮ್ರ, ಸೀಸ, ಸತು ಮುಂತಾದವು ಸಿಗುತ್ತವೆ. ಆಲ್ಮಾಲಿಕ್ ಕಬ್ಬಿಣೇತರ ಲೋಹ ಕೈಗಾರಿಕೆಗಳ ಕೇಂದ್ರ. ಬೆಕಾಬಾದ್‌ದಲ್ಲಿ ಉಕ್ಕಿನ ಕಾರ್ಖಾನೆಯಿದೆ. ಚಿರ್‌ಚೀಕ್ ಯಂತ್ರ ಕೈಗಾರಿಕಾ ಕೇಂದ್ರ. ಯಾಂಗಿಯೊಲ್‌ನಲ್ಲಿ ಲಘು ಕೈಗಾರಿಕೆಗಳು ಬೆಳೆದಿವೆ. ಚಿರ್‌ಚೀಕ್ ನದಿಯ ಮೇಲೆ ಹಲವು ಜಲವಿದ್ಯುದಾಗಾರಗಳಿವೆ.

ತಾಷ್ಕೆಂಟ್ ಅಬ್ಲಾಸ್ಟಿನಲ್ಲಿ ಉತ್ತಮ ರಸ್ತೆ ವ್ಯವಸ್ಥೆಯುಂಟು. ತಾಷ್ಕೆಂಟ್–ಟರ್ಮೆಜ್ ಮತ್ತು ತಾಷ್ಕೆಂಟ್–ದುಷನ್ಬೆ ಹೆದ್ದಾರಿಗಳು ಮುಖ್ಯವಾದವು, ಮಾಸ್ಕೋ–ತಾಷ್ಕೆಂಟ್ – ಕ್ರಾಸ್ನೊವಾಡ್‌ಸ್ಕ್ ರೈಲುಮಾರ್ಗ ಈ ಅಬ್ಲಾಸ್ಟಿನ ಮೂಲಕ ಹಾದುಹೋಗುತ್ತದೆ. ತಾಷ್ಕೆಂಟ್ ನಿಂದ ಚಿರ್‌ಚೀಕ್ ಮತ್ತು ಆಂಗ್ರೆನ್‌ಗೂ ರೈಲುಮಾರ್ಗಗಳಿವೆ.

ಈ ಅಬ್ಲಾಸ್ಟನ್ನು 12 ರಯಾನ್‌ಗಳಾಗಿ ವಿಭಾಗಿಸಲಾಗಿದೆ. ಇದರ ಜನಸಂಖ್ಯೆ 21,06,000 (1994). ಶೇ. 40 ಮಂದಿ ಉಜ್‌ಬೆಕರು, 30% ರಷ್ಯನರು, ಉಳಿದವರು ತಾತಾರರು, ಕಝಾಕರು, ಕೊರಿಯನರು, ಉಕ್ರೇನಿಯರು, ಯಹೂದ್ಯರು ಮತ್ತು ತದ್‌ಜಿಕರು. ಇಲ್ಲಿಯ ಮುಖ್ಯ ನಗರಗಳು ತಾಷ್ಕೆಂಟ್, ಚಿರ್‌ಚೀಕ್ (1,08,000), ಆಂಗ್ರೆನ್ (94,000), ಯಂಗೀಯೊಲ್ (56,000) ಮತ್ತು ಬೇಕಬಾದ್ (60,000). (ಕೆ.ಆರ್.)

**ತಾಷ್ಕೆಂಟ್ ನಗರ :** ಈ ಅಬ್ಲಾಸ್ಟಿನ ಆಡಳಿತ ಕೇಂದ್ರ. ಉಜ್‌ಬೆಕ್ ಗಣರಾಜ್ಯದ ರಾಜಧಾನಿ. ಹಿಂದಿನ ಸೋವಿಯೆತ್ ಸಮಾಜವಾದಿ ಗಣರಾಜ್ಯ ಒಕ್ಕೂಟದ ನಾಲ್ಕನೆಯ ದೊಡ್ಡ ನಗರ (ಮೊದಲ ಮೂರು ನಗರಗಳು: ಮಾಸ್ಕೋ, ಲೆನಿನ್‌ಗ್ರಾಡ್ ಮತ್ತು ಕೀಯೆಫ್). ಜನಸಂಖ್ಯೆ 21,24,000 (1998). ಇದು ಉ. ಅ. $41^0 20'$ ಮತ್ತು ಪೂ.ರೇ $69^0 18'$ ಮೇಲೆ ಚಿರ್‌ಚೀಕ್ ಕಣಿವೆಯಲ್ಲಿ, ಚಟ್ಕಲ್ ಪರ್ವತಗಳ ಪಶ್ಚಿಮದಲ್ಲಿ 450–480 ಮೀ ಎತ್ತರದಲ್ಲಿದೆ. ಚಿರ್‌ಚೀಕ್ ನದಿಯ ಅನೇಕ ಕಾಲುವೆಗಳು ಈ ನಗರದ ಮೂಲಕ ಹಾದುಹೋಗಿವೆ. *

**ತಾಳಗುಪ್ಪ:** ಶಿವಮೊಗ್ಗ ಜಿಲ್ಲೆಯ ವಾಯವ್ಯದಲ್ಲಿರುವ ಸಾಗರ ತಾಲ್ಲೂಕಿನ ಒಂದು ಊರು. ಬೆಂಗಳೂರು– ಮಿರಜ್ ರೈಲುಮಾರ್ಗದಲ್ಲಿರುವ ಬೀರೂರು ಜಂಕ್ಷನ್‌ನಿಂದ ಕವಲೊಡೆದು ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಲ್ಲಿ ಭದ್ರಾವತಿ ಶಿವಮೊಗ್ಗಗಳ ಮೂಲಕ ಸಾಗರವನ್ನು ತಲುಪಿ ಮುಂದುವರಿಯುವ ರೈಲುಮಾರ್ಗದ ಕೊನೆಯ ನಿಲ್ದಾಣ. ಬೀರೂರಿನಿಂದ 161ಕಿಮೀ ಶಿವಮೊಗ್ಗದಿಂದ 100ಕಿಮೀ ಮತ್ತು ಸಾಗರದಿಂದ 16 ಕಿಮೀ, ದೂರದಲ್ಲಿದೆ. ಶರಾವತಿ ಕಣಿವೆ ಮತ್ತು ಜೋಗ್ ಜಲಪಾತ ತಾಳಗುಪ್ಪದಿಂದ 20 ಕಿಮೀ ದೂರದಲ್ಲಿವೆ. (ಆರ್.ಎಂ.ಆರ್.)

**ತಿಪಟೂರು:** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ; ಉಪವಿಭಾಗ; ತಾಲ್ಲೂಕಿನ ಮತ್ತು ಉಪವಿಭಾಗದ ಕೇಂದ್ರ. ಪಶ್ಚಿಮದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳೂ ಪೂರ್ವದಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ತುರುವೇಕೆರೆ ತಾಲ್ಲೂಕುಗಳೂ ತಿಪಟೂರು ತಾಲ್ಲೂಕನ್ನು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 830.1 ಚ.ಕಿಮೀ; ಜನಸಂಖ್ಯೆ 2,16,826. ತಿಪಟೂರು, ಕಿಬ್ಬನಹಳ್ಳಿ, ನೊಣವಿನಕೆರೆ, ಹೊನ್ನವಳ್ಳಿ– ಇವು ಈ ತಾಲ್ಲೂಕಿನ ಹೋಬಳಿಗಳು, ತಾಲ್ಲೂಕಿನಲ್ಲಿ ತಿಪಟೂರು ಪಟ್ಟಣವೂ 216 ಗ್ರಾಮಗಳೂ ಇವೆ.

ತಿಪಟೂರು ತಾಲ್ಲೂಕು ಒಟ್ಟಿನಲ್ಲಿ ಅಲೆಯಲೆಯಾಗಿ ಏರಿಳಿಯುವ ಪ್ರಸ್ಥಭೂಮಿ ಪ್ರದೇಶ. ಆದರೆ ಉತ್ತರಲ್ಲಿ ಬಂಡೆಗಳಿಂದ ಕೂಡಿದ ಬೋಳು ಕೋಡುಗಳ ಬೆಟ್ಟಗಳಿವೆ. ಕೃಷ್ಣಾ ಮತ್ತು ಕಾವೇರಿ ನದೀ ವ್ಯವಸ್ಥೆಗಳನ್ನು ಬೇರ್ಪಡಿಸುವ ಜಲವಿಭಾಗ ರೇಖೆ ಈ ತಾಲ್ಲೂಕಿನ ಮೂಲಕ ಪೂರ್ವಪಶ್ಚಿಮವಾಗಿ ಸಾಗುತ್ತದೆ. ತಾಲ್ಲೂಕಿನ ಉನ್ನತ ಶಿಖರಗಳು ಎರಡು. ಬೊಮ್ಮನಹಳ್ಳಿ ಶಿಖರದ ಎತ್ತರ ಸಮುದ್ರಮಟ್ಟದಿಂದ 956ಮೀ ಚೌಡನಹಳ್ಳಿ ಶಿಖರದ ಎತ್ತರ 812 ಮೀ. ತಾಲ್ಲೂಕಿನಲ್ಲಿ ಉಲ್ಲೇಖಾರ್ಹವಾದ ನದಿಗಳಾಗಲೀ ಹೊಳೆಗಳಾಗಲೀ ಇಲ್ಲ. ಆದರೆ ಕೆರೆಗಳ ನಿರ್ಮಾಣಕ್ಕೆ ಇಲ್ಲಿಯ ಭೂಮಿ ಬಹಳ ಅನುಕೂಲವಾಗಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 61.5 ಸೆಂಮೀ. ಇಲ್ಲಿಯ ನೈಸರ್ಗಿಕ ಸಸ್ಯ ಸಂಪತ್ತು ಬಹಳ ಅಲ್ಪ. ಕುರುಚಲು ಕಾಡುಗಳು ಅಲ್ಲಲ್ಲಿ ಇವೆ. ತಾಲ್ಲೂಕಿನಲ್ಲಿ ಕಪ್ಪು, ಕಂದು ಮತ್ತು ಕೆಂಪು ಮಣ್ಣುಗಳಿವೆ. ಕಪ್ಪು ಮಣ್ಣಿನ ಭೂಮಿ ಬಲು ಕಡಿಮೆ. ಅದಕ್ಕೆ ವ್ಯವಸಾಯದ ದೃಷ್ಟಿಯಿಂದ ಅಷ್ಟೇನೂ ಪ್ರಾಮುಖ್ಯವಿಲ್ಲ. ಮರಳು ಮಿಶ್ರಿತ ಕೆಂಪು ಮಣ್ಣು ಭೂಮಿ ಸಾಮಾನ್ಯ. ತಾಲ್ಲೂಕಿನ ಉತ್ತರ ಭಾಗದ ಮಣ್ಣು ಅಷ್ಟೇನೂ ಫಲವತ್ತಾದ್ದಲ್ಲ. ಅದರಲ್ಲಿ ನೊರಜುಗಲ್ಲು ಮಿಶ್ರವಾಗಿದೆ. ತಾಲ್ಲೂಕಿನ ಮಧ್ಯ ಮತ್ತು ದಕ್ಷಿಣ ಭಾಗಗಳ ಎತ್ತರದ ಪ್ರದೇಶಗಳಲ್ಲಿ ಕೆಂಪು ಮಣ್ಣು ತಗ್ಗಿನ ಪ್ರದೇಶಗಳಲ್ಲಿ ಕಪ್ಪು ಕಂದು ಮಣ್ಣು ಇವೆ. ರಾಗಿ, ಬತ್ತ, ನವಣೆ, ಹುರುಳಿ, ಶೇಂಗ, ತೊಗರಿ ಇಲ್ಲಿಯ ಮುಖ್ಯ ಬೆಳೆಗಳು. ಕೆಲವು ಕಡೆಗಳಲ್ಲಿ ಹತ್ತಿ ಬೆಳೆಯಲಾಗುತ್ತದೆ. ತಿಪಟೂರು ತಾಲ್ಲೂಕು ತೆಂಗಿನ ಬೆಳೆಗೆ ಬಹಳ ಪ್ರಸಿದ್ಧವಾಗಿದೆ. ಹೊನ್ನವಳ್ಳಿಯ ಬಳಿ ಬೆಳೆಯುವ ತೆಂಗು ಅತ್ಯುತ್ತಮವಾದ್ದೆಂದು ಪರಿಗಣಿತವಾಗಿದೆ. ತಾಲ್ಲೂಕಿನ ಅನೇಕ ಕಡೆಗಳಲ್ಲಿ ತೆಂಗಿನ ತೋಟಗಳಿವೆ. ತಾಲ್ಲೂಕಿನಲ್ಲಿ ವ್ಯವಸಾಯದ ಜೊತೆಗೆ ಪಶುಪಾಲನೆಯೂ ಉಂಟು. ತಿಪಟೂರು, ನೊಣವಿನಕೆರೆ ಮತ್ತು ಬಳಿಗೆರೆಯಲ್ಲಿ ಪಶುವೈದ್ಯ ಶಾಲೆಗಳಿವೆ.

ಕೊಬ್ಬರಿ ಎಣ್ಣೆ, ಮರಕೊಯ್ಯುವುದು, ಮರಗೆಲಸ, ಕಬ್ಬಿಣ ಕೆಲಸ, ಬೆಂಕಿಕಡ್ಡಿ ಮತ್ತು ಸಾಬೂನು ತಯಾರಿಕೆ– ಇವು ತಾಲ್ಲೂಕಿನ ಮುಖ್ಯ ಕೈಗಾರಿಕೆಗಳು, ರೇಷ್ಮೆ, ಹತ್ತಿ ಮತ್ತು ಉಣ್ಣೆ ಬಟ್ಟೆಗಳನ್ನು ನೇಯುವರು. ನೇಯ್ಗೆಯ ಮತ್ತು ತೆಂಗಿನ ನಾರಿನ ಉದ್ಯಮದ ಸಹಕಾರ ಸಂಘಗಳುಂಟು.

ಬೆಂಗಳೂರು–ಅರಸೀಕೆರೆ ಬ್ರಾಡ್ ಗೇಜ್ ರೈಲುಮಾರ್ಗವೂ ಬೆಂಗಳೂರು–ಶಿವಮೊಗ್ಗ ಹೆದ್ದರಿಯೂ ತಿಪಟೂರಿನ ಮೂಲಕ ಹೋಗುತ್ತವೆ. ತಿಪಟೂರು ಪಟ್ಟಣ ಒಂದು ಸಂಧಿಸ್ಥಳ. ತಿಪಟೂರಿನಿಂದ ನೈಋತ್ಯಾಭಿಮುಖವಾಗಿ ಲಿಂಗದಹಳ್ಳಿಯ ಮೂಲಕ ಹಾಸನಕ್ಕೂ ದಕ್ಷಿಣಾಭಿಮುಖವಾಗಿ ನುಗ್ಗೆಹಳ್ಳಿಯ ಮೂಲಕ ಚನ್ನರಾಯಪಟ್ಟಣಕ್ಕೂ ಆಗ್ನೇಯದ ಕಡೆಗೆ ನೊಣವಿನಕೆರೆಯ ಮೂಲಕ ತುರುವೆಕೆರೆಗೂ ರಸ್ತೆಗಳಿವೆ. ತಿಪಟೂರು–ತುರುವೆಕೆರೆ ರಸ್ತೆ ಮಾಯಸಂದ್ರಕ್ಕೆ ಮುಂದುವರಿದು ಗುಬ್ಬಿ–ಶ್ರೀರಂಗಪಟ್ಟಣ ರಸ್ತೆಯನ್ನು ಸಂಧಿಸುತ್ತದೆ. ಕೊನೆಹಳ್ಳಿ ರೈಲುನಿಲ್ದಾಣದಿಂದ ಹೊನ್ನವಳ್ಳಿಗೆ ರಸ್ತೆಯಿದೆ. ತಾಲ್ಲೂಕಿನ ಬಹುತೇಕ ಎಲ್ಲ ಗ್ರಾಮಗಳಿಗೂ ರಸ್ತೆಗಳಿವೆ.

ತಿಪಟೂರು ಪಟ್ಟಣ ತುಮಕೂರಿಗೆ ಪಶ್ಚಿಮದಲ್ಲಿ ಸು. 74 ಕಿಮೀ ದೂರದಲ್ಲಿ, ಉ.ಅ.$13^0 15'$ ಮತ್ತು ಪೂ.ರೇ. $76^0 32'$ ಮೇಲೆ, ಬೆಂಗಳೂರು – ಅರಸೀಕೆರೆ ರೈಲುಮಾರ್ಗದಲ್ಲಿ, ಸಮುದ್ರಮಟ್ಟದಿಂದ 848 ಮೀ ಎತ್ತರದಲ್ಲಿ ಇದೆ. ಜನಸಂಖ್ಯೆ 53104. ಜಿಲ್ಲೆಯಲ್ಲಿ ಇದು ಎರಡನೆಯ ದೊಡ್ಡ ಪಟ್ಟಣ. ಮೊದಲನೆಯದು ತುಮಕೂರು, ಹಲವು ರಸ್ತೆಗಳು ಇಲ್ಲಿ ಸಂಧಿಸುತ್ತವೆ. ಶ್ರೀ ಕೃಷ್ಣರಾಜೇಂದ್ರ ಮತ್ತು ಗಾಂಧಿನಗರ ಬಡಾವಣೆಗಳಿಂದ ಕೂಡಿ ಬೆಳೆಯುತ್ತಿರುವ ತಿಪಟೂರು ಒಂದು ಮುಖ್ಯ ವ್ಯಾಪಾರಸ್ಥಳ.

ತೆಂಗು ಮತ್ತು ಕೊಬ್ಬರಿ ಇಲ್ಲಿ ಮಾರಾಟವಾಗುವ ಮುಖ್ಯ ಸರಕುಗಳು. ಮುಂಬಯಿ, ದೆಹಲಿ, ಕಾನ್ಪುರ ಮುಂತಾದ ದೂರದ ವ್ಯಾಪಾರ ಕೇಂದ್ರಗಳಿಗೆ ಕೊಬ್ಬರಿ ಮಾರಾಟವಾಗುತ್ತದೆ. ಪ್ರತಿ ಶನಿವಾರ ಇಲ್ಲಿ ಸಂತೆ ನೆರೆಯುತ್ತದೆ. ಇಲ್ಲಿ ಒಂದು ಪುರಸಭೆ ಉಂಟು. ಅನೇಕ ಶಾಲೆಗಳೂ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿದ್ದು ಈಗ ತುಮಕೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿರುವ ಕಲ್ಪತರು ಕಾಲೇಜೂ ಇವೆ. ವಿದ್ಯುತ್ತು, ಅಂಚೆ, ತಂತಿ, ದೂರವಾಣಿ, ಸಾರ್ವಜನಿಕ ಆಸ್ಪತ್ರೆ, ಪಶುವೈದ್ಯಶಾಲೆ ಮುಂತಾದ ಸೌಲಭ್ಯಗಳುಂಟು. ಪಟ್ಟಣಕ್ಕೆ ಸುರಕ್ಷಿತ ನೀರಿನ ಸರಬರಾಜಾಗುತ್ತದೆ. ಕೊಬ್ಬರಿ ಎಣ್ಣೆಯ ಮತ್ತು ಮರ ಕೊಯ್ಯುವ ಕಾರ್ಖಾನೆಗಳಿವೆ. ವಾಣಿಜ್ಯ ಬ್ಯಾಂಕುಗಳುಂಟು. ಇಲ್ಲಿರುವ ದೇವಾಲಯಗಳಲ್ಲಿ ಕಲ್ಲೇಶ್ವರ, ತಿಪಟೂರಮ್ಮ, ಆಂಜನೇಯಸ್ವಾಮಿ, ಮಲ್ಲಿಕಾರ್ಜುನ, ಕಾಶಿವಿಶ್ವೇಶ್ವರ ಮತ್ತು ಕನ್ಯಕಾಪರಮೇಶ್ವರಿ ದೇವಾಲಯಗಳು ಪ್ರಮುಖವಾದವು.

(ಎಚ್.ಎಸ್.ಡಿ.)

**ತಿರುಚ್ಚಿರಾಪಳ್ಳಿ:** ತಮಿಳುನಾಡು ರಾಜ್ಯದ ಒಂದು ಜಿಲ್ಲೆ, ನಗರ, ಜಿಲ್ಲೆಯ ಆಡಳಿತ ಕೇಂದ್ರ. ಚೆನ್ನೈ ನಗರದ ನೈಋತ್ಯಕ್ಕೆ, ರೈಲಿನಿಂದ 385 ಕಿಮೀ ದೂರದಲ್ಲಿ, ಚೆನ್ನೈ – ತಿರುವನಂತಪುರಂ ರೈಲುಮಾರ್ಗ ಮತ್ತು ಹೆದ್ದಾರಿಗಳ ಮೇಲೆ ಕಾವೇರಿ ನದೀ ಮುಖಜ ಭೂಮಿಯ ಬುಡದಲ್ಲಿದೆ. ಪ್ರಮುಖ ರೈಲ್ವೆ ಜಂಕ್ಷನ್. ಹಿಂದೆ ಇದು ದಕ್ಷಿಣ ರೈಲ್ವೆಯ ಆಡಳಿತ ಕೇಂದ್ರವಾಗಿತ್ತು. ಇದರ ಉಪನಗರವಾದ ಗೋಲ್ಡನ್ ರಾಕ್‌ನಲ್ಲಿ ಈಗ ದಕ್ಷಿಣ ರೈಲ್ವೆಯ ಮೀಟರ್ ಗೇಜ್ ವಿಭಾಗದ ಕಾರ್ಯಾಲಯವಿದೆ. ಇಲ್ಲಿ ವಿಮಾನ ನಿಲ್ದಾಣವೂ ಆಕಾಶವಾಣಿಯ ಪ್ರಸಾರಕೇಂದ್ರವೂ ಇವೆ. ರಾವಣನ ಸಂಬಂಧಿಗಳಲ್ಲೊಬ್ಬನಾದ ತ್ರಿಶಿರನೆಂಬ ಅಸುರ ಇಲ್ಲಿ ಆಳಿದ್ದರಿಂದ ಇದಕ್ಕೆ ತ್ರಿಶಿರಾಪ್ಪಳ್ಳಿ ಎಂಬ ಹೆಸರು ಪ್ರಾಪ್ತವಾಯಿತೆಂದು ಹೇಳಲಾಗುತ್ತದೆ. ತ್ರಿಶಿರಾಪಳ್ಳಿ ಕಾಲಕ್ರಮೇಣ ತಿರುಚ್ಚಿರಾಪಳ್ಳಿಯಾಯಿತು. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಟ್ರಿಚಿನಾಪೊಲಿ ಎನಿಸಿಕೊಂಡಿದ್ದ ಇದಕ್ಕೆ ಕನ್ನಡದಲ್ಲಿ ತಿರುಚಿನಾಪಳ್ಳಿ ಎಂಬ ಹೆಸರೂ ವಾಡಿಕೆಯಲ್ಲಿದೆ. ಇದನ್ನು ಸಂಕ್ಷಿಪ್ತವಾಗಿ ಟ್ರಿಚಿ, ತಿರುಚ್ಚಿ ಎಂದೂ ಕರೆಯುವುದುಂಟು.

ಇದು 7ನೆಯ ಶತಮಾನದಿಂದ 17 ನೆಯ ಶತಮಾನದ ವರೆಗೆ ಪಲ್ಲವ, ಚೋಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಪ್ರಾದೇಶಿಕ ರಾಜಧಾನಿಯಾಗಿದ್ದಿತು. 17–19 ನೆಯ ಶತಮಾನ ಕಾಲದಲ್ಲಿ ತಿರುಚ್ಚಿರಾಪಳ್ಳಿಯ ಮಧ್ಯದಲ್ಲಿರುವ 83 ಮೀ ಎತ್ತರದ ಬಂಡೆಯನ್ನು ಆವರಿಸಿದ್ದ ಕೋಟೆ ಮುಸ್ಲಿಮ್, ಮರಾಠಾ, ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳ ನಡುವಿನ ಕದನದ ರಂಗವಾಗಿತ್ತು. ಈಗ ಕೋಟೆ ಬಿದ್ದುಹೋಗಿದೆ. ಬಂಡೆಯ ತುದಿಗೆ ಗಣೇಶನ (ಉಚ್ಚಿಪ್ಪಿಳ್ಳೆಯಾರ್) ಗುಡಿಯಿದೆ. ಅಲ್ಲಿಂದ ಕಾಣುವ ಸುತ್ತಮುತ್ತಲಿನ ಪ್ರದೇಶದ ದೃಶ್ಯ ಬಹಳ ಸುಂದರವಾದುದ್ದು. ರಾಬರ್ಟ್ ಕ್ಲೈವ್ ವಾಸಿಸುತ್ತಿದ್ದ ಕಟ್ಟಡದಲ್ಲಿ ಈಗ ಸೇಂಟ್ ಜೋಸೆಫ್ ಕಾಲೇಜಿದೆ.

ಇದು ಶೈಕ್ಷಣಿಕ, ಔದ್ಯೋಗಿಕ ಮತ್ತು ವ್ಯಾಪಾರ ಕೇಂದ್ರ. ಇಲ್ಲಿ ಭಾರತಿ ದಾಸನ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಅನೇಕ ಕಾಲೇಜುಗಳಿವೆ. ಇಲ್ಲಿ ವಿದ್ಯುತ್ ಥರ್ಮಲ್ ಬಾಯ್ಲರ್ ಮತ್ತು ರೈಲ್ವೆ ಎಂಜಿನ್ ಕಾರ್ಖಾನೆಗಳಿವೆ. ಹಿಂದಿನಿಂದಲೂ ನಡೆದು ಬಂದಿರುವ, ಕೈಮಗ್ಗದ ಬಟ್ಟೆಗಳನ್ನು ನೇಯುವ ಹಾಗೂ ಚುಟ್ಟಾ ಮತ್ತು ಬೀಡಿಗಳನ್ನು ಕಟ್ಟುವ ಗೃಹಕೈಗಾರಿಕೆಗಳೂ ಇವೆ. ಕೈಮಗ್ಗದ ಬಟ್ಟೆ, ಗಾಜಿನ ಬಳೆ, ತಾಳೆ ಎಲೆಗಳ ಪೆಟ್ಟಿಗೆ, ಚುಟ್ಟಾ ಮತ್ತು ಬೀಡಿ, ಮರ ಮತ್ತು ಮಣ್ಣಿನ ಆಟಿಕೆ, ಚಾಪೆ, ನೂಲಿನ ಜಮಖಾನೆ ಮತ್ತು ಕೃತಕ ಹರಳುಗಳಿಗೆ ಇದು ಪ್ರಸಿದ್ಧವಾಗಿದೆ. ದಿನತಂತಿ ಮತ್ತು ದಿನಮಲರ್ ಪತ್ರಿಕೆಗಳು ಇಲ್ಲಿಂದ ಪ್ರಕಟವಾಗುತ್ತವೆ. ಈ ನಗರದ ಜನಸಂಖ್ಯೆ 6,70,000.

ತಿರುಚ್ಚಿರಾಪ್ಪಳ್ಳಿ ಜಿಲ್ಲೆ ತಮಿಳುನಾಡು ರಾಜ್ಯದ ಮೂರನೆಯ ದೊಡ್ಡ ಜಿಲ್ಲೆ. ಇದು ಬಹುತೇಕ ಕಾವೇರಿ ನದೀ ಕಣಿವೆಯಲ್ಲಿದೆ. 1948ರಲ್ಲಿ ಹಳೆಯ ಪುದುಕೋಟೆ ಸಂಸ್ಥಾನ ಇದರಲ್ಲಿ ಸೇರಿತ್ತು. ಜಿಲ್ಲೆಯ ವಿಸ್ತೀರ್ಣ 14,278 ಚ.ಕಿಮೀ. ಜನಸಂಖ್ಯೆ 80,66,700. ಇಲ್ಲಿಯದು ಉಷ್ಣ ವಾಯುಗುಣ. ಈಶಾನ್ಯ ಮತ್ತು ನೈಋತ್ಯ ಮಾನ್‌ಸೂನ್‌ಗಳಿಂದ ವರ್ಷದಲ್ಲಿ ಸರಾಸರಿ 85 ಸೆಂಮೀ ಮಳೆ ಬೀಳುತ್ತದೆ. ಜಿಲ್ಲೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ಕಾವೇರಿ ನದಿ ತಿರುಚ್ಚಿರಾಪ್ಪಳ್ಳಿ ನಗರದ ಪ್ರಸಿದ್ಧ ಬಂಡೆಯನ್ನು ದಾಟಿದ ಅನಂತರ ಕವಲೊಡೆಯುತ್ತದೆ. ಇದರಿಂದ ಸಂಭವಿಸಿರುವ ದ್ವೀಪವೇ ಶ್ರೀರಂಗಂ ಕಾವೇರಿಯ ಎರಡೂ ಕವಲುಗಳು ಪಟ್ಟಣದಿಂದ 16 ಕಿಮೀ ದೂರದಲ್ಲಿ ಮತ್ತೆ ಒಂದುಗೂಡುತ್ತವೆ. ತಂಜಾವೂರು ಜಿಲ್ಲೆಯ ನೀರಾವರಿ ವ್ಯವಸ್ಥೆಗೆ ಮೂಲವಾದ ಮಹಾ ಅಣೆಕಟ್ಟೆ ಇರುವುದು ಈ ಸ್ಥಳದಲ್ಲಿ. ಇದು ಭಾರತದಲ್ಲೆ ಅತ್ಯಂತ ಹಳೆಯ ನೀರಾವರಿ ವ್ಯವಸ್ಥೆ. ತಿರುಚ್ಚಿರಾಪ್ಪಳ್ಳಿ ನಗರಕ್ಕೂ ಶ್ರೀರಂಗಂ ದ್ವೀಪಕ್ಕೂ ನಡುವೆ 32 ಕಮಾನುಗಳ ಸೇತುವೆಯೊಂದಿದೆ. ದ್ವೀಪದ ಮೇಲೆ ರಂಗನಾಥ ಸ್ವಾಮಿಯ ಪ್ರಸಿದ್ಧ ಶ್ರೀವೈಷ್ಣವ ದೇವಾಯಲವಿದೆ. ಇದರ ಪೂರ್ವಕ್ಕೆ ಸನಿಹದಲ್ಲೇ ಜಂಬುಕೇಶ್ವರನ ದೇವಾಲಯವುಂಟು.

ಜಿಲ್ಲೆ ಫಲವತ್ತಾದ ಭೂಮಿಯಿಂದ ಕೂಡಿದೆ. ಬತ್ತ, ಕಬ್ಬು ಮತ್ತು ವೀಳೆಯದೆಲೆಯ ಬೆಳೆಗಳಿಗೆ ಕಾವೇರಿಯ ನೀರನ್ನು ನೀರಾವರಿಯ ಮೂಲಕ ಬಳಸಿಕೊಳ್ಳಲಾಗುತ್ತಿದೆ. ಇಲ್ಲಿ ಜಿಪ್ಸಮ್ ನಿಕ್ಷೇಪಗಳುಂಟು. ದಾಲ್ಮಿಯಾಪುರದಲ್ಲಿ ಸಿಮೆಂಟಿನ ಕಾರ್ಖಾನೆಯಿದೆ. ಫಾಸ್ಫರಸ್ ಮತ್ತು ಮ್ಯಾಗ್ನಟೈಟ್ ಇಲ್ಲಿ ದೊರಕುವ ಇನ್ನೆರಡು ಖನಿಜಗಳು. (ಜಿ.ಕೆ.ಯು.)

**ತಿರುನಲ್ವೇಲಿ:** ತಮಿಳುನಾಡು ರಾಜ್ಯದ ಒಂದು ಜಿಲ್ಲೆ; ತಾಲ್ಲೂಕು ; ಅವುಗಳ ಮುಖ್ಯಸ್ಥಳ. ಜಿಲ್ಲೆಯ ಉತ್ತರದಲ್ಲಿ ರಾಮನಾಥಪುರಮ್ ಜಿಲ್ಲೆ, ಪೂರ್ವದಲ್ಲಿ ಬಂಗಾಳ ಕೊಲ್ಲಿ, ನೈಋತ್ಯದಲ್ಲಿ ಕನ್ಯಾಕುಮಾರಿ ಜಿಲ್ಲೆ ಮತ್ತು ಪಶ್ಚಿಮದಲ್ಲಿ ಕೇರಳಕ್ಕೆ ಸೇರಿದ ಪಶ್ಚಿಮ ಘಟ್ಟದ ದಕ್ಷಿಣ ತುದಿಯ ಬೆಟ್ಟಗಳ ಸಾಲುಗಳು ಇವೆ. ವಿಸ್ತೀರ್ಣ 11,433 ಚ.ಕಿಮೀ, ಜನಸಂಖ್ಯೆ 54,70,000. ಈ ಜಿಲ್ಲೆಯಲ್ಲಿ ಹರಿಯುವ ಅನೇಕ ನದಿಗಳಲ್ಲಿ ತಾಮ್ರಪರ್ಣಿ ಮುಖ್ಯವಾದುದ್ದು. ಈ ಜಿಲ್ಲೆ ಬತ್ತ, ರಾಗಿ, ಶೇಂಗ, ಹತ್ತಿ ಮೊದಲಾದ ಬೆಳೆಗಳಿಗೂ ಕೈಮಗ್ಗದ ಬಟ್ಟೆಗಳಿಗೂ ಪ್ರಸಿದ್ಧ ಪಡೆದಿದೆ. ಅನೇಕ ಸ್ಥಳಗಳಲ್ಲಿ ಹತ್ತಿಯ ಗಿರಣಿಗಳಿವೆ ; ಅವುಗಳಲ್ಲಿ ಕೋಯಿಲ್‌ಪಟ್ಟಿ ಮತ್ತು ತೂತ್ತುಕುಡಿ ಮುಖ್ಯವಾದವು. ಇಲ್ಲಿ ಉಪ್ಪಿನ ತಯಾರಿಕೆಯೂ ಒಂದು ಮುಖ್ಯ ಉದ್ಯಮ. ಜಿಲ್ಲೆಯ ದಕ್ಷಿಣ ಭಾಗದಲ್ಲಿ ತಾಳೆ ಜಾತಿಯ ಮರಗಳು ಹೆಚ್ಚಾಗಿ ಬೆಳೆಯುತ್ತವೆ. (ಎಂ.ಎ.ಎಚ್.)

**ತಿರುಪತಿ:** ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಚಂದ್ರಗಿರಿ ತಾಲ್ಲೂಕಿನಲ್ಲಿರುವ ಪ್ರಸಿದ್ಧ ವೈಷ್ಣವಕ್ಷೇತ್ರ. ಯಾತ್ರಾಸ್ಥಳ. ಉ. ಅ. $13^{0}39'$ ಮತ್ತು ಪ.ರೇ. $79^{0}25'$ ಮೇಲಿದೆ. ತಿರುಪತಿ ಎಂಬ ಹೆಸರಿನ ಪಟ್ಟಣ, ಅದರ ಪಕ್ಕದಲ್ಲಿರುವ ಬೆಟ್ಟದ ಮೇಲಿರುವ ತಿರುಮಲ ಕ್ಷೇತ್ರ– ಎರಡನ್ನೂ ತಿರುಪತಿ ಎಂದೇ ಕರೆಯುವುದು ರೂಢಿ. 8 ಚ.ಕಿಮೀ ವಿಸ್ತೀರ್ಣದ ತಿರುಪತಿ ಪಟ್ಟಣ ಚೆನ್ನೈನಿಂದ 144 ಕಿಮೀ ದೂರದಲ್ಲಿ, ಚೆನ್ನೈ – ಮುಂಬಯಿ ರೈಲುಮಾರ್ಗದ ರೇಣುಗುಂಟಾ ಜಂಕ್ಷನ್‌ನಿಂದ 10 ಕಿಮೀ ದೂರದಲ್ಲಿದೆ. ಚೆನ್ನೈ, ವಿಜಯವಾಡ. ಕಾಟ್ಪಾಡಿಗಳಿಂದ ಇಲ್ಲಿಗೆ ರೈಲ್ವೆ ಸಂಪರ್ಕವುಂಟು. ಇಲ್ಲಿಂದ ದೇಶದ ಮುಖ್ಯ ಸ್ಥಳಗಳಿಗೆ ರಸ್ತೆ ಹಾಗೂ ವಿಮಾನ ಸಂಪರ್ಕವೂ ಇವೆ. ಪೂರ್ವಘಟ್ಟದ ಬೆಟ್ಟಗಳ ಶ್ರೇಣಿಯೊಂದರ ಮಡಿಲಲ್ಲಿ ಪವಡಿಸಿದಂತಿರುವ ತಿರುಪತಿ ಪಟ್ಟಣದ ಜನಸಂಖ್ಯೆ 6,50,000. ಇಲ್ಲಿ ಇರುವ ವೆಂಕಟೇಶ್ವರ ವಿಶ್ವವಿದ್ಯಾಲಯ 1954ರಲ್ಲಿ ಸ್ಥಾಪಿತವಾಯಿತು. ಇದು ಆಂಧ್ರಪ್ರದೇಶದ ಮೂರನೆಯ ವಿಶ್ವವಿದ್ಯಾಲಯ. ಇಲ್ಲಿ ಒಂದು ಪ್ರಾಚ್ಯ ಮಹಾವಿದ್ಯಾಲಯವೂ ಒಂದು ಸಂಶೋಧನೆ ಕೇಂದ್ರವೂ ಇವೆ. ತಿರುಪತಿಯ ಆಟದ ಸಾಮಾನುಗಳು ಪ್ರಸಿದ್ಧ.

ತಿರುಪತಿ ಬಳಿಯ ಪೂರ್ವಘಟ್ಟ ಶ್ರೇಣಿಗೆ ಶೇಷಾಚಲ, ವೆಂಕಟಾಚಲ ಸಪ್ತಗಿರಿ ಮುಂತಾದ ಹೆಸರುಗಳಿವೆ. ತಿರುಮಲೆ ಬೆಟ್ಟಗಳು ಸು. 25 ಚ.ಕಿಮೀ ಪ್ರದೇಶವನ್ನು ಆವರಿಸಿಕೊಂಡಿವೆ. ಈ ಶ್ರೇಣಿ ಶೇಷಾಚಲ, ನಲ್ಲಮಲ ಮತ್ತು ನಾಗರಿ ಬೆಟ್ಟಗಳ ಶ್ರೇಣಿಗಳೊಂದಿಗೆ ಕೂಡಿಕೊಂಡಿದೆ. ಈ ಬೆಟ್ಟ ಆದಿಶೇಷನ ಶರೀರದಂತೆ ಹಬ್ಬಿದೆಯೆಂಬುದು ಭಕ್ತರ ಕಲ್ಪನೆ, ತಿರುಮಲೆಯ ಏಳು ಬೆಟ್ಟಗಳೂ ಆದಿಶೇಷನ ಏಳು ಹೆಡೆಗಳೆಂದು ಹೇಳಲಾಗಿದೆ. ಸಮುದ್ರಮಟ್ಟದಿಂದ 850 ಮೀ ಎತ್ತರದಲ್ಲಿರುವ ತಿರುಮಲೆಯ ವಾಯುಗುಣ ಹಿತಕರವಾದುದ್ದು. ಇಲ್ಲಿಯ ಜನಸಂಖ್ಯೆ 50,000. (ಬಿ.ಬಿ.ಓ.)

**ತಿರುಮಕೂಡಲು ನರಸೀಪುರ:** ಮೈಸೂರು ಜಿಲ್ಲೆಯಲ್ಲಿ ಒಂದು ತಾಲ್ಲೂಕು; ಈ ತಾಲ್ಲೂಕಿನ ಆಡಳಿತ ಕೇಂದ್ರ, ಮೈಸೂರು, ಶ್ರೀರಂಗಪಟ್ಟಣ, ಮಳವಳ್ಳಿ, ಕೊಳ್ಳೇಗಾಲ, ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕುಗಳು ಈ ತಾಲ್ಲೂಕನ್ನು ಬಳಸಿವೆ. ತಾಲ್ಲೂಕಿನ ವಿಸ್ತೀರ್ಣ 576 ಚ.ಕಿಮೀ. ಜನಸಂಖ್ಯೆ 2,40,500. ತಾಲ್ಲೂಕಿನಲ್ಲಿ ಒಟ್ಟು 5 ಹೋಬಳಿಗಳೂ (ಕಸಬಾ, ಬನ್ನೂರು, ಸೋಸಲೆ, ತಲಕಾಡು, ಮೂಗೂರು) 133 ಗ್ರಾಮಗಳೂ ಇವೆ. 1868ರ ವರೆಗೆ ಇದು ತಲಕಾಡು ತಾಲ್ಲೂಕು ಆಗಿತ್ತು. ಆ ವರ್ಷ ಈ ತಾಲ್ಲೂಕಿಗೆ ತಿರುಮಕೂಡಲು ನರಸೀಪುರ ಎಂಬ ಹೆಸರು ಕೊಡಲಾಯಿತು. ಹಳೆಯ ಅಷ್ಟಗ್ರಾಮ ತಾಲ್ಲೂಕಿನಿಂದ ಬನ್ನೂರು ಮತ್ತು ಬೇವಿನಹಳ್ಳಿಗಳನ್ನು ಈ ತಾಲ್ಲೂಕಿಗೂ ಇಲ್ಲಿದ್ದ ತಾಯೂರು ಹೋಬಳಿಯನ್ನು ನಂಜನಗೂಡು ತಾಲ್ಲೂಕಿಗೂ ಸೇರಿಸಲಾಯಿತು. ಈ ತಾಲ್ಲೂಕಿನಲ್ಲಿದ್ದ ಪೂರಿಗಾಲಿ ಹೋಬಳಿಯನ್ನು ಮಳವಳ್ಳಿ ತಾಲ್ಲೂಕಿಗೆ ಸೇರಿಸಿದ್ದು 1886ರಲ್ಲಿ. ತಾಲ್ಲೂಕು ಬಹುತೇಕ ಮೈದಾನ ಪ್ರದೇಶ. ವಿರಳವಾಗಿ ಅಲ್ಲಲ್ಲಿ ಕೆಲವು ಬೆಟ್ಟಗಳುಂಟು. ಮಳವಳ್ಳಿಯ ಎಲ್ಲೆಯ ಬಳಿ ಇರುವ ಕುಂದೂರು ಬೆಟ್ಟ ಇವುಗಳಲ್ಲಿ ಅತ್ಯಂತ ಎತ್ತರವಾದದ್ದು.

ಕಾವೇರಿ ಮತ್ತು ಕಪಿಲಾ ಈ ತಾಲ್ಲೂಕಿನ ಮುಖ್ಯ ನದಿಗಳು. ಕಾವೇರಿ ನದಿ ಈ ತಾಲ್ಲೂಕಿನಲ್ಲಿ ಉತ್ತರದಿಂದ ಹರಿದು ಬಂದು ಸರ್ಪದಂತೆ ಮುಂದುವರಿದು ಕೊಳ್ಳೇಗಾಲ ತಾಲ್ಲೂಕಿನ ಎಲ್ಲೆಯಾಗಿ ಪರಿಣಮಿಸುತ್ತದೆ. ಪಶ್ಚಿಮದಿಂದ ಕಪಿಲಾ ನದಿ ಹರಿದು ಬಂದು ತಿರುಮಕೂಡಲಿನ ಬಳಿ ಕಾವೇರಿ ನದಿಯನ್ನು ಸೇರುತ್ತದೆ. ಈ ತಾಲ್ಲೂಕಿನಲ್ಲಿ ಕಾವೇರಿ ನದಿ ಕತೆಯಾದ, ಮರಳಿನಿಂದ ಕೂಡಿದ, ಅಗಲವಾದ ಪಾತ್ರದಲ್ಲಿ ಹರಿಯುತ್ತದೆ. ಅನೇಕ

ಕಡೆಗಳಲ್ಲಿ ಪ್ರವಾಹ ಕಾಲವಿನಾ ಉಳಿದ ಕಾಲಗಳಲ್ಲಿ ಇದನ್ನು ಹಾಯುವುದು ಸುಲಭ. ಈ ನದಿಯ ದಡದಲ್ಲೂ ನೆರೆಯ ತಗ್ಗು ಪ್ರದೇಶಗಳಲ್ಲೂ ಕಪ್ಪು ಮಣ್ಣಿದೆ. ಎತ್ತರದ ಪ್ರದೇಶಗಳಲ್ಲಿ, ಅದರಲ್ಲೂ ತಾಲ್ಲೂಕಿನ ಪಶ್ಚಿಮದ ಭೂಮಿ ಅಷ್ಟೇನೂ ಫಲವತ್ತಾಗಿಲ್ಲ.

ಇಲ್ಲಿ ಕಾಡುಗಳು ಇಲ್ಲ. ಬೀಳು ಜಮೀನು ಹೆಚ್ಚೇನೂ ಇಲ್ಲ. ತಾಲ್ಲೂಕಿನ ತರಿ ವ್ಯವಸಾಯಕ್ಕೆ ಕಾವೇರಿ ನದಿ ನಾಲೆಗಳ ನೀರೇ ಮುಖ್ಯ ಆಧಾರ. ರಾಮಸ್ವಾಮಿ ಅಣೆಕಟ್ಟಿನಿಂದ ಎರಡು ಕಾಲುವೆಗಳನ್ನು ತೆಗೆಯಲಾಗಿದೆ. ಎಡದಂಡೆಯ ರಾಮಸ್ವಾಮಿ ನಾಲೆ ಬನ್ನೂರು, ಸೋಸಲೆ ಹೋಬಳಿಗಳಿಗೆ ನೀರನ್ನು ಒದಗಿಸುತ್ತದೆ; ತಲಕಾಡಿಗೆ 13 ಕಿಮೀ ದೂರದಲ್ಲಿ ಕೊನೆಗೊಳ್ಳುತ್ತದೆ. ಬಲದಂಡೆಯ ರಾಜಪರಮೇಶ್ವರಿ ನಾಲೆ ತಿರುಮಕೂಡಲಿನಿಂದ ಪಶ್ಚಿಮಕ್ಕಿರುವ ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ; ತಲಕಾಡಿನಿಂದ 3 ಕಿಮೀ ಮೇಲಕ್ಕೆ ಹೆಮ್ಮಿಗೆಯ ಬಳಿ ಇರುವ ಮಾಧವಮಂತ್ರಿ ಅಣೆಕಟ್ಟಿನಿಂದ ನಿರ್ಮಿಸಲಾಗಿರುವ ನಾಲೆ ತಲಕಾಡಿಗೆ ಉತ್ತರದಲ್ಲಿ ಹರಿದು ಮೂರು ಶಾಖೆಗಳಾಗಿ ಒಡೆಯುತ್ತದೆ. ಈ ತಾಲ್ಲೂಕಿನಲ್ಲಿ ಸು. 35 ಕೆರೆಗಳು ನೀರಾವರಿಗೆ ಉಪಯುಕ್ತವಾಗಿವೆ. ಬತ್ತ ಈ ತಾಲ್ಲೂಕಿನ ಮುಖ್ಯ ಬೆಳೆ, ಇತರ ಬೆಳೆಗಳು ಜೋಳ, ರಾಗಿ, ಹತ್ತಿ, ಹರಳು ಇತ್ಯಾದಿ.

ತಾಲ್ಲೂಕಿನಲ್ಲಿ ರೈಲು ಮಾರ್ಗವಿಲ್ಲ. ತಿರುಮಕೂಡಲು ನರಸೀಪುರದಿಂದ ಮೈಸೂರು, ಸೋಸಲೆ, ಬನ್ನೂರು, ಶ್ರೀರಂಗಪಟ್ಟಣ, ತಲಕಾಡು, ಹೊಳೆಸಾಲು, ನಂಜನಗೂಡು, ಮೂಗೂರು, ಸಂತೆಮರಹಳ್ಳಿ, ಸೋಸಲೆ, ಶಿವಸಮುದ್ರ, ತಲಕಾಡುಗಳಿಗೆ ರಸ್ತೆಗಳಿವೆ. ತಿರುಮಕೂಡಲು ಬಳಿ ಕಾವೇರಿ ಮತ್ತು ಕಪಿಲಾ ನದಿಗಳಿಗೂ ಬನ್ನೂರಿನ ಬಳಿ ಕಾವೇರಿಗೂ ಕಟ್ಟಿರುವ ಸೇತುವೆಗಳು ಮುಖ್ಯವಾದವು.

ಈ ತಾಲ್ಲೂಕಿನಲ್ಲಿರುವ ಗರ್ಗೇಶ್ವರಿಯಲ್ಲಿ ಗರ್ಗೇಶ್ವರಿ ದೇವಾಲಯವೂ ಸೋಸಲೆಯಲ್ಲಿ ಜನಾರ್ಧನ, ಹೊನ್ನಾದೇವಿ, ವೀರಭದ್ರ ದೇವಸ್ಥಾನಗಳೂ ತಲಕಾಡಿನ ಬಳಿಯ ಮುಡುಕುತೊರೆ ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯವೂ ಇದೆ. ಮುಡುಕುತೊರೆಯಲ್ಲಿ ಪ್ರತಿವರ್ಷವೂ ಒಂದು ದೊಡ್ಡ ಜಾತ್ರೆ ನಡೆಯುತ್ತದೆ. ಕಾವೇರಿ ಕಪಿಲೆಗಳು ಸಂಗಮಿಸುವ ಸ್ಥಳವಾದ ತಿರುಮಕೂಡಲಿನಲ್ಲಿ ಅಗಸ್ತ್ಯೇಶ್ವರ ದೇವಾಲಯವಿದೆ. ಮೂಗೂರಿನಲ್ಲಿ ತಿಬ್ಬಾದೇವಿ, ದೇಸೇಶ್ವರ ದೇವಾಲಯಗಳಿವೆ. ಮೂಗೂರಿನ ತಿಬ್ಬಾದೇವಿ ಜಾತ್ರೆ ಪ್ರಸಿದ್ಧವಾದುದ್ದು. ಬನ್ನೂರಿನಲ್ಲಿ ಕೋಸಲೇಶ್ವರ, ಹನುಮಂತೇಶ್ವರ, ಜನಮೇಜಯ, ಸರೋವರಾಂಜನೇಯ ದೇವಾಲಯಗಳು ಇವೆ. ಇಲ್ಲಿಯ ಹೇಮಾದ್ರಮ್ಮನ ಜಾತ್ರೆ ಪ್ರಸಿದ್ಧವಾದ್ದು. ಸೋಸಲೆಯಿಂದ 8 ಕಿಮೀ ಉತ್ತರದಲ್ಲಿರುವ ಸೋಮನಾಥಪುರದಲ್ಲಿ ಸುಪ್ರಸಿದ್ಧ ಪ್ರಸನ್ನ ಚನ್ನಕೇಶವ ದೇವಾಲಯವುಂಟು. ಇದು ಹೊಯ್ಸಳ ಶೈಲಿಯ ಸುಂದರ ದೇವಾಲಯ. ಸೋಸಲೆಯಲ್ಲಿ ವ್ಯಾಸರಾಯರ ಮಠವಿದೆ. ಕಾವೇರಿಯ ದಡದ ಮೇಲಿರುವ ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳ ತಲಕಾಡು.

ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ದೊಡ್ಡ ಪಟ್ಟಣ ತಿರುಮಕೂಡಲು ನರಸೀಪುರ. ಇದು ಉ. ಅ. $12^0 13'$ ಮತ್ತು ಪೂ. ರೇ. $76^0 58'$ ಮೇಲೆ ಕಾವೇರಿ–ಕಪಿಲಾ ನದಿಗಳ ಸಂಗಮದ ಬಳಿ, ಮೈಸೂರು ನಗರಕ್ಕೆ ಆಗ್ನೇಯದಲ್ಲಿ 32 ಕಿಮೀ ದೂರದಲ್ಲಿದೆ. ಇಲ್ಲಿಂದ ನಂಜನಗೂಡು 28 ಕಿಮೀ ದೂರದಲ್ಲಿದೆ. 1868ರಿಂದ ಇದು ತಾಲ್ಲೂಕು ಕೇಂದ್ರವಾಗಿ 1882ರಲ್ಲಿ ಇದರ ಹೆಸರು ತಾಲ್ಲೂಕಿಗೂ ಬಂತು. ಇದರ ಜನಸಂಖ್ಯೆ 9930.

ಕಾವೇರಿ ಮತ್ತು ಕಪಿಲಾ ನದಿಗಳು ಕಾವೇರಿಯ ತಳದಲ್ಲಿದೆಯೆನ್ನಲಾದ ಸ್ಫಟಿಕ ಸರೋವರವೂ ಕೂಡುವ (ತಿರುಮು–ಕೂಡಲು) ಸ್ಥಳಕ್ಕೆ ತಿರುಮಕೂಡಲು ಎಂದು ಹೆಸರು ಬಂದಿದೆ. ಇದರಿಂದಾಚೆಗೆ, ಕಪಿಲಾ ನದಿಯ ಬಲದಂಡೆಯಲ್ಲಿ ಮತ್ತು ಕಾವೇರಿಯ ಪಕ್ಕದಲ್ಲಿ ನರಸೀಪುರ ಪಟ್ಟಣ ಇದೆ. ಹಾಸನ ಜಿಲ್ಲೆಯಲ್ಲಿ ಹೇಮಾವತಿಯ ದಡದಲ್ಲಿ ಇನ್ನೊಂದು ನರಸೀಪುರವಿದೆ. ಅದನ್ನು ಹೊಳೆನರಸೀಪುರವೆಂದು ಕರೆಯುವರು. ತಿರುಮಕೂಡಲನ್ನೂ ನರಸೀಪುರವನ್ನೂ ಸೇರಿಸುವ ಸೇತುವೆಯೊಂದನ್ನು ಕಪಿಲಾ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ತಿರುಮಕೂಡಲಿನ ಭಾಗದಿಂದ ಕಾವೇರಿಯ ಎಡದಂಡೆಗೂ ಒಂದು ಸೇತುವೆಯಿದೆ. ಇದರಿಂದ ತಿರುಮಕೂಡಲು ನರಸೀಪುರಕ್ಕೆ ಎಲ್ಲ ಋತುಗಳಲ್ಲೂ ತಾಲ್ಲೂಕಿನ ಇತರ ಭಾಗಗಳೊಂದಿಗೆ ಸಂಪರ್ಕ ಸಾಧ್ಯವಾಗಿದೆ. ತಿರುಮಕೂಡಲು ನರಸೀಪುರದಲ್ಲಿ ಪುರಸಭೆಯೂ ಶಾಲಾ ಕಾಲೇಜುಗಳೂ ಇವೆ. ನರಸೀಪುರದಲ್ಲಿರುವ ಗುಂಜಾ ನರಸಿಂಹ ಮತ್ತು ಮೂಲಸ್ಥಾನೇಶ್ವರ ದೇವಾಲಯಗಳೂ ತಿರುಮಕೂಡಲಿನ ಅಗಸ್ತ್ಯೇಶ್ವರ ದೇವಸ್ಥಾನವೂ ಪ್ರಸಿದ್ಧವಾದವು. (ಕೆ.ಎ.ಆರ್.)

**ತಿರುವನಂತಪುರ:** ಕೇರಳ ರಾಜ್ಯದ ರಾಜಧಾನಿ. ತಿರುವನಂತಪುರ ಜಿಲ್ಲೆಯ ಮುಖ್ಯ ಪಟ್ಟಣ. ಇದು ಹಿಂದೆ ತಿರುವಾಂಕೂರು ಸಂಸ್ಥಾನದ ಮುಖ್ಯ ಪಟ್ಟಣವಾಗಿತ್ತು. ಇದೊಂದು ದೊಡ್ಡ ವ್ಯಾಪಾರಕೇಂದ್ರ ಹಾಗೂ ಭಾರತದ ಅತ್ಯಂತ ದಕ್ಷಿಣದ ರೇವುಪಟ್ಟಣ. ಜನಸಂಖ್ಯೆ 15,00,500. ಇಲ್ಲಿಂದ ಮುಂಬೈ–ಚೆನ್ನೈಗಳಿಗೆ ರೈಲು ಹಾಗೂ ವಿಮಾನ ಸೌಲಭ್ಯ ಉಂಟು. ತಿರುವನಂಪುರಂ ಅಥವಾ ತಿರುಅನಂಪುರಂನ ಅನಂತ ಪದ್ಮನಾಭ ಸ್ವಾಮಿ ದೇವಾಲಯ ಪುರಾಣ ಪ್ರಸಿದ್ಧವಾದ ಶ್ರೀಕ್ಷೇತ್ರ.

ಈ ನಗರ ಸಮುದ್ರಕ್ಕೆದುರಾಗಿರುವ ಪಶ್ಚಿಮ ಘಟ್ಟಗಳಿಗೆ ಸೇರಿದ ಒಂದು ಎತ್ತರವಾದ ದಿಣ್ಣೆಯ ಮೇಲಿದೆ. ಆದ್ದರಿಂದ ಈ ಸ್ಥಳದಿಂದ ಕಾಣುವ ದೃಶ್ಯ ಅತ್ಯಂತ ಮನಮೋಹಕವಾದುದ್ದು. ಇಲ್ಲಿ ಅನೇಕ ಸರ್ಕಾರಿ ಕಟ್ಟಡಗಳೂ ಭವ್ಯ ಭವನಗಳೂ ಇವೆ. ಸರ್ಕಾರಿ ಸಚಿವಾಲಯ, ನೇಪಿಯರ್ ವಸ್ತುಸಂಗ್ರಹಾಲಯ, ವಿಕ್ಟೋರಿಯ ಜ್ಯೂಬಿಲಿ ಪುರಭವನ – ಇವನ್ನು ಮುಖ್ಯವಾಗಿ ಹೆಸರಿಸಬಹುದು. ಹಿಂದೆ ಇದ್ದ ತಿರುವಾಂಕೂರ್ ದೊರೆಯ ಅರಮನೆ ಇಲ್ಲಿದೆ. ಇದು ಬಲು ಆಕರ್ಷಕ. ತಿರುವನಂತಪುರದಲ್ಲಿರುವ ಪ್ರಾಣಿಸಂಗ್ರಹಾಲಯ ಭಾರತದ ಅತ್ಯುತ್ತಮ ಪ್ರಾಣಿಸಂಗ್ರಹಾಲಯಗಳಲ್ಲೊಂದು ಎಂಬ ಖ್ಯಾತಿ ಗಳಿಸಿದೆ. ಶ್ರೀಚಿತ್ರಾಲಯಂ ಎಂಬುದು ಇಲ್ಲಿರುವ ಒಂದು ಪ್ರಸಿದ್ಧ ಚಿತ್ರಕಲಾಶಾಲೆ. ಇದರಲ್ಲಿ ರಾಜಾ ರವಿವರ್ಮನ ಕಲಾಕೃತಿಗಳೂ ಸೇರಿದಂತೆ ಅನೇಕ ಚಿತ್ತಾಕರ್ಷಕ ಚಿತ್ರಕೃತಿಗಳನ್ನು ಪ್ರದರ್ಶಿಸಲಾಗಿದೆ.

ಕೋವಲಮ್ ಬೀಚ್ ಈ ನಗರಕ್ಕೆ 16 ಕಿಮೀ ದೂರದಲ್ಲಿರುವ ಒಂದು ವಿಹಾರ ಸ್ಥಳ. ಇಲ್ಲಿ ಕೇರಳ ವಿಶ್ವವಿದ್ಯಾಲಯವಿದೆ. ಇಲ್ಲಿ ಅನೇಕ ಶಾಲಾ ಕಾಲೇಜುಗಳಿವೆ. ಹತ್ತಿ ಜವಳಿ, ಸಾಬೂನು, ರಬ್ಬರ್ ಹಗ್ಗ, ಚಾಪೆ, ಪ್ಲೈವುಡ್ ಮೊದಲಾದವು ತಿರುವನಂತಪುರದಲ್ಲಿ ತಯಾರಾಗುವ ಪದಾರ್ಥಗಳು. (ಎಸ್.ಎನ್.ಎ.ಆರ್.)

**ತಿರುವಾಂಕೂರು:** ದಕ್ಷಿಣ ಭಾರತದಲ್ಲಿದ್ದ ಒಂದು ದೇಶಿಯ ಸಂಸ್ಥಾನ. 1949ರ ಜುಲೈ 1 ರಂದು ಕೊಚ್ಚಿಯೊಂದಿಗೆ ಸೇರಿ ತಿರುವಾಂಕೂರು ಕೊಚ್ಚಿ ರಾಜ್ಯವಾಯಿತು. ಈಗ ಕೇರಳ ರಾಜ್ಯದ ಭಾಗವಾಗಿದೆ. ಮಲಯಾಳಂ ಭಾಷೆಯಲ್ಲಿ ತಿರುವಿತ್ತಂಕೂರ್ ಎಂದೂ ಸಂಸ್ಕೃತದಲ್ಲಿ ಶ್ರೀವರ್ಧನಪುರಿ ಎಂದೂ ಇದರ ಹೆಸರು. ಅರಬ್ಬಿ ಸಮುದ್ರದ ಅಂಚಿನಲ್ಲಿ ಉತ್ತರ–ದಕ್ಷಿಣವಾಗಿ 240 ಕಿಮೀ ಉದ್ದಕ್ಕೆ ಕನ್ಯಾಕುಮಾರಿಯವರೆಗೂ ಹಬ್ಬಿದ್ದ ತಿರುವಾಂಕೂರು ಸಂಸ್ಥಾನದ ಪಶ್ಚಿಮ ಮತ್ತು ದಕ್ಷಿಣದಲ್ಲಿ ಅರಬ್ಬಿ ಸಮುದ್ರ ಉತ್ತರದಲ್ಲಿ ಕೊಚ್ಚಿ ಸಂಸ್ಥಾನ ಮತ್ತು ಮದರಾಸು ಪ್ರಾಂತ್ಯದ (ತಮಿಳುನಾಡು) ಕೊಯಮತ್ತೂರು, ಪೂರ್ವದಲ್ಲಿ ಮದುರೈ, ರಾಮನಾಡ್ ಮತ್ತು ತಿರುನೆಲ್ವೇಲಿ ಜಿಲ್ಲೆಗಳು ಸುತ್ತು ವರಿದಿದ್ದ ತಿರುವಾಂಕೂರು ದಕ್ಷಿಣ ಕಾಶ್ಮೀರ ಎಂದು ಪ್ರಸಿದ್ಧವಾಗಿತ್ತು. ಎತ್ತರವಾಗಿರುವ ಪರ್ವತ ಪ್ರದೇಶ, ಬಹು ದೂರದ ವರೆಗೆ ಹಸುರುಗಂಬಳಿ ಹಾಸಿದಂತೆ ಬತ್ತದ ಬಯಲು, ನದಿ, ನಾಲೆ, ಸರೋವರ, ಸಮುದ್ರ, ಖನಿಜ ಸಂಪತ್ತು, ಅಪೂರ್ವ ಪ್ರಾಣಿ ಹಾಗೂ ಸಸ್ಯ ಸಂಪತ್ತು, ತೆಂಗಿನ ಮರಗಳು ಮುಂತಾದುವುಗಳಿಂದ ವಿಶಿಷ್ಟವಾದ ಸಂಸ್ಥಾನವಾಗಿತ್ತು. ಇಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನೂ ಹಲವು ವಿಶಿಷ್ಟ ಪುರಾತನ ಸಂಪ್ರದಾಯಗಳನ್ನೂ ಉಳಿಸಿಕೊಂಡು ಅವುಗಳೊಡನೆ ಆಧುನಿಕ ರೂಢಿಗಳನ್ನೂ ಸಂಯೋಜಿಸಿಕೊಂಡು ಬೆಳೆದ ಒಂದು ಪ್ರಗತಿಪರ ಸಮುದಾಯವನ್ನು ಕಾಣಬಹುದು. (ಎಂ.ಬಿ.ಪಿ.)

**ತೀರ್ಥಹಳ್ಳಿ:** ಶಿವಮೊಗ್ಗ ಜಿಲ್ಲೆಯ ನೈಋತ್ಯ ತುದಿಯ ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ತೀರ್ಥಹಳ್ಳಿ, ಅಗ್ರಹಾರ, ಆಗುಂಬೆ, ಮತ್ತೂರು, ಮಂಡಗದ್ದೆ ಇವು ತಾಲ್ಲೂಕಿನ ಹೋಬಳಿಗಳು. ತಾಲ್ಲೂಕಿನಲ್ಲಿ ಒಟ್ಟು 247 ಗ್ರಾಮಗಳಿವೆ. ಇದರ ವಿಸ್ತೀರ್ಣ 1,247 ಚ.ಕಿಮೀ. ಜನಸಂಖ್ಯೆ 1,43,209.

ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಪಶ್ಚಿಮ ಘಟ್ಟ ಪ್ರದೇಶ. ಕವಲೇದುರ್ಗ (969 ಮೀ), ಕಬ್ಬಿಣದಗುಡ್ಡ ಮತ್ತು ಕುಂದರಗುಡ್ಡ ಇಲ್ಲಿಯ ಬೆಟ್ಟಗಳು. ಪ್ರಕೃತಿ ಸೌಂದರ್ಯಕ್ಕೆ ಪ್ರಸಿದ್ಧವಾಗಿರುವ ಆಗುಂಬೆ ಘಾಟಿ ಇರುವುದು ತಾಲ್ಲೂಕಿನ ನೈಋತ್ಯ ಭಾಗದಲ್ಲಿ. ಕಬ್ಬಿಣ ಗುಡ್ಡದ ಕಬ್ಬಿಣ ಅದಿರು ಉತ್ತಮ ದರ್ಜೆಯದು. ತಾಲ್ಲೂಕು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ತುಂಗಾ ಈ ತಾಲ್ಲೂಕಿನ ಪ್ರಮುಖ ನದಿ. ಆಗುಂಬೆಯಲ್ಲಿ ವಾರ್ಷಿಕ ಮಳೆ ಸು. 805 ಸೆಂಮೀ (ಕರ್ನಾಟಕದಲ್ಲೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ) ತೀರ್ಥಹಳ್ಳಿಯಲ್ಲಿ ಸು. 297 ಸೆಂಮೀ. ಪೂರ್ವಕ್ಕೆ ಹೋದಂತೆ ಮಳೆ ಇನ್ನೂ ಕಡಿಮೆ. ಬತ್ತ, ಅಡಕೆ, ಏಲಕ್ಕಿ, ಮೆಣಸು ಇಲ್ಲಿಯ ಮುಖ್ಯ ಬೆಳೆಗಳು.

ತಾಲ್ಲೂಕಿನಲ್ಲಿ ರೈಲು ಮಾರ್ಗ ಇಲ್ಲ. ಆದರೆ ಮುಖ್ಯ ಊರುಗಳಿಗೆ ಉತ್ತಮ ರಸ್ತೆ ಸಂಪರ್ಕ ಇದೆ. ತೀರ್ಥಹಳ್ಳಿಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗುವ ಆಗುಂಬೆ ಘಾಟಿನ ರಸ್ತೆ ಒಂದು ಮುಖ್ಯ ಮಾರ್ಗ.

ಆರಗ, ಅಗ್ರಹಾರ, ಕವಲೇದುರ್ಗ, ಮಂಡಗದ್ದೆ, ಮತ್ತೂರು, ಮೇಗರವಳ್ಳಿ ಮುಂತಾದುವು ತಾಲ್ಲೂಕಿನ ಮುಖ್ಯ ಸ್ಥಳಗಳು. ಆಗುಂಬೆ ಘಾಟಿ ಪ್ರಕೃತಿ ಸೌಂದರ್ಯದ ಬೀಡು. ಮಂಡಗದ್ದೆ ಮತ್ತು ಕೋಣಂದೂರು (2,690) ಈ ತಾಲ್ಲೂಕಿನ ದೊಡ್ಡ ಊರುಗಳು.

ತೀರ್ಥಹಳ್ಳಿ ತಾಲ್ಲೂಕಿನ ಆಡಳಿತ ಕೇಂದ್ರ. ಜನಸಂಖ್ಯೆ 14,809. ಮಲೆನಾಡಿನ ಪ್ರಸಿದ್ಧ ಊರಾದ ಇದು 610 ಮೀ ಎತ್ತರದಲ್ಲಿದೆ. ತುಂಗಾನದಿಯ ಎಡದಂಡೆಯ ಮೇಲಿರುವ ಈ ಪಟ್ಟಣ ಶಿವಮೊಗ್ಗದ ನೈಋತ್ಯಕ್ಕೆ ಸು. 65 ಕಿಮೀ ದೂರದಲ್ಲಿದೆ. ಇಲ್ಲಿರುವ ಅನೇಕ ತೀರ್ಥಧಾರೆಗಳಿಂದ ಇದಕ್ಕೆ ತೀರ್ಥಹಳ್ಳಿ ಎಂಬ ಹೆಸರು ಬಂದಿದೆ. (ಕೆ.ಎಂ.)

**ತುಂಗಭದ್ರಾ:** ದಕ್ಷಿಣ ಭಾರತದ ದೊಡ್ಡ ನದಿಯಾದ ಕೃಷ್ಣಾ ನದಿಯ ಒಂದು ಪ್ರಮುಖ ಉಪನದಿ. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟಕ್ಕೆ ಏರಿದ ವರಾಹ ಪರ್ವತದ ಗಂಗಾಮೂಲದಲ್ಲಿ ಸು. 1200 ಮೀ ಎತ್ತರದಲ್ಲಿ ಉಗಮಿಸುವ ತುಂಗಾ ಮತ್ತು ಭದ್ರಾ ನದಿಗಳು ಶಿವಮೊಗ್ಗ ಜಿಲ್ಲೆಯಲ್ಲಿ (ಶಿವಮೊಗ್ಗ ಪಟ್ಟಣಕ್ಕೆ ಸು. 13 ಕಿಮೀ ಈಶಾನ್ಯದಲ್ಲಿ) ಕೂಡಲಿಯ ಬಳಿ ಸಂಗಮವಾಗುತ್ತವೆ. ಅಲ್ಲಿಂದ ಮುಂದೆ ಹರಿಯುವ ನದಿಗೆ ತುಂಗಭದ್ರಾ ಎಂಬ ಹೆಸರು ಬಂದಿದೆ. ಆಂಧ್ರಪ್ರದೇಶದಲ್ಲಿ ಕರ್ನೂಲಿನಿಂದ ಸ್ವಲ್ಪ ಕೆಳಕ್ಕೆ ಆಲಂಪುರ ಎಂಬಲ್ಲಿ ಇದು ಕೃಷ್ಣಾ ನದಿಯನ್ನು ಕೂಡಿಕೊಳ್ಳುತ್ತದೆ. ನದಿಯ ಉದ್ದ ಸು. 644 ಕಿಮೀ. ಇದರ ಜಲಾನಯನ ಪ್ರದೇಶ 68,562 ಚ.ಕಿಮೀ. ಇದರಲ್ಲಿ 57,650 ಚ.ಕಿಮೀ ಕರ್ನಾಟಕದಲ್ಲಿದೆ.

ಕೂಡಲಿಯ ಬಳಿಯಿಂದ ಆರಂಭವಾಗಿ ಶಿವಮೊಗ್ಗ ಜಿಲ್ಲೆಯನ್ನು ಬಿಡುವವರೆಗೂ ಉತ್ತರ ದಿಕ್ಕಿಗೆ ಹರಿಯುವ ತುಂಗಭದ್ರಾ ನದಿ ಅನಂತರ ಈಶಾನ್ಯಾಭಿಮುಖವಾಗಿ ಮುಂದುವರಿಯುವುದು. ಧಾರವಾಡ ಜಿಲ್ಲೆಯ ಆಗ್ನೇಯ ಅಂಚಿನಲ್ಲಿ ಸಾಗುತ್ತದೆ: ಧಾರವಾಡ–ಚಿತ್ರದುರ್ಗ ಜಿಲ್ಲೆಗಳ ನಡುವಣ ನೈಸರ್ಗಿಕ ಎಲ್ಲೆಯಾಗಿ ಪರಿಣಮಿಸುತ್ತದೆ. ಈ ಭಾಗದಲ್ಲಿ ಇದನ್ನು ಸೇರುವ ಮುಖ್ಯ ಉಪನದಿ ಕುಮುದ್ವತಿ. ಇದು ಹರಿಹರದಿಂದ ಸ್ವಲ್ಪ ಮೇಲೆ, ರಾಣೆಬೆನ್ನೂರು ತಾಲ್ಲೂಕಿನ ಮೂದೇನೂರಿನ ಹತ್ತಿರ ತುಂಗಭದ್ರಾ ನದಿಯನ್ನು ಎಡಗಡೆಯಲ್ಲಿ ಸಂಗಮಿಸುತ್ತದೆ. ಬಲಗಡೆಯಿಂದ ಹರಿದುಬರುವ ಸ್ಯಾಗಲಹಳ್ಳ, ಸೂಳೆಕೆರೆಹಳ್ಳ ಅಥವಾ ಹರಿದ್ರಾ ಎಂಬ ಹಳ್ಳ ಹರಿಹರದ ಬಳಿ ತುಂಗಭದ್ರೆಯನ್ನು ಕೂಡಿಕೊಳ್ಳುತ್ತವೆ.

ಚಿತ್ರದುರ್ಗ ಜಿಲ್ಲೆಯ ಎಲ್ಲೆಯನ್ನು ದಾಟಿದ ಮೇಲೂ ತುಂಗಭದ್ರಾ ನದಿ ಧಾರವಾಡ ಜಿಲ್ಲೆಯಂಚಿನಲ್ಲೇ ಸಾಗುತ್ತದೆ. ಆದರೆ ಅದು ಸ್ಥೂಲವಾಗಿ ವಾಯವ್ಯಾಭಿಮುಖವಾಗಿ ಅಂಕುಡೊಂಕಾಗಿ ಮುಂದುವರಿದು ಅನಂತರ ಮತ್ತೆ ಈಶಾನ್ಯಾಭಿಮುಖವಾಗಿ ಹರಿಯುತ್ತದೆ. ಈ ಭಾಗದಲ್ಲಿ ಅದು ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳ ನಡುವಣ ನೈಸರ್ಗಿಕ ಎಲ್ಲೆಯಾಗಿ ಪರಿಣಮಿಸುತ್ತದೆ. ಇಲ್ಲಿ ಅದರ ಎಡದಂಡೆಯ ಮುಖ್ಯ ಉಪನದಿ ವರದಾ. ಇದು ತುಂಗಭದ್ರೆಯನ್ನು ಸಂಗಮಿಸುವುದು ಗಳಗನಾಥದ ಬಳಿಯಲ್ಲಿ. ಇದಲ್ಲದೆ ಕೆಲವು ಸಣ್ಣ ಹೊಳೆಗಳೂ ತುಂಗೆಯನ್ನು ಸೇರುತ್ತವೆ.

ಧಾರವಾಡ ಜಿಲ್ಲೆಯ ಎಲ್ಲೆಯಿಂದ ಮುಂದಕ್ಕೆ ತುಂಗಭದ್ರಾ ನದಿ ಸ್ಥೂಲವಾಗಿ ಅದೇ ದಿಕ್ಕಿನಲ್ಲಿ ರಾಯಚೂರು ಜಿಲ್ಲೆಯ ಅಂಚಿನಲ್ಲಿ ಹರಿದು, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳನ್ನು ಪ್ರತ್ಯೇಕಿಸುತ್ತದೆ. ಸುಪ್ರಸಿದ್ಧ ತುಂಗಭದ್ರಾ ಜಲಾಶಯ ನಿರ್ಮಿತವಾಗಿರುವುದು ಈ ಭಾಗದಲ್ಲೆ. ಬಲಗಡೆಯ ಉಪನದಿಗಳು, ಚಿಕ್ಕ ಹಗರಿ ಮತ್ತು ವೇದಾವತಿ (ಹಗರಿ). ಚಿಕ್ಕ ಹಗರಿ ನದಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಹತ್ತಿರವೂ ವೇದಾವತಿ ನದಿ ಸಿರುಗುಪ್ಪದಿಂದ ಕೆಳಕ್ಕೆ ಹಳೆಕೋಟೆಯ ಸನಿಯದಲ್ಲೂ ತುಂಗಭದ್ರೆಯನ್ನು ಕೂಡಿಕೊಳುತ್ತವೆ. ಹಗರಿಬೊಮ್ಮನಹಳ್ಳಿಯಿಂದ ಸ್ವಲ್ಪ ಕೆಳಕ್ಕೆ ಹಂಪಾಪಟ್ಟಣ ಹಳ್ಳ, ಕಂಪ್ಲಿಯ ಪೂರ್ವದಲ್ಲಿ ರಾಮಪ್ಪವಂಕ ಬಲದಂಡೆಯ ಎರಡು ಸಣ್ಣ ಹೊಳೆಗಳು. ಎಡಭಾಗದಲ್ಲಿ ಅದನ್ನು ಕೂಡಿಕೊಳ್ಳುವ ಹಳ್ಳಗಳು ಮಸ್ಕಿನಾಲಾ ಮತ್ತು ಹಿರೇಹಳ್ಳ.

ಬಳ್ಳಾರಿಯ ಅಂಚನ್ನು ಬಿಟ್ಟಮೇಲೂ ತುಂಗಭದ್ರಾ ನದಿ ರಾಯಚೂರು ಜಿಲ್ಲೆಯ ಅಂಚಿನಲ್ಲೇ ಮುಂದುವರಿದು ಸ್ವಲ್ಪ ದೂರವಾದ ಮೇಲೆ ಪೂರ್ವದಿಕ್ಕಿಗೆ ಪ್ರವಹಿಸುತ್ತದೆ. ಕರ್ನಾಟಕದ ಗಡಿಯನ್ನು ದಾಟಿದ ಅನಂತರ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ ಮುಂದುವರಿದು, ಬಲ ಬದಿಯಲ್ಲಿ ಹಿಂದ್ರಿ ಹೊಳೆಯನ್ನು ಕೂಡಿಕೊಂಡು ಕರ್ನೂಲು ಪಟ್ಟಣದಿಂದ ಮುಂದೆ ಈಶಾನ್ಯದ ಕಡೆಗೆ ದಿಕ್ಕು ಬದಲಿಸಿ ಸ್ವಲ್ಪ ದೂರ ಹರಿದು, ಕೃಷ್ಣಾ ನದಿಯಲ್ಲಿ ಸಂಗಮಿಸುತ್ತದೆ.

ತುಂಗಭದ್ರಾ ನದಿಯ ಹರಿವನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು; 1 ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ ಮೇಲಕ್ಕೆ ಸು. 10 ಕಿಮೀ ದೂರದಲ್ಲಿರುವ ವಲ್ಲಭಪುರದವರೆಗೆ ನದಿ ಸಾಮಾನ್ಯವಾಗಿ ಕಡಿದಾದ ದಂಡೆಗಳಿಂದ ಕೂಡಿದ್ದು ಪ್ರತಿ ಕಿಮೀ ಗೂ ಸರಾಸರಿಯಲ್ಲಿ ಸು. 40 ಸೆಂಮೀ ಇಳಿಯುತ್ತ ಸಾಗುತ್ತದೆ. ಈ ಭಾಗದಲ್ಲಿ ನೀರಾವರಿಗಾಗಿ ಅಣೆಕಟ್ಟುಗಳು ಯಾವುವೂ ಇಲ್ಲ. ಕೊಪ್ಪಳ ಮತ್ತು ಹರಿಹರ ತಾಲ್ಲೂಕುಗಳಲ್ಲಿ ನದಿಯಿಂದ ನೀರನ್ನು ಎತ್ತಿ ಸಾಗುವಳಿಗೆ ಬಳಸಿಕೊಳ್ಳಲಾಗುತ್ತಿದೆ. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಲಾದ ವಲ್ಲಭಪುರ ಅಣೆಕಟ್ಟೆ ಈಗ ತುಂಗಭದ್ರಾ ಜಲಾಶಯದಲ್ಲಿ ಮುಳುಗಿದೆ. 2 ವಲ್ಲಭಪುರದಿಂದ ಕಂಪ್ಲಿಯ ವರೆಗೆ ನೀರಿನ ಹರಿವಿನ ವೇಗ ಅಧಿಕ. ಇಲ್ಲಿ ಕಿಮೀ ಗೆ 280 ಸೆಂಮೀ ಗಳಂತೆ ನದಿಯ ಮಟ್ಟ ತಗ್ಗುತ್ತ ಹೋಗುತ್ತದೆ. ಈ ಭಾಗದಲ್ಲಿ ವಿಜಯನಗರ ಕಾಲದಲ್ಲಿ ಹಲವು ಅಣೆಕಟ್ಟೆಗಳನ್ನು ಕಟ್ಟಲಾಗಿತ್ತು. ಹೊಸಪೇಟೆಯ ಬಳಿಯ ಅಣೆಕಟ್ಟೆಯೂ ತುಂಗಭದ್ರಾ ಜಲಾಶಯದಿಂದಾಗಿ ಮುಳುಗಿಹೋಗಿದೆ. ಆದರೆ ವಲ್ಲಭಪುರ ಹೊಸಪೇಟೆ ಅಣೆಕಟ್ಟೆಗಳಿಂದ ನಿರ್ಮಿಸಲಾಗಿದ್ದ ಬಸವಣ್ಣ ನಾಲಾ (10 ಕಿಮೀ) ಮತ್ತು ರಾಯನಾಲಾ (28 ಕಿಮೀ) ಗಳಿಗೆ ತುಂಗಭದ್ರಾ ಜಲಾಶಯದಿಂದಲೇ ನೀರನ್ನು ಬಿಡಲಾಗುತ್ತಿದೆ. ತುಂಗಭದ್ರಾ ಕಟ್ಟೆಯಿಂದ ಕೆಳಗೆ ಇರುವ ಹೊಸೂರು ಅಣೆಕಟ್ಟೆಯಿಂದ ಕಲಘಟ್ಟ ನಾಲಾ (6.5 ಕಿಮೀ) ಮತ್ತು ಎಡದಂಡೆಯ ಹುಲ್ಗೆ ನಾಲಾ (5 ಕಿಮೀ) ಇವೆ. ಇವು ಗಂಗಾವತಿ ತಾಲ್ಲೂಕಿಗೆ ಭಾಗಶಃ ಸೌಲಭ್ಯ ಒದಗಿಸಿವೆ. ಈ ಭಾಗದ ಇತರ ಅಣೆಕಟ್ಟೆಗಳ ಪೈಕಿ ಹಂಪೆಯಿಂದ ಪಶ್ಚಿಮಕ್ಕೆ 3 ಕಿಮೀ ದೂರದಲ್ಲಿರುವ ತುರ್ತ ಅಣೆಕಟ್ಟೆಯೊಂದಿದೆ. ಇದರ ಬಲದಂಡೆಯ ತುರ್ತ ನಾಲೆ (16 ಕಿಮೀ) ಹಂಪೆಗೂ ಎಡದಂಡೆಯ ಆನೆಗೊಂದಿ ನಾಲೆ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಪ್ರದೇಶಕ್ಕೂ ನೀರಾವರಿ ಸೌಲಭ್ಯ ಒದಗಿಸುತ್ತವೆ. ಹಂಪೆಯಿಂದ 5 ಕಿಮೀ ಕೆಳಗೆ ಇರುವುದು ರಾಮಸಾಗರ ಅಣೆಕಟ್ಟೆ. ಇದರ ಬಲ ದಂಡೆಯದು ರಾಮಸಾಗರ ನಾಲೆ (16 ಕಿಮೀ). ಎಡದಂಡೆಯ ಮೇಗಣ ಮತ್ತು ಕೆಳಗಣ ಗಂಗಾವತಿ ನಾಲೆಗಳು. ಕಂಪ್ಲಿ ಅಣೆಕಟ್ಟೆಯ ಬಲ ದಂಡೆಯ ನಾಲೆ ಕಂಪ್ಲಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದೆ. 3 ಕಂಪ್ಲಿಯಿಂದ ಮುಂದಕ್ಕೆ ನದಿಯ ಮಟ್ಟದ ಇಳಿತ ಮತ್ತೆ ಕಡಿಮೆಯಾಗುತ್ತದೆ. ಈ ಪ್ರದೇಶದಲ್ಲಿ ಸಿರಗುಪ್ಪದ ಬಳಿಯ ಸಿರಗುಪ್ಪ ಅಣೆಕಟ್ಟೆ (ಬಲದಂಡೆ ನಾಲೆ 19 ಕಿಮೀ), ದೇಸನೂರು ಅಣೆಕಟ್ಟೆ (ದೇಸನೂರು ನಾಲೆ 10 ಕಿಮೀ), ಮಾನ್ವಿಯ ಬಳಿಯ ರಾಜುಲಖಂಡ ಅಣೆಕಟ್ಟೆ, ರಾಜಮೋಹಿಯ ಬಳಿಯ ಅಣೆಕಟ್ಟೆ–ಇವು ಮುಖ್ಯವಾದವು. ತುಂಗಭದ್ರಾ ನದಿಯಲ್ಲಿ ಅಲ್ಲಲ್ಲಿ ನಡುಗಡ್ಡೆಗಳಿವೆ. ಹೊನ್ನಾಳಿ, ಹರಿಹರ, ಹುಲ್ಗಿ, ಕಂಪ್ಲಿ, ಧಡೆಸುಗೂರು, ಗಿಲೇಸುಗೂರು ಮುಂತಾದ ಎಡೆಗಳಲ್ಲಿ ತುಂಗಭದ್ರಾ ನದಿಗೆ ಸೇತುವೆಗಳನ್ನು ನಿರ್ಮಿಸಲಾಗಿದೆ.

ಬಹುತೇಕ ಕರ್ನಾಟಕ ರಾಜ್ಯದಲ್ಲಿ ಹರಿಯುವ ತುಂಗಭದ್ರಾ ನದಿ ಈ ರಾಜ್ಯದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪ್ರಾಗಿತಿಹಾಸ ಕಾಲದಿಂದಲೂ ಅನೇಕ ಸಂಸ್ಕೃತಿಗಳು ಬೆಳೆದಿದ್ದುವೆಂಬುದಕ್ಕೆ ನಿಟ್ಟೂರು, ಹಂಪಸಾಗರ ಮುಂತಾದ ನೆಲೆಗಳು ಸಾಕ್ಷಿಯಾಗಿವೆ. ಇತಿಹಾಸ ಕಾಲದಲ್ಲಿ ಇದು ಹಲವು ರಾಜ್ಯಗಳ ನೈಸರ್ಗಿಕ ಗಡಿಯಾಗಿತ್ತು. ವಿಜಯನಗರದ ರಾಜಧಾನಿ ಹಂಪೆಯೂ ಕಂಪ್ಲಿಯೂ ಹಲವು ಕೋಟೆಗಳೂ ಇದರ ದಂಡೆಯ ಮೇಲೆ ಸ್ಥಾಪಿತವಾಗಿದ್ದವು. ಈ ನದಿಯ ದಡದಲ್ಲಿ ಹೊನ್ನಾಳಿ, ಹರಿಹರ, ಹೊಸಪೇಟೆ, ಕಂಪ್ಲಿ, ಸಿರಗುಪ್ಪ, ರಾಯಚೂರು, ಗಂಗಾವತಿ, ಕರ್ನೂಲು–ಇವು ದೊಡ್ಡ ಸ್ಥಳಗಳು; ಕೂಡಲಿ, ಹರಿಹರ, ಕುರುವತ್ತಿ, ಮೈಲಾರ, ಗಳಗನಾಥ, ಆನೆಗೊಂದಿ, ಮಾಕಂದ–ಇವು ಪವಿತ್ರ ಕ್ಷೇತ್ರಗಳು.

ತುಂಗಭದ್ರಾ ಪುರಾಣಪ್ರಸಿದ್ಧವಾದ ಪವಿತ್ರ ನದಿ. ರಾಮಾಯಣದಲ್ಲಿ ಇದನ್ನು ಪಂಪಾ ಎಂದು ಕರೆಯಲಾಗಿದೆ. ಭಾಗವತದಲ್ಲೂ ಮಹಾಭಾರತದಲ್ಲೂ ಇದನ್ನು ಹೆಸರಿಸಲಾಗಿದೆ. ವಿಷ್ಣು ವರಾಹಾವತಾರವನ್ನು ತಳೆದು ಹಿರಣ್ಯಾಕ್ಷನನ್ನು ಕೊಂದು ಭೂದೇವಿಯನ್ನು ಪಾರುಮಾಡಿದ ಮೇಲೆ ಪಶ್ಚಿಮಘಟ್ಟದ ಮೇಲೆ ವಿಶ್ರಾಂತಿ ಪಡೆದನೆಂದೂ ಅವನು ಕುಳಿತ ಸ್ಥಳವೇ ವರಾಹ ಪರ್ವತವೆಂದೂ ವರಾಹನ ಬಲ ಕೋರೆದಾಡೆಯಿಂದ ಬಂದ ಬೆವರು ಭದ್ರಾ ನದಿಯಾಗಿಯೂ ಎಡ ಕೋರೆದಾಡೆಯಿಂದ ಸುರಿದ ಬೆವರು ತುಂಗಾ ನದಿಯಾಗಿಯೂ ಹರಿದುವೆಂದೂ ಬ್ರಹ್ಮಾಂಡ ಪುರಾಣದಲ್ಲಿ ಹೇಳಲಾಗಿದೆ. (ಎಚ್.ಸಿ.ಕೆ.)

**ತುಂಗಭದ್ರಾ ಯೋಜನೆ:** ತುಂಗಭದ್ರಾ ನದಿಗೆ ಅಡ್ಡಲಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಮಲ್ಲಾಪುರದ ಬಳಿ ಅಣೆಕಟ್ಟೆಯೊಂದನ್ನು ನಿರ್ಮಿಸುವುದರ ಮೂಲಕ ರೂಪಿಸಲಾದ ವಿವಿಧೋದ್ದೇಶ ನದಿಕಣಿವೆ ಯೋಜನೆ, ಎರಡನೆಯ ಮಹಾಯುದ್ಧದ ಅನಂತರ ಅಂದಿನ ಮದರಾಸು ಮತ್ತು ಹೈದರಾಬಾದ್ ಸರ್ಕಾರಗಳ ಸಂಯುಕ್ತ ಪ್ರಯತ್ನದಿಂದ ಆರಂಭವಾದ ಇದರ ನಿರ್ಮಾಣ ಕಾರ್ಯ ಸ್ವತಂತ್ರ ಭಾರತದ ಪಂಚವಾರ್ಷಿಕ ಯೋಜನೆಗಳಿಗೆ ಹೊಂದಿಕೊಂಡು ಮುಂದುವರಿಯಿತು. ಈ ಯೋಜನೆಯ ಮುಖ್ಯ ಅಂಶಗಳು: 1) ತುಂಗಭದ್ರಾ ನದಿಗೆ ಅಡ್ಡಲಾಗಿ ಮಲ್ಲಾಪುರದಲ್ಲಿ 133 ಟಿಎಮ್‌ಸಿ ಅಡಿ (133 ಸಾವಿರ ದಶಲಕ್ಷ ಘನಅಡಿ) ನೀರನ್ನು ಸಂಗ್ರಹಿಸುವ ಜಲಾಶಯ; 2) ಎಡ ದಂಡೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ 5.8 ಲಕ್ಷ ಎಕರೆಗೆ ನೀರನ್ನು ಒದಗಿಸುವ 22 ಕಿಮೀ ಉದ್ದದ ನಾಲೆ. 3) ಬಲ ದಂಡೆಯಲ್ಲಿ 247 ಕಿಮೀ ಉದ್ದವಾದ ಕೆಳಮಟ್ಟದ ನಾಲೆ; ಈ ನಾಲೆಯಿಂದ ಬಳ್ಳಾರಿ ಜಿಲ್ಲೆಯಲ್ಲಿ 92,435 ಎಕರೆಗಳಿಗೂ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ 1,56,913 ಎಕರೆಗಳಿಗೂ ನೀರಾವರಿ ಒದಗುತ್ತದೆ. 4) ಬಲದಂಡೆಯಲ್ಲಿ ಪೆನ್ನಾರ್ ಕಣಿವೆಯವರೆಗೆ 195 ಕಿಮೀ ಉದ್ದದ ಮೇಲುಘಟ್ಟದ ನಾಲೆ, ಈ ನಾಲೆಯಿಂದ ಬಳ್ಳಾರಿ ಜಿಲ್ಲೆಯಲ್ಲಿ 2 ಲಕ್ಷ ಎಕರೆಗಳಿಗೂ ಆಂಧ್ರಪ್ರದೇಶದಲ್ಲಿ 24 ಲಕ್ಷ ಎಕರೆಗೂ ನೀರು ಒದಗಿಸುತ್ತದೆ. 5) ತುಂಗಭದ್ರಾ ಅಣೆಕಟ್ಟೆಯ ಎಡ ಬಲಭಾಗಗಳ

ಬುಡಗಳಲ್ಲಿ ಎರಡು ವಿದ್ಯುದುತ್ಪಾದನ ಕೇಂದ್ರಗಳಿವೆ. ಇವಲ್ಲದೆ ಪ್ರತ್ಯೇಕ ನಾಲೆಯೊಂದರಿಂದ ಹಾಯ್ದು ನೀರಿನಿಂದ ಹಂಪೆಯ ಬಳಿ ಇನ್ನೊಂದು ವಿದ್ಯುದುತ್ಪಾದನ ಕೇಂದ್ರ ನಿರ್ಮಾಣವಾಗಿದೆ. ಅಣೆಕಟ್ಟೆಯ ಬಳಿ ನದಿಯ ಜಲಾನಯನ ಪ್ರದೇಶ 28,180 ಚ.ಕಿಮೀ.




*ತುಂಗಭದ್ರಾ ಯೋಜನೆ*

ತುಂಗಭದ್ರಾ ಅಣೆಕಟ್ಟೆಯಲ್ಲಿ ಐದು ಭಾಗಗಳಿವೆ: 1) ನದಿಯ ಮಧ್ಯದಲ್ಲಿ ಕಲ್ಲುಗಾರೆಯ ಓಗೀ ಆಕಾರದ ಕೋಡಿ–701 ಮೀ; 2) ಎಡ ದಡದಲ್ಲಿ ಮುಂದುಗಡೆ 81 ಮೀ ಉದ್ದದ ಕಲ್ಲುಗಾರೆ; ಹಿಂದೆ ಮಣ್ಣಿನ ಏರಿ; 3) ಬಲ ದಡದಲ್ಲಿ 960 ಮೀ ಉದ್ದದ ಮೇಲುನೀರು ಹರಿಯದ, ಅಣೆ. 4) ಮೊದಲನೆಯ ನೀರುನೆತ್ತಿಯಲ್ಲಿ ಓಗೀ ಅಣೆಯ ಎಡಗಡೆ 152 ಮೀ ಉದ್ದದ ಮಣ್ಣಿನ ಏರಿ. 5) ಎಡ ದಡದ ಕೊನೆಯಲ್ಲಿ 472 ಮೀ ಉದ್ದವಾದ ಮಣ್ಣಿನ ಏರಿ.

ಆಳವಾದ ತಳಪಾಯದ ಮೇಲಿರುವ ಅಣೆಯ ಎತ್ತರ 49.4 ಮೀ. ತಳದಲ್ಲಿ ಅಗಲ 193.2 ಮೀ, ಮೇಲಿನ ಅಗಲ 6.7 ಮೀ. ಜಲಾಶಯದ ಗರಿಷ್ಠ ಮಟ್ಟ ಸಮುದ್ರ ಮಟ್ಟದಿಂದ 497.7 ಮೀ. ಜಲಾಶಯದಲ್ಲಿ 133 ಟಿಎಂಸಿ ಅಡಿ ನೀರು ನಿಲ್ಲುತ್ತದೆ. ನೀರು ಹರವಿನ ವಿಸ್ತೀರ್ಣ 378 ಚ.ಕಿಮೀ. ಜಲಾಶಯದಿಂದ ಮುಳುಗಡೆಯಾದ ಹಳ್ಳಿಗಳ ಸಂಖ್ಯೆ 73.

ಅಣೆಯಲ್ಲಿ 370 ಘನ ಅಡಿ ಕಲ್ಲುಗಾರೆ ಸೇರಿದೆ. ಮುಂಭಾಗ ಮೇಲುಗಡೆಯಲ್ಲಿ ಲಂಬವಾಗಿದ್ದು ಕೆಳಗಡೆ 6 ಮೀ ಗೆ 1 ರಂತೆ ಓಟವಾಗಿದೆ. ಹಿಂಭಾಗ ಮೇಲಿನ 6.1 ಮೀ ಗಳಲ್ಲಿ ಲಂಬವಾಗಿದ್ದು ನಯವಾದ ಬಾಗಿನಲ್ಲಿ ಇಳಿಯುತ್ತದೆ. ಅಣೆಕಟ್ಟೆಯನ್ನು ಕಲ್ಲು ಮತ್ತು ಸುಣ್ಣ–ಸುರ್ಕಿ ಗಾರೆಯಿಂದ ಕಟ್ಟಿದ್ದಾರೆ. ಮುಂದಿನ ಮುಖದಿಂದ 5.3 ಮೀ ಹಿಂದೆ 468 ಮೀ ಗಳ (ಆರ್.ಎಲ್.) ಮಟ್ಟದಲ್ಲಿ ತಳಪಾಯದಿಂದ ಅಣೆಯೊಳಗೆ ಜಿನುಗಿದ ನೀರನ್ನು ಸಾಗಿಸುವುದಕ್ಕೂ ತನಿಖೆಗೂ 1.5 ಮೀ ಅಗಲ, 2.3 ಮೀ ಎತ್ತರದ ಗೂಡನ್ನು ಉದ್ದಕ್ಕೂ ನಿರ್ಮಿಸಿದೆ. ತಳದಲ್ಲಿ ಹೊಳೆಯ ಕಡೆಗೆ 0.4 ಮೀ ಆಳವಾದ ಚರಂಡಿಯನ್ನು ಕಲ್ಲುಗಾರೆಯಿಂದ ಕಟ್ಟಿದೆ. ಜಿನುಗಿದ ನೀರನ್ನು ಅದರಲ್ಲಿ ಕೂಡಿಸಿ ಪಂಪುಗಳಿಂದ ಮೇಲಕ್ಕೆ ತರಲಾಗುತ್ತದೆ.

492 ಮೀ (ಆರ್.ಎಲ್.) ಮಟ್ಟದಲ್ಲಿ 18.3 ಮೀ ಅಗಲ 6.1 ಮೀ ಎತ್ತರದ 33 ಕೋಡಿ ಬಾಗಿಲುಗಳಿವೆ. ಕೋಡಿ ಓಗೀ ಆಕಾರವಾಗಿದ್ದು ಕೆಳಗಡೆ ಬಾಗಿದ ಬಕೆಟ್ಟು, ಅದರ ಹಿಂದುಗಡೆ ತಗ್ಗಿಸಿದ ನದೀತಳ, 30.5 ಮೀ ಅಗಲದ ಕಲ್ಲುಗಾರೆಯ ನೆಲಹಾಸು ಇವೆ. ಕೋಡಿಯ ಕಂಬಗಳ ಅಗಲ 3.5 ಮೀ ಮೇಲುಗಡೆ 6.7 ಮೀ ಅಗಲವಾದ ರಸ್ತೆಯುಳ್ಳ ಸೇತುವೆಯಿದೆ. ನೀರು ಉರುಳದೆ ಇರುವ ಕೋಡಿಯ ಮೇಲೂ ಈ ಸೇತುವೆ ಇದೆ.

ಇದುವರೆಗೆ ಹೊಳೆಯಲ್ಲಿ ಬಂದ ಮಹಾಪ್ರವಾಹ 3.3 ಲಕ್ಷ ಕ್ಯೂಸೆಕ್ಸ್‌ಗಳು. ಆದರೆ ಕೋಡಿಯನ್ನು 6.5 ಲಕ್ಷ ಕ್ಯೂಸೆಕ್ಸ್ ಮಹಾಪ್ರವಾಹವನ್ನು ಸುರಕ್ಷಿತವಾಗಿ ಸಾಗಿಸುವಂತೆ ವ್ಯವಸ್ಥೆ ಮಾಡಿದೆ. ಕೋಡಿಯ ಒಂದೊಂದು ಬಾಗಿಲೂ 50 ಟನ್ ತೂಕವಾಗಿವೆ.

ನೀರಾವರಿಗೆ ತೂಬುಗಳನ್ನೂ, ವಿದ್ಯುತ್ತಿನ ಉತ್ಪಾದನೆಗಾಗಿ ಪೆನ್‌ಸ್ಟಾಕ್ ಪೈಪುಗಳನ್ನೂ ಅಣೆಕಟ್ಟೆಯಲ್ಲಿ ಅಳವಡಿಸಲಾಗಿದೆ. ಅಣೆಕಟ್ಟೆಯ ಒಂದೊಂದು ದಡದಲ್ಲೂ ಒಂದೊಂದು ವಿದ್ಯುದಾಗಾರವಿದೆ. ಬಲದಂಡೆಯಿಂದ ಪೆನ್‌ಸ್ಟಾಕಿನ ತಳಮಟ್ಟ 472.4 ಮೀ (ಆರ್.ಎಲ್.) ಎಡದಂಡೆಯ ಪೆನ್‌ಸ್ಟಾಕಿನ ತಳ 3.04 ಮೀ ಎತ್ತರವಾಗಿದೆ. ಈ ವಿದ್ಯುದಾಗಾರ ಬೀಳುನೀರನ್ನು ನೀರಾವರಿಯ ನಾಲೆಗಳಿಗೆ ಒಯ್ದಿದ್ದಾರೆ.

ಅಣೆಕಟ್ಟೆಯ ಎರಡು ದಡಗಳಲ್ಲಿಯೂ 483.1 ಮೀ (ಆರ್.ಎಲ್.) ಮಟ್ಟದಲ್ಲಿ ನೀರಾವರಿಗಾಗಿ ಮೇಲ್ಮಟ್ಟದ ತೂಬುಗಳಿವೆ. ಇವು ಮೇಲ್ಮಟ್ಟದ ನಾಲೆಗಳಿಗೆ ನೀರನ್ನು ಬಿಡುತ್ತವೆ. ಬಲದಂಡೆಯ ಮೇಲ್ಮಟ್ಟದ ನಾಲೆ ಬಳ್ಳಾರಿ ಜಿಲ್ಲೆಯ 2 ಲಕ್ಷ ಎಕರೆಗಳಿಗೂ ಅನಂತಪುರ, ಕರ್ನೂಲು ಮತ್ತು ಕಡಪ ಜಿಲ್ಲೆಗಳಲ್ಲಿ 2.4 ಲಕ್ಷ ಎಕರೆ ಪ್ರದೇಶಗಳಿಗೂ ನೀರನ್ನು ಒದಗಿಸುತ್ತದೆ. ಇದು 186 ಕಿಮೀ ಹರಿದಮೇಲೆ ಗುಂತಕಲ್ಲು ಶಾಖೆ, ಉರವಕೊಂಡದ ತೋಡು ಎಂಬ ಎರಡು ಸೀಳುಗಳಾಗುತ್ತವೆ. ಈ ತೋಡಿನಿಂದ ಪೆನ್ನಾರ್ ನದಿಯ ನೀರು 2,000 ಕ್ಯೂಸೆಕ್ಸ್‌ಗಳಷ್ಟು ಹೆಚ್ಚುತ್ತದೆ. ಇಲ್ಲಿ ನೀರು ಹರಿಯುವಾಗ 20,000 ಕಿಲೋವಾಟ್ ಜಲವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆ. ಪೆನ್ನಾರ್ ನದಿಗೆ ಅಡ್ಡಲಾಗಿ ಪೆನಕ ಚರಲದ ಹತ್ತಿರ ನಿಯಂತ್ರಕವನ್ನು ಕಟ್ಟಿ ಅದರಿಂದ ಉತ್ತರಕ್ಕೆ ಒಂದು, ದಕ್ಷಿಣಕ್ಕೆ ಒಂದು ನಾಲೆಯನ್ನು ಒಯ್ದಿದ್ದಾರೆ. ಚಿತ್ರಾವತಿ ನದಿಯ ಸಂಗಮದ ಕೆಳಗೆ ಈ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟೆಯನ್ನು ಕಟ್ಟಿ ಕಡಪ ಮತ್ತು ಜಮ್ಮಲಮಡಗು ತಾಲ್ಲೂಕುಗಳಿಗೆ ನೀರನ್ನು ಸಾಗಿಸಲಾಗಿದೆ. ಈ ನಾಲೆ ಒಂದು ಗುಡ್ಡವನ್ನು 310 ಮೀ ಉದ್ದವಾದ ಸುರಂಗದ ಮೂಲಕ ದಾಟುತ್ತದೆ. ಅನೇಕ ಕಡೆಗಳಲ್ಲಿ ಗುಡ್ಡದ ತಪ್ಪಲುಗಳಲ್ಲೂ ಆಳವಾದ ತೋಡುಗಳಲ್ಲೂ ಹೋಗಿ ಎರಡು ಕಮರಿಗಳನ್ನು ಪ್ರಬಲ ಕಾಂಕ್ರೀಟಿನ ಮೇಲುಗಾಲುವೆಯ ಮೇಲೆ ದಾಟುತ್ತದೆ.

ಎಡದಂಡೆಯ ಮೇಲ್ಮಟ್ಟದ ನಾಲೆಯ ತಳದ ಅಗಲ 26 ಮೀ ಆಳ 4.3 ಮೀ ತಳಮಟ್ಟ 483.1 ಮೀ. ಇದು ಪ್ರಾರಂಭದಲ್ಲಿ 2,000 ಕ್ಯೂಸೆಕ್ಸ್‌ಗಳ ನೀರನ್ನು ಸಾಗಿಸುತ್ತದೆ. ಮೊದಲನೆಯ 32 ಕಿಮೀ ಗಳಲ್ಲಿ ನಾಲೆ ಒರಟಾದ ಭೂಮಿಯ ಮೂಲಕ ಹೋಗುತ್ತದೆ. ಇದಕ್ಕೆ ಕರ್ನಾಟಕದ ಗಡಿಯ ವರೆಗೆ 203 ಕಿಮೀ ಗಳ ಉದ್ದಕ್ಕೂ ನೆಲ ನೀರನ್ನು ಹೀರದ ಹಾಗೆ ಅಂಚನ್ನು ಕಟ್ಟಿದೆ. ಈ ನಾಲೆ ರಾಯಚೂರು ಜಿಲ್ಲೆಯಲ್ಲಿ 5.8 ಲಕ್ಷ ಎಕರೆಗಳಿಗೆ ನೀರನ್ನು ಒದಗಿಸುತ್ತದೆ. ಈ ನಾಲೆ 30ನೆಯ ಕಿಮೀ ದಲ್ಲಿ 1084 ಮೀ ಉದ್ದದ ಸುರಂಗವನ್ನು ಪ್ರವೇಶಿಸಿ ಹೊರಬರುತ್ತದೆ. 112 ನೆಯ ಕಿಮೀ ದಲ್ಲಿ ಮಸ್ಕಿ ಹಳ್ಳವನ್ನು ದಾಟುವ ಪ್ರಬಲವಾದ ಕಾಂಕ್ರೀಟಿನ ಮೇಲುಗಾಲುವೆ 11.3 ಮೀ ಅಗಲ, 4.1 ಮೀ ಎತ್ತರವಾಗಿದೆ. ಕಲ್ಲುಗಾರೆಯ ಕಂಬಗಳನ್ನು ಮರಳಿನಲ್ಲಿ 9 ಮೀ ಆಳಕ್ಕೆ ಇಳಿಸಿದೆ. ಅವು ಗುಂಡಾದ ಬಾವಿಗಳ ಮೇಲೆ ನಿಂತಿವೆ. ಹಳ್ಳದಲ್ಲಿ 45,540 ಕ್ಯೂಸೆಕ್ಸ್‌ಗಳ ಪ್ರವಾಹವನ್ನು ಸಾಗಿಸುವ, 14 ಮೀ ಅಗಲದ, 6.8 ಮೀ ಎತ್ತರದ 11 ಕಣ್ಣುಗಳಿವೆ. ಬಲದಂಡೆಯ ಕೆಳಮಟ್ಟದ ನಾಲೆ 360 ಕಿಮೀ ಉದ್ದವಾಗಿದ್ದು, ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ 92,345 ಎಕರೆಗಳಿಗೂ, ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ 1,56,913 ಎಕರೆಗಳಿಗೂ ನೀರನ್ನು ಒದಗಿಸುತ್ತದೆ. ನಾಲೆಯ ಅಗಲ ಪ್ರಾರಂಭದಲ್ಲಿ 22 ಮೀ ಆಳ 3.2 ಮೀ ನಾಲೆಯ ತಳ 10,000 ಕ್ಕೆ 1 ರಂತೆ ಇಳಿದು ಸೆಕೆಂಡಿಗೆ 3 ಅಡಿ ವೇಗದಲ್ಲಿ 2,500 ಕ್ಯೂಸೆಕ್ಸ್ ನೀರನ್ನು ಸಾಗಿಸುತ್ತದೆ. ಇದರ ಕೆಳಗೆ ಒಟ್ಟು 8.6 ಲಕ್ಷ ಎಕರೆ ಭೂಮಿಯೂ ಬಳ್ಳಾರಿ ಜಿಲ್ಲೆಯ 31 ಕಿಮೀ ಗಳವರೆಗೆ 2.5 ಲಕ್ಷ ಎಕರೆ ಭೂಮಿಯೂ ಇವೆ. ಇದರಲ್ಲಿ 40,000 ಎಕರೆಗೆ ನೀರು ದೊರಕುತ್ತಿದೆ. ಈ ನಾಲೆ 128ನೆಯ ಕಿಮೀ ನಲ್ಲಿ ಹಗರಿ ನದಿಯನ್ನು 10.7 ಮೀ ಕಣ್ಣಿನ 58 ಕಮಾನುಗಳ ಮೇಲುಗಾಲುವೆಯಲ್ಲಿ ದಾಟುತ್ತದೆ. ಮೇಲುಗಾಲುವೆ 3.7 ಮೀ ಅಗಲ, 2.9 ಮೀ ಎತ್ತರವಾಗಿರುವ ಅವಳಿ ತೊಟ್ಟಿಗಳ ರೂಪದಲ್ಲಿ ಕೆಳಗಡೆ ಹೊಳೆ 1,85,000 ಕ್ಯೂಸೆಕ್ಸ್‌ಗಳ ಪ್ರವಾಹವನ್ನು ಸಾಗಿಸುತ್ತದೆ. ಇದೊಂದು ವಿವಿಧೋದ್ದೇಶ ಯೋಜನೆ. ನೀರಾವರಿಯೇ ಅಲ್ಲದೆ ವಿದ್ಯುದುತ್ಪಾದನೆ, ಜಲಯಾನ, ಮತ್ಸ್ಯೋದ್ಯಮ, ಪಟ್ಟಣಗಳಿಗೆ ನೀರಿನ ಸರಬರಾಜು ಮತ್ತು ವಿಹಾರಾನುಕೂಲಗಳು ಯೋಜನೆಯಲ್ಲಿ ಸೇರಿವೆ. ಮೀನಿನ ಕ್ಷೇತ್ರವೊಂದನ್ನು ರಚಿಸಲಾಗಿದೆ.

ಈ ಕೆಲಸದಲ್ಲಿ ಉಪಯೋಗಿಸಲಾದ ಎಲ್ಲ ಕೋಡಿಗಳ ಮತ್ತು ತೂಬುಗಳ ಬಾಗಿಲುಗಳನ್ನೂ ಅಣೆಯ ಬಳಿ 1952ರಲ್ಲಿ ಸ್ಥಾಪಿತವಾದ ಕಾರ್ಖಾನೆಯಲ್ಲಿ ತಯಾರಿಸಲಾಗಿದೆ. (ಎಚ್.ಸಿ.ಕೆ.)

**ತುಂಗಾ:** ಕರ್ನಾಟಕದ ಒಂದು ಮುಖ್ಯ ನದಿ. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟ ಶ್ರೇಣಿಯ ವರಾಹ ಪರ್ವತದಲ್ಲಿನ ಗಂಗಾಮೂಲ ಎಂಬಲ್ಲಿ ಹುಟ್ಟುತ್ತದೆ. ಇದರ ಉಗಮಸ್ಥಾನ ಶೃಂಗೇರಿಯ ನೈಋತ್ಯಕ್ಕೆ ಸು. 25 ಕಿಮೀ ದೂರದಲ್ಲಿದೆ. ನದಿಯ ಒಟ್ಟು ಉದ್ದ ಸು. 130 ಕಿಮೀ. ಉಗಮಸ್ಥಾನದಿಂದ ಈಶಾನ್ಯಾಭಿಮುಖವಾಗಿ ಪ್ರವಹಿಸಿ ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ ತಾಲ್ಲೂಕುಗಳ ಮೂಲಕ ಹರಿದು ಶಿವಮೊಗ್ಗ ತಾಲ್ಲೂಕಿನ ಕೂಡಲಿಯ ಬಳಿ ಭದ್ರಾ ನದಿಯನ್ನು ಕೂಡಿ ಅನಂತರ ತುಂಗಭದ್ರಾ ನದಿ ಆಗಿ ಮುಂದುವರಿಯುತ್ತದೆ. ಈ ನದಿಗೆ 95ಕ್ಕೂ ಹೆಚ್ಚು ಹಳ್ಳಗಳು, ತೊರೆಗಳು ಸೇರುತ್ತವೆ. ಅವುಗಳಲ್ಲಿ ನಂದಿನಿ, ನಳಿನಿ, ಬೇಗಾರ್ ಹಳ್ಳ, ಮಾಲತಿ ಹಳ್ಳ, ಕುಶಾವತಿ ಮುಖ್ಯವಾದವು. ಮಂಡಗದ್ದೆಯ ಬಳಿ ಸ್ವಲ್ಪ ದೂರ ಈ ನದಿ ಏಳು ಕವಲುಗಳಾಗಿ ಹರಿಯುವುದರಿಂದ ಇದನ್ನು ಏಳೂಕಾಲುಸೀಳು ಎಂದು ಕರೆಯಯಲಾಗಿದೆ. ಭದ್ರಾ ನದಿಯಷ್ಟು ಇದು ತೀಕ್ಷ್ಣವಲ್ಲ. ಇದರ ದಡಗಳು ಕಡಿದಾಗಿಲ್ಲ. ನದಿ ರಭಸವಾಗಿ ಹರಿಯುವುದರಿಂದ ಪ್ರಾಹದ ಭೀತಿ ಕಡಿಮೆ. ಶೃಂಗೇರಿ, ತೀರ್ಥಹಳ್ಳಿ, ಹರಿಹರಪುರ ಮುಂತಾದ ಪುಣ್ಯಕ್ಷೇತ್ರಗಳೂ ಶಿವಮೊಗ್ಗದಂಥ ದೊಡ್ಡ ನಗರಗಳೂ ಈ ನದಿ ದಡದಲ್ಲಿ ನೆಲಸಿವೆ. ಮಂದಗದ್ದೆಯ ಬಳಿ ಒಂದು ಪಕ್ಷಿಧಾಮವಿದೆ. ಶಿವಮೊಗ್ಗದ ನೈಋತ್ಯಕ್ಕೆ ಸು. 11 ಕಿಮೀ ದೂರದಲ್ಲಿರುವ

ಗಾಜನೂರಿನ (ಸಕ್ರೆಬೈಲು) ಬಳಿ ಈ ನದಿಗೆ ಅಣೆಕಟ್ಟೆಯನ್ನು ನಿರ್ಮಿಸಲಾಗಿದೆ. ಇದರಿಂದ ಶಿವಮೊಗ್ಗ ಜಿಲ್ಲೆಯ 8.70 ಸಾವಿರ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿದೆ. ತುಂಗಾ ನೀರನ್ನು ಬಳಸಿಕೊಂಡು ಬತ್ತ, ಕಬ್ಬು ಮತ್ತು ಅಡಕೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಈ ನದಿಯ ನೀರು ಕುಡಿಯಲು ತುಂಬ ರುಚಿಯೆಂದು ಪ್ರತೀತಿ. ಈ ಹಿನ್ನೆಲೆಯಿಂದ ಗಂಗಾಸ್ನಾನ ತುಂಗಾಪಾನ ಎಂಬ ನಾಣ್ನುಡಿ ಹುಟ್ಟಿಕೊಂಡಿದೆ.

ವಿಷ್ಣು ವರಾಹಾವತಾರ ತಾಳಿ ಸಾಗರದಿಂದ ಭೂಮಿಯನ್ನು ಮೇಲೆತ್ತಿ ತಂದಾಗ ಆತನ ಎಡಕೋರೆಯಿಂದ ತೊಟ್ಟಿಕ್ಕಿದ್ದ ನೀರೇ ತುಂಗಾ ನದಿಯಾಗಿ ಹರಿಯಿತೆಂದು ಐತಿಹ್ಯವಿದೆ. ಆದರೆ ಇತ್ತೀಚೆಗೆ ಕಾರ್ಖಾನೆಗಳಿಂದ ವಿಸರ್ಜನೆಗೊಂಡ ತ್ಯಾಜ್ಯವಸ್ತುಗಳಿಂದ ನದಿಯು ತೀವ್ರ ಪ್ರಮಾಣದಲ್ಲಿ ಮಾಲಿನ್ಯಗೊಳ್ಳುತಿದೆ. (ಕೆ.ಆರ್.ಆರ್.)

**ತುಮಕೂರು:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಇವುಗಳ ಆಡಳಿತ ಕೇಂದ್ರ. ಉ.ಅ. $12^{0}45'$ –$14^{0}20'$ ಮತ್ತು ಪೂ.ರೇ. $76^{0}20'$–$77^{0}31'$ ನಡುವೆ ಇರುವ ಜಿಲ್ಲೆಯ ಉತ್ತರಕ್ಕೆ; ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಪಶ್ಚಿಮಕ್ಕೆ; ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳು, ದಕ್ಷಿಣಕ್ಕೆ; ಮಂಡ್ಯ ಜಿಲ್ಲೆ; ಪೂರ್ವಕ್ಕೆ; ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳು ಇವೆ. ಇದರ ತಾಲ್ಲೂಕುಗಳಲ್ಲೊಂದಾದ ಪಾವಗಡದ ಪಶ್ಚಿಮದ ಅಂಚಿನ ಒಂದು ಭಾಗ ವಿನಾ ಉಳಿದ ಕಡೆಯಲ್ಲೆಲ್ಲ ಇದನ್ನು ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಬಳಸಿದೆ. ಪಶ್ಚಿಮದ ಅಂಚಿನಲ್ಲಿ ಆ ತಾಲ್ಲೂಕು ಚಿತ್ರದುರ್ಗ ಜಿಲ್ಲೆಗೆ ಸೇರಿದಂತಿದೆ. ತುಮಕೂರು ಜಿಲ್ಲೆಯ ಉಳಿದ ಭಾಗದಿಂದ ಈ ತಾಲ್ಲೂಕು ಸಂಪೂರ್ಣ ಪ್ರತ್ಯೇಕವಾಗಿ ಇದೆ. ಈ ತಾಲ್ಲೂಕನ್ನು 1986 ರಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ಈ ಜಿಲ್ಲೆಗೆ ವರ್ಗಾಯಿಸಲಾಯಿತು. ಜಿಲ್ಲೆಯ ವಿಸ್ತೀರ್ಣ 10,606 ಚ.ಕಿಮೀ ಜನಸಂಖ್ಯೆ 25,79,516. ಚಿಕ್ಕನಾಯಕನಹಳ್ಳಿ (2,09,539), ಗುಬ್ಬಿ (2,56,144), ಕೊರಟಗೆರೆ (1,60,669), ಕುಣಿಗಲು (1,80,170), ಮಧುಗಿರಿ (2,64,447). ಪಾವಗಡ (2,46,238), ಶಿರಾ (3,01,253), ತಿಪಟೂರು (1,42,110), ತುಮಕೂರು (2,63,402), ತುರುವೇಕೆರೆ (1,25,575)–ಇವು ಜಿಲ್ಲೆಯ ತಾಲ್ಲೂಕುಗಳು.




ಭೌತಲಕ್ಷಣ : ತುಮಕೂರು ಜಿಲ್ಲೆಯನ್ನು ಇತರ ಜಿಲ್ಲೆಗಳಿಂದ ಪ್ರತ್ಯೇಕಿಸುವ ನದಿಗಳಾಗಲಿ ಬೆಟ್ಟಗಳಾಗಲಿ ಅದರ ಗಡಿಗಳ ಭಾಗದಲ್ಲಿಲ್ಲ. ಕುಣಿಗಲು ತಾಲ್ಲೂಕಿನ ದಕ್ಷಿಣಕ್ಕೆ ಇರುವ ಪ್ರದೇಶ ಬೆಟ್ಟಗುಡ್ಡಗಳಿಂದ ಕೂಡಿದೆ. ಉಳಿದ ಭಾಗ ಸಾಮಾನ್ಯವಾಗಿ ಅಲೆಯಲೆಯಾಗಿ ಏರಿಳಿಯುವ ಮೈದಾನ ಪ್ರದೇಶ. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಸ್ಥೂಲವಾಗಿ ದಕ್ಷಿಣ–ಆಗ್ನೇಯವಾಗಿ ಹಬ್ಬಿರುವ ಬೆಟ್ಟಗಳ ಸಾಲುಗಳಿವೆ. ಇದು ಚಿತ್ರದುರ್ಗ ಶಿಸ್ಟ್ ಪಟ್ಟೆಯ ವಿಸ್ತರಣೆ. ಇವು ರಾಜ್ಯದಲ್ಲಿರುವ ಧಾರವಾಡ ಶಿಸ್ಟ್‌ಗಳ ಮಧ್ಯದ ಗುಂಪಿನವು. ಜಿಲ್ಲೆಯ ಪೂರ್ವ ಭಾಗದಲ್ಲಿ ಗ್ರಾನೈಟು ಬೆಟ್ಟಗಳ ಕಿರಿದಾದ ಶ್ರೇಣಿಯಿದೆ. ಇದು ಕ್ಲೋಸ್‌ಪೇಟ್ (ಈಗಿನ ರಾಮನಗರ) ಗ್ರಾನೈಟುಗಳ ಉತ್ತರದ ವಿಸ್ತೃತ ಭಾಗ. ಸರಾಸರಿ 32 ಕಿಮೀ ಅಗಲವಾಗಿರುವ ಇವು ಜಿಲ್ಲೆಯಲ್ಲಿ ದಕ್ಷಿಣೋತ್ತರವಾಗಿ ಹಬ್ಬಿವೆ. ದೇವರಾಯನ ದುರ್ಗ ಮತ್ತು ಮಧುಗಿರಿ ಬೆಟ್ಟಗಳು ಈ ಗುಂಪಿನವು. ಪೂರ್ವದ ಗ್ರಾನೈಟ್ ಶ್ರೇಣಿ ಚಿಕ್ಕನಾಯಕನ ಹಳ್ಳಿ, ಶಿರಾ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಹಬ್ಬಿದೆ. ಪಾವಗಡ, ಮಧುಗಿರಿ, ಕೊರಟಗೆರೆ ಮತ್ತು ತುಮಕೂರು ತಾಲ್ಲೂಕಿನ ಉತ್ತರ ಭಾಗದಲ್ಲೂ ಇದಕ್ಕೆ ಸಮಾಂತರವಾಗಿ ಪಶ್ಚಿಮದಲ್ಲಿರುವ, ಶಿಸ್ಟ್ ಶಿಲೆಗಳಿಂದ ಕೂಡಿದೆ. ಕುಣಿಗಲು ತಾಲ್ಲೂಕಿನ ಮಧ್ಯದ ಮತ್ತು ದಕ್ಷಿಣದ ಭಾಗಗಳಲ್ಲಿ ಬೆಟ್ಟಗಳ ಇನ್ನೊಂದು ಗುಂಪಿದೆ. ಜಿಲ್ಲೆಯಲ್ಲಿರುವ ಮುಖ್ಯ ಶಿಖರಗಳು ಇವು: ತುಮಕೂರು ತಾಲ್ಲೂಕಿನಲ್ಲಿ ದೇವರಾಯನದುರ್ಗ (1180ಮೀ), ನಿಜಗಲ್ (1080 ಮೀ), ರಾಮದೇವರ ಬೆಟ್ಟ (1176 ಮೀ) ಮತ್ತು ಸೀತೆಕಲ್ಲು (1014 ಮೀ) ; ಮಧುಗಿರಿ ತಾಲ್ಲೂಕಿನಲ್ಲಿ ಮಧುಗಿರಿದುರ್ಗ (1190 ಮೀ), ಮಿಡಿಗೇಶಿದುರ್ಗ (1033ಮೀ), ದೊಡ್ಡನರಮಂಗಲ (940 ಮೀ) ಮತ್ತು ಬ್ಯಾಳ್ಯ (882 ಮೀ) ; ಕೊರಟಗೆರೆ ತಾಲ್ಲೂಕಿನಲ್ಲಿ ಚನ್ನರಾಯನದುರ್ಗ (1132ಮೀ) ಮತ್ತು ಕೊರಟಗಿರಿ (874 ಮೀ); ಪಾವಗಡ ತಾಲ್ಲೂಕಿನಲ್ಲಿ ರಾಮನದುರ್ಗ(1071 ಮೀ), ನಿಡುಗಲ್ (1142 ಮೀ) ಮತ್ತು ಪಾವಗಡ(913 ಮೀ); ತಿಪಟೂರು ತಾಲ್ಲೂಕಿನ ಬೊಮ್ಮನಹಳ್ಳಿ (947 ಮೀ) ಮತ್ತು ಚೌಡನಹಳ್ಳಿ (8076 ಮೀ) ; ಕುಣಿಗಲು ತಾಲ್ಲೂಕಿನಲ್ಲಿ ಹುತ್ರಿದುರ್ಗ (1124 ಮೀ), ಹುಲಿಯೂರುದುರ್ಗ (840 ಮೀ), ಹೇಮಗಿರಿ (934 ಮೀ) ಮತ್ತು ರಂಗಸ್ವಾಮಿ ಬೆಟ್ಟ (908 ಮೀ).

ಜಿಲ್ಲೆಯಲ್ಲಿ ಜೀವನದಿಗಳಿಲ್ಲ. ಕೆಲವು ಸಣ್ಣ ನದಿಗಳು ಬೆಟ್ಟಗಳಲ್ಲಿ ಹುಟ್ಟಿ ಹರಿಯುತ್ತವೆ. ಬೇಸಗೆಯಲ್ಲಿ ಬತ್ತಿಹೋಗುವ ಈ ಹೊಳೆಗಳಲ್ಲಿ ಕೆಲವು ಅನೇಕ ಕೆರೆಗಳಿಗೆ ನೀರು ಒದಗಿಸುತ್ತವೆ. ಜಿಲ್ಲೆಯ ಅತ್ಯಂತ ಮುಖ್ಯ ನದಿಗಳು ಶಿಂಷಾ ಮತ್ತು ಜಯಮಂಗಳಿ. ಶಿಂಷಾನದಿ ದೇವರಾಯನದುರ್ಗದಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುತ್ತದೆ. ಜಯಮಂಗಳಿಯೂ ದೇವರಾಯದುರ್ಗದಲ್ಲಿ ಹುಟ್ಟುವ ನದಿ. ಇದು ವಾಯವ್ಯಾಭಿಮುಖವಾಗಿ ಸ್ವಲ್ಪ ದೂರ ಹರಿದು ಪಶ್ಚಿಮದ ಮೈದಾನದಲ್ಲಿ ಉತ್ತರಕ್ಕೆ ತಿರುಗಿ ಮುಂದುವರಿದು ಪೆನ್ನಾರ್ ನದಿಯಲ್ಲಿ ಸಂಗಮಿಸುತ್ತದೆ. ರಾಜ್ಯದಲ್ಲಿ ಪೂರ್ವಪಶ್ಚಿಮವಾಗಿ ಹಬ್ಬಿರುವ ಜಲವಿಭಾಗ ರೇಖೆ ಈ ಜಿಲ್ಲೆಯ ಮಧ್ಯದಲ್ಲಿ ಸಾಗಿದೆ. ಇದು ಜಿಲ್ಲೆಯ ಜಲವಿಭಾಗರೇಖೆಯಾಗಿಯೂ ಪರಿಣಮಿಸಿದೆ. ಜಿಲ್ಲೆಯಲ್ಲಿ ಶಿಂಷಾ ನದಿಯ ಉದ್ದ 99 ಕಿಮೀ. ಇದು ತುಮಕೂರು, ಗುಬ್ಬಿ, ತುರುವೇಕೆರೆ ಮತ್ತು ಕುಣಿಗಲ್ ತಾಲ್ಲೂಕುಗಳಲ್ಲಿ ಪ್ರವಹಿಸುತ್ತದೆ. ಜಯಮಂಗಳಿ ನದಿ ಹರಿಯುವ ತಾಲ್ಲೂಕುಗಳು ತುಮಕೂರು, ಕೊರಟಗೆರೆ ಮತ್ತು ಮಧುಗಿರಿ. ತಾಲ್ಲೂಕಿನಲ್ಲಿ ಇದರ ಉದ್ದ 64 ಕಿಮೀ. ಜಿಲ್ಲೆಯ ಇನ್ನೊಂದು ಮುಖ್ಯ ನದಿ ಸುವರ್ಣಮುಖಿ.

ವಾಯುಗುಣ : ಜಿಲ್ಲೆಯ ಅತ್ಯಂತ ಉತ್ತರದ ಭಾಗ ಬಿಟ್ಟು ಉಳಿದ ಭಾಗದ ವಾಯುಗುಣ ಬೆಂಗಳೂರು ಜಿಲ್ಲೆಯದರಂತೆ ಹಿತಕರವಾಗಿರುತ್ತದೆ. ಶಿರಾದಿಂದ ಉತ್ತರಕ್ಕಿರುವ ಪ್ರದೇಶದ ಹಾಗೂ ಪಾವಗಡದ ವಾಯುಗುಣ ಚಿತ್ರದುರ್ಗ ಜಿಲ್ಲೆಯದನ್ನು ಹೋಲುತ್ತವೆ. ಅಲ್ಲಿ ಬೇಸಗೆಯಲ್ಲಿ ಹೆಚ್ಚು ಸೆಕೆ. ಜಿಲ್ಲೆಯಲ್ಲಿ ಮಾರ್ಚ್‌ನಿಂದ ಮೇ ªÀgÉUÉ µÀÄÉÃ¢ÀPÀ K¦ æ CvÀ AvÀ ¥ÀæAiÁRÀªÁUÀÄÄ F ªÀ ÉÃ41 ಸೆ. ವರೆಗೂ ಉಷ್ಣತೆ ಏರುವುದುಂಟು. ಜೂನ್‌ನಲ್ಲಿ ಮುಂಗಾರು ಮುಂದುವರಿದಂತೆ ಉಷ್ಣತೆ ಇಳಿಯುತ್ತದೆ. ಅಕ್ಟೋಬರ್‌ನಿಂದ ಗಮನಾರ್ಹವಾಗಿ ಉಷ್ಣತೆ ಇಳಿಯುತ್ತದೆ. ಡಿಸೆಂಬರ್ ಅತ್ಯಂತ ತಂಪಿನ ತಿಂಗಳು. ಚಳಿಗಾಲದಲ್ಲಿ ದೈನಿಕ ಕನಿಷ್ಠ ಉಷ್ಣತೆ ಕೆಲವು ವೇಳೆ $9^{0}$ಸೆ. ಗೂ ಇಳಿಯುವುದುಂಟು.

ಜಿಲ್ಲೆಯಲ್ಲಿ ಡಿಸೆಂಬರ್‌ನಿಂದ ಫೆಬ್ರವರಿಯ ವರೆಗೆ ಒಣ ಹವೆಯಿರುತ್ತದೆ. ಮಾರ್ಚ್‌ನಿಂದ ಮೇ ವರೆಗೆ ಬೇಸಗೆ ಜೂನ್, ಸೆಪ್ಟೆಂಬರ್ ಮುಂಗಾರಿನ ಕಾಲ. ಅಕ್ಟೋಬರ್–ನವೆಂಬರ್‌ಗಳಲ್ಲಿ ಹಿಂಗಾರು. ಮೇ–ನವೆಂಬರ್ ಅವಧಿಯಲ್ಲೇ ಮಳೆ ವಿಶೇಷ. ಮುಂಗಾರಿನ ಅನಂತರ–ಅಕ್ಟೋಬರ್ ತಿಂಗಳಲ್ಲಿ ಅತ್ಯಂತ ಹೆಚ್ಚಿನ ಮಳೆಯಾಗುತ್ತದೆ (ಒಟ್ಟು ವಾರ್ಷಿಕ ಮಳೆಯ ಶೇ. 28). ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 69 ಸೆಂಮೀ. ಉತ್ತರದಿಂದ ದಕ್ಷಿಣಕ್ಕೆ ಸಾಗಿದಂತೆ ಸಾಮಾನ್ಯವಾಗಿ ಮಳೆ ಹೆಚ್ಚು. ಜಿಲ್ಲೆಯ ಪೂರ್ವದಲ್ಲಿ ಹೆಚ್ಚು ಮಳೆಯಾಗುತ್ತದೆ.

ಸಸ್ಯ ಹಾಗೂ ಪ್ರಾಣಿವರ್ಗ : ಇಲ್ಲಿಯ ನೈಸರ್ಗಿಕ ಸಸ್ಯವರ್ಗ ಶುಷ್ಕ ಪರ್ಣಪಾತಿ ಪ್ರಕಾರದ್ದು. ಬೆಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಅರಣ್ಯಗಳಿವೆ. ಜಿಲ್ಲೆಯಲ್ಲಿರುವ ಅರಣ್ಯಗಳ ವಿಸ್ತೀರ್ಣ ಒಟ್ಟು ಭೂಮಿಯ ಶೇ. 8ರಷ್ಟು ಮಾತ್ರ. ಹೆಚ್ಚು ಮಳೆಯಾಗುವ ಪ್ರದೇಶದಲ್ಲಿ ಜಾಲರಿ, ದಿಂಡಿಗ, ಹೊನ್ನೆ, ಕರೀಮತ್ತಿ, ಅಳಲೆ, ತೋರ ಮತ್ತಿ, ಹುಣಿಸೆ, ತೇಗ, ಶ್ರೀಗಂಧ, ಬಾಗೆ, ಚಿಲಕಧೂಪ ಮುಂತಾದ ಮರಗಳೂ ಕಡಿಮೆ ಮಳೆಯಾಗುವ ಪಾವಗಡ ಮತ್ತು ಜಿಲ್ಲೆಯ ಉತ್ತರ ಭಾಗಗಳಲ್ಲಿ ಕಗ್ಗಿ, ಕಾರೆ, ಕಕ್ಕೆ, ಚುಜ್ಜಲು ಮುಂತಾದ ಮರಗಳೂ ಬೆಳೆಯುತ್ತವೆ. ತಂಗಡಿ ಮತು, ಕಕ್ಕೆ ಮರಗಳು ಜಿಲ್ಲೆಯ ಎಲ್ಲೆಡೆಗಳಲ್ಲೂ ಕಾಣಸಿಗುತ್ತವೆ. ಅಳಲೆ, ಹುಣಿಸೆ, ಸೀತಾಫಲಗಳು ವರಮಾನ ಸಂಪಾದನೆಯ ದೃಷ್ಟಿಯಿಂದ ಮುಖ್ಯವಾದವು. ಜಿಲ್ಲೆಯಲ್ಲಿ ಅರಣ್ಯಗಳು ಹೆಚ್ಚಾಗಿಲ್ಲದಿದ್ದರಿಂದ ವನ್ಯಮೃಗಗಳು ಹೆಚ್ಚಾಗಿಲ್ಲ. ಹುಲಿ, ಚಿರತೆ ಮುಂತಾದವು ಹಿಂದೆ ಇದ್ದುವು. ಈಗ ಕರಡಿ, ಕಾಡುಹಂದಿ ಮುಂತಾದವು ವಿರಳವಾಗಿ ಇವೆ. ಶಿರಾ ಮತ್ತು ಮಧುಗಿರಿ ತಾಲ್ಲೂಕುಗಳ ಕಾಡುಗಳಲ್ಲಿ ಜಿಂಕೆಗಳ ಸಣ್ಣ ಸಣ್ಣ ಗುಂಪುಗಳಿವೆ.

ಖನಿಜ ಸಂಪತ್ತು : ಕುಣಿಗಲು ತಾಲ್ಲೂಕಿನ ಹುಲಿಯೂರು ಮತ್ತು ಹೊನ್ನಮಾಚನಹಳ್ಳಿ ಕೆರೆಯ ಬಳಿ ಆಸ್ಬೆಸ್ಟಾಸ್ ನಿಕ್ಷೇಪಗಳಿವೆ. ಕೊರಟಗೆರೆ, ಹುಲಿಯೂರುದುರ್ಗ, ಪಾವಗಡ ತಾಲ್ಲೂಕಿನ ಪಲವಳ್ಳಿ, ಕುಣಿಗಲು ತಾಲ್ಲೂಕಿನ ತಿಮ್ಮಸಂದ್ರಗಳಲ್ಲಿ ಕುರಂದ ದೊರಕುತ್ತವೆ.

ಜಾನೆಹಾರ್, ಹೊನ್ನೆಬಾಗಿ, ದೋರೆಗುಡ್ಡ, ಕರೆಕುರ್ಚಿ, ಹತ್ಯಾಲ, ಶಿವಸಂದ್ರ, ಕೊಂಡಿ, ಕುದುರೆಕಣಿವೆ ಪ್ರದೇಶಗಳಲ್ಲಿ ಮ್ಯಾಂಗನೀಸ್ ಗಣಿಗಳುಂಟು. ಕೆಲವು ಮ್ಯಾಂಗನೀಸ್ ಗಣಿಗಳಲ್ಲಿ ಸಿಗುವ ಇನ್ನೊಂದು ಖನಿಜವೆಂದರೆ ಮೃದುವಾದ ಜೇಡಿಮಣ್ಣು. ಬೆಳ್ಳಾರ, ಅಜ್ಜನಹಳ್ಳಿಗಳ ಬಳಿ ಚಿನ್ನದ ನಿಕ್ಷೇಪಗಳಿವೆ. ಜಿಲ್ಲೆಯ ಇತರ ಖನಿಜಗಳು ಫೆಲ್ಸ್‌ಸ್ಪಾರ್, ಸುಣ್ಣಕಲ್ಲು, ಕ್ವಾರ್ಟ್ಸ್, ಕಟ್ಟಡಕಲ್ಲು.

ವ್ಯವಸಾಯ, ನೀರಾವರಿ : ಜಿಲ್ಲೆಯ 8,54,376 ಹೆ. ಭೂಮಿಯಲ್ಲಿ ಸಾಗುವಳಿ ಒಳಪಟ್ಟ ಭೂಮಿ 4,85,825 ಹೆ. 1,30,473 ಹೆ. ಬೀಳು ಬಿದ್ದಿತ್ತು. ಸಾಗುವಳಿ ಭೂಮಿ ತುಮಕೂರು, ತಿಪಟೂರು, ಪಾವಗಡ, ಶಿರಾ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಇತರ ತಾಲ್ಲೂಕುಗಳಲ್ಲಿಯದಕ್ಕಿಂತ ಅಧಿಕ. ಕಾಡಿನ ಪ್ರದೇಶ 43777 ಹೆ.. ಶಿರಾ, ಗುಬ್ಬಿ, ಪಾವಗಡ, ಕುಣಿಗಲು, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಕಾಡುಗಳ ಪ್ರದೇಶ ಹೆಚ್ಚು.

ಜಿಲ್ಲೆಯ ಮಣ್ಣು ಸಾಮಾನ್ಯವಾಗಿ ಗಟ್ಟಿ, ಅಷ್ಟೇನೂ ಫಲವತ್ತಾದ್ದಲ್ಲ. ಕೆರೆ ನಾಲೆಗಳಿಂದ ನೀರಾವರಿಗೆ ಒಳಪಟ್ಟ ಭೂಮಿ ಮಾತ್ರ ಉತ್ತಮ. ಜಿಲ್ಲೆಯ ದಕ್ಷಿಣ ಪಶ್ಚಿಮ ತಾಲ್ಲೂಕುಗಳದು ಸಾಮಾನ್ಯವಾಗಿ ಕೆಂಪುಮಣ್ಣು. ಉತ್ತರದ ತಾಲ್ಲೂಕುಗಳಲ್ಲಿ ತಕ್ಕಮಟ್ಟಿಗೆ ಕಪ್ಪು ಮಣ್ಣು ಇದೆ. ಪೂರ್ವದ ತಾಲ್ಲೂಕುಗಳಲ್ಲಿ ಮರಳು ಮಣ್ಣು ಸಾಮಾನ್ಯ. ಒಟ್ಟಿನಲ್ಲಿ ಜಿಲ್ಲೆಯ ಮಣ್ಣನ್ನು ಕೆಂಪು, ಗರಸು, ಮರಳು, ಜೇಡಿ ಕಪ್ಪು, ಮರಳುಜೇಡಿ–ಎಂದು ವಿಂಗಡಿಸಬಹುದು. ಜಿಲ್ಲೆಯ ಮುಖ್ಯ ಬೆಳೆಗಳು ರಾಗಿ, ಬತ್ತ, ಜೋಳ, ಹುರುಳಿ, ನೆಲಗಡಲೆ, ಮೆಣಸಿನಕಾಯಿ, ಕಬ್ಬು, ತೆಂಗು, ಅಡಕೆ, ಬಾಳೆ ಎಣ್ಣೆ ಬೀಜಗಳು. ಚಿಕ್ಕನಾಯಕನಹಳ್ಳಿ ಗುಬ್ಬಿ, ತಿಪಟೂರು ತಾಲ್ಲೂಕುಗಳಲ್ಲಿ ತೆಂಗು ಮತ್ತು ಅಡಕೆ ಬೆಳೆ ಅಧಿಕ. ಕೊರಟಗೆರೆ ತಾಲ್ಲೂಕು ಅಗ್ರಹಾರದಲ್ಲಿ ಬಜೆ ಮೂಲಿಕೆ ಬೆಳೆಯುವರು. ಹಲಸು, ಮಾವು ಇನ್ನೆರಡು ಫಸಲುಗಳು.

ಜಿಲ್ಲೆಯ ಮುಖ್ಯ ಜಲಾಶಯಗಳು ಇವು : 1. ಕುಣಿಗಲು ತಾಲ್ಲೂಕು ಅಮೃತೂರಿನ ಮಾರ್ಕೋನಹಳ್ಳಿ ಜಲಾಶಯ (ಶಿಂಷಾ); 2. ಚಿಕ್ಕನಾಯಕನಹಳ್ಳಿ ತಾಲ್ಲೂಕು ಬೋರನ ಕಣಿವೆ ಜಲಾಶಯ (ಸುವರ್ಣಮುಖಿ); 3. ಕುಣಿಗಲು ತಾಲ್ಲೂಕು ಸಂಕನಪುರ ಅಣೆಕಟ್ಟು (ನಾಗಿನಿ) ; 4. ಮಾಗಡಿ ಕೆಂಪೇಗೌಡ ಕಟ್ಟಿಸಿದ ದೀಪಾಂಬುಧಿ ಕೆರೆ ಮತ್ತು 5. ಕುಣಿಗಲು ತಾಲ್ಲೂಕು ಮಂಗಳ ಗ್ರಾಮದ ಬಳಿ ನಾಗಿನಿ ಜಲಾಶಯ. ಅನೇಕ ಕೆರೆಗಳೂ ತಲಪರಿಗೆಗಳೂ ನೀರಾವರಿಗೆ ಉಪಯುಕ್ತವಾಗಿವೆ.

ಕೈಗಾರಿಕೆ : ಅಜ್ಜನಹಳ್ಳಿ ಮತ್ತು ಬೆಳ್ಳಾರ ಹಳ್ಳಿಗಳ ಬಳಿಯ ಚಿನ್ನದ ಗಣಿಗಾರಿಕೆ ಪ್ರಯತ್ನಗಳನ್ನು ಬಿಟ್ಟರೆ ಈ ಜಿಲ್ಲೆಯಲ್ಲಿ ಯಾವ ಹಳೆಯ ದೊಡ್ಡ ಕೈಗಾರಿಕೆಗಳೂ ಇದ್ದಂತಿಲ್ಲ. ಹಲವು ಗುಡಿಸಿಲು ಕೈಗಾರಿಕೆಗಳು ಪ್ರಾಚೀನವಾದವು. ಇವುಗಳ ಬೇಡಿಕೆ ಹಾಗೂ ಕಚ್ಚಾಸಾಮಗ್ರಿ ಪೂರೈಕೆ ಸ್ಥಳೀಯ. ಚಿಕ್ಕನಾಯಕನ ಹಳ್ಳಿಯ ಉಜ್ಜುಕಂಬಳಿ ತುಂಬ ಪ್ರಸಿದ್ಧವಾದ್ದು. ಜಿಲ್ಲೆಯ ಹಲವು ಕಡೆಗಳಲ್ಲಿ ದುಪ್ಪಟಿಗಳು ತಯಾರಾಗುತ್ತಿದ್ದವು. ಇತರ ಗುಡಿಸಿಲು ಕೈಗಾರಿಕೆಗಳು ಮಡಿಕೆ, ಮರಗೆಲಸ, ಎಣ್ಣೆಗಾಣ, ಹಿಂಡಿ, ಬಾಚಣಿಗೆ ಮತ್ತು ಬಳೆ. ಬೆಳ್ಳಾರದಲ್ಲಿ ಚಿನ್ನ ತೆಗೆಯುವ ಉದ್ಯಮ ಅಷ್ಟೇನೂ ಲಾಭದಾಯಕವಲ್ಲದಿದ್ದರಿಂದ ಅದನ್ನು ಕೈಬಿಡಲಾಯಿತು. ಮರಕೊಯ್ತ, ವ್ಯವಸಾಯ ಉಪಕರಣ ತಯಾರಿಕೆ, ಮೋಟಾರು ವಾಹನಗಳ ಒಡಲಿನ ನಿರ್ಮಾಣ, ಬೆಂಕಿಕಡ್ಡಿ ತಯಾರಿಕೆ, ಪಾತ್ರೆ ಹಾಗೂ ಸಾಬೂನು ತಯಾರಿಕೆ, ಹೆಂಚು ಇಟ್ಟಿಗೆ ತಯಾರಿಕೆ ಬೀಡಿ ತಯಾರಿಕೆ, ನೇಯ್ಗೆ, ರೇಷ್ಮೆ, ಚರ್ಮ ಹದಗಾರಿಕೆ–ಇವು ಕೆಲವು ಆಧುನಿಕ ಸಣ್ಣ ಕೈಗಾರಿಕೆಗಳು. ತುರುವೇಕೆರೆ ತಾಲ್ಲೂಕಿನ ಅಮ್ಮಸಂದ್ರದಲ್ಲಿ ದೊಡ್ಡ ಸಿಮೆಂಟ್ ಕಾರ್ಖಾನೆ ಇದೆ.

ಸಾರಿಗೆ ಸಂಪರ್ಕ: ಬೆಂಗಳೂರು–ಅರಸೀಕೆರೆ ರೈಲುಮಾರ್ಗ ಜಿಲ್ಲೆಯಲ್ಲಿ ಪೂರ್ವದಿಂದ ಪಶ್ಚಿಮಕ್ಕೆ 94ಕಿಮೀ ಸಾಗಿದೆ. ಜಿಲ್ಲೆಯ ರೈಲ್ವೆ ನಿಲ್ದಾಣಗಳು ಹಿರೇಹಳ್ಳಿ, ತುಮಕೂರು, ಗುಬ್ಬಿ, ನಿಟ್ಟೂರು, ಬಾಣಸಂದ್ರ, ಕರಡಿ, ತಿಪಟೂರು ಮತ್ತು ಕೊನೇಹಳ್ಳಿ ಜಿಲ್ಲೆಯ ರಸ್ತೆಗಳ ಒಟ್ಟು ಉದ್ದ 2590 ಕಿಮೀ. ಇದರಲ್ಲಿ 96 ಕಿಮೀ ರಾಷ್ಟ್ರೀಯ ಹೆದ್ದಾರಿ; 227 ಕಿಮೀ ರಾಜ್ಯ ಹೆದ್ದಾರಿ. ಜಿಲ್ಲೆಯಲ್ಲಿ ಹಾದುಹೋಗುವ ಪ್ರಮುಖ ರಸ್ತೆಗಳು, ಬೆಂಗಳೂರು ಪುಣೆ ರಾಷ್ಟ್ರೀಯ ಹೆದ್ದಾರಿ (ಹಿರೇಹಳ್ಳಿಯಿಂದ ಶಿರಾ ತಾಲ್ಲೂಕಿನ ನಾರಾಯಣಪುರದ ವರೆಗೆ): ಬೆಂಗಳೂರು–ಹೊನ್ನಾವರ ರಸ್ತೆ ಬೆಂಗಳೂರು–ಮಂಗಳೂರು ರಸ್ತೆ, ತುಮಕೂರು–ಬಳ್ಳಾರಿ ರಸ್ತೆ, ತುಮಕೂರು–ಕುಣಿಗಲು–ಮದ್ದೂರು ರಸ್ತೆ, ಪಾವಗಡ–ಅರಸೀಕೆರೆ ರಸ್ತೆ.

ಪ್ರಮುಖ ಸ್ಥಳಗಳು: ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳೆಂದರೆ ಕೈದಾಳ, ಸಿದ್ಧಗಂಗೆ ಮತ್ತು ದೇವರಾಯನದುರ್ಗ. ಪಾಳೆಯಗಾರರ ಕೋಟೆಗಳು ಮಧುಗಿರಿ, ಮಿಡಿಗೇಶಿ, ಪಾವಗಡ, ನಿಡುಗಲ್ಲು, ಕೊರಟಗೆರೆ, ಹುತ್ರಿದುರ್ಗ ಮತ್ತು ಶಿರಾಗಳಲ್ಲಿವೆ.

ಆಡಳಿತ ವಿಭಾಗ: ಜಿಲ್ಲೆಯಲ್ಲಿ 3 ರೆವಿನ್ಯೂ ಉಪವಿಭಾಗಗಳೂ ಅವಕ್ಕೆ ಸೇರಿದ 10 ರೆವಿನ್ಯೂ ತಾಲ್ಲೂಕುಗಳೂ 50 ಹೋಬಳಿಗಳೂ 2452 ಗ್ರಾಮಗಳೂ ಇವೆ (1971). ತುಮಕೂರು ಉಪವಿಭಾಗಕ್ಕೆ ತುಮಕೂರು, ಗುಬ್ಬಿ ಕುಣಿಗಲು ತಾಲ್ಲೂಕುಗಳೂ ತಿಪಟೂರು ಉಪವಿಭಾಗಕ್ಕೆ ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲ್ಲೂಕುಗಳೂ ಮಧುಗಿರಿ ಉಪವಿಭಾಗಕ್ಕೆ ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ ತಾಲ್ಲೂಕುಗಳೂ ಸೇರಿವೆ. ಜಿಲ್ಲೆಯಲ್ಲಿ 560 ಗ್ರಾಮಪಂಚಾಯಿತಿಗಳಿವೆ; ಪುರಸಭೆಗಳು 11.

ತುಮಕೂರು ತಾಲ್ಲೂಕು: ತುಮಕೂರು ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕಿನ ಎಲ್ಲೆಗಳು; ಉತ್ತರಕ್ಕೆ ಶಿರಾ ಮತ್ತು ಕೊರಟಗೆರೆ, ಪಶ್ಚಿಮಕ್ಕೆ ಗುಬ್ಬಿ, ದಕ್ಷಿಣಕ್ಕೆ ಕುಣಿಗಲು, ಆಗ್ನೇಯಕ್ಕೆ ಬೆಂಗಳೂರು ಜಿಲ್ಲೆಯ ಮಾಗಡಿ, ಪೂರ್ವಕ್ಕೆ ನೆಲಮಂಗಲ ತಾಲ್ಲೂಕು. ವಿಸ್ತೀರ್ಣ 1.018 ಚ.ಕಿಮೀ ತಾಲ್ಲೂಕಿನ ಹೋಬಳಿಗಳು ತುಮಕೂರು, ಹೆಬ್ಬೂರು, ಕೋರ, ಗೂಳೂರು, ಬೆಳ್ಳಾವೆ ಮತ್ತು ಉದ್ದಗೆರೆ. ತಾಲ್ಲೂಕಿನ ಸರಾಸರಿ ಎತ್ತರ ಸಮುದ್ರಮಟ್ಟದಿಂದ 804 ಮೀ ವಾರ್ಷಿಕ ಸರಾಸರಿ, ಮಳೆ 67 ಸೆಂಮೀ ಉಷ್ಣತೆ ಜನವರಿಯಲ್ಲಿ $32^0$ ಸೆ. ಡಿಸೆಂಬರ್‌ನಲ್ಲಿ $30^0$ ಸೆ. ತಾಲ್ಲೂಕಿನಲ್ಲಿ ಬೆಟ್ಟಗುಡ್ಡಗಳು ಹಾಗೂ ಅರಣ್ಯಗಳಿವೆ ಅನೇಕ ಕಡೆ ಫಲವತ್ತಾದ ಕೆಂಪುಮಣ್ಣಿನ ಭೂಮಿ ಇದೆ. ಪ್ರಮುಖ ಬೆಟ್ಟಗಳು ದೇವರಾಯನದುರ್ಗ, ನಿಜಗಲ್ಲು, ರಾಮದೇವರ ಬೆಟ್ಟ ಮತ್ತು ಸೀತೆಕಲ್ಲು ಬೆಟ್ಟ, ದೇವರಾಯನದುರ್ಗ ಹಾಗೂ ದೊಡ್ಡವಾಡಿ ಬೆಟ್ಟದಲ್ಲಿ ಕಾಡುಗಳಿವೆ. ಚಿರತೆ, ಕರಡಿ, ನರಿ, ಕಾಡುಹಂದಿ, ಕಾಡು ಪಾರಿವಾಳ ಜೀವಂಜೀವ ಮತ್ತು ಇತರ ಪಕ್ಷಿಗಳಿವೆ. ಹಲಸಿನ ಹಾಗೂ ಮಾವಿನ ಮರಗಳು ಹೆಚ್ಚು. ದೇವರಾಯನದುರ್ಗದ ಉತ್ತರದಲ್ಲಿ ಜಯಮಂಗಲಿ ನದಿ ಹುಟ್ಟಿ ತಾಲ್ಲೂಕಿನಲ್ಲಿ 13 ಕಿಮೀ ಹರಿದು ಮುಂದೆ ಕೊರಟಗೆರೆ, ಮಧುಗಿರಿ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಈ ದುರ್ಗದ ದಕ್ಷಿಣದಲ್ಲಿ ಹುಟ್ಟುವ ನದಿಗಳು ಶಿಂಷಾ ಮತ್ತು ಗರುಡಾಚಲ, ಶಿಂಷಾ ನದಿ ತಾಲ್ಲೂಕಿನಲ್ಲಿ 28 ಕಿಮೀ ದೂರ ಹರಿದು ದಕ್ಷಿಣಾಭಿಮುಖವಾಗಿ ಮಂಡ್ಯ ಜಿಲ್ಲೆಯತ್ತ ಸಾಗುತ್ತದೆ.

ತಾಲ್ಲೂಕಿನ ಮುಖ್ಯ ಬೆಳೆಗಳು ತೆಂಗು, ಅಡಕೆ, ರಾಗಿ, ಬತ್ತ, ಕಬ್ಬು, ನೆಲಗಡಲೆ, ಅವರೆ ಮೊದಲಾದ ದ್ವಿದಳಧಾನ್ಯಗಳು ಮತ್ತು ಮೆಣಸಿನಕಾಯಿ. ನೀರಾವರಿ ಹೆಚ್ಚಾಗಿ ಕೆರೆ ಮತ್ತು ತಲಪರಿಗೆಗಳಿಂದ. ತಾಲ್ಲೂಕಿನಲ್ಲಿ ಕೈಗಾರಿಕೆಗಳು ಇತ್ತೀಚೆಗೆ ವೃದ್ಧಿಹೊಂದುತ್ತಿವೆ. ಹಿಂದಿನ ಕಾಲದಿಂದ ಪ್ರಸಿದ್ಧವಾಗಿರುವ ಕೈಗಾರಿಕೆಗಳು ಕಲ್ಲುಹಲಗೆ, ಬಳಪ, ಬಾಚಣಿಗೆ ಮತ್ತು ಇಟ್ಟಿಗೆ ತಯಾರಿಕೆ. ತುಮಕೂರು ತಾಲ್ಲೂಕಿನಲ್ಲಿ ಕೆಲವು ಕಡೆ ರೇಷ್ಮೆಹುಳುಗಳನ್ನು ಸಾಕಲಾಗುತ್ತದೆ. ರೇಷ್ಮೆ ವಸ್ತ್ರಗಳ ನೇಯ್ಗೆಯೂ ಒಂದು ಮುಖ್ಯ ಕಸಬು. ತಾಲ್ಲೂಕಿನ ಹೆಗ್ಗೆರೆ ಗ್ರಾಮದಲ್ಲಿ ಚರ್ಮ ಹದ ಮಾಡಲಾಗುತ್ತದೆ. ತಾಲ್ಲೂಕಿನ ಸಾತಘಟ್ಟ ಮತ್ತು ಸೀತೆಕಲ್ಲು ಹಿತ್ತಾಳೆ ಮತ್ತು ಕಂಚಿನ ಸಾಮಾನುಗಳ ತಯಾರಿಕೆಗೆ ಪ್ರಸಿದ್ಧಿ. ತಾಲ್ಲೂಕಿನಲ್ಲಿ ಬೆಂಗಳೂರು–ಅರಸೀಕೆರೆ ರೈಲುಮಾರ್ಗ ಪೂರ್ವದಿಂದ ಪಶ್ಚಿಮಕ್ಕೆ ಹಾದುಹೋಗುತ್ತದೆ. ತುಮಕೂರು ಒಂದು ಪ್ರಮುಖ ರೈಲ್ವೆನಿಲ್ದಾಣ.

ತುಮಕೂರು ಪಟ್ಟಣ ಜಿಲ್ಲೆಯ ಆಡಳಿತ ಕೇಂದ್ರ. ಉ.ಅ. $3^0 20'$ ಮತ್ತು ಪೂರೇ. $77^0 9'$ ಮೇಲೆ, ಬೆಂಗಳೂರಿನ ವಾಯವ್ಯಕ್ಕೆ 69 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,48,592. ಇತ್ತೀಚೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವಿದೆ. (ವಿ.ಜಿ.ಕೆ.)

**ತುರುವೇಕೆರೆ:** ತುಮಕೂರು ಜಿಲ್ಲೆಯ ತಿಪಟೂರು ಉಪವಿಭಾಗಕ್ಕೆ ಸೇರಿದ ಒಂದು ತಾಲ್ಲೂಕು; ಆ ತಾಲ್ಲೂಕಿನ ಆಡಳಿತ ಮತ್ತು ಕೇಂದ್ರ ಪಟ್ಟಣ. ದಕ್ಷಿಣದಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು, ನೈರುತ್ಯದಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು, ಪಶ್ಚಿಮ ಮತ್ತು ಉತ್ತರದಲ್ಲಿ ತಿಪಟೂರು ತಾಲ್ಲೂಕು, ಈಶಾನ್ಯ ಮತ್ತು ಪೂರ್ವದಲ್ಲಿ ಗುಬ್ಬಿ ತಾಲ್ಲೂಕು, ಆಗ್ನೇಯದಲ್ಲಿ ಕುಣಿಗಲು ತಾಲ್ಲೂಕು–ಇವು ಈ ತಾಲ್ಲೂಕಿನ ಮೇರೆಗಳು. ತಾಲ್ಲೂಕಿನಲ್ಲಿ ತುರುವೇಕೆರೆ, ದಂಡಿನಶಿವರ, ಮಾಯಸಂದ್ರ ಮತ್ತು ದಬ್ಬೆಗಟ್ಟ ಹೋಬಳಿಗಳಿವೆ. 222 ಗ್ರಾಮಗಳನ್ನೊಳಗೊಂಡ ಈ ತಾಲ್ಲೂಕಿನ ವಿಸ್ತೀರ್ಣ 770.6 ಚ.ಕಿಮೀ. ಜನಸಂಖ್ಯೆ 173,615.

ಮೇಲ್ಮೈಲಕ್ಷಣ ಮತ್ತು ನದಿ: ತಾಲ್ಲೂಕು ಅಲೆಯಲೆಯಾಗಿ ಏರಿಳಿಯುವ ಮೈದಾನದಿಂದ ಕೂಡಿದೆ. ಅಲ್ಲಲ್ಲಿ ಎತ್ತರವಾಗಿ ದಟ್ಟವಾಗಿ ಬೆಳೆದ ಮರಗಳ ತೋಪುಗಳುಂಟು. ಬಂಡೆಗಳೂ ಗುಡ್ಡಗಳೂ ವಿರಳ. ತಾಲ್ಲೂಕಿನ ಭೂಮಿ ಸ್ಥೂಲವಾಗಿ ದಕ್ಷಿಣಕ್ಕೆ ಇಳಿಜಾರಾಗಿದೆ. ಇಲ್ಲಿ ಜೀವನದಿಗಳು ಯಾವುವೂ ಇಲ್ಲ. ತುಮಕೂರು ತಾಲ್ಲೂಕಿನ ದೇವರಾಯನ ದುರ್ಗದಲ್ಲಿ ಹುಟ್ಟುವ ಶಿಂಷಾ ನದಿ ನೈರುತ್ಯಾಭಿಮುಖವಾಗಿ ಗುಬ್ಬಿ ತಾಲ್ಲೂಕಿನ ಮೂಲಕ ಹರಿದು, ತುರುವೇಕೆರೆ ತಾಲ್ಲೂಕನ್ನು ಅದರ ಪೂರ್ವಭಾಗದಲ್ಲಿ ಪ್ರವೇಶಿಸಿ, ದಕ್ಷಿಣಾಭಿಮುಖವಾಗಿ ಮುಂದುವರಿದು, ತುರುವೇಕೆರೆಗೆ ನೀರುಣಿಸುವ ನಾಗಹೊಳೆಯನ್ನು ಕಲ್ಲೂರಿನ ಸಮೀಪದಲ್ಲಿ ಕೂಡಿಕೊಂಡು ಕುಣಿಗಲು ತಾಲ್ಲೂಕಿಗೆ ಹರಿಯುತ್ತದೆ. ತುರುವೇಕೆರೆ ತಾಲ್ಲೂಕಿನಲ್ಲಿ ಈ ನದಿ ಹರಿಯುವ ದೂರ ಸು. 14 ಕಿಮೀ.

ವಾಯುಗುಣ: ತಾಲ್ಲೂಕಿನ ವಾಯುಗುಣ ಒಟ್ಟಿನಲ್ಲಿ ಹಿತಕರ. ವರ್ಷವನ್ನು ನಾಲ್ಕು ಋತುಗಳಾಗಿ ವಿಂಗಡಿಸಬಹುದು. ಡಿಸೆಂಬರ್‌ನಿಂದ ಫೆಬ್ರವರಿಯ ವರೆಗೆ ಶುಭ್ರ ಶುಷ್ಕ ಹವೆ. ಮಾರ್ಚ್‌ನಿಂದ ಮೇ ವರೆಗೆ ಬಿಸಿಲು ಅಧಿಕ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮುಂಗಾರಿನ ಕಾಲ. ಅಕ್ಟೋಬರ್‌ನಿಂದ ನವೆಂಬರ್ ವರೆಗಿನದು ಮುಂಗಾರಿನ ಅನಂತರದ ಕಾಲ. ಈ ಕಾಲದಲ್ಲೂ ಮಳೆಯಾಗುತ್ತದೆ. ವಾರ್ಷಿಕ ಸರಾಸರಿ ಮಳೆ 70 ಸೆಂಮೀ.

ಕೃಷಿ: ತಾಲ್ಲೂಕಿನಲ್ಲಿ ನೀರಾವರಿಗೆ ಒದಗಿರುವ ಕೆರೆಗಳ ಸಂಖ್ಯೆ 77; ಬಾವಿಗಳು 407. ನಾಲೆಗಳಿಲ್ಲ. ತಾಲ್ಲೂಕಿನಲ್ಲಿ 54,200 ಎಕರೆ ಕೆಂಪುಮಣ್ಣಿನ ಭೂಮಿ; 10,000 ಎಕರೆ ದಪ್ಪ ಮರಳಿನ ನೆಲ; 10,500 ಎಕರೆ ಮರಳುಬೆರೆತ ಫಲವತ್ತಾದ ಜೇಡಿಮಣ್ಣಿನ ಜಮೀನು. 75,489 ಎಕರೆ ನೆಲ ಕೆಂಪು ಜೇಡಿಮಣ್ಣಿನಿಂದ ಕೂಡಿದ್ದು; 1,500 ಎಕರೆ ಕಪ್ಪುಮಣ್ಣಿನ ಭೂಮಿ. ಈ ತಾಲ್ಲೂಕಿನ ವ್ಯವಸಾಯಯೋಗ್ಯ ಭೂಮಿಯಲ್ಲಿ 1,00,598 ಎಕರೆ ನೆಲ ಸಾಗುವಳಿಗೆ ಒಳಪಟ್ಟಿದೆ. 1,383 ಎಕರೆಗಳಲ್ಲಿ ಅರಣ್ಯ ಹಾಗೂ 43,241 ಎಕರೆಗಳಲ್ಲಿ ಹುಲ್ಲುಗಾವಲೂ ಇದ್ದುವು. ರಾಗಿ, ಬತ್ತ, ಹಾರಕ, ನವಣೆ, ಹುರುಳಿ, ಅವರೆ, ತೊಗರಿ, ನೆಲಗಡಲೆ, ಕಬ್ಬು ಮತ್ತು ತೆಂಗು ಪ್ರಮುಖವಾದ ಬೆಳೆಗಳು. ಪಶುಪಾಲನೆ ಮತ್ತು ಮೀನುಗಾರಿಕೆಗಳೂ ರೂಢಿಯಲ್ಲಿವೆ.

ತಾಲ್ಲೂಕಿನ ದೊಡ್ಡ ಕೈಗಾರಿಕೆಯೆಂದರೆ ಸಿಮೆಂಟ್ ತಯಾರಿಕೆ. ದಂಡಿನ ಶಿವರ ಹೋಬಳಿಯಲ್ಲಿರುವ ಈ ಕಾರ್ಖಾನೆಯನ್ನು 1960ರಲ್ಲಿ ಸ್ಥಾಪಿಸಲಾಯಿತು.

ನೇಯ್ಗೆ ಇಲ್ಲಿಯ ಒಂದು ಮುಖ್ಯ ಸಣ್ಣ ಕೈಗಾರಿಕೆ. ಮಾವಿನಕೆರೆ ಒಂದು ಮುಖ್ಯ ನೇಯ್ಗೆ ಕೇಂದ್ರ. ಇಲ್ಲಿಯ ನೇಯ್ಗೆ ಬಟ್ಟೆಗಳು ಪ್ರಸಿದ್ಧವಾಗಿವೆ. ಮುನಿಯೂರು, ದಂಡಿನಶಿವರ ಮತ್ತು ಮಾವಿನಕೆರೆ ಗ್ರಾಮಗಳಲ್ಲಿ ಹತ್ತಿ ಮತ್ತು ರೇಷ್ಮೆ ನೇಕಾರರ ಸಹಕಾರ ಸಂಘಗಳಿವೆ.

ಈ ತಾಲ್ಲೂಕಿನಲ್ಲಿ 629 ಕಿಮೀ ಉದ್ದದ ರಸ್ತೆಮಾರ್ಗಗಳಿದ್ದು, ಅವು ಬಹಳಷ್ಟು ಗ್ರಾಮೀಣ ವಸತಿಗಳನ್ನು ಸಂಪರ್ಕಿಸುತ್ತವೆ. ಕೇವಲ 16 ಕಿಮೀ ಉದ್ದ ರೈಲು ಮಾರ್ಗವಿದೆ.

ತುರುವೇಕೆರೆ ಪಟ್ಟಣ: ಬೆಂಗಳೂರು-ಅರಸೀಕೆರೆ ರೈಲುಮಾರ್ಗದಲ್ಲಿರುವ ಬಾಣಸಂದ್ರನಿಲ್ದಾಣಕ್ಕೆ 13 ಕಿಮೀ ದಕ್ಷಿಣದಲ್ಲಿದೆ. ಇದು ತುರುವೇಕೆರೆ ತಾಲ್ಲೂಕಿನ ಕೇಂದ್ರ. ಇಲ್ಲೊಂದು ಪೌರಸಭೆ ಇದೆ. ಜನಸಂಖ್ಯೆ 13,275. 13 ನೆಯ ಶತಮಾನದ ನಡುಗಾಲದಲ್ಲಿ ಇದನ್ನು ನರಸಿಂಹಪುರ ಎಂಬ ಅಗ್ರಹಾರವಾಗಿ ಆಗಿನ ದೊರೆಯ ದಂಡನಾಯಕ ಸೋಮಣ್ಣ ನಾಯಕ ನಿರ್ಮಿಸಿದನೆಂದು ಹೇಳಲಾಗಿದೆ. ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿರುವ ಸೋಮನಾಥಪುರವನ್ನು ನಿರ್ಮಿಸಿದವನೂ ಇವನೇ ಎಂದು ತಿಳಿದುಬರುತ್ತದೆ. ಈ ಪಟ್ಟಣಕ್ಕೆ ತುರುವೇಕೆರೆ ಎಂಬ ಹೆಸರು ಬಂದಿರುವುದಕ್ಕೆ ಇದರ ಉತ್ತರಕ್ಕಿರುವ ಈ ಹೆಸರಿನ ಕೆರೆಯೇ ಕಾರಣ. ತುರುವೇಕೆರೆಯಲ್ಲಿ ರೆಗ್ಯುಲೇಟೆಡ್ ಮಾರುಕಟ್ಟೆಯಿದೆ. ಕೊಬ್ಬರಿ, ತೆಂಗಿನಕಾಯಿ, ಬೆಲ್ಲ, ರಾಗಿ, ಜೋಳ, ಅಡಕೆ ಮುಂತಾದವು ಇಲ್ಲಿ ವ್ಯಾಪಾರವಾಗುವ ಸರಕುಗಳು. (ಪಿ.ಎಂ.)

**ತುರ್ಕ್‌ಮೆನಿಸ್ತಾನ:** ದಕ್ಷಿಣ ಮಧ್ಯ ಏಷ್ಯದ ಒಂದು ಗಣರಾಜ್ಯ. ಉ.ಅ. $36^0$–$42^0$ ಹಾಗೂ ಪೂ. ರೇ. $53^0$ – $66^0$ ಗಳವರೆಗೆ ವಿಸ್ತರಿಸಿದೆ. ರಷ್ಯದ ದಕ್ಷಿಣ ತುದಿಯಲ್ಲಿದೆ. ಉತ್ತರದಲ್ಲಿ ಕಝಖ್‌ಸ್ತಾನ ಮತ್ತು ಉಜ್ಬೆಕಿಸ್ತಾನ, ದಕ್ಷಿಣದಲ್ಲಿ ಇರಾನ್ ಮತ್ತು ಆಫ್ಘಾನಿಸ್ತಾನ ಮತ್ತು ಪಶ್ಚಿಮದಲ್ಲಿ ಕ್ಯಾಸ್ಪಿಯನ್ ಸಮುದ್ರಗಳಿವೆ. ವಿಸ್ತೀರ್ಣ 4,88,100 ಚ.ಕಿಮೀ. ಜನಸಂಖ್ಯೆ; 48,33,000 (2005). ರಾಜಧಾನಿ ಆಶ್ಘಾಹಬಾದ್ (5,18,000).

ಮೇಲ್ಮೈಲಕ್ಷಣ: ತುರ್ಕ್‌ಮೆನಿಸ್ತಾನದ ಶೇ. 90 ಭಾಗ ಮರುಭೂಮಿ. ಕಾರಕೂಮ್ ಪ್ರಪಂಚದ ಅತ್ಯಂತ ದೊಡ್ಡ ಮರುಭೂಮಿಗಳಲ್ಲೊಂದು. ಕಾರಕೂಮ್ ಎಂದರೆ ಕಪ್ಪು ಮರಳು ಎಂದು ಅರ್ಥ. ಇದು ಗಣರಾಜ್ಯದ ಮಧ್ಯಭಾಗವನ್ನೆಲ್ಲ ಆವರಿಸಿದೆಯಲ್ಲದೆ ಅಂಚಿನ ಪ್ರದೇಶಗಳಿಗೂ ಚಾಚಿಕೊಂಡಿದೆ. ತುರ್ಕ್‌ಮೆನಿಯಾದ $^4/_5$ ಭಾಗ ಮೈದಾನ. ಇದು ತುರಾನ್ ತಗ್ಗುನೆಲದ ದಕ್ಷಿಣ ಭಾಗ. ಈ ಮೈದಾನ ಉತ್ತರ ಮತ್ತು ಪಶ್ಚಿಮದಲ್ಲಿ ಕ್ಯಾಸ್ಪಿಯನ್ ಸಮುದ್ರದ ಅವನತ ನೆಲವಾಗಿ ಇಳಿಯುತ್ತದೆ. ಪರ್ವತಗಳೂ ತಪ್ಪಲು ಬೆಟ್ಟಗಳೂ ಹೆಚ್ಚಾಗಿ ಇರುವುದು ಈ ದೇಶದ ದಕ್ಷಿಣ ಭಾಗದಲ್ಲಿ ಮಾತ್ರ, ಕೂಗಿ ಟಾಂಗ್‌ಟೌ ಮತ್ತು ಕಾಪೆಟ್ ದಾಗ್ ಶ್ರೇಣಿಗಳು ಪಾಮಿರ್ – ಆಲ್ಟೈ ಪರ್ವತಗಳ ಕವಲುಗಳು. ಕೂಗಿ ಟಾಂಗ್‌ಟೌ ಶ್ರೇಣಿಯ ಅತ್ಯುನ್ನತ ಶಿಖರ ಏರಿಬಾಬ 3137 ಮೀ, ಕಾಪೆಟ್ ದಾಗ್‌ನ ಶಾಹಶಾಹ ಶಿಖರ 2942 ಮೀ ಎತ್ತರವಾಗಿದೆ. ಭೂವೈಜ್ಞಾನಿಕವಾಗಿ ಕಾಪೆಟ್ ದಾಗ್ ಶ್ರೇಣಿ ಈಚಿನದು. 1929 ಮತ್ತು 1948ರಲ್ಲಿ ಆದಂತೆ ಆಗಿಂದಾಗ್ಗೆ ಸಂಭವಿಸುವ ವಿನಾಶಕಾರಿ ಭೂಕಂಪಗಳಿಂದ ಇದು ಎಷ್ಟು ಅಸ್ಥಿರವೆಂಬುದು ವ್ಯಕ್ತವಾಗಿದೆ.

ನದಿಗಳು: ಇಲ್ಲಿನ ಮುಖ್ಯ ನದಿಗಳು ಆಮೂದಾರ್ಯ, ಟೆಜೆನ್, ಮುರ್ಗಾಬ್, ಮತ್ತು ಆಟ್ರೆಕ್. ಇವಲ್ಲದೆ ಅನೇಕ ಸಣ್ಣ ನದಿಗಳು ಇವೆ. ಆಮೂದಾರ್ಯ ನದಿ ಈ ದೇಶದ ಈಶಾನ್ಯ ಗಡಿಯ ಮೇಲೆ ಹರಿದು ಆರಲ್ ಸಮುದ್ರದತ್ತ ಸಾಗುತ್ತದೆ. ಆದರೆ ನದಿಗಳು ಹರಿಯುವ ಭೌಗೋಳಿಕ ಸನ್ನಿವೇಶವೂ ಅವುಗಳ ದಿಕ್ಕೂ ಕೃಷಿಯೋಗ್ಯ ನೆಲದ ಸನ್ನಿವೇಶಕ್ಕೆ ಅನುಗುಣವಾಗಿಲ್ಲ. ಮುಖ್ಯ ನದಿಗಳು ಬಹಳ ಮಟ್ಟಿಗೆ ಪೂರ್ವದಲ್ಲಿ ಹರಿಯುತ್ತವೆ. ಆದರೆ ಅತ್ಯಂತ ಫಲವತ್ತಾದ ನೆಲ ಇರುವುದು ದಕ್ಷಿಣ, ಈಶಾನ್ಯ ಹಾಗೂ ಪಶ್ಚಿಮದಲ್ಲಿ. ಈ ಪ್ರದೇಶದ ಕೃಷಿಯೋಗ್ಯ ನೆಲವನ್ನು ಸಂಪೂರ್ಣವಾಗಿ ಇನ್ನೂ ಬಳಸಿಕೊಂಡಿಲ್ಲ.

ವಾಯುಗುಣ: ಇಲ್ಲಿನ ಸನ್ನಿವೇಶ, ಅದರ ಮೇಲ್ಮೈಲಕ್ಷಣಗಳಿಂದಾಗಿ ಇಲ್ಲಿ ಖಂಡಾಂತರ ವಾಯುಗುಣವಿದೆ. ದೈನಿಕ ಮತ್ತು ವಾರ್ಷಿಕ ಉಷ್ಣತೆಯಲ್ಲಿ ತೀವ್ರ ವ್ಯತ್ಯಾಸಗಳಾಗುತ್ತವೆ. ಅಲ್ಲಿಯ ಸರಾಸರಿ ಉಷ್ಣತೆ $15^0$ಸೆ. ಗಳಾಗಿದ್ದರೂ ಬೇಸಗೆಯಲ್ಲಿ ಅದು $35^0$ಸೆ. ಗಿಂತ ಕೆಳಗೆ ಇಳಿಯುವುದು ಅಪರೂಪ. ಆಗ್ನೇಯ ಕಾರಕೂಮ್‌ನಲ್ಲಿ ಗರಿಷ್ಠ ಉಷ್ಣತೆ $50^0$ಸೆ. ಮುಟ್ಟುತ್ತದೆ. ಆದರೆ ಚಳಿಗಾಲದಲ್ಲಿ ಆರ್ಕ್‌ಟಿಕ್ ಗಾಳಿ ತುರ್ಕ್‌ಮೆನಿಯವನ್ನು ತಲುಪಿದಾಗ ಇದರ ದಕ್ಷಿಣತಮ ಪಟ್ಟಣವಾದ ಕೂಷ್ಕದಲ್ಲಿ ಉಷ್ಣತೆ $-33^0$ಸೆ. ಗೆ ಇಳಿಯುತ್ತದೆ. ಆರ್ದ್ರತೆ ಬಹಳ ಕಡಿಮೆ. ಬೇಸಗೆಯಲ್ಲಿ ಮಳೆಯೇ ಇಲ್ಲವೆನ್ನಬಹುದು. ತಡೆಯಿಲ್ಲದೆ ಒಳನಾಡಿನ ಮಾರುತ ಬೀಸುವುದರಿಂದಾಗಿ ಹವಾಗುಣ ಋತುಗಳಲ್ಲಿ ಬಹಳಮಟ್ಟಿಗೆ ವ್ಯತ್ಯಾಸವಾಗುತ್ತದೆ. ವಸಂತ ಋತುವಿನಲ್ಲಿ ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್‌ನಿಂದ ಬೀಸುವ ಬೆಚ್ಚನೆಯ ಗಾಳಿ ಸ್ವಲ್ಪಮಟ್ಟಿಗೆ ಮೋಡಗಳನ್ನು ಹೊತ್ತು ತಂದು ಮಳೆ ಸುರಿಸುತ್ತದೆ.




ಸಸ್ಯ-ಪ್ರಾಣಿ ಸಂಪತ್ತು: ಓಯಸಿಸ್, ಕಣಿವೆ ಮತ್ತು ಪ್ರಸ್ಥಭೂಮಿ ಪ್ರದೇಶಗಳನ್ನು ಬಿಟ್ಟರೆ ಉಳಿದಲ್ಲಿಯ ಸಸ್ಯಗಳು ಮರುಭೂಮಿಯ ಪ್ರರೂಪದವು. ಕಾಪೆಟ್ ದಾಗ್‌ನ ಕಣಿವೆಗಳಲ್ಲಿ ಕಾಡು ದ್ರಾಕ್ಷಿ, ಬಾದಾಮಿ, ಅಂಜೂರ ಮತ್ತು ಆಕ್ರೋಟ್‌ಗಳಿವೆ. ತೆರದ ಇಳಿಜಾರುಗಳಲ್ಲಿಯ ಮರಗಳು ಜೂನಿಪರ್ ಗುಲ್ಮ ಮತ್ತು ಪಿಸ್ತಾ. ನದಿಗಳ ದಡಗಳಲ್ಲೂ ದ್ವೀಪಗಳಲ್ಲೂ ಕಪ್ಪು ಪಾಪ್ಲರ್, ನೀರುಹಬ್ಬೆ (ವಿಲೋ) ಜೊಂಡು, ಬೆತ್ತ ಮುಂತಾದವುಗಳ ಕಾಡುಗಳಿವೆ.

ಪ್ರಾಣಿಗಳು ವಿಶೇಷವಾಗಿ ಮರುಭೂಮಿಯವು. ಗುಳ್ಳೆನರಿ, ಕಾಡುಬೆಕ್ಕು, ಕಾರಕೂಮ್, ಗೆಜ್ಜೆಲ್ ಮತ್ತು ಆಮೆ. ಪರ್ವತ ಪ್ರದೇಶದಲ್ಲಿ ಪರ್ವತ ಟಗರು, ಆಡು, ಚಿರತೆ, ಲಿಂಕ್ಸ್, ಹಿಮಚಿರತೆ, ಮುಳ್ಳುಹಂದಿ, ನರಿ, ಕಾಡುಹಂದಿ ಮತ್ತು ನಾನಾ ಬಗೆಯ ಹಕ್ಕಿಗಳು ಇವೆ. ಆಮೂದಾರ್ಯ ನದಿ ದಂಡೆಯಲ್ಲಿ ವಿರಳವಾದ ಎಳೆಗೆಂಪು ಜಿಂಕೆಗಳಿವೆ. ಪ್ರಸ್ಥಭೂಮಿಗಳಲ್ಲಿ ಕಾಡುಕತ್ತೆಗಳು, ಕ್ಯಾಸ್ಪಿಯನ್ ಸಮುದ್ರದ ಪೂರ್ವತೀರದಲ್ಲಿ ಬಾತುಕೋಳಿ, ಹಂಸ, ಹೆಬ್ಬಾತು ಮುಂತಾದ ಪಕ್ಷಿಗಳು ಕಂಡುಬರುತ್ತವೆ. ಕ್ಯಾಸ್ಪಿಯನ್ ಸಮುದ್ರ ಹಾಗೂ ಸರೋವರಗಳಲ್ಲಿ ಹಲವು ಬಗೆಯ ಮೀನುಗಳಿವೆ.

ಜನ: ತುರ್ಕ್‌ಮೆನಿಯದ ಜನಸಂಖ್ಯೆಯಲ್ಲಿ ತುರ್ಕ್‌ಮೆನರು (ಶೇ.66). ಇತರರು- ರಷ್ಯನರು (ಶೇ.15), ಉಜ಼ಬೆಕರು (ಶೇ.8.3), ಕಜ಼ಾಕರು (ಶೇ.3.2), ತಾತಾರರು, ಉಕ್ರೇನಿಯನರು, ಆರ್ಮೇನಿಯರು, ಅಜ಼ರ್‌ಬೈಜಾನೀಯನರು ಮತ್ತು ಕಾರಾ ಕಲ್ಪಾಕರು, ರಾಜ್ಯದಲ್ಲಿ ಜನಸಂಖ್ಯೆಯ ವಿತರಣೆ ಅಸಮವಾದ್ದು. ಸರಾಸರಿ ಜನಸಾಂದ್ರತೆ ಚ.ಕಿಮೀ 10 ಜನ.

ತುರ್ಕ್‌ಮೆನ್ ಗಣರಾಜ್ಯದ ಭಾಷೆ ತುರ್ಕ್‌ಮೆನ್. ಇದು ಟರ್ಕಿಕ ಭಾಷೆಗಳ ಆಗ್ನೇಯ ಗುಂಪಿನ ಭಾಷೆ. ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮ, ತುರ್ಕ್‌ಮೆನ್. ರಷ್ಯನ್ ಭಾಷೆಯನ್ನೂ ಕಲಿಸುತ್ತಾರೆ. ತುಕ್‌ಮೆನಿಸ್ತಾನದ ಸಾಂಪ್ರದಾಯಿಕ ಇಸ್ಲಾಮೀ ಶೈಲಿ ಅಲ್ಲಿಯ ವಾಸ್ತುಶಿಲ್ಪ, ಸಾಹಿತ್ಯ, ಸಂಗೀತಗಳಲ್ಲಿ ಪ್ರತಿಬಿಂಬಿಸಿವೆ.

ಆರ್ಥಿಕತೆ: ಕೃಷಿ : ಈ ರಾಜ್ಯ ವ್ಯವಸಾಯಪ್ರಧಾನವಾದದ್ದು. ಇಲ್ಲಿಯ ವಾಯುಗುಣ ಹತ್ತಿಯ ಬೆಳೆಗೆ ಅನುಕೂಲವಾಗಿದೆ. ಉತ್ತಮ ಗುಣದ ಹತ್ತಿ ಆಮೂದಾರ್ಯ ನದೀಕಣಿವೆಯಲ್ಲೂ ಕಾಪೆಟ್ ದಾಗ್ ಪರ್ವತ ತಪ್ಪಲಲ್ಲೂ ಬೆಳೆಯುತ್ತದೆ. ಇತರ ಪ್ರಮುಖ ಬೆಳೆಗಳು ಗೋಧಿ, ಬಾರ್ಲಿ, ಮುಸುಕಿನ ಜೋಳ, ಮಿಲೆಟ್, ಹೊಗೆಸೊಪ್ಪು. ಕಲ್ಲಂಗಡಿ ಮತ್ತು ದ್ರಾಕ್ಷಿ.

ಕಾರ್‌ಕುಲ್ ಕುರಿಯನ್ನು ಎಲ್ಲೆಡೆಯಲ್ಲೂ ಸಾಕುತ್ತಾರೆ. ಇತರ ಸಾಕುಪ್ರಾಣಿಗಳು ದನ, ಹಂದಿ, ಆಡು. ಸೋವಿಯತ್ ದೇಶದ ಒಟ್ಟು ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಶೇ. 10 ರಷ್ಟು ಬೆಳೆಯುವುದು ತುರ್ಕ್‌ಮೆನಿಸ್ತಾನದಲ್ಲಿ.

ಗಣಿಗಾರಿಕೆ, ಕೈಗಾರಿಕೆ: ಮುಖ್ಯ ತೈಲ ಕ್ಷೇತ್ರಗಳು ಇರುವುದು ನೆಬೀಟ್ – ದಾಕ್, ಕೂಮ್ ದಾಕ್ ಮತ್ತು ಚೆಲಕೆನ್‌ಗಳಲ್ಲಿ. ಕಾರ ಕೂಮ್ ಮರುಭೂಮಿ ಮತ್ತು ಗೌರ್ ದಾಕ್‌ನಲ್ಲಿ ಗಂಧಕವನ್ನೂ ಖ್ರೆಬೆಟ್ ಕುಗಿಟಾಂಗ್‌ಟೌನಲ್ಲಿ ಸೀಸವನ್ನೂ ತೆಗೆಯುತ್ತಾರೆ. ಕಿಝಿಲ್ ಆರ್ವಾತ್‌ನಲ್ಲಿ ರೈಲ್ವೆ ದುರಸ್ತಿ ಕಾರ್ಯಾಗಾರವೂ ಕ್ರಾಸ್ನವೋಡ್ಸ್ಕ್ ಮತ್ತು ಚಾರ್ಜೋಗಳಲ್ಲಿ ಹಡಗು ದುರಸ್ತಿಕೇಂದ್ರಗಳೂ ಇವೆ. ಟಾಷಾವ್ರುಜ್, ಚಾರ್ಜೋ, ಕೆರ್ಕಿಚೀ, ಬೇರಾಮ್ – ಆಲಿ, ಮೇರಿ, ಟೆಜೆನ್, ಐಯೊಲೋಟಾನ್ ಮತ್ತು ಕಲೀನಿನ್‌ನಲ್ಲಿ ಹತ್ತಿ ಹಿಂಜುವ ಕೇಂದ್ರಗಳು ಅಶ್ಖಾಹಾಬಾದ್ ಮತ್ತು ಚಾರ್ಜೋಗಳಲ್ಲಿ ರೇಷ್ಮೆ ಹುರಿ ಮಾಡುವ ಗಿರಣಿಗಳಿವೆ. ರಾಜ್ಯದಲ್ಲಿ ಮೀನು ಮತ್ತು ಮಾಂಸ ಡಬ್ಬೀಕರಣ ಕೈಗಾರಿಕೆಗಳೂ ಇವೆ.

ಸಾರಿಗೆ ಸಂಪರ್ಕ: ಕ್ರಾಸ್ನೊವಿಡ್ಸ್ಕ್ – ತಾಷ್ಕೆಂಟ್ ಮುಖ್ಯ ರೈಲು ಮಾರ್ಗ ಈ ರಾಜ್ಯವನ್ನು ಹಾದುಹೋಗುತ್ತದೆ. ವಿಷ್ಕ, ಕೊಷ್ಕ, ಕುನ್‌ಗ್ರಾಡ್ ಸಾಮ್ಸೊ ನೋವೊಗಳಿಗೆ ಇದರ ಶಾಖಾ ಮಾರ್ಗಗಳಿವೆ. ಕ್ರಾಸ್ನೊವಿಡ್ಸ್ಕ್ ದಿಂದಲೂ ಆಮೂದಾರ್ಯ ನದಿಯಲ್ಲಿ ಹಡುಗುಗಳು ಸಂಚರಿಸುತ್ತವೆ. ಆಮೂದಾರ್ಯದ ಮುಖ್ಯ ಬಂದರು ಚಾರ್ಜೋ, ತುರ್ಕ್‌ಮೆನಿಸ್ತಾನದಲ್ಲಿ 6.400 ಕಿಮೀ ರಸ್ತೆಗಳಿವೆ. ಲೆನಿನ್‌ಸ್ಕಿ, ಟಾಷಾವೊಜ಼್ ಆಷ್ಖಾವಾದ್‌ಗಳಿಂದ ವಿಮಾನ ಮಾರ್ಗಗಳಿವೆ. (ಬಿ.ವಿ.ಜಿ.;ವಿ.ಜಿ.ಕೆ.)

**ತೂಗು ಕಣಿವೆ:** ಹಿಮ ಸರಿತದಿಂದಾಗಿ ಪ್ರಧಾನ ಹಿಮನದಿ ಕಣಿವೆಗೆ ಚಾಚಿದಂತೆ ಉನ್ನತಮಟ್ಟದಲ್ಲಿ ಗೋಚರಿಸುವ ಉಪಹಿಮನದಿ ಕಣಿವೆ. ನದಿ ಕಣಿವೆಯ ಸವೆತದ ಪ್ರಮಾಣ ಹಿಮನದಿಯ ಗಾತ್ರ, ಹರಿಯುವ ವೇಗ, ಆಕಾರ, ಒಯ್ಯುವ ಶಿಲಾವಸ್ತು ಹಾಗೂ ಕಣಿವೆಯ ತಳಗಲ್ಲನ್ನು ಅವಲಂಬಿಸಿರುತ್ತದೆ. ಈ ಅಂಶಗಳನ್ನು ಆಧರಿಸಿ ಕಣಿವೆಯ ಕೊರೆತದ ಪ್ರಮಾಣದಲ್ಲಿ ಭೇದ ಉಂಟು. ಒಂದೇ ಮಟ್ಟದ ಕೊರೆತ ಹಿಮ ನದಿಗಳಲ್ಲಿ ಕಂಡು ಬರುವುದು ಬಲು ವಿರಳ. ನದಿಗಳಿಗೆ ಉಪನದಿಗಳಿರುವಂತೆ ಹಿಮ ನದಿಗಳಿಗೆ ಉಪಹಿಮನದಿಗಳಿರುತ್ತವೆ. ಸಾಮಾನ್ಯವಾಗಿ ಉಪನದಿಗಳು ಪ್ರಮುಖ ನದಿಗಳನ್ನು ಸೇರುವುದು ಸಮಾನ ಮಟ್ಟದಲ್ಲಿಯೇ. ಆದರೆ ಮುಖ್ಯ ಹಿಮ ನದಿಯನ್ನು ಸೇರುವ ಉಪಹಿಮನದಿ ಸಾಕಷ್ಟು ಎತ್ತರ ಮಟ್ಟದಲ್ಲಿದ್ದು ಇದರಿಂದ ಉಂಟಾದ ಕಣಿವೆಗಳು ಹಿಮ ನದಿಯ ಮೇಲೆ ತೂಗಾಡುತ್ತಿರುವಂತೆ ಕಂಡುಬರುತ್ತದೆ. ಇಂಥ ಕಣಿವೆಗಳಿಗೆ ತೂಗುಕಣಿವೆಗಳೆಂದು ಹೆಸರು.

ಎತ್ತರ ಹಾಗೂ ಉಷ್ಣತೆಯನ್ನು ಅನುಸರಿಸಿ ಹಿಮನದಿ, ಕಣಿವೆ ತಳ ಪ್ರದೇಶದತ್ತ ಪ್ರವಹಿಸುತ್ತದೆ. ಕಣಿವೆಯಿಂದ ಹಿಮನದಿ ಹೀಗೆ ತೆರವಾದಾಗ ತೂಗು ಕಣಿವೆ ಸ್ಪಷ್ಟವಾಗಿ ಗೋಚರಿಸುತ್ತದೆ. ವ್ಯಾಪ್ತಿಯಲ್ಲಿ ಉಪಹಿಮ ನದಿಗಳು ಬಲು ಕಿರಿದಾಗಿರುತ್ತವೆ. ಇದರಿಂದಾಗಿ ಅವುಗಳ ಕಣಿವೆಯಕೊರೆತವೂ ಸೀಮಿತವಾಗಿರುತ್ತದೆ. ಮುಖ್ಯ ಹಿಮ ನದಿಕಣಿವೆ ಸವೆತಗೊಂಡಷ್ಟೂ ತೂಗುಕಣಿವೆ ಹಿಂಜರಿದಂತೆ ಗೋಚರವಾಗುತ್ತದೆ. ತೂಗುಕಣಿವೆಗಳು ಅನೇಕ ವೇಳೆ ಜಲಪಾತಗಳ ಉಗಮ ಸ್ಥಾನವಾಗಿ ಮಾರ್ಪಡುತ್ತವೆ. ಸ್ವಿಟ್ಜರ್ಲೆಂಡಿನಲ್ಲಿ 910 ಮೀ ಎತ್ತರದ ತೂಗುಕಣಿವೆಗಳಿವೆ, ಕ್ಯಾಲಿಫೋರ್ನಿಯದ ಯೋಸೆಮೈಟ್ ರಾಷ್ಟ್ರೀಯ ಉದ್ಯಾನದಲ್ಲಿರುವ ಯೋಸೆಮೈಟ್ ಜಲಪಾತ 758.33 ಮೀ ಎತ್ತರದಿಂದ ಮೂರು ಹಂತಗಳಲ್ಲಿ ಧುಮುಕುತ್ತದೆ. ಇದು ತೂಗು ಕಣಿವೆಯಿಂದ ಉಂಟಾದ ಜಲಪಾತ. ಸಿಯೆರ್ರಾ ನಿವೇಧ, ಕ್ಯಾಸ್‌ಕೇಡ್ ಮತ್ತು ರಾಕಿ ಪರ್ವತಶ್ರೇಣಿಗಳಲ್ಲಿ ತೂಗುಕಣಿವೆಗಳಿಂದ ಉಂಟಾದ ಅನೇಕ ಜಲಪಾತಗಳನ್ನು ಕಾಣಬಹುದು. (ಟಿ.ಆರ್.ಎ.)

**ತೂಗು ಸೇತುವೆ:** ಹಳ್ಳಕ್ಕೆ ಅಡ್ಡವಾಗಿ ಎರಡು ಬಲವಾದ ಬಳ್ಳಿಗಳನ್ನು ಮರಗಳಿಗೆ ಎಳೆದು ಕಟ್ಟಿ ಅವುಗಳಿಂದ ಮಟ್ಟ ಮತ್ತು ಹಗುರವಾದ ಸೇತುವೆಯನ್ನು ಪ್ರಾಚೀನ ಭಾರತದಲ್ಲಿ ತೂಗು ಹಾಕುತ್ತಿದ್ದರು. ಈ ಪದ್ಧತಿ ಇಂದಿಗೂ ಕರ್ನಾಟಕದ ಮಲೆನಾಡಿನಲ್ಲಿ ಬಳಕೆಯಲ್ಲಿದೆ. ಈ ನಮೂನೆಯನ್ನು ಸ್ವತಂತ್ರವಾಗಿ ಚೀನ, ಆಫ್ರಿಕ ಮತ್ತು ದಕ್ಷಿಣ ಅಮೆರಿಕ ದೇಶಗಳಲ್ಲಿ ಕೂಡ ಹಳ್ಳಗಳನ್ನು ದಾಟುವುದಕ್ಕೆ ಉಪಯೋಗಿಸುತ್ತಿದ್ದರು.

ಮೊದಲನೆಯ ಆಧುನಿಕ ತೂಗುಸೇತುವೆ ಎಂದರೆ ವೇಲ್ಸಿನಲ್ಲಿ ಮಿನ್ಯೆ ಜಲಸಂಧಿಯ ಮೇಲೆ ಥಾಮಸ್ ಟೆಲ್ಫರ್ಡ್ 1826 ರಲ್ಲಿ ನಿರ್ಮಿಸಿದ ಅಚ್ಚಕಬ್ಬಿಣದ ಸರಪಳಿಗಳಿಂದ ತೂಗುಹಾಕಿದ 176.80 ಮೀ ಅಗಲದ ಕಣ್ಣಿನ ಸೇತುವೆ. ಈಗ ಭಾರಿ ತೂಗುಸೇತುವೆಗಳಲ್ಲಿ ಬಳಸುತ್ತಿರುವ ಸಮಾಂತರವಾದ ಉಕ್ಕಿನ ತಂತಿಯ ಹೊರಜಿಗಳಿಗೂ ತೂಗುಸೇತುವೆಗಳು ಬಿಗುವಾಗಿ ಬಳುಕದ ಹಾಗೆ ಮಾಡಿರುವ ಕ್ರಮಕ್ಕೂ ನಾವು ಜಾನ್ ರೋಬ್ಲಿಂಗ್ ಮಹಾಶಯನಿಗೆ ಋಣಿಗಳಾಗಿದ್ದೇವೆ. ಈತ ಜಗದ್ವಿಖ್ಯಾತವಾದ ನಯಾಗರ ಜಲಪಾತದ ಮೇಲೆ 250.20 ಮೀ. ಕಣ್ಣಿನ ರೈಲ್ವೆ ತೂಗುಸೇತುವೆಯನ್ನು 1855 ರಲ್ಲಿಯೂ, ಸಿನ್‌ಸಿನಾಟಿ ನಗರದಲ್ಲಿ ಓಹಿಯೊ ನದಿಯಮೇಲೆ 322.80ಮೀ. ಕಣ್ಣಿನ ತೂಗು ಸೇತುವೆಯನ್ನು 1867 ರಲ್ಲಿಯೂ ಕಟ್ಟಿಸಿದ. ಇವನ ಮಹಾಸಾಧನೆಯೆಂದರೆ ನ್ಯೂಯಾರ್ಕ್ ನಗರದಲ್ಲಿ ಈಸ್ಟ್ ನದಿಯ ಮೇಲೆ 1883 ರಲ್ಲಿ ಕಟ್ಟಿದ 486.30ಮೀ ಕಣ್ಣಿನ ಬ್ರೂಕ್ಲಿನ್ ಸೇತುವೆ. ಈ ಕೆಲಸದ ಮೇಲಿದ್ದಾಗಲೇ ಇವನು ಅಪಘಾತದಲ್ಲಿ ಅಸುನೀಗಿದ. ಆಮೇಲೆ ಇವನ ಮಗ ವಾಷಿಂಗ್ಟನ್ ರೋಬ್ಲಿಂಗ್ ಈ ಕೆಲಸವನ್ನು ಪೂರೈಸಿದ.

ಇದಾದ ಬಳಿಕ ಈ ಶತಮಾನದಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ ಉದ್ದವಾದ ತೂಗುಸೇತುವೆಗಳ ಯುಗ ಪ್ರಾರಂಭವಾಯಿತು ಎನ್ನಬಹುದು. ನ್ಯೂಯಾರ್ಕಿನಲ್ಲಿ ಈಸ್ಟ್ ನದಿಯ ಮೇಲೆ 487.70ಮೀ ಕಣ್ಣಿನ ವಿಲಿಯಂಸ್‌ಬರ್ಗ್ ಸೇತುವೆ (1903), ಡೆಟ್ರಾಯಿಟ್ ನಗರದಲ್ಲಿ 563.90ಮೀ ಕಣ್ಣಿನ ಅಂಬಾಸಡರ್ ಸೇತುವೆ (1928). ಇವು ಮುಗಿದ ಮೇಲೆ ನ್ಯೂಯಾರ್ಕಿನಲ್ಲಿ ಹಡ್ಸನ್ ನದಿಯ ಮೇಲೆ 350 ಮೀ ಕಣ್ಣಿನ ಜಾರ್ಜ್ ವಾಷಿಂಗ್ಟನ್ ಸೇತುವೆಯೂ (1931), ಕ್ಯಾಲಿಫೋರ್ನಿಯದ ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ 1280.20ಮೀ ಕಣ್ಣಿನ ಗೋಲ್ಡನ್ ಗೇಟ್ ಸೇತುವೆಯೂ (1937) ನಿರ್ಮಾಣವಾದವು. ಎರಡನೆಯ ಮಹಾಯುದ್ಧ ಮುಗಿದ ಮೇಲೆ 1949 ರಲ್ಲಿ ನ್ಯೂಯಾರ್ಕ್ ಬಂದರಿನ ಪ್ರವೇಶ ಮಾರ್ಗದಲ್ಲಿ 1408.20ಮೀ ಕಣ್ಣಿನ ನ್ಯಾರೋಸ್ ಸೇತುವೆಯನ್ನು ಮಂಜೂರು ಮಾಡಿದರು. ತಾತ್ತ್ವಿಕವಾಗಿ 2133ಮೀ ಕಣ್ಣಿನ ವರೆಗೂ ಈ ನಮೂನೆಯ ಸೇತುವೆಯನ್ನು ಕಟ್ಟಬಹುದು.

ಸಮಾನಾಂತರ ತಂತಿಯ ಹೊರಜಿಯ ನಮೂನೆಯಲ್ಲದೇ ಕುಣಿಕೆಗಳಿಂದಲೂ ಪೂರ್ವಸಂಮರ್ದಿತ (ಪ್ರೀಸ್ಟ್ರೆಸ್ಡ್) ತಿರುಚಿದ ಉಕ್ಕಿನ ತಂತಿಯ ಹಗ್ಗಗಳಿಂದಲೂ ತೂಗುಸೇತುವೆಗಳನ್ನು ನಿರ್ಮಿಸಿದ್ದಾರೆ. ದಕ್ಷಿಣ ಅಮೆರಿಕದಲ್ಲಿ ಬ್ರಜಿಲ್‌ನಿಂದ ಅಟ್ಲಾಂಟಿಕ್ ಸಾಗರದ ಪ್ಲೋರಿಯಾನೋಪೋಲಿಸ್ ದ್ವೀಪ ನಗರಕ್ಕೆ ಕುಣಿಕೆಗಳಿಂದ ತೂಗುಹಾಕಿರುವ 339.50ಮೀ ಕಣ್ಣಿನ ತೂಗುಸೇತುವೆಯನ್ನು 1926 ರಲ್ಲಿ ಪೂರೈಸಿದರು. ಇದು ಹಳೆಯ ನಮೂನೆಗಿಂತ ಬಿಗುವಾಗಿ ಬಳುಕದಂತಿದೆ. ಇದರಲ್ಲಿ ಇನ್ನೂ ಕಡಿಮೆ ಉಕ್ಕನ್ನು ಉಪಯೋಗಿಸಿದ್ದಾರೆ. ಬ್ರೂಕ್ಲಿನ್ ಸೇತುವೆಯಲ್ಲಿನ ಹಾಗೆ ಸಮಾಂತರವಾದ ಉಕ್ಕಿನ ತಂತಿಗಳನ್ನು ಈ ಕಡೆಯಿಂದ ಆ ಕಡೆಗೂ ಮತ್ತೆ ಈ ಕಡೆಗೂ ಎಳೆಯುವುದರಲ್ಲಿ ಆಗುವ ಸಾವಕಾಶವನ್ನು ತಪ್ಪಿಸುವುದಕ್ಕಾಗಿ ಮೂರನೆಯ ನಮೂನೆಯಲ್ಲಿ ಪೂರ್ವಸಂಮರ್ದಿತ ತಿರುಚಿದ ತಂತಿಯ ಹಗ್ಗವನ್ನು ಉಪಯೋಗಿಸಿ ಕ್ವಿಬೆಕ್ಕಿನಲ್ಲಿ 289.60ಮೀ ಕಣ್ಣಿನ ತೂಗು ಸೇತುವೆಯನ್ನೂ (1920) ವ್ಯಾಂಕೋವರ್‌ನಲ್ಲಿ 502.9ಮೀ ಕಣ್ಣಿನ ಲಯನ್ಸ್‌ಗೇಟ್ ಸೇತುವೆಯನ್ನೂ (1930) ಕಟ್ಟಿದ್ದಾರೆ.

ಅಗಾಧವಾದ ಸ್ಯಾನ್‌ಫ್ರಾನ್ಸಿಸ್ಕೊ–ಓಕ್ಲೆಂಡ್ ಸೇತುವೆಯ ಪಶ್ಚಿಮದ ಸ್ಯಾನ್‌ಫ್ರಾನ್ಸಿಸ್ಕೊ ಕಡೆಯ ಭಾಗದಲ್ಲಿ 704ಮೀ ಎರಡು ಕಣ್ಣುಗಳ ತೂಗುಸೇತುವೆ ಇದೆ. ಈ ಸೇತುವೆಯಲ್ಲಿ 17,464 ಉಕ್ಕಿನ ತಂತಿಗಳಿರುವ 71.8ಸೆಂ.ಮೀ ವ್ಯಾಸದ ಎರಡು ಹೊರಜಿಗಳಿವೆ.

ನ್ಯೂಯಾರ್ಕಿನಲ್ಲಿ ಹಡ್ಸನ್ ನದಿಯ ಮೇಲೆ 1925 ರಲ್ಲಿ 1,066.80ಮೀ ಕಣ್ಣಿನ ಜಾರ್ಜ್ ವಾಷಿಂಗ್ಟನ್ ಸೇತುವೆ ಪ್ರಾರಂಭವಾಯಿತು. ಅದಕ್ಕೆ ಮುಂಚೆ, ಫಿಲಡೆಲ್ಫಿಯದಲ್ಲಿ ಡಿಲಾವರ್ ನದಿಯ ಮೇಲಿನ 533.40ಮೀ ಒಂದು ಕಣ್ಣಿನ ಸೇತುವೆಯೇ ಅತ್ಯಂತ ಉದ್ದವಾದದ್ದಾಗಿತ್ತು. ಅದರಲ್ಲಿ ನೀರಿನ ಮಟ್ಟದ ಮೇಲೆ ಮೊದಲು 36.60ಮೀ ಅಗಲದ ಒಂದು ಅಟ್ಟವಿತ್ತು. ಸದ್ಯದಲ್ಲಿ ಇದು ಅನಗತ್ಯವೆನಿಸಿದರೂ ಮುಂದಿನ ದಿನಗಳಲ್ಲಿ ಬೆಳೆಯಲಿರುವ ಸಂಚಾರಾನುಕೂಲಗಳಿಗೆ ದೂರದೃಷ್ಟಿಯಿಂದ ಅವಕಾಶಮಾಡಿರುವುದು ಈ ಸಂವಿಧಾನದ ಒಂದು ವಿಶೇಷ. ಇತ್ತೀಚಿನ ದಿನಗಳಲ್ಲಿ ಈ ಸೇತುವೆಗೆ ಕೆಳಭಾಗದಿಂದ ಆಸರೆಯಾಗಿ ನಿರ್ಮಿಸಿದ ಒಂದು ಅಟ್ಟದಿಂದಾಗಿ ಮೇಲಿನ ಅಟ್ಟದಲ್ಲಿ ಪಕ್ಕಪಕ್ಕದಲ್ಲಿ ಎಂಟು ವಾಹನಗಳನ್ನೂ, ಎರಡು ಕಾಲುದಾರಿಗಳನ್ನೂ ಕೆಳಗಿನ ಅಟ್ಟದಲ್ಲಿ ಎಂಟು ರೈಲ್ವೆ ಸಾಲುಗಳನ್ನೂ ನಿರ್ಮಿಸಲು ಸಾಧ್ಯವಾಗಿದೆ.

ಹಡ್ಸನ್ ನದಿಯ ಎರಡು ದಡಗಳಲ್ಲಿಯೂ ಇರುವ ಉಕ್ಕಿನ ಸ್ತಂಭಗಳು ನೀರಿನ ಮಟ್ಟದ ಮೇಲೆ 183.90ಮೀ ಎತ್ತರವಾಗಿವೆ. ಈ ಸ್ತಂಭಗಳಲ್ಲಿ 43,000 ಟನ್ ಉಕ್ಕು ಸೇರಿದೆ. ಸ್ತಂಭಗಳ ಮಧ್ಯೆ ತಂತಿಯ ಹೊರಜಿಗಳಿವೆ. ಇವು ಸ್ತಂಭಗಳನ್ನು ಒಳಕ್ಕೆ ಎಳೆಯುತ್ತವೆ. ಬಟ್ಟೆಗಳನ್ನು ಹರಡುವುದಕ್ಕೆ ಎರಡು ಕಂಬಗಳ ನಡುವೆ ದಾರವನ್ನು ಕಟ್ಟಿದಾಗ ಅದು ತಾಳುವ ರೂಪವನ್ನೇ (ಕ್ಯಾಟೆನರಿ ಯಾ ತೂಗುಸರಪಣಿ) ತೂಗು

ಸೇತುವೆಯ ತಂತಿ ತಾಳುತ್ತದೆ. ಹೊರಜಿಯ ಎಳೆತವನ್ನು ಗೋಪುರಗಳು ತಡೆದ ಮೇಲೆ ಹೊರಜಿಗಳು ಆಚೆಗೆ ಬಳುಕಿ ಹಾದು ನೆಲದ ಕೆಳಗೆ ಇರುವ ಭಾರಿ ಕಾಂಕ್ರೀಟಿನ ದಿಮ್ಮಿಯಲ್ಲಿ ಅಂತರ್ಗತವಾಗುತ್ತವೆ. ಹೊರಜಿಗಳಿಗೆ ಈ ರೀತಿ ಎರಡು ಕಡೆಗಳಲ್ಲಿಯೂ ಹಡಗಿಗೆ ಲಂಗರು ಇರುವ ಹಾಗೆ ಬಲವಾದ ಅವಲಂಬನಗಳಿವೆ. ಕಡಿಯದ ಒಂದೇ ಉಕ್ಕಿನ ತಂತಿಗಳು ಒಂದಕ್ಕೊಂದು ತೊಡರಿಕೊಳ್ಳದ ಹಾಗೆ ಈ ಕಡೆಯಿಂದ ಆ ಕಡೆಗೆ ಎಳೆದು ಎಳೆಗಳನ್ನು ಮಾಡಿ ಅದನ್ನು ಒಂದರ ಪಕ್ಕದಲ್ಲಿ ಒಂದು ತಿರುಚಿಕೊಳ್ಳದಂತೆ ಕೂಡಿಸಿ ಹೊರಜಿಯನ್ನು ಮಾಡುತ್ತಾರೆ.

ಗೋಲ್ಡನ್ ಗೇಟ್ ಸೇತುವೆ : ಈ ತೂಗುಸೇತುವೆಯನ್ನು ಇಂಜಿನಿಯರಿಂಗ್‌ನ ಅದ್ಭುತಗಳಲ್ಲಿ ಒಂದೆನ್ನಬಹುದಾಗಿದೆ. ಇದು ಸ್ಯಾನ್‌ಫ್ರಾನ್ಸಿಸ್ಕೋ ಖಾರಿಗೆ ಸಮುದ್ರ ಪ್ರವೇಶಿಸುವ ಕಡೆ ಸ್ತಂಭಗಳ ನಡುವೆ 1280ಮೀ ಅಗಲವಾಗಿವೆ. ಇದರ ಗೋಪುರಗಳು ನೀರಿನಮಟ್ಟದ ಮೇಲೆ 250 ಮೀ ಎತ್ತರವಾಗಿವೆ. ಕಂಬದ ತಳಪಾಯಗಳು ನೀರಿನ ಕೆಳಗೆ 30.50ಮೀ ಆಳದಲ್ಲಿವೆ. ಪಾಯದಲ್ಲಿ ತೋಡುವಾಗ ಒತ್ತಡದ ಗಾಳಿಯ ಕೆಸನ್ನುಗಳನ್ನು ಉಪಯೋಗಿಸಿದರು. ಒಂದೊಂದು ಸ್ತಂಭದ ಮೇಲೂ ತಂತಿಯ ಹೊರಜಿಗಳನ್ನು ಹಿಡಿಯುವುದಕ್ಕೆ 169 ಟನ್ ತೂಕದ ಎರಡು ತೊಟ್ಟಿಲುಗಳಿದ್ದುವು. ಹೊರಜಿಗಳ ವ್ಯಾಸ 92.70ಸೆಂ.ಮೀ ಅವುಗಳಲ್ಲಿ 1,28,000ಕಿಮೀ ಉದ್ದದ ಉಕ್ಕಿನ ತಂತಿಗಳಿವೆ. ವಾಷಿಂಗ್ಟನ್ ಸೇತುವೆಯಲ್ಲಿನ ಹಾಗೆಯೇ ಕಾಂಕ್ರೀಟಿನ ಬೃಹದಾಕಾರವಾದ ದಿಮ್ಮಿಗಳಲ್ಲಿ ಉಕ್ಕಿನ ಕುಣಿಕೆಗಳಲ್ಲಿ ಹೂಜಿಗಳನ್ನು ಭದ್ರಪಡಿಸಿದ್ದಾರೆ. ಸ್ತಂಭಗಳ ನಿರ್ಮಾಣಕ್ಕೂ ಆ ಎತ್ತರದಲ್ಲಿ ಕಾಲುದಾರಿಗಳನ್ನು ಮಾಡಿ ಅವುಗಳ ಮೇಲೆ ನಡೆದು ಕೆಲಸಮಾಡುವುದಕ್ಕೂ ಕೆಲಸಗಾರರಲ್ಲಿ ಅಪಾರವಾದ ಕಾಲಿನ ಬಿಗಿಯೂ ನರಗಳ ಸಮತೂಕವೂ ಬೇಕಾಗಿತ್ತು. ಆದರೂ ಈ ಸೇತುವೆಯಲ್ಲಿ ಒಂದಾದರೂ ಸಾವು ಒದಗಲಿಲ್ಲ. 1949ರ ವರೆಗೂ ಇದೇ ಪ್ರಪಂಚದಲ್ಲಿ ಅತ್ಯಂತ ದೀರ್ಘವಾದ ಕಣ್ಣಿನ ತೂಗು ಸೇತುವೆಯಾಗಿತ್ತು. ಆ ವರ್ಷ ನ್ಯೂಯಾರ್ಕಿನ ಬಂದರಿನಲ್ಲಿ 1408.2ಮೀ ಕಣ್ಣಿನ ನ್ಯಾರೋಸ್ ಸೇತುವೆ ಪ್ರಾರಂಭವಾಯಿತು.

ಪ್ರಪಂಚದ ಅತಿ ಅಗಲ ಕಣ್ಣು ಇರುವುದು ಜಪಾನಿನ ಅಕಾಶಿ ಕೈಕ್ಯೋ ತೂಗು ಸೇತುವೆಯಲ್ಲಿ. ಇದರ ಅಗಲವು 1991ಮೀ ಈ ಸೇತುವೆ ಸೇತುವೆಗಳ ರಾಜ ಎಂದು ಪ್ರಖ್ಯಾತವಾಗಿದೆ. 2010ನೆಯ ಇಸವಿಯ ವೇಳೆಗೆ ಕಣ್ಣಿನ ಅಗಲ 3360ಮೀ ಮೀರಲಿದೆ. ಈ ಬೃಹತ್ ಕಣ್ಣಿರುವ ತೂಗು ಸೇತುವೆಯು ಮೆಸ್ಸಿನ ಖಾರಿಯ ಮೇಲೆ ಹಾದು ಹೋಗಿ ಯುರೋಪನ್ನು ಸಿಸಿಲಿ ದ್ವೀಪದೊಂದಿಗೆ ಸೇರಿಸಲಿದೆ. ತೂಗುಸೇತುವೆಯ ಸುಧಾರಿತ ರೂಪ–ಕೇಬಲ್ ಸ್ಟೇ ಸೇತುವೆ. (ಎಚ್.ಸಿ.ಕೆ.)

**ತೃತೀಯ ಜಗತ್ತು:** ಪ್ರಪಂಚದ ರಾಷ್ಟ್ರಗಳು ಮತ್ತು ಸಮುದಾಯಗಳ ನಡುವೆ ಅಪಾರ ಅಂತರವಿದ್ದು ಈ ಅಂತರ ಹೆಚ್ಚುತ್ತಲೇ ಮುಂದುವರೆದಿದೆ. ಅಭಿವೃದ್ಧಿ ಹೊಂದಿದ ದೇಶಗಳು ಅನಭಿವೃದ್ಧಿ ರಾಷ್ಟ್ರಗಳಿಗಿಂತ ಹೆಚ್ಚು ವೇಗದಲ್ಲಿ ಮತ್ತಷ್ಟು ಶ್ರೀಮಂತವಾಗುತ್ತಿದ್ದರೆ, ಬಡರಾಷ್ಟ್ರಗಳು ಇವುಗಳೊಡನೆ ಪೈಪೋಟಿ ಎದುರಿಸಲಾಗದೆ ಶೋಷಿತಗೊಂಡು ಮತ್ತಷ್ಟು ಬಡರಾಷ್ಟ್ರಗಳಾಗುತ್ತಿವೆ. ಈ ಆರ್ಥಿಕ ಭಿನ್ನತೆಯನ್ನು ಪ್ರತಿನಿಧಿಸಲು ಟೀಲ್‌ಹಾರ್ಡ್–ಡಿ–ಚಾರ್ಡಿನ್ ಎಂಬುವರು ಪ್ರಪಂಚದ ರಾಷ್ಟ್ರಗಳನ್ನು ಪ್ರಥಮ ಜಗತ್ತಿನ ರಾಷ್ಟ್ರಗಳು, ದ್ವಿತೀಯ ಜಗತ್ತಿನ ರಾಷ್ಟ್ರಗಳು ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳು (ಥರ್ಡ್ ವರ್ಲ್ಡ್) ಎಂದು ವಿಂಗಡಿಸಿರುವರು. ಜಗತ್ತಿನಲ್ಲಿ ಅತಿಕಡಿಮೆ ಅಭಿವೃದ್ಧಿ ಹೊಂದಿ ಹಿಂದುಳಿದ ಏಷ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕದ ರಾಷ್ಟ್ರಗಳನ್ನು ಸಾಮಾನ್ಯವಾಗಿ ತೃತೀಯ ಜಗತ್ತಿನ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ. ತೃತೀಯ ಜಗತ್ತು ಎಂಬ ಪದವನ್ನು ಪ್ರಪ್ರಥಮ ಬಾರಿಗೆ ಬಳಸಿದ ವ್ಯಕ್ತಿ ಆಲ್ಜೀರಿಯ ದೇಶದ ಫ್ರಾಂಟ್ಜ್ ಫ್ಯಾನನ್. ಎರಡನೆಯ ಮಹಾಯುದ್ಧದ ಅನಂತರ ಪ್ರಪಂಚದ ಎರಡು ಪ್ರಮುಖ ಬಣಗಳು ಅಸ್ತಿತ್ವಕ್ಕೆ ಬಂದವು. ಅಮೆರಿಕ ಮತ್ತು ರಷ್ಯ ಈ ಬಣಗಳ ನಾಯಕರಾಗಿದ್ದವು. ಈ ಎರಡು ಬಣಗಳ ನಡುವೆ ಶೀತಲ ಸಮರ ಉಂಟಾಯಿತು. ಪ್ರಪಂಚದ ಪ್ರಮುಖ ರಾಷ್ಟ್ರಗಳು ಈ ಬಣಗಳಿಗೆ ಸೇರಿ ಮೂರನೆಯ ಮಹಾಯುದ್ಧಕ್ಕೆ ಸಿದ್ಧತೆ ನಡೆಸಿದವು. ಆದರೆ ಈ ಎರಡೂ ಬಣಗಳನ್ನು ಸೇರದೆ ಹಲವಾರು ದೇಶಗಳು ತಮ್ಮದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ರೂಪಿಸಿಕೊಂಡು ಅಭಿವೃದ್ಧಿ ಹೊಂದಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿವೆ. ಇಂತಹ ರಾಷ್ಟ್ರಗಳನ್ನು ಒಳಗೊಂಡ ಗುಂಪಿಗೆ ತೃತೀಯ ಜಗತ್ತು ಎಂದು ಕರೆಯಲಾಗಿದೆ.

ತೃತೀಯ ಜಗತ್ತಿನ ರಾಷ್ಟ್ರಗಳು ಆರ್ಥಿಕವಾಗಿ ದುರ್ಬಲವಾಗಿದ್ದರೂ ಅಂತಾರಾಷ್ಟ್ರೀಯ ರಂಗದಲ್ಲಿ ಪ್ರಮುಖ ಪಾತ್ರವಹಿಸಿವೆ. ತಮ್ಮ ರಾಷ್ಟ್ರಗಳ ವಿಕಾಸಕ್ಕೆ ತಮ್ಮದೇ ಆದ ನೀತಿ ನಿಯಮಗಳನ್ನು ಹೊಂದಿದ್ದು ವಿಶ್ವದಲ್ಲಿ ಯುದ್ಧ ನಿವಾರಣೆ, ಆರ್ಥಿಕ ವಿಕಾಸ, ಶಾಂತಿ ಮತ್ತು ಸಹಬಾಳ್ವೆ ಸಿದ್ಧಾಂತಗಳಿಗೆಂದೇ ಹೋರಾಡುತ್ತಿವೆ. ಹೀಗಾಗಿ ನಾವು ಇಂದು ವಿಶ್ವದಲ್ಲಿ ಒಂದು ಮಾದರಿಯ ನೂತನ ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಕಾಣುತ್ತಿದ್ದು ಇದು ತೃತೀಯ ಜಗತ್ತಿನ ಕಾಣಿಕೆಯಾಗಿದೆ. (ಪಿ.ಎನ್.ಎಚ್.)

**ತೆಲಂಗಾಣ:** ಹಿಂದಿನ ಹೈದರಾಬಾದ್ ಸಂಸ್ಥಾನದಿಂದ ಆಂಧ್ರ ಪ್ರದೇಶಕ್ಕೆ ಸೇರಿದ 9 ಜಿಲ್ಲೆಗಳ ಪ್ರದೇಶವನ್ನು ತೆಲಂಗಾಣವೆಂದು ಕರೆಯುವುದು ರೂಢಿ. ಮೆಹಬೂಬ್‌ನಗರ, ಹೈದರಾಬಾದ್, ಮೇದಕ್, ನಿಜಾಮಾಬಾದ್, ಆದಿಲಾಬಾದ್, ಕರೀಮ್‌ನಗರ, ವಾರಂಗಲ್, ಖಮ್ಮಮ್, ನಲ್ಗೊಂಡ – ಇವೇ ಈ ಜಿಲ್ಲೆಗಳು. ಈ ಪ್ರದೇಶ ಇಂದಿನ ಆಂಧ್ರ ಪ್ರದೇಶದ ಉತ್ತರಾರ್ಧವನ್ನು ವ್ಯಾಪಿಸಿದೆ. ವಿಸ್ತೀರ್ಣ 1,10,750 ಚ.ಕಿಮೀ ದಖನ್ ಪ್ರಸ್ಥಭೂಮಿಯ ಭಾಗವಾಗಿರುವ ತೆಲಂಗಾಣದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 455 ಮೀ. ಉತ್ತರ ಮತ್ತು ಈಶಾನ್ಯ ಭಾಗದಲ್ಲಿ ಸರಾಸರಿ 100–112 ಸೆಂಮೀ ಮಳೆ ಆಗುತ್ತದೆ. ಗೋದಾವರಿ, ಕೃಷ್ಣ, ಮಾಂಜೀರ, ಮಾನೇರು, ಪ್ರಾಣಹಿತ, ಮೂಸೀ, ಪಲೇರು, ಮುನೇರು, ವೈರಾ – ಇವು ಇಲ್ಲಿಯ ಮುಖ್ಯ ನದಿಗಳು. ತೆಲಂಗಾಣದ ಪ್ರಮುಖ ನಗರವಾದ ಹೈದರಾಬಾದ್ ಆಂಧ್ರಪ್ರದೇಶದ ರಾಜಧಾನಿಯಾಗಿದೆ.

ತೆಲಂಗಾಣ ಪ್ರದೇಶವನ್ನು ಒಂದು ಪ್ರತ್ಯೇಕ ರಾಜ್ಯವಾಗಿ ಪರಿಗಣಿಸಬೇಕೆಂದು ಅಲ್ಲಿಯ ಕೆಲವು ರಾಜಕೀಯ ಗುಂಪುಗಳು ಹೋರಾಟ ನಡೆಸುತ್ತಿವೆ. (ಎಸ್.ಎಸ್.ಆರ್.ಎಂ.)

**ತೇವಾಂಶ ಮಾಪಕ:** ವಾಯುಮಂಡಲದ ಆರ್ದ್ರತೆಯನ್ನು ಅಳೆಯಲು ಬಳಸುವ ಉಪಕರಣ. ಆರ್ದ್ರತಾಮಾಪಕ ಪರ್ಯಾಯನಾಮ (ಹೈಗ್ರೊ ಮೀಟರ್). ಇದರಲ್ಲಿ ನಾಲ್ಕು ವಿಧ: 1. ಇಬ್ಬನಿ ಬಿಂದು ಆರ್ದ್ರತಾಮಾಪಕ 2. ಆರ್ದ್ರ ಮತ್ತು ಶುಷ್ಕ ಬುರುಡೆಯ ಆರ್ದ್ರತಾಮಾಪಕ, 3. ರಾಸಾಯನಿಕ ಆರ್ದ್ರತಾಮಾಪಕ 4. ಕೇಶ ಆರ್ದ್ರತಾ ಮಾಪಕ. (ಕೆ.ಎನ್.ಯು.)

**ತೈಲ–ಜೇಡು ಶಿಲೆ:** ಜೇಡುಮಣ್ಣು ಅಥವಾ ಮಡ್ಡಿ (ಗಸಿ) ಒಟ್ಟಾಗಿ ಸೇರಿದ ತೆಳುವಾದ ಪೊರೆ ರಚನೆ ಇರುವ ಕಪ್ಪು ಅಥವಾ ಕಂದು ಬಣ್ಣದ ಜಲಜಶಿಲೆ (ಆಯಿಲ್ ಶೇಲ್). ಇದು ವಿಶೇಷವಾಗಿ ಕೆರೋಗೆನ್ ಎಂಬ ಕಾರ್ಬನಿಕ ವಸ್ತು ಅಥವಾ ಬಿಟುಮೆನಿನಿಂದಾಗಿರುತ್ತದೆ. ಇದಲ್ಲದೆ ಬೆಣಚು, ಸಿಕತ, ಸಿಲಿಕಾಂಶ ಖನಿಜಗಳು ಅದರಲ್ಲಿಯೂ ಹೈಡ್ರೊಮೈಕ ಮತ್ತು ಮಾಂಟ್‌ಮೊರಿಲ್ಲೊನೈಟ್ ಜೇಡು ಖನಿಜಗಳು ಸಾಮಾನ್ಯವಾಗಿ ಇದರ ಸಂಯೋಜನೆಯಲ್ಲಿ ಇರುವುವು. ಜಲಜಶಿಲೆಗಳ ಜನನದ ಪೂರ್ವಭಾವಿ ಹಂತದಲ್ಲೇ ಜೇಡುಶಿಲೆ ರೂಪುಗೊಳ್ಳುವುದು. ಇದರಲ್ಲಿ ಫಿಲ್ಲೈಟ್ ಅಥವಾ ಮಾರ್ಕಸೈಟ್ ಮತ್ತು ಅಲ್ಪಾಂಶ ಫೆಲ್ಸ್‌ಸ್ಪಾರ್ ಸಹ ಇರುವುದು. ಈ ಕಾರ್ಬನಿಕ ವಸ್ತುಗಳನ್ನು ಬಟ್ಟಿ ಇಳಿಸಿದಾಗ ಕಲ್ಲರಳು (ಕಲ್ಲುರಾಳ) ಅಥವಾ ಪ್ಯಾರಫಿನ್ನಿನಿಂದ ಹಿಡಿದು ಮಂದವಾದ ಹೆರೆ ಎಣ್ಣೆ (ಲ್ಯೂಬ್ರಿಕೇಟಿಂಗ್ ಆಯಿಲ್), ಉರಿಸುವ ಎಣ್ಣೆ, ಹಗುರವಾದ ದೀಪದ ಎಣ್ಣೆ, ಸೀಮೆ ಎಣ್ಣೆ, ಮತ್ತು ಪೆಟ್ರೋಲ್ ಹಾಗೂ ಪೆಟ್ರೋಲ್ ಈಥರ್‌ವರೆಗಿನ ಹಲವಾರು ವಸ್ತುಗಳು ಉತ್ಪತ್ತಿಯಾಗುವುವು. ತೈಲಜೇಡುಶಿಲೆಯಿಂದ ಅಮೋನಿಯಮ್ ಸಹ ದೊರೆಯಬಹುದು. ಮೆಕ್ಕೀಯ ಹೇಳಿಕೆಯಂತೆ ನಿಜವಾದತೈಲ ಜೇಡುಶಿಲೆ ಜೇಡು ಅಥವಾ ಮರಳಿನ ಅಂಶದ ನಿಕ್ಷೇಪ; ಇದನ್ನು ಬಟ್ಟಿ ಇಳಿಸಿದಾಗ ಪೆಟ್ರೋಲ್ ಉತ್ಪತ್ತಿಯಾಗುವುದು. ಕೆಲವು ದ್ರಾವಣಗಳೊಡನೆ ಬೆರೆಸುವುದರಿಂದಲ್ಲ. ತೈಲ–ಜೇಡು ಶಿಲೆಗಳಲ್ಲಿ ಮುಕ್ತ ಎಣ್ಣೆ ಇರದಿದ್ದರೂ ಶಾಕವಸ್ತುಗಳು, ಜಲಚರ ಸಸ್ಯಗಳ ಉಳಿಕೆ ಬೀಜಕಣಗಳು (ಸ್ಪೋರ್ಸ್) ಮೇಣದ ಕಣಗಳು ಮತ್ತು ರಾಳ ವಿಶೇಷವಾಗಿರುತ್ತವೆ. ಎಣ್ಣೆಯನ್ನು ಉತ್ಪತ್ತಿಮಾಡುವ ಹಳದಿ ಸೂಕ್ಷ್ಮಕಣಗಳು ಪುಷ್ಪಪರಾಗ, ಆಲ್ಗೀ, ಬೀಜಕಣ ಮತ್ತು ಸೂಕ್ಷ್ಮಪ್ರಾಣಿಗಳ ಸಮೂಹ ಎಂದು ತಿಳಿದು ಬಂದಿದೆ. ಇವುಗಳಲ್ಲಿ ಅನೇಕವು ದ್ವಿತೀಯಕ ರೀತಿಯಲ್ಲಿ ರಾಳ ಮತ್ತು ಸೆಲ್ಯುಲೋಸ್ ಪದಾರ್ಥಗಳು, ಹಾಗೂ ಪುನರ್ನಿಕ್ಷೇಪಗೊಂಡ ವಸ್ತುಗಳು. ತೈಲ–ಜೇಡು ಶಿಲೆಗಳಲ್ಲಿ ಎಣ್ಣೆ ಹೆಚ್ಚು ಪ್ರಮಾಣವಿದ್ದಲ್ಲಿ ಬೆಂಕಿ ಹೊತ್ತಿಸಿದರೆ ಉರಿಯುತ್ತದೆ. ಮಯನ್ಮಾರ್–ಥೈಲೆಂಡ್ ಅಂಚಿನಲ್ಲಿ ಕರೆನ್‌ಹಳ್ಳಿಯ ಜನ ತೈಲ–ಜೇಡು ಶಿಲೆಯನ್ನು ಉರಿಸಲು ಉಪಯೋಗಿಸುತ್ತಿದ್ದುದೇ ಯಥೇಚ್ಛವಾದ ನಿಕ್ಷೇಪಗಳನ್ನು ಪತ್ತೆ ಹಚ್ಚಲು ಮುಖ್ಯ ಸೂಚಿಯಾಯಿತು.

ಹಲವಾರು ದಶಲಕ್ಷವರ್ಷ ಒಂದೇ ಸಮನೆ ಸಸ್ಯ ಮತ್ತು ಪ್ರಾಣಿಗಳ ಅವಶೇಷಗಳು ಮರಳು ಮತ್ತು ಜೇಡು ನಿಶ್ಚಲವಾದ ಸಿಹಿನೀರಿನ ಮತ್ತು ಉಪ್ಪುನೀರಿನ ಸರೋವರಗಳ ತಳದಲ್ಲಿ ನಿಕ್ಷೇಪಗೊಂಡಾಗ ತೈಲ–ಜೇಡು ಮೈದಳೆವುದು. ಪುರಾತನ ಶಿಲೆಗಳ ರಂಧ್ರಗಳಲ್ಲಿ ಸ್ವಚ್ಛವಾದ ನೀರು ಮತ್ತು ಅದರೊಂದಿಗೆ ಸಿಹಿನೀರಿನ ಚಿಪ್ಪುಗಳು, ಮೀನುಗಳು, ಸಸ್ಯಗಳ ಎಲೆಗಳು ಮತ್ತು ತೆರ್ಮೆ (ಜರಿ) ಎಲೆಗಳು ತುಂಬಿಕೊಂಡು ಒತ್ತಡ ಮತ್ತು ನಿರ್ವಾಯು ಕೊಳೆತದಿಂದ ಸಮ್ಮಿಶ್ರಿತ ಕಾರ್ಬನಿಕ ವಸ್ತು ಉತ್ಪತ್ತಿಯಾಗುವುದು. ಇದು ಕೂಡ ತೈಲ–ಜೇಡುಶಿಲೆ. ಕೆಳಮಯನ್ಮಾರ್‌ನ ಅಮ್‌ಹರ್‌ಸ್ಟ್ ಜಿಲ್ಲೆ ಮತ್ತು ಅಕ್ಕಪಕ್ಕದ ಥೈಲೆಂಡ್ ಭಾಗಗಳ ತೈಲ–ಜೇಡುಶಿಲೆಗಳು ಈ ರೀತಿ ಆದವು. ಇವು ತೃತೀಯ ಭೂಕಾಲಕ್ಕೆ ಸೇರಿವೆ. ಈ ರೀತಿಯ ನಿಕ್ಷೇಪಗಳು ಫಿಟ್ಚಾರ ಪ್ರದೇಶದಲ್ಲಿವೆ. ಇದರಲ್ಲಿ 22.4 ಕಿಮೀ ಉದ್ದ, 14.4 ಕಿಮೀ ಅಗಲದ ಹಲವಾರು ಉತ್ತಮ ತೈಲ–ಜೇಡುಶಿಲಾ ಪದರಗಳಿವೆ. ಇವುಗಳ ಮಂದ ಏಕರೀತಿಯಾಗಿಲ್ಲ. ಈ ಶಿಲಾಮಾದರಿಗಳಲ್ಲಿ ಒಂದು ಟನ್ನಿಗೆ 9.78–

16.2 ಗ್ಯಾಲನ್ನುಗಳಷ್ಟು ಕಚ್ಚಾ ಎಣ್ಣೆ ದೊರೆತಿದೆ. ಕೆಳ ಮಯನ್ಮಾರ್‌ದ ಮರ್ಗ್ಯು ಜಿಲ್ಲೆಯ ತೇಯಿನ್‌ಕುನ್ ಹೊಳೆಯ ಕಣಿವೆಯಲ್ಲಿ, ಬಾಂಕುನ್ ಬಳಿ ಮರ್ಗ್ಯುವಿನ ಲೆನ್ಯ ಕಣಿವೆಯಲ್ಲಿ ಮತ್ತು ಟವಾಯ್ ಜಿಲ್ಲೆಯ ಬೃಹತ್ ಟೆನಸ್ಸೆರಿಮ್ ಕಣಿವೆಯಲ್ಲಿ ತೃತೀಯ ಭೂಕಾಲದ ಜೇಡು ನಿಕ್ಷೇಪಗಳಿವೆ. ಭಾರತದಲ್ಲಿ ಕೆಳದರ್ಜೆಯ ತೈಲ-ಜೇಡುಶಿಲೆಗಳು ಪಂಜಾಬಿನ ಲವಣ ಶಿಲಾ ಶ್ರೇಣಿಯಲ್ಲಿ (ಸಾಲ್ಟ್ ರೇಂಜ್) ಉಪ್ಪು-ಮರಳು ಶಿಲೆಗಳೊಂದಿಗೆ ನಿಕ್ಷೇಪಗೊಂಡಿವೆ. ಆದರೆ ಇದು ಲಾಭದಾಯಕವಾಗಿಲ್ಲ.

ತೈಲ-ಜೇಡು ಶಿಲೆಗಳು ಪ್ರಪಂಚದ ಹಲವಾರು ಕಡೆ ಭೂಕಾಲದ ವಿವಿಧ ಹಂತಗಳಲ್ಲಿ ಉತ್ಪತ್ತಿಯಾಗಿವೆ. ಉದಾಹರಣೆಗಾಗಿ ಆಸ್ಟ್ರೇಲಿಯದ ನ್ಯೂ ಸೌತ್‌ವೇಲ್ಸ್, ನ್ಯೂಜಿಲೆಂಡ್ ಮತ್ತು ಸ್ಕಾಟ್ಲೆಂಡ್ ದೇಶಗಳ ಕಾರ್ಬಾನಿಫೆರಸ್ ಯುಗದ ಶಿಲೆಗಳಲ್ಲಿ, ಬ್ರೆಜಿಲ್‌ನ ಕ್ರಿಟೇಷಸ್ ಯುಗದ ಶಿಲೆಗಳಲ್ಲಿ. ಉತ್ತರ ಅಮೆರಿಕ ಸಂಯುಕ್ತ ಸಂಸ್ಥಾನದ ಕಾಲರಾಡೊ, ಊಟಾ, ವ್ಯೋಮಿಂಗ್ ಮತ್ತು ನೆವಾಡ ಹಾಗೂ ಕೆನಡದ ನ್ಯೂ ಬ್ರನ್ಸ್‌ವಿಕ್ ಇಯೊಸೀನ್ ಉಪಯುಗದ ಶಿಲಾ ನಿಕ್ಷೇಪಗಳಲ್ಲಿ ಕಂಡುಬಂದಿದೆ.

ತೈಲ-ಜೇಡು ಶಿಲೆಗಳಿಂದ ಎಣ್ಣೆಯನ್ನು ಉತ್ಪಾದಿಸುವ ಕಾರ್ಯ ಬಹಳ ಹಿಂದೆಯೇ (1938) ಫ್ರಾನ್ಸಿನಲ್ಲಿ ಆರಂಭವಾಯಿತು. ಸ್ಕಾಟ್ಲೆಂಡಿನಲ್ಲಿ ಪ್ರಥಮ ಬಾರಿಗೆ 1848ರಲ್ಲಿ ಹೆಚ್ಚು ಪ್ರಮಾಣದಲ್ಲಿ ತೈಲ-ಜೇಡುಶಿಲೆಗಳಿಂದ ಕಚ್ಚಾಎಣ್ಣೆಯನ್ನು ಯಂಗ್ ಮತ್ತು ವೆಲ್‌ರನ್ ಬೇರ್ಪಡಿಸಿದರು. ಅನಂತರ 1860ರಲ್ಲಿ ಕೆನಡ, 1865ರಲ್ಲಿ ಆಸ್ಟ್ರೇಲಿಯ ದೇಶಗಳಲ್ಲಿ ಈ ವಿಧಾನಗಳಿಂದ ದಿನಕ್ಕೆ 3,000 ಬ್ಯಾರಲ್ಲುಗಳಷ್ಟು ಎಣ್ಣೆಯನ್ನು ಉತ್ಪಾದಿಸಲಾಯಿತು. ಆದರೂ ತೈಲ-ಜೇಡು ಶಿಲೆಗಳಿಂದ ಪಡೆಯಬಹುದಾದ ಎಣ್ಣೆಯ ಪ್ರಮಾಣ ಏಕರೀತಿಯಾಗಿರುವುದಿಲ್ಲ. 1 ಟನ್ ತೈಲ-ಜೇಡುಶಿಲೆಯಿಂದ ದೊರೆಯುವ ಎಣ್ಣೆಯ ಪ್ರಮಾಣ ಗ್ಯಾಲನ್ನುಗಳಲ್ಲಿ ಹೀಗಿದೆ:

| **ಪ್ರದೇಶ** | (ಗ್ಯಾಲನ್ನುಗಳಲ್ಲಿ) |
|---|---|
| ದಕ್ಷಿಣ ಆಫ್ರಿಕ. . . | 106 |
| ಆಸ್ಟ್ರೇಲಿಯ. . . | 80–180 |
| ಇಂಗ್ಲೆಂಡ್. . . | 40 |
| ರಷ್ಯ. . . | 35–50 |
| ಕೆನಡ. . . | 2–63 |
| ಸ್ಕಾಟ್ಲೆಂಡ್. . . | 16–35 |
| ಮಂಚೂರಿಯ. . . | 15 |
| ಸ್ವೀಡನ್. . . | 12–15 |
| ಜರ್ಮನಿ. . . | 12 |
| ಅಮೆರಿಕ ಸಂಯುಕ್ತ ಸಂಸ್ಥಾನ. . . | 11–65 |
| ಫ್ರಾನ್ಸ್. . . | 10–17 |

ತೈಲ-ಜೇಡುಶಿಲೆಯಿಂದ ಪೆಟ್ರೋಲಿಯಮ್ ಉತ್ಪಾದನೆಯ ರೀತಿ: ಪುಡಿ ಮಾಡಿದ ತೈಲ-ಜೇಡುಶಿಲೆಯನ್ನು ಬಟ್ಟಿ ಇಳಿಸುವ ಪಾತ್ರೆಯೊಳಕ್ಕೆ ಸೇರಿಸಿ, $350^0$-$500^0$ಸೆ ಉಷ್ಣತೆಯ ಆವಿ ಅಥವಾ ಅನಿಲವನ್ನು ಹಾಯಿಸಬೇಕು. ಆಗ ಕೆರೊಗೆನ್ ವಿಶ್ಲೇಷಣೆ ಹೊಂದಿ ಕಚ್ಚಾ ತೈಲ ಉತ್ಪತ್ತಿಯಾಗುವುದು. ಈ ತೈಲಕ್ಕೆ ಪೆಟ್ರೋಲಿಯಮ್ ತೈಲದ ಎಲ್ಲ ಗುಣಗಳೂ ಇವೆ. ಆದರೆ ಹೆಚ್ಚು ಅಂಶ ಗಂಧಕ, ಸಾರಜನಕ, ಮತ್ತು ಆಮ್ಲಜನಕ ಇರುವವು.

ಪೆಟ್ರೋಲಿಯಮ್ ಕೊರತೆಯನ್ನು ಪ್ರಪಂಚ ಅನುಭವಿಸುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಎಣ್ಣೆ ಉತ್ಪಾದನೆಯ ದಿಶೆಯಲ್ಲಿ ತೈಲ-ಜೇಡುಶಿಲೆ ಅತಿ ಮುಖ್ಯವಾಗಬಲ್ಲದೆಂದು ತಜ್ಞರ ಒಮ್ಮತದ ಅಭಿಪ್ರಾಯ. ಆದ್ದರಿಂದ ಎಲ್ಲ ರಾಷ್ಟ್ರಗಳೂ ತೈಲ-ಜೇಡು ಶಿಲಾ ನಿಕ್ಷೇಪಗಳನ್ನು ಅರಸುವುದರಲ್ಲಿಯೂ ಅವುಗಳ ಪರಿಷ್ಕರಣ ಹಾಗೂ ತೈಲ ಉತ್ಪಾದನಾ ವಿಧಾನಗಳಲ್ಲಿಯೂ ನಿರ್ದಿಷ್ಟ ಧೋರಣೆಯನ್ನು ಅನುಸರಿಸುವುದು ಯುಕ್ತ. (ಪಿ.ಎಂ.;ಜಿ.ಪಿ.ಸಿ.)

**ತೊಂಗಲುಗಳು ಮತ್ತು ತುಂಗಲುಗಳು:** ಸುಣ್ಣಶಿಲೆಯ ಗುಹೆಗಳಲ್ಲಿ ಕ್ಯಾಲ್ಸಿಯಮ್ ಕಾರ್ಬೊನೇಟ್ ಮಿಶ್ರಿತ ನೀರು ಜಿನುಗುವಾಗ ಅದು ಆವಿಯಾಗಿ ಯುಗಯುಗಾಂತರಗಳ ಅವಧಿಯಲ್ಲಿ ಮೈದಳೆದ ವಿವಿಧ ಬಗೆಯ ರಚನೆಗಳು (ಸ್ಟಾಲಕ್‌ಟೈಟ್ಸ್ ಅಂಡ್ ಸ್ಟಾಲಗ್‌ಮೈಟ್ಸ್). ಸ್ಥಲಾಕಗಳು ಮತ್ತು ಸ್ಥಲಗ್ಮಗಳು ಪರ್ಯಾಯನಾಮಗಳು. ಇವನ್ನು ಊರ್ಧ್ವಮುಖಿ ಮತ್ತು ಅಧೋಮುಖಿ ಶಂಖು ಅಥವಾ ತೊಂಗಲುಗಳು ಎಂದು ಸಹ ಕರೆಯುತ್ತಾರೆ. ಅವರೋಹಿ ಶಂಖು ಅಥವಾ ತೊಂಗಲುಗಳು (ತೂಗು ತೊಂಗಲುಗಳು ಎಂದೂ ಹೇಳುವುದುಂಟು) ಗುಹೆಗಳ ಚತ್ತುವಿನಿಂದ ಕೆಳಮೊಗವಾಗಿ ಬೆಳೆಯುವುವು. ಇವು ಸಹಜವಾಗಿ ತೆಳು ನೀಳವಾಗಿದ್ದು ಒಳಗೆ ಟೊಳ್ಳಾಗಿರುತ್ತವೆ. ಈ ಟೊಳ್ಳಿನ ಮುಖಾಂತರ ನೀರು ಕೆಳಕ್ಕೆ ಒಸರಿ ತಳದಲ್ಲಿ ಹೊರಸಾಗುತ್ತಿದ್ದಂತೆ ಅದರಲ್ಲಿದ್ದ ರಾಸಾಯನಿಕಾಂಶಗಳು ಅಲ್ಲೇ ಹೊಸ ಪೊರೆಗಳಾಗಿ ಹದಿಗಟ್ಟುವುವು. ಈ ತೆರನಾಗಿ ತೊಂಗಲಿನ ಉದ್ದ ಹೆಚ್ಚುತ್ತಹೋಗುವುದು. ಒಂದು ಕೇಂದ್ರದ ಸುತ್ತ ಏಕಕೇಂದ್ರಿಯ ಪಟ್ಟಿಗಳಾಗಿ ತೊಂಗಲುಗಳು ಬೆಳೆಯುತ್ತವೆ.

ಆರೋಹಿ ಶಂಖು ಅಥವಾ ತುಂಗಲುಗಳು (ನೆಲ ತೊಂಗಲುಗಳು ಎಂದೂ ಹೇಳುವುದುಂಟು) ನೆಲದಿಂದ ಮೇಲುಮೊಗವಾಗಿ ಬೆಳೆಯುವುವು. ಸಾಧಾರಣವಾಗಿ ಇವನ್ನು ತೊಂಗಲುಗಳ ಕೆಳಗೆ ಕಾಣಬಹುದು. ತೊಂಗಲುಗಳನ್ನು ನಿರ್ಮಿಸುವ ಅದೇ ನೀರಿನ ತೊಟ್ಟುಗಳ ಬಾಷ್ಪೀಭವನದಿಂದ ತುಂಗಲುಗಳು ಮೈದಳೆಯುವುವು. ಇವು ತೊಂಗಲುಗಳಿಗಿಂತ ದಪ್ಪ ಹಾಗೂ ಗಿಡ್ಡವಾಗಿವೆ. ಕೇಂದ್ರೀಯ ಟೊಳ್ಳು ಇವುಗಳಲ್ಲಿ ಇಲ್ಲ. ತುಂಗಲಿನ ಪ್ರತಿಯೊಂದು ಪಟ್ಟಿಯೂ ಅವಸಾದಿತವಾಗುವ ತಲಕ್ಕೆ ಸಮಾನಾಂತರವಾಗಿರುವುದು.

ತೊಂಗಲು ಮತ್ತು ತುಂಗಲು ಎರಡನ್ನೂ ಡ್ರಿಪ್‌ಸ್ಟೋನ್ (ತೊಟ್ಟಿಕ್ಕುವ ಕಲ್ಲು) ಎಂಬ ಒಂದೇ ಹೆಸರಿನಿಂದ ಕರೆಯುವುದುಂಟು. ಇದರಲ್ಲಿ ಕ್ಯಾಲ್ಸಿಯಮ್ ಕಾರ್ಬೊನೇಟ್ ಖನಿಜ ಪ್ರಧಾನವಾಗಿರುವುದು ಕಂಡುಬರುತ್ತದೆ. ಈ ಡ್ರಿಪ್‌ಸ್ಟೋನ್ ಜೊತೆಗೆ ಇನ್ನೂ ಅನೇಕ ವಿಧವಾದ ಚಿತ್ರವಿಚಿತ್ರಾಕಾರಗಳುಳ್ಳ ಅತಿ ಸುಂದರ ಮತ್ತು ಆಕರ್ಷಕವಾದ ರಚನೆಗಳನ್ನು ಸುಣ್ಣಶಿಲೆ ಅಥವಾ ಮೆಗ್ನೀಸಿಯಮ್ ಸುಣ್ಣಶಿಲೆಗಳುಳ್ಳ (ಡಾಲೋಮೈಟ್) ಗುಹೆಗಳಲ್ಲಿ ಕಾಣಬಹುದು. ಕ್ಯಾಲ್ಸಿಯಮ್ ಕಾರ್ಬೊನೇಟ್ ಜೊತೆಗೆ ಇನ್ನೂ ಇತರ ಕಾರ್ಬೊನೇಟುಗಳೂ ಬೆಣಚು ಗುಂಪಿಗೆ ಸೇರಿದ ಓಪಾಲ್, ಚಾಲ್ಸಿಡನಿ ಕಬ್ಬಿಣದ ಗುಂಪಿಗೆ ಸೇರಿದ ಲಿಮೋನೈಟ್ ಇತ್ಯಾದಿಗಳೂ ಪಾಲ್ಗೊಳ್ಳುತ್ತವೆ. ಡ್ರಿಪ್‌ಸ್ಟೋನ್ ರಚನೆಗೆ ಪೂರಕವಾಗಿರುವ ಸನ್ನಿವೇಶಗಳು ಈ ಕೆಳಗಿನಂತಿವೆ: ಮೊತ್ತಮೊದಲನೆಯದಾಗಿ ಡ್ರಿಪ್‌ಸ್ಟೋನ್ ನಿರ್ಮಾಣಕ್ಕೆ ಅತ್ಯಗತ್ಯವಾದ ಶಿಲೆಗಳು ಗುಹೆಯ ಚಾವಣಿಯಲ್ಲಿ ಇರಬೇಕು. ಎರಡನೆಯದಾಗಿ, ಮಳೆ ನೀರು ಭೂಮಿಯೊಳಕ್ಕೆ ಒಸರುತ್ತಿರಬೇಕು. ಮೂರನೆಯದಾಗಿ, ಕಾರ್ಬನ್ ಡೈ ಆಕ್ಸೈಡ್ ಸಂಯೋಗದಿಂದಿರುವ ಅಂತರ್ಜಲದಲ್ಲಿ ನಿಧಾನವಾಗಿ ತೊಟ್ಟಿಕ್ಕಲು ಸಾಧ್ಯವಾಗುವಂತೆ ಗುಹೆಯಲ್ಲಿ ಭದ್ರವಾದ ಹಾಗೂ ನೇರವಾದ ಮಾರ್ಗಗಳಿರಬೇಕು. ಕೊನೆಯದಾಗಿ, ಹರಿಯುವ ಅಂತರ್ಜಲದಲ್ಲಿ ಸಂಯೋಗವಾದ ಇಂಗಾಲದ ಡೈಆಕ್ಸೈಡ್ ಭಾಗಶಃ ಅಥವಾ ಪೂರ್ತಿಯಾಗಿ ಆವಿಯಾಗುವುದರಿಂದ ನೀರಿಗೆ ಖನಿಜಗಳನ್ನು ವಿಲೀನಗೊಳಿಸುವ ತ್ರಾಣ ಕುಂದುತ್ತದೆ. ಆಗ ಅದು ತನ್ನಲ್ಲಿ ಅಡಗಿಸಿಕೊಂಡಿದ್ದ ಸುಣ್ಣ ಪದಾರ್ಥಗಳನ್ನು ಹೊರಗೆಡಹುತ್ತದೆ. ಈ ಪ್ರಕ್ರಿಯೆ ಸಮರ್ಪಕವಾಗಿ ನೆರವೇರಲು ಗುಹೆಯಲ್ಲಿ ಸರಾಗವಾದ ವಾಯುಸಂಚಾರ ಇರಬೇಕು ಈ ಎಲ್ಲ ಸನ್ನಿವೇಶಗಳೂ ಸರಿಯಾಗಿದ್ದರೆ ಮಾತ್ರ ತೊಂಗಲುಗಳು ಹಾಗೂ ತುಂಗಲುಗಳು ರೂಪುಗೊಳ್ಳಲು ಸಾಧ್ಯ.

ಇದಲ್ಲದೆ, ಸಿಮೆಂಟ್ ಸೇತುವೆಗಳ ಮತ್ತು ಕಮಾನುಗಳ ಕೆಳಗೂ ಕಾಂಕ್ರಿಟ್‌ನಿಂದ ನಿರ್ಮಿಸಿದ ಸುರಂಗಗಳ ಚಾವಣಿಯಿಂದಲೂ ನೆಲದಡಿ ಹಾದಿಗಳ ಚಾವಣಿಗಳಿಂದಲೂ ಅಪೂರ್ಣವಾದ ಸಣ್ಣಮಟ್ಟ ಇಳಿಬಿದ್ದಿರುವ ತೊಂಗಲುಗಳನ್ನು ಕಾಣಬಹುದು. ಆಗಾಗ ಅಲ್ಲಿ ಬೀಸುವ ಗಾಳಿ ಮತ್ತು ವಾಹನಗಳ ಸಂಚಾರದಿಂದ ಅವು ಆಯಾ ದಿಕ್ಕಿಗೇ ಬಾಗುವುದನ್ನೂ ಗಮನಿಸಬಹುದು.

ಕಾಲಕ್ರಮದಲ್ಲಿ ತೊಂಗಲುಗಳು ವಿಚಿತ್ರಾಕಾರಗಳನ್ನು ತಳೆಯುತ್ತವೆ. ಉದಾಹರಣೆಗೆ ಆಲದಮರದ ಬೀಳಲಿನಂತೆ, ದ್ರಾಕ್ಷಿಗೊಂಚಲಿನಂತೆ ಅಥವಾ ಅಂದವಾದ ನೆರಿಗೆಗಳಂತೆಯೂ ಕಾಣಿಸಿಕೊಳ್ಳುವುದುಂಟು. ಇವಲ್ಲದೆ ಕ್ಯಾರೆಟ್ ಮಾದರಿಯ ತೊಂಗಲುಗಳು ತೀರ ಸಾಮಾನ್ಯ. ತೊಂಗಲಿನ ಮೇಲ್ಭಾಗ ಬೀಟ್‌ರೂಟ್ ಅಥವಾ ಟರ್ನಿಪ್ ಗೆಡ್ಡೆಯಂತೆ ಸಹ ಇರಬಹುದು. ಒಮ್ಮೊಮ್ಮೆ ಬಲು ಸಮೀಪದ ತೊಂಗಲುಗಳು ಮತ್ತು ತುಂಗಲುಗಳು ಒಂದನ್ನೊಂದು ನಿಕಟವಾಗಿ ಸಂಪರ್ಕಿಸುವುದರಿಂದ ಅತಿ ತೊಡಕಾದ ರಚನೆಗಳಾಗುವುವು. ಪ್ರತಿ ತೊಂಗಲಿನ ಕೆಳಗೂ ತುಂಗಲು ಇರಲೇಬೇಕೆಂದೇನೂ ಇಲ್ಲ. ಒಮ್ಮೊಮ್ಮೆ ತೊಂಗಲು ಮತ್ತು ತುಂಗಲುಗಳು ಏಕಕಾಲದಲ್ಲಿ ಬೆಳೆಯುತ್ತ ಕ್ರಮೇಣ ಒಂದನ್ನೊಂದು ಸಂಪರ್ಕಿಸುವುದರಿಂದ ಸ್ತಂಭಾಕಾರದ ರಚನೆ ಆಗುವುದುಂಟು. ಒಟ್ಟಿನಲ್ಲಿ ಹೇಳುವುದಾದರೆ, ಇವು ಪ್ರಕೃತಿಯ ಕಲಾಮಂದಿರದಲ್ಲಿ

ಕಂಡುಬರುವ ಅದ್ಭುತ ಆಕೃತಿಗಳಾಗಿದ್ದು ಸಹಸ್ರಾರು ಮಂದಿ ಕಲೋಪಾಸಕರನ್ನೂ ಭೂವಿಜ್ಞಾನಿಗಳನ್ನೂ ಆಕರ್ಷಿಸುತ್ತವೆ.

ಕಾರ್ಲ್ಸ್‌ಬಾಡ್ ಅಂತರಜಲ ಗುಹೆ, ನ್ಯೂ ಮೆಕ್ಸಿಕೊ

ತೊಂಗಲುಗಳು ಮತ್ತು ತುಂಗಲುಗಳನ್ನು ಒಳಗೊಂಡಿರುವ ಕೆಲವು ಮುಖ್ಯವಾದ ಗುಹೆಗಳ ಹೆಸರುಗಳು ಹೀಗಿವೆ: ನ್ಯೂ ಮೆಕ್ಸಿಕೊದಲ್ಲಿನ ಕಾರ್ಲ್ಸ್ ಬಾಡ್ ಗುಹೆಯ ಅತಿ ಸುಂದರವಾದ ರಾಜನ ಸಭಾಮಂದಿರ, ಆಂಧ್ರಪ್ರದೇಶದ ಕೋನಾರಾಮೇಶ್ವರಿ ಎಂಬ ಸ್ಥಳದಲ್ಲಿರುವ ಗುಹೆಗಳು, ಕರ್ನಾಟಕದ ದಾಂಡೇಲಿಯಲ್ಲಿರುವ ಜೊಯಿಡ ತಾಲ್ಲೂಕಿನ ಕವಳೆ ಗುಹೆಗಳು, ಪ್ರಖ್ಯಾತವಾದ ಉಳವಿ ಕ್ಷೇತ್ರದ ಸಮೀಪದಲ್ಲಿರುವ ಆಕಳಗವಿ. (ಎಂ.ಎಸ್.ಪಿ.)

**ತೋಟಗಾರಿಕೆ:** ಮಾನವನ ಮತ್ತು ಸಮಾಜದ ಸುಖ, ಸಂತೋಷ, ಆಹಾರ, ವಸತಿ, ಕಲೆ, ಆರೋಗ್ಯ, ಮನರಂಜನೆ ಮುಂತಾದ ಎಲ್ಲ ರಂಗಗಳಲ್ಲಿ ಸಸ್ಯ ಸಂಪತ್ತಿನ ವೈಜ್ಞಾನಿಕ ರೀತಿಯ ಉಪಯೋಗ, ತೋಟಗಾರಿಕೆ ಮಾನವ ಜನಾಂಗದ ಜೀವನ ಮತ್ತು ಸಂಸ್ಕೃತಿಯ ಜೊತೆಯಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ಅನಾದಿ ಕಾಲದಿಂದಲೂ ಮನುಷ್ಯನಿಂದ ಬೇರ್ಪಡಿಸಲು ಸಾಧ್ಯವಿಲ್ಲದ ಈ ತೋಟಗಾರಿಕೆ ಒಂದು ಕಲೆ. ಆಧುನಿಕ ವಿಜ್ಞಾನವಾಗಿ ಮೈ ತಾಳಿ ತೋಟಗಾರಿಕೆ ವಿಜ್ಞಾನವೆಂದೂ ಪ್ರಖ್ಯಾತಿಯನ್ನು ಪಡೆದಿದೆ. ಎಲ್ಲ ಧರ್ಮಗಳ ಗ್ರಂಥಗಳಲ್ಲಿಯೂ ಇದರ ಉಲ್ಲೇಖವಿದೆ. ನಮ್ಮ ಪುರಾತನ ಪವಿತ್ರ ಗ್ರಂಥಗಳಲ್ಲಿ ತೋಟದ ಪ್ರಸ್ತಾಪವಿದೆ. ತೋಟಕ್ಕೆ ಬಾಗಾಯ್ತು ಎಂಬ ಇನ್ನೊಂದು ಹೆಸರು ಬಳಕೆಯಲ್ಲಿದೆ. ಇದನ್ನು ಇಂಗ್ಲಿಷಿನಲ್ಲಿ ಹಾರ್ಟಿಕಲ್ಚರ್ ಎಂದು ಕರೆಯುತ್ತಾರೆ. ಹಾರ್ಟಿಕಲ್ಚರ್ ಎಂಬ ಪದ ಹಾರ್ಟಸ್ (ಎಂದರೆ ಗಾರ್ಡನ್ – ತೋಟ; ಹಣ್ಣು, ತರಕಾರಿ, ಹೂವು ಮುಂತಾದವನ್ನು ಬೆಳೆಸುವ ಸ್ಥಳ) ಮತ್ತು ಕಲ್ಚರ್ (ಎಂದರೆ ಬೇಸಾಯ ಅಥವಾ ಸಾಗುವಳಿ) ಎಂಬ ಎರಡು ಪದಗಳ ಸಮ್ಮಿಲನ. ವ್ಯವಸಾಯ ಕ್ರಮದಲ್ಲಿ ಬೆಳೆಯುವ ಬೆಳೆಗಳಿಗೆ ಮತ್ತು ತೋಟಗಳಲ್ಲಿ ಬೆಳೆಯುವ ಬೆಳೆಗಳಿಗೆ ಮೂಲಭೂತ ವ್ಯತ್ಯಾಸವುಂಟು. ವ್ಯವಸಾಯದ ಬೆಳೆಗಳನ್ನು ತೆಗೆಯುವ ರೈತ ಪ್ರಕೃತಿಯ ಅಡಿಯಾಳು. ಮಳೆ ಬರಲಿಲ್ಲವೆಂದರೆ ಬೇಸಾಯಗಾರ ಎಲ್ಲ ಹೊಲಗಳಿಗೆ ನೀರು ಹಾಯಿಸಿ ರಾಗಿ ಬೆಳೆಸಲು ಸಾಧ್ಯವಿಲ್ಲ ಅಥವಾ ಮಳೆ ಹೆಚ್ಚಾದರೆ, ಹಿಮ ಬಿಸಿಲು ಗಾಳಿ ಇವು ಹೆಚ್ಚಾದರೆ ಅವನ್ನು ನಿರ್ಲಕ್ಷಿಸಿ ಬೇಸಾಯ ಮಾಡಲು ಸಾಧ್ಯವಿಲ್ಲ. ಆದರೆ ತೋಟಗಾರಿಕೆಯಲ್ಲಿ ರೈತ ಪರಿಸ್ಥಿತಿಯ ಒಡೆಯ. ಮಳೆಗಾಳಿ, ಬಿಸಿಲುಗಳು ತೋಟದ ಬೆಳೆಗಳ ಮೇಲೆ ಉಂಟು ಮಾಡುವ ಪರಿಣಾಮವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು ಲಾಭದಾಯಕವಾಗಿ ಬೇಸಾಯವನ್ನು ಮುಂದುವರಿಸಬಲ್ಲ. ತೋಟಗಾರಿಕೆಯನ್ನು ಉಪಯೋಗಿಸಿಕೊಳ್ಳುವುದು ಪ್ರತಿಯೋರ್ವನ ಕಲೆ, ಕುಶಲಕಲೆ ಮತ್ತು ಅನುಭವದ ಮೇಲೆ ನಿಂತಿದೆ.

ತೋಟಗಾರಿಕೆಯನ್ನು ಅಭ್ಯಾಸದ ದೃಷ್ಟಿಯಿಂದ ಐದು ಭಾಗಗಳಾಗಿ ವಿಂಗಡಿಸಲಾಗಿದೆ: 1. ಹಣ್ಣಿನ ಬೇಸಾಯ, 2. ತರಕಾರಿ ಬೇಸಾಯ, 3. ದ್ರುವ ಬೆಳೆ, 4. ಹೂವಿನ ಬೇಸಾಯ, 5. ಉದ್ಯಾನಕಲೆ. ಹಣ್ಣು ತರಕಾರಿ ಮತ್ತು ಧ್ರುವ ಬೆಳೆ ಬೇಸಾಯಗಳು ಮನುಷ್ಯನ ಆಹಾರ, ಆರೋಗ್ಯ ಮತ್ತು ಗಳಿಕೆಗೆ ಸಂಬಂಧಿಸಿದೆ. ಕೊನೆಯ ಎರಡು ಬಗೆಗಳು ವಿಲಾಸ, ಕಲೆ, ಸಂತೋಷಗಳಿಗೆ ಸಂಬಂಧಿಸಿವೆ. ಹೆಚ್ಚು ಫಲವನ್ನು ಪಡೆಯಲು ಉತ್ತಮ ಗುಣವುಳ್ಳ ಸಸ್ಯಗಳಿಂದ ಕಣ್ಣು ತೆಗೆದು ಇನ್ನೊಂದು ಬೇರು ಸಸ್ಯಕ್ಕೆ ಕಸಿ ಮಾಡಿ ಅದು ಯಶಸ್ವಿಯಾಗುವಂತೆ ಮಾಡುವುದು ಕಲೆ ಮತ್ತು ಕುಶಲತೆ. ಎಲ್ಲ ಜನರು ಈ ರೀತಿ ಹಣ್ಣು ಕಸಿ ಮಾಡುವುದು ಮತ್ತು ಬೇರೆ ಸಸ್ಯಗಳಿಂದ ಪರಾಗಸ್ಪರ್ಶ ಮಾಡುವುದರಲ್ಲಿ ಯಶಸ್ವಿಯಾಗುವುದು ಸಾಧ್ಯವಿಲ್ಲ. ಆದ್ದರಿಂದ ತೋಟಗಾರಿಕೆಯಲ್ಲಿ ಕುಶಲತೆ ಬಹಳ ಮುಖ್ಯವಾದ ಅಂಶ. ತೋಟಗಾರನಾದವ ಕಸಿ ಮಾಡುವ ಕಲೆ, ಕಣ್ಣು ಹಾಕುವ ಕಲೆ. ಪರಾಗಸ್ಪರ್ಶ ಮಾಡುವ ಕಲೆ, ಬೇಸಾಯ ಕಲೆ, ಉದ್ಯಾನ ಕಲೆ ಇತ್ಯಾದಿ ಅನೇಕ ಕಲೆಗಳನ್ನು ಅನುಭವದಿಂದ ಪಡೆದುಕೊಳ್ಳಬಹುದು. ಇದಕ್ಕೆ ಅಭ್ಯಾಸ ಮತ್ತು ಸಾಧನೆ ಬೇಕು.

ತೋಟಗಾರಿಕೆಯ ಪ್ರಾಮುಖ್ಯ : ಭಾರತದಲ್ಲಿ ಬಡತನ, ಅನಾರೋಗ್ಯ, ಜನಸಂಖ್ಯೆಯ ಹೆಚ್ಚಳ, ನಿರುದ್ಯೋಗ ಮುಂತಾದ ಭಯಂಕರ ಸಮಸ್ಯೆಗಳು ರಾಷ್ಟ್ರದ ಬೆಳವಣಿಗೆಗೆ ಮಾರಕವಾಗಿವೆ. ತೋಟಗಾರಿಕೆ ಈ ಸಮಸ್ಯೆಗಳನ್ನು ಬಗೆಹರಿಸಲು ಪರಿಣಾಮಕಾರಿಯಾದ ಆಯುಧ. ತೋಟದ ಉತ್ಪಾದನೆ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಾಧನೆಯಾಗಬಲ್ಲದು. ಭಾರತದ ಬಹುಪಾಲು ಜನ ಸಮತೂಕ ಆಹಾರವಿಲ್ಲದೇ ರೋಗಪೀಡಿತರಾಗಿದ್ದಾರೆ. ತೋಟಗಳಲ್ಲಿ ಬೆಳೆದ ಹಣ್ಣು ತರಕಾರಿಗಳು ಮನುಷ್ಯನ ಬೆಳವಣಿಗೆಗೆ ಅಗತ್ಯವಾದ ಅಂಶಗಳಿಂದ ಕೂಡಿವೆಯಾಗಿ ಅವನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಅನೇಕ ಜನರ ಕಾಯಿಲೆಯನ್ನು ತಡೆಯುವುದು ಸಾಧ್ಯವಾಗುವುದು. ಭಾರತದ ಜನಸಾಂದ್ರತೆ ವಿಪರೀತವಾಗಿದೆ; ಇದರಲ್ಲಿ 50% ಕ್ಕೂ ಹೆಚ್ಚು ಜನ ವ್ಯವಸಾಯವನ್ನು ಮುಖ್ಯ ಕಸಬಾಗಿ ಅವಲಂಬಿಸಿದ್ದಾರೆ. ದುರದೃಷ್ಟವಶಾತ್ ಕಾಲಕ್ಕೆ ಸರಿಯಾಗಿ ಮಳೆ ಬೀಳದೆ ಅವರು ವರ್ಷದ ಬಹುಭಾಗ ಉದ್ಯೋಗರಹಿತರಾಗಿರುವುದುಂಟು. ಇಂಥ ಜನ ತೋಟಗಾರಿಕೆಯಲ್ಲಿ ನಿರತರಾಗುರುವುದರಿಂದ ಜನಸಂಖ್ಯೆಯ ಸದುಪಯೋಗವಾಗುತ್ತದೆ. ಹೆಚ್ಚು ಜನ ತೋಟಗಾರಿಕೆಯನ್ನು ಕಸುಬಾಗಿ ಸ್ವೀಕರಿಸುವುದರಿಂದ ಹಣ್ಣು, ತರಕಾರಿ, ಹೂವು, ಮತ್ತು ಸಂಬಾರ ಪದಾರ್ಥಗಳ ಉತ್ಪಾದನೆ ಇಮ್ಮಡಿಯಾಗುವುದಲ್ಲದೇ ಇವುಗಳ ಮಾರಾಟ, ಶೇಖರಣೆ, ಸಾಗಾಣಿಕೆ ಮುಂತಾದವುಗಳನ್ನು ನಡೆಸಲು ಉದ್ಯೋಗ ಅವಕಾಶ ಸಿಕ್ಕಿ ನಿರುದ್ಯೋಗ ಸಮಸ್ಯೆ ಪರಿಹಾರವಾಗಲು ನೆರವಾಗುತ್ತದೆ.

ತೋಟಗಾರಿಕೆಯ ಸಾಧ್ಯತೆ : ಕರ್ನಾಟಕ ರಾಜ್ಯದಲ್ಲಿ ಹಣ್ಣು, ತರಕಾರಿ ಹೂವು ಮತ್ತು ಸಂಬಾರ ಪದಾರ್ಥಗಳನ್ನು ಬೆಳೆಯಲು ಸಾಧ್ಯವಾಗುವ ಹಿತಕರ ವಾಯುಗುಣವಿದೆ. ಅದ್ದರಿಂದ ಇಲ್ಲಿ ಬೆಳೆದ ಹೂವು ಮತ್ತು ಸಂಬಾರ ಪದಾರ್ಥಗಳು ಜಗತ್‌ಪ್ರಸಿದ್ಧವಾಗಿವೆ. ಕರ್ನಾಟಕದಲ್ಲಿ ಹೆಚ್ಚು ತೋಟಗಳು ಇರುವ ಕಾರಣ ತೋಟಗಾರಿಕೆಗೆ ಪ್ರೋತ್ಸಾಹ ನೀಡಿ ಮಾರ್ಗದರ್ಶನ ಮಾಡುವ ತೋಟಗಾರಿಕೆ ತಜ್ಞರು ಇಲ್ಲಿದ್ದಾರೆ. ಈ ಉದ್ಯಮಕ್ಕೆ ಬೇಕಾದ ಸಾಮಗ್ರಿಗಳನ್ನು ಮತ್ತು ಆರ್ಥಿಕ ಸಹಾಯವನ್ನು ಹೆಚ್ಚು ಹೆಚ್ಚಾಗಿ ಕೊಡುವ ಯೋಜನೆಗಳನ್ನು ಸರ್ಕಾರ ರೂಪಿಸುತ್ತದೆ. ಬೆಳೆದ ಹಣ್ಣು, ತರಕಾರಿ, ಹೂವು ಮತ್ತು ಸಾಂಬಾರ ಪದಾರ್ಥಗಳನ್ನು ಸುಲಭವಾಗಿ ಸಾಗಿಸಿ ಶೇಖರಿಸಿ, ಉತ್ತಮ ಮಾರುಕಟ್ಟೆಗಳಿಗೆ ಮುಟ್ಟಿಸುವ ಸಾಧನಗಳು ಹೆಚ್ಚುತ್ತಿವೆ. ರೈತರು ತಮ್ಮದೇ ಆದ ಸಹಕಾರ ಸಂಘಗಳನ್ನು ರೂಪಿಸಿಕೊಂಡು ಯೋಗ್ಯ ಬೆಲೆಗೆ ಮಾರುವ, ಶೇಖರಿಸುವ ಸಾಲ ಮತ್ತು ಇತರ ಸೌಲಭ್ಯಗಳನ್ನು ಮಾಡಿಕೊಳ್ಳಲು ಅವಕಾಶವಿದೆ. ಬೇಸಾಯಗಾರರು ತಮ್ಮ ಕೆಲಸಗಳನ್ನು ಬೇಗ ಮತ್ತು ಸುಲಭವಾಗಿ ಮಾಡಿಕೊಳ್ಳಲು ಸಾಧನ ಸೌಕರ್ಯಗಳು ಅಧಿಕವಾಗುತಿವೆ. ತೋಟದ ಬೆಳೆಗಳು ತೋಟಗಾರನಿಗೆ ಹೆಚ್ಚು ಲಾಭವನ್ನು ಮತ್ತು ಇಳುವರಿಯನ್ನು ಕೊಡುತ್ತದೆ. ಇಷ್ಟೆಲ್ಲ ಸೌಲಭ್ಯಗಳು ಇರುವುದರಿಂದ ವ್ಯವಸಾಯಕ್ಕಿಂತಲೂ ತೋಟಗಾರಿಕೆಗೆ ಹೆಚ್ಚಿನ ಭವಿಷ್ಯವಿದೆ.

ಮುಂದುವರಿದ ರಾಷ್ಟ್ರಗಳಲ್ಲಿ ತೋಟಗಾರಿಕೆಯ ಪಾತ್ರ : ಆಧುನಿಕ ಯುಗದಲ್ಲಿ ತೋಟಗಾರಿಕೆ ಕ್ರಾಂತಿಯ ಪರ್ವಕಾಲದಲ್ಲಿದೆ. ಅಮೆರಿಕ, ಕೆನಡ, ಇಂಗ್ಲೆಂಡ್, ಹಾಲೆಂಡ್, ಫ್ರಾನ್ಸ್, ಜಪಾನ್ ಮುಂತಾದ ರಾಷ್ಟ್ರಗಳಲ್ಲಿ ತೋಟಗಾರಿಕೆಯಿಂದ ಅಗಾಧವಾದ ಬದಲಾವಣೆಗಳಾಗಿವೆ. ಇದರಿಂದಾಗಿ ಅಲ್ಲಿಯ ಜನತೆಗೆ ಹೆಚ್ಚು ಮತ್ತು ಉತ್ತಮ ಸೌಲಭ್ಯಗಳು ದೊರಕಿವೆ. ಅಲ್ಲಿಯ ಜನರ ಆರ್ಥಿಕ ಪ್ರಗತಿಯನ್ನು ತೋಟಗಾರಿಕೆ ಉತ್ತಮಗೊಳಿಸುತ್ತಿದೆ. ಆಯಾ ರಾಷ್ಟ್ರಗಳ ಆದಾಯವನ್ನೂ ಜನರ ಆರೋಗ್ಯವನ್ನೂ ಉತ್ತಮಗೊಳಿಸಲು ಪರಿಣಾಮಕಾರಿಯಾಗಿದೆ. ಒಬ್ಬ ಮನುಷ್ಯ ನೂರಾರು ಅಥವಾ ಸಾವಿರಾರು ಎಕರೆ ಭೂಮಿಯನ್ನು ಬೇಸಾಯ ಮಾಡಲು ಸಾಧ್ಯವಾಗುವ ಯಂತ್ರಗಳನ್ನು ಉಪಯೋಗಿಸಿ ಹೆಚ್ಚಿನ ಕಾಲ, ಶ್ರಮ ಮತ್ತು ಹಣವನ್ನು ಉಳಿಸಿ ಅಧಿಕ ಲಾಭವನ್ನು ಪಡೆಯಲು ಸವಲತ್ತು ಲಭ್ಯವಾಗಿದೆ. ಬೇಗ ಮತ್ತು ಹೆಚ್ಚು ಇಳುವರಿ ಕೊಡುವ ಉತ್ತಮ ತಳಿಗಳನ್ನು ಉಪಯೋಗಿಸಿ ಹೆಚ್ಚು ಇಳುವರಿ ಪಡೆಯಬಹುದಾಗಿದೆ. ಕೀಟ ಮತ್ತು ರೋಗಗಳನ್ನು ಹತೋಟಿಯಲ್ಲಿಡಲು ತಜ್ಞರ ಸಲಹೆ ಮತ್ತು ಸಹಾಯವನ್ನು ಪಡೆಯುತ್ತಾರಲ್ಲದೇ ಇವನ್ನು ನಿವಾರಿಸಲು ಹೆಚ್ಚು ಪರಿಣಾಮಕಾರಿಯಾದ ಕೀಟ ಮತ್ತು ರೋಗನಾಶಕಗಳನ್ನು ಬಳಸುವರು. ಹಣಕಾಸು ಬೇಕಾದ ಬೇಸಾಯಗಾರರು ಮುಂಗಡವಾಗಿ ಸಾಲ ಪಡೆಯುವ ಯೋಜನೆಗಳು ಉಂಟು. ತೋಟಗಾರಿಕೆಯ ಕೆಲಸಗಳನ್ನು ಪ್ರತ್ಯೇಕ ಸಂಘಸಂಸ್ಥೆಗಳಿಂದ ಗುತ್ತಿಗೆಗೆ ಮಾಡಿಸಿಕೊಳ್ಳುವ ಸಾಧ್ಯತೆಗಳು ಇವೆ. ಮಾರುಕಟ್ಟೆಗಳಲ್ಲಿ ವಿಶೇಷವಾಗಿ ದಾಸ್ತಾನು ಬಂದು ಗಿರಾಕಿಗಳಿಲ್ಲದೇ ತುಂಬಿದಾಗ ಶೈತ್ಯಾಗಾರಗಳಲ್ಲಿ ಶೇಖರಿಸಿಡಬಹುದಾಗಿದ್ದು ಅಪಾರ ನಷ್ಟಗಳಿಂದ ಪಾರಾಗಲು ಹೆಚ್ಚಿನ ಸೌಲಭ್ಯಗಳಿವೆ. ಬಿತ್ತನೆ ಬೀಜ, ಗೊಬ್ಬರ, ಬಾಡಿಗೆ ಯಂತ್ರಗಳು ಮುಂತಾದವನ್ನು ಸಾಲವಾಗಿ ತೆಗೆದುಕೊಳ್ಳುವ ಅವಕಾಶಗಳು ಸುಲಭವಾಗಿವೆ. ಅಲ್ಲದೇ ಸಾಲ ಕಡಿಮೆ ದರದ ಬಡ್ಡಿಯಲ್ಲಿ ದೊರೆಯುತ್ತದೆ.

ಎರಡನೆಯ ಮಹಾಯುದ್ಧದ ಅನಂತರ ಪ್ರಪಂಚದ ಎಲ್ಲಾ ಮೂಲೆಗಳಲ್ಲಿ ಆಹಾರದ ಅಭಾವ ಹೆಚ್ಚಾಗಿ ಕೋಲಾಹಲ ಉಂಟಾಯಿತು. ಅನೇಕ ಕಡೆಗಳಲ್ಲಿ ಧಾನ್ಯಗಳನ್ನು ಮುಖ್ಯಾಹಾರವಾಗಿ ಬಳಸುತ್ತಿದ್ದರೂ, ಅಭಾವ ತಲೆದೋರಿದ ಅನಂತರ ಇದ್ದನು ಪರಿಹಾರ ಮಾಡಲು ವಿಶೇಷ ಪ್ರಯತ್ನಗಳು ನಡೆದವು. ಇಂಥ ವಿಶೇಷ ಪ್ರಯತ್ನಗಳಲ್ಲಿ ತೋಟಗಾರಿಕೆ ಯಶಸ್ವಿಯಾಗಿ ಪರಿಣಾಮಕಾರಿಯಾಗಿದೆ. (ಎಂ.ಎಚ್.ಎಂ.)

**ತೋಟಗಾರಿಕೆ ಬೇಸಾಯ :** ತೋಟಗಾರಿಕೆ ಬೇಸಾಯ ವಾಣಿಜ್ಯ ದೃಷ್ಟಿಯನ್ನು ಹೊಂದಿದ್ದು ಭೂ ಹಿಡುವಳಿಗಳಲ್ಲಿ, ಉಪವನಗಳ ಮಾದರಿಯಲ್ಲಿ, ಹಣ್ಣುಗಳು, ತರಕಾರಿ, ಹೂವು ಬೆಳೆಗಳ ಉತ್ಪಾದನೆಯನ್ನು ಒಳಗೊಂಡಿದೆ. ಇದು ಸಾಂದ್ರ ಬೇಸಾಯದ ಮಾದರಿಯಾಗಿದ್ದು ನಗರ ಪ್ರದೇಶಗಳು ಅಥವಾ ಕೈಗಾರಿಕಾ ಪ್ರದೇಶಗಳ ಹತ್ತಿರದ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಆಗ್ನೇಯ ಭಾಗದಲ್ಲಿ ಇದನ್ನು ಗಾಲಿಬಂಡಿಯ ಬೇಸಾಯ ಟ್ರಕ್ ಫಾರ್ಮಿಂಗ್ ಎಂದು ಕರೆಯುವರು. ಕಾರಣ ಇಲ್ಲಿ ಉತ್ಪಾದಿಸಲ್ಪಡುವ ಹಣ್ಣು ಮತ್ತು ತರಕಾರಿಯ ಪ್ರದೇಶ ನಗರ ಪ್ರದೇಶಗಳಿಂದ ದೂರವಿದ್ದು ಅದನ್ನು ವ್ಯಾಪಾರದ ದೃಷ್ಟಿಯಿಂದ ಪ್ರತಿ ನಿತ್ಯ ಗಾಲಿಯ ಬಂಡಿಯ ಮೇಲೆ ನಗರದ ಮಾರುಕಟ್ಟೆಗೆ ಸಾಗಿಸಲಾಗುತ್ತಿದೆ.

ನೆಡು ತೋಟಗಾರಿಕೆ ಬೇಸಾಯ ಪ್ರಪಂಚದಲ್ಲಿ ಹೆಚ್ಚಾಗಿ ನಗರೀಕೃತ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಭಿವೃದ್ಧಿ ಹೊಂದಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ಯುರೋಪಿನ ವಾಯವ್ಯ ಕೈಗಾರಿಕಾ ಪ್ರದೇಶ, ಡೆನ್‌ಮಾರ್ಕ್, ಬೆಲ್ಜಿಯಂ, ಜರ್ಮನಿ, ನೆದರ್ಲೆಂಡ್ಸ್ ಅಮೆರಿಕದ ಸಂಯುಕ್ತ ಸಂಸ್ಥಾನದ ವಾಯವ್ಯಭಾಗಗಳಾಗಿವೆ. ತೋಟಗಾರಿಕೆ ಬೇಸಾಯ ಚಿಕ್ಕ ಹಿಡುವಳಿಗಳನ್ನು ಹೊಂದಿದ್ದರೂ ಸಹ ಹೆಚ್ಚು ಬೇಡಿಕೆಯನ್ನು ಹೊಂದಿರುವ ನಗರ ಪ್ರದೇಶಗಳ ಹತ್ತಿರ ಹೆಚ್ಚಾಗಿರುತ್ತದೆ. ಇಲ್ಲಿನ ರೈತರು ಹಣ್ಣುಗಳು ಅಥವಾ ತರಕಾರಿಗಳನ್ನು ಬೆಳೆಯುವುದರಲ್ಲಿ ವಿಶೇಷ ಜ್ಞಾನವನ್ನು ಪಡೆದಿರುತ್ತಾರೆ. ಮಣ್ಣಿನ ಸಾರವನ್ನು ಕಾಪಾಡಲು ಅತೀ ಹೆಚ್ಚು ಸಾವಯವ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸುವುದರ ಜೊತೆಗೆ ಕೀಟ ಮತ್ತು ಶಿಲೀಂದ್ರ ನಾಶಕಗಳನ್ನು ಹೆಚ್ಚು ಹೆಚ್ಚು ಬಳಸುತ್ತಾರೆ. ಈ ವ್ಯವಸಾಯ ಯಂತ್ರಗಳಿಗಿಂತ ಮಾನವನ ದೈಹಿಕ ಶಕ್ತಿಯನ್ನು ಹೆಚ್ಚಾಗಿ ಒಳಗೊಂಡಿರುತ್ತದೆ. ಇಂದು ಈ ಬಗೆಯ ಬೇಸಾಯವನ್ನು ಮುಂದುವರೆದ ಪ್ರದೇಶಗಳಲ್ಲಿ ಹಸುರು ಮನೆ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ. (ಡಿ.ಆರ್.)

**ತ್ಯಾಜ್ಯ ವಸ್ತುಗಳ ಪುನರ್ ಬಳಕೆ:** ಆಧುನಿಕ ತ್ಯಾಜ್ಯ ವಸ್ತುಗಳ ನಿರ್ವಹಣೆಯಲ್ಲಿ ಪುನರ್ ಬಳಕೆಯು ಕೀಲಿಕೈ ಇದ್ದಂತೆ. ಯಾವುದೇ ತರಹದ ಬಳಸಿದ ವಸ್ತುವನ್ನು ಪುನಃ ಬಳಸದಿದ್ದರೆ ಅದು ತ್ಯಾಜ್ಯ ವಸ್ತುವಾಗಿ ಮಾರ್ಪಾಡಾಗುತ್ತದೆ. ಆದರೆ ತ್ಯಾಜ್ಯ ವಸ್ತುವೆಂದು ಎಸೆದಿರುವ ಅನೇಕ ಪ್ರಕಾರದ ವಸ್ತುಗಳಾದ ಕಾಗದ, ಗ್ಲಾಸುಗಳು, ಬಟ್ಟೆ ಮತ್ತು ಲೋಹ ಮುಂತಾದವನ್ನು ಪುನ: ಬಳಕೆ ಮಾಡಬಹುದು. ಉದಾಹರಣೆಗೆ: ಕಾರ್ಖಾನೆಗಳಲ್ಲಿ ಹಳೆ ಕಾಗದಗಳನ್ನು ಬಳಸಿ ಅದನ್ನು ಉತ್ತಮವಾದ ಕಾಗದವಾಗಿ ತಯಾರಿಸುತ್ತಾರೆ. ಲೋಹಗಳು ಸಣ್ಣ ಸಣ್ಣ ಚೂರುಗಳಾಗಿ ಭೂಮಿಯಲ್ಲಿ ಮಿಶ್ರಣವಾಗಿರುತ್ತವೆ. ಈ ಚೂರುಗಳನ್ನು ತೆಗೆದು ಕಾರ್ಖಾನೆಗಳಲ್ಲಿ ಯಾಂತ್ರಿಕ ಸಹಾಯದಿಂದ ಕರಗಿಸಿ ಶುದ್ಧ ಲೋಹವಾಗಿಸಿ ಅದನ್ನು ಪುನರ್‌ಬಳಕೆ ಮಾಡಲಾಗುತ್ತದೆ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಕೆಲವು ತ್ಯಾಜ್ಯ ವಸ್ತುಗಳನ್ನು ಉರಿಸಿ ಶಕ್ತಿ ಪಡೆಯಬಹುದು. ಇದಲ್ಲದೆ ಜೈವಿಕ ವಿಘಟನೆ ಹೊಂದುವ ಕಸವನ್ನು ಕಾಂಪೋಷ್ಟೀಕರಣ ವಿಧಾನದಿಂದ ಗೊಬ್ಬರವನ್ನಾಗಿ ತಯಾರಿಸಬಹುದು ಅಥವಾ ಎರೆಹುಳು ಕೃಷಿಯಿಂದ ಎರೆಹುಳು ಗೊಬ್ಬರವನ್ನು ತಯಾರಿಸಬಹುದು. ಇದಲ್ಲದೆ ಕೆಲವು ಬಗೆಯ ತ್ಯಾಜ್ಯ ವಸ್ತುಗಳಿಂದ ಜೈವಿಕ ಅನಿಲವನ್ನು ಉತ್ಪಾದಿಸಬಹುದು.

ಹಳ್ಳಿಗಳು ಮತ್ತು ನಗರಗಳಲ್ಲಿ ಬಳಸುವ ಗೃಹ ಬಳಕೆಯ ವಸ್ತುಗಳಾದ ಹಣ್ಣು, ತರಕಾರಿಗಳ ಸಿಪ್ಪೆ, ಕಾಗದದ ಚೂರುಗಳು, ಗಾಜು, ಪ್ಲಾಸ್ಟಿಕ್ ಕವರ್‌ಗಳು, ಔಷಧಿ ಬಾಟಲುಗಳು, ಎಸೆಯಲ್ಪಟ್ಟ ಮಾತ್ರೆಗಳು ಮುಂತಾದವು ಕೈಗಾರಿಕೆ, ನಗರ ಸಭೆ, ಆಸ್ಪತ್ರೆಗಳು, ಶಾಲಾಕಾಲೇಜು, ಮಾರುಕಟ್ಟೆ ಮುಂತಾದ ಕೇಂದ್ರಗಳಿಂದಲೂ ತ್ಯಾಜ್ಯ ವಸ್ತುಗಳು ಶೇಖರಣೆಗೊಳ್ಳುತ್ತವೆ. ಈ ತ್ಯಾಜ್ಯ ವಸ್ತುಗಳನ್ನು ಪುನರ್ ಬಳಕೆಮಾಡಿ ಉಪಯೋಗಿಸುವುದರಿಂದ ಪರಿಸರ ಮಾಲಿನ್ಯವನ್ನು ತಡೆಗಟ್ಟುವುದಲ್ಲದೆ, ಸಂಪನ್ಮೂಲಗಳ ರಕ್ಷಣೆ, ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು, ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವುದಲ್ಲದೆ ಇದರಿಂದ ಜನರಿಗೆ ತಗುಲುವ ಕಾಯಿಲೆಗಳನ್ನು ತಡೆಗಟ್ಟಿ ಆರೋಗ್ಯವನ್ನು ಸುಧಾರಿಸಬಹುದು. ಹೀಗೆ ತ್ಯಾಜ್ಯ ವಸ್ತುಗಳನ್ನು ಪುನರ್ ಬಳಕೆ ಮಾಡಲು ಕ್ಯಾಲಿಫೋರ್ನಿಯ, ಹವಾಯ್, ಓರೆಗಾನ್, ಮಿಶಿಗನ್ ಮತ್ತು ನ್ಯೂಯಾರ್ಕ್ ಪ್ರದೇಶಗಳು ಪ್ರೋತ್ಸಾಹಿಸಿವೆ. (ಜಿ.ಡಿ.)

**ತ್ರಿಕೋನ ವಿಧಾನ (ವಿಸ್ತರಣೆ ಮತ್ತು ನ್ಯೂನೀಕರಣ):** ಕೆಲವು ಬಗೆಯ ಸ್ವರೂಪ ಹಾಗೂ ಭೂಪಟಗಳ ವಿಸ್ತರಣೆ ಮತ್ತು ಸಂಕೋಚನದಲ್ಲಿ ತ್ರಿಕೋನ ವಿಧಾನವನ್ನು ಅನುಸರಿಸಲಾಗುವುದು. ನೀಳವಾಗಿರುವ ಸ್ವರೂಪಗಳು ಅಂದರೆ ನದಿ, ಕಾಲುವೆ, ರಸ್ತೆ, ಗಡಿ ರೇಖೆ ಮುಂತಾದವುಗಳನ್ನು ಪ್ರತಿನಿಧಿಸುವ ನಕ್ಷೆಗಳನ್ನು ವಿಸ್ತರಿಸಲು ಹಾಗೂ ನ್ಯೂನೀಕರಿಸಲು ಈ ವಿಧಾನ ಅತ್ಯಂತ ಸೂಕ್ತ. ಆದರೆ ಈ ವಿಧಾನ ಚೌರಸ ವಿಧಾನದಷ್ಟು ಪ್ರಚಲಿತವಾಗಿಲ್ಲ.

ಉದಾ: ಒಂದು ನದಿಯ ಪಾತ್ರವನ್ನು ನಿರೂಪಿಸುವ ಭೂಪಟವನ್ನು 1:25,000 ಅಳತೆಯಲ್ಲಿ ರಚಿಸಲಾಗಿದೆ. ಇದನ್ನು 1:50,000 ಅಳತೆಯಲ್ಲಿ ಎಳೆದು ನ್ಯೂನೀಕರಿಸ ಬೇಕಾದಾಗ ಈ ಕೆಳಗಿನ ವಿಧಾನವನ್ನು ಅನುಸರಿಸಬೇಕು:

ವಿಧಾನ: ಕೊಟ್ಟಿರುವ ಭೂಪಟದ ಮೂಲ ಅಳತೆ 1:25,000 ಹಾಗೂ ಎಳೆಯಬೇಕಾದ ಅಳತೆ 1:50,000 ಅಂದರೆ ನ್ಯೂನೀಕರಣದ ಪ್ರಮಾಣ =

$$\frac{\text{ಹೊಸ ಅಳತೆ}}{\text{ಮೂಲ ಅಳತೆ}} = \frac{1}{50,000} \div \frac{1}{25,000}$$

$$= \frac{1}{50,000} \times \frac{25,000}{1} = \frac{1}{2} \text{ ಅಥವಾ } 0.5$$

ಅಂದರೆ ಮೂಲ ನಕ್ಷೆಯನ್ನು ಅರ್ಧದಷ್ಟು ನ್ಯೂನೀಕರಿಸಬೇಕಾಗಿದೆ.

ವಿಧಾನ: ಚಿತ್ರದಲ್ಲಿ ತೋರಿಸಿರುವಂತೆ ಭೂಪಟದ ರೇಖೆಯ ಚಿತ್ರದ ಎರಡೂ ಅಂಚುಗಳನ್ನು ಸಂಪರ್ಕಿಸುವಂತೆ AB ರೇಖೆಯನ್ನು ಎಳೆಯಿರಿ. ನಂತರ ಈ ಎರಡೂ ಅಂಚುಗಳ ಮೂಲಕ ಹಾದು ಹೋಗುವಂತೆ ಒಂದು ತ್ರಿಕೋನವನ್ನು ಎಳೆಯಿರಿ ಈ ಎರಡೂ ಬಾಹುಗಳು O ಬಿಂದುವಿನಲ್ಲಿ ಸಂಧಿಸುತ್ತವೆ. ನಂತರ O ಬಿಂದುವಿನಿಂದ ನದಿ ಚಿತ್ರ/ಭೂಪಟದ ಅಂಕು ಡೊಂಕುಗಳ ಮೂಲಕ ಹಾದು ಹೋಗುವಂತೆ ರೇಖೆಗಳನ್ನು ಎಳೆಯಿರಿ. ಈ ಭೂಪಟವನ್ನು ಅರ್ಧದಷ್ಟು ನ್ಯೂನೀಕರಿಸಬೇಕಾಗಿದೆ. ಆದುದರಿಂದ OA ಮತ್ತು OB ಬಾಹುಗಳನ್ನು ಅನುಕೂಲಕರ ಅಳತೆಯಿಂದ ವಿಭಾಗಿಸಿ, ಈ ಉದಾಹರಣೆಯಲ್ಲಿ ಈ ಬಾಹುಗಳನ್ನು OA ಮತ್ತು OB ಕ್ರಮವಾಗಿ 8 ಸೆಂಮೀ ಉದ್ದವಾಗಿದ್ದು 8 ವಿಭಾಗಗಳಾಗಿ ವಿಂಗಡಿಸಲಾಗಿದೆ. ನಂತರ O ಯಿಂದ 4 ಸೆಂಮೀ ದೂರದಲ್ಲಿ A ಮತ್ತು B ಬಾಹುಗಳು ಮೇಲೆ CD ಬಿಂದುಗಳನ್ನು ಗುರುತಿಸಿ ಅವುಗಳನ್ನು ಸಂಧಿಸುವಂತೆ ಸರಳರೇಖೆಯನ್ನು ಎಳೆಯಲಾಗಿದೆ. ಇದು AB ರೇಖೆಯ ಅರ್ಧದಷ್ಟಿದೆ. ಈಗ AB ರೇಖೆಯ ಮೇಲಿರುವ ನದಿಯ ನಕ್ಷೆಯ ಚಿತ್ರದ ವಿವರಗಳನ್ನು CD ರೇಖೆಯ ಎರಡೂ ಕಡೆ ವರ್ಗಾಯಿಸಿ.




ಇದೇ ವಿಧಾನದಿಂದ ಮೂಲ ನಕ್ಷೆಯನ್ನು ವಿಸ್ತರಿಸಲುಬಹುದಾಗಿದೆ. ಚಿತ್ರದಲ್ಲಿ ತೋರಿಸಿರುವಂತೆ AB ರೇಖೆಯು ಮೇಲಿನ ಚಿತ್ರವನ್ನು EF ರೇಖೆಯ ಮೇಲೆ ಎರಡರಷ್ಟು ವಿಸ್ತರಿಸಿದೆ. ಅಂದರೆ ವಿಸ್ತರಿಸಿರುವ ಭೂಪಟ/ಚಿತ್ರದ ಪ್ರಾತಿನಿಧಿಕ ಭಿನ್ನಾಂಶ 1:12,500. ಅಂದರೆ ವಿಸ್ತರಣೆ ಪ್ರಮಾಣ–

$$\frac{\text{ಹೊಸ ಅಳತೆ}}{\text{ಮೂಲ ಅಳತೆ}} = \frac{1}{12,500} \times \frac{25,000}{1} = 2 \text{ ರಷ್ಟಾಗಿದೆ.}$$

(ಆರ್.ಎನ್.)

**ತ್ರಿಕೋನಮಿತಿ ಕೇಂದ್ರಗಳು (ಟ್ರಿಗನಾಮೆಟ್ರಿಕ್ ಸ್ಟೇಷನ್ಸ್):** ಒಂದು ವಿಸ್ತಾರವಾದ ಪ್ರದೇಶವನ್ನು ಸರ್ವೇಕ್ಷಣೆ ಮಾಡುವಾಗ ಸಾಮಾನ್ಯವಾಗಿ ಆ ಪ್ರದೇಶವನ್ನು ಹಲವು ತ್ರಿಕೋನಗಳನ್ನಾಗಿ ವಿಂಗಡಿಸುವರು. ಪ್ರತಿಯೊಂದು ತ್ರಿಕೋನದ ಹೆಚ್ಚು ಎತ್ತರವಾಗಿರುವ ಭಾಗವನ್ನು ಕೇಂದ್ರವಾಗಿ ಪರಿಗಣಿಸಿ ಸರ್ವೇಕ್ಷಣೆಯನ್ನು ಮಾಡುವರು. ಭೂಪಟದ ಮೇಲೆ ಈ ತ್ರಿಕೋನ ಮಿತಿ ಕೇಂದ್ರಗಳನ್ನು ತ್ರಿಕೋನ ಚಿಹ್ನೆಯನ್ನು ಬರೆದು ಅದರ ಪಕ್ಕದಲ್ಲಿ ಅದು ಸಮುದ್ರಮಟ್ಟದಿಂದ ಹೊಂದಿರುವ ಎತ್ತರವನ್ನು ಅಡಿಗಳಲ್ಲಿ ಅಥವಾ ಮೀ ಗಳಲ್ಲಿ ಸೂಚಿಸುವರು. ಉದಾ: Δ500 ಮೀ ಎಂಬುದು ಆ ತ್ರಿಕೋನ ಮಿತಿಕೇಂದ್ರದ ಎತ್ತರ 500 ಮೀ ಎಂದಾಗಿರುತ್ತದೆ. ಪರ್ವತ ಪ್ರದೇಶಗಳಲ್ಲಿ ತ್ರಿಕೋನಗಳನ್ನು ಬಳಸಿ ಶಿಖರಗಳ ಎತ್ತರವನ್ನು ಸೂಚಿಸಲಾಗುವುದು. ಉದಾ: ಮೌಂಟ್ ಎವರೆಸ್ಟ್ Δ8,848 ಮೀ ಇದು ಮೌಂಟ್ ಎವರೆಸ್ಟ್‌ನ ಸ್ಥಾನ ಹಾಗೂ ಅದರ ಎತ್ತರ 8,848 ಮೀ ಎಂದು ಸೂಚಿಸುವುದು. (ಆರ್.ಎನ್.)

**ತ್ರಿಚೂರ್:** ಕೇರಳ ರಾಜ್ಯದ ಒಂದು ಜಿಲ್ಲೆ, ಒಂದು ಪಟ್ಟಣ; ತ್ರಿಚೂರ್ ಪಟ್ಟಣ ಕಡಲ ತೀರದಿಂದ 19 ಕಿಮೀ ದೂರದಲ್ಲಿ, ಒಳನಾಡಿನಲ್ಲಿ ಕೊಚ್ಚಿಯ ಉತ್ತರಕ್ಕೆ 73 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,10,000. ಇದು ಭಾರತದ ಪಶ್ಚಿಮ ಕರಾವಳಿಯ ಅತ್ಯಂತ ಪ್ರಾಚೀನ ಪಟ್ಟಣವೆಂದು ಹೇಳಲಾಗಿದೆ. ಒಂದು ಸಣ್ಣ ಬೆಟ್ಟದ ಸುತ್ತ ಈ ಪಟ್ಟಣ ಬೆಳೆದಿದೆ. ಬೆಟ್ಟದ ಮೇಲೆ ವಡಕ್ಕುನಾಥ ದೇವಾಲಯವಿದೆ. ತ್ರಿಚೂರಿನಲ್ಲಿ ಹಿಂದಿನ ರಾಜರ ಅರಮನೆ, ಕೋಟೆ ಮತ್ತು ಚರ್ಚುಗಳು ಇವೆ. ಇದು ಒಂದು ವ್ಯಾಪಾರ ಕೇಂದ್ರ ಮತ್ತು ರೈಲ್ವೆ ನಿಲ್ದಾಣ. ಇಲ್ಲಿ ಹತ್ತಿ ಗಿರಣಿಗಳು, ಹೆಂಚಿನ ಕಾರ್ಖಾನೆಗಳು, ಮರ ಕೊಯ್ಯುವ ಯಂತ್ರಗಳು, ಎಣ್ಣೆ ತಯಾರುಮಾಡುವ ಕಾರ್ಖಾನೆಗಳು ಇವೆ. ಹೆಂಚಿನ ಕಾರ್ಖಾನೆ ಇರುವುದು ತ್ರಿಚೂರಿನ ಹೊರವಲಯದಲ್ಲಿರುವ ಪುದುಕಾಡಿನಲ್ಲಿ. ತ್ರಿಚೂರಿನಲ್ಲಿ ಕಾಲೇಜುಗಳೂ ವಸ್ತುಸಂಗ್ರಹಾಲಯವೂ ಪ್ರಾಣಿಸಂಗ್ರಹಾಲಯವೂ ಇವೆ. ಕೇರಳದ ಇತರ ಭಾಗಗಳೊಂದಿಗೆ ತ್ರಿಚೂರಿಗೆ ರಸ್ತೆ ಹಾಗೂ ರೈಲ್ವೆ ಸಂಪರ್ಕವಿದೆ.

ತ್ರಿಚೂರ್ ಜಿಲ್ಲೆಯ ವಿಸ್ತೀರ್ಣ 3,032 ಚ.ಕಿಮೀ; ಜನಸಂಖ್ಯೆ 38,16,000. ಇದು ಹಿಂದಿನ ಕೊಚ್ಚಿ ಸಂಸ್ಥಾನದ ಭಾಗವಾಗಿತ್ತು. ಜಿಲ್ಲೆಯ ಆಗ್ನೇಯ ಭಾಗದಲ್ಲಿ ಪಶ್ಚಿಮ ಘಟ್ಟಗಳು ಹಬ್ಬಿವೆ. ಮಿಕ್ಕಭಾಗ ಕರಾವಳಿ ಮೈದಾನ. ಕೃಷಿ ಇಲ್ಲಿಯ ಮುಖ್ಯ ಕಸಬು, ಬತ್ತ, ತೆಂಗು ಪ್ರಧಾನ ಬೆಳೆಗಳು. (ಎಸ್.ಎನ್.ಎ.ಆರ್.)

**ತ್ರಿಪುರ:** ಭಾರತ ಒಕ್ಕೂಟದ ಒಂದು ರಾಜ್ಯ; ಈಶಾನ್ಯಭಾರತದಲ್ಲಿ ಉ.ಅ. $22^0 56' - 24^0 32'$ ಮತ್ತು ಪೂ.ರೇ. $91^0 10' - 92^0 22'$ ನಡುವೆ ಇದೆ. ಪೂರ್ವದಲ್ಲಿ ಮೀಜೋರಾಮ್, ಈಶಾನ್ಯದಲ್ಲಿ ಅಸ್ಸಾಂ, ಉತ್ತರ ಪಶ್ಚಿಮ ದಕ್ಷಿಣಗಳಲ್ಲಿ ಬಾಂಗ್ಲಾದೇಶ ಇವೆ. ವಿಸ್ತೀರ್ಣ 10,486 ಚ.ಕಿಮೀ. ಜನಸಂಖ್ಯೆ 31,99,203. ರಾಜಧಾನಿ ಅಗರ್ತಲ. ಜನಸಂಖ್ಯೆ 1,89,327.

ರಾಜ್ಯದಲ್ಲಿ 4 ಜಿಲ್ಲೆಗಳೂ 44 ತಹಸೀಲುಗಳೂ 6 ಪಟ್ಟಣಗಳೂ 4,727 ಗ್ರಾಮಗಳೂ ಇವೆ. ಉತ್ತರ ತ್ರಿಪುರ ಜಿಲ್ಲೆಯ ವಿಸ್ತೀರ್ಣ 3,541 ಚ.ಕಿಮೀ, ಜನಸಂಖ್ಯೆ 4,05,009. ಪಶ್ಚಿಮ ತ್ರಿಪುರದ ವಿಸ್ತೀರ್ಣ 3,359 ಚ.ಕಿಮೀ, ಜನಸಂಖ್ಯೆ 7,51,605. ದಕ್ಷಿಣ ತ್ರಿಪುರ ಜಿಲ್ಲೆ 3,577 ಚ.ಕಿಮೀ ವಿಸ್ತಾರವಾಗಿದೆ. ಇದರ ಜನಸಂಖ್ಯೆ 3,99,728.

ಪ್ರಾಕೃತಿಕ ಲಕ್ಷಣ – ನದಿಗಳು : ತ್ರಿಪುರವನ್ನು ಭೌಗೋಳಿಕವಾಗಿ ಉತ್ತರದ ನಾಲ್ಕು ಕಣಿವೆಗಳು ಹಾಗೂ ದಕ್ಷಿಣದ ಅಗರ್ತಲ ಮೈದಾನ ಎಂದು ವಿಂಗಡಿಸಬಹುದು. ಉತ್ತರದ ಕಣಿವೆಗಳು ಅನುಕ್ರಮವಾಗಿ ಧರ್ಮನಗರ್, ಕೈಲಾಷ್‌ಹರ್, ಕಮಲ್ ಪುರ್ ಮತ್ತು ಖೋವಾಯ್. ಅತ್ಯಂತ ಪೂರ್ವಕ್ಕಿರುವ ಧರ್ಮನಗರ್ ಕಣಿವೆಯ ಪೂರ್ವದ ಅಂಚಿನಲ್ಲಿರುವ ಜಮರೈ ತಲಾಂಗ್ ಗಿರಿಶ್ರೇಣಿ ಸಮುದ್ರಮಟ್ಟಕ್ಕೆ 600–900 ಮೀ ಎತ್ತರವಾಗಿದೆ. ಪಶ್ಚಿಮಕ್ಕಿರುವ ಸಖೋನ್ ತಲಾಂಗ್‌ನ ಎತ್ತರ 300–750 ಮೀ. ಈ ಕಣಿವೆಯ ದಕ್ಷಿಣದಲ್ಲಿ ದಕ್ಷಿಣೋತ್ತರವಾಗಿ ದೇವ್ ನದಿಯೂ ಉತ್ತರದಲ್ಲಿ ಜೂರಿ ನದಿಯೂ ಇವೆ. ಈ ಕಣಿವೆ ಉತ್ತರಕ್ಕೆ ಹೋದಂತೆ ವಿಸ್ತಾರವಾಗಿದೆ. ಇದು ಬೇಸಾಯ ಪ್ರಧಾನ ಪ್ರದೇಶ. ಇಲ್ಲಿ ಜನಸಾಂದ್ರತೆಯೂ ಹೆಚ್ಚು. ಈ ಕಣಿವೆಯ ಉತ್ತರದಲ್ಲಿ ಜೂರಿ ನದಿಯ ದಡದಲ್ಲಿ ಧರ್ಮನಗರ್ ಪಟ್ಟಣವಿದೆ. ಕೈಲಾಷ್‌ಹರ್ ಕಣಿವೆ ಧರ್ಮನಗರ್ ಕಣಿವೆಯ ಪಶ್ಚಿಮಕ್ಕಿದೆ. ಧರ್ಮನಗರ್ ಕಣಿವೆಯಂತೆ ಈ ಕಣಿವೆಯೂ ಇಡೀ ರಾಜ್ಯದ ಉದ್ದಕ್ಕೂ ಹಬ್ಬಿದೆ. ಇದರ ಅಗಲ 19 ಕಿಮೀ. ಇದರ ಪಶ್ಚಿಮದ ಅಂಚಿನಲ್ಲಿ ಲಾಂಗತರೈಶ್ರೇಣಿ ಇದೆ. ಇದರ ಎತ್ತರ ಸಮುದ್ರ ಮಟ್ಟದಿಂದ 450 ಮೀ ಗಿಂತ ಅಧಿಕ. ಇದರ ಅತ್ಯುನ್ನತ ಶಿಖರದ ಎತ್ತರ 481 ಮೀ. ಉತ್ತರಾಭಿಮುಖವಾಗಿ ಹರಿಯುವ ಮಾನು ನದಿಯೂ ಅದರ ಉಪನದಿಗಳೂ ಕಣಿವೆಯ ದಕ್ಷಿಣದ ಭಾಗವನ್ನು ಅಲ್ಲಲ್ಲಿ ಕೊರೆದಿವೆ. ಇಲ್ಲಿ ದಟ್ಟವಾದ ಕಾಡುಗಳಿವೆ. ಕಣಿವೆಯ ಉತ್ತರಭಾಗ ಹೆಚ್ಚು ವಿಶಾಲ; ಅಲ್ಲಲ್ಲಿ ಜವುಗು ನೆಲವುಂಟು. ಮಾನು ನದಿಯ ಬಲದಂಡೆಯಲ್ಲಿರುವ ಪಟ್ಟಣ ಕೈಲಾಷ್‌ಹರ್. ಈ ಕಣಿವೆಯ ಪಶ್ಚಿಮಕ್ಕೆ 420 ಮೀ ಗಳಿಗಿಂತ ಎತ್ತರವಾಗಿರುವ ಅಥರಮುರ ಶ್ರೇಣಿಗೂ ಲಾಂಗ್‌ತರೈ ಶ್ರೇಣಿಗೂ ನಡುವೆ ಇರುವುದು ಕಮಲ್‌ಪುರ್ ಕಣಿವೆ. ಇಲ್ಲಿ ಧಲಾಯ್ ನದಿ ಉತ್ತರದ ಕಡೆ ಹರಿಯುತ್ತದೆ. ದಕ್ಷಿಣದಲ್ಲಿ ದಟ್ಟವಾದ ಕಾಡುಗಳಿವೆ. ಉತ್ತರದ್ದು ಜವುಗು ನೆಲ, ಬತ್ತ ಬೆಳೆಯುವ ಪ್ರದೇಶ. ಧಲಾಯ್ ನದಿಯ ಎಡದಂಡೆಯ ಮೇಲೆ ಇರುವ ಪಟ್ಟಣ ಕಮಲ್‌ಪುರ್, ಅಥರಮುರ ಶ್ರೇಣಿಗೆ ಪಶ್ಚಿಮಕ್ಕಿರುವ ಕಣಿವೆ ಖೋವಾಯ್. ಈ ಕಣಿವೆಯ ಪಶ್ಚಿಮದಲ್ಲಿರುವ ಗಿರಿಶ್ರೇಣಿ ದೇವ್‌ತಮೂರಾ 245 ಮೀ ಗಳಿಗಿಂತ ಹೆಚ್ಚು ಎತ್ತರವಿಲ್ಲ. ಈ ಕಣಿವೆಯಲ್ಲಿ ಉತ್ತರಾಭಿಮುಖವಾಗಿ ಹರಿಯುವ ನದಿ ಖೋವಾಯ್. ಖೋವಾಯ್ ಪಟ್ಟಣ ನದಿಯ ಬಲದಂಡೆಯ ಮೇಲೆ ಇದೆ.




ಇಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿರುವ ಆರು ಮುಖ್ಯ ಗಿರಿಶ್ರೇಣಿಗಳಲ್ಲಿ ಪೂರ್ವದವು ಪಶ್ಚಿಮದವಕ್ಕಿಂತ ಹೆಚ್ಚು ಎತ್ತರವಾಗಿದೆ. ಇವು ಸು. 19 ಕಿಮೀ ಗಳ ಅಂತರದಲ್ಲಿ ಹಬ್ಬಿವೆ. ಇವುಗಳಲ್ಲಿ ಜಮರೈ ತಲಾಂಗ್, ಸಖೋನ್ ತಲಾಂಗ್, ಲಾಂಗ್ ತರೈ, ಅಥರಮುರ ಮುಖ್ಯವಾದವು. ಇವುಗಳಲ್ಲಿರುವ ಉನ್ನತ ಶಿಖರಗಳು ಇವು : ಬೆಟ್‌ಲಿಂಗ್ ಸಿಬ (975 ಮೀ), ಸಖೋನ್ (786 ಮೀ), ಫೆಂಗ್‌ಪೂಯಿ (482 ಮೀ) ಮತ್ತು ಜಾರಿಮುರ (458ಮೀ).

ರಾಜ್ಯದ ದಕ್ಷಿಣದಲ್ಲಿರುವ ಅಗರ್ತಲ ಮೈದಾನದಲ್ಲಿ ಸೋನ್‌ಮುರ್, ಉದಯಪುರ್, ಅಮರ್‌ಪುರ್, ಬೆಲೊನಿಯ ಮತ್ತು ಸಬ್ರೂಮ್ ಎಂಬ ಐದು ಉಪವಿಭಾಗಗಳಿವೆ. ಇಲ್ಲಿ ಅನೇಕ ಸಣ್ಣ ನದಿಗಳು ಹರಿಯುತ್ತವೆ. ಅವುಗಳಲ್ಲಿ ಗುಮ್ತಿ ಮುಖ್ಯವಾದದ್ದು. ದಕ್ಷಿಣದ ಕಡೆ ಹರಿಯುವ ಅನೇಕ ಹೊಳೆಗಳು ಗುಮ್ತಿ ನದಿಯನ್ನು ಸೇರುತ್ತವೆ. ಇದು ಗಿರಿಶ್ರೇಣಿಗಳನ್ನು ಹಾದು ರಾಧಾಕಿಶೋರ್‌ಪುರದ ಬಳಿ ಬಯಲನ್ನು ಪ್ರವೇಶಿಸುತ್ತದೆ. ಈ ಭಾಗದಲ್ಲಿ ಭೂಮಿ ಹೆಚ್ಚು ಬಯಲಾಗಿದೆ. ಇಲ್ಲಿ ಹಳ್ಳಿಗಳೂ ಪಟ್ಟಣಗಳೂ ಅಧಿಕ. ದೇಸ್ತಾಮುರ್ ಶ್ರೇಣಿಯ ಪಶ್ಚಿಮಕ್ಕಿರುವ ಬಯಲು ವಿಶಾಲವಾದದ್ದು. ಇದು ಸಾಂದ್ರ ಬೇಸಾಯದ ಪ್ರದೇಶ. ರಾಜ್ಯದ ರಾಜಧಾನಿಯಾದ ಅಗರ್ತಲ ಇರುವುದು ಈ ಪ್ರದೇಶದಲ್ಲಿ. ಹೋರಾ ನದಿಯ ದಡದ ಮೇಲೆ ಈ ಪ್ರದೇಶ ಸಂಪದ್ಭರಿತವಾದದ್ದು, ಗುಮ್ತಿ ನದಿ ಪಶ್ಚಿಮಕ್ಕೆ ಹರಿದು ಮೇಘ್ನಾ ನದಿಯನ್ನು ಸೇರುತ್ತದೆ. ಫೆನ್ನಿ ಮತ್ತು ಮುಹರಿ ನದಿಗಳು ಬಂಗಾಲಕೊಲ್ಲಿಯನ್ನು ಸೇರುತ್ತವೆ. ತ್ರಿಪುರದ ಹಲವು ನದಿಗಳು ದೋಣಿಸಂಚಾರಕ್ಕೆ ಯೋಗ್ಯವಾದಂಥವು. ಗುಮ್ತಿ ನದಿಯ ಮೇಲ್ಕಣಿವೆಯಲ್ಲಿ ದುಂಬಿರ ಜಲಪಾತವಿದೆ.

ವಾಯುಗುಣ : ಕಣಿವೆಗಳಲ್ಲಿ ಸೆಕೆ ಹೆಚ್ಚು. ಗಿರಿಶ್ರೇಣಿಗಳು ತಂಪಾಗಿರುತ್ತವೆ. ವರ್ಷಕ್ಕೆ 200 ಸೆಂಮೀ ಗಿಂತ ಹೆಚ್ಚು ಮಳೆಯಾಗುತ್ತದೆ. ಜೂನ್‌ನಿಂದ ಸೆಪ್ಟೆಂಬರ್ ವರೆಗೆ ಮಳೆಯಾಗುತ್ತದೆ.

ಸಸ್ಯ–ಪ್ರಾಣಿಸಂಪತ್ತು : ತ್ರಿಪುರ ರಾಜ್ಯದ ಸ್ವಾಭಾವಿಕ ಸಸ್ಯವರ್ಗ ನಿತ್ಯ ಹಸುರು ಕಾಡು. ಇಲ್ಲಿ ಶೇ.60 ರಷ್ಟು ಪ್ರದೇಶ ಅರಣ್ಯಾವೃತ. ಒಟ್ಟು ಅರಣ್ಯ ಪ್ರದೇಶ 6,30,000 ಹೆಕ್ಟೇರುಗಳು. ಇಲ್ಲಿಯ ಬೆಲೆಬಾಳುವ ಮರಗಳಲ್ಲಿ ಮುಖ್ಯವಾದವು ತೇಗ, ಮಹಾಗನಿ ಮತ್ತು ಸಾಲ್. ಎತ್ತರ ಪ್ರದೇಶದಲ್ಲಿ ಬಿದಿರು ಹೆಚ್ಚು. ಕೆಳಮಟ್ಟದ ಪ್ರದೇಶದಲ್ಲಿ ಮರಗಳು ದಟ್ಟವಾಗಿದೆ. ಅಲ್ಲಲ್ಲಿ ಬತ್ತ ಮತ್ತು ಮನೆಗೆ ಹೊದಿಸುವ ಹುಲ್ಲು ಇವೆ. ಆನೆ, ಖಡ್ಗಮೃಗ, ಹುಲಿ, ಕಾಡುಹಂದಿ, ಚಿರತೆ, ನರಿ, ಕಾಡೆಮ್ಮೆ, ಕಾಡುನಾಯಿ, ಕಾಡೆತ್ತು ಮೊದಲಾದ ಪ್ರಾಣಿಗಳಿವೆ.

ಖನಿಜ ಸಂಪತ್ತು : ಈ ರಾಜ್ಯದಲ್ಲಿ ಹೆಚ್ಚು ಖನಿಜ ನಿಕ್ಷೇಪಗಳಿಲ್ಲ.

ಕೃಷಿ : ತ್ರಿಪುರದಲ್ಲಿ ವ್ಯವಸಾಯವೇ ಪ್ರಧಾನ ಉದ್ಯೋಗ. ಇಲ್ಲಿ ಮಳೆ ಸಾಕಷ್ಟು ಬೀಳುವುದಾದರೂ ಅನಿಶ್ಚಿತ. ಇಲ್ಲಿಯ ಮಣ್ಣು ತೇವವನ್ನು ಹಿಡಿದಿಡದಿರುವುದರಿಂದ ವ್ಯವಸಾಯಕ್ಕೆ ಅನುಕೂಲವಾಗಿಲ್ಲ. ಮುಖ್ಯ ಬೆಳೆ ಬತ್ತ. ಕೈಲಾಷ್‌ಹರ್ ಕಣಿವೆಯ ಉತ್ತರದ ತೇವ ಪ್ರದೇಶದಲ್ಲಿ ಇದನ್ನು ವಿಶೇಷವಾಗಿ ಬೆಳೆಯುತ್ತಾರೆ. ಇತರ ಬೆಳೆಗಳು, ಸೆಣಬು, ಹತ್ತಿ, ಚಹ, ಹಣ್ಣು ಇವಲ್ಲದೆ ಕಬ್ಬು, ಸಾಸಿವೆ, ಆಲೂಗೆಡ್ಡೆ, ಮೆಣಸಿನಕಾಯಿ, ಈರುಳ್ಳಿ ಮತ್ತು ಎಣ್ಣೆ ಬೀಜಗಳನ್ನೂ ಬೆಳೆಯುತ್ತಾರೆ. ರಬ್ಬರ್ ಮತ್ತು ಉಪ್ಪು ನೇರಳೆ ಇನ್ನೆರಡು ಬೆಳೆಗಳು. ದೇಶದ ವಿಸ್ತೀರ್ಣದಲ್ಲಿ ಶೇ. 22 ರಷ್ಟರಲ್ಲಿ ಎಂದರೆ 2.4 ಲಕ್ಷ ಹೆ.ಗಳಲ್ಲಿ ಸಾಗುವಳಿಯಾಗುತ್ತದೆ. ಆಹಾರೇತರ ಬೆಳೆಯ ಪ್ರದೇಶ 86,000 ಹೆ. 5,526 ಹೆಕ್ಟೇರ್‌ಗಳಲ್ಲಿ ಚಹ ತೋಟಗಳಿವೆ. ವರ್ಷಕ್ಕೆ 37.8 ಲಕ್ಷ ಕೆಜಿ. ಸಂಸ್ಕರಣ ಮಾಡಿದ ಚಹ ಉತ್ಪಾದನೆಯಾಗುತ್ತದೆ. 105 ಸಾವಿರ ಹೆ.ಗಳಲ್ಲಿ ವಾರ್ಷಿಕವಾಗಿ ಒಂದಕ್ಕಿಂತ ಹೆಚ್ಚು ಬೆಳೆ ಬೆಳೆಯುತ್ತಾರೆ. 64,665 ಹೆ. ಪ್ರದೇಶ ನೀರಾವರಿಗೆ ಒಳಪಟ್ಟಿದೆ. ರಾಜ್ಯದಲ್ಲಿ ಯಾವ ಬೃಹತ್ ನೀರಾವರಿ ಯೋಜನೆಗಳೂ ಇಲ್ಲ. ಈ ರಾಜ್ಯದಲ್ಲಿ ಬೆಳೆಯುವ ಆಹಾರ ಧಾನ್ಯಗಳು ಇಲ್ಲಿಯ ಜನಕ್ಕೆ ಸಾಕಾಗುವುದಿಲ್ಲ. ಆಹಾರ ಧಾನ್ಯಗಳನ್ನು ಹೊರ ರಾಜ್ಯಗಳಿಂದ ತರಿಸಿಕೊಳ್ಳಬೇಕಾಗುತ್ತದೆ.

ಇಲ್ಲಿ ಸಾಗುವಳಿಗೆ ಕೋಣಗಳನ್ನು ಹೆಚ್ಚಾಗಿ ಬಳಸುತ್ತಾರೆ. ಅವುಗಳಲ್ಲಿ ಮಣಿಪುರಿ ಮತ್ತು ಬಂಗಾರ್ ತಳಿಗಳು ಮುಖ್ಯವಾದವು.

ವಿದ್ಯುಚ್ಛಕ್ತಿ : ಡೀಸೆಲ್ ಯಂತ್ರಗಳಿಂದ ಅಗರ್ತಲ, ಅಂಬಾಸ, ಖೋವಾಯ್, ಧರ್ಮನಗರ್, ಕೈಲಾಷ್‌ಹರ್ ಉದಯಪುರ್ ಮತ್ತು ಬೊಗಾಫಗಳಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಾರೆ. ಶೇ. 2.1 ರಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿದೆ.

ಕೈಗಾರಿಕೆ : ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳಿಲ್ಲ. ಎರಡು ಕೈಗಾರಿಕಾ ಕ್ಷೇತ್ರಗಳಿವೆ. ಉದಯಪುರದಲ್ಲಿರುವ ಕ್ಷೇತ್ರದಲ್ಲಿ ಕಮ್ಮಾರಿಕೆ ಮತ್ತು ಮರಗೆಲಸ ಕೈಗಾರಿಕೆಗಳಿವೆ. ಇವುಗಳಲ್ಲಿ ಪೀಠೋಪಕರಣ ಮತ್ತು ವ್ಯವಸಾಯೋಪಕರಣಗಳನ್ನು ತಯಾರಿಸಲಾಗುತ್ತದೆ. ಸಾಬೂನು, ಅಲ್ಯೂಮಿನಿಯಂ ಪಾತ್ರೆಗಳು, ತಗಡಿನ ಪೆಟ್ಟಿಗೆಗಳು, ಬೀಡಿ, ಇಟ್ಟಿಗೆ, ಕೊಳವೆಗಳು, ಕೊಡೆಯ ಹಿಡಿ ಮುಂತಾದವುಗಳ ತಯಾರಿಕೆ ; ಕೈಮಗ್ಗ, ಮರಗೆಲಸ, ಕಬ್ಬಿಣ ಕೆಲಸ, ಎಣ್ಣೆ ತೆಗೆಯುವುದು, ಮೋಟಾರು ವಾಹನಗಳ ರಿಪೇರಿ, ಹಣ್ಣುಗಳ ಡಬ್ಬೀಕರಣ ಮುಂತಾದ ಉದ್ಯಮಗಳಿವೆ. ಅಕ್ಕಿ, ಎಣ್ಣೆ ಮತ್ತು ಹಿಟ್ಟಿನ 128 ಗಿರಿಣಿಗಳಿವೆ; 607 ಕೈಮಗ್ಗಗಳಿವೆ. 5 ಸಾಬೂನು ಕಾರ್ಖಾನೆಗಳಿವೆ. ಉತ್ತರ ತ್ರಿಪುರದ ಫಾತಿಕಿರೆಯಲ್ಲಿ ಕಾಗದದ ಕಾರ್ಖಾನೆ ಸ್ಥಾಪಿಸಲು ಕೇಂದ್ರ ಸರ್ಕಾರ ನೆರವು ನೀಡಿದೆ. ಈ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕಾರ್ಪೋರೇಷನ್ ಇದೆ.

ಸಾರಿಗೆ : ಈ ರಾಜ್ಯದ ಬಹುಭಾಗ ಗುಡ್ಡ ಬೆಟ್ಟಗಳಿಂದಲೂ ಕಾಡುಗಳಿಂದಲೂ ಕೂಡಿರುವುದರಿಂದ ಇಲ್ಲಿ ಸಾರಿಗೆ ಸಂಪರ್ಕ ಕಠಿಣ, ರಸ್ತೆ ನಿರ್ಮಾಣ ವೆಚ್ಚ ದುಬಾರಿ. ಬೆಟ್ಟಗಾಡು ಪ್ರದೇಶದಲ್ಲಿ ಈಚೆಗೆ ಅನೇಕ ರಸ್ತೆಗಳು ಹೊಸದಾಗಿ ನಿರ್ಮಾಣವಾಗಿವೆ. ಮೋಟಾರು ವಾಹನಗಳು ಸಂಚರಿಸಬಲ್ಲ ರಸ್ತೆಯ ಉದ್ದ 14,395 ಕಿಮೀ. ಒಂದು ರಾಷ್ಟ್ರೀಯ ಹೆದ್ದಾರಿಯೂ ಎರಡು ರಾಜ್ಯ ಹೆದ್ದಾರಿಗಳೂ ಇವೆ. ಅಸ್ಸಾಂ–ಅಗರ್ತಲ ಮತ್ತು ಅಗರ್ತಲ–ಸಬ್‌ರೂಮ್ ರಸ್ತೆಗಳು ರಾಜ್ಯ ಹೆದ್ದಾರಿಗಳು. ಧರ್ಮನಗರದಿಂದ ಅಸ್ಸಾಮಿನ ಕಲ್ಕಾಲಿಘಾಟಿಗೆ ಸಂಪರ್ಕ ಕಲ್ಪಿಸುವ ರೈಲುಮಾರ್ಗ (64 ಕಿಮೀ) ಹೊಸದು. ಅಗರ್ತಲ–ಧರ್ಮನಗರ್ ರೈಲುಮಾರ್ಗ ನಿರ್ಮಾಣಕ್ಕೆ ಸರ್ವೇಕ್ಷಣೆ ಆಗಿದೆ. ಅಗರ್ತಲಾದಲ್ಲಿ ವಿಮಾನ ನಿಲ್ದಾಣವಿದೆ. ಇದು ಕೋಲ್ಕತ, ದೆಹಲಿ ಮತ್ತು ಗುಹವಾಟಿಗಳೊಂದಿಗೆ ವಾಯೂಮಾನ ಸಂಪರ್ಕ ಹೊಂದಿದೆ.

ಜನ : ರಾಜ್ಯದಲ್ಲಿ ಪ್ರಧಾನವಾಗಿ ಮಂಗೋಲಿಯ ಬುಡಕಟ್ಟಿಗೆ ಸೇರಿದ ಜನರಿದ್ದಾರೆ. ಅವರು ಹೆಚ್ಚಾಗಿ ಮುರುಂಗರು ಮತ್ತು ಆರಕಾನರಿಗೆ ಸಂಬಂಧಿಸಿದ್ದಾರೆ. ಅವರನ್ನು ಪುರಾನ್ ಅಥವಾ ಮೂಲ ತಿಪ್ಪೇರಿಯನ್ನರೆಂದೂ ಜಮಾತಿಯರೆಂದೂ ಎರಡು ಪಂಗಡಗಳಾಗಿ ವಿಂಗಡಿಸಬಹುದು. ಜಮಾತಿಯರು ಯುದ್ಧ ಮಾಡುವುದರಲ್ಲಿ ಹೆಸರಾದವರು. ಇವರಲ್ಲದೆ ಚಿತ್ತಗಾಂಗಿನಿಂದ ಬಂದವರೆಂದು ಹೇಳಲಾದ ನವಾತಿಯರು ಮತ್ತು ಕುಕಿ ಮೂಲಕ್ಕೆ ಸೇರಿದ ರಿಯಾಂಗರು ಇದ್ದಾರೆ. ತ್ರಿಪುರಿ ಮತ್ತು ಬಂಗಾಳಿ ಭಾಷೆಗಳು ಪ್ರಧಾನವಾಗಿವೆ. ಸ್ವಾತಂತ್ರ್ಯ ಕಾಲದವರೆಗೂ ಇಲ್ಲಿ ಗುಡ್ಡಗಾಡು ಜನರೇ ಪ್ರಧಾನವಾಗಿದ್ದರು. ಆದರೆ ಭಾರತ ವಿಭಜನೆ ಮತ್ತು ಬಾಂಗ್ಲಾ ವಿಮೋಚನಾ ಸಮರ ಕಾಲದಲ್ಲಿ ಬಹು ಸಂಖ್ಯೆಯಲ್ಲಿ ನಿರಾಶ್ರಿತರು ಇಲ್ಲಿ ಪ್ರವೇಶಿಸಿದರು. ತ್ರಿಪುರ ರಾಜ್ಯದಲ್ಲಿ ಹಿಂದೂಗಳು ಬಹುಸಂಖ್ಯಾತರು. ಮುಸ್ಲಿಮರೂ ಬೌದ್ಧರೂ ಸರ್ವಚೇತನವಾದಿಗಳೂ ಇದ್ದಾರೆ. ಇಲ್ಲಿಯ ಜನರು ಹಿಂದು ಧಾರ್ಮಿಕ ಆಚರಣೆಗಳು ಮತ್ತು ದೇವತೆಗಳ ಆರಾಧನೆಯೊಂದಿಗೆ ತಮ್ಮ ಗುಂಪುಗಳ ದೈವಾರಾಧನೆ ಮತ್ತು ಆಚರಣೆಗಳನ್ನೂ ಮುಂದುವರಿಸಿಕೊಂಡು ಬಂದಿದ್ದಾರೆ.

ಗ್ರಾಮ ಜೀವನವೇ ಇಲ್ಲಿ ಪ್ರಧಾನ. ಶೇ.90 ರಷ್ಟು ಜನರು ಗ್ರಾಮ ಪ್ರದೇಶಗಳಲ್ಲಿ ವಾಸಿಸುತ್ತಾರೆ.

ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಇಲ್ಲಿಯ ಆರೋಗ್ಯ ಸೇವಾ ವ್ಯವಸ್ಥೆ ತೀರ ಹಿಂದುಳಿದಿತ್ತು. ಅಗರ್ತಲಾದಲ್ಲಿ 40 ಹಾಸಿಗೆಗಳುಳ್ಳ ಒಂದು ಆಸ್ಪತ್ರೆ ಮತ್ತು ಇಡೀ ರಾಜ್ಯದಲ್ಲಿ 29 ಔಷಧಾಲಯಗಳಿದ್ದುವು. ಕಳೆದ ಎರಡು ಶತಮಾನಗಳಲ್ಲಿ ಗಣನೀಯ ಪ್ರಗತಿ ಆಗಿದೆ. ಈಗ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು, ಔಷಧಾಲಯಗಳು ಅನೇಕ ಆಯುರ್ವೇದ ಶಾಲೆ, ಹೋಮಿಯೋಪತಿ ಔಷಧಾಲಯ, ಕಣ್ಣಿನ ಆಸ್ಪತ್ರೆ, ಹೃದಯ ಪರೀಕ್ಷೆ ಆಸ್ಪತ್ರೆ, ಕುಷ್ಠರೋಗಿ ಆಸ್ಪತ್ರೆ, ದಂತ ಪರೀಕ್ಷೆ ಆಸ್ಪತ್ರೆ, ಗುಹ್ಯರೋಗ ಮತ್ತು ಚರ್ಮವ್ಯಾಧಿ ಆಸ್ಪತ್ರೆ, ಮಾನಸಿಕ ರೋಗ ಆಸ್ಪತ್ರೆ ಇವೆ. ಅಗರ್ತಲದಲ್ಲಿ ಅಂಧರಿಗಾಗಿ ಒಂದು ಸಂಸ್ಥೆ ಇದೆ.

ರಾಜ್ಯದಲ್ಲಿಯ ಸಾಕ್ಷರತೆ ಶೇ. 73.2. ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ. ಶಿಶುವಿಹಾರಗಳು, ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಶಾಲೆಗಳು, ಪ್ರೌಢ ಶಾಲೆಗಳು, ಸಾಮಾನ್ಯ ಶಿಕ್ಷಣ ಕಾಲೇಜುಗಳು, ವೃತ್ತಿ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಕಾಲೇಜುಗಳು, ಸಾಮಾಜಿಕ ಶಿಕ್ಷಣ ಕೇಂದ್ರಗಳು ಇವೆ. ಅಲ್ಲದೆ ದಾದಿಯರ ತರಬೇತಿ ಕೇಂದ್ರಗಳು ಕೈಗಾರಿಕಾ ತರಬೇತಿ ಕೇಂದ್ರಗಳೂ ಇವೆ.

1972 ರ ಜನವರಿ 21ರಂದು ತ್ರಿಪುರ ರಾಜ್ಯದ ಸ್ಥಾನಪಡೆಯಿತು. ಇಲ್ಲಿ ವಿಧಾನಸಭೆಯಿದೆ. 60 ವಿಧಾನಸಭಾ ಸದಸ್ಯರಿದ್ದಾರೆ.

ಕಮಲಸಾಗರ, ಸೀಪಾಯಿಜಾಲ ಮತ್ತು ತ್ರಿಷ್ಣ ವನ್ಯಧಾಮ, ದುಂಬೂರು ಸರೋವರ, ತ್ರಿಪುರ ಸುಂದರಿ ದೇವಾಲಯ, ಭುವನೇಶ್ವರಿ ದೇವಾಲಯ, ವಿಜಯಂತ ಅರಮನೆ, ಕುಂಜಾಟನ್ ದೇವಾಲಯ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳು. (ಡಿ.ಎಸ್.ಜೆ.)

# ಥ

**ಥಾರ್ ಮರುಭೂಮಿ:** ಭಾರತದ ರಾಜಸ್ತಾನ ರಾಜ್ಯದಲ್ಲಿ ಬಿಕನೇರ್, ಜೈಸಲ್ಮೇರ್, ಜೋಧ್‌ಪುರ ಜಿಲ್ಲೆಗಳನ್ನೂ ಜಯಪುರ ಜಿಲ್ಲೆಯ ಕೆಲವು ಭಾಗಗಳನ್ನೂ ಪಾಕಿಸ್ತಾನದ ಬಹವಾಲ್‌ಪುರ ಮತ್ತು ಪೂರ್ವ ಸಿಂಧನ್ನೂ ಆವರಿಸಿರುವ ಮರುಭೂಮಿ. ಇದರ ಪಶ್ಚಿಮದಲ್ಲಿ ಸಿಂಧೂ ನದಿಯ ನೀರಾವರಿ ಬಯಲು, ದಕ್ಷಿಣದಲ್ಲಿ ಕಚ್ಛ್‌ನ ರಣ್, ಆಗ್ನೇಯದಲ್ಲಿ ಅರಾವಳಿ ಶ್ರೇಣಿ, ಉತ್ತರ ಮತ್ತು ಈಶಾನ್ಯದಲ್ಲಿ ಪಂಜಾಬಿನ ಬಯಲು ಇವೆ. 2,00,000 ಚ.ಕಿಮೀ ವಿಸ್ತಾರವಾಗಿರುವ ಈ ಮರುಭೂಮಿಗೆ ಭಾರತದ ಮಹಾ ಮರುಭೂಮಿ ಎಂದೂ ಹೆಸರಿದೆ. ಮರಳು ಗುಡ್ಡಗಳು ಎಂಬರ್ಥದ ಶಬ್ದದಿಂದ ಥಾರ್ ಎಂಬ ಹೆಸರು ಬಂದಿದೆ. ಇದರ ಮೇಲೆ ಬೀಸುವ ಮಾನ್ಸೂನ್ ಮಾರುತಗಳು ಸಾಕಷ್ಟು ಮಳೆ ತರುವುದಿಲ್ಲವಾದ್ದರಿಂದ ಮರುಭೂಮಿ ಸಂಭವಿಸಿದೆ. 460 ಕೋಟಿ ವರ್ಷಗಳ ಹಿಂದೆ ಆರಂಭವಾದ ಅತ್ಯಂತ ಪ್ರಾಚೀನ ಭೂವೈಜ್ಞಾನಿಕ ಯುಗದಲ್ಲಿ ರೂಪುಗೊಂಡ ಪ್ರಿ – ಕೇಂಬ್ರಿಯನ್ ನೀಸ್ ಶಿಲೆಗಳು (ಗ್ರಾನೈಟ್‌ನಂಥ ರೂಪಾಂತರಿತ ಶಿಲೆಗಳು) 57 ಕೋಟಿ – 25 ಕೋಟಿ ವರ್ಷಗಳಷ್ಟು ಹಳೆಯದಾದ ಅವಸಾಧಿ ಶಿಲೆಗಳು ಮತ್ತು ಇತ್ತೀಚೆಗೆ ನದಿಗಳು ತಂದು ತುಂಬಿದ ಮೆಕ್ಕಲು ಮಣ್ಣು – ಇವುಗಳ ಮೇಲೆ ಮರಳಿನ ಹೊದಿಕೆಯಿದೆ. ಅತ್ಯಂತ ಇತ್ತೀಚಿನದಾದ– ಎಂದರೆ 70 ಲಕ್ಷ ವರ್ಷಗಳ ಹಿಂದೆ ಆರಂಭವಾದ – ಚತುರ್ಥ ಕಲ್ಪದಲ್ಲಿ ಗಾಳಿಯಿಂದಾಗಿ ಈ ಪ್ರದೇಶದ ಮೇಲೆ ಮರಳು ತುಂಬಿಕೊಂಡಿತು.

ಇಡೀ ಮರುಭೂಮಿ ಅಲೆಯಲೆಯಾಗಿದೆ. ಎತ್ತರದ ಮತ್ತು ತಗ್ಗಿನ ಮರಳು ದಿಬ್ಬಗಳ ನಡುವೆ ಮರಳು ಮೈದಾನಗಳಿವೆ. ಅಲ್ಲಲ್ಲಿ ತಗ್ಗಾದ ಬರಡು ಬೆಟ್ಟಗಳುಂಟು. ಮರಳು ದಿಬ್ಬಗಳು ಆಗಿಂದಾಗ್ಗೆ ಚಲಿಸುತ್ತ ವಿವಿಧ ಆಕಾರ ಹಾಗೂ ಗಾತ್ರ ತಳೆಯುತ್ತವೆ.

ಹಳೆಯ ಗುಡ್ಡಗಳು ಹೆಚ್ಚು ಕಡಿಮೆ ಸ್ಥಿರವಾದಂಥವು. ಈ ಪ್ರದೇಶದಲ್ಲಿ ಅಲ್ಲಲ್ಲಿ ಉಪ್ಪುನೀರಿನ ಸರೋವರಗಳುಂಟು.

ಪಶ್ಚಿಮದಲ್ಲಿರುವ ಸಿಂಧೂ ನದಿಯನ್ನೂ ಆಗ್ನೇಯದಲ್ಲಿರುವ ಲೂನಿ ನದಿಯನ್ನೂ ಬಿಟ್ಟರೆ ಮಿಕ್ಕಂತೆ ಇಲ್ಲಿಯ ಜಲೋತ್ಸಾರಣ ಒಳಮುಖವಾದ್ದು. ಮಳೆಗಾಲದಲ್ಲಿ ಇಲ್ಲಿಯ ಎತ್ತರದ ಸ್ಥಳಗಳಲ್ಲಿ ಶ್ರಾಯಿಣವಾಗಿ ಹೊಳೆಗಳು ಹುಟ್ಟಿ ಹರಿಯುತ್ತವೆ. ಆದರೆ ತುಸ ದೂರ ಸಾಗುವುದರಲ್ಲೇ ಮರಳಿನಲ್ಲಿ ಇಂಗಿ ಹೋಗುತ್ತವೆ.

ಇಲ್ಲಿಯ ಮಣ್ಣುಗಳಲ್ಲಿ ಏಳು ಬಗೆ: ಮರುಭೂಮಿಯ ಮಣ್ಣು, ಮರಳು ಮಿಶ್ರಿತ ಮಣ್ಣು, ಕಪ್ಪುಕಂದು ಬೂದು ಮಣ್ಣು, ಅಡಿಬೆಟ್ಟಗಳ ಕೆಂಪು ಹಳದಿ ಮಣ್ಣು, ಅವನತ ಪ್ರದೇಶಗಳ ಉಪ್ಪು ಮಣ್ಣು, ಗಾಳಿಮಳೆಗಳಿಗೆ ಪಕ್ಕಾದ ತೆಳು ಮಣ್ಣು ಮತ್ತು ಬೆಟ್ಟಗಳ ಮೇಲಣ ಮೆದು ಮಣ್ಣು, ಇದೆಲ್ಲ ಸುಣ್ಣ ಮಿಶ್ರಿತ ನೆಲ; ಸಾಮಾನ್ಯವಾಗಿ ಫಲವತ್ತಾದ್ದಲ್ಲ. ಇದು ಗಾಳಿಯಿಂದ ಸವೆತಕ್ಕೆ ಒಳಗಾಗಿ ಮರಳಿನಿಂದ ಕೂಡಿದೆ.

ಮರುಭೂಮಿ ಪ್ರದೇಶದಲ್ಲಿ ವಾರ್ಷಿಕ ಮಳೆ, ಸಾಮಾನ್ಯವಾಗಿ ಬಹು ಅಲ್ಪ. ಪಶ್ಚಿಮದಲ್ಲಿ 10 ಸೆಂಮೀ ನಿಂದ ಪೂರ್ವದಲ್ಲಿ 50 ಸೆಂಮೀ ವರೆಗೆ ಸ್ಥಳಾನುಗುಣವಾಗಿ ವ್ಯತ್ಯಾಸವಾಗುತ್ತದೆ. ಮಳೆ ಬಹಳ ಮಟ್ಟಿಗೆ ಅನಿಶ್ಚಿತ. ಜುಲೈ – ಸೆಪ್ಟೆಂಬರ್ ಅವಧಿಯಲ್ಲಿ – ಮುಂಗಾರಿನಲ್ಲಿ – ಶೇ. 90 ರಷ್ಟು ಮಳೆ. ಉಳಿದ ಕಾಲದಲ್ಲಿ ಈಶಾನ್ಯದ ಕಡೆಯಿಂದ ಗಾಳಿ ಬೀಸುತ್ತದೆ. ಮೇ, ಜೂನ್, ತಿಂಗಳುಗಳಲ್ಲಿ ಉಷ್ಣತೆ ಅತ್ಯಧಿಕ; $50^0$ ಸೆ. ಜನವರಿ ಅತ್ಯಂತ ತಣ್ಣನೆಯ ತಿಂಗಳು. ಆಗ ಕನಿಷ್ಠ ಉಷ್ಣತೆ $5^0$ – $10^0$ ಸೆ. ಮೇ – ಜೂನ್ ತಿಂಗಳುಗಳಲ್ಲಿ 140 – 150 ಕಿಮೀ ವೇಗದಲ್ಲಿ ದೂಳಿನಿಂದ ತುಂಬಿದ ಗಾಳಿ ಬೀಸುತ್ತದೆ.

ಮರುಭೂಮಿಯಲ್ಲಿ ಬೆಳೆಯುವ ಸಸ್ಯ ಬಹುತೇಕ ಮೂಲಿಕೆ ಜಾತಿಯದು ಅಥವಾ ಮೋಟು ಕಂಟಿ. ಅಲ್ಲಲ್ಲಿ ಮರಗಳಿವೆ. ಬೆಟ್ಟಗಳ ಮೇಲೆ ಗೊಬ್ಬಳಿ, ಕಳ್ಳಿ ಬೆಳೆಯುತ್ತವೆ. ಎಲ್ಲೆಲ್ಲೂ ಹೊನ್ನೆ ಮರಗಳಿವೆ. ಎಲಚಿ ಮುಂತಾದ ಇತರ ಮರಗಳೂ ಪೊದೆಗಳೂ ಉಂಟು. ಗಟ್ಟಿಯಾದ ಮರಳುದಿಣ್ಣೆಯಲ್ಲಿ ಹುಲ್ಲು, ಪೊದೆ, ಮರ ಬೆಳೆಯುತ್ತವೆ. ಕಾಡು ಸೋರೆ ತುಂಬ ವ್ಯಾಪಕವಾಗಿದೆ. ಹುಲ್ಲು ಬೆಳೆಯುವಲ್ಲಿ ಹುಲ್ಲೆಕರ ಮತ್ತು ಚಿಂಕಾರಗಳೂ ಫ್ರಾಂಕೊಲಿನ್, ಲಾವುಗೆ ಮುಂತಾದ ಪಕ್ಷಿಗಳೂ ಇವೆ. ವಲಸೆಗಾರ ಹಕ್ಕಿಗಳು ಮರಳುವಕ್ಕಿ, ಬಾತು ಕೋಳಿ ಮುಂತಾದವು. ನಷ್ಟಜೀವಿಯಾಗುತ್ತಿರುವ ಗುನಾ ಹದ್ದಿಗೂ ಇದು ವಾಸಸ್ಥಳ. ಇಲ್ಲಿ ದನಗಳನ್ನೂ ಕುರಿ ಒಂಟೆಗಳನ್ನೂ ಸಾಕುತ್ತಾರೆ.

ಇಲ್ಲಿಯ ಜನ ಬಹುತೇಕ ಗ್ರಾಮಸ್ಥರು. ಜನಸಾಂದ್ರತೆ ಚ.ಕಿಮೀ ಗೆ 4 ರಿಂದ 104 ರ ವರೆಗೆ ವ್ಯತ್ಯಾಸವಾಗುತ್ತದೆ. ಹಿಂದುಗಳೂ ಮುಸ್ಲಿಮರೂ ಇದ್ದಾರೆ. ಅಲೆಮಾರಿಗಳು ಸಾಮಾನ್ಯವಾಗಿ ದನಗಾಹಿಗಳು.

ಇಲ್ಲಿ ಬೆಳೆಯುವ ಹುಲ್ಲು ದನಗಳಿಗೆ ಮೇವು. ಇದನ್ನು ಔಷಧಿಗಳ ತಯಾರಿಕೆಗೂ ಉಪಯೋಗಿಸಲಾಗುತ್ತಿದೆ. ನೀರು ಬಲು ವಿರಳ. ಕೆರೆ ಕೊಳಗಳಲ್ಲಿ ನೀರನ್ನು ಸಂಗ್ರಹಿಸಿ ಕುಡಿಯಲು ಉಪಯೋಗಿಸುತ್ತಾರೆ. ನೆಲದಡಿಯ ನೀರು ಕ್ಷಾರಯುಕ್ತವಾದ್ದರಿಂದ ಅಷ್ಟು ಉಪಯುಕ್ತವಲ್ಲ. ಮರುಭೂಮಿಯ ಮಧ್ಯದಲ್ಲಿ ಬಂಡೆಗಳಲ್ಲಿ ಜಲಮೂಲಗಳು ಈಚೆಗೆ ಸಿಕ್ಕಿವೆ.

ಇಲ್ಲಿ ಹಲವು ಖನಿಜ ನಿಕ್ಷೇಪಗಳಿವೆ. ಬಿಕಾನೀರ್ ಬಳಿ ಪಲನಾದಲ್ಲಿ ಲಿಗ್ನೈಟ್ ತೆಗೆಯುತ್ತಾರೆ. ಜೈಸಲ್ಮೇರ್‌ಗೆ ವಾಯವ್ಯದಲ್ಲಿ, ಕಮ್ಲಿ ತಾಲ್‌ನಲ್ಲಿ ನೈಸರ್ಗಿಕ ಅನಿಲವಿದೆ. ನಾಗೌರ್, ಜೈಸಲ್ಮೇರ್, ಬಿಕನೇರ್, ಬಾರ್ಮೇರ್ ಜಿಲ್ಲೆಗಳಲ್ಲಿ ಜಿಪ್ಸಮ್ ತೆಗೆಯಲಾಗುತ್ತದೆ. ಸುಣ್ಣಕಲ್ಲು, ಬೆಂಟೊನೈಟ್ (ಜ್ವಾಲಾಮುಖಿಯ ಬೂದಿಯ ವಿಘಟನೆಯಿಂದ ಪರಿಣಮಿಸಿದ ಒಂದು ಜೇಡುಮಣ್ಣು), ಗಾಜು ಮರಳು, ಸಿಂಗಾಣಿ ಮಣ್ಣು, ಉಪ್ಪು ನೀರಿನ ಸರೋವರಗಳಿಂದ ದೊರಕುವ ಉಪ್ಪು –ಇವು ಇತರ ಖನಿಜಗಳು.

ನೀರು ದೊರಕುವೆಡೆಯಲ್ಲಿ ಗೋದಿ, ಹತ್ತಿ, ಕಬ್ಬು, ಎಳ್ಳು, ಹರಳು, ಮೆಣಸಿನಕಾಯಿ ಮುಂತಾದವನ್ನು ಬೆಳೆಯುತ್ತಾರೆ. ಬಾವಿ, ಕೆರೆ, ನಾಲೆ ನೀರಾವರಿ ಅಲ್ಲಲ್ಲಿ ಉಂಟು. ಸಿಂಧೂ ನದಿಗೆ ಅಡ್ಡಲಾಗಿ ನಿರ್ಮಿಸಿದ ಸುಕ್ಕೂರ್ ಜಲಾಶಯದಿಂದ ಪಾಕಿಸ್ತಾನದ ದಕ್ಷಿಣ ಪ್ರದೇಶದಲ್ಲಿ ನೀರಾವರಿ ಏರ್ಪಟ್ಟಿದೆ. ಸಟ್ಲೆಜ್ ನದಿಯಿಂದ ನಿರ್ಮಿಸಲಾಗಿರುವ ಗಂಗಾ ಕಾಲುವೆಯಿಂದ ದಕ್ಷಿಣ ಭಾಗಕ್ಕೆ ನೀರಾವರಿ ಸೌಲಭ್ಯ ಉಂಟಾಗಿದೆ. ರಾಜಸ್ತಾನ ಕಾಲುವೆ ಮುಖ್ಯವಾಗಿ ಬಿಕನೇರ್ ಮತ್ತು ಜೈಸಲ್ಮೇರ್ ಜಿಲ್ಲೆಗಳಲ್ಲೂ ನೆರೆಯ ಪ್ರದೇಶದಲ್ಲೂ ಸು. 9,99,609 ಹೆ. ನೀರಾವರಿಗೆ ಒಳಪಡುತ್ತದೆ. ಈ ಯೋಜನೆಯಿಂದ 22,000 ಕಿಲೋವಾಟ್ ಜಲವಿದ್ಯುತ್ತು ಒದಗುವಂತಾಗಿದೆ.

ಈ ಪ್ರದೇಶದಲ್ಲಿ ರಸ್ತೆ ಹಾಗೂ ರೈಲ್ವೆ ವ್ಯವಸ್ಥೆ ಅಷ್ಟೇನೂ ಬೆಳೆದಿಲ್ಲ. ದಕ್ಷಿಣ ಭಾಗದಲ್ಲಿ ಭಾರತದ ಲೂನಿ ಜಂಕ್ಷನ್‌ನಿಂದ ಪಾಕ್ ಹೈದರಾಬಾದಿಗೂ, ರಸ್ತೆಯಿಂದ ಸೂರತ್‌ಗಢಕ್ಕೂ, ಜೋಧಪುರದಿಂದ ಜೈಸಲ್ಮೇರ್‌ಗೂ ಪಾಕಿಸ್ತಾನದ ಬಹುವಾಲ್‌ಪುರದಿಂದ ºÉgÀ ÁçUÀAE gÉRÁ ÀAUÀÀ¸É EÉRª ÀgÀÁ ÉÀEGAIÄ (ಬಿ.ಎ.ಎಸ್.)

**ಥಿಯೋಫ್ರಸ್ಟಸ್:** ಪ್ರ.ಶ.ಪೂ. 371–287. ಗ್ರೀಕ್ ತತ್ವಜ್ಞಾನಿ ಮತ್ತು ಪ್ರಕೃತಿವಾದಿ. ಇವನು ಅರಿಸ್ಟಾಟಲ್‌ನ ಶಿಷ್ಯ. ಪ್ರ.ಶ.ಪೂ. 323ರಲ್ಲಿ ತನ್ನ ಪಂಥದ ನಾಯಕತ್ವವನ್ನು ಪಡೆದು ಅದರ ಕೀರ್ತಿಯನ್ನು ವರ್ಧಿಸಿದ. ಇವನ ವ್ಯಾಪಕ ಬರೆವಣಿಗೆಗಳ ಪೈಕಿ ವೈಜ್ಞಾನಿಕ ವಿಷಯಗಳ ಬರೆವಣಿಗೆಗಳು ಮಾತ್ರ ಉಳಿದುಕೊಂಡಿವೆ. ಇವನು ಸಸ್ಯವಿಜ್ಞಾನದ ವಿವಿಧ



ವಿಷಯಗಳನ್ನು ವಿಶೇಷವಾಗಿ ಸಸ್ಯಗಳ ವರ್ಣನೆ, ವಿಂಗಡಣೆ, ಹಂಚಿಕೆ, ಪ್ರಸಾರ, ಉತ್ಪತ್ತಿ ಮತ್ತು ಸಾಗುವಳಿ ಕುರಿತು ಆಳವಾಗಿ ಅಧ್ಯಯನ ಮಾಡಿದ. ಇವನು ಹೂವಿನ ಸಸ್ಯಗಳ ಎರಡು ಗುಂಪುಗಳ ನಡುವಣ ಹಾಗೂ ಹೂವಿನ ಸಸ್ಯಗಳು ಮತ್ತು ಶಂಕುಧಾರಿ (ಸೂಚಿಪರ್ಣ) ಮರಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸಿದ. ಅದರಂತೆ ವನಸ್ಪತಿ ಮತ್ತು ವಾಯುಗುಣಗಳ ನಡುವಣ ಸಂಬಂಧವನ್ನು ಪರೀಕ್ಷಿಸಿದ. ಮೆಸಿಡೋನಿಯ ಮೈದಾನದ ವನಸ್ಪತಿ, ಪಕ್ಕದ ಪರ್ವತದ ವನಸ್ಪತಿ ಮತ್ತು ಕ್ರೀಟ್ ದ್ವೀಪದ ವನಸ್ಪತಿಗಳ ತುಲನಾತ್ಮಕ ವರ್ಣನೆ ಮಾಡಿದ. ಈ ಪ್ರಕಾರ ಇವನಿಂದ ವನಸ್ಪತಿ (ಸಸ್ಯ) ಭೂಗೋಳ ವಿಜ್ಞಾನ ಪ್ರಾರಂಭವಾಯಿತು. (ಎಸ್.ಎಸ್.ಎನ್.)

**ಥೇಮ್ಸ್:** ದಕ್ಷಿಣ ಇಂಗ್ಲೆಂಡಿನ ಒಂದು ನದಿ. ಗ್ಲಾಸ್ಟರ್‌ಷೈರ್‌ನಲ್ಲಿ ಕಾಟ್ಸ್‌ವೋಲ್ಡ್ ಬೆಟ್ಟದ ಇಳಿಜಾರಿನ ಹಲವು ತಲೆದೊರೆಗಳಲ್ಲಿ ಇದು ಉಗಮಿಸುತ್ತದೆ. ಸಮುದ್ರಮಟ್ಟದಿಂದ 109 ಮೀ ಎತ್ತರದಲ್ಲಿರುವ ಥೇಮ್ಸ್ ಹೆಡ್ ಎಂಬುದು ಇದರ ಉಗಮಸ್ಥಳವೆಂಬುದಾಗಿ ಪರಂಪರಾಗತವಾಗಿ ಬಂದಿರುವ ಹೇಳಿಕೆ. ಗ್ಲಾಸ್ಟರ್‌ಷೈರ್, ವಿಲ್ಟ್‌ಷೈರ್, ಆಕ್ಸ್‌ಫರ್ಡ್‌ಷೈರ್, ಬರ್ಕ್‌ಷೈರ್, ಸರ್ರೆ, ಕೆಂಟ್ ಮತ್ತು ಎಸೆಕ್ಸ್‌ಗಳಲ್ಲಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಬೃಹತ್ ಲಂಡನ್ನನ್ನು ಇದು ಇಬ್ಭಾಗಿಸುತ್ತದೆ. ಥೇಮ್ಸ್ ಹೆಡ್‌ನಿಂದ ಉತ್ತರ ಸಮುದ್ರವನ್ನು ಸೇರುವವರೆಗೆ ಇದರ ಉದ್ದ ಸುಮಾರು 338 ಕಿಮೀ ಆಕ್ಸ್‌ಫರ್ಡ್ ಹತ್ತಿರ ಕೇವಲ 38 ಮೀ ಅಗಲವಿರುವ ಈ ನದಿ, ಟೆಡಿಂಗ್ಟನ್ ಬಳಿ 76 ಮೀ ಲಂಡನ್ ಸೇತುವೆಯ ಬಳಿ 227 ಮೀ ಮತ್ತು ಗ್ರೇವ್ ಸೆಂಡ್ ಹತ್ತಿರ 700 ಮೀ ಅಡಿ ಅಗಲವಾಗುತ್ತದೆ. ಅಲ್ಲಿಂದ ಕೆಳಕ್ಕೆ ಈ ನದಿಯ ಅಳಿವೆ ಹೆಚ್ಚು ಹೆಚ್ಚು ಅಗಲವಾಗುತ್ತ ಸಾಗಿ 8 ಕಿಮೀ ಗೆ ಹಿಗ್ಗುತ್ತದೆ. ನದಿಯ ಉಗಮದಿಂದ ಭರತದ ನೀರಿನವರೆಗೆ ಇದರ ಎತ್ತರದ ಸರಾಸರಿ ಇಳಿತ ಕಿಮೀ ಗೆ 47 ಸೆಂಮೀ. ಈ ನದಿಯ ಎಡಭಾಗದಲ್ಲಿ ಕ್ರಿಕ್ಲೇಡ್ ಬಳಿ ಚರ್ನ್ ನದಿಯೂ ಲೆಕ್ಲೇಡ್ ಬಳಿ ಕೋಲ್ನ್ ನದಿಯೂ ನ್ಯೂ ಬ್ರಿಜ್ ಬಳಿ ವಿಂಡ್ರಷ್ ನದಿಯೂ ಐನ್‌ಷಾಮ್ ಕೆಳಗಡೆ ಈವನ್‌ಲೋಡ್ ನದಿಯೂ ಕೂಡಿಕೊಳ್ಳುತ್ತವೆ. ಅನಂತರ ಈ ನದಿ ಉತ್ತರಕ್ಕೆ ತಿರುಗಿ ವೈತಾಮ್ ಬೆಟ್ಟವನ್ನು ಬಳಸಿಕೊಂಡು ಮುಂದುವರಿದು ಮತ್ತೆ ಸರಕ್ಕನೆ ದಕ್ಷಿಣಕ್ಕೆ ಮುಖ ಮಾಡಿ ಆಕ್ಸ್‌ಫರ್ಡ್ ಹತ್ತಿರ ಚರ್ವೆಲ್ ನದಿಯನ್ನು ಕೂಡಿಕೊಳ್ಳುತ್ತದೆ. ಅಬಿಂಗ್ಡನ್ ಬಳಿ ಆಕ್ ನದಿಯೂ ಡಾರ್ಚೆಸ್ಟರ್ ಬಳಿ ಥೇಮ್ಸ್ ನದಿಯೂ ಸಂಗಮಿಸುತ್ತವೆ. ಮುಂದೆ ಈ ನದಿ ಮತ್ತೆ ಪೂರ್ವಕ್ಕೆ ತಿರುಗಿ ಸುಂದರವಾದ ಮರಗಳಿಂದ ಕೂಡಿದ ಕಣಿವೆಯಲ್ಲಿ ಸಾಗುತ್ತದೆ. ಇದರ ಬಲದಂಡೆಯಲ್ಲಿ ರೀಡಿಂಗ್ ಬಳಿ ಸೇರುವ ನದಿ ಕೆನೆಟ್ ಷಿಪ್‌ಲೇಕ್ ಬಳಿ ಲಾಡನ್ ಸಂಗಮಿಸುತ್ತದೆ. ಇದರ ಇತರ ಉಪನದಿಗಳು ಕೋಲ್ನ್, ವೇ ಮತ್ತು ಮೋಲ್. ಟೆಡಿಂಗ್ಟನ್ ಲಾಕ್‌ನಿಂದ ಮುಂದೆ ಇದು ಅಳಿವೆಯ ಸ್ವರೂಪ ತಳೆಯುತ್ತದೆ.

ಇತಿಹಾಸಪ್ರಸಿದ್ಧವಾದ ಈ ನದಿಯ ಪ್ರಾಚೀನ ಹೆಸರು ಟ್ಯಾಮಸಿಸ್. ಜ್ಯೂಲಿಯಸ್ ಸೀಸರ್ ಇದನ್ನು ಹಾಗೆಂದು ಕರೆದಿದ್ದಾನೆ. ಇತರ ಇಂಗ್ಲಿಷ್ ದಾಖಲೆಗಳಲ್ಲಿ ಇದನ್ನು ಟ್ಯಾಮಿಸ್, ಟ್ಯಾಮಿಸ, ಟ್ಯಾಮನ್ಸಿಮ್ ಎಂದು ಕರೆಯಲಾಗಿದೆ. ಟ್ಯಾಮಸಿಸ್ ಎಂಬುದು ಥೇಮ್ಸ್ ಮತ್ತು ಐಸಿಸ್ ಎಂಬ ಎರಡು ಹೆಸರುಗಳ ಸಂಯುಕ್ತವೆಂದು 14ನೆಯ ಶತಮಾನದ ವಿದ್ವಾಂಸರು ಭಾವಿಸಿ ಇದರ ಮೇಲ್ಭಾಗವನ್ನು ಐಸಿಸ್ ಎಂದು ಕರೆದರು. ಡಾರ್ಚೆಸ್ಟರ್‌ನಿಂದ ಕೆಳಗಿನ ಭಾಗ ಮಾತ್ರ ಥೇಮ್ಸ್ ಎಂದು ಅವರು ತಪ್ಪಾಗಿ ಬಗೆದರು.

ಅಧಿಕ ನೀರನ್ನು ಒಳಗೊಳ್ಳಬಲ್ಲಂಥ ಇದರ ಸಾಮರ್ಥ್ಯ ವರ್ಷದ ಉದ್ದಕ್ಕೂ ಸುರಿಯುವ ಮಳೆ–ಇವುಗಳಿಂದಾಗಿ ಥೇಮ್ಸ್ ನದಿಯಲ್ಲಿ ಸರ್ವದಾ ಪ್ರವಾಹ ತಕ್ಕಮಟ್ಟಿಗೆ ಇರುತ್ತದೆ. ನದಿಯಲ್ಲಿ ನೀರು ಕನಿಷ್ಠವಾಗಿರುವುದು ಬೇಸಗೆಯಲ್ಲಿ. ಆದರೆ ಅಕ್ಟೋಬರ್‌ನಿಂದ ಮೇ ತಿಂಗಳವರೆಗಿನ ಅವಧಿಯಲ್ಲಿ ಈ ನದಿಯಲ್ಲಿ ಹೆಚ್ಚು ಪ್ರವಾಹ ಬರುವುದುಂಟು. ಜನವರಿಯಲ್ಲಿ ಸರಾಸರಿ 4,877 ಕ್ಯೂಸೆಕ್ (1 ಕ್ಯೂಸೆಕ್=ಸೆಕೆಂಡಿಗೆ 0.0283 ಘನ ಮೀ)

ಮತ್ತು ಆಗಸ್ಟ್‌ನಲ್ಲಿ 1.067 ಕ್ಯೂಸೆಕ್ ನೀರು ಹರಿಯುತ್ತದೆ. ಮಹಾಪೂರ ಬಂದಾಗ ಈ ನದಿಯ ನೀರಿನ ದೈನಿಕ ಹರಿವು 19,000 ಕ್ಯೂಸೆಕ್‌ಗಳಿಗೂ ಅಧಿಕವಾಗಬಹುದು.

ಲಂಡನ್ ಮತ್ತು ಅದರ ಉಪನಗರಗಳಿಗೂ ಆಕ್ಸ್‌ಫರ್ಡ್ ಮತ್ತು ಫ್ಯಾರಿಂಗ್ಡನ್‌ಗಳಿಗೂ ನೀರಿನ ಪೂರೈಕೆಯಾಗುವುದು ಈ ನದಿಯಿಂದ. ಇದರ ನೀರು ಮಲಿನವಾಗದಂತೆ ಥೇಮ್ಸ್ ಕನ್ಸರ್ವೆನ್ಸಿ ಪ್ರಾಧಿಕರಣ ವ್ಯವಸ್ಥೆ ಮಾಡಿದೆ. ಅಲ್ಲದೆ ಇದು ನದಿಯಲ್ಲಿ ಮೀನುಗಾರಿಕೆಯನ್ನೂ ನಿಯಂತ್ರಿಸುತ್ತದೆ. ಟೆಡಿಂಗ್ಟನ್‌ನಿಂದ ಉತ್ತರ ಸಮುದ್ರದವರೆಗಿನ ನದೀಭಾಗದ ನಿಯಂತ್ರಣವನ್ನು 1908ರಲ್ಲಿ ಲಂಡನ್ ಬಂದರು ಪ್ರಾಧಿಕರಣದ ವಶಕ್ಕೆ ಕೊಡಲಾಯಿತು. ಬೇಸಗೆಯಲ್ಲಿ ಈ ನದಿಯ ಮೇಲೆ ಟೆಡಿಂಗ್ಟನ್‌ನಿಂದ ಕಿಂಗ್‌ಸ್ಟನ್ ವರೆಗೆ ಪ್ರತಿದಿನವೂ ಸ್ಟೀಮರುಗಳು ಸಂಚರಿಸುತ್ತವೆ. ಥೇಮ್ಸ್ ನದಿಯ ಮೇಲೆ ಲಂಡನ್ನಿನವರೆಗೂ ಹಡಗುಗಳು ಸಂಚರಿಸುತ್ತವೆ. (ಬಿ.ಎ.ಎಸ್.)

**ಥೈಲೆಂಡ್:** ಆಗ್ನೇಯ ಏಷ್ಯದ ಒಂದು ಸ್ವತಂತ್ರ ರಾಜ್ಯ. ಸೈಯಾಂ ಎಂಬುದು ಹಿಂದೆ ಇದಕ್ಕೆ ಇದ್ದ ಹೆಸರು. ಸೈಯಾಂ ಖಾರಿಯ ಪಶ್ಚಿಮ, ಉತ್ತರ ಮತ್ತು ಪೂರ್ವದಲ್ಲಿ, ಉ.ಅ. $6^0$–$21^0$ ಮತ್ತು ಪೂ.ರೇ. $97^0$ – $106^0$ ನಡುವೆ ಇದೆ. ಉತ್ತರ ಮತ್ತು ವಾಯವ್ಯದಲ್ಲಿ ಮಯನ್ಮಾರ್, ಈಶಾನ್ಯ ಮತ್ತು ಪೂರ್ವದಲ್ಲಿ ಲಾವೋಸ್ ಮತ್ತು ಕಾಂಬೋಡಿಯ, ಆಗ್ನೇಯ ಮತ್ತು ದಕ್ಷಿಣದಲ್ಲಿ ಮಲಯ ಮತ್ತು ಸೈಯಾಮ್ ಖಾರಿ, ಪಶ್ಚಿಮದಲ್ಲಿ ಅಂಡಮಾನ್ ಸಮುದ್ರ ಮತ್ತು ಮಯನ್ಮಾರ್‌ಗಳಿಂದ ಬಳಸಲ್ಪಟ್ಟಿರುವ ಈ ದೇಶದ ವಿಸ್ತೀರ್ಣ 5,14,000 ಚ.ಕಿಮೀ ರಾಜ್ಯದ ಗರಿಷ್ಠ ಉದ್ದ ಸು. 1.648 ಕಿಮೀ ಗರಿಷ್ಠ ಅಗಲ ಸು. 780 ಕಿಮೀ ಕಿರೀಕ್ರಾನ್ ಭೂಕಂಠದಲ್ಲಿ ಅದರ ಅಗಲ ಕೇವಲ 48 ಕಿಮೀ ಜನಸಂಖ್ಯೆ 63,430,000 (2002). ರಾಜಧಾನಿ ಬ್ಯಾಂಗ್‌ಕಾಕ್.




ಮೇಲ್ಮೈ ಲಕ್ಷಣ: ಥೈಲೆಂಡನ್ನು ಐದು ಭೌಗೋಳಿಕ ಪ್ರದೇಶಗಳಾಗಿ ವಿಂಗಡಿಸಬಹುದು: 1. ಮಧ್ಯದ ಕಣಿವೆ. 2. ಉತ್ತರದ ಮತ್ತು ವಾಯವ್ಯದ ಖಂಡೀಯ ಪರ್ವತ ಪ್ರದೇಶ. 3. ಈಶಾನ್ಯಪ್ರದೇಶ, 4. ಆಗ್ನೇಯ ಕರಾವಳಿ ಮತ್ತು 5. ಪರ್ಯಾಯ ದ್ವೀಪ. ಮಧ್ಯದ ಕಣಿವೆ ಪ್ರದೇಶ ಥೈಲೆಂಡಿನ ಹಾಗೂ ಅಲ್ಲಿಯ ಜನರ ಹೃದಯ ಸ್ಥಾನ. ಇದು ಸೈಯಾಂಖಾರಿಗೆ ಮುಮ್ಮೊಗನಾಗಿ ಹಬ್ಬಿರುವ ಪ್ರದೇಶ. ಇದರ ಮೂರು ಪಕ್ಕಗಳಲ್ಲಿ ಬೆಟ್ಟಗಳೂ ಪರ್ವತಗಳೂ ಹಬ್ಬಿವೆ. ಈ ಕಣಿವೆ ಚಾವ್ ಫ್ರೈಯ ನದಿಯ ಮತ್ತು ಉಪನದಿಗಳ ಮೆಕ್ಕಲು ಮಣ್ಣಿನ ಬಯಲು, ಉತ್ತರದಕ್ಷಿಣವಾಗಿ ಇದರ ಉದ್ದ 480 ಕಿಮೀ ಇದರ ಸರಾಸರಿ ಅಗಲ 160 – 240 ಕಿಮೀ ಈ ಮೈದಾನ – ಮುಖ್ಯವಾಗಿ ಸೈಯಾಂ ಖಾರಿಯ ತೀರದ ನದೀ ಮುಖಜಭೂಮಿ – ಥೈಲೆಂಡಿನ ಕೃಷಿಸಂಪದ್ಯುಕ್ತ ಪ್ರದೇಶ. ಥೈಲೆಂಡಿನ ಜನಸಂಖ್ಯೆಯ ಬಹು ಭಾಗ ಇರುವುದು ಇಲ್ಲಿ.

ಮಧ್ಯದ ಕಣಿವೆಯ ಉತ್ತರಕ್ಕೂ ಪಶ್ಚಿಮಕ್ಕೂ ಖಂಡೀಯ ಪರ್ವತಪ್ರದೇಶ ಹಬ್ಬಿದೆ. ಇದು ಉತ್ತರ ಥೈಲೆಂಡ್ ಭಾಗ. ಇದರ ಮೂರು ಪಕ್ಕಗಳಲ್ಲಿ ಬರ್ಮ ಮತ್ತು ಲಾವೋಸ್ ದೇಶಗಳಿವೆ. ಇಲ್ಲಿ ಸ್ಥೂಲವಾಗಿ ಸಮಾಂತರದಲ್ಲಿ ಪರ್ವತಗಳು ಹಬ್ಬಿವೆ. ಈ ಶ್ರೇಣಿಗಳ ನಡುವೆ ನಾನ್, ಯಾಮ್, ವಾಂಗ್, ಪಿಂಗ್ ಮುಂತಾದ ನದಿಗಳು ದಕ್ಷಿಣಾಭಿಮುಖವಾಗಿ ಹರಿದು ಮಧ್ಯದ ಕಣಿವೆಯಲ್ಲಿ ಚಾವ್‌ಫ್ರೈಯ ನದಿಯನ್ನು ಸೇರುತ್ತವೆ. ಉತ್ತರದ ತುತತುದಿಯಲ್ಲಿ ನೀರಿನ ಓಟ ಉತ್ತರಾಭಿಮುಖ – ಮೇಕಾಂಗ್ ನದಿಯ ಕಡೆಗೆ, ಪಶ್ಚಿಮದ ಭಾಗ ಪಶ್ಚಿಮಕ್ಕೆ – ಮಯನ್ಮಾರ್‌ದಲ್ಲಿರುವ ಸಾಲ್ವೀನ ನದಿಯ ಕಡೆಗೆ – ಇಳಿಜಾರಾಗಿದೆ. ಉತ್ತರ ಥೈಲೆಂಡಿನ ಜನರಲ್ಲಿ ಬಹುಭಾಗ ನೆಲಸಿರುವುದು ಪರ್ವತಗಳ ನಡುವಣ ಕಿರು ಮೈದಾನಗಳಲ್ಲಿ ಹಾಗೂ ನದೀಕಣಿವೆಗಳಲ್ಲಿ, ಥೈಲೆಂಡಿನ ಅತ್ಯನ್ನತ ಶಿಖರವಾದ ಡಾಯಿ ಇಂಥನನ್‌ನ ಎತ್ತರ 2504 ಮೀ ಉತ್ತರದಿಂದ ದಕ್ಷಿಣಕ್ಕೆ ಮಯನ್ಮಾರ್ ಗಡಿಯ ಬಳಿಯ ಪ್ರದೇಶ ಖಂಡೀಯ ಪರ್ವತ ಪ್ರದೇಶದ ಒಂದು ಪ್ರತ್ಯೇಕ ಭಾಗ. ಕಡಿದಾದ ಪರ್ವತಗಳೂ ಆಳವಾದ ಕಂದರಗಳು ಕಿರಿದಾದ ಕಣಿವೆಗಳೂ ಇರುವ ಈ ಭಾಗದಲ್ಲಿ ಜನಸಾಂದ್ರತೆ ತೀರ ಕಡಿಮೆ. ಈ ಪರ್ವತ ಸೀಮೆಯ ನಡುವಣ ನೈಸರ್ಗಿಕ ಕಣಿವೆಗಳ ಪೈಕಿ ಮುಖ್ಯವಾದ್ದು ಮೂರು ಪಗೋಡಗಳ ಕಣಿವೆ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನೀಯರು ಥೈಲೆಂಡಿನಿಂದ ಮಯನ್ಮಾರ್‌ಗೆ ಇದರ ಮೂಲಕ ಮೃತ್ಯು ರೈಲ್ವೆ ರಚಿಸಿದ್ದರು. ಈಗ ಇದನ್ನು ನಾಶಪಡಿಸಲಾಗಿದೆ.

ಖೋರಾತ್ ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಈಶಾನ್ಯ ಪ್ರದೇಶ ತಗ್ಗಿನ, ಅಲೆಯಾಗಿ ಏರಿಳಿಯುವ ಪ್ರಸ್ಥಭೂಮಿ. ಇದು ಉತ್ತರದಲ್ಲೂ ಪಶ್ಚಿಮದಲ್ಲೂ ಸಮುದ್ರಮಟ್ಟದಿಮದ 120 – 212 ಮೀ ಎತ್ತರವಾಗಿದೆ. ಅಗ್ನೇಯದ ಕಡೆಗೆ ಇಳಿಜಾರಾಗಿ ಅ ತುದಿಯಲ್ಲಿ 60 ಮೀಗಳಿಗೆ ತಗ್ಗುತ್ತದೆ. ಬೆಟ್ಟಗಳೂ ಪರ್ವತಶ್ರೇಣಿಗಳು ಪ್ರಪಾತಗಳೂ ಈ ಪ್ರದೇಶವನ್ನು ಪಶ್ಚಿಮದಲ್ಲಿ ಮಧ್ಯ ಕಣಿವೆಯಿಂದಲೂ ದಕ್ಷಿಣದಲ್ಲಿ ಕಾಂಬೋಡಿಯದಿಂದಲೂ ಪ್ರತ್ಯೇಕಿಸುತ್ತವೆ. ಇದರ ಉತ್ತರ ಹಾಗೂ ಪೂರ್ವದ ಬಹುಭಾಗದ ಎಲ್ಲೆಯಾಗಿ ಮೇಕಾಂಗ್ ನದಿ ಹರಿಯುತ್ತದೆ. ಈಶಾನ್ಯ ನೀರನ್ನು ಮೂನ್ ನದಿಯೂ ಅದರ ಮುಖ್ಯ ಉಪನದಿಯಾದ ಚೀ ಯನ್ನು ಮೇಕಾಂಗಿನಲ್ಲಿ ಸಂಗಮಿಸುತ್ತದೆ.

ಅಗ್ನೇಯ ಕರಾವಳಿ ಪ್ರದೇಶ ತುಂಬ ಕಿರಿದಾದ್ದು. ಇದು ಸೈಯಾಮ್ ಖಾರಿಗೆ ಇದಿರಾಗಿದೆ. ಮಧ್ಯ ಕಣಿವೆ ಹಾಗೂ ಕಾಂಬೋಡಿಯದಿಂದ ಇದನ್ನು ಎತ್ತರವಾದ ಪರ್ವತಗಳು ಪ್ರತ್ಯೇಕಿಸುತ್ತವೆ. ಈ ಪರ್ವತಗಳು ಕೆಲವೆಡೆಗಳಲ್ಲಿ 1500 ಮೀ ಎತ್ತರವಾಗಿದೆ. ಕರಾವಳಿಯ ಅಂಚಿನಲ್ಲೂ ನದೀ ಕಣಿವೆಗಳಲ್ಲೂ ಜನಸಂದಣಿ ಹೆಚ್ಚು.

ಥೈಲೆಂಡಿನ ಪರ್ಯಾಯ ದ್ವೀಪ ಪ್ರದೇಶದ ಉತ್ತರದಲ್ಲಿ ಮಧ್ಯ ಕಣಿವೆ ಇದೆ. ಅಲ್ಲಿಂದ ದಕ್ಷಿಣದಲ್ಲಿರುವ ಮಲಯದ ಗಡಿಯ ವರೆಗೆ ಹಬ್ಬಿರುವ ಈ ಪ್ರದೇಶದ ಉದ್ದ ಸು. 960 ಕಿಮೀ ಇದರ ಅಗಲ 16 ಕಿಮೀ 216 ಕಿಮೀ ವರೆಗೆ ವ್ಯತ್ಯಾಸವಾಗುತ್ತದೆ. ಇದರ ಪಶ್ಚಿಮದಲ್ಲಿ ಅಂಡಮಾನ್ ಸಮುದ್ರವೂ ಪೂರ್ವದಲ್ಲಿ ಸೈಯಾಮ್ ಖಾರಿಯೂ ಇವೆ. ದಕ್ಷಿಣೋತ್ತರವಾಗಿ, ಹೆಚ್ಚು ಕಡಿಮೆ ಸಮಾಂತರವಾಗಿ, ಹಬ್ಬಿರುವ ಪರ್ವತಶ್ರೇಣಿಗಳು ಇದನ್ನು ಪೂರ್ವ ಹಾಗೂ ಪಶ್ಚಿಮ ಕರಾವಳಿಗಳಾಗಿ ವಿಂಗಡಿಸಿದೆ. ಪಶ್ಚಿಮ ಕರಾವಳಿ ಕಿರಿದು; ಕೆಲವೆಡೆಗಳಲ್ಲಿ ಪರ್ವತ ನೇರವಾಗಿ ಕಡಲೊಳಕ್ಕೆ ಇಳಿದಿದೆ. ಸಮುದ್ರತೀರ ಹಲವೆಡೆ ತೀರ ಅಂಕು – ಡೊಂಕು ಜವುಗಿನಿಂದ ಕೂಡಿದ್ದು. ಪೂರ್ವ ಕರಾವಳಿ ಹೆಚ್ಚು ಅಗಲ, ಕೆಲವೆಡೆ ಇದು 32 ಕಿಮೀ ಅಗಲವಾಗಿದೆ. ತೀರ ನೇರ. ಕೊಲ್ಲಿಗಳು ಕೆಲವೇ ಕೆಲವು. ಕಡಲ ದಂಡೆ ಉದ್ದವಾಗಿ ಹಬ್ಬಿದೆ. ಪರ್ಯಾಯದ್ವೀಪ ಪ್ರದೇಶದ ಜನವಸತಿ ಇರುವುದು ವಿಶೇಷವಾಗಿ ಕರಾವಳಿಗಳಲ್ಲಿ, ನದೀಕಣಿವೆಗಳಲ್ಲಿ.

ವಾಯುಗುಣ: ಥೈಲೆಂಡಿನದು ಉಷ್ಣವಲಯದ ವಾಯುಗುಣ. ಇಲ್ಲಿಯ ಬಹು ಭಾಗದಲ್ಲಿ ಮೂರು ಋತುಗಳನ್ನು ಖಚಿತವಾಗಿ ಕಾಣಬಹುದು: ಮಾರ್ಚ್ – ಮೇ ಬಿಸಿಲು ಕಾಲ, ಜೂನ್ – ಅಕ್ಟೋಬರ್ ಮಾನ್ಸೂನ್ ಮಳೆಗಾಲ. ನವೆಂಬರ್ – ಮಾರ್ಚ್ ಚಳಿಗಾಲ. ಖಂಡೀಯ ಪ್ರದೇಶದಲ್ಲಿ ಜೂನ್ – ಅಕ್ಟೋಬರ್ ಅವಧಿಯಲ್ಲಿ ವಿಶೇಷವಾಗಿ ಮಳೆಯಾಗುವುದಾದರೂ ಥೈಲೆಂಡಿನ ಪರ್ಯಾಯ ದ್ವೀಪ ಭಾಗದಲ್ಲಿ ಎಲ್ಲ ಋತುಗಳಲ್ಲೂ ಮಳೆಯಾಗುತ್ತದೆ; ಅದರೆ ಪಶ್ಚಿಮ ಕರಾವಳಿಯಲ್ಲಿ ಮೇ – ಅಕ್ಟೋಬರ್‌ನಲ್ಲಿ ಅಧಿಕ ಪೂರ್ವ ಕರಾವಳಿಯಲ್ಲಿ ಅಕ್ಟೋಬರ್ – ಜನವರಿ ಅವಧಿಯಲ್ಲಿ ಹೆಚ್ಚು. ಥೈಲೆಂಡಿನ ಬಹುಭಾಗದಲ್ಲಿ ಉಷ್ಣತೆ $13^0$ ಸೆ. ಗಿಂತ ಕಡಿಮೆಗೆ ಇಳಿಯುವುದಿಲ್ಲ. $35^0$ ಸೆ. ಗಿಂತ ಮೇಲಕ್ಕೆ ಏರುವುದಿಲ್ಲ. ವಾರ್ಷಿಕ ಸರಾಸರಿ ಮಳೆ 1,00 ಸೆಂಮೀ.

ಸಸ್ಯ ಪ್ರಾಣಿ ಜೀವನ: ಥೈಲೆಂಡಿನ ಶೇ. 70 ಭೂಭಾಗ ಅರಣ್ಯಾವೃತ. ನಾನಾ ಬಗೆಯ ಮರಗಿಡಗಳು ಇಲ್ಲಿವೆ. ತೇಗ, ಪೈನ್ ಮುಂತಾದ ಗಟ್ಟಿಮರಗಳೂ, ಬಿದಿರು, ವೀಳೆಯದೆಲೆ, ತೆಂಗು ಮುಂತಾದವೂ ಬೆಳೆಯುತ್ತವೆ. ಕರಾವಳಿಯ ತಗ್ಗಿನ ಪ್ರದೇಶಗಳಲ್ಲಿ ಗುಲ್ಮ ಮತ್ತು ಬೆತ್ತದ ಹುಲ್ಲು ವಿಶೇಷ. ಜೌಗು ಪ್ರದೇಶದಲ್ಲೂ ಸರೋವರಗಳಲ್ಲೂ ಕಮಲವೇ ಮುಂತಾದ ಜಲಸಸ್ಯಗಳಿವೆ.

ಪಶ್ಚಿಮ ಮತ್ತು ಈಶಾನ್ಯದ ಅರಣ್ಯಗಳಲ್ಲಿ ಆನೆಗಳಿವೆ. ಹಿಂದೆ ಹೆಚ್ಚಾಗಿದ್ದ ಖಡ್ಗಮೃಗ ಹಾಗೂ ಟೇಪರ್‌ಗಳು ಈಗ ಅಪರೂಪ. ಹುಲಿ, ಚಿರತೆ, ಜಿಂಕೆ, ಸೈಯಾಂ ಬೆಕ್ಕು ಇವೆ. ನಾಗರಹಾವು, ಕೃಷ್ಣ ಸರ್ಪ, ವಿಷದ ನೀರು ಹಾವುಗಳು ಹೆಚ್ಚು. ಬ್ಯಾಂಗ್‌ಕಾಕ್ ಉರಗ ಸಾಕಣೆ ಕ್ಷೇತ್ರದಲ್ಲಿ ಹಾವುಗಳಿಂದ ಔಷಧಕ್ಕಾಗಿ ವಿಷ ಸಂಗ್ರಹಿಸುತ್ತಾರೆ.

ಕಡಲಲ್ಲಿ ವಿವಿಧ ಬಗೆಯ ಮೀನು. ಸೀಗಡಿ, ನಳ್ಳಿ, ಆಮೆಗಳಿವೆ. ನದಿಸರೋವರಗಳಲ್ಲಿ ಅನೇಕ ಜಾತಿಯ ಮೀನುಗಳು ಸಿಗುತ್ತವೆ. ರೇಷ್ಮೆ ಸಾಕುತ್ತಾರೆ. ಅರಣ್ಯಗಳಲ್ಲಿರುವ ಅನೇಕ ಬಗೆಯ ರೇಷ್ಮೆ ಹುಳುಗಳಲ್ಲಿ ಕೆಲವು ಬಗೆಯನ್ನು ಮಾತ್ರ ಕಸಿ ಮಾಡಲಾಗಿದೆ. ಆನೆಗಳನ್ನು ಪಳಗಿಸಿ ಮರದ ದಿಮ್ಮಿಗಳ ಸಾಗಣೆಗೂ ಇತರ ಕೆಲಸಗಳಿಗೂ ಉಪಯೋಗಿಸುತ್ತಾರೆ.

ಜನಜೀವನ: ಥೈಲೆಂಡಿನಲ್ಲಿ ವಿಭಿನ್ನ ಇತಿಹಾಸ, ಭಾಷೆ, ಧರ್ಮ, ರೂಪ ಜೀವನವಿಧಾನಗಳ 30 ಜನಾಂಗಗಳಿವೆ. ಆದರೆ ಲಾವೋಸಿನ ಲಾವೋ ಮಯನ್ಮಾರ್‌ನ ಷಾನ್ ಮತ್ತು ದಕ್ಷಿಣ ಚೀನೀ ಗುಂಪುಗಳ ಹತ್ತಿರ ಸಂಬಂಧವುಳ್ಳ ಥೈ ಜನರೇ ಒಟ್ಟು ಜನಸಂಖ್ಯೆಯ ಶೇ. 80 ರಷ್ಟು ಇದ್ದಾರೆ. ಥೈಲೆಂಡಿನಲ್ಲಿರುವ ಥೈ ಜನರನ್ನು ಮೂರು ದೊಡ್ಡ ಹಾಗೂ ಮೂರು ಸಣ್ಣ ಗುಂಪುಗಳಾಗಿ ವಿಂಗಡಿಸಬಹುದು. ಮಧ್ಯದ ಕಣಿವೆ, ಪರ್ಯಾಯದ್ವೀಪ ಮತ್ತು ಆಗ್ನೇಯ ಕರಾವಳಿಯ ಥೈಗಳದು (ಸಯಾಮೀ) ಒಂದು ದೊಡ್ಡ ಗುಂಪು. ಈಶಾನ್ಯದಲ್ಲಿನ (ಖೋರಾತ್) ಪೂರ್ವ ಥೈಗಳದೂ ಉತ್ತರ ಥೈಲೆಂಡಿನ ಉತ್ತರ ಥೈಗಳದೂ ಇನ್ನೆರಡು ದೊಡ್ಡ ಗುಂಪುಗಳು. ಈಶಾನ್ಯ ಖೋರಾತ್‌ನ ಪುಥೈ, ಉತ್ತರ ಥೈಲೆಂಡಿನ ವಾಯವ್ಯ ಕೊನೆಯ ಷಾನ್, ಉತ್ತರ ಥೈಲೆಂಡಿನ ಈಶಾನ್ಯ ವಿಭಾಗದಲ್ಲೂ – ಇವು ಸಣ್ಣ ಗುಂಪುಗಳು. ಎಲ್ಲ ಥೈಗಳೂ ಸಮಾನ ಭಾಷೆಯಿಂದ ಒಂದಾಗಿದ್ದಾರೆ. ಅಲ್ಪಸಂಖ್ಯಾತ ಜನಾಂಗಗಳಲ್ಲಿ ಮುಖ್ಯವಾದವು. ಚೀನಿ, ಭಾರತೀಯ, ಮಲಯ್, ಕಾಂಬೋಡಿಯನ್, ಕುಯಿ, ಕಾಲಿಯೂಗೆ ಮೋನ್, ವಿಯಟ್ನಾಮಿ ಅಥವಾ ಅನ್ನಾಮೀ ಮತ್ತು ಕರೆನ್. ಭಾರತೀಯರು ದೇಶದಲ್ಲೆಲ್ಲ ಅಲ್ಲಲ್ಲಿ ಹರಡಿದ್ದಾರೆ. ಇವರ ಮುಖ್ಯ ಕಸಬು ವ್ಯಾಪಾರ ಮಲೇಷ್ಯದ ಗಡಿಯ ಬಳಿ , ದಕ್ಷಿಣಪರ್ಯಾಯ ದ್ವೀಪದಲ್ಲಿ ಮಲಯನರಿದ್ದಾರೆ; ಆಗ್ನೇಯ ಕರಾವಳಿಯಲ್ಲೂ ಅಲ್ಪ ಸಂಖ್ಯೆಯಲ್ಲಿದ್ದಾರೆ. ಕಾಂಬೋಡಿಯನ್ ಗಡಿಯ ಉದ್ದಕ್ಕೂ ಕಾಂಬೋಡಿಯನ್ನರಿದ್ದಾರೆ. ಕುಯಿಗಳೂ ಕಾಲಿಯೂಂಗರೂ ಇರುವುದು ಈಶಾನ್ಯದಲ್ಲಿ. ಮೋನ್ ಜನರು ಪರ್ಯಾಯ ದ್ವೀಪ ಭಾಗದಲ್ಲಿ ಮಯನ್ಮಾರ್ ಗಡಿಯುದ್ದಕ್ಕೂ ಇದ್ದಾರೆ; ಇತರೆಡೆಗಳಲ್ಲಿ ಖೋರಾತ್‌ನಲ್ಲೂ ಆಗ್ನೇಯ ವಿಯೆಟ್ನಾಮಿ ಅಥವಾ ಅನಾಮೀ ಜನರು ದಕ್ಷಿಣ ಖೋರಾತ್‌ನಲ್ಲೂ ಆಗ್ನೇಯ ಕರಾವಳಿಯಲ್ಲೂ ಇದ್ದಾರೆ. ಕರೆನ್ ಜನರು ಮಯನ್ಮಾರ್ ಗಡಿಯ ಉದ್ದಕ್ಕೂ ಇದ್ದಾರೆ. ಇವರಲ್ಲದೆ ಅಖಾ, ಮುಸ್ಸೊ, ವಿಯೊ, ಕಾಮೂಕ್, ಟಿನ್, ಲಾವ, ಸಟಿ ಮುಂತಾದ ಇಪ್ಪತ್ತು ಅಲ್ಪಸಂಖ್ಯಾತ ಗುಂಪುಗಳನ್ನು ಕಾಣಬಹುದು. ಈ ಗುಂಪುಗಳದು ಆದಿಮಸ್ವರೂಪ. ಈ ಗುಂಪುಗಳ ಜನಸಂಖ್ಯೆ ಅಲ್ಪ. ಪರ್ವತ ಪ್ರದೇಶಗಳಲ್ಲೂ ಅರಣ್ಯಗಳಲ್ಲೂ ಇವರು ವಾಸಿಸುತ್ತಾರೆ.

ಭಾಷೆ: ಥೈ ಭಾಷೆಯಲ್ಲಿ ನಾಲ್ಕು ಪ್ರಭೇದಗಳುಂಟು. ಉತ್ತರ, ಪೂರ್ವ, ಮಧ್ಯ, (ಬ್ಯಾಂಗ್‌ಕಾಕ್ ಅಥವಾ ಅಧಿಕೃತ) ಮತ್ತು ದಕ್ಷಿಣ ಭಾಗಗಳಲ್ಲಿ ನಾಲ್ಕು ಉಪಭಾಷೆಗಳಿವೆ. ಎಲ್ಲಕ್ಕೂ ಚೀನಿ ಭಾಷೆಯೊಂದಿಗೆ ದೂರದ ನಂಟುಂಟು. ಒಂದು ಉಪಭಾಷೆಯನ್ನಾಡುವವರು ಇನ್ನೊಂದು ಉಪಭಾಷೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲರು. ಅಲ್ಪಸಂಖ್ಯಾತ ಜನಾಂಗಗಳವರು ತಂತಮ್ಮ ಭಾಷೆಗಳನ್ನಾಡುವವರಾದರೂ ಥೈ ಭಾಷೆ ಎಲ್ಲರಿಗೂ ಅರ್ಥವಾಗುತ್ತದೆ. ಚೀನೀಯರು ದ್ವಿಭಾಷಿಗಳು. ಇಂಗ್ಲಿಷನ್ನು ಹಲವು ಪ್ರೌಢಶಾಲೆಗಳಲ್ಲೂ ಕಾಲೇಜುಗಳಲ್ಲೂ ಬೋಧಿಸಲಾಗುತ್ತದೆ. ಇದನ್ನು ಅಧಿಕಾರಿ ಹಾಗೂ ವಾಣಿಜ್ಯವರ್ಗಗಳು ಬಳಸುತ್ತವೆ.

ಧರ್ಮ: ರಾಜ್ಯದಲ್ಲಿ ಹೀನಯಾನ ಬೌದ್ಧಮತ ಪ್ರಧಾನ. ಜನಸಂಖ್ಯೆಯಲ್ಲಿ ಶೇ. 90 ರಷ್ಟು ಮಂದಿ ಬೌದ್ಧರು. ಕೆಲವು ಕಡೆ ಸರ್ವಚೇತನ ಪಂಥ ಮತ್ತು ಭೂತಗಳಲ್ಲಿ ನಂಬಿಕೆ ಈಗಲೂ ಇದೆ. ದಕ್ಷಿಣದಲ್ಲಿ ಮಲಯ ಮುಸಲ್ಮಾನರ ಸಂಖ್ಯೆ ಹೆಚ್ಚು. ಕ್ರೈಸ್ತರು ಅಲ್ಪಸಂಖ್ಯಾತರು; ಅವರ ವಾಸ ಹೆಚ್ಚಾಗಿ ಬ್ಯಾಂಗ್‌ಕಾಕ್ ಮತ್ತು ರಾಜ್ಯದ ಉತ್ತರ ಭಾಗ. ಅವರಲ್ಲಿ ರೋಮನ್ ಕೆಥೊಲಿಕ್ ಕ್ರೈಸ್ತರೇ ಹೆಚ್ಚು. ಥೈಲೆಂಡಿನಲ್ಲಿರುವ ಚೀನೀಯರು ಸನ್‌ಫ್ಯೂಷಿಯಸ್ ಧರ್ಮವನ್ನನುಸರಿಸುತ್ತಾರೆ. ಸು. 4,000ಕ್ಕೂ ಮಿಗಿಲಾಗಿ ಹಿಂದು ಕುಟುಂಬಗಳು ಥೈಲೆಂಡಿನಲ್ಲಿವೆ. ಅರಮನೆಯಲ್ಲಿ ಧಾರ್ಮಿಕ ವಿಧಿಗಳಲ್ಲಿ ಭಾರತೀಯ ಪುರೋಹಿತರ ಪಾತ್ರ ಪ್ರಧಾನ; ಇಲ್ಲಿ ಹಿಂದು ಧಾರ್ಮಿಕ ವಿಧಿಗಳು ಬೌದ್ಧ ಜೋತಿಷ್ಯದಲ್ಲಿ ಹಾಸುಹೊಕ್ಕಾಗಿವೆ. ಹಿಂದು ಪುರೋಹಿತರು ಜೋತಿಷ್ಯದಲ್ಲಿ ನಿಪುಣರು. ರಾಷ್ಟ್ರ ಪಂಚಾಂಗವನ್ನು ರಚಿಸುತ್ತಾರೆ.

ವ್ಯವಸಾಯ: ರಾಷ್ಟ್ರದ ಉತ್ಪನ್ನದಲ್ಲಿ ವ್ಯವಸಾಯದ ಭಾಗ ಶೇ. 30. ಇಲ್ಲಿಯ ಭೂಮಿಯಲ್ಲಿ 1/4 ಭಾಗ ವ್ಯವಸಾಯಕ್ಕೆ ಒದಗಿದೆ. ಜನಸಂಖ್ಯೆಯ 3/4 ಭಾಗ ವ್ಯವಸಾಯವೇ ಕಸಬು. ಇಲ್ಲಿಯ ಮುಖ್ಯ ಬೆಳೆಗಳು ಬತ್ತ, ಮುಸುಕಿನ ಜೋಳ, ನೆಲಗಡಲೆ, ಸೋಯಬೀನ್ಸ್, ಚಹ, ರಬ್ಬರ್, ಸೆಣಬು ಸುವರ್ಣಗೆಡ್ಡೆ. ಪ್ರಪಂಚದ ಪ್ರಮುಖ ಅಕ್ಕಿ ರಫ್ತುದಾರ ದೇಶಗಳಲ್ಲಿ ಥೈಲೆಂಡ್ ಒಂದು. ಇಲ್ಲಿ ಉತ್ತಮ ಜಾನುವಾರು ಹಾಗೂ ಹಂದಿಗಳನ್ನು ಸಾಕುತ್ತಾರೆ.

ಅರಣ್ಯಗಾರಿಕೆ: ಚೌಬೀನೆಗೆ ಯೋಗ್ಯವಾದ ಗಟ್ಟಿಮರಗಳು ಅರಣ್ಯಗಳಲ್ಲಿವೆ. ಚೌಬೀನೆಯಿಂದ ಅಧಿಕ ಲಾಭ ದೊರಕುತ್ತದೆ. ಅರಣ್ಯಗಳಲ್ಲಿ ರಬ್ಬರ್ ಮರಗಳ ಬೆಳೆ 19 ನೆಯ ಶತಮಾನದಲ್ಲಿ ಆರಂಭವಾಯಿತು. ರಬ್ಬರ್ ಪ್ಲಾಂಟೇಷನ್‌ಗಳು ಹೆಚ್ಚಾಗಿವೆ. 2000 ರಲ್ಲಿ 2,88,400 ಘಮೀ ತೇಗವೂ 28,01,200 ಘಮೀ ಇತರ ಮರಗಳೂ ಉತ್ಪಾದನೆಯಾದುವು.

ಮೀನುಗಾರಿಕೆ: ರಾಜ್ಯದ ಆರ್ಥಿಕ ಮುನ್ನಡೆಯಲ್ಲಿ ಮೀನುಗಾರಿಕೆಯೂ ಪ್ರಧಾನ. 2000ದಲ್ಲಿ 3500 ಮೆಟ್ರಿಕ್ ಟನ್ ಮೀನುಗಳನ್ನೂ 500 ಮೆಟ್ರಿಕ್ ಟನ್ ಒಳನಾಡ ಮೀನುಗಳನ್ನೂ ಹಿಡಿಯಲಾಯಿತು.

ಖನಿಜಗಳು: ಥೈಲೆಂಡಿನಲ್ಲಿ ಹೆಚ್ಚಾಗಿ ಸಿಗುವ ಖನಿಜ ತವರ. ಪರ್ಯಾಯ ದ್ವೀಪ ಭಾಗದಲ್ಲಿ ಸು. 650 ತವರದ ಗಣಿಗಳಿವೆ. ಪ್ರಪಂಚದ ತವರದ ಉತ್ಪಾದನೆಯಲ್ಲಿ ಥೈಲೆಂಡ್‌ಗೆ 3 ನೆಯ ಸ್ಥಾನ. ಇಲ್ಲಿ ದೊರಕುವ ಇತರ ಖನಿಜಗಳು ಟಂಗ್‌ಸ್ಟನ್ ಕಬ್ಬಿಣ ಅದಿರು, ಸೀಸ, ಅಂಟಿಮೋನಿ.

ಕೈಗಾರಿಕೆ: ಪ್ರಮುಖ ನಗರಗಳಲ್ಲಿ ಜವಳಿ ಗಿರಣಿಗಳಿವೆ. ಗಾಜು, ಸಿಮೆಂಟ್, ಸಕ್ಕರೆ, ಚೌಬೀನೆ, ಕಾರ್ಖಾನೆಗಳಿವೆ. ಬ್ಯಾಂಗ್‌ಕಾಕ್, ತನ್‌ಬರೀ ಪ್ರಮುಖ ಕೈಗಾರಿಕಾ ಕೇಂದ್ರಗಳು. ದೇಶದ ಆಗ್ನೇಯ ಭಾಗದಲ್ಲಿ ಮೀನು ಮತ್ತು ಆಹಾರಗಳ ಡಬ್ಬೀಕರಣ ಕಾರ್ಖಾನೆಗಳೂ ಪೆಟ್ರೋಲ್ ಪರಿಷ್ಕರಣ ಉದ್ಯಮಗಳೂ, ವಜ್ರ ಕೆತ್ತನೆ ಉದ್ಯಮಗಳೂ ಇವೆ.

ಹಣ ವ್ಯವಸ್ಥೆ: ಥೈಲೆಂಡಿನ ನಾಣ್ಯ ಬಾಹ್ಟ್. ಇದನ್ನು 100 ಸಟಾಂಗ್‌ಗಳಾಗಿ ವಿಂಗಡಿಸಲಾಗಿದೆ. 1/2, 5, 10, 20, 25 ಮತ್ತು 50 ಸಟಾಂಗ್‌ಗಳ ಮತ್ತು 1 ಬಾಹ್ಟ್‌ನ ನಾಣ್ಯಗಳೂ 50 ಸೆಟಾಂಗ್ ಮತ್ತು 1, 5, 10, 20, 100, 500 ಬಾಹ್ಟ್ ನೋಟುಗಳು ಚಲಾವಣೆಯಲ್ಲಿವೆ. ಬ್ಯಾಂಕ್ ಆಫ್ ಥೈಲೆಂಡ್ 1942 ರಲ್ಲಿ ಸ್ಥಾಪಿತವಾಯಿತು. ಇದು ದೇಶದ ಕೇಂದ್ರೀಯ ಬ್ಯಾಂಕು.

ಸಾರಿಗೆ: 2000 ರಲ್ಲಿ 20,000 ಕಿಮೀ ರೈಲುಮಾರ್ಗಗಳಿದ್ದುವು. ಬ್ಯಾಂಗ್‌ಕಾಕ್‌ನಿಂದ ದೇಶದ ನಾನಾ ಕಡೆಗಳಿಗೆ ರೈಲುಮಾರ್ಗಗಳಿವೆ. ಕಾಂಬೋಡಿಯ ರೈಲುಮಾರ್ಗದೊಂದಿಗೆ ಸಂಪರ್ಕ ಕಲ್ಪಿಸುವ ಒಂದು ಮಾರ್ಗವೂ ಇದೆ. ರಸ್ತೆಗಳ ಉದ್ದ 25,000 ಕಿಮೀ ಕೆಲವು ರಸ್ತೆಗಳು ವರ್ಷವಿಡೀ ಸಂಚಾರಕ್ಕೆ ಅನುಕೂಲವಾಗಿರುವುದಿಲ್ಲ. ಒಳನಾಡಿನಲ್ಲಿ ಹಾಗೂ ಪರ್ವತ ಪ್ರದೇಶಗಳಲ್ಲಿ ಕಾಲುದಾರಿಗಳಿವೆ. ರಸ್ತೆಗಳಿಲ್ಲದ ಕಡೆ ವಿಮಾನ, ಹೆಲಿಕಾಪ್ಟರ್ ಸಂಚಾರವಿದೆ. ಬ್ಯಾಂಗ್‌ಕಾಕ್ ಆಗ್ನೇಯ ಏಷ್ಯದ ಜಲಮಾರ್ಗದ ಹಾಗೂ ವಾಯುಮಾರ್ಗದ ಮುಖ್ಯ ಕೇಂದ್ರ. ಲಾವೋಸ್‌ನ ಸರಕುಗಳೂ ಈ ರೇವಿನ ಮೂಲಕ ಸಾಗುತ್ತವೆ. ನದಿಗಳ ಮೇಲೆ ಪೂರ್ವಕಾಲದಿಂದಲೂ ನೌಕಾಯಾನವಿದೆ. ಬ್ಯಾಂಗ್‌ಕಾಕ್ ನಗರದ ಉತ್ತರದಲ್ಲಿರುವ ದೊನ್ ಮ ಅಂಗ್ ವಿಮಾನ ನಿಲ್ದಾಣಕ್ಕೆ 28 ಅಂತಾರಾಷ್ಟ್ರೀಯ ವಿಮಾನ ಸಂಸ್ಥೆಗಳ ವಿಮಾನಗಳು ಬಂದು ಹೋಗುತ್ತವೆ ಇದಲ್ಲದೆ ದೇಶದಲ್ಲಿ 20 ಸಣ್ಣ ವಿಮಾನ ನಿಲ್ದಾಣಗಳಿವೆ. ನೊಂಗ್ – ಗು – ಹವೊ ಬಳಿ ಹೊಸ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿತವಾಗಿದೆ.

ಥೈಲೆಂಡಿನ ಪ್ರಮುಖ ನಗರಗಳು: ಬ್ಯಾಂಗ್‌ಕಾಕ್ ಜನಸಂಖ್ಯೆ 30,22,006 (2002). ತನ್‌ಬರೀ, ಜೀಯಾಂಗ್ ಮತ್ತು ನಾಕಾನ್ ರಾಚಾಸಿಮಾ. ಥೈಲೆಂಡಿನ ವಿವಿಧ ಕ್ಷೇತ್ರಗಳು ಈಗ ಮತ್ತಷ್ಟು ಅಭಿವೃದ್ಧಿಗೊಂಡಿವೆ. (ವಿ.ಜಿ.ಕೆ.)

# ದ

**ದಕ್ಷಿಣ ಅಮೆರಿಕ:** ಪಶ್ಚಿಮಾರ್ಧ ಗೋಳದ ದಕ್ಷಿಣದ ಖಂಡ. ಉ. ಅ. $12^0$– ದ. ಅ. $55^0$ ಪ. ರೇ. $35^0$ –$80^0$ ನಡುವೆ ವ್ಯಾಪಿಸಿದೆ. ವಿಸ್ತೀರ್ಣ ಸು. 17,805,200 ಚ.ಕಿಮೀ ಭೂಮಿಯ ಮೇಲ್ಮೈ ನೆಲದ ಶೇ. 12 ರಷ್ಟು ಭಾಗವನ್ನು ಇದು ಆವರಿಸಿದೆ. ಈ ಖಂಡ ಉತ್ತರ – ದಕ್ಷಿಣವಾಗಿ 7600 ಕಿಮೀ ಪೂರ್ವ ಪಶ್ಚಿಮ 6400 ಕಿಮೀ ಇದೆ. ಜನಸಂಖ್ಯೆಯ ದೃಷ್ಟಿಯಿಂದ ಇದು ಐದನೆಯ ದೊಡ್ಡ ಖಂಡ. ಇದರ ಜನಸಂಖ್ಯೆ ಸು. 350,977,000 (2002).

**ಭೂವಿಜ್ಞಾನ :** ದಕ್ಷಿಣ ಅಮೆರಿಕದ ಬ್ರೆಜಿಲ್ ಮತ್ತು ಗಯಾನ ಪ್ರಸ್ಥಭೂಮಿಯಲ್ಲಿ ಅತ್ಯಂತ ಪುರಾತನ ಶಿಲೆಗಳನ್ನು ನೋಡಬಹುದು. ಉತ್ತರ ಅಮೆರಿಕದ ಲೊರೆನ್ಷಿಯನ್ ಶಾಶ್ವತ ಭೂಭಾಗಕ್ಕೆ (ಷೀಲ್ಡ್ ಏರಿಯ) ಇದನ್ನು ಹೋಲಿಸಬಹುದು. ಅಲ್ಲಿನಂತೆ ಇಲ್ಲಿ ಸಹ ಪೂರ್ವ ಕೇಂಬ್ರಿಯನ್ ಯುಗದ ನೈಸ್ (ಗೀರುಶಿಲೆ) ಮತ್ತು ಶಿಸ್ಟ್ (ಪದರು ಶಿಲೆ) ಶಿಲಾ ಸಮೂಹ ಉಂಟು. ಇದನ್ನು ತಳ ಶಿಲಾಸಮುದಾಯ ಎಂದೂ ಕರೆಯುತ್ತಾರೆ. ಈ ಸಮುದಾಯದ ಶಿಲೆಗಳು ಬ್ರೆಜಿಲ್ ಮತ್ತು ಗಯಾನ ಪ್ರಾಂತಗಳಲ್ಲಿ ಅನೇಕ ಕಡೆ ಹೊರಚಾಚಿವೆ. ಕೆಲವು ಭಾಗಗಳಲ್ಲಿ ಇವು ಪೆಲಿಯೊಜೋ಼ಯಿಕ್ ಯುಗದ ಪ್ರಸ್ತರಳಿಂದ ಆವೃತವಾಗಿವೆ. ವಯಸ್ಸು, ಸಂಯೋಜನೆ ಮತ್ತು ಹರವುಗಳಲ್ಲಿ ಇವುಗಳಿಗೆ ಸಾಟಿಯಾದ ಶಿಲೆಗಳನ್ನು ದಕ್ಷಿಣ ಮತ್ತು ಪಶ್ಚಿಮ ಆಫ್ರಿಕದ ಹಲವು ಪ್ರದೇಶಗಳಲ್ಲಿ ಗುರುತಿಸಬಹುದು. ಈ ಆಧಾರದ ಮೇಲೆ ಪ್ರಸಕ್ತ ಪರಸ್ಪರ ಬಹುದೂರ ಚದರಿಹೋಗಿರುವ ಈ ಎರಡೂ ಭೂ ಖಂಡಗಳು ಒಮ್ಮೆ ಅಂದರೆ ಜುರಾಸಿಕ್ ಯುಗದ ತನಕ ಒಟ್ಟಿಗೆ ಏಕಖಂಡವಾಗಿದ್ದವೆಂದು ಭಾವಿಸಲಾಗಿದೆ.

ದಕ್ಷಿಣ ಅಮೆರಿಕದ ಇತರ ಭೂಭಾಗಗಳು ತೀರಪ್ರದೇಶ ಸಮುದ್ರ ಭಾಗಗಳಲ್ಲಿ ಸಂಚಿತವಾದ ಜಲಜಶಿಲೆಗಳಿಂದ ಕೂಡಿವೆ. ಖಂಡದ ಪುರಾತನ ಭೂ ಭಾಗಗಳ ಸವೆತದಿಂದ ಹೊರಬಂದ ಶಿಲಾವಶೇಷಗಳ ಶೇಖರದಿಂದಾದ ಶಿಲೆಗಳೇ ಇವು. ಈ ತೀರಪ್ರದೇಶ ಭೂಭಾಗಗಳು ಹಲವಾರು ಬಾರಿ ಭೂಮಿಯ ಚಟುವಟಿಕೆಗಳಿಗೆ ಸಂಬಂಧಿಸಿದ ಉತ್ಕರ್ಷ, ಅಪಕರ್ಷಗಳಿಗೆ ಒಳಗಾದವು. ಹೀಗಾಗಿ ಮೇಲಕ್ಕೆ ಎತ್ತಲ್ಪಟ್ಟಾಗ ಸಮುದ್ರ ಹಿಂಜರಿಯುತ್ತಲೂ ಕೆಳಕ್ಕೆ ಒತ್ತಲ್ಪಟ್ಟಾಗ ಪಕ್ಕದಲ್ಲಿದ್ದ ಸಮುದ್ರ ಮುಂಜರಿದು ಕರಾವಳಿ ಪ್ರದೇಶಗಳನ್ನು ನೀರಿನಿಂದ ಆವರಿಸುತ್ತಲೂ ಇತ್ತು. ಆಗ ಆ ಭಾಗಗಳಲ್ಲಿ ಜಲಜಶಿಲಾ ಪ್ರಸ್ತರಗಳು ನಿಕ್ಷೇಪಗೊಂಡವು. ಈ ತೆರನಾದ ಹಿಂಜರಿತ – ಮುಂಜರಿತಗಳು (ರಿಗ್ರೆಷನ್ಸ್ – ಟ್ರಾನ್ಸ್‌ಗ್ರೆಷನ್ಸ್) ಹಲವಾರು ಬಾರಿ ಉಂಟಾದವೆನ್ನಲು ಅನೇಕ ಆಧಾರಗಳು ದೊರೆತಿವೆ. ಸಮುದ್ರದ ಮುಂಜರಿತಗಳ ದೆಸೆಯಿಂದ ದಕ್ಷಿಣ ಅಮೆರಿಕ ಖಂಡ ತನ್ನ ವಿಸ್ತೀರ್ಣದಲ್ಲಿ ಸಹ ಸಾಕಷ್ಟು ಪ್ರಮಾಣದಲ್ಲಿ ಹಿಗ್ಗುತ್ತ ಹೋಯಿತೆಂದು ಭಾವಿಸಲಾಗಿದೆ.

ಮಿಸೊಜೋ಼ಯಿಕ್ ಯುಗದಲ್ಲಿ ಖಂಡದ ಪಶ್ಚಿಮ ಮತ್ತು ಉತ್ತರ ತೀರದಲ್ಲಿ ಬಹು ಆಗಾಧ ಪ್ರಮಾಣದ ಒಂದು ಅಭಿನತಿ (ಜಿಯೊಸಿಂಕ್ಲೈನ್) ಇತ್ತು. ಅದರಲ್ಲಿ ಸಹಸ್ರಾರು ಅಡಿಗಳಷ್ಟು ಮಂದವಾದ ಜಲಜಶಿಲಾ ನಿಕ್ಷೇಪಗಳು ಉಂಟಾದವು. ಕ್ರಿಟೇಷಸ್ ಯುಗದ ಅಂತ್ಯ ಕಾಲದಲ್ಲಿ ಈ ಬೃಹನ್ನಿಕ್ಷೇಪಗಳ ಭಾರತದಿಂದ ಅಲ್ಲಿಯ ಭೂ ಹೊರ ಚಿಪ್ಪಿನಲ್ಲಿ ಏರುಪೇರುಗಳು ತಲೆದೋರಿ ಮಟ್ಟಸವಾಗಿದ್ದ ಸ್ತರಗಳು ತೀವ್ರವಾಗಿ ಮಡಿಕೆ ಬಿದ್ದು ಇಡೀ ಭೂಭಾಗವೇ ಮೇಲಕ್ಕೆ ಎತ್ತಲ್ಪಟ್ಟಿತು. ಈ ಬಗೆಯ ಭೂ ಚಟುವಟಿಕೆಗಳು ಟರ್ಷಿಯರಿ ಯುಗದ ಉದ್ದಕೂ ನಡೆಯುತ್ತಿದ್ದು ಕಟ್ಟಕಡೆಗೆ ಪ್ರಖ್ಯಾತವಾದ ಆಂಡೀಸ್ ಪರ್ವತಶ್ರೇಣಿ ತಲೆಯೆತ್ತಿತು. ಇದರ ಜನನಕ್ಕೆ ಹಾಸುಹೊಕ್ಕಾಗಿ ಮಾತೃಶಿಲಾದ್ರವದ ಚಟುವಟಿಕೆಯೂ ತಲೆದೋರಿ ಶಿಲಾದ್ರವ ಹೊರಚಿಪ್ಪಿನ ಅನೇಕ ಕಡೆ ಒಳನುಗ್ಗಿತು. ಹಲವು ಪ್ರದೇಶಗಳಲ್ಲಿ ಅಗ್ನಿಪರ್ವತಗಳೂ ಕಾಣಿಸಿಕೊಂಡವು. ಇವುಗಳಲ್ಲಿ ಹಲವು ಇಂದಿಗೂ ಜಾಗೃತಾವಸ್ಥೆಯಲ್ಲೇ ಇವೆ. ಅನೇಕ ಜ್ವಾಲಾಮುಖಿಗಳು ಕಾದ ಶಿಲಾರಸವನ್ನು ಭಾರಿ ಪ್ರಮಾಣದಲ್ಲಿ ಹೊರಚೆಲ್ಲಿದ್ದವು. ಜುರಾಸಿಕ್ ಯುಗದಲ್ಲಿ ಈ ಬಗೆಯ ಭೂ ಕಾರ್ಯಾಚರಣೆ ದಕ್ಷಿಣ ಚಿಲಿ ಮತ್ತು ಪರಗ್ವೇ ಪ್ರದೇಶಗಳಲ್ಲಿ ತೀವ್ರಗತಿಯಲ್ಲಿ ತಲೆದೋರಿ ಬಹು ವಿಸ್ತಾರವಾದ ಪ್ರದೇಶಗಳಲ್ಲಿ ಬೆಸಾಲ್ಟ್ ಮತ್ತಿತರ ಅಗ್ನಿಶಿಲೆಗಳು ಶೇಖರವಾದುವು. ಇದಕ್ಕೆ ಅತ್ಯಂತ ಉತ್ತಮ ಉದಾಹರಣೆ : ಪರಾನಾ ಪ್ರದೇಶದ ವಿಸ್ತಾರವಾದ ಬಸಾಲ್ಟಿಕ ಶಿಲಾಸಮುದಾಯ.

ಭೂ ಯುಗದ ಕಾರ್ಬಾನಿಫೆರಸ್ ಮತ್ತು ಪ್ಲೀಸ್ಟೊಸೀನ್ ಕಾಲಗಳಲ್ಲಿ ದಕ್ಷಿಣ ಅಮೆರಿಕದ ಬಹುಭಾಗ ಹಿಮನದಿಗಳಿಂದ ಮುಚ್ಚಿಹೋಗಿತ್ತು. ಕಾರ್ಬಾನಿಫೆರಸ್ ಹಿಮಯುಗದ ಕೇಂದ್ರ ದಕ್ಷಿಣ ಬ್ರೆಜಿಲ್ ಮತ್ತು ಪ್ಲೀಸ್ಟೊಸೀನ್ ಹಿಮಯುಗದ ಕೇಂದ್ರ ದಕ್ಷಿಣ ಆಂಡಿಸ್. ಇಂದಿಗೂ ದಕ್ಷಿಣ ಪೆಟಗೋನಿಯ ಪ್ರಸ್ಥಭೂಮಿಯಲ್ಲಿ ಆ ಯುಗದ ಹಿಮದ ಹಾಳೆಗಳ ಚೂರುಪಾರುಗಳನ್ನು ಗುರುತಿಸಬಹುದು.

**ಮೇಲ್ಮೈ ಲಕ್ಷಣ :** ದಕ್ಷಿಣ ಅಮೆರಿಕವನ್ನು ಪಶ್ಚಿಮದ ಪರ್ವತಶ್ರೇಣಿ, ಪೂರ್ವದ ಪ್ರಸ್ಥಭೂಮಿ, ಮಧ್ಯೆ ಇರುವ ಮೈದಾನಗಳು ಎಂಬುದಾಗಿ ಮೂರು ವಿಭಾಗ ಮಾಡಬಹುದು. ಇವುಗಳಲ್ಲಿ ಒಂದೊಂದರಲ್ಲೂ ವೈವಿಧ್ಯವಿದೆ.

**ಪರ್ವತಗಳು :** ಆಂಡೀಸ್ ಪರ್ವತಶ್ರೇಣಿಗಳು ಕೊಲಂಬಿಯದ ಎಲ್ಲೆಯಿಂದ ದಕ್ಷಿಣದ ತುದಿಯವರೆಗೂ ಖಂಡದ ಪಶ್ಚಿಮದಲ್ಲಿ ಹಬ್ಬಿವೆ. ಆಂಡೀಸ್ ಪರ್ವತಸ್ತೋಮ ಈ ಖಂಡದ ಬೆನ್ನೆಲುಬು; 8,800 ಕಿಮೀ ಉದ್ದವಾಗಿರುವ ಇದು ಸರಾಸರಿ ಎತ್ತರದಲ್ಲಿ ಹಿಮಾಲಯ ಪರ್ವತಸ್ತೋಮಕ್ಕೆ ಎರಡನೆಯದೆನಿಸಿದೆ. 6,735 ಮೀ ಗಳಿಗಿಂತ ಎತ್ತರವಾಗಿರುವ ಅನೇಕ ಶಿಖರಗಳಿವೆ.

ಖಂಡದ ವಾಯವ್ಯದಲ್ಲಿ ಇದರ ಶ್ರೇಣಿಗಳೆಲ್ಲ ಒಂದೇ ರಾಶಿಯಾಗಿ, ಬೃಹದಾಕಾರದ ಒಗೆಯುವ ಕಲ್ಲಿನಂತಿದೆ. ಕೆರೆಬಿಯನ್ ಸಮುದ್ರದ ಕಡೆಯಿಂದ ಸಮಾನಾಂತರವಾಗಿ ಉತ್ತರ–ದಕ್ಷಿಣ ಮತ್ತು ಈಶಾನ್ಯ–ನೈಋತ್ಯವಾಗಿ ಬರುವ ಕಾರ್ಡಿಲೇರ ಓರಿಯೆಂಟಲ್, ಕಾರ್ಡಿಲೇರ ಸೆಂಟ್ರಲ್ ಮತ್ತು ಕಾರ್ಡಿಲೇರ ಆಕ್ಸಿಡೆಂಟಲ್ ಎಂಬ ಕವಲುಗಳು ಕೊಲಂಬಿಯದ ನೈಋತ್ಯ ಗಡಿಯ ಬಳಿ ಒಂದಾಗಿ ಈಕ್ವೆಡಾರ್‌ನಲ್ಲಿ ಮುಂದುವರಿಯುತ್ತವೆ. ಈ ಕವಲುಗಳ ನಡುವೆ ಕಣಿವೆಗಳಿವೆ. ಈಕ್ವೆಡಾರ್‌ನಿಂದ ಮುಂದಕ್ಕೆ, ಪೆರುವಿನಲ್ಲಿ ಇವು ಎರಡು ಶ್ರೇಣಿಗಳಾಗಿ, ಖಂಡದ ತೀರದಲ್ಲಿ ಮುಂದುವರಿಯುತ್ತವೆ. ಪಶ್ಚಿಮದ ಶ್ರೇಣಿ ಹೆಚ್ಚು ಎತ್ತರವಾದ್ದು. ಇದರ ಹಿಮಾಚ್ಛಾದಿತ ಉನ್ನತ ಶಿಖರಗಳಲ್ಲಿ ಮುಖ್ಯವಾದವು. ಎರಡು ಶ್ರೇಣಿಗಳ ನಡುವೆ 3,600–4,500 ಮೀ ಎತ್ತರದ ವಿಸ್ತಾರವಾದ ಆಲ್ಟಿಪ್ಲೇನೋ ಪ್ರಸ್ಥಭೂಮಿ ಸಂಕೀರ್ಣವಿದೆ. ಇದು ಹಲವಾರು ಕಣಿವೆಗಳ ಬಲೆಗಳು, ಗಿರಿಗಳು ಮತ್ತು ಮೈದಾನಗಳಿಂದ ಕೂಡಿ ಟಿಬೆಟ್ ಪ್ರಸ್ಥಭೂಮಿ ಅನಂತರ ಎರಡನೆಯದಾಗಿದೆ. ಇಲ್ಲಿರುವ ಸರೋವರಗಳಲ್ಲಿ ಮುಖ್ಯವಾದ್ದು ಟಿಟಿಕಾಕ. ಈ ಪ್ರಸ್ಥಭೂಮಿಯನ್ನು ಕತ್ತರಿಸಿಕೊಂಡು ಹಲವು ನದಿಗಳು ಹರಿಯುತ್ತವೆ. ದಕ್ಷಿಣದಲ್ಲಿ ಆಂಡೀಸ್ ವ್ಯವಸ್ಥೆಯ ಹಲವು ಶ್ರೇಣಿಗಳು ಒಂದಾಗಿ ಏಕೈಕ ಸಂಕೀರ್ಣ ಶ್ರೇಣಿಯಾಗಿ ಪರಿಣಮಿಸುತ್ತವೆ. ಇಲ್ಲಿರುವ ಹಲವು ಉನ್ನತ ಶಿಖರಗಳ ಪೈಕಿ ಅತ್ಯುನ್ನತವಾದ್ದು ಆಕನ್‌ಕಾಗ್ವ (6,960ಮೀ), ಈ ಶಿಖರ ಪಶ್ಚಿಮಾರ್ಧಗೋಳದಲ್ಲೇ ಅತ್ಯಂತ ಎತ್ತರವಾದ್ದು. ಪೆಟಗೋನಿಯದಲ್ಲಿ ಆಂಡೀಸ್ ಶ್ರೇಣಿಯ ಒಂದು ಕವಲು ಸಮುದ್ರದ ಅಡಿಗೆ ಚಾಚಿ, ಕಡಿದಾದ ದಡಗಳಿಂದ ಕೂಡಿದ ಅನೇಕ ಸಣ್ಣ ದ್ವೀಪಗಳಿಂದ ಕೂಡಿದೆ. ಆಂಡೀಸ್ ಪರ್ವತಸ್ತೋಮದಲ್ಲಿ ಸು. 4,864 ಚ.ಕಿಮೀ ಪ್ರದೇಶವನ್ನಾಕ್ರಮಿಸಿಕೊಂಡಿರುವ ಹಿಮನದಿಗಳಿವೆ. ಪರ್ವತಸ್ತೋಮವನ್ನು ಅಲ್ಲಲ್ಲಿ ಕೊರೆದಿರುವ ಈ ಹಿಮನದಿಗಳ ತುದಿಯಲ್ಲಿ ಸರೋವರಗಳಿವೆ; ಇಲ್ಲವೆ ಈ ನದಿಗಳು ಹರಿದು ಸಮುದ್ರ ಸೇರುತ್ತವೆ. ಆಂಡೀಸಿನಲ್ಲಿ ಅನೇಕ ಅಗ್ನಿಪರ್ವತಗಳುಂಟು. ಪೆಸಿಫಿಕ್ ಸಾಗರದ ಅಂಚು ಮಹಾ ಅಗ್ನಿಯುಂಗುರದ ಭಾಗ ಈ ಪರ್ವತ ವ್ಯವಸ್ಥೆಯಲ್ಲಿ ಭೂಕಂಪಗಳು ಸಾಮಾನ್ಯ.

ಪೂರ್ವಕ್ಕೆ ಇರುವ ಗಯಾನ ಮತ್ತು ಬ್ರೆಜಿಲ್ ಪ್ರಸ್ಥಭೂಮಿಗಳಲ್ಲಿ ಅತ್ಯಂತ ಪುರಾತನವಾದ ಸ್ಫಟಿಕ ಶಿಲೆಗಳಿವೆ. ಬಹುತೇಕ ಶಿಲೆಗಳು ಸವೆದಿವೆ. ಗಯಾನ ಪ್ರಸ್ಥಭೂಮಿ 250 ಮೀ ಎತ್ತರಕ್ಕೆ ಹಬ್ಬಿದೆ. ಅಲ್ಲಲ್ಲಿ ಸಣ್ಣ ಬೆಟ್ಟಗಳ ನಡುವೆ ಜೌಗು ತುಂಬಿದ ತಗ್ಗು ನೆಲಗಳಿವೆ. ಇವುಗಳ ಸುತ್ತ ಗೋಪುರಾಕಾರದ ಗ್ರಾನೈಟ್ ಬೆಟ್ಟಗಳಿವೆ. ಇವುಗಳಲ್ಲಿ ಕೆಲವು 610 ಮೀ ಗಳಿಗಿಂತಲೂ ಹೆಚ್ಚು ಎತ್ತರವಾಗಿವೆ. ದಕ್ಷಿಣದ ಅಂಚಿನಲ್ಲಿ ಕಡಿದಾದ ಟಿಮೂಕಮಾಕ ಪರ್ವತ ಶ್ರೇಣಿಯೂ ಕೆಲವು ಎತ್ತರದ ಶಿಖರಗಳೂ ಇವೆ. ಬ್ರೆಜಿಲ್ ಪ್ರಸ್ಥಭೂಮಿಯ ವಿಸ್ತೀರ್ಣ ಸು. 1484800 ಚ.ಕಿಮೀ ಎತ್ತರ ಸು. 900 ಮೀ ಇದರ ಮೇಲೆ ಸಣ್ಣ ಗಿರಿಶ್ರೇಣಿಗಳಿವೆ. ಸ್ಯಾನ್‌ಫ್ರಾನ್ಸಿಸ್ಕೋ ನದಿ ಇದನ್ನು ಆಳವಾಗಿ ಕೊರೆದಿದೆ. ಉತ್ತರದಲ್ಲಿ ಪ್ರಸ್ಥಭೂಮಿ ಕ್ರಮೇಣ ತಗ್ಗುತ್ತ ಸಾಗುತ್ತದೆ. ಆದರೆ ಪೂರ್ವದಲ್ಲಿ ಇದು ಥಟ್ಟನೆ ಇಳಿಯುತ್ತದೆ. ಇದರ ದಕ್ಷಿಣದ ಅಂಚಿನಲ್ಲಿ ಸರದ ಮಾರ್ ಪರ್ವತವಿದೆ. ಅದರಲ್ಲಿ 2,800 ಮೀ ಗಿಂತ ಎತ್ತರವಾದ ಅನೇಕ ಶಿಖರಗಳುಂಟು. ಅವುಗಳ ಪೈಕಿ ಪೀಕೂ ದಾ ಬ್ಯಾಂಡೆರ ಶಿಖರದ ಎತ್ತರ 2,890 ಮೀ ಇದು ಬ್ರೆಜಿಲಿನಲ್ಲಿ ಅತ್ಯುನ್ನತ ಶಿಖರ. ಪೂರ್ವ ಪೆಟಗೋನಿಯದಲ್ಲಿ ಅನೇಕ ಪ್ರಸ್ಥಭೂಮಿಗಳಿವೆ.

**ಮೈದಾನಗಳು :** ವೆನಿಝುವೇಲದಲ್ಲಿರುವ ಆಂಡೀಸ್ ಭಾಗಕ್ಕೂ ಗಯಾನ ಉನ್ನತ ಭೂಮಿಗೂ ನಡುವೆ ಓರಿನೋಕೋ ಕಣಿವೆ ಇದೆ. ಇನ್ನೊಂದು ನದೀ ಕಣಿವೆ ಅಮೇಝಾನ್. ಇದು ಪ್ರಪಂಚದಲ್ಲೇ ಅತ್ಯಂತ ದೊಡ್ಡ ನದೀ ಬಯಲು. ಇದರ ಜಲಾನಯನ ಪ್ರದೇಶದ ವಿಸ್ತೀರ್ಣ 4,355,200 ಚ.ಕಿಮೀ ಇದರ ಪಶ್ಚಿಮದಲ್ಲಿ ಆಂಡೀಸ್, ಉತ್ತರದಲ್ಲಿ ಗಯಾನ ಉನ್ನತ ಪ್ರದೇಶ, ದಕ್ಷಿಣದಲ್ಲಿ ಬ್ರೆಜಿಲ್ ಪ್ರಸ್ಥಭೂಮಿಗಳು ಇವೆ. ಪರಗ್ವೇ ನದೀ ಬಯಲು ಬೊಲಿವೀಯ ಪ್ರಸ್ಥಭೂಮಿಗೂ ಬ್ರೆಜಿಲ್ ಪ್ರಸ್ಥಭೂಮಿಗೂ ನಡುವೆ ಇದೆ.

**ನದಿಗಳು :** ದಕ್ಷಿಣ ಅಮೇರಿಕದ ಮೂರು ತಗ್ಗು ಬಯಲುಗಳಲ್ಲಿ ಮೂರು ಮುಖ್ಯ ನದೀ ಸಮುದಾಯಗಳಿವೆ. ಖಂಡದ ಎಲ್ಲ ದೊಡ್ಡ ನದಿಗಳೂ ಆಂಡೀಸ್ ಪರ್ವತ ಪ್ರದೇಶದಿಂದ ಅಟ್ಲಾಂಟಿಕ್ ಕಡೆಗೆ ಹರಿಯುತ್ತವೆ. ಇವುಗಳಲ್ಲಿ ಅತ್ಯಂತ ದೊಡ್ಡದು ಆಮೇಜಾನ್, ಸು. 6400 ಕಿಮೀ ಉದ್ದದ ಈ ನದಿ ಮಧ್ಯ ಪೆರುವಿನ ಆಂಡೀಸ್‌ನಲ್ಲಿ ಪೆಸಿಫಿಕ್ ಸಾಗರದಿಂದ 160 ಕಿಮೀ ದೂರದಲ್ಲಿ ಉಗಮಿಸುತ್ತದೆ. ಜಗತ್ತಿನಲ್ಲೇ ಅತ್ಯಂತ ದೊಡ್ಡ ಜಲಾನಯನ ಭೂಮಿ ಇದರದು. ಇದಕ್ಕೆ 1,000ಕ್ಕಿಂತ ಹೆಚ್ಚು ಉಪನದಿಗಳಿವೆ. ಇವುಗಳಲ್ಲಿ ಏಳು ಉಪನದಿಗಳು ತಲಾ 1600 ಕಿಮೀ ಗಳಿಗಿಂತ ಉದ್ದವಾಗಿವೆ.

ಪರಗ್ವೇ, ಪರನಾ ಮತು ಉರಗ್ವೇಗಳದು ಎರಡನೆಯ ಮುಖ್ಯ ನದೀ ವ್ಯವಸ್ಥೆ. ಇವು ರೀಯೋಡಿಲ ಪ್ಲಾಟ ಆಳಿವೆಯ ಮೂಲಕ ಸಮುದ್ರ ಸೇರುತ್ತವೆ. ಇವುಗಳ ಜಲಾನಯನ ಪ್ರದೇಶದ ವಿಸ್ತೀರ್ಣ ಸು. 4352000 ಚ.ಕಿಮೀ ಪರಗ್ವೇ ನದಿಯ ಉದ್ದ 2534 ಕಿಮೀ ಪರನಾ 3976 ಕಿಮೀ ಉದ್ದವಾಗಿದೆ. ಮೂರನೆಯ ದೊಡ್ಡ ನದೀ ವ್ಯವಸ್ಥೆ ಓರಿನೋಕೋ. ಇದು 365002 ಚ.ಕಿಮೀ ಜಲಾನಯನ ಪ್ರದೇಶವನ್ನು ಹೊಂದಿದೆ. ಇದರ ಉದ್ದ 2140 ಕಿಮೀ.

ಸ್ಯಾನ್ ಫ್ರಾನ್ಸಿಸ್ಕೋ ನದಿ 2880 ಕಿಮೀ ಉದ್ದವಾಗಿದೆ. ಇದು ಬ್ರೆಜಿಲ್‌ನಲ್ಲಿ ಮೀನಸ್ ಗ್ರೆಯಾಸ್‌ನಲ್ಲಿ ಹುಟ್ಟಿ ಉತ್ತರಾಭಿಮುಖವಾಗಿ 1600 ಕಿಮೀ ಹರಿದು ಪೂರ್ವಕ್ಕೆ ತಿರುಗಿ ಅಟ್ಲಾಂಟಿಕ್ ಸೇರುತ್ತದೆ. ಪೆಸಿಫಿಕ್ ಸಾಗರವನ್ನು ಸೇರುವ ನದಿಗಳು ಚಿಕ್ಕವು.

**ಸರೋವರಗಳು :** ದಕ್ಷಿಣ ಅಮೇರಿಕದ ಅನೇಕ ಸರೋವರಗಳು ಪರ್ವತ ಸರೋವರಗಳು. ಇವುಗಳಲ್ಲಿ ಅತ್ಯಂತ ದೊಡ್ಡದು ಟಿಟಿಕಾಕ. 3,810 ಮೀ ಎತ್ತರದಲ್ಲಿ ಪೆರು ಮತ್ತು ಬೊಲಿವೀಯಗಳ ನಡುವೆ ಇರುವ ಇದರ ಉದ್ದ 176 ಕಿಮೀ ಅಗಲ 56 ಕಿಮೀ ಪೆರುವಿನಲ್ಲಿ ಹೂನಿನ್ ಮತ್ತು ಸರೋಕೋಚ, ಬೊಲಿವೀಯದಲ್ಲಿರುವ ಪೋಯಪೋ–ಇವು ಇತರ ಪರ್ವತ ಸರೋವರಗಳು.

ಪೆಟಗೋನಿಯದಲ್ಲಿ ಇನ್ನೊಂದು ಬಗೆಯ ಸರೋವರಗಳಿವೆ. ಹಿಮ ಪ್ರವಾಹಗಳು ಕರಗಿ ಆದಂಥವು ಇವು. ಬ್ಯೂನಸ್ ಐರೀಸ್, ಅರ್ಜೆಂಟೈನ, ನಾವೆಲ್‌ವಾಪೀ–ಇವು ಉದಾಹರಣೆಗಳು.

**ವಾಯುಗುಣ :** ಖಂಡದ ಹೆಚ್ಚು ಭಾಗ ಉಷ್ಣ ವಲಯದಲ್ಲಿರುವುದರಿಂದ ಆ ಪ್ರದೇಶದಲ್ಲಿ ಉಷ್ಣತೆ ಹೆಚ್ಚು; ಮತ್ತು ಸಾಮಾನ್ಯವಾಗಿ ಹೆಚ್ಚು ಮಳೆ. ದಕ್ಷಿಣಕ್ಕೆ ಹೋದಂತೆಲ್ಲ ಖಂಡದ ಅಗಲ ಕಡಿಮೆ ಆಗುವುದರಿಂದ ಸಮಶೀತೋಷ್ಣವಲಯ ಪ್ರದೇಶ ವಿಶಾಲ ಸಾಗರಗಳ ಪ್ರಭಾವಕ್ಕೆ ಒಳಗಾಗುತ್ತದೆ. ಆಂಡೀಸ್ ಪರ್ವತದ ಎತ್ತರವಾದ ಭಾಗಗಳಲ್ಲಿ–ಸಮಭಾಜಕ ವೃತ್ತ ಪ್ರದೇಶದಲ್ಲಿ ಕೂಡ–ಕಡಿಮೆ ಉಷ್ಣತೆ ಇರುತ್ತದೆ. ಒಟ್ಟಿನಲ್ಲಿ ಖಂಡದಲ್ಲಿ ನಾಲ್ಕು ಬಗೆಯ ವಾಯುಗುಣಗಳಿವೆ: ಉಷ್ಣ, ಸಮಶೀತೋಷ್ಣ, ಶುಷ್ಕ ಮತ್ತು ಶೀತ.

ಅಮೇಝಾನ್ ನದೀಬಯಲು, ಕೊಲಂಬಿಯದ ಪೆಸಿಫಿಕ್ ಕರಾವಳಿ, ಬ್ರೆಜಿಲಿನ ತೀರಪ್ರದೇಶದ ಒಂದು ಭಾಗ–ಈ ಪ್ರದೇಶಗಳದು ಸಮಭಾಜಕ ವೃತ್ತದ ವಾಯುಗುಣ; ಇದು ಉಷ್ಣವಲಯದ ಮಳೆಗಾಡು. ಸರಾಸರಿ $27^0$ಸೆ. ಗಿಂತ ಹೆಚ್ಚು ಉಷ್ಣತೆ ಇರುತ್ತದೆ. ಬೇಸಗೆ ಮತ್ತು ಚಳಿಗಾಲದ ಉಷ್ಣತೆಯ ಅಂತರ ತುಂಬ ಕಡಿಮೆ. ಸಾಮಾನ್ಯವಾಗಿ ಸಮಭಾಜಕ ವೃತ್ತದ ಉತ್ತರದಲ್ಲಿ ಮೇ–ಸೆಪ್ಟೆಂಬರ್‌ನಲ್ಲಿ ಮಳೆ. ಅಲ್ಲಿ ಆಗ ಬೇಸಗೆ. ದಕ್ಷಿಣದಲ್ಲಿ ಅಕ್ಟೋಬರ್–ಏಪ್ರಿಲ್‌ನಲ್ಲಿ ಮಳೆ. ಶುಷ್ಕ ಋತು ಅಷ್ಟೇನೂ ಗಮನಾರ್ಹವಲ್ಲ, ದೀರ್ಘವೂ ಅಲ್ಲ. ಪಶ್ಚಿಮದ ಕಡೆ ಆಂಡೀಸ್ ಪರ್ವತ ಪ್ರದೇಶಗಳ ಕಡೆ ಮಳೆ ತುಂಬ ಹೆಚ್ಚು. ಅಲ್ಲಿ ವರ್ಷವೆಲ್ಲ ಮಳೆ ಹಂಚಿಕೆಯಾಗಿದೆ. ವಾರ್ಷಿಕ ಮಳೆಗಳು ಈ ರೀತಿ ಇವೆ: ಪರಾನದಲ್ಲಿ 245 ಸೆಂಮೀ ಇಕೇಟೋಸ್‌ನಲ್ಲಿ 270 ಸೆಂಮೀ ಕೊಲಂಬಿಯದ ಚೋಕೋ ಪ್ರದೇಶದಲ್ಲಿ 885 ಸೆಂಮೀ

ಉಷ್ಣವಲಯ ವಾಯುಗುಣದ ಎರಡನೆಯ ಬಗೆ ಸವನ್ನ ಹುಲ್ಲುಗಾವಲು. ಹೆಚ್ಚು ಉಷ್ಣತೆ, ಕಡಿಮೆ ಅವಪಾತ, ಗಮನಾರ್ಹವಾದ ಮತ್ತು ದೀರ್ಘವಾದ ಶುಷ್ಕ ಋತು–ಇವು ಇದರ ಲಕ್ಷಣಗಳು. ಮಳೆಗಾಡು ಪ್ರದೇಶದ ಸುತ್ತ ಓರಿನೋಕೊ ಕಣಿವೆ, ಬ್ರೆಜಿಲ್ ಪ್ರಸ್ಥಭೂಮಿ, ಪಶ್ಚಿಮ ಈಕ್ವೆಡಾರ್‌ನ ಒಂದು ಭಾಗ ಇವು ಈ ವಾಯುಗುಣಕ್ಕೆ ಸೇರಿದವು. ಇಲ್ಲಿ ಉಷ್ಣತೆ $6^0$–$17^0$ ಸೆ.

ಸಮಶೀತೋಷ್ಣ ವಾಯುಗುಣ ಮಕರಸಂಕ್ರಾಂತಿ ವೃತ್ತದಿಂದ ದಕ್ಷಿಣಕ್ಕೆ–ಪರಗ್ವೇ, ಬೊಲಿವಿಯದ ಭಾಗಗಳು, ಬ್ರೆಜಿಲ್, ಅರ್ಜೆಂಟೈನ, ಚಿಲಿಗಳಲ್ಲಿ– ಕಂಡುಬರುತ್ತದೆ. ಆಂಡೀಸ್ ಪರ್ವತ ಭಾಗಗಳಲ್ಲೂ ಈ ಬಗೆಯ ವಾಯುಗುಣವುಂಟು. ಅಟ್ಲಾಂಟಿಕ್ ಸಾಗರದ ಕಡೆ ಬೇಸಗೆಯ ಸರಾಸರಿ ಉಷ್ಣತೆ $25^0$ಸೆ. ಚಳಿಗಾಲದಲ್ಲಿ ಉತ್ತರದಿಂದ ದಕ್ಷಿಣಕ್ಕೆ $17^0$ಸೆ. ನಿಂದ $10^0$ಸೆ. ವರೆಗೆ ಉಷ್ಣತೆಯಲ್ಲಿ ವ್ಯತ್ಯಾಸವಾಗುತ್ತದೆ. ಮಳೆಯೂ ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆ ಕಡಿಮೆಯಾಗುತ್ತದೆ. ಮಧ್ಯ ಚಿಲಿಯಲ್ಲಿ ದ.ಅ. $32^0$ ಮತ್ತು $38^0$ ನಡುವೆ ಮೆಡಿಟರೇನಿಯನ್ ಪ್ರದೇಶವನ್ನು ಹೋಲುವ ವಾಯುಗುಣವಿದೆ. ದಕ್ಷಿಣಚಿಲಿಯಲ್ಲಿ ಚಳಿಗಾಲದ ಉಷ್ಣತೆ ಕಡಿಮೆಯಾದರೂ ಅಲ್ಲಿಯ ದಕ್ಷಿಣ ಅಕ್ಷಾಂಶಕ್ಕೆ ಅನುಗುಣವಾದಷ್ಟು ಕಡಿಮೆಯಲ್ಲ. ದ್ವೀಪಗಳಲ್ಲೂ ಕಡಲ್ಗಾಲುವೆ ಪ್ರದೇಶದಲ್ಲೂ ವರ್ಷವೆಲ್ಲ ಉಷ್ಣತೆ ಹೆಚ್ಚು ಕಡಿಮೆ ಏಕರೀತಿಯಾಗಿರುತ್ತದೆ. ಉತ್ತರಾರ್ಧಗೋಳದಲ್ಲಿ ಸುಮಾರು ಇದೇ ಅಕ್ಷಾಂಶದಲ್ಲಿರುವ ಲ್ಯಾಬ್ರಡಾರಿನಲ್ಲಿ ಚಳಿಗಾಲ ಇಲ್ಲಿರುವುದಕ್ಕಿಂತ ತೀವ್ರವಾಗಿರುತ್ತದೆ. ವಾಲ್ಡಿವಿಯ, ಚಿಲಿಗಳಲ್ಲಿ 255 ಸೆಂಮೀ ಮಳೆಯಾಗುತ್ತದೆ. ಪರ್ವತಗಳ ಪಶ್ಚಿಮ ಇಳಿಜಾರುಗಳಲ್ಲಿ ಇದರ ಎರಡರಷ್ಟು ಮಳೆ. ಸ್ವಲ್ಪ ಒಳಭಾಗಕ್ಕೆ ಸಾಗಿದರೆ ಮಳೆ ಗಮನಾರ್ಹವಾಗಿ ಕಡಿಮೆಯಾಗುತ್ತದೆ.

ಆಂಡೀಸ್‌ಗೆ ಪೂರ್ವದ ಪೆಟಗೋನಿಯ ಪ್ರದೇಶ ಮಳೆನೆರಳು ವಲಯದಲ್ಲಿದೆ. ಇಲ್ಲಿ ಮಳೆ ಬಲು ಕಡಿಮೆ, ವಾರ್ಷಿಕ ಉಷ್ಣತೆಯ ಅಂತರ $20^0$ಸೆ. ದಕ್ಷಿಣ ಅಮೇರಿಕದಲ್ಲೇ ಇದು ಗರಿಷ್ಠ. ದ.ಅ. $5^0$ ಮತ್ತು $31^0$ ನಡುವೆ ಇರುವ ಪೆಸಿಫಿಕ್ ಕರಾವಳಿ ಪ್ರದೇಶ ಇನ್ನೊಂದು ಶುಷ್ಕವಲಯ. ಹಂಬೋಲ್ಟ್ ಅಥವಾ ಪೆರು ಶೀತ ಪ್ರವಾಹದಿಂದ ಕೂಡಿದ ಸಮುದ್ರಕ್ಕೂ ಉನ್ನತವಾದ ಆಂಡೀಸ್‌ಗೂ ಸಮೀಪದಲ್ಲಿರುವುದರಿಂದಾಗಿ ಇಲ್ಲಿಯ ವಾತಾವರಣ ಮತ್ತು ಸಾಮಾನ್ಯ ಉಷ್ಣತೆಯಲ್ಲಿ ಏರುಪೇರಾಗುತ್ತದೆ. ಉನ್ನತ ಶ್ರೇಣಿಯಲ್ಲಿರುವ ವಾಯುವಿಗಿಂತ ಸಮುದ್ರದ ಸಮೀಪದ ವಾಯು ಶೀಘ್ರವಾಗಿ ತಣ್ಣಗಾಗುತ್ತದೆ. ಇದರಿಂದಾಗಿ 300 ಮೀ ಗಳಿಂದ 900 ಮೀ ಗಳವರೆಗಿನ ಎತ್ತರದಲ್ಲಿ ಸು. 360 ಮೀ ಗಳ ದಪ್ಪದ ಮೋಡದ ಪದರವೊಂದು ಉಂಟಾಗುತ್ತದೆ. ಇದರಿಂದ ನೆಲದ ಬಳಿಯ ವಾಯು ಬಿಸಿಯಾಗಲು ಆಸ್ಪದವಿಲ್ಲದಂತಾಗುತ್ತದೆ. ಆದ್ದರಿಂದ ಉಷ್ಣತೆ ಯಾವಾಗಲೂ ಕಡಿಮೆಯಾಗಿರುತ್ತದೆ. ಪೆರುವಿನ ಕರಾವಳಿ ಪ್ರದೇಶ ಪ್ರಪಂಚದ ಅತ್ಯಂತ ಮೇಘಾಚ್ಛಾದಿತ ಮರುಭೂಮಿ. ವರ್ಷಕ್ಕೆ ಆರು ತಿಂಗಳು ಬಿಸಿಲು ಬೀಳುವುದಿಲ್ಲ. ಸಾಮಾನ್ಯವಾಗಿ ಮಳೆ ಆಗುವುದೇ ಇಲ್ಲ. ಮಂಜಿನಿಂದ ಸ್ವಲ್ಪ ಆರ್ದ್ರತೆ ಉಂಟಾಗುತ್ತದೆಯಷ್ಟೆ. ಈಶಾನ್ಯ ಕೊಲಂಬಿಯದಿಂದ ವೆನಿಝುವೇಲದ ವರೆಗೂ ಮರುಭೂಮಿ ಹಬ್ಬಿದೆ. ಮತ್ತೊಂದು ಶುಷ್ಕವಲಯ ಇರುವುದು ಈಶಾನ್ಯ ಬ್ರೆಜಿಲಿನಲ್ಲಿ–ಪರ್ನಯೀಬಾ ಮತ್ತು ಸ್ಯಾನ್‌ಫ್ರಾನ್ಸಿಸ್ಕೊ ನದಿಗಳ ನಡುವೆ, ಒಳನಾಡಿನ ಬೆಟ್ಟಸೀಮೆಯಿಂದಾಗಿ ಈಶಾನ್ಯದಿಂದಲೂ ಆಗ್ನೇಯದಿಂದಲೂ ಸಮುದ್ರ ಮಾರುತಗಳು ಬೀಸದಂತೆ ತಡೆಯುಂಟಾಗುತ್ತದೆ. ವಾರ್ಷಿಕ ಸರಾಸರಿ ಮಳೆ 10 ಸೆಂಮೀ ಗಿಂತ ಕಡಿಮೆ. ವಾರ್ಷಿಕ ಸರಾಸರಿ ಉಷ್ಣತೆ $10^0$ ಸೆ. ಗಿಂತ ಕಡಿಮೆ ಇರುವ ಶೀತ ವಾಯುಗುಣವನ್ನು ಅರ್ಜೆಂಟೈನ ಮತ್ತು ಚಿಲಿಯ ದಕ್ಷಿಣ ತುದಿಯಲ್ಲೂ ಆಂಡೀಸ್‌ನಲ್ಲಿ 3450 ಮೀ ಗಳಿಗಿಂತ ಎತ್ತರದಲ್ಲೂ ಕಾಣಬಹುದು.

**ಸಸ್ಯಪ್ರಾಣಿವರ್ಗ :** ದಕ್ಷಿಣ ಅಮೇರಿಕದ ಸಸ್ಯಪ್ರಾಣಿಜೀವನ ವಿಶಿಷ್ಟವಾದ್ದು. ಟರ್ಷಿಯರಿ ಯುಗದಲ್ಲಿ ಆಸ್ಟ್ರೇಲಿಯದಂತೆ ಇದೂ ಪ್ರಪಂಚದ ಇತರ ಭಾಗಗಳಿಂದ ಪ್ರತ್ಯೇಕವಾಗಿದ್ದುದು ಈ ವಿಶಿಷ್ಟತೆಗೆ ಕಾರಣ. ಇಲ್ಲಿಯ ಸಸ್ಯಗಳೂ ಪ್ರಾಣಿಗಳೂ ಹಲವು ಬಗೆಯ ಸಂಬಂಧಗಳ ಮಿಶ್ರಣಗಳ ಫಲ. ಇಲ್ಲಿಯ ಸಸ್ಯ ಪ್ರಾಣಿಗಳ ಅನೇಕ ಪ್ರಾಚೀನ ಗುಂಪುಗಳಿಗೂ ಆಫ್ರಿಕ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮುಂತಾದವುಗಳಲ್ಲಿರುವವಕ್ಕೂ ಸಾಮ್ಯವಿದೆ. ಈಚೆಗೆ ಟರ್ಷಿಯರಿ ಯುಗದ ಕೊನೆಯಲ್ಲಿ ಮತ್ತು ಪ್ಲೀಸ್ಟೋಸೀನ್ ಯುಗದಲ್ಲಿ ಉತ್ತರ ಅಮೇರಿಕದಿಂದಲೋ ಅದರ ಮೂಲಕವೋ ಬಂದಂಥ ಪ್ರಾಣಿಗಳೂ ಇವೆ. ಇವು ಬಹುತೇಕ ಕಶೇರುಕಗಳು. ದಕ್ಷಿಣ ಅಮೇರಿಕ ಖಂಡದೊಳಗೆ ಸಸ್ಯಪ್ರಾಣಿ ವರ್ಗಗಳ ವಿತರಣೆಯ ವಿನ್ಯಾಸ ವೈವಿಧ್ಯಮಯವಾದ್ದು. ವಾಯುಗುಣ ಹಾಗೂ ಪರಿಸರಗಳ ವಿಭಿನ್ನತೆ ಇದಕ್ಕೆ ಕಾರಣ. ಉತ್ತರದಲ್ಲಿರುವ ಉಷ್ಣವಲಯ ಪ್ರದೇಶಗಳು ಸಂಪದ್ಯುಕ್ತವಾದಂಥವು. ದಕ್ಷಿಣ ಭಾಗ ಹಾಗೂ ಆಂಡೀಸ್ ಪ್ರದೇಶ ವಿರಳಯುಕ್ತ.

ದಕ್ಷಿಣ ಅಮೇರಿಕದ ಸಸ್ಯವರ್ಗವನ್ನು ಉಷ್ಣವಲಯದ ಮತ್ತು ಉಪೋಷ್ಣವಲಯದ ಮಳೆ ಕಾಡುಗಳು, ಉಷ್ಣವಲಯದ ಪರ್ಣಪಾತಿ ಕಾಡುಗಳು, ಕಾಟಿಂಗ, ಜೆರೊಫೈಟಿಕ್ ಸಸ್ಯಗಳು, ಉಪ ಅಂಟಾರ್ಕ್‌ಟಿಕ್ ಬೀಚ್ ಕಾಡುಗಳು, ಸವನ್ನಾ, ಪಂಪಾಸ್, ಪರ್ವತ ಸಸ್ಯ–ಎಂದು ವಿಂಗಡಿಸಬಹುದು. ಉಷ್ಣ ಹಾಗೂ ಉಪೋಷ್ಣವಲಯ ಮಳೆಗಾಡುಗಳು ಅಮೇಜಾನ್ ಪ್ರದೇಶದ ಬಹುಭಾಗದಲ್ಲೂ ಬಹುತೇಕ ಗಯಾನಗಳಲ್ಲೂ, ದಕ್ಷಿಣ ಮತ್ತು ಪೂರ್ವ ವೆನಿಝುವೇಲದಲ್ಲೂ ಬ್ರೆಜಿಲ್ ಪ್ರಸ್ಥಭೂಮಿಯ ಅಟ್ಲಾಂಟಿಕ್ ಕಡೆಯ ಇಳಿಜಾರುಗಳಲ್ಲೂ ಕೊಲಂಬಿಯದ ಪೆಸಿಫಿಕ್ ತೀರದಲ್ಲೂ, ಉತ್ತರ ಈಕ್ವೆಡಾರ್‌ನಲ್ಲೂ ಇವೆ. ಅಮೇಜಾನ್ ಪ್ರದೇಶ ಪ್ರಪಂಚದ ಅತಿ ದೊಡ್ಡ ಹಾಗೂ ಬಹುಶಃ ಅತ್ಯಂತ ಪ್ರಾಚೀನ ಅರಣ್ಯ ಪ್ರದೇಶ. ಇದು ಆಂಡೀಸ್ ಪರ್ವತದಲ್ಲೂ ಮುಂದುವರಿದು ಉಪೋಷ್ಣವಲಯದ ಮತ್ತು ಸಮಶೀತೋಷ್ಣವಲಯದ ಮಳೆಗಾಡಿನೊಂದಿಗೆ ಬೆರೆತುಕೊಳ್ಳುತ್ತದೆ. ಉಷ್ಣವಲಯದ ಪರ್ಣಪಾತಿ ಕಾಡುಗಳು ದಕ್ಷಿಣ ಅಮೇರಿಕದ ಉತ್ತರ ಭಾಗದಲ್ಲಿ ವ್ಯಾಪಕವಾಗಿ ಹರಡಿವೆ. ವೆನಿಝುವೇಲ, ಕೊಲಂಬಿಯ ಮತ್ತು ಬ್ರೆಜಿಲ್

ಪ್ರಸ್ಥಭೂಮಿಯಲ್ಲಿ ಸಾಮಾನ್ಯ. ತಕ್ಕಮಟ್ಟಿಗೆ ದೀರ್ಘವಾದ ಶುಷ್ಕ ವಾಯುಗುಣ ಇರುವಲ್ಲಿ ಈ ಕಾಡುಗಳಿವೆ. ಕುಬ್ಜವಾದ, ತಕ್ಕಮಟ್ಟಿಗೆ ವಿರಳವಾದ, ಮುಳ್ಳಿನಿಂದ ಕೂಡಿದ ಮರಗಳು ಕಾಟಿಂಗದ (ಬಿಳಿ ಕಾಡು) ವೈಶಿಷ್ಟ್ಯ. ವರ್ಷದಲ್ಲಿ ಹೆಚ್ಚು ಕಾಲ ಇವು ಪರ್ಣರಹಿತವಾಗುತ್ತವೆ. ಅನಾವೃಷ್ಟಿಯನ್ನು ಎದುರಿಸುವ ಶಕ್ತಿ ಹೊಂದಿರುತ್ತವೆ. ಈಶಾನ್ಯ ಬ್ರೆಜ಼ಿಲ್‌ನಲ್ಲಿ ಇಂಥ ಸಸ್ಯ ಸಾಮಾನ್ಯ. ದಕ್ಷಿಣ ಬ್ರೆಜಿಲ್ ಕಾಡುಗಳು ಉಪವನವನ್ನು ಹೋಲುತ್ತವೆ. ಕೆಲವೆಡೆ ಮರಗಳು ಒತ್ತಾಗಿವೆ. ಆದರೆ ನಡುನಡುವೆ ಸವನ್ನಾ ಹುಲ್ಲುಗಾವಲು ಇರುತ್ತದೆ; ಅಮೆಜಾನ್ ಮಳೆಗಾಡಿನ ಅಂಚಿನಿಂದ ಪರಗ್ವೇ ನದಿಯ ಮೇಲ್ದಂಡೆಯವರೆಗೂ ಹಬ್ಬಿದೆ. ಹುಲ್ಲುಗಾವಲು, ಅಲ್ಲಲ್ಲಿ ಚದುರಿದಂತೆ ಸಣ್ಣ ಮರಗಳು ಇದರ ಮುಖ್ಯಲಕ್ಷಣಗಳು. ಒಣಹವೆಯ ಸಸ್ಯಗಳು-ಕುರುಚಲು ಗಿಡಗಳು, ಪೊದೆಗಳು, ಮುಳ್ಳುಗಿಡಗಳು ಮುಂತಾದವು-ನಡುನಡುವೆ ಸ್ವಲ್ಪ ಆರ್ದ್ರತೆಯಿಂದ ಕೂಡಿದ ಶುಷ್ಕ ವಾಯುಗುಣಗಳಲ್ಲಿ ಬೆಳೆಯುತ್ತವೆ. ವೆನಿಜ಼ುವೇಲ ಕರಾವಳಿ, ಈಶಾನ್ಯ ಕೊಲಂಬಿಯ, ನೈಋತ್ಯ ಈಕ್ವೆಡಾರ್, ಉತ್ತರ ಪೆರುಗಳಲ್ಲಿ ಈ ಬಗೆಯ ಸಸ್ಯಗಳಿವೆ. ಪೆರುವಿನಲ್ಲಿ ಈ ಬಗೆಯ ಸಸ್ಯಗಳು ಮರುಭೂಮಿಯ ಕಡೆಗೆ ತೆಳುವಾಗುತ್ತ ಸಾಗಿ ಕೊನೆಗೆ ಅದೃಶ್ಯವಾಗುತ್ತವೆ. ಉಪ ಅಂಟಾರ್ಕ್‌ಟಿಕ್ ಬೀಚ್ ಕಾಡುಗಳು ಸಮಶೀತೋಷ್ಣ ಮಳೆಗಾಡುಗಳು ದಕ್ಷಿಣ ಚಿಲಿಯಲ್ಲಿವೆ. ವೆನಿಜ಼ುವೇಲದ ಒರಿನೋಕೋ ನದಿಬಯಲಿನಲ್ಲಿ ಸವನ್ನಾ ಹುಲ್ಲುಗಾವಲೂ ಪೂರ್ವ ಅರ್ಜೆಂಟೈನದಲ್ಲಿ ಪಂಪಾಸ್ ಹುಲ್ಲುಗಾವಲೂ ಇವೆ. ಪಂಪಾಸ್ ಪ್ರದೇಶದ ದಕ್ಷಿಣದಲ್ಲಿರುವುದು ಪೆಟಗೋನಿಯನ್ ಸ್ಟೆಪ್ (ಹುಲ್ಲುಗಾವಲು). ಆ್ಯಂಡೀಸ್ ಪರ್ವತದಲ್ಲಿ ಉಷ್ಣೋಷ್ಣವಲಯದ ಮಳೆಗಾಡಿನ ಅಂಚಿನಲ್ಲಿ 1800 ಮೀ ಗಳಿಗಿಂತ ಎತ್ತರಕ್ಕೆ, 3150-3750 ಮೀ ಗಳ ವರೆಗೆ, ಸಮಶೀತೋಷ್ಣವಲಯದ ವಾಯುಗುಣವಿದೆ. ಅಮೆಜಾನ್ ನದಿಯ ಕಡೆಗೆ ಈ ಪ್ರದೇಶ ತೇವವಾಗಿದೆ. ಇಲ್ಲಿ ಅಪ್ಪು ಸಸ್ಯಗಳು ಬೆಳೆಯುತ್ತವೆ. ಮರಗಳು ಒತ್ತಾಗಿರುತ್ತವೆ. ಇನ್ನೂ ಎತ್ತರದಲ್ಲಿ ಹಿಮರೇಖೆಯ ವರೆಗೂ ಆಯಾ ಪ್ರದೇಶಗಳಿಗೆ ವಿಶಿಷ್ಟವಾದ ಸಸ್ಯಗಳನ್ನು ಕಾಣಬಹುದು. ದಕ್ಷಿಣ ಅಮೆರಿಕದ ಪ್ರಾಣಿಜೀವನವೂ ವೈವಿಧ್ಯಪೂರ್ಣವಾದ್ದು. ಪ್ರಪಂಚದ ಉಳಿದ ಭಾಗದಲ್ಲಿ ತಕ್ಕಮಟ್ಟಿಗೆ ಹರಡಿರುವ ಪ್ರಾಣಿಗುಂಪುಗಳು ಅಲ್ಲಿ ಕಾಣಬರುವುದಿಲ್ಲ. ಬಹುಕಾಲ ಈ ಖಂಡ ಪ್ರತ್ಯೇಕವಾಗಿದ್ದುದರ ಪರಿಣಾಮ ಹಲವು ಪ್ರತ್ಯೇಕ ಗುಂಪುಗಳು ಇಲ್ಲಿವೆ. ಕುಟುಂಬ ಮಟ್ಟದಲ್ಲೂ ಸ್ಥಳಿಕ ರೂಪಗಳ ಪ್ರಮಾಣ ಅಧಿಕ. ಸಸ್ಯ ವಲಯಗಳಿಗೆ ಅನುಗುಣವಾಗಿ ಪ್ರಾಣಿಗಳ ಹಂಚಿಕೆಯಾಗಿದೆ. ಅಮೆಜಾನ್ ಬಗೆಯ ಕಾಡುಗಳಲ್ಲಿರುವ ಪ್ರಾಣಿಗಳು ಮರಗಪ್ಪೆ, ಹಲ್ಲಿ, ಕೋತಿ, ಪೋಟೋ, ಕಿಂಕಜಾನ್ ಇತ್ಯಾದಿ. ಪಕ್ಷಿಗಳೂ ಅನೇಕ ಬಗೆ: ಪ್ಯಾಂಗೊಲಿನ್, ಟೈರಂಟ್, ಕೋಟಿಂಗ, ಟಂಗಾರ, ಝೇಂಕಾರ ಪಕ್ಷಿ, ಟೌಕಾನ್, ಮರಕುಟುಕ, ಗಿಳಿ ಮುಂತಾದವು. ಬ್ರೆಜ಼ಿಲ್ ಪ್ರಸ್ಥಭೂಮಿಯಲ್ಲಿ ಹೆಚ್ಚು ಪ್ರಾಣಿಗಳಿಲ್ಲ. ಉರಗ್ವೇ ಮತ್ತು ಗ್ರಾನ್ ಚಾಕೋ ಬಯಲುಗಳಲ್ಲಿ ಕೇಸರವಿರುವ ತೋಳವೂ ಜೌಗು ನೆಲದಲ್ಲಿ ನೀರುಕೋಳಿ ಮತ್ತು ಪುಪ್ಪುಸ ಮೀನೂ ಇವೆ. ಅರ್ಜೆಂಟೈನದ ಪಂಪಾಸ್‌ನಲ್ಲಿ ಇರುವ ಪ್ರಾಣಿಗಳು ಮತ್ತು ಪಕ್ಕಿಗಳು ಕೆಲವು ಮಾತ್ರ: ರ್‍ಹೀಯ, ಒಲೆಹಕ್ಕಿ, ಗ್ವಾನಾಕೋ ಮುಂತಾದವು. ದಕ್ಷಿಣ ಚಿಲಿಯ ಕಾಡುಗಳಲ್ಲಿ ವಿಶಿಷ್ಟವಾದ ಪ್ರಾಣಿಗಳಿವೆ. ಸ್ಥಳಿಕವಾದವುಗಳ ಪ್ರಮಾಣ ಅಧಿಕ. ಗಿಳಿ, ಝೇಂಕಾರ ಪಕ್ಷಿ-ಇವು ದಕ್ಷಿಣದ ತುದಿಯಲ್ಲೂ ಇವೆ. ಅಲ್ಲಿ ಈಗಲೂ ಕೆಲವು ಅತ್ಯಂತ ಪುರಾತನ ಕಶೇರುಕಗಳು ಇವೆ. ಆಂಡೀಸ್ ಪರ್ವತಗಳ ಸರೋವರಗಳು ಅನೇಕ ಬಗೆಯ ಜಲಪಕ್ಷಿಗಳನ್ನು ಆಕರ್ಷಿಸಿವೆ. ರಾಜಹಂಸಗಳು ಉತ್ತರ ಚಿಲಿಯಲ್ಲಿ 4800 ಮೀ ಎತ್ತರದಲ್ಲೂ ಗೂಡು ಕಟ್ಟುತ್ತವೆ. ಭೂತಾಕಾರದ ಕಪ್ಪೆಗಳೇ ಮುಂತಾದ ದ್ವಿಚರಿಗಳು ಟಿಟಿಕಾಕ ಸರೋವರದಲ್ಲಿವೆ. ಗ್ವಾನಾಕೋ, ಜಿಂಕೆ, ದಂಶಕಗಳು, ಗಿನಿಇಲಿ, ನರಿ, ಪ್ಯೂಮ, ಕಾಂಡಾರ್ ಹದ್ದು ಮುಂತಾದವು ಉಂಟು. ಪೆರು ಮತ್ತು ಉತ್ತರ ಚಿಲಿಯ ಪಶ್ಚಿಮ ತೀರದ ಶುಷ್ಕ ಪ್ರದೇಶದಲ್ಲಿ ಹೆಚ್ಚು ಪ್ರಾಣಿಗಳಿಲ್ಲ. ಆದರೆ ನೆರೆಯ ಸಮುದ್ರ ಅನೇಕ ಬಗೆಯ ಜಲಚರಗಳಿಂದ ತುಂಬಿದೆ. ಅಲ್ಲಿಯ ಪಕ್ಷಿಗಳಲ್ಲಿ ಮುಖ್ಯವಾದವು ಪೆಂಗ್ವಿನ್, ಕಡಲು ಕಾಗೆ, ಟರ್ನ್, ನೀರ್ಸಿಳ್ಳಕ್ಕಿ, ಪೆಟ್ರೆಲ್, ನೀರು ಕಾಗೆ, ಪೆಲಿಕನ್ ಮತ್ತು ಬೂಬಿ.

**ಖನಿಜಗಳು :** ದಕ್ಷಿಣ ಅಮೆರಿಕದಲ್ಲಿ ಅನೇಕ ಖನಿಜಗಳು ದೊರೆತರೂ ಕಲ್ಲಿದ್ದಲು ಸಿಗದಿರುವುದರಿಂದ ಕೈಗಾರಿಕೆಗಳ ಬೆಳವಣಿಗೆ ಸಾಧ್ಯವಾಗಿಲ್ಲ. ಆ ಖನಿಜಗಳು ಹೆಚ್ಚಾಗಿ ರಫ್ತಾಗುತ್ತವೆ.

ಆ್ಯಂಡೀಸ್ ಪರ್ವತ ಪ್ರದೇಶದಲ್ಲೇ ಹೆಚ್ಚಾಗಿ ಖನಿಜ ನಿಕ್ಷೇಪಗಳಿವೆ. ದಕ್ಷಿಣ ಈಕ್ವೆಡಾರ್‌ನಿಂದ ಮಧ್ಯ ಚಿಲಿಯ ವರೆಗೆ ನಿಕ್ಷೇಪಗಳು ಹರಡಿವೆ. ಈಕ್ವೆಡಾರ್‌ನಲ್ಲಿ ಚಿನ್ನ, ಬೆಳ್ಳಿ; ಪೆರುವಿನಲ್ಲಿ ತಾಮ್ರ, ಬೆಳ್ಳಿ, ಚಿನ್ನ, ಸತು; ಬೊಲಿವಿಯದಲ್ಲಿ ತಾಮ್ರ, ತವರ, ಬೆಳ್ಳಿ; ಚಿಲಿಯಲ್ಲಿ ತಾಮ್ರ ಮತ್ತು ಬೆಳ್ಳಿ-ಇವು ಮುಖ್ಯ ಖನಿಜಗಳು. ಇಲ್ಲಿಯ ಗಣಿಗಾರಿಕೆ ಹೆಚ್ಚಾಗಿ ವಿದೇಶೀ ಬಂಡವಾಳದಿಂದಲೇ ನಡೆಯುತ್ತದೆ. ಇದರ ಪಶ್ಚಿಮ ತೀರದಲ್ಲಿರುವ ಪೆರುವಿನಲ್ಲಿ ತೈಲ, ನೈಟ್ರೇಟ್ ಮತ್ತು ಕಬ್ಬಿಣ ಅದಿರು ಸಿಗುತ್ತವೆ.

ವಾಯವ್ಯದಲ್ಲಿ ವೆನಿಜ಼ುವೇಲ ಮತ್ತು ಕೊಲಂಬಿಯ ಇವುಗಳದು ಎರಡನೆಯ ಮುಖ್ಯ ಗಣಿ ಪ್ರದೇಶ. ವೆನಿಜ಼ುವೇಲ ಪ್ರಪಂಚದ ಪ್ರಮುಖ ತೈಲೋತ್ಪಾದಕ ದೇಶಗಳಲ್ಲಿ ಒಂದು. ಪ್ರಪಂಚದ ತೈಲೋತ್ಪತ್ತಿಯಲ್ಲಿ ಶೇ. 10 ರಷ್ಟು ಈ ಪ್ರದೇಶದಿಂದ ಬರುತ್ತದೆ. ವೆನಿಜ಼ುವೇಲದ ಗಯಾನ ಪ್ರಸ್ಥಭೂಮಿಯಲ್ಲಿ ಚಿನ್ನ ಮತ್ತು ವಜ್ರ ದೊರಕುತ್ತವೆ. ಇಲ್ಲಿ ಹೇರಳವಾಗಿ ಕಬ್ಬಿಣದ ಅದಿರಿನ ನಿಕ್ಷೇಪಗಳೂ ಇವೆ.

ಬ್ರೆಜ಼ಿಲ್ ಪ್ರಸ್ಥಭೂಮಿ ಮೂರನೆಯ ಮುಖ್ಯ ಖನಿಜ ಪ್ರದೇಶ; ಉತ್ತಮ ದರ್ಜೆಯ ವಜ್ರ, ಚಿನ್ನ, ಕಬ್ಬಿಣದ ಅದಿರು ದೊರಕುತ್ತವೆ. ಇಲ್ಲಿ ಮ್ಯಾಂಗನೀಸ್ ಮತ್ತು ಇತರ ಲೋಹಗಳೂ ದೊರೆಯುತ್ತವೆ. ಉಳಿದ ಕಡೆಗಳಲ್ಲೂ ಅಲ್ಲಲ್ಲಿ ಖನಿಜ ನಿಕ್ಷೇಪಗಳಿವೆ. ದಕ್ಷಿಣ ಬ್ರೆಜ಼ಿಲ್ ಮತ್ತು ಮಧ್ಯ ಚಿಲಿಗಳಲ್ಲಿ ಕಲ್ಲಿದ್ದಲು, ಅರ್ಜೆಂಟೈನದಲ್ಲಿ ತೈಲ ದೊರಕುತ್ತವೆ.

**ಕೃಷಿ :** ವ್ಯವಸಾಯ ಈ ಖಂಡದ ಮುಖ್ಯ ಕಸಬು. ಅತ್ಯಂತ ಪ್ರಾಚೀನವಾದ ಕೃಷಿ ಪದ್ಧತಿಯಿಂದ ಅತ್ಯಾಧುನಿಕವಾದ್ದರ ವರೆಗೆ ನಾನಾ ಬಗೆಯ ಕೃಷಿ ಪದ್ಧತಿಗಳನ್ನಿಲ್ಲಿ ಕಾಣಬಹುದು, ವಾಣಿಜ್ಯ ಬೆಳೆಗಳ ವ್ಯವಸಾಯ ಪೂರ್ವತೀರದಲ್ಲಿ ಹೆಚ್ಚು. ಆದಾಗ್ಯೂ ಖಂಡದ ವಿಶಾಲತೆಗೆ ತಕ್ಕಷ್ಟು ವ್ಯವಸಾಯ ಪ್ರದೇಶಗಳಿಲ್ಲ. ಅಭಿವೃದ್ಧಿ ಹೊಂದಬಹುದಾದ ಪ್ರದೇಶಗಳು ಅನೇಕವಿವೆ. ಸದ್ಯದಲ್ಲಿ ಕೆಲವೆಡೆ ಮಾತ್ರ ಬೇಸಾಯ ನಡೆಯುತ್ತದೆ. ಒಟ್ಟು ರಾಷ್ಟ್ರೀಯ ಆದಾಯದ ಶೇ. 12 ರಷ್ಟು ಕೃಷಿಯಿಂದ ಬರುತ್ತದೆ.

ಖಂಡದ ಮುಖ್ಯ ಬೆಳೆ ಗೋದಿ. ಪ್ರಪಂಚದ ಉಗ್ರಾಣಗಳಲ್ಲಿ ಒಂದಾದ ಉತ್ತರ ಅರ್ಜೆಂಟೈನದಲ್ಲಿ ಸೂಕ್ತ ವಾಯುಗುಣ ಹಾಗೂ ಭೂಗುಣಗಳಿರುವುದರಿಂದ ಇದನ್ನು ಅಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಚಿಲಿ, ಉರುಗ್ವೇ, ಪರಗ್ವೇ, ಬೊಲಿವಿಯ, ಪೆರು, ಕೊಲಂಬಿಯ ಮತ್ತು ವೆನಿಜ಼ುವೇಲಗಳಲ್ಲೂ ಗೋದಿ ಬೆಳೆಯುತ್ತದೆ.

ಬ್ರೆಜಿಲ್‌ನಲ್ಲಿ ಬೆಳೆಯುವಷ್ಟು ಕಾಫಿ ಪ್ರಪಂಚದಲ್ಲಿ ಬೇರೆಲ್ಲೂ ಬೆಳೆಯುವುದಿಲ್ಲ. ಪ್ರಪಂಚದಲ್ಲಿ ಹೆಚ್ಚು ಕಾಫಿ ಬೆಳೆಯುವ ಎರಡನೆಯ ದೇಶ ಕೊಲಂಬಿಯ.

ವಿಶಿಷ್ಟವಾದ ಚಹ ಸೊಪ್ಪನ್ನು ಪರಗ್ವೇಯಲ್ಲಿ ಬೆಳೆಯುತ್ತಾರೆ. ಬ್ರೆಜಿಲ್, ವೆನಿಜ಼ುವೇಲ, ಕೊಲಂಬಿಯ, ಈಕ್ವೆಡಾರ್ ಮತ್ತು ಪೆರುಗಳಲ್ಲಿ ಕೋಕೋ ಬೆಳೆಯುತ್ತದೆ. ಕೋಕೋ ಬೆಳೆಯಲ್ಲಿ ಬ್ರೆಜಿಲಿನದು ಜಗತ್ತಿನಲ್ಲಿ ಎರಡನೆಯ ಸ್ಥಾನ. ಬ್ರೆಜಿಲಿನ ಮತ್ತೊಂದು ಮುಖ್ಯ ಬೆಳೆ ರಬ್ಬರ್. ಪರಗ್ವೇ ಮತ್ತು ಅರ್ಜೆಂಟೈನಗಳಲ್ಲಿ ತಂಬಾಕನ್ನು ಬೆಳೆಯುತ್ತಾರೆ. ವಾಯವ್ಯ ಬ್ಯೂನಸ್ ಐರಿಸ್ ಪ್ರದೇಶದಲ್ಲಿ ಮೆಕ್ಕೆಜೋಳ ಪ್ರಮುಖ ಬೆಳೆ.

**ಪಶುಪಾಲನೆ :** ಪೆಟಗೋನಿಯ, ಉತ್ತರ ಅರ್ಜೆಂಟೈನ, ಉರುಗ್ವೇ, ಪರಗ್ವೇ, ಬೊಲಿವಿಯ, ಬ್ರೆಜಿಲ್ ಪ್ರಸ್ಥಭೂಮಿಯ ಒಳ ಅಂಚು, ಆಂಡೀಸ್‌ನಿಂದ ವೆನಿಜ಼ುವೇಲದ ಮೈದಾನದ ವರೆಗಿನ ಪರ್ವತಪ್ರದೇಶಗಳಲ್ಲಿ ಪಶುಪಾಲನೆ ಹೆಚ್ಚು. ಪೆಟಗೋನಿಯದಲ್ಲಿ ಕುದುರೆಗಳನ್ನೂ ಕುರಿಗಳನ್ನೂ ಸಾಕುತ್ತಾರೆ. ಪಶುಪಾಲನೆ ವಿಶೇಷವಾಗಿರುವ ಅರ್ಜೆಂಟೈನ ಮತ್ತು ಉರುಗ್ವೇಗಳಲ್ಲಿ ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳಿವೆ. ಆಂಡೀಸ್ ಪರ್ವತದ ಬುಡದ ವರೆಗೂ ಇರುವ ಲಪ್ಲಾಟಾ ಪಾರನಾ ತಗ್ಗು ಬಯಲು ಪ್ರದೇಶದ ವಿಶಾಲ ಹುಲ್ಲುಗಾವಲುಗಳಲ್ಲಿ ಅಲ್ಫಾಲ್ಫ ಹುಲ್ಲು ಹೆಚ್ಚಾಗಿ ಬೆಳೆಯುತ್ತದೆ. ಪಂಪಾಸ್‌ನಲ್ಲಿ ಶೇ. 40 ಭಾಗದಷ್ಟು ನೆಲ ಪಶುಪಾಲನೆಗೆ ಮೀಸಲಾಗಿದೆ. ಒಳಭಾಗದಲ್ಲಿ ಶೇ. 90 ಕ್ಕಿಂತಲೂ ಹೆಚ್ಚು ಭಾಗ ಪಶುಪಾಲನೆಗೆ ಒದಗಿಬಂದಿದೆ. ಇಲ್ಲಿ ವಿಶಾಲವಾದ ಗೋಮಾಳಗಳಿವೆ.

ಸಾರಿಗೆ : ದಕ್ಷಿಣ ಅಮೆರಿಕದಂಥ ದೊಡ್ಡ ಖಂಡಕ್ಕೆ ಅನುಗುಣವಾಗಿ ಸಾರಿಗೆ ವ್ಯವಸ್ಥೆ ಬೆಳೆದಿಲ್ಲ. ಖಂಡದಲ್ಲಿ ಅನೇಕ ಪ್ರತ್ಯೇಕ ರಸ್ತೆ ಮತ್ತು ರೈಲ್ವೆ ವ್ಯವಸ್ಥೆಗಳಿವೆ. ಈಚೆಗೆ ಆಂತರಿಕ ಹಾಗೂ ಅಂತಾರಾಷ್ಟ್ರೀಯ ವಾಯುಮಾರ್ಗಗಳು ಖಂಡದ ಏಕತೆ ಸಾಧಿಸಲು ಸಹಾಯಕವಾಗಿವೆ.

ಒಳನಾಡಿನ ಜಲಮಾರ್ಗಗಳು ಅನೇಕ ಪ್ರತಿಕೂಲ ಪರಿಸ್ಥಿತಿಗಳಿಗೆ ಒಳಪಟ್ಟಿವೆ. ಹಲವು ನದಿಗಳಲ್ಲಿ ವರ್ಷದಲ್ಲಿ ಕೆಲಕಾಲ ಸಾಕಷ್ಟು ಹರಿವು ಇರುವುದಿಲ್ಲ. ಪ್ರವಾಹಗಳ ದಿಕ್ಕೂ ಅನುಕೂಲವಾಗಿರುವುದಿಲ್ಲ. ಅಲ್ಲಲ್ಲಿ ನದಿಗಳು ವೇಗವಾಗಿ ಹರಿಯುತ್ತವೆ.

ಅಂತಾರಾಷ್ಟ್ರೀಯ ದೃಷ್ಟಿಯಿಂದ ಪ್ರಮುಖವಾದ ಜಲಮಾರ್ಗ ವ್ಯವಸ್ಥೆಗಳು ಎರಡು: 1. ಪರನಾ-ಉರಗ್ವೇ ವ್ಯವಸ್ಥೆ. ಇದು ನಾಲ್ಕು ದೇಶಗಳಲ್ಲಿ ಹರಡಿದೆ. 2. ಅಮೆಜಾನ್ ಕಣಿವೆ. ಇದು ಆರು ದೇಶಗಳಲ್ಲಿ ವ್ಯಾಪಿಸಿದೆ. ಇವುಗಳಲ್ಲಿ ಒಂದೊಂದೂ ಹಲವು ಸಾವಿರ ಕಿಮೀಗಳ ದೂರ ಯಾನಯೋಗ್ಯವಾಗಿವೆ. ಕೊಲಂಬಿಯದಲ್ಲಿ ಮ್ಯಾಗ್ಡಲೀನ, ವೆನಿಜ಼ುವೇಲದಲ್ಲಿ ಒರಿನೋಕೋ ಬ್ರೆಜ಼ಿಲಿನಲ್ಲಿ ಸಾನ್‌ಫ್ರಾನ್ಸಿಸ್ಕೋ-ಇವೂ ಯಾನಯೋಗ್ಯ. ಉಳಿದ ನದಿಗಳು ಯಾನಾರ್ಹವಾಗಿಲ್ಲ. ಒಟ್ಟಿನಲ್ಲಿ ಆಂತರಿಕ ಜಲಮಾರ್ಗಗಳ ಮೇಲೆ ಸಂಚಾರದ ಪ್ರಮಾಣ ಕಡಿಮೆ. ಇದನ್ನು ಅಭಿವೃದ್ಧಿ ಪಡಿಸಲು ಹೆಚ್ಚು ಅನುಕೂಲಗಳಿಲ್ಲ.

ಸಮುದ್ರ ಸಾರಿಗೆ ಮೂರು ರೀತಿಯವು : 1. ಚಿಲಿ, ಬ್ರೆಜ಼ಿಲ್, ಅರ್ಜೆಂಟೈನ ಮುಂತಾದ ದೇಶಗಳಲ್ಲಿ ಆಯಾ ದೇಶಗಳ ಬಂದರುಗಳ ನಡುವೆ ಸಂಪರ್ಕ ಕಲ್ಪಿಸುವ ಕರಾವಳಿ ಸಾರಿಗೆ, 2. ದಕ್ಷಿಣ ಅಮೆರಿಕದ ವಿವಿಧ ದೇಶಗಳ ನಡುವಣ ಸಾರಿಗೆ, 3. ದಕ್ಷಿಣ

ಅಮೆರಿಕದ ದೇಶಗಳಿಗೂ ಪ್ರಪಂಚದ ಇತರ ದೇಶಗಳಿಗೂ ನಡುವಣ ಸಾರಿಗೆ. ಕಳೆದ ದಶಕದಲ್ಲಿ ದಕ್ಷಿಣ ಅಮೆರಿಕದ ಹಡಗುಗಳು, ಆಮದಿನ ಶೇ. 30ರಷ್ಟು ಹಾಗೂ ರಫ್ತಿನ ಶೇ. 10ರಷ್ಟನ್ನು ಸಾಗಿಸಿದುವು.

ದಕ್ಷಿಣ ಅಮೆರಿಕದ ರೈಲ್ವೆ ವ್ಯವಸ್ಥೆ ತೃಪ್ತಿಕರವಲ್ಲ. ರೈಲ್ವೆಗಳು ಸಾಗಿಸುವ ಸರಕು ಅಲ್ಪ. ಏಕೆಂದರೆ ಭಾರವಾದ ಸರಕುಗಳು ಉತ್ಪಾದನೆಯಾಗುವುದು ಸಾಮಾನ್ಯವಾಗಿ ರಫ್ತಿಗಾಗಿಯೇ. ಅವು ಕರಾವಳಿಯ ಬಳಿಯಲ್ಲಿ ಉತ್ಪಾದನೆಯಾಗುತ್ತವೆ. ಬಹುತೇಕ ಮಾರ್ಗಗಳು ಏಕಪಥೀಯ. ಆದ್ದರಿಂದ ಸಂಚಾರ ಬಲು ನಿಧಾನ. ಗೇಜುಗಳ ವ್ಯತ್ಯಾಸವೂ ಒಂದು ತೊಂದರೆ. 1990ರಲ್ಲಿ ಸು. 112712 ಕಿಮೀ ಉದ್ದದ ರೈಲುಮಾರ್ಗಗಳಿದ್ದುವು. ಇವುಗಳಲ್ಲಿ ಅರ್ಧ ಭಾಗ ಇದ್ದುದು ಅರ್ಜೆಂಟೈನದಲ್ಲಿ, ಸು. 22123 ಕಿಮೀ ಬ್ರೆಜಿಲ್‍ನಲ್ಲಿ. ರೈಲ್ವೆಗಳು ಬಹುತೇಕ ಸರ್ಕಾರಿ ಒಡೆತನದಲ್ಲಿವೆ. ದಕ್ಷಿಣ ಅಮೆರಿಕದಲ್ಲಿ ರಸ್ತೆಗಳು ಸಾಕಷ್ಟು ಇವೆ. 1990ರಲ್ಲಿದ್ದಂತೆ ಒಟ್ಟು ರಸ್ತೆಗಳ ಉದ್ದ 413409 ಕಿಮೀ ದಕ್ಷಿಣ ಅಮೆರಿಕದ ಎಲ್ಲ ರಾಜಧಾನಿಗಳಿಗೂ ದೊಡ್ಡ ನಗರಗಳಿಗೂ ವಿಮಾನ ಸಂಪರ್ಕವುಂಟು.

ಆಮದು-ರಫ್ತು : ಗೋದಿಯಿಂದ ಉಣ್ಣೆಯವರೆಗೂ ಪೆಟ್ರೋಲಿಯಮ್‍ನಿಂದ ಕಾಳಿನ ಎಣ್ಣೆಗಳ ವರೆಗೂ ಖಂಡದ ರಫ್ತು ವೈವಿಧ್ಯಪೂರಿತ. ರಫ್ತು ಸರಕುಗಳಲ್ಲಿ ಮುಖ್ಯವಾದವು ಆಹಾರ ಪದಾರ್ಥಗಳು ಮತ್ತು ಕೈಗಾರಿಕೆಯ ಕಚ್ಚಾ ಸಾಮಗ್ರಿಗಳು. ಬ್ರೆಜಿಲಿನಿಂದ ಹತ್ತಿಬಟ್ಟೆಗಳು, ಈಕ್ವೆಡಾರ್‌ನಿಂದ ಹ್ಯಾಟುಗಳು ಮತ್ತು ಉರಗ್ವೆಯಿಂದ ಮಾಂಸ ರಫ್ತಾಗುತ್ತವೆ. ಖಂಡದ ರಫ್ತಿನಲ್ಲಿ ಶೇ. 75ರಷ್ಟು ಪಾಲು ಅರ್ಜೆಂಟೈನ, ಬ್ರೆಜಿಲ್ ಮತ್ತು ವೆನಿಜುವೇಲ ದೇಶಗಳದು. ಅರ್ಜೆಂಟೈನದಿಂದ ಮಾಂಸ, ಗೋದಿ, ಜೋಳ, ಚರ್ಮ, ಎಣ್ಣೆಗಳೂ ಬ್ರೆಜಿಲಿನಿಂದ ಕಾಫಿ, ಹತ್ತಿ, ಹತ್ತಿಬಟ್ಟೆ, ಕಕಾವೊ, ಚರ್ಮ, ಎಣ್ಣೆ, ಅರಗುಗಳೂ ವೆನಿಜುವೇಲದಿಂದ ಪೆಟ್ರೋಲಿಯಂ ಕಾಫಿ, ಕಕಾವೊ, ಚಿನ್ನ ಮತ್ತು ಪಶುಗಳೂ ರಫ್ತಾಗುತ್ತವೆ. ಕೊಲಂಬಿಯದಿಂದ ಪ್ಲಾಟಿನಂ ಮತ್ತು ಚಿನ್ನ, ಈಕ್ವೆಡಾರಿನಿಂದ ಚಿನ್ನ, ಪೆರುವಿನಿಂದ ಪೆಟ್ರೋಲಿಯಂ ಮತ್ತು ತಾಮ್ರ, ಚಿಲಿಯಿಂದ ತಾಮ್ರ, ನೈಟ್ರೇಟ್ ಮತ್ತು ಕಬ್ಬಿಣ, ಬೊಲಿವಿಯದಿಂದ ತವರ, ಬೆಳ್ಳಿ ಮತ್ತು ಸತು ರಫ್ತಾಗುತ್ತವೆ.

ಆಮದಿನಲ್ಲಿ ಮುಖ್ಯವಾದವು ಆಹಾರ ಪದಾರ್ಥಗಳು, ಪಾನೀಯಗಳು, ಯಂತ್ರಗಳು, ಹತ್ತಿಬಟ್ಟೆಗಳು, ಕಬ್ಬಿಣ ಮತ್ತು ಉಕ್ಕಿನ ಸರಕುಗಳು. ಈ ಖಂಡ ಕೈಗಾರಿಕೆಗಳಲ್ಲಿ ಹಿಂದುಳಿದಿದೆಯೆಂಬುದು ಅದರ ಆಮದು ಮತ್ತು ರಫ್ತುಗಳಿಂದ ವೇದ್ಯವಾಗುತ್ತದೆ.

**ಜನತೆ :** ಖಂಡದಲ್ಲಿ ದಕ್ಷಿಣ ಅಮೆರಿಕನ್ ಇಂಡಿಯನ್, ಯುರೋಪಿಯನ್ ಮತ್ತು ನೀಗ್ರೊ ಎಂಬ ಮೂರು ಮುಖ್ಯ ಬುಡಕಟ್ಟುಗಳಿಂದ ವಿಕಾಸಗೊಂಡಿರುವ ಐದು ದೊಡ್ಡ ಜನಾಂಗಗಳಿವೆ. 1. ಆಂಡಿಯನ್ ಇಂಡಿಯನ್, 2. ಆಂಡಿಯನೇತರ ಇಂಡಿಯನ್, 3. ಯುರೋಪಿಯನ್, 4. ಇಂಡಿಯನ್ ಯುರೋಪಿಯನ್ ಮಿಶ್ರದಿಂದ ಬಂದ ಮೆಸ್ಟಿಜೊಗಳು ಮತ್ತು 5. ಮಿಶ್ರಗೊಂಡ ನೀಗ್ರೊಗಳು.

ದಕ್ಷಿಣ ಕೊಲಂಬಿಯದಿಂದ ಉತ್ತರ ಚಿಲಿಯ ವರೆಗಿನ ಆಂಡೀಸ್ ಪರ್ವತಗಳಲ್ಲಿ ಆಂಡಿಯನ್ ಇಂಡಿಯನರೂ ಗಯಾನ ಪ್ರಸ್ಥಭೂಮಿ, ಅಮೆಜಾನ್ ಬಯಲಿನ ಬಹುಭಾಗ, ಬ್ರೆಜಿಲ್ ಪ್ರಸ್ಥಭೂಮಿಯ ಉತ್ತರ ಮತ್ತು ವಾಯವ್ಯ ಭಾಗಗಳಲ್ಲಿ ಇತರ ಇಂಡಿಯನರೂ ದಕ್ಷಿಣ ಮತ್ತು ಮಧ್ಯ ಚಿಲಿ, ಅರ್ಜೆಂಟೈನದ ಗ್ರಾನ್ ಚಾಕೋ, ನೈಋತ್ಯ ಉರಗ್ವೇ ಮತ್ತು ದಕ್ಷಿಣ ಬ್ರೆಜಿಲ್‍ಗಳಲ್ಲಿ ಸಾಮಾನ್ಯವಾಗಿ ಶುದ್ಧ ಯುರೋಪಿಯನ್ನರೂ ಇದ್ದಾರೆ. ನೀಗ್ರೋ ಅಥವಾ ಮಿಶ್ರ ನೀಗ್ರೊಗಳು ಪ್ರಧಾನವಾಗಿ ಇರುವ ಪ್ರದೇಶಗಳು; ಕೊಲಂಬಿಯ ತಗ್ಗು ಬಯಲು, ಪೂರ್ವ ಮತ್ತು ಆಗ್ನೇಯ ಬ್ರೆಜಿಲ್, ಖಂಡದ ಉಳಿದ ಪ್ರದೇಶಗಳಲ್ಲಿ ಇಂಡಿಯನ್ ಮತ್ತು ಯುರೋಪಿಯನ್ ಮಿಶ್ರ ಜನರಿದ್ದಾರೆ. ಬ್ರೆಜಿಲ್‍ನಲ್ಲಿ ಈ ಮಿಶ್ರಣ ತುಂಬ ಹೆಚ್ಚು.

ದಕ್ಷಿಣ ಅಮೆರಿಕದಲ್ಲಿ ಪ್ರಸ್ತುತ 350 ದ. ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದ್ದು, ಜನಸಂಖ್ಯೆಯ ಬೆಳವಣಿಗೆಯ ದರ ಸಹ ಹೆಚ್ಚಾಗಿಯೇ ಇದೆ. ಆದರೆ ಜನಸಂಖ್ಯೆ ಖಂಡದ ಎಲ್ಲಾ ಭಾಗಗಳಲ್ಲೂ ಸಮನಾಗಿ ಹಂಚಿಕೆಯಾಗಿಲ್ಲ. ಸರಾಸರಿ ಜನ ಸಾಂದ್ರತೆ ಪ್ರತಿ ಚ.ಕಿಮೀ ಕೇವಲ 17 ಜನರು. ಜನಸಂಖ್ಯೆಯ ಬಹುಭಾಗ ಖಂಡದ ಅಂಚಿನಲ್ಲಿ ಹಂಚಿಕೆಯಾಗಿದೆ. ಈ ಖಂಡದ ಶೇ. 50 ಕ್ಕೂ ಹೆಚ್ಚಿನ ಪ್ರದೇಶದಲ್ಲಿ ಜನ ಸಾಂದ್ರತೆ ಚ.ಕಿಮೀ ಗೆ ಕೇವಲ ಎರಡು ಜನಮಾತ್ರ. ಜನಸಂಖ್ಯೆಯ ಹೆಚ್ಚಿನ ಭಾಗ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿದೆ. **(ಕೆ.ಆರ್.ಆರ್.;ಬಿ.ವಿ.ಜಿ.;ಎಂ.ಎಸ್.ಎಸ್.)**

**ದಕ್ಷಿಣ ಆಫ್ರಿಕ :** ಆಫ್ರಿಕ ಖಂಡದ ದಕ್ಷಿಣ ತುದಿಯ ಒಂದು ಗಣರಾಜ್ಯ. ದ.ಅ. $22^0$-$35^0$ ಪೂ.ರೇ. $17^0$-$33^0$ ಗಳ ನಡುವೆ ಇದೆ. ವಾಯವ್ಯದಲ್ಲಿ ನಮೀಬಿಯ, ಉತ್ತರದಲ್ಲಿ ಬೋಟ್ಸ್ವಾನ ಮತ್ತು ಜಿಂಬಾಬ್ವೆ, ಪೂರ್ವದಲ್ಲಿ ಮೊಜಾಂಬಿಕ್ ಮತ್ತು ಸ್ವಾಜೀಲ್ಯಾಂಡ್, ಆಗ್ನೇಯ ಮತ್ತು ದಕ್ಷಿಣದಲ್ಲಿ ಹಿಂದು ಮಹಾಸಾಗರ, ನೈಋತ್ಯದಲ್ಲಿ ಅಟ್ಲಾಂಟಿಕ್ ಸಾಗರ ಇವು ಇದರ ಮೇರೆಗಳು. ಈ ಗಣರಾಜ್ಯದ ಪಶ್ಚಿಮಭಾಗದಲ್ಲಿ ಇದರ ನಡುವೆ ಲೆಸೋತೊ ಎಂಬ ಸ್ವತಂತ್ರ ದೇಶವಿದೆ. ವಿಸ್ತೀರ್ಣ 12,21,037 ಚ.ಕಿಮೀ; ಜನಸಂಖ್ಯೆ 45172000 (2002). ಆಡಳಿತ ಕೇಂದ್ರ ಪ್ರಿಟೋರಿಯ, ವಿಧಾನ (ಲೆಜಿಸ್ಲೆಟಿವ್) ಸಭಾ ಕೇಂದ್ರ ಕೇಪ್ ಟೌನ್; ನ್ಯಾಯಾಡಳಿತ ಕೇಂದ್ರ ಬ್ಲೂಯಫಾಂಟೇನ್.




ಮೇಲ್ಮೈ ಲಕ್ಷಣ : ದಕ್ಷಿಣ ಆಫ್ರಿಕದ ಬಹುಭಾಗ ಸಮುದ್ರಮಟ್ಟದಿಂದ 900 ಮೀ ಗಳಿಗಿಂತ ಎತ್ತರವಾಗಿದೆ. ಕನಿಷ್ಠ ಶೇಕಡ 40 ಭಾಗ 1200 ಮೀ ಗಳಿಗಿಂತ ಎತ್ತರವಾಗಿದೆ. ಜೊಹಾನ್ಸ್‌ಬರ್ಗ್‌ನ ಕೆಲವು ಭಾಗಗಳ ಎತ್ತರ 1800 ಮೀ ಗಳಿಗಿಂತಲೂ ಹೆಚ್ಚು. ಈ ಪ್ರದೇಶ ಬೋರಲಿಟ್ಟ ತಟ್ಟೆಯಂತಿದೆ. ಪಶ್ಚಿಮದಿಂದ ಪೂರ್ವಕ್ಕೆ ಡ್ರಾಕನ್ಸ್‌ಬರ್ಗ್ ಪರ್ವತದ ಕಡೆಗೆ ಸಾಗಿದಂತೆ ನೆಲ ಕ್ರಮಕ್ರಮವಾಗಿ ಏರುತ್ತದೆ. ಡ್ರಾಕನ್ಸ್‌ಬರ್ಗ್‌ನ ಅತ್ಯುನ್ನತ ಶಿಖರ ಮಾಂಟ್ ಓಸುವರ್ಸ್ (3246 ಮೀ). ಪಶ್ಚಿಮ ಮತ್ತು ದಕ್ಷಿಣದ ಕಡಲಂಚು 5-48 ಕಿಮೀ ಅಗಲವಾಗಿದೆ. ಸಮುದ್ರಮಟ್ಟದಿಂದ 150-180 ಮೀ ಎತ್ತರವಾಗಿರುವ ಈ ಪ್ರದೇಶ ಬಲು ಫಲವತ್ತಾದ್ದು. ಇಲ್ಲಿ ನಿಂಬೆ ಜಾತಿಯ ಗಿಡಗಳೂ ದ್ರಾಕ್ಷಿಯೂ ಬೆಳೆಯುತ್ತವೆ. ಇದರ ಉತ್ತರಕ್ಕೆ ಲಿಟ್ಲ್ ಕರೂ ಮತ್ತು ಗ್ರೇಟ್ ಕರೂ ಪ್ರಸ್ಥಭೂಮಿಗಳಿವೆ. ಪರ್ವತಗಳ ನಡುವೆ ಇರುವ ಈ ಪ್ರದೇಶ ಬೆಂಗಾಡು ಅಥವಾ ಅರೆಬೆಂಗಾಡು. ಇದರ ಅಂಚಿನಲ್ಲಿರುವ ಮರಳುಗಾಡು ಕಲಹರಿ ಮರುಭೂಮಿಯೊಂದಿಗೆ ಕೂಡಿಕೊಂಡಿದೆ. ಆರೆಂಜ್ ಫ್ರೀ ಸ್ಟೇಟ್ ಮತ್ತು ಟ್ರಾನ್ಸ್‌ವಾಲ್‌ನ ಪ್ರೈರಿ (ಹುಲ್ಲುಗಾವಲು) ಅಥವಾ ವೆಲ್ಡ್ ಪ್ರದೇಶ ಖನಿಜ ನಿಕ್ಷೇಪಗಳಿಂದ ಪ್ರಸಿದ್ಧವಾಗಿದೆ. ಡ್ರಾಕನ್ಸ್‌ಬರ್ಗ್‌ನಿಂದ ಹಿಂದೂ ಸಾಗರದ ವರೆಗಿನ ಪ್ರದೇಶ ಬೆಟ್ಟ ಕಣಿವೆಗಳಿಂದ ಕೂಡಿ ಸಮುದ್ರದ ಕಡೆಗೆ ಇಳಿಜಾರಾಗಿದೆ. ನಟಾಲಿನ ಈ ಪ್ರದೇಶ ಸಸ್ಯಸಮೃದ್ಧವಾದ್ದು; ಕರಾವಳಿಯ ಬಳಿ ಉಪೋಷ್ಣವಲಯದ ಮರಗಿಡಗಳಿವೆ.

ರಾಜ್ಯದ ಪ್ರಮುಖ ನದಿಗಳು ಆರೆಂಜ್ ಮತ್ತು ಲಿಂಪೋಪೋ. ಆರೆಂಜ್ ನದಿ ಅಟ್ಲಾಂಟಿಕ್ ಸಾಗರಕ್ಕೂ ಲಿಂಪೋಪೋ ಹಿಂದೂ ಸಾಗರಕ್ಕೂ ಹರಿಯುತ್ತವೆ. ವಾಲ್ ಎಂಬುದು ಆರೆಂಜ್‌ನ ಮುಖ್ಯ ಉಪನದಿ.

**ವಾಯುಗುಣ :** ಟ್ರಾನ್ಸ್‌ವಾಲ್‌ನ ಉತ್ತರ ಭಾಗ ವಿನಾ ರಾಜ್ಯದ ಉಳಿದ ಭಾಗವೆಲ್ಲ ಸಮಶೀತೋಷ್ಣವಲಯಕ್ಕೆ ಸೇರಿದೆ. ಉತ್ತರಾರ್ಧಗೋಳದಲ್ಲಿ ಈ ಅಕ್ಷಾಂಶಗಳಿಗೆ ಸೇರಿದ ಪ್ರದೇಶಗಳಿಗಿಂತ ಇಲ್ಲಿಯ ವಾಯುಗುಣ ಹೆಚ್ಚು ಹಿತಕರ. ಸುತ್ತಲೂ ಹರಡಿರುವ ಸಮುದ್ರ ಇದಕ್ಕೆ ಕಾರಣ. ಪಶ್ಚಿಮತೀರದಲ್ಲಿ ಉತ್ತರದ ಕೆಲವು ಭಾಗಗಳಿಗಿಂತ ಕೇಪ್ ಟೌನ್ ಪ್ರದೇಶ ಹೆಚ್ಚು ಬೆಚ್ಚಗಿದೆ. ದಕ್ಷಿಣ ಆಫ್ರಿಕದ ಪಶ್ಚಿಮ ತೀರದಲ್ಲಿ ಹರಿಯುವ ಬೆಂಗ್ವೆಲ ಶೀತೋದಕ ಪ್ರವಾಹದಿಂದಾಗಿ ಉತ್ತರದ ಭಾಗಗಳಲ್ಲಿ ಹೆಚ್ಚು ಚಳಿಯಾಗುತ್ತದೆ. ಪೂರ್ವತೀರದಲ್ಲಿ ಮೊಜಾಂಬಿಕ್ ಉಷ್ಣೋದಕ ಪ್ರವಾಹ ಹರಿದು ಅ ಪ್ರದೇಶವನ್ನು ¨ZÉNÉqÁVzÉ Er Ãzà Ê D¦ ÀðÀ¸À gÀ¸À jÀ ª Á¶ðPÀ G µÀ÷ÚvÉ 5ಸೆ. ಎತ್ತರದ ವೆಲ್ಡ್ ಪ್ರದೇಶದಲ್ಲಿ ಹಗಲು ರಾತ್ರಿಗಳ ಉಷ್ಣತೆಗಳಲ್ಲಿ ತೀವ್ರ ವ್ಯತ್ಯಾಸ ಇರುತ್ತದೆ. ಆದರೆ ಕರಾವಳಿಯ ಬಳಿಯಲ್ಲಿ ಉಷ್ಣತೆಯ ದೈನಿಕ ಏರಿಳಿತಗಳು ಕಡಿಮೆ. ದೇಶದ ಬಹುಭಾಗದಲ್ಲಿ ಮಳೆ ಬಹಳ ಅನಿಶ್ಚಿತ. ದೀರ್ಘ ಅಭಾವ ಪರಿಸ್ಥಿತಿ ಸಂಭವಿಸುವುದುಂಟು. ಇದರಿಂದ ಕೃಷಿಕಾರ್ಯ ಅನೇಕ ವೇಳೆ ನಷ್ಟಕರ. ದೇಶದ ವಾರ್ಷಿಕ ಸರಾಸರಿ ಮಳೆ 25 ಸೆಂಮೀ ಅದರೆ ಶೇ. 30ರಷ್ಟು ಪ್ರದೇಶದಲ್ಲಿ 25 ಸೆಂಮೀ ಗಿಂತಲೂ ಕಡಿಮೆ. ಸಾಮಾನ್ಯವಾಗಿ ಬೇಸಿಗೆಯಲ್ಲೇ ಮಳೆಯಾಗುತ್ತದೆ. ಅದರೆ ಪಶ್ಚಿಮ ಕರಾವಳಿಯಲ್ಲಿ ಚಳಿಗಾಲದ ಮಳೆ. ಇದರದು ಮೆಡಿಟರೇನಿಯನ್ ಪ್ರದೇಶದಂಥ ವಾಯುಗುಣ. ದಕ್ಷಿಣ ಕರಾವಳಿಯಲ್ಲಿ ಕೇಪ್ ಪ್ರದೇಶದಲ್ಲಿ ಎರಡು ಋತುಗಳಲ್ಲೂ ಮಳೆಯಾಗುತ್ತದೆ.

ಸಸ್ಯಪ್ರಾಣಿಜೀವನ : ವಾಯುಗುಣ ಹಾಗೂ ಎತ್ತರದಲ್ಲಿ ವೈವಿಧ್ಯ ಇರುವುದರಿಂದ ಇಲ್ಲಿಯ ಸಸ್ಯಪ್ರಾಣಿಸಂಪತ್ತು ವೈವಿಧ್ಯವಾದದ್ದು. ಪ್ರಪಂಚದಲ್ಲಿರುವ 200 ಸಸ್ಯಕುಟುಂಬಗಳ ಪೈಕಿ 140 ಕುಟುಂಬಗಳ ಸಸ್ಯಗಳು ದಕ್ಷಿಣ ಆಫ್ರಿಕದಲ್ಲಿವೆ. ಇಲ್ಲಿರುವ ಸಸ್ಯಪ್ರಭೇದಗಳು ಸು. 16,000. ಕಳ್ಳಿಯ 200 ಪ್ರಭೇದಗಳೂ ಹುಲ್ಲಿನ 500 ಪ್ರಭೇದಗಳೂ ಉಂಟು. ಚಿರತೆ, ನರಿ, ಸಿಂಹ, ಆನೆ, ಖಡ್ಗಮೃಗ, ಕಾಡೆಮ್ಮೆ, ನೀರಾನೆ, ನಾನಾ ಬಗೆಯ ಉರಗಗಳು ಬಹುತೇಕ ಎಲ್ಲೆಡೆಗಳಲ್ಲೂ ಈಗಲೂ ಇವೆ. ಸು. 900 ಬಗೆಯ ಹಕ್ಕಿಗಳೂ 200 ಬಗೆಯ ಹಾವುಗಳೂ ಉಂಟು. ಇವಲ್ಲದೆ ಸು. 40,000 ಬಗೆಯ ಕೀಟಗಳು, 1,000 ಬಗೆಯ ಮೀನುಗಳೂ ಇವೆ. ಮೋಲ್, ತುಪ್ಪಳು ಹೆಗ್ಗಣ, ಮುಳ್ಳುಹಂದಿ, ಮೊಲ, ಅಳಿಲು ಮೊದಲಾದ 150 ಮೂಷಕ ವರ್ಗದ ಪ್ರಾಣಿಗಳಿವೆ. ಪಕ್ಷಿಗಳಲ್ಲಿ ಪ್ರಮುಖವಾದವು ಸ್ವಾಲೊ, ಷ್ರೈಕ್, ಕೊಕ್ಕರೆ, ಕ್ರೌಂಚ, ಗಿಣಿ, ಡೇಗೆ, ಹದ್ದು, ಗೂಬೆ, ಸೆಕ್ರೆಟರಿ ಬರ್ಡ್, ಗಿನಿಕೋಳಿ, ಬಟೇರ, ಉಷ್ಟ್ರಪಕ್ಷಿ ಮತ್ತು ಮೈನ.

ಜನ : ದಕ್ಷಿಣ ಆಫ್ರಿಕದಲ್ಲಿ ವಿವಿಧ ಬುಡಕಟ್ಟುಗಳ ಸಂಮಿಶ್ರಣವಿದೆ. ಆಫ್ರಿಕನ್ಸ್‌ರೆನಿಸಿದ ಮೂಲ ಡಚ್ ಜನರೂ ಫ್ರೆಂಚ್, ಹ್ಯೂಗೆನಾಟ್, ಜರ್ಮನ್ ವಲಸೆಗಾರರ ವಂಶೀಯರೂ ಬ್ರಿಟಿಷ್ ವಂಶೀಯರೂ ಬಿಳಿಯರು, ಹಾಟೆಂಟಾಟ್‌ರು, ಬಿಳಿ ಮತ್ತು ಆಫ್ರಿಕನ್ ರಕ್ತಗಳ ಮಿಶ್ರಣವಾಗಿರುವವರು ವರ್ಣೀಯರು. ಮಲಯದಿಂದ ಬಂದವರೂ ಭಾರತೀಯ ಸಂಜಾತರೂ, ಚೀನೀಯರೂ ಇಂಡೊನೇಷ್ಯನರೂ ಇದ್ದಾರೆ. ಸ್ಥಳೀಯ ಆಫ್ರಿಕನರಲ್ಲಿ ಹಲವು ಬುಡಕಟ್ಟುಗಳಿವೆ. ಕ್ಸೋಸ, ಝೂಲೂ, ದಕ್ಷಿಣ ಸೋತೊ, ಟ್ಸ್ವಾನ, ಉತ್ತರ ಸೋತೊ, ಟ್ಸೋಂಗ, ಸ್ವಾಜಿ, ಸ್ಡೆಬೆಲೆ, ವೆಂಡಿಯಾ–ಇವು ಪ್ರಮುಖ ಗುಂಪುಗಳು. ಇವರೆಲ್ಲ ಕೃಷಿಕರು ಹಾಗೂ ಗೋವಳರು. ಈ ಜನರಲ್ಲಿ ನಗರವಾಸಿಗಳೂ ಉಂಟು. ನಗರಜೀವಿಗಳಿಗೆ ಹಿಂದಿನ ಬಣದ ನಿಷ್ಠೆ ತಪ್ಪಿಹೋಗಿದೆ.

ದಕ್ಷಿಣ ಆಫ್ರಿಕದಲ್ಲಿ ಕರಿಯರನ್ನು ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರತ್ಯೇಕಿಸಿಡುವ ವರ್ಣಭೇದ ಪದ್ಧತಿ ಇತ್ತು. ಆದರೆ 1990ರ ಅನಂತರ ಈ ಪದ್ಧತಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತ್ತು. 1994ರ ಚುನಾವಣೆಯಲ್ಲಿ ನೆಲ್ಸನ್ ಮಂಡೇಲ ಕರಿಯ ಜನಾಂಗದ ಮೊದಲ ಅಧ್ಯಕ್ಷರಾದರು.

ಈ ದೇಶದ ಪ್ರಮುಖ ನಗರಗಳು ಕೇಪ್ ಟೌನ್, ಪ್ರಿಟೋರಿಯ, ಜೋಹಾನ್ಸ್‌ಬರ್ಗ್, ಡರ್ಬನ್, ಪೋರ್ಟ್ ಎಲಿಜ಼ಬತ್, ಜರ್ಮಿಸ್ಟನ್, ಬನೋನಿ, ಬ್ಲೂಮ್‌ಫಾಂಟೀನ್, ಸ್ಪ್ರಿಂಗ್ಸ್ ಮತ್ತು ಈಸ್ಟ್ ಲಂಡನ್.

ಭಾಷೆ : ಪ್ರತಿಯೊಂದು ಜನಾಂಗೀಯ ಗುಂಪಿಗೂ ಅದರದೇ ಆದ ಭಾಷೆಯಿದೆ. ಮುಖ್ಯವಾದ ಭಾಷೆಗಳು ಆಫ್ರಿಕನ್ಸ್ ಮತ್ತು ಇಂಗ್ಲಿಷ್. ಆಫ್ರಿಕನ್ಸ್ ಭಾಷೆ ಇಲ್ಲಿ 17 ನೆಯ ಶತಮಾನದಲ್ಲಿದ್ದ ಡಚ್ ವಲಸೆಗಾರರು ಆಡುತ್ತಿದ್ದ ಭಾಷೆಯ ಪರಿವರ್ತಿತ ರೂಪ. ಇದರಲ್ಲಿ ಹಲವು ಏಷ್ಯನ್, ಆಫ್ರಿಕನ್ಸ್ ಮತ್ತು ಯುರೋಪಿಯನ್ ಭಾಷೆಗಳ ಶಬ್ದಗಳೂ ರಚನೆಗಳೂ ಬೆರೆತುಕೊಂಡಿವೆ. ಇಲ್ಲಿಯ ಬಿಳಿಯ ಜನರಲ್ಲಿ ಅನೇಕರಿಗೆ ಎರಡು ಭಾಷೆಗಳು ಬರುತ್ತವೆ. ವರ್ಣೀಯರು ಆಫ್ರಿಕನ್ಸ್ ಭಾಷೆ ಆಡುತ್ತಾರೆ. ನಗರ ಪ್ರದೇಶಗಳಲ್ಲಿರುವವರು ದ್ವಿಭಾಷಿಗಳು. ಆಫ್ರಿಕನರು ತಮ್ಮ ಭಾಷೆಗಳನ್ನೇ ಆಡುವವರಾದರೂ ತಮ್ಮ ದಣಿಗಳ ಭಾಷೆಗಳನ್ನು ಕಲಿತಿರುತ್ತಾರೆ. ಇಂಗ್ಲಿಷ್ ವ್ಯಾಪಕವಾಗಿ ಬಳಕೆಯಲ್ಲಿದೆ. ಆಫ್ರಿಕನ್ನರ ಶಾಲೆಗಳಲ್ಲಿ ಆಫ್ರಿಕನ್ಸ್ ಈಗ ಕಡ್ಡಾಯ.

ಧರ್ಮ: ಇಲ್ಲಿಯ ಬಿಳಿಯರು ಯುರೋಪ್ ದೇಶಗಳಿಂದ ಬಂದು ನೆಲೆಸಿದವರಾದ್ದರಿಂದ ಇಲ್ಲಿ ಕ್ರೈಸ್ತಧರ್ಮದ ವಿವಿಧ ಪಂಥಗಳಿವೆ. ಅವುಗಳಲ್ಲಿ ಡಚ್ ಸುಧಾರಣಾ ಚರ್ಚ್, ಇಂಗ್ಲೆಂಡಿನ ಪ್ರಾಟೆಸ್ಟಂಟ್ ಮತ, ಮೆಥಾಡಿಸ್ಟ್ ಹಾಗೂ ಕೆಥೊಲಿಕ್ ಪಂಥಗಳು ಪ್ರಮುಖವಾದವು. ಯಹೂದಿ, ಮುಸ್ಲಿಂ ಹಾಗೂ ಹಿಂದು ಧರ್ಮಿಯರು ಅಲ್ಪಸಂಖ್ಯಾತರು.

ಆರ್ಥಿಕತೆ: ಗಣಿಗಾರಿಕೆ: ದಕ್ಷಿಣ ಆಫ್ರಿಕದ ಆರ್ಥಿಕಾಭ್ಯುದಯಕ್ಕೆ ಅಲ್ಲಿಯ ಚಿನ್ನದ ಗಣಿಗಳೇ ಅಡಿಪಾಯ. ಪ್ರಪಂಚದ ಚಿನ್ನದ ಪೂರೈಕೆಯಲ್ಲಿ ಅರ್ಧ ಭಾಗ ಬರುವುದು ದಕ್ಷಿಣ ಆಫ್ರಿಕದ ಗಣಿಗಳಿಂದ. ವಜ್ರ ಇನ್ನೊಂದು ಮುಖ್ಯ ಖನಿಜ. ಇಲ್ಲಿ ಪ್ಲಾಟಿನಮ್, ತವರ, ತಾಮ್ರ, ಸುಣ್ಣ, ಬೆಳ್ಳಿ ಕ್ಲಲಿದ್ದಲು ಹಾಗೂ ಕಬ್ಬಿಣ ಸಿಗುತ್ತವೆ. 1952ರಿಂದ ಈಚೆಗೆ ಯುರೇನಿಯಮ್ಮನ್ನು ಹೆಚ್ಚಾಗಿ ಉತ್ಪಾದಿಸಲಾಗುತ್ತಿದೆ. ಇದು ಚಿನ್ನದ ಅದಿರಿನೊಂದಿಗೆ ಸಿಗುತ್ತದೆ.

ವ್ಯವಸಾಯ: ದಕ್ಷಿಣ ಆಫ್ರಿಕದ ಮುಖ್ಯ ಬೆಳೆಗಳು ಗೋದಿ, ಮೆಕ್ಕೆಜೋಳ, ನೆಲಗಡಲೆ, ಆಲೂಗೆಡ್ಡೆ, ಗೆಣಸು, ಕಬ್ಬು, ಹುಲ್ಲು ಜೋಳ, ಸೋರ್ಗ್ಗಂ, ಹೊಗೆಸೊಪ್ಪು. ಕೇಪ್ ಪ್ರಾಂತ್ಯದ ಪಶ್ಚಿಮ ಭಾಗದಲ್ಲಿ ದ್ರಾಕ್ಷಿ ತೋಟಗಳಿವೆ. ನಿಂಬೆ ಜಾತಿಯ ಹಣ್ಣುಗಳು, ಬಾಳೆ, ಮರಸೇಬು–ಈ ಹಣ್ಣುಗಳನ್ನು ಜ್ಯಾಮ್ ಮಾಡಿ ಡಬ್ಬೀಕರಿಸಿ ರಫ್ತು ಮಾಡುತ್ತಾರೆ. ಕೆಲವು ಕಡೆಗಳಲ್ಲಿ ಮಳೆಯಿಲ್ಲದೆ ಪೈರಿಗೆ ಆಗಾಗ ನಷ್ಟವಾಗುವುದುಂಟು. ರಾಜ್ಯದ ನೆಲದಲ್ಲಿ ಶೇ. 10ರಷ್ಟು ಭೂಮಿ ಸಾಗುವಳಿಗೆ ಒಳಪಟ್ಟಿದೆ. ದನ ಮತ್ತು ಕುರಿಗಳನ್ನು ಭಾರಿ ಮಂದೆಗಳಲ್ಲಿ ಸಾಕುವುದೂ ಒಂದು ಮುಖ್ಯ ಕಸಬು. ತೊಗಲು ಮತ್ತು ಕುರಿ ತುಪ್ಪಟ ಇಲ್ಲಿಂದ ರಫ್ತಾಗುತ್ತದೆ.

**ಮೀನುಗಾರಿಕೆ:** 1945ರಿಂದ ಇದು ಪ್ರಪಂಚದ ಹತ್ತು ಪ್ರಮುಖ ಮೀನುಗಾರಿಕೆ ದೇಶಗಳಲ್ಲೊಂದಾಗಿದೆ. ಈಗ ಇದರದು ಆರನೆಯ ಸ್ಥಾನ. ದೇಶದಲ್ಲಿ ಮೀನು ಸೇವನೆ ಅಧಿಕವಾಗುತ್ತಿದೆಯಾದರೂ ಇದು ಅಲ್ಲಿಯವರ ಆಹಾರದಲ್ಲಿ ಪ್ರಮುಖವಲ್ಲ. ಡಬ್ಬೀಕರಿಸಲಾದ ಮೀನಿನಲ್ಲಿ ಶೇ. 78–80 ರಷ್ಟನ್ನು ರಫ್ತು ಮಾಡಲಾಗುತ್ತಿದೆ.

**ಕೈಗಾರಿಕೆ:** ರಾಷ್ಟ್ರೀಯ ವರಮಾನದ ಅತ್ಯಂತ ಹೆಚ್ಚಿನ ಅಂಶ ಬರುವುದು ಕೈಗಾರಿಕೆಯಿಂದ. ಅನಂತರದ ಸ್ಥಾನಗಳು ಅನುಕ್ರಮವಾಗಿ ಕೃಷಿ, ವಾಣಿಜ್ಯ, ಗಣಿಗಾರಿಕೆ ಇವುಗಳದು. ಎರಡನೆಯ ಮಹಾಯುದ್ಧದ ಅನಂತರ ಕೈಗಾರಿಕೆಗಳು ಶೀಘ್ರವಾಗಿ ಬೆಳೆದಿವೆ. ಹತ್ತಿ ಮತ್ತು ಉಣ್ಣೆ, ಜವಳಿ, ಚಕ್ಕಳ ಹದ ಮಾಡುವುದು, ಮೋಟಾರು ವಾಹನಗಳ ಜೋಡಣೆ, ಕೃತಕ ರಬ್ಬರ್ ತಯಾರಿಕೆ–ಇವು ಪ್ರಮುಖ ಕೈಗಾರಿಕೆಗಳು. ಪೋರ್ಟ್ ಎಲಿಜಬತ್, ಯೂಟೆನ್‌ಹೇಗ್ ಮತ್ತು ಡರ್ಬನ್ ಪ್ರಮುಖ ಕೈಗಾರಿಕಾ ಕೇಂದ್ರಗಳು.

**ಸಾರಿಗೆ:** ದಕ್ಷಿಣ ಆಫ್ರಿಕದಲ್ಲಿ 9600 ಕಿಮೀ ರಾಷ್ಟ್ರೀಯ ಹೆದ್ದಾರಿಗಳೂ 208000 ಕಿಮೀ ಪ್ರಾಂತೀಯ ರಸ್ತೆಗಳೂ ಇವೆ. ಕೇಪ್ ಪ್ರಾಂತ್ಯದಲ್ಲಿ 8750 ಕಿಮೀ ನಟಾಲ್ ಪ್ರಾಂತ್ಯದಲ್ಲಿ 2449 ಕಿಮೀ ಟ್ರಾನ್ಸ್‌ವಾಲ್‌ನಲ್ಲಿ 2500 ಕಿಮೀ ಆರೆಂಜ್ ಫ್ರೀ ಸ್ಟೇಟ್‌ನಲ್ಲಿ 2670 ಕಿಮೀ ನೈಋತ್ಯ ಆಫ್ರಿಕದಲ್ಲಿ 2325 ಕಿಮೀ ರೈಲುಮಾರ್ಗಗಳಿವೆ. ಪ್ರಮುಖ ರೇವುಗಳಿಗೆ ರೈಲ್ವೆ ಸಂಪರ್ಕ ಏರ್ಪಟ್ಟಿದೆ. ದೇಶದ ಪ್ರಮುಖ ರೇವುಪಟ್ಟಣಗಳು ಡರ್ಬನ್, ಕೇಪ್ ಟೌನ್, ಪೋರ್ಟ್ ಎಲಿಜಬತ್, ಈಸ್ಟ್ ಲಂಡನ್ ಮತ್ತು ಮಾಸೆಲ್ ಬೇ. ಪ್ರಮುಖ ವಿಮಾನ ನಿಲ್ದಾಣಗಳು ಜೋಹಾನ್ಸ್‌ಬರ್ಗ್, ಕೇಪ್ ಟೌನ್, ಡರ್ಬನ್, ಬ್ಲೂಮ್ ಫಾಂಟೇನ್, ಈಸ್ಟ್ ಲಂಡನ್, ಪೋರ್ಟ್ ಎಲಿಜಬತ್‌ಗಳಲ್ಲಿವೆ. (ವಿ.ಜಿ.ಕೆ.)

**ದಕ್ಷಿಣ ಆಸ್ಟ್ರೇಲಿಯ:** ಆಸ್ಟ್ರೇಲಿಯ ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಒಂದುಗೂಡಿರುವ ರಾಜ್ಯಗಳಲ್ಲಿ ಒಂದು. ಆಸ್ಟ್ರೇಲಿಯದ ದಕ್ಷಿಣ ಮಧ್ಯ ಕರಾವಳಿಯಲ್ಲಿದೆ. ಈ ರಾಜ್ಯದ ಪಶ್ಚಿಮದಲ್ಲಿ ಪಶ್ಚಿಮ ಆಸ್ಟ್ರೇಲಿಯ, ಉತ್ತರದಲ್ಲಿ ಉತ್ತರ ಪ್ರದೇಶ (ಟೆರಿಟೊರಿ), ಮತ್ತು ಕ್ವೀನ್ಸ್‌ಲೆಂಡ್, ಪೂರ್ವದಲ್ಲಿ ನ್ಯೂ ಸೌತ್ ವೇಲ್ಸ್, ಕ್ವೀನ್ಸ್ ಲೆಂಡ್ ಮತ್ತು ವಿಕ್ಟೋರಿಯ ರಾಜ್ಯಗಳಿವೆ. ಪಶ್ಚಿಮ ಉತ್ತರ ಪೂರ್ವದಲ್ಲಿ ಅನುಕ್ರಮವಾಗಿ ಪೂ.ರೇ. $120^0$, ದ.ಅ. $26^0$ ಮತ್ತು ಪೂ.ರೇ. $141^0$ಗಳ ಉದ್ದಕ್ಕೆ ಹಬ್ಬಿರುವ ಈ ರಾಜ್ಯದ ವಿಸ್ತೀರ್ಣ 988182 ಚಕಿಮೀ ಆಸ್ಟ್ರೇಲಿಯದ ವಿಸ್ತೀರ್ಣದ ಎಂಟನೆಯ ಒಂದರಷ್ಟು ಇರುವ ಈ ರಾಜ್ಯದ ಜನಸಂಖ್ಯೆ 1514854 ಈ ದೇಶದ ಹತ್ತನೆಯ ಒಂದರಷ್ಟಿದೆ. ಜನಸಂಖ್ಯೆ ಕಡಲ ತೀರದಲ್ಲಿ ಸಾಂದ್ರೀಕೃತವಾಗಿದೆ. ಶೇ. ಸು. 70 ರಷ್ಟುಜನ ರಾಜಧಾನಿ ಆಡಿಲೇಡಿನಲ್ಲಿದ್ದಾರೆ.

ಮೇಲ್ಮೈಲಕ್ಷಣ: ರಾಜ್ಯದ ಅಧಿಕ ಭಾಗ ಸಮತಟ್ಟಾದ. ಭೂಪ್ರದೇಶದಿಂದ ಕೂಡಿದೆ. ಹಾಗೂ ಶೇ. 80 ರಷ್ಟು ಪ್ರದೇಶ ಸಮುದ್ರಮಟ್ಟದಿಂದ 300 ಮೀ ಗಳಿಗೂ ಕಡಿಮೆ ಎತ್ತರದಲ್ಲಿದೆ. ವಾಯವ್ಯದಲ್ಲಿ ತಗ್ಗಾದ ಪ್ರಸ್ಥಭೂಮಿಗಳೂ ಈಶಾನ್ಯದಲ್ಲಿ ಐರ್ ಮುಂತಾದ ತಟ್ಟೆಯಾದ ಸರೋವರ ಪ್ರದೇಶಗಳೂ ಇವೆ. ವಾಯವ್ಯದಲ್ಲಿ ಉತ್ತರದ ಗಡಿಯ ಬಳಿ ಮಸ್ಗ್ರೇವ್ ಪರ್ವತಶ್ರೇಣಿ ಹಬ್ಬಿದೆ. ಇದರ ಅತ್ಯುನ್ನತ ಶಿಖರ ವುಡ್‌ರಫ್ (1420 ಮೀ). ಪೂರ್ವದಲ್ಲಿ ಫ್ಲಿಂಡರ್ಸ್ ಪರ್ವತಶ್ರೇಣಿಯಿದೆ. ದಕ್ಷಿಣ ಆಸ್ಟ್ರೇಲಿಯದ ಪಶ್ಚಿಮ ಭಾಗದಲ್ಲಿರುವ ಗ್ರೇಟ್ ವಿಕ್ಟೋರಿಯ ಮರುಭೂಮಿ ಮತ್ತು ನಲ್ಲಾರ್ಬರ್ ಬಯಲು ಪಶ್ಚಿಮ ಆಸ್ಟ್ರೇಲಿಯಕ್ಕೂ ಹಬ್ಬಿವೆ. ಆಗ್ನೇಯದಲ್ಲಿರುವ ಅನೇಕ ಜಲಾಶಯಗಳಲ್ಲಿ ಟಾರೆನ್ಸ್ ಮತ್ತು ಗೇರ್ಡ್‌ನರ್ ಸರೋವರಗಳು ದೊಡ್ಡವು. ಈ ರಾಜ್ಯದ ಅನೇಕ ನದಿಗಳಲ್ಲಿ ಮಳೆ ಬಂದಾಗ ಮಾತ್ರ ನೀರಿರುತ್ತದೆ. ರಾಜ್ಯದ ಪೂರ್ವ ಪ್ರದೇಶಗಳ ನೆಲದಲ್ಲಿ ತಳಗಡೆ ಹರಿಯುವ ಜಲಪ್ರವಾಹಗಳಿವೆ. ಇವು ಅನೇಕ ಕಡೆಗಳಲ್ಲಿ ಜ್ವಾಲಾಮುಖಿಗಳಂತೆ 39 ಮೀ ಗಳ ವರೆಗಿನ ಎತ್ತರದ ನೀರಿನ ಬುಗ್ಗೆಗಳಾಗಿ ಚಿಮ್ಮುತ್ತವೆ. ದಕ್ಷಿಣದಲ್ಲಿ ಸಮುದ್ರತೀರದಲ್ಲಿ ಜಲಸಂಚಾರ ಯೋಗ್ಯವಾದ ಎರಡು ದೊಡ್ಡ ಖಾರಿಗಳುಂಟು. ಇವುಗಳ ಮಧ್ಯದಲ್ಲಿ 48 ಕಿಮೀ ಅಗಲವಿರುವ ಯಾರ್ಕ್ ಪರ್ಯಾಯದ್ವೀಪವಿದೆ. ಪೂರ್ವದ ಸೇಂಟ್ ವಿನ್ಸೆಂಟ್ ಖಾರಿಯ ಅಗಲ 160 ಕಿಮೀ ಆಡಿಲೇಡ್ ಪಟ್ಟಣ ಇದರ ಪೂರ್ವತೀರದಲ್ಲಿದೆ. ಈ ಖಾರಿಯ ಎರಡು ಪಟ್ಟು ಉದ್ದವಿರುವ ಸ್ಪೆನ್ಸರ್ ಖಾರಿಯ ಉತ್ತರದ ತೀರದಲ್ಲಿ ಕೈಗಾರಿಕಾ ನಗರಗಳಾದ ಪೋರ್ಟ್ ಪಿರೀ, ಪೋರ್ಟ್ ಆಗಸ್ಟ್ ಮತ್ತು ಹ್ವೈಯಾಲ ಇವೆ. ನ್ಯೂ ಸೌತ್ ವೇಲ್ಸ್ ಮತ್ತು ವಿಕ್ಟೋರಿಯ ರಾಜ್ಯಗಳ ಗಡಿಯಲ್ಲಿ ಉಗಮಿಸಿ ದಕ್ಷಿಣ ಆಸ್ಟ್ರೇಲಿಯವನ್ನು ಪ್ರವೇಶಿಸಿ ಆಗ್ನೇಯದಲ್ಲಿ ಹರಿಯುವ ಮರ್ರೆ ಈ ರಾಜ್ಯದ ಅತ್ಯಂತ ದೊಡ್ಡ ನದಿ.

**ವಾಯುಗುಣ:** ರಾಜ್ಯದ ಸರಾಸರಿ ಉಷ್ಣತೆ ಬೇಸಗೆಯಲ್ಲಿ ದಕ್ಷಿಣದಲ್ಲಿ $18^0$ ಸೆ. ಉತ್ತರದಲ್ಲಿ $27^0$–$29^0$ ಸೆ. ಚಳಿಗಾಲವಾದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ವಾಯುಗುಣ ತಂಪಾಗಿರುತ್ತದೆ. ಆಗ ರಾಜ್ಯದ ಮಾಧ್ಯ ಉಷ್ಣತೆ $50^0$–$65^0$ಸೆ. ರಾಜ್ಯದ ಶೇ. 80ಕ್ಕಿಂತ ಹೆಚ್ಚು ಭಾಗದಲ್ಲಿ 26 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ. ಇದು ವರ್ಷದ ಕೆಲವೇ ತಿಂಗಳುಗಳಲ್ಲಿ ಬೀಳುತ್ತದೆ. ವರ್ಷದ ಉಳಿದ ಕಾಲ ಶುಷ್ಕ. ಶೇ. 0.3ರಷ್ಟು ಪ್ರದೇಶದಲ್ಲಿ ಮಾತ್ರ 75 ಸೆಂಮೀ ಅಥವಾ ಹೆಚ್ಚು ಮಳೆ ಆಗುತ್ತದೆ. ಆಗ್ನೇಯದಲ್ಲಿರುವ ಕೆಲವು ಪ್ರದೇಶಗಳಲ್ಲಿ 88 ಸೆಂಮೀ ಗಿಂತ ಹೆಚ್ಚು ಮಳೆಯಾಗುತ್ತದೆ.

ಐರ್ ಸರೋವರದ ಸುತ್ತ ಇರುವ ಪ್ರದೇಶ ತೀರ ಶುಷ್ಕ. ರಾಜ್ಯದ ಉತ್ತರಾರ್ಧದ ಹೆಚ್ಚು ಭಾಗ ಶುಷ್ಕ. ಅಲ್ಲಿ ವರ್ಷದಲ್ಲಿ ಸರಾಸರಿ 12–15 ಸೆಂಮೀ ಮಳೆ ಬೀಳುತ್ತದೆ. ಉತ್ತರಾರ್ಧದ ದಕ್ಷಿಣ ಭಾಗ ಮತ್ತು ದಕ್ಷಿಣಾರ್ಧದ ಉತ್ತರ ಭಾಗ ಅತ್ಯಂತ ಶುಷ್ಕ. ಉತ್ತರದಲ್ಲಿ ಬೇಸಗೆಯಲ್ಲಿ ಮಾನ್‌ಸೂನ್ ಪರಿಣಾಮದಿಂದ ಆಗುವ ಮಳೆ ತುಂಬ ಅನಿಶ್ಚಿತ.

ಸಸ್ಯಪ್ರಾಣಿವರ್ಗ: ಮರುಭೂಮಿಯಲ್ಲಿ ಯಾವ ಸಸ್ಯಗಳೂ ಬೆಳೆಯುವುದಿಲ್ಲ. ಉತ್ತರ ಮತ್ತು ದಕ್ಷಿಣಗಳ ಶುಷ್ಕ ಪ್ರದೇಶಗಳಲ್ಲಿ ಕುರುಚಲು, ಹುಲ್ಲು, ಗುಲ್ಮ ಮೊದಲಾದವು ಮಾತ್ರ ಬೆಳೆಯುತ್ತವೆ. ಚೌಬೀನೆಯ ದೃಷ್ಟಿಯಿಂದ ರಾಜ್ಯದ ವೃಕ್ಷಗಳು ನಿರುಪಯೋಗಿ, ಫ್ಲಿಂಡರ್ಸ್ ಶ್ರೇಣಿಯಲ್ಲಿ ನೀಲಗಿರಿ ಮತ್ತು ದೇಶಿಯ ಪೈನ್ ಮರಗಳು ಅಲ್ಲಲ್ಲಿ ಹರಡಿವೆ. ಆಡಿಲೇಡಿನ ಹತ್ತಿರ ಇರುವ ಲಾಫ್ಟಿ ಶ್ರೇಣಿಯಲ್ಲಿ ದಟ್ಟ ಕಾಡುಗಳಿವೆ. ಅಲ್ಲಿ ನೀಲಗಿರಿ ವೃಕ್ಷಗಳು ಹೇರಳವಾಗಿವೆ. ಆಗ್ನೇಯದಲ್ಲಿ 68000 ಹೆ. ಗಳಿಗೂ ಹೆಚ್ಚು ವಿಸ್ತಾರವಾದ ಮಾನವನಿರ್ಮಿತ ಅರಣ್ಯವಿದೆ. ಇದನ್ನು 19ನೆಯ ಶತಮಾನದ ಉತ್ತರಾರ್ಧದಲ್ಲಿ ಬೆಳೆಸಲಾಯಿತು. ರಾಜ್ಯದಲ್ಲಿ ವನ್ಯಪ್ರಾಣಿಗಳು ಹೆಚ್ಚಿಲ್ಲವಾದರೂ ಕಾಂಗರೂ, ವಾಲಬಿ, ವಾಂಬ್ಯಾಟ್ ಮತ್ತು ಪೊದರು ಇಲಿಗಳಿವೆ. ವಿವಿಧ ಬಗೆಯ ಪಕ್ಷಿಗಳು, ಹಲ್ಲಿಗಳು, ಹಾವುಗಳು ಇವೆ. ಮರ್ರೆ ನದಿ ಮತ್ತು ಕಡಲಿನಲ್ಲಿ ಮೀನುಗಳಿವೆ.

**ಜನಸಂಖ್ಯೆ:** ರಾಜ್ಯದ ಜನಸಂಖ್ಯೆಯಲ್ಲಿ 3/4ಕ್ಕೂ ಹೆಚ್ಚು ಜನ ಆಸ್ಟ್ರೇಲಿಯನ್ ಸಂಜಾತರು. ಉಳಿದವರು ಬ್ರಿಟಿಷ್ ದ್ವೀಪಗಳಲ್ಲಿ ಇಲ್ಲವೇ ಯುರೋಪಿನ ಇತರ ದೇಶಗಳಲ್ಲಿ ಹುಟ್ಟಿದವರು. ಆಂಗ್ಲಿಕನ್ ಚರ್ಚಿನ ಅನುಯಾಯಿಗಳು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಉಳಿದವರಲ್ಲಿ ಅರ್ಧ ಜನ ಮೆತಾಡಿಸ್ಟರು ಮತ್ತು ಉಳಿದರ್ಧ ರೋಮನ್ ಕೆಥೊಲಿಕರು.

ಖನಿಜ ಸಂಪತ್ತು: ರಾಜ್ಯದಲ್ಲಿ ಖನಿಜ ಸಂಪತ್ತು ಹೆಚ್ಚಿಲ್ಲ. ಕೆಲವು ಪರ್ವತ ಶ್ರೇಣಿಗಳಲ್ಲಿ ಕಬ್ಬಿಣದ ಅದಿರು ದೊರಕುತ್ತದೆ. ವಿಶ್ವದ ಕ್ಷೀರಸ್ಫಟಿಕ ಹೆಚ್ಚಾಗಿ ಬರುವುದು ಈ ರಾಜ್ಯದಿಂದ. ಆಸ್ಟ್ರೇಲಿಯಕ್ಕೆ ಅವಶ್ಯವಾದ ಉಪ್ಪು ಮತ್ತು ಜಿಪ್ಸಮ್‌ಗಳಲ್ಲಿ ಹೆಚ್ಚು ಭಾಗ ಇಲ್ಲಿಂದಲೇ ಸಾಗುತ್ತದೆ. ರಾಜ್ಯದ ಶ್ರಮಿಕ ಬಲದಲ್ಲಿ ಶೇ. 10 ರಷ್ಟು ಮಂದಿ ಗಣಿಗಾರಿಕೆಯಲ್ಲಿ ನಿರತರಾಗಿದ್ದಾರೆ.

ಕೈಗಾರಿಕೆ: ಮೋಟಾರು ವಾಹನಗಳ ತಯಾರಿಕೆ ಒಂದು ಮುಖ್ಯ ಕೈಗಾರಿಕೆ. ರಾಜ್ಯದ ಶ್ರಮಿಕ ಬಲದ ಶೇ. 30 ರಷ್ಟು ಮಂದಿ ಕಾರ್ಮಿಕರು ಇದರಲ್ಲಿ ನಿರತರಾಗಿದ್ದಾರೆ. ಆಡಿಲೇಡಿನಲ್ಲಿ ಮತ್ತು ಅದರ ಹತ್ತಿರದಲ್ಲಿ ಲೋಹದ ಕೊಳವೆ ಮತ್ತು ನಾಳ, ರಾಸಾಯನಿಕಗಳ ಮತ್ತು ಜವಳಿ ಕೈಗಾರಿಕೆಗಳಿವೆ. ಪೋರ್ಟ್ ಆಡಿಲೇಡಿನ ಬಳಿ ಅಸ್ಬೋರ್ನ್‌ನಲ್ಲಿ ಸೋಡಾ ಆಷ್ ಕಾರ್ಖಾನೆಯಿದೆ. ಹ್ವೈಯಾಲ ನಗರದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಲ್ಲದೆ ಆಸ್ಟ್ರೇಲಿಯದ ಅತ್ಯಂತ ದೊಡ್ಡ ನೌಕಾಂಗಣಗಳಿವೆ. ಆಗ್ನೇಯದಲ್ಲಿ ರಟ್ಟು ಮತ್ತು ಕಾಗದದ ತಯಾರಿಕೆ ಕಾರ್ಖಾನೆಗಳು, ಮರ ಕೊಯ್ಯುವ ಯಂತ್ರಗಳು ಇವೆ. ಪೋರ್ಟ್ ಆಗಸ್ಟದಲ್ಲಿ ವಿದ್ಯುತ್ ಉತ್ಪಾದನ ಕೇಂದ್ರವೂ ಪೋರ್ಟ್ ಪಿರೀಯಲ್ಲಿ ಕಬ್ಬಿಣ ಅದಿರನ್ನು ಕರಗಿಸುವ ಕಾರ್ಖಾನೆಯೂ ಇವೆ.

ಕೃಷಿ: ರಫ್ತಿಗಾಗಿ ಗೋದಿ, ಬಾರ್ಲಿಗಳನ್ನು ಹೆಚ್ಚಾಗಿ ಉತ್ಪಾದಿಸುವ ರಾಜ್ಯ ದಕ್ಷಿಣ ಆಸ್ಟ್ರೇಲಿಯ. ಆದರೆ ದ್ರಾಕ್ಷಿ ಬೆಳೆಯಲ್ಲಿ ಅದರ ವಿಶೇಷತೆ. ಆಸ್ಟ್ರೇಲಿಯದ ದ್ರಾಕ್ಷಿಯ 1/3 ಭಾಗ ಇಲ್ಲಿ ಬೆಳೆಯುತ್ತದೆ. ವೈನ್ ಮತ್ತು ಬ್ರಾಂದಿ ತಯಾರಾಗುತ್ತದೆ. ಕರಾವಳಿಯ ಕಡಲಿನಲ್ಲಿ ವಿಪುಲವಾಗಿರುವ ಟ್ಯೂನಾ ಮತ್ತು ಕ್ರೇಫಿಷ್‌ಗಳನ್ನು ಇತರ ರಾಜ್ಯಗಳಿಗೂ ರಾಷ್ಟ್ರಗಳಿಗೂ ರಫ್ತು ಮಾಡಲಾಗುತ್ತಿದೆ. ತರಕಾರಿಯೂ ಇಲ್ಲಿಂದ ಇತರ ರಾಜ್ಯಗಳಿಗೆ ರಫ್ತಾಗುತ್ತದೆ.

ಸಾರಿಗೆ: ಒಳನಾಡಿನ ಸಾರಿಗೆ ಮಾರ್ಗಗಳು ಆಡಿಲೇಡಿನಲ್ಲಿ ಕೇಂದ್ರೀಕೃತವಾಗಿವೆ. ಬಹುತೇಕ ರೈಲುಮಾರ್ಗಗಳು ರಾಜ್ಯದ ಆಡಳಿತಕ್ಕೊಳಪಟ್ಟಿವೆ. ಆಸ್ಟ್ರೇಲಿಯದ ಪೂರ್ವ ತೀರದಲ್ಲಿರುವ ಸಿಡ್ನಿಯನ್ನು ಪಶ್ಚಿಮ ತೀರದ ಪರ್ತ್ ನಗರದೊಂದಿಗೆ ಕೂಡಿಸುವ ಖಂಡಾಂತರ ರೈಲುಮಾರ್ಗ ಆಸ್ಟ್ರೇಲಿಯ ಸರ್ಕಾರದ ಒಡೆತನಕ್ಕೆ ಸೇರಿದ್ದು. ಆಡಿಲೇಡ್‌ಗೂ ವಿಕ್ಟೋರಿಯ ರಾಜ್ಯದ ಮೆಲ್ಬರ್ನ್ ನಗರಕ್ಕೂ ಸಂಪರ್ಕ ಕಲ್ಪಿಸುವ ಒಂದು ರೈಲುಮಾರ್ಗವಿದೆ. ಮತ್ತೊಂದು ರೈಲುಮಾರ್ಗ ಆಡಿಲೇಡಿನಿಂದ ಹೊರಟು ಪೋರ್ಟ್ ಪಿರೀಯಲ್ಲಿ ಖಂಡಾಂತರ ರೈಲುಮಾರ್ಗವನ್ನು ಕೂಡುತ್ತದೆ. ಆಡಿಲೇಡ್, ಹ್ವೈಯಾಲ–ಇವು ರಾಜ್ಯದ ಮುಖ್ಯ ಬಂದರುಗಳು. ಸಿಡ್ನಿ ಮತ್ತು ಮೆಲ್ಬರ್ನ್ ನಗರಗಳೊಂದಿಗೆ ಆಡಿಲೇಡ್ ನಗರಕ್ಕೆ «ªÀÄ£À À¥ÀPÀ«zÉ (ಜಿ.ಕೆ.ಯು.)

**ದಕ್ಷಿಣ ಏಷ್ಯ ಪ್ರಾದೇಶಿಕ ಸಹಕಾರ ಸಂಘ:** 1985 ಡಿಸೆಂಬರ್ 7 ರಂದು ಬಾಂಗ್ಲಾ ದೇಶದ ರಾಜಧಾನಿ ಢಾಕಾದಲ್ಲಿ ಸಾರ್ಕ್ ಒಪ್ಪಂದಕ್ಕೆ ಸಹಿಹಾಕಲಾಯಿತು. ಈ ಸಂಘದ ರಾಷ್ಟ್ರಗಳೆಂದರೆ ಬಾಂಗ್ಲಾದೇಶ, ಭೂತಾನ್, ಭಾರತ, ಪಾಕಿಸ್ತಾನ, ನೇಪಾಲ, ಶ್ರೀಲಂಕ ಹಾಗೂ ಮಾಲ್ಡೀವ್ಸ್. ಈ ಸಂಘದ ಉದ್ದೇಶಗಳೆಂದರೆ ಸಂಪರ್ಕ ಹವಾಮಾನ, ಹಡಗು ಸಂಚಾರ ಮೂಲಸೌಕರ್ಯ ಗ್ರಾಮೀಣ ಕೃಷಿ, ವಿಜ್ಞಾನ, ತಂತ್ರಜ್ಞಾನ, ಮಾರುಕಟ್ಟೆ ಉತ್ತೇಜನ, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸದಸ್ಯ ರಾಷ್ಟ್ರಗಳಲ್ಲಿ ಪರಸ್ಪರ ಸಹಕಾರದಿಂದ ಅಭಿವೃದ್ಧಿ ಸಾಧಿಸುವುದು ಮುಖ್ಯ ಉದ್ದೇಶಗಳಾಗಿವೆ. ದಕ್ಷಿಣ ಏಷ್ಯನ್ ಪ್ರಾದೇಶಿಕ ಸಹಕಾರ ಸಂಘವು ಎಎಸ್‌ಇಎಎನ್‌ದ ಸ್ಥಾನವನ್ನು ಇನ್ನೂ ಸಹ ತುಂಬಬೇಕಾಗಿದೆ. ಏಕೆಂದರೆ ಸದಸ್ಯ ರಾಷ್ಟ್ರಗಳಲ್ಲಿ ಈಗಲೂ ಸಹ ಪರಸ್ಪರ ದ್ವಂದ್ವತೆ ಇದೆ. ಈ ಸದಸ್ಯ ರಾಷ್ಟ್ರಗಳು ಎರಡು ಗುಂಪುಗಳಾಗಿವೆ. ಶ್ರೀಲಂಕ, ಮಾಲ್ಡೀವ್ಸ್ ಮತ್ತು ಪಾಕಿಸ್ತಾನ ಒಂದುಕಡೆ ಆದರೆ ಮತ್ತೊಂದೆಡೆ ಭಾರತ ಹಾಗೂ ಬಾಂಗ್ಲಾದೇಶಗಳಿವೆ. ಸಾಂಸ್ಥಿಕ ಸಹಕಾರದ ಪರವಾಗಿ ಭೂತಾನ, ನೇಪಾಲ, ಶ್ರೀಲಂಕ ಮತ್ತು ಬಾಂಗ್ಲಾದೇಶಗಳಿವೆ. ಆದರೆ ಅಭಿವೃದ್ಧಿ ಬೃಹತ್ ಪ್ರಮಾಣದ ಪ್ರಾದೇಶಿಕ ಸಹಕಾರದೊಂದಿಗೆ ಆಗಬೇಕೆಂದು ಭಾರತ ಪಾಕಿಸ್ತಾನ ಹಾಗೂ ಮಾಲ್ಡೀವ್ಸ್ ರಾಷ್ಟ್ರಗಳ ಅಭಿಪ್ರಾಯವಾಗಿದೆ. 1994 ಏಷ್ಯ ಅಭಿವೃದ್ಧಿ ಮುನ್ನೋಟದ ವರದಿ ಪ್ರಕಾರ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕ ರಾಷ್ಟ್ರಗಳ ತಲಾವಾರು ನಿವ್ವಳ ಒಟ್ಟು ಲಾಭ 225ರಿಂದ 564 ಡಾಲರ್‌ಗಳಾಗಿವೆ ಮತ್ತು ಸಾರ್ಕ್ ರಾಷ್ಟ್ರಗಳ ವಾರ್ಷಿಕ ನಿವ್ವಳ ಒಟ್ಟು ಲಾಭದ ಬೆಳವಣಿಗೆ ದರ ಶೇ. 0.9 ರಿಂದ 0.3ರ ಮಧ್ಯದಲ್ಲಿದೆ. ಈ ಅಂಕಿ–ಅಂಶಗಳು ಪ್ರಪಂಚದ ಆರ್ಥಿಕತೆಯ ಅಂಚಿನ ಭಾಗದಲ್ಲಿವೆ. (ಎಸ್.ಎಸ್.ಎಸ್.)

**ದಕ್ಷಿಣ ಕನ್ನಡ ಜಿಲ್ಲೆ:** ಕರ್ನಾಟಕದ ಪಶ್ಚಿಮ ಕರಾವಳಿಯ ಜಿಲ್ಲೆಗಳಲ್ಲಿ ಒಂದು. ಉ.ಅ. $12^{0}27'$–$13^{0}10'$ ಮತ್ತು ಪೂ.ರೇ. $74^{0}50'$–$75^{0}45'$ ನಡುವೆ ಇದೆ. ಬೆಳ್ತಂಗಡಿ, ಬಂಟ್ವಾಳ, ಮಂಗಳೂರು, ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳನ್ನೊಳಗೊಂಡಿರುವ ಈ ಜಿಲ್ಲೆಯ ಜನಸಂಖ್ಯೆ 1896403 (2001). ಜಿಲ್ಲೆಯ ಆಡಳಿತ ಕೇಂದ್ರ ಮಂಗಳೂರು. ಜಿಲ್ಲೆಯ ವಿಸ್ತೀರ್ಣ 4866 ಚ.ಕಿಮೀ.




ಸನ್ನಿವೇಶ ಮತ್ತು ವೈಶಿಷ್ಟ್ಯ : ಪಶ್ಚಿಮ ಘಟ್ಟಗಳ ಸಾಲು ಮೂಡಣ ಗಡಿಯಾಗಿ, ಅರಬ್ಬಿ ಸಮುದ್ರತೀರ ಪಡುವಣ ಗಡಿಯಾಗಿ, ಇವೆರಡರ ನೈಸರ್ಗಿಕ ತೋಳ ತೆಕ್ಕೆಯಲ್ಲೆಂಬಂತೆ ಮಲಗಿರುವ ಈ ಜಿಲ್ಲೆ ಹಲವು ಕಾರಣಗಳಿಂದ ವೈಶಿಷ್ಟ್ಯಪೂರ್ಣವಾದ್ದು. ಇದು ಭಾರತದ ಪಶ್ಚಿಮ ಕರಾವಳಿಯಲ್ಲಿ ಮುಂಬಯಿ ಮತ್ತು ಕನ್ಯಾಕುಮಾರಿ ಭೂಶಿರ–ಇವುಗಳ ಮಧ್ಯದಲ್ಲಿದೆ. ನೈಋತ್ಯ ಮಾರುತಗಳ ರಭಸ, ಅವು ತರುವ ಮಳೆಯ ಪ್ರಮಾಣ ಇವೆರಡೂ ಈ ಜಿಲ್ಲೆಯ ಕರಾವಳಿ ಭಾಗದಲ್ಲೇ ಅತ್ಯಧಿಕ. ಇಲ್ಲಿಯ ಏರುಪೇರಿನ ನೆಲದೊಂದಿಗೆ ಹಾಸುಹೊಕ್ಕಾಗಿ ಪಸರಿಸಿರುವ ಹಸಿರಿನ ದೃಶ್ಯ ಹೃದಯಂಗಮ. ಇದಲ್ಲದೆ ಉನ್ನತವಾದ ಬೆಟ್ಟಗಳ ನೆರಳಿನಲ್ಲಿರುವ ಈ ಪ್ರದೇಶಕ್ಕೆ ಇದರದೇ ಆದ ಭೌಗೋಳಿಕ ಮತ್ತು ಸಾಂಸ್ಕೃತಿಕ ಆವರಣ ಸೃಷ್ಟಿಯಾಗಿದೆ. ಗೋವೆಯಿಂದ ನೀಲಗಿರಿಯ ವರೆಗಿನ ಪಶ್ಚಿಮ ಘಟ್ಟಗಳ ಸಾಲಿನ ವಿನ್ಯಾಸವನ್ನು ಗಮನಿಸಿದರೆ ಅವುಗಳ ಹೊರ ಉಬ್ಬು ಮತ್ತು ಒಳತಿರುವುಗಳೆಲ್ಲ– ಉತ್ತರದ ಹೈವ(ಗ)ದಿಂದ ದಕ್ಷಿಣದ ತೊಡವ(ಗ)ದ ವರೆಗಿನ ಪ್ರದೇಶಗಳು–ವಿಶಿಷ್ಟವೂ ವಿಭಿನ್ನವೂ ಆದ ಜನಪದ ಸಂಸ್ಕೃತಿಯ ನೆಲೆಗಳಾಗಿವೆ. ಈ ದೃಷ್ಟಿಯಿಂದ ಈ ಜಿಲ್ಲೆ ಕನ್ನಡಕ್ಕೆ ತನ್ನದೇ ಆದ ಕೊಡುಗೆ ನೀಡಿದ ತುಳು ಭಾಷೆ ಮತ್ತು ಸಂಸ್ಕೃತಿಯ ತವರು ಮನೆ. ಕರ್ನಾಟಕ ರಾಜ್ಯದಲ್ಲಿ ಭೂಮಾರ್ಗ (ರಸ್ತೆ, ರೈಲು), ವಿಮಾನ ಮತ್ತು ಸಮುದ್ರ ಮಾರ್ಗ–ಇವೆಲ್ಲದರ ಮೂಲಕ ದೇಶ–ವಿದೇಶ ಸಂಚಾರ–ಸಂಪರ್ಕ ಸೌಲಭ್ಯವಿರುವ ಜಿಲ್ಲೆ ಇದೊಂದೇ.

# ದಕ್ಷಿಣ ಕನ್ನಡ ಜಿಲ್ಲೆ

ಮೇಲ್ಮೈ ಲಕ್ಷಣ: ಹಸುರು ಹಚ್ಚೆಯೊಡನೆ ಬೆರೆತ ಏರು ತಗ್ಗುಗಳೇ ಜಿಲ್ಲೆಯಲ್ಲೆದ್ದು ಕಾಣುವ ಲಕ್ಷಣ. ಕಡಲ ತೀರದಿಂದ ಪಶ್ಚಿಮ ಘಟ್ಟಗಳ ಗಡಿಯ ವರೆಗೆ ದಕ್ಷಿಣೋತ್ತರವಾಗಿ ಈ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ಗುರುತಿಸಬಹುದು.

1. ಕರಾವಳಿಯ ಬಯಲು: 76 ಮೀ ಸಮೋನ್ನತರೇಖೆಯೇ ಇದಕ್ಕೆ ಸಾಮಾನ್ಯ ಸೀಮಾರೇಖೆ. ಇದರಲ್ಲಿ ಎರಡು ಉಪಶಾಖೆಗಳಿವೆ: i) ಸಮುದ್ರದ ಅಂಚಿನಲ್ಲಿ ಸು. 75 ಮೀ –100 ಮೀ ಅಗಲವಾಗಿರುವ ಮರಳ ರಾಶಿಯ ಭಾಗ. ಹೊಳೆಗಳ ಅಳಿವೆಗಳು, ತೆಂಗಿನ ಮತ್ತು ಚಮಿಕಿ (ಸರ್ವೆ) ಮರಗಳ ತೋಪುಗಳು, ಹರಡಿಬಿದ್ದ ವಿವಿಧ ಚಿಪ್ಪುಗಳು, ಉಸುಬು ಮತ್ತು ಪುಡಿ ಮರಳು ಮತ್ತು ಕಾಲ್ತೊಡಕಾಗೊ ಹಬ್ಬಿರುವ ಬಳ್ಳಿ (ಅಡುಂಬು) – ಇದೇ ಕಡಲ ದಂಡೆಯಲ್ಲಿ ಕಾಣುವ ದೃಶ್ಯ. ಕೆಲವು ಕಡೆಗಳಲ್ಲಿ ಅಲೆಗಳು ದಂಡಯನ್ನೇ ಮೆಲ್ಲನೆ ಕೊರೆದು ಬಿಡುವುದುಂಟು. ಹೀಗಾಗಿ ಈ ಮರಳರಾಶಿಯಲ್ಲಿ ವರ್ಷವರ್ಷ ಮಾರ್ಪಾಟುಗಳಾಗುವುವು. ii) ಇದರ ಒಳ ಅಂಚಿನಲ್ಲಿ 1 – 3 ಕಿಮೀ ಅಗಲದ ಕರಾವಳಿಯ ತಗ್ಗು ಬಯಲು. ಬೆಳೆಗಳಿಗೆ ಬೇಕಾದ ನೀರಿನ ಅನುಕೂಲವಿದೆ. ಹೊಳೆಗಳಲ್ಲಿ ನೀರು ತುಂಬಿ ನೆರೆ ಏರಿದಾಗ ಈ ಭಾಗ ನೀರುಪಾಲಾಗಿ ಹೋಗುವುದೂ ಉಂಟು.

2. ಮುರಕಲ್ಲಿನಿಂದ ಕೂಡಿದ ಏರುನೆಲ ಮತ್ತು ಒಳನಾಡು ಬಯಲು: 76 ಮೀ ಸಮೋನ್ನತ ರೇಖೆಯಿಂದ ಸು. 152 ಮೀ ಸಮೋನ್ನತರೇಖೆಯವರೆಗೆ ಹಬ್ಬಿರುವ ಈ ವಿಭಾಗ ಘಟ್ಟಗಳ ಇಳಿಜಾರು. ಇದು ಏಕಪ್ರಕಾರದ ಇಳಿತವಾಗಿರದೆ ಹಳ್ಳತಿಟ್ಟುಗಳಿಂದ ಕೂಡಿದೆ. ಎಲ್ಲಿ ನೋಡಿದರೂ ಮುರಕಲ್ಲು ಹರಡಿಕೊಂಡಿದೆ. ಅಡಿಯಲ್ಲಿ ಗಟ್ಟಿಯಾದ ಬಂಡೆಗಳಿಂದ ಕೂಡಿದ ಗುಡ್ಡಗಳಿವೆ. ನಡುನಡುವೆ ಕೃಷಿಯೋಗ್ಯವಾದ ಬಯಲು, ಪಕ್ಕದಲ್ಲೇ ಹರಿಯುವ ಹೊಳೆಗಳು. ಗುಡ್ಡ ಇಳಿಯುತ್ತಲೇ ಹೊಲಗದ್ದೆಗಳ ಬಯಲು; ಆ ಬಯಲನ್ನು ಕಳೆಯುತ್ತಲೇ ಮತ್ತೊಂದು ಗುಡ್ಡ – ಹೀಗೆ ಈ ಪ್ರದೇಶದ ಚೆಲುವು. ಗುಡ್ಡಗಳೂ ಸುತ್ತುವರಿದ ಕ್ರಮದ ಮೇಲಿಂದ ಕೆಲವು ಕಡೆ ನಡುವಿನ ಬಯಲುಗಳು ಕುದುರೆ ಲಾಳದಂತೆಯೂ ಹಲವೆಡೆ ಗಂಟೆಯ ಹೂವಿನ ಆಕಾರವಾಗಿಯೂ ಇವೆ. ಮುರಕಲ್ಲಿನಿಂದ ಕೂಡಿದ ವಿಶಾಲವಾಗಿರುವ ಗುಡ್ಡಗಳನ್ನು ಸ್ಥಳೀಯವಾಗಿ ಪದವುಗಳೆಂದು ಕರೆಯುವರು. ಮುಡುಪಿನ ಪದವು, ಮೂಡುಬಿದರೆ ಪದವು, ಗುರುಪುರ ಪದವು, ಬಜಪೆ ಪದವು, ಪರ್ಕಳ ಪದವು – ಇವು ಕೆಲವು ಉದಾಹರಣೆಗಳು. ಕೆಲವು ಕಡೆಗಳಲ್ಲಿ ಎತ್ತರದ ಬೆಟ್ಟ ಏಕಾಕಿಯಾಗಿ ನಿಂತಿರುವುದನ್ನು ಕಾಣಬಹುದು.

3. ಮಲೆನಾಡು: ಘಟ್ಟಗಳಿಗೂ ಏರುನೆಲಕ್ಕೂ ನಡುವಿನ ವಿಭಾಗ, ಇದು ಕಾಡುಗುಡ್ಡಗಳಿಂದ ತುಂಬಿದೆ. ಇಲ್ಲಿ ಅನೇಕ ನದಿಗಳು ಹುಟ್ಟಿ ಪಶ್ಚಿಮ ಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. 305 ಮೀ ಸಮ್ಮೋನ್ನತರೇಖೆ ಇದರ ಪೂರ್ವದ ಅಂಚೆನ್ನಬಹುದು.

4. ಪಶ್ಚಿಮ ಘಟ್ಟಗಳು: ಜಿಲ್ಲೆಯ ಅತಿ ಪೂರ್ವದ ಪ್ರಾಕೃತಿಕ ವಿಭಾಗದ ಘಟ್ಟಗಳು ದಕ್ಷಿಣೋತ್ತರವಾಗಿ ಸಾಲುಸಾಲಾಗಿ ಹಬ್ಬಿವೆ. ಅವು ಕೆಲವು ಕಡೆಗಳಲ್ಲಿ ಕುಗ್ಗಿದಂತೆಯೂ ಕೆಲವು ಕಡೆಗಳಲ್ಲಿ ನೇರಾಗಿ ನಿಂತಂತೆಯೂ ಇವೆ. ಅವು ಉತ್ತರಭಾಗದಲ್ಲಿ ಸಮುದ್ರಕ್ಕೆ ಸಮೀಪವಾಗಿಯೂ ಜಿಲ್ಲೆಯ ಮಧ್ಯಭಾಗದಲ್ಲಿ ಸು. 80 ಕಿಮೀ ದೂರವಾಗಿಯೂ ಇವೆ. ಈ ಬೆಟ್ಟಗಳು ಉತ್ತರಭಾಗದಲ್ಲಿ ಹೆಚ್ಚು ಲಂಬವಾಗಿದ್ದು ದಕ್ಷಿಣಭಾಗದಲ್ಲಿ ಸ್ವಲ್ಪ ಇಳಿಜಾರುಮುಖವಾಗಿದೆ. ಈ ಘಟ್ಟಗಳಲ್ಲಿ 914 ಮೀ–1892 ಮೀ ಎತ್ತರದ ಹಲವು ಶಿಖರಗಳು ಉಂಟು.

ಈ ಘಟ್ಟಗಳು ನಡುನಡುವೆ ಕುಗ್ಗಿ ಅಲ್ಲಲ್ಲಿ ಕಣಿವೆಗಳು ಉಂಟಾಗಿವೆ. ಅವು ಘಟ್ಟಗಳಾಚೆ ಪೂರ್ವ –ಆಗ್ನೇಯ ಭಾಗಗಳಿಗೆ ಸಂಪರ್ಕದ ಅನುಕೂಲತೆಗಳನ್ನೊದಗಿಸಿದೆ. ಈ ಕಣಿವೆಗಳ ತಗ್ಗಿನಲ್ಲಿರುವ ಗ್ರಾಮಗಳ ಹೆಸರುಗಳೇ ಕಣಿವೆಗಳಿಗೆ ಬಂದಿವೆ. ಉತ್ತರದಿಂದ ದಕ್ಷಿಣಕ್ಕೆ ಸಾಗಿದಂತೆ ಸಿಗುವ ಮುಖ್ಯ ಘಾಟ್‌ಗಳು ಇವು: ಚಾರ್ಮಾಡಿ ಕಣಿವೆ, ಶಿರಾಡಿ ಕಣಿವೆ, ಬಿಸಲೆ ಕಣಿವೆ, ಮತ್ತು ಸಂಪಾಜೆ ಕಣಿವೆ. ಹಾಸನ – ಮಂಗಳೂರು ರೈಲುಮಾರ್ಗ ಶಿರಾಡಿ ಕಣಿವೆಯ ಮೂಲಕ ಸಾಗುತ್ತದೆ.

ವಾಯುಗುಣ: ಭಾರತದ ಪಶ್ಚಿಮ ಕರಾವಳಿ ವಾಯುಗುಣ ವಲಯಕ್ಕೆ ಸೇರಿದ ಈ ಜಿಲ್ಲೆಯ ಉಷ್ಣತೆ ವರ್ಷದಲ್ಲೆಂದೂ ಅತಿರೇಕದ್ದಾಗಿರುವುದಿಲ್ಲ. ಅತ್ಯುಷ್ಣ ಮತ್ತು ವಿಶೇಷ ಸೆಕೆಯ ಬೇಸಗೆಯ ತಿಂಗಳುಗಳಾದ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಗರಿಷ್ಠ ಉಷ್ಣತೆ $32^0$ಸೆ. ಮತ್ತು $34^0$ಸೆ. ಒಳಗೂ ಚಳಿಗಾಲದ ತಿಂಗಳುಗಳಲ್ಲಿ $24^0$ಸೆ. ಮತ್ತು $26^0$ಸೆ. ನಡುವೆಯೂ ಇರುತ್ತದೆ. ಸಾಮಾನ್ಯ ವಾರ್ಷಿಕ ಉಷ್ಣತೆಯ ಅಂತರ ಕೇವಲ $8^0$ಸೆ. ಆದರೆ ಆರ್ದ್ರತೆಯ ಆಧಿಕ್ಯದಿಂದ ಬೆವರು ಹೆಚ್ಚು ಬಂದು, ಕೆಲವೊಮ್ಮೆ ಮುಖ್ಯವಾಗಿ ಬೇಸಗೆಯಲ್ಲಿ ದುಸ್ಸಹವಾಗುತ್ತದೆ.

ಮುಂಗಾರು (ನೈರುತ್ಯ ಮಾನ್ಸೂನ್) ಮಾರುತ ಇಲ್ಲಿ ಮಳೆ ತರುತ್ತದೆ. ಜೂನ್ – ಸೆಪ್ಟೆಂಬರ್ ಮಳೆಗಾಲ. ಜಿಲ್ಲೆಯ ಸರಾಸರಿ ವಾರ್ಷಿಕ 3,93 ಸೆಂಮೀ ವರ್ಷದಲ್ಲಿ ಒಟ್ಟು ಮಳೆ ದಿನಗಳು 123. ಅವುಗಳಲ್ಲಿ 97 ದಿನಗಳು ಮಳೆಗಾಲದವು. ಕರಾವಳಿಯಿಂದ ಪಶ್ಚಿಮ ಕಡೆಗೆ ಹೋದಂತೆ ಮಳೆ ಹೆಚ್ಚುತ್ತ ಹೋಗುವುದು. ಕರಾವಳಿಯ ಮಟ್ಟಿಗೆ ನೋಡಿದರೆ ದಕ್ಷಿಣದ ತುದಿಗಿಂತ ಉತ್ತರದ ಭಾಗದಲ್ಲಿ ಹೆಚ್ಚು ಮಳೆಯಾಗುತ್ತದೆ. ಕೆಲವು ಸ್ಥಳಗಳ, ಮಳೆ ಅಂಕಿತಗಳು ಹೀಗಿವೆ: ಮಂಗಳೂರು 339 ಸೆಂಮೀ ಪುತ್ತೂರು 386 ಸೆಂಮೀ ಬೆಳ್ತಂಗಡಿ 458 ಸೆಂಮೀ ಜುಲೈ ಅತ್ಯಧಿಕ ಮಳೆಯ ತಿಂಗಳು. ಮಳೆಗಾಲದ ತಿಂಗಳುಗಳಲ್ಲಿ ವಾರ್ಷಿಕ ಮಳೆಯ ಶೇ. 87 ರಷ್ಟು ಬರುವುದರಿಂದ ಅನಂತರ ಅಕ್ಟೋಬರ್ – ನವೆಂಬರ್‌ನಲ್ಲಿ (ಹಿಂಗಾರು) ಸರಾಸರಿ 31 ಸೆಂಮೀ ಮಳೆಯಾಗುತ್ತದೆ.

ಜಲಸಂಪತ್ತು: ಪೂರ್ವ ಭಾಗದಲ್ಲಿ ಚಾಚಿಕೊಂಡಿರುವ ಘಟ್ಟಗಳ ದೆಸೆಯಿಂದ ಈ ಜಿಲ್ಲೆಯ ನದಿಗಳೆಲ್ಲ ಸಹಜವಾಗಿ ಪೂರ್ವ–ಪಶ್ಚಿಮವಾಗಿ ಹರಿದು ಸಮುದ್ರವನ್ನು ಸೇರುತ್ತವೆ. ಹೀಗೆ, ಅನೇಕ ಚಿಕ್ಕ ದೊಡ್ಡ ನದಿಗಳು ಜಿಲ್ಲೆಯುದ್ದಕ್ಕೂ ಹರಿಯುವುದರಿಂದಲೇ ನೇರವಾದ ದಕ್ಷಿಣೋತ್ತರ ಮಾರ್ಗ ಸೌಕರ್ಯ ಏರ್ಪಡಿಸಲು ಅವುಗಳಿಗೆಲ್ಲ ಸೇತುವೆಗಳಾಗಬೇಕಾಯಿತು. ಪಶ್ಚಿಮ ಕರಾವಳಿಯ ಎಲ್ಲ ನದಿಗಳಂತೆ ಅವೂ ಹೆಚ್ಚು ರೇವೆಮಣ್ಣನ್ನು ತರುವುದಿಲ್ಲ. ಸಮುದ್ರದ ಒಳ ಪ್ರವಾಹದ ಸೆಳೆತವೂ ಉತ್ತರದಿಂದ ದಕ್ಷಿಣಕ್ಕಾಗಿದೆ. ಈ ಕಾರಣಗಳಿಂದಾಗಿ ಈ ನದಿಗಳಾವುವೂ ಮುಖಜಭೂಮಿಗಳನ್ನು ಉಂಟುಮಾಡದೆ ಕೇವಲ ಅಳಿವೆಗಳಾಗಿ ಸಮುದ್ರವನ್ನು ಕೂಡುತ್ತವೆ. ಎತ್ತರವಾದ ಪಶ್ಚಿಮ ಘಟ್ಟಗಳು ಸಮುದ್ರತೀರದಿಂದ ಹೆಚ್ಚು ದೂರವಿರುವ ಕಾರಣ, ಇಲ್ಲಿಯ ಹೊಳೆಗಳು ಮೊದಲಲ್ಲಿ ಬಹಳ ರಭಸದಿಂದ ಓಡುತ್ತವೆ. ಅವು ಮುಖ್ಯತಃ ದೊಡ್ಡವು. ಸಮುದ್ರ ಸಮೀಪಿಸಿದಾಗ ಅವುಗಳ ವೇಗ ಕಡಿಮೆಯಾಗುವುದರಿಂದಲೂ ಸಮುದ್ರದ ಭರತದ ನೀರಿನ ತಡೆಯಿಂದಲೂ ಅವುಗಳಲ್ಲಿ ರೇವೆಮಣ್ಣು ತಳದಲ್ಲಿ ತಂಗಿ, ಕಾಲಾನುಕ್ರಮದಲ್ಲಿ ಈ ಕೆಸರಿನ ಭಾಗ ಚಿಕ್ಕ ದ್ವೀಪವಾಗಿ, ನೀರಿನ ಮೇಲೆ ಕಾಣಿಸಿಕೊಳ್ಳುತ್ತದೆ. ಫಲವತ್ತಾದ ಮಣ್ಣಿನಿಂದೊಡಗೂಡಿದ, ನದಿಗಳ ಮಧ್ಯದ ಈ ದ್ವೀಪಗಳನ್ನು ಸ್ಥಳೀಯವಾಗಿ ಉಳಿಯ ಅಥವಾ ಕುದುರೆಗಳೆಂದು ಕರೆಯುವರು. ಈ ಜಿಲ್ಲೆಯ ನದಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ಒಂದೇ ಅಳಿವೆಯಲ್ಲಿ ಎದುರುಬದರಾಗಿಯಾಗಲಿ ಏಕಮುಖವಾಗಿಯಾಗಲಿ ಒಂದಕ್ಕಿಂತ ಹೆಚ್ಚು ನದಿಗಳು ಒಟ್ಟುಗೂಡಿ ಸಮುದ್ರವನ್ನು ಸೇರುತ್ತವೆ. ಚಿಕ್ಕ ನದಿಗಳು ಘಟ್ಟಗಳ ಪಶ್ಚಿಮದ ಗುಡ್ಡಬೆಟ್ಟಗಳಲ್ಲೂ ದೊಡ್ಡ ನದಿಗಳು ಪಶ್ಚಿಮ ಘಟ್ಟಗಳ ತಪ್ಪಲುಗಳಲ್ಲೂ ಅದರಾಚೆಯೂ ಉಗಮಿಸುತ್ತವೆ.

ಅರಣ್ಯ ಸಂಪತ್ತು: ಇಡೀ ಜಿಲ್ಲೆಯ ವಿಸ್ತೀರ್ಣದ ಸು. ಶೇ. 28 ಕಾಡುಗಳಿಂದ ಕೂಡಿದೆ. ಧಾರಾಳ ಮತ್ತು ತಂಪು ಹವೆಯ ಕಾರಣದಿಂದ, ಮಲೆನಾಡಿನ ಭಾಗಕ್ಕೆ ಸೇರಿದ ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳ ಪೂರ್ವ ಭಾಗಗಳು ಅರಣ್ಯಮಯವಾಗಿವೆ. ಹೆಚ್ಚಿನವು ಮೀಸಲು ಕಾಡುಗಳಾಗಿ ಸರ್ಕಾರದ ವಶದಲ್ಲಿವೆ. ಕಟ್ಟಡಗಳಿಗೆ ಅವಶ್ಯವಾದ ಬಿದಿರು, ತೇಗ, ಬೀಟೆ, ಬಣಪು, ಹೆಬ್ಬಲಸು ಮೊದಲಾದ ಮರಗಳೂ ಉರುವಲಿಗೆ ಬೇಕಾದ ಮರವೂ ಕುಕ್ಕೆ ಹೆಣೆಯಲು ಉಪಯೋಗವಾಗುವ ತರತರದ ಬೆತ್ತಗಳೂ ಬಳ್ಳಿಗಳೂ ಸೀಳುಹಲಗೆಗಳು, ಬೆಂಕಿಪೆಟ್ಟಿಗೆ, ಮತ್ತು ಪ್ಯಾಕಿಂಗ್ ಸಾಮಗ್ರಿಗಳೂ ಅರಣ್ಯದ ಉತ್ಪನ್ನಗಳಲ್ಲಿ ಮುಖ್ಯವಾದವು. ಇತರ ಅರಣ್ಯೋತ್ಪನ್ನಗಳೆಂದರೆ ಸೀಗೆಕಾಯಿ, ಅಳಲೆ, ಕಾಸರಕನ ಬೀಜ, ಕಾಚು, ರಾಮಪತ್ರೆ, ಅರಗು. ವನ್ಯ ಪ್ರಾಣಿ ಸಂಪತ್ತು: ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಹುಲಿ, ಚಿರತೆ, ಕತ್ತೆಕಿರುಬ ಮೊದಲಾದ ಮೃಗಗಳೂ ಆನೆ, ಕಾಡುಹಂದಿ, ಕಾಟಿ, ಮಂಗ, ಕಡವೆ ಜಿಂಕೆಗಳು ವಾಸಿಸುತ್ತವೆ. ನವಿಲು, ಪಾರಿವಾಳ, ಕೋಗಿಲೆ, ಗಿಳಿ, ಕಾಜಾಣ, ಮೊದಲಾದ ಹಕ್ಕಿಗಳು ಹಲವು ತರದ ಹಾವುಗಳೂ ಮೊಸಳೆಗಳೂ ಇವೆ. ಸೋಮೇಶ್ವರ ಘಾಟಿಯ ಕಾಡುಗಳಲ್ಲಿ ವನ್ಯಮೃಗ ರಕ್ಷಣಾಧಾಮವನ್ನು ಸ್ಥಾಪಿಸಲಾಗಿದೆ.

ಖನಿಜ ಸಂಪತ್ತು: ಈ ಜಿಲ್ಲೆಯಲ್ಲಿ ಕೆಲವು ಉಪಯುಕ್ತ ಖನಿಜ ನಿಕ್ಷೇಪಗಳಿವೆಯೆಂಬುದು 1960 ರಿಂದ ಈಚೆಗೆ ನಡೆಸಿದ ಸಮೀಕ್ಷೆಗಳಿಂದ ಗೊತ್ತಾಗಿದೆ. ಲೋಹ ಖನಿಜಗಳಲ್ಲಿ ಮಂಗಳೂರು –ಮಡಿಕೇರಿ ಮಾರ್ಗದ ಮೇಲೆ ಸು. 68 ಕಿಮೀ ದೂರದಲ್ಲಿರುವ ಮಡಲು (ಮೂಡೂರು) ಹೊಳೆಯಲ್ಲಿ ರೇವೆ ಚಿನ್ನದ ತುಣುಕು ಅಂಶ ಬಿಟ್ಟರೆ, ಕಬ್ಬಿಣದ ಅದಿರು ಮುಖ್ಯವಾದುದು. ಸುಬ್ರಹ್ಮಣ್ಯ ಗುಡ್ಡದ ಅರಬುಗುಡ್ಡ, ಭೂತಲಗುಡ್ಡ, ಸುಂಕದಕಟ್ಟೆಯ ವಾಯುವ್ಯೋತ್ತರದಲ್ಲಿರುವ ಬೊರೆಗುಡ್ಡ, ಎಣೆಕಲ್ಲು ಮತ್ತು ಬಳಪ, ಪುತ್ತೂರು ತಾಲ್ಲೂಕಿನ ಒಡದಮುಖ, ನಿಡ್ಲೆ ಇವುಗಳಲ್ಲಿ ಶೇ. 53 – 58 ಕಬ್ಬಿಣಾಂಶವಿರುವ ಅದಿರುಗಳು ಪತ್ತೆಯಾಗಿವೆ.

ಆರ್ಥಿಕತೆ: ಕೃಷಿ: ಈ ಜಿಲ್ಲೆಯ ಒಟ್ಟು ವಿಸ್ತೀಣದ ಶೇ. 28.9 ರಷ್ಟು ಭಾಗ ಕೃಷಿಯೋಗ್ಯ ಭೂಮಿಯಾಗಿದೆ. ಕೃಷಿ ಭೂಮಿಯ ಸು. ಶೇ. 68 ಭಾಗದಲ್ಲಿ ಬತ್ತ ಬೆಳೆಯುತ್ತದೆ. ಕರ್ನಾಟಕ ರಾಜ್ಯದಲ್ಲಿ ಇದು ಅತ್ಯಧಿಕ ಬತ್ತ ಬೆಳೆಯುವ ಜಿಲ್ಲೆಯೆನಿಸಿದೆ. ಬತ್ತವನ್ನು ಎಲ್ಲಾ ತಾಲೂಕುಗಳಲ್ಲಿ ಬೆಳೆದರೂ, ಬಂಟವಾಳ, ಮಂಗಳೂರು ತಾಲ್ಲೂಕುಗಳಲ್ಲಿ ಬತ್ತ ಬೆಳೆಯುವ ನೆಲದ ವಿಸ್ತೀರ್ಣ ಹೆಚ್ಚು. ಈ ಜಿಲ್ಲೆಯಲ್ಲಿ ಬತ್ತದ ಮೂರು ಬೆಳೆ ತೆಗೆಯುತ್ತಾರೆ. ಮೊದಲನೆಯ ಬೆಳೆ ಮಳೆಗಾಲದ್ದಾದರೆ ಎರಡನೆಯ ಬೆಳೆ (ಸುಗ್ಗಿ) ಹಿಂಗಾರುಮಳೆ ಮತ್ತು ಚಳಿಗಾಲದ ನಡುವಿನದು. ನೀರಿನ ಹರಿವಿಗೆ ಅಡ್ಡಕಟ್ಟೆ ಕಟ್ಟಿ

ಅದರಿಂದ ನೀರು ಪಡೆಯಲಾಗುತ್ತದೆ. ಮೂರನೆಯ (ತೊಳಕೆ) ಬೆಳೆ ಅರ್ಧ ಚಳಿಗಾಲ ಮತ್ತು ಪೂರ್ತಿ ಬೇಸಗೆಯದು. ಇದು ಬಯಲುಗದ್ದೆಗಳಲ್ಲಿ ನೀರಿನ ಆಸರೆ ಸರಿಯಾಗಿ ಇರುವಲ್ಲಿ ಮಾತ್ರ ಸಾಧ್ಯ. ಬಾವಿ ಮತ್ತು ಕೆರೆಗಳಿಂದ ಯಾತದ ಇಲ್ಲವೇ ಪಂಪುಗಳ ನೀರಾವರಿ ಆಧಾರ. ಕಂಕನಾಡಿಯಲ್ಲಿ ಬತ್ತ ಅಭಿವೃದ್ಧಿ ಕೇಂದ್ರವಿದೆ. ಹೊಸ ಮಾದರಿಯ ಬೀಜದ ಉಪಯೋಗ ವರ್ಷೇ ವರ್ಷೇ ಹೆಚ್ಚುತ್ತಿದೆ. ಸುಧಾರಿತ ಸಲಕರಣೆಗಳೂ ಬಳಕೆಯಲ್ಲಿವೆ.

ಇತರ ಆಹಾರೋಪಯೋಗಿ ಬೆಳೆಗಳಿಗೆ ಬಿತ್ತನೆಯ ನೆಲದ ಶೇ. 9% ಬಳಸಲಾಗುತ್ತಿದೆ. ಉದ್ದು, ಹೆಸರು, ಹುರುಳಿ ಮೊದಲಾದ ಧಾನ್ಯಗಳು, ಬಾಳೆ ಮತ್ತು ತರಕಾರಿಗಳು ಈ ಬೆಳೆಗಳಲ್ಲಿ ಮುಖ್ಯವಾದವು. ತೆಂಗು ಕರಾವಳಿ ತಾಲ್ಲೂಕುಗಳಲ್ಲಿ ಹೆಚ್ಚು. ಇತರ ತಾಲ್ಲೂಕುಗಳಲ್ಲಿ ಸಾಮಾನ್ಯ. ಇತರ ಬೆಳೆಗಳಲ್ಲಿ ಅಡಕೆ ಪ್ರಮುಖವಾದ್ದು. ಇದು ಪುತ್ತೂರು, ಬಂಟ್ವಾಳ ಮತ್ತು ಸುಳ್ಯ ತಾಲ್ಲೂಕುಗಳಲ್ಲಿ ಹೆಚ್ಚು. ಈ ಬೆಳೆಗೆ ನೀರಿನ ಆಶ್ರಯ ಮತ್ತು ತೆಂಕು ಕಡೆ ಬಿಸಿಲಿಗೆ ತಡೆ ಅಗತ್ಯ. ಅಡಕೆಯ ತೋಟಗಳಲ್ಲಿ ಬಾಳೆ ಮತ್ತು ಕರಿಮೆಣಸಿನ ಬಳ್ಳಿಗಳನ್ನೂ ಬೆಳೆಸುತ್ತಾರೆ. ಕಬ್ಬಿನ ಬೆಳೆ ಕುಂದಾಪುರ, ಮಂಗಳೂರು ಮತ್ತು ಉಡುಪಿ ತಾಲ್ಲೂಕುಗಳಲ್ಲಿ ಹೆಚ್ಚು. ಗೇರುಬೀಜದ ಬೆಳೆ ಕುಂದಾಪುರ, ಬಂಟ್ವಾಳ ಮತ್ತು ಕಾರ್ಕಳ ತಾಲ್ಲೂಕುಗಳಲ್ಲಿ ಇತ್ತೀಚಿಗೆ ಸೀ ಐಲೆಂಡ್ ಹತ್ತಿಯನ್ನು ಕೆಲವು ಸ್ಥಳಗಳಲ್ಲೂ ಬೆಳೆಸಲಾಗುತ್ತದೆ. ಉಳ್ಳಾಲದಲ್ಲಿ ಗೇರು ಸಂಶೋಧನ ಕೇಂದ್ರ, ಪಡಿಲ್‍ನಲ್ಲಿ ಹಣ್ಣುಹಂಪಲುಗಳ ಮಾದರಿ ಕೇಂದ್ರ, ವಿಟ್ಲದಲ್ಲಿ ಕೇಂದ್ರ ಅಡಿಕೆ ಸಂಶೋಧನ ಕೇಂದ್ರ, ಕ್ರಿಮಿನಾಶಕ ಸಂಶೋಧನ ಕೇಂದ್ರ ಮುಂತಾದ ಸಂಸ್ಥೆಗಳಿವೆ. ತೋಟಗಾರಿಕೆಯ ಅಭಿವೃದ್ಧಿಗೆ ಇತ್ತೀಚೆಗೆ ಸ್ವಲ್ಪ ಗಮನ ಹೆಚ್ಚುತ್ತಿದೆಯಲ್ಲದೆ, ಜೇನು ಸಾಕಣೆಯಿಂದ ಜೇನಿನ ಉತ್ಪತ್ತಿಯ ಉದ್ಯೋಗ ಮಲೆನಾಡಿನ ಭಾಗದಲ್ಲಿ ಹೆಚ್ಚು ಪ್ರಚಾರದಲ್ಲಿದೆ. ಮಣ್ಣಿನ ಗುಣ ಪರಿಶೀಲನೆಯ ಕೇಂದ್ರಗಳ ಮೂಲಕ ಮಣ್ಣಿನ ಪರೀಕ್ಷೆ, ಉತ್ತಮ ಗೊಬ್ಬರದ ಬಳಕೆ – ಇವುಗಳಿಂದ ಕೃಷಿಕರಿಗೆ ಹೆಚ್ಚು ಉತ್ಪನ್ನದ ದಾರಿಗಳು ದೊರೆತಿವೆ.

ಕೃಷಿಯ ಅಭಿವೃದ್ಧಿಗೆ ಸಹಾಯಕವಾದ ಪಶುಪಾಲನೆ ಉಪ –ಉದ್ಯೋಗಗಳನ್ನು ಒದಗಿಸುತ್ತಿದೆ. ಉಪ್ಪಿನಂಗಡಿಯ ಸಮೀಪದ ಕೊಯಿಲ ಎಂಬಲ್ಲಿಯ ಪಶುಪಾಲನೆ ಕೇಂದ್ರ ಮುಖ್ಯವಾದ್ದು. ಈಚೆಗೆ ಕೋಳಿ ಸಾಕಣೆ, ಹಂದಿ ಸಾಕಣೆ ಮೊದಲಾದವು ಹೆಚ್ಚುತ್ತಿವೆ. ಕ್ಷೀರೋತ್ಪಾನದ ಕೇಂದ್ರಗಳೂ ಅಲ್ಲಲ್ಲಿ ಸ್ಥಾಪಿತವಾಗಿವೆ. ವರ್ಷವರ್ಷವೂ ಸುಬ್ರಹ್ಮಣ್ಯದ ಬಳಿ ಕುಳಕುಂದ ಎಂಬಲ್ಲೂ ಕಾರ್ಕಳ ತಾಲ್ಲೂಕಿನ ಸೀತಾನದಿ ತೀರದಲ್ಲೂ ಜಾನುವಾರು ಜಾತ್ರೆಗಳಾಗುತ್ತವೆ.

ಮೀನುಗಾರಿಕೆ: ಈ ಜಿಲ್ಲೆಯ ಕರಾವಳಿ ತೀರ ಕೇವಲ 141 ಕಿಮೀ ಉದ್ದವಿದ್ದರೂ ಅದರ ಬಳಿಯ ಸಮುದ್ರದಲ್ಲೂ ಮತ್ಸ್ಯ ಸಂಪತ್ತು ವಿಪುಲವಾಗಿದೆ. ಕಡಲ್ಕರೆಯಲ್ಲಿ ವಾಸಿಸುವ ಮೊಗವೀರ ಜನಾಂಗದವರು (ಸು. 2 ಲಕ್ಷ ಮಂದಿ) ಈ ಕಸಬಿನಲ್ಲಿ ನೇರವಾಗಿ ತೊಡಗಿರುತ್ತಾರೆ.

ಕೈಗಾರಿಕೆ: ಕರ್ನಾಟಕದಲ್ಲಿ ಕೈಗಾರಿಕೆಯಲ್ಲಿ ಹಿಂದುಳಿದ ಅನೇಕ ಜಿಲ್ಲೆಗಳ ಪೈಕಿ ಈ ಜಿಲ್ಲೆಯೂ ಒಂದು. ಈಗ ಶೀಘ್ರವಾಗಿ ಕೈಗಾರಿಕಾ ಪ್ರಗತಿ ಹೊಂದುತ್ತಿದೆ. ಮಂಗಳೂರು ಹೊಸ ಬೃಹತ್ ಬಂದರು ನಿರ್ಮಾಣದಿಂದ ಜಿಲ್ಲೆಯ ಕೈಗಾರಿಕಾ ಬೆಳೆವಣಿಗೆಗೆ ವಿಶೇಷ ಉತ್ತೇಜನ ದೊರೆತಂತಾಗಿದೆ. ನವಮಂಗಳೂರು ಬಂದರಿನ ಪೂರ್ವ ಬದಿಗೆ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಎಂಬ ರಸಗೊಬ್ಬರ ಕಾರ್ಖಾನೆಯ ಸ್ಥಾಪನೆ ಇಲ್ಲಿಯ ಬೃಹತ್ ಉದ್ಯಮವಲಯದ ಬೆಳೆವಣಿಗೆಯ ಮೊದಲ ಹೆಜ್ಜೆ.

ಸಾರಿಗೆ: ಭೂಮಾರ್ಗ: ರಸ್ತೆ: ಪೂರ್ವ – ಪಶ್ಚಿಮ ಹರಿಯುವ ನದಿಗಳಿಗೆಲ್ಲ ಕರಾವಳಿ ಭಾಗದಲ್ಲಿ ಸೇತುವೆಗಳನ್ನು ರಚಿಸಿರುವುದರಿಂದ ಕನ್ಯಾಕುಮಾರಿ – ಮುಂಬಯಿ ರಾಷ್ಟ್ರೀಯ ಹೆದ್ದಾರಿ (ನಂ. 17) ಈ ಜಿಲ್ಲೆಯ ದಕ್ಷಿಣದ ಗಡಿಯಿಂದ ಉತ್ತರದ ಗಡಿಯ ಮೂಲಕ ಉಡುಪಿ ಮಾರ್ಗವಾಗಿ ಉತ್ತರ ಕನ್ನಡ ಜಿಲ್ಲೆಗೆ ಮುಂದುವರಿಯುತ್ತದೆ. ಮಂಗಳೂರಿನಿಂದ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೂ ಹೊರ ಜಿಲ್ಲೆಗಳಿಗೂ ಹೆದ್ದಾರಿಗಳಿವೆ. ಜಿಲ್ಲೆಯಲ್ಲಿ ಒಟ್ಟು, 249.3 ಕಿಮೀ ರಾಷ್ಟ್ರೀಯ ಹೆದ್ದಾರಿ, 474.8 ಕಿಮೀ ರಾಜ್ಯ ಹೆದ್ದಾರಿ 479.2 ಕಿಮೀ ಪ್ರಮುಖ ಜಿಲ್ಲಾ ರಸ್ತೆಗಳು ಮತ್ತು 1,110 ಕಿಮೀ ಇತರ ಗ್ರಾಮೀಣ ರಸ್ತೆಗಳು ಇವೆ.

ರೈಲುಮಾರ್ಗ: ಮಂಗಳೂರು – ಕೊಚ್ಚಿ –ಚೆನ್ನೈಬ್ರಾಡ್‍ಗೇಜ್ ರೈಲು ಮಾರ್ಗದಲ್ಲಿ ಈ ಜಿಲ್ಲೆಯೊಳಗಿನ ಭಾಗ ಕೇವಲ 13 ಕಿಮೀ. ನವಮಂಗಳೂರು ಬಂದರು ಪ್ರದೇಶಕ್ಕೆ ಮಂಗಳೂರಿನಿಂದ 13 ಕಿಮೀ ಉದ್ದದ ಬ್ರಾಡ್‍ಗೇಜ್ ನಿರ್ಮಿಸಲಾಗಿದೆ. ಮಂಗಳೂರು – ಹಾಸನ ರೈಲುಮಾರ್ಗ, ಮಂಗಳೂರು – ಮುಂಬಯಿ ಕರಾವಳಿ ರೈಲು ಮಾರ್ಗಗಳು ಮುಖ್ಯವಾದವುಗಳು.

ವಾಯುಮಾರ್ಗ: ಮಂಗಳೂರಿನಿಂದ ಉತ್ತರಕ್ಕೆ 18 ಕಿಮೀ ದೂರದ ಬಜ್ಪೆ ಎಂಬಲ್ಲಿ ವಿಮಾನ ನಿಲ್ದಾಣವಿದೆ. ಇಲ್ಲಿಂದ ಮುಂಬಯಿ ಕೊಚ್ಚಿಗಳಿಗೆ ದೈನಿಕ ವಿಮಾನ ಸಂಚಾರವಿದೆ.

**ಬಂದರುಗಳು:** ಮಂಗಳೂರು ಕರ್ನಾಟಕ ರಾಜ್ಯದ ದೊಡ್ಡ ಬಂದರು. ಕುಂದಾಪುರ (ಗಂಗೊಳ್ಳಿ) ಮತ್ತು ಮಲ್ಪೆ ಮಧ್ಯಮ ತರದ ಬಂದರುಗಳು. ಹಂಗಾರಕಟ್ಟೆ ಸಣ್ಣದು. ಒಟ್ಟು ನಿರ್ವಹಿಸಲಾದ ವ್ಯಾಪಾರದ ಭಾರದ ಅರ್ಧದಷ್ಟು ಮಂಗಳೂರು ಬಂದರಿನ ಮೂಲಕ ಸಾಗುತ್ತದೆ. ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು, ಹೆಂಚುಗಳು, ಮೋಪು, ಕಾಫಿ, ಏಲಕ್ಕಿ, ಗೇರುಬೀಜ, ಧಾನ್ಯಗಳು, ಕಲ್ಲೆಣ್ಣೆ ಮತ್ತು ಮತ್ಸ್ಯೋತ್ಪನ್ನಗಳು ಈ ಬಂದರಿನ ಮೂಲಕ ಸಾಗುತ್ತವೆ. ಈ ಬಂದರಿನ ಹಿನ್ನಾಡು ಜಿಲ್ಲೆಯಲ್ಲಷ್ಟೇ ಅಲ್ಲ, ಶಿವಮೊಗ್ಗ, ಹಾಸನ ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೂ ವ್ಯಾಪಿಸಿದೆ. ಮಲ್ಪೆ ಬಂದರು ಮತ್ಸ್ಯ ವ್ಯಾಪಾರದಲ್ಲಿ ಮುಖ್ಯಸ್ಥಾನ ಪಡೆದಿದೆ. ಗಂಗೊಳ್ಳಿ ಬಂದರಿನ ಮೂಲಕ ಮ್ಯಾಂಗನೀಸ್ ಅದಿರು ರಫ್ತಾಗಿದೆ.

ಜಿಲ್ಲೆಯ ಪಟ್ಟಣಗಳು. ವ್ಯಾಪಾರಕೇಂದ್ರಗಳು, ಚಾರಿತ್ರಿಕ ಮಹತ್ವದ ಹಾಗೂ ಪ್ರೇಕ್ಷಣೀಯ ಸ್ಥಳಗಳು ಮತ್ತು ಪವಿತ್ರಕ್ಷೇತ್ರಗಳಲ್ಲಿ ಮುಖ್ಯವಾದವು ಇವು: ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಪಟ್ಟಣ ಮಂಗಳೂರು. ಜನಸಂಖ್ಯೆ 538560 (2001). ಜಿಲ್ಲಾ ಕಛೇರಿಯೇ ಮುಂತಾದ ಸರ್ಕಾರಿ ಕಛೇರಿಗಳೂ ಹಲವು ಉಚ್ಚಶಿಕ್ಷಣಾಲಯಗಳೂ ವಿವಿಧ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳೂ ಹೊಸಬಂದರು ಸೌಕರ್ಯವೂ ಇರುವ ಕೇಂದ್ರ, ದಕ್ಷಿಣಕ್ಕೆ 23 ಕಿಮೀ ದೂರದ ಕೊಣಾಜೆಯಲ್ಲಿ ಮಂಗಳಗಂಗೋತ್ರಿಯಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಿದೆ. ನದೀತೀರ, ಸಮುದ್ರ ಸಾಮೀಪ್ಯ, ಗುಡ್ಡ ಮತ್ತು ಹಸುರುನೆಲ ಇವುಗಳಿಂದಾಗಿ ಮಂಗಳೂರು ರಮಣೀಯವಾಗಿದೆ. ಇದು ರಾಜ್ಯದ ನಗರಗಳಲ್ಲಿ ನಾಲ್ಕನೆಯದು.

ಧರ್ಮಸ್ಥಳ (ಬೆಳ್ತಂಗಡಿ ತಾಲ್ಲೂಕು), ಸುಬ್ರಹ್ಮಣ್ಯ (ಸುಳ್ಯ ತಾಲ್ಲೂಕು), ಪೊಳಲಿ (§AmÁ¢ÀvÀ ÁªÀÄÀ) Eª À¥ÀæzÀ¨ÀiÁvÁ¿ÉÆüÀÄ. (ಎಚ್.ಸಿ.ಎಲ್.)

**ದಕ್ಷಿಣ ಕೊರಿಯ:** ಕೊರಿಯ ಗಣರಾಜ್ಯ. ಉತ್ತರ ಚೀನ ಮತ್ತು ಜಪಾನ್‍ಗಳ ನಡುವೆ ಇರುವ ಕೊರಿಯ ಪರ್ಯಾಯ ದ್ವೀಪದ ದಕ್ಷಿಣ ಭಾಗ. ಉತ್ತರ–ದಕ್ಷಿಣ ಕೊರಿಯಗಳನ್ನು ಸ್ಥೂಲವಾಗಿ 38ನೆಯ ಉತ್ತರ ಅಕ್ಷಾಂಶರೇಖೆ ವಿಭಾಗಿಸುತ್ತದೆ. ಇದರ ಪಶ್ಚಿಮದಲ್ಲಿ ಹಳದಿ ಸಮುದ್ರ, ಪೂರ್ವದಲ್ಲಿ ಜಪಾನ್ ಸಮುದ್ರ, ಆಗ್ನೇಯದಲ್ಲಿ ಕೊರಿಯ ಜಲಸಂಧಿ ದಕ್ಷಿಣದಲ್ಲಿ ಪೂರ್ವ ಚೀನ ಸಮುದ್ರ ಇವೆ. $33^0$–$38^0 43'$ ಉ.ಅ. $33^0 43^0$ ಪೂ.ರೇ. ಇದರ ವಿಸ್ತೀರ್ಣ 99,268 ಚ.ಕಿಮೀ. ಜನಸಂಖ್ಯೆ 47640000 (2002). ರಾಜಧಾನಿ ಸೋಲ್.

ಮೇಲ್ಮೈಲಕ್ಷಣ : ದಕ್ಷಿಣ ಕೊರಿಯ ಪರ್ಯಾಯದ್ವೀಪ ಪರ್ವತಮಯ. ಕಣಿವೆಗಳೂ ಕರಾವಳಿಯ ಮೈದಾನವೂ ಕಿರಿದು. ಪರ್ವತಗಳು ಸಮುದ್ರಮಟ್ಟದಿಂದ 3000 ಮೀ ಗಳಿಗಿಂತ ಎತ್ತರವಾಗಿಲ್ಲ. ದಕ್ಷಿಣದ ಮೈದಾನಗಳು ಉತ್ತರಕ್ಕಿಂತ ಹೆಚ್ಚು ವಿಶಾಲವಾಗಿವೆ. ಟೀಬೇಕ್ ಪರ್ವತ ಈ ಪರ್ಯಾಯದ್ವೀಪದಲ್ಲಿ ಪೂರ್ವತೀರದ ಬಳಿ ದಕ್ಷಿಣೋತ್ತರವಾಗಿ ಹಬ್ಬಿದೆ. ಅದರಿಂದ ಹಲವು ತಗ್ಗಾದ ಶ್ರೇಣಿಗಳು ಈಶಾನ್ಯದಿಂದ ನೈರುತ್ಯಕ್ಕೆ ಸಾಗಿವೆ. ದಕ್ಷಿಣ ಕೊರಿಯದ ಅತ್ಯುನ್ನತ ಶಿಖರ ಹಾಲಾ ಸಾನ್. 1950 ಮೀ ಇರುವ ಈ ಶಿಖರ ಚೇಜೂ ದ್ವೀಪದಲ್ಲಿದೆ. ಹಾನ್, ಕುಮ್, ನಾಕ್ಟಾಂಗ್ ಮುಂತಾದ ಮುಖ್ಯ ನದಿಗಳು ಟೀಬೇಕ್ ಪರ್ವತದಲ್ಲಿ ಹುಟ್ಟಿ ಕಣಿವೆಗಳಲ್ಲಿ ಹರಿಯುತ್ತವೆ. ಈ ನದೀ ಕಣಿವೆಗಳ ದಕ್ಷಿಣ ಭಾಗಗಳು ವಿಶಾಲವಾದ ತಗ್ಗುಬಯಲುಗಳು. ದಕ್ಷಿಣ ಕೊರಿಯದ ಪೂರ್ವತೀರ ಹೆಚ್ಚು ನೇರವಾಗಿದೆ. ಪಶ್ಚಿಮ ತೀರ ಅಂಕುಡೊಂಕಾಗಿ ಅನೇಕ ದ್ವೀಪಗಳಿಂದ ಕೂಡಿದೆ. ಈ ಜಟಿಲಮಯ ತೀರದಿಂದಾಗಿ ಹಳದಿ ಸಮುದ್ರದಲ್ಲಿ ಉಬ್ಬರವಿಳಿತದ ವ್ಯಾಪ್ತಿ ಪ್ರಪಂಚದಲ್ಲೇ ಉಚ್ಚತಮವಾದ್ದು; ಸೋಲ್‍ನ ಪ್ರವೇಶದ ಬಂದರಾದ ಇಂಚಾನ್‍ನಲ್ಲಿ 9 ಮೀ ಗಳಷ್ಟು ಗರಿಷ್ಠವಾಗಿರುತ್ತದೆ.

ವಾಯುಗುಣ: ಖಂಡೀಯ ಪ್ರಭಾವದಿಂದಾಗಿ ಇಲ್ಲಿ ಚಳಿಗಾಲ ಹೆಚ್ಚು ತೀವ್ರ, ಬೇಸಗೆ ಹೆಚ್ಚು ಉಷ್ಣ, ದಕ್ಷಿಣಕೊರಿಯದಲ್ಲಿ ಉತ್ತರ ಕೊರಿಯದಲ್ಲಿರುವುದಕ್ಕಿಂತ ಉಷ್ಣತೆಯ ವಾರ್ಷಿಕ ವ್ಯಾಪ್ತಿ ಕಡಿಮೆ; ತೀರಪ್ರದೇಶಕ್ಕಿಂತ ಒಳನಾಡಿನಲ್ಲಿ ಹೆಚ್ಚು. ದಕ್ಷಿಣ ತೀರವನ್ನು ಬಿಟ್ಟರೆ ಉಳಿದ ಪ್ರದೇಶದಲ್ಲಿ ಜನವರಿಯಲ್ಲಿ ಸರಾಸರಿ ಮಾಸಿಕ ಉಷ್ಣತೆ ಬರ್ಫ ಬಿಂದುವಿಗಿಂತ ಕಡಿಮೆ ಇರುತ್ತದೆ. ಜುಲೈಯಲ್ಲಿ ಸರಾಸರಿ ಮಾಸಿಕ ಉಷ್ಣತೆ – $25^0$ಸೆ. ಗೆ ಏರುತ್ತದೆ. ಸೋಲ್‍ನಲ್ಲಿ ಜನವರಿಯಲ್ಲಿ ಸರಾಸರಿ ಮಾಸಿಕ ಉಷ್ಣತೆ – $5^0$ಸೆ. ಆಗಸ್ಟ್‍ನದು $25^0$ಸೆ. ಆಗ್ನೇಯ ತೀರದಲ್ಲಿರುವ ಪೂಸಾನ್‍ನಲ್ಲಿ ಸರಾಸರಿ ಮಾಸಿಕ ಉಷ್ಣತೆ ಜನವರಿಯಲ್ಲಿ $2^0$ಸೆ., ಆಗಸ್ಟಿನಲ್ಲಿ $25^0$ಸೆ. ವಾರ್ಷಿಕ ಮಳೆ ಸು. 100–138 ಸೆಂಮೀ ಬೇಸಗೆಯಲ್ಲಿ ಮಳೆ ಹೆಚ್ಚು. ಅದು ಮಾನ್ಸೂನಿನ ಫಲ. ಮಂಜಿಲ್ಲದ ದಿನಗಳು ವರ್ಷದಲ್ಲಿ 170 – 226.

ಸ್ವಾಭಾವಿಕ ಸಸ್ಯ ಪ್ರಾಣಿವರ್ಗ: ದಕ್ಷಿಣ ಕೊರಿಯದ ವಾಯುಗುಣ ಕಾಡುಗಳ ಬೆಳೆವಣಿಗೆಗೆ ಅನುಕೂಲಕರವಾಗಿದೆ. ಅಲ್ಲಿ ಮೂಲತಃ ಇದ್ದ ಕಾಡುಗಳನ್ನು ಸೌದೆಗಾಗಿ ಮತ್ತು ಜನಸಂಖ್ಯೆಯ ಒತ್ತಡದಿಂದಾಗಿ ಬಹುತೇಕ ಕಡಿಯಲಾಗಿದೆ. ದಕ್ಷಿಣ ಕರಾವಳಿಯಲ್ಲಿ

ಉಷ್ಣವಲಯದ ಅಗಲೆಲೆಯ ಮರಗಳ ಕಾಡುಗಳೂ ಉಳಿದೆಡೆಗಳಲ್ಲಿ ಶಂಕುಪರ್ಣಿ ಕಾಡುಗಳೂ ಇವೆ. ಇಲ್ಲಿಯ ವನ್ಯ ಮೃಗಗಳು ಉತ್ತರ ಚೀನ ಹಾಗೂ ಮಂಚೂರಿಯದಲ್ಲಿರುವಂಥವು. ಹಿಂದೆ ಇಲ್ಲಿ ಹುಲಿ, ಚಿರತೆ, ಲಿಂಕ್, ಕರಡಿ ಮುಂತಾದವು ವಿಶೇಷವಾಗಿದ್ದವು. ಈಗ ಅವು ವಿರಳವಾಗಿವೆ.




ಜನ, ವಸತಿ, ಜೀವನ, ಧರ್ಮ: ಕೊರಿಯದ ಜನರು ಮೂಲತಃ ಮಧ್ಯ ಏಷ್ಯ, ಬೈಕಲ್ ಪ್ರದೇಶ, ಮಂಗೋಲಿಯ ಮತ್ತು ಹಳದಿ ಸಮುದ್ರದ ಕರಾವಳಿಯ ಜನರೊಂದಿಗೆ ಸಂಬಂಧ ಹೊಂದಿದ್ದಿರಬಹುದು. ಕೊರಿಯನರು ಮಂಗೋಲಿಯನರಂಥ ದೈಹಿಕಲಕ್ಷಣಗಳುಳ್ಳವರಾಗಿದ್ದಾರೆ. ನೇರವಾದ ಕಪ್ಪನೆಯ ಕೂದಲು, ನೇರ ಮೂಗು, ಉಬ್ಬಿದ ದವಡೆ ಮೂಳೆ, ಕಣ್ಣು ರೆಪ್ಪೆಯ ಮಡಿಗೆ – ಇವು ಇವರ ಮುಖ್ಯ ಲಕ್ಷಣಗಳು.

ಜನರ ಮುಖ್ಯ ಕಸಬು ಕೃಷಿ. ಮುಖ್ಯವಾಗಿ ನದೀ ಕಣಿವೆಗಳಲ್ಲೂ ಕರಾವಳಿಯ ತಗ್ಗು ನೆಲದಲ್ಲೂ ಬೇಸಾಯ ನಡೆಯುತ್ತದೆ. ಹಳ್ಳಿಗಳು ಸಾಮಾನ್ಯವಾಗಿ ಬೆಟ್ಟಗಳ ಬುಡದಲ್ಲಿ ದಕ್ಷಿಣಾಭಿಮುಖವಾಗಿ ನಿರ್ಮಿತವಾಗಿವೆ. ಬೆಂಗಡೆಯ ಬೆಟ್ಟಗಳು ಉತ್ತರದಲ್ಲಿ ಚಳಿಗಾಳಿಯಿಂದ ರಕ್ಷಣೆ ನೀಡುತ್ತವೆ. ಶೀಘ್ರ ನಗರೀಕರಣದಿಂದಾಗಿ ಪಟ್ಟಣ ಜೀವನದ ಸ್ವರೂಪ ಬದಲಾಗುತ್ತಿದೆ. ಎತ್ತರದ ಕಟ್ಟಡಗಳ ಸಂಖ್ಯೆ ಬೆಳೆಯುತ್ತಿದೆ. ಅದರ ಸಣ್ಣ ಮನೆಗಳೂ ಹಲವು ಅಂತಸ್ತುಗಳ ಮನೆಗಳೂ ಪಕ್ಕಪಕ್ಕದಲ್ಲೇ ಇವೆ. ನಗರಗಳ ಬೆಳವಣಿಗೆಯ ವೇಗದಲ್ಲಿ ಸೌಲಭ್ಯ ಕಲ್ಪನೆ ಸಾಧ್ಯವಾಗಿಲ್ಲವಾದ್ದರಿಂದ ನೀರು ಸರಬರಾಜು, ನಿರ್ಮಲೀಕರಣ ಮುಂತಾದ ಸಮಸ್ಯೆಗಳು – ಮುಖ್ಯವಾಗಿ ಸೋಲ್ ಮತ್ತು ಪೂಸಾನ್ ನಗರಗಳಲ್ಲಿ – ಉದ್ಭವಿಸಿವೆ. ದಕ್ಷಿಣ ಕೊರಿಯದ ಮುಖ್ಯ ನಗರಗಳು ಅಂದರೆ, ಸೋಲ್. ಪೂಸಾನ್, ಟ್ಯಾಗೂ, ಇಂಚಾನ್, ಗ್ವಾಂಜೂ, ಟ್ಯಾಜಾನ್, ಜೋಂಜು ಮತ್ತು ಮಾಸಾನ.

ಆರ್ಥಿಕತೆ: ದಕ್ಷಿಣ ಕೊರಿಯದಲ್ಲಿ ಖನಿಜ ಸಂಪತ್ತು ಅಧಿಕವಾಗಿಲ್ಲ. ಕಬ್ಬಿಣ ಅದಿರು ಮತ್ತು ಟಂಗ್‌ಸ್ಟನ್ ಕಾಂಗ್ವನ್ ಪ್ರಾಂತ್ಯದಲ್ಲೂ ಚಿನ್ನ ಮತ್ತು ಬೆಳ್ಳಿ ಚನ್‌ಚನ್ ಮತ್ತು ಕಯಾಂಗ್‌ಸಾಂಗ್ ಪ್ರಾಂತ್ಯಗಳಲ್ಲೂ ದೊರಕುತ್ತವೆ. ಇತರ ಖನಿಜಗಳು ಕಲ್ಲಿದ್ದಲು, ಗ್ರಾಫೈಟ್, ಸೀಸ ಮತ್ತು ಸತು. ಕಬ್ಬಿಣದ ಅದಿರು ಜಪಾನಿಗೂ ಟಂಗ್‌ಸ್ಟನ್ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೂ ನಿರ್ಯಾತವಾಗುತ್ತವೆ. ದಕ್ಷಿಣ ಕೊರಿಯದ ಜನಸಂಖ್ಯೆಯಲ್ಲಿ ಸುಮಾರು ಅರ್ಧ ಭಾಗ ಕೃಷಿನಿರತವಾಗಿದೆ. ಸ್ಥೂಲವಾಗಿ ಒಟ್ಟು ಭೂಮಿಯ ಕಾಲುಭಾಗ ಸಾಗುವಳಿಗೆ ಒಳಪಟ್ಟಿದೆ. ಬತ್ತ ಅತ್ಯಂತ ಮುಖ್ಯ ಬೆಳೆ. ಒಟ್ಟು ಕೃಷಿಭೂಮಿಯ ಶೇ. 40 ರಷ್ಟು ಭಾಗದಲ್ಲಿ ಬತ್ತ ಬೆಳೆಯುತ್ತಾರೆ. ಇತರ ಬೆಳೆಗಳು ಬಾರ್ಲಿ, ಗೋದಿ, ಸೊಯ ಹುರುಳಿ ಮುಂತಾದವು. ಕಯಾಂಗ್‌ಸಾಂಗ್ ಮತ್ತು ಚಾಲ ಪ್ರಾಂತ್ಯಗಳಲ್ಲಿ ವರ್ಷಕ್ಕೆ ಬತ್ತ ಬಾರ್ಲಿಗಳ ಎರಡು ಬೆಳೆ ತೆಗೆಯುತ್ತಾರೆ. ದಕ್ಷಿಣ ಕೊರಿಯದ ಸ್ಥೂಲ ರಾಷ್ಟ್ರೀಯ ಉತ್ಪನ್ನದಲ್ಲಿ ನಾಲ್ಕನೆಯ ಒಂದಕ್ಕಿಂತ ಹೆಚ್ಚು ಭಾಗ ಬರುವುದು ಕೃಷಿ, ಅರಣ್ಯಗಾರಿಕೆ ಹಾಗೂ ಮೀನುಗಾರಿಕೆಯಿಂದ.

1962 ರಲ್ಲಿ ಆರಂಭವಾದ ಪಂಚವಾರ್ಷಿಕ ಆರ್ಥಿಕ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ದಕ್ಷಿಣ ಕೊರಿಯದಲ್ಲಿ ಗಣಿಗಾರಿಕೆಯೂ ಕೈಗಾರಿಕೆಗಳೂ ಬೆಳೆಯುತ್ತಿವೆ. ರಾಸಾಯನಿಕ, ಲೋಹ ಮತ್ತು ಯಂತ್ರ ತಯಾರಿಕೆಯಂಥ ಬಾರಿ ಕೈಗಾರಿಕೆಗಳು ಬೆಳವಣಿಗೆ ಹೊಂದುತ್ತಿವೆ. ಅತ್ಯಂತ ಮುಖ್ಯವಾದ್ದು ಜವಳಿ ಕೈಗಾರಿಕೆ. ಇದು ದಕ್ಷಿಣ ಕೊರಿಯದಿಂದ ನಿರ್ಯಾತವಾಗುವ ಕೈಗಾರಿಕಾ ಸರಕುಗಳಲ್ಲಿ ಅರ್ಧಭಾಗದಷ್ಟಿದೆ. ಜವಳಿ, ವಿದ್ಯುಚ್ಛಕ್ತಿ, ರಸಗೊಬ್ಬರ, ತೈಲ ಪರಿಷ್ಕರಣ ಮುಂತಾದ ಬೃಹತ್ ಕೈಗಾರಿಕೆಗಳಿಗೆ ಸರ್ಕಾರ ಬೆಂಬಲ ನೀಡುತ್ತಿದೆ. ಮಧ್ಯಮ ಗಾತ್ರದ ಹಾಗೂ ಸಣ್ಣ ಕೈಗಾರಿಕೆಗಳೂ ಖಾಸಗಿ ಒಡೆತನದಲ್ಲಿವೆ. (ಜಿ.ಆರ್.ಆರ್.)

**ದಕ್ಷಿಣ ಕ್ಯಾರಲೈನ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ 13 ಮೂಲ ರಾಜ್ಯಗಳ ಪೈಕಿ ಒಂದು. ಅಟ್ಲಾಂಟಿಕ್ ಸಾಗರ ತೀರದ ರಾಜ್ಯ. ಸವಾನ ನದಿ ಜಾರ್ಜಿಯಕ್ಕೂ ಈ ರಾಜ್ಯಕ್ಕೂ ನಡುವಣ ಸ್ವಾಭಾವಿಕ ಗಡಿಯಾಗಿದೆ. ರಾಜ್ಯದ ವಿಸ್ತೀರ್ಣ 80,432 ಕಿಮೀ. ಜನಸಂಖ್ಯೆ 4012012 (2000). ರಾಜಧಾನಿ ಕೊಲಂಬಿಯ.

ಮೇಲ್ಮೈ ಲಕ್ಷಣ: ದಕ್ಷಿಣ ಕ್ಯಾರಲೈನ್ ಭೌಗೋಳಿಕವಾಗಿ ಕರಾವಳಿ ಬಯಲು, ಪೀಡ್‌ಮಾಂಟ್ ಪ್ರಸ್ಥಭೂಮಿ, ಬ್ಲೂ ರಿಡ್ಜ್ ಪರ್ವತ ಪ್ರದೇಶ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಅಟ್ಲಾಂಟಿಕ್ ತೀರದಿಂದ ಪೀಡ್ ಮಾಂಟ್ ಪ್ರದೇಶದವರೆಗೆ ಸು. 190–240 ಕಿಮೀ ಕರಾವಳಿ ಬಯಲು ರಾಜ್ಯದ 2/3 ಭಾಗವನ್ನು ಆವರಿಸಿಕೊಂಡಿದೆ. ರಾಜ್ಯದ ಪೂರ್ವ ಮತ್ತು ಆಗ್ನೇಯದಲ್ಲಿ 300 ಕಿಮೀ ಸಮುದ್ರತೀರವಿದೆ. ಕಡಲಕರೆಯ ನೆಲ ಜೌಗಿನಿಂದ ಕೂಡಿ ತಗ್ಗಾಗಿದೆ. ಸಮುದ್ರದ ಅಂಚಿನಲ್ಲಿ ನದಿಗಳು ತಂದು ಹಾಕಿದ ಹೂಳಿನಿಂದ ಸೃಷ್ಟಿಯಾದ ಕಿರುದ್ವೀಪಗಳಿವೆ. ಇವುಗಳ ಪೈಕಿ ಪ್ರಧಾನವಾದುವು, ಎಡಿಸ್ಟೋ, ಪೋರ್ಟ್ ರಾಯಲ್, ಸೇಂಟ್ ಹೆಲೀನ ಹಾಗೂ ಪ್ಯಾರಸ್. ಸಮುದ್ರದ ಉಪ್ಪುನೀರಿನಿಂದ ಕೂಡಿದ ನದಿಗಳು ಒಳನಾಡಲ್ಲಿ ಸು. 800 ಕಿಮೀ ವರೆಗೆ ಜಲಯಾನಕ್ಕೆ ಅನುಕೂಲವಾಗಿವೆ. ಸಮುದ್ರತೀರ ಬಯಲಿಗೂ ಪೀಡ್‌ಮಾಂಟ್‌ಗೂ ನಡುವೆ ಇರುವ 16 ಕಿಮೀ ಅಗಲದ ಪ್ರದೇಶ ಇಳಿಜಾರಿನ ವಲಯ. ಇಲ್ಲಿ ನದಿಗಳು ವೇಗವಾಗಿ ಹರಿಯುತ್ತವೆ. ಪೀಡ್‌ಮಾಂಟ್‌ನ್ನು ಪ್ರಸ್ಥಭೂಮಿಯೆಂದು ಕರೆಯಲಾಗಿದೆಯಾದರೂ ವಾಸ್ತವವಾಗಿ ಇದು ನಗ್ನೀಕರಣಕ್ಕೊಳಗಾದ ಮೈದಾನ. ಅನೇಕ ನದಿಗಳು ಇದನ್ನು ಅಲ್ಲಲ್ಲಿ ಕತ್ತರಿಸಿ ಪ್ರಪಾತಗಳನ್ನು ಸೃಷ್ಟಿಸಿವೆ. ಇಲ್ಲಿ ಅನೇಕ ಜಲಪಾತಗಳಿವೆ. ದಕ್ಷಿಣ ಕ್ಯಾರಲೈನ್‌ದ ಅನೇಕ ಹೆದ್ದಾರಿಗಳು, ಪಟ್ಟಣಗಳು, ರೈಲು ಮಾರ್ಗಗಳು ಹಾಗೂ ವ್ಯವಸಾಯದ ಜಮೀನುಗಳು ಪೀಡ್‌ಮಾಂಟ್ ಪ್ರದೇಶದಲ್ಲಿವೆ. ಬ್ಲೂ ರಿಡ್ಜ್ ಪರ್ವತ ಪ್ರದೇಶ ಪೀಡ್‌ಮಾಂಟಿನ ಅತ್ಯುನ್ನತ ಪ್ರದೇಶಕ್ಕಿಂತ 300–600 ಕಿಮೀ ಎತ್ತರವಾಗಿದೆ. ರಾಜ್ಯದ ಅತ್ಯಂತ ಎತ್ತರವಾದ ಶಿಖರ ಸ್ಯಾಸಫ್ರಾಸ್ (460 ಮೀ).

ಪೀಡೀ ನದಿ ಉತ್ತರ ಕ್ಯಾರಲೈನ್ ರಾಜ್ಯದ ದಕ್ಷಿಣ ಗಡಿಯಿಂದ ದಕ್ಷಿಣ ಕ್ಯಾರಲೈನ್‌ಗೆ ಹರಿದು ಬಂದು, ವಿನ್ಯಾ ಕೊಲ್ಲಿಯಲ್ಲಿ ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ರಾಜ್ಯ ಮಧ್ಯಭಾಗದಲ್ಲಿ ವಾಟರೀ ಮತ್ತು ಕಾಂಗರೀ ನದಿಗಳ ಸಂಗಮದಿಂದ ಉಂಟಾದ ಸ್ಯಾಂಟೀ ನದಿಯೂ ರಾಜ್ಯದ ದಕ್ಷಿಣ ಭಾಗದಲ್ಲಿ ಹರಿಯುವ ಎಡಿಸ್ಟನ್ ನದಿಯೂ ಆಗ್ನೇಯಾಭಿಮುಖವಾಗಿ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತವೆ. ಸವಾನ ನದಿ ರಾಜ್ಯದ ನೈಋತ್ಯ ಗಡಿಯಾಗಿ ಹರಿಯುತ್ತದೆ. ಅನೇಕ ನದಿಗಳೂ ಪೀಡ್‌ಮಾಂಟ್‌ಗೂ ಮೈದಾನಕ್ಕೂ ನಡುವಣ ಇಳಿಜಾರಿನ ವರೆಗೆ ಜಲಯಾನಕ್ಕೆ ಅನುಕೂಲವಾಗಿವೆ. ದಕ್ಷಿಣ ಕ್ಯಾರಲೈನ್‌ದಲ್ಲಿ ದೊಡ್ಡ ನೈಸರ್ಗಿಕ ಸರೋವರಗಳಿಲ್ಲ. ಸಮುದ್ರತೀರದ ತಗ್ಗುಭೂಮಿಯಲ್ಲಿ ನೀರು ತುಂಬಿ ಅನೇಕ ಹೊಂಡಗಳಾಗಿವೆ.

ವಾಯುಗುಣ: ರಾಜ್ಯದ ವಾಯುಗುಣ ಸಾಮಾನ್ಯವಾಗಿ ಹಿತಕರ. ಬೇಸಗೆಯ ಸರಾಸರಿ ಉಷ್ಣತೆ $28^{0}$ಸೆ.; ಜನವರಿಯಲ್ಲಿ $11^{0}$ಸೆ. ವಾರ್ಷಿಕ ಸರಾಸರಿ ಮಳೆ 120 ಸೆಂಮೀ ತೀರದ ಬಳಿಯ ದ್ವೀಪಗಳಲ್ಲಿ ಸಾಮಾನ್ಯವಾಗಿ ಉಷ್ಣವಲಯದ ವಾಯುಗುಣವಿದೆ.

ಸಸ್ಯಪ್ರಾಣಿವರ್ಗ: ಸಮುದ್ರತೀರದ ಜೌಗು ಭಾಗದಲ್ಲಿ ಉಷ್ಣವಲಯದ ಸಸ್ಯಗಳಾದ ಪಾಮೆಟ್ಟೊ, ಪೈನ್, ಸೈಪ್ರೆಸ್, ಬೇ ಹಾಗೂ ಗಮ್ ಮರಗಳೂ ಒಳನಾಡಿನಲ್ಲಿ ಪೈನ್, ಹಿಕರಿ, ಡಾಗ್ವುಡ್, ಆಷ್, ಮೇಪಲ್. ವಾಲ್‌ನಟ್, ಮತ್ತು ಚೆಸ್‌ನಟ್ ಮರಗಳೂ ಇವೆ. ಜೌಗು ಪ್ರದೇಶದಲ್ಲಿ ಮೊಸಳೆ ಮತ್ತು ವಿಷಸರ್ಪಗಳುಂಟು. ರಾಜ್ಯದ ಮುಖ್ಯಪ್ರಾಣಿಗಳು ವರ್ಜಿನಿಯ ಜಿಂಕೆ, ಕಾಡು, ಹಂದಿ, ಕಾಡು ಟರ್ಕಿಕೋಳಿ. ವಿವಿಧ ಕಡಲ ಹಕ್ಕಿಗಳೂ ಸಮುದ್ರದಲ್ಲಿ ಹಲವು ಬಗೆಯ ಮೀನುಗಳೂ ಏಡಿ, ಆಮೆ, ಷಾರ್ಕ್‌ಗಳೂ ಉಂಟು.

ಜನ: ದಕ್ಷಿಣ ಕ್ಯಾರಲೈನ್ ಭಾಗದಲ್ಲಿ ಮೊಟ್ಟಮೊದಲು ನೆಲೆಸಿದವರು ಸ್ಪೇನ್, ಇಂಗ್ಲೆಂಡ್ ಮತ್ತು ಐರ್ಲೆಂಡ್ ಜನ. 1671 ರಲ್ಲಿ ನ್ಯೂಯಾರ್ಕಿನಿಂದ ಡಚ್ ಜನರ ತಂಡವೊಂದು ಇಲ್ಲಿಗೆ ಬಂದು ನೆಲೆಸಿತು. 1685 ರಲ್ಲಿ ಫ್ರಾನ್ಸಿನಿಂದ ಅನೇಕ ಜನ ಬಂದು ನೆಲೆಸಿದರು. 1670 ರಲ್ಲಿ 5 ಮಂದಿ ನೀಗ್ರೋಗಳು ಗುಲಾಮರಾಗಿ ಇಲ್ಲಿಗೆ ಬಂದರು. 1970 ರಲ್ಲಿ ನಿಗ್ರೋಜನರ ಸಂಖ್ಯೆ ಇಲ್ಲಿಯ ಜನಸಂಖ್ಯೆ ಶೇ. 30 ರಷ್ಟಿತ್ತು. ದಕ್ಷಿಣ ಕ್ಯಾರಲೈನ್‌ನಲ್ಲಿ ಯುರೋಪಿನಿಂದ ಬಂದ ನಾನಾ ಭಾಷಾ ಜನರ ಸಂಮಿಶ್ರಣವಾಗಿದ್ದರೂ ಇಲ್ಲಿಯ ಪ್ರಧಾನ ಭಾಷೆ ಇಂಗ್ಲಿಷ್. ರಾಜ್ಯದ ಜನರು ಕೆಥೊಲಿಕ್ ಹಾಗೂ ಪ್ರಾಟೆಸ್ಟಂಟ್ ಕ್ರೈಸ್ತರು. ಕ್ಯಾರಲೈನ್‌ದ ಪ್ರಮುಖ ಪಟ್ಟಣಗಳು ಕೊಲಂಬಿಯ, ಚಾರ್ಲ್ಸ್‌ಟನ್, ಗ್ರೀನ್‌ವಿಲ್, ಸ್ಪಾರ್ಟನ್‌ಬರ್ಗ್ ಮತ್ತು ರಾಕ್ ಹಿಲ್.

ಆರ್ಥಿಕತೆ: ಬೇಸಾಯಕ್ಕೆ ಒದಗಿ ಬಂದಿರುವ ಭೂಮಿ ತೀರ ಕಡಿಮೆ. ಇಲ್ಲಿಯ ಪ್ರಧಾನ ಬೆಳೆಗಳು ಹತ್ತಿ, ಹೊಗೆಸೊಪ್ಪು, ಸೋಯಾಬೀನ್ ಮತ್ತು ಮುಸುಕಿನ ಜೋಳ. ರಾಜ್ಯದ ಭೂಮಿಯಲ್ಲಿ ಶೇ. 62 ಅರಣ್ಯ. ಎರಡು ರಾಷ್ಟ್ರೀಯ ಅರಣ್ಯಗಳಿವೆ. ಫ್ರಾನ್ಸಿಸ್ ಮರಿಯ ಅರಣ್ಯದ ವಿಸ್ತೀರ್ಣ 165880 ಹೆ., ಸುಮ್ಟರ್ ಅರಣ್ಯ 562762 ಹೆ. ವಿಸ್ತಾರವಾಗಿದೆ. ರಾಜ್ಯ ಅರಣ್ಯಗಳ ಸಂಖ್ಯೆ 6. ರಾಜ್ಯದಲ್ಲಿ ಜೌಬೀನೆ, ಹತ್ತಿ, ರಾಸಾಯನಿಕ, ಕಾಗದ ಹಾಗೂ ಸಿಮೆಂಟ್ ಕಾರ್ಖಾನೆಗಳಿವೆ. ಸವಾನ ನದಿಯ ದಂಡೆಯ ಮೇಲೆ ಅಮೆರಿಕದ ಪರಮಾಣು ಶಕ್ತಿ ಉತ್ಪಾದನೆಯ ದೊಡ್ಡ ಸಂಸ್ಥೆ ಇದೆ. ಪರಮಾಣು ಅಸ್ತ್ರಗಳಿಗೆ ಅಗತ್ಯವಾದ ಪ್ಲುಟೋನಿಯಂ ಇಲ್ಲಿ ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ ದೊರಕುವ ಖನಿಜಗಳಲ್ಲಿ ಪ್ರಧಾನವಾದದ್ದು ಕೊಲಿನ್ ಮತ್ತು ಇತರ ಬಗೆಯ ಜೇಡಿಮಣ್ಣು. (ವಿ.ಜಿ.ಕೆ.;ಸಿ.ಎಂ.)

**ದಕ್ಷಿಣ ಚೀನ ಸಮುದ್ರ:** ಚೀನ ಸಮುದ್ರದ ಒಂದು ಭಾಗ; ಪೆಸಿಫಿಕ್ ಸಾಗರದ ಚಾಚು. ಇದಕ್ಕಿರುವ ಚೀನಿ ಹೆಸರು ನಾನ್ ಹೈ. ದಕ್ಷಿಣ ಸಮುದ್ರ ಎಂದು ಇದರ ಅರ್ಥ. ಉತ್ತರ – ದಕ್ಷಿಣವಾಗಿ 2,900 ಕಿಮೀ ಉದ್ದಕ್ಕೆ ಚಾಚಿದೆ. ಪೂರ್ವ – ಪಶ್ಚಿಮವಾಗಿ ಇದರ ಅಗಲ 960 ಕಿಮೀ.

ಫಿಲಿಪೈನ್ಸ್ ದ್ವೀಪಗಳು ಮತ್ತು ಏಷ್ಯ ಭೂಖಂಡದ ಮಧ್ಯೆ ಇರುವ ದಕ್ಷಿಣ ಚೀನ ಸಮುದ್ರದಲ್ಲಿ 4,600 ಮೀ ಆಳವುಳ್ಳ ಬೋಗುಣಿಯಾಕಾರದ ಭೂತಗ್ಗು ಇದೆ. ಫಿಲಿಫೈನ್ಸ್ ಮತ್ತು ಫಾರ್ಮೋಸ ದ್ವೀಪಗಳ ಮಧ್ಯೆ ಇರುವ ಸಾಗರತಳ ಕಣಿವೆ ಈ ಬೋಗುಣಿಯಿಂದ ಪೆಸಿಫಿಕ್ ಸಾಗರದ 2,500 – 3,000 ಮೀ ಆಳವಾಗಿರುವ ಸಾಗರತಳ ಕಣಿವೆಗಳಿಗೆ ಸಂಪರ್ಕವನ್ನು ಕಲ್ಪಿಸುತ್ತವೆ.

ನದಿಗಳ ನೀರಿನ ಸೇರುವಿಕೆಯಿಂದ ಈ ಸಮುದ್ರದ ಪಶ್ಚಿಮ ಭಾಗಗಳ ಮೇಲ್ಪದರಗಳಲ್ಲಿ ಪೂರ್ವ ಭಾಗದ್ದಕ್ಕಿಂತ ಕಡಿಮೆ ಲವಣತೆಯಿದೆ. ಆದರೆ 2,000 – 3,000 ಮೀ ಆಳದಲ್ಲಿ ಲವಣತೆ ಪಶ್ಚಿಮ ಪೆಸಿಫಿಕ್ ಸಾಗರದ ಲವಣತೆಯಷ್ಟೇ ಇದೆ. 3,000 ಮೀ ಗಿಂತ ಹೆಚ್ಚು ಆಳಕ್ಕೆ ಹೋದಂತೆ ಉಷ್ಣತೆ ಕ್ರಮೇಣ ಅಧಿಕವಾದರೂ ಲವಣತೆ ಸ್ಥಿರವಾಗಿ ಉಳಿಯುತ್ತದೆ. ಉಷ್ಣತೆಯ ಆಧಿಕ್ಯದಿಂದ ಈ ಜಲಭಾಗದ ಮೇಲೆ ಯಾವುದೇ ರೀತಿಯ ಅಸ್ಥಿರತೆಯುಂಟಾಗುವುದಿಲ್ಲ. ಆಮ್ಲಜನಕದ ಪ್ರಮಾಣ 3,000 ಮೀ ಗಿಂತ ಕೆಳಭಾಗದಲ್ಲಿ ಒಂದೇ ರೀತಿಯಾಗಿರುತ್ತದೆ. ಆಳಕ್ಕೆ ತೆರೆದ ಸಾಗರ ಭಾಗಗಳಲ್ಲಿ ಅದು 3,000 ಮೀ ಗಿಂತ ಆಳಕ್ಕೆ ಹೋದಂತೆ ಅಧಿಕವಾಗುತ್ತದೆ.

ದಕ್ಷಿಣ ಚೀನ ಸಮುದ್ರ ಕರಾವಳಿಗಳಲ್ಲಿ ಮತ್ತು ದ್ವೀಪ ಪ್ರದೇಶಗಳಲ್ಲಿ ಹವಳ ದಿಣ್ಣೆಗಳಿವೆ. ಸಮುದ್ರದ ಮಧ್ಯದಲ್ಲಿರುವ ಹೈನಾನ್ ದ್ವೀಪಪ್ರದೇಶಗಳಲ್ಲಿರುವ ಹವಳದ ದಿಣ್ಣೆಗಳ ಬೆಳವಣಿಗೆ ಬಹಳಮಟ್ಟಿಗೆ ನಿಂತಿದೆ. ಪಶ್ಚಿಮ ಭಾಗದಲ್ಲಿ ದಕ್ಷಿಣ ಚೀನ ಸಮುದ್ರ ಅನೇಕ ಕಡೆಗಳಲ್ಲಿ ಭೂಮಿಯ ಕಡೆಗೆ ಚಾಚಿಕೊಂಡು ಅನೇಕ ಸಣ್ಣ ಆಖಾತಗಳು ಮತ್ತು ಕೊಲ್ಲಿಗಳು ಸೃಷ್ಟಿಯಾಗಿವೆ. ಈ ಸಮುದ್ರದಲ್ಲಿ ಉಂಟಾಗುವ ಚಂಡಮಾರುತಗಳಿಂದ ಮತ್ತು ಭಾರಿ ಅಲೆಗಳಿಂದ ಕರಾವಳಿ ವಿಶೇಷವಾಗಿ ಕೊರೆತಕ್ಕೆ ಒಳಗಾಗಿದೆ. ಇಲ್ಲಿ ಸಮುದ್ರ ಬಹಳ ಬಿರುಸು. ಇದರಿಂದ ಮೇಕಾಂಗ್ ಮುಂತಾದ ಪರ್ಯಾಯ ದ್ವೀಪೀಯ ನದಿಗಳ ಸಂಚಯನಕ್ಕೆ ತೊಂದರೆಯುಂಟಾಗಿ ಆಖಾತದ ರಚನೆಗೆ ಕಾರಣವಾಗಿವೆ. ಆದರೆ ಸಾಕಷ್ಟು ರಕ್ಷಿತವಾಗಿರುವ, ಹೈನಾನ್ ದ್ವೀಪದ ಪಶ್ಚಿಮಕ್ಕಿರುವ ಟಾನ್‌ಕಿನ್ ಕೊಲ್ಲಿಯನ್ನು ಸೇರುವ ನದಿಗಳಿಗೂ ಉತ್ತರದ ಸಿಕಿಯಾಂಗ್ ನದಿಗೂ ವಿಶಾಲವಾದ ಮುಖಜ ಭೂಮಿಗಳಿವೆ ಈ ಭಾಗದ ಭೂಖಂಡದ ಮುಂಚಾಚೂ ಉದ್ದವಾಗಿದೆ. ಕರಾವಳಿಯ ಪ್ರವಾಹಗಳು ಮತ್ತು ನದಿಗಳು ತರುವ ಮಣ್ಣು ಕರಾವಳಿಯ ಸಮುದ್ರದ ಕೊರೆತದಿಂದಾಗಿ ಬಹಳ ಆಳದ ವರೆಗೆ ಭೂಖಂಡದ ಮುಂಚಾಚಿನ ಮೇಲೆ ಸಾಗಿ ಸಂಚಯನಗೊಂಡಿದೆ. ಹೈನಾನ್ ದ್ವೀಪದಿಂದ 100 ಕಿಮೀ ಪೂರ್ವದವರೆಗೆ ಮತ್ತು ಇಂಡೋಚೀನ ಪರ್ಯಾಯ ದ್ವೀಪದಿಂದ 50 ಕಿಮೀ ಪೂರ್ವದವರೆಗೆ ಭೂಖಂಡ ಮುಂಚಾಚಿದೆ. ಅನಂತರ ಅತ್ಯಂತ ಕಿರಿದೂ ಕಡಿದೂ ಆದ ಭೂಖಂಡದ ಇಳುಕಲಿದೆ. ಅದರಾಚೆಗೆ ಆಳವಾದ ಸಮುದ್ರತಳದ ಬೋಗುಣಿಯಿದೆ. ದಕ್ಷಿಣ ಚೀನ ಸಮುದ್ರದ ತಳದಲ್ಲಿ ಅಲ್ಲಲ್ಲಿ ಜ್ವಾಲಾಮುಖಿಗಳ ಕ್ರಿಯೆ ಇನ್ನೂ ನಡೆಯುತ್ತಿದೆ.

ದಕ್ಷಿಣ ಚೀನ ಸಮುದ್ರ ಸಾಕಷ್ಟು ಬೆಚ್ಚಗಿನ ನೀರಿನಿಂದ ಕೂಡಿರುವುದರಿಂದ ಭೂಜಲಸಂಪರ್ಕದಿಂದ ದೂರವಿರುವ ಪ್ರದೇಶಗಳಲ್ಲಿ ಪ್ಲ್ಯಾಂಕ್ಟನ್ ಮುಂತಾದ ಜೀವರಾಶಿಗಳ ಬೆಳವಣಿಗೆಗೆ ಸೂಕ್ತ ಪರಿಸರವೇರ್ಪಟ್ಟು, ಇಲ್ಲಿ ಮೀನುಗಾರಿಕೆಗೆ ಅನುಕೂಲವಾದ ಪ್ರದೇಶಗಳಿವೆ. (ಎಸ್.ಕೆ.ಆರ್.)

**ದಕ್ಷಿಣ ಡಕೋಟ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ತರ – ಮಧ್ಯ ರಾಜ್ಯಗಳಲ್ಲಿ ಒಂದು. ಇದನ್ನು ಉತ್ತರದಲ್ಲಿ ಉತ್ತರ ಡಕೋಟ, ಪೂರ್ವದಲ್ಲಿ ಮಿನ್ನಸೋಟ ಮತ್ತು ಐಯಾವ, ದಕ್ಷಿಣದಲ್ಲಿ ನಬ್ರ್ಯಾಸ್ಕ, ಪಶ್ಚಿಮದಲ್ಲಿ ವೈಯೋಮಿಂಗ್ ಮತ್ತು ಮಾಂಟಾನ್ ರಾಜ್ಯಗಳು ಸುತ್ತುವರೆದಿವೆ. ರಾಜ್ಯಕ್ಕೆ ಈ ಹೆಸರು ಅದರ ಆದಿ ನಿವಾಸಿಗಳಾದ ಡಕೋಟ ಇಂಡಿಯನರಿಂದ ಬಂದಿದೆ. ಡಕೋಟ ಅಂದರೆ ಗೆಳೆಯ ಎಂದರ್ಥ. ಉ.ಅ. $42^0 29' 30'' - 45^0 65'$ ಮತ್ತು ಪ. ರೇ. $96^0 28' 33'' - 104^0 3'$ ನಡುವೆ ಇರುವ ದಕ್ಷಿಣ ಡಕೋಟದ ಒಟ್ಟು ವಿಸ್ತೀರ್ಣ 198322 ಚ.ಕಿಮೀ. ಇದರ ಸರಾಸರಿ ಎತ್ತರ ಸಮುದ್ರಮಟ್ಟದಿಂದ 1377.5 ಮೀ ಜನಸಂಖ್ಯೆ 754844 (2000). ರಾಜಧಾನಿ ಪಿಯರ್.

ಮೇಲ್ಮೈಲಕ್ಷಣ: ದಕ್ಷಿಣ ಡಕೋಟ ರಾಜ್ಯವನ್ನು ಭೌಗೋಳಿಕವಾಗಿ ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಪೂರ್ವದ 2/5ರಷ್ಟು ಭಾಗ ಮಿಸಿಸಿಪಿ ನದಿಯ ಬಯಲಿನ ಮಧ್ಯದ ತಗ್ಗುಪ್ರದೇಶದ ಒಂದು ಭಾಗವಾಗಿದೆ, ಉಳಿದ ಭಾಗ ದೊಡ್ಡ ಮೈದಾನ ಪ್ರದೇಶಕ್ಕೆ ಸೇರಿದೆ. ಈಶಾನ್ಯ ಭಾಗದಲ್ಲಿರುವ ಮಿನ್ನಸೋಟ ಕಣಿವೆಯ ವಿಸ್ತೀರ್ಣ ಸು. 1100 ಚ.ಕಿಮೀ. ದಕ್ಷಿಣ ಡಕೋಟದ ಅತಿ ತಗ್ಗಾದ ಪ್ರದೇಶವೆಂದರೆ ರಾಜ್ಯದ ಪೂರ್ವಗಡಿಯಾಗಿರುವ ಆಳವಾದ ಕಂದರ. ಇದರ ತಗ್ಗಾದ ಪ್ರದೇಶಗಳಲ್ಲಿ ಅನೇಕ ಸರೋವರಗಳಿವೆ. ಮಿನ್ನಸೋಟ ಕಣಿವೆಯ ಪಶ್ಚಿಮಕ್ಕಿರುವ ಪ್ರೇರಿ ಬೆಟ್ಟ ಹಿಮನದಿ ಸಂಚಯನ ಕಾರ್ಯದಿಂದ ಆದ ಒರಟಾದ ಎತ್ತರಪ್ರದೇಶ.

ವಾಯುಗುಣ: ದಕ್ಷಿಣ ಡಕೋಟವನ್ನು ಹೊಳೆಬಿಸಿಲಿನ ರಾಜ್ಯ ಎಂದು ಕರೆಯುವುದುಂಟು. ಇಲ್ಲಿ ವರ್ಷದಲ್ಲಿ ಬಹುಸಂಖ್ಯೆಯ ದಿನಗಳಲ್ಲಿ ಹೆಚ್ಚು ಬಿಸಿಲಿರುತ್ತದೆ. 89 ದಿನಗಳಲ್ಲಿ ಮಾತ್ರ ಮೋಡ ಕವಿದಿರುತ್ತದೆ. ವಾರ್ಷಿಕ ಸರಾಸರಿ ಉಷ್ಣತೆ $7.5^0$ ಸೆ. ಗರಿಷ್ಠ ಉಷ್ಣತೆ $49^0$ ಸೆ. ಕನಿಷ್ಠ ಉಷ್ಣತೆ $2^0$ ಸೆ. ರಾಜ್ಯದ ಆಗ್ನೇಯದಲ್ಲಿ ಹೆಚ್ಚು ಮಳೆ (60 ಸೆಂಮೀ). ಉತ್ತರ ಮತ್ತು ಪಶ್ಚಿಮದ ಕಡೆ ಹೋದಂತೆ ಕಡಿಮೆಯಾಗುತ್ತದೆ. ಕನಿಷ್ಠ ಮಳೆ 35 ಸೆಂಮೀ. ಬೇಸಾಯದ ಕಾಲ 136ರಿಂದ 150 ದಿನಗಳ ವರೆಗೆ ವ್ಯತ್ಯಾಸವಾಗುತ್ತದೆ. ಪೂರ್ವಕ್ಕಿಂತ ಪಶ್ಚಿಮಭಾಗ ಹೆಚ್ಚು ಶುಷ್ಕ.

ಮಣ್ಣು: ರಾಜ್ಯದ ಪ್ರಮುಖ ಪ್ರಕೃತಿ ಸಂಪತ್ತೆಂದರೆ ಫಲವತ್ತಾದ ಪ್ರೇರಿ ಮಣ್ಣುಗಳು. ಪೂರ್ವದ ಹೆಚ್ಚು ಪ್ರದೇಶದಲ್ಲಿ ಫಲವತ್ತಾದ ಕಪ್ಪು ಮಣ್ಣಿದೆ. ಆದರೆ ಪಶ್ಚಿಮ ಮತ್ತು ವಾಯವ್ಯ ಭಾಗಗಳಲ್ಲಿ ದಟ್ಟ ಕೆಂಗಂದು ಮಣ್ಣುಂಟು. ಇದು ಫಲವತ್ತಾಗಿದ್ದರೂ ವಾಯುಗುಣ ಅನುಕೂಲವಾಗಿಲ್ಲದ್ದರಿಂದ ಹೆಚ್ಚು ಉಪಯುಕ್ತವಲ್ಲ.

ಸಸ್ಯ, ಪ್ರಾಣಿವರ್ಗ: ರಾಜ್ಯದ ಪೂರ್ವಭಾಗದಲ್ಲಿ ವಿವಿಧ ಜಾತಿಯ ಮರಗಳ ಕಾಡುಗಳಿವೆ. ಮುಖ್ಯ ಮರಗಳು ಎಲ್ಮ್, ಓಕ್, ಕಾಟನ್‌ವುಡ್, ಹ್ಯಾಕ್‌ಬೆರಿ ಮತ್ತು ಸಿಡಾರ್. ಬ್ಲ್ಯಾಕ್‌ಹಿಲ್ಸ್ ಪ್ರದೇಶದಲ್ಲಿ ಪೈನ್, ಸ್ಪ್ರೂಸ್, ಆಸ್ಪೆನ್, ಹ್ವೈಟ್ ಬರ್ಚ್ ಮತ್ತು ಸಿಡಾರ್ ಮುಖ್ಯವಾದವು. ರಾಜ್ಯದ ಒಟ್ಟು ಅರಣ್ಯ ಪ್ರದೇಶ 6,400 ಕಿಮೀ. ರಾಜ್ಯದ ಪ್ರಾಣಿಗಳಲ್ಲಿ ಜಿಂಕೆ ಮತ್ತು ಚಿಗರಿಗಳು ಹೆಚ್ಚು. ಅಲ್ಲದೆ ಕಾಡೆಮ್ಮೆ, ಪ್ರೇರಿ ನಾಯಿ ಮೊದಲಾದವು ರಾಜ್ಯದ ಕೆಲವು ಭಾಗಗಳಲ್ಲಿವೆ.

ಖನಿಜ ಸಂಪತ್ತು: ದಕ್ಷಿಣ ಡಕೋಟದಲ್ಲಿ ಹಲವು ಖನಿಜಗಳ ನಿಕ್ಷೇಪಗಳುಂಟು. ಚಿನ್ನ ಮತ್ತು ಬೆರಿಲ್ ಉತ್ಪಾದನೆಯಲ್ಲಿ ಅದು ಅಮೆರಿಕ ಸಂಯುಕ್ತ ಸಂಸ್ಥಾನದ ರಾಜ್ಯಗಳ ಪೈಕಿ ಮೊದಲನೆಯ ಸ್ಥಾನ ಪಡೆದಿದೆ. ದಕ್ಷಿಣ ಡಕೋಟವನ್ನು ಚಿನ್ನದ ನಾಡು ಎಂದು ಕರೆಯಲಾಗಿದೆ. ಬ್ಲ್ಯಾಕ್ ಹಿಲ್ಸ್ ಪ್ರದೇಶದಲ್ಲಿ ಲೀಡ್ ನಗರದ ಬಳಿಯ ಚಿನ್ನದ ಗಣಿ ಪಶ್ಚಿಮಾರ್ಧಗೋಳದಲ್ಲೇ ಅತ್ಯಂತ ದೊಡ್ಡದು. ಫೆಲ್‌ಸ್ಪಾರ್ ಉತ್ಪಾದನೆಯಲ್ಲಿ ಈ ರಾಜ್ಯ ಎರಡನೆಯ ಸ್ಥಾನವನ್ನೂ ಲಿಗ್ನೈಟ್ ಉತ್ಪಾದನೆಯಲ್ಲಿ 3 ನೆಯ ಸ್ಥಾನವನ್ನೂ ಪಡೆದಿದೆ. ಈ ಖನಿಜಗಳಲ್ಲದೆ ಬೆಳ್ಳಿ, ಅಭ್ರಕ, ಯುರೇನಿಯಮ್‌ಗಳೂ ದೊರೆಯುತ್ತವೆ. ಕಟ್ಟಡ ಹಾಗೂ ರಸ್ತೆಗಳ ನಿರ್ಮಾಣಕ್ಕೆ ಉಪಯುಕ್ತವಾದ ಕ್ವಾರ್ಟ್‌ಜೈಟ್ ಮತ್ತು ಗ್ರಾನೈಟ್ ವಿಶೇಷವಾಗಿ ದೊರೆಯುತ್ತವೆ.

ಆರ್ಥಿಕತೆ: ಬೇಸಾಯವೇ ರಾಜ್ಯದ ಆರ್ಥಿಕಾಭಿವೃದ್ಧಿಯ ಬೆನ್ನೆಲುಬು. ಸು. $^3/_4$ ರಷ್ಟು ಜನರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೇಸಾಯವೇ ಆಧಾರ. ಬೇಸಾಯದಿಂದ ಬರುವ ತಲಾ ವರಮಾನದಲ್ಲಿ ದಕ್ಷಿಣ ಡಕೋಟ ಇತರ ರಾಜ್ಯಗಳಿಗಿಂತ ಮುಂದಿದೆ. ಆದರೆ ಇದು ವಾಯುಗುಣ ಹಾಗೂ ಮಾರುಕಟ್ಟೆಯ ಏರಿಳಿತಗಳಿಂದ ವ್ಯತ್ಯಾಸವಾಗುತ್ತದೆ. ಇಲ್ಲಿಯ ಪ್ರಮುಖ ಬೆಳೆಗಳು ಧಾನ್ಯ, ಜೋಳ,ಗೋದಿ ಅ. ಸ. ಸಂ.ದ ಧಾನ್ಯದ ಉತ್ಪಾದನೆಯಲ್ಲಿ ಡಕೋಟ 9 ನೆಯ ರಾಜ್ಯ ಇದು ಗೋದಿಯ ಬೆಳೆಯಲ್ಲಿ 10 ನೆಯ ಸ್ಥಾನವನ್ನೂ ಮಾಂಸಕ್ಕಾಗಿ ಸಾಕುವ ದನಕರುಗಳಲ್ಲಿ 5 ನೆಯ ಸ್ಥಾನವನ್ನೂ ಕುರಿ ಮತ್ತು ಹಂದಿ ಸಾಕಣೆ ಮತ್ತು ಉಣ್ಣೆ ಉತ್ಪಾದನೆಯಲ್ಲಿ 10 ನೆಯ ಸ್ಥಾನವನ್ನೂ ಪಡೆದಿದೆ.

ಕೈಗಾರಿಕಾ ಕ್ಷೇತ್ರದಲ್ಲಿ ಇದು ಹಿಂದುಳಿದಿದೆ. ಇದರದು 44ನೆಯ ಸ್ಥಾನ. ಇಲ್ಲಿಯ ಮುಖ್ಯ ಕೈಗಾರಿಕೆಗಳೆಂದರೆ ಕೃಷಿಯನ್ನು ಆಧರಿಸಿದಂಥವು. ಒಟ್ಟು ಕೆಲಸಗಾರರಲ್ಲಿ $^3/_4$ರಷ್ಟು ಮಂದಿ ಮಾಂಸ ಸಂವೇಷ್ಟನ, ಹೈನುಗಾರಿಕೆ ಮತ್ತು ಕುಕ್ಕುಟ ವಸ್ತು ಉತ್ಪಾದನೆಯಲ್ಲಿ ನಿರತರಾಗಿದ್ದಾರೆ. ಮುದ್ರಣ ಮತ್ತು ಪ್ರಕಟಣೆ, ಮರದ ಕೈಗಾರಿಕೆ – ಇವೂ ಉಂಟು.

ಸಾರಿಗೆ ಸಂಪರ್ಕ: ರಾಜ್ಯದ ಹೆಚ್ಚು ಮಾರ್ಗಗಳು ಪೂರ್ವ – ಪಶ್ಚಿಮವಾಗಿ ಹಬ್ಬಿವೆ. 1881 ರಲ್ಲಿ ಮೊದಲ ರೈಲುಮಾರ್ಗ ರಾಜ್ಯದ ಮಧ್ಯಭಾಗದವರೆಗೆ ನಿರ್ಮಾಣವಾಯಿತು. 1907 ರಲ್ಲಿ ಅದನ್ನು ಪಶ್ಚಿಮದ ಕಡೆಗೆ ವಿಸ್ತರಿಸಲಾಯಿತು. ಈಗ

ಸು. 6400 ಕಿಮೀ ರೈಲುಮಾರ್ಗಗಳಿವೆ. ರಾಜ್ಯದ ಮಧ್ಯಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಮಿಸೂರೀ ನದಿ ಪ್ರಮುಖ ಜಲಮಾರ್ಗ. ಇದಕ್ಕೆ ಅಡ್ಡಲಾಗಿ 5 – 6 ಕಡೆ ಸೇತುವೆಗಳನ್ನು ನಿರ್ಮಿಸಿ, ಪೂರ್ವ ಮತ್ತು ಪಶ್ಚಿಮ ಭಾಗಗಳನ್ನು ಸು. 11,200 ಕಿಮೀ ಹೆದ್ದಾರಿಗಳಿಂದ ಸೇರಿಸಲಾಗಿದೆ. ಸು. 12 ನಗರಗಳು ವಾಯುಮಾರ್ಗ ಸಂಪರ್ಕ ಪಡೆದಿವೆ. ರಾಜ್ಯದಲ್ಲಿ ಒಟ್ಟು 30 ಕ್ಕಿಂತ ಹೆಚ್ಚು ವಿಮಾನ ನಿಲ್ದಾಣಗಳಿವೆ. (ಕೆ.ಆರ್.)

**ದಖನ್:** ಸಂಸ್ಕೃತದ ದಕ್ಷಿಣ ಎಂಬ ಶಬ್ದದ ಅಪಭ್ರಂಶ. ಉತ್ತರದಲ್ಲಿ ವಿಂಧ್ಯ ಪರ್ವತ ಮತ್ತು ನರ್ಮದಾ ನದಿ, ದಕ್ಷಿಣದಲ್ಲಿ ಕನ್ಯಾಕುಮಾರಿ ಭೂಶಿರ – ಇವುಗಳ ನಡುವೆ ಇಡೀ ದಕ್ಷಿಣ ಭಾರತ ಅಥವಾ ಪರ್ಯಾಯದ್ವೀಪವಾದ ಭಾರತವನ್ನು ಹಿಂದೆ ದಕ್ಷಿಣ ಅಥವಾ ದಕ್ಷಿಣಾಪಥ ಎಂದು ಕರೆಯಲಾಗುತ್ತಿತ್ತು. ವಿಂಧ್ಯ – ನರ್ಮದಾ ಪ್ರದೇಶದಿಂದ ಕೃಷ್ಣಾ – ತುಂಗಭದ್ರಾ ಪ್ರದೇಶದವರೆಗಿನ ಪ್ರಸ್ಥಭೂಮಿ ಪ್ರದೇಶಕ್ಕೆ ದಖನ್ ಎಂಬ ಹೆಸರನ್ನು ಕಾಲಾಂತರದಲ್ಲಿ ನೀಡಲಾಗಿದೆ. ಉ.ಅ. $12^0$ – $21^0$ ಗಳ ನಡುವಣ ಪ್ರದೇಶ ಸ್ಥೂಲವಾಗಿ ದಖನ್ ಎನಿಸಿಕೊಂಡಿದೆ. ದಖನ್ ಪ್ರಸ್ಥಭೂಮಿಯ ಸಾಮಾನ್ಯ ಎತ್ತರ 600 ಮೀ. ಪಶ್ಚಿಮ ಮತ್ತು ಪೂರ್ವದಲ್ಲಿಯ ಘಟ್ಟಗಳ ಬಳಿಯಲ್ಲಿ ಅದರ ಎತ್ತರ ಹೆಚ್ಚುತ್ತದೆ. ಪೂರ್ವ – ಪಶ್ಚಿಮ ಘಟ್ಟಗಳು ಸೇರುವ ನೀಲಗಿರಿಯ ಬಳಿ ಅದು ಗರಿಷ್ಠ ಎತ್ತರ ಮುಟ್ಟುತ್ತದೆ. ದಖನ್ನಿನ ಉಳಿದ ಭಾಗಕ್ಕಿಂತ ಕರ್ನಾಟಕ ಭಾಗ ಹೆಚ್ಚು ಎತ್ತರವಾಗಿದೆ. ಇಡೀ ಪ್ರದೇಶ ಸಾಮಾನ್ಯವಾಗಿ ಪೂರ್ವದ ಕಡೆಗೆ ಇಳಿಜಾರಾಗಿದೆ. ಪಶ್ಚಿಮ ಘಟ್ಟಗಳ ಕವಲುಗಳೂ ಇತರ ಕೆಲವು ಶ್ರೇಣಿಗಳೂ ಅಲ್ಲಲ್ಲಿ ಮೇಲೆದ್ದಿವೆ. ಅಹಮದ್‌ನಗರವನ್ನೊಳಗೊಂಡ ತ್ರಿಕೋನಾತ್ಮಕ ಪ್ರಸ್ಥಭೂಮಿಯ ಅಂಚುಗಳಲ್ಲಿರುವ ಎರಡು ಶ್ರೇಣಿಗಳು ಗೋದಾವರಿ ಮತ್ತು ಭೀಮಾ ನದಿಗಳ ಜಲಾನಯನ ಪ್ರದೇಶಗಳನ್ನು ಪ್ರತ್ಯೇಕಿಸುತ್ತವೆ. ಭೀಮಾ ಮತ್ತು ಕೃಷ್ಣಾ ನದಿಗಳ ಜಲಾನಯನ ಭೂಮಿಗಳ ನಡುವೆ ಮಹಾದೇವ ಶ್ರೇಣಿಯಿದೆ. ಪೂರ್ವ ಘಟ್ಟಗಳಿಗೆ ಸೇರಿದಂತೆ ಪ್ರಸ್ಥಭೂಮಿಯೊಳಕ್ಕೆ ಹರಿದಿರುವ ಶ್ರೇಣಿಗಳ ಪೈಕಿ ನಲ್ಲಮಲೈ ಒಂದು. ಕೃಷ್ಣಾ ನದಿಯ ದಂಡೆಯಿಂದ ಪೆನ್ನಾರ್ ಕಣಿವೆಯ ವರೆಗೆ ಉತ್ತರ–ದಕ್ಷಿಣವಾಗಿ ಹಬ್ಬಿರುವ ಇದು ಕಡಪ ಕ್ವಾರ್ಟ್ಸ್ ಮತ್ತು ಸ್ಲೇಟ್ ಶಿಲೆಗಳಿಂದ ಕೂಡಿದ್ದು, ಪಶ್ಚಿಮದಲ್ಲಿ ಎರ್ರಮಲೈ ಇದೆ. ಕರ್ನಾಟಕದ ಆಗ್ನೇಯ ಮತ್ತು ದಕ್ಷಿಣ ಭಾಗ ಗ್ರಾನೈಟ್ ಮತ್ತು ನೀಸ್ ಶಿಲೆಗಳಿಂದ ಕೂಡಿದೆ. ಅಲ್ಲಲ್ಲಿ ದುಂಡನೆಯ ಶಿಖರಗಳಂತೆ ಬೆಟ್ಟಗಳು ಮೇಲೆದ್ದಿವೆ.

ಅರಬ್ಬೀ ಸಮುದ್ರದಿಂದ ಬರುವ ಮುಂಗಾರು ಮಾರುತಕ್ಕೆ ಎದುರಾಗಿ ನಿಂತಿರುವ ಪಶ್ಚಿಮ ಘಟ್ಟಗಳ ಆಚೀಚೆ ಬದಿಗಳ ಪ್ರದೇಶಗಳಲ್ಲಿಯ ಮಳೆಯಲ್ಲಿ ತುಂಬ ವ್ಯತ್ಯಾಸವುಂಟು. ಪಶ್ಚಿಮ ಘಟ್ಟಗಳ ಪಶ್ಚಿಮಕ್ಕೆ 750 ಸೆಂಮೀ ಗಿಂತ ಹೆಚ್ಚು ಮಳೆ; ಪೂರ್ವ ಭಾಗದ ಹಲವೆಡೆ 100 ಸೆಂಮೀ ಗಿಂತ ಕಡಿಮೆ. ತತ್ಫಲವಾಗಿ ಸಸ್ಯದಲ್ಲೂ ವ್ಯತ್ಯಾಸ ಕಂಡುಬರುತ್ತದೆ. ಪಶ್ಚಿಮ ಭಾಗದಲ್ಲಿ ಕಾಡುಗಳು ದಟ್ಟವಾಗಿವೆ. ಕರಾವಳಿಯಲ್ಲಿ ತೆಂಗು ವಿಶೇಷ. ಪೂರ್ವದ ಪ್ರಸ್ಥಭೂಮಿ ಪ್ರದೇಶಗಳಲ್ಲಿ ಪರ್ಣಪಾತಿ ಸಸ್ಯಗಳು ಬೆಳೆಯುತ್ತವೆ.

ದಖನ್ನಿನ ನದಿಗಳು ಸಾಮಾನ್ಯವಾಗಿ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುತ್ತವೆ. ಇದಕ್ಕೆ ಅಪವಾದವಾಗಿರುವ ನದಿಗಳ ಪೈಕಿ ಪ್ರಮುಖವಾದ ನರ್ಮದಾ ಮತ್ತು ತಪತಿ. ಪ್ರಸ್ಥಭೂಮಿಯಲ್ಲಿ ಪೂರ್ವಾಭಿಮುಖವಾಗಿ ಹರಿಯುವ ಮೂರು ಮುಖ್ಯ ನದಿಗಳು ಗೋದಾವರಿ, ಕೃಷ್ಣಾ ಮತ್ತು ಕಾವೇರಿ. ಮಹಾನದಿ ಇನ್ನೊಂದು. ಭಾರತದಲ್ಲಿ ಗಂಗೆಯನ್ನು ಬಿಟ್ಟರೆ ಗೋದಾವರಿಯೇ ಅತ್ಯಂತ ದೊಡ್ಡ ನದಿ. ದಖನ್ನಿನ ನದಿಗಳಲ್ಲಿ ಅತ್ಯಂತ ವಿಸ್ತಾರವಾದ ಜಲಾನಯನ ಪ್ರದೇಶವುಳ್ಳ ನದಿ ಕೃಷ್ಣಾ. ತುಂಗಭದ್ರಾ ಇದರ ಅತ್ಯಂತ ಮುಖ್ಯ ಉಪನದಿ. ದಕ್ಷಿಣ ಭಾರತದ ಇತಿಹಾಸದಲ್ಲಿ ತುಂಗಭದ್ರಾ ನದಿ ಅನೇಕ ಸಾಮ್ರಾಜ್ಯಗಳ ಸಹಜವಾದ ಎಲ್ಲೆ ಕಟ್ಟಾಗಿ ಪಾತ್ರವಹಿಸಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಇದ್ದುದು ತುಂಗಭದ್ರಾ ನದಿಯ ದಂಡೆಯ ಮೇಲೆ. ತುಂಗಭದ್ರಾ ಮತ್ತು ಕೃಷ್ಣಾ ನದಿಗಳ ನಡುವಣ ರಾಯಚೂರು ದೋಆಬ್ ಪ್ರದೇಶ ದಖನ್ನಿನ ಕಾಳಗದ ಕಣವಾಗಿತ್ತು. ಅತ್ಯಂತ ದಕ್ಷಿಣದಲ್ಲಿರುವ ಕಾವೇರಿ ನದಿ ಅನೇಕ ಸಂಸ್ಕೃತಿಗಳನ್ನು ಪೋಷಿಸಿ ಬೆಳೆಸಿದೆ. ಇದು ದಕ್ಷಿಣದ ಗಂಗಾ ಎಂದು ಪ್ರಸಿದ್ಧವಾಗಿದೆ. ಇವಲ್ಲದೆ ದಖನ್ನಿನಲ್ಲಿ ಇನ್ನೂ ಅನೇಕ ಸಣ್ಣ ನದಿಗಳಿವೆ. ಭೂವೈಜ್ಞಾನಿಕವಾಗಿ ದಖನ್ ಪ್ರಸ್ಥಭೂಮಿ ಉತ್ತರ ಭಾರತದ ಮೈದಾನಗಳಿಗಿಂತ ಹಳೆಯದು. (ಜಿ.ಎಸ್.ಎ.)

**ದತ್ತಾಂಶಗಳ ವಿಧಗಳು – ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶ:** ಸಾಮಾಜಿಕ ಸಂಶೋಧನೆಯಲ್ಲಿ ವೈಜ್ಞಾನಿಕ ಪದ್ಧತಿಗಳ ಅಳವಡಿಕೆ ಹೆಚ್ಚಾಗುತ್ತಿದೆ. ಸಂಶೋಧಕ ವಿವಿಧ ರೀತಿಯಲ್ಲಿ ವೈಜ್ಞಾನಿಕ ಪದ್ಧತಿ ವಿಧಾನ ಮತ್ತು ತಂತ್ರಗಳನ್ನು ಉಪಯೋಗಿಸಿಕೊಂಡು ಮಾಹಿತಿಯನ್ನು ಸಂಗ್ರಹಿಸುತ್ತಾನೆ. ಸಂಶೋಧನೆಯಲ್ಲಿ ವಿವಿಧ ರೀತಿಯ ಸಮಸ್ಯೆ ಮತ್ತು ವಿಷಯಗಳಿರುವುದರಿಂದ ಅವುಗಳಿಗೆ ಅನುಸಾರವಾಗಿ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ. ಕೇವಲ ಪುಸ್ತಕ ಮತ್ತು ಲಿಖಿತ ದಾಖಲಾತಿಗಳಲ್ಲಿನ ವಿಷಯವನ್ನು ಸಂಗ್ರಹಿಸಿ ವಿಶ್ಲೇಷಿಸಿದರೆ ಸಾಲದು. ಹೆಚ್ಚು ಹೆಚ್ಚು ಮಾಹಿತಿ ಹಾಗೂ ಅಂಕಿ–ಅಂಶಗಳನ್ನು ಪ್ರತ್ಯಕ್ಷವಾಗಿ ಸಂಗ್ರಹಿಸಿ ವಿಶ್ಲೇಷಿಸಿದರೆ ಅವು ಸಮಂಜಸ, ವಾಸ್ತವಕ್ಕೆ ಹತ್ತಿರವೂ ಆಗಿರುತ್ತವೆ. ಸಂಶೋಧಕ ತನ್ನ ಕ್ಷೇತ್ರದ ಅಧ್ಯಯನಕ್ಕೆ ಬೇಕಾದ ಅಂಕಿ ಅಂಶಗಳನ್ನು ಪ್ರಮುಖವಾಗಿ ಎರಡು ಮೂಲಗಳಿಂದ ಪಡೆದುಕೊಳ್ಳುತ್ತಾನೆ. ಅವುಗಳೆಂದರೆ ಪ್ರಾಥಮಿಕ ಮೂಲಗಳು, ಮತ್ತು ದ್ವಿತೀಯ ಮೂಲಗಳು.

ಪ್ರಾಥಮಿಕ ದತ್ತಾಂಶ: ಸಂಶೋಧನೆಯಲ್ಲಿ ಹಾಗೂ ಸಂಖ್ಯಾಶಾಸ್ತ್ರದಲ್ಲಿ ಪ್ರಾಥಮಿಕ ಮೂಲಗಳ ದತ್ತಾಂಶಗಳ ಸಂಗ್ರಹಣೆಯ ಪಾತ್ರ ಪ್ರಮುಖವಾದುದು. ಪ್ರಾಥಮಿಕ ಮೂಲವೆಂದರೆ ಅಂಕಿ–ಅಂಶಗಳನ್ನು, ಪ್ರತಿವರ್ತಿಗಳಿಂದ ಸಂಶೋಧಕರು ನೇರವಾಗಿ ಪಡೆಯುವ ಮಾಹಿತಿಯಾಗಿರುತ್ತವೆ. ಈ ಅಂಕಿ–ಅಂಶಗಳನ್ನು ವ್ಯಕ್ತಿ ಅಥವಾ ಗುಂಪು ಹಾಗೂ ಘಟಕಗಳಿಂದ, ಸುತ್ತಮುತ್ತಲಿನ ಘಟನೆಗಳಿಂದ ಸಂಗ್ರಹಿಸುತ್ತಾರೆ. ಪ್ರಾಥಮಿಕ ಮೂಲದ ಮಾಹಿತಿಯನ್ನು ಪ್ರಮುಖವಾಗಿ ಅವಲೋಕನ ಮಾದರಿಯಲ್ಲಿ, ಪ್ರಶ್ನಾವಳಿ ಮಾದರಿಯಲ್ಲಿ, ಅನುಸೂಚಿ ಅಥವಾ ಸಂದರ್ಶನ ವಿಧಾನಗಳಿಂದ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂಗ್ರಹಿಸಲಾಗುತ್ತದೆ.

ದ್ವಿತೀಯ ಮೂಲಗಳು ಅಥವಾ ಮಾಧ್ಯಮಿಕ ಮೂಲಗಳು: ಮಾಹಿತಿ ಮತ್ತು ದತ್ತಾಂಶಗಳ ಸಂಗ್ರಹಣೆಯಲ್ಲಿ ಅನುಸರಿಸುವ ಮತ್ತೊಂದು ವಿಧಾನವೆಂದರೆ ದ್ವಿತೀಯ ಅಥವಾ ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸುವುದು. ಅಂದರೆ ಪ್ರಕಟಿತ ಮತ್ತು ಅಪ್ರಕಟಿತ ಮೂಲಗಳಿಂದ ಪಡೆಯುವುದು. ಇವುಗಳನ್ನು ದಾಖಲೆಗಳ ಮೂಲಗಳು ಎಂದು ಸಹ ಕರೆಯುವರು. ಈ ದತ್ತಾಂಶಗಳು ಮೊದಲೇ ಸಂಗ್ರಹಿಸಿದವುಗಳಾಗಿರುತ್ತವೆ. ಪರೋಕ್ಷವಾಗಿ ಅಂದರೆ ಸಂಶೋಧಕನ ನೇರ ಸಹಭಾಗಿತ್ವವಿಲ್ಲದೆ ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗ್ಗೆ ದಾಖಲೆಗಳನ್ನು ಪಡೆಯುವುದಕ್ಕೆ ದ್ವಿತೀಯ ಅಥವಾ ಮಾಧ್ಯಮಿಕ ದತ್ತಾಂಶಗಳೆಂದು ಕರೆಯುವರು. ಗ್ರಂಥಗಳು, ಪ್ರಕಟಿತ ಸಾರ್ವಜನಿಕ ದಾಖಲಾತಿಗಳು, ಸಮೀಕ್ಷಾವರದಿಗಳು, ಹಸ್ತಪ್ರತಿಗಳು, ಆತ್ಮಚರಿತ್ರೆಗಳು, ಪತ್ರಗಳು, ಪ್ರವಾಸ ಕತೆಗಳು, ಶಿಲಾಶಾಸನಗಳು, ದೈನಿಕ, ಅರೆದೈನಿಕ, ವಾರ್ಷಿಕ, ಅರ್ಧವಾರ್ಷಿಕ, ನಿಯತಕಾಲಿಕೆಗಳು, ವಾರ್ಷಿಕ ಪುಸ್ತಕಗಳು, ಕೇಂದ್ರ, ರಾಜ್ಯ ಮತ್ತು ಖಾಸಗಿ ಸಂಸ್ಥೆಗಳಿಂದ ಸಂಗ್ರಹಿಸಿದ ಮಾಹಿತಿಗಳು, ರಾಜ್ಯಪತ್ರಗಳು, ಕೃಷಿ ಉತ್ಪಾದನಾ ಪುಸ್ತಕ, ಜಿಲ್ಲಾ ಅಂಕಿ–ಅಂಶಗಳ ಕಛೇರಿಗಳಿಂದ ಪ್ರಕಟಿಸಿದ ಮಾಸಿಕ ವರದಿಗಳು, ಸಂಶೋಧನಾ ಪ್ರಬಂಧಗಳು ಹಾಗೂ ವರದಿಗಳು, ಪ್ರಕಟಿತ ಹಾಗೂ ಅಪ್ರಕಟಿತ ಪ್ರಬಂಧಗಳಿಂದ ಹಾಗೂ ಇತರ ಮಾಹಿತಿಗಳಿಂದ ಉಪಯುಕ್ತವಾದ ಅಂಕಿ–ಅಂಶಗಳನ್ನು ಒಳಗೊಂಡಿರುತ್ತವೆ. (ಸಿ.ಎಂ.)

**ದಮನ್ ಮತ್ತು ದೀವ್:** ಭಾರತದ ಪಶ್ಚಿಮ ತೀರದಲ್ಲಿರುವ ಒಕ್ಕೂಟ ದ್ವೀಪ ಪ್ರದೇಶ ಹಾಗೂ ಕೇಂದ್ರಾಡಳಿತ ಪ್ರದೇಶ. ಇವು ದೂರ ದೂರ ಇದ್ದರೂ ರಾಜಕೀಯವಾಗಿ ಒಂದು ಘಟಕವಾಗಿವೆ. ಇವೆರಡು ಗುಜರಾತ್ ರಾಜ್ಯಕ್ಕೆ ಸಮೀಪದಲ್ಲಿವೆ.

ಕ್ಯಾಂಬೆ ಖಾರಿಯ ದಕ್ಷಿಣಕ್ಕೆ ಗುಜರಾತ್ ರಾಜ್ಯದ ಅಂಚಿನಲ್ಲಿ ದಮನ್ ಇದೆ. ಉತ್ತರಕ್ಕೆ ಭಗವಾನದಿ, ಪೂರ್ವಕ್ಕೆ ಗುಜರಾತ್, ದಕ್ಷಿಣಕ್ಕೆ ಕಾಲೇಂ, ಪಶ್ಚಿಮಕ್ಕೆ ಅರಬ್ಬಿ ಸಮುದ್ರ ಕಂಡುಬರುತ್ತದೆ. ದಮನಗಂಗಾ ನದಿಯು ದಮನ್‌ನ ಮಧ್ಯಭಾಗದಲ್ಲಿ ಹರಿಯುತ್ತದೆ.

ದೀವ್ ದ್ವೀಪ, ಕಚ್ಛ್ ಮತ್ತು ಕ್ಯಾಂಬೆ ಖಾರಿಗಳ ನಡುವೆ ಸೌರಾಷ್ಟ್ರ ಪರ್ಯಾಯ ದ್ವೀಪದ ದಕ್ಷಿಣ ತುದಿಯಲ್ಲಿ ಕಂಡುಬರುವ ಕಿರು ದ್ವೀಪವಾಗಿದೆ. ದೀವ್‌ಗೂ ಸೌರಾಷ್ಟ್ರಕ್ಕೂ ನಡುವೆ ಸಣ್ಣ ದೋಣಿಗಳು ಮಾತ್ರ ಸಂಚರಿಸಬಹುದಾದ ಕಿರುಕಾಲುವೆಯೊಂದಿದೆ. ಈ ದ್ವೀಪ ಬಹುತೇಕ ಮೈದಾನ ಪ್ರದೇಶದಿಂದ ಕೂಡಿದ್ದು ಉತ್ತಮವಾದ ರೇವು ಪಟ್ಟಣವಾಗಿದೆ.

ದಮನ್‌ನಲ್ಲಿ ವಾಯುಗುಣ ಹೆಚ್ಚು ತೇವವಾಗಿರುತ್ತದೆ. ಉಷ್ಣತೆ $22^0$ಸೆ ನಿಂದ $30^0$ಸೆ ಕಂಡುಬರುತ್ತದೆ. ದೀವ್‌ನಲ್ಲಿ ಉಷ್ಣತೆ ದಮನ್‌ಗಿಂತ ಅಧಿಕವಾಗಿದ್ದು ಇಲ್ಲಿ ಸೆಕೆ ಹೆಚ್ಚಾಗಿರುತ್ತದೆ.

ಇಲ್ಲಿ ಸಾಸಿವೆ, ಗೋಡಂಬಿ, ರಬ್ಬರ್ ಮುಖ್ಯಬೆಳೆಗಳು. ಬಿದಿರು, ಕ್ಯಾಸುವೈರ್ಸ್, ತೇಗ, ನೀಲಗಿರಿ, ಸಾವರ್, ಮಾವು ಮೊದಲಾದ ಮರಗಳಿಂದ ಕೂಡಿದ ಸಸ್ಯವರ್ಗವನ್ನು ಕಾಣಬಹುದು.

ಜನಸಂಖ್ಯೆ 158,051. ಇದರ ವಿಸ್ತೀರ್ಣ 112 ಚ.ಕಿಮೀ ದಮನ್ ಇದರ ರಾಜಧಾನಿ. ಇದರ ಜನಸಂಖ್ಯೆ 35743. (ವಿ.ಎಸ್.ಎ.)

**ದಾಂಡೇಲಿ:** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಮತ್ತು ಸೂಪ ತಾಲ್ಲೂಕುಗಳೆರಡರಲ್ಲೂ ಹರಡಿಕೊಂಡಿರುವ ಒಂದು ಪಟ್ಟಣ. ಹಳಿಯಾಳದಿಂದ 22ಕಿಮೀ ಮತ್ತು ಹುಬ್ಬಳ್ಳಿಯಿಂದ 78 ಕಿಮೀ ದೂರದಲ್ಲಿ ಪಶ್ಚಿಮ ಘಟ್ಟದ ದಟ್ಟಕಾಡಿನ ನಡುವೆ ಕಾಳಿ ನದಿಯ ಬಳಿ ಇದೆ. ಜನಸಂಖ್ಯೆ 53,287. ಸುತ್ತಣ ಅರಣ್ಯದಲ್ಲಿ ಮತ್ತಿ, ಹೊನ್ನೆ, ನಂದಿ, ಬೀಟೆ, ತೇಗು, ಬಿದಿರು ಮುಂತಾದ ಉತ್ಪನ್ನಗಳು ಹೇರಳವಾಗಿ

ಲಭಿಸುತ್ತವೆ. ಇಲ್ಲಿ ಸ್ಥಾಪಿತವಾಗಿರುವ ಕಾರ್ಖಾನೆಗಳಿಂದಾಗಿ ಇದೊಂದು ಕೈಗಾರಿಕಾ ಪಟ್ಟಣವಾಗಿ ಬೆಳೆಯುತ್ತಿದೆ. ಕಾಗದ, ಪ್ಲೈವುಡ್, ಫೆರೊ–ಮ್ಯಾಂಗನೀಸ್, ಮರಕೊಯ್ಯುವುದು–ಇವು ಇಲ್ಲಿಯ ಮುಖ್ಯ ಕೈಗಾರಿಕೆಗಳು. ಕಾಗದ ಕಾರ್ಖಾನೆ 1955ರಲ್ಲಿ ಸ್ಥಾಪಿತವಾಗಿ 1958ರಲ್ಲಿ ಉತ್ಪಾದನೆ ಆರಂಭಿಸಿತು. ಕಾರ್ಖಾನೆಗೆ ಬೇಕಾದ ಬಿದಿರು ಮುಂತಾದ ಕಚ್ಚಾ ಸಾಮಗ್ರಿ ಸುತ್ತಮುತ್ತ ದೊರಕುತ್ತದೆ. ಪ್ಲೈವುಡ್ ಕಾರ್ಖಾನೆ 1944ರಲ್ಲಿ ಸ್ಥಾಪಿತವಾಯಿತು. ಫೆರೊ–ಮ್ಯಾಂಗನೀಸ್ ಕಾರ್ಖಾನೆ 1956ರಲ್ಲಿ ಸ್ಥಾಪಿತವಾಗಿ 1957ರಲ್ಲಿ ಉತ್ಪಾದನೆಯನ್ನು ಆರಂಭಿಸಿತು. ಭಾರತದಲ್ಲಿ ಮೊಟ್ಟ ಮೊದಲು ಫೆರೊ–ಮ್ಯಾಂಗನೀಸ್ ಉತ್ಪಾದನೆಯಾಗತೊಡಗಿದ್ದು ಇಲ್ಲೇ. ಇದು ಪ್ರಪಂಚದಲ್ಲೇ ಅತ್ಯುತ್ತಮವೆಂದು ಪರಿಗಣಿತವಾಗಿದೆ. ಮರಕೊಯ್ಯುವ ಕಾರ್ಖಾನೆ ಸರ್ಕಾರಿ ವಲಯದ ಕೈಗಾರಿಕೆ. ಇದನ್ನು ರಾಜ್ಯ ಸರ್ಕಾರ ನಡೆಸುತ್ತಿದೆ. ರೈಲ್ವೆ ಸ್ಲೀಪರ್ ಇದರ ಒಂದು ಮುಖ್ಯ ಉತ್ಪಾದನೆ. ಕಾರ್ಖಾನೆಗೆ ಬೇಕಾದ ಮರವನ್ನು ದಾಂಡೇಲಿಯ ಮರದ ಡಿಪೋ ಪೂರೈಸುತ್ತದೆ.

ದಾಂಡೇಲಿಯ ಸುತ್ತ ಮುತ್ತ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಕವಳೆಗುಹೆ, ನಾಗಝರಿ ದೃಶ್ಯ ಸ್ಥಳ, ಸಿಂಥೇರಿ ಬಂಡೆ. ಕಾಳಿ ಜಲವಿದ್ಯುತ್ ಯೋಜನೆಗಳು ಕಚೇರಿಗಳ ಕೇಂದ್ರ ಅಂಬಿಕಾನಗರ ದಾಂಡೇಲಿಯ ಬಳಿ ಇವೆ. ದಾಂಡೇಲಿಗೆ 20 ಕಿಮೀ ದೂರದಲ್ಲಿರುವ ಉಳವಿಯಲ್ಲಿ ನಡೆಯುವ ಬಸವೇಶ್ವರರ ವಾರ್ಷಿಕ ಜಾತ್ರೆ ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾಗಿದೆ. ದಾಂಡೇಲಿಯಿಂದ ಅರಣ್ಯೋತ್ಪನ್ನಗಳು ಹಲವು ಕಡೆಗಳಿಗೆ ರಫ್ತಾಗುತ್ತವೆ. ದಾಂಡೇಲಿಗೆ ರಸ್ತೆ ಮತ್ತು ರೈಲ್ವೆ ಸಂಪರ್ಕವುಂಟು. ದಾಂಡೇಲಿಗೆ ಸಮೀಪದಲ್ಲಿ ಉತ್ತರ ಕನ್ನಡ ಜಿಲ್ಲೆಯ ಮುಖ್ಯ ಅರಣ್ಯಧಾಮ ಇದೆ. ಇಲ್ಲಿ ವನ್ಯಮೃಗಗಳನ್ನು ರಕ್ಷಿಸಲಾಗುತ್ತಿದೆಯಲ್ಲದೆ ಅರಣ್ಯ ವೃಕ್ಷಗಳನ್ನೂ ಬೆಳೆಸಲಾಗುತ್ತಿದೆ. (ವಿ.ಎನ್.ಬಿ.)

**ದಾದ್ರಾ ಮತ್ತು ನಗರ್ ಹವೇಲಿ:** ಪಶ್ಚಿಮ ಭಾರತದಲ್ಲಿ, ಗುಜರಾತ್ ಮಹಾರಾಷ್ಟ್ರ ರಾಜ್ಯಗಳ ನಡುವೆ ಇರುವ ಕೇಂದ್ರಾಡಳಿತ ಪ್ರದೇಶ (ಯೂನಿಯನ್ ಟೆರಿಟರಿ). ಮುಂಬಯಿಯ ಉತ್ತರಕ್ಕೆ 200 ಕಿಮೀ ದೂರದಲ್ಲಿದೆ. ಪೂರ್ವ ಮತ್ತು ಉತ್ತರದಲ್ಲಿ ಗುಜರಾತ್ ರಾಜ್ಯದ ಬಲ್ಸಾರ್ ಜಿಲ್ಲೆ, ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಮಹಾರಾಷ್ಟ್ರದ ಠಾಣಾ ಜಿಲ್ಲೆ ಇವೆ. ಸಮುದ್ರಮಟ್ಟದಿಂದ ಸು. 150 ಮೀ ಎತ್ತರದಲ್ಲಿರುವ ಈ ಕ್ಷೇತ್ರದಲ್ಲಿ 3 ಹಳ್ಳಿಗಳನ್ನೊಳಗೊಂಡ ದಾದ್ರಾ ಮತ್ತು 69 ಹಳ್ಳಿಗಳನ್ನೊಳಗೊಂಡ ನಗರ್ ಹವೇಲಿ ಎಂಬ ಎರಡು ಭಾಗಗಳಿವೆ. ಇದರ ಒಟ್ಟು ವಿಸ್ತೀರ್ಣ 491 ಚ.ಕಿಮೀ. ಜನಸಂಖ್ಯೆ 2,20,451 (2001). ಆಡಳಿತ ಕೇಂದ್ರ ಸಿಲ್ವಾಸ್ಸಾ.

ಮುಖ್ಯವಾಗಿ ಗುಡ್ಡಗಾಡಿನ ಈ ಪ್ರದೇಶ ಅರಣ್ಯಮಯ. ಒಟ್ಟು ವಿಸ್ತೀರ್ಣದಲ್ಲಿ ಶೇ. 41.5 ರಷ್ಟು ಅರಣ್ಯಗಳಿಂದ ಆವೃತವಾಗಿದೆ. ತೇಗ, ಸಾದ್ರ, ಖೇರ್ ಕಟಿ ಮತ್ತು ಕಾಕನ್ ಮರಗಳು ಸಮೃದ್ಧವಾಗಿ ಬೆಳೆಯುತ್ತವೆ. ಕ್ಷೇತ್ರದ ಒಟ್ಟು ವರಮಾನದಲ್ಲಿ ಕಾಲುಭಾಗದಷ್ಟು ಬರುವುದು ಅರಣ್ಯಗಳಿಂದಲೇ. ಜನರ ಮುಖ್ಯ ವೃತ್ತಿ ಬೇಸಾಯ. ಇಲ್ಲಿಯ ಮುಖ್ಯ ಬೆಳೆಗಳು ಬತ್ತ ಮತ್ತು ರಾಗಿ. ಇತರ ಬೆಳೆಗಳು ಜೋಳಿ, ಮಂಗ್, ಬಜ್ರಿ, ಮುಸುಕಿನ ಜೋಳ ಮತ್ತು ಹತ್ತಿ. ಗೋದಿಯನ್ನು ಎರಡನೆಯ ಬೆಳೆಯಾಗಿ ಬೆಳೆಯುತ್ತಾರೆ. ಇಲ್ಲಿ ದೊಡ್ಡ ನೀರಾವರಿ ಯೋಜನೆಗಳೇನೂ ಇಲ್ಲ. ಜಂಟಿ ನೀರಾವರಿ ಯೋಜನೆಯಾಗಿ ಗುಜರಾತ್ ಸರ್ಕಾರ ಕಾರ್ಯಗತಗೊಳಿಸುತ್ತಿರುವ ದಮನ್–ಗಂಗಾ ಕಟ್ಟೆಯಿಂದ ದಾದ್ರಾ ಮತ್ತು ನಗರ್ ಹವೇಲಿಯಲ್ಲಿ 6,800 ಹೆಕ್ಟೇರ್ ನೆಲ ನೀರಾವರಿಗೆ ಒಳಪಡುತ್ತದೆ. ಟಿಗ್ರ, ಖೇದ್ರಿ, ಖಿಡೋಲಿ–ಟಿಂಡೊಲ, ಖಿನವೇಲ, ಬಿಂದ್ರಾಬಿನ್‌ಗಳಲ್ಲಿ ನೆಲದ ಅಡಿಯ ನೀರಿನಿಂದ ಬೇಸಾಯ ನಡೆಯುತ್ತದೆ. ಕೆಲವರು ಗಣಿ ಉದ್ಯಮ, ಪಶುಪಾಲನೆ, ಮೀನುಗಾರಿಕೆ ಮತ್ತು ಕುಕ್ಕುಟ ಸಾಕಣೆಯಲ್ಲಿ ತೊಡಗಿದ್ದಾರೆ. ದಾದ್ರಾ ಮತ್ತು ನಗರ್ ಹವೇಲಿಯಲ್ಲಿ ದೊಡ್ಡ ಕೈಗಾರಿಕೆಗಳು ಯಾವುವೂ ಇಲ್ಲ. ಸಿಲ್ವಾಸ್ಸಾ ಬಳಿ ಕೈಗಾರಿಕಾ ಕ್ಷೇತ್ರವೊಂದು ಇದೆ. ಇಲ್ಲಿಯ ಜನಸಂಖ್ಯೆಯಲ್ಲಿ ಗಿರಿಜನರು ಶೇ. 86.83 ರಷ್ಟು ಇದ್ದಾರೆ.

ಸಿಲ್ವಾಸದಲ್ಲಿ ಒಂದು ಆಸ್ಪತ್ರೆಯೂ ನರೋಲಿ ಮತ್ತು ದೂಧನಿಯಲ್ಲಿ ಔಷಧಾಲಯಗಳೂ ಕಿಲಾವನಿ ಮತ್ತು ಖಿನವೇಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಇವೆ.

ದಾದ್ರಾ ಮತ್ತು ನಗರ್ ಹವೇಲಿಯಲ್ಲಿ ಒಟ್ಟು 181.75 ಕಿಮೀ ರಸ್ತೆಗಳಿವೆ. ಸಿಲ್ವಾಸ್ಸಾಗೆ ಅತ್ಯಂತ ಹತ್ತಿರದ ರೈಲ್ವೆ ನಿಲ್ದಾಣಗಳೆಂದರೆ ಸು. 18 ಕಿಮೀ ದೂರದಲ್ಲಿರುವ ಪಶ್ಚಿಮ ರೈಲ್ವೆಯ ವಾಪಿ ಮತ್ತು ಭಿಲಾದ್.

ಗೋವ, ದಮನ್ ಮತ್ತು ದೀವ್‌ನ ಉಪರಾಜ್ಯಪಾಲರೇ ದಾದ್ರಾ ಮತ್ತು ನಗರ್ ಹವೇಲಿ ಕ್ಷೇತ್ರಕ್ಕೂ ಮುಖ್ಯ ಆಡಳಿತಗಾರರು. ಆದರೆ ಅನುದಿನದ ವ್ಯವಹಾರಗಳನ್ನು ದಮನ್‌ನಲ್ಲಿರುವ ಕಲೆಕ್ಟರ್ ನೋಡಿಕೊಳ್ಳುವರು. ಈ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ವರಿಷ್ಠ ಪಂಚಾಯಿತಿ ಇದೆ. 21 ಜನ ಚುನಾಯಿತ ಸದಸ್ಯರಿಂದ ಕೂಡಿರುವ ಇದು ಆಡಳಿತಗಾರರಿಗೆ ಸಲಹಾ ಮಂಡಲಿಯಾಗಿ ಕೆಲಸ ಮಾಡುತ್ತದೆ. ಲೋಕಸಭೆಯಲ್ಲಿ ಈ ಕ್ಷೇತ್ರಕ್ಕೆ ಒಂದು ಸ್ಥಾನವಿದೆ. ಇದು ಗಿರಿಜನರಿಗೇ ಮೀಸಲಾಗಿದೆ.

ದಾದ್ರಾ ಮತ್ತು ನಗರ್ ಹವೇಲಿಯ ಪ್ರಮುಖ ಪ್ರವಾಸಿ ಆಕರ್ಷಣೆಯ ಕೇಂದ್ರಗಳು ದುಧಾನಿ, ಖಿನವೇಲ್, ಕಿಲಾವಾಣಿ ಬೆಟ್ಟಗಳು ಮತ್ತು ಬೃಂದಾಬಿನ್. ಸಿಲ್ವಾಸ್ಸಾದಿಂದ 32 ಕಿಮೀ ದೂರದಲ್ಲಿರುವ ದುಧಾನಿಯಲ್ಲಿ ಸೂರ್ಯಾಸ್ತಮಯ ತುಂಬ ಸುಂದರವಾಗಿರುತ್ತದೆ.

ದಾದ್ರಾ ಮತ್ತು ನಗರ್ ಹವೇಲಿ 1789 ರಲ್ಲಿ ಪೋರ್ಚುಗೀಸರ ಆಡಳಿತಕ್ಕೆ ಒಳಪಟ್ಟಿತು. ಅಲ್ಲಿಯ ಜನರು ಸ್ವತಂತ್ರ ಭಾರತದೊಂದಿಗೆ ಸೇರ್ಪಡೆಯಾಗಲು ಆಂದೋಲನ ನಡೆಸಿದರು. 1954 ರ ಆಗಸ್ಟ್ 2 ರಂದು ಅದರ ವಿಮೋಚನೆಯಾಯಿತು. ದಾದ್ರಾ ಮತ್ತು ನಗರ್ ಹವೇಲಿ ಭಾರತದಲ್ಲಿ ವಿಲೀನಗೊಂಡಿತು. ಪೋರ್ಚುಗೀಸರು ಈ ಸೇರ್ಪಡೆಯ ವಿರುದ್ಧ ವಿಶ್ವನ್ಯಾಯಾಲಯಕ್ಕೆ ದೂರಿತ್ತಿದ್ದರು. ಆದರೆ ಅಂತ್ಯದಲ್ಲಿ ನ್ಯಾಯಾಲಯ ಭಾರತದ ಪರವಾಗಿ ತೀರ್ಪಿತ್ತಿತು. 1961 ರ ಅಧಿನಿಯಮವೊಂದರ ಪ್ರಕಾರ ಇದನ್ನು ಸಂಘರಾಜ್ಯ ಕ್ಷೇತ್ರವನ್ನಾಗಿ ಪರಿಗಣಿಸಲಾಯಿತು. (ಎಸ್.ಎಸ್.ಆರ್.ಎ.)

**ದಾಮೋದರ್ ಕಣಿವೆ ಯೋಜನೆ:** ಬಿಹಾರದಲ್ಲಿ ಛೋಟಾನಾಗಪುರದ ಬೆಟ್ಟಗಳ ಪ್ರದೇಶದಲ್ಲಿ ಹುಟ್ಟಿ, 625 ಕಿಮೀ ಹರಿದು ಪಶ್ಚಿಮ ಬಂಗಾಲದಲ್ಲಿ ಹೂಗ್ಲಿ ನದಿಯನ್ನು ಸೇರುವ ದಾಮೋದರ್ ನದಿಯ ಪ್ರವಾಹವನ್ನು ನಿಯಂತ್ರಿಸಿ ಅದನ್ನು ಉಪಯುಕ್ತವಾಗಿ ಬಳಸಿಕೊಳ್ಳಲು ಕೈಗೊಂಡಿರುವ ವಿವಿಧೋದ್ದೇಶ ಯೋಜನೆ. ಈ ಯೋಜನೆ ಅವಶ್ಯಕವೆಂಬುದು ಮನವರಿಕೆಯಾದದ್ದು 1945ರಲ್ಲಿ. ಈ ನದೀಕಣಿವೆಯ ಸುತ್ತಣ ಪ್ರದೇಶ ಈಗ ಭಾರತದಲ್ಲಿ ಅತ್ಯಂತ ಅಭಿವೃದ್ಧಿ ಹೊಂದಿದ ಪ್ರದೇಶ. ಇಲ್ಲಿ ಅನೇಕ ಕೈಗಾರಿಕೆಗಳು ಬೆಳೆದಿವೆ. ಭಾರತದ ಅತ್ಯಂತ ದೊಡ್ಡ ಕಬ್ಬಿಣ ಉಕ್ಕು ಕಾರ್ಖಾನೆಯೂ ರೈಲ್ವೆ ಎಂಜಿನ್ ತಯಾರಿಕಾ ಕೇಂದ್ರವೂ ಸಿಮೆಂಟ್ ಕಾರ್ಖಾನೆಯೂ ಇಲ್ಲಿವೆ. ದಾಮೋದರ್ ನದಿಯ ಮೇಲ್ದಂಡೆ ಅರಣ್ಯ ಪ್ರದೇಶ. ಸಾಗುವಾನಿ, ಅರಗು, ಟಸ್ಸಾರ್ ರೇಷ್ಮೆ ಇವು ಇಲ್ಲಿಯ ಉತ್ಪನ್ನಗಳು. ಕೆಳದಂಡೆಯ ಪ್ರದೇಶ ಫಲವತ್ತಾದ ನೆಲ. ಸರಿಯಾದ ನೀರಾವರಿ ವ್ಯವಸ್ಥೆ ಇಲ್ಲದೆ ಇದು ಸಾಂದ್ರ ಬೇಸಾಯಕ್ಕೆ ಒಳಪಟ್ಟಿರಲಿಲ್ಲ. ದಾಮೋದರ್ ನದೀ ಬಯಲಿನಲ್ಲಿ ಅತ್ಯಂತ ವ್ಯಾಪಕವಾಗಿ ಕಲ್ಲಿದ್ದಲು ಮತ್ತು ಬಾಕ್ಸೈಟ್ ನಿಕ್ಷೇಪಗಳಿವೆ. ಪಿಂಗಾಣಿ ಮಣ್ಣು, ಅಭ್ರಕ, ಸುಣ್ಣಕಲ್ಲು, ಸೀಸ, ಬೆಳ್ಳಿ, ಆಂಟಿಮನಿ, ಕ್ವಾರ್ಟ್ಸ್ ಇವು ಇಲ್ಲಿ ದೊರಕುವ ಇತರ ಖನಿಜಗಳು. ಅಗ್ಗವಾಗಿ ವಿದ್ಯುತ್ ದೊರಕುವುದಾಗಿದ್ದರೆ ಇವನ್ನೆಲ್ಲ ಬಳಸಿಕೊಳ್ಳಬಹುದಾಗಿತ್ತು.



ದಾಮೋಧರ ಕಣಿವೆ ಯೋಜನೆಯ ಪಕ್ಷಿನೋಟ

ದಾಮೋದರ್ ಕಣಿವೆ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಕಾರ್ಪೊರೇಷನ್ ಒಂದನ್ನು ಆರಂಭಿಸಲು 1948ರಲ್ಲಿ ಭಾರತ ಸರ್ಕಾರ ಒಂದು ಅಧಿನಿಯಮವನ್ನು ಜಾರಿಗೆ ತಂದಿತು. ನೀರಾವರಿ, ವಿದ್ಯುತ್ತಿನ ಉತ್ಪಾದನೆ, ಪ್ರವಾಹ ನಿಯಂತ್ರಣ, ಮುಂತಾದ ಕಾರ್ಯಕ್ರಮ ಕೈಗೊಳ್ಳುವುದು ದಾಮೋದರ್ ಕಣಿವೆ ಕಾರ್ಪೊರೇಷನ್ನಿನ (ಡಿ.ವಿ.ಸಿ.) ಕಾರ್ಯಭಾರ. ಮೇಲೆ ಹೇಳಿದವುಗಳೇ ಅಲ್ಲದೆ ನೌಕಾಯಾನ, ಅರಣ್ಯಾಭಿವೃದ್ಧಿ, ಸಾರ್ವಜನಿಕ ಆರೋಗ್ಯ, ಆರ್ಥಿಕ ಬೆಳೆವಣಿಗೆ ಮುಂತಾದವೂ ಇದರ ಉದ್ದೇಶಗಳು.

ಬಾರಕಾರ್ ನದಿಯ ಮೇಲೆ ಮೈಥಾನ್ ಮತ್ತು ತಿಲೈಯ ಎಂಬಲ್ಲಿ ಕೋನಾರ್ ನದಿಯ ಮೇಲೂ ದಾಮೋದರ್ ನದಿಗೆ ಅಡ್ಡಲಾಗಿ ಪಾಂಚೆತ್ ಬೆಟ್ಟದ ಬಳಿಯಲ್ಲೂ ಜಲ ವಿದ್ಯುತ್ತನ್ನು ಉತ್ಪಾದಿಸಲು ಅನುಕೂಲವಾಗುವಂತೆ ಕಟ್ಟೆಗಳ ನಿರ್ಮಾಣ; ಬೊಕಾರೊ, ದುರ್ಗಾಪುರ ಮತ್ತು ಚಂದ್ರಪುರದಲ್ಲಿ ಶಾಖ ವಿದ್ಯುತ್ ಕೇಂದ್ರಗಳ ಸ್ಥಾಪನೆ; ದುರ್ಗಾಪುರದ ಬಳಿಯಲ್ಲಿ ನೀರಾವರಿಗೆ ಅನುಕೂಲವಾಗುವಂತೆ ಜಲಾಶಯ ನಿರ್ಮಾಣ; ವ್ಯಾಪಕವಾದ ವಿದ್ಯುಜ್ಜಾಲದ ರಚನೆ–ಇವು ಈ ಯೋಜನೆಯ ಮುಖ್ಯ ಕಾರ್ಯಕ್ರಮಗಳು. ಪಶ್ಚಿಮ ಬಂಗಾಲದ ದುರ್ಗಾಪುರದ ಬಳಿಯ ಜಲಾಶಯದ ಕಟ್ಟೆಯ ಉದ್ದ 757 ಮೀ, ಎತ್ತರ 13 ಮೀ. 1955ರಲ್ಲಿ ಪೂರೈಸಿದ ಈ ಕಟ್ಟೆಯಿಂದ 4 ಲಕ್ಷ ಹೆ. ಭೂಮಿಗೆ ನೀರಾವರಿ ಸೌಲಭ್ಯ ಒದಗುತ್ತದೆ. ಅಲ್ಲದೆ ನೀರಾವರಿ, ನೌಕಾಯಾನ–ಎರಡಕ್ಕೂ ಅನುಕೂಲವಾಗುವಂತೆ 130 ಕಿಮೀ ಉದ್ದದ ಕಾಲುವೆಯ ನಿರ್ಮಾಣವೂ ಈ ಕಾರ್ಯಕ್ರಮದಲ್ಲಿ ಸೇರಿದೆ. ಕೋಲ್ಕತದಿಂದ 45 ಕಿಮೀ ನಲ್ಲಿ ಹೂಗ್ಲಿಯನ್ನು ಕೂಡುವ ಈ ಕಾಲುವೆಯ ಮೇಲೆ

ದಾಮೋದರ ಕಣಿವೆಯಿಂದ ಕೋಲ್ಕತಕ್ಕೆ ಕಲ್ಲಿದ್ದಲೇ ಮುಂತಾದ ಸಾಮಗ್ರಿಗಳು ಸಾಗಬಹುದು. ಜಲವಿದ್ಯುತ್ ಉತ್ಪತ್ತಿಯಲ್ಲಿ ಶ್ರಾಯಿಣವಾಗಿ ಸಂಭವಿಸುವ ಏರಿಳಿತಗಳನ್ನು ಸರಿದೂಗಿಸುವ ಸಲುವಾಗಿ ಬೊಕಾರೊದಲ್ಲಿ ಕಟ್ಟಲಾದ ಶಾಖ ವಿದ್ಯುತ್ ಕೇಂದ್ರದ ಕೆಲಸ 1953ರಲ್ಲಿ ಪೂರೈಸಿತು. ಕಡಿಮೆ ದರ್ಜೆಯ ಕಲ್ಲಿದ್ದಲನ್ನು ಬಳಸಿಕೊಂಡು 2 ಲಕ್ಷ ಕಿವಾ ವಿದ್ಯುತನ್ನು ಈ ಕೇಂದ್ರ ಉತ್ಪಾದಿಸುತ್ತದೆ. ತಿಲೈಯಾ, ಕೋನಾರ್, ಮೈಥಾನ್ ಮತ್ತು ಪಾಂಚೆತ್ ಬೆಟ್ಟದ ಕಟ್ಟೆಗಳಿಂದ ನಿರ್ಮಿತವಾಗಿರುವ ಒಟ್ಟು ಜಲಾಶಯ ಸಾಮರ್ಥ್ಯ 11.56 ಲಕ್ಷ ಹೆ. ವಿದ್ಯುತ್ತಿನ ಸ್ಥಾಪಿತ ಸಾಮರ್ಥ್ಯ 1,46,000 ಕಿವಾ. ಪ್ರವಾಹವನ್ನು 6,50,000 ಕ್ಯೂಸೆಕ್ಕುಗಳಿಂದ 2,50,000 ಕ್ಯೂಸೆಕ್ಕುಗಳಿಗೆ ತಗ್ಗಿಸಲು ಮೈಥಾನ್ ಮತ್ತು ಪಾಂಚೇತ್ ಬೆಟ್ಟದ ಕಟ್ಟೆಗಳನ್ನು ನಿಯೋಜಿಸಲಾಗಿದೆ. ಬಾರಕರ್ ನದಿಯ ಮೇಲಣ ತಿಲೈಯ ಕಟ್ಟೆಯ ಉದ್ದ 400 ಮೀ, ಎತ್ತರ 37 ಮೀ ಇದನ್ನು 1953ರಲ್ಲಿ ಉದ್ಘಾಟಿಸಲಾಯಿತು. ಇದು ಪ್ರವಾಹದ ಮಟ್ಟವನ್ನು ನಿಯಂತ್ರಿಸುವುದರ ಜೊತೆಗೆ 40,000 ಹೆಕ್ಟೇರ್ ನೆಲಕ್ಕೆ ನೀರಾವರಿ ಸೌಲಭ್ಯ ಒದಗಿಸುತ್ತದೆ. ಜಲಾಶಯದಲ್ಲಿ ಮೀನುಗಾರಿಕೆಯನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ.

ದಾಮೋದರ್ ನದಿಯ ಉಪನದಿಗಳಲ್ಲೊಂದಾದ ಕೋನಾರ್‌ನ ಮೇಲಣ ಕೋನಾರ್ ಕಟ್ಟೆಯ ಉದ್ದ 4,287 ಮೀ, ಎತ್ತರ 95 ಮೀ. ಇದರ ನಿರ್ಮಾಣ ಕಾರ್ಯವನ್ನು 1954ರಲ್ಲಿ ಪೂರೈಸಲಾಯಿತು. ಇದರಿಂದ 40,000 ಹೆಕ್ಟೇರ್ ನೆಲ ನೀರಾವರಿಗೆ ಒಳಪಡುತ್ತದೆ. ಇಲ್ಲಿ ಉತ್ಪತ್ತಿಯಾಗುವ ವಿದ್ಯುತ್ ವರ್ಷಕ್ಕೆ 19,10,00,000 ಕಿವಾ ಗಳು. ಬಾರಕಾರ್ ನದಿಯ ಕೆಳದಂಡೆಯ ಕಟ್ಟೆ ಮೈಥಾನ್, ಇದು ಪ್ರವಾಹವನ್ನು ನಿಯಂತ್ರಿಸುವುದಲ್ಲದೆ 90,000 ಹೆಕ್ಟೇರುಗಳಿಗೆ ನೀರೊದಗಿಸುತ್ತದೆ. ಇಲ್ಲಿ ವರ್ಷಕ್ಕೆ 16,40,00,000 ಕಿವಾ ಜಲ ವಿದ್ಯುತ್ತು ಉತ್ಪಾದನೆಯಾಗುತ್ತದೆ. ಮೈಥಾನ್ ಕಟ್ಟೆ ಈ ಪ್ರದೇಶದ ಮಧ್ಯದಲ್ಲಿರುವುದರಿಂದ ಸಿಂಧ್ರಿ ರಸಗೊಬ್ಬರ ಕಾರ್ಖಾನೆ, ಚಿತ್ತರಂಜನ್ ರೈಲು ಎಂಜಿನ್ ಕಾರ್ಖಾನೆ ಮತ್ತು ಇತರ ಕಾರ್ಯಾಗಾರಗಳಿಗೆ ವಿದ್ಯುತ್ತನ್ನೊದಗಿಸುವ ಮುಖ್ಯ ಕೇಂದ್ರ ಇದು. ಪಾಂಚೇತ್ ಬೆಟ್ಟದ ಕಟ್ಟೆಯ ಮುಖ್ಯ ಉದ್ದೇಶ ಪ್ರವಾಹನಿಯಂತ್ರಣ. ಇದರ ಬಳಿ 40,000 ಕಿವಾ ಉತ್ಪಾದಿಸುವ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಮಣ್ಣಿನ ಮತ್ತು ನೀರಿನ ಸಂರಕ್ಷಣೆಯೂ ಈ ಯೋಜನೆಯ ಅಂಗವಾಗಿದೆ. ನೆಲದ ಮಣ್ಣು ಕೊಚ್ಚಿಹೋಗುವುದನ್ನು ತಡೆಯದಿದ್ದರೆ ಜಲಾಶಯಗಳಲ್ಲಿ ಬಹು ಬೇಗ ಮಣ್ಣು ತುಂಬಿಕೊಳ್ಳುತ್ತದೆ. ನೆಲ ನಿಸ್ಸಾರವಾಗುತ್ತದೆ. ಆದ್ದರಿಂದ ಈ ಪ್ರದೇಶದ ಮಣ್ಣಿನ ವ್ಯಾಪಕ ಸರ್ವೇಕ್ಷಣೆ ನಡೆಸಲಾಗಿದೆ. ದಾಮೋದರ್ ಕಣಿವೆ ಯೋಜನೆಯ ಆರಂಭದ ಕಾಲದಲ್ಲಿ ಈ ಕಣಿವೆಯ ಮೇಲ್ಭಾಗಗಳಲ್ಲಿ ಅಲ್ಲಲ್ಲಿ ನೀರಾವರಿ ಹಾಗೂ ನೆಲಸಾರರಕ್ಷಣೆಗಾಗಿ ಸಣ್ಣ ಕಟ್ಟೆಗಳನ್ನು ಕಟ್ಟಲಾಯಿತು. ಅದಿವಾಸಿ ಕಟ್ಟೆ, ದೇವಚಂದಾ ಕಟ್ಟೆ, ಬಚ್ಚಿ ಕಟ್ಟೆ ಗರಿಯ ಕರ್ಮ ಕಟ್ಟೆ–ಇವು ಮಳೆಯ ನೀರನ್ನು ತಡೆಗಟ್ಟಿ, ಮಣ್ಣು ಕೊಚ್ಚಿಹೋಗುವುದನ್ನು ತಪ್ಪಿಸಿ, ನೀರಾವರಿಗೆ ನೀರನ್ನೊದಗಿಸುತ್ತದೆ. ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವ ಸಾಧ್ಯತೆಗಳನ್ನು ಪರಿಶೀಲಿಸಿ ಸೂಕ್ತ ಕಾರ್ಯಗಳನ್ನು ಅಳವಡಿಸಲಾಗಿದೆ. (ಎಂ.ಜಿ.ಬಿ.)

**ದಾಮೋದರ್ ನದಿ:** ಬಿಹಾರ ರಾಜ್ಯದಲ್ಲಿ ಛೋಟಾ ನಾಗಪುರ ಬೆಟ್ಟಗಳಲ್ಲಿ ಹುಟ್ಟಿ, ಸ್ಥೂಲವಾಗಿ ಆಗ್ನೇಯಾಭಿಮುಖವಾಗಿ 625 ಕಿಮೀ ಹರಿದು ಪಶ್ಚಿಮ ಬಂಗಾಲದಲ್ಲಿ ಹೂಗ್ಲಿಯನ್ನು ಸೇರುವ ಒಂದು ನದಿ. ಇದರ ತಲೆಯ ಬಳಿ ಎರಡು ಕವಲುಗಳಿವೆ. ಇವುಗಳ ಪೈಕಿ ದಕ್ಷಿಣದ ಕವಲು ಬಿಹಾರದ ಪಲಮೌ ಜಿಲ್ಲೆಯ ತೋರಿ ಪರಗಣದಲ್ಲಿ ಉಗಮಿಸುತ್ತದೆ. ಇದೇ ನದಿಯ ನಿಜವಾದ ಉಗಮಸ್ಥಳ. ಉತ್ತರದ ಕವಲು ಹಜ್ಹಾರಿಬಾಗ್ ಜಿಲ್ಲೆಯ ವಾಯುವ್ಯ ಮೂಲೆಯಲ್ಲಿ ಉಗಮಿಸುತ್ತವೆ. ಈ ಕವಲುಗಳು ಸು. 42 ಕಿಮೀ ದೂರ ಹರಿದು ಹಜ್ಹಾರಿಬಾಗ್ ಬಳಿ ಒಂದುಗೂಡುತ್ತದೆ. ಅನಂತರ ಈ ನದಿ ಹೆಚ್ಚು ಕಡಿಮೆ ಪೂರ್ವದಿಕ್ಕಿಗೆ ಹರಿದು ಆ ಜಿಲ್ಲೆಯನ್ನು ದಾಟುತ್ತದೆ. ವಾಯವ್ಯದ ಕಡೆಯಿಂದ ಹರಿದು ಬರುವ ಕೂನೂರ್, ಜಮುನಿಯ ಮುಂತಾದ ನದಿಗಳನ್ನು ಕೂಡಿಕೊಳ್ಳುತ್ತದೆ. ಮನ್‌ಭೂಮ್ ಜಿಲ್ಲೆಯಲ್ಲಿ ಪೂರ್ವಾಭಿಮುಖವಾಗಿಯೇ ಮುಂದುವರಿಯುತ್ತದೆ. ಬಂಗಾಲದ ಬರ್ದ್ವಾನ್ ಜಿಲ್ಲೆಯ ಗಡಿಯನ್ನು ಮುಟ್ಟುವ ಎಡೆಯಲ್ಲಿ ಉತ್ತರದಿಂದ ಬಾರಕಾರ್ ನದಿ ಇದನ್ನು ಸೇರುತ್ತದೆ. ಇದೇ ದಾಮೋದರ್‌ನ ಪ್ರಮುಖ ಉಪನದಿ.

ಸ್ವಲ್ಪ ಮುಂದೆ ಈ ನದಿ ನೌಕಾಯೋಗ್ಯವಾಗಿ ಪರಿಣಮಿಸುತ್ತದೆ. ಬಾರಕಾರ್ ನದಿಯ ಸಂಗಮದ ಸ್ಥಳದಲ್ಲಿ ನದಿಯ ದಿಕ್ಕು ಆಗ್ನೇಯಕ್ಕೆ ಬದಲಾಗಿ ಅಸನ್ಸೋಲ್ ಮತ್ತು ಬಂಕುರ ಜಿಲ್ಲೆಗಳನ್ನು ಪ್ರತ್ಯೇಕಿಸುತ್ತದೆ. ಬರ್ದ್ವಾನ್ ಪಟ್ಟಣದಿಂದ ಮುಂದಕ್ಕೆ ಬಲಕ್ಕೆ ತಿರುಗಿ, ಬರ್ದ್ವಾನ್ ಮತ್ತು ಹೂಗ್ಲಿ ಜಿಲ್ಲೆಗಳಲ್ಲಿ ದಕ್ಷಿಣ ದಿಕ್ಕಿಗೆ ಹರಿಯುತ್ತದೆ. ಹೂಗ್ಲಿ ಜಿಲ್ಲೆಯನ್ನು ಪ್ರವೇಶಿಸುವ ಮುನ್ನ ದಾಮೋದರ ನದಿಯ ಸ್ವರೂಪವೇ ಬದಲಾಗುತ್ತದೆ. ನದೀಮುಖಜಭೂಮಿಯಂಥ ಪ್ರದೇಶದಲ್ಲಿ ಇದು ಅನೇಕ ಕವಲುಗಳಾಗಿ ಒಡೆಯುತ್ತದೆ. ದಾಮೋದರ್ ನದಿ ಹುಟ್ಟುವ ಪ್ರದೇಶದಲ್ಲೇ ಉಗಮಿಸುವ ರೂಪನಾರಾಯಣ್ ನದಿಗೆ ಈ ನದಿಯ ನೀರಿನ ಬಹುಭಾಗ ಹರಿದು ಹೋಗುತ್ತದೆ. ಅಂತಿಮವಾಗಿ ದಾಮೋದರ್ ನದಿ ಒಂದು ಸಣ್ಣ ಹೊಳೆಯಾಗಿ ಪರಿಣಮಿಸಿ, ಉಳಿದ ನೀರು ಹಾಗೂ ಮಣ್ಣಿನೊಂದಿಗೆ ಫಾಲ್ಟಾದ ಎದುರಿಗೆ ಕೋಲ್ಕತದಿಂದ ಕೆಳಕ್ಕೆ 56 ಕಿಮೀ ದೂರದಲ್ಲಿ ಹೂಗ್ಲಿ ನದಿಯನ್ನು ಸೇರುತ್ತದೆ.

ಈ ನದಿ ಭಾರತೀಯ ನದಿಗಳ ಎರಡು ಮುಖ್ಯ ಲಕ್ಷಣಗಳನ್ನೂ ಪ್ರದರ್ಶಿಸುತ್ತದೆ. ಮೇಲ್ಭಾಗದಲ್ಲಿ ಈ ನದಿಯ ಹರಿವಿನ ವೇಗ ಅಧಿಕ. ಅಲ್ಲಿ ಇದು ಅಗಾಧ ಮಣ್ಣನ್ನು ಹೊತ್ತು ತರುತ್ತದೆ. ದಾಮೋದರ್ ನದಿಯ ತಲೆಯ ಎರಡೂ ಕವಲುಗಳು ಸೇರುವ ಎಡೆಯಲ್ಲಿ ಇದು ಸಮುದ್ರಮಟ್ಟದಿಂದ 442 ಮೀ ಎತ್ತರದಲ್ಲಿದೆ. ಮುಂದಿನ ಸು. 150 ಕಿಮೀ ದೂರ ಕ್ರಮಿಸುವ ವೇಳೆಗೆ ಇದು ಸರಾಸರಿಯಲ್ಲಿ ಪ್ರತಿ ಕಿಮೀ ಗೆ 2 ಮೀ ಗಳಷ್ಟು ತಗ್ಗಿಗೆ ಇಳಿಯುತ್ತದೆ. ಉಳಿದ ಸು. 400 ಕಿಮೀ ದೂರದಲ್ಲಿ ಇದು ಕೇವಲ 194 ಮೀ ಇಳಿಯುತ್ತದೆ. ಇಲ್ಲಿ ನದಿಯ ವೇಗ ಬಹಳ ಕಡಿಮೆಯಾಗುತ್ತದೆ.

ದಾಮೋದರ್ ಬಿಹಾರ ಮತ್ತು ಪಶ್ಚಿಮ ಬಂಗಾಲಗಳ ದುಃಖನದಿ ಎಂದು ಕರೆಯಲಾಗಿದೆ. ಈ ನದಿಯ ಮೇಲ್ಕಣಿವೆಯ ಭಾಗದಲ್ಲಿ ಬಿಹಾರದ ಹಜ್ಹಾರಿಬಾಗ್, ಪಲಮೌ, ರಾಂಚಿ, ಮನ್ ಭೂಂ ಮತ್ತು ಸಂತಾಲ್ ಪರಗಣ ಜಿಲ್ಲೆಗಳ ಭಾಗಗಳಿವೆ. ಇಲ್ಲಿ ವಾರ್ಷಿಕ ಮಳೆ ಸು. 117.5 ಸೆಂಮೀ ಇದು ಬಹುತೇಕ ಮುಂಗಾರಿನ ಕಾಲದಲ್ಲಿ ಬೀಳುತ್ತದೆ. ನಗ್ನೀಕೃತವಾದ ಬೆಟ್ಟಗಳ ಮೇಲೆ ಸುರಿಯುವ ಮಳೆಯ ನೀರು ರಭಸವಾಗಿ ದಾಮೋದರ್ ನದಿಗೆ ಹರಿದು ಅದರ ಪ್ರವಾಹವನ್ನು ಒಮ್ಮೆಗೇ ಉಬ್ಬಿಸುತ್ತದೆ. ಇದನ್ನು ತಡೆಯದಿದ್ದರೆ ನೆಲದ ಮಣ್ಣು ಕೊಚ್ಚಿಹೋಗಿ ನದಿಯ ಪಾತ್ರದಲ್ಲಿ ತುಂಬಿ ಪ್ರವಾಹದ ನೀರು ಅಕ್ಕಪಕ್ಕದ ಹೊಲಹಳ್ಳಿಗಳಿಗೆ ನುಗ್ಗಿ ಅಪಾರ ನಷ್ಟವನ್ನುಂಟುಮಾಡುತ್ತದೆ. 12,000 ಚ.ಕಿಮೀ ಜಲೋತ್ಸಾರಣ ನೆಲದಿಂದ ಕೂಡಿದ ಈ ನದಿಯ ಅಗಾಧ ಜಲರಾಶಿಯನ್ನು ನಿಯಂತ್ರಿಸಿ ಪ್ರವಾಹದ ಅನಾಹುತವನ್ನು ತಡೆಗಟ್ಟುವುದಲ್ಲದೆ ಇದನ್ನು ಜನೋಪಯುಕ್ತವಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗಿದೆ. (ಬಿ.ವಿ.ಎಸ್.)

**ದಾಮೋದರ್ ಶ್ರೇಣಿ:** ತಾಲ್‌ಚಿರ್ ಶಿಲಾ ಶ್ರೇಣಿಯ ಮೇಲಿರುವ ಶಿಲಾಶ್ರೇಣಿ; ದಾಮುದಾ ಶ್ರೇಣಿ ಪರ್ಯಾಯನಾಮ. ಇದರ ಶಿಲಾಪ್ರಸ್ತರಗಳನ್ನು ಮೊತ್ತಮೊದಲು ದಾಮೋದರ ನದಿಯ ಕಣಿವೆಯಲ್ಲಿ ಗುರುತಿಸಿದ ಕಾರಣ ಈ ಹೆಸರು ಬಂದಿದೆ. ಗೊಂಡ್ವಾನ ಶ್ರೇಣಿಯಲ್ಲಿ ಇದು ಬಲು ಮುಖ್ಯವಾದ ವರ್ಗ, ಭಾರತದ ಕಲ್ಲಿದ್ದಲಿನ ಮುಖ್ಯ ಗಣಿಗಳೆಲ್ಲವೂ ಇದಕ್ಕೆ ಸೇರಿವೆ. ರಾಣಿಗಂಜ್ ಪ್ರದೇಶದಲ್ಲಿ ಇದು 2032.33 ಮೀ ಗಳಷ್ಟೂ ಝರಿಯಾ ಪ್ರದೇಶದಲ್ಲಿ 1789.66 ಮೀ ಗಳಷ್ಟೂ ದಪ್ಪವಾಗಿದೆ. ಗಣಿಗಳಿಂದ ಪಶ್ಚಿಮಕ್ಕೆ ಸರಿದಂತೆಲ್ಲ ಈ ದಪ್ಪ ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಉದಾಹರಣೆಗೆ ಬೊಕಾರೋ ಮತ್ತು ಕರನ್‌ಪುರ ಕಲ್ಲಿದ್ದಲ ಗಣಿಪ್ರದೇಶದಲ್ಲಿ ಶ್ರೇಣಿಯ ದಪ್ಪ ಕುಗ್ಗಿ ರಾಣಿಗಂಜ್ ಮತ್ತು ಝರಿಯಾಗಳಲ್ಲಿ ಕಂಡುಬಂದ ದಪ್ಪದಲ್ಲಿ ಅರ್ಧದಷ್ಟಾಗುವುದು. ದಾಮೋದರ್ ಶ್ರೇಣಿಯಲ್ಲಿ ಸಾಮಾನ್ಯವಾಗಿ ಸಿಹಿ (ನದಿ) ನೀರಿನಲ್ಲಿ ಶೇಖರವಾಗುವ ನಾನಾ ಬಗೆಯ ಶಿಲೆಗಳನ್ನು ಕಾಣಬಹುದು. ದಪ್ಪನೆಯ ಗುಂಡು ಕಣಗಳಿಂದ ಕೂಡಿದ ಮರಳುಶಿಲೆ, ಜೇಡುಶಿಲೆ, ಕಲ್ಲಿದ್ದಲ ಪ್ರಸ್ತರಗಳು ಮತ್ತು ಕಬ್ಬಿಣ ಸೇರಿರುವ ಶಿಲಾಪ್ರಸ್ತರಗಳನ್ನು ಗುರುತಿಸಬಹುದು. ಇವುಗಳಲ್ಲೆಲ್ಲ ಕಲ್ಲಿದ್ದಲ ಪ್ರಸ್ತರಗಳು ಬಲು ವಿಶಿಷ್ಟವಾಗಿ ಕಂಡುಬರುತ್ತವೆ. ಹಲವು ಪ್ರದೇಶಗಳಲ್ಲಿ ಇವನ್ನು ಒಂದೇಸಮ ಯಾವ ಅಡಚಣೆಯೂ ಇಲ್ಲದೆ ಸು. 32 ಕಿಮೀ ದೂರದವರೆಗೆ ಗುರುತಿಸಬಹುದು. ಈ ಶಿಲೆಗಳಲ್ಲಿ ಹರಿಯುವ ನೀರಿನ ಪ್ರಭಾವದಿಂದ ಉಂಟಾಗುವ ವಿಂಗಡಣಾ ಪ್ರಸ್ತರೀ ರಚನೆಯನ್ನು (ಗ್ರೇಡೆಡ್ ಬೆಡ್ಡಿಂಗ್) ಸುಲಭವಾಗಿ ಗುರುತಿಸಬಹುದು. ಅಲ್ಲದೆ ಈ ಶಿಲಾಸಮುದಾಯದ ವಿನ್ಯಾಸವನ್ನು ಅನುಸರಿಸಿ ಇವು ಸಾಮಾನ್ಯವಾಗಿ ದೊಡ್ಡ ನದೀಪಾತ್ರಗಳಲ್ಲೊ ದೊಡ್ಡ ಸಿಹಿ ನೀರಿನ ಸರೋವರಗಳಲ್ಲೊ ಶೇಖರವಾದವೆಂದು ಊಹಿಸಬಹುದು. ಅನೇಕ ಸ್ಥಳಗಳಲ್ಲಿ ಈ ಬಗೆಯ ಶೇಖರಣೆಯ ವಿವಿಧ ಹಂತಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಿದೆ. *

**ದಾವಣಗೆರೆ:** ಕರ್ನಾಟಕದ ಮಧ್ಯ ಭಾಗದಲ್ಲಿರುವ ಒಂದು ಜಿಲ್ಲೆ. ಇದು ಉ.ಅ. $13^0 45'$ ಮತ್ತು $75^0 30'$ ರೇಖಾಂಶದಲ್ಲಿದೆ. ಇದರ ಪಶ್ಚಿಮಕ್ಕೆ ಹಾವೇರಿ ಮತ್ತು ಶಿವಮೊಗ್ಗ, ದಕ್ಷಿಣಕ್ಕೆ ಚಿಕ್ಕಮಗಳೂರು, ಉತ್ತರಕ್ಕೆ ಕೊಪ್ಪಳ ಮತ್ತು ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಗಳಿವೆ. ಇದು ಆರು ತಾಲ್ಲೂಕುಗಳನ್ನು ಒಳಗೊಂಡಿದ್ದು ಅವು ದಾವಣಗೆರೆ, ಹರಪನಹಳ್ಳಿ, ಜಗಳೂರು, ಹರಿಹರ, ಹೊನ್ನಾಳಿ, ಮತ್ತು ಚನ್ನಗಿರಿಗಳಾಗಿವೆ. ವಿಸ್ತೀರ್ಣ 5,976 ಚ.ಕಿಮೀ 1997ರಲ್ಲಿ ಇದು ಹೊಸ ಜಿಲ್ಲೆಯಾಯಿತು.

ಭೂಸ್ವರೂಪ: ದಾವಣಗೆರೆ ಜಿಲ್ಲೆಯು ಕರ್ನಾಟಕದ ಮೈದಾನ ಪ್ರದೇಶದಲ್ಲಿರುವುದರಿಂದ ಸಾಮಾನ್ಯವಾಗಿ ಬಯಲು ಪ್ರದೇಶ ಹೊಂದಿದೆ. ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ಮತ್ತು ಜಗಳೂರು ಎತ್ತರದಲ್ಲಿವೆ. ದಾವಣಗೆರೆ ಮತ್ತು ಹರಿಹರ ಭಾಗವು ತಗ್ಗಿನಲ್ಲಿದೆ. ಅಲ್ಲದೆ ಸಾಧಾರಣ ಮಟ್ಟದ ಕೆಲವು ಬೆಟ್ಟಗಳಿವೆ. ಜಗಳೂರಿನ ವಾಯವ್ಯದಲ್ಲಿ ಸಣ್ಣ ಬೆಟ್ಟಗಳಿವೆ. ದಾವಣಗೆರೆಯ ಪೂರ್ವಾಗ್ನೇಯದಲ್ಲಿ ಎತ್ತರವಿಲ್ಲದ ಬೆಟ್ಟದ ಸಾಲಿದೆ. ಹರಪನಹಳ್ಳಿ

ತಾಲ್ಲೂಕಿನಲ್ಲಿ ಕಲ್ಲಹಳ್ಳಿ ಗುಡ್ಡ ಶ್ರೇಣಿಯಿದೆ. ಪಶ್ಚಿಮದಲ್ಲಿರುವ ಕಲ್ಲಹಳ್ಳಿ ಶಿಖರವು 850 ಮೀ ಎತ್ತರವಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಶ್ರೇಣಿಯಲ್ಲಿ 1031 ಮೀ ಎತ್ತರದ ಕಲ್ಪರಂಗನಗಿರಿಯಿದೆ.




ನದಿಗಳು: ತುಂಗಭದ್ರಾ ಜಿಲ್ಲೆಯ ಪ್ರಮುಖ ನದಿ. ಇದು ಶಿವಮೊಗ್ಗ ಜಿಲ್ಲೆಯಿಂದ ಹೊನ್ನಾಳಿ ತಾಲ್ಲೂಕನ್ನು ಪ್ರವೇಶಿಸಿ, ಮುಂದೆ ಹರಿಹರ ಮತ್ತು ಹರಪನಹಳ್ಳಿ ತಾಲ್ಲೂಕುಗಳ ಪಶ್ಚಿಮದ ಗಡಿಯಲ್ಲಿ ಹರಿಯುತ್ತದೆ. ಈ ನದಿಗೆ ಕೂಡಿಕೊಳ್ಳುವ ಕೆಲವು ಉಪತೊರೆಗಳು ಹೊನ್ನಾಳಿಯಲ್ಲಿವೆ. ಚನ್ನಗಿರಿ ತಾಲ್ಲೂಕಿನಲ್ಲಿ ಹರಿಯುವ ಹರಿದ್ರಾ ತೊರೆಯು ಹರಿಹರದ ಹತ್ತಿರ ತುಂಗಭದ್ರಾ ನದಿಯನ್ನು ಸೇರುತ್ತದೆ. ಚನ್ನಗಿರಿಯಲ್ಲಿ ಶಾಂತಿಸಾಗರ (ಸೂಳೆಕೆರೆ) ಎಂಬ ದೊಡ್ಡ ಕೆರೆಯಿದೆ. ಚಿತ್ರದುರ್ಗ ಜಿಲ್ಲೆಯಿಂದ ಬರುವ ಸ್ಯಾಗಲಹಳ್ಳವು ದಾವಣಗೆರೆ ತಾಲ್ಲೂಕಿನ ಮುಖಾಂತರ ಹರಿದು ಹರಿಹರದ ಪಕ್ಕದಲ್ಲಿ ತುಂಗಭದ್ರಾ ನದಿಯನ್ನು ಸೇರುತ್ತದೆ. ಹರಪನಹಳ್ಳಿ ತಾಲ್ಲೂಕಿನ ಪೂರ್ವದ ಭಾಗದಲ್ಲಿ ಚಿಕ್ಕ ಹಗರಿ ನದಿಯಿದೆ.

ವಾಯುಗುಣ: ಬೇಸಗೆಯಲ್ಲಿ ಹೆಚ್ಚು ಉಷ್ಣತೆಯಿದ್ದು ಸರಾಸರಿ $30^0$ಸೆ. ಇರುತ್ತದೆ. ಚಳಿಗಾಲದಲ್ಲಿ ಉಷ್ಣಾಂಶ ಕಡಿಮೆಯಿದ್ದು ಸರಾಸರಿ $17^0$ಸೆ. ನಷ್ಟಿರುತ್ತದೆ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 66 ಸೆಂಮೀ. ಜೂನ್‍ನಿಂದ ಸೆಪ್ಟೆಂಬರ್‌ವರೆಗೆ ಮಳೆ ಹೆಚ್ಚು.

ಮಣ್ಣು: ಹೊನ್ನಾಳಿ ತಾಲ್ಲೂಕಿನಲ್ಲಿ, ಮರಳು ಮಿಶ್ರಿತ ಜೇಡಿ, ಮರಳು ಮಿಶ್ರಿತ ಕೆಂಪು, ಹಾಗೂ ಹತ್ತಿ ಬೆಳೆಯುವ ಕಪ್ಪು ಮಣ್ಣುಗಳಿವೆ. ಚನ್ನಗಿರಿಯ ಉತ್ತರ ಹಾಗೂ ವಾಯವ್ಯದ ಪ್ರದೇಶದಲ್ಲಿ ಕರಿಮಣ್ಣು ಮತ್ತು ದಕ್ಷಿಣದಲ್ಲಿ ಕಲ್ಲು ಮಿಶ್ರಿತ ಕೆಂಪು ಹಾಗೂ ಉಳಿದೆಡೆ ಮಿಶ್ರಿತ ಕೆಂಪು ಮಣ್ಣುಗಳಿವೆ. ದಾವಣಗೆರೆಯ ನೈರುತ್ಯದಲ್ಲಿ ಕೆಂಪು ಹಾಗೂ ಉಳಿದೆಡೆ ಕಪ್ಪು, ಎರೆ ಮಣ್ಣುಗಳಿವೆ. ಹರಿಹರ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ವಿವಿಧ ಬಗೆಯ ಕಪ್ಪು ಮಣ್ಣುಗಳಿವೆ. ಹರಪನಹಳ್ಳಿಯಲ್ಲಿ ಕೆಂಪುಜೇಡಿ ಹಾಗೂ ಕಪ್ಪುಜೇಡಿ ಮಣ್ಣುಗಳಿವೆ. ಜಗಳೂರಿನಲ್ಲಿ ಕಪ್ಪು ಹಾಗೂ ಮರಳು ಮಿಶ್ರಿತ ಕೆಂಪು ಮಣ್ಣಿವೆ.

ಸಸ್ಯ ಹಾಗೂ ಪ್ರಾಣಿಸಂಪತ್ತು: ಸಾಮಾನ್ಯವಾಗಿ ಜಿಲ್ಲೆಯಲ್ಲಿ ಅರಣ್ಯ ಕಡಿಮೆ. ಚನ್ನಗಿರಿಯ ನೈರುತ್ಯ ಭಾಗ, ಹೊನ್ನಾಳಿ ಮತ್ತು ಹರಿಹರ ತಾಲ್ಲೂಕಿನಲ್ಲಿ ಅರಣ್ಯವಿದೆ. ಇಲ್ಲಿನ ಮುಖ್ಯ ಮರಗಳೆಂದರೆ ಮತ್ತಿ, ಕರಿಮರ, ನಂದಿ, ಸಂಪಿಗೆ, ಸಾಗವಾನಿ, ಶ್ರೀಗಂಧ, ಬೂರುಗ, ದಿಂಡಿಗ, ಮಾವು, ಬೇವು, ಆಲ, ಹತ್ತಿ, ಜಾಲಿ, ನೇರಳೆ, ಇತ್ಯಾದಿ, ಕುರುಚಲು, ಮುಳ್ಳುಕಂಟಿ ಮತ್ತು ಹುಲ್ಲುಗಾವಲು ಜಿಲ್ಲೆಯ ಇತರ ಸಸ್ಯವರ್ಗ, ಜಿಲ್ಲೆಯ ಅರಣ್ಯದಲ್ಲಿ ನರಿ, ತೋಳ, ಜಿಂಕೆ, ಕಾಡುಹಂದಿ, ಮುಳ್ಳುಹಂದಿ, ಹಾಗೂ ಬಗೆಬಗೆಯ ಕೋತಿಗಳಿವೆ.

ವ್ಯವಸಾಯ: ಕೊಳವೆ ಬಾವಿ (44,800ಹೆ.) ಏತ ನಿರಾವರಿ (76,670ಹೆ.), ಕೆರೆ (917ಹೆ.) ಹಾಗೂ ಇತರ ಮೂಲದ (644ಹೆ.) ನಿರಾವರಿ ಸೌಲಭ್ಯವಿದೆ. ಇಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ. ಬತ್ತ, ರಾಗಿ, ಜೋಳ, ಸಜ್ಜೆ, ಮುಸಕಿನ ಜೋಳ, ಗೋದಿ, ಕಡಲೆ, ತೊಗರಿ, ಶೇಂಗಾ ಮತ್ತು ಸೂರ್ಯಕಾಂತಿ. ಪಶುಸಂಗೋಪನೆಯು ಜಿಲ್ಲೆಯಲ್ಲಿ ಪ್ರಮುಖವಾಗಿದ್ದು, ಇಲ್ಲಿನ ಸಾಕು-ಪ್ರಾಣಿಗಳೆಂದರೆ: ದನಕರುಗಳು, ಎಮ್ಮೆ, ಕುರಿಗಳು, ಹಂದಿ ಮತ್ತು ಮೇಕೆ.

ಕೈಗಾರಿಕೆ: ದಾವಣಗೆರೆಯಲ್ಲಿ ಅನೇಕ ಹತ್ತಿ ಮತ್ತು ತೈಲ ಉತ್ಪಾದನೆ, ಹರಿಹರದಲ್ಲಿ ಕಿರ್ಲೋಸ್ಕರ್ ಯಂತ್ರೋಪಕರಣ ಹಾಗೂ ಪಾಲಿಫೈಬರ್ ಕಾರ್ಖಾನೆಯಿದೆ. ಹತ್ತಿ ಬಟ್ಟೆ, ಹೊಗೆಸೊಪ್ಪು, ಬೀಡಿ, ಚುಟ್ಟಾ, ಕಂಬಳಿ, ಚರ್ಮದ ವಸ್ತುಗಳ ಕಾರ್ಖಾನೆಗಳಿವೆ.

ಸಾರಿಗೆ: ಜಿಲ್ಲೆಯಲ್ಲಿ 47 ಕಿಮೀ ಉದ್ದದ ಬ್ರಾಡ್‍ಗೇಜ್ ರೈಲುಮಾರ್ಗವಿದೆ. ಸಾಕಷ್ಟು ರಸ್ತೆ ಸಾರಿಗೆಯಿದ್ದು 13 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, 603 ಕಿಮೀ ಉದ್ದದ ರಾಜ್ಯ ಹೆದ್ದಾರಿ, ಜಿಲ್ಲೆ ರಸ್ತೆ 1154 ಕಿಮೀ, ಇತರೆ ರಸ್ತೆಗಳೆಲ್ಲಾ ಸೇರಿ 5045. 27 ಕಿಮೀ ಉದ್ದದ ರಸ್ತೆ ಮಾರ್ಗವಿದೆ.

ಜನಸಂಖ್ಯೆ: ಜಿಲ್ಲೆಯ ಒಟ್ಟು ಜನಸಂಖ್ಯೆ 17,90,952 (2001). ಜನಸಾಂದ್ರತೆ, ಪ್ರತಿ ಚ.ಕಿಮೀ ಗೆ 302 ಜನರು.

ದಾವಣಗೆರೆ ತಾಲ್ಲೂಕು: ಜಿಲ್ಲೆಯ ಮಧ್ಯ ಪೂರ್ವ ಭಾಗದಲ್ಲಿರುವ ತಾಲ್ಲೂಕಿನ ಈಶಾನ್ಯಕ್ಕೆ ಜಗಳೂರು, ಉತ್ತರಕ್ಕೆ ಹರಪನಹಳ್ಳಿ, ಪಶ್ಚಿಮಕ್ಕೆ ಹರಿಹರ, ನೈರುತ್ಯಕ್ಕೆ ಹೊನ್ನಾಳಿ, ಮತ್ತು ದಕ್ಷಿಣಕ್ಕೆ ಚನ್ನಗಿರಿ ತಾಲ್ಲೂಕುಗಳಿವೆ, ಹಾಗೂ ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಯಿದೆ. ವಿಸ್ತೀರ್ಣ 994 ಚ.ಕಿಮೀ. ಜನಸಂಖ್ಯೆ 6,02,523 (2001). ಇದು 3 ಹೋಬಳಿಗಳನ್ನು 40 ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ. ಇಲ್ಲಿನ ಸರಾಸರಿ ವಾರ್ಷಿಕ ಮಳೆ 60 ಸೆಂಮೀ.

ತಾಲ್ಲೂಕಿನ ಬಿತ್ತನೆಯಾದ ಭೂಮಿ 69,987 ಹೆ. ಒಟ್ಟು ನೀರಾವರಿಗೆ ಒಳಪಟ್ಟ ಭೂಮಿ 33,021 ಹೆ. ಮುಖ್ಯ ಬೆಳೆಗಳು ಬತ್ತ, ರಾಗಿ, ಜೋಳ, ಮುಸಕಿನ ಜೋಳ, ಕಾಳುಗಳು, ಸೂರ್ಯಕಾಂತಿ ಇತ್ಯಾದಿ. ಪಶುಸಂಗೋಪನೆಯು ಇಲ್ಲಿನ ಒಂದು ಪ್ರಮುಖ ಉದ್ದಿಮೆಯಾಗಿದೆ. ಬಟ್ಟೆ, ರಾಸಾಯನಿಕ, ಎಂಜಿನಿಯರಿಂಗ್, ಚರ್ಮ, ಕಾಗದದ ಕೈಗಾರಿಕೆಗಳಿವೆ. ಈ ತಾಲ್ಲೂಕಿನಲ್ಲಿ 40 ಕಿಮೀ ಉದ್ದದ ಬ್ರಾಡ್‍ಗೇಜ್ ರೈಲು ಮಾರ್ಗ ಮತ್ತು 1491,12 ಕಿಮೀ ಉದ್ದದ ರಸ್ತೆ ಮಾರ್ಗವಿದೆ.

ದಾವಣಗೆರೆ (ನಗರ): ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ವ್ಯಾಪಾರ ಕೇಂದ್ರ. ಇದು ತಾಲ್ಲೂಕಿನ ಉತ್ತರ ಭಾಗದಲ್ಲಿದೆ. ಹಿಂದೆ ಇದನ್ನು ದ್ಯಾವಿನಕೆರೆ ಎಂದು ಕರೆಯಲಾಗಿತ್ತು. ಜಿಲ್ಲೆಯ ಎಲ್ಲಾ ಭಾಗದಿಂದಲೂ ರಸ್ತೆ ಮಾರ್ಗದ ಕೇಂದ್ರ ಹಾಗೂ ಬ್ರಾಡ್‍ಗೇಜ್ ರೈಲು ಮಾರ್ಗದ ಮುಖ್ಯ ರೈಲ್ವೆ ನಿಲ್ದಾಣ ಸಹ ಆಗಿದೆ. ಇದು ಹತ್ತಿ, ಎಣ್ಣೆ, ಕಂಬಳಿ. ಮತ್ತು ವನಸ್ಪತಿ ಉತ್ಪಾದನೆಗೆ ಪ್ರಸಿದ್ಧವಾಗಿದೆ. ಇಲ್ಲಿನ ಬಾಪೂಜಿ-ವಿದ್ಯಾಸಂಸ್ಥೆಯಿಂದಾಗಿ ಇದು ಮುಖ್ಯ ವಿದ್ಯಾಕೇಂದ್ರವಾಗಿ ಬೆಳೆದಿದೆ. ಜನಸಂಖ್ಯೆ 3,63,780 (2001). (ಬಿ.ಸಿ.ಕೆ.)

**ದಿಂಡಿಗಲ್:** ತಮಿಳುನಾಡು ರಾಜ್ಯದ ಮಧುರೈ ಜಿಲ್ಲೆಯ ಒಂದು ಪಟ್ಟಣ. ಪಳನಿ ಮತ್ತು ಸಿರುಮಲೈ ಬೆಟ್ಟಗಳ ನಡುವೆ ಉ. ಅ. $10^0 21'$ ಮತ್ತು ಪೂ. ರೇ. $77^0 58'$ ಮೇಲೆ ಇದೆ. ಈ ನಗರದ ಪಶ್ಚಿಮದ ಕೊನೆಯಲ್ಲಿರುವ ತಿಂಡುಕಲ್ (ದಿಂಬುಕಲ್) ಎಂಬ ಬಂಡೆಯಿಂದ ಇದಕ್ಕೆ ದಿಂಡಿಗಲ್ ಎಂಬ ಹೆಸರು ಬಂದಿದೆಯೆಂದು ಹೇಳಲಾಗಿದೆ. ಇದರ ಗರಿಷ್ಠ ಎತ್ತರ ಸಮುದ್ರಮಟ್ಟದಿಂದ 370 ಮೀ ಇದರ ಮೇಲಣ ಕೋಟೆಯನ್ನು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿಸಲಾಯಿತು. ಕೋಟೆಗೆ ಬಂಡೆಯಲ್ಲೇ ಕೊರೆದ 600 ತಗ್ಗಾದ ಮೆಟ್ಟಿಲುಗಳಿವೆ. ದುರ್ಗದ ಒಳಗೆ ಕೆಲವೇ ಕೆಲವು ಕಟ್ಟಡಗಳುಂಟು. ಈ ಗುಡ್ಡದ ನೆತ್ತಿಯ ಮೇಲೆ ಅಭಿರಾಮಿಯಮ್ಮನ ದೇವಸ್ಥಾನವಿದೆ. ಮೊದಲು ಈ ಕೋಟೆ ನಾಯಕರ ಅಧೀನದಲ್ಲಿತ್ತು. ಅನಂತರ ಟಿಪ್ಪುವಿಗೆ ಸೇರಿತ್ತು. 1767ರಲ್ಲಿ ಬ್ರಿಟಿಷರು ಅವನನ್ನು ಸೋಲಿಸಿ ಕೋಟೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು.

ದಿಂಡಿಗಲ್ಲಿನಲ್ಲಿ ಪುರಸಭೆಯಿದೆ. ಇದು ತಾಲ್ಲೂಕು ಮುಖ್ಯಸ್ಥಳ. ಇಲ್ಲಿ ಹತ್ತಿ ನೂಲು ಮತ್ತು ನೇಯ್ಗೆ ಗಿರಣಿಗಳಿವೆ. ರೇಷ್ಮೆ ನೇಯ್ಗೆ, ಒಡವೆ, ಅಡಿಕೆಪುಡಿ, ಬೀಗ ಮತ್ತು ತಿಜೋರಿ ಕೈಗಾರಿಕೆಗಳೂ ಇವೆ. ಇಲ್ಲಿಯ ಚುಟ್ಟಾ ತುಂಬ ಪ್ರಸಿದ್ಧ. ಇಲ್ಲಿಂದ ಚೆನ್ನೈಗೆ ಚರ್ಮ ರಫ್ತಾಗುತ್ತದೆ. ದಿಂಡಿಗಲ್ ಒಂದು ಸಾರಿಗೆ ಕೇಂದ್ರ, ಹಲವು ರಸ್ತೆಗಳು ಇಲ್ಲಿ ಸಂಧಿಸುತ್ತವೆ. ಇದೊಂದು ರೈಲ್ವೆ ಜಂಕ್ಷನ್ ಕೂಡ. ತಿರುಚಿರಾಪಳ್ಳಿ-ಮಧುರೈ ಮತ್ತು ದಿಂಡಿಗಲ್-ಪಾಲಕ್ಕಾಡ್ ರೈಲುಮಾರ್ಗಗಳು ಇಲ್ಲಿ ಕೂಡುತ್ತವೆ. ಇಲ್ಲಿ ಮಧುರೈ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳಿವೆ. ಇಲ್ಲಿಂದ 11 ಕಿಮೀ ದೂರದಲ್ಲಿರುವ ಗಾಂಧೀಗ್ರಾಮ ಒಂದು ಗ್ರಾಮಸೇವಾಶ್ರಮ. ನಗರದ ಜನಸಂಖ್ಯೆ 1,96,619 (2001). (ಎನ್.ಎ.)

**ದಿಗಂಶೀಯ ಪ್ರಕ್ಷೇಪ:** ದಿಕ್ಕುಗಳನ್ನು ಸರಿಯಾಗಿ ನಿರೂಪಿಸುವ ಪ್ರಕ್ಷೇಪಗಳನ್ನು ಈ ಹೆಸರಿನಿಂದ ಕರೆಯುವರು. ನಕ್ಷಾ ಪ್ರಕ್ಷೇಪಗಳ ಕೇಂದ್ರದಿಂದ ಎಲ್ಲಾ ಬಿಂದುಗಳ ದಿಕ್ಕು ಸರಿಯಾಗಿ ಉಳಿಯುವುದು. ಭೂಪಟವನ್ನು ರಚಿಸಬೇಕಾದ ಸ್ಥಾನವನ್ನು ಸ್ಪರ್ಶಿಸುವಂತೆ ಹಾಳೆಯ ಸಮತಲ ಮೇಲ್ಮೈಯನ್ನು ಗೋಳದ ಮೇಲೆ ಇರಿಸಿ ಅಕ್ಷಾಂಶ ಮತ್ತು ರೇಖಾಂಶಗಳ ಜಾಲವನ್ನು ಪಡೆಯುವಕ್ರಮ. (ಆರ್.ಎ.)

**ದಿಬ್ರೂಗಢ:** ಅಸ್ಸಾಂ ರಾಜ್ಯದ ಲಖಿಮ್‍ಪುರ ಜಿಲ್ಲೆಯ ಒಂದು ಪಟ್ಟಣ. ಷಿಲಾಂಗ್ ನಗರದ ಈಶಾನ್ಯಕ್ಕೆ 368 ಕಿಮೀ ದೂರದಲ್ಲಿ, ಬ್ರಹ್ಮಪುತ್ರಾ ನದಿಯ ದಂಡೆಯಲ್ಲಿ, ಉ.ಅ. $27^0 29'$ ಮತ್ತು ಪೂ.ರೇ. $94^0 55'$ ಮೇಲೆ ಇದೆ. ಇದು ಬ್ರಹ್ಮಪುತ್ರಾ ನದಿಯನ್ನು ದಿಬ್ರೂ ನದಿ ಕೂಡುವ ಬಳಿ ಇರುವುದರಿಂದ ಇದಕ್ಕೆ ದಿಬ್ರೂಗಢ ಎಂಬ ಹೆಸರೂ ಬಂದಿದೆ. ಒಂದು ಬದಿಗೆ ನದಿಯೂ ಉಳಿದ ಮೂರು ಬದಿಗಳಲ್ಲಿ ಗುಡ್ಡಬೆಟ್ಟಗಳೂ ಇರುವ ಈ ಪಟ್ಟಣದಲ್ಲಿ ವರ್ಷಕ್ಕೆ 238-280 ಸೆಂಮೀ ಮಳೆಯಾಗುತ್ತದೆ. ಅಸ್ಸಾಮಿನ ತಪ್ಪಲು ಪ್ರದೇಶದಲ್ಲಿರುವ ದಿಬ್ರೂಗಢ ನಿಸರ್ಗ ರಮಣೀಯ ಸ್ಥಳ. ಹಾಗೆಯೇ ಆಯಕಟ್ಟಿನ

ಸ್ಥಳ ಕೂಡ. ಇಲ್ಲೊಂದು ಸೈನಿಕ ಠಾಣೆಯಿದೆ. 1950 ರಲ್ಲಿ ಸಂಭವಿಸಿದ ಭೂಕಂಪದಲ್ಲಿ ಈ ಪಟ್ಟಣ ಹಾನಿಗೆ ಈಡಾಗಿತ್ತು. ಚಹ ತೋಟಗಳ ಆದಾಯದ ಆಕರ್ಷಣೆಯಿಂದಾಗಿ ಇದು ಮತ್ತೆ ಹೊಸ ಪಟ್ಟಣವಾಗಿ ರೂಪುಗೊಂಡಿತು. ಇದರ ಸುತ್ತ ಚಹ, ಅಕ್ಕಿ, ಕಬ್ಬು, ಸೆಣಬು ಬೆಳೆಯುತ್ತವೆ. ಕಲ್ಲಿದ್ದಲು ಗಣಿಗಳೂ ಎಣ್ಣೆಯ ಬಾವಿಗಳೂ ಉಂಟು. ಇಲ್ಲಿಯ ಎಂಡಿ ಮತ್ತು ಮೂಗಾ ರೇಷ್ಮೆ ಪ್ರಸಿದ್ಧವಾಗಿದೆ. ಎಣ್ಣೆ ತೆಗೆಯುವುದು, ಬಿದಿರಿನ ಸರಕು ಮತ್ತು ಬೆತ್ತದ ಸಾಮಾನುಗಳ ತಯಾರಿಕೆ – ಇವು ಇಲ್ಲಿಯ ಇತರ ಕಸಬುಗಳು. ಇದೊಂದು ವಾಣಿಜ್ಯ ಕೇಂದ್ರ. ಕೋಲ್ಕತದಿಂದ ದಿಬ್ರೂಗಢದ ವರೆಗೆ ವರ್ಷದುದ್ದಕ್ಕೂ ಜಲಯಾನ ಸೌಲಭ್ಯವುಂಟು. ಅಸ್ಸಾಂ–ಬಂಗಾಲಗಳನ್ನು ಕೂಡಿಸುವ ರೈಲುಮಾರ್ಗ ದಿಬ್ರೂಗಢದ ಮೂಲಕ ಸಾದಿಯಾವನ್ನು ಸಂಧಿಸುತ್ತದೆ. ಬ್ರಹ್ಮಪುತ್ರಾ ಮತ್ತು ದಿಬ್ರೂ ನದಿಗಳ ಮೂಲಕ ಚಹ ಮತ್ತು ಇತರ ಸರಕುಗಳ ಸಾಗಣೆ ನಡೆಯುತ್ತದೆ. ಈ ಪಟ್ಟಣದ ಆಡಳಿತಕ್ಕೆ ಒಂದು ಪುರಸಭೆ ಇದೆ. ಇಲ್ಲಿ ಕಲೆ, ವಿಜ್ಞಾನ, ವಾಣಿಜ್ಯ ಮತ್ತು ವೈದ್ಯಕೀಯ ಕಾಲೇಜುಗಳಿವೆ. (ಬಿ.ಎ.ಎಸ್.)

**ದಿಲ್ವಾರಾ:** ರಾಜಸ್ಥಾನ ರಾಜ್ಯದಲ್ಲಿ. ನಾಥದ್ವಾರ–ಉದಯಪುರ ರಸ್ತೆಯಲ್ಲಿ ನಾಥದ್ವಾರದಿಂದ 21 ಕಿಮೀ ದೂರದಲ್ಲಿರುವ ಒಂದು ಸ್ಥಳ. ಪ್ರಾಚೀನ ಜೈನ ಆಲಯಗಳ ನಿವೇಶನ. 6 ರಿಂದ 18 ನೆಯ ಶತಮಾನದ ವರೆಗಿನ ಅನೇಕ ವಾಸ್ತು ನಿರ್ಮಾಣಗಳು ಇಲ್ಲಿವೆ. ಇಲ್ಲಿಯ ದೇವಸ್ಥಾನಗಳಲ್ಲಿ ಅನೇಕ ಶಿಲ್ಪ ಕೃತಿಗಳೂ ಚಿತ್ರ ಕಲಾಕೃತಿಗಳೂ ಇವೆ. ಅಮೃತಶಿಲೆಯಲ್ಲಿ ನಿರ್ಮಿಸಲಾದ ವಾಸ್ತು ಹಾಗೂ ಮೂರ್ತಿಶಿಲ್ಪ ಕೃತಿಗಳು ಅಸಾಧಾರಣವಾದಂಥವು. ಇಲ್ಲಿರುವ ಮಂದಿರಗಳ ಪೈಕಿ 11 ನೆಯ ಶತಮಾನದ ಪಿತ್ತಲ್‌ಹಾರ್ ದೇವಾಲಯ, 18 ನೆಯ ಶತಮಾನದ ತೇಜಪಾಲ ದೇವಮಂದಿರ ತುಂಬ ಜೀರ್ಣಾವಸ್ಥೆಯಲ್ಲಿದ್ದರೂ ಇವು ಆ ಕಾಲದ ವಾಸ್ತುಶಿಲ್ಪ ವೈಭವದ ಪ್ರತೀಕಗಳು. ಗಾಳಿ ಮಳೆ ಬಿಸಿಲುಗಳಿಂದ ಸವೆದು, ಪಾಚಿಯೇ ಮುಂತಾದವುಗಳಿಂದ ಕೂಡಿದ್ದರೂ ಇವು ಸರಳತೆ, ಸಂವೇದನಶೀಲತೆ ಹಾಗೂ ಮಾನವೀಯತೆಯ ಅಭಿವ್ಯಕ್ತಿಗಳಾಗಿ ಆ ಕಾಲದ ಭಾರತೀಯ ಕಲೆಯ ಉತ್ತಮ ನಿದರ್ಶನಗಳಾಗಿವೆ. ಸುಮಾರು ಮುನ್ನೂರು ಜೈನ ಮಂದಿರಗಳ ಭಗ್ನಾವಶೇಷಗಳನ್ನೊಳಗೊಂಡ ಈ ಸ್ಥಳಕ್ಕೆ ದೇವಲಪತಾಕ ಎಂಬ ಹೆಸರಿತ್ತು. (ಸಿ.ಕೆ.ಆರ್.)

**ದುರ್ಗಾಪುರ:** ಪಶ್ಚಿಮ ಬಂಗಾಲ ರಾಜ್ಯದಲ್ಲಿ ಬರ್ದ್ವಾನ್ ವಿಭಾಗದ ಬರ್ದ್ವಾನ್ ಜಿಲ್ಲೆಯಲ್ಲಿರುವ ಒಂದು ಪಟ್ಟಣ. ಉ.ಅ. $23^{0}29'$ ಮತ್ತು ಪೂ.ರೇ. $87^{0}20'$ ಮೇಲೆ, ದಾಮೋದರ್ ನದಿತೀರದಲ್ಲಿ ಕೋಲ್ಕತದಿಂದ 171 ಕಿಮೀ ದೂರದಲ್ಲಿದೆ. ಕೋಲ್ಕತ, ಬರ್ದ್ವಾನ್ ಮತ್ತು ಅಸನ್‌ಸೋಲ್‌ಗಳೊಂದಿಗೆ ರಸ್ತೆ ಮತ್ತು ರೈಲ್ವೆ ಸಂಪರ್ಕ ಹೊಂದಿರುವ ದುರ್ಗಾಪುರ ಭಾರತದ ಒಂದು ದೊಡ್ಡ ಉಕ್ಕು ಉತ್ಪಾದನ ಕೇಂದ್ರ. ಉಕ್ಕು ಕಾರ್ಖಾನೆಯಲ್ಲದೆ ಒಂದು ಕಲ್ಲಿದ್ದಲು ಶುದ್ಧೀಕರಣ ಕಾರ್ಖಾನೆ, ಅಲಯ್ ಮತ್ತು ವಿಶಿಷ್ಟ ಉಕ್ಕಿನ ಕಾರ್ಖಾನೆ, ಎರಡು ಶಾಖ ವಿದ್ಯುತ್ ಉತ್ಪಾದನ ಕೇಂದ್ರಗಳು, ಕನ್ನಡಕದ ಗಾಜಿನ ಕಾರ್ಖಾನೆ, ಕಲ್ಲಿದ್ದಲು, ಯಂತ್ರ ಸಾಮಗ್ರಿಗಳ ಕಾರ್ಖಾನೆ, ಇಟ್ಟಿಗೆ ಮತ್ತು ಹೆಂಚು ಕಾರ್ಖಾನೆ ಇವೆ. ಇಲ್ಲಿ ಉತ್ಪಾದಿಸಲಾಗುವ ಕಲ್ಲಿದ್ದಲು ಕಿಟ್ಟದ ಅನಿಲವನ್ನು 175 ಕಿಮೀ ಉದ್ದದ ಕೊಳವೆಯ ಮಾರ್ಗದ ಮೂಲಕ ಕೋಲ್ಕತ್ತಕ್ಕೆ ಒದಗಿಸಲಾಗುತ್ತದೆ. ದುರ್ಗಾಪುರದ ಬಳಿಯಲ್ಲಿ ದಾಮೋದರ ನದಿಯ ಮೇಲೆ ಕಟ್ಟಿರುವ ಕಟ್ಟೆಯಿಂದ ಪಶ್ಚಿಮ ಬಂಗಾಲದ ಜಮೀನಿಗೆ ನೀರಾವರಿ ಸೌಕರ್ಯ ದೊರೆತಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅಂದರೆ 1959 ರಲ್ಲಿ ಇಂಗ್ಲೆಂಡಿನ ನೆರವಿನಿಂದ ಇಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪಿಸಲಾಯಿತು.

ಇಲ್ಲಿ ಬರ್ದ್ವಾನ್ ವಿಶ್ವವಿದ್ಯಾಲಯದ ವ್ಯಾಪ್ತಿಯೊಳಗೆ ಇರುವ ಎಂಜಿನಿಯರಿಂಗ್ ಕಾಲೇಜು ರವೀಂದ್ರ ಭಾರತಿ ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಗೀತ ಶಾಲೆಯೂ ಇವೆ. ಜನಸಂಖ್ಯೆ 4,92,996 (2001). (ಬಿ.ಎ.ಎಸ್.)

**ದೂರ ಸಂವೇದನೆಯ ಮೂಲ ತತ್ತ್ವಗಳು:** ವಸ್ತುವನ್ನೂ ಸ್ಪರ್ಶಿಸದೆ ಅವುಗಳ ಬಗ್ಗೆ ಮಾಹಿತಿಯನ್ನು ಪಡೆಯುವುದೇ ದೂರಸಂವೇದಿ. ಒಂದು ವಸ್ತುವನ್ನು ನಮ್ಮ ಕಣ್ಣಿನಿಂದ ನೋಡಿದಾಗ ಆ ವಸ್ತುವಿನ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ದೂರಸಂವೇದನೆಗೆ ಕೊಡಬಹುದಾದ ಅತ್ಯಂತ ಸರಳ ಉದಾ: ಸೂರ್ಯನ ಬೆಳಕು ವಸ್ತುವಿನ ಮೇಲೆ ಬಿದ್ದಾಗ ಪ್ರತಿಫಲಿಸುತ್ತದೆ. ಪ್ರತಿಫಲಿತ ಬೆಳಕು ವಸ್ತುವಿನ ನೈಜರೂಪವನ್ನು ಪ್ರತಿಬಿಂಬಿಸುತ್ತದೆ. ದರ್ಶನ, ಘ್ರಾಣ, ಶ್ರವಣ, ರುಚಿ ಹಾಗೂ ಸ್ಪರ್ಶ ಮಾನವನಿಗಿರುವ ಐದು ಪಂಚ ಸಂವೇದನೆಗಳು. ಅವುಗಳಲ್ಲಿ ಮೊದಲನೆಯ ಮೂರು ದೂರ ಸಂವೇದನೆಗಳು.

ಈ ಸಂವೇದನೆಗಳನ್ನು ಗ್ರಹಿಸುವ, ಸಂಗ್ರಹಿಸುವ ಉಪಕರಣವೇ ಸಂವೇದಕ (ಸೆನ್ಸರ್). ಈ ಸಂವೇದಕ ಹಾಗೂ ವಸ್ತುಗಳಿಗೆ ಸಂಪರ್ಕ ಕಲ್ಪಿಸುವುದೇ ವಿದ್ಯುತ್ ಕಾಂತೀಯ ವಿಕಿರಣ. ಸೌರಶಕ್ತಿಯೇ ಇವುಗಳ ಮೂಲಾಧಾರ. ಸೂರ್ಯನ ಬೆಳಕು ಶಕ್ತಿಯ ಅತ್ಯಂತ ಮುಖ್ಯವಾದ ಮೂರ್ತ ರೂಪ. ಈ ಶಕ್ತಿ ವಸ್ತುವಿನ ಮೇಲೆ ಬಿದ್ದಾಗ (ಬೆಳಕು) ಅವು ಪ್ರತಿಫಲಿಸುತ್ತವೆ, ಸಂವಹನಗೊಳ್ಳುತ್ತವೆ, ಇಲ್ಲವೇ ವಸ್ತುಗಳಲ್ಲೇ ವಿಲೀನಗೊಳ್ಳುತ್ತವೆ. ಹಾಗಾಗಿ ದೂರ ಸಂವೇದನೆ ಎಂದರೆ ವಸ್ತುವಿನಿಂದ (ಭೂಮಿಯಿಂದ) ಹೊರಹೊಮ್ಮಿದ ಅಥವಾ ಪ್ರತಿಪಲಿಸಿದ ವಿದ್ಯುತ್‌ಕಾಂತೀಯ ವಿಕಿರಣಗಳನ್ನು ಯಾವುದೇ ಭೌತಿಕ ಸ್ಪರ್ಶವಿಲ್ಲದೆ ಸಂವೇದಕಗಳ ಮೂಲಕ ಸಂಗ್ರಹಿಸಬಹುದಾದ ಮಾಹಿತಿ ತಂತ್ರಜ್ಞಾನವಾಗಿದೆ.

ದೂರಸಂವೇದನೆಯಲ್ಲಿ ಅಡಗಿರುವ ಮೂಲ ತತ್ತ್ವಗಳೆಂದರೆ ವಿವಿಧವಸ್ತುಗಳು ಅವುಗಳ ರಚನೆ, ರಾಸಾಯನಿಕ ಹಾಗೂ ಭೌತಿಕ ಗುಣಲಕ್ಷಣಗಳನ್ನಾಧರಿಸಿ ಅವುಗಳು ಬೇರೆ ಬೇರೆ ಪ್ರಮಾಣದ ಶಕ್ತಿಯನ್ನು (ಪ್ರತಿಫಲಿತ ಅಥವಾ ಹೊರಸೂಸುವ) ಬೇರೆ ಬೇರೆ ತರಂಗಾಂತರಗಳಲ್ಲಿ ಪ್ರಕಟಿಸುತ್ತವೆ. ಈ ವಿಕಿರಣಗಳು ವಾತಾವರಣದಲ್ಲಿ ಪ್ರವಹಿಸುವಾಗ ಅವುಗಳ ಸಂಯೋಜನೆಗೆ ಅನುಗುಣವಾಗಿ ವಿಚಲಿಸುತ್ತವೆ, ಅಥವಾ ವಿಲೀನಗೋಳ್ಳುತ್ತವೆ. ಇದರಿಂದಾಗಿ ಸೂರ್ಯನಿಂದ ಹೊರಹೊಮ್ಮಿದ ಈ ಶಕ್ತಿಯ ಸು. ಅರ್ಧಕ್ಕಿಂತ ಹೆಚ್ಚುಭಾಗ ವಾತಾವರಣದಲ್ಲಿಯೇ ಉಳಿಯುತ್ತವೆ. ಉಳಿದ ವಿದ್ಯುತ್ಕಾಂತೀಯ ವಿಕಿರಣಗಳು ಭೂ ಮೇಲ್ಮೈಯನ್ನು ತಲುಪುತ್ತವೆ. ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತುವೂ ಬೇರೆಬೇರೆ ಪ್ರಮಾಣದಲ್ಲಿ ಈ ವಿಕಿರಣಗಳನ್ನು ಪ್ರತಿಫಲಿಸುತ್ತವೆ, ಹೊರಸೂಸುತ್ತವೆ ಅಥವಾ ಹೀರಿಕೊಳ್ಳುತ್ತವೆ. ಉಪಗ್ರಹಗಳಲ್ಲಿ ಅಳವಡಿಸಲಾದ ಸಂವೇದಕಗಳು ಈ ವಿಶಿಷ್ಟವಾದ ವಸ್ತುಗಳ ಗುಣಧರ್ಮಗಳನ್ನು ದಾಖಲಿಸುವುದರಿಂದ, ಅವುಗಳ ಆಕಾರ, ಗಾತ್ರ, ಭೌತಿಕಗುಣಗಳು, ಅವುಗಳ ರಚನೆ ಮತ್ತು ಸ್ಥಾನೀಕರಣದ ಬಗ್ಗೆ ನಿಖರವಾದ ಮಾಹಿತಿಯು ಲಭ್ಯವಾಗುತ್ತದೆ. ಸಂವೇದಕದಲ್ಲಿ ಈ ರೀತಿ ಶೇಖರಿಸಲಾದ ಅಂಕಿ ಅಂಶಗಳನ್ನು ಭೂ ಕೇಂದ್ರಗಳಲ್ಲಿ ಗಣಕಯಂತ್ರದ ಮೂಲಕ ಸಂಗ್ರಹಿಸಲಾಗುತ್ತದೆ. ಅನಂತರ ಅವುಗಳನ್ನು ದರ್ಶನಗಳನ್ನಾಗಿ ಪರಿವರ್ತಿಸಿ ವಿಶ್ಲೇಷಿಸಲಾಗುತ್ತದೆ.

ದೂರಗ್ರಹಿಕೆ ಅಥವಾ ದೂರಸಂವೇದನೆಯ ವಿಧಾನದಲ್ಲಿ ಅನೇಕ ಘಟ್ಟಗಳಿವೆ. ಅವುಗಳೆಂದರೆ ಶಕ್ತಿಯ ಮೂಲ– ಸೌರಶಕ್ತಿಯೇ ಇದರ ಮೂಲವಾಗಿದ್ದು ವಸ್ತುಗಳನ್ನು ಬೆಳಗಿಸಲು ಇವು ಅತ್ಯಂತ ಅವಶ್ಯಕ. ಎರಡನೆಯದು ವಾತಾವರಣದಲ್ಲಿ ಶಕ್ತಿಯ ಪಾರಸ್ಪರಿಕ ಕ್ರಿಯೆ–ವಿದ್ಯುತ್ ಕಾಂತೀಯ ವಿಕಿರಣಗಳು ಸೂರ್ಯನಿಂದ ಭೂಮಿಗೂ ಹಾಗೂ ಭೂಮಿಯಿಂದ ಉಪಗ್ರಹದಲ್ಲಿರುವ ಸಂವೇದಕಗಳಿಗೂ ಚಲಿಸುವಾಗ ವಾತಾವರಣದೊಡನೆ ವರ್ತಿಸುತ್ತವೆ. ವಸ್ತುಗಳೊಡನೆ ವಿಕಿರಣಗಳ ಪಾರಸ್ಪರಿಕ ಕ್ರಿಯೆ–ಭೂಮಿಯ ಮೇಲಿನ ಬೇರೆಬೇರೆ ವಸ್ತುಗಳು ಪ್ರತಿಫಲಿಸುವ, ಹೊರ ಹೊಮ್ಮಿಸುವ ಅಥವಾ ಹೀರಿಕೊಳ್ಳುವ ಶಕ್ತಿಯ ಪ್ರಮಾಣ ಬೇರೆಬೇರೆಯಾಗಿರುತ್ತದೆ. ಇದನ್ನು ವಸ್ತುವಿನ ವಿಶಿಷ್ಟಗುಣ ಎಂದು ಕರೆಯುತ್ತಾರೆ. ಹಾಗಾಗಿ ಭೂಮಿಯ ಮೇಲಿನ ಎಲ್ಲಾ ವಸ್ತುಗಳನ್ನು ಬೇರೆಬೇರೆಯಾಗಿ ವರ್ಗೀಕರಿಸಲು ಸಾಧ್ಯವಾಗುತ್ತದೆ. ದತ್ತಾಂಶಗಳ ಪ್ರಸಾರ ಹಾಗೂ ಪರಿಷ್ಕರಣೆ–ಇಲ್ಲಿ ದರ್ಶಕಗಳಿಂದ ಪಡೆದ ದತ್ತಾಂಶಗಳನ್ನು ಸಾದೃಶ್ಯಗಳನ್ನಾಗಿ ಪರಿವರ್ತಿಸಲಾಗುತ್ತದೆ. ವಸ್ತುಗಳ ಬಗ್ಗೆ ಮಾಹಿತಿಯನ್ನು ಪರಿಷ್ಕರಿಸಿದ ಅನಂತರ ದರ್ಶನಗಳ ಮೂಲಕ ವಿಶ್ಲೇಷಿಸಲಾಗುತ್ತದೆ. ಅಲ್ಲದೆ ಕೊನೆಯದಾಗಿ ದೂರಸಂವೇದನೆಯಿಂದ ಪಡೆಯಲಾದ ದತ್ತಾಂಶಗಳನ್ನು ಮಾಹಿತಿ (ಜ್ಞಾನ)ಗಳನ್ನಾಗಿ ಪರಿವರ್ತಿಸಿ ವಿವಿಧ ಕ್ಷೇತ್ರಗಳಲ್ಲಿ ಇವು (ರೆಸೊಲ್ಯೂಷನ್) ಗಳನ್ನು ಬಳಸಲಾಗುತ್ತದೆ. (ಕೆ.ಎಂ.)

**ದೂರದೊಡನೆ ಕ್ಷೀಣತೆ:** ಇಂದು ಸಾರಿಗೆಯು ಸಾಕಷ್ಟು ಪ್ರಗತಿಯನ್ನು ಹೊಂದಿದ್ದರೂ ವಲಸೆಯ ದೂರ ಅಧಿಕವಾಗಿದ್ದರೂ ಸಮೀಪದ ಸ್ಥಳಗಳಿಗೆ ವಲಸೆ ಹೋಗುವುದೆ ಹೆಚ್ಚು. ಇದನ್ನೇ ದೂರದೊಡನೆ ಕ್ಷೀಣತೆಯ ಕಾರ್ಯ ಎಂದು ಕರೆಯುವರು.

ರ್‍ಯಾವೆನ್‌ಸ್ಟಿನ್ ಬ್ರಿಟನ್ನಿನ ಸಮಾಜಶಾಸ್ತ್ರಜ್ಞ. ಈತ ಬ್ರಿಟನ್ನಿನ ಆಂತರಿಕ ವಲಸೆಯನ್ನು ಕುರಿತು ಸಂಶೋಧನೆಯನ್ನು ನಡೆಸಿ ಕೆಲವು ಸಿದ್ಧಾಂತಗಳನ್ನು ಮಂಡಿಸಿದ. ಇವುಗಳಲ್ಲಿ ವಲಸೆಯ ನಿಯಮಗಳನ್ನು ಕುರಿತು ವಿವರಿಸಿದ್ದಾನೆ. ಈ ನಿಯಮಗಳು ರ್‍ಯಾವೆನ್‌ಸ್ಟಿನ್ಸ್ ಲಾಸು ಆಫ್ ಮೈಗ್ರೇಷನ್ ಎಂದೇ ಪ್ರಸಿದ್ಧಿಯಾಗಿದೆ. ಈತನ ಮೊದಲ ನಿಯಮದ ಪ್ರಕಾರ ಬಹುಪಾಲು ವಲಸೆಗಳು ಅತಿಸಮೀಪದವು. ಹೆಚ್ಚು ವಲಸಿಗರಲ್ಲಿ ಕೆಲವರು ಮಾತ್ರ ಹೆಚ್ಚು ದೂರದವರೆಗೆ ವಲಸೆ ಹೋಗುವುದು ಕಂಡುಬಂದಿದೆ. ಮಾನವನ ಕ್ರಿಯಾಶೀಲ ಚಟುವಟಿಕೆ, ಸಾಂಸ್ಕೃತಿಕ ಲಕ್ಷಣಗಳೂ ಸಹ ಅನುಕೂಲಕರ ಸ್ಥಳಗಳಲ್ಲಿ ಹೆಚ್ಚು ಕೇಂದ್ರಿತವಾಗಿದ್ದು ದೂರ ಹೋದಂತೆ ಕಡಿಮೆಯಾಗುತ್ತವೆ. ನಗರ ಪ್ರದೇಶ, ಮಾರುಕಟ್ಟೆ ಮುಂತಾದವುಗಳಿಗೆ ಸುತ್ತಲಿನ ಪ್ರದೇಶದಿಂದ ಹೆಚ್ಚು ವಲಸೆಯಿರುವುದು. ದೂರವು ಹೆಚ್ಚಿದಂತೆ ವಲಸೆಯ ಪ್ರಮಾಣ ಕಡಿಮೆಯಾಗುವುದು. ಈ ನಿಯಮವನ್ನು ಆಲೇಖ್ಯದಲ್ಲಿ ನಿರೂಪಿಸಬಹುದು. ಎಕ್ಸ್ ರೇಖೆಯ ಮೇಲೆ ವಲಸಿಗರ ಸಂಖ್ಯೆಯನ್ನು ಮತ್ತು ವೈ ರೇಖೆಯ ಮೇಲೆ ದೂರವನ್ನು ರೂಪಿಸಿ ವಲಸಿಗರನ್ನು ಪರಿಶೀಲಿಸಿದಾಗ ಈ ನಿಯಮದ ದೂರದೊಡನೆ ಕ್ಷೀಣತೆಯ ಸ್ಪಷ್ಟ ಚಿತ್ರಣ ತಿಳಿದುಬರುವುದು ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕೇಂದ್ರಭಾಗದಿಂದ ದೂರವು ಹೆಚ್ಚಾದಂತೆ, ವಲಸೆಯ ಪ್ರಮಾಣವು ಕ್ಷೀಣಿಸುತ್ತಾ ಹೋಗುತ್ತದೆ.

1. ಪರ್ಯಾಯವಾಗಿ ಕೇಂದ್ರತೆಯನ್ನು (ಸೆಂಟ್ರಾಲಿಟಿ) ತಿಳಿಯಲು / ಗುರ್ತಿಸಲು ಎರಡೂ ನಗರಗಳು ಹೊಂದಿರುವ ಅಂಗಡಿ ವಹಿವಾಟು ಮುಂಗಟ್ಟುಗಳನ್ನು ಆದರಿಸಿ ನಗರ ಪ್ರದೇಶದಲ್ಲಿ ಹಂಚಿಕೆಯಾಗಿರುವ ವಹಿವಾಟಿನ ಕಾರ್ಯ ಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ ಪ್ರಕಾರವಾಗಿ ಸಾಪೇಕ್ಷ ಕಾರ್ಯಚಟುವಟಿಕೆಯ ಪ್ರಾಮುಖ್ಯತೆಯನ್ನು ಒಂದು ನಿರ್ಧಿಷ್ಟ ಸ್ಥಾನದ ಬಗ್ಗೆ ತಿಳಿದುಕೊಳ್ಳಲು ಸಾಧ್ಯ.

ಈ ಕೆಳಗಿನ ವಿಧಾನವನ್ನು ಬಳಸಿ ಕೇಂದ್ರತ್ವವನ್ನು ಗುರುತಿಸಬಹುದು:

2) ಗುರುತ್ವ ಬಲ ವಿಧಾನ / ಮಾದರಿ: ಭೌತಿಕ ಅಥವಾ ಗುರುತ್ವ ಬಲ ವಿಧಾನವನ್ನು ಭೂಮೇಲ್ಮೈ ಸ್ವರೂಪದ ಅಧ್ಯಯನಕ್ಕೆ ಅಳವಡಿಸಿಕೊಂಡು ಅದರಿಂದ ಸಂಭವನೀಯ ಅಥವಾ ನಿರೀಕ್ಷಿಸುವಂತಹ ಎರಡು ನಗರಗಳ (ಎ ಮತ್ತು ಬಿ) ನಡುವಿನ ದೂರದೊಡನೆ ಘರ್ಷಣೆಯನ್ನು ತಿಳಿಯಬಹುದಾಗಿದೆ.

ಎ ಮತ್ತು ಬಿ ನಗರಗಳ ನಡುವಿನ ಜನರ ಓಡಾಟ (ಚಲನೆ) ಮತ್ತು ಜನಸಂಖ್ಯೆ ಸರಿಹೊಂದುತ್ತಿದೆ ಎಂದು ಭಾವಿಸಿ. ಆದರೆ ಜನಸಂಖ್ಯೆ ಹಾಗೂ ಅಂತರ (ದೂರ) ಸರಿಹೊಂದುತ್ತಿಲ್ಲ, ಹೀಗಿರುವಾಗ ಜನಸಂಖ್ಯೆ ಹೆಚ್ಚಾಗಿದ್ದಾಗ ಕಾರ್ಯಕ್ರಮ, ಚಟುವಟಿಕೆ, ಜನರ ಓಡಾಟ ಇತ್ಯಾದಿಗಳು ಹೆಚ್ಚಾಗಿರುತ್ತವೆ ಎಂದು ಕಲ್ಪಿಸಿಕೊಳ್ಳೋಣ. ಕೇಂದ್ರದ ಕಡೆಗೆ ಮುಂದುವರಿದಂತೆ ಚಲನವಲನಗಳು ತಿರುಗು–ಮುರುಗಾಗಿ ಕಂಡುಬರುತ್ತವೆ, ಹಾಗೂ ಕೇಂದ್ರ ಭಾಗವು ಅಲ್ಪಪ್ರಮಾಣದಲ್ಲಿ ಜನರನ್ನು ಆಕರ್ಷಿಸುತ್ತದೆ. ಇದನ್ನು ಈ ಕೆಳಗಿನ ವಿಧಾನದಿಂದ ತಿಳಿಯಬಹುದು.

$$\text{ಚಲನ ವಲನ : ಎ – ಬಿ.} = \frac{\text{ಎ ನಗರದ ಜನಸಂಖ್ಯೆ} \times \text{ಬಿ ನಗರದ ಜನಸಂಖ್ಯೆ}}{(\text{ಅಂತರ})^2}$$

ನಗರದ ಕೇಂದ್ರಭಾಗ ಬೃಹತ್ ಗಾತ್ರವಾಗಿದ್ದಾಗ ಅಧಿಕ ಪ್ರಮಾಣದ ವೈವಿಧ್ಯತೆಗಳನ್ನು ಹೊಂದಿರುತ್ತದೆ, ಎರಡೂ ನಗರಗಳ ಮಧ್ಯೆ ಅಧಿಕ ಪ್ರಮಾಣದಲ್ಲಿ ಜನರ ಚಲನ ವಲನಗಳು ಏರ್ಪಟ್ಟಿರುತ್ತವೆ. ವಾಣಿಜ್ಯ ವ್ಯವಹಾರಗಳ ಚಲನವಲನಗಳನ್ನು ಪರೀಕ್ಷಿಸಿದಾಗ, ಈ ಪ್ರಮಾಣವು ಒಟ್ಟು ಜನಸಂಖ್ಯೆಗೆ ಅನುಗುಣವಾಗಿ ಹೊಂದಾಣಿಕೆಯಾಗುವುದಿಲ್ಲ. ಆದುದರಿಂದ ನಗರಕ್ಕೆ ಇಂತಹ ಪದ್ಧತಿಯನ್ನು ಡಬ್ಲ್ಯು. ಜೆ. ರಿಲ್ಲೀ ಹೀಗೆ ವಿವರಿಸುತ್ತಾರೆ: ಎರಡು ವಾಣಿಜ್ಯಕೇಂದ್ರಗಳು ವಹಿವಾಟನ್ನು ಮಧ್ಯಂತರ ಸ್ಥಾನಗಳಿಂದ (ಇಂಟರ್‌ಮೀಡಿಯಟ್) ಆಕರ್ಷಿಸುತ್ತವೆ. ಕೇಂದ್ರದ ಪ್ರಮಾಣದ ಗಾತ್ರಕ್ಕೆ ಅನುಗುಣವಾಗಿ ಪ್ರತಿಕೂಲ (ಇನ್‌ವರ್ಸ್) ಪ್ರಮಾಣದಲ್ಲಿ ಮಧ್ಯಂತರದ ಅಂತರವು ಎರಡು ಪಟ್ಟು ಜಾಸ್ತಿಯಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಎರಡು ನಗರಗಳ ವಾಣಿಜ್ಯ ಪ್ರದೇಶವನ್ನು ತಿಳಿಯಲು ಈ ಕೆಳಗಿನ ಸೂತ್ರವನ್ನು ಬಳಸಬಹುದು:

$$\text{ಭೇದನಾ ಬಿಂದು ಎ ಬಿ} = \frac{\text{ಎ ಬಿ ಗಳ ನಡುವಿನ ದೂರ}}{1 + \dfrac{\text{ಎ ನಗರದ ಜನಸಂಖ್ಯೆ}}{\text{ಬಿ ನಗರದ ಜನಸಂಖ್ಯೆ}}}$$

ಭೇದನಾ ಬಿಂದುವನ್ನು ಎರಡು ನಗರಗಳ ಮಧ್ಯಂತರದಲ್ಲಿರುವ ಸಣ್ಣ ಪ್ರಮಾಣದ ವಸತಿಯ ಅಂತರಕ್ಕೆ ಅನುಗುಣವಾಗಿ ಪರಿಗಣಿಸಬೇಕು.

ನಡವಳಿಕೆಯ ಅಥವಾ ಸಂಭವನೀಯ ವಿಧಾನ: ಗುರುತ್ವ ಬಲ ವಿಧಾನಗಳು ಸಾಂಪ್ರದಾಯಿಕ ಮತ್ತು ಸರಳವಾದವು. ಜನರು ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ದೂರವನ್ನು ಕ್ರಮಿಸುವ ಪದ್ಧತಿಯು ಸಮಾನ ರೀತಿಯಲ್ಲಿರುತ್ತದೆ. ಜನರು ಒಂದೇ ಬಗೆಯ ಪದಾರ್ಥವನ್ನು ಕೊಳ್ಳಲು ಅಷ್ಟೇ ದೂರ ಪ್ರಯಾಣ ಮಾಡುತ್ತಾರೆ. ಈ ಪರಿಕಲ್ಪನೆಯು ಸತ್ಯಕ್ಕೆ ಹತ್ತಿರವಾದದ್ದು. ಉದಾ: ಕೆಲವು ಪದಾರ್ಥಗಳಿಗೆ ಬದಲಿ ಆಯ್ಕೆ (ಛಾಯ್ಸ್) ಇರುವುದಿಲ್ಲ. ಅಂಚೆಚೀಟಿ, ಚಪ್ಪಲಿ, ಪ್ರಮುಖ ಬಿಲ್ಲುಗಳನ್ನು ಪಾವತಿಸಬೇಕಾದಾಗ ನಿರ್ದಿಷ್ಟ ಸ್ಥಳಕ್ಕೆ ಹೋಗಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಪದಾರ್ಥ ಖರೀದಿಸಲು ದೂರ ಪ್ರಯಾಣ ಮಾಡಬೇಕಾಗುತ್ತದೆ. ಹೀಗಿರುವಾಗ ಗ್ರಾಹಕ ತನ್ನ ಬೇಡಿಕೆಗೆ ಅನುಗುಣವಾಗಿ ಯಾವ ದಿಕ್ಕಿನಲ್ಲಿ, ಎಷ್ಟು ದೂರ ಕ್ರಮಿಸಬೇಕು ಎಂಬುದಕ್ಕೆ ತಯಾರಿ ನಡೆಸುತ್ತಾನೆ.

ಈ ವಿಧಾನವಾಗಿ ಗ್ರಾಹಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ನಿರ್ದಿಷ್ಟ ನಗರಕ್ಕೆ ಹೋಗಬಹುದು ಅಂತಹ ಸಂಭವನೀಯ ಗ್ರಾಹಕರ ಬಗ್ಗೆ ತಿಳಿಯಲು ಹುಫ್ ರವರ ವಿಧಾನವು ಸೂಕ್ತವಾಗಿದೆ.

ಅದಾಗಿ, (p) ಸಂಭವನೀಯ ಗ್ರಾಹಕನೊಬ್ಬ ತನ್ನ ನಗರದಲ್ಲಿ ಕೆಲವೊಂದು ಪದಾರ್ಥಗಳನ್ನು ಖರೀದಿಸುತ್ತಾನೆ. (1) ಅಥವಾ ಮತ್ತೊಂದು ನಗರದಲ್ಲಿ ಹಲವು ಬಗೆಯ ಅಂಗಡಿ ಮುಂಗಟ್ಟುಗಳಿರುವುದರಿಂದ ಅಲ್ಲಿ ಖರೀದಿಸಬಹುದು. ಈ ಎರಡೂ ನಗರಗಳ ನಡುವಿನ ಸಾಮ್ಯ ಮತ್ತು ತಲುಪುವ ಸುಲಭ ವ್ಯವಸ್ಥೆಗಳನ್ನು ಈ ಕೆಳಕಂಡ ಸೂತ್ರದಿಂದ ತಿಳಿಯಬಹುದು.

$$P = \frac{\dfrac{\text{ಮೊದಲನೆಯ ಕೇಂದ್ರದಲ್ಲಿರುವ ಮಳಿಗೆಗಳ ಸಂಖ್ಯೆ}}{\text{ಅದರ ದೂರ ಅಥವಾ ಅಲ್ಲಿಗೆ ತಲುಪಲು ಬೇಕಾಗುವ ಕಾಲ}}}{\dfrac{\text{ಅಧ್ಯಯನ ಕ್ಷೇತ್ರದಲ್ಲಿರುವ ಒಟ್ಟು ಮಳಿಗೆಗಳ ಸಂಖ್ಯೆ}}{\text{ಒಟ್ಟು ದೂರ ಅಥವಾ ಅಲ್ಲಿಗೆ ತಲುಪಲು ತೆಗೆದುಕೊಳ್ಳುವ ಕಾಲ}}}$$

ಆದುದರಿಂದ

$$P1 = \frac{\dfrac{N1}{\sum T1}}{\dfrac{NX}{\sum TX}}$$

ಇಲ್ಲಿ ಪ್ರಮುಖ ಅಂಶಗಳೆಂದರೆ:

1) ಅಂತರ ಸಮೀಪವಾಗಿದ್ದರೆ ನಿಷ್ಪತ್ತಿಯು ಹೆಚ್ಚಾಗಿರುತ್ತದೆ, ಸರಳವಾಗಿ ಪೃಥಕ್ಕರಣ ಮಾಡಬಹುದಾದ ಪ್ರಮಾಣದ ಅವಧಿಯನ್ನು ಸಾರ್ವಜನಿಕ ಸಾರಿಗೆಯನ್ನು ಪರಿಗಣಿಸಿ ಇತರೆಯನ್ನು ಹೊರತುಪಡಿಸಬೇಕು.

2) ನಗರಗಳ ಜೊತೆ ಹೊಂದಾಣಿಕೆಯನ್ನು ತಿಳಿಯಲು ನಗರ ಪ್ರದೇಶದ ಕೇಂದ್ರ ಭಾಗದಲ್ಲಿರುವ ವಾಣಿಜ್ಯ ಪ್ರದೇಶವನ್ನು ಹೊರತು ಪಡಿಸಬೇಕಾಗುತ್ತದೆ. ನಗರದ ಹೊರ ವಲಯದ ವಾಣಿಜ್ಯ ವಲಯವು, ಹೊರಗಿನವರನ್ನು ಆಕರ್ಷಿಸುತ್ತದೆ. ಹಾಗೂ ಅವು ಸೂಕ್ಷ್ಮ ಮಾರುಕಟ್ಟೆಗಳಾಗಿ ಕಾರ್ಯನಿರ್ವಹಿಸುತ್ತವೆ.

3) ಮೇಲಿನ ಸೂತ್ರವು ವಾಣಿಜ್ಯದ ಗಾತ್ರವನ್ನು ಪರಿಗಣಿಸಿಲ್ಲ. ಕಾರಣ ನಗರಗಳಲ್ಲಿ ಗ್ರಾಹಕರಿಗೆ ನಕಲಿ ಹಾಗೂ ಬದಲಿ ಸವಲತ್ತುಗಳು ದೊರಕುತ್ತದೆ. ಗ್ರಾಹಕನು ತನ್ನ ಅನುಕೂಲಕ್ಕೆ ತಕ್ಕ ಹಾಗೆ ನಕಲಿ / ಬದಲಿ ಪದಾರ್ಥಗಳನ್ನು ಅದೇ ನಗರದಲ್ಲಿ ಅಥವಾ ಮತ್ತೊಂದು ನಗರದಲ್ಲಿ ಖರೀದಿಸುವುದನ್ನು ತಳ್ಳಿಹಾಕುವಂತಿಲ್ಲ. ಆದುದರಿಂದ ಗ್ರಾಹಕನ ಬೇಡಿಕೆ – ಪ್ರಯಾಣಕ್ಕೆ ತಗಲುವ ಅವಧಿ – ಪ್ರಯಾಣದ ಅಂತರ, ದೂರದೊಡನೆ ಕ್ಷೀಣತೆಯನ್ನು ಇಲ್ಲಿ ಪ್ರಮುಖ ಪಾತ್ರವಹಿಸುತ್ತವೆ. (ಎಸ್.ಎಸ್.ಎನ್.)

**ದೂರಪ್ರಾಚ್ಯ:** ಪೂರ್ವ ಮತ್ತು ಆಗ್ನೇಯ ಏಷ್ಯ ಪ್ರದೇಶವನ್ನು ಸೂಚಿಸಲು ಪಶ್ಚಿಮದ ರಾಷ್ಟ್ರಗಳು ಸಾಮಾನ್ಯವಾಗಿ ಬಳಸುವ ಪದ (ಫಾರ್ ಈಸ್ಟ್). ಚೀನ, ಕೊರಿಯ, ಜಪಾನ್, ಟೈವಾನ್ ಮತ್ತು ಮಂಗೋಲಿಯವನ್ನೂ ಕೆಲವು ವೇಳೆ ರಷ್ಯದ ಪೆಸಿಫಿಕ್ ತೀರಪ್ರದೇಶವನ್ನು ಹಾಗೂ ಆಗ್ನೇಯ ಏಷ್ಯವನ್ನು ಒಳಗೊಂಡ ಭೂಭಾಗವನ್ನು ದೂರಪ್ರಾಚ್ಯವೆಂದು ಕರೆಯುವ ವಾಡಿಕೆ ಇದೆ. ಭಾರತ, ಪಾಕಿಸ್ತಾನ, ಶ್ರೀಲಂಕ, ನೇಪಾಲ, ಭೂತಾನ, ಅಫ್ಘಾನಿಸ್ತಾನ ಇವನ್ನೂ ದೂರಪ್ರಾಚ್ಯದಲ್ಲಿ ಸೇರಿಸುವುದುಂಟು. ಆದರೆ ವಾಸ್ತವವಾಗಿ ಇವು ದಕ್ಷಿಣ ಏಷ್ಯ ಎನಿಸಿಕೊಳ್ಳುತ್ತವೆ. ಬಹಳ ಸೀಮಿತ ಅರ್ಥದಲ್ಲಿ ಪೂರ್ವ ಏಷ್ಯ ಮಾತ್ರ ದೂರ ಪ್ರಾಚ್ಯ ಎನಿಸಿಕೊಳ್ಳುತ್ತದೆ. ಪಶ್ಚಿಮ ಯುರೋಪಿನ ಕಡಲ ನೆರೆಯ ರಾಷ್ಟ್ರಗಳು ತಮಗಿಂತ ತುಂಬ ದೂರವಾಗಿದ್ದು ಆದರೆ ವ್ಯಾಪಾರವೇ ಮುಂತಾದ ಕಾರಣಗಳಿಂದಾಗಿ ಹೆಚ್ಚು ಪ್ರಮುಖವೆನಿಸಿದ ಪೂರ್ವ ದೂರದ ಪ್ರದೇಶಗಳನ್ನು ದೂರ ಪ್ರಾಚ್ಯವೆಂದೂ ಏಷ್ಯದ ಪಶ್ಚಿಮ ಭಾಗದಲ್ಲಿರುವ ಇರಾನ್ ಮತ್ತು ನೆರೆಯ ರಾಷ್ಟ್ರಗಳ ಪ್ರದೇಶವನ್ನು ಮಧ್ಯಪ್ರಾಚ್ಯವೆಂದೂ ಮೆಡಿಟರೇನಿಯನ್ ಸಮುದ್ರದ ಪೂರ್ವ ಭಾಗದ ಪ್ರದೇಶವನ್ನು ಸಮೀಪ ಪ್ರಾಚ್ಯವೆಂದೂ ಕರೆದುವು. (ಎಚ್.ಆರ್.ಡಿ.)

**ದೂಳುಮಣ್ಣು:** ಗಟ್ಟಿಗೊಂಡಿರದ ಮತ್ತು ಪದರ ಪದರಾಗಿ ಸೇರಿಕೊಂಡಿರದ ಆದರೆ ಸುಣ್ಣಕಲ್ಲು ಸೇರಿರುವ (ಕಲ್ಕೇರಿಯಸ್) ಹೂಳು (ಲೋಯೆಸ್). ಸರ್ವಸಾಧಾರಣವಾಗಿ ಇದರ ಕಣಗಳು ಒಂದೇ ಗಾತ್ರದವಾಗಿದ್ದು ಬಿಡಿ ಬಿಡಿಯಾಗಿರುತ್ತವೆ. ಮಾಸಲು ಹಳದಿಯಿಂದ ಬೂದುಬಣ್ಣದವರೆಗೆ ದೂಳಿನ ಬಣ್ಣ ಉಂಟು. ಸುಣ್ಣಕಲ್ಲಿನ ಅವಶೇಷಗಳೂ ಪಳೆಯುಳಿಕೆ ಪುಡಿಗಳೂ ಇದರಲ್ಲಿ ಸೇರಿವೆ. ಉತ್ಖನನ ಮಾಡುವಾಗ ದೂಳುಮಣ್ಣಿನ ಸಂಗ್ರಹಗಳು ದೊರೆಯುವುದುಂಟು. ಅಲ್ಲಿ ಇವು ಸ್ಥಿರ ಊರ್ಧ್ವ ಮುಖಗಳನ್ನು ಪ್ರದರ್ಶಿಸುತ್ತವೆ.

ಮುಖ್ಯವಾಗಿ ಉತ್ತರ ಚೀನದ ಷಾನ್‌ಸೀ ಪ್ರಾಂತ್ಯದ ಸು. 5 ಲಕ್ಷ ಚ.ಕಿಮೀ ಗಳಷ್ಟು ವಿಸ್ತಾರವಾದ ಹುಲ್ಲುಗಾವಲು ಪ್ರದೇಶದಲ್ಲಿ 61 ಮೀ ಗಳಿಗೂ ಹೆಚ್ಚು ದಪ್ಪದ ಹೊದಿಕೆಯಂತೆ ದೂಳುಮಣ್ಣು ಹಬ್ಬಿಕೊಂಡಿದೆ. ಏಷ್ಯಖಂಡದ ಮಧ್ಯಭಾಗದ ಗೋಬಿ ಮುಂತಾದ ಮರುಭೂಮಿ ಪ್ರದೇಶಗಳು ಅದರ ಮೂಲ. ಅಲ್ಲಿಂದ ಬಿರುಸಾಗಿ ಹೊರಬೀಸುವ ಗಾಳಿ ಫಲವತ್ತಾದ ಈ ದೂಳುಮಣ್ಣನ್ನು ಒಯ್ದು ತಂದು ಈ ಭಾಗದಲ್ಲಿ ಒಟ್ಟಯಿಸಿದೆ. ಚೀನೀ ರೈತರು ಅನೇಕ ಶತಮಾನಗಳಿಂದಲೂ ಈ ಮಣ್ಣಿನ ಎತ್ತರ ಗುಡ್ಡಗಳನ್ನು ಕೊರೆದು ಮಾಡಿದ ಗುಹೆಗಳಲ್ಲಿ ವಾಸವಾಗಿದ್ದಾರೆ. ಇಲ್ಲಿ ದೂಳುಮಣ್ಣಿನ ಮಾರ್ಗಗಳು ದೀರ್ಘಕಾಲದ ಬಳಕೆಯಿಂದಲೂ ಗಾಳಿ ಮಳೆಗಳ ಹೊಡೆತದಿಂದಲೂ ಕಡಿದಾದ ಕಮರಿಗಳಾಗಿ

ಮಾರ್ಪಟ್ಟಿವೆ. ಈ ಮಣ್ಣಿನ ಹಳದಿ ಬಣ್ಣದ ದೆಸೆಯಿಂದ ಹರಿಯುವ ನದಿಗೆ ಹಳದಿ ನದಿ (ಹ್ಯಾಂಗ್ ಹೋ) ಎಂದೂ ಅದು ಸೇರುವ ಸಮುದ್ರಕ್ಕೆ ಹಳದಿ ಸಮುದ್ರವೆಂದೂ ಹೆಸರು ಬಂದಿವೆ. (ಎಂ.ವಿ.)

**ದೆಹಲಿ:** ಭಾರತದ ಮೂರನೆಯ ದೊಡ್ಡ ನಗರ. ಹಳೆಯ ದೆಹಲಿ ನಗರದ ದಕ್ಷಿಣಕ್ಕಿರುವ ನವದೆಹಲಿ ಭಾರತದ ರಾಜಧಾನಿ. ಭಾರತದ ಉತ್ತರ ಮಧ್ಯದಲ್ಲಿ ಉ. ಅ $28^{0}31'$ ಮತ್ತು ಪೂ. ರೇ. $77^{0}17'$ ಮೇಲೆ, ಯಮುನಾ ನದಿಯ ಪಶ್ಚಿಮ (ಬಲ) ದಂಡೆಯಲ್ಲಿದೆ. ಭಾರತ ಒಕ್ಕೂಟದ ಕೇಂದ್ರಾಡಳಿತ ಪ್ರದೇಶವಾಗಿದೆ (ಯೂನಿಯನ್ ಟೆರಿಟರಿ). ದೆಹಲಿ ಪ್ರದೇಶದ ಜನಸಂಖ್ಯೆ 1,37,82,976. ಇದರಲ್ಲಿ 1,28,19,761 ಜನರು ನಗರಗಳಲ್ಲೂ ಮತ್ತು ಉಳಿದ 9,63,215 ಗ್ರಾಮೀಣ ಪ್ರದೇಶದಲ್ಲೂ ವಾಸಿಸುತ್ತಿದ್ದಾರೆ. ನಗರ ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ 1,27,91,458 ಜನರು ದೆಹಲಿ ನಗರ ಒಂದರಲ್ಲೆ ನೆಲೆಸಿದ್ದಾರೆ.

ಪ್ರ.ಶ.ಪೂ. 1 ನೆಯ ಶತಮಾನದಲ್ಲಿದ್ದ ಮೌರ್ಯ ದೊರೆ ಧಿಲು ಎಂಬಾತ ಈಗಿನ ಕುತುಬ್ ಮಿನಾರಿನ ಬಳಿ ಒಂದು ಪಟ್ಟಣವನ್ನು ನಿರ್ಮಿಸಿ ಅದಕ್ಕೆ ತನ್ನ ಹೆಸರನ್ನೇ ಇಟ್ಟನೆಂದೂ ಅದೇ ಹೆಸರು ಈಗ ದೆಹಲಿ, ದಿಲ್ಲಿ, ಧಿಲ್ಲಿ ಮುಂತಾದ ರೂಪಗಳಲ್ಲಿ ಉಳಿದಿದೆಯೆಂದೂ ಹೇಳಲಾಗಿದೆ. ಹಿಮಾಲಯದಿಂದ ಸು. 160 ಕಿಮೀ ದಕ್ಷಿಣಕ್ಕೆ, ಭಾರತದ ಸಂಚಾರ ಮಾರ್ಗಗಳ ಮಧ್ಯಬಿಂದುವಿನಂತೆ ಇರುವ ದೆಹಲಿಯ ಸ್ಥಾನ ಮಹತ್ತ್ವಪೂರ್ಣವಾದದ್ದು. ಈ ಪ್ರದೇಶದ ಪಶ್ಚಿಮ ದಕ್ಷಿಣ ಅಂಚುಗಳಲ್ಲಿ ಅರಾವಳಿ ಪರ್ವತದ ಎರಡು ಕವಲುಗಳಿವೆ. ಇನ್ನೊಂದು ಅಂಚಿನಲ್ಲಿ ಯಮುನಾ ನದಿ ಹರಿಯುತ್ತದೆ. ಈಗಿನ ದೆಹಲಿ ಪ್ರದೇಶದ ಪಶ್ಚಿಮಕ್ಕಿರುವ ಅರಾವಳಿ ಪರ್ವತದ ಕವಲಿಗೆ ದೆಹಲಿ ಶ್ರೇಣಿಯೆಂದೇ ಹೆಸರುಂಟು.

ದೆಹಲಿ ಪ್ರದೇಶ ಸಮುದ್ರಮಟ್ಟದಿಂದ 210–300 ಮೀ ಎತ್ತರದಲ್ಲಿದೆ. ದೆಹಲಿಯದು ಒಣ ವಾಯುಗುಣ. ಬೇಸಗೆಯಲ್ಲಿ ಕಡು ಸೆಕೆ; ಚಳಿಗಾಲದಲ್ಲಿ ತೀವ್ರ ಚಳಿ, ಮಳೆಗಾಲವನ್ನುಳಿದು ಮಿಕ್ಕ ಋತುಗಳಲ್ಲಿ ಪಶ್ಚಿಮ ಅಥವಾ ವಾಯವ್ಯದಿಂದ ನೆಲದ ಮೇಲಣ ಗಾಳಿ ಬೀಸುತ್ತದೆ. ಮಾರ್ಚಿಯ ನಡುವಿನಿಂದ ಜೂನ್ ಕೊನೆಯವರೆಗಿನದು ಬೇಸಿಗೆ. ಆಗಿನ ಸರಾಸರಿ ಗರಿಷ್ಠ ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ $36^{0}$ಸೆ. ಮತ್ತು $25^{0}$ಸೆ. ಆಗ ಪದೇಪದೇ ಜೋರಾದ ಬಿಸಿಗಾಳಿ ಬೀಸುವುದುಂಟು. ಬೇಸಿಗೆಯ ಅನಂತರ

ಪಾರ್ಲಿಮೆಂಟ್ ಭವನ

ಸೆಪ್ಟೆಂಬರ್ ಕೊನೆಯವರೆಗೆ ಮಳೆಗಾಲ. ಸರಾಸರಿ ಮಳೆ 60 ಸೆಂಮೀ ಅಕ್ಟೋಬರ್ – ನವೆಂಬರ್ ತಿಂಗಳಿನಲ್ಲಿ ವಾಯುಗುಣ ತಂಪಾಗಿರುತ್ತದೆ. ನವೆಂಬರ್ ಕೊನೆಯಿಂದ ಫೆಬ್ರವರಿಯವರೆಗೆ ಚಳಿಗಾಲ. ಸರಾಸರಿ ಗರಿಷ್ಠ ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ $21^{0}$ ಸೆ. ಮತ್ತು $11^{0}$ಸೆ. ಚಳಿ ತಿಂಗಳುಗಳಲ್ಲಿ ಒಮ್ಮೊಮ್ಮೆ ರಾತ್ರಿಯ ವೇಳೆಯಲ್ಲಿ ತಂಪಾದ ನೆಲದ ಮೇಲಣ ಗಾಳಿ ಬಿಸಿಯಾಗಿಯೇ ಉಳಿದು ಕಲ್ಲಿದ್ದಲ ದೂಳು ಹೊಗೆ ಮುಂತಾದವು ತಪ್ಪಿಸಿಕೊಳ್ಳದಂತೆ ತಡೆಹಿಡಿದು, ನಗರದ ವಾತಾವರಣವನ್ನು ಕಲುಷಿತಗೊಳಿಸುವುದುಂಟು.

ದೆಹಲಿ ಪ್ರದೇಶದ ಸ್ವಾಭಾವಿಕ ಸಸ್ಯವರ್ಗ ಮೇಲ್ಮೈಲಕ್ಷಣಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಅರಾವಳಿ ಶ್ರೇಣಿಯಲ್ಲೂ ಅದರ ಬುಡದಲ್ಲೂ ಜಾಲಿ ಮುಂತಾದ ಮುಳ್ಳು ಗಿಡ ಮರಗಳು ಬೆಳೆಯುತ್ತವೆ. ಮಳೆಗಾಲದಲ್ಲಿ ಎಲೆ ಜಾತಿಯ ಸಸ್ಯಗಳು ಸಮೃದ್ಧವಾಗಿರುತ್ತವೆ. ಮೈದಾನ ಪ್ರದೇಶದಲ್ಲಿ ಸಾಗುವಾನಿಯ ಸಿಸಿವೆ ಮರಗಳು ಸಾಮಾನ್ಯವಾಗಿವೆ. ಯಮುನಾ ನದಿಯ ದಂಡೆಯಲ್ಲಿ ಹುಲ್ಲು ಜೊಂಡು ಹೆಚ್ಚು. ಹೆಚ್ಚು ನೆರಳಿರುವ ಬೇವು, ಮಾವು, ಅರಳಿ, ಸಿಸಿವೆ ಮುಂತಾದ ಮರಗಳು ವಿಶೇಷವಾಗಿ ಬೆಳೆಯುತ್ತವೆ. ಹೂ ಬಿಡುವ ಗಿಡಗಳಿಗೂ ದೆಹಲಿ ಪ್ರಸಿದ್ಧ. ಸೇವಂತಿಗೆ, ಫ್ಲಾಕ್ಸ್, ಪುರುಷರತ್ನ (ವೈಯೊಲ) ಮುಂತಾದವು ಚಳಿಗಾಲದ ಹೂಗಳು. ವಸಂತದಲ್ಲಿ ಗುಲಾಬಿ ಹೂ ಬಿಡುತ್ತದೆ. ದೆಹಲಿಯಲ್ಲಿ ಋತುಗಳ ಬದಲಾವಣೆಯನ್ನು ಹೂಗಳು ಸೂಚಿಸುತ್ತವೆ.

ದೆಹಲಿಯ ಪ್ರಾಣಿಜೀವನವೂ ವೈವಿಧ್ಯಮಯವಾದದ್ದು. ಚಿರತೆ, ಕಿರುಬ, ನರಿ, ತೋಳ ಇವು ಕಾಡುಗಳಲ್ಲೂ ಬೆಟ್ಟಗಳಲ್ಲೂ ಇವೆ. ಯಮುನಾ ನದಿಯ ದಂಡೆಯ ಮೇಲೆ ಕಾಡುಹಂದಿ ಇರುವುದುಂಟು. ಕೋತಿಗಳೂ ಇವೆ. ಕವುಜುಗ, ಪಾರಿವಾಳ, ಗಿಳಿ, ಲಾವಕ್ಕಿ ಮುಂತಾದವು ಇಲ್ಲಿಯ ಹಕ್ಕಿಗಳು. ಯಮುನಾ ನದಿಯಲ್ಲಿ ಮೀನುಗಳೂ ಅಪರೂಪವಾಗಿ ಮೊಸಳೆಯೂ ಇವೆ.

ಕುತುಬ್ ಮಿನಾರ್

ಹಳೆಯ ದೆಹಲಿಯ ವಸತಿಗಳು ಅಯೋಜಿತ, ಹೊಸ ದೆಹಲಿಯಲ್ಲಿ ಸರ್ಕಾರ ವಸತಿಯೋಜನೆಯನ್ನು ವ್ಯಾಪಕವಾಗಿ ಕೈಗೊಂಡಿವೆ. ಜೊತೆಗೆ ದೆಹಲಿ ಮುನಿಸಿಪಲ್ ಕಾರ್ಪೋರೇಷನ್, ಹೊಸ ದೆಹಲಿ ಪೌರಸಮಿತಿ, ದೆಹಲಿ ಆಡಳಿತ ಮತ್ತು ಇತರ ನಾನಾ ಸಂಘ ಸಂಸ್ಥೆಗಳು ಇದನ್ನು ನಿರ್ವಹಿಸುತ್ತಿವೆ. ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ನಿರ್ಮಲೀಕರಣ ಇವು ಮುನಿಸಿಪಲ್ ಕಾರ್ಪೋರೇಷನ್ ಕಡ್ಡಾಯವಾಗಿ ನಿರ್ವಹಿಸಬೇಕಾದ ಕಾರ್ಯಗಳು. ನಗರ ಸಾರಿಗೆ, ವಿದ್ಯುದುತ್ಪಾದನೆ ಮತ್ತು ವಿತರಣೆ ಇವು ಕಡ್ಡಾಯವಲ್ಲವಾದರೂ ಕಾರ್ಪೋರೇಷನ್ ಇವನ್ನು ನಿರ್ವಹಿಸುತ್ತಿದೆ. ನೀರು ಸರಬರಾಜು ಮತ್ತು ಗ್ರಾಮಸಾರಿಗೆ ವ್ಯವಸ್ಥೆ, ವಿದ್ಯುತ್ ಸರಬರಾಜು, ಸಾರಿಗೆ – ಇವಕ್ಕೆ ಪ್ರತ್ಯೇಕ ಪರಿನಿಯತ ವ್ಯವಸ್ಥೆಗಳಿವೆ. ನೀರಿಗೆ ಯಮುನಾ ನದಿ ಮುಖ್ಯ ಮೂಲ. ಬೇಸಿಗೆಯಲ್ಲಿ ನದಿ ಬಹುತೇಕ ಬತ್ತಿರುವುದರಿಂದ ತೊಂದರೆಯಾಗುತ್ತದೆ. ನಗರಕ್ಕೆ ವಿದ್ಯುತ್, ಉಷ್ಣವಿದ್ಯುದಾಗಾರಗಳಿಂದಲೂ ಭಾಕ್ರಾ –ನಂಗಲ್ ಜಲವಿದ್ಯುತ್ ಜಾಲದಿಂದಲೂ ಸರಬರಾಜಾಗುತ್ತದೆ. ಅಖಿಲಭಾರತದ ವೈದ್ಯ ವಿಜ್ಞಾನ ಸಂಸ್ಥೆ, ವಿಲಿಂಗ್ಡನ್ ಆಸ್ಪತ್ರೆ, ಸಫ್ದರ್‌ಜಂಗ್ ಆಸ್ಪತ್ರೆ, ಇರ್ವಿನ್ ಆಸ್ಪತ್ರೆ, ಜಿ. ಬಿ. ಪಂತ್ ಆಸ್ಪತ್ರೆಗಳಂತಹ ಪ್ರಮುಖ ಆಸ್ಪತ್ರೆಗಳಿವೆ.

ದೆಹಲಿಯಲ್ಲಿ ಶಾಲಾಕಾಲೇಜುಗಳೂ ಅನೇಕ ವಿಶ್ವವಿದ್ಯಾನಿಲಯಗಳೂ ಇವೆ. ದೆಹಲಿ ವಿಶ್ವವಿದ್ಯಾಲಯ ಹಾಗೂ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯಗಳು ಮುಖ್ಯವಾದವು.

ದೆಹಲಿ ಭಾರತದ ಎಲ್ಲ ದೊಡ್ಡ ನಗರಗಳೊಡನೆ ಸಂಪರ್ಕ ಹೊಂದಿದೆ. ದೇಶದ ದೊಡ್ಡ ರೈಲ್ವೆ ಜಂಕ್ಷನ್‌ಗಳಲ್ಲಿ ದೆಹಲಿಯೂ ಒಂದು. ಹಲವು ರಾಷ್ಟ್ರೀಯ ಹೆದ್ದಾರಿಗಳು ದೆಹಲಿಯಲ್ಲಿ ಸೇರುತ್ತವೆ. ಹಲವು ಅಂತಾರಾಷ್ಟ್ರೀಯ ವಿಮಾನ ಮಾರ್ಗಗಳು ಈ ನಗರದ ಮೂಲಕ ಸಾಗುತ್ತವೆ. ಸಫ್ದರ್ ಜಂಗ್ ಮತ್ತು ಪಾಲಂ ವಿಮಾನ ನಿಲ್ದಾಣಗಳು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಾಗಿವೆ.

ಜಾಮ ಮಸೀದಿ

ನವದೆಹಲಿಯಲ್ಲಿರುವ ಪಾರ್ಲಿಮೆಂಟ್ ಭವನ, ರಾಷ್ಟ್ರಪತಿ ಭವನ, ಸೆಕ್ರೆಟೇರಿಯಟ್ ಮುಂತಾದ ಆಕರ್ಷಕ ಭವನಗಳನ್ನು ಬ್ರಿಟಿಷ್ ಆಡಳಿತದ ಕಾಲದಲ್ಲಿ ಎಡ್ವಿನ್ ಲೂಟನ್ಸ್ ಮತ್ತು ಹರ್ಬರ್ಟ್ ಬೇಕರ್ ಎಂಬ ಖ್ಯಾತ ಶಿಲ್ಪಿಗಳು ನಿರ್ಮಿಸಿದರು. ಇವುಗಳಲ್ಲಿ ಬೌದ್ಧ ವಾಸ್ತು ಶೈಲಿಯ ಚೈತ್ಯ, ಸ್ತೂಪ ಮುಂತಾದವೂ ಪಾಶ್ಚಾತ್ಯ ವಾಸ್ತುಶೈಲಿಯ ಕೆಲವು ವಿನ್ಯಾಸಗಳೂ ಸಮ್ಮಿಶ್ರವಾಗಿದ್ದು ಇವು ಉಪಯುಕ್ತತೆಯ ದೃಷ್ಟಿಯಿಂದ ನಿರ್ಮಿತವಾಗಿವೆ. ಪಾಶ್ಚಾತ್ಯ ಹಾಗೂ ಭಾರತೀಯ ಶೈಲಿಗಳ ಹಿತಮಿತವಾದ ಮೇಳಕ್ಕೆ ಉದಾಹರಣೆಯಾಗಿ

ಸರ್ವೋಚ್ಚ ನ್ಯಾಯಾಲಯದ ಕಟ್ಟಡ ಹಾಗೂ ವಿಜ್ಞಾನ ಭವನಗಳನ್ನು ಗಮನಿಸಬಹುದು. ಬಾಲಭವನ, ಇಂಡಿಯ ಗೇಟ್ ರಾಷ್ಟ್ರೀಯ ವಸ್ತುಸಂಗ್ರಹಾಲಯ, ಲೋಟಸ್ ಟೆಂಪಲ್, ರವೀಂದ್ರ ಭವನ ಮುಂತಾದವುಗಳಲ್ಲಿ ನವ್ಯಶೈಲಿಯ ಛಾಯೆ ಮೂಡಿದೆ.



ಕೆಂಪುಕೋಟೆ

ಯಮುನಾ ನದೀ ತೀರದಲ್ಲಿರುವ ರಾಜ್‌ಘಾಟ್ (ಗಾಂಧಿ ಸಮಾಧಿ), ಶಾಂತಿಘಾಟ್ (ನೆಹರು ಸಮಾಧಿ), ವಿಜಯ ಘಾಟ್ (ಶಾಸ್ತ್ರಿ ಸಮಾಧಿ), ಶಕ್ತಿ ಸ್ಥಳ (ಇಂದಿರಾ ಗಾಂಧಿ ಸಮಾಧಿ), ವೀರಭೂಮಿ (ರಾಜೀವ್ ಗಾಂಧಿ ಸಮಾಧಿ) – ಇವು ಸಾವಿರಾರು ಜನರನ್ನು ಆಕರ್ಷಿಸುತ್ತವೆ. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಅಂತ್ಯದ ವೇಳೆಗೆ ಕಟ್ಟಲಾದ ಲಕ್ಷ್ಮೀನಾರಾಯಣ ಮಂದಿರ ನಾಗರ ಶೈಲಿಯಲ್ಲಿದೆ. ಇದು ಅನೇಕ ಪೌರಾಣಿಕ ವರ್ಣಚಿತ್ರ ಕಥಾನಕಗಳಿಂದಲೂ ಸಂಸ್ಕೃತ ಸೂಕ್ತಿಗಳಿಂದಲೂ ಅಲಂಕೃತವಾಗಿವೆ. ದೆಹಲಿ ಪ್ರದೇಶವು ಕೇಂದ್ರಾಡಳಿತ ರಾಜ್ಯದ ಸ್ಥಾನಮಾನವನ್ನು ಹೊಂದಿದ್ದು ತನ್ನದೇ ಆದ ಸರ್ಕಾರವನ್ನು ಪಡೆದಿದೆ. ವಿದೇಶ ರಾಯಭಾರಿ ಕಛೇರಿಗಳು ಇಲ್ಲಿವೆ. (ಬಿ.ಎ.ಎಸ್.)

**ದೇವನಹಳ್ಳಿ:** ಬೆಂಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ತಾಲ್ಲೂಕು ಬೆಂಗಳೂರು ಜಿಲ್ಲೆಯ ಈಶಾನ್ಯ ಭಾಗದಲ್ಲಿ ಉ. ಅ. $13^0 5'$ – $13^0 22'$ ಮತ್ತು ಪೂ. ರೇ. $77^0 32'$ – $77^0 50'$ ನಡುವೆ ಇದೆ. ದಕ್ಷಿಣ ಪಿನಾಕಿನಿ ನದಿ ಈ ತಾಲ್ಲೂಕನ್ನು ಹೊಸಕೋಟೆ ತಾಲ್ಲೂಕಿನಿಂದ ಬೇರ್ಪಡಿಸುತ್ತದೆ. ತಾಲ್ಲೂಕಿನ ವಿಸ್ತೀರ್ಣ 597.2 ಚ.ಕಿಮೀ. ಜನಸಂಖ್ಯೆ 1,84,872.

ದೇವನಹಳ್ಳಿ ತಾಲ್ಲೂಕಿನ ಮೇಲ್ಮೈ ಸಾಮಾನ್ಯವಾಗಿ ಅಲೆಯಲೆಯಾಗಿ ಏರಿಳಿಯುತ್ತದೆ. ಕಣಿವೆಗಳು ಫಲವತ್ತಾಗಿದ್ದು ಸಾಗುವಳಿಗೆ ಒಳಪಟ್ಟಿವೆ. ಎತ್ತರ ಪ್ರದೇಶಗಳು ಸಣ್ಣ ಪುಟ್ಟ ಮರಗಳಿಂದ ಕೂಡಿವೆ. ಉತ್ತರ ಮತ್ತು ಪಶ್ಚಿಮದಲ್ಲಿ ಕೆಲವು ಸಣ್ಣ ಬೆಟ್ಟಗಳೂ ಬಂಡೆಗಳೂ ಉಂಟು. ಆದರೂ ಒಟ್ಟಿನಲ್ಲಿ ಈ ತಾಲ್ಲೂಕು ಮೈದಾನ ಪ್ರದೇಶ. ತಾಲ್ಲೂಕಿನ ನೆಲ ಸಾಮಾನ್ಯವಾಗಿ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ವಾಯವ್ಯ ಮೂಲೆಯಲ್ಲಿರುವ ದಿಬ್ಬಗೆರೆ ಬೆಟ್ಟ ಈ ತಾಲ್ಲೂಕಿನ ಅತ್ಯಂತ ಎತ್ತರವಾದ (1,173 ಮೀ) ಪ್ರದೇಶ. ದಕ್ಷಿಣದಲ್ಲಿ ಬೆಟ್ಟಹಲಸೂರು ಒಂದು ಮುಖ್ಯ ಬೆಟ್ಟ.

ತಾಲ್ಲೂಕಿನ ಎಲ್ಲ ಭಾಗಗಳಲ್ಲಿ ಸಾಮಾನ್ಯವಾಗಿ ಗ್ರಾನೈಟಿಕ್ ನೈಸ್ ಶಿಲೆ ಇದೆ. ಆದರೆ ಅದು ರಚನೆ, ವಿನ್ಯಾಸ ಮತ್ತು ರೂಪುಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತವೆ. ಲ್ಯಾಟರೈಟ್ ಶಿಲೆಯೂ ಉಂಟು. ಗ್ರಾನೈಟಿಕ್ ನೈಸ್ ಬಂಡೆಗಳಿಂದ ಕಟ್ಟಡಗಳಿಗೆ ಉಪಯುಕ್ತವಾದ ಉತ್ತಮ ಕಲ್ಲುಚಪ್ಪಡಿಗಳು ದೊರೆಯುತ್ತವೆ. ಬೆಂಗಳೂರು ವಿಧಾನಸೌಧವನ್ನು ಕಟ್ಟಲು ಬೆಟ್ಟಹಲಸೂರಿನ ಚಪ್ಪಡಿಕಲ್ಲುಗಳನ್ನೂ ಬಳಸಲಾಗಿದೆ. ಇದರ ಬಳಿಯ ಕೊಯಿರ ಬೆಟ್ಟ ಚಪ್ಪಡಿ ಕಲ್ಲುಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿಂದ ಚಪ್ಪಡಿಕಲ್ಲುಗಳನ್ನು ಪರದೇಶಗಳಿಗೆ ರಫ್ತು ಮಾಡುತ್ತಾರೆ. ಗ್ರಾನೈಟ್ ಮತ್ತು ಲ್ಯಾಟರೈಟ್ ಶಿಲೆಗಳ ಚೂರುಗಳನ್ನು ರಸ್ತೆಗೆ ಜಲ್ಲಿಕಲ್ಲಾಗಿ ಉಪಯೋಗಿಸುತ್ತಾರೆ. ಈ ತಾಲ್ಲೂಕಿನಲ್ಲಿ ಮಣ್ಣು ಸಾಮಾನ್ಯವಾಗಿ ಫಲವತ್ತಾಗಿದ್ದು, 1 ರಿಂದ 3 ಮೀ ಆಳವಾಗಿದೆ. ಈ ತಾಲ್ಲೂಕಿನ ಮಧ್ಯದಲ್ಲಿ ಸಾಗುವ ರಾಷ್ಟ್ರೀಯ ಹೆದ್ದಾರಿಯ ಪೂರ್ವಕ್ಕೆ ಕೆಂಪು ಲ್ಯಾಟರೈಟಿಕ್ ಮಣ್ಣು ಮತ್ತು ಪಶ್ಚಿಮಕ್ಕೆ ಫಲವತ್ತಾದ ಜೇಡಿಮಿಶ್ರಿತ ಮರಳುಮಯ ಮಣ್ಣು ಇವೆ.

ದೇವನಹಳ್ಳಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ದಕ್ಷಿಣೋತ್ತರವಾಗಿ ಅರ್ಕಾವತಿ ಮತ್ತು ದಕ್ಷಿಣ ಪಿನಾಕಿನಿ ನದಿಗಳ ಜಲವಿಭಾಜಕವಿದೆ. ಪೂರ್ವ ಭಾಗ ದಕ್ಷಿಣ ಪಿನಾಕಿನಿ ನದಿಯ ಜಲಾನಯನ ಪ್ರದೇಶ. ಈ ನದಿಗೆ ಸೇರುವ ಮುಖ್ಯ ಉಪನದಿಗಳಿಂದಾಗಿ ದಕ್ಷಿಣ ಪಿನಾಕಿನಿ ಜಲಾನಯನ ಪ್ರದೇಶವನ್ನು ವಿಜಯಪುರ, ದೇವನಹಳ್ಳಿ ಮತ್ತು ಬೂದಿಗೆರೆ ಎಂಬ ಮೂರು ಉಪಜಲಾನಯನ ಪ್ರದೇಶಗಳಾಗಿ ವಿಭಾಗಿಸಬಹುದು. ಈ ತಾಲ್ಲೂಕಿನ ಪೂರ್ವ ಮೇರೆಯಲ್ಲಿ ದಕ್ಷಿಣದ ಕಡೆಗೆ ಹರಿಯುವ ದಕ್ಷಿಣ ಪಿನಾಕಿನಿ ನದಿಗೆ ಪೆನ್ನಾರ್ ಅಥವಾ ಪೊನ್ನೈಯಾರ್ ಎಂದೂ ಹೆಸರುಂಟು. ಈ ನದಿಯ ಜಲಾನಯನ ಪ್ರದೇಶದಲ್ಲಿ ಅಸಂಖ್ಯ ಕೆರೆ ಮತ್ತು ಬಾವಿಗಳಿವೆ. ದಕ್ಷಿಣ ಭಾಗದಲ್ಲಿ ಪೂರ್ವ– ಪಶ್ಚಿಮವಾಗಿ ಹರಡಿರುವ ಕೆರೆಗಳ ಸಾಲುಂಟು. ಅಣ್ಣೇಶ್ವರದ ಹತ್ತಿರ ಇರುವುದು ಈ ತಾಲ್ಲೂಕಿನ ಅತ್ಯಂತ ದೊಡ್ಡ ಕೆರೆ. ವಿಜಯಪುರದ ಪಶ್ಚಿಮಕ್ಕೆ ದೊಡ್ಡ ಕೆರೆಯೊಂದುಂಟು. ಈ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಕುರುಚಲು ಗಿಡಗಳಿಂದ ತುಂಬಿದ ಕಾಡುಗಳಿವೆ. ಅಲ್ಲಲ್ಲಿ ರಾಜ್ಯ ಕಾಡುಗಳು ಮತ್ತು ಕಾಯ್ದಿಟ್ಟ ಕಾಡುಗಳುಂಟು.

ದೇವನಹಳ್ಳಿ ತಾಲ್ಲೂಕಿನ ಸರಾಸರಿ ಉಷ್ಣತೆ ತಿಂಗಳಲ್ಲಿ $27.5^0$ಸೆ. ಮತ್ತು ಅತ್ಯಂತ ಚಳಿಯ ತಿಂಗಳಿನಲ್ಲಿ $20.5^0$ಸೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 70 ಸೆಂಮೀ

ಈ ತಾಲ್ಲೂಕಿನಲ್ಲಿ ಖುಷ್ಕಿ ಬೆಳೆಗಳು ಮುಖ್ಯ. ರಾಗಿ ಪ್ರಮುಖ ಆಹಾರ ಬೆಳೆ. ಜೋಳ, ಅವರೆ, ಕಡಲೆ, ಎಣ್ಣೆಕಾಳು ಉಳಿದ ಬೆಳೆಗಳು. ತಾಲ್ಲೂಕಿನ ಸಾಗುವಳಿ ನೆಲಬಾವಿಗಳಿಂದ ಮತ್ತು ಕೆರೆಗಳಿಂದ ನೀರಾವರಿಗೆ ಒಳಪಟ್ಟಿದೆ. ನೀರಾವರಿ ಜಮೀನಿನಲ್ಲಿ ತರಕಾರಿ ಅತ್ಯಂತ ಮಹತ್ತ್ವದ ವ್ಯಾಪಾರಿ ಬೆಳೆ. ಆಲೂಗೆಡ್ಡೆ, ಮೆಣಸಿನಕಾಯಿ, ಹೂಕೋಸು, ಎಲೆಕೋಸು, ಲೆಟ್ಯೂಸ್ ಸೊಪ್ಪು, ಬಟಾಣಿ, ಈರುಳ್ಳಿ, ಗಜ್ಜರಿ, ಕೆಂಪು ಮೂಲಂಗಿ. ಮೊದಲಾದವು ಮುಖ್ಯ ತರಕಾರಿ ಬೆಳೆಗಳು. ಅಲ್ಲದೆ ಅಲ್ಲಲ್ಲಿ ಕಬ್ಬು, ಬಾಳೆ ಮತ್ತು ಗೋವಿನ ಜೋಳ ಬೆಳೆಯುತ್ತಾರೆ. ಬತ್ತ, ಹಿಪ್ಪುನೇರಳೆ, ದ್ರಾಕ್ಷಿ ಇತರ ಬೆಳೆಗಳು. ದ್ರಾಕ್ಷಿ ಆವತಿ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ದೇವನಹಳ್ಳಿ ತಾಲ್ಲೂಕಿನಲ್ಲಿ ದೇವನಹಳ್ಳಿ ಮತ್ತು ವಿಜಯಪುರ ಎಂಬ ಎರಡು ಪಟ್ಟಣಗಳು ಮತ್ತು 277 ಗ್ರಾಮಗಳಿವೆ. ದೇವನಹಳ್ಳಿ ಪಟ್ಟಣ ಬೆಂಗಳೂರಿನಿಂದ 35 ಕಿಮೀ ಉತ್ತರದಲ್ಲಿ ಬೆಂಗಳೂರು–ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ ಹಾಗೂ ಬೆಂಗಳೂರು ಚಿಕ್ಕಬಳ್ಳಾಪುರ ರೈಲುಮಾರ್ಗದಲ್ಲಿ ಇದೆ. ಜನಸಂಖ್ಯೆ 23,190. ವಿಸ್ತೀರ್ಣ 4.4 ಚ.ಕಿಮೀ. ಪುರಸಭೆ ಇದೆ. ಪ್ರತಿ ಬುಧವಾರ ಇಲ್ಲಿ ದೊಡ್ಡ ಸಂತೆ ನೆರೆಯುತ್ತದೆ. ರಾಗಿ, ತರಕಾರಿ, ಅಡಕೆ ಮತ್ತು ರೇಷ್ಮೆ ಬಟ್ಟೆಗಳ ವ್ಯಾಪಾರಕ್ಕಾಗಿ ಇದು ಪ್ರಸಿದ್ಧ. ಇದು ತಾಲ್ಲೂಕು ಆಡಳಿತ ಕೇಂದ್ರವಾಗಿರುವುದರಿಂದಲೂ ರೈಲುಮಾರ್ಗ ಮತ್ತು ರಾಷ್ಟ್ರೀಯ ಹೆದ್ದಾರಿಯ ಮೇಲಿರುವುದರಿಂದಲೂ ಸುತ್ತಲೂ ಫಲವತ್ತಾದ ನೆಲವೂ ಹಲವಾರು ಬೆಂಗಳೂರಿನ ಹಳ್ಳಿಗಳಿಗೂ ಇರುವುದರಿಂದ ಇದೊಂದು ವ್ಯಾಪಾರ ಕೇಂದ್ರವಾಗಿ ಬೆಳೆಯುತ್ತಿದೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಇಲ್ಲಿ ಸ್ಥಾಪಿತವಾಗಿದೆ.

ವಿಜಯಪುರ ತಾಲ್ಲೂಕಿನ ಇನ್ನೊಂದು ಪಟ್ಟಣ. ಜನಸಂಖ್ಯೆ 29,458.(ಎಸ್.ಎಸ್.ಎನ್.)

**ದೇವರಾಯನದುರ್ಗ:** ತುಮಕೂರು ಜಿಲ್ಲೆಯಲ್ಲಿ ತುಮಕೂರು ತಾಲ್ಲೂಕಿಗೆ ಸೇರಿದ ಊರು. ತುಮಕೂರಿನಿಂದ ಪೂರ್ವದಲ್ಲಿ 14 ಕಿಮೀ ದೂರದಲ್ಲಿದೆ. ಸಮುದ್ರಮಟ್ಟದಿಂದ 1170 ಮೀ ಎತ್ತರವಾಗಿರುವ ಅದೇ ಹೆಸರಿನ ಬೆಟ್ಟದ ಮೇಲೆ ಏಳು ದ್ವಾರಗಳುಳ್ಳ ಕೋಟೆ ಇದೆ.

ಇಲ್ಲಿರುವ ಜಲಗುಂಡಿ ಎಂಬ ಕೊರಕಲಿನಲ್ಲಿ ಮಂಗಲೀ ನದಿಯೂ ಜಯತೀರ್ಥವೆಂಬ ಚಿಕ್ಕ ಚಿಲುಮೆಯಿಂದ ಜಯ ನದಿಯೂ ಹರಿದು ತಪ್ಪಲಲ್ಲಿ ಒಂದಾಗಿ ಜಯಮಂಗಲೀ ನದಿಯಾಗಿ ಮುಂದುವರೆಯುತ್ತದೆ. ಈ ಬೆಟ್ಟದಲ್ಲಿ ಶಿಂಷಾನದಿ ಉಗಮಿಸುವುದೆಂದೂ ಹೇಳುತ್ತಾರೆ. ಪ್ರತಿ ವರ್ಷ ಚೈತ್ರಮಾಸದಲ್ಲಿ ಇಲ್ಲಿ ದುರ್ಗಾನರಸಿಂಹನ ಜಾತ್ರೆ ನಡೆಯುತ್ತದೆ. ಇತ್ತೀಚಿಗೆ ಈ ಸ್ಥಳ ಪ್ರಮುಖ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಯಾಗುತ್ತಿದೆ. *

**ದೇಶ:** ಸಾಮಾನ್ಯವಾಗಿ ನಿರ್ದಿಷ್ಟ ಎಲ್ಲೆಗಳಿಂದ ಕೂಡಿದ ಭೂ ಹಾಗೂ ಜಲಭಾಗವಾಗಿದ್ದು, ಅಲ್ಲಿನ ಜನರು ಒಂದು ಆಡಳಿತ ವ್ಯವಸ್ಥೆಗೆ ಬದ್ಧರಾಗಿರುವ ಪ್ರದೇಶ. ಮೂಲತಃ ಸ್ಟೇಟ್ ಅನ್ನುವ ಪದ ಲ್ಯಾಟಿನ್ ಭಾಷೆಯಿಂದ ಬಂದಿದ್ದು ಅದು ಆಡಳಿತ ಸ್ಥಿತಿಗೆ ಅಥವಾ ಆ ಪ್ರದೇಶದ ಸ್ಥಿತಿಗೆ ಅನ್ವಯವಾಗುವುದು. ಇದು ರಾಜಕೀಯವಾಗಿ ರಚನೆಯಾದ ಒಂದು ಭಾಗ, ಆ ಭಾಗದ ಆಂತರಿಕ ಹಾಗೂ ಬಾಹ್ಯ ಆಡಳಿತ ನಡೆಸಲು ಒಂದು ಸರ್ಕಾರ ಸ್ಥಾಪಿತವಾಗಿರುವ ಪ್ರದೇಶ ಹಾಗೂ ಇಂತಹ ಭೂಭಾಗವು ಪ್ರಪಂಚದಲ್ಲಿ ನಿರ್ದಿಷ್ಟಿತ ಭೂಭಾಗಗಳ ಎಲ್ಲೆ ಮತ್ತು ಅದರದೇ ಆದ ಜನರನ್ನು ರಾಷ್ಟ್ರೀಯರು ಎನ್ನುವ ಅರ್ಥದಲ್ಲಿ ಹೊಂದಿರುತ್ತದೆ. ಅಂತಹ ದೇಶದ ಸರ್ಕಾರ ಆ ದೇಶದ ಪ್ರದೇಶ ಹಾಗೂ ಜನರ ಆಡಳಿತದ ಮೇಲೆ ಸಾರ್ವಭೌಮತ್ವ / ಪರಮಾಧಿಕಾರ ಹೊಂದಿರುತ್ತದೆ. ಉದಾ: ಭಾರತ, ಅಮೇರಿಕ ಸಂಯುಕ್ತ ಸಂಸ್ಥಾನ, ಚೀನ, ಜಪಾನ್, ಜರ್ಮನಿ ಇತ್ಯಾದಿ. ಆದರೆ ಇಲ್ಲಿ ಸ್ಟೇಟ್ ಅಂದರೆ ದೇಶದೊಳಗಿನ ರಾಜ್ಯವೆಂದು ತಿಳಿಯಬಾರದು ಉದಾ: ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ 50 ರಾಜ್ಯ ಅಥವಾ ಸ್ಟೇಟ್‌ಗಳಿವೆ. ಭಾರತದಲ್ಲಿ 29 ರಾಜ್ಯಗಳಿವೆ.

ಇಲ್ಲಿ ಆಂಗ್ಲ ಭಾಷೆಯ ಸ್ಟೇಟ್ ಅನ್ನುವ ಪದ ದೇಶಕ್ಕೆ ಅನ್ವಯಿಸುತ್ತದೆ. ಪ್ರಪಂಚದಲ್ಲಿ ಇಂದು ಸು. 268 ಸಾರ್ವಭೌಮತ್ವವುಳ್ಳ ದೇಶಗಳಿವೆ. ಅವುಗಳಲ್ಲಿ 196 ವಿಶ್ವಸಂಸ್ಥೆಯ ಸದಸ್ಯ ದೇಶಗಳಾಗಿವೆ ಇನ್ನು ಅನೇಕ ದೇಶಗಳು ಇದರ ಸದಸ್ಯತ್ವ ಹೊಂದಿಲ್ಲ.

ದೇಶಗಳಲ್ಲಿ ಕೆಲವು ದೊಡ್ಡವೂ (ರಷ್ಯದಂತಹ ಬೃಹತ್) ಮತ್ತು ಪೆಸಿಫಿಕ್ ಸಾಗರದಲ್ಲಿನ ಕೆಲವು ಪುಟ್ಟ ದ್ವೀಪ ದೇಶಗಳು ಸೇರಿವೆ (ಪಪುವನ್ಯೂಗಿನಿ ಉದಾ: ಶೆಷಲ್ಸ್). ಇನ್ನೂ ಚಿಕ್ಕದಾದ ವ್ಯಾಟಿಕನ್ ಕೇವಲ 44 ಹೆ. ಪ್ರದೇಶದಲ್ಲಿದ್ದು ಅದರದೇ ಆದ ವಿಶಿಷ್ಟತೆಯನ್ನು ಹೊಂದಿದೆ. (ಬಿ.ಇ.)

**ದೊಡ್ಡಬಳ್ಳಾಪುರ:** ಬೆಂಗಳೂರು ಜಿಲ್ಲೆಯ ಗ್ರಾಮಾಂತರ ವಾಯವ್ಯ ಭಾಗದಲ್ಲಿರುವ ಒಂದು ತಾಲ್ಲೂಕು: ಆ ತಾಲ್ಲೂಕಿನ ಆಡಳಿತ ಕೇಂದ್ರ. ದೊಡ್ಡಬಳ್ಳಾಪುರ, ದೊಡ್ಡ ಬೆಳವಂಗಲ ಮಧುರೆ, ಸಾಸಲು ಮತ್ತು ತೂಬಗೆರೆ ಹೋಬಳಿಗಳಿಂದಲೂ 296 ಗ್ರಾಮಗಳಿಂದಲೂ ಕೂಡಿರುವ ಈ ತಾಲ್ಲೂಕಿನ ವಿಸ್ತೀರ್ಣ 790 ಚ.ಕಿಮೀ. ಜನಸಂಖ್ಯೆ 2,68,145 (2001).

ತಾಲ್ಲೂಕಿನ ಉತ್ತರ ಹಾಗೂ ವಾಯವ್ಯದ ಬೆಟ್ಟಗಳ ಪ್ರದೇಶವನ್ನು ಬಿಟ್ಟು ಉಳಿದ ಭಾಗ ಅಲೆಯಲೆಯಾದ ಬಯಲು ನೆಲ. ತಾಲ್ಲೂಕಿನ ಈಶಾನ್ಯದಲ್ಲಿ ನಂದಿದುರ್ಗ ಬೆಟ್ಟದಲ್ಲಿ ಅರ್ಕಾವತಿ ನದಿ ಹುಟ್ಟಿ ನೈರುತ್ಯಾಭಿಮುಖವಾಗಿ ಹರಿಯುತ್ತದೆ. ತಾಲ್ಲೂಕಿನ ಅತ್ಯಂತ ಉತ್ತರ ಭಾಗ ಬಿಟ್ಟು ಇಡೀ ತಾಲ್ಲೂಕಿನ ಮಳೆನೀರನ್ನು ಕೂಡಿಸಿಕೊಂಡು ಹರಿಯುವ ಈ ನದಿಯಿಂದ ಅದರ ಪಾತ್ರದ ಉದ್ದಕ್ಕೂ ಹಲವು ಕೆರೆಗಳಿಗೆ ನೀರು ತುಂಬುತ್ತದೆ. ತಾಲ್ಲೂಕಿನ ಉತ್ತರಭಾಗ ಉತ್ತರ ಪೆನ್ನಾರ್ ಮತ್ತು ಅದರ ಉಪನದಿಗಳ ಜಲಾನಯನ ಪ್ರದೇಶ.

ತಾಲ್ಲೂಕಿನದು ಹಿತಕರವಾದ ವಾಯುಗುಣ, ಇಲ್ಲಿ ಅಂಥ ಕಾಡುಗಳೇನೂ ಇಲ್ಲ. ವಾಯವ್ಯಭಾಗದಲ್ಲಿ ಕುರುಚಲು ಮರಗಳು ಬೆಳೆದಿವೆ. ಮಾಕಳಿದುರ್ಗದ ಬಳಿ ಅರಣ್ಯ ಬೆಳೆಸಲಾಗಿದೆ. ತಾಲ್ಲೂಕು ಸಾಮಾನ್ಯವಾಗಿ ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು. ರಾಗಿ, ಜೋಳ ಮೊದಲಾದ ಖುಷ್ಕಿ ಬೆಳೆಗಳಿಗೆ ಇದು ಉಪಯುಕ್ತ, ತಾಲ್ಲೂಕಿನ ಉತ್ತರ ಹಾಗೂ ವಾಯವ್ಯ ಭಾಗಗಳಲ್ಲಿ ನೆಲ ಅಷ್ಟು ಫಲವತ್ತಾಗಿಲ್ಲ. ತಾಲ್ಲೂಕಿನಲ್ಲಿ ಕಪ್ಪು ಮಣ್ಣು ಬಲು ಅಪರೂಪ. ತಾಲ್ಲೂಕಿನ ಮುಖ್ಯ ಬೆಳೆಗಳು ರಾಗಿ ಮತ್ತು ಜೋಳ, ಹೊಗೆಸೊಪ್ಪು ಆಲೂಗೆಡ್ಡೆ.

ಘಾಟಿ ಸುಬ್ರಹ್ಮಣ್ಯ ಈ ತಾಲ್ಲೂಕಿನ ಪ್ರಸಿದ್ಧ ಯಾತ್ರಾಸ್ಥಳ. ದೊಡ್ಡ ಬಳ್ಳಾಪುರ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಜನಸಂಖ್ಯೆ 71,509. ಇದೊಂದು ಪ್ರಮುಖ ನೆಯ್ಗೆ ಕೇಂದ್ರ. ಇಲ್ಲಿ ಸು. 8,000 ಮಗ್ಗಗಳಿವೆ. 1932ರಿಂದ ಈಚೆಗೆ ಶಕ್ತಿಚಾಲಿತ ಮಗ್ಗಗಳೂ ಸ್ಥಾಪಿತವಾಗುತ್ತಿವೆ. ಇಲ್ಲಿ ತಯಾರಾಗುವ ಹತ್ತಿ ಮತ್ತು ರೇಷ್ಮೆ ಸೀರೆಗಳು ಬಹಳ ಪ್ರಸಿದ್ಧವಾಗಿದೆ. ಚಪ್ಪಡಿಕಲ್ಲುಗಳು ಇಲ್ಲಿಂದ ಇತರ ಕಡೆಗಳಿಗೆ ಸಾಗುತ್ತದೆ. ಅಗರಬತ್ತಿ ಇಲ್ಲಿಯ ಇನ್ನೊಂದು ಉತ್ಪಾದನೆ. ಗುರುವಾರ ಇಲ್ಲಿ ಸಂತೆ ನಡೆಯುತ್ತದೆ.

ಇಲ್ಲಿ ಒಂದು ಪುರಸಭೆ ಇದೆ. ಲೋಕಸೇವಾನಿರತ ಕೊಂಗಾಡಿಯಪ್ಪ ವಿದ್ಯಾಸಂಸ್ಥೆ ಒಂದು ಪ್ರೌಢಶಾಲೆಯನ್ನು, ಕಾಲೇಜನ್ನೂ ನಡೆಸುತ್ತಿದೆ. ಒಂದು ಪುರಸಭಾ ಕಾಲೇಜೂ ಉಂಟು. *

**ದೌಲತಾಬಾದ್:** ಮಹಾರಾಷ್ಟ್ರ ರಾಜ್ಯದ ಔರಂಗಾಬಾದ್ ಜಿಲ್ಲೆಯಲ್ಲಿ, ಔರಂಗಾಬಾದ್‌ನಿಂದ ಸು. 14.4 ಕಿಮೀ ದೂರದಲ್ಲಿರುವ ಒಂದು ಇತಿಹಾಸ ಪ್ರಸಿದ್ಧ ಸ್ಥಳ. ಮಧ್ಯಯುಗದಲ್ಲಿ ಇದು ದೇವಗಿರಿಯೆಂದು ಖ್ಯಾತಿ ಪಡೆದಿತ್ತು. ಜೈನ ಗ್ರಂಥವೊಂದರಲ್ಲಿ ಇದನ್ನು ಸುರಗಿರಿ ಎಂದು ಹೆಸರಿಸಲಾಗಿದೆ. ದೇವಗಿರಿ 12ನೆಯ ಶತಮಾನದ ಕೊನೆಯಲ್ಲಿ ರಾಜಧಾನಿಯಾಗುವ ಸುಯೋಗ ಪಡೆಯಿತು. (ಎಸ್.ಆರ್.)

**ದ್ರಾವಿಡ ಭಾಷೆಗಳು:** ದ್ರಾವಿಡ ಜನಾಂಗದ ಭಾಷೆ. ಪ್ರಪಂಚದಲ್ಲಿನ ಹಿರಿಯ ಭಾಷಾ ಪರಿವಾರಗಳ ಶ್ರೇಣಿಯಲ್ಲಿ ಇದಕ್ಕೆ 5ನೆಯ ಸ್ಥಾನವಿದೆ. ಭಾರತಕ್ಕೆ ಹೊರಗಿನಿಂದ ಬಂದ ಈ ದ್ರಾವಿಡ ಜನಾಂಗ ಭಾರತವನ್ನು ಹೊಕ್ಕ ಮೇಲೆ ಅನುಕೂಲ ಸಿಕ್ಕ ಕಡೆಗಳಲ್ಲಿ ನೆಲೆಸಿದರು. ಅವರಲ್ಲೇ ಗುಂಪುಗಳುಂಟಾದವು. ಭೌಗೋಳಿಕ, ಸಾಮಾಜಿಕ, ಭಾಷಿಕ, ಕಾರಣಗಳಿಂದಾಗಿ ಅವರು ಆಡುತ್ತಿದ್ದ ಭಾಷೆಯಲ್ಲಿ ಪ್ರಭೇದಗಳುಂಟಾದುವು. ಮೊದಲು ಬಂದ ದ್ರಾವಿಡ ಜನಾಂಗದವರು ಆಡುತ್ತಿದ್ದ ದ್ರಾವಿಡ ಭಾಷೆಯನ್ನು ಮೂಲ ದ್ರಾವಿಡ ಭಾಷೆಯೆಂದು ನಿರ್ದೇಶಿಸುವುದು ವಾಡಿಕೆ. ಮೂಲಜನಾಂಗ ಪಂಗಡ ಪಂಗಡಗಳಾಗಿ ವಿಂಗಡವಾದಂತೆ ಮೂಲಭಾಷೆಯೂ ಭಿನ್ನಭಿನ್ನ ಭಾಷೆ–ಉಪಭಾಷೆಗಳಾಗಿ ಒಡೆದುಕೊಂಡವು. ಮೂಲಬೇರಿನಿಂದ ಹೀಗೆ ಬೇರೆಯಾಗಿ ಕವಲಾದ ಭಾಷೆಗಳೇ ದ್ರಾವಿಡ ಭಾಷೆಗಳು. ದ್ರಾವಿಡ ಗುಂಪುಗಳಲ್ಲಿ ಸಂಪರ್ಕ ತಗ್ಗಿದಂತೆ, ವ್ಯತ್ಯಾಸಗಳೂ ಹೆಚ್ಚತೊಡಗಿದುವು.

ಈಗ ಖಚಿತವಾಗಿ ತಿಳಿದುಬಂದಿರುವ 25 ದ್ರಾವಿಡ ಭಾಷೆಗಳಲ್ಲಿ ಒಂದೊಂದು ಭಾಷೆಗೆ ಸೇರಿದ ಉಪಭಾಷೆಗಳೂ ಇವೆ. ಈ ದ್ರಾವಿಡ ಭಾಷೆಗಳು ಒಂದು ಸ್ವತಂತ್ರ ಭಾಷಾ ಪರಿವಾರದವೆಂದು ಪರಿಗಣಿತವಾಗಿವೆ. ದ್ರಾವಿಡ ಭಾಷೆಗಳು ಪ್ರಮುಖವಾಗಿ ಒಟ್ಟಿಗೆ ಒತ್ತಾಗಿ ಕಾಣಿಸುವುದು ದಕ್ಷಿಣ ಭಾರತದಲ್ಲಿ. ಮಧ್ಯ ಮತ್ತು ಉತ್ತರ ಭಾರತದ ವಿವಿಧ ಪ್ರದೇಶಗಳಲ್ಲೂ ಕೆಲವು ದ್ರಾವಿಡ ಭಾಷೆಗಳು ವ್ಯವಹಾರದಲ್ಲಿವೆ.

ಈಗ ಪ್ರಚಲಿತದಲ್ಲಿರುವ 25 ದ್ರಾವಿಡ ಭಾಷೆಗಳು ಕನ್ನಡ, ತೆಲುಗು, ತಮಿಳು, ಮಲೆಯಾಳಂ, ತುಳು, ಕೊಡಗು, ಮಾಲ್ತೊ, ಬ್ರಾಹುಇ, ಕುರುಖ್, ಒಲ್ಲಾರಿ, ಗದಬ, ಪೆಂಗೊ, ಕೊಯ, ಬಡಗ, ಗೋಂಡಿ, ಕೊಂಡ, ಕುಯಿ, ಕುವಿ, ಪಾರ್ಜಿ, ಕೋಲಾಮಿ, ಕೊರಗ, ನಾಯ್ಕಿ, ತೊದ, ಕೋತ, ಮಂಡ. ಇವುಗಳಲ್ಲಿ ಮೊದಲ ನಾಲ್ಕು ಭಾಷೆಗಳು ಸಾಹಿತ್ಯಕ ಭಾಷೆಗಳು. ಈ ಭಾಷೆಗಳಿಗೆ ಸಾಕಷ್ಟು ಪ್ರಾಚೀನವಾದ ಲಿಖಿತ ಸಾಹಿತ್ಯವಿದೆ. ಇವುಗಳಿಗೆ ಮೊದಲಿಂದಲೂ ತಮ್ಮದೇ ಆದ ಲಿಪಿ ಕೂಡ ಇದೆ. ತುಳು ಮತ್ತು ಕೊಡವ ಭಾಷೆಗಳು ಲಿಪಿರಹಿತ ಭಾಷೆಗಳಾದರೂ ಶ್ರುರೂಪಿಯಾದ ಶ್ರವ್ಯ ಸಾಹಿತ್ಯ ಉಳಿದುಬಂದಿರುವುದರಿಂದ ಇವನ್ನು ಸಾಹಿತ್ಯಕ ದ್ರಾವಿಡ ಭಾಷೆಗಳ ಜೊತೆಗೆ ಸೇರಿಸುವುದು ರೂಢಿ.

ಇನ್ನುಳಿದ ಹತ್ತೊಂಬತ್ತು ಭಾಷೆಗಳನ್ನು ಶ್ರವಣ ಭಾಷೆಗಳೆಂದು ನಿರ್ದೇಶಿಸಿದ್ದಾರೆ. ಇವನ್ನು ಅಸಂಸ್ಕೃತ ಅಥವಾ ಲಿಪಿರಹಿತ ಭಾಷೆಗಳೆಂದೂ ಕರೆಯುತ್ತಾರೆ. (ಎಚ್.ಪಿ.ಎನ್.)

**ದ್ರಾವಿಡರು:** ದ್ರಾವಿಡರು ಭಾರತದ ಮೂಲನಿವಾಸಿಗಳೆಂದೂ ಮಧ್ಯ ಏಷ್ಯದಿಂದ ಬಂದ ಆರ್ಯರು ಇವರನ್ನು ಸೋಲಿಸಿ, ದಕ್ಷಿಣಕ್ಕೆ ಅಟ್ಟಿದರೆಂದೂ ಆದ್ದರಿಂದ ಉತ್ತರ ಭಾರತದ ಸಂಸ್ಕೃತಿ ಆರ್ಯರದಾಯಿತೆಂದೂ ದಕ್ಷಿಣದಲ್ಲಿ ದ್ರಾವಿಡ ಸಂಸ್ಕೃತಿ ಉಳಿಯಿತೆಂದೂ ಬಹುಕಾಲ ಇತಿಹಾಸದ ಅಭಿಪ್ರಾಯವಾಗಿತ್ತು. ಆರ್ಯರು ಉತ್ತಮರು, ದೃಢಕಾಯರು, ಸುಸಂಸ್ಕೃತರು. ದ್ರಾವಿಡರಾದರೋ ಕಪ್ಪುಬಣ್ಣದವರು, ಕುಳ್ಳರು ಮತ್ತು ಕೆಳಮಟ್ಟದ ಸಂಸ್ಕೃತಿಯಿದ್ದವರು. ಆದ್ದರಿಂದಲೇ ಆರ್ಯರು ಅವರನ್ನು ಗೆಲ್ಲುವುದು ಸಾಧ್ಯವಾಯಿತು. ಅಲ್ಲದೆ ತಮ್ಮ ಸಂಸ್ಕೃತಿಯನ್ನು ಭಾರತದಲ್ಲಿ ಹರಡಲು ಸುಲಭವಾಯಿತು. ದ್ರಾವಿಡರು ಆರ್ಯರ ದಾಸರಾದರು, ಆರ್ಯ ಸಂಪರ್ಕದಿಂದ ದ್ರಾವಿಡರು ನಾಗರಿಕರಾದರು– ಹೀಗೆಂದು ಬಹುಕಾಲ ವಿದ್ವಾಂಸರು ತಿಳಿದಿದ್ದರು.

ಆದರೆ 1933ರಲ್ಲಿ ಹಟನ್ ಎಂಬ ವಿದ್ವಾಂಸ ಈ ವಾದವನ್ನು ಅಲ್ಲಗೆಳೆದು, ಭಾರತದಲ್ಲಿ ಮೂಲವಾಸಿಗಳು ಯಾರೂ ಇರಲಿಲ್ಲವೆಂದೂ ಎಲ್ಲರೂ ಹೊರಗಿನಿಂದ ಬಂದ ಗುಂಪುಗಳೇ ಆಗಿವೆಯೆಂದೂ ಅವರನ್ನು ಎಂಟು ಗುಂಪುಗಳನ್ನಾಗಿ ವಿಂಗಡಿಸಬಹುದೆಂದೂ ಅಭಿಪ್ರಾಯಪಟ್ಟ. ಈ ಎಂಟು ಗುಂಪುಗಳು ಭಾರತಕ್ಕೆ ಬಂದು ವಿವಿಧ ಪ್ರದೇಶಗಳಲ್ಲಿ ನೆಲಸಿ ತಮ್ಮ ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಬೆಳೆಸಿಕೊಂಡರು; ಅವರಲ್ಲಿ ನಾರ್ಡಿಕ್ ಮೂಲಕ್ಕೆ ಸೇರಿದ ವೇದಕಾಲದ ಆರ್ಯರು ಮತ್ತು ಮೆಡಿಟರೇನಿಯನ್ ಬುಡಕಟ್ಟಿಗೆ ಸೇರಿದ ದ್ರಾವಿಡರು ಮುಖ್ಯರಾದವರು. ಈ ಬಗೆಗಿನ ವಾದವಿವಾದಗಳು ಈಗಲೂ ಮುಂದುವರಿದಿವೆ. (ಕೆ.ಟಿ.ಆರ್.)

**ದ್ವಂದ್ವ ಆರ್ಥಿಕತೆ:** ಒಂದು ಭೌಗೋಳಿಕ ಪ್ರದೇಶದಲ್ಲಿ ಸಹ ಅಸ್ತಿತ್ವದಲ್ಲಿರುವ ಎರಡು ಪ್ರತ್ಯೇಕ ಅಥವಾ ವಿಶಿಷ್ಟ ಅರ್ಥ ವ್ಯವಸ್ಥೆಯನ್ನು ಹೊಂದಿರುವ ಆರ್ಥಿಕತೆ. ಆಧುನಿಕ ಮತ್ತು ಸಾಂಪ್ರದಾಯಿಕ ಆರ್ಥಿಕತೆಗಳೆರಡರ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಭಾರತದಂತಹ ಅನೇಕ ವಿಕಾಸಶೀಲ ದೇಶಗಳು ದ್ವಂದ್ವ ಆರ್ಥಿಕತೆಯನ್ನು ಹೊಂದಿರುತ್ತವೆ. ಒಂದು ದೇಶದ ಕೆಲವು ಭಾಗಗಳಲ್ಲಿ ಸಾಂಪ್ರದಾಯಿಕ ಆರ್ಥಿಕತೆ ಮತ್ತು ಇನ್ನುಳಿದ ಭಾಗಗಳಲ್ಲಿ ಪ್ರಗತಿಶೀಲ ಆರ್ಥಿಕತೆಗಳು ಕಂಡು ಬರುತ್ತವೆ. ಅವು ಅನುಕ್ರಮವಾಗಿ ಅಭಿವೃದ್ಧಿ ಸೀಮಿತ ಮತ್ತು ಅಭಿವೃದ್ಧಿಶೀಲವಾಗಿರುತ್ತವೆ. ಇವೆರಡೂ ಆರ್ಥಿಕತೆಗಳ ಸೀಮೆಗಳನ್ನು ಅಭಿವೃದ್ಧಿಪ್ರಕ್ರಿಯೆಗಳು ಗೊತ್ತುಪಡಿಸುತ್ತವೆ. ಬ್ರೂಕ್‌ಫೀಲ್ಡ್‌ನ (1975) ಮತಾನುಸಾರ ಅನೇಕ ಅಭಿವೃದ್ಧಿಶೀಲ ಬೃಹತ್ ರಾಷ್ಟ್ರಗಳ ಆರ್ಥಿಕತೆಗಳು ಎರಡು ಭಾಗಗಳಲ್ಲಿ ಸಂಘಟಿತವಾಗಿರುತ್ತವೆ. ಅಂದರೆ ಅವುಗಳಲ್ಲಿ ದ್ವಂದ್ವವಾದ ಅಸ್ತಿತ್ವದಲ್ಲಿರುತ್ತದೆ. ಅಥವಾ ತಾಂತ್ರಿಕ ದ್ವಂದ್ವವಾದ ಪ್ರಚಲಿತವಿರುತ್ತದೆ. ಸಾಂಪ್ರದಾಯಿಕ ಆರ್ಥಿಕತೆ ಕೃಷಿ ಅಥವಾ ಚಿಕ್ಕ ಕೈಗಾರಿಕೆಗಳನ್ನು ಒಳಗೊಂಡಿರುತ್ತದೆ. ಅದು ವ್ಯತ್ಯಾಸಾತ್ಮಕ ತಾಂತ್ರಿಕ ಉತ್ಪಾದನಾ ಗುಣಾಂಕ ಮತ್ತು ಶ್ರಮ ಪ್ರಧಾನ ಉತ್ಪಾದನಾ ವಿಧಾನಗಳನ್ನು ಹೊಂದಿರುತ್ತದೆ. ಆದರೆ ಆಧುನಿಕ ಆರ್ಥಿಕತೆ ದೊಡ್ಡ ಕೈಗಾರಿಕೆ, ಸ್ಥಿರ ತಾಂತ್ರಿಕ ಉತ್ಪಾದನಾ ಗುಣಾಂಕ ಮತ್ತು ಬಂಡವಾಳ ಪ್ರಧಾನ ಉತ್ಪಾದನಾ ವಿಧಾನಗಳನ್ನು ಹೊಂದಿರುತ್ತದೆ. ಕೃಷಿ ಮತ್ತು ಕೈಕಸಬುಗಳಲ್ಲಿ ನಿಧಾನ ತಾಂತ್ರಿಕ ಪ್ರಗತಿ ಹಾಗೂ ಕೈಗಾರಿಕಾ ವಲಯದಲ್ಲಿ ತೀವ್ರ ತಾಂತ್ರಿಕ ಪ್ರಗತಿ ಕಂಡು ಬರುತ್ತವೆ. ಎರಡೂ ವಲಯಗಳಲ್ಲಿ ಕೂಲಿಯ ದರ ಇತ್ಯಾದಿಗಳಲ್ಲಿ ಅಪಾರ ಅಸಮಾನತೆಗಳು ಕಂಡುಬರುತ್ತವೆ.

ಮಿಲ್ಟನ್ ಸಾಂಟೋಸ್ (1979) ಅವರ ಅಭಿಮತದಂತೆ ದ್ವಂದ್ವ ಆರ್ಥಿಕತೆಯಲ್ಲಿ ಉತ್ಪಾದನೆ ಮತ್ತು ವಿನಿಮಯಗಳ ಎರಡು ಸಂಚಾರ ಮಾರ್ಗಗಳು ಗೋಚರವಾಗುತ್ತವೆ. ಒಂದು ವ್ಯವಸ್ಥೆಯಲ್ಲಿ ಹೆಚ್ಚು ಬೇಡಿಕೆಯ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ಪಾದಿಸಲು ವಿದೇಶಿ ಬಂಡವಾಳ ತೊಡಗಿಸುವುದರ ಪರಿಣಾಮದಿಂದ ಕೆಲವೊಂದು ಆರ್ಥಿಕ ಚಟುವಟಿಕೆಗಳು

ಅಭಿವೃದ್ಧಿ ಹೊಂದುತ್ತವೆ. ಆರ್ಥಿಕ ಬಂಡವಾಳ ಹೂಡಿಕೆ, ವ್ಯಾಪಕ ವ್ಯಾಪಾರ ಮತ್ತು ವಾಣಿಜ್ಯ ವಹಿವಾಟು ಈ ವ್ಯವಸ್ಥೆಯ ಪ್ರಮುಖ ಲಕ್ಷಣಗಳು. ಆದರೆ ಆರ್ಥಿಕ ಕಾರ್ಮಿಕರು, ಸ್ಥಳೀಯ ಸೇವೆ, ವಸ್ತುಗಳ ವಿನಿಮಯ ಮತ್ತು ಸೀಮಿತ ವ್ಯಾಪಾರ ಮತ್ತೊಂದು ವ್ಯವಸ್ಥೆಯ ಪ್ರಮುಖ ಲಕ್ಷಣಗಳು. ಇದನ್ನು ಬಜಾರ್ ಆರ್ಥಿಕತೆ ಎಂದು ಕರೆಯುವರು.

ಜೆ.ಎಚ್.ಬೊಯಕೆ (1953) ಇಂಡೋನೇಷ್ಯನ್ ಸಮಾಜ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಎಂಬ ಎರಡು ಪ್ರತ್ಯೇಕ ಸಂಸ್ಕೃತಿಗಳಲ್ಲಿ ವಿಂಗಡಿಸಲ್ಪಟ್ಟಿತೆಂದು ವಾದಿಸಿದ. ಈ ಎರಡೂ ಸಂಸ್ಕೃತಿಗಳು ರಚನಾತ್ಮಕವಾಗಿ ಮತ್ತು ವ್ಯಾವಹಾರಿಕವಾಗಿ ಪರಸ್ಪರ ವಿಭಿನ್ನವಾಗಿದ್ದವು. ಪಾಶ್ಚಾತ್ಯ ಸಂಸ್ಕೃತಿ ಅತ್ಯಂತ ಸಂಘಟಿತವಾಗಿದೆ. ಆದರೆ ಪೌರ್ವಾತ್ಯ ಸಂಸ್ಕೃತಿಯು ಅತಿ ಶಿಥಿಲವಾಗಿ ಸಂಘಟಿತವಾಗಿದೆ. ಎರಡೂ ಸಂಸ್ಕೃತಿಗಳ ನಡುವಣ ಸಂಬಂಧವು ದ್ವಂದ್ವ ಆರ್ಥಿಕತೆಗಳಲ್ಲಿ ಅಭಿವೃದ್ಧಿಯ ಕೇಂದ್ರ ಸಮಸ್ಯೆಯಾಗಿದೆ. (ಎಸ್.ಎಸ್.ಎನ್.)

**ದ್ವಂದ್ವತೆ ಮತ್ತು ವಿಭಜನಾ ಕ್ರಮ:** ಭೂಗೋಳ ವಿಜ್ಞಾನದ ಇತಿಹಾಸದುದ್ದಕ್ಕೂ ಭೂಗೋಳ ವಿಜ್ಞಾನದ ವಿದ್ವಾಂಸರು ತಮ್ಮ ಅಧ್ಯಯನ ವಿಷಯದಲ್ಲಿ ದ್ವಂದ್ವತೆ ಮತ್ತು ವಿಭಜನಾ ಕ್ರಮಾನುಸರಣಿಯ ಸಮಸ್ಯೆಗಳನ್ನು ಎದುರಿಸಿದ್ದಾರೆ. ಅಂದರೆ ಭೂಗೋಳವಿಜ್ಞಾನದ ಕ್ಷೇತ್ರವನ್ನು ಹಲವು ಭಾಗಗಳಾಗಿ ವಿಂಗಡಿಸಿ ಅಭ್ಯಸಿಸುವುದು. ಇದಕ್ಕೆ ಬದಲಾಗಿ ಒಟ್ಟು ಕ್ಷೇತ್ರವನ್ನು ಎರಡು ಪ್ರತ್ಯೇಕ ಭಾಗಗಳಾಗಿ ಅಭ್ಯಾಸಿಸುವುದು ದ್ವಂದ್ವತೆಯಾಗಿದೆ. ಯುರೋಪಿನಲ್ಲಿ ಕಲೆ ಮತ್ತು ಸಾಹಿತ್ಯದ ಪುನರುಜ್ಜೀವನೋತ್ತರದ ಅನಂತರ ದಿನಗಳಲ್ಲಿ ಭೌಗೋಳಿಕ ಚಿಂತನೆಗಳಲ್ಲಿ ಹೆಚ್ಚು ದ್ವಂದ್ವತೆಯು ಸ್ಪಷ್ಟವಾಗಿ ಗೋಚರಿಸಲಾರಂಭಿಸಿತು. ಭೂಗೋಳ ವಿಜ್ಞಾನದ ಕಾರ್ಯಕ್ಷೇತ್ರದ ವರ್ಣನೆಯಲ್ಲಿ ಹಾಗೂ ಇದರ ಅಧ್ಯಯನ ಕ್ರಮಾನುಸರಣಿಯಲ್ಲಿ ಈ ಹಿಂದೆ ಹಾಗೂ ಇಂದಿಗೂ ಬಹಳಷ್ಟು ದ್ವಂದ್ವತೆಗಳನ್ನು ಗುರುತಿಸಬಹುದಾಗಿದೆ.

ಅವುಗಳಲ್ಲಿ ಮುಖ್ಯವಾದವುಗಳಿವು:

ಸಾಮಾನ್ಯ ಭೂಗೋಳ ವಿಜ್ಞಾನ – ಪ್ರಾದೇಶಿಕ ಭೂಗೋಳವಿಜ್ಞಾನ.

ಪ್ರಾಕೃತಿಕ ಭೂಗೋಳ ವಿಜ್ಞಾನ – ಮಾನವ ಭೂಗೋಳವಿಜ್ಞಾನ.

ಐತಿಹಾಸಿಕ ಭೂಗೋಳ ವಿಜ್ಞಾನ – ಪ್ರಸ್ತುತ ಭೂಗೋಳವಿಜ್ಞಾನ.

ಈ ದ್ವಂದ್ವತೆಯು ಕೇವಲ ಭೂಗೋಳ ವಿಜ್ಞಾನದ ಅಧ್ಯಯನಕ್ಕೆ ಮಾತ್ರ ಸೀಮಿತಗೊಂಡಿರದೆ, ಇತರೆ ಅಧ್ಯಯನ ವಿಷಯಗಳಲ್ಲೂ ಬೇರೆ ಬೇರೆ ಪ್ರಮಾಣಗಳಲ್ಲಿ ಕಂಡುಬರುತ್ತದೆ. (ಬಿ.ಸಿ.)

**ದ್ವಿತೀಯ ಅನುಭೋಗಿ:** ಪ್ರಪಂಚದ ಸಮಸ್ತ ಜೀವರಾಶಿಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಸ್ಯಸಮೂಹಗಳ ಮೇಲೆ ಅವಲಂಬಿಸಿರುತ್ತವೆ. ಹಾಗಾಗಿ ಸಸ್ಯಗಳು ಅನೇಕ ಜೀವನಾವಶ್ಯಕ ಪದಾರ್ಥಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದ್ದು, ಇವುಗಳು ಕೆಳವರ್ಗದ ಜೀವಿಗಳಿಂದ, ಮೇಲ್ವರ್ಗದ ಪ್ರಾಣಿಗಳಿಗೆ ಆಹಾರ ಒದಗಿಸುತ್ತವೆ. ಒಟ್ಟಾರೆ ಸಸ್ಯಗಳು ತಯಾರಿಸುವ ಆಹಾರವನ್ನು ಸಸ್ಯಾಹಾರಿ ಜೀವಿಗಳು ಸೇವಿಸುತ್ತವೆ. ಈ ಸಸ್ಯಾಹಾರಿ ಜೀವಿಗಳನ್ನು ಮಾಂಸಾಹಾರಿಗಳು ತಿನ್ನುವುದಕ್ಕೆ, ಅವುಗಳನ್ನು ದ್ವಿತೀಯ ಅನುಭೋಗಿ ಎಂದು ಕರೆಯುವರು. (ವೈ.ಪಿ.ಆರ್.)

**ದ್ವಿದಳ ಧಾನ್ಯಗಳು:** ಆಹಾರ ಪದ್ಧತಿಯಲ್ಲಿ ದ್ವಿದಳ ಧಾನ್ಯಗಳು ಒಂದು ಭಾಗ. ಇವುಗಳನ್ನು ಬೇಳೆಕಾಳು ಬೆಳೆಗಳೆಂದು ಕರೆಯುವುದುಂಟು. ಏಕದಳ ಧಾನ್ಯಗಳಷ್ಟೇ ದ್ವಿದಳಧಾನ್ಯಗಳೂ ಅವಶ್ಯ. ಇವು ಹೆಚ್ಚು ಪ್ರೋಟೀನ್ ಅಂಶವನ್ನು ಹೊಂದಿವೆ. ಭಾರತದಲ್ಲಿ ಒಟ್ಟು ದ್ವಿದಳ ಧಾನ್ಯ ಬೆಳೆಯುವ ಪ್ರದೇಶ ಸು. 22 ದ.ಲ. ಹೆಕ್ಟೇರು ಮತ್ತು ವಾರ್ಷಿಕ ಉತ್ಪಾದನೆ ಸು. 11 ರಿಂದ 12 ದ.ಲ. ಟನ್. ದ್ವಿದಳ ಧಾನ್ಯಗಳಲ್ಲಿ ಹಲವು ವಿಧಗಳಿವೆ. ಉದಾ: ತೊಗರಿ, ಕಡಲೆ, ಉದ್ದು, ಹೆಸರು, ಅವರೆ, ಹಲಸಂದೆ, ಹುರುಳಿ, ಬಟಾಣಿ ಇತ್ಯಾದಿ.

ಉದ್ದು: ಇದು ಫಾಸ್ಫಾರಿಕ್ ಆಮ್ಲದಿಂದ ಕೂಡಿದ ಧಾನ್ಯ. ಮಳೆ ಆಧಾರಿತ ಬೆಳೆ. ಉಷ್ಣವಲಯದ ಕಡಿಮೆ ಮಳೆ ಬೀಳುವ ನೀರನ್ನು ಹೆಚ್ಚುಕಾಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿರುವ ಮಣ್ಣಿನಲ್ಲಿ ಇದನ್ನು ಬೆಳೆಯಲಾಗುತ್ತಿದೆ. ಬೆಳೆಯುವ ಪ್ರಮುಖ ಪ್ರದೇಶಗಳೆಂದರೆ ಮಧ್ಯಪ್ರದೇಶ, ಉತ್ತರ ಪ್ರದೇಶ, ಪಂಜಾಬ್, ಮಹಾರಾಷ್ಟ್ರ, ಪಶ್ಚಿಮ ಬಂಗಾಲ, ಆಂಧ್ರಪ್ರದೇಶ ಮತ್ತು ಕರ್ನಾಟಕ.

ತೊಗರಿ: ಭಾರತದಲ್ಲಿ 3ನೆಯ ಒಂದು ಭಾಗದಷ್ಟು ಕೃಷಿ ಪ್ರದೇಶದಲ್ಲಿ ತೊಗರಿಯನ್ನು ಬೆಳೆಯಲಾಗುತ್ತಿದೆ. ಭಾರತೀಯ ಅಡುಗೆ ಪದ್ಧತಿಯಲ್ಲಿ ತೊಗರಿ ಅತ್ಯಂತ ಪ್ರಮುಖವಾದದು. ಇದನ್ನು 7.8 ಮಿ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದ್ದು, ವಾರ್ಷಿಕ ಸು. 4 ರಿಂದ 5 ಮಿ ಟನ್‌ಗಳಷ್ಟು ಉತ್ಪಾದನೆಯಾಗುತ್ತಿದೆ. ಒಣ ಪ್ರದೇಶಗಳಲ್ಲಿ ಈ ಬೆಳೆಯನ್ನು ಹಗುರ ಮೆಕ್ಕಲು ಮಣ್ಣಿನಲ್ಲಿ ಬೆಳೆಯಲಾಗುತ್ತಿದೆ. ಭಾರತದ ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ರಾಜಸ್ತಾನ, ಹರಿಯಾಣ ಮತ್ತು ದಕ್ಷಿಣ ಭಾರತದ ಕಪ್ಪು ಮಣ್ಣಿನ ಪ್ರದೇಶದಲ್ಲಿ ಇದರ ಉತ್ಪಾದನೆಯಿದೆ.

ಅವರೆ: ಈ ಬೆಳೆ ಬೆಳೆಯಲು ತಂಪಾದ ವಾಯುಗುಣವಿದ್ದು ಆಳವಾದ ಕಪ್ಪು ಮಣ್ಣು ಒಳ್ಳೆಯದು. ಇದನ್ನು ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಬಿತ್ತನೆ ಮಾಡಿ ಫೆಬ್ರವರಿ–ಮಾರ್ಚ್‌ನಲ್ಲಿ ಕಟಾವು ಮಾಡಲಾಗುವುದು. ಮಧ್ಯ ಪ್ರದೇಶ, ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಈ ಬೆಳೆಯನ್ನು ಬೆಳೆಯಲಾಗುತ್ತಿದೆ. ಸಾಮಾನ್ಯವಾಗಿ ಇದನ್ನು ಇತರ ಕಾಳು ಅಥವಾ ಮೆಕ್ಕೆಜೋಳಗಳೊಡನೆ ಮಿಶ್ರ ಬೆಳೆಯಾಗಿ ಬೇಸಾಯ ಮಾಡಲಾಗುತ್ತಿದೆ.

ಹೆಸರು: ಇದನ್ನು ಸಹ ಆಹಾರಕ್ಕೆ ಮತ್ತು ದನಕರುಗಳ ಮೇವಿಗಾಗಿ ಬಳಸುವರು. ಭಾರತದಲ್ಲಿ ಸು. 2.5 ಮಿ. ಹೆ. ಪ್ರದೇಶದಲ್ಲಿ ಇದನ್ನು ಬೆಳೆಯುವರು. ಇದರ ವಾರ್ಷಿಕ ಉತ್ಪಾದನೆ ಸು. 0.8 ಮಿಲಿಯನ್ ಟನ್‌ಗಳು. ಈ ಬೆಳೆಗೆ ಮೆಕ್ಕಲು, ಕೆಂಪು ಮತ್ತು ಕಪ್ಪು ಮಣ್ಣು ಸೂಕ್ತ. ಸಾಧಾರಣ ಮಳೆ ಸಾಕು. ಇದನ್ನು ಸಹ ಬಹುಬೆಳೆ ಬೇಸಾಯ ಕ್ರಮದಲ್ಲಿ ಬೆಳೆಯಲಾಗುವುದು. ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಹೆಚ್ಚು ಬೆಳೆಯುತ್ತಾರೆ.

ಹುರುಳಿ : ವಿಸ್ತಾರವಾದ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಭಾರತದಲ್ಲಿ ವಾರ್ಷಿಕವಾಗಿ ಸು. 2 ಮಿ. ಹೆ.ನಲ್ಲಿ 50 ಲಕ್ಷ ಟನ್‌ಗಳಷ್ಟು ಉತ್ಪಾದನೆಯಾಗುತ್ತಿದೆ. ಇದನ್ನು ಕುದುರೆ ಮತ್ತು ದನಕರುಗಳ ಮೇವಿಗಾಗಿ ಹೆಚ್ಚಾಗಿ ಬಳಸುವುದರಿಂದ ಅಶ್ವಧಾನ್ಯ ಎಂಬ ಹೆಸರು ಬಂದಿದೆ. ಈ ಬೆಳೆಗೆ ಉಷ್ಣವಲಯದ ವಾಯುಗುಣವಿರಬೇಕು. ವಿವಿಧ ಮಣ್ಣುಗಳಲ್ಲಿ ಬೆಳೆಯಬಹುದು. ಇದನ್ನು ಹೆಚ್ಚಾಗಿ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಬೆಳೆಯಲಾಗುತ್ತದೆ.

ಚನ್ನಂಗಿ: ಉತ್ತರ ಭಾರತದಾದ್ಯಂತ ಈ ಧಾನ್ಯವನ್ನು ಬೆಳೆಯಲಾಗುತ್ತದೆ. ದಕ್ಷಿಣ ಭಾರತದಲ್ಲಿ ಇದಕ್ಕೆ ಅಷ್ಟೊಂದು ಪ್ರಾಮುಖ್ಯತೆ ಇಲ್ಲ. ಈ ಧಾನ್ಯದ ಹಂಚಿಕೆ ಸು. 0.9 ಮಿ. ಹೆ. ಗಳಲ್ಲಿದ್ದು 0.45 ಮಿ. ಟನ್ ಉತ್ಪಾದನೆಯಾಗುತ್ತಿದೆ. ಇದನ್ನು ಬೆಳೆಯಲು ತಂಪಾದ ನೀರಾವರಿರಹಿತ ವಾಯುಗುಣ ಆವಶ್ಯಕವಿದ್ದು ಅಕ್ಟೋಬರ್‌ನಿಂದ ಡಿಸೆಂಬರ್ ತನಕದ ಚಳಿಗಾಲ ಉತ್ತಮ. ಲಘು ಮರಳು ಮಿಶ್ರಿತ ಮತ್ತು ಮೆಕ್ಕಲು ಮಣ್ಣು ಈ ಬೆಳೆಗೆ ಸೂಕ್ತ. ಮಧ್ಯಪ್ರದೇಶ ಮತ್ತು ಉತ್ತರ ಭಾರತದಲ್ಲಿ ಹೆಚ್ಚು ಬೆಳೆಯಲಾಗುತ್ತದೆ.

ಮೋಥ್ ಬೀನ್: ಇದೊಂದು ಬರಗಾಲ ನಿರೋಧಕ ಶಕ್ತಿ ಇರುವ ಬೆಳೆ. ಇದನ್ನು ಒಣ ಬೇಸಾಯ ಕ್ರಮದಲ್ಲಿ ಬೆಳೆಯಲಾಗುತ್ತದೆ. ಇದನ್ನು ಜೋಳ ಮತ್ತು ಬಾಜ್ರಗಳ ಜೊತೆ ಬಹು ಬೆಳೆ ಬೇಸಾಯದಲ್ಲೂ ಬೆಳೆಯುತ್ತಾರೆ. ಸಾಧಾರಣ ಮಳೆ, ಲಘು ಮರಳು ಮಿಶ್ರಿತ ಮಣ್ಣು, ಹೆಚ್ಚು ಕಡಿಮೆ ಉನ್ನತಮಣ್ಣು ಈ ಬೆಳೆಗೆ ಸೂಕ್ತ. ಈ ಧಾನ್ಯವನ್ನು ಹೆಚ್ಚಾಗಿ ರಾಜಸ್ತಾನದಲ್ಲಿ ಬೆಳೆಯುತ್ತಾರೆ. ಉತ್ತರ ಪ್ರದೇಶ, ಪಂಜಾಬ್ ಮತ್ತು ಮಹಾರಾಷ್ಟ್ರಗಳ ಕೆಲವು ಭಾಗಗಳಲ್ಲಿ ಈ ಧಾನ್ಯವನ್ನು ಬೆಳೆಯಲಾಗುತ್ತದೆ.

ಬಟಾಣಿ: ಇದು ಬೇಳೆ ಮತ್ತು ಚನ್ನಂಗಿ ತರಹದ ಧಾನ್ಯ, ಇದನ್ನು ಹಸಿಯಾಗಿ ಮತ್ತು ಒಣಗಿಸಿ ಆಹಾರದಲ್ಲಿ ಬಳಸುವರು. ಈ ಧಾನ್ಯವನ್ನು ತಂಪಾದ ಹವಾಮಾನದಲ್ಲಿ ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ಬೆಳೆಯುವರು. ಈ ಬೆಳೆಗೆ ಕ್ಷಾರಯುಕ್ತ ಮಣ್ಣು ಹಾನಿಕರ, ಮರಳುಮಿಶ್ರಿತ ಮಣ್ಣು ಉತ್ತಮ, ಇತರ ಮಣ್ಣುಗಳಲ್ಲೂ ಬೆಳೆಯಬಹುದು. ಬಟಾಣಿಯನ್ನು ಭಾರತದಲ್ಲಿ ಸು. 0.5 ಮಿ. ಹೆ. ಗಳಲ್ಲಿ ಬೆಳೆಯಲಾಗುತ್ತಿದ್ದು. ಸು. 0.47 ಮಿ. ಟನ್‌ಗಳಷ್ಟು ಉತ್ಪಾದನೆಯಾಗುತ್ತಿದೆ. ಭಾರತದ ಉತ್ತರ ಪ್ರದೇಶ ಮತ್ತು ಕರ್ನಾಟಕದ ಕೆಲವು ಭಾಗಗಳಲ್ಲಿ ಬೆಳೆಯಲಾಗುತ್ತಿದೆ. (ಪಿ.ಟಿ.ಬಿ.)

**ದ್ವೀಪ ಪರಿಭಾವನೆ:** ಒಂದು ಪ್ರದೇಶ ಅಥವಾ ಭೂ ಭಾಗ ಪೂರ್ಣವಾಗಿ ನೀರಿನಿಂದ ಆವರಿಸಿದ್ದಲ್ಲಿ ಅದನ್ನು ದ್ವೀಪ ಅಥವಾ ದ್ವೀಪ ಕಲ್ಪ ಎನ್ನುವರು.

ಉದಾ: ಗ್ರೀನ್ಲೆಂಡ್, ನ್ಯೂಜಿಲೆಂಡ್, ಶ್ರೀಲಂಕ ಇತ್ಯಾದಿ. ದ್ವೀಪ ಸ್ಥಾನವನ್ನು ಅನೇಕ ಪ್ರಕಾರಗಳಾಗಿ ವಿಂಗಡಿಸಬಹುದು. ಅವುಗಳಲ್ಲಿ ಜ್ವಾಲಾಮುಖಿ ದ್ವೀಪ, ಹವಳ ದ್ವೀಪಗಳು, ತೋರಣ ದ್ವೀಪ, ಖಂಡಾಂತರಿತ ದ್ವೀಪ ಮುಖ್ಯವಾದವು. ದ್ವೀಪಗಳು ವಿಸ್ತೀರ್ಣದಲ್ಲಿ ಚಿಕ್ಕವುಗಳಾಗಿದ್ದು ಆರ್ಥಿಕತೆಗಿಂತಲೂ ಹೆಚ್ಚಾಗಿ ರಕ್ಷಣಾತ್ಮಕ ಉದ್ದೇಶದ ದೃಷ್ಟಿಯಿಂದ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ರೇಡಿಯೋ, ಟೆಲಿವಿಷನ್ ಮುಂತಾದವುಗಳ ಮರುಪ್ರಸಾರ ಕೇಂದ್ರಗಳ ಸ್ಥಾಪನೆ, ಕ್ಷಿಪಣಿಗಳ ಪ್ರಾಯೋಗಿಕ ಉಡಾವಣೆಗಳು ಮುಂತಾದವುಗಳಿಗೆ ಉಪಯುಕ್ತವಾಗಿವೆ. *

# ಧ

**ಧನಬಾದ್:** ಜಾರ್ಖಂಡ ರಾಜ್ಯದ ಛೋಟಾ ನಾಗಪುರ ವಿಭಾಗದ ಒಂದು ಜಿಲ್ಲೆ; ಆ ಜಿಲ್ಲೆಯ ಆಡಳಿತ ಕೇಂದ್ರ. ಧನಬಾದ್ ಜಿಲ್ಲೆ ರಾಜ್ಯದಲ್ಲಿ ಅತ್ಯಂತ ಸಣ್ಣದು. ವಿಸ್ತೀರ್ಣ 2,884 ಚ.ಕಿಮೀ. ಈ ಜಿಲ್ಲೆಯ ಮಧ್ಯದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ದಾಮೋದರ್ ನದಿ ಹರಿಯುತ್ತದೆ. ಇದಕ್ಕೆ ಕಟ್ಟಿರುವ ಪೈಥಾನ್ ಮತ್ತು ಪಾಂಚೆಟ್ ಕಟ್ಟೆಗಳಿಂದ ನೀರಾವರಿ ಸೌಲಭ್ಯ ಏರ್ಪಟ್ಟಿದೆ. ಆದರೆ ಆಚೀಚಿನ ಪ್ರದೇಶಗಳಲ್ಲಿ ಬತ್ತ, ಮುಸುಕಿನಜೋಳ, ಎಣ್ಣೆಬೀಜ ಬೆಳೆಯುತ್ತವೆ. ಇದು ಭಾರತದ ಪ್ರಮುಖ ಕಲ್ಲಿದ್ದಲು ಉತ್ಪಾದಕ ಜಿಲ್ಲೆ. ಝರಿಯಾ ಮತ್ತು ರಾಣೀಗಂಜ್ ಕಲ್ಲಿದ್ದಲು ಗಣಿಗಳು ಈ ಜಿಲ್ಲೆಯಲ್ಲಿವೆ. ಕೆಂಪುಬಣ್ಣದ ಮಣ್ಣು, ಅಭ್ರಕ ಮತ್ತು ಮಿಂಚು ಹರಳುಗಳು ಜಿಲ್ಲೆಯ ಇತರ ಖನಿಜಗಳು. ಧನಬಾದ್ ಪಟ್ಟಣದ ದಕ್ಷಿಣಕ್ಕೆ 25 ಕಿಮೀ ದೂರದ ಸಿಂಧ್ರಿಯಲ್ಲಿರುವ ರಸಗೊಬ್ಬರ ಕಾರ್ಖಾನೆ ಈ ಜಿಲ್ಲೆಯ ಒಂದು ದೊಡ್ಡ ಕೈಗಾರಿಕೆ. ಜಿಲ್ಲೆಯ ಜನಸಂಖ್ಯೆ 23,94,434.

ಕೋಲ್ಕತದಿಂದ 270 ಕಿಮೀ ದೂರದಲ್ಲಿರುವ ಧನಬಾದ್ ಪಟ್ಟಣದಲ್ಲಿ ಭಾರತೀಯ ಗಣಿ ಶಾಲೆ ಇದೆ. ಇದು ಬಿಹಾರದ ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದಿದೆ. ಇಲ್ಲಿರುವ ಇನ್ನೊಂದು ಸಂಸ್ಥೆ ಕೇಂದ್ರೀಯ ಇಂಧನ ಸಂಶೋಧನ ಸಂಸ್ಥೆ. ಧನಬಾದ್ ಕೃಷಿ ಉತ್ಪನ್ನಗಳ ಮುಖ್ಯ ವ್ಯಾಪಾರ ಕೇಂದ್ರ. ಪಟ್ಟಣದ ಜನಸಂಖ್ಯೆ 10,64,357. (ಬಿ.ಎ.ಎಸ್.)

**ಧನುಷ್ಕೋಟಿ:** ತಮಿಳುನಾಡಿನ ಒಂದು ತೀರ್ಥಸ್ಥಳ. ರಾಮೇಶ್ವರದ ಸಮೀಪದಲ್ಲಿದೆ. ಪೂರ್ವ ಪಶ್ಚಿಮ ಸಮುದ್ರಗಳ ಸಂಗಮ ಸ್ಥಳ. ಸೇತುವೆಯ ಮೇಲೆ ನಡೆದು ಬಂದು ಶತ್ರುಗಳು ತನ್ನನ್ನು ಪೀಡಿಸಿಯಾರೆಂಬ ವಿಭೀಷಣನ ಭೀತಿಯನ್ನು ನೀಗಲು ಶ್ರೀರಾಮಚಂದ್ರ ಆ ಸೇತುವೆಯ ಕೊನೆಯೊಂದನ್ನು ತನ್ನ ಬಿಲ್ಲಿನಿಂದ ಒಡೆದನೆಂದೂ ಅದೇ ಧನುಷ್ಕೋಟಿ ಎಂಬ ಹೆಸರಿನ ತೀರ್ಥವಾಯಿತೆಂದೂ ಐತಿಹ್ಯ. ಸ್ಕಂದಪುರಾಣದ ಬ್ರಹ್ಮಖಂಡದಲ್ಲಿ ಈ ತೀರ್ಥದ ದೀರ್ಘ ವಿವರಣೆ ಇದೆ. *

**ಧರ್ಮಸ್ಥಳ:** ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಒಂದು ಪ್ರಮುಖ ಯಾತ್ರಾಸ್ಥಳ. ಪಶ್ಚಿಮ ಘಟ್ಟಗಳ ಪಶ್ಚಿಮ ಇಳಿಜಾರಿನ ಅಂಚಿನಲ್ಲಿ ಮಂಗಳೂರು ಚಾರ್ಮಾಡಿ ರಸ್ತೆಯಲ್ಲಿ ಮಂಗಳೂರಿನಿಂದ ಪೂರ್ವಕ್ಕೆ 75 ಕಿಮೀ, ಬೆಳ್ತಂಗಡಿಯಿಂದ ಆಗ್ನೇಯಕ್ಕೆ ಸು. 16 ಕಿಮೀ ದೂರದಲ್ಲಿ ಈ ಪುಣ್ಯಸ್ಥಳ ಇದೆ. ಸಮುದ್ರಮಟ್ಟದಿಂದ ಸ್ವಲ್ಪವೇ ಎತ್ತರದಲ್ಲಿದ್ದು ಬೇಸಗೆಯಲ್ಲಿ ಸೆಕೆ ಹೆಚ್ಚು, ಮಳೆಗಾಲದಲ್ಲಿ ತಂಪಾಗಿರುತ್ತದೆ. ಜನಸಂಖ್ಯೆ 9,258.

ಪ್ರೇಕ್ಷಣೀಯ ಬೆಟ್ಟಗಳು, ಬತ್ತದ ಗದ್ದೆಗಳು, ಅಡಕೆ ಮತ್ತು ತೆಂಗಿನ ತೋಟಗಳು ಆಲಂಕಾರಿಕವಾಗಿ ಈ ಊರನ್ನು ಸುತ್ತುವರಿದಿವೆ. ಈ ಊರನ್ನು ಪ್ರವೇಶಿಸುವಾಗಲೇ 45 ಮೀ ಎತ್ತರದ ಸುಂದರವಾದ ಪ್ರವೇಶದ್ವಾರ ಹಾಗೂ ಎರಡು ಕಡೆಗಳಲ್ಲಿನ ಸಾಲುಸಾಲಾದ ನಾಲ್ಕಾರು ಅಂತಸ್ತುಗಳ ಛತ್ರಗಳು ಕಾಣುವುವು. ಮುಂದೆ ನಡೆದಂತೆ ಶ್ರೀ ಮಂಜುನಾಥಸ್ವಾಮಿ ಆಲಯ ಕಾಣುವುದು. ಸು. 6 ಮೀ ಎತ್ತರದ ಪೌಳಿಯ ಮೇಲೆ ನಿರ್ಮಾಣವಾಗಿರುವ ಈ ದೇವಾಲಯ ಕಡಲ ತೀರದ ಅನೇಕ ದೇವಾಲಯಗಳಂತೆ ಮಣ್ಣು, ಜಂಬಿಟ್ಟಿಗೆ ಮತ್ತು ಮರಗಳಿಂದ ನಿರ್ಮಿತವಾದುದು.

ಇಲ್ಲಿನ ಮತ್ತೊಂದು ಆಕರ್ಷಣೆಯೆಂದರೆ ಬೃಹದಾಕಾರದ ಏಕಶಿಲಾ ಗೋಮಟೇಶ್ವರನ ವಿಗ್ರಹ. ಇದರ ನಿರ್ಮಾಣ ಕಾರ್ಯ ರಂಜಾಳ ಗೋಪಾಲ ಶೆಣೈರವರ ನೇತೃತ್ವದಲ್ಲಿ 1968ರಲ್ಲಿ ಪ್ರಾರಂಭವಾಗಿ 1973ರಲ್ಲಿ ಮುಗಿಯಿತು. ಕಾರ್ಕಳದಿಂದ 75 ಕಿಮೀ ದೂರದ ಇಲ್ಲಿಗೆ ವಿಶೇಷ ವಾಹನ ವ್ಯವಸ್ಥೆಯಲ್ಲಿ ಈ ವಿಗ್ರಹವನ್ನು ತರಿಸಲಾಗಿದೆ. ಸು. 12 ಮೀ ಎತ್ತರ 4 ಮೀ ದಪ್ಪನಾದ ಈ ವಿಗ್ರಹ ಗ್ರಾನೈಟ್ ಶಿಲೆಯಿಂದ ನಿರ್ಮಾಣವಾದುದು. ಇದರ ತೂಕ 175 ಟನ್ನುಗಳು. ಇದು ಭಾರತದ ಮೂರನೆಯ ಅತ್ಯಂತ ದೊಡ್ಡ ವಿಗ್ರಹ. ಧರ್ಮಸ್ಥಳದ ಪ್ರವೇಶದ್ವಾರದ ಬಳಿಯ ಗುಡ್ಡದ ಮೇಲೆ ಇದನ್ನು ಸ್ಥಾಪಿಸಲಾಗಿದೆ.

ಇತ್ತೀಚೆಗೆ ಪ್ರವಾಸೋದ್ಯಮ ಕೇಂದ್ರವನ್ನಾಗಿ ಇದನ್ನು ಪರಿವರ್ತಿಸಲು ಕೆಲವು ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ನೇತ್ರಾವತಿ ಮತ್ತು ವೈಶಾಲಿ ಎಂಬ ಪ್ರವಾಸಿ ನಿವಾಸ ಕೇಂದ್ರಗಳು ಅನೇಕರನ್ನು ಆಕರ್ಷಿಸುತ್ತವೆ.

ದೇವಾಲಯ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಹುಬ್ಬಳ್ಳಿ, ಧಾರವಾಡ, ಹೊನ್ನಾವರ ಕಾಲೇಜುಗಳೂ ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳೂ ಇದರ ವತಿಯಿಂದಲೇ ನಡೆಯುತ್ತಿವೆ. (ಕೆ.ಆರ್.ಆರ್.)

**ಧಾನ್ಯಗಳು:** ಮನುಷ್ಯರು ಮತ್ತು ಪ್ರಾಣಿಗಳು ತಮ್ಮ ದಿನನಿತ್ಯದ ಆಹಾರದಲ್ಲಿ ಬಳಸುವ ಕಾಳುಗಳೇ ಧಾನ್ಯಗಳು. ಇವುಗಳಲ್ಲಿ ಏಕದಳ ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳೆಂದು ಎರಡು ವಿಧ : 1. ಏಕದಳ ಧಾನ್ಯಗಳು–ಇವುಗಳಲ್ಲಿ ಒಂದೇ ಬೀಜದಳ ಇರುತ್ತದೆ. ಈ ಗುಂಪಿನ ಧಾನ್ಯಗಳಲ್ಲಿ ಮುಖ್ಯವಾದವು ಬತ್ತ, ರಾಗಿ, ಜೋಳ, ಗೋದಿ, ನವಣೆ, ಸಜ್ಜೆ ಮತ್ತು ಮುಸುಕಿನ ಜೋಳ. ಏಕದಳ ಧಾನ್ಯಗಳಲ್ಲಿ ಪಿಷ್ಟದ ಮೊತ್ತ ಮತ್ತು ಶಕ್ತಿ (ಕ್ಯಾಲೊರಿ) ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಇವುಗಳಲ್ಲಿನ ಪಿಷ್ಟದ ಮೊತ್ತ ಶೇ. 70 ರಿಂದ ಶೇ. 80ರಷ್ಟು ಇರುತ್ತದೆ. ಬಾರ್ಲಿ ಮತ್ತು ಬತ್ತದಲ್ಲಿ ಹೊಟ್ಟು ಇರುವುದರಿಂದ ಪಿಷ್ಟಾಂಶ ಕಡಿಮೆ. ಏಕದಳ ಧಾನ್ಯಗಳು ಮನುಷ್ಯನ ಪ್ರಮುಖ ಆಹಾರ. ಚೀನ ಮತ್ತು ರಷ್ಯಗಳನ್ನು ಬಿಟ್ಟು ಪ್ರಪಂಚದ ಇತರ ರಾಷ್ಟ್ರಗಳ ಒಟ್ಟು ಬಳಕೆಯ ಅರ್ಧದಷ್ಟು ಶಕ್ತಿ ಏಕದಳ ಧಾನ್ಯಗಳಿಂದ ಒದಗುತ್ತದೆ. ಉಳಿದ ಅರ್ಧದಲ್ಲಿ ಕಾಲುಭಾಗ ಇತರ ಬೆಳೆಗಳಿಂದಲೂ ಕಾಲುಭಾಗ ಪ್ರಾಣಿಗಳ ಮೂಲಕ ಲಭಿಸುವುವು. ಈ ಧಾನ್ಯಗಳಿಂದ ದಿನನಿತ್ಯದ ಆಹಾರವಾದ ಅನ್ನ, ಚಪಾತಿ, ರೊಟ್ಟಿ, ಇಡ್ಲಿ, ದೋಸೆ, ಪೂರಿ, ಬ್ರೆಡ್ ಮುಂತಾದುವನ್ನು ತಯಾರಿಸಲಾಗುತ್ತದೆ. ಮಾದಕ ಪಾನೀಯಗಳು, ಕೈಗಾರಿಕಾ ಆಲ್ಕೊಹಾಲ್, ಪಿಷ್ಟ, ಸೆಲ್ಯೂಲಾಯ್ಡ್ ಮತ್ತು ಕೆಲವು ಪಾಲಿಮರ್ ಮೂಲ ಧಾತುಗಳನ್ನು ತಯಾರಿಸಲು ಕೆಲವು ಧಾನ್ಯಗಳನ್ನು ಬಳಸುವುದಿದೆ. 2. ದ್ವಿದಳ ಧಾನ್ಯಗಳು–ಇವುಗಳಲ್ಲಿ ಎರಡು ಬೀಜದಳಗಳುಂಟು. ಈ ಗುಂಪಿನಲ್ಲಿ ಮುಖ್ಯವಾದವು ತೊಗರಿ, ಅವರೆ, ಅಲಸಂದೆ, ಕಡಲೆ, ಹೆಸರು, ಉದ್ದು, ಸೋಯಾಬೀನ್ಸ್, ಹುರುಳಿ ಮತ್ತು ಬಟಾಣಿ. ದ್ವಿದಳ ಧಾನ್ಯಗಳಲ್ಲಿ ಪ್ರೊಟೀನ್ ಮತ್ತು ಕೊಬ್ಬು ಹೆಚ್ಚಾಗಿರುತ್ತದೆ. ಮನುಷ್ಯನ ಆಹಾರದಲ್ಲಿ ದ್ವಿದಳ ಧಾನ್ಯಗಳಿಗೆ ಎರಡನೆಯ ಸ್ಥಾನ. ಈ ಧಾನ್ಯಗಳಿಂದ ಸಾರು, ಹುಳಿ, ದೋಸೆ, ವಡೆ, ಕೋಸಂಬರಿ, ಗುಗ್ಗುರಿ ಮತ್ತು ಹಲವು ಸಿಹಿ ಪದಾರ್ಥಗಳನ್ನು ತಯಾರಿಸುವುದಿದೆ.

ಸಾಧಾರಣವಾಗಿ ಚೀಲಗಳಲ್ಲಿ ಆಹಾರ ಧಾನ್ಯಗಳನ್ನು ಮಾಳಿಗೆಗಳಲ್ಲಿ ದಾಸ್ತಾನುಮಾಡುವರು. ಗೋಣೀಚೀಲಗಳನ್ನು ಕೆಲವು ಕ್ರಿಮಿನಾಶಕ ವಸ್ತುಗಳಿಂದ ಉಪಚರಿಸಿದರೆ 5–6 ತಿಂಗಳುಗಳ ಕಾಲ ಕೀಟಬಾಧೆ ಇಲ್ಲದಂತೆ ಮಾಡಲು ಸಾಧ್ಯವಿದೆ. (ಕೆ.ಆರ್.ಜಿ.ಎ.)

**ಧಾರಕ ಹಡಗು:** ಸರಕುಗಳನ್ನು ಭಾರಿ ಪ್ರಮಾಣದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜಲಸಾರಿಗೆ ಮೂಲಕ ಕೊಂಡೊಯ್ಯುವ ಬೃಹತ್ ಗಾತ್ರದ ಹಡಗು (ಕಂಟೈನರ್ ಶಿಪ್). ಭಾರಿ ಪ್ರಮಾಣದ ಸರಕುಗಳನ್ನು ಕಡಿಮೆ ವೆಚ್ಚದಲ್ಲಿ ಸಾಗಿಸ ಬಹುದಾಗಿದೆ. ದೊಡ್ಡ ದೊಡ್ಡ ಉಕ್ಕಿನ ಪೆಟ್ಟಿಗೆಗಳಲ್ಲಿ ಸರಕುಗಳನ್ನು ತುಂಬಿ ಸಾಗಿಸಲಾಗುತ್ತದೆ. ಧಾರಕ ಹಡಗುಗಳನ್ನು 3 ಭಾಗಗಳಾಗಿ ವಿಂಗಡಿಸಲಾಗಿದೆ. 1. ಫ್ಲಾಟ್ ರಾಕ್ಸ್ 2. ತೆರೆದ ಧಾರಕ ಹಡಗು 3. ಫ್ಲಾಟ್‍ಫಾರಂ– ಇದನ್ನು ರೋ–ರೋ (ರೋಲ್ ಆನ್ ರೋಲ್ ಆಫ್) ಎಂದು ಕರೆಯುತ್ತಾರೆ. ಸರಕುಗಳನ್ನು ಸಾಗಣೆ ಕಾರ್ಯಕ್ಕೆ ಹಾಗೂ ಕಡಿಮೆ ದೂರಕ್ಕೆ ಬಳಸಬಹುದು. ಬಹಳ ವೇಗವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ

ಸರಕುಗಳನ್ನು ಸಾಗಿಸಬಹುದಾಗಿದೆ. ಪ್ರಸ್ತುತದಲ್ಲಿ ಇದರ ಬಳಕೆ ಹೆಚ್ಚಾಗಿದೆ. ಇಂತಹ ಹಡಗುಗಳು ನೂರಾರು ಉಕ್ಕಿನ ಪೆಟ್ಟಿಗೆಗಳನ್ನು ಕೊಂಡೊಯ್ಯುತ್ತವೆ. (ಎಂ.ಎಚ್.)

**ಧಾರವಾಡ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಉತ್ತರ ಕರ್ನಾಟಕದ ಮಧ್ಯ ¥ÀÄ¨sÁUÀzÀ°èzÉ.C. 14$^0$17′–15$^0$50′ ಮತ್ತು ಪೂ.ರೇ. 76$^0$–78$^0$ ನಡುವೆಯಿದೆ. ಇದರ ಉತ್ತರಕ್ಕೆ ಬೆಳಗಾಂವಿ ಮತ್ತು ಗದಗ, ಪೂರ್ವಕ್ಕೆ ಗದಗ, ಪಶ್ಚಿಮಕ್ಕೆ ಉತ್ತರ ಕನ್ನಡ ಮತ್ತು ಬೆಳಗಾಂವಿ ಜಿಲ್ಲೆಗಳು ಮತ್ತು ದಕ್ಷಿಣಕ್ಕೆ ಹಾವೇರಿ ಜಿಲ್ಲೆ ಇವೆ. ಧಾರವಾಡ, ನವಲಗುಂದ, ಹುಬ್ಬಳ್ಳಿ, ಕಲಘಟಗಿ ಮತ್ತು ಕುಂದಗೋಳ ತಾಲ್ಲೂಕುಗಳನ್ನೊಳಗೊಂಡ ಈ ಜಿಲ್ಲೆಯ ವಿಸ್ತೀರ್ಣ 4,230 ಚ.ಕಿಮೀ. ಜನಸಂಖ್ಯೆ 16,03,794. ಜಿಲ್ಲೆಯ ಆಡಳಿತ ಕೇಂದ್ರ ಹುಬ್ಬಳ್ಳಿ–ಧಾರವಾಡ. ಈಸ್ಟ್ ಇಂಡಿಯ ಕಂಪನಿ 1818ರಲ್ಲಿ ದಕ್ಷಿಣ ಮರಾಠ ರಾಜ್ಯಗಳನ್ನು ಗೆದ್ದ ತರುವಾಯ ಈ ಜಿಲ್ಲೆ ಸ್ಥಾಪನೆಯಾಯಿತು.

# ಧಾರವಾಡ

ಮೇಲ್ಮೈ ಲಕ್ಷಣಗಳು: ಧಾರವಾಡ ಜಿಲ್ಲೆ ಪಶ್ಚಿಮದಿಂದ ಪೂರ್ವದ ಕಡೆಗೆ ಇಳಿಜಾರಾಗಿದೆ. ಇದನ್ನು ಸ್ಥೂಲವಾಗಿ ಪಶ್ಚಿಮದ ಮಲೆನಾಡು ಮತ್ತು ಪೂರ್ವದ ಬಯಲುನಾಡು ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಇವೆರಡರ ನಡುವೆ ಇರುವ ಕಿರಿದಾದ ಪ್ರದೇಶ ಗಡಿನಾಡು. ಮಲೆನಾಡು ಅತ್ಯಂತ ವಿಚ್ಛಿನ್ನವಾದ ಪಶ್ಚಿಮ ಘಟ್ಟಗಳ ಪ್ರದೇಶ. ಇವುಗಳಲ್ಲಿ ಆಳ್ನಾವರದ ಪೂರ್ವಕ್ಕೆ ಇರುವ ತೇಗೂರು ಗುಡ್ಡ, ಧಾರವಾಡ ಕಲಘಟಗಿಗಳ ನಡುವೆಯಿರುವ ಬೂದನಗುಡ್ಡ, ಅದರ ಪಶ್ಚಿಮದ ಗಣಿಗುಡ್ಡ, ದಕ್ಷಿಣದಲ್ಲಿಯ ಕಮಾರುಗುಡ್ಡ ಮುಖ್ಯವಾದವು. ಬೂದನಗುಡ್ಡ ಸು. 13 ಕಿಮೀ ಉದ್ದ ಮತ್ತು 1.6 ಕಿಮೀ ಅಗಲವಿದೆ. ಇದು ದಕ್ಷಿಣೋತ್ತರವಾಗಿ ಹಬ್ಬಿದೆ. ಸುತ್ತಲಿನ ಪ್ರದೇಶಕ್ಕಿಂತ ಸು. 152 ಮೀ ಎತ್ತರದಲ್ಲಿದೆ. ಇಲ್ಲಿ ಅನುಕ್ರಮವಾಗಿ 745 ಮೀ ಮತ್ತು 719 ಮೀ ಎತ್ತರದ ಎರಡು ಶಿಖರಗಳುಂಟು. ದುಂಡನೆ ಮತ್ತು ಹಾನಗಲ್ಲು ಗುಡ್ಡಗಳು ಚಿಕ್ಕವು. ಆಕಾರದಲ್ಲಿ ಅವು ದುಂಡಗಿವೆ. ದಕ್ಷಿಣದಲ್ಲಿ ಕಡೂರು ಗುಡ್ಡವಲ್ಲದೆ, ಮಾಸೂರು ಮತ್ತು ಮಾರವಳಿ ಗುಡ್ಡಗಳು ಕಡಿದಾಗಿವೆ. ಪೂರ್ವ ಪಶ್ಚಿಮವಾಗಿ ಹಬ್ಬಿವೆ. ಇವುಗಳ ಸರಾಸರಿ ಎತ್ತರ 732 ಮೀ. ಅತ್ಯುನ್ನತ ಶಿಖರ 825 ಮೀ ಎತ್ತರವಾಗಿದೆ. ಮಲೆನಾಡಿಗೂ ಬಯಲು ಸೀಮೆಗೂ ನಡುವೆ ಇರುವ ಗಡಿನಾಡಿನ ಅಗಲ ಸು. 32 ಕಿಮೀ. ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಇದರ ಮಧ್ಯದಲ್ಲಿ ಹಾಯ್ದಿದೆ. ಈ ಪ್ರದೇಶದಲ್ಲಿ ರಾಣೆಬೆನ್ನೂರಿನ ಹತ್ತಿರ ಐರಣ ಗುಡ್ಡವು, ಬ್ಯಾಡಗಿಯ ಪೂರ್ವಕ್ಕೆ ದೇವರಗುಡ್ಡವಿದೆ.




ಗಡಿನಾಡಿನ ಪೂರ್ವಕ್ಕಿರುವುದು ಬಯಲು ಪ್ರದೇಶ. ಇಲ್ಲಿ ಗಜೇಂದ್ರಗಢ ಗುಡ್ಡ, ನರಗುಂದ ಗುಡ್ಡ, ನವಲಗುಂದ ಗುಡ್ಡ ಮತ್ತು ಕಪ್ಪರ ಗುಡ್ಡಗಳು ಮುಖ್ಯವಾದವು. ಕಪ್ಪತಗುಡ್ಡ ಗದಗದ ಆಗ್ನೇಯದಲ್ಲಿ 48 ಕಿಮೀ ಉದ್ದವಾಗಿ ಹಬ್ಬಿದೆ. ಅದು ಎರಡು ತುದಿಯಲ್ಲೂ ಸು. 6 ಕಿಮೀ ಮತ್ತು ಮಧ್ಯದಲ್ಲಿ ಸು. 16 ಕಿಮೀ ಅಗಲವಾಗಿದೆ. ಅದರಲ್ಲಿ ಅನೇಕ ಅಡ್ಡ ಶ್ರೇಣಿಗಳು ಸಮಾನಾಂತರ ಕಣಿವೆಗಳಿವೆ. ಕಪ್ಪತ ಗುಡ್ಡ ಸುತ್ತಲಿನ ಪ್ರದೇಶಕ್ಕಿಂತ ಸರಾಸರಿ 122 ಮೀ ಎತ್ತರವಿದೆ. ಅದರಲ್ಲಿ ಅತ್ಯುನ್ನತ ಶಿಖರ ಸಮುದ್ರ ಮಟ್ಟದಿಂದ 937 ಮೀ ಎತ್ತರವಾಗಿದೆ. ಈ ಗುಡ್ಡ ಒಂದೇ ಶ್ರೇಣಿಯಾಗಿ ಆರಂಭವಾಗಿ, ಮಧ್ಯದಲ್ಲಿ ಡಂಬಳದ ಹತ್ತಿರ 3–4 ಸಮಾಂತರ ಶ್ರೇಣಿಗಳಾಗಿ ಕವಲೊಡೆದು ಮುಂದೆ ತುಂಗಭದ್ರ ನದಿಯ ಕಡೆಗೆ ಮತ್ತೆ ಒಂದೇ ಶ್ರೇಣಿಯಾಗಿ ಹಬ್ಬಿದೆ.

ನದಿಗಳು: ಧಾರವಾಡ ಜಿಲ್ಲೆ ತುಂಗಭದ್ರ ಮತ್ತು ಮಲಪ್ರಭ ನದಿಗಳ ಜಲಾನಯನ ಪ್ರದೇಶದಲ್ಲಿದೆ. ಮಲಪ್ರಭ ನದಿ ಜಿಲ್ಲೆಯ ಉತ್ತರ ಗಡಿಯಲ್ಲಿ ಸು. 32 ಕಿಮೀ ದೂರ ಹರಿಯುತ್ತದೆ. ಅದರ ಮುಖ್ಯ ಶಾಖೆ ಬೆಳಿಹಳ್ಳ ಶಿಗ್ಗಾಂವಿ ತಾಲ್ಲೂಕಿನ ದುಂಡಸಿ ಗ್ರಾಮದ ಹತ್ತಿರ ಹುಟ್ಟಿ ಹುಬ್ಬಳ್ಳಿ, ನವಲಗುಂದ ಮತ್ತು ರೋಣ ತಾಲ್ಲೂಕುಗಳಲ್ಲಿ ಉತ್ತರಕ್ಕೆ 192 ಕಿಮೀ ಹರಿದು ಮೆಣಸಿಗೆ ಹತ್ತಿರ ಮಲಪ್ರಭ ನದಿಯನ್ನು ಸೇರುತ್ತದೆ. ಗೂಗಿಹಳ್ಳ, ಕುಪ್ಪರಿಹಳ್ಳ, ಹಂದಿಗನ ಹಳ್ಳ ಮೊದಲಾದವು, ಬೆಳ್ಳಿಹಳ್ಳದ ಶಾಖೆಗಳು. ಹಿರೇಹಳ್ಳ, ಗದಗ ಮತ್ತು ರೋಣ ತಾಲ್ಲೂಕುಗಳಲ್ಲಿ ಹರಿದು ಬೆಲೇರಿಯ ಹತ್ತಿರ ಮಲಪ್ರಭ ನದಿಯನ್ನು ಸೇರುತ್ತದೆ. ಶಾಲ್ಮಲ ನದಿ ಧಾರವಾಡದ ಹತ್ತಿರ ಸೋಮೇಶ್ವರದಲ್ಲಿ ಹುಟ್ಟಿ ಬೇಡತಿ ಹಳ್ಳವನ್ನು ಕೂಡುತ್ತದೆ. ವರದ ನದಿಯ ಉಪನದಿ ಧಮ್ಮ. ಅದು ಕೂಡಲ ಗ್ರಾಮದ ಹತ್ತಿರ ವರದ ನದಿಯನ್ನು ಸೇರುತ್ತದೆ. ಕುಮುದ್ವತಿ ನದಿ ಹಿರೆಕೆರೂರು ಮತ್ತು ರಾಣೆಬೆನ್ನೂರು ತಾಲ್ಲೂಕುಗಳಲ್ಲಿ ಸು. 32 ಕಿಮೀ ಪೂರ್ವಕ್ಕೆ ಹರಿದು ಹೊಳೆ ಅನವೇರ ಹತ್ತಿರ ತುಗಾಭದ್ರ ನದಿಯನ್ನು ಕೂಡುತ್ತದೆ.

ಈ ಜಿಲ್ಲೆಯಲ್ಲಿ ಬೇಡತಿ ಹಳ್ಳ ಮಾತ್ರ ಅರಬ್ಬೀ ಸಮುದ್ರದ ಕಡೆಗೆ ಪಶ್ಚಿಮಕ್ಕೆ ಹರಿಯುತ್ತದೆ. ಉಳಿದ ಮುಖ್ಯ ಹೊಳೆಹಳ್ಳಗಳು ಪೂರ್ವಾಭಿಮುಖವಾಗಿ ಹರಿಯುತ್ತವೆ. ಜಿಲ್ಲೆಯ ಮುಖ್ಯ ಕೆರೆಗಳೆಂದರೆ ನೀರಸಾಗರ, ಉಣಕಲ್ಲು, ಮಾದಿಗ–ಮಾಸೂರು, ಹಿರೇಕೆರೂರು, ಹಾವೇರಿ, ಅಸುಂಡಿ, ಮೆಡ್ಲೇರಿ, ಡಂಬಳ, ಹತ್ತಿಮತ್ತೂರು, ಸವಣೂರು, ಮಾಗಡಿ ಮತ್ತು ಕೆಲಗೇರಿ.

ಭೂರಚನೆ: ಜಿಲ್ಲೆಯ ಈಶಾನ್ಯ ಭಾಗದಲ್ಲಿ ಕಲಾದಗಿ ಶಿಲಾಶ್ರೇಣಿಗೆ ಸೇರಿದ ಮರಳುಗಲ್ಲು ಹರಡಿದೆ. ಅದು ನರಗುಂದ ಮತ್ತು ನವಲಗುಂದ ಗುಡ್ಡಗಳ ನೆತ್ತಿಯ ಮೇಲೂ ಕಂಡು ಬರುತ್ತದೆ. ಲ್ಯಾಟರೈಟ್ ಶಿಲೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಹರಡಿದೆ. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ವಿಶೇಷ. ಧಾರವಾಡ ಶಿಲಾಶ್ರೇಣಿಗೆ ಸೇರಿದ ಶಿಲೆಗಳು ಮುಖ್ಯವಾಗಿ ಜಿಲ್ಲೆಯ ಮಧ್ಯ, ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿವೆ. ಡೋಣ ಗ್ರಾಮದ ಹತ್ತಿರ ವಿಸ್ತಾರವಾದ ಸುಣ್ಣಕಲ್ಲಿನ ಪ್ರದೇಶವಿದೆ. ಗ್ರಾನೈಟ್ ಮತ್ತು ನೀಸ್ ಶಿಲೆಗಳು ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲಿ ಹರಡಿವೆ.

ಮಣ್ಣುಗಳು: ಧಾರವಾಡ ಜಿಲ್ಲೆಯ ಮಣ್ಣುಗಳೂ ಎಲ್ಲ ಪ್ರಕಾರದ ವಿಭಜಿತ ಶಿಲೆಗಳ ಮಿಶ್ರಣದಿಂದಾಗಿದೆ. ಎರೆ, ಹುಳಕೆರೆ, ಕೆಂಪು, ಮಸಾರಿಮಣ್ಣು, ಮಡಿಕಟ್ಟು ಮಣ್ಣು ಮತ್ತು ರೇವೆ ಮಣ್ಣು ಮುಖ್ಯವಾದವು. ಎರೆಮಣ್ಣು, ನವಲಗುಂದ, ರೋಣ, ಗದಗ, ಹುಬ್ಬಳಿಯ ಪೂರ್ವಭಾಗ ಶಿರಹಟ್ಟಿಯ ಪಶ್ಚಿಮ ಭಾಗ, ಕುಂದಗೋಳದ ಪೂರ್ವಭಾಗದಲ್ಲಿದೆ. ಹುಳಕೆರೆ ಮಣ್ಣು ಮುಖ್ಯವಾಗಿ ಗಡಿನಾಡಿನಲ್ಲಿ ಧಾರವಾಡದ ಪೂರ್ವಭಾಗ, ಹುಬ್ಬಳ್ಳಿಯ ಪಶ್ಚಿಮಭಾಗ, ಕೆಂಪುಮಣ್ಣು ಉತ್ತರ ಭಾಗದ ಹೊರತಾಗಿ ಜಿಲ್ಲೆಯ ಎಲ್ಲ ಭಾಗಗಳ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿದೆ. ಗಡಿನಾಡಿನಲ್ಲಿ ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣಿದೆ.

ಸಸ್ಯ ಮತ್ತು ಪ್ರಾಣಿ ಸಂಪತ್ತು: ಜಿಲ್ಲೆಯಲ್ಲಿ ಮಾನ್ಸೂನ್ ಕಾಡು, ಮುಳ್ಳಿನ ಗಿಡ ಮತ್ತು ಕುರುಚಲು ಕಾಡುಗಳು ಮುಖ್ಯವಾಗಿವೆ. ಮಾನ್ಸೂನ್ ಕಾಡು ಮಲೆನಾಡಿಗೆ ಸೀಮಿತ. ಈ ಕಾಡುಗಳಲ್ಲಿ ಮುಖ್ಯವಾದ ಮರ ತೇಗ. ಮರಗಳು ಸಾಮಾನ್ಯವಾಗಿ 9 ರಿಂದ 12 ಮೀ ಎತ್ತರವಾಗಿ ಬೆಳೆಯುತ್ತವೆ. ಕಲಘಟಗಿ ಮತ್ತು ತಡಸ – ಇವುಗಳ ಸುತ್ತ ಅರಣ್ಯ ಸಾಂದ್ರವಾಗಿವೆ. ಆದರೆ ಅವು ಪೂರ್ವಕ್ಕೆ ಹೋದಂತೆ ಕಡಿಮೆ ಎತ್ತರದವುಗಳಾಗಿ ವಿರಳವಾಗುತ್ತವೆ. ನದಿ ದಂಡೆಗಳ ಉದ್ದಕ್ಕೂ ಬಿದಿರು ಮೆಳೆಗಳು ಕಂಡು ಬರುತ್ತವೆ. ಮಾನ್ಸೂನ್ ಕಾಡುಗಳಲ್ಲಿ ಮಾವು, ಹಲಸು, ಹುಣಸೆ, ಅರಳಿ, ಆಲ ಮತ್ತು ಸಿರಸಲ ಮರ ಹೆಚ್ಚಾಗಿ ಬೆಳೆಯುತ್ತವೆ. ಮುಳ್ಳುಕಾಡಿನಲ್ಲಿ ಜಾಲಿಮರ ಹೆಚ್ಚು. ಇವು ಬೆಳವಲನಾಡಿನಲ್ಲಿ ಕಂಡುಬರುತ್ತವೆ. ಗಜೇಂದ್ರಗಢ ಗುಡ್ಡದಲ್ಲಿ ಕುರುಚಲು ಕಾಡುಂಟು. ಈ ಪ್ರದೇಶ ಶುಷ್ಕ, ಕೆಳದರ್ಜೆ ಮಣ್ಣಿನಿಂದ ಕೂಡಿರುತ್ತದೆ.

ಧಾರವಾಡ ಕಲಘಟಗಿ, ಶಿಗ್ಗಾವಿ ಮತ್ತು ಹಾನಗಲ್ಲು ಕಾಡುಗಳಲ್ಲಿ ಹುಲಿಗಳು ಹೆಚ್ಚು. ಮಲೆನಾಡಿನ ಉಳಿದ ಭಾಗಗಳಲ್ಲಿ ಚಿರತೆ, ಕರಡಿ, ಕಾಡುಹಂದಿ, ಕಾಡುಕೋಣ, ತೋಳ ಮತ್ತು ನರಿಗಳೂ ಹೆಚ್ಚಾಗಿವೆ. ಕಪ್ಪತಗುಡ್ಡ ಮತ್ತು ಕಡೂರುಗುಡ್ಡಗಳಲ್ಲಿ ತೋಳ, ನರಿ, ಕಾಡುಬೆಕ್ಕು, ಮೊಲ, ಚಿಗರೆ ವಿಶೇಷವಾಗಿವೆ. ಎತ್ತು, ಎಮ್ಮೆ, ಆಕಳು ಮತ್ತು ಕುರಿ ಸಾಕು ಪ್ರಾಣಿಗಳು.

ವಾಯುಗುಣ: ವಾಯುಗುಣ ಹಿತಕರವಾಗಿದೆ. ವರ್ಷದಲ್ಲಿ ನಾಲ್ಕು ಋತುಗಳನ್ನು ಕಾಣಬಹುದು. ಫೆಬ್ರವರಿ ಕೊನೆಯಿಂದ ಮೇ ಕೊನೆಯವರೆಗೆ ಬಿಸಿಲುಕಾಲ, ಜೂನ್–ಸೆಪ್ಟೆಂಬರ್ ಮುಂಗಾರು ಮಳೆಗಾಲ. ಅಕ್ಟೋಬರ್ ನವೆಂಬರ್‌ನಲ್ಲಿ ಈಶಾನ್ಯ ಮಾರುತಗಳ ಮಳೆಗಾಲ ಹಾಗೂ ಡಿಸೆಂಬರ್‌ನಿಂದ ಫೆಬ್ರವರಿ ಮಧ್ಯದವರೆಗೆ ಚಳಿಗಾಲ, ಏಪ್ರಿಲ್, ಮೇ ತಿಂಗಳುಗಳಲ್ಲಿ ಗರಿಷ್ಠ ಉಷ್ಣತೆಯಿರುತ್ತದೆ. ಆಗ ಉಷ್ಣತೆ $42^0$ಸೆ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 96 ಸೆಂಮೀ ಪಶ್ಚಿಮದ ಮಲೆನಾಡು ಪ್ರದೇಶದಲ್ಲಿ 90 ಸೆಂಮೀ ಹೆಚ್ಚು, ಪೂರ್ವ ಭಾಗದಲ್ಲಿ 50–60 ಸೆಂಮೀನಷ್ಟಿರುತ್ತದೆ.

ನೀರಾವರಿ: ಜಿಲ್ಲೆಯಲ್ಲಿ ನಿವ್ವಳ ನೀರಾವರಿ ಪ್ರದೇಶ 37,132 ಹೆ. ಇದರಲ್ಲಿ ಕಾಲುವೆ, ಕೆರೆ, ಬಾವಿ, ಕೊಳವೆಬಾವಿ ಮುಂತಾದವುಗಳಿಂದ ನೀರಾವರಿ ಸೌಲಭ್ಯವಿದೆ. ಕಾಲುವೆ ನೀರಾವರಿಯಿಂದ ಹೆಚ್ಚು ಪ್ರದೇಶಕ್ಕೆ ಅನುಕೂಲವಾಗಿದೆ. ಶೇ. 62.40 ರಷ್ಟು ಪ್ರದೇಶ ಈ ನೀರಾವರಿ ಸೌಲಭ್ಯ ಪಡೆದಿದೆ. ಕೊಳವೆಬಾವಿ ಎರಡನೆಯ ಸ್ಥಾನದಲ್ಲಿದ್ದು ಶೇ. 37.12 ರಷ್ಟು ಭೂಮಿಗೆ ಇದರಿಂದ ನೀರೊದಗುತ್ತದೆ. ಕೆರೆಯಿಂದ ಶೇ.0.17 ಮತ್ತು ಇತರ ಮೂಲಗಳಿಂದ ಶೇ.30 ಪ್ರದೇಶ ನೀರಾವರಿ ಸೌಲಭ್ಯ ಪಡೆದಿದೆ.

ಕೃಷಿ : ಜಿಲ್ಲೆಯ ಶೇ.70 ರಷ್ಟು ಜನರ ಕಸುಬು ಬೇಸಾಯ. ಶೇ.80 ರಷ್ಟು ಸಾಗುವಳಿ ಭೂಮಿಯಿದೆ. ಜೋಳ, ಬತ್ತ, ಮುಸುಕಿನ ಜೋಳ ಮತ್ತು ಗೋದಿ ಪ್ರಮುಖ ಆಹಾರ ಬೆಳೆಗಳು. ಹತ್ತಿ, ಶೇಂಗ, ಮೆಣಸಿನಕಾಯಿ, ಕಬ್ಬು ಮತ್ತು ಕುಸುಬೆ ಮುಖ್ಯ ಆಹಾರೇತರ ಬೆಳೆಗಳು. ಜೋಳವನ್ನು ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತದೆ. ಜೋಳವನ್ನು ಶೇ. 28.95 ಪ್ರದೇಶದಲ್ಲೂ (ಒಟ್ಟು ಆಹಾರ ಧಾನ್ಯಗಳ ಪ್ರದೇಶದಲ್ಲಿ) ಶೇ.20.73 ಪ್ರದೇಶದಲ್ಲಿ ಗೋದಿಯನ್ನು, ಶೇ.11.63 ಪ್ರದೇಶದಲ್ಲಿ ಬತ್ತವನ್ನು ಶೇ.3.80 ಪ್ರದೇಶದಲ್ಲಿ ಮುಸುಕಿನ ಜೋಳವನ್ನು, ಶೇ.32.81 ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನು

ಬೆಳೆಯಲಾಗುತ್ತಿದೆ. ಜೋಳದ ಬೇಸಾಯ ಜಿಲ್ಲೆಯ ತಾಲ್ಲೂಕಿನಲ್ಲೂ ಕಂಡು ಬರುತ್ತದೆ. ಆದರೆ ಧಾರವಾಡ ತಾಲ್ಲೂಕಿನಲ್ಲಿ ಗೋದಿಯ ಬೇಸಾಯ ಹೆಚ್ಚಾಗಿ ನವಲಗುಂದದಲ್ಲೂ ಧಾರವಾಡ ಮತ್ತು ಕಲಘಟಗಿಯಲ್ಲಿ ಹೆಚ್ಚಾಗಿ ಬತ್ತವನ್ನು ಬೆಳೆಯಲಾಗುತ್ತದೆ. ದ್ವಿದಳ ಧಾನ್ಯಗಳ ಬೇಸಾಯವು ನವಲಗುಂದ, ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಕಂಡುಬರುತ್ತದೆ. ಕಬ್ಬು ಗಡಿನಾಡಿನ ಬೆಳೆ.

ಖನಿಜ: ಇಲ್ಲಿ ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸುವ ಕಲ್ಲುಗಳನ್ನುಳಿದು ಬೇರಾವ ಪ್ರಮುಖ ಖನಿಜಗಳೂ ಉಪಲಬ್ಧವಿಲ್ಲ.

ಕೈಗಾರಿಕೆ: ಧಾರವಾಡ ಜಿಲ್ಲೆ ಹತ್ತಿಯ ಕೈಗಾರಿಕೆಗೆ ಪ್ರಸಿದ್ಧವಾಗಿದೆ. ಹುಬ್ಬಳ್ಳಿ, ಗದಗ, ನರಗುಂದ ಈ ಕೈಗಾರಿಕೆಯ ಕೇಂದ್ರಗಳಾಗಿವೆ. ನರಗುಂದ ಮತ್ತು ಹುಲಕೋಟೆಗಳಲ್ಲಿ ನೂಲಿನ ಗಿರಣಿಗಳಿವೆ. ಧಾರವಾಡ ಜಿಲ್ಲೆ ಕೈಮಗ್ಗದ ಕೈಗಾರಿಕೆಗೆ ಪ್ರಸಿದ್ಧ. ಕಂಬಳಿ ನೇಯುವ, ಜಮಖಾನ ತಯಾರಿಸುವ, ಎಣ್ಣೆಯ ಗಾಣ, ಮರಗೆಲಸ, ಪ್ಲೈವುಡ್, ಸಾಮಾನ್ಯ ಯಂತ್ರೋಪಕರಣ, ತಾಮ್ರ ಮತ್ತು ಹಿತ್ತಾಳೆ ಪಾತ್ರೆ ತಯಾರಿಸುವ ಕಾರ್ಖಾನೆ, ಗಡಿಯಾರ, ಸಿಮೆಂಟ್ ಕೊಳವೆ ಕಾರ್ಖಾನೆ ಮುಂತಾದ ಕೈಗಾರಿಕೆಗಳು ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುತ್ತವೆ.

ವಾಣಿಜ್ಯ: ಜಿಲ್ಲೆಯ ಬಹುಪಾಲು ಜನರ ಜೀವನೋಪಾಯ ವ್ಯಾಪಾರ. ಹುಬ್ಬಳ್ಳಿ ಧಾರವಾಡ ಪ್ರಮುಖ ವಾಣಿಜ್ಯ ಕೇಂದ್ರ, ಮೆಣಸಿನಕಾಯಿ, ಪಾತ್ರೆಗಳು, ಬೆಣ್ಣೆ, ಗೋದಿ, ಜೋಳ, ಶೇಂಗಾ ಇಲ್ಲಿನ ಮುಖ್ಯ ವಾಣಿಜ್ಯ ಸರಕುಗಳು.

ಸಾರಿಗೆ ಮತ್ತು ಸಂಪರ್ಕ: ಧಾರವಾಡ ಜಿಲ್ಲೆಯಲ್ಲಿ ಮೀರಜ್–ಬೆಂಗಳೂರು ರೈಲುಮಾರ್ಗ ಮುಖ್ಯವಾದದ್ದು. ಅಳ್ನಾವರ (ಅಳಣಾವರ), ಧಾರವಾಡ, ಹುಬ್ಬಳ್ಳಿ, ಕುಂದಗೋಳ, ಗುಡಿಗೇರಿ, ಸವಣೂರು – ಇವು ಮುಖ್ಯ ರೈಲು ನಿಲ್ದಾಣಗಳು. ಹುಬ್ಬಳ್ಳಿ, ಗದಗ ಮತ್ತು ಅಳ್ನಾವರ ಮುಖ್ಯ ರೈಲ್ವೆ ಜಂಕ್ಷನ್‌ಗಳು. ಜಿಲ್ಲೆಯಲ್ಲಿ 151 ಕಿಮೀ ಬ್ರಾಡ್‌ಗೇಜ್ ರೈಲುಮಾರ್ಗವಿದೆ.

ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಮುಖ್ಯ ಜಿಲ್ಲಾ ರಸ್ತೆಗಳು ಮತ್ತು ಇತರ ಜಿಲ್ಲಾ ರಸ್ತೆಗಳಿವೆ. ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ, ತೇಗೂರು, ಧಾರವಾಡ, ಹುಬ್ಬಳ್ಳಿ, ಶಿಗ್ಗಾವಿ, ಬಂಕಾಪುರ ಮತ್ತು ರಾಣೆಬೆನ್ನೂರಿನ ಮೇಲೆ ಹಾಯ್ದುಹೋಗಿವೆ. ಜಿಲ್ಲೆಯಲ್ಲಿ ಒಟ್ಟು 124 ಕಿಮೀ ಉದ್ದದ ಜಿಲ್ಲಾ ರಸ್ತೆ ಮಾರ್ಗವಿದೆ. ಒಟ್ಟು ಜಿಲ್ಲೆಯ ರಸ್ತೆಮಾರ್ಗದ ಉದ್ದ 4,316 ಕಿಮೀ. ಇದರಲ್ಲಿ 1,127 ಕಿಮೀ ಪಕ್ಕಾ ರಸ್ತೆಮಾರ್ಗವಾಗಿದೆ. ಜಿಲ್ಲೆಯಲ್ಲಿ ಅಂಚೆ ಮತ್ತು ತಂತಿ ಕಚೇರಿಗಳು ವ್ಯಾಪಕವಾಗಿ ಕಂಡುಬರುತ್ತವೆ.

ಧಾರವಾಡ ತಾಲ್ಲೂಕು: ಇದು ಧಾರವಾಡ ಜಿಲ್ಲೆಯಲ್ಲಿ ವಾಯವ್ಯಕ್ಕಿದೆ. ಇದರ ದಕ್ಷಿಣಕ್ಕೆ ಕಲಘಟಗಿ, ಆಗ್ನೇಯಕ್ಕೆ ಹುಬ್ಬಳ್ಳಿ, ಪೂರ್ವಕ್ಕೆ ನವಲಗುಂದ, ತಾಲ್ಲೂಕುಗಳೂ ಉತ್ತರಕ್ಕೆ ಬೆಳಗಾಂವಿ ಜಿಲ್ಲೆಯೂ ಇದೆ.

ಧಾರವಾಡ ತಾಲ್ಲೂಕು ಮಲೆನಾಡಿನ ಭಾಗದಲ್ಲಿದೆ. ಇದು ಅನೇಕ ಗುಡ್ಡ ಹಾಗೂ ಉನ್ನತ ಪ್ರದೇಶದಿಂದ ಕೂಡಿದೆ. ಧಾರವಾಡ ಶಿಲಾಶ್ರೇಣಿಗಳಿಗೆ ಸೇರಿದ ಶಿಲೆಗಳು, ಗ್ರಾನೈಟ್ ಮತ್ತು ನೀಸ್ ಶಿಲೆಗಳಿವೆ. ಶಾಲ್ಮಲ ನದಿಯು ಧಾರವಾಡದ ಸಮೀಪ ಸೋಮೇಶ್ವರದಲ್ಲಿ ಹುಟ್ಟಿ ಬೇಡರೆಹಳ್ಳವನ್ನು ಕೂಡುತ್ತದೆ. ತಾಲ್ಲೂಕಿನ ಪೂರ್ವಭಾಗದಲ್ಲಿ ಹುಳಕೆರೆ ಮಣ್ಣಿದೆ. ಗಡಿನಾಡಿನ ಪ್ರದೇಶದಲ್ಲಿ ಕೆಂಪು ಮತ್ತು ಕಪ್ಪುಮಿಶ್ರಿತ ಮಡಿಕಟ್ಟಿನ ಮಣ್ಣುಂಟು. ಹೆಚ್ಚು ಮಾನ್ಸೂನ್ ಕಾಡುಗಳಿದ್ದು ತೇಗ, ಬೀಟೆ ಮುಂತಾದ ಬೆಲೆಬಾಳುವ ಮರಗಳಿವೆ. ತಾಲ್ಲೂಕಿನ ಕಾಡುಗಳಲ್ಲಿ ಹುಲಿ, ಚಿರತೆ, ಕರಡಿ, ಕಾಡುಹಂದಿ, ಕಾಡುಕೋಣ, ತೋಳ ಮತ್ತು ನರಿ ಮುಖ್ಯಪ್ರಾಣಿಗಳು.

ಧಾರವಾಡ ತಾಲ್ಲೂಕಿನಲ್ಲಿ ಒಟ್ಟು 7,105 ಹೆ. ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಇಲ್ಲಿ ಕೊಳವೆ ಬಾವಿ ಪ್ರಚಲಿತವಾಗಿದೆ. (7031 ಹೆ) ಕೆರೆಗಳಿಂದಲೂ ಸ್ವಲ್ಪ ಮಟ್ಟಿಗೆ ನೀರಾವರಿ ಕಂಡುಬರುತ್ತದೆ. ತಾಲ್ಲೂಕಿನ ಮುಖ್ಯ ಬೆಳೆಗಳೆಂದರೆ ಜೋಳ (20,937 ಹೆ.), ಬತ್ತ (14,152 ಹೆ.), ಗೋದಿ (7,893 ಹೆ.) ಮತ್ತು ಮುಸುಕಿನ ಜೋಳ (4,136 ಹೆ.) ಮುಖ್ಯ ಏಕದಳ ಧಾನ್ಯಗಳಾಗಿವೆ. ಕಡಲೆ, ಎಣ್ಣೆಕಾಳುಗಳು, ತೊಗರಿ, ಕಬ್ಬು, ಹತ್ತಿ, ಸಂಬಾರ ಪದಾರ್ಥಗಳು, ಹಣ್ಣು ಮತ್ತು ತರಕಾರಿ ಇತರ ಮುಖ್ಯ ಬೆಳೆಗಳಾಗಿವೆ. ತಾಲ್ಲೂಕಿನಲ್ಲಿ ಹೆಚ್ಚಾಗಿ ಪಶುಪಾಲನೆಯು ಕಂಡುಬರುತ್ತದೆ. ಧಾರವಾಡದ ಎಮ್ಮೆಗಳು ಹೆಚ್ಚು ಪ್ರಸಿದ್ಧ.

ತಾಲ್ಲೂಕಿನ ಪ್ರಮುಖ ಕೈಗಾರಿಕೆಗಳೆಂದರೆ ಜವಳಿ, ರಾಸಾಯನಿಕ, ಎಂಜಿನಿಯರಿಂಗ್, ಮರಕುಯ್ಯುವ ಮತ್ತು ಪ್ಲೈವುಡ್ ಕಾರ್ಖಾನೆಗಳು. ಎಂಜನಿಯರಿಂಗ್, ವೈದ್ಯಕೀಯ ಕಾನೂನು ಪಾಲಿಟೆಕ್ನಿಕ್ ಮುಂತಾದ ಕಾಲೇಜುಗಳಿವೆ. ಕರ್ನಾಟಕ ವಿಶ್ವವಿದ್ಯಾಲಯವಿದೆ.

ಧಾರವಾಡ ತಾಲ್ಲೂಕು 47 ಕಿಮೀ ಬ್ರಾಡ್‌ಗೇಜ್ ರೈಲುಮಾರ್ಗ 8 ರೈಲು ನಿಲ್ದಾಣಗಳನ್ನು ಹೊಂದಿದೆ. ಇದು 188 ಕಿಮೀ ಉದ್ದದ ರಾಜ್ಯ ಹೆದ್ದಾರಿಯಿದ್ದು ಒಟ್ಟು 1,234 ಕಿಮೀ ಉದ್ದದ ರಸ್ತೆಮಾರ್ಗವಿದೆ.

ಧಾರವಾಡ ನಗರ : ಇದು ಜಿಲ್ಲೆಯ ವಾಯವ್ಯ ಭಾಗಕ್ಕೂ ತಾಲ್ಲೂಕಿನ ಕೇಂದ್ರ ಭಾಗಕ್ಕೂ ಚಾಚಿಕೊಂಡಿದೆ. ಇದು ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಇದು ಶೈಕ್ಷಣಿಕ ಕೇಂದ್ರವೂ ಆಗಿದೆ. ಇದು ಹುಬ್ಬಳ್ಳಿಯೊಡನೆ ಕೂಡಿ ಹುಬ್ಬಳ್ಳಿ–ಧಾರವಾಡ ಅವಳಿನಗರಗಳಾಗಿವೆ (1961).

ಅಕ್ಕಿಗಿರಣಿ, ಮರಗೆಲಸ, ಚಾಪೆ, ಬೀಸಣಿಗೆ, ಬಿದಿರಿನ ಬುಟ್ಟಿ, ಪ್ಲೈವುಡ್ ಕಾರ್ಖಾನೆ, ಸಾಮಾನ್ಯ ಯಂತ್ರೋಪಕರಣ, ಮುದ್ರಣಾಲಯ, ಬೀಡಿ ತಯಾರಿಕೆ, ಮಣ್ಣಿನ ಪಾತ್ರೆ, ಚರ್ಮ ಹದಮಾಡುವುದು, ಟೈವಾಕ್ ಗಡಿಯಾರ, ಎಣ್ಣೆಗಾಣ, ಕೈಮಗ್ಗ ಬಟ್ಟೆ ಮುಂತಾದ ಕಾರ್ಖಾನೆ ಮತ್ತು ಉದ್ದಿಮೆಗಳಿವೆ.

ಪ್ರಸಿದ್ಧ ಕರ್ನಾಟಕ ವಿಶ್ವವಿದ್ಯಾಲಯ ಇಲ್ಲಿದೆ. ಎಂಜಿನಿಯರಿಂಗ್, ಆಕಾಶವಾಣಿ, ಕೃಷಿ ಕಾಲೇಜು, ತರಬೇತಿ ಕಾಲೇಜು, ಮಾನಸಿಕ ರೋಗಿಗಳ ಆಸ್ಪತ್ರೆ ಮುಂತಾದ ಸೌಲಭ್ಯಗಳು ಈ ಪಟ್ಟಣದಲ್ಲಿವೆ. ಧಾರವಾಡ ವೆಂದರೆ ಹೆಬ್ಬಾಗಿಲು ಎಂದರ್ಥ. ಧಾರವಾಡ ಪೇಡಾ ಸಿಹಿತಿನಿಸಿಗೆ ಪ್ರಸಿದ್ಧಿಯಾಗಿದೆ. ಜನಸಂಖ್ಯೆ 6,0,000. (ಬಿ.ಸಿ.ಕೆ.)

**ಧಾರವಾಡ ಶಿಲಾವರ್ಗ:** ಧಾರವಾಡದ ಬಳಿ ಇರುವ ಸ್ಫಟಿಕಾತ್ಮಕ ಪದರುಶಿಲೆಗಳ (ಕ್ರಿಸ್ಟಲೈನ್ ಶಿಷ್ಟ್ಸ್) ಭೂವೈಜ್ಞಾನಿಕ ನಾಮಧೇಯ ಧಾರ್ವಾರ್ ಸಿಸ್ಟಮ್. ಆರ್. ಬಿ. ಫುಟ್ ಎಂಬಾತ ನೀಡಿದ (1886) ಹೆಸರಿದು. ಧಾರವಾಡ ಪದರು ಶಿಲೆಗಳು ಅಥವಾ ಧಾರವಾಡಗಳು ಎಂಬುದಾಗಿ ಕೂಡ ಈ ವರ್ಗವನ್ನು ಉಲ್ಲೇಖಿಸುವುದುಂಟು. ಇದು ಶಿಲಾರಸ, ಶಿಲಾಧೂಳು ಮುಂತಾದ ಜ್ವಾಲಾಮುಖೀಯ ವಸ್ತುವಿಶೇಷಗಳಿಂದ ಮಿಶ್ರಿತವಾದ ಪ್ರಸ್ತರೀ(ಪದರು) ಶಿಲಾಸಮುದಾಯ ಎಂದೂ ಈ ಪದರು ಶಿಲಾವರ್ಗ ಗ್ರಾನಿಟಾಯ್ಡ್ ನೈಸ್‌ಗಳ ಭೂಸಂಮರ್ದದಿಂದ ಮಡಚಿ ಛಿದ್ರಗೊಂಡು ನಗ್ನೀಕೃತವಾದ ಬಳಿಕ ಅವುಗಳ ಮೇಲೆ ಸ್ತರಭಂಗವಾಗಿ ಉತ್ಪನ್ನವಾದ ಜಲಜಶಿಲೆಗಳ ರೂಪಾಂತರಗಳೆಂದೂ ಭಾವಿಸಲಾಗಿತ್ತು. ಮುಂದೆ ಈ ವಿಚಾರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದು ಧಾರವಾಡ ಶಿಲಾವರ್ಗದ ಕೆಲವು ಶಿಲೆಗಳಲ್ಲಿ ಜಲಜಶಿಲೆಗಳ ಸ್ವಾಭಾವಿಕವಾದ ರಚನಾಕೃತಿಗಳ ಸಂದೇಹಾತೀತ ಕುರುಹುಗಳು ಸಾಕಷ್ಟು ಇರುವುದು ದೃಢಪಟ್ಟಿತು. ಆದ್ದರಿಂದ ಇಲ್ಲಿನ ಪೆಂಟೆಕಲ್ಲು (ಕಗ್ಲಾಮರೇಟ್), ಸಿಕತಶಿಲೆ (ಮರಳ್ಗಲ್ಲು, ಸ್ಯಾಂಡ್ ಸ್ಟೋನ್), ಗೋಡುಕಲ್ಲು, ಸುಣ್ಣಕಲ್ಲು ಮತ್ತು ಕೆಲವು ವಿಧವಾದ ಪದರು ಶಿಲೆಗಳು ನಿರ್ದಿಷ್ಟವಾಗಿ ಜಲಜಶಿಲೆಗಳ ರೂಪಾಂತರಗಳೆಂದು ನಿರ್ಧರಿತವಾಯಿತು (1905).

ಧಾರವಾಡ ಶಿಲಾವರ್ಗದಲ್ಲಿ ಪ್ರಮುಖವಾಗಿ ನಾಲ್ಕು ಬಗೆಯ ಶಿಲಾ ಪಂಗಡಗಳಿವೆ. 1. ಜ್ವಾಲಾಮುಖಿ ಶಿಲೆಗಳು. 2. ಸ್ಪಟಿಕಾಕೃತಿಯ ಪದರು ಶಿಲೆಗಳು. 3. ರೂಪಗೆಟ್ಟ ಪ್ರಸ್ತರ ಶಿಲೆಗಳು. 4. ಅಂತಸ್ತರಿತ ಶಿಲೆಗಳು. ಧಾರವಾಡ ಶಿಲಾವರ್ಗವನ್ನು ತಳಭಾಗ, ಮಧ್ಯಭಾಗ ಮತ್ತು ಮೇಲುಭಾಗವೆಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

ಧಾರವಾಡ ಶಿಲಾವರ್ಗದ ಕೆಲವು ಶಿಲೆಗಳ ಶುದ್ಧವಯಸ್ಸನ್ನು ವಿಕಿರಣಮಾಪಕ ಸಲಕರಣೆಗಳಿಂದ ಅಳೆಯಲಾಗಿದೆ. ಈ ಪ್ರಕಾರ ಶಿಲಾವರ್ಗದ ಮೇಲುಭಾಗ ಪ್ರಾಯಶಃ 160 ಕೋಟಿಯಿಂದ 200 ಕೋಟಿ ವರ್ಷಗಳ ಹಿಂದೆ ಉತ್ಪನ್ನವಾಯಿತೆಂದೂ ಮಧ್ಯಭಾಗದ ಶಿಲೆಗಳು ಸು. 220 ಕೋಟಿಯಿಂದ 240 ಕೋಟಿ ವರ್ಷಗಳ ಹಿಂದೆ ಉತ್ಪನ್ನವಾದುವೆಂದೂ ತಳಭಾಗ 250 ಕೋಟಿ ವರ್ಷಗಳಿಗಿಂತಲೂ ಹಿಂದೆ ರೂಪುಗೊಂಡಿತೆಂದೂ ಕಂಡುಬಂದಿದೆ. ಅಂದರೆ ಧಾರವಾಡ ಶಿಲಾವರ್ಗ ಸೂಚಿಸುವ ಆದ್ಯಂತ ಕಾಲ ಒಟ್ಟು ಸು. 100 ಕೋಟಿ ವರ್ಷ ಮೀರಿರುವುದಾಗಿ ತೋರುತ್ತದೆ.

ವಿಸ್ತಾರ ಮತ್ತು ಹಂಚಿಕೆ: ಧಾರವಾಡ ಶಿಲಾವರ್ಗ ಈಗಿನ ಕರ್ನಾಟಕ ರಾಜ್ಯದಲ್ಲಿ ಸು. 20,712 ಚ.ಕಿಮೀ ಗಳಷ್ಟು ಪ್ರದೇಶವನ್ನು ಆಕ್ರಮಿಸಿದೆ. ಇದು ಅನೇಕ ನೀಳವಾದ ಇಕ್ಕಟ್ಟು ಪದರುಶಿಲಾಪಟ್ಟಿಗಳಂತೆ ಗ್ರಾನಿಟಿಕ್ ನೈಸ್ ಪ್ರದೇಶಗಳಲ್ಲಿ ಬೇರೆ ಬೇರೆ ಪಟ್ಟಿಗಳಾಗಿ ಹಂಚಿಕೊಂಡಿದೆ. ಇವು ಉದ್ದದಲ್ಲಿ ಸು. 32 ಕಿಮೀ ಗಳಿಂದ 400 ಕಿಮೀ ಗಳು ಮೇಲ್ಪಟ್ಟು ಅಗಲದಲ್ಲಿ ಕೇವಲ 0.8 ಕಿಮೀ ನಿಂದ ಬಲು ಅಗಲವಾದ ಭಾಗಗಳಲ್ಲಿ 32 ಕಿಮೀ ಗಳವರೆಗೂ ಇರುತ್ತವೆ. ಇವನ್ನು ಪದರು ಶಿಲಾ ಪಟ್ಟಿಗಳೆಂದು ಕರೆಯುವುದು ರೂಢಿ. ವರ್ಣನೆಯ ಸಲುವಾಗಿ ಇವನ್ನು ಪಶ್ಚಿಮ, ಮಧ್ಯಪಶ್ಚಿಮ, ಮಧ್ಯ, ಪೂರ್ವ ಮಧ್ಯ ಮತ್ತು ಪೂರ್ವಗಳೆಂದು ಐದು ವಲಯಗಳಾಗಿ ವಿಂಗಡಿಸಿದೆ. ಸಾಧಾರಣವಾಗಿ ಕಪ್ಪು ಹಾರ್ನ್‌ಬ್ಲೆಂಡ್ ಪದರು ಶಿಲೆಗಳು ರಾಜ್ಯದ ಪೂರ್ವ ಪಶ್ಚಿಮ ಮತ್ತು ಮಧ್ಯದಕ್ಷಿಣ ಭಾಗಗಳಲ್ಲಿಯೂ ಕ್ಲೋರೈಟ್ ಮತ್ತು ಅಭ್ರಕ ಪದರು ಶಿಲೆಗಳು ಉತ್ತರ ಮತ್ತು ಮಧ್ಯ ಉತ್ತರ ಪ್ರದೇಶಗಳಲ್ಲಿಯೂ ಇತರ ಸಿಲಿ ಮನೈಟ್ ಕಾರ್ಡಿಯರೈಟ್ ಮುಂತಾದ ಖನಿಜಗಳನ್ನು ಒಳಗೊಂಡ ಪದರು ಶಿಲೆಗಳು ದಕ್ಷಿಣ ಮತ್ತು ಮಧ್ಯ ದಕ್ಷಿಣ ಭಾಗಗಳಲ್ಲಿಯೂ ಹರಡಿರುತ್ತವೆ. ಧಾರವಾಡ ಶಿಲಾವರ್ಗದ ವಿವಿಧ ಶಿಲಾಭೇದಗಳೆಲ್ಲವೂ ಪ್ರತಿಯೊಂದು ವಲಯದ ಪ್ರತಿಯೊಂದು ಪದರುಶಿಲಾ ಪಟ್ಟಿಯಲ್ಲಿಯೂ ಇರುವುದಿಲ್ಲ.

ಶಿಲಾವರ್ಗ ಪರಸ್ಪರ ಸಂಬಂಧ: ಧಾರವಾಡ ಶಿಲಾವರ್ಗವನ್ನು ಹೋಲುವ ಅಧಿಕ ರೂಪಾಂತರಗೊಂಡ ಸ್ಫಟಿಕಾಕೃತಿಯ ಪದರುಶಿಲೆಗಳು ಮತ್ತು ಇತರ ಶಿಲಾ ವಿಭೇದಗಳು ಭಾರತದ ಇತರ ಭಾಗಗಳಲ್ಲಿವೆ. ಅವುಗಳಲ್ಲಿ ಮುಖ್ಯವಾದವು ರಾಜಸ್ತಾನದ ಇರಾವತಿ ಶಿಲಾವರ್ಗ, ಗುಜರಾತಿನ ಚಂಪಾನೇರ್ ವರ್ಗ, ಮಧ್ಯಪ್ರದೇಶದ ಸಾಸರ್ ಸಕೋಲಿವರ್ಗಗಳು; ಬಿಹಾರ, ಒರಿಸ್ಸಗಳ ಕೊಲ್ಹಾನ ಮುಂತಾದ ಶಿಲಾವರ್ಗಗಳು, ಪೂರ್ವಘಟ್ಟಗಳ ಖಾಂಡಲೈಟ್ ಶಿಲಾವರ್ಗ. ಇವುಗಳ ಪೈಕಿ ಅನೇಕವನ್ನು ಸಾಮಾನ್ಯವಾಗಿ ಧಾರವಾಡ ಶಿಲಾವರ್ಗಕ್ಕೆ ಹೋಲಿಸಲಾಗಿದೆ. ಆದರೆ ಅವುಗಳಲ್ಲಿ ಯಾವುವು ಧಾರವಾಡ ಶಿಲಾವರ್ಗದ ಯಾವ ವಿಭಾಗಕ್ಕೆ ಪರಸ್ಪರ ಸಂಬಂಧಪಟ್ಟವು ಎಂಬುದನ್ನು ಖಚಿತವಾಗಿ ತಿಳಿಯಲು ಹೆಚ್ಚಿನ ಪರಿಶೋಧನೆಗಳು ನಡೆಯಬೇಕಾಗಿವೆ.

ಆರ್ಥಿಕ ಖನಿಜಗಳು: ಧಾರವಾಡ ಶಿಲಾವರ್ಗ ಕರ್ನಾಟಕದಲ್ಲಿ ದೊರೆಯುವ ಚಿನ್ನ, ಕಬ್ಬಿಣ, ಕ್ರೋಮಿಯಮ್, ಮ್ಯಾಂಗನೀಸ್, ಸೀಸ ಮತ್ತು ಸುರಮ ಲೋಹ ಖನಿಜಗಳ ಅದಿರುಗಳನ್ನೂ ಕಲ್ನಾರು, ಕುರಂದ, ಗ್ರಾಫೈಟ್, ವಿವಿಧ ಸುಣ್ಣಕಲ್ಲುಗಳು, ಮ್ಯಾಗ್ನಸೈಟ್, ಕಯನೈಟ್, ಸಿಲಿಮನೈಟ್ ಮುಂತಾದ ಅನೇಕ ಲೋಹೇತರ ಉಪಯುಕ್ತ ಖನಿಜಗಳನ್ನೂ ಒಳಗೊಂಡಿದೆ. (ಬಿ.ಆರ್.ಆರ್.)

**ಧೂಮಕೇತು:** ಶಿರಭಾಗಕ್ಕಿಂತಲೂ ಉದ್ದವಾದ, ಅನಿಲಮಯವಾದ ದೇಹವನ್ನು ಹೊಂದಿರುವ ಆಕಾಶಕಾಯ (ಕಾಮೆಟ್). ಕಾಮೆಟ್ ಎಂಬ ಪದ ಗ್ರೀಕ್ ಭಾಷೆಯ ಆಸ್ಟರ್ ಕಾಮೆಟ್ಸ್ ಎಂಬ ಪದದಿಂದ ರೂಪುಗೊಂಡಿದೆ. ಇದರ ಅರ್ಥ ಉದ್ದವಾದ ಕೂದಲನ್ನು ಹೊಂದಿರುವ ನಕ್ಷತ್ರ ಅಥವಾ ತಾರೆ ಎಂದಾಗುತ್ತದೆ. ಧೂಮಕೇತುಗಳು ಸೂರ್ಯನ ಸುತ್ತ ಅತಿ ದೀರ್ಘವಾದ ವೃತ್ತಾಕಾರದಲ್ಲಿ ಚಲಿಸುವ ಆಕಾಶಕಾಯಗಳು. ಇವು ಕ್ಷುದ್ರಗ್ರಹಗಳ ತುಣುಕುಗಳಿಂದ ಉಂಟಾಗಿರಬಹುದು ಎಂಬ ಅಭಿಪ್ರಾಯವಿದೆ. ಧೂಮಕೇತುಗಳು ಗಟ್ಟಿಯಾದ ಶಿಲೆಗಳು, ದೂಳು ಹಾಗೂ ಅನಿಲಗಳಿಂದ ರೂಪುಗೊಂಡಿರುತ್ತವೆ. ಇವುಗಳ ಬಾಲವು ಅಮೋನಿಯ, ಮಿಥೇನ್, ನೀರಾವಿ ಹಾಗೂ ಮಂಜಿನ ಕಣಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ಶಿಲೆಯು ಸಾಮಾನ್ಯವಾಗಿ ನಿಕ್ಕಲ್, ಕಬ್ಬಿಣ ಹಾಗೂ ಸಿಲಿಕಾದ ಅಂಶಗಳನ್ನು ಒಳಗೊಂಡಿರುತ್ತದೆ. ಈ ಧೂಮಕೇತುಗಳ ಮೇಲೆ ಸೂರ್ಯನ ಕಿರಣ ಬಿದ್ದಾಗ ಹೊಳೆಯುತ್ತವೆ.

ದಿಗಂತದಲ್ಲಿ ಧೂಮಕೇತು

ಧೂಮಕೇತುಗಳಿಗೆ ಎರಡು ಪ್ರಮುಖ ಭಾಗಗಳಿವೆ. ಅವುಗಳೆಂದರೆ ತಲೆ ಹಾಗೂ ಬಾಲ. ಅನಿಲ ಹಾಗೂ ಹೆಪ್ಪುಗಟ್ಟಿದ ಹಿಮದಿಂದ ಕೂಡಿರುವ ತಲೆಯಾಕಾರವನ್ನೇ ಕೇಂದ್ರ ಅಥವಾ ಶಿರ ಅಥವಾ ತಲೆ ಎಂದು ಕರೆದರೆ, ಇದರ ಸುತ್ತಲೂ ಹರಡಿರುವ ಅನಿಲದ ರಾಶಿಯನ್ನು ಕೋಮಾ ಎಂದು ಕರೆಯಲಾಗಿದೆ. ಇದಕ್ಕೆ ಅಂಟಿಕೊಂಡಿರುವ ಉದ್ದವಾದ ಎಳೆ ಎಳೆಯಾದ ಹಿಮಕಣಗಳನ್ನೇ ಬಾಲ ಎಂದು ಹೆಸರಿಸಲಾಗಿದೆ. ಧೂಮಕೇತುಗಳು ಗಾತ್ರದಲ್ಲಿ ವ್ಯತ್ಯಾಸವನ್ನು ಹೊಂದಿರುತ್ತವೆ. ಅಲ್ಲದೆ ಕೆಲವು ಅಪವೃತ್ತ ಮತ್ತು ಅತ್ಯಾಪವೃತ್ತ ಪಥದಲ್ಲಿಯೂ ಸುತ್ತುತ್ತವೆ. ಆದರೆ ಸೂರ್ಯನ ಸುತ್ತವ ದಿಕ್ಕಿಗೆ ವಿರುದ್ಧವಾದ ದಿಕ್ಕಿನಲ್ಲಿ ಧೂಮಕೇತುಗಳು ಸುತ್ತುತ್ತವೆ. ಇವುಗಳು ಸು. 3 ವರ್ಷಗಳಿಂದ 3 ಕೋಟಿ ವರ್ಷಗಳಷ್ಟು ಅವಧಿಯಲ್ಲಿನ ವ್ಯತ್ಯಾಸದಲ್ಲಿ ಸೂರ್ಯನನ್ನು ಒಂದು ಸಾರಿ ಸುತ್ತುತ್ತವೆ. ಆದ್ದರಿಂದಲೇ ಎರಡು ವಿಧದ ಧೂಮಕೇತುಗಳನ್ನು ಕಾಣಬಹುದು: ನಿಯತಕಾಲಿಕ ಧೂಮಕೇತುಗಳು –ಪೀರಿಯಾಡಿಕ್ ಕಾಮೆಟ್ಸ್ ಹಾಗೂ ಅನಿಯತಕಾಲಿಕ ಧೂಮಕೇತುಗಳು – ನಾನ್ ಪೀರಿಯಾಡಿಕ್ ಕಾಮೆಟ್ಸ್. ನಿರ್ದಿಷ್ಟ ಕಾಲಾವಧಿಗೆ ಒಮ್ಮೆ ಕಂಡು ಬರುವಂತಹ ಧೂಮಕೇತುಗಳನ್ನು ನಿಯತಕಾಲಿಕ ಧೂಮಕೇತುಗಳು ಎನ್ನಲಾಗಿದೆ. ಇವುಗಳಲ್ಲಿ ಅತಿ ದೊಡ್ಡದು ಹಾಗೂ ಅತಿ ಪ್ರಮುಖವಾದುದು ಹ್ಯಾಲಿ ಧೂಮಕೇತು. ಇದು ಪ್ರತಿ 75.5 ವರ್ಷಗಳಿಗೆ ಒಮ್ಮೆ ಭೂಮಿಗೆ ಗೋಚರಿಸುತ್ತದೆ. ಏಕೆಂದರೆ ಸೂರ್ಯನಿಗೆ ಒಂದು ಸುತ್ತು ಹಾಕಲು ಸು. 75.5 ವರ್ಷಗಳ ಅವಧಿಯನ್ನು ತೆಗೆದುಕೊಳ್ಳುತ್ತದೆ. ಈ ಧೂಮಕೇತುವನ್ನು 1682 ರಲ್ಲಿ ಇಂಗ್ಲೆಂಡ್‌ನ ಎಡ್ಮಂಡ್ ಹ್ಯಾಲಿ ಎಂಬ ಖಗೋಳ ವಿಜ್ಞಾನಿ ಕಂಡುಹಿಡಿದ. ಆದ್ದರಿಂದ ಆತನ ಹೆಸರನ್ನು ಈ ಧೂಮಕೇತುವಿಗೆ ಇಡಲಾಗಿದೆ. ಇದು ಕ್ರಮವಾಗಿ 1758 , 1835, 1910, 1986 ರಲ್ಲಿ ಕಾಣಿಸಿತ್ತು. ಮತ್ತು 2062 ರಲ್ಲಿ ಪುನಃ ಕಾಣಿಸಿಕೊಳ್ಳಲಿದೆ. ಇತ್ತೀಚೆಗೆ ಹೇಲ್ ಬಾಪ್ ಎಂಬ ಧೂಮಕೇತು ಕಾಣಿಸಿಕೊಂಡಿತ್ತು. ಅಲ್ಲದೆ ಡೊನಾಟಿ, ಮೋರ್‌ಹೌಸ್, ಕನ್ನಿಂಗ್ ಹ್ಯಾಂ, ಇಕೆಯಾಸೆಕೆ ಎಂಬ ಧೂಮಕೇತುಗಳು ಕಾಣಿಸಿಕೊಂಡಿವೆ.

ಅನಿಯತಕಾಲಿಕ ಧೂಮಕೇತುಗಳಲ್ಲಿ ಬ್ರೂಕ್ಸ್ ಧೂಮಕೇತು ಪ್ರಮುಖವಾದುದು. ಇದು ಮೊದಲಿಗೆ 29.2 ವರ್ಷಗಳಿಗೆ ಒಮ್ಮೆ ಕಾಣಿಸಿಕೊಳ್ಳುತ್ತಿತ್ತು. ಇದಕ್ಕೆ ಕಾರಣ ಸೂರ್ಯನನ್ನು ಸುತ್ತು ಹಾಕಲು ಇದು ಹೊಂದಿದ್ದ ದೀರ್ಘ ವೃತ್ತಾಕಾರದ ಪಥ. ಆದರೆ ಗುರುಗ್ರಹದ ಆಕರ್ಷಣೆಗೆ ಒಳಗಾಗಿ ತನ್ನ ಪಥದಲ್ಲಿ ಬದಲಾವಣೆ ಮಾಡಿಕೊಂಡಿತು. ಇದರ ಪರಿಣಾಮವಾಗಿ ಈಗ ಪ್ರತಿ 7 ವರ್ಷಗಳಿಗೆ ಒಮ್ಮೆ ಈ ಧೂಮಕೇತು ಕಾಣಿಸಿಕೊಳ್ಳುತ್ತದೆ. ಧೂಮಕೇತುಗಳು ಭೂಮಿಯಿಂದ ಹಲವು ಜ್ಯೋತಿರ್ವರ್ಷದ ಅಂತರವನ್ನು ಹೊಂದಿರುತ್ತವೆ. ಆದರೆ ಭೂಮಿಗೆ ಹತ್ತಿರ ಬಂದಾಗ ಇವು ನಮಗೆ ಗೋಚರಿಸುತ್ತವೆ. ಬಾಹ್ಯಾಕಾಶದಲ್ಲಿ ಧೂಮಕೇತುಗಳು ಒಂದು ವಾರದಿಂದ ಒಂದು ತಿಂಗಳವರೆಗೂ ಇರುತ್ತವೆ. ಅನಂತರ ಮಾಯವಾಗುತ್ತವೆ. 2000 ಇಸವಿಯವರೆಗೆ ಸು. 1500 ಕ್ಕೂ ಹೆಚ್ಚು ಧೂಮಕೇತುಗಳನ್ನು ಕಂಡುಹಿಡಿಯಲಾಗಿದೆ. ಪ್ರತಿವರ್ಷ ಸರಾಸರಿ 9 ಹೊಸ ಧೂಮಕೇತುಗಳನ್ನು ಕಂಡು ಹಿಡಿಯಲಾಗುತ್ತಿದೆ. (ಎನ್.ಎಲ್.)

**ಧೃವೀಯ ಬೆಳವಣಿಗೆ ಸಿದ್ಧಾಂತ :** ಧೃವೀಯ ಬೆಳವಣಿಗೆ ಪರಿಕಲ್ಪನೆಯನ್ನು ಫ್ರೆಂಚ್ ಪ್ರಾದೇಶಿಕ ಅರ್ಥಶಾಸ್ತ್ರಜ್ಞರಾದ ಫ್ರಾನ್ಸಿಸ್ ಪೆರಾಕ್ಸ್‌ರವರು 1955 ರಲ್ಲಿ ಅಭಿವೃದ್ಧಿಪಡಿಸಿದರು (ದಿ ಗ್ರೋಥ್ ಪೋಲ್ ಥಿಯರಿ). ಇವರು ತಮ್ಮ ಸ್ತಂಭ ಬೆಳವಣಿಗೆ ಸಿದ್ಧಾಂತದಲ್ಲಿ ನವೀನ ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆ ಹೇಗೆ ನಿಶ್ಚಲ ಸಮಸ್ಥಿತಿ ಆರ್ಥಿಕ ಬೆಳವಣಿಗೆಯಿಂದ ವಿಚಲಿತವಾಗಿ ತನ್ನ ಬೆಳವಣಿಗೆಯ ಕ್ರಮವನ್ನು ಬದಲಾಯಿಸುತ್ತದೆ ಎಂಬುದರ ಬಗ್ಗೆ ವಿವರಿಸಿದ್ದಾರೆ. ಪೆರಾಕ್ಸ್ ರವರ ಧೃವೀಯ ಬೆಳವಣಿಗೆ ಸಿದ್ಧಾಂತ ಶ್ಯುಂಪೀಟರ್‌ರವರ ನವೀನ ಆವಿಷ್ಕಾರದೊಂದಿಗೆ ಉತ್ಪಾದನಾ ಕ್ರಮದಲ್ಲಿ ಹೇಗೆ ಬೃಹತ್ ಕ್ರಾಂತಿಯಾಗುತ್ತದೆ ಎಂಬುದರ ಪರಿಕಲ್ಪನೆಯ ಮೇಲೆ ಆಧಾರಿತವಾಗಿದೆ. ಉತ್ಪಾದನಾ ಪ್ರಮಾಣ, ಪ್ರಭುತ್ವ ಮತ್ತು ನವೀನ ಆವಿಷ್ಕಾರಗಳಿಗೆ ಪ್ರೇರಣೆ ಮುಂತಾದವುಗಳು ಪೆರಾಕ್ಸ್ ಸಿದ್ಧಾಂತದ ಪ್ರಮುಖ ಲಕ್ಷಣಗಳು. ಈ ಲಕ್ಷಣಗಳಿಂದ ಉದ್ಯಮ ಚಲನೆ, ಪ್ರೇರಣೆ ಮತ್ತು ಪ್ರಮುಖ ಉದ್ಯಮ ಪ್ರೇರಣಾ ಕಲ್ಪನೆಗಳು ಸೃಷ್ಟಿಯಾಗಿವೆ.

ಚಾಲನಾತ್ಮಕ ಪ್ರೇರಣಾ ಉದ್ಯಮದ ಲಕ್ಷಣಗಳೆಂದರೆ, ಇದು ದೊಡ್ಡ ಪ್ರಮಾಣದ ಉದ್ಯಮವಾಗಿದ್ದು, ಹೊಸ ಆವಿಷ್ಕಾರಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದ್ದು, ವೇಗವಾಗಿ ಬೆಳೆಯುವ ಉದ್ಯಮ ಕ್ಷೇತ್ರವಾಗಿದೆ. ಅಲ್ಲದೆ ಇತರ ಉದ್ಯಮ ಕ್ಷೇತ್ರಗಳ ಪ್ರಮಾಣ ಮತ್ತು ತೀವ್ರತೆಯ ಆಂತರಿಕ ಸಂಬಂಧಗಳು ಇತರ ಆರ್ಥಿಕ ಕ್ಷೇತ್ರಗಳ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರುತ್ತವೆ.

ಪ್ರಮುಖ ಪ್ರೇರಣಾ ಉದ್ಯಮ ಲಕ್ಷಣಗಳು ಏಕರೂಪತೆಯಿಂದ ಕೂಡಿರುತ್ತವೆ. ಅವುಗಳೆಂದರೆ ಉನ್ನತ ಮಟ್ಟದ ತಾಂತ್ರಿಕತೆ ಮತ್ತು ಆಂಚನ ಪರಿಣಿತಿ, ಉತ್ಪಾದನೆಗಳಿಗೆ ಹೆಚ್ಚಿನ ಆದಾಯ ಸ್ಥಿತಿಸ್ಥಾಪಕತ್ವ ಬೇಡಿಕೆ, ಸ್ಥಳೀಯ ಗುಣಕ ಪರಿಣಾಮಗಳು, ಇತರ ಕ್ಷೇತ್ರಗಳ ಮೇಲೆ ಬಲವಾದ ಆಂತರಿಕ ಕೈಗಾರಿಕಾ ಸಂಪರ್ಕಗಳು; ಇಂತಹ ಸಂಪರ್ಕಗಳಲ್ಲಿ 2 ವಿಧಗಳು ಕಂಡು ಬರುತ್ತವೆ. ಮುಂಬದಿಯ ಕೊಂಡಿಗಳ ಸಂಪರ್ಕ ವ್ಯೂಹ (ಫಾರ್‌ವರ್ಡ್ ಲಿಂಕೇಜಸ್) ಹಾಗೂ ಹಿಂಬದಿಯ ಕೊಂಡಿಗಳ ಸಂಪರ್ಕ ವ್ಯೂಹ (ಬ್ಯಾಕ್‌ವರ್ಡ್ ಲಿಂಕೇಜಸ್). ಮೊದಲನೆಯ ವಿಧದಲ್ಲಿ ಕೈಗಾರಿಕೆಗಳು, ಬಂಡವಾಳ ಹೂಡಿಕೆಯನ್ನು ಹೆಚ್ಚು ಪ್ರೋತ್ಸಾಹಿಸುವುದರ ಮೂಲಕ ಉತ್ಪಾದನಾಂಗಗಳ ಬೇಡಿಕೆಗಳನ್ನು ವಿಸ್ತಾರಗೊಳ್ಳುವಂತೆ ಮಾಡುತ್ತವೆ. ಆದರೆ ಮುಂಬದಿಯ ಸಂಪರ್ಕಗಳು ಕೈಗಾರಿಕಾ ಸ್ಥಾಪನೆಯ ಅನಂತರದ ಉತ್ಪಾದನಾ ಹಂತಗಳಲ್ಲಿ ಬಂಡವಾಳ ಹೂಡಲು ಹೆಚ್ಚು ಹೆಚ್ಚು ಪ್ರೋತ್ಸಾಹಿಸುವುದಲ್ಲದೆ, ಹೊಸ ಆವಿಷ್ಕಾರಗಳ ಉನ್ನತಿಯ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ. ಆವಿಷ್ಕಾರಗಳಿಂದಾಗಿ ಕೈಗಾರಿಕಾ ಉತ್ಪಾದನಾ ವೆಚ್ಚದಲ್ಲಿ ಇಳಿಮುಖತೆ ಕಂಡುಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಉತ್ಪನ್ನಗಳ ಬೆಲೆಯಲ್ಲಿ ಗಣನೀಯ ಕುಸಿತ ಕಂಡುಬರುತ್ತದೆ. ಕೈಗಾರಿಕಾ ಉತ್ಪನ್ನಗಳು ಕೆಲವು ಕೈಗಾರಿಕೆಗಳಿಗೆ ಆಧಾನ (ಇನ್‌ಪುಟ್)ಗಳಾಗಿ ಬಳಸುವುದರಿಂದ ಗಣನೀಯವಾಗಿ ಬೇಡಿಕೆ ಹೆಚ್ಚಾಗುತ್ತದೆ. ಅಲ್ಲದೆ ಹೊಸ ಆವಿಷ್ಕಾರಗಳು ಕೈಗಾರಿಕೋದ್ಯಮಗಳಲ್ಲಿ ಪ್ರವಹಿಸುವುದರಿಂದ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುತ್ತವೆ.

ಪೆರಾಕ್ಸ್ ರವರ ಸಿದ್ಧಾಂತ ಎರಡು ಪ್ರಮುಖ ವಿಷಯಗಳ ಮೇಲೆ ಆಧಾರಿತವಾಗಿದೆ 1. ಶ್ಯುಂಪೀಟರ್ ಅಭಿವೃದ್ಧಿಸಿದ್ಧಾಂತ, 2. ಅಂತರ ಕೈಗಾರಿಕಾ ಸಂಪರ್ಕ ಸಿದ್ಧಾಂತಗಳು ಮತ್ತು ಕೈಗಾರಿಕಾ ಅಂತರ ಸಂಬಂಧ ಅವಲಂಬನೆ.

ಪೆರಾಕ್ಸ್‌ರವರ ಪ್ರಕಾರ ಬೆಳವಣಿಗೆಯು ಏಕ ಕಾಲದಲ್ಲಿ ಎಲ್ಲ ಕಡೆಯಲ್ಲೂ ಕಂಡುಬರದೆ ಅದು ಕೆಲವು ಬಿಂದುಗಳಲ್ಲಿ ಮಾತ್ರ ಕಂಡುಬರುತ್ತದೆ. ಅಲ್ಲದೆ ಈ ಬೆಳವಣಿಗೆಯ ತೀವ್ರತೆಯು ವ್ಯತ್ಯಯದಿಂದ ಕೂಡಿ, ಇದು ಕಡಲು ಕಾಲುವೆ ರೂಪದಲ್ಲಿ ಚದುರುವಿಕೆಗೊಂದು ಪೂರ್ಣ ಆರ್ಥಿಕತೆಯ ಮೇಲೆ ತನ್ನದೇ ಆದ ಪರಿಣಾಮ ಬೀರುವುದು. ಪೆರಾಕ್ಸ್ ರವರ ಪ್ರಕಾರ ಧೃವೀಯ ಬೆಳವಣಿಗೆಯ ಕೆಲವು ಕೈಗಾರಿಕೆಗಳು ನಗರ ಪ್ರದೇಶದಲ್ಲಿ ಸ್ಥಾನೀಕರಣಗೊಂಡು, ಕೈಗಾರಿಕಾ ಅಭಿವೃದ್ಧಿ ಚಟುವಟಿಕೆಗಳ ಪ್ರಭಾವ ನಿರ್ದಿಷ್ಟಿತ ಪ್ರದೇಶದವರೆಗೆ ವ್ಯಾಪಿಸುತ್ತವೆ. ಯಾವುದೇ ಸ್ಥಳದಲ್ಲಿ ಪ್ರಬಲ ಕೈಗಾರಿಕೆಗಳು ಸ್ಥಾನೀಕರಣಗೊಂಡು, ಸ್ತಂಭ ಪ್ರದೇಶ ಮತ್ತು ಸಮ್ಮಿಳಿತದ ಪ್ರವೃತ್ತಿಯನ್ನು ಪ್ರೋತ್ಸಾಹಿಸುತ್ತವೆ. ಇಂತಹ ಪ್ರವೃತ್ತಿಯ ಬಾಹ್ಯ ಆರ್ಥಿಕತೆಗಳ (ಮಿತವ್ಯಯ) ಪರಿಣಾಮವಾಗಿ ಆರ್ಥಿಕ ಚಟುವಟಿಕೆಗಳು ಸ್ತಂಭದ ಸುತ್ತಲು ಕೇಂದ್ರೀಕರಣಗೊಳ್ಳುತ್ತವೆ. ಬಾಹ್ಯ ಆರ್ಥಿಕತೆಗಳನ್ನು 3 ವಿಧಗಳಾಗಿ ಗುರುತಿಸಬಹುದು. ಅವುಗಳೆಂದರೆ: 1. ಸಣ್ಣ ಉದ್ಯಮದ ಆಂತರಿಕ ಆರ್ಥಿಕತೆಗಳು: ಉತ್ಪನ್ನಗಳ ದರದ ಹೆಚ್ಚಳದಿಂದ ಸರಾಸರಿ ಉತ್ಪಾದನಾ ವೆಚ್ಚ ಕಡಿಮೆಯಾಗುವುದು. ಇಂತಹ ಆರ್ಥಿಕತೆಗಳಿಂದ ಯಾವುದೇ ಉದ್ಯಮ ಸಂಘಟಕ ಪ್ರಯತ್ನಗಳು ಹೆಚ್ಚು ಫಲಕಾರಿಯಾಗಿವೆ.

2. ಆರ್ಥಿಕತೆಗಳು ಉದ್ಯಮಕ್ಕೆ ಬಾಹ್ಯವಾಗಿದ್ದು, ಕೈಗಾರಿಕೆಗೆ ಆಂತರಿಕವಾಗಿರುತ್ತವೆ: ಇವುಗಳಿಗೆ ಸಂಬಂಧಿಸಿದ ಕೈಗಾರಿಕೆಯ ಸ್ಥಾನೀಕರಣವು ಸ್ಥಾನಿಕ ಉದ್ಯಮದ ಸಾಮೀಪ್ಯ ಸಂಪರ್ಕವು ಕೈಗಾರಿಕೆ ವಿಸ್ತಾರಗೊಂಡಂತೆ ನಿರ್ದಿಷ್ಟ ಸನ್ನಿವೇಶದಲ್ಲಿ ಉದ್ಯಮದ ಉತ್ಪನ್ನ ವೆಚ್ಚವು ಕಡಿಮೆಯಾಗುವುದು.

3. ಕೈಗಾರಿಕೆಗಳಿಗೆ ಆರ್ಥಿಕತೆಗಳು ಬಾಹ್ಯವಾಗಿದ್ದು ನಗರ ಪ್ರದೇಶಕ್ಕೆ ಆಂತರಿಕವಾಗಿರುತ್ತವೆ: ಇವುಗಳನ್ನು ನಗರೀಕರಣ ಆರ್ಥಿಕತೆಗಳು ಎಂಬುದಾಗಿ ಕರೆಯಲಾಗುವುದು ಇವುಗಳು ನಗರದ ಶ್ರಮ ಮಾರುಕಟ್ಟೆಗಳ ಅಭಿವೃದ್ಧಿಯನ್ನು ಒಳಗೊಂಡಿದ್ದು ದೊಡ್ಡ ಪ್ರಮಾಣದ ಮಾರುಕಟ್ಟೆ ಅಭಿವೃದ್ಧಿ ಮತ್ತು ವಿಶಾಲ ವ್ಯಾಪ್ತಿಯ ಸೇವೆಗಳ ಲಭ್ಯತೆಗೆ ಅವಕಾಶ ಮಾಡಿಕೊಡುತ್ತವೆ.

ಆಲ್ಬರ್ಟ್ ಓ ಹ್ರೆಶ್ಚಮಾನ್‌ರವರು ತಮ್ಮ ಅಸಮತೋಲನ ಸಿದ್ಧಾಂತದಲ್ಲಿ ಉಲ್ಲೇಖಿಸಿರುವಂತೆ ಸಾಮಾನ್ಯವಾಗಿ ಹೂಡಿಕೆದಾರರು ಸ್ತಂಭ ಬೆಳವಣಿಗೆಯ ಆಸುಪಾಸಿನಲ್ಲಿ ಕೇಂದ್ರಿಕೃತರಾಗುತ್ತಾರೆ, ಆದ್ದರಿಂದ ಒಂದು ರೀತಿಯಲ್ಲಿ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಯಲ್ಲಿ ಅಂದರೆ ಯಾವುದೇ ದೇಶದಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಹಿಂದುಳಿದ ಆರ್ಥಿಕತೆಗಳೆಂಬ ದ್ವಿರೂಪತೆ ಕಂಡು ಬರುವುದು. ಸ್ತಂಭ ಬೆಳವಣಿಗೆ ಸಿದ್ಧಾಂತ ಕಾರ್ಯನೀತಿ ರೂಪಿಸುವಂತಹ ಪರಿಕಲ್ಪನೆಗಳು ಅಂದರೆ ಉದ್ಯಮಗಳ ಪ್ರೇರಣೆ, ಪ್ರಮುಖ ಕೈಗಾರಿಕೆಗಳು, ಕೇಂದ್ರೀಕರಣ, ¸ÀAiÀÄA¸ÀAÀÄ ¸ÀÀ ¥ÀuÁ ÁUÀÀ ÉÆ£À¥ÀÀÄÉ½ ªÉ (ಟಿ.ಎಂ.ಎಂ.)

**ಧ್ರುವ[1]:** ಗೋಳ ಜ್ಯಾಮಿತಿಯಲ್ಲಿ ಗೋಳದ ಮೇಲಿನ ವಿಶಿಷ್ಟವಾದ ಒಂದು ಬಿಂದುವಿನ ಹೆಸರು (ಪೋಲ್). ಗೋಳ ತನ್ನ ಒಂದು ವ್ಯಾಸದ ಸುತ್ತ ಆವರ್ತಿಸುತ್ತಿದ್ದರೆ ಇದರ ಎರಡು ಕೊನೆಯ ಬಿಂದುಗಳಿಗೆ (ಈ ಆವರ್ತನೆಯನ್ನು ಕುರಿತಂತೆ) ಧ್ರುವ ಬಿಂದುಗಳೆಂದು ಹೆಸರಿದೆ. *

**ಧ್ರುವ[2]:** ಭೂಗೋಳದ ಆವರ್ತನೆಯ ಅಕ್ಷ ಹಾದು ಹೋಗುವ ಬಿಂದುಗಳನ್ನು ಉತ್ತರಧ್ರುವ, ದಕ್ಷಿಣ ಧ್ರುವ ಎಂದು ಕರೆಯುತ್ತಾರೆ. ಕಾಂತದ ಕೊನೆಯೂ ಧ್ರುವ. ಇದನ್ನು ಸಾಧಾರಣವಾಗಿ ಕಾಂತೀಯ ಧ್ರುವ (ಮ್ಯಾಗ್ನೆಟಿಕ್ ಪೋಲ್) ಎನ್ನುವುದು ವಾಡಿಕೆ. ಕಾಂತದ ಒಂದು ಕೊನೆಗೆ ಉತ್ತರ ಧ್ರುವವೆಂದೂ ಇನ್ನೊಂದಕ್ಕೆ ದಕ್ಷಿಣ ಧ್ರುವವೆಂದೂ ಹೆಸರು. ಭೂಗೋಳವನ್ನು ಕಾಂತ ಎಂದು ಪರಿಗಣಿಸಿದಲ್ಲಿ ಭೌಗೋಳಿಕ ಉತ್ತರಧ್ರುವವು ಕಾಂತೀಯ ದಕ್ಷಿಣಧ್ರುವವಾಗುವುದು. ಹೀಗೆಯೇ ದಕ್ಷಿಣ ಗೋಳದಧ್ರುವ ಕಾಂತೀಯ ಉತ್ತರ ಧ್ರುವವಾಗುವುದು. ಈ ಧ್ರುವಬಿಂದುಗಳ ಸ್ಥಾನ ಸತತವಾಗಿ ಬದಲಾಗುತ್ತಿರುತ್ತವೆ. *

**ಧ್ರುವ ನಕ್ಷತ್ರ:** ಭೂಮಿಯ ಆವರ್ತಕಾಕ್ಷ ಖಗೋಳವನ್ನು ಸಂಧಿಸುವ ಎರಡು ಸ್ಥಾನಗಳ ಪೈಕಿ ಒಂದಾದ ಉತ್ತರ ಧ್ರುವಬಿಂದುವಿನಿಂದ (ನಾರ್ತ್ ಸೆಲೆಸ್ಟಿಯಲ್ ಪೋಲ್) ಸು. $1^0$ ಚಾಪದ ಮೇಲಿರುವ ನಕ್ಷತ್ರ, ಪೋಲ್ ಸ್ಟಾರ್, ದಿ ನಾರ್ತ್ ಸ್ಟಾರ್, ಪೋಲಾರಿಸ್– ಇವು ಪರ್ಯಾಯ ನಾಮಗಳು. ಇದು ಇಂದು ನಾವು ಲಘುಸಪ್ತರ್ಷಿ ಪ್ರಥಮ (ಅಲ್ಫ ಅರ್ಸೇ ಮೈನಾರಿಸ್) ಎಂದು ಕರೆಯುವ ನಕ್ಷತ್ರವೇ. ಸಪ್ತರ್ಷಿ ನಕ್ಷತ್ರಪುಂಜದ (ಬಿಗ್ ಡಿಪ್ಪರ್) ನಕ್ಷತ್ರಗಳ ಪೈಕಿ $5^0$ ಅಂತರದಲ್ಲಿರುವ ಪ್ರಥಮ ($\alpha$) ಮತ್ತು ದ್ವಿತೀಯ ($\beta$)ಗಳು ಧ್ರುವ ನಕ್ಷತ್ರದೊಡನೆ ಏಕರೇಖಸ್ಥವಾಗಿವೆ. ಚರಕಾಂತಿಯ ಸೀಫೀಯಡ್ ನಕ್ಷತ್ರಗಳ ಪೈಕಿ ಇದೂ ಒಂದು. ರೋಹಿತ ಪ್ರರೂಪದ F7 ವರ್ಗಕ್ಕೆ ಸೇರಿರುವ ಈ ನಕ್ಷತ್ರದ ದೃಗ್ಗೋಚರ ಕಾಂತಿಮಾನ 2.08–2.17. ಕಾಂತಿಮಾನದ ಬದಲಾವಣೆಯ ಅವಧಿ 4 ದಿವಸಗಳು. ಹಳದಿ ಬಣ್ಣದಿಂದ ಹೊಳೆಯುವ ಈ ನಕ್ಷತ್ರದ ಕಾಂತಿ ಸೂರ್ಯನ ಕಾಂತಿಯ 3000 ದಷ್ಟಿದೆ. ಸೂರ್ಯನಿಂದ (ಸ್ಥೂಲವಾಗಿ ನಮ್ಮಿಂದ) ಇದರ ದೂರ 200 ಪಾರ್ಸೆಕ್ಕುಗಳು.

ಭೂಮ್ಯಕ್ಷದ ದಿಕ್ಕು ಕ್ರಮೇಣ ಬದಲಾಗುತ್ತಿರುವುದರಿಂದ ಉಂಟಾಗುವ ಪರಿಣಾಮವಾಗಿ (ಅಯನಾಂಶ–ಪ್ರಿಸೆಷನ್ ಆಫ್ ಈಕ್ವಿನಾಕ್ಸಸ್) ಬೇರೆ ಬೇರೆ ನಕ್ಷತ್ರಗಳೂ ಧ್ರುವನಕ್ಷತ್ರಗಳಾಗಬಲ್ಲವು ಎಂಬುದು ತಿಳಿದಿದೆ. ಹೀಗಾಗಿ ಈಗಿನ ಧ್ರುವನಕ್ಷತ್ರದ ಸ್ಥಾನವನ್ನು ಬೇರೊಂದು ನಕ್ಷತ್ರ ಪಡೆಯುವುದು ಸಾಧ್ಯ. ಇನ್ನು 13,000 ವರ್ಷಗಳಲ್ಲಿ ಅಭಿಜಿತ್ (ವೇಗಾ) ನಕ್ಷತ್ರ ಧ್ರುವನಕ್ಷತ್ರವಾಗುವುದಿದೆ ಎಂದು ಗುಣಿಸಲಾಗಿದೆ, ಈ ನಕ್ಷತ್ರ 2102ನೆಯ ಇಸವಿಯಲ್ಲಿ ಉತ್ತರ ಧ್ರುವ ಬಿಂದುವಿನಿಂದ $0^0 27' 31''.50$ ರಷ್ಟು ದೂರವಿರುವುದೆಂದೂ ತಿಳಿದುಬಂದಿದೆ. *

**ಧ್ರುವಪ್ರಭೆ :** ಪೃಥ್ವಿಯ ಉನ್ನತ ಅಕ್ಷಾಂಶಗಳ ವಾಯುಮಂಡಲದ ಎತ್ತರ ಭಾಗದಲ್ಲಿ ಪ್ರಜ್ವಲಿಸುವ ದೃಶ್ಯ (ಅರೋರ). ಇದು ಭೂಮಟ್ಟದಿಂದ ಸು. 80–500 ಕಿಮೀ ಎತ್ತರದ ವಾಯುಮಂಡಲದಲ್ಲಿ ಏರ್ಪಡುವುದು. ಸೂರ್ಯನಿಂದ ಹೊರಹೊಮ್ಮಿ ಅಂತರ ಗ್ರಹ ಪ್ರವೇಶಕ್ಕೆ ಅವಿರತವಾಗಿ ಹರಿದು ಬರುವ ವಿದ್ಯುದಾವಿಷ್ಟವಾದ ಪ್ರೋಟಾನ್ ಕಣಗಳು ಮತ್ತು ವಾಯುಮಂಡಲದ ಪರಮಾಣ್ವಕ ಮತ್ತು ಉಪಪರಮಾಣ್ವಕ ಕಣಗಳ ನಡುವಣ ಪರಸ್ಪರ ಕ್ರಿಯೆಯಿಂದ ಧ್ರುವಪ್ರಭೆಗಳು ಉತ್ಪತ್ತಿಯಾಗುತ್ತವೆ. ಅತ್ಯಂತ ಎತ್ತರವಾದ ವಾಯುಮಂಡಲದಲ್ಲಿ ಸೌರವಾತ (ಸೋಲಾರ್‌ವಿಂಡ್) ಕೆಲವು ಪರಮಾಣುಗಳ ಮೇಲೆ ವಿದ್ಯುತ್ ಆಗಿ ಹರಿಯುವುದರ ಪರಿಣಾಮವಾಗಿ ಅಯಾನುಗಳು ವಿವಿಧ ವರ್ಣವುಳ್ಳ ಬೆಳಕಿನ ರೂಪದಲ್ಲಿ ಶಾಖವನ್ನು ಪುನರ್ವಿಕಿರಣಗೊಳಿಸುವುದರಿಂದ ಇಂಥ ಆಕರ್ಷಕ ದೃಶ್ಯಗಳು ಗೋಚರವಾಗುತ್ತವೆ. ಇದು ಪೃಥ್ವಿಯ ಕಾಂತೀಯ ಧ್ರುವಗಳ ಸುತ್ತಲಿನ ವಲಯಗಳಲ್ಲಿ ಏರ್ಪಡುವುದು. ಹೀಗಾಗಿ ಧ್ರುವಪ್ರಭೆಗಳೂ (ಧ್ರುವ ಜ್ಯೋತಿ) $65^0$ ಅಕ್ಷಾಂಶಗಳಿಂದಾಚೆಯ ಧ್ರುವಗಳ ಕಡೆಯ ವಲಯಗಳಿಗೆ ಮಾತ್ರ ಗೋಚರ. ಸೌರವಾತ ಕ್ರಿಯೆ ಏನಾದರೂ ತೀವ್ರಗೊಂಡರೆ ಮಧ್ಯ ಅಕ್ಷಾಂಶ ಪ್ರದೇಶಗಳಿಗೂ ದೃಶ್ಯಗೋಚರ ವಿಸ್ತರಿಸುತ್ತದೆ. 1989ರಲ್ಲಿ ಸೌರವಾತ ತೀಕ್ಷ್ಣತೆಯಿಂದಾಗಿ ಬಡಗಣ ಧ್ರುವಪ್ರಭೆಯು $12^0$

ಉತ್ತರ ಅಕ್ಷಾಂಶದವರೆಗೂ ಗೋಚರವಾಗಿತ್ತು. ಇದರ ಪ್ರಭಾಮಂಡಲವು ಫ್ಲಾರಿಡ, ಕಿಂಗ್‌ಸ್ಟನ್ ಮತ್ತು ಜಮೈಕಗಳಿಗೆ ವಿಸ್ತರಿಸಿತ್ತು. ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳಿಗೆ ಗೋಚರಿಸುವ ಧ್ರುವ ಜ್ಯೋತಿಗಳನ್ನು ಅನುಕ್ರಮವಾಗಿ ಬಡಗಣ (ಉತ್ತರ) ಮತ್ತು ತೆಂಕಣ (ದಕ್ಷಿಣ) ಧ್ರುವಪ್ರಭೆಗಳೆಂದು (ಅರೊರ ಬೊರಿಯಾಲಿಸ್ ಮತ್ತು ಅರೊರ ಅಸ್ಟ್ರಾಲಿಸ್) ಕರೆಯುವರು. (ಪಿ.ಎಂ.)

**ಧ್ವಜ:** ಒಂದು ರಾಷ್ಟ್ರದ, ರಾಜ್ಯದ, ರಾಜವಂಶದ, ಸಮುದಾಯದ ಪಡೆಯ, ಸಂಸ್ಥೆಯ ಇಲ್ಲವೇ ಒಬ್ಬ ಅಧಿಕಾರಿಯ ಲಾಂಛನವಾಗಿ ಅಥವಾ ಸಂಜ್ಞೆಗಳ, ಅಲಂಕಾರದ ಇಲ್ಲವೇ ಪ್ರದರ್ಶನದ ಸಾಧನವಾಗಿ ಉಪಯೋಗಿಸಲಾಗುತ್ತಿರುವ ಬಟ್ಟೆಯ ಇಲ್ಲವೇ ಅಂಥದೇ ವಸ್ತುವಿನ ಫಲಕ (ಫ್ಲ್ಯಾಗ್). ಗಾಳಿಯಲ್ಲಿ ನಿರಾಂತಕವಾಗಿ ಹಾರಾಡಲು ಸಾಧ್ಯವಾಗುವಂತೆ ಇದರ ಒಂದು ಬದಿಯನ್ನು ಒಂದು ಸ್ತಂಭಕ್ಕಾಗಲೀ ದಂಡಕ್ಕಾಗಲೀ ಹುರಿಗಾಗಲೀ ಕಟ್ಟಿರುತ್ತಾರೆ. ಧ್ವಜಗಳ ಆಕಾರ, ಆಕೃತಿ ಮತ್ತು ಬಣ್ಣಗಳಲ್ಲಿ ವೈವಿಧ್ಯವಿರಬಹುದಾದರೂ ಅವು ಬಹುತೇಕ ಇರುವುದು ಆಯತಾಕೃತಿಯಲ್ಲಿ. ಒಂದೇ ಆಕೃತಿಯ ಮತ್ತು ಒಂದೇ ಉದ್ದೇಶದ ಧ್ವಜಗಳ ಆಕಾರದಲ್ಲಿ ಹೆಚ್ಚು

ಕಡಿಮೆಯಿರಬಹುದಾದರೂ ಅವುಗಳ ಉದ್ದ ಮತ್ತು ಅಗಲಗಳ ನಡುವಿನ ಪ್ರಮಾಣ ಒಂದೇ ಇರುತ್ತದೆ. ಧ್ವಜಗಳ ಉದ್ದೇಶ ಉಪಯೋಗಗಳಿಗೆ ಅನುಗುಣವಾಗಿ ಅವನ್ನು ರಾಷ್ಟ್ರಧ್ವಜ, ರಾಜ್ಯ ಧ್ವಜ, ರಾಜಧ್ವಜ, ನೌಕಾಧ್ವಜ, ಸೇನಾಧ್ವಜ, ಪಕ್ಷ ಧ್ವಜ ಮುಂತಾಗಿ ವಿಭಾಗಿಸಬಹುದು. ರಾಷ್ಟ್ರದ ಲಾಂಛನ ರಾಷ್ಟ್ರಧ್ವಜ:

ರಾಜ್ಯ, ನೌಕೆ, ಸೇನೆ, ಪಕ್ಷ – ಇವುಗಳ ಲಾಂಛನಗಳನ್ನು ಅನುಕ್ರಮವಾಗಿ ರಾಜ್ಯ, ನೌಕಾ, ಸೇನಾ ಮತ್ತು ಪಕ್ಷಧ್ವಜಗಳು. ಧ್ವಜದ ಉದ್ದೇಶ ಸಫಲವಾಗಬೇಕಾದರೆ ಇದು ನಿರಾತಂಕವಾಗಿ ಗಾಳಿಯಲ್ಲಿ ಹಾರಾಡುವುದು ಅವಶ್ಯವಾದ್ದರಿಂದ ಇದನ್ನು ಹಗುರವಾದ ಸಾಮಗ್ರಿಯಿಂದ ಮಾಡಿರುವುದೂ ಇದರ ಎರಡೂ ಬದಿಗೆ ಒಂದೇ ಬಗೆಯ ಚಿಹ್ನೆಗಳು, ಬಣ್ಣಗಳು ಇದ್ದು ಯಾವ ಬದಿಯಿಂದ ನೋಡಿದರೂ ಇದು ಒಂದೇ ಸಮನಾಗಿ ಕಾಣುವುದೂ ಅವಶ್ಯ. ಆದ್ದರಿಂದ ಸಾಮಾನ್ಯವಾಗಿ ಧ್ವಜಗಳ ಮೇಲೆ ವಾಕ್ಯ, ಪದ ಅಥವಾ ಪದಗುಚ್ಛಗಳನ್ನು ಹಾಕುವುದಿಲ್ಲ. ಸಾದಾ ಚಿತ್ರಾಲಂಕಾರಗಳು ಮಾತ್ರ ಇರುತ್ತವೆ.

ಭಾರತದ ರಾಷ್ಟ್ರಧ್ವಜ: ಭಾರತದ ರಾಷ್ಟ್ರಧ್ವಜದಲ್ಲಿ ಮೇಲಿನಿಂದ ಕೇಸರಿ, ಬಿಳಿ ಮತ್ತು ಹಸುರು – ಹೀಗೆ ಸಮ ಅಗಲದ ಮೂರು ವರ್ಣಗಳ ಅಡ್ಡಪಟ್ಟಿಗಳು ಇವೆ. ಬಿಳಿಯ ಪಟ್ಟಿಯ ಮೇಲೆ ಮಧ್ಯದಲ್ಲಿ 24 ಅರಗಳ ಚಕ್ರವಿದೆ. ಭಾರತ ಸ್ವತಂತ್ರವಾದ ಬಳಿಕ ಇದು 1947 ರಲ್ಲಿ ಬಳಕೆಗೆ ಬಂತು. ಕೇಸರಿ, ಬಿಳಿ ಮತ್ತು ಕಪ್ಪುಹಸುರು ಬಣ್ಣಗಳು ಸಮಪ್ರಮಾಣದಲ್ಲಿರುತ್ತವೆ. ಚಕ್ರದ ರಚನೆ ಸಾರನಾಥದ ಅಶೋಕಸ್ತಂಭದ ಸಿಂಹಶೀರ್ಷದ ಪೀಠದಲ್ಲಿ ಕಾಣುವ ಚಕ್ರದಂತಿದೆ. ಧ್ವಜದ ಎತ್ತರ, ಉದ್ದಗಳ ಪ್ರಮಾಣ 2:3 ಇರುತ್ತದೆ.

ರಾಷ್ಟ್ರಧ್ವಜದ ಪ್ರಾಮುಖ್ಯ : ರಾಷ್ಟ್ರಧ್ವಜ ರಾಷ್ಟ್ರದ ಏಕತೆಯ, ಸ್ವಾತಂತ್ರ್ಯದ ಗುರುತು. ಅದು ಪ್ರಜೆಗಳ ಅಭಿವೃದ್ಧಿ, ಅಭಿಲಾಷೆ ಮತ್ತು ಆದರ್ಶಗಳನ್ನು ಪ್ರತಿನಿಧಿಸುತ್ತದೆ. ಸ್ವರಾಷ್ಟ್ರದಲ್ಲಿ ಅದು ಜನತೆಯ ಮನ್ನಣೆ ಪ್ರೇಮಗಳಿಗೆ ಅರ್ಹವಾಗುತ್ತದೆ. ರಾಷ್ಟ್ರಾಭಿಮಾನ, ಹರ್ಷ, ರಾಷ್ಟ್ರಪ್ರೇಮ, ಆತ್ಮಗೌರವ ಮೊದಲಾದ ಉನ್ನತ ಮನೋಭಾವಗಳನ್ನು ಉದ್ದೀಪಿಸುತ್ತದೆ. ವಿದೇಶಗಳಲ್ಲಿ ಸ್ವತಂತ್ರ ಜನತೆಯ ಲಾಂಛನವೆಂದೂ ಗೌರವ ಪಡೆಯುತ್ತದೆ. ಅನೇಕ ರಾಷ್ಟ್ರಧ್ವಜಗಳು ರಾಷ್ಟ್ರಗಳ ಮುಖ್ಯ ಘಟನೆಗಳನ್ನು, ವಿಚಾರಗಳನ್ನು ತೋರಿಸುತ್ತವೆ. (ಜಿ.ಕೆ.ಯು.)

# ನ

**ನಂಜನಗೂಡು:** ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಒಂದು ತಾಲ್ಲೂಕು ಹಾಗೂ ಈ ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ತಾಲ್ಲೂಕಿನ ಉತ್ತರದಲ್ಲಿ ಮೈಸೂರು, ಪೂರ್ವದಲ್ಲಿ ತಿರುಮಕೂಡಲು ನರಸೀಪುರ ಮತ್ತು ಚಾಮರಾಜನಗರ, ದಕ್ಷಿಣದಲ್ಲಿ ಚಾಮರಾಜನಗರ ಜಿಲ್ಲೆ ಮತ್ತು ಗುಂಡ್ಲುಪೇಟೆ, ಪಶ್ಚಿಮದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕುಗಳಿವೆ. ಬಿಳಿಗೆರೆ, ಚಿಕ್ಕಯ್ಯನ ಛತ್ರ, ಹುಲ್ಲಹಳ್ಳಿ, ದೊಡ್ಡ ಕವಲಂದೆ, ನಂಜನಗೂಡು – ಇವು ಈ ತಾಲ್ಲೂಕಿನ ಹೋಬಳಿಗಳು. ತಾಲ್ಲೂಕಿನಲ್ಲಿರುವ ಗ್ರಾಮಗಳ ಸಂಖ್ಯೆ 188. ಇದರ ವಿಸ್ತೀರ್ಣ 982 ಚ.ಕಿಮೀ, ಜನಸಂಖ್ಯೆ 3,58415.

ತಾಲ್ಲೂಕಿನ ನೆಲ ಈಶಾನ್ಯದ ಕಡೆಗೆ ಇಳಿಜಾರಾಗಿದೆ. ಅಲ್ಲಲ್ಲಿ ಕೆಲವು ಗುಡ್ಡಗಳಿವೆ. ಒಟ್ಟಿನಲ್ಲಿ ಇದು ಮೈದಾನ ಪ್ರದೇಶ. ತಾಲ್ಲೂಕಿನ ಮುಖ್ಯ ನದಿ ಕಪಿಲ. ವಾಯವ್ಯದಲ್ಲಿ ಹೆಗ್ಗಡದೇವನಕೋಟೆ ಮತ್ತು ನಂಜನಗೂಡು ತಾಲ್ಲೂಕುಗಳ ಗಡಿಯಾಗಿ ಹರಿಯುವ ಈ ನದಿ ಅನಂತರ ತಾಲ್ಲೂಕಿನ ಉತ್ತರ ಭಾಗದಲ್ಲಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ನಂಜನಗೂಡು ಪಟ್ಟಣದ ಬಳಿ ಇದರ ಹರಿವು ಈಶಾನ್ಯ ದಿಕ್ಕಿಗೆ ಬದಲಾಗುತ್ತದೆ. ಮುಂದೆ ಈ ನದಿ ತಿರುಮಕೂಡಲು ನರಸೀಪುರ ತಾಲ್ಲೂಕನ್ನು ಪ್ರವೇಶಿಸುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಿಂದ ಹರಿದು ಬರುವ ಗುಂಡ್ಲುಹೊಳೆ ಈ ತಾಲ್ಲೂಕಿನ ನಡುವೆ ಉತ್ತರದ ಕಡೆಗೆ ಮುಂದುವರಿದು ನಂಜನಗೂಡು ಪಟ್ಟಣದಲ್ಲಿ ಕಪಿಲ ನದಿಯನ್ನು ಸೇರುತ್ತದೆ.

ತಾಲ್ಲೂಕಿನ ಬಹುಭಾಗ ಕಣಶಿಲೆ ಮತ್ತು ಫೆಲ್‌ಸ್ಪಾರ್‌ನಿಂದ ಕೂಡಿದ್ದು, ಕೆಂಪು ನುರುಜು ಹಾಗೂ ಕಪ್ಪು ಎರೆಮಣ್ಣುಗಳಿವೆ. ಗುಂಡ್ಲು ಹೊಳೆ ಮಳೆಗಾಲದಲ್ಲಿ ದಡ ಮೀರಿ ಹರಿದು ಇಕ್ಕೆಲಗಳಲ್ಲೂ ಮೆಕ್ಕಲುಮಣ್ಣನ್ನು ತಂದು ತುಂಬುತ್ತದೆ. ಕಪಿಲ ನದಿಯ ದಡಗಳಲ್ಲೂ ಮೆಕ್ಕಲುಮಣ್ಣು ಹರಡಿದೆ. ಕೋಣನೂರಿನ ಬಳಿಯಲ್ಲಿ ಕಲ್ನಾರಿನ ನಿಕ್ಷೇಪವುಂಟು. ಅಂಬಳೆ, ವಳಗೆರೆಗಳಲ್ಲಿ ಚಿನ್ನ ತೆಗೆಯಲಾಗುತ್ತಿತ್ತು. ಗುಂಡ್ಲುಹೊಳೆಯ ದಡಗಳಲ್ಲಿ ಸುಣ್ಣಕಲ್ಲು, ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಮ್ಯಾಗ್ನಸೈಟ್ ಮತ್ತು ಕ್ರೋಮೈಟ್, ವಾಯವ್ಯ ಭಾಗದಲ್ಲಿ ಬಳಪದ ಕಲ್ಲು ಇವೆ. ತಗಡೂರು ಮತ್ತು ಚಿನ್ನಂಬಳ್ಳಿಯಲ್ಲಿ ಅಭ್ರಕವನ್ನು ತೆಗೆಯಲಾಗುತ್ತಿತ್ತು. ತಾಲ್ಲೂಕಿನಲ್ಲಿ ವರ್ಷಕ್ಕೆ ಸರಾಸರಿ ಸು. 59 ಸೆಂಮೀ ಮಳೆಯಾಗುತ್ತದೆ.

ಕಪಿಲ ನದಿಯ ಎಡದಂಡೆಯಲ್ಲಿ ರಾಮಪುರ ನಾಲೆಯೂ ಬಲದಂಡೆಯಲ್ಲಿ ಹುಲ್ಲಹಳ್ಳಿ ನಾಲೆಯೂ ಈ ತಾಲ್ಲೂಕಿನ ಉತ್ತರ ಭಾಗದಲ್ಲಿ ಉದ್ದಕ್ಕೂ ಸಾಗಿ ವಿಶಾಲವಾದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಿವೆ. ನುಗು ಅಣೆಕಟ್ಟಿನಿಂದ ಬರುವ ನಾಲೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಭಾಗಗಳಿಗೆ ನೀರೊದಗಿಸುತ್ತದೆ. ತಾಲ್ಲೂಕಿನಲ್ಲಿ ಕೆರೆಗಳ ಸಂಖ್ಯೆ ಕಡಿಮೆ. ಉತ್ತಮ ನೀರಾವರಿ ಸೌಲಭ್ಯವಿರುವುದರಿಂದ ಬತ್ತ ಈಗ ತಾಲ್ಲೂಕಿನ ಮುಖ್ಯ ಬೆಳೆ. ಸ್ವಲ್ಪಮಟ್ಟಿಗೆ ಕಬ್ಬು, ಕಡಲೆಕಾಯಿ ಮತ್ತು ದ್ವಿದಳ ಧಾನ್ಯಗಳನ್ನೂ ಬೆಳೆಯುತ್ತಾರೆ. ಜೋಳ ಮತ್ತು ರಾಗಿ ಮುಖ್ಯ ಖುಷ್ಕಿ ಬೆಳೆಗಳು. ನೆಲಗಡಲೆ, ದ್ವಿದಳ ಧಾನ್ಯಗಳು, ಹತ್ತಿ ಬೆಳೆಯುತ್ತವೆ. ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ತೆಂಗಿನ ತೋಟಗಳಿವೆ. ನಂಜನಗೂಡಿನ ಸುತ್ತಿನಲ್ಲಿ ಬೆಳೆಯುವ ರಸಬಾಳೆ ಪ್ರಸಿದ್ಧವಾದದ್ದು.

ಈ ತಾಲ್ಲೂಕಿನಲ್ಲಿ ಕೈಗಾರಿಕೆಗಳು ಕಡಿಮೆ. ಆದರೆ ನೆಯ್ಗೆ ಮತ್ತು ರೇಷ್ಮೆ ಉದ್ಯಮಗಳು ಅಲ್ಲಲ್ಲಿ ಇವೆ. ನಂಜನಗೂಡು ಪಟ್ಟಣದಲ್ಲಿ ಕೆಲವು ಕೈಗಾರಿಕೆಗಳುಂಟು. ಮೈಸೂರು–ಚಾಮರಾಜನಗರ ರೈಲುಮಾರ್ಗ ಮತ್ತು ಮೈಸೂರು–ಗುಂಡ್ಲುಪೇಟೆ–ಉದಕಮಂಡಲ ಹೆದ್ದಾರಿ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತದೆ. ಮೈಸೂರು–ಚಾಮರಾಜನಗರ–ತಿರುಚಿನಾಪಳ್ಳಿ ರಸ್ತೆ ನಂಜನಗೂಡು ಪಟ್ಟಣದ ಬಳಿ ಕವಲೊಡೆದು ಸ್ವಲ್ಪ ದೂರ ತಾಲ್ಲೂಕಿನಲ್ಲಿ ಸಾಗುತ್ತದೆ. ನಂಜನಗೂಡಿನಿಂದ ತಿರುಮಕೂಡಲು ನರಸೀಪುರ ಮತ್ತು ಹುಲ್ಲಹಳ್ಳಿಗೂ ಕವಲಂದೆಯಿಂದ ಕೊಳ್ಳೇಗಾಲಕ್ಕೂ ರಸ್ತೆಗಳಿವೆ. ತಾಲ್ಲೂಕಿನಲ್ಲಿ ವಿದ್ಯುತ್ ಸೌಕರ್ಯ ಸಾಕಷ್ಟಿದೆ. ಗ್ರಾಮೀಣ ವಿದ್ಯುತ್ ಸೌಲಭ್ಯ ವ್ಯಾಪಕವಾಗಿರುವುದಲ್ಲದೆ ಅನೇಕ ಕಡೆಗಳಲ್ಲಿ ವಿದ್ಯುತ್‌ಚಾಲಿತ ಪಂಪುಗಳು ಉಪಯೋಗದಲ್ಲಿವೆ. ಹಲವು ಗ್ರಾಮಗಳಲ್ಲಿ ಅಂಚೆ ಮತ್ತು ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇವೆ.

ಈ ತಾಲ್ಲೂಕಿನ ಹದಿನಾರು, ಕಳಲೆ ಇವು ಹಿಂದೆ ಪಾಳೆಯಪಟ್ಟಿನ ಕೇಂದ್ರಗಳಾಗಿದ್ದವು. ಕಳಲೆ, ದೇವನೂರು, ಹೆಡತಲೆ, ಸುತ್ತೂರು – ಈ ಸ್ಥಳಗಳಲ್ಲಿ ಪ್ರಾಚೀನ ದೇವಾಲಯಗಳಿವೆ. ದೇವನೂರು ಮತ್ತು ಸುತ್ತೂರಿನ ವೀರಶೈವ ಮಠಗಳು ಪ್ರಸಿದ್ಧವಾದವು. ಗಂಗರ ಕಾಲದಷ್ಟು ಪ್ರಾಚೀನತೆಯುಳ್ಳ ಇಮ್ಮಾವು ಗ್ರಾಮದಲ್ಲಿ ಶ್ರೀರಾಮನ ದೇವಾಲಯವಿದೆ. ಇಲ್ಲಿ ಚತುರ್ಭುಜ ಲಕ್ಷ್ಮಣ ವಿಗ್ರಹ ಇದೆ. ನಂಜನಗೂಡಿನಿಂದ ಸು. 1 ಕಿಮೀ ಆಗ್ನೇಯದಲ್ಲಿರುವ ನಗರ್ಲೆ ಚೋಳರ ಕಾಲದಿಂದಲೂ ಪ್ರಸಿದ್ಧವಾದ ಊರು. ಇಲ್ಲಿ ಪ್ರಾಚೀನ ದುರ್ಗಾಪರಮೇಶ್ವರಿ ದೇವಾಲಯ ಮತ್ತು ಒಂದು ಜೀರ್ಣವಾದ ಪಾರ್ಶ್ವನಾಥ ಬಸದಿ ಇದೆ. ನೇರಳೆಯಲ್ಲಿ ವೀರಭದ್ರ ದೇವಾಲಯವಿದೆ. ಹೆಮ್ಮರಗಾಲದಲ್ಲಿ ಪ್ರತಿವರ್ಷ ಜಾತ್ರೆ ಜರುಗುತ್ತದೆ. ನಂಜನಗೂಡಿನ ಸಮೀಪದ ಗೋಳೂರಿನ ಬಳಿಯಲ್ಲಿ ಒಂದು ಮೂಲಶಿಕ್ಷಣ ಕೇಂದ್ರ (ವಿದ್ಯಾಪೀಠ) ಇದೆ.

ನಂಜನಗೂಡು ಪಟ್ಟಣ ಮೈಸೂರಿನಿಂದ ದಕ್ಷಿಣ ಆಗ್ನೇಯಕ್ಕೆ 24 ಕಿಮೀ ದೂರದಲ್ಲಿ ಕಪಿಲ ನದಿಯ ಬಲದಂಡೆಯ ಮೇಲಿದೆ. ಇದು ಕರ್ನಾಟಕದ ಮುಖ್ಯ ಯಾತ್ರಾಸ್ಥಳಗಳಲ್ಲೊಂದು. ಜನಸಂಖ್ಯೆ 48220. ಮೈಸೂರು–ಚಾಮರಾಜನಗರ ರೈಲುಮಾರ್ಗದ ಮೇಲೆ ಇದೊಂದು ನಿಲ್ದಾಣ; ಮೈಸೂರು–ಉದಕಮಂಡಲ ಹೆದ್ದಾರಿ ಈ ಮೂಲಕ ಸಾಗುತ್ತದೆ. ಇಲ್ಲಿಂದ ಕೊಯಮತ್ತೂರಿಗೆ ರಸ್ತೆಯಿದೆ. ಇದು ಸುತ್ತಲ ಅನೇಕ ಸ್ಥಳಗಳೊಡನೆ ಉತ್ತಮ ರಸ್ತೆ ಸಂಪರ್ಕ ಹೊಂದಿದೆ. ಈ ಸುತ್ತಿನ ಪ್ರದೇಶಕ್ಕೆ ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಬಟ್ಟೆ ಗಿರಣಿ, ಕಾಗದದ ಕಾರ್ಖಾನೆ, ಔಷಧ ಮತ್ತು ಸುಗಂಧ ದ್ರವ್ಯಗಳ ಕಾರ್ಖಾನೆ, ಅಕ್ಕಿ ಗಿರಣಿಗಳು ಮತ್ತು ಮರ ಕೊಯ್ಯುವ ಕಾರ್ಖಾನೆಗಳು ಇವೆ. ರೇಷ್ಮೆ ವ್ಯಾಪಾರ ಸ್ವಲ್ಪಮಟ್ಟಿಗೆ ನಡೆಯುತ್ತದೆ. ರೇಷ್ಮೆ ನೂಲುವ ಉದ್ಯಮವಿದೆ. ಅಂಚೆ–ತಂತಿ, ದೂರವಾಣಿ, ವಿದ್ಯುತ್ತು, ಸುರಕ್ಷಿತ ನೀರು ಸರಬರಾಜು ವ್ಯವಸ್ಥೆ ಇದೆ. ತಾಲ್ಲೂಕು ಮಟ್ಟದ ಆಸ್ಪತ್ರೆ ಮತ್ತು ಪಶುವೈದ್ಯಶಾಲೆ, ಶಾಲೆಗಳು ಮತ್ತು ಪ್ರಥಮ ದರ್ಜೆ ಕಾಲೇಜು ಹಾಗೂ ಒಂದು ಪಾಲಿಟೆಕ್ನಿಕ್, ಒಂದು ಐಟಿಐ ಸಂಸ್ಥೆ ಇದೆ. ಪೌರಸಭೆ ಇದೆ. ಇಲ್ಲಿ ಪ್ರತಿ ಶುಕ್ರವಾರ ಸಂತೆ ಸೇರುತ್ತದೆ.

ಪ್ರಾಚೀನ ಕಾಲದಿಂದಲೂ ತೀರ್ಥಕ್ಷೇತ್ರವಾಗಿರುವ ನಂಜನಗೂಡು ಉಮ್ಮತ್ತೂರು ಪಾಳೆಯಗಾರರ ಮತ್ತು ಕಳಲೆ ಅರಸರ ಕಾಲದಲ್ಲಿ ಉಚ್ಛ್ರಾಯಸ್ಥಿತಿಗೆ ಬಂತು. ಸುಮಾರು ಈ ಕಾಲಕ್ಕೆ ಸೇರಿದ ಕೋಟೆಯ ಅವಶೇಷಗಳನ್ನು ಊರಿನ ದಕ್ಷಿಣ ಭಾಗದಲ್ಲಿ ಮತ್ತು ಗುಂಡ್ಲು ಹೊಳೆಯ ದಡದಲ್ಲಿ ಗುರುತಿಸಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೊರಕಿದ ವಿಶೇಷ ಪ್ರೋತ್ಸಾಹದಿಂದ ನಂಜನಗೂಡು ವಿಶೇಷವಾಗಿ ಬೆಳೆಯಿತು.

ನಂಜನಗೂಡು ಪ್ರಸಿದ್ಧವಾಗಿರುವುದು ಇಲ್ಲಿಯ ಶ್ರೀಕಂಠೇಶ್ವರ (ನಂಜುಂಡೇಶ್ವರ) ದೇವಾಲಯದಿಂದ. ಕರ್ನಾಟಕದ ಶ್ರೀಮಂತ ದೇವಾಲಯಗಳಲ್ಲಿ ಒಂದಾಗಿರುವ ಇದು ಊರಿನ ಪೂರ್ವದ ಅಂಚಿನಲ್ಲಿ ಕಪಿಲ ಮತ್ತು ಗುಂಡ್ಲುಹೊಳೆಯ (ಕೌಂಡಿಣ್ಯ ನದಿ) ಸಂಗಮದ ಬಳಿ ಪೂರ್ವಾಭಿಮುಖವಾಗಿದೆ. ನದಿಗಳಲ್ಲಿ ಪ್ರವಾಹ ಬಂದಾಗ ದೇವಾಲಯದಿಂದ ಕೇವಲ 90 ಮೀ ದೂರದವರೆಗೆ ಸಂಗಮದಲ್ಲಿ ನೀರು ಬರುತ್ತದೆ. ಶ್ರೀಕಂಠೇಶ್ವರ ದೇವಾಲಯ ದ್ರಾವಿಡ ಶೈಲಿಯ ಕಟ್ಟಡ. ಇದು 117 ಮೀ ಉದ್ದ, 48 ಮೀ ಅಗಲ ಇದೆ. ಇದರಲ್ಲಿ 147 ಕಂಬಗಳಿವೆ. ಇದರ ಒಟ್ಟು ಆಚ್ಛಾದಿತ ಪ್ರದೇಶ 4,831 ಚ.ಮೀ. ಇದು ಕರ್ನಾಟಕದಲ್ಲೇ ಅತ್ಯಂತ ದೊಡ್ಡ ದೇವಸ್ಥಾನ. ಹೊರಗೋಡೆಗಳು ಸು. 3.7 ಮೀ ಎತ್ತರವಾಗಿವೆ. ಸುತ್ತಲೂ ದಕ್ಷಿಣ, ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಅಧಿಷ್ಠಾನ, ಹಿಂದೆ ಗೋಡೆ, ಮುಂದೆ ಕಂಬಸಾಲಿರುವ ಕೈಸಾಲೆ ಇವೆ (ಈಗ ದಕ್ಷಿಣದ ಕೈಸಾಲೆಯನ್ನು ಪೂರ್ಣವಾಗಿಯೂ ಉತ್ತರದ್ದನ್ನು ಸ್ವಲ್ಪ ಭಾಗಗಳಲ್ಲಿಯೂ ಮುಚ್ಚಲಾಗಿದೆ). ಮೇಲೆ ಸುತ್ತಲೂ ದೇವ ಮತ್ತು ಇತರ ಶಿಲ್ಪಗಳಿರುವ ಕೂಟ ಮತ್ತು ಶಿಖರಗಳ ಗಚ್ಚಿನ ಹಾರ ಇದೆ. ಪೂರ್ವಭಾಗದಲ್ಲಿನ ಮಹಾದ್ವಾರದ ಮುಂದೆ ಇಕ್ಕೆಡೆ ಕೈಸಾಲೆಯಿರುವ ಒಂದು ಮುಖಮಂಟಪವಿದೆ. ಮಹಾದ್ವಾರ ಬೃಹತ್ ರಚನೆ. ಒಳಚಾವಣಿಯ ಎತ್ತರ ಸು. 5.5 ಮೀ. ವಿಶಾಲ ಮಂಟಪದಂತಿರುವ ಈ ಭಾಗದಲ್ಲಿನ ದಪ್ಪ ಎತ್ತರದ ಬಾಗಿಲ ತೋಳುಗಳ ಮೇಲೆ ಮೋಹಿನಿ, ದ್ವಾರಪಾಲಕ ಮೊದಲಾದ ಶಿಲ್ಪಾಲಂಕರಣಗಳಿವೆ. ಮಹಾದ್ವಾರದ ಮೇಲೆ ಏಳು ಅಂತಸ್ತುಗಳಲ್ಲಿ ಎದ್ದಿರುವ ಸು. 37 ಮೀ ಎತ್ತರದ ಬೃಹತ್ ಗೋಪುರದ ಮೇಲ್ತುದಿಯಲ್ಲಿ ಚಿನ್ನದ ಗಿಲೀಟಿನ 3 ಮೀ ಗಳಿಗೂ ಎತ್ತರವಾಗಿರುವ, ಏಳು ಕಲಶಗಳನ್ನು ಅಷ್ಟೇ ಎತ್ತರದ ಎರಡು ಕೊಂಬುಗಳ ಮಧ್ಯೆ ಸಾಲಾಗಿ ಜೋಡಿಸಲಾಗಿದೆ.

ಈ ದೇವಾಲಯಕ್ಕೆ ವರ್ಷವಿಡೀ ದೇಶದ ವಿವಿಧ ಭಾಗಗಳಿಂದ ಭಕ್ತರು ಬರುತ್ತಾರೆ. ಸೋಮವಾರ ಮತ್ತು ಹುಣ್ಣಿಮೆಯ ದಿನಗಳಲ್ಲಿ ವಿಶೇಷ ಪೂಜೆ. ಪ್ರತಿ ಹುಣ್ಣಿಮೆಯಂದು ರಾತ್ರಿ ರಥೋತ್ಸವವುಂಟು. ಅಲ್ಲದೆ ಇಲ್ಲಿ ಎರಡು ವಾರ್ಷಿಕ ಜಾತ್ರೆಗಳಾಗುತ್ತವೆ. ಅಕ್ಟೋಬರ್–ನವಂಬರ್‌ನಲ್ಲಿ ನಡೆಯುವುದು ತ್ರಿರಥ (ಚಿಕ್ಕ ಜಾತ್ರೆ); ಮಾರ್ಚ್–ಏಪ್ರಿಲ್‌ನಲ್ಲಿ ಜರುಗುವುದು ಪಂಚರಥ(ದೊಡ್ಡ ಜಾತ್ರೆ).

ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ

ಯಾತ್ರಾರ್ಥಿಗಳ ಉಪಯೋಗಕ್ಕಾಗಿ ಇಲ್ಲಿ ಅನೇಕ ಛತ್ರಗಳಿವೆ. ಇತ್ತೀಚೆಗೆ ಯಾತ್ರಿಕರಿಗಾಗಿ ತಂಗುದಾಣವನ್ನು ನಿರ್ಮಿಸಿರುವುದು ಪ್ರವಾಸೋದ್ಯಮಕ್ಕೆ ಪ್ರೋತ್ಸಾಹವನ್ನು ನೀಡಿದೆ. ನಂಜನಗೂಡಿನ ನಂಜುಂಡೇಶ್ವರನನ್ನು ಅನೇಕ ಜನ ಕುಲದೈವವೆಂದು ಪರಿಗಣಿಸುತ್ತಾರೆ. ಈ ಸುತ್ತಿನ ಜಾನಪದದಲ್ಲಿ ನಂಜುಂಡೇಶ್ವರನಿಗೆ ವಿಶೇಷ ಸ್ಥಾನವುಂಟು.

ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ದೇವಾಲಯವಲ್ಲದೆ ಪರಶುರಾಮ, ಚಾಮುಂಡೇಶ್ವರಿ, ಸತ್ಯನಾರಾಯಣ, ದತ್ತಾತ್ರೇಯ, ಗಣಪತಿ ಮೊದಲಾದ ದೇವಾಲಯಗಳೂ ಇವೆ. ಇಲ್ಲಿಯ ಪರಶುರಾಮ ದೇವಾಲಯದಲ್ಲಿ ಒಂದು ಶಾಸನಕಲ್ಲು ಪೂಜಾವಸ್ತು. ಈ ದೇವಾಲಯವನ್ನು ಸಂದರ್ಶಿಸದಿದ್ದಲ್ಲಿ ನಂಜನಗೂಡಿನ ಯಾತ್ರೆ ಅಪೂರ್ಣವಾಗುವುದೆಂಬ ನಂಬಿಕೆಯುಂಟು.

ನಂಜನಗೂಡಿನಲ್ಲಿ ಶಂಕರ, ವೀರಶೈವ ಮತ್ತು ಮಾಧ್ವ ಸಂಪ್ರದಾಯದ ಮಠಗಳಿವೆ. ರಾಘವೇಂದ್ರಸ್ವಾಮಿ ಮಠ ಪ್ರಾಚೀನವಾದ್ದು. ಇದನ್ನು 15ನೆಯ ಶತಮಾನದಲ್ಲಿ ವಿಬುಧೇಂದ್ರತೀರ್ಥರು ಸ್ಥಾಪಿಸಿದರು. ಸುಧೀಂದ್ರ, ರಾಘವೇಂದ್ರ ಮೊದಲಾದ ಪ್ರಸಿದ್ಧ ಆಚಾರ್ಯರು ಈ ಮಠದ ಪರಂಪರೆಗೆ ಸೇರಿದವರು. ಮಠದಲ್ಲಿ 15, 18ನೆಯ ಶತಮಾನಗಳಿಗೆ ಸೇರಿದ ಅನೇಕ ತಾಮ್ರಪಟಗಳೂ ಇವೆ. ಇಲ್ಲಿ ಹಸ್ತಪ್ರತಿಗಳ ಸಂಗ್ರಹವೂ ಉಂಟು.

ಸ್ಥಳಪುರಾಣಗಳ ಪ್ರಕಾರ ನಂಜನಗೂಡಿಗೆ ಗರಳಪುರಿ ಕ್ಷೇತ್ರ, ದಕ್ಷಿಣಕಾಶಿ ಎಂಬ ಹೆಸರುಗಳೂ ಇವೆ. ಇದು ತ್ರಿವೇಣೀಸಂಗಮಸ್ಥಾನ ಎಂಬುದು ನಂಬಿಕೆ. ಪರಶುರಾಮ ತನ್ನ ಮಾತೃಹತ್ಯಾಪಾಪವನ್ನು ಇಲ್ಲಿ ಶಿವಾನುಗ್ರಹದಿಂದ ಕಳೆದುಕೊಂಡ; ಗೌತಮ ಋಷಿಗಳ ಆಶ್ರಮ ಇಲ್ಲಿತ್ತು ಎಂದು ಐತಿಹ್ಯವುಂಟು. (ಎಸ್.ಎನ್.)

**ನಂದಾದೇವಿ ಶಿಖರ:** ಹಿಮಾಲಯ ಪರ್ವತ ಶ್ರೇಣಿಯ ಒಂದು ಶಿಖರ. ಇದರ ಎತ್ತರ 7,816 ಮೀ. ಉತ್ತರಖಾಂಡ ರಾಜ್ಯದ ಗಢವಾಲ್ ಜಿಲ್ಲೆಯಲ್ಲಿ, ಉ. ಅ. $33^0 22'$ ಮತ್ತು ಪೂ.ರೇ. $80^0$ ಮೇಲೆ ಇದೆ. ಕಂದುಬಣ್ಣದ ಶಿಲೆಯ ಮೇಲೆ ಹಿಮವನ್ನು ಚೆಲ್ಲಿರುವಂತೆ ದೂರಕ್ಕೆ ಗೋಚರಿಸುವ ಈ ಶಿಖರ, ಕೋಟೆಯಂತಿರುವ ಸು. 112 ಕಿಮೀ ಸುತ್ತಳತೆಯಲ್ಲಿ ಹರಡಿದ ಪರ್ವತಗಳ ಮಧ್ಯದಲ್ಲಿದೆ. ಇವುಗಳ ಸರಾಸರಿ ಎತ್ತರ 6,096 ಮೀ. 1934ರಲ್ಲಿ ಪ್ರಥಮ ಬಾರಿಗೆ ಈ ಕೋಟೆಯನ್ನು ಪ್ರವೇಶಿಸಲು ಸಾಧ್ಯವಾಯಿತು. 1936ರಲ್ಲಿ ಪ್ರಪ್ರಥಮವಾಗಿ ಎನ್.ಇ.ಓಡೆಲ್ ಮತ್ತು ಎಚ್. ಡಬ್ಲ್ಯು. ಟಿಲ್‌ಮನ್ ಎಂಬುವರು ಈ ಶಿಖರವನ್ನು ಏರಿದರು. ಈ ಶಿಖರ ಮತ್ತು ಇದರ ಸುತ್ತಮುತ್ತಲಿನ ಪ್ರದೇಶ ಬಹುವಾಗಿ ಗ್ರಾನೈಟ್ ಮತ್ತು ನೈಸ್ ಶಿಲೆಗಳದ್ದು. ಈ ಶಿಖರವನ್ನು ಹಿಂದುಗಳು ಪವಿತ್ರ ಸ್ಥಾನವೆಂದು ಪರಿಗಣಿಸುತ್ತಾರೆ. ಶಂಕರನ ಪತ್ನಿ ನಂದಾದೇವಿಯ ಆವಾಸಸ್ಥಾನವೆಂದು ಅವರು ನಂಬುತ್ತಾರೆ. ಶಿಖರದ ತುದಿಯಲ್ಲಿ ಮೋಡವಿರುವಾಗ ಗಾಳಿಯ ಬಡಿತದಿಂದ ಹೊಗೆ ಮೇಲೇಳುವಂತೆ ಕಾಣುತ್ತದೆ. ಇದನ್ನು ಅಲ್ಲಿಯ ಜನ ನಂದಾದೇವಿ ದೇವತೆಯ ಅಡುಗೆ ಮನೆಯಿಂದ ಹೊರಟ ಹೊಗೆ ಎಂದು ಹೇಳುತ್ತಾರೆ. ಈಗಲೂ 12 ವರ್ಷಗಳಿಗೊಮ್ಮೆ ನಂದಾದೇವಿಯ ಹೆಸರಿನಲ್ಲಿ ಹಬ್ಬವನ್ನು ಆಚರಿಸುತ್ತಾರೆ. ಹಿಂದು ಯಾತ್ರಿಕರು ಈ ಶಿಖರದ ಸಮೀಪದ ಗಂಗನದಿ ಮೂಲವನ್ನು ಪೂಜಿಸಲು ಬರುತ್ತಾರೆ.

ನಂದಾದೇವಿ ಶಿಖರದ ಸುತ್ತಣ ಗಿರಿಸಮೂಹದಲ್ಲಿ ಅಲ್ಲಲ್ಲಿ ಕೆಲವು ಜಾತಿಯ ಮರಗಳು, ಪೊದೆಗಳು ಬೆಳೆದಿವೆ. ಅಲ್ಲಲ್ಲಿ ಹುಲ್ಲು ಮತ್ತು ಕೆಲವು ಜಾತಿಯ ಹೂವುಗಳುಂಟು. ಜನರು ಕುರಿ ಮೇಕೆಗಳನ್ನು ಸಾಕುತ್ತಾರೆ. ಈ ಪ್ರದೇಶ ವರ್ಷದ ಹೆಚ್ಚು ಕಾಲ ಹಿಮದಿಂದ ಕೂಡಿರುತ್ತದೆ. ಗಂಗೋತ್ರಿ ಮತ್ತು ಕೇದಾರನಾಥ – ಇವು ಇಲ್ಲಿಯ ಮುಖ್ಯ ಹಿಮನದಿಗಳು. ದೇವಿಯ ಸಮೀಪದಲ್ಲಿ ನಂದಾ ಧವಳ ಗಂಗನದಿ ಹರಿಯುತ್ತದೆ. (ಆರ್.ಸಿ.ಎಚ್.)

**ನಂದಿದುರ್ಗ:** ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ಕೋಟೆಯಿಂದ ಕೂಡಿದ ಒಂದು ಬೆಟ್ಟ. ಬೆಂಗಳೂರಿಗೆ ಸು. 53 ಕಿಮೀ ಉತ್ತರದಲ್ಲಿದೆ. ಸಮುದ್ರಮಟ್ಟದಿಂದ ಇದರ ಎತ್ತರ 1,478 ಮೀ. ಇದು ಕರ್ನಾಟಕದ ಜನಪ್ರಿಯ

ಗಿರಿಧಾಮ. ಇದರ ಮೇಲ್ಭಾಗ ಚಪ್ಪಟೆಯಾಗಿ ಪಶ್ಚಿಮಕ್ಕೆ ಇಳಿಜಾರಾಗಿದೆ. ಇದರ ನಡುವೆ ಅಮೃತ ಸರೋವರ ಎಂಬ ಕೊಳವಿರುವುದು. ಇದಕ್ಕೆ ಸ್ವಲ್ಪ ದೂರದಲ್ಲಿ ಟಿಪ್ಪು ಸುಲ್ತಾನ ನಮಾಜು ಮಾಡಲು ಬಳಸುತ್ತಿದ್ದ ಜಗತಿ ಇದೆ. ಟಿಪ್ಪು ಇಲ್ಲಿಗೆ ಬಂದಾಗ ತಂಗುತ್ತಿದ್ದ ಕಟ್ಟಡವೂ ಇದೆ.

ನಂದಿಬೆಟ್ಟದ ಮೇಲೆ ದುರ್ಗವನ್ನು ಮೊಟ್ಟಮೊದಲು ಕಟ್ಟಿದವರು ಪ್ರಾಯಶಃ ಚಿಕ್ಕಬಳ್ಳಾಪುರದ ಪ್ರಭುಗಳು. ಹೈದರ್ ಮತ್ತು ಟಿಪ್ಪು ಕಟ್ಟಿಸಿದ ಕೋಟೆಯ ಭಾಗಗಳು ಈಗ ಉಳಿದಿವೆ. ಬೆಟ್ಟದ ನೈಋತ್ಯ ಮೂಲೆಯಲ್ಲಿರುವ ಕಡಿದಾದ ಬಂಡೆಗೆ ಟಿಪ್ಪು ಪ್ರಪಾತ ಎಂದು ಹೆಸರು. ಟಿಪ್ಪುವಿನ ಕಾಲದಲ್ಲಿ ಅಪರಾಧಿಗಳನ್ನು ಇದರ ತುದಿಯಿಂದ ಕೆಳಕ್ಕೆ ತಳ್ಳುತ್ತಿದ್ದರೆಂದು ಹೇಳಲಾಗಿದೆ. ಉತ್ತರದಲ್ಲಿ ನಂದಿ ಗ್ರಾಮದ ಬಳಿಯಲ್ಲಿರುವ ಕಡಿದಾದ ಬಂಡೆಯೊಂದನ್ನು ಹೈದರ್ ಪ್ರಪಾತ ಎನ್ನುತ್ತಾರೆ. ನಂದಿಬೆಟ್ಟದ ಮೇಲೆ ಯೋಗನಂದೀಶ್ವರನ ದೊಡ್ಡ ದೇವಾಲಯವಿದೆ. ಇಲ್ಲಿ ಪ್ರವಾಸಿಗಳಿಗಾಗಿ ಹಲವು ಬಂಗಲೆಗಳಿವೆ. ಇಲ್ಲಿಯ ವಾಯುಗುಣ ತಂಪಾದ್ದು. ಸುತ್ತಣ ಪ್ರದೇಶ ಇಲ್ಲಿಂದ ರಮ್ಯವಾಗಿ ಕಾಣುತ್ತದೆ.

ಕೂಷ್ಮಾಂಡ ಋಷಿ ಇಲ್ಲಿ ತಪಸ್ಸು ಮಾಡಿದನೆಂದು ಸ್ಥಳ ಪುರಾಣ. ಆದ್ದರಿಂದ ಇದಕ್ಕೆ ಕೂಷ್ಮಾಂಡಗಿರಿ ಎಂಬ ಹೆಸರಿತ್ತು. ಗಂಗರು ಇದರ ಒಡೆತನ ಪಡೆದಿದ್ದರೆಂಬುದು ಇತಿಹಾಸದ ಸಂಗತಿ. ಗಂಗರು ನಂದಗಿರಿಯ ಪ್ರಭು ಎಂಬ ಬಿರುದು ತಳೆದಿದ್ದರು. ಇದು ಜೈನಕ್ಷೇತ್ರವಾಗಿತ್ತು. ನಂದಗಿರಿ ಎಂಬುದು ಇದರ ಮೊದಲಿನ ಹೆಸರು. ಚೋಳರ ಕಾಲದಲ್ಲಿ, 11ನೆಯ ಶತಮಾನದಲ್ಲಿ ಇದರ ಹೆಸರು ನಂದಿಗಿರಿ ಎಂದಾಯಿತು. 1770ರಲ್ಲಿ ಇದನ್ನು ಹೈದರ್ ಅಲಿ ಮರಾಠರಿಂದ ವಶಪಡಿಸಿಕೊಂಡ. ಈಗ ಜೀರ್ಣವಾಗಿರುವ ಕೋಟೆಯನ್ನು ಕಟ್ಟಿಸಿದವನು ಅವನು ಮತ್ತು ಅವನ ಮಗ ಟಿಪ್ಪು. ಬ್ರಿಟಿಷರು 1791ರಲ್ಲಿ ಇದನ್ನು ಬೇಸಗೆಯ ವಿಹಾರಸ್ಥಳವಾಗಿ ಬಳಸುತ್ತಿದ್ದರು. 1799–1808ರಲ್ಲಿ ಇದು ಒಂದು ಸೈನಿಕ ಠಾಣೆಯಾಗಿತ್ತು.

ನಂದಿಬೆಟ್ಟದಲ್ಲಿ ಅಥವಾ ಇದರ ಬಳಿಯಲ್ಲಿ ಪಾಲಾರ್, ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್, ಚಿತ್ರಾವತಿ, ಅರ್ಕಾವತಿ, ಪಾಪಗ್ನಿ ಮುಂತಾದ ನದಿಗಳು ಉಗಮಿಸುತ್ತವೆ. ನಂದಿಬೆಟ್ಟದ ಸುತ್ತ ಇರುವ ಬೆಟ್ಟಗಳಲ್ಲಿ ಕೆಲವು ಚೆನ್ನಕೇಶವಬೆಟ್ಟ (1.452 ಮೀ), ಬ್ರಹ್ಮಗಿರಿ (1.428 ಮೀ) ಮತ್ತು ಸ್ಕಂದಗಿರಿ (1.448 ಮೀ). ನಂದಿಬೆಟ್ಟದ ಬುಡದಲ್ಲಿ ನಂದಿ ಗ್ರಾಮವಿದೆ. ಇಲ್ಲಿ ಭೋಗನಂದೀಶ್ವರನ ದೇವಾಲಯವಿದೆ. ಇಲ್ಲಿಂದ ಸು. $3^3/_4$ ಕಿಮೀ zÀgzÀ¤AzÀ gÉÊ¯ï ¸ÁÖ«zÉ (ಕೆ.ಎ.ಆರ್.)

**ನಕ್ಷತ್ರ:** ಬ್ರಹ್ಮಾಂಡದಲ್ಲಿ ಸ್ವಯಂ ಪ್ರಕಾಶವನ್ನು ಹೊಂದಿರುವ ಆಕಾಶ ಕಾಯಗಳನ್ನು ನಕ್ಷತ್ರಗಳೆಂದು ಕರೆಯುವರು (ಸ್ಟಾರ್). ಇವುಗಳ ಸಂಖ್ಯೆ ಕೋಟಿಗಳಿಗಿಂತಲೂ ಹೆಚ್ಚು, ಅಗಣಿತ. ಕೆಲವುಕಡೆಗಳಲ್ಲಿ ನಕ್ಷತ್ರಗಳು ಅಲ್ಲಲ್ಲಿ ಗುಂಪುಗೂಡಿದಂತೆ ರಾಶಿ–ರಾಶಿಯಾಗಿ ಕಂಡುಬರುತ್ತವೆ. ಇಂತಹ ಅಸಂಖ್ಯಾತ ನಕ್ಷತ್ರಗಳ ಸಮೂಹವನ್ನು ನಕ್ಷತ್ರ ಪುಂಜಗಳೆಂದು (ಗ್ಯಾಲಕ್ಸಿ) ಕರೆಯುವರು. ಇವುಗಳು ಸಾಲಾಗಿ ಬೆಳಕಿನ ದಾರಿಯಂತೆ ಹಂಚಿಕೆಯಾಗಿರುವುದರಿಂದ ಕ್ಷೀರಪಥ ಅಥವಾ ಆಕಾಶಗಂಗೆ (ಮಿಲ್ಕಿ ವೇ) ಎಂದೂ ಕರೆಯಲಾಗಿದೆ. ಈ ಎಲ್ಲ ನಕ್ಷತ್ರ ಪುಂಜಗಳೂ ಒಂದು ಕೇಂದ್ರದ ಸುತ್ತಲೂ ಸುತ್ತುತ್ತಿವೆಯೆಂದು ಇವುಗಳ ವೇಗ ಪ್ರತಿಗಂಟೆಗೆ 7,92,000 ಕಿಮೀ ಎಂದು ಲೆಕ್ಕಾಚಾರ ಮಾಡಲಾಗಿದೆ. ಭೂಮಿಗೆ ಸಮೀಪದ ಸೂರ್ಯನು ಸಹ ಒಂದು ನಕ್ಷತ್ರ. ಸೂರ್ಯ ಇರುವ ಗ್ಯಾಲಕ್ಸಿಯ ಹೆಸರು ಆಂಡ್ರೋಮಿಡ. ಇದಕ್ಕೆ ಸಮೀಪದಲ್ಲಿರುವುದು ಓರಿಯೋನ್ ಗ್ಯಾಲಕ್ಸಿ. ಇದು ಸು. 1,00,000 ದ.ಲ. ನಕ್ಷತ್ರಗಳನ್ನು ಹೊಂದಿದೆ.

ನಕ್ಷತ್ರಗಳ ಗಾತ್ರ ವಿವಿಧ ರೀತಿಯಲ್ಲಿರುವುದು. ಕೆಲವು ನಕ್ಷತ್ರಗಳು ಬೃಹದಾಕಾರದಲ್ಲಿದ್ದರೆ ಕೆಲವು ಅತಿಚಿಕ್ಕವು. ಸೂರ್ಯನು ಇವುಗಳಲ್ಲಿ ಮಧ್ಯಮ ಗಾತ್ರದ ನಕ್ಷತ್ರ. ಸೂರ್ಯನಿಗೆ ಸಮೀಪದ ನಕ್ಷತ್ರ ಪ್ರಾಕ್ಸಿಮಾ ಸೆಂಟಾರಿ. ಸೂರ್ಯನು ಪ್ರಖರವಾಗಿರುವುದರಿಂದ ಹಗಲಿನ ವೇಳೆಯಲ್ಲಿ ಇತರ ನಕ್ಷತ್ರಗಳು ನಮಗೆ ಗೋಚರಿಸುವುದಿಲ್ಲ. ನಕ್ಷತ್ರಗಳು ವಿವಿಧ ದೂರದಲ್ಲಿದ್ದು ಅವುಗಳ ವಿಕಾಸದ ವಿವಿಧ ಹಂತಗಳಲ್ಲಿರುವುದರಿಂದ ನಮಗೆ ಅವುಗಳು ವಿವಿಧ ಬಣ್ಣಗಳ ರೂಪದಲ್ಲಿ ಕಂಡು ಬರುತ್ತವೆ. ಅವುಗಳ ಪ್ರಕಾಶವು ಸಹ ಭಿನ್ನವಾಗಿರುವುದು. ನಕ್ಷತ್ರಗಳು ಸಹ ಹುಟ್ಟು, ಬೆಳವಣಿಗೆ ಹಾಗೂ ಅವಸಾನವನ್ನು ಹೊಂದುತ್ತವೆ. ಬಾಲ್ಯಾವಸ್ಥೆಯ ನಕ್ಷತ್ರಗಳು ಅತಿ ಹೆಚ್ಚು ಪ್ರಖರವಾಗಿದ್ದು, ಕ್ರಮೇಣ ಕೋಟ್ಯಂತರ ವರ್ಷಗಳಲ್ಲಿ ಕ್ಷೀಣಿಸಿ ಕಪ್ಪುರಂಧ್ರಗಳಾಗಿ (ಬ್ಲಾಕ್ ಹೋಲ್ಸ್) ಅವಸಾನ ಹೊಂದುತ್ತವೆಯೆಂದು ತಿಳಿಯಲಾಗಿದೆ. ಕೆಲವು ನಕ್ಷತ್ರಗಳು ಅಗಾಧ ಪ್ರಮಾಣದಲ್ಲಿ ಪ್ರಜ್ವಲಿಸುವ ಹಂತದಲ್ಲಿಯೇ ಸ್ಫೋಟಿಸಿ ಅವಸಾನ ಹೊಂದುತ್ತವೆ. ಈ ಹಂತದ ನಕ್ಷತ್ರಗಳನ್ನು ಸೂಪರ್‌ನೋವ ಎಂದು ಕರೆಯುವರು. *

**ನಕ್ಷತ್ರ ಪುಂಜ :** ಅಸಂಖ್ಯಾತ ನಕ್ಷತ್ರ ಅಥವಾ ತಾರಾ ಸಮೂಹ (ಗ್ಯಾಲಕ್ಸಿ). ರಾತ್ರಿಯ ವೇಳೆ ಆಕಾಶದಲ್ಲಿ ಹಾಲು ಚೆಲ್ಲಿರುವಂತೆ ಕಾಣುವ ಆಕಾಶ ಗಂಗೆಯಲ್ಲಿರುವ ಕೋಟ್ಯನುಕೋಟಿ ನಕ್ಷತ್ರಗಳನ್ನೂ ಆಕಾಶದಲ್ಲಿ ಗೋಚರಿಸುವ ಇತರ ನಕ್ಷತ್ರಗಳನ್ನು ನಮ್ಮ ಸೌರವ್ಯೂಹವನ್ನು ಒಳಗೊಂಡ ಪ್ರದೇಶ. ಈ ಪುಂಜದಲ್ಲಿ ನೂರಾರು ಬಿಲಿಯನ್‌ಗಳಷ್ಟು ನಕ್ಷತ್ರಗಳಿವೆ. ಇಮ್ಯಾನ್ಯುಅಲ್ ಕಾಂಟ್ ಇದನ್ನು ಬ್ರಹ್ಮಾಂಡಗಳ ದ್ವೀಪ ವೆಂದಿದ್ದಾನೆ.

ವಿಶ್ವದಲ್ಲಿ ನಾಲ್ಕು ಪ್ರಕಾರದ ಪುಂಜಗಳಿವೆ. 1. ಅಂಡಾಕಾರದ ನಕ್ಷತ್ರ ಪುಂಜ. 2. ಸುರುಳಿಯಾಕಾರದ ನಕ್ಷತ್ರ ಪುಂಜ. 3. ಪಟ್ಟಿಯಾಕಾರದ ನಕ್ಷತ್ರ ಪುಂಜ ಮತ್ತು 4. ಕ್ರಮವಲ್ಲದ ನಕ್ಷತ್ರ ಪುಂಜ.



1. ಅಂಡಾಕಾರದ ನಕ್ಷತ್ರ ಪುಂಜಗಳು ಸ್ವಲ್ಪ ಗೋಳಾಕಾರವನ್ನು ಹೋಲುತ್ತವೆ. ಇವುಗಳಲ್ಲಿ ಸುರುಳಿ ಬಾಹುಗಳಿರುವುದಿಲ್ಲ. ಆದರೆ ಪ್ರಧಾನವಾಗಿ ಮೂಲ ನಕ್ಷತ್ರಗಳನ್ನುಳ್ಳವು. ಸಾಕಷ್ಟು ದೊಡ್ಡದಾಗಿರುತ್ತವೆ. ನೂರು ಬಿಲಿಯನ್‌ಗೂ ಹೆಚ್ಚು ತಾರ ಸಮೂಹವಿರುತ್ತದೆ.

2. ಸುರುಳಿ ಆಕಾರದ ನಕ್ಷತ್ರ ಪುಂಜಕ್ಕೆ ಆಕಾಶ ಗಂಗೆ ಸೂಕ್ತ ನಿದರ್ಶನ. ಪ್ರಸಿದ್ಧ ಆಂಡ್ರೊಮಿಡ ಮಹಾನಕ್ಷತ್ರ ಪುಂಜ ಅತ್ಯಂತ ದೊಡ್ಡದು ಹಾಗೂ ಸುರುಳಿಯಾಕಾರದ್ದು. ಒಟ್ಟು ನಕ್ಷತ್ರ ಪುಂಜಗಳಲ್ಲಿ ಶೇ. 20 ರಷ್ಟು ಗುಂಪಿಗೆ ಸೇರಿವೆ. ಇವುಗಳ ಮಧ್ಯ ಭಾಗವು ಉಬ್ಬಿದಂತಿದ್ದು ಹೆಚ್ಚು ನಕ್ಷತ್ರಗಳ ಕೇಂದ್ರೀಕರಣವನ್ನು ಸೂಚಿಸುತ್ತದೆ. ಸುತ್ತಲಿನ ಬಾಹುಗಳಲ್ಲಿ ನಕ್ಷತ್ರಗಳ ಸಂಖ್ಯೆ ಕಡಿಮೆ.

3. ಪಟ್ಟಿಯಾಕಾರದ ನಕ್ಷತ್ರ ಪುಂಜದಲ್ಲಿ ನಕ್ಷತ್ರಗಳು ಪಟ್ಟಿಯಂಥ ವ್ಯವಸ್ಥೆಗೊಂಡಿದ್ದು, ನಿರ್ದಿಷ್ಟ ಸ್ಥಿತಿಯಲ್ಲಿ ಸುತ್ತುತ್ತವೆ. ಕೇಂದ್ರದವುಗಳಿಗಿಂತ ಹೊರ ಭಾಗದ ನಕ್ಷತ್ರಗಳ ಚಲನಾ ವೇಗ ಹೆಚ್ಚು. ಇಂತಹ ಪುಂಜಗಳು ಶೇ. 10 ರಷ್ಟಿವೆ.

4. ಕ್ರಮವಲ್ಲದ ನಕ್ಷತ್ರ ಪುಂಜ. ಆಕಾರದಲ್ಲಿ ಶೇ.10 ರಷ್ಟು ನಕ್ಷತ್ರ ಪುಂಜಗಳು ವ್ಯವಸ್ಥಿತವಾಗಿರುವುದಿಲ್ಲ. ಉದಾ: ಮೆಗಲಾನಿಕ್ ಮೇಘ. ಇವು ದಕ್ಷಿಣ ಗೋಳಾರ್ಧದಿಂದ ಬರಿ ಕಣ್ಣಿಗೆ ಗೋಚರಿಸುತ್ತವೆ. ಹೀಗಾಗಿ ಅವು ನಮಗೆ ಸಮೀಪದ ನಕ್ಷತ್ರ ಪುಂಜಗಳಾಗಿವೆ. (ಪಿ.ಎಂ.)

**ನಕ್ಷಾ ಪ್ರಕ್ಷೇಪ:** ಗೋಳದ ಮೇಲಿನ ವಕ್ರವಾದ ಅಕ್ಷಾಂಶ ಮತ್ತು ರೇಖಾಂಶಗಳ ಜಾಲವನ್ನು ನಿರ್ದಿಷ್ಟವಾಗಿ ಸಮತಲವಾದ ಹಾಳೆಯ ಮೇಲೆ ರೂಪಿಸುವುದು. ಭೂಪಟಗಳನ್ನು ನಿರ್ಮಿಸುವ ಕಾರ್ಯದಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳು ಬಹುಮುಖ್ಯವಾದವು. ಇವುಗಳ ಸಹಾಯದಿಂದಲೇ ಯಾವುದೇ ಭೂ ಪ್ರದೇಶವನ್ನಾಗಲೀ, ಸಾಗರವನ್ನಾಗಲೀ ಅಥವ ನಗರವನ್ನಾಗಲೀ ನಕ್ಷೆಯ ಮೇಲೆ ಕರಾರುವಕ್ಕಾಗಿ ಗುರುತಿಸಬಹುದಾಗಿದೆ. ನಕ್ಷಾ ಪ್ರಕ್ಷೇಪಗಳನ್ನು ಪೂರ್ಣ ಪ್ರಪಂಚದ ಅಥವ ಪ್ರಪಂಚದ ಯಾವುದಾದರೊಂದು ಭಾಗವನ್ನು ತೋರಿಸಲು ಬೇಕಾದರೂ ರಚಿಸಬಹುದಾಗಿದೆ. ನಕ್ಷೆಗಳ ಬಳಕೆ ಭೂಗೋಳ ವಿಜ್ಞಾನದ ಅಧ್ಯಯನದಲ್ಲಿ ಅತಿ ಮುಖ್ಯ. ಆದ್ದರಿಂದಲೇ ಇದರ ಇತಿಹಾಸವನ್ನು ಅವಲೋಕಿಸಿದಾಗ ಭೂಗೋಳ ವಿಜ್ಞಾನದ ಇತಿಹಾಸಕ್ಕಿಂತಲೂ ಭೂಪಟಗಳ ರಚನೆ ಬಹು ಪುರಾತನವಾದುದು. ಈ ಪೂರ್ವದಲ್ಲಿಯೇ ನಕ್ಷೆಗಳ ಉಪಯೋಗವನ್ನು ಕಂಡುಕೊಳ್ಳಲಾಗಿತ್ತು. ಭೂಮಿ ಸಮತಲವಾಗಿದ್ದಲ್ಲಿ ಅದರ ಭೂಪಟದ ರಚನಾ ಕಾರ್ಯ ಬಹು ಸುಲಭವಾಗಿರುತ್ತಿತ್ತು. ಆದರೆ ಅದು ಗೋಳಾಕಾರವಾಗಿರುವುದರಿಂದ ಅದನ್ನು ಮಟ್ಟಸವಾದ ಹಾಳೆಯ ಮೇಲೆ ರಚಿಸುವುದು ಬಹು ಕಷ್ಟಕರವಾದ ಸಮಸ್ಯೆಯಾಗಿದೆ. ಇಡೀ ಗೋಳವನ್ನೇ ಕತ್ತರಿಸಿ ಚೂರು ಚೂರಾಗಿ ಮಟ್ಟಸವಾದ ಹಾಳೆಯ ಮೇಲೆ ಹರಡಿದರೂ ಆ ಚೂರುಗಳ ಅಂಚುಗಳು ಮಡಿಚಿಕೊಂಡಿರುತ್ತವೆ. ಗೋಳ ಮಾತ್ರ ಭೂಮಿಯ ನೈಜ ಪ್ರತಿರೂಪವಾಗಿರುವುದು. ಆದುದರಿಂದ ನಕ್ಷಾ ಪ್ರಕ್ಷೇಪಗಳನ್ನು ಬಳಸಿ ಅನೇಕ ವಿಧಾನಗಳಿಂದ ಗೋಳವನ್ನು ನೈಜವಾಗಿ ಪ್ರತಿನಿಧಿಸುವ ಭೂಪಟಗಳನ್ನು ರಚಿಸಬಹುದು. (ಆರ್.ಎ.)

# ನಕ್ಷಾ ಪ್ರಕ್ಷೇಪಗಳ ವಿಧಗಳು – ನಕ್ಷೆಗಳು

**ನಕ್ಷಾ ಪ್ರಕ್ಷೇಪಗಳ ವಿಧಗಳು:** ಭೂಮಿ ಸಮತಲವಾಗಿದ್ದಲ್ಲಿ ಅದರ ಭೂಪಟದ ರಚನಾ ಕಾರ್ಯದಲ್ಲಿ ಒಂದೇ ರೀತಿಯ ಪ್ರಕ್ಷೇಪದಿಂದ ರಚಿಸಬಹುದಾಗಿತ್ತು. ಅದು ಗೋಳಾಕಾರವಾಗಿರುವುದರಿಂದ ಮಟ್ಟಸವಾದ ಹಾಳೆಯ ಮೇಲೆ ಪ್ರಪಂಚದ ಮತ್ತು ಯಾವುದಾದರೊಂದು ದೇಶದ ಅಥವ ಖಂಡದ ಭಾಗವನ್ನು ತೋರಿಸುವಂತೆ ರಚಿಸುವುದು ಒಂದೇ ರೀತಿಯ ಪ್ರಕ್ಷೇಪದಿಂದ ಸಾಧ್ಯವಿಲ್ಲ. ಆದುದರಿಂದ ಯಾವ ಪ್ರದೇಶದ ಭೂಪಟವನ್ನು ತಯಾರಿಸಬೇಕಾಗಿದೆಯೋ ಅದರ ವಿಸ್ತೀರ್ಣ, ಅದರ ಸ್ಥಾನ, ಭೂಪಟದ ಉದ್ದೇಶಗಳನ್ನು ಅನುಸರಿಸಿ ಅದಕ್ಕೆ ಸರಿಹೊಂದುವ ಪ್ರಕ್ಷೇಪಗಳನ್ನು ಬಳಸಿಕೊಳ್ಳಲಾಗುವುದು. ಸಾಮಾನ್ಯವಾಗಿ ವೃತ್ತ ಸ್ಥಂಭಾಕೃತಿ ಪ್ರಕ್ಷೇಪಗಳನ್ನು ಸಮಭಾಜಕ ವೃತ್ತ ಪ್ರದೇಶಗಳ ಭೂಪಟಗಳಿಗೂ, ಶಂಖು ಮತ್ತು ಸಮತಲ ಮೇಲ್ಮೈಗಳನ್ನು ಬಳಸಿದ ಭೂಪಟಗಳನ್ನು ಅನುಕ್ರಮವಾಗಿ ಸಮಶೀತೋಷ್ಣವಲಯ ಹಾಗು ಧ್ರುವ ಪ್ರದೇಶಗಳ ಭೂಪಟಗಳಿಗೂ ಬಳಸಲಾಗುವುದು. ಯಾವುದೇ ಪ್ರಕ್ಷೇಪವನ್ನು ರಚಿಸುವಾಗ ವಿಕ್ಷೇಪವು ತೋರಿಸುವ ಪ್ರದೇಶದ ವಿಸ್ತೀರ್ಣ ಗೋಳದ ಮೇಲಿನ ಪ್ರದೇಶದ ವಿಸ್ತೀರ್ಣಕ್ಕೆ ಅನುಸಾರವಾಗಿರಬೇಕಲ್ಲದೆ, ಆ ಪ್ರದೇಶದ ಭೂಪಟದ ವಿನ್ಯಾಸ ಗೋಳದಲ್ಲಿರುವಂತೆಯೇ ಇದ್ದು, ದಿಕ್ಕುಗಳು ಸಹ ನಿರ್ದಿಷ್ಟವಾಗಿರ ಬೇಕಾಗುವುದು. ಆದುದರಿಂದ ನಕ್ಷಾ ಪ್ರಕ್ಷೇಪಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು:

1. ಅಕ್ಷಾಂಶ ಹಾಗೂ ರೇಖಾಂಶಗಳನ್ನು ಸಮತಲ ಹಾಳೆಯ ಮೇಲೆ ಪಡೆಯುವ ವಿಧಾನಕ್ಕೆ ಅನುಸಾರವಾಗಿ: ಅ. ಯಥಾದೃಷ್ಟಿ ಪ್ರಕ್ಷೇಪ. ಆ. ಆಯತಾ ದೃಷ್ಟಿ ಪ್ರಕ್ಷೇಪ.

2. ಬಳಸುವ, ಅಭಿವೃದ್ಧಿ ಪಡಿಸಬಹುದಾದ ಮೇಲ್ಮೈಗಳಿಗೆ ಅನುಸಾರವಾಗಿ ಅ. ವೃತ್ತ ಸ್ಥಂಭಾಕೃತಿ ಪ್ರಕ್ಷೇಪ. ಆ. ಶಂಖಾಕೃತಿ ಪ್ರಕ್ಷೇಪ. ಇ. ಭೂಮಧ್ಯ ಪ್ರಕ್ಷೇಪ. ಈ. ರೂಢ ಪ್ರಕ್ಷೇಪ.

3. ಕ್ಷೇತ್ರ, ಆಕಾರ ಹಾಗೂ ದಿಕ್ಕುಗಳನ್ನು ಪ್ರತಿನಿಧಿಸಬಲ್ಲ ಆಧಾರದ ಮೇಲೆ. ಅ. ಸಮಕ್ಷೇತ್ರ ಪ್ರಕ್ಷೇಪ ಆ. ಅನುರೂಪ ಪ್ರಕ್ಷೇಪ ಇ. ದಿಗಂಶ ಪ್ರಕ್ಷೇಪ. (ಆರ್‌ಎ.)

**ನಕ್ಷಾ ಪ್ರಕ್ಷೇಪದ ಅಭಿವೃದ್ಧಿ:** ನಕ್ಷೆಗಳ ಬಳಕೆ ಭೂಗೋಳ ವಿಜ್ಞಾನದ ಅಧ್ಯಯನದಲ್ಲಿ ಅತಿ ಮುಖ್ಯ. ಆದ್ದರಿಂದಲೇ ಇದರ ಇತಿಹಾಸವನ್ನು ಅವಲೋಕಿಸಿದಾಗ ಭೂಗೋಳವಿಜ್ಞಾನದ ಇತಿಹಾಸಕ್ಕಿಂತಲೂ ಭೂಪಟಗಳ ರಚನೆ ಬಹುಪುರಾತನವಾದುದು. ಪ್ರಸಕ್ತ ಶಕಪೂರ್ವದಲ್ಲಿಯೇ ನಕ್ಷೆಗಳ ಉಪಯೋಗವನ್ನು ಕಂಡುಕೊಳ್ಳಲಾಗಿತ್ತು. ಆದರೆ ಪುರಾತನ ಕಾಲದ ನಕ್ಷೆಗಳು ನಿಖರವಾಗಿರದೆ, ಯಾವುದೇ ಅಳತೆಯ ಆಧಾರವಿಲ್ಲದೆ ರಚಿಸಲ್ಪಟ್ಟ ಚಿತ್ರಗಳಾಗಿದ್ದವು. ಪುರಾತನ ಈಜಿಪ್ಷರು ಭೂಗಡಿ ರೇಖೆಗಳನ್ನು ತೋರಿಸುವ ಕರಡು ನಕ್ಷೆಗಳನ್ನು ರಚಿಸುತ್ತಿದ್ದರು. ಇವುಗಳನ್ನು ಕಂದಾಯ ವಸೂಲಿಯ ದೃಷ್ಟಿಯಿಂದ ನಿಖರವಾಗಿ ರಚಿಸಲಾಗುತ್ತಿದ್ದಿತು. ಇದೇ ರೀತಿಯಲ್ಲಿ ಪ್ರಪಂಚದ ಬಹುತೇಕ ಎಲ್ಲ ಭೂಭಾಗಗಳಲ್ಲಿ ಒಂದಲ್ಲಾ ಒಂದು ವಿಧದ ನಕ್ಷೆಗಳ ರಚನೆ ರೂಢಿಯಲ್ಲಿದ್ದಿತು. ಎಸ್ಕಿಮೊ ಜನರು, ಅಮೆರಿಕದ ರೆಡ್ ಇಂಡಿಯನ್ನರು ಚಿತ್ರ ಮಾದರಿಯ ನಕ್ಷೆಗಳನ್ನು ರಚಿಸಿದ್ದು, ಇದರಲ್ಲಿ ಭೂಸ್ವರೂಪ, ನದಿ, ಅರಣ್ಯ ಹಳ್ಳಿಗಳು ಮೊದಲಾದವುಗಳನ್ನು ಚಿತ್ರಿಸಿರುವರು. ಅಲ್ಲದೆ ಮೆಸಪೊಟೇಮಿಯರ ಬ್ಯಾಬಿಲೋನಿಯ ಜನರು ಸುಟ್ಟ ಜೇಡಿಮಣ್ಣಿನ ತುಂಡುಗಳ ಮೇಲೆ ರಚಿಸಿರುವ ನದಿ ಕಣಿವೆಯನ್ನು ತೋರಿಸುವ ಚಿತ್ರ ಮಾದರಿಯ ನಕ್ಷೆ 4500 ವರ್ಷಗಳಷ್ಟು ಪುರಾತನವಾದುದು. ಚೀನದಲ್ಲಿ ಕಾಗದದ ಅನ್ವೇಷಣೆಯ ಅನಂತರ ನಕ್ಷೆಗಳ ರಚನೆ ಹೆಚ್ಚು ಅಭಿವೃದ್ಧಿ ಹೊಂದಿತು. ಆಧುನಿಕ ಯುಗದಲ್ಲಿ ಗ್ರೀಕರು ಮತ್ತು ರೋಮನ್ನರು ಇದರ ಬೆಳವಣಿಗೆಗೆ ಹೆಚ್ಚು ಕೊಡುಗೆ ನೀಡಿದ್ದಾರೆ. ಅವರಲ್ಲಿ ಟಾಲೆಮಿ, ಅನಕ್ಸಿಮ್ಯಾಂಡರ್, ಎರಟಾಸ್ಥನೀಸ್ ಮೊದಲಾದವರು ಪ್ರಮುಖರು.

ಪ್ರಪಂಚದ ಮೊದಲ ನಕ್ಷೆಯನ್ನು ರಚಿಸದವನು ಗ್ರೀಸಿನ ಗಣಿತ ಭೂಗೋಳ ಶಾಸ್ತ್ರಜ್ಞನಾದ ಅನಕ್ಸಿಮ್ಯಾಂಡರ್. ಈತ ಪ್ರ.ಶ.ಪೂ. 7ನೆಯ ಶತಮಾನದಲ್ಲಿ ಚಿತ್ರ ಮಾದರಿಯಲ್ಲಿ ಪ್ರಪಂಚದ ನಕ್ಷೆಯನ್ನು ರಚಿಸಿದ. ಅಲ್ಲದೆ ಈತ ನಕ್ಷೆಗಳನ್ನು ರಚಿಸಲು ಅಗತ್ಯವಾದ 2 ನಕ್ಷಾ ಪ್ರಕ್ಷೇಪಗಳನ್ನು ರೂಢಿಸಿದ. ಅವುಗಳೆಂದರೆ ಸ್ಟೀರಿಯೋ ಗ್ರಾಫಿಕ್ ಮತ್ತು ಆರ್ಥೋಗ್ರಾಫಿಕ್ ಪ್ರಕ್ಷೇಪಗಳು. ಟಾಲಮಿ ನಕ್ಷಾಶಾಸ್ತ್ರದ ಬೆಳವಣಿಗೆಗೆ ನೀಡಿದ ಕೊಡುಗೆಗಳು ಬಹಳ ಮಹತ್ತ್ವಪೂರ್ಣವಾಗಿವೆ. ಆದ್ದರಿಂದಲೇ ಟಾಲೆಮಿಯನ್ನು ನಕ್ಷಾಶಾಸ್ತ್ರದ ಪಿತಾಮಹ ಎಂದು ಕರೆಯಲಾಗಿದೆ. ಗೋಳದ ರಚನೆ ಕ್ರಿ.ಶ. 1429ರಿಂದ ಆರಂಭವಾಯಿತು. ಅನಂತರ ಇದರ ವಿಕಾಸ ಹೊಂದಿತು. ಯುರೋಪಿನಲ್ಲಿ ನಕ್ಷೆಗಳ ರಚನೆ ನೆದರ್ಲೆಂಡಿನಲ್ಲಿ ಮರ್ಕೆಟರಿನಿಂದ ಹೆಚ್ಚು ಪ್ರಸಿದ್ಧಿಪಡೆಯಿತು. ಈತ 1569ರಲ್ಲಿ ತನ್ನ ಪ್ರಸಿದ್ಧ ನಕ್ಷಾ ಪ್ರಕ್ಷೇಪಣವನ್ನು ರಚಿಸಿದ. ಅಬ್ರಹಾಂ ಆರ್ಟೆಲಿಯಸ್ ಮೊದಲ ಆಧುನಿಕ ಅಟ್ಲಾಸನ್ನು ಪ್ರಕಟಿಸಿದ. ಅನಂತರ ಫ್ರಾನ್ಸ್, ಇಟಲಿ ಹಾಗೂ ಬ್ರಿಟನಿನಲ್ಲಿ ಸರ್ವೇಕ್ಷಣೆ ಮತ್ತು ನಕ್ಷೆಗಳ ರಚನೆ ನಿರಂತರವಾಗಿ ಮುಂದುವರೆಯಿತು. ಇತ್ತೀಚಿನ ಏರಿಯಲ್ ಪೋಟೋಗ್ರಫಿಗಳಿಂದ ದೊರೆತ ಡಿಜಿಟಲ್ ನಕ್ಷೆಗಳು ಪ್ರಮುಖವಾದುವು. (ಆರ್‌ಎ.)

**ನಕ್ಷಾಶಾಸ್ತ್ರ :** ನಕ್ಷೆಗಳನ್ನು ಕರಾರುವಾಕ್ಕಾಗಿ ರಚಿಸುವ ಕಲೆ ಹಾಗೂ ವಿಜ್ಞಾನ (ಕಾರ್ಟೋಗ್ರಫಿ). ಇಂದು ಇದು ಪ್ರತ್ಯೇಕ ವಿಜ್ಞಾನವಾಗಿ ವಿಕಾಸವನ್ನು ಹೊಂದಿದ್ದರೂ ಇದರ ಇತಿಹಾಸ ಭೂಗೋಳ ವಿಜ್ಞಾನದ ಬೆಳವಣಿಗೆಯಲ್ಲಿಯೇ ಸಮ್ಮಿಳಿತಗೊಂಡಿದೆ. ನಕ್ಷೆಗಳ ರಚನೆಗೆ ಮೊದಲು ಮನುಷ್ಯನು ತನಗೆ ತಿಳಿದಿದ್ದ ಪ್ರದೇಶಗಳ ಲಕ್ಷಣಗಳನ್ನು ಸೂಚಿಸಲು ಮೆಸಪೊಟೇಮಿಯದಲ್ಲಿ ಸುಟ್ಟಜೇಡಿ ಮಣ್ಣಿನ ತಟ್ಟೆಗಳ ಮೇಲೆ ಚಿತ್ರಗಳನ್ನು ಬರೆಯುತ್ತಿದ್ದರು. ಗ್ರೀಕರ ಅನಕ್ಸಿಮ್ಯಾಂಡರ್ (ಪ್ರ.ಶ.ಪೂ. 7 ನೆಯ ಶತಮಾನ) ಅಂದು ತಿಳಿದಿದ್ದ ಭೂಪ್ರದೇಶದ ನಕ್ಷೆಯನ್ನು ರಚಿಸಿದ್ದ. ಪ್ರಪಂಚದ ನಕ್ಷಾಕಾರರಲ್ಲಿ ಈತನೇ ಮೊದಲಿಗ. ಈತನನ್ನು ಅನುಸರಿಸಿ ಹಿಪ್ಪಾರ್ಕಸ್ ಅಕ್ಷಾಂಶ ಮತ್ತು ರೇಖಾಂಶಗಳನ್ನು ಎಳೆದು ಪ್ರಪಂಚದ ನಕ್ಷೆಯನ್ನು ರಚಿಸಿದ. ಅನಂತರ 2ನೆಯ ಶತಮಾನದಲ್ಲಿ ರೋಮಿನ ಕ್ಲಾಡಿಯಸ್ ಟಾಲಮಿ ಅಂದಿನ ಪ್ರಪಂಚದ ನಕ್ಷೆಯನ್ನು ರಚಿಸಿದ್ದು ಇದು ಹಿಂದಿನ ಎಲ್ಲ ನಕ್ಷೆಗಳಿಗಿಂತ ಹೆಚ್ಚು ಸುಧಾರಿತವಾಗಿದ್ದಿತು. ಈ ನಕ್ಷೆ ಪ್ರ.ಶ. 15–16ನೆಯ ಶತಮಾನದಲ್ಲಿ ಮುದ್ರಣಹೊಂದಿ ಭೌಗೋಳಿಕ ಅನ್ವೇಷಣೆಗಳಿಗೆ ಕಾರಣವಾಯಿತು. ಇಂದರಿಂದಾಗಿಯೇ ಟಾಲಮಿಯನ್ನು ನಕ್ಷಾಶಾಸ್ತ್ರದ ಪಿತಾಮಹನೆಂದು ಪರಿಗಣಿಸಲಾಗಿದೆ.

ಭೌಗೋಳಿಕ ಅನ್ವೇಷಣೆಗಳ ಅನಂತರ ನಕ್ಷಾಶಾಸ್ತ್ರ ವ್ಯಾಪಕವಾಗಿ ಅಭಿವೃದ್ಧಿ ಹೊಂದಿತು. ದಿಕ್ಸೂಚಿಯ ಬಳಕೆ, ನೌಕಾಯಾನ ಅಭಿವೃದ್ಧಿ ಇದಕ್ಕೆ ಪ್ರೋತ್ಸಾಹವನ್ನು ನೀಡಿದವು. ಗೆರಾರ್ಡಸ್ ಮರ್ಕೆಟರ್ ರಚಿಸಿದ ಪ್ರಕ್ಷೇಪಣ ನಕ್ಷೆಗಳ ರಚನೆಗೆ ಹೊಸ ಆಯಾಮವನ್ನು ನೀಡಿತು. ಮಾರ್ಟಿನ್ ಬಿಹೇಮ್ ಗೋಳವನ್ನು ರಚಿಸಿದವರಲ್ಲಿ ಮೊದಲಿಗರು. ಅಬ್ರಾಹಂ ಆರ್ಟೆಲಿಯಸ್ ಮೊದಲ ಅಟ್ಲಾಸನ್ನು ರಚಿಸಿದನು.

ಇತ್ತೀಚಿನ ಏರಿಯಲ್ ಫೋಟೋಗ್ರಫಿ ಕೃತಕ ಉಪಗ್ರಹಗಳಿಂದ ಪಡೆದ ಚಿತ್ರಗಳನ್ನು ಡಿಜಿಟಲ್ ನಕ್ಷೆಗಳ ರಚನೆ ನಕ್ಷಾಶಾಸ್ತ್ರದಲ್ಲಿ ಮಹತ್ತರ ಕ್ರಾಂತಿಯನ್ನುಂಟುಮಾಡಿವೆ. ಕಂಪ್ಯೂಟರ್‌ಗಳ ಬಳಕೆಯೊಡನೆ ಸಾಂಪ್ರದಾಯಿಕ ನಕ್ಷೆಗಳಿಗೆ ಬದಲಾಗಿ ಡಿಜಿಟಲ್ ವಿಧಾನ ನಕ್ಷೆಗಳ ರಚನೆಯನ್ನು ಸರಳೀಕರಣಗೊಳಿಸಿರುವುದಲ್ಲದೆ, ಇವುಗಳಲ್ಲಿ ಅಪಾರ ಮಾಹಿತಿ ಹಾಗೂ ಅವುಗಳನ್ನು ಮೂರು ಆಯಾಮಗಳಲ್ಲಿ ತೋರಿಸಲು ಸಾಧ್ಯವಾಗಿದೆ. ಒಂದೇ ಪ್ರದೇಶಕ್ಕೆ ಸಂಬಂಧಿಸಿದ ವಿವಿಧ ನಕ್ಷೆಗಳನ್ನು ಒಂದರ ಮೇಲೊಂದರಂತೆ, ಪದರು–ಪದರಾಗಿ ಇರಿಸಿ ಸಂಯುಕ್ತ ನಕ್ಷೆಗಳನ್ನು ಇದರಿಂದ ತಯಾರಿಸಲು ಸಹಾಯಕವಾಗಿದೆ.



ಟಾಲಮಿ ಭೂಪಟ

ಇದರಿಂದಾಗಿ ಸ್ಥಾನೀಯ ಅಂಶಗಳ ಪರಸ್ಪರ ಸಂಬಂಧದ ವಿಶ್ಲೇಷಣೆಗೆ ಇದು ಹೊಸ ಆಯಾಮವನ್ನು ನೀಡಿದೆ. ಭಾರತದಲ್ಲಿಯೂ ಜಿಐಎಸ್ (ಭೌಗೋಳಿಕ ಮಾಹಿತಿ ವ್ಯವಸ್ಥೆ) ಹಾಗೂ ಸ್ಥಳಗಳನ್ನು ಅಕ್ಷಾಂಶ ಮತ್ತು ರೇಖಾಂಶಗಳನ್ನು ಅನುಸರಿಸಿ ತಿಳಿಯುವ ಗ್ಲೋಬಲ್ ಪೊಸಿಷನ್ ಸಿಸ್ಟಂ (ಜಿ.ಪಿ.ಎಸ್.) ಅಭಿವೃದ್ಧಿ ಹೊಂದುತ್ತಿವೆ. ಇವುಗಳ ಬಳಕೆಯಿಂದ ನಕ್ಷಾಶಾಸ್ತ್ರ ಹೊಸ ಆಯಾಮವನ್ನು ಪಡೆದಿವೆ. (ಆರ್.ಎನ್.)

**ನಕ್ಷೆಗಳು:** ನಕ್ಷೆಗಳನ್ನು ಇಂಗ್ಲಿಷಿನಲ್ಲಿ ಮ್ಯಾಪ್ಸ್ ಎಂದು ಕರೆಯುವರು. ಈ ಪದ ಲ್ಯಾಟಿನ್ನಿನ ಮ್ಯಾಪ್ಪಾ ಎಂಬುದರಿಂದ ಬಳಕೆಗೆ ಬಂದಿದೆ. ಇದರ ಅರ್ಥ ಕರವಸ್ತ್ರ ಅಥವಾ ಹೊದಿಕೆಯ ಬಟ್ಟೆ. ಇದನ್ನು ಭೂಮಿಯ ಪೂರ್ಣ ಅಥವಾ ಯಾವುದಾದರೊಂದು ಭಾಗದ ಹೊರ ಮೈಯನ್ನು ಪ್ರತಿನಿಧಿಸಲು ಬಳಸಲಾಗಿದೆ. ಭೂಮಿಯ ಹೊರ ಭಾಗವನ್ನು ಪ್ರತ್ಯೇಕಿಸಿ, ಅದನ್ನು ಮಟ್ಟಸವಾಗಿ ಹರಡಿರುವಂತೆ ಪರಿಗಣಿಸಿ ಈ ಪದವನ್ನು ಉಪಯೋಗಿಸಲಾಗಿದೆ.

ಭೂಮಿಯ ಪೂರ್ಣ ಅಥವಾ ಯಾವುದಾದರೊಂದು ಭಾಗವನ್ನು ನಿರ್ದಿಷ್ಟವಾದ ಅಳತೆಗೆ ಅನುಗುಣವಾಗಿ ಮಟ್ಟಸವಾದ ಮೇಲ್ಮೈಯಲ್ಲಿ ಸೂಚ್ಯವಾಗಿ ಪ್ರತಿನಿಧಿಸುವದನ್ನೇ

ನಕ್ಷೆ ಅಥವಾ ಭೂಪಟ ಎಂದು ಕರೆಯುವರು. ಇವು ಅಕ್ಷಾಂಶ ಮತ್ತು ರೇಖಾಂಶಗಳನ್ನೊಳಗೊಂಡಿದ್ದು, ಭೂಮಿಯನ್ನು ಮೇಲಿನಿಂದ ವೀಕ್ಷಿಸಿದಂತೆ ಚೌಕಟ್ಟನ್ನು ನಿರ್ದಿಷ್ಟವಾದ ಪ್ರಮಾಣಕ್ಕನುಗುಣವಾಗಿ ಎಳೆದ ಅನಂತರ ನಕ್ಷೆಗಳನ್ನು ರಚಿಸಲಾಗುವುದು.

ಭೂಗೋಳವಿಜ್ಞಾನದಲ್ಲಿ ನಕ್ಷೆಗಳ ಪ್ರಾಮುಖ್ಯತೆ: ಎಲ್ಲ ವಿಜ್ಞಾನಗಳು ತಮ್ಮದೇ ಆದ ಅಧ್ಯಯನ ವಿಧಾನಗಳನ್ನು ವಿಶ್ಲೇಷಣೆಯ ಸಲಕರಣೆ ಹಾಗೂ ಸಾಮಗ್ರಿಗಳನ್ನು ಒಳಗೊಂಡಿರುತ್ತವೆ. ಭೂಗೋಳವಿಜ್ಞಾನ ಸಹ ಇದಕ್ಕೆ ಹೊರತಾದುದಲ್ಲ. ನಕ್ಷೆ ಮತ್ತು ಗೋಳಗಳು ಭೂಗೋಳ ವಿಜ್ಞಾನದಲ್ಲಿ ಬಳಕೆ ಮಾಡುವ ಮುಖ್ಯ ಮಾದರಿಗಳು. ಗೋಳವು ಭೂಮಿಯನ್ನು ಪ್ರತಿನಿಧಿಸುವ ನೈಜ ಮಾದರಿ ಅಥವಾ ರೂಪಕ. ಇದು ಭೂಮಿಯ ಆಕಾರ, ಗಾತ್ರ ಹಾಗೂ ಭೂಮೇಲ್ಮೈಯಲ್ಲಿ ಭೂಭಾಗ ಮತ್ತು ಜಲಭಾಗಗಳ ಸ್ಥಾನ, ವಿಸ್ತಾರ ಮತ್ತು ಆಕಾರಗಳನ್ನು ಸ್ಪಷ್ಟವಾಗಿ, ನೈಜವಾಗಿ ಪ್ರತಿನಿಧಿಸುವುದು. ಗೋಳದ ಮೇಲೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ಸ್ಪಷ್ಟವಾಗಿ ಎಳೆದು ಇವುಗಳ ಆಧಾರದಿಂದ ಸ್ಥಾನವನ್ನು ನೈಜವಾಗಿ ಗುರುತಿಸಲಾಗುವುದು.

ಭೂಮಿಯನ್ನು ಪೂರ್ಣವಾಗಿ ಅಥವಾ ಅದರ ಯಾವುದಾದರೊಂದು ಭಾಗವನ್ನು ಪ್ರತಿನಿಧಿಸುವಂತೆ ನಕ್ಷೆಗಳನ್ನು ವಿವಿಧ ಅಳತೆಗಳಲ್ಲಿ ರಚಿಸಿ, ಅಗತ್ಯವಾದಷ್ಟು ಮಾಹಿತಿಗಳನ್ನು ಅಳವಡಿಸಬಹುದು. ಅಲ್ಲದೆ ನಕ್ಷೆಗಳು ಮಟ್ಟಸವಾಗಿರುವುದರಿಂದ ಪೂರ್ಣಪ್ರಪಂಚದ ನಕ್ಷೆಯನ್ನು ಅಗತ್ಯವಿರುವಷ್ಟು ವಿಸ್ತಾರದಲ್ಲಿ ರಚಿಸಿ, ಭೂಪ್ರದೇಶಗಳನ್ನು ಪರಸ್ಪರ ಹೋಲಿಸಿ, ವಿಶ್ಲೇಷಿಸುವುದು ಅತಿ ಸರಳವಾಗಿದೆ. ಇದರಿಂದಾಗಿಯೇ ನಕ್ಷೆಗಳು ಭೌಗೋಳಿಕ ಅಧ್ಯಯನದ ಮುಖ್ಯ ಸಾಧನಗಳಾಗಿವೆ. ಇವುಗಳ  ಪಾತ್ರ ಭೌಗೋಳಿಕ ಸಂಶೋಧನೆಗಳಲ್ಲಿ ಅತಿ ಮುಖ್ಯ.

ನಕ್ಷೆಗಳು ಕೆಲವು ಅಗತ್ಯವಾದ ಲಕ್ಷಣಗಳನ್ನು ಒಳಗೊಂಡಿರುತ್ತವೆ. ಇಲ್ಲದಿದ್ದಲ್ಲಿ ಅವುಗಳನ್ನು ಕರಡು ನಕ್ಷೆ ಅಂದರೆ ಚಾರ್ಟ್‍ಗಳೆಂದು ಪರಿಗಣಿಸಲಾಗುವುದು. ಈ ಮೂಲಭೂತ ಲಕ್ಷಣಗಳೆಂದರೆ ಶೀರ್ಷಿಕೆ, ಅಳತೆ, ಅಕ್ಷಾಂಶ ಮತ್ತು ರೇಖಾಂಶಗಳು, ದಿಕ್ಕು ಮತ್ತು ಚಿಹ್ನೆಗಳು. ಇವುಗಳಿಂದ ನಕ್ಷೆ ನಿಖರವಾಗಿರುವುದಲ್ಲದೆ ಹೆಚ್ಚು ಅರ್ಥಪೂರ್ಣವಾಗಿರುತ್ತದೆ.

ನಕ್ಷೆಗಳನ್ನು ರಚಿಸಲು ಬಳಸಿರುವ ಮಾಪಕದ ಆಧಾರದ ಮೇಲೆ ಅವುಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು:

1. ದೊಡ್ಡ ಅಳತೆಯ ನಕ್ಷೆಗಳು
2. ಮಧ್ಯಮ ಅಳತೆಯ ನಕ್ಷೆಗಳು ಹಾಗೂ
3. ಸಣ್ಣ ಅಳತೆಯ ನಕ್ಷೆಗಳು.

ಭೂಪಟದ ಮಾಪಕವು 1 ಸೆಂಮೀ. 1,00,000 ಸೆಂಮೀ ಅಥವಾ 1 ಸೆಂಮೀ= 1 ಕಿಮೀಗಿಂತ ಹೆಚ್ಚಾಗಿದ್ದರೆ ಅದನ್ನು ದೊಡ್ಡ ಅಳತೆಯ ನಕ್ಷೆಯೆಂದು ಕರೆಯುವರು. ಉದಾ: ಕಂದಾಯ ನಕ್ಷೆಗಳು. ಇದೇ ರೀತಿಯಲ್ಲಿ ಮಾಪಕವು 1=1,00,000 ರಿಂದ 1=2,50,000 ಆಗಿದ್ದಲ್ಲಿ ಅವುಗಳನ್ನು ಮಧ್ಯಮ ಅಳತೆಯ ನಕ್ಷೆಯೆಂದು ಕರೆಯುವರು. ಸ್ಥಳ ಸ್ವರೂಪ ನಕ್ಷೆಗಳು ಮಧ್ಯಮ ಅಳತೆಯ ನಕ್ಷೆಗಳಿಗೆ ಉತ್ತಮ ಉದಾಹರಣೆಗಳಾಗಿವೆ. ನಕ್ಷೆಗಳ ಮಾಪಕ 250,000ಕ್ಕಿಂತ ಕಡಿಮೆಯಿದ್ದಲ್ಲಿ ಅವುಗಳನ್ನು ಚಿಕ್ಕ ಅಳತೆಯ ನಕ್ಷೆಗಳೆಂದು ಕರೆಯುವರು. ಉದಾ: ತರಗತಿಗಳಲ್ಲಿ ಬೋಧನೆಗೆ ಬಳಸುವ ಗೋಡೆಗೆ ತೂಗು ಹಾಕುವ ನಕ್ಷೆಗಳು ಹಾಗೂ ಅಟ್ಲಾಸ್‍ಗಳಲ್ಲಿ ಬಳಸುವ ನಕ್ಷೆಗಳು ಈ ಪ್ರಕಾರದ ನಕ್ಷೆಗಳಿಗೆ ನಿದರ್ಶನಗಳಾಗಿವೆ. (ಆರ್.ಎನ್.)

**ನಕ್ಷೆಯ ಚಿಹ್ನೆ ಮತ್ತು ಸೂಚನೆಗಳು :** ಭೂಮಿಯ ಮೇಲೆ ಕಂಡು ಬರುವ ವಿವಿಧ ಲಕ್ಷಣಗಳನ್ನು ಭೂಪಟದ ಮೇಲೆ ವಿವಿಧ ಬಗೆಯ ಚಿಹ್ನೆಗಳ ಮೂಲಕ ಪ್ರತಿನಿಧಿಸಲಾಗುವುದು (ಲೆಜೆಂಡ್). ಇವುಗಳನ್ನು ರೂಢ ಚಿಹ್ನೆಗಳೆಂದು ಕರೆಯುವರು. ಪ್ರಪಂಚದಾದ್ಯಂತ ಒಂದೇ ಪ್ರಕಾರದ ಚಿಹ್ನೆಗಳು ಬಳಕೆಯಲ್ಲಿರುವುದರಿಂದ ಅವುಗಳ ಮೂಲಕ ವಿಷಯಗಳನ್ನು ತಿಳಿಸುವುದು–ತಿಳಿಯುವುದು ಬಹು ಸುಲಭ. ನಕ್ಷೆಯಲ್ಲಿ ಭೂಮಿಯ ಪ್ರಾಕೃತಿಕ ಸ್ವರೂಪಗಳಲ್ಲದೆ, ಮಾನವನಿಂದ ನಿರ್ಮಿತವಾಗಿರುವ ಲಕ್ಷಣಗಳನ್ನೂ ಈ ಚಿಹ್ನೆಗಳ ಮೂಲಕ ಪ್ರತಿನಿಧಿಸಲಾಗುವುದು. ಪ್ರತಿಯೊಂದು ನಕ್ಷೆಯೂ ಈ ಮುಖ್ಯ ಚಿಹ್ನೆಗಳ ವಿವರಣೆಗಳನ್ನು ಒಳಗೊಂಡಿರುತ್ತದೆ. ಈ ಚಿಹ್ನೆಗಳು ಬಿಂದುಗಳು, ರೇಖೆಗಳು, ವೃತ್ತಗಳು, ಚಿತ್ರಗಳು ಹಾಗೂ ವಿವಿಧ ಬಣ್ಣಗಳಿಂದ ಕೂಡಿರುತ್ತವೆ. (ಆರ್.ಎನ್.)

**ನಗರ:** ಗ್ರಾಮಗಳಿಗಿಂತಲೂ ಅನೇಕ ಪಟ್ಟು ದೊಡ್ಡದಾಗಿದ್ದು ವಿಶೇಶವಾಗಿ ಕೃಷಿಯೇತರ ಚಟುವಟಿಕೆಗಳನ್ನು ಹೊಂದಿರುವ ಮುಂದುವರಿದ ಜನವಸತಿ ಪ್ರದೇಶ. ಈ ಶಬ್ದವನ್ನು ಸಮಾಜಶಾಸ್ತ್ರಜ್ಞರೂ ಮಾನವಶಾಸ್ತ್ರಜ್ಞರೂ ಭೂಗೋಳ ವಿಜ್ಞಾನಿಗಳೂ ಕಡೆಪಕ್ಷ ಎರಡು ಬೇರೆ ರೀತಿಗಳಲ್ಲಾದರೂ ಉಪಯೋಗಿಸುತ್ತಾರೆ. ಮೊದಲನೆಯದಾಗಿ ಅದರ ಗಾತ್ರ ಹಾಗೂ ಜನಸಾಂದ್ರತೆ ಒಂದೇ ಗಾತ್ರದ ನಗರಗಳು ತಮ್ಮ ಸಾಮಾಜಿಕ ರಚನೆಯಲ್ಲಿ ಒಂದೇ ತರವಾಗಿರುವುದಿಲ್ಲ. ಅದರಲ್ಲೂ ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಇವು ವ್ಯತ್ಯಾಸವಾಗಿರುತ್ತವೆ. ಉದಾಹರಣೆಗೆ ಭಾರತದಲ್ಲಿ 50,000 ಜನರಿರುವ ಊರುಗಳು ಅಷ್ಟೇ ಜನಸಂಖ್ಯೆಯುಳ್ಳ ಯುರೋಪು ಅಥವಾ ಉತ್ತರ ಅಮೆರಿಕದ ಊರುಗಳಿಗಿಂತ ಭಿನ್ನವಾಗಿವೆ. ಜನಸಂಖ್ಯೆಯೊಂದರಿಂದಲೇ ನಗರದ ಲಕ್ಷಣಗಳನ್ನು ನಿರ್ಧರಿಸುವಲ್ಲಿ ಮಿತಿಗಳಿರುವುದರಿಂದ  ಸಮಾಜಶಾಸ್ತ್ರಜ್ಞರೂ ಮಾನವಶಾಸ್ತ್ರಜ್ಞರೂ ಹಾಗೂ ಭೂಗೋಳ ವಿಜ್ಞಾನಿಗಳೂ ಅನೇಕ ಮಾನದಂಡಗಳನ್ನು ಗ್ರಾಮ ಮತ್ತು ನಗರಗಳ ನಡುವಣ ಲಕ್ಷಣವನ್ನು ವಿವರಿಸುವುದಕ್ಕೆ ಬಳಸುತ್ತಾರೆ. ಗಾತ್ರದ ಜೊತೆಗೆ, ಅವರು ಸಾಂದ್ರತೆ ಮತ್ತು ಮುಖ್ಯವಾಗಿ ವ್ಯವಸಾಯೇತರ ಕಸಬುಗಳಲ್ಲಿ ಶೇಕಡವಾರು ಎಷ್ಟೆಷ್ಟು ಜನ ನಿರತರಾಗಿರುವ ಪ್ರಮಾಣವನ್ನು ಪರಿಗಣಿಸಬೇಕಾಗುತ್ತದೆ.

ಒಂದು ನಗರದಲ್ಲಿ ಯಾವ ಯಾವ ಲಕ್ಷಣಗಳು ಇರಬೇಕು ಎಂಬುದರ ಬಗ್ಗೆ ಸಮಾಜವಿಜ್ಞಾನಿಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ  ಗ್ರಾಮೀಣ ಹಾಗೂ ನಗರಗಳಲ್ಲಿ ವಾಸಿಸುವ ಜನರಲ್ಲೂ ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಭಿನ್ನವಾಗಿರುತ್ತವೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಪ್ರಾಚ್ಯನಗರ: ನಮಗೆ ತಿಳಿದಿರುವ ಮಟ್ಟಿಗೆ, ಸಮೀಪ ಪ್ರಾಚ್ಯದ ಮೆಸಪೊಟೇಮಿಯ ನದಿಪ್ರದೇಶದಲ್ಲಿ ಮೊದಲು ಆ ಬಳಿಕ ನೈಲ್ ನದಿಯ ಕಣಿವೆಯಲ್ಲಿ ನಗರಗಳು ಹುಟ್ಟಿಕೊಂಡವು. ಪ್ರಾಚೀನ ನಗರಗಳು ಹುಟ್ಟಿದ ಕಾಲ ಯಾವುದು ಎಂಬುದರ ಬಗ್ಗೆ ಪಂಡಿತರಲ್ಲಿ ವಿವಾದವಿದೆ. ಮೆಸಪೊಟೇಮಿಯ ನಗರಗಳ ಕಾಲ ಪ್ರ.ಶ.ಪೂ. ಸು. 3,000 ವರ್ಷಗಳಿಂದ 6,000 ವರ್ಷಗಳೆಂದು ತಿಳಿದು ಬರುತ್ತದೆ.

ಸಿಂಧುನದಿ ಕಣಿವೆ ನಾಗರಿಕತೆಯ ನಗರಗಳು ಅದರಲ್ಲೂ ಹರಪ್ಪ ಮತ್ತು ಮೊಹೆಂಜೋದಾರೊ ನಗರಗಳು ಪ್ರ.ಶ.ಪೂ. ಸು.2500ರಲ್ಲಿ ಹುಟ್ಟಿಕೊಂಡವು. ಪ್ರ.ಶ.ಪೂ.1200ರ ಹೊತ್ತಿಗೆ ಚೀನದ ಹ್ವಾಂಗ್ ಹೋ ನದಿಪ್ರಾಂತ್ಯದಲ್ಲಿ ಪಟ್ಟಣಗಳು ಹುಟ್ಟಿಕೊಂಡವು. ಏಷ್ಯದ ಇತರ ಕೇಂದ್ರಗಳಲ್ಲಿ ನಗರಗಳು ಬೆಳವಣಿಗೆಯಾದದ್ದು ಅನಂತರವೇ. ಜಪಾನಿನಲ್ಲಿ ಮೊದಲ ಊರುಗಳು ಪ್ರ.ಶ.ಪೂ. 4000 ಹೊತ್ತಿಗೆ ಹುಟ್ಟಿಕೊಂಡವು. ಪರಂಪರೆಯಾಗಿ ಬಂದಿರುವ ಪ್ರಾಚ್ಯನಗರಗಳು ಈಚೆಗಿನವರೆಗೂ ಕೈಗಾರಿಕಾ ತಂತ್ರವಿದ್ಯೆಯ ಹಿಂದಿನ ಪರಿಸರದ ಫಲಗಳು. ಅಲ್ಲಿನ ಉದ್ಯೋಗತಂತ್ರಗಳು ಜೀವಂತ ಪ್ರಾಣಿಗಳ ಶಕ್ತಿಯ ಮೇಲೂ ಸರಳವಾದ ಉಪಕರಣಗಳ ಮೇಲೂ ಅವಲಂಬನೆಗೊಂಡಿದ್ದವಲ್ಲದೆ ಅವುಗಳ ನಿರ್ವಹಣೆಯಲ್ಲಿ ವೈಜ್ಞಾನಿಕ ತಿಳುವಳಿಕೆಯ ಅಭಾವವಿತ್ತು.

ಚೀನ, ಭಾರತ, ಮಧ್ಯಪ್ರಾಚ್ಯ ಇತ್ಯಾದಿ ದೇಶಗಳ ನಗರಗಳು ವೈವಿಧ್ಯಮಯವಾಗಿದ್ದು ಅವುಗಳಲ್ಲಿ ಕೆಲವು ಲಕ್ಷಣಗಳು ಸಾಮಾನ್ಯವಾಗಿದ್ದವು.  ಪ್ರಾಚ್ಯನಗರವೊಂದರ ಮಧ್ಯಭಾಗ ಸಕಲ ಸೇನಾತಂತ್ರಗಳ ಕಾರ್ಯಕ್ಷೇತ್ರವಾಗಿದ್ದು, ಮುಖ್ಯವಾದ ಸರ್ಕಾರಿ ಕಟ್ಟಡಗಳೂ ಮತೀಯ ಮಂದಿರಗಳೂ ಮತ್ತು ವಿದ್ಯಾಶಾಲೆಗಳೂ ಕಂಡುಬರುತ್ತಿದ್ದು ಇಲ್ಲಿ ಸಮಾಜದ ಉಚ್ಚವರ್ಗದ ಜನ ವಾಸಿಸುತ್ತಿದ್ದರು. ಆದುದರಿಂದ ಊರ ಮಧ್ಯದಲ್ಲಿ ವಾಸಮಾಡುವ ಉಚ್ಚ ವರ್ಗದ ಜನ ಪರಸ್ಪರವಾಗಿ ಕಲೆತು ಮಾತನಾಡಬಹುದಿತ್ತು; ಇದರಿಂದ ಅವರು ತಮ್ಮ ಮುಖಂಡತ್ವವನ್ನು ಉಳಿಸಿಕೊಳ್ಳಲೂ ಸಮರ್ಥರಾಗುತ್ತಿದ್ದರು; ಇದಕ್ಕೆ ವಿರುದ್ಧವಾಗಿ, ಉಚ್ಚವರ್ಗದವರ ಸೇವಕರ ಹೊರತು, ಮಿಕ್ಕ ಕೆಳವರ್ಗದ ಕಾರ್ಮಿಕ ಜನ ಈ ಕೇಂದ್ರಭಾಗಕ್ಕೆ ದೂರವಾಗಿ ಊರಿನ ಹೊರವಲಯದಲ್ಲಿ ವಾಸಿಸುತ್ತಿದ್ದರು.

ಹಿಂದಿನ ಮಾದರಿ ದೇಶೀಯ ನಗರಗಳ ಜತೆಗೆ, ಕಳೆದ ಒಂದೆರಡು ಶತಮಾನಗಳಿಂದೀಚೆಗೆ ಮತ್ತೊಂದು ಮಾದರಿಯ ನಗರಗಳು ಪ್ರಾಚ್ಯದಲ್ಲಿ ಹುಟ್ಟಿಕೊಂಡಿವೆ. ಇದು ಯುರೋಪಿನವರು ಹುಟ್ಟುಹಾಕಿದ ಉಪನಿವೇಶಿ ನಗರ. ಚೆನ್ನೈ, ಕೋಲ್ಕತ, ಮುಂಬಯಿ ಇಂಥ ನಗರಗಳನ್ನೊಳಗೊಂಡು ಕೆಲವು ಮುಖ್ಯ ನಗರಗಳೂ, ಚೀನ ಮತ್ತು ಆಗ್ನೇಯ ಏಷ್ಯಗಳ ಕೆಲವು ದೊಡ್ಡ ಪಟ್ಟಣಗಳೂ ವಸಾಹತು ಆಡಳಿತದ ಫಲವಾಗಿ ಹುಟ್ಟಿಕೊಂಡಿವೆ.

ಈಗ ದೇಶೀಯ ನಗರಗಳೂ ಉಪನಿವೇಶೀ ನಗರಗಳೂ ಜೊತೆಗೆ ಹೊಸದಾಗಿ ನಿರ್ಮಿತವಾಗಿರುವ ನಗರಗಳೂ ಕೈಗಾರಿಕೀಕರಣ ಮತ್ತು ಪಾಶ್ಚಾತ್ಯೀಕರಣದ ದೆಸೆಯಿಂದ ತುಂಬ ಮಾರ್ಪಾಟು ಹೊಂದುತ್ತಿವೆ. ಹಳ್ಳಿಗಳಿಗಿಂತ ಪಟ್ಟಣಗಳಲ್ಲಿ ವಾಸಮಾಡುವ ಜನ ಹೆಚ್ಚುತ್ತಿದ್ದಾರೆ.

ಪಾಶ್ಚಾತ್ಯ ಮತ್ತು ಪೌರಾತ್ಯ ನಗರಗಳಿಗಿರುವ ಒಂದು ಮುಖ್ಯ ವ್ಯತ್ಯಾಸವೆಂದರೆ ಪಾಶ್ಚಾತ್ಯ ನಗರ ಒಂದು ತರದ ಸ್ವಯಮಾಡಳಿತವನ್ನು ಬೆಳೆಸಿಕೊಂಡಿತು. ಇದರಿಂದ ಬೃಹತ್ ಸಮಾಜದ ಅಧೀನಕ್ಕೆ ಒಳಗಾಗದೆ ಸ್ವ–ನಿರ್ದೇಶನ ಮತ್ತು ಸ್ವ–ನಿಯಮವನ್ನು ಗಳಿಸಿಕೊಳ್ಳುವಂತಾಯಿತು. ಇಂಗ್ಲೆಂಡಿನಲ್ಲಿ ಬಳಿಕ ಫ್ರಾನ್ಸ್ ಮತ್ತು ಇತರ ಕಡೆಗಳಲ್ಲಿ ಪ್ರಾದುರ್ಭವಿಸಿದ ಕೈಗಾರಿಕಾ ಕ್ರಾಂತಿ ನಗರಗಳ ಪಾರಿಸ್ಥಿತಿಕ ಮತ್ತು ಸಾಮಾಜಿಕ ರಚನೆಗಳನ್ನು ಬದಲು ಮಾಡಿದೆ. ಪ್ರಾಣಿಜನ್ಯವಲ್ಲದ ಶಕ್ತಿಸಂಪತ್ತನ್ನು ಅಧಿಕವಾಗಿ ಒದಗಿಸಿಕೊಳ್ಳುವುದು, ಸಂಕೀರ್ಣ ರಚನೆಯ ಉಪಕರಣಗಳನ್ನು ಬಳಸುವುದು, ವೈಜ್ಞಾನಿಕ ವಿಧಾನಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುವುದೇ ಆಗಿದೆ.

# ನಗರ ಜನಸಂಖ್ಯೆ – ನಗರ ಮಾರ್ಪಾಡು

ಕೈಗಾರಿಕಾಕರಣದ ಫಲಗಳಲ್ಲಿ ಮುಖ್ಯವಾಗಿ ನಗರಗಳ ಸಂಖ್ಯೆ ಮತ್ತು ವಿಸ್ತೀರ್ಣ ಹೆಚ್ಚುತ್ತಿರುವುದು. ಕೈಗಾರಿಕೀಕರಣಕ್ಕೆ ಮೊದಲಿನ ನಾಗರಿಕ ಸಮಾಜದಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 5ರಷ್ಟೋ 10ರಷ್ಟೋ ಮಂದಿ ನಗರಗಳಲ್ಲಿರುತ್ತಿದ್ದರು. ಕೈಗಾರಿಕೀಕರಣವಾದಮೇಲೆ ನಾಗರಿಕ ಸಮಾಜಗಳಲ್ಲಿ ಶೇ. 50 ಕ್ಕಿಂತ ಹೆಚ್ಚು ಜನ ನಗರಗಳಲ್ಲಿ ವಾಸಮಾಡುತ್ತಾರೆ; ದಶಲಕ್ಷ ಜನಸಂಖ್ಯೆಯ ನಗರಗಳು ಸಾಧಾರಣವಾಗುತ್ತಿವೆ.

ಇಂತಹ ನಗರಗಳಲ್ಲಿ ಸಾಮಾನು ಸರಂಜಾಮುಗಳ ಸಾಗಾಣಿಕೆಯಲ್ಲಿ ಹೊಸ ರೀತಿ, ಮುಖ್ಯವಾಗಿ ರೈಲುರಸ್ತೆ ಮತ್ತು ಸ್ವಯಂಚಾಲಿತ ವಾಹನಗಳು ಸಮಾಜದ ಶ್ರೇಷ್ಠವರ್ಗದ ಜನ ನಗರದ ಮಧ್ಯದಲ್ಲಿರದೆ ಅದರ ಹೊರವಲಯದಲ್ಲಿ ವಾಸಮಾಡಲು ಅನುಕೂಲವನ್ನು ಮಾಡಿಕೊಟ್ಟಿವೆ; ಕೈಗಾರಿಕೀಕರಣಕ್ಕೆ ಹಿಂದಿದ್ದ ಸಾಂಪ್ರದಾಯಿಕ ನಗರಗಳ ಹಾಗೆ ಈಗಿನ ನಗರಗಳಲ್ಲಿ ವೃತ್ತಿ ಮತ್ತು ಜಾತಿಗಳ ಪಂಗಡಗಳು ಪ್ರತ್ಯೇಕವಾಗಿ ಜೀವಿಸುವುದು ಕಂಡುಬರುವುದಿಲ್ಲ. ಕೈಗಾರಿಕೀಕರಣಕ್ಕೊಳಗಾದ ನಗರಗಳಲ್ಲಿ ಒಂದೇ ಒಂದು ಕೆಲಸಕ್ಕಾಗಿ ಒಂದು ಜಾಗವನ್ನು ಬಳಸಿಕೊಳ್ಳುವ ಪ್ರವೃತ್ತಿ ಮೂಡಿದೆ. ಈ ಪ್ರಕಾರವಾಗಿ, ಜನರು ತಮ್ಮ ಕಸಬಿನ ಸ್ಥಳಕ್ಕಿಂತ ದೂರದಲ್ಲಿ ವಾಸಮಾಡಲು ಇಚ್ಛಿಸುತ್ತಾರೆ. (ಜಿ.ಎಸ್.ಜಿ.)

**ನಗರ ಜನಸಂಖ್ಯೆ:** ಗ್ರಾಮ ಮತ್ತು ಪಟ್ಟಣಗಳ ಮಧ್ಯೆ ಒಂದು ನಿರಂತರವಾದ ಕೊಂಡಿ ಇದ್ದರೂ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳಲ್ಲಿ ಹೆಚ್ಚಿನ ವ್ಯತ್ಯಾಸ ಕಂಡು ಬರುತ್ತದೆ. ಯಾವುದೇ ಒಂದು ನಿರ್ದಿಷ್ಟವಾದ ಸ್ಥಳದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಶೇ.75 ಕ್ಕಿಂತಲೂ ಹೆಚ್ಚು ಜನರು ಕೃಷಿಯೇತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದರೆ ಇಂತಹ ಜನರ ಸಮೂಹವನ್ನು ನಾವು ನಗರ ಜನಸಂಖ್ಯೆ ಎಂದು ಕರೆಯುತ್ತೇವೆ. ಅಂದರೆ ಹೆಚ್ಚಿನ ಜನರು ದ್ವಿತೀಯ ಮತ್ತು ತೃತೀಯ ಹಂತದ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇದರಲ್ಲಿ ಮುಖ್ಯವಾಗಿ ಕೈಗಾರಿಕೆ, ವ್ಯಾಪಾರ ವಹಿವಾಟು, ಇತರ ಸೇವಾ ಉದ್ಯೋಗಗಳು ಸೇರ್ಪಡೆಯಾಗುತ್ತವೆ. ನಗರ ಜನಸಂಖ್ಯೆಯ ಜೀವನ ಶೈಲಿ ಗ್ರಾಮೀಣದಕ್ಕಿಂತ ಬಹಳ ಭಿನ್ನವಾಗಿರುತ್ತದೆ. *

**ನಗರ ನಿರ್ಮಿತ ಪ್ರದೇಶ:** ನಗರಗಳು ಇತ್ತೀಚಿನ ದಶಕಗಳಲ್ಲಿ ತೀವ್ರಗತಿಯಲ್ಲಿ ಬೆಳೆಯುತ್ತಿವೆ. ಹಿಂದಿನಿಂದಲೂ ನಗರಗಳು ಕಂಡುಬಂದರೂ ಆಧುನಿಕ ಯುಗದಲ್ಲಿ ಅವು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಇತರ ಎಲ್ಲ ರೀತಿಯಲ್ಲೂ ಸಾಕಷ್ಟು ಅಭಿವೃದ್ಧಿ ಹೊಂದಿವೆ.

ಹಲವು ನಗರಗಳು ಕೇಂದ್ರಭಾಗದಲ್ಲಿ ಅಭಿವೃದ್ಧಿಹೊಂದಿ ಅನಂತರ ಆ ಪ್ರದೇಶದಲ್ಲಿ ಜನಸಂಖ್ಯೆ ಅಧಿಕಗೊಂಡು ಒತ್ತಡ ಅಧಿಕವಾದಾಗ ಮೂಲ ನಗರದ ಸುತ್ತಲಿನ ಪ್ರದೇಶ ಸಹ ಇದರ ಒಂದು ಪ್ರಭಾವಕ್ಕೆ ಒಳಗಾಗುತ್ತವೆ. ಅವು ಸಹ ಕ್ರಮೇಣ ನಗರ ನಿರ್ಮಿತ ಪ್ರದೇಶವಾಗಿ ಪರಿಣಮಿಸುತ್ತವೆ.

ನಗರ ನಿರ್ಮಿತ ಪ್ರದೇಶಗಳಲ್ಲಿ ಜನಸಂಖ್ಯೆ ಅಧಿಕವಾಗಿದ್ದು ಆ ಪ್ರದೇಶದಲ್ಲಿ ಎಲ್ಲ ಸೇವಾ ಸೌಲಭ್ಯಗಳು ಲಭ್ಯ. ಹೀಗಾಗಿ ಆ ಪ್ರದೇಶವು ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಗೊಂಡಿರುತ್ತದೆ, ಕೈಗಾರಿಕೆಗಳ ಕೇಂದ್ರೀಕರಣವನ್ನು ನಗರ ನಿರ್ಮಿತ ಪ್ರದೇಶದಲ್ಲಿ ಕಾಣಬಹುದು. ಇದರಿಂದ ಈ ಪ್ರದೇಶದಲ್ಲಿ ಉದ್ಯೋಗ ಅವಕಾಶಗಳು ಅಧಿಕ. ಎಲ್ಲ ಸಾಮಾಜಿಕ ಸೌಕರ್ಯಗಳು ಅಂದರೆ ಆಸ್ಪತ್ರೆ, ಶಾಲಾ–ಕಾಲೇಜುಗಳು, ಸಾರಿಗೆ ಮೊದಲಾದವುಗಳು ಉತ್ತಮವಾಗಿರುವುದರಿಂದ, ನಗರ ನಿರ್ಮಿತ ಪ್ರದೇಶಗಳು ಎಲ್ಲ ಸೇವಾ ಸೌಲಭ್ಯ ಹೊಂದಿರುವುದರಿಂದ ಅವು ಆರ್ಥಿಕ ಪ್ರಗತಿಯನ್ನು ಸಾಧಿಸಿರುವ ಹಾಗೂ ಸಾಧಿಸುತ್ತಿರುವ ಪ್ರದೇಶಗಳಾಗಿವೆ. (ಎಚ್.ಎಸ್.ಡಿ.)

**ನಗರ ಪ್ರದೇಶ:** ನಗರ ಪ್ರದೇಶ ಸಾಮಾನ್ಯವಾಗಿ ದೊಡ್ಡ ನಗರದ ಸುತ್ತಮುತ್ತಲಿನ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಈ ಪ್ರದೇಶದಲ್ಲಿ ನಗರವೇ ಕೇಂದ್ರ ಬಿಂದು. ನಗರ ಪ್ರದೇಶದಲ್ಲಿ ನಗರವಾಸಿಗಳ ಸುತ್ತಲೂ ಗ್ರಾಮೀಣ ವಾಸಿಗಳು ನೆಲಸಿರುತ್ತಾರೆ. ಗ್ರಾಮೀಣ ಜನರು ಹೆಚ್ಚಿಗೆ ನಗರ ಅವಲಂಬಿತ ಕಸುಬನ್ನು ಮತ್ತು ನಗರಕ್ಕೆ ಪೂರೈಸಬಹುದಾದ, ಕೃಷಿ ಉತ್ಪನ್ನವನ್ನು ತಯಾರಿಸುತ್ತಾರೆ. ನಗರ ಪ್ರದೇಶದ ವ್ಯಾಪ್ತಿಯಲ್ಲಿರುವ ಹೆಚ್ಚಿನ ಗ್ರಾಮಗಳಿಗೆ, ನಗರ ಸೌಲಭ್ಯಗಳು, ಕುಡಿಯುವ ನೀರು, ಸಾರಿಗೆ, ಆರೋಗ್ಯ ಇನ್ನಿತರ ಸೌಲಭ್ಯಗಳು ಲಭಿಸುತ್ತವೆ. ಏಕೆಂದರೆ ನಗರ ಮತ್ತು ಗ್ರಾಮಗಳು ನಗರ ಪ್ರದೇಶದಲ್ಲಿ ಪರಸ್ಪರ ಅವಲಂಬನೆಗೆ ಒಳಪಟ್ಟಿರುವುದು. ನಗರ ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಸಣ್ಣ ಪಟ್ಟಣಗಳನ್ನು ನಾವು ಕಾಣಬಹುದು. ಈ ಪಟ್ಟಣಗಳನ್ನು ಯೋಜನೆಗೆ ಅಳವಡಿಸಿದರೆ, ಗ್ರಾಮೀಣದಿಂದ ನಗರಕ್ಕೆ ಬರುವ ವಲಸೆಯನ್ನು ಕಡಿಮೆ ಮಾಡಬಹುದು. ನಗರ ಪ್ರದೇಶ ಮಿತಿ ಅದು ಎಷ್ಟರಮಟ್ಟಿಗೆ ಪ್ರಭಾವ ಮತ್ತು ಆಕರ್ಷಣಾ ಶಕ್ತಿ ಹೊಂದಿದೆ ಎಂಬುವುದರ ಮೇಲೆ ನಿರ್ಧರಿಸಲ್ಪಡುತ್ತದೆ. ನಗರ ಪ್ರದೇಶದಲ್ಲಿ ಕೆಲವು ಸ್ಥಿತ್ಯಂತರ ಪ್ರದೇಶಗಳನ್ನು ನಾವು ಕಾಣಬಹುದು. ನಗರ ಯೋಜನಗಾರರು, ಗುರುತ್ವಾಕರ್ಷಣ ಸಾಮರ್ಥ್ಯ ಮಾದರಿ ತತ್ತ್ವದಿಂದ ನಗರ ಪ್ರದೇಶವನ್ನು ಗುರುತಿಸುತ್ತಾರೆ. ಆರ್‌ಇ ಡಿಕಿನ್‌ಸನ್ ಎಂಬುವರು ನಗರ ಪ್ರದೇಶವನ್ನು ಗುರುತಿಸುವುದರಲ್ಲಿ ಮೊದಲ ಪ್ರಾಜ್ಞರು. ನಗರ ಮತ್ತು ಪ್ರಾದೇಶಿಕ ಯೋಜನೆಗಾರರು ಹೆಚ್ಚಿಗೆ ಆಡಳಿತ ಮಿತಿಯನ್ನು ಪರಿಗಣನೆಗೆ ತೆಗೆದುಕೊಂಡು ನಗರ ಪ್ರದೇಶವನ್ನು ಗುರುತಿಸುತ್ತಾರೆ. (ಎನ್.ಎಸ್.)

**ನಗರ ಭೂಗೋಳವಿಜ್ಞಾನ:** ಮಾನವ ಭೂಗೋಳವಿಜ್ಞಾನದಲ್ಲಿ ಅತಿ ಹೆಚ್ಚು ಅಭಿವೃದ್ಧಿ ಹೊಂದಿರುವ ಶಾಖೆಗಳಲ್ಲಿ ಒಂದು. ನಗರಗಳೆಂದು ಪರಿಗಣಿಸಲ್ಪಟ್ಟಿರುವ ಪ್ರದೇಶಗಳ ಎಲ್ಲ ಬಗೆಯ ವಿಷಯಗಳ ಅಧ್ಯಯನವನ್ನು ಒಳಗೊಂಡಿರುವ ಭೂಗೋಳ ವಿಜ್ಞಾನ. ಇದರ ಅಧ್ಯಯನ ನಗರಗಳ ಸ್ಥಾನದ ವಿಶ್ಲೇಷಣೆಯಿಂದ ಪ್ರಾರಂಭಿಸಲ್ಪಡುವುದು. ನಗರಗಳನ್ನು ಒಂದು ಜೀವಂತ ವ್ಯವಸ್ಥೆಯಂತೆ ಪರಿಗಣಿಸಿ ವಿಶ್ಲೇಷಿಸಲಾಗುವುದು. ಇದು ಸಮಾಜಶಾಸ್ತ್ರ ಹಾಗೂ ಅರ್ಥಶಾಸ್ತ್ರಗಳೊಡನೆ ಹೆಚ್ಚು ನಿಕಟವಾಗಿದೆ. ಇದರ ಕ್ಷೇತ್ರ ಕೆಳಕಂಡ ನಾಲ್ಕು ವಿಷಯಗಳ ಅಧ್ಯಯನವನ್ನು ಪ್ರಧಾನವಾಗಿ ಒಳಗೊಂಡಿರುವುದು.

1. ನಗರಗಳ ಹುಟ್ಟು, ಬೆಳೆವಣಿಗೆ, ಸ್ಥಾನ, ನಗರೀಕರಣದ ಸಮಸ್ಯೆಗಳು, ನಗರಗಳು ಮತ್ತು ಮೆಟ್ರೊಪಾಲಿಟನ್ ಪದಗಳ ವ್ಯಾಖ್ಯಾನ.
2. ನಗರಗಳ ವಿಂಗಡಣೆ ಅವುಗಳ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ಹೋಲಿಕೆ ಮತ್ತು ವ್ಯತ್ಯಾಸ.
3. ನಗರಗಳ ಅಂಚಿನ ಪ್ರದೇಶಗಳ ಮಾರ್ಪಾಡುಗಳು.
4. ನಗರ ಮತ್ತು ಅದರ ಸುತ್ತಲಿನ ಪ್ರದೇಶವನ್ನು ಒಂದು ಭೌಗೋಳಿಕ ಪ್ರದೇಶವನ್ನಾಗಿ ಪರಿಗಣಿಸಿ ಅದರ ಸೂಕ್ಷ್ಮ ಅಧ್ಯಯನ.

ಇದರಲ್ಲಿ ನಗರಗಳ ಸಾಮಾಜಿಕ, ಆರ್ಥಿಕ ಹಾಗೂ ಕೈಗಾರಿಕಾ ವಲಯಗಳ ಪ್ರಾದೇಶಿಕ ತಾರತಮ್ಯಗಳನ್ನು ಅಧ್ಯಯನ ಮಾಡುವ ಕ್ರಮ ಇತ್ತೀಚೆಗೆ ಅಭಿವೃದ್ಧಿ ಹೊಂದಿರುವುದು. ನಗರಗಳಲ್ಲಿ ವಾಣಿಜ್ಯ ರಚನೆ, ಸಾಮಾಜಿಕ ವ್ಯವಸ್ಥೆಗಳ ಅಧ್ಯಯನ, ನಗರಗಳಲ್ಲಿ ಆಂತರಿಕವಾಗಿ ಅಭಿವೃದ್ಧಿ ಹೊಂದುವ ಕೊಳೆಗೇರಿಗಳ ಬೆಳೆವಣಿಗೆ, ಆಧುನಿಕ ಭೂಗೋಳವಿಜ್ಞಾನದ ನಿರೂಪಣೆಯಲ್ಲಿ ಕ್ರಾಂತಿಯನ್ನುಂಟು ಮಾಡಿದ ಅನೇಕ ಸಂಖ್ಯಾಶಾಸ್ತ್ರ ನಮೂನೆಗಳನ್ನು ನಗರ ಭೂಗೋಳವಿಜ್ಞಾನದಲ್ಲಿ ಮೊದಲು ಬಳಸಲಾಯಿತು. ಇಂದು ನಗರ ಭೂಗೋಳವಿಜ್ಞಾನ ನಗರಗಳ ಯೋಜನೆಯೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿರುವುದು. (ಟಿ.ಎಂ.ಎಂ.)

**ನಗರ ಮತ್ತು ಕೈಗಾರಿಕೆ ಒಗ್ಗೂಡುವಿಕೆ:** ಅರ್ಬನ್ ಅಗ್ಲೊಮರೇಷನ್ ಜನರು ಮತ್ತು ಆರ್ಥಿಕ ಚಟುವಟಿಕೆಗಳು ಪರಸ್ಪರ ಅನುಕೂಲಕ್ಕೋಸ್ಕರ ಒಂದೇ ಪ್ರದೇಶದಲ್ಲಿ ಕೇಂದ್ರೀಕೃತವಾಗುವುದನ್ನು ಒಗ್ಗೂಡುವಿಕೆ ಎಂದು ಕರೆಯುವರು. ವಿಶೇಷ ವಸ್ತುಗಳ ಲಭ್ಯತೆ, ಕುಶಲ ತಂತ್ರಜ್ಞರು, ಉತ್ತಮ ಮಾರುಕಟ್ಟೆ ಮೊದಲಾದ ಅಂಶಗಳು ಹೆಚ್ಚು ಜನರನ್ನು ಆಕರ್ಷಿಸುತ್ತವೆ. ಇದರಿಂದ ನಗರದ ಸುತ್ತಲಿನ ಪ್ರದೇಶದಲ್ಲಿ ಹೆಚ್ಚು ಚಟುವಟಿಕೆಗಳು ಬೆಳೆದು ಒಗ್ಗೂಡುವಿಕೆ ಕಂಡುಬರುತ್ತಿದೆ.

2001 ರ ಜನಗಣತಿ ವ್ಯಾಖ್ಯೆಯಂತೆ ಒಂದು ಪಟ್ಟಣ ಅಥವಾ ನಗರ ಹಾಗೂ ಅದರ ಕಂದಾಯ ಭಾಗದ ವ್ಯಾಪ್ತಿಯನ್ನು ಮೀರಿ ಬೆಳೆದಿರುವ ಬೆಳೆವಣಿಗೆಗಳನ್ನು ಅರ್ಬನ್ ಅಗ್ಲೋಮರೇಷನ್ ಎಂದು ಕರೆಯುವರು. ಕೆಲವು ಸಂದರ್ಭಗಳಲ್ಲಿ ಪರಸ್ಪರ ಹತ್ತಿರವಿರುವ ಎರಡು ಅಥವಾ ಮೂರು ಪಟ್ಟಣಗಳ ಹಾಗೂ ಅವುಗಳ ವ್ಯಾಪ್ತಿ ಮೀರಿ ಬೆಳೆದಿರುವ ಭಾಗಗಳು ಪರಸ್ಪರ ಹೆಣೆದುಕೊಂಡಿರುತ್ತವೆ. ಎರಡು ನಗರ ಪ್ರದೇಶಗಳು ಪರಸ್ಪರ ವಿಸ್ತರಿಸಲ್ಪಟ್ಟು, ಅವೆರಡೂ ಹೆಣೆದುಕೊಂಡಿರುತ್ತವೆ. ಇದನ್ನು ಅರ್ಬನ್ ಅಗ್ಲೋಮರೇಷನ್ ಎಂದು ಹೇಳಬಹುದು.

ಕೈಗಾರಿಕೆ ಒಗ್ಗೂಡುವಿಕೆ ಎಂದರೆ ಎರಡು ನಗರಗಳ ಅಥವಾ ಅದಕ್ಕಿಂತ ಹೆಚ್ಚು ನಗರಗಳ ವ್ಯಾಪ್ತಿಯನ್ನು ಮೀರಿ ಬೆಳೆದ ಕೈಗಾರಿಕಾ ಪ್ರದೇಶಗಳು, ಅಲ್ಲಿ ಒಟ್ಟಾಗಿ ಸೇವೆಗಳನ್ನು ಜನರಿಗೆ ಒದಗಿಸುತ್ತಿರುತ್ತವೆ. ಇಲ್ಲಿ ವಸ್ತುಗಳ ಲಭ್ಯತೆ, ತಂತ್ರಜ್ಞರು, ಉತ್ತಮ ಮಾರುಕಟ್ಟೆ ಹಾಗೂ ಇತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹೊಂದಿರುತ್ತವೆ. ಇದರಿಂದ ಇಲ್ಲಿ ಹೆಚ್ಚು ಕೈಗಾರಿಕೆಗಳು ಆಕರ್ಷಿಸಲ್ಪಟ್ಟು ವೃತ್ತಿ ಚಟುವಟಿಕೆಗಳು ಹೆಚ್ಚಾಗಿ ಕಂಡುಬರುತ್ತದೆ. ಇದನ್ನೇ ಕೈಗಾರಿಕಾ ಒಗ್ಗೂಡುವಿಕೆ ಎನ್ನುವರು. (ಎಸ್.ಕೆ.ಪಿ.)

**ನಗರ ಮಾರ್ಪಾಡು :** ಭೌತಿಕವಾಗಿ ಗೋಚರಿಸುವ ನಗರ ಚಟುವಟಿಕೆಗಳನ್ನು ಅದನ್ನು ನಗರ ಮಾರ್ಪಾಡು (ಅರ್ಬನ್ ಮಾರ್ಫಾಲಜಿ) ಎಂದು ಕರೆಯುವರು. ನಗರದಲ್ಲಿ ನಿರ್ಮಿತವಾಗುವ ಮತ್ತು ನಿರ್ಮಾಣವಾಗಿರುವ ನೆಲೆಯೊಳಗಿನ ಕಟ್ಟಡಗಳು ಗಗನಚುಂಬಿ ಮತ್ತು ಗಗನಮುಖಿ ಬಹುಮಹಡಿ ಕಟ್ಟಡಗಳನ್ನು ಒಳಗೊಂಡಿದೆ. ಜೊತೆಗೆ ನಗರದ ಆಂತರಿಕ ಮತ್ತು ಬಾಹ್ಯರಚನೆಯನ್ನು ಇದು ಒಳಗೊಂಡಿರುತ್ತದೆ. ನಗರದ ಮಾರ್ಪಾಡುಗಳಲ್ಲಿ ಭೌತಿಕ ಮತ್ತು ಸಾಂಸ್ಕೃತಿಕ ಅಂಶಗಳು, ನಗರದ ಸ್ಥಾನ, ವಿಸ್ತೀರ್ಣ ಮುಂತಾದ ಅಂಶಗಳ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರುತ್ತವೆ. ಪ್ರಮುಖವಾಗಿ ನದಿ ತೀರ ಪ್ರದೇಶಗಳಲ್ಲಿ

ನಗರಗಳು ಉಗಮವಾಗಿ ತದನಂತರ ಇವುಗಳು ನದಿ ತೀರದುದ್ದಕ್ಕೂ ಹರಡಿಕೊಳ್ಳುತ್ತಾ ನೀಳ ನಗರಗಳಾಗಿ ಮಾರ್ಪಾಡು ಹೊಂದುತ್ತವೆ. ಅದೇ ರೀತಿ ಸಾಂಸ್ಕೃತಿಕ ಅಂಶಗಳಾದ ಕೋಟೆಗಳು, ಹಳೆ ಮಾರುಕಟ್ಟೆಗಳು, ರಸ್ತೆ ಮಾರ್ಗಗಳು, ರೈಲು ನಿಲ್ದಾಣಗಳು ಮತ್ತು ಆಡಳಿತಾತ್ಮಕ ಕಛೇರಿಗಳು ನಗರ ಮಾರ್ಪಾಡಿನಲ್ಲಿ ಹೆಚ್ಚಿನ ಪ್ರಾಮುಖ್ಯತೆ ವಹಿಸುತ್ತವೆ.

ಉದಾ: ಗಂಗನದಿ ತೀರದಲ್ಲಿ ಕಂಡುಬರುವ ಬಕ್ಸರ್, ದೆಹಲಿ ಮುಂತಾದ ನಗರಗಳು ತ್ರಿಕೋನಾಕಾರದಲ್ಲಿ ಮಾರ್ಪಾಡನ್ನು ಹೊಂದಿರುತ್ತವೆ. ಏಕೆಂದರೆ ಒಂದು ಕಡೆ ನದಿ ತೀರದ ಸೆಳೆತ ಮತ್ತೊಂದು ಕಡೆ ಸಾಂಸ್ಕೃತಿಕ ವಲಯಗಳ ಸೆಳೆತಗಳಿಂದ ಈ ರೀತಿ ನಿರ್ಮಾಣವಾಗಿರುವುದನ್ನು ಕಾಣಬಹುದು. ಅದೇ ರೀತಿ ಕೆಲವು ನಗರಗಳು ಬಿಡಿ ಬಿಡಿಯಾದ ಮಾದರಿಯಲ್ಲಿ ಜಗದೀಷಪುರ ಪಟ್ಟಣ ಮಾರ್ಪಾಡು ಹೊಂದಿರುವುದನ್ನು ಕಾಣಬಹುದು.

ನಗರಗಳ ಭೂರಚನೆ ನಿರಂತರವಾಗಿ ಬದಲಾವಣೆಗೊಳ್ಳುತ್ತಿರುತ್ತದೆ. ಆರ್ಥಿಕ ಅಭಿವೃದ್ಧಿ ಜನಸಂಖ್ಯಾ ಬೆಳವಣಿಗೆ, ತಾಂತ್ರಿಕತೆಯ ಮಾರ್ಪಾಡು ಕೈಗಾರಿಕೀಕರಣ ಸಾಮಾಜಿಕ ಬದಲಾವಣೆಗಳು ಭೂ ಬಳಕೆಯ ಬದಲಾವಣೆಗೆ ಕಾರಣವಾಗುತ್ತವೆ. (ಎಂ.ಡಿ.)

**ನಗರ ಯೋಜನೆ:** ನಗರ ಪ್ರದೇಶಗಳ ಬೆಳವಣಿಗೆ ಮತ್ತು ಬದಲಾವಣೆಗಳಿಗೆ ನಿರ್ದಿಷ್ಟ ಮಾರ್ಗದರ್ಶನ ಮಾಡಲು ಇರುವ ಏರ್ಪಾಡು (ಸಿಟಿ ಪ್ಲ್ಯಾನಿಂಗ್). ಕಟ್ಟಡಗಳ ವ್ಯವಸ್ಥಿತ ನಿರ್ಮಾಣ, ರಸ್ತೆ, ಚರಂಡಿ, ಉದ್ಯಾನವನ ಮೊದಲಾದವುಗಳ ಅಳವಡಿಕೆ, ನಾಗರಿಕರ ದೈಹಿಕ ಹಾಗೂ ಮಾನಸಿಕ ಆರೋಗ್ಯರಕ್ಷಣೆ, ಸಾಮಾಜಿಕ ಜೀವನದಲ್ಲಿ ಸ್ವಾಸ್ಥ್ಯ ಕಾಪಾಡುವಿಕೆ ಮುಂತಾದ ವಿವಿಧ ಕರ್ತವ್ಯಗಳು ನಗರಯೋಜನೆಯ ವ್ಯಾಪ್ತಿಯಲ್ಲಿ ಬರುತ್ತವೆ.

ಸೀಮಿತ ಭೌಗೋಳಿಕ ಪ್ರದೇಶದಲ್ಲಿ ಅಧಿಕ ಜನರು ವಾಸಿಸಲು ಅನೇಕ ಕಾರಣಗಳುಂಟು. ಅವುಗಳಲ್ಲಿ: ಅಧಿಕ ಉದ್ಯೋಗಾವಕಾಶಗಳು ಮತ್ತು ವಿವಿಧ ಸೇವಾ ಸೌಲಭ್ಯಗಳು ಪ್ರಧಾನವಾದವು. ಈ ಜನವಸತಿಗಳನ್ನು ಲಂಗುಲಗಾಮಿಲ್ಲದೇ ಬೆಳೆಯಲು ಬಿಟ್ಟಿದ್ದಾದರೆ ಪ್ರತಿಯೊಂದು ನಗರವೂ ಕೊಳಚೆ ಪ್ರದೇಶಗಳಾಗುವುದರಲ್ಲಿ ಸಂದೇಹವಿಲ್ಲ. ತತ್ಪರಿಣಾಮವಾಗಿ ಜನಾರೋಗ್ಯ ಕೆಡುವುದು; ನಾಗರಿಕ ಜೀವನದಲ್ಲಿ ಕ್ಷೋಭೆ ತಲೆದೋರುವುದು. ಆದ್ದರಿಂದ ನಗರದ ವ್ಯವಸ್ಥಿತ ಅಭಿವರ್ಧನೆ ತೀರ ಅಗತ್ಯ. ಪ್ರ.ಶ.ಪೂ. 3000ದಷ್ಟು ಹಿಂದೆಯೇ ನಗರಯೋಜನೆ ಅಸ್ತಿತ್ವಕ್ಕೆ ಬಂದಿತ್ತೆಂಬುದು ಇತಿಹಾಸದಿಂದ ತಿಳಿಯುತ್ತದೆ. ಭಾರತ, ಗ್ರೀಸ್, ಈಜಿಪ್ಟ್, ಚೀನ, ಮಾಯ ಮುಂತಾದ ಎಲ್ಲ ಪ್ರಾಚೀನ ನಾಗರಿಕತೆಗಳೂ ನಗರ ಯೋಜನೆಯನ್ನು ಆಚರಣೆಗೆ ತಂದು ಜನಜೀವನವನ್ನು ಸುವ್ಯವಸ್ಥೆಯ ಹಾದಿಯಲ್ಲಿ ಕೊಂಡೊಯ್ಯುತ್ತಿದ್ದವು. ಉದಾ: ತಕ್ಷಶಿಲೆ, ಹರಪ್ಪ, ಮೊಹೆಂಜೋದಾರೊ ನಗರಗಳಲ್ಲಿ ಇಟ್ಟಿಗೆಗಳಿಂದ ಕಟ್ಟಿದ ಉಪ್ಪರಿಗೆ ಮನೆಗಳ ಸಾಲುಗಳೇ ಇದ್ದುವು, ಒಳಚರಂಡಿ ವ್ಯವಸ್ಥೆ ಇತ್ತು, ಅಗಲ ಹಾದಿಗಳಿದ್ದುವು. ನಾಗರಿಕರ ಆವಶ್ಯಕತೆ ಮತ್ತು ಮನರಂಜನೆಗಳಿಗೆ ಬೇಕಾದ ವಿವಿಧ ಸಾರ್ವಜನಿಕ ಗೃಹಗಳಿದ್ದುವು.

ಪ್ರಾಚೀನ ಕಾಲದ ಭಾರತದಲ್ಲಿ ಪ್ರಚಾರದಲ್ಲಿದ್ದ ವಿಶಿಷ್ಟ ಮಾದರಿಯ ನಗರಗಳಾದ ಅಯೋಧ್ಯೆ, ಇಂದ್ರಪ್ರಸ್ಥ, ಪಾಟಲೀಪುತ್ರ, ಮಧುರೆ, ಕಾಂಚೀಪುರ, ಕಾವೇರಿಪಟ್ಟಣಂ, ವಾರಾಣಸಿ ಮೊದಲಾದ ಪ್ರಸಿದ್ಧ ನಗರಗಳು ಅಂದಿನ ವಾಸ್ತುಶಿಲ್ಪಕ್ಕೆ ಜ್ವಲಂತ ನಿದರ್ಶನಗಳು. 5,500 ಮೀ ಉದ್ದ ಮತ್ತು 1,400 ಮೀ ಅಗಲಕ್ಕೆ ಹರಡಿದ್ದ ಅಯೋಧ್ಯಾ ನಗರ, ಅದು ಒದಗಿಸಿದ್ದ ಸೌಕರ್ಯಗಳ, ಅಂತೆಯೇ ವಿಶಾಲ ಮಾರ್ಗ, ಉದ್ಯಾನವನ, ಸಭಾಂಗಣ, ಅಂಗಡಿ ಮೊದಲಾದ ಸೇವೆಗಳು. ಇಂದಿನ ಯಾವುದೇ ಉತ್ತಮ ನಗರಕ್ಕೆ ಸವಾಲಾಗುವಂತಿತ್ತು. ಅರಮನೆ ಅಥವಾ ದೇವಾಲಯ ನಗರದ ಕೇಂದ್ರವಾಗಿದ್ದು ಅದರ ಸುತ್ತ ವ್ಯವಸ್ಥಿತ ನಕ್ಷೆಯ ರೀತ್ಯ ನಗರವನ್ನು ಕಟ್ಟುತ್ತಿದ್ದುದು ವಾಡಿಕೆ.

ಇತಿಹಾಸ ಕಾಲದಲ್ಲಿ–ಉದಾಹರಣೆಗೆ ಪಾಂಡ್ಯರು, ಚೋಳರು, ರಜಪೂತರು, ಮೊಗಲರು–ನಗರಗಳು ಅರಸರ ವೈಭವದ ಪ್ರತೀಕಗಳಾಗಿ ಕಲೆಗಳ ಬೀಡಾಗಿ ರೂಪುಗೊಂಡದ್ದನ್ನು ಕಾಣಬಹುದು. ಮದುರೆ, ಫತೇಪುರ್‌ಸಿಕ್ರಿ, ಹಂಪೆ ಮೊದಲಾದವು ಉದಾಹರಣೆಗಳು. ಹಂಪೆಯ ನಿರ್ಮಾಣ ಪೂರ್ಣವಾಗಿ ಸ್ಥಳೀಯ ಭೌಗೋಳಿಕ ಸನ್ನಿವೇಶವನ್ನು ಪರಿಗಣಿಸಿ ನಡೆದಿತ್ತು. 16ನೆಯ ಶತಮಾನದಷ್ಟು ಹಿಂದಿನ ಕಾಲದಲ್ಲಿಯೇ ಈ ನಗರದ ಜನಸಂಖ್ಯೆ 2 ಲಕ್ಷದಿಂದ 5 ಲಕ್ಷದವರೆಗೆ ಇತ್ತೆಂಬುದನ್ನು ಗಮನಿಸುವಾಗ ನಗರಯೋಜನೆ ಯಾವ ಹಿರಿಮಟ್ಟಕ್ಕೆ ಇದ್ದಿತು ಎಂಬುದನ್ನು ಊಹಿಸಿಕೊಳ್ಳಬಹುದು. 18ನೆಯ ಶತಮಾನದಲ್ಲಿ ನಿರ್ಮಾಣಗೊಂಡ ಜಯಪುರವನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯ. ಇಮ್ಮಡಿ ಜಯಸಿಂಗ್ ಮಹಾರಾಜ ಇದರ ನಿರ್ಮಾಪಕ. ಸಿದ್ಧನಕ್ಷೆಯ ಅನುಸಾರ ಇದರ ರಚನೆ ಆಗಿದೆ. ಜಾಲ ಮಾದರಿಯ (ಗ್ರಿಡ್) ರಸ್ತೆಗಳು, ಜನವಸತಿ ಸೌಕರ್ಯಗಳು, ಕೋಟೆ ರಕ್ಷಣೆ, ಕುಡಿಯುವ ನೀರಿನ ಏರ್ಪಾಟು ಮೊದಲಾದವನ್ನು ಇಲ್ಲಿ ನೋಡಬಹುದು. ಒಟ್ಟಾರೆ ಪ್ರಾಚೀನ ಕಾಲದಿಂದ ಆಂಗ್ಲರ ಆಗಮನದ ತನಕ ಭಾರತದ ಮಹಾನಗರಗಳು ವೈಜ್ಞಾನಿಕ ಯೋಜನೆಯ ಅನುಸಾರ ಮೈದಳೆದು ಬೆಳೆದುಬಂದಿದ್ದವು. ಈ ನೆಲದ ಸ್ಥಿತಿಗತಿ, ಹವೆ, ಸಂಸ್ಕೃತಿ, ಆಸೆ ಆಕಾಂಕ್ಷೆ ಮುಂತಾದವನ್ನು ಲಕ್ಷ್ಯಲ್ಲಿಟ್ಟುಕೊಂಡು ಸೌಂದರ್ಯಪ್ರಜ್ಞೆಯನ್ನು ಕಳೆದುಕೊಳ್ಳದೆ ಉಪಯುಕ್ತವಾಗುವಂತೆ ಈ ನಗರಗಳಿದ್ದುವು.

ಬ್ರಿಟಿಷರು ಭಾರತಕ್ಕೆ ಬಂದು ಬೇರೂರಿ ನೆಲಸಿ ಇಲ್ಲಿನ ಸ್ಥಿತಿಗತಿಗಳನ್ನು ಅರಿಯಲು ಸಾಕಷ್ಟು ವರ್ಷಗಳೇ ಬೇಕಾದವು. ಈ ನಡುವೆ ಸ್ಥಳೀಯ ನಗರ ಯೋಜನೆಯ ಪ್ರಗತಿ ಸ್ಥಗಿತವಾಯಿತು. ಬ್ರಿಟಿಷರು ತಮ್ಮ ಅನುಕೂಲತೆಗೆ ಅನುಗುಣವಾಗಿ ದಂಡು ಪ್ರದೇಶಗಳನ್ನೂ ಉಪನಗರಗಳನ್ನೂ ಕಟ್ಟತೊಡಗಿದರು. ಹೀಗೆ ಹೊಸ ಯೋಜನೆಯೊಂದು ಈ ನೆಲದ ಮೇಲೆ ಹೇರಲ್ಪಟ್ಟಿತು. ಬಡತನ, ಅನಾಸ್ಥೆ ಮುಂತಾದವೂ ಇದರೊಂದಿಗೆ ಸೇರಿ ದೇಶ ಸ್ವಾತಂತ್ರ್ಯ ಗಳಿಸುವ ಹೊತ್ತಿಗೆ (1947) ನಗರೋಪನಗರಗಳು ವಿಶೇಷವಾದ ಯಾವುದೇ ಯೋಜನೆ ಇಲ್ಲದೇ ಬೇಕಾಬಿಟ್ಟಿ ಬೆಳೆಯುತ್ತಿದ್ದುದು ಕಂಡುಬರುತ್ತದೆ. ಕೊಳಚೆ ಪ್ರದೇಶಗಳು ಪ್ರತಿಯೊಂದು ನಗರಕ್ಕೂ ತಗಲಿರುವ ಶಾಪವೇ ಆಗಿವೆ.

ಬ್ರಿಟಿಷರ ಆಳ್ವಿಕೆಯಲ್ಲಿ ನಗರಯೋಜನೆಯನ್ನು ಕುರಿತಂತೆ ಆಗಿಂದಾಗ್ಗೆ ಹಲವಾರು ಕಾಯಿದೆಗಳು ಜಾರಿಗೆ ಬಂದವು. ದೊಡ್ಡ ನಗರಗಳ ಯೋಗಕ್ಷೇಮವನ್ನು ಗಮನಿಸಿ ಜನಜೀವನವನ್ನು ನಿಯಂತ್ರಿಸುವ ಕೇಂದ್ರೀಯ ವ್ಯವಸ್ಥೆಯೊಂದರ ಆವಶ್ಯಕತೆಯನ್ನು ಸರ್ಕಾರ ಮನಗಂಡುದರ ಫಲವಾಗಿ ಪುರಸಭೆಗಳ ಕಾಯಿದೆ ಮಂಜೂರಾಗಿ ಅಸ್ತಿತ್ವಕ್ಕೆ ಬಂದಿತು. ಉದಾ: 1862ರಲ್ಲಿ ಮೈದಳೆದ ಬೆಂಗಳೂರು ಮತ್ತು ಮೈಸೂರು ಪುರಸಭೆಗಳು. ಮಂಗಳೂರು ಹಾಗೂ ಹೊಸಪೇಟೆ ಪುರಸಭೆಗಳು ಕೂಡ ಒಂದು ಶತಮಾನಕ್ಕಿಂತ ಹಳೆಯವು. ಪುರಸಭೆಗಳ ಸ್ಥಾಪನೆಯೊಂದಿಗೆ ಒಂದೊಂದು ಹಿರಿನಗರದಲ್ಲೂ ನಗರಾಭಿವೃದ್ಧಿ ಮಂಡಳಿ ಸ್ಥಾಪನೆಗೊಂಡು ಹೊಸ ಬಡಾವಣೆಗಳ ನಿರ್ಮಾಣ ಮತ್ತು ಸಾಮೂಹಿಕ ಗೃಹಗಳ ರಚನೆಗಳನ್ನು ಕೈಗೆತ್ತಿಕೊಂಡಿವೆ. ಅದೇ ವೇಳೆ ಇಡೀ ರಾಜ್ಯಕ್ಕೆ ಅನ್ವಯವಾಗುವ ಗೃಹನಿರ್ಮಾಣಮಂಡಳಿಗಳೂ ಕ್ರಿಯೋದ್ಯುಕ್ತವಾಗಿ ಆಧುನಿಕ ಗೃಹಗಳ ನಿರ್ಮಾಣವನ್ನು ಮಾಡುತ್ತಿವೆ.

ನಗರಗಳನ್ನು ವ್ಯಾಪಕವಾಗಿ ಸಂಸ್ಥಾ ಕೇಂದ್ರಗಳು, ವಾಣಿಜ್ಯ ಕೇಂದ್ರಗಳು, ಕೈಗಾರಿಕಾ ಕೇಂದ್ರಗಳು, ಜಾತ್ರೆ ಮತ್ತು ಕ್ರೀಡಾಕೇಂದ್ರಗಳು, ಮಹಾನಗರಗಳು ಎಂಬುದಾಗಿ ಅವುಗಳ ಪ್ರಧಾನ ಗುಣಧರ್ಮಗಳನ್ನು ಗಮನಿಸಿ ವಿಂಗಡಿಸುವುದುಂಟು. ಉದಾ: ಭದ್ರಾವತಿಯನ್ನು ಕೈಗಾರಿಕಾ ಕೇಂದ್ರವೆಂದೂ ಕೋಲ್ಕತವನ್ನು ಮಹಾನಗರವೆಂದೂ ನವದೆಹಲಿಯನ್ನು ಸಂಸ್ಥಾಕೇಂದ್ರವೆಂದೂ ಮುಂಬಯಿಯನ್ನು ವಾಣಿಜ್ಯ ಕೇಂದ್ರವೆಂದೂ ಮುಂತಾಗಿ ಹೇಳಬಹುದು. ಅದೇ ರೀತಿ ಮಣಿಪಾಲ ವಿದ್ಯಾ ಕೇಂದ್ರವಾಗಿದೆ. ಕಾಶಿ ಪುಣ್ಯಕ್ಷೇತ್ರವಾಗಿದೆ. ಇಲ್ಲೆಲ್ಲ ನಗರಗಳು ಆಯಾ ಗುಣಧರ್ಮಾನುಸಾರ ವಿಕಸಿಸಿರುವುದನ್ನು ಗಮನಿಸಬಹುದು. ವರ್ತಮಾನ ಕಾಲದಲ್ಲಿ ನಗರಯೋಜನೆಯನ್ನು ವೈಜ್ಞಾನಿಕವಾಗಿ ಮಾಡಲಾಗುತ್ತಿದೆ. ಅದರ ವಿವಿಧ ಹಂತಗಳನ್ನು ಮುಂದೆ ವಿವರಿಸಿದೆ.

ಮೊದಲನೆಯದಾಗಿ, ನಗರನಿವೇಶನವನ್ನು ಯೋಗ್ಯ ಸ್ಥಳದಲ್ಲಿ ಆಯಬೇಕು, ಬಳಿಕ ಇದನ್ನು ಅನುಕೂಲತೆಗೆ ತಕ್ಕಂತೆ ವಿಭಾಗಗಳಾಗಿ ವಿಂಗಡಿಸಬೇಕು. ಸಾಮಾಜಿಕ ಕೇಂದ್ರಗಳು, ನೆರೆಹೊರೆಗಳು ಮುಂತಾದವು ಇವುಗಳಲ್ಲಿ ಸೇರುತ್ತವೆ.

ಎರಡನೆಯದಾಗಿ, ಯೋಜನೆಯ ಸಿದ್ಧತೆ. ಭವಿಷ್ಯದಲ್ಲಿ 20 ರಿಂದ 30 ವರ್ಷಗಳ ತನಕ ನಗರದ ಬೆಳವಣಿಗೆಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು ಇದನ್ನು ಸಿದ್ಧಗೊಳಿಸಬೇಕಾಗುವುದು. ಜನಸಂಖ್ಯೆಯ ಏರಿಳಿತಗಳಿಗೆ ಮತ್ತು ಜನರ ವಸತಿಸೌಕರ್ಯಗಳಿಗೆ ಆದ್ಯಗಮನ ಹರಿಸುವುದು ಅಗತ್ಯ. ಈ ಮುಂದಿನ ಅಂಶಗಳನ್ನು ಪರಿಶೀಲಿಸುವುದು ಅಪೇಕ್ಷಣೀಯ; ನಗರ ವಿಸ್ತೀರ್ಣ, ಮೇಲ್ಮೈಲಕ್ಷಣ ಸಮೀಕ್ಷೆ, ಪ್ರಚಲಿತ ಭೂಉಪಯೋಗ, ಕಟ್ಟಡಗಳ ಪರಿಸ್ಥಿತಿ, ಜನಸಾಂದ್ರತೆ, ಸಾಮಾಜಿಕಾರ್ಥಿಕ ಪರಿಸ್ಥಿತಿ, ಸಂಚಾರಸೌಲಭ್ಯಗಳು, ಸಾರ್ವಜನಿಕ ಆವಶ್ಯಕತೆಗಳು, ಸೇವಾವ್ಯವಸ್ಥೆ, ಗೃಹಸಮಸ್ಯೆ, ಕ್ರೀಡಾ ಮತ್ತು ವಿಹಾರ ಸೌಲಭ್ಯ, ವ್ಯಾಪಾರ ಮತ್ತು ವಾಣಿಜ್ಯ, ಕೈಗಾರಿಕಾ ಸಮೀಕ್ಷೆ, ಸಾರ್ವಜನಿಕ ಮತ್ತು ಸಾಮಾಜಿಕ ಉಪಯೋಗಗಳು.

ಮೂರನೆಯದಾಗಿ, ಮೇಲಿನ ಸಕಲ ಅಂಶಗಳನ್ನೂ ಸ್ಪಷ್ಟವಾಗಿ ವ್ಯಕ್ತಪಡಿಸಬಲ್ಲ ನಕ್ಷೆ, ಅಂಕಿ ಅಂಶಗಳ ಯಾದಿ, ಗ್ರಾಫ್ ಮೊದಲಾದವನ್ನು ತಯಾರಿಸಬೇಕು. ಮಾಹಿತಿ–ಚಿತ್ರಗಳ ಈ ಸಮನ್ವಯದಿಂದ ನಗರದ ರೂಪುರೇಷೆಗಳು ಸ್ಪಷ್ಟವಾಗುತ್ತವೆ.

ನಾಲ್ಕನೆಯದಾಗಿ, ನಗರ ನೈರ್ಮಲ್ಯವನ್ನು ಕುರಿತ ಆ ನಗರಕ್ಕೆ ಹೊಂದುವಂಥ ಯೋಜನೆಯನ್ನು ತಯಾರಿಸಬೇಕು. ನೀರಿನ ಸರಬರಾಜು ಅಂತೆಯೇ ಮಲಿನ ಜಲದ ವಿಲೇವಾರಿ ಕಡೆ ಆದ್ಯಲಕ್ಷ್ಯವೀಯುವುದು ಅಗತ್ಯ.

ಐದನೆಯದಾಗಿ, ಇಂಥ ಸಮಗ್ರ ಯೋಜನೆಯ ಖರ್ಚನ್ನು ಅಂದಾಜುಮಾಡಿ ಮುಂಗಡ ಪತ್ರವನ್ನು ತಯಾರಿಸಬೇಕು. ಆರ್ಥಿಕ ತಹಬಂದಿಗೆ ಒಳಪಡದ ಯಾವ ಯೋಜನೆಯೂ ಕಾರ್ಯಗತವಾಗದು.

ಆರನೆಯದಾಗಿ, ಪರಿಪೂರ್ಣವಾದ ನಗರಯೋಜನೆಗೆ ಸರ್ಕಾರದ ಬೆಂಬಲ ಕಾಯ್ದೆಯ ಮೂಲಕ ದೊರೆಯಬೇಕು.

# ನಗರ ರಚನೆ – ನಗರೀಕರಣ

ನಗರಗಳ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ನಿರ್ವಹಿಸುವುದೊಂದೇ ಇಂದಿನ ತೀವ್ರಭೂದಾಹವನ್ನು ಸಮರ್ಥವಾಗಿ ಎದುರಿಸುವ ಹಾದಿ. (ಎನ್.ಜಿ.ಆರ್.)

**ನಗರ ರಚನೆ:** ನಗರ ರಚನೆ ಹಳ್ಳಿಗಳ ರಚನೆಗಿಂತ ಭಿನ್ನವಾದದ್ದು. ನಗರಗಳು ವಿಶಾಲವಾಗಿದ್ದು ವಿವಿಧ ಕಾರ್ಯಗಳನ್ನು, ಅದಕ್ಕನುಗುಣವಾದ ಪ್ರದೇಶಗಳನ್ನು ಜನಸಂಖ್ಯೆಯನ್ನು, ವ್ಯಾಪಾರ, ಕೈಗಾರಿಕೆ ಶೈಕ್ಷಣಿಕ, ಮನರಂಜನ ಸಂಕೀರ್ಣಗಳನ್ನು, ಜನಸಂದಣಿಯನ್ನು ಒಳಗೊಂಡಿರುತ್ತದೆ. ನಗರಗಳ ಜನಸಂಖ್ಯೆ ಅಪರಿಮಿತವಾಗಿ ಮತ್ತು ವೈವಿಧ್ಯಮಯವಾಗಿದ್ದು, ವಿಶಾಲ ರಸ್ತೆಗಳನ್ನು, ಗಗನ ಚುಂಬಿ ಕಟ್ಟಡಗಳನ್ನು, ಮಾರುಕಟ್ಟೆ, ಬಸ್ಸು, ರೈಲು ಮತ್ತು ವಿಮಾನ ನಿಲ್ದಾಣಗಳನ್ನು ಒಳಗೊಂಡಿರುತ್ತದೆ. ಸರ್ಕಾರಿ ಮತ್ತು ಖಾಸಗಿ ಸಂಘ ಸಂಸ್ಥೆಗಳು ಎಡೆಬಿಡದೆ ಕಾರ್ಯ ಚಟುವಟಿಕೆಯಲ್ಲಿ ತೊಡಗಿರುತ್ತವೆ. ನಗರ ಜೀವನ ಕ್ರಮ, ಸಾಮಾಜಿಕ ಸಂಬಂಧ, ನೈತಿಕತೆ, ಸಾಮಾಜಿಕ ಮೌಲ್ಯಗಳು, ಸಾಮಾಜಿಕ ನಿಯಂತ್ರಣಗಳು ಕೂಡ ನಗರ ಸಮಾಜ ರಚನೆಯನ್ನು ಒಳಗೊಂಡಿದೆ. ನಗರ ಭೂಗೋಳವಿಜ್ಞಾನ ನಗರದ ರಚನೆಯನ್ನು ಅಧ್ಯಯನ ಮಾಡುತ್ತದೆ.

ನಗರಗಳು ಸಾಮಾನ್ಯವಾಗಿ ಕೇಂದ್ರ ಪ್ರದೇಶದ ಸುತ್ತ ವಿವಿಧ ಆಕೃತಿಯಲ್ಲಿ ರಚನೆಗೊಂಡಿರುತ್ತವೆ. ನಗರಗಳಲ್ಲಿ ಸಾಮಾನ್ಯವಾಗಿ ವಿವಿಧ ಬಡಾವಣೆಗಳಿಗೆ ರಸ್ತೆ ಮಾರ್ಗಗಳು ಚೆನ್ನಾಗಿ ರಚನೆಗೊಂಡಿರುತ್ತವೆ. ನಗರದ ಕೇಂದ್ರ ಭಾಗದಲ್ಲಿ ವಸತಿಗಳು ದಟ್ಟವಾಗಿ ಮತ್ತು ಊರ್ಧ್ವಮುಖವಾಗಿ ನಿರ್ಮಾಣಗೊಂಡಿರುತ್ತವೆ. ಈ ಪ್ರದೇಶಗಳಲ್ಲಿ ವಾಣಿಜ್ಯ ಕಟ್ಟಡಗಳು ಅಧಿಕವಾಗಿ ಕಂಡುಬರುತ್ತವೆ. ನಗರಗಳಲ್ಲಿ ಸಾಮಾನ್ಯವಾಗಿ ಒಳಚರಂಡಿ ವ್ಯವಸ್ಥೆ, ಬೀದಿ ದೀಪ ಮತ್ತು ಇತರೆ ಅಗತ್ಯ ಸೌಲಭ್ಯಗಳು ಪ್ರತಿಯೊಂದು ಭಾಗಗಳಿಗೆ ವಿಸ್ತಾರಗೊಂಡಿರುತ್ತದೆ.

ನಗರಗಳ ಆಂತರಿಕ ರಚನೆಯ ಬಗ್ಗೆ ಅನೇಕ ಸಿದ್ಧಾಂತಗಳು ರೂಪುಗೊಂಡಿವೆ. ಉದಾ: ಏಕ ಕೇಂದ್ರೀಯ ವಲಯ ಸಿದ್ಧಾಂತ, ಬಹುಕೇಂದ್ರೀಯ ವಲಯ ಸಿದ್ಧಾಂತ ಮುಂತಾದವುಗಳು. ಪ್ರತಿಯೊಂದು ನಗರಗಳು ತಮ್ಮದೇ ಆದ ರಚನೆಯನ್ನು ಹೊಂದಿರುತ್ತವೆ. ಕೆಲವು ನಗರಗಳು ವೃತ್ತಾಕಾರವಾಗಿ, ಚೌಕಾಕಾರವಾಗಿ ನಿರ್ಮಾಣಗೊಂಡರೆ ಕೆಲವು ತ್ರಿಕೋನಾಕೃತಿಯಲ್ಲಿ ರಚನೆಗೊಂಡಿರುವುದನ್ನು ನಾವು ಕಾಣಬಹುದು. (ಎಂ.ಡಿ.)

**ನಗರ ಸ್ಥಾನ – ಗಾತ್ರ ನಿಯಮ:** ಯಾವುದೊಂದು ವಿಶಾಲವಾದ ಪ್ರದೇಶ ಅಥವಾ ದೇಶದ ನಗರೀಯ ವ್ಯವಸ್ಥೆಯಲ್ಲಿ ಅಧಿಕ ಸಂಖ್ಯೆಯಲ್ಲಿರುವ ಚಿಕ್ಕ ಪಟ್ಟಣಗಳು, ಕಡಿಮೆ ಸಂಖ್ಯೆಯ ಸಾಧಾರಣ ಗಾತ್ರದ ನಗರಗಳು, ಅತಿ ಕಡಿಮೆ ಸಂಖ್ಯೆಯ ದೊಡ್ಡ ನಗರಗಳಿರುವುದು ಸಾಮಾನ್ಯ. ನಗರ ಗಾತ್ರದಲ್ಲಿರುವ ವ್ಯತ್ಯಾಸವನ್ನು ಆಧಾರವಾಗಿಟ್ಟುಕೊಂಡು ದೊಡ್ಡ ಹಾಗೂ ಸಂಕೀರ್ಣತೆಯುಳ್ಳ ನಗರಗಳು ಅಗ್ರ ಸ್ಥಾನದಲ್ಲೂ ಚಿಕ್ಕ ಪಟ್ಟಣಗಳು ಕೆಳ ಮಟ್ಟದಲ್ಲೂ ಹಾಗೂ ಇವುಗಳ ನಡುವೆ ಸಾಧಾರಣ ಪ್ರಮಾಣದ ನಗರಗಳು ಪಿರಮಿಡ್ ಆಕೃತಿಯ ಶ್ರೇಣಿಯಲ್ಲಿ ವ್ಯವಸ್ಥೆಗೊಳ್ಳುವುವು. ನಗರ ಗಾತ್ರದಲ್ಲಿರುವ ಕ್ರಮಬದ್ಧವಾದ ವ್ಯವಸ್ಥೆಯನ್ನು ನಿರ್ಧರಿಸುವ ನಿಯಮಕ್ಕೆ ಸ್ಥಾನ ಗಾತ್ರ ನಿಯಮವೆನ್ನುವರು. ಈ ನಿಯಮವು ಒಂದು ಪ್ರದೇಶ, ನಗರಗಳ ಗಾತ್ರ ಮತ್ತು ದರ್ಜೆಯ ನಡುವೆ ಸಂಬಂಧ ಕುರಿತ ವಿಶ್ಲೇಷಣೆಯಾಗಿದೆ.

ನಗರ ಪ್ರದೇಶಗಳ ಸ್ಥಾನಕ್ಕನುಗುಣವಾಗಿ ಸರಕುಗಳು, ಸೇವೆಗಳು ಮತ್ತು ಸಂಪರ್ಕ ಸಾಧನಗಳ ವ್ಯವಸ್ಥೆಯಿಂದ ಶ್ರೇಣಿಯ ಏರಿಳಿತವುಂಟಾಗುವುದು. ಕೆಲವೇ ಮಹಾನಗರಗಳು ವಿಶೇಷವಾದ ಕಾರ್ಯ ನೀತಿಯನ್ನು ಹೊಂದಿದ್ದು, ಅವುಗಳ ಉಪಯೋಗವು ವಿಶಾಲವಾದ ಪ್ರದೇಶಕ್ಕೂ ಲಭ್ಯವಾಗುತ್ತದೆ. ಆದರೆ ಚಿಕ್ಕ ನಗರಗಳ ಕಾರ್ಯ ಕ್ಷೇತ್ರ ಸೀಮಿತವಾಗಿರುತ್ತದೆ.

ಜನಸಂಖ್ಯೆಯ ಗಾತ್ರಕ್ಕೆ ಅನುಗುಣವಾಗಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ನಗರ ಒಂದನೆಯ ಸ್ಥಾನ, ಅದರ ಅರ್ಧದಷ್ಟು ಜನಸಂಖ್ಯೆಯುಳ್ಳ ನಗರ ಎರಡನೆಯ ಸ್ಥಾನ ಇತ್ಯಾದಿಯಾಗಿ ಚಿಕ್ಕ ಪ್ರಮಾಣದ ಪಟ್ಟಣಗಳವರೆಗೆ ನಗರ ಶ್ರೇಣಿಯ ವ್ಯವಸ್ಥೆ ಸಾಗುವುದು. ಇದನ್ನೇ ಸ್ಥಾನ ಗಾತ್ರ ನಿಯಮವೆಂದು ಪರಿಗಣಿಸಲಾಗಿದೆ. ಈ ನಿಯಮವನ್ನು ಮೊದಲಿಗೆ ಎಫ್ ಆಯರ್ಬಾಚ್ 1913 ರಲ್ಲಿ ಗುರುತಿಸಿದರು. ಜಿ.ಕೆ ಝಿಪ್ಸ್, ಅಮೆರಿಕ ಸಂಯುಕ್ತ ಸಂಸ್ಥಾನದ ಮಹಾನಗರಗಳನ್ನು ಸಮೀಕ್ಷೆ ಮಾಡಿ ಗಣಿತಾತ್ಮಕ ಸಮೀಕರಣವೊಂದನ್ನು 1949 ರಲ್ಲಿ ನಗರ ಶ್ರೇಣಿಯ ಬಗ್ಗೆ ಮಂಡಿಸಿದರು.

ಇವರ ನಿಯಮದ ಪ್ರಕಾರ ಒಂದು ಪ್ರದೇಶದ ನಗರ ವಸತಿಗಳ ಜನಸಂಖ್ಯೆಯ ಆಧಾರದ ಮೇಲೆ 1, 1/2, 1/3, 1/4 ಸರಣಿಗಳಲ್ಲಿ ವ್ಯವಸ್ಥೆಗೊಳಿಸಬಹುದಾಗಿದೆ. ಇದನ್ನು ಸಾಂಕೇತಿಕವಾಗಿ ಸೂತ್ರವೊಂದರ ಮೂಲಕ ನಿರೂಪಿಸಬಹುದಾಗಿದೆ.

$$Pr \times R = P1$$

P = ದೊಡ್ಡ ನಗರದ ಜನಸಂಖ್ಯೆ

R = ಯಾವುದೇ ನಗರದ ಶ್ರೇಣಿ

or

$$Pr = \frac{P1}{R}$$

Pr = ಶ್ರೇಣಿಯೊಂದಿಗೆ ನಗರದ ಜನಸಂಖ್ಯೆ

ಉದಾ:– 1. ನಗರವೊಂದರ ಜನಸಂಖ್ಯೆ 50,000 ಗಳಾದರೆ ನಿಯಮದ ಪ್ರಕಾರ 5ನೆಯ ಶ್ರೇಣಿಯ ನಗರದ ಜನಸಂಖ್ಯೆ 10,000 ಗಳಾಗಿರುತ್ತವೆ.

$$(Ps) = \frac{P1}{R} = \frac{50,000}{5} = 10,000 \text{ ಜನರು}$$

ಉದಾ: 2. ದೊಡ್ಡ ನಗರವೊಂದರ ಜನಸಂಖ್ಯೆ 2 ದಶಲಕ್ಷಗಳಾದರೆ, 10ನೇ ಸ್ಥಾನದಲ್ಲಿರುವ ನಗರದ ಜನಸಂಖ್ಯೆಯ ಗಾತ್ರ 2 ಲಕ್ಷಗಳಾಗಿರುತ್ತವೆ.

$$(P10) = \frac{P1}{R} = \frac{20,00,000}{10} = 2,00,000 \text{ ಜನರು}$$

ಸ್ಥಾನ ಗಾತ್ರ ನಿಯಮ ಎಲ್ಲ ಕಾಲಕ್ಕೆ ಮತ್ತು ದೇಶಕ್ಕೆ ಅನ್ವಯವಾಗಲಾರದು. ಏಕೆಂದರೆ ಈ ನಿಯಮ ಜನಸಂಖ್ಯೆಯ ಪ್ರಮಾಣವನ್ನಾಧರಿಸಿದ್ದು, ಅದರ ಅಂಕಿ ಸಂಖ್ಯೆ ಕಾಲ ಕಾಲಕ್ಕೆ ಮತ್ತು ದೇಶದಿಂದ ದೇಶಕ್ಕೆ ವ್ಯತ್ಯಾಸಗೊಳ್ಳುವುದು. (ಕೆ.ಬಿ.)

**ನಗರೀಕರಣ:** ಒಂದು ದೇಶದ ಜನರನ್ನು, ಪಟ್ಟಣಿಗರು, ಗ್ರಾಮೀಣರು ಎಂದು ವರ್ಗೀಕರಿಸಬಹುದು. ದೇಶದ ಗ್ರಾಮೀಣ ಜನಸಂಖ್ಯೆಗೂ ನಗರದ ಜನಸಂಖ್ಯೆಗೂ ಇರುವ ಅನುಪಾತ ಅಲ್ಲಿಯ ಆರ್ಥಿಕ, ಸಾಮಾಜಿಕ ಹಾಗೂ ಜನವಲಸೆಯ ಸ್ವರೂಪಗಳಿಗೆ ಅನುಗುಣವಾಗಿರುತ್ತದೆ. ನಗರ ಪ್ರದೇಶದ ಸಾಪೇಕ್ಷ ಬೆಳವಣಿಗೆಯ ಪ್ರಕ್ರಿಯೆಯೇ ನಗರೀಕರಣ. ನಗರ ಪ್ರದೇಶದಲ್ಲಿ ವಾಸಿಸುವ ಜನಸಂಖ್ಯೆಯಿಂದ ನಗರೀಕರಣದ ಪ್ರಮಾಣವನ್ನು ಅರಿಯಬಹುದು. ನಗರಗಳು ಆರ್ಥಿಕ ಪ್ರಗತಿಯ ವೇಗವರ್ಧನೆಯ ಸಾಧನಗಳಾಗಿರುವುದುಂಟು. ಆದ್ದರಿಂದ ಅವುಗಳಿಂದ ಕೆಲವು ಅನುಕೂಲಗಳುಂಟು. ಆದರೆ ಅವುಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಕೆಲವು ಸಮಸ್ಯೆಗಳೂ ಉದ್ಭವಿಸುತ್ತವೆ. ಅನುಕೂಲಗಳನ್ನು ಬಳಸಿಕೊಳ್ಳುವ ಮತ್ತು ಸಮಸ್ಯೆಗಳ ಪರಿಹಾರದ ದೃಷ್ಟಿಯಿಂದ ಒಂದು ದೇಶದ ನಗರೀಕರಣದ ಅಧ್ಯಯನ ಅಗತ್ಯವೆನಿಸುತ್ತದೆ. ಜನಗಣತಿಯಲ್ಲಿ ನಗರೀಕರಣಕ್ಕೆ ಸಂಬಂಧಿಸಿದ ವಿವರಗಳನ್ನೂ ಸಾಮಾನ್ಯವಾಗಿ ಸಂಗ್ರಹಿಸಲಾಗುತ್ತದೆ. ಪ್ರತಿಯೊಂದು ದೇಶದ ಜನಸಂಖ್ಯೆಯನ್ನೂ ಸಾಮಾನ್ಯವಾಗಿ ನಗರ ಹಾಗೂ ಗ್ರಾಮೀಣ ಎಂದು ವರ್ಗೀಕರಿಸುವುದು ಸಾಮಾನ್ಯವಾದರೂ ಈ ವಿಚಾರದಲ್ಲಿ ಎಲ್ಲ ದೇಶಗಳೂ ಒಂದೇ ಮಾನದಂಡವನ್ನು ಇಟ್ಟುಕೊಂಡಿರುವುದಿಲ್ಲ. ಆಯಾ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಇದು ವ್ಯತ್ಯಾಸವಾಗುತ್ತದೆ. ಉದಾ: ಸ್ವೀಡನ್ನಿನಲ್ಲಿ 200 ಜನರಿರುವ ವಸತಿ ಪ್ರದೇಶವನ್ನು ನಗರವೆಂದು ಹೇಳಲಾಗುತ್ತದೆ. ಆದರೆ ದಕ್ಷಿಣ ಆಫ್ರಿಕದಲ್ಲಿ 500, ಕೆನಡದಲ್ಲಿ 1,000, ಪೂರ್ವ ಜರ್ಮನಿಯಲ್ಲಿ 2,000, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 2,500, ಜೋರ್ಡಾನಿನಲ್ಲಿ 10,000 ಜನರಿರುವ ಪ್ರದೇಶಗಳನ್ನು ನಗರ ಎಂದು ಪರಿಗಣಿಸಲಾಗುತ್ತದೆ. ಭಾರತದಲ್ಲಿ ಒಂದು ಪ್ರದೇಶವನ್ನು ನಗರವೆನ್ನಬೇಕಾದರೆ ಅಲ್ಲಿ ಕನಿಷ್ಠ 5,000 ಜನಸಂಖ್ಯೆ ಇರಬೇಕು; ಅಲ್ಲಿಯ ಪುರುಷ ದುಡಿಮೆಗಾರರಲ್ಲಿ ಕನಿಷ್ಠ ಮುಕ್ಕಾಲು ಪಾಲು ಜನ ಕೃಷಿಯೇತರ ಕಾರ್ಯ ನಿರತರಾಗಿರಬೇಕು; ಪ್ರತಿ ಚ.ಕಿಮೀಗೆ ಕನಿಷ್ಠ 400ರಂತೆ ಜನಸಾಂದ್ರತೆ ಇರಬೇಕು. ಪುರಸಭೆ, ನಗರಸಭೆ ಅಥವಾ ದಂಡು ಇರುವ, ಇಲ್ಲವೇ ನಗರಪ್ರದೇಶವೆಂದು ಅಧಿಸೂಚಿತವಾಗಿರುವ ಎಲ್ಲ ಸ್ಥಳಗಳೂ ನಗರ ಪ್ರದೇಶಗಳೆನಿಸಿಕೊಳ್ಳುತ್ತವೆ.

ನಗರೀಕರಣಕ್ಕೆ ಕಾರಣವಾದ ಅಂಶಗಳು ಸಾಮಾನ್ಯವಾಗಿ ಎರಡು: 1. ಜನಸಂಖ್ಯೆಯ ಸ್ವಾಭಾವಿಕ ಬೆಳವಣಿಗೆಯ ಫಲವಾದ ಏರಿಕೆ. 2. ಗ್ರಾಮಪ್ರದೇಶಗಳಿಂದ ಪಟ್ಟಣಗಳಿಗೆ ಜನರ ವಲಸೆ. ಪಟ್ಟಣಪ್ರದೇಶಗಳಲ್ಲಿ ಆರೋಗ್ಯ, ನೈರ್ಮಲ್ಯ ಹಾಗೂ ಆಹಾರದ ಗುಣಮಟ್ಟ ಉತ್ತಮವಾಗಿರುವುದರಿಂದ ಗ್ರಾಮೀಣಪ್ರದೇಶಗಳಲ್ಲಿರುವುದಕ್ಕಿಂತ ನಗರಪ್ರದೇಶಗಳಲ್ಲಿ ಮರಣದರ ಕಡಿಮೆಯಾಗಿರುತ್ತದೆ. ಆದ್ದರಿಂದ ಹೆಚ್ಚಿನ ದರದಲ್ಲಿ ಜನಸಂಖ್ಯೆಯ ಏರಿಕೆ ಆಗುವ ಸಾಧ್ಯತೆ ಇರುತ್ತದೆ. ಎರಡನೆಯದಾಗಿ, ಗ್ರಾಮ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳು ಕಡಿಮೆ. ಆದ್ದರಿಂದ ಅಲ್ಲಿಯ ಜನರು ಉದ್ಯೋಗಾಕಾಂಕ್ಷೆಯಿಂದ ಪಟ್ಟಣಗಳಿಗೆ ವಲಸೆ ಹೋಗುತ್ತಾರೆ. ಪಟ್ಟಣಗಳಲ್ಲಿಯ ಹೆಚ್ಚಿನ ಉದ್ಯೋಗಾವಕಾಶಗಳು, ಮನೋರಂಜನೆ, ಆರೋಗ್ಯ, ನೈರ್ಮಲ್ಯ, ಶಿಕ್ಷಣಸೌಲಭ್ಯ ಮೊದಲಾದ ಅನುಕೂಲಗಳು ಗ್ರಾಮವಾಸಿಗಳನ್ನು ಆಕರ್ಷಿಸುತ್ತವೆ. ಇದರಿಂದ ನಗರೀಕರಣದ ವೇಗ ಹೆಚ್ಚುತ್ತದೆ.

ಮೇಲೆ ಹೇಳಿದ ಎರಡೂ ಕಾರಣಗಳಿಂದಾಗಿ ಭಾರತದಲ್ಲಿ ನಗರೀಕರಣ ಪ್ರಕ್ರಿಯೆ ವೇಗದಲ್ಲಿ ಸಾಗುತ್ತಿದೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆಯ ಪ್ರಮಾಣಕ್ಕಿಂತ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಅದರ ಪ್ರಮಾಣ ಅಧಿಕವಾಗಿರುವುದನ್ನು ಕಾಣಬಹುದು.

ಪ್ರಪಂಚದ ಉಳಿದ ಪ್ರದೇಶಗಳಂತೆಯೇ ಭಾರತದಲ್ಲೂ ದೊಡ್ಡ ನಗರಗಳು ಬೆಳೆಯುತ್ತಿವೆ. 1901ರಲ್ಲಿ 1,00,000ಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ ನಗರಗಳ ಸಂಖ್ಯೆ 25 ಮಾತ್ರವಿತ್ತು; ಈಗ ಅಂಥ ನಗರಗಳ ಸಂಖ್ಯೆ 151. ನಗರ ಪ್ರದೇಶದ ಒಟ್ಟು ಜನಸಂಖ್ಯೆಯ $^{2}/_{3}$ ಪಾಲು ಜನ ಇಂಥ ನಗರಗಳಲ್ಲಿಯೇ ವಾಸಿಸುತ್ತಾರೆ. ಹತ್ತು ಲಕ್ಷಕ್ಕಿಂತ ಅಧಿಕ ಜನಸಂಖ್ಯೆಯುಳ್ಳ

ನಗರಗಳ ಸಂಖ್ಯೆ 1911ರಲ್ಲಿ 2 ಮಾತ್ರವಿತ್ತು; ಈಗ ಅದು 8ಕ್ಕೆ ಏರಿದೆ. ಅವುಗಳ ಪೈಕಿ ಮುಂಬಯಿ, ದೆಹಲಿ, ಬೆಂಗಳೂರು ಮತ್ತು ಅಹಮದಾಬಾದ್ ಅತಿ ಹೆಚ್ಚಿನ ದರದಲ್ಲಿ ಬೆಳೆಯುತ್ತಿದೆ (ಉಳಿದ ನಾಲ್ಕು ದೊಡ್ಡ ನಗರಗಳು ಕೋಲ್ಕತ, ಚೆನ್ನೈ, ಹೈದರಾಬಾದ್ ಮತ್ತು ಕಾನ್ಪುರ).

ಆರ್ಥಿಕ ಬೆಳೆವಣಿಗೆ ಮತ್ತು ಔದ್ಯೋಗಿಕ ರಚನೆಯ ಬದಲಾವಣೆಯನ್ನು ನಗರೀಕರಣ ಸೂಚಿಸುತ್ತದೆ. ಆದರೆ ನಗರಗಳ ಅತಿಯಾದ ಬೆಳವಣಿಗೆಯಿಂದ ಕೆಲವು ಸಮಸ್ಯೆಗಳು ಉದ್ಭವಿಸುತ್ತದೆ. ತೀವ್ರಗತಿಯ ನಗರ ಬೆಳೆವಣಿಗೆಯಿಂದ ವಿದ್ಯಾಭ್ಯಾಸ, ಆರೋಗ್ಯ, ನೈರ್ಮಲ್ಯ, ಕುಡಿಯುವ ನೀರು, ವಿದ್ಯುತ್ತು, ಸಾರಿಗೆ–ಸಂಪರ್ಕ ಮುಂತಾದ ಆವಶ್ಯಕ ಸೇವೆಗಳ ಮೇಲೆ ಒತ್ತಡ ಉಂಟಾಗಿ ಸರ್ಕಾರ ಮತ್ತು ನಗರಸಭೆಗಳಿಗೆ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಯೋಜಿತವಲ್ಲದ ನಗರಗಳ ಬೆಳೆವಣಿಗೆ ಕೊಳೆಗೇರಿಗಳ ಅವಕಾಶ ಉಂಟುಮಾಡುವುದಲ್ಲದೆ ಕಳ್ಳತನ, ದರೋಡೆ, ವೇಶ್ಯಾವಾಟಿಕೆ ಮುಂತಾದ ಸಾಮಾಜಿಕ ಬೇನೆಗಳಿಗೆ ಎಡೆಮಾಡಿಕೊಡುತ್ತದೆ. ಆದ್ದರಿಂದ ನಗರ ಬೆಳೆವಣಿಗೆಯನ್ನು ಯೋಜಿತ ರೀತಿಯಲ್ಲಿ ಕೊಂಡೊಯ್ಯುವ ದೃಷ್ಟಿಯಿಂದಲೂ ಮೇಲಿನ ಸಮಸ್ಯೆಗಳ ಪ್ರಖರತೆಯನ್ನು ಕಡಿಮೆಮಾಡುವ ದೃಷ್ಟಿಯಿಂದಲೂ ನಗರಾಡಳಿತ ಸಂಸ್ಥೆಗಳು ನಗರ ಯೋಜನೆಗಳನ್ನು ತಯಾರಿಸಿ ಅನುಷ್ಠಾನಕ್ಕೆ ತರುವುದುಂಟು. (ಎ.ಬಿ.ಎ.;ಎಚ್.ವಿ.ಎಸ್.)

**ನಗೊರ್ನೊ – ಕರಬಖ್:** ಅಧಿಕೃತವಾಗಿ ಅಜ಼ರ್‌ಬೈಜಾನಿಗೆ ಸೇರಿದ ಒಂದು ಸ್ವಯಂಘೋಷಿತ ಗಣರಾಜ್ಯ. ಬಾಕುವಿನಿಂದ 270 ಕಿಮೀ ದೂರದಲ್ಲಿದೆ. ಆರ್ಮೀನಿಯ ಮತ್ತು ಅಜ಼ರ್ ಬೈಜಾನ್‌ಗಳ ನಡುವೆ ಇದರ ಹತೋಟಿಗಾಗಿ ತಿಕ್ಕಾಟವಿದೆ. ಸು. 4,400 ಚ.ಕಿಮೀ ವಿಸ್ತೀರ್ಣವನ್ನು ಹೊಂದಿದ್ದು ಅಜ಼ರ್‌ಬೈಜಾನ್ ಮತ್ತು ಆರ್ಮೇನಿಯಗಳಿಂದ ಸುತ್ತುವರಿದಿದೆ. ಇದರ ರಾಜಧಾನಿ ಸ್ಟೇಪನ್‌ಕರ್ಟ್. ಜನಸಂಖ್ಯೆ ಸು. 1,38,000 (2007). ಈ ಜನಸಂಖ್ಯೆಯಲ್ಲಿ ಶೇ.76 ಆರ್ಮೇನಿಯನ್ ಹಾಗೂ ಶೇ.23 ಅಜ಼ರ್‌ಬೈಜಾನ್ ಮೂಲದವರಾಗಿದ್ದಾರೆ. *

**ನಗ್ನೀಕರಣ:** ಭೂಮಿಯ ಮೇಲ್ಭಾಗ ವಿವಿಧ ನೈಸರ್ಗಿಕ ಕ್ರಿಯೆಗಳಿಂದ ಸವೆಯಲ್ಪಟ್ಟು ಕ್ಷೀಣವಾಗುವ ಪ್ರಕ್ರಿಯೆ (ಡೆನ್ಯುಡೇಷನ್). ಪೃಥ್ವಿಯ ಅಂತರ್ಜನಿತ ಶಕ್ತಿಗಳ ಕಾರ್ಯಾಚರಣೆಯಿಂದ ವೈವಿಧ್ಯಮಯ ಭೂಸ್ವರೂಪಗಳು ಸೃಷ್ಟಿಯಾದರೆ, ಬಹಿರ್ಜನಿತಶಕ್ತಿಗಳ ನಿರಂತರ ಕಾರ್ಯಾಚರಣೆಯಿಂದ ನಗ್ನೀಕರಣಕ್ಕೊಳಗಾಗಿ ರೂಪಾಂತರ ಹೊಂದುತ್ತವೆ. ಹೀಗೆ ಭೂಸ್ವರೂಪಗಳು ಸವೆದು, ಉತ್ಪತ್ತಿಯಾದ ಶಿಲಾವಸ್ತುಗಳನ್ನು ಸ್ಥಳಾಂತರಿಸಿ ಸಂಚಯಿಸುವ ಯಾವುದೇ ನೈಸರ್ಗಿಕ ಶಕ್ತಿಗೆ ನೈಸರ್ಗಿಕ ನಗ್ನೀಕರಣದ ಕರ್ತೃ ಎನ್ನುವರು. ಉದಾ: ನದಿ, ಹಿಮನದಿ, ಗಾಳಿ, ಸಮುದ್ರ ಅಲೆಗಳು ಮತ್ತು ಅಂತರ್ಜಲ. ಇವು ಸದಾ ಕ್ರಿಯಾಶೀಲವಾಗಿದ್ದು ಸವೆತ, ಸಾಗಣೆ ಮತ್ತು ಸಂಚಯವೆಂಬ ಮೂರು ಬಗೆಯ ಕಾರ್ಯ ನಡೆಸುತ್ತವೆ. ಕೊರೆಯುವಿಕೆ, ಉಜ್ಜುವಿಕೆ ಮತ್ತು ಘರ್ಷಣೆ ಕ್ರಿಯೆಗಳಿಗೆ ಸವೆತ ಕಾರ್ಯವೆಂತಲೂ, ಸವೆತದಿಂದ ಉತ್ಪತ್ತಿಯಾದ ಶಿಲಾದ್ರವ್ಯಗಳನ್ನು ಸ್ಥಳಾಂತರಿಸುವುದಕ್ಕೆ ಸಾಗಣೆ ಹಾಗೂ ಸ್ಥಳಾಂತರಗೊಂಡ ವಸ್ತುಗಳನ್ನು ಒಂದೆಡೆ ರಾಶಿಗೊಳಿಸುವುದಕ್ಕೆ ಸಂಚಯ ಕಾರ್ಯವೆನ್ನುವರು. ಈ ಮೂರು ಕಾರ್ಯಗಳಿಂದಾಗಿ ಪೃಥ್ವಿಯ ಮೇಲ್ಮೈ ಸದಾ ರೂಪಾಂತರಗೊಳ್ಳುವುದು.

ಭೂಮಿಯ ಮೇಲ್ಮೈ ವಿವಿಧ ಶಿಲೆಗಳಿಂದ ನಿರ್ಮಿತವಾಗಿದೆ. ಇದಕ್ಕೆ ಶಿಲಾಗೋಳ ಎಂದು ಹೆಸರು. ಭೂಮಿಯ ಅಧಿಕಭಾಗವನ್ನು ನೀರು ಸುತ್ತುಗಟ್ಟಿದೆ. ಇದಕ್ಕೆ ಜಲಗೋಳ ಎಂದು ಹೆಸರು. ಇವೆರಡನ್ನೂ ವಾಯುಗೋಳ ಆವರಿಸಿದೆ. ಈ ಮೂರೂ ವಲಯಗಳ ಪರಸ್ಪರ ಸಂಪರ್ಕದಿಂದ ಭೂಮಿಯ ಮೇಲ್ಮೈ ಹೆಪ್ಪುಗಟ್ಟಿದ ಕಾಲದಿಂದ ಇಂದಿನತನಕ ಅಂದರೆ ಸು. 450 ಕೋಟಿ ವರ್ಷಗಳ ಅವಧಿಯಲ್ಲಿ ಬದಲಾವಣೆಗೊಳ್ಳುತ್ತಾ ಬಂದಿದೆ. ಹಿಂದಿನ ನಾನಾ ಯುಗಗಳಲ್ಲಿ ಇದ್ದ ಭೂಗೋಳದ ಸ್ವರೂಪವೇ ಬೇರೆ. ಇಂದಿನ ಭೂಮಿಯ ಸ್ವರೂಪವೇ ಬೇರೆ.

ಸೂರ್ಯನ ಶಾಖ, ಗಾಳಿ, ಮಳೆ, ನದಿ, ಹಿಮನದಿ, ಸಮುದ್ರದ ಅಲೆ ಮೊದಲಾದ ವಿವಿಧ ಭೂವೈಜ್ಞಾನಿಕ ಕ್ರಿಯೆಗಳಿಂದ ಭೂಮಿಯ ಆಕಾರ ಸದಾ ಬದಲಾಗುತ್ತಿರುವುದು. ಮೇಲು ಪದರದ ಶಿಲೆಗಳು ಸವೆದು ಹೊಸ ಶಿಲಾವಸ್ತು ಉತ್ಪನ್ನವಾಗುತ್ತದೆ. ಶಿಲೆಗಳ ಶಿಲಾಕ್ಷಯವೇ ಶಿಥಿಲೀಕರಣ. ಇದರಿಂದ ಉತ್ಪನ್ನವಾದ ಶಿಲೆಯ ಚೂರುಗಳು ಪುಡಿಪುಡಿಯಾಗಿ ಮರಳು, ಮಣ್ಣು ಮುಂತಾದ ರೂಪಗಳನ್ನು ತಳೆಯುವುವು. ಈ ಶಿಲಾಕಣಗಳನ್ನು ಗಾಳಿ ತೂರಿಕೊಂಡು ಹೋಗಿ ಬೇರೆ ಸ್ಥಳಗಳಿಗೆ ಸಾಗಿಸುತ್ತದೆ. ಹೀಗೆ ಶಿಲಾಕಣಯುಕ್ತವಾಗಿ ಬೀಸುವ ಗಾಳಿ ಅದಕ್ಕೆ ಎದುರಾಗಿ ಸಿಕ್ಕುವ ಶಿಲಾರಾಶಿಗಳ ಮೇಲೆ ಅಪ್ಪಳಿಸಿ ಘರ್ಷಿಸಿ ಅವನ್ನು ಸವೆಸುತ್ತದೆ. ಗಾಳಿಯಂತೆ ಮಳೆ ಮತ್ತು ನದಿ ನೀರು ಕೂಡ ಭೂಸಾರದ ಕಣಗಳನ್ನೂ ಶಿಲಾಕಣಗಳನ್ನೂ ಸಡಿಲಗೊಳಿಸುತ್ತದೆ. ಬಲುಗಟ್ಟಿಯಾದ ಶಿಲಾರಾಶಿಯಾದರೂ ಹವಾಗುಣದ ವ್ಯತ್ಯಾಸಗಳಿಂದ ಮತ್ತು ನೈಸರ್ಗಿಕ ಕರ್ತೃಗಳ ಕಾರ್ಯಾಚರಣೆಗಳಿಂದ ಕಾಲಕ್ರಮೇಣ ಒಡೆದು, ಚಿಕ್ಕ ಚಿಕ್ಕ ಬಂಡೆಗಳಾಗಿ ಬಿರಿದು ಕೆಳಕ್ಕೆ ಉರುಳಿ ಬೀಳುತ್ತವೆ. ಆಗ ಅದು ಪುಡಿಪುಡಿಯಾಗಿ ಈ ಕಲ್ಲು ಚೂರುಗಳು ಬೇಗ ಸವೆದು ಮರಳಾಗಿ ಮಣ್ಣಾಗುತ್ತವೆ.

ಶಿಲಾ ಚೂರುಗಳು ಸಣ್ಣದಾಗುತ್ತ ಪುಡಿಯಾಗಿ ಶಿಥಿಲೀಕರಣ ಮುಂದುವರಿದಂತೆ ಅವುಗಳ ರಾಸಾಯನಿಕ ವಿಯೋಜನೆ ಅತಿ ವೇಗದಿಂದ ಮತ್ತು ಸುಲಭವಾಗಿ ಸಾಗುತ್ತದೆ. ಈ ಪ್ರಕ್ರಿಯೆಯೇ ಶಿಲಾವಿಘಟನೆ. ಶಿಲೆಗಳು ಹಿಟ್ಟಿನಂತೆ ನುಣ್ಣನೆಯ ಪುಡಿಯಾಗುವುದುಂಟು. ಇದು ಶಿಲೆಗಳ ಚೂರ್ಣೀಕರಣ. ಜೀವಿಗಳಿಂದ ಆಗುವ ಶಿಲಾಕ್ಷಯವಾದರೇ ಅದು ಜೈವಿಕ ತೇಮಾನ. ಹೀಗೆ ಮೂರು ವಿಧವಾಗಿ ಭೂತಲದ ಶಿಲೆಗಳು ಸವೆಯುತ್ತವೆ. ಸವೆದ ಶಿಲೆಗಳು ದೂಳು ಮಿಶ್ರಿತ ಗಾಳಿ ನೀರುಗಳಿಂದ ಬೇರೆ ಸ್ಥಳಗಳಿಗೆ ಹೋಗಿ ಸೇರುತ್ತವೆ. ಶಿಲಾಸವೆತದ ಮುಂದಿನ ಅವಸ್ಥೆಯಾದ ಈ ಪ್ರಕ್ರಿಯೆಗೆ ಸ್ಥಾನಾಂತರೀಕರಣವೆನ್ನುವರು. ಹೀಗೆ, ಉತ್ಪತ್ತಿಯಾದ ಸ್ಥಳದಿಂದ ಶಿಲಾವಸ್ತು ಬೇರೆ ಸ್ಥಳಕ್ಕೆ ಗಾಳಿ ನೀರುಗಳಿಂದ ಒಯ್ಯಲ್ಪಟ್ಟು ನೆಲ, ನದಿಪಾತ್ರ ಮತ್ತು ದಡಗಳಲ್ಲಿಯೂ ಪ್ರವಾಹ ಮೈದಾನ ಮತ್ತು ನದಿಮುಖಗಳಲ್ಲಿಯೂ ಸಂಚಯಿಸಲ್ಪಡುತ್ತದೆ. ಇಲ್ಲವೇ ನೆಲದ ಮೇಲಿರುವ ವಿಶಾಲವಾದ ಸರೋವರಗಳಲ್ಲಿ ಅಥವಾ ಕಡಲತೀರದಲ್ಲಿ ನಿಕ್ಷೇಪಿಸಲ್ಪಡುತ್ತದೆ. ಈ ರೀತಿಯಲ್ಲಿ ಹೊಸ ಶಿಲೆ ನಿರ್ಮಾಣಗೊಳ್ಳುವುದು. ಸವೆತ, ಸಾಗಾಣಿಕೆ ಮತ್ತು ಸಂಚಯ ಎಂಬ ಈ ಮೂರು ಹಂತಗಳಿರುವ ಶಿಲಾ ಆವರ್ತ ಎಡೆಬಿಡದೆ ಮುಂದುವರಿಯುತ್ತ ಬಂದಿದೆ. ಇದರ ಪರಿಶೀಲನೆ ಭೂವಿಜ್ಞಾನದ ಒಂದು ಪ್ರಮುಖ ಆಸಕ್ತಿ. ಶಿಲೆಗಳೇ ಭೂಮಿಯ ಇತಿಹಾಸದ ಪುಟಗಳು, ಭೂವೈಜ್ಞಾನಿಕ ದಾಖಲೆಗಳು. ನಗ್ನೀಕರಣವೇ ಈ ದಾಖಲೆಯ ನಿರ್ಮಾಣದ ಮೊದಲನೆಯ ಹಂತ; ಸಾಗಾಣಿಕೆ ಎರಡನೆಯ ಹಂತ; ಸಂಚಯನ ಮೂರನೆಯ ಹಂತ. ಈ ಮೂರು ಹಂತಗಳ ಸಮಷ್ಟಿಗೆ ನಗ್ನೀಕರಣದ ಆವರ್ತವೆನ್ನುವರು.

ನದಿಗಳೂ ತೊರೆಗಳೂ ತಮ್ಮ ಮೇಲ್ಭಾಗದಲ್ಲಿ ವಿಶೇಷವಾಗಿ ನೆಲವನ್ನು ಸವೆಸುತ್ತವೆ. ಹಿಮನದಿಗಳೂ ಹಾಗೆಯೇ ತಮ್ಮ ಕಣಿವೆಯ ತಳವನ್ನು ಸವೆಯಿಸುತ್ತವೆ. ಸಮುದ್ರತೀರದಲ್ಲಿ ಸದಾ ಅಲೆಗಳು ಬಂದು ಅಪ್ಪಳಿಸುವುದರಿಂದ ಅಲ್ಲಿರುವ ಶಿಲೆಗಳು ಬಲುಬೇಗ ಸಡಿಲವಾಗಿ ಸವೆದುಹೋಗುತ್ತವೆ. ಸಮುದ್ರದ ಉಪ್ಪುನೀರಿನ ಹಾವಳಿಯಿಂದ ಗ್ರಾನೈಟ್ ಮೊದಲಾದ ಗಟ್ಟಿಕಲ್ಲುಗಳೂ ಬೇಗ ಸವೆಯುವುವು. ಮಹಾಬಲಿಪುರದ ಬಳಿ ಇರುವ ಕಡಲತೀರದ ಪ್ರಾಚೀನ ಮಂದಿರ ಮತ್ತು ಅಲ್ಲಿರುವ ಸ್ಥೂಲಮೂರ್ತಿ ಸಮುದ್ರದ ವಿನಾಶ ಕಾರ್ಯಕ್ಕೆ ಉತ್ತಮ ನಿದರ್ಶನ. ಆ ಮೂರ್ತಿ ಕುಳಿಬಿದ್ದಿದೆ. ಇದೇ ರೀತಿ ಶ್ರವಣಬೆಳಗೊಳದ ಜಗತ್ಪ್ರಸಿದ್ಧ ಏಕಶಿಲಾ ಮೂರ್ತಿ ಗೊಮ್ಮಟೇಶ್ವರನ ವಿಗ್ರಹ ಹತ್ತು ಶತಮಾನಗಳಿಂದ ಆವರಣರಹಿತವಾಗಿ ನಿಂತಿರುವುದರಿಂದ ಅದರ ಎಡತೋಳು ಮತ್ತು ಬೆನ್ನಿನ ಎಡಭಾಗ ಕುಳಿಬಿದ್ದಿವೆ. ತಲೆಯ ಮೇಲಿರುವ ಗುಂಗುರುಗಳಲ್ಲಿ ಲೋಮನಾಳಗಳಂತಿರುವ ಬಿರುಕುಗಳು ಮೂಡಿವೆ.

ರಾಸಾಯನಿಕ ಸವೆತದ ವರ್ತನೆ ಬೇರೆ ಬಗೆಯದು. ಶುದ್ಧ ನೀರಿಗೆ ಕಲ್ಲನ್ನು ತೇಯುವ ಸಾಮರ್ಥ್ಯವಿಲ್ಲ. ಆದರೆ ಶಿಲಾಕಣಗಳೊಡನೆ ಕೂಡಿದಾಗ ನೀರಿನೊಡನೆ ರಾಸಾಯನಿಕಗಳು ಬೆರೆತು ಅದಕ್ಕೆ ವಿಶೇಷ ಸಾಮರ್ಥ್ಯ ಬರುತ್ತದೆ ಎಂದೇ ಇಂಥ ನೀರು ಹರಿಯುವಾಗ ಅದು ತನ್ನ ಹಾದಿಯಲ್ಲಿನ ಕಲ್ಲುಮಣ್ಣನ್ನು ಕೊರೆದು ಸಾಗುತ್ತದೆ. ನದಿಗಳ ಕಣಿವೆ ವಿಶಾಲವಾಗಿ ಆಳವಾಗಿ ಪರಿಣಮಿಸುವುದಕ್ಕೆ ಜಲದಲ್ಲಿ ಕೊಚ್ಚಿಕೊಂಡು ಬಂದಿರುವ ಶಿಲೆಯ ಕಣಗಳೇ ಕಾರಣ. ಇಂಗಾಲದ ಡೈ ಆಕ್ಸೈಡ್ ವಿಲೀನವಾಗಿರುವ ನೀರು ಸುಣ್ಣಕಲ್ಲಿನ ಪ್ರದೇಶಗಳನ್ನು ಶಿಲೆಯನ್ನು ಕರಗಿಸಿ ಕೊರೆದು ಬಿಡುತ್ತದೆ. ದೊಡ್ಡ ದೊಡ್ಡ ಗವಿಗಳೇ ಅಲ್ಲಿ ರೂಪಿತವಾಗುತ್ತವೆ. ಉಪ್ಪು ಕರಗಿರುವ ನೀರಿನ ಹಾವಳಿ ಹೇಳತೀರದು. ಇದೆ ನಗ್ನೀಕರಣದಲ್ಲಿ ಅಂತರ್ಜಲದ ಕಾರ್ಯವಾಗಿದೆ. (ಪಿ.ಎಂ.)

**ನಗ್ನೀಕರಣ ಕರ್ತೃವಾಗಿ ನದಿಯ ಕಾರ್ಯ:** ನಗ್ನೀಕರಣ ಕರ್ತೃಗಳಲ್ಲಿ ನದಿ ಅತಿ ಮುಖ್ಯವಾದುದು. ಇದು ಹಿಮಚ್ಛಾದಿತ ಶೀತವಲಯ ಹಾಗೂ ಹಿಮಾವೃತ ಪರ್ವತಗಳು ಮತ್ತು ಅತ್ಯುಷ್ಣ ಮಳೆ ರಹಿತ ಉಷ್ಣವಲಯ ಮತ್ತು ಸಮಶೀತೋಷ್ಣ ವಲಯದ ಮರುಭೂಮಿಗಳನ್ನು ಬಿಟ್ಟರೆ ಪ್ರಪಂಚದಾದ್ಯಂತ ತನ್ನ ಕಾರ್ಯಗಳಿಂದ ವೈವಿಧ್ಯಮಯವಾದ ಭೂ ಸ್ವರೂಪಗಳನ್ನು ನಿರ್ಮಿಸಿದೆ. ನದಿಯು ಮಳೆ, ಹಿಮಕರಗುವಿಕೆ, ಸರೋವರ, ಅಂತರ್ಜಲ – ಹೀಗೆ ವಿವಿಧ ಮೂಲಗಳಿಂದ ನೀರಿನ ಪೂರೈಕೆಯನ್ನು ಪಡೆಯುವುದು. ಇವುಗಳಲ್ಲಿ ಮಳೆಯ ನೀರು ಮುಖ್ಯವಾದುದು. ಬಿದ್ದ ಮಳೆಯ ನೀರಿನ ಸ್ವಲ್ಪಭಾಗ ಭೂಮಿಯಲ್ಲಿ ಇಂಗಿ ಅಂತರ್ಜಲವಾಗುವುದು, ಸ್ವಲ್ಪ ಭಾಗ ಆವಿಯಾಗಿ ವಾಯುಮಂಡಲವನ್ನು ಸೇರುವುದು, ಉಳಿದ ಭಾಗ ಇಳಿಜಾರನ್ನು ಅನುಸರಿಸಿ ಝರಿ, ಹಳ್ಳ ತೊರೆಗಳಾಗಿ ಹರಿದು, ಅವುಗಳು ಒಟ್ಟುಗೂಡಿ ನದಿಯಾಗಿ ಮಾರ್ಪಾಡು ಹೊಂದುವುವು.

ನದಿ: ಒಂದು ಪ್ರದೇಶದ ಇಳಿಜಾರನ್ನು ಅನುಸರಿಸಿ ನಿರ್ದಿಷ್ಟ ಮಾರ್ಗದಲ್ಲಿ ಹರಿದು ಮತ್ತೊಂದು ನದಿ, ಸರೋವರ ಅಥವಾ ಸಮುದ್ರವನ್ನು ಸೇರುವ ಸಿಹಿ ನೀರಿನ ಧಾರೆಯೇ

ನದಿ. ಸಾಮಾನ್ಯವಾಗಿ ನದಿಗಳು ಚಿಲುಮೆ, ಹಿಮನದಿ ಅಥವಾ ಸರೋವರಗಳಿಂದ ಉಗಮ ಹೊಂದುತ್ತವೆ. ನದಿಯು ಹರಿಯುವ ಮಾರ್ಗವನ್ನು ಅದರ ಪಾತ್ರ ಅಥವಾ ನದಿ ಕಣಿವೆ ಎಂದು ಕರೆಯುವರು. ನದಿ ಆರಂಭಗೊಳ್ಳುವ ಸ್ಥಾನವನ್ನು ನದಿಯ ಮೂಲವೆಂತಲೂ ಅದು ಅಂತ್ಯಗೊಳ್ಳುವ ಭಾಗವನ್ನು ನದಿಯ ಮುಖ ಎಂತಲೂ ಕರೆಯುವರು.

ಒಂದು ಸಣ್ಣ ನದಿ ತನ್ನ ಕಣಿವೆಯಲ್ಲಿ ಹರಿದು ಮತ್ತೊಂದು ಪ್ರಧಾನ ನದಿಯನ್ನು ಸೇರಿದಲ್ಲಿ ಅದನ್ನು ಉಪನದಿ ಎಂದು ಕರೆಯುವರು. ಅಂದರೆ ಉಪನದಿ ಪಾತ್ರ ಅದು ಸೇರುವ ಮುಖ್ಯ ನದಿಗಿಂತ ಹೆಚ್ಚು ಎತ್ತರದಲ್ಲಿರುವುದು. ಹೀಗೆ ಒಂದು ನದಿ ಮತ್ತೊಂದು ನದಿಯನ್ನು ಸೇರುವ ಸ್ಥಾನವನ್ನು ಸಂಗಮ ಎನ್ನುವರು. ನದಿ ತಗ್ಗು ವಲಯದಲ್ಲಿ ಹರಿಯುತ್ತಿದ್ದು, ಅದು ಸುತ್ತಲಿನ ಪ್ರದೇಶದಿಂದ ಹರಿಯುವ ಝರಿ, ತೊರೆ, ಉಪನದಿ ಮುಂತಾದ ಎಲ್ಲ ಬಗೆಯ ಜಲಧಾರೆಗಳಿಂದ ನೀರನ್ನು ಪಡೆಯುವುದು. ಹೀಗೆ ಒಂದು ನದಿಯನ್ನು ಬಂದು ಸೇರುವ ಎಲ್ಲ ಜಲಧಾರೆಗಳ ಭೂಭಾಗವನ್ನು ಆ ನದಿಯ ಜಲಾನಯನ ಪ್ರದೇಶ (ಕ್ಯಾಚ್‌ಮೆಂಟ್ ಏರಿಯ) ಎಂದು ಕರೆಯುವರು. ನದಿ ಒಳಗೊಂಡಿರುವ ನೀರಿನ ಪ್ರಮಾಣ ಅದರ ಜಲಾನಯನ ಪ್ರದೇಶದ ವಿಸ್ತಾರ ಹಾಗೂ ಅದು ಪಡೆಯುವ ಮಳೆಯನ್ನು ಅವಲಂಬಿಸಿರುವುದು. ಜಲಾನಯನ ಪ್ರದೇಶ ವಿಸ್ತಾರವಾಗಿದ್ದು, ಹೆಚ್ಚು ಮಳೆಯನ್ನು ಪಡೆಯುತ್ತಿದ್ದರೆ ನದಿಯ ನೀರಿನ ಪ್ರಮಾಣವೂ ಅಧಿಕವಾಗಿರುವುದು. ಮಳೆಯು ವರ್ಷವೆಲ್ಲ ಬೀಳುತ್ತಿದ್ದರೆ ಅಥವಾ ಅದರ ಉಗಮ ಪ್ರದೇಶವು ಹಿಮಚ್ಛಾದಿತವಾಗಿದ್ದರೆ ನದಿಯು ವರ್ಷವೆಲ್ಲ ಹರಿಯುವ ನಿರಂತರ ನದಿಯಾಗಿರುವುದು. ಹಿಮಾಲಯದಿಂದ ಉಗಮಿಸುವ ಭಾರತದ ನದಿಗಳು ಇದಕ್ಕೆ ಉದಾಹರಣೆಗಳಾಗಿವೆ. ಜಲಾನಯನ ಪ್ರದೇಶದಲ್ಲಿ ಮಳೆಯು ನಿಯತಕಾಲಿಕವಾಗಿದ್ದರೆ ನದಿಗಳೂ ನಿಯತಕಾಲಿಕವಾಗಿರುತ್ತವೆ. ದಕ್ಷಿಣ ಭಾರತದ ನದಿಗಳು ಇದಕ್ಕೆ ನಿದರ್ಶನಗಳಾಗಿವೆ. ಜಲಾನಯನ ಪ್ರದೇಶಗಳು ಸಾಮಾನ್ಯವಾಗಿ ಸಾಕಷ್ಟು ಎತ್ತರದಿಂದ ಕೆಲವು ವೇಳೆ ನದಿಗಳ ಮುಖದವರೆಗೂ ವಿಸ್ತರಿಸಿರುತ್ತವೆ.

**ಜಲ ವಿಭಾಜಕ:** ಎತ್ತರವಾಗಿರುವ ಒಂದು ಭೂಭಾಗ ಎರಡೂ ಕಡೆಗೆ ಹರಿಯುವ ನದಿಗಳು ಅಥವಾ ಜಲಧಾರೆಗಳನ್ನು ಬೇರ್ಪಡಿಸುವಂತಿದ್ದರೆ ಅದನ್ನು ಜಲ ವಿಭಾಜಕ ಎನ್ನುವರು.

**ನದಿ ವ್ಯವಸ್ಥೆ ಮತ್ತು ಹಂಚಿಕೆ:** ಭೂ ಪ್ರದೇಶಗಳು ಹೊಸದಾಗಿ ನಿರ್ಮಿತಗೊಂಡಾಗ ಆ ಪ್ರದೇಶದಲ್ಲಿ ನೀರ್ಗಾಲುವೆ ಜಾಲವೂ ಆರಂಭಗೊಳ್ಳುವುದು. ಈ ಜಾಲವು ಕಾಲಾಂತರದಲ್ಲಿ ಭೂ ರಚನೆ ಹಾಗೂ ಉಪನದಿ ವ್ಯವಸ್ಥೆಯಿಂದ ಮಾರ್ಪಾಡು ಹೊಂದುವುದು. ಪೂರ್ಣವಾಗಿ ಅಭಿವೃದ್ಧಿ ಹೊಂದಿದ ಮುಖ್ಯ ನದಿ, ಉಪನದಿಗಳು, ಅವುಗಳ ಝರಿ, ತೊರೆಗಳ ಸಮೂಹವನ್ನು ಒಟ್ಟಾರೆ ನದಿ ವ್ಯವಸ್ಥೆ ಅಥವಾ ನೀರ್ಗಾಲುವೆ ವ್ಯವಸ್ಥೆಯೆಂದು ಕರೆಯುವರು. ಇದನ್ನು ಜಲವ್ಯವಸ್ಥೆ ಎಂದೂ ಕರೆಯುವರು. ಒಂದು ಪ್ರದೇಶದ ಭೂ ರಚನೆ ಒಂದೇ ರೀತಿಯ ಶಿಲೆಗಳಿಂದ ಕೂಡಿದ್ದರೆ, ಆ ಪ್ರದೇಶದ ನೀರ್ಗಾಲುವೆ ವ್ಯವಸ್ಥೆಯೂ ಬಹು ಸರಳವಾಗಿರುವುದು. ಇದಕ್ಕೆ ಬದಲಾಗಿ ಕಠಿಣ ಮತ್ತು ಮೃದು ಶಿಲಾ ಪದರುಗಳು ಒಂದಾದ ಮೇಲೊಂದರಂತೆ ಸಮಾನಾಂತರ ಅಥವಾ ಊರ್ಧ್ವ ಮುಖವಾಗಿದ್ದಲ್ಲಿ ಹಾಗೂ ಆ ಪ್ರದೇಶದಲ್ಲಿ ಪರ್ವತಗಳು ನಿರ್ಮಿತವಾಗಿದ್ದಲ್ಲಿ ನದಿ ವ್ಯವಸ್ಥೆಯು ಸಂಕೀರ್ಣವಾಗಿರುವುದಲ್ಲದೆ, ಜಲಪಾತ, ಶಿಲಾಸೋಪಾನ ಮುಂತಾದ ಭೂ ಸ್ವರೂಪಗಳೂ ಕಂಡುಬರುತ್ತವೆ. ಇವುಗಳಲ್ಲದೆ ಆ ಪ್ರದೇಶ ಆಂತರಿಕ ಶಕ್ತಿಗಳಿಂದ ಮೇಲೆತ್ತಲ್ಪಟ್ಟಿದ್ದರೆ ಅಥವಾ ಕುಸಿತಕ್ಕೀಡಾಗಿದ್ದರೆ ನದಿ ವ್ಯವಸ್ಥೆಯು ಮತ್ತಷ್ಟು ಸಂಕೀರ್ಣತೆಯಿಂದ ಕೂಡಿರುವುದು. ಹೀಗೆ ನದಿ ವ್ಯವಸ್ಥೆಗಳು ಆಯಾ ಪ್ರದೇಶದ ಶಿಲಾ ರಚನೆ, ಭೂ ಇತಿಹಾಸ ಮುಂತಾದವುಗಳನ್ನು ಪ್ರತಿಬಿಂಬಿಸುತ್ತವೆ. ಇದಲ್ಲದೆ ನದಿಯ ಪಾತ್ರವೂ ಕೆಲವು ಕಡೆ ಬಹು ಕಿರಿದಾಗಿದ್ದು, ಇನ್ನೂ ಕೆಲವು ಕಡೆ ಬಹು ವಿಸ್ತಾರವಾಗಿರುವುದು. ಒಂದು ನದಿ ವ್ಯವಸ್ಥೆಯಲ್ಲಿನ ನೀರ್ಗಾಲುವೆ ನಿರ್ಮಾಣ ಪ್ರಕ್ರಿಯೆ ಹಂತಗಳು ಈ ಮುಂದಿನಂತಿವೆ:

ಝರಿಗಳ ಉಗಮ; ಝರಿಗಳು ಸಂಗಮ ಹೊಂದಿ ತೊರೆಗಳಾಗಿ ಪರಿಣಮಿಸುವುದು ಹಾಗೂ ಉಪನದಿಗಳ ಆರಂಭ; ಝರಿಗಳು ಹಾಗೂ ತೊರೆಗಳ ವಿಸ್ತರಣೆ; ತೊರೆ ಮತ್ತು ಝರಿಗಳ ಉಗಮ ಸ್ಥಾನಗಳ ಹಿಂಜರಿತ, ಝರಿಗಳ ನಿರ್ಮಾಣದ ವಿಕಾಸ; ನದಿಯ ಅಪಹರಣ ಹಾಗೂ ಇದರಿಂದ ಜಲ ವಿಭಾಜಕಗಳ ಬದಲಾವಣೆ.

ಈ ಎಲ್ಲ ಬಗೆಯ ಬದಲಾವಣೆಗಳಿಂದ ನದಿ ವ್ಯವಸ್ಥೆಯು ನಿಶ್ಚಿತ ಸ್ಥಿತಿಗೆ ಬರುವುದು. ಅಂತಿಮವಾಗಿ ಮುಖ್ಯ ನದಿ ಹಾಗೂ ಅದರ ಉಪ ನದಿಗಳು ವಿವಿಧ ಮಾದರಿಯನ್ನು ತಳೆಯುತ್ತವೆ. ನೀರ್ಗಾಲುವೆ ವ್ಯವಸ್ಥೆಯನ್ನು ಅವುಗಳ ಅಭಿವೃದ್ಧಿ ಹಾಗೂ ಅವುಗಳ ಪಾತ್ರದ ಶಿಲಾ ರಚನೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿಂಗಡಿಸಬಹುದು:

ನದಿವ್ಯವಸ್ಥೆ
- ಸ್ವಾಭಾವಿಕ ನದಿ ವ್ಯವಸ್ಥೆ
  - ವೃಕ್ಷಮಾದರಿ
  - ಜಾಲಾಕಾರದ ಮಾದರಿ
  - ವಲಯಾಕಾರದ ಮಾದರಿ
  - ವೃತ್ತಾಕಾರದ ಮಾದರಿ
- ಅಸ್ವಾಭಾವಿಕ ನದಿ ವ್ಯವಸ್ಥೆ
  - ಪೂರ್ವಗಾಮಿ ನದಿ ವ್ಯವಸ್ಥೆ
  - ಗತಕಾಲಿಕ ನದಿ ವ್ಯವಸ್ಥೆ

**1. ಸ್ವಾಭಾವಿಕ ಅಥವಾ ಅನುವರ್ತಿ ನದಿ ವ್ಯವಸ್ಥೆ:** ನದಿ ವ್ಯವಸ್ಥೆ ಭೂಸ್ವರೂಪಗಳ ಇಳಿಜಾರು ಹಾಗೂ ಶಿಲಾ ರಚನೆಗೆ ಅನುಗುಣವಾಗಿ ರೂಪುಗೊಂಡಿದ್ದರೆ ಅದನ್ನು ಸ್ವಾಭಾವಿಕ ನದಿ ವ್ಯವಸ್ಥೆ ಎಂದು ಕರೆಯುವರು. ಇವು ಒಂದು ಪ್ರದೇಶದಲ್ಲಿ ಉಗಮಿಸುವ ಮೊದಲ ನದಿ ವ್ಯವಸ್ಥೆಯಾಗಿದ್ದು ಭೂಪ್ರದೇಶಗಳ ಇಳಿಜಾರಿಗೆ ಸಮಾನಾಂತರವಾಗಿ ಹರಿಯುತ್ತವೆ.

ಭೂ ಪ್ರದೇಶಗಳು ಹೊಸದಾಗಿ ನಿರ್ಮಾಣಗೊಂಡ ಅನಂತರ ಇಳಿಜಾರನ್ನು ಅನುಸರಿಸಿ ಹರಿಯುವ ತೊರೆಗಳು ನಿರ್ಮಿತವಾಗುತ್ತವೆ. ಆದುದರಿಂದ ಇವುಗಳನ್ನು ಸ್ವಾಭಾವಿಕ ಝರಿ ಅಥವಾ ತೊರೆಗಳೆಂದು ಕರೆಯುವರು. ಇಂತಹ ವ್ಯೂಹದ ಮುಖ್ಯ ನದಿಯನ್ನು ಪ್ರಧಾನ ಸ್ವಾಭಾವಿಕ ನದಿ ಎಂದು ಕರೆಯುವರು. ಆ ಪ್ರದೇಶದಲ್ಲಿ ಬೀಳುವ ಮಳೆಯ ನೀರಿನಿಂದ ಸ್ವಾಭಾವಿಕ ತೊರೆಗಳಿಗೆ ಎರಡೂ ಬದಿಗಳಿಂದಲೂ ಬಂದು ಸೇರುವ ಝರಿಗಳುಂಟಾಗುತ್ತವೆ. ಇವುಗಳು ಇಳಿಜಾರನ್ನು ಅನುಸರಿಸಿ ಹರಿದು ಮುಖ್ಯ ನದಿಯನ್ನು ಸೇರುತ್ತಿದ್ದಲ್ಲಿ ಸ್ವಾಭಾವಿಕ ನದಿಗಳಾಗಿರುತ್ತವೆ.

**ಕ್ರಮಾನುಗತ ನದಿ:** ಸ್ವಾಭಾವಿಕ ನದಿಗಳನ್ನು ಲಂಬವಾಗಿ ಸೇರುವ ನದಿಗಳನ್ನು ಕ್ರಮಾನುಗತ ನದಿಯೆಂದು ಕರೆಯುವರು. ಮುಖ್ಯ ನದಿಗಳು ಕೆಲವು ಕಡೆ ಪರ್ವತ ಸರಣಿಗಳನ್ನು ಕೊರೆದು (ಹಿಮಾಲಯದಲ್ಲಿರುವಂತೆ) ಮುಂದುವರಿದಿದ್ದರೆ ಉಪನದಿಗಳು ಕಣಿವೆಗಳನ್ನು ಅನುಸರಿಸಿ ಮುಖ್ಯ ನದಿಯನ್ನು ಲಂಬವಾಗಿ ಸಂಧಿಸುತ್ತವೆ. ಕೆಲವು ಕಡೆ ಇವುಗಳು ಮೃದು ಶಿಲಾ ಪದರುಗಳನ್ನು ಸವೆಸಿ ಅಥವಾ ಶಿಲಾಸ್ತರ ಬಿರುಕುಗಳನ್ನು ಅನುಸರಿಸಿ ಹರಿಯುತ್ತವೆ.

**ಪ್ರತ್ಯನುವರ್ತಿ ನದಿ:** ಕ್ರಮಾನುಗತ ನದಿಗಳು ಮಡಿಕೆ ಪರ್ವತ ವಲಯಗಳಲ್ಲಿ ಸಾಮಾನ್ಯ. ಈ ಕ್ರಮಾನುಗತ ನದಿಗಳಿಗೆ ಬಂದು ಸೇರುವ ಉಪನದಿಗಳು ನದಿಗೆ ವಿರುದ್ಧ ದಿಕ್ಕಿನಲ್ಲಿ ಹರಿಯುತ್ತಿರುತ್ತವೆ. ಅಲ್ಲದೆ ಕೆಲವು ವೇಳೆ ಇವು ಶಿಲಾಸ್ತರದ ಇಳಿಮೋರೆಗೆ ವಿರುದ್ಧ ದಿಕ್ಕಿನಲ್ಲಿ ಹರಿಯುತ್ತವೆ. ಇವುಗಳನ್ನು ಡೇವಿಸ್ (1895) ಆಬ್ಸಿಕ್ವೆಂಟ್ ನದಿ ಎಂದು ಕರೆದರು. ಇವುಗಳು ಸ್ವಾಭಾವಿಕ ನದಿಗಳಿಗೆ ಸಮಾನಾಂತರವಾಗಿದ್ದು ಕ್ರಮಾನುಗತ ನದಿಗಳನ್ನು ಲಂಬವಾಗಿ ಸೇರುತ್ತವೆ.

**ಆಕಸ್ಮಿಕ ನದಿ:** ಕೆಲವು ವೇಳೆ ಕಠಿಣ ಶಿಲಾಪದರುಗಳನ್ನು ಹೊಂದಿದ ಭೂ ಪ್ರದೇಶಗಳಲ್ಲಿ ರೂಪುಗೊಂಡಿರುವ ನೀರ್ಗಾಲುವೆಗಳು ಆ ಪ್ರದೇಶದ ಶಿಲಾಸ್ತರ ಹಾಗೂ ಭೂ ಸ್ವರೂಪಗಳಿಗೆ ಭಿನ್ನವಾಗಿರುತ್ತವೆ. ಇಂತಹ ಸಂಕೀರ್ಣ ನೀರ್ಗಾಲುವೆಗಳನ್ನು ಆಕಸ್ಮಿಕ ನೀರ್ಗಾಲುವೆ ಎಂದು ಕರೆಯುವರು. ವಲಯಾಕಾರ ನೀರ್ಗಾಲುವೆ ವ್ಯವಸ್ಥೆ ಇದಕ್ಕೆ ಉದಾಹರಣೆ.

ಆಯಾ ಪ್ರದೇಶದ ಭೂ ಸ್ವರೂಪ ಹಾಗೂ ಶಿಲಾಸ್ತರಗಳ ರಚನೆಯನ್ನು ಅನುಸರಿಸಿ ಅಭಿವೃದ್ಧಿ ಹೊಂದಿದ ಸ್ವಾಭಾವಿಕ ನದಿ ವ್ಯವಸ್ಥೆಯು ಕಾಲಾಂತರದಲ್ಲಿ ಹಲವು ಬಗೆಯ ಆಕಾರಗಳನ್ನು ಪಡೆಯುವುದು. ಅವುಗಳಲ್ಲಿ ಮುಖ್ಯವಾದವು ಈ ಕೆಳಕಂಡಂತಿವೆ:

**ವೃಕ್ಷಾಕಾರ ಮಾದರಿ:** ಮುಖ್ಯ ನದಿ, ಉಪನದಿ ಹಾಗೂ ಅದರ ತೊರೆ, ಝರಿಗಳ ಜಾಲವು ಮರದ ರೆಂಬೆ ಹಾಗೂ ಅದರ ಟಿಸಿಲುಗಳನ್ನು ಹೋಲುವುದು. ಇದೇ ವೃಕ್ಷಾಕಾರ ಮಾದರಿ ನೀರ್ಗಾಲುವೆ ವ್ಯವಸ್ಥೆ. ಎಲ್ಲ ದಿಕ್ಕಿನಿಂದಲೂ ಉಪನದಿಗಳು, ತೊರೆಗಳು ಹರಿದು ಬಂದು ಮುಖ್ಯ ನದಿಯನ್ನು ಸೇರುತ್ತವೆ. ಇಂತಹ ವ್ಯವಸ್ಥೆಯು ಸಾಮಾನ್ಯವಾಗಿ ಒಂದೇ ತರದ ಶಿಲಾರಚನೆಯುಳ್ಳ ನದಿಗಳಿಗೆ ಉದಾಹರಣೆ ಎಂದರೆ ಭಾರತದ ಸಿಂಧು, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿಗಳ ವ್ಯವಸ್ಥೆ.

**ಜಾಲಾಕಾರದ ಮಾದರಿ:** ಭೂ ಸ್ವರೂಪಗಳು ಹಾಗೂ ಶಿಲಾಸ್ತರಗಳ ಇಳಿಜಾರನ್ನು ಅನುಸರಿಸಿ ಅಭಿವೃದ್ಧಿ ಹೊಂದಿದ ಸ್ವಾಭಾವಿಕ ತೊರೆಗಳಿಗೆ ಲಂಬವಾಗಿ ಬಂದು ಸೇರುವ ಕ್ರಮಾನುಗತ ಝರಿಗಳು ಹಾಗೂ ಅವುಗಳು ಹೊಂದಿರುವ ಪ್ರತ್ಯನುವರ್ತಿ ತೊರೆಗಳ ಜಾಲವನ್ನು ಜಾಲಾಕಾರದ ಮಾದರಿ ಎಂದು ಕರೆಯುವರು. ಶಿಲಾಸ್ತರ ಬಿರುಕುಗಳು ಈ ಮಾದರಿಯ ವ್ಯವಸ್ಥೆಯು ರೂಪುಗೊಳ್ಳಲು ಕಾರಣವಾಗುವವು. ಇಂತಹ ವ್ಯವಸ್ಥೆಗೆ ಫ್ರಾನ್ಸಿನ ಸೀನ್ ನದಿ ಕಣಿವೆಯ ಪ್ಯಾರಿಸ್ ಬಯಲು ಸೂಕ್ತ ಉದಾಹರಣೆಯಾಗಿದೆ.

# ನಗ್ನೀಕರಣ ಕರ್ತೃವಾಗಿ ನದಿಯ ಕಾರ್ಯ

**ವಲಯಾಕಾರದ ಮಾದರಿ:** ಗುಮ್ಮಟಾಕಾರದ ಭೂ ಸ್ವರೂಪದ ಅಂಚಿನಲ್ಲಿ, ಬೆಟ್ಟದ ಸಾಲುಗಳಿದ್ದಲ್ಲಿ ಅಲ್ಲಿನ ನೀರ್ಗಾಲುವೆ ವ್ಯವಸ್ಥೆಯು ವಲಯಾಕಾರದಲ್ಲಿರುವುದು. ಇದಲ್ಲದೆ ಗುಮ್ಮಟಾಕಾರದ ಭೂ ಸ್ವರೂಪವು ವಿಚ್ಛಿದ್ರಗೊಂಡಿದ್ದರೂ ಅಲ್ಲಿಯ ನೀರ್ಗಾಲುವೆಗಳು ವಲಯಾಕಾರದಲ್ಲಿಯೇ ಹರಿಯುವವು. ಉದಾ: ಅಮೆರಿಕದ ದಕ್ಷಿಣ ಡಕೋಟ ಮತ್ತು ವ್ಯೋಮಿಂಗ್‌ನ ಬ್ಲಾಕ್ ಹಿಲ್ಸ್‌ನ ಷಿಯನ್ ನದಿ ವ್ಯವಸ್ಥೆ.

**ವೃತ್ತಾಕಾರದ ಮಾದರಿ:** ಗುಮ್ಮಟಾಕೃತಿ ಅಥವಾ ಶಂಕಾಕೃತಿಯ ಎತ್ತರವಾದ ಪ್ರದೇಶದಿಂದ ಸುತ್ತಲಿನ ತಗ್ಗಾದ ಭೂ ಭಾಗಗಳ ಕಡೆಗೆ ಇಳಿಜಾರನ್ನು ಅನುಸರಿಸಿ ಹರಿಯುವ ನೀರ್ಗಾಲುವೆ ಜಾಲವನ್ನು ವೃತ್ತಾಕಾರ ಮಾದರಿಯೆಂದು ಕರೆಯುವರು. ಬ್ರಿಟನ್ನಿನ ಲೇಕ್ ಡಿಸ್ಟ್ರಿಕ್ ಪ್ರಾಂತ್ಯದ ನದಿಗಳು ಈ ಮಾದರಿಯಲ್ಲಿವೆ. ಇದೇ ರೀತಿಯಲ್ಲಿ ಎಲ್ಲ ಶಂಖಾಕೃತಿ ಅಗ್ನಿ ಪರ್ವತಗಳ ಸುತ್ತಲೂ ನದಿ ವ್ಯವಸ್ಥೆಯು ರೂಪುಗೊಳ್ಳುವುದು. ಉದಾ: ಮೌಂಟ್ ಎಟ್ನ, ಮೌಂಟ್‌ಹುಡ್ ಇತ್ಯಾದಿ. ಭಾರತದ ಕೇಂದ್ರಭಾಗದಲ್ಲಿರುವ ಅಮರಕಂಟಕ ಪ್ರಸ್ಥಭೂಮಿಯಿಂದ ನದಿಗಳು ಉಗಮಿಸಿ ಸುತ್ತಲೂ ಹರಿಯುತ್ತಿದ್ದು ವೃತ್ತಾಕಾರ ಮಾದರಿಗೆ ಉದಾಹರಣೆಯಾಗಿದೆ.

**ಅಸ್ವಾಭಾವಿಕ ವ್ಯವಸ್ಥೆ:** ನದಿ ವ್ಯವಸ್ಥೆ ಆ ಪ್ರದೇಶದಲ್ಲಿ ಕಂಡುಬರುವ ಭೂ ಸ್ವರೂಪ ಹಾಗೂ ಶಿಲಾರಚನೆಯೊಂದಿಗೆ ಯಾವುದೇ ರೀತಿಯ ಅನುರೂಪತೆಯನ್ನು ಹೊಂದಿರದೆ ತದ್ವಿರುದ್ಧವಾಗಿದ್ದಲ್ಲಿ ಅದನ್ನು ಅಸ್ವಾಭಾವಿಕ ನದಿ ವ್ಯವಸ್ಥೆಯನ್ನುವರು. ಈ ರೀತಿಯ ನದಿ ವ್ಯವಸ್ಥೆಯನ್ನು ಈ ಕೆಳಕಂಡಂತೆ ಎರಡು ವಿಧಗಳಾಗಿ ವಿಂಗಡಿಸಬಹುದು:

ಪೂರ್ವಗಾಮಿ ವ್ಯವಸ್ಥೆ: ಪ್ರಸ್ತುತ ನದಿ ಹರಿಯುವ ಪಾತ್ರ ಹಾಗೂ ಅದರ ಶಿಲಾಸ್ತರಗಳ ನಡುವೆ ಸಂಬಂಧವಿರದ ನದಿ ವ್ಯವಸ್ಥೆಗೆ ಪೂರ್ವಗಾಮಿ ನದಿ ವ್ಯವಸ್ಥೆಯು ಉದಾಹರಣೆಯಾಗಿದೆ. ನದಿಯು ಉಗಮಗೊಂಡ ಅವಧಿಯಲ್ಲಿ ಅದರ ಕಣಿವೆಯು ನಿರ್ಮಿತಗೊಂಡಾಗ ಇದ್ದ ಮೇಲ್ಪದರವು ಸಂಪೂರ್ಣವಾಗಿ ಸವೆತಕ್ಕೀಡಾಗಿದೆ. ಇದರ ಕೆಳಗೆ ನದಿಯ ಕಣಿವೆ ನಿರ್ಮಿತವಾಗಿದ್ದು, ಇಂದು ಕಣಿವೆಯು ಕಠಿಣ ಹಾಗೂ ಮೃದು ಶಿಲಾಪದರುಗಳೆರಡರಲ್ಲಿಯೂ ಮುಂದುವರಿದಿರುವುದು. ಇದರಿಂದಾಗಿ ನದಿ ಕಣಿವೆಯ ಇಂದಿನ ಶಿಲಾಸ್ತರ ಹಾಗೂ ಆ ಪ್ರದೇಶದಲ್ಲಿ ವ್ಯವಸ್ಥೆಗೊಂಡಿರುವ ನೀರ್ಗಾಲುವೆ ಜಾಲಕ್ಕೂ ಯಾವುದೇ ರೀತಿಯಲ್ಲಿ ಸಂಬಂಧವಿರುವುದಿಲ್ಲ. ಇದನ್ನೇ ಪೂರ್ವಗಾಮಿ ವ್ಯವಸ್ಥೆ ಎಂದು ಕರೆಯುವರು.

ಗತಕಾಲಿಕ ವ್ಯವಸ್ಥೆ: ಒಂದು ಭೂ ಪ್ರದೇಶದಲ್ಲಿ ನದಿ ವ್ಯವಸ್ಥೆ ಪ್ರಾರಂಭಗೊಂಡ ಅನಂತರ ಆ ಪ್ರದೇಶ ಮೇಲೆತ್ತಲ್ಪಟ್ಟು ಅಸ್ತವ್ಯಸ್ಥಗೊಂಡರೂ ನದಿ ವ್ಯವಸ್ಥೆಯಲ್ಲಿ ಯಾವ ಬದಲಾವಣೆ ಇಲ್ಲದಿದ್ದಲ್ಲಿ ಅದನ್ನು ಗತಕಾಲಿಕ ವ್ಯವಸ್ಥೆ ಎಂದು ಕರೆಯುವರು. ಭೂ ಪ್ರದೇಶಗಳು ಓರೆಯಾದಾಗ ಅಥವಾ ಒತ್ತಡದಿಂದ ಮಡಿಕೆ ಪರ್ವತಗಳು ನಿರ್ಮಿತಗೊಂಡಾಗ ಆ ಪ್ರದೇಶದ ನೀರ್ಗಾಲುವೆಗಳೂ ಬದಲಾವಣೆ ಹೊಂದುತ್ತವೆ. ಆದರೆ ಭೂ ಪ್ರದೇಶಗಳ ಮೇಲೆತ್ತಲ್ಪಡುವಿಕೆಯು ಬಹು ಕಡಿಮೆ ಹಾಗೂ ನಿಧಾನವಾಗಿದ್ದು, ನದಿಗಳ ವೇಗ ಮತ್ತು ಕೊರೆತವು ಹೆಚ್ಚಾಗಿದ್ದಲ್ಲಿ ಭೂ ಭಾಗಗಳು ಮೇಲೆತ್ತಿದಂತೆಲ್ಲಾ ತಮ್ಮ ಪಾತ್ರವನ್ನು ಆಳವಾಗಿ ಕೊರೆದು ಸರಿದೂಗಿಸುತ್ತವೆ. ಉದಾ: ಬ್ರಹ್ಮಪುತ್ರ ನದಿಯು ಹಿಮಾಲಯ ಪರ್ವತಗಳನ್ನು ಕೊರೆದು ಅಸ್ಸಾಂ ಪ್ರಾಂತ್ಯವನ್ನು ಪ್ರವೇಶಿಸುವುದು. ಸಿಂಧು, ಘಾಘಾ, ಸಟ್ಲೇಜ್ ಮತ್ತಿತರ ಅನೇಕ ನದಿಗಳು ಹಿಮಾಲಯ ಶ್ರೇಣಿಗಳನ್ನು ಕೊರೆದು ಉತ್ತರ ಭಾರತದ ಮೈದಾನವನ್ನು ಪ್ರವೇಶಿಸುತ್ತವೆ. ಗತಕಾಲಿಕ ನದಿ ವ್ಯವಸ್ಥೆಯು ಆಯಾ ಪ್ರದೇಶಗಳ ಭೂ ಸ್ವರೂಪಗಳ ಇತಿಹಾಸವನ್ನು ಪ್ರತಿಬಿಂಬಿಸುತ್ತದೆ.

**ನದಿಯ ಕಾರ್ಯಗಳು:** ನದಿಯು ನಗ್ನೀಕರಣಕರ್ತೃವಾಗಿ ಎಲ್ಲ ಮೂರು ಬಗೆಯ ಕಾರ್ಯಗಳನ್ನು ನಿರ್ವಹಿಸುವುದು. ಅವುಗಳೆಂದರೆ: ಸವೆತ, ಸಾಗಾಣಿಕೆ, ಸಂಚಯನ.

ಸವೆತ: ನದಿಯು ಹರಿಯುವಾಗ ತನ್ನ ಪಾತ್ರದ ತಳ ಹಾಗೂ ಎರಡೂ ಬದಿಗಳನ್ನು ಸವೆಸುವುದು. ಇದರಿಂದ ಮರಳು, ಶಿಲಾ ಚೂರುಗಳು, ಕಲ್ಲು ಬಂಡೆಗಳನ್ನು ತನ್ನೊಡನೆ ತೇಲಿಸಿಕೊಂಡು ಅಥವಾ ಕರಗಿಸಿ ದ್ರಾವಣದ ರೂಪದಲ್ಲಿ ಸಾಗಿಸುವುದು. ಕೆಲವು ಭಾರವಾದ ವಸ್ತುಗಳು ನದಿಯೊಡನೆ ಉರುಳಿ ಅದರ ಪಾತ್ರವು ಸವೆಯುವುದಲ್ಲದೆ, ಶಿಲಾ ಚೂರುಗಳೂ ಸವೆದು, ಪರಸ್ಪರ ಘರ್ಷಿಸಿ ನುಣ್ಣಗಾಗುತ್ತವೆ. ಇದನ್ನೇ ನದಿಯ ಸವೆತ ಕಾರ್ಯವೆಂದು ಕರೆಯುವರು.

ನದಿಯ ಸವೆತಕಾರ್ಯ ಎರಡು ರೀತಿಯಲ್ಲಿರುವುದು. ಅವುಗಳೆಂದರೆ ಭೌತಿಕ ಸವೆತ ಮತ್ತು ರಾಸಾಯನಿಕ ಸವೆತ. ನದಿಯು ತನ್ನ ಪಾತ್ರವನ್ನು ಕೊರೆದು ಅನೇಕ ವಸ್ತುಗಳನ್ನು ಸಾಗಿಸುವುದು. ಈ ವಸ್ತುಗಳು ಪರಸ್ಪರ ಘರ್ಷಿಸಿ ಅಥವಾ ನದಿಯ ತಳ ಅಥವಾ ಬದಿಗಳೊಂದಿಗೆ ಘರ್ಷಿಸಿ ಸವೆಯುತ್ತವೆ. ಅಲ್ಲದೆ ಈ ವಸ್ತುಗಳು ನದಿಯು ತನ್ನ ಪಾತ್ರವನ್ನು ಆಳವಾಗಿ ಕೊರೆಯಲು ಆಯುಧಗಳಂತೆ ಬಳಕೆಯಾಗುತ್ತವೆ; ಈ ರೀತಿಯ ಸವೆತ ಕಾರ್ಯವನ್ನು ಭೌತಿಕ ಸವೆತವೆಂದು ಕರೆಯುವರು. ಇದರೊಡನೆ ನದಿಯ ನೀರು ಅನೇಕ ಬಗೆಯ ಖನಿಜಗಳನ್ನು ಕರಗಿಸಿ ದ್ರಾವಣದ ರೂಪದಲ್ಲಿ ತನ್ನೊಂದಿಗೆ ಸಾಗಿಸುವುದು. ಈ ರೀತಿಯ ಸವೆತವನ್ನು ರಾಸಾಯನಿಕ ಸವೆತವೆಂದು ಕರೆಯುವರು.

ನದಿಯು ಹಲವಾರು ವಿಧಗಳಲ್ಲಿ ಸವೆತ ಕಾರ್ಯವನ್ನು ನಿರ್ವಹಿಸುವುದು. ಅವು ಹೀಗಿವೆ:

ಘರ್ಷಣೆ: ನದಿ ತನ್ನ ಭಾರವಸ್ತುಗಳೊಡನೆ ಹರಿಯುವಾಗ ಭಾರವಸ್ತುಗಳು ನದಿಯ ಪಾತ್ರ ಹಾಗೂ ಅದರ ದಂಡೆಗಳೊಡನೆ ಉಜ್ಜಿ ಉಂಟಾಗುವ ಸವೆತವನ್ನು ಘರ್ಷಣೆ ಎಂದು ಕರೆಯುವರು. ಇದು ಭೌತಿಕ ಸವೆತವಾಗಿದೆ. ಘರ್ಷಣೆಯು ನದಿಯ ಪಾತ್ರ ಹಾಗೂ ಬದಿಗಳಲ್ಲಿ ಕಂಡುಬರುವುದು.

ಇಕ್ಕೆಲಗಳ ಸವೆತ: ನದಿಯ ಭಾರವಸ್ತುಗಳು ಇಕ್ಕೆಲಗಳ ಬದಿಗಳೊಡನೆ ಘರ್ಷಿಸುವುದರಿಂದ ಪಾತ್ರವು ವಿಸ್ತರಿಸುವುದು. ಇದರಿಂದ V ಆಕಾರದ ಕಣಿವೆಗಳು ಕ್ರಮೇಣ ವಿಸ್ತಾರಗೊಳ್ಳುತ್ತವೆ. ಇದು ನದಿಯ ಯೌವನವಸ್ಥೆಯಲ್ಲಿ ಪ್ರಧಾನವಾಗಿರುವುದು.

ಊರ್ಧ್ವ ಕೊರೆತ: ನದಿಯ ಭಾರ ವಸ್ತುಗಳು ಅದರ ಪಾತ್ರವನ್ನು ಘರ್ಷಿಸುವುದರಿಂದ ಪಾತ್ರ ಆಳವಾಗಿ ಕೊರೆಯಲ್ಪಡುವುದು. ಇದು ನದಿಯ ಬಾಲ್ಯಾವಸ್ಥೆಯಲ್ಲಿ ಪ್ರಧಾನವಾಗಿರುವುದು.

ದ್ರಾವಣೀಕರಣ: ಇದು ನದಿಯ ರಾಸಾಯನಿಕ ಸವೆತ ಕಾರ್ಯವಾಗಿದೆ. ಶಿಲೆಗಳು ಒಳಗೊಂಡಿರುವ ಹಲವಾರು ಖನಿಜಗಳು ನೀರಿನಲ್ಲಿ ಕರಗುತ್ತವೆ. ಹೀಗೆ ಇವುಗಳು ನೀರಿನಲ್ಲಿ ಕರಗುವುದನ್ನೇ ದ್ರಾವಣೀಕರಣವೆಂದು ಕರೆಯುವರು. ನದಿಯ ನೀರಿನಲ್ಲಿರುವ ಇಂಗಾಲಾಮ್ಲವು ಈ ಖನಿಜಗಳನ್ನು ಕರಗಿಸಿ ದ್ರಾವಣೀಕರಣಗೊಳಿಸುವುದರಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸುವುದು. ಹೀಗೆ ನದಿಯಲ್ಲಿ ನೀರಿನ ಕರಗುವ ಮುಖ್ಯ ಖನಿಜಗಳೆಂದರೆ ಸುಣ್ಣದ ಕಲ್ಲು, ಕಲ್ಲುಪ್ಪು, ಜಿಪ್ಸಮ್ ಮುಂತಾದವು. ಈ ಖನಿಜಗಳನ್ನು ಒಳಗೊಂಡಿರುವ ಶಿಲೆಗಳು ನದಿಯ ನೀರಿನಿಂದ ದ್ರಾವಣೀಕರಿಸಲ್ಪಟ್ಟು ಸವೆತವುಂಟಾಗುವುದು.

ನೀರೊತ್ತಡ ಕ್ರಿಯೆ: ಇದು ಭೌತಿಕ ಸವೆತದ ಪ್ರಕಾರವಾಗಿದೆ. ನದಿಯ ನೀರು ಇಕ್ಕೆಲಗಳ ಬದಿಗಳಿಗೆ ಬಲವಾಗಿ ಅಪ್ಪಳಿಸುವುದು. ಇದರಿಂದ ಶಿಲೆಗಳು ಸಡಿಲಗೊಂಡು, ಚೂರಾಗಿ ನೀರಿನೊಡನೆ ಸಾಗುತ್ತವೆ. ಅಲ್ಲದೆ ನದಿಯ ನೀರು ಬಿರುಕುಗಳು ಹಾಗೂ ಸಂಧಿಗಳಲ್ಲಿ ಬಲವಾಗಿ ಅಪ್ಪಳಿಸುವುದರಿಂದ, ಈ ಕಾರ್ಯವು ಮುಂದುವರಿದು ಅವುಗಳು ಚೂರುಗಳಾಗುತ್ತವೆ. ಇದೇ ನೀರೊತ್ತಡ ಕ್ರಿಯೆ. ಜೊತೆಗೆ ಸಡಿಲವಾದ ಶಿಲೆಗಳ ಕಣಗಳು ನೀರಿನ ರಭಸದಿಂದ ಸಾಗಿಸಲ್ಪಡುತ್ತವೆ. ಇವುಗಳಿಂದಾಗಿ ಸವೆತಗಳುಂಟಾಗುವುದು.

ಉಜ್ಜುವಿಕೆ: ನದಿಯಿಂದ ಸಾಗಿಸಲ್ಪಡುವ ಭಾರವಸ್ತುಗಳು ಪರಸ್ಪರ ಉಜ್ಜಲ್ಪಡುತ್ತವೆ. ಅಲ್ಲದೆ ಅವು ದಂಡೆ ಹಾಗೂ ಪಾತ್ರಗಳೊಡನೆ ಉಜ್ಜುತ್ತವೆ. ಇದರಿಂದ ಶಿಲಾ ಚೂರುಗಳು ಗುಂಡಾಗಿ ನುಣ್ಣಗಾಗುತ್ತವೆ. ದಪ್ಪವಾಗಿರುವ ಶಿಲಾಚೂರುಗಳು ಉಜ್ಜುವಿಕೆಯಿಂದ ಗಾತ್ರದಲ್ಲಿ ಚಿಕ್ಕದಾಗುತ್ತವೆ.

ಸವೆತದ ಸಾಮರ್ಥ್ಯ: ನದಿಯ ಸವೆಸುವಿಕೆಯ ಸಾಮರ್ಥ್ಯವು, ಅದರ ವೇಗ, ನೀರಿನ ಪ್ರಮಾಣ ಹಾಗೂ ಅದರ ಪಾತ್ರದ ಶಿಲಾ ರಚನೆಯನ್ನು ಅವಲಂಬಿಸಿದೆ. ನದಿಯ ವೇಗವು ಅದರ ಪಾತ್ರದ ಇಳಿಜಾರನ್ನು ಅವಲಂಬಿಸಿದ್ದು ಇಳಿಜಾರು ಕಡಿದಾಗಿದ್ದರೆ ವೇಗವು ಹೆಚ್ಚಾಗಿದ್ದು, ಕೊರೆತವೂ ಅಧಿಕವಾಗಿರುವುದು. ಇದರಂತೆಯೇ ನದಿಯಲ್ಲಿ ನೀರಿನ ಪ್ರಮಾಣವು ಹೆಚ್ಚಾಗಿದ್ದರೆ ಅದಕ್ಕನುಗುಣವಾಗಿ ಕೊರೆತದ ಪ್ರಮಾಣವೂ ಹೆಚ್ಚು. ಆದುದರಿಂದಲೇ ಕಡಿದಾದ ಇಳಿಜಾರನ್ನು ಹೊಂದಿರುವ ಪರ್ವತ ವಲಯಗಳಲ್ಲಿ ನದಿಯ ಕೊರೆತವು ಮೈದಾನ ಪ್ರದೇಶಗಳಿಗಿಂತ ಅಧಿಕವಾಗಿರುವುದು. ಅಲ್ಲದೆ ಪ್ರವಾಹದ ಕಾಲದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ಕೊರೆತ ಕಾರ್ಯವು ಉಳಿದ ಅವಧಿಗಿಂತಲೂ ಹೆಚ್ಚು. ಇದೇ ರೀತಿಯಲ್ಲಿ ನದಿಯ ಪಾತ್ರವು ಮೃದು ಹಾಗೂ ಸಡಿಲವಾದ ಶಿಲೆಗಳಿಂದ ಕೂಡಿದ್ದರೆ ನದಿಯು ಅವುಗಳನ್ನು ವೇಗವಾಗಿ ಸವೆಸುವುದು. ಅದಕ್ಕೆ ಬದಲಾಗಿ ಕಠಿಣ ಶಿಲೆಗಳಿದ್ದಲ್ಲಿ ಕೊರೆತದ ಪ್ರಮಾಣ ಬಹುಕಡಿಮೆಯಿರುವುದು.

**ಭೂ ಸ್ವರೂಪಗಳು:** ನದಿಯು ಕೊರೆತದ ಕಾರ್ಯದಿಂದ ಕೆಲವು ವಿಶಿಷ್ಟ ಬಗೆಯ ಭೂಸ್ವರೂಪಗಳನ್ನು ನಿರ್ಮಿಸಿವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ 'V' ಆಕಾರದ ಕಣಿವೆ, ಕಂದರ, ಕುಂಭಕುಳಿ, ಜಲಪಾತ ಮತ್ತು ನದಿಯ ಅಪಹರಣ ಮುಂತಾದವು.

**ಸಾಗಾಣಿಕೆ:** ನದಿಯು ತನ್ನ ಸವೆತ ಕಾರ್ಯದಿಂದ ಪಡೆದ ವಸ್ತುಗಳನ್ನು ತನ್ನೊಡನೆ ಸ್ಥಳಾಂತರಿಸುವುದನ್ನೇ ಸಾಗಾಣಿಕೆ ಎಂದು ಕರೆಯುವರು. ಅದು ತನ್ನೊಡನೆ ಸಾಗಿಸುವ ವಸ್ತುಗಳ ಪ್ರಮಾಣವನ್ನು ಅದರ ಭಾರವಸ್ತು ಎನ್ನುವರು. ಹೀಗೆ ವಿವಿಧ ರೂಪದಲ್ಲಿ ಸಾಗಿಸಲ್ಪಡುವ ಸಾಮರ್ಥ್ಯವು ನದಿಯ ಸವೆತ ಕಾರ್ಯದ ಪ್ರಮಾಣ, ಅದು ಒಳಗೊಂಡಿರುವ ಭಾರವಸ್ತುಗಳ ಪ್ರಮಾಣ, ನದಿಯ ವೇಗ ಹಾಗೂ ಅದರ ನೀರಿನ ಪ್ರಮಾಣವನ್ನು ಅವಲಂಬಿಸಿರುವುದು. ಪ್ರವಾಹದ ಕಾಲದಲ್ಲಿ ನದಿಯು ಅಪಾರ ಪ್ರಮಾಣದ ಭಾರವಸ್ತುವನ್ನು ಹೊಂದಿದ್ದು ಅದು ಕೆಂಪಾಗಿ ಕಾಣಿಸುವುದು.

**ಸಾಗಾಣಿಕೆಯ ವಿಧಗಳು:** ನದಿ ತನ್ನ ಭಾರವಸ್ತುಗಳನ್ನು ಹಲವಾರು ವಿಧಗಳಲ್ಲಿ ಸ್ಥಳಾಂತರಿಸುವುದು. ಇವುಗಳಲ್ಲಿ ಮುಖ್ಯವಾದವುಗಳೆಂದರೆ:

# ನಗ್ನೀಕರಣ ಕರ್ತೃವಾಗಿ ನದಿಯ ಕಾರ್ಯ

**ದ್ರಾವಣೀಕರಣವಸ್ತುಗಳು:** ನೀರಿನಲ್ಲಿ ಹಲವಾರು ಖನಿಜ ವಸ್ತುಗಳು ಸುಲಭವಾಗಿ ಕರಗಿ ದ್ರಾವಣೀಕರಣವನ್ನು ಹೊಂದಿರುತ್ತವೆ. ಇವುಗಳು ನದಿಯ ನೀರಿನೊಡನೆ ಸಾಗಿಸಲ್ಪಡುತ್ತವೆ.

**ತೇಲುವ ವಸ್ತುಗಳು:** ಮರಳು, ರೇವೆಮಣ್ಣು, ಮಣ್ಣು ಮುಂತಾದ ಹಗುರ ಕಣಗಳು ಹರಿಯುವ ನದಿಯ ನೀರಿನಲ್ಲಿ ತೇಲುವಂತೆ ಸಾಗಿಸಲ್ಪಡುತ್ತವೆ. ನದಿಯು ಪ್ರವಾಹದ ಕಾಲದಲ್ಲಿ ಈ ವಸ್ತುಗಳನ್ನು ಅತಿ ಹೆಚ್ಚು ಪ್ರಮಾಣದಲ್ಲಿ ಹೊತ್ತೊಯ್ಯುವುದು.

**ಉರುಳುವ ವಸ್ತುಗಳು:** ನದಿಯ ನೀರು ಭಾರವಾಗಿರುವ ಶಿಲಾ ಚೂರುಗಳು, ಕಲ್ಲು ಬಂಡೆ ಮೊದಲಾದವುಗಳನ್ನು ಸಾಗಿಸುವುದು. ಈ ವಸ್ತುಗಳು ಹೆಚ್ಚು ಭಾರವಾಗಿರುವುದರಿಂದ ನದಿಯ ಪಾತ್ರದಲ್ಲಿ ಇವುಗಳು ಉರುಳಿದಂತೆ ನದಿಯಿಂದ ಸಾಗಿಸಲ್ಪಡುತ್ತವೆ.

ನದಿಯ ನೀರಿನೊಡನೆ ಸಾಗಿಸಲ್ಪಡುವ ಭಾರವಸ್ತುಗಳ ಪ್ರಮಾಣವು ಇತರ ಎಲ್ಲ ನಗ್ನೀಕರಣ ಕರ್ತೃಗಳಿಗಿಂತ ಅಗಾಧ ಪ್ರಮಾಣದಲ್ಲಿರುವುದು. ಒಂದು ಅಂದಾಜಿನ ಪ್ರಕಾರ ಭೂ ಮೇಲ್ಮೈನ ಒಂದು ಚ.ಕಿಮೀ. ವಿಸ್ತೀರ್ಣದ ಪ್ರದೇಶದಿಂದ ಸು.250ಟನ್ ಘನವಸ್ತುಗಳು ತೇಲಿಸಿದಂತೆ ಹಾಗೂ 50 ಟನ್ ವಸ್ತುಗಳು ದ್ರಾವಣದ ರೂಪದಲ್ಲಿ ಪ್ರತಿವರ್ಷವೂ ನದಿಗಳಿಂದ ಸಾಗಿಸಲ್ಪಡುತ್ತವೆ. ಮಿಸ್ಸಿಸ್ಸಿಪಿ ನದಿಯ ಜಲಾನಯನ ಪ್ರದೇಶವು ಅಮೇರಿಕ ಸಂಯುಕ್ತ ಸಂಸ್ಥಾನದ ಅರ್ಧದಷ್ಟು ಪ್ರದೇಶವನ್ನು ಒಳಗೊಂಡಿದ್ದು ಪ್ರತಿದಿನವೂ ಸು.2.ದ.ಲ.ಟನ್ ವಸ್ತುಗಳನ್ನು ಮೆಕ್ಸಿಕೋ ಕೊಲ್ಲಿಗೆ ಸಾಗಿಸುವುದು. ಇದೇ ರೀತಿ ಮಯನ್ಮಾರಿನ ಇರವಾಡಿ ನದಿಯ ಜಲಾಯನ ಪ್ರದೇಶದ ಎತ್ತರವು ವಸ್ತುಗಳ ಸಾಗಾಣಿಕೆಯಿಂದ 400 ವರ್ಷಗಳಲ್ಲಿ 1.6 ಮೀ ಕಡಿಮೆಯಾಗುವುದು. ಪ್ರವಾಹದ ಅವಧಿಯಲ್ಲಿ ನದಿಯ ಸಾಗಾಣಿಕೆ ಸಾಮರ್ಥ್ಯವು ಅದರ ಸರಾಸರಿಗಿಂತ 10 ಪಟ್ಟು ಅಧಿಕವಾಗಿರುವುದು. ನದಿಯ ಸಾಗಾಣಿಕೆಯ ಪ್ರಮಾಣವೂ ಕಡಿಮೆಯಿರುವುದು.




ನದಿಯ ಪಾತ್ರಗಳು

**ಸಂಚಯನ ಕಾರ್ಯ:** ನದಿಯೊಡನೆ ಸಾಗಿಸಲ್ಪಡುವ ವಸ್ತುಗಳು, ಅದರ ಸಾಗಾಣಿಕೆಯ ಸಾಮರ್ಥ್ಯವು ಕಡಿಮೆಯಾದಾಗ ಸಂಗ್ರಹಗೊಳ್ಳುವುದನ್ನೇ ಸಂಚಯನಕಾರ್ಯವೆಂದು ಕರೆಯುವರು. ನದಿಯ ವೇಗವು ಕಡಿಮೆಯಾಗುವುದು ಅಥವಾ ನದಿಯಲ್ಲಿನ ನೀರು ಕಡಿಮೆಯಾಗುವುದರಿಂದ ಅದರ ಸಾಗಾಣಿಕೆಯು ಇಳಿಮುಖವಾಗಿ ಭಾರವಸ್ತುಗಳು ಸಂಚಯನಗೊಳ್ಳುತ್ತವೆ. ಈ ಸಂಚಯನವು ನದಿಯ ಪಾತ್ರ ಹಾಗೂ ಇಕ್ಕೆಲಗಳಲ್ಲಿಯೂ ಕಂಡುಬರುವುದು. ಸಂಚಯನ ಕಾರ್ಯವು ನದಿ ಪಾತ್ರದ ವಿವಿಧ ಕಡೆಗಳಲ್ಲಿ ವಿವಿಧ ರೀತಿಯಲ್ಲಿರುವುದು. ಆರಂಭದಲ್ಲಿ ಅತಿ ಭಾರವಾದ ವಸ್ತುಗಳು ಸಂಚಯನವಾಗುತ್ತವೆ. ಅತಿ ನುಣುಪಾದ ವಸ್ತುಗಳು ನದಿಯೊಡನೆ ಅಂತ್ಯದವರೆಗೂ ಸಾಗಿಸಲ್ಪಟ್ಟು, ನದಿಯ ವೇಗವು ಅತಿ ಕಡಿಮೆಯಾಗಿರುವ ಕಡೆಗಳಲ್ಲಿ ಸಂಚಯಿತವಾಗುತ್ತವೆ.

**ಭೂಸ್ವರೂಪಗಳು:** ಸಂಚಯನ ಕಾರ್ಯದಿಂದ ಅನೇಕ ವಿಶಿಷ್ಟ ಬಗೆಯ ಭೂಸ್ವರೂಪಗಳು ನಿರ್ಮಿತವಾಗುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ – ಮೆಕ್ಕಲು ಬೀಸಣಿಗೆ ಪ್ರವಾಹ ಮೈದಾನ, ತಿರುವುಗಳು, ಶೃಂಗ ಸರೋವರ, ಸ್ವಾಭಾವಿಕ ದಡಕಟ್ಟೆ, ಛಿದ್ರಿತ ನದಿಯ ಪಾತ್ರ ಮತ್ತು ಮುಖಜಭೂಮಿ ಮುಂತಾದವುಗಳು.

**ನದಿಪಾತ್ರದ ಹಂತಗಳು ಮತ್ತು ಭೂ ಸ್ವರೂಪಗಳು:** ನದಿಯು ಅದರ ಮೂಲದಿಂದ ಮುಖದವರೆಗಿನ ಪಾತ್ರದುದ್ದಕ್ಕೂ ನಿರ್ವಹಿಸುವ ಕಾರ್ಯ, ನಿರ್ಮಾಣಗೊಳ್ಳುವ ಭೂ ಸ್ವರೂಪಗಳು ಹಾಗೂ ಅವುಗಳು ನಿರ್ಮಾಣ ಹೊಂದುವ ಪ್ರಕ್ರಿಯೆಗಳು ವಿವಿಧ ರೀತಿಯಲ್ಲಿರುತ್ತವೆ. ನದಿಯ ಪಾತ್ರದ ಆಕಾರ, ವಿಸ್ತಾರ ಹಾಗೂ ಆಳ ಮೊದಲಾದ ಗುಣ ಲಕ್ಷಣಗಳು ಅದರ ಪಾತ್ರದ ಶಿಲಾ ರಚನೆ ಹಾಗೂ ಕಾರ್ಯಗತಿಯನ್ನು ಅವಲಂಬಿಸಿರುವುದು. ಸವೆತ ಸಾಗಾಣಿಕೆ ಹಾಗೂ ಸಂಚಯನ ಕಾರ್ಯಗಳು ಅದರ ಪಾತ್ರದುದ್ದಕ್ಕೂ ಪರಸ್ಪರ ಪೂರಕವಾಗಿ ನಿರ್ವಹಿಸಲ್ಪಟ್ಟು ನದಿಯ ಪಾತ್ರವು ಬೆಳವಣಿಗೆಯನ್ನು ಹೊಂದುವುದು. ಈ ಕಾರ್ಯಗಳು ಅದರ ವಿವಿಧ ಕಡೆಗಳಲ್ಲಿ ವಿವಿಧ ರೀತಿಯಲ್ಲಿರುವುವು. ಇದರ ಆಧಾರದ ಮೇಲೆ ನದಿಯ ಪಾತ್ರವನ್ನು ಮೂರು ಹಂತಗಳಾಗಿ ವಿಂಗಡಿಸಬಹುದು.

**1. ಮೇಲ್ಕಣಿವೆ ಪಾತ್ರ ಅಥವಾ ಬಾಲ್ಯಾವಸ್ಥೆ:** ನದಿಗಳು ಸಾಮಾನ್ಯವಾಗಿ ಎತ್ತರವಾದ ಪ್ರದೇಶಗಳಲ್ಲಿ ಉಗಮ ಹೊಂದುತ್ತವೆ. ಹೀಗಾಗಿ ಅವುಗಳ ಮೇಲ್ಕಣಿವೆಯ ಪಾತ್ರವು ಪರ್ವತಗಳು ಅಥವಾ ಉನ್ನತ ಪ್ರದೇಶದಲ್ಲಿರುವುದು. ಇಳಿಜಾರು ಕಡಿದಾಗಿರುವುದರಿಂದ ನದಿಯು ವೇಗವಾಗಿ ಹರಿಯುವುದು ಹಾಗೂ ಅದರ ಸವೆತದ ಸಾಮರ್ಥ್ಯವು ಅತ್ಯಧಿಕವಾಗಿರುವುದು. ಈ ಹಂತವನ್ನು ನದಿಯ ಬಾಲ್ಯಾವಸ್ಥೆಯೆಂದೂ ಪರ್ವತಗಳಲ್ಲಿ ಈ ಹಂತ ವಿಸ್ತರಿಸಿರುವುದರಿಂದ ಇದನ್ನು ಪರ್ವತ ಕಣಿವೆ ಪಾತ್ರವೆಂದೂ ಕರೆಯುವರು. ಈ ಹಂತದಲ್ಲಿ ನದಿಯ ನೀರಿನ ಪ್ರಮಾಣ ಕಡಿಮೆ. ಇದರಿಂದ ನದಿಯ ಪಾತ್ರವು ಆಳವಾಗಿ ಕೆಳಮುಖವಾಗಿ ಕೊರೆಯಲ್ಪಟ್ಟು, ಅದು 'V' ಆಕಾರವನ್ನು ಹೊಂದಿರುವುದು. ಇಕ್ಕೆಲಗಳ ಕೊರೆತ ಪ್ರಮಾಣವು ಅತಿ ಕಡಿಮೆ. ಇದರಿಂದ ನದಿ ಪಾತ್ರವು ಕಿರಿದಾಗಿರುವುದು. ಆಳ ಕೊರೆತ ಕಾರ್ಯವು ಈ ಹಂತದಲ್ಲಿ ಪ್ರಧಾನವಾಗಿದ್ದು ಸಡಿಲವಾದ ಶಿಲಾ ವಸ್ತುಗಳು ಕೊರೆದು ಸ್ಥಳಾಂತರಿಸಲ್ಪಡುತ್ತವೆ. ಇದರಿಂದ ಅತಿ ಗಟ್ಟಿಯಾದ, ಸವೆತವನ್ನು ನಿರೋಧಿಸುವ ಗಟ್ಟಿಯಾದ ಶಿಲೆಗಳು ಮಾತ್ರ ಉಳಿದಿದ್ದು ನದಿ ಪಾತ್ರವು ಶಿಲಾಮಯವಾಗಿರುವುದು. ಪ್ರವಾಹ ಕಾಲದಲ್ಲಿ ಮಾತ್ರ ತೊರೆ–ಝರಿಗಳಿಂದ ಹೊತ್ತುತಂದ ವಸ್ತುಗಳಿಂದಾಗಿ ನದಿಯ ನೀರು ಕೆಂಪಾಗಿರುವುದು.

**ಕಂದರ:** ಮೇಲ್ಕಣಿವೆಯ ಹಂತದಲ್ಲಿ ನದಿಯ ನೀರಿನ ಪ್ರಮಾಣ ಕಡಿಮೆ ಆದರೆ ಇಳಿಜಾರು ಅತ್ಯಂತ ಕಡಿದಾಗಿದ್ದು, ನದಿಯು ತನ್ನ ಪಾತ್ರವನ್ನು ಕಿರಿದಾಗಿ ಹಾಗೂ ಆಳವಾಗಿ ಕೊರೆಯುವುದು. ನದಿ ಕಣಿವೆಯ ಎರಡೂ ಬದಿಗಳೂ ಅತ್ಯಂತ ಕಡಿದಾಗಿದ್ದು ನದಿಯು ತನ್ನ ಪಾತ್ರವನ್ನು ಕಿರಿದಾಗಿ ಹಾಗೂ ಆಳವಾಗಿ ಕೊರೆಯುವುದು. ಉದಾ: ಸಿಂಧು ನದಿಯು ನಂಗ ಪರ್ವತದ ಬಳಿ ಹಾಗೂ ಬ್ರಹ್ಮಪುತ್ರ ನದಿಯು ನಾಮ್‌ಚೆ ಬಾರ್ವದ ಬಳಿ ದಿಹಾಂಗ್‌ನಲ್ಲಿ ಹಿಮಾಲಯ ಪರ್ವತಗಳನ್ನು ಕೊರೆದು ಕಂದರಗಳ ಮೂಲಕ ಉತ್ತರ ಭಾರತದ ಮೈದಾನವನ್ನು ಪ್ರವೇಶಿಸುತ್ತವೆ. ಕೆಲವು ವೇಳೆ ಶಿಲಾಸ್ತರ ಭಂಗ ಮತ್ತು ಶಿಲಾಬಿರುಕುಗಳ ಮೂಲಕ ನದಿಯು ಹರಿಯುವುದರಿಂದಲೂ ಕಂದರಗಳು ನಿರ್ಮಿತಗೊಳ್ಳುತ್ತವೆ. ಆಳವಾದ ಕಂದರಗಳನ್ನು ಕ್ಯಾನನ್‌ಗಳೆಂದೂ ಕರೆಯುವರು. ಅಮೆರಿಕ ಸಂಯುಕ್ತ ಸಂಸ್ಥಾನದ ಕಾಲರಾಡೊ ನದಿಯ ಗ್ರಾಂಡ್ ಕ್ಯಾನ್ಯನ್ ಮತ್ತು ಯಲ್ಲೊ ಸ್ಟೋನ್ ನದಿ ಕಂದರ. ಗ್ರಾಂಡ್ ಕ್ಯಾನ್ಯನ್ ಕಂದರ ಕೆಲವು ಕಡೆ ಸು.2 ಕಿಮೀ ಆಳವಾಗಿದೆ. ಶುಷ್ಕ ಹವಾಗುಣ ಸುಣ್ಣಕಲ್ಲಿನ ಪ್ರದೇಶದಲ್ಲಿಯೂ ಈ ರೀತಿಯ ಕಂದರಗಳು ಸಾಮಾನ್ಯವಾಗಿ ನಿರ್ಮಿತವಾಗುವುವು.

**ತ್ವರಿತ ಪ್ರವಾಹ:** ಇವುಗಳು ನದಿಯ ಪಾತ್ರದ ಕೊರೆತವು ಶಿಲಾಸ್ತರಗಳ ಕಾಠಿಣ್ಯತೆಯ ವ್ಯತ್ಯಾಸದಿಂದ ವಿವಿಧ ಸ್ಥಳಗಳಲ್ಲಿ ವಿವಿಧ ರೀತಿಯಲ್ಲಿರುವುದರಿಂದ ನಿರ್ಮಿತಗೊಳ್ಳುತ್ತವೆ. ನದಿಯ ಪಾತ್ರದಲ್ಲಿ ಒಂದಾದ ಅನಂತರ ಮತ್ತೊಂದರಂತೆ ಕಠಿಣ ಮತ್ತು ಮೃದು ಶಿಲಾಪದರಗಳನ್ನು ಊರ್ಧ್ವಮುಖವಾಗಿ ಹೊಂದಿದ್ದರೆ ಮೃದುಶಿಲೆಗಳು ಹೆಚ್ಚು ಸವೆತಕ್ಕೀಡಾಗಿರುತ್ತವೆ. ಆದರೆ ಕಠಿಣ ಶಿಲೆಗಳು ಹೆಚ್ಚು ಸವೆಯದೆ ಹಾಗೆಯೇ ಉಳಿದಿರುತ್ತವೆ. ನದಿಯ ಪಾತ್ರವು ಏರು ತಗ್ಗಿನಿಂದ ಕೂಡಿರುವುದು. ಇದರಿಂದ ನೀರು ಈ ತಗ್ಗುಗಳಲ್ಲಿ ಕೆಳಗಿಳಿದು ಮೇಲೇರುವುದು. ಹೀಗೆ ನದಿಯ ನೀರು ಏರಿಳಿಯುವುದನ್ನು ತ್ವರಿತ ಪ್ರವಾಹವೆಂದು ಕರೆಯುವರು. ತ್ವರಿತ ಪ್ರಮಾಣಗಳು ಸಾಮಾನ್ಯವಾಗಿ ಶಿಲಾ ಪಾತ್ರವನ್ನು ಒಳಗೊಂಡಿರುವ ಮೇಲ್ಕಣಿವೆಯ ಪಾತ್ರದಲ್ಲಿ ಕಂಡುಬರುತ್ತವೆ.

**ಜಲಪಾತ:** ನೀರು ಹೆಚ್ಚು ಎತ್ತರದಿಂದ ದುಮುಕುವುದನ್ನು ಸಾಮಾನ್ಯವಾಗಿ ಜಲಪಾತವೆಂದು ಕರೆಯುವರು. ನೀರಿನ ಪ್ರಮಾಣ ಮತ್ತು ಎತ್ತರವನ್ನು ಅನುಸರಿಸಿ ಇವುಗಳನ್ನು ಬೇರೆ ಬೇರೆ ಹೆಸರಿನಿಂದ ಕರೆಯುವರು. ಜಲಪಾತ ಒಂದು ಸಣ್ಣ ಧಾರೆಯಂತೆ ಇದ್ದರೆ ಅದನ್ನು ಕ್ಯಾಸ್ಕೇಡ್ ಎಂದು ಕರೆಯುವರು. ಉದಾ: ಸಿಲ್ವರ್ ಕ್ಯಾಸ್ಕೇಡ್, ಕೊಡೈಕೆನಾಲ್.

ಬದಲಾಗಿ ಜಲಪಾತದ ಎತ್ತರ ಕಡಿಮೆ ಇದ್ದರೆ ಅದನ್ನು ಬ್ಲಫ್ ಎನ್ನುವರು. ನೀರಿನ ಪ್ರಮಾಣ ಅಧಿಕವಾಗಿದ್ದು, ಎತ್ತರವೂ ಹೆಚ್ಚಾಗಿದ್ದಲ್ಲಿ ಅದನ್ನು ಜಲಪಾತ ಎನ್ನುವರು. ಜಲಪಾತದ ನೀರಿನ ಪ್ರಮಾಣ ಅತ್ಯಧಿಕವಾಗಿದ್ದಲ್ಲಿ ಅದನ್ನು ಕ್ಯಾಟರಾಕ್ಟ್ ಎಂದು ಕರೆಯುವರು.

ಪ್ರಪಂಚದಾದ್ಯಂತ ವಿವಿಧ ಬಗೆಯ ಜಲಪಾತಗಳು ನಿರ್ಮಿತವಾಗಿದ್ದು, ಇವು ಸುಂದರ ಪ್ರಾಕೃತಿಕ ದೃಶ್ಯಗಳಾಗಿವೆ. ವೆನಿಜುವೇಲ ದೇಶದ ಓರಿನೋಕೊ ನದಿಯ ಉಪನದಿ ರಯೋಚುರುನ್ 979 ಮೀ ಎತ್ತರದಿಂದ ದುಮುಕುವುದು. ಇದು ಪ್ರಪಂಚದಲ್ಲಿ ಅತಿ ಎತ್ತರವಾದ ಜಲಪಾತವಾಗಿದ್ದು 1935ರಲ್ಲಿ ಅಮೆರಿಕದ ಜೇಮ್ಸ್ ಏಂಜಲ್ ಇದನ್ನು ಶೋಧಿಸಿದ. ಈ ಹೆಸರಿನಿಂದಲೇ ಇದನ್ನು ಕರೆಯಲಾಗಿದೆ. ಲಾವೋಸ್‌ನ ಮೀಕಾಂಗ್ ನದಿಯ ಖೋನೆ ಫಾಲ್ಸ್ ಸು.10.8 ಕಿಮೀ ಉದ್ದವಾಗಿದ್ದು ಪ್ರಪಂಚದ ಅತಿ ಉದ್ದವಾದ ಜಲಪಾತವಾಗಿದೆ.

ಪ್ರಪಂಚದ ಅತಿ ಮುಖ್ಯವಾದ ಜಲಪಾತಗಳು

| ಜಲಪಾತ | ನದಿ | ರಾಷ್ಟ್ರ | ಎತ್ತರ ಮೀ |
|---|---|---|---|
| 1. ಏಂಜಲ್ ನದಿಯ ಉಪನದಿ ರಯೋಚುರುನ್ | ಓರಿನೋಕೊ | ವೆನಿಜುವೇಲ | 979 |
| 2. ಟುಗೆಲಾ | ಟುಗೆಲಾ | ದಕ್ಷಿಣ ಆಫ್ರಿಕ | 948 |
| 3. ಯೋಸೆಮೈಟ್ | ಯೋಸೆಮೈಟ್ ಯು.ಎಸ್.ಎ. | ಕ್ಯಾಲಿಫೋರ್ನಿಯ | 777 |
| 4. ಮರಡಾಲ್ಸ್ ಫೋಸ್ಸೆನ್ | | ನಾರ್ವೆ | 655 |
| 5. ಕ್ಯುಕ್ವೆನಾನ್ | ಸದರನ್ ಆಲ್ಸ್ | ವೆನಿಜುವೇಲ | 610 |
| 6. ಸೂದರ್‌ಲೆಂಡ್ ಫಾಲ್ಸ್ | | ನ್ಯೂಜಿಲೆಂಡ್ | 580 |
| 7. ಟೆಕಾಕ್ಕಾವ್ | ಕೊಲಂಬಿಯ | ಬ್ರಿಟಿಷ್ | 503 |
| 8. ಗ್ರೇಟ್‌ಫಾಲ್ಸ್ | ಮಾಚಾರುನಿ | ಗಯಾನ | |
| 9. ವಿಕ್ಟೋರಿಯ | ಜಾಂಬೆಜಿ | ಜೈರೆ | 488 |
| 10. ನಯಾಗರ | ಸೆಂಟ್‌ಲಾರೆನ್ಸ್ ಕೆನಡ | ಯು. ಎಸ್. ಎ | 51 |
| 11. ಕೈಯೆಟಿಯರ್ | ಪೊಟಾರೋ | ಗಯಾನ | 225 |
| 12. ಜೋಗ್‌ಫಾಲ್ಸ್ | ಶರಾವತಿ | ಭಾರತ | 260 |

**ಮಡುವು:** ಜಲಪಾತಗಳಲ್ಲಿ ನೀರು ಎತ್ತರದಿಂದ ದುಮುಕುವುದರಿಂದ ಸುಳಿಗಳುಂಟಾಗುತ್ತವೆ. ನದಿಯೊಡನೆ ಸಾಗುವ ಶಿಲಾವಸ್ತುಗಳು ಈ ಸುಳಿಗಳಲ್ಲಿ ವೃತ್ತಾಕಾರವಾಗಿ ಸುತ್ತುವುದರಿಂದ ಸುಳಿಗಳು ವಿಸ್ತಾರಗೊಂಡು ಆಳವಾದ ಮಡುವುಗಳು ನಿರ್ಮಿತವಾಗುತ್ತವೆ.

**ಕುಂಭಕುಳಿ:** ನದಿಯ ಪಾತ್ರ ಶಿಲೆಗಳಿಂದ ಕೂಡಿದ್ದು ಅಸಮವಾಗಿರುವ ಕಡೆಗಳಲ್ಲಿ ಇವುಗಳು ನಿರ್ಮಿತವಾಗುತ್ತವೆ. ನದಿಯ ಪಾತ್ರವು ಏರಿಳಿತವನ್ನು ಹೊಂದಿರುವ ಕಡೆಗಳಲ್ಲಿ ಸಣ್ಣ ಸುಳಿಗಳುಂಟಾಗುತ್ತವೆ. ಇಂತಹ ತಗ್ಗಿನಲ್ಲಿ ಶಿಲಾಚೂರುಗಳು ನೀರಿನೊಡನೆ ವೃತ್ತಾಕಾರದಲ್ಲಿ ಸುತ್ತುತ್ತವೆ. ಈ ಚೂರುಗಳ ಜೊತೆಗೆ ದಪ್ಪ ಶಿಲೆಗಳೂ ಕ್ರಮೇಣ ಈ ರಂಧ್ರಗಳಲ್ಲಿ ಸೇರಿ ಕುಳಿಗಳು ಮಡಿಕೆಯಂತೆ ದೊಡ್ಡವಾಗುತ್ತವೆ. ಆದುದರಿಂದ ಇವುಗಳನ್ನು ಕುಂಭಕುಳಿಗಳೆಂದು ಕರೆಯುವರು. ನದಿಯ ಪಾತ್ರ ಶಿಲಾಮಯವಾಗಿರುವ ಕಡೆಗಳಲ್ಲಿ ಹಾಗೂ ವೇಗವಾಗಿ ಹರಿಯುವ ತ್ವರಿತ ಪ್ರವಾಹಗಳ ಸ್ಥಳದಲ್ಲಿ ಕುಂಭಕುಳಿಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಕಾವೇರಿ ನದಿಯಲ್ಲಿ ಚುಂಚನಕಟ್ಟೆ ಹಾಗೂ ಹೊಗೇನಕಲ್ಲುಗಳಲ್ಲಿ ಇವುಗಳನ್ನು ಕಾಣಬಹುದು.

**ನದಿಯ ಅಪಹರಣ:** ನದಿಯ ಮೇಲ್ಕಣಿವೆಯಲ್ಲಿ ಕಂಡು ಬರುವ ಸ್ವರೂಪಗಳಲ್ಲಿ ನದಿಯ ಅಪಹರಣವೂ ಮುಖ್ಯವಾದುದು. ಹೆಚ್ಚು ನೀರನ್ನು ಒಳಗೊಂಡಿರುವ ನದಿಯು ತನ್ನ ಮೂಲವನ್ನು ಕೊರೆಯುತ್ತಾ ಹಿನ್ನಡೆಯುವುದು. ಕಾಲಕ್ರಮೇಣ ಜಲವಿಭಾಜಕದ ಇನ್ನೊಂದು ಬದಿಯಲ್ಲಿ ಮತ್ತೊಂದು ನದಿಯು ಹರಿಯುತ್ತಿದ್ದರೆ ಅದರ ನೀರನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದು. ಇದನ್ನೇ ನದಿಯ ಅಪಹರಣ ಅಥವಾ ನದಿಯ ದರೋಡೆ ಎಂದು ಕರೆಯುವರು. ಹಿಮಾಲಯದ ನದಿ ವ್ಯವಸ್ಥೆಗಳಲ್ಲಿ ಹಲವಾರು ನದಿ ಅಪಹರಣಗಳನ್ನು ಕಾಣಬಹುದು. ಪುರಾತನ ಕಾಲದಲ್ಲಿ ಯಮುನಾ ನದಿಯು ಸರಸ್ವತಿ ನದಿಯ ನೀರನ್ನು ಸೆಳೆದುಕೊಂಡಿದ್ದು ಇಂದಿಗೂ ಸರಸ್ವತಿಯ ಶುಷ್ಕ ಕಣಿವೆಯನ್ನು ಕಾಣಬಹುದು.

**ಮಧ್ಯಕಣಿವೆಯ ಪಾತ್ರ ಅಥವಾ ಯೌವನಾವಸ್ಥೆ:** ನದಿಯು ಪರ್ವತ ಅಥವಾ ಉನ್ನತ ಭಾಗವನ್ನು ಬಿಟ್ಟು ಮೈದಾನವನ್ನು ಪ್ರವೇಶಿಸಿದ ಅನಂತರ ಇದರ ಮಧ್ಯಕಣಿವೆಯ ಹಂತವು ಪ್ರಾರಂಭವಾಗಬಹುದು. ಈ ಹಂತವನ್ನು ನದಿಯ ಯೌವನಾವಸ್ಥೆ ಎಂದೂ ಕರೆಯುವರು. ಈ ಹಂತವನ್ನು ಪ್ರವೇಶಿಸುವಲ್ಲಿ ನದಿಯು ತನ್ನ ಪಾತ್ರದ ತಳವನ್ನು ಕೊರೆಯುವುದು ಸಾಕಷ್ಟು ನಿಲುಗಡೆಯಾಗಿರುತ್ತದೆ. ಹಾಗೂ ನದಿಯ ನೀರು ಪೂರ್ಣ ಭಾರವಸ್ತುವನ್ನು ಒಳಗೊಂಡಿರುವುದು. ಇಳಿಜಾರು ಬಳಿದಾಗಿದ್ದು, ನದಿಯು ಮಂದಗತಿಯಲ್ಲಿ ಗಾಂಭೀರ್ಯದಿಂದ ಪ್ರವಹಿಸುವುದು. ನದಿಯಲ್ಲಿ ನೀರಿನ ಪ್ರಮಾಣವು ಹೆಚ್ಚಾಗಿರುವುದು. ಕೆಳಮುಖ ಕೊರೆತಕ್ಕಿಂತ ಪಾರ್ಶ್ವಕೊರೆತವು ಹೆಚ್ಚಾಗಿದ್ದು ನದಿಯ ಪಾತ್ರಗಳು ವಿಸ್ತರಿಸಲ್ಪಟ್ಟಿರುತ್ತವೆ. ಇದರಿಂದ ನದಿ ಪಾತ್ರವು ಅಗಲವಾಗಿದ್ದು, ಇದರ ಆಳವು ಕಡಿಮೆಯಿರುವುದು.

ನದಿಯು ಮೇಲ್ಕಣಿವೆಯ ಹಂತದಿಂದ ಮೈದಾನವನ್ನೂ ಪ್ರವೇಶಿಸಿದಾಗ ಅದರ ವೇಗವು ಕ್ಷಿಪ್ರವಾಗಿ ಕಡಿಮೆಯಾಗುವುದು. ಇದರಿಂದ ತನ್ನ ಎಲ್ಲ ಭಾರವಸ್ತುಗಳನ್ನು ಸಾಗಿಸಲಾಗದೆ ಕೆಲವು ಭಾರವಾದ ಹಾಗೂ ಹೆಚ್ಚು ಗಾತ್ರದ ವಸ್ತುಗಳು ಸಂಚಯಿಸಲ್ಪಡುತ್ತವೆ. ಈ ಹಂತದಲ್ಲಿ ನಿರ್ಮಾಣವಾಗುವ ಮುಖ್ಯ ಭೂಸ್ವರೂಪಗಳೆಂದರೆ ಮೆಕ್ಕಲು ಬೀಸಣಿಗೆ, ಅಂತರ್ಗತ ಚಾಚುಗಳು, ನದಿ ಕಣಿವೆಯ ಕಡಿದಾದ ಇಳಿಜಾರು.

**ಮೆಕ್ಕಲು ಬೀಸಣಿಗೆ ಮತ್ತು ಪರ್ವತ ಪಾದ ಮೈದಾನ:** ಉನ್ನತ ಭಾಗದಲ್ಲಿ ಉಗಮ ಹೊಂದುವ ನದಿಯ ಮೇಲ್ಕಣಿವೆಯ ಹಂತದಲ್ಲಿ ವೇಗವಾಗಿ ಹರಿದು ಮೈದಾನವನ್ನೂ ಪ್ರವೇಶಿಸುವುದು. ಮೈದಾನವು ಬಳಿದಾಗಿರುವುದರಿಂದ ಅದನ್ನು ಪ್ರವೇಶಿಸಿದ ತಕ್ಷಣ ನದಿಯ ವೇಗವು ಕಡಿಮೆಯಾಗುವುದು. ಇದರಿಂದ ಹೆಚ್ಚು ಭಾರವಾಗಿರುವ ವಸ್ತುಗಳನ್ನು ಸಾಗಿಸಲಾರದು. ಮರಳು ನುರುಜುಕಲ್ಲು, ಕಲ್ಲಿನ ಚೂರು ಮುಂತಾದವುಗಳನ್ನು ಪರ್ವತಗಳ ಪಾದಗಳಲ್ಲಿ ತ್ರಿಕೋನಾಕೃತಿಯಲ್ಲಿ ಸಂಚಯಿಸುವುದು. ಇವುಗಳನ್ನೇ ಮೆಕ್ಕಲು ಬೀಸಣಿಗೆ ಎಂದು ಕರೆಯುವರು. ಪರ್ವತ ಸರಣಿಯಲ್ಲಿ ಅನೇಕ ನದಿಗಳು ಉಗಮಹೊಂದಿ, ಸಮಾನಾಂತರವಾಗಿ ಹರಿಯುತ್ತಿದ್ದಲ್ಲಿ ಪರ್ವತದ ಪಾದದುದ್ದಕ್ಕೂ ಇಂತಹ ಮೈದಾನಗಳು ನಿರ್ಮಿತವಾಗುತ್ತವೆ. ಇವುಗಳು ಪರಸ್ಪರ ಹೆಣೆದುಕೊಂಡಿದ್ದಲ್ಲಿ ಅದನ್ನು ಪರ್ವತ ಪಾದ ಮೈದಾನವೆಂದು ಕರೆಯುವರು.

**ಅಂತರ್ಗತಿತ ಬೆಟ್ಟದ ಮುಂಚಾಚುಗಳು:** ಮಧ್ಯ ಕಣಿವೆಯ ಪಾತ್ರದಲ್ಲಿ ನದಿಯ ವೇಗ ಕಡಿಮೆಯಾಗಿದ್ದು, ಅದರ ಅಡೆ ತಡೆಗಳು ಸವೆತಕ್ಕೀಡಾಗದೆ, ಅವುಗಳನ್ನು ನದಿಯು ಬಳಸಿ ಮುಂದುವರಿಯುವುದು. ಇದರಿಂದ ನದಿಯ ಪಾತ್ರ ಅಂಕು ಡೊಂಕಾಗಿರುವುದು. ಇವುಗಳ ನಡುವೆ ನದಿಯ ಬೆಟ್ಟದ ಮುಂಚಾಚುಗಳು ಕಂಡುಬರುತ್ತವೆ. ಇವು ಪರಸ್ಪರ ಒಳಚಾಚಿರುವುದರಿಂದ ಇವುಗಳನ್ನು ಅಂತರ್ಗತಿತ ಬೆಟ್ಟದ ಮುಂಚಾಚುಗಳೆಂದು ಕರೆಯುವರು.



ಅಂತರ್ಗತಿತ ಚಾಚುಳ್ಳ ನದಿ ಕಣಿವೆ

**ನದಿ ಪಾತ್ರದ ಕಡಿದಾದ ಇಳಿಜಾರು:** ನದಿಯು ಮಧ್ಯಕಣಿವೆಯ ಪಾತ್ರದಲ್ಲಿ ಬಳಸಿಕೊಂಡು ಹರಿಯುವಾಗ ಬಾಗುವ ಕಡೆ ಹೊರಬದಿಯನ್ನು ಸವೆಸುವುದು ಹಾಗೂ ಒಳ ಬದಿಯಲ್ಲಿ ಅವುಗಳನ್ನು ಸಂಚಯಿಸುವುದು ಇದರಿಂದ ಹೊರಬದಿಯು ಅತಿ ಕಡಿದಾಗಿರುವುದು.

**ಕೆಳಕಣಿವೆಯ ಪಾತ್ರ ಅಥವಾ ವೃದ್ಧಾಪ್ಯ ಅವಸ್ಥೆ:** ನದಿಯ ಕೆಳಕಣಿವೆಯ ಪಾತ್ರದಲ್ಲಿ ಭಾರವಸ್ತುಗಳ ಸಂಚಯನವೇ ಪ್ರಧಾನ ಕಾರ್ಯ. ನದಿಯು ವಿಸ್ತಾರವಾದ ಪಾತ್ರದಲ್ಲಿ ಅಪಾರ ನೀರಿನೊಡನೆ ಅತ್ಯಂತ ಮಂದಗತಿಯಲ್ಲಿ ಹರಿಯುವುದು. ಈ ಹಂತದಲ್ಲಿ ಬಹುತೇಕ ಭಾರವಸ್ತುಗಳು ಸಂಚಯಿಸಲ್ಪಟ್ಟು ವಿವಿಧ ಭೂಸ್ವರೂಪಗಳು ನಿರ್ಮಿತವಾಗುವುವು.

**ಪ್ರವಾಹ ಮೈದಾನ:** ನದಿಯು ತನ್ನ ಕಣಿವೆಯ ಪಾತ್ರದಲ್ಲಿ ಅದು ಹೊತ್ತು ತಂದ ಅಪಾರ ಭಾರವಸ್ತುಗಳನ್ನು ಇಕ್ಕೆಲಗಳಲ್ಲಿಯೂ ಸಂಚಯಿಸುವುದು. ಈ ಕಾರ್ಯದಿಂದ ನಿರ್ಮಿತವಾಗುವ ಮಟ್ಟಸವಾದ ಪ್ರದೇಶವನ್ನೇ ಪ್ರವಾಹ ಮೈದಾನವೆಂದು ಕರೆಯುವರು. ಪ್ರವಾಹದ ಕಾಲದಲ್ಲಿ ನದಿಯ ನೀರು ಕಣಿವೆಯಿಂದ ಹೊರಚಾಚಿ ಈ ಮೈದಾನದಲ್ಲಿ ವಿಸ್ತರಿಸುವುದು ಅಲ್ಲದೆ ನೀರಿನೊಡನೆ ಹೊತ್ತು ತಂದ ನುಣುಪಾದ ಮಣ್ಣು ಈ ಮೈದಾನದಲ್ಲಿ ಹರಡಿ ಫಲವತ್ತತೆಯು ಅಧಿಕಗೊಳ್ಳುವುದು.

# ನಗ್ನೀಕರಣ ಕರ್ತೃವಾಗಿ ನದಿಯ ಕಾರ್ಯ

**ತಿರುವುಗಳು:** ನದಿಯು ಮೈದಾನ ಪ್ರದೇಶದಲ್ಲಿ ಅತಿ ಹೆಚ್ಚು ಭಾರ ವಸ್ತುಗಳೊಡನೆ ಮಂದಗತಿಯಿಂದ ಪ್ರವಹಿಸುವುದು. ಅದರ ಪಾತ್ರದಲ್ಲಿ ಅತ್ಯಲ್ಪ ತಡೆಯುಂಟಾದರೂ ನದಿಯು ಅದನ್ನು ಸವೆಯಿಸದೆ ಬಳಸಿಕೊಂಡು ಮುನ್ನಡೆಯುವುದು ಕ್ರಮೇಣ ಈ ಬಾಗುವಿಕೆಯು S ಆಕಾರವನ್ನು ಪಡೆಯುವುದು. ನದಿಯ ತಿರುವು ಇದನ್ನು ಮಿಯಾಂಡರ್ ಎನ್ನುವರು. ಈ ಪದ ಟರ್ಕಿಯ ಮಿಯಂಡ್ರಾಸ್ ನದಿಯ ಹೆಸರಿನಿಂದ ರೂಢಿಗೆ ಬಂದಿದೆ. ಈ ತಿರುವುಗಳ ಹೊರ ಅಂಚು ನದಿಯಿಂದ ಕೊರೆಯಲ್ಪಡುವುದು. ಆದರೆ ಒಳತಿರುವಿನಲ್ಲಿ ನದಿಯು ಭಾರವಸ್ತುಗಳನ್ನು ಸಂಚಯಿಸುವುದು, ಇದರಿಂದ ಕ್ರಮೇಣ ತಿರುವುಗಳು ಹೆಚ್ಚು ಬಾಗುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನದ ಮಿಸಿಸಿಪಿ ನದಿಯು ಈ ರೀತಿಯ ಅಪಾರ ತಿರುವುಗಳನ್ನು ಒಳಗೊಂಡಿರುವುದು. ಇವುಗಳಿಂದಾಗಿ ನದಿಯ ಪಾತ್ರವು ನೇರವಾಗಿರದೆ ಅಂಕುಡೊಂಕಾಗಿರುವುದು.

**ಶೃಂಗ ಸರೋವರ:** ನದಿಯ ತಿರುವುಗಳು ನಿರಂತರವಾಗಿ ಬೆಳೆದು S ಆಕಾರದಲ್ಲಿರುತ್ತವೆ. ಪ್ರವಾಹದ ಕಾಲದಲ್ಲಿ ನದಿಯು ಹೆಚ್ಚು ಪ್ರಮಾಣದ ನೀರನ್ನು ಹೊಂದಿದ್ದು, ವೇಗವಾಗಿ ಹರಿಯುವುದರಿಂದ ಅದರ ಕೊರೆತದ ಸಾಮರ್ಥ್ಯವು ಹೆಚ್ಚಾಗುವುದು. ಇದರಿಂದ ತಿರುವುಗಳಲ್ಲಿ ನದಿಯು ಬಳಸಿ ಮುನ್ನಡೆಯದೆ ನೇರವಾಗಿ ಹರಿಯುವುದು. ಅಲ್ಲದೆ ಅದು ಇಕ್ಕೆಲಗಳಲ್ಲಿಯೂ ಭಾರವಸ್ತುಗಳನ್ನು ಸಂಚಯಿಸುವುದರಿಂದ ತಿರುವುಗಳು ನದಿಯ ಸಂಪರ್ಕವನ್ನು ಕಡಿದುಕೊಳ್ಳುತ್ತವೆ. ಈ ರೀತಿ ನದಿಯ ಸಂಪರ್ಕವನ್ನು ಕಳೆದುಕೊಂಡು ಅರ್ಧ ಚಂದ್ರಾಕೃತಿಯ ತಿರುವುಗಳನ್ನು ಶೃಂಗ ಸರೋವರ ಅಥವಾ ಎತ್ತಿನ ಕೊಂಬಿನಾಕಾರದ ಸರೋವರ ಎಂದು ಕರೆಯುವರು. ಕ್ರಮೇಣ ಇವು ಜೌಗು ಪ್ರದೇಶಗಳಾಗಿ ಪರಿಣಮಿಸಿ ಕಾಲಾಂತರದಲ್ಲಿ ಕಾಣೆಯಾಗುತ್ತವೆ.

**ಸ್ವಾಭಾವಿಕ ದಡಕಟ್ಟೆ:** ನದಿ ಕಣಿವೆಯ ಎರಡೂ ಬದಿಗಳಲ್ಲಿ ಭಾರವಸ್ತುಗಳು ಪ್ರವಾಹ ಮೈದಾನಕ್ಕಿಂತ ಹೆಚ್ಚು ಎತ್ತರವಾಗಿ ಗೋಡೆಯಂತೆ ಸಂಚಯಿತಗೊಂಡಿರುತ್ತವೆ. ಇವುಗಳನ್ನೇ ಸ್ವಾಭಾವಿಕ ದಡಕಟ್ಟೆಗಳೆಂದು ಕರೆಯುವರು. ಪ್ರವಾಹದ ಕಾಲದಲ್ಲಿ ಕೆಲವು ವೇಳೆ ಈ ಕಟ್ಟಡಗಳು ಮುರಿದು ನದಿಯ ನೀರು ಮೈದಾನದಲ್ಲಿ ಹರಡುವುದು. ಇದರಿಂದ ಅಪಾರ ಹಾನಿಯುಂಟಾಗುತ್ತದೆ. ಮಿಸಿಸಿಪಿ (ಅಮೆರಿಕ ಸಂಯುಕ್ತ ಸಂಸ್ಥಾನ), ಹ್ವಾಂಗ್‌ಹೋ(ಉತ್ತರ ಚೀನ) ಇಟಲಿಯ ಪೋ ನದಿಗಳಲ್ಲಿ ಈ ದಡ ಕಟ್ಟೆಗಳು ನಿರ್ಮಿತವಾಗಿವೆ.

**ಛಿದ್ರಿತ ಪಾತ್ರ:** ನದಿಯ ಕೆಳ ಪಾತ್ರದಲ್ಲಿ ಕಂಡುಬರುವ ಮುಖ್ಯ ಭೂಸ್ವರೂಪಗಳಲ್ಲಿ ಛಿದ್ರಿತಪಾತ್ರವೂ ಒಂದು. ಈ ಹಂತದಲ್ಲಿ ನದಿಯು ತನ್ನ ಭಾರ ವಸ್ತುಗಳೊಡನೆ ಅತಿ ನಿಧಾನವಾಗಿ ಹರಿಯುವುದು ಇದರಿಂದ ನದಿಯ ಪಾತ್ರದಲ್ಲಿಯೇ ಕೆಲವು ವಸ್ತುಗಳು ಸಂಚಯಿಸಲ್ಪಟ್ಟು ನದಿಯು ಅನೇಕ ಶಾಖೆಗಳಾಗಿ ಒಡೆಯುವುದು. ಈ ರೀತಿಯಲ್ಲಿ ಅಂತರ್ನದಿ ದ್ವೀಪಗಳು, ಮರಳು ದಿಬ್ಬಗಳು ನಿರ್ಮಿತವಾಗುವುವು. ನದಿಯ ಈ ಲಕ್ಷಣವನ್ನೇ ಛಿದ್ರಿತಪಾತ್ರವೆಂದು ಕರೆಯುವರು. ಭಾರತದ ಬ್ರಹ್ಮಪುತ್ರಾನದಿಯಲ್ಲಿರುವ ಮಜೂಲಿ ದ್ವೀಪ ಪ್ರಪಂಚದ ಅತಿ ದೊಡ್ಡ ಅಂತರ್ನದಿ ದ್ವೀಪವಾಗಿದೆ.

**ಮುಖಜಭೂಮಿ:** ನದಿಯು ಸಾಗರ, ಸಮುದ್ರ ಅಥವಾ ಸರೋವರಗಳೊಡನೆ ಸೇರುವ ಮುಖ ಭಾಗದಲ್ಲಿ ಭಾರವಸ್ತುಗಳನ್ನು ಅಪಾರ ಪ್ರಮಾಣದಲ್ಲಿ ಸಂಚಯಿಸಿ ಮೈದಾನವನ್ನು ನಿರ್ಮಿಸುವುದು. ಸಾಮಾನ್ಯವಾಗಿ ಈ ಮೈದಾನಗಳು ಗ್ರೀಕ್ ಅಕ್ಷರಮಾಲೆಯನ್ನು (ಡೆಲ್ಟಾ) ಹೋಲುವುದರಿಂದ ಅವುಗಳನ್ನು ಅದೇ ಹೆಸರಾದ ಡೆಲ್ಟಾ ಎಂದು ಕರೆಯುವರು.

**ಮುಖಜ ಭೂಮಿಯ ವಿಧಗಳು:** ನದಿಯ ಸಂಚಯನದಿಂದ ನಿರ್ಮಿತವಾಗುವ ಮುಖಜ ಭೂಮಿಗಳು ವಿವಿಧ ಆಕಾರವನ್ನು ಹೊಂದಿರುತ್ತವೆ. ಅವುಗಳಲ್ಲಿ ಈ ಕೆಳಗಿನ ನಾಲ್ಕು ಬಗೆಯ ಖನಿಜ ಭೂಮಿಗಳು ಅತಿಮುಖ್ಯವಾದವು.

**ತ್ರಿಕೋನಾಕೃತಿಯ ಮುಖಜ ಭೂಮಿ:** ಈ ಮಾದರಿಯ ಮುಖಜ ಭೂಮಿಗಳು ಪ್ರಪಂಚದಾದ್ಯಂತ ಕಂಡುಬರುತ್ತವೆ. ನೈಲ್ ನದಿಯ ಮುಖಜ ಭೂಮಿಯು ಇದಕ್ಕೆ ಉತ್ತಮ ನಿದರ್ಶನ. ಬಂಗಾಲಕೊಲ್ಲಿಯನ್ನು ಸೇರುವ ಬಾಂಗ್ಲಾ ಭಾರತದ ನದಿಗಳು ತ್ರಿಕೋನಾಕಾರದ ಮುಖಜ ಭೂಮಿಗಳನ್ನು ನಿರ್ಮಿಸಿವೆ. ಗಂಗಾನದಿಯ ಮುಖಜ ಭೂಮಿ ಪ್ರಪಂಚದ ಅತಿದೊಡ್ಡ ಮುಖಜ ಭೂಮಿಯಾಗಿದೆ.

**ಪಕ್ಷಿಪಾದದಾಕಾರದ ಮುಖಜಭೂಮಿ:** ಈ ರೀತಿಯ ಮುಖಜ ಭೂಮಿಗಳು ಪಕ್ಷಿಯ ಪಾದದಂತೆ ಕಂಡು ಬರುತ್ತವೆ. ಇವುಗಳು ನದಿಯ ನೀರಿನೊಡನೆ ತೇಲಿಸಲ್ಪಟ್ಟು ಸಾಗಿಸಿರುವ ನುಣುಪಾದ ಮಣ್ಣಿನಿಂದ ನಿರ್ಮಿತವಾಗಿರುತ್ತವೆ. ನದಿಯಿಂದ ಸಾಗಿಸಿ ತಂದ ಮೆಕ್ಕಲು ಅನೇಕ ಜಲ ಹಂಚಿಕೆಯ ಶಾಖೆಗಳ ಮೂಲಕ ಹಂಚಿಕೆಯಾಗುವುದು. ಮಿಸ್ಸಿಸ್ಸಿಪಿ ನದಿಯ ಮುಖಜ ಭೂಮಿ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

**ನದಿ ಅಳಿವೆ ಮುಖಜ ಭೂಮಿಗಳು:** ಕೆಲವು ನದಿಗಳ ಭಾರವಸ್ತುಗಳು ನಿಧಾನವಾಗಿ ಅಳಿವೆಗಳಲ್ಲಿ ಸಂಚಯಿತಗೊಂಡು, ಅಳಿವೆಯಾಕಾರದಲ್ಲಿಯೇ ಮುಖಜ ಭೂಮಿಗಳು ನಿರ್ಮಿತವಾಗುತ್ತವೆ. ಇವುಗಳನ್ನು ಅಳಿವೆ ಮುಖಜ ಭೂಮಿಗಳು ಎಂದು ಕರೆಯುವರು. ಇರಾಕಿನ ಯೂಫ್ರೆಟೀಸ್ ಟೈಗ್ರಿಸ್ ಮುಖಜ ಭೂಮಿ ಇದಕ್ಕೆ ಮುಖ್ಯ ಉದಾಹರಣೆಯಾಗಿದೆ.

**ಚೂಪಾದ ಮುಖಜಭೂಮಿ:** ಮುಖಜ ಭೂಮಿಯು ಚೂಪಾಗಿ ಸಮುದ್ರದ ಕಡೆಗೆ ಚಾಚಿಕೊಂಡಿದ್ದಲ್ಲಿ ಅದನ್ನು ಕಸ್ಪೇಟ್ ಮುಖಜ ಭೂಮಿಯೆಂದು ಕರೆಯುವರು. ನದಿಯು ಹೊತ್ತು ತಂದ ಭಾರವಸ್ತುಗಳು ಅಲೆಗಳಿಂದ ಇಕ್ಕೆಲಗಳಲ್ಲಿ ಸಮಾನವಾಗಿ ಹಂಚಿಕೆಯಾಗಿ ತುದಿಯು ಚೂಪಾಗುವುದು. ಈ ರೀತಿಯು ಮುಖಜ ಭೂಮಿಯ ನಿರ್ಮಾಣಕ್ಕೆ ನದಿಗಳು ಮುಖಜ ಭೂಮಿಯಲ್ಲಿ ಛಿದ್ರಿತಗೊಳ್ಳದೆ, ನದಿಯ ನೀರು ಒಂದೇ ಪಾತ್ರದಲ್ಲಿ ಸಮುದ್ರವನ್ನು ಸೇರುವಂತಿರಬೇಕು ಹಾಗೂ ತೀರವು ಅಂಕುಡೊಂಕಾಗಿರದೆ ನೇರವಾಗಿರಬೇಕು. ಇಟಲಿಯ ಟೈಬರ್ ನದಿ ಮುಖಜ ಭೂಮಿ ಇದಕ್ಕೆ ಉದಾಹರಣೆಯಾಗಿದೆ.

**ಅಳಿವೆಗಳು:** ಕೆಲವು ನದಿಗಳ ಭಾರವಸ್ತುಗಳು ಸಮುದ್ರದ ಅಲೆಗಳಿಂದ ಆಳದ ಪ್ರದೇಶಕ್ಕೆ ಸಾಗಿಸಲ್ಪಡುತ್ತವೆ. ಅಲ್ಲದೆ ನದಿಗಳು ವೇಗವಾಗಿ ಹರಿದು ಸಮುದ್ರವನ್ನು ಸೇರುತ್ತವೆ. ಇದರಿಂದ ಈ ನದಿಗಳು ಮುಖಜ ಭೂಮಿಗೆ ಬದಲಾಗಿ ಭೂಭಾಗಗಳೊಡನೆ ಚಾಚಿಗೊಂಡಿರುವ ಆಳ–ನೀಳವಾದ ಅಳಿವೆಗಳನ್ನು ಹೊಂದಿರುತ್ತವೆ. ಇವು ಸ್ವಾಭಾವಿಕ ಬಂದರುಗಳಿಗೆ ಉತ್ತಮ ನೆಲೆಗಳು. ಈ ರೀತಿಯಲ್ಲಿ ಭಾರತದಲ್ಲಿ ಪಶ್ಚಿಮಕ್ಕೆ ಹರಿಯುವ ಪ್ರಸ್ಥಭೂಮಿಯ ನದಿ ಅಳಿವೆಗಳು ಹಲವಾರು ನೈಸರ್ಗಿಕ ಬಂದರುಗಳಿಂದ ಕೂಡಿವೆ. ಕೆಲವು ನದಿಗಳು ತೀರದಲ್ಲಿ ಭಾರವಸ್ತುಗಳನ್ನು ಸಂಚಯಿಸಿ ಮರಳು ದಿಬ್ಬಗಳನ್ನು ನಿರ್ಮಿಸುವುವು. ಇದರಿಂದ ಹಡಗುಗಳ ಸಂಚಾರಕ್ಕೆ ತಡೆಯುಂಟುಮಾಡುತ್ತವೆ. ಇದರಿಂದ ಪೂರ್ವ ಕರಾವಳಿ ಮುಖಜ ಭೂಮಿಗಳ ನಿರ್ಮಾಣವನ್ನು ಹೊಂದಿದ್ದು, ಇದರಲ್ಲಿ ಕೃತಕ ಬಂದರುಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಡೇವಿಸ್ ಪ್ರತಿಪಾದಿಸಿದ ಭೂಸವೆತ ಚಕ್ರ ಮೂಲತಃ ನದಿಯಕಾರ್ಯಗಳನ್ನೇ ಆಧರಿಸಿದೆ. ಯಾವುದಾದರೊಂದು ಪ್ರದೇಶವು ಆಂತರಿಕ ಶಕ್ತಿಗಳಿಂದ ಮೇಲೆತ್ತಲ್ಪಟ್ಟು ಹೊಸದಾಗಿ ನಿರ್ಮಿತಗೊಂಡಾಗ ಆರಂಭದಲ್ಲಿ ಆ ಪ್ರದೇಶವು ಎತ್ತರದಾಗಿರುವುದೇ ಹೊರತು ಯಾವುದೇ ಬಗೆಯ ಭೂಸ್ವರೂಪಗಳು ಹಾಗೂ ನದಿ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ. ಅನಂತರ ಉಗಮಿಸುವ ನದಿಗಳು ಇಳಿಜಾರಿಗೆ ಅನುಗುಣವಾಗಿ ಸ್ವಾಭಾವಿಕ ವ್ಯವಸ್ಥೆಯೊಡನೆ ಅಭಿವೃದ್ಧಿ ಹೊಂದುತ್ತವೆ. ಈ ಹಂತದಲ್ಲಿ ನದಿಗಳು ಆಳವಾದ ಕಣಿವೆಗಳನ್ನು ನಿರ್ಮಿಸುತ್ತವೆ. ಅನಂತರ ನದಿಯ ಉಗಮಸ್ಥಾನವು ಹಿಂಜರಿತಗೊಂಡು ನದಿಯ ಪಾತ್ರವು ವೃದ್ಧಿಸುವುದು. ಅಲ್ಲದೆ ಜಲವಿಭಾಗ ರೇಖೆಯನ್ನು ಒಳಗೊಂಡಿರುವ ಶ್ರೇಣಿಗಳು ಕೊರೆತದಿಂದ ಅವುಗಳ ಎತ್ತರ ಕಡಿಮೆಯಾಗುವುದು. ಭೂಸ್ವರೂಪಗಳು ನಿರಂತರವಾಗಿ ಕೊರೆಯಲ್ಪಟ್ಟು ಕಾಲಾಂತರದಲ್ಲಿ ಏರು ತಗ್ಗಿನ ಪ್ರದೇಶವು ನಿರ್ಮಿತವಾಗುವುದು. ಇದೇ ಅಂತ್ಯ ಸ್ವರೂಪ ಮೈದಾನ. ಡೇವಿಸ್ ಇದನ್ನು ಪೆನಿಪ್ಲೇನ್ ಎಂದು ಕರೆದಿರುವನು. ಇದೇ ಸ್ವರೂಪದ ಅಂತಿಮ ಹಂತದ ಭೂಸ್ವರೂಪಗಳನ್ನು ವಿವರಿಸಲು ಇತರ ಭೂ ಆಕೃತಿ ಶಾಸ್ತ್ರಜ್ಞರು ಪೆಡಿಪ್ಲೇನ್ ಮೈದಾನೀಕರಣ ಎಂಬ ಪದಗಳನ್ನು ಬಳಸಿರುವರು. ಹೀಗೆ ಭೂಪ್ರದೇಶಗಳು ರೂಪಿತಗೊಂಡ ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ನದಿಯ ಸವೆತ ಕಾರ್ಯದಿಂದ ಕ್ರಮಾನುಗತವಾಗಿ ಬಾಲ್ಯ, ಯೌವನ ಹಾಗೂ ವೃದ್ಧಾಪ್ಯ ಹಂತಗಳ ಬದಲಾವಣೆಯನ್ನು ಹೊಂದಿ ವಿಶಿಷ್ಟ ಭೂಸ್ವರೂಪಗಳು ನಿರ್ಮಿತಗೊಂಡು ಅಂತಿಮವಾಗಿ ಅಂತ್ಯಸ್ವರೂಪ ಮೈದಾನವು ರೂಪಿತಗೊಳ್ಳುವುದು.

**ನದಿಯ ಕಾರ್ಯದ ಪುನರುಜ್ಜೀವನ:** ನದಿಯು ಬಾಲ್ಯ, ಯೌವನ ಹಾಗೂ ವೃದ್ಧಾಪ್ಯ ಹಂತಗಳನ್ನು ಕ್ರಮವಾಗಿ ದಾಟಿ ಅಂತ್ಯಸ್ವರೂಪ ಮೈದಾನವಾಗಲು ದೀರ್ಘ ಕಾಲಾವಧಿ ಬೇಕಾಗುವುದು. ಭೂ ಪ್ರದೇಶದಲ್ಲಿ ಇತರ ಬಗೆಯ ಬದಲಾವಣೆಗಳಿಲ್ಲದಿದ್ದಲ್ಲಿ ಈ ಕ್ರಿಯೆಯು ಕ್ರಮವಾಗಿ ಮುಂದುವರಿಯುವುದು. ಆದರೆ ಪ್ರಕೃತಿಯು ನಿರಂತರ ಬದಲಾವಣೆಗಳನ್ನೊಳಗೊಂಡಿದೆ. ಇವುಗಳಿಂದಾಗಿ ನದಿಯ ಕಾರ್ಯವು ಏರು–ಪೇರುಗಳನ್ನು ಹೊಂದುವುದು.

ನದಿಯ ಕಾರ್ಯ ಮುಂದುವರಿಯುವ ಹಂತದಲ್ಲಿ ಆಂತರಿಕ ಶಕ್ತಿಗಳಿಂದ ಆ ಪ್ರದೇಶ ಮೇಲೆತ್ತಲ್ಪಡಬಹುದು. ಇದರಿಂದ ಇಳಿಜಾರು ಹೆಚ್ಚಿ, ನದಿಯ ಸವೆತ ಕಾರ್ಯ ಅಧಿಕಗೊಂಡು, ಅದರ ಕಾರ್ಯ ಪುನಃ ಆರಂಭವಾಗುವುದು. ಇದನ್ನೇ ನದಿಯ ಪುನರುಜ್ಜೀವನ ಎಂದು ಕರೆಯುವರು. ಹೀಗೆ ಒಂದು ನದಿಯ ಕಣಿವೆಯು ಆಗಿಂದಾಗ್ಗ ಆಂತರಿಕ ಶಕ್ತಿಗಳಿಂದ ಮೇಲೆತ್ತಲ್ಪಟ್ಟರೆ ಪಾರ್ಶ್ವ ಕೊರೆತದಿಂದ ಮೆಟ್ಟಿಲುಗಳ ಆಕೃತಿಯಲ್ಲಿರುವ ಭೂಸ್ವರೂಪಗಳು ನಿರ್ಮಿತವಾಗುತ್ತವೆ. ಇವುಗಳನ್ನು ನದಿ ಸೋಪಾನ ದಂಡೆ ಎಂದು ಕರೆಯುವರು. ಹಿಮಾಲಯದಿಂದ ಉಗಮಿಸುವ ನದಿಗಳು ಮೂರು ಜೋಡಿ ಸೋಪಾನ ದಂಡೆಗಳನ್ನು ಹೊಂದಿದ್ದು, ಭೂ ಪ್ರದೇಶವು ಮೂರು ಕಾಲದಲ್ಲಿ ಮೇಲೆತ್ತಲ್ಪಟ್ಟಿರುವುದನ್ನು ಸೂಚಿಸುತ್ತವೆ. ಇವುಗಳಲ್ಲಿ ನದಿಯು ನಿರಂತರವಾಗಿ ಕಣಿವೆಯನ್ನು ಆಳಗೊಳಿಸಿರುವುದು. ಇದರಿಂದ ಇಂತಹ ಕಡೆಗಳಲ್ಲಿ ಕಣಿವೆಗಳಲ್ಲಿ ಕಣಿವೆಗಳನ್ನು ಕಾಣಬಹುದು. ಇವುಗಳಿಂದ

ನದಿಯು ಆಳವಾದ ಕಣಿವೆಗಳಲ್ಲಿ ಹರಿಯುವುದು. ಮೊದಲೇ ತಿರುವುಗಳಿಂದ ಕೂಡಿದ ನದಿಯ ಪಾತ್ರವು ಮೇಲೆತ್ತಲ್ಪಟ್ಟು, ಸವೆತ ಕಾರ್ಯವು ಪುನರುಜ್ಜೀವಿತಗೊಂಡಾಗ, ನದಿಯ ವಿಸ್ತಾರವಾದ ಪಾತ್ರದಲ್ಲಿಯೇ ಆಳವಾದ ಕಣಿವೆಗಳು ಊರ್ಧ್ವ ಮುಖ ಕೊರೆತದಿಂದ ನಿರ್ಮಿತವಾಗುವುವು. ಇವುಗಳನ್ನು ಛೇದನ ತಿರುವು ಎಂದು ಕರೆಯುವರು. ದಾಮೋದರ ನದಿಯು ರಾಜ್–ರೊಪ್ಪದ ಬಳಿ (ದಾಮೋದರ ಕಣಿವೆ) ಹಾಗೂ ನರ್ಮದಾ ನದಿಯು ಜಬ್ಬಲ್‌ಪುರದ ಬಳಿಯ ಭೇರಘಾಟ್ ಬಳಿ ಈ ರೀತಿಯ ಛೇದನ ತಿರುವುಗಳನ್ನು ಹೊಂದಿವೆ.

**ಇಳಿಜಾರು ಛೇದ ಬಿಂದು:** ನದಿಯ ಪಾತ್ರದ ಪ್ರದೇಶವು ಆಂತರಿಕ ಶಕ್ತಿಗಳಿಂದ ಮೇಲೆತ್ತಲ್ಪಡುವ ಬದಲು ಕುಸಿತಕ್ಕೀಡಾದಾಗ ಅಥವಾ ಸಮುದ್ರದ ನೀರಿನ ಮಟ್ಟವು ಕಡಿಮೆಯಾದಾಗ ನದಿಯ ಕೊರೆತದ ಅಂತಿಮ ಮಟ್ಟ–ಆಧಾರ ಮಟ್ಟ ಕೆಳಗಿಳಿಯುವುದು. ಇದರಿಂದಲೂ ನದಿಯ ಕಾರ್ಯವು ಪುನರಾರಂಭಿತವಾಗುವುದು. ಇದರಿಂದ ಹಳೆಯ ಮೆಕ್ಕಲು ಮೈದಾನ ಹಾಗೂ ಹೊಸ ಮೆಕ್ಕಲು ಮೈದಾನಗಳ ನಡುವೆ ಕಡಿದಾದ ಇಳಿಜಾರು ಕಂಡುಬರುವುದು. ಇದನ್ನು ಇಳಿಜಾರು ಛೇದ ಬಿಂದು ಎಂದು ಕರೆಯುವರು. ಇಂತಹ ಸ್ಥಳಗಳಲ್ಲಿ ಕೆಲವು ವೇಳೆ ನದಿಗಳು ಜಲಪಾತವನ್ನು ಹೊಂದಿರುತ್ತವೆ. ಇವುಗಳನ್ನು ಛೇದನ ಬಿಂದು ಜಲಪಾತಗಳೆಂದು ಕರೆಯುವರು. ಸುವರ್ಣರೇಖಾ ನದಿಯ ರಾಂಚಿ ನದಿಯ ಜಬ್ಬಲ್‌ಪುರದ ಬಳಿಯಿರುವ ಧುವಂಧರ್ ಜಲಪಾತಗಳು ಈ ಪ್ರಕಾರದ ಜಲಪಾತಗಳಿಗೆ ಉತ್ತಮ ಉದಾಹರಣೆಗಳು.

ಹೀಗೆ ನದಿಯ ಕಾರ್ಯಗಳು ಕ್ರಮಾನುಗತವಾಗಿ ಮುಂದುವರಿಯುವುದರ ಜೊತೆಗೆ ಆಂತರಿಕ ಶಕ್ತಿಗಳಿಂದ ಭೂಸವೆತ ಚಕ್ರ ಪುನರಾವರ್ತನೆಯಾಗುವುದು. ಕೆಲವು ವೇಳೆ ಒಂದೇ ಪ್ರದೇಶದಲ್ಲಿ ಹಲವಾರು ಭೂಸವೆತ ಆವರ್ತನದ ಸ್ವರೂಪಗಳು ಕಂಡುಬರುತ್ತವೆ. ಆಂತರಿಕ ಶಕ್ತಿಗಳಿಂದ ಆ ಪ್ರದೇಶಗಳ ಎತ್ತರವು ಆಗಿಂದಾಗ್ಗೆ ಬದಲಾವಣೆ ಹೊಂದಿರುವುದೇ ಇದಕ್ಕೆ ಕಾರಣ. ಇಂತಹ ಪ್ರದೇಶಗಳ ಭೂಸ್ವರೂಪಗಳನ್ನು ಬಹು ಆವರ್ತನ ಭೂಸ್ವರೂಪಗಳೆಂದು ಕರೆಯುವರು. (ಪಿ.ಎಂ.)

**ನಗ್ನೀಕರಣದ ಕರ್ತೃವಾಗಿ ಪವನ ಕಾರ್ಯ:** ಶುಷ್ಕವಲಯ ಮತ್ತು ಅರೆ ಶುಷ್ಕ ವಲಯಗಳಲ್ಲಿ, ಅಂದರೆ ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯಗಳಲ್ಲಿರುವ ಮರುಭೂಮಿಗಳಲ್ಲಿ ಗಾಳಿ ಪ್ರಧಾನ ನಗ್ನೀಕರಣ ಕರ್ತೃವಾಗಿದೆ. ಅತಿ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುವ ಭೂ ಪ್ರದೇಶವನ್ನೇ ಮರುಭೂಮಿ ಅಥವಾ ವಿಶಾಲವಾದ ಶುಷ್ಕ ಬರಡು ಮರಳು ಪ್ರದೇಶವನ್ನೇ ಮರುಭೂಮಿ ಎಂದು ಕರೆಯುವರು.

ಮರುಭೂಮಿ ಪ್ರದೇಶಗಳಲ್ಲಿ ಭೂ ಇತಿಹಾಸದಿಂದಲೂ ಗಾಳಿಯ ಚಲನೆ ಅವಿರತವಾಗಿ ನಡೆಯುತ್ತಿದ್ದು, ಆ ಪ್ರದೇಶಗಳು ಮರಳು ಸಾಗರವಾಗಿ ಪರಿಣಮಿಸಿವೆ. ಇತರ ನೈಸರ್ಗಿಕ ಕರ್ತೃಗಳಂತೆ ಗಾಳಿ ಸಹ ಮರುಭೂಮಿಯ ಮತ್ತು ಅರೆ ಮರುಭೂಮಿ ಪ್ರದೇಶಗಳಲ್ಲಿ ಸವೆತ, ಸಾಗಾಣಿಕ ಮತ್ತು ಸಂಚಯನಗಳಿಗೆ ಕಾರಣವಾಗಿದೆ.ಈ ಕಾರ್ಯಗಳಿಂದ ಅನೇಕ ವಿಧವಾದ ಹಾಗೂ ವಿಶಿಷ್ಟವಾದ ಭೂ ಸ್ವರೂಪಗಳು ನಿರ್ಮಾಣವಾಗುತ್ತವೆ.

ಸವೆತ ಕಾರ್ಯ: ಮಳೆ ಮತ್ತು ಸಸ್ಯರಹಿತವಾದ ಶುಷ್ಕ ಮತ್ತು ಅರೆ ಶುಷ್ಕ ಪ್ರದೇಶಗಳಲ್ಲಿ ಯಾವುದೇ ಅಡಚಣೆಯಿಲ್ಲದೆ ಗಾಳಿ ನಿರಂತರವಾಗಿ ಅತಿ ರಭಸದಿಂದ ಬೀಸುತ್ತದೆ. ಇದರಿಂದ ಮರುಭೂಮಿಯ ಮೇಲ್ಮೈ ವಿವಿಧ ರೀತಿಯಲ್ಲಿ ಸವೆತಕ್ಕೊಳಗಾಗುತ್ತದೆ.

1. ಅಪವಹನ: ಯಾವುದೇ ಅಡಚಣೆಯಿಲ್ಲದೇ ಗಾಳಿ ಮರುಭೂಮಿಯ ಮೇಲೆ ಬೀಸುವಾಗ ಧೂಳು, ಮರಳು, ಮಣ್ಣಿನ ಕಣಗಳು, ಶಿಲಾಚೂರು ಮುಂತಾದ ಹಗುರವೂ, ಸೂಕ್ಷ್ಮವೂ ಆದ ಸಡಿಲ ವಸ್ತುಗಳನ್ನು ಮೇಲಕ್ಕೆ ಹಾರಿಸಿಕೊಂಡು ಹೋಗುವುದು. ಇದನ್ನು ಗಾಳಿಯ ಅಪವಹನ ವಾಯುಹರಣವೆಂದು ಕರೆಯುವರು. ಅಪವಹನ ಸವೆತ ಕಾರ್ಯ ಯಾವುದೇ ಪ್ರದೇಶದ ಒಣಗಿದ ಶುಷ್ಕ ಬರಡು ಭೂ ಮೇಲ್ಮೈಯಲ್ಲೂ ಆಗುತ್ತದೆ. ಆದರೆ ಮರುಭೂಮಿಯ ಮತ್ತು ಅರೆ ಮರುಭೂಮಿಯಲ್ಲಿ ಅದು ಪ್ರಧಾನವಾಗಿರುತ್ತದೆ. ಅಪವಹನಕ್ಕೊಳಗಾಗುವ ವಸ್ತುಗಳು ವಿವಿಧಾಕೃತಿ ಮತ್ತು ಗಾತ್ರವನ್ನು ಹೊಂದಿರುತ್ತವೆ. ಹಗುರವಾದ ವಸ್ತುಗಳು ತಮ್ಮ ಮೂಲಸ್ಥಾನದಿಂದ ಅನೇಕ ಕಿಲೋಮೀಟರ್‌ಗಳಷ್ಟು ದೂರದವರೆಗೆ ಅಂತರಿಕ್ಷದಲ್ಲಿ ಒಯ್ಯಲ್ಪಡುತ್ತವೆ. ಭಾರವುಳ್ಳವು ಭೂ ಮೇಲ್ಮೈಗೆ ಹೊಂದಿಕೊಂಡಂತೆ ಉರುಳುತ್ತಾ ಸಾಗುತ್ತವೆ.

ಅಪವಹನ ಕಾರ್ಯ ಗಾಳಿ ಬೀಸುವ ವೇಗ, ಬೀಸುವ ಅವಧಿ ಮತ್ತು ವಸ್ತುಗಳ ಗಾತ್ರವನ್ನವಲಂಭಿಸಿರುತ್ತದೆ. ಗಾಳಿಯ ವೇಗ ಹೆಚ್ಚಾಗಿದ್ದರೆ ಹೆಚ್ಚು ವಸ್ತುಗಳನ್ನು ಅಪವಹನಗೊಳಿಸುವುದು. ಇದರಿಂದ ಆ ಭಾಗದಲ್ಲಿ ಆಳವಿಲ್ಲದ ತಗ್ಗುಗಳುಂಟಾಗುತ್ತವೆ. ಇವುಗಳನ್ನು ದೂಳೀ ಭೋಗಣಿ ಅಥವಾ ಅಪವಹನ ಕುಳಿ ಎಂದು ಕರೆಯುವರು. ಕ್ವಟಾರ, ಅ.ಸಂ. ಸಂಸ್ಥಾನದ ಕಾನ್ಸಾಸ್, ಕಲಹರಿ ಮತ್ತು ಆಸ್ಟ್ರೇಲಿಯ ಮರುಭೂಮಿಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಸಹರ ಮರುಭೂಮಿಯ ಕ್ವಟಾರ್ ಬೆಗುಣಿ ಅತಿ ಪ್ರಮುಖವಾದುದು. ಅದು ಸಮುದ್ರಮಟ್ಟದಿಂದ ಸು. 140 ಮೀ ತಗ್ಗಿನಲ್ಲಿದೆ. ಇಂತಹ ಬೋಗುಣಿಗಳಲ್ಲಿ ಸುತ್ತಲಿನ ಒತ್ತಡಕ್ಕೊಳಪಟ್ಟು ಗಾಳಿ ಸುಳಿಯಂತೆ ಸುತ್ತುತ್ತದೆ. ಇಂತಹ ದೂಳು ಮಿಶ್ರಿತ ಸುಳಿಗಾಳಿಯನ್ನು ದೂಳೀ ಸುಳಿ ಎನ್ನುವರು. ಸುಳಿಗಾಳಿ ಅಲ್ಪಾವಧಿಯವರೆಗಿದ್ದು ದೂಳನ್ನು ಬಡಿದೆಬ್ಬಿಸಿ, ಸ್ತಂಭಾಕೃತಿಯಲ್ಲಿ ರಭಸದಿಂದ ಚಲಿಸುವುದು. ಇಂತಹವು ವಿಶೇಷವಾಗಿ ಸಹರ, ಕಲಹರಿ ಮತ್ತು ಆಸ್ಟ್ರೇಲಿಯದ ಪಶ್ಚಿಮ ವಲಯಗಳಲ್ಲಿ ಕಂಡುಬರುತ್ತವೆ. ದೂಳೀ ಸುಳಿಗಳು ಸುತ್ತುತ್ತಾ ದೂಳೀ ಬೋಗುಣಿಗಳನ್ನು ಸವೆತದಿಂದ ವಿಸ್ತಾರಗೊಳಿಸುತ್ತವೆ ಹಾಗೂ ಆಳಗೊಳಿಸುತ್ತವೆ. ಹೀಗಾಗಿ ಬೋಗುಣಿಗಳು ಕಿಮೀ ಗಳಷ್ಟು ಅಗಲವಾಗಿ ಮತ್ತು 25 ರಿಂದ 150 ಸೆಂಮೀ ಆಳವಾಗಿರುತ್ತವೆ.

ಕೆಲವು ವೇಳೆ ಮರುಭೂಮಿಯಲ್ಲಿ ಉಂಟಾಗುವ ಚಂಡಮಾರುತಗಳು ಅತ್ಯಧಿಕ ಪ್ರಮಾಣದ ಧೂಳಿನ ಕಣಗಳನ್ನು ಸಾಕಷ್ಟು ಎತ್ತರದವರೆಗೂ ಕೊಂಡೊಯ್ಯುತ್ತವೆ. ಇವುಗಳನ್ನು ದೂಳಿ ಚಂಡಮಾರುತಗಳೆಂದು ಕರೆಯುವರು. ಅಪರಿಮಿತ ದೂಳಿನ ಕಣಗಳಿಂದ ಕೂಡಿದ ಈ ಚಂಡಮಾರುತಗಳು ಆಕಾಶದಲ್ಲಿ ಕಪ್ಪು ಕಾರ್ಮೋಡಗಳನ್ನುಂಟು ಮಾಡುವುದರಿಂದ ಅಲ್ಲಿಯ ದೃಶ್ಯಗಳೆಲ್ಲಾ ಅಗೋಚರವಾಗುತ್ತವೆ. ಕೆಲವು ವೇಳೆ ಇವು 3000 ಮೀಟರ್ ಎತ್ತರದವರೆಗೆ ಸಾವಿರಾರು ಟನ್ನುಗಳಷ್ಟು ದೂಳಿನ ಕಣಗಳನ್ನು ಒಯ್ಯುತ್ತವೆ. ಈ ರೀತಿಯ ಚಂಡಮಾರುತಗಳು ಆಗಾಗ್ಗೆ ಭಾರತದ ಥಾರ್ ಮರುಭೂಮಿಯಲ್ಲಿಯೂ ಸಂಭವಿಸುತ್ತವೆ.

2. ಉಜ್ಜುವಿಕೆ: ಗಾಳಿ ವೇಗವಾಗಿ ಬೀಸುವಾಗ ತನ್ನೊಡನೆ ಒಯ್ಯುವ ವಿವಿಧ ಶಿಲಾಚೂರು ಮತ್ತು ಮರಳು ಆಯುಧದಂತೆ ವರ್ತಿಸಿ ಮರುಭೂಮಿಯ ಮೇಲ್ಮೈಯನ್ನು ಉಜ್ಜಿ ಸವೆಸುತ್ತವೆ. ಈ ಕಾರ್ಯದ ಪರಿಣಾಮವಾಗಿ ಮರುಭೂಮಿಯ ಶಿಲಾ ಮೇಲ್ಮೈಯು ಸವೆದು ನುಣುಪಾಗುತ್ತದೆ ಅಥವಾ ಗೀಚುಗಳುಂಟಾಗುತ್ತವೆ. ಗಾಳಿ ಉಜ್ಜುವಿಕೆ ಕಾರ್ಯ ಮರುಭೂಮಿಯ ಶಿಲೆಗಳ ಪಾದ ಭಾಗಗಳಲ್ಲಿ ತೀವ್ರವಾಗಿರುತ್ತದೆ. ಏಕೆಂದರೆ, ಭೂಮೇಲ್ಮೈಗೆ ಹೊಂದಿಕೊಂಡಂತೆ ಗಾಳಿ ಅಪಾರ ಶಿಲಾವಸ್ತುಗಳನ್ನು ಸಾಗಿಸುವುದು. ಅವು ಆಯುಧಗಳಂತೆ ವರ್ತಿಸುತ್ತವೆ. ಈ ಕಾರಣಕ್ಕಾಗಿ ಮರುಭೂಮಿ ಪ್ರದೇಶದಲ್ಲಿ ಹಾಕಿರುವ ಟೆಲಿಫೋನ್ ಕಂಬಗಳ ತಳಭಾಗದಲ್ಲಿ 4 ರಿಂದ 8 ಸೆಂಮೀ ಎತ್ತರದವರೆಗೆ ಗಟ್ಟಿ ಲೋಹದ ರಕ್ಷಕವನ್ನು ಅಳವಡಿಸಲಾಗಿರುತ್ತದೆ. ಗಾಳಿಯ ಉಜ್ಜುವಿಕೆ ಕ್ರಿಯೆಯಿಂದ ಅನೇಕ ಭೂಸ್ವರೂಪಗಳುಂಟಾಗುತ್ತವೆ.

3. ಘರ್ಷಣೆ: ಗಾಳಿ ತನ್ನೊಡನೆ ಕೊಂಡೊಯ್ಯುವ ವಿವಿಧ ಶಿಲಾಚೂರುಗಳು ಮತ್ತು ಮರಳಿನ ಕಣಗಳು ಪರಸ್ಪರ ತಾಕಲಾಡಿ ಒಡೆದು ಪುಡಿಯಾಗುವುದರ ಮೂಲಕ ಸವೆಯುತ್ತವೆ. ಗಾಳಿಯ ಈ ಕಾರ್ಯವನ್ನು ಘರ್ಷಣೆ ಕಾರ್ಯವೆಂದು ಕರೆಯುವರು. ಶಿಲಾಚೂರುಗಳು ತಮ್ಮ ತಮ್ಮಲ್ಲೇ ಸಂಘರ್ಷಿಸುವುದಲ್ಲದೆ ತಾವು ಸಾಗುವ ಮಾರ್ಗದಲ್ಲಿ ಅಡ್ಡ ಬರುವ ಶಿಲೆಗಳೊಡನೆಯೂ ಸಂಘರ್ಷಿಸುತ್ತವೆ. ಪರಿಣಾಮವಾಗಿ ಶಿಲಾಚೂರು ಮತ್ತು ಮರಳು ಕಣಗಳು ಸವೆದು ದುಂಡಗೆ ಚಿಕ್ಕ ಮಣಿಗಳು ಅಥವಾ ಧಾನ್ಯಗಳಂತೆ ರೂಪು ತಾಳುತ್ತವೆ. ಇವುಗಳಿಗೆ ಕಾಳು–ಮರಳು ಎಂದು ಹೆಸರು.

ಗಾಳಿ ಸವೆತದ ಸಂಯೋಜಿತ ಕ್ರಿಯೆಯಿಂದ ಅನೇಕ ವಿಶಿಷ್ಟ ಭೂಸ್ವರೂಪಗಳು ಉಂಟಾಗುತ್ತವೆ.

1) ಪೀಠಶಿಲೆ 2) ಸವಕಳಿ ಶಿಲೆ

ಪೀಠ ಶಿಲೆ: ಮೃದು ಮತ್ತು ಕಠಿಣ ಶಿಲಾಸ್ತರಗಳು ಒಂದರ ಮೇಲೊಂದರಂತೆ ರಚಿತವಾಗಿದ್ದು, ಅವು ಮರುಭೂಮಿಯಲ್ಲಿ ಮೇಲೆದ್ದು ಕಾಣಿಸುತ್ತವೆ. ಶಿಲಾಚೂರು ಮತ್ತು ಮರಳು ಕಣಯುತ ಗಾಳಿಯ ರಭಸಕ್ಕೊಳಗಾಗಿ ಮೃದುವಾದ ಶಿಲಾಭಾಗ ಸುಲಭವಾಗಿ ಬೇಗ ಸವೆಯುತ್ತದೆ. ಸವೆತ ಎತ್ತರ ಭಾಗಕ್ಕಿಂತ ಆಧಾರ ತಳದಲ್ಲಿಯೇ ಹೆಚ್ಚಾಗಿರುತ್ತದೆ. ಆದ್ದರಿಂದ ತಳಭಾಗ ಮೇಲ್ಪದರಕ್ಕಿಂತ ಬೇಗ ಸವೆಯುತ್ತದೆ. ಸವೆತಕ್ಕೆ ಸುಲಭವಾಗಿ ಒಳಗಾಗದ ಕಠಿಣ ಶಿಲಾಸ್ತರ ಮೃದು ಶಿಲಾಸ್ತರದ ಮೇಲೆ ಹಾಗೆ ಉಳಿಯುವುದು. ಹೀಗೆ ಮೇಲಿನ ಕಠಿಣ ಶಿಲೆಗೆ ಆಧಾರವಾಗಿರುವ ಮೃದುಸ್ತರವು ಕಂಬದ ಬೋದಿಗೆ ಅಥವಾ ಪೀಠದಂತಿರುತ್ತದೆ. ಈ ರೀತಿಯ ಸ್ವರೂಪವನ್ನು ಪೀಠಶಿಲೆ ಎಂದು ಕರೆಯುವರು. ಉತ್ತರ ಅಮೆರಿಕದ ಅರಿಜೋನದಲ್ಲಿ ಇಂಥ ಸ್ವರೂಪಗಳನ್ನು ಕಾಣಬಹುದು.

# ನಗ್ನೀಕರಣದ ಕರ್ತೃವಾಗಿ ಪವನ ಕಾರ್ಯ

ನಾಯಿಕೊಡೆಯಾಕಾರದ ಶಿಲೆ: ಮರುಭೂಮಿಯಲ್ಲಿ ಭೂಮಟ್ಟದಿಂದ ಮೇಲಕ್ಕೆ ಹೋದಂತೆಲ್ಲಾ ಮರಳು ಮತ್ತು ಶಿಲಾಚೂರುಗಳು ಕಡಿಮೆ ಪ್ರಮಾಣದಲ್ಲೂ ಹಾಗೂ ಭೂಮಟ್ಟದಲ್ಲಿ ಹೆಚ್ಚಾಗಿಯೂ ಇರುತ್ತವೆ. ಗಾಳಿ ವೇಗವಾಗಿ ಬೀಸುತ್ತಾ ನೆಲಕ್ಕೆ ಸಮೀಪವಾಗಿಯೇ ಮರಳು ಮತ್ತು ಶಿಲಾಚೂರುಗಳನ್ನು ರಭಸದಿಂದ ಒಯ್ಯುವಾಗ, ಮೇಲೆದ್ದು ನಿಂತಿರುವ ತಳಭಾಗವನ್ನು ಘರ್ಷಿಸುತ್ತವೆ. ಇದರಿಂದ ಶಿಲೆಯ ತಳಭಾಗ ಹೆಚ್ಚು ಸವೆತಕ್ಕೊಳಗಾಗುವುದರಿಂದ ಅದು ಆಕಾರದಲ್ಲಿ ನಾಯಿಕೊಡೆ ಅಥವಾ ಅಣಬೆಗಳನ್ನು ಹೋಲುವುದು, ಆದ್ದರಿಂದ ಅಂತಹ ಶಿಲೆಗಳನ್ನು ನಾಯಿಕೊಡೆ ಆಕಾರದ ಶಿಲೆಗಳೆನ್ನುವರು. ಇವುಗಳನ್ನು ಸಹರ ಮರುಭೂಮಿಯಲ್ಲಿ ಗಾರ ಎಂದು ಕರೆಯುತ್ತಾರೆ. ಇವುಗಳಿಗೆ ಪ್ರತಿಯಾಗಿ ಕೆಲವು ವೇಳೆ ಶಿಲೆಯ ಮೇಲ್ಭಾಗ ತಳಭಾಗಕ್ಕಿಂತ ಹೆಚ್ಚು ಸವೆತಕ್ಕೊಳಗಾಗುವುದು. ಶಿಲಾ ಮೇಲ್ಭಾಗ ಉಜ್ಜುವಿಕೆಯಿಂದ ಅಸಹಜ ರೂಪವನ್ನು ತಳೆಯುವುದು. ಇದನ್ನು ಸವಕಳಿ ಶಿಲೆ ಅಥವಾ ಡಿಮೊಯಿಸೆಲ್ ಎಂದು ಕರೆಯುವರು. ಇವು ಸಾಮಾನ್ಯವಾಗಿ ನಾಯಿಕೊಡೆಯಾಕಾರದ ಶಿಲೆ ಅಥವಾ ಏರಿಳಿತವುಳ್ಳ ಭಾಗಗಳಲ್ಲಿ ಸರ್ವೇಸಾಮಾನ್ಯ.



ನಾಯಿಕೊಡೆ ಆಕಾರದ ಶಿಲೆ

ಶಿಲಾ ಅಂಕಣ: ಮರಳು ಕಣಗಳುಳ್ಳ ಗಾಳಿಯ ಉಜ್ಜುವಿಕೆ ಕ್ರಿಯೆಗೊಳಗಾಗಿ ವಿಲಕ್ಷಣ ರೀತಿಯಲ್ಲಿ ಸವೆದು ರೂಪಿತವಾದ ಶಿಲೆಗಳಿಗೆ ಶಿಲಾ ಅಂಕಣವೆಂದು ಕರೆಯುವರು. ಮೃದು ಶಿಲಾಸ್ತರಗಳ ಮೇಲೆ ಕಠಿಣ ಶಿಲಾಸ್ತರಗಳು ಸಮಾನಾಂತರವಾಗಿ ರಚನೆಯಾಗಿದ್ದು, ಅವುಗಳ ಎದುರು ಭಾಗದಿಂದ ಮರಳು ಮತ್ತು ಶಿಲಾಚೂರುಗಳುಳ್ಳ ಗಾಳಿ ರಭಸವಾಗಿ ಬೀಸುವುದರಿಂದ ಉಜ್ಜುವಿಕೆಯ ಕ್ರಿಯೆಯಿಂದ ಅನೇಕ ವಿಲಕ್ಷಣವಾದ ಬಿರುಕುಗಳು ಉಂಟಾಗುತ್ತವೆ. ಈ ಶಿಲಾ ಬಿರುಕುಗಳ ಮೂಲಕ ಗಾಳಿ ಬೀಸುತ್ತಾ ಮೃದು ಶಿಲಾಸ್ತರಗಳನ್ನು ಬೇಗ ಸವೆಸುವುದರ ಮೂಲಕ ಬಿರುಕುಗಳು ಅಗಲವಾಗುತ್ತವೆ. ಕಠಿಣ ಶಿಲಾಭಾಗಗಳು ಮೃದುಶಿಲೆಗಳ ಮೇಲೆ ತಂಗುತ್ತವೆ. ಈ ಸ್ವರೂಪಗಳಿಗೆ ಶಿಲಾ ಅಂಕಣವೆನ್ನುವರು. ಇವು 3 ಮೀ ಗಳಿಂದ 30 ಮೀ ಎತ್ತರಕ್ಕೆ ರಚಿತವಾಗಿರುತ್ತವೆ. ಗಾಳಿಯ ಉಜ್ಜುವಿಕೆ ಕಾರ್ಯ ಮುಂದುವರಿದಂತೆ ಶಿಲಾ ಅಂಕಣಗಳ ಎತ್ತರ ಕುಗ್ಗಬಹುದು ಅಥವಾ ಶಿಲಾಬಿರುಕುಗಳು ಅಗಲವಾಗಲೂಬಹುದು.

ಪ್ರಾಂಗಣ ಶಿಲಾಶಿಖೆ: ಕೆಲವು ಸಂದರ್ಭಗಳಲ್ಲಿ ಮೃದು ಮತ್ತು ಕಠಿಣ ಶಿಲಾಸ್ತರಗಳು ಒಂದರ ಪಕ್ಕದಲ್ಲಿ ಮತ್ತೊಂದರಂತೆ ಲಂಬವಾಗಿ ರಚನೆಯಾಗಿದ್ದು, ನಿತ್ಯ ಮಾರುತಗಳು ಬೀಸುವ ದಿಕ್ಕಿಗೆ ಎದುರಾಗಿರುತ್ತವೆ. ಕ್ರಮೇಣ ಅವು ಗಾಳಿಯ ಉಜ್ಜುವಿಕೆ ಕ್ರಿಯೆಗೊಳಗಾಗಿ ಮೃದು ಶಿಲಾಭಾಗ ಬೇಗ ಸವೆದು ಹೋಗಿ ಕಠಿಣ ಶಿಲಾಭಾಗಗಳು ಗರಗಸದಂಥ ವಿವಿಧಾಕೃತಿಯ ಮೊನಚಾದ ಸ್ವರೂಪವನ್ನು ತಾಳುತ್ತವೆ. ಇವು ಕಡಿದಾದ ಇಳಿಜಾರಿನಿಂದ ಕೂಡಿದ್ದು ಮುಂಬಾಗಿದಂತೆ ಕಂಡುಬರುತ್ತವೆ. ಇವುಗಳಿಗೆ ಪ್ರಾಂಗಣ ಶಿಲಾಶಿಖೆ ಅಥವಾ ಯಾರ್ಡಂಗ್ ಎಂದು ಕರೆಯುವರು.

ಇನ್ನು ಕೆಲವು ಭಾಗಗಳಲ್ಲಿ ಶಿಲಾ ಅಂಕಣಗಳ ನಡುವೆ ಗಾಳಿ ದೀರ್ಘಕಾಲ ಒಂದೇ ದಿಕ್ಕಿನಲ್ಲಿ ಬೀಸುವುದರಿಂದ ಅಭಿಮುಖ ಭಾಗದ ಮೃದು ಶಿಲಾ ಭಾಗ ಹೆಚ್ಚು ಸವೆತಕ್ಕೊಳಗಾಗಿ ಯಾರ್ಡಂಗ್‌ಗಳು ಉಂಟಾಗುತ್ತವೆ. ಇವು ಅನೇಕ ಮೀ ಗಳಷ್ಟು ಎತ್ತರವಾಗಿಯೂ ಮತ್ತು ಪರಸ್ಪರ ದೂರದಲ್ಲಿದ್ದು ಪ್ರತ್ಯೇಕಗೊಂಡಿರುತ್ತವೆ. ಇಂತಹವು ಅಟಕಾಮ ಮರುಭೂಮಿ, ಚಿಲಿ ಹಾಗೂ ಮಧ್ಯ ಏಷ್ಯಾಗಳಲ್ಲಿ ಸರ್ವೆಸಾಮಾನ್ಯವಾಗಿ ಕಂಡುಬರುತ್ತವೆ. ಏಷ್ಯಾದ ಮರುಭೂಮಿಗಳಲ್ಲಿ ಇವು 8 ರಿಂದ 15 ಮೀಟರ್‌ಗಳಷ್ಟು ಎತ್ತರವಾಗಿರುತ್ತವೆ. ಅಲ್ಲೆ ಅವುಗಳಿಗೆ ಯಾರ್ಡಂಗ್ ಎಂಬ ಹೆಸರು ಬಂದದ್ದು.

ಮೆಸಾ: ಈ ಶಬ್ದ ಸ್ಪಾನಿಷ್ ಭಾಷೆಯಿಂದ ಬಂದದ್ದು. ಮೆಸಾ ಎಂದರೆ ಮೇಜು ಎಂದರ್ಥ. ಅಂದರೆ ಚಪ್ಪಟೆಯಾದ ಮೇಲ್ವಲಯ, ಕಡಿದು ಬದಿಯುಳ್ಳ, ನಿರೋಧಕ ಶಕ್ತಿಯನ್ನುಳ್ಳ, ಕಠಿಣ ಶಿಲಾಸ್ತರದಿಂದಾದ ಮರುಭೂಮಿಯಲ್ಲಿ ಸವೆಯದೇ ಉಳಿದ ಮೃದು ಶಿಲಾಸ್ತರದ ಮೇಲ್‌ಸ್ತರವಾಗಿದೆ. ಇದು ಮಟ್ಟಸ ಗುಡ್ಡವನ್ನು ಹೋಲುವುದಾದರೂ ಅದಕ್ಕಿಂತ ವಿಸ್ತಾರವಾಗಿರುತ್ತದೆ. ಉದಾ: ಅ.ಸಂ. ಸಂಸ್ಥಾನದ ಅರಿಜೋನ, ಯುಟ್ಟಾ ಮತ್ತು ಕ್ಯಾಲಿಫೋರ್ನಿಯ, ದಕ್ಷಿಣ ಆಫ್ರಿಕದ ಕೇಪ್ ಪ್ರಾಂತ್ಯ.

ಮಟ್ಟಸ ಗುಡ್ಡ: ಕಿರಿದಾಗಿಯೂ ಸಮತಟ್ಟಾದ ನೆತ್ತಿಯ ಭಾಗವುಳ್ಳ ಮರುಭೂಮಿಯಲ್ಲಿ ಎದ್ದು ಕಾಣುವ ಸ್ವರೂಪವೇ ಮಟ್ಟಸ ಗುಡ್ಡ. ಮೆಸಾಗಳಂತೆಯೇ ಇವುಗಳೂ ಸಹ ಸವೆತಕ್ಕೊಳಗಾಗದೇ ಉಳಿದ ಕಠಿಣ ಶಿಲೆಯ ಮೇಲ್‌ಸ್ತರವಾಗಿದೆ. ಇವು ವಿಸ್ತೀರ್ಣದಲ್ಲಿ ಮೆಸಾಗಳಿಗಿಂತ ಚಿಕ್ಕದಾಗಿರುತ್ತವೆ. ಕೆಲವು ವೇಳೆ ವಿಸ್ತೃತ ಮೆಸಾಗಳೆ ನಗ್ನೀಕರಣಕ್ಕೊಳಗಾಗಿ ಅವನತಿ ಹೊಂದಿ ಮಟ್ಟಸ ಗುಡ್ಡಗಳಾಗುತ್ತವೆ. ಕಡಿದಾದ ಬದಿಗಳನ್ನುಳ್ಳ ಚಪ್ಪಟೆಯಾದ ನೆತ್ತಿಯ ಬಿಡಿ ಬೆಟ್ಟದಂತೆ ಗೋಚರಿಸುತ್ತವೆ.

ಶಿಲಾದ್ವೀಪ: ಇದು ದ್ವೀಪ-ಪರ್ವತ ಎಂಬ ಅರ್ಥ ಕೊಡುವ ಜರ್ಮನ್ ಭಾಷೆಯ ಇನ್ಸಲ್ ಬರ್ಗ್ ಪದದಿಂದ ಬಂದದ್ದು. ಇವು ಮರುಭೂಮಿಯಲ್ಲಿ ಅಲ್ಲಲ್ಲಿ ಎದ್ದು ಕಾಣುವ ಅಳಿದುಳಿದ ಬೆಟ್ಟಗಳಾಗಿವೆ. ವಿಶಾಲವಾದ ಮರುಭೂಮಿಯಲ್ಲಿ ಗಾಳಿ ಬಹು ಕಾಲ ನಿರಂತರ ಬೀಸುವುದರಿಂದಾದರೂ ಸುತ್ತಲಿನ ಮೃದುವಾದ ಭಾಗವೆಲ್ಲಾ ಸವೆದು ಹೋಗಿ, ಕಠಿಣ ಬಂಡೆಗಳು ಸುತ್ತಲಿನ ಭೂ ಮಟ್ಟದಿಂದ ಒಮ್ಮೆಲೆ ಎತ್ತರವಾಗಿ ಅಲ್ಲಲ್ಲೆ ಎದ್ದು ನಿಲ್ಲುತ್ತವೆ. ಇವು ನೋಡಲು ಮರಳು ಸಾಗರ ದ್ವೀಪದ ಅಥವಾ ಬೆಟ್ಟಗಳಂತೆ ಕಂಡುಬರುವುವು. ಆದ್ದರಿಂದ ಇವುಗಳಿಗೆ ಶಿಲಾದ್ವೀಪವೆಂಬುದು ಅನ್ವರ್ಥನಾಮ. ಇವುಗಳ ಪಾರ್ಶ್ವಭಾಗ ಕಡಿದಾದ ಇಳಿಜಾರಿನಿಂದಲೂ, ದುಂಡಾದ ನೆತ್ತಿ ಭಾಗದಿಂದ ಕೂಡಿರುತ್ತವೆ. ಕೆಲವು ಭಾಗಗಳಲ್ಲಿ ಅವು ಮೊನಚಾದ ಅಗ್ರಭಾಗದಿಂದ ಕೂಡಿದ್ದು ಪಿರಮಿಡ್ಡು ಆಕೃತಿಯಲ್ಲಿಯೂ, ಮತ್ತೆ ಕೆಲವು ಭಾಗಗಳಲ್ಲಿ ನೆತ್ತಿಯು ಗುಮ್ಮಟಾಕಾರವಾಗಿಯೂ ರೂಪುಗೊಂಡಿರುತ್ತವೆ. ಇವು ಸಾಮಾನ್ಯವಾಗಿ ಗ್ರಾನೈಟ್ ಶಿಲೆಯಿಂದ ರಚಿತವಾದವು. ಈ ರೀತಿಯ ಸ್ವರೂಪಗಳು ವಿಶೇಷವಾಗಿ ನೈಜೀರಿಯ, ಪಶ್ಚಿಮ ಆಸ್ಟ್ರೇಲಿಯಾ, ಕಲಹರಿ, ಉಗಾಂಡ ಮತ್ತು ಅರೇಬಿಯ ಮರುಭೂಮಿಗಳಲ್ಲಿ ಕಂಡುಬರುತ್ತವೆ. ದಕ್ಷಿಣಆಫ್ರಿಕದ ಮರುಭೂಮಿ ಕುರಿತು ಅಧ್ಯಯನ ಮಾಡುವಾಗ ಪಾಸರೇಜ್ ಎಂಬುವನು ಇಂತಹ ಸ್ವರೂಪಗಳನ್ನು ಗುರ್ತಿಸಿ ಹೆಸರಿಸಿದ.

ಡ್ರೈಕಾಂಟರ್ಸ್: ಮರುಭೂಮಿಯಲ್ಲಿ ಗಾಳಿ ಬೀಸುವ ದಿಕ್ಕಿಗೆ ಅಡ್ಡಲಾಗಿ ಶಿಲಾಚೂರುಗಳು ಬಿದ್ದಿರುತ್ತವೆ. ಅವುಗಳ ಅಭಿಮುಖ ಭಾಗ ಮರಳು ಕಣಯುತ ಗಾಳಿ ಉಜ್ಜುವಿಕೆಯಿಂದ ಸವೆದು ಏಕಮುಖ, ತ್ರಿಕೋನಾಕೃತಿ ಅಥವಾ ಚತುಷ್ಪಲಕ ರೂಪವನ್ನು ತಳೆಯುತ್ತವೆ. ಅವುಗಳನ್ನು ಅನುಕ್ರಮವಾಗಿ ಈನ್ ಕಾಂಟರ್, ಡ್ರೈಕಾಂಟರ್ (ಜರ್ಮನ್) ಮತ್ತು ವೆಂಟಿಪ್ಯಾಕ್ಟ್‌ಗಳೆಂದು ಕರೆಯುವರು. ಗಾಳಿ ಸದಾ ಒಂದೇ ದಿಕ್ಕಿಗೆ ಬೀಸುತ್ತಿದ್ದು, ಅದಕ್ಕೆ ಎದುರಾದ ಶಿಲಾಚೂರುಗಳೂ ಸಹ ಒಂದೇ ಕಡೆ ಸವೆದು ಏಕಮುಖ ಆಕೃತಿಯನ್ನೂ ಹಾಗೂ ಗಾಳಿ ದಿಕ್ಕನ್ನು ಬದಲಾಯಿಸಿಕೊಂಡು ವಿವಿಧ ದಿಕ್ಕಿನಿಂದ ಬೀಸುವುದರಿಂದ ತ್ರಿಮುಖ ಹಾಗೂ ಚತುರ್ಮುಖಾಕೃತಿಯಲ್ಲಿ ಶಿಲಾಚೂರುಗಳು ರೂಪುಗೊಳ್ಳುವುವು. ಹೀಗಾಗಿ ಇವುಗಳಿಗೆ ಮುಮ್ಮುಖಶಿಲೆ ಎಂತಲೂ ಕರೆಯುವರು.

ಹಮಾಡ: ಶಿಲಾಮಯ ಮರುಭೂಮಿಯಲ್ಲಿ ಗಾಳಿಯ ಸಂಘರ್ಷಣೆಯಿಂದಾಗಿ ಸುತ್ತಲಿನ ಹಗುರವಾದ ಭಾಗವೆಲ್ಲಾ ಸವೆದು ಹೋಗಿ ಕಠಿಣವಾದ, ಸಮತಲ ಮೇಲ್ಮೈಯುಳ್ಳ ಶಿಲೆಗಳು ಉಳಿಯುತ್ತವೆ. ಇವು ವಿಶಾಲವಾದ ಮರುಭೂಮಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಹರಡಿದ್ದು, ಅವುಗಳ ಸಮೂಹಕ್ಕೆ ನಗ್ನ ಶಿಲಾಭೂಮಿ ಅಥವಾ ಹಮ್ಮಾಡವೆಂದು ಕರೆದಿರುವರು. ಹಮಾಡವೆಂಬ ಶಬ್ದ ಅರಬ್ಬಿ ಭಾಷೆಯಿಂದ ಬಂದದ್ದು. ಇಂತಹ ಸ್ವರೂಪಗಳು ವಿಶೇಷವಾಗಿ ಸಹರ ಮರುಭೂಮಿ, ಪಶ್ಚಿಮ ಆಸ್ಟ್ರೇಲಿಯ ಹಾಗೂ ಗೋಬಿ ಮರುಭೂಮಿಗಳಲ್ಲಿ ವಿಸ್ತೃತವಾಗಿ ಕಂಡುಬರುತ್ತವೆ.

ಮರುಭೂಮಿಯ ನೆಲಗಟ್ಟು: ಕಲ್ಲು ಬಂಡೆಗಳಿಂದ ಅಥವಾ ನೊರಜು ಗಲ್ಲುಗಳಿಂದ ರಚನೆಯಾದ ಮರುಭೂಮಿಯ ಮೇಲ್ಮೈ ಮರಳುಯುತ ಗಾಳಿ ಬೀಸುವುದರಿಂದ ಸಂಘರ್ಷಿಸಲ್ಪಡುತ್ತದೆ. ಈ ಘರ್ಷಕ ಕಾರ್ಯದಿಂದ ಬಿದ್ದಿರುವ ನೊರಜುಗಲ್ಲುಗಳ ಮೇಲ್ಮೈ ಸವೆದು ನಯವಾಗಿ ಮೆರಗನ್ನು ಹೊಂದುತ್ತವೆ. ಅವು ಪರಸ್ಪರ ಒತ್ತೊತ್ತಾಗಿ ರಚನೆಗೊಳ್ಳುವುವು. ಈ ಸ್ವರೂಪವನ್ನೆ ಮರುಭೂಮಿಯ ನೆಲಗಟ್ಟುಗಳು ಎಂದು ಕರೆಯುವರು. ಭೂಮಿಯೊಳಗಿನಿಂದ ದ್ರಾವಣ ರೂಪದಲ್ಲಿ ಹೊರಬಂದ ಕೆಲವು ಲವಣಗಳು ಅಂಟು ವಸ್ತುವಾಗಿ ಪರಿಣಮಿಸಿ ಮೆರಗು ನೊರಜುಗಲ್ಲುಗಳು ಪರಸ್ಪರ ಬಂಧಿಸಲ್ಪಡುತ್ತವೆ. ಇಂತಹ ಸ್ವರೂಪಗಳನ್ನು ಕೆಲವರು ಮೊಸಾಯಿಕ್ ಮರುಭೂಮಿ ಎಂತಲೂ ಕರೆಯುವರು.

ಗಾಳಿ ಸವೆಸಿದ ದೂಳಿನ ಕಣ, ಮರಳು ಮತ್ತು ಶಿಲಾಚೂರುಗಳನ್ನು ತನ್ನೊಡನೆಯೇ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುತ್ತದೆ. ಹೀಗೆ ಸಾಗಿಸಿದ ವಸ್ತುಗಳೇ ಗಾಳಿಯ ಭಾರವಸ್ತುಗಳು. ಸೂಕ್ಷ್ಮ ಮತ್ತು ಹಗುರವೂ ಆದ ದೂಳಿನ ಕಣಗಳಂತಹ ವಸ್ತುಗಳನ್ನು ಗಾಳಿ ಮೇಲಕ್ಕೆ ಹಾರಿಸುವುದರಿಂದ ಅವು ಗಾಳಿಯೊಡನೆಯೇ ಸೇರಿಕೊಂಡು ಬಹುದೂರದವರೆಗೆ ಸಾಗಿಸಲ್ಪಡುತ್ತವೆ. ಸೂಕ್ಷ್ಮ ದೂಳಿನ ಕಣಗಳು ಮರುಭೂಮಿಯಿಂದ

ಹೊರ ವಲಯದವರೆಗೂ ಸಾಗುವುದುಂಟು. ಕೆಲವು ವೇಳೆ ಅವು ಸಂಚಯನಗೊಳ್ಳುವುದಕ್ಕೆ ಮುಂಚೆ ಸು. 3700 ಕಿಮೀ ದೂರ ಸಾಗುವುವು ಎಂದು ಅಂದಾಜುಮಾಡಲಾಗಿದೆ. ಹೀಗೆ ಸಹರಾ ಮರುಭೂಮಿಯಿಂದ ಕೆಂಪು ದೂಳಿನ ಕಣಗಳು ಅಧಿಕ ಪ್ರಮಾಣದಲ್ಲಿ ಸಾಗುತ್ತಾ ಮೆಡಿಟರೇನಿಯನ್ ಸಮುದ್ರವನ್ನು ದಾಟಿ ಸ್ವಿಟ್ಜರ್ಲೆಂಡ್ ಹಾಗೂ ಇಟಲಿಯ ಪರ್ವತ ಪ್ರದೇಶಗಳಲ್ಲಿ ಬೀಳುವುದು. ಇದನ್ನು ರಕ್ತ ಮಳೆಯೆಂದು ಕರೆಯುವರು. ಇದೇ ರೀತಿ ಗೋಬಿ ಮರುಭೂಮಿಯಿಂದ ಅಪಾರ ದೂಳಿನ ಕಣ ಸಾಗಿ ಹ್ವಾಂಗ್ ಹೋ ನದಿ ಬಯಲಿನಲ್ಲಿ ಸಂಚಯಗೊಂಡಿದೆ.

ಭಾರವಾದ ಹಾಗೂ ಅಧಿಕ ಪ್ರಮಾಣದ ಮರಳು ಮತ್ತು ಶಿಲಾಚೂರುಗಳು ಭೂಮೇಲ್ಮೈಗೆ ಹೊಂದಿಕೊಂಡಂತೆ ನಿಧಾನವಾಗಿ ಗಾಳಿಯಿಂದ ಸಾಗಿಸಲ್ಪಡುತ್ತವೆ. ಚಂಡಮಾರುತ ಬೀಸಿದಾಗ ಅಧಿಕ ಪ್ರಮಾಣದ ಮರಳ ಕಣಗಳು ಹಾರಿ ವಾಯುಮಂಡಲದ ಕೆಳಸ್ತರದ ಕಾರ್ಮೋಡದಂತೆ ಬಹು ದೂರದವರೆಗೆ ಸಾಗಿಸಲ್ಪಡುತ್ತವೆ. ಭಾರವಾದ ಅಧಿಕ ಪ್ರಮಾಣದ ಮರಳು ರಾಶಿ ಭೂಮಟ್ಟದಿಂದ ಕೆಲವು ಸೆಂಟಿಮೀಟರ್‌ನಷ್ಟು ಎತ್ತರದಲ್ಲಿ ಸಾಗಿಸಲ್ಪಡುವುದು. ಆದರೆ ಚದರಿದಂತಿರುವ ಹಗುರವಾದ ಮರಳ ಕಣಗಳು ಅನೇಕ ಮೀಟರ್‌ಗಳ ಎತ್ತರದಲ್ಲಿ ಸಾಗಿಸಲ್ಪಡುತ್ತವೆ. ಎಗರುತ್ತಾ, ಕುಪ್ಪಳಿಸುತ್ತಾ ಬಹುದೂರದವೆಗೆ ಮರಳು ಸಾಗುತ್ತದೆ. ಈ ರೀತಿಯ ಮರಳು ಕಣಗಳ ಸಾಗಣಿಕೆ ವಿಧಾನವನ್ನು ಜಿಗಿತ ಚಲನೆ ಎಂದೂ ಮರಳು ಕಣಗಳ ಸಂಘರ್ಷಣೆಯಿಂದ ನಿಧಾನವಾದ ಭೂಮೇಲ್ಮಟ್ಟದ ಚಲನೆಯನ್ನು ಮರಳು ಮೇಲ್ ಚಲನೆ ಎನ್ನುವರು ಗಾಳಿಯ ಸಾಗಾಣಿಕೆ, ಬೀಸುವ ವೇಗ, ಚಲಿಸುವ ಮಾರ್ಗ ಹಾಗೂ ಭಾರವಸ್ತುಗಳ ಪ್ರಮಾಣವನ್ನು ಅವಲಂಬಿಸಿರುತ್ತದೆ.

ಗಾಳಿಯಿಂದ ಸವೆಸಿ, ಸಾಗಿಸಲ್ಪಡುವ ವಿವಿಧ ವಸ್ತುಗಳು, ಗಾಳಿಯ ವೇಗ ಕಡಿಮೆಯಾದಾಗ ಹಾಗೂ ಬೀಸುವ ದಿಕ್ಕಿಗೆ ಅಡ್ಡಲಾಗಿ ಯಾವುದಾದರೂ ಅಡಚಣೆಯುಂಟಾದಾಗ ಸಂಚಯಿಸಲ್ಪಟ್ಟು ಭೂಸ್ವರೂಪಗಳ ರಚನೆಯಾಗುತ್ತದೆ.

ಮರಳು ದಿಣ್ಣೆಗಳು: ಪ್ರಧಾನವಾಗಿ ಬೆಣಚುಕಲ್ಲುಗಳಿಂದ ಉತ್ಪತ್ತಿಯಾದ ಸಣ್ಣ ಸಣ್ಣ ಶಿಲಾಕಣಗಳ ಸಮೂಹವೇ ಮರಳು. ಖನಿಜ ನಿಕ್ಷೇಪಗಳ ನಯವಾದ ಕಣ ಹಾಗೂ ಇತರ ಶಿಲಾ ಕಣಗಳಿಂದಲೂ ಮರಳು ಕಣಗಳು ಉತ್ಪತ್ತಿಯಾಗುತ್ತವೆ. ಸರೋವರ ಮತ್ತು ಸಮುದ್ರಗಳ ದಂಡೆಗಳಲ್ಲಿ, ನದಿ ಮೈದಾನ, ಶುಷ್ಕ ಹಾಗೂ ಸಡಿಲ ಮರಳು ಶಿಲಾಭಾಗಗಳು–ಇವು ಮರಳಿನ ಪ್ರಮುಖ ಆಕರಗಳಾಗಿವೆ. ಮರಳು ಕಣಗಳು ಸಾಮಾನ್ಯವಾಗಿ 0.2 ಮಿಮೀ ನಿಂದ 2 ಮಿಮೀ ನಷ್ಟು ದಪ್ಪವಾಗಿರುತ್ತವೆ.

ಗಾಳಿಯ ಸಂಚಯನದಿಂದ ರಾಶಿಗೊಳ್ಳುವ ಮರಳು ಬೆಟ್ಟ ಅಥವಾ ದಿಬ್ಬಗಳನ್ನು ಮರಳು ದಿಣ್ಣೆಗಳು ಎಂದು ಕರೆಯುವರು. ಸಮತಲ ಮರುಭೂಮಿಯಲ್ಲಿ ಗಾಳಿ ಮರಳನ್ನು ಹೊಡೆದಟ್ಟಿಕೊಂಡು ಹೋಗುವ ಮಾರ್ಗದಲ್ಲಿ ಅಡಚಣೆ ಉಂಟಾದಾಗ ಚಲನೆ ವೇಗ ಕುಂದಿದಾಗ ಮರಳು ರಾಶಿಗೊಳ್ಳುವುದು. ಮರಳು ಕಣಗಳ ಪ್ರಮಾಣ, ಗಾಳಿ ಬೀಸುವ ದಿಕ್ಕು, ವೇಗ ಮರಳು ಚಲಿಸುವ ಭಾಗದ ಮೇಲ್ಮೈ, ಗಾಳಿ ಬೀಸುವ ದಿಕ್ಕಿನಲ್ಲಿರುವ ಪ್ರತಿಬಂಧಕಗಳು, ಸಸ್ಯವರ್ಗ ಹಾಗೂ ಅಂತರ್ಜಲ ಮಟ್ಟದ ಸಾಮೀಪ್ಯತೆ–ಇವು ಮರಳು ದಿಣ್ಣೆಗಳ ರಚನೆಯಲ್ಲಿ ಪಾತ್ರವಹಿಸುವ ಪ್ರಮುಖ ಅಂಶಗಳಾಗಿವೆ.

ಮರಳು ದಿಣ್ಣೆಗಳು ಸಾಕಷ್ಟು ಎತ್ತರ, ಉದ್ದ, ಅಗಲ ಹಾಗೂ ವಿವಿಧಾಕೃತಿಯಲ್ಲಿ ರಚನೆಯಾಗುತ್ತವೆ. ಇವು ಎರಡು ಮೀಟರ್‌ನಿಂದ ಐದು ಮೀಟರ್‌ಗಳವರೆಗೂ ಎತ್ತರವಾಗಿ ಬೆಳೆದು ನೂರಾರು ಕಿಮೀ ಉದ್ದವಾಗಿ ರಚನೆಯಾಗಿರುತ್ತವೆ. ಇವು ವಿವಿಧಾಕೃತಿಯಲ್ಲಿ ನಿರ್ಮಾಣವಾಗುವುದರಿಂದ ಅವುಗಳನ್ನು ಅನೇಕ ವಿಧಗಳಾಗಿ ವಿಂಗಡಿಸಬಹುದು. ಅವು ಈ ಕೆಳಕಂಡಂತಿವೆ:

1. ನೀಳ ಮರಳು ದಿಣ್ಣೆ: ಗಾಳಿ ಬೀಸುವ ದಿಕ್ಕಿಗೆ ಸಮಾನಾಂತರವಾಗಿ ಹಾಗೂ ಅನೇಕ ಕಿಮೀ ಉದ್ದವಾಗಿ ರಚಿತವಾಗಿರುತ್ತವೆ. ಇವು ಕೆಲವು ಸಂದರ್ಭಗಳಲ್ಲಿ 5 ಮೀಟರ್‌ಗಳಿಗಿಂತಲೂ ಎತ್ತರವಾಗಿರುತ್ತವೆ. ಕಡಿದಾದ ಪಾರ್ಶ್ವ ಇಳಿಜಾರಿನಿಂದಲೂ ಮತ್ತು ನೆತ್ತಿಯ ಭಾಗ ಅಸಹಜವಾಗಿ ರೂಪುಗೊಂಡಿರುತ್ತವೆ. ಇವುಗಳನ್ನು ಅರೇಬಿಯಾ ಭಾಷೆಯಲ್ಲಿ ಸೀಫ್ ಎಂದು ಕರೆಯವರು. ಸೀಫ್ ಎಂದರೆ ಎರಡು ಅಲಗುಗಳ ಖಡ್ಗವೆಂದರ್ಥ.

ಸಾಮಾನ್ಯವಾಗಿ ಮರುಭೂಮಿಯಲ್ಲಿ ಬೀಸುವ ಪ್ರಚಲಿತ ಮಾರುತಗಳು ನೀಳ ಮರಳು ದಿಣ್ಣೆಗಳ ಎರಡು ಸಮಾನಾಂತರ ಶ್ರೇಣಿಗಳ ನಡುವಿನ ತಗ್ಗು ಪಾತ್ರದಲ್ಲಿ ಬೀಸುವುದರಿಂದ ಅಲ್ಲಿಯ ಮರಳು ಕಣಗಳು ಚಲನೆ ಹೊಂದಿ, ಆ ಭಾಗ ನಯಗೊಳ್ಳುವುದು. ಇಲ್ಲಿ ಗಾಳಿ ಸುಳಿಯಾಗಿ, ಅದು ಎರಡೂ ಬದಿಗಳ ಕಡೆಗೆ ತಿರುಗಿ ಬೀಸುತ್ತಾ ದಿಬ್ಬದ ಮೇಲೇರಿದಂತೆ ವೇಗದ ಗತಿ ಕುಂದುತ್ತಾ ಮರಳನ್ನು ರಾಶಿ ಮಾಡುತ್ತದೆ. ಈ ರೀತಿಯ ನೀಳ ಮರಳು ದಿಣ್ಣೆಗಳು ದೀರ್ಘವಾಗಿ ಬೆಳೆಯುತ್ತಾ ಸಹರ, ಥಾರ್ ಮತ್ತು ಆಸ್ಟ್ರೇಲಿಯ ಮರುಭೂಮಿಗಳಲ್ಲಿ ಕಂಡುಬರುತ್ತವೆ.

2. ಅಡ್ಡಮರಳು ದಿಣ್ಣೆಗಳು: ಗಾಳಿ ಬೀಸುವ ದಿಕ್ಕಿಗೆ ಅಡ್ಡಲಾಗಿ ಸಂಚಯವಾದ ಮರಳು ರಾಶಿ. ಇಂತಹ ಮರಳು ದಿಣ್ಣೆಗಳ ಮಧ್ಯಭಾಗದಲ್ಲಿ ಮರಳಿನ ಪ್ರಮಾಣ ಅಧಿಕವಾಗಿಯೂ ಮತ್ತು ಬಾಹುಗಳಲ್ಲಿ ಕಡಿಮೆಯಾಗಿಯೂ ಇರುತ್ತದೆ. ಗಾಳಿಗೆ ಎದುರಾದ ಇವುಗಳ ಭಾಗವು ಸಾಧಾರಣ ಇಳಿಜಾರಿನಿಂದಲೂ ಮತ್ತು ವಿರುದ್ಧ ಭಾಗವು ಕಡಿದಾದ ಇಳಿಜಾರಿನಿಂದಲೂ ಕೂಡಿರುತ್ತವೆ. ಇವು ಅಸ್ಥಿರವಾದವು. ನೋಡಲು ಅಲೆಯ ರೂಪದಲ್ಲಿ ಮರುಭೂಮಿಯಲ್ಲಿ ಹಂಚಿಕೆಯಾಗಿರುತ್ತವೆ. ಅವುಗಳ ನೆತ್ತಿಯ ಭಾಗ ಗಾಳಿಯ ಸವೆತದಿಂದ ಒಂದೇ ಸಮನಾಗಿರುವುದಿಲ್ಲ. ಕ್ರಮೇಣ ಅವು ಮಾರ್ಪಾಡಾಗುತ್ತವೆ.

3. ಅರ್ಧಚಂದ್ರಾಕೃತಿಯ ಮರಳು ದಿಣ್ಣೆಗಳು: ಇವು ಅಡ್ಡ ಮರಳು ದಿಣ್ಣೆಗಳು ಮಾರ್ಪಾಡಾದ ಸ್ವರೂಪವಾಗಿವೆ. ಅಡ್ಡ ಮರಳು ದಿಣ್ಣೆಗಳ ಮಧ್ಯಭಾಗ ಅತ್ಯಧಿಕ ಪ್ರಮಾಣದ ಮರಳಿನಿಂದಲೂ ಮತ್ತು ಬಾಹುಗಳು ಕಡಿಮೆ ಮರಳಿನಿಂದಲೂ ಕೂಡಿರುತ್ತವೆ. ಪರಿಣಾಮವಾಗಿ ದಿಣ್ಣೆಯ ಮಧ್ಯಭಾಗ ನಿಧಾನವಾಗಿಯೂ ಹಾಗೂ ಬಾಹುಗಳು ವೇಗವಾಗಿಯೂ ಚಲಿಸುವುದರಿಂದ ಅರ್ಧ ವೃತ್ತಾಕಾರವಾಗಿ ರಚನೆಯಾಗುತ್ತವೆ. ಇವುಗಳಿಗೆ ಅರ್ಧ ಚಂದ್ರಾಕೃತಿಯ ಮರಳು ದಿಣ್ಣೆ (ಭಾರಖಾನ್) ಎಂದು ಹೆಸರು. ಇವು 1 ರಿಂದ 3 ಮೀ ಎತ್ತರವಾಗಿಯೂ ಹಾಗೂ 300 ಮೀ ಅಗಲವಾಗಿಯೂ ರಚಿತವಾಗಿರುತ್ತವೆ. ಇವುಗಳ ಗಾಳಿಗಭಿಮುಖವಾದ ಭಾಗ ಸಾಮಾನ್ಯ ಇಳಿಜಾರಿನಿಂದ ಕೂಡಿದ್ದು ಹೊರ ಉಬ್ಬಿರುತ್ತದೆ ಮತ್ತು ವಿರುದ್ಧ ಭಾಗ ಕಡಿದಾಗಿದ್ದು ಒಳಬಾಗಿರುತ್ತದೆ. ಈ ಭಾಗದಲ್ಲಿ ಗಾಳಿ ಸುಳಿಯಂತೆ ಸುತ್ತುವುದರಿಂದ ಒಳಬಾಗುಳ್ಳ ವರ್ತುಲ ಉಂಟಾಗುತ್ತದೆ.




ಅರ್ಧಚಂದ್ರಾಕೃತಿಯ ಮರಳುದಿಣ್ಣೆ

ಈ ಮರಳು ದಿಣ್ಣೆಗಳ ನೆತ್ತಿಯ ಭಾಗ ಪ್ರಚಲಿತ ಮಾರುತಗಳಿಂದ ಮುಂದೆ ಸರಿಯುತ್ತವೆ. ಗಾಳಿಗಭಿಮುಖ ಭಾಗದ ಮರಳು ಹೊಡೆದಟ್ಟಿಕೊಂಡು ಹೋಗಿ ಅದು ವಿರುದ್ಧ ಇಳಿಜಾರಿನಲ್ಲಿ ಸಂಚಯಗೊಳ್ಳುವುದು. ಹೀಗೆ ಈ ಮರಳು ದಿಣ್ಣೆಗಳು ಮುಂದೆ ಸರಿಯುತ್ತವೆ. ಈ ಚಲನಾಗತಿ ವರ್ಷಕ್ಕೆ 8 ರಿಂದ 15 ಮೀಟರ್‌ಗಳಾಗಿರುತ್ತವೆ. ಇವು ಒಂಟಿಯಾಗಿ ಚದುರಿದಂತೆಯೂ ಹಾಗೂ ಗುಂಪುಗಳಾಗಿಯೂ ಕಂಡುಬರುತ್ತವೆ. ಇವು ಅಸ್ಥಿರವಾದವು. ರಭಸದಿಂದ ಬೀಸುವ ಗಾಳಿಯ ಹೊಡೆತಕ್ಕೆ ಅವು ಇಬ್ಭಾಗವಾಗಲೂಬಹುದು ಅಥವಾ ಅವನತಿಗೊಳ್ಳಬಹುದು. ಇಂತಹ ದಿಣ್ಣೆಗಳು ವಿಶೇಷವಾಗಿ ತುರ್ಕಿಸ್ತಾನದಲ್ಲಿ ಕಂಡುಬರುತ್ತವೆ.

4. ಪರವಲಯ ಮರಳು ದಿಣ್ಣೆಗಳು: ಇವು ಅರ್ಧಚಂದ್ರಾಕೃತಿ ದಿಣ್ಣೆಗಳ ವಿರುದ್ಧ ಸ್ವರೂಪವಾಗಿರುತ್ತವೆ. ದಿಣ್ಣೆಯ ಎರಡು ಬದಿಯಲ್ಲಿರುವ ಹೊರ ಕೊಂಬುಗಳು ಗಾಳಿ ಬೀಸುವ ದಿಕ್ಕಿಗೆ ಎದುರಾಗಿರುತ್ತವೆ. ದಿಣ್ಣೆಯ ಮಧ್ಯಭಾಗದ ಗಾಳಿಗಭಿಮುಖ ಭಾಗ ಕಡಿದಾಗಿರುತ್ತದೆ. ಜೊತೆಗೆ ಅದು ಸ್ಥಳಾಂತರ ಹೊಂದುತ್ತಾ ಒಳ ಪ್ರದೇಶಕ್ಕೆ ಮುನ್ನಡೆಯಬಹುದು. ಸಮತಲ ಮರುಭೂಮಿಯಲ್ಲಿ ಮರಳು ಕಣಗಳು ಸಿಡಿದು ಹಾರುವ ಅಥವಾ ಜಿಗಿತ ಚಲನೆ ಉಂಟಾದಲ್ಲಿ ಈ ರೀತಿಯ ಮರಳು ದಿಣ್ಣೆಗಳು ಉಂಟಾಗುತ್ತವೆ. ಉದಾ: ಮಂಗೋಲಿಯಾ ಮತ್ತು ಟಾರಿಮ್ ಬಯಲು. ಇಂತಹ ದಿಣ್ಣೆಗಳ ಬಾಹುಗಳು ಬೇಗ ಚಲನೆ ಹೊಂದುವುದರಿಂದ ಅವು ಪರಸ್ಪರ ಹತ್ತಿರದಲ್ಲಿ ಸಮಾನಾಂತರವಾಗಿ ರಚನೆಯಾಗಿದ್ದು, ಇಡೀ ದಿಣ್ಣೆಯನ್ನೇ ಹೆಚ್ಚು ವಕ್ರಗೊಳಿಸುತ್ತವೆ. ಆಗ ಅವು ಕೇಶಾಲಂಕಾರದ ಸೂಜಿಯಂತೆ ಕಂಡುಬರುತ್ತವೆ.

ಮರಳು ದಿಣ್ಣೆಯ ವಲಸೆ: ಸಸ್ಯ ಅಥವಾ ಇನ್ನಿತರ ಯಾವುದೇ ಅಡಚಣೆಯಿಲ್ಲದಿದ್ದಲ್ಲಿ ಸಮತಲ ಮರುಭೂಮಿಯಲ್ಲಿ ಮರಳು ದಿಣ್ಣೆಗಳು ಸ್ಥಿರವಾಗದೆ ಪ್ರಚಲಿತ ಮಾರುತಗಳು ಬೀಸುವ ದಿಕ್ಕಿಗೆ ಸ್ಥಳಾಂತರ ಹೊಂದುತ್ತವೆ. ಇದನ್ನೇ ಮರಳು ದಿಣ್ಣೆಯ ವಲಸೆಯ ಅಥವಾ ಚಲನೆ ಎಂದು ಕರೆಯಲಾಗಿದೆ. ದಿಣ್ಣೆಯ ಗಾಳಿಗಭಿಮುಖ ಭಾಗದ ಮರಳನ್ನು ಗಾಳಿ ಸ್ಥಳಾಂತರಿಸಿ ಅದನ್ನು ವಿರುದ್ಧ ಭಾಗದಲ್ಲಿ ಬಿಡುವುದು. ಮರಳು ದಿಣ್ಣೆಯ

ಮುನ್ನಡೆಯುವ ವೇಗ ವಿವಿಧ ಪರಿಸ್ಥಿತಿಗನುಗುಣವಾಗಿ ವ್ಯತ್ಯಾಸಗೊಳ್ಳುವುದು. ಮರಳಿನ ಕಣಗಳು ಅತಿ ಶುಷ್ಕತೆಯಿಂದ ಕೂಡಿರುವ ಭಾಗದಲ್ಲಿ ಗಾಳಿಯ ವೇಗದ ಗತಿಯೂ ತೀವ್ರವಾಗಿರುತ್ತದೆ. ಇದರಿಂದಾಗಿ ವಲಸೆಯ ಗತಿಯು ಹೆಚ್ಚಾಗಿರುತ್ತದೆ. ಹೀಗಾಗಿ ಮರಳು ದಿಣ್ಣೆಗಳ ಮುನ್ನಡೆಯುವ ಕೆಲವು ಭಾಗಗಳಲ್ಲಿ 30 ಮೀ ಗಿಂತಲೂ ಹೆಚ್ಚಾಗಿರುತ್ತದೆ.

ಮರಳುದಿಣ್ಣೆಗಳು ಅತಿ ವೇಗದಿಂದ ಮುನ್ನಡೆಯುವಾಗ ಸಮೀಪದ ನಗರ, ಪಟ್ಟಣ ಅಥವಾ ಇತರ ಜನ ವಸತಿಗಳು ಮರಳಿನಿಂದ ಮುಚ್ಚಿಹೋಗುತ್ತವೆ. ಇನ್ನೂ ಕೆಲವು ವೇಳೆ ಓಯಸಿಸ್‌ಗಳು ಹಾಗೂ ಅಲ್ಲಿ ವಾಸಿಸುವ ಜನ ವಸತಿಗಳು ಮರಳಿನ ಆಕ್ರಮಣದಿಂದ ಅನಾಹುತಕ್ಕೊಳಗಾಗುವುವು. ಇದರ ರಕ್ಷಣೆಗಾಗಿ ಓಯಸಿಸ್‌ಗಳ ಸುತ್ತಲೂ ಆಳಕ್ಕೆ ಬೇರು ಬಿಡುವ ಗಿಡಮರಗಳನ್ನು ಬೆಳೆಸುವರು.

ಲೋಯೆಸ್: ನುಣುಪಾದ ಕಣಗಳಿಂದಲೂ ಸರಂಧ್ರತೆಯುಳ್ಳದ್ದೂ ಹಳದಿ ಹಾಗೂ ಬೂದು ಬಣ್ಣದಿಂದ ಕೂಡಿದ ಮೆದುಮಣ್ಣನ್ನು ಲೋಯಸ್ ಅಥವಾ ಬಂಕೆ ಮಣ್ಣು ಎಂದು ಕರೆಯುವರು. ಲೋಯಸ್ ಶಬ್ದ ಜರ್ಮನ್ ಭಾಷೆಯಿಂದ ಬಂದದ್ದು. ಯುರೋಪಿನ ಆಲ್ಸೇಸ್ ಪ್ರದೇಶದ ಗ್ರಾಮವೊಂದರ ರೈತರು ಮತ್ತು ಇಟ್ಟಿಗೆ ತಯಾರಕರು ಇದರ ಬಳಕೆಯನ್ನು ಮೊದಲಿಗೆ ಕಂಡುಕೊಂಡರು. ಆದ್ದರಿಂದ ಆ ಹಳ್ಳಿಯ ಹೆಸರನ್ನೇ ಈ ಮಣ್ಣಿಗೆ ಕರೆಯಲಾಯಿತು. ಅನಂತರ ಇದರ ವಿವರಣಾ ವ್ಯಾಪ್ತಿಯೂ ಸಹ ಹೆಚ್ಚಿತು.

ಸೂಕ್ಷ್ಮ ಮರಳಿನ ಕಣಗಳನ್ನು ಗಾಳಿಯು ಬಹುದೂರದವರೆಗೆ ಹಾರಿಸಿಕೊಂಡು ಹೋಗಿ ಮರುಭೂಮಿಯ ಅಂಚುಗಳಲ್ಲಿ ಅಥವಾ ನದಿ–ಸರೋವರಗಳ ದಂಡೆಯ ಭಾಗಗಳಲ್ಲಿ ಸಂಚಯಿಸುವುದು. ಇದು ಸರಂಧ್ರತೆಯಿಂದ ಕೂಡಿದ್ದು, ನೀರು ಸುಲಭವಾಗಿ ಒಳ ಸೇರುತ್ತದೆ. ಇದರ ಕಣಗಳು ಸೂಕ್ಷ್ಮವೂ, ಮೃದುವೂ ಮತ್ತು ನಯವಾಗಿರುತ್ತವೆ. ಇದರಲ್ಲಿ ಪದರು ರಚನೆಯಿರುವುದಿಲ್ಲ. ಸಾಕಷ್ಟು ಫಲವತ್ತಾಗಿರುತ್ತದೆ. ಇಂತಹ ಮಣ್ಣು ವಿಶಾಲವಾದ ಪ್ರದೇಶದಲ್ಲಿ ಸಂಚಯನವಾಗಿದ್ದರೆ ಅದನ್ನು ಲೋಯಸ್ ಮೈದಾನವೆಂದು ಕರೆಯುವರು. ಉದಾ: ವಾಯವ್ಯ ಚೀನ, ಅರ್ಜಂಟೈನದ ಪಂಪಾಸ್, ಮಿಸಿಸಿಪ್ಪಿ ಕಣಿವೆ, ವಾಷಿಂಗ್‌ಟನ್ ಪೂರ್ವಭಾಗ ಮತ್ತು ಜರ್ಮನಿ ಮೈದಾನ. ವಾಯವ್ಯ ಚೀನದ ಹ್ವಾಂಗ್ ಹೊ ಲೋಯೆಸ್ ಮೈದಾನ ಜಗತ್ತಿನಲ್ಲೇ ಅತ್ಯಂತ ವಿಸ್ತಾರವಾದುದಾಗಿದೆ. ಇದು ಸು. 6.4 ಲಕ್ಷ ಚ.ಕಿಮೀ ವಿಸ್ತೀರ್ಣವಾಗಿದೆಯೆಂದು ಅಂದಾಜು ಮಾಡಲಾಗಿದೆ. ಇಲ್ಲಿಯ ಮಣ್ಣಿನ ಆಳ 90ರಿಂದ 300 ಮೀ ವರೆಗಿದೆ. ಈ ಮೈದಾನದಲ್ಲಿ ಸಮುದ್ರಮಟ್ಟದಿಂದ 2500 ಮೀ ವರೆಗೆ ಮಣ್ಣು ಸಂಗ್ರಹವಾಗಿರುವುದು. ಇದು ಗೋಬಿ ಮರುಭೂಮಿಯಿಂದ ಮಾರುತಗಳು ಹಾರಿಸಿ ತಂದ ಸೂಕ್ಷ್ಮ ಕಣಗಳಿಂದ ಸಂಚಯನವಾದುದು. ಫ್ರಾನ್ಸ್ ಮತ್ತು ಬೆಲ್ಜಿಯಂನಲ್ಲಿ ಇದನ್ನು ಲಿಮನ್ ಎಂಬ ಹೆಸರಿನಿಂದ ಕರೆಯುವರು.

ಮರುಭೂಮಿಯ ನೀರಿನ ಕಾರ್ಯ ಮತ್ತು ಸ್ವರೂಪಗಳು: ಪ್ರಪಂಚದ ಕೆಲವು ಮರುಭೂಮಿಗಳಲ್ಲಿ ಯಾವುದೇ ರೀತಿಯ ಮಳೆಯ ಹಂಚಿಕೆಯಾಗಲೀ ಅಥವಾ ಜಲ ವ್ಯವಸ್ಥೆಯಾಗಲೀ ಕಂಡುಬರುವುದಿಲ್ಲ. ಆದರೆ ಕೆಲವು ಮರುಭೂಮಿಗಳ ಅಂಚಿನಲ್ಲಿ 25 ಸೆಂಮೀ ಸರಾಸರಿ ವಾರ್ಷಿಕ ಮಳೆಯಾಗುವುದು. ಅರೆ ಮರುಭೂಮಿಗಳಲ್ಲಿ 25–30 ಸೆಂಮೀ ವಾರ್ಷಿಕ ಮಳೆ ಬೀಳುವುದುಂಟು. ಇಲ್ಲಿ ಬೀಳುವ ಮಳೆ ಅನಿಶ್ಚಿತ ಹಾಗೂ ಮುಸಲಧಾರೆಯ ರೀತಿಯದಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಇದ್ದಕ್ಕಿದ್ದ ಹಾಗೆ ಸಿಡಿಲು–ಗುಡುಗು ಗಾಳಿಯಿಂದ ಕೂಡಿದ ಮಳೆ ಧಾರಾಕಾರವಾಗಿ ಬೀಳುವುದು. ಇದರಿಂದ ಆ ಭಾಗ ಕೊಚ್ಚಿ ಹೋಗುವುದು. ಒಂದು ಬಾರಿ ಬಿದ್ದ ಇಂತಹ ಮಳೆ ಕೆಲವೇ ಗಂಟೆಗಳಲ್ಲಿ ಅನೇಕ ಸೆಂಮೀ ಭಾರಿ ಮಳೆಯಾಗಿ ತೊರೆಗಳ ಸಮೀಪ ಅಥವಾ ಮರುಭೂಮಿಯಲ್ಲಿ ಹರಿಯುವ ನದಿಗಳ ಸಮೀಪದಲ್ಲಿನ ಜನರಿಗೆ ಅನಾಹುತವುಂಟಾಗುತ್ತದೆ. ಜನವಸತಿಗಳು ಪ್ರವಾಹದ ನೀರಿನಲ್ಲಿ ಅಥವಾ ಕೆಸರು ಮಣ್ಣಿನಲ್ಲಿ ಮುಳುಗಿ ಹೋಗುವ ಸಂಭವವುಂಟು.

ಮರುಭೂಮಿಯ ಸಸ್ಯಗಳ ಕೊರತೆಯಿಂದಾಗಿ ಯಾವಾಗಲೋ ಒಮ್ಮೆ ಸುರಿಯುವ ಭಾರಿ ಮಳೆಯ ನೀರಿಗೆ ಮೇಲ್ಮಣ್ಣು ಅತ್ಯಧಿಕ ಪ್ರಮಾಣದಲ್ಲಿ ಕೊಚ್ಚಿಕೊಂಡು ಹೋಗಿ ಬಹು ದೂರಕ್ಕೆ ಸಾಗಿಸಲ್ಪಡುತ್ತದೆ. ಸಡಿಲವಾದ ಮಿಶ್ರ ಕಂಕರೆ, ಮರಳು ಮತ್ತು ನಯವಾದ ದೂಳಿನ ಕಣಗಳು ಬೆಟ್ಟಗಳ ಬದಿಯ ಇಳಿಜಾರಿನಲ್ಲಿ ಮಳೆಯ ನೀರಿನಿಂದ ಕೊಚ್ಚಿ ಹೋಗುತ್ತವೆ. ಪರ್ವತಗಳ ಬೆಟ್ಟಗುಡ್ಡಗಳ ಪಾರ್ಶ್ವ ಇಳಿಜಾರಿನಲ್ಲಿ ಪ್ರವಹಿಸುವ ಮಳೆಯ ನೀರು ನಿರ್ದಿಷ್ಟ ಸ್ವರೂಪದ ನಾಲೆಗಳಾಗಿ ಪರಿಣಮಿಸುತ್ತವೆ. ಇವುಗಳಿಗೆ ಕೊರಕಲುಗಳೆಂದು ಹೆಸರು. ಅನೇಕ ಕೊರಕಲುಗಳ ನಡುವೆ ಬರುವ ಭಾಗ ಸಾಕಷ್ಟು ಎತ್ತರವಾಗಿಯೂ, ಶಿಖರಾಗ್ರ ಕೂಟಗಳಿಂದಲೂ ಹಾಗೂ ಸ್ತೂಪಾಕಾರದ ಚಾವಣಿಗಳಿಂದಲೂ ಕೂಡಿರುತ್ತವೆ. ಇಂತಹ ಸ್ವರೂಪವನ್ನು ಹಳ್ಳ–ತಿಟ್ಟು (ಬ್ಯಾಡ್‌ಲ್ಯಾಂಡ್ಸ್) ಭೂ ಸ್ವರೂಪ ಎಂದು ಕರೆಯುವರು.

ಅರೆಮರುಭೂಮಿಯಲ್ಲಿ ಆಗಾಗ್ಗೆ ಪ್ರಬಲವಾದ ಬಿರುಗಾಳಿಯಿಂದ ಕೂಡಿದ ಧಾರಾಕಾರವಾದ ಮಳೆ ಬೀಳುವುದರಿಂದ ಆ ಪ್ರದೇಶದ ಕೊರಕಲುಗಳು ತುಂಬಿ ಹರಿದು ಅನಿರೀಕ್ಷಿತ ಪ್ರವಾಹಗಳುಂಟಾಗುತ್ತವೆ. ಇವು ಅಲ್ಪಕಾಲಿಕ ಪ್ರವಾಹವಾಗಿರುತ್ತವೆ. ಉದಾ: ಕ್ಯಾಲಿಫೋರ್ನಿಯ, ಅರಿಜೋನ, ಯುಟಾ.

ಇಂತಹ ಪ್ರವಾಹಗಳಿಂದ ಕೊರಕಲು ಸವೆದು ಅಗಲ ಹಾಗೂ ಆಳವಾಗುತ್ತವೆ. ಕಣಿವೆಯ ಮೃದು ಮಣ್ಣು ಸುಲಭವಾಗಿ ಸವೆದು, ಅದರ ಬಹುಪಾಲು ನೀರಿನಲ್ಲಿ ಕರಗಿ ಕೆಸರಾಗಿ, ಮುಂದೆ ಅದು ಕೆಸರು ಪ್ರವಾಹವಾಗಿ ಪರಿಣಮಿಸುವುದು. ಈ ರೀತಿ ಸವೆದು–ಸಾಗಿಸಲ್ಪಟ್ಟ ಅಧಿಕ ಪ್ರಮಾಣದ ಮರಳು ಮತ್ತು ಮಣ್ಣುಗಳು ಬೆಟ್ಟಗಳ ಪಾದ ಭಾಗಗಳಲ್ಲಿ ಅಥವಾ ಕಣಿವೆಯ ಅಂತ್ಯ ಭಾಗದಲ್ಲಿ ಸಂಚಯನವಾಗುತ್ತವೆ. ಇದರಿಂದ ಮೆಕ್ಕಲು ಬೀಸಣಿಗೆ ಅಥವಾ ಶುಷ್ಕ ಮುಖಜ ಭೂಮಿಗಳು ಉಂಟಾಗುತ್ತವೆ. ಇವುಗಳ ಮೂಲಕ ತಾತ್ಕಾಲಿಕ ತೊರೆಗಳು ಅನೇಕ ಕವಲುಗಳಾಗಿ ಹರಿಯುತ್ತಾ ಇನ್ನೂ ವಸ್ತುಗಳನ್ನು ಸಂಚಯಿಸುತ್ತವೆ. ಕೆಲವು ವೇಳೆ ಮೆಕ್ಕಲು ಬೀಸಣಿಗೆಯು ಅತಿ ಶಾಖದಿಂದ ಒಣಗಿ ಅಥವಾ ಒಳ ಇಂಗುವಿಕೆಯಿಂದಾಗಿ ಮೇಲ್ಮೈ ಒಣಗಿಹೋದ ಮೇಲೆ ಸಡಿಲಗೊಂಡು ಗಾಳಿಯ ಆಕ್ರಮಣಕ್ಕೊಳಗಾಗಬಹುದು.

ಒಮ್ಮೊಮ್ಮೆ ಬೀಳುವ ಧಾರಾಕಾರವಾದ ಮಳೆ ನೀರಿನಿಂದ ಹರಿವ ಅನೇಕ ತೊರೆಗಳು ಬೆಟ್ಟ ಪಾದಗಳಲ್ಲಿ ಕೂಡುತ್ತವೆ. ಪಾದ ಬೆಟ್ಟಗಳಲ್ಲಿ ಉಂಟಾಗುವ ವಿವಿಧ ಮೆಕ್ಕಲು ಬೀಸಣಿಗೆಗಳ ಪಾರ್ಶ್ವ ಭಾಗಗಳು ವಿಸ್ತಾರವಾಗುತ್ತಾ ಹೋದಂತೆ ಅಕ್ಕಪಕ್ಕದ ಬೀಸಣಿಗೆಗಳು ಪರಸ್ಪರ ಕೂಡಿಕೊಂಡು ವಿಶಾಲವಾದ ಹಾಗೂ ಸಾಧಾರಣ ಇಳಿಜಾರಿನಿಂದ ಕೂಡಿದ ಮೈದಾನಗಳು ನಿರ್ಮಾಣವಾಗುತ್ತವೆ. ಇವುಗಳಿಗೆ ಬಾಜಡವೆಂದು ಕರೆಯುವರು. ಈ ಶಬ್ದ ಇಂಗ್ಲಿಷ್ ಭಾಷೆಯ ಬಾಜ ಎಂಬ ಪದದ ರೂಪಾಂತರವಾಗಿದೆ. ಅರಿಜೋನ, ನಿವೇಡ ಮತ್ತು ಮೆಕ್ಸಿಕೊ ಮತ್ತು ಚಿಲಿಯ ಮರುಭೂಮಿಗಳಲ್ಲಿ ಇಂತಹ ಸ್ವರೂಪಗಳು ಕಂಡುಬರುತ್ತವೆ.

ಮರುಭೂಮಿ ಕಮರಿ: ಮರುಭೂಮಿ ಮತ್ತು ಅರೆ ಮರುಭೂಮಿಗಳಲ್ಲಿ ಕೊರಕಲುಗಳಲ್ಲದೆ ಇನ್ನೂ ಅನೇಕ ವಿಶಾಲವಾದ ಶುಷ್ಕ ಕಣಿವೆಗಳಿರುತ್ತವೆ.ಇವು ಯಾವಾಗಲೋ ಒಮ್ಮೆ ಬೀಳುವ ಧಾರಾಕಾರವಾದ ಮಳೆಯ ನೀರು ತುಂಬಿ ಹರಿಯುವಾಗ ಪಾರ್ಶ್ವ ಮತ್ತು ತಲ ಕೊರೆತದಿಂದ ವಿಸ್ತಾರವೂ ಮತ್ತು ಆಳವೂ ಆಗುತ್ತವೆ. ಮಳೆ ನಿಂತ ನಂತರ ಅವು ಪುನಃ ಒಣಗಿ ಮೊದಲಿನಂತೆಯೇ ಶುಷ್ಕ ಕಣಿವೆಗಳಾಗುತ್ತವೆ. ಇವುಗಳ ಬದಿಗಳು ಕಡಿದಾಗಿರುತ್ತವೆ. ಕಣಿವೆ ಪಾತ್ರದಲ್ಲಿ ಮರಳು, ಮಣ್ಣು ಮತ್ತು ಶಿಲಾಚೂರುಗಳು ಹರಡಿರುತ್ತವೆ. ಈ ರೀತಿಯ ಸ್ವರೂಪಗಳಿಗೆ ವಾಡಿಗಳೆಂದು ಹೆಸರು. ಇಂತಹ ಕಣಿವೆ–ಕಮರಿಗಳು ಅಲ್ಜೀರಿಯದ ಮರುಭೂಮಿಯಲ್ಲಿ ವಿಶೇಷವಾಗಿ ಕಂಡುಬರುತ್ತವೆ. ದಕ್ಷಿಣ ಅಲ್ಜೀರಿಯದ ವಾಡ್‌ರಿರ್ ಭಾಗದಲ್ಲಿ ಸಮುದ್ರ ಮಟ್ಟಕ್ಕೆ 15 ರಿಂದ 60 ಮೀ ಎತ್ತರದಲ್ಲಿರುವ ಚೆಬ್ಕಾ ಎಂಬ ಕಣಿವೆ ಪ್ರಸಿದ್ಧವಾದುದು.

ಮರುಭೂಮಿ ಸರೋವರ: ಮರುಭೂಮಿ–ಅರೆ ಮರುಭೂಮಿಗಳಲ್ಲಿ ಬೀಳುವ ಧಾರಾಕಾರವಾದ ಮಳೆಯ ನೀರು ತೊರೆಗಳ ಮೂಲಕ ಎತ್ತರದಿಂದ ಹರಿಯುತ್ತದೆ. ಅದು ಬೆಟ್ಟದ ಪಾದ ಭಾಗಗಳ ತಗ್ಗುಗಳಿಗೆ ಹರಿದು ಸಂಗ್ರಹವಾಗುತ್ತದೆ. ಹೀಗೆ ಸಂಗ್ರಹವಾದ ನೀರಿನ ಸಮಗ್ರಭಾಗ ಬಾಷ್ಪೀಕರಣಕ್ಕೆ ಅಥವಾ ಒಳ ಇಂಗಿ ಹೋಗದೆ ಉಳಿದದ್ದು ಸರೋವರವಾಗಿರುವುದು.ಇಂತಹ ಸರೋವರಗಳು ಆಳವಿಲ್ಲದ ಹಾಗೂ ತಾತ್ಕಾಲಿಕವಾದವು. ಅತ್ಯಧಿಕ ಶಾಖದಿಂದ ನೀರು ಬಾಷ್ಪೀಕರಣಕ್ಕೊಳಗಾಗುವುದು. ಇದರಿಂದ ನೀರಿನಲ್ಲಿದ್ದ ಲವಣಾಂಶಗಳೆಲ್ಲಾ ಸರೋವರದ ತಳದಲ್ಲೆ ಸಂಚಯವಾಗಿದ್ದು, ಹೊಳೆಯುವ ಚೌಳುಪ್ಪು ಹಾಳೆಗಳುಂಟಾಗುತ್ತವೆ. ಇದು ಮಣ್ಣಿನ ಮೇಲೆ ಹರಡಿರುವುದರಿಂದ ಅದರಲ್ಲಿ ಸಾಕಷ್ಟು ಜೇಡಿ ಮತ್ತು ನೀರಾಮ್ಲೀಯ ಕಿಲುಬುಗಳು ಮಿಶ್ರಣವಾಗಿರುತ್ತವೆ. ಇಂತಹ ಮಿಶ್ರಣ ಉಪ್ಪಿನ ವಿಶಾಲವಾದ ಮರುಭೂಮಿಯ ತಗ್ಗುಗಳಿಗೆ ಪ್ಲಯವೆನ್ನುವರು. ಇವುಗಳನ್ನು ಸಹರಾದಲ್ಲಿ ಸೆಬ್ಖಾಸ್ ಇರಾನಿನಲ್ಲಿ ಕೀವೈರ್ ಮತ್ತು ಟ್ರಾನ್ಸ್‌ಕಕೇಸಿಯನ್ ಭಾಗದಲ್ಲಿ ತಾಕೈರ್ ಎಂದು ಕರೆಯುವರು.

ಪ್ಲಯಾ ಸರೋವರಗಳ ನೀರಿನಲ್ಲೊ ಅಥವಾ ಅವು ಒಣಗಿ ಹೋದ ಮೇಲೆ ಸಂಚಯವಾದ ವಸ್ತುಗಳಲ್ಲಿಯೋ ಅಧಿಕ ಪ್ರಮಾಣದ ಉಪ್ಪಿನಂಶವಿದ್ದರೆ ಅದನ್ನು ಸಲೀನಾ ಅಥವಾ ಸಲಾರ್‌ಗಳೆಂದು ಕರೆಯುವರು. ಉದಾ: ಸಹರಾ, ಮೆಕ್ಸಿಕೊ. ಇವು ಉಪ್ಪು ನೀರಿನ ಸರೋವರಗಳಾಗಿರುತ್ತವೆ.

ಪರ್ವತಪಾದ ಮರುಭೂಮಿ ಮೈದಾನ: ನಯವಾದ, ನಗ್ನವಾದ, ತೆಳುವಾದ ಹಾಗೂ ಸಾಧಾರಣ ಇಳಿಜಾರಿನಿಂದ ಕೂಡಿದ್ದು, ಬಹು ದೀರ್ಘವಾಗಿ ಹರಡಿರುವ ಶಿಲಾ ಮೇಲ್ಮೈಗೆ ಪೆಡಿಮೆಂಟ್ಸ್ ಎಂದು ಹೆಸರು. ಮರುಭೂಮಿ ಮತ್ತು ಅರೆ ಮರುಭೂಮಿಗಳ ಪರ್ವತ ಪಾದ ಭಾಗದಿಂದ ಅನೇಕ ಕಿಮೀ ಗಳವರೆಗೆ ಹೊರವಲಯಕ್ಕೆ ಚಾಚಿಕೊಂಡಿರುತ್ತವೆ. ಇವುಗಳಿಗೂ ಮತ್ತು ಬಾಜಡಗಳಿಗೂ ಕೆಲವೊಮ್ಮೆ ಅಷ್ಟೊಂದು ವ್ಯತ್ಯಾಸ ಕಂಡುಬರುವುದಿಲ್ಲ. ಆದರೂ ನಿರ್ಮಾಣದಲ್ಲಿ ಎರಡು ಭಿನ್ನವಾಗಿರುತ್ತವೆ. ಬಾಜಡಗಳು ಸಂಚಯನದಿಂದಾದವು. ಆದರೆ ಪೆಡಿಮೆಂಟ್‌ಗಳು ಕ್ರಶೀಕರಣದಿಂದಾದವುಗಳು.

ಮರುಭೂಮಿಯ ಭೂಸವೆತ ಚಕ್ರ: ಆರ್ದ್ರತಾ ವಲಯಕ್ಕೆ ಸಂಬಂಧಿಸಿದಂತೆ ವಿಲಿಯಂ ಮಾರಿಸ್ ಡೇವಿಸ್ ಎಂಬುವನು ತನ್ನ ಭೂಸವೆತ ಚಕ್ರದ ಪರಿಕಲ್ಪನೆಯನ್ನು ಮಂಡಿಸಿರುವನು. ಆದರೆ ಈ ಕಲ್ಪನೆ ಮರುಭೂಮಿಯ ಭೂಸವೆತಚಕ್ರಕ್ಕೆ ಪೂರ್ಣವಾಗಿ ಹೊಂದುವುದಿಲ್ಲವೆಂದು

ತಿಳಿದುಬಂದಿದೆ. ಆಫ್ರಿಕದ ಭೂ ಸ್ವರೂಪ ವಿಜ್ಞಾನಿಯಾದ ಎಲ್.ಸಿ. ಕಿಂಗ್ ಎಂಬುವನು ಪೆಡಿಪ್ಲೇನ್ ಸವೆತ ಚಕ್ರದ ಕಲ್ಪನೆಯನ್ನು ರೂಪಿಸುವ ಮೂಲಕ ಮರುಭೂಮಿ ಸವೆತ ಚಕ್ರವನ್ನು ವಿವರಿಸಿರುವನು. ಇದು ಅನೇಕ ವಿಜ್ಞಾನಿಗಳ ಸಮ್ಮತಿಗೊಳಗಾಗಿದೆ. ಇಲ್ಲಿಯೂ ಕೂಡ ಮೂರು ಅವಸ್ಥೆಗಳಿವೆ.

1. ಬಾಲ್ಯಾವಸ್ಥೆ: ಮರುಭೂಮಿಯ ಬಾಲ್ಯಾವಸ್ಥೆ ಸಾಕಷ್ಟು ಎತ್ತರವಾದ ಪರ್ವತಗಳಿಂದ ಆವೃತವಾದ ಭಾಗಗಳಿಂದಲೇ ಪ್ರಾರಂಭಗೊಳ್ಳುತ್ತದೆ. ಇಲ್ಲಿನ ಪರ್ವತಗಳಲ್ಲಿ ಉಗಮವಾಗುವ ನದಿಗಳು ಹರಿದು ತಗ್ಗು ಭಾಗವನ್ನು ತಲುಪುವುದರೊಳಗಾಗಿಯೇ ಬತ್ತಿ ಹೋಗುತ್ತವೆ. ಧಾರಾಕಾರವಾಗಿ ಮಳೆ ಬಿದ್ದಾಗ ಮಾತ್ರ ನದಿ–ತೊರೆಗಳು ಪ್ರವಾಹದಿಂದ ಹರಿದು ತಗ್ಗು ಭಾಗವನ್ನು ತಲುಪುತ್ತವೆ. ಇಲ್ಲಿ ಹರಿಯುವ ತೊರೆಗಳು ಮತ್ತು ಹರವುಗಳು ಪಾರ್ಶ್ವ ಮತ್ತು ಆಳಕೊರೆತದಿಂದ ವಾಡೀ ಮತ್ತು ಕಮರಿಗಳನ್ನು ನಿರ್ಮಿಸುತ್ತವೆ. ತಗ್ಗುಗಳು ಶಿಲಾಪುಡಿಗಳಿಂದ ಮುಚ್ಚಲ್ಪಡುತ್ತವೆ. ಮರಳು ಮಿಶ್ರಿತ ಚೌಳು ಮಣ್ಣು ಕ್ರಮೇಣ ಪ್ಲಯಾಗಳಾಗಿ ಪರಿಣಮಿಸುತ್ತವೆ. ಎತ್ತರ ಭಾಗಗಳು ಈ ಹಂತದಲ್ಲಿ ಸವೆದು ಅವನತಿ ಹೊಂದುತ್ತವೆ.

2. ಯೌವನಾವಸ್ಥೆ: ಈ ಹಂತದಲ್ಲಿ ಎತ್ತರಕ್ಕನುಗುಣವಾಗಿ ರಚಿತವಾದ ತಗ್ಗು ಭಾಗಗಳು, ಮೊದಲು ಎತ್ತರ ಭಾಗವಾಗಿದ್ದು ಅನಂತರ ಅದರ ಕೆಳಭಾಗದಲ್ಲಿ ಬರುವುದು. ಹೀಗೆ ಶಿಲಾಕಣಗಳಿಂದ ಅವು ಮುಚ್ಚಿಹೋಗುತ್ತವೆ. ನದಿಗಳ ಶಿರ್ಷಾಭಿಮುಖ ಕೊರೆತದಿಂದಾಗಿ ತಗ್ಗುಗಳು ಪರಸ್ಪರ ಸವೆದು ಕೂಡಿಕೊಳ್ಳುವುದರಿಂದ ಉದ್ದವಾದ, ಇಳಿಜಾರಿನಿಂದ ಕೂಡಿದ ಕಣಿವೆ ನಿರ್ಮಾಣವಾಗುವುದರ ಜೊತೆಗೆ ಅಸಹಜವಾದ ತಿಟ್ಟುಗಳು ಸವೆದು ಸಮಗೊಳ್ಳುತ್ತವೆ. ಮೆಕ್ಕಲು ಬೀಸಣಿಗೆಗಳು, ಬಾಜಡ, ವಾಡೀಗಳೆಲ್ಲಾ ಕೊಡುತ್ತವೆ. ಮರುಭೂಮಿಯ ನೆಲೆಗಟ್ಟುಗಳು ನಿರ್ಮಾಣವಾಗುತ್ತವೆ ಹಾಗೂ ಪ್ಲಯಾಗಳೂ ಸಹ ಉಂಟಾಗುತ್ತವೆ.

3. ವೃದ್ಧಾಪ್ಯ ಅವಸ್ಥೆ: ಈ ಹಂತದಲ್ಲಿ ಎತ್ತರವಾದ ಪರ್ವತಗಳು ಸವೆದು ಅವನತಿಗೊಳ್ಳುತ್ತವೆ. ಇದರಿಂದಾಗಿ ಪರ್ವತಗಳ ಕಡೆಯಿಂದ ಮೈದಾನಗಳ ಕಡೆಗೆ ಹೋದಂತೆಲ್ಲಾ ಮಳೆಯ ಹಂಚಿಕೆ ಕಡಿಮೆಯಾಗುತ್ತದೆ. ತೊರೆಗಳಲ್ಲಿ ಹರಿಯುವ ನೀರಿನ ಪ್ರಮಾಣ ಕುಗ್ಗುತ್ತದೆ. ಸವೆತ ಕಾರ್ಯ ಗಾಳಿಯ ಅಪವಹನ ಕ್ರಿಯೆಯಿಂದ ಏರ್ಪಡುತ್ತದೆ. ಉನ್ನತ ಭಾಗಗಳೆಲ್ಲಾ ಸವೆದು ಮಟ್ಟಸವಾಗುತ್ತವೆ. ಶಿಲಾದ್ವೀಪ, ಮಟ್ಟಸ ಗುಡ್ಡಗಳೆಲ್ಲಾ ಗೋಚರಿಸುತ್ತವೆ. ಇಡೀ ಪ್ರದೇಶ ಪೆಡಿಮೆಂಟಿನಿಂದ ಸಮಪ್ರಾಯ ಮೈದಾನವಾಗಿ ಮಾರ್ಪಾಡಾಗುತ್ತದೆ. ಅರ್ಧ ಚಂದ್ರಾಕೃತಿ ಹಾಗೂ ನೀಳ ಮರಳು ದಿಣ್ಣೆಗಳು ಸಂಚಯನ ಈ ಹಂತದಲ್ಲಿ ನಿರ್ಮಾಣಗೊಳ್ಳುತ್ತವೆ. (ಪಿ.ಎಂ.)

**ನಗ್ನೀಕರಣದ ಕರ್ತೃವಾಗಿ ಭೂ ಅಂತರ್ಜಲ ಕಾರ್ಯ:** ಭೂ ಮೇಲ್ಪದರಯವಾದ ಶಿಲಾಗೋಳದ ಶಿಲೆಗಳ ರಂಧ್ರಗಳು ಮತ್ತು ಬಿರುಕುಗಳಲ್ಲಿ ಸಂಗ್ರಹವಾಗಿರುವ ಜಲಕ್ಕೆ ಅಂತರ್ಜಲ ಅಥವಾ ಭೂ ಅಂತರ್ಜಲ ಎಂದು ಕರೆಯುವರು. ಅಂತರ್ಜಲ ಮುಖ್ಯವಾಗಿ ಮೂರು ಮೂಲಗಳಿಂದ ಸಂಗ್ರಹವಾಗುತ್ತದೆ:

1. ವಾಯುಮಂಡಲದ ನೀರಾವಿಯ ವೃಷ್ಟಿಯ ರೂಪ. ಮಳೆ ಮತ್ತು ಹಿಮ ಕರಗುವುದರಿಂದ ದೊರೆಯುವ ನೀರು. ಇದು ಶಿಲಾ ಬಿರುಕು ಸ್ತರಭಂಗ. ಶಿಲಾರಂಧ್ರ ಹಾಗೂ ಶಿಲಾಮಡಿಕೆಯ ಪದರುಗಳ ನಡುವೆ ಭೂಗತವಾಗಿ ಅಂತರ್ಜಲವಾಗಿ ಪರಿಣಮಿಸುವುದು. ಈ ನೀರನ್ನು ಉಲ್ಕಾಜಲವೆಂದು ಕರೆಯುವರು.

2. ಅಗರ್ಭಜಲ ಸಮುದ್ರ–ಸರೋವರಗಳ ತಳದಲ್ಲಿ ರಚಿತವಾಗಿರುವ ಕಣಶಿಲೆಗಳ ರಂಧ್ರಗಳಲ್ಲಿ, ಸ್ತರಗಳೊಳಗೆ, ಆ ಶಿಲೆಗಳು ರೂಪುಗೊಂಡ ಕಾಲದಿಂದಲೇ ಸಂಚಯವಾಗಿ ನೆಲಸಿರುವ ಜಲವನ್ನು ಅಗರ್ಭಜಲವೆಂದು ಕರೆಯುವರು. ಈ ರೀತಿಯ ಅಂತರ್ಜಲ ಅಪ್ರವೇಶ್ಯ ಶಿಲೆಗಳ ಸುತ್ತುವರಿಕೆಯಿಂದ ಬಂಧಿಸಲ್ಪಟ್ಟಿರುತ್ತದೆ.

3. ಅಗ್ನಿಜನಿತಜಲ. ಜ್ವಾಲಾಮುಖಿ ಕಾರ್ಯಾಚರಣೆಯಿಂದ ಹೊರಸೂಸುವಂತಹದು. ಭೂ ಅಂತರಾಳದ ಕೆಲವು ಖನಿಜಗಳು ನೀರಿನಾಂಶವನ್ನು ಹೊಂದಿರುತ್ತವೆ. ಭೂಮಿಯ ಆಂತರಿಕ ಅತ್ಯುಷ್ಣತೆಯಿಂದ ಖನಿಜಯುಕ್ತಶಿಲೆಗಳು ಕರಗಿ, ಶಿಲಾಪಾಕವಾಗಿ ಪರಿಣಮಿಸಿದಾಗ, ಅದು ಜ್ವಾಲಾಮುಖಿ ರೂಪದಲ್ಲಿ ಭೂಮೇಲ್ಮೈ ಅಥವಾ ಭೂ ಒಳಸ್ತರದಲ್ಲೋ ಸ್ರವಿಸಿದಾಗ, ಜಲಾಂಶವು ಶಿಲಾಪಾಕದಿಂದ ವಿಸರ್ಜನೆ ಹೊಂದಿ ಅಲ್ಲಿನ ಶಿಲಾರಂಧ್ರಗಳು ಅಥವಾ ಶಿಲಾಬಿರುಕುಗಳ ಮೂಲಕ ಭೂಗತವಾಗುವುದು. ಇದನ್ನೇ ಅಗ್ನಿ ಜನಿತ ಅಥವಾ ಶಿಲಾಪಾಕ ಜಲ ಎಂದು ಕರೆಯುವರು.

ತಾತ್ಕಾಲಿಕ ಅಂತರ್ಜಲಮಟ್ಟ ಮತ್ತು ಸಾರ್ವಕಾಲಿಕ ಅಂತರ್ಜಲಮಟ್ಟ ಎಂದು ಎರಡು ಪದಗಳಿವೆ.

ಅಂತರ್ಜಲ ಸದಾ ತನ್ನ ಮಟ್ಟವನ್ನು ಕಾಯ್ದುಕೊಳ್ಳುವುದರಿಂದ ಅದು ಒಂದೇ ಕಡೆ ಸ್ಥಗಿತವಾಗಿರದೆ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಶಿಲಾಸ್ತರಗಳ ಗುಣಧರ್ಮ ಮತ್ತು ಇಳಿಜಾರನ್ನನುಸರಿಸಿ ಚಲಿಸುತ್ತದೆ. ಹೀಗೆ ಚಲಿಸುವಾಗ ಭೂಮಿಯ ಹೊರವಲಯಕ್ಕೆ ವಿವಿಧ ರೀತಿಯಲ್ಲಿ ಹೊರ ಬೀಳುವುದು. ಉದಾ: ಚಿಲುಮೆಗಳು, ಬಿಸಿನೀರಿನ ಊಟೆ, ಆರ್ಟಿಸಿಯನ್ ಬಾವಿ, ಗೇಯ್ಸರ್ ಇತ್ಯಾದಿ.

ಸವೆತ ಕಾರ್ಯ: ಅಂತರ್ಜಲದ ಸವೆತ ಕಾರ್ಯ ಭೌತಿಕ ಮತ್ತು ರಾಸಾಯನಿಕ ಕ್ರಿಯೆಗಳಿಂದ ಸಾಗುವುದು. ಸುಣ್ಣ ಕಲ್ಲು ಹಾಗೂ ಇತರ ಸರಂಧ್ರ ಶಿಲೆಗಳಿಂದ ರಚಿತವಾಗದ ಪ್ರದೇಶಗಳಲ್ಲಿ ಅಂತರ್ಜಲದ ಸವೆತ ಕಾರ್ಯ ತೀವ್ರವಾಗಿರುತ್ತದೆ. ಇದರಿಂದ ವಿವಿಧ ವಿಶಿಷ್ಟ ಭೂ ಸ್ವರೂಪಗಳು ನಿರ್ಮಾಣವಾಗುತ್ತವೆ. ಮಳೆಯ ನೀರಿನಲ್ಲಿ ಇಂಗಾಲದ–ಡೈ–ಆಕ್ಸೈಡ್ ಮಿಶ್ರಣವಾಗಿದ್ದು ಅದು ಸುಣ್ಣ ಕಲ್ಲು ಹಾಗೂ ಇತರ ಕರಗುವ ಶಿಲೆಗಳ ಮೇಲೆ ರಾಸಾಯನಿಕ ಕ್ರಿಯೆ ನಡೆಸಿ ದ್ರಾವಣವಾಗಿ ಪರಿಣಮಿಸುವುದು. ಈ ಮೂಲಕ ಅಲ್ಲಿಯ ಶಿಲಾಸ್ತರಗಳು ಸವೆತಕ್ಕೊಳಗಾಗುತ್ತವೆ ಹಾಗೂ ಅನೇಕ ರೀತಿಯ ಭೂಸ್ವರೂಪಗಳು ಉಂಟಾಗುತ್ತವೆ.




ಡೊಲೈನ್, ಪೋನಾರ್ ಮತ್ತು ಅಂತರ್ಗುಹೆ

ಮಳೆ ಬಿದ್ದಾಗ ಮಳೆಯ ನೀರಿನ ಒಂದು ಭಾಗ ಭೂಮಿಯಲ್ಲಿ ಇಂಗಿ ಭೂಗತವಾಗುವಾಗ ಇಂಗಾಲದ ಡೈ ಆಕ್ಸೈಡ್, ಸಾರಜನಕ ಮತ್ತು ಗಂಧಕ ವಸ್ತುಗಳೊಂದಿಗೆ ಮಿಶ್ರಣ ಹೊಂದುವುದು. ಇದರಿಂದಾಗಿ ಕೆಲವು ಶಿಲೆಗಳು ರಾಸಾಯನಿಕ ಪ್ರಕ್ರಿಯೆಗೊಳಗಾಗಿ ಕರಗಿ ದ್ರಾವಣವಾಗುವವು. ದ್ರಾವಣ ಭೂಗತವಾಗುವುದರಿಂದ ಸಂಧಿ ಕೂಟಗಳುಂಟಾಗುತ್ತವೆ. ಈ ಕ್ರಿಯೆ ಮುಂದುವರಿದಂತೆ ವಿವಿಧ ಭೂಸ್ವರೂಪಗಳುಂಟಾಗುತ್ತವೆ. ಉದಾ: ಲೇಪೀಜ್, ನುಂಗು ಬಿಲಗಳು, ಲಘುಕುಂಡ, ಪೋನಾರ್, ವುವಾಲಾ, ಪೋಲ್ಜೆ, ಸ್ವಾಭಾವಿಕ ಸೇತುವೆ ಇತ್ಯಾದಿ.

ಡೊಲೈನ್ಸ್: ಸುಣ್ಣಕಲ್ಲು ಅಥವಾ ಮೆದು ಸುಣ್ಣಕಲ್ಲು ಪ್ರದೇಶದಲ್ಲಿನ ಶಿಲೆಗಳು ಕರಗುವ ಪ್ರಮಾಣವು ಹೆಚ್ಚಾಗಿದ್ದರೆ, ನುಂಗು ಬಿಲಗಳು ಅಗಲವಾಗುತ್ತಾ ತಟ್ಟೆಯಾಕಾರದಲ್ಲೋ ಅಥವಾ ದೊಡ್ಡ ಆಲಿಕೆಯಾಕಾರದಲ್ಲೋ ಆಳವಿಲ್ಲದ ತಗ್ಗುಗಳಾಗಿ ಉಂಟಾಗುತ್ತವೆ. ಇವುಗಳಿಗೆ ಡೊಲೈನ್ ಅಥವಾ ಲಘು ಕುಂಡವೆಂದು ಕರೆಯುವರು.

ಪೋನಾರ್: ಆಳವೂ ಮತ್ತು ಲಂಬವೂ ಆದ ಸುಣ್ಣ ಕಲ್ಲು ಪ್ರದೇಶದ ನಾಳಗಳಿಗೆ ಪೋನಾರ್ ಅಥವಾ ಸುಣ್ಣಕಲ್ಲು ಕೂಪವೆಂದು ಹೆಸರು. ಅಂತರ್ಜಲ ಭೂಮಿಯೊಳಗೆ ಪ್ರವೇಶಿಸುವಾಗ ಸುಣ್ಣಕಲ್ಲನ್ನು ಕರಗಿಸಿ ಆಳವಾದ ಮತ್ತು ಅಗಲವಾದ ಕೂಪಗಳನ್ನು ನಿರ್ಮಿಸುತ್ತದೆ. ಅವುಗಳ ಗಾತ್ರ ಅಲ್ಲಿಯ ಶಿಲಾರಚನೆ ಮತ್ತು ಕರಗಿಸುವ ಅಂತರ್ಜಲದ ಸಾಮರ್ಥ್ಯಗಳನ್ನವಲಂಬಿಸಿದೆ. ಇವು ಭೂಮಿಯ ಬಾಹ್ಯ ಪ್ರದೇಶದಿಂದ ಭೂಗರ್ಭದ ಅಂತರ್ಗುಹೆಗಳೊಡನೆ ಸಂಪರ್ಕ ಕಲ್ಪಿಸುತ್ತವೆ. ತೊರೆಯೊಂದು ಪೋನಾರ್ ಮೂಲಕ ಇಳಿದು ಅಂತರ್ಗತ ಜಲ ಪ್ರವಾಹವಾಗಿ ಹರಿಯಬಹುದು. ಉದಾ: ಪಶ್ಚಿಮ ಯಾರ್ಕ್‌ಷೈರ್‌ನ ಗೇಪಿಂಗ್‌ಘಿಲ್. ಇದು 111 ಮೀ ಆಳವಾಗಿಯೂ 146 ಮೀ ಉದ್ದವಾಗಿಯೂ 33 ಮೀ ಎತ್ತರವಾಗಿಯೂ ಇದೆ. ಪಿರನೀಸ್ ಪರ್ವತ ಪ್ರದೇಶದ ಗೌಪರ್–ಡಿ–ಸೈಂಟ್ ಮಾರ್ಟಿನ್.

ಪೊಳ್ಳುಗ್ಳಿ: ಇದು ಲಘು ಕುಂಡಗಳಿಗಿಂತ ದೊಡ್ಡದಾದುದು. ಪರಸ್ಪರ ಹತ್ತಿರದಲ್ಲಿ ರಚಿತವಾಗಿರುವ ಲಘು ಕುಂಡಗಳು ಕೂಡಿಕೊಂಡು ದೊಡ್ಡ ಪೂಟರೆಯಂತಿರುವ ವಿಶಾಲ ತಗ್ಗು ಉಂಟಾಗುತ್ತದೆ. ಅದನ್ನೆ ಪೊಳ್ಳುಗ್ಳಿ ಅಥವಾ ಯವಾಲಾ ಎಂದು ಕರೆಯುವರು.

ಪೋಲ್ಜೆ: ಪೊಳ್ಳುಗ್ಳಿಗಳು ಅಂತರ್ಜಲದ ರಾಸಾಯನಿಕ ಕ್ರಿಯೆಯಿಂದ ವಿಸ್ತಾರವಾಗುವುದರಿಂದಲೋ ಅಥವಾ ಅಂತರ್ಗುಹೆಯ ಮೇಲ್ಛಾವಣಿ ಕುಸಿದು ಬೀಳುವುದರಿಂದಲೋ ಉಂಟಾದ ದೀರ್ಘಾಂಡ ವೃತ್ತಾಕಾರದ ತಗ್ಗುಗಳಿಗೆ ಪೋಲ್ಜೆಗಳೆಂದು ಹೆಸರು. ಇವು ಭೂಮಿಯ ಬಾಹ್ಯ ಪ್ರದೇಶದಿಂದ ಭೂಗರ್ಭದ ಅಂತರ್ಗುಹೆಗಳೊಡನೆ ಸಂಪರ್ಕ ಕಲ್ಪಿಸುತ್ತವೆ. ತೊರೆಯೊಂದು ಪೋನಾರ್ ಮೂಲಕ ಇಳಿದು ಅಂತರ್ಗತ ಜಲ ಪ್ರವಾಹವಾಗಿ ಹರಿಯಬಹುದು. ಉದಾ: ಅಮೆರಿಕ ಸಂಯುಕ್ತ ಸಂಸ್ಥಾನದ ವರ್ಜೀನಿಯದ ಸ್ವಾಭಾವಿಕ ಸೇತುವೆ.

ಶುಷ್ಕ ಕಣಿವೆ: ಸುಣ್ಣ ಕಲ್ಲು ಪ್ರದೇಶದಲ್ಲಿ ವಿಪರೀತ ಮಳೆಯಾದ ಸಂದರ್ಭದಲ್ಲಿ ತಾತ್ಕಾಲಿಕ ತೊರೆಗಳು ಹುಟ್ಟಿಕೊಳ್ಳುತ್ತವೆ. ಇವು ಹರಿಯುವ ಮಾರ್ಗದುದ್ದಕ್ಕೂ ವಸ್ತುಗಳನ್ನು ಸವೆಸುತ್ತವೆ. ತೊರೆಯ ಆಳ ಕೊರೆತ ಮತ್ತು ಪಾರ್ಶ್ವ ಕೊರೆತದಿಂದಾಗಿ ಕಣಿವೆ

ನಿರ್ಮಾಣವಾಗುತ್ತದೆ. ಅನಂತರ ತೊರೆ ಬತ್ತಿ ಹೋಗುತ್ತದೆ. ಹೀಗೆ ನಿರ್ಮಾಣಗೊಂಡ ಸುಣ್ಣಕಲ್ಲು ಪ್ರದೇಶದ ಕಣಿವೆಗೆ ಶುಷ್ಕ ಕಣಿವೆ ಎನ್ನುವರು. ಇನ್ನು ಕೆಲವು ವೇಳೆ ಮುಂದೆ ಹರಿಯುತ್ತಿದ್ದ ತೊರೆ ಶಿಲಾಸಂಧಿಕೂಟಗಳಲ್ಲಿ ಅದೃಶ್ಯವಾಗುವುದರಿಂದಲೂ ಮತ್ತು ಜಲಪೀಠದ ಮಟ್ಟ ಕೆಳಗಿಳಿಯುವುದರಿಂದಲೂ ಕಣಿವೆಗಳು ಶುಷ್ಕವಾಗಿ ಪರಿಣಮಿಸುತ್ತವೆ. ಈ ರೀತಿಯ ಕಣಿವೆಗಳ ಉಗಮ ಹೆಚ್ಚು ಕಡಿಮೆ ಅಂಧಕಣಿವೆಯನ್ನು ಹೋಲುತ್ತದೆ.




ಸಂಚಯನ ಕಾರ್ಯ: ಅಂತರ್ಜಲದಲ್ಲಿ ಕರಗಿದ ಅನೇಕ ವಸ್ತುಗಳು, ನೀರು ಆವಿಯಾಗಿ ಅನಂತರ ಉಳಿಯುವುದರಿಂದಲೋ, ದ್ರಾವಣ ಸಂಚಯ ಅಥವಾ ಚಿಲುಮೆಗಳು ಸ್ರವಿಸುವಾಗಲೋ ವಸ್ತುಗಳು ಸಂಚಯನವಾಗುತ್ತವೆ. ಸಂಚಯನದಿಂದ ಕೆಲವು ಭೂ ಸ್ವರೂಪಗಳು ಉಂಟಾಗುತ್ತವೆ. ಉದಾ: ಆರೋಹಿ ಶಂಖು, ಅವರೋಹಿ ಶಂಖು, ಸುಣ್ಣಕಲ್ಲುಗಂಬ, ಶಿಲಾಪರದೆ ಇತ್ಯಾದಿ.

ಆರೋಹಿ ಶಂಖು: ಸುಣ್ಣ ಕಲ್ಲಿನ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ಶಿಲಾ ಸಂಧಿಕೂಟಗಳ ಮೂಲಕ ಇಂಗುವಾಗ ಸುಣ್ಣದಕಲ್ಲು ನೀರಿನಲ್ಲಿ ಕರಗಿ ದ್ರಾವಣವಾಗುತ್ತದೆ. ಈ ದ್ರಾವಣ ಅಂತರ್ಗುಹೆಯ ಮೇಲ್ಭಾವಣಿಯಿಂದ ಹನಿ ಹನಿಯಾಗಿ ಗುಹೆಯ ತಳಕ್ಕೆ ತೊಟ್ಟಿಕ್ಕುವುದು. ಅದು ಬಾಷ್ಪೀಕೃತವಾಗಿ, ಅದರಲ್ಲಿ ಕರಗಿದ್ದ ಖನಿಜ ಮತ್ತು ಲವಣಾಂಶಗಳು ಘನೀಕರಿಸಿ ರಚಿತವಾಗುವ ಕ್ಯಾಲ್ಸಿಯಂಕಾರ್ಬೋನೇಟ್ ಸ್ತಂಭಾಕೃತಿ ಶಂಖುಗಳನ್ನು ಆರೋಹಿ ಶಂಖು ಅಥವಾ ತಳಗಟ್ಟು ಶಂಖು ಎಂದು ಕರೆಯುವರು. ಇವು ಊರ್ಧ್ವ ಮುಖವಾಗಿ ಬೆಳೆಯುತ್ತಾ ಹೋಗುತ್ತವೆ. ಇವು ಆಕಾರದಲ್ಲಿ ಮೋಟವಾಗಿಯೂ ಮತ್ತು ದಪ್ಪವಾಗಿಯೂ ರಚಿತವಾಗಿರುತ್ತವೆ. ಉದಾ: ಫ್ರಾನ್ಸಿನ ಗ್ರಾಂಡ್ಸ್‌ಕಾಸ್ಸ್. ಇದು 23 ರಿಂದ 25 ಮೀ ಎತ್ತರಕ್ಕೆ ಬೆಳೆದಿದೆ. ಅದೇ ರೀತಿ ಎವೆನ್ ಆರ್ಮಂಡ್ ಮತ್ತು ಕೌಲಾಲಂಪುರದ ಸಮೀಪದಲ್ಲಿಯೂ ಆರೋಹಶಂಖುಗಳು ಕಂಡುಬರುತ್ತವೆ. ಇದನ್ನು ಊರ್ಧ್ವ ಮುಖ ತೊಂಗಲು ಎಂತಲೂ ಕರೆಯುವರು.

ಅವರೋಹಿ ಶಂಖು: ಸುಣ್ಣದ ಕಾರ್ಬೋನೇಟ್‌ಗಳನ್ನೊಳಗೊಂಡ ದ್ರಾವಣ ಅಂತರ್ಗುಹೆಯ ಮೇಲ್ಭಾವಣಿಯಿಂದ ಹನಿ ಹನಿಯಾಗಿ ಗುಹೆಯ ತಳಭಾಗಕ್ಕೆ ಬೀಳುವುದಕ್ಕೆ ಮುಂಚೆ ಅದರಲ್ಲಿರುವ ನೀರು ಬಾಷ್ಪೀಕೃತವಾಗುವುದು. ಅದರಲ್ಲಿ ಕರಗಿದ್ದ ಕ್ಯಾಲ್ಸಿಯಂ ಕಾರ್ಬೋನೇಟ್ ಅಂಶ ಅಲ್ಲೇ ನಿಕ್ಷೇಪಗೊಂಡು ಘನೀಭವಿಸಿ ಗುಹೆಯ ಮೇಲ್ಭಾವಣಿಗೆ ಅಂಟಿಕೊಂಡಂತೆ ಅಧೋಮುಖವಾಗಿ ಬೆಳೆಯುತ್ತಾ ಹೋಗುವುದು. ಇಂತಹ ಸುಣ್ಣಕಲ್ಲು ಶಂಖುಗಳಿಗೆ ಅವರೋಹಿ ಶಂಖು ಅಥವಾ ಚಾವಣಿ ಸುಣ್ಣ ಶಂಖು ಎಂದು ಕರೆಯುವರು. ಯಾರ್ಕ್‌ಷೈರ್‌ಗೆ ಸಮೀಪದ ಇಂಗಲ್‌ಬರೋವಿನ ಗುಹೆಗಳಲ್ಲಿ ಹಾಗೂ ಮಲೇಶಿಯಾದ ಕೌಲಾಲಂಪುರಕ್ಕೆ ಸಮೀಪದ ಪ್ರದೇಶದಲ್ಲಿ ಇಂತಹ ಶಂಖುಗಳು ಕಂಡುಬರುತ್ತವೆ. ಇದನ್ನು ಅಧೋಮುಖ ತೊಂಗಲು ಎಂದೂ ಕರೆಯುವರು.

ಕೆಲವು ವೇಳೆ ಆರೋಹಿ ಶಂಖು ಮತ್ತು ಅವರೋಹಿ ಶಂಖುಗಳೆರಡು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಬೆಳೆಯುತ್ತಾ ಕ್ರಮೇಣ ಅವು ಒಟ್ಟುಗೂಡಿದಾಗ ಅಂತರ್ಗುಹೆಯ ಸುಣ್ಣಕಲ್ಲುಗಂಬಗಳಾಗಿ ಪರಿಣಮಿಸುತ್ತವೆ.

ಶಿಲಾಪರದೆ: ಸುಣ್ಣ ಕಲ್ಲಿನ ಅಂತರ್ಗುಹೆಗಳ ಮೇಲ್ಭಾವಣಿಯಿಂದ ತೂಗುಬಿದ್ದ ಅವರೋಹಿ ಶಂಖುಗಳ ಸರಣಿಗೆ ಹೀಗೆನ್ನಬಹುದು. ಅಂತರ್ಗುಹೆಯ ಮೇಲ್ಭಾವಣಿಯಲ್ಲಿನ ಅಸಂಖ್ಯಾತ ಶಿಲಾ ಸಂಧಿಕೂಟಗಳ ಮೂಲಕ ಸ್ರವಿಸುವ ಸುಣ್ಣ ಕಲ್ಲು ದ್ರಾವಣ ಉದ್ದಕ್ಕೂ ಬಿದ್ದು, ಘನೀಭವಿಸಿ ತೋರಣದಂತೆ ಕೆಳಮುಖವಾಗಿ ಬೆಳೆದ ಅವರೋಹಿ ಶಂಖುಗಳ ಸರಣಿಗೆ ಶಿಲಾಪರದೆ ಎಂದು ಕರೆಯುವರು.

ಚಿಲುಮೆ ನಿಕ್ಷೇಪ: ಬಿಸಿನೀರಿನ ಚಿಲುಮೆಯ ಬಾಯಿಯಲ್ಲಿ ಸಿಲಿಕಾನ್ ಅಥವಾ ಇತರ ಲವಣಾಂಶಗಳು ಸಂಚಯವಾಗುತ್ತವೆ. ಸಿಲಿಕಾನ್ ವಸ್ತುವನ್ನು ಹೆಚ್ಚಾಗಿ ಒಳಗೊಂಡ ಸಂಚಯನಕ್ಕೆ ಸಿಲಿಕಾನ್ ಸೆಂಟರ್ ಎಂದು ಕರೆಯಲಾಗಿದೆ. ಇನ್ನು ಕೆಲವು ಸಂದರ್ಭದಲ್ಲಿ ಕಾರ್ಬೋನೇಟ್‌ಗಳು ಸಂಚಯನವನ್ನು ಒಟ್ಟಾಗಿ ಟ್ರಾವರ್ಟೈನ್ ಎಂದು ಕರೆಯುವರು. ಉದಾ: ಯಲ್ಲೋಸ್ಟೋನ್ ರಾಷ್ಟ್ರೀಯ ಉದ್ಯಾನವನ.




**1) ಅಂತರ್ಗುಹೆ, 2) ಅವರೋಹಿ ಶಂಕು, 3) ಆರೋಹಿ ಶಂಕು, 4) ಸುಣ್ಣಕಲ್ಲು**

ಸುಣ್ಣಕಲ್ಲು ಪ್ರದೇಶದ ಭೂಸವೆತ ಚಕ್ರ: ಅಂತರ್ಜಲದ ಕಾರ್ಯ ಸುಣ್ಣಕಲ್ಲು ಪ್ರದೇಶದಲ್ಲಿ ಪ್ರಧಾನವಾಗಿರುತ್ತದೆ. ಹಾಗಾಗಿ ಅಂತರ್ಜಲಕ್ಕೂ ಮತ್ತು ಸುಣ್ಣ ಕಲ್ಲು ಪ್ರದೇಶದ ಭೂಸ್ವರೂಪಗಳ ಆವರ್ತನಕ್ಕೂ ನಿಕಟವಾದ ಸಂಬಂಧವಿದೆ. ನದಿಯ ಭೂಸವೆತ ಚಕ್ರಕ್ಕಿಂತ ಸುಣ್ಣ ಕಲ್ಲು ಪ್ರದೇಶದ ಆವರ್ತನೆ ಭಿನ್ನವಾದುದು. ಆದರೂ ಇತರ ಭೂಸವೆತ ಆವರ್ತನೆಗಳಿಗಿಂತ ಇದು ಸುಲಭವಾದುದು. ಇದಕ್ಕೆ ಎರಡು ಪ್ರಮುಖ ಕಾರಣಗಳಿವೆ: 1. ಏಕರೀಖಿಯಾದಂತಹ ಸುಣ್ಣಕಲ್ಲು ರಚನೆ ಮತ್ತು 2. ದ್ರಾವಣೀಕರಣ ಕ್ರಿಯೆಯ ಪ್ರಾಧಾನ್ಯತೆ. ಆದಾಗ್ಯೂ ಅಂತರ್ಜಲದ ಚಲನೆಯ ಸ್ವರೂಪ ಮತ್ತು ಸವೆತದ ಆಧಾರ ತಳಗಳು ನಿಖರವಾಗಿರುವುದಿಲ್ಲ.

ಸುಣ್ಣಕಲ್ಲು ಪ್ರದೇಶದ ಭೂಸವೆತ ಆವರ್ತನೆಯನ್ನು ಕುರಿತು ಜೆ. ಡಬ್ಲ್ಯೂ. ಬೀಡೆ (1911), ಜೋವೆನ್ ಸಿವಿಜಿಕ್ (1918) ಹಾಗೂ ವಿಲಿಯಂ ಮಾರಿಸ್ ಡೇವಿಸ್‌ರವರು (1930) ತಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸಿರುವರು. ಇತರ ಭೂಸವೆತ ಆವರ್ತನೆಗಳಿಗಿಂತ ಇದು ಭಿನ್ನವಾಗಿರುವುದಿಲ್ಲವೆಂಬುದು ಡೇವಿಸ್‌ನ ಅಭಿಪ್ರಾಯವಾಗಿದೆ. ಆದರೆ ಇತರ ವಿಜ್ಞಾನಿಗಳು ಇದೊಂದು ವಿಭಿನ್ನವಾದ ಆವರ್ತನೆ ಎಂದು ಪ್ರತಿಪಾದಿಸಿರುವರು. ಡಿನಾರಿಕ್ ಸುಣ್ಣಕಲ್ಲು ಪ್ರದೇಶದ ಭೂಸ್ವರೂಪಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಅನಂತರ ಜೋವೆನ್ ವಿಜಿಕ್ ಮೂರಕ್ಕೆ ಬದಲಾಗಿ ತನ್ನ ನಾಲ್ಕು ಅವಸ್ಥೆಯ ಭೂಸವೆತ ಚಕ್ರದ ಪರಿಕಲ್ಪನೆಯನ್ನು ಪ್ರತಿಪಾದಿಸಿದ. ಅವುಗಳೆಂದರೆ:

ಬಾಲ್ಯಾವಸ್ಥೆ: ಭೂಮೇಲ್ಮೈಗೆ ತೆರೆದುಕೊಂಡಿರುವ ಮಂದವಾದ ಸುಣ್ಣಕಲ್ಲು ಸ್ತರವಿರುವ ಭಾಗಗಳಲ್ಲಿ ಬಿದ್ದ ಮಳೆಯ ನೀರು ಹರಿಯುವ ಅಥವಾ ಭೂಗತವಾಗುವ ಮೂಲಕ ಸುಣ್ಣಕಲ್ಲು ಪ್ರದೇಶದ ಭೂಸವೆತ ಆವರ್ತನೆ ಪ್ರಾರಂಭಗೊಳ್ಳುವುದು. ಒಂದು ವೇಳೆ ಭೂಮೇಲ್ಮೈಗೆ ಸುಣ್ಣಕಲ್ಲು ತೆರೆದುಕೊಳ್ಳದೆ, ಅದರ ಮೇಲೆ ಸುಣ್ಣದಂಶ ರಹಿತವಾದ ಶಿಲಾಕಣ ಅಥವಾ ಮಣ್ಣಿನಿಂದ ಸಂಚಿತ ತೆಳುವಾದ ಸ್ತರವಿದ್ದರೆ, ಅದು ಹರಿಯುವ ನೀರಿನೊಂದಿಗೆ ಕ್ರಮೇಣ ಕೊಚ್ಚಿಹೋಗುವುದು.

ಮಳೆಯ ನೀರಿನೊಂದಿಗೆ ವಾಯುಮಂಡಲದ ಇಂಗಾಲಾಮ್ಲ ವಿಲೀನಗೊಂಡಿರುತ್ತದೆ. ಅಂತಹ ನೀರು ಸುಣ್ಣಕಲ್ಲು ಸಂದುಗಳಲ್ಲಿ ಪ್ರವೇಶಿಸುವುದು. ಸಂಧಿಕೂಟಗಳ ಬದಿಗಳು ಕರಗಿ ದ್ರಾವಣವಾಗುವುದರಿಂದ ನುಂಗುಬಿಲಗಳು ನಿರ್ಮಾಣಗೊಳ್ಳುವುವು. ದ್ರಾವಣೀಕರಣ ಕ್ರಿಯೆ ಮುಂದುವರಿದಂತೆ ನುಂಗು ಬಿಲಗಳ ಬದಿಗಳು ಸವೆದು ದೊಡ್ಡವಾಗುತ್ತವೆ. ಇದರಿಂದ ಲೆಪೀಜ್‌ಗಳು ವಿಸ್ತಾರಗೊಂಡು ಡೋಲೈನ್‌ಗಳು ನಿರ್ಮಾಣಗೊಳ್ಳುವುವು. ಇವುಗಳ ಮೂಲಕ ಹರಿಯುವ ನೀರು ಅಂಧಕಣಿವೆಯಲ್ಲಿ ಅಂತರ್ಗತವಾಗುವುದು. ಈ ಅಂತರ್ಜಲ ಸಮಾನಾಂತರವಾದ ಸಂದುಗಳ ಮೂಲಕ ಪ್ರವಹಿಸುವಾಗ ದ್ರಾವಣೀಕರಣ ಮತ್ತು ಘರ್ಷಣೆ ಕ್ರಿಯೆಗಳಿಂದ ಅಂತರ್ಗುಹೆ ಮತ್ತು ಪೊಳ್ಳಗಿವಿಗಳು ನಿರ್ಮಾಣಗೊಳ್ಳುವುವು. ಇವು ಬಾಲ್ಯಾವಸ್ಥೆಯ ಪ್ರಮುಖ ಪ್ರಕ್ರಿಯೆಗಳ ಭೂಸ್ವರೂಪಗಳಾಗಿವೆ.

ಆದಿ ಯೌವನಾವಸ್ಥೆ: ಈ ಅವಸ್ಥೆಯಲ್ಲಿ ಭೂ ಮೇಲ್ಭಾಗದಲ್ಲಿ ಹರಿಯುವ ನೀರು ಭೂಮಿಯಲ್ಲಿ ಅಂತರ್ಗತವಾಗಿ ಹರಿಯಲು ಪ್ರಾರಂಭಿಸುವುದು. ಪರಿಣಾಮವಾಗಿ ಅಲ್ಲಿನ ಭೂಮೇಲ್ಭಾಗ ಜಲರಹಿತ ಬರಡು ಭಾಗವಾಗಿ ಪರಿಣಮಿಸುವುದು. ಅಂತರ್ಗುಹೆಯ ತಳದಲ್ಲಿ ಸಾಕಷ್ಟು ನೀರು ಹರಿಯುವಾಗ ದ್ರಾವಣೀಕರಣ ಮತ್ತು ಘರ್ಷಣೆ ಕ್ರಿಯೆಗಳು ವರ್ಧನೆಗೊಂಡು ಅಸಂಖ್ಯಾತ ಕೊರಕಲುಗಳು ನಿರ್ಮಾಣಗೊಳ್ಳುವುವು. ಡೋಲೈನ್‌ಗಳು, ಅಂಧಕಣಿವೆ ಮತ್ತು ಅಂತರ್ಗುಹೆಗಳು ವಿಸ್ತಾರಗೊಳ್ಳಲು ಪ್ರಾರಂಭವಾಗುವುವು.

ಅಂತಿಮ ಯೌವನಾವಸ್ಥೆ: ಈ ಹಂತದಲ್ಲಿ ಅಂತರ್ಗುಹೆ ಮತ್ತು ಪೊಳ್ಳವಿಗಳು ವಿಸ್ತಾರಗೊಳ್ಳುವುವು. ಪರಿಣಾಮವಾಗಿ ಅವುಗಳ ಮೇಲ್ಛಾವಣಿಗಳು ತೆಳುವಾಗಿ ಸಡಿಲಗೊಳ್ಳುವುದರಿಂದ ಕುಸಿದು ಬಿದ್ದು ವುವಾಲ, ಪೋಲ್ಜೆಗಳು ಮತ್ತು ಸುಣ್ಣಕಲ್ಲು ಕಿಂಡಿಗಳು ನಿರ್ಮಾಣಗೊಳ್ಳುವುವು. ಇವೆರಡೂ ವಿಧದ ವಿಸ್ತಾರವಾದ ತಗ್ಗುಗಳ ನಡುವೆ ಅಳಿದುಳಿದ ಭಾಗಗಳು ಎತ್ತರವಾದ ಹಾಗೂ ಅಲ್ಲಲ್ಲಿ ಏರುತಗ್ಗುಗಳಿಂದ ಕೂಡಿದ ಚಿಕ್ಕ ಚಿಕ್ಕ ಬೆಟ್ಟಗಳ ಸರಣಿಗಳು ರೂಪುಗೊಳ್ಳುವುವು. ಇವೆಲ್ಲವನ್ನು ಗಮನಿಸಿದಾಗ ಈ ಹಂತದಲ್ಲಿ ವಿನಾಶಕ ಕಾರ್ಯಗಳೇರ್ಪಡುವುದು ಸ್ಪಷ್ಟವಾಗುತ್ತದೆ.

ವೃದ್ಧಾಪ್ಯ ಅವಸ್ಥೆ: ಈ ಅವಸ್ಥೆಯಲ್ಲಿ ಗುಹೆಗಳ ಮೇಲ್ಛಾವಣಿಗಳು ಸಂಪೂರ್ಣವಾಗಿ ಕುಸಿದು ಬೀಳುವುವು. ವುವಾಲಗಳ ನಡುವೆ ನಿರ್ಮಿತಗೊಂಡಿದ್ದ ಏರುತಗ್ಗುಗಳುಳ್ಳ ಚಿಕ್ಕ ಬೆಟ್ಟಗಳಂತಹ ಸರಣಿಗಳ ಎತ್ತರವು ಕುಗ್ಗುವುದು ಮತ್ತು ಅವುಗಳ ಅಗಲ ಕಿರಿದಾಗುವುದು. ಕಾರ್ಬೋನೇಟ್ ಶಿಲೆಗಳು ಭೂಮಟ್ಟದಿಂದ ಮೇಲೆದ್ದು ನಿಲ್ಲುವುವು. ಅವುಗಳಿಗೆ ಅವಶಿಷ್ಟ ದಿಣ್ಣೆಗಳೆಂದು ಕರೆಯುವರು. ಬಹುಪಾಲು ನೆಲ ಸಮತಟ್ಟಾಗುವುದರಿಂದ ಅದು ಸಮಪ್ರಾಯ ಮೈದಾನದಂತೆ ಕಂಡುಬರುವುದು. ಅಂತರ್ಗತವಾಗಿದ್ದ ನೀರು ಮೇಲ್ಭಾಗದಲ್ಲೇ ಹರಿಯುವುದು ಗೋಚರಿಸುವುದು. ನುಂಗುಬಿಲ, ಡೋಲೈನ್, ಅಂಧಕಣಿವೆ ಇತ್ಯಾದಿ ಸ್ವರೂಪಗಳು ಅದೃಶ್ಯವಾಗುವುವು. (ಪಿ.ಎಂ.)

**ನಗ್ನೀಕರಣದ ಕರ್ತೃವಾಗಿ ಸಮುದ್ರ ಅಲೆಗಳ ಕಾರ್ಯ:** ನಗ್ನೀಕರಣದ ಕರ್ತೃಗಳಲ್ಲಿ ಸಮುದ್ರವು ಮಹತ್ವವುಳ್ಳದ್ದೂ ಹಾಗೂ ವಿಭಿನ್ನವಾದುದಾಗಿದೆ. ಇದರ ಕಾರ್ಯವು ವಿಶೇಷವಾಗಿ ಕಿರಿದಾದ ಕಡಲ ವಲಯಕ್ಕೆ ಸೀಮಿತವಾಗಿದೆ. ಈ ನಗ್ನೀಕರಣ ಕರ್ತೃವಿನಿಂದ ಸೃಷ್ಟಿಯಾದ ಕಡಲ ಭೂ ಸ್ವರೂಪಗಳು ಬೇರಾವುದೇ ಸ್ವರೂಪಗಳಿಗಿಂತ ಸಂಕೀರ್ಣವೂ ಹಾಗೂ ಆಕರ್ಷಣೀಯವಾದವುಗಳಾಗಿವೆ. ಇವು ಸಾಗರ ಅಲೆಗಳು, ಸಾಗರ ಪ್ರವಾಹ ಮತ್ತು ಉಬ್ಬರವಿಳಿತಗಳ ಸಂಯುಕ್ತ ಕಾರ್ಯಚರಣೆಗಳಿಂದ ನಿರ್ಮಾಣವಾಗುವುವು. ಆದಾಗ್ಯೂ ಸಮುದ್ರ ಅಲೆಗಳ ಪಾತ್ರವು ಪ್ರಧಾನವಾದುದು. ಅದರಲ್ಲೂ ಮಾರುತಗಳ ಸಂಘರ್ಷಣೆಯಿಂದ ಸೃಷ್ಟಿಯಾದ ಅಲೆಗಳು ಪ್ರಮುಖವಾದವು. ಸಮುದ್ರ–ಸಾಗರಗಳ ನೀರು ಸ್ಥಿರವಾಗಿರುವುದಿಲ್ಲ. ಅದು ಚಲನೆಯನ್ನು ಹೊಂದಿದೆ. ಸಮುದ್ರದ ನೀರಿನ ಮೇಲ್ಮೈ ಅಲೆಯ ರೂಪದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತದೆ. ಸಮುದ್ರದ ನೀರಿನ ಕಣಗಳ ಓಲಾಟ ಅಥವಾ ಆಂದೋಲನವೇ ಅಲೆ ಗಾಳಿ ಬೀಸುವಾಗ ಸಮುದ್ರದ ನೀರಿನ ಮೇಲ್ಮೈಯಲ್ಲಿ ಘರ್ಷಣೆ ಉಂಟಾಗುವುದರಿಂದ ಅಲೆಗಳು ಉಂಟಾಗುತ್ತವೆ. ಕೆಲವು ಸಂದರ್ಭಗಳಲ್ಲಿ ಭೂಕಂಪದಿಂದಲೂ ಅಲೆಗಳು ಉಂಟಾಗುತ್ತವೆ. ಉದಾ: ಸುನಾಮಿ.

ವಿಶಾಲವಾದ ಸಾಗರ–ಸಮುದ್ರಗಳ ನಡುವಲಯದಿಂದ ಅಲೆಗಳು ಮುನ್ನಡೆಯುವಾಗ ನೀರಿನ ಕಣಗಳು ಮೇಲೆದ್ದು ವರ್ತುಲಾಕಾರದಲ್ಲಿ ಹಿಂದೆ–ಮುಂದೆ ಚಲಿಸುತ್ತವೆ. ಸಮುದ್ರ ಮಟ್ಟಕ್ಕೆ ನೀರಿನ ಕಣಗಳ ವರ್ತುಲಾ ಪಥದ ವ್ಯಾಸ ಅಲೆಯ ಎತ್ತರಕ್ಕೆ ಸಮನಾಗಿರುತ್ತದೆ. ಆದರೆ ವ್ಯಾಸ ಸಮುದ್ರ ಮಟ್ಟದಿಂದ ತಳದಲ್ಲಿ ಕಡಿಮೆಯಾಗುತ್ತದೆ. ಅಲೆಗಳ ಅತ್ಯಂತ ಎತ್ತರದ ಮೇಲ್ತುದಿಗೆ ಅಲೆಯ ಶಿಖೆಯೆಂತಲೂ, ಅಲೆಯ ಅತ್ಯಂತ ತಗ್ಗು ಪಾತ್ರಕ್ಕೆ ಅಲೆಯತಗ್ಗು ಎಂತಲೂ ಕರೆಯಲಾಗಿದೆ. ಅಲೆಯ ಶಿಖೆ ಮತ್ತು ತಗ್ಗುಗಳ ನಡುವಣ ಲಂಬಾಂತರವೇ ಅಲೆಯ ಎತ್ತರವೆಂತಲೂ ಕರೆಯುವರು. ಸಾಮಾನ್ಯವಾಗಿ ಅಲೆಯ ಎತ್ತರವು 12 ರಿಂದ 15 ಮೀ ಗಳಾಗಿರುತ್ತವೆ. ಅಲೆಯ ಎರಡು ಶಿಖೆಗಳ ಅಥವಾ ಎರಡು ತಗ್ಗುಗಳ ನಡುವಣ ಸಮತಲ ಅಂತರವೇ ಅಲೆಯ ಉದ್ದವಾಗಿರುತ್ತದೆ. ಸಾಮಾನ್ಯವಾಗಿ ಅಲೆಗಳು 11 ರಿಂದ 28ಮೀ ಉದ್ದವಾಗಿರುತ್ತವೆ. ಅಲೆಯ ಎತ್ತರಕ್ಕಿಂತ ಅಲೆಗಳ ಉದ್ದ ಹೆಚ್ಚಾಗಿರುವುದು ಸರ್ವಸಾಮಾನ್ಯ. ತೀರದ ಸಮೀಪದಲ್ಲಿ ಸಮುದ್ರದ ಅಲೆ ಒಂದು ಶಿಖೆಯಿಂದ ಮತ್ತೊಂದು ಶಿಖೆಯವರೆಗೆ ಚಲಿಸಲು ತೆಗೆದುಕೊಳ್ಳುವ ಅವಧಿಯನ್ನು ಅಲೆಯ ಚಲನಾವಧಿ ಎಂದು ಪರಿಗಣಿಸಲಾಗಿದೆ.

ಅಲೆಯ ಚಲನಾ ವೇಗ ವಿಶೇಷವಾಗಿ ಅವುಗಳ ಉದ್ದ ಮತ್ತು ನೀರಿನ ಆಳವನ್ನವಲಂಬಿಸಿರುತ್ತದೆ. ಸಮುದ್ರ ತೀರದ ಕಡೆಗೆ ಸಮುದ್ರದ ಅಲೆಗಳು ಚಲಿಸಿ ಬಂದಂತೆಲ್ಲಾ ಅದರ ಪಾತ್ರದ ಆಳ ಕಡಿಮೆಯಾಗುತ್ತದೆ. ಒಂದು ವೇಳೆ ನೀರು ಆಳವಾಗಿಲ್ಲದಿದ್ದರೆ ಅಲೆಯ ತಳಭಾಗವು ಆಳವಿಲ್ಲದ ಸಮುದ್ರ ತಳದ ಘರ್ಷಣೆ ಹಾಗೂ ಅಡಚಣೆಗಳಿಂದಾಗಿ ಹಿಂದೆ ಸರಿಯುತ್ತದೆ. ಆದ್ದರಿಂದ ಅಲೆಯು ವಿರೂಪಗೊಳ್ಳುವುದು. ಇದರಿಂದ ಅಲೆಯ ಎತ್ತರ ಹೆಚ್ಚಾಗುತ್ತದೆ. ಆದರೆ ಅಲೆಯ ಉದ್ದ ಕಡಿಮೆಯಾಗುತ್ತದೆ. ಅಲೆಯ ಶಿಖೆ ಭಾಗ ಇನ್ನೂ ಎತ್ತರವಾಗುತ್ತದೆ. ಇದಕ್ಕೆ ಪ್ರತಿಯಾಗಿ ತಗ್ಗುಭಾಗ ಇನ್ನೂ ತಗ್ಗುತ್ತದೆ. ಅಲೆ ಎತ್ತರ ಹೆಚ್ಚಾದಾಗ ಅದು ತನ್ನ ನಿಯಂತ್ರಣವನ್ನು ಕಳೆದುಕೊಳ್ಳುತ್ತದೆ. ಅಲೆಯ ಶಿಖೆ ಭಾಗವು ತನ್ನ ಆಧಾರ ನೀರಿನ ಸ್ಥಾನದಿಂದ ಮುನ್ನೂಕಲ್ಪಟ್ಟು, ಒಡೆದು ದಡಕ್ಕೆ ಅಪ್ಪಳಿಸುವುದು. ಹೀಗೆ ತೀರವನ್ನು ಸಮೀಪಿಸಿದಾಗ ನೊರೆಗಟ್ಟಿದ ನೀರಿನ ಕಣಗಳು ವಿಚ್ಛಿನ್ನವಾಗಿ ಭೋರ್ಗರೆಯುತ್ತಾ ಅಪ್ಪಳಿಸುವ ಕ್ರಿಯೆಗೆ ಅಲೆಯ ಒಡೆತ ಅಥವಾ ಅಲೆಯ ಅಪ್ಪಳಿಸುವಿಕೆ ಎಂದು ಕರೆಯುವರು. ಈ ಸಂದರ್ಭದಲ್ಲಿ ಅಲೆಯ ನೀರಿನಲ್ಲಿ ನೊರೆಯುಂಟಾಗುವುದು. ಇದನ್ನು ಅಲೆಯ ನೊರೆ ಎಂದು ಕರೆಯುವರು. ಸಾಗರದ ನಡುವಿನಿಂದ ಹುಟ್ಟಿದ ಅಲೆಯ ತೀರದ ದಡವನ್ನು ಸಮೀಪಿಸಿದಂತೆಲ್ಲಾ ಅದರ ಎತ್ತರ ಹೆಚ್ಚಾಗುತ್ತದೆ ಹಾಗೂ ಉದ್ದ ಕಡಿಮೆಯಾಗುತ್ತದೆ. ಇದರಿಂದ ಅಲೆ ಹೆಚ್ಚು ಕಡಿದಾಗಿ, ಅದರ ಶಿಖೆ ಮುಂದೆ ಹೊರಳಿ ಒಡೆದು ದಡಕ್ಕೆ ಪ್ರಕ್ಷುಬ್ಧ ಸ್ಥಿತಿಯಲ್ಲಿ ಅಪ್ಪಳಿಸುತ್ತದೆ. ಇದನ್ನೇ ಹೆದ್ದರೆ ಎನ್ನುವರು. ಸಮುದ್ರ ತೀರದ ದಡಕ್ಕೆ ಅಪ್ಪಳಿಸಿ ಒಡೆದು ಹೋದ ಮೇಲೆ ಅಲೆಗಳು ದುರ್ಬಲಗೊಳ್ಳುತ್ತವೆ. ಪರಿಣಾಮವಾಗಿ ನೀರು ಸಮುದ್ರದ ಕಡೆಗೆ ಹಿಂದಿರುಗುವುದು. ಹೀಗೆ ಹಿಂದೆ ಸರಿಯುವಾಗ ನೀರು ಅಲೆಯ ಮುನ್ನಡೆದ ಪಾತ್ರದಲ್ಲಿ ತೀರದ ಇಳಿಜಾರನ್ನನುಸರಿಸಿ ಹರಿಯುತ್ತದೆ. ಇದನ್ನೇ ಹಿಂದಕ್ಕೆ ಸಾಗುವ ಅಲೆಯ ಹಿಂಚಲನೆ ಅಥವಾ ಅಲೆಯ ಹಿಂಬರಿವು ಎಂದು ಕರೆಯುವರು. ಹೀಗೆ ಹಿಂದೆ ಸರಿಯುವಾಗ ಅಲ್ಲಿನ ಸಂಚಯನ ವಸ್ತುಗಳು ಒಳಕ್ಕೆ ಒಯ್ಯುವುದು.

ಸಮುದ್ರ ಅಲೆಗಳ ಕಾರ್ಯ: ಸಮುದ್ರದ ಅಲೆಗಳೂ ಸವೆತ ಸಾಗಾಣಿಕೆ ಮತ್ತು ಸಂಚಯನ ಕಾರ್ಯಗಳನ್ನು ನಿರ್ವಹಿಸುತ್ತವೆಯಾದರೂ ಅಲೆಗಳ ಸವೆತ ಮತ್ತು ಸಂಚಯನ ಕಾರ್ಯಗಳು ಪ್ರಮುಖವಾದವು. ಸಮುದ್ರ ತೀರಗಳಲ್ಲಿ ಅಲೆಗಳ ಕಾರ್ಯ ಪ್ರಧಾನವಾದುದು. ನಿರಂತರವಾಗಿ ಅಲೆಗಳು ಸಮುದ್ರ ತೀರಕ್ಕೆ ಬಂದು ಅಪ್ಪಳಿಸುವುದರಿಂದ ಆ ಭಾಗವು ನಗ್ನೀಕರಣಕ್ಕೊಳಗಾಗಿ ವಿವಿಧ ಸ್ವರೂಪಗಳು ರಚನೆಯಾಗುತ್ತವೆ. ಸಮುದ್ರ ಅಲೆಗಳ ಸವೆತ ಕಾರ್ಯ ವಿಶೇಷವಾಗಿ ಮೂರು ರೀತಿಯಲ್ಲಿ ಏರ್ಪಡುತ್ತದೆ:

1.ಉಜ್ಜುವಿಕೆ: ಸಮುದ್ರದ ನಡುಭಾಗದಿಂದ ಅಲೆಗಳು ತೀರದ ಕಡೆಗೆ ಹಾಗೂ ಹಿಂತಿರುಗಿ ಸಮುದ್ರದೊಳಗೆ ಚಲಿಸುತ್ತದೆ. ಹೀಗೆ ಚಲಿಸುವಾಗ ತೀರದ ವಿವಿಧಾಕೃತಿಯ ಶಿಲಾಚೂರುಗಳನ್ನು ತಮ್ಮೊಡನೆ ಒಯ್ಯುವಾಗ ಅವು ಆಯುಧದಂತೆ ವರ್ತಿಸಿ ತೀರದ ಮೇಲ್ಮೈಯನ್ನು ಉಜ್ಜುತ್ತವೆ. ಇದರಿಂದ ತೀರದ ಶಿಲಾಮೇಲ್ಮೈಯು ನಯವಾಗುವುದರ ಜೊತೆಗೆ ಅದರೊಡನೆ ಉಜ್ಜಲ್ಪಟ್ಟ ಶಿಲಾಚೂರುಗಳ ಏಣುಗಳೆಲ್ಲಾ ಸವೆದು ದುಂಡಾಗುತ್ತವೆ.

2. ಘರ್ಷಣೆ: ಸಮುದ್ರದ ಅಲೆಗಳ ನಿರಂತರ ಮುನ್ನಡೆಯುವಿಕೆ ಹಾಗೂ ಹಿಂಬರುವಿಕೆ ಕಾರ್ಯದಿಂದಾಗಿ ಸಮುದ್ರ ದಡದ ಬಂಡೆಗಳು, ಶಿಲಾಚೂರುಗಳು ಹಾಗೂ ಮರಳಿನ ಕಣಗಳು ನೀರಿನೊಡನೆ ಹೋಗುವಾಗ ಅವು ಪರಸ್ಪರ ಘರ್ಷಿಸಿ, ಒಡೆದು ಚೂರಾಗುತ್ತವೆ. ಇದೇ ಸಮುದ್ರದಲೆಗಳ ಘರ್ಷಣೆ ಕಾರ್ಯ. ಇಂತಹ ವಸ್ತುಗಳು ಮುಂದೆ ಕಡಿದಾದ ಬಂಡೆಯ ಮುಖ ಭಾಗಕ್ಕೆ ಘರ್ಷಿಸುವುದರಿಂದ ಹಾಗೂ ಪರಸ್ಪರ ಶಿಲಾ ಕಣಗಳು ಘರ್ಷಿಸಿ ಸಂಚಯನಗೊಂಡು ಸಹಜವಾದ ಸಮುದ್ರ ದಡವು ನಿರ್ಮಾಣವಾಗುತ್ತದೆ.

3. ನೀರೊತ್ತಡ ಕ್ರಿಯೆ: ಸಮುದ್ರ ದಡದ ಶಿಲೆಗಳು ಅನೇಕ ಬಿರುಕು ಹಾಗೂ ಸೀಳುಗಳನ್ನು ಹೊಂದಿದ್ದರೆ, ಇಂಥ ಶಿಲೆಗಳಿಗೆ ಸಮುದ್ರ ಅಲೆಗಳು ಅಪ್ಪಳಿಸಿದಾಗ ಆ ರಭಸಕ್ಕೆ ನೀರು ಬಿರುಕುಗಳ ಒಳಗೆ ಪ್ರವೇಶಿಸಿ ಬಿರುಕುಗಳಲ್ಲಿದ್ದ ಗಾಳಿ ಸಂಕೋಚನಗೊಳ್ಳುವುದು. ಅಲೆಯ ನೀರು ಹಿಂದಿರುಗಿದಾಗ ಗಾಳಿ ವಿಸ್ತರಿಸಲ್ಪಡುವುದು. ಈ ಕಾರ್ಯ ನಿರಂತರವಾಗಿ ನಡೆಯುವುದರಿಂದ ಕ್ರಮೇಣ ಬಿರುಕುಗಳು ಅಗಲವಾಗುತ್ತಾ ಶಿಲೆಗಳು ಒಡೆದು ಸಣ್ಣ ಸಣ್ಣ ಚೂರುಗಳಾಗುತ್ತವೆ. ಚಂಡಮಾರುತಗಳಿಂದ ಉತ್ಪತ್ತಿಯಾದ ಪ್ರಕ್ಷುಬ್ಧ ಅಲೆಗಳಿಂದ ಈ ಕ್ರಿಯೆ ತೀವ್ರಗೊಳ್ಳುತ್ತದೆ. ಆಗ ತೀರ ಹೆಚ್ಚು ಸವೆತಕ್ಕೀಡಾಗುವುದು.

4. ದ್ರಾವಣೀಕರಣ: ಸಮುದ್ರ ತೀರದ ಕೆಲವು ಶಿಲೆಗಳು ರಾಸಾಯನಿಕ ಪ್ರಕ್ರಿಯೆಗಳಿಗೊಳಗಾಗಿ, ನೀರಿನಲ್ಲಿ ಕರಗಿ, ವಿಲೀನೀಕರಣಗೊಂಡು ಸವೆತಕ್ಕೊಳಗಾಗುತ್ತವೆ. ಸುಣ್ಣ ಕಲ್ಲು ರಚಿತ ತೀರ ಪ್ರದೇಶದಲ್ಲಿ ಈ ಕಾರ್ಯ ವಿಶೇಷವಾಗಿರುತ್ತದೆ. ಆದ್ದರಿಂದ ಈ ಕಾರ್ಯ ಕ್ಷೇತ್ರ ಬಹು ಮಿತವಾದುದಾಗಿರುತ್ತದೆ.

ಸಮುದ್ರ ಅಲೆಗಳ ಸವೆತ ಕಾರ್ಯ ಏಕರೀತಿಯಾಗಿರುವುದಿಲ್ಲ. ಅದು ತೀರ ಪ್ರದೇಶದ ಶಿಲಾರಚನೆ, ಶಿಲಾಸ್ತರ ಮೇಲೆತ್ತಲ್ಪಟ್ಟ ಪ್ರಮಾಣ, ಸಮುದ್ರ ನೀರಿನ ಉಬ್ಬರ ಸಾಗರೀಕ ಪ್ರವಾಹಗಳ ಪ್ರಭಾವ ಹಾಗೂ ತೀರದ ಸವೆತವನ್ನು ನಿಯಂತ್ರಿಸಲು ಮಾನವನ ಪ್ರವೇಶ–ಇತ್ಯಾದಿಗಳಿಗೆ ಅನುಗುಣವಾಗಿ ವ್ಯತ್ಯಾಸಗೊಳ್ಳುವುದು. ಇವುಗಳಲ್ಲದೆ, ಜ್ವಾಲಾಮುಖಿ ಕಾರ್ಯ, ಭೂಕಂಪ, ಅಲೆ ಚಲಿಸುವ ಪಾತ್ರ, ತೀರವನ್ನು ಆವರಿಸಿರುವ ಜೀವಿ ಸಂಕುಲ ಹಾಗೂ ಭೂಮಿಯ ಚಲನೆಗಳೂ ಸಹ ಸಮುದ್ರ ಅಲೆಗಳ ಸವೆತದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಸಮುದ್ರ ಅಲೆಗಳ ಸವೆತ ಕಾರ್ಯದಿಂದಾಗಿ ವಿವಿಧ ಭೂ ಸ್ವರೂಪಗಳು ತೀರದಲ್ಲಿ ಉಂಟಾಗುತ್ತವೆ.

ಶಿಲಾಪ್ರಪಾತ: ಸಮುದ್ರದ ತೀರಕ್ಕೆ ಸಮಾನಾಂತರವಾಗಿ ಮತ್ತು ಸಮುದ್ರಕ್ಕೆ ಎದುರಾಗಿರುವ ಬಂಡೆಯ ಕಡಿದಾದ ಮುಖವನ್ನು ಶಿಲಾಪ್ರಪಾತ ಅಥವಾ ಕಡಿದಾದ ಬಂಡೆಯ ಮುಖವೆಂದು ಕರೆಯುವರು. ಸಮುದ್ರ ಅಲೆಗಳ ನಿರಂತರ ಆಕ್ರಮಣಕ್ಕೊಳಗಾಗಿ ಬಂಡೆಯ ಎದುರಿನ ಸಮುದ್ರದ ತೀರದ ಮುಖಭಾಗ ಸವೆದು ಕಡಿದಾಗುತ್ತದೆ. ಈ ರೀತಿಯ ಸವೆತ ಆ ಶಿಲೆಯ ಸ್ವರೂಪ, ಶಿಲಾ ಬಿರುಕು ನಿರೋಧಕ ಶಕ್ತಿ ಹಾಗೂ ಸ್ತರವಿನ್ಯಾಸವನ್ನೂ ಅವಲಂಬಿಸಿರುತ್ತದೆ. ಶಿಲಾಸ್ತರ ವಿನ್ಯಾಸಕ್ಕನುಗುಣವಾಗಿ ಶಿಲಾ ಪ್ರಪಾತ ಕೆಲವು ವೇಳೆ ಮೆಟ್ಟಿಲೋಪಾದಿಯಲ್ಲೂ ರಚಿತವಾಗಿರುತ್ತದೆ.

# ನಗ್ನೀಕರಣದ ಕರ್ತೃವಾಗಿ ಸಮುದ್ರ ಅಲೆಗಳ ಕಾರ್ಯ

ಮುಂದುವರಿದ ಸಮುದ್ರದ ಅಲೆಯ ನಿರಂತರ ಸವೆತದಿಂದ ಶಿಲಾಪಾತ್ರದ ಆಧಾರದ ಭಾಗ ಬೇಗ ಸವೆತಕ್ಕೊಳಗಾಗುವುದು. ಅದೇ ಭಾಗ ಕ್ರಮೇಣ ಒಳಮುಖವಾಗಿ ಸವೆಯುತ್ತದೆ. ಈ ರೀತಿಯಿಂದ ಉಂಟಾದ ಸ್ವರೂಪವನ್ನು ನಿಚ್ ಅಥವಾ ಪ್ರಪಾತ ಕಚ್ಚು ಎಂದು ಕರೆಯುವರು. ಇದರ ಮೇಲಿನ ಶಿಲಾಭಾಗ ಆಧಾರ ತಪ್ಪಿ ಕೆಲವು ವೇಳೆ ಮುರಿದು ಬಿದ್ದುಹೋಗುವುದು. ಇದರಿಂದ ಶಿಲಾಪ್ರಪಾತದ ಮುಂಭಾಗ ಹಿಂದೆ ಸರಿಯುವುದು. ಉಳಿದ ಭಾಗ ಅಲೆಛೇಧಿತ ಪೀಠವಾಗಿ ಪರಿಣಮಿಸುವುದು.




**ಸಮುದ್ರ, ಗುಹೆ, ಕಮಾನು ಮತ್ತು ಬಿಡಿಬಂಡೆ ಇತ್ಯಾದಿ**

ಸಮುದ್ರ ಗುಹೆ: ಸಮುದ್ರದ ಅಲೆಗಳ ನಿರಂತರ ಆಕ್ರಮಣದಿಂದಾಗಿ ತೀರದ ಶಿಲೆಗಳು ಸವೆಯುತ್ತವೆ. ಕಠಿಣವಾದ ಶಿಲಾಸ್ತರಗಳು ನಿಧಾನವಾಗಿಯೂ, ಮೃದು ಶಿಲೆಗಳು ಬೇಗ ಸವೆಯಲ್ಪಡುತ್ತವೆ. ಸಮುದ್ರಕ್ಕೆ ಎದುರಾಗಿರುವ ಶಿಲಾ ಮುಖ ಭಾಗದಲ್ಲಿ ಬಿರುಕು, ಸೀಳು ಅಥವಾ ಸ್ತರಭಂಗಗಳಿದ್ದರೆ, ಅವುಗಳಲ್ಲಿ ಅಲೆಗಳ ನೀರು ರಭಸದಿಂದ ಒಳನುಗ್ಗಿ, ಅವುಗಳನ್ನು ಸವೆಸಿ ದೊಡ್ಡದು ಮಾಡುತ್ತವೆ. ಮೃದು ಶಿಲಾಸ್ತರವಿದ್ದರೆ ಅವುಗಳ ತಳ, ಅಲೆಗಳ ಏರುಬ್ಬರ ಹಾಗೂ ಇಳಿಉಬ್ಬರಗಳ ಮಟ್ಟದ ನಡುವಿನ ಭಾಗ, ಹೆಚ್ಚಾಗಿ ಸವೆಯಲ್ಪಟ್ಟು ಅಲ್ಲಿ ಪೊಟರೆ ಗುಹೆ ಅಥವಾ ಗವಿಗಳು ಉಂಟಾಗುತ್ತವೆ. ಇಂತಹ ಗುಹೆಗಳ ನಿರ್ಮಾಣ ವಿಶೇಷವಾಗಿ ಸುಣ್ಣಕಲ್ಲು ರಚಿತ ತೀರದಲ್ಲಿ ಕಂಡುಬರುತ್ತವೆ.

ಸಮುದ್ರ ಕಮಾನು ಮತ್ತು ಬಿಡಿ ಬಂಡೆ: ಕಿರಿದಾದ ಹಾಗೂ ಕಡಿದಾದ ಭೂ ಭಾಗ ಸಮುದ್ರದೊಳಗೆ ಚಾಚಿಕೊಂಡಿರುವ ಶಿರೋಭಾಗವನ್ನು ಶಿಲಾಮುಖ ಅಥವಾ ಭೂಶಿರವೆನ್ನುವರು. ಇದರ ಇಕ್ಕೆಲಗಳಲ್ಲಿ ನಿರ್ಮಾಣಗೊಂಡ ಎರಡು ಸಮುದ್ರ ಗುಹೆಗಳು ಕ್ರಮೇಣ ಪರಸ್ಪರ ಕೂಡಿಕೊಳ್ಳುವುದರಿಂದ ಕಿಂಡಿ ಉಂಟಾಗುವುದು. ಅದರ ಮೇಲಿನ ಭಾಗ ಹಾಗೆ ಉಳಿದು ಸ್ವಾಭಾವಿಕ ಕಮಾನಿನಂತೆ ಕಾಣುವುದು. ಇದನ್ನು ಸಮುದ್ರದ ಕಮಾನು ಎಂದು ಕರೆಯುವರು. ಕೆಲವು ವೇಳೆ ಅಲೆಗಳ ಸವೆತ ಕಾರ್ಯವು ಮುಂದುವರಿದಂತೆಲ್ಲಾ ಕಮಾನು ಭಾಗ ಕುಸಿದು ಬಿದ್ದುಹೋಗುವುದು. ಅನಂತರ ಸಮುದ್ರದ ಕಡೆಯ ಭೂಶಿರದ ಭಾಗ ಹಾಗೆ ಉಳಿದು, ಸಮುದ್ರ ಮಟ್ಟದಿಂದ ಎತ್ತರಕ್ಕೆ ಸ್ತಂಭಾಕೃತಿಯಲಿ ಉಳಿಯುವುದು. ಇದನ್ನು ಬಿಡಿಬಂಡೆ (ಸ್ಟ್ಯಾಕ್) ಎಂದು ಕರೆಯುವರು. ಉದಾ: ಆರ್ಕ್ನೆ ದ್ವೀಪದ(ಇಂಗ್ಲೆಂಡ್), ಓಲ್ಡ್‌ಮನ್ ಆಫ್ ಹೋಮ್ (160 ಮೀ ಎತ್ತರ) ಹಾಗೂ ವೈಟ್ ದ್ವೀಪಗಳಲ್ಲಿ ಕಾಣಬಹುದು.

ಬಿರುಸು ಕಿಂಡಿ: ಸಮುದ್ರ ಗುಹೆಯ ಮೇಲ್ಛಾವಣಿಯಲ್ಲಿ ಉಂಟಾಗುವ ಕಿಂಡಿ. ಇದನ್ನು ಇಂಗ್ಲೆಂಡಿನಲ್ಲಿ ಗ್ಲೋಪ್ ಎನ್ನುವರು. ಸಮುದ್ರದ ಅಲೆಗಳು ಗುಹೆಯ ಮೇಲ್ಛಾಣಿಗೆ ಅಪ್ಪಳಿಸಿದಾಗ ಅಲ್ಲಿಯ ಗಾಳಿ ಸಂಕುಚಿತ ಹೊಂದಿ ಶಿಲಾ ಬಿರುಕುಗಳು ವಿಸ್ತರಿಸುತ್ತವೆ. ಈ ಕಾರ್ಯ ಒಂದೇ ಕಡೆ ಕೇಂದ್ರೀಕೃತವಾಗಿ ಸಾಗುತ್ತಾ ಮೇಲ್ಛಾವಣಿಯಲ್ಲಿ ಕಿಂಡಿ ಉಂಟಾಗಿ ಅದು ಮೇಲ್ಮೈಯನ್ನು ತಲುಪುವುದು. ಅಲೆಯ ರಭಸಕ್ಕೆ ಗಾಳಿ ಮತ್ತು ನೀರಿನ ಹನಿಗಳು ಈ ಮೂಲಕ ಶಬ್ದ ಮಾಡುತ್ತಾ ಹೊರಕ್ಕೆ ಎರಚಲ್ಪಡುತ್ತವೆ. ಉದಾ: ಸ್ಕಾಟ್ಲೆಂಡಿನ ಹಾಲ್ಬರ್ನ್.

ಅಲೆಗಳ ಸವೆತ ಕಾರ್ಯ ಮುಂದುವರಿದಂತೆಲ್ಲಾ ಬಿರುಸು ಕಿಂಡಿಗಳು ಅಗಲವಾಗುತ್ತಾ ಹೋಗುತ್ತವೆ ಹಾಗೂ ಗುಹೆಯ ಮೇಲ್ಛಾವಣಿ ದುರ್ಬಲಗೊಳ್ಳುತ್ತದೆ. ಪರಿಣಾಮವಾಗಿ ಯಾವಾಗಲಾದರೊಮ್ಮೆ ಗುಹೆಯ ಮೇಲ್ಛಾವಣಿ ಕುಸಿದು ಬಿದ್ದು ಅಲ್ಲಿ ಇಕ್ಕಟ್ಟಾದ, ಕಡಿದಾದ ಹಾಗೂ ನೀಳವಾದ ಒಳಚಾಚು ಉಂಟಾಗುವುದು. ಇದನ್ನು ಸಮುದ್ರದ ಕಡಿದಾದ ಕಡಲ ಒಳಚಾಚುಗಳೆಂದು ಕರೆಯುವರು. ಉದಾ: ವೈಪ್ ಜೀಯೋ.

ಸಮುದ್ರದ ಅಲೆಗಳು ಕಡಲ ತೀರದಲ್ಲಿ ಸವೆಸಿದ ಅನೇಕ ಶಿಲಾ ವಸ್ತುಗಳನ್ನು ಅವು ಸಮುದ್ರದ ಕಡೆಗೆ ಹಿನ್ನಡೆಯುವಾಗ ತಮ್ಮೊಡನೆ ಸಾಗಿಸುತ್ತವೆ. ಗುರುತ್ವಾಕರ್ಷಣೆಗನುಗುಣವಾಗಿ ಶಿಲಾವಸ್ತುಗಳು ತೀರದ ಇಳಿಜಾರನ್ನನುಸರಿಸಿ ಅಲೆಯ ನೀರಿನೊಡನೆ ಸಮುದ್ರದ ಕಡೆಗೆ ಸಾಗಿಸಲ್ಪಡುತ್ತವೆ. ಸಮುದ್ರ ಅಲೆಯ ಸಾಗಾಣಿಕೆ ಸಾಮರ್ಥ್ಯ ಶಿಲಾವಸ್ತುಗಳ ಭಾರ, ತೀರ ಪ್ರದೇಶದ ಇಳಿಜಾರು, ಗಾಳಿ ಬೀಸುವ ದಿಕ್ಕು, ವೇಗ, ಸಾಗರಿಕ ಪ್ರವಾಹ ಮತ್ತು ಉಬ್ಬರವಿಳಿತಗಳ ಪ್ರವೃತ್ತಿಗಳನ್ನವಲಂಬಿಸಿರುತ್ತದೆ. ತೀರ ಕಡಿದಾದ ಇಳಿಜಾರಿನಿಂದ ಕೂಡಿದ್ದು, ಭಾರಿ ಪ್ರಮಾಣದ ಅಲೆಗಳು ಹಿನ್ನಡೆಯುವಾಗ ಅಪಾರ ವಸ್ತುಗಳನ್ನು ಬಹು ದೂರದ ಸಮುದ್ರದ ಕಡೆಗೆ ಸಾಗಿಸುವುವು. ಅಲೆಗಳ ಸಾಗಾಣಿಕೆಯ ಸಾಮರ್ಥ್ಯವು ಕುಂದಿದಾಗ ಅಥವಾ ಚಲನಾ ದಿಕ್ಕಿನಲ್ಲಿ ಅಡಚಣೆಗಳುಂಟಾದಾಗ ಸಂಚಯನ ಕಾರ್ಯ ಪ್ರಾರಂಭವಾಗುವುದು. ನಿರಂತರ ಸಂಚಯನ ಕಾರ್ಯದಿಂದ ಅನೇಕ ವಿಧವಾದ ಹಾಗೂ ವಿಶಿಷ್ಟ ಭೂ ಸ್ವರೂಪಗಳು ಉಂಟಾಗುತ್ತವೆ.




**ಸಮುದ್ರದ ಕೊಡುಗಲ್ಲು ಮತ್ತು ಅಲೆಗಳಿಂದ ಕೊರೆಯಲ್ಪಟ್ಟ ಭಾಗ ಹಾಗೂ ಪ್ರಪಾತಗಳು**

ಸಮುದ್ರ ದಡ: ಸಾಗರಗಳ ಏರುಬ್ಬರದ ಮಟ್ಟಕ್ಕೂ ಮತ್ತು ಚಂಡಮಾರುತಗಳು ಸಂಭವಿಸಿದಾಗ ಅಲೆಗಳು ಮೇಲೇಳುವ ಅತ್ಯಂತ ಎತ್ತರದ ಮಟ್ಟಕ್ಕೂ ನಡುವೆ ಸಮುದ್ರದುದ್ದಕ್ಕೂ ರಚಿತವಾದ ಕಡಲ ಭಾಗವನ್ನು ಸಮುದ್ರ ದಡವೆಂದು ಕರೆಯಲಾಗಿದೆ. ಮರಳು ಮತ್ತು ನೊರಜುಗಲ್ಲುಗಳು ಅಲೆಗಳಿಂದ ಸಂಚಯಿಸಲ್ಪಡುವುದರಿಂದ ಇವು ನಿರ್ಮಾಣವಾಗುತ್ತವೆ. ಮರಳು ಪ್ರಧಾನವಾಗಿರುವುದರಿಂದ ಇವುಗಳನ್ನು ಮರಳು ತೀರ ವೆಂತಲೂ ಕರೆಯುವರು.

ಸಮುದ್ರದ ಅಲೆಗಳ ರಚನಾತ್ಮಕ ಕಾರ್ಯದಿಂದ ಉಂಟಾಗುವ ಭೂ ಸ್ವರೂಪಗಳಲ್ಲಿ ಸಮುದ್ರ ದಡಗಳು ಪ್ರಮುಖವಾದವು. ಸಹಜವಾದ ಸಮುದ್ರ ದಡಗಳು ಸಾಧಾರಣವಾದ ಒಳವರ್ತುಲ ಇಳಿಜಾರಿನಿಂದ ಕೂಡಿರುತ್ತವೆ. ಸಮುದ್ರ ತೀರ ಪ್ರದೇಶ ಎತ್ತರವಾಗುವ ಬಂಡೆಗಳು ಅಥವಾ ಬೆಟ್ಟಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿದ್ದರೆ ಸಮುದ್ರ ದಡ ಕಿರಿದಾಗಿರುತ್ತದೆ. ಬದಲಾಗಿ ಸಾಧಾರಣ ಇಳಿಜಾರಿನಿಂದ ಕೂಡಿದ ತೀರದಲ್ಲಿ ವಿಶಾಲವಾದ ಸಮುದ್ರ ದಡ ನಿರ್ಮಾಣವಾಗುತ್ತದೆ. ಸಮುದ್ರ ದಡದಲ್ಲಿ ಸಂಚಯವಾಗುವ ವಸ್ತುಗಳೂ ಏಕ ರೀತಿಯಾಗಿರದೆ ವಿವಿಧಾಕೃತಿಯದಾಗಿರುತ್ತವೆ.

ಸಮುದ್ರ ದಡಗಳನ್ನು ಅವುಗಳು ರಚಿತವಾದ ಸ್ಥಳ, ಸಂಚಯನದ ವಸ್ತುಗಳು ಹಾಗೂ ಆಕಾರದ ಆಧಾರದ ಮೇಲೆ 2 ವಿಧಗಳಾಗಿ ವಿಂಗಡಿಸಬಹುದು.

ಅ) ಕೊಲ್ಲಿಯ ಶಿರೋದಡ: ಎರಡು ಭೂ ಶಿರಗಳ ನಡುವೆ ಬರುವ ಕಿರಿದಾದ ಕೊಲ್ಲಿಯ ಕಡಲಲ್ಲಿ ಮರಳು ಮತ್ತು ಶಿಲಾ ಚೂರುಗಳು ಸಂಚಯನವಾಗಿ ಅರ್ಧಚಂದ್ರಾ ಕೃತಿಯಲ್ಲಿ ರಚಿತವಾದ ಸಮುದ್ರ ದಡವೆ. ಕೊಲ್ಲಿಯ ಶಿರೋದಡ ಉದಾ: ಕ್ಯಾಲಿಪೋರ್ನಿಯಾದ ಎಮರಾಲ್ಡ್ ಕೊಲ್ಲಿದಡ, ಓರೆಗಾನ್, ದಕ್ಷಿಣ ವೇಲ್ಸ್‌ನ ಗೋವರ್ ತೀರದ ಪೆಂಬ್ರೋಕ್ ದಡ ಇತ್ಯಾದಿ. ವಿಶಾಲವಾದ ಕೊಲ್ಲಿಯ ಸಮೀಪದ ತೀರದುದ್ದಕ್ಕೂ ಅಲೆಗಳು ವಿವಿಧ ಶಿಲಾವಸ್ತುಗಳನ್ನು ಸಂಚಯಿಸಿ ನಿರ್ಮಾಣವಾದುದಕ್ಕೆ ಕೊಲ್ಲಿಯ ಪಾರ್ಶ್ವ ದಡವೆಂದು ಕರೆಯುವರು.

ಆ) ಪ್ರತಿಬಂಧಕ ಸಮುದ್ರ ದಡ: ಕಡಲ ಏರುಬ್ಬರಕ್ಕಿಂತಲೂ ಎತ್ತರವಾದ, ಸಮುದ್ರ ಮಟ್ಟದಿಂದ ಸಾಕಷ್ಟು ಎತ್ತರದಲ್ಲಿರುವ ಹಾಗೂ ತೀರಪ್ರದೇಶಕ್ಕೆ ಸಮಾನಾಂತರವಾಗಿ ರಚನೆಯಾಗಿದ್ದು ಉಪ್ಪುನೀರಿನ ಹರವಿನಿಂದ ಬೇರ್ಪಟ್ಟಿರುವ ಭೂ ಭಾಗವನ್ನು ಪ್ರತಿಬಂಧಕ ಸಮುದ್ರ ದಡವೆಂದು ಕರೆಯುವರು. ಕೆಲವು ಸಂದರ್ಭಗಳಲ್ಲಿ ಸಮುದ್ರಮಟ್ಟದಿಂದ ಸಾಕಷ್ಟು ಎತ್ತರದಲ್ಲಿ ಮರಳು ದಿಣ್ಣೆಗಳಿಂದ ರಚಿತವಾದ ದಡವನ್ನು ಅಡ್ಡಗಟ್ಟು ದ್ವೀಪವೆಂದು ಕರೆಯುವರು. ಅಮೇರಿಕ ಸಂಯುಕ್ತ ಸಂಸ್ಥಾನದ ಪೂರ್ವ ತೀರದಲ್ಲಿ ನ್ಯೂಜೆರ್ಸಿಯಿಂದ ಫ್ಲಾರಿಡವರೆಗೆ, ಮೆಕ್ಸಿಕೊ ಖಾರಿಯಿಂದ ಮೆಕ್ಸಿಕೊ ಗಡಿವರೆಗೆ ಹರಡಿರುವ ಸಮುದ್ರ ತೀರದಲ್ಲಿ ಇಂತಹ ಸ್ವರೂಪಗಳು ಮರಳು ಗೋಡೆಯಂತೆ ಕಂಡು ಬರುತ್ತವೆ. ಅವು ನದಿಗಳು ಸಾಗಿಸಿ ತಂದ ವಸ್ತುಗಳನ್ನು ಮುಖ ಭಾಗದಲ್ಲಿ ಸಂಚಯಿಸುವುದರಿಂದಲೂ, ಸಮುದ್ರದಲೆಗಳು ಸವೆಸಿದ ಶಿಲಾ ವಸ್ತುಗಳನ್ನು ಸಂಚಯಿಸುವುದರಿಂದಲೂ ರಚನೆಯಾಗುತ್ತವೆ.

ದಡಶೃಂಗ: ಸಮುದ್ರ ತೀರದಲ್ಲಿ ವರ್ತುಲಾಕಾರವಾಗಿ ಹಾಗೂ ಸಮುದ್ರದ ಕಡೆಗೆ ಚಾಚಿಕೊಂಡ, ಮರಳು ಮತ್ತು ನೊರಜುಗಲ್ಲುಗಳು ಒಂದಾದ ಮೇಲೆ ಮತ್ತೊಂದರಂತೆ ಸಂಚಯವಾಗಿ ರಚಿತವಾಗಿ ದಡಗಳಿಗೆ ದಡಶೃಂಗವೆಂದು ಕರೆಯುವರು. ಇವುಗಳ ತುದಿ ಭಾಗ ಸಮುದ್ರದ ಕಡೆಗೆ ಮುಖವಾಗಿದ್ದು ಕಪ್ಪೆಚಿಪ್ಪಿನ ಆಕಾರದಲ್ಲಿ ಅಥವಾ ಬಿಚ್ಚಿದ ಶಂಖುವಿನಾಕಾರದಲ್ಲಿ ಕಾಣಿಸುತ್ತವೆ.

# ನಗ್ನೀಕರಣದ ಕರ್ತೃವಾಗಿ ಸಮುದ್ರ ಅಲೆಗಳ ಕಾರ್ಯ

ಕಡಲ ಅಡ್ಡಗಟ್ಟು: ಎರಡು ಭೂಶಿರಗಳ ನಡುವೆ ಇರುವ ಕೊಲ್ಲಿಯಲ್ಲಿ ಅಥವಾ ಮೂಲ ಭೂಖಂಡ ಭಾಗ ಹಾಗೂ ದ್ವೀಪವೊಂದರ ನಡುವಣ ಸಮುದ್ರದಲ್ಲಿ ಸಂಚಯವಾದ ಜೇಡಿಮಣ್ಣು, ಮರಳು ಮತ್ತು ನೊರಜುಗಲ್ಲುಗಳ ರಾಶಿ. ಉದಾ: ಇಂಗ್ಲೆಂಡಿನ ಡೋರ್ಸೆಟ್‌ನ ಚೆಸಿಲ್‌ದಡದಲ್ಲಿ ಇಂತಹ ಅಡ್ಡಗಟ್ಟುಗಳು ಕಂಡು ಬರುತ್ತವೆ. ಇಂತಹ ಅಡ್ಡಗಟ್ಟುಗಳು ಕೆಲವು ಸಂದರ್ಭದಲ್ಲಿ ನದಿ ಮುಖಜ ಭೂಮಿಗೆ ಅಡ್ಡಲಾಗಿಯೂ ರಚನೆಯಾಗಿರುತ್ತವೆ. ಇವು ಸಮುದ್ರದಲ್ಲಿ ಅಧಿಕ ಭರವುಂಟಾದಾಗ ನೀರಿನಲ್ಲಿ ಮುಳುಗುತ್ತವೆ. ಸಮುದ್ರ ತೀರದುದ್ದಕ್ಕೆ ಸಮಾನಾಂತರವಾದ ಹಾಗೂ ಭೂಭಾಗಕ್ಕೆ ಹೊಂದಿಕೊಳ್ಳದ ದೀರ್ಘಮರಳು ದಿಣ್ಣೆಗಳಿಗೆ ತೀರದಾಚೆಯ ಅಡ್ಡ ಮರಳು ದಿಣ್ಣೆಗಳು ಉಂಟಾಗುವುವು.




ಕಡಲ ಅಡ್ಡಗಟ್ಟು

ಕಿರು ನಾಲಿಗೆ ಆಕಾರದ ದಿಬ್ಬ: ಸಮುದ್ರದ ಅಲೆಗಳಿಂದ ಸವೆಸಲ್ಪಟ್ಟ ಶಿಲಾವಶೇಷಗಳು ಸಮುದ್ರದ ಕಡೆಗೆ ಅಲೆಗಳು ಹಿನ್ನಡೆಯುವಾಗ ಒಯ್ಯಲ್ಪಡುತ್ತವೆ. ಈ ನಿರಂತರ ಕಾರ್ಯಾಚರಣೆಯಿಂದಾಗಿ ನದಿಯ ಮುಖಜ ಭಾಗ ಅಥವಾ ಕೊಲ್ಲಿಗಳಿಗೆ ಅಡ್ಡಲಾಗಿ ಶಿಲಾವಶೇಷಗಳು ಸಂಚಯವಾಗುತ್ತವೆ. ಅಧಿಕ ಪ್ರಮಾಣದ ಮರಳು ಮತ್ತು ನೊರಜುಗಲ್ಲುಗಳು ಚಾಚಿಗೊಂಡಂತೆಲ್ಲಾ ಕಿರುನಾಲಿಗೆ ಆಕಾರದಲ್ಲಿ ಒಡ್ಡುಗಳು ನಿರ್ಮಾಣವಾಗುತ್ತವೆ. ಇದರ




ಭೂಶಿರ, ಕೊಲ್ಲಿ ಮತ್ತು ದ್ವೀಪ

ಒಂದು ತುದಿ ಭೂಭಾಗಕ್ಕೆ ಹೊಂದಿ ಕೊಂಡಿರುತ್ತದೆ. ಮತ್ತೊಂದು ಅಂಚು ಸಮುದ್ರದ ಕಡೆಗೆ ಚಾಚಿಕೊಂಡಿರುತ್ತದೆ. ಇದೆ ಕಿರು ನಾಲಿಗೆಯಾಕಾರದ ದಿಬ್ಬ (ಸ್ಪಿಟ್). ಉದಾ: ಸೌತಾಂಪ್ಟನ್‌ನ ಕಾಲ್ಶಾಟ್ ಸ್ಪಿಟ್ (ಇಂಗ್ಲೆಂಡ್). ಇಂತಹದೇ ಸ್ವರೂಪ ಭಾರತದ ಕರಾವಳಿಯಲ್ಲೂ ಕಂಡುಬರುತ್ತವೆ. ಉದಾ: ಒರಿಸ್ಸದ ಚಿಲ್ಕಾ ಸರೋವರ, ಕಾಕಿನಾಡ, ಪುಲಿಕೇಟ್ ಸರೋವರ, ಗೋದಾವರಿ ಮುಖಜ ಭೂಮಿ ಇತ್ಯಾದಿ.

ಕೆಲವು ವೇಳೆ ಸಾಗರಿಕ ಪ್ರವಾಹಗಳು ವಿಭಿನ್ನವಾಗಿ ಚಲಿಸುವ ಸಮುದ್ರದ ಅಲೆಗಳ ಪ್ರಭಾವದಿಂದಾಗಿ ನಾಲಿಗೆಯಾಕಾರದ ದಿಬ್ಬಗಳ ತುದಿ ಭಾಗ ವಕ್ರವಾಗಿ ಚಲನೆ ಹೊಂದಿ ಕೊಕ್ಕೆಯಂತೆ ತಿರುಗಿಕೊಳ್ಳುವುವು. ಇದನ್ನು ದಿಬ್ಬಗಳ ಕೊಕ್ಕೆ ಎಂದು ಕರೆಯುವರು.

ದ್ವೀಪ ಕೂಟಕ: ಎರಡು ಭೂ ಭಾಗಗಳು ಹಾಗೂ ಅವುಗಳ ನಡುವೆ ಸಮುದ್ರದಲ್ಲಿ ನೆಲೆಸಿರುವ ದ್ವೀಪವೊಂದನ್ನು ಸೇರಿಸುವಂತೆ ರಚನೆಯಾಗಿರುವ ಅಡ್ಡಗಟ್ಟು ಅಥವಾ ಮರಳು ದಿಬ್ಬವನ್ನು ದ್ವೀಪಕೂಟಕವೆಂದು ಕರೆಯುವರು. ಉದಾ: ಚೆಸಿಲ್. ಇದು ಸು. 25 ಕಿಮೀ ಉದ್ದವಾಗಿದ್ದು ವೇಮೌತ್‌ನಿಂದ ಮೂಲ ಖಂಡದೊಡನೆ ಪೋರ್ಟ್‌ಲೆಂಡ್ ದ್ವೀಪವನ್ನು ಕೂಡಿಸುವುದು. ಅಲ್ಲದೆ ಇಟಲಿಯ ಲೆಗಹಾನ್, ಪೋಲೆಂಡ್ ಮತ್ತು ಜರ್ಮನಿಯ ಬಾಲ್ಟಿಕ್ ತೀರದಲ್ಲಿ ದೀರ್ಘವಾಗಿ ಬೆಳೆದಿರುವ ಕಿರಿದಾದ ದಡಕಟ್ಟೆ ಮರಳು ಸಂಚಯನದಿಂದ ರಚಿತವಾಗಿವೆ. ಇವುಗಳನ್ನು ಸ್ಥಳೀಯವಾಗಿ ನೆಹ್ರಂಗ್ ಎಂದು (ಜರ್ಮನ್) ಕರೆಯುವರು.

ಕಡಲ ಮರಳು ದಿಣ್ಣೆ: ಸಮುದ್ರದ ಕಡೆಯಿಂದ ತೀರದ ಕಡೆಗೆ ಕರೆಗಾಳಿಗಳು ಪ್ರಬಲವಾಗಿ ಬೀಸಿ ತೀರದಲ್ಲಿರುವ ಮರಳನ್ನು ಅಪಾರ ಪ್ರಮಾಣದಲ್ಲಿ ಭೂಭಾಗಗಳ ಕಡೆಗೆ ಒಯ್ದು ಸಂಚಯಿಸುವಿಕೆಯಿಂದುಂಟಾಗುತ್ತವೆ. ಕೆಲವು ವೇಳೆ ಇವು ಬೃಹದಾಕರವಾಗಿ ಬೆಳೆದು ಸಮೀಪದ ರಸ್ತೆ ಮಾರ್ಗಗಳು ಅಥವಾ ಮಾನವ ವಸತಿಗಳು ಮುಚ್ಚಿಹೋಗುತ್ತವೆ. ಫ್ರಾನ್ಸಿನ ನೈರುತ್ಯ ತೀರದಲ್ಲಿರುವ ಲಾಂಡೆಸ್ ಮರಳು ದಿಬ್ಬಗಳು ಸು. 15 ಸಾವಿರ ಚ.ಕಿಮೀ ವಿಸ್ತಾರವಾಗಿ ಹರಡಿದ್ದು ಅವುಗಳ ತುದಿಗಳು 40 ಮೀ ಗಿಂತಲೂ ಎತ್ತರವಾಗಿವೆ. ಇದೇ ರೀತಿಯ ದಿಣ್ಣೆಗಳು ಬೆಲ್ಜಿಯಂ, ಡೆನ್ಮಾರ್ಕ್ ಮತ್ತು ನೆದರ್ಲೆಂಡ್ಸ್‌ಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.




ಕಿರುನಾಲಿಗೆಯಾಕೃತಿ ದಿಬ್ಬ

ಸಮುದ್ರ ತೀರ: ನೆಲ–ಜಲಗಳಿಗೆ ಪರಸ್ಪರ ಸಂಪರ್ಕಿಸುವ ಅನಿರ್ದಿಷ್ಟ ವಲಯಕ್ಕೆ ಸಾಮಾನ್ಯವಾಗಿ ಸಮುದ್ರ ತೀರವೆಂದು ಕರೆಯುವರು. ಸಮುದ್ರದ ಅಂಚಿನ ನಿವೇಶನವನ್ನು ಕಡಲ ಕರೆ ಅಥವಾ ತೀರವೆಂದು ಕರೆಯುವರು. ಸಮುದ್ರ–ಸಾಗರಗಳ ಅಂಚಿನಲ್ಲಿ ಹರಡಿರುವ ಪ್ರದೇಶಕ್ಕೆ ತೀರಪ್ರದೇಶವೆನ್ನುವರು. ಅದು ವಿಸ್ತಾರವಾದ ಮೈದಾನವಾಗಿದ್ದಲ್ಲಿ ಅದನ್ನು ಕರಾವಳಿ ಎಂದು ಕರೆಯುವರು. ತೀರ ಪ್ರದೇಶ ಸಾಮಾನ್ಯವಾಗಿ ಸಮುದ್ರದ ಕಡೆಗೆ ಸಾಧಾರಣ ಇಳಿಜಾರನ್ನು ಹೊಂದಿರುತ್ತದೆ. ಮೆಕ್ಕಲು, ಮರಳು ಹಾಗೂ ಶಿಲಾ ಚೂರುಗಳು ಸಂಚಯನದಿಂದ ರೂಪಿತವಾಗಿರುತ್ತದೆ. ಇದರ ವಿಶಾಲತೆಯು ಸಮೀಪದ ಪ್ರಾಕೃತಿಕ ಲಕ್ಷಣವನ್ನವಲಂಬಿಸಿರುತ್ತದೆ. ಸಮುದ್ರದ ಅಂಚು ಪರ್ವತಗಳು, ಪ್ರಸ್ಥಭೂಮಿ ಹಾಗೂ ಎತ್ತರವಾದ ಗುಡ್ಡಗಾಡುಗಳಿಂದ ಕೂಡಿದ್ದರೆ ಅಲ್ಲಿಯ ತೀರ ಪ್ರದೇಶ ಕಿರಿದಾಗಿಯೂ ಮತ್ತು ಕಡಿದಾಗಿಯೂ ಇರುತ್ತದೆ. ಉದಾ: ಭಾರತದ ಪಶ್ಚಿಮ ತೀರ. ಬದಲಾಗಿ ಸಮುದ್ರದ ಅಂಚಿನಲ್ಲಿ ಮೈದಾನ ಪ್ರದೇಶವಿದ್ದರೆ ತೀರ ಪ್ರದೇಶ ವಿಶಾಲವಾಗಿಯೂ ಸಾಧಾರಣ ಇಳಿಜಾರಿನಿಂದಲೂ ಕೂಡಿರುತ್ತದೆ. ಉದಾ: ಭಾರತದ ಪೂರ್ವ ತೀರ ಪ್ರದೇಶ.

ನೆಲ–ಜಲವನ್ನು ಪ್ರತ್ಯೇಕಿಸುವ ರೇಖೆಗೆ ತೀರರೇಖೆ ಎಂದು ಕರೆಯುವರು. ಇದು ಉಬ್ಬರದ ಮಟ್ಟಕ್ಕೂ ಇಳಿತದ ಮಟ್ಟಕ್ಕೂ ನಡುವಣ ತೀರವಲಯದಲ್ಲಿದೆ. ತೀರದ ರೇಖೆ ಯಾವಾಗಲೂ ಒಂದೇ ರೀತಿಯಾಗಿರುವುದಿಲ್ಲ. ಅಧಿಕ ಭರತವುಂಟಾದಾಗ ಎತ್ತರಕ್ಕೂ ಕನಿಷ್ಠ ಭರತವುಂಟಾದಾಗ ಕೆಳಕ್ಕೂ ವ್ಯತ್ಯಾಸಗೊಳ್ಳುವುದು.

ತೀರಗಳನ್ನು ವಿಂಗಡಿಸುವಲ್ಲಿ ಒಮ್ಮತವಿಲ್ಲ. ಅನೇಕ ಭೂಸ್ವರೂಪ ವಿಜ್ಞಾನಿಗಳು ತೀರಗಳನ್ನು ವಿವಿಧ ರೀತಿಯಲ್ಲಿ ವಿಂಗಡಿಸಿರುವರು. ಅಂತಹವುಗಳಲ್ಲಿ ಡಿ.ಡಬ್ಲ್ಯೂ. ಜಾನ್ಸನ್ ವಿಂಗಡನೆ ಸರಳವಾದುದು. ಈತ ಸಮುದ್ರದ ನೀರಿನ ಮಟ್ಟದ ವ್ಯತ್ಯಾಸ ಹಾಗೂ ತೀರದ ಸ್ವರೂಪಗಳನ್ನಾಧರಿಸಿ ನಾಲ್ಕು ಪ್ರಧಾನ ವಿಧಗಳಾಗಿ ವಿಂಗಡಿಸಿರುವರು.

1. ಮೇಲೆತ್ತಲ್ಪಟ್ಟಿರುವ ತೀರಗಳು: ಭೂ ಸ್ಥಾನ ಪಲ್ಲಟದಿಂದ ಸಮುದ್ರದ ಅಂಚಿನ ಭೂ ಭಾಗ ಸಮುದ್ರಮಟ್ಟದಿಂದ ಮೇಲೇಳುವುದರಿಂದಲೋ ಅಥವಾ ಸಮುದ್ರದ ನೀರಿನ ಮಟ್ಟ ಕೆಳಗಿಳಿಯುವುದರಿಂದಲೋ ಮೇಲೆದ್ದು ಕಂಡುಬರುವ ತೀರಗಳು. ಇಂತಹ ತೀರಗಳು ವಿಶೇಷವಾಗಿ ಖಂಡಾಂತರ ಹಿಮಹಾಳೆಗಳಿರುವ ಭಾಗಗಳಲ್ಲಿ ಕಂಡುಬರುತ್ತವೆ. ಈ ರೀತಿಯಲ್ಲಿ ಉಂಟಾದ ಅನೇಕ ತೀರಗಳು 15 ಮೀಟರುಗಳಿಗಿಂತಲೂ ಎತ್ತರಕ್ಕೆ ಮೇಲೆದ್ದು ಕಂಡುಬರುತ್ತವೆ. ಇವು ರಚಿತವಾಗುವ ಪೂರ್ವಾಪರ ಸ್ಥಿತಿಯ ಆಧಾರಗಳ ಮೇಲೆ ಎರಡು ವಿಧಗಳಾಗಿ ವಿಂಗಡಿಸಬಹುದು. ಅ. ಔನ್ನತ್ಯ ಭೂ ತೀರ. ಆ. ತಗ್ಗಾದ ಭೂ ತೀರ.

ಅ. ಔನ್ನತ್ಯ ಭೂ ತೀರ: ಶಿಲಾಸ್ತರಭಂಗ ಅಥವಾ ಶಿಲಾ ಮಡಿಕೆಯಂತಹ ಭೂ ಸ್ಥಾನ ಪಲ್ಲಟಗಳುಂಟಾಗಿ ತೀರ ಪ್ರದೇಶ ಮೇಲೆತ್ತಲ್ಪಡುವುದರಿಂದ ಈ ರೀತಿಯ ತೀರಗಳು ಉತ್ಪತ್ತಿಯಾಗುತ್ತವೆ. ಇಲ್ಲಿ ಮೇಲೆದ್ದ ಎತ್ತರವಾದ ಸಮುದ್ರ ದಡದ ಲಕ್ಷಣ ಪ್ರಧಾನವಾಗಿರುತ್ತದೆ.

ಈ ವಲಯಕ್ಕೆ ಸಮುದ್ರದ ಅಲೆಗಳು ತಲುಪುವುದು ದುರ್ಲಭ. ಆದಾಗ್ಯೂ ಇಲ್ಲಿ ಸ್ವಾಭಾವಿಕ ಸೇತುವೆ, ಸಮುದ್ರ ಕಮಾನು, ಬಿಡಿಬಂಡೆ ಇತ್ಯಾದಿ ಭೂ ಸ್ವರೂಪಗಳು ಕಂಡು ಬರುತ್ತವೆ. ಇಂತಹ ತೀರ ಕಡಿದಾದ ಇಳಿಜಾರು ಹಾಗೂ ನೇರವಾಗಿ ತೀರ ರೇಖೆಯನ್ನೂ ಹೊಂದಿರುತ್ತದೆ. ಇದನ್ನು ಹೊಂದಿಕೊಂಡಿರುವ ಸಮುದ್ರದ ನೀರು ಆಳವಾಗಿರುತ್ತದೆ. ಇಲ್ಲಿ ಸಮುದ್ರ ಅಲೆರಹಿತ ಪೀಠ ಭಾಗಗಳು ಕಂಡುಬರುತ್ತವೆ. ಈ

ತೀರಗಳು ಶಿಲಾ ಚೂರು ಹಾಗೂ ಪ್ರಾಣಿಗಳ ಅವಶೇಷ ತುಣುಕುಗಳ ಸಂಚಯನವನ್ನೊಳಗೊಂಡಿರುತ್ತವೆ. ಈ ವಿಧದ ತೀರಗಳು ಕೆಲಮಟ್ಟಿಗೆ ಬಂದರು ನಿರ್ಮಾಣಕ್ಕೆ ಯೋಗ್ಯವಾಗಿರುತ್ತವೆ. ಉದಾ: ಸ್ಕಾಟ್ಲೆಂಡ್ ತೀರ, ಭಾರತದ ದಖಿನ್ ಪರ್ಯಾಯ ಪಶ್ಚಿಮ ತೀರ, ಕೆಂಪು ಸಮುದ್ರದ ಪಶ್ಚಿಮ ತೀರ ಇತ್ಯಾದಿ.

ಆ. ತಗ್ಗಾದ ಭೂ ತೀರ: ಖಂಡಾವರಣ ಪ್ರದೇಶ ಸಮುದ್ರಮಟ್ಟದಿಂದ ಮೇಲೆದ್ದು ರೂಪಿತವಾದ ಸಮುದ್ರ ತೀರಗಳಿಗೆ ತಗ್ಗಾದ ಭೂ ತೀರಗಳೆಂದು ಕರೆಯುವರು. ಇವು ನಯವಾದ ಮೇಲ್ಮೈ ಹಾಗೂ ಸಾಧಾರಣ ಇಳಿಜಾರನ್ನು ಹೊಂದಿರುತ್ತವೆ. ಇವುಗಳಿಗೆ ಹೊಂದಿಕೊಂಡಂತಿರುವ ಸಮುದ್ರದ ನೀರು ಆಳವಾಗಿರುವುದಿಲ್ಲ. ಬದಲಾಗಿ ಲಗೂನ್, ಚೌಳುಪ್ಪು, ಜೌಗು ಮತ್ತು ಕೆಸರು ಅಂಕಣಗಳಿಂದ ಕೂಡಿರುತ್ತವೆ. ಅಲ್ಲದೆ ಮರಳು ಮತ್ತು ನುರಜುಗಲ್ಲುಗಳ ಸಂಚಯನದಿಂದ ಕೂಡಿದ ಸಮುದ್ರದ ದಡ ಮತ್ತು ಕಡಲ ಮರಳು ದಿಣ್ಣೆಗಳೂ ರಚಿತವಾಗಿರುತ್ತವೆ. ಉದಾ: ಅಮೆರಿಕ ಸಂಯುಕ್ತ ಸಂಸ್ಥಾನದ ಆಗ್ನೇಯ ತೀರ, ಪಶ್ಚಿಮ ಫಿನ್ಲೆಂಡ್, ಪೂರ್ವ ಸ್ವೀಡನ್, ಅರ್ಜೆಂಟೈನದ ತೀರ, ರೈಯೋ–ಡಿ–ಲಾ–ಪ್ಲಾಟಾ ಪ್ರಸ್ಥಭೂಮಿಯ ದಕ್ಷಿಣ ತೀರಗಳು.

2. ಮುಳುಗಡೆ ತೀರಗಳು: ಇಂತಹ ತೀರಗಳು ಸಮೀಪದ ಭೂ ಭಾಗ ಕುಸಿದು ಮುಳುಗಡೆಯಾಗುವುದರಿಂದಲೋ ಅಥವಾ ಸಮುದ್ರದ ನೀರಿನ ಮಟ್ಟ ಏರುವುದರಿಂದಲೋ ಉಂಟಾಗುತ್ತವೆ. ಇವುಗಳಲ್ಲಿ ನಾಲ್ಕು ವಿಧಗಳಿವೆ:

ಅ. ರಿಯಾ ತೀರ: ಕೆಲವು ಔನ್ನತ್ಯ ತೀರ ಪ್ರದೇಶದಲ್ಲಿ ಪರ್ವತ ಅಥವಾ ಗುಡ್ಡಗಾಡುಗಳ ಸರಣಿ ಮತ್ತು ನದಿ ಕಣಿವೆಗಳು ಸಮುದ್ರಕ್ಕೆ ಸಮಕೋನದಲ್ಲಿ ರಚನೆಯಾಗಿದ್ದು, ಅವು ತೀರಕ್ಕೆ ಅಡ್ಡವಾಗಿರುತ್ತವೆ. ಸಮುದ್ರದ ನೀರಿನ ಮಟ್ಟ ಏರಿದಾಗ ಇದರ ಒಂದು ಭಾಗ ಮುಳುಗಡೆಯಾಗಿ ಉಳಿದ ಭಾಗ ಉದ್ದವಾಗಿಯೂ ಕಿರಿದಾಗಿಯೂ ಕಡಿಮೆ ಎತ್ತರದ ತೀರವಾಗಿ ಉಳಿಯುವುದು. ಇದನ್ನೇ ರಿಯಾ (ಸ್ಪಾನಿಷ್) ತೀರ ಅಥವಾ ಕಡಲ್ದೋಳು ತೀರವೆಂದು ಕರೆಯುವರು. ಇವು ಭೂಮಿಯ ಕಡೆಗೆ ಕಿರಿದಾಗಿಯೂ ಹಾಗೂ ಸಮುದ್ರದ ಕಡೆಗೆ ಅಗಲವಾಗಿಯೂ ರಚಿತವಾಗಿದ್ದು ಆಲಿಕೆಯಾಕಾರವನ್ನು ಹೋಲುತ್ತವೆ. ಹಿಮಯುಗದಲ್ಲಿದ್ದ ಅಪರಿಮಿತ ಕಣ ಹಿಮದಲ್ಲಿ ನೀರು ಹೆಪ್ಪುಗಟ್ಟಿತ್ತು. ಕಾಲಾನಂತರ ಉಷ್ಣ ವಾಯುಗುಣದ ಪರಿಸ್ಥಿತಿ ಉಂಟಾಗಿ ಹಿಮ ಕರಗಿ ನೀರಾದುದರಿಂದ ಸಮುದ್ರದ ನೀರಿನ ಮಟ್ಟ ಮೇಲಕ್ಕೇರಿದ ಪರಿಣಾಮವಾಗಿ ಈ ವಿಧದ ತೀರಗಳು ಉಂಟಾದವು ಎಂಬ ಅಭಿಪ್ರಾಯವೊಂದಿದೆ. ಉದಾ: ಐರ್ಲೆಂಡಿನ ನೈರುತ್ಯ ತೀರ, ಫ್ರಾನ್ಸಿನ ಬ್ರಿಟ್ಟಾನಿಯ ಪಶ್ಚಿಮ ತೀರ, ಸ್ಪೇನಿನ ವಾಯವ್ಯ ತೀರ.

ಆ. ಮುಳುಗು ಕಡಲ ದಿಣ್ಣೆಯ ತೀರ: ಸಮುದ್ರ ತೀರಕ್ಕೆ ಸಮಾನಾಂತರವಾಗಿ ಹಬ್ಬಿರುವ ಪರ್ವತ ಅಥವಾ ಬೆಟ್ಟದ ಸಾಲುಗಳ ಸಮುದ್ರದ ನೀರಿನಲ್ಲಿ ಮುಳುಗಡೆಯಾಗಿ ರಚಿತವಾದ ತೀರವನ್ನು ಮುಳುಗು ಕಡಲ ದಿಣ್ಣೆಯ ತೀರವೆಂದು ಕರೆಯುವರು. ಇವುಗಳನ್ನು ಅನುರೂಪ ತೀರವೆಂತಲೂ ಕರೆಯುವರು. ಇಂತಹ ತೀರ ನೇರವಾಗಿಯೂ ಕ್ರಮಬದ್ಧವಾಗಿಯೂ ರಚನೆಯಾಗಿರುತ್ತದೆ. ಏಡ್ರಿಯಾಟಿಕ್ ಸಮುದ್ರದ ತೀರದಲ್ಲಿರುವ ಯುಗಸ್ಲಾವಿಯ ತೀರದ ಡಾಲ್ಮೇಷಿಯನ್ ತೀರ ಸೂಕ್ತ ಉದಾಹರಣೆಯಾಗಿದ್ದು, ಆ ಹೆಸರಿನಿಂದಲೇ ಇಂತಹ ತೀರಗಳನ್ನು ಕರೆಯಲಾಗಿದೆ. ಕೆಲವು ವೇಳೆ ಗುಡ್ಡಗಾಡುಗಳು ಏರಿದ ಸಮುದ್ರದ ನೀರಿನ ಮಟ್ಟದಿಂದ ಮುಳುಗಿ ಪ್ರತ್ಯೇಕಗೊಂಡ ದ್ವೀಪ ಸರಣಿಗಳಂತೆ ಕಾಣಿಸುತ್ತವೆ. ಇವಕ್ಕೆ ಸಮಾನಾಂತರದಲ್ಲಿದ್ದ ಕಣಿವೆಗಳು ಕೊಲ್ಲಿಯಾಗಿ ಪರಿಣಮಿಸುತ್ತವೆ. ಅವುಗಳಿಗೆ ಇಕ್ಕಟ್ಟಾದ ಜಲಸಂಧಿ ಎನ್ನುವರು. ಇವು ಸಹ ನೌಕಾಯಾನಕ್ಕೆ ಅಡ್ಡಿಯನ್ನುಂಟು ಮಾಡುತ್ತವೆ. ಉದಾ: ಪಶ್ಚಿಮ ಸ್ಕಾಟ್ಲೆಂಡ್‌ನ ಜುರಾಸೌಂಡ್.

ಇ. ಫಿಯೋರ್ಡ್ ತೀರ: ಕಡಿದಾದ ಬದಿಯುಳ್ಳ ಆಳವಾದ ಹಿಮನದಿ ರಚಿತ U ಆಕಾರದ ಕಣಿವೆಯೊಂದು ಸಮುದ್ರದ ನೀರಿನಲಿ ಮುಳುಗಡೆಯಾಗಿರುವುದೇ ಫಿಯೋರ್ಡ್. ಇದರ ತೀರದ ಭಾಗವೊಂದು ಕಿರಿದಾಗಿಯೂ ಆಳವಾಗಿಯೂ ಸಮುದ್ರದೊಳಗೆ ಚಾಚಿಕೊಂಡಿರುತ್ತದೆ. ಗೋಡೆಯಂತಹ ಕಡಿದಾದ ಇಳಿಜಾರಿನ ಬದಿಯು ಸಮುದ್ರದ ನೀರಿನಲ್ಲಿ ಮುಳುಗಿರುತ್ತದೆ. ಆಳವಾದ ಸಮುದ್ರದ ನೀರು ಅದರ ಮುಮ್ಮುಖದವರೆಗೂ ಪ್ರಸರಿಸಿರುತ್ತದೆ. ಇದರ ಮುಖಭಾಗದಲ್ಲಿ ಒಂದು ಅಡ್ಡಗಟ್ಟು ರಚನೆಯಾಗಿರುತ್ತದೆ. ಪ್ರಾಯಶಃ ಇದು ಕಠಿಣ ಶಿಲೆಯಿಂದಲೋ ಅಥವಾ ಹಿಮನದಿಯ ಸಂಚಯನ ವಸ್ತುಗಳಿಂದಲೋ ರಚಿತವಾಗಿರುತ್ತದೆ. ಇದು ಫಿಯೋರ್ಡ್‌ನ ಹೊಸಿಲುನಂತಿದ್ದು, ಕೆಲವು ವೇಳೆ ಹಡಗು ಸಂಚಾರಕ್ಕೆ ಅಡಚಣೆಯನ್ನುಂಟುಮಾಡುವುದು. ಇಂತಹವು 50 ರಿಂದ 60 ಮೀ ಎತ್ತರವಾಗಿರುತ್ತವೆ. ಫಿಯೋರ್ಡ್ ತೀರಗಳು ವಿಶೇಷವಾಗಿ ಉನ್ನತ ಅಕ್ಷಾಂಶ ವಲಯಗಳಲ್ಲಿ ಕಂಡುಬರುತ್ತವೆ. ಉದಾ: ನಾರ್ವೆ, ಅಲಾಸ್ಕ, ಬ್ರಿಟಿಷ್ ಕೊಲಂಬಿಯ, ದಕ್ಷಿಣ ಚಿಲಿ, ನ್ಯೂಜಿಲೆಂಡಿನ ದಕ್ಷಿಣ ದ್ವೀಪಗಳ ತೀರ. ಈ ವಲಯಗಳ ಹಿಮನದಿಯ ನಗ್ನೀಕರಣ ಕಾರ್ಯಾಚರಣೆಗೊಳಗಾಗಿ ಕೆಲವು ಫಿಯೋರ್ಡ್ ತೀರಗಳು ಬಹು ಆಳ ಹಾಗೂ ಉದ್ದವಾಗಿ ರಚನೆಯಾಗಿವೆ. ಉದಾ: ನಾರ್ವೆಯ ಸೊಂಗ್ ಫಿಯೋರ್ಡ್ ತೀರ. ಇದು 160 ಕಿಮೀ ಉದ್ದ, 6 ಕಿಮೀ ಅಗಲ ಹಾಗೂ 1500 ಮೀ ಎತ್ತರವಾಗಿದೆ. ಓಸ್ಲೋಫಿಯರ್ಡ್ ಉತ್ತಮ ಉದಾಹರಣೆ.

ಈ. ನದಿ ಅಳಿವೆ ತೀರ: ನದಿಯು ಸಾಗರ–ಸಮುದ್ರವನ್ನು ಸೇರುವ ಭಾಗದಲ್ಲಿ Czg¥ÁvÀzÀ ªÀÄÄRªÁV ¸ÀÄ¼ÉÃV ಆಕಾರದಲ್ಲಿ ಅಥವಾ ಆಲಿಕೆಯಾಕಾರಕ್ಕೆ ವಿಸ್ತರಿಸುತ್ತವೆ. ಅದರೊಳಗೆ ಸಮುದ್ರದ ನೀರು ಒಳಚಾಚುವುದು. ಇದನ್ನೇ ನದಿ ಅಳಿವೆ ತೀರವೆಂದು ಪರಿಗಣಿಸಲಾಗಿದೆ. ಇಲ್ಲಿಂದ ಸಮುದ್ರದ ಏರುಬ್ಬರದ ನೀರು ದೂರ ಸರಿದಾಗ ಜೌಗು ಹಾಗೂ ಕೆಸರು ಮಣ್ಣಿನ ಸಂಚಯನದ ತೀರ ಉಂಟಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಯಾವುದೇ ಮರಳು ದಿಬ್ಬ ಅಥವಾ ಅಡ್ಡಗಟ್ಟುಗಳಿಲ್ಲದಿದ್ದಲ್ಲಿ ಅದು ಬಂದರಿಗೆ ಯೋಗ್ಯವಾಗುವುದು. ಉದಾ: ಲಂಡನ್, ಹ್ಯಾಂಬರ್ಗ್ ಮತ್ತು ಬ್ಯೂನಸ್ ಐರಿಸ್ ಬಂದರುಗಳು.

3. ತಟಸ್ಥ ತೀರ: ನೆಲ ಮತ್ತು ಜಲಗಳ ಸಮತಲದ ವಿನ್ಯಾಸದಲ್ಲಿ ಯಾವುದೇ ಏರಿಳಿತಗಳು ಕಾಣದ ಅಥವಾ ತೀರದ ಮುಳುಗಡೆ ಹಾಗೂ ಮೇಲೆದ್ದು ರೂಪಿತವಾಗದ ತೀರಗಳಿಗೆ ತಟಸ್ಥ ತೀರವೆನ್ನುವರು. ಅಂದರೆ ಈವರೆಗೆ ವಿವರಿಸಿದ ಮೊದಲೆರಡು ತೀರಗಳ ರಚನೆಗೆ ಹೊರತಾದವು. ಇತ್ತೀಚೆಗೆ ಶಿಲಾವಸ್ತುಗಳ ಸಂಚಯನದಿಂದ ರಚನೆಯಾದ ತೀರಗಳು ಈ ವಿಧಗಳಿಗೆ ಸೂಕ್ತ ಉದಾಹರಣೆಯಾಗಿದೆ. ಉದಾ: ನದಿ ಮುಖಜ ಭಾಗದ ತೀರ, ಜೌಗು ಪ್ರದೇಶ, ಮೆಕ್ಕಲು ಸಂಚಯನ ತೀರ, ಉತ್ಕ್ಷಾಲಿತ ಮೈದಾನದ ತೀರ, ಜ್ವಾಲಾಮುಖಿ ಜನ್ಮತೀರ, ಹವಳ ದಿಣ್ಣೆ ತೀರ.

4. ಸಂಯುಕ್ತ ತೀರ: ಸಮುದ್ರದ ನೀರಿನಿಂದ ಮೇಲೇಳುವ ಹಾಗೂ ಮುಳುಗಡೆಯಾಗುವ ಎರಡೂ ರೀತಿಯಿಂದಲೂ ಸಂಯುಕ್ತವಾಗಿ ನಿರ್ಮಾಣವಾದ ತೀರಗಳಿಗೆ ಸಂಯುಕ್ತ ತೀರಗಳೆಂದು ಕರೆಯಲಾಗಿದೆ. ಹಿಮಯುಗದ ಅಂತ್ಯ ಭಾಗದಲ್ಲಿ ಹಿಮ ಕರಗಿ, ನೀರಾಗಿ ಸಮುದ್ರದ ನೀರಿನ ಮಟ್ಟ ಹೆಚ್ಚಾಯಿತು. ಅದರಿಂದ ಸಮುದ್ರ ದಡ ಮುಳುಗಿ ಹೋಯಿತು. ಅಂತೆಯೇ ಹಿಮ ಕರಗಿ ನೀರಾದುದ್ದರಿಂದ ಅಲ್ಲಿನ ಭೂ ರಾಶಿ ಹಗುರವಾಗಿ ಪರಿಣಮಿಸಿ ಅದು ಸಮುದ್ರಮಟ್ಟದಿಂದ ಮೇಲೆದ್ದಿತು. ಹೀಗೆ ಕೆಲವು ತೀರಗಳು ಮುಳುಗಡೆಯಿಂದಲೂ ಮೇಲೆತ್ತಲ್ಪಡುವುದರಿಂದಲೂ ಸಂಯುಕ್ತ ಕಾರ್ಯಗಳಿಂದ ಉಂಟಾಗುತ್ತದೆ. ಉದಾ: ನಾರ್ವೆ ಮತ್ತು ಸ್ವೀಡನ್ ತೀರಗಳು. (ಪಿ.ಎಂ.)

**ನಗ್ನೀಕರಣದಲ್ಲಿ ಹಿಮನದಿಯ ಕಾರ್ಯ:** ಕಣಿವೆ ಹಿಮ ನದಿ ನಿಧಾನವಾಗಿ ಚಲಿಸುತ್ತದೆ. ಇದೂ ಸವೆತ, ಸಾಗಾಣಿಕೆ ಮತ್ತು ಸಂಚಯನ ಕಾರ್ಯಗಳನ್ನು ನಿರ್ವಹಿಸುತ್ತದೆ. ಪರಿಣಾಮವಾಗಿ ವಿವಿಧ ಬಗೆಯ ಭೂ ಸ್ವರೂಪಗಳು ನಿರ್ಮಾಣವಾಗುತ್ತವೆ.

1. ಸವೆತ ಕಾರ್ಯ: ಹಿಮನದಿಯ ಸವೆತ ಕಾರ್ಯ ಕಣಿವೆಯ ಶಿಲಾಸ್ತರಗಳ ರಚನೆಗೆ ಅನುಗುಣವಾಗಿರುತ್ತದೆ. ಘನ ಹಿಮ ಅತ್ಯಂತ ಹೆಚ್ಚು ಶಕ್ತಿಯುಳ್ಳ ಯಂತ್ರದಂತೆ ಸವೆತ ಕಾರ್ಯವನ್ನು ನಿರ್ವಹಿಸುತ್ತದೆ. ಸವೆತ ಕಾರ್ಯ ಅನೇಕ ರೀತಿಯಲ್ಲಿ ಏರ್ಪಡುವುದು. ಅದು ಪ್ರಮುಖವಾಗಿ ಕೀಳುವಿಕೆ, ತೋಡುವಿಕೆ ಹಾಗೂ ಪರಚುವಿಕೆಯಿಂದ ಏರ್ಪಡುತ್ತದೆ.

ಘನ ಹಿಮ ಸಾಗುವಾಗ ಕಣಿವೆಯ ತಳದಲ್ಲಿರುವ ಶಿಲಾ ಚೂರುಗಳನ್ನು ಕೀಳುವುದು. ಇದರಿಂದ ಆ ಸ್ಥಳದಲ್ಲಿ ತಗ್ಗುಗಳೇರ್ಪಡುವವು. ಹೀಗೆ ಶಿಲಾಚೂರು ಮತ್ತು ಶಿಲಾಗುಂಡುಗಳನ್ನು ಕೀಳುತ್ತಾ ಅವುಗಳನ್ನು ಮುಂದಕ್ಕೆ ಜಾರಿಸುತ್ತಾ ಹೋಗುವುದು. ಈ ಕಾರ್ಯವನ್ನು ಹಿಮನದಿಯ ತೋಡುವ ಸವೆತ ಕಾರ್ಯವೆನ್ನುವರು. ಈ ಕ್ರಿಯೆಯಿಂದ ದೊರೆಯುವ ಹರಳುಗಲ್ಲು, ಶಿಲಾಚೂರುಗಳು ಹಿಮನದಿಯೊಡನೆ ಸಾಗುವಾಗ ಕಣಿವೆಯ ಬದಿ ಮತ್ತು ತಲದಲ್ಲಿರುವ ಶಿಲೆಗಳನ್ನು ಪರಚುವ ಹಾಗೂ ಗೀಚುವ ಕಾರ್ಯವೇರ್ಪಡುವುದು. ಮೊನಚಾದ ಏಣುಗಳನ್ನುಳ್ಳ ಶಿಲಾಚೂರುಗಳು ಗೀಚುವುದರಿಂದ ಗೋಚರಿಸುವ ಗೆರೆಗಳು ಹಿಮನದಿ ಹರಿಯುವ ದಿಕ್ಕನ್ನು ನಿರೂಪಿಸುತ್ತವೆ. ಹಿಮನದಿಯೊಂದಿಗೆ ಸಾಗುವ ಸಣ್ಣ ಶಿಲಾಚೂರಗಳು ಕಣಿವೆಯ ತಳದ ಶಿಲೆಗಳನ್ನು ಉಜ್ಜಿ ಮರಳು (ಉಜ್ಜು) ಕಾಗದದಂತಹ ಸ್ವರೂಪವನ್ನುಂಟುಮಾಡುವುದು. ಹೀಗೆ ಉಜ್ಜುವಿಕೆ ಪ್ರಕ್ರಿಯೆಯ ಮೂಲಕವೂ ಹಿಮನದಿ ಕಣಿವೆಯ ತಳ ಮತ್ತು ಬದಿಗಳು ಸವೆತಕ್ಕೊಳಗಾಗುವವು.

ಕಣಿವೆಯ ಶಿಲಾಸ್ತರದ ಮೇಲ್ಮೈಯನ್ನು ಉಜ್ಜಿ ಕೆರೆಯುವ ಕ್ರಿಯೆಯಿಂದ ಮೃದುವೂ ನಯವೂ ಆದ ಶಿಲಾಪುಡಿ ಉತ್ಪತ್ತಿಯಾಗುವುದು. ಕೆಲವೊಮ್ಮೆ ಶಿಲಾ ಬಿರುಕುಗಳಲ್ಲಿ ನೀರು ತುಂಬಿಕೊಂಡು ಅದು ಹೆಪ್ಪುಗಟ್ಟಿದಾಗ ಬಿರುಕುಗಳಲ್ಲಿ ಒತ್ತಡವೇರ್ಪಟ್ಟು ಆ ಶಿಲೆ ಒಡೆದು ಚೂರಾಗುವ ಮೂಲಕ ಸವೆತವೇರ್ಪಡುವುದು. ಹಿಮನದಿಯ ಸವೆತ ಕಾರ್ಯದಿಂದ ವಿವಿಧ ಭೂಸ್ವರೂಪಗಳು ನಿರ್ಮಾಣಗೊಳ್ಳುವವು.

ಅ. ಹಿಮಾಗಾರ: ಇವು ಹಿಮನದಿಯ ಸವೆತದಿಂದ ಉಂಟಾಗುವ ವರ್ತುಲಾಕಾರದ ತಗ್ಗುಗಳು. ಕಡಿದು ಇಳಿಜಾರುಗಳಿಂದ ಕೂಡಿದ ಹಿಂಬದಿ ಮತ್ತು ಪಕ್ಕಗಳನ್ನು ಒಳಗೊಂಡ ಆರಾಮ ಕುರ್ಚಿಯಂತೆ ಕಾಣುವ ತಗ್ಗಾದ ಪ್ರದೇಶವೇ ಹಿಮಗಾರ. ಇವುಗಳನ್ನು ಹಿಮಗಂಹ್ವರ

ಅಥವಾ ರಂಗ ಕಣಿವೆ ಎಂತಲೂ ಕರೆಯುವರು. ಹಾಗೆಯೇ ಸ್ಕಾಟ್ಲೆಂಡಿನಲ್ಲಿ ಕೊರಿ, ಜರ್ಮನಿಯಲ್ಲಿ ಕರ್ರೆನ್ ಸ್ಕಾಂಡಿನೇವಿಯದಲ್ಲಿ ಕೇಲಸ್ ಮತ್ತು ವೇಲ್ಸ್‌ನಲ್ಲಿ ಕಮ್ಸ್ ಎಂಬ ವಿವಿಧ ಹೆಸರುಗಳಿಂದ ಇವುಗಳನ್ನು ಕರೆಯುವರು.

ಹಿಮನದಿ ಪ್ರಾರಂಭವಾಗುವ ಎತ್ತರವಾದ ಪರ್ವತ ಭಾಗಗಳಲ್ಲಿ ಈ ರೀತಿಯ ಸ್ವರೂಪಗಳು ಸಾಮಾನ್ಯವಾಗಿರುತ್ತವೆ. ಆದ್ದರಿಂದ ಇವುಗಳನ್ನು ಹಿಮನದಿಯ ಉಗಮ ಸ್ಥಾನಗಳೆಂತಲೂ ಕರೆಯುವರು. ಪರ್ವತ ಭಾಗದಲ್ಲಿ ಸ್ವಲ್ಪ ಪ್ರಮಾಣದ ಘನ ಹಿಮ ಕರಗಿ ನೀರಾಗಿ ಅದು ಶೀರ್ಷ ಹಿಮನದಿಯ ಬಿರುಕುಗಳಲ್ಲಿ (ಬರ್ಗಶ್ರಂಡ್) ಸೇರುವುದು. ರಾತ್ರಿಯ ವೇಳೆ ಆ ನೀರು ಪುನಃ ಘನೀಕರಿಸಿ ಗಟ್ಟಿಯಾಗುವದರಿಂದ ಶಿಲಾ ಬಿರುಕುಗಳಲ್ಲಿ ಒತ್ತಡವುಂಟಾಗಿ ಅವು ಅಗಲವಾಗುತ್ತವೆ. ಬಿರುಕುಗಳು ಅಗಲವಾದಂತೆಲ್ಲಾ ಶಿಲೆ ಒಡೆದು ಚೂರಾಗುತ್ತದೆ. ಅನಂತರ ಶಿಲಾ ಚೂರುಗಳು ಸಾಗಿಸಲ್ಪಡುತ್ತವೆ. ಈ ಕಾರ್ಯ ಮುಂದುವರಿದಂತೆ ಆ ಭಾಗ ಅಗಲ ಹಾಗೂ ಆಳವಾಗುವುದು. ಹೀಗೆ ಹಿಮಾಗಾರಗಳು ನಿರ್ಮಾಣವಾಗುತ್ತವೆ.

ಹಿಮಾಗಾರದ ಅಂತ್ಯ ಭಾಗದಲ್ಲಿ ಹಿಮ ಬಿರುಕುಗಳುಂಟಾಗುತ್ತವೆ. ಅವು ಹಿಮನದಿ ಚಲನೆಯ ವ್ಯತ್ಯಾಸ ಹಾಗೂ ಕಣಿವೆಯ ತಳದ ತಗ್ಗುಗಳ ಪರಿಣಾಮದಿಂದ ಉಂಟಾಗುತ್ತವೆ. ಇವು ಹಿಮನದಿ ಹರಿಯುವ ದಿಕ್ಕಿಗೆ ನೀಳವಾಗಿಯೂ ಅಡ್ಡವಾಗಿಯೂ ಹಾಗೂ ಪಾರ್ಶ್ವಗಳಲ್ಲಿಯೂ ಉಂಟಾಗುವವು.




ಹಿಮಾಗಾರ

ಆ. ಪರ್ವತ ಕಟಕ ಮತ್ತು ಗಿರಿಶೃಂಗ: ಒಂದರ ಪಕ್ಕದಲ್ಲಿ ಒಂದರಂತೆ ನಿರ್ಮಾಣವಾದ ಹಿಮಾಗಾರಗಳ ಬದಿಗಳು ಪರಸ್ಪರ ವಿರುದ್ಧ ದಿಕ್ಕಿಗೆ ಸವೆಯುತ್ತಾ ಹೋದಂತೆ ಹಿಮಗಾರಗಳ ನಡುವಿನ ಭಾಗ ಕತ್ತಿಯ ಅಲುಗಿನಂತೆ ಏಣುಳ್ಳ ಸ್ವರೂಪಗಳುಂಟಾಗುತ್ತವೆ. ಇವುಗಳಿಗೆ ಪರ್ವತ ಕಟಕಗಳೆಂದು, ಪರ್ವತ ಶಿಲಾಗ್ರಕೂಟವೆಂದು ಕರೆಯುವರು. ಉದಾ: ಆಲ್ಫ್ಸ್, ಸ್ಪೈಡಿಂಗ್ ಎಂಡ್ಸ್ ಮತ್ತು ಬೊಲ್ಲಾರ್ಡ್ ಸಮಾನಾಂತರವಾಗಿ ರಚಿತವಾಗಿರುವ ಪರ್ವತ ಕಟಕಗಳ ಸರಣಿಗಳನ್ನು ದೂರದಿಂದ ನೋಡಲು ಬಾಚಣಿಗೆಯ ಹಲ್ಲುಗಳಂತೆ ಕಂಡುಬರುತ್ತವೆ. ಆದ್ದರಿಂದ ಅವುಗಳನ್ನು ಬಾಚಣಿಗೆ ಆಕೃತಿ ಸರಣಿಗಳೆಂದು ಕರೆಯುವರು.




ಗಿರಿಶೃಂಗ, ಪರ್ವತಕಟಕ ಮತ್ತು ಹಿಮಾಗಾರ

ಪರ್ವತವೊಂದರ ಸುತ್ತಲೂ ಒಂದರ ಹಿಂದೆ ಮತ್ತೊಂದರಂತೆ ಹಿಮಾಗಾರಗಳ ಹಿಂಬದಿಯ ಗೋಡೆಗಳು ಸವೆಯುತ್ತಾ ಹೋದಂತೆ ಮಧ್ಯ ಭಾಗದಲ್ಲಿ ಉಳಿಯುವ ಕೋಡು ಆಕಾರದ, ಮೊನಚಾದ ಶಿಖರಾಗ್ರವನ್ನು ಗಿರಿಶೃಂಗ ಅಥವಾ ಶಿಖರಾಗ್ರವೆಂದು ಕರೆಯುವರು. ಉದಾ: ಸ್ವಿಟ್ಜರ್ಲೆಂಡ್‌ನ ಮ್ಯಾಟರ್ ಹಾರ್ನ್ ಮತ್ತು ವೆಟರ್ ಹಾರ್ನ್. ಇದೇ ರೀತಿ ಎರಡು ಹಿಮಾಗಾರಗಳು ವಿರುದ್ಧ ದಿಕ್ಕಿನಲ್ಲಿ ಬೆಳೆಯುತ್ತಾ ಕ್ರಮೇಣ ಅವುಗಳ ನಡುವಿನ ಗೋಡೆಯಂತಹ ಪರ್ವತ ಕಟಕ ಒಡೆದು ಬಿದ್ದು ಹೋಗುವುದು. ಇದರಿಂದ ವಿಶಾಲವಾದ ತಗ್ಗು ಉಂಟಾಗುತ್ತದೆ. ಇದನ್ನು ಬೆಟ್ಟದ ನೆತ್ತಿಯ ಕಣಿವೆ (ಕಾಲ್) ಎಂದು ಕರೆಯುವರು. ಈ ಫ್ರೆಂಚ್ ಶಬ್ದವನ್ನು ಫ್ರಾನ್ಸಿನಲ್ಲಿ ವಿಸ್ತರಿಸಿರುವ ಆಲ್ಪ್ಸ್ ಪರ್ವತಗಳಲ್ಲಿ ಉಂಟಾಗುವ ಈ ರೀತಿಯ ಸ್ವರೂಪಗಳಿಗೆ ವಿಶೇಷವಾಗಿ ಬಳಸುವರು. ಉದಾ: ಕಾಲ್–ಡು–ಮಿಡಿ; ಕಾಲ್–ಡು–ಬಾನ್ ಹ್ಯಾಂ ಇತ್ಯಾದಿ.

ಇ. U ಆಕಾರದ ಕಣಿವೆ: ಹಿಮನದಿಯ ಸವೆತ ಕಾರ್ಯದಿಂದ ನಿರ್ಮಾಣವಾಗುವ ಭೂ ಸ್ವರೂಪಗಳಲ್ಲಿ U ಆಕಾರದ ಕಣಿವೆ ವಿಶಿಷ್ಟವಾದುದು. ಇಕ್ಕಟ್ಟಾದ ಕಣಿವೆ ಮೂಲಕ ಹಿಮನದಿ ಹರಿಯುವಾಗ ತನ್ನ ಕಣಿವೆಯ ಪಾರ್ಶ್ವ ಮತ್ತು ತಳಭಾಗಗಳೆರಡನ್ನು ಸವೆಸುವುದರಿಂದ U ಆಕಾರದ ಕಣಿವೆಗಳು ನಿರ್ಮಾಣವಾಗುತ್ತವೆ. ಕಣಿವೆಯ ಪಾರ್ಶ್ವ ಭಾಗ ಸವೆದು ಗೋಡೆಯಂತೆ ಕಡಿದಾಗಿಯೂ ತಳಭಾಗ ನಯವಾಗಿಯೂ ಸಮತಲವಾಗಿಯೂ ಅಗಲವಾಗಿಯೂ ರೂಪುಗೊಂಡಿರುತ್ತದೆ. ಈ ಕಣಿವೆಯ ಎರಡು ಬದಿಗಳು U ಅಕ್ಷರದ ಎರಡು ಬಾಹುಗಳನ್ನು ಮತ್ತು ತಳ ಅದರ ತಳಭಾಗವನ್ನು ಹೋಲುತ್ತವೆ. ಸ್ವಿಟ್ಜರ್ಲೆಂಡಿನ ಲಾಟರ್ ಬ್ರುನ್ನೆನ್ ಮತ್ತು ಕ್ಯಾಲಿಫೋರ್ನಿಯದ ಯೋಸ್ಮೈಟ್ ಕಣಿವೆ ಇದಕ್ಕೆ ಸೂಕ್ತ ಉದಾಹರಣೆಗಳಾಗಿವೆ.

ಈ. ತೂಗು ಕಣಿವೆ: ಪ್ರಧಾನ ಹಿಮನದಿಗೆ ಎರಡೂ ಬದಿಗಳಿಂದಲೂ ಅನೇಕ ಉಪ ಹಿಮನದಿಗಳು ಬಂದು ಸೇರುವುದರಿಂದ ತೂಗು ಕಣಿವೆಗಳುಂಟಾಗುತ್ತವೆ. ಇದಕ್ಕೆ ಪ್ರಧಾನ ಹಿಮನದಿ ಮತ್ತು ಉಪನದಿಗಳ ವಿಭಿನ್ನ ಮಟ್ಟದ ಸವೆತ ಕಾರ್ಯ ಹಾಗೂ ಎತ್ತರವೇ ಮುಖ್ಯ ಕಾರಣ. ಪ್ರಧಾನ ಹಿಮನದಿಯ ಅಪಾರ ಹಿಮಕಣ ತನ್ನ ಕಣಿವೆಯನ್ನು ಹೆಚ್ಚು ಆಳವಾಗಿ ಕೊರೆಯುತ್ತದೆ. ಇದಕ್ಕೆ ಪ್ರತಿಯಾಗಿ ಉಪನದಿಯಲ್ಲಿ ಕಡಿಮೆ ಹಿಮರಾಶಿಯಿದ್ದು ಅದು ತನ್ನ ಕಣಿವೆಯನ್ನು ಪ್ರಧಾನ ಹಿಮನದಿಯಷ್ಟು ಸವೆಸದೆ ಎತ್ತರದಲ್ಲಿರುತ್ತದೆ. ಹೀಗೆ ಎತ್ತರದ ಉಪನದಿ ಆಳವಾದ ಪ್ರಧಾನ ನದಿಯನ್ನು ಸಂಧಿಸುವ ಕಡೆಗಳಲ್ಲಿ ತೂಗು ಬಿದ್ದಂತೆ ಕಾಣವುದು. ಆದ್ದರಿಂದ ಇವುಗಳನ್ನು ತೂಗು ಕಣಿವೆ ಎಂದು ಕರೆಯುವರು. ಇವು ನೀರಿನ ನದಿಯ ಜಲಪಾತಗಳಂತಿರುತ್ತವೆ. ಉದಾ: ರ್ಹೋನ್ ನದಿ ಮೇಲ್ಕಣಿವೆ. ಲಾಟರ್ ಬ್ರನ್ನೆನ್ ಯೋಸ್ಮೈಟ್ ಕಣಿವೆ.

ಉ. ಶಿಲಾತಗ್ಗು: ಹಿಮ ನದಿ ತನ್ನ ಕಣಿವೆಯ ತಳದ ಶಿಲಾಸ್ತರವನ್ನು ಸವೆತ ಮತ್ತು ತೋಡುವಿಕೆಯಿಂದ ಅಸಮಗೊಳಿಸುವುದು. ಇದರಿಂದ ಕಣಿವೆಯಲ್ಲಿ ಏರಿಳಿತಗಳಿಂದ ಕೂಡಿದ ತಗ್ಗುಗಳು ಉಂಟಾಗುತ್ತವೆ. ಇವುಗಳಿಗೆ ಶಿಲಾತಗ್ಗುಗಳೆಂದು ಹೆಸರು. ಕ್ರಮೇಣ ಈ ತಗ್ಗುಗಳು ಹಿಮಕರಗಿದ ನೀರಿನಿಂದ ತುಂಬಿ ಸರೋವರಗಳಾಗಿ ಪರಿಣಮಿಸಬಹುದು.

ಊ. ಶಿಲಾಸೋಪಾನ: ಉಪನದಿ ಪ್ರಧಾನ ನದಿಯನ್ನು ಸೇರುವ ಭಾಗದಲ್ಲಿ ಕಣಿವೆಯ ಕಡಿದಾದ ಭಾಗ ಹಂತ ಹಂತವಾಗಿ ಸವೆಯಲ್ಪಡುತ್ತದೆ. ಪ್ರಧಾನ ಪಾತ್ರದ ತಳವನ್ನು ಮುಟ್ಟುವವರೆಗೂ ಈ ಕೊರೆತ ಮುಂದುವರಿದು ಮೆಟ್ಟಲೋಪಾದಿಯ ಸ್ವರೂಪಗಳು ನಿರ್ಮಾಣವಾಗುವವು. ಅವುಗಳನ್ನು ಶಿಲಾಸೋಪಾನಗಳೆಂದು ಕರೆಯುವರು. ಈ ರೀತಿಯ ಸ್ವರೂಪಗಳು ಹಿಮನದಿ ಕಣಿವೆಯಲ್ಲಿ ಸವೆತಗತಿಯ ವ್ಯತ್ಯಾಸ ಮತ್ತು ಶಿಲಾಸ್ತರಗಳ ಕಠಿಣತೆಯ ವ್ಯತ್ಯಾಸಗಳಿಂದಾಗಿ ನಿರ್ಮಾಣವಾಗುತ್ತವೆ. ಉದಾ: ಆಲ್ಫೈನ್ ಪರ್ವತಗಳಲ್ಲಿ ಕೆಲವು ಶಿಲಾಸೋಪಾನಗಳ ನಡುವಣ ಎತ್ತರ 150 ರಿಂದ 200 ಮೀ ಎತ್ತರ ಹಾಗೂ ಕಡಿದಾಗಿದ್ದು, ಕಡಿದಾದ ಬಂಡೆಯ ಮುಂಚಾಚುವಿನಂತೆ ಕಂಡುಬರುತ್ತದೆ.

ಋ. ಮೇಷಶಿಲೆ: ನದಿಯಂತೆ ಹಿಮನದಿ ತನ್ನ ಮಾರ್ಗದ ಅಡ್ಡಲಾಗಿ ಸಣ್ಣ ಮಟ್ಟ ಅಡಚಣೆಗಳು ಬಂದರೆ ತನ್ನ ದಿಕ್ಕನ್ನು ಬದಲಾಯಿಸಿಕೊಂಡು ಹರಿಯುವುದಿಲ್ಲ. ತನ್ನ ಮಾರ್ಗದಲ್ಲಿ ಯಾವುದೇ ಏರುತಗ್ಗುಗಳಿದ್ದರೂ ಅದನ್ನೆಲ್ಲಾ ಸವೆಸಿ ಮಟ್ಟಗೊಳಿಸುವುದು. ಹೀಗಾಗಿ ಹಿಮನದಿಯ ಮಾರ್ಗದಲ್ಲಿರುವ ಶಿಲಾಬೆಟ್ಟಗಳ ಅಭಿಮುಖ ಭಾಗ ಸವೆದು ಮಟ್ಟಸವಾದ ಹಾಗೂ ನಯವಾದ ಭಾಗವಾಗಿ ಪರಿಣಮಿಸುವುದು. ಆದರೆ ಬೆಟ್ಟದ ವಿರುದ್ಧವಾದ ಭಾಗ ಅಸಮಾನಾದ ಒರಟು ಭಾಗವಾಗಿ ಉಳಿಯುವುದು. ಇದನ್ನು ಮೇಷಶಿಲೆ (ರೋಷ್ಚೆ ಮೌಟೇನೀಸ್) ಎಂದು ಕರೆಯುವರು. ಇವು ದೂರದಿಂದ ನೋಡಲು ಕುರಿಗಳ ಹಿಂಡಿನ ಪೃಷ್ಠಗಳಂತೆ ಕಾಣುತ್ತವೆ. ಇಂತಹ ಸ್ವರೂಪಗಳು ಪ್ರಬಲ ಕಣ ಹಿಮದ ಸವೆತ ಶಕ್ತಿ ನಿರಂತರವಾಗಿರುವ ಕಡೆ ವಿಶೇಷವಾಗಿ ಕಂಡುಬರುತ್ತವೆ. ಉದಾ: ದಕ್ಷಿಣ ಸ್ವೀಡನ್, ಫಿನ್ಲೆಂಡ್ ಮತ್ತು ಗ್ರೀನ್ಲೆಂಡ್.

ೠ. ಕಡಿದು ಬಂಡೆ ಮತ್ತು ಹಿಂಬಾಲ: ಹರಿದು ಬರುವ ಹಿಮನದಿಯ ಮಾರ್ಗದಲ್ಲಿ ಕಡಿದಾದ ಬಂಡೆ ಅಡ್ಡ ಬಂದು, ಅದರ ಹಿಂಬದಿಯಲ್ಲಿ ರಾಶಿಗೊಂಡಿರುವ ಮೃದುವಾದ ಶಿಲಾದ್ರವ್ಯಗಳನ್ನು ಸವೆತದಿಂದ ರಕ್ಷಿಸುತ್ತದೆ. ಆದ್ದರಿಂದ ಕಡಿದಾದ ಬಂಡೆಯ ಬದಿಯಲ್ಲಿ ಶಿಲಾ ದ್ರವ್ಯಗಳು ಸಂಚಯನಗೊಂಡು ಬಾಲದಂತೆ ಬೆಳೆದು ಸಾಧಾರಣ ಇಳಿಜಾರಿನಿಂದ

ಕೂಡಿರುತ್ತವೆ. ಆದರೆ ಬಂಡೆಯ ಎದುರು ಮುಖಭಾಗ ಸವೆದು ಕಡಿದಾದ ಇಳಿಜಾರಿನಿಂದ ಕೂಡಿರುತ್ತದೆ. ಉದಾ: ಎಡಿನ್ ಬರೋ ಕ್ಯಾಸಲ್ ರಾಕ್ (ಸ್ಕಾಟ್ಲೆಂಡ್). ಇದರ ಹಿಂಬದಿಯಲ್ಲಿ ವಸ್ತು ಸಂಚಯನ ಮತ್ತು ಮುಖಭಾಗದಲ್ಲಿ ಸವೆತ. ಹೀಗೆ ಈ ಸ್ವರೂಪಗಳ ನಿರ್ಮಾಣದಲ್ಲಿ ಸವೆತ ಮತ್ತು ಸಂಚಯನಗಳೆರಡೂ ಏರ್ಪಡುತ್ತವೆ.

ಹಿಮನದಿಯಿಂದ ಸವೆಸಲ್ಪಟ್ಟ ಶಿಲಾ ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ಥಳಾಂತರಿಸುವುದು. ಇದೇ ಹಿಮ ನದಿಯ ಸಾಗಾಣಿಕೆ ಕಾರ್ಯವಾಗಿದೆ. ಹಿಮ ನದಿ ಸಾಗಿಸುವ ಮಣ್ಣು, ಮರಳು, ಬಂಡೆ, ಚೂರುಗಲ್ಲು, ಮುಂತಾದವುಗಳನ್ನು ಹಿಮ ನದಿಯ ಭಾರವಸ್ತುಗಳೆನ್ನುವರು. ಸಾಮಾನ್ಯವಾಗಿ ಹಿಮ ನದಿ ತನ್ನ ಭಾರವಸ್ತುಗಳನ್ನು ತಾನು ಅಂತ್ಯಗೊಳ್ಳುವ ಅಥವಾ ಹಿಂದೆ ಸರಿಯುವವರೆಗೂ ಸಾಗಿಸುತ್ತದೆ. ಭಾರವಸ್ತುಗಳು ಹಿಮನದಿಯಲ್ಲಿ ವಿಲೀನಗೊಂಡು ಅದರೊಡನೆಯೇ ಮತ್ತು ಅದರ ತಳವನ್ನು ಹೊಂದಿಕೊಂಡಂತೆ ಸಾಗುತ್ತವೆ. ಹಿಮನದಿಯ ಸಾಗಾಣಿಕೆ ಸಾಮರ್ಥ್ಯ ಕಣಿವೆಯ ತಳಭಾಗ ಮತ್ತು ಪಾರ್ಶ್ವ ಭಾಗಗಳಿಗಿಂತ ಮಧ್ಯಭಾಗ ಮತ್ತು ಮೇಲ್ಭಾಗದಲ್ಲಿ ಹೆಚ್ಚಾಗಿರುತ್ತದೆ. ಕಣಿವೆಯ ತಳ ಮತ್ತು ಪಾರ್ಶ್ವ ಭಾಗಗಳಲ್ಲಿ ಅಡಚಣೆಯಿರುವುದರಿಂದ ಸಾಗಾಣಿಕೆ ಕಾರ್ಯ ಹೆಚ್ಚಿರುವುದಿಲ್ಲ.



'U' ಆಕಾರದ ಕಣಿವೆ

ಹಿಮ ನದಿ ಸವೆಸಿ, ಸಾಗಿಸಿದ ವಿವಿಧಾಕೃತಿಯ ಶಿಲಾ ದ್ರವ್ಯಗಳನ್ನು ತನ್ನ ಅಂತ್ಯದಲ್ಲಿ ಅಥವಾ ಕರಗಿ ಹಿಂದೆ ಸರಿದಾಗ ಅಲ್ಲೆ ಬಿಟ್ಟುಬಿಡುವುದು. ಇದೇ ಹಿಮ ನದಿಯ ಸಂಚಯನ ಕಾರ್ಯ. ಸಾಮಾನ್ಯವಾಗಿ ಹಿಮ ನದಿಯ ಸಂಚಯನ ಕಾರ್ಯ ಹಿಮ ನದಿಯ ಮುಖಭಾಗ, ತಳ ಹಾಗೂ ಬದಿಗಳಲ್ಲಿ ಕಂಡುಬರುವುದು. ಈ ಕಾರ್ಯ ಪ್ರಮುಖವಾಗಿ ಎರಡು ರೂಪಗಳಲ್ಲಿ ನಡೆಯುತ್ತದೆ; 1. ಹಿಮ ಪ್ರವಾಹ ಸಂಚಯನ, ಹಿಮ–ಜಲ ಪ್ರವಾಹ ಸಂಚಯನ. ಹಿಮನದಿಯಿಂದಲೇ ನೇರವಾಗಿ ಅಸಮಾನದ ಶಿಲಾ ವಸ್ತುಗಳಾದ ಬಂಡೆ, ಮರಳು, ಜೇಡಿಮಣ್ಣು ಇತ್ಯಾದಿಗಳು ಸಂಚಯನವಾಗುವುದಕ್ಕೆ ಹಿಮ ಪ್ರವಾಹ ಸಂಚಯನವೆನ್ನುವರು. ಇದಕ್ಕೆ ಬದಲಾಗಿ ಹಿಮನದಿಯ ಮುಖ ಭಾಗದಲ್ಲೋ ಅಥವಾ ಹಿಮ ಹಾಳೆಯ ಅಂಚಿನಲ್ಲೋ ಕರಗಿ, ಹೊರಬರುವ ನೀರು ಸಾಗಿಸಿದ ಮಿಶ್ರಕಂಕರೆ, ಮರಳು, ಮಣ್ಣು ಇತ್ಯಾದಿ ನಯವಾದ–ಹಗುರವಾದ ವಸ್ತುಗಳನ್ನು ದೂರದಲ್ಲಿ ಸಂಚಯಿಸುವುದಕ್ಕೆ ಹಿಮ–ಜಲ ಪ್ರವಾಹ ಸಂಚಯನವೆಂದು ಕರೆಯುವರು. ಹಿಮನದಿಯ ಸಂಚಯನದಿಂದ ಅನೇಕ ವಿಧವಾದ ಭೂ ಸ್ವರೂಪಗಳು ನಿರ್ಮಾಣವಾಗುತ್ತವೆ. ಉದಾ: ಶಿಲಾನಿಚಯಗಳು, ಅಂಡಾಕಾರದ ದಿಣ್ಣೆಗಳು, ತ್ರಿಕೋಣಾಕಾರದ ದಿಣ್ಣೆಗಳು, ಸರ್ಪಾಕಾರದ ದಿಣ್ಣೆಗಳು, ಉತ್ಕ್ಷಾಲಿತ ಹೊರಮೈದಾನ ಇತ್ಯಾದಿ.

ಅ. ಶಿಲಾನಿಚಯಗಳು: ಹಿಮ ನದಿ ಸವೆಸಿ, ಸಾಗಿಸಿದ ಕಲ್ಲು, ಮರಳು ಹಾಗೂ ಮಣ್ಣುಗಳ ಸಂಚಯನವನ್ನು ಶಿಲಾನಿಚಯಗಳೆಂದು ಕರೆಯುವರು. ಇವು ಹಿಮನದಿ ಸಂಚಯನ ಕಾರ್ಯದ ವಿಶಿಷ್ಟ ಸ್ವರೂಪಗಳಾಗಿವೆ. ಶಿಲಾನಿಚಯಗಳ, ವಿವಿಧಾಕೃತಿಯ ಹಾಗೂ ಗಾತ್ರದ ಶಿಲಾವಸ್ತುಗಳನ್ನು ಒಳಗೊಂಡಿರುತ್ತವೆ.ಇವು ಸೂಕ್ಷ್ಮ ಶಿಲಾಪುಡಿಯಿಂದ ದೊಡ್ಡ ಬಂಡೆಗಳಂತಹ ವಸ್ತುಗಳನ್ನೂ ಒಳಗೊಂಡಿರುತ್ತವೆ. ಅವು ಹಿಮಪಾತ, ಭೂಪಾತಗಳಿಂದಲೋ ಹಿಮ ಕಣಿವೆಯ ಒಂದು ಭಾಗವನ್ನು ಘರ್ಷಿಸುವುದರಿಂದ ಉಜ್ಜುವಿಕೆ ಹಾಗೂ ತೋಡುವುದರಿಂದ ಅನೇಕ ಶಿಲಾವಸ್ತುಗಳು ಹಿಮನದಿಯೊಡನೆ ಸೇರಿ ಸ್ಥಳಾಂತರಗೊಂಡು ಸಂಚಯವಾಗಿರುತ್ತವೆ. ಇವುಗಳ ಸಂಚಯಿತ ಸ್ಥಳಗಳಿಗನುಗುಣವಾಗಿ ತಲಶಿಲಾನಿಚಯ, ಪಾರ್ಶ್ವಶಿಲಾನಿಚಯ, ಮಧ್ಯ ಶಿಲಾನಿಚಯ ಹಾಗೂ ಅಂತ್ಯ ಶಿಲಾನಿಚಯಗಳಿವೆ.

ಶಿಲಾಮೇಲ್ಮೈ: ಕೆಲವು ವೇಳೆ ಹಿಮನದಿಯ ಮುಖ ಭಾಗದಲ್ಲಿ ಬೀಸಣಿಗೆ ಆಕಾರವುಳ್ಳ ಸರ್ಪಾಕಾರದ ದಿಣ್ಣೆಗಳು ರಚಿತವಾಗುತ್ತವೆ. ಅವುಗಳನ್ನು ರೇವೆಮಣ್ಣಿನ ಹರವು ಎಂತಲೂ ಹಿಮ ಕರಗಿದ ನೀರು ಹರಿಯುವ ದಿಕ್ಕಿಗೆ ಅಡ್ಡಲಾಗಿ ರಚನೆಯಾಗಿದ್ದು ಅವುಗಳ ಮೇಲ್ಮೈಯು ಸಮತಲವಾಗಿಯೂ ಮುಂಬದಿ ಕಡಿದಾಗಿಯೂ ರಚನೆಯಾದವುಗಳಿಗೆ ಮುಖಜ ಭೂಮಿಯೆಂತಲೂ ದಿಣ್ಣೆಗಳು ಒಂದರ ಹಿಂದೆ ಒಂದರಂತೆ ರಚನೆಗೊಂಡು ಅವು ದಾರದಲ್ಲಿ ಪೋಣಿಸಿದ ಮಣಿಗಳ ಸರಣಿಯಂತೆ ಕಾಣುತ್ತವೆ. ಅವುಗಳಿಗೆ ಹವಳ ಸರಣಿಯಂಥ ದಿಣ್ಣೆಗಳೆಂದೂ ಕರೆಯುವರು.

ಉ. ಉತ್ಕ್ಷಾಲಿತ ಮೈದಾನ: ಇವುಗಳೂ ಸಹ ಹಿಮ–ಜಲ ಪ್ರವಾಹ ಸಂಚಯನದಿಂದಾದವು. ಹಿಮ ನದಿ ಕರಗಿ, ಅದರ ನೀರು ತೊರೆಗಳ ರೂಪದಲ್ಲಿ ಹರಿಯುವಾಗ ಜೇಡಿ, ಮರಳು, ಗರಸು ಮುಂತಾದವುಗಳನ್ನು ಕೊಚ್ಚಿಕೊಂಡು ಹೋಗಿ




ಶಿಲಾನಿಚಯಗಳು

ಹೊರವಲಯದಲ್ಲಿ ಸಂಚಯಿಸುವುದರಿಂದ ನಿರ್ಮಾಣವಾಗುವ ಮೈದಾನಗಳಿಗೆ ಹಿಮ ಜಲ ಪ್ರವಾಹ ಮೈದಾನ ಅಥವಾ ಉತ್ಕ್ಷಾಲಿತ ಹೊರ ಮೈದಾನ ಎಂದು ಕರೆಯುವರು. ಇವು ಸಾಮಾನ್ಯವಾಗಿ ಅಂತ್ಯಶಿಲಾನಿಚಯಗಳಿಂದ ದೂರದ ಹೊರ ವಲಯದಲ್ಲಿ ರಚಿತವಾಗಿರುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನದ ಇಲಿನಾಯ್ಸ್, ಐಯೋವ ಮತ್ತು ಇಂಡಿಯಾನ ಪ್ರಾಂತ್ಯಗಳಲ್ಲಿ ಇಂತಹ ಸ್ವರೂಪಗಳು ಕಂಡು ಬರುತ್ತವೆ. ಇವು ತಾತ್ಕಾಲಿಕವಾದವು. ಪ್ರವಾಹದಿಂದ ನೀರು ಹರಿಯುವಾಗ ಪುನಃ ಅವು ಕಿವುಚ್ಚಿ ಹೋಗುವ ಸಾಧ್ಯತೆಯಿರುತ್ತದೆ. ಈ ರೀತಿಯ ತೊರೆಗಳು ಹರಿಯುತ್ತಾ ತಮ್ಮದೇ ಆದ ಕಣಿವೆಗಳನ್ನು ರೂಪಿಸಿಕೊಳ್ಳುತ್ತವೆ. ಇದರಿಂದ ಈ ಮೈದಾನಗಳು ಪ್ರತ್ಯೇಕಗೊಂಡು ಅವು ಬಂಜರು–ಕುರುಚಲು ಕಾಡುಗಳಾಗಿ ಪರಿಣಮಿಸುತ್ತವೆ.

ಊ. ಆಗುಂತಕ ಬಂಡೆ: ಗಾತ್ರದಲ್ಲಿ ದೊಡ್ಡದಾದ ಬಂಡೆಗಳನ್ನು ಹಿಮನದಿ ಬಹು ದೂರದಿಂದ ಸಾಗಿಸಿಕೊಂಡು ಬಂದು ಸಂಚಯ ಮಾಡುವುದು. ಈ ಬಂಡೆಗಳು ಎಲ್ಲಿ ಸಂಚಯನವಾಗುತ್ತವೆಯೊ ಅಲ್ಲಿನ ಶಿಲಾಸ್ತರದ ವರ್ಗಕ್ಕೆ ಹೊಂದಾಣಿಕೆಯಾಗುವುದಿಲ್ಲ. ಹಾಗಾಗಿ ಆ ಬಂಡೆಗಳು ಸಂಚಯವಾದ ಸ್ಥಳಕ್ಕೆ ಅಪರಿಚಿತವಾಗುತ್ತವೆ. ಆದ್ದರಿಂದ ಇವುಗಳನ್ನು ಆಗುಂತಕ ಬಂಡೆಗಳೆನ್ನುವರು. ಉದಾ: ಹಿಮ ನದಿಯಿಂದ 3.2 ಕಿಮೀ ದೂರದವರೆಗೆ ಒಯ್ಯಲ್ಪಟ್ಟಿರುವ ನ್ಯೂ ಹಾಂಪ್ಷೈರ್‌ನ ಮ್ಯಾಡಿಸನ್ ಬಂಡೆ. ಇದರ ತೂಕ 4.662 ಟನ್ನುಗಳು

ಹಿಮನದಿ ಕರಗಿ ನೀರಾಗುವುದಕ್ಕೆ ಮುಂಚೆ ಘನ ಹಿಮ ಸಂಚಯವಾಗಿದ್ದು, ಕ್ರಮೇಣ ಅದು ಕರಗುವುದರಿಂದಲೋ ಶಿಲಾಗುಂಡು–ಬಂಡೆಗಳು ಕಿತ್ತು ಸ್ಥಳಾಂತರ ಹೊಂದುವುದರಿಂದಲೋ ನೀರ್ಗಲ್ಲು ಜಲ ಪ್ರವಾಹ ಮೈದಾನದಲ್ಲಿ ವರ್ತುಲಾಕಾರದ ತಗ್ಗು ಅಥವಾ ಕುಳಿಗಳುಂಟಾಗುತ್ತವೆ. ಇವುಗಳಿಗೆ ಹಿಮಕುಳಿ ಅಥವಾ ಹಿಮರಂಧ್ರವೆಂದು ಕರೆಯುವರು. ಈ ಕುಳಿಗಳಲ್ಲಿ ನೀರು ತುಂಬಿರುತ್ತದೆ. ಉದಾ: ಉತ್ತರ ಅಮೆರಿಕದ ವಿಸ್ಕಾನ್ಸಿನ್ ಪ್ರಾಂತ್ಯ, ಇಂಗ್ಲೆಂಡಿನ ಬ್ರಾಮ್ಸನ್ ಪ್ರದೇಶ ಮತ್ತು ಲಂಕಾಶೈರ್ ಪ್ರದೇಶ.

ಹೀಗೆ ಹಿಮನದಿಯ ಕಾರ್ಯ ಮತ್ತು ಅದರಿಂದ ಉಂಟಾಗುವ ಭೂ ಸ್ವರೂಪಗಳು ಇತರ ನಗ್ನೀಕರಣದ ಕರ್ತೃಗಳಿಗಿಂತ ಭಿನ್ನವಾಗಿರುತ್ತವೆ ಹಾಗೂ ವಿಶಿಷ್ಟವಾಗಿರುತ್ತವೆ. ಅತಿ ಕಡಿಮೆ ಉಷ್ಣಾಂಶವನ್ನು ಹೊಂದಿದ ಶೀತ ವಲಯ ಹಾಗೂ ನಿರಂತರ ಹಿಮಾವೃತಗೊಂಡಿರುವ ಇತರ ಭೂ ವಲಯಗಳ ಎತ್ತರವಾದ ಭಾಗಗಳಲ್ಲಿ ಇತರ ಎಲ್ಲಾ ನಗ್ನೀಕರಣದ ಕರ್ತೃಗಳಿಗಿಂತ ಹಿಮನದಿಯ ಭೂ ಸ್ವರೂಪ ನಿರ್ಮಾಣ ಕ್ರಿಯೆ ಬಹು ಮುಖ್ಯವಾದುದು. (ಪಿ.ಎಂ.)

**ನಟಾಲ್:** ದಕ್ಷಿಣ ಆಫ್ರಿಕ ಗಣರಾಜ್ಯದ ಒಂದು ಪ್ರಾಂತ್ಯ. ಅದರ ನಾಲ್ಕು ಪ್ರಾಂತ್ಯಗಳಲ್ಲಿ ಇದು ಅತ್ಯಂತ ಚಿಕ್ಕದು. ಇದನ್ನು ಇಂದು ಕ್ವಾಜುಲು ನಟಾಲ್ ಪ್ರಾಂತ್ಯವೆಂದು ಕರೆಯಲಾಗುತ್ತಿದೆ. 1994ರಲ್ಲಿ ನಟಾಲ್ ರಾಜ್ಯದೊಡನೆ ಕ್ವಾಜುಲು ಪ್ರಾಂತ್ಯವನ್ನೂ ಸೇರಿಸಲಾಯಿತು. ಈ ಪ್ರಾಂತ್ಯದ ಉತ್ತರದಲ್ಲಿ ಪ್ರಮಲಾಂಗ ಪ್ರಾಂತ್ಯ, ಸ್ವಾಜಿಲೆಂಡ್ ಮತ್ತು ಮೋಜಾಂಬಿಕ್, ಪಶ್ಚಿಮದಲ್ಲಿ ಆರೆಂಜ್ ಫ್ರೀ ಸ್ಟೇಟ್ ಪ್ರಾಂತ್ಯ ಮತ್ತು ಲೆಸೋತೊ, ದಕ್ಷಿಣದಲ್ಲಿ ಕೇಪ್ ಆಫ್ ಗುಡ್ ಹೋಪ್ ಪ್ರಾಂತ್ಯ ಮತ್ತು ಪೂರ್ವದಲ್ಲಿ ಹಿಂದೂ ಸಾಗರ ಇದೆ. ಪಶ್ಚಿಮದಲ್ಲಿ ಡ್ರೇಕನ್‌ಬರ್ಗ್ ಶ್ರೇಣಿಯ ಇಳಿಜಾರೂ ಉತ್ತರದಲ್ಲಿ ಬಹು ದೂರ ಪೊಂಗೋಲ ನದಿಯೂ ದಕ್ಷಿಣದಲ್ಲಿ ಭಾಗಶಃ ಉಮ್‌ಜಿಕೂಲೂ ನದಿಯೂ ಇದರ ನೈಸರ್ಗಿಕ ಮೇರೆಗಳಾಗಿವೆ. ಪ್ರಾಂತ್ಯದ ವಿಸ್ತೀರ್ಣ 92100 ಚ.ಕಿಮೀ. ಜನಸಂಖ್ಯೆ 8924643 (2001). ರಾಜಧಾನಿ ಪೀಟರ್‌ಮ್ಯಾರಿಟ್ಸ್‌ಬರ್ಗ್ (405385).

ಭೂಸ್ವರೂಪ: ದಕ್ಷಿಣ ಆಫ್ರಿಕ ಗಣರಾಜ್ಯದ ಪೂರ್ವಭಾಗದಲ್ಲಿರುವ ಈ ಪ್ರಾಂತ್ಯ ಪರ್ವತಮಯವಾದುದ್ದು. ಇದರಲ್ಲಿ ಮೂರು ನೈಸರ್ಗಿಕ ವಿಭಾಗಗಳಿವೆ. ಕರಾವಳಿ ಪ್ರದೇಶ ಸಮುದ್ರಮಟ್ಟದಿಂದ ಸು. 900 ಮೀ ವರೆಗೆ ಏರುತ್ತದೆ. ಮಧ್ಯದ ಪ್ರದೇಶ 900–1,000 ಮೀ ಎತ್ತರವಾಗಿದೆ. ಪಶ್ಚಿಮದಲ್ಲಿ ಡ್ರೇಕನ್ಸ್‌ಬರ್ಗ್ ಪರ್ವತ ಸು. 3,350 ಮೀ ಎತ್ತರವಾಗಿದೆ. ಪರ್ವತಗಳಿಂದ ಹರಿದುಬರುವ ನದಿಗಳು ಬಂಡೆಗಳನ್ನು ಕೊರೆದು ಅಂಕುಡೊಂಕಾದ ನಕ್ಷೆಗಳನ್ನು ತೆಗೆದಂತೆ ಕಾಣಿಸುತ್ತವೆ. ರಭಸದಿಂದ ಹರಿಯುವಲ್ಲಿ ಈ ನದಿಗಳು ಬದಿಯ ಭೂಭಾಗವನ್ನು ಕೆತ್ತಿಕೊಂಡು ಹೋಗುತ್ತವೆ. ಪ್ರಾಂತ್ಯದ ಉತ್ತರ ಗಡಿಯಲ್ಲಿ ಹರಿಯುವ ಪೊಂಗೋಲ, ಮಧ್ಯಪ್ರದೇಶದಲ್ಲಿ ಹರಿಯುವ ತುಗೇಲ, ಕೇಪ್ ಪ್ರಾಂತ್ಯದ ಗಡಿಗುಂಟ ಹರಿಯುವ ಉರ್ಮ್‌ಜಿಕೂಲೂ ಮತ್ತು ಉಮ್ಜಿಮ್ವುನಾ ಇವು ಈ ಪ್ರಾಂತ್ಯದ ಪ್ರಮುಖ ನದಿಗಳು.

ವಾಯುಗುಣ: ಈ ಪ್ರಾಂತ್ಯದ ವಾಯುಗುಣ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸಗೊಳ್ಳುತ್ತದೆ. ದಕ್ಷಿಣಾರ್ಧಗೋಳದಲ್ಲಿರುವ ಈ ಪ್ರದೇಶದ ಉಷ್ಣತೆ ಜನವರಿಯಲ್ಲಿ ಗರಿಷ್ಠ, ಜುಲೈ ತಿಂಗಳಲ್ಲಿ ಕನಿಷ್ಠ. ಜುಲೈ ತಿಂಗಳಲ್ಲಿ ಉಷ್ಣತೆ ಕರಾವಳಿಯಲ್ಲಿ $10^0$ಸೆ. ಗಿಂತ ಅಧಿಕವಾಗಿರುತ್ತದೆ; ಒಳನಾಡಿನಲ್ಲಿ $7^0$–$10^0$ ಸೆ ಕರಾವಳಿಯಲ್ಲಿ ಜನವರಿಯಲ್ಲಿ ಮಧ್ಯ ಮಾಸಿಕ ಉಷ್ಣತೆ ಡರ್ಬನ್‌ನಿಂದ ಉತ್ತರಕ್ಕೆ $24^0$ಸೆ ಒಳನಾಡಿನ ತಗ್ಗಿನಲ್ಲೂ ಜೂಲೂಲ್ಯಾಂಡಿನಲ್ಲೂ ಮಾಧ್ಯ ಗರಿಷ್ಠ ಉಷ್ಣತೆ $29^0$ಸೆ ಗಿಂತ ಅಧಿಕವಾಗಿರುತ್ತದೆ. ಕೆಲವು ವೇಳೆ $32^0$ಸೆ ಗಿಂತ ಹೆಚ್ಚಿನ ಉಷ್ಣತೆ ಇರುವುದುಂಟು. ಕರಾವಳಿಯ ಕಣಿವೆಗಳ ತಳದಲ್ಲಿ ಜುಲೈ ತಿಂಗಳಿನಂದು ತೆಳ್ಳಗೆ ಮಂಜು ಬೀಳುತ್ತದೆ; ಉಳಿದ ಕಾಲದಲ್ಲಿ ಅಪರೂಪ. ಎತ್ತರದ ಪ್ರದೇಶದಲ್ಲಿ ಮೇ ಮಧ್ಯದಿಂದ ಸೆಪ್ಟೆಂಬರ್ ಮಧ್ಯದವರೆಗೆ ಮಂಜು ಬೀಳುತ್ತದೆ.

ಈ ಪ್ರಾಂತ್ಯದಲ್ಲಿ ಸಾಮಾನ್ಯವಾಗಿ ಬೇಸಗೆಯಲ್ಲಿ ಮಳೆಯಾಗುತ್ತದೆ. ಆದರೆ ಕರಾವಳಿ ಪ್ರದೇಶದಲ್ಲಿ ಆಗುವ ಶೇ. 30ಕ್ಕಿಂತ ಅಧಿಕ ಭಾಗ ಚಳಿಗಾಲವನ್ನೊಳಗೊಂಡ ಅರ್ಧವರ್ಷದಲ್ಲಿ ಬೀಳುತ್ತದೆ. ಕರಾವಳಿಯಲ್ಲಿಯ ವಾರ್ಷಿಕ ಮಳೆ 110 ಸೆಂಮೀ. ನಡುನಾಡಿನಲ್ಲಿ 76 ಸೆಂಮೀ ಆಗುತ್ತದೆ. ಪಶ್ಚಿಮದ ಕಡೆಗೆ ಸಾಗಿದಂತೆ ಪ್ರಸ್ಥಭೂಮಿಯಲ್ಲಿ, ಮಳೆ 110 ಸೆಂಮೀ ಗೆ ಏರುತ್ತದೆ. ಡ್ರೇಕನ್ಸ್‌ಬರ್ಗ್‌ನಲ್ಲಿ 152 ಸೆಂಮೀ ಮಳೆ ಆಗುತ್ತದೆ.

ಆರ್ಥಿಕತೆ: ನಟಾಲಿನಲ್ಲಿ ಎರಡು ಬಗೆಯ ಆರ್ಥಿಕತೆ ಇದೆ. ಬಂಟೂಗಳದು ಜೀವನಾಧಾರ ಆರ್ಥಿಕತೆ. ಇವರ ಉದ್ಯೋಗ ದನ ಸಾಕುವುದು, ಮುಸುಕಿನ ಜೋಳ ಬೆಳೆಯುವುದು. ಇವರು ವಾಸಿಸುವ ಭೂಮಿ ಫಲವತ್ತಾಗಿಲ್ಲದ್ದರಿಂದ ಸಂಪದ್ಯುಕ್ತವಾಗಿಲ್ಲ. ಬಿಳಿಯರು ವಾಣಿಜ್ಯಾಧಾರಿತವಾದ ಪ್ರಗತಿಪರ ಕೃಷಿಯಲ್ಲಿ ನಿರತರಾಗಿದ್ದಾರೆ. ಬಿಳಿಯರಲ್ಲದವರು ಹೆಚ್ಚಾಗಿ ಕೂಲಿಗಾರರು. ಮುಖ್ಯ ಬೆಳೆ ಕಬ್ಬು.

ನಟಾಲಿನ ಕಲ್ಲಿದ್ದಲು ಉತ್ತಮವಾದದ್ದು. ವಾರ್ಷಿಕ ಕಲ್ಲಿದ್ದಲು ಉತ್ಪಾದನೆ 10 ದಶಲಕ್ಷ ಟನ್. ವಾಯವ್ಯದ ನ್ಯೂಕ್ಯಾಸಲ್–ರೈಹೀಡ್–ಡಂಡೀ–ಯುಟ್ರೆಕ್ಟ್ ಪ್ರದೇಶದಲ್ಲಿ ಕಲ್ಲಿದ್ದಲು ಗಣಿಗಳಿವೆ. ನಟಾಲಿನ ಶೇ. 80ರಷ್ಟು ಕಾರ್ಖಾನೆಗಳು ಡರ್ಬನ್‌ನಲ್ಲಿವೆ. ಡರ್ಬನ್‌ನಿಂದ ಪೀಟರ್‌ಮ್ಯಾರಿಟ್ಸ್‌ಬರ್ಗ್ ಮೂಲಕ ವಿಟ್‌ವಾಟರ್ಸ್‌ರ್ಯಾಂಡ್‌ಗೆ ಒಂದು ರೈಲುಮಾರ್ಗವಿದೆ. ಕರಾವಳಿಯ ರೈಲುಮಾರ್ಗಗಳಿಗೆ ಹಲವು ಕವಲುಗಳುಂಟು. ಇಲ್ಲಿಂದ ಕಲ್ಲಿದ್ದಲನ್ನು ರಫ್ತುಮಾಡಲಾಗುವುದು. (ಜಿ.ಆರ್.ಕೆ.)

**ನದೀ ಕಣಿವೆ ಪ್ರದೇಶ:** ಒಂದು ಭೂಸ್ವರೂಪ ಸುಸಂಘಟಿತವಾದ ಅಥವಾ ಸುಸಂಯೋಜಿತ ಪ್ರದೇಶ. ಇಲ್ಲಿ ಸ್ವಾಭಾವಿಕ ಸಂಪತ್ತು ಹೇರಳವಾಗಿರುತ್ತದೆ. ಈ ಪ್ರದೇಶ ನೈಸರ್ಗಿಕ ಸಂಪತ್ತನ್ನು ಹೊಂದಿರುವುದರಿಂದ ಇದನ್ನು ಕಾರ್ಯರೂಪ ಪ್ರದೇಶವೆಂದು ಸಹ ಪರಿಗಣಿಸಬಹುದು. ನದಿ ಕಣಿವೆ ಅನೇಕ ಉಪನದಿಗಳಿಂದ ಮತ್ತು ಹಳ್ಳ ಕೊಳ್ಳಗಳ ಮೂಲಕ ಹರಿಯುವ ಭೂಸ್ವರೂಪದಿಂದ ಕೂಡಿ, ನೀರು ಸ್ವಾಭಾವಿಕವಾಗಿ ಮುಖ್ಯ ನದಿಗೆ ಸೇರಿ ಇಡೀ ಕಣಿವೆ ಒಂದು ವ್ಯವಸ್ಥೆಯ ರೂಪ ತಾಳುತ್ತದೆ. ಮುಖ್ಯನದಿ ಮತ್ತು ಉಪನದಿಗಳು ಒಂದೇ ವ್ಯೂಹಕ್ಕೆ ಸೇರಿರುವುದರಿಂದ ಒಂದು ಉಪನದಿಯಲ್ಲಿ ಆಗಬಹುದಾದ ಏರುಪೇರುಗಳು (ನೀರಿನಮಟ್ಟ) ಇಡೀ ಕಣಿವೆಯ ಮೇಲೆ ಪರಿಣಾಮ ಬೀರಬಹುದು. ನದೀ ಕಣಿವೆ ಪ್ರದೇಶದಲ್ಲಿ ವಾಸಿಸುವ ಜನರ ಪ್ರವಾಹದಂತಹ ಏರು ಪೇರನ್ನು ಸತತವಾಗಿ ಎದುರಿಸುತ್ತಲೆ ಇರಬೇಕಾಗುತ್ತದೆ. ಆದ್ದರಿಂದ ನದೀ ಕಣಿವೆ ಪ್ರದೇಶಕ್ಕೆ ಸಮಗ್ರ ಯೋಜನೆಯನ್ನು ತಯಾರಿಸುವುದು ಸೂಕ್ತ ಎಂದು ಪ್ರಾದೇಶಿಕ ಯೋಜನಾಕಾರರ ಅಭಿಪ್ರಾಯ. ನದೀ ಕಣಿವೆ ಯೋಜನೆ ಪ್ರದೇಶಾಭಿವೃದ್ಧಿ ದೃಷ್ಟಿಯಿಂದ ಅಮೆರಿಕದ ಟೆನೆಸಿ ನದೀ ಕಣಿವೆಯಲ್ಲಿ ಪ್ರಾರಂಭವಾಯಿತು. ನದೀ ಕಣಿವೆ ಪ್ರದೇಶ ವಿವಿಧೋದ್ದೇಶ ಯೋಜನೆಗೆ ಒಳಪಡುತ್ತದೆ. ನದೀ ಕಣಿವೆಯಲ್ಲಿ ಪ್ರವಾಹವನ್ನು ತಡೆಗಟ್ಟುವುದರ ಜೊತೆಗೆ, ಅಧಿಕ ನೀರನ್ನು ಸಂಗ್ರಹಿಸಿ, ನೀರಿಲ್ಲದ ಪ್ರದೇಶ ಅಥವಾ ಒಣ ಭೂಮಿಗೆ ನೀರನ್ನು ಒದಗಿಸಲಾಗುತ್ತದೆ. ಈ ಪ್ರದೇಶ ಒಂದು ಅಭಿವೃದ್ಧಿ ಪ್ರದೇಶವೆಂದೇ ಪರಿಗಣಿಸಬಹುದು. ವ್ಯವಸಾಯ ಉತ್ಪನ್ನಗಳಿಂದ ಕೈಗಾರಿಕಾ ಉತ್ಪನ್ನಗಳನ್ನು ತಯಾರಿಸಿ ಹೆಚ್ಚಿನ ಗ್ರಾಮೀಣ ಜನರು ಆಯಾ ಪ್ರದೇಶದಲ್ಲೆ ನೆಲೆಸಲೂ ಉಪಕಾರಿಯಾಗಿರುತ್ತದೆ. ಉದಾ: ಕಾವೇರಿ ಕಣಿವೆ, ಕೃಷ್ಣನದಿ ಕಣಿವೆ ಪ್ರದೇಶಗಳು. (ಎನ್.ಎಸ್.)

**ನದೀ ಶಿಲ್ಪ:** ಸಂಚಾರ ಸಾಗಣೆಯ ವಿವಿಧೋದ್ದೇಶಗಳಿಗಾಗಿ ನದಿ ಮತ್ತು ಅದರ ದಡಗಳ ಬಳಕೆ ಮತ್ತು ಅವುಗಳ ಅಭಿವರ್ಧನೆಯೇ ನದಿ ಶಿಲ್ಪ. ಪ್ರಾಚೀನ ನಾಗರಿಕತೆಯ ಕೇಂದ್ರಗಳು ನದಿಗಳ ಕಣಿವೆಗಳಲ್ಲಿ ವಿಕಸಿಸಿದವು. ಆಧುನಿಕ ಯಂತ್ರಯುಗದಲ್ಲಿ ನದಿಗಳ ಮೇಲೆ ಜಲಯಾನ ಮುಂದುವರಿದಿದೆ. ನದಿಯ ಪಾತ್ರವನ್ನು ಕಿರಿದಾಗಿ ಮಾಡಿ ನೀರಿನ ಆಳವನ್ನು ಹೆಚ್ಚಿಸಿ ಎಲ್ಲ ಕಾಲಗಳಲ್ಲಿಯೂ ಜಲಯಾನ ಸಾಧ್ಯವಾಗುವ ಹಾಗೆ ಮಾಡಲಾಗಿದೆ. ದಡಗಳನ್ನು ಭದ್ರಗೊಳಿಸಿ ಪ್ರವಾಹ ಕಾಲದಲ್ಲಿ ಹೊಳೆ ಅದರ ಅಕ್ಕಪಕ್ಕದ ಗದ್ದೆ, ಪಟ್ಟಣ, ಸೇತುವೆಗಳ ಮೇಲೆ ನುಗ್ಗದ ಹಾಗೆ ನಿಯಂತ್ರಿಸಲಾಗಿದೆ. ನದಿಗಳಿಗೆ ಅಡ್ಡವಾಗಿ ಕಟ್ಟೆಗಳನ್ನು ಕಟ್ಟಿ ಜಲಾಶಯದಿಂದ ನೀರನ್ನು ದಡದ ಮೇಲೆ ನಾಲೆಗಳ ಮೂಲಕ ಸಾಗಿಸಿ ಖುಷ್ಕಿ ಭೂಮಿಯನ್ನು ಗದ್ದೆಗಳಾಗಿ ಪರಿವರ್ತಿಸಲಾಗಿದೆ. ಜಲಯಾನವಿರುವ ನಾಲೆಗಳಲ್ಲಿ ಮಟ್ಟ ಬದಲಾವಣೆಯ ಕಟ್ಟೆಗಳನ್ನು ಕಟ್ಟಿ ದೋಣಿಗಳು ಎಲ್ಲ ಕಡೆಗಳಿಗೂ ಹೋಗುವಂತೆ ಮಾಡಿದ್ದಾರೆ. ದೊಡ್ಡದಾದ ಒಂದು ನದಿಯ ಪಾತ್ರದಲ್ಲಿನ ಸಮಸ್ಯೆಗಳನ್ನು ಎದುರಿಸುವಾಗ ನದಿಯ ಇಳುಕಲು ತಿರುವುಗಳು, ಅದರ ಹರಿವಿನಲ್ಲಿ ತಿಂಗಳು ತಿಂಗಳಿಗೂ ಆಗುವ ವ್ಯತ್ಯಾಸ, ಅದು ಸಾಗಿಸುವ ಗೋಡು ಮಣ್ಣಿನ ಪ್ರಮಾಣ ಮುಂತಾದವನ್ನು ಗಮನಿಸಬೇಕಾಗುತ್ತದೆ. ನದಿ ಹರಿವ ಪಾತ್ರ ವರ್ಷವಿಡೀ ಗೋಡು ಮಣ್ಣು ತುಂಬಿ ಎತ್ತರವಾಗದೆ ಮತ್ತು ತಳದ ಮಣ್ಣು ತೊಳೆದು ಹೋಗಿ ತಗ್ಗದೆ ಇದ್ದರೆ ಆ ಪಾತ್ರ ಭದ್ರವಾದುದೆಂದು ಹೇಳುವೆವು. ಎಷ್ಟೋ ನದಿಗಳು ದಡವನ್ನು ಒಂದು ಕಡೆ ಕೊರೆದು ಇನ್ನೊಂದು ಕಡೆ ಮಣ್ಣು ತುಂಬುವುದುಂಟು. ಕಾವೇರಿ ತುಂಗಭದ್ರಾ ಮೊದಲಾದ ನದಿಗಳ ಮೇಲುಗಡೆಯ ಪಾತ್ರಗಳೆಲ್ಲ ಭದ್ರವಾಗಿವೆ. ಆದರೆ ಅವು ಸಮುದ್ರದ ಹತ್ತಿರ ಹೋದಂತೆ ಮೆಕ್ಕಲು ಮಣ್ಣಿನಲ್ಲಿ ಹರಿಯುವುದರಿಂದ ದಡಗಳು ಸವೆತ ತಡೆಯದಿದ್ದರೆ ಪಾತ್ರ ಅಗಲವಾಗಿ ತಟ್ಟೆಯಾಗಿರುತ್ತದೆ; ಹೀಗಲ್ಲದೆ ದಡಗಳು ಸವೆತ ತಡೆಯುವಷ್ಟು ಗಟ್ಟಿಯಾಗಿದ್ದರೆ ಪಾತ್ರ ಕಿರಿದಾಗಿ ಆಳವಾಗಿರುತ್ತದೆ.

ನದಿಗಳ ಮಾರ್ಗಗಳನ್ನು ಮೂರು ಬಗೆಯಾಗಿ ವಿಂಗಡಿಸಿದೆ: 1. ನೇರವಾಗಿರುವುವು, 2. ತಿರುವುಗಳು ವಿಶೇಷವಾಗಿರುವುವು, 3. ಎರಡು ದಾರಿಗಳು ಸೇರಿ ಜಡೆಯಾಗಿ ಹೊಸೆದಿರುವುವು.

ನದಿಯಲ್ಲಿ ಹರಿಯುವ ನೀರು, ಮಣ್ಣಿನ ಸ್ವಭಾವ, ಹೊಳೆ ಸಾಗಿಸುವ ಗೋಡು ಮಣ್ಣಿನ ಪ್ರಮಾಣ ಇವು ನದಿಯ ಮಾರ್ಗದ ಮೇಲೆ ಪರಿಣಾಮ ಬೀರುತ್ತವೆ. ನದಿಯ ಇಳುಕಲಿಗೂ ಈ ಮಾರ್ಗಕ್ಕೂ ಸಂಬಂಧವುಂಟು. ನೇರವಾದ ನಾಲೆಗಳನ್ನು ಇಳುಕಲು ಬಹಳ ಕಡಿಮೆಯಾಗಿರುವ ಮತ್ತು ಹೆಚ್ಚಾಗಿರುವ ನದಿಗಳಲ್ಲಿ ಕಾಣಬಹುದು. ಮಧ್ಯವರ್ತಿಯಾದ ಇಳುಕಲಿನಲ್ಲಿ ಹರಿಯುವ ನದಿಗಳು ಹೆಚ್ಚಾಗಿ ಅಂಕುಡೊಂಕಾಗಿರುತ್ತವೆ. ನದಿಯ ಇಳುಕಲಿಗೂ ಅದರ ಪಾತ್ರದ ಆಕಾರಕ್ಕೂ ಇರುವ ಸಂಬಂಧವನ್ನು ತಿಳಿಯಲು ಇನ್ನೂ ಸಂಶೋಧನೆಗಳು ನಡೆಯಬೇಕಾಗಿವೆ. ಇದು ತಿಳಿಯದೆ ನದಿಗಳ ಡೊಂಕುಗಳನ್ನು ನೇರವಾಗಿ ಮಾಡುವ ಪ್ರಯತ್ನಗಳು ವಿಫಲವಾಗಿವೆ. ಹಾಗೆಯೇ ನದಿಯ ಇಳುಕಲು ಹೆಚ್ಚಾಗಿರುವ ಕಡೆ ತಿರುವುಗಳನ್ನು ಜೋಡಿಸುವುದೂ ಸಾಧ್ಯವಾಗಿಲ್ಲ. ಅಭದ್ರವಾದ ಪಾತ್ರವುಳ್ಳ ನದಿಗಳಲ್ಲಿ ಅವುಗಳ ಇಳುಕಲು ಎಷ್ಟೇ ಇರಲಿ ಎರಡು ದಾರಿಗಳು ಸೇರಿ ಜಡೆಯಾಗಿ ಹರಿಯುವ ಜಾಡುಗಳನ್ನೂ ಕಾಣಬಹುದು.

ಜಲಯಾನ ಯೋಗ್ಯವಾದ ನದಿಗಳ ಶಿಲ್ಪದ ಮೊದಲನೆಯ ಉದ್ದೇಶ ಜಲಯಾನಕ್ಕೆ ಅವಶ್ಯವಾದ ನೀರಿನ ಆಳವನ್ನು ಒಂದೇ ಸಮವಾಗಿ ಒದಗಿಸುವುದು. ಈ ಉದ್ದೇಶವನ್ನು ಬೇರೆ ಬೇರೆ ನದಿಗಳಲ್ಲಿ ಪ್ರತ್ಯೇಕವಾದ ಉಪಾಯಗಳಿಂದ ಸಾಧಿಸುತ್ತಾರೆ.

ಪಾತ್ರವನ್ನು ಕಿರಿದಾಗಿ ಮಾಡುವುದು: ನೈಸರ್ಗಿಕ ಸ್ಥಿತಿಯಲ್ಲಿ ನದಿಯ ಪಾತ್ರದ ಆಳದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬಹಳ ವ್ಯತ್ಯಾಸ ಇರುವುದು. ಮಧ್ಯೆ ತಿರುವುಗಳಲ್ಲಿ ಆಳವಾಗಿ ನಡುವೆ ಆಳ ಕಡಿಮೆಯಾಗಿರುವ ಭಾಗಗಳಿರಬಹುದು. ಆದರೆ ಹೊಳೆಯ ಜಲಯಾನಯೋಗ್ಯತೆ ತೆಟ್ಟೆಯಾಗಿರುವ ಭಾಗಗಳ ಆಳವನ್ನು ಅವಲಂಬಿಸಿದೆ. ತೆಟ್ಟೆ ಜಾಗಗಳನ್ನು ತೋಡಿ ಆಳಮಾಡಬಹುದು. ಹಾಗಲ್ಲದೆ ಆ ಪಾತ್ರವನ್ನೇ ಕಿರಿದು ಮಾಡಿ ಬೇಸಗೆ ವೇಳೆ ಅದರಲ್ಲಿ ಹರಿಯುವ ನೀರೇ ಅದನ್ನು ಬೇಕಾದ ಆಳಕ್ಕೆ ತುಂಬುವ ಹಾಗೆ ಮಾಡಬಹುದು. ಆಗ ಪಾತ್ರದಲ್ಲಿರುವ ಗೋಡು ಮಣ್ಣು ನೀರಿನ ಅಧಿಕ ವೇಗದಲ್ಲಿ ಕೊಚ್ಚಿಹೋಗುತ್ತದೆ. ತೆಟ್ಟೆ ಭಾಗದಲ್ಲಿ ನೀರಿಗೆ ದಾರಿ ತೋರಿಸಲು ಕಲ್ಲಿನ ಎರಡು ತಗ್ಗು ಗೋಡೆಗಳನ್ನು ಉದ್ದವಾಗಿ ಕಟ್ಟಿ ಅವನ್ನು ನದಿಯ ದಡಗಳಿಗೆ ತಗ್ಗಾದ ಕಲ್ಲಿನ ತಡೆಗಟ್ಟುಗಳಿಂದ ಸೇರಿಸಬಹುದು. ಆಗ ಗೋಡು ಮಣ್ಣು ಮತ್ತು ನದಿಯ ತಳದಲ್ಲಿ ಚಲಿಸುವ ಸಾಮಗ್ರಿ ಈ ತಡೆಗಟ್ಟುಗಳ ಬಳಿ ನಿಲ್ಲುತ್ತವೆ; ಮತ್ತು ಗೋಡೆಗಳ ನಡುವಿನ ಜಾಡಿನಲ್ಲಿ ನೀರು ಧಾರಾಳವಾಗಿ ಹರಿಯುತ್ತದೆ. ತಿರುವುಗಳ ಒಳಭಾಗದ ಏರಿಗಳಲ್ಲಿ ಕಲ್ಲನ್ನು ಜೋಡಿಸಿ ಚಾಪೆಗಳಿಂದ ಮುಚ್ಚಿ ಮೇಲೆ ಕಲ್ಲುಗಳನ್ನು ಹೇರಬಹುದು. ಆಗ ಕೊರೆತ ತಿರುವುಗಳವರೆಗೂ ಮುಂದುವರಿಯುವುದು ತಪ್ಪುತ್ತದೆ.

ನದಿಯ ನೀರಿಗೆ ದಾರಿ ತೋರಿಸುವುದು: ತಿರುವುಗಳ ಉದ್ದವನ್ನು ಕಡಿಮೆ ಮಾಡುವುದರಿಂದಲೂ ಅವು ವಕ್ರವಾಗಿದ್ದಾಗ ಅಡ್ಡಗೋಡೆಗಳಿಂದ ತಿರುಗಿಸುವುದರಿಂದಲೂ ಜಲಯಾನಕ್ಕೆ ಅನುಕೂಲವಾಗುತ್ತದೆ. ಈ ವಿವರವನ್ನು ಪ್ರಯೋಗ ಶಾಲೆಗಳಲ್ಲಿ ಮಾದರಿಗಳಿಂದ ನಿರ್ಣಯಿಸುವುದು ಉತ್ತಮ. ಗೋಡುಮಣ್ಣನ್ನು ಸಾಗಿಸುವ ನದಿಯ ನೇರವಾದ ಭಾಗದಲ್ಲಿ ಬಲಕ್ಕೊ ಎಡಕ್ಕೊ ಹೆಚ್ಚು ಗೋಡು ಮಣ್ಣು ತುಂಬಿದಾಗ ತಿರುವುಗಳು ಪ್ರಾರಂಭವಾಗುತ್ತವೆ. ಆಗ ಗೋಡು ಮಣ್ಣು ತುಂಬಿರುವ ದಿಕ್ಕಿನಲ್ಲಿಯೇ ಇನ್ನೂ ಹೆಚ್ಚು ಗೋಡು ಸೇರುತ್ತದೆ. ಎದುರು ದಿಕ್ಕಿನಲ್ಲಿ ಗೋಡು ನಿಲ್ಲುವುದಿಲ್ಲ. ಹೀಗಾಗಿ ನೇರವಾಗಿದ್ದ ಭಾಗದಲ್ಲಿ ಒಂದು ತಿರುವು ಪ್ರಾರಂಭವಾಗಿ ಕೊಂಚ ಮುಂದೆ ಎದುರು ದಿಕ್ಕಿನಲ್ಲಿ ಇನ್ನೊಂದು ತಿರುವು ಕಾಣಿಸಿಕೊಳ್ಳುತ್ತದೆ. ಸುಲಭವಾಗಿ ಕೊರೆದು ಹೋಗುವ ಭೂಮಿಯಲ್ಲಿ ಗೋಡಿನಿಂದ ತುಂಬಿದ ನದಿಯಲ್ಲಿ ತಿರುವುಗಳ ಹರವು ಹೆಚ್ಚಿ, ಪ್ರವಾಹದ ನೀರು ಎರಡು ತಿರುವುಗಳ ನಡುವಣ ಗಡ್ಡೆಯನ್ನು ಕೊರೆದು ನೇರವಾಗಿ ಹರಿಯುತ್ತದೆ.

ನಾಲೆಗಳಾಗಿ ಮಾಡಿದ ನದಿಗಳು: ನದಿಯ ಮೇಲಿನ ಮಜಲುಗಳಲ್ಲಿ ನೀರಿನ ಆಳವನ್ನು ದೋಣಿಗಳು ಸಾಗುವ ಹಾಗೆ ಹೆಚ್ಚಿಸಬೇಕಾದರೆ ಪಾತ್ರವನ್ನು ಕಿರಿದಾಗಿ ಮಾಡಬೇಕಾಗುತ್ತದೆ. ಅಂಥ ಕಡೆಗಳಲ್ಲಿ ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟಿ ಅವುಗಳ ನಡುವೆ ನದಿಯ ತಳವನ್ನು ತೋಡಿ ನೀರಿನ ಆಳವನ್ನು ಹೆಚ್ಚಿಸಬಹುದು. ಆಗ ನದಿಯ ತಳ ಮಜಲುಮಜಲಾಗಿ ಇಳಿಯುತ್ತದೆ. ಇಲ್ಲಿ ದೋಣಿಯನ್ನು ಸಾಗಿಸಬೇಕಾದರೆ ಮಟ್ಟ ಬದಲಾವಣೆಯ ಸಂದು (ಲಾಕ್ಸ್) ಕಟ್ಟೆಗಳನ್ನು ಕಟ್ಟೆಯ ಒಂದು ಕೊನೆಯಲ್ಲಿ ಕಟ್ಟಬೇಕು. ಈ ಪರಿಸ್ಥಿತಿಯಲ್ಲಿ ನದಿಯ ಪಾತ್ರ ಅನೇಕ ನಾಲೆಗಳಾಗಿ ವಿಂಗಡವಾಗುತ್ತದೆ.

ಭರತದ ನದಿ : ಸಾಮಾನ್ಯವಾಗಿ ಎಲ್ಲ ನದಿಗಳೂ ನದೀಮುಖದಿಂದ ಸ್ವಲ್ಪ ದೂರದವರೆಗೆ ಭರತದ ಉಬ್ಬರವಿಳಿತಕ್ಕೆ ಒಳಗಾಗುತ್ತದೆ. ಇಂಥ ನದಿಗಳಲ್ಲಿ ಪಾತ್ರ ನಿಧಾನವಾಗಿ ಗೋಡು ಮಣ್ಣಿನಿಂದ ತುಂಬುತ್ತದೆ. ಕೆಲವು ವೇಳೆ ನೀರು ನದಿಯಲ್ಲಿ ಕಡಿಮೆ ಆಗಿದ್ದಾಗ ಗೋಡು ಮುಂದೆ ಬರುವ ಅಲೆಯಲ್ಲಿ ಸಂಪೂರ್ಣವಾಗಿ ಕೊಚ್ಚಿ ಹೋಗುವುದಿಲ್ಲ. ಆಗ ಭರತ ನದಿಯ ಪ್ರವಾಹವನ್ನು ಎದುರಿಸಬೇಕಾಗುತ್ತದೆ. ಆದರೆ ಇಳಿತದಲ್ಲಿ ಪ್ರವಾಹದ ನೀರಿಗೆ ಭರತದ ಕಾಲದಲ್ಲಿ ಹಿಂದೆ ಕೂಡಿಹಾಕಿಕೊಂಡಿದ್ದ ನದಿಯ ನೀರೂ ಸೇರಿ ಪಾತ್ರವನ್ನು ಕೊರೆಯುತ್ತದೆ. ನದಿಯ ಅಳಿವೆಯಲ್ಲಿ ಭರತದ ಕಾಲದಲ್ಲಿ ಹೆಚ್ಚು ನೀರು ಒಳಕ್ಕೆ ಬಂದು, ಇಳಿತದ ಕಾಲದಲ್ಲಿ ಈ ನೀರೂ ಮೇಲಿನಿಂದ ಬರುವ ನೀರೂ ಹೊರಕ್ಕೆ ಹೋಗಿ ತಳ ಕೊರೆಯುತ್ತದೆ. ನದಿಯ ಅಳಿವೆ ಕೆಳಭಾಗದಲ್ಲಿ ಕ್ರಮೇಣ ಅಗಲವಾಗಿ ನೀರು ಸಾಕಷ್ಟು ವೇಗದಿಂದ ಹರಿಯಬೇಕು. ಅಳಿವೆಯ ನಾಲೆ ಸರಿಯಾಗಿ ಕೆಲಸ ಮಾಡಬೇಕಾದರೆ ಅಲೆಯ ನೀರು ಒಳಕ್ಕೆ ಧಾರಾಳವಾಗಿ ಬರಬೇಕಾಗಿರುವುದರಿಂದ ಸಾಕಷ್ಟು ಪರಿಶೀಲನೆಯ ಅನಂತರ ಆ ಜಾಗದಲ್ಲಿ ಸೇತುವೆಯ ಕಂಬಗಳನ್ನೂ ಅಡ್ಡಟ್ಟುಗಳನ್ನೂ ಮತ್ತು ಬಂದರು ಕಟ್ಟೆಗಳನ್ನು ನಿರ್ಮಿಸಬೇಕು.

ಸಾಮಾನು ಸರಂಜಾಮುಗಳನ್ನು ಹಡಗಿನಿಂದ ಇಳಿಸುವುದಕ್ಕೂ ತುಂಬುವುದಕ್ಕೂ ಸರಕು ಕಟ್ಟೆಗಳನ್ನು ಒಂದಕ್ಕೆ ಒಂದು ತೊಡರಿಕೊಳ್ಳುವ ಉಕ್ಕಿನ ಹಾಳೆಗಳ ಚೂಪು ದಸಿಗಳಿಂದ ನಿರ್ಮಿಸುತ್ತಾರೆ.

ನದಿಯ ಇಳಕಲು ಕಿಲೊಮೀಟರಿಗೆ 2.25 ಮೀಟರುಗಳಿಗಿಂತ ಹೆಚ್ಚಾಗಿಲ್ಲದ ಕಡೆಗಳಲ್ಲಿ ಜಲಯಾನ ಅಭಿವೃದ್ಧಿಯಾಗಿ ಕೆಲವು ಕಡೆ ಶಕ್ತಿಚಾಲಿತ ನಾಲೆಗಳನ್ನು ಉಪಯೋಗಿಸುತ್ತಿದ್ದಾರೆ. ಆದರೆ 1922ರಲ್ಲಿ ಕಾವೇರಿ ನದಿಯಲ್ಲಿ ಬಂದ ಹಾಗೆ ಮಹಾಪ್ರವಾಹ ಬಂದರೆ ಗದ್ದೆಗಳ ಮೇಲೂ ಊರುಗಳ ಮೇಲೂ ನುಗ್ಗಿ ಹಾವಳಿ ಮಾಡಬಹುದು. ಪ್ರತಿಯಾಗಿ 1966ರಲ್ಲಿ ಆದ ಹಾಗೆ ಮಳೆ ವಿಶಾಲವಾದ ಭೂಭಾಗದಲ್ಲಿ ಬರದೆ ಹೋದರೆ ನೀರಾವರಿಗೇ ಅಲ್ಲದೆ ಕುಡಿಯುವ ನೀರಿಗೂ ಪೇಚಾಟವಾಗಬಹುದು. ಈ ನೈಸರ್ಗಿಕವಾದ ಏರುಪೇರಿಗೆ ಪರಿಹಾರವಿಲ್ಲ. ಆದರೂ ನದಿಯ ಮೇಲಿನ ಸಾಗಣೆ ವ್ಯಾಪಾರಕ್ಕೆ ವಿಶೇಷವಾದ ಅನುಕೂಲತೆಗಳನ್ನು ಒದಗಿಸಿದೆ. ನದಿಯ ದಡದ ಮೇಲೆ ಕಾರ್ಖಾನೆಗಳು ಬೆಳೆದು ಅವುಗಳಿಂದ ಹೊರಬರುವ ರಾಸಾಯನಿಕಗಳು ನದಿಯ ನೀರನ್ನು ಕುಡಿಯಲು ಆಗದ ಹಾಗೆ ಕೆಡಿಸಬಹುದು. ಪಟ್ಟಣಗಳ ಗ್ರಾಮಸಾರ ನದಿಗೆ ಬೀಳುವುದಕ್ಕೆ ಮುಂಚೆ ಅದನ್ನು ಶುದ್ಧಿ ಮಾಡಬೇಕು. ನದೀಮುಖದ ಮೇಲುಗಡೆ ಎಷ್ಟು ದೂರ ಶಕ್ತಿಚಾಲಿತವಾದ ದೋಣಿಗಳು ಒಂದು ನಿಯತವಾದ ಕಾರ್ಯಕ್ರಮದ ಮೇಲೆ ಹೋಗಬಹುದೊ ಅದರ ಮೇಲೆ ಆ ನದಿಯ ಜಲಯಾನ ಯೋಗ್ಯತೆ ನಿರ್ಧಾರವಾಗುತ್ತದೆ. ಎಷ್ಟೊ ನದಿಗಳ ಮೇಲೆ ಸಮುದ್ರಯಾನ ಮಾಡಬಲ್ಲ ಹಡಗುಗಳು ಹೋಗುವುದೇ ಇಲ್ಲ. ಕೆಲವು ನದಿಗಳ ಮೇಲೆ ವ್ಯಾಪಾರದ ಸಾಗಣೆ ವಿಶೇಷವಾಗಿರುತ್ತದೆ. ಏಕೆಂದರೆ ಅವುಗಳ ಸಮುದ್ರದ ಕಡೆಯ ಕೊನೆಯಲ್ಲಿ ಬಂದರು ಸಾಮಾನನ್ನು ಇಳಿಸುವ ಕೇಂದ್ರವಾಗಿರುತ್ತದೆ. ಅಲ್ಲಿ ಸಮುದ್ರಗಾಮಿಗಳಾದ ಹಡಗುಗಳು ನಿಂತು ಒಳಗಿರುವ ಸಾಮಾನನ್ನು ದೋಣಿಗಳೊಳಕ್ಕೆ ಇಳಿಸಲಾಗುತ್ತದೆ. ಆ ದೋಣಿಗಳಿಂದ ಸಾಮಾನು ಒಳನಾಡಿನಲ್ಲಿರುವ ಎಲ್ಲ ಊರುಗಳಿಗೂ ರವಾನೆಯಾಗುತ್ತದೆ. ಹಾಗೆಯೇ ಈ ದೋಣಿಗಳು ಒಳನಾಡಿನಿಂದ ತಂದ ಸಾಮಾನುಗಳನ್ನು ಹಡಗಿಗೆ ತುಂಬಿ ಬೇರೆ ಬಂದರುಗಳಿಗೆ ಸಾಗಿಸುತ್ತವೆ. ದಕ್ಷಿಣ ಭಾರತದಲ್ಲಿ ಕೃಷ್ಣಾ ಮತ್ತು ಗೋದಾವರಿ ನದಿಗಳ ಮೇಲೆ ಈ ನಮೂನೆಯ ಸಾಗಣೆ ಸಾಮಾನ್ಯವಾಗಿದೆ. ಯುರೋಪಿನಲ್ಲಿ ರಾಟರ್‌ಡ್ಯಾಮ್, ಆ್ಯಂಟ್ವರ್ಪ್ ಮತ್ತು ಹ್ಯಾಂಬರ್ಗ್ ಬಂದರುಗಳಲ್ಲಿ ಅಮೆರಿಕದಿಂದ ಬರುವ ಧಾನ್ಯವನ್ನು ಜಲಮಾರ್ಗಗಳ ಮೂಲಕ ಯುರೋಪಿನ ಮೂಲೆಗಳಿಗೂ ಸಾಗಿಸುತ್ತಾರೆ. ಈ ದೋಣಿಗಳು ಸು. 90 ಮೀಟರ್ ಉದ್ದವಾಗಿರುತ್ತವೆ. ಅಮೆಜಾನ್ ನದಿಯ ಮೇಲೆ ಬಂದರುಗಳು ಸಮುದ್ರದಿಂದ ನೂರಾರು ಕಿಮೀ ದೂರ ಒಳನಾಡಿನಲ್ಲಿವೆ.

ನದಿಯ ನಾಲೆಯ ಮೇಲ್ಪಾಡುಗಳು: ನದಿಯ ಏರಿಗಳನ್ನು ಕೊರೆದು ಅದರ ದಾರಿ ಬದಲಾಗದಂತೆ ಏರಿಗಳಿಗೆ ಕಲ್ಲುಕಟ್ಟಡವನ್ನು ಕಟ್ಟಬಹುದು. ತಿರುವುಗಳನ್ನು ತಿದ್ದಲು ನಾಲೆಯ ದಾರಿಯನ್ನು ಕೊಂಚ ಬದಲಾಯಿಸಬಹುದು. ನದಿಗೆ ಅಡ್ಡವಾಗಿ ತಗ್ಗಾದ ಕಟ್ಟೆಗಳನ್ನು ಕಟ್ಟಿ ಮೇಲು ಭಾಗದಲ್ಲಿ ನೀರನ್ನು ನಿಲ್ಲಿಸಬಹುದು ಅಥವಾ ಒಂದು ಹೊಸ ನಾಲೆಯನ್ನೇ ಅಗೆಯಬಹುದು.

ಎರಡು ಜಲಮಾರ್ಗಗಳಿಗೆ ನಡುವೆ ಸಂಬಂಧವನ್ನು ಕಲ್ಪಿಸಲು ನಾಲೆಗಳನ್ನು ತೋಡಬೇಕಾಗುತ್ತದೆ. ಇವು ಸೂಯೆಜ್ ಕಾಲುವೆಯ ಹಾಗೆ ತೆರೆದ ನೀರಿನ ದಾರಿ ಆಗಿರಬಹುದು, ಇಲ್ಲವೆ ಪನಾಮ ಕಾಲುವೆಯಂತೆ ತೊಡಕಾದ ತೋಡುದಾರಿ ಆಗಿರಬಹುದು ಅಥವಾ ಅಮೆರಿಕದ ಸೇಂಟ್ ಲಾರೆನ್ಸ್ ನದಿಯಲ್ಲಿರುವ ಹಾಗೆ ತೆರೆದ ಕಾಲುವೆ ಮಟ್ಟ ಬದಲಾವಣೆಯ ಕಟ್ಟೆ ಮತ್ತು ಕಾಂಕ್ರೀಟಿನ ಕಟ್ಟೆಗಳ ಸಮಾವೇಶ ಆಗಿರಬಹುದು.

ನದಿ ಹರಿಯುವ ಮಾರ್ಗಕ್ಕೂ ಅದರ ಕಣಿವೆಯ ಇಳುಕಲಿಗೂ ಸಂಬಂಧವಿದೆ. ಬಹಳ ಚಪ್ಪಟೆಯಾದ ಇಲ್ಲವೆ ಹೆಚ್ಚಿನ ಇಳುಕಲಿನ ಕಣಿವೆಗಳಲ್ಲಿ ನದಿಗಳು ನೇರವಾಗಿ ಹರಿಯುತ್ತವೆ. ಮಧ್ಯಮ ಇಳುಕಲಿನ ಕಣಿವೆಯಲ್ಲಿ ತಿರುವುಗಳಿಂದ ಕೂಡಿ ಬಳಸಾಗಿ ಹರಿಯುತ್ತದೆ. ನದಿಯ ಅಗಲವೂ ಆಳವೂ ಎಲ್ಲ ಭಾಗಗಳಲ್ಲಿಯೂ ಸುಮಾರಾಗಿ ಒಂದೇ ಆಗಿರುವ ಕಡೆಗಳಲ್ಲಿ ಕಡಿದಾದ ಇಳುಕಲಿರುವ ಕಡೆ ಜಡೆಗಳಾಗಿ ಹರಿಯುತ್ತವೆ.

ನದಿಯ ಪಾತ್ರದಲ್ಲಿ ಸರೋವರಗಳು: ನದಿಯ ಕಣಿವೆಯ ಒಂದು ಭಾಗದಲ್ಲಿ ದೊಡ್ಡ ಹಳ್ಳವಿದ್ದು ಅದರ ಕೆಳಗಡೆ ಕಲ್ಲಿನ ಬಂಡೆ ಸಂಪೂರ್ಣವಾಗಿ ಅಡ್ಡವಾಗಿದ್ದರೆ ನದಿಯ ಪಾತ್ರದಲ್ಲಿಯೇ ಸರೋವರ ನಿರ್ಮಾಣವಾಗುತ್ತದೆ. ಆಗ ನದಿಯಲ್ಲಿರುವ ಗೋಡು ಮಣ್ಣೆಲ್ಲ ಸರೋವರದ ತಳದಲ್ಲಿ ನಿಲ್ಲುತ್ತದೆ. ಕೆಳಭಾಗದಲ್ಲಿ ಸರೋವರ ಸ್ವಚ್ಛವಾದ ನೀರಿನಿಂದ ತುಂಬಿರುತ್ತದೆ.

ನದಿಯ ಉಬ್ಬರವಿಳಿತಗಳು: ಉಬ್ಬರವಿಳಿತಗಳು ಸಮುದ್ರಕ್ಕೆ ನೇರವಾಗಿ ಬೀಳುವ ನದಿಗಳಲ್ಲಿ ಮಾತ್ರ ಸಾಧ್ಯ. ಇವು ಸಮುದ್ರದ ಉಬ್ಬರವಿಳಿತಗಳಿಗಿಂತ ಮೂರು ವಿಧಗಳಲ್ಲಿ ಕೊಂಚ ಭಿನ್ನವಾಗಿವೆ.

1. ಅಲೆ ನದಿಯ ಮೇಲುಭಾಗಕ್ಕೆ ಚಲಿಸುವ ವೇಗ ನಾಲೆಯ ಆಳಕ್ಕೆ ಅನುಗುಣವಾಗಿರುತ್ತದೆ.

2. ನದಿಯ ಮೇಲುಭಾಗಕ್ಕೆ ಹೋದ ಹಾಗೆ ಇಳಿಯುವ ಅಲೆಯ ಅವಧಿ ಹೆಚ್ಚು. ಹಾಗೆಯೇ ಏರುವ ಅಲೆಯ ಅವಧಿ ಕಡಿಮೆ. ನದಿಯ ಮೇಲುಭಾಗದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಇರಬಹುದಾದ ನೀರಿನ ಆಳದ ವ್ಯತ್ಯಾಸವೂ ಈ ವ್ಯತ್ಯಾಸಕ್ಕೆ ಒಂದು ಕಾರಣ. ಇದಲ್ಲದೆ ನದಿಯಲ್ಲಿಯ ನೀರಿನ ಪ್ರಮಾಣವೂ ವ್ಯತ್ಯಾಸವಾಗಬಹುದು. ಆಗ ಏರುವ ಅಲೆ ಚುರುಕಾಗುತ್ತದೆ. ಇಳಿಯುವ ಅಲೆ ಸಾವಕಾಶವಾಗುತ್ತದೆ.

ಮೇಲಕ್ಕೆ ಹೋದ ಹಾಗೆ ಉಬ್ಬರವಿಳಿತದ ವ್ಯಾಪ್ತಿಯೂ ಕಡಿಮೆ ಆಗುತ್ತದೆ. ಇದಕ್ಕೆ ನೀರು ನದಿಯ ದಡಗಳಿಗೂ ತಳಕ್ಕೂ ಉಜ್ಜುವಾಗ ಅದರ ಸಾಮರ್ಥ್ಯ ಕಡಿಮೆ ಆಗುವುದೂ ಒಂದು ಕಾರಣ. ಆದರೆ ಈ ಜಾಗದಲ್ಲಿಯೇ ಕಿರಿದಾದರೆ ಉಬ್ಬರವಿಳಿತದ ವ್ಯಾಪ್ತಿ ಸ್ವಲ್ಪ ಹೆಚ್ಚಾಗಬಹುದು. ನದಿಯಲ್ಲಿ ಏರುವ ಮತ್ತು ಇಳಿಯುವ ಅಲೆಗಳ ನಡುವೆ ನೀರಿನ ಆಳದ ವ್ಯತ್ಯಾಸವೂ ಹೆಚ್ಚಾಗಿರಬಹುದು. ಇದರಿಂದ ಎತ್ತರವಾದ ಅಲೆಗಳು ಚಲಿಸುವ ವೇಗಕ್ಕೂ ತಗ್ಗಾದ ಅಲೆಗಳ ವೇಗಕ್ಕೂ ವ್ಯತ್ಯಾಸವಾಗಬಹುದು.

ನದಿಗಳಿಂದ ಮಾನವನಿಗೆ ಉಪಯೋಗ: ನದಿಗಳ ನೀರನ್ನು ದಡದಲ್ಲಿರುವ ಹಳ್ಳಿ ಮತ್ತು ಪಟ್ಟಣಗಳಲ್ಲಿ ಕುಡಿಯುವುದಕ್ಕೂ ಕೈಗಾರಿಕೆಗಳಿಗೂ ನೀರಾವರಿಗೂ ಉಪಯೋಗಿಸುತ್ತಾರೆ. ನದಿಯ ಗೋಡಿನಿಂದ ಫಲವತ್ತಾದ ಪ್ರವಾಹದ ಬಯಲುಗಳನ್ನು ಬೇಸಾಯಕ್ಕಾಗಿ ಬಳಸಿ, ದಡಗಳ ಮೇಲೆ ಜನರು ಸೌಖ್ಯವಾಗಿ ಬಾಳುತ್ತಾರೆ. ದಕ್ಷಿಣ ಭಾರತದಲ್ಲಿ ತಂಜಾವೂರಿನ ಬಳಿ ಕಾವೇರಿ ನದಿಯ ಕುದುರಿನಲ್ಲಿ ಜನ ಬಹುಕಾಲದಿಂದಲೂ ಸುಖವಾಗಿ ಬಾಳುತ್ತಿರುವುದಕ್ಕೆ ಆ ನದಿಯ ನೀರೇ ಕಾರಣ. ನದಿಯ ಇಳುಕಲು ಅತಿಯಾಗಿ ಇರದ ಕಡೆಗಳಲ್ಲಿ ದೋಣಿಗಳಿಂದಲೇ ಅಲ್ಲದೆ ಆವಿಯ ಹಡಗುಗಳಿಂದಲೂ ಜಲಯಾನ ಸಾಮಾನ್ಯವಾಗಿದೆ. (ಎಚ್.ಸಿ.ಕೆ.)

**ನದೀಬಳಸುಗಳು:** ಪ್ರೌಢಾವಸ್ಥೆಯನ್ನು ತಲುಪಿದ ನದಿಯೊಂದರ ತಿರುವು ಮುರುವುಗಳು (ರಿವರ್ ಮಿಯಾಂಡರ್ಸ್; ಬೆಂಡಿಗ್ ಲೂಪ್ಸ್). ಗಟ್ಟಿಕಲ್ಲಿರುವ ಪ್ರದೇಶಗಳಲ್ಲಿ ಇವು ವಿರಳ. ನುಣುಪಾದ ಮರಳಿನಲ್ಲಿ ಅಥವಾ ಮೆಕ್ಕಲು ಮಣ್ಣಿನಲ್ಲಿ ಮುಪ್ಪಡಸಿದ ನದಿ

ಬಲು ನಿಧಾನವಾಗಿ ಡೊಂಕುಡೊಂಕಾಗಿ ಹರಿಯುತ್ತದೆ. ನದಿ ಹರಿಯುವ ದಾರಿಯಲ್ಲಿ ಏನಾದರೂ ಅಡ್ಡಿಬಂದರೆ ನೀರಿನ ಹರಿವು ಅದನ್ನು ಬಳಸಿಕೊಡು ಮುಂದೆ ಸಾಗುತ್ತದೆ. ಆಗ ಅದರ ಚಲನಶಕ್ತಿ ಒಂದು ದಡದ ಬಳಿಯಿರುವುದಕ್ಕಿಂತಲೂ ಹೆಚ್ಚಾಗಿ ಮತ್ತೊಂದು ದಡದ ಮೇಲೆ ಕೇಂದ್ರೀಕೃತವಾಗುತ್ತದೆ. ಆದ್ದರಿಂದ ಶಕ್ತಿ ಒತ್ತಡಕ್ಕೆ ಈಡಾದ ದಡ ಬೇಗ ಸವೆಯುತ್ತದೆ ಮತ್ತು ಬಾಗುತ್ತದೆ. ವಿಶಾಲವಾದ ಪ್ರವಾಹ ಮೈದಾನದಲ್ಲಿ ಇಂಥ ನದೀಬಳಸುಗಳು ಸಾಮಾನ್ಯವಾಗಿ ಹೆಚ್ಚು. ಈ ಪ್ರದೇಶಗಳಲ್ಲಿ ನದೀಬಳಸುಗಳಿರುವ ಪಾತ್ರ ಪದೇ ಪದೇ ಮಾರ್ಪಾಡುಗೊಳ್ಳುವುದುಂಟು. ಹಾರಾಡುವ ವಿಮಾನಗಳಲ್ಲಿ ಕುಳಿತು ನೋಡಿದಾಗ ಈ ನದಿಯ ಬಾಗುಗಳು, ತಿರುವು ಮುರುವುಗಳು, ಕುಣಿಕೆಗಳು ಬಲು ಚೆನ್ನಾಗಿ ಕಾಣುತ್ತವೆ. ನದೀಬಳಸುಗಳ ಅಗಲ ಕೆಲವು ವೇಳೆ ಅನೇಕ ಕಿಮೀ ಗಳಷ್ಟಿರಲೂಬಹುದು. ಕರ್ನಾಟಕದಲ್ಲಿ ಹರಿಯುವ ಹೇಮಾವತಿ, ಕಾವೇರಿ ನದಿಗಳಿಗೆ ಇಂಥ ಬಳಸುಗಳು ಬಹಳ ಇವೆ.

ಕಾಲಕ್ರಮದಲ್ಲಿ ನದೀಬಳಸಿನ ತಿರುವು ಅತ್ಯಧಿಕವಾದಾಗ ಅದರ ಕಿರಿದಾದ ಕತ್ತಿನ ಮೂಲಕ ಕಾಲುವೆಯನ್ನು ಕೊರೆದುಕೊಂಡು ನದಿ ನೆಟ್ಟಗೆ ಹರಿಯುತ್ತದೆ. ಹೀಗಾಗುವುದು ಸಾಮಾನ್ಯವಾಗಿ ನದಿಯ ಪ್ರವಾಹಕಾಲದಲ್ಲಿ. ಆಗ ನದಿಯ ಜಾಡೇ ಬದಲಾಗುತ್ತದೆ. ಪ್ರವಹಿಸುವ ಉದ್ದ ಕಡಿಮೆಯಾಗಲೂಬಹುದು. ಹೀಗೆ ನದಿ ಕೊರೆದ ಕಾಲುವೆಯ ದಾರಿಯಲ್ಲಿ ಮೆಕ್ಕಲುಮಣ್ಣು ತುಂಬಿಕೊಂಡಾಗ ಶೃಂಗ ಚಂದ್ರಾಕಾರದ ಇಲ್ಲವೆ ಎತ್ತಿನ ಕೊಂಬಿನ ಇಲ್ಲವೆ ಕುದುರೆ ಲಾಳದ ಆಕಾರದ ಕೊಳ ಗೋಚರವಾಗುತ್ತದೆ. ಉತ್ತರ ಅಮೆರಿಕದ ಕೆಳಗಣ ಮಿಸಿಸಿಪಿ ನದಿಯ ಉದ್ದಕ್ಕೂ ಇಂಥ ಕೊಳಗಳು ನೂರಾರಿವೆ. ನದಿಯಿಂದ ಬೇರ್ಪಟ್ಟ ಬಳಸುಗಳು. ಭೂಭಾಗದ ಚಲನವಲನಗಳಿಂದ ನದಿಯ ಪುನರುಜ್ಜೀವನವಾದಾಗ ಕಂಡುಬರುವ ಈ ನದೀಬಳಸುಗಳು ಬಹಳ ಕಿರಿದಾಗಿರುತ್ತವೆ. (ಎ.ಎನ್.ಎಸ್.ಐ.)

**ನದೀವೇದಿಕೆ:** ನದಿಗಳ ಪ್ರವಾಹ ಕ್ಷೇತ್ರಗಳಿಗಿಂತ ಎತ್ತರದಲ್ಲಿದ್ದು ಚಪ್ಪಟೆಯಾಗಿ ಜಗತಿಯಂತೆ ಕಾಣುವ ಭೂಭಾಗ (ರಿವರ್ ಟೆರೇಸ್). ನದಿ ಪುನರುಜ್ಜೀವನಗೊಂಡಿದ್ದರ (ರಿಜೂವಿನೇಷನ್) ಗುರುತು ಇದು. ಇದರ ಮೇಲೆ ಗುಂಡಾದ ಕಲ್ಲುಗಳ, ಮರಳಿನ ಮತ್ತು ಮೆಕ್ಕಲು ಮಣ್ಣಿನಿಂದ ಕೂಡಿದ ಹೊದಿಕೆ ಇರುವುದು. ಪ್ರಪಂಚದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೃಹದಾಕಾರದ ಸೋಪಾನ ಪಂಕ್ತಿಗಳಂತೆ ಗೋಚರವಾಗುವ ನದೀವೇದಿಕೆಗಳನ್ನು ಕಾಣಬಹುದು. ಪರ್ವತ, ಪ್ರಸ್ಥಭೂಮಿ ಇರುವೆಡೆಗಳಲ್ಲಿ ಭೂಭಾಗಗಳ ಏರಿಳಿತಗಳು ಆಗಾಗ್ಗೆ ಆಗುವುದು ಸಹಜ. ಇದೇ ರೀತಿ ನದಿಯೂ ಮುಪ್ಪಾಗಿ ಶಿಲಾಕ್ಷಯದ ತಳಮಟ್ಟವನ್ನು ಮುಟ್ಟಿ, ಆ ನದೀಪ್ರಾಂತ್ಯದ ಮೇಲೆ ಭೂಶಕ್ತಿ ಪರಿಣಾಮ ಬೀರಿದಾಗ, ನದಿಗೆ ಮತ್ತೆ ಯೌವನ ಪ್ರಾಪ್ತಿಯಾಗುತ್ತದೆ. ಆಗ ಅದು ತನ್ನ ಹಿಂದಿನ ಕಣಿವೆಯನ್ನು ಕೊರೆದುಕೊಂಡು ಕೆಳಕ್ಕೆ ಹರಿದುಬರುವುದು. ಹಳೆಯ ಕಣಿವೆಯ ನಡುವೆ ಹೊಸ ಕಣಿವೆ ರೂಪುಗೊಂಡಾಗ ಜೋಡಿವೇದಿಕೆಗಳು ಅಥವಾ ಸೋಪಾನಗಳು ಏರ್ಪಡುವುದೂ ಉಂಟು. ಅಕ್ಕಪಕ್ಕದ ವೇದಿಕೆಗಳ ಅಂತರ ಕೆಲವೇ ಅಡಿಗಳಿಂದ ನೂರಾರು ಅಡಿಗಳಷ್ಟು ಇರಬಹುದು. ಪುನರುಜ್ಜೀವನಗೊಂಡ ನದಿಯ ಸ್ಥಿತಿಯನ್ನು ಅನುಸರಿಸಿ ಈ ವೇದಿಕೆಗಳು ಒಂಟಿಯಾಗಿಯೋ ಜೋಡಿಯಾಗಿಯೋ ಇರುವ ಸಾಧ್ಯತೆ ಇದೆ. ಗ್ರೇಟ್‌ಬ್ರಿಟನ್, ಪಶ್ಚಿಮ ಯುರೋಪಿನ ಕೆಲವು ಭಾಗಗಳು, ಬ್ರಿಟಿಷ್ ಕೊಲಂಬಿಯ ಮುಂತಾದ ಭಾಗಗಳಲ್ಲಿ ನದೀವೇದಿಕೆಗಳ ಸಾಲುಗಳು ಬಹಳ ಇವೆ. ಲಂಡನ್ ನಗರದ ಬಳಿ ಥೇಮ್ಸ್ ನದಿಯ ಮೂರು ವೇದಿಕೆಗಳ ಗುಂಪನ್ನು ಗುರ್ತಿಸಲಾಗಿದೆ. ಕರ್ನಾಟಕ ರಾಜ್ಯದ ವೇಣೂರಿನ ಗೊಮ್ಮಟೇಶ್ವರ ಮೂರ್ತಿ ನೇತ್ರಾವತಿಯ ನದೀವೇದಿಕೆಯ ಮೇಲಿದೆ. ನದೀವೇದಿಕೆಗಳು ವ್ಯವಸಾಯಕ್ಕೆ ಅನುಕೂಲವಾದ ಪ್ರದೇಶಗಳಾಗಿರುವುದಲ್ಲದೆ, ನದೀ ತೀರದ ನಗರಗಳ ನಿರ್ಮಾಣಕ್ಕೆ ಬಹಳಷ್ಟು ಉಚಿತವಾಗಿಯೂ ಇರುತ್ತವೆ. ಭೂಮಿಯ ಚಲನವಲನಗಳಿಂದಾಗಿ ಒಂದು ಪ್ರದೇಶದಲ್ಲಿ ಪದೇ ಪದೇ ನವೀಕರಣ ಕ್ರಿಯೆ ಉಂಟಾದಾಗ ಕೆಳಗಿನ ಮಟ್ಟಗಳಲ್ಲಿ ಉದ್ದವಾದ ಕಾಲ್ಮೆಣೆಗಳಂತಿರುವ ಅನೇಕ ವೇದಿಕೆಗಳು ಉಂಟಾಗುತ್ತವೆ. ಉಪನದಿಗಳ ಚಟುವಟಿಕೆಗಳಿಂದ ನದೀವೇದಿಕೆಗಳು ಉಂಟಾಗುವ ಬದಲಿಗೆ ವಿಶಾಲವಾದ, ಚಪ್ಪಟೆಯಾಗಿರುವ ಕಣಿವೆಯ ತಳ ಕೊರೆತಕ್ಕೆ ಈಡಾಗಬಹುದು. ಬೆಟ್ಟ ಪ್ರದೇಶದ ಅಗಲವಾದ ಈ ಕಣಿವೆಗಳ ಮೇಲ್ಭಾಗವೇ ಹಳೆಯ ಕಣಿವೆಯ ತಳವನ್ನು ಪ್ರತಿನಿಧಿಸುತ್ತವೆ. (ಎ.ಎನ್.ಎಸ್.ಐ.)

**ನದೀಹರಣ:** ಒಂದು ನದಿ ಅಥವಾ ನದೀವ್ಯವಸ್ಥೆ ಮತ್ತೊಂದು ನದಿಯ ಇಲ್ಲವೇ ನದೀ ವ್ಯವಸ್ಥೆಯ ನೀರನ್ನು ಅಪಹರಿಸಿ ಬೆಳೆದು ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಕ್ರಿಯೆ (ರಿವರ್ ಪೈರೆಸಿ; ಸ್ಟ್ರೀಮ್‌ಕ್ಯಾಪ್ಚರ್). ದೊಡ್ಡ ನದಿ ತನ್ನ ಉಪನದಿಗಳೊಂದಿಗೆ ಕೂಡಿಕೊಂಡು ಮುಂದೆ ಸಾಗಿದಂತೆ ಬೇರೆ ಪ್ರವಾಹಗಳ ಜಲಾನಯನ ಪ್ರದೇಶವನ್ನು ಆಕ್ರಮಿಸುತ್ತದೆ. ಹೀಗಾದಾಗ ನೀರಿನ ಹರಿವಿನ ಜಾಡೇ ಬದಲಾಯಿಸಿ ಹೋಗಬಹುದು. ಒಂದೇ ಪ್ರದೇಶದಲ್ಲಿ ಹುಟ್ಟಿ ಬೇರೆ ಬೇರೆ ದಿಕ್ಕುಗಳಿಗೆ ಹರಿಯುವ ಎರಡು ನದೀಮೂಲಗಳು ಹಿಂಜರಿದು ಒಂದಕ್ಕೊಂದು ಸಂಧಿಸಿದಾಗ ಇವುಗಳಲ್ಲಿ ಪ್ರಬಲವಾದ ನದಿ ದುರ್ಬಲವಾದ ನದಿಯನ್ನು ತನ್ನ ಪಾತ್ರಕ್ಕೆ ಸೆಳೆದುಕೊಳ್ಳುತ್ತದೆ. ಒಂದು ವೇಳೆ ನದಿಯಲ್ಲಿ ತುಂಬ ನೀರಿದ್ದು ಅದರ ಪಾತ್ರ ಬಹಳಷ್ಟು ಇಳಿಜಾರಾಗಿದ್ದು, ಮೃದುಶಿಲೆಗಳಿಂದಲೂ ಕೂಡಿದ್ದರೆ ಈ ಕ್ರಿಯೆ ಸುಲಭವಾಗಿ ಸಾಗುತ್ತದೆ. ಇದರಿಂದ ಅಡಿಯಲ್ಲಿರುವ ಕಣಿವೆಗೆ ಬಾಧೆ ಇಲ್ಲವಾದರೂ ಅದರಲ್ಲಿರುವ ನೀರಿನ ಪರಿಮಾಣ ಬಹಳಷ್ಟು ಕಡಿಮೆ ಆಗುವುದು. ಉದಾಹರಣೆಗೆ




ಒಂದು ದೊಡ್ಡ ಕಣಿವೆಯಲ್ಲಿ ಬಲುಚಿಕ್ಕತೊರೆ ಹರಿಯುತ್ತಿದ್ದರೆ ಅಥವಾ ಒಂದು ದಿಣ್ಣೆಯ ಪ್ರದೇಶದಲ್ಲಿ ನೀರು ಹರಿಯದೆ ಇರುವ V–ಆಕಾರದ ಕಡಿದಾದ ದಡಗಳುಳ್ಳ ಕಣಿವೆಯಿದ್ದರೆ ಅಲ್ಲಿ ನದೀಹರಣವಾಗಿದೆ ಎನ್ನಬಹುದು. ಒಂದು ನದಿ ತಾನು ಕೊರೆದ ಕಾಲುವೆಯನ್ನು ತೊರೆದಾಗ ಆ ಕಾಲುವೆಗೆ ನೀರುಕಂಡಿ, ಜಲರಂಧ್ರ (ವಾಟರ್‌ಗ್ಯಾಪ್) ಮುಂತಾದ ಹೆಸರುಗಳಿವೆ. ನದೀಹರಣದ ಪರಿಣಾಮವಾಗಿ ನೀರನ್ನು ಕಳೆದುಕೊಂಡ ಕಣಿವೆಯ ಕಿರಿದಾದ ಭಾಗಕ್ಕೆ ಗಾಳಿಕಂಡಿ (ವಿಂಡ್‌ಗ್ಯಾಪ್) ಎಂದು ಹೆಸರು. ಹಿಮಾಲಯ ಪ್ರದೇಶ ಮತ್ತು ದಕ್ಷಿಣ ಭಾರತಗಳಲ್ಲಿ ನದೀಹರಣದ ಉತ್ತಮ ನಿದರ್ಶನಗಳನ್ನು ಕಾಣಬಹುದು.ಅದರಲ್ಲಿರುವ ನೀರಿನ ಪರಿಮಾಣ ಬಹಳಷ್ಟು ಕಡಿಮೆ ಆಗುವುದು. ಉದಾಹರಣೆಗೆ ಒಂದು ದೊಡ್ಡ ಕಣಿವೆಯಲ್ಲಿ ತುಂಬ ಚಿಕ್ಕತೊರೆ ಹರಿಯುತ್ತಿದ್ದರೆ ಅಥವಾ ಒಂದು ದಿಣ್ಣೆಯ ಪ್ರದೇಶದಲ್ಲಿ ನೀರು ಹರಿಯದೆ ಇರುವ V–ಆಕಾರದ ಕಡಿದಾದ ದಡಗಳುಳ್ಳ ಕಣಿವೆಯಿದ್ದರೆ ಅಲ್ಲಿ ನದೀಹರಣವಾಗಿದೆ ಎನ್ನಬಹುದು. (ಎ.ಎನ್.ಎಸ್.ಐ)

**ನಮೀಬಿಯ:** ಆಫ್ರಿಕದಲ್ಲಿ ಅಟ್ಲಾಂಟಿಕ್ ಸಾಗರದ ಅಂಚಿನಲ್ಲಿ ದ.ಅ. $17^0$–$29^0$ ಪೂ.ರೇ. $11^0$–$26^0$ ಗಳ ನಡುವೆ ಇರುವ ದೇಶ. ದಕ್ಷಿಣದಲ್ಲಿ ದಕ್ಷಿಣ ಆಫ್ರಿಕ ಗಣರಾಜ್ಯ, ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ಪೂರ್ವದಲ್ಲಿ ಬೋಟ್ಸ್‌ವಾನ ಮತ್ತು ದಕ್ಷಿಣ ಆಫ್ರಿಕ ಗಣರಾಜ್ಯ, ಉತ್ತರದಲ್ಲಿ ಆಂಗೋಲ ಮತ್ತು ಜಾಂಬಿಯ ಇವೆ. ಈಶಾನ್ಯದಲ್ಲಿ ಕ್ಯಾಪ್ರಿವಿ ಎಂಬ ಕಿರಿದಾದ ನೆಲದ ಪಟ್ಟಿಯೊಂದು ಸು. 480 ಕಿಮೀ ದೂರ ಪೂರ್ವಕ್ಕೆ, ಆಂಗೋಲದಿಂದ ಮುಂದೆ ಜಾಂಬಿಯ ಗಡಿಯಲ್ಲೂ ಸ್ವಲ್ಪ ದೂರ ಚಾಚಿದೆ. ಉತ್ತರದಲ್ಲಿ ಆಂಗೋಲದಿಂದ ಕೂನೇನೆ ಮತ್ತು ಓಕವಾಂಗೊ ನದಿಗಳೂ ದಕ್ಷಿಣದಲ್ಲಿ ದಕ್ಷಿಣ ಆಫ್ರಿಕ ಗಣರಾಜ್ಯದಿಂದ ಆರೆಂಜ್ ನದಿಯೂ ಇದನ್ನು ಪ್ರತ್ಯೇಕಿಸುತ್ತವೆ. ಇದರ ವಿಸ್ತೀರ್ಣ 8,23600 ಚಮೀ. ಜನಸಂಖ್ಯೆ 2 ದಶಲಕ್ಷಗಳು (2005). ಆಡಳಿತ ಕೇಂದ್ರ ವಿಂಡ್‌ಹೋಕ್. ಜನಸಂಖ್ಯೆ 2,30,000 (2000).

ಮೇಲ್ಮೈ ಲಕ್ಷಣ : ಇದು ಎರಡು ಮರುಭೂಮಿಗಳ ನಡುವಣ ಪ್ರಸ್ಥಭೂಮಿ ಪ್ರದೇಶ. ಪ್ರಾಕೃತಿಕವಾಗಿ ಇದನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು: 1. ನಮೀಬ್ ಕರಾವಳಿ. 2. ಮಧ್ಯದ ಪರ್ವತ ಪ್ರದೇಶ ಮತ್ತು ಪ್ರಸ್ಥ ಭೂಮಿ. 3. ಉತ್ತರ ಮತ್ತು ಪೂರ್ವದಲ್ಲಿರುವ ಕಲಹರಿ ಮರುಭೂಮಿ. ನಮೀಬ್ ಕರಾವಳಿ ಪ್ರದೇಶ ಮರಳುಗಾಡು. ಅಟ್ಲಾಂಟಿಕ್ ತೀರಕ್ಕೆ ಪೂರ್ವದಲ್ಲಿ ಸು. ಒಂದು ಸಾವಿರ ಮೀ ಎತ್ತರದ ವರೆಗೆ ಇದು ವ್ಯಾಪಿಸಿದೆ. ಇದನ್ನೆ ನಮೀಬ್ ಮರುಭೂಮಿಯೆಂದು ಕರೆಯುವರು, ಅಲ್ಲಿಂದ ಮುಂದೆ ಭಾರಿ ಇಳುಕಲು ಭೂಮಿ, ನಮೀಬ್ ಮರಳುಗಾಡು, ಮರಳುಗುಡ್ಡಗಳಿಂದಲೂ ಅಲ್ಲಲ್ಲಿ, ಉಪ್ಪಿನ ಕುಳಿಗಳಿಂದಲೂ ಕಲ್ಲು ಗುಡ್ಡಗಳಿಂದ ಕೂಡಿದೆ. ಅದರ ಉತ್ತರದಲ್ಲಿ ಕೂನೇನೆ ಮತ್ತು ದಕ್ಷಿಣದಲ್ಲಿ ಆರೆಂಜ್ ನದಿಗಳು ಹರಿಯುತ್ತವೆ. ಈ ಮರಳುಗಾಡು 160 ಕಿಮೀ ಗಳಿಗಿಂತ ಅಗಲವಾಗಿಲ್ಲ. ಉತ್ತರದ ಮೈದಾನ ಭಾಗದಲ್ಲಿ ಅಲ್ಲಲ್ಲಿ ಬೆಟ್ಟಗಳಿವೆ. ಅವುಗಳಲ್ಲಿ ಪ್ರಮುಖವಾದುದು ಬ್ರಾಂಡ್‌ಬರ್ಗ್ (2575 ಮೀ). ಇದು ನಮೀಬಿಯದ ಅತ್ಯಂತ ಎತ್ತರವಾದ ಬೆಟ್ಟ. ನಮೀಬಿಯದ ಶೇಕಡ 15ರಷ್ಟು ಭಾಗವನ್ನು ನಮೀಬ್ ಮರುಭೂಮಿ ಆವರಿಸಿದೆ.

ನಮೀಬಿಯ ಮರುಳುಗಾಡಿನ ಪೂರ್ವಕ್ಕೆ ಮಧ್ಯದ ಪರ್ವತ ಪ್ರದೇಶವಿದೆ. ದಕ್ಷಿಣ ಗಡಿಯಿಂದ ಉತ್ತರ ಗಡಿಯ ವರೆಗೆ ವ್ಯಾಪಿಸಿರುವ ಇದು ಸಮುದ್ರಮಟ್ಟದಿಂದ 1000–2000 ಮೀ ಎತ್ತರದಲ್ಲಿದೆ. ಇಲ್ಲಿ ಹುಲ್ಲುಗಾವಲು, ಮರಳು ತುಂಬಿದ ಕಣಿವೆಗಳು, ಸಮತಲ ಭೂಮಿ ಮತ್ತು ಅಲ್ಲಲ್ಲಿ ಒಂಟಿ ಬೆಟ್ಟಗಳು ಇವೆ. ವಿಂಡ್‌ಹೋಕ್ ಬಳಿಯಲ್ಲಿಯ ಬೆಟ್ಟಸೀಮೆ ಇದರ ನಡುವೆ ಇದೆ. ಇದರ ಉತ್ತರಕ್ಕೆ ಡಾಮಾರಾ ಲ್ಯಾಂಡ್ ಮತ್ತು ನಾಮಾಲ್ಯಾಂಡ್ ಇವೆ. ಇದು ಈ ಪ್ರದೇಶದ ಅತ್ಯುನ್ನತ ಭೂಮಿ. ಖೋಮಾಸ್, ಔಸ್‌ಬರ್ಜ್, ಇರಾಸ್, ಒನ್ಯಾಟಿ ಇವು ಇಲ್ಲಿಯ ಕೆಲವು ಮುಖ್ಯ ಬೆಟ್ಟಗಳು.

ಔಸ್‌ಬರ್ಜ್‌ನಲ್ಲಿರುವ ಮಾಲ್ಟ್‌ಕೆಬ್ಲಿಕ್ ಅತ್ಯುನ್ನತ ಶಿಖರ. ಎತ್ತರದಲ್ಲಿ ಇದು ನಮೀಬಿಯದಲ್ಲೇ ಎರಡನೆಯ ಶಿಖರ. ಇದು ನಮೀಬಿಯದ ಜಲವಿಭಾಗ ಪ್ರದೇಶವಾಗಿದೆ. ಇಲ್ಲಿಂದ ನಾಲ್ಕೂ ದಿಕ್ಕುಗಳಿಗೆ ನದಿಗಳು ಹರಿಯುತ್ತವೆ.




ಕಲಹರಿ ಮರುಭೂಮಿ ಇಡೀ ಪೂರ್ವಗಡಿಯಲ್ಲಿ ಓಕವಾಂಗೊ ನದಿಯವರೆಗೆ ಹಬ್ಬಿದೆ. ಮರಳು ಮತ್ತು ಸುಣ್ಣಕಲ್ಲಿನಿಂದ ಕೂಡಿದ ನೆಲವಿದು. ದಕ್ಷಿಣದಲ್ಲಿ 80 ಕಿಮೀ ನಿಂದ ಉತ್ತರದಲ್ಲಿ 400 ಕಿಮೀ ವರೆಗೆ ಇದು ಅಗಲವಾಗಿದೆ. ಇದರ ದಕ್ಷಿಣದಲ್ಲಿ ನೋಸಾಬ್ ಮತ್ತು ಊಬ್ ನದಿಗಳೂ ಉತ್ತರದಲ್ಲಿ ಎಟೋಷ ಮತ್ತು ಓಕವಾಂಗೊ ನದಿಗಳೂ ಹರಿಯುತ್ತವೆ. ಮರುಭೂಮಿಯ ದಕ್ಷಿಣದಲ್ಲಿ ಮರಳುಗುಡ್ಡಗಳೂ ಹುಲ್ಲು ಮತ್ತು ಮುಳ್ಳುಗಿಡಗಳೂ ಇವೆ.

ನೀರಿನ ಕೊರತೆಯಿಂದಾಗಿ ನಮೀಬಿಯದ ಜನರು ಬೇಸಾಯ, ಪಶುಪಾಲನೆ ಮೊದಲಾದವುಗಳಲ್ಲಿ ಮುಂದುವರಿದಿರಲಿಲ್ಲ; ಇತ್ತೀಚೆಗೆ ನೀರಾವರಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ದೊಡ್ಡ ನದಿಗಳ ಪೈಕಿ ಆರೆಂಜ್, ಕೂನೇನೆ ಮತ್ತು ಓಕವಾಂಗೊಗಳಲ್ಲಿ ಮಾತ್ರ ವರ್ಷವೆಲ್ಲ ನೀರಿರುತ್ತದೆ. ಇವುಗಳಲ್ಲಿ ಆರೆಂಜ್ ದಕ್ಷಿಣದ ಗಡಿಯಾಗಿದೆ. ಉತ್ತರದಲ್ಲಿ ಕೂನೇನೆ ಮತ್ತು ಓಕವಾಂಗೊ ಭಾಗಶಃ ಗಡಿಗಳಾಗಿವೆ. ಈ ನದಿಗಳೆಲ್ಲ ನಮೀಬಿಯದ ಹೊರಗೆ ಹುಟ್ಟುತ್ತವೆ. ಉತ್ತರದಲ್ಲಿ ಕ್ವಾಂಡೋ ಮತ್ತು ಝಾಂಬೀಜ಼ೀ ನದಿಗಳು ನಮೀಬಿಯದ ಸ್ವಲ್ಪ ಭಾಗದಲ್ಲಿ ಮಾತ್ರ ಹರಿದು ಸಾಗುತ್ತದೆ. ಈ ನದಿಗಳ ನೀರನ್ನು ಕೆಲವು ಪ್ರದೇಶಗಳಲ್ಲಿ ಮಾತ್ರ ಬಳಸಿಕೊಳ್ಳಬಹುದಾಗಿದೆ. ಸ್ವಾಕಾಫ್, ಕುಯಿಸೆಬ್, ಎಮುಕಿರೊ, ಒಮುರಾಂಬ ಮುಂತಾದವು ಬೇಸಗೆಯಲ್ಲಿ ಇಂಗಿಹೋಗುತ್ತವೆ. ಆದರೆ ಅವುಗಳ ಅಂಚುಗಳಲ್ಲಿ ಬಾವಿಗಳನ್ನು ತೋಡಿ ನೀರನ್ನು ಬಳಸುತ್ತಾರೆ. ಮರಳುಕಾಡಿನ ಪ್ರದೇಶಗಳಲ್ಲಿ ಜೇಡಿಮಣ್ಣಿನ ಇಲ್ಲವೆ ಸುಣ್ಣಕಲ್ಲಿನ ತಗ್ಗು ಭೂಮಿಯಲ್ಲಿ ನೀರು ಶೇಖರವಾಗುತ್ತದೆ. ಇವುಗಳಲ್ಲಿ ಅತ್ಯಂತ ದೊಡ್ಡದು ಇಟೋಷ ಸರೋವರ. ನಮೀಬಿಯದಲ್ಲಿ ಅನೇಕ ಚಿಲುಮೆಗಳೂ ಇವೆ. ನೀರಾವರಿಗೆ ಕೊಳವೆ ಭಾವಿಗಳನ್ನು ತೋಡಿದ್ದಾರೆ. ಜಲಾಶಯಗಳನ್ನು ಕಟ್ಟಿ ನೀರನ್ನು ಶೇಖರಿಸಿದ್ದಾರೆ. ಒಟ್ಟು 67 ಕೋಟಿ ಘನ ಮೀಟರ್ ನೀರನ್ನು ಶೇಖರಿಸುವ 10,000 ಕಟ್ಟೆಗಳಿವೆ. ನಮೀಬಿಯದ ದಕ್ಷಿಣದಲ್ಲಿ ಹರಿಯುವ ಫಿಷ್ ನದಿಗೆ ಅಡ್ಡಲಾಗಿ ಕಟ್ಟಿರುವ ಹಾರ್ಡಾಪ್ ಕಟ್ಟೆ ಇವುಗಳ ಪೈಕಿ ಅತ್ಯಂತ ದೊಡ್ಡದು.

ವಾಯುಗುಣ : ನಮೀಬಿಯ ಮರುಭೂಮಿ ವಾಯುಗುಣವನ್ನು ಹೊಂದಿದೆ. ಇದು ದಕ್ಷಿಣಾರ್ಧಗೋಳದಲ್ಲಿ ಉಷ್ಣವಲಯದ ಅಧಿಕ ಒತ್ತಡದ ಕಕ್ಷೆಯಲ್ಲಿ ಬರುತ್ತದೆ. ಅಟ್ಲಾಂಟಿಕ್ ಸಾಗರ ತೀರದ ಭಾಗದಲ್ಲಿ ಬೆಂಗ್ಯುಲ ಶೀತಲ ಸಮುದ್ರ ಪ್ರವಾಹ ಹಾಗೂ ದಕ್ಷಿಣ ಅಟ್ಲಾಂಟಿಕ್ ಸಾಗರದ ವಾಯು ಒತ್ತಡದಿಂದಾಗಿ ಕರಾವಳಿಯಲ್ಲಿ ಉಷ್ಣತೆ ಒಳನಾಡಿನದಕ್ಕಿಂತ ಕಡಿಮೆ. ಅಲ್ಲಿಯ ಉಷ್ಣತೆ $16^0$ಸೆ ಮಧ್ಯದ ಪ್ರಸ್ಥಭೂಮಿಯಲ್ಲಿ $16^0$–$22^0$ಸೆ ಬೇಸಗೆಯಲ್ಲಿ ಉತ್ತರದಲ್ಲಿ $38^0$ಸೆ ವರೆಗೂ ನಮೀಬ್ ಮರಳುಗಾಡು ಮತ್ತು ದಕ್ಷಿಣದಲ್ಲಿ $49^0$ಸೆ ವರೆಗೂ ಉಷ್ಣತೆ ಏರುತ್ತದೆ. ಜುಲೈ ಅತ್ಯಂತ ಕಡಿಮೆ ಉಷ್ಣತೆಯ ತಿಂಗಳು. ದಕ್ಷಿಣದಲ್ಲಿ ಉಷ್ಣತೆ $-7^0$ಸೆ ಗಿಂತ ಕೆಳಕ್ಕೆ ಇಳಿಯಬಹುದು.

ನಮೀಬಿಯದಲ್ಲಿ ಮಳೆ ಹೆಚ್ಚಿಲ್ಲ; ದಕ್ಷಿಣಕ್ಕಿಂತ ಉತ್ತರದಲ್ಲಿ ಉತ್ತಮ. ನಮೀಬ್ ಮರಳುಗಾಡು ಮತ್ತು ಆರೆಂಜ್ ನದಿ ಕಣಿವೆಯಲ್ಲಿ ವಾರ್ಷಿಕ ಸರಾಸರಿ ಮಳೆ 10.2 ಸೆಂಮೀ ಗಿಂತ ಕಡಿಮೆ. ಉತ್ತರದಲ್ಲಿ ಕ್ಯಾಪ್ರಿವಿ ಬಳಿ 41 ರಿಂದ 46 ಸೆಂಮೀ. ನಮೀಬಿಯದ ಸರಾಸರಿ ವಾರ್ಷಿಕ ಮಳೆ 25.4 ಸೆಂಮೀ. ಈ ಮಳೆಯಲ್ಲಿ ಹೆಚ್ಚು ಭಾಗ ಬೀಳುವುದು ಬೇಸಗೆಯಲ್ಲಿ (ಡಿಸೆಂಬರ್–ಫೆಬ್ರವರಿ). ನೈರುತ್ಯದ ಕೊನೆಯ ಚಳಿಗಾಲದಲ್ಲಿ 1.3 ಸೆಂಮೀ ಮಳೆಯಾಗುತ್ತದೆ. ಕೆಲವು ವರ್ಷಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಮಳೆಯಾಗಿ ನದಿಗಳಲ್ಲಿ ಅತಿಪ್ರವಾಹ ಬರುವುದುಂಟು. ಕೆಲವು ವರ್ಷಗಳಲ್ಲಿ ಬರ ಸಂಭವಿಸುತ್ತದೆ. ಈಶಾನ್ಯದಲ್ಲಿ ಮಳೆಯಾಗುವ ಭರವಸೆಯುಂಟು. ಆದರೆ ದಕ್ಷಿಣದಲ್ಲಿ ಮಳೆ ಅನಿಶ್ಚಿತ.

ಸಸ್ಯ ಹಾಗೂ ಪ್ರಾಣಿಸಂಪತ್ತು : ನಮೀಬಿಯದಲ್ಲಿ ಎರಡು ಬಗೆಯ ಸಸ್ಯಗಳಿವೆ. ಪಶ್ಚಿಮದಲ್ಲಿ ಮರುಭೂಮಿ ಮತ್ತು ಅರೆಮರುಭೂಮಿ ಸಸ್ಯಗಳಿವೆ. ಅಲ್ಲಿ ಮರಳುಗಾಡಿನ ಹುಲ್ಲು ಮತ್ತು ಕುರುಚಲು ಗಿಡಗಳು ಬೆಳೆಯುತ್ತವೆ. ಪೂರ್ವಭಾಗದಲ್ಲಿ ಮರಗಳಿಂದ ಕೂಡಿದ ಹುಲ್ಲುಗಾವಲು ಮತ್ತು ಪೊದೆಗಳಿವೆ. ನಮೀಬ್ ಮರುಭೂಮಿಯಲ್ಲಿ ಸಸ್ಯಗಳು ಕಡಿಮೆ; ಅಲ್ಲಿ ಕತ್ತಾಳೆ ಮಾದರಿಯ ದಪ್ಪ ಕಾಂಡದ ಗಿಡಗಳಿವೆ. ಒಳನಾಡು ಹಾಗೂ ದಕ್ಷಿಣದಲ್ಲಿ ವಿವಿಧ ಬಗೆಯ ಹುಲ್ಲು ಮತ್ತು ಗಿಡಮರಗಳೂ ಉತ್ತರದಲ್ಲಿ ಹುಲ್ಲುಗಾವಲು ಹಾಗೂ ಜಾಲಿ ಜಾತಿಯ ಮುಳ್ಳುಮರಗಳೂ ಇವೆ. ತೀರ ಉತ್ತರದಲ್ಲಿ ತಕ್ಕಮಟ್ಟಿಗೆ ದಟ್ಟವಾದ ಅರಣ್ಯಗಳಿವೆ.

ನಮೀಬಿಯದ ಹಲವು ಕಡೆಗಳಲ್ಲಿ ಸಿಂಹ, ಆನೆ, ಖಡ್ಗಮೃಗ, ಜಿರಾಫೆ, ಚಿರತೆ, ಕಾಡುಕೋಣ, ಹೇಸರಗತ್ತೆ ಮೊದಲಾದ ಮೃಗಗಳಿವೆ. 38,860 ಚ.ಕಿಮೀ ವಿಸ್ತೀರ್ಣದ ಎಟೋಷ ರಾಷ್ಟ್ರೀಯ ಉದ್ಯಾನವನ ಪ್ರಸಿದ್ಧವಾದುದ್ದು. ಇದು ಪ್ರಪಂಚದ ಅತ್ಯಂತ ದೊಡ್ಡ ಅಭಯಾರಣ್ಯಗಳಲ್ಲಿ ಒಂದು.

ಜನಸಂಖ್ಯೆ : ನಮೀಬಿಯದ 2 ದಶಲಕ್ಷ ಜನರಲ್ಲಿ ಯುರೋಪಿಯನ್ನರು ಕೇವಲ 91,000 ಮಂದಿ. ಉಳಿದವರು ಕಪ್ಪು ಜನ ಮತ್ತು ವರ್ಣೀಯರು. ಪ್ರಮುಖ ಬಣಗಳು ಒವಾಂಬೋ, ದಮಾರ, ಕಾವಾಂಗೋ, ಹೆರೆರೊ, ನಾಮಾ, ಪೂರ್ವಕ್ಯಾಪ್ರಿವಿಯನ್ ಇತ್ಯಾದಿ. ಉತ್ತರದ ಒವಾಂಬೋ ಬಣದ ಜನರ ವೃತ್ತಿ ಬೇಸಾಯ ಹಾಗೂ ಕೂಲಿ ಕೆಲಸ. ಅನಾಗರಿಕ ಸ್ಥಿತಿಯಲ್ಲಿರುವ ಆದಿವಾಸಿ ಜನರು ಈಗಲೂ ಹಳೆಯ ಕಾಲದ ಆಯುಧಗಳನ್ನು ಬಳಸಿ ಬೇಟೆಯಾಡುವರು. ಉಳಿದ ಬಣಗಳ ಜನರು ಪಟ್ಟಣಗಳಲ್ಲಿ ಹಾಗೂ ದಕ್ಷಿಣದ ಗ್ರಾಮಗಳಲ್ಲಿ ಜೀವಿಸುವರು. ಕೃಷಿ ಮತ್ತು ಕಾರ್ಖಾನೆ ಕೆಲಸ ಅವರ ಮುಖ್ಯ ವೃತ್ತಿಗಳು.

ವಿಂಡ್‌ಹೊಕ್ (ಆಡಳಿತ ಕೇಂದ್ರ), ಟ್ಸೂಮೆಬ್, ಕೇಟ್ ಮಾನ್‌ಷೋಪ್, ವಾಲ್ವಿಸ್ ಬೇ–ಇವು ಪ್ರಮುಖ ಪಟ್ಟಣಗಳು.

ಆರ್ಥಿಕತೆ : ನಮೀಬಿಯದಲ್ಲಿ ಗಣಿಗಾರಿಕೆ ಪ್ರಧಾನವೃತ್ತಿ, ಎರಡನೆಯದು ಮೀನುಗಾರಿಕೆ. ಮೀನುಗಳನ್ನು ಸಂಸ್ಕರಿಸುವ ಕೈಗಾರಿಕೆಯಿದೆ. ಮಾಂಸ, ಹಾಲು, ಬೆಣ್ಣೆ ಇವನ್ನು ಸಹ ಡಬ್ಬಿಗಳಲ್ಲಿ ತುಂಬಿ ಇತರ ಕಡೆಗಳಿಗೆ ರಫ್ತು ಮಾಡಲಾಗುತ್ತದೆ. ಕುರಿ ಸಾಕುವುದೂ ಒಂದು ಉದ್ಯೋಗ.

ವಜ್ರ, ತಾಮ್ರ, ಸೀಸ ಹಾಗೂ ತವರ ಇಲ್ಲಿಯ ಮುಖ್ಯ ಖನಿಜೋತ್ಪನ್ನಗಳು. ವಜ್ರದ ಗಣಿಗಳಿವೆ. ರೋಸಿಂಗ್‌ನಲ್ಲಿ ಯುರೇನಿಯಂ ಗಣಿಯಿದೆ. ನಮೀಬಿಯದ ಆರ್ಥಿಕತೆಯನ್ನು ಸಂಪೂರ್ಣವಾಗಿ ದಕ್ಷಿಣ ಆಫ್ರಿಕದ ಹಿಡಿತಕ್ಕೆ ಒಳಪಡಿಸಲಾಗಿದೆ.

ಸಾರಿಗೆ ಸಂಪರ್ಕ : ನಮೀಬಿಯದ ರೈಲ್ವೆಗಳು ದಕ್ಷಿಣ ಆಫ್ರಿಕ ರೈಲ್ವೆ ಕಂಪನಿಗೆ ಸೇರಿದವು. ದಕ್ಷಿಣ ಆಫ್ರಿಕದಿಂದ ವಿಂಟ್‌ಹುಕ್‌ಗೆ ಮತ್ತು ಅಲ್ಲಿಂದ ಟ್ಸುಮೆಬ್‌ಗೆ ದಕ್ಷಿಣೋತ್ತರವಾಗಿ ಹರಿದಿರುವ ಪ್ರಮುಖ ರೈಲುಮಾರ್ಗದಿಂದ ಪೂರ್ವ–ಪಶ್ಚಿಮವಾಗಿ ವಾಲ್ವಿಸ್ ಬೇ ಮತ್ತು ಲೂಡೆರಿಟ್ಜ್ ರೇವುಗಳಿಗೂ ಗೋಬಾಬಿಸ್‌ಗೂ ಕವಲುಮಾರ್ಗಗಳಿವೆ.

ನಮೀಬಿಯದಲ್ಲಿ 54,400 ಕಿಮೀ ರಸ್ತೆಗಳಿವೆ. 33,600 ಕಿಮೀ ರಸ್ತೆಗಳು ನಮೀಬಿಯದ ನಿಯಂತ್ರಣ ಹಾಗೂ ರಕ್ಷಣೆಯಲ್ಲಿದೆ. ಉಳಿದ ರಸ್ತೆಗಳು ದಕ್ಷಿಣ ಆಫ್ರಿಕ ಗಣರಾಜ್ಯದ ನೇರ ಆಡಳಿತಕ್ಕೊಳಪಟ್ಟಿವೆ.

ವಾಲ್ವಿಸ್ ಬೇ ಮತ್ತು ಲೂಡೆರಿಟ್ಜ್ ಇವು ಮುಖ್ಯ ರೇವುಗಳು. ವಾಲ್ವಿಸ್ ಬೇ ಆಳ ಬಂದರು. ಅಲ್ಲಿ ಭಾರೀ ಹಡಗುಗಳು ನಿಲ್ಲಬಹುದು.

ಕೇಪ್‌ಟೌನ್, ವಾಲ್ವಿಸ್ ಬೇ, ಅಲೆಗ್ಸಾಂಡ್ರ ಬೇ, ಲೂಡೆರಿಟ್ಜ್ ಮತ್ತು ವಿಂಟ್‌ಹುಕ್ ಪಟ್ಟಣಗಳ ನಡುವೆ ವಿಮಾನ ಸಂಚಾರವುಂಟು. ಇಟೋ ನ್ಯಾಷನಲ್ ಪಾರ್ಕ್ ಎಂಬುದು

ಅರಣ್ಯ ಮೃಗಗಳನ್ನು ರಕ್ಷಿಸಿರುವ ಭಾರಿ ಅರಣ್ಯ. ಇಲ್ಲಿಗೆ ಪ್ರವಾಸಿಗಳು ಹೋಗಿಬರಲು ವಿಮಾನ ವ್ಯವಸ್ಥೆ ಇದೆ. ವಾರ್ಷಿಕವಾಗಿ 2,50,000 ಮಂದಿ ಪ್ರವಾಸಿಗಳು ಇಲ್ಲಿಗೆ ಭೇಟಿ ಕೊಡುತ್ತಾರೆ. (ವಿ.ಜಿ.ಕೆ.)

**ನಯಾಗರ:** ಈ ಹೆಸರಿನ ಎರಡು ಪಟ್ಟಣಗಳು ಇವೆ. ಒಂದು ಕೆನಡದಲ್ಲಿದ್ದರೆ ಮತ್ತೊಂದು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿದೆ. ಅಮೆರಿಕದ ನ್ಯೂಯಾರ್ಕ್ ರಾಜ್ಯದ ಪಶ್ಚಿಮದ ಭಾಗದಲ್ಲಿ ಬಫಲೋ ಪಟ್ಟಣಕ್ಕೆ 27 ಕಿಮೀ ದೂರದಲ್ಲಿ ನಯಾಗರ ನದಿಯ ಪೂರ್ವ ದಂಡೆಯ ಮೇಲಿರುವುದು ಒಂದು ಪಟ್ಟಣ. ನಯಾಗರ ಜಲಪಾತದ ಅಂಚಿನ ತಳಕ್ಕೂ ಮೇಲಕ್ಕೂ ಇದು ವ್ಯಾಪಿಸಿದೆ. ಜನಸಂಖ್ಯೆ 61640. ಪಟ್ಟಣಕ್ಕೆ ನ್ಯೂಯಾರ್ಕ್ ಸೆಂಟ್ರಲ್ ರೈಲುಮಾರ್ಗ ಹಾಗೂ ಅಮೆರಿಕನ್ ವಿಮಾನ ಮಾರ್ಗಗಳ ಸಂಪರ್ಕವಿದೆ. ಇದು ವಿದ್ಯುತ್ ರಾಸಾಯನ ಹಾಗೂ ವಿದ್ಯುತ್ ಲೋಹ ಕೈಗಾರಿಕೆಗಳ ಕೇಂದ್ರ. ಕ್ಲೋರಿನ್, ಫ್ಲೋರಿನ್, ಕಾಸ್ಟಿಕ್‌ಸೋಡ, ಅಲ್ಯೂಮಿನಿಯಂ ವಸ್ತುಗಳು, ಕಾಗದ, ಕ್ಷಿಪಣಿ ಭಾಗಗಳು, ಪ್ಲಾಸ್ಟಿಕ್ ಸಾಮಾನು ಮೊದಲಾದ ವಸ್ತುಗಳು ಇಲ್ಲಿ ತಯಾರಾಗುತ್ತವೆ. ನಯಾಗರ ಜಲಪಾತವನ್ನು ನೋಡಲು ಬರುವ ಪ್ರವಾಸಿಗಳು ಈ ಪಟ್ಟಣಕ್ಕೆ ಬರುತ್ತಾರೆ. ನಯಾಗರ ರಾಷ್ಟ್ರೀಯ ಉದ್ಯಾನವನ ಇಲ್ಲಿದೆ. ಪ್ರಾಸ್ಪೆಕ್ಟ್ ಪಾಯಿಂಟ್, ಲೂನ, ಗೋಟ್ ಐಲೆಂಡ್ ಹಾಗೂ ಇತರ ದ್ವೀಪಗಳು, ಹ್ವಿರ್ಲ್‌ಪೂಲ್ ಮತ್ತು ಡೆವಿಲ್ಸ್‌ಹೋಲ್, ಕೇವ್ ಆಫ್ ದಿ ವಿಂಡ್ಸ್, ನಯಾಗರ ಜಲಪಾತದ ಅಮೆರಿಕನ್ ಕವಲು ಇವೆಲ್ಲವೂ ಈ ಉದ್ಯಾನದ ಕಕ್ಷೆಯೊಳಗಿವೆ. 1856ರಲ್ಲಿ ನಯಾಗರ ವಿಶ್ವವಿದ್ಯಾಲಯ ಸ್ಥಾಪಿತವಾಯಿತು.

ಕೆನಡದ ಆಂಟೇರಿಯೋ ಪ್ರಾಂತ್ಯಕ್ಕೆ ಸೇರಿದ ವೆಲೆಂಡ್ ಕೌಂಟಿಯಲ್ಲಿ ಈ ಹೆಸರಿನ ಇನ್ನೊಂದು ಪಟ್ಟಣ ಇದೆ. ಇದು ನಯಾಗರ ಜಲಪಾತದ ಕೆಳಗೆ, ನಯಾಗರ ನದಿಯ ಪಶ್ಚಿಮ ದಂಡೆಯ ಮೇಲೆ, ಬಫಲೋ ಪಟ್ಟಣದ ವಾಯವ್ಯಕ್ಕೆ 29 ಕಿಮೀ ಮತ್ತು ಟೊರಾಂಟೋ ಪಟ್ಟಣದ ಆಗ್ನೇಯಕ್ಕೆ 67 ಕಿಮೀ ದೂರದಲ್ಲಿ, ಅಮೆರಿಕದಲ್ಲಿರುವ ನಯಾಗರ ಫಾಲ್ಸ್ ಪಟ್ಟಣಕ್ಕೆ ಎದುರಾಗಿದೆ. ಜನಸಂಖ್ಯೆ 78815 (2001). ಇಲ್ಲಿರುವ ಕ್ವೀನ್ ವಿಕ್ಟೋರಿಯ ಪಾರ್ಕ್‌ನಿಂದ ನಯಾಗರ ಜಲಪಾತದ ಸುಂದರ ನೋಟವನ್ನು ಕಾಣಬಹುದು. ಪ್ರಪಂಚದಲ್ಲೆಲ್ಲ ಅತ್ಯಂತ ದೊಡ್ಡದಾದ ವಿದ್ಯುತ್ ಉತ್ಪಾದನಾ ಕೇಂದ್ರಗಳು ಇಲ್ಲಿವೆ. ರಾಸಾಯನ ವಸ್ತುಗಳು, ರಸಗೊಬ್ಬರ, ಬೆಳ್ಳಿಯ ಸಾಮಾನುಗಳು, ಕ್ರೀಡೋಪಕರಣ ಮೊದಲಾದವು ಇಲ್ಲಿ ತಯಾರಾಗುತ್ತವೆ. ಇದು 1853ರಲ್ಲಿ ಸ್ಥಾಪಿತವಾಯಿತು. 1856ರಿಂದ 1881ರವರೆಗೆ ಇದಕ್ಕೆ ಕ್ಲಿಫ್ಟನ್ ಎಂಬ ಹೆಸರಿತ್ತು. ಅಮೆರಿಕ ಮತ್ತು ಕೆನಡಗಳ ನಡುವೆ ಸಂಪರ್ಕ ಕಲ್ಪಿಸುವ ಅಂತಾರಾಷ್ಟ್ರೀಯ ಮಾರ್ಗ ಈ ಪಟ್ಟಣದ ಮೂಲಕ ಸಾಗುತ್ತದೆ. (ವಿ.ಜಿ.ಕೆ.)

**ನಯಾಗರ ನದಿ:** ಉತ್ತರ ಅಮೆರಿಕದಲ್ಲಿ ಈರೀ ಸರೋವರದಲ್ಲಿ ಹುಟ್ಟಿ ಉತ್ತರಾಭಿಮುಖವಾಗಿ ಹರಿದು ಆಂಟೇರಿಯೋ ಸರೋವರವನ್ನು ಸೇರುವ, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡ ದೇಶಗಳ ನಡುವೆ ಸ್ವಲ್ಪ ದೂರದ ಗಡಿಯಾಗಿರುವ ನದಿ; ನದಿಯ ಉದ್ದ ಕೇವಲ 56 ಕಿಮೀ. ಇದು ಅಮೆರಿಕ ಸಂಯುಕ್ತ ಸಂಸ್ಥಾನಗಳ ನ್ಯೂಯಾರ್ಕ್ ರಾಜ್ಯವನ್ನು ಕೆನಡದ ಆಂಟೇರಿಯೋ ಪ್ರಾಂತ್ಯದಿಂದ ಪ್ರತ್ಯೇಕಿಸುತ್ತದೆ. ಪಂಚ ಮಹಾಸರೋವರಗಳ ಪೈಕಿ ನಾಲ್ಕಕ್ಕೆ–ಸುಪೀರಿಯರ್, ಮಿಷಿಗನ್, ಹ್ಯುರಾನ್, ಈರೀ ಇವಕ್ಕೆ– ಹೊರ ಹರಿವಿನ ತೂಬಿನಂತಿರುವ ಈ ನದಿ ಈರೀ ಸರೋವರವನ್ನು ಬಿಟ್ಟು ಸು. 8 ಕಿಮೀ ದೂರ ಹರಿದು ಎರಡು ಕವಲುಗಳಾಗಿ ಒಡೆಯುತ್ತದೆ. ಈ ಕವಲುಗಳ ನಡುವೆ ಇರುವ ದ್ವೀಪಗಳು ಸ್ಟ್ರಾಬೆರಿ ಮತ್ತು ಗ್ರ್ಯಾಂಡ್ ಐಲೆಂಡ್. ಪೂರ್ವದ ಕವಲು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 24 ಕಿಮೀ ದೂರವೂ ಪಶ್ಚಿಮದ ಕವಲು ಕೆನಡದಲ್ಲಿ ಸು. 19 ಕಿಮೀ ದೂರವೂ ಹರಿದು ಗ್ರ್ಯಾಂಡ್ ಐಲೆಂಡ್ ದ್ವೀಪದ ಕೆಳಭಾಗದಲ್ಲಿ ಹಾಗೂ ನಯಾಗರ ಜಲಪಾತಕ್ಕೆ ಸು. 5 ಕಿಮೀ ದೂರದಲ್ಲಿ ಒಂದಾಗುತ್ತದೆ. ನಯಾಗರ ನದಿ ಕ್ರಮಿಸುವ ದೂರದಲ್ಲಿ ಸುಮಾರು ಅರ್ಧದಷ್ಟು ಸಾಗಿದ ಮೇಲೆ ಅದು ಸು. 51 ಮೀ ಕೆಳಕ್ಕೆ ದುಮುಕುತ್ತದೆ. ಇದೇ ಪ್ರಪಂಚ ಪ್ರಸಿದ್ಧವಾದ ನಯಾಗರ ಜಲಪಾತ. ಪ್ರಪಂಚದಲ್ಲಿ ಇದಕ್ಕಿಂತ ಎತ್ತರದ ನೂರಾರು ಜಲಪಾತಗಳಿವೆ. ಆದರೆ ಇದರ ಅಗಲ ಹಾಗೂ ಅಗಾಧ ಜಲರಾಶಿಯಿಂದಾಗಿ ಇದು ಅತ್ಯಂತ ಅದ್ಭುತ, ಸುಂದರ ಜಲಪಾತವಾಗಿ ಪರಿಣಮಿಸಿದೆ.

ಈರೀ ಸರೋವರದಿಂದ ಇಳಿಜಾರಿನ ಹರಿವಿನವರೆಗೆ ನದಿ ಜಲಯಾನಕ್ಕೆ ಅನುಕೂಲವಾಗಿದೆ. ಚಳಿಗಾಲದಲ್ಲಿ ಈರೀ ಸರೋವರದ ನೀರು ಗಡ್ಡೆಗಟ್ಟಿ ನಯಾಗರ ನದಿಯೊಳಕ್ಕೆ ಮಂಜುಗಡ್ಡೆಗಳು ತೇಲಿಬರುವುದರಿಂದ ನದಿಯ ಹರಿವಿಗೆ ಅಡಚಣೆಯಾಗುತ್ತದೆ. ಇದನ್ನು ನಿವಾರಿಸಲು ನದಿಯ ದ್ವಾರಕ್ಕೆ ಅಡ್ಡಲಾಗಿ ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ತೇಲುದಿಮ್ಮಿಗಳನ್ನು ಹಾಕುತ್ತಾರೆ.

ನಯಾಗರ ಜಲಪಾತದ ಸೌಂದರ್ಯವನ್ನು ರಕ್ಷಿಸುವ ಉದ್ದೇಶದಿಂದ ಸಾಕಷ್ಟು ಪರಿಮಾಣದ ನೀರನ್ನು ಜಲಪಾತದಲ್ಲಿ ಹರಿಸಲು ಕೆನಡ ಮತ್ತು ಅಮೆರಿಕ ದೇಶಗಳು 1950ರಲ್ಲಿ ಒಪ್ಪಂದ ಮಾಡಿಕೊಂಡಿವೆ. ನಿಗದಿಯಾದ ಪರಿಮಾಣದಲ್ಲಿ ಜಲಪಾತಕ್ಕೆ ಬಿಡಬೇಕಾದ್ದಲ್ಲದೆ ಉಳಿದ ನೀರನ್ನು ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅಮೆರಿಕ ಮತ್ತು ಕೆನಡ ದೇಶಗಳೆರಡೂ ಸಮವಾಗಿ ಹಂಚಿಕೊಂಡಿವೆ.

ನಯಾಗರ ಜಲಪಾತ

ನಯಾಗರ ಜಲಪಾತಕ್ಕೆ ಎರಡು ಕವಲುಗಳಿವೆ. ಇವೆರಡರ ನಡುವೆ ಇರುವ ಭೂಭಾಗವೇ ಗೋಟ್ ಐಲೆಂಡ್. ಕೆನಡದ ಕಡೆಯದು ಎಡ ಕವಲು, ಇದು ದೊಡ್ಡದು. ಇದರ ಲಾಳಾಕೃತಿಯಿಂದಾಗಿ ಇದನ್ನು ಹಾರ್ಸ್ ಷೂ ಜಲಪಾತ ಎನ್ನುತ್ತಾರೆ. ಇದರ ಎತ್ತರ ಸು. 49 ಮೀ. ಬಲ ಕವಲು ಅಮೆರಿಕದ ಕಡೆಯದು. ಇದರ ಎತ್ತರ 51 ಮೀ.

ಈ ಜಲಪಾತ ಪ್ರಪಂಚದ ಅತಿಮುಖ್ಯ ಪ್ರವಾಸಿ ಕೇಂದ್ರಗಳಲ್ಲಿ ಒಂದು. ಕೆನಡದಲ್ಲೂ ಅಮೆರಿಕದಲ್ಲೂ ಜಲಪಾತದ ಅಂಚಿನ ಭೂಮಿಗಳಲ್ಲಿ ಸಾರ್ವಜನಿಕ ಪಾರ್ಕುಗಳನ್ನು ನಿರ್ಮಿಸಲಾಗಿದೆ.

ಕೆನಡ ಭಾಗದ ಕ್ವೀನ್ ವಿಕ್ಟೋರಿಯ ಪಾರ್ಕ್, ಅಮೆರಿಕದ ಕಡೆಯ ಪ್ರಾಸ್ಪೆಕ್ಟ್ ಪಾಯಿಂಟ್, ಜಲಪಾತದ ಎದುರು ಕಮರಿಗೆ ಅಡ್ಡಲಾಗಿ ಕಟ್ಟಿರುವ ರೇನ್‌ಬೋ ಬ್ರಿಡ್ಜ್– ಈ ಸ್ಥಳಗಳಿಂದ ಜಲಪಾತದ ನೋಟ ಅತ್ಯಂತ ಮನೋಹರವಾದುದ್ದು. ಜಲಪಾತವನ್ನು ನೋಡಲು ಬಂದವರು ಅಮೆರಿಕಕ್ಕೆ ಸೇರಿದ ನದಿಯ ದಂಡೆಯಿಂದ ಗೋಟ್ ಐಲೆಂಡ್ ದ್ವೀಪಕ್ಕೆ ನಡೆಸೇತುವೆಯ ಮೂಲಕ ಬಂದು, ಅಲ್ಲಿಂದ ಜಲಪಾತದ ತಳಕ್ಕೆ ಎಲಿವೇಟರ್ ಮೂಲಕ ಸಾಗಿ, ಜಲಪಾತದಿಂದ ಕಮರಿಗೆ ಬೀಳುವ ನೀರಿನ ಪದರದ ಹಿಂದಿರುವ ಕೇವ್ ಆಫ್ ದಿ ವಿಂಡ್ ಗುಹೆಯನ್ನು ನೋಡಬಹುದು. (ವಿ.ಜಿ.ಕೆ.)

**ನಯಾಗರ-ಆನ್-ದಿ-ಲೇಕ್:** ಕೆನಡದ ಆಂಟೇರಿಯೋ ಪ್ರಾಂತ್ಯದಲ್ಲಿ ಲಿಂಕನ್ ಕೌಂಟಿಗೆ ಸೇರಿದ ಚಿಕ್ಕಪಟ್ಟಣ. ಆಂಟೇರಿಯೋ ಸರೋವರದ ಅಂಚಿನಲ್ಲಿ, ನಯಾಗರ ನದಿ ಸೇರುವ ಸ್ಥಳದ ಬಳಿ, ಉತ್ತರದಲ್ಲಿರುವ ನಯಾಗರ ಜಲಪಾತದಿಂದ 24 ಕಿಮೀ ದೂರದಲ್ಲಿದೆ. ಆಗ್ನೇಯದಲ್ಲಿರುವ ಟೊರಾಂಟೋ ಪಟ್ಟಣಕ್ಕೆ ಇಲ್ಲಿಂದ 54 ಕಿಮೀ. ಇದಕ್ಕೆ ಮಿಷಿಗನ್ ರೈಲ್ವೆ ಮಾರ್ಗದ ಸಂಪರ್ಕವಿದೆ. ಇದರ ಸುತ್ತಮುತ್ತಲ ಪ್ರದೇಶದಲ್ಲಿ ಹಣ್ಣುಗಳನ್ನು ಬೆಳೆಯುತ್ತಾರೆ. ಬೇಸಗೆಯಲ್ಲಿ ವಿಹಾರಾರ್ಥವಾಗಿ ಜನ ಇಲ್ಲಿಗೆ ಬರುತ್ತಾರೆ. 1780ರಲ್ಲಿ ಈ ಪಟ್ಟಣ ಸ್ಥಾಪಿತವಾಯಿತು. 1796ರ ವರೆಗೆ ಇದು ಮೇಲಣ ಕೆನಡದ ಆಡಳಿತ ಕೇಂದ್ರವಾಗಿತ್ತು. ನಯಾಗರ ಜಲಪಾತದ ಬಳಿಯ ಎರಡು ಪಟ್ಟಣಗಳಿವೆ. ಈ ಪಟ್ಟಣದ ಹೆಸರುಗಳಿಂದ ಗೊಂದಲವಾಗದಂತೆ ಇದಕ್ಕೆ ನಯಾಗರ ಆನ್ ದಿ ಲೇಕ್ ಎಂಬ ಹೆಸರನ್ನು ಕೊಡಲಾಗಿದೆ. ಇದನ್ನು ನಯಾಗರ ಎಂದಷ್ಟೇ ಕರೆಯುವುದುಂಟು. (ವಿ.ಜಿ.ಕೆ.)

**ನರಗುಂದ:** ಗದಗ ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು ಹಾಗೂ ಅದರ ಆಡಳಿತಕೇಂದ್ರ. ಈ ಹಿಂದೆ ಧಾರವಾಡಕ್ಕೆ ಸೇರಿದ್ದ ಈ ತಾಲ್ಲೂಕನ್ನು ಗದಗ ಜಿಲ್ಲೆಯ ನಿರ್ಮಾಣದಲ್ಲಿ ಗದಗಿಗೆ ಸೇರಿಸಲಾಯಿತು. ತಾಲ್ಲೂಕಿನ ಉತ್ತರ ಪಶ್ಚಿಮಗಳಲ್ಲಿ ಅನುಕ್ರಮವಾಗಿ ಬಿಜಾಪುರ ಮತ್ತು ಬೆಳಗಾಂವಿ ಜಿಲ್ಲೆಗಳೂ ಪೂರ್ವದಲ್ಲಿ ರೋಣ ತಾಲ್ಲೂಕೂ ದಕ್ಷಿಣದಲ್ಲಿ ನವಲಗುಂದ ತಾಲ್ಲೂಕೂ ಇದೆ. ಈ ತಾಲ್ಲೂಕಿನ ಹೋಬಳಿಗಳು ಕೊಣ್ಣೂರು ಮತ್ತು ನರಗುಂದ. ಇಲ್ಲಿ 35 ಗ್ರಾಮಗಳೂ ನರಗುಂದ ಪಟ್ಟಣವೂ ಇದೆ. ವಿಸ್ತೀರ್ಣ 436 ಚ.ಕಿಮೀ. ಜನಸಂಖ್ಯೆ 92644. ನರಗುಂದ ಮತ್ತು ಚಿಕ್ಕ ನರಗುಂದ ಬೆಟ್ಟಗಳನ್ನು ಬಿಟ್ಟರೆ ತಾಲ್ಲೂಕಿನ ಉಳಿದ ಭಾಗ ಸಾಮಾನ್ಯವಾಗಿ ಮೈದಾನ. ತಾಲ್ಲೂಕಿನ ಈಶಾನ್ಯದಲ್ಲಿ ಬಿಜಾಪುರ ಧಾರವಾಡ ಜಿಲ್ಲೆಗಳ ಗಡಿಯಾಗಿ ಮಲಪ್ರಭಾ ನದಿ ಹರಿಯುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 56 ಸೆಂಮೀ. ಜೋಳ, ಹತ್ತಿ, ಗೋದಿ, ಎಣ್ಣೆಬೀಜಗಳು ಮತ್ತು ಬೇಳೆಕಾಳುಗಳು ಬೆಳೆಯುತ್ತವೆ. ತರಕಾರಿ ಮತ್ತು ತೋಟದಬೆಳೆಗಳೂ ಉಂಟು.

ನರಗುಂದ ಈ ತಾಲ್ಲೂಕಿನ ಆಡಳಿತ ಕೇಂದ್ರ, ಗದಗ ನಗರಕ್ಕೆ ಈಶಾನ್ಯದಲ್ಲಿ ಸು. 50 ಕಿಮೀ ಮತ್ತು ನವಲಗುಂದದಿಂದ ಉತ್ತರಕ್ಕೆ ಸು. 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 32548. ಇದು ಹತ್ತಿ, ಶೇಂಗ, ಧಾನ್ಯ, ಕಾಳು ಮುಂತಾದವುಗಳ ವ್ಯಾಪಾರಕೇಂದ್ರ. ಶಿರಸಿ, ಹುಬ್ಬಳ್ಳಿ ಮುಂತಾದ ಸ್ಥಳಗಳಿಗೆ ಇಲ್ಲಿಂದ ರಸ್ತೆಗಳಿವೆ.

ಇಲ್ಲಿ ಶಂಕರಲಿಂಗ, ಮಹಾಬಲೇಶ್ವರ ಮತ್ತು ಹನುಮಂತನ ದೇವಾಲಯಗಳಿವೆ. ನರಗುಂದ ಬೆಟ್ಟ ಸು. 215 ಮೀ ಎತ್ತರವಾಗಿದೆ. ಸು. 5 ಕಿಮೀ ಉತ್ತರಕ್ಕಿರುವ ಚಿಕ್ಕನರಗುಂದ ಬೆಟ್ಟ ಸು. 61 ಮೀ ಎತ್ತರವಾಗಿದೆ. ನರಗುಂದ ಬೆಟ್ಟದ ಮೇಲೆ ಜೀರ್ಣವಾದ ಕೋಟೆಯೊಂದಿದೆ. ಇಲ್ಲಿರುವ ವೆಂಕಟೇಶ್ವರ ದೇವಾಲಯ 1720ರಲ್ಲಿ ನಿರ್ಮಿತವಾದದ್ದು. ಭಾರತದ 1857ರ ಬಂಡಾಯದಲ್ಲಿ ನರಗುಂದ ಪ್ರಧಾನಪಾತ್ರ ವಹಿಸಿತ್ತು. ಆಗ ಬ್ರಿಟಿಷರು ನಡೆಸಿದ ಆಕ್ರಮಣವನ್ನು ಇಲ್ಲಿಯ ಜನರು ಕೆಚ್ಚಿನಿಂದ ಎದುರಿಸಿದರು. 1858ರಲ್ಲಿ ಬ್ರಿಟಿಷರು ಬಾಬಾಸಾಹೇಬನನ್ನು ಮಣಿಸಿ ಕೋಟೆಯನ್ನು ಕೆಡವಿದರು. (ಎಸ್.ಪಿ.)

**ನರಸಿಂಹರಾಜಪುರ:** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು; ಆ ತಾಲ್ಲೂಕಿನ ಆಡಳಿತ ಕೇಂದ್ರ. ಜಿಲ್ಲೆಯ ವಾಯವ್ಯ ಭಾಗದಲ್ಲಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳೂ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಚಿಕ್ಕಮಗಳೂರು, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳೂ ಇದನ್ನು ಸುತ್ತುವರಿದಿವೆ. ಸಮುದ್ರಮಟ್ಟದಿಂದ ಸರಾಸರಿ ಎತ್ತರ 1,061 ಮೀ. ತಾಲ್ಲೂಕಿನ ವಿಸ್ತೀರ್ಣ 805 ಚ.ಕಿಮೀ. ತಾಲ್ಲೂಕು ಜನಸಂಖ್ಯೆ 65,624. ತಾಲ್ಲೂಕಿನ ಹೋಬಳಿಗಳು ಬಾಳೆಹೊನ್ನೂರು ಮತ್ತು ನರಸಿಂಹರಾಜಪುರ. ಒಟ್ಟು 59 ಗ್ರಾಮಗಳನ್ನು ಹೊಂದಿದೆ.

ತಾಲ್ಲೂಕು ಮಲೆನಾಡು ಪ್ರದೇಶ. ಪಶ್ಚಿಮ ಘಟ್ಟದ ಬೆಟ್ಟಗುಡ್ಡಗಳೂ ದಟ್ಟವಾದ ಕಾಡುಗಳೂ ಆವರಿಸಿವೆ. ಅಲ್ಲಲ್ಲಿ ಕಿರಿದಾದ ಬಯಲುಗಳಿವೆ. ಇಲ್ಲಿಯ ಕೆಲವು ಬೆಟ್ಟಗಳು 1,370 ಮೀ ಗಳಿಗಿಂತಲೂ ಎತ್ತರವಾಗಿವೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಬೆಟ್ಟಗಳು ಇವೆ. ವಾಯವ್ಯದಲ್ಲಿ ತುಂಗಾ ನದಿ ತಾಲ್ಲೂಕಿನ ಗಡಿಯಾಗಿ ಉತ್ತರಕ್ಕೆ ಹರಿದು ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಬಾಳೆಹೊನ್ನೂರಿನ ಬಳಿ ತಾಲ್ಲೂಕನ್ನು ಪ್ರವೇಶಿಸುವ ಭದ್ರಾ ನದಿ ಉತ್ತರಕ್ಕೆ ಹರಿಯುತ್ತದೆ. ಲಕ್ಕವಳ್ಳಿ ಬಳಿ ಈ ನದಿಗೆ ಅಣೆಯನ್ನು ಹಾಕಿ ಭದ್ರಾ ಜಲಾಶಯವನ್ನು ನಿರ್ಮಿಸಲಾಗಿದೆ. ತಾಲ್ಲೂಕಿನ ಪೂರ್ವಭಾಗದಲ್ಲಿ ಭದ್ರಾ ಜಲಾಶಯದ ಹಿನ್ನೀರು ಹರಡಿದೆ. ತಾಲ್ಲೂಕಿನ ಹೆಚ್ಚು ಪ್ರದೇಶ ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದ್ದು, ನದೀಬಯಲುಗಳಲ್ಲಿ ಮಾತ್ರ ಸ್ವಲ್ಪ ಮೆಕ್ಕಲುಮಣ್ಣು ಕಂಡುಬರುತ್ತದೆ. ಮಳೆ ಪಶ್ಚಿಮದಲ್ಲಿ ಹೆಚ್ಚು; ಪೂರ್ವಕ್ಕೆ ಹೋದಂತೆ ಕಡಿಮೆಯಾಗುತ್ತದೆ. ಪಶ್ಚಿಮ ಭಾಗ ಬೆಟ್ಟಗುಡ್ಡಗಳಿಂದ ಕೂಡಿ ಅಲ್ಲಿ ಮಳೆ ಹೆಚ್ಚಾಗಿ ಬೀಳುವುದರಿಂದ ದಟ್ಟವಾದ ಕಾಡುಗಳು ಬೆಳೆದಿವೆ. ಬತ್ತ, ರಾಗಿ, ಜೋಳ ಇಲ್ಲಿಯ ಮುಖ್ಯ ಆಹಾರಬೆಳೆಗಳು. ಕಾಫಿ, ಏಲಕ್ಕಿ, ಅಡಕೆ, ತೆಂಗು ಮುಖ್ಯವಾದ ತೋಟದ ಬೆಳೆಗಳು. ಬಿದಿರಿನ ಕೆಲಸ, ಕೆಲವೆಡೆ ಜೇನುಸಾಕಣೆ ಉದ್ಯಮ ಇದೆ. ಬಾಳೆಹೊನ್ನೂರು ಈ ತಾಲ್ಲೂಕಿನ ಒಂದು ಪ್ರಸಿದ್ಧ ಸ್ಥಳ.

ತಾಲ್ಲೂಕಿನ ಆಡಳಿತ ಕೇಂದ್ರ ನರಸಿಂಹರಾಜಪುರ. ಜನಸಂಖ್ಯೆ 7,441. ಇಲ್ಲೊಂದು ಪುರಸಭೆಯಿದೆ. ಹಿಂದೆ ಈ ಪಟ್ಟಣ ಎಡೆಹಳ್ಳಿ ಎಂದು ಪ್ರಸಿದ್ಧವಾಗಿತ್ತು. (ಆರ್.ಸಿ.ಎಚ್.)

**ನರೇಗಲ್ಲು:** ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಒಂದು ಪಟ್ಟಣ. ರೋಣದಿಂದ ಆಗ್ನೇಯಕ್ಕೆ ಸು. 16 ಕಿಮೀ ಮತ್ತು ಮಲ್ಲಾಪುರ ರೈಲ್ವೆ ನಿಲ್ದಾಣದಿಂದ 32 ಕಿಮೀ ದೂರದಲ್ಲಿ ಉ.ಅ. $15^0 40'$ ಮತ್ತು ಪೂರೇ. $75^0 41'$ ಮೇಲೆ ಇದೆ. ಜನಸಂಖ್ಯೆ 16652. ಇದಕ್ಕೆ ಪ್ರಾಚೀನ ಕಾಲದಲ್ಲಿ ನರೇಂಗಲ್ ಪನ್ನಾಸು ಎಂಬ ಅನಂತರ ನರೇಂಗಲ್ ಪನ್ನೆರಡು ಎಂದೂ ಹೆಸರುಗಳಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ನರೇಂಗಲ್ ಎಂಬುದು ಕಾಲಕ್ರಮದಲ್ಲಿ ನರೆಯಂಗಲ್ಲಾಗಿ ಅನಂತರ ನರೇಗಲ್ಲ, ನರೇಗಲ್ ಎಂದು ಹೆಸರು ಪಡೆಯಿತು. 12ನೆಯ ಶತಮಾನದಲ್ಲಿ ಚಾಳುಕ್ಯರ ಆಧಿಪತ್ಯದಲ್ಲಿಯ ಸಿಂಧ ಮಹಾಮಾಂಡಲಿಕರು ಈ ಭಾಗವನ್ನು ಆಳಿದರು. ಇಲ್ಲಿಯವರೆಗೆ ದೊರೆತಿರುವ 10 ಶಿಲಾಶಾಸನಗಳ ಪೈಕಿ ಚಾವಡಿಯ ಎದುರಿಗೆ ದೊರೆತ ರಾಷ್ಟ್ರಕೂಟರ 3ನೆಯ ಕೃಷ್ಣನ ಕಾಲದ (950) ಶಿಲಾಶಾಸನವೇ ಅತ್ಯಂತ ಹಳೆಯದು. ಪದ್ದಬ್ಬರಸಿಯಿಂದ ಬಸದಿಯ ನಿರ್ಮಾಣ ಹಾಗೂ ದಾನಕ್ಕೆ ಅದು ಸಂಬಂಧಿಸಿದೆ.

ಉತ್ತರ ಕರ್ನಾಟಕದ ಬಯಲು ಸೀಮೆಯಲ್ಲಿರುವ ಈ ಪಟ್ಟಣದ ಸುತ್ತಲೂ ಫಲವತ್ತಾದ ಕಪ್ಪುಭೂಮಿಯಲ್ಲಿ ಹತ್ತಿ, ಶೇಂಗ ಮತ್ತು ಜೋಳ ಬೆಳೆಯುತ್ತದೆ. ಈ ಸುತ್ತಿನಲ್ಲಿ ವರ್ಷಕ್ಕೆ ಸು. 68 ಸೆಂಮೀ ಮಳೆಯಾಗುತ್ತದೆ. ಗರಿಷ್ಠ ಹಾಗೂ ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ $40.2^0$ಸೆ ಮತ್ತು $13.0^0$ಸೆ. 1973ರಲ್ಲಿ ಪೌರಸಭೆ ಪ್ರಾರಂಭವಾಯಿತು. ಅನೇಕ ವರ್ಷಗಳಿಂದ ಶ್ರೀ ಅನ್ನದಾನ ವಿಜಯ ವಿದ್ಯಾಪ್ರಸಾರಕ ಸಮಿತಿ ಹಲವಾರು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದೆ.

ನರೇಗಲ್ಲಿನ ಅನೇಕ ಪುರಾತನ ದೇವಾಲಯಗಳ ಪೈಕಿ ನಾರಾಯಣ ಮತ್ತು ಕಾಮೇಶ್ವರ ದೇವಸ್ಥಾನಗಳು ಮುಖ್ಯವಾದವು. (ಎಸ್.ಎಸ್.ಎನ್.)

**ನರ್ಮದಾ:** ಭಾರತದಲ್ಲಿ ಪಶ್ಚಿಮದ ಕಡೆಗೆ ಹರಿದು ಅರಬ್ಬಿಸಮುದ್ರವನ್ನು ಸೇರುವ ನದಿಗಳಲ್ಲಿ ಇದು ಅತಿ ಹೆಚ್ಚು ಉದ್ದವಾದುದು. ಸಪ್ತ ಪುಣ್ಯನದಿಗಳಲ್ಲಿ ಒಂದೆಂದು ಹಿಂದುಗಳಿಂದ ಪರಿಗಣಿತವಾಗಿದೆ. ಇದು ಮಧ್ಯ ಪ್ರದೇಶದ ಮಂಡಲಾ ಜಿಲ್ಲೆಯಲ್ಲಿ ವಿಂಧ್ಯಾಚಲ ಹಾಗೂ ಸಾತ್ಪುರ ಶ್ರೇಣಿಗಳ ಸಂಧಿಸ್ಥಳವಾದ ಅಮರಕಂಟಕ ಪ್ರಸ್ಥಭೂಮಿಯಲ್ಲಿ ಸಮುದ್ರ ಮಟ್ಟದಿಂದ ಸು. 914 ಮೀ ಎತ್ತರದಲ್ಲಿ ಉಗಮಿಸಿ ಪಶ್ಚಿಮಾಭಿಮುಖವಾಗಿ ಮಂಡಲಾ ಹಾಗೂ ಜಬ್ಬಲ್ಪುರ ಜಿಲ್ಲೆಗಳ ಮೂಲಕ ಹರಿದು ಗುಜರಾತಿನ ಬರೂಚ್ ಹತ್ತಿರ ಕ್ಯಾಂಬೇ ಖಾರಿಯನ್ನು ಸೇರುತ್ತದೆ. ಇದರ ಉದ್ದ ಸು. 1,282 ಕಿಮೀ ನದಿಯ ಮೊದಲ ಹರಿವು ಇರುವುದು ಶಿಲಾ ಪ್ರದೇಶದಲ್ಲಿಯೇ. ಇಲ್ಲಿ ಇದರ ಪಾತ್ರ ಕಿರಿದು. ಆದರೆ ಇಳಿಜಾರು ಕಡಿದಾಗಿರುವುದರಿಂದ ನದಿ ತುಂಬ ರಭಸವಾಗಿ ಹರಿಯುತ್ತದೆ. ಜಬಲ್ಪುರದಿಂದ ಸು. 16 ಕಿಮೀ ದೂರದಲ್ಲಿ ಸು. 15 ಮೀ ಎತ್ತರದ ಧುವಂದರ್ ಜಲಪಾತವಿದೆ. ಮುಂದೆ ಬಹುದೂರದವರೆಗೆ ಈ ನದಿ ಅಮೃತಶಿಲಾ ಪ್ರದೇಶದಲ್ಲಿ ಹರಿಯುತ್ತದೆ. ಹಾಂಡಿರೂ ಮತ್ತು ಮಂಧಾತಗಳ ನಡುವೆ ಆಳವಾದ ಕಂದರದಲ್ಲಿ ಹರಿಯುತ್ತದೆ. ಇಲ್ಲಿಯೇ ಕಪಿಲ್‌ಧಾರಾ (23 ಮೀ) ಮತ್ತು ದರ್ದಿ (15ಮೀ) ಜಲಪಾತಗಳಿವೆ. ಅಮೃತಶಿಲಾ ಪ್ರದೇಶದಲ್ಲಿ ನದಿಯ ದೃಶ್ಯ ಬಲು ಸುಂದರವಾಗಿದೆ. ನರ್ಮದಾನದಿ ಉತ್ತರದಲ್ಲಿ ವಿಂಧ್ಯ ಹಾಗೂ ದಕ್ಷಿಣದಲಿ ಸಾತ್ಪುರ ಪರ್ವತಗಳ ನಡುವೆ ಸೀಳುಕಣಿವೆಯಲ್ಲಿ ಹರಿಯುವುದು.

ಬಂಜಾರ, ಶೇರ್, ಶಕ್ಕರ್, ತವಾ, ಗಂಜಾಲ್ ಮತ್ತು ಛೋಟಾತವಾ ಇದರ ಮುಖ್ಯ ಉಪನದಿಗಳು. ಇವು ಅನುಕ್ರಮವಾಗಿ ಮಂಡಲಾ, ನರಸಿಂಹಪುರ ಹಾಗೂ ಹೋಶಂಗಾಬಾದ್ ಜಿಲ್ಲೆಗಳಲ್ಲಿ ನರ್ಮದಾವನ್ನು ಕೂಡುತ್ತವೆ. ಅನಂತರ ಓರ್ಸಂಗ್, ಕರ್ಜನ್, ಅಮರಾವತಿ, ಭೂಖಿ ಮುಂತಾದ ಚಿಕ್ಕ ನದಿಗಳು ನರ್ಮದೆಯನ್ನು ಸೇರುತ್ತವೆ. ನದೀಮುಖದಿಂದ ಸು. 48 ಕಿಮೀ ದೂರದವರೆಗೂ ಇದು ಹಡಗು ಸಂಚಾರಕ್ಕೆ ಯೋಗ್ಯವಾಗಿದೆ. ಇದರ ದಂಡೆಗಳು ತುಂಬ ಎತ್ತರವಾಗಿರುವುದರಿಂದ ಈ ನದಿ ಕೃಷಿಗೆ ಅಷ್ಟು ಉಪಯುಕ್ತವಾಗಿಲ್ಲ. ಗುಜರಾತಿನಲ್ಲಿ ನವಾಗ್ರಾಮದ ಬಳಿ ಇದಕ್ಕೆ ಕಟ್ಟೆ ಕಟ್ಟಿ ಸು. 4 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಲಾಗುತ್ತದೆ. ಜಬಲ್ಪುರ, ಹೋಶಂಗಾಬಾದ್ ಮತ್ತು ಮೋರಟಕ್ ಎಂಬಲ್ಲಿ ಈ ನದಿಗೆ ರೈಲು ಸೇತುವೆಗಳಿವೆ.

ಭಾರತದ ನದಿಗಳಲ್ಲಿ ಗಂಗೆಯನ್ನು ಬಿಟ್ಟರೆ ಹೆಚ್ಚಿನ ಸಂಖ್ಯೆಯಲ್ಲಿ ತೀರ್ಥಕ್ಷೇತ್ರಗಳಿರುವ ನದಿಯೆಂದರೆ ನರ್ಮದೆಯೇ ಎಂದು ತೋರುತ್ತದೆ. ನದಿಯ ಉಗಮಸ್ಥಾನವಾದ ಅಮರಕಂಟದಲ್ಲಿ ದೇವಾಲಯಗಳು ತುಂಬಿಹೋಗಿವೆ. ಓಂಕಾರೇಶ್ವರದಲ್ಲಿ ಓಂಕಾರೇಶ್ವರ ಜ್ಯೋತಿರ್ಲಿಂಗವಿದೆ. ನೇಮಾವರ, ಶುಕ್ಲತೀರ್ಥ ಮುಂತಾದ ತೀರ್ಥಕ್ಷೇತ್ರಗಳು ಭಕ್ತರನ್ನು ಸದಾ ಆಕರ್ಷಿಸುತ್ತವೆ.

ನರ್ಮದಾ ನದಿಯ ನೀರಿನ ಬಳಕೆಗೆ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಇವುಗಳಲ್ಲಿ ನರ್ಮದಾ ಸಾಗರ ಯೋಜನೆ ಅಥವಾ ಸರ್ದಾರ್ ಸರೋವರ ಯೋಜನೆ ಅತಿ ಮುಖ್ಯವಾದುದು. ಕೆಲವನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಈ ಯೋಜನೆಗಳಿಂದ ವಿಸ್ತಾರವಾದ ಪ್ರದೇಶ ಮುಳುಗಡೆಯಾಗಿದ್ದು, ಲಕ್ಷಾಂತರ ಜನ ಸ್ಥಳಾಂತರಗೊಂಡಿರುವರು. ಹಲವಾರು ಪುಣ್ಯಕ್ಷೇತ್ರಗಳೂ ಸಹ ಮುಳುಗಡೆಯಾಗಿವೆ. ಸರ್ದಾರ್ ಯೋಜನೆ ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್ ಹಾಗೂ ರಾಜಸ್ತಾನಗಳಿಗೆ ಉಪಯುಕ್ತವಾಗಿದೆ. (ಬಿ.)

**ನವದ್ವೀಪ:** ಪಶ್ಚಿಮ ಬಂಗಾಲ ರಾಜ್ಯದ ನದಿಯಾ ಜಿಲ್ಲೆಯ ಒಂದು ಪಟ್ಟಣ. ಹಿಂದೆ ನದಿಯಾ ಎಂದೇ ಇದಕ್ಕೂ ಹೆಸರಿತ್ತು. ನವದ್ವೀಪ ಎಂಬುದು ಪುರಾತನ ಹೆಸರು. ಉ.ಅ. $23^0 25'$ ಮತ್ತು ಪೂ.ರೇ. $88^0 22'$. 1063ರಲ್ಲಿ ಸ್ಥಾಪಿತವಾದ ಈ ನಗರ ಸಂಸ್ಕೃತ, ವಿದ್ಯೆ ಮತ್ತು ತರ್ಕಶಾಸ್ತ್ರದ ನೆಲೆವೀಡೆನಿಸಿ ಭಾರತದ ಎಲ್ಲೆಡೆಗಳಿಂದ ವಿದ್ವಾಂಸರನ್ನು ಆಕರ್ಷಿಸುತ್ತಿತ್ತು. ಇದು ಬಂಗಾಲದ ಸೇನವಂಶದ ದೊರೆಗಳ ರಾಜಧಾನಿಯಾಗಿತ್ತು. ಪ್ರಖ್ಯಾತ ವೈಷ್ಣವ ಅವತಾರಪುರುಷ ಚೈತನ್ಯನ (1485–1533) ಜನ್ಮಸ್ಥಳ ಲೋಹ ಮತ್ತು ಮಣ್ಣಿನ ಪಾತ್ರೆಗಳಿಗೂ ಇದು ಪ್ರಸಿದ್ಧವಾಗಿದೆ. ಇಲ್ಲಿ ಕೋಲ್ಕತ್ತ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜೊಂದಿದೆ. (ಎಸ್.ಎಸ್.ಎಂ.ಯು.;ಪಿ.ವಿ.ಎ.)

**ನವಲಗುಂದ:** ಧಾರವಾಡ ಜಿಲ್ಲೆಯ ಒಂದು ತಾಲ್ಲೂಕು; ಈ ತಾಲ್ಲೂಕಿನ ಮುಖ್ಯಸ್ಥಳ. ತಾಲ್ಲೂಕಿನ ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯ ಪರಸಗಡ ಮತ್ತು ಧಾರವಾಡ ಜಿಲ್ಲೆಯ ನರಗುಂದ ತಾಲ್ಲೂಕುಗಳು ಈಶಾನ್ಯದಲ್ಲಿ ರೋಣ, ಪೂರ್ವ ಮತ್ತು ಆಗ್ನೇಯದಲ್ಲಿ ಗದಗ, ದಕ್ಷಿಣದಲ್ಲಿ ಕುಂದಗೋಳ, ನೈಋತ್ಯ ಮತ್ತು ಪಶ್ಚಿಮದಲ್ಲಿ ಹುಬ್ಬಳ್ಳಿ ಮತ್ತು ಧಾರವಾಡ ತಾಲ್ಲೂಕುಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 1,08.16 ಚ.ಕಿಮೀ. ಜನಸಂಖ್ಯೆ 176641. ಇದರಲ್ಲಿ ಗ್ರಾಮೀಣ ಜನಸಂಖ್ಯೆ 128732. ನಗರ ಜನಸಂಖ್ಯೆ 47909. ತಾಲ್ಲೂಕಿನಲ್ಲಿ ಗ್ರಾಮಗಳ ಸಂಖ್ಯೆ 58. ನವಲಗುಂದ, ಅಣ್ಣಿಗೇರಿ ಇವು ತಾಲ್ಲೂಕಿನಲ್ಲಿರುವ ಪಟ್ಟಣಗಳು.

ಈ ತಾಲ್ಲೂಕು ಈಶಾನ್ಯದ ಕಡೆಗೆ ಸ್ವಲ್ಪಮಟ್ಟಿಗೆ ಇಳಿಜಾರಾಗಿರುವ, ಆದರೆ ಸ್ಥೂಲವಾಗಿ ಮೈದಾನವೆನ್ನಬಹುದಾದ ಪ್ರದೇಶ. ಇಲ್ಲಿ ದೊಡ್ಡ ನದಿಗಳು ಹರಿಯುವುದಿಲ್ಲ. ಈ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಬಲ್ಲರವಾಡದ ಬಳಿ ಪ್ರವೇಶಿಸುವ ಬೆಣ್ಣಿಹಳ್ಳ ಉತ್ತರದಿಕ್ಕಿಗೆ ಹರಿದು

ಅನಂತರ ಈಶಾನ್ಯ ದಿಕ್ಕಿಗೆ ತಿರುಗಿ, ಮೂಗನೂರಿನ ಬಳಿಯಲ್ಲಿ ನರಗುಂದ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮುಂದೆ ಸ್ವಲ್ಪ ದೂರ ಇದು ಇವೆರಡೂ ತಾಲ್ಲೂಕುಗಳ ಗಡಿಯಾಗಿ ಹರಿದು ಮಲಪ್ರಭಾ ನದಿಯನ್ನು ಕೂಡುತ್ತದೆ. ಈ ತಾಲ್ಲೂಕಿನಲ್ಲಿ ಹರಿಯುವ ಇನ್ನೊಂದು ಹೊಳೆ ತುಪರಿಹಳ್ಳ. ಇದು ಪಶ್ಚಿಮದಲ್ಲಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಸ್ವಲ್ಪ ದೂರ ಪೂರ್ವ ದಿಕ್ಕಿಗೆ ಹರಿಯುವ ಈ ನದಿ ಅಳಗವಾಡಿಯ ಹತ್ತಿರ ದಕ್ಷಿಣಕ್ಕೆ ತಿರುಗುತ್ತದೆ. ಅನಂತರ ಇದು ಆಗ್ನೇಯ ದಿಕ್ಕಿನಲ್ಲಿ ಹರಿಯುತ್ತದೆ. ಇದು ನವಲಗುಂದ ಪಟ್ಟಣದ ವಾಯವ್ಯದಲ್ಲಿ ಬೆಣ್ಣಿಹಳ್ಳವನ್ನು ಸೇರುತ್ತದೆ. ಆಗ್ನೇಯದಲ್ಲಿ ಕಿತ್ತೂರಿನ ಹತ್ತಿರ ತಾಲ್ಲೂಕನ್ನು ಪ್ರವೇಶಿಸುವ ಹೊಳೆ ಹಂದಿಗನಹಳ್ಳ. ಇದು ತಾಲ್ಲೂಕಿನ ಪೂರ್ವಭಾಗದಲ್ಲಿ ಉತ್ತರದ ಕಡೆಗೆ ಹರಿಯುತ್ತದೆ. ಇದೂ ಬೆಣ್ಣಿಹಳ್ಳವನ್ನು ಸೇರುತ್ತದೆ. ಹಂದಿಗನಹಳ್ಳವನ್ನು ಕೂಡುವ ಹೊಳೆ ಪಿಂಜರಹಳ್ಳ. ಇವೆರಡೂ ತುಪ್ಪದ ಕುರಹಟ್ಟಿಯ ಬಳಿಯಲ್ಲಿ ಕೂಡುತ್ತವೆ. ತಾಲ್ಲೂಕಿನಲ್ಲಿ ವರ್ಷಕ್ಕೆ ಸರಾಸರಿ 66 ಸೆಂಮೀ ಮಳೆಯಾಗುತ್ತದೆ.

ತಾಲ್ಲೂಕಿನಲ್ಲಿ ಅರಣ್ಯಗಳಿಲ್ಲ. ಇಲ್ಲಿಯದು ಕಪ್ಪು ಎರೆ ಭೂಮಿ. ಹೊಳೆ ತೊರೆಗಳ ಹಾಗೂ ಮಾನವನಿರ್ಮಿತವಾದ ಬಾವಿಕೆರೆಗಳ ಪ್ರದೇಶ ವ್ಯವಸಾಯಕ್ಕೆ ಅನುಕೂಲವಾಗಿದೆ. ಸಾಗುವಳಿಗೆ ಒಳಪಟ್ಟ ಭೂಮಿ 1,02,667 ಹೆ (ಒಟ್ಟು ಭೂಮಿ 107394 ಹೆ.). ಬತ್ತ, ಗೋದಿ, ಜೋಳ, ಶೇಂಗ, ಎಣ್ಣೆಬೀಜಗಳು, ಹತ್ತಿ, ಕುಸುಬೆ, ಕಡಲೆ ಬೆಳೆಯುತ್ತವೆ. ಮಳೆಯ ಅಭಾವದಿಂದ ಈ ತಾಲ್ಲೂಕು ಪದೇಪದೇ ಬರಕ್ಕೆ ತುತ್ತಾಗುತ್ತಿತ್ತು. ಮಲಪ್ರಭಾ ಬಲದಂಡೆ ಕಾಲುವೆಯಿಂದಾಗಿ ಪರಿಸ್ಥಿತಿ ಸುಧಾರಿಸುತ್ತಿದೆ. ಪಶುಪಾಲನೆಯೂ ತಾಲ್ಲೂಕಿನ ಒಂದು ಕಸುಬು. ಇಲ್ಲಿಯ ದನಗಳು ಒಳ್ಳೆಯ ತಳಿಯವೆಂದು ಪ್ರಸಿದ್ಧವಾಗಿವೆ. ಕೈಮಗ್ಗ, ಚರ್ಮ ಹದಗಾರಿಕೆ, ಚರ್ಮದ ಸರಕುಗಳ ತಯಾರಿಕೆ, ಗೂಡಾರ, ಜಮಖಾನೆ, ಮರದ ತೊಟ್ಟಿಲು ಮತ್ತು ಆಟಿಕೆಗಳ ತಯಾರಿಕೆ–ಇವು ಇಲ್ಲಿಯ ಸಣ್ಣ ಕೈಗಾರಿಕೆಗಳು. ಗೂಡಾರ ಜಮಖಾನೆಗಳು ತಾಲ್ಲೂಕಿನಿಂದ ಹೊರಗೂ ವ್ಯಾಪಾರವಾಗುತ್ತವೆ. ಗದಗ–ಹುಬ್ಬಳ್ಳಿ ರೈಲುಮಾರ್ಗ ಈ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಸಾಗುತ್ತದೆ. ಅಣ್ಣಿಗೇರಿ, ಹೆಬಸೂರು ಇವು ರೈಲುನಿಲ್ದಾಣಗಳು. ಹುಬ್ಬಳ್ಳಿ–ಬಿಜಾಪುರ ರಸ್ತೆ ಈ ತಾಲ್ಲೂಕನ್ನು ಹಾದು ಹೋಗುತ್ತದೆ. ನವಲಗುಂದದ ನೈರುತ್ಯಕ್ಕೆ ಸು. 5 ಕಿಮೀ ದೂರದಲ್ಲಿರುವ ಯಮನೂರಿನಲ್ಲಿ ನಡೆಯುವ ರಾಜಾಬಾಗ್ ಸವಾರ್ ಉರುಸಿನಲ್ಲಿ ಹಿಂದೂ ಮುಸಲ್ಮಾನರಿಬ್ಬರೂ ಭಾಗವಹಿಸುವರು. ಅಣ್ಣಿಗೇರಿಯಲ್ಲಿ ಅಮೃತೇಶ್ವರ ದೇವಾಲಯ ಇದೆ.

ಈ ತಾಲ್ಲೂಕಿನ ಆಡಳಿತ ಕೇಂದ್ರ ನವಲಗುಂದ. ಇದು ಧಾರವಾಡದ ಪೂರ್ವಕ್ಕೆ ಸು. 47 ಕಿಮೀ ದೂರದಲ್ಲಿ ಬೆಣ್ಣಿಹಳ್ಳದ ಬಲದಂಡೆಯ ಮೇಲೆ ಇದೆ. ಜನಸಂಖ್ಯೆ 22200. ಇದೊಂದು ವ್ಯಾಪಾರ ಕೇಂದ್ರ. ಪ್ರತಿ ಮಂಗಳವಾರ ಇಲ್ಲಿ ಸಂತೆ ಸೇರುತ್ತದೆ. ಧಾನ್ಯ, ಎಣ್ಣೆ, ಹತ್ತಿ ಮತ್ತು ದನಗಳ ವ್ಯಾಪಾರ ನಡೆಯುತ್ತದೆ. ಗೂಡಾರ, ತೊಟ್ಟಿಲು, ಆಟಿಕೆಗಳ ತಯಾರಿಕೆಗಳು ಮಾರಾಟವಾಗುತ್ತವೆ. 1870ರಿಂದ ಪುರಸಭೆಯ ಆಡಳಿತಕ್ಕೆ ಒಳಪಟ್ಟಿರುವ ಈ ಪಟ್ಟಣಕ್ಕೆ ನೀಲವ್ವನ ಕೆರೆಯಿಂದ ನೀರಿನ ಸರಬರಾಜಾಗುತ್ತದೆ. ನವಲಗುಂದ ಪಟ್ಟಣದಿಂದ ಹುಬ್ಬಳ್ಳಿ–ಧಾರವಾಡ, ಗದಗ, ಬಾದಾಮಿ, ನರಗುಂದ, ಗೋಕಾಕ, ಬಿಜಾಪುರ ಹಾಗೂ ಅಣ್ಣಿಗೇರಿಗಳಿಗೆ ಪಕ್ಕಾ ರಸ್ತೆ ಸಂಪರ್ಕವುಂಟು. ನವಲಗುಂದದ ದಕ್ಷಿಣಕ್ಕೆ ಸು. 10 ಕಿಮೀ ದೂರದಲ್ಲಿರುವ ಅಣ್ಣಿಗೇರಿ ಇದರ ಹತ್ತಿರದ ರೈಲು ನಿಲ್ದಾಣ. ಇಲ್ಲಿರುವ ಗವಿಮಠದಲ್ಲಿ ಪ್ರತಿ ವರ್ಷವೂ ನಡೆಯುವ ಎಡೆಯೂರು ಸಿದ್ಧಲಿಂಗೇಶ್ವರ ಜಾತ್ರೆ ಪ್ರಸಿದ್ಧವಾದದ್ದು. (ಎಸ್.ಎನ್.ಎ.ಆರ್.ಇ.)

**ನವಶಿಲಾಯುಗ:** ಶಿಲಾಯುಗದ ಕೊನೆಯ ಭಾಗ (ನಿಯೋಲಿತಿಕ್ ಏಜ್). ಚಕ್ಕೆ ತೆಗೆದು ಮಾಡಿದ ಒರಟಾದ ಪೂರ್ವಶಿಲಾಯುಗದ ಆಯುಧಗಳಿಗಿಂತ ಬೇರಾದ, ಅಂಚುಗಳನ್ನು ಅಥವಾ ಇಡೀ ಆಯುಧಗಳನ್ನು ಕಲ್ಲು ಬಂಡೆಗಳ ಮೇಲೆ ತಿಕ್ಕಿ ನಯಗೊಳಿಸಿ ಬಳಸುತ್ತಿದ್ದುದು ಈ ಯುಗದ ವೈಶಿಷ್ಟ್ಯ. ಜಾನ್ ಲಬಕ್ (ಲಾರ್ಡ್ ಆವ್‌ಬರಿ) 1865ರಲ್ಲಿ ನಿಯೋಲಿತಿಕ್ ಏಜ್ ಎಂಬ ಪದವನ್ನು ಮೊದಲಿಗೆ ಬಳಸಿದ. ಆಯುಧ ತಯಾರಿಕೆಯಲ್ಲಿ ಹೊಸ ವಿಧಾನಗಳನ್ನು ಬಳಸಿದುದನ್ನು ಅದು ಪ್ರಧಾನವಾಗಿ ಸೂಚಿಸುತ್ತದೆ. ನಯಗೊಳಿಸಿದ ಕಲ್ಲಿನ ಆಯುಧಗಳ ಬಳಕೆ ಮೊದಲ ಬಾರಿಗೆ ಮಣ್ಣಿನ ಪಾತ್ರೆಗಳ ತಯಾರಿಕೆ ಮತ್ತು ಉಪಯೋಗ, ಮೊದಲ ಹಂತದ ಬೇಸಾಯ ಮತ್ತು ಪ್ರಾಣಿಗಳ ಸಾಕಾಣಿಕೆ–ಇವು ಈ ಹಂತದ ವಿಶಿಷ್ಟ ಲಕ್ಷಣಗಳೆಂದು ಈಚಿನವರೆಗೂ ಪರಿಗಣಿಸಲಾಗಿತ್ತು. ಆದರೆ ಈಚಿನ 3–4 ದಶಕಗಳಿಂದ ಗೋರ್ಡನ್ ಚೈಲ್ಡ್ ಮುಂತಾದ ಪ್ರಾಕ್ತನ ವಿದ್ವಾಂಸರು ಅಂಥ ತಾಂತ್ರಿಕ ಲಕ್ಷಣಗಳಿಗಿಂತಲೂ ಸಾಂಸ್ಕೃತಿಕ ಹಿನ್ನೆಲೆಯನ್ನು ಸೂಚಿಸುವ ಆರ್ಥಿಕ ಸಾಮಾಜಿಕ ಅಂಶಗಳ ಆಧಾರದ ಮೇಲೆ ನವಶಿಲಾಯುಗದ ಸಂಸ್ಕೃತಿಯನ್ನು ಗುರುತಿಸುವುದು ಸೂಕ್ತವೆಂದು ವಾದಿಸಿದ್ದಾರೆ. ಅವರ ಪ್ರಕಾರ ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದ ಶಿಲಾಯುಗದ ಮಾನವ ಈ ಹಂತದಲ್ಲಿ ಆಹಾರೋತ್ಪಾದನೆಯತ್ತ ಮೊದಲ ಹೆಜ್ಜೆ ಇಟ್ಟ. ಪ್ರಕೃತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವುದರ ಮೂಲಕ ಆರಂಭ ಹಂತದ ಬೇಸಾಯ, ಪಶುಸಂಗೋಪನೆಗಳನ್ನು ರೂಢಿಸಿಕೊಂಡು, ತನ್ನ ಅಲೆಮಾರಿ ಜೀವನಕ್ರಮವನ್ನು ಬಿಟ್ಟು ಒಂದೆಡೆಯಲ್ಲಿ ನೆಲೆನಿಂತು ವಾಸಿಸುವಂತಾಯಿತು. ನೆಲೆನಿಂತ ಜೀವನದ ಫಲವಾಗಿ ಗ್ರಾಮೀಣ ಜೀವನ ಮತ್ತು ವಸತಿ ನಿರ್ಮಾಣಗಳು ರೂಢಿಗೆ ಬಂದುವು. ಧಾನ್ಯ, ಮಾಂಸ, ಮತ್ತಿತರ ಪಾನೀಯಗಳನ್ನೂ ಸಂಗ್ರಹಿಸಿಡಲು ಸುಟ್ಟಮಣ್ಣಿನ ಪಾತ್ರೆಗಳನ್ನು, ಬೆತ್ತದಲ್ಲಿ ಹೆಣೆದ ಬುಟ್ಟಿಗಳನ್ನು ತಯಾರಿಸಲಾರಂಭಿಸಿದ. ಇವೆಲ್ಲವುಗಳಿಂದ ಮಾನವ ಸಂಸ್ಕೃತಿ ಪ್ರಗತಿಪಥದಲ್ಲಿ ಸಾಗಲು ಸಾಧ್ಯವಾಯಿತು. ಮಾನವನ ಜೀವನ ರೀತಿಯಲ್ಲಿ ತಲೆದೋರಿದ ಇಂಥ ಪ್ರಮುಖ ಬದಲಾವಣೆಗಳು ಅವನ ಸರ್ವತೋಮುಖ ಪ್ರಗತಿ ಮತ್ತು ನಾಗರಿಕತೆಗೆ ಭದ್ರಬುನಾದಿಯನ್ನೊದಗಿಸಿದವು. ಆದುದರಿಂದ ಚೈಲ್ಡ್ ಆ ಹಂತವನ್ನು ಆಹಾರೋತ್ಪಾದನಾಕ್ರಾಂತಿ ಮತ್ತು ಮಾನವ ಪ್ರಗತಿಯ ಮೊದಲ ದಿಟ್ಟಹೆಜ್ಜೆಯೆಂದು ವರ್ಣಿಸಿದ್ದಾನೆ.

ಈ ಕ್ರಾಂತಿಯ ಮೊದಲ ಕುರುಹುಗಳು ಪಶ್ಚಿಮ ಏಷ್ಯದ ಇರಾಕ್, ಪ್ಯಾಲಸ್ತೀನ್ ಮತ್ತು ಸಿರಿಯ ಪ್ರದೇಶಗಳಲ್ಲಿ ಪ್ರ.ಶ.ಪೂ. 9ನೆಯ ಸಹಸ್ರಮಾನದಲ್ಲಿ ತಲೆದೋರುತ್ತವೆ. ಕ್ರಮೇಣ ಇತರ ಪ್ರದೇಶಗಳಿಗೂ ಹಬ್ಬುತ್ತದೆ. ಈಜಿಪ್ಟಿನಲ್ಲಿ ಪ್ರ.ಶ.ಪೂ. 6–5ನೆಯ ಸಹಸ್ರಮಾನಗಳಲ್ಲೂ ಇರಾನಿನಲ್ಲಿ ಪ್ರ.ಶ.ಪೂ. 7–6ನೆಯ ಸಹಸ್ರಮಾನಗಳಲ್ಲೂ ಮೆಡಿಟರೇನಿಯನ್ ಭೂಭಾಗದಲ್ಲಿ ಪ್ರಶ.ಪೂ. 5ನೆಯ ಸಹಸ್ರ ಮಾನದಲ್ಲೂ ಯುರೋಪಿನಲ್ಲಿ ಪ್ರ.ಶ.ಪೂ. 4ನೆಯ ಸಹಸ್ರಮಾನದಲ್ಲೂ ನವಶಿಲಾಯುಗ ಸಂಸ್ಕೃತಿಯ ಕುರುಹುಗಳು ಕಾಣಬರುತ್ತವೆ. ಆದರೆ ಈ ಎಲ್ಲ ಪ್ರದೇಶಗಳಲ್ಲೂ ಆಯಾ ಕಾಲಗಳಲ್ಲಿ ಚೈಲ್ಡನ ಸ್ಪಷ್ಟೀಕರಣಕ್ಕೆ ಸರಿಹೊಂದುವ ಗ್ರಾಮೀಣ ಜೀವನ ಆರಂಭವಾಯಿತೆಂದು ಹೇಳಲು ಸಾಧ್ಯವಿಲ್ಲ.

ಭಾರತದ ವಾಯವ್ಯ ಗಡಿಪ್ರದೇಶ, ಆಫ್ಘಾನಿಸ್ತಾನ, ಬಲೂಚಿಸ್ತಾನ, ಮತ್ತು ಸಿಂಧ್ ಪ್ರದೇಶಗಳಲ್ಲಿ ಪ್ರ.ಶ.ಪೂ. 5ನೆಯ ಸಹಸ್ರಮಾನದ ಕೊನೆಯ ಭಾಗದಲ್ಲಿ ಈ ಗ್ರಾಮೀಣ ಜೀವನದ ಕುರುಹುಗಳು ಕಂಡುಬರುತ್ತವೆ. ಪ್ರ.ಶ.ಪೂ. 3ನೆಯ ಸಹಸ್ರಮಾನದ ವೇಳೆಗೆ ಕಾಶ್ಮೀರ, ಪೂರ್ವಭಾರತ ಮತ್ತು ಕರ್ನಾಟಕ–ಆಂಧ್ರ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಹೆಜ್ಜೆಗಳನ್ನೂ ಗುರುತಿಸಲಾಗಿದೆ. *

**ನವೀಕರಿಸಿದ ಪರಿಸರ ಪ್ರಭುತ್ವವಾದ:** ಪರಿಸರವಾದ ಮತ್ತು ಸಂಭವವಾದಗಳನ್ನು ಸಮನ್ವಯಗೊಳಿಸಿ ರೂಪಿಸಿದಂತಹ ಪರಿಕಲ್ಪನೆಯೇ ನವೀಕರಿಸಿದ ಪರಿಸರ ಪ್ರಭುತ್ವವಾದ (ನಿಯೋ ಡಿಟರ್‌ಮಿನಿಸಂ). ಈ ವಾದದ ಪ್ರವರ್ತಕ ಗ್ರಿಫಿ ಟೈಲ್ಲರ್. ಈ ವಾದವನ್ನು ಕ್ರಿಯಾತ್ಮಕ ನಿಶ್ಚಯವಾದ ಎಂದೂ ಕರೆಯಲಾಗಿದೆ. ಇವರ ಪ್ರಕಾರ ಮಾನವನ ಮೇಲೆ ಪ್ರಕೃತಿಯ ಪೂರ್ಣ ನಿಯಂತ್ರಣವಿರದೆ ಕೇವಲ ಅದರ ಪ್ರಭಾವವಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಮೆರಿಕದ ಕಾರ್ಲ್‌ಸೌರ್ ಸ್ವತಃ ಸಂಭವವಾದದ ಸಮರ್ಥಕನಾದರೂ ಸಹ, ನವ್ಯ ಪರಿಸರವಾದವನ್ನು ಬೆಂಬಲಿಸಿದ್ದಾರೆ. ಪರಿಸರ ಮಾನವರ ಪರಸ್ಪರ ಹೊಂದಾಣಿಕೆ ಎಂಬ ಅಂಶಕ್ಕೆ ಆದ್ಯತೆ ನೀಡಿದ್ದಾರೆ. ನವ್ಯ ಪರಿಸರವಾದವನ್ನು ರಾಕ್ಸಬಿ, ಹರ್ಬರ್ಟ್‌ಸನ್, ಮೊದಲಾದವರು ಅನುಮೋದಿಸಿದ್ದಾರೆ.

ರೋಜರ್ ಮಿನ್‌ಶುಲ್ ಹೇಳುವಂತೆ ಮಾನವನು ಅನಿವಾರ್ಯವಾಗಿ ಪರಿಸರದಿಂದ ಪ್ರಭಾವಿತನಾಗಿರುವನು; ಆದರೆ ಯಾವುದೇ ಪ್ರದೇಶದಲ್ಲಿಯೂ ಆತನು ಸಂಪೂರ್ಣವಾಗಿ ನಿಯಂತ್ರಿಸಲ್ಪಟ್ಟಿಲ್ಲ. ಆದುದರಿಂದ ಭೂಗೋಳ ವಿಜ್ಞಾನಿಯು ಪ್ರಾಕೃತಿಕ ಪರಿಸರ ಮಾನವನ ಚಟುವಟಿಕೆಗಳ ಮೇಲೆ ಯಾವ ಪ್ರಮಾಣದಲ್ಲಿ ಪ್ರಭಾವ ಬೀರಿದೆ ಎಂಬುದನ್ನು ವಿಶ್ಲೇಷಿಸಬೇಕಾಗಿದೆ.

ಗ್ರಿಫಿ ಟೈಲ್ಲರ್ ಈ ವಾದವನ್ನು ಕುರಿತು ವಿವರಿಸುತ್ತಾ ವಿವೇಕಿಯಾದಂತಹ ಮಾನವ ಪ್ರಕೃತಿಯ ಯೋಜನೆ ಅನುಸರಿಸಿದರೆ, ಅವಿವೇಕಿಯಾದಂತಹ ಮಾನವನು ಪರಿಸರದ ಪರಿಮಿತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಮಾನವನು ವಿವೇಕಿ (ಬುದ್ಧಿವಂತ) ಅಥವಾ ಅವಿವೇಕಿ (ಮೂರ್ಖ) ಎಂಬ ಎರಡು ಭಾವನಾ ರೂಪವನ್ನು ಹೊಂದಿದ್ದಾನೆ. ಆದರೆ ಪರಿಸರಕ್ಕೆ ಈ ಕಲ್ಪನೆ ಇಲ್ಲ. ಬದಲಿಗೆ ಪ್ರಕೃತಿ ನೀಡಿರುವ ಯೋಜನೆಗಳಲ್ಲಿ ಸಾಧ್ಯ ಮತ್ತು ಅಸಾಧ್ಯ ಎಂಬುದು ಮಾತ್ರವಿದೆ. ಇದರ ಪ್ರತ್ಯೇಕತೆ ಮತ್ತು ಆಯ್ಕೆ ಎರಡೂ ಸಹ ಮಾನವನಿಗೆ ಬಿಟ್ಟಿದ್ದು. ಈ ವಾದವನ್ನು ಒಂದು ಉದಾಹರಣೆ ಮೂಲಕ ವಿವರಿಸಿದ್ದಾರೆ. ಭೂಮಿಯನ್ನು ಆಹಾರಧಾನ್ಯದ ಸಾಗುವಳಿಗೆ ಬದಲಾಗಿ ವಾಣಿಜ್ಯ ಅಥವಾ ಹೈನುಗಾರಿಕೆಗೆ ಬಳಸುವುದು ಲಾಭದಾಯಕ. ಇದನ್ನು ಗಮನದಲ್ಲಿಟ್ಟುಕೊಂಡೇ ಡೆನ್ಮಾರ್ಕಿನಲ್ಲಿ ಬಹುಭಾಗದ ಭೂಮಿಯನ್ನು ಹೈನುಗಾರಿಕೆಗೆ ಒಳಪಡಿಸಿ ಲಾಭ ಪಡೆಯಲಾಗುತ್ತಿದೆ ಎಂದು ಹೇಳಲಾಗುತ್ತದೆ. (ಎನ್.ಎಲ್.)

**ನಾಂದೇಡ್:** ಮಹಾರಾಷ್ಟ್ರ ರಾಜ್ಯದ ಪಶ್ಚಿಮ ಭಾಗದ ಒಂದು ಜಿಲ್ಲೆ; ಆ ಜಿಲ್ಲೆಯ ಮುಖ್ಯಸ್ಥಳ. ಜಿಲ್ಲೆಯ ವಿಸ್ತೀರ್ಣ 10,492 ಚ.ಕಿಮೀ. ಈ ಜಿಲ್ಲೆಯಲ್ಲಿ ನಾಂದೇಡ್, ಹದಗಾಂವ್, ಕಿಂವಟ್, ಭೋಕರ್, ಬಿಲೋಲಿ, ದೇಗಲೂರ್, ಮುಖೇಡ್ ಮತ್ತು ಕಂಧಾರ್ ತಾಲ್ಲೂಕುಗಳಿವೆ. ಗೋದಾವರಿ ನದೀಕಣಿವೆಯ ಮರಾಠವಾಡ ವಿಭಾಗದಲ್ಲಿರುವ

ನಾಂದೇಡ್ ಮಹಾರಾಷ್ಟ್ರದ ಹಿಂದುಳಿದ ಜಿಲ್ಲೆಗಳಲ್ಲೊಂದು. ಕೃಷಿ ಇಲ್ಲಿಯ ಜನರ ಮುಖ್ಯ ಕಸಬು. ಜೋಳ, ಬತ್ತ ಮುಖ್ಯ ಬೆಳೆಗಳು. ಹತ್ತಿ ಮುಖ್ಯ ಆರ್ಥಿಕ ಬೆಳೆ. ಇಲ್ಲಿಯ ಜನ ದನಕರುಗಳನ್ನು ಹೆಚ್ಚಾಗಿ ಸಾಕುವರು. ಹತ್ತಿ ಸಂಸ್ಕರಣೆ ಮತ್ತು ಎಣ್ಣೆ ತೆಗೆಯುವುದು ಪ್ರಮುಖ ಕೈಗಾರಿಕೆಗಳು.

ನಾಂದೇಡ್ ನಗರ ಗೋದಾವರಿ ನದಿಯ ಉತ್ತರ ದಡದಲ್ಲಿದೆ. ಪ್ರಾಚೀನ ಕಾಲದಿಂದಲೂ ಇದೊಂದು ಪ್ರಸಿದ್ಧ ಧಾರ್ಮಿಕ ತೀರ್ಥಕ್ಷೇತ್ರ. ನಾಂದೀತಟ ಎಂಬುದು ಇದರ ಪುರಾತನ ಹೆಸರು. (ಎಸ್.ಎಸ್.ಜೆ.ಎ.)

**ನಾಗಪಟ್ಟಿಣಂ:** ತಮಿಳುನಾಡು ರಾಜ್ಯದ ತಂಜಾವೂರು ಜಿಲ್ಲೆಯ ಒಂದು ರೇವು ಪಟ್ಟಣ. ವಿಸ್ತೀರ್ಣ 2716 ಚ.ಕಿಮೀ. ಬಂಗಾಲ ಕೊಲ್ಲಿಯ ತೀರದಲ್ಲಿ ಚೆನ್ನೈಗೆ 400 ಕಿಮೀ ದಕ್ಷಿಣಕ್ಕಿದೆ. ಜನಸಂಖ್ಯೆ 14,87,055 (2001). ಪ್ರಾಚೀನ ಕಾಲದಲ್ಲಿ ಗ್ರೀಸ್ ಮತ್ತು ರೋಮ್‌ಗಳೊಂದಿಗೆ ಇದು ವ್ಯಾಪಾರ ನಡೆಸುತ್ತಿತ್ತು. ಟಾಲಮಿ ತನ್ನ ಬರೆವಣಿಗೆಗಳಲ್ಲಿ ಇದನ್ನು ನಿಗಮೋಸ್ ಎಂದು ಕರೆದಿದ್ದಾನೆ. ಪೋರ್ಚುಗೀಸರೂ ಅನಂತರ ಡಚ್ಚರೂ ಇದನ್ನು ವಶಪಡಿಸಿಕೊಂಡಿದ್ದರು. 1781ರಲ್ಲಿ ಇದು ಇಂಗ್ಲಿಷರ ವಶವಾಯಿತು. ಮದರಾಸು (ಈಗಿನ ಚೆನ್ನೈ) ಬೆಳೆದ ಮೇಲೆ ಇದರ ಪ್ರಮುಖತೆ ತಗ್ಗಿತು. ಈಗ ಇದು ತಮಿಳುನಾಡಿನ ಮೂರನೆ ಬಂದರು. ಇದು ಅಷ್ಟೇನೂ ಆಳವಾದ ಬಂದರಲ್ಲ. ಈಚೆಗೆ ಈ ಪಟ್ಟಣ ವೇಗವಾಗಿ ಬೆಳೆಯುತ್ತಿದೆ. ಇಲ್ಲಿಂದ ಎಣ್ಣೆ ಬೀಜ, ಹತ್ತಿ, ರೇಷ್ಮೆ ಬಟ್ಟೆ, ಚರ್ಮ, ಹೊಗೆಸೊಪ್ಪು, ಸಾಗುವಾನಿ ರಫ್ತಾಗುತ್ತವೆ. ಸಂಪದ್ಯುಕ್ತವಾದ ಕಾವೇರಿ ಮುಖಜಭೂಮಿ ಇದರ ಹಿನ್ನಾಡು, ಹಡಗು ರಿಪೇರಿ, ಉಕ್ಕು ಸಾಮಾನು, ಕೈಮಗ್ಗ ಮುಂತಾದ ಕೈಗಾರಿಕೆಗಳಿವೆ. ಮೀನುಗಾರಿಕೆಯೂ ಇಲ್ಲಿಯ ಜನರ ಮುಖ್ಯ ಕಸಬು. (ಕೆ.ವಿ.ಆರ್.ಇ.)

**ನಾಗಪುರ:** ಮಹಾರಾಷ್ಟ್ರದ ಒಂದು ವಿಭಾಗ ; ಅದರ ಒಂದು ಜಿಲ್ಲೆ ; ವಿಭಾಗ ಹಾಗೂ ಜಿಲ್ಲೆಯ ಆಡಳಿತ ಕೇಂದ್ರ. ಜಿಲ್ಲೆಯ ವಿಸ್ತೀರ್ಣ 9,928 ಚ.ಕಿಮೀ. ಜನಸಂಖ್ಯೆ 40051444. ಮಹಾರಾಷ್ಟ್ರದ ಈಶಾನ್ಯ ಗಡಿಯಲ್ಲಿರುವ ಈ ಜಿಲ್ಲೆಯನ್ನು ರಾಜ್ಯ ಪುನರ್ವಿಂಗಡಣೆಯಾದಾಗ (1956) ಮಧ್ಯಪ್ರದೇಶದಿಂದ ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಯಿತು. ಉತ್ತರದಲ್ಲಿ ಸಿವನಿ ಮತ್ತು ಚಿದವಾಡ ಜಿಲ್ಲೆ (ಮಧ್ಯ ಪ್ರದೇಶ), ಪೂರ್ವಕ್ಕೆ ಭಂಡಾರ, ದಕ್ಷಿಣ ಹಾಗೂ ನೈರುತ್ಯಕ್ಕೆ ಚಂದಾಪುರ (ಮಧ್ಯ ರಾಷ್ಟ್ರ) ಮತ್ತು ವರ್ಧಾ, ಪಶ್ಚಿಮಕ್ಕೆ ಅಮರಾವತಿ ಜಿಲ್ಲೆಗಳು ಮೇರೆಗಳಾಗಿವೆ.

ಜಿಲ್ಲೆಯ ಬಹುಭಾಗ ಪ್ರಸ್ಥಭೂಮಿ. ಉತ್ತರದಲ್ಲಿ ಸಾತ್ಪುರ ಬೆಟ್ಟಗಳು ಹಬ್ಬಿವೆ. ಜಿಲ್ಲೆಯ ಅತ್ಯಧಿಕ ಉಷ್ಣತೆ $46.7^{0}$ಸೆ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 1.16 ಸೆಂಮೀ. ಜಿಲ್ಲೆಯ ಬಹುಭಾಗ ಕಪ್ಪು ಮಣ್ಣಿನ ಪ್ರದೇಶವಾದ್ದರಿಂದ ಹತ್ತಿ ಬೆಳೆಯಲು ಪ್ರಶಸ್ತವಾಗಿದೆ. ಇದಲ್ಲದೇ ಜೋಳ, ಎಳ್ಳು, ಕಡಲೆ, ಹಣ್ಣುಗಳು ಇಲ್ಲಿಯ ಮುಖ್ಯ ಕೃಷಿ ಉತ್ಪನ್ನಗಳು. ಇಲ್ಲಿಯ ಕಿತ್ತಳೆ ಹಣ್ಣುಗಳು ತುಂಬಾ ಪ್ರಸಿದ್ಧ. ಮೆಣಸಿನಕಾಯಿ ಮತ್ತು ವೀಳ್ಯದೆಲೆ ಕೃಷಿಯಲ್ಲೂ ಜಿಲ್ಲೆ ತುಂಬ ಹೆಸರು ಗಳಿಸಿದೆ. ಜಿಲ್ಲೆಯಲ್ಲಿ ಮ್ಯಾಂಗನೀಸ್ ಅದಿರು ಹೇರಳವಾಗಿ ಸಿಗುತ್ತದೆ. ಅನೇಕ ಕಡೆ ಅಮೃತ ಶಿಲೆಯ ಗಣಿಗಳುಂಟು. ಬಟ್ಟೆ ನೇಯ್ಗೆ ಈ ಜಿಲ್ಲೆಯ ಮುಖ್ಯ ಉದ್ಯಮ. ಇಲ್ಲಿ ಹಿತ್ತಾಳೆ ಪಾತ್ರೆಗಳನ್ನು ತಯಾರಿಸುತ್ತಾರೆ. ಜಿಲ್ಲೆಯಿಂದ ಕಿತ್ತಳೆ ಹಣ್ಣು, ಕೈಮಗ್ಗದ ಬಟ್ಟೆ, ಪಾತ್ರೆಗಳು, ಮ್ಯಾಂಗನೀಸ್ ಅದಿರು, ಅಮೃತ ಶಿಲೆ ಮುಂತಾದವು ಇತರ ರಾಜ್ಯಗಳು ಮತ್ತು ದೇಶಗಳಿಗೆ ರಫ್ತಾಗುತ್ತವೆ. ಉರೇಡ್, ಕಾಟೋಲ್, ರಾಮ್‌ಟೇಕ್, ನಾರ್‌ಕೇಡ್ ಇವು ಜಿಲ್ಲೆಯ ಪ್ರಮುಖ ಪಟ್ಟಣಗಳು.

ನಾಗಪುರ ನಗರ ಉ.ಅ.$21^{0}90'$ ಮತ್ತು ಪೂ.ಅ. $79^{0}90'$ ಗಳಲ್ಲಿದೆ. ಜನಸಂಖ್ಯೆ 2.5 ಮಿ. ಇದು ನಾಗ ನದಿಯ ದಂಡೆಯ ಮೇಲಿರುವುದರಿಂದ ಇದಕ್ಕೆ ನಾಗಪುರ ಎಂದು ಹೆಸರಾಯಿತು. 18ನೆಯ ಶತಮಾನದಲ್ಲಿ ಗೋಂಡ್ ವಂಶದ ಭಕ್ತ ಬುಲಂದ್ ಎಂಬ ರಾಜ ಇದನ್ನು ಸ್ಥಾಪಿಸಿದ.

ಭೌಗೋಳಿಕವಾಗಿ ನಾಗಪುರ ಭಾರತ ಪರ್ಯಾಯ ದ್ವೀಪದ ಕೇಂದ್ರದಲ್ಲಿದೆ. ಮುಂಬೈ–ಕೋಲ್ಕತ, ಚೆನ್ನೈ–ದೆಹಲಿ ರೈಲು ಮಾರ್ಗಗಳು ಇಲ್ಲಿ ಸಂಧಿಸುತ್ತವೆ. ಹಾಗೆಯೇ ಆಂತರಿಕ ವಿಮಾನಗಳಿಗೂ ಇದು ಸಂಧಿಸ್ಥಳ. ಪ್ರಧಾನ ರೈಲು ಮಾರ್ಗ ಮತ್ತು ರಸ್ತೆಗಳು ಇಲ್ಲಿ ಹಾದಿರುವುದರಿಂದಲೂ ಇದು ಹತ್ತಿ ಬೆಳೆಯುವ ಪ್ರದೇಶವಾದ್ದರಿಂದಲೂ ಇಲ್ಲಿ ಅನೇಕ ಬಟ್ಟೆ ಗಿರಣಿಗಳು ಸ್ಥಾಪಿತವಾಗಿವೆ. ಇದೊಂದು ಕೈಗಾರಿಕಾ ನಗರವಾಗಿ ಬೆಳೆದಿದೆ. ಸಮೀಪದ ಕಾಂಪ್ಟೀ ಇಂದು ನಾಗಪುರ ನಗರದ ಕಾರ್ಪೋರೇಷನ್ನಿನ ಎಲ್ಲೆಯೊಳಗೆ ಸೇರಿ ಹೋಗಿದೆ. ಕಾಂಪ್ಟೀ ಒಂದು ಕೈಗಾರಿಕಾ ಕೇಂದ್ರ ಹಾಗೂ ಸೇನಾ ನೆಲೆ.

ಬಟ್ಟೆ ನೇಯ್ಗೆ, ಪಾತ್ರೆ ತಯಾರಿಕೆ ಇಲ್ಲಿನ ಪ್ರಮುಖ ಉದ್ಯಮಗಳು. ನಗರದ ಸುತ್ತ ಮುತ್ತಣ ತೋಟಗಳಲ್ಲಿ ಕಿತ್ತಳೆ ಹಣ್ಣನ್ನು ಬೆಳೆಯಲಾಗುತ್ತದೆ. ನಾಗಪುರ ಒಂದು ಪ್ರಮುಖ ವ್ಯಾಪಾರ ಕೇಂದ್ರ. ಇಲ್ಲಿಂದ ಕಿತ್ತಳೆ ಹಣ್ಣು, ಹತ್ತಿ, ಬಟ್ಟೆ, ಮ್ಯಾಂಗನೀಸ್ ಬೇರೆ ಬೇರೆ ಭಾಗಗಳಿಗೆ ರಫ್ತಾಗುತ್ತವೆ.

ನಗರ ಮಧ್ಯದ ಸೀತಾಬಲ್ಡಿಯಲ್ಲಿ ಬ್ರಿಟಿಷರ ಕಾಲದ ಕೋಟೆ ಇದೆ. ಪ್ರಮುಖ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೇಂದ್ರವಾಗಿ ಈ ನಗರ ಬೆಳೆದಿದೆ. ಇಲ್ಲೊಂದು ವಿಶ್ವವಿದ್ಯಾಲಯವಿದೆ (1923). ಇದಕ್ಕೆ ಸೇರಿದ ಸು. 22 ಕಾಲೇಜುಗಳು ನಗರದಲ್ಲಿವೆ. (ಕೆ.ಎ.ಆರ್.)

**ನಾಗಮಂಗಲ:** ಮಂಡ್ಯ ಜಿಲ್ಲೆಯ ಉತ್ತರ ಭಾಗದಲ್ಲಿರುವ ತಾಲ್ಲೂಕು. ಇದು ಮಂಡ್ಯ ಜಿಲ್ಲೆಯ ಅತ್ಯಂತ ದೊಡ್ಡ ತಾಲ್ಲೂಕು. ಪಾಂಡವಪುರ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನ ಹೋಬಳಿಗಳು ಕಸಬ, ಬಿಂಡಿಗನವಿಲೆ, ಬೆಳ್ಳೂರು, ದೇವಲಾಪುರ ಮತ್ತು ಹೊಣಕೆರೆ. ಇಲ್ಲಿ 365 ಗ್ರಾಮಗಳಿವೆ. ವಿಸ್ತೀರ್ಣ 1,040 ಚ.ಕಿಮೀ. ಜನಸಂಖ್ಯೆ 190814 (2001). ಈ ತಾಲ್ಲೂಕು 1882ರ ವರೆಗೆ ಹಾಸನ ಜಿಲ್ಲೆಯಲ್ಲಿತ್ತು. ಅನಂತರ ಮೈಸೂರು ಜಿಲ್ಲೆಯಲ್ಲಿತ್ತು. ಪ್ರತ್ಯೇಕ ಮಂಡ್ಯ ಜಿಲ್ಲೆಯನ್ನು ರಚಿಸಿದಾಗ ಆ ಜಿಲ್ಲೆಗೆ ಇದನ್ನು ಸೇರಿಸಲಾಯಿತು. ಉತ್ತರಕ್ಕೆ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು, ಪಶ್ಚಿಮಕ್ಕೆ ಹಾಸನಜಿಲ್ಲೆಯ ಚನ್ನರಾಯಪಟ್ಟಣ ಮತ್ತು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು, ಪೂರ್ವಕ್ಕೆ ಕುಣಿಗಲು (ತುಮಕೂರು) ಮತ್ತು ಮದ್ದೂರು (ಮಂಡ್ಯ) ಮತ್ತು ಪಾಂಡವಪುರ ತಾಲ್ಲೂಕುಗಳು ಮೇರೆಗಳಾಗಿವೆ.

ತಾಲ್ಲೂಕು ಸಾಮಾನ್ಯವಾಗಿ ಬಯಲು ಭೂಮಿ, ಪಶ್ಚಿಮ ಮತ್ತು ಉತ್ತರದಲ್ಲಿ ಸಾಮಾನ್ಯವಾದ ಬೆಟ್ಟಗುಡ್ಡಗಳಿವೆ. ಚುಂಚನಗಿರಿ ಇವುಗಳಲ್ಲಿ ಪ್ರಸಿದ್ಧವಾದುದ್ದು. ತುಮಕೂರಿನಿಂದ ಹರಿದು ಬರುವ ಶಿಂಷಾ ನದಿ ಈ ತಾಲ್ಲೂಕಿನ ಪೂರ್ವದ ಗಡಿಯಾಗಿ ಅಲ್ಲಲ್ಲಿ ಸ್ವಲ್ಪ ದೂರ ಹರಿಯುತ್ತದೆ. ಲೋಕಪಾವನಿ ನದಿ ತಾಲ್ಲೂಕಿನ ನೈರುತ್ಯದಲ್ಲಿ ಹುಟ್ಟಿ ಸ್ವಲ್ಪ ದೂರ ಹರಿದು ದಕ್ಷಿಣಾಭಿಮುಖವಾಗಿ ಪಾಂಡವಪುರ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ. ತಾಲ್ಲೂಕು ಒಟ್ಟಿನಲ್ಲಿ ಪೂರ್ವ ಮತ್ತು ದಕ್ಷಿಣಕ್ಕೆ ಇಳಿಜಾರಾಗಿದೆ.

ಪಶ್ಚಿಮದ ಶಿಲೆಗಳಲ್ಲಿ ಚಿನ್ನದ ನಿಕ್ಷೇಪವುಂಟು. ಆದರೆ ಇದು ಅತ್ಯಲ್ಪ; ಆರ್ಥಿಕವಾಗಿ ಲಾಭದಾಯಕವಲ್ಲ. ಮೃದುವಾದ ಬಳಪದ ಕಲ್ಲು ಇನ್ನೊಂದು ಖನಿಜ ನಿಕ್ಷೇಪ. ತಾಲ್ಲೂಕಿನಲ್ಲಿ ಅಲ್ಲಲ್ಲಿ ಕುರುಚಲು ಕಾಡುಗಳಿವೆ. ಇಲ್ಲಿಯ ಮಣ್ಣು ಸಾಮಾನ್ಯವಾಗಿ ಮರಳುಮಿಶ್ರಿತ. ಅಲ್ಲಲ್ಲಿ ಕೆಂಪು ಮಣ್ಣೂ ಉಂಟು. ವಾರ್ಷಿಕ ಸರಾಸರಿ ಮಳೆ 60 ಸೆಂಮೀ. ಬೇಸಾಯದಲ್ಲಿ ರಾಗಿ, ಜೋಳ, ಹುರುಳಿ, ತೊಗರಿ ಇವು ಮುಖ್ಯ ಬೆಳೆಗಳು. ಕೆರೆಗಳು ವಿಶೇಷವಾಗಿವೆ. ಬಾವಿಗಳ ನೆರವಿನಿಂದ ಬತ್ತ, ಕಬ್ಬುಗಳನ್ನೂ ಬೆಳೆಯಲಾಗುತ್ತದೆ. ಇತರ ಫಸಲುಗಳು ತೆಂಗು, ಬಾಳೆ, ಮೆಣಸಿನಕಾಯಿ, ತರಕಾರಿ. ಇಲ್ಲಿ ಬೆಳೆಯುವ ಪ್ರಸಿದ್ಧವಾದ ಬತ್ತ ತಿರುಗನಹಳ್ಳಿಯ ಸಣ್ಣ ಎಂಬುದು.

ಕುರಿ ಸಾಕುವುದು ತಾಲ್ಲೂಕಿನ ಒಂದು ಮುಖ್ಯ ಕಸಬು. ಇದು ಹಳ್ಳಿಕಾರ್ ರಾಸುಗಳಿಗೂ ಹೆಸರಾಗಿದೆ. ಕರಡಿಹಳ್ಳಿ ಪ್ರದೇಶದಲ್ಲಿ ಇದನ್ನು ಹೆಚ್ಚಾಗಿ ಸಾಕಲಾಗುತ್ತದೆ.

ನಾಗಮಂಗಲ ಪಟ್ಟಣ ಈ ತಾಲ್ಲೂಕಿನ ಮುಖ್ಯ ಸ್ಥಳ. ಇದು ಉ.ಅ. $12^{0}49'$ ಮತ್ತು ಪೂ.ರೇ. $76^{0}49'$ ಮೇಲೆ ಇದೆ. ಸಮುದ್ರಮಟ್ಟಕ್ಕೆ ಸು. 786 ಮೀ ಎತ್ತರದಲ್ಲಿರುವ ಈ ಪಟ್ಟಣ ಮೈಸೂರಿನಿಂದ ಸು. 65 ಕಿಮೀ ಉತ್ತರಕ್ಕೆ ಇದೆ. ಇದೊಂದು ವ್ಯಾಪಾರ ಸ್ಥಳ. ಇಲ್ಲಿ ಪ್ರತಿ ಶುಕ್ರವಾರ ಸಂತೆ ಸೇರುತ್ತದೆ. ಹಿತ್ತಾಳೆ ಕೆಲಸ, ಕಂಚಿನ ವಿಗ್ರಹ ತಯಾರಿಕೆಗಳಿಗೆ ಈ ಪಟ್ಟಣ ಪ್ರಸಿದ್ಧವಾದದ್ದು. ಜನಸಂಖ್ಯೆ 16050.

**ನಾಗರಹೊಳೆ:** ಕರ್ನಾಟಕದ ಪ್ರಸಿದ್ಧ ಅಭಯಾರಣ್ಯಗಳಲ್ಲೊಂದು. ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಆಗ್ನೇಯಕ್ಕೆ 61 ಕಿಮೀ ದೂರದಲ್ಲಿದೆ. ವಿರಾಜಪೇಟೆ ತಾಲ್ಲೂಕಿನ ಆಗ್ನೇಯದಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು, ಮೈಸೂರು ಜಿಲ್ಲೆಯಲ್ಲಿ ಕಪಿಲಾನದಿಯನ್ನು ಸೇರುವ ನಾಗರಹೊಳೆಯಿಂದಾಗಿ ಇದಕ್ಕೆ ಈ ಹೆಸರು ಬಂದಿದೆ. ನಾಗರಹೊಳೆ, ಕಲ್ಲಹಳ್ಳಿ, ತಿತಿಮತಿ, ನಾಗರಹೊಳೆ ಅರಣ್ಯಪ್ರದೇಶಗಳನ್ನು ಒಳಗೊಂಡಿದೆ. ಇದರ ಒಟ್ಟು ವಿಸ್ತೀರ್ಣ 288 ಚ.ಕಿಮೀ. ಇದು ಸಮುದ್ರಮಟ್ಟದಿಂದ ಸು. 760 ಮೀ ಎತ್ತರದಲ್ಲಿದೆ. ಇದರ ದಕ್ಷಿಣದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಾಕನಕೋಟೆ ಅರಣ್ಯವುಂಟು. ಅಭಯಾರಣ್ಯದ ಉತ್ತರ ಭಾಗವೆಲ್ಲ ದಟ್ಟವಾದ ಅರಣ್ಯ ವೃಕ್ಷಗಳಿಂದ (ತೇಗ, ಬೀಟೆ, ಕರಿಮತ್ತಿ, ನಂದಿ, ಶ್ರೀಗಂಧ ಮುಂತಾದವು ಇಲ್ಲಿನ ಪ್ರಮುಖ ವೃಕ್ಷ ಜಾತಿಗಳು) ಕೂಡಿದೆಯಾದರೂ ದಕ್ಷಿಣದಲ್ಲಿ ಕಾಡುಪ್ರಾಣಿಗಳಿಗೆ ಬೇಕಾಗುವ ಹುಲ್ಲುಗಾವಲು ಇದೆ. ವರ್ಷದ ಬಹು ಪಾಲು ಎಲ್ಲಕಾಲಗಳಲ್ಲಿಯೂ ವನ್ಯಜೀವಿಗಳಿಗೆ ಇಲ್ಲಿ ಆಹಾರ ಸೌಲಭ್ಯವಿದೆ. ಹಾಗೇ ನೀರಿನ ಸೌಕರ್ಯವೂ ಪ್ರಾಣಿಗಳಿಗೆ ಪ್ರಿಯವಾದ ಉಪ್ಪುನೆಕ್ಕುಗಳೂ (ಸಾಲ್ಟ್ ಲಿಕ್ಸ್) ಇವೆ.

ಇಲ್ಲಿನ ವನ್ಯಪ್ರಾಣಿಗಳಲ್ಲಿ ಮುಖ್ಯವಾದವು ಹುಲಿ, ಆನೆ, ಚಿರತೆ, ಕರಡಿ, ಕಾಡು ನಾಯಿ, ಕಾಡೆಮ್ಮೆ, ಕಾಡುಬೆಕ್ಕು, ಕೆಂಪು ಅಳಿಲು, ಹಾರುವ ಅಳಿಲು, ಕೋತಿ, ಜಿಂಕೆ, ನರಿ, ಮುಂಗುಸಿ ಮುಂತಾದವು. ಕಾಕನಕೋಟೆಯ ಕಡೆ ಬಂದರೆ, ಅಪರೂಪದ ನಾಲ್ಕು ಕೊಂಬಿನ ಹುಲ್ಲೆ ಕಾಣದೊರೆಯುವುದು. ನಾಗರಹೊಳೆಯ ಪಕ್ಷಿ ಸಂಪತ್ತು ಕೂಡ ವೈವಿಧ್ಯಮಯ. ನವಿಲು, ಕಾಡು ಕೋಳಿ, ಗೌಜಲು, ಭೀಮರಾಜ, ಮರಕುಟಿಗ, ಪ್ಯಾರಡೈಸ್ ಫ್ಲೈ ಕ್ಯಾಚರ್, ಅರಶಿಣ ಬಣ್ಣದ ಕೊಕ್ಕುಳ್ಳ ಮಂಗಟ್ಟೆ (ಹಾರ್ನ್‌ಬಿಲ್),

ಕಾಮಾಲೆಹಕ್ಕಿ (ಓರಿಯೋಲ್), ಬಾಬಾಬುಡನ್ ಗಿಣಿ, ಬೆಟ್ಟದ ಗೊರವಂಕ (ಹಿಲ್‌ಮೈನ್), ಬುಲ್‌ಬುಲ್ ಸೂರಕ್ಕಿ (ಸನ್‌ಬರ್ಡ್)– ಇವು ಇಲ್ಲಿನ ಮುಖ್ಯ ಪಕ್ಷಿಗಳು. ಅಂತೆಯೇ ವಿವಿಧ ರೀತಿಯ ಹಾವುಗಳು (ಹೆಬ್ಬಾವು, ನಾಗರಹಾವು, ಕಾಳಿಂಗಸರ್ಪ ಇತ್ಯಾದಿ) ಇಲ್ಲಿ Eª É (ಎಸ್.ಜಿ.ಎನ್.)

**ನಾಗರ್‌ಕೋಯಿಲ್:** ತಮಿಳುನಾಡು ರಾಜ್ಯದ ಕನ್ಯಾಕುಮಾರಿ ಜಿಲ್ಲೆಯ ಆಡಳಿತ ಕೇಂದ್ರ. ಪಶ್ಚಿಮ ಘಟ್ಟದ ಅರಂಬೋಲಿ ಕಣಿವೆಗೆ ಪಶ್ಚಿಮದಲ್ಲಿ ಉ.ಅ. $8^0 11'$ ಮತ್ತು ಪೂ.ರೇ. $77^0 26'$ ಮೇಲೆ ಇದೆ.

ನಾಗರ್‌ಕೋಯಿಲ್‌ನಲ್ಲಿ ನಾಗರಾಜನ ಪ್ರಾಚೀನ ಸುಂದರ ದೇವಾಲಯವಿದೆ. ಅದರಿಂದಲೇ ಈ ಸ್ಥಳಕ್ಕೆ ಈ ಹೆಸರು ಬಂದಿದೆ. ಇದೊಂದು ಯಾತ್ರಾಸ್ಥಳ. ಈ ಪಟ್ಟಣದ ಸುತ್ತಣ ಪ್ರದೇಶ ಫಲವತ್ತಾದುದ್ದು. ಇದೊಂದು ಕೃಷಿ ಉತ್ಪನ್ನ ವ್ಯಾಪಾರ ಕೇಂದ್ರ. ಹಿಂದೆ ಇದು ತಿರುವಾಂಕೂರು ಸಂಸ್ಥಾನದಲ್ಲಿತ್ತು. 1956ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ತಮಿಳು ರಾಜ್ಯಕ್ಕೆ ಸೇರಿತು. ಹತ್ತಿ ಮತ್ತು ಅಕ್ಕಿಗಿರಣಿ, ಮೋಟಾರು ರಿಪೇರಿ, ರಬ್ಬರ್ ಸರಕು ತಯಾರಿಕೆ– ಇವು ಇಲ್ಲಿಯ ಉದ್ಯಮಗಳು. ಇಲ್ಲಿಯ ಕಾಲೇಜುಗಳು ಮದುರೈ ವಿಶ್ವವಿದ್ಯಾಲಯಕ್ಕೆ ಸೇರಿವೆ. ಇದೊಂದು ಪ್ರವಾಸಿ ಕೇಂದ್ರ. ನಾಗರ್‌ಕೋಯಿಲ್‌ನಿಂದ ತಿರುವನಂತಪುರ ಮತ್ತು ಚೆನ್ನೈಗೆ ರಸ್ತೆಗಳಿವೆ. ಜನಸಂಖ್ಯೆ; 208149. (ವಿ.ಕೆ.ಯು.ಎಸ್.)

**ನಾಗಾಸಾಕೀ:** ಜಪಾನಿನ ಕೀಯೂಷೂ ದ್ವೀಪದಲ್ಲಿರುವ ಒಂದು ಪ್ರಾಂತ್ಯ ಹಾಗೂ ಅದರ ಆಡಳಿತ ಕೇಂದ್ರ ಮತ್ತು ಅತ್ಯಂತ ದೊಡ್ಡ ನಗರ. ಪ್ರಾಂತ್ಯದ ವಿಸ್ತೀರ್ಣ 40.40 ಚ.ಕಿಮೀ. ನಗರ ಕೀಯೂಷೂ ದ್ವೀಪದ ವಾಯವ್ಯ ಭಾಗದಲ್ಲಿರುವ ಹಿಜೆನ್ ಪರ್ಯಾಯ ದ್ವೀಪದ ಪಶ್ಚಿಮ ತುದಿಯಲ್ಲಿದೆ. ಜನಸಂಖ್ಯೆ 455156 (2000). ಇದು ಭೂಶಿರದ ಮೇಲಿರುವುದರಿಂದ ಒಳ್ಳೆಯ ಬಂದರಾಗಿದೆ. ಪ್ರಪಂಚದ ಅತ್ಯಂತ ಸುಂದರ ಹಾಗೂ ನೈಸರ್ಗಿಕ ಬಂದರುಗಳಲ್ಲಿ ಒಂದಾದ ಇದು ಸು. 1.2 ಕಿಮೀ ಅಗಲ ಮತ್ತು 4.8 ಕಿಮೀ ಉದ್ದವಾಗಿದ್ದು ಚಿಕ್ಕ ಚಿಕ್ಕ ದ್ವೀಪಗಳಿಂದ ರಕ್ಷಣೆ ಪಡೆದಿದೆ. ನಾಗಸಾಕೀ ಪಟ್ಟಣ ಅರ್ಧಚಂದ್ರಾಕೃತಿಯ ನಾಟಕಶಾಲೆಯಂತಿದೆ.

ನಾಗಸಾಕಿಯು ಜಪಾನಿನ ಮೊಟ್ಟಮೊದಲ ಬಂದರು. 16ನೆಯ ಶತಮಾನದಲ್ಲೆ ವಿದೇಶೀ ವ್ಯಾಪಾರ ಪ್ರಮಾಣದ ದೃಷ್ಟಿಯಿಂದ ಪ್ರಾಮುಖ್ಯತೆ ಕಡಿಮೆಯಾಗಿದೆ. ಇದು ಹಡಗು ನಿರ್ಮಾಣ ಕೇಂದ್ರವೇ ಅಲ್ಲದೇ ಯಂತ್ರೋಪಕರಣ ತಯಾರಿಕೆ, ಮೀನುಗಳ ಮತ್ತು ಹಣ್ಣುಗಳ ಡಬ್ಬೀಕರಣ, ಆಮೆಗಳ ಕರಟದಿಂದ ಸರಕು ತಯಾರಿಕೆ– ಇವು ಇಲ್ಲಿಯ ಕೈಗಾರಿಕೆಗಳು. ಮಿಟ್ಸುಬಿಸಿ ಎಂಬ ಬೃಹತ್ ಕೈಗಾರಿಕಾ ಸಂಸ್ಥೆ ನಾಗಸಾಕಿಯಲ್ಲಿ ವಿವಿಧ ಕೈಗಾರಿಕಾವಸ್ತುಗಳನ್ನು ತಯಾರಿಸುವುದರಲ್ಲಿ ಪ್ರಸಿದ್ಧಿ ಹೊಂದಿದೆ. ಎರಡನೆಯ ಮಹಾಯುದ್ಧ ಕಾಲದಲ್ಲಿ ಅಣುಬಾಂಬಿಗೆ ತುತ್ತಾದ ನಗರಗಳಲ್ಲಿ ಇದೂ ಒಂದು (ಇನ್ನೊಂದು ಹಿರೋಷಿಮ). (ಜಿ.ಕೆ.ಯು.)

**ನಾಗಾ ಬೆಟ್ಟಗಳು:** ಭಾರತ–ಮಯನ್ಮಾರ್ ಗಡಿಯಲ್ಲಿರುವ, ಉತ್ತರ ಆರ್ಕಾನ್‌ಯೋಮ ಪರ್ವತಸರಣಿಯ ಒಂದು ಭಾಗ. ಮಣಿಪುರ ರಾಜ್ಯದ ಎಲ್ಲೆಯ ಬಳಿ ಇರುವ ಜಾಪೊ (3,014 ಮೀ) ಈ ಬೆಟ್ಟಗಳ ಉನ್ನತ ಶಿಖರ. ನಾಗಾ ಬೆಟ್ಟಗಳು ನಾಗಾಲೆಂಡಿನ ಒಂದು ಭಾಗ. ಮಯನ್ಮಾರಿನ ಉತ್ತರ ತುದಿಯಿಂದ ಅಸ್ಸಾಮಿನ ಉನ್ನತ ಪ್ರದೇಶದವರೆಗಿನ ಗಡಿ ರೇಖೆ ಪಟ್ಕಾಯಿ ಶ್ರೇಣಿಯ ಬೆನ್ನೇಣಿನ ಮೇಲೆ ಹಾದಿದೆ. ಈ ಶ್ರೇಣಿ ನೈಋತ್ಯದಿಂದ ಈಶಾನ್ಯಕ್ಕೆ ಸಾಗಿದೆ. ನಾಗಾ ಶ್ರೇಣಿಗಳು ಸ್ಥೂಲವಾಗಿ ಸಮಾನಾಂತರವಾಗಿ ಹಬ್ಬಿವೆ. ದಕ್ಷಿಣದ ಕಡೆ ಜಾಪೊ ಶಿಖರದ ಸುತ್ತ ಗಂಟುಗೂಡಿವೆ. ನಾಗಾ ಬೆಟ್ಟಗಳು ಮುಖ್ಯವಾಗಿ ಮೂರನೆಯ ಭೂಯುಗದ ಶಿಲಾ ಮಡಿಕೆ ಶ್ರೇಣಿಗಳು. ಇವುಗಳ ಮೇಲೆ ಮಾನ್ಸೂನ್ ಮಳೆ ಹೇರಳವಾಗಿ ಬೀಳುವುದರಿಂದ ಇವು ದಟ್ಟವಾದ ನಿತ್ಯಹಸುರು ಕಾಡುಗಳಿಂದ ಆವೃತವಾಗಿವೆ. ಕಾಡುಗಳನ್ನು ಸುಟ್ಟು ಝೂಮ್ ಬೇಸಾಯ ಮಾಡುವ ಪದ್ಧತಿಯಿಂದಾಗಿ ಹಲವು ಎಡೆಗಳಲ್ಲಿ ಮರಗಳು ನಾಶವಾಗಿ ಬಿದಿರುಮೆಳೆಗಳು ಬೆಳೆದಿವೆ. ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ 170–200 ಸೆಂಮೀ ಮಳೆಯಾಗುತ್ತದೆ. (ಪಿ.ಬಿ.)

**ನಾಗಾಲ್ಯಾಂಡ್:** ಭಾರತ ಗಣರಾಜ್ಯದ ಈಶಾನ್ಯ ಭಾಗದಲ್ಲಿರುವ ಒಂದು ರಾಜ್ಯ. ಅಸ್ಸಾಮ್ ರಾಜ್ಯಕ್ಕೂ ಮಯನ್ಮಾರ್‌ಗೂ ನಡುವೆ ಇದೆ. ಈ ರಾಜ್ಯದ ಪಶ್ಚಿಮ ಮತ್ತು ವಾಯವ್ಯಕ್ಕೆ ಅಸ್ಸಾಮ್ ರಾಜ್ಯ, ಪೂರ್ವಕ್ಕೆ ಮಯನ್ಮಾರ್ ಮತ್ತು ದಕ್ಷಿಣಕ್ಕೆ ಮಣಿಪುರ ಇದೆ; ಉತ್ತರ ಅ. $25^0 10'$ ದಿಂದ $27^0$ ಹಾಗೂ ಪೂ.ರೇ. $93^0 20'$ ರಿಂದ $95^0$ ನಡುವೆ ಇದೆ. ಪೂರ್ವದಲ್ಲಿ ಮಯನ್ಮಾರಿನ ಗಡಿಯಿಂದ ನಾಗಾಲ್ಯಾಂಡಿನ ಉತ್ತರದ ಮೊನಚಾದ ತುದಿಯವರೆಗೆ ಅರುಣಾಚಲ ಪ್ರದೇಶ ಹಬ್ಬಿದೆ. ನಾಗಾಲ್ಯಾಂಡಿನ ವಿಸ್ತೀರ್ಣ 16,527 ಚ.ಕಿಮೀ. ಜನಸಂಖ್ಯೆ 1,990,036. ರಾಜಧಾನಿ ಕೋಹಿಮ. 78594.

ಮೇಲ್ಮೈಲಕ್ಷಣ: ರಾಜ್ಯದ ಬಹುಭಾಗ ಹಿಮಾಲಯ ಪರ್ವತ ಸರಣಿಗೆ ಒಳಪಟ್ಟಿದೆ. ಉತ್ತರದಲ್ಲಿ ಬ್ರಹ್ಮಪುತ್ರಾ ಬಯಲಿನಿಂದ ಒಮ್ಮೆಲೆ ಸು. 600 ಮೀ ಗೆ ಏರುವ ನಾಗಾ ಬೆಟ್ಟಗಳು ಪಶ್ಚಿಮದಲ್ಲಿ 1,800 ಮೀ ಗೂ ಹೆಚ್ಚು ಎತ್ತರವಾಗಿವೆ. ಅಲ್ಲಲ್ಲಿ ಕೆಲವು ಶಿಖರಗಳು 3,050 ಮೀ ಗಿಂತ ಎತ್ತರವಾಗಿವೆ. ಇವುಗಳ ಪೂರ್ವಕ್ಕೆ ಇದಕ್ಕೆ ಸೇರಿಕೊಂಡಂತೆ ಇರುವ ಪಟ್ಕಾಯಿ ಶ್ರೇಣಿ ಈ ರಾಜ್ಯವನ್ನು ಮಯನ್ಮಾರಿನಿಂದ ಪ್ರತ್ಯೇಕಿಸುತ್ತದೆ. ಮಯನ್ಮಾರಿನ ಗಡಿಯಲ್ಲಿರುವ ಸಾರಮತಿ ಶಿಖರದ ಎತ್ತರ 3,826 ಮೀ.

ನದಿಗಳು: ರಾಜ್ಯದ ವಾಯವ್ಯ ಭಾಗದಲ್ಲಿ ಬ್ರಹ್ಮಪುತ್ರಾ ನದಿಯ ಉಪನದಿಗಳು ಹರಿಯುತ್ತವೆ. ಆಗ್ನೇಯ ಭಾಗ 1,200 ಮೀ ಗಿಂತ ಎತ್ತರವಾಗಿದೆ. ಮಯನ್ಮಾರ್‌ನಲ್ಲಿ ಹರಿಯುವ ಚಿಂದ್ವಿನ್ ನದಿಯ ಉಪನದಿಗಳ ಜಲಾನಯನ ಭೂಮಿ ಇದು. ನೈಋತ್ಯ ಭಾಗದಲ್ಲಿ ಬರಾಕ್ ನದಿ ಉಗಮಿಸುತ್ತದೆ. ಬೆಟ್ಟಗಳು ಅಲ್ಲಲ್ಲಿ ಕತ್ತರಿಸಿದಂತಿವೆ.

ವಾಯುಗುಣ: ನಾಗಾಲ್ಯಾಂಡಿನದು ಮಾನ್ಸೂನ್ ವಾಯುಗುಣ. ಸರಾಸರಿ ವಾರ್ಷಿಕ ಮಳೆ ಆಗ್ನೇಯದಲ್ಲಿ 1,81 ಸೆಂಮೀ, ಈಶಾನ್ಯದಲ್ಲಿ 259 ಸೆಂಮೀ ಗಿಂತ ಅಧಿಕ. ಉಷ್ಣತೆ ಸಾಮಾನ್ಯವಾಗಿ ಕಡಿಮೆಯಾಗಿರುತ್ತದೆ. ನೆಲದ ಎತ್ತರಕ್ಕೆ ಅನುಗುಣವಾಗಿ ಬೇಸಗೆಯಲ್ಲಿ $21^0$ಸೆ ನಿಂದ $40^0$ಸೆ ವರೆಗೆ ವ್ಯತ್ಯಾಸವಾಗುತ್ತದೆ. ಚಳಿಗಾಲದಲ್ಲಿ $4^0$ಸೆ ಕನಿಷ್ಠ ಮಿತಿ. ಇಲ್ಲಿನ ವಾಯುವಿನ ತೇವಾಂಶದಿಂದಾಗಿ ಬೇಸಿಗೆಯಲ್ಲಿ ತಗ್ಗಿನ ಪ್ರದೇಶಗಳಲ್ಲಿ ಧಗೆ ಹೆಚ್ಚು.

ಸಸ್ಯ ಮತ್ತು ಪ್ರಾಣಿವರ್ಗ: ಬೆಟ್ಟಗಳು ದಟ್ಟವಾದ ಕಾಡಿನಿಂದ ಆವೃತವಾಗಿವೆ. ಇಲ್ಲಿಯ ಕಾಡುಗಳನ್ನು ನಿತ್ಯ ಹಸುರಿನ ಮರಗಳ ಕಾಡು, ಅಗಲ ಎಲೆಗಳ ಮರಗಳ ಕಾಡು. ಪೀತದಾರು ಮರಗಳ ಕಾಡು ಎಂದು ವಿಂಗಡಿಸಬಹುದು. ವರ್ಗಾವಣೆ ಬೇಸಾಯಕ್ಕಾಗಿ (ಝೂಮ್) ಕಾಡುಗಳನ್ನು ಕಡಿದ ಎಡೆಗಳಲ್ಲಿ ಎತ್ತರವಾದ ಹುಲ್ಲು, ಬಿದಿರು, ಕುರುಚಲು ಬೆಳೆದಿವೆ. 1,220 ಮೀ ಗಳಿಗಿಂತ ಕೆಳಗಿನ ಪ್ರದೇಶದಲ್ಲಿ ನಿತ್ಯಹಸುರು ಕಾಡುಗಳಿವೆ. ಬೆಲೆಬಾಳುವ ಸಾಗುವಾನಿ ಮರಗಳೂ ಬಿದಿರೂ ಇವೆ. ಪೂರ್ವ ಮತ್ತು ಆಗ್ನೇಯ ಭಾಗದ ಎತ್ತರದ ಪ್ರದೇಶಗಳಲ್ಲಿ ಓಕ್, ಪೈನ್ ಮತ್ತು ಇತರ ಶಂಕುಪರ್ಣಿ ಮರಗಳಿವೆ.




ತಗ್ಗಿನ ಬೆಟ್ಟಗಳಲ್ಲಿರುವ ಪ್ರಾಣಿಗಳು ಖಡ್ಗಮೃಗ, ಆನೆ, ಹುಲಿ, ಚಿರತೆ, ಕರಡಿ, ಜಿಂಕೆ, ಕಾಡೆಮ್ಮೆ, ಕಾಡುಹಂದಿ ಮತ್ತು ಕಾಡೆತ್ತು, ಹಲವು ಬಗೆಯ ಕೋತಿಗಳು, ಮುಳ್ಳುಹಂದಿ, ಪ್ಯಾಂಗೊಲಿನ್, ಆಡು, ಕಾಡುನಾಯಿ, ನರಿ, ಪುನುಗಿನ ಬೆಕ್ಕು ಮತ್ತು ಮುಂಗುಸಿ ಜೊತೆಗೆ ಇಲ್ಲಿ ಹಲವು ಬಗೆಯ ಪಕ್ಷಿಗಳಿವೆ.

ಜನಸಂಖ್ಯೆ: ರಾಜ್ಯದ ಜನಸಾಂದ್ರತೆ ಚ.ಕಿಮೀ ಗೆ 120. ಪ್ರತಿ 1000 ಪುರುಷರಿಗೆ 900 ಸ್ತ್ರೀಯರಿದ್ದಾರೆ. ಈ ರಾಜ್ಯದಲ್ಲಿ ಹಿಂದುಗಳು, ಮುಸ್ಲಿಮರು, ಕ್ರೈಸ್ತರು, ಸಿಖ್ಖರು, ಜೈನರು ಮತ್ತು ಬೌದ್ಧರು ಇದ್ದಾರೆ. ನಾಗಾಗಳು ಇಂಡೋ–ಮಂಗೊಲಾಯಿಡ್ ಬುಡಕಟ್ಟಿಗೆ ಸೇರಿದವರು. ವಿವಿಧ ಭಾಗಗಳಲ್ಲಿ, ವಿವಿಧ ರೀತಿ–ನೀತಿ ಅನುಸರಿಸುವ ಅಂಗಮಿ, ಸೇಮಾ, ರೆಂಗ್ಮಾ, ಚಾಕೇಸಾಂಗ್, ಸಂಗ್‌ತಮ್, ಚಾಂಗ್, ಪೋಮ್, ಇಮ್, ಚುಂಗರ್, ಬೇನ್‌ಮುಂಗರ್, ಜೇಲಿಯಾಂಗ್, ಕುಕೀ ಮುಂತಾದ ಹದಿನೇಳು ವಿಭಿನ್ನ ಪಂಗಡಗಳಿವೆ. ಅವರೆಲ್ಲ ಇಂಡೋ–ಟಿಬೆಟನ್ ಮೂಲದ ಮೂವತ್ತು ಭಾಷೆ–ಉಪಭಾಷೆಗಳನ್ನು ಮಾತನ್ನಾಡುವವರು.ಈ ಜನ ಮಾತನಾಡುವಾಗ ಹೇರಳವಾಗಿ ಸಂಯುಕ್ತ ಪದಗಳನ್ನು ಬಳಸುತ್ತಾರೆ. ಯುದ್ಧ ಜನಾಂಗವೆಂದು ಹೆಸರಾದ ನಾಗಾಗಳು ಇಂದಿಗೂ ಯುದ್ಧ ಮತ್ತು ಬೇಟೆಯ ಉತ್ಸಾಹ ಮತ್ತು ಕ್ಷಾತ್ರಪರಂಪರೆಗಳನ್ನು ಕಾಯ್ದುಕೊಂಡು ಬಂದಿರುವುದು ಅವರ ಯುದ್ಧ ನೃತ್ಯಗಳಲ್ಲೂ ಆಟ ಪಂದ್ಯಗಳಲ್ಲೂ ಉತ್ಸವ ಮೇಳಗಳಲ್ಲೂ ಕಂಡುಬರುತ್ತದೆ.

ಕೃಷಿ: ಜನರ ಪ್ರಮುಖ ವೃತ್ತಿ ಕೃಷಿ. ವರ್ಗಾವಣೆ ಬೇಸಾಯ ರೂಢಿಯಲ್ಲಿದೆ. ಇಲ್ಲಿ ಕೆಲವು ಗಿಡಮರಗಳನ್ನು ಸುಡುವ ಕೆಲಸ ನಡೆಯುತ್ತದೆ. ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಸಣ್ಣ ಕಾಳುಗಳ ಬಿತ್ತನೆಯೂ ಏಪ್ರಿಲ್ ತಿಂಗಳಲ್ಲಿ ಬತ್ತದ ಬಿತ್ತನೆಯೂ ನಡೆಯುತ್ತದೆ. ಬತ್ತ ಪ್ರಮುಖ ಬೆಳೆ. ಕೃಷಿಯ ಭೂಮಿಯಲ್ಲಿ ಶೇ.70 ಭಾಗದಲ್ಲಿ ಬತ್ತದ ಬೆಳೆಯಿದೆ. ಕೊಯಿಲಿಗೆ ಬಂದ ಬೆಳೆಗಳನ್ನು ಕೆಲವರು ಕೈಯಿಂದಲೇ ಕೀಳುತ್ತಾರೆ. ಕುಡುಗೋಲು ಬಳಸುವುದೂ ಉಂಟು. ಸುಗ್ಗಿಯಾದ ಬಳಿಕ ಧಾನ್ಯಗಳನ್ನು ಬಿದಿರಿನ ಕಣಜಗಳಲ್ಲಿ ಸಂಗ್ರಹಿಸಿಡುತ್ತಾರೆ. ನೀರಾವರಿ ಸೌಲಭ್ಯ ಕಡಿಮೆ. ರಾಜ್ಯದ ಕೆರೆಕೊಳ್ಳಗಳಲ್ಲಿ ಮೀನು ಹಿಡಿಯುತ್ತಾರೆ. ಅರಣ್ಯಗಳಿಂದ ಬಿದಿರು, ಓಕ್, ಮನೆಕಟ್ಟುವ ಮತ್ತು ಚಪ್ಪರಗಳಿಗೆ ಬಳಸುವ ಮರ, ಉರುವಲು, ಗೋಂದು ಮುಂತಾದವು ದೊರೆಯುತ್ತವೆ.

ಕೈಗಾರಿಕೆಗಳು: ರಾಜ್ಯದಲ್ಲಿ ದೊಡ್ಡ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲ ಕಡಿಮೆ. ಅನೇಕ ಗ್ರಾಮಗಳಲ್ಲಿ ನೇಯ್ಗೆ ಕೆಲಸ ನಡೆಯುತ್ತದೆ. ಬಟ್ಟೆ, ರೇಷ್ಮೆ, ಬಿದಿರಿನ ಬುಟ್ಟಿಹೆಣಿಗೆ, ಕೃಷಿಗಾಗಿ ಮತ್ತು ಬೇಟೆಗಾಗಿ ಮರದ ಉಪಕರಣಗಳ ತಯಾರಿಕೆ– ಇವು ಕೆಲವು ಸಣ್ಣ ಕೈಗಾರಿಕೆಗಳು. ನೇಯ್ಗೆ ಕೇಂದ್ರಗಳನ್ನೂ ಗುಡಿಕೈಗಾರಿಕೆಗಳ ಕೇಂದ್ರಗಳನ್ನೂ ರೇಷ್ಮೆ ಕ್ಷೇತ್ರಗಳನ್ನೂ ಒಂದು ಕುಶಲ ವಸ್ತು ತಯಾರಿಕೆಯ ತರಬೇತಿ ಮತ್ತು ಉತ್ಪಾದನ ಕೇಂದ್ರವನ್ನೂ ಸಣ್ಣ ಕೈಗಾರಿಕೆಗಳ ಸೇವಾಕೇಂದ್ರವೊಂದನ್ನೂ ಸರ್ಕಾರ ನಡೆಸುತ್ತಿದೆ. ದಿಮಾಪುರ ಈ ಕೈಗಾರಿಕೆಗಳ ವ್ಯಾಪಾರ ಕೇಂದ್ರ. ಮೊಕೋಕ್‌ಚಂಗ್ ಇತರ ಪಟ್ಟಣಗಳು.

ಸಾರಿಗೆ–ಸಂಪರ್ಕ: ಪರ್ವತ ಪ್ರಧಾನವಾದ ಈ ರಾಜ್ಯದಲ್ಲಿ ಸಾರಿಗೆ–ಸಂಪರ್ಕ ಕಷ್ಟಕರ. ರಾಜ್ಯದ 5,139 ಕಿಮೀ ಉದ್ದದ ರಸ್ತೆಯಲ್ಲಿ 105 ಕಿಮೀ ರಾಷ್ಟ್ರೀಯ ಹೆದ್ದಾರಿ, 646 ಕಿಮೀ ರಾಜ್ಯ ಹೆದ್ದಾರಿ. ರಾಜ್ಯದಲ್ಲಿ 8.04 ಕಿಮೀ ರೈಲು ಮಾರ್ಗವಿದೆ. ದಿಮಾಪುರ ಮುಖ್ಯ ರೈಲ್ವೆ ನಿಲ್ದಾಣ. ಇದು ನಾಗಾಲ್ಯಾಂಡಿನ ಪ್ರವೇಶದ್ವಾರವೆಂದು ಪ್ರಸಿದ್ಧವಾಗಿದೆ. (ಎಸ್.ಜಿ.ಎಂ.ಪಿ.;ಬಿ.ಸಿ.ಪಿ.)

**ನಾಟಿಂಗ್ಯಾಮ್:** ಇಂಗ್ಲೆಂಡಿನ ನಾಟಿಂಗ್ಯಮ್‌ಷೈರ್ ಕೌಂಟಿಯ ಆಡಳಿತ ಕೇಂದ್ರ. ಬರ್ಮಿಂಗ್ ಹ್ಯಾಮ್ ಪಟ್ಟಣದ ಈಶಾನ್ಯಕ್ಕೆ 75 ಕಿಮೀ ದೂರದಲ್ಲಿ ಟ್ರೆಂಡ್ ನದಿಯ ದಡದಲ್ಲಿ ಉ.ಅ. $52^0 58'$ ಮತ್ತು ಪ.ರೇ. $1^0 10'$ ಮೇಲೆ ಇದೆ. ಮರಳು ದಿಬ್ಬವೊಂದರ ಮೇಲಿದ್ದ ಇದರ ಮೂಲ ನಿವೇಶನದಲ್ಲಿ 6ನೆಯ ಶತಮಾನದಲ್ಲಿ ಆಂಗ್ಲೊ–ಸ್ಯಾಕ್ಸನ್ನರು ನೆಲಸಿ ಇದಕ್ಕೆ ಸ್ನಾಟಿಂಗ್ ಹ್ಯಾಮ್ (ಸ್ನಾಟ್ ಜನರ ಗ್ರಾಮ) ಎಂಬ ಹೆಸರಿಟ್ಟರು. 9ನೆಯ ಶತಮಾನದಲ್ಲಿ ಡೆನ್‌ಮಾರ್ಕಿನಿಂದ ಬಂದ ಡೇನರು ಇದನ್ನು ಆಕ್ರಮಿಸಿದರು. ಆಗ ಇದು ಡೇನರ ಆಡಳಿತ ಘಟಕದ (ಡೇನ್‌ಲಾ) 5 ಪಟ್ಟಣಗಳಲ್ಲಿ ಒಂದಾಗಿತ್ತು. ನಾರ್ಮನ್ನರು ಇಂಗ್ಲೆಂಡನ್ನು ಆಕ್ರಮಿಸಿದ ತರುವಾಯ ಇಲ್ಲಿ ಹೊಸ ಪಟ್ಟಣವನ್ನು ಕಟ್ಟಿದರು (1066). ಸ್ಯಾಕ್ಸನರು ಸ್ಥಾಪಿಸಿದ ಹಳೆಯ ಪಟ್ಟಣವೂ ಅಸ್ತಿತ್ವದಲ್ಲಿತ್ತು. 1300ರವರೆಗೆ ಈ ಎರಡೂ ವಸತಿಗಳಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆಗಳಿದ್ದವು. 1449ರಲ್ಲಿ 6ನೆಯ ಹೆನ್ರಿ ನಾಟಿಂಗ ಹ್ಯಾಮ್ ಪಟ್ಟಣಕ್ಕೆ ಮಾರುಕಟ್ಟೆ ನಡೆಸುವುದೂ ಸೇರಿ ಎಲ್ಲ ಅಧಿಕಾರಗಳನ್ನೂ ನೀಡಿದ. ನಗರಪಾಲನನ್ನು (ಷೆರಿಫ್) ನೇಮಿಸಿದ. ದೊರೆ 2ನೆಯ ಹೆನ್ರಿ 1155ರಲ್ಲಿ ಹೊರಡಿಸಿದ ಪ್ರಣಾಳಿಕೆಯ ಪ್ರಕಾರ ಸ್ಥಾಪಿಸಿದ ಮಾರುಕಟ್ಟೆ ಆಧುನಿಕ ನಗರದ ಮಧ್ಯಭಾಗದಲ್ಲಿದೆ. ಸ್ಯಾಕ್ಸನರು ಪಟ್ಟಣವನ್ನು ಸ್ಥಾಪಿಸಿದ ಸ್ಟ್ಯಾಂಡರ್ಡ್ ಹಿಲ್ ಬಳಿ ನಾಟಿಂಗ ಹ್ಯಾಮ್ ದುರ್ಗವಿದೆ. ಇಲ್ಲಿಯ ಕ್ಯಾಸಲ್ ಗ್ರೀನ್ ಬಳಿ ಐತಿಹ್ಯಗಳ ವೀರ ರಾಬಿನ್ ಹುಡ್ ಮತ್ತು ಅವನ ಸಂಗಡಿಗರು ಇದ್ದ ಅರಣ್ಯವಿದೆ.

ನಾಟಿಂಗ ಹ್ಯಾಮ್‌ನ ಶಿಕ್ಷಣ ಸಂಸ್ಥೆಗಳು ನಾಟಿಂಗ ಹ್ಯಾಮ್, ಗ್ರ್ಯಾಮರ್ ಸ್ಕೂಲ್ (1153), ನಾಟಿಂಗ ಹ್ಯಾಮ್ ಬಾಲಿಕೆಯರ ಪ್ರೌಢಶಾಲೆ (1875) ಮತ್ತು ವಿಶ್ವವಿದ್ಯಾಲಯ ಕಾಲೇಜ್ (1881). ನಾಟಿಂಗ ಹ್ಯಾಮ್ ವಿಶ್ವವಿದ್ಯಾಲಯ 1948ರಲ್ಲಿ ಸ್ಥಾಪಿತವಾಯಿತು. ಇಲ್ಲಿ ಎರಡು ನಾಟಕಮಂದಿರಗಳಿವೆ. ಆರ್ಕ್‌ರೈಟ್ ತನ್ನ ಪ್ರಥಮ ನೂಲುವ ಸಾಧನವನ್ನೂ (ಸ್ಪಿನ್ನಿಂಗ್ ಫ್ರೇಮ್) ಹಾರ್‌ಗ್ರೀವ್ಸ್ ತನ್ನ ಸ್ಪಿನಿಂಗ್ ಜೆನ್ನಿಯನ್ನೂ ಇಲ್ಲಿ ಉಪಜ್ಞಿಸಿದರು. ಕೈಗಾರಿಕಾ ಕ್ರಾಂತಿಯ ಆಗಮನವನ್ನು ಸಾರಿದ ಈ ಉಪಜ್ಞೆಗಳನ್ನು ಬಳಕೆಗೆ ತಂದಾಗ ಇದನ್ನು ಪ್ರತಿಭಟಿಸಿ 1811–12 ಮತ್ತು 1816–17ರಲ್ಲಿ ಕೈಕೆಲಸಗಾರರ ಗಲಭೆಗಳಾದವು. 19ನೆಯ ಶತಮಾನದಲ್ಲಿ ಲಾರ್ಡ್ ಬೈರನ್, 20ನೆಯ ಶತಮಾನದಲ್ಲಿ ಕಾದಂಬರಿಕಾರ ಡಿ.ಎಚ್. ಲಾರೆನ್ಸ್ ಇಲ್ಲಿದ್ದರು. ಇದು ರೈಲ್ವೆ, ರಸ್ತೆ ಮತ್ತು ಜಲಮಾರ್ಗಗಳ ಕೇಂದ್ರ. ಕಾಲುಚೀಲ, ಲೇಸ್ ಹಾಗೂ ಬಟ್ಟೆ ತಯಾರಿಕೆಗೆ ಹಿಂದಿನಿಂದಲೂ ಇದು ಪ್ರಸಿದ್ಧವಾಗಿದೆ. ಸಿಗರೇಟ್ ಮತ್ತು ಔಷಧಗಳನ್ನು ಇಲ್ಲಿ ತಯಾರಿಸುತ್ತಾರೆ. ನಾಟಿಂಗ ಹ್ಯಾಮ್ ಕೌಂಟಿ ಪ್ರದೇಶದ ಜನಸಂಖ್ಯೆ 748503 (2001). ನಗರದ ಜನಸಂಖ್ಯೆ 275100 (2005). (ವಿ.ಜಿ.ಕೆ.)

**ನಾಟಿಂಗ ಹ್ಯಾಮ್‌ಷೈರ್:** ಇಂಗ್ಲೆಂಡಿನ ಈಸ್ಟ್ ಮಿಡ್ಲೆಂಡ್ಸ್ ಪ್ರದೇಶದ ಕೌಂಟಿ. ಲಿಂಕನ್ ಷೈರ್, ಲೀಸೆಸ್ಟರ್ ಷೈರ್, ಡರ್ಬಿಷೈರ್ ಮತ್ತು ಸೌತ್‌ಯಾರ್ಕ್ ಷೈರ್‌ಗಳ ನಡುವೆ ಇದೆ. ವಿಸ್ತೀರ್ಣ 2164 ಚ.ಕಿಮೀ. ಜನಸಂಖ್ಯೆ 748503 (2001). ಈ ಕೌಂಟಿ ದಕ್ಷಿಣ ಪೆನ್ನೈನ್‌ಗಳ ಪೂರ್ವಕ್ಕೆ ವಿಸ್ತಾರವಾಗಿ ಹಬ್ಬಿರುವ ತಗ್ಗು ನೆಲದ ಭಾಗ. ಪಶ್ಚಿಮಭಾಗದಲ್ಲಿ ಭೂಮಿ 122–183 ಮೀ ಗಳಷ್ಟು ಎತ್ತರವಾಗಿದೆ. ಪಶ್ಚಿಮದತ್ತ ಕಡಿದಾಗಿರುವ ಇಕ್ಕಟ್ಟಾದ ಉನ್ನತ ಪ್ರದೇಶದಲ್ಲಿ ಸುಣ್ಣಕಲ್ಲಿನ ಕೆಳಗೆ ಇಂಗಾಲಸ್ತರಗಳುಂಟು. ಇಲ್ಲಿ ಕಲ್ಲಿದ್ದಲು ನಿಕ್ಷೇಪಗಳಿವೆ. ನಾಟಿಂಗ ಹ್ಯಾಮ್, ಮ್ಯಾನ್ಸ್‌ಫೀಲ್ಡ್ ಮತ್ತು ವರ್ಕಪ್ ಮುಖ್ಯ ಕಲ್ಲಿದ್ದಲು ಕೇಂದ್ರಗಳು. ಬಾಟ್ರಿಯಿಂದ ದಕ್ಷಿಣದತ್ತ ನಾಟಿಂಗ ಹ್ಯಾಮ್‌ವರೆಗಿನದು ಮರಳುಗಲ್ಲಿನ ಪ್ರದೇಶ. ಕೌಂಟಿಯ ಪೂರ್ವಭಾಗ ತಗ್ಗುನೆಲ. ಇದರ ನಡುವೆ ಟ್ರೆಂಟ್ ನದಿ ಹರಿಯುತ್ತದೆ. ಈ ಪ್ರದೇಶದ ಬಹುಭಾಗ ಷೆರ್‌ವುಡ್ ಅರಣ್ಯ. ಇಲ್ಲಿ ಓಕ್ ಮತ್ತು ಬರ್ಚ್ ಮರಗಳಿವೆ.

ಇದು ಕೃಷಿ ಪ್ರಧಾನ ಪ್ರದೇಶ. ಬಾರ್ಲಿ, ಗೋದಿ, ಓಟ್ಸ್, ಸಕ್ಕರೆ ಬೀಟ್ ಮತ್ತು ಆಲೂಗಡ್ಡೆ ಮುಖ್ಯ ಬೆಳೆಗಳು. ಇಲ್ಲಿ ಹಣ್ಣು ಮತ್ತು ತರಕಾರಿ ತೋಟಗಳೂ ಇವೆ. ಕಲ್ಲಿದ್ದಲು ಇಲ್ಲಿನ ಮುಖ್ಯ ಖನಿಜ. ಹಾಲುಗಲ್ಲು, ಜೆಲ್ಲಿ ಇವೂ ಸಿಗುತ್ತವೆ. ನಾರ್ಮನ್ನರ ಕಾಲದಲ್ಲಿ ಈ ಪ್ರದೇಶ ಉಣ್ಣೆ ಕೈಗಾರಿಕೆಗೆ ಹೆಸರಾಗಿತ್ತು. 16ನೆಯ ಶತಮಾನದಲ್ಲಿ ಈ ಕೈಗಾರಿಕೆ ಕುಂದಿತು. 1959ರಲ್ಲಿ ಕಾಲುಚೀಲದ ಚೌಕಟ್ಟಿನ ಉಪಜ್ಞೆಯಾದ ಮೇಲೆ ಹೆಣಿಗೆ ಉಡುಪುಗಳಿಗೆ ಇದು ಪ್ರಸಿದ್ಧವಾಯಿತು. ಈಗಲೂ ಇದು ಪ್ರಾಮುಖ್ಯ ಉಳಿಸಿಕೊಂಡಿದೆ. ನಾಟಿಂಗ ಹ್ಯಾಮ್ ಉಡುಪುಗಳ ಕೈಗಾರಿಕ ಕೇಂದ್ರ. ಸೈಕಲ್, ತಂಬಾಕು, ಔಷಧ ಮತ್ತು ಭಾರಿ ಎಂಜಿನಿಯರಿಂಗ್ ಇವು ಈ ಪ್ರದೇಶದ ಆಧುನಿಕ ಕೈಗಾರಿಕೆಗಳು.

ನಾಟಿಂಗ ಹ್ಯಾಮ್ ಈ ಕೌಂಟಿಯ ಆಡಳಿತ ಕೇಂದ್ರ. ಕೌಂಟಿಯಲ್ಲಿ 10 ಜಿಲ್ಲೆಗಳು ಮತ್ತು 7 ಗ್ರಾಮಾಂತರ ಜಿಲ್ಲೆಗಳೂ ಇವೆ. ಇಲ್ಲಿ ಅನೇಕ ಧಾರ್ಮಿಕ ಕಟ್ಟಡಗಳಿವೆ. ಸ್ಟೇಪಲ್‌ಫರ್ಡ್‌ನಲ್ಲಿ ಪೂರ್ವ ರೋಮನ್ ಕಾಲದ ಸುಂದರ ಶಿಲುಬೆಯಿದೆ. ಇಲ್ಲಿಯ ಚರ್ಚುಗಳು ವಾಸ್ತುಶಿಲ್ಪಕ್ಕೆ ಹೆಸರಾಗಿವೆ. 1884ರ ಸೌತ್‌ವೆಲ್ ಚರ್ಚ್ ನಾರ್ಮನ್ ವಾಸ್ತುವಿನ ಸುಂದರ ಉದಾಹರಣೆ. ಲಿಂಡನ್, ಲೀಸೆಸ್ಟರ್, ಡರ್ಬಿ, ಡಾಂಕಾಸ್ಟರ್, ಗ್ರ್ಯಾಂತ್ಯಾಮ್‌ಗಳೊಂದಿಗೆ ರೈಲು ಸಂಪರ್ಕವಿದೆ. ಕೌಂಟಿಯ ಒಳಭಾಗದಲ್ಲಿ ಟ್ರೆಂಟ್ ನದಿಯೂ ಬಾಟ್ರಿಯಿಂದ ಟ್ರೆಂಟ್‌ವರೆಗೆ ಐಡ್ಲ್ ನದಿಯೂ ನೌಕಾ ಯಾನಯೋಗ್ಯವಾಗಿದೆ. (ವಿ.ಜಿ.ಕೆ.)

**ನಾನ್‌ಕಿಂಗ್:** ಚೀನದ ಪ್ರಮುಖ ಪೂರ್ವಮಧ್ಯ ಪ್ರಾಂತ್ಯವಾದ ಜೀಯಾಂಗ್ಸೂವಿನ ಆಡಳಿತ ಕೇಂದ್ರ. ಇದು ಯಾಂಟ್ಸ್–ಕಿ–ಯಾಂಗ್ ನದಿಯ ದಡದಲ್ಲಿದೆ. ಜನಸಂಖ್ಯೆ 6,00,000 (1998). (ವಿ.ಜಿ.ಕೆ.)

**ನಾರ್ ಫೋಕ್:** ಜನವಸತಿಯುಳ್ಳ ಪುಟ್ಟ ದ್ವೀಪ. ದಕ್ಷಿಣ ಫೆಸಿಫಿಕ್ ಸಾಗರದಲ್ಲಿ ಆಸ್ಟ್ರೇಲಿಯದ ಪೂರ್ವಕ್ಕೆ ನ್ಯೂಜಿಲೆಂಡ್ ಮತ್ತು ನ್ಯೂ ಕ್ಯಾಲಿಡೊನಿಯಗಳ ನಡುವೆ ಇತರೆ ಎರಡು ದ್ವೀಪಗಳನ್ನು ಒಳಗೊಂಡಂತೆ ಇದೆ. ಇದು ಆಸ್ಟ್ರೇಲಿಯದ ಬಾಹ್ಯ ಭೂ ಮೇರೆಗಳಾಗಿರುತ್ತದೆ.

ಇದರ ಅಕ್ಷಾಂಶ ಮತ್ತು ರೇಖಾಂಶಿಕ ಸ್ಥಾನ $29^0 02'$ ದ. ಮತ್ತು $167^0 57'$ ಪೂ. ವಾಗಿರುತ್ತದೆ. ಇದರ ಒಟ್ಟು ಭೌಗೋಳಿಕ ಕ್ಷೇತ್ರ 34.6 ಚ.ಕಿಮೀ. ಕಿಂಗ್‌ಸ್ಟನ್ ಇದರ ರಾಜಧಾನಿ. ಬರೆಂಟಪ್ಪೈನ್ ನಗರ ಇಲ್ಲಿನ ಅತ್ಯಂತ ದೊಡ್ಡ ನಗರ. ಈ ದ್ವೀಪ ಸು. 32 ಕಿಮೀ ಕರಾವಳಿ ಭಾಗವನ್ನು ಹೊಂದಿದೆ. ಇಲ್ಲಿನ ವಾಯವ್ಯ ಭಾಗದಲ್ಲಿ ಮೌಂಟ್ ಬೇಟ್ಸ್ ಹೆಸರಿನ ಎತ್ತರವಾದ ಶಿಖರವನ್ನು ಹೊಂದಿದ್ದು ಇದು ಸಮುದ್ರಮಟ್ಟದಿಂದ 319 ಮೀ ಎತ್ತರದಲ್ಲಿದೆ. ಈ ದ್ವೀಪದ ಹೆಚ್ಚಿನ ಭಾಗ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಸಹಕಾರಿಯಾಗಿದೆ.

ಇಲ್ಲಿನ ವಾಯುಗುಣ ಉಪಉಷ್ಣವಲಯದ ಮಾದರಿಯದಾಗಿದೆ. ಆದರೆ ಸಾಗರದ ಪ್ರಭಾವದಿಂದ ಇದು ಮತ್ತಷ್ಟು ಹಿತಕರವಾಗಿದೆ. ಜನಸಂಖ್ಯೆ 21841 (2005). ಜನಸಾಂದ್ರತೆ ಪ್ರ.ಚ.ಕಿಮೀ ಗೆ 53. ಆಸ್ಟ್ರೇಲಿಯನ್ ಡಾಲರ್ ಇಲ್ಲಿನ ಹಣ. *

**ನಾರಾಯಣಪುರ:** ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ಕೃಷ್ಣಾ ನದಿಯ ದಂಡೆಯ ಮೇಲಿರುವ ಈ ಗ್ರಾಮದ ಬಳಿ ನದಿಗೆ ಒಂದು ಕಟ್ಟೆ ನಿರ್ಮಿತವಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಸೇರಿದ ಈ ಕಟ್ಟೆಯಿಂದ ಬಿಜಾಪುರ, ಗುಲ್ಬರ್ಗ ಹಾಗೂ ರಾಯಚೂರು ಜಿಲ್ಲೆಯ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಇಲ್ಲಿಗೆ ಸು. 5 ಕಿಮೀ ದೂರದಲ್ಲಿ ಛಾಯಾಭಗವತಿ ಗುಹಾದೇವಾಲಯವೂ ಬಳಿಯಲ್ಲಿ ಜಲಪಾತವೂ ಇದೆ. *

**ನಾರ್ತಂಬರ್ಲೆಂಡ್:** ಇಂಗ್ಲೆಂಡಿನ ಉತ್ತರ ತುದಿಯಲ್ಲಿರುವ ಒಂದು ಕೌಂಟಿ. ಉತ್ತರಕ್ಕೆ ಸ್ಕಾಟ್ಲೆಂಡ್, ಪೂರ್ವಕ್ಕೆ ಉತ್ತರ ಸಮುದ್ರ, ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ಕಂಬ್ರಿಯ, ಟೈನ್, ವೇರ್ ಮತ್ತು ಡರ್‌ಹ್ಯಾಮ್ ಇದೆ. ವಿಸ್ತೀರ್ಣ 5033 ಚ.ಕಿಮೀ. ಜನಸಂಖ್ಯೆ 307186 (2001). ನ್ಯೂ ಕ್ಯಾಸಲ್, ಬ್ಲೈತ್, ಆಂಬ್ಲ್, ಆಲ್ನ್‌ಮೌತ್ ಮತ್ತು ಬೆರ್ವಿಕ್ –ಇವು ಮುಖ್ಯ ಬಂದರುಗಳು.

ಪೂರ್ವದ ಉದ್ದನೆಯ ಸಮುದ್ರ ತೀರ ಸ್ಕಾಟ್ಲೆಂಡಿನ ಗಡಿಯಿಂದ ದಕ್ಷಿಣಕ್ಕೆ ಟೈನ್ ನದಿಯ ಮುಖದವರೆಗೆ ಹಬ್ಬಿದೆ. ಸಮುದ್ರದಲ್ಲಿ ಅನೇಕ ದ್ವೀಪಗಳಿವೆ. ಅವುಗಳಲ್ಲಿ ಹೋಲಿ (ಲಿಂಡಸ್‌ಫಾರ್ನ್) ಮುಖ್ಯವಾದುದು. ಪೂರ್ವದ ತಗ್ಗು ಮೈದಾನದಿಂದ ಭೂಮಿಯ

ಎತ್ತರ ಹೆಚ್ಚಾಗುತ್ತಾ ಹೋಗಿ ಮಧ್ಯದ ಬಂಜರು ಪ್ರದೇಶವನ್ನು ದಾಟಿ ಮುಂದೆ ವಾಯವ್ಯದಲ್ಲಿ 300–700 ಮೀ ಎತ್ತರದ ಶಿವೀಯತ್ ಬೆಟ್ಟಗಳನ್ನು ಮುಟ್ಟುತ್ತದೆ. ಈ ಬೆಟ್ಟಗಳಲ್ಲಿ ರೀಡ್ ಮತ್ತು ಉತ್ತರ ಟೈನ್ ನದಿಗಳು ಅನೇಕ ಕೊರಕಲುಗಳನ್ನು ಮಾಡಿವೆ. ಪೂರ್ವ, ಮಧ್ಯ ಮತ್ತು ದಕ್ಷಿಣ ನಾರ್ತಂಬರ್ಲೆಂಡಿನ ಹೆಚ್ಚು ಭಾಗ ಸುಣ್ಣದ ಕಲ್ಲು ಮತ್ತು ಮರಳುಗಲ್ಲು ಪ್ರದೇಶ. ಅಲ್ಲಲ್ಲಿ ಅಗ್ನಿಶಿಲೆಗಳಿಂದಾದ ಏರಿಗಳಿವೆ. ತೀರದ ಬಯಲಿನ ಅಡಿಯಲ್ಲಿ ಉತ್ತರದಲ್ಲಿ ಸುಣ್ಣದ ಕಲ್ಲು ಮತ್ತು ದಕ್ಷಿಣದಲ್ಲಿ ಇಂಗಾಲದ ಕಲ್ಲುಗಳ ಸ್ತರಗಳಿದ್ದು, ಮೇಲೆ ಸಣ್ಣ ಮರಳು, ದಪ್ಪಮರಳು, ಭಾರಿ ಜೇಡಿಮಣ್ಣು, ಫಲವತ್ತಾದ ಜೇಡಿಮಣ್ಣು ಮುಂತಾದ ನೀರ್ಗಲ್ಲು ನಿಕ್ಷೇಪಗಳಿವೆ. ಎತ್ತರಪ್ರದೇಶದ ತೆಳುಮಣ್ಣು ಆಮ್ಲ ಮತ್ತು ಇಂಗಾಲಗಳಿಂದ ಮಿಶ್ರಿತವಾದದ್ದು. ಟ್ವೀಡ್, ಕೋಕೆಟ್, ವಾನ್ಸಬೆಕ್, ಬ್ಲೈತ್ ಮತ್ತು ಟೈನ್ ಮುಖ್ಯ ನದಿಗಳು.

ಕೌಂಟಿಯ ವಾಯುಗುಣ ತಂಪಾದುದ್ದು. ಚಳಿಗಾಲ ಹೆಚ್ಚು ತೀವ್ರವಾಗಿರುತ್ತದೆ. ವಸಂತ ಬರುವುದು ತಡ. ಉಷ್ಣತೆ ಸಾಮಾನ್ಯವಾಗಿ $16^0$ ಯನ್ನು ಮೀರುವುದಿಲ್ಲ. ಕರಾವಳಿಯಲ್ಲಿ ದಟ್ಟವಾದ ಸಮುದ್ರ ಮಂಜು ಕವಿಯುವುದುಂಟು. ಮಳೆ ಕಡಿಮೆ; ಕರಾವಳಿಯಲ್ಲಿ 63 ಸೆಂಮೀ ಶಿವೀಯತ್ ಬೆಟ್ಟಗಳ ಮೇಲೆ 1.27 ಸೆಂಮೀ.

ನಾರ್ತಂಬರ್ಲೆಂಡಿನ ಅರ್ಧ ಭಾಗ ಗುಡ್ಡಗಾಡು. ಶೇ. 45ರಷ್ಟು ಭೂಮಿ ಸಾಮಾನ್ಯ. ಉಳಿದ ಭೂಮಿ ಫಲವತ್ತಾಗಿದೆ. ಕರಾವಳಿಯ ಸೇ.5ರಷ್ಟು ಬಯಲು ಹಾಗೂ ನದಿ ಕಣಿವೆಗಳು ವ್ಯವಸಾಯ ಯೋಗ್ಯ. ಜವೆಗೋದಿ. ಗೋದಿ, ಟರ್ನಿಪ್ ಮತ್ತು ಬಾರ್ಲಿ ಮುಖ್ಯ ಬೆಳೆಗಳು. ದನಗಳಿಗಿಂತ ಕುರಿಗಳ ಸಂಖ್ಯೆ ಹೆಚ್ಚು. ಕರಾವಳಿಯಲ್ಲಿ ಮಿಶ್ರ ವ್ಯವಸಾಯ ಸಾಮಾನ್ಯ. ಮೀನುಗಾರಿಕೆ ಇನ್ನೊಂದು ಉದ್ಯೋಗ. ಕೌಂಟಿಯ ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಪ್ರಮುಖ ಕೈಗಾರಿಕೆ ಮತ್ತು ಗಣಿಗಾರಿಕೆ ಪಟ್ಟಣಗಳಿವೆ. ಕೌಂಟಿಯಲ್ಲಿ ಕಲ್ಲಿದ್ದಲು, ಕಬ್ಬಿಣ ದೊರೆಯುವುದರಿಂದ ಹಲವು ಕೈಗಾರಿಕೆಗಳಿವೆ. ಕೌಂಟಿಯ ಮುಖ್ಯಸ್ಥಳ ನ್ಯೂ ಕ್ಯಾಸಲ್. ವಾಲ್‌ಸೆಚಿಡ್, ಟೈನ್‌ಮೌತ್, ವೂಲರ್, ರಾತ್‌ಬರಿ ಮತ್ತು ಬೆಲ್ಲಿಂಗ್‌ಹ್ಯಾಮ್ ಇತರ ಪಟ್ಟಣಗಳು. (ಜಿ.ಕೆ.ಯು.)

**ನಾರ್ಫೋಕ್[1] :** ಅಮೆರಿಕ ಸಂಯುಕ್ತ ಸಂಸ್ಥಾನ ವರ್ಜಿನಿಯ ರಾಜ್ಯದ ಒಂದು ನಗರ, ಬಂದರು. ಹ್ಯಾಮ್ಟನ್ ರೋಡ್ಸ್‌ನ ದಕ್ಷಿಣದಲ್ಲಿ ಎಲಿಜಬೆತ್ ನದಿ ದಂಡೆಯ ಮೇಲಿದೆ. ಇದು ಅಮೆರಿಕನ್ ನೌಕಾದಳದ ಕೇಂದ್ರ. ಇದು 1682ರಲ್ಲಿ ಸ್ಥಾಪಿತವಾಯಿತು. ಅಮೆರಿಕದ ಅಂತರ್ಯುದ್ಧದ ಕಾಲದಲ್ಲಿ ಈ ನಗರವನ್ನು ಒಕ್ಕೂಟ ಸರ್ಕಾರದ ಸೈನ್ಯ ಆಕ್ರಮಿಸಿಕೊಂಡಿತ್ತು (ಮೇ, 1862). ಎರಡನೆಯ ಮಹಾಯುದ್ಧದ ಕಾಲದಲ್ಲಿ (1939–1945) ಈ ಸ್ಥಳ ಅಮೆರಿಕದ ಬಹು ಮುಖ್ಯ ಸೇನಾ ಕೇಂದ್ರವಾಗಿತ್ತು. ಇಲ್ಲಿಯ ಪ್ರಧಾನ ಕೈಗಾರಿಕೆಗಳು ಹಡಗು ನಿರ್ಮಾಣ, ವಿಮಾನ ಹಾಗೂ ಮೋಟಾರು ಜೋಡಣೆ, ಕೃಷಿ ಉಪಕರಣ ಹಾಗೂ ಬಟ್ಟೆ ತಯಾರಿಕೆ. ಇಲ್ಲಿ ರಾಜ್ಯ ಕಾಲೇಜು (1935) ಮತ್ತು ವರ್ಜಿನಿಯ ವೆಸ್ಲಿಯನ್ ಕಾಲೇಜುಗಳಿವೆ. ನಗರದ ಜನಸಂಖ್ಯೆ 234403. (ವಿ.ಜಿ.ಕೆ.)

**ನಾರ್ಫೋಕ್[2] :** ಅಮೆರಿಕದ ನೆಬ್ರಾಸ್ಕ ರಾಜ್ಯದ ಮ್ಯಾಡಿಸನ್ ಜಿಲ್ಲೆಯಲ್ಲಿರುವ ಒಂದು ಪಟ್ಟಣ. ಇದೊಂದು ವ್ಯಾಪಾರ ಕೇಂದ್ರ. ಹೈನುಗಾರಿಕೆ ಪ್ರಧಾನವಾಗಿದೆ. (ವಿ.ಜಿ.ಕೆ.)

**ನಾರ್ಫೋಕ್[3] :** ಪೂರ್ವ ಇಂಗ್ಲೆಂಡಿನ ಒಂದು ಕೌಂಟಿ. ಪಶ್ಚಿಮದಲ್ಲಿ ಕೇಂಬ್ರಿಜ್‌ಷೈರ್ ಮತ್ತು ಲಿಂಕನ್‌ಷೈರ್, ಉತ್ತರ ಮತ್ತು ಪೂರ್ವದಲ್ಲಿ ಉತ್ತರ ಸಮುದ್ರ, ದಕ್ಷಿಣದಲ್ಲಿ ಸಫೋಕ್ ಇದೆ. ವಿಸ್ತೀರ್ಣ 5,353 ಚ.ಕಿಮೀ. ಜನಸಂಖ್ಯೆ ಸು. 296733 (2001) ನಾರ್ವಿಚ್ ಇದರ ಮುಖ್ಯ ಹಾಗೂ ಅತ್ಯಂತ ದೊಡ್ಡ ಪಟ್ಟಣ (127600(2001)). ಈ ಕೌಂಟಿಯ ಅತ್ಯಂತ ಎತ್ತರದ ಭಾಗ (76.2 ಮೀ) ಸ್ವಾಫ್‌ಹ್ಯಾಮಿನ ವಾಯವ್ಯಕ್ಕಿದೆ. ಇಲ್ಲಿಯ ಸೀಮೆಸುಣ್ಣದ ಇಳಿಜಾರು ಪ್ರದೇಶ ಪಶ್ಚಿಮದ ಸಮತಟ್ಟಿನ ಫಿನ್ಲೆಂಡ್ ಜಿಲ್ಲೆಯ ಕಡೆಯಿಂದ ಕಡಿದಾಗಿ ಈ ಎಡೆಗೆ ಏರಿ, ಪೂರ್ವದಿಕ್ಕಿನ ನೀರ್ಗಲ್ಲುಬಂಡೆ, ಜೇಡಿಮಣ್ಣು, ಮರಳು ಮತ್ತು ಗರಸಿನಿಂದ ಕೂಡಿದ ಪ್ರದೇಶದ ಕಡೆಗೆ ನಿಧಾನವಾಗಿ ಇಳಿಯುತ್ತದೆ. ಕೌಂಟಿಯ ಬಹುಭಾಗ ಸಮತಟ್ಟಿನ ಮತ್ತು ಫಲವತ್ತಾದ ಭೂಮಿಯಿಂದ ಕೂಡಿದೆ. ನಾರ್ಫೋಕಿನ ಪೂರ್ವಭಾಗದಿಂದ ಮುಂದಕ್ಕೆ ಮರಳು ಹಾಗೂ ಮೆಕ್ಕಲು ಮಣ್ಣು ತುಂಬಿದ ಕಣಿವೆ ಸಿಕ್ಕುತ್ತದೆ. ಈ ಕಣಿವೆಯಲ್ಲಿ ಮಾನವ ನಿರ್ಮಿತ ರಮ್ಯ ಸರೋವರಗಳಿವೆ. ಕೌಂಟಿಯ ಪೂರ್ವದ ಕಡೆ ಮರಳು ಮತ್ತು ಗರಸಿನ ಗುಪ್ಪೆಯ ಚಾಚು ಏಣುಗಳು ಉಂಟು.

ಈ ಕೌಂಟಿಯದು ಬಿಸಿಲಿನಿಂದ ಕೂಡಿದ ಶುಷ್ಕ ವಾಯುಗುಣ. ಭೂಮಿ ಸಾಮಾನ್ಯವಾಗಿ ಫಲವತ್ತಾಗಿರುವುದರಿಂದ ಇಲ್ಲಿ ವ್ಯವಸಾಯ ಅಭಿವೃದ್ಧಿ ಹೊಂದಿದೆ. ಇದು ಇಂಗ್ಲೆಂಡಿನಲ್ಲಿ ಬಾರ್ಲಿ ಮತ್ತು ಸಕ್ಕರೆ ಬೀಟ್ ಬೆಳೆಯುವ ಪ್ರಮುಖ ಪ್ರದೇಶ. ಗೋದಿ ಹಾಗೂ ಆಲೂಗೆಡ್ಡೆ ಮತ್ತು ಇತರ ತರಕಾರಿಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ದನ, ಹಂದಿ, ಕೋಳಿ ಮುಂತಾದವುಗಳ ಸಾಕಣೆಯುಂಟು. ಯಾರ್‌ಮೌತ್ ಇಂಗ್ಲೆಂಡಿನ ಪ್ರಮುಖ ಮೀನುಗಾರಿಕೆ ಬಂದರುಗಳಲ್ಲೊಂದು. ಹಡಗು ನಿರ್ಮಾಣ ಹಾಗೂ ದುರಸ್ತು ಕೂಡ ಇಲ್ಲಿ ನಡೆಯುತ್ತದೆ. ಕ್ರೋಮರ್‌ರಲ್ಲಿ 15ನೆಯ ಶತಮಾನದ ಚರ್ಚ್ ಇದೆ. ಕಿಂಗ್ಸ್ ಲಿನ್ ಒಂದು ವ್ಯಾಪಾರಸ್ಥಳ. ಇಲ್ಲಿಯ ಬಂದರಿನಿಂದ ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಸಮುದ್ರದ ಬಂದರುಗಳೊಂದಿಗೆ ವ್ಯಾಪಾರ ನಡೆಯುತ್ತದೆ. (ವಿ.ಜಿ.ಕೆ.)

**ನಾರ್ಮಂಡಿ:** ಉತ್ತರ ಫ್ರಾನ್ಸಿನ ಒಂದು ಇತಿಹಾಸ ಪ್ರಸಿದ್ಧ ಪ್ರದೇಶ. ಇದು ಹಿಂದೆ ಉತ್ತರ ಫ್ರಾನ್ಸಿನ ಒಂದು ಪ್ರಾಂತ್ಯವಾಗಿತ್ತು. ಈಗಿನ ಮಾನ್‌ಷ್, ಕ್ಯಾಲ್ವಡಾಸ್, ಸೀನ್–ಮಾರೀಟೀಮ್, ಆರ್ ಮತ್ತು ಆರ್ನ್ ಡಿಪಾರ್ಟ್‌ಮೆಂಟ್‌ಗಳು ಇರುವ ಪ್ರದೇಶವಿದು. ಇದರ ಪಶ್ಚಿಮ ಮತ್ತು ಉತ್ತರದಲ್ಲಿ ಇಂಗ್ಲಿಷ್ ಕಡಲ್ಗಾಲುವೆ ಇದೆ.

ಇದು ಹಿಂದೆ ರೋಮನ್ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟ ಗಾಲ್‌ನ ಐದು ಆಡಳಿತ ವಿಭಾಗದಲ್ಲಿ ಒಂದಾದ ಲಗ್ಡನೆನ್ಸಿಸ್‌ನ ಭಾಗವಾಗಿತ್ತು. 9ನೆಯ ಶತಮಾನದ ಮಧ್ಯಭಾಗದಲ್ಲಿ ನಾರ್ತ್‌ಮನ್ನರು ಇದರ ಮೇಲೆ ದಾಳಿ ಮಾಡಿದ್ದರಿಂದ ಈ ಪ್ರದೇಶಕ್ಕೆ ನಾರ್ಮಂಡಿ ಎಂಬ ಹೆಸರು ಬಂತು. ಇದರ ಕರಾವಳಿ ಹಲವು ಕಡಿದಾದ ತೀರಗಳನ್ನು ಹೊಂದಿದೆ. ಜನಸಂಖ್ಯೆ : 3.2 ಮಿಲಿಯನ್. (ಜೆ.ಎಸ್.ಎಸ್.)

**ನಾರ್ವಿಚ್:** ಅಮೆರಿಕ ಸಂಯುಕ್ತಸಂಸ್ಥಾನದ ಕನೆಕ್ಟಿಕಟ್ ರಾಜ್ಯದ ನ್ಯೂ ಲಂಡನ್ ಕೌಂಟಿಯ ಒಂದು ನಗರ. ಯಾಂಟಿಕ್ ಮತ್ತು ಷೀಟಕಟ್ ನದಿಗಳ ಸಂಗಮದ ಬಳಿ, ಉ.ಅ. $41^0 32'$ ಮತ್ತು ಪ.ರೇ. $72^0 05'$ ಮೇಲೆ ಇದೆ. ನ್ಯೂ ಲಂಡನ್ ನಗರಕ್ಕೆ ಉತ್ತರದಲ್ಲಿ 21 ಕಿಮೀ ದೂರದಲ್ಲಿ ಸಮುದ್ರಮಟ್ಟಕ್ಕೆ 31 ಮೀ. ಎತ್ತರದಲ್ಲಿ ಈ ನಗರವನ್ನು ಕಟ್ಟಲಾಗಿದೆ. ಇಲ್ಲಿ ಹತ್ತಿ, ಉಣ್ಣೆ ಮತ್ತು ವೆಲ್ವೆಟ್ ಬಟ್ಟೆಗಳು, ರಾಸಾಯನಿಕ, ಪಾದರಕ್ಷೆ ಮತ್ತು ಯಂತ್ರೋಪಕರಣಗಳು ತಯಾರಾಗುತ್ತವೆ. ಇಲ್ಲಿಯ ಈ ಪ್ರದೇಶ 1685ರಲ್ಲಿ ಪಟ್ಟಣವಾಯಿತು ಮತ್ತು 1748ರಲ್ಲಿ ನಗರವಾಗಿ ಸನ್ನದು ಪಡೆಯಿತು. ಜನಸಂಖ್ಯೆ 38280 (2005). (ಜೆ.ಎಸ್.ಎಸ್.)

**ನಾರ್ವೆ:** ಉತ್ತರ ಯುರೋಪಿನ ಸ್ಕಾಂಡಿನೇವಿಯನ್ ಪರ್ಯಾಯ ದ್ವೀಪದ ಪಶ್ಚಿಮ ಭಾಗದಲ್ಲಿರುವ ದೇಶ. ಅಲ್ಲಿಯ ಜನರ ಭಾಷೆಯಲ್ಲಿ ಈ ಪದದ ಅರ್ಥ ಉತ್ತರದ ದಾರಿ ಎಂದು. ಆರ್ಕ್‌ಟಿಕ್ ಸಾಗರದಲ್ಲಿ ಬಾಲ ಚಾಚಿರುವ ಮೀನಿನಂತೆ ನಾರ್ವೆ ಆಕಾರವಿದೆ. ಉ.ಅ. $57^0$–$72^0$ ಹಾಗೂ ಪೂ.ರೇ. $4^0$–$32^0$ ನಡುವೆ ಹಬ್ಬಿದೆ. ನಾರ್ವೆಯ ಪೂರ್ವ ಭಾಗದಲ್ಲಿ ಸ್ವೀಡನ್, ಉತ್ತರಕ್ಕೆ ಬರ್‌ರೆಂಟ್ ಸಮುದ್ರ ಮತ್ತು ವಾಯವ್ಯಕ್ಕೆ ನಾರ್ವೆ ಸಮುದ್ರ ಹಾಗೂ ಆರ್ಕ್‌ಟಿಕ್ ಸಮುದ್ರ ಇದೆ. ನಾರ್ವೆಯ ಒಟ್ಟು ವಿಸ್ತೀರ್ಣ 3,23,883 ಚ.ಕಿಮೀ. ಜನಸಂಖ್ಯೆ 4.6 ದಶಲಕ್ಷಗಳು. ಜನಸಂಖ್ಯೆಯ ಸು. ಅರ್ಧದಷ್ಟು ಮಂದಿ ಓಸ್ಲೋ ಮತ್ತು ಸುತ್ತಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ನಾರ್ವೆಯ ರಾಜಧಾನಿ ಓಸ್ಲೋ. ಜನಸಂಖ್ಯೆ 5,38,411 (2006).

ಭೂವೈಜ್ಞಾನಿಕವಾಗಿ ನಾರ್ವೆ ಉತ್ತರ ಯುರೋಪಿನ ಫೆನ್ನೋ ಸ್ಕಾಂಡಿಯನ್ ಷೀಲ್ಡ್ ಪ್ರದೇಶಕ್ಕೆ ಸೇರಿದೆ. ಪ್ರಪಂಚದ ಅತ್ಯಂತ ಪುರಾತನ ಭೂಭಾಗಗಳಲ್ಲಿ ಇದೂ ಸಹ ಒಂದಾಗಿದೆ. ಇಲ್ಲಿಯ ಶಿಲೆಗಳು ಪ್ರೀಕೇಂಬ್ರಿಯನ್ ಕಾಲದಿಂದ ಕ್ರಿಟೇಷಸ್ ಕಾಲದ ವರಗಿನವು. ಇಲ್ಲಿಯ 1,700 ಹಿಮನದಿಗಳು ಸು. 3,365 ಚ.ಕಿಮೀ ವಿಸ್ತಾರವಾಗಿದೆ. ನಾರ್ವೆ ಒಂದು ಪರ್ವತ ಪ್ರದೇಶ. ಇದರ ಎತ್ತರ ಸಮುದ್ರಮಟ್ಟಕ್ಕಿಂತ 500 ಮೀ ಗಳಿಗೂ ಹೆಚ್ಚು, ಸು. ಐದನೆಯ ಒಂದು ಭಾಗ ಮಾತ್ರ ಸಮುದ್ರಮಟ್ಟಕ್ಕಿಂತ 152.5 ಮೀ ಎತ್ತರವಾಗಿದೆ. ಇಲ್ಲಿಯ ಪ್ರಸ್ಥಭೂಮಿ ಸಮುದ್ರಮಟ್ಟಕ್ಕಿಂತ 1,000 ಮೀ ಎತ್ತರವಾಗಿದ್ದು, ಸು. 12,000 ಚ.ಕಿಮೀ ವಿಸ್ತಾರವಾಗಿದೆ. ಪರ್ವತಗಳು ಅತಿಪುರಾತನ ಅಗ್ನಿಶಿಲೆಗಳಾದ ಗ್ರಾನೈಟ್, ಗ್ಯಾಬ್ರೊ, ನೈಸ್, ಸ್ಫಟಿಕೀಕೃತ ಶಿಸ್ಟ್ (ಪದರು ಶಿಲೆ) ಮತ್ತು ಸುಣ್ಣಶಿಲೆ ಮುಂತಾದವುಗಳಿಂದ ಕೂಡಿದೆ. ಶಿಲಾಮಡಿಕೆಗಳಿಂದಾದ ಅಪಾರ ಬಿರುಕುಗಳಲ್ಲಿ ನದಿಗಳು ಆಳವಾದ ಕಣಿವೆ ಮತ್ತು ಕಮರಿಗಳನ್ನು ಕೊರೆದಿವೆ. ಹಿಮಯುಗದಲ್ಲಿ (2.5 ದ.ಲ. ವರ್ಷಗಳ ಹಿಂದೆ) ಪಶ್ಚಿಮ ತೀರದಲ್ಲಿದ್ದ V–ಆಕಾರದ ಕಣಿವೆಗಳೆಲ್ಲ U–ಆಕಾರದ ಕಣಿವೆಗಳಾಗಿ ಮಾರ್ಪಟ್ಟಿವೆ. ಫಿಯೋರ್ಡ್ ಮಾದರಿಯ ತೀರಪ್ರದೇಶಕ್ಕೆ ಇದು ಉದಾಹರಣೆಯಾಗಿದೆ. ಹಿಮನದಿಗಳ ಪ್ರವಾಹದಿಂದ ಮರಳುಶಿಲೆ, ಕದಂಬಶಿಲೆ (ಕಂಗ್ಲಾಮರೇಟ್), ಸುಣ್ಣಶಿಲೆ ಮತ್ತು ಜೇಡುಶಿಲೆಗಳೂ ಸು. 100–160 ಮೀ ನಷ್ಟು ಮಂದವಾಗಿ ರೂಪುಗೊಂಡಿವೆ. ಇಂಥ ನಿಕ್ಷೇಪಗಳು ದಕ್ಷಿಣ ಭಾಗದಲ್ಲಿ ಡೆನ್ಮಾರ್ಕ್ ಮತ್ತು ಜರ್ಮನಿಯ ದೇಶಗಳಲ್ಲೂ ಕಾಣಬಹುದು.

ಮೇಲ್ಮೈಲಕ್ಷಣ: ಈಶಾನ್ಯ ತುದಿಯಿಂದ ನೈರುತ್ಯ ತುದಿಯವರೆಗೆ ಸು. 1,600 ಕಿಮೀ ಉದ್ದವಾಗಿರುವ ಈ ದೇಶದ ಕನಿಷ್ಠ ಅಗಲ ಕೇವಲ 6.4 ಕಿಮೀ; ಗರಿಷ್ಠ ಅಗಲ ಸು. 2,600 ಕಿಮೀ. ಸಮುದ್ರದ ನೂರಾರು ಒಳಚಾಚುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಇದರ ಕರಾವಳಿಯ ಉದ್ದ 2,640 ಕಿಮೀ.; ಅವನ್ನೂ ಸೇರಿಸಿಕೊಂಡರೆ 19,200 ಕಿಮೀ ಗಿಂತಲೂ ಹೆಚ್ಚು. ಕಡಲ ಅಂಚಿನಲ್ಲಿ ಅನೇಕ ದ್ವೀಪಗಳಿವೆ. ಸ್ವೀಡನ್ ಗಡಿಯ ಉತ್ತರ ಭಾಗದಲ್ಲಿ ಜೋಲಾನ್ ಪರ್ವತಗಳಿವೆ. ದಕ್ಷಿಣ ಮಧ್ಯಭಾಗದಲ್ಲಿರುವ ಯೋಟನ್

ಹೇಮನ್ ಪರ್ವತಗಳಲ್ಲಿಯ ಉನ್ನತ ಶಿಖರ ಗಾಲ್ಡಪಿಗೆನ್ 2,468 ಮೀ ಎತ್ತರವಾಗಿದೆ. ನೈಋತ್ಯ ಮತ್ತು ಮಧ್ಯ ಭಾಗಗಳಲ್ಲಿ ವಿಶಾಲವಾದ ಪ್ರಸ್ಥಭೂಮಿ ಪ್ರದೇಶಗಳಿವೆ. ಇಲ್ಲಿರುವ ಅನೇಕ ದ್ವೀಪಗಳ ಪೈಕಿ ಅತ್ಯಂತ ದೊಡ್ಡದು ಮಿಯರ್ಸಾ. ಇಲ್ಲಿ ಅನೇಕ ಸಣ್ಣ ದೊಡ್ಡನದಿಗಳು ಇವೆ. ದೊಡ್ಡ ನದಿಗಳ ಪೈಕಿ ಮುಖ್ಯವಾದವು ಗ್ಲಾಮ, ಡ್ರಾಮಸೆಲ್ವ, ಲಾಗೆನ್ ಮತ್ತು ಟಾನ.




ವಾಯುಗುಣ: ನಾರ್ವೆ ಮತ್ತು ಅಲಾಸ್ಕ ಇವುಗಳು ಇರುವ ಅಕ್ಷಾಂಶಗಳು ಸ್ಥೂಲವಾಗಿ ಒಂದೇ ಆಗಿದ್ದರೂ ನಾರ್ವೇಯ ಉಷ್ಣಾಂಶ ಅಲಾಸ್ಕದ್ದಕ್ಕಿಂತ ಹೆಚ್ಚು. ಉತ್ತರ ಅಟ್ಲಾಂಟಿಕ್ ಸಾಗರದಿಂದ ಸಾಗಿ ಬರುವ ಉಷ್ಣೋದಕ ಪ್ರವಾಹ ಇದಕ್ಕೆ ಕಾರಣ. ಇದು ನಾರ್ವೆಯ ಸಮುದ್ರ ಚಾಚುಗಳ ನೀರು ಗಡ್ಡೆ ಕಟ್ಟದಂತೆ ತಡೆಯುತ್ತದೆ.

ವಾರ್ಷಿಕ ಸರಾಸರಿ ಉಷ್ಣತೆ ಪಶ್ಚಿಮ ತೀರದಲ್ಲಿ $7^0$ಸೆ ಆರ್ಕ್ಟಿಕ್ ವೃತ್ತದಿಂದ ಮೇಲಕ್ಕೆ, ಲೋಪೋಟೆನ್‌ನಲ್ಲಿ ಜನವರಿಯ ಸರಾಸರಿ ಉಷ್ಣತೆ ಪ್ರಪಂಚದ ಈ ಅಕ್ಷಾಂಶದ ಇತರ ಪ್ರದೇಶಗಳಿಗಿಂತ ಅಧಿಕವಾಗಿರುತ್ತದೆ. ಉತ್ತರ ಅಟ್ಲಾಂಟಿಕ್ ಚಂಡಮಾರುತಗಳ ನೇರ ಹಾದಿಯಲ್ಲಿ ನಾರ್ವೆ ಇರುವುದರಿಂದ ಇದರ ಹವಾಗುಣದಲ್ಲಿ ತೀವ್ರ ವ್ಯತ್ಯಾಸಗಳಾಗುತ್ತಿರುತ್ತವೆ. ಪಶ್ಚಿಮ ನಾರ್ವೇಯದು ಸಾಗರಿಕ ವಾಯುಗುಣ; ಬೇಸಗೆ ತಂಪು. ಚಳಿಗಾಲ ತೀವ್ರವಲ್ಲ. ಇಲ್ಲಿ ವಾರ್ಷಿಕ ಮಳೆ 203 ಸೆಂಮೀ. ಪೂರ್ವ ನಾರ್ವೆಯ ಮಧ್ಯದ ಪ್ರದೇಶ ಪರ್ವತಗಳ ನೆರಳಿನಲ್ಲಿದೆ. ಇಲ್ಲಿ ಬೇಸಗೆ ಚುರುಕು, ಚಳಿಗಾಲ ತೀವ್ರ. ಇಲ್ಲಿ ವಾರ್ಷಿಕ ಸರಾಸರಿ ಮಳೆ 102 ಸೆಂಮೀ.

ಸಸ್ಯ ಮತ್ತು ಪ್ರಾಣಿ ಸಂಪತ್ತು: ನಾರ್ವೆ ದೇಶದಲ್ಲಿ ಆರ್ಕ್ಟಿಕ್ ವಲಯದ ಸಸ್ಯಗಳಿಂದ ಹಿಡಿದು ಮಧ್ಯ ಯುರೋಪಿನ ಸಸ್ಯವರ್ಗದವರೆಗೆ ವೈವಿಧ್ಯತೆಯನ್ನು ಕಾಣಬಹುದು. ಸು. 2,000 ಪ್ರಭೇದಗಳ ಸಸ್ಯಗಳಿವೆ. ಕೆಲವು ಮಾತ್ರ ನಾರ್ವೆಗೆ ವಿಶಿಷ್ಟವಾದಂಥವು. ಸಮುದ್ರ ಮಟ್ಟದಿಂದ 850 ಮೀ ವರೆಗಿನ ಎತ್ತರದ ಪೂರ್ವನಾರ್ವೆಯ ಮತ್ತು ಟ್ರಾನ್‌ಹೇಮ್ ಪ್ರದೇಶದ 700 ಮೀ ಎತ್ತರದ ವಿಶಾಲ ನೀರ್ಗಲ್ಲ ನದೀಕಣಿವೆಗಳಲ್ಲಿ ಸ್ಪ್ರೂಸ್ ಮತ್ತು ಪೈನ್ ಮರಗಳ ದಟ್ಟ ಅರಣ್ಯಗಳಿವೆ. ಬರ್ಚ್ ಮರಗಳು ಸಮುದ್ರ ಮಟ್ಟಕ್ಕೆ 1,000–2,000 ಮೀ ಎತ್ತರದ ಪ್ರದೇಶದಲ್ಲಿ ಅಧಿಕ. ಆದರೂ ಮೇಲಿನ ಪ್ರದೇಶದಲ್ಲಿ ಹಾಗೂ ವಿಲ್ಲೊ ಹಾಗೂ ಗಿಡ್ಡ ಬರ್ಚ್‌ಗಳು ಬೆಳೆಯುತ್ತವೆ. ಪಶ್ಚಿಮ ನಾರ್ವೆಯಲ್ಲಿ ಶಂಕುಪರ್ಣೀ ವೃಕ್ಷಗಳಿಲ್ಲ. ಆರ್ಕ್ಟಿಕ್ ವೃತ್ತದ ಉತ್ತರಕ್ಕೆ ಸ್ಪ್ರೂಸ್ ಇಲ್ಲ. ಆರ್ಕ್ಟಿಕ್ ವೃತ್ತ ಪ್ರದೇಶದಲ್ಲಿ ಒಳನಾಡ ಕಣಿವೆಗಳಲ್ಲಿ ಪೈನ್‌ಗಳುಂಟು. ನಾರ್ವೆಯ ಎಲ್ಲ ಭಾಗಗಳಲ್ಲೂ ವಿವಿಧ ಬಗೆಯ ಬೆರಿ ಹಣ್ಣುಗಳ ಗಿಡಗಳು ಹಾಗೂ ಪೊದೆಗಳು ಅಧಿಕವಾಗಿವೆ.

ಇಡೀ ದೇಶದಲ್ಲಿ ಹಿಮಸಾರಂಗ, ಲೆಮಿಂಗ್, ಉಲ್‌ವರೈನ್ ಮೊದಲಾದ ಆರ್ಕ್ಟಿಕ್ ಪ್ರಾಣಿಗಳಿವೆ. ದಕ್ಷಿಣದಲ್ಲಿ ಈ ಪ್ರಾಣಿಗಳನ್ನು ಪರ್ವತಭಾಗದಲ್ಲಿ ಮಾತ್ರ ಕಾಣಬಹುದು. ಪೂರ್ವ ಮತ್ತು ಉತ್ತರದ ಸೂಚಿಪರ್ಣಿ ಮರಗಳ ಕಾಡುಗಳಲ್ಲಿ ಎಲ್ಕ್ ಪ್ರಾಣಿಗಳಿವೆ. ನರಿ, ಕೆಂಪು ಜಿಂಕೆ ಪಶ್ಚಿಮ ತೀರಭಾಗಗಳಲ್ಲೂ ಕರಡಿ, ತೋಳ, ಲಿಂಕ್ಸ್ ಹೆಚ್ಚಾಗಿ ಉತ್ತರದಲ್ಲೂ ಇದೆ.

ನಾರ್ವೆಯಲ್ಲಿ ಅನೇಕ ಬಗೆಯ ಪಕ್ಷಿಗಳಿವೆ. ಕಡಲ ಹಕ್ಕಿಗಳ ತುಪ್ಪುಳು ಗರಿಗಳನ್ನೂ ಜನರು ಸಂಗ್ರಹಿಸುವರು. ಇಲ್ಲಿಯ ಕೆಲವು ಪಕ್ಷಿಗಳು ಚಳಿಗಾಲದಲ್ಲಿ ಆಫ್ರಿಕದ ಕಡೆ ವಲಸೆ ಹೋಗುತ್ತವೆ. ರಾಜ್ಯದ ನದಿ ಸರೋವರಗಳಲ್ಲಿ ಅನೇಕ ಬಗೆಯ ಮೀನುಗಳುಂಟು.

ಜನ: ಈ ದೇಶದವರು ಟ್ಯೂಟನ್ ಬುಡಕಟ್ಟಿನ ಉತ್ತರಶಾಖೆಯ ಜನ. ನಾರ್ವೇ, ಸ್ವೀಡನ್, ಡೆನ್‌ಮಾರ್ಕ್ ಮತ್ತು ಐಸ್ಲೆಂಡ್ ಜನರನ್ನು ಒಟ್ಟಿಗೆ ಸ್ಕಾಂಡಿನೇವಿಯನರೆಂದು ಕರೆಯುವುದು ರೂಢಿಯಲ್ಲಿದೆ. ಇವರ ಟ್ಯೂಟನ್ ಬುಡಕಟ್ಟಿನ ಪೂರ್ವಜರು ದಕ್ಷಿಣ ಸ್ವೀಡನ್ ಮತ್ತು ಜಟ್ಲೆಂಡ್ ಭಾಗಗಳಿಂದ ಸು. 36 ಶತಮಾನಗಳ ಹಿಂದೆ ದಕ್ಷಿಣ ನಾರ್ವೇ ಭಾಗಕ್ಕೆ ಬಂದರೆಂದು ಹೇಳಲಾಗಿದೆ. ನೀಲಿಯ ಕಣ್ಣು ಇಲ್ಲಿಯ ಜನರಿಗೆ ಸಾಮಾನ್ಯ. ಆಲ್ಪ್ಸ್ ಮತ್ತು ಮೆಡಿಟರೇನಿಯನ್ ಪ್ರದೇಶಗಳಿಂದ ವಲಸೆ ಬಂದು ನೆಲಸಿದ ಜನ ಈಶಾನ್ಯಭಾಗದಲ್ಲಿ ಈ ಜನರೊಡನೆ ಬೆರೆತ್ತಿದ್ದಾರೆ. ಕಕಾಸಾಯ್ಡ್ ಜನಾಂಗದ ನಾರ್ಡಿಕ್ ಗುಂಪಿಗೆ ಸೇರಿದವರು. ನಾರ್ವೆ ಜನ ಉತ್ತರದಲ್ಲಿ ಸಾಮೆರ್ ಮತ್ತು ಲಾಪ್ ಅಥವಾ ಲಾಪ್‌ಲಾಂಡ್ ಜನರೊಂದಿಗೆ ಅಂತರ್ವಿವಾಹ ಮಾಡಿಕೊಂಡಿದ್ದಾರೆ. ಲಾಪ್ ಜನ ಫಿನ್‌ಮಾರ್ಕ್ಸ್‌ವಿಡ್ಡಾ ಎಂಬ ಬಯಲು ನಾಡಿನಲ್ಲಿ ವಾಸಿಸುತ್ತ, ಬೇಸಗೆಯಲ್ಲಿ ತಮ್ಮ ಹಿಮಸಾರಂಗಗಳ ಮಂದೆಗಳೊಡನೆ ಮೇವು ಸಿಗುವ ಸಮುದ್ರತೀರದತ್ತ ಸಾಗುತ್ತಾರೆ. ಲಾಪ್ ಜನ ಕಪ್ಪು ಕೂದಲಿನ ಗಿಡ್ಡರು. ಅವರು ನಾರ್ವೆ ದೇಶಕ್ಕೆ ಸು. 10,000 ವರ್ಷಗಳ ಹಿಂದೆ, ಬಹುಶಃ ಮಧ್ಯ ಏಷ್ಯದಿಂದ ಬಂದವರು. ಫಿನ್ಲೆಂಡ್‌ನಿಂದಲೂ ಜನರು ಬಂದು ಇಲ್ಲಿ ನೆಲೆಸಿದ್ದಾರೆ. ವಿಸ್ತಾರವಾಗಿರುವ ಈ ದೇಶದಲ್ಲಿ ಜನಸಂಖ್ಯೆ ಕಡಿಮೆ. ಇದರಿಂದ ಜನಸಾಂದ್ರತೆ ಚ.ಕಿಮೀಗೆ ಸು. 13 ಜನರು ಮಾತ್ರ.

ಧರ್ಮ: ನಾರ್ವೆ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಸು. ಶೇ. 96 ರಷ್ಟು ಮಂದಿ ಇವಾಂಜೆಲಿಕಲ್ ಲೂತರನ್ ರಾಷ್ಟ್ರೀಯ ಚರ್ಚಿಗೆ ಸೇರಿದವರು. ಇದಕ್ಕೆ ಸರ್ಕಾರದ ನಿಧಿಯಿಂದ ನೆರವು ದೊರಕುತ್ತದೆ. ರೋಮನ್ ಕೆಥೋಲಿಕರು ಓಸ್ಲೋ ನಗರದ ಬಿಷಪ್ ಧರ್ಮ ಪ್ರಭುವಿನ ಧಾರ್ಮಿಕ ನಿಯಂತ್ರಣಕ್ಕೊಳಪಟ್ಟಿದ್ದಾರೆ. ರಾಜ್ಯದಲ್ಲಿ ಯಹೂದ್ಯ, ಮೆತಾಡಿಸ್ಟ್, ಬ್ಯಾಪ್ಟಿಸ್ಟ್, ಕ್ವೇಕರ್, ಪ್ರೆಸ್ ಬಿಟೇರಿಯನ್ ಮೊದಲಾದವರೂ ಇದ್ದಾರೆ.

ಆರ್ಥಿಕತೆ: ಈ ದೇಶದ ಆರ್ಥಿಕತೆ ವ್ಯವಸಾಯ, ಅರಣ್ಯಗಾರಿಕೆ, ಕೈಗಾರಿಕೆ, ಗಣಿಗಾರಿಕೆ, ಮೀನುಗಾರಿಕೆ ಹಾಗೂ ವಾಣಿಜ್ಯೋದ್ಯಮಗಳನ್ನು ಅವಲಂಬಿಸಿದೆ.

ವ್ಯವಸಾಯ: ನಾರ್ವೆ ಬೆಟ್ಟಗುಡ್ಡಗಳ, ಸಮುದ್ರಚಾಚುಗಳ ಬಂಜರು ಹಿಮನಾಡು; ರಾಜ್ಯದ ಪ್ರಾಕೃತಿಕ ಪರಿಸರ ವ್ಯವಸಾಯಕ್ಕೆ ಅನುಕೂಲವಾಗಿಲ್ಲ. ಬೇಸಾಯಕ್ಕೆ ಯೋಗ್ಯವಾದ ಭೂಭಾಗ ಕಡಿದಾದ ಕಣಿವೆಗಳಲ್ಲಿ, ಸಮುದ್ರಚಾಚು ಹಾಗೂ ಸರೋವರಗಳ ಅಂಚುಗಳಲ್ಲಿ ಮಾತ್ರ ಇವೆ. ವಿಶಾಲವಾದ ಭೂಮಿ ವ್ಯವಸಾಯಕ್ಕೆ ಸಿಗುವುದು ಅಪರೂಪ. ರಾಜ್ಯದ ಸು. 1,65,000 ವ್ಯವಸಾಯ ಕ್ಷೇತ್ರಗಳ ಪೈಕಿ 10 ಹೆ. ಗಳಿಗಿಂತ ಹೆಚ್ಚು ವಿಸ್ತಾರವಾದ ಕ್ಷೇತ್ರಗಳು ಕೇವಲ 22,000 ಮಾತ್ರ. ವ್ಯವಸಾಯಕ್ಕೆ ಕಾರ್ಮಿಕರ ಅಭಾವವಿದೆ. ರಾಜ್ಯದ ಇಡೀ ಭೂಭಾಗದಲ್ಲಿ ಶೇ. 76 ರಷ್ಟು ಬಂಜರು ಭೂಮಿ, ಶೇ. 21 ಅರಣ್ಯ ಹಾಗೂ ಶೇ. 3 ರಷ್ಟು ಮಾತ್ರ ವ್ಯವಸಾಯದ ಭೂಮಿ. ಗೋದಿ, ರೈ, ಓಟ್ಸ್, ಆಲೂಗೆಡ್ಡೆ ಇವು ದೇಶದ ಮುಖ್ಯ ಬೆಳೆಗಳು. ಕುದುರೆ, ದನ, ಕುರಿ, ಹಂದಿ, ಕೋಳಿಗಳನ್ನು ಸಾಕುವುದೂ ಉಂಟು.

ಅರಣ್ಯಗಾರಿಕೆ: ವ್ಯವಸಾಯದ ಅಭಾವವನ್ನು ನಾರ್ವೆಯ ಅರಣ್ಯ ಮತ್ತು ಮತ್ಸ್ಯ ಸಂಪತ್ತು ತುಂಬಿಕೊಡುತ್ತದೆ. ಈ ದೇಶ ಅರಣ್ಯಸಂಪದ್ಯುಕ್ತವಾದುದು. ಅರಣ್ಯಗಳ ಒಟ್ಟು ವಿಸ್ತೀರ್ಣ 83,000 ಚ.ಕಿಮೀ. ಎಲೆ ಮೊನಚಾದ ಹಾಗೂ ಎಲೆ ಉದುರುವ ಮರಗಳ ಅರಣ್ಯಗಳು ಅಧಿಕ. ಮರದ ತಿರುಳು ಉತ್ಪಾದನೆಗೆ ಹಾಗೂ ಕಾಗದ ಮುಂತಾದ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾಸಾಮಗ್ರಿ ದೊರಕುತ್ತದೆ. ಅರಣ್ಯೋತ್ಪಾದನೆಯಲ್ಲಿ ಶೇ. 12 ರಷ್ಟು ಭಾಗ ಹೊರದೇಶಗಳಿಗೆ ರಫ್ತಾಗುತ್ತದೆ.

ಕೈಗಾರಿಕೆ: ಕಬ್ಬಿಣದ ಅದಿರು, ಮರದ ತಿರುಳು ಹಾಗೂ ಮರದ ಸಾಮಾನುಗಳ ಉತ್ಪಾದನೆ, ಮೀನು, ಮಾಂಸ, ಹಾಲು ಮೊದಲಾದವನ್ನು ಡಬ್ಬಗಳಲ್ಲಿ ತುಂಬುವುದು– ಈ ಕೈಗಾರಿಕೆಗಳು ಪ್ರಧಾನವಾಗಿವೆ. ಕಾಗದದ ತಯಾರಿಕೆಯಲ್ಲಿ ದೇಶ ಪ್ರಗತಿ ಹೊಂದಿದೆ. ದೇಶದಲ್ಲಿ ಅಪಾರವಾಗಿ ಉತ್ಪಾದನೆಯಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಅಲ್ಯೂಮಿನಿಯಂ ಮತ್ತು ಇತರ ಲೋಹಕೈಗಾರಿಕೆಗಳಿಗೆ ಬಳಸುತ್ತಿದ್ದಾರೆ. ಪ್ರಾಣಿಗಳ ಚರ್ಮವನ್ನು ಹದಮಾಡುವ ಉದ್ಯಮವೂ ಇದೆ. ಕೈಗಾರಿಕೆಗಳಿಗೆ ಸರ್ಕಾರದ ನೆರವುಂಟು.

ಮೀನುಗಾರಿಕೆ: ನಾರ್ವೆ ಸಮುದ್ರತೀರದಲ್ಲಿ ಮೀನುಗಾರಿಕೆ ಮುಖ್ಯ ಕಸಬು. ದೇಶದ ಮತ್ಸ್ಯೋತ್ಪಾದನೆಯಲ್ಲಿ ಶೇ. 76 ರಷ್ಟು ಉತ್ಪಾದನೆಯಾಗುವುದು ಸಮುದ್ರದಿಂದ. ಮೀನು

ಹಿಡಿಯುವುದಕ್ಕೆ ಮೋಟಾರ್ ಜೋಡಿಸಿದ ಹಡಗುಗಳನ್ನು ಉಪಯೋಗಿಸುತ್ತಾರೆ. ದೇಶದಲ್ಲಿ ಮೀನುಗಳ ಡಬ್ಬೀಕರಣ ಕಾರ್ಖಾನೆಗಳಿವೆ. ಮೀನಿನ ವಿಕ್ರಯದಿಂದ ವಿದೇಶೀ ವಿನಿಮಯ ಸಂಪಾದನೆಯಾಗುತ್ತದೆ. ತಿಮಿಂಗಿಲದ ಎಣ್ಣೆಯನ್ನು ಉತ್ಪಾದಿಸಲಾಗುತ್ತದೆ.

ಖನಿಜಗಳು: ತಾಮ್ರ, ಕಬ್ಬಿಣ, ತವರ, ನಿಕ್ಕಲ್, ಸೀಸ ಮೊದಲಾದ ಲೋಹಗಳು ದೇಶದಲ್ಲಿ ಸಿಗುತ್ತವೆ. ಸ್ವಾಲ್‌ಬಾರ್ ದ್ವೀಪಗಳಲ್ಲಿ ಕಲ್ಲಿದ್ದಲು ದೊರೆಯುತ್ತದೆ. ಉತ್ತರ ಸಮುದ್ರದಲ್ಲಿ ತೈಲ ಮತ್ತು ಅನಿಲ ನಿಕ್ಷೇಪಗಳಿವೆ. ಸರ್ಕಾರ ಅವನ್ನು ಬಳಸಿಕೊಳ್ಳಲು ಕ್ರಮ ಕೈಗೊಂಡಿದೆ.

ವಿದ್ಯುಚ್ಛಕ್ತಿ: ಯುರೋಪಿನ ಜಲವಿದ್ಯುಚ್ಛಕ್ತಿ ಉತ್ಪಾದಿಸುವ ಪ್ರಮುಖ ರಾಷ್ಟ್ರಗಳಲ್ಲಿ ನಾರ್ವೆಯೂ ಒಂದು. ರಾಜ್ಯದ ಅನೇಕ ಜಲಪಾತಗಳಿಂದ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ. ಕೈಗಾರಿಕೆಗಳಿಗೆ, ವಿಶೇಷವಾಗಿ ರಾಸಾಯನಿಕ ವಸ್ತುಗಳ ತಯಾರಿಕೆಗೆ ಮತ್ತು ಖನಿಜ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿಯ ಬಳಕೆ ಹೆಚ್ಚು. ಪರ್ವತಮಯ ಭೂಸ್ವರೂಪ, ಸದಾ ನೀರಿನ ಪೂರೈಕೆ, ನೀರಿನ ಸಂಗ್ರಹಣೆಗೆ ಉಪಯುಕ್ತವಾದ ನೂರಾರು ಸರೋವರಗಳು ಹಾಗೂ ಇತರ ಶಕ್ತಿಮೂಲಗಳು ದೊರೆಯದಿರುವುದು ಜಲವಿದ್ಯುತ್ತಿನ ಅವಲಂಬನೆಗೆ ಮುಖ್ಯಕಾರಣಗಳಾಗಿವೆ.

ವಾಣಿಜ್ಯ: ಬಹುಕಾಲದಿಂದ ನಾರ್ವೆ ಜನರು ಹೊರ ದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಹೊಂದಿದ್ದಾರೆ. ಇವರ ಜೀವನ ಹೊರಗಿನ ವಸ್ತುಗಳನ್ನು ಅವಲಂಬಿಸಿದೆ. ಪ್ರಪಂಚದ ಸರಕುಗಳನ್ನು ಸಮುದ್ರಮಾರ್ಗಗಳಲ್ಲಿ ಸಾಗಿಸುವುದರಲ್ಲಿ ನಾರ್ವೆ ಖ್ಯಾತಿ ಪಡೆದಿದೆ. ನಾರ್ವೆ ಹಡಗು ನಿರ್ಮಾಣ ಕೈಗಾರಿಕೆಯಲ್ಲಿ ಪ್ರಸಿದ್ಧಿಪಡೆದಿದೆ. ನಾರ್ವೆಯ ವ್ಯಾಪಾರಿ ಹಡಗುಗಳು ಪ್ರಪಂಚ ಪ್ರಸಿದ್ಧವಾದವು. ಪ್ರಪಂಚದ ನಾಲ್ಕು ನೌಕಾ ಪ್ರಧಾನ ರಾಷ್ಟ್ರಗಳಲ್ಲಿ ನಾರ್ವೆಯೂ ಒಂದು. ವ್ಯಾಪಾರದ ಹಡುಗುಗಳಿಂದ ರಾಜ್ಯಕ್ಕೆ ಹೆಚ್ಚು ವಿದೇಶಿ ವಿನಿಮಯ ಸಂಪಾದನೆಯಾಗುತ್ತಿದೆ. ಸು. 1,300 ಹಡಗುಗಳು ವಿದೇಶಿ ರೇವುಗಳಿಗೆ ಹೋಗಿ ಬರುತ್ತವೆ.

ರಾಜ್ಯ ಆಮದು ಮಾಡಿಕೊಳ್ಳುವ ಸರಕುಗಳು ಯಂತ್ರೋಪಕರಣ, ಮೋಟಾರು ವಾಹನ, ಆಹಾರಪದಾರ್ಥ ಇತ್ಯಾದಿ. ಒಟ್ಟು ಆಮದಿನಲ್ಲಿ 1/4 ಭಾಗ ಆಹಾರಪದಾರ್ಥ; ಕಾಗದ, ಮರದ ತಿರುಳು. ಡಬ್ಬೀಕರಿಸಿದ ಮೀನು, ಮಾಂಸ, ಹಾಲು ಇತ್ಯಾದಿ ದೇಶದ ರಫ್ತುಗಳಲ್ಲಿ ಮುಖ್ಯವಾದವು.

ಹಣ: ನಾರ್ವೆಯ ನಾಣ್ಯ ಕ್ರೋನೆ. 1 ನಾರ್ವೇಜಿಯನ್ ಕ್ರೋನೆ= 100 ಅರೆ. ದೇಶದಲ್ಲಿ 1,2,5,10 ಮತ್ತು 50 ಅರೆಗಳ ಹಾಗೂ 1 ಮತ್ತು 5 ಕ್ರೋನೆರ್ ನಾಣ್ಯಗಳಿವೆ. 5,10,50, 100,500 ಮತ್ತು 1,000 ಕ್ರೋನೆರ್ ನೋಟುಗಳು ಚಲಾವಣೆಯಲ್ಲಿವೆ.

ಸಾರಿಗೆ: ಮೇಲ್ಮೈ ಲಕ್ಷಣ ಹಾಗೂ ವಾಯುಗುಣ ಕಾರಣಗಳಿಂದಾಗಿ ಒಳನಾಡ ಸಂಚಾರ ಸುಲಭವಲ್ಲ. ಓಸ್ಲೋ ಪಟ್ಟಣ ಪ್ರದೇಶದಲ್ಲಿ ಮತ್ತು ದಕ್ಷಿಣ ನಾರ್ವೆ ಭಾಗಗಳಲ್ಲಿ ಮಾತ್ರ ಸಾರಿಗೆ ಬೆಳೆದಿವೆ.

ರೈಲು: ಸ್ಟವಾಂಜರ್ ಮತ್ತು ಬರ್ಗನ್ ನಗರಗಳಿಂದ ಓಸ್ಲೋಗೆ, ಮುರೋಗ್ ರೊಮ್ಸ್‌ಡಲಿನ್‌ನಿಂದ ಬಾಸ್ಲೋ ಮತ್ತು ಟ್ರಾನ್‌ಹೇಮ್ ನಗರಗಳಿಗೆ ರೈಲುಮಾರ್ಗಗಳಿವೆ. ಬೋಡರ್ ನಗರಕ್ಕೆ 1962ರಲ್ಲಿ ರೈಲುಮಾರ್ಗ ಹಾಕಲಾಯಿತು. ಉತ್ತರದಲ್ಲಿ ನಾರ್‌ವಿಕ್‌ವರೆಗೆ ಸಾಗಿರುವ ಸ್ವೀಡನ್ ರೈಲುಮಾರ್ಗ ಮಾತ್ರ ಇದೆ. ಕಬ್ಬಿಣದ ಅದಿರನ್ನು ಸಾಗಿಸಲು ಈ ರೈಲು ಮಾರ್ಗ ಅನುಕೂಲವಾಗಿದೆ. ಟ್ರಾನ್‌ಹೇಮ್ ಮತ್ತು ಓಸ್ಲೋ ನಗರಗಳಿಂದ ಸ್ವೀಡನ್ ದೇಶದ ರೈಲುಗಳಿಗೆ ಸಂಪರ್ಕ ಕಲ್ಪಿಸುವ ಮೂರು ಪ್ರಮುಖ ರೈಲು ಮಾರ್ಗಗಳಿವೆ.

ಜಲಮಾರ್ಗ: ಸಮುದ್ರದ ಮೂಲಕ ಸರಕುಗಳ ಹಾಗೂ ಪ್ರಯಾಣಿಕರ ಸಂಚಾರ ವಿಶೇಷವಾಗಿ ನಡೆಯುತ್ತದೆ. ಸಮುದ್ರಚಾಚುಗಳಲ್ಲಿ ಹಡಗುಗಳು ಒಳನಾಡಿಗೆ ಸಂಚರಿಸುತ್ತವೆ. ಸು. 1,700 ಹಡಗುಗಳು ನಾರ್ವೆಯ ರೇವುಪಟ್ಟಣಗಳ ನಡುವೆ ಯಾನಮಾಡುತ್ತವೆ. ಆರ್ಕ್‌ಟಿಕ್ ಪ್ರದೇಶಕ್ಕೆ ಸಾಮಾನುಗಳ ಸಾಗಣೆ ಹಡಗುಗಳ ಮೂಲಕ ನಡೆಯುತ್ತವೆ.

ವಿಮಾನ: ನಾರ್ವೆ, ಡೆನ್‌ಮಾರ್ಕ್ ಮತ್ತು ಸ್ವೀಡನ್‌ಗಳ ವಿಮಾನ ಸಂಸ್ಥೆಗಳು ಒಟ್ಟುಗೂಡಿ ಸ್ಕಾಂಡಿನೇವಿಯನ್ ವಿಮಾನ ಸಂಸ್ಥೆಯನ್ನು ಸ್ಥಾಪಿಸಿಕೊಂಡಿವೆ. ಇದರಲ್ಲಿ ನಾರ್ವೆಯ ಬಂಡವಾಳ 2/7ರಷ್ಟು. ವಿಮಾನ ಸಂಚಾರ ಜನಪ್ರಿಯವಾಗುತ್ತಿದೆ. ಚಳಿಗಾಲದಲ್ಲಿ ಉತ್ತರ ನಾರ್ವೆ ಭಾಗದಲ್ಲಿ ಇತರ ಸಾರಿಗೆಗಳಿಗಿಂತ ವಿಮಾನ ಸಾರಿಗೆ ಹೆಚ್ಚು ಅನುಕೂಲಕರ. ನಾರ್ವೆಯಿಂದ ಯುರೋಪಿನ ವಿವಿಧ ಸ್ಥಳಗಳಿಗೆ ವಿಮಾನಗಳು ಹಾರುತ್ತವೆ.

ಪ್ರವಾಸಿ ಕ್ಷೇತ್ರಗಳು: ಸಮುದ್ರದಂಚಿನ ಪೂರ್ವ, ದಕ್ಷಿಣ ಮತ್ತು ಪಶ್ಚಿಮ ಪಟ್ಟಣಗಳು ಹಾಗೂ ಕಡಲತೀರಗಳು ಪ್ರವಾಸಿಕ್ಷೇತ್ರಗಳು. ಚಳಿಗಾಲದ ಕ್ರೀಡೆಗಳಲ್ಲಿ ಸ್ಕೀಯಿಂಗ್ ಜನಪ್ರಿಯವಾಗಿದೆ.

ದೇಶದ ರಾಜಧಾನಿ ಓಸ್ಲೋ. ಇತರ ಮುಖ್ಯ ಸ್ಥಳಗಳು ಬರ್ಗನ್, ಟ್ರಾನ್‌ಹೇಮ್, ಸ್ಟವಾಂಜರ್, ಕ್ರಿಶ್ಚನ್ ಸ್ಯಾಂಡ್ ಮತ್ತು ಡ್ರಾಮನ್. ಇವೆಲ್ಲವೂ ರೇವು ಪಟ್ಟಣಗಳು. (ವಿ.ಜಿ.ಕೆ.)

**ನಾಲೆ:** ಜಮೀನುಗಳ ನೀರಾವರಿಗಾಗಲಿ, ನೆಲದಲ್ಲಿ ಅತಿಯಾಗಿರುವ ನೀರನ್ನು ಹೊರಕ್ಕೆ ಸಾಗಿಸುವುದಕ್ಕಾಗಲಿ, ಜಲಯಾನಕ್ಕಾಗಲಿ ತೋಡಿದ ನೀರಿನ ಹಾದಿ (ಕೆನಾಲ್). ಬಹಳ ಹಿಂದೆಯೇ ಭಾರತ, ಈಜಿಪ್ಟ್, ಚೀನ ಮೊದಲಾದ ದೇಶಗಳಲ್ಲಿ ನೀರಾವರಿಯ ನಾಲೆಗಳು ಬಳಕೆಯಲ್ಲಿದ್ದವು. ಪ್ರ.ಶ.ಪೂ. 521ರಲ್ಲಿ ನೈಲ್ ನದಿಯಿಂದ ಕೆಂಪುಸಮುದ್ರಕ್ಕೆ ಜಲಯಾನದ ನಾಲೆಯನ್ನು ಅಗೆದಿದ್ದರು. ಚೀನದಲ್ಲಿ 7ನೆಯ ಶತಮಾನದಲ್ಲಿ ಪ್ರಾರಂಭವಾಗಿ 13ನೆಯ ಶತಮಾನದಲ್ಲಿ ಮುಗಿದ ಮಹಾನಾಲೆ ಇತಿಹಾಸದ ಸಾಹಸ ಕಾರ್ಯಗಳಲ್ಲೊಂದು. ಪ್ರ.ಶ.ಪೂ. 980ರಲ್ಲಿ ಚೀನದಲ್ಲಿ ತೋಡಿದ ಕ್ಯಾಂಟನ್-ಪೀಕಿಂಗ್ ನಾಲೆಯ ಅಗಲ 15.25 ಮೀ ಆಳ 2.75 ಮೀ. ಆದರೆ ನಾಲೆಯಲ್ಲಿ ಭೂಮಿಯ ಮಟ್ಟ ಇಳಿದಂತೆ ತಳದ ಮಟ್ಟವೂ ಇಳಿದದ್ದರಿಂದ ದೋಣಿ ಇಳಿಯುವುದಕ್ಕೆ ಕಟ್ಟೆಗಳು ನಿರ್ಮಾಣವಾಗುವ ತನಕವೂ ನಾಲೆಗಳಲ್ಲಿ ಜಲಯಾನ ಬೆಳೆಯುವುದಕ್ಕೆ ಅವಕಾಶವಿರಲಿಲ್ಲ.

ಜೋಡಿಬಾಗಿಲುಗಳುಳ್ಳ ಮೊದಲನೆಯ ಮಟ್ಟ ಬದಲಾವಣೆಯ ಕಟ್ಟೆ ಇಟಲಿಯಲ್ಲಿ 1481ರಲ್ಲಿ ನಿರ್ಮಾಣವಾಯಿತು. ವಿಖ್ಯಾತನಾದ ಲಿಯನಾರ್ಡೊ ಡ ವಿಂಚಿ (1452–1519) ಮಿಲಾನ್ ನಗರದ ಸುತ್ತಮುತ್ತ ಅನೇಕ ಇಂಥ ಕಟ್ಟೆಗಳನ್ನು ಕಟ್ಟಿಸಿದ. ಕೂಡಲೆ ಬೆಲ್ಜಿಯಮ್, ಹಾಲೆಂಡ್, ಫ್ರಾನ್ಸ್, ಜರ್ಮನಿಗಳಲ್ಲಿ ಹೊಳೆಗಳ ಮೇಲೂ ನಾಲೆಗಳ ಮೇಲೂ ಜಲಯಾನವನ್ನು ವಿಸ್ತರಿಸಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿದವು. ಆಗ ಒಳದೇಶದ ಪಟ್ಟಣಗಳಿಂದ ಸಮುದ್ರತೀರಕ್ಕೂ ಒಂದು ಪಟ್ಟಣದಿಂದ ಇನ್ನೊಂದಕ್ಕೂ ಸರಕನ್ನು ಸುಲಭ ಬೆಲೆಯಲ್ಲಿ ಶೀಘ್ರವಾಗಿ ಸಾಗಿಸುವುದು ಸಾಧ್ಯವಾಯಿತು. ಫ್ರಾನ್ಸಿನಲ್ಲಿಯೇ ಸು. 10,000 ಕಿಮೀ ಉದ್ದದ ಜಲಯಾನದ ನಾಲೆಗಳಿವೆ. ಇವುಗಳ ಮೇಲೆ ಸಾಗುವ ಒಂದೊಂದು ದೋಣಿಯೂ 300ರಿಂದ 2,000 ಟನ್ನುಗಳವರೆಗಿನ ಹೊರೆಯನ್ನು ಒಯ್ಯುತ್ತವೆ.

ಬ್ರಿಟನ್ನಿನ ನಾಲೆಗಳ ಇತಿಹಾಸದಲ್ಲಿ ಜೇಮ್ಸ್ ಬ್ರಿಂಡ್ಲಿ (1716–72) ಪ್ರಮುಖ ವ್ಯಕ್ತಿ. ಈತ ಟ್ರೆಂಟ್ ಮತ್ತು ಮರ್ಸಿ ನದಿಗಳನ್ನು ಸೇರಿಸುವ ನಾಲೆಯ ಮೇಲೆ 915 ಮೀ ಉದ್ದದ ಮೊದಲನೆಯ ದೊಡ್ಡ ಸುರಂಗವನ್ನು ನಿರ್ಮಿಸಿದ. ನದಿಗಳ ಮೇಲೆ ನಾಲೆಗಳನ್ನು ಮೇಲುಗಾಲುವೆಗಳ ಮೂಲಕ ಒಯ್ಯುವುದನ್ನು ಪ್ರಾರಂಭಿಸಿದನು. ಕೆಳಗಡೆ ನದಿಯ ಮೇಲೆ ದೋಣಿಗಳು ಹೋಗುತ್ತಿದ್ದಾಗ ಎತ್ತರದ ಮೇಲುಗಾಲುವೆಗಳ ಮೇಲೂ ದೋಣಿಗಳು ಓಡಾಡುವ ದೃಶ್ಯ ಆಗಿನ ಜನರಿಗೆ ಅಚ್ಚರಿಯೆನಿಸಿತು. ಸ್ಕಾಟ್ಲೆಂಡಿನಲ್ಲಿ ಗ್ರೇಟ್‌ಗ್ಲೆನ್ ಸರೋವರಗಳನ್ನು ಸೇರಿಸಿದ ನಾಲೆಯನ್ನು ತಾಮಸ್ ಟೆಲ್ಫರ್ಡ್ (1757–1834) 1825ರಲ್ಲಿ ನಿರ್ಮಿಸಿದ. ಮ್ಯಾಂಚೆಸ್ಟರ್ ನಗರವನ್ನು ಸಮುದ್ರಕ್ಕೆ ಸೇರಿಸುವ ಹಡಗಿನ ನಾಲೆ 1904ರಲ್ಲಿ ನಿರ್ಮಾಣವಾಯಿತು.

ಜರ್ಮನಿಯಲ್ಲಿ ಉತ್ತರ ಸಮುದ್ರವನ್ನೂ ಬಾಲ್ಟಿಕ್ ಸಮುದ್ರವನ್ನೂ ಒಟ್ಟುಗೂಡಿಸುವ ಕಿಯಾಲ್ ನಾಲೆ 1895ರಲ್ಲಿ ಮುಗಿಯಿತು. ಡಾರ್ಟ್‌ಮಂಡ್–ಎಮ್ಸ್–ವಿಸರ್ ನಾಲೆ ರೈನ್ ಮತ್ತು ವಿಸರ್ ನದಿಗಳನ್ನು ಸೇರಿಸಿ ರೂರ್ ಜಿಲ್ಲೆಯನ್ನು ಎಮ್ಡನ್ನಿನೊಂದಿಗೆ ಸಂಪರ್ಕಿಸಿತು. ಬರ್ಲಿನ್–ಸ್ಟೆಟಿನ್ ನಾಲೆ ಬರ್ಲಿನನ್ನು ಓಡರಿನೊಂದಿಗೆ ಕೂಡಿಸಿ ಬ್ರಾಂಬರ್ಗ್ ನಾಲೆಯ ಮೂಲಕ ವಿಸ್ತುಲ ನದಿಯನ್ನು ಮುಟ್ಟಿತು. ಕ್ರಮೇಣ ಪೂರ್ವ ದಿಕ್ಕಿನ ನದಿಗಳನ್ನು ಪಶ್ಚಿಮದ ನದಿಗಳೊಂದಿಗೆ ಸೇರಿಸಿ ರೈನ್ ನದಿಯ ಮೇಲು ಭಾಗವನ್ನು ಅಭಿವೃದ್ಧಿ ಮಾಡಿ ಡ್ಯಾನ್ಯೂಬ್ ನದಿಯೊಂದಿಗೆ ಜಲಸಂಪರ್ಕ ಸಾಧಿಸುವ ಯೋಜನೆ ಜಾರಿಗೆ ಬಂದಿದೆ. ಹಾಲೆಂಡ್ ತಗ್ಗಾದ ಭೂಭಾಗ. ಅಲ್ಲಿ ಜಲಯಾನಕ್ಕೇ ಅಲ್ಲದೆ ಹೆಚ್ಚು ನೀರನ್ನು ಹೊರಕ್ಕೆ ಸಾಗಿಸುವುದಕ್ಕಾಗಿ ಕೂಡ ನಾಲೆಗಳನ್ನು ತೋಡಿದ್ದಾರೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಕೆನಡ ದೇಶಗಳಲ್ಲಿ ದೊಡ್ಡ ಸರೋವರಗಳಿಗೂ ನದಿಗಳಿಗೂ ಮಧ್ಯೆ ನಾಲೆಗಳನ್ನು ತೋಡಿ ಮಟ್ಟ ಬದಲಾವಣೆಯ ಕಟ್ಟೆಗಳನ್ನು ಎಲ್ಲ ಕಡೆಗಳಲ್ಲಿಯೂ 30.5 ಮೀ ಅಗಲ ಮತ್ತು 183 ಮೀ ಉದ್ದವಾಗಿ ಮಾಡಿದ್ದಾರೆ. ಅಟ್ಲಾಂಟಿಕ್ ಮಹಾಸಾಗರವನ್ನು ಪಂಚಸರೋವರಗಳಿಗೆ ಸೇರಿಸುವ ವೆಲ್ಲೆಂಡ್ ನಾಲೆ ನಯಾಗರ ಪರ್ಯಾಯ ದ್ವೀಪವನ್ನು ಜಲಪಾತದ ಪಶ್ಚಿಮಕ್ಕೆ ದಾಟಿ ಎರೀ ಮತ್ತು ಆಂಟೇರಿಯೋ ಸರೋವರಗಳಿಗೆ ನಡುವೆ ಸಾಗರಗಾಮಿಗಳಾದ ದೊಡ್ಡ ಹಡಗುಗಳಿಗೆ ದಾರಿಮಾಡಿಕೊಟ್ಟಿದೆ. ಸೇಂಟ್ ಲಾರೆನ್ಸ್ ನದೀಖಾರಿಯ ಮುಖದಲ್ಲಿ ಬೆಲ್ ದ್ವೀಪದ ಜಲಸಂಧಿಯಿಂದ ಹೊರಟು ಮಹಾಸಾಗರಗಳ ಮೂಲಕ ಸುಪೀರಿಯರ್ ಸರೋವರದವರೆಗೂ 3,763 ಕಿಮೀ ಉದ್ದವಾಗಿರುವ ಜಲಮಾರ್ಗದ ಒಂದು ಭಾಗವಾಗಿರುವ ಈ ನಾಲೆ ಕೆನಡಕ್ಕೂ ಸಂಯುಕ್ತ ಸಂಸ್ಥಾನಗಳಿಗೂ ವಾಣಿಜ್ಯ ಸಂಬಂಧವನ್ನು ತಂದಿದೆ.

ರಷ್ಯದಲ್ಲಿ ಮೂರು ಹೊಸನಾಲೆಗಳ ಮೂಲಕ ಬಾಲ್ಟಿಕ್ ಸಮುದ್ರದಿಂದ ರಷ್ಯದ ಮಾರ್ಗವಾಗಿ ಕಪ್ಪುಸಮುದ್ರದವರೆಗೆ ಹೋಗಬಹುದು. ಈ ಕಡೆ ಒನಿಗ ಸರೋವರದಿಂದ ಇನ್ನೊಂದು ನಾಲೆ ವೋಲ್ಗನದಿಯನ್ನು ಸೇರುತ್ತದೆ. ಮೂರನೆಯ ನಾಲೆ ಸ್ಟಾಲಿನ್‌ಗ್ರಾಡಿನ ಹತ್ತಿರ ಡಾನ್ ನದಿಯನ್ನೂ ವೋಲ್ಗ ನದಿಯನ್ನೂ ಕೂಡಿಸುತ್ತದೆ. ವೋಲ್ಗ ನದಿಯನ್ನು 129 ಕಿಮೀ ಉದ್ದವಾದ ನಾಲೆಯ ಮೂಲಕ ಮಾಸ್ಕೊ ನಗರಕ್ಕೆ ಸೇರಿಸಿ ಆ ನಗರವನ್ನು 1937ರಲ್ಲಿ ಒಳನಾಡಿನ ಬಂದರಾಗಿ ಮಾಡಿದರು. ರಾಜಧಾನಿಗೆ ಕುಡಿಯುವ ನೀರನ್ನು

ಒದಗಿಸುವುದಕ್ಕಾಗಿ ಈ ನಾಲೆಯ 21 ಕಿಮೀ ಉದ್ದದಲ್ಲಿ ಒಂದು ಜಲಾಶಯವನ್ನು ನಿರ್ಮಿಸಿದ್ದಾರೆ. ಇದನ್ನು ಕಟ್ಟುವುದಕ್ಕೆ ತಗಲಿದ ತೋಡುಗೆಲಸವೂ ಕಾಂಕ್ರಿಟ್ ಕೆಲಸವೂ ಪನಾಮ ನಾಲೆಯನ್ನು ಬಿಟ್ಟರೆ ಅಷ್ಟು ಹೆಚ್ಚಾಗಿ ಬೇರೆ ಯಾವ ನಾಲೆಯಲ್ಲೂ ನಡೆದಿಲ್ಲ.

ಹಡಗುಗಳ ಸಂಚಾರದ ನಾಲೆಗಳು: 1869ರಲ್ಲಿ ಸೂಯೆಜ್ ನಾಲೆಯನ್ನು ತೋಡಿದಾಗ ಯುರೋಪಿನಿಂದ ನೀರಿನ ಮೇಲೆ ಪ್ರಾಚ್ಯ ದೇಶಗಳಿಗೆ ಭೂಮಧ್ಯ ಸಮುದ್ರದ ಮೂಲಕ ನೇರವಾಗಿ ಹೋಗುವುದು ಸಾಧ್ಯವಾಯಿತು. ಅದಕ್ಕೆ ಮುಂಚೆ ಗುಡ್ ಹೋಪ್ ಭೂಶಿರವನ್ನು ಬಳಸಿ ಹೋಗಬೇಕಾಗಿತ್ತು. ಆಮೇಲೆ 1915ರಲ್ಲಿ, ಉತ್ತರ ಅಮೆರಿಕಕ್ಕೂ ದಕ್ಷಿಣ ಅಮೆರಿಕಕ್ಕೂ ನಡುವೆ ಇರುವ ಪನಾಮ ಭೂಕಂಠದಲ್ಲಿ, ನಿರ್ಮಿಸಿದ ಪನಾಮ ನಾಲೆ ಪೆಸಿಫಿಕ್ ಸಾಗರಕ್ಕೂ ಅಟ್ಲಾಂಟಿಕ್ ಸಾಗರಕ್ಕೂ ಮಧ್ಯೆ ಜಲಯಾನದ ಅನುಕೂಲತೆಯನ್ನು ಏರ್ಪಡಿಸಿದೆ. ನಾಲೆಯ ಉದ್ದ 64 ಕಿಮೀ. ಅದು ಸಮುದ್ರ ಮಟ್ಟದಿಂದ 26 ಮೀ ಎತ್ತರದಲ್ಲಿದೆ. ಹಡಗುಗಳು ಸಮುದ್ರದಿಂದ ನಾಲೆಯೊಳಕ್ಕೆ ಮಟ್ಟ ಬದಲಾವಣೆ ಕಟ್ಟೆಗಳ ಮೂಲಕ ಹತ್ತಿ ಮತ್ತೆ ಇಳಿಯುತ್ತವೆ. ಯಂತ್ರಶಿಲ್ಪದ ದೃಷ್ಟಿಯಿಂದಲೂ ಸಾಹಸದ ದೃಷ್ಟಿಯಿಂದಲೂ ಇದು ಅಪ್ರತಿಮ ಕಾರ್ಯ. ಎರಡು ಮಹಾಯುದ್ಧಗಳ ನಡುವಿನ ಅವಧಿಯಲ್ಲಿ ಬಿಳೀ ಸಮುದ್ರ, ಬಾಲ್ಟಿಕ್ ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರಗಳನ್ನು ಕೂಡಿಸುವ ಅಗಾಧವಾದ ಹಡಗಿನ ನಾಲೆಯ ಯೋಜನೆ ರಷ್ಯದಲ್ಲಿ ಕಾರ್ಯಗತವಾಯಿತು. ಈ ಪೈಕಿ 1933ರಲ್ಲಿ ತೆರೆದ ಬಿಳೀಸಮುದ್ರದ ನಾಲೆ ಪ್ರಪಂಚದಲ್ಲಿ ಈ ತನಕ ಅಗೆಯಲಾದ ಅತ್ಯಂತ ದೊಡ್ಡ ನಾಲೆ. ಅದರ ಉದ್ದ 227 ಕಿಮೀ.

**ಕರ್ನಾಟಕದ ನಾಲೆಗಳು**

| ನೀರಾವರಿ ಯೋಜನೆಯ ಹೆಸರು | ಸ್ಥಳ | ನಾಲೆ ಉದ್ದ ಕಿಮೀ |
|---|---|---|
| ಕಪಿಲಾ | ಹೆಗ್ಗಡದೇವನಕೋಟೆ ತಾಲೂಕಿನ ಬಿದರಹಳ್ಳಿ ಪಕ್ಕದಲ್ಲಿ ಕಪಿಲಾ ನದಿಗೆ ಕಟ್ಟೆ | 212.43 |
| ಕಾರಂಜ | ಬಿದರೆ | |
| ಕೃಷ್ಣ (ಮೇಲ್ದಂಡೆ) | ಬಾಗೇವಾಡಿ ತಾಲೂಕಿನ ಆಲಮಟ್ಟಿ ಪಕ್ಕದಲ್ಲಿ ಒಂದು ಕಟ್ಟೆ. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸಿದ್ದಾಪುರದಲ್ಲಿ ಇನ್ನೊಂದು ಕಟ್ಟೆ | ಆಲಮಟ್ಟಿ 170.58 ಸಿದ್ದಾಪುರ 222 |
| ಘಟಪ್ರಭಾ | ಬೆಳಗಾವಿ ಜಿಲ್ಲೆಯ ಧೂಪದಾಳದ ಪಕ್ಕದಲ್ಲಿ ಘಟಪ್ರಭಾನದಿಗೆ ತಡೆಗಟ್ಟು, ಮೇಲು ಹೊಳೆಯಲ್ಲಿ ಹಿಡಕಲ್ ಗ್ರಾಮದ ಪಕ್ಕದಲ್ಲಿ ಕಟ್ಟೆ | 114.25 |
| ತುಂಗಭದ್ರಾ | ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ ಸುಮಾರು 4.8 ಕಿಮೀ ದೂರದಲ್ಲಿರುವ ಮಲ್ಲಾಪುರ ಗ್ರಾಮದಲ್ಲಿ ತುಂಗಭದ್ರಾ ನದಿಗೆ ಕಟ್ಟೆ | 576.13 |
| | ಶಿವಮೊಗ್ಗ ಜಿಲ್ಲೆಯ ಲಕ್ಕವಳ್ಳಿ ಗ್ರಾಮದ ಪಕ್ಕದಲ್ಲಿ ಭದ್ರಾನದಿಗೆ ಕಟ್ಟೆ | |
| ಭದ್ರಾ | ಮನೋಳಿ ಗ್ರಾಮದ ಪಕ್ಕದಲ್ಲಿರುವ ಪೀಕಾಕ್ ಜಾರ್ಜ್‌ನಲ್ಲಿ ಮಲಪ್ರಭಾ ನದಿಗೆ ಕಟ್ಟೆ | 176.62 |
| ಮಲಪ್ರಭ | ಕೊಡಗು | 193.12 |
| | ಮೈಸೂರು | |
| ಹಾರಂಗಿ | | |
| ಹೇಮಾವತಿ | | |

ನೀರಾವರಿಯ ನಾಲೆಗಳನ್ನು ಹೊಳೆಗಳಿಂದ ನೇರವಾಗಿ ತೆಗೆಯುವುದಿಲ್ಲ. ಹೊಳೆಗೆ ಅಡ್ಡವಾಗಿ ಅಣೆಕಟ್ಟನ್ನೋ ಕಟ್ಟೆಯನ್ನೋ ಕಟ್ಟಿ ನೀರನ್ನು ನಾಲೆಯೊಳಕ್ಕೆ ನಿಯಂತ್ರಣ ಮಾಡಿಬಿಡುತ್ತಾರೆ. ಗಂಗಾನದಿಗೆ ಹರಿದ್ವಾರದ ಬಳಿ ಅಣೆಕಟ್ಟನ್ನು ಕಟ್ಟಿ ರೂರ್ಕಿ ನಗರದ ಮೇಲೆ ಹೋಗುವ ಮೇಲಿನ ಗಂಗಾನಾಲೆಯನ್ನು ತೋಡಿದ್ದಾರೆ. ಸರೋವರದ ಬಳಿ ಇದೇ ನದಿಯ ಮೇಲೆ ಇನ್ನೊಂದು ಅಣೆಕಟ್ಟನ್ನು 1878ರಲ್ಲಿ ಕಟ್ಟಿ ಕೆಳಗಿನ ಗಂಗಾನಾಲೆಯನ್ನು ಕಾನ್ಪುರದ ಕಡೆಗೆ ಹೋಗುವಂತೆ ಬಡಾಯಿಸಿದ್ದಾರೆ. ತೇಜವಾಲದ ಹತ್ತಿರ ಯಮುನಾ ನದಿಗೆ ಅಡ್ಡವಾಗಿ ಅಣೆಕಟ್ಟನ್ನು ಕಟ್ಟಿ ಎರಡು ದಡಗಳಲ್ಲಿಯೂ ನಾಲೆಗಳನ್ನು ತೆಗೆದು ನೀರಾವರಿಯನ್ನು ಒದಗಿಸಿದ್ದಾರೆ. ಕಾವೇರಿ ಮುಖಜಭೂಮಿಯಲ್ಲಿ ನೀರಾವರಿ ಪ್ರ.ಶ.ಪೂ. 2ನೆಯ ಶತಮಾನದಿಂದಲೂ ರೂಢಿಯಲ್ಲಿದೆ. 1840ರಲ್ಲಿ ಸರ್ ಆರ್ಥರ್ ಕಾಟನ್ ಅವರು ಕೊಲ್ಲಡಮ್ ನದಿಗೆ ತಗ್ಗಿನ ಅಣೆಕಟ್ಟನ್ನು ಕಟ್ಟಿ ಹಳೆಯ ಕಾಮಗಾರಿಗಳನ್ನೆಲ್ಲ ಆಧುನೀಕರಿಸಿದರು. ಇವರೇ ಮುಂದೆ ಗೋದಾವರಿ ನದಿಗೆ ಅಡ್ಡವಾಗಿ ಧವಳೇಶ್ವರದ ಬಳಿ ಭಾರೀ ಅಣೆಕಟ್ಟನ್ನು ಕಟ್ಟಿ ನದಿಯ ಎರಡು ದಡಗಳಲ್ಲಿಯೂ ನಾಲೆಗಳನ್ನು ನೀರಾವರಿಗೂ ಜಲಯಾನಕ್ಕೂ ಅನುಕೂಲವಾಗುವಂತೆ ಪ್ರಾರಂಭಿಸಿದರು; ವಿಜಯವಾಡದ ಹತ್ತಿರ ಕೃಷ್ಣಾನದಿಯ ಮೇಲೂ ಕಲ್ಲುಗಾರೆಯ ಅಣೆಕಟ್ಟನ್ನು ಕಟ್ಟಿ ನದಿಯ ಎರಡು ಕಡೆಗಳಲ್ಲಿಯೂ ನೀರಾವರಿಗೂ ಜಲಸಂಚಾರಕ್ಕೂ ಯೋಗ್ಯವಾದ ನಾಲೆಗಳನ್ನು ತೋಡಿದರು. ಇದೇ ತೆರನಾದ ನೀರಾವರಿ ನಾಲೆಗಳನ್ನು ಭಾರತದ ಅನೇಕ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ಕಟ್ಟಿ ತೋಡಲಾಗಿದೆ. ಮೈಸೂರಿನಲ್ಲಿ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಕಾವೇರಿ ನದಿಗೆ ಅಡ್ಡಲಾಗಿ ಕೃಷ್ಣರಾಜಸಾಗರದ ಕಟ್ಟೆಯನ್ನು ಕಟ್ಟಿಸಿದರು. ಅದರ ಎಡ ದಡದಲ್ಲಿ ಮಂಡ್ಯದ ಕಡೆಗೆ ಹೋಗುವ ನಾಲೆಗೆ ವಿಶ್ವೇಶ್ವರಯ್ಯ ನಾಲೆ ಎಂಬ ಹೆಸರಿದೆ. ಈಚೆಗೆ ಇಲ್ಲಿಂದ ವರುಣ ನಾಲೆಯನ್ನು ನಿರ್ಮಿಸಿ ದಕ್ಷಿಣದ ತಾಲ್ಲೂಕುಗಳಿಗೂ ನೀರಾವರಿ ಸೌಕರ್ಯ ಒದಗಿಸಲಾಗಿದೆ.

| ರಾಜ್ಯ | ಭಾರತದ ಕೆಲವು ನಾಲೆಗಳು ಕಟ್ಟೆ/ನಾಲೆ/ನೀರಾವರಿ | ನಾಲೆಯ ಉದ್ದ ಕಿಮೀ |
|---|---|---|
| ಆಂಧ್ರಪ್ರದೇಶ | ಕರ್ನೂಲ್–ಕಡಪನಾಲೆ | 307.4 |
| | ತುಂಗಭದ್ರಾ ಕೆಳಮಟ್ಟನಾಲೆ | 347.0 |
| ಉತ್ತರಪ್ರದೇಶ | ಶಾರದಾಸಾಗರ ನೀರಾವರಿ | 1113.8 |
| ಒರಿಸ್ಸ | ಮಹಾನದಿ ತಡೆಗಟ್ಟು | 386.24 |
| ಕರ್ನಾಟಕ | ತುಂಗಭದ್ರಾ ಕಟ್ಟೆ | 576.13 |
| ಗುಜರಾತ್ | ಬನಸ್ ಕಟ್ಟೆ | 651.77 |
| | ಕಾಕ್ರಪುರ ತಡೆಗಟ್ಟು | 435.0 |
| | ಮಾಹಿ ಬಲದಂಡೆ ನಾಲೆ | 304.0 |
| | ಉಕಾಯ್ ಕಟ್ಟೆ | 949.0 |
| ಪಶ್ಚಿಮ ಬಂಗಾಲ | ಕಾಂಗ್ಸಬತಿ ಕಟ್ಟೆ | 1305.0 |
| ಬಿಹಾರ | ಮಯೂರಾಕ್ಷಿ ನೀರಾವರಿ | 361.0 |
| | ಗಂಡಕ್ ಅಡ್ಡಗಟ್ಟು | 527.76 |
| ಮಹಾರಾಷ್ಟ್ರ | ಭೀಮಾ ಕಟ್ಟೆ | 429.6 |
| | ಕೃಷ್ಣಾ ಕಟ್ಟೆ | 367.4 |
| | ವೀರ ಕಟ್ಟೆ | 331.5 |
| | ವರ್ಣ ಕಟ್ಟೆ | 341.0 |
| ರಾಜಸ್ತಾನ | ಕೋಟ ಅಡ್ಡಗಟ್ಟು | 379.8 |
| | ರಾಜಸ್ತಾನ ನಾಲೆ | 489.55 |
| ಹರಿಯಾಣ | ಗುರ್‌ಗಾಂವ್ ನಾಲೆ | 469.31 |
| | ಪಶ್ಚಿಮ ಜಮುನಾ ನಾಲೆ | 629.03 |

(ಎಚ್.ಸಿ.ಕೆ.)

**ನಾವಿಕಮೈಲು :** ನೌಕಾಯಾನದಲ್ಲಿ ಬಳಸುವ ದೂರದ ಮೂಲಭೂತ ಏಕಮಾನ (ನಾಟಿಕಲ್ ಮೈಲ್). ಇದರ ಮೌಲ್ಯ 1825 ಮೀ ಗಳೆಂದು ಅಂಗೀಕರಿಸಲಾಗಿದೆ. ನಿಷ್ಕೃಷ್ಟ ವ್ಯಾಖ್ಯೆ ಇದು: ಭೂತಲದ ಸಲೆಗೆ ಸಮಾನ ಸಲೆ ಇರುವ ಗೋಳಕೇಂದ್ರದಲ್ಲಿ ಕೋನದ 1 ಮಿನಿಟನ್ನು ರಚಿಸುವ (ಆ ಗೋಳದ) ಮಹಾವೃತ್ತದ ಉದ್ದ. ಇದರ ಮೌಲ್ಯ 1825 ಮೀ ಗಳು. ಇದರಿಂದಾಗಿ 1825 ಮೀ ಗಳನ್ನು ಒಂದು ನಾಟಿಕಲ್ ಮೈಲಿ ಎಂದು ಕರೆಯಲಾಗಿದೆ. ಅಂತಾರಾಷ್ಟ್ರೀಯ ಒಡಂಬಡಿಕೆಯ ಪ್ರಕಾರ ನಾವಿಕ ಮೈಲಿನ ಉದ್ದ 1825 ಮೀ. ಮಾನಕ ಮೈಲು (ಸ್ಟ್ಯಾಟ್ಯೂಟರಿ ಮೈಲ್) ಎಂಬುದು ಭಾರತದಲ್ಲಿ (ವ್ಯಾಪಕವಾಗಿ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ) ಈ ಹಿಂದೆ ಬಳಕೆಯಲ್ಲಿತ್ತು, 985 ಮೀ ಗಳಿಗೆ ಸಮ. (ಆರ್.ಎಸ್.)

**ನಾಸಿಕ್:** ಮಹಾರಾಷ್ಟ್ರ ರಾಜ್ಯದ ಒಂದು ಜಿಲ್ಲೆ ಹಾಗೂ ಅದರ ಆಡಳಿತ ಕೇಂದ್ರ. ಜಿಲ್ಲೆ ಉ.ಅ. $19^0 53'$–$20^0 53'$ ಮತ್ತು ಪೂ.ರೇ. $73^0 15'$–$74^0 56'$ ನಡುವೆ ಇದೆ. ಜಿಲ್ಲೆಯ ವಿಸ್ತೀರ್ಣ 15.582 ಚ.ಕಿಮೀ. ಜನಸಂಖ್ಯೆ 48,87,923. ಪಶ್ಚಿಮ ಘಟ್ಟಗಳಲ್ಲಿ ಹುಟ್ಟುವ ಗೋದಾವರಿ ಹಾಗೂ ಗಿರನಾ ಇವು ಜಿಲ್ಲೆಯ ಮುಖ್ಯ ನದಿಗಳು. ಸಜ್ಜೆ, ಗೋದಿ, ಎಣ್ಣೆ ಹಾಗೂ ಬೇಳೆಕಾಳುಗಳು, ಕಬ್ಬು ಹಾಗೂ ಹತ್ತಿ ಇಲ್ಲಿಯ ಮುಖ್ಯ ಕೃಷಿ ಉತ್ಪನ್ನಗಳು. ಇಲ್ಲಿಯ ಕಾಡುಗಳಲ್ಲಿ ಸಾಗುವಾನಿ ಮರಗಳು ಹೇರಳವಾಗಿವೆ. ಬಟ್ಟೆ ನೇಯ್ಗೆ, ಎಣ್ಣೆ ತೆಗೆಯುವುದು, ಪಾತ್ರೆಗಳ ತಯಾರಿಕೆ ಇವು ಜಿಲ್ಲೆಯ ಮುಖ್ಯ ಉದ್ಯಮಗಳು. ನಾಸಿಕ್, ಮಾಲೆಗಾಂವ್ (1,91,847), ಮನ್‌ಮಾಡ್ (29,572), ಯಿಯೋಲಾ (24,533)– ಇವು ಪ್ರಮುಖ ಪಟ್ಟಣಗಳು. ಇಗತ್‌ಪುರಿ ಮತ್ತು ಮನ್‌ಮಾಡ್‌ಗಳಲ್ಲಿ ರೈಲ್ವೆ ಕಾರ್ಯಾಗಾರಗಳು ಇವೆ. *

**ನಿಕರಾಗುವ:** ಮಧ್ಯ ಅಮೆರಿಕದ ಅತ್ಯಂತ ದೊಡ್ಡ ಗಣರಾಜ್ಯ. ಉ.ಅ. $10^0 15'$ ಮತ್ತು ಪ.ರೇ. $83^0 87'$ ನಡುವೆ ಹಬ್ಬಿದೆ. ಉತ್ತರದಲ್ಲಿ ಹೊಂಡುರಸ್ ಗಣರಾಜ್ಯ, ಪೂರ್ವದಲ್ಲಿ ಕ್ಯಾರಿಬೀಯನ್ ಸಮುದ್ರ, ದಕ್ಷಿಣದಲ್ಲಿ ಕೋಸ್ಟರೀಕ ಗಣರಾಜ್ಯ ಮತ್ತು ಪಶ್ಚಿಮದಲ್ಲಿ ಪೆಸಿಫಿಕ್ ಸಾಗರ ಇವೆ. ನಿಕರಾಗುವಾದ ಗರಿಷ್ಠ ಅಗಲ 568 ಕಿಮೀ. ಇದಕ್ಕೆ ಕೆರೆಬಿಯನ್ ಕಡೆಗೆ 538 ಕಿಮೀ ಹಾಗೂ ಪೆಸಿಫಿಕ್ ಸಾಗರದ ಕಡೆಗೆ 350 ಕಿಮೀ– ಒಟ್ಟು 888 ಕಿಮೀ ಉದ್ದದ ಸಮುದ್ರತೀರವಿದೆ. ಇದರ ವಿಸ್ತೀರ್ಣ 1,30,700 ಚ.ಕಿಮೀ. ಜನಸಂಖ್ಯೆ 5570129 (2002). ರಾಜಧಾನಿ ಮನಾಗುವ, ಇದು ದೇಶದ ಅತಿದೊಡ್ಡನಗರ. ಜನಸಂಖ್ಯೆ 1380100 (2002).

ಭೂಸ್ವರೂಪ: ನಿಕರಾಗುವಾದಲ್ಲಿ ಮೂರು ಮುಖ್ಯ ಪ್ರಾಕೃತಿಕ ವಿಭಾಗಗಳಿವೆ; ಉತ್ತರದಲ್ಲಿ ಹಾಂಡುರಸ್ ದೇಶದ ಗಡಿಯೇ ತಲವಾಗಿರುವ ತ್ರಿಕೋಣಾಕೃತಿಯ ಪ್ರಸ್ಥಭೂಮಿ ಈ ದೇಶದ ಅತ್ಯಂತ ದೊಡ್ಡ ಪ್ರಾಕೃತಿಕ ವಿಭಾಗ. ಇದರ ದಕ್ಷಿಣದ ಮೊನೆ ಕೋಸ್ಟರೀಕದ ಅಂಚಿನ ಬಳಿ ಸಾನ್ ವಾನ್ ನದಿಯ ಉತ್ತರಕ್ಕೆ ಕೆಲವೇ ಕಿಮೀ ದೂರದಲ್ಲಿ ಇದೆ. ಇದು 1,524 ಮೀ ಗಿಂತ ಹೆಚ್ಚು ಎತ್ತರವಾಗಿದೆ. ಇದರ ಅತ್ಯುನ್ನತ ಶಿಖರ ಜೆಲ್ಯೆಯ (1,999 ಮೀ). ಇದರ ಪಶ್ಚಿಮ ಭಾಗವನ್ನು ಜ್ವಾಲಾಮುಖಿ ಶಿಲಾಪಾತ ಮುಚ್ಚಿದೆ. ಕೆರೆಬಿಯನ್ ತೀರ ಈ ದೇಶದ ಎರಡನೆಯ ಪ್ರಾಕೃತಿಕ ವಿಭಾಗ. ಇದು ತಗ್ಗಾದ ಮೈದಾನ; ಉಷ್ಣವಲಯದ ಅರಣ್ಯ ಪ್ರದೇಶ. ಮಧ್ಯ ಅಮೆರಿಕದ ಉಳಿದ ದೇಶಗಳ ಕರಾವಳಿಗಿಂತ ಹೆಚ್ಚು ಅಗಲವಾಗಿದೆ. ಮೂರನೆಯ ವಿಭಾಗ ಚಿಕ್ಕದಾದರೂ ಜನವಸತಿಯ ದೃಷ್ಟಿಯಿಂದ ಅತ್ಯಂತ ಮಹತ್ತ್ವದ್ದು. ವಾಯವ್ಯದ ಫಾನ್ಸೇಕ ಖಾರಿಯಿಂದ ಕರ್ಣರೇಖೆಯಂತೆ ಆಗ್ನೇಯದತ್ತ ಕೆರೆಬಿಯನ್ ಬದಿಗೆ ಕೋಸ್ಟರೀಕದ ಅಂಚಿನವರೆಗೆ ಹಬ್ಬಿರುವ ತಗ್ಗು ನೆಲವಿದು. ಮನಾಗ್ವ ಮತ್ತು ನಿಕರಾಗ್ವ ಎಂಬ ಎರಡು ವಿಶಾಲ ಸರೋವರಗಳು ಮತ್ತು ಸಾನ್‌ವಾನ್ ನದೀ ಕಣಿವೆ ಈ ವಿಭಾಗದಲ್ಲಿವೆ. ನಿಕರಾಗ್ವ ಸರೋವರ 61 ಕಿಮೀ ಉದ್ದ ಮತ್ತು 26 ಕಿಮೀ ಅಗಲವಾಗಿದೆ. ಇವೆರಡನ್ನೂ ಕೂಡಿಸುವ ಟೀಪಿಟಾಪ ನದಿ ಮನಾಗ್ವ ಸರೋವರದಿಂದ ಹೊರಟು ನಿಕರಾಗುವ ಸರೋವರವನ್ನು ಸೇರುತ್ತದೆ. ನಿಕರಾಗುವಾದ ಪಶ್ಚಿಮದ ಇಳಿಜಾರು ಕಡಿದಾಗಿದೆ. ಮೋಗೋಟನ್ ಶಿಖರ (2130 ಮೀ) ದೇಶದಲ್ಲಿ ಅತಿ ಎತ್ತರವಾದ ಭಾಗವಾಗಿದೆ.




ನಿಕರಾಗುವದಲ್ಲಿ ಪೆಸಿಫಿಕ್ ಸಾಗರವನ್ನು ಸೇರುವ ಪ್ರಮುಖ ನದಿಗಳು ಯಾವುವೂ ಇಲ್ಲ. ಮಧ್ಯದ ಜಲವಿಭಾಜಕ ಪ್ರಸ್ಥಭೂಮಿಯಿಂದ ಪೂರ್ವದ ಕಡೆಗೆ ಹರಿಯುವ ನದಿಗಳು ಕೋಕೋ, ರೀಯೋ ಗ್ರ್ಯಾಂಡೇ, ಎಸ್ಕಂಡೀಡೋ ಅಥವಾ ಬ್ಲೂ ಫೀಲ್ಡ್ ಮತ್ತು ಸಾನ್ ವಾನ್. ಎಸ್ಕೆಂಡೀಡೋ ನದಿ ಮಾತ್ರ ಯಾನಯೋಗ್ಯ.

ವಾಯುಗುಣ: ಮಧ್ಯದ ಪ್ರಸ್ಥಭೂಮಿಯನ್ನು ಬಿಟ್ಟು ಉಳಿದೆಡೆ ವಾಯುಗುಣ ಉಷ್ಣ ಮತ್ತು ಆರ್ದ್ರ. ಪಶ್ಚಿಮಕ್ಕಿಂತ ಪೂರ್ವದ ಕಡೆ ತಂಪು ಮತ್ತು ಆರ್ದ್ರತೆ ಹೆಚ್ಚು. ಪೆಸಿಫಿಕ್ ಸಾಗರದ ಕಡೆಯಲ್ಲಿ ಮೇ–ನವೆಂಬರ್ ವರೆಗೆ ಮಳೆ ಬೀಳುತ್ತದೆ. ಡಿಸೆಂಬರಿನಿಂದ ಏಪ್ರಿಲ್‌ವರೆಗೆ ಒಣಹವೆ ಇರುತ್ತದೆ. ಇಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $27^0$ಸೆ.; ವಾರ್ಷಿಕ ಸರಾಸರಿ ಮಳೆ 1905 ಮಿಮೀ. ಕ್ಯಾರಿಬಿಯನ್ ಸಮುದ್ರದ ಕಡೆಯ ಪ್ರದೇಶದಲ್ಲಿ ವರ್ಷದಲ್ಲಿ ಸು. 9 ತಿಂಗಳು ಮಳೆ ಬೀಳುತ್ತದೆ. ಇಲ್ಲಿ ನಿಶ್ಚಿತ ಬೇಸಗೆಯಿರುವುದಿಲ್ಲ. ಇಲ್ಲಿಯ ವಾರ್ಷಿಕ ಸರಾಸರಿ ಉಷ್ಣತೆ $26^0$ ಸೆ. ಒಟ್ಟು ಮಳೆ ಸು. 3,810 ಮಿಮೀ. ಉತ್ತರದ ಪರ್ವತಪ್ರದೇಶದಲ್ಲಿ ವಾಯುಗುಣ ಹೆಚ್ಚು ತಂಪು. ಅಲ್ಲಿಯ ಸರಾಸರಿ ಉಷ್ಣತೆ $18^0$ಸೆ.

ಸಸ್ಯ ಮತ್ತು ಪ್ರಾಣಿಸಂಪತ್ತು: ದೇಶದ ಅರ್ಧಕ್ಕೂ ಹೆಚ್ಚು ಭಾಗವನ್ನು ಉಷ್ಣ ವಲಯದ ಕಾಡು ಆವರಿಸಿದೆ. ಬಾದಾಮಿ, ಆಕ್ರೋಟು, ಅಗಲ ಎಲೆಯ ಗಂಡು ದೇವದಾರು, ರಾಜದಾರು, ಗುಗ್ಗುಳ, ತೈಲಪರ್ಣಿ, ಮಹಾಗನಿ ಮುಂತಾದ ಮರಗಳಿವೆ. ಕ್ವೆಬ್ರಾಚೊ ಗಟ್ಟಿಮರವನ್ನೊದಗಿಸುತ್ತದೆ. ಇತರ ಮರಗಳು ಕಾಡು ರಬ್ಬರ್, ಎಬೂನಿ, ಬೀಟೆ ಹಾಗೂ ರಾಳ. ಮೆಡ್ಲರ್ ಮರ ಕ್ರ್ಯಾಬ್ ಸೇಬಿನಂಥ ಹಣ್ಣುಗಳನ್ನೊದಗಿಸುತ್ತದೆ. ಪಶ್ಚಿಮದ ತಗ್ಗು ಭೂಮಿಯಲ್ಲಿ ಹುಲ್ಲುಗಾವಲುಗಳಿವೆ.

ಜಾಗ್ವಾರ್, ಪ್ಯೂಮ, ಕೋತಿ, ಆರ್ಮಡಿಲೊ, ಮೊಸಳೆ, ಗಿಣಿ, ಪೆಕರಿ, ಹಲವು ಬಗೆಯ ಹಾವುಗಳು, ಪಕ್ಷಿಗಳು ಇವೆ. ಇವಲ್ಲದೆ ಸಿಹಿನೀರಿನ ಹಾಗೂ ಉಪ್ಪುನೀರಿನ ಮೀನುಗಳು, ಮೃದ್ವಂಗಿ, ಹೆಗ್ಗಣ ಮತ್ತು ಕ್ರಿಮಿಕೀಟಗಳು ಹೇರಳವಾಗಿವೆ.

ಜನತೆ: ದೇಶದಲ್ಲಿ ಶೇ. 70ರಷ್ಟು ಜನರು ಮೆಸ್ಟಿಜೋ (ಐರೋಪ್ಯ ಮತ್ತು ಇಂಡಿಯನ್ ಮಿಶ್ರತಳಿ). ಜಾಂಬೋ (ನೀಗ್ರೋ ಮತ್ತು ಇಂಡಿಯನ್ ಮಿಶ್ರತಳಿ) ಮತ್ತು ಮುಲಾಟೋ (ಐರೋಪ್ಯ ಮತ್ತು ನೀಗ್ರೋ ಮಿಶ್ರತಳಿ) ಪಂಗಡಗಳಿಗೆ ಸೇರಿದವರು. ಶೇ. 20ರಷ್ಟು ಬಿಳಿಯರು, ಶೇ 10ರಷ್ಟು ನೀಗ್ರೋಗಳು. ಮೂಲ ಇಂಡಿಯನರಲ್ಲಿ ಸುಮೋ, ಮಿಸ್ಕಿಟೋ ಮತ್ತು ರಾಮಾಕ್ವಿ ಬುಡಕಟ್ಟುಗಳು ಮಾತ್ರ ಉಳಿದಿವೆ. ಆಗ್ನೇಯ ತೀರದಲ್ಲಿರುವ ಮನಾಗ್ವ ಅತ್ಯಂತ ದೊಡ್ಡ ನಗರ. ಜನಸಂಖ್ಯೆ 9,59,000.00. 1972ರ ಡಿಸೆಂಬರ್ 23ರಂದು ಸಂಭವಿಸಿದ ಭೂಕಂಪ ಮತ್ತು ಅನಂತರದ ಬೆಂಕಿಯಿಂದ ನಗರಕ್ಕೆ ಬಹಳ ಹಾನಿ ತಟ್ಟಿತು. ಲೇಯಾನ್ (1,00,982). ಗ್ರನಾಡ, ಗ್ರಾನಡ (88,636) – ಇವು ಇತರ ಪಟ್ಟಣಗಳಲ್ಲಿ ಮುಖ್ಯವಾದವು.

ಆರ್ಥಿಕತೆ: ನಿಕರಾಗುವದ ಆರ್ಥಿಕತೆ ಕೃಷಿ ಪ್ರಧಾನವಾದುದ್ದು. ದೇಶದಲ್ಲಿ ನಿಸರ್ಗ ಸಂಪತ್ತು ಸಮೃದ್ಧವಾಗಿರುವುದಾದರೂ ಅದರ ಲಾಭವನ್ನು ಸಾಕಷ್ಟು ಪಡೆಯುವುದು ಸಾಧ್ಯವಾಗುತ್ತಿಲ್ಲ. ಕೈಗಾರಿಕೆ ಇನ್ನೂ ಆರಂಭದಿಶೆಯಲ್ಲಿದೆ. ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣದ ಅದಿರು, ಸೀಸ, ಬಾಕ್ಸೈಟ್, ಅಮೃತಶಿಲೆ ಮತ್ತು ಜಿಪ್ಸಮ್ ನಿಕ್ಷೇಪಗಳಿವೆಯೆಂದು ಅಂದಾಜು ಮಾಡಲಾಗಿದೆ. ಚಿನ್ನದ ಗಣಿಗಾರಿಕೆ ವಸಾಹತಿನ ಕಾಲದಿಂದಲೂ ಮಹತ್ತ್ವದ್ದಾಗಿದೆ.

ಕೃಷಿ: ಶೇ. 20ರಷ್ಟು ಭೂಮಿಯನ್ನು ಮಾತ್ರ ಕೃಷಿಗೆ ಬಳಸಲಾಗುತ್ತಿದೆ. ಪೂರ್ವತೀರದ ಮೈದಾನದಲ್ಲಿ ಬಾಳೆ, ಹತ್ತಿ, ಹಣ್ಣು ಬೆಳೆಯುತ್ತಾರೆ. ಕಾಫಿ, ಕಬ್ಬು, ಕಾಳು, ಅವರೆ, ಕೋಕೋ, ಬತ್ತ, ಎಳ್ಳು, ತಂಬಾಕು ಮತ್ತು ಗೋದಿ ಪಶ್ಚಿಮಾರ್ಧದಲ್ಲಿ ಬೆಳೆಯುತ್ತವೆ. ಹತ್ತಿ, ಕಾಫಿ, ಮಾಂಸ ಮತ್ತು ಸಕ್ಕರೆ ಪ್ರಮುಖ ರಫ್ತುಗಳು. ಸೋಯಾ ಅವರೆ ಮತ್ತು ನೆಲಗಡಲೆಗಳ ಬೆಳೆಗಳನ್ನು ಪ್ರಾರಂಭಿಸಲಾಗಿದೆ.

ಸಾರಿಗೆ ಸೌಲಭ್ಯಗಳ ಅಭಾವದಿಂದಾಗಿ ಅರಣ್ಯಗಾರಿಕೆ ಹೆಚ್ಚು ಬೆಳೆದಿಲ್ಲ. ಸೀಗಡಿ ಹಿಡಿಯುವುದು ಒಂದು ಮುಖ್ಯ ಕಡಲ ಚಟುವಟಿಕೆ. ಪೆಸಿಫಿಕ್ ಸಾಗರ ಮತ್ತು ಕೆರೆಬಿಯಾನ್‌ಗಳಲ್ಲಿ ಹಿಡಿಯಲಾಗುವ ಸೀಗಡಿ ಸೇಕಡ 95ರಷ್ಟು ರಫ್ತಾಗುತ್ತವೆ.

ಕೈಗಾರಿಕೆ: ಪೆಟ್ರೋಲ್, ಬೆಂಕಿಪಟ್ಟಿಗೆ, ಪಾದರಕ್ಷೆ, ಸಾಬೂನು, ಸಸ್ಯತೈಲ, ಮದ್ಯ ಮತ್ತು ಬಟ್ಟೆ ತಯಾರಾಗುತ್ತದೆ. ತೈಲಶುದ್ಧೀಕರಣ ಉದ್ಯಮ ಬೆಳೆಯುತ್ತಿದೆ.

ಸಾರಿಗೆ: ಸಾರಿಗೆ ವ್ಯವಸ್ಥೆ ಪಶ್ಚಿಮವಲಯದಲ್ಲಿ ಬೆಳೆದಿದೆ. ದೇಶದಲ್ಲಿ ಸು. 18712 ಕಿಮೀ ಹೆದ್ದಾರಿಗಳಿವೆ. ಅವುಗಳಲ್ಲಿ ಅರ್ಧಕ್ಕೂ ಹೆಚ್ಚು ಭಾಗದವು ಮಳೆಗಾಲದಲ್ಲಿ ಸಂಚಾರಕ್ಕೆ ಯೋಗ್ಯವಾಗಿಲ್ಲ. ಸು. 300 ಕಿಮೀ ಉದ್ದದ ರೈಲುಮಾರ್ಗಗಳಿವೆ. ಮುಖ್ಯಮಾರ್ಗ ಗ್ರನಾಡದಿಂದ ಕರಿಂಟೋಗೆ ಹೋಗುತ್ತದೆ. ಪ್ವೆರ್ಟೊ ಮೊರಜಾಮ್, ಕರಿಂಟೋ, ಸ್ಯಾನ್, ವಾನ್, ಡೆಲ್, ಸುರ್, ಇವು ಪೆಸಿಫಿಕ್ ಬಂದರುಗಳು. ಪ್ವೆರ್ಟೊ ಕಬೇಜಾಸ್, ಬ್ಲೂಫೀಲ್ಡ್ ಇವು ಕೆರೆಬಿಯನ್ ತೀರದ ಬಂದರುಗಳು. ಮನಾಗುವದ ಬಳಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣವಿದೆ. ಅಲ್ಲಿಂದ ಉತ್ತರ ಅಮೆರಿಕ ಮತ್ತು ಲ್ಯಾಟಿನ್ ಅಮೆರಿಕಗಳಿಗೆ ನಿತ್ಯವೂ ಜೆಟ್ ವಿಮಾನ ಸಂಚಾರವುಂಟು. ಪ್ವೆರ್ಟೊ ಕಬೇಜಾಸ್‌ನಲ್ಲಿರುವುದು ಎರಡನೆಯ ದೊಡ್ಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. ಇವಲ್ಲದೆ ಐದು ಆಂತರಿಕ ವಿಮಾನ ನಿಲ್ದಾಣಗಳಿವೆ. **(ಜಿ.ಕೆ.ಯು.)**

**ನಿಗೆಲ್ ತ್ರಿಫ್ಟ್:** 1949– ಪ್ರಪಂಚದ ಪ್ರಮುಖ ಮಾನವ ಭೂಗೋಳವಿಜ್ಞಾನಿ ಹಾಗೂ ಸಾಮಾಜಿಕ ತಜ್ಞ. ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಬೇರೆ ಬೇರೆ ಹುದ್ದೆಗಳ ಅಧಿಕಾರ ಅನುಭವವುಳ್ಳವರು. ರಿಂದ ಪ್ರಸ್ತುತ ಹುದ್ದೆಗೆ ಬಡ್ತಿ. ಇವರ ಸರಳ ಆಧುನಿಕ ವಾಕ್ಸರಣೆ ಹಾಗೂ ನಿರೂಪಣೇತರ ಸಿದ್ಧಾಂತದ ಬುನಾದಿಗೆ ಮೆಚ್ಚುಗೆ ದೊರೆತಿದೆ.

ಇವರ ಸಂಶೋಧನ ಕಾರ್ಯಗಳಿಗೆ ಹಲವು ಪ್ರಶಸ್ತಿಗಳು ಲಭ್ಯವಾಗಿವೆ. ಬ್ರಿಟಿಷ್ ಅಕಾಡೆಮಿಗೆ ಆಯ್ಕೆ (2003). ಬ್ರಿಟನ್ ಸರ್ಕಾರದ ಹಲವು ಸಲಹಾಮಂಡಲಿಗಳಿಗೆ ಸ್ಥಾನಮಾನ ಹಾಗೂ ಇ.ಎಸ್.ಆರ್.ಸಿ ರಿಸರ್ಚ್ ಪ್ರೈಯಾರಿಟಿಸ್ ಬೋರ್ಡ್‌ನಲ್ಲಿ ಸದಸ್ಯತ್ವ. ಪರಿಸರ ಮತ್ತು ಯೋಜನೆ (ಎನ್ವಿರಾನ್‌ಮೆಂಟ್ ಅಂಡ್ ಪ್ಲಾನಿಂಗ್) ಬಗ್ಗೆ ನಿಯತಕಾಲಿಕೆ ಸ್ಥಾಪನೆ, ಪರಿಸರದ ಬಗ್ಗೆ ಚಿಂತನೆಗಳ ಪ್ರಕಟಣೆ (1962). ಇವೆಲ್ಲದರ ಜೊತೆಗೆ ಈತ ಮಾನವ ಭೂಗೋಳ ವಿಜ್ಞಾನದ ವೈವಿಧ್ಯಮಯ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಇವರ ಅಧ್ಯಯನ ಕ್ಷೇತ್ರ ಕ್ರಿಯಾತ್ಮಕ ವಿಧಾನದಿಂದ ಕೂಡಿರುತ್ತದೆ. ಈಗ ನಾರ್ವಿಕ್ ವಿಶ್ವವಿದ್ಯಾಲಯದಲ್ಲಿ ಕುಲಪತಿಯಾಗಿದ್ದಾರೆ (2006). **(ಪಿ.ಎಂ.)**

**ನಿಜಾಮಾಬಾದ್:** ಆಂಧ್ರಪ್ರದೇಶ ರಾಜ್ಯದ ವಾಯವ್ಯ ಭಾಗದಲ್ಲಿರುವ ಒಂದು ಜಿಲ್ಲೆ; ತಾಲ್ಲೂಕು; ಅವುಗಳ ಮುಖ್ಯಪಟ್ಟಣ. ನಿಜಾಮಾಬಾದ್ ಜಿಲ್ಲೆ ದಖನ್ ಪ್ರಸ್ಥಭೂಮಿಯಲ್ಲಿದೆ. ಉತ್ತರದಲ್ಲಿ ಗೋದಾವರಿ ನದಿ ಈ ಜಿಲ್ಲೆಯನ್ನು ಅದಿಲಾಬಾದ್ ಜಿಲ್ಲೆಯಿಂದಲೂ ಪಶ್ಚಿಮದಲ್ಲಿ ಗೋದಾವರಿಯ ಉಪನದಿಯಾದ ಮಂಜ್ರಾ ಇದನ್ನು ನಾಂದೇಡ್ ಜಿಲ್ಲೆಯಿಂದಲೂ ಬೇರ್ಪಡಿಸುತ್ತವೆ. ನೈಋತ್ಯದಲ್ಲಿ ಮಂಜ್ರಾ ನದಿಗೆ ಕಟ್ಟೆ ಕಟ್ಟಿ ನಿರ್ಮಿಸಲಾದ ನಿಜಾಮ್ ಸಾಗರ ಜಲಾಶಯವಿದೆ. ಜಿಲ್ಲೆಯ ಗುಡ್ಡಗಾಡಿನ ದೃಶ್ಯ ರಮಣೀಯವಾದುದ್ದು. ಇಲ್ಲಿಯ ವಾಯುಗುಣ ಉಷ್ಣ ಮತ್ತು ಸ್ವಲ್ಪಮಟ್ಟಿಗೆ ಆರ್ದ್ರ. ಇಲ್ಲಿ ವರ್ಷಕ್ಕೆ 114 ಸೆಂಮೀ ಸರಾಸರಿ ಮಳೆಯಾಗುತ್ತದೆ. ಜಿಲ್ಲೆಯ ಅರಣ್ಯಪ್ರದೇಶದಲ್ಲಿ ಚೌಬೀನೆಗೆ ಯೋಗ್ಯವಾದ ಮರ ದೊರಕುತ್ತದೆ. ಹುಲಿ, ಚಿರತೆ, ನರಿ, ಕರಡಿ ಮತ್ತು ಕಾಡುಹಂದಿ ಇಲ್ಲಿಯ ವನ್ಯಮೃಗಗಳು. ಬತ್ತ ಮುಖ್ಯ ಬೆಳೆ. ಜೋಳ, ಗೋದಿ ಮತ್ತು ಕಬ್ಬು ಇತರ ಬೆಳೆಗಳು. ಜಿಲ್ಲೆಯ ವಿಸ್ತೀರ್ಣ 7,969 ಚ.ಕಿಮೀ. ನಿಜಾಮಾಬಾದ್, ಆರ್ಮೂಲ್, ಕಾಮರೆಡ್ಡಿ, ಯೆಲ್ಲಾರೆಡ್ಡಿ, ಬನ್ಸ್‌ವಾಡಾ, ಮದ್ನೂರ್ ಮತ್ತು ಬೋಧನ್ – ಇವು ಇಲ್ಲಿಯ ತಾಲ್ಲೂಕುಗಳು. ಜಿಲ್ಲೆಯ ಜನಸಂಖ್ಯೆ :23.42 ಲಕ್ಷ.

ನಿಜಾಮಾಬಾದ್ ನಗರ ಹೈದರಾಬಾದ್ ನಗರದ ವಾಯವ್ಯಕ್ಕೆ 144 ಕಿಮೀ ದೂರದಲ್ಲಿ ಮಧ್ಯ ರೈಲ್ವೆಯ ಹೈದರಾಬಾದ್–ಗೋದಾವರಿ ಕಣಿವೆ ರೈಲುದಾರಿಯ ಮೇಲಿದೆ. ಇಲ್ಲಿ ಅನೇಕ ಮಾರ್ಗಗಳು ಕೂಡುತ್ತವೆ. ಹಿಂದೆ ಇದಕ್ಕೆ ಇಂದೂರ್ ಎಂಬ ಹೆಸರಿತ್ತು. ನಗರದ ನೈಋತ್ಯದಲ್ಲಿರುವ ಗುಡ್ಡದ ಮೇಲಿರುವ ದೇವಾಲಯ, ಇಂದೂರು ಕಿಲ್ಲೆ ಇವು ನೋಡತಕ್ಕ ಸ್ಥಳಗಳು. ನಗರದ ಜನಸಂಖ್ಯೆ 320722. ಪೌರ ಸಭೆಯೂ ಸುರಕ್ಷಿತ ನೀರು ಸರಬರಾಜು ವ್ಯವಸ್ಥೆಯೂ ಇವೆ. ಅಕ್ಕಿಗಿರಣಿ, ಖಂಡಸಾರಿ ಸಕ್ಕರೆಯ ತಯಾರಿಕೆ, ಕಾಂಕ್ರೀಟ್ ಕೊಳವೆಗಳ ತಯಾರಿಕೆ–ಇಲ್ಲಿಯ ಕೈಗಾರಿಕೆಗಳು. ನಗರದ ಬಳಿ ಇರುವ ಯೆಲ್ಲಾರೆಡ್ಡಿ ಪೇಟೆಯಲ್ಲಿ ಸುಂದರವಾದ ಎರಡು ಪುರಾತನ ಜೈನ ದೇವಾಲಯಗಳಿವೆ. (ಜಿ.ಕೆ.ಯು.)

**ನಿತ್ಯ ಪ್ರಯಾಣ:** ಜನ ವಾಸ ಮಾಡುವ ಸ್ಥಳದಿಂದ ವೃತ್ತಿ ನಿರ್ವಹಿಸುವ ಸ್ಥಳಕ್ಕೆ ಪ್ರತಿದಿನವೂ ಪ್ರಯಾಣಿಸುವುದನ್ನು ನಿತ್ಯ ಪ್ರಯಾಣ ಎನ್ನುವರು (ಕಮ್ಯೂಟಿಂಗ್). ಜೊತೆಗೆ ವಿದ್ಯಾರ್ಥಿಗಳು ತಮ್ಮ ವಸತಿಯ ಸ್ಥಳದಿಂದ ವಿದ್ಯಾಭ್ಯಾಸಕ್ಕಾಗಿ ಶಾಲಾ ಕಾಲೇಜುಗಳಿಗೆ ಪ್ರತಿದಿನ ಹೋಗಿಬರುವುದನ್ನು ಇದೇ ಹೆಸರಿನಲ್ಲಿ ಕರೆಯಲಾಗುವುದು.

ಇದನ್ನು ಕೈಗಾರಿಕೋದ್ಯಮದಲ್ಲಿ ಹೆಚ್ಚಾಗಿ ಕಾಣಬಹುದು. ಇದಕ್ಕೆ ಕಾರಣ ಈ ಪ್ರದೇಶಗಳು ನಗರ ಪ್ರದೇಶಗಳಾಗಿದ್ದು ವಿವಿಧ ಸಾರಿಗೆಸೌಲಭ್ಯ ಹಾಗೂ ಇತರ ಅನುಕೂಲಗಳನ್ನು ಒಳಗೊಂಡಿರುತ್ತವೆ. ರೈಲು, ಬಸ್ಸು, ದ್ವಿಚಕ್ರವಾಹನ ಮೊದಲಾದ ಆಧುನಿಕ ಸಾರಿಗೆ ಸೌಲಭ್ಯವಿದ್ದು ಜನರನ್ನು ತಮ್ಮ ವಸತಿಗಳಿಂದ ವೃತ್ತಿನಿರತ ಪ್ರದೇಶಗಳಿಗೆ ಒಯ್ಯುತ್ತವೆ.

19ನೆಯ ಶತಮಾನದಲ್ಲಿ ಹೆಚ್ಚಿನ ಜನ ತಾವು ವಾಸ ಮಾಡುತ್ತಿದ್ದ ಪ್ರದೇಶದಲ್ಲೆ ಕೆಲಸ ಮಾಡುತ್ತಿದ್ದರು. ಅತಿ ದೂರದ ಪ್ರದೇಶಕ್ಕೆ ಅವರು ಪ್ರಯಾಣಿಸುತ್ತಿರಲಿಲ್ಲ. ತಮ್ಮ ವಸತಿಗೂ ಹಾಗೂ ಕಾರ್ಯನಿರ್ವಹಿಸುವ ಪ್ರದೇಶಗಳು ಹತ್ತಿರದಲ್ಲೆ ಇರುತ್ತಿದ್ದವು.

ಆಧುನಿಕತೆ ಬೆಳೆದಂತೆಲ್ಲ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳು ಅಧಿಕವಾಗಿ ಹೆಚ್ಚಿನ ಅವಕಾಶಗಳು, ಉದ್ಯೋಗಾವಕಾಶಗಳು ಹುಟ್ಟಿಕೊಂಡವು. ಇದರಿಂದ ಜನರು ನಗರ ಪ್ರದೇಶಗಳಲ್ಲಿ ಉದ್ಯೋಗಾವಕಾಶವನ್ನು ಕಂಡುಕೊಂಡರು. ನಗರಗಳು ತಮ್ಮ ವಸತಿಗಳಿಂದ ದೂರವಿದ್ದುದ್ದರಿಂದ ಉತ್ತಮ ಸಾರಿಗೆ ಸಂಪರ್ಕದ ನೆರವಿನಿಂದ ನಿತ್ಯ ಪ್ರಯಾಣಗಳು ಪ್ರಾರಂಭವಾದವು ಹಾಗೂ ಇದರ ಜೊತೆಗೆ ನಗರಗಳ ಸುತ್ತ ಉಪನಗರಗಳು ಹುಟ್ಟಿಕೊಂಡವು.

ಎಲ್ಲಾ ನಗರಗಳಿಗೆ ಜನ ನಿತ್ಯ ಪ್ರಯಾಣ ಮಾಡುವುದು ಸಾಮಾನ್ಯವಾಗಿದೆ. ಬೃಹನ್ನಗರಗಳು (ಮೆಟ್ರೋಪಾಲಿಟನ್) ನಿತ್ಯ ಪ್ರಯಾಣದ ವಲಯಗಳಾಗಿ ಮಾರ್ಪಡುತ್ತಿವೆ. ರೈಲು ಮತ್ತು ರಸ್ತೆ ಸಾರಿಗೆಗಳು ನಿತ್ಯ ಪ್ರಯಾಣಕ್ಕೆ ಪ್ರಮುಖವಾದ ಸಾಧನಗಳಾಗಿವೆ.

ನಿತ್ಯ ಪ್ರಯಾಣದ ಸಹಾಯದಿಂದ ನಗರ ಪ್ರದೇಶಗಳಲ್ಲಿ ಜನಸಾಂದ್ರತೆಯ ತೀವ್ರತೆಯನ್ನು ಕಡಿಮೆ ಮಾಡಬಹುದು ಹಾಗೂ ಉಪನಗರಗಳ ಅಭಿವೃದ್ಧಿಯನ್ನು ಹೆಚ್ಚಿಸಬಹುದು. (ಎಲ್.ಎಲ್.)

**ನಿಪ್ಪಾಣಿ:** ಬೆಳಗಾಂವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಒಂದು ಪಟ್ಟಣ. ಹೋಬಳಿ ಕೇಂದ್ರ. ಮಹಾರಾಷ್ಟ್ರ ಗಡಿಯ ಬಳಿ, ಚಿಕ್ಕೋಡಿಯ ಪಶ್ಚಿಮಕ್ಕೆ 24 ಕಿಮೀ ಮತ್ತು ಬೆಳಗಾಂವಿಯ ಉತ್ತರಕ್ಕೆ 72 ಕಿಮೀ ದೂರದಲ್ಲಿ, ಸಮುದ್ರ ಮಟ್ಟದಿಂದ 607 ಮೀ ಎತ್ತರದಲ್ಲಿ ಇದೆ. ಜನಸಂಖ್ಯೆ 58,061 (2001). ಜನಸಂಖ್ಯೆಯ ದೃಷ್ಟಿಯಿಂದ ಇದಕ್ಕೆ ಜಿಲ್ಲೆಯಲ್ಲಿ ಎರಡನೆಯ ಸ್ಥಾನ.

ಚಿಕ್ಕೋಡಿ ತಾಲ್ಲೂಕಿನ ಪಶ್ಚಿಮದ ಅಂಚನ್ನು ವಲ್ಲಾಡ (ಮಲೆನಾಡಿನ) ಸೆರಗೆಂದು ಕರೆಯಲಾಗಿದೆಯಾದರೂ ಈ ತಾಲ್ಲೂಕಿನ ಬಹುಭಾಗ ಗಡಿನಾಡಿನಲ್ಲಿ–ಮಲೆನಾಡು ಹಾಗೂ ಬೆಳವಲನಾಡುಗಳ (ಬಯಲು ನೆಲ) ಮಧ್ಯದಲ್ಲಿದೆ. ನಿಪ್ಪಾಣಿ ಗಡಿನಾಡಿನಲ್ಲಿದೆ.

ಕೃಷಿ ಇಲ್ಲಿಯ ಜನರ ಮುಖ್ಯ ಉದ್ಯೋಗ. ಮಳೆಯ ಜೊತೆಗೆ ಕೆರೆ ಬಾವಿಗಳ ಹಾಗೂ ಬಳಿಯಲ್ಲೆ ಹರಿಯುವ ನಿಪ್ಪಾಣಿ ಹಳ್ಳದ ನೀರಾವರಿಯನ್ನು ಅದು ಅವಲಂಬಿಸಿದೆ. ಬತ್ತ, ಚನ್ನಂಗಿ, ಕಡಲೆ, ಎಳ್ಳು, ಔಡಲ, ಸಾಸಿವೆ, ಕಬ್ಬು, ಹತ್ತಿ, ಮೆಣಸಿನಕಾಯಿ, ತಂಬಾಕು ಇವು ಈ ಸುತ್ತಿನ ಮುಖ್ಯ ಬೆಳೆಗಳು. ನಿಪ್ಪಾಣಿ ತಂಬಾಕಿಗೆ ಪ್ರಸಿದ್ಧವಾಗಿದೆ. ನಿಪ್ಪಾಣಿ ಹೊಗೆಸೊಪ್ಪಿನ ಒಂದು ಪ್ರಮುಖ ವ್ಯಾಪಾರಸ್ಥಳ. ಇದರ ಜೊತೆಗೆ ಬೆಲ್ಲ ಮತ್ತು ಮೆಣಸಿನಕಾಯಿ ಇಲ್ಲಿಯ ಇತರ ವ್ಯಾಪಾರ ಸರಕುಗಳು. ದನಗಳ ವ್ಯಾಪಾರವೂ ನಡೆಯುತ್ತದೆ. ಬೀಡಿ ಕಟ್ಟುವ ಉದ್ಯಮ ಸಾಕಷ್ಟು ಬೆಳೆದಿದೆ. ಇಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಕಾರ್ಖಾನೆಯಿದೆ. ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಈ ಊರಿನ ಮೂಲಕ ಸಾಗುತ್ತದೆ. ಇಲ್ಲಿಂದ ಸಂಕೇಶ್ವರ, ಹುಕ್ಕೇರಿ, ಗೋಕಾಕ, ಯರಗಟ್ಟಿ, ಸವದತ್ತಿಗಳ ಮಾರ್ಗವಾಗಿ ಧಾರವಾಡಕ್ಕೆ ರಸ್ತೆಯೊಂದಿದೆ. ಜಿಲ್ಲೆಯ ಹಾಗೂ ಹೊರಗಿನ ಇತರ ಪ್ರಮುಖ ಸ್ಥಳಗಳಿಗೂ ರಸ್ತೆ ಸಂಪರ್ಕವುಂಟು. ಪಟ್ಟಣದ ಆಡಳಿತಕ್ಕೆ ಪೌರಸಭೆ ಇದೆ. ರಕ್ಷಿತ ನೀರಿನ ಸರಬರಾಜು ಕಡಿಮೆ. (ವಿ.ಕೆ.ಯು.ಎಸ್.)

**ನಿಯತಕಾಲಿಕ ಮಾರುಕಟ್ಟೆ:** ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ವ್ಯವಸ್ಥಿತ ಸಂಗ್ರಹಣಾ ಸಾಮರ್ಥ್ಯವಿಲ್ಲದ, ಹೆಚ್ಚು ಸಂಚಾರ ವ್ಯವಸ್ಥೆಗಳಿಲ್ಲದ, ಕಡಿಮೆ ಜನಸಾಂದ್ರತೆಯುಳ್ಳ ಮತ್ತು ಪ್ರತಿದಿನ ನಡೆಸಲು ಸಾಧ್ಯವಾಗದ ಪ್ರದೇಶಗಳಲ್ಲಿ ನಡೆಸಲಾಗುವ ಮಾರಾಟ ವ್ಯವಸ್ಥೆ. ಮಾರುಕಟ್ಟೆ ಪ್ರದೇಶ ಸಾರ್ವಜನಿಕ ಪ್ರದೇಶವಾಗಿದ್ದು ಅಲ್ಲಿ ಸಾಮಾನು ಸರಂಜಾಮುಗಳ ಕೊಂಡುಕೊಳ್ಳುವಿಕೆ ನಡೆಯಲ್ಪಡುತ್ತದೆ. ಮಾರುಕಟ್ಟೆ ಸ್ಥಾಪನೆ ಬಹುಹಿಂದಿನದ್ದಾಗಿದ್ದು ಮನುಷ್ಯ ತಾನು ಬೆಳೆದದ್ದನ್ನು ಇನ್ನೊಬ್ಬರಿಗೆ ಕೊಟ್ಟು ತನಗೆ ಬೇಕಾದದ್ದನ್ನು ಇನ್ನೊಬ್ಬರಿಂದ ಪಡೆದು ಕೊಳ್ಳುವ (ಬಾರ್ಟರ್ ಸಿಸ್ಟಂ) ಸಾಟಿ (ಚಾಟಿ) ಹಂತದಿಂದ ಈಗಿನ ವಿವಿಧ ಪ್ರಕಾರದ ಮಾರುಕಟ್ಟೆಯ ಸ್ಥಾಪನೆಯವರಿಗೆ ಬೆಳೆದು ನಿಂತಿದೆ. ಮಾರು ಕಟ್ಟೆಗಳನ್ನು ನಡೆಸುವಲ್ಲಿ, ಸ್ಥಾಪಿಸುವಲ್ಲಿ ಭೌಗೋಳಿಕ ಅಂಶಗಳು ಮಹತ್ವದ ಪಾತ್ರ ವಹಿಸುತ್ತವೆ. ಜನಸಂಖ್ಯೆಯ ಗಾತ್ರ ಪ್ರಮುಖ ಪಾತ್ರ ವಹಿಸುತ್ತದೆ.

ಮಾರುಕಟ್ಟೆಗಳಲ್ಲಿ ನಿಯತಕಾಲಿಕ ಮತ್ತು ದಿನವಹಿ ಮಾರುಕಟ್ಟೆಗಳೆಂಬ ಎರಡು ವಿಧಗಳುಂಟು. ಇಂಥ ಮಾರುಕಟ್ಟೆಗಳು ವಾರಕ್ಕೊಮ್ಮೆ ಅಥವಾ ಆ ಪ್ರದೇಶದ ಒಟ್ಟು ಸಾಮರ್ಥ್ಯದ ಮೇಲೆ ಮಾರುಕಟ್ಟೆ ನಡೆಸುವ ದಿನಗಳನ್ನು ನಿಗದಿ ಪಡಿಸಲಾಗುವುದು. ನಿಗದಿತ ಸಮಯಕ್ಕೆ ಸರಿಯಾಗಿ ಕೃಷಿಕರು ತಾವು ಬೆಳೆದ ಬೆಳೆಗಳನ್ನು ಅಲ್ಲಿ ಮಾರಾಟಮಾಡಬಹುದು ಅಥವಾ ಕೊಂಡುಕೊಳ್ಳಬಹುದು. ಗ್ರಾಮ್ಯ ಭಾಷೆಯಲ್ಲಿ ಇವುಗಳನ್ನು ಸಂತೆ ಎಂತಲೂ ಕರೆಯಲಾಗುತ್ತದೆ.

ಸಾಮಾನ್ಯವಾಗಿ ನಿಯತಕಾಲಿಕ ಮಾರುಕಟ್ಟೆಗಳಲ್ಲಿ ಕೃಷಿ ಪ್ರಧಾನ ಉತ್ಪನ್ನಗಳು, ಗೃಹಕೈಗಾರಿಕಾ ಉತ್ಪನ್ನಗಳ ಮಾರಾಟ ಮತ್ತು ಖರೀದಿ ನಡೆಯುತ್ತದೆ. ನಿಯತಕಾಲಿಕ ಮಾರುಕಟ್ಟೆಗಳಲ್ಲಿ ವ್ಯಾಪಾರಿಗಳು ಕಡಿಮೆ ಖರ್ಚಿನಲ್ಲಿ ಹೆಚ್ಚು ಹುಟ್ಟುವಳಿ ಬರುವಂತೆ ಪ್ರಯತ್ನಿಸುವರು. ಕೃಷಿಕರು ತಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಮಾರುಕಟ್ಟೆ ಪ್ರದೇಶಗಳಲ್ಲಿ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಆ ಜಾಗಕ್ಕೆ ನಗರ ಸಭೆ ಅಥವಾ ಸುಂಕ ಕೊಡುತ್ತಾರೆ. (ಕೆ.ಬಿ.)

**ನಿರಾಶ್ರಿತರು:** ಒಂದು ಸರ್ಕಾರ ಹೊಂದಿರುವ ಕೆಲವು ನಿರ್ದಿಷ್ಟ ಸಮಸ್ಯೆಗಳನ್ನು ಹೋಗಲಾಡಿಸಲು ಹಾಕಿಕೊಂಡ ಯೋಜನೆಗಳನ್ನು ಜಾರಿಗೊಳಿಸುವಾಗ ಉದ್ಭವಿಸುವ ಸ್ಥಾನ ಪಲ್ಲಟವನ್ನು ನಿರಾಶ್ರಿತತೆ ಎನ್ನಲಾಗುತ್ತದೆ. ಅಂದರೆ ಸರ್ಕಾರ ಹಾಕಿಕೊಂಡ ಕೆಲವು ಯೋಜನೆಗಳನ್ನು ಜಾರಿಗೊಳಿಸುವಾಗ ಒಂದು ಭಾಗದ ಜನಸಂಖ್ಯೆ ಮನೆ, ಆಸ್ತಿ, ಉದ್ಯೋಗ ಇತ್ಯಾದಿಗಳನ್ನು ಕಳೆದುಕೊಳ್ಳುವವರಿಗೆ ನಿರಾಶ್ರಿತರು ಎಂದು ಹೆಸರು. ಉದಾಹರಣೆಗೆ ಭಾರತ ಸ್ವಾತಂತ್ರ್ಯವನ್ನು ಪಡೆದ ತಕ್ಷಣ ಭಾರತ ಮತ್ತು ಪಾಕಿಸ್ತಾನವೆಂದು ಇಬ್ಭಾಗವಾದಾಗ ಆಗಿನ ಸರ್ಕಾರ ಎದುರಿಸಿದ ನಿರಾಶ್ರಿತರ ಸಮಸ್ಯೆ, ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದಾಗ ಉಂಟಾದ ನಿರಾಶ್ರಿತರ ಸಮಸ್ಯೆ ಇತ್ಯಾದಿಗಳು. ನಿರಾಶ್ರಿತರ ಸಮಸ್ಯೆ ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವಾಗ ಒಂದು ಆತಂಕವಾಗಿ ಪರಿಣಮಿಸುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಈ ರೀತಿಯ ಸಮಸ್ಯೆಯನ್ನು ಕಾಣಬಹುದು. ಆದರೆ ಇಲ್ಲಿ ರಾಜಕೀಯ ಕಾರಣಗಳು ನಿರಾಶ್ರಿತರಿಗೆ ಕಾರಣವಾಗುತ್ತಿವೆ. ಉದಾ: ಟಿಬೇಟಿಯನ್ ಸಮಸ್ಯೆ. (ಎಸ್.ಎಂ.ಎಚ್.)

**ನಿರ್ದ್ರವ ವಾಯುಭಾರ ಮಾಪಕ:** ವಾಯುಮಂಡಲದ ಒತ್ತಡವನ್ನು ಅಳೆಯಲು ಬಳಸುವ ಮತ್ತೊಂದು ವಿಧದ ಸಾಧನ. ಇದನ್ನು 1843ರಲ್ಲಿ ಲ್ಯೂಸಿಯನ್ ವಿಡೀ ಎಂಬುವವನು ಕಂಡುಹಿಡಿದ. ಪಾದರಸದ ವಾಯುಭಾರ ಮಾಪಕವನ್ನು ಎಲ್ಲ ಸ್ಥಳಗಳಿಗೂ ಒಯ್ಯುವುದು ಸುಲಭವಲ್ಲ. ದ್ರವವಿಲ್ಲದ, ಹಗುರವಾದ ಮತ್ತು ಗಾತ್ರದಲ್ಲಿ ಚಿಕ್ಕದಾದ ನಿರ್ದ್ರವ ವಾಯುಭಾರಮಾಪಕವನ್ನು ತಯಾರಿಸಲಾಯಿತು. ನಿರ್ದ್ರವವೆಂದು ಅರ್ಥನೀಡುವ ಆನಿರೋಸ್ ಎಂಬ ಶಬ್ದ ಗ್ರೀಕ್ ಪದದಿಂದ ಬಂದುದ್ದರಿಂದ ಆ ಹೆಸರು ಈ ಉಪಕರಣಕ್ಕೆ ಬಂದಿದೆ.

ಇದು ವೃತ್ತಾಕಾರದ ಲೋಹದ ಪೆಟ್ಟಿಗೆಯಾಗಿದೆ. ಇದರೊಳಗಿನ ಭಾಗಶಃ ವಾಯುವನ್ನು ಹೊರತೆಗೆದು ಭದ್ರಪಡಿಸಲಾಗಿರುತ್ತದೆ. ಒತ್ತಡದ ಬದಲಾವಣೆಗೆ ತಕ್ಕಂತೆ ಸ್ಥಿತಿಸ್ಥಾಪಕ ಗುಣವುಳ್ಳ ತೆಳ್ಳನೆಯ ಮುಚ್ಚಳವನ್ನು ಅಳವಡಿಸಲಾಗಿರುತ್ತದೆ. ವಾಯುಮಂಡಲದಲ್ಲಿ ಒತ್ತಡ ಹೆಚ್ಚಾದಾಗ ಮುಚ್ಚಳ ಒಳಬಾಗುತ್ತದೆ ಮತ್ತು ಒತ್ತಡ ಕಡಿಮೆಯಾದಾಗ ಹೊರಬಾಗುತ್ತದೆ. ಈ ಮುಚ್ಚಳದ ಬಳುಕುವ ಸ್ಥಿತಿಯನ್ನು ಸನ್ನೆಗಳ ಜೋಡಣೆಯೊಂದಿಗೆ ವೃದ್ಧಿಸಿ, ವಾಚಕಗಳನ್ನು ಗುರುತಿಸಿರುವ ಮುಖ ಬಿಲ್ಲೆಯ ಮೇಲೆ ಸೂಚಕಗಳು ಚಲಿಸುವ ವ್ಯವಸ್ಥೆ ಮಾಡಲಾಗಿರುತ್ತದೆ. ಒತ್ತಡ ಹೆಚ್ಚಾದಾಗ ಸೂಚಕ ಪ್ರದಕ್ಷಿಣೆ ದಿಕ್ಕಿಗೂ ಮತ್ತು ಒತ್ತಡ ಕಡಿಮೆಯಾದಾಗ ಅಪ್ರದಕ್ಷಿಣೆ ದಿಕ್ಕಿಗೆ ಚಲಿಸುವುದು. ಮುಖ ಬಿಲ್ಲೆಯ ಮೇಲೆ ಅಂಗುಲ ಅಥವಾ ಮಿಲಿಬಾರ್‌ಗಳಲ್ಲಿ ಅಳತೆ ಗುರುತಿಸಲಾಗಿರುತ್ತದೆ. ಇದರಿಂದ ಒತ್ತಡದ ಪ್ರಮಾಣವನ್ನು ತಿಳಿಯಬಹುದು. ಜೊತೆಗೆ ಮುಖ ಬಿಲ್ಲೆಯ ಮೇಲೆ ಸ್ಟಾರ್ಮಿ, ರೇನ್, ಫೇರ್ ಮತ್ತು ಡ್ರೈ ಎಂಬ ಶಬ್ದಗಳನ್ನು ಮುದ್ರಿಸಲಾಗಿರುತ್ತದೆ.

ಈ ಉಪಕರಣದ ಗಾಜಿನ ಮುಚ್ಚಳದ ಮೇಲ್ಭಾಗಕ್ಕೆ ಒಂದು ಸೂಚಿಯನ್ನು ಅಳವಡಿಸಲಾಗಿರುತ್ತದೆ. ಅದನ್ನು ಗುಬಟು (ಸ್ಟಡ್) ಸಹಾಯದಿಂದ ತಿರುಗಿಸಬಹುದಾಗಿದೆ. ಇದನ್ನು ನಿರ್ದಿಷ್ಟ ಸ್ಥಳ ಮತ್ತು ವೇಳೆಯಲ್ಲಿ ವಾಯುವಿನ ಒತ್ತಡವನ್ನು ಅಳೆಯುವುದಕ್ಕೆ ಮುಂಚೆ ಸೂಚಕಕ್ಕೆ ಸರಿಹೊಂದಿಸಬೇಕು. ಗುಬಟುವಿನಿಂದ ಹಿಂದೆ–ಮುಂದೆ ಚಲಿಸುವ ಸೂಚಕದಿಂದ ಒತ್ತಡದ ವ್ಯತ್ಯಾಸ ತಿಳಿಯುವುದು ಸುಲಭ.




*ನಿರ್ದ್ರವ ವಾಯುಭಾರ ಮಾಪಕ*

ಈ ಉಪಕರಣವನ್ನು ಸಾಮಾನ್ಯವಾಗಿ ಹವಾಮಾನ ವಿಜ್ಞಾನಿಗಳು, ನಾವಿಕರು, ವೈಮಾನಿಕರು, ಪರ್ವತಾರೋಹಿಗಳು ಮತ್ತು ಸಂಶೋಧಕರು ವಾಯುವಿನ ಒತ್ತಡ ಹಾಗೂ ಸಮುದ್ರಮಟ್ಟದ ಎತ್ತರವನ್ನು ತಿಳಿಯಲು ಬಳಸುವರು. (ಪಿ.ಎಂ.)

**ನಿವೇಶನ ಮತ್ತು ಸನ್ನಿವೇಶ:** ಆರ್ಥಿಕ ಭೂಗೋಳ ವಿಜ್ಞಾನ, ನಗರ ಭೂಗೋಳ ವಿಜ್ಞಾನ ಮತ್ತು ವಸತಿ ಭೂಗೋಳ ವಿಜ್ಞಾನದ 4 ಪರಿಕಲ್ಪನೆಗಳಲ್ಲಿ ಎರಡು ಪ್ರಮುಖವಾದವು. ಕಾರ್ಯ ಮತ್ತು ಜಡತ್ವ ಇವುಗಳಲ್ಲಿ ನಿವೇಶನ ಮತ್ತು ಸನ್ನಿವೇಶ ಅರ್ಥ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ನಿವೇಶನ ಎಂದರೆ ಆರ್ಥಿಕತೆ ಮತ್ತು ನಗರ ಬೆಳೆದು ವಿಕಾಸ ಹೊಂದುವ ಪ್ರಾಕೃತಿಕ ಪರಿಸರ, ಭೂಗರ್ಭದ ರಚನೆ, ಭೂಸ್ವರೂಪಗಳು, ಅಂತರ್ಜಲದ ಮಟ್ಟ, ಭೂಸಮತಲ ಮತ್ತು ಇಳಿಜಾರು ನಿವೇಶನದ ಪ್ರಮುಖ ಲಕ್ಷಣಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನದ ಪ್ರಗತಿಯಿಂದ ನಿವೇಶನದ ವಸ್ತು ವಿಷಯ ಹೊಸ ಮೆರಗನ್ನು ಪಡೆಯುತ್ತಿದೆ. ದೂರ ಸಂವೇದಿ ಉಪಗ್ರಹಗಳ ಸಹಾಯದಿಂದ ನಿವೇಶನಗಳ ಯೋಜನೆ ಮತ್ತು ರಚನೆಯನ್ನು ವೈಜ್ಞಾನಿಕವಾಗಿ ರೂಪಿಸಲಾಗುತ್ತಿದೆ.

ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕಿರುವ ಪರಸ್ಪರ ಸಂಬಂಧಾತ್ಮಕ ಅಂಶವನ್ನು ಸನ್ನಿವೇಶ ಎಂದು ಕರೆಯಲಾಗುತ್ತದೆ. ಸನ್ನಿವೇಶ ಒಂದು ಸ್ಥಳ ಮತ್ತೊಂದು ಸ್ಥಳದ ಜೊತೆ ಹೇಗೆ ವರ್ತಿಸುತ್ತದೆ ಎಂಬುದನ್ನು ಅರ್ಥಪೂರ್ಣವಾಗಿ ವಿವರಿಸುತ್ತದೆ. ವ್ಯಾಪಾರ ಸನ್ನಿವೇಶ, ಸಾರಿಗೆ ಸನ್ನಿವೇಶ, ಗಡಿಭಾಗದ ಸನ್ನಿವೇಶ ಮತ್ತು ಕೇಂದ್ರಿಯ ಸನ್ನಿವೇಶಗಳು ಪ್ರಮುಖ ಬಗೆಗಳಾಗಿವೆ. 20ನೆಯ ಶತಮಾನದ ಅನಂತರ ನಗರ ಭೂಗೋಳ ವಿಜ್ಞಾನ ಮತ್ತು ವಸತಿ ಭೂಗೋಳ ವಿಜ್ಞಾನದಲ್ಲಿ ಸನ್ನಿವೇಶದ ಅಧ್ಯಯನ º ZÀ¤À ªÀÄAR¥ÀÉÆÃLÉÀUÉ (ಪಿ.ಎನ್.ಎಚ್.)

**ನೀಗ್ರೊ:** ಮಾನವ ಜನಾಂಗದ ಮೂರು ಮುಖ್ಯ ವಿಭಾಗಗಳಲ್ಲಿ ಒಂದಕ್ಕೆ ಸೇರಿದ ಜನ. ಉಳಿದ ಎರಡು ವಿಭಾಗಗಳೆಂದರೆ ಕಾಕಸಾಯಿಡರು ಮತ್ತು ಮಂಗೋಲಿಯನರು.

ನೀಗ್ರೊ ಜನಾಂಗದ ಪ್ರಧಾನ ಲಕ್ಷಣಗಳಿವು: ಇವರ ಮೈಬಣ್ಣ ಅಪ್ಪಟ ಕಪ್ಪು. ಸೂರ್ಯನ ರಶ್ಮಿಯಿಂದ ಚರ್ಮದಲ್ಲಿ ಉತ್ಪತ್ತಿಯಾಗುವ ಮೆಲಾನಿನ್‌ನಿಂದ ಇವರ ಬಣ್ಣ ಕಪ್ಪಾಗಿದೆ. ಕೆಲವರ ಮೈಬಣ್ಣ ಸ್ವಲ್ಪ ಕಂದುಮಿಶ್ರಿತ. ಗುಂಗುರು ಗುಂಗುರು ಕೂದಲು ಅತಿ ಕಪ್ಪಾಗಿಯೂ ಕೆಲವು ವೇಳೆ ಕಂದುಮಿಶ್ರಿತ ಕಪ್ಪುಬಣ್ಣದ್ದಾಗಿಯೂ ಇರುವುದುಂಟು. ಕಣ್ಣುಗಳು ಕಪ್ಪುಮಿಶ್ರಿತ ಹಳದಿಬಣ್ಣವಾಗಿಯೂ ಕೆಲವು ಸಾರಿ ಕಂದುಮಿಶ್ರಿತ ಕಪ್ಪುಬಣ್ಣವಾಗಿಯೂ ಇವೆ. ಮೂಗಿನ ಬುಡ ಅಗಲ, ದಿಂಡು ದಪ್ಪ. ಹೊಳ್ಳೆಗಳು ಗುಂಡು. ತುಟಿಗಳು ದಪ್ಪನಾಗಿಯೂ ಮುಂದಕ್ಕೆ ಚಾಚಿದಂತೆಯೂ ಇವೆ. ಮುಖ ಸಾಮಾನ್ಯವಾಗಿ ಬಾದಾಮಿ ಆಕಾರವಾಗಿಯೂ ಮುಂದಕ್ಕೆ ಚಾಚಿದಂತೆಯೂ ಕೆಳಭಾಗ ಸ್ವಲ್ಪ ಚಿಕ್ಕದಾಗಿಯೂ ಇದೆ. ದೇಹಕ್ಕೆ ನಿರ್ದಿಷ್ಟ ಆಕಾರವಿಲ್ಲ. ಮುಂಡ ಸ್ವಲ್ಪ ಚಿಕ್ಕದು. ಕೈಗಳು ನೀಳ ಮುಂಗಾಲು ಮತ್ತು ಮುಂಗೈಗಳು ಹಿಂಗಾಲು ಮತ್ತು ಹಿಂಗೈಗಳಿಗಿಂತ ಹೆಚ್ಚು ಉದ್ದ. ದೈಹಿಕ ಅಷ್ಟಾಗಿ ಹೆಚ್ಚು ಅಗಲವಿಲ್ಲ. ಉದ್ದವೂ ನಿರ್ದಿಷ್ಟವಾಗಿಲ್ಲ. ಕುಳ್ಳರೂ ಉಂಟು. ಅತಿ ಎತ್ತರದವರೂ ಉಂಟು.

ನೀಗ್ರೋ ಜನಾಂಗವನ್ನು ಮೂರು ಪಂಡಗಳಾಗಿ ವಿಂಗಡಿಸಿರುವರು: ಮಧ್ಯ ಆಫ್ರಿಕಾದಲ್ಲಿರುವ ಮೂಲನೀಗ್ರೋಗಳು, ಆಫ್ರಿಕದಿಂದ ವಲಸೆಹೋಗಿ ದಕ್ಷಿಣ ಮತ್ತು ಆಗ್ನೇಯ ಏಷ್ಯಗಳಲ್ಲಿ ನೆಲೆಸಿರುವವರು. ಇವರನ್ನು ನೀಗ್ರಿಟೋ ಎಂದು ಕರೆಯುವರು. ಇದೇ ಜನಾಂಗದ ಕೆಲವರು ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ನೆಲೆಸಿದ್ದು ಇವರನ್ನು ಮೇಲಾನೇಷಿಯನ್ನರೆಂದು ಕರೆಯುವರು.

ಮೂಲ ನೀಗ್ರೊ ಜನ ಪ್ರಧಾನವಾಗಿ ವ್ಯವಸಾಯಗಾರರು. ಜೊತೆಗೆ ಬೇಟೆಯಾಡುವುದು, ಮೀನು ಹಿಡಿಯುವುದು, ದನಕರುಗಳನ್ನು ಸಾಕುವುದು ಮೊದಲಾದ ಕಸಬುಗಳನ್ನು ಅವಲಂಬಿಸಿದ್ದಾರೆ. ನೈಲ್ ನದಿಯ ದಡದಲ್ಲಿ ವಾಸಿಸುತ್ತಿರುವ ದಿಂಕರು ಬರಿ ದನಕರುಗಳನ್ನು ಮಾತ್ರ ಸಾಕಿ ಜೀವನವನ್ನು ಸಾಗಿಸುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ವಾಸವಾಗಿರುವುದರಿಂದ ಈ ಜನ ಹಿಂದುಳಿದವರಾಗಿದ್ದಾರೆ. ಹಳ್ಳಿಯಲ್ಲಿ ಪಂಚಾಯ್ತಿಯನ್ನು ಮಾಡಿಕೊಂಡು, ನಾಯಕನನ್ನು ನೇಮಿಸಿಕೊಂಡು ನ್ಯಾಯ ತೀರ್ಮಾನ ಮಾಡಿಕೊಳ್ಳುವುದು ವಾಡಿಕೆ. ಆದರೆ, ಅಲ್ಲಲ್ಲಿ ಸಂಚಾರಕ್ಕೆ ಅನುಕೂಲವಿರುವ ಕಡೆಗಳಲ್ಲಿ ಕೆಲವು ನಾಯಕರು ಕೆಲವಾರು ಹಳ್ಳಿಗಳನ್ನು ತಮ್ಮ ಅಧೀನಕ್ಕೆ ಒಳಪಡಿಸಿಕೊಂಡು ಅವನ್ನು ತಮ್ಮ ತಹಬಂದಿಗೆ ತಂದುಕೊಂಡು ರಾಜ್ಯ ಕಟ್ಟಿದ್ದೂ ಉಂಟು. ಉದಾಹರಣೆಗೆ ಬಂಟುಜನ ಲುಂಡ ಮತ್ತು ಕೆಜಂಬೆ ಎಂಬ ರಾಜ್ಯಗಳನ್ನು ಕಟ್ಟಿದ್ದರು. ನೀಗ್ರೊ ಜನ ಬಹುಪತ್ನಿವಿವಾಹ ಪದ್ಧತಿಯನ್ನು ಅವಲಂಭಿಸಿದ್ದಾರೆ. ಸಾಮಾನ್ಯವಾಗಿ ಆಸ್ತಿಗೆ ಹೆಂಗಸರೇ ಹಕ್ಕುದಾರರು.

ಆಫ್ರಿಕದ ನೀಗ್ರೊ

ನೀಗ್ರೊ ಜನರು ಮೊದಲಿಗೆ ಸಸ್ಯಹಾರಿಗಳು. ದನಕರುಗಳನ್ನು ಸಾಕಿ ಜೀವನ ಸಾಗಿಸುತ್ತಿದ್ದವರಲ್ಲಿ ದನಗಳನ್ನು ಕೊಲ್ಲುವುದು ರೂಡಿಯಲ್ಲಿರಲಿಲ್ಲ. ದನಗಳನ್ನು ವಿನಿಯಮ ಸಾಧನವಾಗಿ ಬಳಸುವ ರೂಡಿ ಅವರಲ್ಲಿತ್ತು. ನೈಲ್ ಮತ್ತು ಕಾಂಗೋ ನದಿಗಳ ತೀರದಲ್ಲಿ ವಾಸಿಸುತ್ತಿದ್ದ ನೀಗ್ರೊ ಜನರು ಹೇರಳವಾಗಿ ಮೀನು ಹಿಡಿದು ಅದನ್ನೇ ಆಹಾರವಾಗಿ ಉಪಯೋಗಿಸುವರು. ನರಭಕ್ಷಕ ಕೆಲವು ನೀಗ್ರೊ ಗುಂಪುಗಳು ಆಫ್ರಿಕದ ಕೆಲವು ಭಾಗಗಳಲ್ಲಿ ವಾಸವಾಗಿದ್ದರೆಂದು ಪ್ರತೀತಿ. ವೆಲ್ಲಿ ಮತ್ತು ಉಬಾಂಗಿಯ ಕೆಲವು ಭಾಗಗಳಲ್ಲಿ ನರಭಕ್ಷಕರ ಕೆಲವು ಗುಂಪುಗಳಿದ್ದವೆಂದು ತಿಳಿಯಲಾಗಿದೆ.

ಕಬ್ಬಿಣವನ್ನು ಕರಗಿಸಿ ಅದರಿಂದ ವಿವಿಧ ಆಯುಧಗಳನ್ನು ಮಾಡುವ ಜನರು ಕಾಂಗೋ ಪ್ರದೇಶದಲ್ಲಿ ಇದ್ದಾರೆ. ಗರಿಗಳಿಂದ ನೇಯುವ ಕಸಬುಳ್ಳವರು ಆಫ್ರಿಕದ ಪಶ್ಚಿಮ ಭಾಗದಲ್ಲಿದ್ದಾರೆ. ಹತ್ತಿಯ ನೂಲಿನಿಂದ ನೇಯುವವರು ಇದೇ ಭಾಗದಲ್ಲಿ ಸಿಗುತ್ತಾರೆ. ಮಡಕೆಗಳನ್ನು ಮಾಡುವುದು ಸಾಮಾನ್ಯವಾಗಿ ಎಲ್ಲ ಪಂಗಡಗಳಲ್ಲಿಯೂ ವಾಡಿಕೆಯಲ್ಲಿದೆ. ಚಕಮಕಿ ಕಲ್ಲಿನಿಂದ, ಮರ ಉಜ್ಜುವುದರಿಂದ ಬೆಂಕಿ ಪಡೆಯುವ ಹಳೆಯ ವಿಧಾನ ಈಗಲೂ ಅನೇಕ ಕಡೆ ಬಳಕೆಯಲ್ಲಿದೆ.

ವಾರದ ಸಂತೆಯಲ್ಲಿ ಸಾಮಾನುಗಳನ್ನು ವಿನಿಮಯ ಮಾಡಿಕೊಂಡು ವ್ಯಾಪಾರ ನಡೆಸುವ ಪದ್ಧತಿ ರೂಢಿಯಲ್ಲಿದೆ. ಹುಲ್ಲುಗಾವಲುಗಳ ಪ್ರದೇಶದವರು ಆಡು ಮತ್ತು ದನಕರುಗಳನ್ನು ವಿನಿಮಯ ಸಾಧನಗಳಾಗಿ ಬಳಸುತ್ತಾರೆ. ಆಫ್ರಿಕದ ಪೂರ್ವ ದಿಕ್ಕಿನಲ್ಲಿ ಚೂಪಾದ ಕತ್ತಿಯಂಥ ಸಾಮಾನುಗಳನ್ನು, ವ್ಯವಸಾಯದ ಸಲಕರಣೆಗಳನ್ನೂ ಪಶ್ಚಿಮ ಆಫ್ರಿಕ ಭಾಗದಲ್ಲಿ ಕವಡೆ ಶಂಖಗಳನ್ನೂ ಲೋಹದ ತುಂಡುಗಳನ್ನೂ ಆಡುಗಳನ್ನೂ ಕೋಳಿಗಳನ್ನೂ ನಾಣ್ಯವೆಂದು ಪರಿಗಣಿಸಲಾಗಿದೆ.

ಪಶ್ಚಿಮ ಆಫ್ರಿಕದ ಕಾಡುಗಳಲ್ಲಿ ನೀಗ್ರೊ ಜನ ಪ್ರಕೃತಿಯ ನೈಜಸ್ವರೂಪವನ್ನು ಆರಾಧಿಸುತ್ತಾರೆ. ಚಲನವಲನಗಳಿಗೆ ಅನುಕೂಲವಿರುವ ಕಡೆಗಳಲ್ಲಿ ಗ್ರಹಶಕ್ತಿಗಳಿವೆ ಎಂದು ಭಾವಿಸಿ ಅವನ್ನು ಆರಾಧಿಸುವ ಪದ್ಧತಿಯೂ ರೂಢಿಯಲ್ಲಿದೆ. ಪಶ್ಚಿಮ ಆಫ್ರಿಕದಲ್ಲಿಯೂ ದಕ್ಷಿಣ ಆಫ್ರಿಕದ ಭಾಗದಲ್ಲಿಯೂ ವಾಸಿಸುತ್ತಿರುವ ಅನೇಕ ಜನರಲ್ಲಿ ಪಿತೃಗಳನ್ನು ಆರಾಧಿಸುವ ಪದ್ಧತಿ ಹೆಚ್ಚಾಗಿ ರೂಡಿಯಲ್ಲಿದೆ. ಪಶ್ಚಿಮ ಆಫ್ರಿಕದ ನೀಗ್ರೊ ಜನರಲ್ಲಿಯೂ ಬಂಟು ನೀಗ್ರಾಯಿಡರಲ್ಲಿಯೂ ಸಾವು ಸಂಭವಿಸಿದರೆ ಅದು ಯಾರೋ ಮಂತ್ರವಾದಿಯಿಂದ ನಡೆದಿರಬೇಕೆಂಬ ಪ್ರಬಲ ನಂಬಿಕೆ ಇದೆ. ಅನೇಕ ಬಾರಿ ಸಾವು ಪಿತೃಗಳ ಆತ್ಮಶಕ್ತಿಯಿಂದ ಸಂಭವಿಸಿದೆಯೆಂದೂ ಕೆಲವು ಗುಂಪುಗಳ ನಂಬಿಕೆಯಾಗಿದೆ. ನೀಗ್ರೊ ಜನರ ಅನೇಕ ಗುಂಪುಗಳಲ್ಲಿ ಗಾಳಿಯನ್ನೂ ಮಳೆಯನ್ನು ಗುಡುಗು ಮಿಂಚುಗಳನ್ನೂ ದೇವರೆಂದು ಪೂಜಿಸುವ ಪದ್ಧತಿಯೂ ರೂಢಿಯಲ್ಲಿದೆ. ಈ ಆರಾಧನೆಗಳನ್ನು ನಿಗದಿಯಾದ ದಿನ ಕುಣಿತ, ಮದ್ಯಸೇವನೆ, ಹಬ್ಬ ಆರಾಧನೆಗಳ ಮೂಲಕ ನಡೆಸುವುದು ಸಾಮಾನ್ಯ. ಈ ಆರಾಧನೆಗಳಿಂದ ಆರೋಗ್ಯವೂ ಸಂತಾನವೂ ಸುಖಸಂಪತ್ತುಗಳೂ ಹೆಚ್ಚುವುದೆಂದು ನಂಬಿಕೆ. ಮಾಟ, ಮಂತ್ರ, ಮಂತ್ರವಾದಿ, ವೈದ್ಯ–ಇವುಗಳನ್ನು ಆ ಜನ ಬಹುವಾಗಿ ನಂಬಿದ್ದಾರೆ. ಮೂಢನಂಬಿಕೆಗಳು ಇಂದಿಗೂ ಗಾಢವಾಗಿವೆ. ಈ ಜನರ ಗುಂಪುಗಳ ನಡುವೆ ಕಲಹಗಳು ಸಾಮಾನ್ಯ. (ಕೆ.ಎನ್.ಯು.)

**ನೀರಾವರಿ:** ಕೃಷಿ ಹಾಗೂ ಮತ್ತಿತರ ಉದ್ದೇಶಕ್ಕಾಗಿ ವಿವಿಧ ಮೂಲಗಳಾದ ನದಿ, ಸರೋವರ ಕೆರೆ, ಕಾಲುವೆ, ಬಾವಿಗಳಿಂದ ನೀರನ್ನು ಒದಗಿಸುವ ವ್ಯವಸ್ಥೆ. ನೀರಾವರಿಯ ಇತಿಹಾಸ ಮಾನವನ ನಾಗರಿಕತೆಯೊಡನೆ ಸಮ್ಮಿಳಿತಗೊಂಡಿದೆ. ಪ್ರ.ಶ.ಪೂ. 4000ಕ್ಕೂ ಹಿಂದೆ ಈಜಿಪ್ಟಿನಲ್ಲಿ ನೈಲ್ ನದಿಯ ನೀರಿನಿಂದ ನೀರಾವರಿ ಬಳಕೆಯಲ್ಲಿತ್ತು. ಅನಂತರ ಮೆಸಪೊಟೇಮಿಯದಲ್ಲಿ ಟೈಗ್ರಿಸ್–ಯೂಫ್ರೆಟೀಸ್ ನದಿಗಳಿಂದ ನೀರನ್ನು ತಿರುಗಿಸಲು ಅಡ್ಡಕಟ್ಟೆಗಳನ್ನು ಕಟ್ಟಿದರು. ಈಜಿಪ್ಟಿನಲ್ಲಿ ನದಿಗೆ ಸಮಾಂತರವಾಗಿ ದಡಗಳಲ್ಲಿ ಹಲವಾರು ಕಿಮೀ ಉದ್ದದ ಸಣ್ಣಮಣ್ಣಿನ ಏರಿಗಳನ್ನೂ ಅವುಗಳಿಗೆ ಲಂಬಕೋನವಾಗಿ ಬೇರೆ ಏರಿಗಳನ್ನು ಕಟ್ಟಿ ನೈಲ್ ನದಿಯಲ್ಲಿ ಪ್ರವಾಹ ಬಂದಾಗ ಹೊಳೆಯ ನೀರನ್ನು ಏರಿಗಳ ಮಧ್ಯದ ತೊಟ್ಟಿಗಳೊಳಕ್ಕೆ ಹರಿದು ಸಂಗ್ರಹಗೊಳ್ಳಲು ಬಿಡುತ್ತಿದ್ದರು. ನಾಲೆಗಳ ಮೇಲೆ ನೈಲಾ ಮೀಟರ್ ಎಂಬ ಅಳೆಯುವ ದೊಡ್ಡ ಯಂತ್ರ ಇಟ್ಟು ನೀರನ್ನು ಅಳತೆ ಮಾಡಿ ಪ್ರತಿಯೊಬ್ಬ ರೈತನಿಗೂ ಆತ ಬಳಸಿದ ನೀರಿನ ಮೇಲೆ ಕಂದಾಯ ವಿಧಿಸುತ್ತಿದ್ದರು. ಗದ್ದೆಗಳಿಗೆ ನೀರನ್ನು ತೂಬಿನ ಬಾಗಿಲುಗಳಿಂದ ಬಿಟ್ಟು ಕ್ಲುಪ್ತ ಕಾಲಗಳಲ್ಲಿ ಪಡಿಗಳನ್ನು ಮತ್ತೆ ಮುಚ್ಚುತ್ತಿದ್ದರು. ಈಚೆಗೆ ನೈಲ್ ನದಿಗೆ ಅಡ್ಡಲಾಗಿ ಅಸ್ವಾನಿನಲ್ಲಿ ಕಲ್ಲುಗಾರೆಯ ಕಟ್ಟೆಯನ್ನು ಕಟ್ಟಿ ವಿಸ್ತಾರವಾದ ನಾಸರ್ ಜಲಾಶಯವನ್ನು ನಿರ್ಮಿಸಲಾಗಿದೆ.

ಭಾರತ ಪುರಾತನ ಕಾಲದಿಂದಲೂ ನೀರಾವರಿಯನ್ನು ರೂಢಿಸಿಕೊಂಡಿರುವ ಪ್ರಪಂಚದ ಮುಖ್ಯ ರಾಷ್ಟ್ರಗಳಲ್ಲಿ ಒಂದು. ಮಾನ್ಸೂನ್ ಮಾರುತಗಳ ಅನಿಶ್ಚಿತ ಮಳೆ, ಆಗಿಂದಾಗ್ಗೆ ಸಂಭವಿಸುವ ಬರಗಾಲ, ಕ್ಷಾಮ ಮೊದಲಾದವುಗಳು ಜನರು ನೀರಾವರಿಗೆ ಪ್ರಾಮುಖ್ಯತೆ ನೀಡಲು ಕಾರಣಗಳಾಗಿವೆ. ಭಾರತ ಇಂದು ಪ್ರಪಂಚದಲ್ಲಿ ಅತಿಹೆಚ್ಚು ನೀರಾವರಿ ಕ್ಷೇತ್ರವನ್ನು ಹೊಂದಿದ್ದು, ಚೀನ ಎರಡನೆಯ ಸ್ಥಾನದಲ್ಲಿದೆ.

ಉಪಯೋಗ: ನೀರಾವರಿಯ ಉಪಯೋಗ ಮುಖ್ಯವಾಗಿ ಬೆಳೆಯನ್ನು ಹೆಚ್ಚಿಸುವುದು ಮತ್ತು ಮಳೆ ಸಾಕಷ್ಟು ಬೀಳದಿದ್ದಾಗ ಪೈರನ್ನು ಕಾಪಾಡುವುದು. ಈ ಉಪಯೋಗ ಭೂಮಿಯ ಗುಣ, ಬೀಳುವ ಮಳೆ, ವಾಯುಗುಣ, ಭೂಮಿಗೆ ಒಗ್ಗುವ ಬೆಳೆಗಳು– ಇವನ್ನು ಅವಲಂಬಿಸಿವೆ. ಕರ್ನಾಟಕದ ಮಲೆನಾಡಿನಲ್ಲಿ ಮಳೆ ಸಮೃದ್ಧಿಯಾಗಿ ಸುರಿದು ನೀರಾವರಿಯ ಅವಶ್ಯಕತೆಯೇ ಇಲ್ಲದೆ ಇರಬಹುದು. ಇನ್ನು ಕೆಲವು ಕಡೆ ಬೀಳುವ ಮಳೆ ಸಾಮಾನ್ಯವಾಗಿ ಸಾಕಾದರೂ ಅನಾವೃಷ್ಟಿಯ ಕಾಲದಲ್ಲಿ ತೊಂದರೆ ಆಗಬಹುದು; ಅಥವಾ ಅಕಾಲದಲ್ಲಿ ಬಿದ್ದು ಪೈರಿಗೆ ಉಪಯೋಗವಿಲ್ಲದೆ ಹೋಗಬಹುದು. ನೀರಾವರಿಯ ಪ್ರಯೋಜನ ನಿರ್ಣಯವಾಗುವುದು ಆ ಪ್ರದೇಶದಲ್ಲಿ ಬೀಳುವ ಮಳೆಯ ಪ್ರಮಾಣದಿಂದ. ಅದು ಒಂದೇ ವರ್ಷದಿಂದ ಬೇರೆ ಬೇರೆ ಪ್ರದೇಶಗಳಲ್ಲಿ ಬದಲಾಗುವುದು ಸರಿಯಷ್ಟೆ. ಅಲ್ಲದೆ ಒಂದೇ ಊರಿನಲ್ಲಿ ಬೇರೆ ಬೇರೆ ವರ್ಷಗಳಲ್ಲಿಯೂ ಅದು ವ್ಯತ್ಯಾಸವಾಗುತ್ತದೆ.

ನೀರಾವರಿ ವಿಧಾನಗಳು: ಮುಖ್ಯವಾದ ನೀರಾವರಿ ವಿಧಾನಗಳನ್ನು ಹೀಗೆ ವಿಂಗಡಿಸಬಹುದು: 1. ಬಾವಿ ನೀರಾವರಿ; 2. ಕೆರೆ ನೀರಾವರಿ; 3. ಕಾಲುವೆ ನೀರಾವರಿ;

1. ಬಾವಿ ನೀರಾವರಿ: ಭೂಮಿಯ ಒಳಭಾಗದಲ್ಲಿ ಕಂಡುಬರುವ ನೀರ ಸೆಲೆಯೇ ಅಂತರ್ಜಲ. ಇಂಥ ಅಂತರ್ಜಲ ಮೂಲಗಳನ್ನು ನೀರಾವರಿಗೆ ಬಳಸುವುದು ಪ್ರಾಚೀನ ಕಾಲದಿಂದಲೂ ಇರುವ ಒಂದು ವಿಧಾನ. ಇಂದು ಭಾರತದಲ್ಲಿ ಇತರ ಮೂಲಗಳಿಗಿಂತಲೂ ಬಾವಿ ನೀರಾವರಿಯ ಕ್ಷೇತ್ರವೇ ಅಧಿಕವಾಗಿದೆ. ಬೇಸಾಯಕ್ಕಾಗಿ ಅಂತರ್ಜಲ ಮೂಲಗಳನ್ನು ಸದುಪಯೋಗಪಡಿಸಲು ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಬಹಳ ಪ್ರಾಶಸ್ತ್ಯ ಕೊಡಲಾಗಿದೆ. ಅಂತರ್ಜಲ ಸಮೀಕ್ಷೆಗಳನ್ನು ನಡೆಸಿ ಯಾವ ಪ್ರದೇಶದಲ್ಲಿ ಬಾವಿಗಳನ್ನು ತೋಡಿ ಸಾಕಷ್ಟು ನೀರು ಪಡೆಯಲು ಅವಕಾಶವಿದೆ ಎಂಬುದನ್ನು ಭೂಗರ್ಭತಜ್ಞರು ತಿಳಿಸುತ್ತಾರೆ. ಇಂಥ ಸಮೀಕ್ಷೆಗಳ ಆಧಾರದ ಮೇಲೆ ಅಂತರ್ಜಲ ಮೂಲವನ್ನು ನೀರಾವರಿಗೆ ಸಂಪೂರ್ಣವಾಗಿ ಬಳಸುವ ಪ್ರಯತ್ನ ನಡೆದಿದೆ. ಬಾವಿಗಳಲ್ಲಿ ಎರಡು ಬಗೆಗಳುಂಟು: (1) ನೆಲಬಾವಿಗಳು; (2) ಕೊಳವೆಬಾವಿಗಳು. ಭಾರತದಲ್ಲಿ ನೆಲಬಾವಿಗಳು ಸಾಂಪ್ರದಾಯಿಕ ನೀರಾವರಿಯ ವಿಧಗಳು. ಭಾರತದಲ್ಲಿ ಸು. 30 ಲಕ್ಷಕ್ಕಿಂತಲೂ ಹೆಚ್ಚು ನೆಲಬಾವಿಗಳಿವೆ. ಉತ್ತರ ಪ್ರದೇಶ, ಪಂಜಾಬ್, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಇವು ವಿಶೇಷವಾಗಿವೆ. ಒಂದು ನೆಲ ಬಾವಿ ಸರಾಸರಿ 2 ಹೆ. ಜಮೀನಿನ ವ್ಯವಸಾಯಕ್ಕೆ ನೀರನ್ನು ಒದಗಿಸುತ್ತದೆ. ನೆಲದ ಮೇಲ್ಮೈಯಲ್ಲಿ ನೀರು ದೊರೆಯುವಂತಿದ್ದು ಹೆಚ್ಚು ಆಳದ ಬಾವಿಗಳ ಅಗತ್ಯ ಇಲ್ಲದಿರುವೆಡೆಗಳಲ್ಲಿ ಇಂಥ ಬಾವಿಗಳಿಂದಲೇ ನೀರನ್ನು ಒದಗಿಸಿಕೊಳ್ಳಬಹುದು. ಆದರೆ ಸಾಕಷ್ಟು ನೀರು ಪಡೆಯಲು ಹೆಚ್ಚು ಆಳಕ್ಕೆ ಹೋಗಬೇಕಾದರೆ ಕೊಳವೆ ಬಾವಿಗಳ ನಿರ್ಮಾಣ ಯುಕ್ತ. ಕೊಳವೆ ಬಾವಿ ಸಾಮಾನ್ಯವಾಗಿ ಇಪ್ಪತ್ತರಿಂದ ನೂರೈವತ್ತು ಮೀ ಗಳ ಆಳದವರೆಗೆ ಹೋಗುತ್ತದೆ. ಕೆಲವು ಕಡೆಗಳಲ್ಲಿ ಸು. 150 ರಿಂದ 200 ಮೀ ಗಳವರೆಗೂ ಬಾವಿಗಳನ್ನು ಕೊರೆದಿರುವರು. ಕೊರೆಯುವ ಯಂತ್ರಗಳಿಂದ ಇವುಗಳ ನಿರ್ಮಾಣ ಸಾಧ್ಯ. ನೆಲಬಾವಿಗಿಂತ ಅಧಿಕ ಮೊತ್ತದಲ್ಲಿ ಕೊಳವೆ ಬಾವಿಯಲ್ಲಿ ನೀರು ದೊರಕಿ ಹೆಚ್ಚು ಪ್ರದೇಶದಲ್ಲಿ ಬೇಸಾಯ ಮಾಡಲು ಸಾಧ್ಯವಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಉತ್ತರ ಪ್ರದೇಶದಲ್ಲಿ ಕೊಳವೆ ಬಾವಿಗಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿವೆ.

ಬಾವಿಗಳಿಂದ ನೀರೆತ್ತಲು ವಿದ್ಯುತ್ತಿನ ಸಹಾಯದಿಂದ ಕೆಲಸ ಮಾಡುವ ಪಂಪುಗಳ ಬಳಕೆ ಈಗ ಸರ್ವೇ ಸಾಮಾನ್ಯ. ಈ ರೀತಿ ಎತ್ತಿದ ನೀರು ಸಣ್ಣ ಕಾಲುವೆಗಳ ಮೂಲಕ ಬೇಸಾಯದ ಜಮೀನಿಗೆ ಹರಿಯುತ್ತದೆ. ಈ ವಿಧಾನದಲ್ಲಿ ಹೆಚ್ಚು ನೀರು ಅಪವ್ಯಯವಾಗುತ್ತದೆ. ನೀರಿನ ಅಭಾವವಿರುವಲ್ಲಿ ಆದಷ್ಟು ಮಿತವಾಗಿ ನೀರನ್ನು ಬಳಸಿ ಬೆಳೆಗೆ ಅನುಕೂಲವಾಗುವಂತೆ ಮಾಡುವುದು ಅಗತ್ಯ. ಈ ಕಾರಣದಿಂದ ಹನಿ ನೀರಾವರಿ ವಿಧಾನ ಬಳಕೆಗೆ ಬಂದಿದೆ. ಬಾವಿಯಿಂದ ಎತ್ತಿದ ನೀರನ್ನು ಒತ್ತಡ ಕೊಳವೆಯ ಮೂಲಕ ಬೆಳೆಗೆ ಹನಿಸುವುದೇ ಇದರಲ್ಲಿ ಅನುಸರಿಸುವ ವಿಧಾನ.

2. ಕೆರೆ ನೀರಾವರಿ: ನೀರು ಹರಿಯುವ ಹಳ್ಳ, ತೊರೆಗಳಿಗೆ ಏರಿಯನ್ನು ನಿರ್ಮಿಸಿ, ನೀರನ್ನು ಸಂಗ್ರಹಿಸುವುದನ್ನು ಕೆರೆಗಳು ಎಂದು ಕರೆಯುವರು. ನೀರನ್ನು ಶೇಖರಿಸಿ ಬೇಸಾಯಕ್ಕೆ ಬಳಸುವ ಸಲುವಾಗಿ ಕೈಗೊಂಡಿರುವ ಕ್ರಮಗಳಲ್ಲಿ ಕೆರೆಗಳ ನಿರ್ಮಾಣ ಮುಖ್ಯವೂ ಪ್ರಾಚೀನವೂ ಹೌದು. ಈ ಕೆರೆಗಳು ಸಾಮಾನ್ಯವಾಗಿ ಮಣ್ಣಿನ ಏರಿ ಹಾಕಿ ಕಟ್ಟಿದಂಥವು. ನಾಲ್ಕಾರು ಹೆಕ್ಟೇರುಗಳಿಗೆ ನೀರು ಒದಗಿಸುವ ಸಣ್ಣದರಿಂದ ಹಿಡಿದು ಸಾವಿರಾರು ಹೆಕ್ಟೇರುಗಳಿಗೆ ನೀರು ಒದಗಿಸುವ ದೊಡ್ಡದರವರೆಗೆ ಕೆರೆಗಳ ನಿರ್ಮಾಣವಾಗಿದೆ. ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ಕೆರೆಗಳು ವಿಶೇಷವಾಗಿವೆ. ಸುತ್ತುಮುತ್ತಲಿಂದ ಮಳೆಯ ನೀರು ಹರಿದು ಬಂದು ತುಂಬುವ ಸಣ್ಣ ಕೆರೆಗಳುಂಟು. ಸಣ್ಣ ನದಿಗೆ ಅಡ್ಡಕಟ್ಟೆ ಹಾಕಿ ಕಾಲುವೆಗೆ ನೀರು ಬರುವಂತೆ ಮಾಡಿ ಅದರಿಂದ ತುಂಬಿಸುವ ಕೆರೆಗಳೂ ಉಂಟು. ಕೆರೆ ನೀರಾವರಿಯ ಒಂದು ಸಮಸ್ಯೆ ಏನೆಂದರೆ ಹೂಳು ತುಂಬಿಕೊಳ್ಳುವುದರಿಂದ ಕೆರೆಯಲ್ಲಿ ಶೇಖರವಾಗುವ ನೀರಿನ ಪ್ರಮಾಣ ಕಡಿಮೆಯಾಗಿ ಬೇಸಾಯಕ್ಕೆ ಸಾಕಷ್ಟು ನೀರು ಒದಗುವುದಿಲ್ಲ. ಆಗಾಗ್ಗೆ ಹೂಳೆತ್ತುವ ಮತ್ತು ಏರಿಯನ್ನು ಭದ್ರಗೊಳಿಸುವ ಕೆಲಸ ಮಾಡಬೇಕಾಗುತ್ತದೆ.

3. ಕಾಲುವೆ ನೀರಾವರಿ: ಕಾಲುವೆಗಳಿಂದ ಬೇಸಾಯದ ಭೂಮಿಗೆ ನೀರನ್ನು ಒದಗಿಸುವುದು ಇನ್ನೊಂದು ನೀರಾವರಿ ವಿಧಾನ. ನದಿ ಹರಿದುಹೋಗುವಾಗ ಯಾವುದೋ ಸ್ಥಳದಲ್ಲಿ ಪ್ರಯತ್ನವಿಲ್ಲದೆ ಅಂದರೆ ನದಿಯ ನೀರಿಗೆ ಯಾವ ತಡೆಯನ್ನೂ ಒಡ್ಡದೆ ಅದು ಕಾಲುವೆಗೆ ಹೋಗುವಂತಿರಬಹುದು. ಅಂಥ ಸ್ಥಳದಿಂದ ಕಾಲುವೆಯ ಮೂಲಕ ಬೇಸಾಯಕ್ಕೆ

ನೀರನ್ನು ಒದಗಿಸಿಕೊಳ್ಳಬಹುದು. ಇವುಗಳು ಪ್ರವಾಹ ಕಾಲುವೆಗಳು. ಆದರೆ ಇಂಥ ಅನುಕೂಲ ಪರಿಸ್ಥಿತಿ ವಿಶೇಷವಾಗಿ ಒದಗಿರುವುದರಿಂದ ನೀರಾವರಿಗೆ ಇದರಿಂದ ದೊರಕಿರುವ ಪ್ರಯೋಜನ ಅತ್ಯಲ್ಪ. ಇದಕ್ಕೆ ಬದಲಾಗಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ಹಾಕಿ ನೀರನ್ನು ಸಂಗ್ರಹಿಸಿ ಕಾಲುವೆಗಳಿಗೆ ನೀರನ್ನು ಬಿಡಲಾಗುವುದು. ಇವುಗಳು ನಿರಂತರ ಕಾಲುವೆಗಳು. ಭಾರತದಾದ್ಯಂತ ಇಂದು ಕಾಲುವೆಗಳು ಹಂಚಿಕೆಯಾಗಿದೆ. ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸಿ ವ್ಯವಸಾಯ ಕ್ಷೇತ್ರಗಳಿಗೆ ಪೂರೈಸಲಾಗುವುದು. (ಕೆ.ಕೆ.)

**ನೀರಿನ ಲವಣಾಂಶೀಕರಣ:** ಸಾಗರ ಮತ್ತು ಸಮುದ್ರಗಳಲ್ಲಿ ಹಲವು ಬಗೆಯ ಲವಣಾಂಶಗಳಿವೆ. ಇದೇ ನೀರಿನ ಲವಣಾಂಶೀಕರಣ. ಸಾಗರ ಮತ್ತು ಸಮುದ್ರದ ನೀರು ಲವಣಾಂಶಗಳಿಂದ ಕೂಡಿರುವುದರಿಂದ ನೀರು ಉಪ್ಪಾಗಿರುತ್ತದೆ. ಒಂದು ನಿರ್ದಿಷ್ಟ ಪ್ರಮಾಣದ ಸಾಗರ ನೀರು ಹಾಗೂ ಅದು ಒಳಗೊಂಡಿರುವ ಲವಣಾಂಶಗಳ ಅನುಪಾತವೇ ಲವಣತೆ. ಸಾಗರಗಳಲ್ಲಿ ವಿವಿಧ ಬಗೆಯ ಲವಣ ಮತ್ತು ಖನಿಜಗಳ ಉತ್ಪತ್ತಿಯ ಬಗ್ಗೆ ತಜ್ಞರಲ್ಲಿ ವಿವಿಧ ಅಭಿಪ್ರಾಯಗಳಿವೆ. ಕೆಲವು ತಜ್ಞರ ಪ್ರಕಾರ ಭೂಪ್ರದೇಶದ ಶಿಲೆಗಳು ಕರಗಿ ನದಿಗಳ ಮೂಲಕ ಸಮುದ್ರವನ್ನು ಸೇರಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೆಲವರು ಇದನ್ನು ವಿರೋಧಿಸಿದ್ದಾರೆ. ಏಕೆಂದರೆ ನದಿಯ ನೀರಿನಲ್ಲಿ ಕ್ಯಾಲ್ಸಿಯಂ ಸಲ್ಫೇಟ್ ಮತ್ತು ಸೋಡಿಯಂ ಕ್ಲೋರೈಡ್ ಕೇವಲ ಶೇ. 2 ರಷ್ಟು ಮಾತ್ರ ಕಂಡುಬರುವುದು. ಆದರೆ ಸಮುದ್ರದ ನೀರು ಹೆಚ್ಚಿನ ಪ್ರಮಾಣದಲ್ಲಿ ಸೋಡಿಯಂ ಮತ್ತು ಮೆಗ್ನೀಸಿಯಂ ಕ್ಲೋರೈಡನ್ನು ಹೊಂದಿರುವುದು. ಮತ್ತೆ ಕೆಲವು ವಿಜ್ಞಾನಿಗಳ ಪ್ರಕಾರ ಸಾಗರತಳದಲ್ಲಿರುವ ಶಿಲೆಗಳು ಕರಗಿ ಲವಣಾಂಶ ಉಂಟಾಗಿದೆಯೆಂದು ತಿಳಿದಿದೆ. ಸಾಗರಗಳಲ್ಲಿ ಕಂಡುಬರುವ ಲವಣಗಳಲ್ಲಿ ಸೋಡಿಯಂ ಕ್ಲೋರೈಡ್ ಅತಿಮುಖ್ಯ. ಇದು ಒಟ್ಟು ಲವಣಗಳ ಶೇ. 77.8ರಷ್ಟಿರುವುದು. ಸಾಗರದ ನೀರಿನಲ್ಲಿರುವ ಇತರ ಲವಣಗಳೆಂದರೆ ಮೆಗ್ನೀಸಿಯಂ ಕ್ಲೋರೈಡ್, ಮೆಗ್ನೀಸಿಯಂ ಸಲ್ಫೇಟ್, ಕ್ಯಾಲ್ಸಿಯಂ ಸಲ್ಫೇಟ್, ಪೊಟಾಷಿಯಂ ಸಲ್ಫೇಟ್, ಕ್ಯಾಲ್ಸಿಯಂ ಕಾರ್ಬೋನೇಟ್ ಮತ್ತು ಮೆಗ್ನೀಸಿಯಂ ಬ್ರೋಮೈಡ್. ಇವುಗಳಲ್ಲದೆ ನೀರಿನಲ್ಲಿ ಹಲವು ಬಗೆಯ ಖನಿಜಗಳು ಕೂಡ ಕರಗಿರುತ್ತವೆ. ಅವುಗಳಲ್ಲಿ ಮುಖ್ಯವಾದವು ಚಿನ್ನ, ಬೆಳ್ಳಿ ಮತ್ತು ರೇಡಿಯಂ.

ಸಾಗರಗಳಲ್ಲಿ ಲವಣತೆಯ ಸರಾಸರಿ ಪ್ರಮಾಣ ಒಂದು ಕಿಗ್ರಾಂನಲ್ಲಿ 35 ಗ್ರಾಂ.

**ಸಾಗರದ ನೀರಿನ ಲವಣದ ಪ್ರಮಾಣ**

| ಲವಣಗಳು | ಪ್ರಮಾಣ (ಪ್ರತಿ 1000 ಗ್ರಾಂಗಳಿಗೆ) | ಶೇಕಡವಾರು |
|---|---|---|
| ಸೋಡಿಯಂ ಕ್ಲೋರೈಡ್ | 27.213 | 77.8 |
| ಮೆಗ್ನೀಸಿಯಂ ಕ್ಲೋರೈಡ್ | 3.807 | 10.9 |
| ಮೆಗ್ನೀಸಿಯಂ ಸಲ್ಫೇಟ್ | 1.658 | 4.7 |
| ಕ್ಯಾಲ್ಸಿಯಂ ಸಲ್ಫೇಟ್ | 1.260 | 3.6 |
| ಪೊಟಾಶಿಯಂ ಸಲ್ಫೇಟ್ | 0.863 | 2.5 |
| ಕ್ಯಾಲ್ಸಿಯಂ ಕಾರ್ಬೋನೇಟ್ | 0.123 | 0.3 |
| ಮೆಗ್ನೀಸಿಯಂ ಬ್ರೋಮೈಡ್ | 0.076 | 0.2 |
| ಸರಾಸರಿ ಲವಣತೆ | 35.000 | 100.0 |

ಲವಣತೆಯ ಹಂಚಿಕೆಯು ಎಲ್ಲಾ ಸಾಗರ ಸಮುದ್ರಗಳಲ್ಲಿ ಒಂದೇ ರೀತಿಯಾಗಿ ಕಂಡುಬರುವುದಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ– ಆವಿಯಾಗುವಿಕೆ, ಮಳೆ, ನದಿನೀರು, ಸಾಗರದ ನೀರಿನ ಚಲನೆ, ವಾಯುಮಂಡಲದ ಒತ್ತಡ, ಮಾರುತಗಳದಿಕ್ಕು ಮುಂತಾದವು. ಈ ಅಂಶಗಳು ಸಾಗರದ ನೀರಿನ ಲವಣತೆಯನ್ನು ಹೆಚ್ಚಿಸುತ್ತವೆ ಅಥವಾ ಕುಗ್ಗಿಸುತ್ತವೆ. ನೀರಿನ ಆವಿಯಾಗುವಿಕೆಯ ಪ್ರಮಾಣ ಮತ್ತು ಲವಣತೆಯ ನಡುವೆ ನೇರ ಸಂಬಂಧವಿದೆ. ನೀರು ಹೆಚ್ಚು ಆವಿಯಾದಲ್ಲಿ ಲವಣಾಂಶಗಳು ಅಲ್ಲಿಯೇ ಉಳಿಯುವುದು. ಆದ್ದರಿಂದ ಆವಿಯಾಗುವಿಕೆಯ ಪ್ರಮಾಣ ಹೆಚ್ಚಾಗಿರುವ ಉಷ್ಣವಲಯ ಸಾಗರಗಳಲ್ಲಿ ಲವಣತೆ ಅಧಿಕವಾಗಿರುವುದು. ಹೆಚ್ಚಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ಸಾಗರವನ್ನು ಸೇರುವ ನೀರಿನ ಪ್ರಮಾಣ ಅಧಿಕವಾಗಿರುವುದು. ಇದರಿಂದ ಆವಿಯಾಗುವಿಕೆಯ ಪ್ರಮಾಣ ಕಡಿಮೆಯಿರುತ್ತದೆ. ಉದಾ: ಸಮಭಾಜಕವೃತ್ತ ಪ್ರದೇಶಗಳಲ್ಲಿ ಅಧಿಕ ಮೋಡ ಮತ್ತು ಮಳೆಯಿಂದ ಕಡಿಮೆ ಲವಣಾಂಶ ಕಂಡುಬರುತ್ತದೆ. ನದಿಗಳು ಸಾಗರಗಳಿಗೆ ಲವಣಾಂಶವನ್ನು ತಂದರೂ ಜೊತೆಯಲ್ಲಿಯೇ ಅಧಿಕ ಪ್ರಮಾಣದ ಶುದ್ಧ ನೀರನ್ನು ತರುತ್ತವೆ. ಇದರಿಂದ ತೀರಪ್ರದೇಶಗಳಲ್ಲಿ ಸಾಗರದ ನೀರು ಕಡಿಮೆ ಲವಣತೆಯನ್ನು ಹೊಂದಿರುವುದು. ವೇಗವಾಗಿ ಬೀಸುವ ನಿರಂತರ ಮಾರುತಗಳು ತಮ್ಮ ಜೊತೆಯಲ್ಲಿ ಸಾಗರದ ಮೇಲ್ಮೈ ನೀರನ್ನು ಸೆಳೆದೊಯ್ಯುತ್ತವೆ. ಇದರಿಂದ ಕೆಳಭಾಗದ ನೀರು ಮೇಲ್ಮುಖವಾಗಿ ಚಲಿಸಿ ಲವಣಾಂಶ ಕಡಿಮೆಯಾಗುವುದು.

ಈ ಮೇಲಿನ ಅಂಶಗಳಲ್ಲದೆ ವಾಯುಮಂಡಲದ ಒತ್ತಡ, ಮಾರುತಗಳ ದಿಕ್ಕು ಮುಂತಾದವು ಲವಣತೆಯ ಮೇಲೆ ಪ್ರಭಾವ ಬೀರುತ್ತವೆ. (ಕೆ.ಕೆ.)

**ನೀರ್ಗಲ್ಲ ಬಿರುಕು:** ಹಿಮನದಿಯ (ಗ್ಲೇಶಿಯರ್) ಜಾಡಿನಲ್ಲಿ ತಲೆದೋರುವ ಕಮರಿ (ಕ್ರೆವ್ಯಾಸ್). ಧ್ರುವಪ್ರದೇಶಗಳಲ್ಲಿಯೂ ಅತ್ಯುನ್ನತ ಪರ್ವತಗಳಲ್ಲಿಯೂ ಹಿಮ ಅಧಿಕವಾಗಿ ತುಂಬುತ್ತಲೂ ಆಗಾಗ್ಗೆ ಕರಗುತ್ತಲೂ ಗಡ್ಡೆ ಕಟ್ಟುತ್ತಲೂ ಇರುತ್ತದೆ. ಆ ಹಿಮ ಅಲ್ಲಿ ಹಳ್ಳಗಳನ್ನು ಕೊರೆಯುವುದು. ಇಂಥ ಹಳ್ಳಗಳು ಹಿಮದಿಂದ ತುಂಬಿಕೊಂಡಾಗ ಆ ಹಿಮರಾಶಿ ಚಿಕ್ಕ ಹಿಮನದಿಯಾಗಿ ಕೆಳಕಣಿವೆಗೆ ಪ್ರಸರಿಸುವುದು. ಅದು ಬೆಟ್ಟದ ಇಳಿಜಾರಿನಲ್ಲಿ ತನ್ನ ಗುರುತ್ವದಿಂದಲೇ ಪ್ರವಹಿಸುತ್ತದೆ. ಮಂದಗತಿಯಲ್ಲಿ ಮುಂದೆಸಾಗುವ ಹಿಮನದಿ ತನ್ನ ಕೊರೆತದಿಂದ ಸಂಗ್ರಹವಾದ ಕಲ್ಲುಬಂಡೆಗಳು, ಮರಳು ಮೊದಲಾದ ಹೊರೆಯನ್ನು ಹೊತ್ತುಕೊಂಡು ಹರಿಯುತ್ತದೆ. ಇದರ ಹೆಚ್ಚಿನ ಭಾಗ ಹಿಮನದಿಯ ಮೇಲ್ಭಾಗ ಮತ್ತು ಮುಂಭಾಗದಲ್ಲಿ ಇರುವುದು. ಹಿಮನದಿ ವಿಸ್ತಾರವಾಗುತ್ತ ಹೋಗುವಾಗ ತಳಶಿಲೆಯ ತಡೆಯಿಂದ ಅದರ ನಡುವೆ 30 ಮೀ ಗಳಿಗೂ ಹೆಚ್ಚಿನ ಆಳದ ಬಿರುಕುಗಳು ತೋರಿಬರುತ್ತವೆ. ಇವೇ ನೀರ್ಗಲ್ಲ ಬಿರುಕುಗಳು. ಇವು ಹಿಮನದಿಯಲ್ಲಿ ಅಡ್ಡವಾಗಿಯೂ ನೀಳವಾಗಿಯೂ ಗೋಚರಿಸಬಹುದು. ಹಿಮಸಂಚಾರಿಗಳಿಗೂ ಪರ್ವತಾರೋಹಿಗಳಿಗೂ ನೀರ್ಗಲ್ಲ ಬಿರುಕು ಮೃತ್ಯುಪಂಜರವಾಗಿ ಪರಿಣಮಿಸುವುದುಂಟು. ಅದರೊಳಗೆ ಸಿಲುಕಿದವರ ಶವಗಳು ಅತಿದೀರ್ಘಕಾಲದ ಮೇಲೆ ಹೊರಕಾಣಿಸುವುದು ಸಂಭಾವ್ಯ. ಉದಾಹರಣೆಗೆ 1820ರಲ್ಲಿ ಗ್ರೀನ್‌ಲೆಂಡಿನ ಡೆಸ್ ಬಾಸನ್ ಎಂಬ ಹಿಮನದಿಯ ಬಿರುಕಿನಲ್ಲಿ ಸಿಕ್ಕಿಬಿದ್ದ ಮೂರು ಮಾರ್ಗದರ್ಶಕರ ಶವಗಳೂ 1861, 1863 ಮತ್ತು 1865ರಲ್ಲಿ ಹೊರಕಾಣಿಸಿಕೊಂಡವು. ಅಷ್ಟರಲ್ಲಿಯೇ ಆ ಹಿಮನದಿ 6 ಕಿಮೀ ಗಳಷ್ಟು ದೂರ ಸರಿದಿತ್ತು. ಆಸ್ಟ್ರಿಯದ ಆಲ್ಪ್‌ನ ನೀರ್ಗಲ್ಲ ಬಿರುಕೊಂದರಲ್ಲಿ ಶತಮಾನಗಳ ಹಿಂದಿನ ರೀತಿಯ ಉಡುಪುಗಳನ್ನು ಧರಿಸಿದ್ದ ಒಂದು ಶವ ದೊರೆತಿತ್ತು (1860). ಈ ನೀರ್ಗಲ್ಲ ಬಿರುಕುಗಳ ಮೇಲೆ ಹಿಮದ ಕಣಗಳು ಮುಚ್ಚಿಕೊಂಡು ಅವು ಥಕ್ಕನೆ ದೃಗ್ಗೋಚರವಾಗದಿರುವುದೇ ಇಂಥ ಅಪಘಾತಗಳಿಗೆ ಕಾರಣ. (ಎಂ.ವಿ.)

**ನೀರ್ಗಲ್ಲು ಗುಡ್ಡ:** ಹಿಮನದಿಯಿಂದ ಬೇರ್ಪಟ್ಟು ಕಡಲು ಸೇರಿ ತೇಲುತ್ತಿರುವ ಅಗಾಧಗಾತ್ರದ ನೀರ್ಗಲ್ಲ ರಾಶಿ (ಐಸ್‌ಬರ್ಗ್). ಪ್ರಪಂಚದ ಹಲವೆಡೆಗಳಲ್ಲಿ ಹಿಮ ಶಾಶ್ವತವಾಗಿ ರಾಶಿಗೂಡಿರುತ್ತದೆ. ಗ್ರೀನ್ಲೆಂಡ್, ಉತ್ತರ ಮತ್ತು ದಕ್ಷಿಣ ಧ್ರುವ ಖಂಡಗಳ ಭಾಗಗಳಲ್ಲಿ ಹಿಮರೇಖೆಯ ಮಟ್ಟ ಸಮುದ್ರಮಟ್ಟಕ್ಕೆ ಸಮವಾಗಿರುತ್ತದೆ. ನೆಲದ ಇಳಿಜಾರಿಗೆ ಅನುಗುಣವಾಗಿ ನಿಧಾನವಾಗಿ ಹರಿಯುತ್ತ ಸಮುದ್ರದ ಅಂಚಿಗೆ ಬಂದಾಗ ಇವುಗಳ ಹರಿವಿನ ಇಳುಕಲಿನಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಇದರಿಂದ ಎಳೆತ ಸಂಭವಿಸಿ, ಹಿಮನದಿಗಳಿಂದ ವಿವಿಧಾಕಾರದ ದೊಡ್ಡ ದೊಡ್ಡ ಹಿಮಗಡ್ಡೆಗಳು ಮುರಿದು ಬಿದ್ದು ಸಮುದ್ರದಲ್ಲಿ ತೇಲುತ್ತವೆ. ಈ ರೀತಿ ಸಿಡಿದ ಹಿಮಭಾಗಗಳೇ ನೀರ್ಗಲ್ಲ ಬೆಟ್ಟಗಳು.




ನೀರ್ಗಲ್ಲು ಗುಡ್ಡ

ದಕ್ಷಿಣ ಧ್ರುವ ಪ್ರದೇಶದ ನೀರ್ಗಲ್ಲ ಬೆಟ್ಟಗಳು ಹಲವಾರು ಕಿಮೀ ಅಗಲವಾಗಿರುವ 50 ಅಂತಸ್ತುಗಳ ಕಟ್ಟಡದಷ್ಟು ಎತ್ತರವಾಗಿವೆ. ಉತ್ತರಭಾಗದವು ಸಾಮಾನ್ಯವಾಗಿ 1.6 ಕಿಮೀ ಅಗಲ ಮತ್ತು 30.5 ಮೀ ಎತ್ತರ ಇವೆ. ನೀರ್ಗಲ್ಲುಗಳು ವಾಸ್ತುಶಿಲ್ಪ ವೈಭವದಲ್ಲಿ ಈಜಿಪ್ಟಿನ ನೆಲಗೋಪುರಗಳನ್ನೂ ಗಂಭೀರತೆಯಲ್ಲಿ ಸಿಂಹಮಾನವಗಳನ್ನೂ (ಸ್ಫಿಂಕ್ಸ್) ಮೀರಿಸುತ್ತವೆ. ಇವುಗಳಲ್ಲಿ ಸೂರ್ಯ ಪ್ರಕಾಶ ಬಿಂಬಿಸಿದಾಗ ಕಾಮನಬಿಲ್ಲಿನ ಬಣ್ಣಗಳನ್ನು ಕಾಣಬಹುದು. ಕೆಲವು ಹಿಮ ಪ್ಲಾವಿಗಳಲ್ಲಿ ತೆರೆಗಳು ಕೊರೆದು ಮಾಡಿದ ಗುಹೆಗಳಿವೆ. ಅವು ಕಡುನೀರಳೆ ಬಣ್ಣದವಾಗಿ ತೋರುತ್ತವೆ. ಇರುಳಿನಲ್ಲಿ ಹಿಮಪ್ಲಾವಿಗಳು ಕಡಲುಗಳಲ್ಲಿ ತೇಲುತ್ತ ಮುಂದುವರಿಯುವಾಗ ವಿವಿಧ ಬಣ್ಣದಿಂದ ಹೊಳೆಯುವುವು.

ತೇಲುತ್ತಿರುವ ನೀರ್ಗಲ್ಲುಗುಡ್ಡಗಳಲ್ಲಿ ನೀರಿನ ಮೇಲೆ ಕಾಣಿಸುವ 30 ಸೆಂಮೀ ಎತ್ತರಕ್ಕೆ ಅದರ ರಚನಾರೀತಿ ಮತ್ತು ಲಕ್ಷಣಗಳನ್ನು ಹೊಂದಿಕೊಂಡು, 2.5 ಮೀ ನಿಂದ 3 ಮೀ ವರೆಗೆ ನೀರಿನ ಅಡಿಯಲ್ಲಿರುತ್ತವೆ. ಬೆಚ್ಚನೆಯ ಸಾಗರದ ನೀರಿಗೆ ಬಂದಾಗ

ಹಿಮಪ್ಲಾವಿ ಕರಗುತ್ತವೆ. ಆ ಮೊದಲು ಅದು 3,200 ಕಿಮೀ ದೂರ ಸಂಚರಿಸಬಲ್ಲದು. ತನ್ನ ಹೆಚ್ಚಿನ ಅಂಶವನ್ನು ನೀರಿನ ಅಡಿಯಲ್ಲಿ ಮರೆಮಾಚಿಕೊಂಡು ತೇಲುವುದರಿಂದ ನೀರ್ಗಲ್ಲುಗುಡ್ಡ ನೌಕಾಸಂಚಾರಕ್ಕೆ ಅಪಾಯಕಾರಿ. ಮಂಜು ಮುಸುಕಿದಾಗಲಂತೂ ನೌಕೆಗಳು ಅರಿವಿಲ್ಲದೆ ನೀರ್ಗಲ್ಲ ಗುಡ್ಡಗಳಿಗೆ ಬಡಿದು ಚೂರುಚೂರಾಗಿ ಹೋಗುವುದುಂಟು. 1912ರಲ್ಲಿ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಸಂಭವಿಸಿದ ಟೈಟಾನಿಕ್ ಮಹಾನೌಕೆಯ ಪ್ರಥಮ ಪ್ರಯಾಣದ ದುರಂತವೇ ನೌಕಾಘಾತ ಚರಿತ್ರೆಯಲ್ಲಿಯ ಅತ್ಯಂತ ಭೀಕರ ನಿದರ್ಶನ. ಮುಂದೆ ಅಂತಾರಾಷ್ಟ್ರೀಯ ಹಿಮಪ್ಲಾವಿ ಕಾವಲುಪಡೆಯ ಸಹಾಯದಿಂದ ಅಟ್ಲಾಂಟಿಕ್ ಸಾಗರದಲ್ಲಿಯ ಹಿಮಪ್ಲಾವಿಗಳನ್ನು ಪತ್ತೆಹಚ್ಚಿ ಸಂಚರಿಸುವ ನೌಕೆಗಳಿಗೆ ಎಚ್ಚರಿಕೆ ನೀಡುವ ಏರ್ಪಾಡನ್ನು ಮಾಡಲಾಯಿತು. (ಎಂ.ವಿ.)

**ನೀರ್ಗುಳಿ:** ನದಿಯ ನೀರಿನ ಕೊರೆತದಿಂದ ಅದರ ಪಾತ್ರದ ಗಟ್ಟಿಕಲ್ಲಿನಲ್ಲಿ ಉಂಟಾದ ಕಿರಿದಾದ ಬಾಯಿಯುಳ್ಳ ಗುಳಿ. ಇದನ್ನು ಕುಂಭಕುಳಿಯೆಂದು ಕರೆಯುವುದು ಹೆಚ್ಚು ರೂಢಿಯಲ್ಲಿದೆ. ಪರ್ವತ ಪ್ರದೇಶಗಳಲ್ಲಿ ಅತಿವೇಗದಿಂದ ಹರಿಯುವ ನದಿ ತಾನು ಹೊತ್ತುಕೊಂಡು ಬರುವ ಮರಳು ಮತ್ತು ಕಲ್ಲಿನ ಚೂರುಗಳಿಂದ ತನ್ನ ದಡಗಳನ್ನೂ ಪಾತ್ರವನ್ನೂ ಕೊರೆಯುತ್ತ ಮುಂದುವರಿಯುತ್ತದೆ. ಅದರ ತಳದ ಗಟ್ಟಿಕಲ್ಲಿನ ತಗ್ಗುಗಳಲ್ಲಿ ತಂಗಿದ ದಪ್ಪ ಮರಳುಕಲ್ಲುಗಳು ಸಂಘರ್ಷ ಪರಿಭ್ರಮಣಗಳಿಂದ ತೋಡಿದ ಹಳ್ಳಗಳೇ ನೀರ್ಗುಳಿಗಳು. ಅತಿ ರಭಸದಿಂದ ಹರಿಯುವ ಪ್ರವಾಹದ ಸುಳಿಗೆ ಸಿಕ್ಕಿದ ಕಲ್ಲುಮರಳು ದೀರ್ಘ ಕಾಲದ ತನಕ ಒಂದೇ ಕಡೆ ಸುತ್ತುತ್ತ ಇರುವುದರಿಂದ ಆ ಹಳ್ಳವೂ ಹಿಗ್ಗುತ್ತದೆ; ಮರಳಿನ ಕಣಗಳೂ ಕಲ್ಲು ಚೂರುಗಳೂ ಸವೆದು ಗುಂಡಾಗುತ್ತವೆ; ಸುಳಿಗಳು ಹೇರಳವಾಗಿರುವ ಜಲಪಾತಗಳ ಅಡಿಯಲ್ಲಿ ದೊಡ್ಡ ದೊಡ್ಡ ನೀರ್ಗುಳಿಗಳಿರುತ್ತವೆ. ಇವುಗಳಲ್ಲಿ ಸಿಕ್ಕುವ ನುಣುಪು ಮತ್ತು ಗುಂಡು ಕಲ್ಲುಗಳೇ ಇವನ್ನು ಅಗಲವಾಗಿ ಮಾಡಿ ಆಳವಾಗಿ ತೊಡುವ ಆಯುಧಗಳು. ಇವುಗಳ ಅಗಲ–ಆಳ ಕೆಲವು ಸೆಂಮೀ ಗಳಿಂದ ಅನೇಕ ಮೀಟರುಗಳಷ್ಟಿರಬಹುದು. ಶರಾವತೀ ನದಿ ಗೇರುಸೊಪ್ಪೆ ಜಲಪಾತದ ಬಳಿ, ಕಾವೇರಿನದಿ ಚುಂಚನಕಟ್ಟೆಯ ಬಳಿ ಗಟ್ಟಿಕಲ್ಲನ್ನು ಕೊರೆಯುವ ಯಂತ್ರದಂತೆ ಕೊರೆದು, ಮೊಸರು ಕಡೆಯುವ ಮಂತಿನಂತೆ ಕಡೆದು, ಬಲು ದೊಡ್ಡ ಕುಳಿಗಳನ್ನು ತೋಡಿದೆ. ತುಂಬ ದೊಡ್ಡದಾದವನ್ನು ರಕ್ಕಸನ ಕೊಪ್ಪರಿಗೆ ಎಂದು ಕರೆಯುವುದುಂಟು. (ಎ.ಎನ್.ಎಸ್.ಐ.)

**ನೀಲ್ ಆರ್ಮ್‌ಸ್ಟ್ರಾಂಗ್:** ಅಮೆರಿಕ ದೇಶದ ಗಗನಯಾತ್ರಿ, ಪ್ರಾಧ್ಯಾಪಕ ಹಾಗೂ ಆಕಾಶ ನೌಕಾ ನಿರ್ದೇಶಕ. ಚಂದ್ರನ ಮೇಲೆ ಪಾದಾರ್ಪಣ ಮಾಡಿದ ಪ್ರಥಮ ಮಾನವ. ಜನನ 1930, ಆಗಸ್ಟ್ 5 ಓಹಿಯೊದಲ್ಲಿ. ಇವನ ಪ್ರಥಮ ಬಾಹ್ಯಾಕಾಶ ಯಾನ 1966ರಲ್ಲಿ, ಜಮಿನಿ 8. ಇದರಲ್ಲಿ ಇವನ ಸಹ ಚಾಲಕರಲ್ಲಿ ಡೇವಿಡ್ ಸ್ಕಾಟ್‌ರೊಡನೆ ಚಂದ್ರನ ಮೇಲೆ ಪ್ರಥಮ ಮಾನವರಿಂದ ಕೂಡಿದ ಬಾಹ್ಯಾಕಾಶ ನೌಕೆಯ ಸ್ಪರ್ಷ. ಇವನ ಎರಡನೆಯ ಹಾಗೂ ಕೊನೆಯ ಮಹತ್ವ ಪೂರ್ಣ ಬಾಹ್ಯಾಕಾಶ ಯಾನ ಅಪೊಲೋ 11ರಲ್ಲಿ (1969 ಜುಲೈ 20). ಇದು ಮಾನವ ಇತಿಹಾಸದಲ್ಲಿ ಬಾಹ್ಯಾಕಾಶ ಸಂಶೋಧನೆಯಲ್ಲಿ ಹನುಮಂತ ನೆಗೆತ, ಒಂದು ಪ್ರಮುಖ ಹೆಜ್ಜೆ. ಆರ್ಮ್‌ಸ್ಟ್ರಾಂಗ್ ಮತ್ತು ಸಹ ಯಾತ್ರಿ ಬಜ್ ಆಲ್ಡ್ರಿನ್ ಚಂದ್ರನ ಮೇಲೆ ಇಳಿದು $2\ ^1/_2$ ಗಂಟೆಗಳ ಕಾಲ ಅನ್ವೇಷಣೆ ಕಾರ್ಯದಲ್ಲಿ ತೊಡಗಿದ್ದರು.

ಗಗನ ಯಾತ್ರಿಯಾಗುವ ಮೊದಲು ಈತ ಅಮೆರಿಕದ ನೌಕಾದಳದಲ್ಲಿ ವಿಮಾನ ಚಾಲಕನಾಗಿ ಕೊರಿಯ ಯುದ್ಧದಲ್ಲಿ ಭಾಗವಹಿಸಿದ್ದ. ಅತಿ ವೇಗವಾಗಿ ಚಲಿಸುವ ಅತ್ಯಾಧುನಿಕ ಯುದ್ಧವಿಮಾನಗಳ ಚಾಲಕನಾಗಿದ್ದ. ಚಂದ್ರನ ಮೇಲೆ ಇವರು ಗುರುತಿಸಿದ ಜ್ವಾಲಾಮುಖಿಯ ಕುಳಿಯೊಂದಕ್ಕೆ ಇವನ ಗೌರವಾರ್ಥವಾಗಿ ಇವನ ಹೆಸರಿನ್ನಿಡಲಾಗಿದೆ. (ಕೆ.ಎನ್.ಯು.)

**ನೀಲಗಿರಿ:** ತಮಿಳುನಾಡು ರಾಜ್ಯದ ವಾಯವ್ಯದಲ್ಲಿರುವ ಬೆಟ್ಟಗಳ ಸಾಲು ಹಾಗೂ ಅದೇ ಹೆಸರಿನ ಜಿಲ್ಲೆ. ಈ ಜಿಲ್ಲೆಯ ಬಹುಭಾಗ ನೀಲಗಿರಿ ಬೆಟ್ಟಗಳ ಪ್ರದೇಶವಾಗಿರುವುದರಿಂದ ಜಿಲ್ಲೆಗೆ ಈ ಹೆಸರು ಬಂದಿದೆ. ನೀಲಗಿರಿ ಬೆಟ್ಟಗಳು ಸು. 2,500 ಚ.ಕಿಮೀ ವಿಸ್ತೀರ್ಣವಾದ ಅಡಕವಾದ ಉನ್ನತ ಪ್ರದೇಶ. ಇದರ ಶಿಖರಗಳು ಸುತ್ತಲಿನ 1000 ಮೀ ಎತ್ತರವಾದ ಮೈದಾನದಿಂದ 1,800–2,400 ಮೀ ಎತ್ತರವಾಗಿವೆ. ನೀಲಗಿರಿ ಜಿಲ್ಲೆ ಕರ್ನಾಟಕ ಮತ್ತು ಕೇರಳ ರಾಜ್ಯಗಳು, ಕೊಯಮತ್ತೂರು ಜಿಲ್ಲೆ ಇವುಗಳ ನಡುವೆ ಇದೆ. ಈ ಜಿಲ್ಲೆಯ ವಿಸ್ತೀರ್ಣ 2,549 ಚ.ಕಿಮೀ ಜನಸಂಖ್ಯೆ 76214. ನೀಲಗಿರಿಯೆಂಬ ಹೆಸರು ಸು. 850 ವರ್ಷಗಳಿಗೂ ಹೆಚ್ಚು ಹಳೆಯದು. ಈ ಗಿರಿಪಂಕ್ತಿಯ ಉನ್ನತ ಶಿಖರಗಳು ತೆಳು ನೀಲಿಬಣ್ಣದ ಮಂಜಿನಿಂದ ಮುಚ್ಚಲ್ಪಟ್ಟಿರುವುದನ್ನು ಕಂಡ ಜನರು ಇದನ್ನು ಈ ಹೆಸರಿನಿಂದ ಕರೆದಿರಬಹುದು ಎಂದು ಹೇಳಲಾಗಿದೆ.

ಇತಿಹಾಸ: ನೀಲಗಿರಿ ಜಿಲ್ಲೆಯ ಪ್ರದೇಶ ಗಂಗರಾಜರ ಆಡಳಿತದಲ್ಲಿತ್ತು (930). ಅನಂತರ 16ನೆಯ ಶತಮಾನದ ಅಂತ್ಯದ ಹೊತ್ತಿಗೆ ಕದಂಬರ ಕೈವಶವಾಯಿತು. ಸು. 12ನೆಯ ಶತಮಾನದ ಆದಿಭಾಗದಲ್ಲಿ ಇದು ಹೊಯ್ಸಳರ ಕೈಸೇರಿತು. ಅನಂತರ ಹೊಯ್ಸಳ ರಾಜನಾದ ವಿಷ್ಣುವರ್ಧನ ನೀಲಗಿರಿ ಪ್ರದೇಶವನ್ನು ಗೆದ್ದ. ಹೊಯ್ಸಳರ ಕಾಲದ ಶಿಲಾಶಾಸನಗಳಲ್ಲಿ ನೀಲಗಿರಿಯನ್ನು ನೀಲಾದ್ರಿ, ನೀಲಾಚಲ ಎಂದು ಕರೆಯಲಾಗಿದೆ. ವಿಷ್ಣುವರ್ಧನ ನೀಲಗಿರಿಯಲ್ಲಿ ಒಂದು ಪಟ್ಟಣವನ್ನು ಸ್ಥಾಪಿಸಿದನೆಂದು 1120ರ ಶಾಸನದಲ್ಲಿ ತಿಳಿಸಲಾಗಿದೆ. ನೀಲಗಿರಿ ಬೆಟ್ಟದ ಮೇಲೆ ಒಂದು ಕೋಟೆಯಿತ್ತೆಂದು ಹೇಳಲಾಗಿದೆ. ನೀಲಗಿರಿ ಪವಿತ್ರವೆಂದೂ ಇಲ್ಲಿಯ ಶಿಖರಗಳ ದರ್ಶನಮಾತ್ರದಿಂದ ಪಾಪ ನಾಶವಾಗುತ್ತದೆಂದೂ ಆ ಪ್ರದೇಶದ ಜನರು ನಂಬಿದ್ದರೆಂದು ಅಬೆ ಡೂಬಾಯನ ಹೇಳಿಕೆಯಿಂದ ತಿಳಿದುಬರುತ್ತದೆ. ಹೊಯ್ಸಳರ ಅನಂತರ 14ನೆಯ ಶತಮಾನದಿಂದ 16ನೆಯ ಶತಮಾನದವರೆಗೂ ನೀಲಗಿರಿ ಪ್ರದೇಶ ಡಣಾಯಕರ ವಶದಲ್ಲಿದ್ದು, ಈಗಿನ ಡಣಾಯಕನಕೋಟೆಯಿಂದ ಆಳಲ್ಪಡುತ್ತಿತ್ತು. 16ನೆಯ ಶತಮಾನದ ಆದಿಭಾಗದಿಂದ 1565ರವರೆಗೆ ಇದು ವಿಜಯನಗರ ಅರಸರ ಅಧೀನಕ್ಕೆ ಒಳಪಟ್ಟಿತ್ತು. ತಾಳಿಕೋಟೆ ಯುದ್ಧಾನಂತರ ಬಹಮನಿ ಸುಲ್ತಾನರ ವಶವಾಗಿದ್ದು, 1610ರಲ್ಲಿ ಮೈಸೂರಿನ ರಾಜ ಒಡೆಯರ ಆಳ್ವಿಕೆಗೆ ಸೇರಿತ್ತು. 1799ರಲ್ಲಿ ಇದನ್ನು ಬ್ರಿಟಿಷರು ವಶಪಡಿಸಿಕೊಂಡರು. ಇದು ಮದರಾಸ್ ಪ್ರಾಂತ್ಯದ ಭಾಗವಾಯಿತು. ಈಗ ಈ ಪ್ರದೇಶ ತಮಿಳುನಾಡು ರಾಜ್ಯದ ಒಂದು ಜಿಲ್ಲೆಯಾಗಿದೆ.

ಭೂಸ್ವರೂಪ: ನೀಲಗಿರಿಯ ಜಿಲ್ಲೆಯಲ್ಲಿ ನಾಲ್ಕು ಸ್ವಾಭಾವಿಕ ವಿಭಾಗಗಳಿವೆ: 1. ನೀಲಗಿರಿಯ ಉನ್ನತ ಪ್ರದೇಶ, 2. ಇದರ ಬುಡಕ್ಕೆ ಹೊಂದಿಕೊಂಡಿರುವ ದಟ್ಟವಾದ ಕಾಡುಪ್ರದೇಶ, 3. ಪಶ್ಚಿಮದ ಆಕ್ಟರ್ಲೋನಿ ಕಣಿವೆ, 4. ಆಗ್ನೇಯದ ವೈನಾಡು. ನೀಲಗಿರಿ ಉನ್ನತ ಪ್ರದೇಶದ ಸ್ವಾಭಾವಿಕ ಮೇರೆಗಳಾಗಿ ದಕ್ಷಿಣದಲ್ಲಿ ಭವಾನಿ ನದಿಯೂ ಉತ್ತರದಲ್ಲಿ ಭವಾನಿಯ ಉಪನದಿಯಾದ ಮೋಯಾರ್ ನದಿಯೂ ಹರಿಯುತ್ತದೆ. ನೀಲಗಿರಿಯು ಸು. 2,590 ಕಿಮೀ ಪ್ರದೇಶವನ್ನು ಆವರಿಸಿಕೊಂಡಿದ್ದು, ಸುತ್ತಲೂ ಅತ್ಯಂತ ಕಡಿದಾದ ಇಳಿಜಾರಿನಿಂದ ಕೂಡಿದೆ. ಪೂರ್ವದ ಇಳಿಜಾರು 21/2 ಯಿಂದ 3 ಕಿಮೀ ಉದ್ದವಾಗಿ ಸು. 1,829 ಮೀ ಆಳವಾಗಿದೆ. ಮೋಯಾರ್ ಕಣಿವೆ ಮೈಸೂರು ಪ್ರಸ್ಥಭೂಮಿಯಿಂದ ಈ ಬೆಟ್ಟಗಳನ್ನು ಬೇರ್ಪಡಿಸುತ್ತದೆ.

ಉತ್ತರ–ದಕ್ಷಿಣವಾಗಿ ಹಬ್ಬಿರುವ ಗಿರಿಶ್ರೇಣಿಯಿಂದ ನೀಲಗಿರಿ ಉನ್ನತ ಭೂಪ್ರದೇಶ ಸ್ವಾಭಾವಿಕವಾಗಿ ವಿಭಜಿಸಲ್ಪಟ್ಟಿದ್ದು, ವಿಭಿನ್ನವಾದ ಪೂರ್ವ ಮತ್ತು ಪಶ್ಚಿಮ ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಈ ಶ್ರೇಣಿ ವಾಯುಗುಣದ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ನೀಲಗಿರಿಯ ಶಿಖರಗಳಲ್ಲಿ ಅತ್ಯಂತ ಎತ್ತರವಾದದ್ದು ಉದಕಮಂಡಲದ ಪೂರ್ವಕ್ಕಿರುವ ದೊಡ್ಡಬೆಟ್ಟ (2,660 ಮೀ). ಇದರ ಶಿಖರಗಳಲ್ಲಿ ಮುಖ್ಯವಾದವು ಶಂಖಾಕೃತಿಯ ಸ್ನೊಡನ್ (2,529 ಮೀ), ಕ್ಲಬ್ ಬೆಟ್ಟ (2,448 ಮೀ), ಎಲ್ಕ್ ಬೆಟ್ಟ (2466 ಮೀ). ಈ ಎಲ್ಲಾ ಬೆಟ್ಟಗಳು ಉದಕಮಂಡಲ ಕಣಿವೆಯನ್ನು ಸುತ್ತುವರಿದಿವೆ. ಪೂರ್ವಕ್ಕಿರುವ ಕುಲಕಂಬೈ ಬೆಟ್ಟದಿಂದ ಭವಾನಿ ಕಣಿವೆ ಪ್ರದೇಶದ ದೃಶ್ಯ ರಮಣೀಯವಾದದ್ದು.

ನೀಲಗಿರಿ ಬೆಟ್ಟಗಳು ಚಾರ್ನೊಕೈಟ್ ಶಿಲಾ ಸಮೂಹಕ್ಕೆ ಸೇರಿದ್ದು, ಗ್ರಾನೈಟಿಕ್ ನೀಸ್ ಶಿಲೆಗಳಿಂದ ಕೂಡಿವೆ. ಇಲ್ಲಿ ಮೂರು ಸ್ತರಭಂಗಗಳಿವೆ. ನೀಲಗಿರಿ ಬೆಟ್ಟಗಳು ನಗ್ನೀಕರಣಕ್ಕೆ ತುತ್ತಾದ ಹಳೆಯ ಪ್ರಸ್ಥಭೂಮಿಯ ಅವಶೇಷಗಳೆಂದು ಹೇಳಲಾಗಿದೆ. ನೀಲಗಿರಿ ಬೆಟ್ಟಗಳಲ್ಲಿ ನೂರಾರು ಸಣ್ಣಪುಟ್ಟ ಝರಿ ಹೊಳೆ ನದಿಗಳು ಹುಟ್ಟುತ್ತವೆ. ಎರಡು ದಿಣ್ಣೆಗಳ ಮಧ್ಯದ ಹಳ್ಳದಲ್ಲಿ ಸಾಮಾನ್ಯವಾಗಿ ಒಂದು ಜಲಧಾರೆ ಇದ್ದೇ ಇರುತ್ತದೆ. ಮುಖ್ಯ ನದಿಗಳು ಮೋಯಾರ್, ಭವಾನಿ ಪೈಕಾರ ಮತ್ತು ಕ್ಯಾಲಿಕಟ್. ಮೋಯಾರ್ ನದಿಗೆ ಸಿಗೂರ್, ಗುಂಟಹಟ್ಟಿ, ಕೋಟಗಿರಿ ಎಂಬವು ಉಪನದಿಗಳು. ಸಿಗೂರ್ ಕಣಿವೆ ಪ್ರದೇಶದ ಕಲ್ಹಟ್ಟಿ ಎಂಬಲ್ಲಿ ಸಿಗೂರ್ ನದಿಗೆ 52 ಮೀ ಎತ್ತರದ ಜಲಪಾತವಿದೆ. ಭವಾನಿಗೆ ಕೋಟಗಿರಿ, ಕೂನೂರ್, ಕಟೇರಿ, ಕುಲಕಂಬೈ, ಕುಂದ ಮುಂತಾದ ಉಪನದಿಗಳಿವೆ. ನೀಲಗಿರಿಯ ಪಶ್ಚಿಮ ಭಾಗದಲ್ಲಿ ಹುಟ್ಟುವ ಪೈಕಾರ ನದಿಗೆ 55 ಮತ್ತು 61 ಮೀ ಎತ್ತರದಿಂದ ಧುಮುಕುವ ಎರಡು ಜಲಪಾತಗಳಿವೆ. ಇಲ್ಲಿಯ ನದಿಗಳು ವಿದ್ಯುದುತ್ಪಾದನೆಗೆ ಉಪಯುಕ್ತವಾಗಿವೆ. ಇಲ್ಲಿ ಪೈಕಾರ ವಿದ್ಯುದುತ್ಪಾದನ ಕೇಂದ್ರವಿದೆ (1932).

ವಾಯುಗುಣ: ನೀಲಗಿರಿ ಪ್ರದೇಶದ್ದು ಆಹ್ಲಾದಕರವಾದ ಸಮಶೀತೋಷ್ಣ ವಾಯುಗುಣ. ವರ್ಷದ ಮೊದಲ ಮೂರು ತಿಂಗಳು ಮಳೆಯಿಲ್ಲದ, ನಿರಭ್ರವಾದ ಆಕಾಶದಿಂದ ಕೂಡಿದ ಹವೆ ಇರುತ್ತದೆ. ಸರಾಸರಿ ವಾರ್ಷಿಕ ಮಳೆ 250 ಸೆಂಮೀ. ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಅಧಿಕ ಮಂಜು ಕವಿದಿರುತ್ತದೆ. ಏಪ್ರಿಲ್, ಮೇ ತಿಂಗಳುಗಳಲ್ಲಿ ಮಳೆ ಪ್ರಾರಂಭವಾಗುತ್ತದೆ.

ಸಸ್ಯ ಹಾಗೂ ಪ್ರಾಣಿಸಂಪತ್ತು: ನೀಲಗಿರಿ ಬೆಟ್ಟಗಳ ಸಸ್ಯಸಂಪತ್ತಿನಲ್ಲಿ ಹೆಚ್ಚು ವೈವಿಧ್ಯವಿದೆ. ಇದನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು; ಇಳಿಜಾರಿನ ಎಲೆ ಉದುರುವ ಕಾಡುಗಳು: ಹೆಚ್ಚು ಬೆಲೆಯುಳ್ಳ ಸಿಡಾರ್, ಸ್ಯಾಟಿನ್, ಬೀಟೆ, ಮತ್ತಿ, ತೇಗ, ಗಂಧ, ಹೊನ್ನೆ, ಮುಂತಾದವುಗಳಿಂದ ಕೂಡಿದೆ. ನಿತ್ಯಹರಿದ್ವರ್ಣದ ಕಾಡುಗಳು: ಪಶ್ಚಿಮದ 900–1,200 ಮೀ ಎತ್ತರದ ಇಳಿಜಾರು ಪ್ರದೇಶದಲ್ಲಿವೆ. ಪ್ರಸ್ಥಭೂಮಿಯ ಎತ್ತರ ಭಾಗದಲ್ಲಿ ಕಂಡುಬರುವ ಸಸ್ಯವರ್ಗ: 1200 ಮೀ ಗಿಂತ ಎತ್ತರವಾದ ಪ್ರದೇಶದಲ್ಲಿ ವಿರಳವಾಗಿ , ಕಡಿಮೆ ಎತ್ತರವುಳ್ಳ, ವಿಭಿನ್ನ ಸಸ್ಯಗಳಿವೆ. ಪ್ರಸ್ಥಭೂಮಿಯ ಹುಲ್ಲುಗಾವಲು: ವಿಶೇಷವಾಗಿ ಒರಟು ಜಾತಿಯ ಹಲವು ಬಗೆಯ ತುಂಡು ಹುಲ್ಲುಗಳು ಬೆಳೆಯುತ್ತವೆ.

ಸಮಶೀತೋಷ್ಣ ವಲಯ ಪ್ರದೇಶದಿಂದ ತಂದು ಇಲ್ಲಿ ನೆಟ್ಟ ಸಸ್ಯಗಳ ಪೈಕಿ ಸೇಬು, ಪೀಯರ್, ಪ್ಲಮ್, ಚೆರಿ, ಸ್ಟ್ರಾಬೆರಿ ಮುಂತಾದವು ಮುಖ್ಯವಾದವು. ಪ್ಲಾಂಟೇಷನ್ ಬೆಳೆಗಳು ರಬ್ಬರ್, ಕಾಫಿ, ಚಹ ಮತ್ತು ಸಿಂಕೋನ. ಅಲ್ಲದೆ ಯೂಕಲಿಪ್ಟಸ್, ಅಕೇಶಿಯ, ಸಿಲ್ವರ್ ಓಕ್, ಬಲೂ ಗಮ್, ಕಿಕಿಯು ಹುಲ್ಲು, ಚರ್ಮ ಹದ ಮಾಡಲು ಉಪಯೋಗಿಸುವ ಟ್ಯಾನಿನ್ ದೊರೆಯುವ ವ್ಯಾಟ್‌ಲ್ ಬೆಳೆಯಲಾಗುತ್ತದೆ.

ಆನೆ, ಹುಲಿ, ಕರಡಿ, ಜಿಂಕೆ, ಕಾಡೆಮ್ಮೆ, ಕಾಡುಹಂದಿ, ಕಾಡುಮೇಕೆ, ಕಾಡುನಾಯಿ, ಮೊಲ ತೋಳ ಮುಂತಾದವು ಇವೆ. ಇತ್ತೀಚೆಗೆ ಅರಣ್ಯಗಳು ನಾಶವಾಗುತ್ತಿರುವುದರಿಂದ ವನ್ಯಮೃಗಗಳು ನಶಿಸುತ್ತಿವೆ. ಇವನ್ನು ಬೇಟೆಯಾಡುವುದು ಒಂದು ಹವ್ಯಾಸವಾಗಿತ್ತು. ಈಚೆಗೆ ನಿರ್ಬಂಧ ವಿಧಿಸಲಾಗಿದೆ. ಇಲ್ಲಿ ಅನೇಕ ಜಾತಿಯ ಪಕ್ಷಿಗಳುಂಟು.

ಖನಿಜಗಳು: ಕಟ್ಟಡಗಳಿಗೆ ಉಪಯೋಗಿಸುವ ಕಲ್ಲು ಮತ್ತು ಲ್ಯಾಟರೈಟ್, ಕೊಯಲಿನ್ ಮತ್ತು ಸ್ವಲ್ಪಮಟ್ಟಿಗೆ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ.

ಜನತೆ: ನೀಲಗಿರಿಯ ಆದಿವಾಸಿಗಳಲ್ಲಿ ಬಡಗ, ಕೋಟ, ತೋಡ, ಇರುಳ ಮತ್ತು ಕುರುಂಬರು ಮುಖ್ಯರಾದವರು. ಇಲ್ಲಿ ಪಾರ್ಸಿಗಳು, ಭಾರತೀಯ ಕ್ರೈಸ್ತರು, ಹಿಂದುಗಳು ಮತ್ತು ಮುಸಲ್ಮಾನರು, ಯುರೋಪಿಯನರು, ಚೆಟ್ಟಿಯಾರ್‌ಗಳು ಇದ್ದಾರೆ. ಈಗ ಇಲ್ಲಿ ತಮಿಳರು, ಕನ್ನಡಿಗರು ಮತ್ತು ಕೇರಳೀಯರೂ ಇದ್ದಾರೆ.

ಪಟ್ಟಣಗಳು: ನೀಲಗಿರಿ ಬೆಟ್ಟಗಳ ಪ್ರಮುಖ ಪಟ್ಟಣಗಳೆಂದರೆ ಪ್ರವಾಸಿಗಳ ಸ್ವರ್ಗವೆಂದು ಪ್ರಸಿದ್ಧವಾದ ಗಿರಿಧಾಮಗಳಾದ ಉದಕಮಂಡಲ (ಊಟಿ) ಮತ್ತು ಕೂನೂರು. ಕೂನೂರಿಗೆ ಸಮೀಪದಲ್ಲಿ ವೆಲ್ಲಿಂಗ್‌ಟನ್ ದಂಡುಪ್ರದೇಶವಿದೆ. ಮೂರನೆಯ ಪ್ರಮುಖ ಪಟ್ಟಣ ಗೂಡಲೂರು. ಉತ್ತರದಲ್ಲಿ ಸಿಗೂರ್ ಘಾಟ್ ಮೂಲಕ ಮೈಸೂರಿನಿಂದಲೂ ಪಶ್ಚಿಮದಲ್ಲಿ ಗೂಡಲೂರ್ ಘಾಟ್ ಮೂಲಕ ಕೇರಳದ ವೈನಾಡಿನಿಂದಲೂ ಆಗ್ನೇಯದಲ್ಲಿ ಕೋಟಗಿರಿ ಘಾಟ್ ಮೂಲಕ ಮೆಟ್ಟುಪಾಳ್ಯಂನಿಂದಲೂ ಸಂಪರ್ಕ ಮಾರ್ಗಗಳಿವೆ. ಉದಕಮಂಡಲಕ್ಕೆ ಮೆಟ್ಟುಪಾಳ್ಯಂನಿಂದ ಕೂನೂರು ಮೂಲಕ ರೈಲುಮಾರ್ಗವಿದೆ. ಉದಕಮಂಡಲ ಹಿಂದೆ ಮದರಾಸ್ ಪ್ರಾಂತ್ಯದ ಬೇಸಗೆ ರಾಜಧಾನಿಯಾಗಿತ್ತು. ಈಗ ಇದು ಒಂದು ಪ್ರವಾಸಿ ಕೇಂದ್ರ. ಇಲ್ಲಿ ಶಾಲಾ ಕಾಲೇಜುಗಳಿವೆ. ಇದರ ಜನಸಂಖ್ಯೆ 78,000. ಇಲ್ಲಿಯ ಸುಪ್ರಸಿದ್ಧ ಸರ್ಕಾರಿ ವನಸ್ಪತಿ ಉದ್ಯಾನ 1845ರಲ್ಲಿ ಪ್ರಾರಂಭವಾಯಿತು. ಜನಸಂಖ್ಯೆ : 43297.

ಆರ್ಥಿಕತೆ: ನೀಲಗಿರಿಯ ಪ್ರಮುಖ ಉದ್ಯಮ ತೋಟಗಾರಿಕೆ. ಇಲ್ಲಿ ಕಾಫಿ, ಚಹ ತೋಟಗಳಿವೆ. ಬೆಟ್ಟದ ಇಳಿಜಾರನ್ನು ಕಡಿದು ಮೆಟ್ಟಿಲು ಮೆಟ್ಟಿಲಾಗಿ ಮಾಡಿದ ಪಾತಿಗಳಲ್ಲಿ ಆಲೂಗೆಡ್ಡೆಯನ್ನು ಬೆಳೆಯುತ್ತಾರೆ. ಇದರಿಂದ ಅಧಿಕ ಭೂಸವೆತವಾಗಿದೆ. ಈ ಪ್ರದೇಶದ ಎಲ್ಲ ಚಟುವಟಿಕೆಗಳೂ ಉದಕಮಂಡಲದ ಸುತ್ತಮುತ್ತಲಿನ ಪರಿಸರದ ಪರಿಮಿತಿಯಲ್ಲಿದೆ. ಸೋಡಾ ನೀರಿನ ತಯಾರಿಕೆ, ಚಲನಚಿತ್ರ ಫಿಲ್ಮ್ ಉತ್ಪಾದನೆ ಕಾರ್ಖಾನೆ, ಚಹ ಕೈಗಾರಿಕೆ, ನೀಲಗಿರಿ ತೈಲದ ಉತ್ಪಾದನೆ, ವೆಲ್ಲಿಂಗ್‌ಟನ್ನಿನ ಸರ್ಕಾರಿ ಕೊರ್ಡೈಟ್ ಕಾರ್ಖಾನೆ, ಪೈಕಾರ ವಿದ್ಯುತ್ ಕೇಂದ್ರ, ಹೈನುಗಾರಿಕೆ –ಇವು ಇಲ್ಲಿಯ ಕೆಲವು ಪ್ರಮುಖ ಉದ್ಯಮಗಳು. (ಕೆ.ಆರ್.)

**ನುಗು ಜಲಾಶಯ:** ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬೀರವಾಳು ಬಳಿ ನುಗು ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಜಲಾಶಯ. ಈ ಅಣೆಕಟ್ಟೆಯ ಕೆಳಗೆ ಲಕ್ಷ್ಮಣಾಪುರ ಮತ್ತು ಮುಳ್ಳೂರಿನ ಬಳಿ ಇರುವ ಅಡ್ಡಕಟ್ಟೆಗಳಿಂದ ಸಾಗುವಳಿಯಾಗುತ್ತಿರುವ 1460 ಹೆ. ಜಮೀನಿಗೆ ನೀರನ್ನು ಮೀಸಲಾಗಿ ಇಟ್ಟು, ಈ ಅಣೆಕಟ್ಟಿನ ಕೆಳಗಡೆ 8,100 ಹೆ. ಗಳಿಗಾಗಿ 226,560,000 ಘನ ಮೀ ನೀರನ್ನು ಬಳಸಲಾಗುತ್ತದೆ.

ನದೀತಳದಲ್ಲಿ 238 ಮೀ ಉದ್ದದ ಕಲ್ಲುಗಾರೆಯ ಕಟ್ಟೆಯನ್ನೂ ಬಲದಡದಲ್ಲಿ 378 ಮೀ ಉದ್ದದ ಮಣ್ಣಿನ ಏರಿಯನ್ನೂ ಕಟ್ಟಿದೆ. ಕಟ್ಟೆಯ ಎತ್ತರ ನದೀತಳದ ಮೇಲೆ 35 ಮೀ ನದಿಯಲ್ಲಿ ಸೆಕೆಂಡಿಗೆ ಬರುವ 850 ಘನ ಮೀ. ಪ್ರವಾಹವನ್ನು 3 ಮೀ ಅಗಲ, 6 ಮೀ ಎತ್ತರದ ಒಂದು ಕೆಳಮಟ್ಟದ ಬಾಗಿಲಿನಿಂದಲೂ 9 ಮೀ ಅಗಲ, 6 ಮೀ ಎತ್ತರದ ಎರಡು ಕೋಡಿಯ ಬಾಗಿಲುಗಳಿಂದಲೂ ಹೊರಕ್ಕೆ ಬಿಡುತ್ತಾರೆ.

ಬಲದಡದಲ್ಲಿ ಮೇಲಿನ ಮಟ್ಟದ ನಾಲೆ ನದೀ ತಳದ ಮೇಲೆ 15 ಮೀ ಎತ್ತರದಿಂದ ಹೊರಡುತ್ತದೆ. ಇದರ ಮೇಲೆ 36 ಮೀ ಮಟ್ಟದವರೆಗೆ ಇರುವ 138,768,000 ಕೋಟಿ ಘನ ಮೀ ನೀರನ್ನು 81,00 ಹೆ. ಗಳ ನೀರಾವರಿಗೆ ಉಪಯೋಗಿಸಿದ್ದಾರೆ. ಪ್ರಾರಂಭದಲ್ಲಿ ನಾಲೆಯ ಅಗಲ 9.75 ಮೀ, ಆಳ 2.5 ಮೀ ಈ ನಾಲೆ 88.5 ಕಿಮೀ ದೂರ ಹರಿದು ನರಸಾಂಬುಧಿ ಕೆರೆಯನ್ನು ಸೇರುವುದು. ಈ ಕೆರೆಯಿಂದ ಮತ್ತೊಂದು ಶಾಖೆಯನ್ನು ತೆಗೆದು ಈಗ ಸಾಗುವಳಿಯಾಗುತ್ತಿರುವ 485 ಹೆ. ಜೊತೆಗೆ ಇನ್ನೂ 325 ಹೆ. ಗೆ ನೀರನ್ನು ಒದಗಿಸಲಾಗಿದೆ. ಸಮುದ್ರಮಟ್ಟದಿಂದ 727 ಮೀ ಎತ್ತರದಲ್ಲಿರುವ ಕಟ್ಟೆಯ ಮೇಲಿನ ರಸ್ತೆಯ ಅಗಲ 5.5 ಮೀ. (ಎಚ್.ಸಿ.ಕೆ.)

**ನೆಡುತೋಟ ಬೇಸಾಯ:** ವಿಸ್ತಾರವಾದ ಬೇಸಾಯ ಭೂಮಿಯಲ್ಲಿ ಹಣಗಳಿಕೆಯ ಉದ್ದೇಶದಿಂದ ಯಾವುದಾದರೊಂದು ಬಹುವಾರ್ಷಿಕ ಬೆಳೆ ಬೆಳೆಯುವ ಕ್ರಮ (ಪ್ಲಾಂಟೇಷನ್ ಫಾರ್ಮಿಂಗ್). ಯುರೋಪಿಯನ್ನರು ತಮ್ಮ ವಸಾಹತುಗಳ ಕಾಲದಲ್ಲಿ ಈ ಮಾದರಿಯ ಬೇಸಾಯವನ್ನು ಪ್ರಾರಂಭಿಸಿದರು. ಮೂಲತಃ ಅಮೆರಿಕದಲ್ಲಿ ನೆಲೆಸಿದ್ದ ಬ್ರಿಟಿಷರಿಂದ ಬಳಕೆಗೆ ಬಂದಿತು. ಅನಂತರ ಯಾವುದೇ ವಿಸ್ತಾರವಾದ ಎಸ್ಟೇಟ್‌ಗಳನ್ನು ಉತ್ತರ ಅಮೆರಿಕ, ವೆಸ್ಟ್ ಇಂಡೀಸ್ ಮತ್ತು ಆಗ್ನೇಯ ಏಷ್ಯದಲ್ಲಿ ಈ ಹೆಸರಿನಿಂದ ಕರೆಯಲಾಯಿತು.

ಈ ಬೇಸಾಯ ಕ್ರಮ ಪ್ರಮುಖವಾಗಿ ಉಷ್ಣವಲಯ ಹಾಗೂ ಉಪಉಷ್ಣವಲಯ ಪ್ರದೇಶಗಳಲ್ಲಿ ಹಂಚಿಕೆಯಾಗಿದೆ. ಸಾಮಾನ್ಯವಾಗಿ ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕಂಡು ಬರುತ್ತದೆ. ಏಷ್ಯ, ಆಫ್ರಿಕ ಮತ್ತು ಅಮೆರಿಕಗಳಲ್ಲಿ ಈ ಬೇಸಾಯ ಹಂಚಿಕೆಯಾಗಿವೆ, ಉದಾಹರಣೆಗೆ ಭಾರತ ಮತ್ತು ಶ್ರೀಲಂಕದ ಚಹತೋಟಗಳು, ಮಲೇಷಿಯ, ಇಂಡೊನೇಷ್ಯ ಮತ್ತು ಶ್ರೀಲಂಕಗಳ ರಬ್ಬರ್ ತೋಟ, ಘಾನ, ನೈಜೀರಿಯಗಳ ಕೋಕೊ ತೋಟ, ಬ್ರೆಜಿಲ್ ಮತ್ತು ಕೊಲಂಬಿಯಗಳ ಕಾಫಿತೋಟ, ಕ್ಯೂಬ ಮತ್ತು ಜಾವ ದ್ವೀಪಗಳ ಕಬ್ಬು ಬೇಸಾಯ ಇತ್ಯಾದಿ.

ಈ ಬೇಸಾಯದ ಪ್ರಮುಖ ಬೆಳೆಗಳೆಂದರೆ; ರಬ್ಬರ್, ತಾಳೆ, ತೆಂಗು, ಪಾನೀಯ ಬೆಳೆಗಳಾದ ಚಹ, ಕಾಫಿ ಮತ್ತು ಕೋಕೋ. ಹಣ್ಣುಗಳಾದ ಅನಾನಸ್, ಬಾಳೆ, ಕಬ್ಬು ಚಹ ಮತ್ತು ರಬ್ಬರ್ ಬೆಳೆಗಳನ್ನು ವಿಸ್ತಾರವಾದ ಭೂ ಪ್ರದೇಶಗಳಲ್ಲೂ ಹಾಗೂ ಉಳಿದ ಬೆಳೆಗಳನ್ನು ಚಿಕ್ಕ ಭೂಹಿಡುವಳಿಗಳಲ್ಲಿ ಬೆಳೆಯಲಾಗುತ್ತದೆ.

ಬಂಡವಾಳ ಆಧಾರಿತ ಹಾಗೂ ವಿಸ್ತೃತ ಮೇಲ್ವಿಚಾರಣೆಯನ್ನು ಅವಲಂಬಿಸಿರುವ ಬೇಸಾಯ ಪದ್ಧತಿ. ಈ ಬೇಸಾಯ ಕ್ರಮದಲ್ಲಿ ಯಂತ್ರಗಳ ಬಳಕೆ ಕಡಿಮೆ. ಬದಲಾಗಿ ಅತ್ಯಧಿಕ ಋತುಮಾನಿಕ ಕೂಲಿಕಾರರನ್ನು ಅವಲಂಬಿಸಿದೆ. ಕೂಲಿಕಾರರ ಸಮಸ್ಯೆ ಆಗಾಗ್ಗೆ ತಲೆದೋರುತ್ತದೆ. ಈ ಬೇಸಾಯದ ಪ್ರದೇಶಗಳು ನಗರ ಕೇಂದ್ರಗಳಿಂದ ದೂರದಲ್ಲಿರುವುದರಿಂದ ಸಾರಿಗೆಯ ಅಭಿವೃದ್ಧಿ ಅವಶ್ಯಕ. ಇದಕ್ಕಾಗಿ ಸಾಕಷ್ಟು ಬಂಡವಾಳ ಅಗತ್ಯ. ನೆಡುತೋಟದ ಬೇಸಾಯ ಬಹುವಾರ್ಷಿಕ ಬೆಳೆಯಾಗಿದ್ದು ಕೆಲವು ಬೆಳೆಗಳು ಫಸಲನ್ನು ನೀಡಲು ಅನೇಕ ವರ್ಷಗಳನ್ನು ತೆಗೆದುಕೊಳ್ಳುತ್ತವೆ. ಉದಾಹರಣೆಗೆ ರಬ್ಬರ್ 6 ವರ್ಷ, ಕೋಕೊ 5 ವರ್ಷ, ತಾಳೆ 3 ವರ್ಷ ಇತ್ಯಾದಿ. ಈ ಅವಧಿಯಲ್ಲಿ ಬೆಳೆಗಳು ಯಾವುದೇ ಆದಾಯವನ್ನು ಒದಗಿಸುವುದಿಲ್ಲ. ಬದಲಾಗಿ ತೋಟಗಳ ನಿರ್ವಹಣೆ, ಕಾರ್ಮಿಕರ ವೇತನ, ತಾಂತ್ರಿಕ ನೆರವು ಇವುಗಳಿಗೆ ಸಾಕಷ್ಟು ಬಂಡವಾಳ ವಿನಿಯೋಗವಾಗುತ್ತದೆ.

ಕೆಲವು ರೈತರು ತಮ್ಮ ತೋಟವನ್ನು ತಾವೇ ನಿರ್ವಹಿಸುತ್ತಾರೆ. ಅನೇಕ ಎಸ್ಟೇಟ್‌ಗಳ ಮಾಲೀಕತ್ವ ವಿದೇಶಿ ಖಾಸಗಿ ವ್ಯಕ್ತಿ, ಸಂಸ್ಥೆ ಅಥವಾ ಕೇಂದ್ರೀಕೃತ ಅಧಿಕಾರ ಪಡೆದ ವ್ಯವಸ್ಥಾಪನೆಗೆ ಸೇರಿರುತ್ತದೆ. ಆದರೆ ಆ ತೋಟಗಳಲ್ಲಿ ಕೆಲಸ ನಿರ್ವಹಿಸುವವರು ಕಾರ್ಮಿಕರಾಗಿರುತ್ತಾರೆ. ಪ್ರಾರಂಭದಲ್ಲಿ ಬಹುಪಾಲು ಬೃಹತ್ ಪ್ರಮಾಣದ ತೋಟಗಳು ಯುರೋಪಿಯನ್ನರ ಒಡೆತನಕ್ಕೆ ಸೇರಿದ್ದವು. ಉದಾಹರಣೆಗೆ ಭಾರತ, ಶ್ರೀಲಂಕಗಳ ಚಹ ತೋಟಗಳು, ಮಲೇಷ್ಯದ ರಬ್ಬರ್ ತೋಟಗಳು, ವೆಸ್ಟ ಇಂಡೀಸ್ ಬಾಳೆ ಮತ್ತು ಕಬ್ಬಿನ ತೋಟಗಳು ಇತ್ಯಾದಿ. ಎರಡನೆಯ ಮಹಾಯುದ್ಧದ ಅನಂತರ ಈ ರಾಷ್ಟ್ರಗಳು ಸ್ವತಂತ್ರವಾಗುತ್ತಾ ಬಂದಂತೆ ತೋಟಗಳ ವ್ಯವಸ್ಥೆ ಮತ್ತು ಒಡೆತನ ಸ್ಥಳೀಯರ ವಶಕ್ಕೆ ಬಂದವು. ಬ್ರೆಜಿಲ್‌ನ ಕೆಲವು ಕಾಫಿ ತೋಟಗಳು ಇಂದಿಗೂ ಪೋರ್ಚುಗೀಸರ ಸ್ವಾಮ್ಯದಲ್ಲಿವೆ.

ಉಷ್ಣವಲಯದಲ್ಲಿ ಈ ಬೇಸಾಯ ಕೆಲವು ತೊಂದರೆಗಳನ್ನು ಎದುರಿಸುತ್ತಿದೆ. ಅವುಗಳೆಂದರೆ: ಚಂಡಮಾರುತಗಳು, ಬರಗಾಲ, ರೋಗ ಮತ್ತು ಕ್ರಿಮಿ – ಕೀಟಗಳ ಹಾವಳಿ, ಮಣ್ಣಿನ ಸವೆತ, ಮೇಲ್ಮಣ್ಣಿನ ತೊಳಸಲ್ಪಡುವಿಕೆ, ಕಾರ್ಮಿಕರ ಕೊರತೆ, ವಿದೇಶಿ ಮಾರುಕಟ್ಟೆಯಲ್ಲಿನ ಪೈಪೋಟಿ ಮುಂತಾದ ಸಮಸ್ಯೆಗಳಿಗೆ ಪರಿಹಾರ ಅವಶ್ಯಕ. (ಪಿ.ಎಂ.)

**ನೆದರ್ಲೆಂಡ್ ಆಂಟಿಲ್ಲೇಸ್:** ಕೆರೆಬಿಯನ್ ಸಾಗರದಲ್ಲಿನ ದ್ವೀಪ ಸಮೂಹ. ಇದನ್ನು ಹಿಂದೆ ನೆದರ್ಲೆಂಡ್ ವೆಸ್ಟ್‌ಇಂಡೀಸ್ ಅಥವಾ ಡಚ್ ಆಂಟಿಲ್ಲೇಸ್ ಎಂದು ಕರೆಯುತ್ತಿದ್ದರು. ಇಲ್ಲಿಯ ಗಾಳಿಗೆ ಅಭಿಮುಖವಾಗಿರುವ ದ್ವೀಪಗಳು ಜ್ವಾಲಾಮುಖಿಯ ಚಟುವಟಿಕೆಗಳಿಂದ ಉಗಮ ಹೊಂದಿದವುಗಳಾಗಿದ್ದು ಗಾಳಿಗೆ ವಿಮುಖವಾದ ದ್ವೀಪಗಳು ಜ್ವಾಲಾಮುಖಿ ಮತ್ತು ಹವಳ ದ್ವೀಪಗಳಾಗಿರುತ್ತವೆ. ಇವುಗಳಲ್ಲಿ ಅತ್ಯಂತವಾದ ಎತ್ತರವಾದ ಶಿಖರ ಮೌಂಟ್ ಸೀನರೀ 862 ಮೀ ಎತ್ತರವನ್ನು ಹೊಂದಿದೆ. ಇದು ಉಷ್ಣವಲಯದ ವಾಯುಗುಣವನ್ನು ಹೊಂದಿದ್ದು, ವರ್ಷದ ಎಲ್ಲಾ ಕಾಲದಲ್ಲಿಯೂ ಬೆಚ್ಚನೆಯ ವಾತಾವರಣವನ್ನು ಹೊಂದಿರುತ್ತದೆ. ಈ ದ್ವೀಪ ಸಮೂಹ ಪ್ರವಾಸೋದ್ಯಮ, ಪೆಟ್ರೋಲಿಯಂ ಸಂಸ್ಕರಣೆಗೆ ಹೆಸರುವಾಸಿಯಾಗಿದೆ. ಇದರ ರಾಜಧಾನಿ ವಿಲ್ಲೆಮ್‌ಸ್ಟಾಡ್ ಇಲ್ಲಿನ ಅತ್ಯಂತ ದೊಡ್ಡ ನಗರವೂ ಆಗಿದೆ. ಇದರ ವಿಸ್ತೀರ್ಣ ಸು. 800 ಚ.ಕಿಮೀ. ಜನಸಂಖ್ಯೆ ಸು. 1,83,000 (2005). ಇಲ್ಲಿನ ಜನಸಾಂದ್ರತೆ ಪ್ರತಿ ಚ.ಕಿಮೀ. ಗೆ 229. *

**ನೆದರ್ಲೆಂಡ್ಸ್:** ವಾಯವ್ಯ ಯುರೋಪಿನ ಉತ್ತರ ಸಾಗರತೀರದಲ್ಲಿರುವ ಸಂವಿಧಾನಬದ್ಧ ರಾಜ ಪ್ರಭುತ್ವವುಳ್ಳ ಒಂದು ಚಿಕ್ಕ ದೇಶ. ಇದು $50^0 45'$ ರಿಂದ $53^0 30'$ ಉ.ಅ. ಮತ್ತು $3^0 20'$ ರಿಂದ $7^0 0'$ ಪೂ.ರೇ. ಗಳ ನಡುವೆ ವಿಸ್ತರಿಸಿದೆ. ಉತ್ತರ ಮತ್ತು ಪಶ್ಚಿಮದಲ್ಲಿ ಉತ್ತರ ಸಮುದ್ರ, ಪೂರ್ವದಲ್ಲಿ ಜರ್ಮನಿ ಮತ್ತು ದಕ್ಷಿಣದಲ್ಲಿ ಬೆಲ್ಜಿಯಂದೇಶಗಳಿಂದ ಸುತ್ತುವರಿಯಲ್ಪಟ್ಟಿದೆ. ವಿಸ್ತೀರ್ಣ 41,863 ಚ.ಕಿಮೀ. ಜನಸಂಖ್ಯೆ 16,295000 (2005). ರಾಜಧಾನಿ ಅಮ್‌ಸ್ಟರ್ಡಾಮ್. ಜನಸಂಖ್ಯೆ 724096 (2002). ನೆದರ್ಲೆಂಡ್ಸ್ ಎಂಬ ಹೆಸರು ಡಚ್ ಭಾಷೆಯ ಶಬ್ದ ನೆಡರ್ ಎಂಬುದರಿಂದ ಬಂದದ್ದು. ನೆಡರ್ ಎಂದರೆ ತಗ್ಗು ಎಂದರ್ಥ. ಯುರೋಪಿನ ಅತ್ಯಂತ ತಗ್ಗು ದೇಶಗಳಲ್ಲಿ ಬೆಲ್ಜಿಯಂ, ಲಕ್ಸಂಬರ್ಗ್ ಮತ್ತು ನೆದರ್ಲೆಂಡ್ಸ್‌ಗಳು ಸೇರಿವೆ.

ನೆದರ್ಲೆಂಡ್ಸ್‌ನಲ್ಲಿ ಹಾಲೆಂಡ್ ಮತ್ತು ಆಂಟಿಲ್ಲಸ್ ಪ್ರಾಂತ್ಯಗಳು ಸೇರಿವೆ. ಹಾಲೆಂಡ್ ಎಂಬ ಪದ ಹಾಲ್ಟ್‌ಲೆಂಡ್‌ನಿಂದ ಉತ್ಪತ್ತಿಯಾದುದು. ಇದು ಸಮುದ್ರಮಟ್ಟಕ್ಕಿಂತ ತಗ್ಗಿನಲ್ಲಿರುವಂತಾದ್ದು. ಹಾಲೆಂಡ್ ಎಂಬ ಹೆಸರು ನೆದರ್ಲೆಂಡ್ಸ್‌ನ ಪಶ್ಚಿಮ ಭಾಗಕ್ಕೆ ಅನ್ವಯವಾಗುತ್ತದೆ. ಇಲ್ಲಿ ವಾಸಿಸುವವರು ಡಚ್ಚರು. ದೇವರು ಪ್ರಪಂಚವನ್ನು ಸೃಷ್ಟಿಸಿದರೆ, ಹಾಲೆಂಡ್‌ನ್ನು ಡಚ್ಚರು ಸೃಷ್ಟಿಸಿದರು ಎಂಬುದು ಡಚ್ಚರ ನಾಣ್ನುಡಿ. ಒಂದು ಕಾಲದಲ್ಲಿ $^2/_5$ ಭೂಪ್ರದೇಶ ಸಮುದ್ರ–ಸರೋವರಗಳಿಂದಾವರಿಸಿತ್ತು. ಡಚ್ಚರು ಪಂಪ್‌ಮೂಲಕ ನೀರು ಹೊರಹಾಕಿ. ಕಟ್ಟೆಕಟ್ಟಿ ನೆಲವನ್ನು ನೀರಿನಿಂದ ತೆರವು ಮಾಡಿದ್ದರಿಂದ ಹಾಲೆಂಡ್ ಡಚ್ಚರಿಂದ ಸೃಷ್ಟಿಯಾಯಿತೆಂದು ಪ್ರತೀತಿ. ಇದು ನೆದರ್ಲೆಂಡ್ಸಿನ ಅತ್ಯಂತ ಫಲವತ್ತಾದ ಕೃಷಿವಲಯವೂ ಹೌದು.

ಮೇಲ್ಮೈ ಲಕ್ಷಣ: ನೆದರ್ಲೆಂಡ್ಸ್‌ನ $^1/_3$ ಭಾಗ ಸಮುದ್ರಮಟ್ಟಕ್ಕೆ ತಗ್ಗಿನಲ್ಲಿದೆ. ಉಳಿದುದರಲ್ಲಿ ಶೇ 25 ಭಾಗ ಅತ್ಯಂತ ತಗ್ಗು ಪ್ರದೇಶವಾಗಿದ್ದು ಆಗಾಗ್ಗೆ ನೀರನ್ನು ಹೊರಹಾಕ ಬೇಕಾಗುವುದು. ದೇಶದ ಉತ್ತರ ಮತ್ತು ಪಶ್ಚಿಮಭಾಗಗಳು ಸಮುದ್ರ ಮಟ್ಟಕ್ಕೆ 1 ಮೀ ಎತ್ತರವಾಗಿವೆ. ದಕ್ಷಿಣ ಮತ್ತು ಪೂರ್ವ ಭಾಗಗಳು ಎತ್ತರವಾಗಿವೆ. ರಾಟರ್ಡಾಮ್‌ನಿಂದ ಉತ್ತರದ ಭಾಗ ದೇಶದಲ್ಲೇ ಅತ್ಯಂತ ತಗ್ಗಾದ, ಅಂದರೆ ಸಮುದ್ರ ಮಟ್ಟಕ್ಕೆ 6.7 ಮೀ ತಗ್ಗಿನಲ್ಲಿರುವ ಭಾಗ.

ಯುರೋಪಿನ ಅತ್ಯಂತ ಪ್ರಮುಖ ನದಿಗಳಾದ ಮ್ಯಾಸ್, ರೈನ್ ಮತ್ತು ಶೆಲ್ಡ್‌ನದಿಗಳು ನೆದರ್ಲೆಂಡ್ಸ್ ಮೂಲಕ ಹರಿದು ಉತ್ತರ ಧ್ರುವವನ್ನು ಸೇರುತ್ತವೆ. ಇವು ನೆದರ್ಲೆಂಡನ್ನು ಪ್ರಪಂಚದ ಪ್ರಮುಖ ವಾಣಿಜ್ಯ ಕೇಂದ್ರವನ್ನಾಗಿ ಮಾಡಿವೆ. ಕೃಷಿ ಮತ್ತು ಮೇವಿಗಾಗಿ ಹುಲ್ಲು, ಬೆಳೆಯುವುದಕ್ಕಾಗಿ ಅರಣ್ಯಗಳನ್ನು ವಿಸ್ತರಿಸಲಾಗಿದ್ದು, ಈಗ ನೆದರ್ಲೆಂಡ್ಸ್‌ನ ಶೇ 8 ಭಾಗ ಮಾತ್ರ ವೃಕ್ಷಗಳಿಂದಾವೃತ. ವನ್ಯ ಪ್ರಾಣಿಗಳು ವಿರಳ. ಮರಳುರಾಶಿ, ಮಣ್ಣು ಹಾಗೂ ಜವುಗುಳ್ಳ ವಡ್ಡಂಜೀ ಒಂದು ಪ್ರಮುಖ ಪಕ್ಷಿಧಾಮ. ಇಲ್ಲಿಗೆ ಅನೇಕ ಪಕ್ಷಿಗಳು ವಲಸೆ ಬರುತ್ತವೆ.

ವಾಯುಗುಣ: ನೆದರ್ಲೆಂಡ್ಸ್ ಉತ್ತರ ಸಾಗರಿಕ ವಾಯುಗುಣವನ್ನು ಹೊಂದಿದೆ. ಚಿಕ್ಕ ಗಾತ್ರ ಮತ್ತು ತಗ್ಗು ಪ್ರದೇಶವುಳ್ಳ ನೆದರ್ಲೆಂಡ್ಸ್‌ನ ವಾಯುಗುಣದ ಪ್ರಾದೇಶಿಕ ವ್ಯತ್ಯಾಸ ಗೌಣ. ತಂಪಾದ ಬೇಸಗೆ ಮತ್ತು ಸೌಮ್ಯ ಹಾಗೂ ತೇವಾಂಶವುಳ್ಳ ಚಳಿಗಾಲ. ಜುಲೈನಲ್ಲಿ ಸರಾಸರಿ ಉಷ್ಣಾಂಶ $17^0$ಸೆ. ಮತ್ತು ಜನವರಿಯಲ್ಲಿ ಅದು $3^0$ಸೆ. ಮಾತ್ರ. ವಾರ್ಷಿಕ ಸರಾಸರಿ ಮಳೆ 76 ಸೆಂಮೀ ಅದು ವರ್ಷವೆಲ್ಲ ಸಮನಾಗಿ ಹಂಚಿಕೆಯಾಗುತ್ತದೆ. ದಟ್ಟವಾದ ಮೋಡ, ಮಂಜು ಹಾಗೂ ಕಾವಳದ ಪರಿಸ್ಥಿತಿ ಸರ್ವೇಸಾಮಾನ್ಯ.

ಕೃಷಿ: ನೆದರ್ಲೆಂಡ್ಸ್‌ನ ಕೃಷಿ ಭೂಮಿ ಸಾಕಷ್ಟು ವಿಶಾಲ ಮತ್ತು ಯಾಂತ್ರಿಕೃತ ಬೇಸಾಯ ರೂಢಿಯಲ್ಲಿದೆ. ಅತ್ಯಂತ ಕಡಿಮೆ ಸಂಖ್ಯೆಯ ಕಾರ್ಮಿಕರು ಕೃಷಿಯಲ್ಲಿ ತೊಡಗಿಸಿಕೊಂಡಿರುವರು. ದೇಶದ ವಿಸ್ತೀರ್ಣದಲ್ಲಿ $^1/_5$ ಭಾಗ ಕೃಷಿಗೆ ಬಳಕೆಯಾಗಿದೆ. ಹೆಚ್ಚಿನ ಭಾಗವು ದನಕರುಗಳ ಮೇವಿಗಾಗಿ ಬಳಕೆಯಾಗುತ್ತಿದೆ. ಎರಡು ಪ್ರಮುಖ ಕರಾವಳಿ ಪ್ರಾಂತ್ಯಗಳಾದ ಫ್ರೈಸ್‌ಲೆಂಡ್ ಮತ್ತು ಉತ್ತರ ಹಾಲೆಂಡ್ ಹೈನುಗಾರಿಕೆಗೆ ಪ್ರಸಿದ್ಧ. ಇಲ್ಲಿ ಬೆಣ್ಣೆ ಮತ್ತು ಗಿಣ್ಣು ಹೆಚ್ಚು ರಫ್ತಾಗುತ್ತವೆ. ಅಷ್ಟೇ ಪ್ರಮಾಣದಲ್ಲಿ ಮಾಂಸ ಮತ್ತು ಮೊಟ್ಟೆಗಳೂ ರಫ್ತಾಗುವವು. ಹೀಗಾಗಿ ರಫ್ತುಸರಕುಗಳಲ್ಲಿ ಕೃಷಿ ಉತ್ಪನ್ನಗಳ ಮೊತ್ತ ಕಡಿಮೆ. ಜಾನುವಾರು ಕೃಷಿಯೊಂದಿಗೆ ಸಕ್ಕರೆ ಗೆಡ್ಡೆ, ಆಲೂಗೆಡ್ಡೆ ಮತ್ತು ತರಕಾರಿಗಳನ್ನು ಸಂಯುಕ್ತವಾಗಿ ಬೆಳೆಯಲಾಗುವುದು. ಪುಷ್ಪ ಕೃಷಿಯೂ ಮುಖ್ಯ ಮತ್ತು ರಫ್ತಿನ ಒಂದು ಸರಕು. ನೆದರ್ಲೆಂಡ್ಸ್‌ನ ಹೂವಿಗೆ ವಿದೇಶಗಳಲ್ಲಿ ಹೆಚ್ಚು ಬೇಡಿಕೆಯಿದೆ. ವಿಮಾನದ ಮೂಲಕ ರಫ್ತು ಮಾಡಲಾಗುವುದು.




ಮೀನುಗಾರಿಕೆ: ತೀರಪ್ರದೇಶ ಹಾಗೂ ಒಳನಾಡಿನ ಜಲರಾಶಿ ಒಳಗೊಂಡ ನೆದರ್ಲೆಂಡ್ಸ್‌ನಲ್ಲಿ ಮೀನುಗಾರಿಕೆಯೂ ರೂಢಿಯಲ್ಲಿದೆ. ಐಜು ಮ್ಯೂಡೆನ್, ಶೇವೆನಿನ್ಜೆನ್ ಮತ್ತು ಯರ್ಕ್ ಪ್ರಮುಖ ಮೀನುಗಾರಿಕೆ ಬಂದರುಗಳು. ಷೆಲ್ ಮೀನು, ಹೆರ್‍ರಿಂಗ್, ಸೀಗಡಿ ಮತ್ತು ಒಯಿಸ್ಟ ಮೀನುಗಳನ್ನು ಹಿಡಿಯಲಾಗುತ್ತದೆ. ಇವುಗಳಲ್ಲಿ ಕೆಲವು ಪ್ರಭೇದಗಳು ನಶಿಸಿ ಹೋಗುತ್ತವೆ.

ಕೈಗಾರಿಕೆ: ನೆದರ್ಲೆಂಡ್ಸ್‌ನ ಖನಿಜ ಸಂಪತ್ತು ಗೌಣ. ನೈಸರ್ಗಿಕ ಅನಿಲವನ್ನು ಹೊರತು ಪಡಿಸಿ ಉಳಿದೆಲ್ಲ ಕೈಗಾರಿಕಾ ಕಚ್ಚಾ ಪದಾರ್ಥಗಳನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಹೀಗಾಗಿ ಪ್ರಮುಖ ಕೈಗಾರಿಕಾ ಪ್ರದೇಶಗಳೆಲ್ಲ ರಾಟರ್ಡ್ಯಾಮ್ ಮತ್ತು ಆಮ್‌ಸ್ಟರ್‌ಡ್ಯಾಮ್ ಸುತ್ತಮುತ್ತ ಕೇಂದ್ರೀಕರಿಸಿವೆ. ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆ, ಆಹಾರ ಸಂಸ್ಕರಣೆ, ಲೋಹ ಮತ್ತು ಎಂಜಿನಿಯರಿಂಗ್, ರಾಸಾಯನಿಕ ವಸ್ತುಗಳ ತಯಾರಿಕೆ, ಪೆಟ್ರೋಲಿಯಂ ವಸ್ತುಗಳ ತಯಾರಿಕೆ ಪ್ರಮುಖ ಉದ್ಯಮಗಳು. ವೆಲ್ಸೆನ್‌ನಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಿದೆ. ರಾಟರ್ಡ್ಯಾಮ್ ಪ್ರಮುಖ ತೈಲಶುದ್ಧೀಕರಣ ಕೇಂದ್ರ. ಈಂಡೋವೆನ್ ಎಲೆಕ್ಟ್ರಾನಿಕ್ ಕೇಂದ್ರ ಆಹಾರ ಸಂಸ್ಕರಣ ವ್ಯಾಪಕವಾಗಿ ಹಂಚಿಕೆಯಾಗಿದೆ. ರಾಟರ್ಡ್ಯಾಮ್‌ದಲ್ಲಿ ರಾಸಾಯನಿಕ ಕೈಗಾರಿಕೆ ಮತ್ತು ಲಿಂಬರ್ಗ್‌ನಲ್ಲಿ ಪೆಟ್ರೋಕೆಮಿಕಲ್ಸ್ ಉದ್ಯಮಗಳಿವೆ. ಹೆಚ್ಚು ಕಾರ್ಮಿಕರು ಕೈಗಾರಿಕೋದ್ಯಮದಲ್ಲಿ ತೊಡಗಿರುವರು.

ಸಾರಿಗೆ ಮತ್ತು ವಾಣಿಜ್ಯ: ನೆದರ್ಲೆಂಡ್ಸ್‌ನಲ್ಲಿ ಉತ್ತಮ ರಸ್ತೆಮಾರ್ಗಗಳಿವೆ. ರೈನ್, ಮ್ಯೂಸ್ ಮತ್ತು ಇತರ ನದಿಗಳಿಂದ ಒಳನಾಡಿನ ಜಲಸಾರಿಗೆ ಸೌಲಭ್ಯವಿದ್ದು ಆಮ್‌ಸ್ಟರ್ ಡ್ಯಾಮ್‌ಗೆ ಸಂಪರ್ಕ ಕೊಂಡಿಯಂತಿವೆ. ಇದು ಯುರೋಪಿನ ಪ್ರಮುಖ ಸಂಚಾರಮಾರ್ಗ. ಸ್ವಲ್ಪ ರೈಲು ಸಾರಿಗೆಯಿದೆ. ರಾಯಲ್ ಡಚ್ ವಿಮಾನ ಮಾರ್ಗಗಳ ಸೇವೆ ಮಹತ್ವವುಳ್ಳದ್ದು. ಆಮ್‌ಸ್ಟರ್‌ಡ್ಯಾಮ್‌ನ ಶಿಪೋಲ್ ವಿಮಾನ ನಿಲ್ದಾಣ ಯುರೋಪಿನ ವಾಯು ಸಾರಿಗೆ ಒತ್ತಡವುಳ್ಳದ್ದು. ರಾಟರ್ಡ್ಯಾಮ್–ಯುರೋಪೋರ್ಟ್ ಪ್ರಮುಖ ಬಂದರು. ಅತ್ಯಧಿಕ ಪ್ರಮಾಣದ ರಫ್ತು–ಆಮದು ಈ ಬಂದರಿನ ಮೂಲಕ ಸಾಗುತ್ತದೆ. ದಿ ಹೇಗ್ ಆಡಳಿತ ಕೇಂದ್ರ ನಗರ. ಜನಸಂಖ್ಯೆ 445279 (2002).

ನೆದರ್ಲೆಂಡ್ಸ್‌ನಿಂದ ಹೆಚ್ಚು ನೈಸರ್ಗಿಕ ಅನಿಲ ರಫ್ತಾಗುತ್ತದೆ. ರಾಸಾಯನಿಕ ವಸ್ತುಗಳು, ಯಂತ್ರಗಳು ಮತ್ತು ಸಾರಿಗೆ ಉಪಕರಣ, ಹೈನು ಪದಾರ್ಥ, ಮಾಂಸ, ಹೂವು ಹಾಗೂ ಆಹಾರ ಪದಾರ್ಥ–ಇವು ಇತರ ಮುಖ್ಯ ರಫ್ತಾಗುವ ಸರಕುಗಳು. ಲೋಹ ಖನಿಜ, ಉಕ್ಕು ಮತ್ತು ಕಚ್ಚಾ ತೈಲಗಳನ್ನು ಆಮದಾಗುತ್ತವೆ. ಜರ್ಮನಿ, ಬೆಲ್ಜಿಯಂ, ಲಕ್ಸಂಬರ್ಗ್ ಹಾಗೂ ಅಮೆರಿಕದೊಂದಿಗೆ ನೆದರ್ಲೆಂಡ್ಸ್‌ನ ವ್ಯಾಪಾರ ಸಂಬಂಧವಿದೆ. ಇಲ್ಲಿನ ಹಣ ಯೂರೋ. ಶೇ. 52 ಕ್ರೈಸ್ತ ಧರ್ಮಾವಲಂಬಿಗಳು. (ಪಿ.ಎಂ.)

**ನೆಬ್ರ್ಯಾಸ್ಕ:** ಅಮೆರಿಕದ 37ನೆಯ ರಾಜ್ಯವಾಗಿ 1867 ಮಾರ್ಚ್ 21 ರಂದು ಸ್ಥಾಪಿತಗೊಂಡಿತು. ಮಟ್ಟಸವಾದ ಪ್ರದೇಶದಲ್ಲಿ ಹರಿಯುವ ಪ್ಲಾಟೆ ನದಿಯಿಂದ ಈ ರಾಜ್ಯದ ಹೆಸರು ಬಂದಿದೆ. ಸ್ಥೂಲವಾಗಿ ಉ.ಅ. $40^0$–$43^0$ ಮತ್ತು ಪೂ.ರೇ. $95^0$–

104° ನಡುವೆ ಇರುವ ಈ ರಾಜ್ಯದ ಉತ್ತರದಲ್ಲಿ ದಕ್ಷಿಣ ಡಕೋಟ, ಪೂರ್ವದಲ್ಲಿ ಐಯೋವ ಮತ್ತು ಮಿಸೋರಿ. ದಕ್ಷಿಣದಲ್ಲಿ ಕ್ಯಾನ್ಸಸ್, ನೈಋತ್ಯದಲ್ಲಿ ಕೊಲರಾಡೊ ಮತ್ತು ಪಶ್ಚಿಮದಲ್ಲಿ ವೈಯೋಮಿಂಗ್ ರಾಜ್ಯಗಳು ಇವೆ. ಇದರ ವಿಸ್ತೀರ್ಣ 2,00,359 ಚ.ಕಿಮೀ. ಜನಸಂಖ್ಯೆ 17,47,214 (2004). ರಾಜಧಾನಿ ಲಿಂಕನ್. ಜನಸಂಖ್ಯೆ 2,39,214 (2005).

ಭೂಸ್ವರೂಪ: ನೆಬ್ರ್ಯಾಸ್ಕದ ಭೂಪ್ರದೇಶ ವಾಯವ್ಯದಿಂದ ಆಗ್ನೇಯದ ಕಡೆಗೆ ಇಳಿಜಾರಾಗಿದೆ. ಇಡೀ ರಾಜ್ಯ ಮೈದಾನವಾಗಿದ್ದು ಇದರ ಉತ್ತರ ಮತ್ತು ಪೂರ್ವ ಎಲ್ಲೆಗಳ ಪ್ರದೇಶ ಮಾತ್ರ ಬೆಟ್ಟಸೀಮೆ. ರಾಜ್ಯದ ಗರಿಷ್ಠ ಎತ್ತರದ ಬಿಂದು (1,564 ಮೀ) ಕಿಂಬಲ್ ಕೌಂಟಿಯಲ್ಲಿದೆ. ಅತಿ ತಗ್ಗಿನ ಬಿಂದುವಿನ ಎತ್ತರ ಸಮುದ್ರಮಟ್ಟದಿಂದ 256 ಮೀ; ಇದು ರಿಚರ್ಡ್‌ಸನ್ ಕೌಂಟಿಯಲ್ಲಿದೆ.

ನೆಬ್ರ್ಯಾಸ್ಕ ರಾಜ್ಯ ಮಿಸ್ಸೊರಿ ನದಿಯ ಜಲಾನಯನ ಪ್ರದೇಶದಲ್ಲಿದೆ. ಈ ನದಿ ನೆಬ್ರ್ಯಾಸ್ಕದ ಪೂರ್ವದ ಅಂಚಿನಲ್ಲಿ ಹರಿಯುತ್ತದೆ. ಮಿಸ್ಸೊರಿ ಮತ್ತು ಪ್ಲ್ಯಾಟ್ ನದಿಗಳು ಓಮಹಾ ನಗರದ ದಕ್ಷಿಣದಲ್ಲಿ ಸಂಗಮಿಸುತ್ತವೆ. ಪ್ಲ್ಯಾಟ್ ನದಿ ಹಡಗುಗಳ ಸಂಚಾರಕ್ಕೆ ಸಾಕಷ್ಟು ಆಳವಾಗಿಲ್ಲ. ಅದರ ನೀರನ್ನು ವ್ಯವಸಾಯಕ್ಕೆ ಹೆಚ್ಚಾಗಿ ಬಳಸುತ್ತಾರೆ. ನೈಯಾಬ್ರಾರ, ರಿಪಬ್ಲಿಕನ್, ಬಿಗ್‌ಬ್ಲೂ, ಲಿಟಲ್ ಬ್ಲೂ, ಬಿಗ್ ನೆಮೂಹ, ಲಿಟಲ್ ನಮೂಹ ಇವು ಮಿಸ್ಸೊರಿಯ ಇತರ ಉಪನದಿಗಳು. ಪ್ಲ್ಯಾಟ್ ನದಿಯ ಉಪನದಿಗಳು ಎಲ್ಕ್‌ಹಾರ್ನ್ ಮತ್ತು ಲೂಪ್. ರಿಪಬ್ಲಿಕನ್ ಮತ್ತು ಬಿಗ್ ಬ್ಲೂ ನದಿಗಳು ರಾಜ್ಯದ ದಕ್ಷಿಣದಲ್ಲಿ ಹರಿಯುತ್ತವೆ. ವೈಯೋಮಿಂಗ್ ರಾಜ್ಯದ ಪೂರ್ವ ಮೇಲ್ನಾಡಿನಲ್ಲಿ ಹುಟ್ಟಿ ರಭಸದಿಂದ ಹರಿಯುವ ನೈಯಾಬ್ರಾರ ನದಿ ರಾಜ್ಯದ ಉತ್ತರದಲ್ಲಿ ಹರಿಯುತ್ತದೆ.

ವಾಯುಗುಣ: ನೆಬ್ರ್ಯಾಸ್ಕ ರಾಜ್ಯ ಸಮುದ್ರದಿಂದ ತುಂಬ ದೂರದಲ್ಲಿರುವುದರಿಂದ ಇಲ್ಲಿಯ ಉಷ್ಣತೆಯಲ್ಲಿ ತೀವ್ರ ಏರಿಳಿತಗಳಿರುತ್ತವೆ. ಬೇಸಗೆ ಚಳಿಗಾಲಗಳ ಅಂತರ ಅಧಿಕ. ಮಳೆ ಕಡಿಮೆ. ಜನವರಿಯಲ್ಲಿ –18° ಸೆ ನಷ್ಟು ಕಡಿಮೆ ಉಷ್ಣಾಂಶವಿರುವುದು. ಶೀತ ಆರ್ಕ್‌ಟಿಕ್ ವಾಯುರಾಶಿಯ ಪ್ರಭಾವಕ್ಕೆ ಒಳಪಡುವುದು ಇದಕ್ಕೆ ಮುಖ್ಯಕಾರಣ. ಬೇಸಿಗೆಯಲ್ಲಿ ಉಷ್ಣಾಂಶ 38° ಸೆ ನಷ್ಟು ಹೆಚ್ಚಿಗಿರುವುದು. ಮಳೆಯ ಹಂಚಿಕೆಯಲ್ಲಿ ಅಪಾರ ವ್ಯತ್ಯಾಸಗಳು ಕಂಡುಬರುತ್ತವೆ. ಆಗ್ನೇಯದಲ್ಲಿ 84 ಸೆಂಮೀ ಗಳಷ್ಟಿರುವ ಮಳೆಯು ಪಶ್ಚಿಮದಲ್ಲಿ 45 ಸೆಂಮೀ ಗಳಷ್ಟಿರುವುದು. ಇದು ಪ್ರೈರೀ ಹುಲ್ಲುಗಾವಲು ಮಾದರಿಯ ವಾಯುಗುಣಕ್ಕೆ ಸೇರಿದುದಾಗಿದೆ.

ಸಸ್ಯ–ಪ್ರಾಣಿವರ್ಗ: ನೆಬ್ರ್ಯಾಸ್ಕದ ಹುಲ್ಲುಗಾಡುಗಳಲ್ಲಿ ಹಾಗೂ ನದಿ ಕಣಿವೆಗಳ ಹಿಂದೆ ವಿವಿಧ ಬಗೆಯ ಹುಲ್ಲು ಹಾಗೂ ಎಲೆ ಉದುರುವ ಮರಗಳಿದ್ದುವು. ಈಗ ಕಾಟನ್ ವುಡ್, ಎಲ್ಮ್, ಓಕ್ ಮತ್ತು ವಾಲ್ನಟ್ ಮರಗಳು ರಾಜ್ಯದ ಪೂರ್ವಭಾಗದ ಕಡಿದಾದ ದಿಣ್ಣೆಗಳ ಮೇಲಿದೆ. ಶಂಕುಪರ್ಣಿ ಮರಗಳು ವೈಲ್ಡ್‌ಕ್ಯಾಟ್ ಪ್ರದೇಶ ಮತ್ತು ನೈಯಾಬ್ರಾದ ಕಣಿವೆಯಲ್ಲಿದೆ. ಜನ ನೆಲೆಸುವುದಕ್ಕೆ ಮುಂಚೆ ಉತ್ತರದ ಹುಲ್ಲುಗಾಡುಗಳಲ್ಲಿ ಕಾಡುಕೋಣಗಳು ಹೆಚ್ಚಾಗಿದ್ದುವು. ಕವಲುಗೊಂಬಿನ ಸಾರಂಗ, ಕಯೋಟಿ, ನರಿ, ಜ್ಯಾಕ್‌ರ್ಯಾಬಿಟ್, ಸ್ಕಂಕ್, ಬೀವರ್ ಇವು ಇತರ ಪ್ರಾಣಿಗಳು. ಪಕ್ಷಿಗಳು ಹೇರಳವಾಗಿವೆ.

ಮಣ್ಣು: ರಾಜ್ಯದ ಭೂಮಿ ವ್ಯವಸಾಯಕ್ಕೆ ಅನುಕೂಲವಾಗಿದೆ. ಆಗ್ನೇಯ ಹುಲ್ಲುಗಾಡಿನ ಭೂಮಿಯನ್ನು ಬೇಸಾಯಕ್ಕೆ ಅಳವಡಿಸಿ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ. ಪಶ್ಚಿಮದ ಭೂಮಿ ಫಲವತ್ತಾಗಿದೆ. ಅಲ್ಲಿಯ ಮಳೆ ಗೋದಿ ಬೆಳೆಗೆ ಯುಕ್ತವಾಗಿದೆ. ಸ್ಯಾಂಡ್‌ಹಿಲ್ ಪ್ರದೇಶದಲ್ಲಿ ಮಳೆ ಪರಿಮಿತ ಹಾಗೂ ಭೂಸವೆತ ಹೆಚ್ಚಾದ ಕಾರಣ ಆ ಭಾಗ ಜಾನುವಾರುಗಳ ಸಾಕಾಣಿಕೆಗೆ ಮಾತ್ರ ಉಪಯುಕ್ತ. ಅಲ್ಲಿ ಸಣ್ಣ ಸಣ್ಣ ಸರೋವರಗಳು ಹಾಗೂ ಹುಲ್ಲುಗಾವಲು ಇರುವುದರಿಂದ ಅದು ಉತ್ತರ ಅಮೆರಿಕದ ಪಶುಪಾಲನೆಯ ಕ್ಷೇತ್ರಗಳಲ್ಲಿ ಅತ್ಯಂತ ದೊಡ್ಡದೆನಿಸಿಕೊಂಡಿದೆ. ಮಿಸ್ಸೊರಿ ಮತ್ತು ಪ್ಲ್ಯಾಟ್ ನದಿ ಕಣಿವೆಗಳ ಮೆಕ್ಕಲು ಭೂಮಿಯಲ್ಲಿ ಧಾನ್ಯಗಳನ್ನು ಹಾಗೂ ಇತರ ಬೆಳೆಗಳನ್ನು ಬೆಳೆಯುತ್ತಾರೆ.

ಆರ್ಥಿಕತೆ: ಜನರ ಮುಖ್ಯ ಕಸಬು ವ್ಯವಸಾಯ ಮತ್ತು ಪಶುಪಾಲನೆ. ಬೆಳೆಗಳನ್ನು ಬೆಳೆಯಬಹುದಾದ ಅವಧಿ ವರ್ಷದಲ್ಲಿ 160 ದಿನಗಳು. ವ್ಯವಸಾಯ ಕ್ಷೇತ್ರಗಳು ಹೆಚ್ಚು ವಿಸ್ತಾರವಾಗಿದ್ದು ಮುಸುಕಿನ ಜೋಳ, ಜವೆಗೋದಿ, ಗೋದಿ, ಸೋಯಾಬೀನ್ಸ್, ಆಲೂಗಡ್ಡೆ, ಸಕ್ಕರೆ ಗೆಡ್ಡೆ, ಹುಲ್ಲು–ಇವು ಪ್ರಮುಖ ಉತ್ಪನ್ನಗಳು. ಈ ರಾಜ್ಯ ದನಗಾವಲಿಗೆ ಅತ್ಯಂತ ಹೆಸರಾಗಿದೆ.

ಪೆಟ್ರೋಲ್ ಗಣಿಗಾರಿಕೆ ಮತ್ತು ಸಂಸ್ಕರಣ, ಮಾಂಸ ಬೆಣ್ಣೆ, ಹಾಲುಪುಡಿ ಹಾಗೂ ಇತರ ಆಹಾರ ಪದಾರ್ಥಗಳ ಡಬ್ಬೀಕರಣ, ವಿದ್ಯುಚ್ಛಕ್ತಿಯ ಸಲಕರಣೆ, ಲೋಹವಸ್ತು, ಯಂತ್ರ, ರಬ್ಬರ್ ಮತ್ತು ಪ್ಲಾಸ್ಟಿಕ್ ಸರಕು, ರಾಸಾಯನಿಕ ಮತ್ತು ಸಿಮೆಂಟ್ ತಯಾರಿಕೆ ಇವು ರಾಜ್ಯದ ಮುಖ್ಯ ಕೈಗಾರಿಕೆಗಳು.

ಸಾರಿಗೆ ಸಂಪರ್ಕ: ಅಮೆರಿಕದ ಪೂರ್ವ ಹಾಗೂ ಪಶ್ಚಿಮ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಗಳು ನೆಬ್ರ್ಯಾಸ್ಕದ ಮೂಲಕ ಸಾಗಿವೆ. ಓಮಹಾ, ಲಿಂಕನ್, ಐಯೋವ ಮೊದಲಾದ ನಗರಗಳಿಗೆ ಹೋಗುವ ಒಳನಾಡ ಹೆದ್ದಾರಿಗಳಿವೆ. ರಾಜ್ಯದಲ್ಲಿ 5 ಮುಖ್ಯ ರೈಲುಮಾರ್ಗಗಳಿವೆ. ಓಮಹಾ ಪಟ್ಟಣ ಮಿಸೂರಿ ನದಿಯ ದಂಡೆಯ ಮೇಲಣ ಪ್ರಮುಖ ಬಂದರು. ಅಲ್ಲಿಂದ ಸರಕುಗಳು ಸಾಗುತ್ತವೆ. ನೆಬ್ರ್ಯಾಸ್ಕ ಇನ್ನೊಂದು ಪಟ್ಟಣ. ಒಳನಾಡಿನ ಹಾಗೂ ಅಂತರರಾಜ್ಯ ವಿಮಾನ ವ್ಯವಸ್ಥೆಯುಂಟು. (ವಿ.ಜಿ.ಕೆ.)

**ನೆಲ್ಲೂರು:** ಆಂಧ್ರ ಪ್ರದೇಶ ರಾಜ್ಯದ ಪೂರ್ವಭಾಗದಲ್ಲಿರುವ ಒಂದು ಜಿಲ್ಲೆ; ಆ ಜಿಲ್ಲೆಯ ಮುಖ್ಯ ಪಟ್ಟಣ. ಜಿಲ್ಲೆಯ ಉತ್ತರದಲ್ಲಿ ಗುಂಟೂರು ಜಿಲ್ಲೆ, ಪಶ್ಚಿಮದಲ್ಲಿ ಕರ್ನೂಲು ಮತ್ತು ಕಡಪ ಜಿಲ್ಲೆಗಳು, ವಾಯುವ್ಯದಲ್ಲಿ ಚಿತ್ತೂರು ಜಿಲ್ಲೆ, ದಕ್ಷಿಣದಲ್ಲಿ ತಮಿಳುನಾಡಿನ ಚಿಂಗಲ್‌ಪಟ್ ಜಿಲ್ಲೆ ಮತ್ತು ಪೂರ್ವದಲ್ಲಿ ಬಂಗಾಲಕೊಲ್ಲಿ ಇವೆ. ವಿಸ್ತೀರ್ಣ 13,058 ಚ. ಕಿಮೀ (ಜನಸಂಖ್ಯೆ 2668564). ಈ ಜಿಲ್ಲೆಯಲ್ಲಿರುವ ತಾಲ್ಲೂಕುಗಳು: ನೆಲ್ಲೂರು, ಗೂಡೂರ್, ಸೂಲೂರ್‌ಪೇಟೆ, ವೆಂಕಟಗಿರಿ, ರಾಪುರ್, ಆತ್ಮಕೂರ್, ಉದಯಗಿರಿ, ಕಾವಲಿ ಮತ್ತು ಕೋವೂರ್.

ಪೂರ್ವಘಟ್ಟಗಳಿಂದ ಸಮುದ್ರದವರೆಗೆ ಹಬ್ಬಿರುವ ಮೈದಾನನ್ನೊಳಗೊಂಡಿರುವ ಈ ಜಿಲ್ಲೆಯ ಕಡಲ ತೀರ ಮರಳಿನಿಂದ ಕೂಡಿದೆ. ಇಲ್ಲಿ ಆಗಾಗ ಸಮುದ್ರದ ಅಲೆಗಳ ನೀರು ನುಗ್ಗುತ್ತದೆ. ಪಶ್ಚಿಮಕ್ಕೆ ಸಾಗಿದಂತೆ ನೆಲ ಎತ್ತರವಾಗುತ್ತದೆ. ಅದರೆ ಅದು ಅಷ್ಟು ಫಲವತ್ತಾಗಿಲ್ಲ. ಜಿಲ್ಲೆಯಲ್ಲಿ ಹರಿಯುವ ನದಿಗಳು ಪೆನ್ನಾರ್, ಕೊಂಡಲೇರು, ಸ್ವರ್ಣಮುಖಿ, ಮೂಸಿ ಮತ್ತು ಮೊನ್ನೇರು. ಜಿಲ್ಲೆಯಲ್ಲಿ ಸುಮಾರು ಅರ್ಧದಷ್ಟು ನೆಲ ಸಾಗುವಳಿಗೆ ಒಳಪಟ್ಟಿದೆ. ಇದರಲ್ಲಿ ಅರ್ಧಕ್ಕೆ ನೀರಾವರಿ ಸೌಲಭ್ಯವುಂಟು. ಮುಖ್ಯ ಬೆಳೆಗಳು ರಾಗಿ, ಸಾವೆ, ಬತ್ತ, ಬೇಳೆ ಕಾಳುಗಳು ಮತ್ತು ಎಣ್ಣೆ ಬೀಜಗಳು. ನೆಲ್ಲೂರು ಜಿಲ್ಲೆಯ ದನಗಳು ಪ್ರಸಿದ್ಧವಾಗಿವೆ. ಜಿಲ್ಲೆಯಲ್ಲಿ ಅಭ್ರಕದ ಗಣಿಗಳಿವೆ. ಮಣ್ಣಿನ ತಯಾರಿಕೆಗೆ ಜಿಲ್ಲೆ ಹೆಸರಾಗಿದೆ.

ನೆಲ್ಲೂರು ಜಿಲ್ಲೆಯಿರುವ ಪ್ರದೇಶ ಹಿಂದೆ ಚೋಳ ಮತ್ತು ಪಾಂಡ್ಯ ರಾಜ್ಯಗಳಿಗೆ ಸೇರಿತ್ತು. ಅನಂತರ ಇದು ವಿಜಯನಗರದ ಭಾಗವಾಯಿತು. ಕರ್ನಾಟಕದ ನವಾಬರ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶ 1781ರಲ್ಲಿ ಬ್ರಿಟಿಷರ ವಶವಾಯಿತು. ಉದಯಗಿರಿಯಲ್ಲಿ ಒಂದು ಕೋಟೆ ಇದೆ.

ನೆಲ್ಲೂರು ಪಟ್ಟಣ ಜಿಲ್ಲೆಯ ಪೂರ್ವಭಾಗದಲ್ಲಿ ಪೆನ್ನಾರ್ ನದಿಯ ಬಲದಂಡೆಯ ಮೇಲೆ ಚೆನ್ನೈಗೆ ಉತ್ತರದಲ್ಲಿ ಸು. 152 ಕಿಮೀ ದೂರದಲ್ಲಿದೆ. ಜನಸಂಖ್ಯೆ 378947. 1866ರಲ್ಲಿ ಇಲ್ಲಿ ಪುರಸಭೆ ಸ್ಥಾಪಿತವಾಯಿತು. ವೆಂಕಟಗಿರಿಯ ರಾಜರು ಇಲ್ಲಿ 1876ರಲ್ಲಿ ಆರ್ಟ್ಸ್ ಮತ್ತು ವಿಜ್ಞಾನ ಕಾಲೇಜನ್ನೂ ಸಂಸ್ಕೃತ ಮಹಾವಿದ್ಯಾಲಯವನ್ನೂ ಸ್ಥಾಪಿಸಿದರು. ಇವು ತಿರುಪತಿಯ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯಕ್ಕೆ ಸೇರಿವೆ. ಇಲ್ಲಿ ಹಲವು ಪ್ರೌಢಶಾಲೆಗಳು ಮತ್ತು ಪ್ರಶಿಕ್ಷಣ ಶಾಲೆಗಳು ಮತ್ತು ರೋಮನ್ ಕೆಥೊಲಿಕ್ ಮಿಷನ್ನಿನ ಶಿಕ್ಷಣ ಸಂಸ್ಥೆಗಳು ಇವೆ. ಚೆನ್ನೈ–ವಿಜಯವಾಡ ಹೆದ್ದಾರಿ ಇದರ ಮೂಲಕ ಸಾಗುತ್ತದೆ. ಚೆನ್ನೈ ದೆಹಲಿಗಳಿಗೆ ರೈಲ್ವೆ ಸಂಪರ್ಕವಿದೆ. (ಬಿ.ಬಿ.ಓ.)

**ನೆಲ್ಸನ್ ನದಿ:** ಕೆನಡ ದೇಶದ ಉತ್ತರ ಮ್ಯಾನಿಟೋಬದ ಅತ್ಯಂತ ದೊಡ್ಡ ನದಿ. ವಿನ್ನಿಪೆಗ್ ಸರೋವರದಲ್ಲಿ ಉಗಮಿಸಿ ಪೋರ್ಟ್ ನೆಲ್ಸನ್ ಬಳಿಯಲ್ಲಿ ಹಡ್ಸನ್ ಕೊಲ್ಲಿಯನ್ನು ಸೇರುತ್ತದೆ. ವಿನ್ನಿಪೆಗ್ ಸರೋವರ ಸ್ಯಾಸ್‌ಕಚೆವನ್, ರಾಕೀ ಪರ್ವತದ ಪೂರ್ವದ ಮೈದಾನ, ಅಮೆರಿಕದ ಉತ್ತರ ಭಾಗದಿಂದ ಬರುವ ರೆಡ್ ರಿವರ್, ವಿನ್ನಿಪೆಗ್ ಹಾಗೂ ಇಂಗ್ಲಿಷ್ ನದಿಗಳು, ಪಶ್ಚಿಮ ಒಂಟೇರಿಯೊ ಅರಣ್ಯ ಪ್ರದೇಶ–ಇವುಗಳ ನೀರನ್ನು ಹಡ್ಸನ್ ಕೊಲ್ಲಿಗೆ ಅಂತಿಮವಾಗಿ ತಲಪಿಸುವ ನದಿ ಇದು. ಇದರ ಜಲಾನಯನ ಪ್ರದೇಶದ ಒಟ್ಟು ವಿಸ್ತೀರ್ಣ 11,50.000 ಚ.ಕಿಮೀ. ಇದು ಸಮುದ್ರಕ್ಕೆ ಸಾಗಿಸುವ ನೀರಿನ ಗಾತ್ರ ಅಗಾಧ. ಇದರ ಪಾತ್ರದ ಆಳ, ಪ್ರವಾಹದ ವೇಗ ಅಧಿಕ. 644 ಕಿಮೀ ಉದ್ದದ ಈ ನದಿಯಲ್ಲಿ ಸು. 80 ಕಿಮೀ ದೂರ ನೌಕಾಯಾನಯೋಗ್ಯವಾಗಿದೆ. ಹರಿವಿನಲ್ಲಿ ಇದು ಒಟ್ಟು 217 ಮೀ ಗಳಷ್ಟು ಕೆಳಕ್ಕೆ ಇಳಿಯುತ್ತದೆ. ಇದರಿಂದಾಗಿ ಈ ನದಿಯ ಹರಿವಿನಲ್ಲಿ ಹಲವಾರು ಇಳಿಜಾರು ಪ್ರವಾಹಗಳೂ ಜಲಪಾತಗಳೂ ಇವೆ. ಬೋ ಮತ್ತು ಸ್ಯಾಸ್‌ಕಚೆವನ್ ನದಿಗಳೂ ಸೇರಿ ಕೆನೆಡಿಯನ್ ರಾಕಿಯವರೆಗೆ ಒಟ್ಟು 2,560 ಕಿಮೀ ಜಲಮಾರ್ಗ ಆಗಿದೆ. 1612ರಲ್ಲಿ ಇಂಗ್ಲಿಷ್ ಅನ್ವೇಷಕ ಸರ್ ತಾಮಸ್ ಬಟನ್ ಈ ನದಿಯನ್ನು ಕಂಡು ಇದಕ್ಕೆ ತನ್ನ ನೌಕಾ ಯಜಮಾನನಾದ ನೆಲ್ಸನ್‌ನ ಹೆಸರನ್ನಿಟ್ಟ. ಬಹಳ ಕಾಲದಿಂದ ಇದು ತುಪ್ಪಳು ವ್ಯಾಪಾರದ ಮಾರ್ಗವಾಗಿದೆ. ಕೆನಡ ರಾಷ್ಟ್ರೀಯ ರೈಲ್ವೆಯ ಶಾಖಾ ಮಾರ್ಗವೊಂದು ಮ್ಯಾನ್‌ಹಾಟನ್‌ಗೆ ಚರ್ಚಿಲ್‌ಗೆ ಬಹುತೇಕ ಈ ನದಿಯ ಬಳಿಯಲ್ಲೇ ಸಾಗುತ್ತದೆ. ಈ ನದಿಯ ಪ್ರಮುಖ ಉಪನದಿಯಾದ ಬರ್ನ್ಟ್‌ವುಡ್‌ನ ದಡದ ಮೇಲಿರುವ ತಾಮ್ಸನ್ನಿನ ನಿಕಲ್ ಗಣಿಗೆ ಅಗತ್ಯವಾದ ವಿದ್ಯುತ್ತನ್ನು ಗ್ರಾಂಡ್ ರ್ಯಾಪಿಡ್ಸ್‌ನ ಕೆಲ್ಸಿ ಕಟ್ಟೆಯ ಬಳಿ ಉತ್ಪಾದಿಸಲಾಗುತ್ತದೆ. (ಎಸ್.ಎಸ್.ಎಂ.ವಿ.)

**ನೆವಾಡ:** ಅಮೆರಿಕದ ಪಶ್ಚಿಮಭಾಗದಲ್ಲಿರುವ ಒಂದು ರಾಜ್ಯ. ಉ.ಅ. 35°–42° ಮತ್ತು ಪ.ರೇ. 114°2′–120° ನಡುವೆ ಇದು ಹಬ್ಬಿದೆ. ರಾಜ್ಯದ ಪಶ್ಚಿಮ ಭಾಗದಲ್ಲಿರುವ ಸಿಯೆರ ನೆವಾಡ ಪರ್ವತದಿಂದಾಗಿ ಇದಕ್ಕೆ ಹೆಸರು ಬಂದಿದೆ. ಇದರ ಜನಪ್ರಿಯ

ಹೆಸರುಗಳು ಸಿಲ್ವರ್ ಸ್ಟೇಟ್ ಮತ್ತು ಸೇಜ್‍ಬ್ರಷ್ ಸ್ಟೇಟ್. ಇದು 1864ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ 36ನೆಯ ರಾಜ್ಯವಾಯಿತು. ಈ ರಾಜ್ಯದ ಉತ್ತರದಲ್ಲಿ ಆರಿಗನ್ ಮತ್ತು ಇಡಹೋ, ಪೂರ್ವದಲ್ಲಿ ಯೂಟಾ, ಆಗ್ನೇಯದಲ್ಲಿ ಆರಿಜೋನ ಮತ್ತು ಪಶ್ಚಿಮ ಹಾಗೂ ನೈರುತ್ಯದಲ್ಲಿ ಕ್ಯಾಲಿಫೋರ್ನಿಯ ರಾಜ್ಯಗಳು ಇವೆ. ಸಂಯುಕ್ತ ಸಂಸ್ಥಾನಗಳ ರಾಜ್ಯಗಳ ಪೈಕಿ ಇದು ವಿಸ್ತೀರ್ಣದಲ್ಲಿ 7ನೆಯದು ಮತ್ತು ಜನಸಂಖ್ಯೆಯಲ್ಲಿ 47ನೆಯದು. ವಿಸ್ತೀರ್ಣ 2,86,367 ಚ.ಕಿಮೀ; ಜನಸಂಖ್ಯೆ 1988,258 (2005). ರಾಜಧಾನಿ ಕಾರ್ಸನ್ ನಗರ. ಜನಸಂಖ್ಯೆ 57701 (2005).

ಭೌಗೋಳಿಕಲಕ್ಷಣ: ನೆವಾಡದ ಹೆಚ್ಚಿನ ಭಾಗ ಗ್ರೇಟ್ ಬೇಸಿನ್ ಪ್ರದೇಶದಲ್ಲಿದ್ದು, ಕಡಿದಾದ ಪರ್ವತ ಪ್ರದೇಶಗಳಿಂದಲೂ ಸಮತಲವಾದ ಕಣಿವೆಗಳಿಂದಲೂ, ಮರಳು ಗಾಡುಗಳಿಂದಲೂ ಕೂಡಿದೆ. 30ಕ್ಕೂ ಹೆಚ್ಚು ಪರ್ವತಗಳ ಸಾಲುಗಳು ರಾಜ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹಾದುಹೋಗಿವೆ. ರಾಜ್ಯದ ನೈರುತ್ಯದಲ್ಲಿರುವ ಎಸ್ಮರಾಲ್ಡ ಕೌಂಟಿಯ ಬೌಂಡರಿ ಶಿಖರ (4,005 ಮೀ) ಇಲ್ಲಿಯ ಅತ್ಯುನ್ನತ ಶಿಖರ. ಇನ್ನೊಂದು ಉನ್ನತ ಶಿಖರ ಡ್ವೀಲರ್ (3,981 ಮೀ) ಕೊಲರಾಡೊ ನದಿ ದಂಡೆಯ ಕಮ್ಮರಿ ಪ್ರದೇಶ (143 ಮೀ) ಅತ್ಯಂತ ತಗ್ಗಿನ ನೆಲ. ರಾಜ್ಯದ ಸರಾಸರಿ ಎತ್ತರ 1,676 ಮೀ ರಾಜ್ಯದ ದಕ್ಷಿಣ ಭಾಗ ಮಹಾವೆ ಮರುಭೂಮಿಯಲ್ಲಿದೆ.

ರಾಜ್ಯದ ಎಲ್ಲ ನದಿಗಳೂ ಸರೋವರಗಳನ್ನು ಅಥವಾ ಆಳವಾದ ಕುಳಿಗಳನ್ನು ಸೇರುತ್ತವೆ. ನೆವಾಡದ ಅತ್ಯಂತ ದೊಡ್ಡ ನದಿ ಹಂಬೋಲ್ಟ್. 464 ಕಿಮೀ ಉದ್ದ ಈ ನದಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಹಂಬೋಲ್ಟ್ ಸರೋವರವನ್ನು ಸೇರುತ್ತದೆ. ಇತರ ಪ್ರಮುಖ ನದಿಗಳು ಟ್ರಕೀ, ಕಾರ್ಸನ್ ಮತ್ತು ವಾಕರ್. ಇವು ನೀರಾವರಿಗೆ ಸಹಾಯಕವಾಗಿವೆ. ದಕ್ಷಿಣ ನೆವಾಡದಲ್ಲಿರುವ ಮಡೀ ಮತ್ತು ವರ್ಜಿನ್ ನದಿಗಳು ಕಾಲರ್‍ಯಾಡೋ ನದೀವ್ಯೂಹಕ್ಕೆ ಸೇರಿವೆ. ರಾಜ್ಯದಲ್ಲಿ ಅನೇಕ ಸುಂದರ ಸರೋವರಗಳಿವೆ. ಇವುಗಳಲ್ಲಿ ಅತ್ಯಂತ ದೊಡ್ಡದು ಪಿರಮಿಡ್. ಇದು 48 ಕಿಮೀ ಉದ್ದ ಮತ್ತು 6 ರಿಂದ 21 ಕಿಮೀ ಅಗಲವಿದೆ. ಇದರಲ್ಲಿಯ ಪಿರಮಿಡ್ ಆಕಾರದ ದ್ವೀಪಗಳನ್ನು ಕಂಡು ಜಾನ್ ಸಿ. ಫ್ರಿಮಾಂಟ್ ಇದಕ್ಕೆ ಈ ಹೆಸರು ನೀಡಿದ. ಇದೂ ವಿನಮಕ ಮತ್ತು ವಾಕರ್ ಸರೋವರಗಳೂ ಪ್ಲೀಸ್ಟೋಸೀನ್ ಯುಗದಲ್ಲಿದ್ದ, 21,504 ಚ.ಕಿಮೀ ವಿಸ್ತೀರ್ಣವಾಗಿದ್ದ ಹಾಗೂ ಸು. 1,15,200 ಚ. ಕಿಮೀ ಜಲಾನಯನ ಪ್ರದೇಶದಿಂದ ಕೂಡಿದ್ದ ಲಾಹೊನ್ಟನ್ ಎಂಬ ಬೃಹತ್ ಸರೋವರದ ಅವಶೇಷಗಳಾಗಿವೆ. ಕ್ಯಾಲಿಫೋರ್ನಿಯ-ನೆವಾಡ ಗಡಿಯಲ್ಲಿರುವ ಟಾಹೋ ಸರೋವರ ನಿರ್ಮಲವಾಗಿ ಮನೋಹರವಾಗಿದೆ. ಇದರ 1/3ಭಾಗ ನೆವಾಡ ರಾಜ್ಯದಲ್ಲಿದೆ. ಇಲ್ಲಿಯ ಮತ್ತೊಂದು ಪ್ರಮುಖ ಸರೋವರ ಹೂವರ್ ಕಟ್ಟೆಯ ಹಿಂಭಾಗದಲ್ಲಿ 187 ಕಿಮೀ ದೂರಕ್ಕೆ ವ್ಯಾಪಿಸಿರುವ ಮೀಡ್, ರಾಜ್ಯದಲ್ಲಿ ಇಷ್ಟು ಅಗಾಧ ಜಲಸಂಪತ್ತಿದ್ದರೂ ರಾಜ್ಯದ ವಿಸ್ತೀರ್ಣಕ್ಕೆ ಹೋಲಿಸಿದರೆ ಇದರ ಜಲಾವೃತ ಪ್ರದೇಶ ಕಡಿಮೆಯೆಂದೇ ಹೇಳಬಹುದು. ನಗರಗಳು, ಕೈಗಾರಿಕೆಗಳು ಹಾಗೂ ವ್ಯವಸಾಯ ಕ್ಷೇತ್ರದ ಅಭಿವೃದ್ಧಿಗಾಗಿ ನೀರಿನ ಬಳಕೆ ಹೆಚ್ಚುತ್ತಿರುವುದರಿಂದ ಇಲ್ಲಿ ನೀರಿನ ಅಭಾವ ತಲೆದೋರುತ್ತಿದೆ.

ವಾಯುಗುಣ: ಪಶ್ಚಿಮ ಗಡಿಯುದ್ದಕ್ಕೂ ಹಬ್ಬಿರುವ ಪರ್ವತ ಶ್ರೇಣಿಗಳು ಪೆಸಿಫಿಕ್ ಸಾಗರದಲ್ಲಿ ಹುಟ್ಟುವ ಮೋಡಗಳನ್ನು ನೆವಾಡಕ್ಕೆ ಬರುವ ಮೊದಲೇ ತಡೆದುಬಿಡುವುದರಿಂದ ರಾಜ್ಯದ ವಾಯುಗುಣ ಅರೆ-ಶುಷ್ಕವಾಗಿದೆ. ರಾಜ್ಯದ ಆಗ್ನೇಯ ಭಾಗ ಮತ್ತು ಕಾರ್ಸನ್ ಸಿಂಕ್ ಪ್ರದೇಶ ಅತ್ಯಂತ ಶುಷ್ಕವಾದವು. ಇಲ್ಲಿ ವಾರ್ಷಿಕ ಮಳೆಯ ಪರಿಮಾಣ 10 ಸೆಂಮೀ ಗಳಿಗೂ ಕಡಿಮೆ. ಈಶಾನ್ಯಭಾಗದಲ್ಲಿ ಮಳೆಯ ವಾರ್ಷಿಕ ಸರಾಸರಿ 10 – 23 ಸೆಂಮೀ ಇದ್ದರೆ ವಾಯುವ್ಯ ಭಾಗದ ಪರ್ವತಗಳಲ್ಲಿ 610 ಸೆಂಮೀ ಇಲ್ಲಿಯ ಉಷ್ಣತೆಯೂ ವ್ಯತ್ಯಾಸವಾಗುತ್ತದೆ. ಉತ್ತರದಲ್ಲಿ ಸರಾಸರಿ ಉಷ್ಣತೆ ಜುಲೈಯಲ್ಲಿ $21^0$ಸೆ ಮತ್ತು ಜನವರಿಯಲ್ಲಿ $-4^0$ಸೆ ದಕ್ಷಿಣ ಭಾಗದಲ್ಲಿ ಸರಾಸರಿ ಉಷ್ಣತೆ ಜುಲೈಯಲ್ಲಿ $30^0$ಸೆ ಮತ್ತು ಜನವರಿಯಲ್ಲಿ $4.5^0$ಸೆ ರಾಜ್ಯದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಚಳಿಗಾಲ ತೀವ್ರರೂಪದ್ದೂ ದೀರ್ಘ ಕಾಲದ್ದೂ ಆಗಿದ್ದು ಬೇಸಗೆ ಅಲ್ಪಕಾಲದ್ದೂ ಸೌಮ್ಯ ರೂಪದ್ದೂ ಆಗಿರುತ್ತವೆ.

ಸಸ್ಯಪ್ರಾಣಿವರ್ಗ: ಇಲ್ಲಿಯ ಮರಳುಗಾಡು ಪ್ರದೇಶದಲ್ಲಿ ಮೆಸ್‍ಕ್ವೈಟ್, ಕ್ರಿಯೋಸೋಟ್ ಗ್ರೀಸ್‍ವುಡ್, ಯಕ್ಕ ಮತ್ತು 30ಕ್ಕೂ ಹೆಚ್ಚು ಬಗೆಯ ಕ್ಯಾಕ್ಟಸ್ ಗಿಡಗಳು ಬೆಳೆಯುತ್ತವೆ. ಎತ್ತರದ ಪ್ರದೇಶಗಳಲ್ಲಿ ಸೇಜ್‍ಬ್ರಷ್ ಮತ್ತು ಜೋಷ್ವಾಮರಗಳು ಬೆಳೆಯುತ್ತವೆ. ಪರ್ವತಗಳ ಮೇಲಿನ ಕಾಡುಗಳಲ್ಲಿರುವ ಮರಗಳು ತೈಲಪುರ್‍ನಿ, ತಾಳೀಶಪತ್ರೆ, ಸ್ಪ್ರೂಸ್, ಜುನಿಪರ್, ಮಹಾಗನಿ ಮುಂತಾದವು. ರಾಜ್ಯದಲ್ಲಿ ವಿಶೇಷವಾಗಿ ವಸಂತಕಾಲದಲ್ಲಿ 2,000ಕ್ಕೂ ಹೆಚ್ಚು ಬಗೆಯ ಕಾಡು ಹೂಗಳನ್ನು ಕಾಣಬಹುದು.

ರಾಜ್ಯದಲ್ಲಿ ಲಾಂಗ್‍ಹಾರ್ನ್ ಜಾತಿಯ ಕುರಿಗಳು, ಅನೇಕ ಬಗೆಯ ಜಿಂಕೆಗಳು, ಮೊಲಗಳು ಹೇರಳವಾಗಿವೆ. ಮರಳುಗಾಡು ಪ್ರದೇಶಗಳಲ್ಲಿ ಹಲ್ಲಿಯ ಜಾತಿಗೆ ಸೇರಿದ ಗೆಕೋ, ಕಾಡುಕಪ್ಪೆ, ಆಮೆ ಮತ್ತು ವಿಷಸರ್ಪಗಳಿವೆ. ಇಲ್ಲಿ ಉಷ್ಣತೆಯ ತೀವ್ರ ವೈಪರೀತ್ಯಕ್ಕೂ ಶುಷ್ಕ ಹವೆಗೂ ಹೊಂದಿಕೊಳ್ಳುವಂಥ ಪ್ರಾಣಿಗಳೇ ಇವೆ. ಸ್ಥಿರವಾಗಿ ನೆಲಸಿದ ಪಕ್ಷಿಗಳು ಹೆಚ್ಚು ಸಂಖ್ಯೆಯಲ್ಲಿಲ್ಲದಿದ್ದರೂ ವಲಸೆ ಬರುವ ಪಕ್ಷಿ ಸಂಕುಲಗಳು ಹೇರಳ. ನದಿಗಳು ಮತ್ತು ಸರೋವರಗಳಲ್ಲಿ ಅನೇಕ ಬಗೆಯ ಮೀನುಗಳೂ ಇತರ ಜಲಚರಗಳೂ ಇವೆ.

ಆಡಳಿತ: ಇಲ್ಲಿಯ ಆಡಳಿತವ್ಯವಸ್ಥೆ 1864ರಲ್ಲಿ ಅಂಗೀಕೃತವಾದ ಸಂವಿಧಾನಕ್ಕೆ ಅನುಗುಣವಾಗಿದೆ. ಸಂವಿಧಾನವನ್ನು 1864ರಿಂದ ಈಚೆಗೆ 60ಕ್ಕೂ ಹೆಚ್ಚು ಬಾರಿ ತಿದ್ದುಪಡಿ ಮಾಡಲಾಗಿದೆ. ಇಲ್ಲಿಯ ಕಾರ್ಯಾಂಗದ ಪ್ರಾಧಿಕಾರಿ ಗವರ್ನರ್. ಇವನನ್ನು ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆಯ ಮೂಲಕ ಆರಿಸಲಾಗುತ್ತದೆ. ಸೆನೆಟಿನಲ್ಲಿ 20 ಸದಸ್ಯರಿರುತ್ತಾರೆ. ಇವರು ನಾಲ್ಕು ವರ್ಷಗಳಿಗೊಮ್ಮೆ ಆಯ್ಕೆಯಾಗುತ್ತಾರೆ. ಪ್ರತಿನಿಧಿಸಭೆಯಲ್ಲಿ 40 ಜನ ಸದಸ್ಯರಿರುತ್ತಾರೆ. ಅವರಲ್ಲಿ ಅರ್ಧದಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಾರೆ. ರಾಜ್ಯದಲ್ಲಿ 16 ಕೌಂಟಿಗಳಿವೆ. ಅವನ್ನು 58 ಉಪಕೌಂಟಿಗಳಾಗಿ ವಿಭಾಗ ಮಾಡಲಾಗಿದೆ. ಇವಲ್ಲದೆ 16 ನಗರಗಳೂ ಒಂದು ನಗರ ಕೌಂಟಿಯೂ (ಕಾರ್ಸನ್) ಇವೆ.

ಜನಸಂಖ್ಯೆ: 1960ರಿಂದ 1970ರ ವರೆಗಿನ ಹತ್ತು ವರ್ಷಗಳಲ್ಲಿ ರಾಜ್ಯದ ಜನಸಂಖ್ಯೆ ಶೇ. 71.3 ರಷ್ಟು ಹೆಚ್ಚಿತು. ಇಲ್ಲಿಯ ಜನರಲ್ಲಿ ಶೇ. 80.9 ಮಂದಿ ನಗರವಾಸಿಗಳು. ಇತರ ಪ್ರಮುಖ ನಗರಗಳು: ಲಾಸ್ ವೇಗಸ್ (1,25,787), ರೀನೋ (72,860), ನಾರ್ತ್ ಲಾಸ್ ವೇಗಸ್ (36,216), ಸ್ಪಾರ್ಕ್ಸ್ (24,187) ಮತ್ತು ಹೆಂಡರ್‍ಸನ್ (16,395). 1970ರಲ್ಲಿ ಕ್ಲಾರ್ಕ್ ಮತ್ತು ವಾಷೋ ಇವೆರಡು ಕೌಂಟಿಗಳಲ್ಲೇ ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 80ರಷ್ಟು ಜನ ವಾಸವಾಗಿದ್ದರು.

ವಿದ್ಯಾಭ್ಯಾಸ: ಇಲ್ಲಿಯ ಸಾರ್ವಜನಿಕ ಶಾಲೆಗಳ ಆಡಳಿತವನ್ನು 8 ಜನ ಚುನಾಯಿತ ಸದಸ್ಯರಿರುವ ವಿದ್ಯಾಭ್ಯಾಸ ಮಂಡಲಿ ನಡೆಸುತ್ತದೆ. 7 ರಿಂದ 17 ವರ್ಷಗಳೊಳಗಿನ ಮಕ್ಕಳಿಗೆ ಶಾಲೆಯಲ್ಲಿ ಹಾಜರಾತಿ ಕಡ್ಡಾಯ. 1973–74ರಲ್ಲಿ ರಾಜ್ಯದಲ್ಲಿ 171 ಪ್ರಾಥಮಿಕ ಶಾಲೆಗಳೂ 74 ಸೆಕೆಂಡರಿ ಶಾಲೆಗಳೂ ಇದ್ದುವು. ನೆವಾಡ ವಿಶ್ವವಿದ್ಯಾಲಯ 1874ರಲ್ಲಿ ಎಲ್ಕೋದಲ್ಲಿ ಸ್ಥಾಪಿತವಾಯಿತು. 12 ವರ್ಷಗಳ ಅನಂತರ ಅದನ್ನು ರೀನೋಗೆ ಸ್ಥಳಾಂತರಿಸಲಾಯಿತು. 1951ರಲ್ಲಿ ಅದರ ವಿಸ್ತರಣ ವಿಭಾಗವೊಂದನ್ನು ಲಾಸ್ ವೇಗಸ್‍ನಲ್ಲಿ ಸ್ಥಾಪಿಸಲಾಯಿತು. ಈಗ ಅದು ಸ್ವತಂತ್ರ ವಿಶ್ವವಿದ್ಯಾಲಯವಾಗಿದೆ. ಇಲ್ಲಿ ಮರುಭೂಮಿ ಸಂಶೋಧನ ಸಂಸ್ಥೆ ಮತ್ತು ವ್ಯಾವಸಾಯಿಕ ಪ್ರಾಯೋಗಿಕ ಕೇಂದ್ರಗಳು ಸಂಶೋಧನೆ ನಡೆಸುತ್ತಿವೆ. ರಾಜ್ಯದಲ್ಲಿ 43 ಗ್ರಂಥಾಲಯಗಳೂ 5 ಪ್ರಾಚ್ಯವಸ್ತು ಸಂಗ್ರಹಾಲಯಗಳೂ ಇವೆ.

ಕೃಷಿ ಮತ್ತು ಅರಣ್ಯ: ನೆವಾಡದಲ್ಲಿ ವ್ಯವಸಾಯ ಹೆಚ್ಚಾಗಿ ನೀರಾವರಿಯನ್ನ ಅವಲಂಬಿಸಿದೆ. ಇಲ್ಲಿ ಪಶುಪಾಲನೆಯೂ ಒಂದು ಪ್ರಮುಖ ಉದ್ಯೋಗ. ಎಲ್ಕೋ, ಹಂಬೋಲ್ಟ್ ಮತ್ತು ಲ್ಯಾಂಡರ್ ಕೌಂಟಿಗಳಲ್ಲಿ ದೊಡ್ಡ ಪಶುಪಾಲನ ಕ್ಷೇತ್ರಗಳಿವೆ. ನೆವಾಡದ ಒಟ್ಟು ಭಾಗದಲ್ಲಿ ಶೇ. 17ರಷ್ಟು (ಸು. 485633 ಹೆ.) ಎಕರೆಗಳಷ್ಟು ಪ್ರದೇಶದಲ್ಲಿ ಅರಣ್ಯಗಳಿವೆ. ಇದರಲ್ಲಿ 202347 ಹೆ. ಹೆಚ್ಚು ಪ್ರದೇಶ ರಾಷ್ಟ್ರೀಯ ಅರಣ್ಯ. ಇಲ್ಲಿ ಖಾಸಗಿ ಅರಣ್ಯಗಳೂ ಉಂಟು. ಅವು ಸಣ್ಣ ಗಾತ್ರದ ಮರದ ಕೈಗಾರಿಕೆಗಳಿಗೆ ಆಧಾರವಾಗಿದೆ.

ಗಣಿಗಾರಿಕೆ, ಕೈಗಾರಿಕೆ: ನೆವಾಡ ರಾಜ್ಯ ಅಮೆರಿಕದ ಅತ್ಯಂತ ವಿಪುಲ ಖನಿಜ ಸಂಪದ್ಯುಕ್ತ ಪ್ರದೇಶಗಳಲ್ಲೊಂದು. ಹೈಟ್‍ಪೈನ್ ಕೌಂಟಿಯಲ್ಲಿನ ರೂತ್ ಮೈನ್‍ನಲ್ಲಿರುವ ತೆರೆದ ಗುಂಡಿಯ ತಾಮ್ರದ ಗಣಿ ಪ್ರಪಂಚದಲ್ಲೇ ಅತ್ಯಂತ ದೊಡ್ಡದು. ಈ ರಾಜ್ಯದಲ್ಲಿ ತಾಮ್ರವೇ ಅಲ್ಲದೆ ಚಿನ್ನ, ಬೆಳ್ಳಿ, ಮ್ಯಾಂಗನೀಸ್, ಟಂಗ್‍ಸ್ಟನ್, ಆಂಟಿಮನಿ, ಪಾದರಸ ಮತ್ತು ಕಬ್ಬಿಣದ ನಿಕ್ಷೇಪಗಳು ವಿಪುಲವಾಗಿವೆ.

1960ರ ದಶಕದಲ್ಲಿ ಕೈಗಾರಿಕೆಗಳು ಇಲ್ಲಿ ವಿಶೇಷವಾಗಿ ಅಭಿವೃದ್ಧಿ ಹೊಂದಿದವು. ಇದರಿಂದ ಉದ್ಯೋಗಾವಕಾಶ ಸು. ಶೇ. 60 ರಷ್ಟು ಹೆಚ್ಚಾಯಿತು. ದೊಡ್ಡ ಕೈಗಾರಿಕೆಗಳು ಕ್ಲಾರ್ಕ್ ಮತ್ತು ವಾಷೋ ಕೌಂಟಿಗಳಲ್ಲಿವೆ. ಇಲ್ಲಿಯ ಉದ್ಯಮಗಳಲ್ಲಿ ಮುಖ್ಯವಾದವು ಮೂಲಲೋಹಗಳು, ಸಿಮೆಂಟ್, ಕಲ್ಲು, ಗಾಜು, ಆಹಾರಪದಾರ್ಥ, ತಯಾರಾದ ಲೋಹಗಳು ಮತ್ತು ಯಂತ್ರಗಳು, ಮುದ್ರಣ ಮತ್ತು ಪ್ರಕಾಶನ. ರಾಜ್ಯದ ಅತ್ಯಂತ ದೊಡ್ಡ ಕೈಗಾರಿಕಾಕೇಂದ್ರ ಹೆಂಡರ್‍ಸನ್. ನೆವಾಡದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ 1955–1966ರಲ್ಲಿ ದ್ವಿಗುಣಗೊಂಡಿತು. ಹೂವರ್ ಮತ್ತು ಡೇವಿಸ್ ಕಟ್ಟೆಗಳಲ್ಲಿ ದೊಡ್ಡ ವಿದ್ಯುದುತ್ಪಾದನ ಕೇಂದ್ರಗಳಿಗೆ. ಇಷ್ಟಾದರೂ ವಿದ್ಯುಚ್ಛಕ್ತಿಯ ಅಭಾವವುಂಟು. ಬಾನ್‍ವಿಲ್ ಕಟ್ಟೆಯಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯನ್ನು ವಾಯುವ್ಯ ನೆವಾಡದ ಉಪಯೋಗಕ್ಕೆ ಆಮದು ಮಾಡಿಕೊಳ್ಳಲಾಗುತ್ತದೆ. ಇಲ್ಲಿ ವಿದ್ಯುಚ್ಛಕ್ತಿ ಅಗ್ಗವಾಗಿರುವುದರಿಂದ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ದೊರಕಿದೆ. 1950ರಲ್ಲಿ ಸಂಯುಕ್ತ ಸಂಸ್ಥಾನಗಳ ಪರಮಾಣು ಆಯೋಗ ನೆವಾಡದಲ್ಲಿ ಪರೀಕ್ಷಾಕೇಂದ್ರವನ್ನು ಸ್ಥಾಪಿಸಿದ್ದರಿಂದ ರಾಜ್ಯದಲ್ಲಿ ಉದ್ಯೋಗ ಆಕಾಶಗಳು ಹೆಚ್ಚಿವೆ. ತಾಂತ್ರಿಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ಲಾಸ್‍ವೇಗಸ್ ಪ್ರದೇಶದಲ್ಲಿ ಏರೋಸ್ಪೇಸ್, ಪರಿಸರ ರಕ್ಷಣೆ ಮತ್ತು ಎಲೆಕ್ಟ್ರಾನಿಕ್ಸ್ ಸಂಶೋಧನ ಕೇಂದ್ರಗಳೂ ಕೈಗಾರಿಕೆಗಳೂ ಸ್ಥಾಪಿತವಾಗಿವೆ. ಇದು ಭೂಗರ್ಭ ಪರಮಾಣು ಸ್ಫೋಟದ ಪ್ರಮುಖ ಕೇಂದ್ರ. ಇಲ್ಲಿ ಪರಮಾಣು ಕ್ಷಿಪಣಿ ಅಭಿವೃದ್ಧಿ ಕೇಂದ್ರವೂ ಇದೆ.

ಸಾರಿಗೆ: ನೆವಾಡ ಭೌಗೋಳಿಕವಾಗಿ ಆಯಕಟ್ಟಿನ ಸ್ಥಳದಲ್ಲಿರುವುದರಿಂದ ಮತ್ತು ಈ ರಾಜ್ಯದ ಮೂಲಕ ಸಾಗುವ ವಸ್ತುಗಳಿಗೆ ಸುಂಕದ ವಿನಾಯಿತಿ ಇರುವುದರಿಂದ ದಾಸ್ತಾನುಗಾರಿಕೆ ಮತ್ತು ಸಾರಿಗೆ ಉದ್ಯಮಗಳು ಚೆನ್ನಾಗಿ ಅಭಿವೃದ್ಧಿ ಹೊಂದಿವೆ. ಇಲ್ಲಿ 7 ರಾಷ್ಟ್ರೀಯ ವಿಮಾನ ಸಾರಿಗೆ ಸಂಸ್ಥೆಗಳೂ ಅನೇಕ ಪೂರಕ ವ್ಯವಸ್ಥೆಗಳೂ ಇವೆ. ರಾಜ್ಯದಲ್ಲಿ 81 ವಿಮಾನ ನಿಲ್ದಾಣಗಳುಂಟು. ರಾಜ್ಯದ ಮೂಲಕ 3 ಪ್ರಮುಖ ರೈಲುಮಾರ್ಗಗಳು ಹಾದುಹೋಗುತ್ತವೆ. ಇವಲ್ಲದೆ ಅನೇಕ ಶಾಖಾಮಾರ್ಗಗಳೂ ಉಂಟು. ಅಂತಾರಾಜ್ಯ ಹೆದ್ದಾರಿಗಳೂ ಪೌರ ಮತ್ತು ಗ್ರಾಮೀಣ ರಸ್ತೆಗಳ ಜಾಲವೂ ಇವೆ. ಇಲ್ಲಿಯ ಪ್ರಮುಖ ಸಾರಿಗೆ ಮತ್ತು ವ್ಯಾಪಾರಕೇಂದ್ರಗಳು ರೀನೋ (ವಾಯುವ್ಯ ಮತ್ತು ಈಶಾನ್ಯಭಾಗ), ಎಲ್ಕೋ, ಈಲೀ (ಈಶಾನ್ಯಭಾಗ), ಲಾಸ್ ವೇಗಸ್ (ದಕ್ಷಿಣ). (ಜಿ.ಎಸ್.ಎಸ್.)

**ನೇಗ್ರೋ:** ದಕ್ಷಿಣ ಅಮೇರಿಕದ ಅಮೆಜ಼ಾನ್ ನದಿಯ ಪ್ರಮುಖ ಉಪನದಿ. ಇದರ ಪ್ರಮುಖ ಉಪನದಿಗಳು ವ್ಯಾಯುಪೇಸ್ ಮತ್ತು ಗೀಯಾನ. ಇವು ಕೊಲಂಬಿಯದ ದಟ್ಟವಾದ ಕಾಡುಗಳಲ್ಲಿ ಉಗಮಿಸುತ್ತವೆ. ಗೀಯಾನ ಪೂರ್ವಾಭಿಮುಖವಾಗಿ ಹರಿದು ಈಶಾನ್ಯ ಮತ್ತು ಆಗ್ನೇಯಾಭಿಮುಖವಾಗಿ ಬಾಗಿ, ಕೊಲಂಬಿಯ ಮತ್ತು ವೆನಿಜುವೆಲ ದೇಶಗಳ ಗಡಿಯಾಗಿ ಪರಿಣಮಿಸಿ, ಸ್ಯಾನ್ ಕಾರ್ಲಸ್ ಡೇ ರೀಯೊ ನೇಗ್ರೋ ಬಳಿ ಬ್ರ್ಯಾಜ಼ೋ ಕಾಸಿಕ್ವಾರೀ ನದಿಯನ್ನು ಕೂಡಿಕೊಂಡ ಮೇಲೆ ರೀಯೊ ನೇಗ್ರೋ ಎಂಬ ಹೆಸರಿನಿಂದ ಬ್ರೆಜ಼ಿಲನ್ನು ಪ್ರವೇಶಿಸುತ್ತದೆ. ಅನಂತರ ಇದು ಆಗ್ನೇಯಾಭಿಮುಖವಾಗಿ ಹರಿಯುವಾಗ ಬ್ರಾಂಕೋ ಮುಂತಾದ ಹಲವು ಉಪನದಿಗಳು ಸೇರಿಕೊಳ್ಳುತ್ತವೆ. ಮನೌಸ್ ನಗರದ ಬಳಿ ಇದು ಸೂಲೀಮೋಯಿಷ್ ನದಿಯೊಂದಿಗೆ ಸಂಗಮಿಸಿ ಅಮೆಜ಼ಾನ್ ನದಿಯಾಗಿ ಪರಿಣಮಿಸುತ್ತದೆ. ಈ ನದಿಯ ಉದ್ದ 2,000 ಕಿಮೀ. ಬ್ರೆಜ಼ಿಲ್‌ನಲ್ಲಿ ಇದರ ಉದ್ದ ಸು. 1,360 ಕಿಮೀ. ಈ ನದಿಯ ತೀರದಲ್ಲಿ ಜನವಸತಿ ವಿರಳವಾಗಿದ್ದರೂ ಇದು ಪ್ರಮುಖ ಸಾರಿಗೆ ಮಾರ್ಗವಾಗಿದೆ.

ಈ ಹೆಸರಿನ ಇನ್ನೊಂದು ನದಿ ದಕ್ಷಿಣ ಅರ್ಜೆಂಟೈನಾದಲ್ಲಿದೆ. ಇದನ್ನು ರೀಯೊ ನೇಗ್ರೋ ಎಂದು ಕರೆಯುತ್ತಾರೆ. ನ್ಯೂಕೇನ್ ಮತ್ತು ಲೀಮೈತ್ತ ಇದರ ಉಪನದಿಗಳಾಗಿವೆ. ಇದು ಪೂರ್ವ ಆಗ್ನೇಯಾಭಿಮುಖವಾಗಿ ಉತ್ತರ ಪಟಗೋನಿಯದ ಮೂಲಕ ಹರಿದು ರೀಯೊ ನೇಗ್ರೋ ಪ್ರಾಂತ್ಯವನ್ನು ಹಾದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಇದರ ಉದ್ದ ಸು. 644.8 ಕಿಮೀ. ನದಿಯ ಕೆಳಭಾಗದ 400 ಕಿಮೀ ಉದ್ದವು. ನೌಕಾಯಾನಕ್ಕೆ ಯೋಗ್ಯವಾಗಿದೆ. ಈ ನದಿಯ ನೀರು ಜಲವಿದ್ಯುತ್ ಉತ್ಪಾದನೆಗೆ ಹಾಗೂ ಧಾನ್ಯ, ಹಣ್ಣು, ದ್ರಾಕ್ಷಿ ಬೆಳೆಗೆ ಬಳಕೆಯಾಗುತ್ತದೆ.

ಬ್ರೆಜ಼ಿಲ್‌ನ ದಕ್ಷಿಣದ ಪರ್ವತ ಪ್ರದೇಶದಲ್ಲಿ ಬಷೇ ನಗರದ ಪೂರ್ವಕ್ಕೆ ಹರಿಯುವ ಇದೇ ಹೆಸರಿನ ಇನ್ನೊಂದು ನದಿ ಇದೆ. ಇದು ನೈಋತ್ಯಾಭಿಮುಖವಾಗಿ ಹರಿದು ಉರಗ್ವೆಯನ್ನು ಪ್ರವೇಶಿಸುತ್ತದೆ. ಅನಂತರ ಪಶ್ಚಿಮಾಭಿಮುಖವಾಗಿ ಹರಿದು ಉರುಗ್ವೆ ನದಿಯನ್ನು ಕೂಡುತ್ತದೆ. ಈ ನದಿಗೆ ಪಾಸೋ ಡೇ ಲಸ್ ಟೋರಸ್ ಪಟ್ಟಣದ ಬಳಿ ಹಾಗೂ ಡೇ ಬೇಗಾರ್ರವ ಬಳಿ ಕಟ್ಟೆ ಕಟ್ಟಿ ದೊಡ್ಡ ಜಲಾಶಯವೊಂದನ್ನು ನಿರ್ಮಿಸಲಾಗಿದೆ. ಈ ನದಿಯ ಉದ್ದ 800 ಕಿಮೀ ಇದ್ದರೂ 70 ಕಿಮೀ ಮಾತ್ರ ನೌಕಾಯಾನಕ್ಕೆ ಯೋಗ್ಯವಾಗಿದೆ. ಎಂಬಾಲ್ಸೆ ಸರೋವರದ ಬಳಿ ಬೃಹತ್ ಜಲ ವಿದ್ಯುತ್ ಸ್ಥಾವರ ನಿರ್ಮಿಸಲಾಗಿದೆ. (ಎಸ್.ಎಸ್.ಎಂ.ಎ.)

**ನೇಗ್ರೋಸ್ ಅಕ್ಸಿಡೆಂಟಾಲ್:** ಫಿಲಿಫೈನ್ಸ್‌ನ ನೇಗ್ರೋಸ್ ದ್ವೀಪ. ಇದು ಪನ್ಯೆ ಹಾಗೂ ಸೆಬುದ್ವೀಪಗಳ ನಡುವೆ ಇದೆ. ವಿಸ್ತೀರ್ಣ 12704 ಚ.ಕಿಮೀ. ಜನಸಂಖ್ಯೆ 3182219. ಈ ದ್ವೀಪ ಸಂಪೂರ್ಣವಾಗಿ ಪರ್ವತಮಯವಾಗಿದ್ದು ಕ್ಯಾನ್‌ಲೋನ್ ಶಿಖರವು 2465 ಮೀ ಎತ್ತರವಾಗಿದೆ. ಕಬ್ಬು ಇಲ್ಲಿಯ ಮುಖ್ಯಬೆಳೆ. ಇದರಲ್ಲಿ ಎರಡು ಪ್ರಾಂತ್ಯಗಳಿವೆ. ಇವುಗಳೆಂದರೆ ನೆಗ್ರೋಸ್ ಆಕ್ಸಿಡೆಂಟಾಲ್ ಮತ್ತು ನೆಗ್ರೋಸ್ ಓರಿಯೆಂಟಾಲ್. (ಜಿ.ಎಸ್.ಎಸ್)

**ನೇಗ್ರೋಸ್ ಓರಿಯೆಂಟಾಲ್:** ಫಿಲಿಫೈನ್ಸ್ ದೇಶದ ಒಂದು ಪ್ರಾಂತ್ಯ. ನೇಗ್ರೋಸ್ ದ್ವೀಪದ ಪೂರ್ವದ ಭಾಗಗಳನ್ನೊಳಗೊಂಡಿದೆ. ಇದರ ನೈಋತ್ಯದಲ್ಲಿ ಸೂಲೂ ಸಮುದ್ರವಿದೆ. ಇದಕ್ಕೂ ಸೇಬೂ ದ್ವೀಪಕ್ಕೂ ನಡುವೆ ಟ್ಯಾನನ್ ಜಲಸಂಧಿಯಿದೆ. ವಿಸ್ತೀರ್ಣ 5741 ಚ.ಕಿಮೀ. ಜನಸಂಖ್ಯೆ 11,26,061 (2000). ಈ ಪ್ರಾಂತ್ಯ ಗುಡ್ಡಗಾಡುಗಳಿಂದ ಕೂಡಿದ್ದು, ಪೂರ್ವಭಾಗ ಮಾತ್ರ ಫಲವತ್ತಾಗಿದೆ. ಇಲ್ಲಿಯ ಪ್ರಮುಖ ವ್ಯವಸಾಯ ಉತ್ಪನ್ನಗಳು ಮುಸುಕಿನ ಜೋಳ, ಬತ್ತ, ಕಬ್ಬು ಮತ್ತು ತೆಂಗು. ಇಲ್ಲಿ ಬೆತ್ತ ಮತ್ತು ಬಿದಿರು ಹೆಚ್ಚಾಗಿ ಬೆಳೆಯುತ್ತವೆ. ಮರದ ದಿಮ್ಮಿಗಳನ್ನು ಇಲ್ಲಿಂದ ಜಪಾನಿಗೆ ಹಡಗುಗಳಲ್ಲಿ ಸಾಗಿಸಲಾಗುತ್ತದೆ. ಇಲ್ಲಿಯ ಭೂಮಿಯ ಶೇ. 25 ಭಾಗ ಅರಣ್ಯಾವೃತ. ಬೇಯವಾನ್, ಲಾ ಲಿಬರ್ಟಾಡ್ ಮತ್ತು ಟಾಂಜೇಯಲ್ಲಿ ಮರ ಕೊಯ್ಯುವ ಕಾರ್ಖಾನೆಗಳಿವೆ.

ನೇಗ್ರೋಸ್ ಓರಿಯೆಂಟಾಲ್‌ನ ಮುಖ್ಯ ಪಟ್ಟಣ ಡೂಮಗೇಟೇ. ಇದು ಪ್ರಾಂತ್ಯದ ಆಗ್ನೇಯ ಭಾಗದಲ್ಲಿ, ಉಪಪ್ರಾಂತ್ಯವಾದ ಸೀಕಿಹೋರ್ ದ್ವೀಪಕ್ಕೆ ಎದುರಾಗಿದೆ. ಜನಸಂಖ್ಯೆ 1,02,265 (2000). ಈ ಪ್ರಾಂತ್ಯದ ಏಕೈಕ ಸಕ್ಕರೆ ಕಾರ್ಖಾನೆ ಇರುವುದು ಬಾಯೀಸ್‌ನಲ್ಲಿ ಜನಸಂಖ್ಯೆ 68,115 (2000). ಇಲ್ಲಿ ಮದ್ಯಸಾರ ಮತ್ತು ಕಾಗದ ಕಾರ್ಖಾನೆಗಳೂ ಇವೆ. ಕರಾವಳಿ ಹೆದ್ದಾರಿಯೊಂದು ಈ ಪ್ರಾಂತ್ಯದ ಪ್ರಮುಖ ಪಟ್ಟಣಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ. (ಜಿ.ಎಸ್.ಎಸ್.)

**ನೇತ್ರಾವತಿ:** ಕರ್ನಾಟಕದ ಕರಾವಳಿಯ ಒಂದು ಮುಖ್ಯ ನದಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನದಿ ಅತ್ಯಂತ ದೊಡ್ಡದು. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮಘಟ್ಟದ ಭಾಗವಾದ ಬಲ್ಲಾಳರಾಯನ ದುರ್ಗದಲ್ಲಿ (1,504 ಮೀ) ಇದರ ಉಗಮ. ಪಶ್ಚಿಮಾಭಿಮುಖವಾಗಿ ಸಾಗಿ, ಸು. 160 ಕಿಮೀ ದೂರ ಹರಿದು ಮಂಗಳೂರಿನ ಪಡುಬದಿಯಲ್ಲಿ ಅರಬ್ಬಿ ಸಮುದ್ರವನ್ನು ಸೇರುತ್ತದೆ.

ಹಲವಾರು ಕಿರುಹೊಳೆಗಳೊಂದಿಗೆ ಪಶ್ಚಿಮಘಟ್ಟದ ಬಂಗಾಡಿ ಕಣಿವೆಯಲ್ಲಿಳಿದು ಬರುತ್ತಲೇ ಕಡಿರುದ್ಯಾವರಕ್ಕೆ ಸ್ವಲ್ಪ ದೂರದಲ್ಲಿ ಈ ನದಿ ಎರಡು ಹಂತಗಳಲ್ಲಿ ಬಂಡಾಜೆ ಜಲಪಾತವನ್ನು ನಿರ್ಮಿಸುವುದು. ಮುಂದೆ ಇದು ನೈಋತ್ಯಾಭಿಮುಖವಾಗಿ ಹರಿಯುತ್ತ ಮುಂಡಾಜೆಯ ದಕ್ಷಿಣಕ್ಕೆ ಚಾರ್ಮಾಡಿ ಹೊಳೆಯನ್ನು ಕೂಡಿ ಧರ್ಮಸ್ಥಳಕ್ಕೆ ಉತ್ತರದಲ್ಲಿ ಸು. 2 ಕಿಮೀ ದೂರದಲ್ಲಿ ಪ್ರವಹಿಸುತ್ತದೆ. ನೇತ್ರಾವತಿಯನ್ನು ದಕ್ಷಿಣದಲ್ಲಿ ನೆರಿಯಾ ಹೊಳೆ ಸೇರುತ್ತದೆ. ಈ ಹೊಳೆ ಮತ್ತು ಇತರ ತೊರೆಗಳು ಧರ್ಮಸ್ಥಳವನ್ನು ಸುತ್ತುವರಿದಿವೆ. ಅನಂತರ ಎಡದಿಂದ ಶಿಶಿಲಾ ಮತ್ತು ಸ್ವಲ್ಪ ದೂರದಲ್ಲಿ ಬಲದಿಂದ ಏರುಮಲೆ (ಬೆಳ್ತಂಗಡಿ) ಹೊಳೆಗಳ ನೀರನ್ನು ಪಡೆದು ಮುನ್ನಡೆಯುವ ನೇತ್ರಾವತಿ ನದಿ ಅಲ್ಲಲ್ಲಿ ಕಿರುಬಂಡೆಗಳಿರುವ ಮತ್ತು ಹೆಚ್ಚು ಸಮತಟ್ಟಾದ ಬಯಲುನೆಲವನ್ನು ಪ್ರವೇಶಿಸುತ್ತದೆ. ಕೊಡಗಿನಲ್ಲಿ, ಪಶ್ಚಿಮಘಟ್ಟಗಳ ಭಾಗವಾದ ಕುಮಾರಪರ್ವತದಲ್ಲಿ (ಪುಷ್ಪಗಿರಿ 1,654 ಮೀ) ಹುಟ್ಟಿ, ಹಾಸನ ಕೊಡಗು ಜಿಲ್ಲೆಗಳ ನಡುವೆ ಗಡಿ ನದಿಯಾಗಿ ಹರಿದು ಬಿಸಲೆಘಾಟಿನ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿ ಕುಳಗುಂದದ ಬಯಲಿನ ಬಳಿ ಸುಬ್ರಹ್ಮಣ್ಯ ಕ್ಷೇತ್ರವನ್ನು ಹಾದುಬರುವ ಕುಮಾರಧಾರಾ ನದಿ ಉಪ್ಪಿನಂಗಡಿಯಲ್ಲಿ ನೇತ್ರಾವತಿಯನ್ನು ಎಡದಿಂದ ಬಂದು ಸೇರುತ್ತದೆ. ಇದು ನೇತ್ರಾವತಿಯ ಪ್ರಮುಖ ಉಪನದಿ.

ಮುಂದೆ ನೇತ್ರಾವತಿ ನದಿ ಪಶ್ಚಿಮಾಭಿಮುಖವಾಗಿ ಸಮುದ್ರದ ಕಡೆಗೆ ಹರಿಯುತ್ತದೆ. ತಾಲ್ಲೂಕು ಕೇಂದ್ರವಾದ ಬಂಟವಾಳವನ್ನು ಬಲದಲ್ಲೂ ಸು. 5 ಕಿಮೀ ಅಚೆಗಿನ ಪಾಣೆಮಂಗಳೂರು ಪೇಟೆಯನ್ನು ಎಡದಲ್ಲೂ ಹಾದು ಫರಂಗಿಪೇಟೆಯ ದಟ್ಟ ಹಸುರು ಹಚ್ಚೆಯ ಬಳಿ ನಿಧಾನ ಗತಿಯನ್ನು ತಳೆಯುತ್ತದೆ. ಇದು ಹೊತ್ತು ತಂದ ರೇವೆ ಮಣ್ಣನ್ನು ಸಂಚಯಿಸಿ ಪಾವೂರು ಎಂಬಲ್ಲಿಂದ ಅಲ್ಲಲ್ಲಿ ಹಲಕೆಲವು ದ್ವೀಪಗಳನ್ನು (ಕುದುರು) ನಿರ್ಮಿಸಿದೆ. ಈ ಚಿಕ್ಕ ಫಲವತ್ತಾದ ನಡುಗಡ್ಡೆಗಳಲ್ಲಿ ಮುಖ್ಯವಾದವು ಪಾವೂರು ಉಳಿಯ, ಗಟ್ಟಿಕುದುರು ಮತ್ತು ಉಳ್ಳಾಲ ಉಳಿಯ (ಸೋಮನಾಥ). ಸಮುದ್ರವನ್ನು ಸೇರುವ ಮುನ್ನ ನೇತ್ರಾವತಿ ನದಿ 1.5 ಕಿಮೀ ಅಗಲವಾಗಿ ನಿಧಾನವಾಗಿ ಹರಿಯುತ್ತದೆ. ಉಳ್ಳಾಲದ ಸಮೀಪದಲ್ಲಿ ಫಲ್ಗುಣಿ (ಗುರುಪುರ) ಹೊಳೆಯೊಡಗೂಡಿ ಅಳಿವೆಯಾಗಿ ಪರಿಣಮಿಸಿ ಸಮುದ್ರವನ್ನು ಸೇರುತ್ತದೆ. ಸಮುದ್ರಕ್ಕೂ ಇದಕ್ಕೂ ನಡುವೆ ಕಿರಿದಾದ ಮರಳದಂಡೆಯ ಬೆಂಗರೆ ಎಂಬ ಕಿನಾರೆ ಪ್ರದೇಶವಿದೆ. ನೇತ್ರಾವತಿ ಮತ್ತು ಗುರುಪುರ ನದಿಗಳು ಸಂಯುಕ್ತವಾಗಿ ಮಂಗಳೂರಿನ ಬಳಿಯೇ ಸಮುದ್ರವನ್ನು ಸೇರುವುವಾದರೂ ಮಂಗಳೂರಿಗೆ ಸ್ವಾಭಾವಿಕ ರೇವಿನ ಸೌಕರ್ಯವಿಲ್ಲ. ಅಳಿವೆಯಿಂದ ಈಚೆಗೆ ನದೀಪಾತ್ರದಲ್ಲಿ ಪ್ರತಿ ಮಳೆಗಾಲದಲ್ಲೂ ತುಂಬುವ ಮರಳು ಮತ್ತು ಕೆಸರು ಸಣ್ಣಪುಟ್ಟ ನೌಕೆಗಳ ಸಂಚಾರಕ್ಕೂ ತಡೆಯನ್ನುಂಟುಮಾಡುತ್ತವೆ. ಸಮುದ್ರದಲ್ಲಿ ಸು. 5 ಕಿಮೀ ದೂರದಲ್ಲಿ ದೊಡ್ಡ ಹಡಗುಗಳು ಲಂಗರುಹಾಕಿ ನಿಲ್ಲುವ, ಅದರಿಂದ ಸರಕುಗಳನ್ನು ಸಾಗಿಸಲು ಮಂಜಿಗಳನ್ನು ಬಳಸುವ ಕ್ರಮದಿಂದ ಮಂಗಳೂರಿನ ಹಳೆಯ ಬಂದರಿನ ಸೀಮಿತ ಕಾರ್ಯ ನಡೆಯುತ್ತಿತ್ತು. ಮಳೆಗಾಲದ ನಾಲ್ಕು ತಿಂಗಳುಗಳ ಕಾಲ ಯಾವುದೇ ರೀತಿಯ ಸಾಗಾಣಿಕೆ ಸಾಧ್ಯವಿರಲಿಲ್ಲ. ಈಗ ಮಂಗಳೂರಿನ ಉತ್ತರಕ್ಕೆ 10 ಕಿಮೀ ದೂರದಲ್ಲಿ ನವಮಂಗಳೂರು ಸರ್ವಋತು ಬಂದರು ಆಗಿದೆ.

ನೇತ್ರಾವತಿ ನದಿಯಲ್ಲಿ ಮಳೆಗಾಲದಲ್ಲಿ ಆಗಿಂದಾಗ್ಗೆ ವಿಪರೀತವಾದ ಪ್ರವಾಹಗಳುಂಟಾಗುತ್ತವೆ. ಬೆಳ್ತಂಗಡಿ, ಪುತ್ತೂರು, ಸುಳ್ಯ, ಬಂಟವಾಳ ಮತ್ತು ಮಂಗಳೂರು ತಾಲ್ಲೂಕುಗಳಲ್ಲಿ ಹರಿಯುವ ನೇತ್ರಾವತಿ ನದಿಯ ಬಯಲಿನಲ್ಲಿ ಬತ್ತ, ಕಬ್ಬು, ಅಡಿಕೆ, ತೆಂಗು, ದವಸಧಾನ್ಯ ಮತ್ತು ಗೇರುಬೀಜ ಬೆಳೆಯುತ್ತಾರೆ.

ನೇತ್ರಾವತಿ ನದಿಯ ನೀರನ್ನು ಬಂಟ್ವಾಳ ತಾಲ್ಲೂಕಿನ ತುಂಬೆ ಎಂಬಲ್ಲಿ ಸಂಗ್ರಹಿಸಿ ಕೊಳವೆಗಳ ಮೂಲಕ ಮಂಗಳೂರು ನಗರ, ನವಮಂಗಳೂರು ಬಂದರು ವಲಯ ಮತ್ತು ಉತ್ತರದ ಸೂರತ್ಕಲ್ ಎಂಜಿನಿಯರಿಂಗ್ ಕಾಲೇಜು ಪ್ರದೇಶಗಳಿಗೆ ಪೂರೈಕೆ ಮಾಡಲಾಗಿದೆ. ಬಂಟ್ವಾಳ ಮತ್ತು ಹಂಚಿಕಟ್ಟೆಗಳಲ್ಲಿ ಕಟ್ಟಿರುವ ಅಣೆಕಟ್ಟುಗಳಿಂದ ಮತ್ತು ಹಲವೆಡೆಗಳಲ್ಲಿ ಪಂಪುಗಳ ಮೂಲಕ ಈ ನದಿಯ ನೀರು ಕೃಷಿಗೆ ಉಪಯೋಗವಾಗುತ್ತಿದೆ. (ಎಂ.ವಿ.)

**ನೇಪಲ್ಸ್:** ಇಟಲಿಯ ಒಂದು ನಗರ, ಪ್ರಮುಖ ಬಂದರು. ಇದು ಇಟಲಿಯ ಬೌದ್ಧಿಕ, ಔದ್ಯಮಿಕ ಹಾಗೂ ಹಣಕಾಸು ಕೇಂದ್ರ. ಇಟಲಿ ಪರ್ಯಾಯದ್ವೀಪದ ಪಶ್ಚಿಮ ತೀರದಲ್ಲಿದೆ. ನೇಪಲ್ಸ್ ಕೊಲ್ಲಿಯ ಉತ್ತರ ಭಾಗದಲ್ಲಿ ರೋಮ್ ನಗರದ ಆಗ್ನೇಯಕ್ಕೆ

ಸು. 190 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,000,470 (2005). ಪಶ್ಚಿಮದ ವೆಸೂವಿಯಸ್ ಹಾಗೂ ಪೂರ್ವದ ಕಾಂಪೀ ಫ್ಲೇಗ್ರೇಯೀ ಅಗ್ನಿಪರ್ವತಗಳ ನಡುವೆ ಸುಂದರವಾದ ಕೊಲ್ಲಿಯ ಸುತ್ತಲೂ ಈ ನಗರವನ್ನು ಕಟ್ಟಲಾಗಿದೆ. ಗುಡ್ಡಗಳ ಮೇಲೂ ನಗರ ಹಬ್ಬಿದೆ. ಟೆರಿನಿಯನ್ ಸಮುದ್ರದಲ್ಲಿರುವ ಈ ಕೊಲ್ಲಿಯ ಬಾಯಿಯ ಅಗಲ ಸು. 29 ಕಿಮೀ. ಇದರ ಪಶ್ಚಿಮದಲ್ಲಿ ಇಸ್ಕಿಯ ಹಾಗೂ ಪೂರ್ವದಲ್ಲಿ ಕ್ಯಾಪ್ರೀ ದ್ವೀಪಗಳಿವೆ.

ನಗರ ಸಭೆಯ ಭವನ

ಇದು ಯುರೋಪಿನ ಮಹಾ ಮಾಯಾ ಪಟ್ಟಣವೆಂದು ಹೆಸರಾಗಿದೆ. ನೇಪಲ್ಸ್ ನಗರವನ್ನು ನೋಡಿ ಸಾಯಿ ಎಂಬುದು ಒಂದು ಹಳೆಯ ಮಾತು. ಬಹುರಾಷ್ಟ್ರೀಯವಾದ ಸಂಸ್ಕೃತಿ ವೈವಿಧ್ಯವುಳ್ಳ, ವಿವಿಧ ಸ್ತರಗಳ ಪರಂಪರೆಯಿಂದ ಕೂಡಿದ ನಗರವಿದು. ಇಲ್ಲಿಯ ಬೀದಿಗಳೂ ಕಟ್ಟಡಗಳೂ ಸಾಮಾಜಿಕ ಚರ್ಯೆಗಳೂ ರೂಢಿ ಸಂಪ್ರದಾಯಗಳೂ ಈ ಅಂಶವನ್ನು ಎತ್ತಿ ಸಾರುತ್ತವೆ. ಇದರ ವರ್ತಮಾನದ ಬದುಕಿನ ಪ್ರತಿಯೊಂದು ಘಟ್ಟದಲ್ಲೂ ಭೂತಕಾಲದ ಬದುಕು ಎದ್ದು ಕಾಣುತ್ತದೆ. ಈ ನಗರದ ಇಂದಿನ ಬದುಕಿಗೆ ಇದರ ಇತಿಹಾಸವೇ ದಿಗ್ದರ್ಶಕ.

ಇಂದಿನ ನಗರ: ನೇಪಲ್ಸ್ ನಗರವನ್ನು ವೀಕ್ಷಕರು ಒಂದು ದೊಡ್ಡ ರಂಗ ಭೂಮಿಯೆಂದು ಬಣ್ಣಿಸಿದ್ದಾರೆ. ಸುಂದರವಾದ ವೆಸೂವಿಯಸ್ ಮತ್ತು ಕೊಲ್ಲಿಯ ಹಿನ್ನೆಲೆಯಲ್ಲಿ ಕಟ್ಟಲಾಗಿರುವ ಈ ನಗರ ಅರಮನೆಗಳಿಂದಲೂ ಚರ್ಚುಗಳಿಂದಲೂ ಕೂಡಿದೆ. ಇಲ್ಲಿಯ ಇಕ್ಕಟ್ಟಾದ ಬೀದಿಗಳು ಅನೇಕ ಸಲ ಮೆಟ್ಟಲುಗಳಾಗಿ ಪರಿವರ್ತನೆ ಹೊಂದಿ ಗುಡ್ಡಗಳ ಮಧ್ಯೆ ಹಾದುಹೋಗುತ್ತವೆ. 20ನೆಯ ಶತಮಾನದ ಮಧ್ಯಭಾಗದವರೆಗೆ ಇಲ್ಲಿ ಹೆಚ್ಚಿನ ಬಡತನವಿದ್ದು ಅಪರಾಧಿ ಪ್ರವೃತ್ತಿ ಹೆಚ್ಚಾಗಿತ್ತು. 1770ರ ವರೆಗೆ ಇಲ್ಲಿ ಅಪರಾಧಗಳು ಬಹಳ ಹೆಚ್ಚಾಗಿದ್ದುವು. ಆ ವರ್ಷ ಫಾದರ್ ರೋಕೋ ಎಂಬ ಪಾದ್ರಿಯ ಪ್ರಯತ್ನದಿಂದಾಗಿ ನೂರಾರು ಬೀದಿ ದೀಪಗಳನ್ನು ಹಾಕಿದ ಮೇಲೆ ಅಪರಾಧಗಳು ಕಡಿಮೆಯಾದವು. ಅನಂತರ ಜನರ ನಿರುದ್ಯೋಗ ಸ್ಥಿತಿ ಈಗ ಕಡಿಮೆಯಾಗಿ ಜೀವನ ಮಟ್ಟ ಸುಧಾರಿಸಿತು.

ನಗರದಲ್ಲಿ ಅನೇಕ ಮಾನವ ನಿರ್ಮಿತ ಸುರಂಗಗಳುಂಟು. ಹಲವಾರು ಸುರಂಗಗಳು ರೋಮನ್ನರಿಂದ ನಿರ್ಮಿತವಾದವು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಇವು ಜನರನ್ನು ಬಾಂಬು ದಾಳಿಯಿಂದ ರಕ್ಷಿಸುವುದರಲ್ಲಿ ನೆರವಾದುವು. ಸುರಂಗಗಳು ಆಗಾಗ ಕುಸಿದುಹೋಗಿ ಮನೆಗಳು ಉರುಳಿ ರಸ್ತೆಗಳಲ್ಲಿ ದೊಡ್ಡ ಕುಳಿಗಳಾಗಿ ಹಾನಿಯಾಗುತ್ತಿರುವುದುಂಟು. ಸೇಂಟ್ ಜೆನ್ನಾರೊ ಮತ್ತು ಸೇಂಟ್ ಗಾಡಿಯೇನೋ ಸಮಾಧಿ ಸುರಂಗಗಳಲ್ಲಿ ಭಿತ್ತಿಚಿತ್ರಗಳೂ ಕೆತ್ತನೆಗಳೂ ಇವೆ. ಪಾಸಿಲಿಪೊ ಬೆಟ್ಟದ ಅಡಿಯಲ್ಲಿ ಸಾಗುವ ಸುರಂಗಮಾರ್ಗ ಪ್ರಸಿದ್ಧವಾದ್ದು.

ಬಂದರಿನಿಂದ ನಗರಕ್ಕೆ ಬರುವ ಹಾದಿಯಲ್ಲಿ 914 ಮೀ ಉದ್ದದ ವಿಲ ಕಮ್ಯೂನೇಲ್ ಎಂಬ ಸಾರ್ವಜನಿಕ ಉದ್ಯಾನವಿದೆ. ನಗರದಲ್ಲಿ ಮಧ್ಯಯುಗದ ಐದು ದುರ್ಗಗಳಿವೆ. ವೊಮೆರೊದಲ್ಲಿ 1229ರಲ್ಲಿ ಆಜೆಜೂವಿನ ರಾಬರ್ಟ್ ದೊರೆ ಕಟ್ಟಿಸಿದ ದುರ್ಗವನ್ನು ಸ್ಪೇನಿಗರು 1537ರಲ್ಲಿ ಆರು ಮೊನೆಯ ನಕ್ಷತ್ರದ ಮಾದರಿಯಲ್ಲಿ ಪುನಃ ನಿರ್ಮಾಣ ಮಾಡಿದರು. ಕ್ಯಾಸೆಲ್ ಸೇಂಟ್ ಎಲ್ಮೋ ಎಂದು ಹೆಸರಾದ ಈ ದೊಡ್ಡ ಕಲ್ಲುಕಟ್ಟಡ ಅನೇಕ ಶತಮಾನಗಳವರೆಗೆ ನೇಪಲ್ಸಿನ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಇದರ ಪಕ್ಕದಲ್ಲಿ 14ನೆಯ ಶತಮಾನದಲ್ಲಿ ಕ್ರೈಸ್ತ ಸಂನ್ಯಾಸಿ ಮಠವಾಗಿ ಕಟ್ಟಲಾದ ಮ್ಯೂಸಿಯೊ ಡಿ ನಾಸ್ ಮಾರ್ಟಿನೋ ಎಂಬ ಕಟ್ಟಡವಿದೆ. ಇಲ್ಲಿ ನಗರದ ವಸ್ತುಸಂಗ್ರಹಾಲಯವಿದೆ. ಇಲ್ಲಿಯ ಮತ್ತೊಂದು ದುರ್ಗವನ್ನು ನಾರ್ಮನರು 12ನೆಯ ಶತಮಾನದಲ್ಲಿ ಕಟ್ಟಿದರು. 13ನೆಯ ಶತಮಾನದಲ್ಲಿ ಆಂಜಿ ವಿನ್ ದೊರೆಗಳು ಇದನ್ನು ವಿಸ್ತರಿಸಿ ಅಂದಗೊಳಿಸಿದರು. ಈಗ ದೊಡ್ಡ ಕಟ್ಟಡದಲ್ಲಿ ಸೈನಿಕ ಠಾಣ್ಯವಿದೆ. ಕ್ಯಾಸಲ್ ನೋವೋ ಇಲ್ಲಿಯ ಇನ್ನೊಂದು ದುರ್ಗ. ಇದನ್ನು ಆಂಜೂವಿನ 1ನೆಯ ರಾಬರ್ಟ್ ದೊರೆ 1279–82ರಲ್ಲಿ ಕಟ್ಟಿಸಿದ. ಇದನ್ನು ಮ್ಯಾಸ್ಕಿಯೋ ಆಂಜಿಯಾನೊ ಎಂದು ಕರೆಯಲಾಗುತ್ತದೆ. ಇಲ್ಲಿ ಆರೆಗಾನಿನ ಮೊದಲನೆಯ ಅಲ್ಫಾನ್ಸೊ ದೊರೆ 15ನೆಯ ಶತಮಾನದ ಮಧ್ಯಭಾಗದಲ್ಲಿ ಅಮೃತ ಶಿಲೆಯ ಕೆತ್ತನೆ ಕೆಲಸವಿರುವ ಸುಂದರವಾದ ಕಮಾನುದ್ವಾರವನ್ನು ನಿರ್ಮಿಸಿದ. ಇಲ್ಲಿಯ ಭೋಜನ ಶಾಲೆ ಈಗ ನೇಪಲ್ಸ್ ಪುರಸಭೆಯ ಸಭಾಂಗಣವಾಗಿದೆ. ಇದರ ಮುಂಭಾಗದಲ್ಲಿ ನೇಪಲ್ಸಿನ 4ನೆಯ ಫರ್ಡಿನೆಂಡ್ ದೊರೆ ತನ್ನ ಮಂತ್ರಿಗಳ ಕಚೇರಿಗಾಗಿ ನಿರ್ಮಿಸಿದ ಪಿಯಾಜ್ ಮುನಿಸಿಪಿಯೋ ಎಂಬ ಕಟ್ಟಡವಿದೆ (1819). ಈಗ ಇಲ್ಲಿ ಪುರಸಭೆಯ ಆಡಳಿತ ಕಛೇರಿ ಇದೆ. ನೇಪಲ್ಸಿನ ರಾಷ್ಟ್ರೀಯ ಗ್ರಂಥಾಲಯ ಪ್ಯಾಲೇಸೋ ರಿಯೇಲ್‍ನಲ್ಲಿದೆ. 1752ರಲ್ಲಿ ಹರ್ಕ್ಯುಲೇನಿಯಮ್‍ನಲ್ಲಿ ದೊರೆತ ಪ್ಯಾಪಿರಸ್ ಅಲ್ಲದೆ ಇನ್ನೂ ಅನೇಕ ಅಪೂರ್ವ ಗ್ರಂಥಗಳು ಈ ಗ್ರಂಥಾಲಯದಲ್ಲಿವೆ. ಇಲ್ಲಿರುವ ಮ್ಯೂಸಿಯೊ ಆರ್ಕಿಯೊಲಾಜಿಕೊ ನ್ಯಾಷನೇಲ್‍ನಲ್ಲಿ ರಾಜಮನೆತನಗಳ ಅಪೂರ್ವವಸ್ತುಗಳೂ ಹರ್ಕ್ಯುಲೇನಿಯಮ್, ಪಾಂಪೆ ಮೊದಲಾದ ಕಡೆಗಳಲ್ಲಿ ಸಿಕ್ಕ ಅನೇಕ ವಸ್ತುಗಳೂ ಇವೆ. ಈ ಕಟ್ಟಡವನ್ನು 1586ರಲ್ಲಿ ಅಶ್ವಸೈನ್ಯದ ಬ್ಯಾರಕ್ಕಿಗಾಗಿ ಕಟ್ಟಲಾಗಿದ್ದು 1790ರಲ್ಲಿ ರಾಜಮನೆತನಕ್ಕೆ ಸಂಬಂಧಿಸಿದ ವಸ್ತುಗಳನ್ನಿಡಲು ವಿಸ್ತರಿಸಲಾಯಿತು. ನಗರದಲ್ಲಿ 50ಕ್ಕೂ ಹೆಚ್ಚು ಚರ್ಚುಗಳೂ ಸುಮಾರು 100 ಅರಮನೆಗಳೂ ಇವೆ. ಇಲ್ಲಿಯ ವಿಶ್ವವಿದ್ಯಾಲಯವನ್ನು 1224ರಲ್ಲಿ 2ನೆಯ ಫ್ರೆಡರಿಕ್ ಚಕ್ರವರ್ತಿ ಸ್ಥಾಪಿಸಿದ. ಇಲ್ಲಿ 3,000 ಅಧ್ಯಾಪಕರೂ ಸು. 40,000 ವಿದ್ಯಾರ್ಥಿಗಳೂ ಇದ್ದಾರೆ.

ಕೈಗಾರಿಕೆಗಳು: ಬೂರ್ಬನರ ಕಾಲದಲ್ಲಿ ಇಲ್ಲಿ ಕೈಗಾರಿಕೆಗಳು ಪ್ರಾರಂಭವಾದುವು. 1740ರಲ್ಲಿ ಇಲ್ಲಿ ಪಿಂಗಾಣಿ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಅನಂತರ ರೇಷ್ಮೆ ಹಾಗೂ ಇತರ ಬಟ್ಟೆಗಳ ಉದ್ಯಮಗಳು ಅಭಿವೃದ್ಧಿಹೊಂದಿದುವು. 1826ರಲ್ಲಿ ಬಂದರಿನ ಪುನರ್ನಿರ್ಮಾಣ ಕಾರ್ಯ ಕೈಗೊಳ್ಳಲಾಯಿತು. 1839ರಲ್ಲಿ ನೇಪಲ್ಸಿನಿಂದ ಪೋರ್ಟಿಕಿಗೆ 8 ಕಿಮೀ ಉದ್ದದ, ಇಟಲಿಯಲ್ಲೇ ಮೊದಲನೆಯದಾದ ರೈಲುಮಾರ್ಗವನ್ನು ನಿರ್ಮಿಸಲಾಯಿತು. ಉಕ್ಕಿನ ಕಾರ್ಖಾನೆಯನ್ನು 19ನೆಯ ಶತಮಾನದಲ್ಲೇ ಪ್ರಾರಂಭಿಸಿದರೂ ಅದರ ಉತ್ಪಾದನೆ ಗಣನೀಯವಾಗಿ ಹೆಚ್ಚಿದ್ದು 1970ರ ದಶಕದಲ್ಲಿ. ಇಲ್ಲಿ ಕಂಡುಬರುವ ಕೈಗಾರಿಕಾಭಿವೃದ್ಧಿಗೆ ರಾಷ್ಟ್ರದ ಯೋಜನಾ ಕ್ರಮಗಳು, ಹಣಕಾಸಿನ ವ್ಯವಸ್ಥೆ ಹಾಗೂ ಸರ್ಕಾರದ ಆಧೀನದ ಕಂಪನಿಗಳು ಕಾರಣವೆನ್ನಬಹುದು. ಹೊಸ ರಸ್ತೆಗಳ ನಿರ್ಮಾಣ, ಬಂದರಿನ ಅಭಿವೃದ್ಧಿ, ಆಧುನಿಕ ಸಾರಿಗೆ ಸಂಪರ್ಕ ವ್ಯವಸ್ಥೆ ಹಾಗೂ ಶಕ್ತಿಯ ಉತ್ಪಾದನೆ ಇವುಗಳಿಂದ ಈ ಪ್ರದೇಶ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದೆ. ಪ್ರವಾಸೋದ್ಯಮ 1960ರ ದಶಕದಲ್ಲಿ ಬೆಳೆಯಿತು. ಇಲ್ಲಿಯ ಕೈಗಾರಿಕೆಗಳಲ್ಲಿ ಪ್ರಮುಖವಾದವು ಬಟ್ಟೆ, ಉಕ್ಕು, ಹಡಗು, ರೈಲ್ವೆ ಎಂಜಿನ್, ಎಲೆಕ್ಟ್ರಾನಿಕ್ಸ್, ಆಹಾರ ಸಂಸ್ಕರಣ ಮತ್ತು ತೈಲಶುದ್ಧೀಕರಣ. (ಜಿ.ಆರ್.ಕೆ.;ಜಿ.ಎಸ್.ಎಸ್.)

**ನೇಪಾಲ:** ಹಿಮಾಲಯ ಪರ್ವತಗಳ ದಕ್ಷಿಣ ಇಳಿಜಾರು ಪ್ರದೇಶದಲ್ಲಿರುವ ಒಂದು ಪ್ರಜಾಪ್ರಭುತ್ವ ರಾಷ್ಟ್ರ. ಇದು ಭೂಭಾಗಗಳಿಂದಲೇ ಸುತ್ತುವರಿಯಲ್ಪಟ್ಟಿರುವ ಖಂಡಾಂತರಸ್ಥಾನದ ದೇಶ. ಪೂರ್ವ, ದಕ್ಷಿಣ ಪಶ್ಚಿಮಗಳಲ್ಲಿ ಭಾರತ, ಉತ್ತರದಲ್ಲಿ ಚೀನದ ಸ್ವಯಮಾಡಳಿತ ಪ್ರದೇಶವಾದ ಟಿಬೆಟ್ ಇವೆ. ಉ.ಅ. $26^0 20'$–$30^0 10'$ ಮತ್ತು ಪೂ.ರೇ. $80^0 15'$–$88^0 15'$ ನಡುವೆ, ಪೂರ್ವಪಶ್ಚಿಮವಾಗಿ 800 ಕಿಮೀ ಮತ್ತು ದಕ್ಷಿಣೋತ್ತರವಾಗಿ 144–240 ಕಿಮೀ ಹಬ್ಬಿರುವ ನೇಪಾಲದ ವಿಸ್ತೀರ್ಣ 147181 ಚ.ಕಿಮೀ. ಜನಸಂಖ್ಯೆ 27.6 ದಶಲಕ್ಷಗಳು. ರಾಜಧಾನಿ ಕಠ್ಮಂಡು. ಜನಸಂಖ್ಯೆ 6,00,000 (2002).

ಭೂಸ್ವರೂಪ: ನೇಪಾಲ ದೇಶದ ಉತ್ತರದ ಭಾಗ ಪರ್ವತಮಯವಾಗಿದೆ. ದೇಶದ ಉತ್ತರ ಭಾಗದಲ್ಲಿ ಹಿಮಾಲಯ ಪರ್ವತ ಪಶ್ಚಿಮದಿಂದ ಪೂರ್ವದ ಕಡೆಗೆ ವಿಸ್ತರಿಸಿದೆ. ಈ ದೇಶವನ್ನು ಭೂಸ್ವರೂಪಗಳ ಆಧಾರದ ಮೇಲೆ 6 ಭಾಗಗಳಾಗಿ ವಿಂಗಡಿಸಬಹುದು.

ಅ. ತೆರಾಯಿ ಮೈದಾನ : ಎತ್ತರ ಸಮುದ್ರಮಟ್ಟದಿಂದ 100–200 ಮೀ ಅಗಲ 10–30 ಕಿಮೀ, ಉದ್ದ ಸು. 800 ಕಿಮೀ ನೇಪಾಲದ ಉದ್ದಕ್ಕೂ ಹರಡಿದೆ. ಮೆಕ್ಕಲು ಮಣ್ಣಿನಿಂದ ಕೂಡಿದ್ದು ಫಲವತ್ತಾಗಿದೆ.

ಆ. ಚುರಿಯ ಗುಡ್ಡಪ್ರದೇಶ : ತೆರಾಯಿ ಮೈದಾನ ಪ್ರದೇಶದ ಉತ್ತರ ಭಾಗದಲ್ಲಿ ಸಮುದ್ರ ಮಟ್ಟದಿಂದ ತಟ್ಟನೆ 1,300 ಕಿಮೀ ಎತ್ತರಕ್ಕೆ ಏರಿದೆ. ಈ ಭಾಗದಲ್ಲಿ ಹಲವಾರು ಕಣಿವೆಗಳೂ ಇವೆ. ಅಲ್ಲಲ್ಲಿ ಮಹಾಭಾರತ ಶ್ರೇಣಿಯೊಡನೆ ಸೇರಿಹೋಗುತ್ತವೆ.

ಇ. ಮಹಾಭಾರತ ಶ್ರೇಣಿ : ಭಾರತೀಯರ ಅಭಿಜಾತ ಕಾವ್ಯ ಮಹಾಭಾರತದ ಜ್ಞಾಪಕಾರ್ಥ ಈ ಹೆಸರು ಬಂದಿದೆ. ಈ ಪ್ರದೇಶ ಚುರಿಯ ಗುಡ್ಡಗಾಡಿನ ದಕ್ಷಿಣಕ್ಕೂ ತಗ್ಗಾದ ಮಧ್ಯಭಾಗದ ಉತ್ತರಕ್ಕೂ ಇದೆ. ಸಮುದ್ರ ಮಟ್ಟದಿಂದ 3,000 ಮೀ ಎತ್ತರವಾಗಿದೆ. ದೇಶದ ಉದ್ದಕ್ಕೂ ಹಬ್ಬಿದೆ. ಇದು ಮಧ್ಯ ಹಿಮಾಲಯದ ಸರಣಿಯ ಭಾಗವಾಗಿದೆ.

ಇದರಲ್ಲಿ ಉತ್ತರ–ದಕ್ಷಿಣವಾಗಿ ಕೋಶಿ, ಗಂಡಕಿ ಮತ್ತು ಕರ್ನಾಲಿ ನದಿಗಳು ಆಳ ಕಣಿವೆಗಳನ್ನು ಕೊರೆದಿವೆ. ಪೋಡ್ಸೋಲ್ ಮಣ್ಣು ಇಲ್ಲಿ (ಪರ್ವತಪ್ರದೇಶದ ಮಣ್ಣು–ಫಲವತ್ತತೆ ಕಡಿಮೆ, ಆಮ್ಲೀಯತೆ ಹೆಚ್ಚು) ಹರಡಿಕೊಂಡಿದೆ. ಜನಸಂಖ್ಯೆ ಅತಿವಿರಳ.




ಈ. ಮಧ್ಯಪ್ರದೇಶ : ಇದು ಮಹಾಭಾರತ ಪರ್ವತ ಸಾಲಿನ ಉತ್ತರದಲ್ಲಿ ಎತ್ತರವಾದ ಹಿಮಾಲಯ ಪರ್ವತಸಾಲಿನ ದಕ್ಷಿಣಕ್ಕಿರುವ ಮಟ್ಟಸ ಬೆಟ್ಟಗಳ ಪ್ರದೇಶ ಸು. 30 ಕಿಮೀ ಅಗಲವಾಗಿ ಪೂರ್ವದಿಂದ ಪಶ್ಚಿಮದುದ್ದಕ್ಕೂ ಹಬ್ಬಿದೆ. ನದಿ ಮತ್ತು ಕಣಿವೆಗಳಿಂದ ಕೂಡಿದೆ. ಪೋಡ್ಸೋಲ್ ಮಣ್ಣು ಹರಡಿಕೊಂಡಿದೆ.

ಉ. ಉನ್ನತ ಹಿಮಾಲಯ ವಲಯ : ಉತ್ತರದಲ್ಲಿರುವ ಮಟ್ಟಸ ಬೆಟ್ಟ ಪ್ರದೇಶ ನಿಧಾನವಾಗಿ ಏರುತ್ತ ಹೋಗಿ ಬೃಹತ್ ಪರ್ವತಗಳವರೆಗೆ ವ್ಯಾಪಿಸಿದೆ. ಇಲ್ಲಿ ಅನೇಕ ಹಿಮಾಚ್ಛಾದಿತ ಶಿಖರಗಳೂ ಇವೆ. ಹಿಮರಹಿತ ಭಾಗಗಳಲ್ಲಿ ಪೋಡ್ಸೋಲ್ ಮಣ್ಣು ಹರಡಿಕೊಂಡಿದೆ. ಈ ಭಾಗದಲ್ಲಿಯೇ ಪ್ರಪಂಚದ ಅತ್ಯುನ್ನತ ಶಿಖರ ಮೌಂಟ್‌ಎವರೆಸ್ಟ್ ಇರುವುದು (8848 ಮೀ). ಇದನ್ನು ಸಾಗರಮಾತಾ ಎಂದು ನೇಪಾಲಿಯರು ಕರೆಯುವರು. ಇದಲ್ಲದೆ ಇನ್ನಿತರ ಹಲವಾರು ಶಿಖರಗಳು ಈ ಭಾಗದಲ್ಲಿ ಕಂಡುಬರುತ್ತವೆ.

ಊ. ಹಿಮಾಲಯದಾಚೆಯ ಕಣಿವೆ ಪ್ರದೇಶ : ಉನ್ನತಹಿಮಾಲಯದಿಂದಾಚೆಗೆ ಇರುವ ಕಣಿವೆ ಭಾಗ. ಇದು ತೆತಿಸ್ ಮಹಾಸಾಗರದ ಜಲಜ ಶಿಲೆಗಳಿಂದ ಕೂಡಿದ್ದು ಸಮತಲವಾಗಿದೆ. ಇದರಲ್ಲಿರುವ ನಯವಾದ ಮಣ್ಣು ವ್ಯವಸಾಯಕ್ಕೆ ಅನುಕೂಲವಾಗಿದೆ.

ನದಿಗಳು: ನೇಪಾಲದ ನದಿಗಳನ್ನು ಅವುಗಳ ಉಗಮವನ್ನು ಆಧರಿಸಿ ಎರಡು ಗುಂಪುಗಳಾಗಿ ವಿಂಗಡಿಸಬಹುದು:

ಪುರಾತನ ನದಿಗಳು : ಇವು ಹಿಮಾಲಯ ಪರ್ವತದ ಉದಯಕ್ಕೆ ಮೊದಲೇ ಇದ್ದವು. ಉದಾಹರಣೆಗೆ ಕೋಸಿ, ಗಂಡಕಿ, ಕರ್ನಾಲಿ ಮತ್ತು ಮಹಾಕಾಳಿ. ಇವು ರಭಸವಾಗಿ ಅತಿ ಎತ್ತರದಿಂದ ಹರಿದು ಬರುತ್ತವೆ.

ಅನುಗಾಮಿ ನದಿಗಳು : ಇವು ಹಿಮಾಲಯ ಪರ್ವತದ ಉದಯದ ತರುವಾಯ ಹುಟ್ಟಿದಂಥವು. ಉದಾಹರಣೆ: ಕೊಹಿಲಾ ಮತ್ತು ಅದರ ಉಪನದಿಗಳು.

ನೇಪಾಲದಲ್ಲಿ ಮುಖ್ಯವಾಗಿ ನಾಲ್ಕು ನದಿವ್ಯೂಹಗಳಿವೆ :

ಪೂರ್ವಭಾಗದಲ್ಲಿ ಕೋಸಿ ನದಿವ್ಯವಸ್ಥೆ : ಸನ್‌ಕೋಶಿ, ಅರುಣ ತಮೂರ್, ಕಾಂಬ ಕೋಶಿ.

ಮಧ್ಯದಲ್ಲಿ ಗಂಡಕಿ ನದಿವ್ಯವಸ್ಥೆ : ಕಾಳಿ, ತ್ರಿಶೂಲಿ, ಸೇಟಿ, ಮರ್ಸ್ಯಾಂಗ್ಡಿ, ಅಂಬು, ಬುರಿ.

ಪಶ್ಚಿಮಭಾಗದಲ್ಲಿ ಕರ್ನಾಲಿ ನದಿವ್ಯವಸ್ಥೆ : ಕರ್ನಾಲಿ, ಸೇಟಿ(ಕಾಲಿಗಡ್), ಬುರಿ

ಅತ್ಯಂತ ಪಶ್ಚಿಮಭಾಗದಲ್ಲಿ ಮಹಾಕಾಳಿ ನದಿವ್ಯವಸ್ಥೆ : ಮಹಾಕಾಳಿ ಮತ್ತು ಅದರ ಉಪನದಿಗಳು.

ಇವೂ ಅಲ್ಲದೆ ಅನೇಕ ಸಣ್ಣನದಿಗಳೂ ಇವೆ. ಟಿಸ್ತಾ, ಅರುಂಗ್ ಮತ್ತು ಮಾರಿಖೋಲ, ಬಾಗ್‌ಮತಿ, ಕಮಲ, ಕಂಕೈ, ತ್ರಿಜುಗ ಮತ್ತು ಮೆಚಿ.

ಹಿಮಾಲಯ ಪರ್ವತಭಾಗಗಳಲ್ಲಿ ಅನೇಕ ಹಿಮನದಿಗಳೂ ಇವೆ. ಇವು ಹೆಚ್ಚಾಗಿ ಉತ್ತರ ನೇಪಾಲದಲ್ಲಿವೆ. ಮುಖ್ಯವಾದವು ನಿಪುಚು, ಬರುಣ, ಚಾಂಗೊ ಮತ್ತು ಹುಂಕ್ಬು.

ಸರೋವರಗಳು : ಇವುಗಳನ್ನು ಹಿಮನದಿಗಳಿಂದಾದ ಸರೋವರಗಳು, ನದಿ ಕಣಿವೆಗಳಿಂದಾದ ಸರೋವರಗಳು ಎಂಬುದಾಗಿ ವಿಂಗಡಿಸಬಹುದು. ನೇಪಾಲಿ ಭಾಷೆಯಲ್ಲಿ ಈ ಸರೋವರಗಳನ್ನು ದಾಹ್, ರಾಹ್, ಟಾಲ್ಸ್ ಅಥವಾ ಕುಂದ್ ಎಂದು ಕರೆಯುವರು. ಅತ್ಯಂತ ದೊಡ್ಡ ಸರೋವರ ರಾರ 3,300 ಮೀ ಎತ್ತರದಲ್ಲಿದೆ. ಪ್ರಖ್ಯಾತವಾದ ಸರೋವರ ವೆಂದರೆ ಪೊಖ್ಪರ್ ಕಣಿವೆಯಲ್ಲಿರುವ ಫೇವ.

ಭೂಕಂಪನಗಳು: ನೇಪಾಳ ದೇಶ ಹಿಮಾಲಯ ಪರ್ವತಪ್ರದೇಶದ ಅಸ್ಥಿರ ವಲಯದಲ್ಲಿರುವುದರಿಂದ ಇಲ್ಲಿ ಭೂಕಂಪನಗಳು ಸರ್ವಸಾಮಾನ್ಯ. ಅದರೆ ಇಲ್ಲಿ ಒಂದಾದರೂ ಭೂಕಂಪನಮಾಪಕಕೇಂದ್ರ ಇಲ್ಲದಿರುವುದು ಆಶ್ಚರ್ಯ. ಹೀಗಾಗಿ ಅಲ್ಲಿ ಘಟಿಸುವ ಸಮಸ್ತ ಭೂಕಂಪನಗಳ ಬಗ್ಗೆ ಮಾಹಿತಿ ಇಡಲು ಸಾಧ್ಯವಾಗಿಲ್ಲ. ಅದರೆ 1897ರ ಭೂಕಂಪನ, ರಿಕ್ಟರ್ ಮಾನಕದಲ್ಲಿ 8.2 ರಷ್ಟಿದ್ದಿತು. ಇದರಿಂದ ಕಠಮಂಡು ನಗರ ತೀವ್ರ ಹಾನಿಗೊಳಗಾಯಿತು. ಅಲ್ಲಿಯ ಬಚಾಂಗ್ ಪ್ರದೇಶದಲ್ಲಿ ಸತ್ತವರ ಸಂಖ್ಯೆ ಸು. 3,400. ಇದೇ ತೀವ್ರತೆಯ ಭೂಕಂಪನಗಳು 1803 ಮತ್ತು 1833ರಲ್ಲಿಯೂ ಘಟಿಸಿದ್ದುವು. 1968ರ ಭೂಕಂಪನ ಇನ್ನೂ ತೀವ್ರ ತರದ್ದಾಗಿ ಅಪಾರ ಆಸ್ತಿ ನಷ್ಟವಾಯಿತು. ಈ ಎಲ್ಲ ಭೂಕಂಪನಗಳ ಕೇಂದ್ರವೂ ಪ್ರಮುಖ ಸ್ತರಭಂಗದ ವಲಯದಲ್ಲಿಯೇ ಕಂಡುಬಂದಿದೆ.

ಭೂಕುಸಿತಗಳು : ಪ್ರತಿವರ್ಷ ಮಳೆಗಾಲದಲ್ಲಿ ನೂರಾರು ಭೂಕುಸಿತಗಳು ಸಂಭವಿಸುತ್ತವೆ. ಇದರಿಂದ ಪ್ರಾಣ, ಆಸ್ತಿ ನಷ್ಟ ಸಾಮಾನ್ಯ. ಪ್ರತಿಬಾರಿಯೂ ಹಲವು ಕೋಟಿ ರೂಪಾಯಿಗಳಷ್ಟು ನಷ್ಟವಾಗುವುದೆಂದು ಅಂದಾಜು. ತಗ್ಗು ಪ್ರದೇಶಗಳಲ್ಲಿರುವ ಹಲವಾರು ಹಳ್ಳಿಗಳೇ ನಾಶವಾಗಿಹೋಗುತ್ತವೆ. ಈ ರೀತಿಯ ಭೂಕುಸಿತಗಳಿಗೆ ಮುಖ್ಯವಾಗಿ ಮೇಲ್ಮೈಲಕ್ಷಣಗಳು, ಮಳೆ ಮತ್ತು ಶಿಲಾಗುಣಗಳು ಕಾರಣ. ಅದರೂ ಭೂಕುಸಿತಗಳು ಹೆಚ್ಚು ಸಂಭವಿಸದಂತೆ ಹಲವಾರು ರೀತಿಯ ತಡೆ ಕಾರ್ಯಗಳನ್ನು ಅಲ್ಲಲ್ಲಿ ಕೈಗೊಳ್ಳಲಾಗಿದೆ.

ಬಿಸಿನೀರು ಚಿಲುಮೆಗಳು : ಇವು ಉತ್ತರ ಭಾಗದ ಎತ್ತರವಾದ ಹಿಮಾಲಯ ವಲಯದಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ. ಡುನ್ ಪ್ರದೇಶದ ಕಣಿವೆ ವಲಯದಲ್ಲಿ ಕಡಿಮೆ.

ವಾಯುಗುಣ: ನೇಪಾಳ ಉಷ್ಣೋಷ್ಣವಲಯ ಪ್ರದೇಶದಲ್ಲಿದೆ. ಇದರ ವಾಯುಗುಣ ಭೂಪ್ರದೇಶದ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ತೆರಾಯ್ ಪ್ರದೇಶದಲ್ಲಿ ಉಷ್ಣೋಷ್ಣ ಮಾನ್ಸೂನ್ ವಾಯುಗುಣವಿದೆ. 1,220–2.135 ಮೀ ಎತ್ತರದ ಮಧ್ಯ ಪರ್ವತ ಪ್ರದೇಶ ಬೆಚ್ಚಗಿರುತ್ತದೆ. 2.135 ಮೀ ಗಳಿಂದ 3.355 ಮೀ ವರೆಗಿನ ಪ್ರದೇಶದ್ದು ತಂಪಾದ ವಾಯುಗುಣ. 4.267 ಮೀ ಗಳಿಂದ 4.876 ಮೀ ವರೆಗಿನ ಎತ್ತರದಲ್ಲಿ ಹಿಮಾಲಯದ ಕೆಳ ಇಳಿ ಜಾರುಗಳಲ್ಲಿ, ಆಲ್ಪೈನ್ ವಾಯುಗುಣವಿರುತ್ತದೆ. ಇದಕ್ಕಿಂತ ಎತ್ತರದ ಪ್ರದೇಶದಲ್ಲಿ ನೀರು ಹೆಪ್ಪುಗಟ್ಟುವ ಬಿಂದುವಿಗಿಂತ ಕಡಿಮೆ ಉಷ್ಣತೆ ಇರುತ್ತದೆ. ಇಲ್ಲಿ ಹಿಮ ಕವಿದಿರುತ್ತದೆ. ತೆರಾಯ್‌ನ ಮತ್ತು ಪರ್ವತಗಳ ಪೂರ್ವ ಭಾಗದಲ್ಲಿ ತಕ್ಕಮಟ್ಟಿಗೆ ಮಳೆ ಆಗುತ್ತದೆ (78 ಸೆಂಮೀ – 190 ಸೆಂಮೀ) ಪಶ್ಚಿಮದಲ್ಲಿ ಕಡಿಮೆ. 66 ಸೆಂಮೀ – 89 ಸೆಂಮೀ.

ಸಸ್ಯ–ಪ್ರಾಣಿವರ್ಗ: ವಾಯುಗುಣ ಮತ್ತು ಎತ್ತರಕ್ಕೆ ಅನುಗುಣವಾಗಿ ನೇಪಾಳದ ನೈಸರ್ಗಿಕ ಸಸ್ಯವರ್ಗ ವ್ಯತ್ಯಾಸವಾಗುತ್ತದೆ. ತೆರಾಯ್ ಮತ್ತು ಚುರಿಯಾ ಬೆಟ್ಟಗಳ ಪ್ರದೇಶದಲ್ಲಿ ಎಲೆಮೊನಚಾದ ಕಾಡುಗಳಿವೆ. ಇಲ್ಲಿಯ ಮರಗಳು ಮುಖ್ಯವಾಗಿ ಕಾಚು, ಬಿಂಡಿ ಮತ್ತು ಬಿಳೇ ಭೋಗಿ. ಮಹಾಭಾರತ್ ಲೇಖ್ ಶ್ರೇಣಿಯಲ್ಲಿ 1,500–3,000 ಮೀ ನಡುವಣ ಎತ್ತರದಲ್ಲಿ ತೈಲಪರ್ಣಿ, ಮಾಚಿಕಾಯಿ, ಕಾಡುಹೂವರಿಸಿ, ಪಾಪ್ಲರ್, ಅಕ್ರೋಟು ಮತ್ತು ಲಾರ್ಚ್ ಬೆಳೆಯುತ್ತವೆ. ಮಧ್ಯ ಪರ್ವತ ಪ್ರದೇಶದಲ್ಲಿ ಜನರು ಸ್ವಾಭಾವಿಕ ಸಸ್ಯವರ್ಗವನ್ನು ಬಹುತೇಕ ಕಡಿದು ಹಾಕಿದ್ದಾರೆ. ಮಹಾ ಹಿಮಾಲಯ ಶ್ರೇಣಿಯಲ್ಲಿ ಕೆಳಭಾಗದಲ್ಲಿ ಸ್ಪ್ರೂಸ್, ತಾಳೀಶಪತ್ರೆ, ತುರಾಯಿ, ಜೂನಿಪರ್, ಬೋಜಪತ್ರೆ ಮರಗಳಿವೆ. ಉನ್ನತ ಭಾಗಗಳಲ್ಲಿ ಆಲ್ಪೈನ್ ಸಸ್ಯಗಳಿವೆ.

ತೆರಾಯ್‌ನ ಕಾಡುಗಳಲ್ಲಿ ಹುಲಿ, ಚಿರತೆ, ಕಾಡೆತ್ತು, ಕಾಡುಕೋಣ ಮತ್ತು ಜಿಂಕೆ ಇವೆ. ವಿರಳವಾಗಿ ಆನೆಗಳೂ ಇರುವುದುಂಟು. ರಾಪ್ತಿ ಕಣಿವೆಯಲ್ಲಿ ಖಡ್ಗ ಮೃಗಗಳಿವೆ. ಇವುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇವನ್ನು ರಕ್ಷಿಸಲು ನೇಪಾಲ ಸರ್ಕಾರ ಕ್ರಮ ತೆಗೆದುಕೊಂಡಿದೆ. ಮಧ್ಯ ವಲಯದಲ್ಲಿ ಕಾಡುಗಳನ್ನು ವಿಶೇಷವಾಗಿ ಕಡಿದಿರುವುದರಿಂದ ವನ್ಯಮೃಗಗಳು ಕಡಿಮೆ. ಚಿರತೆ, ಕರಡಿ, ಕಾಡುಕುರಿ ಮುಂತಾದವು ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುತ್ತವೆ. ಆಲ್ಪೈನ್ ವಲಯದಲ್ಲಿ ಕಸ್ತೂರಿಮೃಗ, ವಾರ್ನ್ಯ ಆಡು ಮುಂತಾದವು ಇವೆ. ಉನ್ನತ ಪರ್ವತ ಪ್ರದೇಶದಲ್ಲಿ ಯೇತಿ ಎಂಬ ಹಿಮಮಾನವ ಇರುವುದಾಗಿ ಶರ್ಪ ಜನರು ನಂಬಿದ್ದಾರೆ.

ಜನಜೀವನ : ನೇಪಾಲದ ಮೊದಲ ನೆಲಸುಗಾರರು ಅಧಿಕ ಸಂಖ್ಯೆಯಲ್ಲಿ ಟಿಬೆಟ್ಟಿನಿಂದ ಬಂದ ಮಂಗೋಲಾಯ್ಡರು ಮತ್ತು ಉತ್ತರ ಭಾರತದಿಂದ ಬಂದ ಇಂಡೊ–ಆರ್ಯನರು. ಒಟ್ಟು ಜನಸಂಖ್ಯೆಯಲ್ಲಿ ಶೇ. 80 ರಷ್ಟು ಮಂದಿ ಇಂಡೋ–ಆರ್ಯನ್ ಮೂಲದವರು. ಟಿಬೆಟೊ–ನೇಪಾಲಿ ಜನರು ಉತ್ತರ ಮತ್ತು ಪೂರ್ವದಲ್ಲಿ ವಾಸಿಸುತ್ತಾರೆ.

ಭಾಷೆ: ನೇಪಾಲದ ಪ್ರಮುಖ ಹಾಗೂ ಅಧಿಕೃತ ಭಾಷೆ ನೇಪಾಲಿ ಅಥವಾ ಗೂರ್ಖಾಲಿ. ತೆರಾಯ್ ಮತ್ತು ಮಧ್ಯ ಪರ್ವತ ಸೀಮೆಯ ಜನ ಈ ಭಾಷೆಯನ್ನಾಡುತ್ತಾರೆ. ಇದು

ಇಂಡೊ–ಆರ್ಯನ್ ಭಾಷೆ. ತರಾಯ್ ಮತ್ತು ಪರ್ವತ ಪ್ರದೇಶದಲ್ಲಿ ಅನೇಕ ಉಪಭಾಷೆಗಳು ಬಳಕೆಯಲ್ಲಿವೆ. ಉತ್ತರ ಮತ್ತು ಪೂರ್ವದಲ್ಲಿ ಬಳಕೆಯಲ್ಲಿರುವ ಮಗಾರ್, ಗುರುಂಗ್‌ವಾಯ್ ಮುಂತಾದ ಭಾಷೆಗಳು ಟಿಬೆಟೊ–ಬರ್ಮನ್ ಕುಟುಂಬದವು.

ಧರ್ಮ: ನೇಪಾಲದ ಜನರಲ್ಲಿ ಶೇ. 90 ಮಂದಿ ಹಿಂದುಗಳು, ಶೇ. 9 ರಷ್ಟು ಜನ ಬೌದ್ಧರು, ಉಳಿದವರು ಇತರ ಧರ್ಮದವರು. ನೇಪಾಲದ ದೊರೆ ಹಿಂದು. ಇದು ಪ್ರಪಂಚದ ಏಕಮಾತ್ರ ಹಿಂದೂ ದೇಶ.

ಜನನಿಬಿಡತೆ: ನೇಪಾಲದ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 2008. ಉನ್ನತ ಪರ್ವತ ಪ್ರದೇಶ ಅರಣ್ಯ ಪ್ರದೇಶ ಮುಂತಾದ ಅನುತ್ಪಾದಕ (ಶೇ. 65) ಕಳೆದರೆ ಉಳಿದ ಪ್ರದೇಶವನ್ನು ಸರಾಸರಿ ಜನಸಾಂದ್ರತೆ ಸಾಕಷ್ಟು ಹೆಚ್ಚು ಶೇ. 56ರಷ್ಟು ಜನರು ಮಧ್ಯ ಪರ್ವತ ಪ್ರದೇಶದಲ್ಲೂ ಶೇ. 42ರಷ್ಟು ಮಂದಿ ತೆರಾಯಿ ಪ್ರದೇಶದಲ್ಲೂ ವಾಸಿಸುತ್ತಾರೆ. ಕಠ್ಮಂಡು ಕಣಿವೆಯಲ್ಲಿ ಶೇ. 5ರಷ್ಟು ಜನರಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ 5ಕ್ಕಿಂತ ಕಡಿಮೆ ಜನರು ನಗರವಾಸಿಗರು.

ನಗರಗಳು: ನೇಪಾಲದಲ್ಲಿ ದೊಡ್ಡ ನಗರಗಳಿಲ್ಲ. ರಾಜಧಾನಿ ಕಠ್ಮಂಡುವಿನ ಜನಸಂಖ್ಯೆ 6,71,846 (2005). ಭಾರತದ ಗಡಿಯಿಂದ ಸು. 120 ಕಿಮೀ ದೂರದಲ್ಲಿರುವ ಈ ನಗರ ವಾಣಿಜ್ಯ ಹಾಗೂ ಸಾರಿಗೆ ಕೇಂದ್ರ.. ಇತರ ಪಟ್ಟಣಗಳು ಬಿರಾಟ್‌ನಗರ (130129) ಪಟಾಣ್ (162991).

ಅರ್ಥಿಕತೆ : ಪ್ರಪಂಚದ ಅತಿ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ಪೈಕಿ ನೇಪಾಳವೂ ಒಂದು. ಇಲ್ಲಿ ಅರ್ಥಿಕ ಅಭಿವೃದ್ಧಿಗೆ ಅವಶ್ಯವಾದ ಮೂಲಸಾಧನಗಳು ಕಡಿಮೆ. ನೆಲದಿಂದ ಆವೃತವಾದ ಈ ದೇಶದ ವಿದೇಶಿ ವ್ಯಾಪಾರ ಅನ್ಯದೇಶಗಳ ಮೂಲಕ ನಡೆಯಬೇಕಾದ್ದು ಅನಿವಾರ್ಯ. ಇದರ ಆರ್ಥಿಕ ವ್ಯವಸ್ಥೆ ಈಚೆಗೆ ಮಾತ್ರವೇ ಬದಲಾವಣೆಗೆ ಒಳಪಡುತ್ತಿದೆ.

ಕೃಷಿ : ನೇಪಾಲದ ಜನರಲ್ಲಿ ಶೇ. 90ರಷ್ಟು ಮಂದಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಸ್ಥೂಲ ರಾಷ್ಟ್ರೀಯ ಉತ್ಪನ್ನದಲ್ಲಿ ಶೇ.70ರಷ್ಟು ಬರುವುದು ಕೃಷಿಯಿಂದ. ಅದರ ನಿರ್ಯಾತದಿಂದ ದೊರಕುವ ವರಮಾನದಲ್ಲಿ ಐದನೆಯ ಮೂರರಷ್ಟು ಕೃಷಿಮೂಲವಾದ್ದು. ಆದರೂ ಕೃಷಿಯ ಉತ್ಪಾದಕತೆ ಬಲು ಕಡಿಮೆ. ನೇಪಾಲದಲ್ಲಿ ಸಾಗುವಳಿಗೆ ಒಳಪಟ್ಟಿರುವ ಭೂಮಿ ಕಡಿಮೆ, ಶೇ. 4ರಷ್ಟಕ್ಕೆ ಮಾತ್ರ ನೀರಾವರಿ ಸೌಲಭ್ಯವಿದೆ. ವ್ಯವಸಾಯಕ್ಕೆ ಮುಖ್ಯವಾಗಿ ಮಳೆಯೇ ಆಧಾರ. ಸಾಮಾನ್ಯವಾಗಿ ಅಹಾರ ಧಾನ್ಯದಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚುವರಿಯ ಸ್ಥಿತಿ ಇದೆಯಾದರೂ ಮಳೆ ಕಡಿಮೆಯಾದ ವರ್ಷಗಳಲ್ಲಿ ಅಭಾವ ಸಂಭವಿಸುವುದುಂಟು. ತೆರಾಯ್ ಪ್ರದೇಶದಲ್ಲಿ ಕೃಷಿ ಉತ್ಪನ್ನವನ್ನು ಹೆಚ್ಚಿಸಲು ಸಾಧ್ಯತೆಗಳಿವೆ. ಇಲ್ಲಿ ಬೆಳೆಯುವ ಮುಖ್ಯ ಧಾನ್ಯಗಳು ಬತ್ತ, ಮುಸುಕಿನ ಜೋಳ ಮತ್ತು ಗೋದಿ.

ಅರಣ್ಯೋತ್ಪನ್ನ: ನೇಪಾಲದ ಒಟ್ಟು ವಿಸ್ತೀರ್ಣದಲ್ಲಿ ಮೂರನೆಯ ಒಂದು ಭಾಗ ಅರಣ್ಯಾವೃತ. ಇದು ಬಹುತೇಕ ಸರ್ಕಾರಿ ಒಡೆತನಕ್ಕೆ ಸೇರಿದ್ದು, ಅರಣ್ಯ ನಿರ್ವಹಣೆ ಸಮರ್ಪಕವಾಗಿಲ್ಲ. ಮರಗಳನ್ನು ಅಡ್ಡಾದಿಡ್ಡಿಯಾಗಿ ಕಡಿಯಲಾಗಿದೆ. ಆದಾಗ್ಯೂ ರಾಷ್ಟ್ರದ ಸಂಪನ್ಮೂಲಗಳಲ್ಲಿ ಮರದ ತಿರುಳು ಮುಖ್ಯವಾದ್ದು. ಇದರಲ್ಲಿ ಬಹುಭಾಗ ಭಾರತಕ್ಕೆ ರಫ್ತಾಗುತ್ತದೆ.

ಖನಿಜ ಸಂಪತ್ತು: ನೇಪಾಲದ ಖನಿಜ ಸಂಪತ್ತು ಗಮನಾರ್ಹವಾದ್ದೇನೂ ಅಲ್ಲ. ಇದು ಹಲವಡೆಗಳಲ್ಲಿ ಹರಡಿದೆ. ಇದನ್ನು ಸರಿಯಾಗಿ ರೂಢಿಸಿಕೊಂಡಿಲ್ಲ. ದೇಶದಲ್ಲಿ ಕಲ್ಲಿದ್ದಲು, ಕಬ್ಬಿಣ ಅದಿರು, ಪೈರೈಟ್ (ಗಂಧಕಾಮ್ಲ, ತಯಾರಿಕೆಗೆ ಬೇಕಾದ್ದು), ಸುಣ್ಣಕಲ್ಲು ಮತ್ತು ಅಭ್ರಕ ನಿಕ್ಷೇಪಗಳಿವೆ. ಆದರೆ ಇವು ಅಧಿಕ ಪರಿಮಾಣಗಳಲ್ಲಿ ಇಲ್ಲ. ನೇಪಾಲದ ನದಿಗಳ ವಿದ್ಯುತ್ ಸಂಭವನೀಯತೆ ಅಗಾಧವಾದ್ದು. ಇದನ್ನು ಅಭಿವೃದ್ಧಿ ಪಡಿಸಿ ಭಾರತಕ್ಕೆ ರಫ್ತು ಮಾಡಿದರೆ ರಾಷ್ಟ್ರದ ವರಮಾನ ಗಮನಾರ್ಹವಾಗಿ ಹೆಚ್ಚುವ ಸಾಧ್ಯತೆಯಿದೆ.

ಕೈಗಾರಿಕೆ: ನೇಪಾಲದಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಬೆಳೆದಿಲ್ಲ. ಇವು ನಿಧಾನವಾಗಿ ಅಭಿವೃದ್ಧಿ ಹೊಂದುತ್ತಿವೆ. ಕೈಗಾರಿಕೆಗಳು ಮುಖ್ಯವಾಗಿ ಸಣ್ಣವು, ಸ್ಥಳೀಯವಾದವು. ಅವು ಕೃಷಿ ಆಧಾರಿತವಾದವು. ಬಿರಾಟ್‌ನಗರದಲ್ಲಿ ಸೆಣಬು ಕೈಗಾರಿಕೆಯಿದೆ. ಇದರ ಉತ್ಪನ್ನವನ್ನು ವಿಶೇಷವಾಗಿ ರಫ್ತುಮಾಡಲಾಗುತ್ತದೆ. ಬೀರ್‌ಗಂಜ್, ಭೈರವ ಮತ್ತು ನೇಪಾಲ್‌ಗಂಜಿನಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಜನಕಪುರದಲ್ಲಿ ಸಿಗರೇಟ್ ಕಾರ್ಖಾನೆ ಇದೆ. ಹಿತೌರದಲ್ಲಿ ಮರ ಕೊಯ್ಯುವ ಕಾರ್ಖಾನೆಗಳು ತೆರಾಯ್ ಪ್ರದೇಶಗಳಲ್ಲಿ ಅನೇಕ ಅಕ್ಕಿ ಮತ್ತು ಎಣ್ಣೆ ಗಿರಣಿಗಳೂ ಇವೆ. ಬಿರಾಟ್‌ನಗರ, ಬೀರ್‌ಗಂಜ್–ಹಿತೌರ ಪಟ್ಟಿ, ಕಠ್ಮಂಡು ಕಣಿವೆ–ಇವು ಪ್ರಮುಖ ಕೈಗಾರಿಕಾ ಪ್ರದೇಶಗಳು. ಖಾಸಗಿ ವಲಯದ ಕೈಗಾರಿಕೆಗಳೇ ಅಧಿಕ.

ಪ್ರವಾಸೋದ್ಯಮ: ಪ್ರವಾಸೋದ್ಯಮ ವೇಗವಾಗಿ ಬೆಳೆಯುತ್ತಿದೆ. ವಿದೇಶೀಯರ ಪ್ರವಾಸಿಗಳು ಈಗ ವಿಶೇಷವಾಗಿ ಕಠ್ಮಂಡುವಿಗೆ ಸೀಮಿತವಾಗಿವೆ. ಆದರೆ ಪೋಖಾರ, ಎವರೆಸ್ಟ್ ಶಿಖರ ಪ್ರದೇಶ ಮತ್ತು ನಾರಾಯಣಿ ಪ್ರದೇಶದಲ್ಲೂ ಪ್ರವಾಸೋದ್ಯಮವನ್ನು ಬೆಳೆಸುವ ಸಾಧ್ಯತೆ ಹೆಚ್ಚಿದೆ. ನಾರಾಯಣಿ ಪ್ರದೇಶ ವನ್ಯಮೃಗ ಸಂಪತ್ತಿನಿಂದ ಕೂಡಿದೆ.

ವ್ಯಾಪಾರ: ನೇಪಾಳದ ವ್ಯಾಪಾರ ವಿಶೇಷವಾಗಿ ಭಾರತದೊಂದಿಗೆ ನಡೆಯುತ್ತಿದೆ. ಇತರ ದೇಶಗಳೊಂದಿಗೂ ವ್ಯಾಪಾರ ಬೆಳಸಲು ಪ್ರಯತ್ನಗಳಾಗುತ್ತಿವೆ. ಇಲ್ಲಿಂದ ಭಾರತಕ್ಕೆ ರಫ್ತಾಗುವ ಪದಾರ್ಥಗಳು ಅಕ್ಕಿ, ಸಾಸಿವೆ, ಕುರಿ, ಆಡು, ಚರ್ಮ ಮತ್ತು ತೊಗಲು, ತುಪ್ಪ ಮತ್ತು ಮರದತಿರುಳು. ಹತ್ತಿ ಜವಳಿ, ನೂಲು, ಉಣ್ಣೆಬಟ್ಟೆ, ಕಂಬಳಿ, ರೇಷ್ಮೆ, ಉಪ್ಪು ಸಾಂಬಾರ, ತಂಬಾಕು, ಪೆಟ್ರೋಲಿಯಂ. ವಿದ್ಯುನ್ಮಾನ ಸರಕುಗಳು ರಾಸಾಯನಿಕಗೊಬ್ಬರ, ರಾಸಾಯನಿಕ ಮುಂತಾದವು ಆಮದಾಗುತ್ತವೆ.

ಸಾರಿಗೆ: ನೇಪಾಲದ ಸಾರಿಗೆ ವ್ಯವಸ್ಥೆ ಹೆಚ್ಚು ಅಭಿವೃದ್ಧಿ ಹೊಂದಿಲ್ಲ. ಕೇವಲ 13223 ಕಿಮೀ ಉದ್ದವಾದ ರಸ್ತೆ ಮಾರ್ಗಗಳಿವೆ. ಪ್ರತಿ 2,000 ಜನಕ್ಕೆ ಒಂದು ವಾಹನ ಇದೆ. ಕಾಲುದಾರಿಗಳೇ ಸಾರಿಗೆಯ ಮುಖ್ಯಮಾಧ್ಯಮಗಳಾಗಿವೆ. ಭಾರತದ ಗಡಿ ಪಟ್ಟಣವಾದ ರಾಕ್ಸಾಲ್‌ನಿಂದ ಕಠ್ಮಂಡುವಿಗೆ ರಸ್ತೆಯೊಂದನ್ನು ನಿರ್ಮಿಸಲಾಗಿದೆ. 1968ರಲ್ಲಿ ಭಾರತದ ಸುನೌಲಿಯಿಂದ ನೇಪಾಳದ ಪೋಖಾರಕ್ಕೆ 208 ಕಿಮೀ ದೂರದ ಹೆದ್ದಾರಿಯೊಂದು ತೆರೆಯಿತು. ಕಠ್ಮಂಡುವಿನಿಂದ ಪೂಖಾರಕ್ಕೆ ಒಂದು ರಸ್ತೆ ನಿರ್ಮಾಣವಾಗುತ್ತಿದೆ. ಪೂರ್ವಪಶ್ಚಿಮವಾಗಿ ರಸ್ತೆಯೊಂದನ್ನು ನಿರ್ಮಿಸಿ ದೇಶವನ್ನು ಒಗ್ಗೂಡಿಸುವ ಯೋಜನೆಗೆ ವಿದೇಶಿ ನೆರವು ದೊರಕಿದೆ. ಅಮ್ಲುಖ್‌ಗಂಜಿನಿಂದ ರಾಕ್ಸಾಲ್‌ಗೂ ಜನಕಪುರದಿಂದ ಭಾರತದ ಜಯನಗರಕ್ಕೂ ನ್ಯಾರೋ ಗೇಜ್ ರೈಲುಮಾರ್ಗಗಳಿವೆ. ರಾಯಲ್ ನೇಪಾಲ್ ವಿಮಾನ ಕಾರ್ಪೊರೇಷನ್ ಮತ್ತು ಭಾರತ ವಿಮಾನ ಕಾರ್ಪೊರೇಷನ್‌ಗಳ ಸಹಯೋಗದಲ್ಲಿ ಕಠ್ಮಂಡುವಿನಿಂದ ಪಟಣ, ಕೋಲ್ಕತ, ವಾರಾಣಸಿ ಮತ್ತು ದೆಹಲಿಗೆ ವಿಮಾನ ಸಂಚಾರವಿದೆ. ಆಂತರಿಕ ವಿಮಾನ ಸಾರಿಗೆಯನ್ನೂ ವಿಸ್ತರಿಲಾಗುತ್ತಿದೆ. ಕಠ್ಮಂಡು ಹಾಗೂ ಬಿರಾಟ್ ಪುರಗಳಲ್ಲಿ ವಿಮಾನ ನಿಲ್ದಾಣಗಳಿವೆ. ಹೆಟಾಡ–ಕಠ್ಮಂಡುಗಳ ನಡುವೆ 42 ಕಿಮೀ ಉದ್ದದ ಕೇಬಲ್ ರೈಲು ಮಾರ್ಗವಿದ್ದು ಪ್ರವಾಸೋದ್ಯಮಕ್ಕೆ ಇಂಬುನೀಡಿದೆ. *

**ನೇವಿನ್ ಎಂ.ಫೆನ್‌ಮನ್:** 1865–1945. ಅಮೆರಿಕದ ಭೂವಿಜ್ಞಾನಿ, ಭೂಗೋಳವಿಜ್ಞಾನಿ. ಇವನು 1865ರಲ್ಲಿ ಓಹಿಯೊ ರಾಜ್ಯದ ಲಿಮಾದಲ್ಲಿ ಜನಿಸಿದ. 1883ರಲ್ಲಿ ಹೈಡಲ್‌ಬರ್ಗ್ ಕಾಲೇಜಿನಿಂದ ಬಿ.ಎ., 1900ರಲ್ಲಿ ಎಂ.ಎ. ಮತ್ತು 1901ರಲ್ಲಿ ಶಿಕಾಗೊ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದ. ಸಿನ್‌ಸಿನ್ನಾಟಿ ವಿಶ್ವವಿದ್ಯಾಲಯದಲ್ಲಿ ಭೂವಿಜ್ಞಾನ ಮತ್ತು ಭೂಗೋಳ ವಿಜ್ಞಾನ ವಿಭಾಗ ಪ್ರಾರಂಭಿಸಿ 1907ರಿಂದ 1937ರವರೆಗೆ ಅದರ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸಿದ. 1901ರಿಂದ 1924ರವರೆಗೆ ಅಮೆರಿಕ ಸಂಯುಕ್ತ ಸಂಸ್ಥಾನದ ಭೂವೈಜ್ಞಾನಿಕ ಸರ್ವೇಕ್ಷಣ ಮತ್ತು ಮೂರು ರಾಜ್ಯಗಳ ಭೂವೈಜ್ಞಾನಿಕ ಸರ್ವೇಕ್ಷಣಗಳೊಂದಿಗೆ ಸೇವೆ ಸಲ್ಲಿಸಿದ. ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಪ್ರಾಕೃತಿಕ ವಿಭಾಗಗಳನ್ನಾಗಿ ವರ್ಗೀಕರಿಸಿದ. ಅದರ ಪ್ರಾಕೃತಿಕ ನಕ್ಷೆಯನ್ನು ತಯಾರಿಸಿದ. ಈ ನಕ್ಷೆಯನ್ನು ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆ ಅನುಮೋದಿಸಿ ಅಳವಡಿಸಿತು.

ಈತ ಪಶ್ಚಿಮ ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಾಕೃತಿಕ ವಿಜ್ಞಾನ (1931) ಮತ್ತು ಪೂರ್ವ ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಾಕೃತಿಕ ವಿಜ್ಞಾನ (1938) ಎಂಬ ಎರಡು ಗ್ರಂಥಗಳನ್ನು ಪ್ರಕಟಿಸಿದ. ಈ ಗ್ರಂಥಗಳು ಅಧಿಕೃತ ಪರಾಮರ್ಶನ ಗ್ರಂಥಗಳಾಗಿವೆ. ಈತ ಅಮೆರಿಕದ ಭೂಗೋಳ ವಿಜ್ಞಾನಿಗಳ ಸಂಘದ ಅಧ್ಯಕ್ಷ (1918) ಮತ್ತು ಅಮೆರಿಕದ ಭೂವೈಜ್ಞಾನಿಕ ಸಮಿತಿಯ ಅಧ್ಯಕ್ಷನಾಗಿ (1935) ಕಾರ್ಯ ನಿರ್ವಹಿಸಿದ. (ಎಸ್.ಎಸ್.ಎನ್.)

**ನೈಜರ್:** ಪಶ್ಚಿಮ ಆಫ್ರಿಕದ ಒಂದು ಗಣರಾಜ್ಯ. ಉ.ಅ. $12^{\circ}$–$24^{\circ}$ ಮತ್ತು ಪೂ.ರೇ $0^{\circ}30'$–$15^{\circ}$ $30'$ ನಡುವೆ ಇರುವ ಈ ದೇಶ ಅಂತಾರಾಷ್ಟ್ರೀಯ ಗಡಿರೇಖೆಗಳಿಂದ ಸುತ್ತುವರಿಯಲ್ಪಟ್ಟಿದೆ. ಇದರ ವಾಯವ್ಯದಲ್ಲಿ ಆಲ್ಜೀರಿಯ, ಈಶಾನ್ಯದಲ್ಲಿ ಲಿಬಿಯ, ಪೂರ್ವದಲ್ಲಿ ಚಾಡ್ ಗಣರಾಜ್ಯ, ದಕ್ಷಿಣದಲ್ಲಿ ನೈಜೀರಿಯ ಮತ್ತು ದಹೋಮೀ, ಪಶ್ಚಿಮದಲ್ಲಿ ಉತ್ತರ ವೋಲ್ಟ ಮತ್ತು ಮಾಲೀ ದೇಶಗಳಿವೆ. ಇದರ ವಿಸ್ತೀರ್ಣ 11,86,408 ಚ.ಕಿಮೀ. ಜನಸಂಖ್ಯೆ 13,957,000 (2005 ಅಂ.) ರಾಜಧಾನಿ ನೀಯಾಮೇ. ಜನಸಂಖ್ಯೆ 398265 (2005).

ಮೇಲ್ಮೈ ಲಕ್ಷಣ: ನೈಜರ್ ಸಮುದ್ರಮಟ್ಟದಿಂದ ಸು. 367 ಮೀ ಎತ್ತರದಲ್ಲಿರುವ ಪ್ರಸ್ಥಭೂಮಿ. ಇದರ ಮಧ್ಯದಲ್ಲಿರುವ ಪರ್ವತ ಪ್ರದೇಶ 1,698 ಮೀ ವರೆಗೂ ಎತ್ತರವಾಗಿದೆ. ಲಿಬಿಯ ಗಡಿಯ ಬಳಿಯ ನೆಲದ ಸರಾಸರಿ ಎತ್ತರ ಸು.792 ಮೀ ನೈಜರ್ ನದಿ ಈ ಗಣರಾಜ್ಯದ ಮೂಲಕ, ಮಾಲೀ ಗಡಿಯಿಂದ ಲಿಬಿಯದ ಗಡಿಯವರೆಗೆ ಸು.296 ಕಿಮೀ ದೂರ ಹರಿಯುತ್ತದೆ. ದೇಶದ ವಾಯವ್ಯದಲ್ಲಿ ಚಾಡ್ ಸರೋವರ ಇದೆ.

ವಾಯುಗುಣ: ನೈಜರ್ ದೇಶದ್ದು ಉಷ್ಣ ಹಾಗೂ ಶುಷ್ಕ ವಾಯುಗುಣ. ಉತ್ತರದಲ್ಲಿಯ ಅತಿಯಾದ ಶಾಖದಿಂದಾಗಿ ಮಳೆಯ ನೀರು ನೆಲತಾಕುವ ಮುನ್ನವೇ ಆವಿಯಾಗಿಹೋಗುತ್ತದೆ. ದಕ್ಷಿಣದಲ್ಲಿ ವಾರ್ಷಿಕ ಮಳೆ ಜಿಂದರ್‌ನಲ್ಲಿ 22 ಸೆಂಮೀ ಗಳಿಂದ ನೀಯಮೇಯಲ್ಲಿ 76 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆಗಾಲ. ಜುಲೈ–ಆಗಸ್ಟ್‌ನಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ.

ಸಸ್ಯ–ಪ್ರಾಣಿವರ್ಗ: ಉತ್ತರ ಮತ್ತು ಮಧ್ಯ ನೈಜರಿನ ಬಹುಭಾಗ ಸಹರ ಮರುಭೂಮಿಗೆ ಸೇರಿದೆ. ಉತ್ತರದಲ್ಲಿ ಅಪರೂಪವಾಗಿ ಮಳೆ ಬಂದಾಗ ಮಾತ್ರವೇ ಸಸ್ಯ ಸಂಪತ್ತು ಇರುತ್ತದೆ. ನೈಜರ್ ನದಿಯ ದಕ್ಷಿಣಕ್ಕೆ ನೈಜರ್‌ನಲ್ಲಿ ಚಾಡ್ ಸರೋವರದ ಕಡೆಗೆ ಇರುವ ಪ್ರದೇಶದಲ್ಲಿ ಸವನ್ನಾ ಪ್ರರೂಪಿ ಸಸ್ಯವರ್ಗವಿದೆ,




ಅರಣ್ಯಗಳಲ್ಲಿ ಮಹಾಗನಿ, ಬೂರುಗ, ಬಾವೊಬಾಬ್ ಮತ್ತು ಷಿ ಮುಖ್ಯ ಮರಗಳು. ಜಿಂಕೆ, ಸಿಂಹ, ವಾಟರ್‌ಬಕ್, ಚಿರತೆ, ಕತ್ತೆಕಿರುಬ, ಕೋತಿ, ನರುಳ್ಳಿಹಂದಿ, ಅನೇಕ ಬಗೆಯ ಹಕ್ಕಿಗಳು, ಕೀಟಗಳು ಇವೆ. ನೈಜರ್ ನದಿಯಲ್ಲಿ ಮೊಸಳೆ, ನೀರಾನೆ ಇವೆ. ಇಲ್ಲಿರುವ ಇತರ ಪ್ರಾಣಿಗಳು ಕಡಲಾಮೆ, ಹಲ್ಲಿ, ಹೆಬ್ಬಾವು ಮತ್ತು ಇತರ ಹಲವು ಬಗೆಯ ಹಾವುಗಳು.

ಜನ: ಇಲ್ಲಿಯ ಜನರನ್ನು ಸೂಡಾನೀ ನೀಗ್ರೋ ಮತ್ತು ಹ್ಯಾಮೈಟ್ ಎಂದು ವಿಂಗಡಿಸಬಹುದು. ಒಟ್ಟು ಜನಸಂಖ್ಯೆಯಲ್ಲಿ ಶೇ. 75ರಷ್ಟು ಮಂದಿ ನೀಗ್ರೋಗಳು. ಇವರ ಕಸಬು ವ್ಯವಸಾಯ ಅಥವಾ ನೈಜರ್ ನದಿಯಲ್ಲಿ ಮೀನುಗಾರಿಕೆ. ಹ್ಯಾಮೈಟರು ಅಲೆಮಾರಿಗಳು. ಇವರು ಉತ್ತರದಲ್ಲಿ ವಾಸಿಸುತ್ತಾರೆ. ಪ್ರಾಣಿಗಳ ಮಂದೆಯನ್ನು ಸಾಕುವುದು ಇವರ ಕಸಬು. ಉತ್ತರ ಆಫ್ರಿಕದ ಬರ್ಬರರನ್ನು ಹೋಲುವ ಟ್ವಾರೆಗ್‌ಗಳು, ಈಶಾನ್ಯ ಭಾಗದಲ್ಲಿ ವಾಸಿಸುವ ಟುಬುಗಳು, ಮುಖ್ಯವಾಗಿ ಸವನ್ನಾ ಪ್ರದೇಶದ ಅಂಚಿನಲ್ಲಿ ವಾಸಿಸುವ ಅರೆ ಅಲೆಮಾರಿಗಳಾದ ಫುಲಾನಿಗಳು ಇವರೆಲ್ಲ ಹ್ಯಾಮೈಟರು. ನೈಜರಿನ ಜನಸಂಖ್ಯೆಯಲ್ಲಿ ಐದನೆಯ ಒಂದು ಭಾಗದಷ್ಟು ಜನರು ಅಲೆಮಾರಿಗಳು ಅಥವಾ ಅರೆ ಅಲೆಮಾರಿಗಳು. ನೀಗ್ರಾಯಿಡ್ ಜನರಲ್ಲಿ ಹಾವುಸಗಳೂ ಅವರಿಗೆ ಸಂಬಂಧಿಸಿದ ಇತರ ಬುಡಕಟ್ಟುಗಳವರೂ ಆಗ್ನೇಯ ಹಾಗೂ ದಕ್ಷಿಣಮಧ್ಯ ಜಿಲ್ಲೆಗಳಲ್ಲಿ ಪ್ರಮುಖವಾಗಿದ್ದಾರೆ. ಪಶ್ಚಿಮದಲ್ಲಿ ಡ್ಜೆರ್ಮ ಮತ್ತು ಸೋಂಘೈಗಳೂ ಪೂರ್ವದಲ್ಲಿ ಬೆರಿಬೆರಿ ಮತ್ತು ಕಾನೂರಿಗಳೂ ಹೆಚ್ಚಾಗಿದ್ದಾರೆ. ನೈಜರ್‌ನಲ್ಲಿ ಸುಮಾರು ಅರ್ಧ ಲಕ್ಷದಷ್ಟು ವಿದೇಶಿಯರಿದ್ದಾರೆ.

ಭಾಷೆ: ನೈಜರಿನಲ್ಲಿ ಎಷ್ಟು ಬಣಗಳಿವೆಯೋ ಅಷ್ಟು ಭಾಷೆಗಳಿವೆ, ಫ್ರೆಂಚ್ ಅಧಿಕೃತ ಭಾಷೆ. ವ್ಯಾಪಾರದಲ್ಲಿ ಬಳಸುವ ಭಾಷೆ ಹಾವುಸ. ಅರಬರು ಮತ್ತು ಟ್ವಾರೆಗ್‌ಗಳವು ಮಾತ್ರ ಲಿಖಿತ ಭಾಷೆಗಳು. ಅರಬರ ಸೆಮೆಟಿಕ್ ಭಾಷೆ ಮತ್ತು ಟ್ವಾರೆಗರ ಹ್ಯಾಮೈಟಿಕ್ ನುಡಿಯನ್ನು ಬಿಟ್ಟರೆ ಉಳಿದ ಭಾಷೆಗಳು ಚಾದಿಕ್ ಗುಂಪಿಗೆ ಸೇರಿದವು.

ಧರ್ಮ: ನೈಜರಿನ ಸು. 32 ಲಕ್ಷ ಮಂದಿ ಮುಸ್ಲಿಮರು, ಸು. 8 ಲಕ್ಷ ಜನ ಸರ್ವಚೇತನವಾದಿಗಳು, ಕ್ರೈಸ್ತರು ಸು. 25 ಸಾವಿರ. ಇಸ್ಲಾಂ ಧರ್ಮದೊಂದಿಗೆ ಸರ್ವಚೇತನವಾದ ಆಚರಣೆಗಳೂ ಬೆರೆತುಕೊಂಡಿದೆ.

ಪ್ರಮುಖ ಪಟ್ಟಣಗಳು : ನೈಜರ್‌ನಲ್ಲಿ ನಾಲ್ಕು ಪ್ರಮುಖ ಪಟ್ಟಣಗಳಿವೆ. ನೀಯಾಮೇಯ (ಜನಸಂಖ್ಯೆ ಸು. 44,000) ಹಲವು ಸಂಸ್ಕೃತಿಗಳ ಸಂಗಮಸ್ಥಳ. ಅಚ್ಚ ಗ್ರಾಮೀಣ ಆಫ್ರಿಕನ್ ಜೀವನ ವಿಧಾನಗಳನ್ನೂ ಐರೋಪ್ಯ ಶೈಲಿಯನ್ನೂ ವಿದ್ಯಾವಂತ ಆಫ್ರಿಕನರ ಅನುಕರಣ ಶೀಲತೆಯನ್ನೂ ಇಲ್ಲಿ ಕಾಣಬಹುದು. ಜಿಂದರ್ (ಜನಸಂಖ್ಯೆ 1,21,000 – 2005) ಡನಗರನ್ ಎಂಬುದು ಇದರ ಆಫ್ರಿಕನ್ ಹೆಸರು. ಇದು ನೀಯಾಮೆಗಿಂತ ಹಳೆಯದು. ಹಾವುಸರ ಈ ಪಟ್ಟಣ 1926ರವರೆಗೆ ನೈಜರ್‌ನ ರಾಜಧಾನಿಯಾಗಿತ್ತು. ಇನ್ನೊಂದು ಪಟ್ಟಣ ಮರಾಡೀ (ಜನಸಂಖ್ಯೆ 1,13,000–2005). ಇದು ನೈಜೀರಿಯದ ಗಡಿಯ ಬಳಿ ಇದೆ. ನೆಲಗಡಲೆ ಬೆಳೆಯುವ ಪ್ರದೇಶ ಇದು. ಮರುಭೂಮಿಯ ಅಂಚಿನಲ್ಲಿ ಬೆಳೆದಿರುವ ಪಟ್ಟಣ ಟಾವುವ (ಜನಸಂಖ್ಯೆ 45000–2005). ಅಗಾಡೇಜ್ ಮತ್ತೊಂದು ನಗರ (ಜನಸಂಖ್ಯೆ 29000–2005).

ಆರ್ಥಿಕತೆ: ನೈಜರಿನ ಆರ್ಥಿಕತೆ ಎರಡು ವಿಭಿನ್ನ ಅಂಶಗಳಿಂದ ಕೂಡಿದ್ದು. ಉತ್ತರದ ಕಾಕಸಾಯಿಡ್ ಅಲೆಮಾರಿ ಜನರ ಮುಖ್ಯ ಜೀವನ ವಿಧಾನವೆಂದರೆ ಪಶುಪೋಷಣೆ. ದಕ್ಷಿಣದ ನೀಗ್ರೋ ಜನರು ನೆಲೆ ನಿಂತು ವಿಶೇಷವಾಗಿ ಕೃಷಿನಿರತರಾಗಿದ್ದಾರೆ.

ಕೃಷಿ: ನೈಜರಿನ ಜನರಲ್ಲಿ ಶೇ. 80ರಷ್ಟು ಮಂದಿ ಕೃಷಿಕರು. ಆಹಾರಕ್ಕಾಗಿ ಸಾವೆಯೇ ಮುಂತಾದ ಧಾನ್ಯಗಳನ್ನೂ ರಫ್ತಿಗಾಗಿ ನೆಲಗಡಲೆಯನ್ನೂ ಬೆಳೆಯುತ್ತಾರೆ. ಸೋರ್ಗಮ್. ಬತ್ತ, ಮುಸುಕಿನ ಜೋಳ, ಹುರುಳಿ ಮುಂತಾದವೂ ಇತರ ಬೆಳೆಗಳು. ನೆಲಗಡಲೆಯನ್ನು ವಿಶೇಷವಾಗಿ ಜಿಂದರ್ ಪ್ರದೇಶದಲ್ಲಿ ಬೆಳೆಯುತ್ತಾರೆ, ಕಳೆದ ಇಪ್ಪತ್ತು ವರ್ಷಗಳಿಂದ ಹತ್ತಿ ಪ್ರಾಮುಖ್ಯಗಳಿಸುತ್ತಿದೆ. ಇದು ಮೂರನೆಯ ಮುಖ್ಯ ರಫ್ತು ಸರಕು. ನೈಜರಿನ ವ್ಯವಸಾಯ ಮುಖ್ಯವಾಗಿ ಮಳೆಯನ್ನೇ ಅವಲಂಬಿಸಿದೆ.

ಪಶುಸಂಗೋಪನೆ: ಒಟ್ಟು ಪ್ರದೇಶದಲ್ಲಿ ಶೇ. 58ರಷ್ಟು ಭಾಗ ಪಶುಸಂಗೋಪನೆಗೆ ಮೀಸಲಾಗಿದೆ. ಈ ಪ್ರದೇಶದಲ್ಲಿ ವಾರ್ಷಿಕವಾಗಿ 51 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ. ಮಳೆ ಇಲ್ಲದಾಗ ನೀರೂ ಮೇವೂ ಇಲ್ಲದಂತಾಗುವುದರಿಂದ ಇಲ್ಲಿಯ ಪಶುಸಂಪತ್ತಿಗೆ ಆಗಿಂದಾಗ್ಗೆ ವಿಪತ್ತು ಸಂಭವಿಸುತ್ತಿರುವುದುಂಟು. ಇಲ್ಲಿಯ ಪ್ರಾಣಿಗಳು ದನ, ಕುರಿ, ಆಡು, ಕುದುರೆ, ಕತ್ತೆ ಮತ್ತು ಒಂಟೆ, ಹಾಲು ಮತ್ತು ಕ್ಷೀರೋತ್ಪನ್ನ, ಆಕಳ ಚಕ್ಕಳ, ಕುರಿಯ ಮತ್ತು ಮೇಕೆಯ ಚರ್ಮ ಇವು ರಫ್ತಾಗುತ್ತವೆ.

ಮೀನುಗಾರಿಕೆ: ನೈಜರಿನಲ್ಲಿ ಮೀನುಗಾರಿಕೆ ಹೆಚ್ಚಾಗಿ ಬೆಳೆದಿಲ್ಲ. ನೈಜರ್ ನದಿಯಲ್ಲೂ, ಚಾಡ್ ಸರೋವರದ ಮತ್ತು ಇತರ ಒಳನಾಡಿನ ಜಲಾಶಯಗಳಲ್ಲೂ ಅಲ್ಪಸ್ವಲ್ಪ ಮೀನು ಹಿಡಿಯಲಾಗುತ್ತದೆ. ಇದನ್ನು ಸ್ಥಳೀಯವಾಗಿ ಬಳಸಲಾಗುತ್ತದೆ.

ಗಣಿಗಾರಿಕೆ: ಬಿಲ್ಮ ಮತ್ತು ಇತರ ಎಡೆಗಳಲ್ಲಿ ಲವಣ ದೊರಕುತ್ತದೆ. ಕೆಲವೆಡೆಗಳಲ್ಲಿ ನೆಟ್ರಾನ್ ಮತ್ತು ಸೋಡಿಯಂ ನಿಕ್ಷೇಪಗಳಿವೆ. ನೀಯಾಮೆಗೆ ಸು. 59 ಕಿಮೀ ದೂರದಲ್ಲಿ ಆಯಿರ್ ಪರ್ವತಪ್ರದೇಶದಲ್ಲಿ ಯುರೇನಿಯಂ ನಿಕ್ಷೇಪಗಳು ಪತ್ತೆಯಾಗಿವೆ. ಫ್ರಾನ್ಸಿನೊಂದಿಗೆ ಮಾಡಿಕೊಂಡಿರುವ ಒಪ್ಪಂದಕ್ಕೆ ಅನುಗುಣವಾಗಿ ಯುರೇನಿಯಂ ಉತ್ಪಾದನೆ ಮತ್ತು ರಫ್ತು ಕೆಲಸ ನಡೆಯುತ್ತಿದೆ.

ಶಕ್ತಿ ಮತ್ತು ವಿದ್ಯುತ್‌ಚ್ಛಕ್ತಿ: ನೈಜರಿನಲ್ಲಿರುವ ಶಕ್ತಿ ಮೂಲಗಳು ಬಹು ಅಲ್ಪ. ವಿದ್ಯುತ್‌ಚ್ಛಕ್ತಿಯ ಸ್ಥಾಪಿತ ಸಾಮರ್ಥ್ಯ 12.600ಕಿವಾ (1970). ಅತ್ಯಂತ ದೊಡ್ಡ ಡೀಸೆಲ್ ವಿದ್ಯುತ್ ಉತ್ಪಾದನ ಕೇಂದ್ರ ನೀಯಾಮೀಯಲ್ಲಿದೆ. ಇತರ ಕೇಂದ್ರಗಳು ಜಿಂದರ್. ಮರಾಡೀ ಮತ್ತು ಅಗಡೆಸ್ನಲ್ಲಿದೆ. ನೈಜರ್ ನದಿಗೆ ಕಟ್ಟೆಕಟ್ಟಿ ಜಲವಿದ್ಯುತ್ತನ್ನು ಉತ್ಪಾದಿಸುವ ಯೋಜನೆ ಕಾರ್ಯಗತವಾಗುತ್ತಿದೆ. ಯುರೇನಿಯಂನಿಂದ ವಿದ್ಯುತ್ತಿನ ಉತ್ಪಾದನೆ ಮಾಡುವ ಸಾಧ್ಯತೆಯಿದೆ.

ಕೈಗಾರಿಕೆ: ನೈಜರಿನ ರಾಷ್ಟ್ರೀಯ ವರಮಾನದಲ್ಲಿ ಕೈಗಾರಿಕೆಗಳ ಪಾಲು ಕೇವಲ ಶೇ. 3ರಷ್ಟು. ಇವುಗಳಲ್ಲಿ ಉದ್ಯೋಗ ಹೊಂದಿರುವವರ ಸಂಖ್ಯೆ 3000 ಮಾತ್ರ, ಕೈಗಾರಿಕೆಗಳ ಅಭಿವೃದ್ಧಿ ತುಂಬ ನಿಧಾನವಾಗಿ ಸಾಗಿದೆ. ಸ್ಥಳೀಯ ಬೇಡಿಕೆಯ ಮಿತಿ. ಸಾರಿಗೆಯ ಅಧಿಕವೆಚ್ಚ, ಸಾಮಗ್ರಿಗಳ ಕೊರತೆ, ಕುಶಲ ಕೆಲಸಗಾರರ ಅಭಾವ– ಇವು ಇದಕ್ಕೆ ಕಾರಣ. ಆಗಡೆಸ್ ಪ್ರದೇಶದಲ್ಲಿರುವ ಯುರೇನಿಯಂ ಪರಿಷ್ಕರಣ ಕೇಂದ್ರ, ಜಿಂದರ್‌ನಲ್ಲಿರುವ ಹಿಟ್ಟು ಗಿರಣಿ, ನೀಯಾಮೆ ಬಳಿಯಲ್ಲಿಯ ಸಿಮೆಂಟ್ ಕಾರ್ಖಾನೆ ಇವು ಪ್ರಮುಖ ಕೈಗಾರಿಕೆಗಳು. ಇಟ್ಟಿಗೆ ತಯಾರಿಕೆ, ಹತ್ತಿ ಹಿಂಜುವುದು, ಲೋಹ ಹದಗಾರಿಕೆ, ಹೈನುಗಾರಿಕೆ, ಬಣ್ಣತಯಾರಿಕೆ ಇವು ಇತರ ಕೈಗಾರಿಕೆಗಳು.

ಸಾರಿಗೆ: ಸಾರಿಗೆ ಸೌಲಭ್ಯ ಮುಂದುವರಿದಿಲ್ಲ. ನೈಜರ್ ದೇಶ ಭೂ ಆವೃತವಾಗಿದೆ, ಇದು ಬಳಸುವ ಎರಡು ಬಂದರುಗಳೆಂದರೆ ದಹೋಮಿಯಲ್ಲಿರುವ ಕೋಟಾನೂ, ಮತ್ತು ನೈಜೀರಿಯದಲ್ಲಿರುವ ಲಗೋಸ್, ಇವುಗಳಲ್ಲಿ ಒಂದೊಂದೂ 960 ಕಿಮೀ ಗಿಂತ ದೂರದಲ್ಲಿದೆ, ನೈಜರಿನಲ್ಲಿ ರೈಲುಮಾರ್ಗಗಳಿಲ್ಲ ಒಂಟೆಗಳ ಕಾರವಾನುಗಳು ಉತ್ತರದ ಸಾಹೆಲ್ ಪ್ರದೇಶದಲ್ಲಿ ಇಂದಿಗೂ ಇವೆ. ಚಾಡ್ ಸರೋವರದಲ್ಲಿ ಮತ್ತು ನೈಜರ್ ನದಿಯ ಮೇಲೆ ದೋಣಿಗಳನ್ನು ಬಳಸಲಾಗುತ್ತದೆ. ಕುದುರೆಸವಾರಿ, ಕಾಲುನಡಿಗೆ ಇವೂ ವ್ಯಾಪಕವಾಗಿವೆ. ಸಾರಿಗೆಸೌಲಭ್ಯ ಬಲು ಕಡಿಮೆ. ನೈಜರಿನ ಮುಖ್ಯ ರಸ್ತೆಮಾರ್ಗ ಮಾಲಿ ಗಡಿಯಿಂದ ದೇಶವನ್ನು ಪ್ರವೇಶಿಸಿ ನೈಜರ್ ನದಿಯ ದಂಡೆಯ ಮೇಲೆ ಸಾಗಿ ನೀಯಾಮೆಯ ಪೂರ್ವದ ಕಡೆಗೆ ತಿರುಗಿ ಜಿಂದರ್ ಅನ್ನು ತಲುಪುತ್ತದೆ. ಇದನ್ನು ಚಾಡ್ ಸರೋವರದ ದಂಡೆಯ ಮೇಲಿರುವ ನ್ಗೂಯಿಗ್ಮಿಗೆ ವಿಸ್ತರಿಸಲಾಗುತ್ತಿದೆ. ಈ ಕೇಂದ್ರಿಯ ಮಾರ್ಗದಿಂದ ದಕ್ಷಿಣಾಭಿಮುಖವಾಗಿ ಹಲವು ರಸ್ತೆಗಳು ಕವಲೊಡೆಯುತ್ತವೆ. ಉತ್ತರದ ಕಡೆಯಲ್ಲಿ ಟಾವುವ ಮತ್ತು ಟಾನೌಟ್‌ಗಳ ಮೂಲಕ ಸಾಗುವ ರಸ್ತೆಗಳು ಆಗಡಸ್ ಬಳಿ ಒಂದುಗೂಡಿ ನೈಜರ್ಗೂ, ಆಲ್ಜೀರಿಯಕ್ಕೂ ಸಂಪರ್ಕ ಕಲ್ಪಿಸುತ್ತವೆ. ಟಾವುವ. ಮರಾಡೀ, ಜಿಂದರ್. ಆಗಡಸ್, ಆರ್ಲಿಟ್‌ಗಳಿಗೆ ಆಂತರಿಕ ವಿಮಾನ ಸಂಪರ್ಕವಿದೆ. ನೀಯಾಮೀಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇಲ್ಲಿಂದ ಪಶ್ಚಿಮ ಆಫ್ರಿಕದ ಮುಖ್ಯ ನಗರಗಳಿಗೂ ಯುರೋಪಿಗೂ ವಿಮಾನ ಸಂಪರ್ಕವುಂಟು. ಆರ್ಲಿಟ್‌ನಲ್ಲಿ ಯುರೇನಿಯಂ ಉತ್ಪಾದನೆಯ

ಕೆಲಸ ಮುಂದುವರಿದಂತೆ ಸಹರದ ಮೂಲಕ ಸಾರಿಗೆ ಮಾರ್ಗ ನಿರ್ಮಾಣವಾಗಬಹುದು. ದಹೋಮಿಯ ಪಾರಕ್ಕೂನಿಂದಲೂ ಉತ್ತರ ವೋಲ್ಟದ ವಾಗಡೂಗೂವಿನಿಂದಲೂ ರೈಲುಮಾರ್ಗಗಳನ್ನು ನೈಜಿರಿನ ಗಡಿಗೆ ವಿಸ್ತರಿಸುವ ಸಾಧ್ಯತೆಯುಂಟು. (ಪಿ.ಐ.)

**ನೈಜೀರಿಯ:** ಪಶ್ಚಿಮ ಆಫ್ರಿಕದಲ್ಲಿರುವ ಒಂದು ಗಣರಾಜ್ಯ. ನೈಜೀರಿಯ ಸಂಯುಕ್ತ ಗಣರಾಜ್ಯ ಎಂಬುದು ಇದರ ಅಧಿಕೃತ ಹೆಸರು. ಇದು ಆಫ್ರಿಕದಲ್ಲಿ 13ನೆಯ ಅತಿ ದೊಡ್ಡ ದೇಶ. ಸ್ಥೂಲವಾಗಿ ಉ.ಅ. $4^0$–$14^0$ ಮತ್ತು ಪೂ.ರೇ. $3^0$–$14^0$ ನಡುವೆ ದಕ್ಷಿಣೋತ್ತರವಾಗಿ ಸು. 1,050 ಕಿಮೀ ಮತ್ತು ಪೂರ್ವ ಪಶ್ಚಿಮವಾಗಿ ಸು. 1,120 ಕಿಮೀ ಹಬ್ಬಿರುವ ಈ ದೇಶದ ದಕ್ಷಿಣ ಕರಾವಳಿಯ ಉದ್ದ ಸು. 800 ಕಿಮೀ. ನೈಜೀರಿಯದ ವಿಸ್ತೀರ್ಣ 9,23,773 ಚ.ಕಿಮೀ. ಜನಸಂಖ್ಯೆ ಸು. 131,530,000 (2005) ಜನಸಾಂದ್ರತೆ 142 ಪ್ರತಿ ಚ.ಕಿಮೀಗೆ ಆಫ್ರಿಕದ ದೇಶಗಳ ಪೈಕಿ ಅತಿ ಹೆಚ್ಚಿನ ಜನಸಂಖ್ಯೆ ಇರುವ ದೇಶ. ರಾಜಧಾನಿ ಅಬುಜ. ಜನಸಂಖ್ಯೆ 3,39,000 (2005).




ಭೂರಚನೆ: ನೈಜೀರಿಯದ ಶಿಲಾಸ್ತೋಮಗಳನ್ನು ಪ್ರೀಕೇಂಬ್ರಿಯನ್, ಕ್ರಿಟೇಷಿಯಸ್ ಮತ್ತು ಟರ್ಷಿಯರಿ ಭೂ ಕಲ್ಪದಲ್ಲಿ ಸೇರಿಸಬಹುದು. ಪ್ರೀಕೇಂಬ್ರಿಯನ್ ಶಿಲಾಸ್ತೋಮ ನೈಜೀರಿಯದ ಬಹುಭಾಗವನ್ನು ಆಕ್ರಮಿಸುತ್ತದೆ. ಇದರಲ್ಲಿ ನೈಸ್ ಮಿಗ್ಮಟೈಟ್, ಬೆಸಾಲ್ಟ್ ಮತ್ತು ಗ್ರಾನೈಟ್ ಶಿಲೆಗಳಿವೆ. ಆಗ್ನೇಯ ನೈಜೀರಿಯದಲ್ಲಿ ಇವನ್ನು ಕಾಣಬಹುದು. ಶಾಖ ಮತ್ತು ಒತ್ತಡಗಳಿಂದ ಈ ಶಿಲೆಗಳು ರೂಪಾಂತರಗೊಂಡಿವೆ. ಪ್ರಮುಖವಾಗಿ ಇವು ಮಲ್ಲಮ್ ಟಾಂಕೊ, ಸಾಂಡೊ ಮತ್ತು ಮೂಯಿಕಾವೋಂಗ್ ಪ್ರದೇಶಗಳಲ್ಲಿ ಸ್ಫುಟವಾಗಿ ಹೊರಹೊಮ್ಮಿವೆ. ಕ್ರಿಟೇಷಸ್ ಮತ್ತು ಟರ್ಷಿಯರಿ ಯುಗದ ಶಿಲೆಗಳಲ್ಲಿ ಜಲಶಿಲೆಗಳು ಮತ್ತು ಲಾವಾರಸ ಘನೀಭವಿಸಿದುದರಿಂದ ಆದ ಶಿಲೆಗಳು ವಿರಳವಾಗಿದ್ದು ಹಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿವೆ. ಪ್ರೀಕೇಂಬ್ರಿಯನ್ ಶಿಲೆಗಳಲ್ಲಿ ತವರ ಮತ್ತು ಕೊಲಂಬೈಟ್ ಹೇರಳವಾಗಿ ದೊರಕುತ್ತವೆ. ಟರ್ಷಿಯರಿ ಯುಗದ ಜಲಜ ಶಿಲೆಗಳಲ್ಲಿ ಪೆಟ್ರೋಲಿಯಮ್ ಮತ್ತು ನೈಸರ್ಗಿಕ ಅನಿಲ ಹಾಗೂ ಕಲ್ಲಿದ್ದಲ ನಿಕ್ಷೇಪಗಳು ಬೀಳುವ ಅರಣ್ಯ ಪ್ರದೇಶದ ಮಣ್ಣು ಹಾಗೂ ತೀರ ಪ್ರದೇಶದ ಲ್ಯಾಟರೈಟ್ ಮಣ್ಣು ಫಲವತ್ತಾಗಿವೆ.

ಮೇಲ್ಮೈ ಲಕ್ಷಣ: ನೈಜೀರಿಯ ದಕ್ಷಿಣದ ಕರಾವಳಿಯ ಉದ್ದಕ್ಕೂ 16–96 ಕಿಮೀ ಅಗಲದ ತಗ್ಗಾದ ನೆಲವಿದೆ. ಜೌಗುವಿನಿಂದ ಕೂಡಿದ ಈ ಪ್ರದೇಶ ಗುಲ್ಮ ವೃಕ್ಷಗಳಿಂದ ಆವೃತವಾಗಿದ್ದು, ನೈಜರ್ ನದಿಯ ಮುಖಜಭೂಮಿಯ ಕವಲುಗಳೂ ಇತರ ಹಲವಾರು ಸಣ್ಣ ನದಿಗಳೂ ಕೊರಕಲುಗಳೂ ಇದನ್ನು ಅಲ್ಲಲ್ಲಿ ಕತ್ತರಿಸುತ್ತವೆ. ಈ ನೆಲದ ಉತ್ತರಕ್ಕೆ 80–160 ಕಿಮೀ ಅಗಲದ ಪ್ರದೇಶ ಅಲೆಯಲೆಯಾಗಿ ಏರಿಳಿತಗಳುಳ್ಳ ನೆಲ. ಇಲ್ಲಿ ಉಷ್ಣವಲಯದ ಮಳೆಗಾಡುಗಳಿವೆ. ಇದರಿಂದಾಚೆಗೆ ನೆಲ ಏರುತ್ತ ಹೋಗುತ್ತದೆ. ಈ ಪ್ರದೇಶದ ಸರಾಸರಿ ಎತ್ತರ 610 ಮೀ ಆದರೆ ಪೂರ್ವಭಾಗದಲ್ಲಿ ಇದು ಸು. 1820 ಮೀ ವರೆಗೂ ಏರುತ್ತದೆ. ಇಲ್ಲಿಯ ಸಸ್ಯ ಸವನ್ನಾ ಹುಲ್ಲುಗಾವಲಾಗಿ ವ್ಯತ್ಯಾಸ ಹೊಂದುತ್ತದೆ. ಉತ್ತರದಲ್ಲಿ ಸಹರ ಮರುಭೂಮಿಯ ದಕ್ಷಿಣದ ಅಂಚಿನವರೆಗೂ ನೈಜೀರಿಯ ಹಬ್ಬಿದೆ.

ನದಿಗಳು: ನೈಜೀರಿಯದ ಮುಖ್ಯನದಿ ನೈಜರ್. ಇದು ಆಫ್ರಿಕದ ಮೂರನೆಯ ದೊಡ್ಡ ನದಿ. ಇದು ಈಶಾನ್ಯ ಭಾಗದಲ್ಲಿ ನೈಜೀರಿಯವನ್ನು ಪ್ರವೇಶಿಸಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಅನಂತರ ತನ್ನ ಮುಖ್ಯ ಉಪನದಿಯಾದ ಬೇನ್ವೇಯನ್ನು ಲಕೋಜ ಪಟ್ಟಣದ ಬಳಿ ಕೂಡಿಕೊಂಡು ದಕ್ಷಿಣ ದಿಕ್ಕಿನಲ್ಲಿ ಮುಂದುವರಿದು ಮುಖಜಭೂಮಿಯಲ್ಲಿ ಹಲವಾರು ಕವಲುಗಳಾಗಿ ಒಡೆದು ಗಿನೀಖಾರಿಯಲ್ಲಿ ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಈ ನದಿಯ ಉದ್ದ 4184 ಕಿಮೀ. ನೈಜರ್‌ನ ಇತರ ಮುಖ್ಯ ಉಪನದಿಗಳು ಸೋಕಟೋ ಮತ್ತು ಕಡೂನ. ನೈಜರ್ ನದಿಯ ಜಲಾನಯನ ಭೂಮಿ ದಕ್ಷಿಣದ ಕಡೆಗೆ ಇಳಿಜಾರಾಗಿದೆ. ಮಧ್ಯದ ಪ್ರಸ್ಥಭೂಮಿಯಿಂದ ಉತ್ತರ ಮತ್ತು ಪೂರ್ವದ ಕಡೆಗೆ ಹರಿಯುವ ನದಿಗಳು ಚಾಡ್ ಸರೋವರವನ್ನು ಸೇರುತ್ತವೆ.

ವಾಯುಗುಣ: ನೈಜೀರಿಯ ಸಂಪೂರ್ಣವಾಗಿ ಉಷ್ಣವಲಯದಲ್ಲಿದ್ದರೂ ಅಲ್ಲಿಯ ವಿವಿಧ ಪ್ರದೇಶಗಳ ವಾಯುಗುಣದಲ್ಲಿ ವ್ಯತ್ಯಾಸಗಳಿವೆ. ಸಮುದ್ರತೀರದ ಬಳಿ ಋತುಗಳಲ್ಲಿ º ÉÆÃ¸À«Ä ¸ÀgÁ¸Àj 32$^0$ಸೆ. ಗಿಂತ ಹೆಚ್ಚಿನ ಉಷ್ಣತೆ ಬಲು ಅಪರೂಪ. ಆದರೆ ವಾತಾವರಣದಲ್ಲಿ ತೇವ ಹೆಚ್ಚಾಗಿರುತ್ತದೆ. ರಾತ್ರಿ ಹೆಚ್ಚು ಸೆಕೆ. ಒಳನಾಡಿನಲ್ಲಿ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಮಳೆಗಾಲ. ಆಗ ಉಷ್ಣತೆ ಕಡಿಮೆ ಇರುತ್ತವೆ. ನವೆಂಬರಿನಿಂದ ಮಾರ್ಚ್‌ವರೆಗೆ ಶುಷ್ಕ ಹವೆ ಇರುತ್ತದೆ. ನಡುಹಗಲಿನ ಉಷ್ಣತೆ 38$^0$ಸೆ. ನ್ನೂ ಮೀರುವುದುಂಟು. ಆದರೆ ರಾತ್ರಿ ತಂಪಾಗಿರುತ್ತದೆ. ಜಾಸ್ ಪ್ರಸ್ಥಭೂಮಿಯ ಮೇಲೆ ಉಷ್ಣತೆ ಸಾಮಾನ್ಯವಾಗಿ ಹದವಾಗಿರುತ್ತದೆ.

ಕರಾವಳಿಯಲ್ಲಿಯ ಸರಾಸರಿ ಮಳೆ ಪಶ್ಚಿಮದಲ್ಲಿ 180 ಸೆಂಮೀ ಗಳಿಂದ ಪೂರ್ವದ ಕೆಲವು ಭಾಗಗಳಲ್ಲಿ 431 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ: ಮಧ್ಯ ನೈಜೀರಿಯದಲ್ಲಿ 127 ಸೆಂಮೀ ಗಳಿಗೂ ಅತ್ಯಂತ ಉತ್ತರದಲ್ಲಿ 127 ಸೆಂಮೀ ಗಳಿಗೂ ಕಡಿಮೆಯಾಗುತ್ತದೆ.

ನೈಜೀರಿಯದ ಮೇಲೆ ಪ್ರಭಾವ ಬೀರುವ ಮಾರುತಗಳು ಎರಡು. ಈಶಾನ್ಯದಿಂದ ಬೀಸುವ ಮಾರುತ ಬಿಸಿಯಾಗಿಯೂ ಶುಷ್ಕವಾಗಿಯೂ ಇರುತ್ತದೆ. ಇದು ಮರುಭೂಮಿಯಿಂದ ಕೆಂಪನೆಯ ದೂಳನ್ನು ಹೊತ್ತು ತರುತ್ತದೆ. ಇದರಿಂದ ಹಗಲು ಬಿಸಿ ಹೆಚ್ಚು; ರಾತ್ರಿ ತಂಪಾಗಿರುತ್ತದೆ. ನೈಋತ್ಯದಿಂದ ಬೀಸುವ ಮಾರುತ ಮೋಡದಿಂದ ಕೂಡಿದ್ದು ಮಳೆ ಸುರಿಸುತ್ತದೆ.

ಸಸ್ಯಪ್ರಾಣಿವರ್ಗ: ನೈಜೀರಿಯದ ವಾಯುಗುಣಕ್ಕೆ ಅನುಗುಣವಾಗಿ ಅಲ್ಲಿಯ ಸಸ್ಯವರ್ಗದ ವಿಂಗಡಣೆಯಾಗಿದೆ. ಜವುಗಿನಲ್ಲೂ ಅಧಿಕ ಮಳೆಯಾಗುವಲ್ಲೂ ಬೆಳೆಯುವ ಸಸ್ಯಗಳು ಒಂದು ವಿಧ. ಸವನ್ನಾ ಹುಲ್ಲುಗಾವಲು ಇನ್ನೊಂದು ಬಗೆ. ಕರಾವಳಿಯಲ್ಲಿ ಗುಲ್ಮವೃಕ್ಷಗಳು ಬೆಳೆಯುತ್ತವೆ. ಸ್ವಲ್ಪ ಹಿಂಬದಿಗೆ ಹೆಚ್ಚು ತೇವದಲ್ಲಿ ತಾಳೆ, ಅಬೂರ ಮತ್ತು ಮಹಾಗನಿ ಮರಗಳ ಕಾಡುಗಳಿವೆ. ಇದಕ್ಕೂ ಉತ್ತರದಲ್ಲಿ ಮಳೆಗಾಡುಗಳಿವೆ. ಇವುಗಳದ್ದು ಸು. 128 ಕಿಮೀ ಅಗಲದ ಒಂದು ಪಟ್ಟೆ. ಇಲ್ಲಿ ಸು. 60 ಮೀ ಗಳಷ್ಟು ಎತ್ತರಕ್ಕೆ ಬೆಳೆಯುವ ಮರಗಳುಂಟು. ಆಫ್ರಿಕದ ಮಹಾಗನಿ, ಇರೋಕೊ, ಆಫ್ರಿಕದ ಅಕ್ರೋಟು ಇವು ಇಲ್ಲಿಯ ಮುಖ್ಯ ಮರಗಳು. ಇನ್ನೂ ಒಳಗಿನ ಪ್ರದೇಶದಲ್ಲಿ ಎತ್ತರದ ಹುಲ್ಲು, ಕುಬ್ಜ ಪರ್ಣಪಾತಿ ಮರಗಳು ಇವೆ. ಇದು ಸವಾನಾ ಹುಲ್ಲುಗಾಡು ಪ್ರದೇಶ.

ಮಳೆಗಾಡಿನ ಪ್ರದೇಶದಲ್ಲಿ ದೊಡ್ಡ ಮೃಗಗಳಿಲ್ಲ. ಗೊರಿಲ್ಲಾ, ಚಿಂಪಾಂಜಿ ಇವುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಬಬೂನ್ ಕೋತಿಗಳೂ ಇವೆ. ಮೊಸಳೆ, ಹಲ್ಲಿ, ಹಾವು ಮುಂತಾದ ಸರೀಸೃಪಗಳು ಅಧಿಕವಾಗಿವೆ. ಅನೇಕ ಬಗೆಯ ಚಿಗರಿಗಳು ಇವೆ. ನೀರಾನೆ, ಆನೆ, ಜಿರಾಫೆ, ಸಿಂಹ–ಇವು ಅಲ್ಲಲ್ಲಿ ಇವೆ. ಇವುಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಚಿರತೆ, ಕಿರುಬ, ಕಾಡುಬೆಕ್ಕು ಹೆಚ್ಚಾಗಿದೆ. ನೈಜೀರಿಯದಲ್ಲಿ ಪಕ್ಷಿಗಳು ಹೆಚ್ಚಾಗಿವೆ.

ಜನಜೀವನ: ಇಲ್ಲಿಯ ಪ್ರಧಾನ ಬುಡಕಟ್ಟು ಪಶ್ಚಿಮ ಆಫ್ರಿಕದ ನೀಗ್ರೋ, ಇತರ ಬುಡಕಟ್ಟುಗಳೊಂದಿಗೆ ನೀಗ್ರೋಗಳ ಸಂಕರವಾಗಿದ್ದರೂ ನೀಗ್ರೋ ಲಕ್ಷಣಗಳೇ ವಿಶೇಷವಾಗಿ ಕಂಡುಬರುತ್ತವೆ. ಆಗ್ನೇಯ ಅರಣ್ಯಪ್ರದೇಶದಲ್ಲಿ ಶುದ್ಧ ನೀಗ್ರೋ ಬುಡಕಟ್ಟನ್ನು ಕಾಣಬಹುದು. ಆದರೆ ನೈಜೀರಿಯದ ಬಹುಭಾಗದ ಜನರದು ನೀಗ್ರೋ ಮೂಲಲಕ್ಷಣವಾಗಿದೆ. ಮೆಡಿಟರೇನಿಯನ್ ಮೂಲದ ಫುಲಾನಿ ಎಂಬುದು ನೀಗ್ರೇತರ ಬುಡಕಟ್ಟು. ಈ ಬುಡಕಟ್ಟಿನವರು ಉತ್ತರದಲ್ಲಿ ವ್ಯಾಪಕವಾಗಿದ್ದರೂ ನೀಗ್ರೋಗಳೊಂದಿಗೆ ಬೆರೆತುಹೋಗಿದ್ದಾರೆ. ಸೆಮೆಟಿಕ್ ಷುವಾ ಅರಬರ ಇನ್ನೊಂದು ಬುಡಕಟ್ಟು, ಇವರು ಈಶಾನ್ಯ ತುದಿಯಲ್ಲಿ ಚಾಡ್ ಸರೋವರದ ಪ್ರದೇಶಕ್ಕೆ ಸೀಮಿತಗೊಂಡಿದ್ದಾರೆ.

ಜನಾಂಗೀಯವಾಗಿ ಇಲ್ಲಿಯ ಜನರನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಪಶ್ಚಿಮದ ಮತ್ತು ಮಧ್ಯಪಶ್ಚಿಮದ ರಾಜ್ಯಗಳಲ್ಲಿ ಯೆರುಬರು ಪ್ರಧಾನ, ಇಬೊಗಳು ಹಿಂದೆ ದೇಶಾದ್ಯಂತ ಇದ್ದರು. ಈಗ ಇವರು ಆಗ್ನೇಯ ಮತ್ತು ಪೂರ್ವಮಧ್ಯ ರಾಜ್ಯಗಳಲ್ಲಿದ್ದಾರೆ. ವಾಯವ್ಯ, ಉತ್ತರಮಧ್ಯ, ಈಶಾನ್ಯರಾಜ್ಯಗಳಲ್ಲೂ ಕ್ವಾರ, ಕಾನೋ ಮತ್ತು ಬೇನ್ವೇ–ಪ್ಲೇಟೋ ರಾಜ್ಯಗಳಲ್ಲೂ ಇರುವ ಗುಂಪು ಹಾವುಸಗಳದು. ಇತರ ಗುಂಪುಗಳು ಇಡೊ, ಇಬಿಬಿಯೊ. ಇಜಾವ್, ಪುಲಾನಿ, ಕಾವೂರಿ, ನುಪೆ ಮತ್ತು ಟಿವ್, ನೈಜೀರಿಯದಲ್ಲಿರುವ 250 ಭಾಷಾಗುಂಪುಗಳ ಪೈಕಿ 14ನ್ನು ಬಿಟ್ಟು ಉಳಿದವೆಲ್ಲ ಉತ್ತರದಲ್ಲಿವೆ.

ಭಾಷೆ: ನೈಜೀರಿಯದ ಅಧಿಕೃತ ಭಾಷೆ ಇಂಗ್ಲಿಷ್. 250 ದೇಶಿಯ ನುಡಿಗಳಲ್ಲಿ ಹಾವುಸ ಪ್ರಧಾನ. ಇದು ಉತ್ತರ ನೈಜೀರಿಯದ ಶೇ. 40ಕ್ಕಿಂತ ಹೆಚ್ಚಿನ ಜನರ ಮಾತೃಭಾಷೆ. ಅಲ್ಲಿ ಇದೂ ಅಧಿಕೃತ ಭಾಷೆ.

ಧರ್ಮ: ರಾಜ್ಯದ ಆರು ಉತ್ತರ ರಾಜ್ಯಗಳಲ್ಲಿಯ ಜನರ ಮೂರನೆಯ ಎರಡಷ್ಟು ಮಂದಿ ಮುಸ್ಲಿಮರು, ಲಗೋಸ್, ಮಧ್ಯ ಪಶ್ಚಿಮ ಮತ್ತು ಪಶ್ಚಿಮ ರಾಜ್ಯಗಳಲ್ಲಿ ಕ್ರೈಸ್ತರೂ ಮುಸ್ಲಿಮರೂ ಸರ್ವಚೇತನವಾದಿಗಳೂ ಹೆಚ್ಚು ಕಡಿಮೆ ಸಮಸಮವಾಗಿ ಇದ್ದಾರೆ. ಪೂರ್ವ ಮಧ್ಯ, ಆಗ್ನೇಯ ಮತ್ತು ರಿವರ್ಸ್ ರಾಜ್ಯಗಳಲ್ಲಿ ಮುಸ್ಲಿಮರು. ಪ್ರಧಾನ, ಒಟ್ಟು ಜನಸಂಖ್ಯೆಯಲ್ಲಿ ಸು. ಶೇ. 44ರಷ್ಟು ಮಂದಿ ಮುಸ್ಲಿಮರು, ಶೇ. 22 ಕ್ರೈಸ್ತರು, ಉಳಿದವರು ಸರ್ವಚೇತನವಾದಿಗಳು.

ಆರ್ಥಿಕತೆ: ನೈಜೀರಿಯ ವ್ಯವಸಾಯಪ್ರಧಾನ ದೇಶ. ಮುಖ್ಯ ಬೆಳೆಗಳು ಬತ್ತ, ಮುಸುಕಿನಜೋಳ, ಸೋರ್ಗಮ್, ಗೆಣಸು, ಸುವರ್ಣಗೆಡ್ಡೆ, ಯಾಮ್, ನೆಲಗಡಲೆ, ಹತ್ತಿ, ತೆಂಗು, ಕಬ್ಬು, ಕೋಕೋ, ರಬ್ಬರ್, ಬಾಳೆ ಮತ್ತು ನಿಂಬೆ ಜಾತಿಯ ಹಣ್ಣುಗಳು.

ದನ ಮತ್ತು ಕುರಿಗಳ ಸಾಕಣೆ ವ್ಯಾಪಕವಾಗಿದೆ, ಮೀನುಗಾರಿಕೆ ಬೆಳೆದಿದೆ. ಕರಾವಳಿ ಹಾಗು ಒಳನಾಡಿನಲ್ಲಿ ಮೀನುಗಾರಿಕೆ ಜನರ ಮುಖ್ಯ ಕಸುಬು.

ಅರಣ್ಯ: ದಕ್ಷಿಣದ ಅರಣ್ಯ ಭಾಗಗಳನ್ನು ಕಡಿದು ವ್ಯವಸಾಯಕ್ಕೆ ತಂದಿದ್ದಾರೆ. ಚೌಬೀನೆಗೆ ಯೋಗ್ಯವಾದ ಮರಗಳು ಹೆಚ್ಚಾಗಿವೆ. ರಾಜ್ಯದ ಮುಕ್ಕಾಲು ಭಾಗ ಹುಲ್ಲುಗಾವಲು.

ಕೈಗಾರಿಕೆ: ಸಿಮೆಂಟ್, ಹತ್ತಿ, ಬಟ್ಟೆ, ಗಾಜು ಮತ್ತು ಅಲ್ಯೂಮಿನಿಯಂ ಸಾಮಾನುಗಳು, ಸಿಗರೇಟ್, ಚರ್ಮಹದಗಾರಿಕೆ, ಹಡಗು ತಯಾರಿಕೆ, ಚೌಬೀನೆ ಕಾರ್ಖಾನೆಗಳಿವೆ. ಹೈನುಗಾರಿಕೆಯೂ ಒಂದು ಉದ್ಯಮ.

ಖನಿಜಗಳು: ಪೆಟ್ರೋಲಿಯಂ, ತವರ ಮತ್ತು ಕೊಲಂಬೈಟ್ ಮುಖ್ಯ ಖನಿಜಗಳು, ನೈಜೀರಿಯದ ನಿರ್ಯಾತದ ಒಟ್ಟು ಮೌಲ್ಯದಲ್ಲಿ ಸುಮಾರು ಅರ್ಧದಷ್ಟು ಪೆಟ್ರೋಲಿಯಂ ನಿರ್ಯಾತದಿಂದ ಬರುತ್ತದೆ. ಪಶ್ಚಿಮ ಆಫ್ರಿಕದಲ್ಲಿ ಕಲ್ಲಿದ್ದಲು ಉತ್ಪಾದಿಸುವ ರಾಷ್ಟ್ರ ಇದೊಂದೇ.

ನಾಣ್ಯ: 1973ರಲ್ಲಿ ನೈಜೀರಿಯದಲ್ಲಿ ದಶಮಾಂಶ ನಾಣ್ಯಪದ್ಧತಿ ರೂಢಿಗೆ ಬಂತು. ಇಲ್ಲಿಯ ನಾಣ್ಯ ನೈರ. ಇದನ್ನು 100ಕೋಟೊಗಳಾಗಿ ವಿಂಗಡಿಸಲಾಗಿದೆ.

ಸಾರಿಗೆ: ನೈಜೀರಿಯದಲ್ಲಿ ರೈಲ್ವೆ ಕಾರ್ಪೊರೇಷನ್ ಸ್ಥಾಪಿಸಲಾಗಿದೆ (1955). ಲಗೋಸ್–ಮೈದುಗರಿ, ಪೋರ್ಟ ಹಾರ್‌ಕೋರ್ಟ–ಡೀಪ್‌ವಾಟರ್ ಕ್ವೇ ಇವು ಮುಖ್ಯಮಾರ್ಗಗಳು. ಇವಕ್ಕೆ ಹಲವು ಶಾಖೆಗಳಿವೆ. ದೇಶದಲ್ಲಿರುವ ಒಟ್ಟು ರೈಲುಮಾರ್ಗಗಳ ಉದ್ದ 3.504 ಕಿಮೀ. ಮೋಟಾರು ರಸ್ತೆಗಳ ಉದ್ದ 88.000 ಕಿಮೀ ನೈಜೀರಿಯದ ನದೀಮಾರ್ಗಗಳು ಸು. 20.000 ಕಿಮೀ. ದೇಶದ ಪ್ರಮುಖ ರೇವುಗಳು ಲೇಗಾಸ್ ಮತ್ತು ಪೋರ್ಟ ಹಾರ್ಕೋರ್ಟ. ಯುರೋಪ್, ಅಮೆರಿಕ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ದೂರಪ್ರಾಚ್ಯ ಮೊದಲಾದ ಕಡೆಗಳಿಗೆ ಜಹಜುಗಳು ಹೋಗಿಬರುತ್ತವೆ. ಒಳನಾಡಿನ ರೇವುಗಳ ಪೈಕಿ ನೈಜರ್ ನದಿಯ ಮೇಲೆ ಇರುವ ಬುರುಟು ಮತ್ತು ವಾರಿ ನದಿಯ ಮೇಲಿನ ವಾರಿ ಮುಖ್ಯವಾದುವು. ಒಳನಾಡಿನ ವಿಮಾನಯಾನವನ್ನು ನೈಜೀರಿಯ ಏರ್ವೇಸ್ ಸಂಸ್ಥೆ ನಿರ್ವಹಿಸುತ್ತದೆ. ಉತ್ತರ ಆಫ್ರಿಕ, ಘಾನ, ಸಿಯೆರ ಲಿಯೋನ್, ಜಾಂಬಿಯ, ಐವರಿಕೋಸ್ಟ್, ಲೆಬನಾನ್, ಲೈಬೀರಿಯ, ಕ್ಯಾಮರೂನ್ ಮೊದಲಾದ ಕಡೆಗಳಿಗೆ ವಿಮಾನ ಸಂಚಾರವಿದೆ. ರಾಜ್ಯದಲ್ಲಿ ಒಟ್ಟು 18 ವಿಮಾನ ನಿಲ್ದಾಣಗಳಿವೆ. ನೈಜೀರಿಯ ಒಕ್ಕೂಟದ ಪ್ರತಿ ರಾಜ್ಯದ ಆಡಳಿತಕೇಂದ್ರದಲ್ಲೂ ಒಂದು ವಿಮಾನ ನಿಲ್ದಾಣವಿದೆ. ಲಗೋಸ್ ಮತ್ತು ಕಾನೋದಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ.

ನಗರಗಳು: ನೈಜೀರಿಯದ ಕೆಲವು ಪ್ರಮುಖ ನಗರಗಳು ಇಬಾಡನ್ (ಜನಸಂಖ್ಯೆ 1,060,000). ಆಗ್ಬಮೋಷೋ, ಕಾನೋ, ಓಷಾಗ್ಬೋ, ಈಲರೀನ್, ಅಬೀಯೋಕಟ ಮತ್ತು ಪೋರ್ಟ ಹಾರ್ಕೋರ್ಟ. (ವಿ.ಜಿ.ಕೆ.)

**ನೈನೀತಾಲ್:** ಉತ್ತರಾಂಚಲ ರಾಜ್ಯದ ಕುಮಾವೂ ವಿಭಾಗದ ಪಟ್ಟಣ ಮತ್ತು ಜಿಲ್ಲೆ. ಜಿಲ್ಲೆಯ ಆಡಳಿತ ಕೇಂದ್ರ, ಗಿರಿಧಾಮ. ಜನಸಂಖ್ಯೆ 7,62900. ಹಿಮಾಲಯ ಶಿವಾಲಿಕ್ ಶ್ರೇಣಿಯ ಕಣಿವೆಯಲ್ಲಿ ಉ.ಅ. $29^{0}24'$ ಪೂ.ರೇ. $79^{0}28'$ ಮೇಲೆ ಇದೆ. ಸಮುದ್ರಮಟ್ಟದಿಂದ ಇದರ ಎತ್ತರ 1,934 ಮೀ ಸುಂದರವಾದ ಸರೋವರದ ಸುತ್ತಲೂ ಈ ಪಟ್ಟಣ ಹಬ್ಬಿದೆ. ಹಿನ್ನಲೆಯಲ್ಲಿ ಬೆಟ್ಟಗಳೂ ಅರಣ್ಯವೂ ಇವೆ. ನೈನೀತಾಲ್ ಸರೋವರ 1.6 ಕಿಮೀ ಉದ್ದವಾಗಿಯೂ 366 ಮೀ ಅಗಲವಾಗಿಯೂ ಇದೆ. ಸರೋವರದ ದಕ್ಷಿಣದಲ್ಲಿ ತಿಳಿನೀರಿನ ಚಿಲುಮೆಗಳಿವೆ.

ನೈನೀತಾಲ್ ಬೇಸಗೆಯ ವಾಸಕ್ಕೆ ಯೋಗ್ಯವೆಂದು ಬ್ರಿಟಿಷ್ ಅಧಿಕಾರಿ ಬ್ಯಾರನ್ ಮಾಡಿದ ಶಿಫಾರಸಿನಂತೆ 1841ರಲ್ಲಿ ಈ ಪಟ್ಟಣವನ್ನು ಸ್ಥಾಪಿಸಲಾಯಿತು. 1862ರಲ್ಲಿ ಬ್ರಿಟಿಷ್ ಇಂಡಿಯ ಸರ್ಕಾರ ಇದನ್ನು ಸಂಯುಕ್ತ ಪ್ರಾಂತ್ಯದ (ಈಗಿನ ಉತ್ತರ ಪ್ರದೇಶ) ಬೇಸಿಗೆಯ ರಾಜಧಾನಿಯಾಗಿ ಮಾಡಿತ್ತು. 1881ರ ಭೂಕುಸಿತದಿಂದ ಪಟ್ಟಣಕ್ಕೆ ನಷ್ಟ ಸಂಭವಿಸಿತು. ಈ ಅನಾಹುತದ ತರುವಾಯ ಸರೋವರದ ಮೇಲ್ದಡದ ಕಡೆ ಹೊಸ ಪಟ್ಟಣವನ್ನು ನಿರ್ಮಿಸಲಾಯಿತು. ಪಟ್ಟಣದಲ್ಲಿ ತಲ್ಲಿತಾಲ್ ಮತ್ತು ಮಾಲ್ಲಿತಾಲ್ ಪ್ರಸಿದ್ಧ ವ್ಯಾಪಾರಸ್ಥಳಗಳು. ಮಾಲ್‌ನ (ಆಗಿನ ಪಚಿತ್ ಮಾರ್ಗ) ಉದ್ದಕ್ಕೂ ಅಂಗಡಿಗಳಿವೆ. ತಲ್ಲಿತಾಲ್ ಪ್ರದೇಶದಲ್ಲಿ ಸರ್ಕಾರಿ ಕಛೇರಿಗಳಿವೆ. ಮಲ್ಲಿತಾಲ್ ಭಾಗದಲ್ಲಿ ಪುರಸಭಾ ಕಛೇರಿ, ಆರಕ್ಷಕ ಠಾಣೆ, ಅಂಚೆ ಕಚೇರಿ ಇವೆ. ಪಟ್ಟಣದಲ್ಲಿ ಆಗ್ರ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳಿವೆ. ಪಟ್ಟಣದ ಜನಸಂಖ್ಯೆ 40,000.

ನೈನೀತಾಲ್ ಬೇಸಗೆಯ ಪ್ರವಾಸಿ ಕೇಂದ್ರ. ಈ ಪಟ್ಟಣದಿಂದ 37 ಕಿಮೀ ದೂರದಲ್ಲಿರುವ ಕಾತ್‌ಗೋದಾಮ್ ರೈಲು ನಿಲ್ದಾಣಕ್ಕೆ ರಸ್ತೆ ಇದೆ. ರೈಲ್ವೆ ಸಂಪರ್ಕ ಏರ್ಪಟ್ಟ ಮೇಲೆ ಪಟ್ಟಣ ಬೇಗ ಬೆಳೆಯಿತು. ನೈನೀತಾಲ್ ಸರೋವರದಲ್ಲಿ ದೋಣಿಯ ಸಂಚಾರವಿದೆ.

ನೈನೀತಾಲ್ ಜಿಲ್ಲೆಯ ವಿಸ್ತೀರ್ಣ 6,285 ಚ.ಕಿಮೀ. ಜಿಲ್ಲೆಯ ಉತ್ತರದಲ್ಲಿ ಶಿವಾಲಿಕ್ ಪರ್ವತ ಶ್ರೇಣಿಗಳಿವೆ. ದಕ್ಷಿಣದಲ್ಲಿ ಗಂಗಾನದಿ ಬಯಲಿನ ಪ್ರದೇಶವಿದೆ. ಪೂರ್ವ ಭಾಗದಲ್ಲಿ ಈ ಜಿಲ್ಲೆ ನೇಪಾಳದ ಗಡಿಯನ್ನು ಮುಟ್ಟುತ್ತದೆ. ಜಿಲ್ಲೆಯಲ್ಲಿ ಬೆಟ್ಟಗಳು ಹಾಗೂ ಅರಣ್ಯಗಳು ಹೆಚ್ಚು. ಗಂಗಾ ಬಯಲಿಗೆ ತರಾಯ್ ಎಂದು ಹೆಸರು. ಅದು ತೇವದಿಂದ ಕೂಡಿದ ಅನಾರೋಗ್ಯಕರ ಪ್ರದೇಶ. ಜಿಲ್ಲೆಯ ಬೆಟ್ಟಗಳು ಸಮುದ್ರಮಟ್ಟದಿಂದ ಸರಾಸರಿ 2,743 ಮೀ ಎತ್ತರದಲ್ಲಿವೆ. ಜಿಲ್ಲೆಯ ಬೆಳೆಗಳು ಬತ್ತ, ಕಬ್ಬು, ಗೋದಿ, ಚಹ ಮತ್ತು ಹಣ್ಣು, ನೈನೀತಾಲ್‌ನ ಈಶಾನ್ಯಕ್ಕೆ 48 ಕಿಮೀ ದೂರದಲ್ಲಿರುವ ಮುಕ್ತೇಶ್ವರದಲ್ಲಿ (2,286 ಮೀ) ರಾಷ್ಟ್ರೀಯ ಪಶುವೈದ್ಯ ಸಂಶೋಧನ ಸಂಸ್ಥೆಯಿದೆ. ಪಟ್ಟಣಕ್ಕೆ 11 ಕಿಮೀ ದೂರದಲ್ಲಿ ಭೀಮ್‌ತಾಲ್ ಮತ್ತು ನೌಕುಚಿಯಾತಾಲ್ ಸರೋವರಗಳಿವೆ. ಉತ್ತರ ಪ್ರದೇಶ ವ್ಯವಸಾಯ ವಿಶ್ವವಿದ್ಯಾಲಯ ಪಂತ್‌ನಗರದಲ್ಲಿ ಸ್ಥಾಪಿತವಾಗಿದೆ (1960). (ವಿ.ಜಿ.ಕೆ.)

**ನೈರೋಬಿ:** ಪೂರ್ವ ಆಫ್ರಿಕದಲ್ಲಿರುವ ಕೀನ್ಯ ಗಣರಾಜ್ಯದ ರಾಜಧಾನಿ. ಕೀನ್ಯದ zÀQÉë ªÀÄzÀåSÉÃRAiÀÄ. 1117′ ಮತ್ತು ಪೂ.ರೇ. $36^{0}49'$ ಗಳಲ್ಲಿ ಗಿಕುಯೂ ತಪ್ಪಲಿನಲ್ಲಿ ಹಿಂದೂ ಸಾಗರದ ಮೇಲಣ ಮೊಂಬಾಸ ಬಂದರಿನ ವಾಯುವ್ಯಕ್ಕೆ 480 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 2,143,254 (1999). ನೈರೋಬಿ ಪ್ರದೇಶ ಅದರ ಸುತ್ತಣ ಪ್ರಾಂತ್ಯದಿಂದ ಪ್ರತ್ಯೇಕವಾದ ವಿಭಾಗವಾಗಿದೆ. ಇದರ ವಿಸ್ತೀರ್ಣ 676 ಚ.ಕಿಮೀ ನೈರೋಬಿ ಪ್ರದೇಶದ ಆಡಳಿತಕ್ಕೆ ನಗರ ಸಮಿತಿಯೊಂದು ಇದೆ. ಸಮುದ್ರ ಮಟ್ಟದಿಂದ ಸು. 1,680 ಮೀ ಎತ್ತರದಲ್ಲಿರುವ ನೈರೋಬಿಯ ವಾಯುಗುಣ ಹಿತಕರವಾದದ್ದು. ಅದರ ನಡುಹಗಲಿನ ಉಷ್ಣತೆ ಎಂದೂ $27^{0}$ಸೆ ಮೀರುವುದಿಲ್ಲ. ವಾರ್ಷಿಕ ಸರಾಸರಿ ಮಳೆ 63 ಸೆಂಮೀ ಇದರಲ್ಲಿ ಅರ್ಧದಷ್ಟು ಮಳೆ ಬೀಳುವುದು ಮಾರ್ಚ್–ಮೇ ಅವಧಿಯಲ್ಲಿ.

ನಗರದ ಒಂದು ನೋಟ

ನೈರೋಬಿ ಪೂರ್ವ ಆಫ್ರಿಕದ ಪ್ರಮುಖನಗರ; ಹಣಕಾಸು, ಕೈಗಾರಿಕೆ ಮತ್ತು ವಾಣಿಜ್ಯದ ಕೇಂದ್ರ. ಇದು ಪೂರ್ವ ಆಫ್ರಿಕದ ಮುಖ್ಯ ರೈಲ್ವೆ ಕೇಂದ್ರ. ಇತರ ಪ್ರಮುಖ ಕೇಂದ್ರಗಳೊಂದಿಗೆ ಇದಕ್ಕೆ ರಸ್ತೆ ಸಂಪರ್ಕವಿದೆ. ನೈರೋಬಿಯ ನೈಋತ್ಯಕ್ಕೆ ಸು. 14 ಕಿಮೀ ದೂರದಲ್ಲಿರುವ ಎಂಬಾಕಾಸಿ ಎಂಬುದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. ನೈರೋಬಿ ಒಂದು ಪ್ರವಾಸಿ ಕೇಂದ್ರ. ಜಾನುವಾರುಗಳನ್ನು ಸಾಕುವುದು ಇದರ ಸುತ್ತಣ

ಪ್ರದೇಶದಲ್ಲಿ ಒಂದು ಪ್ರಮುಖ ಉದ್ಯೋಗ, ಮಾಂಸವೇಷ್ಟನ, ಹಣ್ಣುಗಳ ಡಬ್ಬೀಕರಣ, ಹಿಟ್ಟು ಮಾಡುವುದು, ತಂಬಾಕಿನ ಸರಕು, ಆಹಾರ ಪದಾರ್ಥ, ರೈಲು ಮತ್ತು ಲಘುಯಂತ್ರ ತಯಾರಿಕೆ, ಚರ್ಮ ಹದಗಾರಿಕೆ, ಮದ್ಯ ತಯಾರಿಕೆ–ಇವು ಇಲ್ಲಿಯ ಪ್ರಮುಖ ಕೈಗಾರಿಕೆಗಳು. ಕೀನ್ಯದ ಮೂಲ ಉತ್ಪನ್ನಗಳು ಇಲ್ಲಿಂದಲೇ ಮೊಂಬಾಸ ಬಂದರಿನ ಮೂಲಕ ಪರದೇಶಗಳಿಗೆ ರಫ್ತಾಗುತ್ತವೆ. ಕೀನ್ಯದ ಆಮದುಗಳು ಇಲ್ಲಿಂದ ಹಂಚಿಕೆಯಾಗುತ್ತವೆ. ನೈರೋಬಿ ರಾಷ್ಟ್ರೀಯ ಉದ್ಯಾನ ಈ ನಗರದ ಹೊರವಲಯದಲ್ಲಿದೆ. ಸಿಂಹ, ಜಿಂಕೆ, ಜಿರಾಫೆ, ನೀರುಕುದುರೆ ಮತ್ತು ಇತರ ವನ್ಯಮೃಗಗಳನ್ನು ಇಲ್ಲಿ ಸಂರಕ್ಷಿಸಲಾಗಿದೆ.

ನೈರೋಬಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿವೆ. ಪೂರ್ವ ಆಫ್ರಿಕ ವಿಶ್ವವಿದ್ಯಾನಿಲಯಕ್ಕೆ ಸೇರಿದ ರಾಯಲ್ ಕಾಲೇಜ್ ಇದೆ.

ಎರಡನೆಯ ಮಹಾಯುದ್ಧದ ಅನಂತರ ನೈರೋಬಿ ತೀವ್ರಗತಿಯಲ್ಲಿ ಬೆಳೆದಿದೆ. ಕಾಮನ್ ಸರ್ವಿಸಸ್ ಆರ್ಗನೈಸೇಷನ್ನಿನ ಮುಖ್ಯ ಠಾಣ್ಯ, ಪಾರ್ಲಿಮೆಂಟ್ ಭವನ, ಅಂತಾರಾಷ್ಟ್ರೀಯ ಸಮ್ಮೇಳನ ನಡೆಸಲು ಅನುಕೂಲವಾಗುವಂತೆ ವಿಶಾಲವಾಗಿ ನಿರ್ಮಿಸಲಾದ ಪುರಭವನ–ಇವು ಗಮನಾರ್ಹ ಕಟ್ಟಡಗಳು. ಕೀನ್ಯದ ರಾಷ್ಟ್ರೀಯ ರಂಗಮಂದಿರ, ಸಾಂಸ್ಕೃತಿಕ ಕೇಂದ್ರ, ಪೂರ್ವ ಆಫ್ರಿಕ ಸಾರ್ವಜನಿಕ ಸಂಗೀತ ಶಿಕ್ಷಣ ಶಾಲೆ, ಕಾರಿಂಡಲ್ ಸ್ಮಾರಕ ವಸ್ತುಸಂಗ್ರಹಾಲಯ, ಸಾರ್ಸ್‌ಬಿ ಕಲಾ ಮಂದಿರ ಹಾಗೂ ಅನೇಕ ಸಂಘ ಸಂಸ್ಥೆಗಳು ಇಲ್ಲಿವೆ. (ವಿ.ಜಿ.ಕೆ.)

**ನೈರೋಬಿ ಘೋಷಣೆ:** ಸ್ಟಾಕ್‌ಹೋಮ್ ಘೋಷಣೆಯ ಅನಂತರ ಸಂಯುಕ್ತರಾಷ್ಟ್ರ ಸಂಘಟನೆ 1982 ಮೇ 10ರಿಂದ 18 ರವರೆಗೆ ನೈರೋಬಿಯಲ್ಲಿ ಮಾನವ ಪರಿಸರ ಸಮ್ಮೇಳನ ನಡೆಸಿತು. ಈ ಸಮ್ಮೇಳನದ ಮೂಲಕ ಹೊರಬಿದ್ದ ನಿರ್ಣಯವನ್ನು ನೈರೋಬಿ ಘೋಷಣೆ ಎಂದು ಕರೆಯಲಾಯಿತು. ಈ ಸಮ್ಮೇಳನದ ಮುಖ್ಯ ಉದ್ದೇಶವೆಂದರೆ, 1972ರಲ್ಲಿನ ಸ್ಟಾಕ್‌ಹೋಮ್ ಘೋಷಣೆಯಲ್ಲಿನ ಸಮಸ್ಯೆಗಳ ಬಗ್ಗೆ ಚಿಂತನೆ ಹಾಗೂ ಪರಿಶೀಲನೆ. ಪರಿಸರ ಸಂರಕ್ಷಣೆಯಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚೆ ಮತ್ತು ನಿರ್ಣಯಗಳು. ಪರಿಸರ ಸಂರಕ್ಷಣೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಪಡಿಸಿ ಸಹಕಾರ ಪಡೆಯುವುದು, ಪರಿಸರ ಸಮಸ್ಯೆಗಳ ಬಗ್ಗೆ ಚಿಂತಿಸುವುದು ಈ ಘೋಷಣೆಯ ಮೂಲ ಮಂತ್ರ. (ವೈ.ಪಿ.ಆರ್.)

**ನೈಲ್ ನದಿ:** ಉತ್ತರ ಆಫ್ರಿಕದ ಪೂರ್ವಾರ್ಧದಲ್ಲಿ ಹರಿಯುವ ಪ್ರಪಂಚದಲ್ಲೇ ಅತ್ಯಂತ ಉದ್ದವಾದ ನದಿ. ಇದರ ಉದ್ದ 6,648 ಕಿಮೀ. ಇದು ವಿಕ್ಟೋರಿಯ ಸರೋವರದಲ್ಲಿ ಉಗಮಿಸುತ್ತದೆ. ನೈಲ್ ನದಿಗೆ ಈಜಿಪ್ಟ್ ಮತ್ತು ಉತ್ತರ ಸೂಡಾನ್‌ನಲ್ಲಿ ಎನ್ ನೀಲ್, ಆಲ್ ಬಾಹರ್ ಎಂಬ ಹೆಸರುಗಳಿವೆ. ಈ ನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ ಸು. 33.49,000 ಚ.ಕಿಮೀ. ನೈಲ್‌ನದೀ ಕಣಿವೆ ಆಫ್ರಿಕದ ಸುಮಾರು ಹತ್ತನೆಯ ಒಂದರಷ್ಟು ಪ್ರದೇಶವನ್ನು ಆವರಿಸಿದೆ. ಇದು ಟಾಂಜಾನಿಯ, ಬುರುಂಡಿ, ರುವಾಂಡ, ಜೈರೆ, ಕೀನ್ಯ, ಉಗಾಂಡ ದೇಶಗಳ ಭಾಗಗಳನ್ನಲ್ಲದೆ ಸೂಡಾನ್ ಇಥಿಯೋಪಿಯಗಳ ಬಹುಭಾಗವನ್ನೂ ಈಜಿಪ್ಟಿನಲ್ಲಿ ಸಾಗುವಳಿಯಾಗುತ್ತಿರುವ ಭಾಗವನ್ನೂ ಒಳಗೊಂಡಿದೆ. ಈ ನದಿಯ ಜಲ ಮೂಲಗಳು ಉತ್ತರ ಟಾಂಜಾನಿಯ, ನೈರುತ್ಯ ಕೀನ್ಯ ಮತ್ತು ಕಾಂಗೋ ನದಿ ಕಣಿವೆಯ ಈಶಾನ್ಯ ಭಾಗದ ಎತ್ತರ ಭಾಗದ ನೀರನ್ನು ಬಸಿದುಕೊಂಡು ಹರಿದು ವಿಕ್ಟೋರಿಯ ಸರೋವರವನ್ನು ಸೇರುತ್ತವೆ. ವಾಸ್ತವವಾಗಿ ನೈಲ್‌ನದಿ ಎನ್ನಬಹುದಾದದ್ದು ವಿಕ್ಟೋರಿಯ ನೈಲ್ ಅಥವಾ ಸಾಮರ್‌ಸೆಟ್ ನೈಲನ್ನು. ಇದು ವಿಕ್ಟೋರಿಯ ಸರೋವರದ ಉತ್ತರದಲ್ಲಿ ಜಿಂಜದ ಬಳಿ ಉಗಮಿಸುತ್ತದೆ. ಇದರ ಉಗಮಸ್ಥಾನ ಸಮಭಾಜಕ ವೃತ್ತಕ್ಕೆ 48 ಕಿಮೀ ಉತ್ತರದಲ್ಲಿದೆ. ಇದು ಉತ್ತರಾಭಿಮುಖವಾಗಿ, ಕ್ಯೋಗ ಸರೋವರದ ಮೂಲಕ ಹರಿದು, ವಾಯವ್ಯಕ್ಕೆ ತಿರುಗಿ, ಮರ್ಚಿಸನ್ ಜಲಪಾತದಲ್ಲಿ ಇಳಿದು, ಆಲ್ಬರ್ಟ್ ಸರೋವರವನ್ನು ಅದರ ಈಶಾನ್ಯ ತುದಿಯಲ್ಲಿ ಸೇರುತ್ತದೆ. ಆ ಸರೋವರದ ಉತ್ತರದ ತುದಿಯಲ್ಲಿ ಹೊರಬಂದು ವಾಯವ್ಯ ಉಗಾಂಡದಲ್ಲಿ ಉತ್ತರ ದಿಕ್ಕಿಗೆ ಹರಿಯುತ್ತದೆ. ಅಲ್ಲಿ ಅದಕ್ಕೆ ಆಲ್ಬರ್ಟ್ ನೈಲ್ ಎಂದು ಹೆಸರು. ಅನಂತರ ಇದು ಸೂಡಾನಿಗೆ ಹರಿಯುತ್ತದೆ. ಸೂಡಾನಿನಲ್ಲಿ ಪಶ್ಚಿಮದ ಕಡೆಯಿಂದ ಬಾಹರ್ ಅಲ್–ಗಜಲ್ ನದಿ ಕೂಡುತ್ತದೆ. ಅಲ್ಲಿಂದ ಮುಂದಕ್ಕೆ ಇದರ ಹೆಸರು ಬಿಳಿಯ ನೈಲ್ (ಬಾರ್ ಆ–ಆಬ್ಯಾದ್). ಪೂರ್ವ ದಿಕ್ಕಿಗೆ ಹರಿಯುವ ಈ ನದಿ ನೈರುತ್ಯ ಇಥಿಯೋಪಿಯದಿಂದ ಹರಿದು ಬರುವ ಸೋಬಾತ್ ನದಿಯೊಂದಿಗೆ ಸಂಗಮಿಸುತ್ತದೆ. ಸೂಡಾನಿನಲ್ಲಿ ಉತ್ತರಕ್ಕೆ ಹರಿಯುವ ಈ ನದಿಗೆ ಖಾರ್ಟೂಮಿನ ಬಳಿ ನೀಲ ನೈಲ್ (ಬಾರ್ ಅಲ್ ಆಜ್ರಾಕ್) ಸೇರುತ್ತದೆ. ನೀಲ ನೈಲ್ ಹುಟ್ಟುವುದು ಇಥಿಯೋಪಿಯದಲ್ಲಿ. ಅನಂತರ ಮುಂದುವರಿಯುವ ಈ ನದಿಯನ್ನು ಅಟ್ಬಾರ ನದಿ ಕೂಡುತ್ತದೆ. ಅಲ್ಲಿಂದ ಮುಂದೆ ನೈಲ್‌ನದಿಗೆ ಯಾವ ಉಪನದಿಗಳು ಇಲ್ಲ. ಇದು ಎ ಆಕಾರದಲ್ಲಿ ತಿರುಗಿ ವಾಡಿ ಹಾಲ್ಫಕ್ಕೆ ಸು. 5 ಕಿಮೀ ಉತ್ತರದಲ್ಲಿ ಈಜಿಪ್ಟನ್ನು ಪ್ರವೇಶಿಸುತ್ತದೆ. ಅನಂತರ ಉತ್ತರಾಭಿಮುಖವಾಗಿ ಸು. 640 ಕಿಮೀ ಹರಿದು ಮೆಡಿಟರೇನಿಯನ್ ಸಮುದ್ರದಲ್ಲಿ ಸಂಗಮಿಸುತ್ತದೆ. ಕೈರೋ ನಗರದಿಂದ ಸು. 9 ಕಿಮೀ ಕೆಳಗೆ ನೈಲ್ ನದಿಯ ಮುಖಜಭೂಮಿ ಆರಂಭವಾಗುತ್ತದೆ. ಇದರ ಅಗಲ ಸು. 192 ಕಿಮೀ ಪ್ರಾಚೀನ ಕಾಲದಲ್ಲಿ ನೈಲ್ ನದಿಗೆ ಇಲ್ಲಿ 7 ಕವಲುಗಳಿದ್ದುವು. ಈಗ ಇರುವವು ಎರಡು ಮಾತ್ರ. ಒಂದೊಂದು ಕವಲೂ ಸು. 234 ಕಿಮೀ ಉದ್ದವಾಗಿದೆ. ಪಶ್ಚಿಮದ ರೋಸೆಟ ಕವಲು ಅಲೆಗ್ಸಾಂಡ್ರಿಯಕ್ಕೆ ಪೂರ್ವದಲ್ಲೂ ಪೂರ್ವದ ಡ್ಯಾಮಿಯೆಟ ಕವಲು ಪೋರ್ಟ್ ಸೈದ್‌ಗೆ ಪಶ್ಚಿಮದಲ್ಲೂ ಕಡಲನ್ನು ಸೇರುತ್ತವೆ.

ನೈಲ್ ನದಿಯ ಮೇಲೆ ಸಮುದ್ರದಿಂದ ಮರ್ಚಿಸನ್ ಜಲಪಾತದವರೆಗೆ ನೌಕಾಯಾನ ಸಾಮಾನ್ಯವಾಗಿ ಸಾಧ್ಯ. ಪ್ರವಾಹ ಕಡಿಮೆಯಿದ್ದಾಗ ಅದರ ಆರು ಜಲಪಾತಗಳಿರುವ ಭಾಗದಲ್ಲಿ ಯಾನ ಸಾಧ್ಯವಿಲ್ಲ. ವಾಸ್ತವವಾಗಿ ಅವು ಜಲಪಾತಗಳಲ್ಲ, ತ್ವರಿತ ಪ್ರವಾಹಗಳು (ರ್‍ಯಾಪಿಡ್ಸ್). ಆಸ್ವಾನ್, ವಾಡಿ, ಡಂಕುಲ, ಮರಾವಿ ಮತ್ತು ಬರ್ಬರ್‌ನಲ್ಲಿ ಐದು ತ್ವರಿತ ಪ್ರವಾಹಗಳಿವೆ.

ನೈಲ್ ನದಿಗೆ ಅಡ್ಡಲಾಗಿ ಮೂರು ದೊಡ್ಡ ಅಣೆಕಟ್ಟೆಗಳನ್ನು ಕಟ್ಟಲಾಗಿದೆ. ಈಜಿಪ್ಟಿನಲ್ಲಿರುವ ಆಸ್ವಾನ್ ಎತ್ತರವಾದ ಅಣೆಕಟ್ಟೆ. ಇನ್ನೊಂದನ್ನು ಖಾರ್ಟೂಮ್‌ಗೆ 32 ಕಿಮೀ ದಕ್ಷಿಣದಲ್ಲಿ ಕಟ್ಟಲಾಗಿದೆ. ಇದರ ಹೆಸರು ಜಬಾಲ್ ಆಲ್ ಅಲಿಯಾ ಕಟ್ಟೆ. ಮೂರನೆಯದು ಮಾಕ್ವಾರ್ ಅಣೆಕಟ್ಟೆ. ಇದನ್ನು ನೀಲ ನೈಲ್ ನದಿಗೆ ಸೆನ್ನಾರ್ ಪಟ್ಟಣದ ಬಳಿ ನಿರ್ಮಿಸಲಾಗಿದೆ. ಆಸ್ವಾನ್ ಎತ್ತರಕಟ್ಟೆಯಿಂದ ಉ. ಅ. $20^{0}40'$ ವರೆಗೆ ಹರಡಿರುವ ಜಲಾಶಯವನ್ನು ನಾಸರ್ ಸರೋವರ ಎಂದು ಕರೆಯಲಾಗಿದೆ. ಈಜಿಪ್ಟಿನಲ್ಲಿ ನೈಲ್ ನದಿಯ ದಂಡೆಗಳ ಮೇಲೆ ಪ್ರಾಚೀನ ರಾಜವಂಶಗಳ ಹಲವಾರು ಸ್ಮಾರಕಗಳು ಸಾಲಾಗಿ ಹಬ್ಬಿವೆ.

ನೈಲ್ ನದಿಯ ಉಗಮದ ಬಗ್ಗೆ ಹಲವಾರು ಐತಿಹ್ಯಗಳು ಹಿಂದಿನಿಂದಲೂ ಬಂದಿವೆ. ಇದು ಚಂದ್ರಪರ್ವತದಲ್ಲಿ ಹುಟ್ಟುವುದೆಂದು ಕಥೆ. ಬಹುಶಃ ಇದು ರೂವೆಂಜೋರಿ ಶಿಖರವಿರಬೇಕು. 15ನೆಯ ಶ. ವರೆಗೂ ಇದರ ಉಗಮದ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. 15–17ನೆಯ ಶತಮಾನಗಳಲ್ಲಿ ಇದರ ಉಗಮದ ಪ್ರದೇಶಕ್ಕೆ ಇಟಾಲಿಯನ್ ಮತ್ತು ಪೋರ್ಚುಗೀಸ್ ಪ್ರವಾಸಿಗಳು ಬಂದಿದ್ದರು. ನೀಲ ನೈಲಿನ ಉಗಮವನ್ನು ಜೇಮ್ಸ್ ಬ್ರೂಸ್ ಕಂಡುಹಿಡಿದು ಅದರ ಹರಿವನ್ನು ಗುರುತಿಸಿದ (1768–73). ನೈಲ್ ನದಿಯ ಮೂಲ ವಿಕ್ಟೋರಿಯ ಸರೋವರವೆಂದು ನಿರ್ಧರಿಸಿದವನು ಜೆ. ಎಚ್. ಸ್ಪೀಕ್ (1858). ಅವನೂ ಜೆ. ಎ. ಗ್ರಾಂಟನೂ 1860–62ರಲ್ಲಿ ಈ ಸರೋವರವನ್ನು ಪರಿಶೋಧಿಸಿ, ರಿಪನ್ ಜಲಪಾತ ನೈಲ್ ನದಿಯ ಮೂಲವೆಂದು ಹೇಳಿದನು. ಓವೆನ್ ಜಲಪಾತದ ಬಳಿ ಕಟ್ಟೆ ಕಟ್ಟಿರುವುದರಿಂದ ರಿಪನ್ ಜಲಪಾತ ಈಗ ಮುಚ್ಚಿಹೋಗಿದೆ. ಆಲ್ಬರ್ಟ್ ಸರೋವರ ಮತ್ತು ಮರ್ಚಿಸನ್ ಜಲಪಾತವನ್ನು ಕಂಡುಹಿಡಿದವನು ಸ್ಯಾಮ್ಯುಯೆಲ್ ಬೇಕರ್, ಅವನು ಇಲ್ಲಿ 1861–62 ಮತ್ತು 1863–65ರಲ್ಲಿ ಪ್ರವಾಸ ಮಾಡಿದ್ದ. (ವಿ.ಎಸ್.ಬಿ.ಎ.ಎನ್.)

**ನೈವೇಲಿ ಲಿಗ್ನೈಟ್:** ಇದನ್ನು ಕಂದು ಕಲ್ಲಿದ್ದಲು ಎನ್ನುವರು. ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ನೈವೇಲಿ ಗ್ರಾಮದ ಸುತ್ತಮುತ್ತ ಇರುವ ಟರ್ಷಿಯರಿ ಯುಗದ ಶಿಲೆಗಳಲ್ಲಿ ದೊರೆಯುವ ಲಿಗ್ನೈಟ್, ಪರಿಪೂರ್ಣವಾಗಿ ರೂಪಾಂತರಣಗೊಳ್ಳದ ಕಲ್ಲಿದ್ದಲು. ಸು. 240 ಚ.ಕಿಮೀ ವಿಸ್ತಾರದ ಪ್ರದೇಶದಲ್ಲಿ 170 ಕೋಟಿ ಟನ್ ದಾಸ್ತಾನು ಇರಬಹುದೆಂದು ಭೂವಿಜ್ಞಾನಿಗಳ ಅಂದಾಜು. ಸದ್ಯ ಕೇವಲ 20 ಚ.ಕಿಮೀ ಪ್ರದೇಶದಲ್ಲಿ ತೀವ್ರ ರೀತಿಯ ಗಣಿಯ ಕೆಲಸ ನಡೆಯುತ್ತಿದ್ದು ಸು. 25 ಕೋಟಿ ಟನ್ ಲಿಗ್ನೈಟ್ ಅತ್ಯಂತ ಉಪಯುಕ್ತ ರೀತಿಯಲ್ಲಿ ರೂಢಿಸುವ ಪ್ರಯತ್ನ ನಡೆಯುತ್ತಿದೆ. ಈ ಗಣಿಯ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿ 33 ಚ.ಕಿಮೀ ವಿಸ್ತಾರದ ಮತ್ತೊಂದು ಉತ್ತಮ ಲಿಗ್ನೈಟ್ ಪ್ರದೇಶವನ್ನು ಭೂತಜ್ಞರು ಗುರುತಿಸಿ ಅಲ್ಲಿ ಸು. 38 ಕೋಟಿ ಟನ್ ದೊರೆಯಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಪ್ರದೇಶದಲ್ಲಿ ಅತಿ ಹೆಚ್ಚೆಂದರೆ ಸು. 1,500 ಮೀ ಆಳದಲ್ಲಿ ಕಲ್ಲಿದ್ದಲು ದೊರೆಯುವುದು. ಮೇಲ್ಭಾಗದಲ್ಲಿ ನೆಲಮಟ್ಟದವರೆಗೆ ಕಡಲೂರು ಮರಳುಶಿಲೆಗಳು ಮುಚ್ಚಿಕೊಂಡಿವೆ. ಆದರೆ ಈಗ ಗಣಿಕೆಲಸ ನಡೆಯುತ್ತಿರುವ ಕಡೆ ಈ ಮರಳು ಶಿಲೆಗಳು ಸು. 55 ಮೀ ಅದರ ದಕ್ಷಿಣಕ್ಕೆ ಎರಡನೆಯ ಗಣಿಗಾಗಿ ಗುರುತಿಸಿರುವ ಕಡೆ ಸು. 75 ಮೀ ಮಂದವಾಗಿವೆ. ಲಿಗ್ನೈಟಿನ ಮುಖ್ಯ ಸಿರ ಸು. 15 ಮೀ ಮಂದವಾಗಿದ್ದು ಇಡೀ ಸಿರದುದ್ದಕ್ಕೂ ಒಂದೇ ಬಗೆಯ ಅಡಕವಾದ ವಿನ್ಯಾಸವನ್ನು ತೋರಿಸುತ್ತದೆ. ಅದರ ಭೌತಗುಣಗಳಲ್ಲಿ ಸಹ ಯಾವ ಬಗೆಯ ವ್ಯತ್ಯಾಸಗಳೂ ಕಂಡುಬಂದಿಲ್ಲ. ಪ್ರಸ್ತರೀ ರಚನೆಯಾಗಲಿ ಇತರ ಬಗೆಯ ಸೀಳು ಅಥವಾ ಬಿರುಕುಗಳಾಗಲಿ ಎಲ್ಲೂ ತೋರಿಬಂದಿಲ್ಲ. ಸಿರದ ಕೆಲವು ಭಾಗಗಳು ಸುಟ್ಟು ಕರಿಕಾದಮರದಂತೆ ಇವೆ. ಎಲೆ ಮತ್ತು ಮರದ ಕಾಂಡಗಳ, ಆಕೃತಿ ಅಚ್ಚಳಿಯದೆ ಉತ್ತಮರೀತಿಯಲ್ಲಿದ್ದು ಸುಲಭವಾಗಿ ಗುರುತಿಸಲು ಸಾಧ್ಯವಾಗಿದೆ. ಎಲೆಗಳು ಭರ್ಜಿಯಾಕಾರದವು. ಅವುಗಳ ಗಾತ್ರದಲ್ಲಿ ಏರುಪೇರುಗಳನ್ನು ಕಾಣಬಹುದು. ಬಲು ದೊಡ್ಡದಾದ ಎಲೆಯ ಅವಶೇಷ 15 ಸೆಂಮೀ ಉದ್ದ, 6 ಸೆಂಮೀ ಅಗಲವಿದೆ. ಅಲ್ಲದೆ ಎಲೆಯ ಒಳರಚನೆಯನ್ನೂ ಸುಲಭವಾಗಿ ನೋಡಬಹುದು. ಇವು ಈಗಿನ ತಾಳೆಯ ಜಾತಿಯ ವೃಕ್ಷಗಳ ಗುಂಪಿಗೆ ಸೇರಿವೆ. ಸಿರದ ಕೆಲವು ಭಾಗಗಳಲ್ಲಿ ಹಳದಿಬಣ್ಣದ

ಸೂಕ್ಷ್ಮಪುಡಿಯೋಪಾದಿಯಲ್ಲಿರುವ ಬೀಜಕಣಗಳು, ಪರಾಗಧೂಳಿ ಮತ್ತು ರಾಳ ಹುದುಗಿವೆ. ವಿಶೇಷಾಂಶವೆಂದರೆ ಈ ರಾಳಕ್ಕೆ ಇಂದಿಗೂ ವಿಶಿಷ್ಟವಾಸನೆ ಇರುವುದು. ಮತ್ತೆ ಕೆಲವು ಕಿರಿದಾದ ಮರಳಿನಿಂದ ಕೂಡಿದ ಬಿರುಕುಗಳನ್ನೂ ಕಾಣಬಹುದು.

ಗಣಿಯಿಂದ ಹೊರತೆಗೆದಾಗ ಲಿಗ್ನೈಟ್ ಅಚ್ಚ ಕಂದು ಅಥವಾ ಕಪ್ಪಗಿದ್ದು ಕ್ರಮೇಣ ತನ್ನಲ್ಲಿರುವ ನೀರಿನ ಅಂಶವನ್ನು ಕಳೆದುಕೊಂಡು ಒಂದು ಬಗೆಯ ತಿಳಿ ಕಂದುಬಣ್ಣವನ್ನು ತಳೆಯುತ್ತದೆ. ಅಲ್ಲದೆ ಕೈಯಲ್ಲಿ ಹಿಡಿದು ಅಮುಕಿದಾಗ ಚೂರು ಚೂರಾಗಿ ಒಡೆದು ಪುಡಿಯಾಗುತ್ತದೆ. ಇಂಧನ ಸಾಮರ್ಥ್ಯ ಗುಣದಲ್ಲಿ ನೈವೇಲಿ ಲಿಗ್ನೈಟನ್ನು ಪ್ರಪಂಚದ ಅತ್ಯುತ್ತಮ ಲಿಗ್ನೈಟ್ ಶ್ರೇಣಿಗೆ ಸೇರಿಸಲಾಗಿದೆ.

ನೈವೇಲಿಯಲ್ಲಿ ಲಿಗ್ನೈಟ್ ದೊರೆಯುವುದೆಂಬ ಅಂಶ 1920ರಲ್ಲೇ ತಿಳಿದು ಬಂದಿದ್ದರೂ ಗಣಿಯ ಕೆಲಸ ಕಷ್ಟಕರವೆಂದು ಅದರ ಗೋಜಿಗೇ ಹೋಗಿರಲಿಲ್ಲ. ತಮಿಳುನಾಡಿನಲ್ಲಿ ವಿದ್ಯುಚ್ಛಕ್ತಿಗೆ ಪೂರೈಕೆಗೆ ಇರುವ ಕೊರತೆಗಳನ್ನು ಗಮನಿಸಿ 1953–54ರಲ್ಲಿ ಭಾರತ ಸರ್ಕಾರ ವಿದ್ಯುದುತ್ಪಾದನೆಗೆ ಲಿಗ್ನೈಟನ್ನು ರೂಢಿಸಿಕೊಳ್ಳಲು ಯೋಚಿಸಿ ವಿಶೇಷ ರೀತಿಯ ಅಧ್ಯಯನವನ್ನು ಪ್ರಾರಂಭಿಸಿತು. ಇದಕ್ಕಾಗಿ ವಿದೇಶೀತಜ್ಞರ ನೆರವನ್ನೂ ಕೋರಲಾಯಿತು. ಅವರ ಅಭಿಪ್ರಾಯದಂತೆ ಪ್ರಸಕ್ತ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶವನ್ನು ಆಯಲಾಯಿತು. ಇಲ್ಲಿಯ 14.25 ಚ.ಕಿಮೀ ವಿಸ್ತಾರದ ಪ್ರದೇಶದಲ್ಲಿ ಸು. 20 ಕೋಟಿ ಟನ್ ಲಿಗ್ನೈಟ್ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಇಲ್ಲಿನ ಲಿಗ್ನೈಟನ್ನು ಒಪ್ಪಮಾಡಿ ವಿದ್ಯುತ್ತಿನ ತಯಾರಿಕೆ ಮಾತ್ರವಲ್ಲ ನಿತ್ಯಬಳಕೆಗೆ ಬೇಕಾದ ಉರವಲಾಗಿ ಕೂಡ ಉಪಯೋಗಿಸಬಹುದೆಂದೂ ಒಪ್ಪ ಮಾಡುವಾಗ ಉತ್ಪನ್ನವಾಗುವ ಉಪವಸ್ತುಗಳ ಬಳಕೆಯಿಂದ ರಾಸಾಯನಿಕ ಗೊಬ್ಬರ ಮತ್ತು ಪ್ಲಾಸ್ಟಿಕುಗಳ ತಯಾರಿಕೆಗೆ ಬೇಕಾದ ಕಚ್ಚಾವಸ್ತು ಮುಂತಾದವನ್ನು ಪಡೆಯಬಹುದೆಂದೂ ತಜ್ಞರು ಸೂಚಿಸಿದರು. ಇಷ್ಟೇ ಅಲ್ಲದೆ ಇಲ್ಲಿ ಈಗ ಇತರ ಉಪಯುಕ್ತ ಪದಾರ್ಥಗಳಾದ ಕಾರ್ಬಾಲಿಕ್ ಆಮ್ಲ, ಟಾರೆಣ್ಣೆ, ಫಿನಾಲ್ ಇತ್ಯಾದಿ ರಾಸಾಯನಿಕ ವಸ್ತುಗಳನ್ನೂ ಪಡೆಯಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ರಷ್ಯ ಮತ್ತು ಪಶ್ಚಿಮ ಜರ್ಮನಿಯ ತಾಂತ್ರಿಕ ನೆರವನ್ನು ಪಡೆದದ್ದೂ ಉಂಟು. ಸದ್ಯಕ್ಕೆ ವಾರ್ಷಿಕ ಉತ್ಪನ್ನ 35 ಲಕ್ಷ ಟನ್ ಲಿಗ್ನೈಟ್. ಇದರಲ್ಲಿ 15 ಲಕ್ಷ ಟನ್ನುಗಳನ್ನು 250 ಮೆಗಾವಾಟ್ ವಿದ್ಯುತ್ತಿನ ತಯಾರಿಕೆಗೂ 6 ಲಕ್ಷ ಟನ್ ರಾಸಾಯನಿಕ ಗೊಬ್ಬರದ ತಯಾರಿಕೆಗೂ ಉಳಿದದ್ದನ್ನು 3,80,000 ಟನ್ ಲಿಕೋ ಎಂಬ ನಿತ್ಯಬಳಕೆಯ ಉರುವಲ ತಯಾರಿಕೆಗೂ ಬಳಸಲಾಗುತ್ತಿದೆ. (ಬಿ.ವಿ.ಜಿ.)

**ನೈಸರ್ಗಿಕ ಆಯ್ಕೆ:** ಕೆಲವು ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚು ಸಾಮಾನ್ಯವಾದ ವಿಪತ್ತು. ದಟ್ಟಡವಿಗಳಲ್ಲಿ ಮರಗಳು ಪರಸ್ಪರ ಸಂಘರ್ಷಿಸಿ ಬೆಂಕಿ ಉತ್ಪತ್ತಿಯಾಗಿ ಕಾಡುಗಳು ಸುಟ್ಟು ನಾಶವಾಗುತ್ತವೆ. ಇದೇ ರೀತಿ ನೈಸರ್ಗಿಕ ವಿಕೋಪಗಳಾದ ಪ್ರವಾಹ ಭೂಕಂಪ, ಸುನಾಮಿ, ಭೂಕುಸಿತ, ಜ್ವಾಲಾಮುಖಿ ಕ್ರಿಯೆಯಿಂದಾಗಿ ಕೆಲವು ಅರಣ್ಯಗಳು ನೈಸರ್ಗಿಕವಾಗೇ ನಾಶವಾಗುತ್ತವೆ. ಹೀಗೆ ಮಾನವನ ಯಾವುದೇ ಕೃತ್ಯವಿಲ್ಲದೆ ನಿಸರ್ಗವೇ ಅರಣ್ಯವನ್ನು ನಾಶಮಾಡುವ ಆಕಸ್ಮಿಕ ಕ್ರಮವನ್ನು ನೈಸರ್ಗಿಕ ಆಯ್ಕೆ ಕಡಿತವೆನ್ನುವರು. ಇತ್ತೀಚೆಗೆ ಕಿಡಿಗೇಡಿಗಳ ಕೃತ್ಯದಿಂದಾಗಿ ಕಾಡ್ಗಿಚ್ಚು ಅರಣ್ಯವನ್ನು ನಾಶಗೊಳಿಸುತ್ತಿದೆ. (ವಿ.ಎಸ್.ಎ.)

**ನೈಸರ್ಗಿಕ ವಿಪತ್ತುಗಳು:** ಭೂಮಿಯ ಆಂತರಿಕ ಮತ್ತು ಬಾಹ್ಯ ಶಕ್ತಿಗಳ ಕಾರ್ಯಾಚರಣೆಯಿಂದ ಭೂ ಮೇಲ್ಮೈಯಲ್ಲಿ ಸಂಭವಿಸುವ ಆಕಸ್ಮಿಕ ಮತ್ತು ಅನಿಶ್ಚಿತ ಘಟನೆಗಳ ಫಲಿತಾಂಶವನ್ನು ನೈಸರ್ಗಿಕ ವಿಪತ್ತುಗಳು ಎಂದು ಕರೆಯುತ್ತಾರೆ. ಈ ದುರಂತಗಳಿಂದ ಭೂ ಮೇಲ್ಮೈ ನಿರಂತರ ಬದಲಾವಣೆಗೆ ಒಳಪಡುವುದಲ್ಲದೆ ಅಪಾರ ಪ್ರಮಾಣದ ಸಾವು, ನೋವು, ಆಸ್ತಿ ನಷ್ಟ, ಬೆಳೆಗಳ ಹಾನಿ ಇತ್ಯಾದಿ ಸಮಸ್ಯೆಗಳು ತಲೆದೋರುತ್ತವೆ. ಇದರಿಂದ ಪರಿಸರ ಮತ್ತು ಜೀವ ಸಮೂಹಗಳ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಈ ರೀತಿ ದುಷ್ಪರಿಣಾಮವನ್ನುಂಟು ಮಾಡುವ ನೈಸರ್ಗಿಕ ವಿಪತ್ತುಗಳಿವು:

ಪ್ರವಾಹಗಳು: ಭೂಮಿಯ ಮೇಲೆ ಅಧಿಕ ಮಳೆ ಬಿದ್ದಾಗ ಅಥವಾ ಹಿಮ ಕರಗಿದಾದ ನದಿಯಲ್ಲಿ ನೀರಿನ ಪ್ರಮಾಣ ಅಧಿಕವಾಗಿ ನದಿಯ ಪಾತ್ರದ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ಉಕ್ಕಿ ಹರಿಯುವ ಜಲಧಾರೆಗಳೇ ಪ್ರವಾಹಗಳು. ಇದರ ಪರಿಣಾಮದಿಂದ ಸಾಕುಪ್ರಾಣಿಗಳು ಮತ್ತು ಕಟ್ಟಡಗಳು ನಾಶ ಹೊಂದುತ್ತವೆ ಮತ್ತು ಸಾವಿರಾರು ಜನರು ಸಾವಿಗೀಡಾಗುತ್ತಾರೆ. ಇದರಿಂದ ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಮಾರಕವಾಗುವುದು. ಪ್ರಪಂಚದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. 35 ರಷ್ಟು ಭಾಗ ಪ್ರವಾಹಕ್ಕೆ ಸಿಲುಕಿರುವ ಭಾಗವಾಗಿದ್ದು, ಇದು ಪ್ರಪಂಚದ ಜನಸಂಖ್ಯಾಯ ಶೇ. 16.5 ರಷ್ಟಿರುತ್ತದೆ. ಭಾರತದಲ್ಲಿ ಪ್ರವಾಹಗಳು ಮಾನವ ಮತ್ತು ಸಾಕು ಪ್ರಾಣಿಗಳ ಸಮುದಾಯಕ್ಕೆ ಅಪಾರ ಹಾನಿ ಉಂಟು ಮಾಡುತ್ತಿದ್ದು, ಭಾರತದ ಉತ್ತರ ಭಾಗಗಳು ಅದರಲ್ಲೂ ಪ್ರಮುಖವಾಗಿ ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಲ ಈ ಪ್ರದೇಶಗಳಲ್ಲಿ ಶೇ. 20 ರಷ್ಟು ಜನರು ಪ್ರವಾಹದಿಂದ ಸಾವಿಗೀಡಾಗಿದ್ದಾರೆ.

ಭೂಕಂಪಗಳು: ಭೂಮಿಯ ಅಂತರ್ಜನಿತ ಶಕ್ತಿಗಳಿಂದ ಭೂಮೇಲ್ಮೈಯಲ್ಲಿ ಉಂಟಾಗುವ ಕಂಪನ ಅಥವಾ ನಡುಗುವಿಕೆಯನ್ನು ಭೂಕಂಪಗಳೆಂದು ಕರೆಯುತ್ತಾರೆ. ಇದು ಭೂ ಮೇಲ್ಮೈಯಲ್ಲಿ ಅತಿ ಹೆಚ್ಚು ಹಾನಿಯನ್ನುಂಟುಮಾಡುವ ನೈಸರ್ಗಿಕ ವಿಕೋಪವಾಗಿದೆ. ಭಾರತದಲ್ಲಿ ಇಲ್ಲಿಯವರೆಗೂ ಉಂಟಾಗಿರುವ ಬಹಳಷ್ಟು ಭೂಕಂಪಗಳು ಫಲಕಗಳ (ಪ್ಲೇಟ್ಸ್) ರಚನಾ ಕ್ರಿಯೆಯಿಂದ ಉಂಟಾಗಿದೆ. ಈ ಫಲಕಗಳು ಪರಸ್ಪರ ಸಂಧಿಸಿದಾಗ ಅಥವಾ ಪರಸ್ಪರ ದೂರ ಸರಿದಾಗ ಮತ್ತು ಒಂದಕ್ಕೊಂದು ಸಮಾನಾಂತರವಾಗಿ ಚಲಿಸುತ್ತಿರುವಾಗ ಅಪಾರ ಒತ್ತಡ ಉಂಟಾಗಿ ಭೂಮಿ ನಡುಗುವುದು. ಈ ಭೂಕಂಪದ ತೀವ್ರತೆಯನ್ನು ಭೂಕಂಪ ಮಾಪಕ (ಸಿಸ್ಮೋಗ್ರಾಫ್) ಎಂಬ ಉಪಕರಣದಿಂದ ಅಳೆಯುತ್ತಾರೆ. ಅದರ ತೀವ್ರತೆಯನ್ನು ರಿಕ್ಟರ್ ಮಾಪಕದಿಂದ ಸೂಚಿಸಲಾಗುವುದು.

ಜ್ವಾಲಾಮುಖಿಗಳು: ಭೂಮಿಯ ಅಂತರಾಳದ ಕಾರ್ಯಾಚರಣೆಯಿಂದ ಭೂಮಿಯ ಮೇಲ್ಮೈ ಮೇಲೆ ಹೆಚ್ಚು ವಿಧ್ವಂಸಕಕಾರಿ ಪರಿಣಾಮವನ್ನುಂಟು ಮಾಡುವ ನೈಸರ್ಗಿಕ ವಿಪತ್ತುಗಳಲ್ಲಿ ಜ್ವಾಲಾಮುಖಿಗಳು ಪ್ರಮುಖವಾದವು. ಭೂಮಿಯ ಅಂತರಾಳದಿಂದ ಲಾವಾರಸವು ಶಿಲಾಚೂರು, ನೀರಾವಿ, ಅನಿಲ ಮತ್ತು ಬೂದಿಗಳೊಡನೆ ಭೂಮಿಯ ಹೊರ ಕವಚದ ದ್ವಾರದ ಮೂಲಕ ಹೊರ ಹೊಮ್ಮುವುದೇ ಜ್ವಾಲಾಮುಖಿ. ವಲ್ಕನ್ ಎಂಬುದು ಪುರಾತನ ರೋಮನ್ನರ ಅಗ್ನಿದೇವತೆಯ ಹೆಸರಿನಿಂದ ಬಳಕೆಗೆ ಬಂದಿದ್ದು ಈ ಪದ ವಾಲ್ಕೆನೋ ಎಂಬ ಪದವಾಗಿ ಕ್ರಮೇಣ ಬದಲಾಗಿದೆ. ಜ್ವಾಲಾಮುಖಿಯ ಕಾರ್ಯಾಚರಣೆಯಿಂದ ಹೊರ ಹೊಮ್ಮುವ ಲಾವಾರಸ ಹಾಗೂ ಅನೇಕ ಬಗೆಯ ಶಿಲಾವಸ್ತುಗಳು ಅಪಾರ ಜೀವಹಾನಿ ಮತ್ತು ಆಸ್ತಿಪಾಸ್ತಿಗಳನ್ನು ನಾಶಪಡಿಸುತ್ತವೆ. ಇದರಿಂದುಂಟಾಗುವ ದುಷ್ಪರಿಣಾಮಗಳೆಂದರೆ, ಮಾನವನ ವಸತಿಗಳ ನಾಶ, ಕೃಷಿ, ಬೆಳೆಗಳ ನಾಶ, ಅಣೆಕಟ್ಟುಗಳು, ನದಿಗಳು, ಕೈಗಾರಿಕೆಗಳು, ರೈಲ್ವೆ, ವಿಮಾನ ನಿಲ್ದಾಣ ಮತ್ತು ಸಸ್ಯ ವರ್ಗ ಮತ್ತು ಪ್ರಾಣಿಗಳು ನಾಶವಾಗುವುದಲ್ಲದೆ ಸಾವಿರಾರು ಜನರ ಸಾವಿಗೂ ಕಾರಣವಾಗಿದೆ.

ಜಪಾನ್ ಮತ್ತು ಫಿಲಿಫೈನ್ಸ್‌ನಲ್ಲುಂಟಾದ ಜ್ವಾಲಾಮುಖಿಯಿಂದ ಅಪಾರ ಆಸ್ತಿ ನಷ್ಟವಾಗಿರುವುದಲ್ಲದೆ, ಅನೇಕ ಜನರು ಸಾವಿಗೀಡಾಗಿದ್ದಾರೆ (1992). ಭಾರತದ ಬ್ಯಾರೇನ್ ದ್ವೀಪದಲ್ಲಿ ಸ್ಫೋಟಗೊಂಡ ಜ್ವಾಲಾಮುಖಿಯಿಂದ ಸು. 300 ವಿದ್ಯಾರ್ಥಿಗಳು ಸಾವಿಗೀಡಾಗಿದ್ದಾರೆ (ಸೆಪ್ಟೆಂಬರ್ 5, 2005). ಈ ರೀತಿಯಲ್ಲಿ ದುಷ್ಪರಿಣಾಮವನ್ನುಂಟುಮಾಡುವ ಜ್ವಾಲಾಮುಖಿಗಳು ಪ್ರಪಂಚದಲ್ಲಿ ಪ್ರಮುಖವಾಗಿ ಪೆಸಿಫಿಕ್ ಸಾಗರ ವಲಯ, ಯುರೋಪ್ ವಲಯ, ಅಟ್ಲಾಂಟಿಕ್ ವಲಯ ಮತ್ತು ಪೂರ್ವ ಆಫ್ರಿಕದ ಪ್ರದೇಶಗಳಲ್ಲಿ ಕಂಡುಬರುತ್ತವೆ.

ಮಾರುತಗಳು: ಸುತ್ತಲಿನ ಹೆಚ್ಚು ಒತ್ತಡ ಪ್ರದೇಶದಿಂದ ಕೇಂದ್ರದ ಕಡಿಮೆ ಒತ್ತಡದ ಪ್ರದೇಶದ ಕಡೆಗೆ ವೃತ್ತಾಕಾರವಾಗಿ ಬೀಸುವ ಮಾರುತಗಳೇ ಆವರ್ತ ಮಾರುತಗಳು. ಇವುಗಳು ಸು. 150 ರಿಂದ 1500 ಕಿಮೀ ಗಳಷ್ಟು ವಿಸ್ತಾರವಾಗಿದ್ದು ಪ್ರತಿಗಂಟೆಗೆ 80 ರಿಂದ 100 ಕಿಮೀ ಗಳಿಗಿಂತಲೂ ಹೆಚ್ಚು ವೇಗವಾಗಿ ಬೀಸುತ್ತವೆ. ಈ ಮಾರುತಗಳು ಪರಿಸರ, ಮಾನವ ಮತ್ತು ಇತರೆ ಜೀವಿಗಳ ಮೇಲೆ ಅಪಾರ ಹಾನಿಯನ್ನುಂಟುಮಾಡುತ್ತವೆ. ಕಟ್ಟಡಗಳು ಕುಸಿಯುತ್ತವೆ, ಮರಗಳು ಉರುಳುತ್ತವೆ, ಸೇತುವೆಯು ಕುಸಿದು ಬೀಳುವುದು, ವಿದ್ಯುತ್ ಕಂಬಗಳು ಮುರಿದು ಬಿದ್ದು ವಿದ್ಯುತ್ ಸರಬರಾಜು ಸ್ಥಗಿತಗೊಳ್ಳುತ್ತದೆ. ಒರಿಸ್ಸದಲ್ಲಿ ಸಂಭವಿಸಿದ ಚಂಡಮಾರುತಕ್ಕೆ ಸು. 10000 ಜನರು ಬಲಿಯಾಗಿ ಲಕ್ಷಾಂತರ ನಿರಾಶ್ರಿತರಾಗಿ ಕೋಟ್ಯಾಂತರ ರೂಪಾಯಿಗಳ ಆಸ್ತಿ ಹಾನಿ ಸಂಭವಿಸಿತು. (ಅಕ್ಟೋಬರ್ 29, 1999).

ಭೂ ಕುಸಿತ: ಭೂಮಿಯ ಮೇಲ್ಮೈ ಆಂತರಿಕ ಮತ್ತು ಬಾಹ್ಯ ಶಕ್ತಿಗಳಿಂದ ನಿರಂತರವಾಗಿ ಮಾರ್ಪಾಡು ಹೊಂದುತ್ತಿರುತ್ತದೆ. ಹೀಗೆ ಗುರುತ್ವಾಕರ್ಷಣ ಶಕ್ತಿಯಿಂದ ಎತ್ತರವಾದ ಭೂ ಭಾಗದಿಂದ ಮಣ್ಣು, ಕಲ್ಲು ಮತ್ತು ಇತರೆ ನಗ್ನೀಕರಣದ ಅವಶೇಷಗಳು ಕಡಿದಾದ ಇಳಿಜಾರಿನಲ್ಲಿ ಬೀಳುವುದು ಅಥವಾ ಜಾರುವುದೇ ಭೂಕುಸಿತ. ಇದನ್ನು ಇಂಗ್ಲೀಷ್‌ನಲ್ಲಿ ಲ್ಯಾಂಡ್‌ಸ್ಲೈಡ್ ಎಂದು ಕರೆಯಲಾಗಿದ್ದು, ಇದನ್ನು ಮೊಟ್ಟಮೊದಲು ಉತ್ತರ ಅಮೆರಿಕದಲ್ಲಿ ಬಳಕೆ ಮಾಡಲಾಗಿದೆ. ಶಿಲೆಗಳ ಶಿಥಿಲೀಕರಣ, ದ್ರಾವಣೀಕರಣ ಮತ್ತು ಲವಣಗಳ ತೊಳಸಲ್ಪಡುವಿಕೆಯಿಂದ ಶಿಲಾಸ್ತರಗಳು ಶಿಥಿಲಗೊಂಡು ಮೇಲ್ಮಣ್ಣು ಜಾರುವುದು. ಎತ್ತರವಾದ ಭೂಭಾಗದಲ್ಲಿ ಸ್ತರಭಂಗ ಮತ್ತು ಬಿರುಕುಗಳ ನಿರ್ಮಾಣವಾಗಿ ಕುಸಿಯುತ್ತವೆ. ದೀರ್ಘಾವಧಿ ಮಳೆ ಬೀಳುವುದರಿಂದ ಭೂಮಿಯಲ್ಲಿ ನೀರು ಇಂಗಿ ಕುಸಿತ ಉಂಟಾಗುವುದು. ಅರಣ್ಯಗಳನ್ನು ಬೆಳೆಸುವುದು. ಇಳಿಜಾರಿಗೆ ಅಡ್ಡಲಾಗಿ ಅಲ್ಲಲ್ಲಿ ಬದು ಅಥವಾ ತಡೆಗೋಡೆಗಳನ್ನು ನಿರ್ಮಿಸುವುದು ಮುಂತಾದ ಕ್ರಮಗಳನ್ನು ಅನುಸರಿಸುವುದರಿಂದ ಭೂಕುಸಿತವನ್ನು ತಡೆಗಟ್ಟಬಹುದು.

ಬರಗಾಲ: ಯಾವುದೇ ಒಂದು ಪ್ರದೇಶದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಅಸಮತೋಲನ ಉಂಟುಮಾಡಿ ಅಲ್ಲಿಯ ಸಮುದಾಯದ ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಮೇಲೆ ದುಷ್ಪರಿಣಾಮವನ್ನುಂಟುಮಾಡುವ ನೈಸರ್ಗಿಕ ವಿಕೋಪವೇ ಬರಗಾಲ.

ಈ ಬರಗಾಲವು ಅನಿಶ್ಚಿತವಾದುದು. ಇದು ವಾರ್ಷಿಕ ಮಳೆಯ ಪ್ರಮಾಣವನ್ನು ಅವಲಂಬಿಸಿದೆ. ಬರಗಾಲವು ಯಾವುದೇ ಸಮಯದಲ್ಲಿ ಉಂಟಾಗಿ ಕುಡಿಯಲು, ನೀರಾವರಿ, ಕೈಗಾರಿಕೆಗಳು, ನಗರ ಮುಂತಾದ ಕ್ಷೇತ್ರಗಳಿಗೆ ನೀರಿನ ಕೊರತೆಯನ್ನುಂಟುಮಾಡುತ್ತದೆ. ಮಣ್ಣಿನಲ್ಲಿರುವ ಆರ್ದ್ರತೆಯನ್ನು ಕಡಿಮೆ ಮಾಡಿ ಬೆಳೆ ಬೆಳೆಯಲು ನಿರುಪಯುಕ್ತವನ್ನಾಗಿ ಮಾಡುತ್ತದೆ. ಬರಗಾಲದಿಂದ ಬಳಲುವ ಪ್ರದೇಶಗಳು ಆಹಾರಧಾನ್ಯ, ನೀರು, ಮುಂತಾದ ಮೂಲ ಅವಶ್ಯಕ ಪದಾರ್ಥಗಳ ಕೊರತೆಯಿಂದ ಬಳಲುತ್ತವೆ. ಈ ಸಮಸ್ಯೆಗಳು ಉದ್ಭವವಾದಾಗ ಅಸಂಖ್ಯಾತ ಜನರು ಮತ್ತು ಪ್ರಾಣಿಗಳು ಬೇರೆ ಪ್ರದೇಶಕ್ಕೆ ಆಹಾರ ಮತ್ತು ನೀರನ್ನು ಹುಡುಕುತ್ತಾ ವಲಸೆ ಹೋಗಬೇಕಾಗುತ್ತದೆ. ಹೀಗೆ ಭಾರತವೂ ಸಹ ಬರಗಾಲ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದು ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಒಂದು ದಶಲಕ್ಷ ಚ.ಕಿಮೀ ಅಥವಾ ಒಟ್ಟು ಭೌಗೋಳಿಕ ವಿಸ್ತೀರ್ಣದ ಮೂರನೆಯ ಒಂದರಷ್ಟು ಪ್ರದೇಶ ಬರಗಾಲ ಪೀಡಿತ ಪ್ರದೇಶವಾಗಿದೆ. (ಜಿ.ಡಿ.)

**ನೈಸರ್ಗಿಕಾನಿಲ:** ಸರಂಧ್ರ ಶಿಲೆಗಳಲ್ಲಿ ಅಡಕವಾಗಿರುವ ನೈಸರ್ಗಿಕ ತೈಲದೊಡನೆ ಹುದುಗಿರುವ ಅನಿಲ (ನ್ಯಾಚುರಲ್ ಗ್ಯಾಸ್). ಶಿಲಾನಿಕ್ಷೇಪದಲ್ಲಿ ಹರಡಿರುವ ತೈಲಬಿಂದುಗಳು ಒಂದೆಡೆ ಶೇಖರವಾಗಲು ಅಗತ್ಯವಾದ ಪ್ರೇರಕಶಕ್ತಿಯನ್ನು ನೈಸರ್ಗಿಕಾನಿಲ ಒದಗಿಸುತ್ತದೆ. ಒಮ್ಮೊಮ್ಮೆ ಕೊಳವೆಬಾವಿಯಿಂದ ನೈಸರ್ಗಿಕ ತೈಲವನ್ನು ಹೊರತೆಗೆಯಲು ಇದರಿಂದ ತೊಂದರೆ ಆಗುವುದೂ ಉಂಟು. ಕೆಲವು ಪ್ರದೇಶಗಳಲ್ಲಿ ಈ ಅನಿಲ ಅಧಿಕ ಗಾತ್ರದಲ್ಲಿ ಶೇಖರವಾಗಿದ್ದು ರಂಧ್ರವನ್ನು ಕೊರೆದಾಗ ಹೊರಬರುತ್ತದೆ. ಅಲ್ಲದೆ ಭೂಮಿಯ ಒಳಗೆ ಹುದುಗಿರುವ ತೈಲನಿಕ್ಷೇಪವನ್ನು ಪತ್ತೆಹಚ್ಚಲು ಇದು ಕೈದೀವಿಗೆಯಂತೆ ಬಲು ಸಹಕಾರಿ. ಆ ಪ್ರದೇಶದಲ್ಲಿರುವ ಬಾವಿ, ತೊರೆ, ಚಿಲುಮೆಗಳಲ್ಲಿ ಅನಿಲದ ಗುಳ್ಳೆಗಳು ಸತತವಾಗಿ ಹೊರಹೊಮ್ಮುತ್ತಿರುತ್ತವೆ. ಹೀಗೆಯೇ ಜೌಗುಪ್ರದೇಶಗಳಲ್ಲಿ ನಿಂತು ಹೆಪ್ಪುಗಟ್ಟಿರುವ ಕೆಸರಿನಲ್ಲೂ ಅನಿಲ ನೊರೆಗಟ್ಟುತ್ತದೆ.

ಬಾಕು ತೈಲಪ್ರದೇಶದ ಬಳಿ ಇರುವ ಕ್ಯಾಸ್ಪಿಯನ್ ಸಮುದ್ರತೀರದಲ್ಲಿ ಬಿರುಕುಗಳ ಮೂಲಕ ಧಗಧಗನೆ ಉರಿಯುತ್ತಿರುವ ಅನಿಲಜ್ವಾಲೆಗಳನ್ನು ಇಂದಿಗೂ ಗುರುತಿಸಬಹುದು. ಪುರಾತನ ಅಗ್ನಿಪೂಜಕರು ಇದರ ಆರಾಧಕರಾಗಿದ್ದರು. ಇರಾಕ್ ದೇಶದ ಮೆಸಪೊಟೇಮಿಯ ಪ್ರದೇಶದಲ್ಲಿ ಇಂದಿಗೂ ಜಾಜ್ವಲ್ಯಮಾನವಾಗಿ ಉರಿಯುತ್ತಿರುವ ಜ್ವಾಲೆಯನ್ನು ಬಲು ಹಿಂದಿನಿಂದಲೂ ಅಂದರೆ ನೆಬುಚೆಡ್ನೆಸಾರ್ (ಪ್ರ.ಶ.ಪೂ. 6ನೆಯ ಶತಮಾನ) ಎಂಬಾತನ ಕಾಲದಿಂದಲೂ ಗುರುತಿಸಲಾಗಿದೆ.

ನೈಸರ್ಗಿಕಾನಿಲದಲ್ಲಿ ಹಲವಾರು ಅನಿಲಗಳು ವಿವಿಧ ಪ್ರಮಾಣಗಳಲ್ಲಿರುತ್ತವೆ. ಇವುಗಳ ಪೈಕಿ ಮೀಥೇನ್‌ಪ್ಯಾರಫಿನ್ನುಗಳು, ಹೈಡ್ರೋಜನ್ ಸಲ್ಫೈಡ್, ಹೀಲಿಯಮ್, ನೈಟ್ರೊಜನ್ ಹಾಗೂ ಕಾರ್ಬನ್‌ಡೈಆಕ್ಸೈಡ್ ಇವು ಅತಿ ಸಾಮಾನ್ಯವಾಗಿದ್ದು ಮೀಥೇನ್ ಅಧಿಕಗಾತ್ರದಲ್ಲಿರುತ್ತದೆ. ನೈಸರ್ಗಿಕಾನಿಲದಲ್ಲಿ ಹೈಡ್ರೊಕಾರ್ಬನ್ ಅಂಶ ಅಧಿಕವಾಗಿದ್ದಲ್ಲಿ ಅದು ಉತ್ತಮ ಇಂಧನ. ಪೆಟ್ರೋಲಿಯಮ್ ಗಣಿ ಉದ್ಯಮದ ಪ್ರಾರಂಭದಲ್ಲಿ ಕಚ್ಚಾಎಣ್ಣೆಯೊಡನೆ ಹೊರಬರುತ್ತಿದ್ದ ನೈಸರ್ಗಿಕಾನಿಲವನ್ನು ಅಷ್ಟಾಗಿ ಗಮನಿಸುತ್ತಿರಲಿಲ್ಲ. ಆದರೆ ಈಚಿನ ವರ್ಷಗಳಲ್ಲಿ ಇದನ್ನು ಪೋಲುಮಾಡದೆ ಬಳಸಿಕೊಳ್ಳಲಾಗುತ್ತಿದೆ.

ಹೆಚ್ಚು ಒತ್ತಡದ ಪ್ರಭಾವಕ್ಕೆ ಒಳಗಾಗಿರುವ ಅನಿಲ ಜಲಪೂರಿತ ಪ್ರಸ್ತರಗಳ ಮುಖಾಂತರ ಪ್ರವಹಿಸಿದಾಗ ಅದರ ರಭಸಕ್ಕೆ ಕೆಸರೂ ಹೊರಚಿಮ್ಮುತ್ತದೆ. ಇದೇ ಮಡ್‌ವಾಲ್ಕೇನೊ (ಮೃತ್ತಿಕಾಗ್ನಿ ಜ್ವಾಲಾಮುಖಿ). ಮಯನ್ಮಾರ್, ಕ್ಯಾಲಿಫೋರ್ನಿಯ ಮತ್ತು ಟ್ರಿನಿದಾದ್ ದೇಶಗಳ ತೈಲ ಜಾಡುಗಳಲ್ಲಿ ಈ ಬಗೆಯ ಕೆಸರು ಚಿಮ್ಮುವ ಸಣ್ಣಪುಟ್ಟ ಗುಡ್ಡಗಳಿವೆ. ಇವುಗಳ ಪೈಕಿ ಕೆಲವು ಒಂದೇ ಸಮನೆ ಕೆಸರನ್ನು ಹೊರಚಿಮ್ಮಿಸುತ್ತವೆ; ಮತ್ತೆ ಕೆಲವು ನಿರ್ದಿಷ್ಟ ವೇಳೆಯಲ್ಲಿ ಮಾತ್ರ ಈ ಕಾರ್ಯಾಚರಣೆಯನ್ನು ನಡೆಸುತ್ತವೆ. ಇದಕ್ಕೆ ಮುಖ್ಯ ಕಾರಣ ಅನಿಲದ ಸರಬರಾಜು. ಅದು ಒಂದೇಸಮನೆ ಹೊಮ್ಮುತ್ತಿದ್ದಲ್ಲಿ ಕೆಸರಿನ ಚಿಮ್ಮುವಿಕೆಯೂ ಸತತವಾಗಿರುತ್ತದೆ. ಹಾಗಿಲ್ಲದೆ ಅನಿಲ ಶೇಖರವಾಗಿ ಸಾಕಷ್ಟು ಒತ್ತಡ ಉಂಟಾದಾಗ ಮಾತ್ರ ಕೆಸರಿನ ಚಿಮ್ಮುವಿಕೆಯನ್ನು ಕಾಣಬಹುದು. ಹೀಗಾಗಲು ಕೊಂಚಕಾಲವೂ ಬೇಕಾದೀತು.

ಭಾರತ ಉಪಖಂಡದ ಬಲೂಚಿಸ್ತಾನದ ಆಗ್ನೇಯ ಭಾಗದಲ್ಲಿರುವ ಲಾಕಿ ಸುಣ್ಣ ಶಿಲಾ ನಿಕ್ಷೇಪಗಳಲ್ಲಿ ನೈಸರ್ಗಿಕಾನಿಲದ ಅತ್ಯುತ್ತಮ ನಿಕ್ಷೇಪವಿದೆ. ಜಾಕೊಬಾಬಾದಿನ ಬಳಿ ಇರುವ ಸುಯ್ ಎಂಬಲ್ಲಿ ಇದನ್ನು ತೋಡುರಂಧ್ರಗಳ ಮೂಲಕ ಹೊರತೆಗೆದು ಬಳಸಲಾಗುತ್ತಿದೆ. 1956ರಿಂದೀಚೆಗೆ ದಿನಂಪ್ರತಿ ಸು. 9,91,000 ಘನ ಮೀಟರುಗಳಷ್ಟು ಅನಿಲ ಇಲ್ಲಿ ದೊರೆಯುತ್ತಿದೆ. ಇಷ್ಟು ಉತ್ತಮ ನಿಕ್ಷೇಪ ಭಾರತದಲ್ಲಿ ಇಲ್ಲವಾದರೂ ಅಸ್ಸಾಮಿನ ನಹಾರ್‌ಕಾತಿಯಾ, ಗುಜರಾತಿನ ಕ್ಯಾಂಬೆ ಮತ್ತು ಅಂಕಲೇಶ್ವರ ಮತ್ತು ಹಿಮಾಲಯದ ತಪ್ಪಲಿನ ಪ್ರದೇಶಗಳಲ್ಲಿ ಸಾಕಷ್ಟು ನೈಸರ್ಗಿಕಾನಿಲ ದೊರೆಯುತ್ತಿದೆ. ಅದನ್ನು ಹಲವಾರು ಕೈಗಾರಿಕೆಗಳಲ್ಲಿಯೂ ಗೃಹಬಳಕೆಯಲ್ಲಿಯೂ ಇಂಧನವಾಗಿ ಉಪಯೋಗಿಸಲಾಗುತ್ತಿದೆ. ಈಚಿನ ವರ್ಷಗಳಲ್ಲಿ ರಾಸಾಯನಿಕ ಗೊಬ್ಬರಗಳು, ಕೃತಕ ರಬ್ಬರ್ ಹಾಗೂ ಹಲವಾರು ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ ನೈಸರ್ಗಿಕಾನಿಲವನ್ನು ಬಳಸಲಾಗುತ್ತಿದೆ. ಇತ್ತೀಚೆಗೆ ಪ್ರಪಂಚದಾದ್ಯಂತ ಬೇಡಿಕೆ ಹೆಚ್ಚಾಗುತ್ತಿದೆ. (ಎಂ.ಎಚ್.)

**ನೋವ ಸ್ಕೋಟಿಯ:** ಕೆನಡ ದೇಶದ ನಾಲ್ಕು ಅಟ್ಲಾಂಟಿಕ್ ತೀರ ಪ್ರಾಂತ್ಯಗಳಲ್ಲಿ ಒಂದು. ಅಟ್ಲಾಂಟಿಕ್ ಸಾಗರದೊಳಕ್ಕೆ ಚಾಚಿಕೊಂಡಿರುವ ಕೆನಡದ ಮುಖ್ಯ ಭೂಭಾಗವೂ ಕೇಪ್ ಬ್ರೆಟನ್ ದ್ವೀಪ ಮತ್ತು ಅಕ್ಕಪಕ್ಕದ ಕೆಲವು ದ್ವೀಪಗಳೂ ಈ ಪ್ರಾಂತ್ಯದಲ್ಲಿ ಸೇರಿವೆ. ಈ ಪ್ರಾಂತ್ಯದ ಯಾವ ಭಾಗವೂ ಸಾಗರದಿಂದ 80 ಕಿಮೀ ಗಿಂತ ದೂರದಲ್ಲಿಲ್ಲ. ಅಟ್ಲಾಂಟಿಕ್ ಸಾಗರ, ಸೇಂಟ್ ಲಾರೆನ್ಸ್ ಖಾರಿ ಹಾಗೂ ಫಂಡೀ ಕೊಲ್ಲಿಗಳು ಈ ಪ್ರಾಂತ್ಯವನ್ನು ಸುತ್ತುವರಿದಿವೆ. ಕೆನಡದ ಮುಖ್ಯ ಭೂಪ್ರದೇಶದೊಂದಿಗೆ ನೋವ ಸ್ಕೋಟಿಯವನ್ನು ಸೇರಿಸುವ 27 ಕಿಮೀ ಅಗಲದ ಶಿಗ್ನೆಕ್ಟೋ ಭೂಸಂಧಿ ಒಂದೇ ಈ ಪ್ರಾಂತ್ಯದ ಏಕೈಕ ಭೂ ಗಡಿಭಾಗ. ನೋವ ಸ್ಕೋಟಿಯದ ಪಶ್ಚಿಮಕ್ಕೆ ನ್ಯೂ ಬ್ರನ್ಸ್‌ವಿಕ್ ಪ್ರಾಂತ್ಯ, ಈಶಾನ್ಯಕ್ಕೆ ನ್ಯೂ ಫೌಂಡ್‌ಲೆಂಡ್ ಪ್ರಾಂತ್ಯ, ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ ಹಾಗೂ ನೈಋತ್ಯಕ್ಕೆ ಫಂಡೀ ಕೊಲ್ಲಿ ಇವೆ. ಇದರ ವಿಸ್ತೀರ್ಣ 55,490 ಚ.ಕಿಮೀ, ಜನಸಂಖ್ಯೆ 9,37,538 (2005). ಪ್ರಾಂತ್ಯದ ಜನಸಂಖ್ಯೆಯ ಮೂರನೆಯ ಒಂದು ಭಾಗದಷ್ಟು ಜನರು ಪ್ರಾಂತ್ಯದ ರಾಜಧಾನಿ ಹ್ಯಾಲಿಫಾಕ್ಸ್‌ನಲ್ಲಿರುವರು. ಜನಸಂಖ್ಯೆಯ ದೃಷ್ಟಿಯಿಂದ ಈ ಪ್ರಾಂತ್ಯಕ್ಕೆ ಕೆನಡದಲ್ಲಿ ಏಳನೆಯ ಸ್ಥಾನ, ಜನಸಾಂದ್ರತೆ ಚ.ಕಿಮೀ ಗೆ ಸು.18.

ಮೇಲ್ಮೈ ಲಕ್ಷಣ: ನೋವ ಸ್ಕೋಷಿಯದ ಭೂಭಾಗಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು: 1. ಪ್ರಸ್ಥಭೂಮಿ ಪ್ರದೇಶಗಳು. 2. ಕರಾವಳಿಯ ತಗ್ಗು ಮೈದಾನ. ಇಲ್ಲಿಯ ಐದು ಪ್ರಸ್ಥಭೂಮಿ ಪ್ರದೇಶಗಳೂ ಸಾಗರಮಟ್ಟಕ್ಕಿಂತ ಸಾಕಷ್ಟು ಎತ್ತರದಲ್ಲಿದೆ. ಕೇಪ್ ಬ್ರೆಟನ್‌ನ ನೆಲ ಸಮುದ್ರಮಟ್ಟಕ್ಕಿಂತ 520 ಮೀ ಎತ್ತರದಲ್ಲಿದೆ. ಫಂಡೀಕೊಲ್ಲಿ, ಮೈನಸ್ ಕಣಿವೆ ಮತ್ತು ನಾರ್ತಂಬರ್‌ಲೆಂಡ್ ಜಲ ಸಂಧಿಯ ಉದ್ದಕ್ಕೂ ಇರುವ ಪ್ರದೇಶಗಳು ತಗ್ಗಾಗಿವೆ. ಫಂಡೀ ಕೊಲ್ಲಿಯ ಅಗಾಧ ಉಬ್ಬರಗಳಿಂದ ಸಂಭವಿಸಿರುವ ಸಾವಿರಗಟ್ಟಲೆ ಎಕರೆಗಳಷ್ಟು ವಿಸ್ತಾರವಾದ ಜೌಗು ಪ್ರದೇಶಗಳಿಗೆ ಅಡ್ಡಗಟ್ಟೆಗಳನ್ನು ಕಟ್ಟಿ ಆ ಭೂಮಿಯನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ನೋವ ಸ್ಕೋಟಿಯದಲ್ಲಿ 3.000ಕ್ಕೂ ಹೆಚ್ಚು ಸರೋವರಗಳೂ ನೂರಾರು ಸಣ್ಣನದಿ ತೊರೆಗಳೂ ಇವೆ. ಪ್ರಸಿದ್ಧ ಸರೋವರವೆಂದರೆ ಕೇಪ್ ಬ್ರೆಟೋನ್ ದ್ವೀಪದಲ್ಲಿರುವ ಬ್ರಾಸ್‌ಡೋರ್ ಅಟ್ಲಾಂಟಿಕ್ ಸಾಗರದೊಡನೆ ಇದು ಮೂರು ಸಣ್ಣ ಕಾಲುವೆಗಳಿಂದ ಸಂಪರ್ಕ ಹೊಂದಿದೆ. ಇದರಿಂದಾಗಿ ಇದು ಉಪ್ಪು ನೀರಿನಿಂದ ಕೂಡಿದೆ. ಈ ಸರೋವರ 932 ಚ.ಕಿಮೀ ವಿಸ್ತಾರವಾಗಿದೆ. ಭೌಗೋಳಿಕವಾಗಿ ಈ ಪ್ರದೇಶ ಒಂದು ಸಂಕೀರ್ಣ ವಲಯ. ಇದರ ಸುತ್ತ ಕಡಿದಾದ ಬೆಟ್ಟಗಳೂ ಕಣಿವೆಗಳೂ ಇವೆ.

ಈ ಪ್ರಾಂತ್ಯದ ನದಿಗಳೆಲ್ಲವೂ ಚಿಕ್ಕವು. 80 ಕಿಮೀ ಗಿಂತ ಉದ್ದವಿರುವ ನದಿಗಳು ಕಡಿಮೆ. ಪ್ರಾಂತ್ಯದ ದೊಡ್ಡ ನದಿಗಳು ಮರ್ಸಿ ಮತ್ತು ಸೆಂಟ್ ಮೇರಿ. ಇತರೆ ಪ್ರಮುಖ ನದಿಗಳು ಹಾವೆ, ಮುಸ್ಕೊದುಬಾ, ಮಿರಾ, ನೋವ ಸ್ಕೋಷಿಯಕ್ಕೆ 1.600 ಕಿಮೀ ಉದ್ದದ ಕರಾವಳಿ ಇದೆ.

ವಾಯುಗುಣ: ಸುತ್ತಲೂ ಸಾಗರವಿರುವುದರಿಂದ ಇಲ್ಲಿಯ ವಾಯುಗುಣ ಮಾರ್ಪಾಡುಹೊಂದಿರುವ ಖಂಡಾಂತರ ಮಾದರಿಯದು, ಜನವರಿ ತಿಂಗಳಲ್ಲಿ ಸರಾಸರಿ– $4^0$ಸೆ ಉಷ್ಣತೆ ಇದ್ದರೆ. ಜುಲೈಯಲ್ಲಿ ಸರಾಸರಿ $18^0$ ಸೆ ಉಷ್ಣತೆ ಇರುತ್ತದೆ. ಉತ್ತರದ ಅಟ್ಲಾಂಟಿಕ್ ಕರಾವಳಿ ಪ್ರದೇಶ ಅತ್ಯಂತ ಶೀತದ ವಲಯ. ಚಳಿಗಾಲದಲ್ಲಿ ಹಿಮಾಚ್ಛಾದಿತ ಪ್ರದೇಶಗಳ ಮೇಲಿಂದ ಬೀಸುವ ಮಾರುತಗಳಿಂದ ಹವಾಮಾನ ಅತಿಶೀತವಾಗಿರುವುದು. ವಾರ್ಷಿಕ ಹಿಮಪಾತ ಸರಾಸರಿ 216 ಸೆಂಮೀ ಹಿಮರಹಿತ ದಿನಗಳು ಫಂಡೀ ಕೊಲ್ಲಿಯ ಪ್ರದೇಶದಲ್ಲಿ ವರ್ಷಕ್ಕೆ 140 ದಿನ ಗಳಿದ್ದರೆ, ಯೂರ್‌ಮೌತ್ ಸುತ್ತಮುತ್ತ 160 ದಿನಗಳು. ಒಳನಾಡಿನಲ್ಲಿ 100 ದಿನಗಳು. ಅಟ್ಲಾಂಟಿಕ್ ಕರಾವಳಿಯಲ್ಲಿ ವಿಪರೀತ ಮಳೆ ಬೀಳುತ್ತದೆ. ಪ್ರಾಂತ್ಯದ ದಕ್ಷಿಣದಲ್ಲಿ 140 ಸೆಂಮೀ ಇತರೆಡೆ 102 ಸೆಂಮೀ ಮಳೆ ಆಗುತ್ತದೆ.

ಸಸ್ಯ–ಪ್ರಾಣಿಗಳು: ಈ ಪ್ರಾಂತ್ಯದ ಶೇ. 75 ಭಾಗವನ್ನು ಅರಣ್ಯಗಳು ಆಕ್ರಮಿಸಿಕೊಂಡಿವೆ, ಬರ್ಚ್, ಫರ್, ಮೇಪಲ್, ಪೈನ್, ಸ್ಪ್ರೂಸ್ ಅತ್ಯಂತ ಸಾಮಾನ್ಯ ವೃಕ್ಷಗಳು, ಇವು ಸೌದೆ, ಮರದ ತಿರುಳು ಹಾಗು ಕಾಗದ ತಯಾರಿಕೆ ಸಾಮಗ್ರಿಯ ಆಕರಗಳು ಇತರ ಸಸ್ಯಗಳು ಬ್ಲೂ ಬೆರಿ, ಬ್ರ್ಯಾಕನ್, ಮೇಫ್ಲವರ್, ಬೆಟ್ಟದ ಲಾರೆಲ್, ಡಾಸ್ಬೆರಿ, ರೋಡೆರ, ಸ್ವೀಟ್ ಫರ್ನ, ಮಿಟರ್‌ಗ್ರೀನ್,

ಬಿಳಿಬಾಲದ ಜಿಂಕೆ ಸಾಮಾನ್ಯವಾಗಿ ಕಾಣುವ ಪ್ರಾಣಿ, ಇತರ ಪ್ರಮುಖ ಪ್ರಾಣಿಗಳೆಂದರೆ ಕಪ್ಪು ಕರಡಿ, ಕಡವೆ, ಕಾಡುಬೆಕ್ಕು. ಸಣ್ಣ ಪ್ರಾಣಿಗಳಾದ ಮಿಂಕ್, ಕಸ್ತೂರಿಇಲಿ, ನೀರುನಾಯಿ. ಮುಳ್ಳುಹಂದಿ, ಕೆಂಪುನರಿ ಮೊದಲಾದವು ಪ್ರಾಂತ್ಯದಲ್ಲಿ ಹರಡಿಕೊಂಡಿವೆ. ಹಲವು ಬಗೆಯ ಹೆಬ್ಬಾತು, ಬಾತು, ಫೆಸೆಂಟ್, ಗ್ರೌಸ್, ಮರಕುಟಿಕ ಹಕ್ಕಿಗಳಿವೆ. ಅಲ್ಲದೆ ಕಾರ್ಮೊರಂಟ್,

ಗಲ್, ಟರ್ನ ಮತ್ತಿತರ ಸಾಗರ ಹಕ್ಕಿಗಳು ಕರಾವಳಿಯ ಉದ್ದಕ್ಕೂ ಕಂಡುಬರುತ್ತವೆ. ನೋವ ಸ್ಕೋಟಿಯದವರಿಗೆ ಹಾಗೂ ಇಲ್ಲಿಗೆ ಬರುವ ಪ್ರವಾಸಿಗಳಿಗೆ ಬೇಟೆ ಒಂದು ಪ್ರಿಯವಾದ ಹವ್ಯಾಸ. ಸ್ಯಾಲ್ಮನ್ ಮತ್ತು ಟ್ರೌಟ್ ಮೀನುಗಳು ಸಿಹಿನೀರಿನಲ್ಲಿ ಕಂಡುಬರುತ್ತವೆ.

ಜನತೆ: ನೋವ ಸ್ಕೋಟಿಯದವರು ಮೂಲತಃ ಸಾಮಾನ್ಯವಾಗಿ ಬ್ರಿಟನ್ ಇಲ್ಲವೇ ಫ್ರಾನ್ಸಿನಿಂದ ಬಂದವರು. ಜನಸಂಖ್ಯೆಯ ಎಂಟನೆಯ ಒಂದು ಭಾಗ ಅಕೆಡಿಯನ್ ಫ್ರೆಂಚ್ ಮೂಲದವರು. ನ್ಯೂ ಇಂಗ್ಲೆಂಡಿನಿಂದ ಬಂದ ವಲಸೆಗಾರರ, ಅಮೆರಿಕದಿಂದ ಹೊರಬಿದ್ದ ಬ್ರಿಟನ್ ಸಾಮ್ರಾಜ್ಯದ ನಿಷ್ಠಾವಂತ ಪ್ರಜೆಗಳ ವಂಶಸ್ಥರೂ ಇಲ್ಲಿದ್ದಾರೆ. ಜರ್ಮನ್ ವಲಸೆಗಾರರ ತಂಡವೂ ಸಹ ಇದೆ. ಇತರ ಅಲ್ಪ ಸಂಖ್ಯಾತರೆಂದರೆ ಎರಡನೆಯ ಮಹಾಯುದ್ಧದ ಅನಂತರ ಬಂದ ಡಚ್, ಇಟಾಲಿಯನ್, ಹಂಗೇರಿಯನ್ ಮೂಲದವರು. ನಗರ ಪ್ರದೇಶಗಳ ಬಳಿ ನೀಗ್ರೋ ಸಮುದಾಯಗಳು ಇವೆ. ಅಲ್ಲದೆ ಈ ಪ್ರಾಂತ್ಯದಲ್ಲಿ 3.000ಕ್ಕೂ ಹೆಚ್ಚುಮಂದಿ ಮಿಕ್ಮಾಕ್ ರೆಡ್ ಇಂಡಿಯನರಿದ್ದಾರೆ.

ಇಲ್ಲಿಯ ಜನರಲ್ಲಿ ಮೂರನೆಯ ಒಂದು ಭಾಗಕ್ಕಿಂತ ಹೆಚ್ಚುಮಂದಿ ರೋಮನ್ ಕೆಥೊಲಿಕರು ಹೆಚ್ಚು ಮಂದಿ. ಪ್ರಾಟೆಸ್ಟಂಟರಲ್ಲಿ ಯುನೈಟೆಡ್ ಚರ್ಚ್‌ಆಫ್ ಕೆನಡದ ಅನುಯಾಯಿಗಳು. ಅಲ್ಲದೆ ಆಂಗ್ಲಿಕನ್ ಚರ್ಚ್ ಆಫ್ ಕೆನಡ ಬ್ಯಾಪ್ಟಿಸ್ಟ್‌ಚರ್ಚ್ ಹಾಗೂ ಪ್ರೆಸ್ಬಿಟೇರಿಯನ್ ಚರ್ಚ್‌ಗಳ ಅನುಯಾಯಿಗಳೂ ಇದ್ದಾರೆ.

1960ರಿಂದ ಈಚೆಗೆ ನೋವ ಸ್ಕೋಟಿಯಕ್ಕೆ ವಲಸೆ ಬರುವವರ ಸಂಖ್ಯೆ ಬಹಳ ಕಡಿಮೆ. ಆದರೆ ವಿದ್ಯಾವಂತ ಹಾಗು ಅಶಿಕ್ಷಿತ ನೋವ ಸ್ಕೋಟಿಯನರು ಹೊರ ದೇಶಗಳಿಗೆ ಹೋಗುವುದು ಹೆಚ್ಚುತ್ತಿದೆ. ಈ ಪ್ರಾಂತ್ಯ ಕೆನಡದ ಸಮಗ್ರ ಜನಜೀವನ ಗತಿಯಿಂದ ದೂರವಾದಂತಿದೆ. ಭೌಗೋಳಿಕವಾಗಿ ಈ ಪ್ರಾಂತ್ಯ ಕೆನಡದ ಉಳಿದ ಭಾಗದಿಂದ ಪ್ರತ್ಯೇಕವಾದಂತೆ ಇರುವುದು ಇದಕ್ಕೆ ಕಾರಣ. ಇತ್ತೀಚೆಗೆ ಸಂಚಾರ ಸುಲಭವಾಗಿರುವುದರಿಂದ. ರಾಷ್ಟ್ರೀಯ ಸಂಪರ್ಕ ಸಾಧನಗಳು ಬೆಳೆದಿರುವುದರಿಂದ ಈ ಪ್ರಾಂತ್ಯವೂ ಕೆನಡದ ಮುಖ್ಯ ಜೀವನ ಪ್ರವಾಹದೊಂದಿಗೆ ಹೆಚ್ಚು ಹೆಚ್ಚಾಗಿ ಬೆರೆತುಕೊಳ್ಳುತ್ತಿದೆ. ಆಧುನಿಕ ಜೀವನ ಶೈಲಿ ಇಲ್ಲೂ ಮೊಳೆಯುತ್ತಿದೆ. ಆದರೂ ಪರ್ಯಾಯದ್ವೀಪದ ಮುಖ್ಯಭಾಗಗಳಲ್ಲಿ ಹಾಗೂ ಕೇಪ್ ಬ್ರೆಟನ್ ದ್ವೀಪದಲ್ಲಿ ಪ್ರಾಚೀನ ಪರಂಪರೆಯ ಜೀವನ ಈಗಲೂ ನಿಚ್ಚಳವಾಗಿ ಉಳಿದಿರುವುದನ್ನು ಕಾಣಬಹುದು. ನೋವ ಸ್ಕೋಟಿಯದಲ್ಲಿ ಸ್ಕಾಟ್ ಸಂಸ್ಕೃತಿ ಎದ್ದುಕಾಣುತ್ತದೆ. ಸಂಗೀತ, ನೃತ್ಯ, ಹಾಗು ಕುಶಲ ಕೈಗಾರಿಕೆಗಳಲ್ಲಿ ಇದರ ಪ್ರಭಾವ ಹೆಚ್ಚುತ್ತಿದೆ. ಪ್ರಾಂತ್ಯದ ಕೆಲವು ಜನರು ಈಗಲೂ ತಮ್ಮ ಸ್ಕಾಟ್ ಮೂಲಜರ ಗಾಲಿಕ್ ಭಾಷೆ ಆಡುತ್ತಾರೆ.

ಆರ್ಥಿಕತೆ: ಇಲ್ಲಿ ಕೈಗಾರಿಕೆಯೇ ಪ್ರಧಾನ. ವ್ಯವಸಾಯ ಮತ್ತು ಮೀನುಗಾರಿಕೆ ಅನಂತರದ ಪ್ರಮುಖ ಉದ್ಯೋಗಗಳು. ಈ ಪ್ರಾಂತ್ಯದ ನೆಲದ ಶೇ. 10 ಭಾಗ ಮಾತ್ರ ಸಾಗುವಳಿಗೆ ಯೋಗ್ಯವಾಗಿದೆ. ಆದ್ದರಿಂದ ಜಾನುವಾರು ಸಾಕಣೆ. ಕೋಳಿಸಾಕಣೆ ಮತ್ತು ವಿವಿಧ ಹೈನು ಉತ್ಪಾದನೆಗಳಿಗೆ ವ್ಯವಸಾಯ ಮೀಸಲಾಗಿದೆ. ಈ ಪ್ರಾಂತ್ಯದ ಅತ್ಯಂತ ಮೌಲಿಕ ಸಂಪನ್ಮೂಲಗಳೆಂದರೆ ವ್ಯಾಪಕ ಖನಿಜ ನಿಕ್ಷೇಪಗಳು. ಫಲವತ್ತಾದ ತಗ್ಗುಭೂಮಿ ಹಾಗೂ ಸಂಪದ್ಭರಿತ ಮತ್ಸ್ಯ ವಲಯಗಳು. ಅನಾಪೊಲಿಸ್ ಕಣಿವೆ ಉತ್ತಮ ಉಳುಮೆ ನೆಲ. ಫಂಡೀ ಕೊಲ್ಲಿಯ ಉದ್ದಕ್ಕೂ ಇರುವ ಜೌಗು ನೆಲವೂ ನಾರ್ತಂಬರ್ಲೆಂಡ್ ಜಲಸಂಧಿಯ ಮಗ್ಗುಲ ಬಯಲೂ ಇತರ ವ್ಯವಸಾಯಯೋಗ್ಯ ಪ್ರದೇಶಗಳಾಗಿವೆ. ಹುಲ್ಲು ಇಲ್ಲಿಯ ಮುಖ್ಯ ಬೆಳೆ. ಇತರ ಬೆಳೆಗಳು ಬಾರ್ಲಿ, ಗೋದಿ, ಓಟ್ಸ್.

ಉತ್ತರ ಅಮೆರಿಕದಲ್ಲಿಯೇ ಭಾರಿ ಪ್ರಮಾಣದ ಜಿಪ್ಸಮ್ ನಿಕ್ಷೇಪ ಹ್ಯಾಲಿಫಾಕ್ಸ್ ಬಳಿ ಇದೆ. ಶಿಗ್ನೆಕ್ಟೊ ಭೂಸಂಧಿಯಿಂದ ಕೇಪ್ ಬ್ರೆಟನ್ ದ್ವೀಪದ ಗ್ಲೇಸ್ ಕೊಲ್ಲಿಯ ವರೆಗಿನ ನೆಲದಲ್ಲಿ ಕಲ್ಲಿದ್ದಲು ನಿಕ್ಷೇಪವಿದೆ. ಇತರ ಪ್ರಮುಖ ಖನಿಜಗಳು ಬ್ಯಾರೈಟ್, ಸೀಸ, ಲವಣ, ಮರಳು, ಮರಳುಗಲ್ಲು, ಬೆಳ್ಳಿ, ತಾಮ್ರ, ಸತು. ಕಲ್ಲಿದ್ದಲಿನ ಬಹುಭಾಗವನ್ನು ಈ ಪ್ರಾಂತ್ಯದ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಬ್ಯಾರೈಟ್ ನಿಕ್ಷೇಪವಿರುವ ಪ್ರಾಂತ್ಯ ನೋವಸ್ಕೋಟಿಯ. ಆಹಾರ ಸಂಸ್ಕರಣ ಇಲ್ಲಿಯ ಪ್ರಮುಖ ಕೈಗಾರಿಕೆ. ಕರಾವಳಿಯ ಉದ್ದಕ್ಕೂ ಮೀನು ಸಂಸ್ಕರಣ ಸ್ಥಾವರಗಳಿವೆ. ಕ್ಷೀರೋತ್ಪನ್ನ ಕೇಂದ್ರಗಳು ಮೈನಸ್ ಕಣಿವೆಯ ಪ್ರದೇಶದಲ್ಲೂ ಫಂಡೀಕೊಲ್ಲಿಯ ತೀರದಲ್ಲೂ ಇವೆ.

ಕಾಗದ ಹಾಗೂ ಅದಕ್ಕೆ ಸಂಬಂಧಿಸಿದ ವಸ್ತುಗಳ ಉತ್ಪಾದನೆ ಎರಡನೆಯ ಪ್ರಮುಖ ಕೈಗಾರಿಕೆ. ಇದಕ್ಕೆ ಆಧಾರವಾಗಿ ಅರಣ್ಯ ಕೈಗಾರಿಕೆ, ಮರದ ತಿರುಳಿನ ಉದ್ಯಮ ಇವೆ.

ಜೇಡಿ ಹಾಗೂ ಗಾಜಿನ ಸರಕು ಮತ್ತು ಮರಮುಟ್ಟು ತಯಾರಿಕೆ, ಲೋಹಗಾರಿಕೆ–ಇವು ಇತರ ಉದ್ಯಮಗಳು. ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ಬಹುತೇಕ ಸಿಡ್ನಿ ಹಾಗು ಟ್ರೆಂಟನ್‌ಗಳಲ್ಲಿವೆ. ಡಾರ್ಟ್‌ಮೌತ್ ಹಾಗೂ ಪೋರ್ಟ್ ಹಾಕ್ಸ್‌ಬರಿಗಳ ತೈಲಾಗಾರಗಳು ಗ್ಯಾಸೊಲಿನ್ ಮತ್ತು ಇತರ ಪೆಟ್ರೋಲಿಯಂ ಪದಾರ್ಥಗಳನ್ನು ಉತ್ಪಾದಿಸುತ್ತವೆ. ನೋವ ಸ್ಕೋಟಿಯ ಕೆನಡದ ಪ್ರಮುಖ ಮೀನುಗಾರಿಕೆ ಪ್ರಾಂತ್ಯ. ಸೀಗಡಿಗಳನ್ನು ಹಿಡಿಯಲಾಗುತ್ತದೆ, ಕಾಡ್, ಹ್ಯಾಡರ್, ಹೆರಿಂಗ್, ಸ್ಕ್ಯಾಲತ್, ಸ್ವೋರ್ಡಫಿಷ್ ಮುಂತಾದ ಮೀನುಗಳನ್ನು ಹಿಡಿಯಲಾಗುತ್ತಿದೆ. ಸಮುದ್ರ ಮೀನುಗಳ ವಾರ್ಷಿಕ ಮೌಲ್ಯ 5.65 ಕೋಟಿ ಡಾಲರ್. ಇವನ್ನು ಸಂಸ್ಕರಣ ಕೇಂದ್ರಗಳಿಗೆ ಸಾಗಿಸಿ, ಅಲ್ಲಿಂದ ಮಾರುಕಟ್ಟೆಗೆ ರವಾನಿಸಲಾಗುತ್ತದೆ.

ಸಾರಿಗೆ ಸಂಪರ್ಕ: ನೋವ ಸ್ಕೋಟಿಯದಲ್ಲಿ ಸು. 24.100 ಕಿಮೀ ರಸ್ತೆಗಳೂ ಸು. 2,740 ಕಿಮೀ ರೈಲುಮಾರ್ಗಗಳು ಇವೆ. ವಿಮಾನ ಸೌಲಭ್ಯವುಂಟು. ಹ್ಯಾಲಿಫಾಕ್ಸ್ ವಿಮಾನಸಾರಿಗೆ ಕೇಂದ್ರ. ಇದೊಂದು ದೊಡ್ಡ ಬಂದರೂ ಹೌದು. ಜನಸಂಖ್ಯೆ 88,931 (2001).

ಲೂಯಿಬರ್ಗ್ ಕೋಟೆ, ಪೋರ್ಟ್ ರಾಯಲ್‌ನಲ್ಲಿ ಚಾಂಪ್ಲೇನನ ವಸತಿ, ಹ್ಯಾಲಿಫಾಕ್ಸಿನ ದುರ್ಗ, ಅನಾಪೊಲಿಸ್ ಕಣಿವೆಯಲ್ಲಿನ ಅಲೆಗ್ಸಾಂಡರ್ ಗ್ರಹಾಂಬೆಲ್ ರಾಷ್ಟ್ರೀಯ ಇತಿಹಾಸ ಉದ್ಯಾನ, ಗ್ರಾನ್ ಪ್ರಿಸ್ಮಾರಕ ಇವು ಪ್ರೇಕ್ಷಣೀಯ. (ಎಸ್.ಎಸ್.ಎಂ.ಯು.)

**ನೌಕಾಯಾನ:** ಒಂದು ನೆಲೆಯಿಂದ ಇನ್ನೊಂದು ನೆಲೆಗೆ ನೌಕೆಯ ಚಲನೆಯನ್ನು ನಿರ್ದೇಶಿಸುವ ತಂತ್ರಗಳ ಅಧ್ಯಯನ (ನ್ಯಾವಿಗೇಶನ್). ನೌಕಾಗತಿವಿಜ್ಞಾನ ಪರ್ಯಾಯಪದ, ನೆಲೆ, ದಿಶೆ, ದೂರ ಇವು ನೌಕಾಯಾನದ ಮೂರು ಮುಖ್ಯ ಘಟಕಗಳು. ನೌಕೆ ಈಗ ಇರುವ ನೆಲೆ ಯಾವುದು, ಅದು ತಲಪಬೇಕಾದ ನೆಲೆಯ ದಿಶೆ ದೂರ ಏನು ಎಂಬವನ್ನು ಅರಿತು ತದನುಗುಣವಾಗಿ ಚಲನೆಯನ್ನು ರೂಪಿಸುವುದೇ ನೌಕಾಯಾನದ ಉದ್ದೇಶ. ಇಂದು ನೌಕಾಯಾನ ಪದವನ್ನು ಜಲ, ವಾಯು ಹಾಗೂ ಆಕಾಶಯಾನಗಳನ್ನು ಕುರಿತಂತೆ ಬಳಸುವುದು ವಾಡಿಕೆ. ನೆಲದ ಮೇಲೆ ಗಡಿ ಗುರುತುಗಳು ಸ್ಥಿರವಾಗಿರುವುದರಿಂದ, ಹಾದಿಗಳು ನಿರ್ಣೀತವಾಗಿರುವುದರಿಂದ, ಭೂಪಟಗಳು ಶಿಷ್ಟೀಕೃತವಾಗಿರುವುದರಿಂದ ಮೇಲಾಗಿ ನೆಲದ ಮೇಲಿನ ಪ್ರಯಾಣ ಇತರ ಮೂರು ವಲಯಗಳಲ್ಲಿಯ ಪ್ರಯಾಣಗಳಿಗಿಂತ, ಸಾಪೇಕ್ಷವಾಗಿ, ಅಪಾಯರಹಿತವಾದ್ದರಿಂದ ಇಲ್ಲಿಯ ನೌಕಾಯನ ತಂತ್ರಗಳು ಸರಳವಾಗಿವೆ.

ನೌಕಾಯಾನದ ಮೂರು ಘಟ್ಟಗಳು: ಉದ್ದೇಶರಹಿತವಾಗಿ ತೇಲುವುದಾಗಲಿ ಹಾರುವುದಾಗಲಿ ನೌಕಾಯಾನ ಎನ್ನಿಸದು. ನೌಕಾಯಾನದ ಪ್ರಥಮ ಆವಶ್ಯಕತೆ ಎಂದರೆ ಎಲ್ಲಿಗೆ ತೆರಳಬೇಕು ಎನ್ನುವ ಲಕ್ಷ್ಯದ ಅರಿವು. ಇದನ್ನು ನಿರ್ಧರಿಸಿದ ಬಳಿಕ ನೌಕೆ–ಅದು ಜಲನೌಕೆ ಆಗಬಹುದು ಅಥವಾ ವಾಯುನೌಕೆ ಆಗಬಹುದು–ಯಾವ ಹಾದಿಯನ್ನು ಅನುಸರಿಸಬೇಕು ಎಂಬುದನ್ನು ತೀರ್ಮಾನಿಸಬೇಕಾಗುವುದು. ಇದು ನೌಕಾಯಾನದ ಪ್ರಥಮ ಘಟ್ಟ. ನೌಕೆ ಪೂರ್ವನಿರ್ಧರಿತ ಹಾದಿ ಮೇಲೆ ಸಾಗಲು ಅದರ ಚಲನದಿಶೆ ಹಾಗೂ ಚಲನ ವೇಗ ಎರಡೂ ಸರಿಯಾಗಿ ಹೊಂದಾಣಿಕೆ ಆಗುವುದು ಅವಶ್ಯ. ಇದು ನೌಕಾಯನದ ದ್ವಿತೀಯ ಘಟ್ಟ. ಆರಂಭದಲ್ಲಿ ವೇಗ ಅಧಿಕವಾಗಿರಬೇಕು. ನಡು ಹಾದಿಯಲ್ಲಿ ಅದನ್ನು ಏರಿಸಬೇಕಾದೀತು, ಇಳಿಸಬೇಕಾದೀತು. ಚಲನದಿಶೆಯನ್ನು ಯುಕ್ತವಾಗಿ ಮಾರ್ಪಡಿಸಬೇಕಾದೀತು ಮತ್ತು ಕೊನೆಯಲ್ಲಿ ವೇಗವನ್ನು ತಗ್ಗಿಸಿ ಗುರಿಯಲ್ಲಿ ಮೆತ್ತಗೆ ಇಳಿಯುವುದು ಸಾಧ್ಯವಾಗಬೇಕು. ಆದ್ದರಿಂದ ವೇಗೋತ್ಕರ್ಷವನ್ನು ಒಳಗೊಂಡಂತೆ ನೌಕೆಯ ಚಾಲನ ನೌಕಾಯಾನದ ತೃತೀಯ ಘಟ್ಟ.

ಆಧುನಿಕ ನೌಕಾಯಾನ ತಂತ್ರಗಳು : ಇವನ್ನು ಮುಖ್ಯವಾಗಿ ಚಾಲನ, ಮಾರ್ಗಧಾರಣ, ಸ್ಥಾನ ನಿರ್ಧಾರ ಮತ್ತು ರೇಡಾರ್ ಬಳಕೆ ಎಂಬ ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಅಭ್ಯಸಿಸುವುದು ವಾಡಿಕೆ.

**ಗ್ರಹಗಳ ನಡುವೆ ನೌಕಾಯಾನ :** ಚಂದ್ರನವರೆಗೆ ಸ್ವತಃ ಮನುಷ್ಯ ಹೋಗಿ ಧರೆಗೆ ಸುರಕ್ಷಿತವಾಗಿ ಮರಳಿದ್ದಾನೆ. ಮಾನವರಹಿತ ಆಕಾಶನೌಕೆಗಳು ನೆರೆಗ್ರಹಗಳಾದ ಶುಕ್ರ ಹಾಗೂ ಮಂಗಳನ ಮೇಲೆ ಇಳಿದಿವೆ. ಸೌರವ್ಯೂಹದ ಮಹಾಯಾನದಲ್ಲಿ ನಿರತವಾಗಿವೆ. ಅತಿದೂರ, ಅತಿವೇಗ, ಅತಿ ವಿಸ್ತಾರ–ಇವುಗಳೊಡನೆ ವ್ಯವಹರಿಸಬೇಕಾದ ಆಕಾಶಯಾನದಲ್ಲಿ ನೌಕಾಯಾನದ ಮಹತ್ತ್ವವಾಗುತ್ತದೆ. ಇದರಲ್ಲಿ ಅತಿನಿಷ್ಕೃಷ್ಟತೆ ಸಾಧಿಸಿದ ವಿನಾ ಆಕಾಶಯಾನ ಸಫಲವಾಗದು.

1976ರಲ್ಲಿ ವೈಕಿಂಗ್ ಆಕಾಶನೌಕೆಗಳನ್ನು ಮಂಗಳಾಭಿಮುಖವಾಗಿ ಉಡಾಯಿಸಿದ್ದೂ ಅವುಗಳಲ್ಲಿದ್ದ ಕೋಶಗಳು ಮಂಗಳ ತಳದ ಮೇಲೆ ಮೃದುವಾಗಿ ಇಳಿದು ಕಾರ್ಯನಿರ್ವಹಿಸಿದ್ದೂ ಸರಿಯಷ್ಟೆ.. ಸುಮಾರು ಹತ್ತು ತಿಂಗಳ ಯಾನಾವಧಿಯಲ್ಲಿ ನೌಕೆ ಚಲಿಸಿದ ದೂರ 70 ಕೋಟಿ ಕಿಮೀ ವೈಕಿಂಗಿನ ಉಡಾವಣ ನೆಲೆಯಾದ ಭೂಮಿಗೆ ಅತಿ ರಭಸದ ಆವರ್ತನ ಹಾಗೂ ಪರಿಭ್ರಮಣ ಚಲನೆಗಳಿವೆ. ಸಹಜವಾಗಿ ಇವೆರಡೂ ವೈಕಿಂಗಿನ ಉಡಾವಣ ವೇಗ ಹಾಗೂ ಚಲನದಿಶೆಗಳ ಮೇಲೆ ಪ್ರಭಾವ ಬೀರುವುವು. ಇತ್ತ ಮಂಗಳಕ್ಕೆ ಕೂಡ ಇದೇ ವಿಧವಾದ ಆದರೆ ಭಿನ್ನ ದರಗಳ ಚಲನೆಗಳಿವೆ. ಅದರ ಕಕ್ಷೆ ಭೂಕಕ್ಷೆಗಿಂತ ವಿಭಿನ್ನವಾದದ್ದು. ಇಂಥ ಹಲ ಬಗೆಯ ವಿಭಿನ್ನತೆಗಳು ಇದ್ದಾಗ್ಯೂ ಅತಿ ಪುಟ್ಟ ವೈಕಿಂಗ್ ನೌಕೆ ಸರಿಯಾಗಿ ಗುರಿ ತಲಪಿದ್ದು ನೌಕಾಯಾನದಲ್ಲಿ ಸಾಧಿಸಲಾಗಿರುವ ನಿಷ್ಕೃಷ್ಟತೆಗೆ ಸಾಕ್ಷಿ. ಬುಧ, ಶುಕ್ರ ಹಾಗೂ ಮಂಗಳ ಗ್ರಹಗಳನ್ನು ಕುರಿತಂತೆ ಕೇವಲ ಕೆಲವು 10 ಕಿಮೀ ಲಕ್ಷ್ಯಭ್ರಷ್ಟತೆಯ ಒಳಗೆ ಗುರಿ ತಲಪುವುದು ಇಂದು ಸಾಧ್ಯವಾಗಿದೆ.

ಆಕಾಶಯಾನದಲ್ಲಿ ಭೂಮಿಗೂ ನೌಕೆಗೂ ನಡುವೆ ರೇಡಿಯೊ ಅಲೆಗಳ ಮೂಲಕ ಸೇತುವೆ ಏರ್ಪಡುವುದು. ಇವು ಬೆಳಕಿನ ವೇಗದಿಂದ (ಸೆಕೆಂಡಿಗೆ 3 ಲಕ್ಷ ಕಿಮೀ) ಧಾವಿಸುವುವು. ಧರೆಯಲ್ಲಿಯ ಪ್ರೇಷಕ ಹಾಗೂ ಅಭಿಗ್ರಾಹಕಗಳು ಅತಿ ಸಾಮರ್ಥ್ಯಯುತವಾದವೂ ವಿಶಾಲಾವಾದವೂ ಆಗಿರಬೇಕು. ಇಲ್ಲವಾದರೆ ಆಕಾಶದ ಅತಿ ದೂರದಲ್ಲಿ ರೇಡಿಯೊ ಸಂಜ್ಞೆಗಳು ನೌಕೆಯನ್ನು ತಲಪಲಾರವು ಮತ್ತು ನೌಕೆಯಿಂದ ಪ್ರೇಷಿತವಾದ ದುರ್ಬಲ ಸಂಜ್ಞೆಗಳು ಧರೆಗೆ ಯೋಗ್ಯ ಮಾಹಿತಿ ಒದಗಿಸಲಾರವು. ಉದಾಹರಣೆಗೆ ಮಂಗಳದಲ್ಲಿ ಬೆಂಕಿಕಡ್ಡಿ ಗೀರಿ ಬೆಂಕಿ ಉರಿದಾಗ ಹೊಮ್ಮುವ ಶಕ್ತಿಯನ್ನು ಧರೆಯಲ್ಲಿಯ ಅಭಿಗ್ರಾಹಕಗಳು ಗ್ರಹಿಸಬಲ್ಲವು. ಭೂಮಿಯ ಮೇಲಿನ ಯಾವುದೇ ಒಂದು ವೀಕ್ಷಣ ಕೇಂದ್ರ ಸದಾ ನೌಕೆಯನ್ನು ದೃಷ್ಟಿಸುತ್ತಿರಲಾರದು. ಭೂಮಿಯ ಆವರ್ತನೆ ಹಾಗೂ ನೌಕೆಯ ಚಲನೆಗಳ ಪರಿಣಾಮವಾಗಿ ನೌಕೆಯನ್ನು ಕುರಿತಂತೆ ವೀಕ್ಷಣಕೇಂದ್ರದ ಸ್ಥಾನ ನಿರಂತರವಾಗಿ ಬದಲಾಗುತ್ತಿರುವುದೇ ಇದರ ಕಾರಣ. ಇದಕ್ಕಾಗಿ ಭೂಮಿಯ ಮೇಲೆ ಅನುಕೂಲ ನೆಲೆಗಳಲ್ಲಿ ಹರಡಿ ಹೋದಂತೆ ಹಲವಾರು ಪಥವೀಕ್ಷಣ ಠಾಣ್ಯಗಳನ್ನು ಕಟ್ಟಲಾಗಿದೆ. ಇವುಗಳಲ್ಲಿ ಸಂಗೃಹೀತವಾದ ಮಾಹಿತಿ ಕೇಂದ್ರ ನಿರ್ದೇಶನಾಲಯಕ್ಕೆ ಆಗಿಂದಾಗಲೇ ರವಾನಿಸಲ್ಪಡುವುದು.

ವಾಸ್ತವವಾಗಿ ಅಂತರಗ್ರಹ ನೌಕಾಯನ ಒಂದು ವಿಚಿತ್ರ ಸಮಸ್ಯೆ. ಇದರ ಒಂದು ಮುಖವನ್ನು ಗಮನಿಸುವಾಗ ನಿಸರ್ಗದಿಂದ ಎದುರಾಗುವ ಅಡೆತಡೆಗಳು ಅಪಾರ. ಮುಂಬರುವ ದಶಕಗಳಲ್ಲಿ ಆಕಾಶ ನೌಕಾಯಾನದಲ್ಲಿ ಹೆಚ್ಚಿನ ಸುಧಾರಣೆಗಳು ಸಾಧ್ಯವಾಗಿ ದೂರ ಗ್ರಹಗಳತ್ತ ಪ್ರಯಾಣವೂ ಹೆಚ್ಚು ನಿಷ್ಕೃಷ್ಟವಾಗುವುದೆಂದು ನಿರೀಕ್ಷಿಸಬಹುದು. *

**ನೌರು:** ನೌರು ದಕ್ಷಿಣ ಪೆಸಿಫಿಕ್ ಸಾಗರದ ಮಧ್ಯೆ ಮಾರ್ಷಲ್ ದ್ವೀಪಗಳ ದಕ್ಷಿಣದಲ್ಲಿದೆ. ಇದು $0^0 32'$ ದ.ಅ. ಹಾಗೂ $166^0 55'$ ಪೂ.ರೇ. ದಲ್ಲಿ ನೆಲೆಸಿದೆ. ಇದರ ವಿಸ್ತೀರ್ಣ 21 ಚ.ಕಿಮೀ. ನೌರು 1968 ರಲ್ಲಿ ಸ್ವಾತಂತ್ರ್ಯವನ್ನು ಪಡೆಯಿತು ಮತ್ತು 1999 ರಲ್ಲಿ ವಿಶ್ವಸಂಸ್ಥೆಯನ್ನು ಸೇರಿತು. ಇದು ಪ್ರಪಂಚದಲ್ಲೇ ಅತ್ಯಂತ ಚಿಕ್ಕ ಸ್ವತಂತ್ರ ಗಣರಾಜ್ಯ. ಇದನ್ನು ಆಡಳಿತದ ಅನುಕೂಲತೆಗಾಗಿ 14 ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ರಾಜಧಾನಿ ಯಾರೆನ್. ಜನಸಂಖ್ಯೆ 600 (2004).

ಮೇಲ್ಮೈ ಲಕ್ಷಣಗಳು: ನೌರು ಹವಳದ ದಿಬ್ಬಗಳಿಂದ ಸುತ್ತುವರಿಯಲ್ಪಟ್ಟಿದೆ. ಇದರ ತೀರ ಪ್ರದೇಶದ ಉದ್ದ 30 ಕಿಮೀ. ಇದು ಫಲವತ್ತಾದ ಮರಳಿನಿಂದ ಕೂಡಿದ ಬೀಚುಗಳನ್ನು ಹೊಂದಿದೆ. ಇಲ್ಲಿಯ ಹವಳದ ದಿಬ್ಬಗಳು ಬಂದರುಗಳ ನಿರ್ಮಾಣಕ್ಕೆ ಅನುಕೂಲಕರವಾಗಿಲ್ಲ. ಆದರೂ ಸಹ 16 ಕಾಲುವೆಗಳನ್ನು ನಿರ್ಮಾಣ ಮಾಡಿದ್ದು, ಅವುಗಳ ಮೂಲಕ ಚಿಕ್ಕ ಚಿಕ್ಕ ದೋಣಿಗಳು ಓಡಾಡಲು ಅನುಕೂಲವಾಗಿದೆ. ಹವಳದ ದಿಬ್ಬಗಳು ಮಧ್ಯ ಪ್ರಸ್ಥಭೂಮಿಯನ್ನು ಆವರಿಸಿವೆ. ನೌರು ದ್ವೀಪದ ಅತ್ಯಂತ ಎತ್ತರವಾದ ಸ್ಥಳ ಅದರ ಪ್ರಸ್ಥಭೂಮಿಯಲ್ಲಿದ್ದು ಅದು ಸಮುದ್ರಮಟ್ಟದಿಂದ 65 ಮೀ ಎತ್ತರ ಹೊಂದಿದೆ.




ವಾಯುಗುಣ: ಉಷ್ಣವಾಯುಗುಣದ ಜೊತೆಗೆ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಮಳೆಕಾಲ ನವೆಂಬರ್‌ನಿಂದ ಫೆಬ್ರವರಿಯವರೆಗೆ ಇಲ್ಲಿ ಆಗಾಗ್ಗೆ ಕ್ಷಾಮಗಳುಂಟಾಗುತ್ತವೆ.

ವ್ಯವಸಾಯ: ದ್ವೀಪದ ಫಲವತ್ತತೆಯ ಭೂಭಾಗ ತೀರ ಪ್ರದೇಶದಲ್ಲಿ ಹಂಚಿಕೆಯಾಗಿದೆ. ಇಲ್ಲಿ ತೆಗು ಪ್ರಮುಖವಾದ ಬೆಳೆಯಾಗಿದೆ. ಜೊತೆಗೆ ಬಾಳೆ, ಅನಾನಸ್, ತರಕಾರಿಗಳು ಹಾಗೂ ವಿವಿಧ ಜಾತಿಯ ಮರಗಳನ್ನು ಬೆಳೆಸಲಾಗುತ್ತಿದೆ.

ನೌರು ಫಾಸ್ಫೇಟ್ ಶಿಲೆಯಿಂದ ನಿರ್ಮಾಣವಾದ ಒಂದು ದ್ವೀಪ. ಗಣಿಗಾರಿಕೆ ಇಲ್ಲಿಯ ಮತ್ತೊಂದು ಆರ್ಥಿಕ ಚಟುವಟಿಕೆ. ಇದು ಗಣಿಗಾರಿಕೆಯಿಂದ ತೆಗೆದ ಫಾಸ್ಫೇಟನ್ನು ರಫ್ತು ಮಾಡುತ್ತದೆ.

ಆಹಾರ ಪದಾರ್ಥಗಳು, ಶಕ್ತಿ ಸಂಪನ್ಮೂಲಗಳು, ಕೈಗಾರಿಕೋತ್ಪನ್ನಗಳು, ಕಟ್ಟಡದ ಸಾಮಾಗ್ರಿಗಳು, ಯಂತ್ರೋಪಕರಣಗಳು ಮುಂತಾದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದೆ.

ಜನಸಂಖ್ಯೆ: ಇಲ್ಲಿಯ ಜನಸಂಖ್ಯೆ 13,770 (2009). ಇಲ್ಲಿಯ ಜನರ ಭಾಷೆ ಹಾಗೂ ವ್ಯಾವಹಾರಿಕ ಭಾಷೆ ಇಂಗ್ಲಿಷ್. ಒಟ್ಟು ಜನಸಂಖ್ಯೆಯ ಶೇ. 58 ರಷ್ಟು ಸ್ಥಳೀಯರು. ಶೇ. 26 ಇತರ ಪೆಸಿಫಿಕ್ ದ್ವೀಪದವರು. ಶೇ. 8 ರಷ್ಟು ಚೀನಿಯರು ಮತ್ತು ಶೇ.8ರಷ್ಟು ಯುರೋಪಿಯನ್ನರು. ಇಲ್ಲಿಯ ಜನರ ಮುಖ್ಯಧರ್ಮ ಕ್ರೈಸ್ತಧರ್ಮ. ಒಟ್ಟು ಜನಸಂಖ್ಯೆಯ ಶೇ. 97 ಭಾಗ ವಿದ್ಯಾವಂತರು. ಹಣ ಆಸ್ಟ್ರೇಲಿಯನ್ ಡಾಲರ್. (ಟಿ.ಎಚ್.ಎಚ್.)

**ನ್ಯಾಷನಲ್ ಜಿಯೋಗ್ರಾಫಿಕ್:** ಅಮೆರಿಕದ ನ್ಯಾಷನಲ್ ಜೀಯೊಗ್ರಾಫಿಕ್ ಸೊಸೈಟಿಯಿಂದ ವಾಷಿಂಗ್ಟನ್ ಡಿ.ಸಿ. ನಗರದಲ್ಲಿ ಆರಂಭವಾದ ಹೆಸರಾಂತ ಮಾಸಪತ್ರಿಕೆ (1888). ಭೌಗೋಳಿಕ ಸಂಗತಿಗಳ ಅನ್ವೇಷಣೆಯನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶ. ಇದಕ್ಕಾಗಿಯೇ ಈ ಮಾಸಿಕವನ್ನು ಅದು ತನ್ನ ಕಾರ್ಯಾಲಯದಿಂದ ಹೊರಡಿಸಿತು. ಭೂಮಿ, ಸಮುದ್ರ ಹಾಗೂ ಆಕಾಶ ಇವುಗಳ ಬಗ್ಗೆ ಇನ್ನೂ ಮಾನವ ಜನಾಂಗಕ್ಕೆ ಗೊತ್ತಿರದ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಸಚಿತ್ರ ಲೇಖನಗಳನ್ನು ಈ ಪತ್ರಿಕೆ ಪ್ರಕಟಿಸುತ್ತದೆ. ಇದಕ್ಕಾಗಿ ಸಂಶೋಧನ ಕಾರ್ಯಕ್ಕೆ ಅಪಾರ ಧನಸಹಾಯವನ್ನು ಸೊಸೈಟಿ ನೀಡುತ್ತದೆ. ಒಳ್ಳೆಯ ಲೇಖನ ಹಾಗೂ ಬಣ್ಣದ ಚಿತ್ರಗಳ ಪ್ರಕಟಣೆಗಾಗಿ ವಿನ್ಯಾಸದ ದೃಷ್ಟಿಯಿಂದ ಈ ಪತ್ರಿಕೆ ಪ್ರಪಂಚ ಪ್ರಸಿದ್ಧವಾಗಿ ಪ್ರಶಂಸೆಗೆ ಪಾತ್ರವಾಗಿದೆ. ಇದರಲ್ಲಿ ಪ್ರಕಟವಾಗುವ ಲೇಖನ ಹಾಗೂ ಚಿತ್ರಗಳಿಗೆ ಹೆಚ್ಚಿನ ಸಂಭಾವನೆ ಕೊಡಲಾಗುತ್ತದೆ. ಪ್ರಕಟವಾಗುವ ಸಾಮಗ್ರಿಯ ಗುಣಮಟ್ಟವೂ ಉತ್ಕೃಷ್ಟವಾದದ್ದು. ಇಂದು ಈ ಪತ್ರಿಕೆಗೆ ಸು. 30 ಲಕ್ಷ ಚಂದಾದಾರರಿದ್ದಾರೆ. (ಜಿ.ಟಿ.ಎಚ್.ಇ.)

**ನ್ಯೂರೆಂಬರ್ಗ್:** ಪಶ್ಚಿಮ ಜರ್ಮನಿಯ ಬವೇರಿಯದಲ್ಲಿರುವ ಒಂದು ವಾಣಿಜ್ಯ ಹಾಗೂ ಕೈಗಾರಿಕಾ ನಗರ. ಮ್ಯೂನಿಕ್‌ನ ಉತ್ತರ–ವಾಯವ್ಯಕ್ಕೆ 147 ಕಿಮೀ ದೂರದಲ್ಲಿ ಪೆಗ್ನಿಟ್ಜ್ ನದಿಯ ದಂಡೆಯ ಮೇಲೆ ಇದೆ. ಜನಸಂಖ್ಯೆ 500132 (2005). ಇಲ್ಲಿ 11ನೆಯ ಶತಮಾನದ ಗೋಡೆಗಳು ಮತ್ತು ಅವುಗಳ ಹೆಬ್ಬಾಗಿಲುಗಳು, ಅರಮನೆ, ಪುರಭವನ, 14ನೆಯ ಶತಮಾನದ ಕಾರ್ತೂಸಿಯನ್ ಸಂನ್ಯಾಸಿ ಮಠದಲ್ಲಿ 1852ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಮ್ಯೂಸಿಯಂ, ಸೇಂಟ್ ಸೆಬಾಲ್ಡ್ ಮತ್ತು ಸೇಂಟ್ ಲೊರೆನ್ಸರ ಹಳೆಯ ಚರ್ಚುಗಳು ಇವೆ. ಈ ನಗರ 11ನೆಯ ಶತಮಾನದಲ್ಲಿ ಸ್ಥಾಪಿತವಾಯಿತು. 1219ರಲ್ಲಿ ಇದು ಸ್ವತಂತ್ರ ನಗರವಾಯಿತು. ಜರ್ಮನಿಯ ಅತ್ಯಂತ ಶ್ರೀಮಂತ ನಗರಗಳ ಪೈಕಿ ಇದೂ ಒಂದಾಗಿತ್ತು. 16ನೆಯ ಶತಮಾನದಲ್ಲಿ ಇದು ಜರ್ಮನ್ ಸಂಸ್ಕೃತಿಯ ಕೇಂದ್ರವಾಗಿತ್ತು. 1806ರಲ್ಲಿ ಬವೇರಿಯಕ್ಕೆ ಸೇರಿತು. 1933ರ ಅನಂತರ ಹಿಟ್ಲರನ ರಾಷ್ಟ್ರೀಯ ಸಮಾಜವಾದಿ ಪಕ್ಷದ ವಾರ್ಷಿಕ ಸಮ್ಮೇಳನ ಇಲ್ಲಿ ಸೇರುತಿತ್ತು. ಎರಡನೆಯ ಮಹಾಯುದ್ಧದ ಬಾಂಬು ದಾಳಿಯಿಂದ ಈ ನಗರದ ಹಲವು ಭಾಗಗಳು ನಾಶವಾದುವು. 1945ರ ಏಪ್ರಿಲ್ 21ರಂದು ಅಮೆರಿಕನರು ಇದನ್ನು ಆಕ್ರಮಿಸಿಕೊಂಡರು. 1945–46ರಲ್ಲಿ ಜರ್ಮನ್ ಯುದ್ಧಾಪರಾಧಿಗಳ ವಿಚಾರಣೆಯನ್ನು ಇಲ್ಲಿ ನಡೆಸಲಾಯಿತು. (ಬಿ.ಸಿ.ಪಿ.)

**ನ್ಯೂ ಆರ್ಲಿಯನ್ಸ್:** ಅಮೆರಿಕದ ಲೂಸಿಯಾನ ರಾಜ್ಯದ ಅತ್ಯಂತ ದೊಡ್ಡ ನಗರ; ಅಮೆರಿಕದ ಪ್ರಧಾನ ರೇವುಪಟ್ಟಣಗಳಲ್ಲಿ ಎರಡನೆಯದು, ನ್ಯೂ ಆರ್ಲಿಯನ್ಸ್ ಪ್ಯಾರಿಷಿನ ಆಡಳಿತಕೇಂದ್ರ. ಲುವೀಸ್ಯಾನದ ಆಗ್ನೇಯ ಭಾಗದಲ್ಲಿ ಮಿಸಿಸಿಪಿ ನದಿಗೂ ಪಾಂಚರ್ಟ್ರೇನ್ ಸರೋವರಕ್ಕೂ ನಡುವೆ ಇದೆ. ಲ್ಯಾಟಿನ್ ಅಮೆರಿಕ ರಾಜ್ಯಗಳಿಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೂ ನಡುವಣ ವ್ಯಾಪಾರ ಈ ರೇವಿನ ಮೂಲಕ ನಡೆಯುತ್ತದೆ. ನಗರವನ್ನು ಮಿಸಿಸಿಪಿ ಪೂರ್ವದಂಡೆಯ ಬಳಸಿನಲ್ಲಿ ಸ್ಥಾಪಿಸಲಾಗಿತ್ತಾದ್ದರಿಂದ ಇದಕ್ಕೆ ಕ್ರೆಸೆಂಟ್ ಸಿಟಿ ಎಂಬ ಹೆಸರು ಬಂದಿತ್ತು. ಆಧುನಿಕ ನಗರ ಈ ನಿವೇಶನದ ಎರಡೂ ದಂಡೆಗಳ ಮೇಲೂ ಹಬ್ಬಿದೆ. ಜನವಸತಿ ಪ್ರಧಾನವಾಗಿ ಪೂರ್ವದಂಡೆಯ ಮೇಲಿದೆ. ಆಲ್ಜಿಯರ್ಸ್ ಎಂಬ ಪಶ್ಚಿಮ ಬಡಾವಣೆ ಈಚೆಗೆ ತ್ವರಿತವಾಗಿ ಬೆಳೆದುಕೊಂಡಿದೆ. ಆಲ್ಜಿಯರ್ಸ್ ಭಾಗಕ್ಕೂ ಪೂರ್ವಭಾಗಕ್ಕೂ ಸಂಪರ್ಕ ಕಲ್ಪಿಸುವ ಮಹಾಸೇತುವೆಯೊಂದಿದೆ. ನಗರದ ವಾಯುಗುಣ ಹಿತಕರವಾದ್ದು. ಸರಾಸರಿ ದೈನಂದಿನ ಉಷ್ಣತೆ ಅಕ್ಟೋಬರ್ – ಮಾರ್ಚ್‌ನಲ್ಲಿ $16^0$ಸೆ. ಏಪ್ರಿಲ್–ಸೆಪ್ಟೆಂಬರ್‌ನಲ್ಲಿ $25^0$ಸೆ. ನ್ಯೂ ಆರ್ಲಿಯನ್ಸಿನ ಮೆಟ್ರೊ ಜನಸಂಖ್ಯೆ 1,319,367 (2005).

ವಸಾಹತು ಸ್ಥಾಪನೆಯ ಕಾಲದಲ್ಲಿ ಉತ್ತರ ಅಮೆರಿಕವನ್ನು ಗೆದ್ದು ಆಕ್ರಮಿಸಿಕೊಳ್ಳಲು ಸ್ಪರ್ಧಿಸಿದ ಯುರೋಪಿಯನ್ ರಾಷ್ಟ್ರಗಳ ದೃಷ್ಟಿ ನ್ಯೂ ಆರ್ಲಿಯನ್ಸ್ ಮೇಲಿತ್ತು. ಈ ನಗರದಲ್ಲಿ ವಿವಿಧ ಜನಾಂಗಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ವೈವಿಧ್ಯಗಳನ್ನು

ಕಾಣಬಹುದು. ನೀಗ್ರೋಗಳು ಇಲ್ಲಿಯ ಜನಸಂಖ್ಯೆಯಲ್ಲಿ ಕಾಲುಭಾಗ ಇದ್ದವರು ಈಗ ಸುಮಾರು ಅರ್ಧಭಾಗದಷ್ಟು ಇದ್ದಾರೆ. ನ್ಯೂ ಆರ್ಲಿಯನ್ಸ್ ಸಮಸ್ಯೆಗಳ ನಗರವಾಗಿದೆ. ಇವುಗಳಲ್ಲಿ ಪ್ರಧಾನವಾದದ್ದು ವರ್ಣಭೇದ. ಕಪ್ಪು ಹಾಗೂ ಬಿಳಿ ಜನರ ನಡುವಣ ಘರ್ಷಣೆಯ ಪ್ರವೃತ್ತಿ ಕಾನೂನಿನ ಫಲವಾಗಿ ನಿಯಂತ್ರಣಕ್ಕೆ ಒಳಪಟ್ಟಿದೆ. ನಗರದ ಗೃಹನಿರ್ಮಾಣ ಯೋಜನೆಯಲ್ಲಿ ಬಿಳಿಯರು ಮತ್ತು ಕರಿಯರು ತಾರತಮ್ಯವಿಲ್ಲದೆ ವಾಸಿಸುವ ವ್ಯವಸ್ಥೆ ಇದೆ. ಇಲ್ಲಿಯ ಸಾಂಸ್ಕೃತಿಕ ಜೀವನದಲ್ಲಿ ಬಿಳಿಯರ ಹಾಗೂ ನೀಗ್ರೋಗಳ ಕೊಡುಗೆಯನ್ನು ಕಾಣಬಹುದು: ನೀಗ್ರೋ ಜನರು ಸಂಗೀತ, ಪತ್ರಿಕೋದ್ಯಮ, ವ್ಯಾಪಾರ, ಕೈಕಸಬು, ಕಟ್ಟಡ ನಿರ್ಮಾಣ ಇವುಗಳಲ್ಲಿ ಪ್ರವೀಣರು. ಬಿಳಿಯರು ಶಿಕ್ಷಣ, ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಮುಂದಿದ್ದಾರೆ.

ನ್ಯೂ ಆರ್ಲಿಯನ್ಸ್ ಜನಸಂಖ್ಯೆ 8,000 (1803) ಇತ್ತು. ಇವರಲ್ಲಿ ಬಿಳಿಯರು 4,000, ಗುಲಾಮರು 2,700, ಗುಲಾಮಗಿರಿಯಿಂದ ಮುಕ್ತರಾದ ಕಪ್ಪುಜನ 1,300. 1805ರಲ್ಲಿ ಪೌರಸಭೆ ಸ್ಥಾಪಿತವಾಯಿತು. 1812–52 ಮತ್ತು 1865–80ರಲ್ಲಿ ಇದು ಲುವೀಸಿಯಾನದ ರಾಜಧಾನಿಯಾಗಿತ್ತು. 18–12–14ರ ಅಮೆರಿಕ–ಬ್ರಿಟನ್ ಯುದ್ಧದಲ್ಲಿ ಬ್ರಿಟಿಷ್ ಪಡೆ ನ್ಯೂ ಆರ್ಲಿಯನ್ಸ್ ನಗರಕ್ಕೆ ಮುತ್ತಿಗೆ ಹಾಕಿತ್ತು. ಜನರಲ್ ಆಂಡ್ರ್ಯೂ ಜ್ಯಾಕ್‌ಸನ್ ಬ್ರಿಟಿಸನ್ ಬ್ರಿಟಿಷರನ್ನು ಸೋಲಿಸಿ ನಗರವನ್ನು ರಕ್ಷಿಸಿದ. ಈ ಯುದ್ಧದ ತರುವಾಯ 40 ವರ್ಷಗಳ ಕಾಲ ನ್ಯೂ ಆರ್ಲಿಯನ್ಸ್ ಹತ್ತಿ ಸಾಗಣೆಯ ಪ್ರಧಾನ ರೇವುಪಟ್ಟಣವಾಗಿತ್ತು. ನ್ಯೂ ಆರ್ಲಿಯನ್ಸ್ ಪ್ರಪಂಚದ ಪ್ರಧಾನ ಬಂದರುಗಳಲ್ಲಿ 4ನೆಯ ಸ್ಥಾನ ಪಡೆಯಿತು (1840). 1840ರ ತರುವಾಯ ನಾಲೆಗಳ ಮತ್ತು ರೈಲುಮಾರ್ಗಗಳ ಮೂಲಕ ಪೂರ್ವಾಭಿಮುಖವಾಗಿ ನ್ಯೂ ಯಾರ್ಕ್ ಪಟ್ಟಣಕ್ಕೆ ಸರಕುಗಳು ಸಾಗಹತ್ತಿದುವು. ಆ ವರ್ಷ ಜರ್ಮನಿ ಮತ್ತು ಐರ್ಲೆಂಡ್ ದೇಶಗಳ ವಲಸೆಗಾರರು ಹೆಚ್ಚು ಸಂಖ್ಯೆಯಲ್ಲಿ ಬಂದು ಇಲ್ಲಿ ನೆಲೆಸಿದರು. 1850ರ ಹೊತ್ತಿಗೆ ಇದರ ಜನಸಂಖ್ಯೆ 1,16,375 ಆಯಿತು. ಶೀಘ್ರವಾಗಿ ಬೆಳೆಯುತ್ತಿದ್ದ ನಗರದ ಸಮಸ್ಯೆಗಳು ಅಧಿಕವಾದವು; ಮನೆಗಳು ಒತ್ತಾಗಿದ್ದ ಕಡೆ ಜನರ ಆರೋಗ್ಯದತ್ತ ಗಮನ ನೀಡುವುದು ನಗರ ಪಾಲಿಕೆಯ ಕೆಲಸವಾಯಿತು. ಮಿಸಿಸಿಪಿ ನದಿಯಿಂದ ಪೀಪಾಯಿಗಳಲ್ಲಿ ನಗರದ ಬಳಕೆಗೆ ಬರುತ್ತಿದ್ದ ನೀರು ಶುಚಿಯಾಗಿರುತ್ತಿರಲಿಲ್ಲ. ಒಳಚರಂಡಿಗಳ ವ್ಯವಸ್ಥೆ ಇರಲಿಲ್ಲ. ಭಾರಿ ಮಳೆಯಾದಾಗ ನೀರು ಪಟ್ಟಣದ ತಗ್ಗು ಭಾಗಗಳಲ್ಲಿ ಹಾಗೂ ಬೀದಿಗಳಲ್ಲಿ ನಿಲ್ಲುತ್ತಿತ್ತು. ಕಾಲರಾ ಮತ್ತು ಶೀತಜ್ವರದಿಂದ 1853ರಲ್ಲಿ 8,000 ಮಂದಿ ಮೃತರಾದರು.

20ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಮಿಸಿಸಿಪಿ ಉಗಿ ಜಹಜುಗಳು ಸರಕುಸಾಗಣೆಯಲ್ಲಿ ರೈಲುಗಳೊಡನೆ ಸ್ಪರ್ಧಿಸುವುದು ಸಾಧ್ಯವಾಗದೆ ಅವುಗಳ ಸಂಖ್ಯೆ ಇಳಿಯಿತು. ರೈಲುಮಾರ್ಗಗಳ ನಿರ್ಮಾಣದ ಭಾರೀ ಯೋಜನೆ ಯಶಸ್ವಿಯಾಗಿ ಪೂರ್ಣಗೊಂಡಿತು. ನಗರದ ರಸ್ತೆಗಳನ್ನು ವಿಸ್ತರಿಸಲಾಯಿತು. 11 ಅಂತಸ್ತುಗಳ ನಗರಭವನದ ನಿರ್ಮಾಣವಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ (1939–45) ನ್ಯೂ ಆರ್ಲಿಯನ್ಸ್ ಅಮೆರಿಕದ ಪ್ರಧಾನ ಭೂ, ಸೇನಾ ಹಾಗೂ ನೌಕಾ ಶಿಬಿರಗಳಲ್ಲೊಂದಾಗಿತ್ತು.

ನ್ಯೂ ಆರ್ಲಿಯನ್ಸ್ ಪ್ರಧಾನವಾಗಿ ವಾಣಿಜ್ಯಕೇಂದ್ರ. ಇದು ಪ್ರಪಂಚದ ಪ್ರಧಾನ ಬಂದರುಗಳಲ್ಲೊಂದು. ಇಲ್ಲಿಂದ ಧಾನ್ಯಗಳು, ಲೋಹ ಹಾಗೂ ರಾಸಾಯನಿಕ ವಸ್ತುಗಳು, ಬಟ್ಟೆ, ಎಣ್ಣೆ, ಗಂಧಕ, ಪೆಟ್ರೋಲ್, ಹೊಗೆಸೊಪ್ಪು, ಕಾಗದ ರಫ್ತಾಗುತ್ತವೆ. ನ್ಯೂ ಆರ್ಲಿಯನ್ಸ್ ಮತ್ತು ಅದರ ಪ್ಯಾರಿಷ್ ಭಾಗಗಳಾದ ಸೇಂಟ್ ಬರ್ನಾರ್ಡ್, ಸೇಂಟ್ ಟಮನಿ, ಜೆಫರ್‌ಸನ್‌ಗಳಲ್ಲಿ ಕೈಗಾರಿಕೆಗಳು ಹೆಚ್ಚುತ್ತಿವೆ. ಕಲ್ಲು, ಗಾಜು, ಸಾಬೂನು, ಮಣ್ಣಿನ ವಸ್ತುಗಳು, ಮೋಟಾರು ವಾಹನಗಳ ಬಿಡಿಭಾಗಗಳು, ಹತ್ತಿಬಟ್ಟೆ, ಕಬ್ಬಿಣದ ಸರಕು, ಚುಟ್ಟ, ಸಿಗರೇಟು, ಅಲ್ಯೂಮಿನಿಯಂ ಸರಕು, ಮೀನುಗಳ ಡಬ್ಬೀಕರಣ, ಮೀನೆಣ್ಣೆ ಮತ್ತು ತೈಲ ಶುದ್ಧೀಕರಣ ಕೈಗಾರಿಕೆಗಳಿವೆ.

ನ್ಯೂ ಆರ್ಲಿಯನ್ಸ್ ಭಾರಿ ರೈಲ್ವೆ ಜಂಕ್ಷನ್. ಇಲ್ಲಿಂದ 8 ಪ್ರಧಾನ ಮಾರ್ಗಗಳಲ್ಲಿ ರೈಲುಗಳು ಅಮೆರಿಕದ 28 ರಾಜ್ಯಗಳಿಗೆ ಹೋಗುತ್ತವೆ. ಬಸ್ಸು, ಲಾರಿ ಸಂಚಾರವೂ ಅಧಿಕವಾಗಿದೆ. 100ಕ್ಕೂ ಹೆಚ್ಚಿನ ಉಗಿ ಜಹಜುಗಳು ಪ್ರಯಾಣಿಕೆ ಮತ್ತು ಸರಕುಗಳ ಸಾಗಣೆಗೆ ಮಿಸಿಸಿಪಿ ನದಿಯಲ್ಲಿ ದಿನವಹಿ ಸಂಚರಿಸುತ್ತವೆ. ಇಲ್ಲಿ ಮೂರು ವಿಮಾನನಿಲ್ದಾಣಗಳಿವೆ. ದಿನವಹಿ 300 ವಾಣಿಜ್ಯ ವಿಮಾನಗಳು ಬಂದು ಹೋಗುತ್ತವೆ.

ರಸ್ತೆಗಳು ಸುವ್ಯವಸ್ಥಿತವಾಗಿವೆ. ಭಾರಿ ಸೇತುವೆಗಳು ನಿರ್ಮಾಣವಾಗಿವೆ. ನ್ಯೂ ಆರ್ಲಿಯನ್ಸ್ ಮಹಾಸೇತುವೆ 1958ರಲ್ಲಿ ನಿರ್ಮಾಣವಾಯಿತು. ಹೆನ್ರಿ ಪೀಲಾಂಗ್ ಸೇತುವೆ ಇನ್ನೊಂದು ದೊಡ್ಡ ಸೇತುವೆ. ಸು. 37 ಕಿಮೀ ಉದ್ದವಿರುವ ಪಾಂಚರ್ಟ್ರೇನ್ ಸೇತುವೆ ಪ್ರಪಂಚದಲ್ಲೇ ಅತ್ಯಂತ ಉದ್ದವಾದದ್ದು.

ಮನರಂಜನೆ, ರುಚಿಕರ ಭೋಜನ ಹಾಗೂ ಜಾಸ್ ಸಂಗೀತಕ್ಕೆ ನ್ಯೂ ಆರ್ಲಿಯನ್ಸ್ ಪ್ರಸಿದ್ಧವಾದದ್ದು. ಇದು ಅಮೆರಿಕದ ಮುಖ್ಯ ಪ್ರವಾಸಿ ಕ್ಷೇತ್ರಗಳಲ್ಲೊಂದು. ಕ್ರಿಸ್‌ಮಸ್ ತರುವಾಯ ನಗರದಲ್ಲಿ ಜಾತ್ರೆ ಸೇರುತ್ತದೆ. ಮೆರವಣಿಗೆಯ ದಿನ ಲಕ್ಷಾಂತರ ಜನ ಬೀದಿಗಳಲ್ಲಿ ಕಿಕ್ಕಿರಿದು ಅದನ್ನು ವೀಕ್ಷಿಸುತ್ತಾರೆ. ದೋಣಿ ಸಂಚಾರ, ಮೀನುಹಿಡಿತ, ಗಾಲ್ಫ್ ಆಟ, ಈಜುಗಾರಿಕೆ ಮೊದಲಾದವು ಪ್ರವಾಸಿಗಳ ಆಕರ್ಷಣೆಗಳು. ಫ್ರೆಂಚ್ ಕ್ವಾರ್ಟರ್ಸ್, ಜ್ಯಾಕ್ಸನ್ ಸ್ಕ್ವೇರ್, ಸ್ಪೇನಿನವರು ನಿರ್ಮಿಸಿದ ಕಬಿಲ್ಡೊ ನ್ಯಾಯಾಲಯ ಭವನ, ಸೇಂಟ್ ಲೂಯಿ ಕತೀಡ್ರಲ್, 18ನೆಯ ಶತಮಾನದ ಸ್ಪ್ಯಾನಿಷ್ ಕೋಟೆ, ಪಾಂಚರ್ಟ್ರೇನ್ ತೀರ, ಡೆಲ್ಗಾಡೋ ಕಲಾ ವಸ್ತು ಸಂಗ್ರಹಾಲಯ, ನಗರೋದ್ಯಾನ, ನಗರ ಭವನ, ಕೆನಾಲ್ ಸ್ಟ್ರೀಟ್, ನಗರದ ಮಹಾಸೇತುವೆಗಳು–ಇವು ಪ್ರೇಕ್ಷಣೀಯ. ಎರಡನೆಯ ಮಹಾಯುದ್ಧದ ತರುವಾಯ ನ್ಯೂ ಆರ್ಲಿಯನ್ಸ್ ಅಮೆರಿಕದ ಕಲಾಕೇಂದ್ರಗಳಲ್ಲೊಂದಾಗಿ ಬೆಳೆದಿದೆ. ಜಾಸ್ ಸಂಗೀತ ನಡೆದು ಬಂದ ದಾರಿಯನ್ನು ತೋರಿಸುವ ವಸ್ತು ಸಂಗ್ರಹಾಲಯವೊಂದು ಈ ನಗರದಲ್ಲಿದೆ. (ವಿ.ಜಿ.ಕೆ.)

**ನ್ಯೂ ಇಂಗ್ಲೆಂಡ್:** ಅಮೆರಿಕದ ಈಶಾನ್ಯ ಭಾಗ ಒಳಗೊಂಡಿರುವ ಮೇನ್, ನ್ಯೂಹ್ಯಾಂಪ್‌ಷೈರ್, ವರ್ಮಾಂಟ್, ಮ್ಯಾಸಚೂಸೆಟ್ಸ್, ರೋಡ್ ಐಲೆಂಡ್ ಮತ್ತು ಕನೆಕ್ಟಿಕಟ್ ರಾಜ್ಯಗಳಿಗೆ ನೀಡಿರುವ ಹೆಸರು. 1614ರಲ್ಲಿ ಹಲವು ಲಂಡನ್ ವ್ಯಾಪಾರಸ್ಥರ ಪರವಾಗಿ ಇದರ ತೀರಪ್ರದೇಶದಲ್ಲಿ ಪರಿಶೋಧನೆ ನಡೆಸಿದ ಕ್ಯಾಪ್ಟನ್ ಜಾನ್ ಸ್ಮಿತ್, ಇದಕ್ಕೆ ನ್ಯೂ ಇಂಗ್ಲೆಂಡ್ ಎಂಬ ಹೆಸರನ್ನು ನೀಡಿದ. ಇಂಗ್ಲೆಂಡಿನ ಪ್ಯೂರಿಟನ್ನರು ಇಲ್ಲಿ ನೆಲಸಿ ವಸಾಹತುಗಳನ್ನು ಸ್ಥಾಪಿಸಿದರು. ಈ ಪ್ರದೇಶ ಇಂದು ಪ್ರವಾಸೋದ್ಯಮ, ಅರಣ್ಯಾಭಿವೃದ್ಧಿಗಳಿಗೆ ಹೆಸರಾಗಿದೆ. ಜನಸಂಖ್ಯೆ 13922715 (2002). (ಎ.ವಿ.ಪಿ.;ಕೆ.ಆರ್.)

**ನ್ಯೂ ಐರ್ಲೆಂಡ್:** ಪೆಸಿಫಿಕ್ ಸಾಗರದ ನೈರುತ್ಯಭಾಗದಲ್ಲಿರುವ ಪಾಪುವ ನ್ಯೂ ಗಿನಿ ದೇಶಕ್ಕೆ ಸೇರಿದ ಬಿಸ್‌ಮಾರ್ಕ್ ದ್ವೀಪಸ್ತೋಮದ ಒಂದು ದ್ವೀಪ. ನ್ಯೂ ಬ್ರಿಟನ್ ದ್ವೀಪದ ಉತ್ತರಕ್ಕೆ ಇದೆ. ಇದಕ್ಕೂ ನ್ಯೂ ಬ್ರಿಟನ್ನಿಗೂ ನಡುವೆ ಕಡಲ್ಗಾಲುವೆ ಇದೆ. ವಾಯವ್ಯದಿಂದ ಆಗ್ನೇಯಕ್ಕೆ 350 ಕಿಮೀ ಉದ್ದಕ್ಕೆ ಚಾಚಿರುವ ಈ ದ್ವೀಪದ ಅಗಲ ಬಲು ಕಿರಿದು. ಇದರ ಆಗ್ನೇಯ ಭಾಗ ಸು. 44 ಕಿಮೀ ಅಗಲವಾಗಿದೆ. ಇದರ ಒಟ್ಟು ವಿಸ್ತೀರ್ಣ 8650 ಚ.ಕಿಮೀ. ಇದು ಸಾಮಾನ್ಯವಾಗಿ ಬೆಟ್ಟಗುಡ್ಡಗಳಿಂದ ಕೂಡಿರುವುದು ಹಾಗೂ ಮೌಂಟ್ ಲ್ಯಾಂಬೆಲ್ 2150 ಮೀ ಎತ್ತರವಾಗಿದ್ದು ಇದರ ಅತ್ಯುನ್ನತ ಶಿಖರವಾಗಿದೆ. ದಕ್ಷಿಣಭಾಗದಲ್ಲಿರುವ ರೋಸೆಲ್ ಪರ್ವತದ ಎತ್ತರ 1,871 ಮೀ ಉತ್ತರದಲ್ಲಿರುವ ಷ್ಲೀನಿಟ್ಸ್ ಪರ್ವತ ಸು. 567 ಮೀ ಎತ್ತರವಾಗಿದೆ. ವಾಯವ್ಯದ ಬಹುಭಾಗ ಸುಣ್ಣಕಲ್ಲು ಗುಡ್ಡಗಳಿಂದ ಕೂಡಿದ್ದು, ಲೆಲೆಟ್ ಪ್ರಸ್ಥಭೂಮಿ ಸರಾಸರಿ 610 ಮೀ ಎತ್ತರವಾಗಿದೆ. ಕಡಲಂಚು ಹವಳದ ದಿಬ್ಬದಿಂದ ಅಥವಾ ಮೆಕ್ಕಲು ಮಣ್ಣಿನಿಂದ ಕೂಡಿದ ಮೈದಾನ. ಇಲ್ಲಿಯ ಹಲವಾರು ತೊರೆಗಳಿಂದ ಮೆಕ್ಕಲು ಮಣ್ಣಿನ ಮೈದಾನ ರೂಪುಗೊಂಡಿದೆ. ಅವುಗಳಲ್ಲಿ ಪ್ರಮುಖವಾದದ್ದು 40 ಕಿಮೀ ಉದ್ದದ ವೈಟಿನ್. ಇದರ ಒಟ್ಟು ಜನಸಂಖ್ಯೆ 87,194.

ಇಲ್ಲಿಯ ಮುಖ್ಯ ಬೆಳೆ ತೆಂಗು. ಪೂರ್ವತೀರದಲ್ಲಿ ಇದು ವಿಶೇಷವಾಗಿದೆ. ಜನಸಾಂದ್ರತೆ ಉತ್ತರದಲ್ಲಿ ಹೆಚ್ಚು. ಕಾವಿಯೆಂಗ್ ಪಟ್ಟಣ ಈ ದ್ವೀಪದ ವಾಯವ್ಯ ತುದಿಯಾದ ನಾರ್ತ್ ಭೂಶಿರದ ಮೇಲಿದೆ. ಇದೊಂದು ರೇವುಪಟ್ಟಣ. 1884ರಲ್ಲಿ ಜರ್ಮನಿ ಇದನ್ನು ವಶಪಡಿಸಿಕೊಂಡು ನ್ಯೂ ಮೆಕ್ಲೆನ್ಬರ್ಗ್ ಎಂದು ಇದಕ್ಕೆ ನಾಮಕರಣ ಮಾಡಿತು. ಒಂದನೆಯ ಮಹಾಯುದ್ಧದ ಅನಂತರ ಆಸ್ಟ್ರೇಲಿಯ ಇದನ್ನು ವಶಪಡಿಸಿಕೊಂಡಿತು. 1975ರಲ್ಲಿ ಪಪುವ ನ್ಯೂ ಗಿನಿ ಸ್ವತಂತ್ರವಾದಾಗ ಅದರ ಅಂಗವಾಗಿ ಇದು ಮುಂದುವರಿಯಿತು. ಇದರ ಮುಖ್ಯಬಂದರು ಕವಿಯೆಂಗ್. (ಪಿ.ಬಿ.)

**ನ್ಯೂ ಕ್ಯಾಲಿಡೋನಿಯ:** ನೈರುತ್ಯ ಪೆಸಿಫಿಕ್ ಸಾಗರದಲ್ಲಿರುವ ಫ್ರೆಂಚ್ ಸಾಗರಾಂತರ ಪ್ರದೇಶ; ಆ ಪ್ರದೇಶದ ಅತ್ಯಂತ ದೊಡ್ಡ ದ್ವೀಪ. ಇತರ ದ್ವೀಪಗಳು ಬೆಲೆಪ್, ಪಿನ್ಸ್, ಲಾಯಲ್ಟಿ, ಹ್ಯೂವನ್, ಚೆಸ್ಟರ್‌ಫೀಲ್ಡ್, ವಾಲ್ಪೋಲ್ ಮತ್ತು ಹಂಟರ್. ನ್ಯೂ ಕ್ಯಾಲಿಡೋನಿಯ ಪ್ರದೇಶದ ವಿಸ್ತೀರ್ಣ 19,058 ಚ.ಕಿಮೀ. ಜನಸಂಖ್ಯೆ 219246 (2006). ರಾಜಧಾನಿ ನೂಮೇಯ (65110); ಇದು ನ್ಯೂ ಕ್ಯಾಲಿಡೋನಿಯ ದ್ವೀಪದಲ್ಲಿದೆ. ಇದು ಈ ದ್ವೀಪಗಳ ಅತಿದೊಡ್ಡನಗರವಾಗಿದೆ.

ಇದು ಅಕ್ಷಾಂಶಿಕವಾಗಿ ಮತ್ತು ರೇಖಾಂಶಿಕವಾಗಿ $21^{0}30'$ ದ. ಮತ್ತು $165^{0}30'$ ಪೂ.ದಲ್ಲಿ ನೆಲೆಗೊಂಡಿದೆ. ಇಲ್ಲಿ ಕೈಗಾರಿಕಾ ಪ್ರಾಮುಖ್ಯತೆ ದೃಷ್ಟಿಯಿಂದ ಅವಶ್ಯವಿರುವ ಅಂಶಗಳನ್ನು ಹೊಂದಿರುವಂತಹ ಮಣ್ಣಿನ ವಿವಿಧ ಪ್ರಕಾರಗಳನ್ನು ಹೊಂದಿದೆ. ನಿಕ್ಕಲ್ ಗಣಿಗಾರಿಕೆ ಇಲ್ಲಿ ಬಹುಮುಖ್ಯವಾದ ಆರ್ಥಿಕ ಚಟುವಟಿಕೆಯಾಗಿದೆ.

ಈ ಭಾಗ ಸು. 60–85 ದ.ಲ.ವರ್ಷಗಳ ಹಿಂದೆ ವಿಶಾಲವಾದ ಭೂ ಭಾಗವಾಗಿದ್ದು ಅನಂತರ ಈ ಭೂ ಭಾಗದ ಶೇ. 93 ಭಾಗ ಸಾಗರದಲ್ಲಿ ಮುಳುಗಿದೆ. ಈ ಭೂ ಭಾಗವನ್ನು ಜಿಲ್ಯಾಂಡಿಯ ಭೂಖಂಡವೆಂದು ಹೆಸರಿಸುತ್ತಾರೆ.

ಇಲ್ಲಿಯದು ಉಷ್ಣವಲಯದ ವಾಯುಗುಣ. ಡಿಸೆಂಬರ್–ಮಾರ್ಚ್‌ನಲ್ಲಿ ಅತ್ಯಧಿಕ ಮಳೆಯಾಗುತ್ತದೆ. ಎತ್ತರವಾದ ದ್ವೀಪಗಳಲ್ಲಿ ಪೂರ್ವತೀರದಲ್ಲಿ ವಾಣಿಜ್ಯ ಮಾರುತಗಳ

ಪ್ರಭಾವದಿಂದ ಹೆಚ್ಚು ಮಳೆಯಾಗುತ್ತದೆ. ತೆಂಗು, ಕಾಫಿ ಇಲ್ಲಿಯ ಮುಖ್ಯಬೆಳೆಗಳು, ಪಶುಸಂಗೋಪನೆ, ಮೀನುಗಾರಿಕೆ, ಅರಣ್ಯಗಾರಿಕೆ, ಪ್ರವಾಸೋದ್ಯಮ, ಗಣಿಗಾರಿಕೆ ಇಲ್ಲಿಯ ಮುಖ್ಯ ಆರ್ಥಿಕ ವೃತ್ತಿಗಳು.

ನ್ಯೂ ಕ್ಯಾಲಿಡೋನಿಯ 1946ರಲ್ಲಿ ಫ್ರೆಂಚ್ ಸಾಗರೋತ್ತರ ಪ್ರದೇಶವಾಯಿತು. ಫ್ರಾನ್ಸಿನಿಂದ ನೇಮಕವಾದ ಗವರ್ನರ್ ಈ ಪ್ರದೇಶದ ಆಡಳಿತದ ಮುಖ್ಯಸ್ಥ. ಇವನ ನೆರವಿಗೆ ಐವರ ಮಂಡಲಿಯಿರುತ್ತದೆ. ಈ ಪ್ರದೇಶದಿಂದ ಫ್ರೆಂಚ್ ರಾಷ್ಟ್ರೀಯ ಸಭೆಯಲ್ಲೂ ಸೆನೆಟಿನಲ್ಲೂ ಒಬ್ಬೊಬ್ಬ ಸದಸ್ಯನಿರುತ್ತಾನೆ. (ಜಿ.ಎಸ್.ಎಸ್.)

**ನ್ಯೂ ಕ್ಯಾಸಲ್:** ಈ ಹೆಸರಿನ ಹಲವು ನಗರಗಳಿವೆ: 1 ಅಮೆರಿಕದ ಇಂಡಿಯಾನ ರಾಜ್ಯದ ಪೂರ್ವಭಾಗದಲ್ಲಿ ಹೆನ್ರಿ ಕೌಂಟಿಯಲ್ಲಿರುವ ನಗರ, ಅದರ ಆಡಳಿತ ಕೇಂದ್ರ. ಬ್ಲೂ ನದಿಯ ದಡದ ಮೇಲೆ ಇಂಡಿಯಾನಪೊಲಿಸ್‌ಗೆ ಈಶಾನ್ಯದಲ್ಲಿ ಸು. 224 ಕಿಮೀ ದೂರದಲ್ಲಿ ಉ.ಅ. $39^0 55'$ ಪ.ರೇ. $85^0 22'$ ಮೇಲೆ ಇದೆ. ಜನಸಂಖ್ಯೆ 17780(2005). ಇದನ್ನು 1819ರಲ್ಲಿ ಸ್ಥಾಪಿಸಲಾಯಿತು. 1839ರಲ್ಲಿ ಇದಕ್ಕೆ ನಗರ ಮಾನ್ಯತೆ ದೊರಕಿತು. 1900ರಿಂದ ಮುಂದಿನ ಹತ್ತು ವರ್ಷಗಳಲ್ಲಿ ಇಲ್ಲಿ ಹಲವು ಕೈಗಾರಿಕೆಗಳು ಸ್ಥಾಪಿತವಾದವು. ಪಿಯಾನೋ ವ್ಯಾಪಾರೋದ್ದೇಶದಿಂದ ಇಲ್ಲಿ ವ್ಯಾಪಕವಾಗಿ ಗುಲಾಬಿ ಬೆಳೆಸಿದರು. ಆದ್ದರಿಂದ ಅದು ಗುಲಾಬಿಯ ನಗರ ಎಂದೂ ಪ್ರಸಿದ್ಧವಾಯಿತು. ಇಲ್ಲಿ ಆಟೊಮೊಬೈಲ್ ಬಿಡಿ ಭಾಗಗಳೂ ಉಕ್ಕಿನ ಪದಾರ್ಥಗಳೂ ಪಿಯಾನೋ ಮುಂತಾದವು ತಯಾರಾಗುತ್ತವೆ.

2 ಅಮೆರಿಕದ ಪೆನ್ಸಿಲ್ವೇನಿಯ ರಾಜ್ಯದ ಪಶ್ಚಿಮ ಭಾಗದಲ್ಲಿ ಲಾರೆನ್ಸ್ ಕೌಂಟಿಯಲ್ಲಿ ಉ.ಅ. $41^0 00'$ ಮತ್ತು ಪ.ರೇ. $80^0 20'$ ಮೇಲೆ, ಪಿಟ್ಸ್‌ಬರ್ಗ್‌ಗೆ ಉತ್ತರ ವಾಯವ್ಯದಲ್ಲಿ 64 ಕಿಮೀ ದೂರದಲ್ಲಿ ಒಹೈಯೋದ ಯಂಗ್ಸ್‌ಟನ್‌ನ ಆಗ್ನೇಯಕ್ಕೆ 32 ಕಿಮೀ ದೂರದಲ್ಲಿದೆ. ಇದನ್ನು ಷೆನಾಂಗೋ, ಮಹೋನಿಂಗ್ ಮತ್ತು ಬೀವರ್ ನದಿಗಳ ಸಂಗಮಸ್ಥಳದಲ್ಲಿ ಆಲಿಘಾನಿ ಪರ್ವತದ ತಪ್ಪಲಿನಲ್ಲಿ ನಿರ್ಮಿಸಲಾಗಿದೆ. ಇದು ಮೊದಲು ಡೆಲವೇರ್ ಇಂಡಿಯಾನರ ಹಳ್ಳಿಯಾಗಿತ್ತು. ಸು. 1798ರಲ್ಲಿ ಜಾನ್ ಸ್ಟುವರ್ಟ್ ಇಲ್ಲಿ ಬಿಳಿಯರ ವಸತಿ ನಿರ್ಮಿಸಿ, ಕಬ್ಬಿಣದ ಕುಲುಮೆಯೊಂದನ್ನು ಸ್ಥಾಪಿಸಿ ಇಂಗ್ಲೆಂಡಿನ ಕೈಗಾರಿಕಾ ಕೇಂದ್ರವಾದ ನ್ಯೂ ಕ್ಯಾಸಲ್ ಅಪಾನ್ ಟೈನ್ ನೆನಪಾಗಿ ಇದಕ್ಕೆ ನ್ಯೂ ಕ್ಯಾಸಲ್ ಎಂದು ಹೆಸರಿಟ್ಟ. ನ್ಯೂ ಕ್ಯಾಸಲ್ 1828ರಲ್ಲಿ ಬರೋ ಆಯಿತು. ಅಲ್ಲದೆ ಇದಕ್ಕೆ ನಗರದ ಸ್ಥಾನಮಾನ ದೊರಕಿತು (1869). ಕೈಗಾರಿಕೆಯ ದೃಷ್ಟಿಯಿಂದ ಪ್ರಮುಖ ಸ್ಥಳದಲ್ಲಿದೆ. ಇಲ್ಲಿ ಕಲ್ಲಿದ್ದಲು, ಸುಣ್ಣಕಲ್ಲು, ಜೇಡಿಮಣ್ಣು ಮತ್ತು ಕಬ್ಬಿಣದ ಅದಿರು ಸಿಗುತ್ತವೆ. ಇಲ್ಲಿ ಪಿಂಗಾಣಿ ಸಾಮಾನು, ಉಕ್ಕು, ಮಣ್ಣಿನ ಪಾತ್ರೆ, ರಾಸಾಯನಿಕ, ಸಿಮೆಂಟು, ಇಟ್ಟಿಗೆ, ಹಿತ್ತಾಳೆ, ತಾಮ್ರ ಸರಕು ಮತ್ತು ರೋಲಿಂಗ್ ಮಿಲ್ ಯಂತ್ರಗಳು ತಯಾರಾಗುತ್ತವೆ. ಇಲ್ಲಿಗೆ ಸಮೀಪದಲ್ಲಿ ಮೊರೇನ್ ರಾಜ್ಯವು ಮನರಂಜನೆಯ ಪ್ರದೇಶವೂ ಆಗಿದೆ.

3 ಅಮೆರಿಕದ ಡೆಲವೇರ್ ರಾಜ್ಯದ ಉತ್ತರ ಭಾಗದಲ್ಲಿ ಡೆಲವೇರ್ ನದಿಯ ದಂಡೆಯ ಮೇಲೆ ಉ.ಅ. $39^0 40'$, ಪ.ರೇ. $75^0 34'$ ಮೇಲಿರುವ ನಗರ. ಇದು ಕ್ಯಾಸಲ್ ಕೌಂಟಿಯ ಆಡಳಿತ ಕೇಂದ್ರ. ಜನಸಂಖ್ಯೆ 4836 (2005). ಇಲ್ಲಿ 1651ರಲ್ಲಿ ವಸತಿ ಸ್ಥಾಪಿತವಾಯಿತು. ಡಚ್ಚರ ವಸಾಹತಾಗಿದ್ದ ಇದನ್ನು 1654ರಲ್ಲಿ ಸ್ವೀಡನ್ನಿನವರು ವಶಪಡಿಸಿಕೊಂಡಿದ್ದರು. ಡಚ್ಚರು ಇದನ್ನು ಮತ್ತೆ ಗೆದ್ದುಕೊಂಡರು (1655). ಇದು ದಕ್ಷಿಣ ಡೆಲವೇರ್ ಪ್ರದೇಶದ ರಾಜಧಾನಿಯಾಯಿತು. ಅನಂತರ ಬ್ರಿಟಿಷರು ಇದನ್ನು ವಶಪಡಿಸಿಕೊಂಡು, ನ್ಯೂ ಕ್ಯಾಸಲ್‌ನ ಅರ್ಲ್ ಆಗಿದ್ದ ವಿಲಿಯಂ ಕ್ಯಾವೆಂಡಿಷನ ಹೆಸರಿನ ಮೇಲೆ ಇದನ್ನು ನ್ಯೂ ಕ್ಯಾಸಲ್ ಎಂದು ಕರೆದರು (1664). 1704ರಿಂದ 1776ರವರೆಗೆ ಇದು ಡೆಲವೇರ್‌ನ ಕೌಂಟಿಗಳ ಮುಖ್ಯಪಟ್ಟಣವಾಗಿತ್ತು. 1776ರ ಸೆಪ್ಟೆಂಬರ್ 21ರಂದು ಕೌಂಟಿಗಳ ಪ್ರತಿನಿಧಿಗಳು ಇಲ್ಲಿ ಸಭೆ ಸೇರಿ ಡೆಲವೇರ್ ರಾಜ್ಯವನ್ನು ಸ್ಥಾಪಿಸಿದರು. ಸ್ವಲ್ಪ ಕಾಲ ಇದು ಆ ರಾಜ್ಯದ ರಾಜಧಾನಿಯಾಗಿತ್ತು. ಇಲ್ಲಿಯ ಇಮಾನ್ಯುಯೆಲ್ ಚರ್ಚ್ ಐತಿಹಾಸಿಕ ಪ್ರಾಮುಖ್ಯ ಪಡೆದಿದೆ. ಸು. 1730ರಲ್ಲಿ ಪ್ರಾರಂಭವಾದ ಆಮ್‌ಸ್ಟೆಲ್ ಹೌಸ್ ಮ್ಯೂಸಿಯಂ, ಓಲ್ಡ್ ಡಚ್ ಹೌಸ್, ಗ್ರೀನ್ ಚೌಕ ಇವು ಪ್ರೇಕ್ಷಣೀಯ. ಇಲ್ಲಿಯ ಪ್ರಮುಖ ಕೈಗಾರಿಕೆಗಳು ರೇಯಾನ್, ಉಕ್ಕು, ಪಾದರಕ್ಷೆ, ಬಣ್ಣ ಮತ್ತು ಔಷಧಿ. 1875ರಲ್ಲಿ ಇದು ನಗರವಾಯಿತು.

4 ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸಿನಲ್ಲಿರುವ ಒಂದು ನಗರ. ಇದೊಂದು ಬಂದರು. ದಕ್ಷಿಣ ತೀರದಲ್ಲಿ ಹಂಟರ್ ನದಿಯ ಮುಖದಲ್ಲಿ (ದ.ಅ.$32^0 55'$ ಪೂ.ರೇ. $151^0 45'$), ಸಿಡ್ನಿಗೆ ಉತ್ತರ ಈಶಾನ್ಯದಲ್ಲಿ 166 ಕಿಮೀ ದೂರದಲ್ಲಿರುವ ಎತ್ತರವಾದ ಬೆಟ್ಟದ ಬುಡದಲ್ಲಿ ಕಟ್ಟಲಾಗಿರುವ ಈ ನಗರದ ಜನಸಂಖ್ಯೆ 184319 (2005). ಇಲ್ಲಿಯ ಸರಾಸರಿ ವಾರ್ಷಿಕ ಉಷ್ಣತೆ $22^0$–$12^0$ ಸೆ. ಸರಾಸರಿ ವಾರ್ಷಿಕ ಮಳೆ 133 ಸೆಂಮೀ ದೊಡ್ಡ ಹಾಗೂ ಫಲವತ್ತಾದ ಹಿನ್ನಾಡು, ವಿಪುಲವಾದ ಇಂಧನ, ಜಲಸಂಪತ್ತು ಹಾಗೂ ಕಚ್ಚಾ ಸಾಮಗ್ರಿಗಳು ಇರುವುದರಿಂದ ಈ ನಗರದಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪಿತವಾಗಿದೆ. ಇದು ದಕ್ಷಿಣಾರ್ಧಗೋಳದ ಅತ್ಯಂತ ಪ್ರಮುಖ ಕೈಗಾರಿಕಾ ಕೇಂದ್ರವಾಗಿದೆ.

ಈ ನಗರ ಅಪರಾಧಿಗಳನ್ನಿಡುವ ವಸಾಹತಾಗಿ ಪ್ರಾರಂಭವಾಯಿತು (1801). ನ್ಯೂ ಕ್ಯಾಸಲ್–ಸೆಸ್‌ನಾಕ್ ಪ್ರದೇಶದಲ್ಲಿ ವರ್ಷಕ್ಕೆ ಲಕ್ಷ ಟನ್ನುಗಳಿಗೂ ಹೆಚ್ಚು ಕಲ್ಲಿದ್ದಲನ್ನು ತೆಗೆಯಲಾಗುತ್ತಿದೆ. ಇದು ಆಸ್ಟ್ರೇಲಿಯದ ಒಟ್ಟು ಉತ್ಪನ್ನದ ಶೇ. 46ಕ್ಕಿಂತಲೂ ಹೆಚ್ಚಾಗಿದೆ. ಬ್ರೋಕನ್‌ಹಿಲ್ ಪ್ರೊಪ್ರೈಟರಿ ಕಂಪೆನಿಯಿಂದ ಸ್ಥಾಪಿತವಾದ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಅಗಾಧವಾಗಿ ಅಭಿವೃದ್ಧಿ ಹೊಂದಿದೆ (1915). ನ್ಯೂಕ್ಯಾಸಲ್ ಬಳಿ ರೇಯಾನ್ ನೂಲು ಮತ್ತು ಹಗ್ಗಗಳನ್ನು ತಯಾರಿಸುವ ಕಾರ್ಖಾನೆಗಳು ಪ್ರಾರಂಭವಾದವು(1960). ಲೋಹ ತಯಾರಿಕೆ, ಹಡಗು ನಿರ್ಮಾಣ, ಜವಳಿ ಇವು ಇಲ್ಲಿಯ ಕೆಲವು ಪ್ರಮುಖ ಕೈಗಾರಿಕೆಗಳು. ನಾರ್ತ್ ಹಾರ್ಬರ್, ಬೇಸಿನ್ ಮತ್ತು ಪೋರ್ಟ್ ವರಾಟಾ ರೇವುಗಳ ಬಂದರು ಸೌಲಭ್ಯ ತೃಪ್ತಿಕರವಾಗಿದೆ. ಇಲ್ಲಿ ಸರಕುಗಳನ್ನು ಹಡಗುಗಳಿಗೆ ತುಂಬಲು ಮತ್ತು ಇಳಿಸಲು ಆಧುನಿಕ ವ್ಯವಸ್ಥೆಯಿದೆ. ಇಲ್ಲಿ ತೇಲುವ ಹಡಗುಕಟ್ಟೆಯೂ ಉಂಟು. 366 ಮೀ ಅಗಲದ ರೇವನ್ನು ಪ್ರವೇಶಿಸಲು 152 ಮೀ ಅಗಲ ಮತ್ತು 11 ಮೀ ಆಳದ (ಇಳಿತದ ಸಮಯದಲ್ಲಿ) ಕಾಲುವೆಯಿದೆ. ನ್ಯೂ ಕ್ಯಾಸಲ್‌ನಿಂದ ರಫ್ತಾಗುವ ಪ್ರಮುಖ ಪದಾರ್ಥಗಳು ಕಲ್ಲಿದ್ದಲು, ಟಾರು, ಮಾಂಸ, ಬೆಣ್ಣೆ, ಮೊಟ್ಟೆ, ಮರ, ಕಬ್ಬಿಣ, ಉಕ್ಕಿನ ಕಂಬಿಗಳು ಮತ್ತು ತಗಡುಗಳು, ಗೊಬ್ಬರ ಮುಂತಾದವು. ನ್ಯೂ ಕ್ಯಾಸಲ್ ವಿಶ್ವವಿದ್ಯಾಲಯ 1965ರಲ್ಲಿ ಸ್ಥಾಪಿತವಾಯಿತು. ಇಲ್ಲಿ 1859ರಲ್ಲಿ ಪೌರಸಭೆ ಸ್ಥಾಪಿತವಾಯಿತು.

5 ಉತ್ತರ ಐರ್ಲೆಂಡಿನ ಡೌನ್ ಕೌಂಟಿಯಲ್ಲಿರುವ ಒಂದು ನಗರ. ಡನ್‌ಡ್ರಮ್ ಕೊಲ್ಲಿಯ ದಡದ ಮೇಲೆ ಮೋರ್ನ್ ಪರ್ವತದ ಅತ್ಯುನ್ನತ ಶಿಖರವಾದ ಸ್ಲೀವ್ ಡಾನರ್ಡ್‌ನ ಬುಡದಲ್ಲಿದೆ. ಇದು ಸಮುದ್ರತೀರದ ವಿಹಾರಸ್ಥಳ, ಪ್ರವಾಸಿಕೇಂದ್ರ. ಇಲ್ಲಿಂದ ಪರ್ವತಪ್ರದೇಶಕ್ಕೆ ಜನರು ಪರಿಶೋಧನ ಪ್ರವಾಸ ಮಾಡುತ್ತಾರೆ. ಇಲ್ಲಿಯ ಗಾಲ್ಫ್ ಮೈದಾನ ಪ್ರಸಿದ್ಧವಾದದ್ದು. ಇಲ್ಲಿಗೆ 3.2 ಕಿಮೀ ದೂರದಲ್ಲಿ 1,200 ಎಕರೆ ವಿಸ್ತೀರ್ಣವುಳ್ಳ ರಾಷ್ಟ್ರೀಯ ಉದ್ಯಾನ (ಟಾಲಿಮೋರ್ ಫಾರೆಸ್ಟ್ ಪಾರ್ಕ್) ಇದೆ. ಇದರಲ್ಲಿ 135 ಜಾತಿಯ ಮರಗಳುಂಟು. ಈ ಪಟ್ಟಣಕ್ಕೆ ನ್ಯೂ ಕ್ಯಾಸಲ್ ಎಂಬ ಹೆಸರು ಬರಲು ಕಾರಣವಾದ ನ್ಯೂ ಮೆಗನಿಸ್ ದುರ್ಗ ಭದ್ರ ಕೇಂದ್ರವಾಗಿತ್ತು. ಇದನ್ನು 1588ರಲ್ಲಿ ಕಟ್ಟಲಾಯಿತು.

6 ಕೆನಡದ ನ್ಯೂ ಬ್ರನ್ಸ್‌ವಿಕ್‌ನ ನಾರ್ತಂಬರ್ಲೆಂಡ್ ಕೌಂಟಿಯಲ್ಲೂ ದಕ್ಷಿಣ ಆಫ್ರಿಕದ ಪಶ್ಚಿಮ ನಟಾಲ್ ಪ್ರಾಂತ್ಯದಲ್ಲೂ, ಅಮೆರಿಕ ಸಂಯುಕ್ತ ಸಂಸ್ಥಾನಗಳ ವೈಯೊಮಿಂಗ್ ರಾಜ್ಯದ ವೆಸ್ಟನ್ ಕೌಂಟಿಯಲ್ಲೂ ಈ ಹೆಸರಿನ ಪಟ್ಟಣಗಳಿವೆ. (ಜಿ.ಎಸ್.ಎಸ್.)

**ನ್ಯೂ ಜರ್ಸಿ:** ಅಮೆರಿಕದ ಪೂರ್ವತೀರದ ಒಂದು ರಾಜ್ಯ. ಉತ್ತರದಲ್ಲಿ ನ್ಯೂಯಾರ್ಕ್, ಪಶ್ಚಿಮದಲ್ಲಿ ಪೆನ್ಸಿಲ್ವೇನಿಯ, ನೈರುತ್ಯದಲ್ಲಿ ಡೆಲವೇರ್ ಕೊಲ್ಲಿ, ಮತ್ತು ಡೆಲವೇರ್ ರಾಜ್ಯ, ದಕ್ಷಿಣದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಡೆಲವೇರ್ ಕೊಲ್ಲಿ, ಪೂರ್ವದಲ್ಲಿ ನ್ಯೂಯಾರ್ಕ್ ಮತ್ತು ಅಟ್ಲಾಂಟಿಕ್ ಸಾಗರ ಇವೆ. ವಿಸ್ತೀರ್ಣ 20,295 ಚ.ಕಿಮೀ. ಜನಸಂಖ್ಯೆ 86,98,879 (2004). ರಾಜಧಾನಿ ಟ್ರೆಂಟನ್.

ಭೂಸ್ವರೂಪ: ನ್ಯೂಜರ್ಸಿಯನ್ನು ನಾಲ್ಕು ಸ್ವಾಭಾವಿಕ ವಿಭಾಗಗಳಾಗಿ ವಿಂಗಡಿಸಬಹುದು. ವಾಯವ್ಯದ ಅಪಲೇಷಿಯನ್ ಪರ್ವತ ಪ್ರದೇಶ: ರಾಜ್ಯದ ಅತ್ಯಂತ ಎತ್ತರವಾದ ಭಾಗ (550 ಮೀ) ನ್ಯೂಯಾರ್ಕ್ ಗಡಿಯ ಬಳಿ ಇದೆ. ನ್ಯೂ ಇಂಗ್ಲೆಂಡ್ ಪ್ರಸ್ಥಭೂಮಿ ಅಪಲೇಷಿಯನ್ ಪರ್ವತ ಪ್ರದೇಶದ ಕೆಳಗಡೆಗೆ ಇದೆ. ಪೀಡ್ ಮಾಂಟ್ ಪ್ರದೇಶ ನ್ಯೂ ಇಂಗ್ಲೆಂಡ್ ಪ್ರಸ್ಥಭೂಮಿಗೆ ಆಗ್ನೇಯದಲ್ಲಿ ಅಡ್ಡಲಾಗಿ ವ್ಯಾಪಿಸಿದೆ. ಇದು ಸಮತಲ ಪ್ರದೇಶ. ಅಟ್ಲಾಂಟಿಕ್ ಸಾಗರದ ಅಂಚಿನ ಮೈದಾನ: ಹಳ್ಳತಿಟ್ಟಿನ ಭಾಗ. ಸಮುದ್ರದ ಕಡೆಗೆ ಇಳಿಜಾರಾದ ಈ ಮೈದಾನದ ಉದ್ದಕ್ಕೂ ಚವುಳಮಣ್ಣಿನ ಜವುಗುನೆಲವೂ, ಮರುಳು ಸುತ್ತುಗಟ್ಟಿರುವ ಲಗೂನುಗಳೂ ಇವೆ. ಸಮುದ್ರದ ಅಂಚಿನಲ್ಲಿ ದ್ವೀಪಗಳಿವೆ. ಹಡ್ಸನ್ ಮತ್ತು ಡೆಲವೇರ್ ಈ ರಾಜ್ಯದ ಪ್ರಮುಖ ನದಿಗಳು. ಹಡ್ಸನ್ ನದಿ ಈ ರಾಜ್ಯವನ್ನು ನ್ಯೂ ಯಾರ್ಕ್‌ನಿಂದ ಪ್ರತ್ಯೇಕಿಸುತ್ತದೆ. ಡೆಲವೇರ್ ನದಿ ಈ ರಾಜ್ಯದ ಪಶ್ಚಿಮ ಗಡಿಯಾಗಿ ಹರಿಯುತ್ತದೆ. ರಾಜ್ಯದಲ್ಲೇ ಹುಟ್ಟಿ ಹರಿಯುವ ನದಿ ರೇರಿಟನ್. ಇದು 120 ಕಿಮೀ. ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಇತರ ಮುಖ್ಯ ನದಿಗಳು ಪಸೇಯಿಕ್ ಮತ್ತು ಹ್ಯಾಕನ್ಸ್ಯಾಕ್. ರಾಜ್ಯದ ಪ್ರಸ್ಥಭೂಮಿ ಪ್ರದೇಶದಲ್ಲಿ, ಹೆಚ್ಚಾಗಿ ವಾಯವ್ಯಭಾಗದಲ್ಲಿ, ನೂರಾರು ಸರೋವರಗಳಿವೆ. ಅವುಗಳಲ್ಲಿ ಹಪಾಟ್‌ಕಾಂಗ್ ಅತ್ಯಂತ ದೊಡ್ಡದು.

ವಾಯುಗುಣ: ರಾಜ್ಯದ ವಾಯುಗುಣ ಸೌಮ್ಯವಾದದ್ದು. ವಾಯವ್ಯ ಹಾಗೂ ಆಗ್ನೇಯಭಾಗಗಳ ನಡುವೆ ಉಷ್ಣತೆಯಲ್ಲಿ ತೀವ್ರ ವ್ಯತ್ಯಾಸಗಳಿವೆ. ಉತ್ತರದಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $10^0$ಸೆ. ದಕ್ಷಿಣದಲ್ಲಿ ವಾರ್ಷಿಕ ಸರಾಸರಿ $13^0$ಸೆ. ವಾರ್ಷಿಕ ಸರಾಸರಿ ಮಳೆ ಉತ್ತರ ಜರ್ಸಿಯಲ್ಲಿ 127 ಸೆಂಮೀ. ದಕ್ಷಿಣಜರ್ಸಿಯಲ್ಲಿ 91 ಸೆಂಮೀ.

ರಾಜ್ಯದ ದೊಡ್ಡ ನಗರಗಳು ಜರ್ಸಿ ಸಿಟಿ, ಫಿಲಡೆಲ್ಫಿಯ, ಟ್ರೆಂಟನ್, ನ್ಯೂ ವಾರ್ಕ್, ಪ್ಯಾಟರ್ಸನ್, ಕ್ಯಾಮ್‌ಡನ್ ಮತ್ತು ಎಲಿಜಬೆತ್. (ವಿ.ಜಿ.ಕೆ.)

**ನ್ಯೂಜಿಲೆಂಡ್:** ದಕ್ಷಿಣ ಪೆಸಿಫಿಕ್ ಸಾಗರದಲ್ಲಿ ಆಸ್ಟ್ರೇಲಿಯದ ಆಗ್ನೇಯಕ್ಕೆ ಸು. 1.760 ಕಿಮೀ. ದೂರದಲ್ಲಿ ಹಾಗೂ ದ.ಅ. $34^0 25'$–$47^0 17'$ ಪೂ. ರೇ. $166^0 27'$–$178^0 35'$ ನಡುವೆ ಇರುವ ಕಾಮನ್‌ವೆಲ್ತಿನ ಪೂರ್ಣ ಸದಸ್ಯತ್ವ ಪಡೆದಿರುವ ಒಂದು ಸ್ವತಂತ್ರ ದೇಶ. ನಾರ್ತ್ ಮತ್ತು ಸೌತ್ ಐಲೆಂಡುಗಳೆಂಬ ಎರಡು ದೊಡ್ಡ ದ್ವೀಪಗಳನ್ನೂ ಅನೇಕ ಸಣ್ಣ ದ್ವೀಪಗಳನ್ನೂ ಇದು ಒಳಗೊಂಡಿದೆ. ಇವುಗಳಲ್ಲಿ ಕೆಲವು ದ್ವೀಪಗಳು ಮುಖ್ಯ ದ್ವೀಪಗಳಿಂದ ನೂರಾರು ಕಿಮೀ ದೂರದಲ್ಲಿವೆ. ದಕ್ಷಿಣ ಪೆಸಿಫಿಕಿನ ನೀಯೂ ಮತ್ತು ಟೋಕಿಲಾ ದ್ವೀಪಗಳೂ ಅಂಟಾರ್ಕ್‌ಟಿಕ ಖಂಡದ ಒಂದು ಭಾಗವೂ (ರಾಸ್ ಡಿಪೆಂಡೆನ್ಸಿ) ನ್ಯೂಜಿಲೆಂಡಿನ ಆಡಳಿತಕ್ಕೆ ಒಳಪಟ್ಟಿವೆ. ನಾರ್ತ್ ಮತ್ತು ಸೌತ್ ದ್ವೀಪಗಳ ನಡುವೆ ಕುಕ್ ಜಲಸಂಧಿ ಇದೆ. ಅತ್ಯಂತ ಕಿರಿದಾದ ಎಡೆಯಲ್ಲಿ ಈ ಜಲಸಂಧಿಯ ಅಗಲ ಸು. 26 ಕಿಮೀ. ಸೌತ್ ಮತ್ತು ಸ್ಟೂವರ್ಟ್ ದ್ವೀಪಗಳ ನಡುವಣ ಜಲಸಂಧಿ ಫೋವೋ. ಸಮೋವ ದ್ವೀಪಗಳ ಉತ್ತರಕ್ಕೆ ಸು. 48 ಕಿಮೀ ದೂರದಲ್ಲಿ ಟೋಕಿಲಾ ದ್ವೀಪಗಳಿವೆ. ನ್ಯೂಜಿಲೆಂಡಿನ ಆಶ್ರಯದಲ್ಲಿದ್ದ ಕುಕ್ ದ್ವೀಪ 1965ರಲ್ಲಿ ಸ್ವಯಮಾಡಳಿತ ಪಡೆಯಿತಾದರೂ ಅದರ ರಕ್ಷಣೆ ಮತ್ತು ವಿದೇಶ ವ್ಯವಹಾರಗಳ ಹೊಣೆ ಇಂದಿಗೂ ನ್ಯೂ ಜಿಲೆಂಡಿನದಾಗಿದೆ. ಪಶ್ಚಿಮಕ್ಕೆ 640 ಕಿಮೀ ದೂರದಲ್ಲಿ ಮಧ್ಯ ಪೇಫಿಕ್‌ನಲ್ಲಿರುವ ನೀಯೂ ದ್ವೀಪವೂ 1974ರಲ್ಲಿ ಅದೇ ಸ್ಥಾನ ಗಳಿಸಿತು. ಇಂಗ್ಲೆಂಡಿನ ಎರಡರಷ್ಟು ಇರುವ ಈ ದೇಶದ 1/3 ಭಾಗ ಗುಡ್ಡಗಾಡು. ಹಿಮಾಚ್ಛಾದಿತ ಪರ್ವತಗಳು, ಜ್ವಾಲಾಮುಖಿಗಳು, ಬಿಸಿನೀರಿನ ಚಿಲುಮೆಗಳು, ಸಮುದ್ರ ದಂಡೆಗಳು, ನಾರ್ತ್ ದ್ವೀಪದಲ್ಲಿ ವೈಟೋಮೋ ಕುಹರಗಳು (ಮಿಣುಕು ಹುಳುವಿನ ಕುಹರ) – ಇವು ಈ ದೇಶದ ಕೆಲವು ಆಕರ್ಷಣೆಗಳು. ನ್ಯೂಜಿಲ್ಯೆಂಡಿನ ವಿಸ್ತೀರ್ಣ 2,68,676 ಚ.ಕಿಮೀ. ಜನಸಂಖ್ಯೆ 4 ದ. ಲ. (2005). ರಾಜಧಾನಿ ವೆಲಿಂಗ್ಟನ್.




1840ರಿಂದ ಬ್ರಿಟಿಷ್ ವಸಾಹತಾಗಿದ್ದ ನ್ಯೂಜಿಲೆಂಡ್ 1974ರಲ್ಲಿ ಸಂಪೂರ್ಣಪ್ರಭುತ್ವ ರಾಷ್ಟ್ರವಾಗಿ ಪರಿಣಮಿಸಿತು. ಇದು ದೂರದಲ್ಲಿ ಪ್ರತ್ಯೇಕವಾಗಿರುವುದರಿಂದ ಈ ದೇಶ ರಾಜಕೀಯವಾಗಿ ಹಾಗೂ ಆಯಕಟ್ಟಿನ ದೃಷ್ಟಿಯಿಂದ ಅಷ್ಟೇನೂ ಇತರ ರಾಷ್ಟ್ರಗಳಿಗಿಂತ ಮಹತ್ತ್ವವುಳ್ಳದ್ದಲ್ಲ. ಆದರೆ ಇದರ ಜೀವನಮಟ್ಟ ಉನ್ನತವಾದದ್ದಾಗಿದೆ. ಮೂಲನಿವಾಸಿಗಳಾದ ಮಾವೊರಿಗಳೊಂದಿಗೆ ಪಾಶ್ಚಾತ್ಯ ಮಾದರಿಯ ಸಮಾಜದ ಹೊಂದಾಣಿಕೆ ಸಾಧಿಸಲಾಗಿದೆ. ಈಚೆಗೆ ಇದು ಪೆಸಿಫಿಕ್ ಸಾಗರದಲ್ಲಿರುವ ನೆರೆರಾಷ್ಟ್ರಗಳ ಬಗ್ಗೆ ಹೆಚ್ಚಿನ ಪ್ರಜ್ಞೆ ತಳೆದಿದೆ. ಹೆಚ್ಚು ಅಭಿವೃದ್ಧಿ ಹೊಂದದಿರುವ ಈ ವಲಯದ ಅಭಿವೃದ್ಧಿಯಲ್ಲಿ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಗಳಂಥ ಹೆಚ್ಚು ಅಭಿವೃದ್ಧಿ ಹೊಂದಿದ ದೇಶಗಳು ಅಧಿಕ ಪಾತ್ರ ವಹಿಸುವುದು ಅನಿವಾರ್ಯವಾಗಿದೆ.

ಭೂಸ್ವರೂಪ: ನ್ಯೂಜಿಲೆಂಡ್ ಪೆಸಿಫಿಕ್ ಸಾಗರದ ದಕ್ಷಿಣ ಭಾಗದಲ್ಲಿದೆ. ಉತ್ತರ ದ್ವೀಪ ಮತ್ತು ದಕ್ಷಿಣ ದ್ವೀಪ ಎಂಬ ಎರಡು ಮುಖ್ಯ ದ್ವೀಪಗಳಿಂದ ಕೂಡಿದೆ. ಇವುಗಳ ನಡುವೆ ಕುಕ್ ಜಲಸಂಧಿ ಉಂಟು. ಇದಲ್ಲದೆ ತೀರದಾಚೆ ಇನ್ನೂ ಅನೇಕ ಸಣ್ಣಪುಟ್ಟ ದ್ವೀಪಗಳಿವೆ. ನ್ಯೂಜಿಲೆಂಡಿನ ಭೂಸ್ವರೂಪ ಪರ್ವತಗಳು, ನದಿ ಹಾಗು ಸರೋವರಗಳಿಂದ ತುಂಬಿದೆ. ದೇಶದ ಮುಕ್ಕಾಲುಭಾಗ ಸಮುದ್ರಮಟ್ಟಕ್ಕಿಂತ ಎತ್ತರವಾಗಿದೆ. ದ್ವೀಪಗಳ ಮಧ್ಯಭಾಗಗಳಲ್ಲಿ ಉನ್ನತಪರ್ವತ ಶ್ರೇಣಿಗಳು ಹಾದುಹೋಗಿವೆ. ಉತ್ತರ ದ್ವೀಪದವು ಜ್ವಾಲಾಮುಖಿಯ ಚಟುವಟಿಕೆಯಿಂದ ರಚಿತವಾಗಿದೆ. ಇದರಿಂದಾಗಿ ಸಜೀವ ಜ್ವಾಲಾಮುಖಿಗಳು, ಬಿಸಿನೀರಿನ ಚಿಲುಮೆಗಳು, ಗೀಸರುಗಳು ಹೆಚ್ಚಾಗಿಕಂಡುಬರುತ್ತವೆ. ಉತ್ತರದ್ವೀಪದ ಮುಖ್ಯ ಶಿಖರಗಳೆಂದರೆ ಮೌಂಟ್ ಎಗ್‌ಮಾಂಟ್ (2,517 ಮೀ) ಮತ್ತು ಮಾಂಟ್ ರುವಾಪಿಹೂ (2,796 ಮೀ). ದಕ್ಷಿಣ ದ್ವೀಪದಲ್ಲಿ ಉದ್ದಕ್ಕೂ ಹಬ್ಬಿರುವ ದಕ್ಷಿಣ ಆಲ್ಪ್ಸ್ ಪರ್ವತಗಳಿವೆ. ಸು. 3,704 ಮೀ ಎತ್ತರದ ಮೌಂಟ್ ಕುಕ್ ನೂಜಿಲೆಂಡ್‌ನ ಅತ್ಯುನ್ನತ ಶಿಖರ. ಇದರ ಮೇಲ್ಭಾಗದಲ್ಲಿ ಟಾಸ್ಮಾನ್ ಹಿಮನದಿ ಕಂಡುಬರುವುದು.

ನದಿ ಮತ್ತು ಸರೋವರಗಳು: ನ್ಯೂಜಿಲೆಂಡಿನಲ್ಲಿ ಹಲವಾರು ಸುಂದರ ಸರೋವರಗಳಿವೆ. ಟಾಪೋ ಸರೋವರ (ವಿಸ್ತಾರ 616 ಚ.ಕಿಮೀ) ಉತ್ತರದ್ವೀಪದ ಮಧ್ಯದಲ್ಲಿದ್ದು ಇದು ನ್ಯೂಜಿಲೆಂಡಿನ ಅತ್ಯಂತ ದೊಡ್ಡ ಸರೋವರ. ವಾಯ್‌ಕಾಟೋ ಎಂಬುದು ಅತಿ ಉದ್ದವಾದ ನದಿ. ಇದು ಟಾಪೋ ಸರೋವರದಲ್ಲಿ ಹುಟ್ಟಿ ಉತ್ತರಾಭಿಮುಖವಾಗಿ 435 ಕಿಮೀ ದೂರ ಹರಿದು ಆಕ್ಲೆಂಡ್ ಸಮೀಪದಲ್ಲಿ ಟಾಸ್ಮಾನ್ ಸಮುದ್ರವನ್ನು ಸೇರುತ್ತದೆ. ಕ್ಲುತಾನದಿ ದಕ್ಷಿಣ ಆಲ್ಪ್ಸ್ ಪರ್ವತದ ದಕ್ಷಿಣಭಾಗದಲ್ಲಿರುವ ವನಾಕಾ ಸರೋವರದಲ್ಲಿ ಹುಟ್ಟಿ. ಉತ್ತರಾಭಿಮುಖವಾಗಿ 338 ಕಿಮೀ ದೂರ ಹರಿದು ಪೆಸಿಫಿಕ್ ಸಾಗರವನ್ನು ಸೇರುವುದು. ಉತ್ತರದ್ವೀಪದ ರೋಟೋರುವ ಎಂಬ ಸ್ಥಳದಲ್ಲಿ ಬಿಸಿನೀರಿನ ಚಿಲುಮೆಗಳೂ ಕಾರಂಜಿಗಳೂ ಇವೆ.

ಉತ್ತರದ್ವೀಪ: ಇದರ ಅಧಿಕ ಭಾಗ ಪರ್ವತಸ್ತೋಮಗಳಿಂದ ಕೂಡಿದೆ. ಈ ದ್ವೀಪದ ಪರ್ವತಗಳ ಮೇಲ್ಮೈ ಮತ್ತು ಮೇಲ್ಭಾಗಕ್ಕೆ ಚಾಚಿಕೊಂಡಿರುವ ಶಿಲೆಗಳು ಅತಿ ಪುರಾತನ ಮತ್ತು ಗಡುಸಾದ ಶಿಲಾಭಾಗಗಳು. ಇವು ಬಲು ಇಕ್ಕಟ್ಟಾದ ಪ್ರದೇಶಗಳಿಗೆ ಸೀಮಿತಗೊಂಡಿವೆ. ಈ ಮಡಿಕೆ ಪರ್ವತಗಳಲ್ಲಿ ಅಧಿಕ ಪ್ರಮಾಣದ ಸ್ತರಭಂಗಗಳನ್ನು ಗುರುತಿಸಬಹುದು. ಪೂರ್ವಭಾಗಕ್ಕೂ, ಪಶ್ಚಿಮ ಭಾಗಕ್ಕೂ ನಡುವೆ ಸ್ಫುಟವಾದ ವಿಭಜನೆಯಾಗಿರುವುದನ್ನು ಮಧ್ಯಜೀವ ಯುಗದ ಗ್ರೇವಾಕೀಸ್ ಶಿಲೆಗಳು ತೋರಿಸುತ್ತವೆ. ಪೂರ್ವಕ್ಕೆ ಪಲ್ಲಿಸಾರ್ ಭೂಶಿರದಿಂದ ಅದರ ಪೂರ್ವದೆಡೆಗೆ ಭೂರಚನೆಯಲ್ಲಿ ಅತಿಕ್ಲಿಷ್ಟವಾದ ರೌಕುಮಾರ ಪರ್ಯಾಯ ದ್ವೀಪವೂ ಸೇರಿದಂತೆ ಉಳಿದ ಅತಿ ದೊಡ್ಡದಾದ ಜುರಾಸಿಕ್, ಕ್ರಿಟೇಷಿಯಸ್, ತೃತೀಯಕ ಹಾಗೂ ಚತುರ್ಥಕ ಭೂಕಾಲಯುಗದ ಮೇಲ್ಭಾಗದ ಮಡ್ಡಿಸ್ತರಗಳುಂಟು. ಮುಖ್ಯವಾಗಿ ಇವುಗಳಲ್ಲಿ ಗ್ರೇವಾಕೀಸ್ ಸುಣ್ಣಶಿಲೆಗಳು, ಮೆಕ್ಕಲುಮಣ್ಣಿನ ಶಿಲೆಗಳು ಮತ್ತು ಪೆಂಟಿಶಿಲೆಗಳು ಸೇರಿವೆ. ತೃತೀಯಕ ಭೂಕಾಲಯುಗದ ಅಂತ್ಯದಲ್ಲಿ ಭೂಚಲನೆಯುಂಟಾಗಿ ಸಮತಲವನ್ನು ಸಂಕೋಚಿಸುವ ಶಕ್ತಿಗಳಿಂದ ಈ ಪ್ರದೇಶದಲ್ಲಿ ತೆಕ್ಕೆ ಮಡಿಲ ಪರ್ವತಗಳ ರಚನೆಯಾಯಿತು. ಈ ಮಡಿಕೆಗಳು ಕ್ರಮೇಣ ಹಲವಾರು ಸ್ತರಭಂಗಗಳಿಂದ ಭೇದಿಸಲ್ಪಟ್ಟವು. ಈ ಕ್ರಿಯೆ ಮತ್ತೂ ಮುಂದುವರಿದಿದೆ. ನ್ಯೂಜಿಲೆಂಡಿನ ಇತರ ಭಾಗಗಳಂತೆ ಉತ್ತರದ್ವೀಪದಲ್ಲೂ ಭೂಕಂಪಗಳು ಆಗಾಗ ಸಂಭವಿಸುತ್ತಿರುತ್ತಿವೆ. ದಪ್ಪಮರಳು ನಿಕ್ಷೇಪದಿಂದಾದ ವೈರಾಪಾರ ತಗ್ಗುಭಾಗ, ಮೆಕ್ಕಲುಮಣ್ಣಿನಿಂದ ರಚಿತವಾದ ಹಿಯರ್ ಟಾಂಗಾ ಮೈದಾನ (ಇದೇ ಹಾಕೀಸ್ ಕೊಲ್ಲಿ) ಮತ್ತು ಪಾವರ್ಟಿಕೊಲ್ಲಿಯ ವೈರಾಪಾರಾದ ಸಮತಟ್ಟಾದ ಭಾಗವನ್ನು ಬಿಟ್ಟರೆ ಉತ್ತರದ್ವೀಪ ಹಲವಾರು ಬೆಟ್ಟಗುಡ್ಡಗಳಿಂದ ಕೂಡಿದೆ. ಬೆಟ್ಟಗಳು ಬಲು ಕಡಿದಾಗಿವೆ. ಅಲ್ಲಲ್ಲಿ ಹಲವಾರು ಬಿರುಕುಗಳಿಂದ ಕೂಡಿವೆ. ಅತಿಯಾದ ಶಿಥಿಲೀಕರಣದಿಂದ ಬೆಟ್ಟಗಳು ತಮ್ಮ ಮೊದಲಿನ ಆಕಾರವನ್ನು ಕಳೆದುಕೊಂಡಿವೆ. ಉತ್ತರದ್ವೀಪದ ಜ್ವಾಲಾಮುಖಿಗಳ ಪೈಕಿ ಮೌಂಟ್ ಎಗ್ (ಎತ್ತರ 2,518 ಮೀ.) 250 ವರ್ಷಗಳಷ್ಟು ಹಿಂದೆ ಕಾರ್ಯಾಚರಣೆ ನಡೆಸಿದ್ದರು. ಪ್ರಸ್ತುತ ಸಜೀವವಾಗಿರುವ ಜ್ವಾಲಾಮುಖಿಗಳೆಂದರೆ ರುಯಾಪೆಹು, (ಎತ್ತರ 2,797 ಮೀ) ನ್ಗೌರಾಹೋ (ಎತ್ತರ 2,201 ಮೀ).

ದಕ್ಷಿಣ ದ್ವೀಪ: ದಕ್ಷಿಣ ದ್ವೀಪದ ಮುಕ್ಕಾಲು ಭಾಗ ಪರ್ವತಗಳಿಂದ ಕೂಡಿದೆ. ಪರ್ವತಗಳು ಈ ದ್ವೀಪದ ಮಧ್ಯಭಾಗದಲ್ಲಿದ್ದು. ಇವುಗಳನ್ನು ನ್ಯೂಜಿಲೆಂಡ್ ಆಲ್ಪ್ಸ್ ಎಂದು ಕರೆಯಲಾಗಿದೆ. ಈ ಪರ್ವತಗಳ ದಕ್ಷಿಣ ಭಾಗ ಬಲುಮಟ್ಟಿಗೆ ದೀರ್ಘಕಾಲದ ನಗ್ನೀಕರಣದ ಕ್ರಿಯೆಯಿಂದ ಕೊರೆತಕ್ಕೆ ಒಳಗಾಗಿದೆ. ಅಷ್ಟೇ ಅಲ್ಲ ಹಿಮನದಿಗಳ ಕ್ರಿಯೆಯಿಂದ ಕೂಡ ಪರಿಣಾಮಕಾರಿಯಾಗಿ ಸವೆದು ಹೋಗಿದೆ. ಇದರ ಅತ್ಯುನ್ನತ ಶಿಖರ ಮೌಂಟ್‌ಕುಕ್ ಹಿಮಾಚ್ಛಾದಿತವಾಗಿದೆ (3,784 ಮೀ) ಅಲ್ಲಿ ಸಮುದ್ರದ ಕಡೆಗೆ ಚಾಚಿರುವ ಕೈಕಾರಾ ಪರ್ವತಶ್ರೇಣಿಗಳು ಮುಖ್ಯವಾಗಿ ಸ್ಪೆನ್ಸರ್ ಮತ್ತು ಸೇಂಟ್ ಅರ್ನಾಂಡ್ ಪರ್ವತಗಳಿಗೆ

ಸಮಾನಾಂತರದಲ್ಲಿದ್ದು ಆಳವಾದ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿವೆ, ಭೂರಚನಾ ಕ್ರಿಯೆಯಿಂದ ಆದ ಸ್ತರಭಂಗಗಳು ಈ ಕಣಿವೆಗಳಲ್ಲಿ ಕಂಡುಬರುವುವು. ಈ ಪರ್ವತಗಳು ಮಾರ್ಲಬರೋ ಕರಾವಳಿಗುಂಟ ಬಟಾಗೋದ ಪೂರ್ವಭಾಗದಲ್ಲಿ ಸಮುದ್ರದ ಕಡೆಗೆ ಇಳಿಮುಖವಾಗುತ್ತವೆ. ಪುನಃ ಇವು ಸೌತ್ ಲೆಂಡಿ ಟೀವೇಕೊಲ್ಲಿಯನ್ನು ಸೇರುವುವು. ಇತರ ಕಡೆ ಮೈದಾನಗಳೂ ಸಣ್ಣ ಸಣ್ಣ ಬೆಟ್ಟಗಳು ಇಳಿಜಾರು ಪ್ರದೇಶಗಳು ಇವೆ. ಕ್ಯಾಂಟರ್‌ಬರಿ ಮೈದಾನ ಈಶಾನ್ಯದಿಂದ ನೈರುತ್ಯ ದಿಕ್ಕಿಗೆ ಅಲ್ಲಲ್ಲಿ 160 ಕಿಮೀ ಗೂ ಹೆಚ್ಚಾಗಿ ವ್ಯಾಪಿಸಿದೆ ಮತ್ತು 65 ಕಿಮೀ ಗಳಷ್ಟು ಒಳಭಾಗಕ್ಕೆ ಚಾಚಿದೆ. ಈ ಮೈದಾನ ಇಡೀ ನ್ಯೂಜಿಲೆಂಡಿನಲ್ಲಿ ಅತಿ ದೊಡ್ಡದಾದುದು.

ಆಲ್ಪ್ಸ್ ಪರ್ವತಗಳ ಮೇಲಿನಿಂದ ತುಂಬು ಪ್ರವಾಹದಲ್ಲಿ ಹರಿದು ಬರುವ ನದಿಗಳು ಅಧಿಕ ಮೊತ್ತದ ನೊರಜು ಮತ್ತು ಮರಳನ್ನು ಪರ್ವತ ತಪ್ಪಲಿನಲ್ಲಿ ತಂದು ಹಾಕುತ್ತವೆ. ಪರಿಣಾಮವಾಗಿ ಬೀಸಣಿಗೆ ಆಕಾರದ ತಪ್ಪಲು ಸಂಚಯನಗಳು ರೂಪುಗೊಳ್ಳುತ್ತವೆ. ಇತರ ಕಡೆ ಮೆಕ್ಕಲುಮಣ್ಣಿನಿಂದ ಕೂಡಿದ ಸಣ್ಣಪುಟ್ಟ ಮೈದಾನಗಳು ಕಂಡುಬರುತ್ತವೆ.

ದಕ್ಷಿಣ ದ್ವೀಪದ ವಿವಿಧ ಪರ್ವತ ಭಾಗಗಳು ಪಶ್ಚಿಮದ ಕಡೆಗೆ ಆಲ್ಪೈನ್ ಸ್ತರ ಭಂಗದಿಂದ ಹಠಾತ್ತನೆ ಅಂತ್ಯಗೊಳ್ಳುತ್ತವೆ, ಈ ಬದಲಾವಣೆ ದಕ್ಷಿಣ ದ್ವೀಪದ ಅತಿ ಪ್ರಮುಖ ಭೂರಚನಾಲಕ್ಷಣ. ಈ ಸ್ತರಭಂಗ ಎಲ್ಲಿಯೂ ಅಡೆತಡೆಯಿಲ್ಲದ ದಕ್ಷಿಣ ಆಲ್ಪ್ಸ್ ಪರ್ವತಗಳ ಪಶ್ಚಿಮ ತಪ್ಪಲಿನುದ್ದಕ್ಕೂ ಮಿಲ್‌ಫೋರ್ಡ್ ಸೌಂಡ್ ಮುಖದಿಂದ ನೆಲ್ಸನ್ ಜಿಲ್ಲೆಯ ರೊಟೋರಾ ಸರೋವರದವರೆಗೆ ಸು. 480 ಕಿಮೀ ದೀರ್ಘವಾಗಿ ಮುಂದುವರಿಯುತ್ತದೆ. ಅಲ್ಲಿಂದ ಈ ಸ್ತರಭಂಗ ವೈರಾವ್ ಎಂಬ ಹೆಸರಿನಿಂದ ಈಶಾನ್ಯಕ್ಕೆ ಇನ್ನೂ 145 ಕಿಮೀ ದೂರಕ್ಕೆ ವ್ಯಾಪಿಸಿ ಬ್ಲೆನ್‌ಹೀಮ್ಮುಕ್ ಜಲಸಂಧಿಯನ್ನು ತಲಪುತ್ತವೆ. ಈ ಸ್ತರಭಂಗದ ಪಶ್ಚಿಮಕ್ಕೆ ಇಕ್ಕಟ್ಟಾದ ವೆಸ್ಟ್ಲೆಂಡ್ ಮೈದಾನವಿದೆ. ಅಲ್ಲದೆ ಭೂವೈಜ್ಞಾನಿಕವಾಗಿ ಅತಿ ಕ್ಲಿಷ್ಟವೂ ದುರ್ಗಮವೂ ಆದ ಪರ್ವತಗಳಿಂದ ತುಂಬಿದ ನೆಲ್ಸನ್ ಪ್ರದೇಶವಿದೆ. ವೆಸ್ಟ್‌ಲೆಂಡಿನ ಕಿರಿದಾದ ಕರಾವಳಿಯ ಕೆಲವು ಕಿಮೀ ಗಳಾಚೆ ಫ್ರಾನ್ಸ್ ಜೋಸೆಫ್ ಎಂಬ ಹಿಮನದಿಗಳ ಹಿಮಸಂಚಯನ ಮತ್ತು ಮೆಕ್ಕಲುಮಣ್ಣಿನ ಸಂಚಯನಗಳು ನ್ಯೂಜಿಲೆಂಡಿನ ಅತಿ ಪುರಾತನ ಶಿಲೆಗಳನ್ನು ಮುಚ್ಚಿಬಿಟ್ಟಿದೆ.

ದಕ್ಷಿಣ ದ್ವೀಪದ ತೀರ ಪ್ರದೇಶವು ಬಹು ದೀರ್ಘಕಾಲದ ತನಕವೂ ಆಳವಾಗಿ ಕೊರೆಯಲ್ಪಟ್ಟಿದ್ದು ಉತ್ತರದ ಕಡೆಗೆ ಕುಕ್ ಜಲಸಂಧಿಗೆ ಸೇರಿದಂತೆ ಅತಿ ಜಟಿಲವಾದ ರಿಯಾಕರಾವಳಿಯನ್ನು ರಚಿಸಿವೆ.

ಗಣಿಗಾರಿಕೆ: ನ್ಯೂಜಿಲೆಂಡಿನ ಆದಿವಾಸಿಗಳಾದ ಮಾವೋರಿಗಳಿಗೆ ನೆಪ್ರೈಟ್ ಹಸುರುವರ್ಣದ ಶಿಲೆ ಮತ್ತು ಸೀಸೆಯ ಗಾಜನ್ನು ಹೋಲುವ ಜ್ವಾಲಾಮುಖಿ ಶಿಲೆಯಾದ ಅಬ್ಸಿಡಿಯನ್ ಎಂಬುವು ಅತಿಮುಖ್ಯ ಖನಿಜಗಳಾಗಿದ್ದವು. ಯುರೋಪಿಯನ್ನರು ನೆಲೆಸಿದ್ದ ಕಾಲದಲ್ಲಿ ಮೊದಲು ಚಿನ್ನ ಮತ್ತು ಅನಂತರ ಕಲ್ಲಿದ್ದಲು ಪ್ರಾಮುಖ್ಯವನ್ನು ಪಡೆದಿದ್ದವು. ಚಿನ್ನ ಅಗತ್ಯವಾದ ಬಂಡವಾಳವನ್ನು ಒದಗಿಸಿತಲ್ಲದೆ ದೇಶದ ಅಭಿವೃದ್ಧಿಗೆ ಪೂರಕವಾಗಿದ್ದು ಹೆಚ್ಚು ಜನಸಂಖ್ಯೆಯನ್ನು ಆಕರ್ಷಿಸಿತು. ಈ ದೇಶದಲ್ಲಿ ಭಾರಿ ಪ್ರಮಾಣದ ವಿದ್ಯುದುತ್ಪಾದನ ಘಟಕಗಳಿವೆ. ಇಲ್ಲಿನ ಮುಖ್ಯ ಖನಿಜ ನಿಕ್ಷೇಪಗಳೆಂದರೆ ಮ್ಯಾಂಗನೀಸ್ ಟಂಗ್‌ಸ್ಟನ್, ಯುರೇನಿಯಮ್, ಟೈಟಾನಿಯಮ್, ಕಬ್ಬಿಣಾಂಶದಿಂದ ಕೂಡಿದ ಮರಳು ಮತ್ತು ಬಾಕ್ಸೈಟ್ ಜೇಡಿಮಣ್ಣು. ದಕ್ಷಿಣ ದ್ವೀಪದ ಪಶ್ಚಿಮ ಕರಾವಳಿಯಲ್ಲಿರುವ ಮರಳಿನಲ್ಲಿ 4,30,00,000, ಟನ್ನುಗಳಿಗೂ ಹೆಚ್ಚಾಗಿ ಇಲ್ಮನೈಟ್ ಧಾತು ಇರುವುದೆಂದೂ ತಾರಾ ನಾಕಿ ಮತ್ತು ಆಕ್ಲೆಂಡ್ ರೇವಿನ ಉತ್ತರ ಭಾಗದವರೆಗೆ ವ್ಯಾಪಿಸಿರುವ ಕಪ್ಪುವರ್ಣದ ಕಬ್ಬಿಣಾಂಶವುಳ್ಳ ಮರಳಿನಲ್ಲಿ 80.00.00.000 ಟನ್ನುಗಳಷ್ಟು ಟೈಟಾನಿಯಮ್ ಇರುವುದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಶೇ. 50–50 ಕಬ್ಬಿಣ ಮತ್ತು ಶೇ. 5–10 ರಷ್ಟು ಟೈಟಾನಿಯಮ್ ಇರುವುದೆಂದು ರಾಸಾಯನಿಕ ವಿಶ್ಲೇಷಣೆಯಿಂದ ತಿಳಿದಿದೆ. ಕಬ್ಬಿಣಾಂಶವುಳ್ಳ ಮರಳನ್ನು ಆಧರಿಸಿ ವೈಕಾಟೋ ನದಿಮುಖಜಭೂಮಿಯ ಎತ್ತರಕ್ಕೆ ಆಕ್ಲೆಂಡಿನಿಂದ 58 ಕಿಮೀ ದೂರದ ಗ್ಲೆನ್ ಬ್ರೂಕ್ ಎಂಬ ಸ್ಥಳದಲ್ಲಿ 1969ರಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪಿತಗೊಂಡಿದೆ. ಮುಖ್ಯವಾಗಿ ವೆಟ್‌ಲೆಂಡಿನ ವೈಕಾಟೋ ಮತ್ತು ಸೌತ್‌ಲೆಂಡ್ ಈ ಸ್ಥಳಗಳಲ್ಲಿ ಕಲ್ಲಿದ್ದಲಿನ ವಾರ್ಷಿಕ ಉತ್ಪನ್ನ ಸು. 30 ದ. ಲ. ಟನ್ನು ಗಳಷ್ಟಾಗುತ್ತದೆ. ಚಿನ್ನದ ಉತ್ಪಾದನೆ ಕ್ರಮೇಣ ಇಳಿಮುಖವಾಗಿದೆ. ಈಗ ಅದರ ವಾರ್ಷಿಕ ಉತ್ಪಾದನೆ ಕೇವಲ 3,10,000 ದಷ್ಟಾಗುತ್ತದೆ.

ನ್ಯೂಜಿಲೆಂಡಿನ ಪ್ರತ್ಯೇಕತೆ ವಿಶಿಷ್ಟವಾದದ್ದು. ಇದರ ಮತ್ತು ಆಸ್ಟ್ರೇಲಿಯದ ಬಂದರುಗಳ ನಡುವಿನ ತೀರ ಸಮೀಪದ ಸಮುದ್ರಮಾರ್ಗ ಸು. 1,920 ಕಿಮೀ ಉದ್ದವಾಗಿದೆ. ಇದರ ಮತ್ತು ಚಿಲಿ ತೀರದ ನಡುವೆ ಸು. 6,400 ಕಿಮೀ ದೂರ ಸಮುದ್ರವಿದೆ. ಉತ್ತರಕ್ಕೆ ಪಾಲಿನೇಷ್ಯದವರೆಗೂ ದಕ್ಷಿಣಕ್ಕೆ ದಕ್ಷಿಣಧ್ರುವದವರೆಗೂ ನೀರಿನಿಂದ ಆವೃತವಾಗಿದ್ದು, ನಡುನಡುವೆ ಸಿಂಪಡಿಸಿದಂತೆ ದ್ವೀಪಗಳು. ಗುಡ್ಡಗಾಡು ಇಲ್ಲವೇ ಪರ್ವತಮಯ ಒಳನಾಡು ಮತ್ತು ತೀರ ಕಡಿದಾದ ತೀರಗಳನ್ನು ಹೊಂದಿರುವ ಈ ದೇಶ ಒಮ್ಮೆಲೇ ನೀರಿನೊಳಗಿಂದ ಎದ್ದುಕಾಣುತ್ತದೆ. ಪ್ರಪಾತ ಇಲ್ಲವೇ ಮರಳು ದಿಣ್ಣೆಗಳ ಹಿನ್ನೆಲೆಯಿರುವ ಡೊಂಕುಡೊಂಕಾದ ಕಡಲ ತೀರವಿದೆ. ಗುಡ್ಡಗಳ ಚಾಚುಗಳು ಸಮುದ್ರವನ್ನು ಹೊಗದಿರುವ ಎಡೆಗಳಲ್ಲಿ ಅವು ಸಮುದ್ರದಿಂದ ಅನತಿ ದೂರದಲ್ಲೇ ಇವೆ. ಪೂರ್ವದ ತೀರದಲ್ಲಂತೂ ಅವು ತಿಳಿ ವಾತಾವರಣದಲ್ಲಿ ಎಷ್ಟು ನಿಚ್ಚಳವಾಗಿ ಕಾಣುವುದೆಂದರೆ, ನ್ಯೂಜಿಲೆಂಡ್ ದೇಶ ಸಮುದ್ರದಲ್ಲಿ ಅರ್ಧ ಮುಳುಗಿರುವ ಅಲ್ಲಲ್ಲಿ ತುಂಡಾಗಿರುವ, ಕಡಿದಾದ, ಮನೋಹರವಾದ ತಪ್ಪಲು ಸರಣಿಯಂತೆ ಕಾಣುತ್ತದೆ. ಪರ್ವತಗಳು ಸಮುದ್ರವನ್ನು ತಲುಪುವಲ್ಲೂ ಉದ್ದನೆಯ ತೀರದ ತೋಳುಗಳು ಪರ್ವತ ಶ್ರೇಣಿಗಳನ್ನು ಬಳಸುವಲ್ಲೂ ಕರಾವಳಿಯ ದೃಶ್ಯ ಅತ್ಯಂತ ಮನೋಹರವಾದದ್ದು, ನೈರುತ್ಯದ ಜಲಸಂಧಿಗಳ ಭಾಗ ಮೃದು ಸೌಂದರ್ಯ ವಿಲಾಸದಿಂದ ಕೂಡಿದೆ.

ವಾಯುಗುಣ: ದಕ್ಷಿಣೋತ್ತರವಾಗಿ 1,600 ಕಿಮೀ ದೂರ ಹಬ್ಬಿರುವ ನ್ಯೂಜಿಲೆಂಡಿನ ವಾಯುಗುಣದಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿರುತ್ತವೆ. ಒಟ್ಟಿನಲ್ಲಿ ಇಲ್ಲಿಯದು ಸಾಗರಿಕ ವಾಯುಗುಣ. ಪೂರ್ವಕ್ಕಿಂತ ಪಶ್ಚಿಮದ ಕಡೆ ಹೆಚ್ಚು ಮಳೆಯಾಗುತ್ತದೆ. ಉತ್ತರ ದ್ವೀಪದ ತೀರ ಉತ್ತರ ಭಾಗದಲ್ಲಿ ಉಷ್ಣವಲಯಕ್ಕೆ ಹತ್ತಿರವಾದ ವಾಯುಗುಣ ಇರುತ್ತದೆ. ದಕ್ಷಿಣ ದ್ವೀಪದ ಎತ್ತರ ಪ್ರದೇಶವನ್ನು ಚಳಿಗಾಲದಲ್ಲಿ ದಪ್ಪನೆಯ ಹಿಮ ಮುಸುಕುತ್ತದೆ. ಪಶ್ಚಿಮ ಮಾರುತಕ್ಕೆ ಅಡ್ಡಲಾಗಿ ಹಬ್ಬಿರುವ ಪರ್ವತ ಶ್ರೇಣಿಗಳಿಂದಾಗಿ ದಕ್ಷಿಣೋತ್ತರದಲ್ಲಿ ಇರುವುದಕ್ಕಿಂತ ಪೂರ್ವ–ಪಶ್ಚಿಮವಾಗಿ ವಾಯುಗುಣದ ವ್ಯತ್ಯಾಸ ಹೆಚ್ಚು. ಸುತ್ತಲೂ ಹಬ್ಬಿರುವ ವಿಶಾಲ ಸಾಗರದ ಪ್ರಭಾವ ನ್ಯೂಜಿಲೆಂಡಿನ ಮೇಲೆ ಅಧಿಕವಾಗಿದೆ.

ಗಾಳಿಗೆ ಎದುರಾದ ಪರ್ವತ ಪಕ್ಕದ ಪ್ರದೇಶದಲ್ಲಿ ಮಳೆ ಅಧಿಕ. ಮಾಧ್ಯವಾರ್ಷಿಕ ಮಳೆ ಮಧ್ಯ ಓಟಾಗೋದಲ್ಲಿ 33 ಸೆಂಮೀ ನಿಂದ ದಕ್ಷಿಣ ಆಲ್ಪ್ಸ್ ನಲ್ಲಿ 760 ಸೆಂಮೀವರೆಗೆ ವ್ಯತ್ಯಾಸವಾಗುತ್ತದೆ. ಸಮಶೀತೋಷ್ಣ ವಲಯದಲ್ಲಿ ಸಾಮಾನ್ಯವಾಗಿ ಆಗುವಂತೆ ಇಡೀ ದೇಶದಲ್ಲಿ ಮಳೆಯಾಗುತ್ತದೆ. ವರ್ಷವೆಲ್ಲ ಮಳೆಯ ಹಂಚಿಕೆಯಾಗಿದೆ. ವಾರ್ಷಿಕ ಸರಾಸರಿ 64–153 ಸೆಂಮೀ.

ಸಸ್ಯವರ್ಗ: ನ್ಯೂಜಿಲೆಂಡಿನ ಸಸ್ಯವರ್ಗ ಸಮಶೀತೋಷ್ಣವಲಯದ ಮಿಶ್ರ ನಿತ್ಯಹರಿದ್ವರ್ಣಕಾಡು. ಇದು ಬಹುಶ: ಇಲ್ಲಿಯ ಮೂರನೆಯ ಎರಡು ಭಾಗದಷ್ಟು ಪ್ರದೇಶವನ್ನು ಆವರಿಸಿತ್ತು. ಬಹು ದೀರ್ಘಕಾಲ ಈ ಪ್ರದೇಶ ಪ್ರತ್ಯೇಕವಾಗಿದ್ದುದರಿಂದ ಪ್ರಪಂಚದ ಇತರ ಭಾಗಗಳಲ್ಲಿ ಇಲ್ಲದ ಸಸ್ಯಗಳ ಅಭಿವೃದ್ಧಿಗೆ ಇಲ್ಲಿ ಪ್ರೋತ್ಸಾಹ ದೊರಕಿದೆ. ಜನವಾಸಯೋಗ್ಯವಲ್ಲದ ಪ್ರದೇಶಗಳಲ್ಲಿ ಉದ್ಯಾನಗಳಲ್ಲೂ ರಕ್ಷಿತ ಅರಣ್ಯಗಳಲ್ಲೂ ಮೊದೆ ಜಾತಿಯ ಸಸ್ಯಗಳು ಈಗ ಉಳಿದಿವೆ. ದಕ್ಷಿಣದ ಪಶ್ಚಿಮ ತೀರದಲ್ಲಿಯ ಮಿಶ್ರ ಅರಣ್ಯಗಳು ಮರಮುಟ್ಟುಗಳಿಗೆ ಉಪಯುಕ್ತವಾಗಿವೆ. ಪರ್ವತ ಶ್ರೇಣಿಗಳಲ್ಲಿ ಉದ್ದಕ್ಕೂ ತೈಲಪರ್ಣಿ ಮರಗಳಿವೆ. ಐರೋಪ್ಯ ವಲಸೆಗಾರರಿಂದ ಇಲ್ಲಿಯ ನೈಸರ್ಗಿಕ ಸಸ್ಯವರ್ಗ ಬಹಳಮಟ್ಟಿಗೆ ನಷ್ಟವಾಗಿದೆ. ಹೊಸದಾಗಿ ಈಗ ತೋಪುಗಳಲ್ಲಿ ಮರಗಳನ್ನು ಬೆಳೆಸಲಾಗುತ್ತಿದೆ. ಕ್ಯಾಲಿಫೋರ್ನಿಯದ ಜಾತಿಯ ತೈಲಪರ್ಣಿ ಇಲ್ಲಿಗೆ ಹೊಂದಿಕೊಂಡಿದೆ. ಯುರೋಪಿನ ಹಲವು ಜಾತಿಯ ಮರಗಳನ್ನು ಇಲ್ಲಿ ಅಲಂಕಾರಕ್ಕಾಗಿ ಇಲ್ಲವೇ ನಗ್ನೀಕರಣವನ್ನು ತಡೆಯುವುದಕ್ಕಾಗಿ ಬೆಳೆಸಲಾಗಿದೆ.

ಪ್ರಾಣಿಸಂಪತ್ತು : ನ್ಯೂಜಿಲೆಂಡ್ ದೀರ್ಘಕಾಲ ಪ್ರತ್ಯೇಕವಾಗಿದ್ದುದರಿಂದ ಇಲ್ಲಿ ಉನ್ನತ ಪ್ರಾಣಿಜೀವನ ಇರಲಿಲ್ಲ. ಮಾವೊರಿ ಜನ ಇಲ್ಲಿಗೆ ಬಂದಾಗ (1000 ವರ್ಷಗಳಿಗೂ ಹಿಂದೆ) ಇಲ್ಲಿ ಎರಡು ಬಗೆಯ ಹಲ್ಲಿಗಳು ಇದ್ದುವು. ಗೆಕೊ ಎಂಬುದು ಮೊಟ್ಟೆಯ ಬದಲು ನೇರವಾಗಿಯೇ ಮರಿ ಹಾಕುತ್ತಿದ್ದಿತು. ಟುವಾಟರ ಎಂಬುದು ಕೊಕ್ಕಿನಂತೆ ತಲೆಯುಳ್ಳ ಸರೀಸೃಪ, ಕೆಲವು ಆದಿಮ ಕಪ್ಪೆಗಳು, ಎರಡು ಬಗೆಯ ಬಾವಲಿಗಳು ಇದ್ದವು. ಇವು ದೂರದ ದ್ವೀಪಗಳಲ್ಲಿ ಹಾಗೂ ಒಳನಾಡಿನ ಜನರಹಿತ ದೂರ ಪ್ರದೇಶಗಳಲ್ಲಿ ಅಪರೂಪವಾಗಿ ಈಗಲೂ ಇವೆ. ಯುರೋಪಿನವರು ಸಾಕುಪ್ರಾಣಿಗಳೊಂದಿಗೆ ಕೆಂಪು ಜಿಂಕೆ, ಒಪಾಸಮ್ ಮುಂತಾದವನ್ನೂ ಇಲ್ಲಿಗೆ ತಂದಿದ್ದಾರೆ. ಒಪಾಸಮ್‌ಗಳ ಸಂಖ್ಯೆ ಅತಿಯಾಗಿ ಹೆಚ್ಚಿದೆ. ಮೊಲಗಳ ಸಂಖ್ಯೆಯನ್ನು ಹಿಡಿತದಲ್ಲಿ ಇಡಲಾಗಿದೆ.

ನ್ಯೂಜಿಲೆಂಡಿನಲ್ಲಿ ಖಗಭಕ್ಷಕ ಮೃಗಗಳು ಇಲ್ಲದ್ದರಿಂದ ಇಲ್ಲಿ ಹಕ್ಕಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಭಿವೃದ್ಧಿ ಹೊಂದಿದುವು. ಹಾರಲಾರದ ಹಲವು ಬಗೆಯ ಹಕ್ಕಿಗಳು ಇಲ್ಲಿವೆ. ಇಂಥ ಪಕ್ಷಿಗಳ ಪೈಕಿ ಅತ್ಯಂತ ದೊಡ್ಡದಾಗಿದ್ದ ಮೋವದ ಸಂತತಿ ಹಾಳಾಗಿದೆ. ಕಿವಿ ಇನ್ನೂ ಉಳಿದಿದೆ. ಆದರೆ ಇವು ಜನದೂರವಾದ ಪೊದೆ ಪ್ರದೇಶಗಳಲ್ಲಿ ಮಾತ್ರ ಇವೆ. ವೇಕಾ ಮತ್ತು ನೊಟೋರ್ನಿಸ್ ಇಲ್ಲಿಗೆ ಬಂದ ಮೇಲೆ ಹಾರುವ ಸಾಮರ್ಥ್ಯ ಕಳೆದುಕೊಂಡವು. ವೇಕಾ ಜಾತಿಯ ಪುಕೇಕೊ ಈ ಸಾಮರ್ಥ್ಯ ಕಳೆದುಕೊಳ್ಳುತ್ತಿದೆ. ಉಷ್ಣ ಹಾಗೂ ಶೀತೋದಕ ಪ್ರವಾಹಗಳು ಈ ದೇಶದ ಬಳಿ ಸಂಧಿಸುವುದು ಅನೇಕ ಬಗೆಯ ಮೀನುಗಳ ವೃದ್ಧಿಗೆ ಸಹಾಯಕವಾಗಿದೆ.

ಜನಜೀವನ : ನ್ಯೂಜಿಲೆಂಡಿನ ನಿವಾಸಿಗಳಲ್ಲಿ ಶೇ. 91ರಷ್ಟು ಮಂದಿ ಐರೋಪ್ಯ ಮೂಲಗಳವರು. ಶೇ. 8ರಷ್ಟು ಜನ ಮಾವೋರಿ ಮೂಲವಾಸಿಗಳು. ಉಳಿದವರು ಪೆಸಿಫಿಕ್ ಸಾಗರ ದ್ವೀಪವಾಸಿಗಳು. ಇಲ್ಲಿರುವ ಯುರೋಪಿಯನ್ ಮೂಲದವರ ಪೈಕಿ ಬ್ರಿಟಿಷ್ ಮೂಲದವರಲ್ಲದೆ ಡಾಲ್ಮೇಷಿಯನರು, ಗ್ರೀಕ್ ಮತ್ತು ಇಟಾಲಿಯನ್ ಮೀನುಗಾರರು,

ಡೇನ್ ಕೃಷಿಕಾರ ಒಂದನೆಯ / ಎರಡನೆ ಮಹಾಯುದ್ಧಗಳ ನಡುವಣ ಕಾಲದಲ್ಲಿ ಬಂದು ನೆಲಸಿದ ಮಧ್ಯ ಯುರೋಪಿನವರು, ಅನಂತರ ವಲಸೆ ಬಂದವರು ಡಚ್ಚರು. ಚೀನಿ ತೋಟಗಾರರೂ ಕಡಿಮೆ ಸಂಖ್ಯೆಯಲ್ಲಿ ಭಾರತೀಯರೂ ಇಲ್ಲಿದ್ದಾರೆ. ಮಾವೋರಿಗಳು ಪಾಲಿನೇಷ್ಯದಿಂದ ಬಂದವರು. 19ನೆಯ ಶತಮಾನದ ಪ್ರಾರಂಭದಲ್ಲಿ ಅವರ ಸಂಖ್ಯೆ 2,00,000 ದಷ್ಟಿತ್ತು. ಕಲಹಗಳಿಂದಾಗಿಯೂ ಐರೋಪ್ಯರು ತಮ್ಮೊಡನೆ ತಂದ ರೋಗಗಳ ಫಲವಾಗಿಯೂ ಆ ಶತಮಾನದ ಅಂತ್ಯದ ವೇಳೆಗೆ ಮಾವೋರಿಗಳ ಸಂಖ್ಯೆ 40,000ಕ್ಕೆ ಇಳಿದಿತ್ತು. ಇತ್ತೀಚೆಗೆ ಮಾವೋರಿಗಳ ಸಂಖ್ಯೆ ವರ್ಷಕ್ಕೆ ಶೇ. 3 ರಂತೆ ಹೆಚ್ಚುತ್ತಿದೆ.

ಭಾಷೆ : ನ್ಯೂಜಿಲೆಂಡ್‌ನ ಮುಖ್ಯ ಭಾಷೆ ಇಂಗ್ಲಿಷ್. ಯುರೋಪಿನಿಂದ ವಲಸೆ ಬಂದವರು ಬಹು ಬೇಗ ತಮ್ಮ ಭಾಷೆಯನ್ನು ಬಿಟ್ಟು ಇಂಗ್ಲಿಷಿಗೆ ಹೊಂದಿಕೊಂಡಿದ್ದಾರೆ. ಗ್ರೀಕರು, ಚೀನೀಯರು ಮತ್ತು ಭಾರತೀಯರು ತಮ್ಮ ಮಕ್ಕಳನ್ನು ದ್ವಿಭಾಷೀಯರನ್ನಾಗಿಡಲು ಯತ್ನಿಸುತ್ತಾರೆ. ಮಾವೋರಿಗಳದು ಮಾವೋರಿ ಭಾಷೆ. ಅವರು ಸಾಮಾನ್ಯವಾಗಿ ದ್ವಿಭಾಷೀಯರು. ಮಾವೋರಿ ಮಕ್ಕಳ ಇಂಗ್ಲಿಷನ್ನು ಸುಧಾರಿಸಲು ಬಹಳ ಪ್ರಯತ್ನ ನಡೆಯುತ್ತಿದೆ.

ಧರ್ಮ : ರಾಜ್ಯದಲ್ಲಿ ಕ್ರೈಸ್ತಧರ್ಮ ಪ್ರಧಾನ. ಇಲ್ಲಿಯ ನಿವಾಸಿಗಳ ಪೈಕಿ ಸು. ಶೇ. 80ರಷ್ಟು ಜನರು ಪ್ರೆಸ್ಬಿಟೇರಿಯನ್, ಆಂಗ್ಲಿಕನ್, ರೋಮನ್ ಕೆಥೊಲಿಕ್ ಮತ್ತು ಮೆತಾಡಿಸ್ಟ್ ಪಂಥಗಳಿಗೆ ಸೇರಿದವರು. ಉಳಿದವರು ಪ್ರಾಟೆಸ್ಟಂಟರು. ಪೌರಸ್ತ್ಯ ಸಂಪ್ರದಾಯಬದ್ಧ ಚರ್ಚಿನವರು. ಯಹೂದ್ಯರು ಹಾಗೂ ಮಾವೋರಿ ಕ್ರೈಸ್ತರು.

ಆರ್ಥಿಕತೆ: ನ್ಯೂಜಿಲೆಂಡಿನ ಜನರ ಜೀವನಮಟ್ಟ ಹೆಚ್ಚಿನದು. ತಲಾ ವರಮಾನದ ದೃಷ್ಟಿಯಿಂದ ಪ್ರಪಂಚದಲ್ಲಿ ಇದರ ಸ್ಥಾನ 10ನೆಯದು. ತಲಾವಾರು ಆದಾಯ ವಾರ್ಷಿಕವಾಗಿ 15530 ಡಾಲರುಗಳಷ್ಟು ಅಧಿಕ. ಇಲ್ಲಿ ನಿರುದ್ಯೋಗ ಸಮಸ್ಯೆಯಿಲ್ಲ. ಕೃಷಿ ಉತ್ಪನ್ನಗಳ ರಫ್ತಿನಿಂದ ಹೆಚ್ಚಿನ ವರಮಾನ ಸಂಪಾದನೆಯಾಗುತ್ತಿದೆ. ಶೇ. 70 ಕ್ಕೂ ಹೆಚ್ಚಿನ ಅಂಶ ಉಣ್ಣೆ, ಮಾಂಸ, ಹಾಲು ಮತ್ತು ಹೈನು ಪದಾರ್ಥಗಳ ರಫ್ತಿನಿಂದ ಬರುತ್ತದೆ. ಹಾಲಿನಿಂದ ತಯಾರಾದ ಸಾಮಗ್ರಿಗಳ ರಫ್ತಿನಲ್ಲಿ ನ್ಯೂಜಿಲೆಂಡ್ ಪ್ರಪಂಚದಲ್ಲೇ ಮೊದಲನೆಯದು, ಉಣ್ಣೆಯ ರಫ್ತಿನಲ್ಲಿ ಮೂರನೆಯದು. ಇಲ್ಲಿ ಜನಸಂಖ್ಯೆ ಕಡಿಮೆಯಾಗಿರುವುದೂ ಪ್ರಪಂಚದ ಪ್ರಮುಖ ವಾಣಿಜ್ಯ ಕೇಂದ್ರಗಳಿಂದ ಇದು ದೂರ ಇರುವುದೂ ಈ ದೇಶದ ಅರ್ಥಿಕ ಅಭಿವೃದ್ಧಿಗೆ ಇರುವ ತೊಡಕುಗಳು.

ಕೃಷಿ : ಶೇ. 12ರಷ್ಟು ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಕಣಿವೆ ಪ್ರದೇಶದಲ್ಲಿ ಗೋಧಿ, ಓಟ್ಸ್, ಬಾರ್ಲಿ, ಹೊಗೆಸೊಪ್ಪು, ಹಣ್ಣು ಬೆಳೆಯುತ್ತಾರೆ. ಮೊದಲಿನಿಂದಲೂ ಪಶುಸಂಪತ್ತು ಉಳಿದೆಲ್ಲ ಸಂಪತ್ತಿಗಿಂತ ಹೆಚ್ಚು ಮಹತ್ತ್ವದ್ದಾಗಿದೆ. ಇಂದಿಗೂ ಅದೇ ಪ್ರವೃತ್ತಿ ಮುಂದುವರಿದಿದೆ. ಪೂರ್ವಾರ್ಧಗೋಳದಿಂದ ತಂದ ಸಾಧುಪ್ರಾಣಿಗಳು ನ್ಯೂಜಿಲೆಂಡಿಗೆ ಚೆನ್ನಾಗಿ ಹೊಂದಿಕೊಂಡಿವೆ. ಅವುಗಳ ಸಂಖ್ಯೆ ಹೆಚ್ಚುತ್ತಿದೆ. ಅವು ಉಣ್ಣೆ, ಬೆಣ್ಣೆ, ಗಿಣ್ಣು, ಮಾಂಸ ಒದಗಿಸಿ ದೇಶದ ಗ್ರಾಮ ಕೈಗಾರಿಕೆಗೆ ಮುಖ್ಯಾಧಾರವಾಗಿವೆ. ರಾಷ್ಟ್ರೀಯ ವರಮಾನದ ಶೇ. 18ರಷ್ಟು ಪ್ರಾಪ್ತವಾಗುವುದು ಈ ಪ್ರಾಥಮಿಕ ಕೈಗಾರಿಕೆಯಿಂದ. ವರಮಾನದ ಶೇ. 90ರಷ್ಟು ಬರುವುದು ಕೃಷಿ ಉತ್ಪನ್ನದಿಂದ.

ವಿದ್ಯುಚ್ಛಕ್ತಿ : ಜಲಶಕ್ತಿಯಿಂದ ವಿದ್ಯುತ್ತಿನ ಉತ್ಪಾದನೆಗೆ ದೇಶದಲ್ಲಿ ಬಹಳಷ್ಟು ಸೌಕರ್ಯವಿದೆ. ವಿದ್ಯುತ್ ಕೇಂದ್ರಗಳು ದೇಶಕ್ಕೆ ಆಗತ್ಯವಾದ ವಿದ್ಯುಚ್ಛಕ್ತಿಯನ್ನು ಕಡಿಮೆ ಖರ್ಚಿನಲ್ಲಿ ಒದಗಿಸುತ್ತವೆ. ಎರಡೂ ಮುಖ್ಯ ದ್ವೀಪಗಳ ನಡುವೆ ನೇರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದ ಸೌತ್ ದ್ವೀಪದಲ್ಲಿ ಉಳಿಕೆಯಾಗುವ ವಿದ್ಯುತ್ತು ಹೆಚ್ಚು ಜನವಸತಿ ಹಾಗೂ ಕೈಗಾರಿಕೆಗಳಿರುವ ಉತ್ತರ ದ್ವೀಪದಲ್ಲಿ ಉಪಯೋಗವಾಗುತ್ತದೆ. ದೇಶದ ಇದುವರೆಗಿನ ಅಭಿವೃದ್ಧಿಯಲ್ಲಿ ವಿದ್ಯುತ್ತು ಮಹತ್ತ್ವದ ಪಾತ್ರ ವಹಿಸಿದೆ. ಜನರ ಉನ್ನತ ಮಟ್ಟದ ಸುಖಜೀವನಕ್ಕೆ ಸೌಕರ್ಯಗಳನ್ನು ಒದಗಿಸಿದೆ. ಅಲ್ಯೂಮಿನಿಯಮ್ ಕಾರ್ಖಾನೆಯೇ ಮುಂತಾದ ನಾನಾ ಕೈಗಾರಿಕೆಗಳ ಅಭಿವೃದ್ಧಿಗೆ ಇದು ಸಹಾಯಕವಾಗಿದೆ.

ಕೈಗಾರಿಕೆ : ಹಾಲು, ಹೈನು, ಮಾಂಸ ಸಂಸ್ಕರಣ, ಮರದ ಪದಾರ್ಥಗಳು, ಕಾರಿನ ಬಿಡಿ ಭಾಗಗಳ ಜೋಡಣೆ, ಬಟ್ಟೆ, ಪಾದರಕ್ಷೆ, ಕಬ್ಬಿಣ ಸಾಮಾನು, ವಿದ್ಯುತ್ ಉಪಕರಣ, ಕಾಗದ ಮತ್ತು ತಿರುಳಿನ ತಯಾರಿಕೆ–ಇವು ಮುಖ್ಯ ಕೈಗಾರಿಕೆಗಳು . ಆಹಾರ ಸಂಸ್ಕರಣೆ ಅತ್ಯಂತ ದೊಡ್ಡ ಕೈಗಾರಿಕೆ. 1968ರಲ್ಲಿ ಮೊದಲನೆಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕೆಲಸ ಪ್ರಾರಂಭವಾಯಿತು. ದಕ್ಷಿಣ ದ್ವೀಪದ ಮಾನಾಪೌರಿ ಸರೋವರದಲ್ಲಿರುವ ದೊಡ್ಡ ಜಲವಿದ್ಯುತ್ ಯಂತ್ರಾಗಾರ 1971ರಲ್ಲಿ ಅಲ್ಯೂಮಿನಿಯಮ್ ಕಾರ್ಖಾನೆಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾರಂಭಿಸಿತು.

ಸಾರಿಗೆ : ದೇಶವು ಪರ್ವತಮಯವಾಗಿರುವುದಾದರೂ ಜನ ವಾಸವಿರುವ ಪ್ರದೇಶಗಳಲ್ಲಿ ಸಾರಿಗೆ ಸಂಪರ್ಕಗಳಿಗೆ ಅಡಚಣೆಗಳೇನೂ ಇಲ್ಲ. ಗ್ರಾಮಾಂತರ ಜಿಲ್ಲೆಗಳಲ್ಲೂ ಒಳ್ಳೆಯ ರಸ್ತೆಗಳಿವೆ. ದೊಡ್ಡ ನಗರಗಳ ಸುತ್ತಮುತ್ತ ಆಧುನಿಕ ಮಾರ್ಗಗಳನ್ನು ನಿರ್ಮಿಸಲಾಗಿದೆ. ನಗರಗಳ ನಡುವೆ ಬಸ್ಸುಗಳ ವ್ಯವಸ್ಥೆಯುಂಟು. ದುರ್ಗಮ ಪ್ರದೇಶದಲ್ಲಿ ಸಾರಿಗೆ ನಿಧಾನ. ರೈಲ್ವೆ ವ್ಯವಸ್ಥೆ ಸರ್ಕಾರದ ಒಡೆತನ ಹಾಗೂ ನಿರ್ವಹಣೆಯಲ್ಲಿದೆ. ರೈಲು, ದೋಣಿ ವ್ಯವಸ್ಥೆಯಿಂದಾಗಿ ಎರಡೂ ಮುಖ್ಯ ದ್ವೀಪಗಳ ನಡುವೆ ಸಂಪರ್ಕ ಏರ್ಪಟ್ಟಿದೆ. ಹೆಚ್ಚು ಕಡಿಮೆ ಎಲ್ಲ ನಗರಗಳಿಗೂ ರೈಲುಮಾರ್ಗಗಳುಂಟು. ಸುರಂಗಗಳು ಕಿರಿದಾಗಿರುವುದರಿಂದ ರೈಲು ಹಳಿಗಳ ನಡುವಿನ ಅಗಲ ಕಡಿಮೆ. ರೈಲು ಸಂಚಾರ ಬಹಳ ನಿಧಾನ. ಸರಕುಗಳನ್ನು ಸುವ್ಯವಸ್ಥಿತವಾಗಿ ಸಾಗಿಸುವುದರಲ್ಲಿ ರೈಲ್ವೆಯ ಪಾತ್ರ ಪ್ರಮುಖವಾದದ್ದು. ಸರಕು ಸಾಗಣೆಯಲ್ಲಿ ರೈಲ್ವೆಯೊಂದಿಗೆ ರಸ್ತೆ ಸಾರಿಗೆ ಸ್ಪರ್ಧೆ ನಡೆಸದಂತೆ ನಿರ್ಬಂಧಗಳಿವೆ. ಪರ್ವತಪ್ರದೇಶವಾದ ನ್ಯೂಜಿಲೆಂಡಿನಲ್ಲಿ ವಿಮಾನ ಸಾರಿಗೆ ಬೆಳೆವಣಿಗೆ ವಿಶೇಷವಾಗಿ ಆಗಿದೆ. ಬಹುತೇಕ ಪ್ರಾಂತೀಯ ಪಟ್ಟಣಗಳಲ್ಲಿ ವಿಮಾನ ನಿಲ್ದಾಣಗಳುಂಟು. ಎಲ್ಲ ಪ್ರಮುಖ ಕೇಂದ್ರಗಳ ನಡುವೆ ಸುವ್ಯವಸ್ಥಿತ ವಿಮಾನ ಸಂಪರ್ಕವಿದೆ. ಆಕ್ಲೆಂಡ್ ಮತ್ತು ಕ್ರೈಸ್ಟ್‌ಚರ್ಚ್‌ಗಳಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ. ವೆಲ್ಲಿಂಗ್ಟನ್ನಿನಲ್ಲಿರುವುದು ಇವಕ್ಕಿಂತ ಚಿಕ್ಕದು. ವೆಲ್ಲಿಂಗ್‌ಟನ್, ಆಕ್ಲೆಂಡ್, ನೇಪಿಯರ್ ಇವು ನಾರ್ತ್ ದ್ವೀಪದ ಮುಖ್ಯ ಬಂದರುಗಳು. ಸೌತ್ ದ್ವೀಪದಲ್ಲಿ ಕ್ರೈಸ್ಟ್‌ಚರ್ಚ್, ಡನೀಡಿನ್ ಬಂದರುಗಳು ಮುಖ್ಯವಾದವು.

ಸಮಾಜ ಕಲ್ಯಾಣ: ಆರೋಗ್ಯ ಇಲಾಖೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತದೆ. ನ್ಯೂಜಿಲೆಂಡ್ ಒಂದು ಕಲ್ಯಾಣ ರಾಜ್ಯ. ತೊಟ್ಟಿಲಿನಿಂದ ಗೋರಿಯ ತನಕ ಸಾಮಾಜಿಕ ಸುರಕ್ಷಣೆಯ ವ್ಯವಸ್ಥೆ, ಹೆರಿಗೆ, ಶಿಕ್ಷಣ, ವೈದ್ಯಕೀಯ ಚಿಕಿತ್ಸೆ, ನಿವೃತ್ತಿವೇತನ ಮತ್ತು ಇತರ ಸವಲತ್ತುಗಳನ್ನು ಸರ್ಕಾರ ಎಲ್ಲರಿಗೂ ಒದಗಿಸುತ್ತದೆ. ತಮ್ಮವೇ ಆದ, ಮೂರು ಮಲಗುವ ಕೋಣೆಗಳೂ ತೋಟವೂ ಇರುವ, ಬಂಗಲೆ ಮಾದರಿಯ ಮನೆಗಳನ್ನು ಪಡೆಯಲು ನ್ಯೂಜಿಲೆಂಡಿನಲ್ಲಿ ಹೆಚ್ಚು ಜನರು ಯತ್ನಿಸುತ್ತಾರೆ. ದೊಡ್ಡ ನಗರಗಳಲ್ಲಿ ಸ್ಥಳದ ಅಭಾವ ಇರುವುದರಿಂದ ಎತ್ತರದ ಕಟ್ಟಡಗಳಲ್ಲಿ ಭಾಗಗಳನ್ನು ಮಾತ್ರ ದೊರಕಿಸುವುದು ಸಾಧ್ಯ. ಸರ್ಕಾರ ಕಡಿಮೆ ಬಾಡಿಗೆಯ ವಸತಿಗಳನ್ನೂ ಒದಗಿಸುತ್ತದೆ. ಕಡಿಮೆ ವರಮಾನದವರು ಮನೆಕೊಳ್ಳಲು ಅವರಿಗೆ ಸರ್ಕಾರ ಕಡಿಮೆ ಬಡ್ಡಿ ದರದಲ್ಲಿ ಸಾಲು ಒದಗಿಸುತ್ತದೆ.

ಸಂಸ್ಕೃತಿ, ಕಲೆ, ಸಾಹಿತ್ಯ: ಕಲ್ಯಾಣ ರಾಜ್ಯದ ಗುರಿಯನ್ನು ಜಾರಿಗೆ ತಂದಾಗಿನಿಂದ ಜನರು ಸಾಮಾನ್ಯವಾಗಿ ತೃಪ್ತಜೀವನ ನಡೆಸುತ್ತಿದ್ದಾರೆ. ವೈಯಕ್ತಿಕ ವೈಲಕ್ಷಣ್ಯಗಳನ್ನು ಅವರು ಸಾಮಾನ್ಯವಾಗಿ ಸಹಿಸುವುದಿಲ್ಲ. ಮಾತು. ನಡೆತೆ, ಗೃಹೋಪಕರಣ–ಎಲ್ಲವೂ ಸಾಮಾನ್ಯವಾಗಿ ಒಂದೇ ರೀತಿ ಇರುತ್ತವೆ. ಇವರು ಅಧಿಕಾರಕ್ಕೆ ಸುಲಭವಾಗಿ ಮಣಿಯುತ್ತಾರೆ. ಮಾವೋರಿ ಜನರ ಸಂಸ್ಕೃತಿ ಈಚೆಗೆ ಎದ್ದು ಕಾಣತೊಡಗಿದೆ. ದೇಶದಾದ್ಯಂತ ಕಲಾವಿಲಾಸಿಗಳ ಸಜೀವ ನಾಟಕ ಸಂಪ್ರದಾಯವಿದೆ. ಸ್ಕಾಟ್ಲೆಂಡಿನ ತಿದಿಗೊಳಲು ಹಾಗೂ ಹಿತ್ತಾಳೆ ವಾದ್ಯಗಳ ಬಾಜನದಲ್ಲಿ ಜನರು ವಿಶೇಷ ಆಸಕ್ತಿ ವಹಿಸುತ್ತಾರೆ. ನ್ಯೂಜಿಲೆಂಡಿನ ಜನರು ಮಣ್ಣಿನ ಪಾತ್ರೆಗಳನ್ನು ಮಾಡುವುದರಲ್ಲಿ ನಿಪುಣರು. ಇಲ್ಲಿಯ ಕುಂಬಾರಕೆಲಸ ಪ್ರಪಂಚದ ಶ್ರೇಷ್ಠ ಕುಂಬಾರ ಕೆಲಸಕ್ಕೆ ಸಮವಾಗಿದೆ. ದೇಶದ ಜನಸಂಖ್ಯೆ ಕಡಿಮೆಯಾಗಿರುವುದು ಸಾಂಸ್ಕೃತಿಕ ಅಭಿವೃದ್ಧಿಗೆ ಒಂದು ಸಮಸ್ಯೆಯಾಗಿದೆ. (ಜಿ.ಕೆ.ಯು.;ಎಂ.ಎಸ್.ಪಿ.)

**ನ್ಯೂ ಫಿಡೆಲ್ಫಿಯ:** ಅಮೇರಿಕ ಸಂಯುಕ್ತ ಸಂಸ್ಥಾನದ ಒಹೈಯೊ ರಾಜ್ಯದ ಈಶಾನ್ಯ ಭಾಗದಲ್ಲಿರುವ ಟಿಸ್ಕರಾವಸ್ ಕೌಂಟಿಯ ನಗರ. ಆ ಕೌಂಟಿಯ ಆಡಳಿತಕೇಂದ್ರ, ಕ್ಯಾಂಟನ್‌ಗೆ ದಕ್ಷಿಣದಲ್ಲಿ, ಟಿಸ್ಕರಾವಸ್ ನದಿಯ ದಡದ ಮೇಲೆ ಉ.ಅ 40°30′ ಮತ್ತು ಪ.ರೇ 81°27′ ನಲ್ಲಿದೆ. ಜನಸಂಖ್ಯೆ 17056(2000). ಜಾನ್ ಕಿನ್ಸ್‌ಲಿ ಇದನ್ನು 1803ರಲ್ಲಿ ಸ್ಥಾಪಿಸಿದ. ಕ್ರಾಂತಿಯುದ್ಧದಲ್ಲಿ ಭಾಗವಹಿಸಿದ ಯೋಧರಿಗೆ ಮೀಸಲಾಗಿಡಲಾಗಿದ್ದ ಪ್ರದೇಶದಲ್ಲಿ ಇದು ಸ್ಥಾಪಿತವಾಯಿತು. ಅಂತರ್ಯುದ್ಧದ ಅನಂತರ ಇದು ಬೆಳೆಯಿತು. ಇಲ್ಲಿಯ ಕಲ್ಲಿದ್ದಲು ಮತ್ತು ಜೇಡಿಮಣ್ಣಿನ ನಿಕ್ಷೇಪಗಳಿಂದ ಕೈಗಾರಿಕೆಗೆ ಪ್ರೋತ್ಸಾಹ ಲಭ್ಯವಾಯಿತು. ಜವಳಿ ಯಂತ್ರ, ಕಟ್ಟಡ ಸಲಕರಣೆ, ಯಂತ್ರ ಸಲಕರಣೆ, ಜೇಡಿಮಣ್ಣು ಸರಕು, ಪ್ಲಾಸ್ಟಿಕ್ ಸಾಮಾನು, ಕೈಗಾರಿಕಾ ಪಂಖ, ಕಿಡಿ ಪ್ಲಗ್, ಬ್ಯಾಟರಿ ಇವು ಇಲ್ಲಿ ತಯಾರಾಗುತ್ತವೆ. 1833ರಲ್ಲಿ ಇದು ಪಟ್ಟಣವಾಯಿತು. 1883ರಲ್ಲಿ ಇದಕ್ಕೆ ನಗರದ ಸ್ಥಾನ ಪ್ರಾಪ್ತವಾಯಿತು. (ಎಸ್.ಕೆ.ಆರ್.)

**ನ್ಯೂ ಬೆಡ್‌ಫರ್ಡ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೆಸಾಚುಸೆಟ್ಸ್ ರಾಜ್ಯದ ಒಂದು ನಗರ; ಬಂದರು; ಬ್ರಿಸ್ಟಲ್ ಕೌಂಟಿಯ ಒಂದು ಕೇಂದ್ರ. ರಾಜ್ಯದ ಆಗ್ನೇಯ ಭಾಗದಲ್ಲಿ, ಬಜರ್ಡ್ಸ್ ಕೊಲ್ಲಿಯ ಬಳಿ, ಅಕೂಷ್‌ನೆಟ್ ನದೀ ಮುಖದಲ್ಲಿ ಉ.ಅ.41°38′ ಮತ್ತು ಪ.ರೇ.70°56′ ಮೇಲೆ ಇದೆ ಪ್ಲೀಮತ್ ವಸಾಹತುದಾರರು 1652ರಲ್ಲಿ ಇಲ್ಲಿ ವಸತಿ ನಿರ್ಮಿಸಿದರು. ಆಗ ಇದು ಡಾರ್ಟ್‌ಮತ್‌ನ ಭಾಗವಾಗಿತ್ತು. 1760ರಲ್ಲಿ ಇಲ್ಲಿ ಮೀನುಗಾರರು ನೆಲೆಸಿದರು. 1765ರ ವೇಳೆಗೆ ಇದು ತಿಮಿಂಗಲ ಬೇಟೆಯ ಬಂದರಾಗಿ ಬೆಳೆಯಿತು. ಅನಂತರ ಹಡಗು ನಿರ್ಮಾಣ ಕೇಂದ್ರವಾಯಿತು. ಅಮೆರಿಕದ ಕ್ರಾಂತಿಯುದ್ಧದ ಸಮಯದಲ್ಲಿ ಹೋರಾಟಗಾರರು ಇಲ್ಲಿಯ ರೇವಿನಿಂದ ಕಾರ್ಯಾಚರಣೆ ನಡೆಸಿದರು. 1778ರಲ್ಲಿ ಬ್ರಿಟಿಷ್ ಪಡೆಗಳು ಇದರ ಮೇಲೆ ದಾಳಿ ಮಾಡಿ ಹಳ್ಳಿಯನ್ನು ಸುಟ್ಟುವು. ಅನಂತರ ಇದು ಚೇತರಿಸಿಕೊಂಡು ಮತ್ತೆ ಬೆಳೆಯಿತು. 1787ರಲ್ಲಿ ಡಾರ್ಟ್‌ಮತ್‌ನಿಂದ ಪ್ರತ್ಯೇಕವಾಗಿ, ಬೆಡ್‌ಫರ್ಡ್ ಎಂಬ ಹೆಸರು ಗಳಿಸಿ ಪಟ್ಟಣವಾಯಿತು. ಇದೇ ಹೆಸರಿನ

ಮತ್ತೊಂದು ಪಟ್ಟಣ ಮಿಡ್ಲ್‌ಸೆಕ್ಸ್ ಕೌಂಟಿಯಲ್ಲಿದ್ದುದರಿಂದ ಇದನ್ನು ನ್ಯೂಬೆಡ್‌ಫರ್ಡ್ ಎಂದು ಅನಂತರ ಕರೆಯಲಾಯಿತು. 1820ರ ವೇಳೆಗೆ ನ್ಯೂಬೆಡ್‌ಫರ್ಡ್ ಪ್ರಪಂಚದ ಪ್ರಮುಖ ತಿಮಿಂಗಲ ಬೇಟೆಯ ಬಂದರುಗಳಲ್ಲಿ ಒಂದಾಗಿತ್ತು. ಇದರ ಪ್ರಾಮುಖ್ಯ ತಗ್ಗಿದಾಗ ನ್ಯೂಬೆಡ್‌ಫರ್ಡ್‌ನಲ್ಲಿ ಹತ್ತಿ ಬಟ್ಟೆ ತಯಾರಿಕೆಯ ಉದ್ಯಮ ಬೆಳೆಯಿತು. 1920ರ ಅನಂತರ ಈ ಕೈಗಾರಿಕೆ ಇಲ್ಲಿಂದ ಆಗ್ನೇಯಕ್ಕೆ ಸರಿಯತೊಡಗಿತು. ಈಗ ಇಲ್ಲಿ ಉಡುಪು, ವಿದ್ಯುತ್ ಉಪಕರಣ, ಯಂತ್ರ, ರಬ್ಬರ್ ಸರಕು, ಲೋಹ ಸರಕು ತಯಾರಾಗುತ್ತವೆ. ಈಗ ಇದು ಕಾಡ್ ಭೂಶಿರ ಪ್ರದೇಶದ ಬಂದರು; ಮೀನುಗಾರಿಕೆ ಕೇಂದ್ರ. ತಿಮಿಂಗಲ ಬೇಟೆಯ ಇತಿಹಾಸ ಸಂಘದ ವಸ್ತುಸಂಗ್ರಹಾಲಯ. ಅಂತರ್ಯುದ್ಧಕಾಲದಲ್ಲಿ ಬಂದರನ್ನು ರಕ್ಷಿಸಲು ರೋಡ್‌ಮನ್ ನಿರ್ಮಿಸಿದ ಕೋಟೆ ಮತ್ತು ಇತರ ಕೆಲವು ಇತಿಹಾಸ ಪ್ರಸಿದ್ಧ ಸಂಸ್ಥೆಗಳು, ಕಟ್ಟಡಗಳು ಇಲ್ಲಿವೆ. ಇದರ ಜನಸಂಖ್ಯೆ 92538 (2006).

ನ್ಯೂಬೆಡ್‌ಫರ್ಡ್ ಬಂದರು ಪ್ರಮುಖವಾಗಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಎಣ್ಣೆಯ ವ್ಯಾಪಾರ ನಿರ್ವಹಿಸುತ್ತಿವೆ. ಇದು ದಕ್ಷಿಣ ನ್ಯೂಇಂಗ್ಲೆಂಡ್ ಭಾಗದ ಆಯಕಟ್ಟಿನ ಪ್ರದೇಶದಲ್ಲಿದೆ. (ಎಸ್.ಕೆ.ಆರ್.)

**ನ್ಯೂ ಬ್ರನ್ಸ್‌ವಿಕ್[1]:** ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ನ್ಯೂಜರ್ಸಿಯ ಒಂದು ನಗರ. ಮಿಡ್ಲ್‌ಸೆಕ್ಸ್ ಕೌಂಟಿಯ ಆಡಳಿತ ಕೇಂದ್ರ. ಉ.ಅ. 40°29′ ಮತ್ತು ಪ.ರೇ 74°27′ ಮೇಲೆ ರ್‍ಯಾರಿಟನ್ ನದಿಯ ದಡದ ಮೇಲಿದೆ. ಜನಸಂಖ್ಯೆ 7,49,168(2006). 1681ರಲ್ಲಿ ಇಲ್ಲಿ ವಸತಿ ಏರ್ಪಟ್ಟಿತು. ಈ ಸ್ಥಳದಲ್ಲಿ ನೆಲೆ ಸ್ಥಾಪಿಸಿದ ಜಾನ್ ಇನಿಯನ್ ಇಲ್ಲಿ ನದಿ ದಾಟಲು ಹರಿಗೋಲು ಸಂಚಾರ ವ್ಯವಸ್ಥೆ ಏರ್ಪಡಿಸಿ ನಡೆಸುತ್ತಿದ್ದ. ಆದ್ದರಿಂದ ಇದಕ್ಕೆ ಇನಿಯನ್ಸ್ ಫೆರಿ ಎಂಬ ಹೆಸರಿತ್ತು. 1713ರಲ್ಲಿ ಒಂದನೆಯ ಜಾರ್ಜನ ಗೌರವಾರ್ಥ ಇದಕ್ಕೆ ಈಗಿನ ಹೆಸರು ಬಂತು. ಜಾರ್ಜ್ ದೊರೆ ಬ್ರನ್ಸ್‌ವಿಕ್‌ನ ಡ್ಯೂಕನೂ ಆಗಿದ್ದ. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ನ್ಯೂಯಾರ್ಕಿನಿಂದ ಹಿನ್ನಡೆಯುತ್ತಿದ್ದ ವಾಷಿಂಗ್‌ಟನ್ನಿನ ಪಡೆಗಳು ಇದನ್ನು ಆಕ್ರಮಿಸಿಕೊಂಡಿದ್ದು (1776) ಬ್ರಿಟಿಷ್ ಸೇನೆಯ ಆಗಮನವಾದಾಗ ತೆರವು ಮಾಡಿದುವು. 1778ರಲ್ಲಿ ವಾಷಿಂಗ್‌ಟನ್ ಮತ್ತೆ ಇದನ್ನು ಗೆದ್ದುಕೊಂಡ. ಇಲ್ಲಿಂದ ಯೋಧರು ಬ್ರಿಟಿಷರಿಗೆ ಕಿರುಕುಳ ನೀಡುತ್ತಿದ್ದರು. 1838ರಲ್ಲಿ ಕ್ಯಾಮ್‌ಡೆನ್ ಮತ್ತು ಅಂಬೋಯ್ ರೈಲು ರಸ್ತೆ ಇಲ್ಲಿಯವರೆಗೂ ನಿರ್ಮಾಣವಾಯಿತು. 19ನೆಯ ಶತಮಾನದಿಂದ ಇದು ಆಸ್ಪತ್ರೆಯ ವಸ್ತುಗಳ ಮತ್ತು ಔಷಧಗಳ ತಯಾರಿಕೆಯ ಕೇಂದ್ರವಾಗಿದೆ. ವಸ್ತ್ರ, ರಾಸಾಯನಿಕ, ಚರ್ಮ ಸರಕು, ಮತ್ತು ಮೋಟಾರುವಾಹನಗಳ ಬಿಡಿಭಾಗಗಳು ತಯಾರಾಗುತ್ತವೆ. 1766ರಲ್ಲಿ ಸ್ಥಾಪಿತವಾದ ಕ್ವೀನ್ಸ್ ಕಾಲೇಜು ರಟ್ಗರ್ಸ್ ವಿಶ್ವವಿದ್ಯಾಲಯವಾಗಿ ಬೆಳೆದಿದೆ. ಅಮೆರಿಕದ ಅತ್ಯಂತ ಪ್ರಾಚೀನ ದೇವತಾಶಾಸ್ತ್ರ ಶಾಲೆ ಇರುವುದು ಇಲ್ಲೇ. 1784ರಲ್ಲಿ ಸ್ಥಾಪಿತವಾದ ಈ ಶಾಲೆ 1810ರಿಂದ ಈ ನಗರದಲ್ಲಿದೆ. ಅಮೆರಿಕದ ಬಾಲಚಮಾ ಸಂಸ್ಥೆಯ ಕೇಂದ್ರ ಕಛೇರಿ ಇದೆ. 1784ರಲ್ಲಿ ಇದು ನಗರವಾಗಿ ನೋಂದಣಿಯಾಯಿತು. (ಎಚ್.ಜಿ.ಎ.)

**ನ್ಯೂ ಬ್ರನ್ಸ್‌ವಿಕ್[2]:** ಉತ್ತರ ಅಮೆರಿಕ ಖಂಡದಲ್ಲಿ ಕೆನಡ ದೇಶಕ್ಕೆ ಸೇರಿದ ಒಂದು ಪ್ರಾಂತ್ಯ. ಆ ದೇಶದ ಪೂರ್ವ ಕರಾವಳಿಗೆ ತಾಗಿ ಉ.ಅ.45°–48° ಮತ್ತು ಪ.ರೇ 63°–69° ನಡುವೆ ಇದೆ. ಉತ್ತರದಲ್ಲಿ ಕೆನಡದ ಕ್ವಿಬೆಕ್ ಪ್ರಾಂತ್ಯ, ಪಶ್ಚಿಮದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ, ಮೇನ್ ರಾಜ್ಯ, ದಕ್ಷಿಣದಲ್ಲಿ ಫಂಡೀ ಕೊಲ್ಲಿ, ಪೂರ್ವದಲ್ಲಿ ಸೆಂಟ್ ಲಾರೆನ್ಸ್ ಖಾರಿ ಇದೆ. ವಿಸ್ತೀರ್ಣ 72,908 ಚ.ಕಿಮೀ. ಜನಸಂಖ್ಯೆ 68,043 (2005). ರಾಜಧಾನಿ ಫ್ರೆಡರಿಕ್‌ಟನ್ 50,535 (2005). ಪ್ರಾಂತ್ಯದ ಅತ್ಯಂತ ದೊಡ್ಡ ನಗರ ಸೆಂಟ್ ಜಾನ್. 1,22,398(2005) ಇನ್ನೊಂದು ಮುಖ್ಯ ನಗರ ಮಾಂಕ್‌ಟನ್.

ಪ್ರಾಕೃತಿಕ ಲಕ್ಷಣಗಳು : ಪಶ್ಚಿಮದಲ್ಲಿ 820 ಮೀ. ವರೆಗೂ ಏರುವ ಶಿಖರಗಳುಳ್ಳ ಪರ್ವತಶ್ರೇಣಿ ಇದೆ. ಪಶ್ಚಿಮ ಭಾಗದಲ್ಲಿ ಸೆಂಟ್ ಜಾನ್ ಮತ್ತು ಸೆಂಟ್ ಲಾರೆನ್ಸ್, ಪೂರ್ವ ಭಾಗದಲ್ಲಿ ರೆಸ್ಟಿಗೂಷ್, ಮಿರಮಿಷೀ ಮತ್ತು ಪೆಟೀ ಕೋಡಿಯಾಕ್ ನದಿಗಳು ಮುಖ್ಯವಾದವು. ಇಲ್ಲಿಯದು ಶೀತ ವಾಯುಗುಣ. ಚಳಿಗಾಲದಲ್ಲಿ ಸರಾಸರಿ 0° ಸೆ. ಬೇಸಗೆಯಲ್ಲಿ 12° ಸೆ. ಉಷ್ಣತೆ ಇರುತ್ತದೆ. ವಾರ್ಷಿಕ ಮಳೆ ಸರಾಸರಿ 100–112 ಸೆಂಮೀ. ಹಿಮಪಾತ ಸು. 254 ಸೆಂಮೀ.

ಮಣ್ಣು ಆಮ್ಲಯುತ ಮತ್ತು ಕಲ್ಲಿನಿಂದ ಕೂಡಿದ್ದಾಗಿರುವುದರಿಂದ ಕೃಷಿಗೆ ಅನುಕೂಲವಾಗಿಲ್ಲ. ಶೇ 86ರಷ್ಟು ಪ್ರದೇಶ ಅರಣ್ಯಮಯ. ಅದನ್ನು ಇನ್ನೂ ವಿಸ್ತರಿಸಲಾಗುತ್ತಿದೆ. ಅರಣ್ಯ ಸಂಪತ್ತೇ ಪ್ರಾಂತ್ಯದ ಮುಖ್ಯ ಆರ್ಥಿಕ ಆಧಾರ. ಒಂದು ಕಾಲದಲ್ಲಿ ವಿಪುಲವಾಗಿದ್ದ ಪೀತದಾರು ವೃಕ್ಷಗಳು ಈಗ ನಶಿಸುತ್ತಿದ್ದರೂ ಈಗ ಮೇಪಲ್, ಭೂರ್ಜ, ಸ್ಪ್ರೂಸ್, ಶಂಕುಫಲಿ ಪ್ರಧಾನವಾಗಿವೆ. ಖನಿಜಸಂಪತ್ತೂ ಅಷ್ಟಿಷ್ಟಿದೆ. ನದಿಗಳು ಮೀನಿನಿಂದ ಸಮೃದ್ಧವಾಗಿದೆ. ಅರಣ್ಯಗಳಲ್ಲಿ ಹಿಂಡುಹಿಂಡಾಗಿ ಅಲೆಯುವ ಮೂಸ್ ಕಡವೆಗಳು ದೇಶವಿದೇಶಗಳಿಂದ ಬೇಟೆಗಾರರನ್ನು ಆಕರ್ಷಿಸುತ್ತವೆ.

ಜನ ಮತ್ತು ಆಡಳಿತ : ಜನಸಂಖ್ಯೆಯಲ್ಲಿ ಶೇ 40ರಷ್ಟು ಮಂದಿ ಫ್ರೆಂಚ್ ಭಾಷೆ ಆಡುವವರು. ಬಹುಸಂಖ್ಯಾತರಾದ, ಇಂಗ್ಲಿಷ್ ಭಾಷೆ ಆಡುವ ಜನರ ಪೈಕಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಬ್ರಿಟಿಷರಿಂದ ಸ್ವತಂತ್ರವಾದ ಮೇಲೆ ಅಲ್ಲಿಂದ ಬಂದು ನೆಲೆಸಿದ ರಾಜಭಕ್ತರ ವಂಶಜರೂ ಐರಿಷ್ ಮತ್ತು ಸ್ಕಾಟ್ ಮೂಲದವರೂ ಇದ್ದಾರೆ. ಇತ್ತೀಚೆಗೆ ಡೆನ್ಮಾರ್ಕ್ ಮತ್ತು ಹಾಲೆಂಡಿನಿಂದ ಬಂದವರೂ 4,000 ಮೂಲ ನಿವಾಸಿ ಇಂಡಿಯನ್ನರೂ 5,500 ರಷ್ಟು ಕಪ್ಪುವರ್ಣೀಯರೂ ಇದ್ದಾರೆ. ಫ್ರೆಂಚ್ ಭಾಷೆ ಆಡುವವರು ತಮ್ಮ ಪ್ರತ್ಯೇಕ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದರೂ ಇತ್ತೀಚಿನವರೆಗೆ ಭಾಷಾವೈಷಮ್ಯ ಇರಲಿಲ್ಲ. ಈಗ ನೆರೆಯ ಕ್ವಿಬೆಕ್ ಪ್ರಾಂತ್ಯದಿಂದ ಫ್ರೆಂಚ್ ಪ್ರತ್ಯೇಕತಾ ಭಾವನೆ ಇಲ್ಲಿಗೂ ಹಬ್ಬಿದೆ. ತಮ್ಮ ವಿರುದ್ಧ ಪಕ್ಷಪಾತವಾಗುತ್ತಿದೆ ಎಂದು ಫ್ರೆಂಚ್ ಮಾತನಾಡುವವರು ದೂರುತ್ತಿದ್ದಾರೆ. ಅವರನ್ನು ಸಮಾಧಾನಗೊಳಿಸಲು 1960 ರಲ್ಲಿ ಮಂತ್ರಿಸಂಪುಟದಲ್ಲಿ ಅವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟು ಫ್ರೆಂಚನ್ನು ದ್ವಿತೀಯ ಭಾಷೆಯನ್ನಾಗಿ ಅಂಗೀಕರಿಸಲಾಗಿದೆ. ಜನರಲ್ಲಿ ಶೇ.51ರಷ್ಟು ಮಂದಿ ಕೆಥೊಲಿಕ್ ಕ್ರೈಸ್ತರು ಉಳಿದವರು ಪ್ರಾಟೆಸ್ಟಂಟರು.

ಬ್ರಿಟಿಷ್ ಉತ್ತರ ಅಮೆರಿಕನ್ ಕಾನೂನಿನ ಪ್ರಕಾರ ಸಂಘಟಿತವಾದ ಪ್ರಾಂತೀಯ ಆಡಳಿತದಲ್ಲಿ 15 ಜನಪದಗಳು ಮತ್ತು 6 ನಗರಗಳನ್ನು ಪ್ರತಿನಿಧಿಸುವ 58 ಸದಸ್ಯರ ಪ್ರತಿನಿಧಿ ಸಭೆಗೆ ಅಧೀನವಾಗಿ 13 ಜನರ ಮಂತ್ರಿಮಂಡಲವಿದೆ. ಶಿಕ್ಷಣ ಮೊದಲಾದ ಆಂತರಿಕ ವಿಷಯಗಳು ಪ್ರಾಂತೀಯ ಸರ್ಕಾರಕ್ಕೆ ಸೇರಿದವು. ಇತ್ತೀಚಿನ ವರ್ಷಗಳಲ್ಲಿ ಪ್ರಾಂತೀಯ ಸರ್ಕಾರದ ಅಧಿಕಾರದ ಕಕ್ಷೆ ವಿಸ್ತರಿಸುತ್ತಿದೆ. ಸಂವಿಧಾನದ ಪ್ರಕಾರ ಐದು ವರ್ಷಗಳಿಗೊಮ್ಮೆ ಚುನಾವಣೆಗಳು ನಡೆಯಬೇಕಿದ್ದರೂ ವಾಸ್ತವವಾಗಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತಿದೆ. ಕನ್ಸರ್ವೆಟಿವ್ ಮತ್ತು ಲಿಬರಲ್ ಪಕ್ಷಗಳು ಮುಖ್ಯವಾಗಿವೆ.

ಪ್ರಾಂತ್ಯದ ಆದಾಯದಲ್ಲಿ ಶೇ. 50ರಷ್ಟು ಬರುವುದು ಆಟವಾದಲ್ಲಿರುವ ಕೇಂದ್ರ ಸರ್ಕಾರದಿಂದ. ಕುಟುಂಬ ಭತ್ಯೆ, ವೃದ್ಧಾಪ್ಯ ವೇತನ, ನಿರುದ್ಯೋಗ ಭತ್ಯೆ ಮೊದಲಾದವನ್ನು ಕೇಂದ್ರವೇ ವಹಿಸುತ್ತಿದೆ. ಆದರೂ ನ್ಯೂ ಬ್ರನ್ಸ್‌ವಿಕ್ ಪ್ರಾಂತ್ಯದ ತೆರಿಗೆ ದರಗಳು ಕೆನಡದ ಇತರ ಪ್ರಾಂತ್ಯಗಳಲ್ಲಿರುವುದಕ್ಕಿಂತ ಹೆಚ್ಚು.

ಆರ್ಥಿಕ ಸ್ಥಿತಿಗತಿ : 18ನೆಯ ಶತಮಾನದಲ್ಲಿ ಬ್ರಿಟಿಷರು ನ್ಯೂ ಬ್ರನ್ಸ್‌ವಿಕ್ ಪ್ರಾಂತ್ಯವನ್ನು ಗೆದ್ದುಕೊಂಡಾಗ ಇದ್ದ ಆರ್ಥಿಕ ಆಶೋತ್ತರ ಮುಂದೆ ಉಳಿಯಲಿಲ್ಲ ಅಲ್ಲಿನ ಭೂಮಿ ಕೃಷಿಗೆ ಅನುಕೂಲವಿದ್ದುದ್ದೆ ಇದಕ್ಕೆ ಮುಖ್ಯ ಕಾರಣ. 19ನೆಯ ಶತಮಾನದಲ್ಲಿ ನೆಪೋಲಿಯನ್ ಯುದ್ಧಗಳ ಕಾಲದಲ್ಲಿ ಇಲ್ಲಿಯ ಅರಣ್ಯ ಸಂಪತ್ತು ಹೆಸರಾಂತ ಹಡಗು ಕಟ್ಟುವ ಉದ್ಯೋಗಕ್ಕೆ ಆಧಾರವಾದರೂ ಮುಂದೆ ಆರ್ಥಿಕ ಅವನತಿ ಆರಂಭವಾಯಿತು. ಪ್ರಾಂತೀಯ ಉತ್ಪಾದನೆಯಲ್ಲಿ ಶೇ. 65ರಷ್ಟು ಅರಣ್ಯಮೂಲವಾದದ್ದು. ಏಳು ದೊಡ್ಡ ಕಾಗದ ಕಾರ್ಖಾನೆಗಳು ಮತ್ತು ಅನೇಕ ಮರ ಕೊಯ್ಯುವ ಕಾರ್ಖಾನೆಗಳು ಇವೆ. ಜಲ ಮತ್ತು ಶಾಖ ವಿದ್ಯುತ್ ಉತ್ಪಾದನೆ 40 ಲಕ್ಷ ಕಿವಾ. ಕೃಷಿಕರ ಸಂಖ್ಯೆ 10ಕ್ಕಿಂತ ಕಡಿಮೆ. ಫಂಡೀ ಕೊಲ್ಲಿಯಲ್ಲಿ ಮೀನುಗಾರಿಕೆ ನಡೆಯುತ್ತದೆ. ಈಚೆಗೆ ಕೆಲವು ಲೋಹಗಳ ಗಣಿಗಾರಿಕೆ ಬೃಹತ್ತಾಗಿ ಬೆಳೆಯುತ್ತಿದೆ. ಪಟ್ಟಣವಾಸಿಗಳ ಸಂಖ್ಯೆ ಶೇ. 50ಕ್ಕೂ ಹೆಚ್ಚು.

ಸರ್ಕಾರ ಎಷ್ಟೇ ಪ್ರಯತ್ನಿಸಿದರೂ ನ್ಯೂ ಬ್ರನ್ಸ್ ವಿಕ್ ಆರ್ಥಿಕ ಅವನತಿಯ ದೆಸೆಯಿಂದ ಚೇತರಿಸುತ್ತಿಲ್ಲ. ಅದರ ತಲಾ ವರಮಾನ ಅಖಿಲ ಕೆನಡದ ಸರಾಸರಿಯ ಶೇ. 66ಕ್ಕಿಂತ ಕಡಿಮೆ ಇದೆ. ಜನನ ಪ್ರಮಾಣ ಹೆಚ್ಚಾಗಿದ್ದರೂ ಹೊರಗೆ ವಲಸೆ ಹೋಗುತ್ತಿರುವುದರಿಂದ ಜನಸಂಖ್ಯೆ ಹೆಚ್ಚುತ್ತಿಲ್ಲ. ಸರ್ಕಾರ ವಿಸ್ತಾರವಾದ ರಸ್ತೆ ಮತ್ತು ಬಂದರು ಅಭಿವೃದ್ಧಿಯಲ್ಲಿ ವಿಪುಲ ಬಂಡವಾಳ ತೊಡಗಿಸಿ ಅವನತಿಯನ್ನು ತಡೆಯಲು ಯತ್ನಿಸುತ್ತಿದೆ. ವಿಶೇಷವಾಗಿ ಅಟ್ಲಾಂಟಿಕ್ ಸಾಗರ ಕರಾವಳಿಯಲ್ಲಿ ಕೈಗೊಂಡಿರುವ ಆಳನೀರಿನ ಸೇಂಟ್ ಜಾನ್ ಸರ್ವಋತು ಬಂದರು ಸಂಕೀರ್ಣದ ಬೆಳವಣಿಗೆಯಿಂದ ಪ್ರಾಂತ್ಯದ ಆರ್ಥಿಕ ಉದ್ಧಾರಕ್ಕೆ ಚಾಲನೆ ಸಿಗಬಹುದೆಂಬ ಆಶೆಯೊಂದು ಸಾಧಾರಣವಾಗಿ ಕಾಣುತ್ತಿದೆ. ಏಕೆಂದರೆ ಉತ್ತರದ ಸೇಂಟ್‌ಲಾರೆನ್ಸ್ ಖಾರಿಯ ಬಂದರುಗಳಲ್ಲಿ ಚಳಿಗಾಲದಲ್ಲಿ ಸಮುದ್ರ ಹೆಪ್ಪುಗಟ್ಟಿರುತ್ತದೆ. ದೇಶದ ಎರಡು ಪ್ರಮುಖ ರೈಲುಮಾರ್ಗಗಳೂ ಇಲ್ಲಿ ಸಂಧಿಸುತ್ತವೆ. 1950ರಿಂದ ರಸ್ತೆ ವ್ಯವಸ್ಥೆಯನ್ನು ಆಧುನೀಕರಿಸಲಾಗುತ್ತಿದೆ. ಸೇಂಟ್ ಜಾನ್, ಮಾಂಕ್‌ಟನ್ ಮತ್ತು ಫ್ರೆಡರಿಕ್‌ಟನ್‌ನಲ್ಲಿ ದೊಡ್ಡ ವಿಮಾನ ನಿಲ್ದಾಣಗಳೂ ಉತ್ತರದಲ್ಲಿ ಆರು ಸಣ್ಣ ವಿಮಾನ ನಿಲ್ದಾಣಗಳೂ ಇವೆ. (ಎಚ್.ಜಿ.ಎ.)

**ನ್ಯೂ ಬ್ರಿಟನ್:** ನೈರುತ್ಯ ಪೆಸಿಫಿಕ್ ಸಾಗರದಲ್ಲಿ ಪಪುವ ನ್ಯೂ ಗಿನಿಯ ಬಿಸ್ಮಾರ್ಕ್ ದ್ವೀಪಸ್ತೋಮದ ಅತ್ಯಂತ ದೊಡ್ಡ ದ್ವೀಪ. ದ.ಅ. 6° ಮತ್ತು ಪೂ.ರೇ 150° ನಡುವೆ ಇದೆ. ಸು. 592 ಕಿಮೀ ಉದ್ದವಾಗಿಯೂ 80 ಕಿಮೀ ಗರಿಷ್ಠ ಅಗಲ ಉಳ್ಳದ್ದಾಗಿಯೂ ಇರುವ ಈ ದ್ವೀಪ ಅರ್ಧಚಂದ್ರಾಕೃತಿಯಲ್ಲಿದೆ. ಇದರ ಕರಾವಳಿ 1,600 ಕಿಮೀ ಉದ್ದವಾಗಿದೆ. ಇದರ ಅಂಚಿನಲ್ಲಿ ಹವಳದ ದಿಬ್ಬಗಳಿವೆ. ಇದರ ವಿಸ್ತೀರ್ಣ 36,500 ಚ.ಕಿಮೀ. ಕರಾವಳಿಯ ಬಯಲು ಕಿರಿದು. ದ್ವೀಪದ ನಡುವೆ ಇರುವ ವೈಟ್‌ಮನ್‌ನಾಕಾನಾಯ್, ಮತ್ತು ಬೇನಿಂಗ್

ಪರ್ವತಶ್ರೇಣಿಗಳ ಕಡೆಗೆ ಸಾಗಿದಂತೆ ನೆಲ ಎತ್ತರವಾವಾಗುತ್ತ ಹೋಗುತ್ತದೆ. 2,100 ಮೀ. ಗಿಂತ ಎತ್ತರವಾದ ಅನೇಕ ಶಿಖರಗಳಿವೆ. ಅತ್ಯಂತ ಪಶ್ಚಿಮದಲ್ಲಿ ಉತ್ತರ ಕರಾವಳಿಯ ಓಪನ್ ಕೊಲ್ಲಿಯ ಬಳಿಯಲ್ಲಿ ಹಾಗೂ ಈಶಾನ್ಯದ ಗಝೆಲ್ ಪರ್ಯಾಯ ದ್ವೀಪಪ್ರದೇಶದಲ್ಲಿ ಜೀವಂತ ಜ್ವಾಲಾಮುಖಿಗಳಿವೆ. ಮೌಂಟ್‌ಸಿನೆವಿಟ್ (1999 ಮೀ) ಇವುಗಳಲ್ಲಿ ಹೆಚ್ಚು ಎತ್ತರವಾದುದು. ಗಝೆಲ್ ಪರ್ಯಾಯ ದ್ವೀಪದ ಜ್ವಾಲಾಮುಖಿಗಳು ಬಳಿಯ ರಬಾವುಲ್ ಪಟ್ಟಣಕ್ಕೆ ಸದಾ ಆತಂಕಕಾರಿಗಳಾಗಿವೆ. ರಬಾವುಲ್ ಈಶಾನ್ಯ ನ್ಯೂ ಬ್ರಿಟನ್ನಿನ ಪ್ರಮುಖ ರೇವುಪಟ್ಟಣ ಹಾಗೂ ಪೂರ್ವ ನ್ಯೂ ಬ್ರಿಟನ್ ಜಿಲ್ಲೆಯ ಆಡಳಿತ ಕೇಂದ್ರ. ನ್ಯೂ ಬ್ರಿಟನ್ನಿನದು ಸಮಭಾಜಕ ವೃತ್ತವಲಯದ ವಾಯುಗುಣವಾಗಿದೆ. ಇದರ ಒಟ್ಟು ಜನಸಂಖ್ಯೆ 3,11,955. ತೆಂಗು, ಕೋಕೋ ಮತ್ತು ಅರಣ್ಯ ವಸ್ತುಗಳು ಉತ್ಪಾದಿಸಲ್ಪಡುವ ಮುಖ್ಯ ¥ÀæzÉñÀUÀ¼Á (ಜೆ.ಎಸ್.ಎಸ್.)

**ನ್ಯೂ ಮೆಕ್ಸಿಕೊ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ನೈಋತ್ಯ ರಾಜ್ಯವಾಗಿದ್ದು ಸಂಪೂರ್ಣವಾಗಿ ಆಯತಾಕಾರದಲ್ಲಿದೆ. ಉತ್ತರಕ್ಕೆ ಕೊಲರಾಡೊ, ಪೂರ್ವಕ್ಕೆ ಓಕ್ಲಹೋಮ ಮತ್ತು ಟೆಕ್ಸಾಸ್ ರಾಜ್ಯಗಳೂ ದಕ್ಷಿಣಕ್ಕೆ ಟೆಕ್ಸಾಸ್ ರಾಜ್ಯ ಮತ್ತು ಮೆಕ್ಸಿಕೋ ದೇಶವೂ ಪಶ್ಚಿಮಕ್ಕೆ ಆರಿಜೋನ ರಾಜ್ಯವೂ ಇವೆ. ಉ.ಅ. $31^0\ 20'$–$37^0$ ಮತ್ತು ಪೂ.ರೇ $103^0$–$109^0$ ನಡುವೆ ಹಬ್ಬಿರುವ ಈ ರಾಜ್ಯದ ವಿಸ್ತೀರ್ಣ 3,14,925 ಚ.ಕಿಮೀ. ಇದು ಪಶ್ಚಿಮದಿಂದ ಪೂರ್ವಕ್ಕೆ 565 ಕಿಮೀ ಅಗಲ ಹಾಗೂ ದಕ್ಷಿಣದಿಂದ ಉತ್ತರಕ್ಕೆ 629 ಕಿಮೀ ಉದ್ದವಾಗಿರುವುದು. ಇದು ಅಮೆರಿಕ ಸಂಯುಕ್ತ ಸಂಸ್ಥಾನದ ಐದನೆಯ ಅತಿದೊಡ್ಡ ರಾಜ್ಯ. ನೈಋತ್ಯದಲ್ಲಿರುವ ಬಾಣಲೆ ಹಿಡಿಯಂಥ ಭಾಗವನ್ನು ಬಿಟ್ಟರೆ ಇದು ಆಯಾಕಾರವಾಗಿದೆ. ಜನಸಂಖ್ಯೆ 19,03,289 (2004). ರಾಜಧಾನಿ ಸಾಂತಫೇ. ಜನಸಂಖ್ಯೆ 29,282 (2000). ಈ ರಾಜ್ಯವು ಶ್ರೀಮಂತವಾದ ಮೂಲ ಅಮೆರಿಕನ್ನರ ಸಂಸ್ಕೃತಿಯಿಂದ ಕೂಡಿದೆ. ಇದರಿಂದಾಗಿ ಈ ರಾಜ್ಯ ಅಮೆರಿಕದ ಇತರ ರಾಜ್ಯಗಳಿಗಿಂತ ಭಿನ್ನವಾಗಿದೆ.

ಭೂಸ್ವರೂಪ: ನ್ಯೂ ಮೆಕ್ಸಿಕೊ ರಾಜ್ಯವು ಮಟ್ಟಸವಾದ ಮೈದಾನ ಹಾಗೂ ಪರ್ವತಮಯವಾದ ಪ್ರದೇಶದಿಂದ ಕೂಡಿದೆ. ಕೆಲವು ಭಾಗಗಳಲ್ಲಿ ಎಲೆಮೊನಚಾದ ಅರಣ್ಯ, ಸಮೃದ್ಧ ಹುಲ್ಲುಗಾವಲು, ಮತ್ತು ಮೀನು ತುಂಬಿರುವ ಪರ್ವತ–ತೊರೆಗಳು ಇದ್ದರೆ, ಇನ್ನು ಕೆಲವು ಭಾಗಗಳಲ್ಲಿ ನೀರೇ ಇಲ್ಲದೆ, ಪಾಪಾಸುಕಳ್ಳಿ ಸಹ ಬೆಳೆಯುವುದು ಕಷ್ಟ. ರಾಜ್ಯದ ಪೂರ್ವದ ಮೂರನೆಯ ಒಂದು ಭಾಗ ಅಮೆರಿಕ ಸಂಯುಕ್ತ ಸಂಸ್ಥಾನದ ಮಹಾ ಮೈದಾನದ ವಿಸ್ತರಣವಾಗಿದ್ದು ಇದನ್ನು ಲ್ಲಾನೋ ಎಸ್ಟ್ಯಾಕ್ಯಾಡೋ ಎಂದು ಕರೆಯುವರು. ಮಧ್ಯದ ಮೂರನೆಯ ಒಂದು ಭಾಗ ಉತ್ತರದಕ್ಷಿಣವಾಗಿ ಹಬ್ಬಿರುವ ರಾಕಿ ಪರ್ವತದ ಮುಂದುವರಿದ ಭಾಗವಾಗಿದೆ. ಪಶ್ಚಿಮದ ಮೂರನೆಯ ಒಂದು ಭಾಗ ಎತ್ತರವಾದ ಪ್ರಸ್ಥಭೂಮಿ. ಇಲ್ಲಿ ಎತ್ತರವಾದ ಶ್ರೇಣಿಗಳು ನಡುವೆ ಕಣಿವೆಗಳೂ ಇವೆ. ಇದು ಅನೇಕ ಚಿಕ್ಕ ಶ್ರೇಣಿಗಳನ್ನೂ ಮೈದಾನಗಳನ್ನೂ ಒಳಗೊಂಡಿದೆ. ರಾಜ್ಯದ ಶೇ. 85ರಷ್ಟು ಪ್ರದೇಶ 1200 ಮೀ ಗಳಿಗೂ ಹೆಚ್ಚು ಎತ್ತರವಾಗಿದೆ. ಎತ್ತರ ವಾಯವ್ಯದಲ್ಲಿ 1,500 ಮೀ ನಿಂದ 2,500 ಮೀ ಆಗ್ನೇಯ 1,200 ಮೀ ಗಳಿಗೂ ಕಡಿಮೆ. ರಾಜ್ಯದ ಉತ್ತರ ಮಧ್ಯದಲ್ಲಿರುವ ರಾಕೀ ಪರ್ವತಶ್ರೇಣಿಯಾದ ಸ್ಯಾಂಗ್ರೀಡ ಕ್ರಿಸ್ಟೋದಲ್ಲಿರುವ ವೀಲರ್ (4,011ಮೀ) ಮತ್ತು ಟ್ರೂಚಸ್ (3,993 ಮೀ) ಅತ್ಯುನ್ನತ ಶಿಖರಗಳು. ಶ್ರೇಣಿಗಳ ಮಧ್ಯದಲ್ಲಿರುವ ಅಸಂಖ್ಯ ಕಣಿವೆಗಳು ಕೃಷಿಗೂ ದನಗಳ ಮೇವಿಗೂ ಉಪಯುಕ್ತವಾಗಿವೆ.

ನದಿಗಳು : ಈ ರಾಜ್ಯ ಐದು ನದಿಗಳನ್ನು ಹೊಂದಿದೆ. ಇವುಗಳೆಂದರೆ ರಯೋಗ್ರಾಂಡೆ, ಪಿಕೋಸ್, ಕೆನಾಡಿಯನ್, ಸಾನ್‌ಜವಾನ್ ಮತ್ತು ಗಿಲಾ. ನ್ಯೂ ಮೆಕ್ಸಿಕೊದ ಮುಖ್ಯ ನದಿಗಳ ಪೈಕಿ ರೀಯೊ ಗ್ರ್ಯಾಂಡೆ ಕೊಲರಾಡೊದಲ್ಲಿ ಉಗಮಿಸುತ್ತದೆ. ಇದು ರಾಜ್ಯವನ್ನು ಸಮಭಾಗಿಸಿ, ಉತ್ತರದಿಂದ ದಕ್ಷಿಣಕ್ಕೆ ಹರಿದು ಮೆಕ್ಸಿಕೊ ಕೊಲ್ಲಿಯನ್ನು ಸೇರುತ್ತದೆ. ರಾಜ್ಯದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿರುವ ನದಿ ಇದು. ಇದರ ಪೂರ್ವಕ್ಕೆ ಸಮಾನಾಂತರದಲ್ಲಿ ಹರಿಯುವ ನದಿ ಪಿಕೋಸ್. ಇನ್ನೊಂದು ನದಿ ಕನಡಿಯನ್, ಇದು ಸ್ಯಾಂಗ್ರೀಡ ಕ್ರಿಸ್ಟೋದಲ್ಲಿ ಹುಟ್ಟಿ ಪೂರ್ವದತ್ತ ಶುಷ್ಕ ಮೈದಾನದಲ್ಲಿ ಹರಿಯುತ್ತದೆ. ಸ್ಯಾನ್‌ಜುವಾನ್ ಮತ್ತು ಗಿಲಾ ನದಿಗಳು ಜಲವಿಭಾಗ ರೇಖೆಯ ಪಶ್ಚಿಮದ ಕಡೆಯಲ್ಲಿ ವಾಯವ್ಯ ಮತ್ತು ನೈಋತ್ಯ ಭಾಗಗಳಲ್ಲಿ ಹರಿಯುತ್ತವೆ. ಗಿಲಾ ನದಿಯನ್ನು ಬಿಟ್ಟು ಉಳಿದವಕ್ಕೆ ನ್ಯೂ ಮೆಕ್ಸಿಕೊದಲ್ಲಿ ಕಟ್ಟೆಗಳನ್ನು ನಿರ್ಮಿಸಿ ಅವುಗಳ ನೀರನ್ನು ವ್ಯವಸಾಯಕ್ಕೆ ಬಳಸಲಾಗುತ್ತಿದೆ. ಜಲಾಶಯಗಳು ಪ್ರವಾಸಿ ಕೇಂದ್ರಗಳೂ ಸಹ ಆಗಿವೆ. ಈ ಅಣೆಕಟ್ಟೆಗಳು ಪ್ರವಾಹನಿಯಂತ್ರಣಕ್ಕೆ ಸಹಾಯಕವಾಗಿವೆ.

ವಾಯುಗುಣ: ರಾಜ್ಯದ ವಾರ್ಷಿಕ ಸರಾಸರಿ ಉಷ್ಣತೆ $12^0$ ಸೆ. ಗರಿಷ್ಠ ಮತ್ತು ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ $43^0$ ಸೆ. ಮತ್ತು–$2^0$ ಸೆ. ಭೂ ಪ್ರದೇಶದ ಎತ್ತರಕ್ಕೆ ಅನುಗುಣವಾಗಿ ಉಷ್ಣತೆಯಲ್ಲಿ ವ್ಯತ್ಯಾಸ ಅಧಿಕ. ರಾತ್ರಿಯ ಉಷ್ಣತೆ ಹಗಲಿನದಕ್ಕಿಂತ ಬಹಳ ಕಡಿಮೆ ಇರುತ್ತದೆ. ವಾರ್ಷಿಕ ಸರಾಸರಿ ಮಳೆ 38 ಸೆಂಮೀ. ಎತ್ತರ ಹೆಚ್ಚಿದಂತೆ ಹೆಚ್ಚು ಮಳೆ ಬೀಳುತ್ತದೆ. ಉನ್ನತ ಪರ್ವತಶ್ರೇಣಿಪ್ರದೇಶದಲ್ಲಿ ಸು. 100 ಸೆಂಮೀ ಮತ್ತು ತಗ್ಗಿನ ನೆಲದಲ್ಲಿ 20–25 ಸೆಂಮೀ ಮಳೆಯಾಗುತ್ತದೆ. ಸಾಮಾನ್ಯವಾಗಿ ಅತಿ ಹೆಚ್ಚು ಮಳೆ ಬೀಳುವುದು ರಾಜ್ಯದ ಪೂರ್ವದ ಕಡೆಯಲ್ಲಿ.

ಸಸ್ಯಸಂಪತ್ತು: ರಾಜ್ಯದಲ್ಲಿ ಆರು ಸಸ್ಯವಲಯಗಳಿವೆ. ರಿಯೊ ಗ್ರ್ಯಾಂಡೆ ಮತ್ತು ಪೇಕಸ್ ನದಿಗಳ ದಕ್ಷಿಣ ಪ್ರದೇಶ ಮತ್ತು ಸೋನೋರನ್ ಕೆಳವಲಯ ಸಾಮಾನ್ಯವಾಗಿ 1,400 ಮೀ ಗಳಿಗಿಂತ ಕಡಿಮೆ ಎತ್ತರವಾಗಿದೆ. ಸು. 52,000 ಚ.ಕಿಮೀ ವಿಸ್ತಾರವಾಗಿರುವ ಈ ಮೈದಾನ ಹುಲ್ಲುನೆಲ, ವ್ಯವಸಾಯ ಭೂಮಿ. ಇಲ್ಲಿ ನೀರಾವರಿ ಸೌಲಭ್ಯವುಂಟು. ಮೇಲಣ ಸೋನೋರನ್ ಪ್ರದೇಶ ಇಡೀ ರಾಜ್ಯದ ಮುಕ್ಕಾಲು ಭಾಗವನ್ನಾವರಿಸಿದೆ. 1,400 ಮೀ ಗಳಿಗಿಂತ ಎತ್ತರವಾಗಿರುವ ಇದು ಪ್ರೈರಿಪ್ರದೇಶ. ಇಲ್ಲಿ ಕುಬ್ಜವಾದ ಪೈನ್ ಮತ್ತು ಜೂನಿಪರ್ ಬೆಳೆಯುತ್ತದೆ. ಇದಕ್ಕಿಂತ ಮೇಲಿನ ವಲಯದಲ್ಲಿ ಪಾಂಡೆರೋಸ ಪೈನ್ ಸಾಮಾನ್ಯ. ಇದು ಸು. 49,000 ಚ.ಕಿಮೀ ವಿಸ್ತಾರವಾಗಿದೆ. ಕನಡಿಯನ್ ನದಿ ವಲಯದ ಸು. 10,000 ಚ.ಕಿಮೀ ಪ್ರದೇಶ 3,000 ಮೀ 3,500 ಮೀ ಎತ್ತರವಾಗಿದೆ. ಇಲ್ಲಿ ನೀಲಿ ಸ್ಪ್ರೂಸ್ ಮತ್ತು ಡೊಗ್ಲಾಸ್ ಫರ್ ಬೆಳೆಯುತ್ತವೆ. ಇದಕ್ಕಿಂತ ಎತ್ತರವಾದ ಪ್ರದೇಶ ಬಲು ಕಿರಿದು. ಇಲ್ಲಿ ಹಡ್ಸನ್ ಮತ್ತು ಆರ್ಕ್‌ಟಿಕ್ ವಲಯ ಪ್ರಕಾರ ಸಸ್ಯವಿದೆ.

ಪ್ರಾಣಿಸಂಪತ್ತು: ಎತ್ತರ ಹಾಗೂ ಸಸ್ಯವೈವಿಧ್ಯದಿಂದಾಗಿ ಪ್ರಾಣಿವರ್ಗದಲ್ಲೂ ವೈವಿಧ್ಯವಿದೆ. ಹಲವಾರು ವನ್ಯಮೃಗಗಳು ಇಲ್ಲಿ ನಾಗರಿಕತೆಗೆ ಬಲಿಯಾಗದೆ ಉಳಿದುಕೊಂಡು ಬಂದಿವೆ. ಚಿಗರೆ, ಜಿಂಕೆ, ಕಡವೆ, ಕರಿಕರಡಿ, ಮೊಲ ಮತ್ತು ಇಣಚಿ ಇವು ವನ್ಯಮೃಗಗಳು. ಸ್ಕಂಕ್, ರ್‍ಯಾಕೂನ್, ಬೂದುಬಣ್ಣದ ನರಿ, ಬೀವರ್ ಮತ್ತು ಕಸ್ತೂರಿ ಇಲಿ ಇವೂ ಇವೆ. ನದಿಗಳಲ್ಲಿ ಮೀನುಗಳುಂಟು. ಇಲ್ಲಿ ಹಲವು ಬಗೆಯ ಹಕ್ಕಿಗಳಾದ ಗ್ರೌಸ್, ಕ್ವೇಲ್, ಪಾರಿವಾಳ, ಕಪೋತ, ಹೆಬ್ಬಾತು ಇವು ಕೆಲವು. ಉತ್ತರ ಆಫ್ರಿಕದಿಂದ ತಂದ ಬಾರ್ಬರಿ ಕುರಿಯನ್ನು ಪರ್ವತ ಪ್ರದೇಶದಲ್ಲಿ ಬೆಳೆಸಲಾಗಿದೆ.

ಜನತೆ: ರಾಜ್ಯದ ನಿವಾಸಿಗಳು ಮುಖ್ಯವಾಗಿ ಆಂಗ್ಲೋಗಳು, ಆಂಗ್ಲೋ ಅಮೆರಿಕನರು ಮತ್ತು ಸ್ಪ್ಯಾನಿಷ್ ಅಮೆರಿಕನ್ನರು ಅಥವಾ ಇಂಡಿಯನ್ನರು. ನೀಗ್ರೋಗಳು ಮತ್ತು ಪ್ರಾಚ್ಯರು ಕಡಿಮೆ. ಸ್ಪ್ಯಾನಿಷ್ ಮತ್ತು ಇಂಡಿಯನ್ನರ ಮಿಶ್ರಸಂತತಿಯವರನ್ನು ಹಿಸ್ಪಾನೋ ಅಥವಾ ಸ್ಪ್ಯಾನಿಷ್ ಅಮೆರಿಕನ್ ಎಂದು ಕರೆಯುತ್ತಾರೆ. 1940ರವರೆಗೂ ಇವರು ಬಹುಸಂಖ್ಯಾತರಾಗಿದ್ದರು. ಆದರೆ 1940ರ ವೇಳೆಗೆ ಇವರು ಅಲ್ಪಸಂಖ್ಯಾತರಾಗಿ ಪರಿಣಮಿಸಿದರು. ಎರಡನೆಯ ಮಹಾಯುದ್ಧದ ಅನಂತರ ಆಂಗ್ಲೋಗಳು ಅಧಿಕಸಂಖ್ಯೆಯಲ್ಲಿ ರಾಜ್ಯವನ್ನು ಪ್ರವೇಶಿಸಿದರು. ಇಂಡಿಯನ್ನರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 10 ರಷ್ಟು ಮಾತ್ರ. ಇವರುಗಳು ನಾವಾಜೋ ಮೀಸಲು ಪ್ರದೇಶದಲ್ಲಿ ಕೇಂದ್ರೀಕೃತವಾಗಿರುವರು.

ಆರ್ಥಿಕತೆ: ಇತರ ರಾಜ್ಯಗಳೊಂದಿಗೆ ಹೋಲಿಸಿದರೆ ನ್ಯೂ ಮೆಕ್ಸಿಕೊ ಬಡರಾಜ್ಯ. ತಲಾ ವರಮಾನದ ದೃಷ್ಟಿಯಿಂದ ಈ ರಾಜ್ಯದ ಸ್ಥಾನ 44ನೆಯದು. ತಲಾವಾರು ಆದಾಯ ಕಡಿಮೆ. ಅದರ ಆರ್ಥಿಕತೆ ಅಭಿವೃದ್ಧಿಶೀಲ ದೇಶಗಳ ಆರ್ಥಿಕತೆಯನ್ನು ಹೋಲುತ್ತದೆ. ಅದು ಮುಖ್ಯವಾಗಿ ಕಚ್ಚಾ ಸಾಮಗ್ರಿಗಳನ್ನು ರಫ್ತು ಮಾಡುವ ರಾಜ್ಯವಾಗಿದೆ. ಅದರ ಸಾಮಗ್ರಿಗಳ ಬೇಡಿಕೆಗಳಲ್ಲಿ ತೀವ್ರ ಏರಿಳಿತಗಳಾಗುತ್ತಿರುತ್ತವೆ.

ಈ ಪ್ರಾಂತ್ಯ ಸ್ಪೇನ್ ಮತ್ತು ಮೆಕ್ಸಿಕೊಗಳ ಅಧೀನದಲ್ಲಿದ್ದಾಗ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದ್ದಿತು. ರಿಯೋ ಗ್ರಾಂಡೆ ನದಿಯ ಮೈದಾನದಲ್ಲಿ ಹುರುಳಿ, ಮೆಕ್ಕೆಜೋಳ, ಹತ್ತಿ ಮತ್ತು ಕುಂಬಳಕಾಯಿ ಉತ್ಪಾದಿಸುತ್ತಿತ್ತು. ಶುಷ್ಕಪ್ರದೇಶದಲ್ಲಿ ಕುರಿಸಾಕಣೆ ಪ್ರಧಾನವಾಗಿತ್ತು. ಆಂಗ್ಲೋಗಳು ಟೆಕ್ಸಾಸ್‌ನಿಂದ ದನಕರುಗಳನ್ನು ತಂದು ಪೋಷಿಸತೊಡಗಿದರು. ಈಗ ಕೃಷಿ ಉತ್ಪನ್ನಗಳಿಂದ ಬರುವ ವರಮಾನದಲ್ಲಿ ಅರ್ಧಕ್ಕಿಂತ ಹೆಚ್ಚು ಬರುವುದು ಮಾಂಸದಿಂದ. ಹತ್ತಿ ಮುಖ್ಯ ವಾಣಿಜ್ಯ ಬೆಳೆ. ಒಣಹುಲ್ಲು ಎರಡನೆಯದು. ರಾಜ್ಯದ ಪೂರ್ವಭಾಗದ ಜಮೀನಿನಲ್ಲಿ ಗೋದಿ ಮತ್ತು ಜೋಳ ಬೆಳೆಯುತ್ತದೆ. ಒಟ್ಟು 4,52,000 ಹೆ ಭೂಪ್ರದೇಶ ಸಾಗುವಳಿಗೆ ಒಳಪಟ್ಟಿದೆ. ಇದರಲ್ಲಿ ಅರ್ಧ ಭಾಗ ನೀರಾವರಿ ಸೌಲಭ್ಯವನ್ನು ಹೊಂದಿದೆ.

ಗಣಿಗಾರಿಕೆ: 19ನೆಯ ಶತಮಾನದಲ್ಲಿ ಪ್ರಾರಂಭವಾದ ಬಂಗಾರ ಮತ್ತು ಬೆಳ್ಳಿಗಳ ಉತ್ಪಾದನೆ 1915ರಲ್ಲಿ ಗರಿಷ್ಠ ಮಟ್ಟವನ್ನು ಮುಟ್ಟಿ ಅಲ್ಲಿಂದೀಚೆಗೆ ಇಳಿಮುಖವಾಗಿದೆ. ತಾಮ್ರದ ಉತ್ಪಾದನೆ ಈಗಲೂ ಗಮನಾರ್ಹವಾಗಿದೆ. ಕಲ್ಲಿದ್ದಲಿನ ಉತ್ಪಾದನೆ 1960ರ ದಶಕದಲ್ಲಿ ಆರಂಭಗೊಂಡಿತು. ಅಮೆರಿಕ ಸಂಯುಕ್ತ ಸಂಸ್ಥಾನಗಳ ಪೊಟಾಷ್ ಉತ್ಪಾದನೆಯಲ್ಲಿ ಶೇ. 85ರಷ್ಟು ಈ ರಾಜ್ಯದಲ್ಲಿ ಉತ್ಪಾದನೆಯಾಗುತ್ತದೆ. 1950ರಲ್ಲಿ ಇಲ್ಲಿ ಯುರೇನಿಯಮ್ ನಿಕ್ಷೇಪಗಳು ಪತ್ತೆಯಾದವು. ಈಗ ಅದರ ಉತ್ಪಾದನೆಯಲ್ಲಿ ಈ ರಾಜ್ಯ ಪ್ರಮುಖವಾಗಿದೆ. ಕಬ್ಬಿಣ, ಸೀಸ, ಸತುವು, ಮ್ಯಾಂಗನೀಸ್ ಮತ್ತು ಮಾಲಿಬ್ಡಿನಮ್ ಇಲ್ಲಿಯ ಇತರ ಖನಿಜಗಳು. ತೈಲ ಮತ್ತು ಅನಿಲಗಳ ಉತ್ಪನ್ನದ ವರಮಾನ ಈ ರಾಜ್ಯದ ಎಲ್ಲ ಖನಿಜಗಳ ಉತ್ಪನ್ನದ ವರಮಾನದ ಶೇ. 65ರಷ್ಟಿದೆ.

ಕೈಗಾರಿಕೆ: ಮೊದಮೊದಲು ಅನುಭೋಗ ವಸ್ತುಗಳ ತಯಾರಿಕೆಗೆ ಇಲ್ಲಿಯ ಕೈಗಾರಿಕೆಗಳು ಸೀಮಿತವಾಗಿದ್ದವು. ಎರಡನೆಯ ಮಹಾಯುದ್ಧದ ಅನಂತರ ಇಲ್ಲಿ ಕೈಗಾರಿಕೆಗಳು ವೇಗವಾಗಿ ಬೆಳೆದಿವೆ. ಕೈಗಾರಿಕೆಯ ಉತ್ಪನ್ನದ ಮೌಲ್ಯ ರಾಜ್ಯದ ಎಲ್ಲ ಉತ್ಪನ್ನಗಳ ಮೌಲ್ಯದ ಶೇ. 7ರಷ್ಟಿದೆ. ಆಹಾರ ಪರಿಷ್ಕರಣ, ಪೆಟ್ರೋಲಿಯಮ್, ಲೋಹ, ಕಟ್ಟಡ ಸಾಮಗ್ರಿ, ಇವು ಮುಖ್ಯ ಕೈಗಾರಿಕೆಗಳು. ಲಾಸ್ ಆಲಮೋಸ್‌ನ ವೈಜ್ಞಾನಿಕ ಪ್ರಯೋಗ ಶಾಲೆಯಲ್ಲಿ ಪರಮಾಣುಶಕ್ತಿಯನ್ನು ಕುರಿತ ಸಂಶೋಧನೆ ನಡೆಯುತ್ತಿದೆ. ಇದರಿಂದಾಗಿ ಯುದ್ಧೋಪಕರಣ ಎಲೆಕ್ಟ್ರಾನಿಕ್ಸ್ ಮತ್ತು ಸೂಕ್ಷ್ಮ ಸಲಕರಣೆಗಳ ಕೈಗಾರಿಕೆಗಳು ಬೆಳೆದಿವೆ.

ಪ್ರವಾಸೋದ್ಯಮ : ನ್ಯೂ ಮೆಕ್ಸಿಕೊ ರಾಜ್ಯದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಕಾರ್ಲ್ಸ್‌ಬಾದ್ ಗುಹೆಗಳು ಮುಖ್ಯ ಆಕರ್ಷಣೆ. ಇವು ಸುಣ್ಣಕಲ್ಲಿನ ಬೃಹತ್ ಅಂತರ್‌ಗುಹೆ ಇವು 411 ಮೀ ಆಳವಾಗಿವೆ. ರಾಜನ ಅರಮನೆ ಎಂದು ಕರೆಯಲಾಗುವ ಅತಿ ದೊಡ್ಡ ಗವಿಯ ಉದ್ದ 1220 ಮೀ. ಗರಿಷ್ಠ ಅಗಲ 191 ಮೀ ಇಂಡಿಯನ್ ಮತ್ತು ಹಿಸ್ಪಾನೋ ಬುಡಕಟ್ಟುಗಳ ಆಚಾರ ಸಂಸ್ಕೃತಿಗಳು, ರಾಜ್ಯ ಮತ್ತು ರಾಷ್ಟ್ರೀಯ ಉದ್ಯಾನಗಳು, ಐತಿಹಾಸಿಕ ಸ್ಥಳಗಳು, ಬೇಟೆ, ಮೀನು ಹಿಡಿಯುವುದು ಮತ್ತು ಸ್ಕೀಯಿಂಗ್ ಮುಂತಾದವು ಪ್ರವಾಸಿಗಳನ್ನು ಆಕರ್ಷಿಸುತ್ತವೆ.

ಸಾರಿಗೆ: 1880ರಲ್ಲಿ ಆಲ್ಬುಕರ್ಕ್ ಮತ್ತು ಸಾಂತ ಫೇ ವರೆಗೂ ರೈಲುಮಾರ್ಗಗಳನ್ನು ವಿಸ್ತರಿಸಿದಾಗ ನ್ಯೂ ಮೆಕ್ಸಿಕೊ ರಾಜ್ಯದ ಪ್ರತ್ಯೇಕತೆ ಕೊನೆಗೊಂಡಿತು. ಇಂದು ರೈಲ್ವೆಯ ಜಾಲವೇ ರಾಜ್ಯದಲ್ಲಿದ್ದು ಅದರ ಅಖಂಡತೆ ಸಾಧಿಸಿದೆ. ಜನಪೂರಿತ ನಗರಗಳನ್ನು ಕೂಡಿಸುವ ರಸ್ತೆಗಳಿವೆ. ಸಂಯುಕ್ತ ಸಂಸ್ಥಾನಗಳ ಮೂರು ಅಂತರರಾಜ್ಯ ರಸ್ತೆಗಳು ಇವೆ. ಪರ್ವತ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಸ್ವಲ್ಪ ಹಿಂದೆ ಬಿದ್ದಿದೆಯಾದರೂ ರಾಜ್ಯಕ್ಕೆ ಸಾಕಷ್ಟು ರಸ್ತೆಗಳಿವೆ. ದೂರದ ಸ್ಥಳಗಳಿಗೆ ವಿಮಾನ ಸೌಕರ್ಯವುಂಟು.

ಸಾಂಸ್ಕೃತಿಕ ಜೀವನ : ಇಂಡಿಯನ್, ಸ್ಪ್ಯಾನಿಷ್ ಮತ್ತು ಆಂಗ್ಲೋ ಪರಂಪರೆಗಳ ಸಮನ್ವಯವನ್ನು ಇಲ್ಲಿಯ ಸಾಹಿತ್ಯ ಹಾಗೂ ಕಲೆಯಲ್ಲಿ ಕಾಣಬಹುದು. 19ನೆಯ ಶತಮಾನದಲ್ಲಿ ಪಶುಸಂಗೋಪಕರು ಮತ್ತು ಗಣಿಗಾರರ ನಡುವಣ ಘರ್ಷಣೆಗಳು ಪ್ರಮುಖ ಸಾಂಸ್ಕೃತಿಕ ವಿಷಯಗಳಾಗಿವೆ. ಇಲ್ಲಿಯ ಸುಂದರ ನೈಸರ್ಗಿಕ ದೃಶ್ಯ ಮತ್ತು ಜನಜೀವನ ವೈವಿಧ್ಯಗಳು ಕಲಾವಿದರನ್ನು ಆಕರ್ಷಿಸಿವೆ. ಉಚ್ಚಶಿಕ್ಷಣ ಸಂಸ್ಥೆಗಳಲ್ಲಿ ಕಲೆ, ಸಂಗೀತ, ಮತ್ತು ನೃತ್ಯ ವಿಭಾಗಗಳೂ ಗ್ರಂಥಾಲಯಗಳೂ ಸಂಸ್ಕೃತಿ ಕಲೆಗಳ ಪ್ರಸಾರ ಮಾಡುತ್ತಿವೆ. 1956ರಲ್ಲಿ ಸಂಘಟಿಸಲಾದ ಸಾಂತ ಫೇ ಒಪೆರ ಯಶಸ್ವಿಯಾಗಿದೆ.

ಸ್ಥಳೀಯ ಇಂಡಿಯನರು ಸುಂದರವಾದ ಮಣ್ಣಿನ ಪಾತ್ರೆಗಳನ್ನು ಮಾಡುತ್ತಾರೆ. ಪ್ರತಿ ಗ್ರಾಮಕ್ಕೂ ಅದರ ನಿವಾಸಿಗಳ ಕೆಲಸವನ್ನು ಗುರುತಿಸುವ ವಿನ್ಯಾಸಗಳಿವೆ ನವಾಹೋ ಕಂಬಳಿಗಳು ಜಗತ್ಪ್ರಸಿದ್ಧವಾದವು. ಅನೇಕ ಇಂಡಿಯನರು ಗುಂಡಿ, ಮಣಿ, ಪಿನ್ನು, ಉಂಗುರ, ಹಾರ, ಕಿವಿಯುಂಗುರ ಮತ್ತು ನಡುಪಟ್ಟಿಗಳನ್ನು ಮಾಡಿ ಪ್ರವಾಸಿಗಳಿಗೆ ಮಾರಾಟ ಮಾಡುತ್ತಾರೆ. (ಜಿ.ಕೆ.ಯು.)

**ನ್ಯೂ ಯಾರ್ಕ್ (ನಗರ):** ನ್ಯೂ ಯಾರ್ಕ್ ರಾಜ್ಯದ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಅತ್ಯಂತ ದೊಡ್ಡ ನಗರ ಮತ್ತು ಬಂದರು, ಜನಸಂಖ್ಯೆ 18,976,457 (2001). ಇದು ದೇಶದ ಆರ್ಥಿಕ, ವಾಣಿಜ್ಯ ಮತ್ತು ಸಾಂಸ್ಕೃತಿಕ ಕೇಂದ್ರ. ಇಲ್ಲಿಯ ಮಾರುಕಟ್ಟೆಗಳು ಪ್ರಪಂಚದಲ್ಲಿ ಸರಕುಗಳ ಬೆಲೆಗಳ ಮೇಲೆ ಪ್ರಭಾವ ಬೀರುತ್ತವೆ. ಪ್ರಪಂಚದಲ್ಲಿ ಶಾಂತಿಸ್ಥಾಪನೆಯ ಹಂಬಲದ ಪ್ರತೀಕವಾದ ವಿಶ್ವಸಂಸ್ಥೆಯ ಕೇಂದ್ರ ಕಛೇರಿ ಇಲ್ಲಿದೆ. ಇದು ನ್ಯೂ ಯಾರ್ಕ್ ರಾಜ್ಯದಲ್ಲಿ ನಾಟಕ, ಸಂಗೀತ, ಕಲೆಗಳಿಗೆ ಕೇಂದ್ರವಾಗಿದೆ.

ನ್ಯೂ ಯಾರ್ಕ್ ದ್ವೀಪಗಳ ನಗರ. ಇದು ಮ್ಯಾನ್‌ಹ್ಯಾಟನ್, ಬ್ರಾಂಕ್ಸ್, ಬ್ರೂಕ್ಲಿನ್, ಕ್ವೀನ್ಸ್ ಮತ್ತು ರಿಚ್ಮಂಡ್ ಎಂಬ ಐದು ವಿಭಾಗಗಳನ್ನೊಳಗೊಂಡಿದೆ. ನಗರದ ಹೃದಯವೆನ್ನಬಹುದಾದ ಮ್ಯಾನ್‌ಹ್ಯಾಟನ್ ವಿಭಾಗ ಹಡ್ಸನ್ ಮತ್ತು ಈಸ್ಟ್ ನದಿಗಳ ಸಂಗಮದಲ್ಲಿರುವ ಮ್ಯಾನ್‌ಹ್ಯಾಟನ್ ದ್ವೀಪದ ಮೇಲಿದೆ. ರಾಜ್ಯದ ಭೂ ಭಾಗದ ಮೇಲೆ ಇರುವ ಬ್ರಾಂಕ್ಸ್ ಒಂದನ್ನು ನೀರು ಸುತ್ತುವರಿದಿಲ್ಲ. ಇದು ಮ್ಯಾನ್‌ಹ್ಯಾಟನ್ನಿನ ಈಶಾನ್ಯಕ್ಕೆ ಮತ್ತು ಕ್ವೀನ್ಸಿನ ಉತ್ತರಕ್ಕೆ ಇದೆ. ಹಾರ್ಲೆಮ್ (ಹಡ್ಸನ್ ಮತ್ತು ಈಸ್ಟ್ ನದಿಗಳನ್ನು ಕೂಡಿಸುವ, ಅನೇಕ ಸೇತುವೆಗಳಿಂದ ಕೂಡಿದ, ಸಮುದ್ರದ ಒಂದು ಇಕ್ಕಟ್ಟಾದ ತೋಳು) ಮತ್ತು ಈಸ್ಟ್ ನದಿ ಇದನ್ನು ಆ ವಿಭಾಗಗಳಿಂದ ಬೇರ್ಪಡಿಸಿದೆ. ರಿಚ್ಮಂಡ್ ವಿಭಾಗ ಸ್ಟ್ಯಾಟೆನ್ ದ್ವೀಪದ ಮೇಲಿದೆ. ನ್ಯೂಯಾರ್ಕ್‌ನಗರ ಅದೇ ಹೆಸರಿನ ರಾಜ್ಯದ ಆಗ್ನೇಯ ಭಾಗದಲ್ಲಿ ಹಡ್ಸನ್ ನದಿ ಅಟ್ಲಾಂಟಿಕ್ ಸಾಗರವನ್ನು ಸೇರುವಲ್ಲಿ ಇದೆ. ಪ್ರಾರಂಭದಲ್ಲಿ ಯುರೋಪಿನಿಂದ ಬಂದ ನೆಲಸಿಗರು ನೌಕೆಗಳಿಂದ ಇಳಿದು ಭೂ ಪ್ರದೇಶವನ್ನು ಸೇರುವುದಕ್ಕೆ ಸಹಜವಾಗಿಯೇ ಈ ಸ್ಥಳವನ್ನು ಆರಿಸಿದರು. ಏಕೆಂದರೆ ಇದಕ್ಕೆ ಸ್ಟ್ಯಾಟೆನ್ ದ್ವೀಪ ಮತ್ತು ಸ್ಯಾಂಡಿ ಹುಕ್ ಗಳಿಂದ ನೈಸರ್ಗಿಕ ರಕ್ಷಣೆ ಒದಗಿಸಿದ್ದಿತು. ಹಡ್ಸನ್ ನದಿ ಒಳನಾಡಿನಲ್ಲಿ ಹೋಗಲು ಸುಲಭವಾಗಿ ಜಲಮಾರ್ಗವನ್ನು ಒದಗಿಸುತ್ತಿದ್ದುದರಿಂದ ವ್ಯಾಪಾರದೃಷ್ಟಿಯಿಂದಲೂ ಈ ಸ್ಥಳ ಅನುಕೂಲವಾಗಿದಿತ್ತು. ಅನಂತರ ಬಂದ ವಲಸೆಗಾರರಿಗೂ ಇದು ಒಳನಾಡನ್ನು ಸೇರುವುದಕ್ಕೆ ಅನುಕೂಲಕರವಾಗಿದ್ದಿತು.

ಹಡ್ಸನ್ ನದಿಯ ಕೊರೆತದಿಂದಾಗಿ ಬಂದರು ಆಳವಾಗಿರುವುದರಿಂದ ದೊಡ್ಡ ಹಡಗುಗಳು ಕೂಡ ಹಡ್ಸನ್ ನದಿಯವರೆಗೆ ಬಂದು ನಿಲ್ಲಬಹುದಾಗಿದೆ. ಈ ಬಂದರಿನ ಮೂಲಕ ರಫ್ತಾಗುವ ಸರಕುಗಳಲ್ಲಿ ಮುಖ್ಯವಾದವು ಗೋದಿ ಮತ್ತು ಗೋದಿಹಿಟ್ಟು, ಮೋಟಾರುಗಾಡಿಗಳು, ಬಟ್ಟೆ, ಸಿದ್ಧ ಉಡುಪು, ತಂಬಾಕು, ಯಂತ್ರದ ಸಾಮಾನು, ರಾಸಾಯನಿಕ ಪದಾರ್ಥ, ಕಾಗದ ಮತ್ತು ಆಹಾರ ಪದಾರ್ಥಗಳು. ಆಮದಾಗುವ ಸರಕುಗಳಲ್ಲಿ ಮುಖ್ಯವಾದವು. ಎಣ್ಣೆ, ಸಕ್ಕರೆ, ಎಣ್ಣೆಕಾಳು, ಮರದತಿರುಳು, ಸಸ್ಯನಾರು, ಕೋಕೋ, ಕಾಫಿ, ರಬ್ಬರ್, ತಾಮ್ರ, ಚಿನ್ನ, ಬಾಳೆ ಮತ್ತು ಇತರ ಹಣ್ಣುಗಳು.

ನ್ಯೂ ಯಾರ್ಕ್ ನಗರಕ್ಕೆ ಒಳನಾಡಿನೊಡನೆ ಮತ್ತು ಬಾಹ್ಯಪ್ರಪಂಚದೊಡನೆ ಭೂ, ಜಲ ಮತ್ತು ವಾಯುಮಾರ್ಗಗಳ ಮೂಲಕ ಉತ್ತಮ ಸಂಪರ್ಕವಿದೆ. ಎರಡು ಪ್ರಮುಖ ರೈಲುಮಾರ್ಗಗಳಾದ ಪೆನ್ಸಿಲ್ವೇನಿಯ ಮತ್ತು ಗ್ರ್ಯಾಂಡ್ ಸೆಂಟ್ರಲ್ ನಿಲ್ದಾಣಗಳಿವೆ. 42 ಅಂತರರಾಜ್ಯ ಬಸ್ ಸಾರಿಗೆಗಳು ಈ ಮೂಲಕ ಹಾಯ್ದು ಹೋಗುತ್ತವೆ. ನೆಲದೊಳಗಿನ ಮಾರ್ಗಗಳ ಜಾಲ ರಿಚ್ಮಂಡಿನ ಹೊರತಾಗಿ ಉಳಿದೆಲ್ಲ ಬರೋಗಳನ್ನೂ ಮುಟ್ಟುತ್ತದೆ. ಜಲಮಾರ್ಗ, ಮತ್ತು 1,298 ಮೀ ಉದ್ದದ ತೂಗುಸೇತುವೆಯೊಂದು ರಿಚ್ಮಂಡನ್ನು ಮ್ಯಾನ್‌ಹ್ಯಾಟನ್ ಮತ್ತು ಬ್ರೂಕ್ಲಿನ್ ಗಳೊಡನೆ ಕೂಡಿಸುತ್ತವೆ. 18ಕ್ಕೂ ಹೆಚ್ಚು ಸೇತುವೆಗಳು ಮ್ಯಾನ್‌ಹ್ಯಾಟನ್ನಿಗೂ ಉಳಿದ ವಿಭಾಗಗಳಿಗೆ ಸಂಪರ್ಕ ಒದಗಿಸುತ್ತವೆ. ಹಡ್ಸನ್ ನದಿಯ ಮೇಲಿನ ಜಾರ್ಜ್ ವಾಷಿಂಗ್‌ಟನ್ ಸೇತುವೆಯಿಂದ ನ್ಯೂ ಜರ್ಸಿಯೊಡನೆ ಸಂಪರ್ಕ ಏರ್ಪಟ್ಟಿದೆ. 1883ರಲ್ಲಿ ಸಂಚಾರಕ್ಕೆ ತೆರೆಯಲಾದ ಬ್ರೂಕ್ಲಿನ್ ಸೇತುವೆ ಅತ್ಯಂತ ಹಳೆಯದು. ಹಡ್ಸನ್ ಮತ್ತು ಈಸ್ಟ್ ನದಿಗಳ ಕೆಳಗೆ 5 ಸುರಂಗಮಾರ್ಗಗಳಿವೆ. ಡ್ಯೂಯಿ ಹೆದ್ದಾರಿ ಪೆನ್ಸಿಲ್ವೇನಿಯ ಗಡಿಯವರೆಗೂ ಹೋಗಿದೆ. ಸೇಂಟ್ ಜಾರ್ಜ್ ಕಾಲುವೆ ವ್ಯವಸ್ಥೆ 1,280 ಕಿ.ಮೀ ಉದ್ದವಿದೆ. ಇದರಿಂದ ನಗರಕ್ಕೆ ಸೇಂಟ್‌ಲಾರೆನ್ಸ್ ಸಮುದ್ರ ಮಾರ್ಗದೊಂದಿಗೂ ಮಹಾಸರೋವರಗಳೊಂದಿಗೂ ಸಂಪರ್ಕಏರ್ಪಟ್ಟಿದೆ.

ನ್ಯೂಯಾರ್ಕ್ ನಗರದ ಗಗನ ಚುಂಬಿ ಕಟ್ಟಡಗಳು

ಕೆನಡಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ರಾಷ್ಟ್ರದ ವಿಮಾನ ಸಾರಿಗೆಯ ಶೇ. 50 ರಷ್ಟನ್ನು ನಿರ್ವಹಿಸುತ್ತದೆ. ವಿಮಾನದ ಮೂಲಕ ರಫ್ತು ಮತ್ತು ಆಮದಾಗುವ ಸರಕಿನ ಶೇ.53ರಷ್ಟು ಈ ಮೂಲಕ ಸಾಗುತ್ತದೆ. ಪ್ರತಿ ವರ್ಷ ಸುಮಾರು ಒಂದೂವರೆ ಕೋಟಿ ಪ್ರವಾಸಿಗರು ಇಲ್ಲಿಂದ ಪ್ರವಾಸಮಾಡುವರೆಂದು ಊಹಿಸಲಾಗಿದೆ. 58 ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಸಂಸ್ಥೆಗಳ ವಿಮಾನಗಳು ಈ ನಿಲ್ದಾಣವನ್ನು ಉಪಯೋಗಿಸುತ್ತವೆ. ಲಾ ಗಾರ್ಡಿಯ ವಿಮಾನ ನಿಲ್ದಾಣವನ್ನು 11 ದೇಶೀಯ ವಿಮಾನ ಸಾರಿಗೆ ವ್ಯವಸ್ಥೆಗಳು ಉಪಯೋಗಿಸುತ್ತವೆ. ನಗರದಲ್ಲಿ 5 ಹೆಲಿಕಾಪ್ಟರ್ ನಿಲ್ದಾಣಗಳೂ ಉಂಟು.

ಇದು ಮಹಾನಗರ. ಪ್ರಪಂಚದ ಎಲ್ಲ ಭಾಗಗಳ ಜನರೂ ಇದರಲ್ಲಿ ಸೇರಿದ್ದಾರೆ. ಭಿನ್ನ ಭಿನ್ನ ಮತೀಯರೂ ಇದ್ದಾರೆ. 20,00,000 ಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಯಹೂದ್ಯರು ಬ್ರೂಕ್ಲಿನ್ ಮತ್ತು ಬ್ರಾಂಕ್ಸ್ ಬರೋಗಳಲ್ಲಿ ಕೇಂದ್ರೀಕೃತರಾಗಿದ್ದಾರೆ. 10,00,000 ಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ನೀಗ್ರೋ ಜನರಲ್ಲಿ 3,50,000 ದಷ್ಟು ಮಂದಿ ಹಾರ್ಲೆಮ್‌ನ ಪ್ರದೇಶದಲ್ಲೂ ಉಳಿದವರು ಬೆಡ್ ಫರ್ಡ್–ಸ್ಟಿವ್ ಸಾಂಟ್(ಬ್ರೂಕ್ಲಿನ್) ಮತ್ತು ಆಗ್ನೇಯ ಬ್ರಾಂಕ್ಸ್‌ನಲ್ಲೂ ವಾಸವಾಗಿದ್ದಾರೆ. ಪೂರ್ವ ಹಾರ್ಲೆಮ್‌ನಲ್ಲಿ ಸುಮಾರು 10,00,000 ಐರಿಷ್ ಹಾಗೂ 6,00,000 ಪ್ಯೆರ್ಟೋರಿಕನ್ ಮೂಲದವರು ಇದ್ದಾರೆ. ಸ್ಥಳದ ಅಭಾವದಿಂದಾಗಿ ನಗರ ಎತ್ತರಕ್ಕೆ ಅಂದರೆ ಬಹು ಮಹಡಿ ಕಟ್ಟಡಗಳಿಗೆ ಹೆಸರುವಾಸಿ.

ನ್ಯೂ ಯಾರ್ಕ್‌ನಲ್ಲಿ ತುಪ್ಪಳದ ಉಡುಪುಗಳೂ ಸೇರಿದಂತೆ ಮುಖ್ಯವಾಗಿ ಬಳಕೆಯ ಸರಕುಗಳು ತಯಾರಾಗುತ್ತವೆ. ಅಮೆರಿಕದಲ್ಲಿ ತಯಾರಾಗುವ ಉಡುಪುಗಳಲ್ಲಿ ಶೇ. 25.3 ರಷ್ಟು ಅಮೆರಿಕದ ಮುದ್ರಣ ಹಾಗೂ ಪ್ರಕಾಶನದಲ್ಲಿ ಶೇ.18.2 ರಷ್ಟು, ಚರ್ಮ ಮತ್ತು ಚರ್ಮದ ವಸ್ತುಗಳಲ್ಲಿ ಶೇ. 10ರಷ್ಟು, ಆಭರಣ, ಗೊಂಬೆ ಮುಂತಾದ ವಿವಿಧ ಸರಕುಗಳಲ್ಲಿ ಶೇ. 7 ರಷ್ಟು ಜೋಡಿಸಿದ ಲೋಹವಸ್ತು ಮತ್ತು ವಿದ್ಯುತ್ತಿನ ಉಪಕರಣಗಳಲ್ಲಿ ಶೇ.4.6ರಷ್ಟು ಜವಳಿಯಲ್ಲಿ ಶೇ. 4.3 ರಷ್ಟು ಮತ್ತು ಆಹಾರ ಪದಾರ್ಥಗಳಲ್ಲಿ ಶೇ. 3.2 ರಷ್ಟು ಇಲ್ಲಿ ತಯಾರಾಗುತ್ತವೆ. ಕೈಗಾರಿಕೆ, ಔದ್ಯೋಗಿಕ ಸಂಸ್ಥೆಗಳು, ಬ್ರಾಂಕ್ಸ್, ಕ್ವೀನ್ಸ್, ರಿಚ್ಮಂಡ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚಾಗಿವೆ. ಹೆಚ್ಚು ರಾಸಾಯನಿಕ ಮತ್ತು ಎಣ್ಣೆ ಶುದ್ಧೀಕರಣ ಕಾರ್ಖಾನೆಗಳು ನ್ಯೂ ಜರ್ಸಿಯಲ್ಲಿವೆ. ಮಧ್ಯ ಮ್ಯಾನ್‌ಹ್ಯಾಟನ್ ಪ್ರದೇಶದಲ್ಲಿ ಉಡುಪಿನ ಕಾರ್ಖಾನೆಗಳು ಅಧಿಕವಾಗಿವೆ. ಮುದ್ರಣ ಮತ್ತು ಪ್ರಕಾಶನ ಸಂಸ್ಥೆಗಳೂ ಇಲ್ಲಿಯೇ ಹೆಚ್ಚಾಗಿವೆ. ಮನೋರಂಜನೆಗೆ ಬ್ರಾಡ್‌ವೇ, ಜಾಹೀರಾತಿಗೆ ಮ್ಯಾಡಿಸನ್ ಅವೆನ್ಯೂ ಹೆಸರಾಗಿವೆ.

ಸ್ಟಾಕು ವಿನಿಮಯ ಕೇಂದ್ರವಿರುವ ವಾಲ್‌ಸ್ಟ್ರೀಟ್ ಪ್ರಪಂಚದ ಅತ್ಯಂತ ದೊಡ್ಡ ಹಣಕಾಸು ಕೇಂದ್ರ, ನ್ಯೂ ಯಾರ್ಕ್, ನ್ಯೂ ಜರ್ಸಿ ಮತ್ತು ನೈಋತ್ಯ ಕನೆಕ್ಟಿಕಟ್ ಪ್ರದೇಶಗಳಿಗೆ ಇದು ಸಗಟು ಮತ್ತು ಚಿಲ್ಲರೆ ವ್ಯವಹಾರಕೇಂದ್ರ. 35 ವಾಣಿಜ್ಯ ಬ್ಯಾಂಕುಗಳು, 43 ಉಳಿತಾಯ ಬ್ಯಾಂಕುಗಳು, ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ವಿಶ್ವ ವಾಣಿಜ್ಯ ಕೇಂದ್ರದ ಕಟ್ಟಡವು ಇಲ್ಲಿದ್ದಿತು. ಇದನ್ನು ಸೆಪ್ಟೆಂಬರ್ 11, 2000. ಭಯೋತ್ಪಾದಕರು ಸ್ಫೋಟಿಸಿ ಧ್ವಂಸಗೊಳಿಸಿದರು.

ನ್ಯೂ ಯಾರ್ಕ್ ನಗರದಲ್ಲಿ ಪ್ರೇಕ್ಷಣೀಯ ಸ್ಥಳಗಳು, ಕಟ್ಟಡಗಳು, ನಿವೇಶನಗಳು ಹಲವಾರಿವೆ. 45.8 ಮೀ ಎತ್ತರ ಇರುವ ಪೀಠದ ಮೇಲೆ ನಿಂತ 46.4 ಮೀ ಎತ್ತರದ ಸ್ವಾತಂತ್ರ್ಯ ಪ್ರತಿಮೆ. 102 ಅಂತಸ್ತುಗಳಿರುವ 381 ಮೀ ಎತ್ತರದ ಕಟ್ಟಡವಾದ ಎಂಪೈರ್ ಸ್ಟೇಟ್ ಭವನ, ಸೆಂಟ್ರಲ್ ಪಾರ್ಕ್, ಬ್ರಾಂಕ್ಸ್ ಪ್ರಾಣಿಸಂಗ್ರಹಾಲಯ, ಸಸ್ಯೋದ್ಯಾನ, ಪ್ರಾಣಿ ವಿಜ್ಞಾನದ ಅಮೆರಿಕನ್ ಮ್ಯೂಸಿಯಂ ಇವು ನೋಡ ತಕ್ಕಂಥವು. ನಾಟಕ ಸಂಗೀತ ಕಲೆಗಳಿಗೂ ನ್ಯೂ ಯಾರ್ಕ್ ಪ್ರಸಿದ್ಧವಾಗಿದೆ. (ಜಿ.ಕೆ.ಯು.)

**ನ್ಯೂ ಯಾರ್ಕ್ (ರಾಜ್ಯ):** ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ರಾಜ್ಯ; ಅದನ್ನು ಮೊದಲು ಸೇರಿದ 13 ರಾಜ್ಯಗಳ ಪೈಕಿ ಒಂದು, ಉ.ಅ. $40^0 31'$–$45^0$ ಮತ್ತು ಪ.ರೇ. $1^0 1'$–$79^0 46'$ ನಡುವೆ ಇದೆ. ರಾಜ್ಯದ ವಾಯವ್ಯದಲ್ಲಿ ಆಂಟೇರಿಯೊ ಸರೋವರ ಮತ್ತು ಕೆನಡದ ಆಂಟೇರಿಯೋ ಪ್ರಾಂತ್ಯ, ಉತ್ತರದಲ್ಲಿ ಕೆನಡದ ಕ್ವಿಬೆಕ್ ಪ್ರಾಂತ್ಯ, ಪೂರ್ವದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ವರ್ಮಾಂಟ್, ಮೆಸಾಚುಸೆಟ್ಸ್ ಮತ್ತು ಕನೆಕ್ಟಿಕಟ್ ರಾಜ್ಯಗಳು, ಆಗ್ನೇಯದಲ್ಲಿ ಅಟ್ಲಾಂಟಿಕ್ ಸಾಗರ, ದಕ್ಷಿಣದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ನ್ಯೂ ಜರ್ಸಿ ಮತ್ತು ಪೆನ್ಸಿಲ್ವೇನಿಯ ರಾಜ್ಯಗಳು ಮತ್ತು ಪಶ್ಚಿಮದಲ್ಲಿ ಈರೀ ಸರೋವರ ಮತ್ತು ನಯಾಗರ ನದಿ ಇವೆ. ಇದರ ವಿಸ್ತೀರ್ಣ 141299 ಚ.ಕಿಮೀ. ಜನಸಂಖ್ಯೆ 19,22,7088 (2005). ರಾಜಧಾನಿ ಆಲ್ಬನೀ (93919).

ಮೇಲ್ಮೈಲಕ್ಷಣ : ಇದರ ಮೇಲ್ಮೈಲಕ್ಷಣ ವೈವಿಧ್ಯಮಯವಾಗಿದೆ. ಪ್ರಪಂಚದ ಉತ್ತಮವಾದ ಬಂದರು ಇರುವ ಸಾಗರತೀರ, ಪರ್ವತಗಳು, ಗುಡ್ಡಗಳು, ಮೈದಾನ ಬಹು ದೂರ ನೌಕಾಯಾನ ಯೋಗ್ಯವಾದ ನದಿಗಳು, ಅನೇಕ ಚಿಕ್ಕದೊಡ್ಡ ಸರೋವರಗಳು, ಜಲಪಾತಗಳು ಎಲ್ಲವೂ ಇಲ್ಲಿವೆ. ಈ ಪ್ರಾಂತ್ಯದ ಭೂಸ್ವರೂಪಗಳನ್ನು ಎಂಟುಭಾಗಗಳಾಗಿ ವಿಂಗಡಿಸಬಹುದು. ಇವುಗಳೆಂದರೆ, 1) ಈಶಾನ್ಯದಲ್ಲಿ ವರ್ತುಲಾಕಾರದ ಆಡಿರೋನ್‌ಡ್ಯಾಕ್ ಉನ್ನತ ಭೂಭಾಗವಿರುವುದು. ಮೌಂಟ್ ಮಾರ್ಸಿ (1,629 ಮೀ) ಇದರ ಅತ್ಯುನ್ನತ ಶಿಖರ. ಇದು ಈ ಪ್ರಾಂತ್ಯದಲ್ಲಿ ಅತಿಹೆಚ್ಚು ಎತ್ತರವಾದುದು. 2) ಮೋಹಾಕ್ ಮತ್ತು ಹಡ್ಸನ್ ನದಿಗಳ ಕಣಿವೆ ಪ್ರದೇಶದ ತಗ್ಗಿನ ಮೈದಾನ. 3) ಹಡ್ಸನ್ ನದಿಯ ಪೂರ್ವಕ್ಕೆ ನ್ಯೂ ಇಂಗ್ಲೆಂಡ್ ಉನ್ನತ ಭಾಗವಿರುವುದು. ಇದು ಪೂರ್ವದಲ್ಲಿ ಮೆಸಾಚುಸೆಟ್ಸ್ ಮತ್ತು ಕನೆಕ್ಟಿಕಟ್ ರಾಜ್ಯಗಳಿಗೂ ದಕ್ಷಿಣದಲ್ಲಿ ಪೆನ್ಸಿಲ್ವೇನಿಯಕ್ಕೂ ಹಬ್ಬಿದೆ. 4) ಸೇಂಟ್‌ಲಾರೆನ್ಸ್ ತಗ್ಗು ಪ್ರದೇಶವು ಆಂಟೇರಿಯೊ ಸರೋವರದಿಂದ ಕೆನಡದ ಗಡಿಯುದ್ದಕ್ಕೂ ಈಶಾನ್ಯಾಭಿಮುಖವಾಗಿ ಸಾಗಿರುವ ಮೈದಾನವಾಗಿದೆ. 5) ನ್ಯೂ ಯಾರ್ಕ್ ರಾಜ್ಯದ ಆಗ್ನೇಯ ಭಾಗದಲ್ಲಿ ಅಟ್ಲಾಂಟಿಕ್ ಕರಾವಳಿ ಮೈದಾನ ಮೆಸಾಚುಸೆಟ್ಸ್‌ನಿಂದ ದಕ್ಷಿಣಾಭಿಮುಖವಾಗಿ ಮುಂದುವರಿದಿದ್ದು ಇದು ಲಾಂಗ್ ಮತ್ತು ಸ್ಟ್ಯಾಟನ್ ದ್ವೀಪಗಳನ್ನೂ ಒಳಗೊಂಡಿದೆ. ಹಡ್ಸನ್ ನದಿಯ ಪಶ್ಚಿಮ ದಡದಲ್ಲಿ ಕಿರು ಅಗಲದ ಪೀಡ್ಮಾಂಟ್ ಉನ್ನತ ಪ್ರದೇಶ ಹಬ್ಬಿದೆ. 6) ನ್ಯೂ ಯಾರ್ಕ್ ರಾಜ್ಯದ ಅತ್ಯಂತ ದೊಡ್ಡ ಸ್ವಾಭಾವಿಕ ವಿಭಾಗ ಅಪಲೇಷಿಯನ್ ಪ್ರಸ್ಥಭೂಮಿ ಪ್ರದೇಶ. ಇದು ರಾಜ್ಯದ ಸುಮಾರು ಅರ್ಧ ಭಾಗವನ್ನು ಒಳಗೊಂಡಿದೆ. ಇದು ಹಡ್ಸನ್ ನದಿ ಕಣಿವೆಯ ಪಶ್ಚಿಮಕ್ಕೆ, ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಎಲ್ಲೆಗಳವರೆಗೂ ಹಬ್ಬಿದೆ. ಇಲ್ಲಿ ಕ್ಯಾಟ್ಸ್‌ಕಿಲ್ ಪರ್ವತವೂ ಫಿಂಗರ್ ಲೇಕ್ಸ್ ಬೆಟ್ಟಗಳೂ ಇವೆ. 7) ಅಪಲೇಷಿಯನ್ ಪ್ರಸ್ಥಭೂಮಿಯ ಉತ್ತರಕ್ಕೆ ಮತ್ತು ಮೋಹಾಕ್ ಕಣಿವೆಯ ಪಶ್ಚಿಮಕ್ಕೆ, ಮಹಾಸರೋವರಗಳ ದಕ್ಷಿಣದಂಡೆಗಳವರೆಗೂ, ಪ್ರಸ್ಥಭೂಮಿ ಸದೃಶ ಪ್ರದೇಶವಿದ್ದು. ಇದನ್ನು ಈರೀ–ಆಂಟೇರಿಯೊ ಮೈದಾನ ಎಂದು ಕರೆಯಲಾಗಿದೆ. ಸರೋವರಗಳ ಪ್ರಭಾವದಿಂದಾಗಿ ಇಲ್ಲಿ ವಾಯುಗುಣದ ತೀವ್ರತೆ ತಗ್ಗಿದೆ. ಇದು ಪ್ರಮುಖವಾಗಿ ಹಣ್ಣು ಬೆಳೆಯುವ ಪ್ರದೇಶ. 8) ಸರೋವರಗಳ ನೆರೆಯ ತಗ್ಗು ಪ್ರದೇಶ ಹಾಗೂ ಆಡಿರಾಂಡ್ಯಾಕ್ ಪರ್ವತಸಮೂಹದ ಪಶ್ಚಿಮದ ಅಂಚಿಗೂ ನಡುವೆ, ಓನೀಡ ಸರೋವರದ ಉತ್ತರಕ್ಕೆ ಟಗ್ ಬೆಟ್ಟ ಪ್ರದೇಶವಿದೆ. ಇಲ್ಲಿಯ ನೆಲ ಬರಡು. ವಾಯುಗುಣ ತೀವ್ರತರ. ಆದ್ದರಿಂದ ಇದು ರಾಜ್ಯದ ಅತ್ಯಂತ ಕಡಿಮೆ ಜನವಸತಿಯ ಪ್ರದೇಶ.

ನದೀ ವ್ಯವಸ್ಥೆ : ನ್ಯೂ ಯಾರ್ಕ್ ರಾಜ್ಯಕ್ಕೆ 204 ಕಿಮೀ ಉದ್ದದ ಅಟ್ಲಾಂಟಿಕ್ ತೀರವೂ 597 ಕಿಮೀ ಉದ್ದದ ಈರೀ ಮತ್ತು ಆಂಟೇರಿಯೋ ಸರೋವರ ತೀರಗಳೂ ಇವೆ. ಇಲ್ಲಿ 8,000 ಸರೋವರಗಳೂ 9 ಪ್ರಮುಖ ನದಿಗಳೂ ಇವೆ. ಐತಿಹಾಸಿಕವಾಗಿ ರಾಜ್ಯದಲ್ಲಿ ಪ್ರಧಾನ ಪಾತ್ರ ವಹಿಸಿರುವ ನದಿಗಳು ಹಡ್ಸನ್ ಮತ್ತು ಮೋಹಾಕ್. ಇತರ ಪ್ರಮುಖ ನದಿಗಳ ಪೈಕಿ ಜೆನಸೀ, ಆಸ್ವಿಗೋ – ಇವು ಉತ್ತರ ದಿಕ್ಕಿಗೆ ಹರಿದು ಆಂಟೇರಿಯೊ ಸರೋವರನ್ನು ಸೇರುತ್ತವೆ. ಡೆಲವೇರ್, ಸಸ್ಕ್ವಹ್ಯಾನ, ಆಲಿಘನಿ ಇವು ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗದ ನದಿಗಳು. ನ್ಯೂ ಯಾರ್ಕ್ ನಗರದ ನೀರಿನ ಪೂರೈಕೆಯಾಗುವುದು ಬಹಳ ಮಟ್ಟಿಗೆ ಈ ನದಿಗಳಿಂದ. ಈಸ್ಟ್‌ರಿವರ್ ಲಾಂಗ್‌ಐಲೆಂಡಿನ ಸೌಂಡರ್ ಕಡಲ್ಗಾಲುವೆ ಹಾಗೂ ನ್ಯೂಯಾರ್ಕ್ ಕೊಲ್ಲಿಯನ್ನು ಸಂಪರ್ಕಿಸುವುದು ಹಾಗೂ ಮ್ಯಾನ್‌ಹಟ್ಟನ್–ಲಾಂಗ್‌ಐಲೆಂಡ್‌ಗಳನ್ನು ಪ್ರತ್ಯೇಕಿಸುವುದು. ನಯಾಗರ ಜಲಪಾತ ಈ ರಾಜ್ಯದ ವಿಶೇಷ ಆಕರ್ಷಣೆ. ಇದೊಂದು ಅತ್ಯಂತ ಸುಂದರ ತಾಣ; ವಿದ್ಯುತ್ತಿನ ಮೂಲ.

ವಾಯುಗುಣ : ನ್ಯೂ ಯಾರ್ಕ್ ರಾಜ್ಯದ ಪ್ರದೇಶದಲ್ಲಿ ಮೊದಲು ನೆಲಸಿದ ಡಚ್ ಜನಕ್ಕೆ ಇಲ್ಲಿಯ ವಾಯುಗುಣ ಅತ್ಯಂತ ನಿರಾಶಾದಾಯಕವಾಗಿತ್ತು. ತೀರದಿಂದ ಒಳನಾಡಿಗೆ ಹೋದಂತೆ ಉಷ್ಣಾಂಶಗಳಲ್ಲಿ ಹೆಚ್ಚು ವ್ಯತ್ಯಾಸಗಳಿರುವಂತೆಯೇ ಚಳಿಗಾಲ ಹಾಗೂ ಬೇಸಿಗೆಯ ಉಷ್ಣಾಂಶದಲ್ಲಿಯೂ ಹೆಚ್ಚು ಅಂತರ ಕಂಡುಬರುವುದು. ನ್ಯೂಯಾರ್ಕ್ dÃ ÉwAUÀ£ÀèÁ¸ÀgÀ $25^0$ ಸೆ. ನಷ್ಟು ಉಷ್ಣಾಂಶವನ್ನು ಹೊಂದಿದ್ದು ಚಳಿಗಾಲದಲ್ಲಿ $0.5^0$ ಸೆ. ನಷ್ಟು ಕಡಿಮೆ ಉಷ್ಣಾಂಶದಿಂದ ಕೂಡಿದೆ. ಸಾಮಾನ್ಯವಾಗಿ ಎಲ್ಲ ಕಡೆಯೂ ಸಾಕಷ್ಟು ಮಳೆಯಾಗುತ್ತದೆ. ಬಫೆಲೋ ಪ್ರದೇಶದಲ್ಲಿ ಇತರ ಕಡೆಗಳಿಗಿಂತ ಹೆಚ್ಚು ಹಿಮಪಾತವಾಗುವುದು.

ಸಸ್ಯ–ಪ್ರಾಣಿ ಜೀವನ: ವಸಾಹತು ಕಾಲದಲ್ಲಿ ಕೆಲವು ನೈಸರ್ಗಿಕ ಮೈದಾನ ಪ್ರದೇಶಗಳನ್ನು ಬಿಟ್ಟರೆ ಉಳಿದ ಎಲ್ಲ ಕಡೆಗೂ ದಟ್ಟವಾದ ಅರಣ್ಯ ಹಬ್ಬಿತ್ತು. ಇಲ್ಲಿ ಸು. 140 ಜಾತಿಗಳ ಮರಗಳಿವೆ. ಇವುಗಳಲ್ಲಿ 116 ದೇಶೀಯ ಆಡಿರಾಂಡ್ಯಾಕ್ಸ್ ಹಾಗೂ ಕ್ಯಾಟ್ಸ್‌ಕಿಲ್ ಪರ್ವತಗಳಲ್ಲಿ ಸ್ಪ್ರೂಸ್, ತೈಲಪರ್ಣಿ ಮತ್ತು ಹೆಮ್ಲಾಕ್ ಹೆಚ್ಚಾಗಿವೆ. ಹಡ್ಸನ್–ಮೋಹಾಕ್ ಕಣಿವೆ. ಆಂಟೇರಿಯೋ ಸರೋವರದ ಬಯಲು ಹಾಗೂ ಪರ್ವತಗಳ ಆಳವಾದ ಕಣಿವೆಗಳಲ್ಲಿ ಓಕ್, ಕಿರಿ ಎಲೆಯ ತೈಲಪರ್ಣಿ, ಮೇಪಲ್, ಹಿಕರಿ, ಚೆಸ್‌ನಟ್ ಮತ್ತು ಎಲ್ಮ್ ಮರಗಳು ಅಧಿಕವಾಗಿವೆ. ರಾಜ್ಯದಲ್ಲಿ ಸಾವಿರಾರು ಜಾತಿಯ ಸಸ್ಯಗಳೂ ಜರೀ ಗಿಡಗಳೂ ತುಂಬಿವೆ.

ಕಾಡು ಟರ್ಕಿ ಕೋಳಿ, ಚಿರತೆ, ಎಲ್ಕ್, ಮೂಸ್, ವೋಲ್ವರೀಸ್ ಹಾಗೂ ಟಿಂಬರ್ ವುಲ್ಫ್ ಮೃಗಗಳು ಮಿತಿಯಿಲ್ಲದೆ ಕೊಲ್ಲಲ್ಪಟ್ಟು ಈಗ ಇಲ್ಲದಂತಾಗಿವೆ. ರಕ್ಷಣಾಕ್ರಮಗಳಿಂದ ಬೀವರ್, ಆಟರ್, ಮಿಂಕ್ ಮತ್ತು ಕಪ್ಪು ಕರಡಿ ಇನ್ನೂ ಉಳಿದುಕೊಂಡಿವೆ. ಚಿಗರೆ, ನರಿ, ಕಸ್ತೂರಿ ಇಲಿ, ರ್‍ಯಾಕೂನ್, ಮೊಲ, ಅಳಿಲು ಇವು ಎಲ್ಲೆಲ್ಲೂ ಕಂಡುಬರುವ ಪ್ರಾಣಿಗಳು. ಸು. 265 ಜಾತಿ ಪಕ್ಷಿಗಳು ವರ್ಷದಲ್ಲಿ ಕೆಲವು ಕಾಲ ಇಲ್ಲಿ ವಾಸಿಸುತ್ತವೆ. ರಾಬಿನ್, ತ್ರಶ್, ಕ್ಯಾಟ್ ಬರ್ಡ್, ರೆನ್, ಲಾರ್ಕ್, ಕೆಂಪುತಲೆಯ ಮರಕುಟಕ, ಓರಿಯಲ್ ಮೊದಲಾದ ಪಕ್ಷಿಗಳು ಬೇಸಗೆಯಲ್ಲಿರುತ್ತವೆ. ಇಂಗ್ಲಿಷ್ ಸ್ವಾಲೋ, ಕಾಗೆ ಹಲವು ಜಾತಿಯ ಮರಕುಟಕಗಳು ಹಾಗೂ ಗಿಡುಗ ವರ್ಷದಾದ್ಯಂತ ಇರುತ್ತವೆ. ಬೇಟೆ ಪಾರ್ಟ್‌ರಿಜ್, ಜೀವಂಜೀವ, ಗ್ರೌಸ್, ಬಗೆಬಗೆಯ ಕಾಡು ಬಾತುಗಳು, ಸ್ನೈಪ್ ಮತ್ತು ವುಡ್‌ಕಾಕ್‌ಗಳಿಗೆ ಸರ್ಕಾರ ರಕ್ಷಣೆ ನೀಡಿದೆ.

ಖನಿಜಸಂಪತ್ತು : ರಾಜ್ಯದಲ್ಲಿ ಖನಿಜಸಂಪತ್ತು ಹೇರಳವಾಗಿದೆ. ಕಲ್ಲುಪ್ಪು, ಜೇಡಿ ಮಣ್ಣು, ಜಿಪ್ಸಮ್ ಸತು, ಸಿಮೆಂಟು ಕಲ್ಲು, ಬಳಪಕಲ್ಲು ಮರಳುಗಲ್ಲು ಬೆಣಚುಕಲ್ಲು, ಪೈರೈಟೀಸ್ ಇವು ಕೆಲವು ಮುಖ್ಯ ಅದಿರುಗಳು. ಕಾಗೆಬಂಗಾರ, ಟಿಟಾನಿಯಮ್, ಕುರುಂದ, ಗಾರ್ನೆಟ್ ಇವುಗಳ ಉತ್ಪಾದನೆಯಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ ಇದು ಮೊದಲನೆಯ ರಾಜ್ಯ; ಸತುವಿನ ಉತ್ಪಾದನೆಯಲ್ಲಿ ಎರಡನೆಯದು. ಕಲ್ಲುಪ್ಪು ಉತ್ಪಾದಿಸುತ್ತಿರುವ ಪ್ರಮುಖ ರಾಜ್ಯಗಳಲ್ಲಿ ಇದೂ ಒಂದು. ಸೀಸ ಮತ್ತು ಕಬ್ಬಿಣ ಇವು ಇತರ ಉತ್ಪನ್ನಗಳು.

ಕೃಷಿ : ಫಲವತ್ತಾದ ಮತ್ತು ಏರುತಗ್ಗಿನ ಭೂಸ್ವರೂಪದ ಭೂಮಿ ಕೃಷಿಗೆ ಅನುಕೂಲವಾಗಿದೆ. ಕ್ಲೋವರ್ ಮತ್ತು ಟಿಮೊತಿ ಮೊದಲಾದ ಸಸ್ಯಗಳನ್ನು ಬೆಳೆಯುತ್ತಾರೆ. ಮೇಪಲ್ ಷರಬತ್ತು, ಹಾಲು ಮತ್ತು ಐಸ್ ಕ್ರೀಂ ಉತ್ಪಾದನೆಯಲ್ಲಿ ಈ ರಾಜ್ಯದ್ದು ಮೊದಲನೆಯ ಸ್ಥಾನ. ಸೇಬು ಮತ್ತು ದ್ರಾಕ್ಷಿ ಉತ್ಪಾದನೆಯಲ್ಲಿ ಇದು ಎರಡನೆಯದು. ತರಕಾರಿ, ಕರಬೂಜ, ಸಿಹಿ ಮತ್ತು ಹುಳಿ ಚೆರಿ, ಬೋರೆ ಹಣ್ಣು ಮತ್ತು ಬಟಾಟೆ ಉತ್ಪಾದನೆಯಲ್ಲಿ ಇದು ಮುಂದಿದೆ. ಕಾಳು, ಓಟ್ಸ್, ಗೋದಿ, ಪೀಚ್, ಬಟಾಣಿ, ಬೀಟ್,

ಅವರೆ, ಕೋಸು, ಕೋಳಿ ಮತ್ತು ತತ್ತಿ ಇವುಗಳ ಉತ್ಪಾದನೆಯೂ ಅಧಿಕ. ಮದ್ಯ ಮತ್ತು ದ್ರಾಕ್ಷಾರಸ ಹೆಚ್ಚಾಗಿ ತಯಾರಾಗುತ್ತವೆ. ಆಹಾರಪದಾರ್ಥಗಳನ್ನು ಡಬ್ಬಿಗಳಲ್ಲಿ ತುಂಬುವ ಮತ್ತು ಘನೀಕರಿಸುವ ಉದ್ಯಮಗಳೂ ಅಧಿಕ ಸಂಖ್ಯೆಯಲ್ಲಿ ಇವೆ.

ಕೈಗಾರಿಕೆ : 1840ರಿಂದಲೇ ನ್ಯೂ ಯಾರ್ಕ್ ಕೈಗಾರಿಕೆಯಲ್ಲಿ ಮುಂದುವರಿದಿತ್ತು. ಉಡುಪುಗಳ ತಯಾರಿಕೆ ರಾಜ್ಯದ ಅತ್ಯಂತ ದೊಡ್ಡ ಉದ್ಯಮ, ಮುದ್ರಣ ಮತ್ತು ಪ್ರಕಾಶನ, ಆಹಾರ ಸಂಸ್ಕರಣ, ಯಂತ್ರ, ರಗ್ಗು, ರತ್ನಗಂಬಳಿ, ಬಟ್ಟೆ, ವಾಹನ ಸೌಕರ್ಯ, ಸಾಬೂನು, ಪೀಠೋಪಕರಣ, ಪೆಟ್ರೋಲ್, ಶುದ್ಧೀಕರಣ, ವೈಜ್ಞಾನಿಕ ಸಲಕರಣೆ, ತಂಬಾಕಿನ ಸರಕು, ರಾಸಾಯನಿಕ, ಕಾಗದ ಮತ್ತು ಚರ್ಮದ ವಸ್ತು ಇವು ಇಲ್ಲಿನ ಪ್ರಮುಖ ಕೈಗಾರಿಕೆಗಳು. ಆಭರಣ, ಬೆಳ್ಳಿಯ ಸಾಮಾನು, ಗೊಂಬೆ, ಆಟಿಕೆ, ಲೇಖನಿ, ಸೀಸದ ಕಡ್ಡಿ ಇವೂ ತಯಾರಾಗುತ್ತವೆ. ವಿದ್ಯುತ್ ಉಪಕರಣ, ಉಗಿಬಂಡಿ, ಮೋಟಾರುಗಾಡಿ ಮತ್ತು ವಿಮಾನಯಂತ್ರ, ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳು ಇಲ್ಲಿ ತಯಾರಾಗುತ್ತವೆ. ರಾಚೆಸ್ಟರಿನಲ್ಲಿ ಕ್ಯಾಮೆರ ತಯಾರಿಸುವ ಒಂದು ಜಗತ್‌ಪ್ರಸಿದ್ಧ ಸಂಸ್ಥೆಯಿದೆ.

ಪ್ರೇಕ್ಷಣೀಯ ಸ್ಥಳಗಳು : ರಾಜ್ಯದಲ್ಲಿ ಅನೇಕ ವಸ್ತು ಸಂಗ್ರಹಾಲಯಗಳು, ಕಟ್ಟಡಗಳು ಮತ್ತು ಐತಿಹಾಸಿಕ ನಿವೇಶನಗಳು ಇವೆ. ಸರ್ಕಾರ 20ಕ್ಕೂ ಹೆಚ್ಚು ಐತಿಹಾಸಿಕ ಭವನ ಮತ್ತು ನಿವೇಶನಗಳನ್ನು ವಹಿಸಿಕೊಂಡಿದೆ. ಕಿಂಗ್ಸ್ ಟನ್ನಿನಲ್ಲಿರುವ ಸೆನೆಟ್ ಹೌಸ್, ಟ್ಯಾರಿಟೌನಿನಲ್ಲಿರುವ ವಾಷಿಂಗ್‌ಟನ್ ಅರ್ವಿಂಗನ ಮನೆ ಸನ್ನಿಸೈಡ್, ಡಚ್ಚರ ಚರ್ಚು (1697), ಜೇಗೋಲ್ಡನ 19ನೆಯ ಶತಮಾನದ ಭವನ ಲಿಂಡ್‌ಹರ್ಸ್ಟ್, ಹೈಡ್ ಪಾರ್ಕಿನಲ್ಲಿರುವ ರೂಸ್‌ವೆಲ್ಟ್ ರಾಷ್ಟ್ರೀಯ ಐತಿಹಾಸಿಕ ನಿವೇಶನ, ರೂಸ್‌ವೆಲ್ಟ್ ಗ್ರಂಥಾಲಯ, ನಾರ್ತ್ ಟ್ಯಾರಿಟೌನಿನಲ್ಲಿರುವ ಫಿಲಿಪ್ಸ್ ಬರ್ಗ್ ಮೇನರ್, ಸ್ಟೋನೀಬ್ರೂಕ್ ನಲ್ಲಿರುವ ಸಫಾಕ್ ಮ್ಯೂಸಿಯಮ್ ಮತ್ತು ಕ್ಯಾರಿಯೇಜ್ ಹೌಸ್, ಕೂಪರ್ ಟೌನಿನ ರಾಷ್ಟ್ರೀಯ ಬೇಸ್‌ಬಾಲ್ ಹಾಲ್, ಹತ್ತಿರದಲ್ಲೇ ಇರುವ ಫೆನಿಮಾರ್ ಹೌಸ್, ಆಲ್ಬನಿಯ ನ್ಯೂ ಯಾರ್ಕ್ ರಾಜ್ಯ ವಸ್ತು ಸಂಗ್ರಹಾಲಯ, ಕಾರ್ನಿಂಗಿನ ಕಾರ್ನಿಂಗ್ ಗ್ಲಾಸ್ ಸೆಂಟರ್, ಫಿಂಗರ್ ಲೇಕ್ಸ್‌ನ ಕರ್ಟಿಸ್ ಮ್ಯೂಸಿಯಮ್, ಹ್ಯಾಮಂಡ್ಸ್ ಪೋರ್ಟಿನ ವೈನ್ ಮ್ಯೂಸಿಯಮ್, ಯುಟಿಕಾದಲ್ಲಿರುವ ಮನ್ಸನ್–ವಿಲಿಯಮ್–ಪ್ರಾಕ್ಟರ್ ಇನ್‌ಸ್ಟಿಟ್ಯೂಟ್, ಆಗ್ಡೆನ್ಸ್ ಬರ್ಗ್‌ನ ರೆಮಿಂಗ್‌ಟನ್ ಕಲಾ ಸ್ಮಾರಕ ವಸ್ತುಸಂಗ್ರಹಾಲಯ ಮೊದಲಾದವು ಪ್ರೇಕ್ಷಣೀಯವಾದವು.

ನ್ಯೂ ಯಾರ್ಕ್, (8,085,742) ಬಫೆಲೋ, ರಾಚೆಸ್ಟರ್, ಸಿರಾಕ್ಯೂಸ್, ಯಾಂಕರ್ಸ್, ಆಲ್ಬನಿ, ಯೂಟಿಕ, ಸ್ಕನೆಕ್‌ಟಡೀ, ನಯಾಗರ ಫಾಲ್ಸ್, ಬಿಂಗ್‌ಹ್ಯಾಮ್‌ಟನ್ ಇವು ಹೆಚ್ಚು ಜನಸಂಖ್ಯೆಯ ನಗರಗಳು. (ಜಿ.ಕೆ.ಯು.)

**ನ್ಯೂ ಲಂಡನ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಕನೆಕ್ಟಿಕಟ್ ರಾಜ್ಯದ ಆಗ್ನೇಯ ಭಾಗದಲ್ಲಿರುವ ನಗರ. ತೇಮ್ಸ್ ನದಿಯ ಮುಖದಲ್ಲಿ ಲಾಂಗ್ ಐಲೆಂಡ್ ಸೌಂಡ್‌ನ (ಜಲಸಂಧಿ) ಮೇಲಿರುವ ಬಂದರು. ಉ.ಅ.$41^0 21'$ ಮತ್ತು ಪ.ರೇ $28^0 7'$ ನಲ್ಲಿದೆ. ಜನಸಂಖ್ಯೆ 25,671. ಅಟ್ಲಾಂಟಿಕ್ ತೀರದ ಅತ್ಯಂತ ಆಳವಾದ ಬಂದರುಗಳಲ್ಲಿ ಇದೂ ಸಹ ಒಂದು. ಈ ಬಂದರು 1646ರಲ್ಲಿ ಸ್ಥಾಪಿತವಾಯಿತು. 1658ರ ವರೆಗೂ ಇದಕ್ಕೆ ಪೆಕ್ವಿಡ್ ಎಂದು ಹೆಸರಿತ್ತು. ಅಮೆರಿಕನ್ ಕ್ರಾಂತಿಯ ಸಮಯದಲ್ಲಿ ಬ್ರಿಟಿಷ್ ಸೇನೆ ಇದರ ಮೇಲೆ ದಾಳಿ ನಡೆಸಿತ್ತು. 1784ರಲ್ಲಿ ಇಲ್ಲಿ ತಿಮಿಂಗಿಲ ಹಿಡಿಯುವ ಉದ್ಯಮ ಸ್ಥಾಪಿತವಾಯಿತು. 1846ರವರೆಗೂ ಇದು ಪ್ರವರ್ಧಮಾನದಲ್ಲಿತ್ತು. ಇಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ತೀರ ರಕ್ಷಣಾಪಡೆಯ ಅಕಾಡೆಮಿ ಇದೆ. ಇದು ಅಮೆರಿಕದ ಜಲಾಂತರ್ಗಾಮಿ ನೌಕಾ ನೆಲೆ, ಅಮೆರಿಕನ್ ನೌಕೆಯ ಪ್ರಯೋಗಶಾಲೆಯಿದೆ. ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆಗಳನ್ನು ಇಲ್ಲಿ ನಿರ್ಮಿಸಲಾಗುತ್ತದೆ. (ಪಿ.ಬಿ.)

**ನ್ಯೂ ಸೈಬೀರಿಯನ್ ದ್ವೀಪಗಳು:** ಆರ್ಕ್‌ಟಿಕ್ ಸಾಗರದಲ್ಲಿ, ಉ.ಅ. $75^0$ ಮತ್ತು ಪೂ.ರೇ. $142^0$ ದಲ್ಲಿ ಪೂರ್ವ ಸೈಬೀರಿಯನ್ ಸಮುದ್ರ ಹಾಗೂ ಲಾಪ್ಟೇವ್ ಸಮುದ್ರಗಳ ನಡುವೆ ಕಂಡುಬರುವ ದ್ವೀಪಗಳನ್ನು ಈ ಹೆಸರಿನಿಂದ ಕರೆಯಲಾಗಿದೆ. ಕೊಟೆಲ್‌ನಿ ಹಾಗೂ ನೋವೋಯಾ ಸಿಬಿರ್ ಈ ದ್ವೀಪಗಳಲ್ಲಿ ಅತಿದೊಡ್ಡವು. ಸೈಬೀರಿಯನ್ ಪ್ರದೇಶಕ್ಕೂ ಈ ದ್ವೀಪಕ್ಕೂ ನಡುವೆ ಇರುವ ಜಲಸಂಧಿ ಡಮೀಟ್ರೀ ಲಾಪ್ಟೇವ್. ರಷ್ಯದೇಶಕ್ಕೆ ಸೇರಿದ ಈ ದ್ವೀಪಗಳ ವಿಸ್ತೀರ್ಣ ಸು. 38,000 ಚ.ಕಿಮೀ. ಈ ದ್ವೀಪಗಳು 374 ಮೀ ಗಿಂತ ಎತ್ತರವಾಗಿಲ್ಲ. ಇಲ್ಲಿಯದು ತೀವ್ರ ಶೀತ ವಾಯುಗುಣ. ಈ ದ್ವೀಪಗಳು ಶೀತವಲಯ ಪ್ರದೇಶದಲ್ಲಿವೆ. ವರ್ಷದಲ್ಲಿ ಒಂಬತ್ತು ತಿಂಗಳ ಕಾಲ ನೆಲದ ಮೇಲೆ ಹಿಮ ಕಟ್ಟಿರುತ್ತದೆ. ತಂಡ್ರಾ ಮಾದರಿಯ ಸಸ್ಯಗಳು ಬೇಸಗೆಯಲ್ಲಿ ಮಾತ್ರಕಂಡು ಬರುತ್ತವೆ. ಜವುಗು ಮತ್ತು ಮರಳು ಸಾಮಾನ್ಯವಾಗಿದೆ. ಶೀತವಲಯದ ನರಿ, ಆರ್ಟಿಕ ಜಿಂಕೆ ಮತ್ತು ಲೆಮಿಂಗ್ ಇಲ್ಲಿಯ ಮುಖ್ಯ ಪ್ರಾಣಿಗಳು. ಬೇಸಗೆಯಲ್ಲಿ ಹಕ್ಕಿಗಳು ಹೇರಳವಾಗಿರುತ್ತವೆ. (ಕೆ.ಆರ್.)

**ನ್ಯೂ ಸೌತ್ ವೇಲ್ಸ್:** ಆಸ್ಟ್ರೇಲಿಯದ ಆಗ್ನೇಯ ಭಾಗದ ರಾಜ್ಯ. ದಕ್ಷಿಣದಲ್ಲಿ ವಿಕ್ಟೋರಿಯ ರಾಜ್ಯ, ಪಶ್ಚಿಮದಲ್ಲಿ ದಕ್ಷಿಣ ಆಸ್ಟ್ರೇಲಿಯ ರಾಜ್ಯ. ಇದು ಆಸ್ಟ್ರೇಲಿಯದ ಶೇ. 10 ರಷ್ಟು ಭೂಭಾಗವನ್ನು ಒಳಗೊಂಡಿದೆ. ಇದು ಸು. 1800 ಕಿಮೀ ಉದ್ದವಾದ ತೀರವನ್ನು ಒಳಗೊಂಡಿದೆ. ಟಾಸ್ಮನ್ ಸಮುದ್ರದ ಲಾರ್ಡ್‌ಹೋವೆ ದ್ವೀಪವೂ ಸಹ ಈ ರಾಜ್ಯಕ್ಕೆ ಸೇರಿದೆ. ಉತ್ತರದಲ್ಲಿ ಕ್ವೀನ್ಸ್‌ಲೆಂಡ್ ರಾಜ್ಯ ಹಾಗೂ ಪೂರ್ವದಲ್ಲಿ ಪೆಸಿಫಿಕ್ ಸಾಗರದ ಟಾಸ್ಮೇನಿಯ ಸಮುದ್ರ ಈ ರಾಜ್ಯದ ಮೇರೆಗಳು. ವಿಸ್ತೀರ್ಣ 8,01,600 ಚ.ಕಿಮೀ. ಜನಸಂಖ್ಯೆ 66,99,300 (2003). ಆಡಳಿತ ಕೇಂದ್ರ ಸಿಡ್ನಿ. ಇದು ಆಸ್ಟ್ರೇಲಿಯದ ಅತಿದೊಡ್ಡ ನಗರ. ಜನಸಂಖ್ಯೆ 4 ಮಿ. (2002).

ಪ್ರಾಕೃತಿಕ ಲಕ್ಷಣಗಳು : ರಾಜ್ಯದ ಪೂರ್ವತೀರದ ಗ್ರೇಟ್ ಡಿವೈಡಿಂಗ್ ರೇಂಜ್ ಕಡಿದಾದ ಸಮುದ್ರದಂಚಿನ ಭೂಭಾಗವನ್ನು ಪಶ್ಚಿಮದ ಮೈದಾನದಿಂದ ಪ್ರತ್ಯೇಕಿಸಿದೆ. ಸಮುದ್ರದಂಚಿಗೂ ಬೆಟ್ಟದಸಾಲುಗಳಿಗೂ ನಡುವಣ ಭೂಪ್ರದೇಶ ಕೇವಲ 16 ರಿಂದ 80 ಕಿಮೀ. ಅಗಲವಾಗಿದೆ. ಬೆಟ್ಟ ಸಾಲುಗಳು ಪಶ್ಚಿಮಕ್ಕೆ ಕಡಿದಾದ ಇಳಿಜಾರಿಂದ ಕೂಡಿದೆ. ಸಮುದ್ರ ಮಟ್ಟದಿಂದ ಈ ಗಿರಿಶ್ರೇಣಿಯ ಸರಾಸರಿ ಎತ್ತರ 762 ಮೀ. ಇದರ ಅತ್ಯುನ್ನತ ಶಿಖರ ಕೊಸ್ಸಿಯುಸ್ಕೊ (2,234 ಮೀ). ಇದು ಆಸ್ಟ್ರೇಲಿಯ ದೇಶದ ಅತಿಹೆಚ್ಚು ಎತ್ತರವಾದ ಶಿಖರವಾಗಿದೆ. ಪಶ್ಚಿಮದ ಮೈದಾನ ಸಮುದ್ರಮಟ್ಟಕ್ಕೆ 305 ಮೀ ಎತ್ತರವಾಗಿದೆ. ಈ ರಾಜ್ಯದ ವಾಯವ್ಯ ಭಾಗ ಮರಳು ದಿಣ್ಣೆಗಳಿಂದ ಕೂಡಿದ್ದು, ಸಂಪೂರ್ಣ ಮರುಭೂಮಿಯ ಭಾಗವಾಗಿದೆ.

ನದಿಗಳು : ನ್ಯೂ ಸೌತ್ ವೇಲ್ಸ್ ರಾಜ್ಯದ ನದಿಗಳು ಪೂರ್ವಭಾಗದಲ್ಲಿರುವ ಗ್ರೇಟ್ ಡಿವೈಡಿಂಗ್ ಶ್ರೇಣಿಯಲ್ಲಿ ಉಗಮಿಸಿ ಪೂರ್ವ ಹಾಗೂ ಪಶ್ಚಿಮದ ಕಡೆಗೆ ಹರಿಯುತ್ತವೆ. ಪೂರ್ವಕ್ಕೆ ಹರಿಯುವ ನದಿಗಳೆಂದರೆ ಹಂಟರ್, ಕ್ಲಾರೆನ್ಸ್ ಮತ್ತು ಶೋಲ್ಹಾವೆನ್. ಪಶ್ಚಿಮದ ಕಡೆಗೆ ಹರಿಯುವ ನದಿಗಳೆಂದರೆ ನಾಮಾಯ್, ಗ್ವೈಡಿರ್, ಮಾಕ್ವೈರಿ, ಲಾಚ್‌ಲಾನ್ ಮತ್ತು ಮುರ್ರುಮ್ ಬಿಡ್ಜೀ. ಇವುಗಳು ಅಂತಿಮವಾಗಿ ಮುರ್ರೆ ಮತ್ತು ಡಾರ್ಲಿಂಗ್ ನದಿಗಳನ್ನು ಸೇರುತ್ತವೆ. ಇವುಗಳು ಆಸ್ಟ್ರೇಲಿಯದ ಅತಿ ದೊಡ್ಡ ನದಿಗಳು. ಇವುಗಳೆರಡೂ ವೆಂಟ್‌ವರ್ತ್ ಪಟ್ಟಣದ ಬಳಿ ಒಟ್ಟುಗೂಡಿ ಸಾಗರವನ್ನು ಸೇರುತ್ತವೆ. ಡಾರ್ಲಿಂಗ್ ನದಿಯು ಕ್ವಿನ್ಸ್‌ಲೆಂಡ್ ಪ್ರಾಂತ್ಯದಲ್ಲಿ ಹರಿಯುತ್ತವೆ ಇದರಲ್ಲಿನ ನೀರಿನ ಪ್ರಮಾಣ ಹೆಚ್ಚು. ಇದು ಆಸ್ಟ್ರೇಲಿಯದ ಅತಿದೊಡ್ಡ ನದಿ.

ವಾಯುಗುಣ : ಇಲ್ಲಿಯದು ಶುಷ್ಕ ವಾಯುಗುಣ. ರಾಜ್ಯದಲ್ಲಿ ಪ್ರಕಾಶಮಾನವಾದ ಬಿಸಿಲು ಹೆಚ್ಚು. ಕೃಷಿಗೆ ಈ ವಾಯುಗುಣ ಅನುಕೂಲವಾಗಿಲ್ಲ. ಆದರೆ ಕರಾವಳಿಯ ನಗರಗಳು ಆಹ್ಲಾದಕರವಾಗಿದೆ. ಬೇಸಗೆಯಾಗಲಿ, ಚಳಿಗಾಲವಾಗಲಿ ತೀವ್ರವಾಗಿರುವುದಿಲ್ಲ. ಒಳನಾಡಿನಲ್ಲಿ ಬೇಸಗೆಯಲ್ಲಿ ಹೆಚ್ಚು ಸೆಕೆ. ಚಳಿಗಾಲದಲ್ಲಿ ಚಳಿ ತೀವ್ರ. ಉಷ್ಣತೆ ಬೇಸಗೆಯಲ್ಲಿ $24^0$ ಸೆ.–$29^0$ ಸೆ. ಚಳಿಗಾಲದಲ್ಲಿ $7^0$ ಸೆ.–$13^0$ ಸೆ. ಬೇಸಿಗೆಯಲ್ಲಿ ಉಷ್ಣತೆ $38^0$ ಸೆ. ವರೆಗೂ ಏರುವುದುಂಟು. ಚಳಿಗಾಲದಲ್ಲಿ ಮಂಜುಬೀಳುವುದುಂಟು. ರಾಜ್ಯದ ಶೇ. 19ರಷ್ಟು ಪ್ರದೇಶದಲ್ಲಿ 25 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ. ಶೇ. 23ರಷ್ಟು ಪ್ರದೇಶದಲ್ಲಿ 25–38 ಸೆಂಮೀ ಮಳೆ ಆಗುತ್ತದೆ. ಕರಾವಳಿಯಲ್ಲಿ ಹೆಚ್ಚು ಮಳೆ. ಅಲ್ಲಿಯ ಉತ್ತರ ಭಾಗದಲ್ಲಿ ವರ್ಷಕ್ಕೆ 76 ಸೆಂಮೀ ಮತ್ತು ದಕ್ಷಿಣದಲ್ಲಿ 190 ಸೆಂಮೀ ಮಳೆಯಾಗುತ್ತದೆ. ಕರಾವಳಿಯಿಂದ ಒಳನಾಡಿಗೆ ಸಾಗಿದಂತೆ ಮಳೆ ಕಡಿಮೆಯಾಗುತ್ತದೆ; ಕೇವಲ 20 ಸೆಂಮೀ ಮಳೆಯಾಗುತ್ತದೆ.

ಸಸ್ಯ–ಪ್ರಾಣಿ ಸಂಪತ್ತು : ರಾಜ್ಯದ ಶೇ. 10 ರಷ್ಟು ಭಾಗ ಅರಣ್ಯಗಳಿಂದ ಕೂಡಿದೆ. ಪೂರ್ವದ ಕಡಲ ತೀರದ ಬೆಟ್ಟದ ಸಾಲಿನಲ್ಲೂ ಉನ್ನತ ಪ್ರದೇಶದಲ್ಲೂ ಅರಣ್ಯಗಳಿವೆ. ಕರಾವಳಿಯ ಉತ್ತರ ಭಾಗದಲ್ಲಿಯ ದಟ್ಟವಾದ ಉಷ್ಣವಲಯ ಅರಣ್ಯದಿಂದ ಪಶ್ಚಿಮದ ಮೈದಾನದ ವಿರಳವಾದ ಸಸ್ಯಗಳ ವರೆಗೆ ನೈಸರ್ಗಿಕ ಸಸ್ಯ ಸಂಪತ್ತು ವ್ಯತ್ಯಾಸವಾಗುತ್ತದೆ. ಹೆಚ್ಚು ಭಾಗ ಪೊದೆ ಮತ್ತು ಕುರುಚಲುಗಳಿಂದ ಕೂಡಿದೆ. ಪ್ರಮುಖ ಮರ ನೀಲಗಿರಿ. ಉತ್ತರ ಕರಾವಳಿಯಲ್ಲಿ ಕೆಂಪು ಸಿಡಾರ್, ಹೂಪ್‌ಪೈನ್, ಬೀಟೆ ಮುಂತಾದ ಮೃದು ಮರಗಳಿವೆ.

ಅರಣ್ಯಗಳಲ್ಲಿ ವಿವಿಧ ಬಗೆಯ ಗಿಳಿಗಳು, ಕೊಕ್ಯಾಟು, ಎಮು, ಟರ್ಕಿ ಕೋಳಿ ಇವೆ. ಸ್ತನಿಗಳಲ್ಲಿ ಪ್ರಧಾನವಾದವು ವಾಂಬಾಟ್, ಕೋವಲ, ಒಪಾಸಂ, ಕಾಂಗರು. ಇಲ್ಲಿ ಅನೇಕ ಬಗೆಯ ವಿಷ ಸರ್ಪಗಳಿವೆ. ಪಶ್ಚಿಮದ ನದಿಗಳಲ್ಲಿ ಮೀನುಗಳು ಹೇರಳವಾಗಿ ಕಂಡುಬರುತ್ತವೆ.

ಜನತೆ: ನ್ಯೂ ಸೌತ್‌ವೇಲ್ಸ್ ಜನ ಆಸ್ಟ್ರೇಲಿಯದ ಇತರ ಭಾಗಗಳ ಜನರನ್ನೇ ಹೋಲುತ್ತಾರೆ. ಇಲ್ಲಿಯ ಜನರಲ್ಲಿ ಶೇ. 80ರಷ್ಟು ಮಂದಿ ಇಂಗ್ಲೆಂಡಿನಿಂದಲೂ ಶೇ. 20 ರಷ್ಟು ಮಂದಿ ಐರ್ಲೆಂಡಿನಿಂದಲೂ ಬಂದವರ ವಂಶದವರು. ಉಳಿದವರ ಪೂರ್ವಜರು ಯುರೋಪಿಯನ್ನರು. ಇಲ್ಲಿರುವ ಮೂಲವಾಸಿಗಳ ಸಂಖ್ಯೆ ಸು. 24 ಸಾವಿರ. ರಾಜ್ಯದ ಜನ ಸಾಂದ್ರತೆ ಅತ್ಯಂತ ಕಡಿಮೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 75 ರಷ್ಟು ಜನ ರಾಜ್ಯದ ನ್ಯೂ ಕ್ಯಾಸೆಲ್, ಸಿಡ್ನಿ ಮತ್ತು ವೂಲಂಗಾಂಗ್‌ಗಳಲ್ಲಿ ನೆಲೆಸಿದ್ದಾರೆ. ಶೇ. 88ರಷ್ಟು ಮಂದಿ ಕ್ರೈಸ್ತರು. ಇವರಲ್ಲಿ ಆಂಗ್ಲೀಕನರೂ ರೋಮನ್ ಕೆಥೊಲಿಕರು ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆ. ಸರ್ಕಾರದ ವ್ಯವಹಾರದ ಭಾಷೆ ಇಂಗ್ಲಿಷ್.

ಹೆಚ್ಚು ಜನಸಂಖ್ಯೆಯ ಪಟ್ಟಣಗಳೆಂದರೆ : ಸಿಡ್ನಿ (ಆಡಳಿತ ಕೇಂದ್ರ), ನ್ಯೂ ಕ್ಯಾಸೆಲ್, ವೂಲಂಗಾಂಗ್, ಬ್ರೋಕನ್ ಹಿಲ್, ವಾಗವಾಗ, ಆಲ್ಬರಿ, ಟಾಂ ವರ್ತ್, ಆರೆಂಜ್, ಗೋಬರ್ನ್, ಸೆಸನಾಕ್ ಮತ್ತು ಬ್ಲೂ ಮೌಂಟನ್.

ಆರ್ಥಿಕತೆ : ನ್ಯೂ ಸೌತ್ ವೇಲ್ಸ್ ಆಸ್ಟ್ರೇಲಿಯದ ಆರ್ಥಿಕತೆಯಲ್ಲಿ ಅತ್ಯಂತ ಪ್ರಮುಖವಾದುದು. ಇದು ಆಸ್ಟ್ರೇಲಿಯದ ಒಟ್ಟು ಕುರಿಗಳ 1/3 ಭಾಗ, ದನಗಳ 1/5 ಭಾಗ ಹಾಗೂ ಹಂದಿಗಳ 1/3 ಭಾಗವನ್ನು ಒಳಗೊಂಡಿದೆ. ವ್ಯವಸಾಯ ಪ್ರಧಾನ ರಾಜ್ಯ. ಮುಖ್ಯ ಬೆಳೆಗಳು: ಗೋದಿ, ಓಟ್ಸ್, ಮುಸುಕಿನ ಜೋಳ, ಬತ್ತ, ಆಲೂಗಡ್ಡೆ, ಕಬ್ಬು, ಹತ್ತಿ, ದ್ರಾಕ್ಷಿ, ಪಶುಪಾಲನೆ ಮತ್ತು ಹೈನುಗಾರಿಕೆ ಮುಖ್ಯವಾಗಿವೆ. ಆಸ್ಟ್ರೇಲಿಯದ ಗೋದಿ, ಮೆಕ್ಕೆಜೋಳ ಹಾಗೂ ಜೋಳಗಳ ಹೆಚ್ಚು ಪಾಲು ಈ ರಾಜ್ಯದಲ್ಲಿ ಉತ್ಪಾದಿಸಲ್ಪಡುವುದು.

ಅರಣ್ಯಗಳಲ್ಲಿಯ ಯೂಕಲಿಪ್ಟಸ್, ಸಿಡಾರ್, ತೈಲಪರ್ಣಿ, ಕರಿಮರ – ಇವುಗಳಿಂದ ರಾಜ್ಯಕ್ಕೆ ಆದಾಯ ಬರುತ್ತದೆ. ಪೆಸಿಫಿಕ್ ಸಾಗರ ತೀರದಲ್ಲಿ ಅಧಿಕವಾಗಿ ಮೀನುಹಿಡಿಯಲಾಗುತ್ತದೆ.

ಸಿಡ್ನಿ ನಗರದಲ್ಲಿ ದೊಡ್ಡ ಕೈಗಾರಿಕೆಗಳು ಕೇಂದ್ರೀಕೃತವಾಗಿವೆ. ಮೀನು, ಮಾಂಸ, ಹಾಲು, ಹಣ್ಣು, ಬೆಣ್ಣೆ ಮೊದಲಾದವುಗಳ ಡಬ್ಬೀಕರಣ; ಬಟ್ಟೆ, ಸಿಗರೇಟು, ಚುಟ್ಟಾ, ಬಣ್ಣ ಕಾಗದ ಮುಂತಾದವುಗಳ ತಯಾರಿಕೆ – ಇವು ಮುಖ್ಯ ಕೈಗಾರಿಕೆಗಳು. ಹಂಟರ್ ಕಣಿವೆಯು ದ್ರಾಕ್ಷಾರಸದ ಉತ್ಪಾದನೆಗೆ ಹೆಸರಾದುದು. ರಾಜ್ಯದಲ್ಲಿ ನ್ಯೂ ಕ್ಯಾಸ್ಲ್‌ನ ಉತ್ತರದ ಹಂಟರ್ ಕಣಿವೆ, ವೂಲಂಗಾಂಗ್ ಹಾಗೂ ಲಿತ್‌ಗೌ ಪ್ರದೇಶಗಳಲ್ಲಿ ಕಲ್ಲಿದ್ದಲ ಗಣಿಗಳಿವೆ. ಬ್ರೋಕನ್ ಹಿಲ್‌ನ ಸುತ್ತಮುತ್ತ ಬೆಳ್ಳಿ, ಸೀಸ ಹಾಗೂ ತವರದ ಗಣಿಗಳೂ ಕೋಬರ್ ಬಳಿ ತಾಮ್ರದ ಗಣಿಯೂ ಇವೆ.

ಸಾರಿಗೆ : ರಸ್ತೆ ಹಾಗೂ ರೈಲು ಮಾರ್ಗಗಳು ಸಾರಿಗೆಯ ಮುಖ್ಯ ಮಾಧ್ಯಮಗಳು. ಸಿಡ್ನಿಯಿಂದ ಇತರ ಪಟ್ಟಣಗಳಿಗೆ ರೈಲುಮಾರ್ಗಗಳುಂಟು. ಸಿಡ್ನಿಯಲ್ಲಿ ವಿವಿಧ ಬಡಾವಣೆಗಳಿಗೆ ಸುರಂಗ ರೈಲುಮಾರ್ಗಗಳನ್ನು ನಿರ್ಮಿಸಲಾಗಿದೆ. ಸಿಡ್ನಿ ದೊಡ್ಡ ರೈಲ್ವೆ ಕೂಡುನಿಲ್ದಾಣ, ರೈಲುಮಾರ್ಗಗಳು ತೀರಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೆ, ಒಳನಾಡಿನಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಸಾಗಿವೆ. ಸಿಡ್ನಿ–ಬ್ರೋಕನ್ ಹಿಲ್ ರೈಲು ಮಾರ್ಗದ ಉದ್ದ 1,120 ಕಿಮೀ. ನ್ಯೂ ಸೌತ್ ವೇಲ್ಸ್ ನಾಲ್ಕು ಮುಖ್ಯ ಬಂದರುಗಳನ್ನು ಹೊಂದಿದೆ. ಇವುಗಳೆಂದರೆ ಸಿಡ್ನಿ, ನ್ಯೂಕ್ಯಾಸಲ್, ಪೋರ್ಟ್‌ಕೆಂಬ್ಲ ಮತ್ತು ಬಾಟನಿ ಬೇ. ಸಿಡ್ನಿಯ ಪೋರ್ಟ್ ಜ್ಯಾಕ್‌ಸನ್ ಪ್ರಪಂಚದ ಅತ್ಯುತ್ತಮ ಬಂದರುಗಳಲ್ಲಿ ಒಂದಾಗಿದೆ. ವಿಮಾನಗಳ ಹಾರಾಟ ಪ್ರಧಾನವಾಗಿ ಪ್ರಯಾಣಿಕರನ್ನು ಸಾಗಿಸುವುದಕ್ಕೆ, ಸಿಡ್ನಿಯಿಂದ ಅನೇಕ ಕಡೆಗಳಿಗೆ ವಿಮಾನ ಸಂಚಾರವುಂಟು. ಸಿಡ್ನಿಯ ಕಿಂಗ್ಸ್‌ಫೋರ್ಡ್‌ಸ್ಮಿತ್ ವಿಮಾನ ನಿಲ್ದಾಣದಲ್ಲಿ ಜೆಟ್ ವಿಮಾನಗಳು ಇಳಿಯಲು ಸೌಲಭ್ಯಗಳಿವೆ. (ವಿ.ಜಿ.ಕೆ.)

**ನ್ಯೂ ಹೆಬ್ರಿಡೀಸ್:** ಪೆಸಿಫಿಕ್ ಸಾಗರದ ನೈರುತ್ಯ ಭಾಗದಲ್ಲಿರುವ 12 ದೊಡ್ಡ ಮತ್ತು ಹಲವಾರು ಚಿಕ್ಕ ದ್ವೀಪ ಸಮೂಹ, ಫಿಜಿಯ ಪಶ್ಚಿಮಕ್ಕೆ 800 ಕಿಮೀ ಮತ್ತು ಆಸ್ಟ್ರೇಲಿಯದ ಪೂರ್ವಕ್ಕೆ 1,760 ಕಿಮೀ ದೂರದಲ್ಲಿವೆ. ಈ ದ್ವೀಪಗಳ ಆಡಳಿತವನ್ನು ಫ್ರಾನ್ಸ್ ಮತ್ತು ಬ್ರಿಟನ್ ಜಂಟಿಯಾಗಿ ನಡೆಸುತ್ತವೆ. ದಕ್ಷಿಣೋತ್ತರವಾಗಿ 640 ಕಿಮೀ ಹಬ್ಬಿರುವ ಇವುಗಳ ವಿಸ್ತೀರ್ಣ 14,763 ಚ.ಕಿಮೀ. ಜನಸಂಖ್ಯೆ 205754 (2005). ನ್ಯೂ ಹೆಬ್ರಿಡೀಸ್‌ನಲ್ಲಿ ಪ್ರಮುಖವಾದ ದ್ವೀಪಗಳು ಬ್ಯಾಂಕ್ಸ್, ಎಸ್ಪಿರಿಟೂ ಸ್ಯಾಂಟೋ, ಓಬ, ಪೆಂಟಿಕಾಸ್ಟ್, ಮಾಲೆಕೂಲ, ಆಂಬ್ರಿಮ್, ಏಫ್ಯಾಟೀ ಮತ್ತು ಎರೊಮ್ಯಾಂಗ. ರಾಜಧಾನಿ ವೀಲ. ಇದು ಏಫ್ಯಾಟೀ ದ್ವೀಪದಲ್ಲಿದೆ.

ಈ ದ್ವೀಪಗಳ ಮೇಲ್ಮೈಲಕ್ಷಣ ವೈವಿಧ್ಯಮಯವಾದ್ದು. ಪರ್ವತಗಳು ಉನ್ನತ ಹಾಗೂ ತಗ್ಗಿನ ಪ್ರಸ್ಥಭೂಮಿಗಳು. ಏರಿಳಿತದ ನೆಲ, ಕರಾವಳಿಯ ಉಬ್ಬು ನೆಲ, ಕಡಲ ಕರೆಯಿಂದಾಚೆಗೆ ಹವಳದ ದಿಬ್ಬ–ಇವುಗಳಿಂದ ಈ ದ್ವೀಪಗಳು ಕೂಡಿವೆ. ಇಲ್ಲಿ ಸುಣ್ಣ ಕಲ್ಲುಗಳೂ ಜ್ವಾಲಾಮುಖಿಯ ಶಿಲೆಗಳೂ ಪ್ರಧಾನವಾಗಿವೆ. ಆಗಿಂದಾಗ್ಗೆ ಭೂಕಂಪಗಳಾಗುತ್ತಲೇ ಇರುತ್ತವೆ. ಈ ದ್ವೀಪಸ್ತೋಮದ ಅತ್ಯುನ್ನತ ಶಿಖರ ಟ್ಯಾಬ್‌ವೆಮಸಾನ (1,888 ಮೀ) ಇದು ಇಲ್ಲಿಯ ಅತ್ಯಂತ ದೊಡ್ಡ ದ್ವೀಪವಾದ ಎಸ್ಪಿರಿಟೂ ಸ್ಯಾಂಟೋ ದ್ವೀಪದಲ್ಲಿದೆ. ದ್ವೀಪಗಳನ್ನು ಕಾಡುಗಳು ಆವರಿಸಿವೆ. ದಕ್ಷಿಣಕ್ಕಿಂತ ಉತ್ತರದಲ್ಲಿ ಹೆಚ್ಚು ಮಳೆ ಬೀಳುತ್ತವೆ. ಉಷ್ಣತೆಯೂ ಉತ್ತರದಲ್ಲೇ ಅಧಿಕ. ನೆಲದ ಮೇಲಣ ಪ್ರಾಣಿಗಳು ವಿರಳ. ಆದರೆ ಪಕ್ಷಿ ಸಂಕುಲ ವಿಪುಲವಾಗಿದೆ.

ಪಾಶ್ಚಾತ್ಯರ ಪೈಕಿ ಇದನ್ನು ಮೊದಲು ನೋಡಿದವರು ಪೋರ್ಚುಗೀಸ್ ನಾವಿಕ ಪೇದ್ರೂ ಫರ್ನಾಂಡಿಷ್ ದೆ ಕ್ವೈರೋಸ್(1606). ಅನಂತರ ಫ್ರೆಂಚ್ ಪರಿಶೋಧಕ ಲೂಯಿದ ಲೂಗ್ಯಾನ್‌ವೀಲ್ (1768). ಇಂಗ್ಲಿಷ್ ನಾವಿಕ ಜೇಮ್ಸ್ ಕುಕ್ ಇದರ ಮೇಲೆ ಬ್ರಿಟಿಷ್ ಹಕ್ಕನ್ನು ಸ್ಥಾಪಿಸಿದ (1887). ಬ್ರಿಟಿಷರಿಗೂ ಫ್ರೆಂಚರಿಗೂ ಇವುಗಳ ಒಡೆತನದ ಬಗ್ಗೆ ಎದ್ದಿದ್ದ ವಿವಾದ 1887ರಲ್ಲಿ ಪರಿಹಾರವಾಯಿತು. ಇವುಗಳ ಆಡಳಿತಕ್ಕೆ ಇವೆರಡೂ ದೇಶಗಳ ಜಂಟಿ ನೌಕಾಆಯೋಗ ನೇಮಕವಾಯಿತು. 1906ರಲ್ಲಿ ಇವೆರಡೂ ದೇಶಗಳು ಸಹಪ್ರಭುತ್ವದ ಸರ್ಕಾರದ ಸ್ಥಾಪನೆಗೆ ಒಪ್ಪಿದವು. ಸ್ಥಳೀಯರ ಮೇಲೆ ಇವುಗಳ ಜಂಟಿ ಅಧಿಕಾರ ಇದೆ. ಇಲ್ಲಿರುವ ಬ್ರಿಟಿಷ್ ಫ್ರೆಂಚ್ ಕಮಿಷನರು ತಂತಮ್ಮ ರಾಷ್ಟ್ರೀಯರ ಮೇಲೆ ಅಧಿಕಾರ ಹೊಂದಿದ್ದಾರೆ.

ಕೊಬ್ಬರಿ, ಕೋಕೋ, ಕಾಫಿ, ಮಾಂಸ ಇಲ್ಲಿಂದ ರಫ್ತಾಗುವ ವಸ್ತುಗಳು. ಇವು ಮುಖ್ಯವಾಗಿ ಫ್ರಾನ್ಸಿಗೆ ನಿರ್ಯಾತವಾಗುತ್ತವೆ. ವೀಲ ಮತ್ತು ಲೂಗ್ಯಾನ್‌ವಿಲ್ ಬಂದರುಗಳಿಂದ ಇವು ಸಾಗುತ್ತವೆ. ಲ್ಯೂಗಾನ್‌ವಿಲ್ ಬಂದರು ಎಸ್ಪಿರಿಟೂ ಸ್ಯಾಂಟೋ ದ್ವೀಪದ ಪೂರ್ವತೀರದಲ್ಲಿದೆ. ಮೀನು ಹಿಡಿಯುವುದೂ ಪ್ರವಾಸೋದ್ಯಮವೂ ಇಲ್ಲಿಯ ಜನರ ಸಂಪಾದನೆಯ ಇನ್ನೆರಡು ಮಾರ್ಗಗಳು.

ಇಲ್ಲಿಯ ಮೂಲವಾಸಿಗಳು ಮೆಲನೇಷಿಯನರು. ಯುರೋಪ್, ಚೀನ ಮತ್ತು ವಿಯೆಟ್ನಾಂ ಜನರೂ ತಾಹಿತಿಯನ್, ವಾಲಿಸ್ ದ್ವೀಪೀಯ ಮತ್ತು ನ್ಯೂ ಕ್ಯಾಟಲೋನಿಯನ್ ಜನರೂ ಇಲ್ಲಿದ್ದಾರೆ. (ಪಿ.ಬಿ.)

**ನ್ಯೂ ಹ್ಯಾಂಪ್‌ಶೈರ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಈಶಾನ್ಯ ಮೂಲೆಯಲ್ಲಿರುವ ಒಂದು ರಾಜ್ಯ. ಉತ್ತರದಲ್ಲಿ ಕೆನಡದ ಕ್ವಿಬೆಕ್ ಪ್ರಾಂತ್ಯ, ಪೂರ್ವದಲ್ಲಿ ಮೇನ್ ರಾಜ್ಯ ಮತ್ತು 29 ಕಿಮೀ ದೂರ ಅಟ್ಲಾಂಟಿಕ್ ಸಾಗರ. ದಕ್ಷಿಣದಲ್ಲಿ ಮೆಸಾಚುಸೆಟ್ಸ್ ರಾಜ್ಯ, ಪಶ್ಚಿಮದಲ್ಲಿ ವರ್ಮಾಂಟ್ ಇವೆ. ವಿಸ್ತೀರ್ಣ 24043 ಚ.ಕಿಮೀ. ಜನಸಂಖ್ಯೆ 12,99,500 (2004). ರಾಜಧಾನಿ ಕಾನ್‌ಕರ್ಡ್ (41,823) ರಾಜ್ಯದ ದಕ್ಷಿಣ ಮಧ್ಯದಲ್ಲಿದೆ. ಇತರ ಪ್ರಮುಖ ಪಟ್ಟಣಗಳು ಮ್ಯಾಂಚೆಸ್ಟರ್ (1,08,871), ನ್ಯಾಷವ (87,285) ಮತ್ತು ಪೋರ್ಟ್ಸ್‌ಮತ್ (2002).

ಮೇಲ್ಮೈಲಕ್ಷಣ : ಇದನ್ನು ಗ್ರಾನೈಟ್ ರಾಜ್ಯ ಎಂದು ಕರೆಯುವುದುಂಟು. ಈ ರಾಜ್ಯ ಪರ್ವತಮಯವಾಗಿದೆ. ಇಲ್ಲಿ ಸು. 1,500 ಶಿಖರಗಳಿವೆ. ವೈಟ್ ಶಿಖರ 1,917 ಮೀ ಎತ್ತರವಾಗಿದೆ. ರಾಜ್ಯದ ಸರಾಸರಿ ಎತ್ತರ ಸಮುದ್ರಪಾತಳಿಯಿಂದ ಸು. 305 ಮೀ. ರಾಜ್ಯದಲ್ಲಿ ಐದು ಮುಖ್ಯ ನದಿ ವ್ಯವಸ್ಥೆಗಳಿವೆ. ಅತ್ಯಂತ ದೊಡ್ಡ ನದಿ ಮೆರಿಮ್ಯಾಕ್. ಎರಡನೆಯದು ಕನೆಕ್ಟಿಕಟ್. ಉಳಿದ ಮೂರು ನದಿಗಳು ಸ್ಯಾಕೋ, ಆಂಡ್ರಸ್ಕಾಗಿನ್ ಮತ್ತು ಪಿಸ್ಕೇಟಕ್ವಾ.

ವಾಯುಗುಣ : ವಾಯುಗುಣದಲ್ಲಿ ತೀವ್ರ ವ್ಯತ್ಯಾಸಗಳಾಗುತ್ತವೆ. ಚಳಿಗಾಲದಲ್ಲಿ –$17^0$ಸೆ. ಗಿಂತ ಕಡಿಮೆ ಉಷ್ಣತೆಗೆ ಇಳಿಯಬಹುದು. ಅನೇಕ ದಿವಸಗಳವರೆಗೆ ಹೀಗಿರುವುದುಂಟು. ಬೇಸಗೆ ತಂಪಾಗಿರುತ್ತದೆ. ವಾರ್ಷಿಕ ಮಧ್ಯ ಉಷ್ಣತೆ $44^0$ಸೆ. ವಾರ್ಷಿಕ ಮಳೆ 102 ಸೆಂಮೀ. (ಜಿ.ಕೆ.ಯು.)

**ನ್ಯೂಕ್ಯಾಸಲ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಇಂಡಿಯಾನ ರಾಜ್ಯದ ಪೂರ್ವಭಾಗದಲ್ಲಿ ಹೆನ್ರಿ ಕೌಂಟಿಯಲ್ಲಿರುವ ನಗರ ಮತ್ತು ಆಡಳಿತ ಕೇಂದ್ರ. ಬಲೂ ನದಿಯ ದಡದ ಮೇಲೆ ಇಂಡಿಯಾನಪೋಲಿಸ್‌ಗೆ ಈಶಾನ್ಯದಲ್ಲಿ ಸು. 224 ಕಿಮೀ ದೂರದಲ್ಲಿದೆ. ಇದನ್ನು 1819ರಲ್ಲಿ ಸ್ಥಾಪಿಸಲಾಯಿತು. 1839ರಲ್ಲಿ ಇದಕ್ಕೆ ನಗರ ಮಾನ್ಯತೆ ದೊರಕಿತು. *

**ನ್ಯೂಗಿನಿ:** ಇದು ಪ್ರಪಂಚದ ಎರಡನೆಯ ಅತಿದೊಡ್ಡ ದ್ವೀಪ. ಗ್ರೀನ್‌ಲೆಂಡ್ ಮಾತ್ರ ಇದಕ್ಕಿಂತ ದೊಡ್ಡದಾದುದು. ಭೂವೈಜ್ಞಾನಿಕವಾಗಿ ಇದನ್ನು ಆಸ್ಟ್ರೇಲಿಯ ಖಂಡದ ವಿಸ್ತರಣೆಯೆಂದೇ ಭಾವಿಸಲಾಗಿದೆ. ಇದು ಆಸ್ಟ್ರೇಲಿಯದ ಉತ್ತರಕ್ಕೆ ಅತ್ಯಂತ ಹತ್ತಿರವೆಂಬಲ್ಲಿ ಕೇವಲ ಸು. 160 ಕಿಮೀ ದೂರದಲ್ಲಿದೆ. ಇದು ದ. ಅ. $0^019'$–$10^043'$ ಮತ್ತು ಪೂ. ರೇ. $130^045'$– $150^048'$ ನಡುವೆ ವಿಸ್ತರಿಸಿದೆ. ನ್ಯೂಗಿನಿ ದ್ವೀಪ ಆಸ್ಟ್ರೇಲಿಯದ ಕಡೆಯಿಂದ ಇಂಡೊನೇಷ್ಯ ದ್ವೀಪಗಳ ಕಡೆಗೆ ಕೊಕ್ಕು ಚಾಚಿದ ಪಕ್ಷಿಯಂತೆ ತೋರುತ್ತದೆ. ಸು. 2,400 ಕಿಮೀ ಉದ್ದವಾಗಿಯೂ ಮಧ್ಯದಲ್ಲಿ 800 ಕಿಮೀ ಅಗಲವಾಗಿಯೂ ಇರುವ ಈ ದ್ವೀಪದ ವಿಸ್ತೀರ್ಣ 7,75,21 ಚ.ಕಿ.ಮೀ.

ರಾಜಕೀಯವಾಗಿ ನ್ಯೂಗಿನಿ ದ್ವೀಪವು ಎರಡು ಭಾಗಗಳಾಗಿ ಪರಿಣಮಿಸಿದೆ. ಪೂ.ರೇ. $141^0$ಯ (ಫ್ಲೈ ನದಿ ಗಡಿಯಾಗಿರುವ ಸ್ವಲ್ಪ ದೂರದಲ್ಲಿ) ಪಶ್ಚಿಮಕ್ಕಿರುವ ಸು. $^1/_2$ ಭಾಗವು ಇಂಡೋನೇಷ್ಯ ದೇಶದ ಒಂದು ಪ್ರಾಂತ್ಯವಾಗಿದೆ. ಇದನ್ನು ಇರೀಯಾನ್ ಜಯ (ಪಶ್ಚಿಮ ಇರೀಯಾನ್) ಎಂದು ಕರೆಯುತ್ತಾರೆ. ಉಳಿದ ಭಾಗದ ದಕ್ಷಿಣಾರ್ಧ ಪಪುವ ಪ್ರದೇಶವೆನಿಸಿದ್ದು ಆಸ್ಟ್ರೇಲಿಯಕ್ಕೆ ಸೇರಿತ್ತು. 1975 ಸೆಪ್ಟೆಂಬರ್ 16ರಂದು ಸ್ವತಂತ್ರವಾಯಿತು. ನ್ಯೂಗಿನಿಯ ರಾಜಕೀಯ ವಿಭಾಗದಲ್ಲಿ ಸಮೀಪದ ನೂರಾರು ದ್ವೀಪಗಳು ಸೇರಿವೆ. ಇವನ್ನೂ ಸೇರಿಸಿದರೆ ಇವುಗಳ ಒಟ್ಟು ವಿಸ್ತೀರ್ಣ ಸು. 4,53,000 ಚ.ಕಿಮೀ. ಜನಸಂಖ್ಯೆ ಪಪುವ ನ್ಯೂಗಿನಿ ಸು. 5.5 ದ. ಲಕ್ಷಗಳು (2005).

ಭೂಸ್ವರೂಪ: ನ್ಯೂಗಿನಿ ದ್ವೀಪದ ಭೂಭೌತ ಚರಿತ್ರೆಯನ್ನು ಸರಿಯಾಗಿ ಶೋಧಿಸಿಲ್ಲ. ಪ್ಲೀಸ್ಟೊಸೀನ್ ಯುಗದಲ್ಲಿ ಇದು ಬಹುಶಃ ಆಸ್ಟ್ರೇಲಿಯದ ಭಾಗವಾಗಿದ್ದಿರಬಹುದು. ಅದರ ನಡುವೆ ಉದ್ದಕ್ಕೂ 80–240 ಕಿಮೀ ಅಗಲದ ಉನ್ನತ ಪರ್ವತ ಶ್ರೇಣಿಗಳು ಹಬ್ಬಿವೆ. ಇವುಗಳಲ್ಲಿ ಅನೇಕ ಶಿಖರಗಳು 4,570 ಮೀ ಗಳಿಗಿಂತ ಎತ್ತರವಾಗಿವೆ. ಈ ಪ್ರದೇಶ ಭೂಮಧ್ಯ ರೇಖೆಗೆ ತೀರ ಹತ್ತಿರವಾಗಿದ್ದರೂ ಎತ್ತರವಾದ ಶಿಖರಗಳು ನಿತ್ಯಹಿಮಾವೃತವಾಗಿವೆ. ಬಿಸ್ಮಾರ್ಕ್, ಓವೆನ್ ಮೊದಲಾದ ಶಿಖರಗಳಿವೆ; ಇವುಗಳಾಚೆ ಪೂರ್ವಕ್ಕೆ ಹೊಂದಿಕೊಂಡಿರುವ ದ್ವೀಪಗಳಲ್ಲಿ ಸಜೀವ ಜ್ವಾಲಾಮುಖಿಗಳಿವೆ. ಈ ಶ್ರೇಣಿಗಳಲ್ಲಿ ಹುಟ್ಟಿ ಸಮುದ್ರಕ್ಕೆ ವೇಗವಾಗಿ ಧಾವಿಸುವ ನದಿಗಳಲ್ಲಿ ವಾಯವ್ಯದ ಕಡೆಗೆ ಮ್ಯಾಂಬರಾಮೋ.

ದಕ್ಷಿಣದ ಕಡೆಗೆ ಡೀಗುಲ್, ಉತ್ತರದ ಕಡೆಗೆ ಸೆಪಿಕ್, ಈಶಾನ್ಯದ ಕಡೆಗೆ ಮಾರ್ಖಮ್, ಆಗ್ನೇಯದ ಸಮುದ್ರ ಸೇರುವ ಪುರಾರೀ ಮತ್ತು ಫ್ಲೈ ಹೆಸರಿಸತಕ್ಕವು. ಸೆಪಿಕ್ ನದಿಯಲ್ಲಿ 480 ಕಿಮೀ ವರೆಗೂ ಇತರ ಹಲವು ನದಿಗಳಲ್ಲಿ 160 ಕಿಮೀ ವರೆಗೂ ನೌಕಾಯಾನ ಸಾಧ್ಯವಿದೆ. ಶ್ರೇಣಿಗಳ ನಡುವೆ ಬಹಳ ಕಡಿದಾದ ಕಣಿವೆಯಿದೆ. ಅದಕ್ಕೆ ಸರೋವರದ ಮೈದಾನವೆಂದು ಹೆಸರು. ಇಲ್ಲಿ ರಾವುಫೇರ್ ಮತ್ತು ಐಡೆನ್‌ಬರ್ಗ್ ನದಿಗಳು ಹರಿಯುತ್ತವೆ. ಚಿಕ್ಕಪುಟ್ಟ ಸರೋವರಗಳೂ ಇವೆ.

ಕರಾವಳಿಯ ಬಯಲಿನ ಬಹುಭಾಗ ವಿಸ್ತಾರವಾದ ಜವುಗು ನೆಲಗಳು ಗುಲ್ಮವೃಕ್ಷ ಹಾಗೂ ಎತ್ತರದ ಹುಲ್ಲಿನಿಂದ ಕೂಡಿವೆ. ಒಳನಾಡಿನಲ್ಲಿ ಮಳೆಯ ನೀರು ರಭಸದಿಂದ ಹರಿದು ಮಣ್ಣನ್ನು ಕೊಚ್ಚಿಹಾಕಿರುವುದರಿಂದ ನೆಲ ಬಹುಮಟ್ಟಿಗೆ ಬರಡಾಗಿದೆ. ಮಧ್ಯದ ಪ್ರಸ್ಥಭೂಮಿ ಮತ್ತು ಅಗಲವಾದ ಕಣಿವೆ ಮಾತ್ರ ಹುಲುಸಾಗಿವೆ.

ವಾಯುಗುಣ: ಈ ದ್ವೀಪ ಸಮಭಾಜಕ ವೃತ್ತದ ವಾಯುಗುಣವನ್ನು ಹೊಂದಿದೆ. ಸಮುದ್ರಮಟ್ಟದಲ್ಲಿ ಉಷ್ಣತೆಯ ಸರಾಸರಿ $22^{0}$ ಸೆ. ಇರುತ್ತದೆ. ಅನೇಕ ಪ್ರದೇಶಗಳಲ್ಲಿ 25 ಸೆಂಮೀ ಗಳಿಗಿಂತ ಹೆಚ್ಚು ಮಳೆ ಬೀಳುತ್ತದೆ.

ಸಸ್ಯ ಮತ್ತು ಪ್ರಾಣಿಸಂಪತ್ತು: ನ್ಯೂಗಿನಿಯ ಶೇ.70ರಷ್ಟು ಭೂಮಿ ಅರಣ್ಯಮಯ. ಸಸ್ಯಶಾಸ್ತ್ರೀಯ ಸಮೀಕ್ಷೆ ಇನ್ನೂ ಅಪೂರ್ಣವಾಗಿದೆ. ಈ ದ್ವೀಪವು ಪ್ರಪಂಚದ ಅತಿಹೆಚ್ಚು ಜೀವ ವೈವಿಧ್ಯತೆಗಳಿಂದ ಕೂಡಿದೆ. ಆಸ್ಟ್ರೇಲಿಯದ ಸಸ್ಯ ಪ್ರಪಂಚದ ಹೋಲಿಕೆಯಿದ್ದರೂ ಭಾರತ-ಮಲೇಷ್ಯ ವಲಯದ ಪ್ರಭಾವವೂ ಇದೆ. 1,829 ಮೀ ಗಿಂತ ತಗ್ಗಾದ ಪ್ರದೇಶಗಳಲ್ಲಿ ನಿತ್ಯ ಹರಿದ್ವರ್ಣದ ಅರಣ್ಯಗಳು ಸೂರ್ಯಪ್ರಕಾಶವನ್ನು ಒಳಗೆ ಬಿಡದಷ್ಟು ದಟ್ಟವಾಗಿವೆ. ಇದಕ್ಕಿಂತ ಎತ್ತರವಾದ ಪ್ರದೇಶಗಳಲ್ಲಿ ಎಲೆಮೊನಚು ಅರಣ್ಯಗಳಿವೆ. ಎತ್ತರವಾದ ಕಾಂಗರೂ ಮತ್ತು ಕುನಾಯಿ ಹುಲ್ಲಿನ ಪ್ರದೇಶಗಳೂ ಸಾಕಷ್ಟಿವೆ. ದ್ವೀಪದಲ್ಲಿ ಒಳ್ಳೆ ಗಟ್ಟಿಯಾದ ಮರಗಳು ಸಾಕಷ್ಟಿದ್ದರೂ ಸಂಪರ್ಕ ಮಾರ್ಗಗಳಿಲ್ಲದೆ ಅವುಗಳ ವ್ಯಾಪಾರಿ ವಿನಿಯೋಗ ಆಗಿಲ್ಲ.

ಪ್ರಾಣಿ ಸಂಪತ್ತು: ಈ ವಿಷಯದಲ್ಲಿ ನ್ಯೂಗಿನಿ ಆಸ್ಟ್ರೇಲಿಯಕ್ಕೆ ಸಮೀಪವಾಗಿದೆಯಲ್ಲದೆ, ದೀರ್ಘಕಾಲದಿಂದ ಇದು ಪ್ರತ್ಯೇಕವಾಗಿರುವುದರಿಂದ ಆಸ್ಟ್ರೇಲಿಯದಲ್ಲಿ ಅಳಿದುಹೋದ ಕೆಲವು ಪ್ರಾಣಿಜಾತಿಗಳು ಇಲ್ಲಿ ಉಳಿದಿವೆ. ಮಾರ್ಸ್ಯೂಪಿಯಲ್ ವರ್ಗದ 100ಕ್ಕೂ ಹೆಚ್ಚು ಪ್ರಾಣಿಜಾತಿಗಳಿವೆ. ವೃಕ್ಷವಾಸಿ ಕಾಂಗರು ಅಥವಾ ಹಾರಾಡುವ ನರಿ ಎಲ್ಲಕ್ಕಿಂತ ದೊಡ್ಡದು. ಎಚಿಡ್ನಾ ಎಂಬ ತತ್ತಿ ಇಡುವ ಸಸ್ತನಿಯೊಂದು ಇಲ್ಲಿಯ ಪ್ರಾಣಿ ವಿಶೇಷ. ದಸ್ಯೂರ್ ಎಂಬ ಸ್ಥಳೀಯ ಬೆಕ್ಕು ಇಲ್ಲಿಯ ಮಾಂಸಾಹಾರಿ ಪ್ರಾಣಿ, ಬಗೆಬಗೆಯ ಮೊಸಳೆಗಳು. ಆಮೆಗಳು, ಓತಿಕ್ಯಾತಗಳು, ಹೆಬ್ಬಾವನ್ನೊಳಗೊಂಡು ವಿವಿಧ ಜಾತಿಯ ವಿಷವಿಲ್ಲದ ಹಾಗೂ ವಿಷಯುಕ್ತ ಹಾವುಗಳು, 80ಕ್ಕೂ ಹೆಚ್ಚು ಜಾತಿ ಚೇಳುಗಳು, ಜಿಗಣೆಗಳು, ಮಲೇರಿಯ ರೋಗ ಹರಡುವ ಸೊಳ್ಳೆಗಳು ಇಲ್ಲಿವೆ.

ಪಕ್ಷಿ ಪ್ರಪಂಚ ಆಸ್ಟ್ರೇಲಿಯದ್ದಕ್ಕೆ ಜ್ಞಾತಿಯಾದ್ದು. ಪ್ರಪಂಚದ ಅತಿಸುಂದರ ಪಕ್ಷಿಗಳಾದ ಫಲಭಕ್ಷಕ ಸ್ವರ್ಗಪಕ್ಷಿ ಮತ್ತು ಕೆಸೋವರಿ ಎಂಬುವುಗಳ ಅನುಕ್ರಮವಾಗಿ 59 ಮತ್ತು 39 ಜಾತಿಗಳು ಇಲ್ಲಿ ಮತ್ತು ಪೂರ್ವ ಆಸ್ಟ್ರೇಲಿಯದಲ್ಲಿ ಮಾತ್ರ ಕಾಣಸಿಗುತ್ತವೆ. ಪಾರಿವಾಳ, ಗಿಳಿ, ಮಿಂಚುಳ್ಳಿ ಮೊದಲಾದ ಹಕ್ಕಿಗಳೂ ಅತ್ಯಂತ ಸುಂದರವಾದ ಚಿಟ್ಟೆಗಳು ಇಲ್ಲಿವೆ. ಕರಾವಳಿಯಲ್ಲಿ ಅನೇಕ ಜಾತಿಯ ಮೀನುಗಳು ಲಭ್ಯವಾಗಿವೆ.

ಜನಾಂಗಗಳು: ಇಲ್ಲಿಯ ಮೂಲನಿವಾಸಿ ಹೆಚ್ಚಿನವರು ಕಪ್ಪು ಜನರು. ಪ್ರಾಚೀನ ವಲಸೆಗಾರರಾದ ನಿಗ್ರಿಟೋ ಜಾತಿಯ 1.52 ಮೀಗಿಂತ ಕುಳ್ಳರಾದ ಜನರು, ಒಳ ನಾಡಿನ ದುರ್ಗಮ ಪ್ರದೇಶಗಳಲ್ಲಿದ್ದಾರೆ. ಪಪುವನರದು ಎರಡನೆಯ ಮುಖ್ಯ ಗುಂಪು, ಮಲಯ ಭಾಷೆಯಲ್ಲಿ ಉಣ್ಣೆ ಕೂದಲಿನವರೆಂದು ಅರ್ಥ ಕೊಡುತ್ತದೆ. ಇವರ ಹೆಸರು ಅನ್ವರ್ಥವಾದ್ದು. ಒಳನಾಡಿನ ತಗ್ಗುಪ್ರದೇಶ, ದಕ್ಷಿಣ ಮತ್ತು ಪಶ್ಚಿಮ ಕರಾವಳಿ ಇವರ ನೆಲೆ. ಕೊನೆಗೆ ಬಂದವರು ಮಲೆನೇಷಿಯನ್ನರು. ಇವರ ವಸತಿ ಹೆಚ್ಚಾಗಿ ಪಪುವ ಕರಾವಳಿ ಮತ್ತು ನೆರೆಹೊರೆಯ ದ್ವೀಪಗಳಲ್ಲಿ ಇದೆ. ಬಿಳಿಯರ ಸಂಖ್ಯೆ ಅಲ್ಪ.

ನ್ಯೂಗಿನಿಯಲ್ಲಿ ಪ್ರಚಲಿತವಾದ 500ಕ್ಕೂ ಮೇಲ್ಪಟ್ಟ ಭಾಷೆಗಳನ್ನು ಪಪುವನ್ ಮತ್ತು ಮೆಲನೇಷಿಯನ್ ಎಂದು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ಎಷ್ಟೋ ವೇಳೆ ನೆರೆಹೊರೆಯ ಹಳ್ಳಿಯವರಿಗೆ ಪರಸ್ಪರ ಭಾಷೆಗಳು ಅರ್ಥವಾಗುವುದಿಲ್ಲ. ಒಂದು ತರಹದ ಅಪಭ್ರಂಶ ಮೆಲನೇಷಿಯರ ವ್ಯವಹಾರಭಾಷೆಯದಾಗಿದೆ. ಇವರ ಧರ್ಮಗಳನ್ನು ಕ್ರೈಸ್ತ, ಮುಸ್ಲಿಂ ಮತ್ತು ಸ್ಥಳೀಯರು ಎಂದು ವರ್ಗೀಕರಿಸಿದ್ದರೂ ಹೆಚ್ಚಿನವರು ಪಿತೃಪೂಜಕರು, ಭೂತಪಿಶಾಚಿ, ಮಂತ್ರಮಾಟಗಳಲ್ಲಿ ವಿಶ್ವಾಸವುಳ್ಳವರು. ಮಾಟದ ಸಂಶಯದಿಂದ ಹಳ್ಳಿಹಳ್ಳಿಗಳ ನಡುವೆ ಯುದ್ಧಗಳಾಗುವುದುಂಟು. ಇತ್ತೀಚಿಗಿನವರೆಗೂ ತಲೆಬೇಟೆಯಂತ ಕ್ರೂರ ಪದ್ಧತಿ ರೂಢಿಯಲ್ಲಿತ್ತು. ಅನೇಕ ಜಾತಿಗಳವರು ಇನ್ನೂ ಎಲೆಯುಡುಗೆಯ ಅವಸ್ಥೆಯಲ್ಲಿದ್ದಾರೆ. ಇವರು ಕಲ್ಲು, ಕವಡೆ, ಸೀಳಿದ ಬಿದಿರಿನ ಆಯುಧಗಳನ್ನು ಬಳಸುತ್ತಾರೆ. ಗುಡಿಸಲುಗಳಲ್ಲಿ ಇವರ ವಾಸ. ಕೃಷಿಯೆಂದರೆ ಬಹುಶಃ ತೋಟಗಾರಿಕೆ. ಕಬ್ಬು, ಬಾಳೆ, ಗೆಣಸು, ಟಾರೋ ಎಂಬ ಸಸ್ಯದ ಗೆಡ್ಡೆ, ಸೊಪ್ಪು ಮತ್ತು ತೆಂಗಿನಕಾಯಿ ಬೆಳೆಸಿ ತಿನ್ನುತ್ತಾರೆ. ಕೆಲವು ಜನಾಂಗದವರಂತೂ ಸಬ್ಬಕ್ಕಿಯನ್ನೇ ಅವಲಂಬಿಸಿ ಬದುಕುತ್ತಾರೆ. ನಾಯಿ, ಹಂದಿ, ಹಕ್ಕಿ, ಆಮೆ, ಮೀನು, ಓತಿಕ್ಯಾತಗಳು ಮಾಂಸಾಹಾರದ ಮೂಲಗಳು. ಮಸಾಲೆ ದ್ವೀಪಗಳನ್ನು ಹುಡುಕುತ್ತ 1511ರಲ್ಲಿ ಬಂದ ಪೋರ್ಚುಗೀಸ್ ನಾವಿಕ ಅಂತಾನ್ಯೂದಿ ಅಬ್ರೇಯೂ ಈ ದ್ವೀಪವನ್ನು ಕಂಡ ಮೊದಲ ಯುರೋಪಿಯನ್ ಎಂದು ತಿಳಿಯಲಾಗಿದೆ. ದ್ವೀಪದ ಭೂಸ್ವರೂಪ ಆಫ್ರಿಕದ ಗಿನಿ ಪ್ರದೇಶವನ್ನು ಹೋಲುತ್ತಿದ್ದುದರಿಂದ ಸ್ಪ್ಯಾನಿಷ್ ಶೋಧಕರು ಇದಕ್ಕೆ ನ್ಯೂಗಿನಿಯೆಂದು ಕೊಟ್ಟ ಹೆಸರು ಶಾಶ್ವತವಾಯಿತು.

ಸಂಪನ್ಮೂಲಗಳು: ನ್ಯೂಗಿನಿಯ ವಿವಿಧ ಭಾಗಗಳಲ್ಲಿ ಅಪಾರ ಖನಿಜ, ಜಲವಿದ್ಯುತ್ ಮತ್ತು ಅರಣ್ಯ ಸಂಪನ್ಮೂಲಗಳಿವೆ. ಆದರೆ ಒಳನಾಡಿನ ದುರ್ಗಮತೆಯಿಂದಾಗಿ ಅವಿನ್ನೂ ಹೆಚ್ಚು ಉಪಯೋಗಕ್ಕೆ ಬಂದಿಲ್ಲ. ಪಶ್ಚಿಮ ಇರೀಯಾನ್ ಕರಾವಳಿಯಲ್ಲಿ ಡಚ್ಚರು ಕಲ್ಲೆಣ್ಣೆ ತೆಗೆಯತೊಡಗಿದರು. ಅದು ಮುಂದುವರಿದಿದೆ. ನ್ಯಾಸ ಪ್ರದೇಶದಲ್ಲಿ ಬಹುಕಾಲದಿಂದ ನಡೆದುಬಂದ ಗಣಿಗಳಿಂದ ಚಿನ್ನದ ಉತ್ಪಾದನೆ ಈಗ ಕುಗ್ಗಿದೆ. ಆದರೆ ಪರ್ವತದ ತಪ್ಪಲು ಪ್ರದೇಶಗಳಲ್ಲಿ ಕಾಫಿ, ಕೋಕೋ, ಚಹ ಮತ್ತು ಪೈರೇಥಿಯಂ ಬೆಳೆಗಳೂ ಕರಾವಳಿಯಲ್ಲಿ ತೆಂಗು, ಮೀನು ಉದ್ಯಮಗಳೂ ವಿಕಾಸ ಹೊಂದಿವೆ. ಖನಿಜಗಳ ಪೈಕಿ ತಾಮ್ರದ ಅಪಾರ ಅದಿರುಗಳ ವಿನಿಯೋಗ ಈಗ ಪ್ರಾರಂಭವಾಗಿ ಅದಕ್ಕೆ ಮಹತ್ತ್ವ ಬರಲಿದೆ. *

**ನ್ಯೂಪೋರ್ಟ್:** ಈ ಹೆಸರಿನ ಅನೇಕ ಪಟ್ಟಣಗಳಿವೆ. 1. ದಕ್ಷಿಣ ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಕಡಲ್ಗಾಲುವೆಯ ವೈಟ್ ದ್ವೀಪದಲ್ಲಿರುವ ಒಂದು ಪಟ್ಟಣ. ಮೆಡೀನ ನದಿಯ ವಿಶಾಲವಾದ ಅಳಿವೆಯಲ್ಲಿರುವ ವಜ್ರಾಕಾರದ ದ್ವೀಪದಲ್ಲಿ ಮಧ್ಯದ ಕಡೆಗೆ ಉ.ಅ. 50°42′ ಮತ್ತು ಪ.ರೇ. 1°18′ ಮೇಲೆ ಇದೆ. ಇದು ಒಂದು ಬರೋ. ಜನಸಂಖ್ಯೆ 13,70,119 (2002). ಹಿಂದೆ ಇದು ಬಹುಶಃ ಮೆಡೀನದ ರೋಮನ್ ವಸತಿಗಳಿಂದ ಕೂಡಿತ್ತು. ಅನಂತರ ಇಲ್ಲಿ ನೆಲೆಸಿದ್ದ ಸ್ಯಾಕ್ಸನ್ ವಸತಿಗಳು ಕಂಡುಬರುವುದಿಲ್ಲ. ಈ ಪಟ್ಟಣಕ್ಕೆ ಮೊದಲನೆಯ ಸನ್ನದು 1177 ಮತ್ತು 1184ರ ಮಧ್ಯೆ ನೀಡಲಾಯಿತು. ಇಲ್ಲಿ 1184 ರಿಂದಲೂ ಶನಿವಾರದಂದು ಸಂತೆ ನಡೆಯುತ್ತಾ ಬಂದಿದೆ. 1608 ರಲ್ಲಿ ಇದು ಬರೋ ಆಗಿ ಸನ್ನದು ಪಡೆಯಿತು. ಸೇಂಟ್ ತಾಮಸ್ ಆಫ್ ಕ್ಯಾಂಟರ್‌ಬರಿ ಚರ್ಚ್, ಪುರಸಭಾ ಭವನ ಇಲ್ಲಿಯ ಮುಖ್ಯ ಕಟ್ಟಡಗಳು. ನ್ಯೂಪೋರ್ಟ್‌ನ ವ್ಯಾಪಾರ ಸೌಲಭ್ಯಗಳಿಂದಾಗಿ ಅದು ಐಲ್ ಆಫ್ ವೈಟ್‌ನ ಆಡಳಿತಕೇಂದ್ರವಾಗಿದ್ದ ಕ್ಯಾರಿಸ್ ಬ್ರೂಕನ್ನು ಹಿಂದಕ್ಕೆ ಹಾಕಿ ತಾನೇ ಆ ಸ್ಥಾನ ಪಡೆದುಕೊಂಡಿತು. ಈಗ ಕ್ಯಾರಿಸ್‌ಬ್ರೂಕ್ ನ್ಯೂಪೋರ್ಟ್‌ನ ಒಂದು ಉಪನಗರ. ನ್ಯೂಪೋರ್ಟ್ ವೈಟ್ ದ್ವೀಪದ ವ್ಯವಸಾಯಕೇಂದ್ರ; ಇಲ್ಲಿಯ ಬಂದರಿನ ಮೂಲಕ ಮುಖ್ಯ ಭೂಭಾಗದೊಡನೆ ವಾಣಿಜ್ಯ ಬೆಳೆದಿದೆ. ನ್ಯೂಪೋರ್ಟಿನ ಮುಖ್ಯ ಕೈಗಾರಿಕೆಗಳು ಪ್ಲಾಸ್ಟಿಕ್ ತಯಾರಿಕೆ, ಮರಗೆಲಸ, ಗಿರಣಿಗಾರಿಕೆ ಮತ್ತು ಮದ್ಯಸಾರ ತಯಾರಿಕೆ. ನ್ಯೂಪೋರ್ಟ್‌ನ ಹೊರವಲಯದಲ್ಲಿ ಬ್ರಿಟನ್ನಿನ ಅತ್ಯಂತ ಭದ್ರ ಕಾರಾಗೃಹವಾದ ಪಾರ್ಕ್‌ಹರ್ಸ್ಟ್ ಇದೆ.

2. ಅಮೆರಿಕ ಸಂಯುಕ್ತ ಸಂಸ್ಥಾನಗಳ ಅರ್ಕಾನ್ಸಸ್‌ನ ಈಶಾನ್ಯ ದಿಕ್ಕಿನಲ್ಲಿ ವೈಟ್ ನದಿಯ ದಡದ ಮೇಲೆ ಈ ಹೆಸರಿನ ಒಂದು ಪಟ್ಟಣವಿದೆ. ಜ್ಯಾಕ್ಸನ್ ಕೌಂಟಿಯ ಆಡಳಿತಕೇಂದ್ರವಿದು. ಉತ್ತರದಲ್ಲಿರುವ ಜ್ಯಾಕ್ಸನ್‌ಪೋರ್ಟ್ ಪಟ್ಟಣದ ನಿವಾಸಿಗಳು ನದಿಗೆ ಅಡ್ಡಲಾಗಿ ಸೇತುವೆ ಕಟ್ಟಿ ನೇರ ಹೊರದಾರಿ ನಿರ್ಮಿಸಲು ಅವಕಾಶ ಕೊಡಲು ನಿರಾಕರಿಸಿದಾಗ ಆ ನದಿಯ ಮೇಲಿನ ಹೊಸ ಬಂದರಾಗಿ (ನ್ಯೂಪೋರ್ಟ್) ಇದನ್ನು 1870ರಲ್ಲಿ ಸ್ಥಾಪಿಸಲಾಯಿತು. 1875ರಲ್ಲಿ ಇದಕ್ಕೆ ಅಧಿಕೃತ ಮಾನ್ಯತೆ ದೊರಕಿತು. ಜ್ಯಾಕ್ಸನ್‌ಪೋರ್ಟ್ ಬದಲು ಇದನ್ನು ಕೌಂಟಿಯ ಆಡಳಿತ ಕೇಂದ್ರವಾಗಿ ಮಾಡಲಾಯಿತು (1892). ಆ ಪ್ರದೇಶದ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ಹಡಗಿನಲ್ಲಿ ಸಾಗಿಸುವ ಕೇಂದ್ರವಾಗಿ ಇದರ ಬೆಳೆವಣಿಗೆಯಾಯಿತು. ನದಿಯಿಂದ ಜೋಡು ಚಿಪ್ಪುಗಳನ್ನಾಯ್ದು ಅವುಗಳಿಂದ ಮುತ್ತಿನ ಸಂಗ್ರಹಣೆ. ಚಿಪ್ಪಿನ ಗುಂಡಿಗಳ ತಯಾರಿಕೆ-ಈ ಉದ್ಯಮಗಳು ಇಲ್ಲಿ ಬೆಳೆದುವು. ನಗರದ ಈಶಾನ್ಯದಲ್ಲಿದ್ದ ಸೇನಾ ವಿಮಾನ ನಿಲ್ದಾಣ ಪ್ರದೇಶವನ್ನು ಎರಡನೆಯ ಮಹಾಯುದ್ಧದ ಅನಂತರ ನ್ಯೂಪೋರ್ಟ್‌ಗೆ ವಹಿಸಿಕೊಡಲಾಯಿತು. ಅಲ್ಲಿ ಇಂದು ಕೈಗಾರಿಕೋದ್ಯಾನವಿದೆ. ಈ ಪಟ್ಟಣದ ಜನಸಂಖ್ಯೆ 7811(2005). ಇದು ಉ.ಅ. $35^{0}37'$ ಮತ್ತು ಪ.ರೇ. $90^{0}17'$ ಮೇಲೆ ಇದೆ.

3. ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೆಂಟಕೀ ರಾಜ್ಯದ ಕ್ಯಾಂಬೆಲ್ ಕೌಂಟಿಯ ಎರಡು ಕೇಂದ್ರಗಳಲ್ಲಿ ಒಂದು. ಮತ್ತೊಂದು ಅಲೆಗ್ಸಾಂಡ್ರಿಯ ಒಹೈಯೊ ನದಿಯ ದಡದ ಮೇಲೆ, ಲಿಕಿಂಗ್ ನದಿಯ ಮುಖದ ಬಳಿ ಇರುವ ಸಿನ್ಸಿನಾಟಿ ನಗರದ ಎದುರಿನಲ್ಲಿದೆ. ಹಬರ್ಡ್ ಟೇಲರ್ ಎಂಬ ತರುಣ ಸೈನಿಕನೊಬ್ಬ 1790ರಲ್ಲಿ ಪಟ್ಟಣದ ಸ್ಥಳದಲ್ಲಿ ಮೊಟ್ಟಮೊದಲು ಜನವಸತಿಯನ್ನು ಯೋಜಿಸಿದ. ಜೇಮ್ಸ್‌ಟೌನ್ ಬಂದರನ್ನು ಪ್ರಥಮವಾಗಿ ತಲುಪಿದ (1607) ನೌಕೆಯ ಅಧಿಪತಿಯಾದ ಕ್ರಿಸ್ಟೋಫರ್ ನ್ಯೂಪೋರ್ಟ್ ಎಂಬವನ ಜ್ಞಾಪಕಾರ್ಥವಾಗಿ ಇದಕ್ಕೆ ಈ ಹೆಸರನ್ನು ಇಡಲಾಯಿತು. 1850ರ ದಶಕದಲ್ಲಿ ಕೆಂಟಕಿಯಲ್ಲಿ ಪ್ರಕಟವಾಗುತ್ತಿದ್ದ ದಿ ಫ್ರೀ ಸೌತ್ ಎಂಬ ಗುಲಾಮಗಿರಿ ವಿರೋಧಿ ಪತ್ರಿಕೆಯನ್ನು ವಿಲಿಯಮ್ ಷ್ರೆವ್ ಬೇಲಿ ಇಲ್ಲಿಂದ ಪ್ರಕಟಿಸುತ್ತಿದ್ದ. ಆದರೆ ಗುಲಾಮಗಿರಿಯ ಪರವಾಗಿದ್ದವರ ದೊಂಬಿಯೊಂದು 1859ರಲ್ಲಿ ಇವನ ಮುದ್ರಣಯಂತ್ರ ಸಲಕರಣೆಗಳನ್ನು ಬೀದಿಯಲ್ಲಿ ಬಿಸಾಡಿತು. ಬೇಲ್ ಆಗ ಸಿನ್ಸಿನಾಟಿಗೆ ಹೋದ. 1880-1900ರಲ್ಲಿ ಈ ನಗರ ವಿಶೇಷವಾಗಿ

ಬೆಳೆಯಿತು. ಸಿನ್ಸಿನಾಟಿಗೆ ಸೇತುವೆಗಳ ನಿರ್ಮಾಣವಾಯಿತು. ಇಲ್ಲಿಯ ಮುಖ್ಯ ಕೈಗಾರಿಕೆಗಳು GPÀ§mÉ ÄvÀÄ ÀzÀÄgÀvÀiÁ¥É Éz ÀÄzÀªÀAG.C. 39°36′ ಮತ್ತು ಪ.ರೇ. 84°29′ ಮೇಲೆ ಇರುವ ಈ ಪಟ್ಟಣ ಒಂದು ಪ್ರಮುಖ ವ್ಯಾಪಾರಸ್ಥಳವಾಗಿದೆ.

4. ಅಮೆರಿಕ ಸಂಯುಕ್ತ ಸಂಸ್ಥಾನಗಳ ಆರಿಗನ್ ರಾಜ್ಯದ ಲಿಂಕನ್ ಕೌಂಟಿಯ ಆಡಳಿತ ಕೇಂದ್ರದ ಹೆಸರೂ ಇದೇ ಆಗಿದೆ. ಇದು ಪೆಸಿಫಿಕ್ ಸಾಗರದ ಯಾಕಿನ ಕೊಲ್ಲಿಯ ಉತ್ತರ ದಡದ ಮೇಲಿದೆ. ಮರದ ದಿಮ್ಮಿ, ಮೀನು ಡಬ್ಬೀಕರಣ – ಇವು ಮುಖ್ಯ ಕೈಗಾರಿಕೆಗಳು. ಆರಿಗನ್ ರಾಜ್ಯ ವಿಶ್ವವಿದ್ಯಾಲಯದ ಸಾಗರಿಕ ವಿಜ್ಞಾನ ಕೇಂದ್ರ ಇಲ್ಲಿದೆ. ನ್ಯೂಪೋರ್ಟ್ ಪ್ರವಾಸಿ ಕೇಂದ್ರ. ಜನಸಂಖ್ಯೆ 5250 (2002).

5. ಅಮೆರಿಕ ಸಂಯುಕ್ತ ಸಂಸ್ಥಾನಗಳ ರೋಡ್ ಐಲೆಂಡಿನ ದಕ್ಷಿಣ ತುದಿಯಲ್ಲಿರುವ ಇದೇ ಹೆಸರಿನ ನಗರ. ಜನಸಂಖ್ಯೆ 26,457(2002). ಇದು ನ್ಯೂಪೋರ್ಟ್ ಕೌಂಟಿಯ ಆಡಳಿತ ಕೇಂದ್ರ, ಬಂದರು. 1639ರಲ್ಲಿ ಇದು ಸ್ಥಾಪಿತವಾಯಿತು. ಅಮೆರಿಕನ್ ಕ್ರಾಂತಿಯ ಸಮಯದಲ್ಲಿ (1776–79) ಬ್ರಿಟನ್ ಇದನ್ನು ಆಕ್ರಮಿಸಿಕೊಂಡಿತ್ತು. ಅಂತರ್ಯುದ್ಧದ ಅನಂತರ ಇದು ಅಭಿವೃದ್ಧಿ ಹೊಂದಿತು. ಇಲ್ಲಿನ ವಾಯುಗುಣ ಮತ್ತು ಇದು ಬಂದರಾಗಿರುವುದೇ ಇದರ ಬೆಳೆವಣಿಗೆಗೆ ಕಾರಣಗಳು. ನ್ಯೂಪೋರ್ಟ್‌ನಲ್ಲಿ ಮತ್ತು ಇದರ ಸುತ್ತಮುತ್ತ ನೌಕಾ ನೆಲೆಯ ಅನೇಕ ಸ್ಥಾವರಗಳ ಸಂಕೀರ್ಣವೊಂದು ಬೆಳೆದಿದೆ. ನೌಕಾ ಚಟುವಟಿಕೆಗೆ ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳೂ ಸಂಶೋಧನ ಕೇಂದ್ರಗಳೂ ಇಲ್ಲಿವೆ. ಹಳೆಯ ವಸಾಹತು ಭವನ (1739). ಟ್ರಿನಿಟಿ ಚರ್ಚ್ (1726), ಟೌರೊ ಸೈನಗಾಗ್(1763), ರೆಡ್‌ಮಾಡ್ ಲೈಬ್ರರಿ ಮತ್ತು ಅತೆನಿಯಮ್ (1747), ನ್ಯೂಪೋರ್ಟ್ ಆರ್ಟಿಲರಿ ಕಂಪನಿ, ಸೈನಿಕ ವಸ್ತು ಸಂಗ್ರಹಾಲಯ (1741) ಮೊದಲಾದವು ನಗರದ ಕೆಲವು ಆಕರ್ಷಣೆಗಳು. ರೇವಿನ ಮೇಲೆ ಇರುವ ಹಳೆಯ ವಲಯದಲ್ಲಿ (ದಿ ಪಾಯಿಂಟ್) ವಸಾಹತುಕಾಲದ ವ್ಯಾಪಾರಿಗಳ ಮನೆಗಳಿವೆ.

6. ಬ್ರಿಟನ್ನಿನ ವೇಲ್ಸ್ ನಲ್ಲಿ ಬ್ರಿಸ್ಟಲ್ ಕಡಲ್ಗಾಲುವೆಯ ಮುಖದ ಮೇಲೆ ಇರುವ ನ್ಯೂಪೋರ್ಟ್ ಸು. 1126ರಿಂದ ಬೆಳೆದು ಬಂದಿದೆ. ಮಧ್ಯಯುಗದಲ್ಲಿ ವಾಣಿಜ್ಯ ಪ್ರಾಮುಖ್ಯತೆ ಹೊಂದಿದ್ದ ಈ ನಗರ ಅನೇಕ ಸವಲತ್ತುಗಳನ್ನು ಪಡೆದಿತ್ತು. 19ನೆಯ ಶತಮಾನದಲ್ಲಿ ಪಶ್ಚಿಮ ಮಾನ್‌ಮತ್‌ಷೈರ್ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಕೈಗಾರಿಕೆಗಳು ಬೆಳೆದ ಫಲವಾಗಿ ಆಧುನಿಕ ನಗರ ಉಚ್ಛ್ರಾಯಸ್ಥಿತಿಗೆ ಬಂತು. ನ್ಯೂಪೋರ್ಟ್‌ನಲ್ಲಿ 20ನೆಯ ಶತಮಾನದಲ್ಲಿ ಉಕ್ಕು ಸಂಸ್ಕರಣೆ, ಕಾಗದ ತಯಾರಿಕೆ, ರಾಸಾಯನಿಕ ಮುಂತಾದ ಕೈಗಾರಿಕೆಗಳು ಬೆಳೆದಿವೆ. 1959ರಿಂದ ಈಚೆಗೆ ಇದು ಬ್ರಿಟನ್ನಿನ ಮುಖ್ಯ ಉಕ್ಕು ತಯಾರಿಕಾ ಕೇಂದ್ರಗಳಲ್ಲಿ ಒಂದಾಗಿದೆ. ಇಲ್ಲಿ ಐತಿಹಾಸಿಕ ಕಟ್ಟಡಗಳು ಹೆಚ್ಚಾಗಿಲ್ಲ. ನಗರದ ಜನಸಂಖ್ಯೆ 1,37,011 (2005).

7. ಅಮೆರಿಕ ಸಂಯುಕ್ತ ಸಂಸ್ಥಾನಗಳ ವರ್ಮಾಂಟ್ ರಾಜ್ಯದ ಉತ್ತರ ಭಾಗದಲ್ಲಿ ಈ ಹೆಸರಿನ ಒಂದು ಪಟ್ಟಣವಿದೆ. ಇದು ಆರ್ಲಿಯನ್ಸ್ ಕೌಂಟಿಯ ಆಡಳಿತ ಕೇಂದ್ರ. (ಕೆ.ಆರ್.)

**ನ್ಯೂಫೌಂಡ್ಲೆಂಡ್:** ಕೆನಡದ ಒಂದು ಪ್ರಾಂತ್ಯ; ಅದೇ ಹೆಸರಿನ ದ್ವೀಪವನ್ನೂ ಮುಖ್ಯ ಭೂಭಾಗವಾದ ಲ್ಯಾಬ್ರಡಾರನ್ನೂ ಒಳಗೊಂಡಿದೆ. ನೂಫೌಂಡ್ಲೆಂಡ್ ದ್ವೀಪ ಉ.ಅ. 46°36′–51°39′ ಮತ್ತು ಪ.ರೇ 52°36′–59°24′ ಮಧ್ಯೆಯೂ ಲ್ಯಾಬ್ರಡಾರ್ ಉ.ಅ. 51°22′–60°30′ ಮತ್ತು ಪ.ರೇ. 58°30′–67°25′ ನಡುವೆಯೂ ಇವೆ. ನ್ಯೂಫೌಂಡ್ಲೆಂಡ್ ದ್ವೀಪ ಹೆಚ್ಚುಕಡಿಮೆ ತ್ರಿಕೋನಾಕಾರವಾಗಿದೆ. ಅದರ ಉತ್ತರದಲ್ಲಿ ಬಾಲ್ಡ್, ಆಗ್ನೇಯದಲ್ಲಿ ರೇಸ್, ನೈರುತ್ಯದಲ್ಲಿ ರೇ ಮತ್ತು ಪೂರ್ವ ತೀರದಲ್ಲಿ ಫ್ರೀಲ್ಸ್ ಭೂಶಿರಗಳು ಇವೆ. ಲ್ಯಾಬ್ರಡಾರ್ ಭಾಗ ದಕ್ಷಿಣದಲ್ಲಿ ಲಾನ್ಸ್ ಎಕ್ಲೇರ್‌ನಿಂದ ಉತ್ತರದಲ್ಲಿ ಚಿಡ್ಲೀ ಭೂಶಿರದ ವರೆಗೆ ವ್ಯಾಪಿಸಿದೆ. ಪ್ರಾಂತ್ಯದ ವಿಸ್ತೀರ್ಣದಲ್ಲಿ ಮುಕ್ಕಾಲು ಭಾಗವನ್ನು ಲ್ಯಾಬ್ರಡಾರ್ ಆವರಿಸಿದೆ. ಕೊಲ್ಲಿ ಖಾರಿಗಳಿಂದ ಕೂಡಿ, ಸಮುದ್ರದ ಅಲೆಗಳ ಬಡಿತಕ್ಕೊಳಗಾದ ಈ ಪ್ರಾಂತ್ಯದ ಕರಾವಳಿಯ ಉದ್ದ ಸು. 16,000 ಕಿಮೀ. ಲ್ಯಾಬ್ರಡಾರ್ ವಿಸ್ತೀರ್ಣ 2,96,860 ಚ.ಕಿಮೀ. ನ್ಯೂಫೌಂಡ್ಲೆಂಡ್ ದ್ವೀಪದ ವಿಸ್ತೀರ್ಣ 108860 ಚ.ಕಿಮೀ. ಪ್ರಾಂತ್ಯದ ಜನಸಂಖ್ಯೆ 576986 (2005). ಆಡಳಿತ ಕೇಂದ್ರ ಸೇಂಟ್ ಜಾನ್ಸ್. ಇದರ ಜನಸಂಖ್ಯೆ 99,182 (2002). ಬೆಲ್ಲೆ ಜಲಸಂಧಿಯು ಲ್ಯಾಬ್ರಡಾರ್ ಭಾಗವನ್ನು ದ್ವೀಪದಿಂದ ಬೇರ್ಪಡಿಸಿದೆ.

ನ್ಯೂಫೌಂಡ್ಲೆಂಡ್ ಮಟ್ಟಸವಾದ ಭೂಸ್ವರೂಪವನ್ನು ಹೊಂದಿದ್ದು ಲಾಂಗ್‌ರೇಂಜ್ (814 ಮೀ) ಅತಿಹೆಚ್ಚು ಎತ್ತರವಾದುದು. ಗ್ರಾಂಡ್‌ಲೇಕ್, ಗ್ರಾಂಡ್‌ರೆಡ್ ಇಂಡಿಯನ್, ಗ್ಯಾಂಡರ್ ಇಲ್ಲಿಯ ಮುಖ್ಯ ಸರೋವರಗಳು. ಮುಖ್ಯ ನದಿಗಳೆಂದರೆ ಟೆರ ನೋವ, ಗ್ರ್ಯಾಂಡ್, ಎಕ್ಸ್‌ಪ್ಲಾಯಿಟ್ಸ್ ಮತ್ತು ಗ್ಯಾಂಡರ್.

ಲ್ಯಾಬ್ರಡಾರ್ ಜಿಲ್ಲೆಯ ಪಶ್ಚಿಮ ಮತ್ತು ದಕ್ಷಿಣಗಳಲ್ಲಿ ಕ್ವಿಬೆಕ್ ಪ್ರಾಂತ್ಯವೂ ಪೂರ್ವ ಮತ್ತು ಉತ್ತರಭಾಗಗಳಲ್ಲಿ ಅಟ್ಲಾಂಟಿಕ್ ಸಾಗರವೂ ಇವೆ. ಇಲ್ಲಿ ಅತ್ಯಂತ ಪ್ರಾಚೀನ ಶಿಲೆಗಳಿವೆ. ಉತ್ತರದ ತುದಿಯಲ್ಲಿರುವ ಟಾರ್ನ್‌ಗ್ಯಾಟ್ ಪರ್ವತಶ್ರೇಣಿ ಸಮುದ್ರಮಟ್ಟಕ್ಕೆ 1,524 ಮೀ ಎತ್ತರಕ್ಕಿದೆ. ಪೂರ್ವಭಾಗದಲ್ಲಿ ಸಮುದ್ರತೀರ ಬಹು ಡೊಂಕು. ಹಲವಾರು ಹಿಮ ನದಿಗಳು ಹರಿಯುವಾಗ ಕರಗಿ ರಭಸದಿಂದ ಸಮುದ್ರಕ್ಕೆ ಬೀಳುತ್ತವೆ. ನ್ಯೂಫೌಂಡ್ಲೆಂಡ್ ದ್ವೀಪದಲ್ಲಿರುವಂತೆ ಇಲ್ಲಿಯೂ ಅನೇಕ ಸರೋವರಗಳಿವೆ. ಚರ್ಚಿಲ್ ಲ್ಯಾಬ್ರಡಾರ್‌ನ ಅತಿ ಉದ್ದವಾದ ನದಿ. ಇದರ ಆಗ್ನೇಯ ಭಾಗದಲ್ಲಿ ಹೆಚ್ಚು ಆಳವಿಲ್ಲದ ಅಟ್ಲಾಂಟಿಕ್ ಸಾಗರದ ವಿಸ್ತಾರವಾದ ಖಂಡಾವರಣ ಪ್ರದೇಶವಿದ್ದು ಇದನ್ನು ಗ್ರಾಂಡ್‌ಬ್ಯಾಂಕ್ಸ್ ಎಂದು ಕರೆಯುವರು.

ವಾಯುಗುಣ : ನ್ಯೂಫೌಂಡ್ಲೆಂಡ್‌ನಲ್ಲಿ ಚಳಿಗಾಲದಲ್ಲಿ ಮಂಜು ಮುಸುಕಿದರೂ ಚಳಿ ಬಹಳ ತೀವ್ರವಾಗಿರುವುದಿಲ್ಲ. ಬೇಸಗೆ ಹಿತಕರ, ಜುಲೈ ಸರಾಸರಿ ಉಷ್ಣತೆ ದಕ್ಷಿಣ ತೀರದಲ್ಲಿ 15°ಸೆ. ಉತ್ತರ ಲ್ಯಾಬ್ರಡಾರ್‌ನಲ್ಲಿ 4.4°ಸೆ. ದಕ್ಷಿಣದ ಒಳನಾಡಿನಲ್ಲಿ ಜುಲೈ ಸರಾಸರಿ ಉಷ್ಣತೆ 16°ಸೆ. ಗಿಂತ ಸ್ವಲ್ಪ ಹೆಚ್ಚಾಗಿರುತ್ತದೆ. ಜನವರಿಯ ಮಧ್ಯ ಉಷ್ಣತೆ ನ್ಯೂಫೌಂಡ್ಲೆಂಡಿನ ದಕ್ಷಿಣ ಭಾಗದಲ್ಲಿ –6.7°ಸೆ. ಗಿಂತ ಕಡಿಮೆ. ಲ್ಯಾಬ್ರಡಾರ್ ತೀರದ ದಕ್ಷಿಣ ಭಾಗದಲ್ಲಿ (12.2°ಸೆ.), ಉತ್ತರದಲ್ಲಿ (17.8°ಸೆ.), ಲ್ಯಾಬ್ರಡಾರಿನ ಪಶ್ಚಿಮ ಒಳನಾಡಿನಲ್ಲಿ (26°ಸೆ.) ಕಡಿಮೆ ಇರುತ್ತದೆ. ಇಲ್ಲಿ –40°ಸೆ ವರೆಗೂ ಉಷ್ಣತೆ ಇಳಿಯುವುದುಂಟು. ನ್ಯೂಫೌಂಡ್ಲೆಂಡ್ ದ್ವೀಪದ ದಕ್ಷಿಣ ಭಾಗದಲ್ಲಿ ವಾರ್ಷಿಕ ಅವಪಾತ 140 ಸೆಂಮೀ. ಚಿಡ್ಲೀ ಭೂಶಿರದ ಬಳಿ 43 ಸೆಂಮೀ. ಉತ್ತರ ಭಾಗದಲ್ಲಿ ವಾರ್ಷಿಕ ಅವಪಾತದಲ್ಲಿ ಅರ್ಧದಷ್ಟೂ ದಕ್ಷಿಣದಲ್ಲಿ ಸು $3^1/_5$ರಷ್ಟೂ ಹಿಮರೂಪದಲ್ಲಿ ಬೀಳುತ್ತವೆ.

ಕೆನಡ ಮತ್ತು ಅಮೆರಿಕದ ಅಟ್ಲಾಂಟಿಕ್ ಸಾಗರ ತೀರದತ್ತ ಸಾಗುವ ಚಂಡಮಾರುತಗಳು ನ್ಯೂಫೌಂಡ್ಲೆಂಡ್ ದ್ವೀಪದ ವಾಯುಗುಣದ ಮೇಲೆ ತೀವ್ರ ಪ್ರಭಾವ ಬೀರುತ್ತವೆ. ಚಂಡಮಾರುತಗಳು ಬೀಸುವ ಮೊದಲು ಈಶಾನ್ಯ ಮತ್ತು ಪೂರ್ವ ಮಾರುತಗಳು ಲ್ಯಾಬ್ರಡಾರಿನ ಶೀತಲ ಸಮುದ್ರ ಪ್ರವಾಹಗಳ ಮೇಲೆ ಬೀಸಿ, ಬೇಸಗೆಯಲ್ಲಿ ತಂಪು ಹವಾಮಾನವನ್ನು ತಂದು, ವಸಂತಕಾಲದ ಆಗಮನವನ್ನು ಮುಂದೆಳ್ಳುತ್ತವೆ. ದ್ವೀಪದ ದಕ್ಷಿಣದಲ್ಲಿ ಲ್ಯಾಬ್ರಡಾರ್ ಸಾಗರಿಕ ತಂಗಾಳಿ ಗಲ್ಫ್ ಉಷ್ಣೋದಕ ಪ್ರವಾಹದ ಮೇಲಣ ಬೆಚ್ಚನೆಯ ಗಾಳಿಯೊಂದಿಗೆ ಮಿಲನಗೊಂಡು ಆಗಾಗ್ಗೆ ದಟ್ಟವಾದ ಮಂಜನ್ನುಂಟುಮಾಡುವುದುಂಟು. ಮೀನುಗಾರಿಕೆ ಇಲ್ಲಿಯ ಮುಖ್ಯ ಉದ್ಯೋಗ.

ನ್ಯೂಫೌಂಡ್ಲೆಂಡಿನ ರಾಜಧಾನಿ ಸೇಂಟ್ ಜಾನ್ಸಿನ. ಜನಸಂಖ್ಯೆ 99,182. ಇನ್ನೊಂದು ಮುಖ್ಯ ಪಟ್ಟಣ. ಕಾರ್ನರ್ ಬ್ರೂಕ್ (20,103). (ವಿ.ಜಿ.ಕೆ.)

**ನ್ಯೂಬರಿ:** ಇಂಗ್ಲೆಂಡಿನ ಒಂದು ಪಟ್ಟಣ, ವ್ಯಾಪಾರ ಸ್ಥಳ ಮತ್ತು ಬರ್ಕ್‌ಷೈರ್‌ನ ಬರೋ. ಕೆನೆಟ್ ನದಿಯ ದಡದಲ್ಲಿ ಉ.ಅ.51°25′ ಮತ್ತು ಪ.ರೆ. 1°20′ ಮೇಲೆ ಇದೆ. ಜನಸಂಖ್ಯೆ 32000(2004). ಇದು ಇಂಗ್ಲೆಂಡಿನ ಹಳೆಯ ಪಟ್ಟಣಗಳಲ್ಲೊಂದು. ಇಲ್ಲಿ 16ನೆಯ ಶತಮಾನದಲ್ಲಿ ನಿರ್ಮಿತವಾದ ಸೇಂಟ್ ನಿಕೋಲಸ್ ಚರ್ಚ್ ಇದೆ. ಇಲ್ಲಿಯ ಜಾಕೋಬಿಯನ್ ವಸ್ತ್ರಭವನ ಈಗ ಬರೋ ವಸ್ತುಸಂಗ್ರಹಾಲಯವಾಗಿದೆ. ಇದಕ್ಕೆ ಸೇರಿಕೊಂಡಂತೆ ಉದ್ದನೆಯ ಎರಡು ಅಂತಸ್ತುಗಳ ಕಣಜವೊಂದುಂಟು. ಇಲ್ಲೊಂದು ಹಳೆಯ ಶಾಲೆ, ಎಲಿಜಬೆತ್ ಕಾಲದ ಭವನ ಮುಂತಾದ ಹಲವು ಕಟ್ಟಡಗಳು ಇವೆ. ಇಲ್ಲಿಯ ಪ್ರಸಿದ್ಧ ಕುದುರೆ ಪದ್ಯಾಂಗಣ 1905ರಲ್ಲಿ ಪ್ರಾರಂಭವಾಯಿತು. ಮಾರುಕಟ್ಟೆ ಪ್ರದೇಶದಲ್ಲಿ ನ್ಯಾಯಾಲಯ, ಸಾರ್ವಜನಿಕ ಮನರಂಜನೆಯ ಭವನ ಮುಂತಾದವು ಇವೆ. ನ್ಯೂಬರಿಯ ಆಧುನಿಕ ಮಳಿಗೆಗಳು ಮತ್ತು ಬಯಲು ಮಾರುಕಟ್ಟೆಗಳು ಗ್ರಾಮಾಂತರ ಜನರನ್ನು ಆಕರ್ಷಿಸಿವೆ. ಇದು ಉಣ್ಣೆ ವ್ಯಾಪಾರ ಕೇಂದ್ರ. ಸಾಗರಯಾನ ಸಂಬಂಧವಾದ ಉಪಕರಣ ಮತ್ತು ಲಘು ಎಂಜಿನಿಯರಿಂಗ್ ಕೈಗಾರಿಕೆ, ಹಿಟ್ಟು ಗಿರಣಿ, ಮರಗೆಲಸ, ಲಘು ವಿಮಾನ ತಯಾರಿಕೆ – ಇವು ಮುಖ್ಯ ಉದ್ಯಮಗಳು. ದಕ್ಷಿಣ ಇಂಗ್ಲೆಂಡಿನ ಮತ್ತು ತೀರ ಪ್ರದೇಶದ ಮುಖ್ಯ ಮಾರ್ಗಗಳು ಇಲ್ಲಿ ಸಂಧಿಸುತ್ತವೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೆಸಾಚುಸೆಟ್ಸ್ ರಾಜ್ಯದಲ್ಲೂ ಈ ಹೆಸರಿನ ಪಟ್ಟಣವಿದೆ. (ಡಿ.ಎಸ್.ಜೆ.)

**ನ್ಯೂಬರ್ನ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ತರ ಕರೋಲಿನ ರಾಜ್ಯದ ಪೂರ್ವಭಾಗದಲ್ಲಿಯ ಕ್ರೇವನ್ ಕೌಂಟಿಯ ಒಂದು ನಗರ; ಆ ಕೌಂಟಿಯ ಆಡಳಿತ ಕೇಂದ್ರ. ನ್ಯೂಸ್ ನದಿಯ ದಡದ ಮೇಲೆ, ಟ್ರೆಂಟ್ ನದಿ ಅದನ್ನು ಸೇರುವ ಎಡೆಯಲ್ಲಿದೆ (ಉ.ಅ 35°0.7′, ಪ.ರೇ 77°0.3′). ಜನಸಂಖ್ಯೆ 30,808 (2004). 1710ರಲ್ಲಿ ಇಲ್ಲಿ ವಸತಿ ಆರಂಭವಾಯಿತು. ಸ್ವಿಟ್ಜರ್‌ಲೆಂಡಿನ ಬರ್ನ್ ನಿಂದ ಬಂದ ಕ್ರಿಸ್ಟಫರ್ ವಾನ್ ಗ್ರ್ಯಾಫನ್ ರೀಡ್ ಇದನ್ನು ಸ್ಥಾಪಿಸಿದ. 1723ರಲ್ಲಿ ಇದಕ್ಕೆ ನಗರದ ಸ್ಥಾನಮಾನ ದೊರಕಿತು. ಇದಕ್ಕೆ ಮುಂಚೆ (1711–12) ಇಂಡಿಯನರ ಆಕ್ರಮಣದಿಂದ ಇದು ಬಹುತೇಕ ನಾಶಗೊಂಡಿತ್ತು. ಉತ್ತರ ಕರೋಲಿನದ ಮೊದಲನೆಯ ಮುದ್ರಣಾಲಯ (1749) ಮತ್ತು ಮೊದಲನೆಯ ಅನುದಾನ ಶಾಲೆ (1764) ಇಲ್ಲಿ ಸ್ಥಾಪಿತವಾದವು. 1737ರಲ್ಲಿ ನ್ಯೂಬರ್ನ್‌ನಲ್ಲಿ ಪ್ರಾಂತೀಯ ವಿಧಾನಸಭೆ ಸೇರಲಾರಂಭವಾಯಿತು. ಆಗ ಇದು ಉತ್ತರ ಕರೋಲಿನ ವಸಾಹತುವಿನ ರಾಜಧಾನಿಯ ಮಟ್ಟಕ್ಕೇರಿತು. 1767–70ರಲ್ಲಿ ನಿರ್ಮಿತವಾದ ಭವ್ಯ ಗವರ್ನರ್ ಭವನದಿಂದ ನಗರದ ಪ್ರಾಮುಖ್ಯ ಹೆಚ್ಚಿತು. 1798ರಲ್ಲಿ ಟ್ರೈಯಾನ್ ಅರಮನೆಯ ಪ್ರಮುಖ ಭಾಗ ಭಸ್ಮವಾಯಿತು. ಅದನ್ನು ಅದರ ಎರಡು ಪಾರ್ಶ್ವಗಳೊಂದಿಗೆ 1959ರಲ್ಲಿ ಪುನರ್ ನಿರ್ಮಿಸಲಾಯಿತು. 1774 ಮತ್ತು 75ರಲ್ಲಿ ನ್ಯೂಬರ್ನ್ ನಗರದಲ್ಲಿ ಬ್ರಿಟಿಷ್ ವಿರೋಧಿ ಪ್ರಥಮ ಮತ್ತು ದ್ವಿತೀಯ ಪ್ರಾಂತೀಯ ಕಾಂಗ್ರೆಸ್ ಸಭೆ ಸೇರಿತ್ತು.

ಅಮೆರಿಕನ್ ಕ್ರಾಂತಿಯ ಅನಂತರ ಅನೇಕ ಪಟ್ಟಣಗಳಲ್ಲಿ ಪ್ರಾಂತೀಯ ಕಾಂಗ್ರೆಸ್ ಸಭೆಗಳು ನಡೆದರೂ 1794ವರೆಗೂ ಇದು ಕರೋಲಿನದ ರಾಜಧಾನಿಯಾಗಿ ಮುಂದುವರಿಯಿತು.

ನ್ಯೂಬರ್ನ್ ನಗರ ಉತ್ತರ ಕರೋಲಿನದ ಉತ್ತಮ ಬಂದರಾಗಿ ಪ್ರಸಿದ್ಧಿಗೆ ಬಂತು. ಪಾಮ್ಲಿಕೋ ಜಲಸಂಧಿಯ ಮುಖಾಂತರ ನ್ಯೂಇಂಗ್ಲೆಂಡ್ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳೊಂದಿಗೆ ಇದು ಸಮುದ್ರ ವ್ಯಾಪಾರ ನಡೆಸುತ್ತಿತ್ತು. ಅಮೆರಿಕನ್ ಕ್ರಾಂತಿಯ ಅನಂತರ ಇಲ್ಲಿ ಹಡಗು ನಿರ್ಮಾಣ ಕಾರ್ಯ ಬೆಳೆಯಿತು. ಹೊಗೆಸೊಪ್ಪು, ಮರಮುಟ್ಟುಗಳು ಮತ್ತು ನಾವಿಕರ ಪರಿಕರಗಳನ್ನು ಪ್ರಮುಖವಾಗಿ ಈ ಬಂದರಿನ ಮುಖಾಂತರ ರಫ್ತುಮಾಡಲಾಗುತ್ತಿತ್ತು. 20ನೆಯ ಶತಮಾನದಲ್ಲಿ ಅಟ್ಲಾಂಟಿಕ್ ಕರಾವಳಿಯಲ್ಲಿ ಸು. 4 ಮೀ ಅಗಲದ ಜಲಮಾರ್ಗವನ್ನು ನಿರ್ಮಿಸಿ ನ್ಯೂಬರ್ನ್ ನಗರಕ್ಕೆ ಒಳನಾಡಿನ ಜಲಮಾರ್ಗ ಸೌಲಭ್ಯಗಳನ್ನು ಕಲ್ಪಿಸಲಾಯಿತು. ಮೋರ್‌ಹೆಡ್ ನಗರದ ಬಂದರನ್ನು ಅಭಿವೃದ್ಧಿಪಡಿಸಿ ಸರ್ಕಾರ ಇದನ್ನು ವಾಣಿಜ್ಯಕೇಂದ್ರವನ್ನಾಗಿ ಪರಿವರ್ತಿಸಿತು. ಇದು ಬೇಸಗೆ ತಾಣವಾಗಿದೆ. ಮೆಕ್ಕೆಜೋಳ, ಹೊಗೆಸೊಪ್ಪು, ಸೋಯಾಬೀನ್, ಮರದ ತಿರುಳು ಮತ್ತು ಹತ್ತಿ ಬೆಳೆಯುವ ಪ್ರದೇಶ ಇದಕ್ಕೆ ಹಿನ್ನಾಡಾಗಿದೆ. ಮರಗೆಲಸ ದೋಣಿ ನಿರ್ಮಾಣ, ಆಹಾರ ಸಂಸ್ಕರಣ, ಜವಳಿ, ರಾಸಾಯನಿಕ – ಇವು ನಗರದ ಪ್ರಮುಖ ಕೈಗಾರಿಕೆಗಳು. ಈಗಿನ ಸಾರ್ವಜನಿಕ ಪುಸ್ತಕಭಂಡಾರವಾಗಿರುವ ಸ್ಟಾನ್ಲೆ ಅರಮನೆ (1780), ಆಟ್‌ಮೋರ್ ಅರಮನೆ (1790), ಪ್ರೆಸ್ ಬಿಟೇರಿಯನ್ ಚರ್ಚ್ (1822), ಕ್ರೈಸ್ಟ್ ಚರ್ಚ್ (1752) – ಇವು ಇಲ್ಲಿಯ ಪ್ರಮುಖ ಭವನಗಳು. ನೀಗ್ರೋಗಳಿಗಾಗಿ ಆರಂಭವಾದ ಮೊದಮೊದಲ ಸಾರ್ವಜನಿಕ ಶಾಲೆಗಳಲ್ಲಿ ಒಂದು ಇಲ್ಲಿ 1862ರಲ್ಲಿ ಸ್ಥಾಪಿತವಾಯಿತು. (ಎಸ್.ಕೆ.ಆರ್.)

**ನ್ಯೂಯ್:** ದಕ್ಷಿಣ ಪೆಸಿಫಿಕ್ ಸಾಗರದಲ್ಲಿನ ಒಂದು ಸ್ವತಂತ್ರ ದ್ವೀಪ. ಇದನ್ನು ರಾಕ್ ಆಫ್ ಪಾಲಿನೇಷ್ಯ ಎಂದು ಕರೆಯಲಾಗುತ್ತದೆ. ಇದೊಂದು ಸ್ವಯಂ ಆಡಳಿತವಿರುವ ಪ್ರದೇಶವಾದರೂ ರಾಜತಾಂತ್ರಿಕ ಸಂಬಂಧಗಳನ್ನು ಮತ್ತು ಇತರೆ ವ್ಯವಹಾರಗಳನ್ನು ನ್ಯೂಜಿಲೆಂಡ್ ಇದರ ಪರವಾಗಿ ನಿರ್ವಹಿಸುತ್ತದೆ.

ಈ ದ್ವೀಪ ನ್ಯೂಜಿಲೆಂಡಿನ ಈಶಾನ್ಯಕ್ಕೆ ಸು. 2400 ಕಿಮೀ ದೂರದಲ್ಲಿ ಟೊಂಗ, ಸಮೋವ ಮತ್ತು ಕುಕ್ ದ್ವೀಪಗಳ ನಡುವೆ ಕಂಡುಬರುತ್ತದೆ. ಈ ದ್ವೀಪ ಸು. 269 ಚ.ಕಿಮೀ ವಿಸ್ತೀರ್ಣವನ್ನು ಹೊಂದಿದ್ದು ಅಕ್ಷಾಂಶ ಮತ್ತು ರೇಖಾಂಶಿಕ ಸಂಯೋಜನೆ $19^0 03'48''$ ದ. ಮತ್ತು $169^0 52'11''$ ಪಶ್ಚಿಮವಾಗಿರುತ್ತದೆ. ಈ ದ್ವೀಪ ಪ್ರಪಂಚದ ಅತೀ ದೊಡ್ಡದಾದ ಹವಳ ದ್ವೀಪಗಳಲ್ಲಿ ಪ್ರಮುಖವಾದದ್ದಾಗಿದೆ. ಇಲ್ಲಿಯ ಕರಾವಳಿ ಭಾಗಗಳು ಸುಣ್ಣಕಲ್ಲುಗಳಿಂದ ನಿರ್ಮಿತವಾಗಿದ್ದು ಮಧ್ಯದಲ್ಲಿ ಉಬ್ಬಿದ ಪ್ರಸ್ಥಭೂಮಿ ಕಂಡುಬರುತ್ತದೆ. ಇದು ಸಮುದ್ರಮಟ್ಟದಿಂದ ಕೇವಲ 60 ಮೀ ಎತ್ತರವನ್ನು ಹೊಂದಿದೆ. ಇದರ ರಾಜಧಾನಿ ಅಲೋಫಿ ನಗರ.

ಈ ದ್ವೀಪ ಉಷ್ಣವಲಯದ ವಾಯುಗುಣವನ್ನು ಹೊಂದಿದೆ. ಇಲ್ಲಿ ಮಳೆ ನವೆಂಬರ್ ಮತ್ತು ಏಪ್ರಿಲ್ ತಿಂಗಳ ನಡುವೆ ಬೀಳುವುದು. ಜನಸಂಖ್ಯೆ 2,166 (2006). (ಕೆ.ಎಸ್.)

# ಪ

**ಪಂಚ ಮಹಾ ಸರೋವರಗಳು:** ಉತ್ತರ ಅಮೆರಿಕ ಖಂಡದ ಪೂರ್ವಭಾಗದಲ್ಲಿ ಸೇಂಟ್ ಲಾರೆನ್ಸ್ ನದಿಯ ಹರಿವಿನ ಭಾಗದಲ್ಲಿರುವ ಸುಪೀರಿಯರ್, ಮಿಷಿಗನ್, ಹ್ಯುರಾನ್, ಈರೀ ಮತ್ತು ಆಂಟೇರಿಯೋ ಎಂಬ ಐದು ದೊಡ್ಡ ಸರೋವರಗಳು. ಉ.ಅ.$41^0 22'$–$49^0 00'$, ಪ.ರೇ.$76^0 04'$–$92^0 06'$ ನಡುವೆ ಇರುವ ಈ ಸರೋವರಗಳ ಒಟ್ಟು ವಿಸ್ತೀರ್ಣ 2,45,000 ಚ.ಕಿಮಿ. ಇವು ಪ್ರಪಂಚದ ಅತ್ಯಂತ ದೊಡ್ಡ ಸಿಹಿನೀರು ಸರೋವರಗಳು. ಇವುಗಳ ಜಲಾನಯನ ಭೂಮಿಯ ವಿಸ್ತೀರ್ಣ 7,53,950 ಚ.ಕಿಮೀ. ಈ ಸರೋವರಗಳು ಒಂದು ಅಖಂಡ ಜಲೋತ್ತರಣ ವ್ಯವಸ್ಥೆಯಾಗಿ ಪರಸ್ಪರ ಕೂಡಿಕೊಂಡಿವೆ. ಸೇಂಟ್‌ಲಾರೆನ್ಸ್ ನದಿಯ ಮೂಲಕ ಇವಕ್ಕೆ ಹೊರ ತೆರವು ಏರ್ಪಟ್ಟಿದೆ. ಈ ವ್ಯವಸ್ಥೆ ಅಮೆರಿಕ ಖಂಡದ ಅರ್ಧದವರೆಗೆ ಹಬ್ಬಿರುವ ಜಲಮಾರ್ಗವಾಗಿ ಪರಿಣಮಿಸಿದೆ. ಸುಪೀರಿಯರ್ ಸರೋವರದ ಉತ್ತರಕ್ಕಿರುವ ಪಟ್ಟಣಗಳಿಂದ ಅಟ್ಲಾಂಟಿಕ್ ಸಾಗರದ ವರೆಗಿನ ದೂರ 3,744 ಕಿಮೀ. ಮಿಷಿಗನ್ ಹೊರತು ಉಳಿದ ಸರೋವರಗಳು ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ನಡುವಣ ಸ್ವಾಭಾವಿಕ ಗಡಿಗಳಾಗಿವೆ. ಈ ಗಡಿಗಳನ್ನು 1909ರ ಗಡಿ ಜಲ ಒಪ್ಪಂದದ ಮೂಲಕ ಊರ್ಜಿತಗೊಳಿಸಲಾಯಿತು.

ಪಂಚಮಹಾಸರೋವರಗಳ ಉಪಗ್ರಹ ಚಿತ್ರ

ಸುಪೀರಿಯರ್ ಸರೋವರದ ಉತ್ತರದಲ್ಲಿ ಕೆನಡದ ಮಾಂಟೇರಿಯೋ ಪ್ರಾಂತ್ಯವೂ ಪಶ್ಚಿಮದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮಿನ್ನಿಸೋಟ, ದಕ್ಷಿಣದಲ್ಲಿ ವಿಸ್ಕಾನ್ಸಿನ್ ಮತ್ತು ಮಿಷಿಗನ್ ರಾಜ್ಯಗಳೂ ಇವೆ. ಪಂಚ ಮಹಾ ಸರೋವರಗಳ ಪೈಕಿ ಸುಪೀರಿಯರ್ ಸರೋವರವೆ ಮೂಲ ಜಲಾಶಯ ಹಾಗೂ ಹೆಚ್ಚು ಆಳವಾದದ್ದು. ಇದರ ಸರಾಸರಿ ಆಳ 406 ಮೀ. ಇದು ಸಮುದ್ರ ಮಟ್ಟಕ್ಕೆ 189 ಮೀ ಎತ್ತರದಲ್ಲಿದೆ. ಇದರ ಅಗಲ 258 ಕಿಮೀ ಮತ್ತು ಉದ್ದ 616 ಕಿಮೀ. ಈ ಸರೋವರದ ನೀರು ಸೇಂಟ್ ಮೇರಿಸ್ ನದಿಯ ಮೂಲಕ, ಸೆಕೆಂಡಿಗೆ ಸರಾಸರಿ 74,200 ಘ.ಅ.ಗಳಂತೆ ಹ್ಯುರಾನ್ ಸರೋವರಕ್ಕೆ ಸೇರುತ್ತದೆ.

ಮಿಷಿಗನ್ ಸರೋವರ ಸುಪೀರಿಯರ್ ಸರೋವರಕ್ಕೆ ದಕ್ಷಿಣದಲ್ಲಿದೆ. ಪಂಚ ಮಹಾಸರೋವರದಲ್ಲಿ 4ನೆಯ ದೊಡ್ಡ ಸರೋವರ. ಈ ಸರೋವರದ ಪಶ್ಚಿಮದಲ್ಲಿ ವಿಸ್ಕಾನ್ಸಿನ್, ದಕ್ಷಿಣದಲ್ಲಿ ಇಲಿನಾಯ್ಸ್ ಮತ್ತು ಇಂಡಿಯಾನ, ಪೂರ್ವ ಹಾಗೂ ಉತ್ತರದಲ್ಲಿ ಮಿಷಿಗನ್ ರಾಜ್ಯಗಳಿವೆ. ಇದು ಸಂಪೂರ್ಣವಾಗಿ ಅ.ಸಂ.ಸಂ. ದಲ್ಲಿದೆ. ಸರೋವರದ ಸರಾಸರಿ ಆಳ 82 ಮೀ. ಇದು ಸಮುದ್ರಮಟ್ಟಕ್ಕೆ 176 ಮೀ ಎತ್ತರದಲ್ಲಿದೆ. ಇದು 517 ಕಿಮೀ ಉದ್ದ ಹಾಗೂ 190 ಕಿಮೀ ಅಗಲವಾಗಿದೆ. ಸರೋವರದ ನೀರು ಸೆಕೆಂಡಿಗೆ 56,000 ಘ.ಅ.ಗಳಂತೆ ಉತ್ತರಕ್ಕೆ ಹರಿದು ಮ್ಯಾಕಿನಾಕ್ ಜಲಸಂಧಿಯ ಮೂಲಕ ಹ್ಯುರಾನ್ ಸರೋವರವನ್ನು ಸೇರುತ್ತದೆ.

ಹ್ಯುರಾನ್ ಸರೋವರ ಮಿಷಿಗನ್ ಸರೋವರದಂತೆ ಸಮುದ್ರಮಟ್ಟಕ್ಕೆ 176 ಮೀ ಎತ್ತರದಲ್ಲಿದೆ. ಆದರೆ ಇದು ಮಿಷಿಗನ್‌ಗಿಂತ ದೊಡ್ಡದು. ಪಂಚ ಮಹಾ ಸರೋವರದಲ್ಲಿ ಇದು ಎರಡನೆಯ ದೊಡ್ಡ ಸರೋವರ. ಇದರ ಸರಾಸರಿ ಆಳ 229 ಮೀ. ಸರೋವರದ ಉತ್ತರ ಹಾಗೂ ಪೂರ್ವ ಭಾಗಗಳಲ್ಲಿ ಕೆನಡದ ಆಂಟೇರಿಯೋ ಪ್ರಾಂತ್ಯ, ಪಶ್ಚಿಮ ಹಾಗೂ ದಕ್ಷಿಣದಲ್ಲಿ ಅಮೆರಿಕದ ಮಿಷಿಗನ್ ರಾಜ್ಯ ಇದೆ. ಇದರ ಉದ್ದ 330 ಕಿಮೀ. ಕ್ಷೇತ್ರ 59,570 ಚ.ಕಿಮೀ.

ಈರೀ ಸರೋವರದ ಉತ್ತರದಲ್ಲಿ ಕೆನಡದ ಆಂಟೇರಿಯೋ ಪ್ರಾಂತ್ಯವೂ ಪಶ್ಚಿಮದಲ್ಲಿ ಅಮೆರಿಕದ ಮಿಷಿಗನ್, ದಕ್ಷಿಣದಲ್ಲಿ ಒಹೈಯೋ ಮತ್ತು ಪೆನ್ಸಿಲ್ವೇನಿಯ, ಪೂರ್ವದಲ್ಲಿ ನ್ಯೂ ಯಾರ್ಕ್ ರಾಜ್ಯಗಳೂ ಇವೆ. ಇದು ಹ್ಯುರಾನ್ ಮತ್ತು ಆಂಟರಿಯ ಸರೋವರಗಳ ನಡುವೆ ಇದೆ. ಪಂಚ ಮಹಾ ಸರೋವರಗಳ ಪೈಕಿ ಈ ಸರೋವರದ ಆಳ ಅತ್ಯಂತ ಕಡಿಮೆ. ಇದರ ಸರಾಸರಿ ಆಳ 64 ಮೀ. ಇದು ಸಮುದ್ರಮಟ್ಟಕ್ಕೆ 174 ಮೀ ಎತ್ತರದಲ್ಲಿದೆ. ಈ ಸರೋವರ 388 ಕಿಮೀ ಉದ್ದವಾಗಿ ಮತ್ತು 92 ಕಿಮೀ ಅಗಲವಾಗಿದೆ. ಇದರ ನೀರು ನಯಾಗರ ನದಿಯ ಮೂಲಕ ಹರಿದು, ನದಿಯ ಹಾರ್ಸ್ ಷೂ ಮತ್ತು ಅಮೆರಿಕನ್ ಜಲಪಾತಗಳಲ್ಲಿ ದುಮುಕಿ ಆಂಟೇರಿಯೋ ಸರೋವರವನ್ನು ಸೇರುತ್ತದೆ. ಪಂಚಮಹಾ ಸರೋವರದಲ್ಲಿ ಇದು ನಾಲ್ಕನೆಯ ದೊಡ್ಡ ಸರೋವರ ನೀರಿನ ಸರಾಸರಿ ಹರಿವು ಸೆಕೆಂಡಿಗೆ 1,94,300 ಘ.ಅ.

ಆಂಟೇರಿಯೊ ಅಮೆರಿಕದ ಪಂಚ ಮಹಾ ಸರೋವರಗಳಲ್ಲಿ ಅತ್ಯಂತ ಕಿರಿಯದು, ಇದರ ಸರಾಸರಿ ಆಳ 237 ಮೀ. ಇದರ ಪಶ್ಚಿಮ ಮತ್ತು ಉತ್ತರದಲ್ಲಿ ಕೆನಡದ ಆಂಟೇರಿಯೊ ಪ್ರಾಂತ್ಯ, ದಕ್ಷಿಣ ಮತ್ತು ಪೂರ್ವದಲ್ಲಿ ಅಮೆರಿಕದ ನ್ಯೂಯಾರ್ಕ್ ರಾಜ್ಯ

ಇವೆ. ಇದು ಸಮುದ್ರಮಟ್ಟಕ್ಕೆ 74 ಮೀ ಎತ್ತರದಲ್ಲಿದೆ, ಸೆಕೆಂಡಿಗೆ 233,000 ಘ.ಅ.ಗಳಂತೆ ಈ ಸರೋವರದ ನೀರು ಹರಿದು ಸೇಂಟ್ ಲಾರೆನ್ಸ್ ನದಿಯನ್ನು ಸೇರುತ್ತದೆ. ಈ ನದಿ 1,200 ಮೀ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ.

**ಪಂಚಮಹಾಸರೋವರಗಳ ನಕ್ಷೆ**

ಸುತ್ತಮುತ್ತಲ ಪ್ರದೇಶದ ವಾಯುಗುಣದ ಮೇಲೆ ಪಂಚ ಮಹಾ ಸರೋವರಗಳ ಪ್ರಭಾವ ಗಣನೀಯ. ಬೇಸಗೆ ಹಿತಕರ. ಚಳಿಗಾಲದಲ್ಲಿ ಚಳಿ ಹೆಚ್ಚಾಗಿರುವುದಿಲ್ಲ. ಸರೋವರಗಳ ಪೂರ್ವತೀರಗಳಲ್ಲಿ ಮಳೆ ಹೆಚ್ಚು. ಸರೋವರಗಳ ಅಂಚಿನಲ್ಲಿ ಕವಿಯುವ ಮಂಜಿನಿಂದ ಸರೋವರ ಭಾಗಗಳ ಪಟ್ಟಣಗಳಾದ ಪೆನ್ಸಿಲ್ವೇನಿಯ, ಬಫೆಲೋ, ನ್ಯೂಯಾರ್ಕ್ ಮೊದಲಾದವುಗಳ ಚಟುವಟಿಕೆಗಳಿಗೆ ಅಡಚಣೆ ಉಂಟಾಗುತ್ತದೆ.

ಸರೋವರಗಳು ಮೀನುಗಾರಿಕೆಗೆ ಪ್ರಧಾನವಾದವು, ಸರೋವರದ ಅಂಚಿನಲ್ಲಿ ಅನೇಕ ಬಗೆಯ ಜಲಪಕ್ಷಿಗಳು ಹಾಗೂ ಕಾಡುಹಕ್ಕಿಗಳು ಇವೆ. ವಸಂತ ಕಾಲದಲ್ಲಿ ಕೆಲವು ಬಗೆಯ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ. ಸರೋವರಗಳ ಮರಳು ತೀರಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಇವುಗಳ ನೀರು ಸಮೀಪದ ಪಟ್ಟಣಗಳ ಕೈಗಾರಿಕೆಗಳಿಗೆ ಉಪಯುಕ್ತವಾಗಿದೆ. ಸು. 240 ಪುರಸಭೆಗಳು ಇವುಗಳ ನೀರನ್ನು ಉಪಯೋಗಿಸುತ್ತವೆ. (ವಿ.ಜಿ.ಕೆ.)

**ಪಂಚವಟಿ:** ಗೋದಾವರಿ ನದಿಯ ಉತ್ತರದ ದಂಡೆಯಲ್ಲಿ ನಾಸಿಕ್ ಕ್ಷೇತ್ರದ ಸಮೀಪದಲ್ಲಿರುವ ಒಂದು ಪ್ರದೇಶ. ಇಲ್ಲಿ ವಿಶಾಲವೂ ಉನ್ನತವೂ ಆಗಿರುವ ಐದು ಆಲದ ಮರಗಳಿರುವುದರಿಂದ ಈ ಪ್ರದೇಶಕ್ಕೆ ಪಂಚವಟಿಯೆಂದು ಹೆಸರು. ಪುರಾಣಗಳ ಪ್ರಕಾರ ವನವಾಸ ಕಾಲದಲ್ಲಿ ರಾಮಲಕ್ಷ್ಮಣರು ಅಗಸ್ತ್ಯಾಶ್ರಮದಿಂದ ದಕ್ಷಿಣಕ್ಕೆ ಬರುವಾಗ ಅಗಸ್ತ್ಯನ ಅಪ್ಪಣೆಯಂತೆ ಆತನ ಆಶ್ರಮದಿಂದ ಎರಡು ಗಾವುದ ದೂರವಿರುವ ಪಂಚವಟಿಯಲ್ಲಿ ಆಶ್ರಮ ಕಟ್ಟಿಕೊಂಡಿದ್ದು, ಶೂರ್ಪನಖಿಯ ವಿರೂಪಕರಣವೂ ಖರದೂಷಣಾದಿ ರಾಕ್ಷಸರ ಸಂಹಾರವೂ ಸೀತಾಪಹರಣವೂ ನಡೆದದ್ದು ಇಲ್ಲಿಯೇ ಎಂಬ ನಂಬಿಕೆಯಿದೆ. ಈ ಘಟನೆಗಳ ಸವಿಸ್ತಾರವಾದ ವರ್ಣನೆ ಮೂಲರಾಮಾಯಣದಲ್ಲಿ ಬಂದಿದೆ. *

**ಪಂಚವಾರ್ಷಿಕ ಯೋಜನೆಗಳು:** ಲಭ್ಯವಾಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಒಂದು ನಿಶ್ಚಿತ ಕಾಲಾವಧಿಯಲ್ಲಿ ನಿಗದಿಯಾದ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ಸಂಪನ್ಮೂಲಗಳನ್ನು ಗೊತ್ತಾದ ರೀತಿಯಲ್ಲಿ ಬಳಸುವಂತೆ ರೂಪಿಸಿ ಕೈಗೊಳ್ಳುವ ಕ್ರಮವೇ ಸ್ಥೂಲವಾಗಿ ಯೋಜನೆಯೆನ್ನುವುದಾದರೆ, ಈ ದೀರ್ಘಕಾಲಿಕ ಅಭಿವೃದ್ಧಿಯನ್ನು ಐದೈದು ವರ್ಷಗಳ ಮಜಲುಗಳನ್ನಾಗಿ ವಿಂಗಡಿಸಿ ಆಯಾ ಮಜಲು ಅಥವಾ ಅವಧಿಯಲ್ಲಿ ದೊರಕುವ ಸಂಪನ್ಮೂಲಗಳು, ಸಾಧಿಸಬೇಕಾದ ಅಭಿವೃದ್ಧಿ ಮುಂತಾದವನ್ನು ನಿರೂಪಿಸುವ ಕಾರ್ಯಕ್ರಮವೇ ಪಂಚವಾರ್ಷಿಕ ಯೋಜನೆ. ಪಂಚವಾರ್ಷಿಕ ಯೋಜನೆಗಳನ್ನು ಮೊಟ್ಟಮೊದಲಿಗೆ ಜಾರಿಗೆ ತಂದ ದೇಶ ಸೋವಿಯೆತ್ ಒಕ್ಕೂಟ. ಇಂದಿನ ರಷ್ಯ. ಅದರ ಪ್ರಥಮ ಪಂಚವಾರ್ಷಿಕ ಯೋಜನೆ 1928ರಲ್ಲೂ ಎರಡನೆಯದು 1933ರಲ್ಲೂ ಆರಂಭವಾದವು. ಮುಂದೆ ಎರಡನೆಯ ಮಹಾಯುದ್ಧ ಈ ಕಾರ್ಯಕ್ಕೆ ಅಡ್ಡ ಬಂತು. ಯುದ್ಧಾನಂತರ 1959ರಿಂದ ಮತ್ತೆ ಅಲ್ಲಿ ಯೋಜನಾಬದ್ಧ ಅಭಿವೃದ್ಧಿಕಾರ್ಯ ಮುಂದುವರಿಯಿತು. ಚೀನ ಜನತಾ ಗಣರಾಜ್ಯದಲ್ಲೂ ಪಂಚವಾರ್ಷಿಕ ಯೋಜನೆಗಳ ಸರಣಿ ಈ ಕಾಲದಲ್ಲಿ ಆರಂಭವಾಯಿತು.

ಮೊಟ್ಟ ಮೊದಲಿಗೆ ಸಮಾಜವಾದಿ ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿ ಯೋಜನೆಗಳ ಮಾರ್ಗವನ್ನು ಅನುಸರಿಸಿದುವಾದರೂ ನಿರುಪಾಧಿಕ ಆರ್ಥಿಕ ನೀತಿಯನ್ನು ಪಾಲಿಸಿಕೊಂಡು ಬಂದ ಬಂಡವಾಳವಾದಿ ರಾಷ್ಟ್ರಗಳೂ ಈಗ ಯೋಜನೆಗಳನ್ನು ಜಾರಿಗೆ ತರುತ್ತಿವೆ. ನಿರುಪಾಧಿಕ ಆರ್ಥಿಕ ನೀತಿಯ ಮೇಲಿನ ನಂಬಿಕೆಯ ಸಡಲಿಕೆ, ಎರಡನೆಯ ಮಹಾಯುದ್ಧದ ಅನಂತರ ಉದ್ಭವಿಸಿದ ಆರ್ಥಿಕ ಸಮಸ್ಯೆಗಳನ್ನು ಸುಯೋಜಿತ ರೀತಿಯಲ್ಲಿ ಎದುರಿಸಬೇಕೆಂದು ಬೆಳೆದು ಬಂದ ಭಾವನೆ–ಇವು ಇದಕ್ಕೆ ಕಾರಣ. ಹಿಂದುಳಿದ ರಾಷ್ಟ್ರಗಳೂ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ದೃಷ್ಟಿಯಿಂದ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ಅನುಸರಿಸುತ್ತವೆ.

ಆರ್ಥಿಕ ಅಭಿವೃದ್ಧಿಯನ್ನು ಆರಂಭಿಸಬೇಕಾದರೆ ಮುಖ್ಯವಾಗಿ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳು ವೃದ್ಧಿ ಹೊಂದಬೇಕು. ಇವುಗಳ ಬೆಳವಣಿಗೆಯನ್ನು ಉತ್ತೇಜಿಸುವಂಥ ರಸ್ತೆ, ರೈಲುಮಾರ್ಗ, ವಿದ್ಯುತ್ ಉತ್ಪಾದನೆ, ವಿದ್ಯೆ, ತರಬೇತು ಹಾಗೂ ಹಣಕಾಸು ಸಂಸ್ಥೆಗಳು ಅತ್ಯವಶ್ಯಕ. ಈ ಅಗತ್ಯಗಳನ್ನು ಖಾಸಗಿ ಯತ್ನಶೀಲತೆಯಿಂದ ಒದಗಿಸಲು ಸಾಧ್ಯವಿಲ್ಲದ ಕಾರಣ ಇವನ್ನು ಸರ್ಕಾರ ಒದಗಿಸಬೇಕೆಂಬ ಭಾವನೆ ಬೆಳೆದುಬಂದು ಈ ಕಾರ್ಯವನ್ನು ಸರ್ಕಾರ ಯೋಜನಾಬದ್ಧವಾಗಿ ಕೈಗೊಳ್ಳಬೇಕೆಂಬುದು ಮನದಟ್ಟಾಯಿತು.

ಭಾರತದಲ್ಲಿ 1951ರಿಂದ ಇದುವರೆಗೆ ಹತ್ತು ಪಂಚವಾರ್ಷಿಕ ಯೋಜನೆಗಳು ಮುಕ್ತಾಯಗೊಂಡಿದ್ದು ಪ್ರಸ್ತುತ ಹನ್ನೊಂದನೆಯ ಪಂಚವಾರ್ಷಿಕ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಭಾರತದ ಪಂಚವಾರ್ಷಿಕ ಯೋಜನೆಗಳ ಧ್ಯೇಯಗಳು ಮುಖ್ಯವಾಗಿ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸುವುದು ಹಾಗೂ ಜೀವನಮಟ್ಟವನ್ನು ಯುಕ್ತದರದಲ್ಲಿ ಏರಿಸುವುದು. ಆರ್ಥಿಕತೆಯ ಬೆಳವಣಿಗೆ ಸ್ವಯಂಚಾಲಿತವಾಗುವಂತೆ ವಿನಿಯೋಜನೆಯ ಪ್ರಮಾಣವನ್ನು ಏರಿಸುವ ನಿರ್ಧಾರವನ್ನು ತೆಗೆದುಕೊಂಡಿತಲ್ಲದೆ ವಿವಿಧ ಕ್ಷೇತ್ರಗಳ ಬೆಳವಣಿಗೆಯಿಂದ ಆರ್ಥಿಕತೆಯಲ್ಲಿ ಅಸಮತೋಲವುಂಟಾಗದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಯಿತು. ಜನಬಲ ಅಧಿಕವಿರುವ ಭಾರತೀಯ ಆರ್ಥಿಕತೆಯಲ್ಲಿ ಕಾರ್ಮಿಕ ಪ್ರಧಾನ ಉತ್ಪಾದನ ತಂತ್ರಗಳನ್ನು ಅನುಸರಿಸಲಾಗಿದೆ. ಅಂತಾರಾಷ್ಟ್ರೀಯ ಪೈಪೋಟಿಯನ್ನು ಎದುರಿಸುವ ಸಲುವಾಗಿ ರಫ್ತು ಕ್ಷೇತ್ರಗಳಲ್ಲಿ ಬಂಡವಾಳ ಪ್ರಧಾನ ಉತ್ಪಾದನ ತಂತ್ರವನ್ನು ಉತ್ತೇಜಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಉತ್ಪಾದನ ಸಾಮರ್ಥ್ಯಕ್ಕೆ ಅನುಗುಣವಾಗಿ ವೇತನದ ಏರಿಕೆ ಇರಬೇಕು, ಬೆಲೆ ಏರಿಕೆಯ ತೀವ್ರತೆಯನ್ನು ತಡೆಗಟ್ಟಬೇಕು ಹಾಗೂ ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ವರಮಾನ ಹಂಚಿಕೆ ಇರಬೇಕು ಎಂಬ ನಿರ್ದೇಶನಗಳು ಯೋಜನಾ ವರದಿಗಳಲ್ಲಿ ಕಂಡುಬಂದರೂ ಒಂದು ಸಮಗ್ರವಾದ ವೇತನ, ವರಮಾನ ಮತ್ತು ಬೆಲೆ ನೀತಿ ಇನ್ನೂ ರೂಪಿತವಾಗಿಲ್ಲ. ಭಾರತ ಸರ್ಕಾರ ಮಿಶ್ರ ಆರ್ಥಿಕ ನೀತಿಯನ್ನು ಪಾಲಿಸಿಕೊಂಡು ಬಂದಿರುವುದರಿಂದ ಯೋಜನಕಾರ್ಯ ಗತಿಯ ನಿರ್ಣಯಗಳನ್ನು ನಿಯಂತ್ರಣ ಹಾಗೂ ಉತ್ತೇಜನ–ಈ ಎರಡೂ ಕ್ರಮಗಳನ್ನನುಸರಿಸಿ ಕೈಗೊಳ್ಳಲಾಗುತ್ತಿದೆ. 1990ರ ದಶಕದಲ್ಲಿ ಆರ್ಥಿಕ ಸುಧಾರಣೆ ಪ್ರಾರಂಭವಾದ ಮೇಲೆ ಉದಾರೀಕರಣ ಮತ್ತು ಖಾಸಗೀಕರಣಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದ್ದು ಆರ್ಥಿಕಯೋಜನೆಗಳಿಗೆ ಹಿಂದೆ ಇದ್ದಷ್ಟು ಪ್ರಾಮುಖ್ಯ ಇಲ್ಲವಾದರೂ ಯೋಜಿತ ಅಭಿವೃದ್ಧಿಯ ಮಾರ್ಗವನ್ನು ಮುಂದುವರಿಸಲಾಗುತ್ತಿದೆ. ಆದರೆ ನಿಯಂತ್ರಣಕ್ಕಿಂತ ಉತ್ತೇಜನಕ್ಕೆ ಪ್ರಾಧಾನ್ಯ ನೀಡಬೇಕೆಂಬ ಅಭಿಪ್ರಾಯಕ್ಕೆ ಮನ್ನಣೆ ದೊರಕಿದೆ ಹಾಗೂ ನಿರ್ದೇಶಾರ್ಥ ಯೋಜನಾ ವಿಧಾನದ ಕಡೆಗೆ ಹೆಚ್ಚಿನ ಒಲವು ಕಂಡುಬರುತ್ತಿದೆ.

ಭಾರತೀಯ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಇತ್ತೀಚೆಗೆ ಆಚರಣೆಗೆ ತರಲಾಗಿದ್ದ ನವೀನತೆ ಎಂದರೆ ಆವರ್ತ ಯೋಜನಾ ಪರಿಕಲ್ಪನೆ. ಯೋಜನಾತಂತ್ರದ ಮುಖ್ಯವಾದ ಒಂದು ಅಂಶವೆಂದರೆ ಅಭಿವೃದ್ಧಿಯ ಕಾಲಾವಧಿ ಪಥ. ಸಾಮಾನ್ಯವಾಗಿ ಯೋಜನಾ ಆಯೋಗ ಬಡತನ ನೀಗಿಸುವ ಅಥವಾ ನಿರುದ್ಯೋಗವನ್ನು ತೊಡೆಯುವ ದೀರ್ಘಾವಧಿ ಧ್ಯೇಯಗಳನ್ನು ಸಾಧಿಸುವ 15, 20 ಅಥವಾ 25 ವರ್ಷಗಳ ಸಮದರ್ಶ ಯೋಜನೆಗಳನ್ನು (ಪರ್‌ಸ್ಪೆಕ್ಟಿವ್ ಪ್ಲಾನ್) ರಚಿಸುವುದು ವಾಡಿಕೆ. ಇಂಥ ದೀರ್ಘಾವಧಿ ಧ್ಯೇಯಗಳನ್ನು ಹಂತಹಂತವಾಗಿ ಸಾಧಿಸುವ ದೃಷ್ಟಿಯಿಂದ ಸಮದರ್ಶ ಯೋಜನೆಗಳನ್ನು ಪಂಚವಾರ್ಷಿಕ ಯೋಜನೆಗಳನ್ನಾಗಿಯೂ ಪ್ರತಿ ಪಂಚವಾರ್ಷಿಕ ಯೋಜನೆಯನ್ನೂ ವಾರ್ಷಿಕ ಯೋಜನೆಗಳನ್ನಾಗಿಯೂ ವಿಭಾಗಿಸಿಕೊಳ್ಳಲಾಗುವುದು. ಆದರೆ ಅವಧಿ ಮಧ್ಯದಲ್ಲಿ ಅನಿರೀಕ್ಷಿತವಾಗಿ ಉಂಟಾಗುವ ಬದಲಾವಣೆಗಳ ಕಾರಣ ಸಮದರ್ಶ ಯೋಜನೆಯಲ್ಲಿ ನಮೂದಿಸಿರುವಂತೆ ದೀರ್ಘಾವಧಿ ಗುರಿಗಳನ್ನು ಯೋಜನೆಯ ಅವಧಿಯಲ್ಲಿಯೇ ಸಾಧಿಸಲು ಸಾಧ್ಯವಾಗದಿರಬಹುದು. ಅಂಥ ಸಂದರ್ಭದಲ್ಲಿ ಸಮದರ್ಶ ಯೋಜನೆಯ ಕಾಲಾವಧಿಯನ್ನೇ ಬದಲಿಸಬೇಕಾಗಬಹುದು. ಇಲ್ಲವೇ ವಿನಿಯೋಜನೆಯ ಗಾತ್ರ ಹಾಗೂ ಅದರ ಮಾದರಿಯನ್ನೇ ಬದಲಿಸಬೇಕಾಗಬಹುದು. ಸಮದರ್ಶ ಯೋಜನೆಯಲ್ಲಿ ಈ ಬಗೆಯ ಬದಲಿಕೆಗಳನ್ನು ಸಾಧ್ಯಪಡಿಸುವ ದೃಷ್ಟಿಯಿಂದ ಆವರ್ತ ಯೋಜನಾ ತಂತ್ರವನ್ನು ಅನುಸರಿಸಲಾಯಿತು. (ಎಚ್.ಆರ್.ಕೆ.)

**ಪಂಜಾಬ್ (ಪಾಕಿಸ್ತಾನ):** ಪಾಕಿಸ್ತಾನದ ಒಂದು ಪ್ರಾಂತ್ಯ. ಹಿಮಾಲಯ ತಪ್ಪಲ ಬೆಟ್ಟಗಳು ಹಾಗೂ ಭಾರತದ ರಾಜಸ್ತಾನ ರಾಜ್ಯ ಇವುಗಳ ನಡುವೆ ಇದೆ. ವಿಸ್ತೀರ್ಣ 2,06.432 ಚ.ಕಿಮೀ. ಪ್ರಾಂತ್ಯದ ಆಡಳಿತ ಕೇಂದ್ರ ಲಾಹೋರ್.

ಮೇಲ್ಮೈ ಲಕ್ಷಣ : ಸಿಂಧೂವಿನ ಉಪನದಿಗಳಾದ ಝೀಲಂ, ಚೀನಾಬ್, ರಾವಿ, ಬೀಯಾಸ್ ಮತ್ತು ಸಟ್ಲೆಜ್. ಇವು ಹರಿಯುವ ಪ್ರದೇಶಕ್ಕೆ ಪಂಜಾಬ್ ಎಂದು ಹೆಸರು ಬಂತು. ಝೀಲಂ ಭಾರತದ ಜಮ್ಮು-ಕಾಶ್ಮೀರ ರಾಜ್ಯದ ಪಶ್ಚಿಮ ಗಡಿಯಾಗಿ, ರಾವಿ ಮತ್ತು ಸಟ್ಲೆಜ್ ನದಿಗಳು ಭಾರತದ ಪಂಜಾಬ್ ರಾಜ್ಯದ ಗಡಿಯಾಗಿ ಒಂದಿಷ್ಟು ದೂರ ಹರಿಯುತ್ತದೆ. ಇವು ಹರಿಯುವ ಪ್ರದೇಶ ಫಲವತ್ತಾದ ಮೆಕ್ಕಲು ಮಣ್ಣಿನ ಭೂಮಿ. ಪ್ರಾಂತ್ಯದ ಉತ್ತರದಲ್ಲಿ ಮುರ್ರೀ ಮತ್ತು ರಾವಲ್ಪಿಂಡಿ ಬೆಟ್ಟಗಳಿವೆ. ಇವುಗಳ ಎತ್ತರ ಸಮುದ್ರಮಟ್ಟದಿಂದ 2,269 ಮೀ ಉತ್ತರದಲ್ಲಿರುವ ಪೋಟ್ವಾರ್ ಪ್ರಸ್ಥಭೂಮಿಯಲ್ಲಿ ಹಾರೋ ಮತ್ತು ಸೋನ್ ನದಿಗಳು ಹರಿಯುತ್ತವೆ. ಪಂಜಾಬಿನ ಬಯಲು ನೆಲ ಸ್ಥೂಲವಾಗಿ ಈಶಾನ್ಯದಿಂದ ನೈಋತ್ಯಕ್ಕೆ ಇಳಿಜಾರಾಗಿದೆ. ಆದರೆ ನದಿಗಳ ನಡುವಣ ನೆಲ ಸ್ವಲ್ಪ ಎತ್ತರವಾಗಿದೆ. ನದಿಯ ಪಾತ್ರಗಳ ಪಕ್ಕದ ನೆಲ ಪ್ರವಾಹಕಾಲದಲ್ಲಿ ನೀರಿನಿಂದ ತುಂಬಿರುತ್ತದೆ. ಮರುಭೂಮಿಯ ನೆಲದಲ್ಲಿ ಮರಳುಗುಡ್ಡೆಗಳಿವೆ.

ವಾಯುಗುಣ : ಈ ಪ್ರಾಂತ್ಯ ಮುಂಗಾರು ಮಳೆಯ ವಲಯದಲ್ಲಿದೆ. ಜೂನ್ ತಿಂಗಳಲ್ಲಿ ಬಿಸಿಲೂ ಜನವರಿಯಲ್ಲಿ ಚಳಿಯೂ ಅಧಿಕ. ಮುರ್ರೀ ಗಿರಿಧಾಮದಲ್ಲಿ ಜೂನ್ ತಿಂಗಳ ಗರಿಷ್ಠ ಉಷ್ಣತೆ $27^0$ಸೆ. ಕನಿಷ್ಠ ಉಷ್ಣತೆ $16^0$ಸೆ. ಜನವರಿಯ ಗರಿಷ್ಠ ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ $7^0$ಸೆ. ಮತ್ತು – $0.7^0$ಸೆ. ಮೈದಾನದಲ್ಲಿ ಜೂನಿನ ಸರಾಸರಿ ಉಷ್ಣತೆ ಮುಲ್ತಾನಿನಲ್ಲಿ $36^0$ಸೆ. ಲಾಹೋರಿನಲ್ಲಿ $34^0$ಸೆ. ಜನವರಿಯಲ್ಲಿ ಇವುಗಳ ಸರಾಸರಿ ಉಷ್ಣತೆಗಳು ಅನುಕ್ರಮವಾಗಿ $13^0$–$12^0$ಸೆ.

ಉಪ ಹಿಮಾಲಯ ಮತ್ತು ಉತ್ತರ ಭಾಗಗಳ ಹೊರತು ಉಳಿದ ಭಾಗಗಳಲ್ಲಿ ಮಳೆ ಕಡಿಮೆ. ಉತ್ತರದಿಂದ ದಕ್ಷಿಣಕ್ಕೆ ಅಥವಾ ನೈಋತ್ಯಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ. ವಾರ್ಷಿಕ ಮಳೆ ಸಿಯಾಲ್ಕೋಟ್‌ನಲ್ಲಿ 81 ಸೆಂಮೀ. ಲಾಹೋರ್‌ನಲ್ಲಿ 58 ಸೆಂಮೀ. ಮುಲ್ತಾನ್‌ನಲ್ಲಿ 17 ಸೆಂಮೀ.

ಆಡಳಿತ : ಪ್ರಾಂತ್ಯದ ಪ್ರಮುಖ ಆಡಳಿತಾಧಿಕಾರಿ ಗವರ್ನರ್. ಪಾಕಿಸ್ತಾನದ ರಾಷ್ಟ್ರಾಧ್ಯಕ್ಷರಿಂದ ಈತನ ನೇಮಕ. ಗವರ್ನರನಿಗೆ ಆಡಳಿತದಲ್ಲಿ ಸಹಾಯ ಮಾಡಲು ಪ್ರಾಂತ್ಯ ಸರ್ಕಾರವಿದೆ. ಆಡಳಿತಕ್ಕಾಗಿ ಪ್ರಾಂತ್ಯವನ್ನು 5 ವಿಭಾಗಗಳು, 19 ಜಿಲ್ಲೆಗಳು ಮತ್ತು 75 ತಹಸೀಲ್‌ಗಳಾಗಿ ವಿಂಗಡಿಸಲಾಗಿದೆ.

ಜನ : ಇದು ಪಾಕಿಸ್ತಾನದ ಅತ್ಯಧಿಕ ಜನಸಂಖ್ಯೆಯುಳ್ಳ ಪ್ರಾಂತ್ಯ. ಹಿಂದೆ ಈ ಪ್ರಾಂತ್ಯ ಜನರ ವಾಸಕ್ಕೆ ಅನುಕೂಲವಾಗಿರಲಿಲ್ಲ. 20ನೆಯ ಶತಮಾನದ ಪ್ರಾರಂಭದಲ್ಲಿ ನೀರಾವರಿ ನಾಲೆಗಳನ್ನು ನಿರ್ಮಿಸಿದ ಮೇಲೆ ಇಡೀ ಪ್ರಾಂತ್ಯ ಬೇಗ ಅಭಿವೃದ್ಧಿಹೊಂದಿತು. ಇತ್ತೀಚೆಗೆ ಸ್ಥಾಪಿತವಾದ ಗ್ರಾಮಗಳು ಹಾಗೂ ಪಟ್ಟಣಗಳು ಆಧುನಿಕವಾಗಿವೆ.

ಲಾಹೋರ್, ಲೈಯಲ್ಪುರ್, ಮುಲ್ತಾನ್, ರಾವಲ್ಪಿಂಡಿ, ಗುಜ್ರನ್ವಾಲ, ಸಿಯಾಲ್ಕೋಟ್, ಸರ್ಗೋಧಾ ಇವು ಪ್ರಾಂತ್ಯದ ಪ್ರಮುಖ ಪಟ್ಟಣಗಳು. ಪ್ರಾಂತ್ಯದಲ್ಲಿ ಮುಸಲ್ಮಾನರ ಸಂಖ್ಯೆ ಹೆಚ್ಚು. ಕ್ರೈಸ್ತರು ಶೇ.2 ಇದ್ದಾರೆ. ಇತರ ಮತಾವಲಂಬಿಗಳು ಶೇ.0.1. ಜನರ ಮಾತೃಭಾಷೆ ಪಂಜಾಬಿ. ವ್ಯವಹಾರದಲ್ಲಿ ಉರ್ದು, ಇಂಗ್ಲಿಷ್ ಭಾಷೆಗಳನ್ನು ವಿಶೇಷವಾಗಿ ಬಳಸುವರು. ಅಕ್ಷರಸ್ಥರು ಶೇ.16. ಪಂಜಾಬಿನಲ್ಲಿ ಭಾವಲ್ಪುರದ ಇಸ್ಲಾಮಿಯ ವಿಶ್ವವಿದ್ಯಾಲಯ, ಮುಲ್ತಾನಿನ ಮುಲ್ತಾನ್ ವಿಶ್ವವಿದ್ಯಾನಿಲಯ, ಲೈಯಲ್ಪುರದ ಪಾಕಿಸ್ತಾನ್ ವ್ಯವಸಾಯ ವಿಶ್ವವಿದ್ಯಾಲಯ, ಲಾಹೋರಿನ ಎಂಜಿನಿಯರಿಂಗ್ ವಿಶ್ವವಿದ್ಯಾಲಯ ಮತ್ತು ಪಂಜಾಬ್ ವಿಶ್ವವಿದ್ಯಾಲಯ ಇವೆ.

ಜನರು ಯೋಧಪರಂಪರೆಗೆ ಸೇರಿದವರು. ಜನಜೀವನದಲ್ಲಿ ಧರ್ಮದ ಪಾತ್ರ ಪ್ರಧಾನ. ಪಂಜಾಬಿ ಸಾಹಿತ್ಯದಲ್ಲಿ ಸಹ ಇದನ್ನು ಕಾಣಬಹುದು. ಜನಪದ ಕಥೆಗಳಲ್ಲಿ ಪ್ರಸಿದ್ಧವಾದವು ಹೀರಾ ರಾಂಝಾ, ಸೋಹಿನ ಮಾಹೀವಾಲ್ ಮತ್ತು ಮಿರ್ಜಾ ಶಾಹಿಬಾನ್.

ವ್ಯವಸಾಯ : ಪ್ರಾಂತ್ಯದ ಪ್ರಧಾನ ಬೆಳೆಗಳು ಗೋದಿ ಮತ್ತು ಹತ್ತಿ. ಇತರ ವ್ಯವಸಾಯೋತ್ಪನ್ನಗಳು ಬತ್ತ, ದ್ವಿದಳ ಧಾನ್ಯಗಳು, ಕಬ್ಬು, ಮೆಕ್ಕೆ ಜೋಳ, ಎಣ್ಣೆ ಬೀಜಗಳು, ಹಣ್ಣು ಮತ್ತು ತರಕಾರಿ. ವ್ಯವಸಾಯ ಯೋಗ್ಯ ಭೂಮಿಯ 3/4 ಭಾಗ ಜಮೀನಿಗೆ ನೀರಾವರಿ ಸೌಲಭ್ಯವಿದೆ. ಥಾರ್ ಮರುಭೂಮಿ ವಸಾಹತು ಯೋಜನೆಯ ಅಡಿಯಲ್ಲಿ ಸಿಂಧೂ ಮತ್ತು ಝೀಲಂ ನದಿಗಳ ನಡುವಣ ಸು. 20 ಲಕ್ಷ ಎಕರೆ ಭೂಮಿಯನ್ನು ನೀರಾವರಿಗೆ ತರುವ ನಿರೀಕ್ಷೆಯಿದೆ.

ಕೈಗಾರಿಕೆ : ಪಾಕಿಸ್ತಾನದಲ್ಲಿ ಇದು ಕೈಗಾರಿಕೆಗಳಲ್ಲಿ ಮುಂದುವರಿದ ಪ್ರಾಂತ್ಯ. ಇಲ್ಲಿಯ ಪ್ರಧಾನ ಕೈಗಾರಿಕೆಗಳು ಬಟ್ಟೆ, ಯಂತ್ರೋಪಕರಣ, ವಿದ್ಯುತ್ ಸಲಕರಣೆ, ಲೋಹವಸ್ತು, ಸೈಕಲ್ ಮತ್ತು ಪ್ಲಾಸ್ಟಿಕ್ ಸರಕು.

ಸಾರಿಗೆ ಸಂಪರ್ಕ : ಈ ಪ್ರಾಂತ್ಯದಲ್ಲಿ 9,477 ಕಿಮೀ ರಸ್ತೆಗಳಿದ್ದುವು (1970). ಲಾಹೋರ್ ಮತ್ತು ರಾವಲ್ಪಿಂಡಿ ಪಟ್ಟಣಗಳಿಗೆ ವಿಮಾನ ಸಂಪರ್ಕವಿದೆ. ಲಾಹೋರ್ ಪ್ರಮುಖ ರೈಲ್ವೆ ಜಂಕ್ಷನ್. (ವಿ.ಜಿ.ಕೆ)

**ಪಂಜಾಬ್ (ಭಾರತ):** ಭಾರತ ಗಣರಾಜ್ಯದ ಒಂದು ರಾಜ್ಯ. ದೇಶದ ವಾಯವ್ಯ ಭಾಗದಲ್ಲಿದೆ. ಉ.ಅ.$28^0 30'$ ರಿಂದ $32^0 30'$ ಹಾಗೂ ಪೂ.ರೇ. $74^0$ ರಿಂದ $77^0$ ನಡುವೆ ವಿಸ್ತರಿಸಿದೆ. ಈ ರಾಜ್ಯದ ಹೆಸರು ಪಾಂಚ್ (ಐದು) ಮತ್ತು ಆಬ್ (ನದಿಗಳು) ಎಂಬ ಎರಡು ಪದಗಳ ಸಂಯೋಗದಿಂದ ಆಗಿದೆ. ಸಿಂಧು ನದಿಯ ಐದು ಉಪನದಿಗಳಾದ ಝೀಲಂ, ಚೀನಾಬ್, ರಾವಿ, ಬೀಯಾಸ್ ಮತ್ತು ಸಟ್ಲೆಜ್‌ಗಳು ಹಿಂದೆ ಪಂಜಾಬ್ ಎನಿಸಿಕೊಂಡಿದ್ದ ಪ್ರದೇಶದಲ್ಲಿ ಹರಿಯುತ್ತಿದ್ದವು. ಭಾರತದ ವಿಭಜನೆಯಾದ ಮೇಲೆ ಭಾರತದಲ್ಲಿ ಉಳಿದ ಪಂಜಾಬ್ ರಾಜ್ಯದಲ್ಲಿ ಸಟ್ಲೆಜ್ ಮತ್ತು ಬೀಯಾಸ್ ನದಿಗಳು ಮಾತ್ರ ಹರಿಯುತ್ತವೆ (1947). ಈಗಿನ ಪಂಜಾಬ್ ರಾಜ್ಯದ ಸ್ವರೂಪ ನಿರ್ಣಯವಾದದ್ದು 1966 ನವೆಂಬರ್ 1 ರಂದು. ಇದರ ವಿಸ್ತೀರ್ಣ 50,362 ಚ.ಕಿಮೀ; ಜನಸಂಖ್ಯೆ 24,358,999 (2001). ರಾಜಧಾನಿ ಚಂಡೀಗಢ.

ಮೇಲ್ಮೈಲಕ್ಷಣ : ಪಂಜಾಬಿನ ಬಹುಭಾಗ ಮೈದಾನ. ಇದು ಈಶಾನ್ಯದಿಂದ ನೈಋತ್ಯದ ಕಡೆಗೆ ಇಳಿಜಾರಾಗಿದೆ. ರಾಜ್ಯವನ್ನು ಭೌಗೋಳಿಕವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಈಶಾನ್ಯದಲ್ಲಿ ಸಮುದ್ರಮಟ್ಟದಿಂದ 274 – 914 ಮೀ ಗಳವರೆಗೆ ಎತ್ತರವಾಗಿರುವ ಶಿವಾಲಿಕ್ ಬೆಟ್ಟಗಳದು ಮೊದಲನೆಯ ವಿಭಾಗ. ಈ ವಿಭಾಗದ ವಿಸ್ತೀರ್ಣ ಇಡೀ ರಾಜ್ಯದ ವಿಸ್ತೀರ್ಣದಲ್ಲಿ ಅಲ್ಪ. ಬೆಟ್ಟಗಳ ತಪ್ಪಲಿನ ಪ್ರದೇಶ ಎರಡನೆಯ ವಿಭಾಗ. ಇಲ್ಲಿ ನೆಲ ಅಲೆಅಲೆಯಾಗಿ ಏರಿಳಿತವಾಗಿದೆ. ಮಳೆಗಾಲದಲ್ಲಿ ವೇಗವಾಗಿ ಹರಿಯುವ ತೊರೆಗಳು ಈ ಕಿರಿದಾದ ಪ್ರದೇಶವನ್ನು ಅಲ್ಲಲ್ಲಿ ಕೊರೆದಿವೆ. ಈ ತೊರೆಗಳು ಮೈದಾನದಲ್ಲಿ ಕೊನೆಗೊಳ್ಳುತ್ತವೆ. ಚಪ್ಪಟೆಯಾದ ಹಾಗೂ ಫಲವತ್ತಾದ ಮೆಕ್ಕಲು ಮಣ್ಣಿನಿಂದ ಕೂಡಿದ ಮೈದಾನ ಇದರ ಮೂರನೆಯ ವಿಭಾಗ. ನದಿಗಳ ಎರಡೂ ಬದಿಗಳ ನೆಲ ತಗ್ಗಾಗಿಯೂ ಇವುಗಳ ನಡುವಣ ಪ್ರದೇಶ ಸ್ವಲ್ಪ ಎತ್ತರವಾಗಿಯೂ ಇವೆ. ನೈಋತ್ಯದಲ್ಲಿ ಅಲ್ಲಲ್ಲಿ ಮರಳ ದಿಬ್ಬಗಳುಂಟು.




ವಾಯುಗುಣ : ಪಂಜಾಬಿನ ವಾಯುಗುಣ ಸಾಮಾನ್ಯವಾಗಿ ಒಳನಾಡಿನ ಉಪೋಷ್ಣವಲಯದ್ದು. ಕೆಲವು ಭಾಗ ಅರೆ ಒಣ ಬಯಲು; ಇನ್ನು ಕೆಲವು ಭಾಗ ಸ್ವಲ್ಪ ಆರ್ದ್ರವಾಗಿರುತ್ತದೆ. ಬೇಸಗೆ ಬಹಳ ಬಿಸಿಯಾಗಿರುತ್ತದೆ. ಚಳಿಗಾಲದಲ್ಲಿ ಚಳಿಯೂ ಸ್ವಲ್ಪ ಹೆಚ್ಚಾಗಿಯೇ ಇರುತ್ತದೆ. ಜೂನ್‌ನ ಸರಾಸರಿ ಉಷ್ಣತೆ $34^0$ – $45^0$ ಸೆ. ವರೆಗೂ ಏರುವುದುಂಟು. ಜನವರಿಯಲ್ಲಿ ಸರಾಸರಿ ಉಷ್ಣತೆ $13^0$ ಸೆ. ಒಮ್ಮೊಮ್ಮೆ ರಾತ್ರಿಯ ವೇಳೆಯಲ್ಲಿ ನೀರು ಘನೀಕರಣ ಬಿಂದುವಿನವರೆಗೂ ಇದು ಇಳಿಯುವುದುಂಟು. ಜುಲೈನಿಂದ ಸೆಪ್ಟಂಬರ್‌ವರೆಗಿನ ಮುಂಗಾರಿನ ಕಾಲದಲ್ಲೇ ರಾಜ್ಯದ ಒಟ್ಟು ವಾರ್ಷಿಕ ಮಳೆಯ ಶೇ. 70 ರಷ್ಟು ಬೀಳುತ್ತದೆ. ಶಿವಾಲಿಕ್ ಬೆಟ್ಟಗಳ ಪ್ರದೇಶದಲ್ಲಿ ಗರಿಷ್ಠ ಮಳೆ (1.24 ಸೆಂಮೀ) ಆಗುತ್ತದೆ. ನೈಋತ್ಯಕ್ಕೆ ಬಂದಂತೆ ಇದು ಕಡಿಮೆಯಾಗುತ್ತದೆ. ನೈಋತ್ಯದಲ್ಲಿ ವಾರ್ಷಿಕ ಮಳೆ 35 ಸೆಂಮೀ. ಒಟ್ಟು ಮಳೆಯಲ್ಲಿ ಶೇ. 15 ರಷ್ಟು ಡಿಸೆಂಬರ್ ನಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಬೀಳುತ್ತದೆ.

ಸಸ್ಯಸಂಪತ್ತು : ಪಂಜಾಬ್ ಪ್ರದೇಶದಲ್ಲಿ ಅನೇಕ ಶತಮಾನಗಳಿಂದ ಜನರು ನೆಲಸಿದ್ದಾರೆ. ನೀರಾವರಿ ಸೌಲಭ್ಯ ಪ್ರಗತಿಗೊಂಡಿದ್ದು ಕೃಷಿಗಾಗಿ ಹೆಚ್ಚು ಭೂಬಳಕೆಯಾಗಿದೆ.

ಆದ್ದರಿಂದ ಇಲ್ಲಿಯ ಸ್ವಾಭಾವಿಕ ಸಸ್ಯಸಂಪತ್ತು ಬಹುವಾಗಿ ನಷ್ಟವಾಗಿದೆ. ಇಲ್ಲಿಯದು ಉಷ್ಣವಲಯದ ಪರ್ಣಪಾತಿ ಸಸ್ಯವರ್ಗ, ಶಿಷ್ವಬಾಗೆ, ಅರಳಿ, ಎಲಚಿ ಮತ್ತು ಗೊಬ್ಬಳಿ ಮರಗಳು ಸಾಮಾನ್ಯ. ಶಿವಾಲಿಕ್ ಬೆಟ್ಟಗಳಲ್ಲಿದ್ದ ಮರಗಳನ್ನು ಬಹುತೇಕ ಕಡಿಯಲಾಗಿದೆ.

ಪ್ರಾಣಿ ಸಂಪತ್ತು : ನೀಲ್ಗಾಯ್, ಕಾಡುಹಂದಿ, ಮೊಲ, ನರಿ, ಜಿಂಕೆ ಇವು ಇಲ್ಲಿಯ ಕೆಲವು ಮುಖ್ಯ ವನ್ಯಮೃಗಗಳು. ಕಾಗೆ, ಗುಬ್ಬಚ್ಚಿ, ಪಾರಿವಾಳ, ಗಿಳಿ, ಕೋಗಿಲೆ, ಕೊಕ್ಕರೆ, ಕಬ್ಬಾರೆ ಮತ್ತು ಬಾತುಗಳು ಇವೆ. ವಿವಿಧ ಪ್ರಭೇದದ ಹಾವುಗಳಿವೆ.

ಜನಜೀವನ : ವಾಯವ್ಯದಿಂದ ಭಾರತವನ್ನು ಪ್ರವೇಶಿಸಿದ ಆರ್ಯರು ಮೊದಲು ಇಲ್ಲಿ ನೆಲಸಿದರು. ಚಂಡೀಗಢದ ಬಳಿ ಇರುವ ರೂಪಾರ್‌ದಲ್ಲಿ ಪ್ರಾಚೀನ ನಾಗರಿಕತೆಯ ಅವಶೇಷಗಳಿವೆ. ಅನಂತರ ಗ್ರೀಕರೂ ಪಾರ್ಥಿಯನರೂ ಕುಷಾಣರೂ ಹೂಣರೂ ಬಂದು ಆರ್ಯರೊಂದಿಗೆ ಬೆರೆತರು. ಆರ್ಯರು ಬರುವುದಕ್ಕೆ ಮುಂಚೆ ಇಲ್ಲಿ ವಾಸಿಸುತ್ತಿದ್ದ ಜನಾಂಗಗಳ ವಂಶೀಯರು ಇದ್ದಾರೆ.

ಪಂಜಾಬಿನ ಬಹುಸಂಖ್ಯಾತರು ಸಿಖ್ಖರು. ಇವರು ಒಟ್ಟು ಜನಸಂಖ್ಯೆಯ ಶೇ. 60 ರಷ್ಟಿದ್ದಾರೆ. ಹಿಂದುಗಳು ಶೇ. 38ರಷ್ಟು. ಮುಸ್ಲಿಮರೂ ಕ್ರೈಸ್ತರೂ ತಲಾ ಶೇ. 1ರಷ್ಟು ಇದ್ದಾರೆ. ಉಳಿದ ಶೇ. 1 ರಷ್ಟು ಜನರ ಜೈನರು, ಬೌದ್ಧರು ಇತ್ಯಾದಿ. ಪಂಜಾಬಿನಲ್ಲಿ ಮೂರನೆಯ ಎರಡರಷ್ಟು ಜನರ ಮಾತೃಭಾಷೆ ಪಂಜಾಬಿ, ಉಳಿದವರದು ಸಾಮಾನ್ಯವಾಗಿ ಹಿಂದಿ.

ಪಂಜಾಬಿನ ಜನಸಂಖ್ಯೆಯಲ್ಲಿ ಶೇ.34ರಷ್ಟು ಜನರು ನಗರ ಪಟ್ಟಣಗಳಲ್ಲಿ ವಾಸಿಸುತ್ತಾರೆ. ಉಳಿದ ಹೆಚ್ಚು ಜನರು ಗ್ರಾಮೀಣವಾಸಿಗಳು. ಪ್ರಮುಖ ನಗರಗಳು ಅಮೃತಸರ, ಲೂಧಿಯಾನ, ಜಲಂಧರ್ ಮತ್ತು ಪಟಿಯಾಲಾ. ಪಂಜಾಬಿನ ರಾಜಧಾನಿಯಾದ ಚಂಡೀಗಢ, ಪಂಜಾಬ್ ಮತ್ತು ಹರಿಯಾಣಗಳೆರಡಕ್ಕೂ ರಾಜಧಾನಿ. ಇದರ ಜನಸಂಖ್ಯೆ 900635 (2001).

ಕೃಷಿ : ಪಂಜಾಬಿನ ಪ್ರಮುಖ ವೃತ್ತಿ. ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.86 ಭಾಗವು ಕೃಷಿಗೆ ಬಳಕೆಯಾಗುತ್ತಿದೆ. ಪಂಜಾಬಿನ ಮುಖ್ಯ ಬೆಳೆಗಳು ಗೋದಿ, ಮುಸುಕಿನ ಜೋಳ, ಬತ್ತ, ಸಜ್ಜೆ, ಬಾರ್ಲಿ ಮತ್ತು ದ್ವಿದಳಧಾನ್ಯ ಬೆಳೆಗಳು. ಇಲ್ಲಿ ಹತ್ತಿ, ಕಬ್ಬು, ಆಲೂಗಡ್ಡೆ ಮತ್ತು ಎಣ್ಣೆ ಕಾಳು ಬೆಳೆಗಳನ್ನು ಬೆಳೆಯಲಾಗುತ್ತದೆ. ಇವುಗಳಲ್ಲಿ ಗೋದಿ ಪ್ರಮುಖವಾದುದು. ದೇಶದ ಗೋದಿ ಉತ್ಪಾದನೆಯಲ್ಲಿ ಪಂಜಾಬ್ ಶೇ.21ರಷ್ಟನ್ನು ಉತ್ಪಾದಿಸುತ್ತದೆ. ತರುವಾಯ ಬತ್ತ ಮತ್ತು ಹತ್ತಿ ಮುಖ್ಯವಾದವು. ಒಳ್ಳೆಯ ತಳಿಯ ಬೀಜಗಳ ಬಳಕೆ, ರಸಗೊಬ್ಬರ ಮತ್ತು ಕ್ರಿಮಿನಾಶಕಗಳ ಉಪಯೋಗ ಇವುಗಳಿಂದ ಕೃಷಿಯ ಇಳುವರಿ ಉತ್ತಮವಾಗಿದೆ. ದೇಶದ ಹಸುರು ಕ್ರಾಂತಿ ಪ್ರಾರಂಭವಾದದ್ದು ಇಲ್ಲೆ.

ನೀರಾವರಿ: ರಾಜ್ಯದಲ್ಲಿ ಸಾಗುವಳಿಗೆ ಒಳಪಟ್ಟಿರುವ ನೆಲದಲ್ಲಿ ಶೇ. 67ಕ್ಕೂ ಹೆಚ್ಚು ಭಾಗಕ್ಕೆ ನೀರಾವರಿ ಸೌಲಭ್ಯವಿದೆ. ಭಾರತದ ಬೇರೆ ಯಾವ ರಾಜ್ಯದಲ್ಲೂ ನೀರಾವರಿ ವ್ಯವಸ್ಥೆ ಇಷ್ಟೊಂದು ವ್ಯಾಪಕವಾಗಿಲ್ಲ. ಇದರಲ್ಲಿ ಶೇ. 49 ಭಾಗಕ್ಕೆ ನಾಲೆಗಳಿಂದಲೂ ಉಳಿದ ನೆಲಕ್ಕೆ ಬಾವಿ, ಕೊಳವೆ ಬಾವಿ ಮತ್ತು ಪಂಪುಗಳಿಂದಲೂ ನೀರು ಒದಗುತ್ತದೆ. ಏಷ್ಯದಲ್ಲೇ ಅತ್ಯಂತ ದೊಡ್ಡ ವಿವಿಧೋದ್ದೇಶ ಯೋಜನೆಯಾದ ಭಾಕ್ರ-ನಂಗಲ್ ನಿಂದ ಪಂಜಾಬಿನ 5,50,000 ಹೆ. ನೆಲಕ್ಕೆ ನೀರಾವರಿ ಸೌಲಭ್ಯ ಒದಗುತ್ತದೆ. ಇದಲ್ಲದೆ ಇಲ್ಲಿ ಇತರ ನೀರಾವರಿ ಹಾಗೂ ವಿವಿಧೋದ್ದೇಶ ಯೋಜನೆಗಳು ಕಾರ್ಯಗತವಾಗಿವೆ. ಇವುಗಳ ಪೈಕಿ ಬೀಯಾಸ್ ಸಟ್ಲೆಜ್- ಕೊಂಡಿ ಯೋಜನೆ ದೊಡ್ಡದು. ಸಿಂಧು ನದಿ ನೀರಿನ ಒಪ್ಪಂದದ ಪ್ರಕಾರ ಪಾಕಿಸ್ತಾನ ಬೀಯಾಸ್ ನದಿಯಲ್ಲಿ ಬಿಟ್ಟು ಕೊಡುವ ಹೆಚ್ಚಿನ ನೀರನ್ನು ಬಳಸುವ ತೆಯಿನ್ ಕಟ್ಟೆ ಇನ್ನೊಂದು ಯೋಜನೆ. ಸಟ್ಲೆಜ್ ನದಿಯ ಹರಿಕ ಅಡ್ಡಕಟ್ಟೆ, ಬೀಯಾಸ್ ನದಿಯ ಪೊಂಗ್ ಕಟ್ಟೆ ಇವೂ ಮುಖ್ಯವಾದವು.

ಕೈಗಾರಿಕೆ : ಪಂಜಾಬಿನಲ್ಲಿ ಖನಿಜ ನಿಕ್ಷೇಪಗಳು ಇಲ್ಲವೇ ಇಲ್ಲವೆನ್ನಬಹುದು. ಇಲ್ಲಿಯ ಕೈಗಾರಿಕಾಭಿವೃದ್ಧಿ ಕೃಷಿ ಆಧಾರಿತವಾದವು. ಇತರ ಅನುಭೋಗ ಕೈಗಾರಿಕೆಗಳೂ ಇವೆ. ಇಲ್ಲಿಯ ಮುಖ್ಯ ಕೈಗಾರಿಕೆಗಳು ಹತ್ತಿ ಜವಳಿ, ಉಣ್ಣೆ, ರೇಷ್ಮೆ, ಸಕ್ಕರೆ, ಯಂತ್ರ ಸಲಕರಣೆ, ಕೃಷಿ ಉಪಕರಣ, ರಸಗೊಬ್ಬರ, ಬೈಸಿಕಲ್ಲು ಮತ್ತು ಅದರ ಬಿಡಿಭಾಗಗಳು, ಹೊಲಿಗೆಯಂತ್ರ, ಸಿಮೆಂಟ್, ಗೋದಿಹಿಟ್ಟು ಮತ್ತು ಅಕ್ಕಿ ಗಿರಣಿಗಳು, ಮೋಟರ್ ವಾಹನದ ಬಿಡಿಭಾಗಗಳು, ಪ್ಲಾಸ್ಟಿಕ್ ಕೊಳವೆ, ನಟ್ ಮತ್ತು ಬೋಲ್ಟ್‌ಗಳು, ಮರ ಕೈಗಾರಿಕೆ, ಹೈನುಗಾರಿಕೆ ಮತ್ತು ಕಸೂತಿ. ಸಣ್ಣ ಕೈಗಾರಿಕೆಗಳ ಕ್ಷೇತ್ರದಲ್ಲಿ ಪಂಜಾಬು ವಿಶೇಷವಾಗಿ ಮುಂದುವರಿದಿದೆ.

ಸಾರಿಗೆ : ಪಂಜಾಬ್ ರಾಜ್ಯದಲ್ಲಿ ರಸ್ತೆಗಳು ವಿಶೇಷವಾಗಿ ಅಭಿವೃದ್ಧಿ ಹೊಂದಿವೆ. ರಾಜ್ಯದ ವಿವಿಧ ಪ್ರದೇಶಗಳಿಗೆ ಒಳ್ಳೆಯ ಸಂಪರ್ಕ ಏರ್ಪಟ್ಟಿರುವುದು ವಾಣಿಜ್ಯದ ಬೆಳವಣಿಗೆಗೆ ಸಹಕಾರಿಯಾಗಿದೆ. 64,549 ಕಿಮೀ (1997) ಉದ್ದದ ರಸ್ತೆಗಳಿದ್ದವು. ಇವುಗಳ ಪೈಕಿ 52,602 ಕಿಮೀ ಸುಧಾರಿತ ರಸ್ತೆಗಳು. 11 ರಾಷ್ಟ್ರೀಯ ಹೆದ್ದಾರಿಗಳಿದ್ದು ಅವುಗಳ ಉದ್ದ 1553 ಕಿಮೀ ಪ್ರಯಾಣಿಕರ ಸಾರಿಗೆಯನ್ನು ಸರ್ಕಾರ ಕ್ರಮ ಕ್ರಮವಾಗಿ ರಾಷ್ಟ್ರೀಕರಿಸುತ್ತಿದೆ. ದೂರ ಪ್ರಯಾಣಕ್ಕೆ ಸಾಮಾನ್ಯವಾಗಿ ರೈಲುಗಳು (3,726 ಕಿಮೀ) ಬಳಕೆಯಲ್ಲಿವೆ. ಚಂಡೀಗಢ, ಪಟಿಯಾಲ, ಬಾಟಿಂಡ, ಫಿರೋಜ್‌ಪುರ, ಲೂಧಿಯಾನ, ಜಲಂಧರ್, ಅಮೃತಸರ, ಗುರುದಾಸ್‌ಪುರ ಮುಂತಾದ ಸ್ಥಳಗಳನ್ನು ಸಂಪರ್ಕಿಸುವ ರೈಲುಮಾರ್ಗಗಳಿವೆ. ದೆಹಲಿ ಮುಂತಾದ ನಗರಗಳಿಗೂ ಒಳ್ಳೆಯ ರೈಲುಸಾರಿಗೆ ಸಂಪರ್ಕವುಂಟು. ಅಮೃತಸರದಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ದೆಹಲಿಗೂ ಪಂಜಾಬಿನ ಪ್ರಮುಖ ನಗರಗಳಿಗೂ ನಡುವೆ ವಿಮಾನ ಸಂಚಾರವಿದೆ.

ಶಿಕ್ಷಣ : ರಾಜ್ಯದಲ್ಲಿಯ ಸಾಕ್ಷರತೆ ದರ ಶೇ.69.7 ಇಡೀ ಭಾರತದ ಸಾಕ್ಷರತೆ ದರವಾದ ಶೇ. 65.38 ರೊಂದಿಗೆ ಹೋಲಿಸಿದರೆ ಇದು ಅಧಿಕ. ಪುರುಷರಲ್ಲಿ ಶೇ. 75.2 ಮಂದಿ ಮತ್ತು ಸ್ತ್ರೀಯರಲ್ಲಿ ಶೇ. 63.4 ಮಂದಿ ಸಾಕ್ಷರಸ್ಥರು. ರಾಜ್ಯದಲ್ಲಿ 9,120 ಪ್ರಾಥಮಿಕ ಶಾಲೆಗಳೂ 1,213 ಮಾಧ್ಯಮಿಕ ಶಾಲೆಗಳೂ 1,495 ಪ್ರೌಢಶಾಲೆಗಳೂ 152 ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳೂ 38 ತಾಂತ್ರಿಕ ಮತ್ತು ವೃತ್ತೀಯ ಕಾಲೇಜುಗಳೂ 17 ಪ್ರಶಿಕ್ಷಣ ಕಾಲೇಜುಗಳೂ ಇವೆ. ಇತರ ಶಿಕ್ಷಣ ಸಂಸ್ಥೆಗಳು 4 ರಾಜ್ಯದಲ್ಲಿ ಒಟ್ಟು ನಾಲ್ಕು ವಿಶ್ವವಿದ್ಯಾಲಯಗಳಿವೆ: ಗುರುನಾನಕ್ ವಿಶ್ವವಿದ್ಯಾಲಯ (ಅಮೃತಸರ), ಪಂಜಾಬ್ ವಿಶ್ವವಿದ್ಯಾಲಯ (ಚಂಡೀಗಢ), ಪಂಜಾಬ್ ಕೃಷಿ ವಿಶ್ವವಿದ್ಯಾಲಯ (ಲೂಧಿಯಾನ) ಮತ್ತು ಪಂಜಾಬಿ ವಿಶ್ವವಿದ್ಯಾಲಯ (ಪಟಿಯಾಲ).

ಪ್ರವಾಸೋದ್ಯಮ : ಪಂಜಾಬಿನಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಅನೇಕ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ಥಳಗಳಿವೆ. ಸಿಂಧೂ ಕಣಿವೆ ನಾಗರಿಕತೆಯ ಅವಶೇಷಗಳಿರುವ ರೂಪಾರ್, ಸಿಖ್ ಧರ್ಮದ ಪವಿತ್ರ ಯಾತ್ರಾಸ್ಥಳವಾದ ಸ್ವರ್ಣದೇಗುಲ ದುರ್ಗಿಯಾನ ಮಂದಿರ, ಅಮೃತಸರದ ಜಲಿಯನ್ ವಾಲಾಬಾಗ್ ಮತ್ತು ಸರೋವರಗಳ ನಗರವಾದ ಅಮೃತಸರ, ಪ್ರಾಚೀನ ಕೋಟೆ ಇರುವ ಭಟಿಂಡ, ಶಿಲ್ಪಕಲಾ ಕೃತಿಗಳ ಆಗರವಾದ ಕಪೂರ್ಥಲಾ, ಉದ್ಯಾನನಗರವೆಂದು ಹೆಸರಾದ ಪಟಿಯಾಲ, ತಾಖಾಗರ್ ಸಾಹಿಬ್, ಆನಂದಪುರಸಾಹಿಬ್, ಭಾಕ್ರ-ನಂಗಲ್ ಜಲಾಶಯ, ಜಲಂಧರನ ಸೋಡಲ್ ದೇವಾಲಯ ಮತ್ತು ರಾಮತೀರ್ಥ ಸ್ಮಾರಕ ಹಾಗೂ ರಾಜಧಾನಿ ಚಂಡೀಗಢ-ಇವು ಪ್ರಮುಖ ಸ್ಥಳಗಳು.

ಸಂಸ್ಕೃತಿ : ರಾಜ್ಯದ ಸಾಂಸ್ಕೃತಿಕ ಜೀವನ ಅಲ್ಲಿಯ ಜಾನಪದದಲ್ಲಿ, ಪ್ರೇಮ ಮತ್ತು ಯುದ್ಧಗಳ ಲಾವಣಿಗಳಲ್ಲಿ, ಜಾತ್ರೆ, ಹಬ್ಬಗಳಲ್ಲಿ, ನೃತ್ಯ ಸಾಹಿತ್ಯ ಸಂಗೀತಗಳಲ್ಲಿ ಅಭಿವ್ಯಕ್ತಗೊಂಡಿದೆ. ಹೀರಾ ರಾಂಝಾ, ಮಿರ್ಜಾ ಶಾಹಿಬಾನ್ ಮುಂತಾದ ಹಳೆಯ ರಮ್ಯ ಹಾಡುಕಥೆಗಳೂ ಜನಪ್ರಿಯವಾಗಿವೆ. ಅನೇಕ ಸೂಫಿ ಗೀತೆಗಳೂ ಪ್ರಸಿದ್ಧವಾಗಿವೆ. ಸಿಖ್ ಧರ್ಮದ ಸ್ಥಾಪಕರಾದ ಗುರುನಾನಕ್ ಪ್ರಥಮವಾಗಿ ಪಂಜಾಬಿ ಭಾಷೆಯನ್ನು ಕಾವ್ಯಾಭಿವ್ಯಕ್ತಿ ಮಾಧ್ಯಮವಾಗಿ ಬಳಸಿದರು. 20 ನೆಯ ಶತಮಾನದಲ್ಲಿ ಈ ಭಾಷೆ ವೈವಿಧ್ಯಮಯವಾಗಿ ಬೆಳೆದಿದೆ. ದಸರ, ದೀಪಾವಳಿ, ಬೈಸಾಖಿ ಸಿಖ್ ಗುರುಗಳ ವಾರ್ಷಿಕ ಉತ್ಸವಗಳು- ಇವು ಸಾರ್ವತ್ರಿಕವಾಗಿ ಆಚರಣೆಯಲ್ಲಿವೆ. ಭಾಂಗ್ರ, ಝುಮಾರ್, ಸಮ್ಮಿ ಇವು ಜನಪ್ರಿಯ ನೃತ್ಯ ಪ್ರಕಾರಗಳು. ಸಿಖ್ ಧಾರ್ಮಿಕ ಗೀತಗಳೂ ಮೊಗಲ್ ಮಾದರಿಯ ಅಭಿಜಾತ ಸಂಗೀತವೂ ಜನರನ್ನು ವಿಶೇಷವಾಗಿ ಆಕರ್ಷಿಸುತ್ತವೆ. (ಕೆ.ಆರ್.)

**ಪಂಜಾಲ್ ಲಾವಾಸ್ತರಗಳು:** ಕಾಶ್ಮೀರದ ಪಿರ್-ಪಂಜಾಲ್ ಪರ್ವತ ಶ್ರೇಣಿಯಲ್ಲಿ ಕಂಡುಬರುವ ಜ್ವಾಲಾಮುಖಿಜನಿತ ಉತ್ಪನ್ನಗಳು. ಕಾರ್ಬಾನಿಫೆರಸ್ ಭೂಕಾಲದ ಮಧ್ಯಭಾಗದಲ್ಲಿ ಕಾಶ್ಮೀರದ ಬಲುಭಾಗ ನೆಲವಾಗಿತ್ತು, ಆಗ ಅಲ್ಲಿ ತಲೆದೋರಿದ ಜ್ವಾಲಾಮುಖಿ ಚಟುವಟಿಕೆಯ ಪರಿಣಾಮವಾಗಿ ಮೊದಮೊದಲು ಸ್ಫೋಟಿಸಿದ ಶಿಲಾಚೂರುಗಳು ಅಗ್ಲಾರೇಟ್ ಸ್ಲೇಟ್ ಇಡುಗೆಗಳಾದುವು. ಅವು ಸಾಮಾನ್ಯವಾಗಿ ಜೀವಾವಶೇಷರಹಿತವಾದವಾದರೂ 5-6 ಕಡೆ ಅವುಗಳಲ್ಲಿ ಜೀವವಶೇಷಗಳನ್ನು ಗುರುತಿಸಲಾಗಿದೆ. ಈ ನಿಕ್ಷೇಪಗಳಾದ ಬಳಿಕ ಜ್ವಾಲಾಮುಖಿ ಚಟುವಟಿಕೆ ತೀವ್ರಗೊಂಡು ಪರ್ಮಿಯನ್ ಆದಿಯಲ್ಲಿ ಪರಾಕಾಷ್ಠೆಯನ್ನು ಮುಟ್ಟಿತು. ಆಗ ಲಾವಾ ಪ್ರವಾಹಗಳು ಹೊರಬಂದು ಪದರುಪದರಾಗಿ ಹೆಪ್ಪುಗಟ್ಟಿದವು. ಜ್ವಾಲಾಮುಖಿ ಕಾರ್ಯಾಚರಣೆ ಕ್ರಮೇಣ ಕುಗ್ಗುತ್ತಾಹೋಗಿ ಟ್ರಯಾಸಿಕ್ ಅಂತ್ಯದಲ್ಲಿ ಕೊನೆಗೊಂಡಿತು. ಈ ಲಾವಾಸ್ತರಗಳು ಜೀವವಶೇಷಗಳುಳ್ಳ ನಾನಾ ವಯಸ್ಸಿನ ಜಲಜಶಿಲಾಪದರುಗಳೊಡನೆ ಕಂಡುಬಂದಿವೆ. ಲಿಡಾರ್ ಕಣಿವೆಯಲ್ಲಿ ಕಾರ್ಬಾನಿಫೆರಸ್ ಆದಿಭಾಗದ ಶಿಲೆಗಳ ಮೇಲೆ ಹಾಗೂ ಮಧ್ಯ ಕಾರ್ಬೊನಿಫೆರಸ್ ಶಿಲೆಗಳೊಡನೆ ನಾಗಮಾರ್ಗದಲ್ಲಿ ಕಾರ್ಬೊನಿಫೆರಸ್ ಅಂತ್ಯದ ಶಿಲೆಗಳೊಡನೆ ಸೊನಾಮಾರ್ಗದಲ್ಲಿ ಪರ್ಮಿಯನ್ ಶಿಲೆಗಳೊಡನೆ ಮತ್ತು ವೂಲಾರ್ ಸರೋವರದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಟ್ರಯಾಸಿಕ್ಕಿನ ಆದಿ, ಮಧ್ಯ ಮತ್ತು ಅಂತ್ಯ ಕಾಲದ ಶಿಲೆಗಳೊಡನೆ ಕಂಡುಬಂದಿರುವುದು ಈ ಊಹೆಗೆ ಆಧಾರವಾಗಿದೆ. ಇಲ್ಲಿ ಜ್ವಾಲಾಮುಖಿಯ ಚಟುವಟಿಕೆ ಭೂಕಾಲದ ದೀರ್ಘ ಕಾಲದತನಕ ಸತತವಾಗಿ ನಡೆದಿದೆಯಾದರೂ ಆ ನಿಕ್ಷೇಪಗಳ ಸಂಯೋಜನೆ ಅತ್ಯಾಶ್ಚರ್ಯಕರ ರೀತಿಯಲ್ಲಿ ಏಕ ಪ್ರಕಾರವಾಗಿ ಉಳಿದಿರುವುದು ಹೇಗೆ ಎಂಬುದು ಸಮಸ್ಯೆಯಾಗಿದೆ. ಈ ಸ್ತರಗಳಲ್ಲಿ ಆಂಡಿಸೈಟಿನಿಂದ ಬಸಾಲ್ಟ್ ಬಗೆಯವರೆಗಿನ ಶಿಲೆಗಳಿವೆ. ಅವು ಹಸುರು, ನೇರಳೆ ಮತ್ತು

ಕಪ್ಪು ಬಣ್ಣಗಳಲ್ಲಿವೆ. ಅಲ್ಲಲ್ಲಿ ಅಮಿಗ್ಡಲಾಯಿಡಲ್ ಮತ್ತು ಪಾರ್ಫಿರಿಟಿಕ್ ಹೊರರಚನೆ ಕಂಡುಬರುವುದಾದರೂ ಸೂಕ್ಷ್ಮಸ್ಫಟಿಕ ಒಳರಚನೆ ಸಾಮಾನ್ಯ ಸ್ತರಗಳ ದಪ್ಪ 6 – 9 ಮೀ ವರೆಗೆ. ಆದರೆ ಊರಿ ಜಿಲ್ಲೆಯಲ್ಲಿ ಅದರ ದಪ್ಪ 2100 ಮೀ.

ಹೊರನೋಟಕ್ಕೆ ಅಬಾಧಿತವೆಂದು ಕಾಣುವ ಈ ಶಿಲೆಗಳ ತೆಳುಪೊರೆಯನ್ನು ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದಾಗ ಮೂಲ ಪ್ರಮುಖ ಖನಿಜಗಳಾದ ಅಗೈಟ್ ಮತ್ತು ಪ್ಲೇಜಿಯೋಕ್ಲೇಸ್ ಗುರುತುಕಾಣದಷ್ಟು ಮಾರ್ಪಾಡಾಗಿರುವುದು ವ್ಯಕ್ತವಾಗುತ್ತದೆ. ಅಸ್ಫಟಿಕ ಇಲ್ಲವೆ ಸೂಕ್ಷ್ಮ ಒಡಲಿನಲ್ಲಿದ್ದ ಈ ದೊಡ್ಡ ಹರಳುಗಳಲ್ಲಿ ಪ್ಲೇಜಿಯೋಕ್ಲೇಸ್ ಎಪಿಡೋಟ್ ಜೋಯಿಸೈಟ್ ಮತ್ತು ಕ್ಯಾಲ್ಸೈಟುಗಳಾಗಿ ಬದಲಾಗಿದ್ದರೆ ಮೊದಲೇ ಅನಿರ್ದಿಷ್ಟ ಆಕಾರದಲ್ಲಿದ್ದ ಅಗೈಟ್ ಎಪಿಡೋಟ್ ಅಥವಾ ಕ್ಲೋರೈಟ್ ಆಗಿದೆ. ಇವುಗಳೊಡನೆ ಇಲ್ಮನೈಟ್ ಮತ್ತು ಮ್ಯಾಗ್ನಸೈಟುಗಳು ಉಪ ಖನಿಜಗಳಾಗಿ ದೊರೆಯುತ್ತವೆ. ಒಡಲಿನ ಅಸ್ಫಟಿಕ ವಸ್ತು ಅಲ್ಲಲ್ಲಿ ಸ್ಫಟಿಕಾಂಕುರ ರಚನೆ ತೋರುತ್ತದೆ. ಈ ಶಿಲೆಗಳು ಲಿಡಾರ್ ಕೊಳ್ಳ, ಬಾಸವಾರ್, ಕೊರಿಹಾರ್ ನಾಗಮಾರ್ಗ, ಜೋಯಿಲಾ, ಪೀರ್ಪಂಜಾಲ್, ಶಾಂತ ಅಭಾರಿ, ಗುರಾಮಿಸ್, ದೇವೀಘರ್, ರಂಜಾ ರಾ ಹಿಮಾಲಯ, ಗಿಲ್ಗಿಟ್, ಕನ್ವಾರ್, ಮಂಡಿ, ಡಾಲ್‌ಹೌಸಿಗಳಲ್ಲಿ ಕಂಡುಬಂದಿವೆ. (ಸಿ.ಪಿ)

**ಪಚಮಾರಿ:** ಮಧ್ಯಪ್ರದೇಶದ ಹೋಷಂಗಾಬಾದ್ ಜಿಲ್ಲೆಯ ಸೋಹಾಣ್‌ಪುರ್ ತಾಲ್ಲೂಕಿನಲ್ಲಿರುವ ಗಿರಿಧಾಮ ಹಾಗೂ ಪಟ್ಟಣ. ಸಾತ್ಪುರ ಬೆಟ್ಟ ಸಾಲುಗಳ ತಲೆಯ ಮೇಲೆ, ಉ.ಅ. 22°28′ – ಪೂ.ರೇ. 78°26′ ಮೇಲೆ ಪಿಪಾರಿಯ ರೈಲ್ವೆ ನಿಲ್ದಾಣಕ್ಕೆ ಸು. 51 ಕಿಮೀ ದೂರದಲ್ಲಿ ಇದೆ. ಸಮುದ್ರಮಟ್ಟದಿಂದ 1.067 ಮೀ ಎತ್ತರದಲ್ಲಿರುವ ಈ ಸ್ಥಳ ಆರೋಗ್ಯಧಾಮಕ್ಕೆ ಯೋಗ್ಯವಾಗಿದೆ. ಪಚಮಾರಿ ಎಂಬ ಹೆಸರು ಪಾಂಚ್ ಮತಿ (ಐದು ಹಟ್ಟಿಗಳು) ಎಂಬುದರಿಂದ ಬಂದಿದೆ. ಇದು ಸಾತ್ಪುರದ ಮೇಲಿನ ತೆರಪಿನಲ್ಲಿರುವ ಐದು ಗವಿಗಳುಳ್ಳ ಸಣ್ಣ ಬೆಟ್ಟಕ್ಕೆ ಅನ್ವಯಿಸುತ್ತದೆ. ಈ ಐದು ಗವಿಗಳಲ್ಲಿ ಪಂಚಪಾಂಡವರು ತಮ್ಮ ವನವಾಸ ಕಾಲದಲ್ಲಿ ತಂಗಿದ್ದರೆಂಬ ಪ್ರತೀತಿ. ಮೇ ತಿಂಗಳ ಮಧ್ಯ ಉಷ್ಣತೆ 29° ಸೆ. ಮಳೆಗಾಲದ ಅನಂತರ ಸೆಪ್ಟಂಬರ್–ಅಕ್ಟೋಬರ್ ತಿಂಗಳುಗಳಲ್ಲಿ 21° ಸೆ ಉಷ್ಣತೆ ಇರುತ್ತದೆ. ವಾರ್ಷಿಕ ಸರಾಸರಿ ಮಳೆ 200 ಸೆಂಮೀ.

ಪಚಮಾರಿ ಗಿರಿಧಾಮ ಬ್ರಿಟಿಷರ ಕಾಲದಲ್ಲಿ ಮಧ್ಯ ಪ್ರಾಂತ್ಯ ಸರ್ಕಾರದ ಬೇಸಗೆ ಕೇಂದ್ರವಾಗಿತ್ತು. ಪಚಮಾರಿ ಬಯಲಿನ ವಿಸ್ತೀರ್ಣ 56 ಚಕಿಮೀ. ಈ ಬಯಲನ್ನು ಸುತ್ತುವರಿದಂತೆ ಹಲವು ಬೆಟ್ಟಗಳಿವೆ. ಅವುಗಳಲ್ಲಿ ಪ್ರಧಾನವಾದವು ಧೂಪ್‌ಗಢ್ (1.358 ಮೀ), ಮಹಾದೇವೊ (1,336 ಮೀ), ಚೌರಾಗಢ್ (1,316 ಮೀ). ಇಲ್ಲಿನ ಅರಣ್ಯಗಳಲ್ಲಿ ಸಾಲವೃಕ್ಷಗಳು ಅಧಿಕವಾಗಿವೆ. ಪಟ್ಟಣಪ್ರದೇಶದ ಪಚಮಾರಿಯಲ್ಲಿ 1889ರಲ್ಲಿ ಪೌರಸಭೆ ಸ್ಥಾಪಿತವಾಯಿತು. *

**ಪಟಣ:** ಬಿಹಾರದ ರಾಜಧಾನಿ, ಪಟಣ (ಪಾಟ್ನ) ವಿಭಾಗದ ಹಾಗೂ ಜಿಲ್ಲೆಯ ಆಡಳಿತ ಕೇಂದ್ರ. ಗಂಗ ನದಿಯ ಬಲದಂಡೆಯ ಮೇಲೆ, ಕೋಲ್ಕತಕ್ಕೆ 464 ಕಿಮೀ ದೂರದಲ್ಲಿದೆ. ಪ್ರಾಚೀನ ನಗರವಾದ ಪಾಟಲಿಪುತ್ರ ಹೆಚ್ಚು ಕಡಿಮೆ ಇದೇ ಸ್ಥಳದಲ್ಲಿತ್ತು. ಹಳೆಯ ನಗರ ಗಂಗ ನದಿಯ ದಂಡೆಯ ಮೇಲೆ ಸು. 19 ಕಿಮೀ ಉದ್ದಕ್ಕೆ ಹಬ್ಬಿದೆ. ಇದರ ಪಶ್ಚಿಮಕ್ಕೆ ಹೊಸ ಬಂಕೀಪುರ ವಿಭಾಗವಿದೆ. ಇದರ ಪಶ್ಚಿಮಕ್ಕೂ ನೈಋತ್ಯಕ್ಕೂ ಆಧುನಿಕ ರಾಜಧಾನಿ ಬೆಳೆದಿದೆ. ಜನಸಂಖ್ಯೆ 13,76,950.

ಪಟಣ ಪ್ರಮುಖ ರೈಲ್ವೆ ಮತ್ತು ರಸ್ತೆ ಸಂಧಿಸ್ಥಳ. ಕಳೆದ 80 ವರ್ಷಗಳಲ್ಲಿ ಪಟಣ ಬಹಳಮಟ್ಟಿಗೆ ಬೆಳೆದಿದೆ. 1916ರಲ್ಲಿ ಇಲ್ಲಿ ಉಚ್ಚ ನ್ಯಾಯಾಲಯ ಸ್ಥಾಪಿತವಾಯಿತು. ಪಾಟ್ನ ವಿಶ್ವವಿದ್ಯಾಲಯ 1917ರಷ್ಟು ಹಳೆಯದು. ಇಲ್ಲಿಯ ಆಧುನಿಕ ಕಟ್ಟಡಗಳಲ್ಲಿ ಮುಖ್ಯವಾದವುಗಳೆಂದರೆ ಸರ್ಕಾರಿ ಭವನ, ವಿಧಾನಸಭಾ ಭವನ, ಪ್ರಾಚ್ಯ ಗ್ರಂಥಾಲಯ, ವೈದ್ಯಕೀಯ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜು. ಇಲ್ಲಿ ಬಂಗಾಳದ ಹುಸೇನ್ ಶಹನ ಮಸೀದಿಯೂ (1490) ಸಿಖ್ಖರ ಹತ್ತನೆಯ ಗುರುವಾದ ಗೋವಿಂದ ಸಿಂಗ್‌ನ ಕಾಲದ ಮಂದಿರವೂ ಗೋಲ್‌ಘರ್ ಎಂಬ ಬಂಕೀಪುರದ ಕಣಜವೂ ಇದೆ.

ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಇಲ್ಲಿ ಸ್ಥಾಪಿತವಾದ ಪಾಟಲಿಪುತ್ರ ನಗರ ಪ್ರ.ಶ. 7ನೆಯ ಶತಮಾನದವರೆಗೂ ಪ್ರವರ್ಧಮಾನಸ್ಥಿತಿಯಲ್ಲಿತ್ತು. ಅನಂತರ 16ನೆಯ ಶತಮಾನದ ವರೆಗಿನ ಇದರ ಇತಿಹಾಸ ನಮಗೆ ತಿಳಿದುಬಂದಿಲ್ಲ. ಆಫ್ಘನ್ ದೊರೆ ಷೇರ್‌ಶಹ 1541ರಲ್ಲಿ ಮತ್ತೆ ಸ್ಥಾಪಿಸಿದ ನಗರಕ್ಕೆ ಪಾಟ್ನ ಎಂದು ಹೆಸರಿಟ್ಟ. ಮೊಘಲರ ಆಧಿಪತ್ಯದಲ್ಲಿ ಇದು ಮತ್ತೆ ಹಳೆ ಸ್ಥಾನಮಾನ ಪಡೆದು ಬಿಹಾರದ ಪ್ರಮುಖ ನಗರವಾಯಿತು. 1865 ರಲ್ಲಿ ಪಾಟ್ನ ಮತ್ತು ಗಯಾ ಜಿಲ್ಲೆಗಳು ರೂಪಿತವಾದವು. 1912 ರಲ್ಲಿ ಬಂಗಾಳ ಆಧಿಪತ್ಯದಿಂದ ಬಿಹಾರ ಒರಿಸ್ಸ ಪ್ರಾಂತ್ಯದ ರಚನೆಯಾದಾಗ ಪಟಣ ಪ್ರಾಂತ್ಯದ ರಾಜಧಾನಿಯಾಯಿತು. 1936ರಲ್ಲಿ ಒರಿಸ್ಸ ಪ್ರತ್ಯೇಕ ಪ್ರಾಂತ್ಯವಾಯಿತು. ಬಿಹಾರದ ರಾಜಧಾನಿಯಾಗಿ ಪಟಣ ಮುಂದುವರೆಯಿತು. *

**ಪಟಿಯಾಲ:** ಪಂಜಾಬ್ ರಾಜ್ಯದಲ್ಲಿರುವ ಒಂದು ನಗರ, ಪಟಿಯಾಲ ಜಿಲ್ಲೆಯ ಹಾಗೂ ವಿಭಾಗದ ಮುಖ್ಯ ಪಟ್ಟಣ. ದೆಹಲಿಯ ಉತ್ತರ ವಾಯವ್ಯಕ್ಕೆ ಸು. 203 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,23,309.

ಪಟಿಯಾಲ ನಗರ ಹಿಂದೆ ಪಟಿಯಾಲ ಸಂಸ್ಥಾನದ ರಾಜಧಾನಿ ಆಗಿತ್ತು. ಇದು ವ್ಯಾಪಾರ ಕೈಗಾರಿಕೆಗಳ ಕೇಂದ್ರ. ನೆಯ್ಗೆ, ಹತ್ತಿ ಬಿಡಿಸುವುದು, ಮದ್ಯ ತಯಾರಿಕೆ ಮುಖ್ಯ ಕೈಗಾರಿಕೆಗಳು. ನಗರದ ಮಧ್ಯದಲ್ಲಿ ಹಳೆ ಕೋಟೆಯಿದೆ. ಸ್ಥಾಪಿತವಾದ ಪಂಜಾಬ್ ವಿಶ್ವವಿದ್ಯಾಲಯವಿದೆ (1962).

ಪಟಿಯಾಲ ಜಿಲ್ಲೆಯ ವಿಸ್ತೀರ್ಣ 3627 ಚ.ಕಿಮೀ. ಜನಸಂಖ್ಯೆ 1,839,056 (2001). ಜಿಲ್ಲೆಯ ಬಹುಭಾಗ ಬಂಜರು. ಮಳೆಗಾಲದಲ್ಲಿ ಹರಿಯುವ ತೊರೆಗಳಿಂದ ಬೇಸಾಯವಾಗುತ್ತದೆ. 1956ರಲ್ಲಿ ಪಂಜಾಬ್ ರಾಜ್ಯ ಪುನರ್ರಚಿತವಾದಾಗ ಪಟಿಯಾಲ ಜಿಲ್ಲೆಯನ್ನು ರಚಿಸಲಾಯಿತು.

ಪಟಿಯಾಲ ವಿಭಾಗದಲ್ಲಿ ಭಟಿಂಡ, ರೂಪಾರ್, ಸಂಗ್ರೂರ್, ಪಟಿಯಾಲ ಎಂಬ ನಾಲ್ಕು ಜಿಲ್ಲೆಗಳಿವೆ. ಮುಖ್ಯವಾದ ನದಿ ಘಗ್ಗರ್. ವಿಭಾಗದ ವಾರ್ಷಿಕ ಸರಾಸರಿ ಮಳೆ 102 ಸೆಂಮೀ ಮಹೀಚಿದರ್‌ಘರ್ ಪ್ರದೇಶದಲ್ಲಿ ಕಾಡುಗಳಿವೆ. ಅರಣ್ಯಗಳಲ್ಲಿ ಜಿಂಕೆ, ಕಸ್ತೂರಿಮೃಗ, ಚಿಗರಿ, ತೋಳ, ನರಿ, ಕಾಡುಬೆಕ್ಕು, ನೀರುನಾಯಿ, ಕಾಡುಹಂದಿ, ಕಾಡುಕೋಳಿ, ಹಸುರುಪಾರಿವಾಳ, ಕೋಗಿಲೆ ಕಂಡುಬರುತ್ತವೆ. ವಿಭಾಗದ ಮುಖ್ಯ ಬೆಳೆಗಳು ಗೋದಿ, ಹತ್ತಿ, ಮುಸುಕಿನ ಜೋಳ ಮತ್ತು ದಿದ್ವಳಧಾನ್ಯ. ಪ್ರಧಾನ ಕೈಗಾರಿಕೆಗಳು ಸಿಮೆಂಟ್, ವಿದ್ಯುತ್ ಸಲಕರಣೆ ಮತ್ತು ಜವಳಿ. (ವಿ.ಜಿ.ಕೆ.)

**ಪಠಾಣ್ ಕೋಟ್:** ಭಾರತದಲ್ಲಿರುವ ಪಂಜಾಬ್ ರಾಜ್ಯದ ಒಂದು ಪಟ್ಟಣ. ಇದೇ ಹೆಸರಿನ ತಾಲ್ಲೂಕಿನ ಆಡಳಿತ ಕೇಂದ್ರ. ರಾಜ್ಯದ ವಾಯವ್ಯ ಭಾಗದಲ್ಲಿ ಗುರುದಾಸಪುರ ಜಿಲ್ಲೆಯಲ್ಲಿ ಗುರುದಾಸಪುರದಿಂದ ಈಶಾನ್ಯಕ್ಕೆ 33.6 ಕಿಮೀ ದೂರದಲ್ಲಿ, ಉ.ಅ. 32°16″ ಮತ್ತು ಪೂ.ರೇ. 75°43′ ಮೇಲೆ ಇದೆ. ಇತಿಹಾಸ ಪ್ರಸಿದ್ಧ ಸ್ಥಳವಾಗಿರುವ ಇದು ಪಠಾಣ್ ರಾಜಮನೆತನವೊಂದರ ರಾಜಧಾನಿಯಾಗಿತ್ತು. ಇಲ್ಲಿಯ ಅರಸರು ಮೊಗಲ್ ಚಕ್ರವರ್ತಿಗಳ ವಿರುದ್ಧ ಅನೇಕ ಬಾರಿ ಹೋರಾಟ ನಡೆಸಿದ್ದರು.

ಭಾರತ–ಪಾಕಿಸ್ತಾನ ಗಡಿಯ ಸಮೀಪದಲ್ಲಿರುವ ಈ ಪಟ್ಟಣದಲ್ಲಿ 1947 ರಲ್ಲಿ ಭಾರತದ ವಿಭಜನೆಯ ಸಮಯದಲ್ಲಿ ಅನೇಕ ಮಂದಿ ನಿರಾಶ್ರಿತರು ಬಂದು ನೆಲಸಿದ್ದರಿಂದ ಇದರ ಜನಸಂಖ್ಯೆ ತೀವ್ರವಾಗಿ ಏರಿತು. ಪಠಾಣ್ ಕೋಟ್ ದಂಡಿನ ಪ್ರದೇಶ, ಪಠಾಣ್‌ಕೋಟ್ ಪೌರಪ್ರದೇಶ ಎರಡೂ ಸೇರಿ 1961ರಲ್ಲಿ ಈಗಿನ ಪಟ್ಟಣವಾಯಿತು.

ಈ ಪಟ್ಟಣ ಆಯಕಟ್ಟಿನ ಸ್ಥಳದಲ್ಲಿರುವುದರಿಂದ ಇದಕ್ಕೆ ಭೌಗೋಳಿಕ, ರಾಜಕೀಯ ಹಾಗೂ ವಾಣಿಜ್ಯ ಮಹತ್ವವಿದೆ. ಇದು ಪರ್ವತಸೀಮೆ ಹಾಗೂ ಬಯಲುನಾಡಿನ ನಡುವಣ ವ್ಯಾಪಾರಕೇಂದ್ರ. ಸುತ್ತಣ ಪ್ರದೇಶದ ಗೋದಿ ಮತ್ತು ಇತರ ಧಾನ್ಯಗಳು, ಮರಮುಟ್ಟು, ಉಣ್ಣೆ ಮತ್ತು ಚರ್ಮಗಳ ವ್ಯಾಪಾರ ಇಲ್ಲಿ ನಡೆಯುತ್ತದೆ. ದೆಹಲಿ, ಅಮೃತ್‌ಸರ, ಚಂಡೀಗಢ, ಜಮ್ಮು, ಕುಲೂ, ಕಾಂಗ್ರ ಮೊದಲಾದ ಪ್ರವಾಸಿ ಕ್ಷೇತ್ರಗಳಿಗೆ ಸಾರಿಗೆ ಸಂಪರ್ಕ ವ್ಯವಸ್ಥೆಯ ಕೊಂಡಿ ಇದಾಗಿದೆ. ಈ ಭಾಗದಲ್ಲಿ ಇದೊಂದು ಪ್ರಮುಖ ರೈಲ್ವೆ ಜಂಕ್ಷನ್. ಪಠಾಣ್‌ಕೋಟ್‌ನ್ನು ಕಾಶ್ಮೀರದ ಹೆಬ್ಬಾಗಿಲು ಎನ್ನಲಾಗಿದೆ.

ಈ ಪಟ್ಟಣ ಕೈಮಗ್ಗದ ನೆಯ್ಗೆ ಕೈಗಾರಿಕೆಗೆ ಪ್ರಸಿದ್ಧ. ಉತ್ತಮ ಕಂಬಳಿ ಮತ್ತು ಶಾಲುಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಇಲ್ಲಿ ಆಹಾರ ಸಂಸ್ಕರಣೆಯ ಪ್ರಸಿದ್ಧ ಕಾರ್ಖಾನೆ ಇದೆ. (ಎಸ್.ಎಸ್.ಎಂ.ಯು.)

**ಪಡಿಯಚ್ಚು ವಿಧಾನ ಅಥವಾ ಇಟ್ಟಿಗೆ ರಾಶಿ ವಿಧಾನ:** ಈ ವಿಧಾನದಲ್ಲಿ ವಸ್ತುಗಳ ಮೊತ್ತವನ್ನು ಎಣಿಸಲು ಅನುಕೂಲವಾಗುವಂತೆ ಅವುಗಳನ್ನು ಒಂದರ ಮೇಲೊಂದರಂತೆ ಜೋಡಿಸಲಾಗುತ್ತದೆ. ಇಟ್ಟಿಗೆಗಳನ್ನು ಜೋಡಿಸಿದಂತೆ ಇದನ್ನು ರಚಿಸುವುದರಿಂದ ಇದನ್ನು ಈ ಹೆಸರಿನಿಂದ ಕರೆಯಲಾಗುವುದು. (ಜಿ.ಕೆ.)

**ಪಣಜಿ:** ಪಂಜಿಂ ಎಂದೂ ಹೆಸರು ಪಡೆದಿರುವ ಇದು ಗೋವ. ರಾಜ್ಯದ ಆಡಳಿತ ಕೇಂದ್ರ ; ಬಂದರು. ಮಾಂಡವಿ ನದಿಯ ದಂಡೆಯ ಮೇಲೆ (ಉ.ಅ. 15°29′ ಮತ್ತು ಪೂ.ರೇ. 73°50′) ಇದೆ. ಜನಸಂಖ್ಯೆ 98,915 (2001). 18ನೆಯ ಶತಮಾನಕ್ಕೆ ಹಿಂದೆ ಇದು ಒಂದು ಸಣ್ಣ ಹಳ್ಳಿ. ಪೋರ್ಚುಗೀಸ್ ಗೋವದ ರಾಜಧಾನಿಯಾಗಿದ್ದ ಹಳೆಯ ಗೋವದಲ್ಲಿ (ವೆಲ್ಹ ಗೋವ) ಪದೇ ಪದೇ ಪ್ಲೇಗ್ ವ್ಯಾಧಿ ಬರುತ್ತಿದ್ದುದರಿಂದ ಪೋರ್ಚುಗೀಸರು ಅದನ್ನು ತೊರೆದು 1843ರಲ್ಲಿ ಪಣಜಿಯನ್ನು ರಾಜಧಾನಿಯಾಗಿ ಮಾಡಿಕೊಂಡರು. 1962ರಲ್ಲಿ ಗೋವದ ವಿಮೋಚನೆಯಾದಾಗ ಗೋವೆಯೊಂದಿಗೆ ಇದೂ ಭಾರತಕ್ಕೆ ಸೇರಿತು. ಆಡಳಿತ ಪ್ರಾಮುಖ್ಯ ಗಳಿಸಿದ ಈ ಪಟ್ಟಣದಲ್ಲಿ 1970ರಿಂದ ಈಚೆಗೆ ವಾಣಿಜ್ಯ ಬೆಳೆಯುತ್ತಿದೆ. ಇದರ ಬಳಿಯಲ್ಲಿ ಕೈಗಾರಿಕಾ ಕ್ಷೇತ್ರವೊಂದನ್ನು ಸ್ಥಾಪಿಸಲಾಗಿದೆ.

ಪಣಜಿಯಲ್ಲಿ ಹಿಂದೆ ಪೋರ್ಚುಗೀಸರು ಕಟ್ಟಿದ ಬಂಗಲೆಗಳು ಮತ್ತು ವಿಶಾಲವಾದ ಚೌಕಗಳು ಇವೆ. ಇಲ್ಲಿ ಯಸೂಫ್ ಆದಿಲ್ ಷಾ ಕಟ್ಟಿಸಿದ ಭವನವನ್ನು 1759ರಲ್ಲಿ ಪೋರ್ಚುಗೀಸ್ ರಾಜಪ್ರತಿನಿಧಿಯ ಅರಮನೆಯಾಗಿ ಮಾರ್ಪಡಿಸಲಾಗಿತ್ತು. ಪಶ್ಚಿಮ ಕರಾವಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಪಣಜಿ ಮತ್ತು ಬೇಟಿಂ ನಡುವೆ ಸಂಪರ್ಕ ಕಲ್ಪಿಸುವ ದೊಡ್ಡ ಸೇತುವೆಯೊಂದು ಮಂಡಾವಿ ನದಿಗೆ ಅಡ್ಡಲಾಗಿ ನಿರ್ಮಿತವಾಗಿದೆ. (ವಿ.ಜಿ.ಕೆ.)

**ಪದರ ಬಣ್ಣದ ವಿಧಾನ:** ವಿಸ್ತಾರವಾದ ಪ್ರದೇಶಗಳ ನಕ್ಷೆಗಳನ್ನು ಚಿಕ್ಕ ಅಳತೆಗಳ ಬಳಕೆಯಿಂದ ರಚಿಸಲಾಗುವುದು. ಭೂಪಟಗಳು ಚಿಕ್ಕದಾಗಿದ್ದರೂ ಅವು ವಿಸ್ತಾರವಾದ ಭೂಭಾಗಗಳನ್ನು ಪ್ರತಿನಿಧಿಸುತ್ತವೆ. ಇಂತಹ ಭೂಪಟಗಳಲ್ಲಿ ಆ ಪ್ರದೇಶದ ಮೇಲ್ಮೈಲಕ್ಷಣಗಳ ಪಕ್ಷಿನೋಟವನ್ನು ನಿರೂಪಿಸಲು ಪದರ ಬಣ್ಣದ ವಿಧಾನವನ್ನು ಬಳಸುವರು. (ಲೇಯರ್ ಟಿಂಟ್ ವಿಧಾನ)

ಈ ವಿಧಾನದಲ್ಲಿ ಯಾವುದಾದರೂ ಎರಡು ನಿರ್ದಿಷ್ಟ ಸಮೋನ್ನತಿ ರೇಖೆಗಳ ನಡುವಿನ ಭೂಭಾಗವನ್ನು ನಿರ್ದಿಷ್ಟವಾದ ಬಣ್ಣದಿಂದ ಪ್ರತಿನಿಧಿಸಲಾಗುವುದು. ಭೂಪಟ ಪ್ರತಿನಿಧಿಸುವ ಪ್ರದೇಶ ವಿಸ್ತಾರವಾಗಿದ್ದು, ಅದಕ್ಕನುಗುಣವಾಗಿ ಭೂಸ್ವರೂಪಗಳು ವಿವಿಧ ರೀತಿಯಲ್ಲಿರುತ್ತವೆ. ಉದಾ: ಭಾರತದ ಭೂಸ್ವರೂಪಗಳು 0 ಯಿಂದ 8000 ಮೀ ಎತ್ತರದವರೆಗೆ ವ್ಯತ್ಯಾಸ ಹೊಂದುತ್ತವೆ. ಇದರಿಂದ ಕೆಲವು ಮುಖ್ಯ ಸಮೋನ್ನತಿ ರೇಖೆಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಉದಾ: 0 ಯಿಂದ 200 ಮೀ ಸಮೋನ್ನತಿ ರೇಖೆಯು ಮೈದಾನವನ್ನು ಪ್ರತಿನಿಧಿಸುವುದು. 200 ಹಾಗೂ 1000 ಮೀ ಸಮೋನ್ನತಿ ರೇಖೆಗಳು ಪ್ರಸ್ಥಭೂಮಿಯ ವಿಸ್ತರಣೆಯನ್ನು ಸೂಚಿಸುತ್ತವೆ. ಹಾಗೆಯೇ 5000 ಮೀ ಗಳಿಗಿಂತ ಹೆಚ್ಚು ಎತ್ತರವಾಗಿರುವ ಭಾಗಗಳು ನಿರಂತರವಾಗಿ ಹಿಮಾಚ್ಛಾದಿತವಾಗಿರುತ್ತವೆ. 1000 ಮೀ ಗಳಿಂದ 5000 ಮೀ ಗಳ ವರೆಗಿನ ಪ್ರದೇಶ ಸಾಮಾನ್ಯವಾಗಿ ಪರ್ವತಗಳು ಅಥವಾ ಬೆಟ್ಟಗುಡ್ಡಗಳಿಂದ ಕೂಡಿರುವುದು. ಹೀಗೆ (ಸಮುದ್ರಮಟ್ಟ) 200 ಮೀ 1000 ಮೀ ಹಾಗೂ 5000 ಮೀ ಸಮೋನ್ನತಿ ರೇಖೆಗಳನ್ನು ಆಯ್ಕೆ ಮಾಡಿಕೊಂಡು ಇವುಗಳ ನಡುವಿನ ಭೂವಲಯಗಳಿಗೆ ವಿವಿಧ ಬಣ್ಣವನ್ನು ನೀಡಿ ಅವುಗಳ ವಿಸ್ತಾರವನ್ನು ಪ್ರತಿನಿಧಿಸಲಾಗುವುದು. ಇದರಿಂದ ಆ ಪ್ರದೇಶಗಳ ಸಾಮಾನ್ಯ ಭೂಸ್ವರೂಪ ಲಕ್ಷಣಗಳ ಪಕ್ಷಿನೋಟವನ್ನು ಪಡೆಯಬಹುದು. ಇದಕ್ಕಾಗಿ ಎತ್ತರಕ್ಕೆ ಅನುಗುಣವಾಗಿ ವಿವಿಧ ಬಣ್ಣಗಳನ್ನು ನೀಡಬೇಕಾಗುವುದು. ತಗ್ಗು ಮೈದಾನಗಳನ್ನು ಹಸುರು, ಅನಂತರದ ಎತ್ತರವನ್ನು ನಸು ಹಸುರು, ಹಳದಿ ಹಸುರು, ನಸು ನೇರಳೆ, ನೇರಳೆ, ಕಡು ನೇರಳೆ. ಕೆಂಪು ನೇರಳೆ ಹಾಗೂ ಕ್ರಿಮ್‌ಸನ್ ಕೆಂಪು ಬಣ್ಣಗಳನ್ನು ವಿವಿಧ ಎತ್ತರಗಳನ್ನು ಸೂಚಿಸಲು ನೀಡಲಾಗುವುದು. ಆದರೆ ಹಿಮಾವೃತ ವಲಯಗಳನ್ನು ತುಸು ನೀಲಿ ಬೆರೆತ ಬಣ್ಣದಿಂದ ತೋರಿಸಲಾಗುವುದು.

ಪದರ ಬಣ್ಣದ ವಿಧಾನ ಅತಿ ಹೆಚ್ಚು ಪ್ರಸಿದ್ಧವಾದದ್ದು. ಭೂಪಟವನ್ನು ವೀಕ್ಷಿಸಿದ ತಕ್ಷಣ ಭೂಪ್ರದೇಶದ ಮೇಲ್ಮೈ ಬಣ್ಣಗಳ ಸಾಮಾನ್ಯ ಪರಿಚಯವನ್ನು ಇದು ನೀಡುವುದರಿಂದಾಗಿ ಈ ವಿಧಾನ ಹೆಚ್ಚು ಜನಪ್ರಿಯವಾಗಿದೆ. (ಆರ್.ಎನ್.)

**ಪನಾಮ ಕಾಲುವೆ:** ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳ ನಡುವೆ ಉತ್ತರ ಮತ್ತು ದಕ್ಷಿಣ ಅಮೆರಿಕಗಳನ್ನು ಕೂಡಿಸುವ ಕಿರಿದಾದ ಭೂಭಾಗವನ್ನು ಕತ್ತರಿಸಿ ಮಾಡಿರುವ ಕಾಲುವೆ. ಸೂಯಜ್ ನಾಲೆಯನ್ನು 1869ರಲ್ಲಿ ತೋಡಿ ಮುಗಿಸಿದ ಫ್ರಾನ್ಸ್ ದೇಶದ ವಿಖ್ಯಾತ ಶಿಲ್ಪಿ ಡಿ ಲೆಸೆಪ್ಸ್ ಪನಾಮಾ ಭೂಕಂಠದ ಮೂಲಕ ಸಮುದ್ರಮಟ್ಟದ ನಾಲೆಯನ್ನು ಪ್ರಾರಂಭಿಸಿದ (1879). ಉರಿಯುವ ಆ ಕಾಡು ಮತ್ತು ಜೌಗು ಭೂಮಿಯಲ್ಲಿ ಕೆಲಸಗಾರರಿಗೆ ಅನುಕೂಲತೆಗಳಿರಲಿಲ್ಲ. ಕುಡಿಯಲು ಒಳ್ಳೆಯ ನೀರೂ ಇರಲಿಲ್ಲ. ಜನಾರೋಗ್ಯದ ಏರ್ಪಾಡುಗಳೂ ಔಷದೋಪಚಾರಗಳೂ ಇಲ್ಲದ ಅವರು ಕಾಯಿಲೆಗಳಿಂದ ನರಳಿ ಅಸುನೀಗಿದರು. ನಿರ್ವಾಹವಿಲ್ಲದೆ ಈ ಉದ್ಯಮವನ್ನು ನಿಲ್ಲಿಸಬೇಕಾಯಿತು (1889). ಆದರೂ ಮತ್ತೊಂದು ಫ್ರೆಂಚ್ ಕಂಪನಿ ಸಮುದ್ರಮಟ್ಟಕ್ಕಿಂತ ಎತ್ತರವಾದ ನಾಲೆಗೆ ನಕ್ಷೆಗಳನ್ನೂ ಅಂದಾಜುಗಳನ್ನೂ ಸಿದ್ಧಪಡಿಸಿತು (1894).

ಏತನ್ಮಧ್ಯೆ ಅಮೆರಿಕದ ಸಂಯುಕ್ತ ಸಂಸ್ಥಾನ ನಿಕರಾಗುವ ಎನ್ನುವ ಇನ್ನೊಂದು ಜಾಗದಲ್ಲಿ ನಾಲೆಯನ್ನು ತೋಡುವ ಸೂಚನೆಯನ್ನೊಡ್ಡಿ 1899ರಲ್ಲಿ ಫ್ರೆಂಚ್ ಪನಾಮಾ ಕಂಪನಿಯ ಆಸ್ತಿಗಳನ್ನೆಲ್ಲ 4 ಕೋಟಿ ಡಾಲರುಗಳನ್ನು ಕೊಟ್ಟು ಕೊಂಡಿತು. 1903ರಲ್ಲಿ ಹೊಸದಾಗಿ ಸ್ಥಾಪಿತವಾದ ಪನಾಮ ಪ್ರಜಾಪ್ರಭುತ್ವ ನಾಲೆಯ ವಿಚಾರದಲ್ಲಿ ಸಂಯುಕ್ತ ಸಂಸ್ಥಾನದೊಂದಿಗೆ ಕೌಲನ್ನು ಮಾಡಿಕೊಂಡ ಬಳಿಕ ಕೆಲಸಕ್ಕೆ ಅಡಚಣೆಯಾಗಿದ್ದ ತೊಡಕುಗಳೆಲ್ಲ ನಿವಾರಣೆಯಾದುವು.

ಅನಂತರ ನಾಲೆ ಸಮುದ್ರಮಟ್ಟದಲ್ಲಿರಬೇಕೇ, ಕೊಂಚ ಎತ್ತರವಾಗಿರಬೇಕೇ ಎಂಬ ತೊಡಕಾದ ವಿಚಾರದ ತೀರ್ಮಾನಕ್ಕಾಗಿ ಆಗ ಅಧ್ಯಕ್ಷರಾಗಿದ್ದ ಥಿಯೋಡೋರ್ ರೂಸವೆಲ್ಟ್ ಸ್ಥಾಪಿಸಿದ ತಜ್ಞರ ಸಮಿತಿ ಭಿನ್ನಾಭಿಪ್ರಾಯವನ್ನು ಕೊಟ್ಟಿತು. ಅಧ್ಯಕ್ಷರು ಸಮುದ್ರ ಮಟ್ಟಕ್ಕಿಂತಲೂ 26 ಮೀ ಎತ್ತರದಲ್ಲಿ ನಾಲೆ ಹೋಗಬೇಕೆಂದು ತೀರ್ಮಾನಿಸಿದರು. ಮಟ್ಟ ಬದಲಾವಣೆಯ ಕಟ್ಟೆಗಳ ಮೂಲಕ ಒಂದು ಕಡೆ ಸಮುದ್ರಮಟ್ಟದಿಂದ ನಾಲೆಯೊಳಕ್ಕೆ ಏರುವ ಇನ್ನೊಂದು ಕಡೆ ಸಮುದ್ರಮಟ್ಟಕ್ಕೆ ಇಳಿಯುವ ಹಾಗೂ ಏರ್ಪಾಡು ಮಾಡಲಾಯಿತು. ಕರ್ನಲ್ ಗೋತಾಲ್ಸ್ ಎಂಬುವವನ್ನು ಮುಖ್ಯ ಎಂಜಿನಿಯರಾಗಿಯೂ ನಿಯೋಗದ ಅಧ್ಯಕ್ಷನಾಗಿಯೂ ನೇಮಿಸಿದರು. ವ್ಯಾಲೇಸ್ ಮತ್ತು ಸ್ಟೀವನ್ಸ್ ಎಂಬ ಪ್ರಖ್ಯಾತ ಶಿಲ್ಪಿಗಳ ಸಹಕಾರದಿಂದ ಈ ಕಷ್ಟಸಾಧ್ಯವಾದ ಕಾರ್ಯ ಯಶಸ್ವಿಯಾಗಿ ಮುಕ್ತಾಯವಾಯಿತು. ಈ ಭೂಕಂಠದ ಆಕಾರದ ವೈಚಿತ್ರ್ಯದಿಂದ ನಾಲೆ ಆಗ್ನೇಯ ಅಟ್ಲಾಂಟಿಕ್ ಸಾಗರದಿಂದ ಕೋಲನ್ ನಗರದಲ್ಲಿ ಪ್ರಾರಂಭವಾಗಿ ಪೆಸಿಫಿಕ್ ಸಾಗರದ ಕಡೆ ಪನಾಮ ನಗರದಲ್ಲಿ ಪೂರ್ವದಿಕ್ಕಿಗೆ ತಿರುಗುವುದರಿಂದ ಇಲ್ಲಿ ಸೂರ್ಯ ಪಶ್ಚಿಮ ಸಮುದ್ರವಾದ ಪೆಸಿಫಿಕ್ ಸಾಗರದಲ್ಲಿ ಉದಯಿಸುವ ಅಪೂರ್ವ ದೃಶ್ಯವನ್ನು ಕಾಣಬಹುದು.

ಪನಾಮ ಕಾಲುವೆಯಲ್ಲಿ ಸಾಗುತ್ತಿರುವ ಹಡಗು

ಕೋಲನ್ ನಗರದ ಬಳಿ ಭೂಕಂಠ ತಗ್ಗಾಗಿದ್ದು ನಾಲೆಯ ಮೇಲೆ 56 ಕಿಮೀ ದೂರದಲ್ಲಿ ಎರಡು ಭೂಖಂಡಗಳನ್ನೂ ಪ್ರತ್ಯೇಕಿಸುವ ನೀರ ನೆತ್ತಿಯನ್ನು ಸಮುದ್ರಮಟ್ಟದ ಮೇಲೆ 95 ಮೀ ಎತ್ತರದಲ್ಲಿ ಮುಟ್ಟುತ್ತದೆ. ಅಲ್ಲಿಂದ ಪೆಸಿಫಿಕ್ ಸಾಗರದ ಕಡೆಗೆ ಬೇಗ ಇಳಿಯುತ್ತದೆ. ನಾಲೆ ಅಟ್ಲಾಂಟಿಕ್ ಸಾಗರದ ಕಡೆ ಕೋಲನ್ನಿನಿಂದ ಹೊರಟು ಸಮುದ್ರಮಟ್ಟದಲ್ಲಿ 11.25 ಕಿಮೀ ದೂರ ಹೋಗಿ ಮೂರು ಮಟ್ಟ ಬದಲಾವಣೆಯ ಕಟ್ಟೆಗಳ ಮೂಲಕ ಸಮುದ್ರ ಮಟ್ಟದ ಮೇಲೆ 26 ಮೀ ಎತ್ತರದಲ್ಲಿರುವ ಗಾಟನ್ ಸರೋವರವನ್ನು ತಲುಪುತ್ತದೆ. ಜಾಗ್ರಿಸ್ ನದಿಯ ಕಣಿವೆಯಲ್ಲಿರುವ ಈ ಕೃತಕ ಸರೋವರದಲ್ಲಿ 37 ಕಿಮೀ ದೂರ ಹರಿದು ಖಂಡಾಂತರದ ನೀರನೆತ್ತಿಯನ್ನು ದಾಟಿ ಕ್ಯುಲೆಬ್ರ ಪರ್ವತವನ್ನು ಕತ್ತರಿಸಿಕೊಂಡು 12.9 ಕಿಮೀ ದೂರ ಹೋಗುತ್ತದೆ. ಈ ಜಾಗದಲ್ಲಿ ಕೋಟ್ಯಂತರ ಚ.ಮೀ ತೋಡು ಕೆಲಸವನ್ನು ಅಪಾರವಾದ ವೆಚ್ಚದಿಂದ ಮಾಡಬೇಕಾಯಿತು. ಸಾಲದ್ದಕ್ಕೆ ಇಂಥ ಕಡೆಗಳಲ್ಲೆಲ್ಲ ಆಗುವ ಹಾಗೆ ಎರಡು ಪಕ್ಕಗಳಲ್ಲಿಯೂ ಕಡಿದ ಗುಡ್ಡದ ತಪ್ಪಲುಗಳಿಗೆ ಆಧಾರವಿಲ್ಲದೆ ಅವು ಜರಿದು (1912) ಸು. 125.42 ಲಕ್ಷ ಚ.ಕಿಮೀ ಕಲ್ಲು ಮತ್ತು ಮಣ್ಣನ್ನು ಹೆಚ್ಚಾಗಿ ತೆಗೆದು ಹಾಕಬೇಕಾಯಿತು. ಇನ್ನೂ ಕೆಳಗೆ ಕುಕ್‌ರಾಟ್ ಗುಡ್ಡ ಜರಿದು ಮತ್ತಷ್ಟು ಕಲ್ಲು ಮತ್ತು ಮಣ್ಣನ್ನು ಎತ್ತಿಹಾಕಬೇಕಾಯಿತು. ಕ್ಯಾಲೆಬ್ರ ಬೆಟ್ಟದ ತಪ್ಪಲಿನಲ್ಲಿ ಪೀಡ್ರೊ ಮೈಗೆಲ್ಲಿನಲ್ಲಿ ನಾಲೆಯ ಮಟ್ಟ ಒಂದು ಕಟ್ಟೆಯಲ್ಲಿ ಸು. 9 ಮೀ ಗಳಷ್ಟು ಇಳಿಯುತ್ತದೆ. ಮುಂದೆ ಮೀರಾ ಫ್ಲೋರ್ಸ್ ಸರೋವರದಲ್ಲಿ 8 ಕಿಮೀ ದೂರ ಹಾಯ್ದು ಇನ್ನೆರಡು ಮಟ್ಟ ಬದಲಾವಣೆಯ ಕಟ್ಟೆಗಳಲ್ಲಿ 17 ಮೀ ಗಳಷ್ಟು ಇಳಿದು ಕೊನೆಯಲ್ಲಿ ಪೆಸಿಫಿಕ್ ಸಾಗರವನ್ನು ಸೇರುತ್ತದೆ. ಈ ಕಡೆ ಭರತದ ಏರಿಳಿತಗಳು ಹೆಚ್ಚಾದರಿಂದ ನಾಲೆಯ ಮಟ್ಟ ಕೊಂಚ ತಗ್ಗಾಗಿದೆ.

ಈ ನಾಲೆಯವನ್ನು ಅಮೆರಿಕನ್ನರು ನಿರ್ಮಿಸಿದರು (4–5–1904 ರಿಂದ 15–8–1914). ಮಾರನೆಯ ವರ್ಷ ಗುಡ್ಡ ಜರಿದದ್ದರಿಂದ ಪ್ರಯಾಣಕ್ಕೆ ಆದ ಅಡ್ಡಿಯನ್ನು ಕೂಡಲೆ ನಿವಾರಿಸಿದರು. ಈ ನಾಲೆಯಲ್ಲಿ ಎಷ್ಟು ದೊಡ್ಡ ಹಡಗಾದರೂ ಹೋಗಬಹುದು. ನಾಲೆ ಪ್ರಯಾಣಕ್ಕೆ ಹಿಡಿಯುವ ಎಂಟು ಗಂಟೆಗಳ ಕಾಲದಲ್ಲಿ ಅರೆವಾಸಿ ಹೊತ್ತು ಐದು ಮಟ್ಟ ಬದಲಾವಣೆ ಕಟ್ಟೆಗಳಲ್ಲಿಯೇ ಕಳೆಯುತ್ತದೆ. ನಾಲೆ ನೇರವಾಗಿಲ್ಲ. ನೆಲದ ಮಟ್ಟವನ್ನು ಅನುಸರಿಸಿ ಬಾಗಿ ಬಳುಕಿ ಮುಂದೆ ಹೋಗುವುದು. ನಾಲೆಯ ತಳದ ಅಗಲ 61 ಮೀ – 305 ಮೀ ಗಳವರೆಗೂ ವ್ಯತ್ಯಾಸವಾಗುತ್ತದೆ. ಈ ನಾಲೆಯಲ್ಲಿ ಒಟ್ಟು 2006.64 ಲಕ್ಷ ಚ.ಮೀ ಮಣ್ಣಿನ ತೋಡುಕೆಲಸವಾಗಬೇಕಾಯಿತು. ತಗಲಿದ ಖರ್ಚು 36.6 ಕೋಟಿ ಡಾಲರುಗಳು. ನಾಲೆ ಅಮೆರಿಕಕ್ಕೆ ಸೇರಿದ್ದರೂ ಎಲ್ಲ ದೇಶಗಳ ಹಡಗುಗಳೂ ಮಾಮೂಲಾದ ಬಾಡಿಗೆಯನ್ನು ಕೊಟ್ಟು ಅದನ್ನು ಉಪಯೋಗಿಸಿಕೊಳ್ಳಬಹುದು.

ಹಿಂದೆ ಸೂಯಜ್ ನಾಲೆಯ ಶಿಲ್ಪಿ ಡಿ ಲೆಸೆಪ್ಸ್ ಈ ನಾಲೆ ಸಮುದ್ರಮಟ್ಟದಲ್ಲಿ ಹೋಗಬೇಕೆಂದು ವಾದಿಸಿದ್ದನಷ್ಟೆ ಆದರೆ ಖರ್ಚು ಹೆಚ್ಚಾಗುವುದೆಂದು ಮಟ್ಟ ಬದಲಾವಣೆಯ ಕಟ್ಟೆಗಳನ್ನು ಕಟ್ಟಿದರು. ಎರಡನೆಯ ಮಹಾಯುದ್ಧದ ಅನುಭವದಿಂದ ಈಗ ಅಮೆರಿಕದ ನಾಲೆಯ ಅಧಿಕಾರಿಗಳಿಂದ ಮತ್ತೆ ನಾಲೆಯನ್ನು ಸಮುದ್ರಮಟ್ಟಕ್ಕೆ ಇಳಿಸಬೇಕೆಂದು ಒತ್ತಾಯ ಬರುತ್ತಿದೆ. (ಎಚ್.ಸಿ.ಕೆ.)

**ಪನಾಮ**[1]**:** ಮಧ್ಯ ಅಮೆರಿಕದ ದಕ್ಷಿಣದಲ್ಲಿ ಪನಾಮ ಭೂ ಕಂಠದ ಪ್ರದೇಶವನ್ನೊಳಗೊಂಡಿರುವ ಗಣರಾಜ್ಯ. ಉ.ಅ. $7^0$15′–$9^0$39′ ಮತ್ತು ಪ.ರೇ. $77^0$15′–$83^0$30′ ನಡುವೆ ಇದೆ. ಪನಾಮದ ವಿಸ್ತೀರ್ಣ 75,650 ಚ.ಕಿಮೀ (ಪನಾಮ ಕಾಲುವೆಯ ಭಾಗನವನ್ನುಳಿದು). ಜನಸಂಖ್ಯೆ : 29,15,000 (2002). ರಾಜಧಾನಿ ಪನಾಮ ನಗರ.




ಮೇಲ್ಮೈಲಕ್ಷಣ : ಪನಾಮ ರಾಜ್ಯದಲ್ಲಿ ಮೂರು ನಿರ್ದಿಷ್ಟ ಭೌಗೋಳಿಕ ಪ್ರದೇಶಗಳಿವೆ. ರಾಜ್ಯದ ಒಟ್ಟು ವಿಸ್ತೀರ್ಣದ ಶೇ. 87ರಷ್ಟಿರುವ ಪ್ರದೇಶ ಸಮುದ್ರಮಟ್ಟದಿಂದ 700 ಮೀ ಗಳಿಗಿಂತ ಹೆಚ್ಚು ಎತ್ತರವಾಗಿಲ್ಲ. ಸಮುದ್ರಮಟ್ಟದಿಂದ 493–700 ಮೀ ಇರುವ ಪ್ರದೇಶ ದೇಶದ ವಿಸ್ತೀರ್ಣದ ಶೇ. 10 ರಷ್ಟಿದೆ. ಉಳಿದ ಪ್ರದೇಶ ಸಮುದ್ರಮಟ್ಟದಿಂದ 1,493 ಮೀ ಗಳಿಗಿಂತ ಹೆಚ್ಚು ಎತ್ತರದಲ್ಲಿದೆ.

ಕೆರೆಬಿಯನ್ ಸಮುದ್ರವನ್ನು ಸೇರುವ ನದಿಗಳಲ್ಲಿ ಮುಖ್ಯವಾದವು ಸಿಕ್ಸವೋಲ, ಚಂಗ್ವಿನೋಲ, ರೀಯೊ ಇಂಡಿಯೊ, ಲೋ ಮಿಯೆಲ್ ಮತ್ತು ಚಾಗ್ರೆಸ್, ಪೆಸಿಫಿಕ್ ಸಾಗರವನ್ನು ಸೇರುವ ಮುಖ್ಯ ನದಿಗಳು ಚಿರಿಗ್ವಿ, ವೈಗೋ, ಸ್ಯಾನ್ ಫೆಲಿಕ್ಸ್, ಸ್ಯಾನ್ ಪ್ಯಾಬ್ಲೋ, ಸಾಂತ ಮರೀಯ, ಬಯಾನೋ, ಚುಕುನಾಕ್ ಮತ್ತು ಟುಯಿರ. ಮಳೆಗಾಲದಲ್ಲಿ ನದಿಗಳು ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ನೀರು ತಗ್ಗುತ್ತದೆ. ಟುಯಿರ ಮತ್ತು ಬಯಾನೋ ನದಿಗಳು ಮಾತ್ರ ಯಾನಯೋಗ್ಯ.

ಪನಾಮ ದೇಶದಲ್ಲಿ ಪನಾಮ ಭೂಕಂಠಕ್ಕೆ ಅಡ್ಡಲಾಗಿ ಕೆರಿಬಿಯನ್ ತೀರದ ಕೊಲೋನ್ ಪಟ್ಟಣದಿಂದ ಪನಾಮ ಕೊಲ್ಲಿಯ ತೀರದ ಬ್ಯಾಲ್ಬೋವದವರೆಗೆ ಪನಾಮ ಕಾಲುವೆಯನ್ನು ನಿರ್ಮಿಸಿ ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳನ್ನು ಕೂಡಿಸಲಾಗಿದೆ.

ವಾಯುಗುಣ : ಸಾಮಾನ್ಯವಾಗಿ ಇಲ್ಲಿಯದು ಉಷ್ಣವಲಯ ವಾಯುಗುಣ. ಸನ್ನಿವೇಶ ಮತ್ತು ಎತ್ತರಕ್ಕೆ ಅನುಗುಣವಾಗಿ ಉಷ್ಣತೆ ವ್ಯತ್ಯಾಸವಾಗುತ್ತದೆ. ತೀರ ಪ್ರದೇಶಗಳಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $27^0$ ಸೆಂ. ಪರ್ವತ ಪ್ರದೇಶದಲ್ಲಿ $16^0$–$19^0$ ಸೆಂ. ವರ್ಷವಿಡೀ ಉಷ್ಣತೆ ಸಾಮಾನ್ಯವಾಗಿ ಒಂದೇ ರೀತಿ ಇರುತ್ತದೆ. ಸರಾಸರಿ ವಾರ್ಷಿಕ ಮಳೆ ಕೆರಿಬಿಯನ್ ತೀರಪ್ರದೇಶದಲ್ಲಿ ಸು. 300 ಸೆಂಮೀ ನಿಂದ ಪೆಸಿಫಿಕ್ ಸಾಗರ ತೀರದಲ್ಲಿ 160 ಸೆಂಮೀ.

ಸಸ್ಯಪ್ರಾಣಿ ಜೀವನ : ಪನಾಮದ ಬಹು ಭಾಗದಲ್ಲಿ ದಟ್ಟ ಅರಣ್ಯ ಇದೆ. ನಡುವೆ ಅಲ್ಲಲ್ಲಿ ಸವನ್ನ ಹುಲ್ಲುಗಾವಲು. ಕೆರಿಬಿಯನ್ ತೀರಪ್ರದೇಶದ್ದು ನಿತ್ಯ ಹರಿದ್ವರ್ಣ ಕಾಡುಗಳು. ಪೆಸಿಫಿಕ್ ತೀರ ಪ್ರದೇಶದಲ್ಲಿ ಅರ್ಧ ಪರ್ಣಪಾತಿ ಕಾಡುಗಳು ಇವೆ. ಜೌಗು ಪ್ರದೇಶಗಳಲ್ಲಿ ಗುಲ್ಮ ವೃಕ್ಷಗಳಿವೆ.

ವನ್ಯ ಮೃಗಗಳಲ್ಲಿ ಪ್ರಧಾನವಾದವು ಆರ್ಮಡಿಲೊ, ಚಿರತೆ ಜಾತಿಯ ಓಸಿಲಾಟ್ ಬೆಕ್ಕು, ಒಪಾಸಮ್, ನಾನಾ ಬಗೆಯ ಕೋಡಗಗಳು ಇತ್ಯಾದಿ. ಸಮುದ್ರ ತೀರದಲ್ಲಿ ಮೊಸಳೆಗಳು ವಿಶೇಷವಾಗಿವೆ. ಬಗೆಬಗೆಯ ಹಕ್ಕಿಗಳು ಹೇರಳವಾಗಿವೆ.

ಜನ: ಪನಾಮದ ಆದಿವಾಸಿಗಳು ಇಂಡಿಯನ್ನರು. 16ನೆಯ ಶತಮಾನದಲ್ಲಿ ಈ ಪ್ರದೇಶವನ್ನು ಸ್ಪೇನ್ ಆಕ್ರಮಿಸಿಕೊಂಡ ಮೇಲೆ ಹೆಚ್ಚಾಗಿ ಫ್ರೆಂಚರು ಮತ್ತು ಸ್ಪ್ಯಾನಿಷರು ನೆಲಸಿದರು. ಪನಾಮ ಕಾಲುವೆಯ ವಲಯದಲ್ಲಿ ಅಮೆರಿಕನ್ನರ ಸಂಖ್ಯೆ ಹೆಚ್ಚು. ಇಲ್ಲಿಯ ಜನರಲ್ಲಿ ರೋಮನ್ ಕೆಥೊಲಿಕರು ಹೆಚ್ಚು ಪ್ರಾಟೆಸ್ಟಂಟ್, ಆಂಗ್ಲಿಕನ್ ಮತ್ತು ಯಹೂದ್ಯರೂ ಇದ್ದಾರೆ.

ರಾಜಧಾನಿಯಾದ ಪನಾಮ ನಗರದ ಜನಸಂಖ್ಯೆ 415964 (2000). ಪ್ರಮುಖ ಪಟ್ಟಣಗಳು ಕೊಲೋನ್, ಡಾವೀಡ್, ಲಾ ಚರೆರ ಮತ್ತು ಸ್ಯಾಂಟಿಯಾಗೋ.

ವ್ಯವಸಾಯ: ನದಿಗಳ ಜಲಾನಯನ ಪ್ರದೇಶಗಳ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ಮುಖ್ಯ ಬೆಳೆಗಳು ಮೆಕ್ಕೆಜೋಳ, ಬತ್ತ, ಕಬ್ಬು, ಬಾಳೆ, ಕೋಕೊ, ಸೆಣಬು, ಕಾಫಿ, ಹೊಗೆಸೊಪ್ಪು. ಹುಲ್ಲುಗಾವಲುಗಳಲ್ಲಿ ಜಾನುವಾರು ಸಾಕುತ್ತಾರೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ತೀರಗಳಲ್ಲಿ ಮೀನುಗಾರಿಕೆ ಮುಖ್ಯ ಕಸಬು.

ಕೈಗಾರಿಕೆ, ವಾಣಿಜ್ಯ : ಅರಣ್ಯಗಳಲ್ಲಿ ಚೌಬೀನೆಗೆ ಅಗತ್ಯವಾದ ಗಟ್ಟಿಮರಗಳಿವೆ. ಅವುಗಳಿಂದ ರಾಜ್ಯಕ್ಕೆ ಒಳ್ಳೆಯ ಆದಾಯವಿದೆ. ಬಟ್ಟೆ, ಪಾದರಕ್ಷೆ, ಮಾದಕದ್ರವ್ಯ ಮತ್ತು ಸಕ್ಕರೆ ಕಾರ್ಖಾನೆಗಳಿವೆ. ಪೆಟ್ರೋಲ್ ಶುದ್ಧೀಕರಣ ಕೇಂದ್ರಗಳುಂಟು. ಪನಾಮ ಕೊಲ್ಲಿಯಲ್ಲಿ ಪೆಟ್ರೋಲ್ ತೆಗೆಯಲು ಪರಿಶೋಧನೆಗಳಾಗುತ್ತಿವೆ. ಅಟ್ಲಾಂಟಿಕ್ ಸಾಗರ ತೀರದಲ್ಲಿ ಕಲ್ಲಿದ್ದಲ ಸ್ತರಗಳು ದೊರಕಿವೆ. ಸೆರೊ ಕೊಲರಾಡೊ ಬಳಿ ತಾಮ್ರದ ನಿಕ್ಷೇಪಗಳಿವೆ. (ವಿ.ಜಿ.ಕೆ.)

ಪನಾಮ ನಗರ ಈ ಗಣರಾಜ್ಯದ ರಾಜಧಾನಿ. ಪನಾಮ ಪ್ರಾಂತ್ಯದ ಆಡಳಿತ ಕೇಂದ್ರ. ಪನಾಮ ಕಾಲುವೆ ಪೆಸಿಫಿಕ್ ಸಾಗರವನ್ನು ಸಂಧಿಸುವ ಕಡೆ, ಪನಾಮ ಕೊಲ್ಲಿಯ ಮೇಲೆ ಇದೆ. ಇಂಡಿಯನ್ ಜನರ ಭಾಷೆಯಲ್ಲಿ ಪನಾಮ ಎಂದರೆ ಅನೇಕ ಮೀನುಗಳು ಎಂದು ಅರ್ಥ. ಮೊದಲು ಇದು ಮೀನು ಹಿಡಿಯುವ ಸಣ್ಣ ಗ್ರಾಮವಾಗಿತ್ತು. ಹಳೆಯ ನಗರವನ್ನು ಪೆದ್ರೋ ಆರಿಯಾಸ್ ದೆ ವಿಲಾ 1591ರಲ್ಲಿ ಸ್ಥಾಪಿಸಿದ.

ಪನಾಮ ನಗರದ ರೇವುಪಟ್ಟಣ ಬಲ್ಬೋವ. ಪೆಟ್ರೋಲ್ ಸಂಸ್ಕರಣ, ಮದ್ಯ, ಬಟ್ಟೆ, ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳ ತಯಾರಿಕೆ– ಇವು ನಗರದ ಪ್ರಮುಖ ಕೈಗಾರಿಕೆಗಳು. ಪನಾಮ ಮತ್ತು ಕೊಲೋನ್ ನಗರಗಳ ನಡುವೆ ಕಾಲುವೆ, ರೈಲು ಹಾಗೂ ರಸ್ತೆಗಳ ಮೂಲಕ ಸಂಚಾರ ಸರಕುಗಳು ಸಾಗುತ್ತವೆ. ಅಮೆರಿಕನ್ ಹೆದ್ದಾರಿಗಳು ಪನಾಮ, ಡೇವಿಡ್ ಮತ್ತು ಚೇಪೋ ನಗರಗಳ ಮೂಲಕ ಹಾದುಹೋಗುತ್ತವೆ. ಪನಾಮದ ಟೆಕುಮೆನ್ ಅಂತಾರಾಷ್ಟ್ರೀಯ ನಿಲ್ದಾಣದಿಂದ ಪ್ರಪಂಚದ ಪ್ರಮುಖ ಪಟ್ಟಣಗಳಿಗೆ ವಿಮಾನಗಳ ಹಾರಾಟ ವ್ಯವಸ್ಥೆಯಿದೆ.

ಪನಾಮದಲ್ಲಿ ಅನೇಕ ಆಧುನಿಕ ಭವನಗಳಿರುವುದಾದರೂ ವಸಾಹತು ಕಾಲದಲ್ಲಿ ಸ್ಪೇನಿನವರು ನಿರ್ಮಿಸಿದ ಆಕರ್ಷಕ ಕಟ್ಟಡಗಳಿಂದ ಶೋಭಿಸುತ್ತದೆ. ಇಲ್ಲಿ ಕ್ರೈಸ್ತ ದೇವಾಲಯವಿದೆ (1673). ಆಧುನಿಕ ಕಟ್ಟಡಗಳಲ್ಲಿ ಮುಖ್ಯವಾದವು ನ್ಯಾಯಭವನ, ಅಧ್ಯಕ್ಷಭವನ, ರಾಷ್ಟ್ರೀಯ ಅರಮನೆ ಮತ್ತು ಹೊಟೇಲ್–ಎಲ್–ಪನಾಮ. ನಗರದ ಜನಸಂಖ್ಯೆ 4,50,668 (2004). (ವಿ.ಜಿ.ಕೆ.)

**ಪನಾಮ**[2]**:** ಅಮೆರಿಕದ ಫ್ಲಾರಿಡ ರಾಜ್ಯದ ಬೇ ಕೌಂಟಿಯ ಆಡಳಿತ ಕೇಂದ್ರ ಹಾಗೂ ರೇವು ಪಟ್ಟಣ. ಸೇಂಟ್ ಆಂಡ್ರ್ಯೂ ಕೊಲ್ಲಿಯಲ್ಲಿದೆ. ಸಣ್ಣ ಗ್ರಾಮವಾಗಿ ಸ್ಥಾಪಿತವಾದ ಸೇಂಟ್ ಆಂಡ್ರ್ಯೂ ಗ್ರಾಮ ಪನಾಮ ನಗರ ಎಂಬ ಹೆಸರು ಪಡೆಯಿತು (1765). ಅಮೆರಿಕನ್ ಕ್ರಾಂತಿಯುದ್ಧ ಕಾಲದಲ್ಲಿ ಟೋರಿ ಪಕ್ಷದವರು ಈ ನಗರದಲ್ಲಿ ನೆಲೆಸಿ ನೀಲಿ ಗಿಡಗಳ ಪ್ಲಾಂಟೇಷನ್‌ಗಳನ್ನು ಹಾಗೂ ಮರಕೊಯ್ಯುವ ಕಾರ್ಖಾನೆಗಳನ್ನು ಸ್ಥಾಪಿಸಿದರು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಪನಾಮ ನಗರ ಹಡಗು ತಯಾರಿಕೆಯ ಕೇಂದ್ರವಾಯಿತು (1939–45). ಕೈಗಾರಿಕೆಗಳಿಂದ ಜನಸಂಖ್ಯೆ ಹೆಚ್ಚಿತು. ಮೀನುಗಾರಿಕೆ, ಕಾಗದ ಹಾಗೂ ರಾಸಾಯನಿಕ ವಸ್ತುಗಳ ತಯಾರಿಕೆ–ಇವು ಪ್ರಮುಖ ಉದ್ಯಮಗಳು. ಮೆಕ್ಸಿಕೊ ಕೊಲ್ಲಿಯ ತೀರದಲ್ಲಿ ಸಂಚರಿಸುವ ಹಡಗುಗಳಿಗೆ ಪನಾಮ ರೇವು ಅನುಕೂಲವಾದ ನಿಲ್ದಾಣ. ಜನಸಂಖ್ಯೆ 4,50,668 (2002). (ವಿ.ಜಿ.ಕೆ.)

**ಪನ್ನ ವಜ್ರ ಗಣಿಗಳು:** ಮಧ್ಯ ಪ್ರದೇಶದ ವಿಂಧ್ಯ ಪರ್ವತ ಶ್ರೇಣಿಯ ಪಾರ್ಶ್ವದ ಬಂದೇಲ್‌ಖಂಡದಲ್ಲಿರುವ ವಜ್ರಗಣಿಗಳು. ಇಲ್ಲಿ ವಜ್ರಗಳನ್ನು ಕಂಗ್ಲಾಮರೇಟುಗಳಲ್ಲಿ (ಪೆಂಟಿಕಲ್ಲು) ಮತ್ತು ಅವುಗಳಿಂದ ಉತ್ಪತ್ತಿಯಾಗುವ ಮರಳಿನಿಂದ ಪಡೆಯಲಾಗುವುದು. ಸು. 96 ಕಿಮೀ ಉದ್ದದ ಮತ್ತು 16 ಕಿಮೀ ಅಗಲದ ವಲಯದಲ್ಲಿ ಅವು ಲಭ್ಯವಾಗುತ್ತವೆ. ಈ ಹಿಂದಿನ ಸಾಮಂತರಾಜ್ಯಗಳಾದ ಪನ್ನ, ಚಾರ್ಖಾರಿ, ಬಿಜಾವರ, ಅಜಾರಿಘರ್, ಬರಾಂಡ ಮತ್ತು ಚೋಬಾಪುರ ಮುಂತಾದ ಸ್ಥಳಗಳಲ್ಲಿ ಹಿಂದೆ ತೋಡಲಾದ ವಜ್ರಗಣಿಗಳಿವೆ.

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯವರು ನಡೆಸಿದ ಭೂಭೌತ ಅನ್ವೇಷಣೆಗಳಿಂದ ಪನ್ನಾ ವಜ್ರಗಣಿಗಳಲ್ಲಿರುವ ಪ್ರದೇಶದಲ್ಲಿ ಮತ್ತಷ್ಟು ವಜ್ರಗಳನ್ನು ಒಳಗೊಂಡಿರುವ ಜ್ವಾಲಾಮುಖಿ ನಳಿಗೆಗಳು ಪತ್ತೆಯಾಗಿವೆ. ಪನ್ನ ಮತ್ತು ಮಜ್‌ಗವಾನ್ ಗಣಿಗಳ ಉತ್ತರಕ್ಕೆ ಸು. 150 ಕಿಮೀ ಉದ್ದದ ವಜ್ರ ಭರಿತ ವಲಯವೊಂದು ಪತ್ತೆಯಾಗಿದೆ.

ಪನ್ನ ಗಣಿಗಳಲ್ಲಿ ವಜ್ರಗಳಿಗಾಗಿ ಅನ್ವೇಷಣೆ ಮಾಡಿ ಗಣಿಗಳ ಉದ್ಯಮವನ್ನು ಸಮರ್ಪಕವಾಗಿ ನಡೆಸಲು ಆಧುನಿಕ ಯಂತ್ರೋಪಕರಣಗಳ ಹಾಗೂ ತಾಂತ್ರಿಕ ಕೌಶಲದ ನೆರವನ್ನು ಬೃಹತ್ ಗಾತ್ರದಲ್ಲಿ ಕೈಗೊಳ್ಳಲಾಗಿದೆ. ಸು. 1.02 ಕೋಟಿ ರೂಪಾಯಿಗಳನ್ನು

ಮೂಲ ಬಂಡವಾಳವಾಗಿ ಹೂಡುವ ಮೂಲಕ ಪನ್ನ ಡೈಮಂಡ್ ಮೈನಿಂಗ್ ಸಿಂಡಿಕೇಟ್ ಲಿಮಿಟೆಡ್ ಎಂಬ ಒಂದು ಖಾಸಗೀ ಸಂಸ್ಥೆ 1939 ರಿಂದಲೂ ಗಣಿ ಉದ್ಯಮದಲ್ಲಿ ತೊಡಗಿದ್ದ ಪನ್ನ ಮೈನಿಂಗ್ ಸಿಂಡಿಕೇಟನ್ನು ತನ್ನ ವಶಕ್ಕೆ ತೆಗೆದುಕೊಂಡಿತು. (ಎಂ.ಎಸ್.ಪಿ.)

**ಪಪುವ ನ್ಯೂಗಿನಿ:** ಆಸ್ಟ್ರೇಲಿಯ ಖಂಡದ ಉತ್ತರದಲ್ಲಿರುವ ಪೆಸಿಫಿಕ್ ಸಾಗರದ್ವೀಪವಾದ ನ್ಯೂಗಿನಿಯ ಪೂರ್ವ ಭಾಗ ಮತ್ತು ಸಮೀಪದ ದ್ವೀಪಗಳು ಸೇರಿ ಪಾಪುವ ನ್ಯೂಗಿನಿ ಆಗಿದೆ. ನ್ಯೂ ಗಿನಿ ದ್ವೀಪದ ಪಶ್ಚಿಮ ಭಾಗ ಇಂಡೊನೇಷ್ಯಕ್ಕೆ ಸೇರಿದ ಇರೀಯಾನ್ ಬಾರಾತ್ (ಪಶ್ಚಿಮ ಇರೀಯಾನ್) ಅದಕ್ಕೂ ಪಪುವ ನ್ಯೂಗಿನಿಗೂ ನಡುವೆ 141ನೆಯ ಪೂರ್ವ ರೇಖಾಂಶ ಗಡಿರೇಖೆಯಾಗಿದೆ. ನೆರೆಯ ಸಮುದ್ರಗಳಲ್ಲಿ ಪೂ.ರೇ. $130^0$–$154^0 14'$ ವರೆಗೂ ದ.ಅ $8^0$–$12^0$ ನಡುವೆಯೂ ಇರುವ ಆಡ್ಮಿರಾಲ್ಟಿ, ನ್ಯೂ ಐರ್ಲೆಂಡ್, ನ್ಯೂ ಬ್ರಿಟನ್, ಬೂಗನ್‌ವಿಲ್ ಮತ್ತು ಬೂಕ ದ್ವೀಪಗಳೂ ಟ್ರೋಬ್ರಿಯಾಂಡ್, ವುಡ್‌ಲಾರ್ಕ್, ಲಾಫ್ಲಾನ್, ದಾಂತ್ರಕಾಸ್ತೋ, ಕಾನ್‌ಫ್ಲಿಕ್, ಲುಯಿಸೇಡ್ ಮತ್ತು ಸಾಮರಾಯ್ ದ್ವೀಪಗಳೂ ಪಪುವನ್ಯೂ ಗಿನಿಗೆ ಸೇರಿವೆ. ಇದರ ಒಟ್ಟು ವಿಸ್ತೀರ್ಣ 1,61,700 ಕಿಮೀ. ಜನಸಂಖ್ಯೆ ಸು. 5426000 (2002). ರಾಜಧಾನಿ ಪೋರ್ಟ್ ಮೋರ್ಸ್‌ಬೀ. ಜನಸಂಖ್ಯೆ 2,50,000 (2002).

ಭೌತಿಕ ಭೂವಿವರಣೆ : ಉನ್ನತ ಪರ್ವತ ಶ್ರೇಣಿಗಳು, ಕಡಿದೂ ಆಳವೂ ಆದ ಕಣಿವೆಗಳು, ವೇಗವಾಗಿ ಹರಿಯುವ ನದಿಗಳು ಮತ್ತು ಅವುಗಳ ಕೊಳಚೆ ಬಯಲುಗಳಿಂದ ಕೂಡಿದ ಈ ದೇಶದಲ್ಲಿ ಆಗಾಗ್ಗೆ ಭೂಕಂಪ ಮತ್ತು ಒಮ್ಮೊಮ್ಮೆ ಉರಿದೇಳುವ ಜ್ವಾಲಾಮುಖಿಗಳಿಂದಾಗಿ ಇದರ ಭೂಗರ್ಭ ಸ್ವರೂಪ ಅಸ್ಥಿರವಾಗಿದೆ ಎಂಬುದು ವ್ಯಕ್ತವಾಗುತ್ತದೆ. ಸುತ್ತಲ ದ್ವೀಪಗಳು ಹವಳದ ದಂಡೆಗಳಿಂದಾದ ಕರಾವಳಿಯಿಂದಲೂ ಜ್ವಾಲಾಮುಖಿಯಿಂದ ನಿರ್ಮಿತವಾದ ಪರ್ವತಗಳಿಂದಲೂ ಕೂಡಿದ್ದು, ಸಾಗರಗರ್ಭದಿಂದ ಎದ್ದ ಪರ್ವತಶ್ರೇಣಿಗಳ ಶಿಖರಗಳಾಗಿವೆ. ಈ ಪ್ರದೇಶ ಭೂಮಧ್ಯರೇಖೆಗೆ ತೀರ ಹತ್ತಿರ ಇರುವುದರಿಂದ 3,962 ಮೀ ಗಿಂತ ಎತ್ತರವಾದ ಕೆಲವು ಶಿಖರಗಳ ಮೇಲೆ ಶಾಶ್ವತ




ಹಿಮವಿರಬಹುದಾದರೂ ಉಳಿದ ಪ್ರದೇಶದಲ್ಲಿ ಉಷ್ಣತೆ $20^0$ಸೆ.–$32^0$ಸೆ. ಇದ್ದು, ವಾತಾವರಣ ಆರ್ದ್ರವಾಗಿರುತ್ತದೆ. ಡಿಸೆಂಬರ್–ಮಾರ್ಚ್ ಮಳೆಗಾಲ. 200 ಸೆಂಮೀ ಮಳೆ ಸಾಮಾನ್ಯ. ಕೆಲವೆಡೆ 500 ಸೆಂಮೀ ವರೆಗೂ ಮಳೆ ಬೀಳುತ್ತದೆ. ಹೆಚ್ಚಿನ ಪ್ರದೇಶ ನಿಬಿಡಾರಣ್ಯಮಯವಾಗಿದ್ದರೂ ಧಾವಿಸುವ ಹೊಳೆಹಳ್ಳಗಳು ಮೇಲ್ಮಣ್ಣನ್ನು ಕೊಚ್ಚಿಹಾಕಿರುವುದರಿಂದ ಭೂಮಿ ಸಾರರಹಿತವಾಗಿದೆ. ಪಪುವ ಪ್ರದೇಶದಲ್ಲಿ ಫ್ಲೈ ಮತ್ತು ದಿಗುಲ್ ನದಿಗಳೂ ಉತ್ತರ ಕರಾವಳಿಯಲ್ಲಿ ಸಿಪಿರ್ ಮತ್ತು ರಾಮು ನದಿಗಳೂ ಮಳೆಗಾಲದಲ್ಲಿ ನೆರೆನೀರಿನಿಂದ ವಿಶಾಲ ಪ್ರದೇಶಗಳನ್ನು ಮುಳುಗಿಸುತ್ತವೆ. ಕೆಲವೇ ಉನ್ನತ ಕಣಿವೆಗಳು, ಮತ್ತು ಜ್ವಾಲಾಮುಖಿ ಭಸ್ಮ ಕೂಡಿಬಿದ್ದ ಪ್ರದೇಶಗಳು ಮಾತ್ರ ಫಲವತ್ತಾಗಿವೆ. ಇವು ಕೋಕೋ, ಕಾಫಿ, ರಬ್ಬರ್ ಮೊದಲಾದ ಹಣಬೆಳೆಗಳಿಗೆ ಅನುಕೂಲವಾಗಿವೆ. ಇವನ್ನು ರೂಢಿಸಿದವರು ವಿಶೇಷವಾಗಿ ಯುರೋಪಿಯನರು.

ಜನ : ಮಲಯ್ ಭಾಷೆಯಲ್ಲಿ ಪಪುವ ಎಂದರೆ ಉಣ್ಣೆಕೂದಲು ಎಂದು ಅರ್ಥ. ಪಶ್ಚಿಮಭಾಗದಲ್ಲೂ ಒಳನಾಡಿನಲ್ಲೂ ಮುಖ್ಯವಾಗಿ ಉಣ್ಣೆ ಕೂದಲಿನ ಪಾಪ್ಯವನರು ವಾಸವಾಗಿದ್ದಾರೆ. ಪೂರ್ವ ಕರಾವಳಿ ಮತ್ತು ದ್ವೀಪಗಳಲ್ಲಿ ಕಪ್ಪುಬಣ್ಣದ ಮೇಲನೇಷಿಯನರು ಪ್ರಧಾನವಾಗಿದ್ದಾರೆ. ತೀರ ದೂರ ಪ್ರದೇಶಗಳಲ್ಲಿ ನೆಗ್ರಿಟೋ ಮೂಲದ ಶಿಲಾಯುಗಾವಸ್ಥೆಯಲ್ಲಿರುವ ಜನರಿದ್ದಾರೆ. ಅವರಲ್ಲಿ ತಲೆಬೇಟೆ, ನರಮಾಂಸ ಭಕ್ಷಣೆ ಮುಂತಾದ ಅನಾಗರಿಕ ರೂಢಿಗಳು ಇನ್ನೂ ಇರಬಹುದು. ಯುರೋಪಿಯನರು ತೀರ ಅಲ್ಪ ಸಂಖ್ಯಾತರು. ಹೆಚ್ಚಿನ ಸ್ಥಳೀಯ ಜನರು ಪರಸ್ಪರ ಸಂಪರ್ಕವಿಲ್ಲದ, ಪರಸ್ಪರ ಅರ್ಥವಾಗದ ನೂರಾರು ಭಾಷೆಗಳನ್ನಾಡುವ ಚಿಕ್ಕಚಿಕ್ಕ ಕುಗ್ರಾಮಗಳಲ್ಲಿ ವಾಸಿಸುತ್ತಾರೆ.

ಪಪುವ ನ್ಯೂ ಗಿನಿಯ ಶೇ. 90 ಜನ ಕ್ರೈಸ್ತರೆಂದು ಹೇಳಿಕೊಳ್ಳುತ್ತಿದ್ದರೂ ಆಚರಣೆಯಲ್ಲಿ ಮದ್ದು, ಮಾಟ, ಮಂತ್ರಗಳ ಆದಿಮ ರೂಢಿಗಳು ಧರ್ಮದೊಡನೆ ಬೆರೆತಿವೆ.

ಪಪುವ ನ್ಯೂಗಿನಿಯ ಆದಿವಾಸಿ

ಆರ್ಥಿಕತೆ : ಹೆಚ್ಚು ಜನರಿಗೆ ಕೃಷಿಯೇ–ಅದೂ ಕುಮರಿ ಬೇಸಾಯ–ಮುಖ್ಯ ಜೀವನೋಪಾಯ. ಸಾಬಕ್ಕಿ, ಮರಗೆಣಸು, ಟಾರೋಗಡ್ಡೆ, ಬಾಳೆ ಮೊದಲಾದವು ಮುಖ್ಯ ಆಹಾರ ಬೆಳೆಗಳು. ಹಂದಿ ಸಾಕುವುದು ಪ್ರತಿಷ್ಠೆಯ ಕುರುಹು. ಕರಾವಳಿ ಮತ್ತು ದ್ವೀಪಗಳಲ್ಲಿ ಹೇರಳವಾಗಿ ತೆಂಗಿನ ತೋಟಗಳಿವೆ. ದೇಶದ ಮುಖ್ಯ ರಫ್ತು ಬೆಳೆ ಕೊಬ್ಬರಿ. ಕಾಫಿ, ಕೋಕೋ, ರಬ್ಬರ್, ಮೀನು ಮುಂತಾದುವೂ ರಫ್ತಾಗುತ್ತವೆ. ಈಚೆಗೆ ಅಲ್ಲಲ್ಲಿ ಬತ್ತ, ಶುಂಠಿ, ನೆಲಗಡಲೆ, ಪರಂಗಿಹಣ್ಣು ಬೆಳೆಸುತ್ತಿದ್ದಾರೆ.

ಸ್ಟಾರ್ ಪರ್ವತಗಳಲ್ಲಿ ಅಮೂಲ್ಯ ನಾಟ ಮರಗಳೂ ಬೇರೆಡೆ ತಾಮ್ರ ಮೊದಲಾದ ಖನಿಜಗಳೂ ಧಾರಾಳವಾಗಿದ್ದರೂ ಆ ಪ್ರದೇಶದ ದುರ್ಗಮತೆಯಿಂದಾಗಿ ಅವುಗಳ ಪ್ರಯೋಜನ ಪಡೆಯುವುದು ಕಷ್ಟವಾಗಿದೆ.

ತಾಮ್ರ, ಬಂಗಾರ ಸ್ವಲ್ಪಮಟ್ಟಿಗೆ ಉತ್ಪಾದನೆಯಾಗುತ್ತವೆ. ಈಚೆಗೆ ಖನಿಜ ತೈಲ ಮತ್ತು ನೈಸರ್ಗಿಕ ಅನಿಲಶೋಧ ಆಶಾದಾಯಕ ಫಲ ನೀಡಿದೆ. ವಿಪುಲ ಖನಿಜ ನಿಕ್ಷೇಪಗಳುಂಟೆಂದು ನಂಬಲಾದ ಟೋರ್ಸ್ ಸಮುದ್ರದ ಬೊಯಿಗು, ತಾವನ್ ಮತ್ತು ಸಾಯಿಬಾಯಿ ದ್ವೀಪಗಳು ತನಗೆ ನ್ಯಾಯವಾಗಿ ಸೇರಬೇಕೆಂಬ ಬೇಡಿಕೆಯನ್ನು ಪಪುವ ನ್ಯೂ ಗಿನಿ ಸರ್ಕಾರ ಆಸ್ಟ್ರೇಲಿಯದ ಮುಂದಿಟ್ಟಿದೆ. ಕ್ಷಿಪ್ರಗಾಮಿ ನದಿಗಳು ಜಲವಿದ್ಯುತ್ ಉತ್ಪಾದನೆಗೆ ಅವಕಾಶ ನೀಡುತ್ತವೆ. ದೇಶದಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿನಲ್ಲಿ ಗಮನಾರ್ಹ ಭಾಗ ಜಲವಿದ್ಯುತ್.

ರಸ್ತೆ ಸೌಲಭ್ಯ ಪೋರ್ಟ್ ಮೋರ್ಸ್‌ಬಿ ಮೊದಲಾದ ಕೆಲವೇ ಪಟ್ಟಣಗಳಿಗೆ ಸೀಮಿತವಾಗಿದೆ. ದೇಶದಲ್ಲಿ 16,458 ಕಿಮೀ ಉದ್ದದ ಮುಖ್ಯ ರಸ್ತೆಗಳಿವೆ. 47 ವಿಮಾನ ನಿಲ್ದಾಣಗಳೂ 12 ಬಂದುರುಗಳೂ ಇವೆ. ದುರ್ಗಮ ಭಾಗಗಳಿಗೆ ವಿಮಾನಗಳೇ ಮುಖ್ಯ ಸಾರಿಗೆ ಸಾಧನ. (ಎನ್.ಬಿ.)

**ಪರಗ್ವೆ:** ದಕ್ಷಿಣ ಅಮೆರಿಕದ ಒಂದು ಭೂವೇಷ್ಟಿತ ಗಣರಾಜ್ಯ ರಾಷ್ಟ್ರ. ಇದರ ವಿಸ್ತೀರ್ಣ 4,06,752 ಚ.ಕಿಮೀ. ವಾಯವ್ಯ ಉತ್ತರ ದಿಕ್ಕುಗಳಲ್ಲಿ ಬೊಲಿವಿಯ, ಪೂರ್ವದಲ್ಲಿ ಬ್ರೆಜಿಲ್, ಆಗ್ನೇಯ ದಕ್ಷಿಣ ನೈಋತ್ಯಗಳಲ್ಲಿ ಅರ್ಜೆಂಟೈನ ಇದನ್ನು ಸುತ್ತುವರಿದಿವೆ. ಜನಸಂಖ್ಯೆ 63,47,884 (2001) ರಾಜಧಾನಿ ಅಸುನ್ಸಿಯಾನ್. ಜನಸಂಖ್ಯೆ 5,02,426 (2001). ಇಲ್ಲಿಯ ಮೂಲನಿವಾಸಿ ಇಂಡಿಯನ್ನರ ಗ್ವಾರಾನೀ ಭಾಷೆಯಲ್ಲಿ ಪರಗ್ವೆ ಎಂದರೆ ಮಹಾನದಿಯ ನೆಲ ಎಂದು ಅರ್ಥ. $19^0 20'$ ದಿಂದ $27^0 40'$ ದ.ಅ. ಹಾಗೂ $54^0 15'$ ರಿಂದ $64^0$ ಪ.ರೇ. ಗಳ ನಡುವೆಯಿದೆ.




ಭೂ ಲಕ್ಷಣ : ಪರಗ್ವೆ ನದಿ ಈ ದೇಶದಲ್ಲಿ ದಕ್ಷಿಣೋತ್ತರವಾಗಿ ಹರಿದು ದೇಶವನ್ನು ಪೂರ್ವ ಮತ್ತು ಪಶ್ಚಿಮ ಪ್ರಾಂತ್ಯಗಳಾಗಿ ವಿಭಾಗಿಸುತ್ತದೆ. ಬ್ರೆಜಿಲ್‌ನಲ್ಲಿ ಹುಟ್ಟಿ, ಪರಗ್ವೆಯಲ್ಲಿ ಹರಿದು, ಪಿಲ್‌ಕಮೈಯೋ ನದಿಯೊಡನೆ ಸಂಗಮಿಸಿ, ಪರಾನಾ ನದಿಗೆ ಕೂಡಿ ಸಮುದ್ರ ಸೇರುವ ಇದರ ಉದ್ದ 2,550 ಕಿಮೀ 304–608 ಮೀ ಎತ್ತರವಾಗಿರುವ ಅದು ಬ್ರೆಜಿಲ್ ಪ್ರಸ್ಥಭೂಮಿಯ ವಿಸ್ತರಣೆಯಲ್ಲಿದೆ. ಇಲ್ಲಿ ಜನಸಾಂದ್ರತೆ ಅಧಿಕ. ಪೂರ್ವದಲ್ಲಿ ಆಂಡಿಯನ್ ಕಾರ್ಡಿಲೆರಾ, ಅಮಂಬೆ ಪರ್ವತ ಇವೆ. ಈಶಾನ್ಯದಲ್ಲಿ ಅರಕಾಂಗ್ವೆ ಎಂಬ ಇನ್ನೊಂದು ಪರ್ವತ ದಕ್ಷಿಣಾಭಿಮುಖವಾಗಿ ಸಾಗಿ ಅಷ್ಟು ಎತ್ತರವಿಲ್ಲದ ಗುಡ್ಡಗಳಾಗಿ ಪರಿಸಮಾಪ್ತಿ ಹೊಂದುತ್ತದೆ.

ದೇಶದ ಮೂರರಲ್ಲೆರಡರಷ್ಟು ಭಾಗವನ್ನು ವ್ಯಾಪಿಸಿರುವ ಪಶ್ಚಿಮ ಪ್ರಾಂತ್ಯ ನಿರ್ವಿಶೇಷ ಭೂಲಕ್ಷಣವುಳ್ಳ ಸಮತಟ್ಟಾದ ಬಯಲು. ಗ್ರಾನ್ ಚಾಕೊ ಎಂದು ಕರೆಯಲ್ಪಡುವ ಈ ಬಯಲು ಪರಗ್ವೆಯ ಗಡಿಯಾಚೆಗೆ ಬೊಲಿವಿಯ ಮತ್ತು ಅರ್ಜೆಂಟೈನ ದೇಶಗಳಲ್ಲೂ ಹಬ್ಬಿದೆ. ಚಾಕೊದಲ್ಲಿ ಕುರುಚಲು ಕಾಡು, ಹುಲ್ಲು ಮಾತ್ರ ಬೆಳೆಯುತ್ತವೆ. ನದಿಗಳು ಸಾವಕಾಶವಾಗಿ ಹರಿದು, ಅಲ್ಲಲ್ಲೇ ಇಂಗಿ ಜವುಳುಗಳನ್ನು ನಿರ್ಮಿಸಿವೆ.

ಪೂರ್ವದ ಪರ್ವತಶ್ರೇಣಿಯಾಚೆಗೆ ಹರಿಯುವ ಪಾರನಾ ನದಿ ಪೂರ್ವ ಆಗ್ನೇಯ ಗಡಿಯಾಗಿಯೂ ಪರಿಣಮಿಸಿದೆ. ಪರಗ್ವೆ–ಪರನಾ ಸಂಗಮದ ಉತ್ತರಕ್ಕೆ ಮತ್ತು ಪರಗ್ವೆ–ಪಿಲ್ ಕಮೈಯೋ ಸಂಗಮದ ಪೂರ್ವಕ್ಕೆ ಇರುವ ಚಿಕ್ಕ ಪ್ರದೇಶವೇ ದೇಶದ ಅತ್ಯಂತ ಫಲವತ್ತೂ, ಜನಭರಿತವೂ ಆದ ಪ್ರದೇಶ. (ಚ.ಕಿಮೀ ಗೆ 50–2000 ಜನ). ಈ ದೇಶದ ಎರಡು ದೊಡ್ಡ ಸರೋವರಗಳು (ಪೊವಾ ಮತ್ತು ಯಿಪಕಾರೈ) ಇರುವುದು ಇಲ್ಲೇ. ಇಲ್ಲಿಯ ನದಿಗಳ ದಡಗಳಲ್ಲಿ ದಟ್ಟ ಉಷ್ಣವಲಯ ಅರಣ್ಯಗಳಿವೆ. ದೇಶದ ಗಡಿಗಳ ಉದ್ದದಲ್ಲಿ ಶೇ. 80ರಷ್ಟು ದೂರ ನದಿಗಳೇ ಹಂಚಿಕೆಯಾಗಿವೆ. ಅವೇ ದೇಶದ ಮುಖ್ಯ ಜೀವನಾಧಾರ ಕೂಡ.

ವಾಯುಗುಣ : ಪರಗ್ವೆಯ ಮಧ್ಯದಲ್ಲಿ ಮಕರ ಸಂಕ್ರಾಂತಿ ವೃತ್ತ ಹಾದು ಹೋಗುತ್ತದೆ. ಈ ದೇಶದ ಉತ್ತರಾರ್ಧ ಉಷ್ಣವಲಯದಲ್ಲಿದೆ. ಇದು ಸಮುದ್ರದಿಂದ ದೂರವಾಗಿರುವುದರಿಂದ ಉಷ್ಣತೆ ಹೆಚ್ಚು. ಚಳಿಗಾಲದಲ್ಲಿ $10^0$ಸೆ ಕನಿಷ್ಠ ಉಷ್ಣತೆ ಮತ್ತು ಬೇಸಗೆಯಲ್ಲಿ $40^0$ಸೆ ಗರಿಷ್ಠ ಉಷ್ಣತೆಯನ್ನು ಹೊಂದಿರುತ್ತದೆ. ಒಟ್ಟಿನಲ್ಲಿ ಬ್ರೆಜಿಲ್ ಕಡೆಯಿಂದ ಬೀಸುವ ಪೂರ್ವ ಗಾಳಿ ಉಷ್ಣವಾಗಿಯೂ ಅರ್ಜೆಂಟೈನದಿಂದ ಬೀಸುವ ಪಶ್ಚಿಮ ಗಾಳಿ ತಂಪಾಗಿಯೂ ಇರುತ್ತವೆ. ದಕ್ಷಿಣ ಪರಗ್ವೆಯಲ್ಲಿ ಕೆಲವೇಳೆ ನೀರು ಹೆಪ್ಪುಗಟ್ಟುವಷ್ಟು ಶೈತ್ಯ ಇರುವುದುಂಟು. ಪೂರ್ವಭಾಗದಲ್ಲಿ ವಾರ್ಷಿಕ ಸರಾಸರಿ ಮಳೆ 1,27 ಸೆಂಮೀ ಪಶ್ಚಿಮಕ್ಕೆ ಮಳೆ ಕಡಿಮೆಯಾಗುತ್ತ ಸಾಗಿ, 76 ಸೆಂಮೀ ಗಳಷ್ಟಾಗುತ್ತದೆ. ಚಾಕೋ ಪ್ರದೇಶಗಳಲ್ಲಿ ಒಮ್ಮೊಮ್ಮೆ ಬರಗಾಲವೂ ಅನಂತರ ಅತಿವೃಷ್ಟಿಯಿಂದ ನದೀ ಪ್ರದೇಶಗಳಲ್ಲಿ ನೆರೆಹಾವಳಿಯೂ ಸಂಭವಿಸುವುದುಂಟು.

ಸಸ್ಯ–ಪ್ರಾಣಿಜೀವನ : ವಿಸ್ತಾರವಾದ ಅರಣ್ಯಗಳು ದೇಶದ ಸಂಪತ್ತಿಗೆ ತಮ್ಮ ಪಾಲಿನ ನೆರವು ನೀಡುತ್ತವೆ. ಚಾಕೊ ಪ್ರದೇಶದಲ್ಲಿ ಬೆಳೆಯುವ ಕೆಂಬಣ್ಣದ ಕ್ವಿಬ್ರಾಚೋ ಎಂಬ ಮರ ಚರ್ಮ ಹದ ಮಾಡುವುದರಲ್ಲಿ ಬಳಸುವ ಶ್ರೇಷ್ಠ ಬಣ್ಣದ ದ್ರವ್ಯದ ನಿಧಿಯಾಗಿದೆ. ಪೂರ್ವಭಾಗದಲ್ಲಿರುವ ಅರಣ್ಯಗಳಲ್ಲಿ ಉರುಡೇ, ಸಿಡಾರ್, ಕುರುಪೇ ಮತ್ತು ಲಪಾಚೋ ವೃಕ್ಷಗಳು ಸಮೃದ್ಧವಾಗಿವೆ. ಕ್ವಿನಿನ್ ಕೊಡುವ ಪರಾತೋದೋ, ಸೊಪ್ಪನ್ನು ಭಟ್ಟಿ ಇಳಿಸಿದರೆ ಪರಿಮಳದ್ರವ್ಯ ಕೊಡುವ ಪಟಟ್‌ಗ್ರೇನ್ ಎಂಬ ಕಹಿ ಕಿತ್ತಳೆ, ಜನಪ್ರಿಯವಾದ ಚಹ ಎನಿಸುವ ಯೆರ್ಬ ಮಾತೇ ಇವು ಇತರ ವಾಣಿಜ್ಯ ಸಸ್ಯಗಳು. ಇವು ಈಶಾನ್ಯದಲ್ಲಿ ಕಾಡಾಗಿ ಬೆಳೆದರೆ ನೈಋತ್ಯದಲ್ಲಿ ಕೃಷಿ ಮಾಡಲ್ಪಡುತ್ತವೆ.

ಪಶ್ಚಿಮದ ಚಾಕೊ ಪ್ರದೇಶ ಹೆಚ್ಚು ಕಡಿಮೆ ಬಂಜರಾಗಿದ್ದರೂ ಅದರ ಹೆಸರಿಗೆ ತಕ್ಕಂತೆ (ಚಾಕೊ ಎಂದರೆ ಬೇಟೆಯ ನೆಲೆ) ವನ್ಯಪಶುಗಳ ಆಗರವಾಗಿದೆ. ಸ್ಥಳೀಯರು ಟೈಗ್ರೆ ಎಂದು ಕರೆಯುವ ಜಾಗ್ವಾರ್ ಚಿರತೆ, ಕಾಡು ಹಂದಿ, ನೀರು ಹಂದಿ, ಚಿಗರೆ ಬೇಕಾದಷ್ಟಿವೆ. ಆರ್ಮಡಿಲೋ, ಪಿಪೀಲಿಕಾಭಕ್ಷಕ, ನೀರುನಾಯಿ, ಕೊಯ್ಪು (ಜಲಚರ ಇಲಿ) ಮೊದಲಾದ ದಕ್ಷಿಣ ಅಮೆರಿಕನ್ ಬಿಲವಾಸಿ ಪ್ರಾಣಿಗಳು ಚಾಕೊ ಪ್ರದೇಶದ ಪ್ರಾಣಿವಿಶೇಷಗಳಾದರೆ, ಪೂರ್ವಪ್ರದೇಶದ ಕಾಡುಗಳಲ್ಲಿ ಬಗೆಬಗೆಯ ಮಂಗ, ಟೇಪರ್ ಎಂಬ ಚಪಲ ಮುಸುಡಿಯ ಹಂದಿ, ಪೆಕರಿಯೆಂಬ ಚಿಕ್ಕ ಹಂದಿ, ಚಿಗರೆ, ಸಿಂಹ, ಜಾಗ್ವಾರ್ ಚಿರತೆ, ನರಿ, ಮುಂಗುಸಿ ಮೊದಲಾದವು ಇವೆ.

ಆರ್ಥಿಕತೆ : ಇದು ಕೃಷಿ ಪ್ರಧಾನ ದೇಶ. ದಕ್ಷಿಣದ ಫಲವತ್ತಾದ ಭೂಮಿಯಲ್ಲಿ ಕೃಷಿ ಕೇಂದ್ರಿಕೃತವಾಗಿದೆ. ಕೃಷಿ ವಿಧಾನ ಪುರಾತನವಾದದ್ದು. (ಕೆ.ಎಲ್.ಪಿ.)

**ಪರಮಾಣು ವಿಪತ್ತುಗಳು:** ಅಣುಸ್ಫೋಟಗಳ ಅನಂತರ ಬೀಳುವ ವಿಕಿರಣ ದೂಳು ಮತ್ತು ಅಣುಶಕ್ತಿಯನ್ನು ಕೈಗಾರಿಕಾ ಉಪಯೋಗಗಳಿಗೆ ಬಳಸಿದಾಗ ಉಂಟಾಗುವ ವಿಕಿರಣ ಹೊರಸೂಸುವಿಕೆಗಳನ್ನು ಅಣುಸ್ಥಾವರಗಳಲ್ಲಿ ಅಣ್ವಸ್ತ್ರಗಳ ತಯಾರಿಕೆಗೆ ಅಥವಾ ಶಾಂತಿಯುತ ಬಳಕೆಗೆ ಉಪಯೋಗಿಸುವರು. ಇವೆರಡೂ ಕ್ರಿಯೆಗಳಿಂದ ಬಿಡುಗಡೆಯಾಗುವ ಅಪರಿಮಿತ ವಿಕಿರಣಶೀಲ ಪದಾರ್ಥಗಳು ಹಾಗೂ ವಿಕಿರಣಶೀಲ ಸಮಸ್ಥಾನಿಗಳು ಆಹಾರ ಸರಪಳಿಯ ಮೂಲಕ ದೇಹವನ್ನು ಪ್ರವೇಶಿದಾಗ ರೋಗ ಬರುವುದಲ್ಲದೆ ಅದರ ಅನುವಂಶೀಯತೆಯಲ್ಲಿ ಅವ್ಯವಸ್ಥೆಗಳುಂಟಾಗುತ್ತವೆ. ಉದಾ: 1945ರ ಆಗಸ್ಟ್‌ನಲ್ಲಿ ಜಪಾನಿನ ಎರಡು ಪ್ರಮುಖ ಪಟ್ಟಣಗಳಾದ ಹಿರೋಶಿಮ ಮತ್ತು ನಾಗಸಾಕಿಯ ಮೇಲೆ ಅಮೆರಿಕ ಮಾಡಿದ ಪರಮಾಣು ಬಾಂಬ್ ದಾಳಿಯ ಪರಿಣಾಮ ಇಂದಿಗೂ ಈ ಪ್ರದೇಶದಲ್ಲಿ ಜನಿಸುವ ಮಕ್ಕಳು ಒಂದಲ್ಲಾ ಒಂದು ರೀತಿಯ ಅನುವಂಶೀಯ ಕಾಯಿಲೆ ಅಂಗವಿಕಲತೆಯಿಂದ ಬಳಲುತ್ತಿರುವುದನ್ನು ಕಾಣಬಹುದು. ಇದೇ ರೀತಿ ಇಂಗ್ಲೆಂಡಿನ ಸೆಲ್‌ಫೀಲ್ಡ್, (1975), ಅಮೆರಿಕದ ಪೆನ್ಸಿಲ್ವೇನಿಯ (1979) ಮೆಕ್ಸಿಕೊ (1979) ಉಕ್ರೈನ್ (1986) ಮತ್ತು ಸೈಬೀರಿಯ (1983) ಆ ಘಟನೆಗಳನ್ನು ಮರೆಯುವಂತಿಲ್ಲ.

ಪರಮಾಣುಗಳು ಕೇವಲ ಮಾನವನ ಮೇಲೆ ಮಾತ್ರವಲ್ಲದೆ ಇಡೀ ಭೌತಿಕ ಮತ್ತು ಜೈವಿಕ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟು ಮಾಡುತ್ತವೆ. ಇದರಿಂದ

ವಾಯು ಮತ್ತು ಅಂತರ್ಜಲ ಮಾಲಿನ್ಯ ಉಂಟಾಗುತ್ತದೆ. ಆಹಾರ ಸರಪಳಿ ಹದಗೆಡುತ್ತದೆ. ಪ್ರಾಣಿಗಳಿಗೆ ಚರ್ಮ, ಶ್ವಾಸಕೋಶ ಹಾಗೂ ವಂಶಾವಳಿಗೆ ಸಂಬಂಧಪಟ್ಟಂತೆ ಅನೇಕ ಬಗೆಯ ಕಾಯಿಲೆಗಳುಂಟಾಗುತ್ತವೆ. ಉದಾ: ಅಂಗವಿಕಲತೆ, ಮನೋವಿಕಲತೆ, ಕ್ಯಾನ್ಸರ್, ಇತ್ಯಾದಿ.

ಪರಮಾಣು ವಿಪತ್ತುಗಳಿಂದ ಮುಕ್ತರಾಗಲು ಇರುವ ಎರಡು ಮಾರ್ಗಗಳೆಂದರೆ ಪ್ರಪಂಚದ ರಾಷ್ಟ್ರ ರಾಷ್ಟ್ರಗಳ ನಡುವೆ ಪರಸ್ಪರ ಶಾಂತಿ ಸಹಬಾಳ್ವೆ ನೆಲೆಸುವಂತೆ ಮಾಡುವುದು. ಹಾಗೂ ಅಣುಶಕ್ತಿ ವಿಸ್ತರಣೆಯನ್ನು ತಡೆಯುವುದು ಮತ್ತು ಇರುವ ಅಣುಸ್ಥಾವರಗಳಿಂದ ಜನರನ್ನು ದೂರ ಇರಿಸುವುದು. ವಿಕಿರಣಶೀಲ ತ್ಯಾಜ್ಯವಸ್ತುಗಳ ಮೂಲಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವುದು, ಶಕ್ತಿ ಉತ್ಪಾದನೆ ಪರಮಾಣುಗಳ ಬಳಕೆ ನಿಷೇಧ ಹಾಗೂ ಪರಮಾಣು ದುರ್ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಅಗತ್ಯ. (ಕೆ.ಎಸ್.)

**ಪರಸ್ಪರ ಆಕರ್ಷಣಾ ಸಿದ್ಧಾಂತ:** ಸ್ಥಾನೀಕರಣ ಸಿದ್ಧಾಂತಗಳಲ್ಲಿ ಒಂದು. ಈ ಸಿದ್ಧಾಂತದ ಪ್ರಕಾರ ಒಂದು ಪ್ರದೇಶ ಜನರನ್ನು ತನ್ನತ್ತ ಆಕರ್ಷಿಸಲು ತನ್ನದೇ ಆದ ಅಂಶಗಳನ್ನು ಒಳಗೊಂಡಿರುತ್ತದೆ. ಇಲ್ಲಿ ಎರಡು ಪ್ರದೇಶಗಳ ಆರ್ಥಿಕತೆಯನ್ನು ಆಧರಿಸಿದೆ. ಒಂದು ಪ್ರದೇಶ ಗಾತ್ರದಲ್ಲಿ ಧನಾತ್ಮಕತೆಯನ್ನು ಹೊಂದಿದ್ದರೆ ದೂರದಲ್ಲಿ ಋಣಾತ್ಮಕ ಅಂಶವನ್ನು ಹೊಂದಿರುತ್ತದೆ. ಹೆಚ್ಚಿನ ಜನಸಂಖ್ಯೆಯಿಂದ ಕೂಡಿದ್ದರೆ ಅವು ಆರ್ಥಿಕತೆಯ ಸೆಳೆತವನ್ನು ಹೊಂದಿರುತ್ತದೆ. ಆದರೆ ಅವುಗಳ ನಡುವಿನ ಅಂತರ ಹೆಚ್ಚಾದರೆ ಸೆಳೆತ ಕಡಿಮೆ ಇರುತ್ತದೆ. ಎರಡು ನಗರಗಳ ನಡುವೆ ಅಂತರ ಅಥವಾ ದೂರ ಹೆಚ್ಚಾದಾಗ ಅವುಗಳ ನಡುವೆ ಮತ್ತೊಂದು ವ್ಯಾಪಾರ ನಗರ ಸೃಷ್ಟಿಯಾದರೆ ಅದನ್ನು ನಡುವಿನ ಅಂತರದ ಸೆಳೆತ ಅಥವಾ ವಿಭಜಿತ ಬಿಂದುವಿನ ನಗರ ಎಂದು ಕರೆಯುವರು. (ಎಂ.ಡಿ.)

**ಪರಾವಲಂಬಿ ಅಥವಾ ಉಪಭೋಗಿಗಳು:** ತಮ್ಮ ಉಪ ಜೀವನಕ್ಕೆ ಬೇಕಾದ ಪೋಷಕಾಂಶಗಳನ್ನು ಪಡೆಯಲು ಪ್ರಾಥಮಿಕ ಉತ್ಪಾದಕಗಳಾದ ಸಸ್ಯಗಳನ್ನು ತಿಂದು ಬದುಕುವ ಪ್ರಾಣಿಗಳನ್ನು ಪರಾವಲಂಬಿ ಅಥವಾ ಉಪಭೋಗಿಗಳು ಎಂದು ಕರೆಯುತ್ತಾರೆ. ಎಲ್ಲಾ ಪ್ರಕಾರದ ಪ್ರಾಣಿಗಳು ಈ ವರ್ಗಕ್ಕೆ ಸೇರಿರುತ್ತವೆ. ಆಹಾರ ಬಳಕೆ ಮಾಡುವ ಆಧಾರದ ಮೇಲೆ ಪರಾವಲಂಬಿಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. ಅವು ಹೀಗಿವೆ:

ಪ್ರಾಥಮಿಕ ಪರಾವಲಂಬಿ ಅಥವಾ ಉಪಭೋಗಿಗಳು: ಈ ಹಂತದಲ್ಲಿ ಕಂಡು ಬರುವ ಸಸ್ಯಾಹಾರಿ ಪ್ರಾಣಿಗಳು ಕೇವಲ ಸಸ್ಯ ಮತ್ತು ಅವುಗಳ ಉತ್ಪನ್ನಗಳನ್ನು ಆಹಾರವನ್ನಾಗಿ ಉಪಯೋಗಿಸಿ ಜೀವಿಸುತ್ತವೆ. ಉದಾ: ಇಲಿ, ಆಡು, ಕುರಿ, ಮೊಲ, ದನಕರುಗಳು, ಆನೆ, ಕುದುರೆ ಮುಂತಾದವು.

ದ್ವಿತೀಯ ಪರಾವಲಂಬಿ ಅಥವಾ ಉಪಭೋಗಿಗಳು: ಈ ಹಂತದಲ್ಲಿ ಮಾಂಸಾಹಾರಿ ಜೀವಿಗಳನ್ನು ದ್ವಿತೀಯ ಉಪಭೋಗಿಗಳೆಂದು ಕರೆಯುತ್ತಾರೆ. ಈ ಮಾಂಸಾಹಾರಿ ಜೀವಿಗಳು ಸಸ್ಯಾಹಾರಿ ಜೀವಿಗಳನ್ನು ತಿಂದು ಬದುಕುತ್ತವೆ. ಉದಾಹರಣೆಗೆ: ಹಾವು, ಹುಲಿ, ಸಿಂಹ ಇತ್ಯಾದಿ

ತೃತೀಯ ಪರಾವಲಂಬಿ ಅಥವಾ ಉಪಭೋಗಿಗಳು: ಈ ಹಂತದಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿ ಎರಡನ್ನೂ ತಿಂದು ಜೀವಿಸುವ ಜೀವಿಗಳಿಗೆ ತೃತೀಯ ಉಪಭೋಗಿಗಳೆಂದು ಕರೆಯುತ್ತಾರೆ. ಉದಾ: ಡೈನೊಸಾರ್ಸ್, ದೊಡ್ಡಮೀನು. ಮಾನವನೂ ಈ ಗುಂಪಿಗೆ ಸೇರುತ್ತಾನೆ. (ಜಿ.ಡಿ.)

**ಪರಿಕಲ್ಪನೆಗಳ ಪರೀಕ್ಷೆ:** ಸಂಶೋಧನೆಯ ಒಂದು ಪ್ರಮುಖವಾದ ಸಾಮಗ್ರಿ ಎಂದರೆ ಪರಿಕಲ್ಪನೆ. ಪರಿಕಲ್ಪನೆಗಳನ್ನು ರಚಿಸಿ ಅವುಗಳನ್ನು ಪರೀಕ್ಷಿಸುವುದು ಅತ್ಯಂತ ಸೂಕ್ತವಾದದ್ದು ಮತ್ತು ಇದರಿಂದ ಸಂಶೋಧನೆಯ ಮುಂದಿನ ದಾರಿ ಸುಗಮವಾಗುತ್ತದೆ. ಈ ಪರಿಕಲ್ಪನೆಗಳಿಂದ ಹೊಸ ಪ್ರಯೋಗಗಳನ್ನು ಕೈಗೊಳ್ಳಲು ಸಹಾಯವಾಗುತ್ತದೆ. ಪರಿಕಲ್ಪನೆ ಎಂದರೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರಚಲಿತ ಸಾಹಿತ್ಯವನ್ನು ಪರಾಮರ್ಶಿಸಿ, ಮಾಡುವ ಜಾಣ್ಮೆಯ ಊಹೆ. ಸಂಶೋಧನೆಯನ್ನು ಕೈಗೊಂಡಾಗ ಚಲಕಗಳ ನಡುವಿನ ಸಂಬಂಧವನ್ನು ಊಹಿಸಿಕೊಳ್ಳಬೇಕಾಗುತ್ತದೆ ಮತ್ತು ಹೀಗೆ ಊಹಿಸಿಕೊಂಡ ಸಂಬಂಧವು ಸರಿಯೋ ಅಥವಾ ತಪ್ಪೋ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ. ಈ ರೀತಿ ಪರೀಕ್ಷೆಗೆ ಒಳಪಟ್ಟ ಪರಿಕಲ್ಪನೆಗಳು ನಿಜವೆಂದು ಹೊರ ಹೊಮ್ಮಿದರೆ, ಅವುಗಳಿಂದ ಸಿದ್ಧಾಂತಗಳನ್ನು ರಚಿಸುವುದಕ್ಕೆ ಪುಷ್ಟಿ ಸಿಕ್ಕಿದಂತಾಗುತ್ತದೆ ಮತ್ತು ಸಂಶೋಧನೆಯೂ ಹೆಚ್ಚು ಫಲಪ್ರದವಾಗಿರುತ್ತದೆ. ಆದ್ದರಿಂದಲೆ ಸಂಶೋಧನೆಯಲ್ಲಿ ರಚಿಸಿದ ಪರಿಕಲ್ಪನೆಯನ್ನು ಪರೀಕ್ಷಿಸುವುದು ಅತ್ಯಂತ ಸಮಂಜಸವಾಗಿರುತದೆ. ಪರಿಕಲ್ಪನೆಗಳನ್ನು ಅನೇಕ ವಿಧಾನಗಳಿಂದ ಪರೀಕ್ಷಿಸಬಹುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ 1) ಟಿ.ಟೆಸ್ಟ್ 2) ಎಫ್.ಟೆಸ್ಟ್ ಮತ್ತು 3) $X^2$ ಟೆಸ್ಟ್. ಈ ಮೇಲಿನ ಯಾವ ವಿಧಾನವನ್ನು ಅಳವಡಿಸಿಕೊಂಡರೂ ಆಯಾಯ ವಿಧಾನದ ಸೂತ್ರಗಳನ್ನು ಅಳವಡಿಸಿ ಬೆಲೆಯನ್ನು ಕಂಡುಹಿಡಿಯ ಬೇಕಾಗುತ್ತದೆ. ಈ ರೀತಿ ಕಂಡು ಹಿಡಿದ ಬೆಲೆಯನ್ನು ವಿತರಣ ಪಟ್ಟಿಯ ಬೆಲೆಯೊಡನೆ ಹೋಲಿಸಿ ನೋಡ ಬೇಕಾಗುತ್ತದೆ. ಲೆಕ್ಕ ಹಾಕಿದ ಬೆಲೆಯೂ ವಿತರಣ ಪಟ್ಟಿಯ ಬೆಲೆಗಿಂತ ಕಡಿಮೆ ಇದ್ದರೆ ಅಂತಹ ಪರಿಕಲ್ಪನೆಗಳನ್ನು ಒಪ್ಪಿಕೊಳ್ಳಲಾಗುವುದಲ್ಲ. ಆದರೆ ಲೆಕ್ಕ ಹಾಕಿದ ಬೆಲೆ ವಿತರಣ ಪಟ್ಟಿಯ ಬೆಲೆಗಿಂತ ಹೆಚ್ಚು ಇದ್ದರೆ ಅಂತಹ ಪರಿಕಲ್ಪನೆಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ಪರಿಕಲ್ಪನೆಗಳನ್ನು ಒಪ್ಪುವಾಗ ಅಥವಾ ತಿರಸ್ಕರಿಸುವಾಗ ಯಾವ ಗಮನಾರ್ಹ (ಸಿಗ್ನಿಫಿಕೆಂಟ್) ಮಟ್ಟದಲ್ಲಿ ಎಂಬುದನ್ನು ಸಹ ನಿರ್ಧರಿಸಬೇಕಾಗುತ್ತದೆ. ಅಂದರೆ ಶೇ.1ರ ಸಿಗ್ನಿಫಿಕೆಂಟ್ ಮಟ್ಟದಲ್ಲೊ, ಶೇ.5ರ ಮಟ್ಟದಲ್ಲೋ ಅಥವಾ ಶೇ.10ರ ಮಟ್ಟದಲ್ಲಿಯೋ ಎಂಬುದನ್ನು ಸಂಶೋಧಕರು ತಿಳಿಸಬೇಕಾಗುತ್ತದೆ. *

**ಪರಿಮಾಣಾತ್ಮಕ ಕ್ರಾಂತಿ:** ಭೌಗೋಳಿಕ ಅಧ್ಯಯನದಲ್ಲಿ ಸಂಖ್ಯಾಶಾಸ್ತ್ರದ ಕೌಶಲಗಳನ್ನು ವಿಷಯದ ಪ್ರತಿಪಾದನೆಗೆ ಹಾಗೂ ಅವುಗಳ ಸಿದ್ಧಾಂತಗಳು ಹೆಚ್ಚು ಖಚಿತತೆಯಿಂದ ಕೂಡಿರಲು ಉಳಿಸಿಕೊಂಡ ವಿಧಾನಗಳ ಪ್ರಸರಣ ಮಾನವ ಭೂಗೋಳ ವಿಜ್ಞಾನದ ಪ್ರಮುಖ ವಿಭಾಗಗಳಾದ ಆರ್ಥಿಕ ಭೂಗೋಳ ವಿಜ್ಞಾನ, ನಗರ ಭೂಗೋಳ ವಿಜ್ಞಾನದ ಪರಿಮಾಣಾತ್ಮಕ ವಿಶ್ಲೇಷಣೆಗಳು ಹೆಚ್ಚು ರೂಢಿಗೆ ಬಂದಿದೆ.

ಈಟ್ಸ್ ಅವರು ವಿವರಿಸಿರುವಂತೆ ಭೂಮಿಯ ಮೇಲಿನ ವಿವಿಧ ಲಕ್ಷಣಗಳನ್ನು ಗುರುತಿಸುವಿಕೆ ಹಾಗೂ ಅವುಗಳ ಸ್ಥಾನೀಯ ಹಂಚಿಕೆಗಳನ್ನು ವಿವರಿಸಲು ಅಥವಾ ಊಹಿಸಲು ಮತ್ತು ನಿಯಮಗಳನ್ನು ಹಾಗೂ ಸಿದ್ಧಾಂತಗಳನ್ನು ಪರೀಕ್ಷಿಸಿ, ವೈಚಾರಿಕವಾಗಿ ಅಧ್ಯಯನ ಮಾಡುವ ಕ್ರಮವನ್ನು ಭೂಗೋಳ ವಿಜ್ಞಾನವೆಂದು ಕರೆದು, ಈ ರೀತಿಯ ಅಧ್ಯಯನದಿಂದ ಭೂಗೋಳಶಾಸ್ತ್ರವನ್ನು 'ವಿಜ್ಞಾನ' ಎಂದು ಕರೆದಿರುವರು. ಹಲವಾರು ನಿಯಮಗಳ ರಚನೆ ಮಾದರಿಗಳು ನಿರೂಪಣೆ ಹಾಗೂ ಪೂರ್ವಸಿದ್ಧಾಂತಗಳ ಪರೀಕ್ಷೆ ಈ ಎಲ್ಲಾ ಕ್ರಮಗಳನ್ನು ಭೂಗೋಳವಿಜ್ಞಾನದ ಅಧ್ಯಯನದಲ್ಲಿ ಬಳಸತೊಡಗಿದರು.

ಭೂಗೋಳ ವಿಜ್ಞಾನದಲ್ಲಿ ಸಿದ್ಧಾಂತ, ನಿಯಮ ಹಾಗೂ ಮಾದರಿಗಳನ್ನು ಇತರೆ ಸಮಾಜ ವಿಜ್ಞಾನ ಹಾಗೂ ಭೌತಿಕ ವಿಜ್ಞಾನಗಳಿಂದ ಎರವಲು ಪಡೆದು ಬಳಸಿಕೊಂಡಿರುವುದನ್ನು ಕಾಣಬಹುದು. ಉದಾಹರಣೆಗೆ ಆಲ್ಫ್ರೆಡ್ ವೆಬರ್ ಅವರ ಕೈಗಾರಿಕಾ ಸ್ಥಾನೀಕರಣ ಸಿದ್ಧಾಂತ ಆರ್ಥಿಕ ನಿಯಮವಾಗಿದ್ದು ಭೂಗೋಳ ವಿಜ್ಞಾನದಲ್ಲಿ ಬಳಸಿಕೊಳ್ಳಲಾಗಿದೆ(1909). ಹಾಗೆಯೇ ವಾನ್‌ತೂನೆನ್ (1826) ಅವರ ಪೂವೆನ್, ಲೋಸ್ಚ್ ಮತ್ತು ಐ ಸಾರ್ಡ್ ಮಾದರಿಗಳನ್ನು ಅರ್ಥಶಾಸ್ತ್ರದಿಂದ ಎರವಲು ಪಡೆಯಲಾಗಿದೆ. ಹಾಗೆಯೇ ಕ್ರಿಸ್ಟಲ್‌ರ ದಕ್ಷಿಣ ಜರ್ಮನಿಯಲ್ಲಿನ ಕೇಂದ್ರೀಯಸ್ಥಾನ ಸಿದ್ಧಾಂತವನ್ನು ರಚಿಸಲು ಪರಿಮಾಣಾತ್ಮಕ ವಿಭಾಗವನ್ನು ಬಳಸಿದ್ದಾರೆ. ಹಾಗೆಯೇ ವೀವರ್ ಅವರು ಬೆಳೆ ಸಂಯೋಜನೆ ಮಾದರಿ (1954) ಯ ರಚನೆಗಾಗಿ ಪರಿಮಾಣಾತ್ಮಕ ತಂತ್ರಗಳನ್ನು ಬಳಸಿಕೊಂಡಿದ್ದಾರೆ. (ಬಿ.ಸಿ.)

**ಪರಿಸರ:** ಜೀವಿಯ ಬದುಕಿನ ಮೇಲೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪ್ರಭಾವ ಬೀರುವ ಎಲ್ಲ ಜೈವಿಕ ಮತ್ತು ಅಜೈವಿಕ ಅಂಶಗಳು ಮತ್ತು ಅವುಗಳ ನಡುವೆ ಜರುಗುವ ನಿರಂತರ ಪರಿವರ್ತನೆ (ಎನ್‌ವಿರಾನ್‌ಮೆಂಟ್). ವ್ಯಕ್ತಿಯ ಅಥವಾ ಸಮುದಾಯದ ಒಟ್ಟಾರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಮೇಲೆ ಪ್ರಭಾವ ಬೀರುವ ಸುತ್ತಮುತ್ತಲಿನ ಪರಿಸ್ಥಿತಿಯನ್ನು ಪರಿಸರವೆನ್ನಬಹುದು. ಪರಿಸರದಲ್ಲಿ ಯಾವುದೇ ಜೀವಿ ತನ್ನಷ್ಟಕ್ಕೆ ಇರಲು ಆಗುವುದಿಲ್ಲ. ಪರಿಸರದ ಜೈವಿಕ ಮತ್ತು ಅಜೈವಿಕ ಅಂಶಗಳೊಂದಿಗೆ ಅವು ನಿರಂತರವಾಗಿ ಅನುವರ್ತಿಸುವುದು ಅನಿವಾರ್ಯ, ಹೀಗಾಗಿ ಪರಿಸರ ಎಂಬುದು ನಿರಂತರ ಚಲನಶೀಲವಾಗಿರುವ ಒಂದು ವ್ಯವಸ್ಥೆ. ಪರಿಸರ ಆಯಾ ಪ್ರದೇಶದ ಶಿಲಾಗೋಳ, ವಾಯುಗೋಳ, ಜಲಗೋಳ ಹಾಗೂ ಜೀವಗೋಳದ ಒಟ್ಟು ಸ್ವರೂಪವನ್ನು ಮಾತ್ರವಲ್ಲದೆ, ಆಯಾ ಸ್ಥಳದಲ್ಲಿ ಮಾನವನಿಂದ ನಿರ್ಮಿತಗೊಂಡಿರುವ ಎಲ್ಲ ಬಗೆಯ ಸಾಂಸ್ಕೃತಿಕ ಲಕ್ಷಣಗಳನ್ನು ಒಳಗೊಂಡಿರುವುದು.

ಪರಿಸರ ಎನ್ನುವ ಪದವನ್ನು ವಿವಿಧ ಕ್ಷೇತ್ರದ ಪರಿಣಿತರು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿರುವರು. ಸಾಮಾನ್ಯ ಅರ್ಥದಲ್ಲಿ ಈ ಪದವನ್ನು ಒಂದು ಜೀವಿ, ವ್ಯಕ್ತಿ ಅಥವಾ ಒಂದು ಸಮುದಾಯವು ಜೀವಿಸುತ್ತಿರುವ ಸ್ಥಳದ ಎಲ್ಲಾ ಬಗೆಯ ಸಾಂಸ್ಕೃತಿಕ ಲಕ್ಷಣಗಳ ಒಟ್ಟಾರೆ ಪರಿಸ್ಥಿತಿ.

ಪರಿಸರವು ಹಲವು ಪ್ರಾಕೃತಿಕ, ಸಾಮಾಜಿಕ ಮತ್ತು ಭೌತ ವಿಜ್ಞಾನಗಳ ಕ್ಷೇತ್ರದಲ್ಲಿ ಹಾಸುಹೊಕ್ಕಾಗಿದೆ. ವಿವಿಧ ಅಧ್ಯಯನ ವಿಷಯಗಳು ಪರಿಸರದ ವಿವಿಧ ಆಯಾಮಗಳನ್ನು ಅಭ್ಯಸಿಸುತ್ತವೆ. ಇವುಗಳು ಪರಿಸರವನ್ನು ವಿವಿಧ ದೃಷ್ಟಿಕೋನಗಳಿಂದ ಪರಿಶೀಲಿಸುತ್ತವೆ, ಇದರಿಂದ ಪರಿಸರ ಅಧ್ಯಯನವು ಪ್ರತ್ಯೇಕ ವಿಷಯವಸ್ತುವಾಗಿರದೆ, ಇತರ ಹಲವಾರು ವಿಷಯಗಳ ಸಂಗಮದಂತೆ ಕಂಡುಬರುತ್ತದೆ. ಪರಿಸರದ ಭೌತಿಕಾಂಶಗಳು, ಜೈವಿಕ ಅಂಶಗಳು ಹಾಗೂ ಅವುಗಳ ಸಂಬಂಧ, ಪರಿಸರದ ಗುಣಮಟ್ಟದ ವಿಶ್ಲೇಷಣೆ ಇವುಗಳನ್ನು ಅಧ್ಯಯನ ಮಾಡಲಾಗುತ್ತದೆ.

ಮೊದಲು ಪರಿಸರ ಉತ್ತಮವಾಗಿದ್ದು ಮಾನವನಿಂದ ಇದರ ಹಾನಿಯ ಪ್ರಮಾಣ ಅತಿ ಕಡಿಮೆಯಾಗಿತ್ತು. ಆದರೆ ಮಾನವನ ಬುದ್ಧಿ ಶಕ್ತಿ, ಕುಶಲತೆ, ತಾಂತ್ರಿಕತೆ ಹೆಚ್ಚಿದಂತೆಲ್ಲ ಅವನು ಪರಿಸರವನ್ನು ಹಾಗೂ ಪರಿಸರದಲ್ಲಿ ದೊರೆಯುವ ಸಂಪನ್ಮೂಲಗಳನ್ನು ಹೆಚ್ಚೆಚ್ಚು ಬಳಸಿಕೊಳ್ಳಲು ಪ್ರಾರಂಭಿಸಿದ. ಇದರಿಂದ ಪರಿಸರಕ್ಕೆ ಹಲವಾರು ರೀತಿಯಲ್ಲಿ ಹಾನಿಯಾಗಲು ಪ್ರಾರಂಭವಾಯಿತು. ಪರಿಸರ ಮಾಲಿನ್ಯಗಳು ಪ್ರಾರಂಭವಾದವು. ಜಲಮಾಲಿನ್ಯ, ವಾಯುಮಾಲಿನ್ಯ, ಭೂಮಾಲಿನ್ಯ, ಶಬ್ದಮಾಲಿನ್ಯ ಮೊದಲಾದವು ಪರಿಸರವನ್ನು ನಾಶಮಾಡುವ ಮಾಲಿನ್ಯಗಳು. ಹೀಗೆ ಮಾನವ ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ಬಳಸಿಕೊಂಡು ಆ ಪರಿಸರದಿಂದಲೇ ಉನ್ನತಿಯನ್ನು ಹೊಂದಿ ಅದನ್ನು ಸದ್ಬಳಕೆ ಮಾಡದೆ ವಿನಾಶದೆಡೆಗೆ ಸಾಗಿದ್ದಾನೆ.

ಇತ್ತೀಚಿನ ದಿನಗಳಲ್ಲಿ ಮಾನವ ಪರಿಸರ ಮಾಲಿನ್ಯದ ಬಗೆಗೆ ಎಚ್ಚೆತ್ತಿದ್ದಾನೆ. ಹಲವಾರು ರೀತಿಯ ಕಾರ್ಯರೂಪಗಳಿಂದ ಪರಿಸರವನ್ನು ಮಲಿನ ಮಾಡದೆ ಅದನ್ನು ಕಾಪಾಡುವಲ್ಲಿ ಮುಂದಾಗಿದ್ದಾನೆ. ಪರಿಸರ ಪ್ರಕೃತಿದತ್ತವಾಗಿ ಮಾನವನಿಗೆ ಸಿಕ್ಕಿರುವ ಸಂಪತ್ತು, ಅದನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ಅದರಿಂದ ಅವನ ಅಭಿವೃದ್ಧಿ ಸಾಧಿಸುವುದು ಅತ್ಯವಶ್ಯಕ. ಒಟ್ಟಾರೆ ನಮಗಿರುವುದೊಂದೇ ಪರಿಸರ, ಅದರ ರಕ್ಷಣೆ ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ. ಪರಿಸರದ ಉಳಿವು ನಮ್ಮೆಲ್ಲರ ಉಳಿವು. ವಾಹನ ಚಾಲಕನ ಅಲಕ್ಷ್ಯ ಅಪಘಾತಕ್ಕೆ ಕಾರಣವಾಗುವಂತೆ ಪರಿಸರದ ಬಗ್ಗೆ ತೋರುವ ಮಾನವನ ಅಲಕ್ಷ್ಯ ಆತನ ಅವನತಿಯ ಸೂಚಕ. (ಎಚ್.ಎಸ್.ಡಿ.)

**ಪರಿಸರ ಪ್ರಭುತ್ವವಾದ:** ಮಾನವನ ಕ್ರಿಯೆಗಳು ಪರಿಸರದಿಂದ ನಿಯಂತ್ರಿಸಲ್ಪಡುತ್ತವೆ ಎಂಬ ವಾದ. ಇದನ್ನು ನಿಶ್ಚಯವಾದ ಅಥವಾ ಪರಿಸರವಾದ ಎಂದೂ ಕರೆಯಲಾಗುತ್ತದೆ. ಸ್ವಾಭಾವಿಕ ಪರಿಸರದ ಭಿನ್ನತೆಗಳಿಗೆ ಅನುಗುಣವಾಗಿ ಪ್ರಪಂಚದಲ್ಲಿ ಮಾನವನ ವರ್ತನೆಗಳೂ ಸಹ ಭಿನ್ನವಾಗಿರುತ್ತದೆ.

ಆರಂಭದಲ್ಲಿ ಪರಿಸರವಾದ ಗ್ರೀಕ್ ಮತ್ತು ರೋಮನ್ ವಿದ್ವಾಂಸರಿಂದ ಪ್ರತಿಪಾದಿಸಲ್ಪಟ್ಟಿತು. ಹಿಪ್ಪೋಕ್ರೇಟ್ಸ ಈ ವಾದದ ಸಂಸ್ಥಾಪಕ ಮತ್ತು ಪ್ರವರ್ತಕ. ಈತ ಪ್ರ.ಶ.ಪೂ.420 ರಲ್ಲಿ ಬರೆದ ಆನ್ ಏರ್ಸ್, ವಾಟರ್ಸ್ ಅಂಡ್ ಪ್ಲೇಸಸ್ ಎಂಬ ಕೃತಿಯಲ್ಲಿ ಏಷ್ಯದ ಜನ ಉತ್ತಮ ಭೌಗೋಳಿಕ ಪರಿಸರ ಹೊಂದಿದ್ದು, ಸುಗಮ ಜೀವನ ಸಾಗಿಸುವರು. ಆದರೆ ಯುರೋಪಿಯನ್ನರು ಪ್ರತಿಕೂಲ ಪರಿಸರ ಹೊಂದಿದ್ದು ಕಷ್ಟಕರ ಜೀವನ ಸಾಗಿಸುವರು ಎಂದು ವಿವರಿಸಿದ್ದಾನೆ. ಅರಿಸ್ಟಾಟಲ್ ಈ ವಾದವನ್ನು ತನ್ನ ಕೃತಿ ಪಾಲಿಟಿಕ್ಸ್ ನಲ್ಲಿ ಯುರೋಪಿನ ಶೀತ ಪ್ರದೇಶದ ಜನ ಸಾಹಸಿಗಳು ಮತ್ತು ಉತ್ಸಾಹಿಗಳು ಆಗಿದ್ದರೂ ಸಹ, ಅವರು ಬೌದ್ಧಿಕತೆ ಮತ್ತು ಪರಿಣತಿಗಳ ಕೊರತೆ ಹೊಂದಿದ್ದಾರೆ, ಜೊತೆಗೆ ನೆರೆ ಹೊರೆಯವರ ಪೀಡನೆಯಿಂದ ಮುಕ್ತರಾಗಿ ಬದುಕುವರು. ಆದರೆ ಇವರಲ್ಲಿ ರಾಜಕೀಯ ಸಂಘಟನೆಯ ಕೊರತೆ ಹಾಗೂ ನೆರೆಯವರ ಮೇಲೆ ಪ್ರಭುತ್ವ ಸಾಧಿಸಲು ಅಸಮರ್ಥರು. ಇದಕ್ಕೆ ಪ್ರತಿಯಾಗಿ ಏಷ್ಯನ್ನರು ಚಿಂತಕರೂ ಮತ್ತು ನಿಪುಣತೆಯುಳ್ಳವರಾಗಿದ್ದಾರೆ. ಆದರೂ ಅವರು ಉತ್ಸಾಹವಿಲ್ಲದೆ ಗುಲಾಮಗಿರಿಗೆ ಒಳಪಡುವರು ಎಂದು ಸಮರ್ಥಿಸಿದ್ದಾನೆ. ಇದಕ್ಕೆ ಈ ಜನರ ಸುತ್ತಲಿನ ಪರಿಸರವೇ ಕಾರಣ ಎಂಬುದು ಇವನ ವಾದ. ಸ್ಟ್ರಾಬೊ ಸಹ ರೋಮ್ ಸಾಮ್ರಾಜ್ಯದ ಹುಟ್ಟು ಬೆಳೆವಣಿಗೆಗೆ ಇಟಲಿಯ ಪರಿಸರದ ಸಂಬಂಧವನ್ನು ಕುರಿತು ವಿವರಿಸಿದ್ದಾನೆ.

ಫ್ರಾನ್ಸ್‌ನ ಜೆ.ಬೋಡಿನ್ ಪರಿಸರವಾದವನ್ನು ವಿವರಿಸುತ್ತಾ ಉತ್ತರದ ಜನರು ಕ್ರೂರಿಗಳು, ಧೂರ್ತರು ಆದರೆ ಸಾಹಸಿಗಳು, ಅದೇ ದಕ್ಷಿಣದ ಜನರು ದ್ವೇಷಿಗಳು, ವಂಚಕರು ಆದರೆ ಸುಳ್ಳಿನಿಂದ ಸತ್ಯವನ್ನು ಬೇರ್ಪಡಿಸುವಂತಹ ಪ್ರತಿಭೆಯುಳ್ಳವರು. ಸಮಶೀತೋಷ್ಣ ವಲಯದವರು ಉತ್ತರದವರಿಗಿಂತ ಪ್ರತಿಭಾವಂತರು ಹಾಗೂ ದಕ್ಷಿಣದವರಿಗಿಂತ ಸಾಹಸಿಗರು ಎಂದಿದ್ದಾನೆ. ಇದನ್ನೇ ಮಾಂಟ್‌ಸ್ಕೊ ಸಹಮತಿಸುತ್ತಾ, ಇದಕ್ಕೆ ವಾಯುಗುಣ ಹಾಗೂ ಪರಿಸರವೇ ಕಾರಣವಾಗಿದೆ ಎನ್ನುತ್ತಾನೆ.

ಅರಬ್ ಭೂಗೋಳವಿಜ್ಞಾನಿಗಳು ಈ ವಾದವನ್ನು ಬೆಂಬಲಿಸಿದ್ದಾರೆ. ಇವರುಗಳು ಜನರ ಸಾಂಸ್ಕೃತಿಕ ಚಟುವಟಿಕೆ ಮತ್ತು ಜೀವನ ಕ್ರಮಕ್ಕೂ ಹಾಗೂ ಪರಿಸರಕ್ಕೂ ಇರುವ ಸಂಬಂಧವನ್ನು ತಿಳಿಸಿದ್ದಾರೆ. ಅಲ್–ಮಸೂದಿ ಪ್ರಕಾರ ಸಮೃದ್ಧ ನೀರಿರುವ ಕಡೆ ಜನ ಸುಖ ಸಂತೋಷದಿಂದ ಉಲ್ಲಾಸಭರಿತರಾಗಿರುತ್ತಾರೆ. ಆದರೆ ನೀರಿನ ಕೊರತೆ ಇರುವಲ್ಲಿ ಜನರ ಜೀವನ ದುರ್ಲಭವಾಗಿದ್ದು, ಜನರು ತಾಳ್ಮೆಗೆಟ್ಟವರಾಗಿರುತ್ತಾರೆ. ಈ ವ್ಯಾಖ್ಯಾನ ಪರಿಸರದಿಂದ ಮಾನವ ಚಟುವಟಿಕೆ ಅಷ್ಟೇ ಅಲ್ಲದೆ, ಮಾನಸಿಕ ಸಾಮರ್ಥ್ಯವೂ ಸಹ ನಿರ್ಧಾರವಾಗುತ್ತದೆ ಎಂಬುದನ್ನು ತೋರಿಸುತ್ತದೆ.

16 ಹಾಗೂ 17ನೆಯ ಶತಮಾನದಲ್ಲಿ ಜರ್ಮನ್ನರು ಮತ್ತು ಬ್ರಿಟಿಷರು ಪರಿಸರವಾದದ ಬೆಳೆವಣಿಗೆಗೆ ಕೊಡುಗೆ ನೀಡಿದ್ದಾರೆ. ಜರ್ಮನಿಯಲ್ಲಿ ರ್‍ಯಾಟ್ಜೆಲ್ ಪರಿಸರ ಪ್ರಭುತ್ವವನ್ನು ಪ್ರತಿಬಿಂಬಿಸಿದ.. ಈತನಿಂದಲೇ ಈ ವಾದ ಜರ್ಮನಿಯಲ್ಲಿ ಪ್ರಸಾರಗೊಂಡಿತು. ಹಾಗೂ ಜರ್ಮನಿಯ ಪರಿಸರ ಪಂಥವನ್ನು ಹುಟ್ಟುಹಾಕಿತು. ಕಾರ್ಲ್ ರಿಟ್ಟರ್ (1779–1859) ಮಾನವ ಕೇಂದ್ರೀಯ ವಿಧಾನವನ್ನು ಅನುಸರಿಸಿ ಭೌಗೋಳಿಕ ಪರಿಸರವಾದ (ನಿಶ್ಚಿತವಾದ) ವನ್ನು ಪ್ರತಿಪಾದಿಸಿದ. ಜನರ ದೈಹಿಕ ರಚನೆ ಹಾಗೂ ಆರೋಗ್ಯಕ್ಕೆ ಪರಿಸರವೇ ಕಾರಣ ಎಂದು ತನ್ನ ಯುರೋಪ್ ಇನ್ ಜರ್ನಡ್ ಕೃತಿಯಲ್ಲಿ ಹೇಳಿದ್ದಾನೆ. ಅಲೆಗ್ಸಾಂಡರ್–ವಾನ್–ಹಂಬೋಲ್ಟ್ (1769–1859) ತನ್ನ ಕಾಸ್ಮೋಸ್ ಕೃತಿಯಲ್ಲಿ ಮೆಡಿಟರೇನಿಯನ್ ಪ್ರದೇಶದ ಭೌಗೋಳಿಕ ಸನ್ನಿವೇಶ ಮತ್ತು ವಿನ್ಯಾಸಗಳು ಪುರಾತನ ನಾಗರಿಕತೆಯ ಬೆಳೆವಣಿಗೆಯ ಮೇಲೆ ಪ್ರಭಾವ ಬೀರಿದೆ ಎಂದಿದ್ದಾನೆ. ಈ ಪರಿಸರವಾದಿಗಳ ಮೇಲೆ ಡಾರ್ವಿನ್ನನ ಜೀವ ವಿಕಾಸ ಪ್ರಭಾವ ಬೀರಿತು.

ಹ್ಯಾಕಲ್ ಜೀವಿಪರಿಸ್ಥಿತಿ ಶಾಸ್ತ್ರ ಎಂಬ ಕೃತಿ ರಚಿಸಿದ. ಇದರಲ್ಲಿ ಉಷ್ಣವಲಯದ ಯಾವುದೇ ದೇಶದಲ್ಲೂ ಯಥೇಚ್ಛವಾದ ಸಂಪತ್ತು ಸೇರಿಲ್ಲ. ಇಲ್ಲಿ ಹೆಚ್ಚು ಉಷ್ಣಾಂಶದಿಂದ ಆಹಾರ ಧಾನ್ಯ ಉತ್ಪಾದಿಸಲು ಸಾಧ್ಯವಿಲ್ಲ. ಮಾನವ ನತದೃಷ್ಟ, ಏಕೆಂದರೆ, ಆಹಾರ, ಸಂಪತ್ತು, ರಾಜಕೀಯ ಶಕ್ತಿ, ಸಾಮಾಜಿಕ ಅಧಿಕಾರ ಅಸಮವಾಗಿ ಹಂಚಿಕೆಯಾಗಿದೆ ಎಂದು ಹೇಳುತ್ತಾರೆ. ಬಿದಲ್‌ನು ತನ್ನ ಹಿಸ್ಟರಿ ಆಫ್ ಸಿವಿಲೈಜೇಶನ್ ಇನ್ ಇಂಗ್ಲೆಂಡ್ ಎಂಬ ಗ್ರಂಥದಲ್ಲಿ ಮಾನವ ಜನಾಂಗಗಳ ಮೇಲೆ ಪರಿಸರ ನಿಶ್ಚಿತವಾದ ಪ್ರಭಾವ ಬೀರಿದೆ ಎಂದು ಪರಿಸರ ಪ್ರಭುತ್ವವಾದವನ್ನು ಸಮರ್ಥಿಸಿದ್ದಾನೆ. ಫ್ರಾನ್ಸ್‌ನ ಎಡ್ಮಂಡ್ ಡಿಮೊಲಿನ್ಸ್‌ನು ಪ್ರಪಂಚದ ಜನಸಂಖ್ಯೆಯ ವೈವಿಧ್ಯತೆಗೆ ಜನಾಂಗಗಳೇ ಕಾರಣ, ಈ ವಿಭಿನ್ನ ಜನಾಂಗಗಳಿಗೆ ಪರಿಸರವೇ ಕಾರಣ ಹಾಗೂ ಪರಿಸರ ಬದಲಾವಣೆಯ ಪ್ರತಿಫಲವೇ ಜನಾಂಗಗಳ ಉತ್ಪತ್ತಿಯಾಗಿದೆ ಎಂದು ವಾದಿಸಿದ್ದಾನೆ.

ಅಮೆರಿಕದಲ್ಲಿ ಎಲೆನ್ ಸೆಂಪಲ್‌ರು ಇನ್‌ಫ್ಲುಯೆನ್ಸ್ ಆಫ್ ಜಿಯೋಗ್ರಫಿಕಲ್ ಎನ್ವಿರಾನ್‌ಮೆಂಟ್ ಗ್ರಂಥ ರಚಿಸಿ ಮಾನವ ಪರಿಸರದ ಕೂಸು, ಅದರ ದೂಳಿನ ದೂಳು ಎಂದರು. ಎಲ್ಸ್‌ವರ್ಥ್ ಹಂಟಿಂಗ್‌ಟನ್ ಮಾನವ ಪರಿಸರದ ಸಂಬಂಧ ಕುರಿತು ವಿವರಿಸಿದ.

ಮಕಿಂದರ್, ಚಿಸ್ಲೊಮ್, ಡೇವಿಸ್, ಬೌಮ್ಯಾನ್, ರಾಬರ್ಟ್ ಮಿಲ್, ಟೈಲ್ಯರ್, ಹರ್ಬರ್ಟ್‌ಸನ್ ಮೊದಲಾದವರು ಪರಿಸರ ಪ್ರಭುತ್ವವಾದವನ್ನು ಅನುಸರಿಸಿದರು. ಮಾನವನ ಆಹಾರ, ಉಡುಪು, ವಸತಿ, ಸ್ವಭಾವ, ದೈಹಿಕ ರಚನೆ, ವೃತ್ತಿ, ಜನಸಂಖ್ಯೆ ಬೆಳೆವಣಿಗೆ, ಅದರ ಹಂಚಿಕೆ ಮೊದಲಾದವುಗಳ ಪರಿಸರದ ಪರಿಸ್ಥಿತಿಯಿಂದ ಪರಿಸರ ಪ್ರಭುತ್ವವಾದವನ್ನು ಸಮರ್ಥಿಸಿದ್ದಾರೆ. (ಎನ್.ಎಲ್.)

**ಪರಿಸರ ಭೂಗೋಳ ವಿಜ್ಞಾನ:** ಪರಿಸರಶಾಸ್ತ್ರ ಮತ್ತು ಭೂಗೋಳವಿಜ್ಞಾನಗಳ ವಸ್ತು ವಿಷಯಗಳು ಪರಸ್ಪರ ಅನ್ಯೋನ್ಯ ಸಂಬಂಧವನ್ನು ಹೊಂದಿವೆ. ಭೂಗೋಳವಿಜ್ಞಾನವೊಂದು ಪ್ರಾದೇಶಿಕ ಅಥವಾ ಕ್ಷೇತ್ರೀಯ ಶಾಸ್ತ್ರವಾಗಿದೆ. ಪರಿಸರ ವಿಜ್ಞಾನ ಪ್ರಾದೇಶಿಕ ಭೂಗೋಳವಿಜ್ಞಾನದ ಅಂಗವಾಗಿದೆ. ಭೂಗೋಳವಿಜ್ಞಾನದಲ್ಲಿ ಅಧ್ಯಯನ ಮಾಡುವ ಪ್ರತಿಯೊಂದು ವಸ್ತುವಿಷಯ ಪರಿಸರದಲ್ಲಿ ಅಡಕವಾಗಿದೆ. ಪರಿಸರ ಭೂಗೋಳವಿಜ್ಞಾನ ಬಹು ವಿಶಾಲವಾದ ಅಧ್ಯಯನಕ್ಷೇತ್ರವನ್ನು ಒಳಗೊಂಡಿದೆ. ಇಂದು ಪರಿಸರ ಭೂಗೋಳವಿಜ್ಞಾನವನ್ನು ಮಾನವನ ಎಲ್ಲ ಬಗೆಯ ವಿಜ್ಞಾನಗಳಲ್ಲೂ ಅಧ್ಯಯನ ಮಾಡಲಾಗುತ್ತಿದೆ. ಪರಿಸರ ಭೂಗೋಳವಿಜ್ಞಾನದ ಅಧ್ಯಯನ ಸು. 1960–70ರ ದಶಕದಲ್ಲಿ ಪ್ರಾರಂಭಗೊಂಡಿತು. ಅಂದಿನ ಸಮಯದಲ್ಲಿ ಪ್ರಪಂಚದಾದ್ಯಂತ ಭೂಗೋಳವಿಜ್ಞಾನದ ವಿಷಯದಲ್ಲಿ ಸಂಖ್ಯಾಶಾಸ್ತ್ರದ ಭೂಗೋಳ ವಿಷಯಗಳು ಹಾಗೂ ಸ್ಥಾನೀಕರಣ ವಿಶೇಷತೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದ್ದರಿಂದ ಪರಿಸರಭೂಗೋಳವಿಜ್ಞಾನದ ಅಭ್ಯುದಯ ಕಂಡುಬರಲಿಲ್ಲ, ಆದರೆ 1970ರ ದಶಕದ ನಂತರ ಭೂಗೋಳವಿಜ್ಞಾನದಲ್ಲಿ ಪರಿಸರದ ಅಧ್ಯಯನ ಹೆಚ್ಚಿನ ಪ್ರಾಮುಖ್ಯತೆಗಳಿಸಿದ್ದರಿಂದ ಫ್ರೆಂಚ್ ಮತ್ತು ಜರ್ಮನ್ ದೇಶಗಳು ಭೂಗೋಳವಿಜ್ಞಾನದಲ್ಲಿ ಪರಿಸರದ ಅಧ್ಯಯನ ಹೆಚ್ಚಿನ ಪ್ರಾಮುಖ್ಯತೆ ನೀಡಿದವು. ಹೀಗಾಗಿ ಭೂಗೋಳವಿಜ್ಞಾನಿಗಳು ಪರಿಸರ ಭೂಗೋಳವಿಜ್ಞಾನದಲ್ಲಿ ಹೆಚ್ಚಿನ ಸಂಶೋಧನೆ ಮತ್ತು ಬರೆವಣಿಗೆಯನ್ನು ನಿರಂತರವಾಗಿ ಕೈಗೊಂಡಿದ್ದರಿಂದ ಪರಿಸರ ಭೂಗೋಳವಿಜ್ಞಾನ ಪ್ರಗತಿಯನ್ನು ಹೊಂದಿತು.

ಪರಿಸರದ ಭೂಗೋಳವಿಜ್ಞಾನದಲ್ಲಿ ಮುಖ್ಯವಾಗಿ ಭೂಮಿಯ ಮೇಲೆ ಕಂಡುಬರುವ ಜೀವ ಪರಿಸರ ವ್ಯವಸ್ಥೆ ಮತ್ತು ಪರಿಸರದ ಅವನತಿ, ಮಾಲಿನ್ಯಗಳು, ಮಾಲಿನ್ಯಗಳ ರಚನೆ, ವಿಧಾನಗಳು, ಮಾಲಿನ್ಯ ಉಂಟುಮಾಡುವ ಘಟಕಗಳು, ಜೀವ ಪರಿಸರದ ಬದಲಾವಣೆಗಳು ಮೊದಲಾದವುಗಳನ್ನು ಚರ್ಚಿಸಲಾಗುವುದು. ಇದಲ್ಲದೆ ಪರಿಸರದ ಮೇಲೆ ಉಂಟಾಗುವ ಪರಿಣಾಮಗಳನ್ನು ಅವುಗಳ ನಿರ್ವಹಣೆ ಮತ್ತು ನಿಯಂತ್ರಣದ ಬಗೆಯನ್ನು ತಿಳಿಯಲಾಗುವುದು. ಇದು ಮಾನವ ಮತ್ತು ಪರಿಸರ, ಸಂಪನ್ಮೂಲಗಳು, ಹಂಚಿಕೆ, ಉಪಯೋಗ, ನಿರ್ವಹಣೆ, ಯೋಜನೆ ಹಾಗೂ ನಿಯಂತ್ರಣದ ಅಂಶಗಳನ್ನು ಒಳಗೊಂಡಿದೆ. (ಎಚ್.ಎಸ್.ಡಿ.)

**ಪರಿಸರ ಯೋಜನೆ:** ಪರಿಸರವನ್ನು ಸುಸ್ಥಿರವಾಗಿ ಸಂರಕ್ಷಿಸಲು ಹಲವಾರು ಯೋಜನೆಗಳನ್ನು ಭಾರತ ಜಾರಿಗೆ ತಂದಿದೆ. ಭಾರತವು ಹಿಂದಿನಿಂದಲೂ ಪರಿಸರದ ಬಗ್ಗೆ ಕಾಳಜಿಯನ್ನು ವಹಿಸಿದೆ. ಜನಸಂಖ್ಯೆಗೆ ಸಂಬಂಧಿಸಿದಂತೆ ಜನಸಂಖ್ಯೆ ಬೆಳೆವಣಿಗೆ,

ಹಂಚಿಕೆ ಮತ್ತು ಆರ್ಥಿಕ ಅಭಿವೃದ್ಧಿಯೂ ಒಳಗೊಂಡಂತೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. 1972ರಲ್ಲಿ ಪರಿಸರ ಯೋಜನೆ ಮತ್ತು ಸಮಾನಾಧಿಕಾರ ರಾಷ್ಟ್ರೀಯ ಸಮಿತಿ ರಚಿಸಲಾಯಿತು. ಪರಿಸರ ಕುರಿತು ಸಂಶೋಧನೆ ಮಾಡುವುದಕ್ಕೆ ಪ್ರೋತ್ಸಾಹ ಮತ್ತು ಅವಶ್ಯಕವಿದ್ದರೆ ಸಂಶೋಧನೆಗೆ ಅನುಕೂಲ ಒದಗಿಸುವುದೇ ಸಮಿತಿಯ ಮುಖ್ಯ ಗುರಿಯಾಗಿತ್ತು. ಎನ್.ಎಲ್.ಇ.ಪಿ.ಸಿಯ ಯೋಜನಾ ಆಯೋಗದೊಂದಿಗೆ ಸಂಬಂಧ ಹೊಂದಿದ ಪರಿಸರ ಸಮಸ್ಯೆಗಳಿಗೆ ಪೂರಕವಾದ ಅನೇಕ ಯೋಜನೆಗಳನ್ನು ರೂಪಿಸುವುದೇ ಅಲ್ಲದೇ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದ ಮೂಲಕ ಪರಿಸರ ಸಮಸ್ಯೆ ಕುರಿತು ಜನರಲ್ಲಿ ಅರಿವು ಮೂಡುವಂತಹ ಹಲವು ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿದೆ.

ಅಂತಾರಾಷ್ಟ್ರೀಯ ಏಜೆನ್ಸಿಗಳಾದ, ಯು.ಎನ್.ಇ.ಪಿ., ಯು.ಎನ್.ಎಸ್.ಸಿ.ಓ., ಐ.ಯು.ಸಿ.ಎನ್ ಗಳೊಂದಿಗೆ ಸಹಕಾರ ಹೊಂದಲು ಸರ್ಕಾರಕ್ಕೆ ಸಲಹೆ ನೀಡುತ್ತದೆ ಯೋಜನೆಗಳಲ್ಲಿ ಪ್ರಮುಖವಾದವುಗಳೆಂದರೆ ಪರಿಸರ ಸಂಶೋಧನೆ ಸಮಿತಿ. ಗ್ರಾಮೀಣ ಮತ್ತು ನಗರ ಪರಿಸರದ ಅಂಶಗಳು, ಪರಿಸರ ಅವನತಿ, ಸಂಪನ್ಮೂಲ ನಿರ್ವಹಣಾ ಅಂಶಗಳು, ಪರಿಸರ ಕುರಿತು ತರಬೇತಿ. ಇದಲ್ಲದೆ ಇನ್ನೂ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಯಿತು. ಯೋಜನೆಗಳ ಮಾಹಿತಿ ಶಿಕ್ಷಣ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ದಿನಚರಿ, ನಿಯತಕಾಲಿಕ ಲೇಖನಗಳ ಪ್ರಕಟಣೆ ಇವೇ ಮೊದಲಾದವುಗಳು. ಇವುಗಳಲ್ಲದೆ ಸರ್ಕಾರ 1980ರಲ್ಲಿ ಪರಿಸರ ಗುಣಮಟ್ಟ ಕಾಪಾಡಲು ಹಲವು ಅಭಿವೃದ್ಧಿಯೋಜನೆಗಳನ್ನು ರೂಪಿಸಿ ಪರಿಸರ ಸಂರಕ್ಷಿಸುತ್ತಿವೆ ಅವುಗಳೆಂದರೆ: ಮಾಲಿನ್ಯ ನಿಯಂತ್ರಣ ಮಂಡಳಿ, ರಾಷ್ಟ್ರೀಯ ಬಂಜರು ಭೂಮಿ ಅಭಿವೃದ್ಧಿಯೋಜನೆ (1985), ಕೇಂದ್ರೀಯ ಗಂಗಾ ಪ್ರಾಧಿಕಾರ, ಮಾಲಿನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ, ಭೂಮಾಲಿನ್ಯ ನಿವಾರಣಾ ಕಾಯ್ದೆ. **(ವೈ.ಪಿ.ಆರ್.)**

**ಪರಿಸರ ಶಿಕ್ಷಣ:** ಯುನೆಸ್ಕೋದ ಆಶ್ರಯದಲ್ಲಿ ಪ್ಯಾರಿಸ್ ನಗರದಲ್ಲಿ ಜರುಗಿದ ಅಂತಾರಾಷ್ಟ್ರೀಯ ಕಾರ್ಯಾಗಾರದಲ್ಲಿ ವ್ಯಕ್ತ ಪಡಿಸಿದ ಅಭಿಪ್ರಾಯದಂತೆ ಪರಿಸರ ಶಿಕ್ಷಣ ಮಾನವನ ಸಂಸ್ಕೃತಿ ಹಾಗೂ ಸುತ್ತಲಿನ ಜೈವಿಕ ಮತ್ತು ಭೌತಿಕ ಪರಿಸರಗಳ ಜೊತೆಗೆ ಆಂತರಿಕ ಸಂಬಂಧಗಳನ್ನು ಅರ್ಥೈಸುವುದರ ಶಿಕ್ಷಣವಾಗಿದೆ.

ಪರಿಸರ ಶಿಕ್ಷಣ ಮೂಲಭೂತವಾಗಿ ಪರಿಸರದ ಘಟಕಗಳ ಮಹತ್ವವನ್ನು ತಿಳಿಸಿ ಸಮಸ್ಯೆಗಳನ್ನು ಪರಿಚಯಿಸಿ ಕೊಟ್ಟು ಅದರ ಪರಿಣಾಮಗಳನ್ನು ಎತ್ತಿ ತೋರಿಸಿ ಪರಿಹಾರೋಪಾಯಗಳನ್ನು ಸೂಚಿಸುತ್ತದೆ.

ಇಂದಿರಾಗಾಂಧಿಯವರ ನೇತೃತ್ವದಲ್ಲಿ ದೆಹಲಿಯಲ್ಲಿ ಪರಿಸರ ಶಿಕ್ಷಣ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಿತು (1985). ಪುನಃ ದೆಹಲಿಯಲ್ಲಿ ಎರಡನೆಯ ಬಾರಿ ಅಂತಾರಾಷ್ಟ್ರೀಯ ಸಮ್ಮೇಳನ ಜರುಗಿತು (1987). ಇದರಲ್ಲಿ ಭಾಗವಹಿಸಿದ ಕ್ವಾನ್‌ಟ್ಸು ಎಂಬ ಚೀನಿ ತತ್ತ್ವಜ್ಞಾನಿಯ ಪ್ರಕಾರ ಒಂದು ವರ್ಷಕ್ಕಾಗಿ ಯೋಚಿಸಿದರೆ ಧಾನ್ಯಗಳನ್ನು ಬೆಳೆ ಮತ್ತು ಹತ್ತು ವರ್ಷಕ್ಕಾಗಿ ಯೋಚಿಸಿದರೆ ಮರಗಳನ್ನು ಬೆಳೆ, ನೂರು ವರ್ಷಕ್ಕಾಗಿ ಯೋಚಿಸುವುದಾದರೆ ಜನರಿಗೆ ಸೂಕ್ತ ಪರಿಸರ ಶಿಕ್ಷಣ ನೀಡು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಪರಿಸರ ಶಿಕ್ಷಣ ಪರಿಸರದ ಬಗ್ಗೆ ಜಾಗೃತಿ, ಜೀವ ಪರಿಸರ, ಪರಿಸರ ಜ್ಞಾನ, ಮೌಲ್ಯಗಳು, ಅಭಿವೃದ್ಧಿ, ಅಭಿರುಚಿಗಳನ್ನು ಮೂಡಿಸುತ್ತದೆ. **(ವೈ.ಪಿ.ಆರ್.)**

**ಪರಿಸರ ಸಂರಕ್ಷಣೆ:** ಪರಿಸರದ ಮೂಲ ಘಟಕಗಳಾದ ವಾಯು, ನೀರು, ಭೂಮಿ, ಅರಣ್ಯಗಳು, ಜಲರಾಶಿಗಳು, ವನ್ಯ ಪ್ರಾಣಿಗಳು, ಮುಂತಾದವು ತಮ್ಮ ಮೂಲ ಗುಣ ಲಕ್ಷಣ ಕಳೆದುಕೊಂಡು ಮಲಿನಗೊಳ್ಳುತ್ತಿರುವುದು ಭೂಮಂಡಲದ ಜ್ವಲಂತ ಸಮಸ್ಯೆಯಾಗಿದೆ. ಇಂತಹ ಸಮಸ್ಯೆಗಳನ್ನು ಬಗೆಹರಿಸಿ ಪರಿಸರವನ್ನು ಕಾಪಾಡಿಕೊಂಡು ಅದರ ರಕ್ಷಣೆ ಮಾಡಲು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾನೂನು ರೂಪಿಸಿ ಅವುಗಳನ್ನು ಕಡ್ಡಾಯವಾಗಿ ಜಾರಿಗೊಳಿಸಿ, ಅವುಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯ ನಡೆಯಬೇಕು. ನಾಗರಿಕತೆ ಬೆಳೆದಂತೆ ವಾಣಿಜ್ಯ ಕ್ಷೇತ್ರದಲ್ಲಿ ಬದಲಾಗುತ್ತಿರುವ ಜನರ ಜೀವನಮಟ್ಟ ಮಾನವನ ಬೇಡಿಕೆಗಳು ಪರಿಸರ ಶೋಷಣೆ ಮಾಡಲು ಪ್ರೇರೇಪಿಸುತ್ತವೆ. ಹೀಗಾಗಿ ಮಾನವ ಪರಿಸರವನ್ನು ಮಿತಿ ಮೀರಿದ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದಾನೆ. ಇದನ್ನು ತಡೆಗಟ್ಟಿ ಭವಿಷ್ಯಕ್ಕಾಗಿ ಪರಿಸರವನ್ನು ಉಳಿಸುವುದೇ ಇಂದಿನ ತುರ್ತು ಅಗತ್ಯವಾಗಿದೆ. **(ಎಚ್.ಎಸ್.ಡಿ.)**

**ಪರಿಸರದ ಅವನತಿ:** ಮಾನವ ಮತ್ತು ಪ್ರಕೃತಿಯ ಸಂಬಂಧವನ್ನು ಅಧ್ಯಯನ ಮಾಡಿದಾಗ ಪರಿಸರ ಅವನತಿ ಎಂಬ ವಿಷಯಕ್ಕೆ ಸುದೀರ್ಘವಾದ ಇತಿಹಾಸವಿದೆ. ಇದರ ಇತಿಹಾಸದ ಹೆಜ್ಜೆಗಳು ತುಂಬಾ ಹಳೆಯ ಕಾಲದ ನೆಲೆಯಲ್ಲಿ ಕಾಣಸಿಗುತ್ತವೆ. ಆದರೂ ಇತಿಹಾಸ ಪೂರ್ವಕಾಲದಲ್ಲಿ ಮಾನವ ಮತ್ತು ಪರಿಸರದ ಸಂಬಂಧ ಉತ್ತಮವಾಗಿತ್ತು. ಮಾನವ ಪ್ರಕೃತಿಗೆ ಯಾವುದೇ ರೀತಿಯ ತೊಂದರೆಯನ್ನು ಕೊಡದೆ ಅದಕ್ಕೆ ಪೂರಕವಾಗಿ ಕೆಲಸ ನಿರ್ವಹಿಸುತ್ತಿದ್ದ. ಅಂದಿನ ಸ್ಥಿತಿಯಲ್ಲಿ ಪರಿಸರದ ಅವನತಿ ಎಂಬ ಶಬ್ದದ ಬಳಕೆಯೇ ಅನುಚಿತವೇನೂ ಎಂಬಂತಿತ್ತು.

ಪರಿಸರದ ಅವನತಿಯನ್ನು ಮಾನವನ ಜೀವನ ಸಾಗಿ ಬಂದ ನಾಲ್ಕು ಪ್ರಮುಖ ಹಂತಗಳ ಜೊತೆಯಲ್ಲಿ ಅಧ್ಯಯನ ಮಾಡುವುದು ಹೆಚ್ಚು ಮಹತ್ವ ಎನಿಸುತ್ತದೆ.

1) ಆಹಾರ ಸಂಗ್ರಹಣೆಯ ಕಾಲ: ಈ ಹಂತದಲ್ಲಿ ಮಾನವ ಪ್ರಕೃತಿಯೊಂದಿಗೆ ಸ್ನೇಹಪೂರ್ವಕ, ಪ್ರೀತಿಪೂರ್ವಕ ಸಹ ಬಾಳ್ವೆ ನಡೆಸುತ್ತಿದ್ದ. ಅವನ ಮೂಲಭೂತ ಅವಶ್ಯಕತೆಗಳೆಲ್ಲ ಪ್ರಕೃತಿಯಿಂದಲೇ ದೊರೆಯುತ್ತಿದ್ದವು. ಹಸಿವಾದಾಗ ಮರದಲ್ಲಿ ದೊರೆಯುತ್ತಿದ್ದ ಹಣ್ಣನ್ನು ತಿಂದು, ನಿದ್ದೆ ಬಂದಾಗ ಮರದ ಪೊಟರೆಯಲ್ಲಿ ಮಲಗಿ ಜೀವನ ನಿರ್ವಹಿಸುತ್ತಿದ್ದ. ಪ್ರಕೃತಿಗೆ ಕಿಂಚಿತ್ತು ತೊಂದರೆಯನ್ನುಂಟು ಮಾಡುತ್ತಿರಲಿಲ್ಲ. ನಂತರ ಬೇಟೆಯಾಡುವುದನ್ನು ಕಲಿತ. ಆಗಲೂ ಅವನು ಪರಿಸರದಲ್ಲಿ ಯಾವುದೇ ರೀತಿಯ ಬದಲಾವಣೆ ತರಲಿಲ್ಲ. ಆದರೆ ಮಾನವ ಯಾವಾಗ ಬೆಂಕಿಯ ಉಪಯೋಗವನ್ನು ಕಂಡುಕೊಂಡನೋ ಅಂದೇ ಪ್ರಾರಂಭವಾಯಿತು ಪರಿಸರದ ಅವನತಿ. ಈ ಬೆಂಕಿಯನ್ನು ಪ್ರಾಣಿಗಳ ಮಾಂಸವನ್ನು ಬೇಯಿಸಿ ತಿನ್ನಲು ಮಾತ್ರವಲ್ಲದೆ ತನ್ನ ವಸತಿಯನ್ನು ಕ್ರೂರಮೃಗಗಳಿಂದ ರಕ್ಷಿಸಲು ಸಹ ಬಳಸಿದ. ಇದಕ್ಕೆ ಅಗತ್ಯವಾದ ಸೌದೆಗಾಗಿ ಮರಗಳನ್ನು ಕಡಿಯತೊಡಗಿದ. ಇದೇ ಪರಿಸರ ಅವನತಿಯ ಮೊದಲ ಹೆಜ್ಜೆ. ಅಲ್ಲದೆ ಅಲೆಮಾರಿಯಾಗಿದ್ದ ಈತ ಕ್ರಮಿಸುವ ಮಾರ್ಗಕ್ಕೆ ಅಡಚಣೆಯನ್ನುಂಟು ಮಾಡುತ್ತಿದ್ದ ಮರಗಳನ್ನು ತೆಗೆಯಲು ಬೆಂಕಿ ಬಳಸಿದನಲ್ಲದೆ, ಮರಗಳಿಂದ ಅನೇಕ ರೀತಿಯ ಆಯುಧಗಳನ್ನು ತಯಾರಿಸುವುದನ್ನು ಕಲಿತ.

2) ಹೈನುಗಾರಿಕೆ: ಮೊದಲ ಹಂತ ಕಳೆದ ಹಲವಾರು ವರ್ಷಗಳ ನಂತರ ತನ್ನ ಲಾಭಕ್ಕಾಗಿ ಹಾಲು ಮತ್ತು ಆಹಾರ ಒದಗಿಸುವ ಕೆಲವೊಂದು ಪ್ರಾಣಿಗಳನ್ನು ಪಳಗಿಸತೊಡಗಿದ. ಈ ಕ್ರಿಯೆಯಿಂದ ನಿಧಾನಗತಿಯಲ್ಲಿ ಪ್ರಾಣಿಗಳ ಸಮೂಹ ದೊಡ್ಡದಾಯಿತು. ಅವುಗಳಿಗೆ ರಕ್ಷಣೆ ಕೊಡಲು ಕೊಟ್ಟಿಗೆ/ದೊಡ್ಡಿಯನ್ನು ನಿರ್ಮಿಸಲು ಅರಣ್ಯವನ್ನು ನಾಶಮಾಡಿದುದಲ್ಲದೆ ಏರುತ್ತಿರುವ ಮಾನವ ಹಾಗೂ ಪ್ರಾಣಿಗಳ ಸಂಖ್ಯೆಯಿಂದಾಗಿ ನೈಸರ್ಗಿಕ ಸಂಪನ್ಮೂಲಗಳು ಅತ್ಯಧಿಕ ಪ್ರಮಾಣದಲ್ಲಿ ಬಳಕೆಯಾಗತೊಡಗಿದವು. ಇದು ಪರಿಸರ ಅವನತಿಯ ಎರಡನೆಯ ಹಂತ.

3) ವ್ಯವಸಾಯ: ಮಾನವ ಮತ್ತು ಪರಿಸರದ ಸಂಬಂಧದಲ್ಲಿ ಉಂಟಾದ ಬಿರುಕು ಬೃಹದಾಕಾರವಾಗಿ ಬೆಳೆಯಲು ವ್ಯವಸಾಯ ಸಹಾಯಕವಾಯಿತು. ವ್ಯವಸಾಯದಿಂದಾಗಿ ಮಾನವ ಒಂದೆಡೆ ನೆಲೆನಿಂತ. ಇದರಿಂದ ಪ್ರಾಕೃತಿಕ ಪರಿಸರಕ್ಕೆ ವಿರುದ್ಧವಾದ ಸಾಂಸ್ಕೃತಿಕ ಪರಿಸರ ನಿರ್ಮಾಣವಾಯಿತು. ಮಾನವ ಅನುಸರಿಸುತ್ತಿದ್ದ ಸ್ಥಳಾಂತರ ಬೇಸಾಯದಿಂದ (ಕುಂಬ್ರಿ) ಬೃಹತ್‌ಪ್ರಮಾಣದಲ್ಲಿ ಅರಣ್ಯ ನಾಶವಾಗತೊಡಗಿತು. ಪರಿಸರವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಪ್ರಯತ್ನ ನಡೆಸಿದನಲ್ಲದೆ ಪರಿಸರದ ಯಜಮಾನ ಅಥವಾ ಸಲಹೆಗಾರನೆಂಬಂತೆ ವರ್ತಿಸತೊಡಗಿದ.

4) ವೈಜ್ಞಾನಿಕ, ತಾಂತ್ರಿಕ ಮತ್ತು ಕೈಗಾರಿಕಾಭಿವೃದ್ಧಿಯ ಕಾಲ: ಕೈಗಾರಿಕಾ ಕ್ರಾಂತಿಯ ಕಾಲ 1860ರ ದಶಕವೆಂಬುದು ಹಲವರ ವಾದ. ಈ ಹಂತದಲ್ಲಿ ಮಾನವ ಮತ್ತು ಪರಿಸರದ ನಡುವೆ ಪ್ರಾಗೈತಿಹಾಸಿಕ ಕಾಲದಿಂದಿದ್ದ ಸ್ನೇಹದ ಕೊನೆಯ ಕೊಂಡಿ ಕಳಚಿಬಿತ್ತು. ಕೈಗಾರಿಕೀಕರಣ, ನಗರೀಕರಣ ಮುಂತಾದವುಗಳಿಂದಾಗಿ ಮಾನವ ಅತಿಯಾಗಿ ಪ್ರಾಕೃತಿಕ ಪರಿಸರದ ಸಂಪತ್ತನ್ನು ದೋಚುತ್ತಿರುವನಲ್ಲದೆ ಬೇಡವಾದ ತ್ಯಾಜ್ಯವಸ್ತುಗಳಿಂದ ಪರಿಸರದಲ್ಲಿ ಅನೇಕ ರೀತಿಯ ಸಮಸ್ಯೆಗಳುಂಟಾಗಲು ಕಾರಣನಾಗಿರುವನು ಮತ್ತು ಜೀವ ಪರಿಸರ ವ್ಯವಸ್ಥೆಯಲ್ಲಿ ಅಸಮತೋಲನ ಉಂಟಾಗಲು ಕಾರಣೀಭೂತನಾಗಿರುವನು.

ಜೀವಪರಿಸರ ವ್ಯವಸ್ಥೆಯಲ್ಲಿ ಅಸಮತೋಲನ ಎರಡು ರೀತಿಯಲ್ಲಿ ಉಂಟಾಗುತ್ತವೆ. 1) ನೇರವಾಗಿ/ಉದ್ದೇಶ ಪೂರ್ವಕವಾಗಿ ಅವನತಿಯನ್ನು ಮಾಡುತ್ತಿರುವ ವಿಧಾನಗಳು: ನೇರ ಪರಿಣಾಮಗಳು ಮನುಷ್ಯನಿಗೆ ಮೊದಲೇ ತಿಳಿದಿರುತ್ತವೆ. ತನ್ನ ಕಾರ್ಯಗಳಿಂದ ಉಂಟಾಗುವ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ಮೊದಲೇ ಯೋಚಿಸಿರುತ್ತಾನೆ. ಅಭಿವೃದ್ಧಿಗಾಗಿ ಅವನು ಪರಿಸರವನ್ನು ಮಾರ್ಪಾಡಿಸುತ್ತಾನೆ. ನೇರ ಕ್ರಮಗಳಲ್ಲಿ ಮುಖ್ಯವಾದವುಗಳು: 1) ಭೂ ಬಳಕೆಯಲ್ಲಿ ಮಾರ್ಪಾಡು: ಅರಣ್ಯವನ್ನು ನಾಶ ಮಾಡಿ ವಿವಿಧ ಸಾಂಸ್ಕೃತಿಕ ಉದ್ದೇಶಗಳಿಗೆ ಬಳಸುವುದು. 2) ಹೊಸ ಸಂಪನ್ಮೂಲಗಳ ಶೋಧನೆ. 3) ಕೃಷಿ ಚಟುವಟಿಕೆಗಳಿಂದ. 4) ವಾಯುಗುಣವನ್ನು ಮಾರ್ಪಡಿಸುವುದರಿಂದ. ಉದಾ: ಮೋಡಬಿತ್ತನೆ. 5) ಅಣುಚಟುವಟಿಕೆಗಳಿಂದ. 6) ಅಣೆಕಟ್ಟೆಗಳ ನಿರ್ಮಾಣ ಮುಂತಾದವುಗಳಿಂದ, ಭೂಮೇಲ್ಮೈನ ಭೂ ಮತ್ತು ಜಲ ವ್ಯವಸ್ಥೆಗಳು ಮಾತ್ರವಲ್ಲದೆ. ಭೂಮಿಯ ಹೊರಾವರಣವನ್ನು ಆವರಿಸಿರುವ ವಾಯುವು ಸಹ ಸ್ಥಳೀಯವಾಗಿ ಮತ್ತು ಪ್ರಾದೇಶಿಕವಾಗಿ ಬದಲಾವಣೆಗೆ ಒಳಗಾಗುತ್ತಿದೆ.

ಪರೋಕ್ಷ ಅಥವಾ ಅರಿವಿಲ್ಲದೆ ಮಾಡುವ ಪರಿಣಾಮಗಳು: ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಮಾನವನು ಅಂದು ಕೈಗೊಂಡ ಹಲವಾರು ಚಟುವಟಿಕೆಗಳು ಇಂದು ಅವನ ಮೇಲೆ ಪ್ರತಿಕೂಲ ಪರಿಣಾಮವನ್ನುಂಟುಮಾಡುತ್ತಿವೆ. ಉದಾ: ಡಿಡಿಟಿ ಬಳಕೆ. ಇದರ ಬಳಕೆಯ ಪ್ರಾರಂಭದ ವರ್ಷಗಳಲ್ಲಿ ಇದರಿಂದಾಗುವ ದುಷ್ಪರಿಣಾಮಗಳ ಅರಿವಿರಲಿಲ್ಲ. ಆದರೆ ಇಂದು ಇದರ ದುಷ್ಪರಿಣಾಮಗಳನ್ನು ತಿಳಿದು ಈ ವಸ್ತುವನ್ನು ನಿಷೇಧಿಸಿದ್ದರು.

ಆಹಾರ ಸರಪಳಿಯ ಮೂಲಕ ಈಗಾಗಲೇ ಮಾನವನ ದೇಹ ಸೇರಿರುವ ಈ ವಸ್ತು ಅನೇಕ ಪ್ರತಿಕೂಲ ಪರಿಣಾಮಗಳಿಗೆ ನಾಂದಿ ಹಾಡಿದೆ. ಇದಲ್ಲದೆ ಯಾವುದೇ ಸಾಮಾಜಿಕ ಮಹತ್ವವಿಲ್ಲದ ಕೇವಲ ಆರ್ಥಿಕ ಉದ್ದೇಶಗಳಿಗಾಗಿ ಬಳಸುತ್ತಿರುವ ಕ್ರಿಮಿನಾಶಕ ಮತ್ತು ಕೀಟನಾಶಕಗಳಿಂದಾಗಿ ಪರಿಸರ ವ್ಯವಸ್ಥೆಯೇ ಹಾದಿ ತಪ್ಪಿ ನಡೆಯುವಂತಾಗಿದೆ. ಜೀವ ಪರಿಸರ ವ್ಯವಸ್ಥೆಯಲ್ಲಿ ಈಗಾಗಲೇ ಹಲವಾರು ಸಂತತಿಗಳು ನಾಶ ಹೊಂದಿದ್ದರೆ ಮತ್ತೆ ಕೆಲವು ನಾಶ ಹೊಂದುವ ಹಾದಿಯಲ್ಲಿವೆ. **(ಕೆ.ಎಸ್.)**

**ಪರ್ತ್[1]:** ಪಶ್ಚಿಮ ಆಸ್ಟ್ರೇಲಿಯದ ರಾಜಧಾನಿ. ಸ್ವಾನ್ ನದಿಯ ಮುಖದಲ್ಲಿರುವ ಫ್ರಿಮ್ಯಾಂಟಲ್ ಬಂದರಿನಿಂದ 19 ಕಿಮೀ ದೂರದಲ್ಲಿದೆ. ಈ ನಗರ ಅನೇಕ ಉಪನಗರಗಳಿಂದ ಕೂಡಿದ್ದು ನದಿಯ ಉತ್ತರಕ್ಕೆ 32 ಕಿಮೀ ಗೂ ಹೆಚ್ಚು ದೂರ ಹಬ್ಬಿದೆ. ಜನಸಂಖ್ಯೆ 10,97,000 (1996).

ವಾಯುಗುಣ ಮೆಡಿಟರೇನಿಯನ್ ಮಾದರಿ. ಜನವರಿ ಮತ್ತು ಫೆಬ್ರವರಿಯಲ್ಲಿ ಉಷ್ಣತೆ ಅಧಿಕ. ಜೂನ್, ಜುಲೈ ತಿಂಗಳಿನಲ್ಲಿ ಹವೆ ತಂಪು ಮತ್ತು ಆರ್ದ್ರ. ವಾರ್ಷಿಕ ಮಳೆ 91 ಸೆಂಮೀ. ಅಕ್ಟೋಬರ್‌ನಲ್ಲಿ ಹೆಚ್ಚು ಮಳೆ ಬೀಳುತ್ತದೆ.

ಇದು ಆಸ್ಟ್ರೇಲಿಯದ ರಾಜಕೀಯ, ನ್ಯಾಯಾಂಗ ಆಡಳಿತ ಕೇಂದ್ರವಾಗಿರುವುದರ ಜೊತೆಗೆ ಪ್ರಮುಖ ವ್ಯಾಪಾರ ಕೇಂದ್ರ. ಕೂಲ್‌ಗಾರ್ಡಿಯಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾದ ಮೇಲೆ ವಲಸೆಗಾರರು ಹೆಚ್ಚಿ ನಗರದ ಜನಸಂಖ್ಯೆ ಹೆಚ್ಚಿತು. ಪರ್ತ್ ಒಂದು ಕೈಗಾರಿಕಾ ಕೇಂದ್ರ. ಕ್ವಿನಾನಾ, ಫ್ರಿಮ್ಯಾಂಟಲ್ ಮತ್ತು ವೆಲ್ಷ್‌ಪೂಲ್‌ಗಳ ಉಪನಗರ ಪ್ರದೇಶಗಳಲ್ಲಿ ದೊಡ್ಡ ಕೈಗಾರಿಕೆಗಳಿವೆ.

**ಪರ್ತ್[2]:** ಇದೇ ಹೆಸರಿನ ಮತ್ತೊಂದು ಪ್ರದೇಶ. ಕೇಂದ್ರ ಸ್ಕಾಟ್ಲೆಂಡಿನ ನಗರ. ತಾಯ್ ನದಿಯ ದಂಡೆಯ ಮೇಲೆ ಎಡಿನ್‌ಬರ್ಗ್‌ನಿಂದ ಈಶಾನ್ಯಕ್ಕಿದೆ. ಇದು ರೋಮನ್ನರ ವಸಾಹತು ಆಗಿತ್ತು. 1487ರ ವರೆಗೆ ಇದು ಸ್ಕಾಟ್ಲೆಂಡಿನ ರಾಜಧಾನಿಯಾಗಿತ್ತು. ಇಲ್ಲಿ ಮದ್ಯ ತಯಾರಿಕೆ ಇದೆ. ಇದು ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಕೇಂದ್ರವು ಆಗಿದೆ. ಜನಸಂಖ್ಯೆ 42,000 (1995). **(ಜಿ.ಕೆ.ಯು.)**

**ಪರ್ಮಿಯನ್:** ಭೂವಿಜ್ಞಾನ ಕಾಲಮಾಪನದಲ್ಲಿ ಪೇಲಿಯೊಜೋಯಿಕ್ (ಪ್ರಾಚೀನ ಜೀವ) ಕಲ್ಪದ ಕೊನೆಯ ಯುಗದ ಹಾಗೂ ಆ ಅವಧಿಯಲ್ಲಿ ರೂಪುಗೊಂಡ ಶಿಲಾಸ್ತೋಮಗಳ ಹೆಸರು. ಇಂಗ್ಲೆಂಡಿನಲ್ಲಿ ಕಲ್ಲಿದ್ದಲ ಸ್ತರಗಳ ಮೇಲೆ ಸಂಚಯನಗೊಂಡಿರುವ ನಿಕ್ಷೇಪದ ಬಣ್ಣ ಕೆಂಪು. ಇದರಲ್ಲಿ ಮರಳುಶಿಲೆಯೇ ಹೆಚ್ಚು. ಬಣ್ಣ ಮತ್ತು ಶಿಲಾಸಂಯೋಜನೆಗಳಲ್ಲಿ ಈ ಶಿಲೆಗಳು ಕಾರ್ಬಾನಿಫೆರಸ್ ಸ್ತೋಮಗಳ ಕೆಳಗಿರುವ ಹಳೆ ಕೆಂಪು ಮರಳು ಶಿಲಾವರ್ಗವನ್ನು ಹೋಲುತ್ತವೆ. ಆದ್ದರಿಂದ ಬಹಳ ಕಾಲದತನಕ ಇವನ್ನು ಕೂಡ ಹಳೆಕೆಂಪು ಮರಳುಶಿಲಾವರ್ಗಕ್ಕೆ ಸೇರಿದವೆಂದು ಭಾವಿಸಲಾಗಿತ್ತು. ಕಾರ್ಬಾನಿಫೆರಸ್ ಸ್ತೋಮಗಳು ನಿಕ್ಷೇಪಗೊಂಡಿರದ ಎಡೆಗಳಲ್ಲಿ ಈ ಶಿಲೆಗಳು ನೇರವಾಗಿ ಹಳೆ ಕೆಂಪು ಮರಳು ಶಿಲೆಗಳ ಮೇಲೆ ಸಂಚಯನಗೊಂಡಿವೆ. ಅಲ್ಲಿ ಅವುಗಳನ್ನು ಇವುಗಳಲ್ಲಿರುವ ಪಳೆಯುಳಿಕೆಗಳಿಂದ ಮಾತ್ರ ಗುರ್ತಿಸಬಹುದು. ಕಾರ್ಬಾನಿಫೆರಸ್ ಸ್ತೋಮಗಳ ಮೇಲೆ ನಿಕ್ಷೇಪಗೊಂಡಿರುವಂಥವುಗಳಿಗೆ ಹೊಸ ಕೆಂಪು ಮರಳು ಶಿಲಾವರ್ಗ ಎಂದು ಹೆಸರು. ಇದನ್ನು ಫಾಸಿಲುಗಳ ಆಧಾರದ ಮೇಲೆ ಎರಡು ಸ್ತೋಮಗಳಾಗಿ ವಿಭಾಗಿಸಲಾಗಿದೆ. ಕೆಳಸ್ತೋಮ ಪ್ರಾಚೀನ ಜೀವಕಲ್ಪದ ಕೊನೆಯ ಭಾಗವನ್ನು ಮೇಲಿನಸ್ತೋಮ ಮಧ್ಯಜೀವಿಕಲ್ಪದ ಆದಿಭಾಗವನ್ನು ಪ್ರತಿನಿಧಿಸುತ್ತವೆ.

ಜರ್ಮನಿಯ ಹೊಸ ಕೆಂಪುಮರಳು ಶಿಲಾವರ್ಗದಲ್ಲಿ ಬೆಲೆಬಾಳುವ ಅನೇಕ ನಿಕ್ಷೇಪಗಳಿವೆ. ಭೂ ವಿಜ್ಞಾನಿಗಳು ಈ ಶಿಲಾವರ್ಗದಲ್ಲಿ ಐದು ಸ್ಪಷ್ಟ ಭಾಗಗಳನ್ನು ಗುರುತಿಸಿದ್ದಾರೆ (1861). ಅವುಗಳ ಪೈಕಿ ಕೆಳಗಿನ ಎರಡು ಭಾಗಗಳಲ್ಲಿ ಪ್ರಾಗ್ಜೀವ ಕಲ್ಪದ ಪರ್ಮಿಯನ್ ಫಾಸಿಲುಗಳೂ ಮೇಲಣ ಮೂರು ಭಾಗಗಳಲ್ಲಿ ಮಧ್ಯ ಜೀವಿಕಲ್ಪದ ಟ್ರಯಾಸಿಕ್ ಫಾಸಿಲುಗಳೂ ಇವೆ.

ಪರ್ಮಿಯನ್ ಸ್ತೋಮದ ಪ್ರತ್ಯೇಕತೆಯ ಆವಶ್ಯಕತೆ : ಎಚ್.ಬಿ.ವುಡ್‌ವರ್ಡ್, ಜಿ.ಜಿ. ಗೋಲ್ಡ್‌ಚೈಲ್ಡ್ ಮತ್ತು ಜೂಕ್ಸ್ ಎಂಬವರು ಪರ್ಮಿಯನ್ ಎಂಬ ಒಂದು ಬೇರೆ ಹೆಸರಿನ ಸ್ತೋಮವೇ ಇರಬೇಕಾಗಿಲ್ಲ ಎಂದಿದ್ದಾರೆ. ಈ ಸ್ತೋಮವನ್ನು ನಿರ್ಮಿಸಲು ಫಾಸಿಲುಗಳನ್ನು ಆಧಾರವಾಗಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ಅವರ ಅಭಿಪ್ರಾಯ. ಕೋನಿಬೇರ್ ಮತ್ತು ಫಿಲಿಪ್ಸ್ ಎಂಬವರು ಇಡೀ ಕೆಂಪು ಮರಳು ಶಿಲಾವರ್ಗ ಚುಕ್ಕೆಗಳಿಂದ ಕೂಡಿರುವ ಪ್ರಯುಕ್ತ ಅದನ್ನು ಪಾಯ್ಕಿಲಿಟಿಕ್ ಸ್ತೋಮ ಎಂದು ಕರೆಯುವುದು ಯುಕ್ತ ಎಂದಿರುವರು. ವುಡ್‌ವರ್ಡ್ ಮತ್ತು ಇತರರು ಇದನ್ನು ಒಪ್ಪಿದ್ದಾರೆ. ಸಿ.ಆರ್.ಕೆಯೆಸ್ ಎಂಬಾತ ಪರ್ಮಿಯನ್ ಶಿಲೆಗಳು ಕಾರ್ಬಾನಿಫೆರಸ್ ಸಾಗರಗಳ ಆಳವಿಲ್ಲದ ಪ್ರದೇಶಗಳಲ್ಲಿ ಸಂಚಯನಗೊಂಡ ನಿಕ್ಷೇಪ ಎಂದಿರುವನು. ನಾಯ್ಕಿನ್ಸ್ಕಿ, ಯಕೊವೆಲೆವ್ ಮತ್ತು ಸೆರ್ಲಾಕ್ ಎಂಬವರ ಅಭಿಪ್ರಾಯವಾದರೂ ಇದೇ.

ಪರ್ಮಿಯನ್ ಸ್ತೋಮವನ್ನು ಪರ್ವತಗಳ ಅವತರಣಿಕೆ, ಶಿಲಾಪೇರಿಕೆಯ ಕ್ರಮ ಮತ್ತು ಫಾಸಿಲುಗಳ ಆಧಾರಗಳ ಮೇಲೆ ನಿರ್ಮಿಸಲಾಗಿದೆ. ಈ ಕಾಲದಲ್ಲಿ ಪ್ರಾಚೀನ ಜೀವಿಕಲ್ಪದ ನಿಕ್ಷೇಪ ಪ್ರದೇಶಗಳೆಲ್ಲ ಮೇಲೊಗೆಯಲ್ಪಟ್ಟು ಪರ್ವತಪ್ರದೇಶಗಳಾದವು. ಏಷ್ಯ, ಯುರೋಪ್ ಖಂಡಗಳಲ್ಲಿ ಹರ್ಸಿನೀನಿಯನ್, ವಾರ್ಸಿಕನ್, ಅರ್ಮೋರಿಕನ್ ಮತ್ತು ಯೂರಲ್ ಪರ್ವತಗಳು ಉದಯಿಸಿದುವು. ಹೀಗೆ ಭೂ ಜಲಗಳ ಪ್ರಮಾಣದಲ್ಲಿ ಅಸ್ತವ್ಯಸ್ತವಾದ್ದರಿಂದ ಜಲಪರಿಚಲನೆಯ ನಿಯಮಕ್ಕೆ ಧಕ್ಕೆಯುಂಟಾಯಿತು. ಇದು ವಾಯುಗುಣದ ತೀವ್ರತೆಗಳಿಗೆ ಎಡೆಕೊಟ್ಟಿತು. ಉತ್ತರಾರ್ಧದಲ್ಲಿ ಅತಿ ಉಷ್ಣವಾಯುಗುಣವಿದ್ದರೆ ಗೊಂಡವಾನ ಖಂಡ ನೀರ್ಗಲ್ಲು ನದಿಗಳಿಂದ ಮುಚ್ಚಲ್ಪಟ್ಟಿತ್ತು. ಈ ಎರಡು ಬಗೆಯ ತೀವ್ರ ವಾಯುಗುಣವೂ ಜೀವರಾಶಿಯ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡಿವೆ.

ಪರ್ಮಿಯನ್ ಸ್ತೋಮಗಳಲ್ಲಿ ಸಾಗರದ ಆಳನಿಕ್ಷೇಪಗಳೇ ಅಲ್ಲದೆ ನೀರ್ಗಲ್ಲು ನಿಕ್ಷೇಪಗಳು, ಸರೋವರ ನಿಕ್ಷೇಪಗಳು, ಸಮುದ್ರಸಂಪರ್ಕ ಹೊಂದಿದ ಉಪ್ಪುನೀರಿನ ಸರೋವರದ ನಿಕ್ಷೇಪದ ಬಹುಮುಖ ನಿಕ್ಷೇಪಗಳಿವೆ. ಅಲ್ಲದೆ ಅವುಗಳಲ್ಲಿ ಜಿಪ್ಸಮ್ ಉಪ್ಪು ಮತ್ತು ರಂಜಕ ನಿಕ್ಷೇಪಗಳೂ ಉಂಟು. ಈ ಶಿಲೆಗಳಲ್ಲಿರುವ ಪ್ರಾಣಿಗಳು ಬಲುಮಟ್ಟಿಗೆ ಗುಜ್ಜಾರಿಗಳು. ದೀರ್ಘಾವಧಿಯ ಅನೇಕ ಪ್ರಾಣಿವರ್ಗ ಮತ್ತು ವಂಶಗಳು ಕೊನೆಯ ಬಾರಿಗೆ ಪ್ರತಿನಿಧಿಸಲ್ಪಟ್ಟಿವೆ.

ಉತ್ತರ ಅಮೆರಿಕ : ಪರ್ಮಿಯನ್ ಸ್ತೋಮ ಉತ್ತರ ಅಮೆರಿಕ ಖಂಡದ ಪೂರ್ವ ಮತ್ತು ಮಧ್ಯಭಾಗಗಳಲ್ಲಿ ಪೆನ್ಸಿಲ್ವೇನಿಯನ್ ಸ್ತೋಮದ ಮೇಲೆ ಅನುರೂಪದಿಂದ ನಿಕ್ಷೇಪಗೊಂಡಿದೆ. ಆದ್ದರಿಂದ ಅದರ ಕೆಳಎಲ್ಲೆಯನ್ನು ಕರಾರುವಾಕ್ಕಾಗಿ ಎಳೆಯುವುದು ಅಸಾಧ್ಯ. ಆದರೆ ಮಾದರಿ ಪ್ರದೇಶಗಳಾಗಿ ಪಶ್ಚಿಮ ಟೆಕ್ಸಾಸ್ ಮತ್ತು ಮೆಕ್ಸಿಕೊದಲ್ಲಿ ಕೆಳಎಲ್ಲೆ ಸ್ಪಷ್ಟವಾಗಿದೆ. ಪರಿಚಯದ ಉದ್ದೇಶಕ್ಕಾಗಿ ಪರ್ಮಿಯನ್ ಸ್ತೋಮವನ್ನು ಈ ಮುಂದಿನ ಭೌಗೋಳಿಕ ಪ್ರದೇಶಗಳಾಗಿ ವಿಂಗಡಿಸಬಹುದು:

ಭಾರತ : ಪರ್ಮಿಯನ್ ಸ್ತೋಮಗಳು ಸಾಲ್ಟ್‌ರೇಂಜ್, ಕಾಶ್ಮೀರ ಮತ್ತು ಸ್ಪಿಟಿ ಪ್ರದೇಶಗಳಲ್ಲಿ ಉತ್ತಮ ರೀತಿಯಲ್ಲಿ ರೂಪುಗೊಂಡಿವೆ. ಸ್ಪಿಟಿಯಲ್ಲಿ ಕಾರ್ಬಾನಿಫೆರಸ್ ಅಂತ್ಯಕಾಲದ ನೀರ್ಗಲ್ಲುನದಿ ನಿಕ್ಷೇಪವಾದ ಗುಂಡುಶಿಲೆಯ ಮೇಲೆ ಸುಣ್ಣ ಮಿಶ್ರ ಮರಳು ಶಿಲೆಯೂ ಅದರ ಮೇಲೆ ಇಂಗಾಲ ಮತ್ತು ಮರಳಿನ ಅಂಶಗಳಿಂದ ಕೂಡಿದ ಕಪ್ಪು ಅಥವಾ ಕಂದುಬಣ್ಣದ ಜೇಡುಶಿಲೆಯೂ ಇವೆ. ಜೇಡುಶಿಲೆ 30–60 ಮೀ ದಪ್ಪ ಇದೆ. ಇದರಲ್ಲಿ ಹೇರಳವಾದ ಪ್ರೊಡಕ್ಟಸ್ ಅವಶೇಷಗಳಿವೆ. ಈ ಶಿಲಾವಲಯ ಕಾಶ್ಮೀರ, ಸ್ಪಿಟಿ, ಕುಮಾಂವ್, ನೇಪಾಲ ಮುಂತಾದ ಅನೇಕ ಕಡೆ ರೂಪುಗೊಂಡು ಪರ್ಮಿಯನ್ ಯುಗದ ವಿಶಿಷ್ಟ ಜೀವರಾಶಿಯ ಆಕರವಾಗಿದೆ.

ಹರ್ಸೀನಿಯನ್ ಪ್ರಳಯ ಕಾಶ್ಮೀರ ಪ್ರದೇಶವನ್ನು ಭೂಮಟ್ಟಕ್ಕೆ ತಂದು ಅದನ್ನು ಜ್ವಾಲಾಮುಖಿಗಳ ಕಾರ್ಯಚಟುವಟಿಕೆಯ ಕೇಂದ್ರವಾಗಿ ಪರಿವರ್ತಿಸಿತು. ಈ ಕಾರ್ಯವೊದಲು ಆಸ್ಫೋಟನ ರೀತಿಯದಾಗಿತ್ತು. ಅಲ್ಲಿ ಶಿಲಾಚೂರುಗಳು ಮೇಲೊಗೆಯಲ್ಪಟ್ಟು ರಾಶಿರಾಶಿಯಾಗಿ ಬಿದ್ದಿವೆ. ಇವುಗಳಿಗೆ ಅಗ್ಲಾಮರೆಟಿಕ್ ಸ್ಲೇಟುಗಳೆನ್ನುವರು. ಅನಂತರ ಶಿಲಾರಸ ಉಗುಳುವಿಕೆ ಪ್ರಾರಂಭವಾಗಿ ಪರ್ಮಿಯನ್ ಯುಗದ ಆದಿಯಲ್ಲಿ ತೀವ್ರಗತಿ ಮುಟ್ಟಿದ ತರುವಾಯ ಕ್ರಮೇಣ ಇಳಿಮುಖವಾಯಿತು. ಈ ಜ್ವಾಲಾಮುಖಜ ಶಿಲೆಗಳಿಗೆ ಪಂಜಾಲ್‌ಟ್ರಾಪ್ ಎಂದು ಹೆಸರು. ಜ್ವಾಲಾಮುಖಜ ಶಿಲಾಪದರಗಳಲ್ಲಿ ಕೆಲವೆಡೆ ಸಸ್ಯಾವಶೇಷಗಳಿಂದ ಕೂಡಿದ ಜಲಜ ಶಿಲೆಗಳಿವೆ. ಇವುಗಳಲ್ಲಿರುವ ಸಸ್ಯಗಳಲ್ಲಿ ಗ್ಲಾಸಾಪ್ಟರಿಸ್ ಇಂಡಿಕ ಮತ್ತು ಗಂಗಮಾಪ್ಟರಿಸ್ ಕಾಶ್ಮೀರೆನ್ಸಿಸ್ ಮುಖ್ಯವಾದವು. ಈ ಶಿಲೆಗಳಿಗೆ ಗಂಗಮಾಪ್ಟರಿಸ್ ಪದರಗಳು ಎಂದು ಹೆಸರು. ಒಂದು ಕಡೆ ಜ್ವಾಲಾಮುಖಿ ಕಾರ್ಯಾಚರಣೆ ಆಗುತ್ತಿದ್ದರೆ ಮತ್ತೊಂದು ಕಡೆ ಸಮುದ್ರಾಕ್ರಮಣವಾಯಿತು. ಆದ್ದರಿಂದ ಜ್ವಾಲಾಮುಖಜ ಶಿಲೆಗಳನ್ನು ಮತ್ತು ಸಾಗರನಿಕ್ಷೇಪಗಳನ್ನು ಅಕ್ಕಪಕ್ಕದಲ್ಲಿ ಕಾಣುವೆವು. ಸಾಗರಜನಿತ ಶಿಲೆಗಳಿಗೆ ಝಿವಾನ್ ಪದರಗಳೆಂದು ಹೆಸರು. ಝಿವಾನ್ ಮತ್ತು ಬಾರುಸ್ ಎಂಬ ಸ್ಥಳಗಳಲ್ಲಿ ಪ್ರೋಟೊರೆಟಿಫೊರ ಆಮ್ಪ ಎಂಬ ಬ್ರಯಜೋವ, ಪರ್ಮಿಯನ್ ಯುಗದ ವಿಶಿಷ್ಟ ಬ್ರೇಕಿಯೋಪೋಡಗಳು ಮತ್ತು ಹವಳಗಳ ಗುಂಪಿಗೆ ಸೇರಿದ ಪ್ರಾಣಿಗಳ ಅವಶೇಷಗಳು ಇರುವ ಜಲಶಿಲೆಗಳಿವೆ. ಈ ಪ್ರಾಣಿವರ್ಗ ಸಾಲ್ಟ್‌ರೇಂಜ್ ಪ್ರದೇಶದ ಪ್ರೊಡಕ್ಟಸ್ ಸುಣ್ಣಶಿಲಾಸಮುದಾಯದ ಮೇಲುಭಾಗದ ಪ್ರಾಣಿವರ್ಗವನ್ನು ಹೋಲುತ್ತದೆ.

ಸಾಲ್ಟ್‌ರೇಂಜ್ ಪ್ರದೇಶದಲ್ಲಿ ಕಾರ್ಬಾನಿಫೆರಸ್ ಯುಗದ ಆಲೀವ್ ಶಿಲಾವರ್ಗ ಮತ್ತು ಚುಕ್ಕೆಮರಳು ಶಿಲಾವರ್ಗದ ಮೇಲೆ ಪರ್ಮಿಯನ್ ಸ್ತೋಮ ಅನುರೂಪದಿಂದ ನಿಕ್ಷೇಪಗೊಂಡಿದೆ. ಇದು ಭಾರತದ ಭೂಇತಿಹಾಸದಲ್ಲಿ ಮುಖ್ಯವಾದ ನಿಕ್ಷೇಪ. ಭಾರತದ ಭೂವಿಜ್ಞಾನಿಗಳಿಗೆ ಫಾಸಿಲ್‌ಭರಿತ ಶಿಲಾವರ್ಗಗಳಲ್ಲಿ ಮೊದಲು ಗೋಚರವಾದುದು ಇದೇ ಆದ್ದರಿಂದ ಇದು ಹೆಚ್ಚು ಪರಿಶೋಧಿಸಲ್ಪಟ್ಟಿದೆ. ಸಾಲ್ಟ್‌ರೇಂಜಿನ ಪಶ್ಚಿಮ ಮತ್ತು ಮಧ್ಯಭಾಗಗಳಲ್ಲಿ ಉತ್ತಮವಾಗಿ ರೂಪುಗೊಂಡು ಪೂರ್ವಕ್ಕೆ ಬಂದ ಹಾಗೆಲ್ಲ ತೆಳುವಾಗುತ್ತದೆ. ಇದು ಪ್ರಪಂಚದ ಪರ್ಮಿಯನ್ ಯುಗದ ಸಾಗರನಿಕ್ಷೇಪಗಳಲ್ಲೆಲ್ಲ ಅತ್ಯಂತ ಉತ್ತಮ ರೀತಿಯಲ್ಲಿ

ರೂಪುಗೊಂಡು ಹೆಸರುವಾಸಿಯಾಗಿದೆ. ಈ ಶಿಲಾಸಮುದಾಯ ಮುಖ್ಯವಾಗಿ ಸುಣ್ಣಶಿಲೆಯಿಂದ ಕೂಡಿ ಹೇರಳವಾದ ಫಾಸಿಲುಗಳಲ್ಲಿಯೂ ದೊರೆಯುವುದರಿಂದ ಇದಕ್ಕೆ ಪ್ರೊಡಕ್ಟಸ್ ಸುಣ್ಣಶಿಲೆ ಎಂದು ಹೆಸರಾಗಿದೆ. ಈ ಶಿಲಾಸ್ತೋಮವನ್ನು ಮೂರು ಭಾಗಗಳಾಗಿ ವಿಂಗಡಿಸಿದೆ. ಪುನಃ ಕೆಳಭಾಗವನ್ನು ಅಂಬ್ ಮತ್ತು ಕಟ್ಟ ಎಂಬ ಎರಡು ಭಾಗಗಳಾಗಿಯೂ ಮಧ್ಯಭಾಗವನ್ನು ವಿರ್ಗಲ್ ಮತ್ತು ಕಲಬಾಗ್ ಎಂಬ ಎರಡು ಭಾಗಗಳಾಗಿಯೂ ಮೇಲ್ಭಾಗವನ್ನು ಕುಂದಘಾಟ್ ಜಬ್ಬಿ ಮತ್ತು ಚಿದ್ರು ಎಂಬ ಮೂರು ಭಾಗಗಳಾಗಿಯೂ ವಿಂಗಡಿಸಿದೆ. *

**ಪರ್ಯಾವಣರದ ಸಮತೋಲನ ಮತ್ತು ಅಸಮತೋಲನ:** ಸಮತೋಲನ ಎಂಬುದು ಒಂದು ಸಾಮಾನ್ಯ ಬಳಕೆಯ ಪದವಾದರೂ ಅದರ ಅಗತ್ಯತೆ, ಅನಿವಾರ್ಯತೆ ಬದುಕಿನ ಎಲ್ಲಾ ಸ್ತರಗಳಲ್ಲೂ ಅತ್ಯಗತ್ಯವಾಗಿದೆ. ಅದು ಶಿಶು ಆಹಾರದ ಸಮತೋಲನದಿಂದ ಪ್ರಾರಂಭವಾಗಿ, ವೈಚಾರಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ವ್ಯಾಪಿಸಿಕೊಂಡಿದೆ. ಇಂತಹವುದರ ಅನಿವಾರ್ಯತೆಯು ಪ್ರಾಮಾಣಿಕವಾಗಿ ಅರ್ಥವಾಗಬೇಕಾದರೆ ಅದು ಸ್ವಲ್ಪ ಅಸಮತೋಲನವಾದಾಗ ಆಗುವ ದುಷ್ಪರಿಣಾಮಗಳಿಂದ ವೇದ್ಯವಾಗುತ್ತದೆ. ಹೀಗಿರುವಾಗ ಎಲ್ಲಾ ಜೀವಿಗಳಿಗೂ, ಜೀವಕ ಜಗತ್ತಿನ ಉಳಿವಿಗಾಗಿಯೂ ಪರಿಸರದ ಸಮತೋಲನ ಅಥವಾ ಪರ್ಯಾವರಣ ಸಮತೋಲನವೊಂದು ಅವಿಭಾಜ್ಯ ಅಂಗವಾಗಿದೆ. ಸಸ್ಯವಾಗಲಿ, ಪ್ರಾಣಿಯಾಗಲಿ ಅಥವಾ ಒಂದು ಸೂಕ್ಷ್ಮ ಜೀವಾಣುವೇ ಆಗಲಿ ಅದು ಒಂಟಿಯಾಗಿಯೋ ಅಥವಾ ಪರ್ಯಾವರಣವೇ ಇಲ್ಲದ ಪರಿಸ್ಥಿತಿಯಲ್ಲಿ ಇರುವುದು ಊಹೆಗೂ ನಿಲುಕದ ವಿಷಯವಾಗಿದೆ. ಪ್ರತಿಯೊಂದು ಜೀವಿಯೂ ತನ್ನ ವಾಸಸ್ಥಾನದ ಭೌತಿಕ ಪರಿಸ್ಥಿತಿಗೆ ಹೊಂದಿಕೊಂಡಿರುತ್ತದೆ. ಉದಾ: ಶಾಖ, ಗಾಳಿ, ಬೆಳಕು ಮಣ್ಣಿನ ಪ್ರಕಾರಗಳು, ಭೂ ಸ್ವರೂಪಗಳು ಇತ್ಯಾದಿ. ಹಾಗೆಯೇ ತನ್ನ ನೆರೆಹೊರೆಯಲ್ಲಿನ ಇತರ ಜೀವಿಗಳೊಡನೆ ಸ್ವಾಮ್ಯತೆಯನ್ನು ಹೊಂದಬಲ್ಲವು. ಪರಿಸರವೆಂದರೆ ಜೀವಿಗಳು ಮತ್ತು ಅವುಗಳ ಸಮುದಾಯಗಳು ಜೀವಿಸುತ್ತಿರುವ ಸುತ್ತಮುತ್ತಲಿನ ಪರಿಸ್ಥಿತಿ. ಅದೊಂದು ಅತ್ಯಂತ ಸೂಕ್ಷ್ಮವಾದ, ಸಂಕೀರ್ಣತೆಯುಳ್ಳ ಸಮಷ್ಟಿ. ಇದರ ವ್ಯವಸ್ಥೆಯಲ್ಲಿ ಎಲ್ಲಾ ಜೈವಿಕ ಜಗತ್ತು ಹಾಗೂ ಅಜೈವಿಕ ವಸ್ತುಗಳು ಪರಸ್ಪರ ಅವಲಂಬಿಸಿ ಬದುಕುವುದು ಸೃಷ್ಟಿಯ ವ್ಯವಸ್ಥೆ. ಇದನ್ನು ಆಹಾರ ಸರಪಳಿಯಿಂದ ಮನಗಾಣಬಹುದು. ಅಷ್ಟೇ ಅಲ್ಲದೆ ಆಹಾರದ ಮೂಲ ಶಕ್ತಿಯೂ ಸಹ ಅನೇಕ ಸಸ್ಯ, ಪ್ರಾಣಿಗಳ ಮೂಲಕ ಮತ್ತೊಂದಕ್ಕೆ ಸಂಚಯನಗೊಳ್ಳುತ್ತಲೇ ಬಂದಿದೆ. ಸೃಷ್ಟಿಯಲ್ಲಿ ಪ್ರತಿಯೊಂದೂ ಅಗತ್ಯ ಹಾಗೂ ಅನಿವಾರ್ಯ. ಹಾಗಿಲ್ಲದಿದ್ದಲ್ಲಿ ಅವು ಕಾಲ ಉಳಿಯುವ ಸಾಧ್ಯತೆಯೇ ಇಲ್ಲ. ಹೀಗಿರುವಾಗ ಸಮಷ್ಟಿಯ ಉಳಿವಿಗಾಗಿ ಸೃಷ್ಟಿಯ ಪ್ರತಿಯೊಂದು ಭಾಗವೂ ಜೈವಿಕ ಅಥವಾ ಅಜೈವಿಕವಾಗಿರಲಿ, ಯಾವುದೂ ಕೊರತೆಯಾಗದೇ ಅಥವಾ ಅತಿಯಾಗದೆ ಸಮಸ್ಥಿತಿ, ಸಮನ್ವಯತೆ, ಸಮತೋಲನತ್ವ ಕಾಪಾಡಿಕೊಳ್ಳುವುದು ಸೃಷ್ಟಿಯ ನಿಯಮ.

ಇಂತಹ ಪರಿಸ್ಥಿತಿ ಹಾಗೂ ವ್ಯವಸ್ಥೆಯ ಅಗತ್ಯವನ್ನು ಸರಳವಾಗಿ ಅರ್ಥಮಾಡಿಕೊಳ್ಳಲು ಪರ್ಯಾವರಣ ವ್ಯವಸ್ಥೆಯಲ್ಲಿ ಸೃಷ್ಟಿಯ ಒಂದು ಭಾಗವನ್ನು ಕತ್ತರಿಸಿಟ್ಟು ನೋಡಿದರೆ ಸುಲಭವಾಗಿ ಅರ್ಥವಾಗುವುದು. ಉದಾ: ಒಂದು ಕಾಡಿನ ವ್ಯವಸ್ಥೆಯಲ್ಲಿ ಹುಲಿ ಸಂಕುಲವು ಅವನತಿಗೊಂಡರೆ ಸಸ್ಯಾಹಾರಿ ಪ್ರಾಣಿಗಳ ಸಂತತಿಯು ಏಕ ಪ್ರಕಾರವಾಗಿ ಹೆಚ್ಚಾಗುವುದು. ಅವು ತಮ್ಮ ನಿತ್ಯ ಆಹಾರಕ್ಕಾಗಿ ಗಿಡಮರಗಳನ್ನು ತಿನ್ನುವುದರಿಂದ ಅರಣ್ಯದ ಅಸ್ತಿತ್ವ ಹಾಗೂ ಕ್ಷೇತ್ರದ ಮೇಲಾಗಬಹುದಾದ ಪರಿಣಾಮದಿಂದ ತಿಳಿಯಬಹುದು. ಪರ್ಯಾಯವರಣದ ಸಮತೋಲನವು ಭಂಗವಾಗುವುದಕ್ಕೆ ಮತ್ತೊಂದು ನಿದರ್ಶನವನ್ನೂ ನೀಡಬಹುದು. ಕೃಷಿ ಬೆಳೆಯೊಂದನ್ನು ಅದರ ಬೇಸಾಯಕ್ಕೆ ಯೋಗ್ಯವಲ್ಲದ ಪ್ರದೇಶದಲ್ಲಿ ಬೆಳೆಯಲು ಯತ್ನಿಸುವುದು. ಸೂಕ್ತವಾದ ಸ್ಥಳಗಳನ್ನು ಗುರುತಿಸಿ ಕೃಷಿ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದರೂ ಅತಿವೃಷ್ಟಿ, ಅನಾವೃಷ್ಟಿ, ಕ್ರಿಮಿ–ಕೀಟಗಳ ಹಾವಳಿಯಿಂದ ಬೆಳೆಗಳು ಹಾನಿಗೊಳಗಾಗಬಹುದು. ಇಂತಹ ಪರಿಸ್ಥಿತಿಯಲ್ಲಿ ಮನುಷ್ಯನ ನೈಪುಣ್ಯತೆ ಮತ್ತು ಪ್ರಯತ್ನಗಳು ಅವಶ್ಯಕ. ಅಂದರೆ ಸಂಬಂಧಪಟ್ಟ ಕೃಷಿ ಬೆಳೆಗಳಿಗೆ ಬೇಕಾಗುವಂತಹ ಅಗತ್ಯತೆಗಳನ್ನು ಕೃತಕವಾಗಿ ಪೂರೈಸುವುದು. ಉದಾ: ನೀರಾವರಿ ಸೌಲಭ್ಯ, ಗೊಬ್ಬರದ ಬಳಕೆ, ಕ್ರಿಮಿನಾಶಕಗಳು ಇತ್ಯಾದಿ. ತನ್ಮೂಲಕ ಇಳುವರಿ ಮತ್ತು ಒಟ್ಟು ಉತ್ಪಾದನೆಗಳನ್ನು ಹೆಚ್ಚಿಸಿಕೊಳ್ಳಬಹುದು.

ಕುದುರೆಗಳ ಮೇವಿಗಾಗಿ ತನ್ನ ಜಮೀನಿನಲ್ಲಿ ಕೆಂಪು ಕ್ಲೋವರ್ ಎಂಬ ಬೆಳೆಯನ್ನು ಬೆಳೆಯುವ ರೈತನೊಬ್ಬ ಬೆಕ್ಕುಗಳನ್ನು ಸಾಕುವ ಮೂಲಕ ಅಧಿಕ ಫಸಲನ್ನು ಪಡೆಯಬಲ್ಲ ಎಂದು ಹೇಳಿದರೆ ಅದು ಮೇಲ್ನೋಟಕ್ಕೆ ಹಾಸ್ಯಾಸ್ಪದವಾಗಿ ಕಂಡುಬರಬಹುದು. ಆದರೆ ಅದರಲ್ಲಿ ವಾಸ್ತವಿಕತೆಯಿದೆ. ರೈತನು ಸಾಕಿದ ಬೆಕ್ಕುಗಳು ಜಮೀನಿನಲ್ಲಿರುವ ಇಲಿಗಳನ್ನು ಕೊಲ್ಲುತ್ತವೆ. ಇದರಿಂದ ಹೆಜ್ಜೇನುಗಳ ಗೂಡು ಮತ್ತು ಮೊಟ್ಟೆಗಳಿಗಾಗುತ್ತಿದ್ದ ಹಾನಿಯು ನಿಲ್ಲುವುದು. ಪರಿಣಾಮವಾಗಿ ಕ್ಲೋವರ್ ಸಸ್ಯದ ಹೂವುಗಳ ಪರಾಗ ಸ್ಪರ್ಶಕ್ಕೆ (ಗರ್ಭೋತ್ಪತ್ತಿ) ಅಗತ್ಯವಾದಂತಹ ಹೆಜ್ಜೇನು ಹುಳುಗಳು ಹೆಚ್ಚು ದೊರೆಯುತ್ತವೆ. ಅವುಗಳ ಸಹಾಯದಿಂದ ಹೂವುಗಳು ಹೆಚ್ಚಾಗಿ ಪರಾಗ ಸ್ಪರ್ಶಕ್ಕೊಳಗಾಗುವವು. ಇದರಿಂದ ಬೀಜೋತ್ಪತ್ತಿಯು ಹೆಚ್ಚಾಗುವ ಮೂಲಕ ಫಸಲು ಸಮೃದ್ಧವಾಗುವುದು. ಈ ರೀತಿಯ ಬೆಕ್ಕು–ಇಲಿ–ಜೇನು–ಕ್ಲೋವರ್ ಬೆಳೆಗಳ ಪರಸ್ಪರ ಸಂಬಂಧ, ಅವಲಂಬನೆ ಹಾಗೂ ಪೂರಕತ್ವವು ಪರ್ಯಾವರಣದ ಸಮತೋಲನಕ್ಕೊಂದು ಸೂಕ್ತ ನಿದರ್ಶನ. ಅಂದರೆ ಒಂದು ಜೀವಿಯ ನೆರವಿನಿಂದ ಮತ್ತೊಂದನ್ನು ಉಳಿಸುವುದು ಅಥವಾ ಸಂರಕ್ಷಿಸುವುದೇ ಪರ್ಯಾವರಣ ಸಮತೋಲನ.

ಅಸಮತೋಲನ : ವಿಶ್ವದ ಸೃಷ್ಟಿಯನ್ನು ಅವಲೋಕಿಸಿದಾಗ ಪ್ರಸ್ತುತ ಪರಿಸರ ನಿರ್ಮಾಣವಾಗಲು ಸು. 200 ಕೋಟಿ ವರ್ಷಗಳೇ ಬೇಕಾದವು. ಇಂತಹ ಮಹತ್ವದ ಪರಿಸರದ ಸಹಜತೆ ಇಂದು ಉಳಿದಿಲ್ಲ. ಅದರಲ್ಲಿ ಸಾಕಷ್ಟು ಏರುಪೇರುಗಳುಂಟಾಗಿವೆ. ಅದರ ಸಮತೋಲನ ಮತ್ತು ನೈಜತೆಯನ್ನು ಕಾಪಾಡುವುದು ಇಂದು ಒಬ್ಬ ವ್ಯಕ್ತಿಯ ಅಥವಾ ಪ್ರಾದೇಶಿಕ ಸಮಸ್ಯೆಯಾಗಿರದೆ ಅದೊಂದು ಜಾಗತಿಕ ಸಮಸ್ಯೆಯಾಗಿ ಉಲ್ಬಣಿಸಿದೆ. ಈ ಪರಿಸರದ ಅಸಮತೋಲನಕ್ಕೆ ಅನೇಕ ಕಾರಣಗಳಿರಬಹುದು. ಅವುಗಳಲ್ಲಿ ವೈಜ್ಞಾನಿಕವಾಗಿ, ವೈಚಾರಿಕವಾಗಿ, ದೈತ್ಯವಾಗಿ ಬೆಳೆದು ನಿಂತಿರುವ ಮಾನವನ ಕೊಡುಗೆಗಳೇ ಸಿಂಹಪಾಲು. ಮಾನವನಿಗೆ ತನ್ನ ಉಳಿವಿನ ಪ್ರಶ್ನೆಯು ಉದ್ಭವಿಸಿದಾಗ ಪರಿಸರದ ಸಮತೋಲನೆಗಾಗಿ ಹೆಣಗುತ್ತಾನೆ. ಇಂದು ಆತ ಪರಿತಪಿಸುವ ಕಾಲವು ಸನ್ನಿಹಿತವಾಗಿದೆ. ಆತನ ಅತಿಯಾದ ಆಸೆಗಳು ಪರಿಸರದ ಶೋಷಣೆಗೆ ಎಡೆಮಾಡಿಕೊಟ್ಟಿವೆ. ಈತನಿಂದ ಸೃಷ್ಟಿಯಾಗಿರುವ ಸಮಸ್ಯೆಗಳೆಂದರೆ ನಿಯಂತ್ರಣವಿಲ್ಲದ ಜನಸಂಖ್ಯಾ ಸ್ಫೋಟ, ನಗರೀಕರಣ, ಕೈಗಾರಿಕೀಕರಣ, ಹಸುರು ಕಾಡನ್ನು ಸಿಮೆಂಟಿನ ನಾಡಾಗಿಸುವುದರ ಕಡೆಗೆ ಹುನ್ನಾರ, ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆ ಹಾಗೂ ದುರ್ಬಳಕೆ, ಮುಂದಾಲೋಚನೆಯಿಲ್ಲದೇ ಬಳಸುವುದು, ಪರಿಸರದ ಪ್ರಜ್ಞೆಯಕೊರತೆ, ಮಣ್ಣು, ಜಲ, ವಾಯು ಮುಂತಾದವುಗಳ ಮಾಲಿನ್ಯತೆ ಇತ್ಯಾದಿ.

ಪರ್ಯಾವರಣ ಸಮತೋಲನ ಕಾಪಾಡುವುದು ಸಾಧ್ಯವಿದೆ. ಅದಕ್ಕಾಗಿ ಕೆಲವು ಪರಿಹಾರೋಪಾಯಗಳಿವೆ. 1) ಪರಿಸರ ನಿರ್ವಹಣಾ ಕ್ರಮ, 2) ಭೂಮಿಯ ಸಕ್ರಮ ಮತ್ತು ಸಮಗ್ರ ಬಳಕೆ, 3) ಆರೋಗ್ಯಕರ ಕೃಷಿ ಬೆಳೆ ಮತ್ತು ಹುಲ್ಲುಗಾವಲುಗಳ ವ್ಯವಸ್ಥೆ, 4) ಅರಣ್ಯಗಳ ಸಂರಕ್ಷಣೆ ಹಾಗೂ ಬೆಳೆಸುವುದು. 5) ವೈವಿಧ್ಯಮಯವಾದ ಜೈವಿಕ ಸಂರಕ್ಷಣೆ, 6) ವಾಯು, ಜಲ ಮತ್ತಿತರ ಮಾಲಿನ್ಯದ ನಿಯಂತ್ರಣ, 7) ಮಾಲಿನ್ಯರಹಿತ ಹಾಗೂ ನವೀಕರಿಸಬಲ್ಲ ಅಥವಾ ಮುಗಿಯದ ಶಕ್ತಿ ಸಂಪನ್ಮೂಲಗಳ ವ್ಯವಸ್ಥೆಯ ಪ್ರಗತಿ, 8) ವ್ಯರ್ಥ ಮತ್ತು ಲೇಶವಸ್ತುಗಳ ಮರು ಆವರ್ತನ, 9) ಕೊಳಚೆ ಪ್ರದೇಶಗಳು ಹಾಗೂ ಇತರ ಮಾನವ ವಸತಿಗಳ ಸುಧಾರಣೆ. 10) ಜನರಲ್ಲಿ ಪರಿಸರದ ಬಗ್ಗೆ ಶಿಕ್ಷಣ ಹಾಗೂ ಜಾಗೃತಿ ಮೂಡಿಸುವುದು. 11) ಪರಿಸರ ಸಂರಕ್ಷಣೆಯ ಬಗ್ಗೆ ರೂಪರೇಷೆಗಳನ್ನು ಹಮ್ಮಿಕೊಳ್ಳುವುದು. ಒಟ್ಟಾರೆ ನಮಗಿರುವುದೊಂದೇ ಪರಿಸರ, ಅದರ ರಕ್ಷಣೆ ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ. ಪರಿಸರದ ಉಳಿವು ನಮ್ಮ ಉಳಿವು. ಪರಿಸರದ ಬಗ್ಗೆ ತೋರುವ ಮಾನವನ ಅಲಕ್ಷ್ಯ ಆತನ ಅವನತಿಗೆ ಆಹ್ವಾನ ನೀಡಿದಂತಾಗುತ್ತದೆ. (ಎನ್.ಎಲ್.)

**ಪರ್ಲ್ ಹಾರ್ಬರ್:** ಹವಾಯಿ ದ್ವೀಪಗಳಲ್ಲಿ ಹೊನಲೂಲೂವಿಗೆ ಸು. 10 ಕಿಮೀ ಪಶ್ಚಿಮಕ್ಕೆ ಅವಾಹೂ ದ್ವೀಪದ ದಕ್ಷಿಣ ಕಡಲ ತೀರ. ಇದೊಂದು ಭೂಸೀಮಿತ ರೇವು. ಅಮೆರಿಕದ ಪೆಸಿಫಿಕ್ ನೌಕಾಧಿಪತ್ಯ ಕೇಂದ್ರ. ಇದು 26 ಚ.ಕಿಮೀ ವಿಸ್ತೀರ್ಣದ ಯಾನಯೋಗ್ಯ ಜಲಪ್ರದೇಶವನ್ನೊಳಗೊಂಡಿದೆ. ಇಲ್ಲಿ ನೂರಾರು ಲಂಗರು ನೆಲೆಗಳಿವೆ. ಇಲ್ಲಿ ನೌಕಾಂಗಣವೂ ಸರಬರಾಜು ಕೇಂದ್ರವೂ ಜಲಾಂತರ್ಗಾಮಿ ನೆಲೆಯೂ ಇವೆ. ದುರಸ್ತಿ, ನಿರ್ವಹಣೆ, ಹೊಸ ಹಡಗು ನಿರ್ಮಾಣ ಮುಂತಾದವಕ್ಕೆ ಸೌಲಭ್ಯಗಳಿವೆ. ಪರ್ಯಾಯದ್ವೀಪದ ಮೇಲೆ ನೌಕಾ ಸರಬರಾಜು ಕೇಂದ್ರವಿದೆ. ಪರ್ಲ್ ಹಾರ್ಬರಿನ ಪ್ರವೇಶದ್ವಾರದ ಒಂದು ಬದಿಗೆ ವಾಯುಬಲದಾಣವೂ ಇವೆ. (ಆರ್.ಜಿ.ಎಸ್.)

**ಪರ್ವತ ಮಂದ ಮಾರುತ:** ಪರ್ವತ ಪ್ರದೇಶಗಳಲ್ಲಿ ಕಂಡುಬರುವ ವಿಶೇಷ ರೀತಿಯ ಮಾರುತ. ಪರ್ವತದ ಶಿಖರದ ಕಡೆಯಿಂದ ಕಣಿವೆಯ ಕಡೆಗೆ ಬೀಸುತ್ತದೆ. ವಿಕಿರಣದಿಂದ ಪರ್ವತದ ಶಿಖರಗಳು ತಂಪಾಗಿ ಅಲ್ಲಿಯ ಗಾಳಿಯೂ ತಂಪಾಗುತ್ತದೆ. ಗಾಳಿಯ ಸಾಂದ್ರತೆ ಹೆಚ್ಚಾಗಿ ಅದು ಕೆಳಪ್ರದೇಶಕ್ಕೆ ಚಲಿಸತೊಡಗುತ್ತದೆ. ಪರ್ವತ ಮಂದ ಮಾರುತ ಉಂಟಾಗುವುದು ಹೀಗೆ. ಈ ಮಾರುತ ಬೀಸುವುದು ಸಾಮಾನ್ಯವಾಗಿ ರಾತ್ರಿಯ ಹೊತ್ತು. ಇದು ಕಣಿವೆಯ ತಳವನ್ನು ಸೇರಿ, ನೀರ್ಗಲ್ಲ ಸರೋವರದೋಪಾದಿಯಲ್ಲಿ ಆ ಪ್ರದೇಶದಲ್ಲೆಲ್ಲ ಪದರಪದರವಾಗಿ ಹರಡಿ, ಮಂಜುಮುಸುಕಿದಂತೆ ಕಾಣುವ ಹಾಗೆ ಮಾಡುತ್ತದೆ. ಇದನ್ನು ಪರ್ವತ ಮಾರುತ (ಮೌಂಟನ್ ಬ್ರೀಸ್) ಎಂದೂ ಕರೆಯುವರು. ಅನೇಕ ಪ್ರದೇಶಗಳಲ್ಲಿ ಈ ಮಾರುತಕ್ಕೆ ಸ್ಥಳೀಯ ಹೆಸರುಗಳುಂಟು. ಉತ್ತರ ಅಮೆರಿಕದ ರಾಕೀ ಪರ್ವತ ಪ್ರದೇಶಗಳಲ್ಲಿ ಚಿನೂಕ್ ಎಂದೂ ಯುರೋಪಿನ ಆಲ್ಪ್ಸ್ ಪರ್ವತ ಪ್ರದೇಶದಲ್ಲಿ ಫೇನ್ ಎಂದೂ ಇವನ್ನು ಕರೆಯುತ್ತಾರೆ. ಪರ್ವತ ಮಂದ ಮಾರುತ ಉಂಟಾಗುವುದು ಪರ್ವತದ ಬೆನ್ನುಪ್ರದೇಶದಲ್ಲಿ, ಅಂದರೆ ಒಂದು ದಿಕ್ಕಿನಿಂದ ಬೀಸಿದ

ಮಾರುತ ಪರ್ವತದ ಒಂದು ಪಾರ್ಶ್ವಕ್ಕೆ ಬಡಿದು ಆ ಕಡೆಯಲ್ಲೇ ಮಳೆಯನ್ನು ಕರೆದು ಮುಂದೆ ಸಾಗಿ ಪರ್ವತಶಿಖರವನ್ನೂ ದಾಟಿ ಇನ್ನೊಂದು ಪಾರ್ಶ್ವದಲ್ಲಿ ಕೆಳಕ್ಕಿಳಿಯುತ್ತದೆ. ಇದೇ ಪರ್ವತದ ಬೆನ್ನು ಪಾರ್ಶ್ವ (ಮಳೆಯ ನೆರಳಿನ ಭಾಗ). ಈ ಪಾರ್ಶ್ವದಲ್ಲಿ ವಾಯು ಬೀಸುವಾಗ ಅದರಲ್ಲಿ ಆರ್ದ್ರತೆ ಇರುವುದಿಲ್ಲ. ಈ ಒಣಗಾಳಿಯೇ ಪರ್ವತ ಮಂದ ಮಾರುತವಾಗಿ ಪರಿಣಮಿಸುತ್ತದೆ. ಚಳಿಗಾಲದಲ್ಲಿ ಈ ಮಾರುತದಿಂದ ಕಣಿವೆ ಪ್ರದೇಶದಲ್ಲಿ ವಿಪರೀತ ಮಂಜು ಮುಸುಕುತ್ತದೆ. ಹಿಮಸುರಿಯುತ್ತದೆ. ಆದರೆ ಇತರ ಕಾಲಗಳಲ್ಲಿ ಈ ಒಣಗಾಳಿಯಿಂದ ಅರಣ್ಯಗಳಲ್ಲಿ ಬೆಂಕಿ ಸಂಭವಿಸುವುದು.

ಪರ್ವತ ಮಂದ ಮಾರುತ ಅಂಟಾರ್ಕ್‌ಟಿಕ ಮತ್ತು ಗ್ರೀನ್ಲೆಂಡ್‌ಗಳಲ್ಲಿ ಹೆಚ್ಚು. ಇತರ ಕಡೆಗಳಲ್ಲೂ ಇದು ಬೀಸುವುದಾದರೂ ಅಲ್ಲಿಯಷ್ಟು ಶೀತವಾಗಿರುವುದಿಲ್ಲ. ವಿಕಿರಣದಿಂದ ಅದರಲ್ಲಿಯ ಉಷ್ಣ ಅತಿ ವೇಗವಾಗಿ ಕಳೆದುಹೋಗುವುದರಿಂದ ಪರ್ವತ ಹಾಗೂ ನೀರ್ಗಲ್ಲ ಹಾಳೆಗಳು ಬಹಳ ಬೇಗ ತಣ್ಣಗಾಗುತ್ತವೆ. ಇದರಿಂದ ಅದರ ಮೇಲಿರುವ ಗಾಳಿ ತಣ್ಣಗಾಗಿ ಇಳಿಜಾರಿನ ಕಡೆಗೆ ಬೀಸುತ್ತದೆ.

ಪರ್ವತ ಮಂದಮಾರುತಕ್ಕೆ ಸಂವಾದಿಯಾದಂಥದು ಆನಬ್ಯಾಟಿಕ್ ಅಥವಾ ಕಣಿವೆ ಮಂದಮಾರುತ. ಇದು ಹಗಲು ಹೊತ್ತಿನಲ್ಲಿ ಉತ್ಪತ್ತಿಯಾಗುತ್ತದೆ. ಆಗ ಪರ್ವತಕಣಿವೆಗಳ ಇಳಿಜಾರುಗಳಲ್ಲಿ ಗಾಳಿ ಕಾದು ಬೆಚ್ಚಗಾಗುತ್ತದೆ. ಇದರಿಂದಾಗಿ ಮೇಲ್ಪದರಗಳ ಗಾಳಿಯೂ ಬೆಚ್ಚಗಾಗುತ್ತದೆ. ಈ ಗಾಳಿ ಹಗುರವಾಗಿ ಪರ್ವತಗಳ ಮೇಲ್ಭಾಗವನ್ನು ತಲುಪಿ, ಅಲ್ಲಿರುವ ತಣ್ಣಗಿನ ಗಾಳಿಯನ್ನು ದೂರ ತಳ್ಳುತ್ತದೆ. ಈ ಕ್ರಿಯೆಯಿಂದ ಆನಬ್ಯಾಟಿಕ್ ಅಥವಾ ಕಣಿವೆ ಮಾರುತ ಉಂಟಾಗುತ್ತದೆ. (ಪಿ.ಎಂ.)

**ಪರ್ವತ ರೂಪಣೆ:** ಪರ್ವತಗಳು ಹೇಗೆ ಮೈದಳೆದು ಬೆಳೆಯುತ್ತವೆ ಎನ್ನುವುದನ್ನು ಅಧ್ಯಯಿಸುವ ವಿಜ್ಞಾನ (ಓರೊಜೆನಿ). ಭೂಮಿಯ ಮೇಲ್ಮೈ ಲಕ್ಷಣಗಳಲ್ಲಿ ಎದ್ದುತೋರುವವೆಂದರೆ ಪರ್ವತಗಳು. ಕಿರಿದಾದ ಮೇಲುಭಾಗದಿಂದ ಕೂಡಿರುವ ಉನ್ನತ ಪ್ರದೇಶಗಳಿಗೆ ಪರ್ವತಗಳೆಂದು ಹೆಸರು. ಎತ್ತರ ಮತ್ತು ಗಾತ್ರಗಳಲ್ಲಿ ಬಗೆಬಗೆಯ ಪರ್ವತಗಳಿವೆ. ಇವನ್ನು ಆಧರಿಸಿ ಮೊಟ್ಟೆ, ಗುಡ್ಡ, ಬೆಟ್ಟ, ಪರ್ವತ, ಪರ್ವತಶ್ರೇಣಿ, ಪರ್ವತ ಸರಣಿ, ಪರ್ವತಸ್ತೋಮ ಎಂದು ಮುಂತಾಗಿ ಹೇಳುವುದುಂಟು. ಆದರೆ ಈ ಪದಗಳಿಗೆ ನಿಷ್ಕೃಷ್ಟ ವೈಜ್ಞಾನಿಕಾರ್ಥ ನಿಗದಿಯಾಗಿಲ್ಲ. ಮೇಲುನೋಟಕ್ಕೆ ಎಲ್ಲ ಪರ್ವತಗಳೂ ಒಂದೇ ರೀತಿಯಾಗಿ ಕಂಡರೂ ಅವುಗಳ ಆಕಾರ, ರಚನೆ, ಅವು ರೂಪುಗೊಂಡ ಕಾಲ ಮತ್ತು ವಿಧಾನಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಅವು ರೂಪುಗೊಂಡುದರ ಆಧಾರದ ಮೇಲೆ ಮುಖ್ಯವಾಗಿ ಮೂರು ವಿಧವಾದ ಪರ್ವತಗಳನ್ನು ಕಾಣಬಹುದು. ಮೊದಲನೆಯದಾಗಿ ಜ್ವಾಲಾಮುಖಿಯಿಂದ ಹೊರಸೂಸುವ ಲಾವಾರಸದ ಸಂಚಯನದಿಂದ ಉಂಟಾದ ಮೌಂಟ್ ಎಟ್ನಾ, ಕ್ರಕಟೋವ ಮುಂತಾದವು. ಇವುಗಳಿಗೆ ಜ್ವಾಲಾಮುಖಿ ಪರ್ವತಗಳೆಂದು ಹೆಸರು. ಎರಡನೆಯದಾಗಿ ಭಾರತ ಪರ್ಯಾಯ ದ್ವೀಪದ ಆರಾವಳಿ ಪರ್ವತವೊಂದನ್ನು ಬಿಟ್ಟು ಉಳಿದೆಲ್ಲ ಪರ್ವತಗಳು ಭೂವ್ಯಾಪಾರ ಕರ್ತೃಗಳ ಕಾರ್ಯಾಚರಣೆಯ ಅಂಗವಾದ ಶಿಥಿಲೀಕರಣದಿಂದ ಉಂಟಾದವು. ಆದ್ದರಿಂದ ಇವನ್ನು ಶೇಷಪರ್ವತಗಳೆಂದು ಕರೆಯುತ್ತಾರೆ. ಆದರೆ ಪ್ರಪಂಚದ ಬಹುತೇಕ ಪರ್ವತಗಳು ಭೂಮಿಯಲ್ಲಿ ಉಂಟಾಗುವ ಚಲನೆಗಳಿಂದ ಉದ್ಭವಿಸುತ್ತವೆ. ಇವು ಭೂಚಲಜನ್ಯ ಪರ್ವತಗಳು. ಈ ಕೊನೆಯವುಗಳಲ್ಲಿ ಮತ್ತೆ ಮೂರು ವಿಧಾನಗಳಿವೆ. ಕೆಲವು ಜಲಜಶಿಲಾ ನಿಕ್ಷೇಪಗಳೂ ಪಾರ್ಶ್ವಒತ್ತಡಕ್ಕೆ ಒಳಗಾಗಿ ಉಂಟಾಗುವ ಮಡಿಕೆಗಳಿಂದ ಉದ್ಭವಿಸಿದರೆ ಮತ್ತೆ ಕೆಲವು ಶಿಲಾಸ್ತರದಿಂದಲೂ ಇನ್ನು ಕೆಲವು ಶಿಲಾಪಾಕ ಅಂತಸ್ಸರಣದಿಂದಲೂ ಉಂಟಾಗುತ್ತವೆ. ಅವನ್ನು ಅನುಕ್ರಮವಾಗಿ ಮಡಿಕೆ ಪರ್ವತ, ಸ್ತರಭಂಗ ಪರ್ವತ ಮತ್ತು ಗುಮ್ಮಟ ಪರ್ವತಗಳೆಂದು ಕರೆಯುತ್ತಾರೆ. ಮೇಲೆ ತಿಳಿಸಿದ ಪರ್ವತಗಳ ಶಿಲಾಸಂಯೋಜನೆ, ರಚನೆ ಸರಳವಾಗಿದ್ದು ಅವು ರೂಪುಗೊಂಡ ವಿಧಾನ ಅಷ್ಟೇನೂ ತೊಡಕಾಗಿಲ್ಲ. ಆದರೆ ಪ್ರಪಂಚದ ಅತ್ಯುನ್ನತವೆಂದು ಹೆಸರಾಂತ ಹಿಮಾಲಯ, ಆಲ್ಪ್ಸ್, ರಾಕೀಸ್, ಆಂಡಿಸ್ ಮುಂತಾದ ಪರ್ವತಗಳು ಮೇಲೆ ತಿಳಿಸಿದ ಯಾವ ವರ್ಗಕ್ಕೂ ಸೇರುವುದಿಲ್ಲ. ಕಾರಣ ಇವುಗಳ ಶಿಲಾಸಂಯೋಜನೆ, ಶಿಲಾರಚನೆಗಳು ಬಲು ಕ್ಲಿಷ್ಟ. ಇವುಗಳಲ್ಲಿ ನಾನಾರೀತಿಯ ಮಡಿಕೆಗಳು, ಸ್ತರಭಂಗಗಳು ಮತ್ತು ಶಿಲಾಪಾಕ ಅಂತಸ್ಸರಣಗಳು ಸೇರಿ ಇವುಗಳ ನಿರ್ಮಾಣವಿಧಾನ ಭೂವಿಜ್ಞಾನಿಗಳಿಗೆ ಒಂದು ಸವಾಲಾಗಿದೆ. ಇಂಥ ಪರ್ವತಗಳನ್ನು ಸಂಮಿಶ್ರಣ ಅಥವಾ ಸಂಕೀರ್ಣ ಪರ್ವತಗಳೆಂದು ಕರೆಯುತ್ತಾರೆ. ಈ ವರ್ಗಕ್ಕೆ ಸೇರಿದ ಪರ್ವತಗಳು ಒಂದೇ ಸಾರಿ ಈ ಉನ್ನತಿಯನ್ನು ಮುಟ್ಟಲಿಲ್ಲ. ಇವು ದೀರ್ಘಕಾಲಾವಧಿಯಲ್ಲಿ ಹಂತಹಂತವಾಗಿ ಬೆಳೆದು ಈಗಿನ ಸ್ಥಿತಿಯನ್ನು ತಲುಪಿವೆ. ಈ ಸಂಕೀರ್ಣ ಪರ್ವತಗಳ ನಿರ್ಮಾಣದಲ್ಲಿ ಮೂರು ಹಂತಗಳನ್ನು ಗುರುತಿಸಬಹುದು. ಮೊದಲನೆಯ ಹಂತದಲ್ಲಿ ಜಲಜಶಿಲೆಗಳು ಅಗಾಧ ಪ್ರಮಾಣದಲ್ಲಿ ಸಂಚಯನಗೊಳ್ಳಲು ಬೇಕಾದಂಥ ತಗ್ಗು ಪ್ರದೇಶಗಳ ನಿರ್ಮಾಣವಾದರೆ, ಎರಡನೆಯ ಹಂತದಲ್ಲಿ ಈ ಜಲಜಶಿಲಾನಿಕ್ಷೇಪಗಳಲ್ಲಿ ಬೃಹತ್ ಭೂಚಲನೆಗಳಿಂದ ನಾನಾ ರೀತಿಯ ಮಡಿಕೆಗಳು ಮತ್ತು ಸ್ತರಭಂಗಗಳು ಉಂಟಾಗಿ ಕ್ಲಿಷ್ಟತರ ರಚನೆಯನ್ನು ಪಡೆಯುತ್ತವೆ. ಶಿಲಾಪಾಕ ಅಂತಸ್ಸರಣದ ತರುವಾಯ ಈ ಹಂತ ಕೊನೆಗೊಳ್ಳುತ್ತದೆ. ಆದ್ದರಿಂದಲೆ ಎಲ್ಲ ಸಂಕೀರ್ಣ ಪರ್ವತಗಳ ತಿರುಳು ಭಾಗಗಳು ಅಗ್ನಿಶಿಲೆಗಳಿಂದಾದ ಕಣಶಿಲೆಗಳಿಂದ ಕೂಡಿರುವುದಾಗಿದೆ. ಮೂರನೆಯ ಅಥವಾ ಕೊನೆಯ ಹಂತದಲ್ಲಿ ಈ ರೀತಿ ವಿರೂಪಗೊಂಡ ಶಿಲಾಸ್ತೋಮ ಸಮುದ್ರಮಟ್ಟದಿಂದ ಮೇಲೊಗೆಯಲ್ಪಟ್ಟು ಉನ್ನತ ಪರ್ವತಗಳಾಗುತ್ತವೆ. ಈ ಸಂಕೀರ್ಣ ಪರ್ವತಗಳ ಉತ್ಪತ್ತಿ ಭೂವಿಜ್ಞಾನದಲ್ಲಿ ಇನ್ನೂ ವಿವಾದಾಸ್ಪದ ವಿಷಯ. ವಿಜ್ಞಾನಿಗಳು ಇವು ರೂಪುಗೊಂಡ ರೀತಿಯನ್ನು ಕುರಿತು ವಿಭಿನ್ನ ವಾದಗಳನ್ನು ಮಂಡಿಸಿದ್ದಾರೆ. (ಜಿ.ಟಿ.)

**ಪರ್ವತಗಳು:** ಭೂಮಿಯ ಮೇಲಿನ ಪ್ರಮುಖ ಸ್ವರೂಪಗಳಲ್ಲಿ ಪರ್ವತಗಳು ಬಹು ಮುಖ್ಯವಾದವು. ಸಾಮಾನ್ಯವಾಗಿ ಸುತ್ತಲಿನ ಪ್ರದೇಶಕ್ಕಿಂತ ಹೆಚ್ಚು ಎತ್ತರವಾಗಿರುವ ಹಾಗೂ ಕಡಿದಾದ ಇಳಿಜಾರನ್ನು ಹೊಂದಿದ ಭೂಸ್ವರೂಪವನ್ನು ಪರ್ವತಗಳೆಂದು ಕರೆಯುವರು. ಈ ವಿವರಣೆಯಲ್ಲಿ ಪರ್ವತಗಳ ಎತ್ತರವನ್ನು ಸ್ಪಷ್ಟಪಡಿಸಿಲ್ಲ. ಇದರಿಂದ ಬೆಟ್ಟ ಗುಡ್ಡಗಳು ಹಾಗೂ ಘಟ್ಟಗಳನ್ನು ಪರ್ವತಗಳಿಂದ ಪ್ರತ್ಯೇಕಿಸುವಲ್ಲಿ ಗೊಂದಲ ಉಂಟಾಗುವುದು. ಪ್ರಪಂಚದ ಕೆಲವು ಭಾಗಗಳಲ್ಲಿ 1000 ಮೀ ಹಾಗೂ ಇದಕ್ಕಿಂತ ಎತ್ತರವಾದ ಭೂಸ್ವರೂಪಗಳನ್ನು ಪರ್ವತಗಳೆಂದು ಕರೆಯಲಾಗಿದ್ದು ಕೆಲವು ಕಡೆ ಇದಕ್ಕಿಂತ ಎತ್ತರವಾದ ಭೂಸ್ವರೂಪವನ್ನು ಬೆಟ್ಟಗಳು ಎಂದು ಕರೆಯಲಾಗುತ್ತದೆ. ಬೃಹತ್ ಪ್ರಮಾಣದ ಹಾಗೂ ಎತ್ತರವಾದ ಪರ್ವತಗಳ ಸಮೂಹ ಹಾಗೂ, ಪರ್ವತಗಳ ಅತ್ಯಂತ ಎತ್ತರವಾದ ಶಿರೋಭಾಗ ಪರ್ವತ ಸಾಲನ್ನು ಪರ್ವತ ಶ್ರೇಣಿ ಎಂದು ಕರೆಯುವರು.

ವಿಧಗಳು: ಪ್ರಪಂಚದಲ್ಲಿ ವಿವಿಧ ರೀತಿಯ ಪರ್ವತಗಳಿವೆ. ಪರ್ವತಗಳನ್ನು ನಾಲ್ಕು ಪ್ರಧಾನ ವಿಧಗಳಾಗಿ ವಿಂಗಡಿಸಬಹುದು. 1. ಜ್ವಾಲಾಮುಖಿ ಪರ್ವತಗಳು, 2. ಸ್ತರಭಂಗ ಜನಿತ ಪರ್ವತಗಳು, 3. ಅವಶೇಷ ಪರ್ವತಗಳು, 4. ಮಡಿಕೆ ಪರ್ವತಗಳು.

ಜ್ವಾಲಾಮುಖಿ ಪರ್ವತಗಳು: ಜ್ವಾಲಾಮುಖಿಗಳಿಂದ ಹೊರಬೀಳುವ ಶಿಲಾಪಾಕ ಬೂದಿ ಕಿಟ್ಟ, ಶಿಲಾಚೂರು ಮುಂತಾದ ವಸ್ತುಗಳು ಸಂಚಯನಗೊಂಡು ನಿರ್ಮಿತವಾಗುವ ಪರ್ವತಗಳನ್ನು ಜ್ವಾಲಾಮುಖಿ ಪರ್ವತಗಳೆಂದು ಕರೆಯುವರು. ಇವು ವಿವಿಧ ಆಕಾರವನ್ನು ಹೊಂದಿರುತ್ತವೆ. ಪೆಸಿಫಿಕ್ ಸಾಗರದ ಸುತ್ತಲಿನ ಅಂಚಿನವಲಯ, ಪೆಸಿಫಿಕ್ ಸಾಗರದ ಆಳ ಮೈದಾನ ಅಟ್ಲಾಂಟಿಕ್ ಸಾಗರದ ಅಂತರ್ಗತ ಪರ್ವತಶ್ರೇಣಿಗಳು ಬಹುಪಾಲು ಅಗ್ನಿ ಪರ್ವತಗಳನ್ನೊಳಗೊಂಡಿವೆ.

ಸ್ತರಭಂಗ ಜನಿತ ಪರ್ವತಗಳು: ಭೂಸ್ತರಗಳ ವಿಸ್ತರಣೆಯಿಂದ ಅಥವಾ ಕುಗ್ಗುವಿಕೆಯಿಂದ ಉಂಟಾಗುವ ಅಸ್ಥಿರತೆಯಿಂದ ಶಿಲಾಸ್ತರಗಳು ಮುರಿದು ಸ್ತರಭಂಗ ಉಂಟಾಗಿ ಅವುಗಳು ಸ್ಥಳಾಂತರ ಹೊಂದುತ್ತವೆ. ಸ್ತರಭಂಗದ ಯಾವುದಾದರೊಂದು ಭಾಗವು ಕೆಳಗೆ ಸರಿಯುವುದರಿಂದ ಅಥವಾ ಮೇಲೆ ಎತ್ತಲ್ಪಡುವುದರಿಂದ ಅಥವಾ ಮತ್ತೊಂದು ಕಡೆಗೆ ಜರಗುವುದರಿಂದ ಒಂದು ಬದಿಯಲ್ಲಿ ಕಡಿದಾದ ಏಣುಗಳನ್ನು ಹೊಂದಿದ ಭೂಭಾಗವನ್ನು ಪರ್ವತಗಳೆಂದು ಕರೆಯುವರು. ಈ ಪರ್ವತಗಳ ಒಂದು ಬದಿಯ ಇಳಿಜಾರು ಬಿಳುವಾಗಿದ್ದು ಮತ್ತೊಂದು ಕಡಿದಾಗಿರುವುದು. ಇವುಗಳನ್ನು ಖಂಡ ಪರ್ವತ ಎಂದೂ ಸಹ ಕರೆಯುವರು. ಅಮೆರಿಕದಲ್ಲಿ ಕ್ಯಾಲಿಫೋರ್ನಿಯ ಪ್ರಾಂತ್ಯದಲ್ಲಿರುವ ಸಿಯರಾನಿವೆಡ ಪ್ರಪಂಚದ ಅತಿ ವಿಸ್ತಾರವಾದ ಖಂಡ ಪರ್ವತವಾಗಿದೆ.

ಅವಶೇಷ ಪರ್ವತಗಳು: ಎತ್ತರವಾದ ಭೂಭಾಗಗಳು ವಿವಿಧ ನಗ್ನೀಕರಣ ಕರ್ತೃಗಳಾದ ಗಾಳಿ, ಹರಿಯುವ ನೀರು, ಹಿಮನದಿಗಳಿಂದ ನಗ್ನೀಕರಣಕ್ಕೆ ತುತ್ತಾಗಿ ಸವೆತ ಕಾರ್ಯವು ಪ್ರಾರಂಭವಾಗುವುದು. ಸಡಿಲವಾದ ಭಾಗಗಳು ಸವೆಯಲ್ಪಟ್ಟು ಗಟ್ಟಿಯಾದ ಭಾಗಗಳು ಮಾತ್ರ ಉಳಿದಿರುತ್ತವೆ. ಇವು ಸುತ್ತಲಿನ ಭಾಗಕ್ಕಿಂತ ಎತ್ತರವಾಗಿದ್ದು ಇವುಗಳನ್ನು ಅವಶೇಷ ಪರ್ವತಗಳು ಎನ್ನುವರು ಉದಾ: ಪಶ್ಚಿಮ ಮತ್ತು ಪೂರ್ವಘಟ್ಟಗಳು.

ಮಡಿಕೆ ಪರ್ವತಗಳು: ಶಿಲಾಸ್ತರಗಳು ಮಡಿಚಲ್ಪಟ್ಟು ನಿರ್ಮಿತವಾಗಿರುವ ಪರ್ವತಗಳನ್ನು ಮಡಿಕೆ ಪರ್ವತಗಳು ಎಂದು ಕರೆಯುವರು. ಜಗತ್ತಿನ ಎಲ್ಲಾ ಮಡಿಕೆ ಪರ್ವತಗಳು ಸಹ ಕಣ ಶಿಲೆಯ ಪದರುಗಳಿಂದ ನಿರ್ಮಿತವಾಗಿವೆ. ಉದಾ: ಆಲ್ಪ್ಸ್, ಹಿಮಾಲಯ, ಆಂಡಿಸ್, ರಾಕೀಸ್.

ಪರ್ವತಗಳು ನದಿಗಳ ಉಗಮಸ್ಥಾನ, ಅರಣ್ಯ ಮತ್ತು ಖನಿಜಗಳ ಆಗರ. ಇವು ಆರ್ದ್ರವಾಯುವನ್ನು ತಡೆದು ಮಳೆ ಸುರಿಸುತ್ತವೆ. ಶೀತ ಮತ್ತು ಉಷ್ಣವಾಯುವಿನಿಂದ ರಾಷ್ಟ್ರಗಳನ್ನು ರಕ್ಷಿಸುತ್ತವೆ. ಇಲ್ಲಿ ನದಿ ಹರಿದ ಕಡೆ ಜಲವಿದ್ಯುತ್ ಆಗರವಾಗಿದೆ. ಹುಲ್ಲುಗಾವಲಿದ್ದು ಪಶುಸಂಗೋಪನೆಗೆ ಉಪಯುಕ್ತ. ಆದರೆ ಇದು ಸಂಚಾರ, ವ್ಯವಸಾಯ ಮತ್ತು ವಸತಿಗೆ ಅನಾನುಕೂಲ. ಪ್ರಪಂಚದ ಪ್ರಮುಖ ಪರ್ವತಗಳು:

1. ಹಿಮಾಲಯ: ಪ್ರಪಂಚದ ಅತ್ಯುನ್ನತ ಪರ್ವತವಾಗಿದೆ. ಇದರ ಪ್ರಮುಖ ಶಿಖರಗಳೆಂದರೆ ಎವರೆಸ್ಟ್ (8848ಮೀ), ಗಾಡ್ವಿನ್ ಆಸ್ಟಿನ್ (8481ಮೀ) ಮತ್ತು ಧವಲಗಿರಿ (8172ಮೀ).

2. ಆಂಡಿಸ್: ದಕ್ಷಿಣ ಅಮೆರಿಕದ ಪಶ್ಚಿಮಭಾಗದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಪ್ರಮುಖ ಪರ್ವತ. ಇದರ ಪ್ರಮುಖ ಶಿಖರಗಳೆಂದರೆ ಆಕನ್‌ಕಾಗ್ವ (6959 ಮೀ) ಚಿಂಬರಾಜೋ (6267 ಮೀ) ಮತ್ತು ಕೊಟಪಾಕ್ಸಿ (5897ಮೀ).

3. ರಾಕೀ ಪರ್ವತ: ಉತ್ತರ ಅಮೆರಿಕದ ಪಶ್ಚಿಮ ಭಾಗದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಪರ್ವತ ಸಾಲು. ಇದರ ಪ್ರಮುಖ ಶಿಖರಗಳೆಂದರೆ ಲಾಂಗ್ಸ್ (4345 ಮೀ) ಪೈಕ್ಸ್ (4301ಮೀ) ಇತ್ಯಾದಿ.

ಪ್ರಪಂಚದ ಇತರ ಪ್ರಮುಖ ಪರ್ವತಗಳೆಂದರೆ ಆಲ್ಫ್, ಅಪಲೇಷಿಯನ್, ಪೆನ್ನೈನ್, ಕಿಲಿಮಾಂಜಿರೋ, ಎಲ್‌ಬ್ರೂಸ್ ಇತ್ಯಾದಿ. (ಎಂ.ಎನ್.ಎಂ.)

**ಪರ್ಷಿಯನ್ ಖಾರಿ:** ಅರಬ್ಬಿ ಪರ್ಯಾಯದ್ವೀಪ ಮತ್ತು ಆಗ್ನೇಯ ಇರಾನಿನ ನಡುವೆ ಚಾಚಿರುವ ಹಿಂದೂ ಮಹಾಸಾಗರದ ತಪ್ಪೆ (ಉತ್ತರ) ಸಮುದ್ರಭಾಗ (ಪರ್ಷಿಯನ್ ಗಲ್ಫ್). ಇದರ ಉದ್ದ 984 ಕಿಮೀ ಭೌಗೋಳಿಕವಾಗಿ ಇದು ಶಿಥ್–ಅಲ್–ಅವಾಸಿನಿಂದ ಓಮಾನಿನ ಮುಸುಂಡಾಮ್ ಪರ್ಯಾಯ ದ್ವೀಪದತ್ತ ಆಗ್ನೇಯವಾಗಿ ಚಾಚಿರುವ ಜಲಭಾಗ. ಇಲ್ಲಿ ಓರ್‌ಮುಜ಼್ ಜಲಸಂಧಿ ಪರ್ಷಿಯನ್ ಖಾರಿಯನ್ನು ಓಮಾನ್ ಖಾರಿಯಿಂದ ಬೇರ್ಪಡಿಸುತ್ತದೆ. ಓರ್‌ಮುಜ಼್ ಜಲಸಂಧಿ ಓಮಾನ್ ಖಾರಿ ಹಾಗೂ ಪರ್ಷಿಯನ್ ಖಾರಿ ಈ ಮೂರಕ್ಕು ಪರ್ಷಿಯನ್‌ಖಾರಿ ಎನ್ನುವುದೇ ರೂಢಿಯಲ್ಲಿದೆ. ಪರ್ಷಿಯನ್ ಖಾರಿಯ ವಿಸ್ತೀರ್ಣ 2.40.000 ಚ.ಕಿಮೀ. ಓರ್‌ಮುಜ಼್ ಜಲಸಂಧಿಯ ಬಳಿ ಇದರ ಅಗಲ ಸು. 80 ಕಿಮೀ ಇದೆ. ಖಾರಿಯ ಅಗಲ ತಲೆಭಾಗದಲ್ಲಿ 224 ಕಿಮೀ ಗರಿಷ್ಠ ಅಗಲ 320 ಕಿಮೀ. ಈ ಸಮುದ್ರಭಾಗದ ಆಳ ಹೆಚ್ಚೆಂದರೆ 110 ಮೀ. ಕೆಲವೆಡೆ 90 ಮೀ ಆಳವಿದ್ದರೆ ಉಳಿದೆಡೆ 25 ಮೀ ಕನಿಷ್ಠ ಆಳ ಇರುತ್ತದೆ. ಖಾರಿಯ ಅತ್ಯಂತ ಆಳವಾದ ಭಾಗ ಪರ್ಷಿಯನ್ ತೀರದ ಬಳಿ ಕಂಡುಬರುತ್ತದೆ. ಇಲ್ಲಿ ಓರ್‌ಮುಜ಼್ ಜಲಸಂಧಿಯ ಸು. 112 ಕಿಮೀ ಉದ್ದದ ತೆಪ್ಪೆ ಭಾಗ ಖಾರಿಯನ್ನು ಪೂರ್ವ–ಪಶ್ಚಿಮವಾಗಿ ಬೇರ್ಪಡಿಸುತ್ತದೆ.

ಪರ್ಷಿಯನ್ ಖಾರಿ ಅಸಂಖ್ಯಾತ ದ್ವೀಪಗಳಿಗೆ ಹೆಸರಾಗಿದೆ. ಇವುಗಳಲ್ಲಿ ಕೆಲವು ಮಡಿಕೆಗಳ ಶೃಂಗಗಳು ಮತ್ತೆ ಕೆಲವು ಲವಣದ ಅಡಚುಗಳು. ಉಳಿದ ಭೂಭಾಗ ಕ್ವಾಟರ್ನರಿ ಯುಗದಲ್ಲಿ ಸಂಚಯಿಸಿದ ನಿಕ್ಷೇಪಗಳು ಇವನ್ನು ಪ್ರತಿನಿಧಿಸುತ್ತವೆ. ಖಾರಿಯ ತಲೆಭಾಗದಲ್ಲಿ ಟೈಗ್ರಿಸ್–ಯೂಫ್ರೆಟೀಸ್ ಮತ್ತು ಕಾರುನ್ ನದಿಗಳು ಸಿಹಿ–ನೀರನ್ನು ಹರಿಸುತ್ತವೆ. ಇವುಗಳ ಜೊತೆಗೆ ಪರ್ಷಿಯನ್ ತೀರದಲ್ಲಿ ವಿಚ್ಛಿತ್ತಿಯಾಗಿ ಹರಿಯುವ ತೊರೆಗಳಿಂದಲೂ ಖಾರಿಗೆ ಸಿಹಿನೀರಿನ ಸೇರ್ಪಡೆಯಾಗುತ್ತದೆ. ಪ್ರವೇಶ ಭಾಗದಲ್ಲಿ ನೀರಿನ ಉಷ್ಣತೆ $25^0$–$30^0$ಸೆ. ವಾಯವ್ಯದ ಕೊನೆಗೆ ನೀರಿನ ಉಷ್ಣತೆ ವ್ಯತ್ಯಾಸಗೊಳ್ಳುತ್ತದೆ ($15^0$–$30^0$ಸೆ.) ಅತಿ ಕಡಿಮೆ ಸಿಹಿನೀರಿನ ಒಳಹರಿತ ಮತ್ತು ಅಧಿಕ ಉಷ್ಣತೆ ಇವುಗಳಿಂದಾಗುವ ತೀವ್ರ ಬಾಷ್ಪೀಕರಣಗಳಿಂದಾಗಿ ಖಾರಿಯ ನೀರು ಹೆಚ್ಚು ಉಪ್ಪಾಗಿರುತ್ತದೆ. ಖಾರಿಯ ಪ್ರದೇಶ ಭಾಗದಲ್ಲಿ ಲವಣಾಂಶ 37%–38% ಇದ್ದರೆ ವಾಯವ್ಯದ ಅಂಚಿನಲ್ಲಿ ಅದು 38%–41% ಕಂಡುಬರುತ್ತದೆ.

ಪರ್ಷಿಯನ್ ಖಾರಿಯ ಪಶ್ಚಿಮಕ್ಕೆ ವಿಶಾಲವಾದ ಅರಬ್ಬಿ ಪರ್ಯಾಯದ್ವೀಪವಿದೆ. ನೈರುತ್ಯಕ್ಕೆ ಇರಾನಿನ ಜಾಗ್ರೋಸ್ ಪರ್ವತಶ್ರೇಣಿ, ವಾಯವ್ಯಕ್ಕೆ ಮೆಸಪೊಟೇಮಿಯನ್ ನದಿಯ ಸಂಚಯನದಿಂದ ತುಂಬಿರುವ ತಗ್ಗು ಪ್ರದೇಶ ಇವೆ. (ಟಿ.ಆರ್.ಎ.)

**ಪಲವು:** ಶಾಂತಮಹಾಸಾಗರದ ಅತಿ ಸಣ್ಣ ದ್ವೀಪ ರಾಷ್ಟ್ರ. ಫಿಲಿಫೈನ್ಸ್‌ನಿಂದ ಸು. 800 ಕಿಮೀ ದೂರದಲ್ಲಿದೆ. ವಿಶ್ವಸಂಸ್ಥೆಯ ಸಹಯೋಗದಿಂದ 1994ರಲ್ಲಿ ಸ್ವಾತಂತ್ರ್ಯ ರಾಷ್ಟ್ರವಾಯಿತು. ಆಂಗ್ಲರು ಇದನ್ನು ಬೆಲಾವೊ ಎಂದು ಕರೆಯುತ್ತಾರೆ. ಇದರ ರಾಜಧಾನಿ




ಕೊರೋರ್ ಇದು ಪಲವು ದ್ವೀಪದ ಜನಭರಿತ ಹಾಗೂ ಅತಿ ದೊಡ್ಡ ನಗರ. ಜನಸಂಖ್ಯೆ 12,300 (2002). ಈ ದ್ವೀಪ 458 ಚ.ಕಿಮೀ ಭೌಗೋಳಿಕ ಕ್ಷೇತ್ರವನ್ನು ಹೊಂದಿದೆ. ಜನಸಂಖ್ಯೆ 20,303. ಈ ದ್ವೀಪದ ಜನ ಸಾಂದ್ರತೆ 44 ಜನಪ್ರತಿ ಚ.ಕಿಮೀ. ರಾಷ್ಟ್ರದ ನಿವ್ವಳ ಆದಾಯ 174 ಮಿ. ಡಾಲರ್ (2001), ತಲಾವಾರು ಆದಾಯ 9000 ಮಿ. ಡಾಲರ್ (2001), ಕರೆನ್ಸಿ ಯು.ಎಸ್. ಡಾಲರ್. (ವಿ.ಎಸ್.ಎ.)

**ಪವನವಿಜ್ಞಾನ:** ವಾಯುಮಂಡಲ ಮತ್ತು ಅದರ ವಿದ್ಯಮಾನಗಳನ್ನು ಕುರಿತ ವಿಜ್ಞಾನ (ಮೀಟಿಯರಾಲಜಿ). ಪ್ರಧಾನವಾಗಿ ಇದೊಂದು ವೀಕ್ಷಣಶಾಸ್ತ್ರ. ಪವನವಿಜ್ಞಾನಿ ವಾಯುಮಂಡಲವನ್ನು ವೀಕ್ಷಿಸಿ ಅದರ ಉಷ್ಣತೆ, ಸಾಂದ್ರತೆ ಮಾರುತಗಳು, ಮೋಡಗಳು, ಅವಕ್ಷೇಪಣೆ(ಪ್ರೆಸಿಪಿಟೇಶನ್) ಮತ್ತು ಇತರ ಲಕ್ಷಣಗಳನ್ನು ಸಂಗ್ರಹಿಸಿ ವಾಯುಮಂಡಲದ ಸ್ಥಿತಿಗತಿಗಳನ್ನು ಭೌತವಿಜ್ಞಾನದ ಮೂಲ ನಿಯಮಾನುಸಾರ ವಿವರಿಸಲು ಪ್ರಯತ್ನಿಸುತ್ತಾನೆ.

ಭೂಮಿಯನ್ನು ಆವರಿಸಿರುವ ವಾಯುಮಂಡಲದಲ್ಲಿ ನಡೆಯುವ ವಿದ್ಯಮಾನಗಳನ್ನು ತಿಳಿಸುವ ವಿಜ್ಞಾನವೇ ಪವನವಿಜ್ಞಾನ. ಅಖಂಡ ವಾಯುಮಂಡಲದ ದ್ರವ್ಯವಾಗಿರುವ ವಾಯುವಿನ ಬಗೆಗಿನ ಬದಲಾವಣೆಗಳನ್ನು ವಿಚಾರ ಮಾಡತಕ್ಕ ಭೂಭೌತ ವಿಜ್ಞಾನದ ಒಂದು ಶಾಖೆ. ಆದರೂ ವಾಸ್ತವಿಕತೆಯ ಮತ್ತು ವೀಕ್ಷಣೆಯ ದೃಷ್ಟಿಯಿಂದ ಈ ವಿಜ್ಞಾನ ಅಧ್ಯಯನದಲ್ಲಿ ನಮ್ಮ ಮುಖ್ಯ ಲಕ್ಷ್ಯ ವಾಯುಮಂಡಲದಲ್ಲಿ 10–15 ಕಿಮೀ ಎತ್ತರದವರೆಗೆ ಇರುವ ಕೆಳಗಿನ ಮಟ್ಟಗಳಿಗೆ ಮಾತ್ರ ಸೀಮಿತ. ಈ ಪ್ರದೇಶಗಳಿಗೆ ಪರಿವರ್ತನಾ ಮಂಡಲ (ಟ್ರೋಪೋಸ್ಫಿಯರ್) ಮತ್ತು ಸಮೋಷ್ಣ ಮಂಡಲ (ಸ್ಟ್ರಾಟೋಸ್ಫಿಯರ್) ಎಂಬ ಹೆಸರುಗಳಿವೆ. ಇಲ್ಲಿ ನಡೆಯುವ ಬದಲಾವಣೆಗಳ ಒಟ್ಟು ಗುಣವೇ ಹವೆ (ವೆದರ್).

ಆಕಾಶದಲ್ಲಿ ಹಾರಿಸಲಾಗುತ್ತಿರುವ ಆಕಾಶಬುಟ್ಟಿ, ವಿಮಾನ, ರಾಕೆಟ್ ಮುಂತಾದ ಉಪಕರಣಗಳಿಂದ ವಾಯುಮಂಡಲದ ವಿವಿಧ ಮಟ್ಟಗಳ ವಿದ್ಯಮಾನಗಳು ವಿಶೇಷವಾಗಿ ಗೊತ್ತಾಗುತ್ತವೆ. ಇವುಗಳಲ್ಲಿ ಹಲವಾರು ಸ್ವಯಂಚಾಲಿತ ಮತ್ತು ಸ್ವಯಂಲೇಖಕ ಯಂತ್ರಗಳನ್ನು ಇಟ್ಟು ಕಳುಹಿಸುತ್ತಾರೆ. ವಾಯುಮಂಡಲದ ಕೆಳಮಟ್ಟಗಳಲ್ಲೇ ಅಲ್ಲದೆ ಮತ್ತು 20–30 ಕಿಮೀ ಗಳ ಎತ್ತರದವರೆಗೆ ಕೂಡ ವಾಯುಗುಣದ ಹಲವಾರು ಅಂಗಗಳ ಬದಲಾವಣೆಗಳು ಗೋಚರವಾಗುತ್ತವೆ. ಇವುಗಳ ಜೊತೆಗೆ ಮಾನವನಿರ್ಮಿತ ಉಪಗ್ರಹಗಳ ಸಹಾಯದಿಂದಲೂ ಅಪಾರವಾದ ಜ್ಞಾನ ಸಂಗ್ರಹಿಸಲ್ಪಟ್ಟು ಪವನಜ್ಞಾನಕ್ಷೇತ್ರ ವಿವಿಧ ಮಾರ್ಗಗಳಲ್ಲಿ ವಿಸ್ತಾರಗೊಳ್ಳುತ್ತಿದೆ. ರೇಡಿಯೊ, ದೂರದರ್ಶನ ಮುಂತಾದ ಹಲವಾರು ಅಂತಾರಾಷ್ಟ್ರೀಯ ವಾರ್ತಾಪ್ರಸಾರ ಸಂಸ್ಥೆಗಳ ಉಪಯುಕ್ತತೆ ಈ ಸಂಶೋಧನೆಗಳಿಂದ ಬಹಳ ಪರಿಣಾಮಕಾರಿಯಾಗುತ್ತಿದೆ. ಅತ್ಯಾಧುನಿಕ ಆಕಾಶಸಂಶೋಧನೆಗಳಿಗೂ ವಾಯುಮಂಡಲದ ವಿಜ್ಞಾನದ ಪ್ರಗತಿಗೂ ಸಂಪರ್ಕ ಕಲ್ಪಿತವಾಗಿದೆ.

ಹವಾ ಮುನ್ಸೂಚನೆ : ವಾಯುಮಂಡಲದಲ್ಲಿ ನಡೆಯುವ ವಿಶೇಷ ವಿದ್ಯಮಾನಗಳನ್ನು ಯಂತ್ರಗಳ ಸಹಾಯದಿಂದ ತಿಳಿದು. ಅಂಕಿ–ಅಂಶಗಳನ್ನು ಸಂಗ್ರಹಿಸಿ, ಅವುಗಳ ಆಧಾರದ ಮೇಲೆ ವಾಯುಗುಣದ ಮುನ್ಸೂಚನೆಯನ್ನು ಪ್ರಸಾರ ಮಾಡುವುದು ವಾಡಿಕೆ. ಇಂಥ ಮುನ್ಸೂಚನೆ ಸಾಮಾನ್ಯವಾಗಿ ಮುಂದಿನ 24 ಗಂಟೆಗಳಲ್ಲಿ ನಡೆಯಬಹುದಾದ ಬದಲಾವಣೆಗಳನ್ನು ಸೂಚಿಸುವುದು. ವಿಜ್ಞಾನದ ದೃಷ್ಟಿಯಿಂದ ಮಾಡಲಾಗುವ ಈ ಭವಿಷ್ಯನುಡಿಗೆ ಹಲವಾರು ಪ್ರದೇಶಗಳಲ್ಲಿ ವಿವಿಧ ಕಾಲಗಳಲ್ಲಿ ಕ್ರೋಡೀಕರಿಸಲಾದ ಅಂಕಿ ಅಂಶಗಳೇ ಆಧಾರ. ಪ್ರಕೃತಿಯ ವಿದ್ಯಮಾನಗಳಲ್ಲಿ ನಿರ್ದಿಷ್ಟ ಕ್ರಮವಿದ್ದರೂ, ಅನೇಕ ವೇಳೆಗಳಲ್ಲಿ ನಾವು ಊಹಿಸಲಾಗದಂಥ ಹಲವು ವಿಶೇಷ ಸಂಘಟನೆಗಳು ಉದ್ಭವಿಸುತ್ತವೆ. ಆದ್ದರಿಂದ ಭವಿಷ್ಯವನ್ನು ಎಚ್ಚರಿಕೆಯಿಂದ ನುಡಿಯಬೇಕು. ಅಲ್ಲದೆ ಮುಂದೆ ಆಗಬಹುದಾದ ಬದಲಾವಣೆಗಳ ಸ್ವರೂಪವನ್ನು ಕಡಿಮೆ ಅವಧಿಯಲ್ಲಿ ಮಾತ್ರ ತಿಳಿಸಬಹುದು. ವಾಸ್ತವ ಅನುಭವಕ್ಕೂ ಈ ಭವಿಷ್ಯವಾದಿಗಳಿಗೂ ಇರಬಹುದಾದ ಅಂತರ ಕಡಿಮೆಯಾಗಬೇಕಾದರೆ ಪವನವಿಜ್ಞಾನದಲ್ಲಿ ಇನ್ನೂ ಹೆಚ್ಚು ತಿಳಿವಳಿಕೆ ಅವಶ್ಯ. *

ಈ ರಾಷ್ಟ್ರದ ಪ್ರಮುಖ ದ್ವೀಪಗಳೆಂದರೆ ಅಂಗೌರ್, ಬಾಬೆಲ್ ದೊಬ್ ಕೊರೋರ್ ಹಾಗೂ ಪೆಲಿಲಿಯೊ. ಈ ಎಲ್ಲಾ ದ್ವೀಪಗಳು ಬ್ಯಾರಿಯರ್ ರೀಫ್‌ನಲ್ಲಿವೆ. 2/3 ರಷ್ಟು ಜನರು ತೊರೋರ್ ದ್ವೀಪವಾಸಿಗಳು.

ಈ ದ್ವೀಪಗಳ ಉತ್ತರಕ್ಕೆ ಕಾಯಂಜಿಲ್ ಹವಳ ದಿಬ್ಬಗಳು ಕಂಡುಬರುತ್ತವೆ. ಇಲ್ಲಿಂದ ಸ್ವಲ್ಪ ಮುಂದೆ ರಾಕ್ ದ್ವೀಪ ಸಮೂಹ. ಈ ದ್ವೀಪ ಸಮೂಹದಲ್ಲಿ 70 ದ್ವೀಪಗಳು ಮಾನವರಹಿತವಾಗಿವೆ ಇವು ಪ್ರಮುಖ ದ್ವೀಪ ಸಮೂಹದ ಪಶ್ಚಿಮದಲ್ಲಿವೆ. ಇಲ್ಲಿಂದ 600 ಕಿಮೀ ದೂರದಲ್ಲಿ ವಾಯವ್ಯದಲ್ಲಿರುವ 6 ದ್ವೀಪಗಳು ಪಲವು ರಾಷ್ಟ್ರಕ್ಕೆ ಸೇರಿವೆ.

ಸ್ಥಾನ: ಪಲವು ದ್ವೀಪ ಸಮೂಹ $7^0$21 ಉತ್ತರ ಅಕ್ಷಾಂಶ ಮತ್ತು $134^0 28'$ ಪೂರ್ವ ರೇಖಾಂಶಗಳನ್ನು ಹೊಂದಿದೆ. 26 ದೊಡ್ಡ ಹಾಗೂ 300 ಸಣ್ಣ ದ್ವೀಪಗಳ ಪಲಾವೊ ಒಟ್ಟು ಭೂ ಭಾಗದ (458 ಚ.ಕಿಮೀ) ಶೇ. 75ರಷ್ಟು ಪ್ರದೇಶವನ್ನು ಬಾಬಿಲ್‌ದೊಬ್ ಹೊಂದಿದೆ.

ಇತಿಹಾಸ: ಪುರಾತತ್ತ್ವ ಸಂಶೋಧನೆಯ ಪ್ರಕಾರ ಈ ರಾಷ್ಟ್ರದ ನಿವಾಸಿಗಳು ಮೂಲತಃ ಆಸ್ಟ್ರೇಲಿಯ, ಪಾಲಿನೇಷ್ಯ ಮತ್ತು ಏಷ್ಯ ಮೂಲದವರು. ವಂಶಾವಳಿಯ ಪ್ರಕಾರ ರಕ್ತ ಸಂಬಂಧಿಗಳು ಮೆಲನೇಷ್ಯ, ಮೈಕ್ರೋನೇಷ್ಯ ಹಾಗೂ ಪಾಲಿನೇಷ್ಯಗಳಲ್ಲಿ ಹಂಚಿಕೆಯಾಗಿದ್ದಾರೆ. ಸಂಪ್ರದಾಯವಾಗಿ ಇವರೆಲ್ಲ ಮೆಲನೇಷ್ಯ ಮೂಲದವರೆಂದು ಪರಿಗಣಿಸಲಾಗಿದೆ. ಅನುವಂಶಿಕವಾಗಿ ಎರಡು ರೀತಿಯ ವಂಶಾವಳಿಗಳು ಮೇಲನೇಷ್ಯದಲ್ಲಿ ಕಂಡು ಬಂದಿದೆ– ಸ್ಥಳೀಯ ಆಸ್ಟ್ರೇಲಿಯ / ಪಪುವ ನ್ಯೂಗಿನಿಯ ಮತ್ತು ಏಷ್ಯನ್ನರು. ಕಾರ್ಬನ್–14 ಶೋಧನೆಯ

ಪ್ರಕಾರ ಪ್ರ.ಶ.ಪೂ. 2500 ರಿಂದ 1000 ನಡುವೆ ಈ ದ್ವೀಪ ಅಸ್ತಿತ್ವಕ್ಕೆ ಬಂದಿದೆ. ಈ ದ್ವೀಪದಲ್ಲಿ ಸಿಕ್ಕಿರುವ ಅತ್ಯಂತ ಪುರಾತನವಾದ ಶವಸಂಸ್ಕಾರ ನಡೆಸಿರುವ ಸ್ಥಳ ಇದಕ್ಕೆ ಪುಷ್ಟಿ ನೀಡಿದೆ. ಪಲವು ಪುರಾತನ ವಾಣಿಜ್ಯ ಮಿತ್ರರಾಗಿ ಜಾವ ದ್ವೀಪದಲ್ಲಿಯೂ ಈ ಹೋಲಿಕೆಗಳು ಪತ್ತೆಯಾಗಿವೆ. ವಿಶೇಷವೆಂದರೆ ಜಾವ ದ್ವೀಪದ ಸ್ತ್ರೀಯರು ಸಂಪ್ರದಾಯಸ್ಥರು ಇವರೊಂದಿಗೆ ವೈವಾಹಿಕ ಸಂಬಂಧಗಳನ್ನು ಪಲವೂ ಹೊಂದಿತ್ತು. ಪಲಾವೂ ದ್ವೀಪದ ಸ್ತ್ರೀಯರು ಆಸ್ತಿ, ಅಂತಸ್ತು ಮತ್ತು ಐಶ್ವರ್ಯ ಪ್ರಿಯರಾಗಿದ್ದರು. ಇವರು ಸ್ತ್ರೀ ಪ್ರಧಾನ ಸಮಾಜವನ್ನು ಸಾವಿರಾರು ವರ್ಷಗಳವರೆಗೆ ಹೊಂದಿದ್ದರು.

ಅಂತಾರಾಷ್ಟ್ರೀಯ ಸಂಬಂಧ: ಪಲವೂ ಸ್ವಾತಂತ್ರ್ಯವಾಗಿ (1994 ಅಕ್ಟೋಬರ್ 1), ವಿಶ್ವ ಸಂಸ್ಥೆಯ ಮಾನ್ಯತೆ ಪಡೆದು ಸದಸ್ಯ ರಾಷ್ಟ್ರವಾಯಿತು (ಡಿಸೆಂಬರ್ 15, 1994). ಹಲವಾರು ರಾಷ್ಟ್ರಗಳ ಜೊತೆ ಉತ್ತಮ ಸಂಬಂಧವನ್ನು ಕಾಪಾಡಿಕೊಂಡು ಬಂದಿದೆ.

ಈ ದ್ವೀಪದ ಪ್ರಮುಖ ಆರ್ಥಿಕ ಬೆಳೆಗಳು ತೆಂಗು, ಕಸಾವ, ಸಿಹಿಗೆಣಸು. ಪ್ರವಾಸೋದ್ಯಮ ರಾಷ್ಟ್ರದ ಪ್ರಮುಖ ಆರ್ಥಿಕ ಆದಾಯವಾಗಿದೆ. ವಾರ್ಷಿಕ 40,000 ಪ್ರವಾಸಿಗರು ಈ ದೇಶಕ್ಕೆ ಬರುತ್ತಾರೆ. (ಕೆ.ಎಸ್.ಐ.)

**ಪಶ್ಚಿಮ ಆಸ್ಟ್ರೇಲಿಯ:** ಆಸ್ಟ್ರೇಲಿಯ ಸಮಧಿರಾಜ್ಯದಲ್ಲಿ (ಕಾಮನ್‌ವೆಲ್ತ್) ಒಂದು ಗೂಡಿರುವ ರಾಜ್ಯಗಳಲ್ಲಿ ಅತ್ಯಂತ ದೊಡ್ಡದು. ಆಸ್ಟ್ರೇಲಿಯದ ಮೂರನೆಯ ಒಂದರಷ್ಟಿರುವ ಈ ರಾಜ್ಯ. ಪೂ.ರೇ. 129$^0$ ಗೆ ಪಶ್ಚಿಮಕ್ಕಿರುವ ಖಂಡ ಪ್ರದೇಶವನ್ನೆಲ್ಲ ಆವರಿಸಿದೆ. ವಿಸ್ತೀರ್ಣ 25,27,621 ಚ.ಕಿಮೀ. ಜನಸಂಖ್ಯೆ 1906114 (2001). ರಾಜ್ಯದ ಪೂರ್ವದಲ್ಲಿ ಉತ್ತರ ಪ್ರದೇಶ (ನಾರ್ದರ್ನ್ ಟೆರಿಟೊರಿ) ಮತ್ತು ದಕ್ಷಿಣ ಆಸ್ಟ್ರೇಲಿಯ ಇವೆ. ರಾಜಧಾನಿ ಪರ್ತ್.

ಮೇಲ್ಮೈ ಲಕ್ಷಣ : ಪಶ್ಚಿಮ ಆಸ್ಟ್ರೇಲಿಯದ ಹೆಚ್ಚು ಭಾಗ ದಿ ಗ್ರೇಟ್ ವೆಸ್ಟರ್ನ್ ಪ್ಲೇಟೋ ಎಂದು ಕರೆಯಲಾದ ತಗ್ಗಾದ ಪ್ರಸ್ಥಭೂಮಿ. ಮರಳು ತುಂಬಿದ ದಕ್ಷಿಣ ಹಾಗೂ ಪಶ್ಚಿಮ ತೀರಪ್ರದೇಶಗಳು ಹೆಚ್ಚು ಕಡಿಮೆ ಚಪ್ಪಟೆಯಾಗಿವೆ. ಇವುಗಳಲ್ಲಿ ನೈಸರ್ಗಿಕ ಬಂದರುಗಳೂ ಒಳಚಾಚುಗಳು ಬಲು ವಿರಳ. ಕರಾವಳಿಯ ಉದ್ದ 6,960 ಚ.ಕಿಮೀ ನೈರುತ್ಯದಲ್ಲಿರುವ ಆಲ್ಬನಿ ಉತ್ತಮ ಬಂದರು. ಕಿಂಬರ್ಲಿ ವಿಭಾಗದಲ್ಲಿ ಹಬ್ಬಿರುವ ಮುಖ್ಯ ಪರ್ವತಶ್ರೇಣಿಯಾದ ಕಿಂಗ್ ಲಿಯೋಪೋಲ್ಡಿನ ಅತ್ಯುನ್ನತ ಶಿಖರ ಬ್ರೂಮ್ (927 ಮೀ) ವಾಯವ್ಯದಲ್ಲಿ ಫಾರ್ಟೆಸ್ಕ್ಯೂ ಮತ್ತು ಆಷ್ಬರ್ಟನ್ ನದಿಗಳ ನಡುವೆ ಪಶ್ಚಿಮ ಆಸ್ಟ್ರೇಲಿಯದ ಅತ್ಯುನ್ನತ ಪರ್ವತಶ್ರೇಣಿಯಾದ ಹ್ಯಾಮರ್ಸ್ಲಿ ಇದೆ. ರಾಜ್ಯದ ಅತ್ಯುನ್ನತ ಶಿಖರವಾದ ಬ್ರೂಸ್ (1.227 ಮೀ) ಈ ಶ್ರೇಣಿಯಲ್ಲಿದೆ. ನೈರುತ್ಯದಲ್ಲಿ ಹಬ್ಬಿರುವ ಡಾರ್ಲಿಂಗ್ ಶ್ರೇಣಿಯ ಅತ್ಯುನ್ನತ ಶಿಖರ ಕುಕ್ (582 ಮೀ). ದಕ್ಷಿಣದಲ್ಲಿರುವ ಸ್ಟರ್ಲಿಂಗ್ ಶ್ರೇಣಿಯ ಅತ್ಯುನ್ನತ ಶಿಖರ ಬ್ಲಫ್ ನಾಲ್ (1.109 ಮೀ). ಅದಕ್ಕೂ ಕರಾವಳಿಗೂ ನಡುವೆ ತಗ್ಗಾದ ಪೊರಾನ್ ಗೊರಪ್ ಶ್ರೇಣಿಯಿದೆ. ಪಶ್ಚಿಮ ಆಸ್ಟ್ರೇಲಿಯದಲ್ಲಿ ಇಡೀ ವರ್ಷ ಹರಿಯುವ ದೊಡ್ಡ ನದಿಗಳು ವಿರಳ, ಮಳೆ ಬಿದ್ದಾಗ ತುಂಬಿ ಹರಿಯುವ, ಮತ್ತು ಒಣ ಋತುವಿನಲ್ಲಿ ಸಣ್ಣ ಸಣ್ಣ ಮಡುಗಳ ಸಾಲುಗಳಂತೆ ಕಾಣುವ ನದಿಗಳೇ ಹೆಚ್ಚು.

ವಾಯುಗುಣ : ಪಶ್ಚಿಮ ಆಸ್ಟ್ರೇಲಿಯದ್ದು ಸಮಶೀತೋಷ್ಣವಾಯುಗುಣ. ಚಳಿಗಾಲದಲ್ಲಿ ಸಾಗರಿಕ ಬೇಸಗೆಯಲ್ಲಿ ಉಷ್ಣತೆ ಮಿತವಾಗಿರುತ್ತದೆ. ಒಳನಾಡಿನಲ್ಲಿ ಶುಷ್ಕ ವಾಯುಗುಣ ಇರುತ್ತದೆ. ಶೇ. 58 ರಷ್ಟು ಪ್ರದೇಶದಲ್ಲಿ, ಅಂದರೆ ಮಧ್ಯದ ಒಳನಾಡಿನಲ್ಲಿ 25 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ. 76 ಸೆಂಮಿ ಅಥವಾ ಅದಕ್ಕೆ ಹೆಚ್ಚಿನ ಮಳೆಯ ಭರವಸೆ ಇರುವ ಪ್ರದೇಶ ಶೇಕಡ 5.4ರಷ್ಟು ಮಾತ್ರ. ಅದು ಹೆಚ್ಚಾಗಿ ನೈರುತ್ಯದಲ್ಲಿದೆ.

ಸಸ್ಯವರ್ಗ : ಇಲ್ಲಿ 6,800 ಬಗೆಯ ಸಸ್ಯಗಳಿವೆ. ಅವುಗಳಲ್ಲಿ ಕೀಟಾಹಾರಿ ಪಿಚರ್, ಕಾಂಗರೂ ಹುಲ್ಲು, ಫೆದರ್‌ಫ್ಲವರ್ ಮತ್ತು ಕ್ರಿಸಮಸ್ ಮರ ವಿಶಿಷ್ಟವಾದವು. ಉತ್ತರಭಾಗದಲ್ಲಿ ಮಾನ್‌ಸೂನ್ ಕಾಡುಗಳಿವೆ. ಕಿಂಬರ್ಲಿ ಪ್ರದೇಶದಲ್ಲಿ ಹುಲ್ಲು ಸಮೃದ್ಧವಾಗಿ ಬೆಳೆಯುತ್ತದೆ. ಫಿಟ್ಸ್‌ರಾಯ್‌ನದಿಯ ದಕ್ಷಿಣದಲ್ಲಿ ಎತ್ತರವಾದ ಹುಲ್ಲುಗಾವಲಿದೆ. ನೈರುತ್ಯದಲ್ಲಿ ಹುಲ್ಲುಗಾವಲು ಕಡಿಮೆಯಿದ್ದು ಮರ ಮತ್ತು ಗುಲ್ಮಗಳು ಹೆಚ್ಚಾಗಿವೆ. ಅಲ್ಲಿಯ ಸಸ್ಯವರ್ಗ ಹೆಚ್ಚು ವೈವಿಧ್ಯ. ಹೂ ಬಿಡುವ ಗಿಡಗಳೂ ಹೆಚ್ಚಾಗಿವೆ. ರಾಜ್ಯದ ಅಧಿಕ ಭಾಗವನ್ನು ಮರುಭೂಮಿ ಆವರಿಸಿದೆ. ಕಾಡು ಮುಖ್ಯವಾಗಿರುವುದು ನೈರುತ್ಯ ಭಾಗದಲ್ಲಿ. ಮರಳುಮಯವಾದ ಕರಾವಳಿ ಬಯಲಿನಲ್ಲೂ ನೈರುತ್ಯದ ಒಳನಾಡಿನಲ್ಲೂ ನೀಲಗಿರಿ ಮರಗಳು ಬೆಳೆಯುತ್ತವೆ.

ಕೃಷಿ : ಕೃಷಿಕೂಲಿ ವಿರಳವೂ ಹೆಚ್ಚು ವೆಚ್ಚದ್ದೂ ಆಗಿರುವುದರಿಂದ ವ್ಯವಸಾಯವನ್ನು ಪೂರ್ಣವಾಗಿ ಯಾಂತ್ರೀಕರಿಸಲಾಗಿದೆ. ಕಬ್ಬು, ಕುಸುಬೆ, ಬತ್ತ ಮುಖ್ಯ ವಾಣಿಜ್ಯ ಬೆಳೆಗಳು ಉತ್ತರದಲ್ಲಿ ದನಕರುಗಳನ್ನು ಸಾಕುತ್ತಾರೆ. ಪೂರ್ವ ಕಿಂಬರ್ಲಿ ಪ್ರದೇಶದಲ್ಲಿ ಹತ್ತಿ ಬೆಳೆಯುತ್ತದೆ. ಜವೆ ಗೋದಿ, ಬಾರ್ಲಿ, ಮೇವಿನ ಹುಲ್ಲು, ತಂಬಾಕು, ಆಲೂಗಡ್ಡೆ ಅಗಸೆಯ ನಾರು – ಇವು ಇತರ ವ್ಯವಸಾಯ ಬೆಳೆಗಳು. ಹಣ್ಣಿನ ಮತ್ತು ದ್ರಾಕ್ಷಿಯ ತೋಟಗಳಿವೆ.

ಕುರಿಸಾಕಣೆ ವ್ಯಾಪಕವಾಗಿದೆ. ಮೆರಿನೋ ಜಾತಿಯ ಕುರಿಗಳನ್ನು ಸಾಕುತ್ತಾರೆ. ರಾಜ್ಯದ ಉತ್ತರಭಾಗದಲ್ಲಿ ಇವುಗಳ ಉತ್ಪಾದನೆ ಒಂದು ವಿಶೇಷ ಉದ್ಯಮ. ಹೈನಿನ ಪದಾರ್ಥಗಳನ್ನು ತಯಾರಿಸಲಾಗುತ್ತದೆ. ಮೊಟ್ಟೆಗಳನ್ನು ವಿಶೇಷವಾಗಿ ಗ್ರೇಟ್ ಬ್ರಿಟನ್ನಿಗೆ ರಫ್ತುಮಾಡಲಾಗುತ್ತಿದೆ.

ಖನಿಜ ಸಂಪತ್ತು : ರಾಜ್ಯದಲ್ಲಿ ಅನೇಕ ಖನಿಜಗಳು ದೊರೆಯುತ್ತವೆ. ಬಹುಕಾಲದಿಂದ ಜೆರಾಲ್ಡ್‌ಟನ್ನಿನ ಹತ್ತಿರ ಸೀಸ, ತಾಮ್ರಗಳ ಗಣಿಗಾರಿಕೆ ನಡೆಯುತ್ತಿದೆ. ಮಾರ್ಗನ್ ಶಿಖರ, ಫಿಲಿಪ್ಸ್ ನದಿ ಮತ್ತು ಪಶ್ಚಿಮ ವೆಲ್ಬಾರಾ ಪ್ರದೇಶಗಳಲ್ಲೂ ತಾಮ್ರನಿಕ್ಷೇಪಗಳಿವೆ. ಕೂಲ್ಗಾರ್ಡಿ ಮತ್ತು ಕಾಲ್ಗೂರ್ಲಿಯಲ್ಲಿ ಚಿನ್ನದ ಗಣಿಗಳಿವೆ. ಆಸ್ಟ್ರೇಲಿಯದ ಚಿನ್ನದ ಉತ್ಪಾದನೆಯ ಶೇ. 73 ಬರುವುದು ಈ ರಾಜ್ಯದ ಗಣಿಗಳಿಂದ. ಬ್ಲ್ಯಾಕ್‌ವುಡ್ ನದಿಯ ಮೇಲೆ ಗ್ರೀನ್ ಬುಷಸ್‌ನಲ್ಲಿ ಮತ್ತು ಮೊರ್ಬಲ್ ಬಾರ್‌ನಲ್ಲಿ ತವರ ದೊರೆಯುತ್ತದೆ. ವಾಯವ್ಯದ ಆರ್ಷ್‌ಬರ್ಟನ್ ಹಾಗೂ ಪಿಲ್ಬಾರಾ ಪ್ರದೇಶಗಳಲ್ಲಿ ಕಬ್ಬಿಣ ಅದಿರಿನ ನಿಕ್ಷೇಪಗಳಿವೆ. ಪರ್ತ್‌ನ ಸುತ್ತಮುತ್ತಲಿನ ಗುಡ್ಡಗಳಲ್ಲಿ ಬಾಕ್ಸೈಟ್ ನಿಕ್ಷೇಪ ಪತ್ತೆಯಾಗಿದೆ. ಕಾಲ್ಗೂರ್ಲಿಯ ಬಳಿ ನಿಕ್ಕಲ್ ದೊರೆಯುತ್ತದೆ. 1967ರಲ್ಲಿ ಆನ್‌ಸ್ಲೋದ ಹತ್ತಿರ ಬ್ಯಾರೋ ದ್ವೀಪದಲ್ಲಿ ಆಸ್ಟ್ರೇಲಿಯದ ಅತ್ಯಂತ ದೊಡ್ಡ ಎಣ್ಣೆ ಬಾವಿ ಕೆಲಸ ಪ್ರಾರಂಭವಾಯಿತು. ಜೆರಾಲ್ಡ್‌ಟನ್ನಿನ ಹತ್ತಿರ ಯಾರ್ಡಾರಿನೋದಲ್ಲಿ ನೈಸರ್ಗಿಕ ಅನಿಲ ಪತ್ತೆಯಾಗಿದೆ. ಈ ರಾಜ್ಯದಲ್ಲಿ ದೊರೆಯುವ ಇತರ ಖನಿಜಗಳು ಮ್ಯಾಂಗನೀಸ್, ಇಲ್ಮೆನೈಟ್, ಮೊನೋಸೈಟ್, ರುಟೈಲ್, ಲ್ಯೂಕೋಕ್ಸಿನ್ ಜ಼ರ್ಕಾನ್.

ಕೈಗಾರಿಕೆ : ಕೈಗಾರಿಕೆ ಮುಖ್ಯವಾಗಿ ಪರ್ತ್ ನಗರದ ಪ್ರದೇಶಕ್ಕೆ ಸೀಮಿತ. ಮರ ಕೊಯ್ಯುವುದು, ಹಂದಿಯ ಮಾಂಸವನ್ನು ಕೆಡದಂತಿಡುವುದು, ಹೈನುಗಾರಿಕೆ ಉತ್ಪನ್ನಗಳ ಸಂಸ್ಕರಣೆ, ಸೂಪರ್ ಫಾಸ್ಫೇಟ್‌ಗಳ ತಯಾರಿಕೆ, ರೈಲ್ವೆ ಎಂಜಿನಿಯರಿಂಗ್ ಮೊದಲಾದವಕ್ಕೆ ಸಂಬಂಧಿಸಿದ ಕೈಗಾರಿಕೆಗಳೇ 1950ರ ದಶಕದ ಮಧ್ಯದವರೆಗೂ ಪ್ರಧಾನವಾಗಿದ್ದವು. ಈಚೆಗೆ ಪರ್ತ್–ಫ್ರೀಮ್ಯಾಂಟಲ್–ಕಾಕ್ ಬರ್ನ್ ಸೌಂಡ್ (ಕ್ವಿನಾನಾ) ಪ್ರದೇಶದಲ್ಲಿ ದೊಡ್ಡ ತೈಲ ಶುದ್ಧೀಕರಣ ಮತ್ತು ಉಕ್ಕಿನ ರೋಲಿಂಗ್ ಕಾರ್ಖಾನೆಗಳು ಕೆಲಸವಾರಂಭಿಸಿದಂದಿನಿಂದ ಸುತ್ತ ಮುತ್ತ ಅವಕ್ಕೆ ಸಂಬಂಧಿಸಿದ ಕೈಗಾರಿಕಾ ಘಟಕ ಸಂಕೀರ್ಣ ಬೆಳೆದಿದೆ.

ಸಾರಿಗೆ ಸಂಪರ್ಕ : 19ನೆಯ ಶತಮಾನದ ಕೊನೆಯಲ್ಲಿ ಇಲ್ಲಿಗೆ ರೈಲಿನ ಪ್ರವೇಶವಾಯಿತು. ಖನಿಜ ಸಾಗಣೆಯ ಕೆಲವು ಮಾರ್ಗಗಳನ್ನು ಬಿಟ್ಟರೆ ಉಳಿದ ಎಲ್ಲ ರೈಲುಮಾರ್ಗಗಳು ಸರ್ಕಾರಕ್ಕೆ ಸೇರಿದವು. ಕಾಲ್ಗೂರ್ಲಿಯನ್ನು ಸಿಡ್ನಿ, ಬ್ರಿಸ್ಬೇನ್ ಮೊದಲಾದ ಪೂರ್ವದ ರಾಜಧಾನಿಗಳೊಂದಿಗೆ ಜೋಡಿಸುವ ಖಂಡಾಂತರ ರೈಲು ಮಾರ್ಗಗಳಿವೆ. ಪಶ್ಚಿಮ ಆಸ್ಟ್ರೇಲಿಯದಲ್ಲಿ ರೈಲಿನೊಡನೆ ರಸ್ತೆ ಸಾರಿಗೆ ಸ್ಪರ್ಧಿಸುತ್ತಿದೆ. ಉತ್ತರದ ಪ್ರದೇಶದಲ್ಲಿ ವಿಮಾನಗಳನ್ನು ಸಾರಿಗೆಗೆ ವಿಶೇಷವಾಗಿ ಬಳಸಲಾಗುತ್ತಿದೆ. ಪರ್ತಿಗೆ ಈ ಪ್ರದೇಶಗಳೊಡನೆ ಹಾಗೂ ಖನಿಜಗಳ ರಫ್ತಿನ ಬಂದರುಗಳೊಡನೆ ವಿಮಾನಸಂಪರ್ಕವಿದೆ. ವಾಯವ್ಯದ ದೂರದ ಸ್ಥಳಗಳಲ್ಲಿನ ಜನರಿಗೆ ವ್ಯವಸ್ಥಿತವಾಗಿ ವೈದ್ಯಕೀಯ ಸಹಾಯ ಒದಗಿಸುವುದಕ್ಕಾಗಿ 1953ರಲ್ಲಿ ಪ್ರಾರಂಭವಾದ ರಾಯಲ್ ಹಾರುವ ವೈದ್ಯ ಸೇವೆಯಲ್ಲಿ ವಿಮಾನಗಳನ್ನು ಬಳಸಲಾಗುತ್ತಿದೆ. ಪರ್ತ ನಗರ ಅಂತಾರಾಷ್ಟ್ರೀಯ ವಿಮಾನ ಪಥದಲ್ಲಿದೆ. ಫ್ರೀಮ್ಯಾಂಟಲ್ ಮುಖ್ಯ ಬಂದರು. ಸೂಯೆಜ಼್ ಕಾಲುವೆ ಮತ್ತು ಗುಡ್‌ಹೋಪ್ ಭೂಶಿರಗಳ ಮಾರ್ಗವಾಗಿ ಸಂಚರಿಸುವ ಹಡಗುಗಳು ಇಲ್ಲಿಗೆ ಬರುತ್ತವೆ. ಪಶ್ಚಿಮ ಆಸ್ಟ್ರೇಲಿಯಕ್ಕೂ ಇತರ ರಾಜ್ಯಗಳಿಗೂ ನಡುವೆ ಹಡಗು ಸಂಚಾರವುಂಟು. ಮುಖ್ಯವಾಗಿ ಉತ್ತರದತ್ತ ಹೋಗುವ ಕರಾವಳಿ ನೌಕಾಮಾರ್ಗಗಳು ಜಾವ ಮತ್ತು ಸಿಂಗಪುರದವರೆಗೂ ಸಾಗುತ್ತವೆ. ಆಲ್ಬನಿ. ಬನ್‌ಬರಿ. ಜೆರಾಲ್ಡ್‌ಟನ್ ಮತ್ತು ಬ್ರೂಮ್ ಇತರ ಬಂದರುಗಳು. (ಜಿ.ಕೆ.ಯು.)

**ಪಶ್ಚಿಮ ಘಟ್ಟಗಳು:** ದಕ್ಷಿಣ ಭಾರತದ ಪಶ್ಚಿಮ ಕರಾವಳಿ ಸಮೀಪದಲ್ಲಿ ತಪತಿ ನದಿಯ ಬಳಿಯಿಂದ ಕನ್ಯಾಕುಮಾರಿಯವರೆಗೆ ಸು. 1600 ಕಿಮೀ ದೂರ ಹಬ್ಬಿರುವ ಪರ್ವತ ಶ್ರೇಣಿ, ಸಹ್ಯಾದ್ರಿ ಎಂದೂ ಇದಕ್ಕೆ ಹೆಸರಿದೆ. ದಕ್ಷಿಣದ ಪಾಲಘಾಟ್ ಬಿಟ್ಟು ಅವಿಚ್ಛಿನ್ನವಾಗಿ ಸಾಗಿರುವ ಈ ಘಟ್ಟಗಳು ಮಹಾರಾಷ್ಟ್ರ, ಗೋವ, ಕರ್ನಾಟಕ, ತಮಿಳುನಾಡು ಹಾಗೂ ಕೇರಳ ಭಾಗಗಳಲ್ಲಿ ಹರಡಿವೆ.

ಪಶ್ಚಿಮ ಘಟ್ಟಗಳು ಮಹಾರಾಷ್ಟ್ರ ರಾಜ್ಯದ ಉತ್ತರದ ತುದಿಯಲ್ಲಿ ತಪತಿ ನದಿ ಕಣಿವೆಯ ಕುಂಬೈಬಾರಿ ಬಳಿ (ಉ.ಅ. 21$^0$6$'$ ಮತ್ತು ಪೂ.ರೇ.73$^0$) ಪ್ರಾರಂಭವಾಗಿ ಸಮುದ್ರಮಟ್ಟಕ್ಕೆ ಸರಾಸರಿ 1220 ಮೀ ಎತ್ತರದಲ್ಲಿ ಸಾಗಿವೆ. ಸಮುದ್ರಕ್ಕೂ ಕಡಿದಾದ ಮತ್ತು ಪೂರ್ವಕ್ಕೆ ಬಳಿದಾದ ಇಳಿಜಾರನ್ನು ಹೊಂದಿದೆ. ದಕ್ಷಿಣ ಭಾರತಕ್ಕೆ ಇದು ಜಲ ವಿಭಾಜಕ ಪ್ರದೇಶವಾಗಿದೆ. ಎಲ್ಲಾ ನದಿಗಳು ಇಲ್ಲಿಯೇ ಉಗಮಿಸಿ ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿಯನ್ನು ಹಾಗೂ ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಪಶ್ಚಿಮಕ್ಕೆ ಹರಿಯುವ ನದಿಗಳ ಉದ್ದ ಕಡಿಮೆ ಅವು ರಭಸವಾಗಿ ಹರಿದು ಜಲಪಾತಗಳನ್ನು ಉಂಟುಮಾಡುತ್ತವೆ. ಇಲ್ಲಿ ಕಂಡುಬರುವ ಕೆಲವು ಶಿಖರಗಳ ಎತ್ತರ 1500 ಮೀ ಗಿಂತ ಹೆಚ್ಚಿದೆ. ಕರ್ನಾಟಕ ಭಾಗದ ಪಶ್ಚಿಮಘಟ್ಟಗಳ ಉತ್ತರ ಭಾಗದಲ್ಲಿ ಸಾಲ್ಪ್ ಶಿಲೆಗಳು ಮತ್ತು ದಕ್ಷಿಣದಲ್ಲಿ ಗ್ರಾನೈಟ್, ನಿಸ್, ಮತ್ತು ಸಿಸ್ಟ್ ಶಿಲೆಗಳಿವೆ. ಈ ಭಾಗದಲ್ಲಿ ಕೆಲವು ಪರ್ವತ ಮಾರ್ಗಗಳು (ಘಾಟಿ) ಕಂಡು ಬಂದು ಒಳ ಭಾಗದ ಮೈದಾನ ಮತ್ತು ಕರಾವಳಿ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಪಾಲಘಾಟ್, ತಾಲಘಾಟ್ ಮತ್ತು ಬೋರಘಾಟ್. ಇದರ ಮೂಲಕ ರಸ್ತೆ ಮತ್ತು ರೈಲು ಮಾರ್ಗಗಳನ್ನು ನಿರ್ಮಿಸಲಾಗಿದೆ.

ನೀಲಗಿರಿ ಬೆಟ್ಟಗಳಲ್ಲಿ ಪಶ್ಚಿಮ ಮತ್ತು ಪೂರ್ವಘಟ್ಟಗಳು ಸಂಧಿಸುತ್ತವೆ. ದೊಡ್ಡ ಬೆಟ್ಟವು (2637 ಮೀ) ನೀಲಗಿರಿ ಬೆಟ್ಟಗಳಲ್ಲೇ ಅತ್ಯಂತ ಎತ್ತರವಾಗಿದ್ದು ತಮಿಳುನಾಡಿನ ಉದಕಮಂಡಲದಲ್ಲಿದೆ. ಪಾಲಘಾಟ್ ಘಾಟಿ ಪಶ್ಚಿಮ ಘಟ್ಟಗಳ ಅವಿಚ್ಛಿನ್ನತೆಯನ್ನು ಮುರಿದಿದೆ. ಆದ್ದರಿಂದ ದಕ್ಷಿಣಕ್ಕೆ ಅಣ್ಣಾಮಲೈ, ಪಳನಿ ಬೆಟ್ಟ ಮತ್ತು ಕಾರ್ಡಮಮ್ ಬೆಟ್ಟಗಳಿವೆ. ಆನೆಮುಡಿ (2695ಮೀ) ದಕ್ಷಿಣ ಭಾರತದಲ್ಲೇ ಅತ್ಯಂತ ಎತ್ತರವಾದ ಶಿಖರವಾಗಿದೆ. ಇದು ಅಣ್ಣಾಮಲೈ ಶ್ರೇಣಿಯಲ್ಲಿದೆ. ಪಶ್ಚಿಮ ಘಟ್ಟಗಳು ಜಲವಿದ್ಯುತ್ ತಯಾರಿಕೆಗೆ ಸೂಕ್ತವಾಗಿವೆ. ಇವು ದಟ್ಟವಾದ ಅರಣ್ಯದಿಂದ ಕೂಡಿವೆ. ಈ ಅರಣ್ಯದಲ್ಲಿ ಬಿದಿರು, ತೇಗ, ಹೊನ್ನೆ, ಶ್ರೀಗಂಧ ಮೊದಲಾದ ಮರಗಳಿವೆ. ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಿಂದ ಕೇರಳದವರೆಗೆ ಕಾಫಿ, ಚಹ, ಏಲಕ್ಕಿ, ಬಾಳೆ, ಮೆಣಸು, ರಬ್ಬರ್, ಗೋಡಂಬಿ ಬೆಳೆಯಲಾಗುತ್ತದೆ. ಇಲ್ಲಿಯ ವನ್ಯಮೃಗಗಳು ಕಾಡುಕೋಣ, ಹುಲಿ, ಆನೆ, ಜಿಂಕೆ, ಡೊಂಕು ಕೊಂಬಿನ ನೀಲಗಿರಿ ಕಾಡುಕುರಿ.

ಪಶ್ಚಿಮಘಟ್ಟ ಪ್ರದೇಶದ ನೀಲಗಿರಿಯಲ್ಲಿ ತೋಡರು, ಕುರುಬರು, ಆನೈಮಲೈ ಅರಣ್ಯಗಳಲ್ಲಿ ಕಾಡರು, ಕರ್ನಾಟದ ಭಾಗದಲ್ಲಿ ಲಂಬಾಣಿ ಮೊದಲಾದ ಆದಿವಾಸಿಗಳು ವಾಸಿಸುತ್ತಾರೆ. ಹಲವಾರು ತೀರ್ಥಕ್ಷೇತ್ರಗಳಾದ ಶೃಂಗೇರಿ, ಧರ್ಮಸ್ಥಳ, ಪಳನಿ, ಶಬರಿಮಲೈ ಇತ್ಯಾದಿ ಈ ಘಟ್ಟಗಳಲ್ಲಿ ಹಂಚಿಕೆಯಾಗಿವೆ. (ಎ.ಜಿ.ಕೆ.)

**ಪಶ್ಚಿಮ ಬಂಗಾಲ:** ಭಾರತ ಗಣರಾಜ್ಯದ ಒಂದು ರಾಜ್ಯ. ದೇಶದ ಈಶಾನ್ಯ ಭಾಗದಲ್ಲಿ, ಉ.ಅ. $21^{0}38'–27^{0}10'$ ಮತ್ತು ಪೂ.ರೇ. $85^{0}50'–89^{0}50'$ ನಡುವೆ ಇದೆ. ಕರ್ಕಾಟಕ ಸಂಕ್ರಾಂತಿ ವೃತ್ತ ಈ ರಾಜ್ಯದ ನಡುವೆ ಹಾದುಹೋಗುತ್ತದೆ. ರಾಜ್ಯದ ಉತ್ತರದಲ್ಲಿ ಸಿಕ್ಕಿಂ ಮತ್ತು ಭೂತಾನ್, ದಕ್ಷಿಣದಲ್ಲಿ ಬಂಗಾಲ ಕೊಲ್ಲಿ, ಪೂರ್ವದಲ್ಲಿ ಅಸ್ಸಾಂ ಮತ್ತು ಬಾಂಗ್ಲಾದೇಶ, ಪಶ್ಚಿಮದಲ್ಲಿ ಜಾರ್ಖಂಡ್, ಒರಿಸ್ಸ, ಬಿಹಾರ ಮತ್ತು ನೇಪಾಲ ಇವೆ. ಇದರ ವಿಸ್ತೀರ್ಣ 87,853 ಚ.ಕಿಮೀ. ಜನಸಂಖ್ಯೆ 80,176,192. ಜನಸಂಖ್ಯೆಯಲ್ಲಿ ಈ ರಾಜ್ಯದ್ದು ಭಾರತದ ರಾಜ್ಯಗಳ ಪೈಕಿ ನಾಲ್ಕನೆಯ ಸ್ಥಾನ. ರಾಜಧಾನಿ ಕೋಲ್ಕತ. ಜನಸಾಂದ್ರತೆ ಚ.ಕಿಮೀ ಗೆ 903. ರಾಜಧಾನಿ ಕೋಲ್ಕತ ಜನಸಂಖ್ಯೆ 13,216,544.

ಭಾರತ ವಿಭಜನೆಯಾದಾಗ ಆಗಿನ ಬಂಗಾಲ ಪ್ರಾಂತ್ಯವನ್ನು ಪೂರ್ವ ಮತ್ತು ಪಶ್ಚಿಮ ಬಂಗಾಲಗಳಾಗಿ ವಿಂಗಡಿಸಲಾಯಿತು. ಪೂರ್ವ ಬಂಗಾಲ ಪೂರ್ವ ಪಾಕಿಸ್ತಾನವಾಯಿತು (ಬಾಂಗ್ಲದೇಶ). ಪಶ್ಚಿಮ ಬಂಗಾಲ ಭಾರತದಲ್ಲಿ ಉಳಿಯಿತು.

ಈ ರಾಜ್ಯ ವಿಚಿತ್ರವಾದ ಆಕಾರ ಹೊಂದಿದೆ. ಇದರ ಅಗಲ ಒಂದೆಡೆಯಲ್ಲಿ 320 ಕಿಮೀ ಇದ್ದರೆ ಇನ್ನೊಂದಡೆಯಲ್ಲಿ ಕೇವಲ 16 ಕಿಮೀ ಭಾರತದ ರಕ್ಷಣಾ ದೃಷ್ಟಿಯಿಂದ ಇದರದು ಆಯಕಟ್ಟಿನ ಸ್ಥಾನ. ಬಾಂಗ್ಲಾದೇಶದೊಂದಿಗೆ ಸು. 2,160 ಕಿಮೀ ಉದ್ದದ ಗಡಿ ಇದಕ್ಕಿದೆ.

ಮೇಲ್ಮೈ ಲಕ್ಷಣ : ಪಶ್ಚಿಮ ಬಂಗಾಲ ಬಹುತೇಕ ಮೆಕ್ಕಲು ಮಣ್ಣಿನ ಬಯಲು ಪ್ರದೇಶ. ಇದರ ಬಹುಭಾಗ ಗಂಗನದಿಯ ಮುಖಜ ಭೂಮಿ. ಒಟ್ಟು ಪ್ರದೇಶದ ಶೇ. 1 ರಷ್ಟು ಭಾಗ ಮಾತ್ರ ಪರ್ವತ ಪ್ರದೇಶ. ಈ ರಾಜ್ಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು: 1. ಉತ್ತರದಲ್ಲಿರುವ ಹಿಮಾಲಯ ಮತ್ತು ಅದರ ತಪ್ಪಲಿನ ಪ್ರದೇಶ, 2. ದಕ್ಷಿಣದ ಮೆಕ್ಕಲು ಮಣ್ಣಿನ ಬಯಲು. ರಾಜ್ಯದ ಉತ್ತರ ಗಡಿಯಲ್ಲಿ ಪ್ರಪಂಚದ ಅತ್ಯಂತ ಎತ್ತರದ ಹಿಮಾಲಯ ಪರ್ವತ ಶ್ರೇಣಿ ಇದೆ. ಈ ಸೀಮೆ ಡಾರ್ಜಿಲಿಂಗ್ ಜಿಲ್ಲೆಯನ್ನು ಒಳಗೊಳ್ಳುತ್ತದೆ. ಈ ಜಿಲ್ಲೆ ಸಮುದ್ರಮಟ್ಟದಿಂದ 3,658 ಮೀ ಎತ್ತರದಲ್ಲಿದೆ. ಕಾಂಚನಗಂಗ ಶಿಖರ ಇದಕ್ಕೆ ಸಮೀಪದಲ್ಲಿದೆ. ಮೋಡವಿಲ್ಲದ ದಿನಗಳಲ್ಲಿ ಗೌರೀಶಂಕರ ಶಿಖರ ಇಲ್ಲಿಗೆ ಕಾಣುತ್ತದೆ. ಹಿಮಾಲಯ ತಪ್ಪಲಿನ ಹರವು ಜಲಪೈಗುರಿ ಮತ್ತು ಕೂಚ್‌ಬಿಹಾರ್ ಜಿಲ್ಲೆಗಳಲ್ಲಿ ಹಬ್ಬಿದೆ.

ವಿಶಾಲವಾದ ಮೆಕ್ಕಲು ಬಯಲು ಉತ್ತರದ ಜಲಪೈಗುರಿ ಮತ್ತು ಸಿಲಗುರಿಯಿಂದ ಹಿಡಿದು ದಕ್ಷಿಣದ ಸುಂದರಬನ ಖಾರಿಯ ವರೆಗೆ ಹರಡಿಕೊಂಡಿದೆ. ಮಾಲ್ಡಾ ಜಿಲ್ಲೆಯನ್ನು ಒಳಗೊಳ್ಳುವ ಮಹಾನದಿ ಬಯಲು ಅನೇಕ ಸಣ್ಣ ತೊರೆಗಳಿಂದ ಕೂಡಿದ ಎತ್ತರದ ಮೆಕ್ಕಲು ಪ್ರದೇಶ, ಬಿರ್‌ಭೂಮ್, ಬುರ್ದ್ವಾನ್, ಬಂಕುರ, ಮಿಡ್ನಾಪುರ ಮತ್ತು ಪುರುಲಿಯ ಜಿಲ್ಲೆಗಳನ್ನು ಒಳಗೊಳ್ಳುವ ಪ್ರಸ್ಥಭೂಮಿಯ ಅಂಚುನೆಲ ಅಲ್ಲಲ್ಲಿ ಗುಡ್ಡಬೆಟ್ಟಗಳಿಂದ ಕೂಡಿರುವ, ವಿರಳವಾದ ಕಾಡುಗಳನ್ನುಳ್ಳ ಕೆಂಪು ಮಣ್ಣಿನ ಪ್ರದೇಶ. ಗಂಗ ನದಿಯ ದಕ್ಷಿಣಕ್ಕೆ ಇರುವ ಬಯಲು ಭಾಗೀರಥಿ ಹೂಗ್ಲಿ ನದಿಯಿಂದಾಗಿ ಇಬ್ಭಾಗವಾಗಿದೆ.

ಮಣ್ಣು : ರಾಜ್ಯ ಸರ್ಕಾರ ನಡೆಸಿದ ಸರ್ವೇಕ್ಷಣೆಯಲ್ಲಿ ಇಲ್ಲಿಯ ಮಣ್ಣನ್ನು ಕೆಳಕಂಡಂತೆ ವಿಂಗಡಿಸಲಾಗಿದೆ (1965): 1. ಕೆಂಪು ಜೇಡಿಮಣ್ಣು; 2. ತರೈ ಮಣ್ಣು; ಈ ಮಣ್ಣು ಪಶ್ಚಿಮ ಬಂಗಾಳಕ್ಕೆ ವಿಶಿಷ್ಟವಾದ್ದು : 3. ಕರಾವಳಿಯ ಉಪ್ಪು ಮಣ್ಣು; 4. ಮರಳುಕಲ್ಲಿನ ಮಣ್ಣು; 5. ಕಂದು ಕಾಡು ಮಣ್ಣು.

ವಾಯುಗುಣ : ಉತ್ತರದ ಎತ್ತರವಾದ ಪ್ರದೇಶಗಳನ್ನು ಬಿಟ್ಟರೆ, ಪಶ್ಚಿಮ ಬಂಗಾಳದಲ್ಲಿ ಮೂಲಭೂತವಾಗಿ ಉಷ್ಣವಲಯದ ವಾಯುಗುಣವಿದೆ. ಇಲ್ಲಿ ಹೆಚ್ಚು ಆರ್ದ್ರತೆ ಹಾಗೂ ತಕ್ಕಮಟ್ಟಿಗೆ ಅಧಿಕ ಉಷ್ಣತೆ ಇರುತ್ತದೆ.

1. ಬೇಸಗೆ: ಮಾರ್ಚಿಯಿಂದ ಜೂನ್ ಆರಂಭದ ವರೆಗೆ); 2. ಮಳೆಗಾಲ: ಜೂನ್ ಮಧ್ಯದಿಂದ ಸೆಪ್ಟಂಬರ್ ವರೆಗೆ; 3. ಚಳಿಗಾಲ: ಅಕ್ಟೋಬರಿನಿಂದ ಫೆಬ್ರವರಿಯ ವರೆಗೆ. ಉಷ್ಣತೆಯಲ್ಲಿ ಅತಿಯಾದ ಏರಿಳಿತಗಳಿರುವುದಿಲ್ಲ. ಗರಿಷ್ಠ ಉಷ್ಣತೆ $45^{0}$ಸೆ. ವರೆಗೂ ಏರಬಹುದು. ಕನಿಷ್ಠ ಉಷ್ಣತೆ $15^{0}$ಸೆ. ವರೆಗೂ ಇಳಿಯಬಹುದು. ಮೇ–ಜೂನ್ ತಿಂಗಳುಗಳಲ್ಲಿ ತೀವ್ರ ಧಗೆ ಇರುತ್ತದೆ; ನವೆಂಬರ್–ಡಿಸೆಂಬರ್‌ಗಳಲ್ಲಿ ಚಳಿ. ಜೂನ್‌ನಲ್ಲಿ ಮಳೆಗಾಲ ಆರಂಭವಾಗುತ್ತದೆ. ಆಗ್ನೇಯ ಮಾನ್ಸೂನ್ ಮಾರುತಗಳು ಮಳೆ ತರುತ್ತವೆ. ಬಂಗಾಳ ಕೊಲ್ಲಿಯ ಸಾಗರಪ್ರವಾಹ ಮತ್ತು ಒತ್ತಡದ ಕುಸಿತ ಸಂಭಾವ್ಯತೆ ಹಾಗೂ ಅವುಗಳ ಚಲನೆಗಳನ್ನು ಮಳೆತೀವ್ರತೆ ಅವಲಂಬಿಸುತ್ತದೆ. ಪಶ್ಚಿಮ ಬಂಗಾಳ ಹೆಚ್ಚು ಮಳೆ ಬೀಳುವ ಪ್ರದೇಶ. ರಾಜ್ಯದ ಸರಾಸರಿ ಮಳೆ ಸು. 175 ಸೆಂಮೀ. ಇದರಲ್ಲಿ 125 ಸೆಂಮೀ ಗಳಷ್ಟು ಮಳೆ ಬೀಳುವುದು ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ, ದಕ್ಷಿಣದಲ್ಲಿ 120 ಸೆಂಮೀ ಗಳಿಂದ ಹಿಡಿದು ಉತ್ತರದಲ್ಲಿ 400 ಸೆಂಮೀ ಗಳವರೆಗೂ ಮಳೆ ವ್ಯತ್ಯಾಸವಾಗುತ್ತದೆ. ಉತ್ತರದ ಜಿಲ್ಲೆಗಳಲ್ಲಿ 300 ಸೆಂಮೀ ಗಳಿಗೂ ಹೆಚ್ಚು ಮಳೆಯಾಗುತ್ತದೆ. ನದಿ ಬಯಲು, ಸುಂದರಬನ, ಕಾಂತಿ ಕರಾವಳಿ–ಇಲ್ಲಿ ಸು. 200 ಸೆಂಮೀ ಮಿಡ್ನಾಪುರ, ಹೌರ, ಹೂಗ್ಲಿ ನದಿಯ ಜಿಲ್ಲೆಗಳಲ್ಲಿ 140–160 ಸೆಂಮೀ ಮಳೆಯಾಗುತ್ತದೆ. ಅತ್ಯಂತ ಕಡಿಮೆ ಮಳೆ ಬೀಳುವ ಜಿಲ್ಲೆಯಾದ ಬಂಕುರದಲ್ಲಿ ಬೀಳುವ ಮಳೆ ಸು. 118 ಸೆಂಮೀ.




ಸಸ್ಯಪ್ರಾಣಿ ಸಂಪತ್ತು : ಪಶ್ಚಿಮ ಬಂಗಾಳದಲ್ಲಿ ವಾಯುಗುಣ ಮತ್ತು ಮಣ್ಣಿಗೆ ಅನುಗುಣವಾದ ಸಸ್ಯವರ್ಗವಿದೆ. ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದ ಶೇ. 13.4 ರಷ್ಟು ಭೂಮಿ ಅರಣ್ಯಾವೃತ. ಜನಸಾಂದ್ರತೆ

ಹೆಚ್ಚುತ್ತಿರುವುದರಿಂದ ಹೆಚ್ಚು ಹೆಚ್ಚು ಭೂಮಿಯನ್ನು ಸಾಗುವಳಿಗೆ ತರಲಾಗುತ್ತಿದೆ. ಇದರಿಂದ ಪಶ್ಚಿಮ ಬಂಗಾಳದ ನೈಸರ್ಗಿಕ ಸಸ್ಯಸಂಪತ್ತು ನಶಿಸುತ್ತಿದೆ. ಸಾಮಾನ್ಯವಾಗಿ ಇಲ್ಲಿ ಮೂರು ಬಗೆಯ ಅರಣ್ಯಗಳನ್ನು ಗುರುತಿಸಬಹುದು: 1. ಪರ್ವತಪ್ರದೇಶದ ಸಮಶೀತೋಷ್ಣ ಕಾಡು, 2. ಪರ್ವತ ತಪ್ಪಲಿನ ಪರ್ಣಪಾತಿ ಕಾಡು, ಮತ್ತು 3. ಸುಂದರಬನದ ಮ್ಯಾಂಗ್ರೂವ್ ಉಷ್ಣವಲಯ ಕಾಡು. ಅಲ್ಲದೆ ಉತ್ತರದಲ್ಲಿ ಪರ್ವತ ಇಳಿಜಾರುಗಳಲ್ಲಿ ಚಹ ತೋಟಗಳು ಹಾಗೂ ದೇವದಾರು ಅರಣ್ಯಗಳು ಹಬ್ಬಿಕೊಂಡಿವೆ. ತಪ್ಪಲು ಪ್ರದೇಶದ ವಿರಳ ಕಾಡುಗಳಲ್ಲಿ ಸಾಲವೃಕ್ಷ, ಮಹುವ, ಪಾರಾಶ, ಸಂಪಿಗೆ, ಬೀಟೆ ಮುಂತಾದ ಮರಗಳನ್ನು ಕಾಣಬಹುದು. ಬಯಲಿನ ಕಾಡುಗಳಲ್ಲಿ ಬೆಲೆಬಾಳುವ ಮರಮುಟ್ಟು ನೀಡುವ ವೃಕ್ಷಗಳಿವೆ. ಬಿದಿರು ಮತ್ತು ನೀಳ ಹುಲ್ಲು ವಿಪುಲವಾಗಿ ಬೆಳೆಯುತ್ತವೆ. ಕಾಂತಿ ಕರಾವಳಿಯಲ್ಲಿ ಸಮುದ್ರದ ಕೊರೆತವನ್ನು ತಪ್ಪಿಸಲು ಸರ್ವೆಮರಗಳ ಕಾಡನ್ನು ಬೆಳೆಸಲಾಗುತ್ತಿದೆ. ಶೀಘ್ರವಾಗಿ ಬೆಳೆಯುವ ಜಪಾನಿ ಮರ ಕುಡ್ಜುವನ್ನು ನೆಡಲಾಗುತ್ತಿದೆ. ಈ ಭಾಗದ ನೈಸರ್ಗಿಕ ಸಸ್ಯವೆಂದರೆ ಕೆಯಾ ಪೊದೆ, ಇದರ ಸುವಾಸನೆಯ ಹೂಗಳನ್ನು ಸಂಗ್ರಹಿಸಿ ಪ್ರಸಿದ್ಧ ಕೆವ್ರಾ ಸುಗಂಧವನ್ನು ಉತ್ಪಾದಿಸುತ್ತಾರೆ, ಸಾಲ ವೃಕ್ಷಗಳು ಮರಳುಮಣ್ಣಿನಲ್ಲಿ ಬೆಳೆಯುತ್ತವೆ. ನೇರಳೆ, ಮಾವು, ಹಲಸು ಹಾಗೂ ಬಾಳೆ ಪಶ್ಚಿಮ ಬಂಗಾಲದ ಪ್ರಮುಖ ಫಲವೃಕ್ಷಗಳು.

ಉತ್ತರದ ಜಿಲ್ಲೆಗಳ ಕಾಡುಗಳಲ್ಲಿ ಹುಲಿ, ಚಿರತೆ, ಆನೆ, ಕಾಡೆಮ್ಮೆ, ನೀರಾನೆ ಮತ್ತು ಇತರ ಹಲವು ದೊಡ್ಡಮಟ್ಟದ ಪ್ರಾಣಿಗಳಿವೆ. ಉರಗ ಹಾಗೂ ವಿವಿಧ ಜಾತಿಯ ಪಕ್ಷಿಗಳು ಇಲ್ಲಿವೆ. ಜಾಲ್ಡಾಕಾ ನದಿ ಕಣಿವೆಯಲ್ಲಿ ಒಂದು ಪ್ರಾಣಿಧಾಮವಿದೆ.

ಪಶ್ಚಿಮ ಬಂಗಾಲದಲ್ಲಿ ಮಾನ್ಯತೆ ಪಡೆದ 41 ಬುಡಕಟ್ಟು ಸಮುದಾಯಗಳಿವೆ. ಇವುಗಳಲ್ಲಿ ಪ್ರಸಿದ್ಧವಾದವು ಬಯಲುಸೀಮೆಯಲ್ಲಿ ಸಂತಾಲ, ಒರಾವೂ ಮತ್ತು ಮುಂಡ. ಹಿಮಾಲಯ ಪ್ರದೇಶಗಳಲ್ಲಿ ಲೆಪ್ಚಾ ಹಾಗೂ ಭೂತಿಯ. ಬುಡಕಟ್ಟು ಜನರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ.6. ರಾಜ್ಯದ ಮುಖ್ಯ ಭಾಷೆ ಬಂಗಾಲಿ. ಜನಸಂಖ್ಯೆಯ ಶೇ. 84ರಷ್ಟು ಮಂದಿ ಬಂಗಾಲಿ ಮಾತನಾಡುತ್ತಾರೆ. ಇತರ ಭಾಷೆಗಳು ಹಿಂದಿ (ಶೇ.5), ಸಂತಾಲಿ (ಶೇ. 3), ಉರ್ದು (ಶೇ. 2) ಮತ್ತು ನೇಪಾಲಿ (ಶೇ. 1). ಒರಾವೂ ಮತ್ತು ಇಂಗ್ಲಿಷ್ ಭಾಷೆಗಳೂ ಪ್ರಚಾರದಲ್ಲಿವೆ.

ನೀರಾವರಿ : ಪಶ್ಚಿಮ ಬಂಗಾಲ ಹೆಚ್ಚು ಮಳೆ ಬೀಳುವ ಪ್ರದೇಶವಾದ್ದರಿಂದ ನೀರಾವರಿಗೆ ಅಂಥ ಪ್ರಾಮುಖ್ಯವಿಲ್ಲ. ರಾಜ್ಯದ ಒಟ್ಟು ಸಾಗುವಳಿ ಪ್ರದೇಶದ ಶೇ 38ರಷ್ಟು ಭೂಮಿಯು ನೀರಾವರಿಗೆ ಒಳಪಟ್ಟಿದೆ. ಸರ್ಕಾರದಿಂದ ನಿಯಂತ್ರಿತವಾದ ನಾಲೆಗಳು ಮತ್ತು ಕೆರೆಗಳ ಸಹಾಯದಿಂದ ಪ್ರಮುಖ ಗೌಣ ಹಾಗೂ ಸಾಧಾರಣ ನೀರಾವರಿ ಯೋಜನೆಗಳ ಮೂಲಕ ಸು. 10 ಲಕ್ಷ ಹೆಕ್ಟೇರ್ ಜಮೀನು ಸಾಗುವಳಿಯಾಗುತ್ತದೆ. ಸ್ವಾತಂತ್ರ್ಯಾನಂತರ ಅನೇಕ ವಿವಿಧೋದ್ದೇಶ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಮುಖ್ಯವಾದವು ದಾಮೋದರ ಕಣಿವೆ ಹಾಗೂ ಮಯೂರಾಕ್ಷಿ ಯೋಜನೆಗಳು. ಖಂಡೆಲ್ ಶಾಖವಿದ್ಯುತ್ ಕೇಂದ್ರ ಹಾಗೂ ದುರ್ಗಾಪುರ ವಿದ್ಯುತ್ ಕೇಂದ್ರಗಳಿವೆ.

ಕೃಷಿ : ಪಶ್ಚಿಮ ಬಂಗಾಳದ ಜನರ ಮುಖ್ಯ ಕಸಬು ವ್ಯವಸಾಯ. ಶೇ. 57.5 ಮಂದಿ ಕೃಷಿಯನ್ನು ಅವಲಂಬಿಸಿದ್ದಾರೆ. ರಾಜ್ಯದ ನೆಲದ ಶೇ. 60 ರಷ್ಟು ಭಾಗ ಸಾಗುವಳಿಗೆ ಒಳಪಟ್ಟಿದೆ. ರಾಜ್ಯದ ಮುಖ್ಯ ಬೆಳೆ ಬತ್ತ. ಒಟ್ಟು ಸಾಗುವಳಿ ಪ್ರದೇಶದ ಶೇ. 70ರಷ್ಟು ಇದಕ್ಕೆ ಮೀಸಲು ಇತ್ತೀಚೆಗೆ ಆಹಾರ ಬೆಳೆ ಉತ್ಪಾದನೆಯ ವಿನ್ಯಾಸ ತೀವ್ರವಾಗಿ ಬದಲಾಗುತ್ತಿದೆ. ಗೋದಿಯೂ ಒಂದು ಪ್ರಮುಖ ಬೆಳೆಯಾಗುತ್ತಿದೆ. ಬಾರ್ಲಿ ಮತ್ತು ಜೋಳವನ್ನು ಬೆಳೆಯಲಾಗುತ್ತಿದೆ. ಇಲ್ಲಿಯ ವಾಣಿಜ್ಯ ಬೆಳೆಗಳಲ್ಲಿ ಮುಖ್ಯವಾದವು ಸೆಣಬು, ಚಹ ಮತ್ತು ವೀಳೆಯದೆಲೆ. ಭಾರತದ ಒಟ್ಟು ಸೆಣಬು ಉತ್ಪಾದನೆಯಲ್ಲಿ ಶೇ. 50ರಷ್ಟು ಇಲ್ಲಿ ಬೆಳೆಯುತ್ತದೆ. ಚಹ ಪ್ರಮುಖ ತೋಟಗಾರಿಕೆ ಬೆಳೆ. ಅಸ್ಸಾಮನ್ನು ಬಿಟ್ಟರೆ ಈ ರಾಜ್ಯವೇ ಅತ್ಯಂತ ಹೆಚ್ಚು ಚಹ ಬೆಳೆಯುವ ರಾಜ್ಯ. ಪ್ರಪಂಚದ ಶ್ರೇಷ್ಠ ದರ್ಜೆಯ ಅತ್ಯಂತ ರುಚಿಕರ ಹಿಮಾಲಯದ ಚಹ (ಡಾರ್ಜಿಲಿಂಗ್) ಇಲ್ಲಿಯದು. ಪರ್ವತ ಶ್ರೇಣಿಗಳ ಇಳುಕಲುಗಳಲ್ಲಿ ಚಹ ತೋಟಗಳು ಸಮೃದ್ಧವಾಗಿವೆ. ಮಗ್ಗಲಲ್ಲಿಯೆ ಚಹ ಸಂಸ್ಕರಣೆ ಕಾರ್ಖಾನೆಗಳುಂಟು. ಸಂಸ್ಕರಣ ಹೊಂದಿದ ಕಪ್ಪು ಚಹ ಪುಡಿಯನ್ನು ಕೋಲ್ಕತ ಮಾರುಕಟ್ಟೆಗೆ ಸಾಗಿಸುತ್ತಾರೆ. ಇಲ್ಲಿಯ ಸೆಣಬು ಮತ್ತು ಚಹ ಭಾರತದ ವಿದೇಶಿ ವಿನಿಮಯ ಸಂಪಾದನೆಯ ಸರಕುಗಳು. ರಾಜ್ಯದಲ್ಲಿ ಸಾಗುವಳಿಯಾಗುತ್ತಿರುವ ಜಮೀನಿನ ಶೇ. 2ರಷ್ಟು ಪ್ರದೇಶದಲ್ಲಿ ಎಣ್ಣೆ ಬೀಜಗಳನ್ನು ಬೆಳೆಯುತ್ತಾರೆ. ರಾಜ್ಯದ ಅಗತ್ಯವನ್ನು ಇಲ್ಲಿಯ ಬೆಳೆ ಭಾಗಶಃ ಪೂರೈಸುತ್ತದೆ. ಎಣ್ಣೆ ಬೀಜಗಳಲ್ಲಿ ಸಾಸುವೆ ಪ್ರಮುಖವಾದ್ದು. ಬಂಗಾಲದಲ್ಲಿ ಅಡುಗೆಗೆ ಸಾಸುವೆ ಎಣ್ಣೆಯನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಅಲ್ಲದೆ ಈ ಎಣ್ಣೆಯನ್ನು ಮೈಗೆ ಪೂಸಲೂ ಬಳಸುತ್ತಾರೆ. ಹತ್ತಿ, ತಂಬಾಕು ಮತ್ತು ಕಬ್ಬು ಇತರ ಮುಖ್ಯ ಬೆಳೆಗಳು, ಡಾರ್ಜಿಲಿಂಗ್‌ಶ್ರೇಣಿಗಳಲ್ಲಿ ಸೇಬು ಮೊದಲಾದ ಹಣ್ಣುಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಇವುಗಳ ಬೆಳೆಯಿಂದ ಸುತ್ತಣ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಸಹಾಯವಾಗುವ ನಿರೀಕ್ಷೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಾಳೆ. ಪಪ್ಪಾಯ, ಮಾವು, ಹಲಸು ಮತ್ತು ಅನಾನಸುಗಳನ್ನು ಬೆಳೆಯುತ್ತಾರೆ. ದನ, ಎಮ್ಮೆ, ಆಡು, ಕುರಿ, ಹಂದಿ ಮತ್ತು ಕುದುರೆ ಇಲ್ಲಿನ ಪ್ರಮುಖ ಪ್ರಾಣಿಗಳು. ಜಾನುವಾರು ಸಾಂದ್ರತೆ ಕಿಮೀ 200, ಹೈನಿನ ಹಸು ಎಮ್ಮೆಗಳು ಕೋಲ್ಕತ ನಗರದ ಸುತ್ತ ಸಾಂದ್ರೀಕೃತವಾಗಿವೆ. ಕ್ಷೀರೋತ್ಪಾದನಾ ಕೈಗಾರಿಕೆ ಅಭಿವೃದ್ಧಿಗೊಳ್ಳುತ್ತಿದೆ. ಸರ್ಕಾರ ಅನೇಕ ರೇಷ್ಮೆ ಫಾರಂಗಳನ್ನು ಸ್ಥಾಪಿಸಿದೆ. ಜೇನು ಸಾಕುವುದಕ್ಕೂ ಪ್ರೋತ್ಸಾಹವಿದೆ.ಕೋಳಿ ಮೊಟ್ಟೆಗಳ ಉತ್ಪಾದನೆಯಲ್ಲೂ ಈ ರಾಜ್ಯ ಅಗ್ರಸ್ಥಾನದಲ್ಲಿದೆ.

ಮತ್ಸ್ಯೋದ್ಯಮ : ಬಂಗಾಲಿಗಳ ಆಹಾರದಲ್ಲಿ ಮೀನು ಪ್ರಮುಖವಾದದ್ದು. ಸಿಹಿನೀರಿನ ಮೀನುಗಾರಿಕೆಯಲ್ಲಿ ಈ ರಾಜ್ಯಕ್ಕೆ ಭಾರತದಲ್ಲಿ ಅಗ್ರಸ್ಥಾನ. ಸುಂದರಬನಗಳಲ್ಲಿ ಮತ್ತು ನದಿಗಳಲ್ಲಿ ಗಣನೀಯವಾಗಿ ಮೀನು ಹಿಡಿಯಲಾಗುತ್ತದೆ. ಜೊತೆಗೆ ಕರಾವಳಿ ಮೀನು ಉತ್ಪಾದನೆಯೂ ಬೆಳೆದಿದೆ. ಆಳ ಕಡಲು ಮೀನುಗಾರಿಕೆಯನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ. ಆದರೂ ರಾಜ್ಯದ ಬೇಡಿಕೆಯನ್ನು ಪೂರೈಸುವಷ್ಟು ಮೀನು ಉತ್ಪಾದನೆಯಾಗುತ್ತಿಲ್ಲ. ಸಾಮಾನ್ಯವಾಗಿ ಮನೆಮನೆಯಲ್ಲೂ ಮೀನುಕೊಳಗಳಿರುತ್ತವೆ. ಮೀನುಸಾಕಣೆ ಕೇಂದ್ರಗಳು ವಾಣಿಜ್ಯಮಟ್ಟದಲ್ಲಿ ಅಭಿವೃದ್ಧಿಗೊಳ್ಳುತ್ತಿವೆ.

ಖನಿಜ: ಪಶ್ಚಿಮ ಬಂಗಾಲವೇ ದೇಶದಲ್ಲಿ ಅತ್ಯಂತ ಹೆಚ್ಚು ಖನಿಜಗಳನ್ನು ಉತ್ಪಾದಿಸುವ ರಾಜ್ಯ. ರಾಷ್ಟ್ರದಲ್ಲಿ ಉತ್ಪಾದನೆಯಾಗುವ ಖನಿಜಗಳಲ್ಲಿ $^1/_5$ ಭಾಗ ಪಶ್ಚಿಮ ಬಂಗಾಳದಲ್ಲಾಗುತ್ತದೆ. ಕಲ್ಲಿದ್ದಲು ಪ್ರಮುಖ ಖನಿಜ. ರಾಜ್ಯದ ಒಟ್ಟು ಖನಿಜೋತ್ಪಾದನೆಯ ಶೇ.99 ಭಾಗ ಕಲ್ಲಿದ್ದಲು. ಭಾರತದ ಒಟ್ಟು ಕಲ್ಲಿದ್ದಲು ಉತ್ಪಾದನೆಯ ಶೇ.30ರಷ್ಟು ಇಲ್ಲಿಯದು. ಜೇಡಿಮಣ್ಣು ಇನ್ನೊಂದುಪ್ರಮುಖ ಸಂಪನ್ಮೂಲ. ಡೊಲಮೈಟ್ ವಿಪುಲವಾಗಿ ದೊರೆಯುತ್ತದೆ. ಕ್ವಾರ್ಟ್ಸ್ ಮತ್ತು ಟಂಗ್‌ಸ್ಟನ್‌ಗಳೂ ದೊರೆಯುತ್ತವೆ. ಮಿಡ್ನಾಪುರದ ಬಳಿ ಮ್ಯಾಂಗನೀಸ್ ಅದಿರು ನಿಕ್ಷೇಪಗಳಿವೆ. ಡಾರ್ಜಿಲಿಂಗ್ ಬಳಿ ಸ್ವಲ್ಪ ಪ್ರಮಾಣದಲ್ಲಿ ಆರ್ಸೆನಿಕ್ ದೊರೆಯುತ್ತದೆ. ರಾಣಿಗಂಜ್ ಕಲ್ಲಿದ್ದಲ ಗಣಿಯ ಸಮೀಪದಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ.

ಕೈಗಾರಿಕೆ : ಪಶ್ಚಿಮ ಬಂಗಾಲ ಮೊದಲಿನಿಂದಲೂ ಕೈಗಾರಿಕಾ ಬೆಳವಣಿಗೆಯ ಮುಂಚೂಣಿಯಲ್ಲಿದೆ. ಹಿಂದಿನ ಬಂಗಾಲದ ವಿಭಜನೆಯಾದ ಮೇಲೆ ಇಲ್ಲಿ ಆರ್ಥಿಕ ಅವ್ಯವಸ್ಥೆ ಉಂಟಾಗಿ ಎರಡು ಪ್ರಮುಖ ಉದ್ಯಮಗಳಿಗೆ ಧಕ್ಕೆಯಾಯಿತು. ಇಲ್ಲಿ ಸೆಣಬು ಕೈಗಾರಿಕೆ ಪೂರ್ವ ಪಾಕಿಸ್ತಾನದಲ್ಲಿ ಬೆಳೆಯುವ ಕಚ್ಚಾ ಸೆಣಬನ್ನೂ ಅವಲಂಬಿಸಿತ್ತು. ಉತ್ತರದ ತೋಟಗಳ ಚಹವನ್ನು ಪೂರ್ವ ಪಾಕಿಸ್ತಾನದ ಮೂಲಕ ಹಾದುಹೋಗುವ ರೈಲು ಹಾಗೂ ಜಲಮಾರ್ಗಗಳ ಮೂಲಕ ಸಾಗಿಸಲಾಗುತ್ತಿತ್ತು. ಈ ಅವ್ಯವಸ್ಥೆಯನ್ನು ನಿವಾರಿಸಿಕೊಂಡು ಹೊಸ ಉದ್ಯಮಗಳನ್ನು ಅಭಿವೃದ್ಧಿಗೊಳಿಸುವುದು ರಾಜ್ಯದ ಪ್ರಮುಖ ಆರ್ಥಿಕ ಗುರಿಯಾಯಿತು. ಸೆಣಬು ಮತ್ತು ಚಹ ಕೈಗಾರಿಕೆಗಳು ರಾಜ್ಯದಲ್ಲಿ ಪ್ರಮುಖವಾಗಿವೆ. ಕಾಗದ ಮತ್ತು ಉಕ್ಕಿನ ಕಾರ್ಖಾನೆಗಳನ್ನು ಆರಂಭಿಸಿದ ಪ್ರಥಮ ರಾಜ್ಯ ಇದು. ರಾಣಿಗಂಜ್ ಬಳಿ ಕಲ್ಲಿದ್ದಲು ಪತ್ತೆಯಾಗಿದ್ದು ಭಾರತದಲ್ಲಿ ಕೈಗಾರಿಕಾ ಕ್ರಾಂತಿಗೆ ಕಾರಣವಾಯಿತು. ರಾಜ್ಯದಲ್ಲಿ ಎರಡು ಉಕ್ಕು ಸ್ಥಾವರಗಳಿವೆ. ದುರ್ಗಾಪುರದ ಕಾರ್ಖಾನೆ ಸರ್ಕಾರಿ ವಲಯದ್ದು; ಬರ್ನ್‌ಪುರದ ಕಾರ್ಖಾನೆ ಖಾಸಗಿ ವಲಯದ್ದು, ರೈಲ್ವೆ ಎಂಜಿನ್, ಕೇಬಲ್, ರಸಗೊಬ್ಬರ ಮತ್ತು ನೌಕಾ ನಿರ್ಮಾಣ–ಇವು ಇತರ ಕೆಲವು ದೊಡ್ಡ ಕೈಗಾರಿಕೆಗಳು. ಹಾಲ್ದಿಯ ಬಳಿ ಭಾರತೀಯ ರಸಗೊಬ್ಬರ ಕಂಪನಿಯಿದೆ. ಅಲ್ಲದೆ ಇಲ್ಲಿ ತೈಲಸಂಸ್ಕರಣ ಕೇಂದ್ರವಿದೆ. ಹೂಗ್ಲಿ ಜಲಾನಯನದ ಸುತ್ತ ಅನೇಕ ಹತ್ತಿ ಗಿರಣಿಗಳಿವೆ. ಕೋಲ್ಕತ ನಗರದಲ್ಲಿ ಪ್ರಮುಖ ಬಟ್ಟೆ ಗಿರಣಿಗಳಿವೆ. ಇಲ್ಲಿಯ ಇತರ ಕೆಲವು ಉದ್ಯಮಗಳೆಂದರೆ ಮೋಟರು ವಾಹನ, ಸೈಕಲ್, ಹಡಗು, ಮೋಟರು ದೋಣಿಗಳ ತಯಾರಿಕೆ, ಲಘು ಎಂಜಿನಿಯರಿಂಗ್, ಅಲ್ಯೂಮಿನಿಯಂ, ಕಾಗದ, ರಾಸಾಯನಿಕ, ಪಾದರಕ್ಷೆ, ಸಿಮೆಂಟ್, ಸ್ಕೂಟರ್, ವಿದ್ಯುದುಪಕರಣಗಳು ಮತ್ತು ಮಿನಿ ಉಕ್ಕು ಸ್ಥಾವರಗಳು.

ಸಾರಿಗೆ : 1947ರ ವಿಭಜನೆಯ ಫಲವಾಗಿ ಪೂರ್ವ ಪಾಕಿಸ್ತಾನದ ಮೂಲಕ ಸಾಗುತ್ತಿದ್ದ ರಸ್ತೆ ಮಾರ್ಗಗಳೆಲ್ಲವೂ ಕಡಿದುಹೋಗಿ ಉತ್ತರ ಬಂಗಾಲ ಮತ್ತು ಅಸ್ಸಾಮಿಗೆ ರೈಲು ಹಾಗೂ ಜಲಸಾರಿಗೆಗಳನ್ನು ಕಲ್ಪಿಸುವ ಅನಿವಾರ್ಯ ಅಗತ್ಯ ಉಂಟಾಯಿತು. 1968ರ ಹೊತ್ತಿಗೆ ಸುವ್ಯವಸ್ಥಿತ ಸಾರಿಗೆ ಸೌಕರ್ಯಗಳನ್ನು ಮಾಡಲಾಯಿತು.

1997ರಲ್ಲಿ ಇದ್ದ ರಸ್ತೆಗಳ ಒಟ್ಟು ಉದ್ದ 79,255 ಕಿಮೀ. ಪಶ್ಚಿಮ ಬಂಗಾಲದ ಉತ್ತರಭಾಗಕ್ಕೆ ಹಾಗೂ ಅಸ್ಸಾಮಿಗೆ ವಿಮಾನ ಸಾರಿಗೆ ಸೌಲಭ್ಯ ಚೆನ್ನಾಗಿದೆ. ಕೋಲ್ಕತ ಪ್ರಮುಖ ಅಂತಾರಾಷ್ಟ್ರೀಯ ವಿಮಾನ ಮಾರ್ಗಗಳ ಕೇಂದ್ರ.

ಸಾಂಸ್ಕೃತಿಕ ಜೀವನ :ಬಂಗಾಲಿಗಳು ಬುದ್ಧಿಜೀವಿಗಳು, ಕಲಾಪ್ರೇಮಿಗಳು ಎಂದು ಹೆಸರಾಗಿದ್ದಾರೆ. ಸಾಹಿತ್ಯ ಕಲೆ, ಸಂಗೀತ ಹಾಗೂ ನಾಟಕಗಳಿಗೆ ಪ್ರೋತ್ಸಾಹ ನೀಡುತ್ತಾರೆ. 19ನೆಯ ಶತಮಾನದ ಆರಂಭದಿಂದಲೇ ಪಾಶ್ಚಾತ್ಯ ಸಂಪರ್ಕದಿಂದಾಗಿ ಬಂಗಾಲಿ ಸಾಹಿತ್ಯದಲ್ಲಿ ಅತ್ಯುತ್ತಮ ಸಾಹಿತ್ಯ ಸೃಷ್ಟಿಯಾಯಿತು. ಇದು ಭಾರತದ ಇತರ ಭಾಷಾ ಸಾಹಿತ್ಯಗಳ ಮೇಲೆ ಪ್ರಭಾವ ಬೀರಿದೆ. ನೊಬೆಲ್ ಪಾರಿತೋಷಿಕ ಪಡೆದ ರವೀಂದ್ರನಾಥ ಠಾಕೂರರಲ್ಲದೆ, ಬಂಕಿಮಚಂದ್ರ, ಶರಚ್ಚಂದ್ರ ಮುಂತಾದ ಯುಗಪ್ರವರ್ತಕ ಸಾಹಿತಿಗಳು ಬಂಗಾಲಿಯಲ್ಲಿ

ಕೃತಿರಚನೆ ಮಾಡಿದ್ದಾರೆ. ಬಂಗಾಲಿ ರಂಗಭೂಮಿ ಜನಪ್ರಿಯವಾಗಿದೆ. ವೃತ್ತಿ ಹಾಗೂ ಹವ್ಯಾಸಿ ಎರಡೂ ರಂಗಭೂಮಿಗಳು ಪ್ರಚಲಿತವಾಗಿವೆ. ಇಲ್ಲಿ ಸಾಮಾನ್ಯವಾಗಿ ಪೌರಾಣಿಕ ಹಾಗೂ ಐತಿಹಾಸಿಕ ವಸ್ತುಗಳೇ ಪ್ರಧಾನವಾದರೂ ಇವು ಇತ್ತೀಚೆಗೆ ಆಧುನಿಕ ವಸ್ತುಗಳಿಂದಲೂ ಆಕರ್ಷಿತವಾಗಿವೆ. ಗ್ರಾಮ ಕವಿಗಳ ನಡುವೆ ನಡೆಯುವ ಆಶು ಸಂಗೀತ ಕಾವ್ಯ ಸ್ಪರ್ಧೆ ಜನಪ್ರಿಯವಾಗಿದೆ. ಇನ್ನೊಂದು ಗ್ರಾಮಾಂತರ ಮನರಂಜನೆ ಎಂದರೆ ಪರಂಪರಾಗತವಾಗಿ ಬಂದ ಕಥಾಕೂಟ ಎಂಬ ಹರಿಕಥೆ. ಜನರಿಗೆ ಸಾರ್ವತ್ರಿಕವಾಗಿ ಮನರಂಜನೆ ನೀಡುವ ಪ್ರಮುಖ ಉದ್ಯಮ ಚಲನಚಿತ್ರ, ಬಂಗಾಲಿ ಚಿತ್ರಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳಿಸಿವೆ. ಅವುಗಳಲ್ಲಿಯ ಭಾರತೀಯ ಸಮಾಜ ನಿರೂಪಣೆಯ ಕುಶಲತೆ ಮೆಚ್ಚುಗೆ ಗಳಿಸಿವೆ. ನಿರ್ದೇಶಕ ಸತ್ಯಜಿತ್‌ರಾಯ್‌ರ ಕೃತಿಗಳು ಗಮನಾರ್ಹ. ಸಾಂಪ್ರದಾಯಿಕ ಸಂಗೀತದ ರೂಪಕಗಳು ಭಕ್ತಿ ಹಾಗೂ ಸಾಂಸ್ಕೃತಿಕ ಗೀತೆಗಳಲ್ಲಿ ವಿಕಾಸಗೊಂಡಿವೆ. ರವೀಂದ್ರನಾಥ ಠಾಕೂರರು ರಚಿಸಿ ರಾಗ ಸಂಯೋಜಿಸಿರುವ ಗೀತೆಗಳು ರವೀಂದ್ರ ಸಂಗೀತವೆಂದು ಹೆಸರಾಗಿವೆ. ಶುದ್ಧ ಭಾರತೀಯ ಸಂಗೀತ ಹಾಗೂ ಪರಂಪರಾಗತ ಜನಪದ ಸಂಗೀತ ಮೂಲಗಳಿಂದ ರಾಗ ಸಂಯೋಜಿಸಿರುವ ರವೀಂದ್ರ ಸಂಗೀತ ಬಂಗಾಲಿ ಸಾಂಸ್ಕೃತಿಕ ಜೀವನದ ಮೇಲೆ ಪ್ರಬಲ ಪ್ರಭಾವಬೀರಿದೆ. ಜೇಡಿಮಣ್ಣಿನ ಹಾಗೂ ಕೆಂಪುಮಣ್ಣಿನ ಮೂರ್ತಿಗಳು ಹಾಗೂ ಅಲಂಕಾರಿಕ ಚಿತ್ರಕಲೆಗಳು ಜನಪ್ರಿಯವಾಗಿವೆ.

ಕೋಲ್ಕತದ 'ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಶನ್ ಆಫ್ ಸೈನ್ಸ್, ಬೋಸ್ ಸಂಶೋಧನ ಕೇಂದ್ರ' ಮತ್ತು ಕೋಲ್ಕತ ವಿಶ್ವವಿದ್ಯಾಲಯದ ವಿಜ್ಞಾನ ಪ್ರಯೋಗಾಲಯಗಳು ವಿಜ್ಞಾನಕ್ಕೆ ಗಮನಾರ್ಹ ಕೊಡುಗೆ ನೀಡಿವೆ. ಅತ್ಯಂತ ಪ್ರಸಿದ್ಧ ಇತಿಹಾಸ ಸಂಶೋಧನ ಸಂಸ್ಥೆಯಾದ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಇಲ್ಲಿದೆ. ಶಾಂತಿನಿಕೇತನದಲ್ಲಿ ರವೀಂದ್ರನಾಥ ಠಾಕೂರರು ಸ್ಥಾಪಿಸಿದ ವಿಶ್ವಭಾರತಿ ವಿಶ್ವವಿದ್ಯಾಲಯವಿದೆ ಭಾರತದ ಪುರಾತತ್ತ್ವ ಹಾಗೂ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸಂಬಂಧಗಳ ಅಧ್ಯಯನ ಕೇಂದ್ರಗಳು ಪ್ರಪಂಚ ಪ್ರಸಿದ್ಧ. (ಎಸ್.ಎಸ್.ಎಂ.ಯು.)

**ಪಶ್ಚಿಮ ವರ್ಜಿನಿಯ:** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ವಿಸ್ತೀರ್ಣದ ದೃಷ್ಟಿಯಿಂದ ಸಂಯುಕ್ತ ಸಂಸ್ಥಾನಗಳ 41ನೆಯ ಮತ್ತು ಜನಸಂಖ್ಯೆಯ ದೃಷ್ಟಿಯಿಂದ 34ನೆಯ ರಾಜ್ಯ. ಉ.ಅ. $37^0 12'$–$40^0 38'$ ಹಾಗೂ ಪ.ರೇ $77^0 40'$–$82^0 40'$ ನಡುವೆ ಹಬ್ಬಿರುವ ಈ ರಾಜ್ಯದ ಉತ್ತರದಲ್ಲಿ ಮೇರಿಲ್ಯಾಂಡ್ ಮತ್ತು ಪೆನ್ಸಿಲ್ವೇನಿಯ, ದಕ್ಷಿಣ ಮತ್ತು ಪೂರ್ವದಲ್ಲಿ ವರ್ಜಿನಿಯ, ಪಶ್ಚಿಮದಲ್ಲಿ ಕೆಂಟಕಿ ಮತ್ತು ಒಹೈಯೋ ಇವೆ. ಉತ್ತರದಿಂದ ದಕ್ಷಿಣಕ್ಕೆ ರಾಜ್ಯದ ಉದ್ದ ಸು. 384 ಕಿಮೀ ಪೂರ್ವ ಪಶ್ಚಿಮವಾಗಿ ಅಗಲ 256 ಕಿಮೀ. ಒಹಿಯೋ ನದಿ ಈ ರಾಜ್ಯದ ಪಶ್ಚಿಮ ಗಡಿ. ಅದರ ಅನೇಕ ಉಪನದಿಗಳು ರಾಜ್ಯದಲ್ಲಿ ಹರಿಯುತ್ತವೆ. ಪೊಟೋಮಕ್ ನದಿ ಉತ್ತರದ ಗಡಿಯ ಒಂದು ಭಾಗ. ಆಗ್ನೇಯ ಗಡಿಗುಂಟ ಆಲೆಗಾನೀ ಮತ್ತು ಶನಂಡೋವ ಪರ್ವತಗಳಿವೆ. ರಾಜ್ಯದ ವಿಸ್ತೀರ್ಣ 62,760 ಚ.ಕಿಮೀ. ಜನಸಂಖ್ಯೆ 18,08,344 (2000). ರಾಜಧಾನಿ ಚಾರ್ಲ್ಸ್‌ಟನ್.

ಪ್ರಾಕೃತಿಕ ಲಕ್ಷಣ : ಪಶ್ಚಿಮ ವರ್ಜಿನಿಯದ ಮೇಲ್ಮೈ ವಿಪರೀತ ಏರುತಗ್ಗುಗಳಿಂದ ಕೂಡಿದೆ. ಇಡೀ ರಾಜ್ಯವೇ ಅಪಲೇಷಿಯನ್ ಪರ್ವತವ್ಯೂಹದ ಒಂದು ಭಾಗವಾಗಿರುವುದರಿಂದ ಪರ್ವತಮಯವಾಗಿದೆ. ರಾಜ್ಯದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 457 ಮೀ. ಮಟ್ಟಸವಾದ ನೆಲ ತೀರ ಕಡಿಮೆ. ತೀರ ತಗ್ಗಿನ ಪ್ರದೇಶಗಳು ಒಹಿಯೋ ಮತ್ತು ಪೊಟೋಮ್ಯಾಕ್ ನದಿಗಳ ಕಣಿವೆ ಭಾಗಗಳು. ಅಪಲೇಷಿಯನ್ ಪರ್ವತಗಳು ಈಶಾನ್ಯದಿಂದ ನೈರುತ್ಯಕ್ಕೆ ಹಬ್ಬಿವೆ.

ಪಶ್ಚಿಮ ವರ್ಜಿನಿಯದ ಅನೇಕ ನದಿಗಳು ಅಪಲೇಷಿಯನ್ ಪರ್ವತ ಪಂಕ್ತಿ ಮತ್ತು ಕಣಿವೆಗಳಲ್ಲಿ ಚಿಕ್ಕ ಝರಿಗಳಂತೆ ಪ್ರಾರಂಭವಾಗುತ್ತವೆ. ಅವು ಪರ್ವತಗಳ ಮಗ್ಗಲುಗಳಲ್ಲಿ ಧುಮುಕುವಾಗ ಅನೇಕ ಜಲಪಾತಗಳನ್ನೂ ಆಳವಾದ ಕಣಿವೆಗಳನ್ನೂ ನಿರ್ಮಿಸಿ ಒಹೈಯೋ ಅಥವಾ ಪೊಟೊಮ್ಯಾಕ್ ನದಿಗಳನ್ನು ಸೇರುತ್ತವೆ. ಅಗಲವಾಗಿರುವ ಒಹಿಯೋ ನದಿಯಿಂದ ಮಿಸಿಸಿಪಿ ನದಿಗೂ ಮೆಕ್ಸಿಕೊ ಕೊಲ್ಲಿಗೂ ಸುಲಭವಾದ ಸಂಚಾರಸೌಲಭ್ಯ ಒದಗಿಸಿದೆ. ರಾಜ್ಯದಲ್ಲಿ ಒಹಿಯೋ ನದಿಯ ಅತ್ಯಂತ ದೊಡ್ಡ ಉಪನದಿ ಕನಾವ. ಮನಾಂಗಹೀಲ ಮತ್ತು ಅದರ ಉಪನದಿಗಳು ಅಪಲೇಷಿಯನ್ ತಪ್ಪಲಿನ ಈಶಾನ್ಯ ಭಾಗದಲ್ಲಿ ಹರಿಯುತ್ತವೆ. ಪೊಟೊಮ್ಯಾಕ್ ರಾಜ್ಯದ ಪೂರ್ವದ ತುದಿಯಲ್ಲಿ ಹರಿಯುವ ಮುಖ್ಯ ನದಿ.

ಮಣ್ಣು : ಒಹೈಯೋ ನದಿಯ ಉದ್ದಕ್ಕೂ ಇರುವ ಜೇಡಿ ಮಣ್ಣು ಕುಂಭ ಕೈಗಾರಿಕೆಗೆ ಸಹಾಯಕವಾಗಿದೆ. ಪೂರ್ವದಲ್ಲಿರುವ ಸುಣ್ಣಕಲ್ಲಿನ ಮಣ್ಣು ಹುಲ್ಲುಗಾವಲು ಮತ್ತು ಹಣ್ಣಿನ ತೋಟಗಾರಿಕೆಗೆ ಯೋಗ್ಯವಾಗಿದೆ. ರಾಜ್ಯದ ಅಧಿಕ ಭಾಗದಲ್ಲಿ ಕಂಡುಬರುವ ಮರಳುಗಲ್ಲಿನಿಂದ ಉತ್ಪತ್ತಿಯಾದ ಆಮ್ಲೀಯಮಣ್ಣು ಕೃಷಿಗೆ ಉಪಯುಕ್ತವಾದದ್ದು.

ವಾಯುಗುಣ : ಇಲ್ಲಿನ ವಾಯುಗುಣ ಹಿತಕರ, ಆರೋಗ್ಯಕರವೂ ಆಗಿದ್ದು, ಜನವರಿ ಅತ್ಯಂತ ಚಳಿಯ ತಿಂಗಳು. ಆಗ ರಾಜ್ಯದ ಸರಾಸರಿ ಉಷ್ಣತೆ $1^0$ಸೆ. ಜುಲೈ ಅತ್ಯಂತ ಸೆಕೆಯ ತಿಂಗಳು. ಆಗಿನ ಸರಾಸರಿ ಉಷ್ಣತೆ $23^0$ಸೆ. ಪರ್ವತ ಪ್ರದೇಶಗಳಲ್ಲಿ 152.4 ಸೆಂಮೀ ಗಳಿಂದ ಹಿಡಿದು ಅತ್ಯಂತ ಪೂರ್ವದಲ್ಲಿ 88 ಸೆಂಮೀ ವರೆಗೆ ಮಳೆಯಾಗುತ್ತದೆ. ರಾಜ್ಯದ ಮುಕ್ಕಾಲು ಭಾಗವನ್ನು ಅರಣ್ಯಗಳು ಆವರಿಸಿವೆ. ತಪ್ಪಲಿನ ಕಾಡುಗಳಲ್ಲಿ ಕೆಂಪು ಮತ್ತು ಬಿಳಿ ಓಕ್, ಹಳದಿ ಪಾಪ್ಲರ್, ಕೆಂಪು ಮೇಪಲ್, ಹಿಕರಿ ಬೀಚ್, ಬಾಸ್‌ವುಡ್, ಬ್ಲ್ಯಾಕ್‌ಬರಿ, ಹಳದಿ ಬರ್ಚ್ ಮೊದಲಾದ ಗಟ್ಟಿ ಮರಗಳು ವಿಶೇಷವಾಗಿವೆ. ವಿವಿಧ ಜಾತಿಯ ಪೈನ್, ಸ್ಪ್ರೂಸ್, ಹೆಮ್ಲಾಕ್ ಮೊದಲಾದ ಮೆದು ಮರಗಳು ಉನ್ನತ ಪರ್ವತಗಳ ಇಳಿಜಾರುಗಳಲ್ಲಿ, ಆಳವಾದ ಕಮರಿಗಳಲ್ಲಿ ಬೆಳೆಯುತ್ತವೆ. ರಾಜ್ಯದ ಪೂರ್ವಭಾಗದಲ್ಲಿ ಓಕ್ ಮತ್ತು ಪೈನ್ ಮರಗಳು ಹೆಚ್ಚಾಗಿವೆ. ಮೊಲ, ಅಳಿಲು, ಕಂದು ನರಿ, ಒಪಾಸಮ್, ಸ್ಕಂಕ್, ರ‍್ಯಾಕೂನ್ ಮತ್ತು ಹಂದಿ ಇಲ್ಲಿ ಸಾಮಾನ್ಯ. ದೂರದ ಹಾಗೂ ಸಂರಕ್ಷಿತ ಪ್ರದೇಶಗಳಲ್ಲಿ ಬಿಳಿಯ ಬಾಲದ ಜಿಗರೆಯೂ ಸಂಪರ್ಕರಹಿತ ಉನ್ನತ ಪ್ರದೇಶಗಳಲ್ಲಿ ಕಪ್ಪು ಕರಡಿಗಳೂ ಇವೆ.

ಕೃಷಿ : ಗುಡ್ಡಗಾಡಿನಲ್ಲಿ ಕೃಷಿಗೆ ಹೆಚ್ಚಿನ ಅನುಕೂಲತೆಗಳಿಲ್ಲ. ಕೋಳಿ ಸಾಕಣೆ, ಹೈನುಗಾರಿಕೆ, ದನಕರುಗಳ ಹಾಗೂ ಕುರಿಗಳ ಸಾಕಣೆ ಮುಖ್ಯ ಕಸಬುಗಳು. ಸೇಬು ಮತ್ತು ಪೀಚ್ ಹಣ್ಣುಗಳ ಉತ್ಪಾದನೆಯೂ ಲಾಭದಾಯಕವಾಗಿದೆ.

ಖನಿಜ ಸಂಪತ್ತು : ನೈಸರ್ಗಿಕ ಅನಿಲ, ಪೆಟ್ರೋಲಿಯಂ, ಕಲ್ಲುಪ್ಪು, ಕಲ್ಲಿದ್ದಲು ಮತ್ತು ಸುಣ್ಣಕಲ್ಲು ಇಲ್ಲಿನ ಮುಖ್ಯ ಖನಿಜಗಳು.

ಕೈಗಾರಿಕೆ : ರಾಸಾಯನಿಕ ಕೃತಕ ನಾರು ಮತ್ತು ಪ್ಲಾಸ್ಟಿಕ್ ಕೈಗಾರಿಕೆಗಳು ಮಹತ್ತ್ವ ಪಡೆದಿವೆ. ವಿದ್ಯುತ್ ವಿಪುಲವಾಗಿ ದೊರೆಯುವ ಒಹೈಯೋ ಮತ್ತು ಕನಾವ ನದಿಗಳ ಕಣಿವೆಗಳಲ್ಲಿ ಕಾರ್ಖಾನೆಗಳು ವಿಶೇಷವಾಗಿವೆ. ಉಕ್ಕು, ಗಾಜು, ವಿದ್ಯುತ್ ಸಲಕರಣೆ ಮತ್ತು ಮಣ್ಣಿನ ಪಾತ್ರೆಗಳು ಹೆಚ್ಚಾಗಿ ತಯಾರಾಗುತ್ತವೆ. ರಾಜ್ಯದ ದೊಡ್ಡ ನಗರಗಳಲ್ಲಿ ಮತ್ತು ಅವುಗಳ ಸುತ್ತಣ ಪ್ರದೇಶಗಳಲ್ಲಿ ಸಾರಿಗೆ ಸೌಲಭ್ಯ ತೃಪ್ತಿಕರವಾಗಿದೆ. ಗುಡ್ಡಗಾಡಿನ ಪ್ರದೇಶದಲ್ಲಿ ಹಾಗೂ ವಿರಳ ಜನಸಂಖ್ಯೆ ಇರುವೆಡೆಗಳಲ್ಲಿ ಸೌಲಭ್ಯ ಕಡಿಮೆ. (ಜಿ.ಕೆ.ಯು.)

**ಪಶ್ಚಿಮ ಸಹರ:** ಆಫ್ರಿಕ ಖಂಡದ ವಾಯವ್ಯಭಾಗದ ಪ್ರಾಂತ್ಯ. ಇದರ ಉತ್ತರಕ್ಕೆ ಮೊರಾಕ್ಕೊ, ಈಶಾನ್ಯಕ್ಕೆ ಆಲ್ಜೀರಿಯ, ಪೂರ್ವ ಮತ್ತು ದಕ್ಷಿಣಕ್ಕೆ ಮೌರಿಟಾನಿಯ ಹಾಗೂ ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರಗಳಿವೆ. 1960ರಿಂದ ವಿಶ್ವಸಂಸ್ಥೆಯ ಸ್ವಪ್ರಭುತ್ವವಲ್ಲದ ಪ್ರದೇಶಗಳಲ್ಲಿ (ನಾನ್‌ಸೆಲ್ಫ್–ಗವರ್ನಿಂಗ್ ಟೆರಿಟರಿಸ್) ಒಂದಾಗಿದೆ. ಅದಕ್ಕೂ ಮುಂಚೆ ಸ್ಪಾನಿಷ್ ವಸಾಹತುವಾಗಿತ್ತು. 1975 ನವೆಂಬರ್ 14 ರಂದು ಸ್ಪೇನಿನಿಂದ ಬಿಡುಗಡೆ ಹೊಂದಿತ್ತು. ಅನಂತರ ಈ ಪ್ರದೇಶದ ಸ್ವಾಧೀನದ ಬಗ್ಗೆ ಮೊರಾಕ್ಕೊ ಮತ್ತು ಪೊಲಿಸಾರಿಯೊ ಫ್ರಂಟ್‌ಗಳ ನಡುವೆ ವಿವಾದವೇರ್ಪಟ್ಟು 1991ರಲ್ಲಿ ವಿಶ್ವಸಂಸ್ಥೆ, ಕದನ ವಿರಾಮ ಒಪ್ಪಂದ ಮಾಡಿದ ಅನಂತರ ಈ ಪ್ರದೇಶದ ಬಹಳಷ್ಟು ಭಾಗ ಮೊರಾಕ್ಕೊ ಹಿಡಿತದಲ್ಲಿದೆ, ಉಳಿದ ಭಾಗದ ಬಗ್ಗೆ ವಿವಾದವಿದೆ. ಇದನ್ನು ಸರಾವಿ ಅರಬ್ ಪ್ರಜಾತಂತ್ರ ಗಣರಾಜ್ಯವೆಂದೂ ಕರೆಯುತ್ತಾರೆ. ಇಲ್ಲಿ ಸಮೃದ್ಧವಾದ ಫಾಸ್ಫೇಟ್ ನಿಕ್ಷೇಪಗಳಿವೆ. ಬಹುಪಾಲು ಭೂಮಿ ಶುಷ್ಕ ಮರುಭೂಮಿ.

ಪಶ್ಚಿಮ ಸಹರದ ವಿಸ್ತೀರ್ಣ 266,769 ಚ.ಕಿಮೀ. ಜನಸಂಖ್ಯೆ 341,000 (2005). ಜನಸಾಂದ್ರತೆ ಚ.ಕಿಮೀ ಗೆ 1.3. ಪ್ರಪಂಚದ ಅತಿವಿರಳ ಜನಸಾಂದ್ರತೆಯುಳ್ಳ ಪ್ರದೇಶಗಳಲ್ಲಿ ಒಂದು. ಇದಕ್ಕೆ ಪ್ರಾಂತದ ಹೆಚ್ಚು ಭಾಗ ಮರುಭೂಮಿಯಿಂದ ಆವೃತವಾಗಿರುವುದೆ ಪ್ರಮುಖ ಕಾರಣ. ಎಲ್ ಅಲಾಯೆಯುನ್ ಈ ಪ್ರಾಂತದ ರಾಜಧಾನಿ ಹಾಗೂ ದೊಡ್ಡ ನಗರ. ಇಲ್ಲಿನ ಭಾಷೆ ಅರೇಬಿಕ್. (ಪಿ.ಎಂ.)

**ಪಳನಿ:** ತಮಿಳುನಾಡಿನ ಮದುರೈ ಜಿಲ್ಲೆಯಲ್ಲಿರುವ ಒಂದು ಪುಣ್ಯಕ್ಷೇತ್ರ. ಇಲ್ಲಿನ ವರಾಹಗಿರಿ ಬೆಟ್ಟದ ಶಿಖರದ ಮೇಲೆ ಸುಬ್ರಹ್ಮಣ್ಯನ ದೇವಾಲಯವಿದೆ. ಈ ಬೆಟ್ಟವನ್ನು ಮೇರುಪರ್ವತದ ಚೂರೆಂದು ಕಾಳಹಸ್ತಿಯ ಸ್ಥಳಪುರಾಣ ಸೂಚಿಸುತ್ತದೆ. ಇಲ್ಲಿ ಸುಬ್ರಹ್ಮಣ್ಯ ಮೂರ್ತಿಯ ಕೈಲಿ ಒಂದು ದಂಡವಿರುವುದರಿಂದ ಈತನನ್ನು ದಂಡಾಯುಧಪಾಣಿಯೆಂದು ಕರೆಯುತ್ತಾರೆ. ಈ ಪರ್ವತದಲ್ಲಿ ಸುಬ್ರಹ್ಮಣ್ಯ ನೆಲೆಸಿದ ಬಗೆಗೆ ಒಂದು ಆಖ್ಯಾಯಿಕೆ ಹೀಗಿದೆ:

ಒಮ್ಮೆ ಶಿವಪಾರ್ವತಿಯರು ವಿನೋದಕ್ಕಾಗಿ ತಮ್ಮ ಇಬ್ಬರು ಪುತ್ರರಾದ ಗಣೇಶ, ಸುಬ್ರಹ್ಮಣ್ಯ ಇವರ ನಡುವೆ ವಿಶ್ವಪ್ರದಕ್ಷಿಣೆಯ ಸ್ಪರ್ಧೆಯನ್ನು ಏರ್ಪಡಿಸಿದರು. ಸುಬ್ರಹ್ಮಣ್ಯ ತತ್‌ಕ್ಷಣವೇ ತನ್ನ ವಾಹನವಾದ ನವಿಲನ್ನೇರಿ ಪೃಥ್ವಿ ಪ್ರದಕ್ಷಿಣೆಗೆ ಹೊರಟ. ಸ್ಥೂಲ ದೇಹಿಯಾದ ಗಣಪತಿಯಾದರೊ ತನ್ನ ವಾಹನವಾದ ಇಲಿಯ ಮೇಲೆ ಕುಳಿತು ಸುಬ್ರಹ್ಮಣ್ಯನ ಜೊತೆ ಸ್ಪರ್ಧಿಸಲು ಸಾಧ್ಯವಿಲ್ಲವಾಗಿ ಬುದ್ಧಿವಂತಿಕೆಯಿಂದ ವಿಶ್ವವನ್ನೇ ಒಳಗೊಂಡ ತನ್ನ ಮಾತಾಪಿತೃಗಳನ್ನು ಮೂರು ಪ್ರದಕ್ಷಿಣೆ ಹಾಕಿ ತಾನೇ ಸ್ಪರ್ಧೆಯಲ್ಲಿ ಗೆದ್ದನೆಂದು ಹೇಳಿದ. ಇದರಿಂದ ಸಂತೋಷಗೊಂಡ ಶಿವ ಬಹುಮಾನವಾಗಿ ಗಣಪತಿಗೆ ದಾಳಿಂಬೆ ಹಣ್ಣನ್ನು ನೀಡಿದ. ಇತ್ತ ಪೃಥ್ವಿಯ ಪ್ರದಕ್ಷಿಣೆ ಮಾಡಿ ಬಂದ ಸುಬ್ರಹ್ಮಣ್ಯ ಶಿವನ ಪಕ್ಷಪಾತವನ್ನು ಕಂಡು ಅಸಮಾಧಾನಗೊಂಡು ಕ್ರೋಧದಿಂದ ಪಳನಿಯಲ್ಲಿ ನೆಲೆಸಿದನಂತೆ.

ಸುಬ್ರಹ್ಮಣ್ಯ ತನ್ನ ಇಷ್ಟಾರ್ಥವನ್ನು ಪೂರೈಸುತ್ತಾನೆಂಬ ನಂಬಿಕೆ ಈ ಭಾಗದ ಜನರಲ್ಲಿದೆ. ಮುಸಲ್ಮಾನರು ಇಲ್ಲಿ ಹರಕೆ ಹೊರುವುದು ಒಂದು ವೈಶಿಷ್ಟ್ಯ. ಕಾರ್ತಿಕ ಮಾಸದಲ್ಲಿ ಇಲ್ಲಿ ದೊಡ್ಡ ಉತ್ಸವ ನಡೆಯುತ್ತದೆ. (ಜಿ.ಎಚ್.)

**ಪಳೆಯುಳಿಕೆಗಳು:** ಹಿಂದೊಮ್ಮೆ ಜೀವಂತವಾಗಿದ್ದ ಪ್ರಾಣಿ ಅಥವಾ ಸಸ್ಯಗಳ ಗಡಸು ಭಾಗಗಳು ಇಲ್ಲವೆ ಅವುಗಳ ಗುರುತುಗಳು ರಾಸಾಯನಿಕ ಅಥವಾ ಇತರ ಮಾರ್ಪಾಡುಗಳಿಗೆ ಒಳಗಾಗಿ ಆಯಾ ಪ್ರಾಣಿ, ಸಸ್ಯ ಇಲ್ಲವೆ ಮಾನವನ ಅವಶೇಷವೆಂದು ಗುರುತಿಸಬಹುದಾದ ವಸ್ತುಗಳು (ಫಾಸಿಲ್ಸ್). ಜೀವ್ಯವಶೇಷಗಳು ಇವುಗಳ ಪರ್ಯಾಯನಾಮ. ಫಾಸಿಲ್ ಪದ ಲ್ಯಾಟಿನ ಭಾಷೆಯಿಂದ ಬಂದದ್ದು. ಇದರ ಅರ್ಥ ಅಗೆದು ತೆಗೆದ ವಸ್ತು ಎಂದು. ಪಳೆಯುಳಿಕೆಗಳು ಶಿಲೆಯಲ್ಲಿ ಹುದುಗಿ ದೊರೆಯಬೇಕೆಂದಿಲ್ಲ. ಹಿಮ, ಡಾಮರು ಅಥವಾ ಅರಗಿನಲ್ಲಾದರೂ ಸಿಲುಕಿಕೊಂಡು ಅವಶೇಷವಾಗಿರಬಹುದು. ಪಳೆಯುಳಿಕೆಗಳು ಹಿಂದಣ ಜೀವಿಗಳ ದಾಖಲೆಯನ್ನೊದಗಿಸುತ್ತವೆ. ಈ ದಾಖಲೆ ಬಹಳ ಅಪೂರ್ವವಾದುದು. ಭೂಕಾಲದ ಯಾವುದಾದರೊಂದು ಯುಗವೇ ಆದರೂ ಅಸಂಖ್ಯಾತ ಜೀವರಾಶಿಯಿಂದ ತುಂಬಿ ತುಳುಕುತ್ತಿತ್ತು. ಈ ಜೀವರಾಶಿಯ ಎಲ್ಲೊ ಅಲ್ಪಭಾಗ ಮಾತ್ರ ಪಳೆಯುಳಿಕೆಗಳಾಗಿ ದೊರೆಯಬಹುದು. ಇವು ಜೀವ್ಯವಶೇಷಗಳಾಗಿ ಸಂರಕ್ಷಿತವಾದ ಮೇಲೂ ಭೂಸವೆತ ಮತ್ತು ಕೊರತೆಗಳಿಂದಾಗಿ ಬೇರೊಂದು ಸ್ಥಳಕ್ಕೆ ವರ್ಗಾವಣೆಯಾಗಿರಬಹುದು, ಇಲ್ಲವೆ ಸಂಪೂರ್ಣವಾಗಿ ನಶಿಸಿಹೋಗಿರಬಹುದು. ಜೀವ್ಯವಶೇಷಗಳ ಅಧ್ಯಯನ ಹಾಗೂ ಅವುಗಳ ಉಪಯುಕ್ತತೆಗಳನ್ನು ವಿವರಿಸುವ ಶಾಸ್ತ್ರ ಪ್ರಾಗ್ಜೀವಶಾಸ್ತ್ರ (ಪೇಲಿಯಂಟಾಲಜಿ). ಪ್ರಾಣಿ ಅಥವಾ ಸಸ್ಯ ಪಳೆಯುಳಿಕೆಯಾಗಲು ಎರಡು ಅಂಶಗಳು ಬಹುಮುಖ್ಯ. ಮೊದಲನೆಯದಾಗಿ ಅವುಗಳ ದೇಹ ಗಡಸು ಅಥವಾ ಕಠಿಣ ಭಾಗಗಳನ್ನು ಪಡೆದಿರಬೇಕು. ಉದಾ: ಚಿಪ್ಪು, ಮೂಳೆ ಅಥವಾ ಕೊಂಬಿನಂಥ ವಸ್ತು. ಎರಡನೆಯದಾಗಿ ಪ್ರಾಣಿ ಅಥವಾ ಸಸ್ಯಗಳು ಗತಿಸಿದ ಮೇಲೆ ಅವನ್ನು ಕೊಳೆಯುವುದಕ್ಕಾಗಲಿ ಹುಳುಗಳು ತಿನ್ನುವುದಕ್ಕಾಗಲಿ ಬಿಡದೆ ಇಡೀ ಶರೀರ ಮಡ್ಡಿಯಿಂದ ಆವೃತಗೊಂಡು ಹೂತು ಸಮಾಧಿಯಾಗುವಂಥ ಅವಕಾಶವಿರಬೇಕು. ಇವು ಇಂದಿಗೂ ನಡೆಯುತ್ತಿರುವ ಭೂಪ್ರಕ್ರಿಯೆಗಳು. ಭೂಸವೆತ, ಕೊರೆತ, ಸಂಚಯನಕಾರ್ಯ, ಭೂಕುಸಿತ, ಸಾಂಕ್ರಾಮಿಕ ರೋಗಗಳ ಹಾವಳಿ, ಭೂಕಂಪನ, ಪ್ರವಾಹಗಳು, ಅಗ್ನಿಪರ್ವತ, ನೀರ್ಗಲ್ಲ ನದಿಗಳೇ ಅಲ್ಲದೆ ಭೂರಾಸಾಯನಿಕ ಕಾರ್ಯಗಳು, ಶಿಥಿಲೀಕರಣ, ಇಂಗಾಲೀಕರಣ, ಸುಣ್ಣೀಕರಣ, ಖನಿಜಪೂರಕಗಳು, ಜಲಜಶಿಲಾ ಸಮುದಾಯಗಳಾಗುವಿಕೆ ಇವೇ ಮೊದಲಾದ ಭೂಪ್ರಕ್ರಿಯೆಗಳು ಕೋಟ್ಯಂತರ ವರ್ಷಗಳಿಂದಲೂ ಇಂದಿನತನಕ, ಅದರ ಪರಿಣಾಮ, ವ್ಯಾಪ್ತಿ ಮತ್ತು ತೀಕ್ಷ್ಣತೆಗಳು ಹೆಚ್ಚುಕಡಿಮೆಯಾಗಿದ್ದರೂ ಸತತವಾಗಿ ನಡೆಯುತ್ತಿರುವ ಭೂಪ್ರಕ್ರಿಯೆಗಳು ಆಗಿವೆ. ಈ ತತ್ತ್ವವನ್ನು ಹಟನ್, ಪ್ಲೇಫೇರ್ ಮುಂತಾದವರು ಪ್ರತಿಪಾದಿಸಿದ್ದಾರೆ. ಭೂವಿಜ್ಞಾನದ ಸರ್ವತೋಮುಖ ಅಭಿವೃದ್ಧಿಯನ್ನೂ ಅದರ ಬುನಾದಿಯನ್ನೂ ಈ ತತ್ತ್ವ ನವೀಕರಿಸಿತು.

ಕರ್ನಾಟಕದಲ್ಲೂ ಪಳೆಯುಳಿಕೆಗಳಿಗೇನೂ ಕೊರತೆಯಿಲ್ಲ. ಪ್ರಪಂಚದ ಅತಿಪುರಾತನ ಪ್ರಸ್ಥಭೂಮಿಯಲ್ಲಿ ಕರ್ನಾಟಕವೂ ಒಂದು. ಆಶ್ಚರ್ಯವೆಂದರೆ, ಇಂಥ ಅತ್ಯಂತ ಹಳೆಯ ಶಿಲೆಗಳಲ್ಲೂ (3200 ಕೋಟಿ ವರ್ಷವಯಸ್ಸಿನ) ಅವಶೇಷಗಳಿವೆ; ಮೈಸೂರು ಜಿಲ್ಲೆಯ ಸರಗೂರಿನ ಶಿಲೆಗಳಲ್ಲಿ ದೊರೆಯುವ ಜೈವಿಕ ರಚನೆಗಳ ಹಾಗೂ ಶೈವಲಗಳ ಆಧಾರದ ಮೇಲೆ ಈ ಶಿಲೆಗಳ ವಯಸ್ಸು 3400 ಕೋಟಿ ವರ್ಷಗಳೆಂದೂ ಇವು ದಕ್ಷಿಣ ಆಫ್ರಿಕದ ಅನ್ವರ್‌ವಾಕ್ ಸಮುದಾಯವನ್ನು ಹೋಲುವುದೆಂದೂ ಗೊತ್ತುಪಡಿಸಲಾಗಿದೆ. ಅಂತೆಯೇ ಬಿಜಾಪುರ ಜಿಲ್ಲೆಯ ಕಲಾದಗಿಯ ಶಿಲಾಸ್ತೋಮದಲ್ಲಿ ಸ್ಟ್ರೊಮ್ಯಾಟೊಲೈಟ್ ಶೈವಲಗಳನ್ನು ಪತ್ತೆಹಚ್ಚಲಾಗಿದೆ. ಗುಲ್ಬರ್ಗ ಹಾಗೂ ಯಾದಗಿರಿಗೆ ಸಮೀಪದಲ್ಲಿರುವ ಗುರುಮಟ್ಕಲ್‌ನ ಅಂತರ ಟ್ರಾಪ್ ಶಿಲಾಪದರಗಳಿಂದ ಅತ್ಯಂತ ಉತ್ಕೃಷ್ಟವಾದ ಸೂಕ್ಷ್ಮಗಾತ್ರದ ಸಿಕತೀಕರಣ ಹೊಂದಿದ ಸಸ್ಯ ಹಾಗೂ ಪ್ರಾಣಿಗಳ ಪಳೆಯುಳಿಕೆಗಳ ಪತ್ತೆಯಾಗಿದೆ. ಪ್ರಪಂಚದಲ್ಲಿ ಮೊತ್ತಮೊದಲ ಬಾರಿಗೆ ಸೀಗಡಿಸತ್ತೆಯ (ಕ್ಯಾರೋಫೈಟ್) ಸಸ್ಯಗಳ ಗಂಡು ಮತ್ತು ಹೆಣ್ಣು ಲಿಂಗಭೇದ ಭಾಗಗಳನ್ನೊಳಗೊಂಡ ಕ್ಯಾರ ಗುರುಮಠಕಲ್ಲಿನ ಎಂಬ ಹೊಸಜಾತಿಯನ್ನು ಹಾಗೂ ಇದೇ ಪ್ರಕಾರಕ್ಕೆ ಸೇರಿದ ನೈಟೆಲ ಎಂಬ ಸಸ್ಯಜಾತಿಯ ಅತಿವಿರಳ ಪಳೆಯುಳಿಕೆಗಳನ್ನೂ ಗುರುಮಠಕಲ್ಲಿನ ಚರ್ಟ್‌ಶಿಲೆಗಳಲ್ಲಿ ಗುರುತಿಸಲಾಗಿದೆ. ಮಂಗಳೂರಿನ ಬಂದರು ಪ್ರದೇಶದ ಕೆಲವು ಶಿಲೆಗಳಲ್ಲಿ ಫೊರ್ಯಾಮಿನಿಫೆರ ಮತ್ತು ಆಸ್ಟ್ರೋಕೋಡಗಳಂಥ ಸೂಕ್ಷ್ಮಾವಶೇಷಗಳು ದೊರೆತಿವೆ. (ಟಿ.ವಿ.ಎಸ್.ಎಚ್.;ಎಂ.ಎಸ್.ಎಸ್.ಆರ್.)

**ಪಾಂಡವಪುರ:** ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು. ಉಪವಿಭಾಗ; ಆ ತಾಲ್ಲೂಕಿನ ಮತ್ತು ಉಪವಿಭಾಗದ ಮುಖ್ಯಸ್ಥಳ. ಉಪವಿಭಾಗದಲ್ಲಿ ಪಾಂಡವಪುರ, ಕೃಷ್ಣರಾಜಪೇಟೆ, ನಾಗಮಂಗಲ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳಿವೆ. ಪಾಂಡವಪುರ ತಾಲ್ಲೂಕಿನ ಉತ್ತರದಲ್ಲಿ ನಾಗಮಂಗಲ, ಪೂರ್ವದಲ್ಲಿ ಮಂಡ್ಯ, ಆಗ್ನೇಯದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕುಗಳೂ ದಕ್ಷಿಣದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕೂ ಕೃಷ್ಣರಾಜಸಾಗರವೂ ಇವೆ. ಪಾಂಡವಪುರ, ಮೇಲುಕೋಟೆ ಮತ್ತು ಚಿನಕುರಳಿ ಹೋಬಳಿಗಳು, ಗ್ರಾಮಗಳ ಸಂಖ್ಯೆ 175. ತಾಲ್ಲೂಕಿನ ವಿಸ್ತೀರ್ಣ 533 ಚ.ಕಿಮೀ. ಜನಸಂಖ್ಯೆ 1,75,008.

ತಾಲ್ಲೂಕಿನ ಮೇಲ್ಮೈ ಏರಿಳಿತದಿಂದ ಕೂಡಿದೆ. ಇದರ ಉತ್ತರ ಪೂರ್ವಭಾಗಗಳಲ್ಲಿ ಗ್ರಾನೈಟ್ ಶಿಲೆಗಳ ಬೆಟ್ಟಗಳಿವೆ. ಇಲ್ಲಿನ ಅತ್ಯಂತ ಎತ್ತರದ ಬೆಟ್ಟ ಮೇಲುಕೋಟೆ (1,094 ಮೀ). ಮುಖ್ಯ ನದಿ ಲೋಕಪಾವನಿ. ಈ ಪ್ರದೇಶದಲ್ಲಿ ದಕ್ಷಿಣಾಭಿಮುಖವಾಗಿ ಹರಿದು, ನೆರೆಯ ತಾಲ್ಲೂಕಾದ ಶ್ರೀರಂಗಪಟ್ಟಣದಲ್ಲಿ ಕಾವೇರಿಯನ್ನು ಸೇರುತ್ತವೆ. ಇಲ್ಲಿನ ಮಣ್ಣು ಗ್ರಾನೈಟ್ ಮತ್ತು ನೀಸ್ ಶಿಲೆಗಳಿಂದ ಕೂಡಿದೆ. ಇದು ಕೆಂಪುಜೇಡಿ ಹಾಗೂ ಮರಳುಮಿಶ್ರಿತ ಮಣ್ಣಿನಿಂದ ಉಂಟಾಗಿದೆ.

ಪಾಂಡವಪುರದಲ್ಲಿ ಏಪ್ರಿಲ್–ನವೆಂಬರ್ ಅವಧಿಯಲ್ಲಿ ಮಳೆಯಾಗುತ್ತದೆ. ಏಪ್ರಿಲ್ ಅಕ್ಟೋಬರ್ ತಿಂಗಳುಗಳಲ್ಲಿ ಹೆಚ್ಚು ಮಳೆ; ಅಕ್ಟೋಬರಿನಲ್ಲಿ ಗರಿಷ್ಠ. ವಾರ್ಷಿಕ ಸರಾಸರಿ ಮಳೆ 60 ಸೆಮೀ.

ಬೇಸಾಯವೇ ಈ ತಾಲ್ಲೂಕಿನ ಜನರ ಮುಖ್ಯ ಕಸಬು. ಕೃಷ್ಣರಾಜಸಾಗರದಿಂದ ತೋಡಿರುವ ವಿಶ್ವೇಶ್ವರಯ್ಯ ನಾಲೆ ಲೋಕಪಾವನಿ ನದಿ ಮತ್ತು ಕೆರೆಗಳಿಂದ ತಾಲ್ಲೂಕಿನ ಹೆಚ್ಚು ಭಾಗಕ್ಕೆ ನೀರಾವರಿ ಸೌಲಭ್ಯ ದೊರಕಿದೆ. ತಾಲ್ಲೂಕಿನ ಉತ್ತರ ಮತ್ತು ಪೂರ್ವ ಭಾಗದ ಕೆಲವು ಪ್ರದೇಶಗಳಲ್ಲಿ ಕೆರೆಕುಂಟೆಗಳು ಮತ್ತು ಸಣ್ಣ ತೊರೆಗಳೇ ನೀರಾವರಿ ಮೂಲಗಳು. ನಾಲೆ ನೀರಾವರಿ ಪ್ರದೇಶದಲ್ಲಿ ಸಾಮಾನ್ಯವಾಗಿ ವರ್ಷಕ್ಕೆ ಭತ್ತದ ಎರಡು ಬೆಳೆ ಬೆಳೆಯುತ್ತಾರೆ. ಕಬ್ಬು ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಬತ್ತ, ಕಬ್ಬು ಅಲ್ಲದೆ ರಾಗಿ, ಜೋಳ, ಹುರುಳಿ, ನೆಲಗಡಲೆ, ಮೆಣಸಿನಕಾಯಿ, ಆಲೂಗೆಡ್ಡೆ, ಸಂಬಾರ, ದ್ವಿದಳ ಧಾನ್ಯ ಸಹಾ ಇಲ್ಲಿ ಬೆಳೆಯುತ್ತಾರೆ.

ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಇಲ್ಲಿಯ ಮುಖ್ಯ ಕೈಗಾರಿಕೆ. ಇಲ್ಲಿ ಬತ್ತದ ಗಿರಣಿಗಳು ಇವೆ. ಕೈಮಗ್ಗ, ಬೆಲ್ಲ ತಯಾರಿಕೆ, ವ್ಯವಸಾಯೋಪಕರಣಗಳ ಕೈಗಾರಿಕೆ, ಮರಗೆಲಸ, ಕಮ್ಮಾರಿಕೆ–ಇವು ಇತರ ಉದ್ಯಮಗಳು.

ಈ ತಾಲ್ಲೂಕಿನ ಮೂಲಕ ಪಾಂಡವಪುರ ಪಟ್ಟಣಕ್ಕೆ ಸಮೀಪದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ಹಾದುಹೋಗುತ್ತದೆ. ಪಾಂಡವಪುರ–ನೆಲ್ಲಿಗೆರೆ ರಸ್ತೆ ನಾಗಮಂಗಲದ ಮೂಲಕ ತುಮಕೂರು ಜಿಲ್ಲೆಯೊಂದಿಗೆ ಸಂಪರ್ಕಕಲ್ಪಿಸುತ್ತದೆ. ಪಾಂಡವಪುರ–ಚಿನಕುರಳಿ–ಕೃಷ್ಣರಾಜಪೇಟೆ–ಚನ್ನರಾಯಪಟ್ಟಣ, ಚಿನಕುರಳಿ–ಮೇಲುಕೋಟೆ, ಪಾಂಡವಪುರ–ಕೃಷ್ಣರಾಜಸಾಗರ ಇತರ ಮುಖ್ಯ ಮಾರ್ಗಗಳು. ಬೆಂಗಳೂರು–ಮೈಸೂರು ರೈಲುಮಾರ್ಗದ ಪಾಂಡವಪುರ ಒಂದು ನಿಲ್ದಾಣ.

ಪಾಂಡಪುರ ತಾಲ್ಲೂಕಿನಲ್ಲಿ ಒಂದು ಪದವಿ ಪೂರ್ವ ಕಾಲೇಜು, ಪ್ರಥಮ ದರ್ಜೆ ಕಾಲೇಜು, ಮೂಲಶಿಕ್ಷಣ ಶಾಲೆಗಳು, ಪ್ರೌಢಶಾಲೆಗಳು, ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು ಇವೆ. ಪ್ರಾಥಮಿಕ ಶಾಲೆಗಳು ಮುಖ್ಯ ಪಟ್ಟಣಗಳಲ್ಲಿ ಇವೆ.

ಪಾಂಡವಪುರ ತಾಲ್ಲೂಕು ಹಿಂದೆ ಮೈಸೂರು ಜಿಲ್ಲೆಯ ಭಾಗವಾಗಿತ್ತು. 1882ರಲ್ಲಿ ಫ್ರೆಂಚ್ ರಾಕ್ಸ್ ಎಂಬ ಉಪವಿಭಾಗದ ರಚನೆಯಾಯಿತು. ಅನಂತರ ಇದು ಉಪತಾಲ್ಲೂಕಾಗಿತ್ತು. ಇದನ್ನು ರದ್ದು ಮಾಡಲಾಯಿತು (1923). ಕಸಬಾ ಹೋಬಳಿ ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿತು. ಹಿರೋಡೆ, ಮೇಲುಕೋಟೆ ಮತ್ತು ಚಿನಕುರಳಿ ಹೋಬಳಿಗಳಿಂದ ಕೂಡಿದ ಫ್ರೆಂಚ್ ರಾಕ್ಸ್ ತಾಲ್ಲೂಕು ಅಸ್ತಿತ್ವಕ್ಕೆ ಬಂತು (1937). ಹಳೆಯ ಮೈಸೂರು ಜಿಲ್ಲೆಯನ್ನು ಇಬ್ಭಾಗಿಸಿ ಮಂಡ್ಯ ಜಿಲ್ಲೆಯನ್ನು ರಚಿಸಿದಾಗ ಇದು ಆ ಜಿಲ್ಲೆಗೆ ಸೇರಿತು (1939).

ಪಾಂಡವಪುರ ಮತ್ತು ಮೇಲುಕೋಟೆ ಈ ತಾಲ್ಲೂಕಿನ ಮುಖ್ಯ ಪಟ್ಟಣಗಳು. ಪಾಂಡವಪುರ ಮೈಸೂರಿನಿಂದ ಇಲ್ಲಿಗೆ 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 18,236. (ಡಿ.ಎಸ್.ಜೆ.)

**ಪಾಂಪಸ್:** ದಕ್ಷಿಣ ಅಮೆರಿಕದ ಅರ್ಜೆಂಟೈನಕ್ಕೆ ಅಡ್ಡಲಾಗಿ ಅದರ ಮಧ್ಯದಲ್ಲಿ ಅಟ್ಲಾಂಟಿಕ್ ತೀರದಿಂದ ಪಶ್ಚಿಮಾಭಿಮುಖವಾಗಿ ಆಂಡಿಯನ್ ಗುಡ್ಡಪಾದ ಬೆಟ್ಟಗಳವರೆಗೆ ಹಬ್ಬಿರುವ ವಿಶಾಲವಾದ ಹುಲ್ಲುಗಾವಲು. ಪಾಂಪಸ್ ಎಂಬುದು ಬಹುವಚನ. ಇದರ ಏಕವಚನ ರೂಪ ಪಾಂಪ. ಸಮತಟ್ಟಾದ ಪ್ರದೇಶ ಎಂಬ ಅರ್ಥವುಳ್ಳ ಕೆಚುವ ಇಂಡಿಯನ್ ಪದದಿಂದ ಈ ಹೆಸರು ಬಂದಿದೆ. ಇದರ ಉತ್ತರಕ್ಕೆ ಗ್ರಾನ್ ಚಾಕೊ (ಬೇಟೆಯಾಡುವ ಪ್ರದೇಶ) ಮತ್ತು ದಕ್ಷಿಣಕ್ಕೆ ಪೆಟಗೋನಿಯ ಇವೆ. ಈ ಪ್ರದೇಶ ವಾಯವ್ಯದಿಂದ ಆಗ್ನೇಯದ ಕಡೆಗೆ ಇಳಿಜಾರಾಗಿದೆ. ಮೆಂಡೋಜದಲ್ಲಿ ಇದರ ಎತ್ತರ ಸಮುದ್ರಮಟ್ಟದಿಂದ 500 ಮೀ. ಬ್ಯೂನಸ್ ಏರೀಸ್‌ನಲ್ಲಿ 20 ಮೀ. ವಾಯವ್ಯ ಮತ್ತು ದಕ್ಷಿಣಭಾಗದಲ್ಲಿ ಇರುವ ಕೆಲವು ಕಡಿದಾದ ಬೆಟ್ಟಸಾಲುಗಳನ್ನು ಬಿಟ್ಟರೆ ಈ ಪ್ರದೇಶ ಸಂಪೂರ್ಣವಾಗಿ ಸಮತಲವಾಗಿದೆ. ದಕ್ಷಿಣ ಅಮೆರಿಕದ ಇತರ ಭಾಗಗಳಲ್ಲಿರುವ ಸಣ್ಣ ಬಯಲುಗಳನ್ನೂ ಪಾಂಪಸ್ ಎಂದೇ ಕರೆಯಲಾಗುತ್ತದೆ.

ಅರ್ಜೆಂಟೈನದ ಪಾಂಪಸ್ ಪ್ರದೇಶ 7,60,000 ಚ.ಕಿಮೀ ವಿಸ್ತಾರವಾಗಿದೆ. ಇದನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮ ಭಾಗ ಲಾ ಪಾಂಪ ಪ್ರಾಂತ್ಯದ ಬಹುಭಾಗವನ್ನು ಆವರಿಸಿದೆ. ಇದರಲ್ಲಿ ಹೆಚ್ಚು ಭಾಗ ಬಂಜರು ನೆಲ. ಇದು ಚೌಳು ಪ್ರದೇಶಗಳಿಂದಲೂ ಉಪ್ಪುನೀರಿನ ತೊರೆಗಳಿಂದಲೂ ಮರಳು ಕಾಡುಗಳಿಂದಲೂ ಕೂಡಿದೆ. ಪೂರ್ವಭಾಗದ್ದು ತೇವದಿಂದ ಕೂಡಿದ ಸಮಶೀತೋಷ್ಣ ವಾಯುಗುಣ. ಇಲ್ಲಿ ನೀರಿನ ಸೌಲಭ್ಯಗಳಿವೆ. ಈ ಭಾಗ ಅರ್ಜೆಂಟೈನದ ಸಂಪತ್ತಿನ ಮೂಲ. ಪಾಂಪಸ್ ಪ್ರದೇಶದ ಪ್ರಾಣಿಗಳು ನರಿ, ಸ್ಕಂಕ್, ಗ್ವಾನಾಕೋ, ವಿಜ್‍ಕಾಚ, ಪೊದೆ ನಾಯಿ ಮುಂತಾದವು. ಇಲ್ಲಿಯ ಪಕ್ಷಿಗಳು ಗುಬ್ಬಚ್ಚಿ, ಗಿಡುಗ, ನೀರುಕೋಳಿ ಮುಂತಾದುವು.

19ನೆಯ ಶತಮಾನದಿಂದೀಚೆಗೆ ಈ ಪ್ರದೇಶ ತಕ್ಕಮಟ್ಟಿಗೆ ಅಭಿವೃದ್ಧಿ ಹೊಂದಿದೆ. ಇಲ್ಲಿ ರೈಲುಮಾರ್ಗಗಳ ನಿರ್ಮಾಣವಾಗಿದೆ. ಇದರ ಆಗ್ನೇಯ ಭಾಗದಲ್ಲಿ ಪಶುಪಾಲನೆ ಮುಖ್ಯ ಉದ್ಯೋಗ. ಪಶ್ಚಿಮ ಭಾಗದಲ್ಲಿ ಮೇವಿಗಾಗಿ, ಆಲ್ಫಾಲ್ಫವನ್ನೂ ಗೋದಿಯನ್ನೂ ಬೆಳೆಯುತ್ತಾರೆ. ರೊಸಾರಿಯೋದ ಸುತ್ತಮುತ್ತ ಮೆಕ್ಕೆಜೋಳ ಮತ್ತು ಫ್ಲಾಕ್ಸ್ (ಒಂದು ತೆರನ ಅಗಸೆ) ಬೆಳೆಯುತ್ತಾರೆ; ಕುರಿ ಮತ್ತು ದನಕರುಗಳನ್ನು ಸಾಕುತ್ತಾರೆ. ಬ್ಯೂನಸ್ ಏರಿಸ್ ಸಮೀಪದಲ್ಲಿ ತರಕಾರಿ ಹಣ್ಣು ಮತ್ತು ಹಾಲನ್ನು ಉತ್ಪಾದಿಸಲಾಗುತ್ತದೆ. ಇವು ಆ ನಗರಕ್ಕೆ ಸರಬರಾಜಾಗುತ್ತವೆ. (ಜಿ.ಎಸ್.ಎಸ್.)

**ಪಾಂಪೋನಿಯಸ್ ಮೇಲಾ:** 335–95. ಸ್ಪ್ಯಾನಿಷ್ ಭೂಗೋಳಶಾಸ್ತ್ರಜ್ಞ. ಡಿ ಕೋರೊಗ್ರಾಫಿಯಾ ಮತ್ತು ಕಾಸ್ಮೋಗ್ರಾಪಿ ಎಂಬ ಎರಡು ಸಂಪುಟಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದಿದ್ದಾನೆ. ಡಿ ಕೋರೋಗ್ರಾಫಿಯಾದಲ್ಲಿ ಪೃಥ್ವಿಯನ್ನು 5 ದೊಡ್ಡ ಪ್ರದೇಶಗಳನ್ನಾಗಿ ವಿಭಾಗಿಸಿ ಉತ್ತರ ಸಮಶೀತೋಷ್ಣವಲಯದ ಭೌಗೋಳಿಕ ವರ್ಣನೆ ಮಾಡಿದ್ದಾನೆ. ಮೆಡಿಟರೇನಿಯನ್ ಕರಾವಳಿ, ಯುರೋಪ್, ಏಷ್ಯ ಮತ್ತು ಆಫ್ರಿಕ ಖಂಡಗಳ ಕರಾವಳಿಗಳ ಭೌಗೋಳಿಕ ವರ್ಣನೆಯನ್ನೂ ಈ ಸಂಪುಟದಲ್ಲಿ ಸಂಕ್ಷಿಪ್ತ ರೂಪದಲ್ಲಿ ಮಾಡಿದ್ದಾನೆ. ಅದರಂತೆ ಎರಡನೆಯ ಸಂಪುಟ ಕಾಸ್ಮೋಗ್ರಫಿಯಲ್ಲಿ ವಿಶ್ವ ಅಥವಾ ಬ್ರಹ್ಮಾಂಡದ ವರ್ಣನೆ ಮಾಡಿದ್ದಾನೆ. ಲ್ಯಾಟಿನ್ ಭಾಷೆಯಲ್ಲಿ ಬರೆಯಲ್ಪಟ್ಟ ಇವೆರಡೂ ಸಂಪುಟಗಳು ಆದಿ ಮಧ್ಯಕಾಲದಲ್ಲಿ ಗಣನೀಯ ಮಹತ್ತ್ವಹೊಂದಿದ್ದವು. (ಎಸ್.ಎಸ್.ಎನ್.)

**ಪಾಂಪೆ:** ದಕ್ಷಿಣ ಇಟಲಿಯ ಕ್ಯಾಂಪೇನಿಯ ಪ್ರದೇಶದ ನಾಪಲೀ ಪ್ರಾಂತ್ಯದಲ್ಲಿ, ಸಾರ್ನೋ ನದೀ ಮುಖಜಭೂಮಿಯ ಉತ್ತರಕ್ಕೆ ವೆಸೂವಿಯಸ್ ಅಗ್ನಿಪರ್ವತದ ಬುಡದಲ್ಲಿ, ನೇಪಲ್ಸ್ ನಗರಕ್ಕೆ 24 ಕಿಮೀ ದೂರದಲ್ಲಿದ್ದ ಪ್ರಾಚೀನ ನಗರ. ಪ್ರ.ಶ.79ರ ಆಗಸ್ಟ್ 24ರಂದು ವೆಸೂವಿಯಸ್ ಜ್ವಾಲಾಮುಖಿಯ ಸ್ಫೋಟದಿಂದ ಈ ನಗರ ಮುಚ್ಚಿಹೋಗಿ ನಾಶವಾಯಿತು. ಈಚೆಗೆ ಪುರಾತತ್ತ್ವಶಾಸ್ತ್ರಜ್ಞರು ಈ ನಗರದ ನೆಲೆಯನ್ನು ಸಂಶೋಧಿಸಿದರು. ಸು. 6 ಮೀ ಬೂದಿ ಮತ್ತು ಪಾಳು ಮಣ್ಣಿನಲ್ಲಿ ಹೂತುಹೋಗಿದ್ದ ನಗರದಲ್ಲಿ ಗ್ರೀಕ್ ಮತ್ತು ರೋಮನ್ ಯುಗಕ್ಕೆ ಸೇರಿದ್ದ ಮನೆಮಠಗಳು ಮತ್ತು ದಿನಬಳಕೆಯ ವಸ್ತುಗಳು ಅಚ್ಚಳಿಯದ ಸ್ಥಿತಿಯಲ್ಲಿ ದೊರಕಿದುವು. ಇದರಿಂದ ಆ ಕಾಲದ ನಗರಜೀವನದ ಪೂರ್ಣಪರಿಚಯ ಪಡೆಯಲು ಸಾಧ್ಯವಾಗಿದೆ. ಈಗ ಅದರ ಬಳಿಯಲ್ಲಿ ಒಂದು ಸಣ್ಣ ಪಟ್ಟಣವಿದೆ. ಇದೊಂದು ಕ್ರೈಸ್ತ ಯಾತ್ರಾಸ್ಥಳ.

ಪಾಂಪೆ ಹಠಾತ್ತಾಗಿ 63ರ ಫೆಬ್ರವರಿಯಲ್ಲಿ ಸಂಭವಿಸಿದ ಭೂಕಂಪದಿಂದ ಬಹಳಮಟ್ಟಿಗೆ ನಾಶವಾಯಿತು. ಪಾಂಪೆಯ ಪ್ರಾಚೀನ ಗ್ರೀಕ್ ಸಂಸ್ಕೃತಿಜನ್ಯವಾದ ಅನೇಕ ಕಟ್ಟಡಗಳು ಆಗ ಹಾಳಾದುವು. ಮತ್ತೆ ಜೀರ್ಣೋದ್ಧಾರಕಾರ್ಯ ನಡೆಯುತ್ತಿದ್ದಾಗ 79ರ ಆಗಸ್ಟ್ 24ರಂದು ವೆಸೂವಿಯಸ್ ಸ್ಫೋಟಗೊಂಡು ನಗರ ಸಂಪೂರ್ಣವಾಗಿ ಹಾಳಾಯಿತು. ತೊಂದರೆಗೀಡಾದ ಜನರ ಸಹಾಯಕ್ಕೆ ರೋಮನ್ ದಳಪತಿ ಹಿರಿಯ ಪ್ಲಿನಿ ಧಾವಿಸಿ ತಾನೆ ಪ್ರಾಣ ಬಿಟ್ಟನೆಂದು ಹೇಳಲಾಗಿದೆ. ಬೆಂಕಿಯ ಕಣಗಳು ಮತ್ತು ಬೂದಿಯಲ್ಲಿ ನಗರ ಹೂತುಹೋಯಿತು. ಅನಂತರ ಇಲ್ಲಿ ಪಾಳು ಮಣ್ಣು ಸೇರಿತು. ಈಗ ನಗರದ ಅವಶೇಷಗಳು ನೆಲದ ಮಟ್ಟದಿಂದ 5–6 ಮೀ ಆಳದಲ್ಲಿದೆ.

ನಗರಯೋಜನೆ ಮತ್ತು ವಾಸ್ತುಶಿಲ್ಪ : ಪಾಂಪೆ ಒಂದು ದೀರ್ಘ ವೃತ್ತಾಕಾರದ ತಳಹದಿಯ ನಗರ ; ಪ್ರಾಚೀನ ಕಾಲದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಲಾವಾದಿಂದಾಗಿ ನಿರ್ಮಿತವಾದ ಪ್ರಾಕೃತಿಕ ಶಿಲಾರಾಶಿ ಅದನ್ನು ಕೋಟೆಯಂತೆ ರಕ್ಷಿಸುತ್ತಿತ್ತು. ನೈಋತ್ಯ ದಿಕ್ಕಿನಲ್ಲಿ ನಗರ ಪ್ರದೇಶ ಬಹುಮಟ್ಟಿಗೆ ಸಮತಟ್ಟಾಗಿತ್ತು; ಕೆಲವು ಪ್ರದೇಶಗಳಲ್ಲಿ ಹಂತಹಂತಗಳಲ್ಲಿದ್ದ ಸಮತಟ್ಟಾದ ಪ್ರದೇಶಗಳಲ್ಲಿ ಪ್ರಮುಖ ಸಾರ್ವಜನಿಕ ಮಂದಿರಗಳನ್ನೂ ದೇವಾಲಯಗಳನ್ನೂ ನಿರ್ಮಿಸಲಾಗಿತ್ತು. ಆಗ್ನೇಯ ಮೂಲೆಯ ತುದಿಯ ಸಮತಟ್ಟಾದ ಪ್ರದೇಶದಲ್ಲಿ ಬಯಲುರಂಗಮಂದಿರವನ್ನು ನಿರ್ಮಿಸಲಾಗಿತ್ತು. ನೈಋತ್ಯ ಮೂಲೆಯಲ್ಲಿ ವೀನಸ್ ದೇವತೆಯ ಮಂದಿರವಿತ್ತು. ಗ್ರೀಕ್ ವಾಸ್ತು ಪದ್ಧತಿಯಂತೆ ನಗರ ಪ್ರದೇಶದಲ್ಲಿ ಪೂರ್ವ–ಪಶ್ಚಿಮವಾಗಿಯೂ ಉತ್ತರ–ದಕ್ಷಿಣವಾಗಿಯೂ ಅನೇಕ ನೇರವಾದ ಮುಖ್ಯ ರಸ್ತೆಗಳನ್ನು ನಿರ್ಮಿಸಲಾಗಿತ್ತು. ಅವುಗಳಿಂದ ನಗರಪ್ರದೇಶ ಹಲವಾರು ಆಯಾಕಾರದ ಚೌಕಗಳಾಗಿ ವಿಭಾಗಗೊಂಡಿತ್ತು. ಹಲವು ವಾಸಗೃಹಗಳನ್ನೊಳಗೊಂಡ ಅನೇಕ ಚೌಕಗಳನ್ನು 9 ಪ್ರದೇಶಗಳಾಗಿ ವಿಂಗಡಿಸಲಾಗಿತ್ತು. ಪಾಂಪೆಯ ಪ್ರಮುಖ ಸಾರ್ವಜನಿಕ ಕಟ್ಟಡಗಳು ನೈಋತ್ಯ ಮೂಲೆಯ ಸಿವಿಲ್ ಫೋರಮ್‍ನ ಭಾಗದಲ್ಲಿದ್ದುವು. ಅಲ್ಲಿದ್ದ ಕಟ್ಟಡಗಳಲ್ಲಿ ಜ್ಯೂಪಿಟರ್, ಜುನೋ ಮತ್ತು ಮಿನರ್ವ ದೇವಾಲಯಗಳ ಸಮೂಹ, ಅಪಾಲೋ ಮಂದಿರ, ನ್ಯಾಯಾಲಯಗಳಿದ್ದ ಬೆಸಿಲಿಕ ಇವು ಗಮನಾರ್ಹ. ಕಂಬಗಳಿಂದ ಕೂಡಿದ ಹಜಾರ, ಚಿತ್ರಗಳಿಂದ ಅಲಂಕೃತವಾದ ಗೋಡೆಗಳು–ಇವು ಹೆಲನಿಸ್ಟಿಕ್ ಶೈಲಿಯ ಪ್ರತೀಕಗಳಾಗಿದ್ದುವು. ವಿಧಾನ ಪರಿಷತ್ತಿನ (ಕ್ಯೂರಿಯ) ಭವನ, ಜವಳಿ ಕೆಲಸಗಾರರ ಮಹಾಸಂಘದ ಕಟ್ಟಡ–ಇವು ಉಳಿದ ನಿರ್ಮಾಣಗಳ ಪೈಕಿ ಗಮನಾರ್ಹ.

ಈ ನಗರದ ಆಗ್ನೇಯ ದಿಕ್ಕಿನಲ್ಲಿರುವ ಮುಕ್ಕೋನ ಚೌಕ ಬಹಳ ಪ್ರಾಚೀನ ಭಾಗಗಳಲ್ಲಿ ಒಂದು. ಅಲ್ಲಿರುವ ಡೋರಿಕ್ ಶೈಲಿಯ ದೇವಾಲಯದ ಬಳಿ ಸಾರ್ವಜನಿಕರ ಮನರಂಜನೆಗಾಗಿ ಕೆಲವು ನಾಟ್ಯ ಮಂದಿರಗಳನ್ನು ನಿರ್ಮಿಸಲಾಗಿತ್ತು. ಓಡಿಯನ್ ಮತ್ತು ವಿಶಾಲ ರಂಗಮಂದಿರಗಳು, ಖಡ್ಗಯುದ್ಧ ಪ್ರದರ್ಶನ ಗೃಹ, ಜ್ಯೂಸ್ ದೇವಾಲಯ ಇವು ಆ ಭಾಗದ ಮುಖ್ಯ ಕಟ್ಟಡಗಳು. ನಗರದ ಮಧ್ಯಭಾಗದಲ್ಲಿ ಸಾರ್ವಜನಿಕ ಸ್ನಾನಗೃಹಗಳನ್ನು ನಿರ್ಮಿಸಲಾಗಿತ್ತು.

ಇವಲ್ಲದೆ ಹಲವಾರು ವ್ಯಕ್ತಿಗಳ ವಾಸಗೃಹಗಳನ್ನು ಗುರುತಿಸಲಾಗಿದೆ. ಶ್ರೀಮಂತ ಮತ್ತು ಮಧ್ಯಮ ವರ್ಗಗಳವರ ಹಾಗೂ ಸಾಮಾನ್ಯರ ವಾಸಗೃಹಗಳ ವಿಶಿಷ್ಟ ಲಕ್ಷಣಗಳನ್ನು ಅವುಗಳಲ್ಲಿ ಕಂಡುಬರುವ ಉಪಕರಣ ಮತ್ತು ನಿತ್ಯಬಳಕೆ ವಸ್ತುಗಳನ್ನೂ ಪರಿಶೀಲಿಸಿದರೆ ಆಗಿನ ಸಾಮಾಜಿಕ ವರ್ಗಗಳ ನಡುವೆ ಇದ್ದ ವ್ಯತ್ಯಾಸಗಳನ್ನು ತಿಳಿದುಕೊಳ್ಳಬಹುದಾಗಿದೆ. ಶಸ್ತ್ರವೈದ್ಯನ ಮನೆಯೆಂದು ಕರೆಯಲಾದ ಒಂದು ಕಟ್ಟಡದಲ್ಲಿ ಶಸ್ತ್ರಚಿಕಿತ್ಸೆಗೆ ಬಳಸುವ ಹಲವು ಉಪಕರಣಗಳು ದೊರಕಿವೆ. ಲ್ಯಾಬಿರಿಂತ್ ಮನೆಯೆಂದು ಹೆಸರಾದ ಮತ್ತೊಂದು ಕಟ್ಟಡದಲ್ಲಿ ವಾಸ್ತುವಿನ್ಯಾಸಕ್ಕೆ ಪೂರಕವಾದ ಅನೇಕ ಭಿತ್ತಿವರ್ಣಚಿತ್ರಗಳಿವೆ. ಅವು ಚಿತ್ರಕಲೆಯ ಬೆಳವಣಿಗೆಯ ದ್ವಿತೀಯ ಹಂತಕ್ಕೆ ಸೇರಿದವು. ನಗರದ ಕೊನೆಗಾಲದಲ್ಲಿ ಮನೆಗಳ ಗೋಡೆಗಳ ಮೇಲೆ ಗಾರೆಯ ಶಿಲ್ಪಗಳ ಅಲಂಕರಣಗಳಿದ್ದುದು ತಿಳಿದುಬರುತ್ತದೆ. ಅಲ್ಲದೆ ವಿಶಾಲವಾದ ಪಡಸಾಲೆಗಳಲ್ಲಿ ಇಟ್ಟಿಗೆ ಗಾರೆಗಳಿಂದ ನಿರ್ಮಿಸಿದ ಕಂಬಗಳಿದ್ದುವು. ಈ ಅಂಶಗಳು ರೋಮನ್ನರ ವಾಸ್ತುಪದ್ಧತಿಯ ಪ್ರತೀಕಗಳಾಗಿದ್ದುವು. ಪ್ರಾಚೀನ ಕಾಲದ ಅತ್ಯುತ್ತಮ ಚಿತ್ರಕಲೆಯ ನಿದರ್ಶನಗಳನ್ನು ಉಳಿಸಿಕೊಂಡ ನಗರಗಳಲ್ಲಿ ಪಾಂಪೆಯೂ ಒಂದಾಗಿತ್ತು.

ಪಾಂಪೆ ನಗರದಲ್ಲಿ ದೊರಕಿರುವ ಅವಶೇಷಗಳಲ್ಲಿ ಕಂಚಿನ ಮತ್ತು ಕಲ್ಲಿನ ಹಲವಾರು ಶಿಲ್ಪ ಕೃತಿಗಳಿವೆ. ಇವುಗಳಲ್ಲಿ ಸಾರ್ವಜನಿಕ ಕಟ್ಟಡ. ಉದ್ಯಾನ ಮತ್ತು ನೀರು ಚಿಲುಮೆಗಳನ್ನು ಅಲಂಕರಿಸಲು ಬಳಸಿದ್ದ ಕಂಚಿನ ಮಾನವ ಮತ್ತು ಪ್ರಾಣಿಗಳ ಶಿಲ್ಪಗಳು ಬಹಳ ಮೋಹಕವಾಗಿವೆ. (ಬಿ.ಕೆ.ಜಿ.)

**ಪಾಕ್ ಜಲಸಂಧಿ:** ಶ್ರೀಲಂಕದ ಉತ್ತರತಮ ತುದಿಗೂ ಭಾರತದ ಆಗ್ನೇಯ ತೀರಕ್ಕೂ ನಡುವೆ ಇರುವ ಕಿರಿದಾದ ಕಡಲ್ಗಾಲುವೆ, ಜಲಸಂಧಿ. ಅದರ ದಕ್ಷಿಣಕ್ಕೆ ಆಡಮ್ಸ್ ಬ್ರಿಜ್, ಮನ್ನಾರ್ ದ್ವೀಪ ಮತ್ತು ಮನ್ನಾರ್ ಖಾರಿ ಇವೆ. ಆಡಮ್ಸ್ ಬ್ರಿಜ್ ಎಂಬುದು ದಿಬ್ಬಗಳ ಸಾಲು. ಶ್ರೀ ರಾಮ ಲಂಕೆಗೆ ಹೋಗಲು ಕಟ್ಟಿದ ಸೇತುಬಂಧನವೇ ಇದು ಎಂದು ನಂಬಿಕೆಯಿದೆ. ಆಡಮ್ಸ್ ಬ್ರಿಜ್‍ನ ಪೂರ್ವಕ್ಕೆ ಮನ್ನಾರ್ ದ್ವೀಪವಿದೆ. ಮನ್ನಾರ್ ದ್ವೀಪದ ಉತ್ತರಕ್ಕೆ ಇರುವ ಕಡಲ ಚಾಚು ಪಾಕ್ ಕೊಲ್ಲಿ. 1763–66ರಲ್ಲಿ ಮದರಾಸಿನ ಗವರ್ನರ್ ಆಗಿದ್ದ ಸರ್ ರಾಬರ್ಟ್ ಪಾಕ್‍ನ ಹೆಸರು ಈ ಜಲಸಂಧಿಗೆ ಬಂದಿದೆ. ಸೇತುಬಂಧನದ ಪಶ್ಚಿಮಕ್ಕೆ ಪಾಕ್ ಜಲಸಂಧಿಗೂ ಮನ್ನಾರ್ ಖಾರಿಗೂ ನಡುವೆ ದಕ್ಷಿಣ ಭಾರತದ ಪುಣ್ಯಕ್ಷೇತ್ರವಾದ ರಾಮೇಶ್ವರ ದ್ವೀಪವಿದೆ. ಪಾಕ್ ಜಲಸಂಧಿಯ ಅಗಲ 64 ಕಿಮೀ, ಉದ್ದ 137 ಕಿಮೀ. ಶ್ರೀಲಂಕದ ಕೆಲವು ನದಿಗಳು ಮತ್ತು ಭಾರತದ ವೈಗೈ ನದಿ ಈ ಜಲಸಂಧಿಯಲ್ಲಿ ಕಡಲನ್ನು ಸೇರುತ್ತವೆ. ಜಲಸಂಧಿಯಲ್ಲಿ ಶ್ರೀಲಂಕದ ಹಲವು ದ್ವೀಪಗಳಿವೆ. ಇಲ್ಲಿ ಕಡಲು ಆಳವಾಗಿಲ್ಲ. ಇದು ದೊಡ್ಡ ಹಡಗುಗಳ ಸಂಚಾರಕ್ಕೆ ಅನುಕೂಲವಾಗಿಲ್ಲ. ಶ್ರೀಲಂಕದ ಜಾಫ್ನಾ ರೇವಿಗೂ ದಕ್ಷಿಣ ಭಾರತಕ್ಕೂ ನಡುವೆ ವ್ಯಾಪಾರ ಸಂಪರ್ಕವಿದೆ. ಸರಕುಗಳನ್ನು ಹೊತ್ತ ಸಣ್ಣ ಹಡಗುಗಳು ಇಲ್ಲಿ ಸಂಚರಿಸುತ್ತವೆ. (ವಿ.ಜಿ.ಕೆ.)

**ಪಾಕಿಸ್ತಾನ:** ದಕ್ಷಿಣ ಏಷ್ಯದ ಒಂದು ದೇಶ. ಪಾಕಿಸ್ತಾನ್ ಇಸ್ಲಾಮಿಕ್ ಗಣರಾಜ್ಯವೆಂದು ಇದರ ಅಧಿಕೃತ ಹೆಸರು. ಉ.ಅ. $24^0$ –$37^0$ ಮತ್ತು ಪೂ.ರೇ. $60^0$–$75^0$ ನಡುವೆ ಹಬ್ಬಿರುವ ಈ ದೇಶದ ವಿಸ್ತೀರ್ಣ 7,96,095 ಚ.ಕಿಮೀ. ಪಾಕಿಸ್ತಾನ ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಜಮ್ಮು ಮತ್ತು ಕಾಶ್ಮೀರ ಭಾಗವನ್ನು ಇದರಲ್ಲಿ ಸೇರಿಸಿಲ್ಲ. ಜನಸಂಖ್ಯೆ 132 ದಶಲಕ್ಷ (2001). ರಾಜಧಾನಿ ಇಸ್ಲಾಮಾಬಾದ್. ಜನಸಂಖ್ಯೆ 201,000 (2002).

ಪಾಕಿಸ್ತಾನದಲ್ಲಿ ನಾಲ್ಕು ಪ್ರಾಂತ್ಯಗಳಿವೆ. ಬಲೂಚಿಸ್ತಾನ, ವಾಯವ್ಯ ಸರಹದ್ದು ಪ್ರಾಂತ್ಯ, ಪಂಜಾಬ್ ಮತ್ತು ಸಿಂಧ್.

ಮೇಲ್ಮೈ ಲಕ್ಷಣ : ಪಾಕಿಸ್ತಾನದ ಮೇಲ್ಮೈ ಲಕ್ಷಣ ವೈವಿಧ್ಯಮಯ. ಪಾಕಿಸ್ತಾನದ ದಕ್ಷಿಣ ಸರಹದ್ದಿನಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತ ಹಾದುಹೋಗುತ್ತದೆ. ಈ ದೇಶದ ಉತ್ತರದಲ್ಲಿ ಹಿಮಾಲಯ ಪರ್ವತ ಶ್ರೇಣಿಗಳು ಹಾಯ್ದಿವೆ. ದಕ್ಷಿಣದಲ್ಲಿ ಮರುಭೂಮಿಗಳು ಹಬ್ಬಿವೆ. ಉತ್ತರ ಮತ್ತು ಪಶ್ಚಿಮಭಾಗಗಳಲ್ಲಿ ಪರ್ವತಗಳಿಂದ ಕೂಡಿರುವ ಈ ದೇಶದಲ್ಲಿ 6,705 ಮೀ ಗಳಿಗೂ ಎತ್ತರವಾದ 60 ಶಿಖರಗಳಿವೆ. ಪ್ರಪಂಚದ ಅತ್ಯಂತ ದೊಡ್ಡ ನದಿಗಳಲ್ಲೊಂದಾದ ಸಿಂಧೂ ಇಲ್ಲಿ ಹರಿಯುತ್ತದೆ. ಹೀಗೆ ವಿಭಿನ್ನ ಭೌತಲಕ್ಷಣಗಳಿಂದ ಕೂಡಿರುವ ಈ ದೇಶವನ್ನು 6 ನೈಸರ್ಗಿಕ ವಿಭಾಗಗಳಾಗಿ ವಿಂಗಡಿಸಬಹುದು: 1.ಉತ್ತರದ ಪರ್ವತಗಳು, 2. ಉಪಪರ್ವತ ಪ್ರಸ್ತಭೂಮಿ, 3. ಸಿಂಧೂಬಯಲು, 4. ಬಲೂಚಿಸ್ತಾನ ಪ್ರಸ್ತಭೂಮಿ, 5. ಪಶ್ಚಿಮದ ಸರಹದ್ದು ಪರ್ವತಗಳು, 6. ಮರುಭೂಮಿ ಪ್ರದೇಶಗಳು.




ಉತ್ತರದ ಪರ್ವತಗಳು : ಹಿಮಾಲಯ ಮತ್ತು ಹಿಮಾಲಾಯಾಂತರ ಪರ್ವತವಲಯ ಇಡೀ ಉತ್ತರ ಭಾಗವನ್ನು ವ್ಯಾಪಿಸಿವೆ. ವಾಯವ್ಯಕ್ಕೆ ಹಿಂದೂಕುಷ್ ಶ್ರೇಣಿಯ ಆಚೆಗೆ ಪ್ರಪಂಚದ ಛಾವಣಿ ಎನಿಸಿದ ಪಾಮಿರ್ ಪ್ರಸ್ಥಭೂಮಿಯಿದೆ. ಇಲ್ಲಿ ಸೋವಿಯತ್ ಒಕ್ಕೂಟ ಮತ್ತು ಪಾಕಿಸ್ತಾನ ಭೂ ಪ್ರದೇಶಗಳು ಆಫ್ಘಾನಿಸ್ತಾನದ ಕಿರಿದಾದ ಭೂ ಪ್ರದೇಶದಿಂದ ಪ್ರತ್ಯೇಕಗೊಂಡಿವೆ. ಉತ್ತರ ಪರ್ವತವಲಯ ಕೆಲವೆಡೆಗಳಲ್ಲಿ 320 ಕಿಮೀ ಅಗಲವಾಗಿವೆ. ಇಲ್ಲಿ 6,096 ಮೀ ಗಳಿಗಿಂತ ಎತ್ತರವಾದ ಶಿಖರಗಳು ಅಲ್ಲಲ್ಲಿ ಎದ್ದು ನಿಂತಿವೆ. ಈ ಪರ್ವತವಲಯ ಪಾಕಿಸ್ತಾನದ ವಾಯುಗುಣದ ಮೇಲೆ ಗಾಢ ಪ್ರಭಾವ ಬೀರಿದೆ. ಇದು ದಕ್ಷಿಣದಿಂದ ಬೀಸುವ ಮಳೆಯಮಾರುತಗಳನ್ನು ತಡೆದು ಇಲ್ಲಿ ಹೆಚ್ಚಿನ ಮಳೆ ಬೀಳಲು ಕಾರಣವಾಗಿದೆ. ಇದರ ಪೂರ್ವಭಾಗ ಮಂಜುಗಡ್ಡೆ ಮತ್ತು ನೀರ್ಗಲ್ಲ ನದಿಗಳಿಂದ ಕೂಡಿದೆ. ಇಲ್ಲಿಯ ಮಂಜುಗಡ್ಡೆಗಳು ಬೇಸಗೆಯಲ್ಲಿ ಕರಗುವುದರಿಂದ ಸಿಂಧೂ ನದಿ ಮತ್ತು ಅದರ ಉಪನದಿಗಳು ಸದಾ ತುಂಬಿ ಹರಿಯುತ್ತವೆ. ಈ ವಲಯದಲ್ಲಿ ಪರ್ವತಗಳ ವಿವಿಧ ಪಂಕ್ತಿಗಳು ಹಬ್ಬಿವೆ.

ಉಪಪರ್ವತ ವಲಯ : ಪರ್ವತವಲಯ ಮತ್ತು ಸಿಂಧೂ ನದಿ ಬಯಲಿನ ನಡುವೆ ಇರುವ ಪ್ರದೇಶವನ್ನು 4 ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು: 1. ಸಿಂಧೂ ಆಚೆಗಿನ ಬಯಲು, 2. ಪೊಟ್ವಾರ್ ಪ್ರಸ್ಥಭೂಮಿ, 3. ಸಾಲ್ಟ್ ಶ್ರೇಣಿ ಮತ್ತು 4. ಸಿಯಾಲ್‌ಕೋಟ್ ಜಿಲ್ಲೆ.

1. ಸಿಂಧೂ ಆಚೆಗಿನ ಬಯಲು : ಈ ಪ್ರದೇಶ ಸಿಂಧೂ ನದಿಯ ಪಶ್ಚಿಮಕ್ಕಿರುವ ಪೇಷಾವರ್ ಕಣಿವೆ, ಕೊಹಾಟ್ ಬಯಲು, ಬನ್ನು ಪ್ರಸ್ಥಭೂಮಿ ಇವನ್ನೊಳಗೊಂಡಿದೆ. ಇವುಗಳಲ್ಲಿ ಪೇಷಾವರ್ ಮತ್ತು ಮರ್ಧನ್ ಜಿಲ್ಲೆಗಳನ್ನೊಳಗೊಂಡ ಪೇಷಾವರ್ ಕಣಿವೆ ಅತ್ಯಂತ ಫಲವತ್ತಾದ ವಲಯ. ಇಲ್ಲಿಯ ಹೆಚ್ಚು ಭಾಗ ಒಣಪ್ರದೇಶ. ಇದು ಕುರುಚಲು ಕಾಡುಗಳಿಂದ ಮತ್ತು ತೆಳುಹುಲ್ಲು ನೆಲದಿಂದ ಕೂಡಿದೆ. ಇಲ್ಲಿಯ ಭೂಮಿ ಸಾಮಾನ್ಯವಾಗಿ 305–366 ಮೀ ಎತ್ತರವಾಗಿದೆ. ಈಚೆಗೆ ವ್ಯಾಪಕ ನೀರಾವರಿ ಯೋಜನೆಯಿಂದ ಲಕ್ಷಾಂತರ ಎಕರೆಗಳು ಸಾಗುವಳಿಯಾಗಿವೆ. ಪೇಷಾವರ್ ಕಣಿವೆಗಿಂತ ಸ್ವಲ್ಪ ಎತ್ತರದಲ್ಲಿರುವ ಕೋಹಾಟ್ ಪ್ರದೇಶದಲ್ಲಿ ಅಲ್ಲಲ್ಲಿ ಸುಣ್ಣದ ಕಲ್ಲಿನ ಏಣುಗಳುಂಟು. ಈ ಪ್ರದೇಶ ಏರುತಗ್ಗಾಗಿದೆ. ಅಲ್ಲಲ್ಲಿ ಹೊಳೆಗಳಿಂದ ಕಣಿವೆಗಳುಂಟಾಗಿದೆ. ಇವು ಆಳದಲ್ಲಿ ಹರಿಯುವುದರಿಂದ ನೀರಾವರಿಗೆ ಅನುಕೂಲವಾಗಿಲ್ಲ. ಕೋಹಾಟ್ ಬಯಲಿನ ದಕ್ಷಿಣಕ್ಕಿರುವ ಬನ್ನು ಬಯಲು ಹೆಚ್ಚಾಗಿ ಗುಡ್ಡ ಬೆಟ್ಟಗಳಿಂದ ಕೂಡಿದೆ. ಕೆಲವೆಡೆ ಗೋಡುಮಣ್ಣಿರುವುದನ್ನು ಬಿಟ್ಟರೆ ಉಳಿದಂತೆ ನೆಲ ಮರಳು ಅಥವಾ ಪುಡಿಗಲ್ಲಿನಿಂದ ಕೂಡಿದ್ದು, ವಾರ್ಷಿಕ ಮಳೆ ಸು. 28 ಸೆಂಮೀ.

2.ಪೊಟ್ವಾರ್ ಪ್ರಸ್ಥಭೂಮಿ : ಇದು ಸಿಂಧೂ ನದಿಯ ಪೂರ್ವಕ್ಕೆ ಪಂಜಾಬಿನಲ್ಲಿದೆ. ಸು. 12,800 ಚ.ಕಿಮೀ ವಿಸ್ತಾರವಾಗಿದೆ. ಇದರ ಎತ್ತರ 366 ಮೀ–579 ಮೀ ಏರುತಗ್ಗುಗಳಿರುವ ಈ ಬಯಲಿನಲ್ಲಿ ಮರಳುಕಲ್ಲು ಹೆಚ್ಚು. ಗಾಳಿಯಿಂದ ಅಲ್ಲಲ್ಲಿ ವಿವಿಧ ಪ್ರಮಾಣದಲ್ಲಿ ಜಿಗುಟು ಮಣ್ಣು ಮತ್ತು ಜೇಡುಮಣ್ಣುಗಳು ಸಂಗ್ರಹವಾಗಿವೆ. ಇಲ್ಲಿ 38–64 ಸೆಂಮೀ ಮಳೆಯಾಗುತ್ತದೆ. ಮಳೆಗಾಲದಲ್ಲಿ ತೊರೆಗಳು ಭೂಮಿಯನ್ನು ಕೊರೆದು ಮಣ್ಣನ್ನು ಕೊಚ್ಚುತ್ತವೆ. ವ್ಯವಸಾಯಕ್ಕೆ ನೆಲ ಅಷ್ಟು ಅನುಕೂಲಕರವಾಗಿಲ್ಲ. ಇಲ್ಲಿ ಸೋವಾನ್ ನದಿ ಹರಿಯುತ್ತದೆ.

3. ಸಾಲ್ಟ್ ಶ್ರೇಣಿ : ಇದು ಪೊಟ್ವಾರ್ ಪ್ರಸ್ಥಭೂಮಿಯಲ್ಲಿ ದಕ್ಷಿಣಕ್ಕೆ ಮತ್ತು ಪಂಜಾಬ್ ಬಯಲುಗಳ ಉತ್ತರಕ್ಕೆ ಇದೆ. ಇಲ್ಲಿಯ ನೆಲದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 670 ಮೀ. ಇಲ್ಲಿಯ ಅತ್ಯುನ್ನತ ಶಿಖರ ಸಕೇಸರ್‌ನ (1,500 ಮೀ) ಉಪಪರ್ವತ ವಲಯ ಮತ್ತು ಸಿಂಧೂ ಬಯಲನ್ನು ಪ್ರತ್ಯೇಕಿಸಿರುವ ಈ ಎತ್ತರ ಪ್ರದೇಶ ತೀರ ಬರಡು. ಸಿಂಧೂ ನದಿಯ ಉಪನದಿಗಳು ಹರಿಯುವ ಈ ಪ್ರದೇಶದಲ್ಲಿ ನೆರೆಯ ಬಯಲುಗಳಿವೆ. ಹಳೆಯ ಕಾಲದ ಕಾಲುವೆಗಳಿವೆ. ಪ್ರವಾಹಗಳ ಕೊರೆತದಿಂದಾಗಿ ತಗ್ಗುದಿಣ್ಣೆಗಳು ಹುಟ್ಟಿಕೊಂಡಿವೆ. ಕೆಲವು ರಮಣೀಯ ಸರೋವರಗಳಿವೆ. ಸಸ್ಯವರ್ಗ ವಿರಳ.

4. ಸಿಯಾಲ್‌ಕೋಟ್ ಜಿಲ್ಲೆ : ಇದು ಈಶಾನ್ಯ ಭಾಗದ ಕಿರಿದಾದ ಉಪಪರ್ವತ ವಲಯ. ಭಾರತದ ಸರಹದ್ದಿನಲ್ಲಿರುವ ಈ ಜಿಲ್ಲೆ ಫಲವತ್ತಾದ ವ್ಯವಸಾಯ ಪ್ರದೇಶ. ಇಲ್ಲಿ ಮಣ್ಣಿನ ಸವೆತ ಹೆಚ್ಚು. ಭೂಗರ್ಭಜಲ ಸಂಪನ್ಮೂಲ ಯಥೇಚ್ಛವಾಗಿದೆ. ಸಾಂದ್ರವ್ಯವಸಾಯ ರೂಢಿಯಲ್ಲಿದೆ. ಜನಸಾಂದ್ರತೆ ಅಧಿಕ, ಸು. 65–90 ಸೆಂಮೀ ವರೆಗೆ ಮಳೆಯಾಗುತ್ತದೆ.

ಸಿಂಧೂ ಬಯಲು : ಪೊಟ್ವಾರ್ ಪ್ರಸ್ಥಭೂಮಿಯ ಅಂಚಿನಿಂದ ದಕ್ಷಿಣಕ್ಕೆ ಅರಬ್ಬಿ ಸಮುದ್ರದವರೆಗೂ ಈ ಪ್ರದೇಶ ಹಬ್ಬಿದೆ. ಇದು ಫಲವತ್ತಾದ ಮೆಕ್ಕಲು ಮಣ್ಣಿನಿಂದ ಕೂಡಿದ್ದು, ಇದನ್ನು ಉತ್ತರ ವಲಯ ಮತ್ತು ದಕ್ಷಿಣ ವಲಯ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಉತ್ತರದಲ್ಲಿ ಸಿಂಧೂ ಮತ್ತು ಅದರ ಉಪನದಿಗಳು ಈ ಬಯಲನ್ನು ಸೀಳಿಕೊಂಡು ಹರಿಯುತ್ತವೆ. ನದಿಗಳ ನಡುವೆ ಭೂಪ್ರದೇಶ ಎತ್ತರವಾಗಿದೆ. ಅಲ್ಲಲ್ಲಿ ಮರಳುದಿಣ್ಣೆಗಳಾಗಿವೆ. ಪಂಜಾಬ್ ಪ್ರದೇಶದಲ್ಲಿ ಹರಿಯುವ ಐದು ನದಿಗಳು ಒಂದಾಗಿ ಸೇರಿ ಮಿಥಾನ್‌ಕೋಟ್ ಬಳಿ ಸಿಂಧೂನದಿಯೊಡನೆ ಸಂಗಮಿಸುತ್ತವೆ. ಈ ನದಿಗಳಿಂದಾಗಿರುವ ದೋಆಬ್‌ಗಳ ಪೈಕಿ ಅತ್ಯಂತ ದೊಡ್ಡದು ಸಿಂಧ್ ಸಾಗರ್. ಸಿಂಧೂ ಮತ್ತು ಚೀನಾಬ್ ನದಿಗಳ ನಡುವಿನ ಇತರ ಉಪನದಿಗಳ ನಡುವೆ ಇರುವ ದೋಆಬ್‌ಗಳು ಫಲವತ್ತಾಗಿವೆ. ಆಧುನಿಕ ನೀರಾವರಿ ವ್ಯವಸ್ಥೆಯಿಂದಾಗಿ ಈ ಬಯಲು ಪಾಕಿಸ್ತಾನದ ಅತ್ಯಂತ ಸಂಪದ್ಭರಿತ ವ್ಯವಸಾಯ ಕ್ಷೇತ್ರವಾಗಿದೆ. ಸಿಂಧೂ ಬಯಲಿನ ದಕ್ಷಿಣ ವಲಯ ಸಿಂಧ್ ಪ್ರಾಂತ್ಯದಲ್ಲಿದೆ. ಪಶ್ಚಿಮಕ್ಕೆ ಕಿರ್ಥಾರ್ ಮತ್ತು ಸುಲೇಮಾನ್ ಪರ್ವತಶ್ರೇಣಿಗಳು, ಪೂರ್ವಕ್ಕೆ ಭಾರತದ ಥಾರ್ ಮರುಭೂಮಿ ವಲಯ ಇದರ ಮೇರೆಗಳು. ಇಲ್ಲಿ ಭೂಮಿ ಸಡಿಲವಾಗಿದೆ. ಸಿಂಧೂ ನದಿ ಇಲ್ಲಿ ಆಗಾಗ ಪಾತ್ರ ಬದಲಾಯಿಸುತ್ತದೆ. ಮರಳಿನಿಂದ ಕೂಡಿದ ಈ ವಿಸ್ತಾರವಾದ ಬಯಲಿನಲ್ಲಿ ಫಲವತ್ತಾದ ಮರಳು ಮತ್ತು ಜೇಡಿಮಣ್ಣು ಹೆಚ್ಚು. ಸಿಂಧೂನದಿ ಕಣಿವೆಯಲ್ಲಿ ಮೃದುವಾದ ಕೆಂಪು ಮಿಶ್ರಿತ ಹಾಗೂ ಜೇಡಿ ಮರಳು ಮಿಶ್ರಿತ ಮಣ್ಣಿದೆ. ಇಲ್ಲಿ ಎತ್ತರದ ಶಿಖರಗಳುಂಟು. ಪರ್ವತವಲಯ ಬರಡು ನೆಲ. ಪೂರ್ವದಲ್ಲಿರುವ ಮರುಭೂಮಿಗಳು ತಗ್ಗಾದ ಮರಳು ದಿಣ್ಣೆಗಳಿಂದಲೂ ಸಮತಟ್ಟು ಬಯಲುಗಳಿಂದಲೂ ಕೂಡಿವೆ. ಸಿಂಧೂ ನದಿಯ ಪಶ್ಚಿಮಕ್ಕಿರುವ ಮಾಂಛಾರ್ ಜೌಗು ಸರೋವರ ಸಂಪೂರ್ಣವಾಗಿ ನೀರಿನಿಂದ ತುಂಬಿದಾಗ 518 ಚ.ಕಿಮೀ ವಿಸ್ತಾರವಾಗಿರುತ್ತದೆ. ದಕ್ಷಿಣ ಏಷ್ಯದಲ್ಲಿ ಇದು ಅತ್ಯಂತ ದೊಡ್ಡ ಸಿಹಿನೀರಿನ ಸರೋವರ. ಸಿಂಧೂ ನದಿಯ ಮುಖಜಭೂಮಿ ಅನೇಕ ಕಿಮೀ ಅಗಲವಾಗಿದೆ. ಮುಖಜಭೂಮಿಯ ದಕ್ಷಿಣ ತೀರದಲ್ಲಿ ಸಮುದ್ರದ ಅಲೆಗಳು ಮತ್ತು ನದೀ ಪ್ರವಾಹಗಳಿಂದಾಗಿ ಕೆಲವೊಮ್ಮೆ ನದಿಯಲ್ಲಿ ಹಿನ್ನೀರು 32 ಕಿಮೀ ದೂರ ಒಳಪ್ರದೇಶದ ಕಡೆ ಏರಿ ನಿಲ್ಲುತ್ತದೆ.

ಬಲೂಚಿಸ್ತಾನ ಪ್ರಸ್ಥಭೂಮಿ: ಇದು ಸಿಂಧೂ ಬಯಲಿನಿಂದ ಪಶ್ಚಿಮಕ್ಕೆ ಕೋಡಿನಾಕಾರದಲ್ಲಿ ಮುಂಚಾಚಿ ಇರಾನಿನೊಂದಿಗೆ ಸಂಪರ್ಕಿಸುವ ವಿಸ್ತಾರ ಪ್ರದೇಶವನ್ನೊಳಗೊಂಡಿದೆ. ಈ ಪ್ರಸ್ಥಭೂಮಿಯನ್ನು ಪೂರ್ವದಲ್ಲಿ ಸುಲೇಮಾನ್ ಮತ್ತು ಕಿರ್ಥಾರ್ ಶ್ರೇಣಿಗಳು ಸಿಂಧೂ ಬಯಲಿನಿಂದ ಬೇರ್ಪಡಿಸಿವೆ. ವಾಯವ್ಯಕ್ಕೆ ತೋಬಕಾಕರ್ ಮತ್ತು ಈಶಾನ್ಯಕ್ಕೆ ಗೋಮಲ್ ನದಿ ಇದರ ಪರಿಮಿತಿಗಳೆನ್ನಬಹುದು. ಪಶ್ಚಿಮಕ್ಕೆ ಇರಾನಿನ ಮಹಾಪ್ರಸ್ಥಭೂಮಿಯ ಭಾಗದಂತಿರುವ ಇದು ಪಾಕಿಸ್ತಾನದ ಗಡಿಯವರೆಗೂ ವ್ಯಾಪಿಸಿದೆ. ಪೂರ್ವದ ಕಿರ್ಥಾರ್ ಮತ್ತು ಸುಲೇಮಾನ್ ಶ್ರೇಣಿಗಳು ಉತ್ತರ ದಕ್ಷಿಣವಾಗಿ ಹಬ್ಬಿದ್ದರೆ ದಕ್ಷಿಣ ತೀರಪ್ರದೇಶದ ಮಕ್ರಾನ್ ಬೆಟ್ಟಸಾಲು ಪೂರ್ವ–ಪಶ್ಚಿಮವಾಗಿ ಹಬ್ಬಿದೆ. ಕಾಕರ್ ಬೆಟ್ಟಸಾಲು ಈಶಾನ್ಯ–ನೈಋತ್ಯವಾಗಿ ವ್ಯಾಪಿಸಿದೆ. ಸುಲೇಮಾನ್ ಶ್ರೇಣಿಯಲ್ಲಿರುವ ತಖ್ತ್–ಇ–ಸುಲೇಮಾನ್ ಪರ್ವತದ ಎತ್ತರ 3.353 ಮೀ. ಉಳಿದೆಡೆ 1,829–2,134 ಮೀ ಎತ್ತರದ ಶಿಖರಗಳು ಅಲ್ಲಲ್ಲಿವೆ. ಸುಲೇಮಾನ್ ಮತ್ತು ತೋಬಕಾಕರ್ ಶ್ರೇಣಿಗಳ ನಡುವೆ

ಝೋಬ್ ಮತ್ತು ಬೆಜಿ ಉಪನದಿಗಳ ಜಲಾನಯನ ಪ್ರದೇಶಗಳಿವೆ. ಆಗ್ನೇಯದಲ್ಲಿರುವ ಕಿರ್ಥಾರ್ ಶ್ರೇಣಿ ದಕ್ಷಿಣದಲ್ಲಿ 1,219 ಮೀ ಗಳಿಂದ ಹಿಡಿದು ಉತ್ತರದಲ್ಲಿ 2,438 ಮೀ ವರೆಗೆ ಎತ್ತರವಾಗಿದೆ. ಕಿರ್ಥಾರ್‌ನ ಉತ್ತರ ವಲಯದ ಅತ್ಯಂತ ಎತ್ತರದ ಭಾಗವಾದ ಮತ್ತು ಬಲೂಚಿಸ್ತಾನ ಪ್ರಸ್ಥಭೂಮಿಯ ಮಧ್ಯದಲ್ಲಿರುವ ಕಲಾತ್ ಪೀಠಭೂಮಿಯ ಎತ್ತರ 2,134,–2,438 ಮೀ. ಪಶ್ಚಿಮದ ಸೀಯಾಹಾನ್ ಶ್ರೇಣಿ ಮತ್ತು ವಾಯವ್ಯದ ಜಾಗ್ಯೆ ಬೆಟ್ಟಗಳ ಕಡೆ ಭೂಮಿಯ ಎತ್ತರ ಕಡಿಮೆಯಾಗುತ್ತ ಹೋಗಿದೆ. ಇಲ್ಲಿ ಸಮತಟ್ಟಾದ ಮರುಭೂಮಿ ಬಯಲುಗಳಿವೆ. ಪಶ್ಚಿಮದ ಬೋಲಾನ್ ಮತ್ತು ಖೋಜಾಕ್ ಕಣಿವೆಗಳಿಂದಾಗಿ ಮೇಲಣ ಪ್ರಸ್ಥಭೂಮಿಯಿಂದ ಕೆಳಗಿನ ಪ್ರಸ್ಥಭೂಮಿ ಬೇರ್ಪಟ್ಟಿದೆ. ಬಲೂಚಿಸ್ತಾನ ಪ್ರಸ್ಥಭೂಮಿ ಅತ್ಯಂತ ಬರಡು ಪ್ರದೇಶ. ಇಲ್ಲಿ ಜನಸಾಂದ್ರತೆ ಬಲು ವಿರಳ. ಇದು ಇಡೀ ಪಾಕಿಸ್ತಾನದಲ್ಲೇ ತೀರ ಕಡಿಮೆ. ವ್ಯವಸಾಯಕ್ಕೆ ಅಷ್ಟು ಯೋಗ್ಯವಲ್ಲದ ಈ ಪ್ರದೇಶದಲ್ಲಿ ಪ್ರಾಣಿಗಳನ್ನು ಸಾಕುವುದು ಮುಖ್ಯ ಕಸಬು.

ಪಶ್ಚಿಮ ಸರಹದ್ದಿನ ಪರ್ವತಗಳು : ಇವು ಬಲೂಚಿಸ್ತಾನ ಪ್ರಸ್ಥಭೂಮಿಯ ಉತ್ತರಕ್ಕಿರುವ ಗೋಮಲ್ ನದಿಯಿಂದ ಮುಂದೆ ಆಫ್ಘಾನಿಸ್ತಾನದ ಗಡಿಯ ಉದ್ದಕ್ಕೂ ಹಿಂದೂಕುಷ್ ಪರ್ವತಶ್ರೇಣಿಯ ಬುಡದವರೆಗೆ ವ್ಯಾಪಿಸಿವೆ. ಹಿಂದೂಕುಷ್‌ನ ಎತ್ತರ ಪರ್ವತ ವಲಯದ ದಕ್ಷಿಣಕ್ಕೆ ಕಾಬೂಲ್ ನದಿಯವರೆಗೂ ಈಶಾನ್ಯ–ನೈಋತ್ಯಾಭಿಮುಖವಾಗಿ ಪರ್ವತ ಸಾಲುಗಳು ಹಬ್ಬಿವೆ. ಕಾಬೂಲ್ ನದಿಯ ಉತ್ತರಕ್ಕೆ ಮತ್ತು ಸ್ವಾಟ್ ನದಿಯ ಪಶ್ಚಿಮಕ್ಕೆ 1,524–1,829 ಮೀ ಎತ್ತರವಿರುವ ಮೊಹಮಂಡ್ ಬೆಟ್ಟಗಳಿವೆ. ಸ್ವಾಟ್ ನದಿಯ ಪೂರ್ವಕ್ಕಿರುವ ಮಾಲಕಂಡ್ ಶ್ರೇಣಿಸ್ವಾಟ್ ಕಣಿವೆಯನ್ನು ಪೆಷಾವರ್ ಕಣಿವೆಯಿಂದ ಬೇರ್ಪಡಿಸುತ್ತದೆ. ಕಾಬೂಲ್ ನದಿಯ ದಕ್ಷಿಣದಲ್ಲಿರುವ ಸಾಕರಮ್ ಆ ಪ್ರದೇಶದ ಅತ್ಯಂತ ಎತ್ತರವಾದ ಶಿಖರ (4,761 ಮೀ).

ಕಾಬೂಲ್ ನದಿಯತ್ತ ಹಬ್ಬಿರುವ ಕಿರಿಯ ಬೆಟ್ಟಸಾಲುಗಳ ದಕ್ಷಿಣದಲ್ಲಿ ಆಫ್ಘಾನಿಸ್ತಾನದ ಗಡಿಯ ಬಳಿ ಇತಿಹಾಸ ಪ್ರಸಿದ್ಧ ಖೈಬರ್ ಕಣಿವೆ ಇದೆ. ಕಾಬೂಲ್ ನದಿಯ ದಕ್ಷಿಣಕ್ಕೆ ಸಫೇದ್‌ಕೋ ಶ್ರೇಣಿ ಹಬ್ಬಿದೆ. ಸಫೇದ್‌ಕೋ ಶ್ರೇಣಿಯ ಗರಿಷ್ಠ ಎತ್ತರ 4,761 ಮೀ. ಈ ಶ್ರೇಣಿಯನ್ನು ಮೇಲಿನ ಕುರ್ರಮ್ ಕಣಿವೆಯಲ್ಲಿ ಹಬ್ಬಿರುವ, ನೈಋತ್ಯ ಬೆಟ್ಟಸಾಲುಗಳು ತುಂಡರಿಸುತ್ತವೆ. ಖೈಬರ್ ಮತ್ತು ಬೋಲಾನ್ ಕಣಿವೆಗಳ ಮಧ್ಯೆ ಗೋಮಲ್ ಕಣಿವೆ ಇದೆ. ಈ ವಲಯದಲ್ಲಿ ಗೋಮಲ್, ತೋಚಿ ಮತ್ತು ಕುರ್ರಂ ನದಿಗಳು ಹರಿಯುತ್ತವೆ. ಒಟ್ಟಿನಲ್ಲಿ ಪಶ್ಚಿಮ ಸರಹದ್ದು ಪರ್ವತಗಳ ವಲಯ ಕಣಿವೆಗಳಿಂದಲೂ ಮತ್ತು ಪರ್ವತ ಸಾಲುಗಳಿಂದಲೂ ಕೂಡಿದೆ. ಮಾನ್‌ಸೂನ್ ವಲಯದ ಹೊರಗಿರುವ ಈ ಪ್ರದೇಶದಲ್ಲಿ ಮಳೆ ಕಡಿಮೆ. ಸರಾಸರಿ 30–64 ಸೆಂಮೀ. ಇಲ್ಲಿ ಸಸ್ಯಜೀವನ ಸಮೃದ್ಧವಾಗಿಲ್ಲ. ಕಣಿವೆಗಳಲ್ಲಿ ನದಿಗಳ ದಡಗಳಲ್ಲಿ ಇಳಿಜಾರು ತಟ್ಟುಗಳನ್ನು ಮಾಡಿರುವಲ್ಲಿ ಮತ್ತು ಬೆಟ್ಟಗಳ ತಪ್ಪಲಲ್ಲಿ ಮಾತ್ರ ವ್ಯವಸಾಯ ಸಾಧ್ಯ. ಪ್ರಾಣಿ ಸಾಕಣೆ ಮುಖ್ಯ ಕಸಬು. ಹೇಸರಗತ್ತೆ ಇಲ್ಲಿಯ ಮುಖ್ಯ ಹೇರು ಪ್ರಾಣಿ.

ಮರುಭೂಮಿ ಪ್ರದೇಶಗಳು: ಪಾಕಿಸ್ತಾನದ ದಕ್ಷಿಣ ಭಾಗದಲ್ಲಿ ಪೂರ್ವ–ಪಶ್ಚಿಮವಾಗಿ ಅಲ್ಲಲ್ಲಿ ಕಿರು ಮರುಭೂಮಿಗಳಿವೆ. ಅವುಗಳಲ್ಲಿ ಸಿಂಧ್ ಸಾಗರ್ ದೋಆಬ್ ಮುಖ್ಯವಾದದ್ದು. ಅದರ ಮಧ್ಯದಲ್ಲಿರುವ ಥಾಲ್ ಶುದ್ಧ ಮರುಭೂಮಿಯ ಲಕ್ಷಣಗಳಿಂದ ಕೂಡಿದೆ. ಭಾವಲ್‌ಪುರದ ಚೊಲಿಸ್ತಾನ ಇನ್ನೊಂದು ದೊಡ್ಡ ಮರುಭೂಮಿ. ಇನ್ನೂ ದಕ್ಷಿಣಕ್ಕೆ ಸಿಂಧ್ ಪ್ರಾಂತ್ಯದಲ್ಲಿ ಥಾರ್ ಮರುಭೂಮಿ ಇದೆ. ಇದು ಪಶ್ಚಿಮ ಭಾರತದ ಥಾರ್ ಮರುಭೂಮಿಯ ವಿಸ್ತೃತ ಪ್ರದೇಶ. ಬಲೂಚಿಸ್ತಾನದ ಪಶ್ಚಿಮಭಾಗದಲ್ಲೂ ಮರುಭೂಮಿಗಳಿವೆ.

ನದಿಗಳು : ಪಾಕಿಸ್ತಾನದ ಬಹುಭಾಗ ಮರಳು ಬಯಲು ಮತ್ತು ಬರಡು ಪ್ರದೇಶದಿಂದ ಕೂಡಿದ್ದರೂ ಪ್ರಪಂಚದಲ್ಲೇ ಅಸಾಧಾರಣವೆನ್ನುವಂತೆ ಇಲ್ಲಿ ಅನೇಕ ನದಿಗಳು ತುಂಬಿ ಹರಿಯುತ್ತವೆ. ಹಿಂದೂಕುಷ್ ಮತ್ತು ಹಿಮಾಲಯ ಪರ್ವತ ವಲಯಗಳು ಇಲ್ಲಿಯ ನದಿಗಳಿಗೆ ಸತತವಾಗಿ ಜಲವನ್ನೂಡಿಸುತ್ತವೆ. ಸಿಂಧೂ ಮತ್ತು ಅದರ ಉಪನದಿಗಳು ಬಹುಮಟ್ಟಿಗೆ ಪಾಕಿಸ್ತಾನದ ಸಮಗ್ರ ನದಿ ವ್ಯವಸ್ಥೆಯಾಗಿ ಪರಿಣಮಿಸಿವೆ.

ಸಿಂಧೂ ನದಿ ಟಿಬೆಟ್‌ನಲ್ಲಿ ಹುಟ್ಟಿ ವಾಯವ್ಯಾಭಿಮುಖವಾಗಿ ಕಾಶ್ಮೀರವನ್ನು ಹಾಯುತ್ತದೆ. ಅಲ್ಲಿಯ ಕಾರಕೋರಂ ಶ್ರೇಣಿಯಲ್ಲಿ ಬೃಹತ್ ನೀರ್ಗಲ್ಲ ಹೊಳೆಗಳನ್ನು ಕೂಡಿಕೊಂಡು ದಕ್ಷಿಣಾಭಿಮುಖವಾಗಿ ತಿರುಗಿ ಪಾಕಿಸ್ತಾನವನ್ನು ಈಶಾನ್ಯ ಭಾಗದಲ್ಲಿ ಪ್ರವೇಶಿಸುತ್ತದೆ. ಒಟ್ಟು 2,900 ಕಿಮೀ ಉದ್ದವಿರುವ ಈ ನದಿ ಬೆಟ್ಟ ಗುಡ್ಡಗಳ ಮಧ್ಯೆ ವೇಗವಾಗಿ ಹರಿದು ಮುಂದೆ ತರ್ಬೆಲ ಅಣೆಕಟ್ಟು ಪ್ರದೇಶವನ್ನು ದಾಟುತ್ತದೆ. ಅಟ್ಟಾಕ್‌ಗೆ ಸ್ವಲ್ಪ ಮೇಲ್ಭಾಗದಲ್ಲಿ ಆಫ್ಘಾನಿಸ್ತಾನದಿಂದ ಹರಿದುಬರುವ ಕಾಬೂಲ್ ನದಿ ಸಿಂಧೂ ನದಿಯನ್ನು ಕೂಡುತ್ತದೆ. ಇದು ಕಾಲಾಬಾಗ್ ಬಳಿ ಸಾಲ್ಟ್ ಶ್ರೇಣಿಯನ್ನು ಸೀಳಿಕೊಂಡು ಪಂಜಾಬಿನ ಬಯಲನ್ನು ಪ್ರವೇಶಿಸುತ್ತದೆ. ಸಿಂಧೂ ನದಿ ಪಂಜಾಬಿನ ಬಯಲಿಗೆ ಬರುವಾಗ ಮಂದಗಮನದಿಂದ ದೊಡ್ಡ ಪಾತ್ರದಲ್ಲಿ ತುಂಬಿ ಹರಿಯುತ್ತದೆ. ಇಲ್ಲಿ ಅದಕ್ಕೆ ಪೂರ್ವದ ಕಡೆ ಝೀಲಂ, ಚೀನಾಬ್, ರಾವಿ, ಬೀಯಾಸ, ಸಟ್ಲೆಜ್ ಮೊದಲಾದ ಉಪನದಿಗಳು ಸೇರುತ್ತವೆ. ಇವು ಸೇರಿದ ಮೇಲೆ ಸಿಂಧೂ ಬೃಹತ್ ಸ್ವರೂಪ ತಳೆದು ಹರಿಯುತ್ತದೆ. ಪಾಕಿಸ್ತಾನದ ಪಶ್ಚಿಮಭಾಗದಲ್ಲಿ ಹರಿಯುವ ಸ್ವಾಟ್ ನದಿ ಸಿಂಧುವಿನ ಉಪನದಿಯಾದ ಕಾಬೂಲ್ ನದಿಯನ್ನು ಸೇರುತ್ತದೆ. ಪೂರ್ವ ಆಫ್ಘಾನಿಸ್ತಾನದಿಂದ ಹರಿದು ಬರುವ ಗೋಮಲ್ ನದಿ ಡೇರ ಇಸ್ಮೇಲ್ ಖಾನ್ ಬಳಿ ಸಿಂಧೂನದಿಯನ್ನು ಸೇರುತ್ತದೆ. ಇದರ ಮುಖ್ಯ ಉಪನದಿ ಝೋಬ್, ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಹರಿಯುವ ತೋಚಿ ನದಿ ಕುರ್ರಂ ನದಿಯೊಡಗೂಡಿ ಬನ್ನು ಪ್ರದೇಶದಲ್ಲಿ ಸಿಂಧೂ ನದಿಯನ್ನು ಸೇರುತ್ತದೆ.

ಮಣ್ಣು : ಪಾಕಿಸ್ತಾನದ ಮಣ್ಣಿನ ಬಹುಭಾಗ ಒಣ ಮಣ್ಣಿನ ವರ್ಗಕ್ಕೆ ಸೇರಿದೆ. ಅದರಲ್ಲಿ ಕಾರ್ಬೊನೇಟ್ ಅಂಶ ಹೆಚ್ಚಿದ್ದು, ಜೈವಿಕ ವಸ್ತು ಕಡಿಮೆ ಪ್ರಮಾಣದಲ್ಲಿದೆ. ಇದು ಕಡಿಮೆ ಮತ್ತು ಅನಿಶ್ಚಿತ ಮಳೆ ಬೀಳುವ ಭೂಮಿಯ ಲಕ್ಷಣ. ಎತ್ತರದ ಪರ್ವತ ವಲಯದಲ್ಲಿ ಹೆಚ್ಚಾಗಿ ಸುಣ್ಣದಕಲ್ಲು ಮತ್ತು ಮರಳಗಲ್ಲು ಮಿಶ್ರಿತಮಣ್ಣು ಕಂಡುಬರುತ್ತವೆ. ಬನ್ನು ಪ್ರದೇಶದಲ್ಲಿ ಮೃದು ಮರಳು ಹರಡಿದೆ. ಡೇರ ಇಸ್ಮೇಲ್ ಖಾನ್ ಭಾಗದಲ್ಲಿ ಪುಡಿಗಲ್ಲು ಮತ್ತು ಮೆಕ್ಕಲು ಮಣ್ಣಿದೆ. ಹಾಗೂ ಸುಣ್ಣದಕಲ್ಲು ವ್ಯಾಪಿಸಿದೆ. ಸಿಯಾಲ್‌ಕೋಟ್ ಜಿಲ್ಲೆಯಲ್ಲಿ ಫಲವತ್ತಾದ ಮಣ್ಣುಂಟು.

ಸಿಂಧೂ ಬಯಲಿನಲ್ಲಿ ಸಿಂಧೂ ನದಿ ಆಗಾಗ ಪಾತ್ರ ಬದಲಾಯಿಸುವುದರಿಂದ ಅಲ್ಲಿ ಕೆಲವು ಕಡೆ ಪ್ರವಾಹದ ಮೆಕ್ಕಲುಮಣ್ಣು ಹರಡಿದೆ. ಸಿಂಧ್‌ನ ಸಿಬಿ ಮತ್ತು ನಾರಾ ಪ್ರದೇಶಗಳಲ್ಲಿ ಸಸ್ಯಾಂಗವಿರುವ ಮತ್ತು ಗೋಬ್ಬರ ಮಣ್ಣಿರುವ ನೆಲವುಂಟು. ಥಾರ್ ಮರುಭೂಮಿ ಪ್ರದೇಶ ಮತ್ತು ಸಿಂಧ್ ಸಾಗರ್ ದೋಆಬ್‌ನ ಜೇಡು ಬೆರೆತ ಮರಳು ಮಣ್ಣಿನಲ್ಲಿ ಕ್ಯಾಲ್ಸಿಯಂ ಕಾರ್ಬೊನೇಟ್ ಅಂಶ ಗಣನೀಯವಾಗಿದೆ. ಸಿಂಧ್‌ನ ತೀರಪ್ರದೇಶದಲ್ಲಿ ಮತ್ತು ಜೌಗು ಹಾಗೂ ಸರೋವರಗಳ ದಡದಲ್ಲಿ ಲವಣಮಿಶ್ರಿತ ಮಣ್ಣುಂಟು.

ಮರುಭೂಮಿ ಪ್ರದೇಶಗಳಲ್ಲಿ ಮತ್ತು ಬಲೂಚಿಸ್ತಾನದ ಬಹುಭಾಗದಲ್ಲಿ ಗಾಳಿಯಿಂದ ತೂರಿಬಂದ ಪುಡಿಮಣ್ಣಿನ ಶೇಖರಣೆಗಳಿವೆ. ಅದು ಬಂಕೆಮಣ್ಣು ಅಥವಾ ಜಿಗುಟು ಮಣ್ಣು ಮಿಶ್ರಿತ ಮೆಕ್ಕಲುಮಣ್ಣಿನಿಂದ ಕೂಡಿದೆ. ವಿಸ್ತಾರ ಪ್ರದೇಶಗಳಲ್ಲಿ ಶುದ್ಧ ಮರಳು ಇದೆ. ಪಾಕಿಸ್ತಾನದಲ್ಲಿ ನದಿ ಕಣಿವೆಗಳು ಮತ್ತು ಬೆಟ್ಟದ ತಪ್ಪಲುಗಳನ್ನು ಬಿಟ್ಟರೆ ಉಳಿದ ಇರುವ ಮಣ್ಣು ವ್ಯವಸಾಯಕ್ಕೆ ಅಷ್ಟು ಉತ್ಕೃಷ್ಟವಾಗಿಲ್ಲ. ಹೊಸ ಮಣ್ಣಿನಲ್ಲಿ ನೀರಾವರಿ ಬೆಳೆ ಸಾಗುವಳಿ ಮಾಡಿದಾಗ ಉತ್ತೇಜನಕಾರಕ ಫಲ ದೊರೆತಿದೆ. ಮಣ್ಣು ಸಂರಕ್ಷಣೆ ಮತ್ತು ನೀರಾವರಿ ಯೋಜನೆಗಳು ಇಲ್ಲಿಯ ನೆಲದ ಉಪಯುಕ್ತತೆಯನ್ನು ಹೆಚ್ಚಿಸಿವೆ.

ವಾಯುಗುಣ : ಪಾಕಿಸ್ತಾನ ಕರ್ಕಾಟಕ ಸಂಕ್ರಾಂತಿ ವೃತ್ತದ ಉತ್ತರಕ್ಕೆ ಏಷ್ಯದ ಮುಖ್ಯ ಭೂ ಭಾಗದಲ್ಲಿ ಬರುವುದರಿಂದ ಇಲ್ಲಿಯದು ಖಂಡಾಂತರ ಲಕ್ಷಣದ ವಾಯುಗುಣ, ಇದರ ಗಣನೀಯಭಾಗ ಮಾನ್‌ಸೂನ್ ಮಾರುತವಲಯಕ್ಕೆ ಸೇರಿದ್ದರೂ ಉಪಖಂಡದ ಇತರ ಭಾಗಗಳಿಗೆ ಹೋಲಿಸಿದರೆ ಇಲ್ಲಿ ಮಳೆ ತುಂಬ ಕಡಿಮೆ. ಹಿಮಾಲಯದ ದಕ್ಷಿಣದ ಇಳಿಜಾರು ಮತ್ತು ಉಪಪರ್ವತ ವಲಯದಲ್ಲಿ 75–90 ಸೆಂಮೀ ಮಳೆಯಾಗುತ್ತದೆ. ಪೊಟ್ವಾರ್ ಪ್ರಸ್ಥಭೂಮಿಯಲ್ಲಿ 50 ಸೆಂಮೀ ಮಳೆಯಾಗುತ್ತದೆ. ಅಲ್ಲಿಂದ ದಕ್ಷಿಣಕ್ಕೆ ಬಹು ಬರಡು ಪ್ರದೇಶವಿದೆ. ಗುಡ್ಡಗಾಡಿನಲ್ಲಿ 6 ರಿಂದ 41 ಸೆಂಮೀ ವರೆಗೆ ಮಳೆ ಬಿದ್ದರೆ, ತೀರ ಪ್ರದೇಶದಲ್ಲಿ 11 ರಿಂದ 28 ಸೆಂಮೀ ವರೆಗೆ ಮಳೆ ಬೀಳುತ್ತದೆ. ಸಿಂಧ್‌ನ ಪಶ್ಚಿಮಭಾಗದಲ್ಲಿ ಮತ್ತು ಜಾಕಬೂಬಾದ್‌ನಲ್ಲಿ 13 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ. ಪಾಕಿಸ್ತಾನದ ಬಹುಭಾಗ ಒಣಪ್ರದೇಶ. ಪಾಕಿಸ್ತಾನದ ಶ್ರಾಯೀಣ ಮತ್ತು ದೈನಿಕ ಉಷ್ಣತೆಗಳಲ್ಲಿ ತೀವ್ರ ವ್ಯತ್ಯಾಸಗಳಾಗುತ್ತದೆ. ವಿಶೇಷವಾಗಿ ಸಿಂಧ್ ಪ್ರದೇಶದಲ್ಲಿ ಬೇಸಗೆಯಲ್ಲಿ ಉಷ್ಣತೆ ಗರಿಷ್ಠ ಮಟ್ಟ ಮುಟ್ಟುತ್ತದೆ. ಇಡೀ ಉಪಖಂಡದ ಗರಿಷ್ಠ ಉಷ್ಣತೆಯಾದ $52^{0}$ಸೆ. ಜಾಕಬೂಬಾದ್‌ನಲ್ಲಿ ದಾಖಲಾಗಿದೆ. ಬಲೂಚಿಸ್ತಾನ ಪ್ರಸ್ಥಭೂಮಿಯಲ್ಲಿ ಉಷ್ಣತೆ ಅಧಿಕ. ತೀರದ ಬಯಲುಗಳಲ್ಲಿ ಬೇಸಗೆಯಲ್ಲಿ ಆಗಾಗ ಉಷ್ಣತೆ 46 ಸೆ. ದಾಟುತ್ತದೆ. ದಿನದ ಉಷ್ಣತೆಯಲ್ಲಿ ತೀವ್ರ ವ್ಯತ್ಯಾಸಗಳು ಕಂಡುಬರುತ್ತವೆ. ಬೇಸಗೆಯಲ್ಲಿ ಹಗಲಿನಲ್ಲಿ ಬಯಲುಗಳ ಮೇಲೆ ಲೂ ಎಂಬ ಬಿಸಿಮಾರುತಗಳು ಬೀಸುತ್ತವೆ. ದೂಳಿನಿಂದ ಕೂಡಿದ ಬಿರುಗಾಳಿ ಬೀಸಿ ಸಿಡಿಲುಗುಡುಗು ಸಮೇತ ಮಳೆ ತರುವುದುಂಟು. ಇದರಿಂದ ತಾತ್ಕಾಲಿಕವಾಗಿ ಉಷ್ಣತೆ ಕಡಿಮೆಯಾಗುತ್ತದೆ. ಚಳಿಗಾಲ ತಂಪಾಗಿರುತ್ತದೆ. ಕಲಾಟೆ ಮತ್ತು ಕ್ವೆಟ್ಟಾಗಳಲ್ಲಿ ಸ್ವಲ್ಪ ಹಿಮ ಬೀಳುತ್ತದೆ.

ಸಸ್ಯ ಸಂಪತ್ತು : ಪಾಕಿಸ್ತಾನದ ಉತ್ತರದ ಪರ್ವತಶ್ರೇಣಿಗಳನ್ನು ಬಿಟ್ಟರೆ ಉಳಿದೆಡೆ ಸಸ್ಯವರ್ಗ ಬಡವಾಗಿದೆ. ಎತ್ತರದ ಪರ್ವತದ ಇಳಿಜಾರುಗಳಲ್ಲಿ ಓಕ್ ಮತ್ತು ಪೈನ್ ಮರಗಳಿಂದ ಕೂಡಿದ ದಟ್ಟವಾದ ಕಾಡುಗಳಿವೆ. ಕುರುಚಲು ಕಾಡುಗಳಿರುವಲ್ಲಿ ಗಡುಸಾದ ನೀಳಹುಲ್ಲು ಮತ್ತು ಪೊದೆಗಳು ವ್ಯಾಪಿಸಿವೆ. ಪಂಜಾಬಿನ ಮರ್ರಿ ಬೆಟ್ಟಗಳಲ್ಲಿ ಉಪೋಷ್ಣ ವಲಯ ಮತ್ತು ಸಮಶೀತೋಷ್ಣ ವಲಯ ಕಾಡುಗಳಿವೆ. ಬಯಲುಗಳಲ್ಲಿ ದೊಡ್ಡ ಮರಗಳು ವಿರಳ.

ಬಲೂಚಿಸ್ತಾನದಲ್ಲಿ ಮತ್ತು ಸಾಲ್ಟ್ ಶ್ರೇಣಿ ಹಾಗೂ ಪಶ್ಚಿಮ ಸರಹದ್ದಿನ ಪರ್ವತಗಳ ಸಸ್ಯವರ್ಗದಲ್ಲಿ ಬಹುಮಟ್ಟಿಗೆ ಜೀರೋಫೈಟಿಕ್ ಸಸ್ಯಗಳಿವೆ. ಇಲ್ಲಿ ಪಿಸ್ತಾ, ಆಲಿವ್, ಆಷ್, ವಿಲೋ ಮರಗಳಿವೆ. ಬೆಟ್ಟದ ಇಳಿಜಾರುಗಳಲ್ಲಿ ಜಾಲಿ ಜಾತಿಯ ಮರ ಮತ್ತು ಹುಲ್ಲು ಬೆಳೆದಿವೆ. ಸಿಂಧೂ ಕಣಿವೆಯಲ್ಲಿ ಜಾಲಿ ಜಾತಿ ಮರಗಳು ಮತ್ತು ಉಳಿದೆಡೆ ತಾಳೆ ಜಾತಿ ಮರಗಳು ಇವೆ.

ಮೀಸಲು ಕಾಡುಗಳಲ್ಲಿ ಪ್ಲಾಂಟೇಷನ್‌ಗಳಿವೆ. ಕೆಲವೆಡೆ ಹಣ್ಣಿನ ಮರಗಳ ತೋಪುಗಳುಂಟು. ಮಾವು, ದ್ರಾಕ್ಷಿ ಸಸ್ಯಗಳಿವೆ. ಇತ್ತೀಚೆಗೆ ತಂದು ಬೆಳೆಸಿದ ಬಾಳೆ, ಕಿತ್ತಳೆ ವಿಶಿಷ್ಟ ಹಣ್ಣಿನ ಸಸ್ಯಗಳಾಗಿವೆ. ಗುಡ್ಡಗಳಲ್ಲಿ ಗಿಡಮೂಲಿಕೆ, ಗೆಡ್ಡೆಗಳು ಹೇರಳವಾಗಿವೆ. ಬಲೂಚಿಸ್ತಾನದಲ್ಲಿ ಕ್ಷಾಮಕಾಲದಲ್ಲಿ ಹುಲ್ಲುಬೀಜಗಳನ್ನು ತಿನ್ನುತ್ತಿದ್ದರು. ಸಿಂಧೂ ಮತ್ತು ಅದರ ಉಪನದಿಗಳಿಂದ ವ್ಯಾಪಕವಾಗಿ ನೀರಾವರಿ ನಡೆದಿರುವುದರಿಂದ ಬೋಳು ಬಯಲುಗಳಲ್ಲಿ ಕಬ್ಬು, ಗೋದಿ, ಹತ್ತಿ ಮತ್ತು ಬತ್ತದ ಬೆಳೆಗಳು ವ್ಯಾಪಕವಾಗಿವೆ.

ಆರ್ಥಿಕತೆ: ಪಾಕಿಸ್ತಾನ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ. ಕೃಷಿಯೇ ಇದರ ಬೆನ್ನೆಲುಬು. ಕೃಷಿ ಕ್ಷೇತ್ರದಲ್ಲಿ ಅಪಾರವಾದ ಸಮಸ್ಯೆಗಳನ್ನೆದುರಿಸುತ್ತಿರುವ ಮತ್ತು ಕೈಗಾರಿಕೆಯಲ್ಲಿ ಹಿಂದುಳಿದಿರುವ ರಾಷ್ಟ್ರವಿದು.

ಕೃಷಿ : ಪಾಕಿಸ್ತಾನದ ಆರ್ಥಿಕತೆಯಲ್ಲಿ ಕೃಷಿಯೇ ಅತ್ಯಂತ ಪ್ರಧಾನವಾದ ಕ್ಷೇತ್ರ. ದೇಶದ ಶೇ. 60ರಷ್ಟು ಜನ ಕೃಷಿಯನ್ನೇ ಆಧರಿಸಿದ್ದಾರೆ. ಬತ್ತ, ಗೋದಿ, ಮುಸುಕಿನ ಜೋಳ, ಕಬ್ಬು, ಹತ್ತಿ–ಇವು ಮುಖ್ಯ ಬೆಳೆಗಳು.

ಕೈಗಾರಿಕೆ : ಕೃಷಿಯನ್ನು ಬಿಟ್ಟರೆ ಪಾಕಿಸ್ತಾನದ ಅರ್ಥವ್ಯವಸ್ಥೆಯನ್ನು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿರುವ ಕ್ಷೇತ್ರವೆಂದರೆ ಕೈಗಾರಿಕೆ. 1970ರಲ್ಲಿ ಕೈಗಾರಿಕೋದ್ಯಮದಿಂದ ರಾಷ್ಟ್ರೀಯ ಉತ್ಪನ್ನಕ್ಕೆ ಶೇ.17ರಷ್ಟು ಸಂದಿತು. ಆದರೆ ದೇಶದ ಒಟ್ಟು ಶ್ರಮದ ಕೇವಲ ಶೇ. 10ರಷ್ಟಕ್ಕೆ ಮಾತ್ರ ಕೈಗಾರಿಕೆಗಳು ಉದ್ಯೋಗ ಒದಗಿಸುತ್ತಿವೆ. ಕೈಗಾರಿಕಾ ಕ್ಷೇತ್ರದಲ್ಲಿ ದೊಡ್ಡ ಕೈಗಾರಿಕೆಗಳು ಪ್ರಧಾನ ಪಾತ್ರ. ಕೈಗಾರಿಕೆಗಳ ಒಟ್ಟು ಉತ್ಪಾದನೆಯಲ್ಲಿ ಶೇ. 65ರಷ್ಟು ಭಾಗ ದೊಡ್ಡ ಕೈಗಾರಿಕೆಗಳಿಂದಲೇ ಬರುತ್ತಿದೆ.

ಪಾಕಿಸ್ತಾನದಲ್ಲಿ ಕೈಗಾರಿಕಾ ಪ್ರಗತಿ 1950ರಿಂದಲೂ ವೇಗವಾಗಿ ನಡೆಯುತ್ತ ಬಂದಿದೆ. ಪ್ರಾರಂಭದಲ್ಲಿ ಅನುಭೋಗ ಸರಕುಗಳ ಉತ್ಪಾದನೆಗೆ ಪ್ರಾಧಾನ್ಯ ನೀಡಿದ್ದರಿಂದ ಈ ಗುಂಪಿನ ಕೈಗಾರಿಕೆಗಳೇ ಪ್ರಮುಖವಾಗಿ ಅಭಿವೃದ್ಧಿಗೊಂಡವು. ಆದರೆ ಅನಂತರ ಈ ಪ್ರಾಧಾನ್ಯ ಬಂಡವಾಳ ಸರಕುಗಳ ಉತ್ಪಾದನೆಗೆ ದೊರೆಯಿತು. 1960ರ ಅನಂತರ ಹೆಚ್ಚಾಗಿ ಬಂಡವಾಳ ಸರಕುಗಳ ಕೈಗಾರಿಕೆಗಳು ಪ್ರಾರಂಭವಾಗಿ ಅಭಿವೃದ್ಧಿಹೊಂದಿವೆ.

ವಿದ್ಯುಚ್ಛಕ್ತಿ : ಜಲವಿದ್ಯುತ್ ಉತ್ಪಾದನೆಯಲ್ಲಿ ಪಾಕಿಸ್ತಾನ ಹೆಚ್ಚಿನ ಪ್ರಗತಿಯನ್ನೇನೂ ಸಾಧಿಸಿಲ್ಲವಾದ್ದರಿಂದ ಶಾಖ ವಿದ್ಯುತ್ ಉತ್ಪಾದನೆಯನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿದೆ. 1970ರಲ್ಲಿ ಅತ್ಯಂತ ಹೆಚ್ಚಿನ ಜಲವಿದ್ಯುತ್ ಉತ್ಪಾದಿಸುತ್ತಿದ್ದ ಕೇಂದ್ರವೆಂದರೆ ಝೀಲಮ್ ನದಿಗೆ ಅಡ್ಡಲಾಗಿ ಕಟ್ಟಿರುವ ಮಂಗ್ಲಾ ಕಟ್ಟೆಯ ವಿದ್ಯುತ್ ಉತ್ಪಾದನ ಕೇಂದ್ರ. ಇದರ ಸಾಮರ್ಥ್ಯ 10 ಲಕ್ಷ ಕಿವಾ. 1968ರಲ್ಲಿ ಪ್ರಾರಂಭವಾದ ತಾರ್‌ಬೆಲಾ ಕಟ್ಟೆಯ ವಿದ್ಯುತ್ ಉತ್ಪಾದನಾ ಕೇಂದ್ರವೂ 21 ಲಕ್ಷ ಕಿವಾ ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಆದರೆ ಈ ಗಾತ್ರದ ಉತ್ಪಾದನೆಯಿಂದಲೂ ರಾಷ್ಟ್ರಕ್ಕೆ ಅಗತ್ಯವಾದ ವಿದ್ಯುತ್ತಿನ ಪೂರೈಕೆ ಸಂಪೂರ್ಣವಾಗಿ ಲಭಿಸದಿರುವುದರಿಂದ ಪಾಕಿಸ್ತಾನ ಹೆಚ್ಚಾಗಿ ಶಾಖ ವಿದ್ಯುತ್ ಕೇಂದ್ರಗಳನ್ನೇ ಅವಲಂಬಿಸಬೇಕಾಗಿದೆ. ಜಲ ಹಾಗೂ ಶಾಖ ವಿದ್ಯುತ್ ಉತ್ಪಾದನ ಕೇಂದ್ರಗಳಲ್ಲದೆ, ಕರಾಚಿಯ ಹೊರ ಭಾಗದಲ್ಲಿ 1,37,000 ಕಿವಾ ಉತ್ಪಾದನಾ ಸಾಮರ್ಥ್ಯದ ಪರಮಾಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

ವಿದೇಶಿ ವ್ಯಾಪಾರ : ಪಾಕಿಸ್ತಾನದ ವಿದೇಶಿ ವ್ಯಾಪಾರ ಹೆಚ್ಚು ಬೆಳವಣಿಗೆ ಸಾಧಿಸಿಲ್ಲ. ಪ್ರಾರಂಭದಿಂದಲೂ ಪಾಕಿಸ್ತಾನ ಕೃಷಿಮೂಲ ವಸ್ತುಗಳನ್ನು ರಫ್ತು ಮಾಡುತ್ತ, ಕಚ್ಚಾ ಸಾಮಗ್ರಿ ಮತ್ತು ಬಂಡವಾಳ ಸರಕುಗಳನ್ನು ಆಮದು ಮಾಡಿಕೊಳ್ಳುತ್ತ ಬಂದಿದೆ. ರಫ್ತಿಗಿಂತ ಯಾವಾಗಲೂ ಆಮದು ಹೆಚ್ಚಾಗಿರುವುದರಿಂದ ಮೊದಲಿನಿಂದಲೂ ಪಾಕಿಸ್ತಾನ ವಿದೇಶಿ ವಿನಿಮಯದ ಕೊರತೆಯನ್ನು ಎದುರಿಸುತ್ತಲೇ ಬಂದಿದೆ. ಬಾಂಗ್ಲಾದೇಶ ಪ್ರತ್ಯೇಕವಾಗುವುದಕ್ಕೆ ಮುಂಚೆ ಪಾಕಿಸ್ತಾನದ ಅತ್ಯಂತ ಮುಖ್ಯವಾದ ರಫ್ತು ಸರಕುಗಳು ಸೆಣಬು, ಹತ್ತಿ, ಉಣ್ಣೆ, ಚರ್ಮ ಮತ್ತು ಚಹ ಆಗಿದ್ದುವು. ಒಟ್ಟು ರಫ್ತಿನ ಆದಾಯದ ಶೇ. 90ರಷ್ಟು ಇವುಗಳಿಂದ ಸಂಪಾದನೆಯಾಗುತ್ತಿತ್ತು. ಆದರೆ ಬಾಂಗ್ಲಾ ಪ್ರತ್ಯೇಕತೆಯಿಂದ ಪಾಕಿಸ್ತಾನ ಸೆಣಬು ಮತ್ತು ಚಹ ರಫ್ತನ್ನು ಕಳೆದುಕೊಳ್ಳಬೇಕಾಯಿತು. ಪಾಕಿಸ್ತಾನದ ಈಗಿನ ಮುಖ್ಯ ರಫ್ತು ವಸ್ತುಗಳು ಹತ್ತಿ ಮತ್ತು ಹತ್ತಿ ಬಟ್ಟೆ, ಅಕ್ಕಿ, ಚರ್ಮ, ಮೀನು ಮತ್ತು ಜಮಖಾನೆ. ಮುಖ್ಯ ಆಮದುಗಳು ಯಂತ್ರ ಸಲಕರಣೆ, ರಾಸಾಯನಿಕ, ರಸಗೊಬ್ಬರ, ಖಾದ್ಯ ತೈಲ, ಕಬ್ಬಿಣ, ಉಕ್ಕು ಹಾಗೂ ವಿದ್ಯುತ್ ಉಪಕರಣ.

ಸಾರಿಗೆ : 1990ರ ವೇಳೆಗೆ ಪಾಕಿಸ್ತಾನದಲ್ಲಿ 12,624 ಕಿಮೀ ರೈಲ್ವೆ ಮಾರ್ಗಗಳಿದ್ದುವು. ಕರಾಚಿಯ ಬಂದರು ಪಾಕಿಸ್ತಾನದಲ್ಲಿ ಅತ್ಯಂತ ಮುಖ್ಯವಾದ್ದು. ಮಕ್ರಾನ್ ಕರಾವಳಿಯಲ್ಲಿ ಮತ್ತೊಂದು ಬಂದರನ್ನು ನಿರ್ಮಿಸಲು ಯೋಜಿಸಲಾಗಿದೆ. ಪಾಕಿಸ್ತಾನದ ರಾಷ್ಟ್ರೀಯ ಹಡಗು ಸಾರಿಗೆ ಕಾರ್ಪೊರೇಷನ್ 25 ರಾಷ್ಟ್ರಗಳೊಡನೆ ಹಡಗು ಸಂಪರ್ಕ ಹೊಂದಿದ್ದು ವಿದೇಶಿ ವ್ಯಾಪಾರದಲ್ಲಿ ಗಣನೀಯ ಪಾತ್ರ ವಹಿಸುತ್ತಿದೆ. 1990ರಲ್ಲಿ ಪಾಕಿಸ್ತಾನದಲ್ಲಿ 86,839 ಕಿಮೀ ರಸ್ತೆಗಳಿದ್ದುವು. ಪಾಕಿಸ್ತಾನದಲ್ಲಿ ಎರಡು ವಿಮಾನ ಸಾರಿಗೆ ಸಂಸ್ಥೆಗಳಿವೆ.

ಪಾಕಿಸ್ತಾನ ಮುಖ್ಯವಾಗಿ ಮುಸ್ಲಿಮರ ದೇಶ. ಅಲ್ಲಿಯ ಜನಸಂಖ್ಯೆಯಲ್ಲಿ ಶೇ. 88.1 ಮುಸ್ಲಿಮರು, ಶೇ. 5.8 ಅನುಸೂಚಿತ ಹಿಂದು ವರ್ಗಗಳು, ಶೇ. 4.9 ಸವರ್ಣೀಯರು ಹಿಂದುಗಳು, ಶೇ. 0.8 ಕ್ರೈಸ್ತರು ಮತ್ತು ಶೇ. 0.4 ಬೌದ್ಧರು ಇದ್ದಾರೆ. ಮುಸ್ಲಿಮರಲ್ಲಿ ಸುನ್ನಿ ಪಂಥದವರು ಬಹು ಸಂಖ್ಯಾತರು.

ಪಾಕಿಸ್ತಾನ ಅನೇಕ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಸ್ಥಳಗಳಿಂದ ಕೂಡಿದೆ. ಸಿಂಧೂ ಕಣಿವೆ ನಾಗರಿಕತೆಯ ಕಾಲದ ನಗರ ನಿವೇಶನಗಳಾದ ಹರಪ್ಪ, ಮೊಹೆಂಜೊದಾರೋಗಳು ಪ್ರಪಂಚ ಪ್ರಸಿದ್ಧವಾಗಿವೆ. ದೇಶದ ಈಶಾನ್ಯದಲ್ಲಿ ಪ್ರಾಚೀನ ವಿದ್ಯಾಕೇಂದ್ರವಾದ ತಕ್ಷಶಿಲೆ ನಿವೇಶನವಿದೆ. ಮಾಣಿಕ್ಯಾಲಯ ಪಾವರ್, ಅರೋರ್, ಮಾಲೊತ್, ಹೈದರಾಬಾದ್, ನಂದನ ಮೊದಲಾದ ಚಾರಿತ್ರಿಕ ಸ್ಥಳಗಳು ಶಿವಗಂಗಾ, ಹಸನ್ ಅಬ್ದುಲ್ ಮುಂತಾದ ಧಾರ್ಮಿಕ ಸ್ಥಳಗಳು ಇವೆ.

ಪಾಕಿಸ್ತಾನದ ಮುಖ್ಯ ನಗರಗಳು ಇಸ್ಲಾಮಾಬಾದ್, ಕರಾಚಿ, ಲಾಹೋರ್, ಲೈಲ್‌ಪುರ, ಹೈದರಾಬಾದ್, ರಾವಲ್ಪಿಂಡಿ, ಮುಲ್ತಾನ್, ಪೆಷಾವರ್, ಸರ್ಗೋದ, ಸಕ್ಕೂರ್.

(ಟಿ.ಆರ್.ಎ.;ಡಿ.ಎಸ್.ಜೆ.;ಸಿ.ಕೆ.ಆರ್.)

**ಪಾಮಿರ್:** ಮಧ್ಯ ಏಷ್ಯದ ಎತ್ತರವಾದ ಪರ್ವತಪ್ರದೇಶ. ತಜಿಕಿಸ್ತಾನ್ ದೇಶಕ್ಕೆ ಸೇರಿದೆ. ಅದನ್ನು ಸುತ್ತುಗಟ್ಟಿರುವ ಪರ್ವತ ವ್ಯವಸ್ಥೆಗಳು ಮಧ್ಯ ಏಷ್ಯದ ಹಿಂದೂಕುಷ್, ಕೂನ್‌ಲೂನ್ದ್ ಗಿಸ್ಸಾರ್‌ಆಲ್ಯೆ ಮತ್ತು ಟೀಯೆನ್ ಷಾನ್. ಈ ಉನ್ನತ ಪ್ರದೇಶದ ಉದ್ದ, ಸು. 448 ಕಿಮೀ, ಅಗಲ 192–240 ಕಿಮೀ. ಇದರ ಉತ್ತರದಲ್ಲಿ ಆಲ್ಯೆ ಪರ್ವತಶ್ರೇಣಿ. ಪೂರ್ವದಲ್ಲಿ ಚೀನ ಮತ್ತು ರಷ್ಯ ದೇಶಗಳ ಗಡಿಯಲ್ಲಿರುವ ಸಾರಿಕಾಲ್, ದಕ್ಷಿಣದಲ್ಲಿ ಜಾರ್ಕೂಲ್ ಸರೋವರ (ಪಾಮಿರ್ ನದಿ ಮತ್ತು ಪ್ಯಾನಷ್ ನದಿಯ ಉಗಮ ಸ್ಥಳ), ಪಶ್ಚಿಮದಲ್ಲಿ ಪ್ಯಾನಷ್ ಕಣಿವೆಯ ದಕ್ಷಿಣೋತ್ತರ ಭಾಗ ಇದೆ. ಪೀಟರ್ 1 ಮತ್ತು ದರ್ವಾಜ್ ಶ್ರೇಣಿಗಳು ಈ ಪರ್ವತ ಪ್ರದೇಶಕ್ಕೆ ಸೇರಿವೆ. ಏಕೆಂದರೆ ಇವುಗಳ ಹಿಮನದಿಗಳು ಪಾಮೀರ್‌ನ ವಾಯವ್ಯಭಾಗದ ಹಿಮನದಿಗಳು ಒಂದೇ ವ್ಯವಸ್ಥೆಗೆ ಒಳಪಡುವಂಥವು.

ಪಾಮಿರ್ ಪರ್ವತ ಪ್ರದೇಶವನ್ನು ಅದರ ಮೇಲ್ಮೈಲಕ್ಷಣಕ್ಕನುಸಾರವಾಗಿ ಪಶ್ಚಿಮ ಪಾಮಿರ್ ಮತ್ತು ಪೂರ್ವ ಪಾಮಿರ್ ಎಂದು ವಿಭಜಿಸಬಹುದು. ಪಶ್ಚಿಮ ಪಾಮಿರ್‌ನಲ್ಲಿ ಎತ್ತರವಾದ ಪರ್ವತಗಳು, ಮಂಜು ಕವಿದ ಶಿಖರಗಳು ಮತ್ತು ಹಿಮ ನದಿಗಳು ಇವೆ. ಇಲ್ಲಿಯ ಬೃಹತ್ ಪರ್ವತಗಳ ನಡುನಡುವೆ ಕಿರುಬೆಟ್ಟಗಳುಂಟು. ಆಳವಾದ ಕಮರಿಯಲ್ಲಿ ವೇಗವಾಗಿ ಹರಿಯುವ ನದಿಗಳಿವೆ. ಪಾಮಿರ್ ಉನ್ನತ ಪ್ರದೇಶ ಹಿಂದೆ ಕಡಿದಾದ ನದೀ ಪ್ರಪಾತವಾಗಿತ್ತು; ಇದು ಕಾಲಗತಿಯಲ್ಲಿ ಬೆಟ್ಟಗಳಿಂದ ಬಿದ್ದ ಬಂಡೆ ಮತ್ತು ಭೂಗಷ್ಪಿನಿಂದ ತುಂಬಿಹೋಗಿ ಎತ್ತರವಾದ ಪ್ರದೇಶವಾಯಿತು– ಎಂಬ ಅಭಿಪ್ರಾಯವನ್ನು ಫ್ರಾನ್ಸಿಸ್ ಯಂಗ್‌ಹಸ್ಬೆಂಡ್ ನೀಡಿದ್ದಾರೆ. ಪಾಮಿರ್ ಪ್ರದೇಶದ ಅತ್ಯಂತ ಎತ್ತರವಾದ ಭಾಗವನ್ನು ಕೂನ್‌ಲೂನ್ ಪರ್ವತದ ಕಡೆಯಿಂದ ಮುಟ್ಟಬಹುದು. ಮೂಸ್ತಾ ಆಟಾ ಮತ್ತು ಟೀಯೆನ್ ಷಾನ್ ಪರ್ವತಗಳ ನಡುವಣ ಪ್ರದೇಶದ ಎತ್ತರ, ಸಮುದ್ರ ಮಟ್ಟದಿಂದ 3,658 ಮೀ.

ಪಾಮಿರ್ ಪ್ರದೇಶದಲ್ಲಿ ಉತ್ತರದಲ್ಲಿ ಕಮ್ಯೂನಿಸಂ (7,495 ಮೀ) ಮತ್ತು ಲೆನಿನ್ (7,134 ಮೀ) ಶಿಖರಗಳಿವೆ. ಕಮ್ಯೂನಿಸಂ ಶಿಖರ ಸೋವಿಯತ್ ದೇಶದ ಅತ್ಯುನ್ನತ ಬಿಂದು. ಪೂರ್ವಭಾಗದಲ್ಲಿ ಮೂಸ್ತಾ ಆಟಾ ಶಿಖರ. ಪಶ್ಚಿಮದ ಅಕಾಡೆಮಿ ಆಫ್ ಸೈನ್ಸಸ್ ಮತ್ತು ಜುಲೂಮಾರ್ಟ್ ಶಿಖರಗಳು ಅಷ್ಟು ಎತ್ತರವಾಗಿಲ್ಲ. ಪಾಮಿರ್ ಪರ್ವತ ಸಾಲುಗಳನ್ನು ದಾಟಿಹೋಗಲು ಹಲವು ಮಾರ್ಗಗಳಿವೆ. ಅವುಗಳ ಪೈಕಿ ಖರ್ಗೋಷ್ ಮುಖ್ಯವಾದ್ದು. ಪಾಮಿರ್ ಕಣಿವೆಯಲ್ಲಿ ಅನೇಕ ನದಿಗಳು ಎಲ್ಲ ದಿಕ್ಕುಗಳಲ್ಲಿ–ವಿಶೇಷವಾಗಿ ಪೂರ್ವ ಹಾಗೂ ಪಶ್ಚಿಮದ ಕಡೆ–ಹರಿಯುತ್ತವೆ. ಅವುಗಳಲ್ಲಿ ಮುಖ್ಯವಾದದ್ದು ಅಮೂದಾರ್ಯ, ಇತರೆ ನದಿಗಳು ಮುರ್ಗಾಬ್, ಪ್ಯಾನಷ್ ಮತ್ತು ಪಾಮಿರ್. ದಾರೀಮ್ ನದಿ ಪೂರ್ವಾಭಿಮುಖವಾಗಿ ಚೀನದತ್ತ ಹರಿಯುತ್ತದೆ.

ಪಾಮಿರ್ ಪ್ರದೇಶದಲ್ಲಿ 1,085 ಹಿಮನದಿಗಳಿವೆ. ಅಕಾಡೆಮಿ ಆಫ್ ಸೈನ್ಸಸ್, ಟ್ರಾನ್ಸ್ ಆಲೀ, ರುಷಾನ್, ಆಲೀಚೂರ್, ಪೀಟರ್ 1 ಮತ್ತು ಝುಲುಮಾರ್ಟ್ ಪರ್ವತ ಶ್ರೇಣಿಗಳಲ್ಲಿ ಇವು ಹೆಚ್ಚು. ಫೆಡೆಚೆಂಕೊ ಹಿಮನದಿ ಅಕಾಡೆಮಿ ಆಫ್ ಸೈನ್ಸಸ್‌ನಲ್ಲಿ ಹುಟ್ಟಿ ಹರಿಯುತ್ತದೆ (70 ಕಿಮೀ). ಗ್ರುಮ್ ಗ್ರಿಜ್‌ಹೆಮೆಲೊ, ಗರ್ಮೊ, ಸಗ್ರನ್, ಜಿಯೋಗ್ರಾಫಿಕ್ ಸೊಸೈಟಿ, ಸೌಕ್‌ದಾರಾ, ಕೊರ್ಜೆನೆವ್‌ಸ್ಕಿ, ಅಕ್ಟೋಬರ್, ಲೆನಿನ್–ಇವು ಕೆಲವು ಹಿಮನದಿಗಳು. ಪಶ್ಚಿಮ ಪಾಮಿರ್ ಪ್ರದೇಶದಲ್ಲಿ ಹಿಮ ಕವಿದಿದೆ.

ಪಾಮಿರ್ ಪ್ರದೇಶದಲ್ಲಿ ಹಲವು ಸರೋವರಗಳಿವೆ. ಕಾರಕಲ್, ರಂಗಕಲ್, ಆಲೀಚೂರ್ ಷೋರ್‌ಕಲ್ ಮತ್ತು ಯಾಷಿಲ್‌ಕಲ್, ಕಾರಕಲ್ ಉಪ್ಪು ನೀರಿನ ಸರೋವರ.

ವಾಯುಗುಣ : ಪಾಮಿರ್ ಪ್ರದೇಶದ್ದು ಶುಷ್ಕ ಹಾಗೂ ಖಂಡಾಂತರ ವಾಯುಗುಣ. ಪಶ್ಚಿಮ ಪಾಮಿರ್ ಭಾಗದಲ್ಲಿ ವಾರ್ಷಿಕ ಮಳೆ 11–25 ಸೆಂಮೀ. ಪೂರ್ವ ಭಾಗದಲ್ಲಿ 13 ಸೆಂಮೀ. ಸಮುದ್ರಮಟ್ಟಕ್ಕೆ ಅತ್ಯಂತ ಹೆಚ್ಚು ಎತ್ತರದಲ್ಲಿರುವ ಭಾಗಗಳಲ್ಲಿ ವಾರ್ಷಿಕ ಮಳೆ 81–102 ಸೆಂಮೀ. ಪಶ್ಚಿಮ ಪಾಮಿರ್‌ನಲ್ಲಿ 51–71 ಸೆಂಮೀ ಹಿಮಪಾತವಾಗುತ್ತದೆ; ಪೂರ್ವಭಾಗದಲ್ಲಿ 4–10 ಸೆಂಮೀ.

ಪೂರ್ವಪಾಮಿರ್‌ನಲ್ಲಿ ಸಮುದ್ರಮಟ್ಟದಿಂದ 3,500 ಮೀ ಎತ್ತರವಾಗಿರುವ ಕಡೆಗಳಲ್ಲಿ ಸರಾಸರಿ ಉಷ್ಣತೆ–$17.8^0$ಸೆ. ಇಲ್ಲಿ ಚಳಿಗಾಲ ದೀರ್ಘವಾದದ್ದು (ಅಕ್ಟೋಬರಿನಿಂದ ಏಪ್ರಿಲ್‌ವರೆಗೆ). ಆಗ ಉಷ್ಣತೆ –$50^0$ಸೆ. ಬೇಸಗೆಯ ಅವಧಿ ಕಡಿಮೆ ಉಷ್ಣತೆ $20^0$ಸೆ ಗಿಂತ ಹೆಚ್ಚಾಗಿರುವುದಿಲ್ಲ. ಪಶ್ಚಿಮ ಪಾಮಿರ್ ಕಣಿವೆಗಳ ವಾಯುಗುಣ ಸ್ವಲ್ಪ ಹಿತಕರ. ಜನವರಿಯ ಸರಾಸರಿ ಉಷ್ಣತೆ $22.5^0$ಸೆ.

ಜನಜೀವನ : ಪಾಮಿರ್ ಪರ್ವತ ಪ್ರದೇಶದಲ್ಲಿ ಜನಸಾಂದ್ರತೆ ಚ.ಕಿಮೀ ಗೆ 2 ಕ್ಕಿಂತ ಕಡಿಮೆ. ಇಲ್ಲಿ ಶೇ. 90 ಮಂದಿ ತಾಜಿಕ್ ಜನ. ಇವರು ಪಶ್ಚಿಮ ಪಾಮಿರ್ ವಾಸವಾಗಿದ್ದಾರೆ. ಇವರು ಇರಾನಿ ಗುಂಪಿನ ಭಾಷೆ ಆಡುತ್ತಾರೆ. ಪೂರ್ವ ಪಾಮಿರ್‌ನಲ್ಲಿ ಕಿರ್ಗಿಜ್ ಜನರಿದ್ದಾರೆ. ಇವರ ಭಾಷೆ ತುರ್ಕಿ. ಇವರು ಸುನ್ನಿ ಮುಸ್ಲಿಮರು.

ಜನರ ಪ್ರಧಾನ ಕಸುಬು ಬೇಸಾಯ ಹಾಗೂ ಕುರಿ ಸಾಕಣೆ. ಮುಖ್ಯ ಬೆಳೆ ಮೆಕ್ಕೆಜೋಳ, ಕಾಳುಗಳು ಹಾಗೂ ಆಲೂಗೆಡ್ಡೆ. ಕಲ್ಲಿದ್ದಲು ಮತ್ತು ಕಬ್ಬಿಣ ಅದಿರಿನ ಗಣಿಗಳಿವೆ. ಪಾಮಿರ್ ಪ್ರದೇಶದಲ್ಲಿ ಚಿನ್ನ, ವಜ್ರ, ಕಾಗೆಬಂಗಾರ ದೊರಕುತ್ತವೆ.

ಸಸ್ಯ ಹಾಗೂ ಪ್ರಾಣಿಸಂಪತ್ತು : ಪಾಮಿರ್ ಪೂರ್ವಭಾಗದಲ್ಲಿ ಮರುಭೂಮಿಯ ವಾತಾವರಣವಿದೆ. ಇಲ್ಲಿ ಸಸ್ಯರಹಿತ ಭಾಗಗಳೇ ಹೆಚ್ಚು. ಪಶ್ಚಿಮ ಪಾಮಿರ್‌ನಲ್ಲಿ ಸಸ್ಯಗಳಿವೆ. ನದಿಗಳು ಹರಿಯುವ ಕಣಿವೆಗಳಲ್ಲಿ ಮುಳ್ಳುಪೊದೆಗಳು, ವಿಲೊ, ಬರ್ಚ್, ಪಾಪ್ಲರ್, ಬಾದಾಮಿ, ಜುನಿಪರ್ ಗಿಡಗಳಿವೆ. ನದಿಗಳ ಅಂಚಿನಲ್ಲಿ ಹುಲ್ಲುಗಾವಲುಗಳಿವೆ. ಬೇಸಗೆಯಲ್ಲಿ ಕಿರ್ಗಿಜ್ ಪ್ರಾಂತ್ಯದ ಅಲೆಮಾರಿಗಳು ಈ ಹುಲ್ಲುಗಾವಲುಗಳಲ್ಲಿ ಕುರಿಗಳನ್ನು ಮೇಯಿಸುತ್ತಾರೆ. ಈ ಭಾಗದಲ್ಲಿ ದ್ರಾಕ್ಷಿ, ಏಪ್ರಿಕಾಟ್, ಸೇಬು, ಮರಸೇಬು, ವಾಲ್‌ನಟ್, ಹಿಪ್ಪುನೇರಳೆ ಬೆಳೆಯುತ್ತಾರೆ.

ಪಾಮಿರ್‌ನಲ್ಲಿ ಪ್ರಾಣಿಗಳು ವಿರಳ. ಪೂರ್ವ ಪಾಮಿರ್‌ನಲ್ಲಿ ಬೆಟ್ಟದ ಕುರಿಗಳು, ಉದ್ದನೆಯ ಬಾಲದ ಮರ್ ಮೊಟ್, ಉದ್ದನೆಯ ಕಿವಿಯ ತೋಳಗಳು ಇವೆ. ಪಕ್ಷಿಗಳಲ್ಲಿ ಮುಖ್ಯವಾದವು ಬೆಟ್ಟದ ತುರ್ಕಿಕೋಳಿ. ಕಾಗೆ, ಬಿಳಿಯ ರಣಹದ್ದು, ಪಶ್ಚಿಮ ಪಾಮಿರ್‌ನಲ್ಲಿ ಬೆಟ್ಟದ ಮೇಕೆ, ಕಂದುಕರಡಿ, ತೋಳ, ನರಿ, ಹಿಮಚಿರತೆ, ಲಿಂಕ್ಸ್, ತುಪ್ಪುಳು ಬೆಕ್ಕು, ಮೊಲ, ಹಾರುವ ಇಲಿ ಇವೆ. ಇಲ್ಲಿಯ ಪಕ್ಷಿಗಳ ಪೈಕಿ ಮುಖ್ಯವಾದವು ನೀಲಪಕ್ಷಿ, ಜೀವಂಜೀವ ಮತ್ತು ಪೊಟ್ಟರೆಯ ಗವುಜುಗ. ಇಲ್ಲಿಯ ನದಿ ಸರೋವರಗಳಲ್ಲಿ ಮೀನುಗಳ ಹೆಚ್ಚು ಬಗೆಗಳಿಲ್ಲ.

ಸಾರಿಗೆ ಮತ್ತು ಸಂಪರ್ಕ : ಪಶ್ಚಿಮದ ದೂಷನ್ಬೆ ಪಟ್ಟಣದಿಂದ ದಕ್ಷಿಣದ ಖೊರೊಗ್ ಪಟ್ಟಣದವರೆಗೆ, ಖೊರೊಗ್‌ನಿಂದ ಪೂರ್ವದಲ್ಲಿಯ ಓಷ್ ಪಟ್ಟಣಕ್ಕೆ ಮೋಟರು ರಸ್ತೆಗಳಿವೆ. ಹಿಂದೆ ದಾಟಲು ಅಸಾಧ್ಯವೆನಿಸಿದ್ದ ಪ್ಯಾನ್ಷ್, ಪಾಮಿರ್ ನದಿಗಳ ಕಮರಿಯ ಕಡೆ ಖೊರೊಗ್ ಪಟ್ಟಣದಿಂದ ಮತ್ತೊಂದು ರಸ್ತೆಯಿದೆ. ವಾಹನ ಸಂಚಾರ ದುಸ್ಸಾಧ್ಯವಾದ ಕಡೆ ಕಾಲುದಾರಿಗಳಲ್ಲಿ ಸಂಚಾರ ಸಾಗುತ್ತದೆ. ಅಲ್ಲಿ ಸರಕು ಸಾಗಿಸಲು ಹೇರು ಪ್ರಾಣಿಗಳನ್ನು ಬಳಸುತ್ತಾರೆ. *

**ಪಾರ್ಶ್ವನೋಟ ಸಂಯೋಜಿತ ರಂಧ್ರರೇಡಾರ್:** ಭೂಮಿಯ ಮೇಲಿನ ಎಲ್ಲಾ ಲಕ್ಷಣಗಳ ಪಾರ್ಶ್ವ ಚಿತ್ರವನ್ನು ತೆಗೆಯಬಲ್ಲ ಸಾಮರ್ಥ್ಯವನ್ನು ಹೊಂದಿರುವ ಸಾಧನವೇ ಎಸ್.ಎಲ್.ಎ.ಆರ್.(ಸೈಡ್ ಲುಕಿಂಗ್ ಏರ್‌ಬೊರ್ನ್ ರೇಡಾರ್).

ಈ ರೇಡಾರ್, ಭೂಮಿಯ ಮೇಲಿನ ಅಂಶಗಳನ್ನು ಪಾರ್ಶ್ವಮುಖವಾಗಿ ಹಂತಹಂತವಾಗಿ ಚಿತ್ರಣಗಳನ್ನು ತೆಗೆದುಕೊಳ್ಳುತ್ತದೆ. ಈ ರೇಡರ್ ಪರ್ವತಗಳು, ಅರಣ್ಯಗಳು, ಬೆಟ್ಟಗಳು ಮುಂತಾದವುಗಳ ಪಾರ್ಶ್ವ ಚಿತ್ರಣವನ್ನು ನೀಡುತ್ತವೆ. ಇದರಿಂದ ಭೂಮಿಯ ಮೇಲಿನ ಅಂಶಗಳ ಸ್ಪಷ್ಟತೆ ಅಥವಾ ನಿಖರತೆಯನ್ನು ನೀಡುವುದು. ಸಂಯೋಜಿತ ರಂಧ್ರ ರೇಡಾರಿನಲ್ಲಿನ ನ್ಯೂನತೆಗಳನ್ನು ನಿವಾರಿಸಲು ಈ ಪಾರ್ಶ್ವನೋಟ ಸಂಯೋಜಿತ ರಂಧ್ರರೇಡಾರ್‌ನ್ನು ಬಳಸಲಾಗುತ್ತದೆ.

ಈ ರೇಡಾರ್ ವ್ಯವಸ್ಥೆಯಲ್ಲಿ, ತರಂಗ ದೂರ ಹೆಚ್ಚಾಗಿರುತ್ತದೆ ಮತ್ತು ಪೃಥಕ್ಕರಣ ಕೂಡ ಹೆಚ್ಚಾಗಿರುತ್ತದೆ. ಏಕೆಂದರೆ, ಈ ರೇಡಾರ್, ಭೂಮೇಲ್ಮೈನ ಭಾಗದ ಲಕ್ಷಣಗಳ ಅಂಶಗಳನ್ನು ಕೂಲಂಕಷವಾಗಿ ನೀಡುವಲ್ಲಿ ಸಫಲವಾಗಿದೆ.

ಈ ಪಾರ್ಶ್ವ ನೋಟ ರಂಧ್ರ ರೇಡಾರ್‌ನ ಪ್ರಮುಖ ಪ್ರಯೋಜನವೆಂದರೆ, ಕೇವಲ ಮೇಲ್ಮೈಲಕ್ಷಣಗಳ ನೇರ ಮಾಹಿತಿಯನ್ನಲ್ಲದೆ, ಪಾರ್ಶ್ವ ಅಂಶಗಳ ಮಾಹಿತಿಯನ್ನು ಸಹ ಒದಗಿಸುತ್ತದೆ. ಆದುದರಿಂದ ಈ ರೇಡಾರ್ ದೂರಸಂವೇದನೆಯಲ್ಲಿ ಪ್ರಮುಖವಾದುದಾಗಿದೆ. ಅಲ್ಲದೆ ಒಂದು ಪ್ರದೇಶದ 3ಡಿ ಚಿತ್ರವನ್ನು ರಚಿಸುವಲ್ಲಿ ಇದು ನೆರವಾಗುತ್ತದೆ. (ಎಂ.ಜಿ.)

**ಪಾಲಘಾಟ್:** ಕೇರಳ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಇವುಗಳ ಆಡಳಿತ ಕೇಂದ್ರ. ಪಾಲಕ್ಕಾಡು ಎಂಬುದು ಸ್ಥಳೀಯ ಹೆಸರು. ಪಾಲ್ (ಹಾಲು) ಮತ್ತು ಕಾಟ್ಟು (ಕಾಡು) ಎಂಬ ಮಲೆಯಾಳಿ ಶಬ್ದಗಳಿಂದ ಪಾಲಕ್ಕಾಡು ಎಂಬುದು ಬಂದಿದೆಯೆನ್ನಲಾಗಿದೆ. ಈ ಶಬ್ದಗಳನ್ನು ಪಾಲವೃಕ್ಷಗಳ (ಪಾಲ್) ಕಾಡು ಎಂದೂ ಅರ್ಥೈಸಲಾಗಿದೆ. ಕೇರಳ ರಾಜ್ಯದ ಮಧ್ಯಭಾಗದ ಜಿಲ್ಲೆಯಿದು. ಜಿಲ್ಲೆಯ ವಿಸ್ತೀರ್ಣ 4,400 ಚ.ಕಿಮೀ. ಜನಸಂಖ್ಯೆ 197369. ಆಡಳಿತ ಕೇಂದ್ರ ಪಾಲಘಾಟ್ ಪಟ್ಟಣ.

ಪಶ್ಚಿಮ ಘಟ್ಟಗಳು ಜಿಲ್ಲೆಯ ಆಗ್ನೇಯ ಮೂಲೆಯತ್ತ ಸಾಗಿವೆ. ಪಾಲಘಾಟ್ ಪಟ್ಟಣದ ಪಶ್ಚಿಮಕ್ಕೆ 80 ಕಿಮೀ ದೂರದಲ್ಲಿ ಪೊನ್ನಾನಿ ರೇವು ಇದೆ. ಜಿಲ್ಲೆಯ ತಾಲ್ಲೂಕುಗಗಳು ಒಟ್ಟಪ್ಪಲಂ, ಮಣ್ಣಾರ್‌ಕಾಡು, ಪಾಲಘಾಟ್, ಚಿತ್ತೂರ್ ಮತ್ತು ಆಲತ್ತೂರ್. ಜಿಲ್ಲೆಯ ಮುಖ್ಯ ಉತ್ಪನ್ನಗಳು ತೆಂಗು, ಅಡಕೆ, ಕಾಫಿ, ಬಾಳೆ, ಕಬ್ಬು, ತಂಬಾಕು, ಬತ್ತ, ಮೆಣಸು. ಮಲಂಪುಳಿ ನದಿಗೆ ಅಡ್ಡಲಾಗಿ ಕಟ್ಟಿರುವ ಕಟ್ಟೆಯಿಂದ ನಿರ್ಮಿತವಾದ ಜಲಾಶಯದಿಂದ 38,527 ಹೆ. ಭೂಮಿಗೆ ನೀರಾವರಿ ಸೌಲಭ್ಯ ಒದಗಿದೆ.

ಪಾಲಘಾಟ್ ತಾಲ್ಲೂಕು ಪಾಲಘಾಟ್ ತೆರಪು ಅಥವಾ ಕಣಿವೆಯ ಭಾಗದಲ್ಲಿದೆ. ತಾಲ್ಲೂಕಿನಲ್ಲಿ ಹರಿಯುವ ನದಿಗಳು ನೆಲನದಿ, ಕನ್ನಡಿ ಮತ್ತು ಗಾಯತ್ರಿ. ಇಲ್ಲಿಯ ಸಾರಯುತ ಕರಿಯ ಭೂಮಿಯಲ್ಲಿ ಬತ್ತ, ಕಬ್ಬು, ಹೊಗೆಸೊಪ್ಪು, ಬಾಳೆ, ತೆಂಗು ಬೆಳೆಯುತ್ತಾರೆ. ಪಾಲಘಾಟ್ ಚಾಪೆಗಳು ಪ್ರಸಿದ್ಧವಾಗಿವೆ. ತಾಲ್ಲೂಕಿನ ಮುಖ್ಯ ಸ್ಥಳಗಳು ಆಲತೂರೆ, ಕರಿಮಲ, ಕೊಂಗಾಡು, ಮಾಂಕರ ಮತ್ತು ವೋಲವಕೋಡೆ.

ಪಾಲಘಾಟ್ ಜಿಲ್ಲೆಯ ಮತ್ತು ತಾಲ್ಲೂಕಿನ ಕೇಂದ್ರ ಹಾಗೂ ಪಟ್ಟಣ. ಇದು ಪಶ್ಚಿಮ ಘಟ್ಟಗಳ ತೆರಪಿನ ಬಳಿ ಪೊನ್ನಾನಿ ನದಿಯ ದಂಡೆಯ ಮೇಲಿದೆ. ತಮಿಳುನಾಡು ಮತ್ತು ಕೇರಳ ರಾಜ್ಯಗಳ ನಡುವಣ ಬಹು ಮುಖ್ಯ ವ್ಯಾಪಾರ ಹಾಗೂ ವಾಣಿಜ್ಯ ಕೇಂದ್ರವಿದು. ಇಲ್ಲಿ ತಂಬಾಕು ಚೌಬೀನೆ ಹಾಗೂ ಆಹಾರ ಧಾನ್ಯಗಳು ವ್ಯಾಪಾರವಾಗುತ್ತವೆ. ಇಲ್ಲಿ ವಿಕ್ಟೋರಿಯ ಕಾಲೇಜು (1888) ಎಂಜಿನಿಯರಿಂಗ್ ಕಾಲೇಜು ಇದೆ. ಉತ್ತರದಲ್ಲಿ ಪೊನ್ನಾನಿ ನದಿಯ ಆಚೆ ಒಲವಕೋಡ್ ರೈಲ್ವೇ ಜಂಕ್ಷನ್ ಇದೆ. ಪಾಲಘಾಟಿನಲ್ಲಿ ಹಳೆಯ ಕೋಟೆಯೊಂದಿದೆ.

ಪಾಲಘಾಟ್ ತೆರಪು: ಭಾರತದ ಈಶಾನ್ಯ ಭಾಗದಲ್ಲಿಯ ಪಶ್ಚಿಮ ಘಟ್ಟಗಳ ಸೀಳು ಅಥವಾ ತೆರಪು. ಈ ಸೀಳು ಉತ್ತರದ ನೀಲಗಿರಿಬೆಟ್ಟಗಳು ಹಾಗೂ ದಕ್ಷಿಣದ ಅನೈಮಲೈ ಬೆಟ್ಟಗಳ ನಡುವೆ ಇದೆ. ಇದಕ್ಕೆ ಪಾಲಘಾಟ್ ಚೇರಿ ಕಣಿವೆ ಎಂಬ ಹೆಸರೂ ಇದೆ. ಪಾಲಘಾಟ್ ತೆರಪಿನ ಉತ್ತರದಲ್ಲಿ ಪಡಮಲೈ ಬೆಟ್ಟ, ದಕ್ಷಿಣದಲ್ಲಿ ತೆನ್‌ಮಲೈ ಬೆಟ್ಟಸಾಲುಗಳು ಇವೆ. ಪಾಲಘಾಟ್ ತೆರಪಿನ ಬಳಿಯ ಕಣಿವೆ ಸಮುದ್ರ ಮಟ್ಟದಿಂದ 152 ಮೀ ಗಿಂತ ಹೆಚ್ಚು ಎತ್ತರವಾಗಿಲ್ಲ. 32 ಕಿಮೀ ಅಗಲವಿರುವ ಈ ತೆರಪು ಕೇರಳ ಮತ್ತು ತಮಿಳುನಾಡು ಗಡಿಯ ನಡುವಣ ಸೀಳುದಾರಿ. ಈ ತೆರಪಿನ ರೈಲುಮಾರ್ಗ ಹಾಗೂ ಹೆದ್ದಾರಿಗಳಿಂದ ಕೇರಳದ ಪಾಲಘಾಟ್ ಜಿಲ್ಲೆಗೂ ತಮಿಳುನಾಡಿನ ಕೊಯಮತ್ತೂರು ಮತ್ತು ಪೊಲ್ಲಚಿ ಪಟ್ಟಣಗಳಿಗೂ ಸಂಪರ್ಕ ಉಂಟಾಗಿದೆ. ದಕ್ಷಿಣ ಭಾರತದ ವಾಯುಗುಣದ ಮೇಲೂ ಪಾಲಘಾಟ್ ತೆರಪಿನ ಪ್ರಭಾವವಿದೆ. ಪಶ್ಚಿಮ ಘಟ್ಟಗಳ ಕಡೆ ಬೀಸುವ ನೈಋತ್ಯ ಮಾರುತಗಳು ಹಾಗೂ ಬಂಗಾಲ ಕೊಲ್ಲಿಯ ಚಂಡಮಾರುತಗಳು ದಕ್ಷಿಣ ಭಾರತದತ್ತ ಸಾಗುವುದು ಈ ತೆರಪಿನ ಮೂಲಕ. (ವಿ.ಜಿ.ಕೆ.)

**ಪಾಲಿನೇಷ್ಯ:** ಮಧ್ಯ ಪೆಸಿಫಿಕ್ ಸಾಗರದಲ್ಲಿ ಹರಡಿರುವ ದ್ವೀಪಗಳ ಗುಂಪು. ಉ. ಅ. $30^0$ ಮತ್ತು ದ. ಅ. $47^0$ ಮತ್ತು $130^0$–$145^0$ ಪ.ರೇ.ಗಳ ನಡುವೆ ಇದೆ. ಓಷಿಯಾನಿಯದ ದ್ವೀಪ ಸಮೂಹಗಳ ಪೈಕಿ ಒಂದು. ಉಳಿದ ಎರಡು ಸಮೂಹಗಳಾದ ಮೆಲನೇಷ್ಯ ಮತ್ತು ಮೈಕ್ರೊನೇಷ್ಯಗಳಿಗೆ ಪೂರ್ವದಲ್ಲಿ ತ್ರಿಕೋಣಾಕಾರವಾಗಿ ಹಬ್ಬಿವೆ. ಗ್ರೀಕ್ ಭಾಷೆಯ ಪಾಲಿ (ಅನೇಕ) ಮತ್ತು ನಿಸೋಯ್ (ದ್ವೀಪಗಳು) ಎಂಬ ಪದಗಳಿಂದ ಪಾಲಿನೇಷ್ಯ ಎಂಬ ಪದದ ನಿಷ್ಪತ್ತಿಯಾಗಿದೆ. ಪಾಲಿನೇಷ್ಯದ ದ್ವೀಪಗಳ ಒಟ್ಟು ಭೂಪ್ರದೇಶದ ವಿಸ್ತೀರ್ಣ 2,90,000 ಚ.ಕಿಮೀ.

ಪಾಲಿನೇಷ್ಯದ ದ್ವೀಪಗಳ ಪೈಕಿ ಅಮೆರಿಕಕ್ಕೆ ಸೇರಿದ ಹವಾಯಿ ದ್ವೀಪಗಳು ಉತ್ತರದಲ್ಲೂ ನ್ಯೂಜಿಲೆಂಡ್ ದಕ್ಷಿಣದಲ್ಲೂ ಈಸ್ಟರ್ ಪೂರ್ವದಲ್ಲೂ ಇವೆ. ಈ ತ್ರಿಕೋನದ ಪಶ್ಚಿಮದ ಅಂಚಿನಲ್ಲಿ ಸಮೋವ, ಎಲಿಜ್ ದ್ವೀಪಗಳು ಮತ್ತು ಟೋಂಗ ಇವೆ. ಫ್ರೆಂಚರಿಗೆ ಸೇರಿದ ಸೊಸೈಟಿ ದ್ವೀಪಗಳು ಮಧ್ಯಭಾಗದಲ್ಲಿವೆ. ಇವುಗಳಲ್ಲಿ ತಾಹಿತಿಯೂ ಇದೆ. ಸೊಸೈಟಿ ದ್ವೀಪಗಳ ಈಶಾನ್ಯಕ್ಕೆ ಇರುವ ದ್ವೀಪಗಳು ಮಾರ್ಕೆಸಸ್. ಇವುಗಳ ನಡುವೆ ಪೂರ್ವದ ಕಡೆಗೆ ಟುವಾಮೋಟೂ ದ್ವೀಪಸ್ತೋಮ ಹಬ್ಬಿದೆ. ಕುಕ್ ಮತ್ತು ಟೋಕಲಾಮ ದ್ವೀಪಗಳು ಸೊಸೈಟಿ ದ್ವೀಪಗಳಿಗೆ ಪಶ್ಚಿಮದಲ್ಲೂ ಟೂಬಾವೈ ದ್ವೀಪಗಳು ದಕ್ಷಿಣದಲ್ಲೂ ಇವೆ.

ಪಾಲಿನೇಷ್ಯ ದ್ವೀಪಗಳ ಪೈಕಿ ಹಲವು ಸಣ್ಣವು; ಹವಳದ ದಿಬ್ಬಗಳಿಂದ ಸೃಷ್ಟಿಯಾದವು. ದೊಡ್ಡ ದ್ವೀಪಗಳು ಅಗ್ನಿಪರ್ವತಗಳಿಂದ ರೂಪಿತವಾದವು. ಪೆಸಿಫಿಕ್ ಸಾಗರ ತಳದ ನೆಲಮೈ ಗಟ್ಟಿಯಾಗಿಲ್ಲದ ಕಾರಣ ಇಲ್ಲಿ ಭೂಕಂಪಗಳು ಸಾಮಾನ್ಯ. ಸಾಗರದಡಿಯಿಂದ ಸಾವಿರಾರು ಅಗ್ನಿಪರ್ವತಗಳು ಸೃಷ್ಟಿಯಾಗಿವೆ. ಇಂದಿಗೂ 300 ಕ್ಕೂ ಹೆಚ್ಚಿನ ಜ್ವಾಲಾಮುಖಿಗಳು ಲಾವಾವನ್ನು ಕಾರುತ್ತವೆ. ಭೂಮಧ್ಯರೇಖೆಯ ಭಾಗದ ಕೆಲವು ದ್ವೀಪಗಳು ಸಮುದ್ರಮಟ್ಟಕ್ಕೆ ಬಹಳ ಎತ್ತರದಲ್ಲಿವೆ. ಅಲ್ಲಿಯ ಪರ್ವತಗಳ ಶಿಖರಗಳಲ್ಲಿ ಮಂಜು

ಕವಿದಿರುತ್ತದೆ. ಹವಾಯಿ ದ್ವೀಪಗಳಲ್ಲಿ ಅಗ್ನಿಪರ್ವತಗಳ ಸಾಲುಗಳಿವೆ. ಆ ದ್ವೀಪದ ಮಾವುನಕಾಯ ಒಂದು ಸುಪ್ತ ಅಗ್ನಿಪರ್ವತ. ಇದು ಸಮುದ್ರಮಟ್ಟಕ್ಕೆ 4.201 ಮೀ ಎತ್ತರದಲ್ಲಿದೆ. ಇದೇ ದ್ವೀಪದ ಮತ್ತೊಂದು ಅಗ್ನಿಪರ್ವತ ಮಾವುನಲೋವ. ಇದು ಸಮುದ್ರ ಮಟ್ಟಕ್ಕೆ 4.069 ಮೀ ಎತ್ತರದಲ್ಲಿದೆ.

ವಾಯುಗುಣ: ಪಾಲಿನೇಷ್ಯದಲ್ಲಿ ಸಾಮಾನ್ಯವಾಗಿ ಉಷ್ಣವಲಯ ಮತ್ತು ಉಪೋಷ್ಣವಲಯ ವಾಯುಗುಣ ಇದೆ. $21^{0}$ಸೆ – $29^{0}$ಸೆ ಮಧ್ಯ ಉಷ್ಣತೆ ಇರುತ್ತದೆ. ಸಮುದ್ರದಮಟ್ಟದ ಭಾಗಗಳಲ್ಲಿ ಸರಾಸರಿ ಉಷ್ಣತೆ $30.5^{0}$ಸೆ ದಕ್ಷಿಣ ಪಾಲಿನೇಷ್ಯದಲ್ಲಿ ಬೇಸಗೆ ಹಿತಕರ. ದಕ್ಷಿಣದ ನ್ಯೂಜಿಲೆಂಡ್‌ನಲ್ಲಿ ಹೊರತು ಉಳಿದ ಕಡೆ ಚಳಿಗಾಲದಲ್ಲಿ ಮಂಜು ಬೀಳುವುದಿಲ್ಲ. ಪೆಸಿಫಿಕ್ ಸಾಗರದ ಉತ್ತರಾರ್ಧ ಗೋಳದಲ್ಲಿ ಪ್ರದಕ್ಷಿಣವಾಗಿಯೂ ದಕ್ಷಿಣಾರ್ಧ ಗೋಳದಲ್ಲಿ ಅಪ್ರದಕ್ಷಿಣವಾಗಿಯೂ ಹರಿಯುವ ಸಮುದ್ರ ಪ್ರವಾಹಗಳು ಪಾಲಿನೇಷ್ಯದ ದ್ವೀಪಗಳ ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ. ಋತುಗಳು ಹಾಗೂ ನಿಸರ್ಗದ ವೈಪರೀತ್ಯಗಳಿಂದ ದ್ವೀಪದಿಂದ ದ್ವೀಪಕ್ಕೆ ಮಳೆ ಪ್ರಮಾಣ ಭಿನ್ನವಾಗಿದೆ. ಪಶ್ಚಿಮ ಪಾಲಿನೇಷ್ಯದಲ್ಲಿ ಗುಡುಗು – ಮಿಂಚುಗಳೊಂದಿಗೆ ಮಳೆಯಾಗುತ್ತದೆ. ಆಗಾಗ ಚಂಡಮಾರುತಗಳು ಬೀಸುತ್ತವೆ. ಇವುಗಳಿಂದ ಸಾಮಾನ್ಯವಾಗಿ ದ್ವೀಪಗಳಿಗೆ ಅಪಾಯವಿಲ್ಲ.

ಸಸ್ಯಪ್ರಾಣಿ ವರ್ಗ: ಪಾಲಿನೇಷ್ಯ ದ್ವೀಪಗಳ ಮಣ್ಣಿನ ಗುಣಗಳಲ್ಲಿ ವ್ಯತ್ಯಾಸಗಳಿವೆ. ಅನೇಕ ದ್ವೀಪಗಳಲ್ಲಿ ಸುಣ್ಣಕಲ್ಲು ಹಾಗೂ ಅಗ್ನಿಪರ್ವತಗಳಿಂದ ಸೃಷ್ಟಿಯಾದ ಬಂಡೆಗಳುಂಟು. ಕೆಲವು ಕಡೆ ಮಳೆ ಮತ್ತು ಚಂಡಮಾರುತಗಳಿಂದ ಜ್ವಾಲಾಮುಖಿಗಳ ಲಾವಾಬಂಡೆಗಳು ಸವೆದು ಪುಡಿಮಣ್ಣಾಗಿರುವುದರಿಂದ ಭೂಮಿ ಬಹಳ ಫಲವತ್ತಾಗಿದೆ. ಹವಳದ ದಿಬ್ಬಗಳಿಂದ ಸೃಷ್ಟಿಯಾದ ದ್ವೀಪಗಳ ಭೂ ಸಾರ ಕಡಿಮೆ. ಸಸ್ಯ ಹಾಗೂ ಪ್ರಾಣಿಗಳು ಪಾಲಿನೇಷ್ಯದ ವಿವಿಧ ಭಾಗಗಳಲ್ಲಿ ಹರಡಿರುವುದಕ್ಕೆ ಪೆಸಿಫಿಕ್ ಸಾಗರದ ಚಂಡಮಾರುತಗಳು ಹಾಗೂ ಸಮುದ್ರ ಪ್ರವಾಹಗಳು ಕಾರಣ. ಪಾಲಿನೇಷ್ಯದ ಸಸ್ಯಗಳು ಇಂಡೋ – ಮಲಯ ಸಸ್ಯ ವರ್ಗಕ್ಕೆ ಸಂಬಂಧಿಸಿದಂಥವು. ತೆಂಗು ಮತ್ತು ಕ್ಯಾಸುರಿನಾ ಮರಗಳು ಹೆಚ್ಚು. ಮಳೆ ಹೆಚ್ಚಾಗಿರುವ ದ್ವೀಪಗಳಲ್ಲಿ ದಟ್ಟ ಅಡವಿಗಳು ಮತ್ತು ಪೊದೆಗಳು ಬೆಳೆದಿವೆ. ಕೆಲವು ದೊಡ್ಡ ದ್ವೀಪಗಳಲ್ಲಿ ಹುಲ್ಲುಗಾವಲುಗಳಿವೆ.

ದ್ವೀಪಗಳಲ್ಲಿ ಆಮೆ, ಮೊಸಳೆ, ದಿವ್ಯಪಕ್ಷಿ, ಫ್ರಿಗೇಟ್, ಬಾವಲಿ, ಗಿಳಿ, ಜಲಪಕ್ಷಿಗಳು, ವಿವಿಧ ಬಣ್ಣಗಳ ಹಕ್ಕಿಗಳು ಇವೆ. ಕಡಲಂಚಿನಲ್ಲಿ ಮೀನು ಹೇರಳವಾಗಿದೆ. ಹಲವಾರು ಬಗೆಯ ಮತ್ಸ್ಯಗಳುಂಟು. ಮೀನುಗಾರಿಕೆ ಲಾಭದಾಯಕ. ಹವಳ ಹಾಗೂ ಆಮೆಯ ಚಿಪ್ಪುಗಳನ್ನು ಸಂಗ್ರಹಿಸುತ್ತಾರೆ.

ಜನ: ಪಾಲಿನೇಷ್ಯ ಜನ ಮಲೆಯ ಪರ್ಯಾಯ ದ್ವೀಪ ವಾಸಿಗಳಿಗೆ ಸಂಬಂಧಪಟ್ಟವರೆಂದು ತೋರುತ್ತದೆ. ಆದರೆ ಮಾನವಶಾಸ್ತ್ರ ಸಂಶೋಧನೆಗಳ ಪ್ರಕಾರ ಅನೇಕರು ಮಂಗೋಲ್ ನೀಗ್ರಾಯ್ಡ್ ಹಾಗೂ ಕಾಕೇಶಿಯನ್ ಬುಡಕಟ್ಟಿನ ಜನರೊಂದಿಗೆ ಸಮ್ಮಿಶ್ರಗೊಂಡವರು. ಇವರು ಕಂದುಬಣ್ಣದ ಒಳ್ಳೆಯ ಮೈಕಟ್ಟಿನ ಎತ್ತರದ ಜನ. ಇವರ ಕೂದಲು ಕಪ್ಪು. ಇವರು ಸ್ಫುರದ್ರೂಪಿಗಳು. ಸರಳ ಜೀವಿಗಳು. ಪಾಲಿನೇಷ್ಯ ಜನರ ದೈಹಿಕ ಲಕ್ಷಣಗಳುಳ್ಳ ಜನರು ಸಾಮಾನ್ಯವಾಗಿ ಮತ್ತೆಲ್ಲೂ ಕಂಡುಬರುವುದಿಲ್ಲ. ಇವರಲ್ಲಿ ಕೆಲವರು ಇತ್ತೀಚೆಗೆ ಪಶ್ಚಿಮದ ಕೆಲವು ದ್ವೀಪಗಳಲ್ಲಿ ನೆಲೆಸಿದ್ದಾರೆ. ಏಷ್ಯದಿಂದ ಹೊರಟ ಬಣಗಳ ಸಮ್ಮಿಶ್ರಣದ ಫಲವೇ ಪಾಲಿನೇಷ್ಯನರು ಎಂಬ ಅಭಿಪ್ರಾಯವೂ ಇದೆ. ದಕ್ಷಿಣ ಅಮೆರಿಕದ ಪೆರುವಿನ ಜನರ ಹಲವಾರು ಸಾಂಸ್ಕೃತಿಕ ಲಕ್ಷಣಗಳು ಹಾಗೂ ಗೆಣಸಿನ ಬೆಳೆ ಪಾಲಿನೇಷ್ಯದ ದ್ವೀಪಗಳಲ್ಲಿ ಕಂಡುಬರುವುದರಿಂದ ಈ ಮೂಲ ನಿವಾಸಿಗಳು ಪೆರುವಿನಿಂದ ಪಶ್ಚಿಮಕ್ಕೆ ಚಲಿಸಿ ಬಂದವರೆಂದು ಕೆಲವು ಮಾನವಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪಾಲಿನೇಷ್ಯ ಜನ ತಾಹಿತಿ ಮತ್ತು ಮಾರ್ಕೆಸಸ್ ದ್ವೀಪಗಳಲ್ಲಿ ಪ್ರ.ಶ.ಪೂ. 500 ರಲ್ಲಿ ನೆಲೆಸಿರಬಹುದೆಂದು ಊಹಿಸಲಾಗಿದೆ.

ಆರ್ಥಿಕತೆ: ಜನರ ಮುಖ್ಯ ಕಸಬುಗಳು ಮೀನುಗಾರಿಕೆ ಮತ್ತು ವ್ಯವಸಾಯ. ಬೆಟ್ಟಗುಡ್ಡಗಳ ಇಳಕಲುಗಳಲ್ಲ ಬೇಸಾಯ ಪ್ರಧಾನವಾಗಿದೆ. ಮುಖ್ಯ ಬೆಳೆಗಳು ಗೆಣಸು, ಕೆಸವು, ಬಾಳೆ, ಬ್ರೆಡ್‌ಫ್ರೂಟ್, ಕಬ್ಬು ಮತ್ತು ತೆಂಗು. ಜನರು ಹಂದಿಗಳನ್ನು ಹೆಚ್ಚಾಗಿ ಸಾಕುತ್ತಾರೆ. ಇವರು ಕುಶಲಕಲೆಗಳಲ್ಲಿ ನುರಿತವರು. ನೀಳ್ದೋಣಿಗಳ ರಚನೆ, ಬುಟ್ಟಿ ಹೆಣೆಯುವುದು, ನೇಯ್ಗೆ, ಕುಂಬಕಲೆ, ಕಲಾಪೂರ್ಣವಾದ ಮರದ ಸಾಮಾನುಗಳ ತಯಾರಿಕೆ ಇವುಗಳಲ್ಲೂ ಇವರು ನಿಪುಣರಾಗಿದ್ದಾರೆ. ಅನೇಕ ದ್ವೀಪಗಳಿಂದ ಕೊಬ್ಬರಿ ಹಾಗೂ ತೆಂಗು ರಫ್ತಾಗುತ್ತವೆ. ಜನರು ಸಮೀಪದ ದ್ವೀಪಗಳಿಗೆ ಹೋಗಿಬರಲು ಮತ್ತು ಮೀನು ಹಿಡಿಯಲು ನೌಕೆಗಳನ್ನೂ ಉಪಯೋಗಿಸುತ್ತಾರೆ. ಹವಾಯಿ, ನ್ಯೂಜಿಲೆಂಡ್ ಮೊದಲಾದ ದ್ವೀಪಗಳಿಗೆ ವಿಮಾನ ಸೌಲಭ್ಯವುಂಟು. (ವಿ.ಜಿ.ಕೆ.)

**ಪಾಲೆರ್ಮೊ:** ಇಟಲಿಯ ಸಿಸಿಲಿ ದ್ವೀಪದ ಒಂದು ಪ್ರಮುಖ ರೇವು ಪಟ್ಟಣ, ಪಾಲೆರ್ಮೊ ಪ್ರಾಂತ್ಯ ಮತ್ತು ಸಿಸಿಲಿ ಸ್ವಯಮಾಡಳಿತ ಪ್ರದೇಶದ ರಾಜಧಾನಿ. ಮುಖ್ಯ ಕೈಗಾರಿಕಾ ಸ್ಥಳ, ವಿಶ್ವವಿದ್ಯಾಲಯ ಕೇಂದ್ರ. ಜನಸಂಖ್ಯೆ 6,98,556 (2001). ಈ ನಗರದಲ್ಲಿ ಹಾಗೂ ಇದರ ಸುತ್ತಮುತ್ತ ಪುರಾತನ ಅವಶೇಷಗಳಿವೆ. ಪಾಲೆರ್ಮೊ ವಸ್ತು ಸಂಗ್ರಹಾಲಯ ಪ್ರಸಿದ್ಧವಾದದ್ದು.

ಈ ನಗರವನ್ನು ಫಿನಿಷಿಯನರು ಪ್ರ.ಶ..ಪೂ. 8 ನೆಯ ಶತಮಾನದಲ್ಲಿ ಸ್ಥಾಪಿಸಿದರು. 1848ರ ಬಂಡಾಯದಲ್ಲಿ ಇದು ದಾಳಿಗೆ ಗುರಿಯಾಯಿತು. ಅನಂತರ ಗ್ಯಾರಿಬಾಲ್ಡಿ ಇದನ್ನು ಆಕ್ರಮಿಸಿಕೊಂಡ (1860). ಇದು ಇಟಲಿ ರಾಜ್ಯದ ಭಾಗವಾಯಿತು (1861). ಎರಡನೆಯ ಮಹಾಯುದ್ಧದ ಕಾಲದಲ್ಲಿ ಇದು ಮಿತ್ರ ಸೇನೆಗಳ ವಶವಾಗಿತ್ತು.

ಇಲ್ಲಿಯ ಪ್ರಾಚೀನತಮ ಕಟ್ಟಡಗಳು ನಾರ್ಮನ್ ಅರಸರ ಕಾಲದವು. ಅರಮನೆ ಹಾಗೂ ಚರ್ಚುಗಳು ಸಾರಸನಿಕ್ ಮತ್ತು ಬೈಜಾಂಟಿಯನ್ ಶೈಲಿಗಳಲ್ಲಿ ನಿರ್ಮಿತವಾಗಿವೆ. ಇವೆರಡು ಶೈಲಿಗಳಿಂದ ಹೆಚ್ಚಿದ ಅರಬ್ಬೀ ನಾರ್ಮನ್ ಶೈಲಿಗೆ ಮಿಲ್ ಆರ್ಚ್‌ಬಿಷಪ್ ವಾಲ್ಟರ್ ಎಂಬ ಆಂಗ್ಲ ಕಟ್ಟಿಸಿದ ಆರಾಧನಾ ಮಂದಿರ ಒಂದು ಒಳ್ಳೆಯ ಉದಾಹರಣೆ.

16ನೆಯ ಶತಮಾನದಲ್ಲಿ ಹೊಸ ಬೀದಿಗಳು ರೂಪುಗೊಂಡು, ಅರಮನೆ ಕಟ್ಟಡಗಳಿಂದ ಅಲಂಕೃತವಾದವು. ಈಗ ಉಳಿದಿರುವ ನಗರ ದ್ವಾರಗಳು ಈ ಕಾಲದಲ್ಲಿ ಬರೋಕ್ ಶೈಲಿಯಲ್ಲಿ ನಿರ್ಮಿತವಾದವು. ಈ ಕಾಲದಲ್ಲಿ ಮೆರುಗು ಆಡಂಬರಗಳ ಕಡೆಗೆ ಒಲವು ಹೆಚ್ಚಿತು. 17ನೆಯ ಶತಮಾನದ ಸ್ಪ್ಯಾನಿಷ್ ಪ್ರಭಾವದ ಕಾಲದಲ್ಲಿ ಇದು ಇನ್ನೂ ಬೆಳೆಯಿತು. ರಸ್ತೆಗಳ ಚೌಕಗಳಲ್ಲಿ ದೊಡ್ಡ ಕಟ್ಟಡಗಳನ್ನು ಮೂರ್ತಿಶಿಲ್ಪ, ಉಬ್ಬುಶಿಲ್ಪ ಅಥವಾ ಇತರ ಶಿಲ್ಪಗಳಿಂದ ಅಲಂಕರಿಸಲಾಯಿತು. 1805ರಲ್ಲಿ ಪಾಲೆರ್ಮೊದಲ್ಲಿ ಒಂದು ವಿಶ್ವವಿದ್ಯಾಲಯವೂ ಆರಂಭವಾಯಿತು.

ಪಾಲೆರ್ಮೊದ ಮುಖ್ಯ ರಫ್ತುಗಳು ಹಣ್ಣು, ಆಲಿವ್ ಎಣ್ಣೆ, ದ್ರಾಕ್ಷಾರಸ. ಇಲ್ಲಿ ಹಡಗುಗಳನ್ನು ನಿರ್ಮಿಸಲಾಗುತ್ತದೆ. ಉಕ್ಕು, ಗಾಜು, ರಾಸಾಯನಿಕಗಳು, ಪೀಠೋಪಕರಣಗಳು–ಇವು ಇಲ್ಲಿಯ ಪ್ರಮುಖ ತಯಾರಿಕೆಗಳು. ಈ ನಗರದ ಸಮೀಪದಲ್ಲಿರುವ ಮಾಂಟೆ ಪೆಲೆಗ್ರಿನೊ ಮತ್ತು ಮಾಂಡೆಲೊ ಬೀಚ್ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳು. ಈ ನಗರಕ್ಕೆ ಭೂ, ಜಲ ಮತ್ತು ವಿಮಾನ ಸಾರಿಗೆ ಸಂಪರ್ಕವಿದೆ. (ಎಚ್.ಎಂ.ಎಸ್.ಆರ್.)

**ಪಾವಗಡ:** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು; ಆ ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕು ತುಮಕೂರು ಜಿಲ್ಲೆಯ ಅವಿಚ್ಛಿನ್ನ ಭಾಗವಾಗಿರದೆ ಪಶ್ಚಿಮದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿಗೆ ಅಂಟಿಕೊಂಡಂತಿದೆ. ಉಳಿದ ಮೂರು ಕಡೆ ಆಂಧ್ರಪ್ರದೇಶ ರಾಜ್ಯ ಸುತ್ತುವರಿದಿದೆ. ತುಮಕೂರು ಜಿಲ್ಲೆಗೂ ಪಾವಗಡ ತಾಲ್ಲೂಕಿಗೂ ನಡುವೆ ಆಂಧ್ರಪ್ರದೇಶದ ಮಡಕ ಶಿರಾ ತಾಲ್ಲೂಕು ಇದೆ. ಈ ತಾಲ್ಲೂಕಿನಲ್ಲಿ ನಿಡುಗಲ್ಲು, ಹೊಸಕೋಟೆ, ಪಾವಗಡ ಮತ್ತು ನಾಗಲಮಡಿಕೆ ಹೋಬಳಿಗಳೂ 144 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 1.35 ಚ.ಕಿಮೀ. ಜನಸಂಖ್ಯೆ 246238 (2001).

ತಾಲ್ಲೂಕಿನ ಮಧ್ಯೆ ಕಣಶಿಲೆಯ ಬೆಟ್ಟಗಳು ಉತ್ತರದಿಂದ ದಕ್ಷಿಣಕ್ಕೆ ಹಬ್ಬಿವೆ. ಈ ಶ್ರೇಣಿಯ ಪ್ರಮುಖ ಬೆಟ್ಟಗಳು ಕಾಮನದುರ್ಗ (1.077 ಮೀ), ನಿಡುಗಲ್ಲು ಬೆಟ್ಟ (1149 ಮೀ) ಮತ್ತು ಪಾವಗಡ ಬೆಟ್ಟ (918 ಮೀ) ಪಾವಗಡ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪ್ರಶಸ್ತ ಶಿಲೆಗಳು ದೊರಕುವುವೆಂದು ಹೇಳಲಾಗಿದೆ. ಉತ್ತರ ಪಿನಾಕಿನಿ ನದಿ ಈ ತಾಲ್ಲೂಕಿನ ಪೂರ್ವದಲ್ಲಿ ಸು. 5 ಕಿಮೀ ದೂರ ಹರಿದು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗೆ ಸಾಗುತ್ತದೆ. ತಾಲ್ಲೂಕಿನಲ್ಲಿ ಬಂಜರು ನೆಲ ಅಧಿಕ. ಕುರುಚಲು ಸಸ್ಯದ ಕಾಡುಗಳಿವೆ. ವನ್ಯಮೃಗಗಳು ಜಿಂಕೆ ಮತ್ತು ಕಾಡು ಹಂದಿ. ತುಮಕೂರು ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಮಳೆ ಬೀಳುವ ತಾಲ್ಲೂಕು ಪಾವಗಡ. ತಾಲ್ಲೂಕಿನ ನೈಋತ್ಯ ಹಾಗೂ ಉತ್ತರ ಭಾಗಗಳ ಕಣಿವೆಗಳಲ್ಲಿ ತೆಂಗು ಹಾಗೂ ಅಡಕೆ ಬೆಳೆಯುತ್ತವೆ.

ಮಳೆಯ ಅಭಾವದಿಂದಾಗಿ ತರಿ ಬೆಳೆಗೆ ಅನುಕೂಲವಿಲ್ಲ. ತೊರೆಗಳ ಅಂಚಿನಲ್ಲಿ ಚಿಲುಮೆಗಳನ್ನು ತೋಡಿ ಏತಗಳಿಂದ ನೀರು ಹಾಯಿಸುವ ತಲಪರಿಗೆ ನೀರಾವರಿ ಪದ್ಧತಿ ರೂಢಿಯಲ್ಲಿದೆ. ಬೇಸಗೆಯಲ್ಲಿ ಈ ಚಿಲುಮೆಗಳು ಬತ್ತಿ ಹೋಗಿರುತ್ತವೆ. ಪ್ರಧಾನ ಬೆಳೆಗಳು ರಾಗಿ, ಹತ್ತಿ, ಬತ್ತ, ಹುರುಳಿ, ಕಡಲೇಕಾಯಿ, ಕಂಬಳಿ ನೆಯ್ಗೆ ಒಂದು ಮುಖ್ಯ ಕಸಬು.

ಪಾವಗಡ ತಾಲ್ಲೂಕಿನ ರಸ್ತೆಗಳ ಪೈಕಿ ಮಡಕಶಿರಾ ಮೂಲಕ ಸಾಗುವ ಮಧುಗಿರಿ–ಪಾವಗಡ ರಸ್ತೆ, ಚಳ್ಳಕೆರೆ ರಸ್ತೆ, ಪಾವಗಡ–ಪೆನುಕೊಂಡ ರಸ್ತೆ, ತಾಲ್ಲೂಕಿನ ರಾಚರ್ಲು ಮೂಲಕ ಸಾಗುವ ಬೆಂಗಳೂರು–ಬಳ್ಳಾರಿ ಹಳೆಯ ರಸ್ತೆ ಇವು ಮುಖ್ಯವಾದುವು.

ಪಾವಗಡ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ.. ತುಮಕೂರಿಗೆ ಸು. 100 ಕಿಮೀ ದೂರದಲ್ಲಿದೆ. ಆಂಧ್ರಪ್ರದೇಶದ ಪೆನುಕೊಂಡ ಇಲ್ಲಿಗೆ ಸು. 30 ಕಿಮೀ ದೂರದಲ್ಲಿದೆ. ಜನಸಂಖ್ಯೆ 28,036 (2001).

ಇಲ್ಲಿ ನಾಗರಶಿಲ್ಪವಿದ್ದ ಶಿಲೆ ಸಿಕ್ಕಿದ ಕಾರಣ ಇದಕ್ಕೆ ಪಾವಗಡ ಅಥವಾ ಪಾಮುಕೊಂಡ (ಸರ್ಪಗಳ ಬೆಟ್ಟ) ಎಂಬ ಹೆಸರಾಯಿತೆನ್ನಲಾಗಿದೆ. ಪಟ್ಟಣದ ಸಮೀಪದ ಬೆಟ್ಟಕ್ಕೂ ಅದೇ ಹೆಸರು. (ವಿ.ಜಿ.ಕೆ.)

**ಪಾಸಿಟಿವಿಸಂ:** ಸತ್ಯವು ವೈಜ್ಞಾನಿಕ ವಿಧಾನಕ್ಕೆ ಮಾತ್ರ ಗೋಚರವೆಂದು ಸಾರುವ ವಾದ (ಸಾಧ್ಯತಾವಾದ). ಆಗಸ್ಟ್ ಕಾಂಪ್ಟೆ (1798–1857) ಎಂಬ ಫ್ರೆಂಚ್ ತಾತ್ವಿಕ ಈ ವಾದದ ಪ್ರತಿಪಾದಕ. ಆತ ತನ್ನ ತಾತ್ವಿಕ ನಿಲುವನ್ನು ಪಾಸಿಟಿವ್ ಫಿಲೋಸಫಿ ಎಂಬ ಗ್ರಂಥದಲ್ಲಿ ಮಂಡಿಸಿದ್ದಾನೆ. ಆತನ ಪ್ರಕಾರ ಆರೋಗ್ಯಕರ ಸಮಾಜದ ಅಸ್ತಿತ್ವ

ವೈಜ್ಞಾನಿಕತೆಯನ್ನು ಅವಲಂಬಿಸಿದೆ. ಸಮಾಜವನ್ನು ಕುರಿತ ಕಾಂಪ್ಟೆಯ ಧೋರಣೆ ಆತನಿಗೆ ಸಮಾಜಶಾಸ್ತ್ರದ ಸ್ಥಾಪಕನೆಂಬ ಬಿರುದನ್ನು ತಂದುಕೊಟ್ಟಿತು.

ಕಾಂಪ್ಟೆ ಪ್ರಕಾರ ಪಾಸಿಟಿವ್ ಶಬ್ದ ಖಚಿತ, ನಿಸ್ಸಂದಿಗ್ಧ ಮತ್ತು ಉಪಯುಕ್ತ ಎಂಬರ್ಥವನ್ನು ಸೂಚಿಸುತ್ತದೆ. ಎಂದರೆ ಯಾವ ಜ್ಞಾನವು ಖಚಿತವಿದ್ದು ನಮ್ಮ ದೈನಂದಿನ ಬದುಕಿನ ಉದ್ದೇಶವನ್ನು ಪೂರೈಸುವುದೋ ಅದು ಮಾತ್ರ ಸತ್ಯ. ವಿಜ್ಞಾನ ಮಾತ್ರ ಈ ಉದ್ದೇಶಗಳನ್ನು ಪೂರೈಸಬಲ್ಲದು. ಏಕೆಂದರೆ ಅದು ಅವಲೋಕನ ಮತ್ತು ಅನುಭವಗಳ ಬುನಾದಿಯ ಮೇಲೆ ನಿಂತಿದೆ. ವಿಜ್ಞಾನದ ಗುರಿ ನಿಸರ್ಗದ ಘಟನೆಗಳ ನಡುವಣ ಸಂಬಂಧವನ್ನು ಮತ್ತು ಅವುಗಳ ಹಿನ್ನೆಲೆಯಲ್ಲಿ ನಿಯಮಗಳನ್ನು ಕಂಡುಹಿಡಿಯುವುದು.

ಆದರೆ ಈ ಪಾಸಿಟಿವ್ ಎಂದರೆ ವೈಜ್ಞಾನಿಕ ಹಂತವನ್ನು ಒಮ್ಮೆಲೇ ಸಾಧಿಸುವಂತಹುದಲ್ಲ. ಈ ಆದರ್ಶವನ್ನು ಹಂತ ಹಂತವಾಗಿ ಸಾಧಿಸಬೇಕು. ಕಾಂಪ್ ಪ್ರಕಾರ ಮನುಷ್ಯನ ಬುದ್ಧಿ ಮೂರು ಹಂತಗಳಲ್ಲಿ ವಿಕಾಸಗೊಳ್ಳುತ್ತದೆ. ಈ ಹಂತಗಳಿಗೆ ಮೂರು ಹಂತಗಳ ನಿಯಮ ಎಂದು ಹೆಸರು. ಪ್ರತಿಯೊಂದು ಹಂತಕ್ಕೂ ತನ್ನದೇ ಆದ ಪ್ರಾಯೋಗಿಕ ಮೌಲ್ಯವಿದೆ.

ಮೊದಲನೆಯದಾದ ದೇವತಾಶಾಸ್ತ್ರೀಯ ಹಂತ ಮಾನವ ಬುದ್ಧಿಯ ಶೈಶವಾವಸ್ಥೆಯನ್ನು ಪ್ರತಿನಿಧಿಸುತ್ತದೆ. ಇಲ್ಲಿ ಮಾನವನು ನಿಸರ್ಗದ ಘಟನೆಗಳಿಗೆ ಅತಿಮಾನುಷ ಶಕ್ತಿಗಳೇ ಕಾರಣವೆಂದು ಬಗೆದು ಅವುಗಳನ್ನು ತನ್ನ ನಮೂನೆಯಲ್ಲಿ ಕಲ್ಪಿಸಿಕೊಂಡು, ಅವುಗಳನ್ನು ಆರಾಧಿಸುತ್ತಾ ಎಂದರೆ ನಿರ್ಜೀವ ವಸ್ತುಗಳಿಗೆ ಆತ್ಮವಿದೆಯೆಂದು ಭಾವಿಸಿ ಅದಕ್ಕೆ ಮಾನವೀಯ ರೂಪುಗುಣಗಳನ್ನು ಆರೋಪಿಸುತ್ತಾನೆ. ಇದಕ್ಕೆ ಮನುಷ್ಯತ್ವಾರೋಪಣೆ ಎಂದು ಹೆಸರು. ಘಟನೆಗಳ ಸಂಖ್ಯೆ ಅನೇಕವಾದ್ದರಿಂದ ಅವುಗಳನ್ನು ನಿಯಂತ್ರಿಸುವ ಅತಿಮಾನುಷಶಕ್ತಿಗಳೂ ಅನೇಕವಾಗುತ್ತವೆ. ಅಂದರೆ ಕ್ರಮೇಣ ಮಾನವನ ಬುದ್ಧಿಯು ಬಹುದೇವತಾವಾದದಿಂದ (ಮಾನೊಥೀಸಮ್) ಚಲಿಸುತ್ತದೆ. ಎಂದರೆ ಅವನು ಜಗತ್ತಿನ ಎಲ್ಲ ಘಟನೆಗಳನ್ನೂ ನಿಯಂತ್ರಿಸುವ ಒಂದೇ ದೇವರನ್ನು ನಂಬಲು ಪ್ರಾರಂಭಿಸುತ್ತಾನೆ.

ಮನಸ್ಸು ವಿಕಾಸಗೊಳ್ಳುತ್ತಿದ್ದಂತೆ ಮನುಷ್ಯ ಎರಡನೆಯದಾದ ಭೌತಾತೀತ ಹಂತಕ್ಕೆ (ಮೆಟಫಿಸಿಕಲ್ ಸ್ಟೇಜ್) ಬರುತ್ತಾನೆ. ಈ ಹಂತ ಮಾನವ ಬುದ್ಧಿಯ ತಾರುಣ್ಯಾವಸ್ಥೆಯನ್ನು ಪ್ರತಿನಿಧಿಸುತ್ತದೆ. ಇಲ್ಲಿ ಇವನು ನಿಸರ್ಗದ ಘಟನೆಗಳನ್ನು ಜಗತ್ತನ್ನು ಮೀರಿದ ಅಮೂರ್ತ ಸತ್ವದ ಪರಿಭಾಷೆಯಲ್ಲಿ ವಿವರಿಸಲು ಯತ್ನಿಸುತ್ತಾನೆ. ಮೂರ್ತ ದೇವತೆಗಳ ಸ್ಥಾನವನ್ನು ಇಲ್ಲಿ ಅಮೂರ್ತ ಆಕ್ರಮಿಸುತ್ತದೆ. ವಸ್ತು ವೈವಿಧ್ಯಕ್ಕೆ ಅನುಗುಣವಾಗಿ ಈ ತತ್ವಗಳು ಅನೇಕವಾಗಿದ್ದು ಈ ತತ್ವಗಳೇ ಘಟನೆಗಳಿಗೆ ಕಾರಣವಾಗುತ್ತವೆ.

ಆದರೆ ಮಾನವ ಬುದ್ಧಿಯ ವಿಕಾಸ ತುತ್ತ ತುದಿಯನ್ನು ಮುಟ್ಟುವುದು ಕೊನೆಯದಾದ ವೈಜ್ಞಾನಿಕ ಹಂತದಲ್ಲಿ. ಮನುಷ್ಯನು ಅತೀತದಲ್ಲಿನ ಆಸಕ್ತಿಯನ್ನು ಕೈಬಿಟ್ಟು ತನ್ನ ಅನ್ವೇಷಣೆಯನ್ನು ಅವಲೋಕನ ಮತ್ತು ಪ್ರತ್ಯಕ್ಷಾನುಭವಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳುತ್ತಾನೆ. ಇಲ್ಲಿ ಇವನಿಗೆ ವಸ್ತುಗಳ ಏಕೆ ಎಂಬ ಪ್ರಶ್ನೆಗಿಂತಲೂ ವಸ್ತುಗಳ ಹೇಗೆ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಏಕೆಂದರೆ ಘಟನೆಗಳು ಯಾವ ಉಪಾಧಿಗಳಲ್ಲಿ ಉಂಟಾಗುತ್ತವೆ ಮತ್ತು ಯಾವ ಸಾಮಾನ್ಯ ನಿಯಮಗಳಿಗೆ ಬದ್ಧವಾಗಿವೆಯೆಂಬುದಷ್ಟೆ ಅವನಿಗೆ ಮುಖ್ಯವಾಗುತ್ತದೆ. ಇಂದ್ರಿಯಾನುಭವದ ಮೂಲಕ ಕಂಡುಕೊಂಡ ಈ ಸಾಮಾನ್ಯ ನಿಯಮಗಳ ಮೂಲಕ ಅವನು ನಿರ್ದಿಷ್ಟ ಘಟನೆಯನ್ನು ವಿವರಿಸಲೆತ್ನಿಸುತ್ತಾನೆ. ಆದರೆ ಈ ವಿವರಣೆ ಸಾರ್ವತ್ರಿಕ ಮತ್ತು ಸಾರ್ವಕಾಲಿಕವಾಗಲು ಸಾಧ್ಯವಿಲ್ಲ. ಕಾಂಪ್ಟೆ ಪ್ರಕಾರ ಯಾವ ಜ್ಞಾನವೂ ಪ್ರಸ್ತುತ ನಮ್ಮ ಪ್ರಾಯೋಗಿಕ ಉದ್ದೇಶವನ್ನು ಪೂರೈಸಿದರೆ ಅಷ್ಟೇ ಸಾಕು. ಏಕೆಂದರೆ ಜ್ಞಾನ ಸಾಪೇಕ್ಷವಾಗಿದ್ದರೂ ಅದು ಉಪಯುಕ್ತವೂ ಆಗಿರಬೇಕು.

ಕಾಂಪ್ಟೆ ಗಣಿತ ವಿಜ್ಞಾನ (ಅಂಕಗಣಿತ, ಜ್ಯಾಮಿತಿ ಮಂತ್ರ ಶಾಸ್ತ್ರ), ಖಗೋಳವಿಜ್ಞಾನ, ಭೌತವಿಜ್ಞಾನ, ರಸಾಯನವಿಜ್ಞಾನ (ಮನಃಶಾಸ್ತ್ರವನ್ನೂ ಒಳಗೊಂಡಂತೆ) ಜೀವವಿಜ್ಞಾನ ಮತ್ತು ಸಮಾಜವಿಜ್ಞಾನಗಳೆಂಬ ಆರು ವಿಜ್ಞಾನಗಳನ್ನು ಗುರುತಿಸುತ್ತಾನೆ. ಇವನ ಪ್ರಕಾರ ಈ ವಿಜ್ಞಾನಗಳಲ್ಲಿ ಸರಳ ಸಂಕೀರ್ಣತೆಯ ಒಂದು ಕ್ರಮಬದ್ಧ ಶ್ರೇಣಿಯಿದೆ. ಸರಳ, ಅಮೂರ್ತ ಮತ್ತು ಸಾಮಾನ್ಯ ತತ್ವಗಳನ್ನು ಒಳಗೊಂಡ ಗಣಿತ ವಿಜ್ಞಾನ ಮೊದಲು ಬಂದು ಅದು ಉಳಿದ ಎಲ್ಲ ಶಾಸ್ತ್ರಗಳಿಗೂ ಬುನಾದಿಪ್ರಾಯವಾಗಿದೆ. ಸಮಾಜವಿಜ್ಞಾನವು ಎಲ್ಲಕ್ಕಿಂತಲೂ ಅತ್ಯಂತ ಸಂಕೀರ್ಣ ವಿಜ್ಞಾನ ಅದು ಉಳಿದ ವಿಜ್ಞಾನಗಳ ಅಂಶಗಳನ್ನು ಒಳಗೊಂಡಿರುವುದರಿಂದ ಅದರ ಜ್ಞಾನಕ್ಕೆ ಉಳಿದ ಶಾಸ್ತ್ರಗಳ ವಿಜ್ಞಾನ ಅಗತ್ಯ. ಮಾನವ ಬುದ್ಧಿ ವಿಕಾಸಗೊಳ್ಳುತ್ತಿದ್ದಂತೆ ಇನ್ನೂ ಹೆಚ್ಚಿನ ಸಂಕೀರ್ಣ ವಿಜ್ಞಾನಗಳು ಅಸ್ತಿತ್ವಕ್ಕೆ ಬರುತ್ತವೆ. ಈ ದಿಶೆಯಲ್ಲಿ ಕಾಂಪ್ಟೆ ಅನಂತರ ಸಮಾಜವಿಜ್ಞಾನದೊಂದಿಗೆ ನೀತಿವಿಜ್ಞಾನವನ್ನು ಸೇರಿಸಿ ಅದನ್ನು ಎಲ್ಲ ವಿಜ್ಞಾನಗಳ ತುತ್ತತುದಿಯೆಂದು ಭಾವಿಸುತ್ತಾನೆ.

ಕಾಂಪ್ಟೆ ಪ್ರಕಾರ ಎಲ್ಲ ಘಟನೆಗಳನ್ನು ಒಂದೇ ನಿಯಮದಿಂದ ಅಥವಾ ಒಂದು ಶಾಸ್ತ್ರದ ಸಂಗತಿಯನ್ನು ಮತ್ತೊಂದರ ಪರಿಭಾಷೆಯಲ್ಲಿ ವಿವರಿಸಲು ಕಾರ್ಯತಃ ಸಾಧ್ಯವೇ ಇಲ್ಲ. ಕಾರಣ, ಪ್ರತಿಯೊಂದು ವಿಜ್ಞಾನದಲ್ಲೂ ಉಳಿದ ವಿಜ್ಞಾನಗಳ ಅಂಶಗಳಷ್ಟೇ ಅಲ್ಲ. ಹೊಸ ಅಂಶಗಳೂ ಸೇರಿದ್ದು ಈ ಹೊಸ ಅಂಶಗಳೇ ಅದಕ್ಕೆ ಒಂದು ವೈಶಿಷ್ಟ್ಯವನ್ನು ನೀಡುವುದು. ಹೀಗಾಗಿ ಅದರ ಘಟನೆಗಳನ್ನು ಅದರ ನಿಯಮಗಳಿಂದ ಮಾತ್ರವೇ ವಿವರಿಸಬೇಕಾಗುತ್ತದೆ. ಉದಾಹರಣೆಗೆ ಜ್ಯಾಮಿತಿಯ ನಿಯಮಗಳು ದೇಶವನ್ನು ಆಕ್ರಮಿಸುವ ಸ್ಥಿರವಸ್ತುಗಳಿಗೆ ಮಾತ್ರವೇ ಅನ್ವಯಿಸುವುದು. ಹಾಗೆಯೇ ಯಂತ್ರ ವಿಜ್ಞಾನದ ನಿಯಮಗಳು ಚಲನೆಯಲ್ಲಿರುವ ವಸ್ತುಗಳಿಗೆ ಮಾತ್ರ ಅನ್ವಯಿಸುವುದು. ಜೀವವಿಜ್ಞಾನದ ಸಂಗತಿಗಳನ್ನು ಯಂತ್ರ ವಿಜ್ಞಾನದ ಅಥವಾ ರಸಾಯನವಿಜ್ಞಾನದ ವಿವಿಧ ಸಂಗತಿಗಳಿಗೂ ಅನ್ವಯವಾಗುತ್ತವೆ. ಉದಾಹರಣೆಗೆ ಸಸ್ಯವಿಜ್ಞಾನದ ಎಷ್ಟೋ ನಿಯಮಗಳು ಪ್ರಾಣಿವಿಜ್ಞಾನಕ್ಕೆ ಅನ್ವಯವಾಗುವುದಿಲ್ಲ ಇದಕ್ಕೆ ಕಾರಣ ಸಂಗತಿಗಳ ವೈವಿಧ್ಯ. (ಎನ್.ಎಲ್.)

**ಪಿಝಾರೋ ಫ್ರಾನ್ಸಿಸ್ಕೊ:** 1475–1535. ಹೆಸರಾಂತ ಅನ್ವೇಷಣಾಕಾರ ಹಾಗೂ ದಂಡೆಯಾತ್ರ ಪ್ರವೀಣ. ಟ್ರೂಜಿಲ್ಲೊ ಎಂಬಲ್ಲಿ ಜನಿಸಿದ (1475). ಈತ ಇನ್ಕ ಸಾಮ್ರಾಜ್ಯವನ್ನು ಸ್ಪೇನ್ ದೇಶಕ್ಕಾಗಿ ವಶಪಡಿಸಿಕೊಂಡ. ಹೊಸ ಪ್ರಪಂಚದ ದಂಡಯಾತ್ರೆ ಹಾಗೂ ಅನ್ವೇಷಣೆಗಳಲ್ಲಿ ತನ್ನ ಹೆಸರನ್ನು ಸುವರ್ಣಾಕ್ಷರಗಳಲ್ಲಿ ದಾಖಲಿಸಿದ (1510). ವಾಸ್ಕೊ ನ್ಯೂನಿಜ್ ಡಿ ಬಾಲ್‌ಬೂವ ಜೊತೆಗೂಡಿ ಸಮುದ್ರ ದಂಡಯಾತ್ರೆಯಲ್ಲಿ ಪೆಸಿಫಿಕ್ ಅನ್ನು ಶೋಧಿಸಿದ (1513). ಈತ ಎರಡು ಬಾರಿ ಸಮುದ್ರ ಮಾರ್ಗಗಳ ಶೋಧನೆಗಳಲ್ಲಿ ಪಾಲ್ಗೊಂಡ (1524–1526–28). ದಕ್ಷಿಣದ ಕಡೆಗೆ ಈತ ಸಾಹಸ ಯಾತ್ರೆ ಕೈಗೊಂಡು

ಕೊಲಂಬಿಯ ಕರಾವಳಿಯ ಕಡೆ ಮುಂದುವರಿಸಿದ. 1931 ರಲ್ಲಿ ಈತನ ನಾಲ್ಕು ಮಂದಿ ಸಹೋದರರು, 180 ಸಿಬ್ಬಂದಿ ವರ್ಗದವರು ಹಾಗೂ 37 ಅಶ್ವಗಳ ಜೊತೆ ದಕ್ಷಿಣ ಅಮೆರಿಕದ ಪೆರೂ ದೇಶಕ್ಕೆ ಕಾಲಿಟ್ಟ. ಪೆರುವಿನ ಇನ್ಕ ಸಾಮ್ರಾಜ್ಯದ ಚಕ್ರವರ್ತಿಗೆ ಎದುರು ಬಿದ್ದ, ಗುಪ್ತಚಾರರ ಸಹಾಯದಿಂದ ಅಟಹುಲ್ಪನ ಜೊತೆ ಮಾತುಕತೆಗೆ ಸಿದ್ಧತೆಗಳನ್ನು ಮಾಡಿದ. ಚಕ್ರವರ್ತಿಯನ್ನು ಬಂಧಿಸಿ ಹೇರಳವಾದ ಧನವನ್ನು ಚಕ್ರವರ್ತಿಯಿಂದ ಪಡೆದು ಇನ್ಕ ಸಾಮ್ರಾಜ್ಯವನ್ನು ತನ್ನದಾಗಿಸಿಕೊಂಡ. ಚಕ್ರವರ್ತಿ ಅತಹುಲ್ಪನನ್ನು ಸಮುದ್ರದ ಬಾತುಕೋಳಿಯಂತೆ ಬದುಕಲು ಬಿಟ್ಟ. 1535 ರಲ್ಲಿ ಲಿಮಾ (ಪೆರುವಿನ ರಾಜಧಾನಿ) ವನ್ನು ಸ್ಥಾಪಿಸಿದ. ಮುಂದೆ ಸ್ಪೇನ್ ದೇಶದ ವಿಶ್ವಾಸಘಾತಕ ವ್ಯಕ್ತಿಯಿಂದ ಈತ ಲಿಮಾದಲ್ಲಿ ಹತನಾದ. (ವಿ.ಎಸ್.ಎ.)

**ಪಿಟ್‌ಕೈರನ್ ದ್ವೀಪಗಳು:** ದಕ್ಷಿಣ ಪೆಸಿಫಿಕ್ ಮಹಾಸಾಗರದಲ್ಲಿರುವ ಪಿಟ್‌ಕೈರನ್, ಹೆಂಡರ್‌ಸನ್, ಡ್ಯೂಸಿ ಮತ್ತು ಓಯಿನೋ ಎಂಬ ನಾಲ್ಕು ದ್ವೀಪಸಮೂಹ. ಮೊದಲು ಈ ದ್ವೀಪಗಳು ಬ್ರಿಟಿಷರ ವಸಾಹತುಗಳಾಗಿದ್ದವು. ಸಾರ್ವಭೌಮತ್ವವನ್ನು ಪಡೆಯದ ದೇಶವಾದ ಪಿಟ್‌ಕೈರನ್ ಸು. 9 ಕುಟುಂಬಗಳನ್ನು ಹೊಂದಿದ್ದು (ಜನಸಂಖ್ಯೆ 45) ಪ್ರಪಂಚದಲ್ಲಿಯೇ ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ ದ್ವೀಪವಾಗಿದೆ. ಇಲ್ಲಿಯ ಮೂಲ ನಿವಾಸಿಗಳು ಪಾಲಿನೇಷಿಯನ್ ಜನಾಂಗದವರು. ರಾಜಧಾನಿ ಆ್ಯಂಡರ್ ಸ್ಟಾನ್. ವಿಸ್ತೀರ್ಣ 5 ಚ.ಕಿಮೀ. ಇಲ್ಲಿಯ ಜನ ಚೌಂಟಿ ವಂಶಕ್ಕೆ ಸೇರಿದವರಾಗಿದ್ದಾರೆ. ಪಿಟ್‌ಕೈರನ್ ಭಾಷೆ 18ನೆಯ ಶತಮಾನದ ಇಂಗ್ಲಿಷ್ ಭಾಷೆ ರೂಪತಳೆದಿದೆ. ಉಳಿದ ಮೂರು ದ್ವೀಪಗಳು ಸು. 100 ಕಿಮೀ ದೂರದಲ್ಲಿದ್ದು ಅಲ್ಲಿ ಯಾವುದೇ ಜನವಸತಿ ಕಂಡುಬರುವುದಿಲ್ಲ.

ಪಿಟ್‌ಕೈರನ್ ದ್ವೀಪದ ಫಲವತ್ತಾದ ಕಣಿವೆ ಪ್ರದೇಶದಲ್ಲಿ ತರಕಾರಿ ಹಾಗೂ ಹಣ್ಣುಗಳನ್ನೂ ಕಲ್ಲಂಗಡಿ, ಕಬ್ಬು, ಬಾಳೆ ಹಾಗೂ ಬೀನ್ಸ್ ಬೆಳೆಯಲಾಗುವುದು. ಈ ಚಿಕ್ಕ ದ್ವೀಪದಲ್ಲಿ ವಾಸಮಾಡುವ ಕೆಲವೇ ಕುಟುಂಬದ ಜನರ ಕಸಬು ಮೀನುಗಾರಿಕೆ ಹಾಗೂ ಕರಕುಶಲಗಾರಿಕೆ. ಇಂಗ್ಲೆಂಡಿನಿಂದ ಪನಾಮಾ ಕಾಲುವೆಯ ಮೂಲಕ ನ್ಯೂಜಿಲೆಂಡಿಗೆ ಹಾದು ಹೋಗುವ ಹಡಗುಗಳು ಇಲ್ಲಿ ತಂಗಿದಾಗ ಜನರು ಜೇನು, ಕರಕುಶಲವಸ್ತುಗಳು ಹಾಗೂ ಅಂಚೆ ಚೀಟಿಗಳನ್ನು ಮಾರಾಟಮಾಡುವರು. (ಕೆ.ಎಂ.)

**ಪಿಟ್ಸ್‌ಬರ್ಗ್:** ಅಮೆರಿಕದ ಪೆನ್ಸಿಲ್ವೇನಿಯ ರಾಜ್ಯದಲ್ಲಿರುವ ಪಿಟ್ಸ್‌ಬರ್ಗ್ ಪ್ರಪಂಚದ ಪ್ರಮುಖ ಉಕ್ಕು ಉತ್ಪಾದನಾ ಕೇಂದ್ರಗಳಲ್ಲಿ ಒಂದು. ಅಮೆರಿಕದ ಉಕ್ಕು ಉತ್ಪಾದನಾ ಸಾಮರ್ಥ್ಯದ ಶೇ. 20 ರಷ್ಟು ಇಲ್ಲಿಯದು. ಆ ದೇಶದ ಅತಿ ದೊಡ್ಡ ಒಳನಾಡ ರೇವು ಕೂಡ ಆಗಿದೆ. ಅಲಿಗಾನೀ ಮತ್ತು ಮೋನಾಂಗಹೀಲ ನದಿಗಳು ಸಂಗಮಿಸಿ ಒಹೈಯೊ

ನದಿಯಾಗುವ ಎಡೆಯಲ್ಲಿರುವ ಈ ನಗರ ವಾಣಿಜ್ಯ ಮತ್ತು ಬ್ಯಾಂಕಿಂಗ್ ಕೇಂದ್ರ. ಇದರ ಸುತ್ತ ಆಗ್ಪಿಪ, ಮೆಕ್ಕಿಸ್ಪೋರ್ಟ್, ನ್ಯೂ ಕೆನ್‌ಸಿಂಗ್‌ಟನ್, ವಾಷಿಂಗ್ಟನ್ ಮತ್ತು ವಿಲ್ಕಿನ್ಸ್‌ಬರ್ಗ್ ಎಂಬ ಉಪನಗರಗಳೂ ಇವೆ. ಜನಸಂಖ್ಯೆ 3,34,563 (2000).

1958–59 ರಲ್ಲಿ ದ್ವಿಶತಮಾನೋತ್ಸವ ಆಚರಿಸಿಕೊಂಡ ಪಿಟ್ಸ್‌ಬರ್ಗ್ 18 ನೆಯ ಶತಮಾನದಲ್ಲಿ ಚಿಕ್ಕ ಗ್ರಾಮವಾಗಿ ಆರಂಭವಾಗಿ ಅಲ್ಲಿಯ ಭಾರೀ ಕಲ್ಲಿದ್ದಲು ನಿಕ್ಷೇಪದಿಂದಾಗಿ ಗಾಜು ಮತ್ತು ಕಬ್ಬಿಣ ಕುಲುಮೆಗಳ ಕಾರ್ಖಾನೆ ಪಟ್ಟಣವಾಯಿತು. ಹತ್ತಿರವೇ ತೈಲ ಮತ್ತು ನೈಸರ್ಗಿಕ ಅನಿಲ ಸಿಕ್ಕ ಮೇಲೆ ಆಂಡ್ರೂ ಕಾರ್ನೆಜಿಯ ಸಾಹಸದಿಂದ ಇದು ಉಕ್ಕಿನ ನಗರವಾಯಿತು. ಈಗ ಇದು ಪೆಟ್ರೋಲಿಯಮ್, ಗಾಜು, ವಿದ್ಯುತ್ ಉಪಕರಣಗಳು, ಯಂತ್ರೋಪಕರಣಗಳು, ಕಲ್ಲಿದ್ದಲು, ಕೋಕ್ ರಸಾಯನಿಕಗಳು, ಆಹಾರ ವಸ್ತುಗಳು ಮೊದಲಾದುವನ್ನು ತಯಾರಿಸುವ ಬೃಹತ್ ಕೇಂದ್ರವಾಗಿದೆ. ಇದರ ನದಿ ಬಂದರು ವರ್ಷಕ್ಕೆ 4 ಕೋಟಿ ಟನ್ ಸಾರಿಗೆಯನ್ನು ನಿರ್ವಹಿಸುತ್ತದೆ.

1937 ರಿಂದಲೂ ಪ್ರಮುಖ ಪರಮಾಣು ಸಂಶೋಧನ ಕೇಂದ್ರವಾಗಿ ಇದು ಅಮೆರಿಕದ ಪ್ರಥಮ ಪರಮಾಣು ಭೇದಕ ವೇಗೋತ್ಕರ್ಷಕವನ್ನು ನಿರ್ಮಿಸಿತು. ಇಲ್ಲಿ ಪರಮಾಣು ಸಂಶೋಧನ ಕೇಂದ್ರದಲ್ಲಿ ಪ್ರಪ್ರಥಮ ಪರಮಾಣು ಶಕ್ತಿ ಜಲಾಂತರ್ಗಾಮಿಗಳಾದ ನಾಟಿಲಸ್ ಮತ್ತು ಸ್ಕೇಟ್‌ಗಳಿಗೆ ಬೇಕಾದ ರಿಯಾಕ್ಟರುಗಳು ತಯಾರಾದವು. 1957 ರಲ್ಲಿ ಪಿಟ್ಸ್‌ಬರ್ಗಿಗೆ ಪ್ರಪಂಚದಲ್ಲೇ ಪ್ರಥಮವಾಗಿ ಪರಮಾಣು ವಿದ್ಯುತ್ತಿನ ಪೂರೈಕೆಯಾಗತೊಡಗಿತು.

ಪಿಟ್ಸ್‌ಬರ್ಗ್ ಪ್ರಮುಖ ವೈಜ್ಞಾನಿಕ ಸಂಶೋಧನ ಕೇಂದ್ರವೂ ಹೌದು. ಇಲ್ಲಿನ ಪಿಟ್ಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸಿಯೇ ಜೊನಾಸ್ ಸಾಲ್ಕ್ 1955 ರಲ್ಲಿ ಪೋಲಿಯೋ ರೋಗಕ್ಕೆ ಲಸಿಕೆಯನ್ನು ಪ್ರಕಟಿಸಿದ್ದು. (ಪಿ.ವಿ.ಎ.)

**ಪಿರಮಿಡ್ ಆಲೇಖ:** ಪಿರಮಿಡ್ ಆಲೇಖದಲ್ಲಿ ಜನಸಂಖ್ಯೆಯ ಸಂಯೋಜನೆಯನ್ನು ತೋರಿಸಲಾಗುತ್ತದೆ. ಜನಸಂಖ್ಯೆಯ ರಚನೆ, ಬೆಳೆವಣಿಗೆ, ಮಹಿಳೆಯರ ಹಾಗೂ ಪುರುಷರ ಸಂಖ್ಯೆಯನ್ನು ಗ್ರಾಮೀಣ ಮತ್ತು ನಗರಗಳಲ್ಲಿ ವಾಸಿಸುವ ಜನರ ಜನಗಣತಿಯನ್ನು ತೆಗೆದುಕೊಂಡು ಬೇರೆ ಬೇರೆಯಾಗಿ ತೋರಿಸಲಾಗುತ್ತದೆ. ಇದು ಏರಿಕೆ ಹಾಗೂ ಇಳಿಕೆಯ ಕ್ರಮದಲ್ಲಿದ್ದು ಪಿರಮಿಡ್‌ನ ಆಕೃತಿಯನ್ನು ಹೊಂದಿರುವುದರಿಂದ ಇದನ್ನು ಪಿರಮಿಡ್ ಆಲೇಖವೆಂದು ಕರೆಯಲಾಗುತ್ತದೆ. (ಜಿ.ಕೆ.)

**ಪಿರಿಯಾಪಟ್ಟಣ:** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ. ಕೊಡಗು ಜಿಲ್ಲೆಯ ವೀರರಾಜೇಂದ್ರಪೇಟೆ ಮತ್ತು ಸೋಮವಾರಪೇಟೆ, ಹಾಸನ ಜಿಲ್ಲೆಯ ಅರಕಲಗೂಡು, ಮತ್ತು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ಮತ್ತು ಹುಣಸೂರು ತಾಲ್ಲೂಕುಗಳು ಈ ತಾಲ್ಲೂಕನ್ನು ಬಳಸಿವೆ. ತಾಲ್ಲೂಕಿನ ವಿಸ್ತೀರ್ಣ 814.5 ಚ.ಕಿಮೀ. ಜನಸಂಖ್ಯೆ 2,24,254. ಪಿರಿಯಾಪಟ್ಟಣ, ಹಾರನಹಳ್ಳಿ, ಬೆಟ್ಟದಪುರ ಮತ್ತು ರಾವಂದೂರು ಹೋಬಳಿಗಳನ್ನು ಒಳಗೊಂಡಿರುವ ಈ ತಾಲ್ಲೂಕಿನಲ್ಲಿ 201 ಗ್ರಾಮಗಳಿವೆ. ತಾಲ್ಲೂಕಿನ ಪಶ್ಚಿಮ ಮತ್ತು ವಾಯುವ್ಯ ಗಡಿಯಲ್ಲಿ ಹರಿಯುವ ಕಾವೇರಿ ನದಿ ಇದನ್ನು ಸೋಮವಾರಪೇಟೆ ತಾಲ್ಲೂಕಿನಿಂದ ಪ್ರತ್ಯೇಕಿಸುತ್ತದೆ. ಪಶ್ಚಿಮ ಘಟ್ಟಗಳ ಬುಡದಲ್ಲಿ ಹಬ್ಬಿರುವ ಪಿರಿಯಾಪಟ್ಟಣ ತಾಲ್ಲೂಕು ಸ್ಥೂಲವಾಗಿ ಪೂರ್ವದ ಕಡೆಗೆ ಇಳಿಜಾರಾಗಿದೆ. ಪಶ್ಚಿಮ ಭಾಗದಲ್ಲಿ ಮಾಕಲಯ್ಯನ ಬೆಟ್ಟ ಮತ್ತು ಜೇನುಕಲ್ಲು ಬೆಟ್ಟ ಇವೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 87 ಸೆಂಮೀ. ಹೊಗೆಸೊಪ್ಪು, ಹತ್ತಿ, ಅಡಕೆ–ಇವು ಇಲ್ಲಿನ ಮುಖ್ಯ ಬೆಳೆಗಳು. ರಾಗಿ ಮತ್ತು ಜೋಳಗಳೂ ಬೆಳೆಯುತ್ತಾರೆ. ಪಿರಿಯಾಪಟ್ಟಣ–ಹಾಸನ ರಸ್ತೆಯಲ್ಲಿ ಪಿರಿಯಾಪಟ್ಟಣದಿಂದ ವಾಯುವ್ಯಕ್ಕೆ 16 ಕಿಮೀ ದೂರದಲ್ಲಿರುವ ಬೆಟ್ಟದಪುರ ಒಂದು ಮುಖ್ಯ ಸ್ಥಳ. ಇಲ್ಲಿಯ ಬೆಟ್ಟದ ಎತ್ತರ ಸಮುದ್ರಮಟ್ಟದಿಂದ 1,338 ಮೀ. ಇದರ ಮೇಲೆ ಸಿಡಿಲು ಮಲ್ಲಿಕಾರ್ಜುನ ದೇವಾಲಯವಿದೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಬೈಲುಕುಪ್ಪೆಯಲ್ಲಿ ಟಿಬೆಟ್ಟಿನ ನಿರಾಶ್ರಿತರಿಗೆ ವಸತಿಯನ್ನು ಕಲ್ಪಿಸಲಾಗಿದೆ.

ತಾಲ್ಲೂಕಿನ ಆಡಳಿತ ಕೇಂದ್ರ ಪಿರಿಯಾಪಟ್ಟಣ. ಮೈಸೂರು–ಮಡಿಕೇರಿ ಹೆದ್ದಾರಿಯಲ್ಲಿರುವ ಈ ಪಟ್ಟಣ ಮೈಸೂರಿನಿಂದ ಪಶ್ಚಿಮಕ್ಕೆ ಸು. 67 ಕಿಮೀ ಮತ್ತು ಹುಣಸೂರಿನಿಂದ ಪಶ್ಚಿಮಕ್ಕೆ ಸು. 20 ಕಿಮೀ ದೂರದದಲ್ಲಿದೆ. ಜನಸಂಖ್ಯೆ 14,924. ಹಿಂದೆ ಇದಕ್ಕೆ ಸಿಂಗಪಟ್ಟಣ ಎಂಬ ಹೆಸರಿತ್ತು. (ಪಿ.ಬಿ.)

**ಪೀಟರ್ ಹ್ಯಾಗೆಟ್:** ಬ್ರಿಟನ್ನಿನ ಪ್ರಸಿದ್ಧ ಭೂಗೋಳವಿಜ್ಞಾನಿ. ಮಾನವ ಭೂಗೋಳ ವಿಜ್ಞಾನದಲ್ಲಿ ಪರಿಮಾಣಾತ್ಮಕ ಕೌಶಲ್ಯಗಳು, ಸಿದ್ಧಾಂತಗಳು ಹಾಗೂ ನಮೂನೆಗಳ ಬಳಕೆಯನ್ನು ಕುರಿತು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಜಿಯೋಗ್ರಫಿ – ಎ ಮಾಡರ್ನ ಸಿಂಥೆಸಿಸ್ (1979) ಮಾಡೆಲ್ಸ್ ಇನ್ ಹ್ಯೂಮನ್ ಜಿಯೋಗ್ರಫಿ; ಲೊಕೇಷನಲ್ ಅನಲಿಸಿಸ್ ಇನ್ ಹ್ಯೂಮನ್ ಜಿಂಯಾಗ್ರಫಿ (1965), ಫ್ರಾಂಟೀಯರ್ಸ್ ಇನ್ ಜಿಯಾಗ್ರಾಫಿಕಲ್ ಟೀಚಿಂಗ್ ಈ ಕ್ಷೇತ್ರದಲ್ಲಿ ಈ ಗ್ರಂಥಗಳು ಇಂದಿಗೂ ಮುಖ್ಯ ಪರಾಮರ್ಶನ ಗ್ರಂಥಗಳಾಗಿವೆ. ಈತ ಮಾನವ ಭೂಗೋಳ ವಿಜ್ಞಾನದ ಅಧ್ಯಯನದಲ್ಲಿ ಬಳಕೆಯಲ್ಲಿರುವ ನಾಲ್ಕು ಮುಖ್ಯ ಕ್ರಿಯಾ ಮಾಲೆಗಳನ್ನು ಗುರುತಿಸಿದರು. ಅವುಗಳೆಂದರೆ ಮಾನವ ಪರಿಸರ ಕ್ರಿಯಾಮಾಲೆ, ಸ್ಥಾನೀಯ ವಿಶ್ಲೇಷಣೆ ಕ್ರಿಯಾಮಾಲೆ, ವರ್ತನಾ ವಿಶ್ಲೇಷಣೆ ಕ್ರಿಯಾಮಾಲೆ, ವೈಚಾರಿಕ ಅಥವಾ ರಚನಾತ್ಮಕ ಕ್ರಿಯಾಮಾಲೆ. (ಬಿ.ಪಿ.)

**ಪೀಡ್‌ಮಾಂಟ್:** ಇಟಲಿಯ ವಾಯವ್ಯ ಭಾಗದ ಪ್ರದೇಶ. ಅಲೆಸಾಂಡ್ರಿಯ, ಆಸ್ತೀ, ಕೂನೋವೋ, ನೋವಾರ, ಟೋರೆನೋ ಮತ್ತು ವರ್ಚಿಲೀ ಪ್ರಾಂತ್ಯಗಳನ್ನು ಒಳಗೊಂಡಿದೆ. ವಿಸ್ತೀರ್ಣ 25,399 ಚ.ಕಿಮೀ. ಜನಸಂಖ್ಯೆ 4,166,442 (2001). ಆಡಳಿತ ಕೇಂದ್ರ ಟೂರಿನ್.

ಈ ಪ್ರದೇಶದ ದಕ್ಷಿಣ, ಪಶ್ಚಿಮ ಮತ್ತು ಉತ್ತರದಲ್ಲಿ ಅಪನೀನೊಲಿಗೂರೆ ಹಾಗೂ ಸಮುದ್ರದಂಚಿನ ಕೋಯಟಿನ್, ಗ್ರಾಯೀಯನ್ ಮತ್ತು ಪೆನೈನ್ ಆಲ್ಪ್ಸ್ ಪರ್ವತಗಳೂ ಮಧ್ಯ ಭಾಗದಲ್ಲಿ ಪೋ ನದೀ ಬಯಲಿನ ಫಲವತ್ತಾದ ವ್ಯವಸಾಯ ಭೂಮಿಯೂ ಇವೆ. ಇಟಲಿಯ ಪರ್ವತ ಪ್ರದೇಶದ ನಡುವೆ ಇರುವ ವ್ಯವಸಾಯ ಯೋಗ್ಯ ಬಯಲುಗಳಿಗೆ ಪೀಡ್‌ಮೌಂಟ್ (ಬೆಟ್ಟ ತಪ್ಪಲ ಭೂಮಿ) ಎಂಬ ಹೆಸರುಂಟು. ಪೋ ನದಿಯ ದಕ್ಷಿಣ ಭಾಗದಲ್ಲಿ ಆಲ್ಪ್ಸ್ ತಪ್ಪಲಲ್ಲಿರುವ ಸರೋವರಗಳು ಮಜೋರೇ ಮತ್ತು ಓರ್ಟ್ಪ, ಪೋ ಹಾಗೂ ಅದರ ಉಪನದಿಗಳಾದ ಡೋರಾಬಾಲ್ಟಿಯ, ಡೋರಾ ರಿಪಾರಿಯ, ಸೇಸೀಯ, ಟನಾರೊ ಮತ್ತು ಸ್ಕ್ರೀವಿಯ ಇವು ವ್ಯವಸಾಯಕ್ಕೆ ಸಾಕಷ್ಟು ನೀರನ್ನು ಒದಗಿಸುತ್ತವೆ.

ಪೀಡ್‌ಮಾಂಟಿಗೆ ಸೇರಿದ ಆಲ್ಪ್ಸ್ ಪರ್ವತದ ನದಿಗಳು ಉತ್ತರ ಇಟಲಿಯ ವಿದ್ಯುಚ್ಛಕ್ತಿ ಪೂರೈಕೆಗೆ ಸಹಾಯಕವಾಗಿವೆ. ಅರಣ್ಯಗಳಲ್ಲಿ ಉಪಯುಕ್ತವಾದ ಗಟ್ಟಿ ಮರಗಳಿವೆ. ಆಲ್ಪ್ಸ್ ತಪ್ಪಲಿನ ಬಯಲುಗಳಲ್ಲಿ ಪಶುಪಾಲನೆ ಹಾಗೂ ಹೈನುಗಾರಿಕೆ ಮುಖ್ಯ ಕಸಬು. ಇಲ್ಲಿಯ ಪ್ರಧಾನ ಬೆಳೆಗಳು ಗೋದಿ, ಬತ್ತ, ತರಕಾರಿ ಹಾಗೂ ಹಣ್ಣು. ಪೋ ನದಿಯ ದಕ್ಷಿಣ ಭಾಗಗಳಲ್ಲಿ ವೈನ್‌ಗೆ ಅಗತ್ಯವಾದ ಉತ್ತಮ ದ್ರಾಕ್ಷಿ ಬೆಳೆಯುತ್ತಾರೆ. ಇಟಲಿಯ ಕೈಗಾರಿಕೆಯಲ್ಲಿ ಪೀಡ್‌ಮಾಂಟಿನ ಪಾತ್ರ ಗಮನಾರ್ಹವಾದದ್ದು. ಟೂರಿನ್‌ನಲ್ಲಿ ಮೋಟಾರು ವಾಹನ, ಹತ್ತಿ ಬಟ್ಟೆ, ಗಾಜಿನ ಸಾಮಾನು ಮತ್ತು ಯಂತ್ರೋಪಕರಣ ತಯಾರಾಗುತ್ತವೆ. ರಸ್ತೆಗಳ ಜಾಲದಿಂದ ಅನೇಕ ಪಟ್ಟಣಗಳ ನಡುವೆ ಸಂಪರ್ಕ ಏರ್ಪಟ್ಟಿದೆ. ಈ ಪ್ರದೇಶದಿಂದ ಜಿನೋವ ರೇವು ಪಟ್ಟಣಕ್ಕೆ ಉತ್ತಮ ರಸ್ತೆ ಇದೆ. ಇತ್ತೀಚೆಗೆ ಫ್ರಾನ್ಸ್ ಮತ್ತು ಇಟಲಿಗಳ ನಡುವೆ ಬ್ಲಾನ್ ಸುರಂಗದ ಮೂಲಕ ಹಾದು ಹೋಗುವ ಹೊಸ ರಸ್ತೆ ನಿರ್ಮಾಣವಾಗಿದೆ. (ವಿ.ಜಿ.ಕೆ.)

**ಪುಣೆ:** ಮಹಾರಾಷ್ಟ್ರ ರಾಜ್ಯದ ಒಂದು ಪ್ರಸಿದ್ಧ ಐತಿಹಾಸಿಕ ನಗರ, ಅದೇ ಹೆಸರಿನ ಜಿಲ್ಲೆ ಹಾಗೂ ವಿಭಾಗದ ಆಡಳಿತ ಸ್ಥಳ. ಸಮುದ್ರಮಟ್ಟದಿಂದ ಸು. 567 ಮೀ ಎತ್ತರದಲ್ಲಿ, ಸಹ್ಯಾದ್ರಿ ಗುಡ್ಡಗಳಲ್ಲಿ ಮುಠಾ ಮತ್ತು ಮುಳಾ ನದಿಗಳು ಕೂಡುವ ಎಡೆಯಲ್ಲಿ, ಮುಂಬಯಿ ನಗರದ ಆಗ್ನೇಯಕ್ಕೆ 192 ಕಿಮೀ ದೂರದಲ್ಲಿ ಉ.ಅ. $18^{0}31'$ ಮತ್ತು ಪೂ. ರೇ. $73^{0}54'$ ಮೇಲೆ ಇದೆ. ಇದು ಮಧ್ಯ ಹಾಗೂ ಪಶ್ಚಿಮ ರೈಲ್ವೆಗಳ ಸಂಧಿ ಸ್ಥಳ. ನಗರದ ವಿಸ್ತೀರ್ಣ 138.35 ಚ.ಕಿಮೀ. ಜನಸಂಖ್ಯೆ 5695000(2003).

ಇಲ್ಲಿಯದು ಸಮಶೀತೋಷ್ಣವಾದ ಆಹ್ಲಾದಕರ ವಾಯುಗುಣ. ವರ್ಷದಲ್ಲಿ ಸು. 63 ಸೆಂಮೀ ಮಳೆ ಬೀಳುತ್ತದೆ. ಭಾರತದ ರಾಷ್ಟ್ರೀಯ ನಾಯಕರಾಗಿದ್ದ ಲೋಕಮಾನ್ಯ ಬಾಲ ಗಂಗಾಧರ ಟಿಳಕ್, ಗೋಪಾಲಕೃಷ್ಣ ಗೋಖಲೆ, ಮಹರ್ಷಿ ಕರ್ವೆ ಮೊದಲಾದ ಮಹನೀಯರಿಗೂ ಈ ನಗರಕ್ಕೂ ಸಂಬಂಧವಿದೆ. ಇತಿಹಾಸಪ್ರಸಿದ್ಧವಾದ ಈ ನಗರ ಸುಂದರ ನೈಸರ್ಗಿಕ ಸನ್ನಿವೇಶದಿಂದ ಕೂಡಿದ್ದು ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಕೇಂದ್ರವಾಗಿ ಬೆಳೆದಿದೆ. ಈ ನಗರಕ್ಕೆ ದಖ್ಖನ್ನಿನ ರಾಣಿ ಎಂಬ ಹೆಸರು ಅನ್ವರ್ಥವೆನಿಸಿದೆ. ಬ್ರಿಟಿಷರ ಕಾಲದಲ್ಲಿ ಸುಮಾರು ನೂರು ವರ್ಷಗಳ ಕಾಲ ಇದು ಮುಂಬಯಿ ಪ್ರಾಂತ್ಯದ ಮಳೆಗಾಲದ ರಾಜಧಾನಿಯಾಗಿತ್ತು.

ಪುಣೆ ದೀರ್ಘ ಕಾಲದಿಂದ ಪ್ರಮುಖ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರ. 1948 ರಲ್ಲಿ ಸ್ಥಾಪಿತವಾದ ಪುಣೆ ವಿಶ್ವವಿದ್ಯಾಲಯ ಗಣೇಶ ಖಿಂಡದಲ್ಲಿರುವ ಹಳೆಯ ಸರ್ಕಾರಿ ಭವನದಲ್ಲಿದೆ. ಕಲೆ, ವಿಜ್ಞಾನ, ಕೃಷಿ, ಎಂಜಿನಿಯರಿಂಗ್, ನ್ಯಾಯಶಾಸ್ತ್ರ, ವಾಣಿಜ್ಯ, ವೈದ್ಯ ಮುಂತಾದ ವಿಷಯಗಳಲ್ಲಿ ಶಿಕ್ಷಣ ನೀಡುವ 12 ಕಾಲೇಜುಗಳಿವೆ. 1917 ರಲ್ಲಿ ಸ್ಥಾಪಿತವಾದ ಭಂಡಾರಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಒಂದು ಪ್ರಮುಖ ಸಂಶೋಧನ ಸಂಸ್ಥೆ. ರಾಜ್ಯ ಸರ್ಕಾರದ ಅನೇಕ ಇಲಾಖೆಗಳ ಮುಖ್ಯ ಕಾರ್ಯಾಲಯಗಳು ಪುಣೆಯಲ್ಲಿವೆ. ರೇಸ್ ಕೋರ್ಸ್, ಪ್ರಸಾರ ಕೇಂದ್ರ ಮತ್ತು ಹವಾ ಸಮೀಕ್ಷಾಲಯ ಇವೆ. ನಗರದ ಪೂರ್ವದಲ್ಲಿ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ಆಡಳಿತದಲ್ಲಿರುವ ದಂಡಿನ ಪ್ರದೇಶವಿದೆ. ಭಾರತ ಸೈನ್ಯದ ದಕ್ಷಿಣ ಆಧಿಪತ್ಯದ ಮತ್ತು ಪುಣೆ ಉಪಕ್ಷೇತ್ರದ ಮುಖ್ಯ ಸ್ಥಾನ ಪುಣೆ. ಇಲ್ಲಿಗೆ 16 ಕಿಮೀ ದೂರದಲ್ಲಿರುವ ಖಡಕ್‌ವಾಸ್ಲಾದಲ್ಲಿರುವ ಭಾರತ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ಎಲ್ಲ ಕ್ಯಾಡೆಟ್‌ಗಳಿಗೆ ಆಧುನಿಕ ಯುದ್ಧ ವಿಧಾನದಲ್ಲಿ ತರಬೇತು ನೀಡಲಾಗುತ್ತದೆ. 4 ಕಿಮೀ ದೂರದಲ್ಲಿರುವ ಲೋಣವಾಲದಲ್ಲಿ ಭಾರತದ ನೌಕಾ ಮತ್ತು ಯಾಂತ್ರಿಕ ತರಬೇತು ಸಂಸ್ಥಾಪನೆಯಾದ ಐ.ಎನ್.ಎಸ್. ಶಿವಾಜಿ ಕಾಲೇಜ್ ಮತ್ತು ಅದರ ಅಂಗವಾದ ಎಂಜಿನಿಯರಿಂಗ್ ಕಾಲೇಜ್ ಇವೆ. ಪುಣೆಯಲ್ಲಿ ಇತರ ಪ್ರಮುಖ ಸಂಸ್ಥೆಗಳು ಯುದ್ಧ ಸಾಧನಗಳ ಅಧ್ಯಯನ ಸಂಸ್ಥೆ, ಕೃತಕ ಅಂಗ ಕೇಂದ್ರ, ರಾಷ್ಟ್ರೀಯ ರಸಾಯನ ವಿಜ್ಞಾನ ಪ್ರಯೋಗಶಾಲೆ ಮತ್ತು ಭಾರತೀಯ ಚಲನಚಿತ್ರ ಶಿಕ್ಷಣ ಸಂಸ್ಥೆ ಡೆಕ್ಕನ್ ಕಾಲೇಜು, ಖಡಕಿಯಲ್ಲಿ ಮದ್ದುಗುಂಡುಗಳ ಕಾರ್ಖಾನೆ ಇವೆ. ಕೆಲವೇ ಕಿಮೀ ದೂರದಲ್ಲಿರುವ ಪಿಂಪ್ರಿಯಲ್ಲಿ ಪೆನಿಸಿಲಿನ್ ಕಾರ್ಖಾನೆ ಇದೆ.

ಪುಣೆ ನಗರದಲ್ಲಿ ಅನೇಕ ದೇವಾಲಯಗಳೂ ವಸ್ತು ಸಂಗ್ರಹಾಲಯಗಳೂ ಚರ್ಚುಗಳೂ ಯೆಹೂದ್ಯರ ಆರಾಧನಾ ಮಂದಿರ ಮತ್ತು ಆಸ್ಪತ್ರೆಗಳೂ ಇವೆ. ಎಂಪ್ರಸ್ ಉದ್ಯಾನ, ಶಿವಾಜಿ ಪಾರ್ಕ್, ಮುಳಾ ನದಿಯ ಒಡ್ಡಿನ ಮೇಲೆ ಬಂಡ್ ಉದ್ಯಾನ ಮತ್ತು ಸಂಭಾಜಿ ಪಾರ್ಕ್ ಇವು ಇಲ್ಲಿಯ ಪ್ರಮುಖ ಉದ್ಯಾನಗಳು. ಪುಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳುಂಟು. ಪೇಶ್ವೆಗಳ ಕಾಲದ ಪ್ರಸಿದ್ಧ ಶನಿವಾರ ವಾಡೆ ಅರಮನೆಯ ಅವಶೇಷಗಳು ಮತ್ತು ಮಹಾತ್ಮಾಗಾಂಧಿಯವರನ್ನು 1942 ರಲ್ಲಿ ಬಂಧನದಲ್ಲಿಡಲಾಗಿದ್ದ ಆಗಾಖಾನ್ ಅರಮನೆ ಇವೆ. ಪುಣೆಯ ನೈರುತ್ಯ ಭಾಗದಲ್ಲಿ ದುರ್ಗಾ ಅಥವಾ ಪಾರ್ವತಿ ಗುಡ್ಡ ಇದೆ.

ಪುಣೆಯಲ್ಲಿ ಹತ್ತಿ ಗಿರಣಿ, ಕಾಗದ ಮತ್ತು ಸಕ್ಕರೆ ಕಾರ್ಖಾನೆಗಳು ಇವೆ. ನಗರದ ಸುತ್ತಮುತ್ತ ಅನೇಕ ಔದ್ಯೋಗಿಕ ಉಪನಗರಗಳು ಬೆಳೆದಿವೆ. ಬಗೆಬಗೆಯ ಸರಕುಗಳನ್ನು ತಯಾರಿಸುವ ಹಲವಾರು ಚಿಕ್ಕ ದೊಡ್ಡ ಕಾರ್ಖಾನೆಗಳು ಪುಣೆಯಿಂದ ಮುಂಬಯಿ, ಅಹಮದ್ ನಗರ, ಸೊಲ್ಲಾಪುರ ಮತ್ತು ಸತಾರಾಗಳಿಗೆ ಹೋಗುವ ಮಾರ್ಗಗಳಲ್ಲಿ ಸ್ಥಾಪಿತವಾಗಿವೆ. 1961 ರಲ್ಲಿ ಪಾನ್‌ಷೇಟ್ ಅಣೆಕಟ್ಟು ಒಡೆದಿದ್ದರಿಂದ ಹಳೆಯ ಪುಣೆಯ ಗಮನಾರ್ಹ ಭಾಗ ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು. ಹೊಸದಾಗಿ ನಿರ್ಮಿತವಾದ ಮನೆಗಳಿಂದ ಕೂಡಿರುವ ನಗರ ಭಾಗ ವಿಶಿಷ್ಟವಾಗಿ ಬೆಳೆಯುತ್ತಿದೆ.

ಪುಣೆ ಜಿಲ್ಲೆಯ ವಿಸ್ತೀರ್ಣ 15,625 ಚ.ಕಿಮೀ; ಜನಸಂಖ್ಯೆ 224224. ಈ ಜಿಲ್ಲೆ ತ್ರಿಕೋಣಾಕಾರವಾಗಿದೆ. ಪಶ್ಚಿಮದ ಸಹ್ಯಾದ್ರಿ ಗುಡ್ಡಗಳು ಅದರ ತಳ. ನೈರುತ್ಯದಲ್ಲಿ ಭೀಮಾ ಮತ್ತು ನೀರಾ ನದಿಗಳ ಸಂಗಮದ ಬಳಿಯ ಪ್ರದೇಶ ಅದರ ಅಗ್ರ. ಪಶ್ಚಿಮದ ನೆಲ ಅಲೆಅಲೆಯಾಗಿ ಏರಿಳಿಯುತ್ತದೆ. ಬೆನ್ನೇಣುಗಳಿಂದ ಕೂಡಿದ ಅನೇಕ ಗುಡ್ಡಗಳ ಸಾಲುಗಳು ಜಿಲ್ಲೆಯೊಳಗೆ ಪ್ರವೇಶಿಸುತ್ತವೆ. ಹೆಚ್ಚು ಮಳೆ ಬೀಳುವ ಪಶ್ಚಿಮದ ಎತ್ತರ ಪ್ರದೇಶ ಅರಣ್ಯಾವೃತ. ಅಲ್ಲಿಂದ ಆಗ್ನೇಯದ ಶುಷ್ಕ ಪ್ರದೇಶದ ಕಡೆಗೆ ಭೂಮಿ ಇಳಿಜಾರಾಗಿದೆ. ಈ ಪ್ರದೇಶ ಬರಕ್ಕೆ ತುತ್ತಾಗುವುದುಂಟು. ಮುಟಾ ಮತ್ತು ನೀರಾ ನದಿಗಳ ಕಾಲುವೆಗಳು ನೀರಾವರಿಗೆ ಉಪಯುಕ್ತವಾಗಿವೆ. ಪುಣೆ ಜಿಲ್ಲೆ ರಾಜ್ಯದ ಎರಡನೆಯ ದೊಡ್ಡ ಕೈಗಾರಿಕಾ ಕ್ಷೇತ್ರ. ಇಲ್ಲಿಯ ಕೆಲಸಗಾರರಲ್ಲಿ ಸುಮಾರು ಅರ್ಧದಷ್ಟು ಜನ ಕೃಷಿಯಲ್ಲಿ ತೊಡಗಿದ್ದಾರೆ. ಜೋಳ, ಬತ್ತ ಮತ್ತು ಸಜ್ಜೆ ಮುಖ್ಯ ಧಾನ್ಯಗಳು. ಕಬ್ಬು ಇನ್ನೊಂದು ಪ್ರಮುಖ ಬೆಳೆ. ಇದರಿಂದ ಹೇರಳವಾಗಿ ಬೆಲ್ಲ ತಯಾರಾಗುತ್ತದೆ. ಜುನ್ನಾರ್ ಎಂಬುದು ಹಣ್ಣು ಮತ್ತು ತರಕಾರಿಗಳ ಮಾರಾಟದ ಕೇಂದ್ರ. ಮಧ್ಯ ಮತ್ತು ದಕ್ಷಿಣ ರೈಲ್ವೆಗಳ ರೈಲು ಮಾರ್ಗಗಳು ಜಿಲ್ಲೆಯೊಳಗಿಂದ ಹಾದು ಹೋಗುತ್ತವೆ.

ಜಿಲ್ಲೆಯ ಧಾರ್ಮಿಕ ಮತ್ತು ಐತಿಹಾಸಿಕ ಮಹತ್ವದ ಹಾಗೂ ಪ್ರವಾಸಿ ಕೇಂದ್ರಗಳಲ್ಲಿ ಹಲವು ಸಹ್ಯಾದ್ರಿ ಗುಡ್ಡಗಳಲ್ಲಿವೆ. ಲೋಣವಾಲ, ಶಿವನೇರಿ ಮೊದಲಾದ ಜಿಲ್ಲೆಗಳು ಪ್ರವಾಸಿ ಆಕರ್ಷಣೆಗಳು. ಶಿವನೇರಿ ಶಿವಾಜಿಯ ಜನ್ಮಸ್ಥಳ. ಜ್ಯೋತಿರ್ಲಿಂಗದ ಗುಡಿ ಇರುವ ಭೀಮಾಶಂಕರ, ಸಂತ ತುಕಾರಾಮನ ಜನ್ಮಸ್ಥಳವಾದ ದೇಹು, ಸಂತ ಜ್ಞಾನೇಶ್ವರನ ಜನ್ಮಸ್ಥಳವಾದ ಅಳಂದಿ ಮೊದಲಾದವು ಧಾರ್ಮಿಕ ಮಹತ್ವವುಳ್ಳವು. ಕಾರ್ಲಾ ಮತ್ತು ಭಾಜಾ ಗುಹೆಗಳು ಬೌದ್ಧ ಶಿಲ್ಪಕಲಾಕೇಂದ್ರಗಳು.

ಪುಣೆ ವಿಭಾಗದಲ್ಲಿ ಪುಣೆ, ಅಹಮದ್ ನಗರ, ಜಳಗಾಂವ್, ಧುಳಿಯಾ, ಠಾಣಾ, ನಾಸಿಕ್ ಮತ್ತು ಕೊಲಾಬಾ ಜಿಲ್ಲೆಗಳಿವೆ. (ಜಿ.ಕೆಯು.)

**ಪುತ್ತೂರು:** ದಕ್ಷಿಣ ಕನ್ನಡ ಜಿಲ್ಲೆಯ ಮಲೆನಾಡು ಭಾಗವನ್ನೊಳಗೊಂಡ ಐದು ಒಳನಾಡು ತಾಲ್ಲೂಕುಗಳ ಪೈಕಿ ಒಂದು; ಈ ತಾಲ್ಲೂಕಿನ ಆಡಳಿತ ಕೇಂದ್ರ. ಐದು ದಶಕಗಳ ಹಿಂದೆ ಈ ತಾಲ್ಲೂಕಿಗೆ ಉಪ್ಪಿನಂಗಡಿ ತಾಲ್ಲೂಕು ಎಂಬ ಹೆಸರಿತ್ತು. ಪುತ್ತೂರು ಪಟ್ಟಣ ಬೆಳೆಯುತ್ತಾ ಬಂದುದರಿಂದ 1927 ರಲ್ಲಿ ಅದನ್ನೇ ತಾಲ್ಲೂಕಿನ ಮುಖ್ಯ ಕೇಂದ್ರವಾಗಿ ಮಾಡಿ ಅದರ ಹೆಸರನ್ನೇ ತಾಲ್ಲೂಕಿಗೂ ಕೊಡಲಾಯಿತು. 1954 ಜುಲೈ 1 ರಂದು ಬೆಳ್ತಂಗಡಿ, 1959 ರ ಅಕ್ಟೋಬರ್ 1 ರಂದು ಬಂಟ್ವಾಳ ಮತ್ತು 1966 ರ ಏಪ್ರಿಲ್ 1 ಸೂಳ್ಯ ತಾಲ್ಲೂಕುಗಳು ನಿರ್ಮಾಣವಾದಾಗ ಪುತ್ತೂರು ತಾಲ್ಲೂಕಿನಿಂದ ಕೆಲವು ಭಾಗಗಳನ್ನು ಹೊಸ ತಾಲ್ಲೂಕುಗಳಿಗೆ ವರ್ಗಾಯಿಸಲಾಯಿತು. ಹೀಗಾಗಿ, ಹಿಂದೆ 184 ಗ್ರಾಮಗಳು ಮತ್ತು 3,172 ಚ.ಕಿಮೀ ವಿಸ್ತೀರ್ಣ ಉಳ್ಳದ್ದಾಗಿದ್ದು ಜಿಲ್ಲೆಯ ಅತ್ಯಂತ ದೊಡ್ಡ ತಾಲ್ಲೂಕಾಗಿದ್ದ ಪುತ್ತೂರು ಈಗ 67 ಗ್ರಾಮಗಳಿಂದ ಕೂಡಿ 1,004 ಚ.ಕಿಮೀ ವಿಸ್ತೀರ್ಣವುಳ್ಳದ್ದಾಗಿದೆ. ಈ ತಾಲ್ಲೂಕಿನ ಜನಸಂಖ್ಯೆ 1,56,266.

ಮೇಲ್ಮೈಲಕ್ಷಣ: ಮಲೆನಾಡಿನ ಒಂದು ಭಾಗವಾದ ತಾಲ್ಲೂಕಿನ ಹೆಚ್ಚು ಭಾಗ ಬೆಟ್ಟಗುಡ್ಡಗಳಿಂದ ಕೂಡಿದೆ. ಪೂರ್ವದಲ್ಲಿರುವ ಪಶ್ಚಿಮ ಘಟ್ಟಗಳ ಇಳಿಜಾರಿನಲ್ಲಿರುವ ಬೆಟ್ಟಗಳ ಪೈಕಿ ಅಮ್ಮೆಡಿಕಲ್ ಅತ್ಯಂತ ಎತ್ತರವಾದ್ದು. (1,293 ಮೀ). ಪಶ್ಚಿಮಕ್ಕೆ ಸಾಗಿದಂತೆ ಗುಡ್ಡಗಳು ಕಂಡುಬರುತ್ತವೆ. ನೆಲ ಏರುತಗ್ಗಾಗಿದೆ. ಜಿಲ್ಲೆಯ ಮುಖ್ಯ ನದಿ ನೇತ್ರಾವತಿ. ಕುಮಾರಧಾರಾ ನದಿ ಇದನ್ನು ಉಪ್ಪಿನಂಗಡಿಯಲ್ಲಿ ಕೂಡುತ್ತದೆ. ತಾಲ್ಲೂಕಿನ ಇನ್ನೊಂದು ನದಿ ಗೌರಿ ಹೊಳೆ. ಇದು ಕಡಬಕ್ಕೆ ಪಶ್ಚಿಮದಲ್ಲಿ ಕುಮಾರಧಾರಾ ನದಿಯಲ್ಲಿ ಸಂಗಮಿಸುತ್ತದೆ. ಪುತ್ತೂರು ತಾಲ್ಲೂಕಿನಲ್ಲಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ ಮಳೆ 4,40 ಸೆಂಮೀ.

ಭೂರಚನೆ: ತಾಲ್ಲೂಕಿನಲ್ಲಿ ಜಂಬುಮಣ್ಣಿನ ನೆಲವೇ ಹೆಚ್ಚು. ಶಿರಾಡಿ ಘಾಟ್ ಪ್ರದೇಶದಲ್ಲಿ ಹಾರ್ನ್‌ಬ್ಲೆಂಡ್ ಶಿಲೆ ಇದೆ. ತಾಲ್ಲೂಕಿನ ಸುಂಕದಕಟ್ಟೆಯ ಸುತ್ತಣ ಪ್ರದೇಶದಲ್ಲಿ ಅರಬಗುಡ್ಡ, ಬೊರ್ಕ್ಯಗುಡ್ಡ, ಬೂತಾಲಗುಡ್ಡ, ಒಡತ್ತುಖಗಳಲ್ಲಿ ಉತ್ತಮ ದರ್ಜೆಯ ಕಬ್ಬಿಣದ ಅದಿರು ನಿಕ್ಷೇಪಗಳಿವೆ. ಉಪ್ಪಿನಂಗಡಿ-ಸುಬ್ರಹ್ಮಣ್ಯ ರಸ್ತೆಯಲ್ಲಿ ಸಂಪ್ಯಾಡಿಯ ಬಳಿ ಕುರಂದಕಲ್ಲು ಮತ್ತು ಕ್ಯಾನೈಟ್ ಸಿಗುತ್ತದೆ. ಮೂಡ್ನೂರು ಹೊಳೆ ಹರಿಯುವ ಕಾವು ಎಂಬಲ್ಲಿ ರೇವೆ ಚಿನ್ನದ ರೇಕುಗಳಿವೆ. ನೈರುತ್ಯ ಭಾಗದಲ್ಲಿ ಹರಿಯುವ ಸೀರ್‌ಹೊಳೆಯಲ್ಲಿ ಬೆಟ್ಟಂಪಾಡಿ ಎಂಬಲ್ಲಿರುವ ಬೆಂದ್ರ್ ತೀರ್ಥ ಎಂಬ ಬಿಸಿನೀರಿನ ಕೊಳದಲ್ಲಿ ಗಂಧಕಾಂಶವಿದೆ. ಪುತ್ತೂರಿನಿಂದ 19 ಕಿಮೀ ದೂರದಲ್ಲಿ (ಉಪ್ಪಿನಂಗಡಿ-ಬಿಸಲೆಘಾಟ್ ರಸ್ತೆಯಲ್ಲಿ) ಹಿರೆಬಂಡಾಡಿ ಗ್ರಾಮದಲ್ಲಿ ಮಲೆನಾಡಿನ ಹಸುರಿನ ನಡುವೆ ಹುದುಗಿರುವ ಕೆಮ್ಮಾರ್ ಸರೋವರ ಸುಂದರವಾಗಿದೆ. ಅದೊಂದು ವಿಶ್ರಾಂತಿಧಾಮ.

ಕೃಷಿ: ತಾಲ್ಲೂಕಿನ ಒಟ್ಟು ಭೂಮಿ 99,693 ಹೆ. ಇದರಲ್ಲಿ 30.317 ಹೆ. ಅರಣ್ಯಾವೃತ. ಇಲ್ಲಿ ತೇಗ ಮುಖ್ಯವಾದದ್ದು. ಕರಿಮರ, ಮತ್ತಿ, ಕೀರಲ್‌ಬೋಗಿ ಮುಂತಾದ ಮರಗಳೂ ಇವೆ. 5,120 ಹೆ. ವ್ಯವಸಾಯದ ಭೂಮಿಯ ವಿಸ್ತೀರ್ಣ 32,607 ಹೆ. ಸಾಗುವಳಿ ವಿಶೇಷವಾಗಿ ಮಳೆಯನ್ನೇ ಅವಲಂಬಿಸಿದೆ. ಕೆಲವೆಡೆಗಳಲ್ಲಿ ಬಾವಿಗಳಿಂದ ನೀರಾವರಿ ಮಾಡಿಕೊಳ್ಳಲಾಗುತ್ತದೆ. ಗೌರಿ ಹೊಳೆಗೆ ಅಣ್ಣೆಕಟ್ಟುವ ಯೋಜನೆಯೊಂದಿದೆ. ನದಿಗಳ ಬಯಲುಗಳಲ್ಲಿ ಮತ್ತು ಕಣಿವೆಗಳಲ್ಲಿ ಬತ್ತ, ತೆಂಗು ಒಳನಾಡಿನ ಕಣಿವೆಗಳಲ್ಲಿ ಅಡಕೆಯೂ ಏರುನೆಲದಲ್ಲಿ ಗೇರುಬೀಜವೂ (ಗೋಡಂಬಿ) ಬೆಳೆಯುತ್ತವೆ. ಮೆಣಸು, ಬಾಳೆ, ಹಲಸು, ರಾಗಿ, ತೊಗರಿ ಇತರ ಉತ್ಪನ್ನಗಳು. ಈಚೆಗೆ ಕೋಕೋ ಮತ್ತು ರಬ್ಬರ್ ಬೆಳೆಯುತ್ತಿದ್ದಾರೆ.

ತಾಲ್ಲೂಕಿನ ಮುಖ್ಯ ಉದ್ಯಮ ಬೀಡಿ ಕಟ್ಟುವುದು. ಮೈಸೂರು-ಮಂಗಳೂರು ಹೆದ್ದಾರಿ ಪುತ್ತೂರಿನ ಮೂಲಕ ಹಾದು ಹೋಗುತ್ತದೆ. ಪುತ್ತೂರಿನಿಂದ ಕಾಸರಗೋಡು, ವಿಟ್ಲ, ಸವಣೂರು, ಸುಬ್ರಹ್ಮಣ್ಯ, ಉಪ್ಪಿನಂಗಡಿಗೆ ರಸ್ತೆಗಳಿವೆ. ಹಾಸನ-ಮಂಗಳೂರು ರಸ್ತೆ ಹಾಗೂ ರೈಲು ಮಾರ್ಗಗಳು ಪುತ್ತೂರು ತಾಲ್ಲೂಕಿನ ಶಿರಾಡಿ ಘಾಟಿನ ಮೂಲಕ ಹಾದು ಹೋಗುತ್ತವೆ. ತಾಮ್ರದ ತಯಾರಿಕೆ, ಜೇನುಸಾಕಣೆ, ಮರಕೊಯ್ಯುವ ಉದ್ಯಮ, ಗೇರು ಬೀಜ ಸಂಸ್ಕರಣೆ ಹಾಗೂ ಹಲವಾರು ಗುಡಿಗಾರಿಕೆಗಳಿವೆ.

ಪುತ್ತೂರು ತಾಲ್ಲೂಕಿನ ಕಡಬ ಗ್ರಾಮ ವಿಜಯನಗರ ಕಾಲದಲ್ಲಿ ಸುತ್ತಣ ಪ್ರದೇಶದ ಆಡಳಿತ ಕೇಂದ್ರವಾಗಿತ್ತು. ಇಲ್ಲಿ ಗಣೇಶ ಮತ್ತು ನೀಲಕಂಠ ದೇವಾಲಯಗಳಿವೆ. ಸವಣೂರು ಹಿಂದೆ ಜೈನರ ಒಂದು ಕೇಂದ್ರವಾಗಿತ್ತು. ಪುತ್ತೂರಿನ ಈಶಾನ್ಯಕ್ಕೆ 13 ಕಿಮೀ

ದೂರದಲ್ಲಿ ಹಳೆಯ ಪುಡೊತ್ತು ಚಂದ್ರನಾಥ ಬಸದಿ ಇದೆ. ಉಪ್ಪಿನಂಗಡಿ ಹಿಂದೆ ತಾಲ್ಲೂಕಿನ ಮುಖ್ಯ ಸ್ಥಳವಾಗಿತ್ತು. ಆಗ ಈ ತಾಲ್ಲೂಕಿಗೆ ಈ ಊರಿನ ಹೆಸರೇ ಇತ್ತು. ಉಪ್ಪಿನಂಗಡಿಯಲ್ಲಿರುವ ದೇವಾಲಯಗಳು ಲಕ್ಷ್ಮೀರಮಣ ಮತ್ತು ಸಹಸ್ರ ಲಿಂಗೇಶ್ವರ. ಕೊಯ್ಲ ಒಂದು ಪ್ರಮುಖ ಹೈನು ಕೇಂದ್ರ. ಮಂಗಳೂರಿನಿಂದ ಆಗ್ನೇಯಕ್ಕೆ 52 ಕಿಮೀ ದೂರದಲ್ಲಿದೆ. ವಿಸ್ತೀರ್ಣ 9.84 ಚ.ಕಿಮೀ. ಸಮುದ್ರಮಟ್ಟದಿಂದ ಸು. 111 ಮೀ ಎತ್ತರದಲ್ಲಿರುವ ಈ ಸ್ಥಳದ ಸುತ್ತಲೂ ಏರುಗುಡ್ಡಗಳಿವೆ. ಇದು ಜಿಲ್ಲೆಯ ಒಳನಾಡಿನ ದೊಡ್ಡ ವ್ಯಾಪಾರ ಮತ್ತು ಶಿಕ್ಷಣ ಕೇಂದ್ರ. ಮಂಗಳೂರು–ಹಾಸನ ರೈಲು ಮಾರ್ಗದಲ್ಲಿ ಪುತ್ತೂರು ಒಂದು ಮುಖ್ಯ ನಿಲ್ದಾಣ. ಜನಸಂಖ್ಯೆ 48070 (2001). ತಾಲ್ಲೂಕು ಕೇಂದ್ರವಾದ ಪುತ್ತೂರಿಗೆ ಇದರಿಂದ ಮಂಗಳೂರು ಮತ್ತು ಕರ್ನಾಟಕದ ಇತರ ಭಾಗಗಳೊಡನೆ ರೈಲುಸಂಪರ್ಕ ಲಭ್ಯವಿದೆ. (ಎಂ.ವಿ.)

**ಪುದುಚೇರಿ:** ಭಾರತ ಗಣರಾಜ್ಯದ ಕೇಂದ್ರಾಡಳಿತ ಪ್ರದೇಶ; ಅದರ ಒಂದು ಜಿಲ್ಲೆ ಮತ್ತು ಆ ಪ್ರದೇಶದ ಮುಖ್ಯ ಪಟ್ಟಣ. ಪುದುಚೇರಿ ಎಂಬುದು ತಮಿಳಿನ ಪುದು (ಹೊಸ) ಮತ್ತು ಚೇರಿ (ಗ್ರಾಮ) ಎಂಬ ಪದಗಳಿಂದ ಕೂಡಿದೆ. ಪಾಂಡಿ ಎಂಬುದು ಪುದು ಎಂಬುದರ ಅಪಭ್ರಂಶ. ಪುದುವೈ, ಪಾಂಡಿಚೇರಿ ಹಾಗೂ ಪಾಂಡಿ ಎಂದು ಕರೆಯುವುದುಂಟು. ಪಾಂಡಿಚೇರಿ ಎಂಬುದು ಪಾಶ್ಚಾತ್ಯೀಕೃತ ಹೆಸರು. ಪಾಂಡಿಚೇರಿ ಪ್ರದೇಶದ ವಿಸ್ತೀರ್ಣ 480 ಚ.ಕಿಮೀ. ಜನಸಂಖ್ಯೆ 974,345. ಈ ಪ್ರದೇಶಕ್ಕೆ ಕೋರಮಂಡಲ (ಪೂರ್ವ) ತೀರದ ಪುದುಚೇರಿಯೇ ಅಲ್ಲದೆ, ಕಾರೈಕಲ್, ಯಾನಾಂ ಮತ್ತು ಮಾಹೆ ಇವು ಸೇರಿವೆ. ಪುದುಚೇರಿ ಜಿಲ್ಲೆ 290 ಚ.ಕಿಮೀ ವಿಸ್ತಾರವಾಗಿದೆ. ಯಾನಾಂ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಗೋದಾವರಿ ನದಿಯ ಮುಖಜ ಭೂಮಿಯಲ್ಲಿದೆ. ಫ್ರೆಂಚರು ಇದನ್ನು 1731 ರಲ್ಲಿ ಪಡೆದುಕೊಂಡರು. ಇದರ ವಿಸ್ತೀರ್ಣ 20 ಚ.ಕಿಮೀ. ಕಾರೈಕಲ್ ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ ಕಾವೇರಿಯ ಮುಖಜ ಭೂಮಿಯಲ್ಲಿದೆ. 1738 ರಲ್ಲಿ ತಂಜಾವೂರಿನ ದೊರೆ ಸಾಹುಜಿ ಫ್ರೆಂಚ್ ಈಸ್ಟ್ ಇಂಡಿಯ ಕಂಪನಿಗೆ ಇದನ್ನು ನೀಡಿದ. ಕಾರೈಕಲ್‌ನ ವಿಸ್ತೀರ್ಣ 161 ಚ.ಕಿಮೀ. ಮಾಹೆ ಇರುವುದು ಪಶ್ಚಿಮ ಕರಾವಳಿಯಲ್ಲಿ ಕೇರಳದ ನಡುವೆ. ಇದು 9 ಚ.ಕಿಮೀ ವಿಸ್ತಾರವಾಗಿದೆ. ಇದನ್ನು ಬಡಗರ ರಾಜ 1721 ರಲ್ಲಿ ಫ್ರೆಂಚರಿಗೆ ಒಪ್ಪಿಸಿದ್ದ. ಪುದುಚೇರಿ, ಕಾರೈಕಲ್ ಹಾಗೂ ಯಾನಾಂ ಇವುಗಳಿಗೆ ಭಿನ್ನವಾಗಿ ಮಾಹೆ ಬೆಟ್ಟಗುಡ್ಡಗಳ ಹಾಗೂ ಅರಣ್ಯಗಳ ಪ್ರದೇಶ. ಇಲ್ಲಿ ತೆಂಗಿನ ಬೆಳೆ ಅಧಿಕ.

ಆಡಳಿತ : ಪುದುಚೇರಿಯ 4 ಜಿಲ್ಲೆಗಳು: ಪುದುಚೇರಿ, ಕಾರೈಕಲ್, ಯಾನಾಂ ಮತ್ತು ಮಾಹೆ. ಪುದುಚೇರಿಯ ಆಡಳಿತಕ್ಕೆ ಲೆಫ್ಟಿನೆಂಟ್ ಗವರ್ನರ್ ಮುಖ್ಯರು. ಇವರಿಗೆ ಆಡಳಿತದಲ್ಲಿ ನೆರವು ನೀಡಲು ಮಂತ್ರಿಮಂಡಲ ಇರುತ್ತದೆ. ಮಂತ್ರಿಮಂಡಲದ ನಾಯಕ ಮುಖ್ಯಮಂತ್ರಿ. 30 ಮಂದಿ ಸದಸ್ಯರ ವಿಧಾನಸಭೆಗೆ ಮಂತ್ರಿಮಂಡಲ ಆಡಳಿತ ವಿಚಾರಗಳಲ್ಲಿ ಹೊಣೆಯಾಗಿರುತ್ತದೆ.

ಮಾತೃ ಮಂದಿರ, ಆರೋವಿಲಿ

ಆರ್ಥಿಕತೆ : ಈ ಪ್ರದೇಶದ ಹೆಚ್ಚು ಭಾಗ ಕಡಲ ತೀರ. ಶೇ. 45 ಮಂದಿಯ ಕಸಬು ವ್ಯವಸಾಯ. ಮುಖ್ಯ ಬೆಳೆಗಳು ಬತ್ತ, ಹತ್ತಿ, ಜೋಳ, ಬಾಜ್ರ, ಮೆಕ್ಕೆಜೋಳ, ಕಬ್ಬು, ಕಡಲೆಕಾಯಿ, ಎಣ್ಣೆ ಬೀಜಗಳು, ತೆಂಗು, ತಂಬಾಕು ಮತ್ತು ಮೆಣಸಿನಕಾಯಿ. ಮೀನುಗಾರಿಕೆ ಇನ್ನೊಂದು ಕಸಬು.

ಸಾರಿಗೆ : ವಿಳ್ಳುಪ್ಪುರಂ ಜಂಕ್ಷನ್‌ನಿಂದ ಪುದುಚೇರಿಗೆ 1879 ರಲ್ಲಿ ರೈಲು ಮಾರ್ಗವನ್ನು ನಿರ್ಮಿಸಲಾಯಿತು. ದರ ಉದ್ದ 38.4 ಕಿಮೀ.

ಪುದುಚೇರಿ ಪಟ್ಟಣ ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಪೂರ್ವ ಅಂಚಿನಲ್ಲಿ ಬಂಗಾಲ ಕೊಲ್ಲಿಯ ಸಣ್ಣ ನದಿಯೊಂದರ ಮುಖದ ಬಳಿಯ ಬೆಟ್ಟ ಸಾಲುಗಳ ಆಗ್ನೇಯ ಭಾಗದಲ್ಲಿದೆ. ಇದು ಚೆನ್ನೈನಿಂದ ದಕ್ಷಿಣಕ್ಕೆ ರೈಲುಮಾರ್ಗದಲ್ಲಿ 196 ಕಿಮೀ ದೂರದಲ್ಲಿದೆ. 1954 ರಿಂದ ಇದು ಒಕ್ಕೂಟ ಪ್ರದೇಶದ ರಾಜಧಾನಿ. ಇದರ ಜನಸಂಖ್ಯೆ 2,03,065.

ಕಡಲಿನ ದಂಡೆಯ ಮೇಲಿರುವ ಪುದುಚೇರಿಯ ನೆಲ ಸಮತಟ್ಟಾಗಿದ್ದು ಹೆಚ್ಚು ಮರಳಿನಿಂದ ಕೂಡಿದೆ. ಸಮುದ್ರ ಪಟ್ಟಣಕ್ಕೆ ಕೆಲವೇ ಅಡಿಗಳ ಎತ್ತರದಲ್ಲಿದೆ. ಪ್ರಮುಖ ರಸ್ತೆಗಳು ಸಮಾಂತರದಲ್ಲಿವೆ. ಪುದುಚೇರಿ ಬಂದರಿನಲ್ಲಿ ಹಡಗುಗಳು ನಿಲ್ಲಲು ಅವಕಾಶವಿಲ್ಲ. ಬಂದರಿಗೆ ಎರಡು ಮೂರು ಕಿಮೀ ದೂರದಲ್ಲಿ ಹಡಗುಗಳು ನಿಲ್ಲುತ್ತವೆ. ಬಂದರಿನಿಂದ ಸಮುದ್ರದ ಕಡೆಗೆ ಚಾಚಿರುವ ಹಡಗುಕಟ್ಟೆ ಜನಸಂಚಾರಕ್ಕೂ ಹಡಗಿನಿಂದ ಸರಕುಗಳನ್ನು ಇಳಿಸಿಕೊಳ್ಳುವುದಕ್ಕೂ ಅನುಕೂಲವಾಗಿದೆ. 1960 ರಲ್ಲಿ ಹೊಸ ಹಡಗುಕಟ್ಟೆಯೊಂದನ್ನು ನಿರ್ಮಿಸಲಾಯಿತು. ಪಟ್ಟಣದಲ್ಲಿ ಕಪೂಚಿಯನ್ ಪಾದ್ರಿಗಳು ಸ್ಥಾಪಿಸಿದ್ದ ರೋಮನ್ ಕ್ಯಾತೊಲಿಕ್ ಚರ್ಚ್, ಅರವಿಂದಾಶ್ರಮ, ಮದರಾಸು ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳಿವೆ. ಆರೋವಿಲಿ ಪ್ರಮುಖ ಆಕರ್ಷಣೆ. (ವಿ.ಜಿ.ಕೆ.)

**ಪುರಾತನ ಶಿಲಾಯುಗ:** ಮಾನವ ಭೂಮಿಯ ಮೇಲೆ ಕಾಣಿಸಿಕೊಂಡ ಆದಿಕಾಲದಲ್ಲಿ ಆಹಾರ ಸಂಗ್ರಹಣಾದಿ ಅವಶ್ಯಕ ಕಾರ್ಯ ನಿರ್ವಹಣೆಗೆ ಕಲ್ಲಿನ ಒರಟಾದ ಆಯುಧಗಳನ್ನು ತಯಾರಿಸಿ ಬಳಸುತ್ತಿದ್ದ ದೀರ್ಘಕಾಲ (ಪೇಲಿಯೋಲಿತಿಕ್ ಏಜ್). ಮಾನವ ಮೊದಮೊದಲು ಇತರ ಪ್ರಾಣಿಗಳಲ್ಲೊಬ್ಬನಾಗಿ ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುತ್ತಿದ್ದ ಆಹಾರ ಪದಾರ್ಥಗಳನ್ನು ಅವುಗಳಂತೆಯೇ ಸಂಗ್ರಹಿಸಿ ಜೀವನ ನಡೆಸುತ್ತಿದ್ದ. ಆದರೆ ಮಾನವನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸಿದ ಲಕ್ಷಣವೆಂದರೆ ಅವು ತಮ್ಮ ರಕ್ಷಣೆ ಮತ್ತು ಆಹಾರ ಸಂಪಾದನೆಗೆ ದೇಹದಲ್ಲಿಯೇ ಸಲಕರಣೆಗಳನ್ನು ಹೊಂದಿದ್ದರೆ, ಮಾನವ ತನ್ನ ಶರೀರಕ್ಕೆ ಸೇರದ ಬಾಹ್ಯ ಆಯುಧ ಉಪಕರಣಗಳಿಂದ ತನ್ನ ಕಾರ್ಯಗಳನ್ನು ಸಾಧಿಸಬೇಕಾಗಿತ್ತು. ಈ ಕಾರಣದಿಂದಲೇ ಮಾನವ ಆಯುಧೋಪಕರಣಗಳ ತಯಾರಿಕೆಯಲ್ಲಿ ತೊಡಗಿ ಕ್ರಮೇಣ ಗಳಿಸಿದ ವಿವಿಧ ಅನುಭವಗಳಿಂದ ತನ್ನ ಬುದ್ಧಿಶಕ್ತಿಯನ್ನು ಬೆಳೆಸಿಕೊಂಡು ಪ್ರಗತಿಯನ್ನು ಸಾಧಿಸಿದ. ಈ ಪ್ರಗತಿಯ ಅಧ್ಯಯನವೇ ಮಾನವನ ಪ್ರಾಗಿತಿಹಾಸ, ಅದರಲ್ಲಿ ಸಸ್ಯಮೂಲ ಆಹಾರದ ಸಂಗ್ರಹಣೆಗೆ, ಪ್ರಾಣಿ ಜನ್ಯ ಆಹಾರದ ಬೇಟೆಗಳಿಗೆ ಒರಟಾದ ಕಲ್ಲಿನ ಆಯುಧಗಳನ್ನು ಮಾನವ ಉಪಯೋಗಿಸುತ್ತಿದ್ದ ಹಂತವನ್ನು ಪುರಾತನ ಶಿಲಾಯುಗವೆಂದು ಕರೆಯಲಾಗಿದೆ. ಮಾನವ ಮೊತ್ತಮೊದಲಿಗೆ ಭೂಮಿಯ ಮೇಲೆ ಕಾಣಿಸಿಕೊಂಡಂದಿನಿಂದ ಅವನು ಆಹಾರ ಸಂಗ್ರಹಣೆಯಿಂದ ಹೊಟ್ಟೆ ಹೊರೆಯುತ್ತಿದ್ದಷ್ಟು ಕಾಲ ಈ ವಿಭಾಗದ ಮಿತಿಗೆ ಸೇರುತ್ತದೆ. ಇದರ ವ್ಯಾಪ್ತಿ ಹತ್ತು ಲಕ್ಷ ವರ್ಷಗಳೆಂದು ಪುರಾತತ್ತ್ವಜ್ಞರು ಇತ್ತೀಚಿನವರೆಗೂ ಭಾವಿಸಿದ್ದರು; ಆದರೆ ಅದು ಸುಮಾರು ಇಪ್ಪತ್ತೈದು ಲಕ್ಷ ವರ್ಷಗಳಷ್ಟು ಕಾಲ ವಿಸ್ತರಿಸಿತ್ತೆಂಬುದು ಆಧುನಿಕ ವೈಜ್ಞಾನಿಕ ವಿಧಾನಗಳಿಂದ ಈಗ ತಿಳಿದುಬಂದಿದೆ.

ಭೂವೈಜ್ಞಾನಿಕರು ಭೂಮಿಯ ಇತಿಹಾಸವನ್ನು ಆರ್ಕಿಯೊಜೋಯಿಕ್; ಪೇಲಿಯೋಜೋಯಿಕ್, ಮೆಸೊಜೋಯಿಕ್ ಮತ್ತು ಸೆನೋಜೋಯಿಕ್ ಎಂಬ ನಾಲ್ಕು ಪರ್ವಗಳಾಗಿ ವಿಂಗಡಿಸಿದ್ದಾರೆ. ಇವುಗಳಲ್ಲಿ ಕೊನೆಯದಾದ ಸೆನೋಜೋಯಿಕ್ ಪರ್ವವನ್ನು ಪ್ಲಿಯೋಸೀನ್ ಮತ್ತು ಪ್ಲೀಸ್ಟೊಸೀನ್ ಎಂಬ ಎರಡು ಯುಗಗಳಾಗಿ ವಿಂಗಡಿಸಲಾಗಿದೆ. ಮಾನವನ ಮೊದಮೊದಲ ಚಟುವಟಿಕೆಗಳು ಪ್ಲೀಸ್ಟೊಸೀನ್ ಯುಗದಲ್ಲಿ ಕಂಡುಬರುತ್ತವೆ. ಈ ಯುಗದುದ್ದಕ್ಕೂ ರೂಢಿಯಲ್ಲಿದ್ದ ಸಂಸ್ಕೃತಿಗೆ ಪುರಾತನ ಶಿಲಾಯುಗ ಸಂಸ್ಕೃತಿ ಎಂದು ಹೆಸರಾಗಿದೆ. ಪ್ಲೀಸ್ಟೊಸೀನ್ ಯುಗದ ವೈಶಿಷ್ಟ್ಯವೆಂದರೆ ಅವರೆಗೂ ಹೆಚ್ಚು ಕಡಿಮೆ ಒಂದೇ ರೀತಿಯಾಗಿದ್ದ ವಾಯುಗುಣ ಆ ಕಾಲದಲ್ಲಿ ಬಹಳ ಏರುಪೇರಾಯಿತು. ವಾಯುಗುಣದ ಈ ವೈಪರೀತ್ಯಗಳ ಕಾಲವನ್ನು ಹಿಮಯುಗ ಮತ್ತು ಅಂತರ್ಹಿಮಯುಗಗಳೆಂದು ಕರೆಯಲಾಗಿದೆ. ಯೂರೋಪಿನಲ್ಲಿ ಪ್ಲೀಸ್ಟೊಸೀನ್ ಯುಗದಲ್ಲಿ ಇಂಥ ನಾಲ್ಕು ಹಿಮಯುಗಗಳನ್ನು ಇತರ ಉಷ್ಣವಲಯ ಪ್ರದೇಶಗಳಲ್ಲಿ ಅವುಗಳ ಸಮಕಾಲೀನವಾದ ವರ್ಷಾಯುಗಗಳನ್ನೂ (ಪ್ಲೂವಿಯಲ್) ಗುರುತಿಸಲಾಗಿದೆ. ಪ್ಲೀಸ್ಟೊಸೀನ್ ಯುಗದುದ್ದಕ್ಕೂ ಪ್ರಪಂಚದ ವಿವಿಧ ಎಡೆಗಳಲ್ಲಿ ಮಾನವ ಕಾಣಿಸಿಕೊಂಡು ಹಲವು ರೀತಿಯ ಕಂದಮೂಲ ಫಲಗಳ ಸಂಗ್ರಹಣೆಯಿಂದಲೂ ಪ್ರಾಣಿಗಳ ಬೇಟೆಯಿಂದಲೂ ಜೀವನ ನಡೆಸುತ್ತಿದ್ದುದರಿಂದ ಈ ಯುಗವನ್ನು ಆದಿಮಾನವಯುಗ ಅಥವಾ ಪುರಾತನ ಶಿಲಾಯುಗವೆಂದು ಕರೆಯುವುದು ಸಹಜವಾಗಿದೆ.

ಅಂಥ ಬದಲಾವಣೆಗಳ ವಿವಿಧ ಹಂತಗಳ ಸಾಕ್ಷ್ಯಗಳು ಪಳೆಯುಳಿಕೆಗಳ ರೂಪದಲ್ಲಿ ದೊರಕುವುದಿಲ್ಲ. ಆದ್ದರಿಂದ ಜೀವನ ನಿರ್ವಹಣೆಗಾಗಿ ಮಾನವ ಆಯುಧ ತಯಾರಿಕೆಯಲ್ಲಿ ತೊಡಗಿದಂದು ಮಾನವನ ಹುಟ್ಟು ಆಯಿತೆಂದು ಹೇಳುತ್ತಾರೆ. ಅಂದರೆ ಮೊದಲ

ಆಯುಧ ತಯಾರಿಸಿದ ಜೀವಿ ಮಾನವ. ಆಫ್ರಿಕ, ಯುರೋಪ್ ಮತ್ತು ಏಷ್ಯದ ಹಲವೆಡೆಗಳಲ್ಲಿ ಇಂಥ ಆದಿಮಾನವನ ಪಳೆಯುಳಿಕೆಗಳು ಸಿಗುತ್ತವೆ.

ಪುರಾತನ ಶಿಲಾಯುಗ ಸಂಸ್ಕೃತಿಯ ಪ್ರಾರಂಭ ಯಾವಾಗ ಎಂಬುದು ಬಹಳ ವಿವಾದಾಸ್ಪದ. ದೈಹಿಕ ವಿಕಾಸದ ಮಜಲುಗಳನ್ನು ನಿರ್ಧಾರಾತ್ಮಕವಾಗಿ ಗುರುತಿಸಲಾಗುವುದಿಲ್ಲವೆಂಬ ಕಾರಣದಿಂದ ಸಂಸ್ಕೃತಿಯ ಉಗಮವನ್ನು ಪುರಾತತ್ತ್ವಜ್ಞರು ಆಧಾರವಾಗಿಟ್ಟುಕೊಂಡಿದ್ದಾರಷ್ಟೆ. ಆದರೂ ಮಂಗಗಳ ಹಂತದಿಂದ ನೈಜ ಮಾನವನತ್ತ ವಿಕಾಸ ಒಮ್ಮೆಗೇ ಸಂಭವಿಸಲಿಲ್ಲ. ಹತ್ತಾರು ಸಹಸ್ರ ವರ್ಷಗಳ ಕಾಲ ನಿಧಾನವಾಗಿ ದೈಹಿಕ-ಸಾಂಸ್ಕೃತಿಕ ಬದಲಾವಣೆಗಳು ನಡೆದಿರಬೇಕೆಂದು ಮಾನವಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಪುರಾತನ ಶಿಲಾಯುಗದ ಕಾಲವಾದ ಪ್ಲೀಸ್ಟೊಸೀನ್ ಯುಗವನ್ನು ಅಧ್ಯಯನದ ಅನುಕೂಲಕ್ಕಾಗಿ ಆದಿ, ಮಧ್ಯ ಮತ್ತು ಅಂತ್ಯ ಪ್ಲೀಸ್ಟೊಸೀನ್ ಎಂಬುದಾಗಿ ವಿಂಗಡಿಸಲಾಗಿದೆ.

(ಬಿ.ಕೆ.ಜಿ.)

**ಪೂರ್ವ-ಪಶ್ಚಿಮ ಘಟ್ಟಗಳು:** ದಖನ್ ಪ್ರಸ್ಥಭೂಮಿಯ ಪಶ್ಚಿಮ ಮತ್ತು ಪೂರ್ವ ಅಂಚುಗಳಲ್ಲಿರುವ ಪರ್ವತ ಶ್ರೇಣಿಗಳು. ಇವಕ್ಕೆ ಅನುಕ್ರಮವಾಗಿ ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಎಂಬ ಹೆಸರುಗಳಿವೆ. ತಪತೀ ನದಿಯ ದಕ್ಷಿಣದಲ್ಲಿ ಆರಂಭವಾಗುವ ಘಟ್ಟಗಳು ಸಮುದ್ರಮಟ್ಟದಿಂದ 900-1200 ಮೀ ವರೆಗೂ ಹಬ್ಬಿವೆ. ಕೆಲವಡೆಗಳಲ್ಲಿ 1501 ಮೀ ಎತ್ತರ ನಿಲುಕುವುದೂ ಉಂಟು. ದಖನ್ ಲಾವಾದಿಂದ ಆವೃತ್ತವಾಗಿರುವ ಈ ಭಾಗ ಸಮುದ್ರದ ಕಡೆಯಲ್ಲಿ ಗೋಡೆಯಂತೆ ಕಡಿದಾದ, ಅಲ್ಲಲ್ಲಿ ಬಲು ಆಳವಾದ ಕಂದರಗಳಿವೆ. ಗೋವದಿಂದ ದಕ್ಷಿಣಕ್ಕೆ ನೈಸ್ ಶಿಲೆ ಮತ್ತು ಗ್ರಾನೈಟುಗಳಿಂದ ಕೂಡಿರುವ ಘಟ್ಟಗಳು ಮುಂದೆ 320 ಕಿಮೀ ದೂರದಲ್ಲಿ 900 ಮೀ ಗಿಂತ ಕಡಿಮೆ ಎತ್ತರವಾಗಿವೆ. ಈ ಭಾಗದಲ್ಲಿ ಕರಾವಳಿಯ ಹಲವು ನದಿಗಳು ಘಟ್ಟಗಳ ಬೆನ್ನೇಣುಗಳನ್ನು ಕತ್ತರಿಸಿ ಆಳವಾದ ಪಾತ್ರ ಸೃಷ್ಟಿಸಿಕೊಂಡು, ದಖನ್ ಪ್ರಸ್ಥಭೂಮಿಯ ನದಿಗಳ ಮೇಲ್ಭಾಗದ ನೀರನ್ನೂ ಸಂಗ್ರಹಿಸಿಕೊಳ್ಳುತ್ತವೆ. ಮುಂದೆ ಘಟ್ಟಗಳು ಎತ್ತರವಾಗುತ್ತ ಸಾಗಿ ನೀಲಗಿರಿ ವಿಭಾಗದಲ್ಲಿ ಸೇರಿಕೊಳ್ಳುತ್ತವೆ. ಅತ್ಯಂತ ಎತ್ತರದ ಶಿಖರವಾದ ದೊಡ್ಡಬೆಟ್ಟ (2612 ಮೀ) ಈ ಭಾಗದಲ್ಲಿದೆ. ಇಲ್ಲಿಂದ ದಕ್ಷಿಣಕ್ಕೆ ಪಾಲಕ್ಕಾಡ್ ಬಳಿ ಎತ್ತರ ಕಡಿಮೆಯಾಗುತ್ತದೆ. ಈ ಭಾಗವನ್ನು ಪಶ್ಚಿಮ ಘಟ್ಟಗಳ ದಕ್ಷಿಣ ತುದಿ ಎಂದು ಪರಿಗಣಿಸಲಾಗಿದೆಯಾದರೂ ಅಲ್ಲಿಂದ ದಕ್ಷಿಣಕ್ಕೂ ಅಣ್ಣಾಮಲೈ, ಪಳನಿ ಮತ್ತು ಏಲಕ್ಕಿ ಬೆಟ್ಟಗಳಲ್ಲಿ ಇವು ಮುಂದುವರಿದು ಭಾರತದ ದಕ್ಷಿಣ ತುದಿಯಾದ ಕನ್ಯಾಕುಮಾರಿ ಭೂಶಿರದವರೆಗೂ ಸಾಗುತ್ತವೆ. ಅಣ್ಣಾಮಲೈಯಲ್ಲಿ ಆನೈಮುಡಿಯ ಎತ್ತರ 2654 ಮೀ ತಪತಿಯಿಂದ ಕನ್ಯಾಕುಮಾರಿಯವರೆಗೆ 1400 ಕಿಮೀ ದೂರ ಹಬ್ಬಿರುವ ಶ್ರೇಣಿಗಳನ್ನು ಪಾಲಕ್ಕಾಡ್ ಕಣಿವೆಯ ಮೂಲಕ ಮಾತ್ರ ಸುಲಭವಾಗಿ ದಾಟಬಹುದು.

ಒರಿಸ್ಸದ ಮಹಾನದಿಯಿಂದ ಕನ್ಯಾಕುಮಾರಿವರೆಗೆ, ಪೂರ್ವದಲ್ಲಿ ಸು. 1,367 ಕಿಮೀ ಹಬ್ಬಿರುವ ಬೆಟ್ಟಗಳನ್ನು ಪೂರ್ವಘಟ್ಟಗಳೆನ್ನುತ್ತಾರಾದರೂ ಪಶ್ಚಿಮಘಟ್ಟಗಳೊಂದಿಗೆ ಹೋಲಿಸಿದರೆ ಇವುಗಳಿಗೆ ಮಹತ್ತ್ವವಿಲ್ಲ. ಇವು ಪಶ್ಚಿಮಘಟ್ಟಗಳಷ್ಟು ಎತ್ತರವಾಗಿಯಾಗಲಿ ಅವಿಚ್ಛಿನ್ನವಾಗಿಯಾಗಲಿ ಇಲ್ಲ. ಗೋದಾವರಿ ಮತ್ತು ಕೃಷ್ಣಾ ನದಿಗಳ ನಡುವೆ ಸು. 161 ಕಿಮೀ ಗಳಷ್ಟು ದೂರ ಇವು ಸಾಗುತ್ತವೆ. ಒರಿಸ್ಸದಲ್ಲಿ ಮಾತ್ರ ಕೆಲವೆಡೆ ಇವುಗಳು ಸು. 1,000 ಮೀ ಗೂ ಮಿಗಿಲಾಗಿದೆ. ಈ ಪರ್ವತಪಂಕ್ತಿಗಳು ಬಹು ದಟ್ಟವಾದ ಅರಣ್ಯಗಳಿಂದ ತುಂಬಿದೆ. ಪೂರ್ವಘಟ್ಟದ ವಿವಿಧ ಭಾಗಗಳಿಗೆ ಸ್ಥಳೀಯವಾಗಿ ಪ್ರತ್ಯೇಕ ಹೆಸರುಗಳೇ ಇವೆ. ಪಾಲಾರ್-ಪೆನ್ನಾರ್ ನದಿಯ ಎದುರಿಗಿನ ಶ್ರೇಣಿಗಳನ್ನು ಮಾತ್ರ ಪೂರ್ವ ಘಟ್ಟಗಳೆಂದು ಕರೆಯಬಹುದು. ಅವು ಪಶ್ಚಿಮ ಘಟ್ಟಗಳೊಂದಿಗೆ ಸಾದೃಶ್ಯಹೊಂದಿವೆ. ಪಶ್ಚಿಮಘಟ್ಟದಲ್ಲಿ ಹುಟ್ಟಿ, ಪೂರ್ವಾಭಿಮುಖವಾಗಿ, ಇಳಿಜಾರಾದ ದಕ್ಷಿಣದ ಪ್ರಸ್ಥಭೂಮಿಯಲ್ಲಿ ಹರಿದು ಬಂಗಾಲಕೊಲ್ಲಿಯನ್ನು ಸೇರುವ ನದಿಗಳೆಲ್ಲ ಈ ಘಟ್ಟಗಳ ನಡುವೆ ಸಾಗುತ್ತವೆ. ದಕ್ಷಿಣದ ಕೆಲವು ಭಾಗಗಳಲ್ಲಿ ಅಧಿಕವಾಗಿ ಕಬ್ಬಿಣದ ಅದಿರಿನ ಮತ್ತು ಅಲ್ಪ ಸ್ವಲ್ಪ ತಾಮ್ರ ಮತ್ತು ಸೀಸಗಳ ನಿಕ್ಷೇಪಗಳುಂಟು. ಕೆಲವಡೆ ವಜ್ರವೂ ಸಿಕ್ಕಿವೆ.

ಪಶ್ಚಿಮ ಘಟ್ಟ ಪ್ರದೇಶಗಳು ಈಶಾನ್ಯ ಮಾರುತಗಳಿಂದ ಅಧಿಕ ಮಳೆ ಪಡೆಯುತ್ತವೆ (ಸು. 250-750 ಸೆಮೀ). ಪೂರ್ವ ಘಟ್ಟಗಳಲ್ಲಿ ಮಳೆ ಕಡಿಮೆ. ಪಶ್ಚಿಮ ಘಟ್ಟಗಳಲ್ಲಿ ದಟ್ಟವಾದ, ಸದಾ ಹಸುರಾದ ಅರಣ್ಯಗಳೂ ಜಲಪಾತಗಳೂ ಆಕರ್ಷಕ ಪ್ರದೇಶಗಳೂ ಇವೆ. ಆದರೆ ಪೂರ್ವ ಘಟ್ಟಗಳಲ್ಲಿ ಕೆಲವೆಡೆ ಮಾತ್ರ ದಟ್ಟ ಅರಣ್ಯಗಳುಂಟು. (ಬಿ.ಸಿ.ಕೆ.)

**ಪೂರ್ವಕೇಂಬ್ರಿಯನ್ ಕಾಲ:** ಭೂವಿಕಾಸದ ಮಾಪಕದಲ್ಲಿ ಸುಮಾರು ಅರುವತ್ತು ಕೋಟಿ ವರ್ಷಗಳಷ್ಟು ಪ್ರಾಚೀನ ಕಾಲದಿಂದ ಹಿಂದಿನ (ಮತ್ತೂ ಭೂತಕಾಲದೆಡಗಿನ) ಸುಮಾರು ಮುನ್ನೂರು ಕೋಟಿ ವರ್ಷಗಳ ತನಕದ ಅವಧಿ. ಸುಮಾರು ನಾನೂರ ಅರುವತ್ತು ಕೋಟಿ ವರ್ಷಗಳ ಹಿಂದೆ ಭೂ ತೊಗಟೆ ಮೈದಳೆಯಿತು. ಸುಮಾರು ಐವತ್ತೇಳು ಕೋಟಿ ವರ್ಷಗಳ ಹಿಂದೆ ಕೇಂಬ್ರಿಯನ್ ಯುಗ ಪ್ರಾರಂಭವಾಯಿತು. ಸ್ಥೂಲವಾಗಿ ಈ ಎರಡೂ ಘಟನೆಗಳ ನಡುವಿನ ಅವಧಿಯನ್ನು ಪೂರ್ವ ಕೇಂಬ್ರಿಯನ್ ಕಾಲವೆಂದು ಗುರುತಿಸಿದೆ. ಭೂ ಇತಿಹಾಸದಲ್ಲಿ ಕೇಬ್ರಿಯನ್ ಯುಗ ಪ್ರಥಮ ಘಟ್ಟವೆನಿಸಿದೆ. ಆ ಕಾಲದಲ್ಲಿ ವ್ಯಾಪಕವಾಗಿದ್ದ ವೈವಿಧ್ಯಮಯವಾದ ಜೀವ ವಿಶೇಷ ಅಥವಾ ಪಳೆಯುಳಿಕೆಗಳು ಜಲಜಶಿಲೆಗಳಲ್ಲಿ ದೊರೆತಿವೆ.

ಕೇಂಬ್ರಿಯನ್ ಯುಗದ ಪ್ರಾರಂಭಕ್ಕೂ ಮುನ್ನ ಜೀವೋತ್ಪತ್ತಿಯಾಯಿತೆಂದೂ ಪೂರ್ವ ಕೇಂಬ್ರಿಯನ್ ಕಾಲಕ್ಕೂ ಅದರಿಂದೀಚಿನ ಎಲ್ಲ ಭೂಕಾಲಗಳಿಗೂ ಒಂದು ತೆರನಾದ ಮೂಲ ಭೇದವಿರುವುದೆಂದೂ ಒಮ್ಮೆ ಭಾವಿಸಲಾಗಿತ್ತು. ಆದರೆ ಮೂಲ ಜೀವಿಗಳು ಸುಮಾರು ಮುನ್ನೂರು ಕೋಟಿ ವರ್ಷಗಳಿಗೂ ಹಿಂದೆ ಅಸ್ತಿತ್ವದಲ್ಲಿದ್ದುವು ಎಂಬುದು ಇಂದಿನ ಅಭಿಪ್ರಾಯ. ಪೂರ್ವ ಕೇಂಬ್ರಿಯನ್ ಕಾಲದಲ್ಲಿ ಎಲ್ಲ ಭಾಗಗಳಲ್ಲೂ ಜೀವಿಗಳು ಕಂಡುಬರಲಿಲ್ಲ. ಆದರೆ ಆ ಕಾಲದುದ್ದಕ್ಕೂ ಜೀವಿಗಳಿದ್ದುವು ಎಂಬುದು ಇಂದಿನ ಭಾವನೆ. ಭೂಕಾಲದ ಬಹುಭಾಗವನ್ನು ಪ್ರಾಗ್ಜೀವಕಲ್ಪ (ಪೇಲಿಯೋಜೋಯಿಕ್) ಆಕ್ರಮಿಸಿಕೊಂಡಿದೆ.

ಭೂತೊಗಟೆಯ ರಚನೆಯಿಂದೀಚಿನ ಕಾಲದ ಹತ್ತನೆಯ ಒಂದು ಭಾಗಕ್ಕಿಂತಲೂ ಹೆಚ್ಚು ಕಾಲವನ್ನು ಕೇಂಬ್ರಿಯನ್ ಮತ್ತು ಅದರ ತರುವಾಯದ ಎಲ್ಲ ಭೂಕಾಲಗಳು ಪ್ರತಿನಿಧಿಸುತ್ತವೆ. ಪೂರ್ವ ಕೇಂಬ್ರಿಯನ್ ಕಾಲದ ವಿಭಜನೆಯ ಬಗೆಗೆ ಸರ್ವಸಮ್ಮತವಾದ ವಿಧಾನವೊಂದು ಇನ್ನೂ ಒಪ್ಪಿಗೆಯಾಗದಿರುವುದು ಗಮನಾರ್ಹ ಅಂಶ. ಪೂರ್ವ ಕೇಂಬ್ರಿಯನ್ ಕಾಲದ ಆದಿಭಾಗವನ್ನು ಆರ್ಷೇಯ ಜೀವಕಲ್ಪವೆಂದೂ ಅದರ ನವೀನ ಭಾಗವನ್ನು ಆದಿಜೀವ ಕಲ್ಪವೆಂದೂ ಹೆಸರಿಸಲಾಗಿದೆ. ಆದರೆ ಕೆಲವು ಭೂವಿಜ್ಞಾನಿಗಳ ಪ್ರಕಾರ ಈ ಎರಡೂ ವಿಭಾಗಗಳ ಎಲ್ಲೆಯ ಬಗೆಗೆ ಇನ್ನೂ ಸ್ಪಷ್ಟವಾಗಿಲ್ಲ. ಕೆಲವು ಆಧಾರಗಳ ಪ್ರಕಾರ ಈ ಎಲ್ಲೆಯ ಮಿತಿ ಸುಮಾರು ಇನ್ನೂರ ಐವತ್ತು ಕೋಟಿ ವರ್ಷಗಳೆಂದು ತಿಳಿದುಬಂದಿದೆ. ಪೂರ್ವ ಕೇಂಬ್ರಿಯನ್ ಶಿಲೆಗಳ ಹೊರಚಾಚುಗಳಿರುವ ಪ್ರತಿಯೊಂದು ಮುಖ್ಯವಾದ ಭಾಗದಲ್ಲಿ ಆ ಶಿಲೆಗಳನ್ನು ಸ್ಥಳೀಯವಾಗಿ ವಿಭಾಗಿಸಿ, ಅವುಗಳ ವಿತರಣೆಯನ್ನು ಗುರುತಿಸಲಾಗಿದೆ.

ಪೂರ್ವ ಕೇಂಬ್ರಿಯನ್ ಕಾಲದ ದಾಖಲೆಯ ಸಾಮಾನ್ಯ ಲಕ್ಷಣಗಳು : ಸ್ಥೂಲವಾಗಿ ಹೇಳುವುದಾದರೆ ಪೂರ್ವ ಕೇಂಬ್ರಿಯನ್ ಕಾಲದ ಶಿಲೆಗಳು ಹಲವಾರು ನೂರು ಕಿಮೀ ಗಳಷ್ಟು ವಿಶಾಲವಾದ ಸಮಾನಾಂತರ ಪ್ರದೇಶಗಳಲ್ಲಿ ಉದ್ದಕ್ಕೂ ಹೊರಚಾಚಿರುವುದು ಕಂಡುಬಂದಿದೆ. ಉತ್ತರ ಅಮೆರಿಕದ ಮೈದಾನ, ಜರ್ಮನಿಯ ತಗ್ಗು ಪ್ರದೇಶಗಳು ಮತ್ತು ಬಾಲ್ಟಿಕ್ಕಿನ ದಕ್ಷಿಣ ಮತ್ತು ಪೂರ್ವ ಭಾಗಗಳ ಸಂಚಯನಗಳಲ್ಲಿರುವ ನವೀನ ನಿಕ್ಷೇಪಗಳ ಕೆಳಗೆ ಇತರ ಪೂರ್ವ ಕೇಂಬ್ರಿಯನ್ ಶಿಲೆಗಳು ಅಡಗಿವೆ. ಸಮತಲವಾದ ನವೀನ ನಿಕ್ಷೇಪಗಳ ಕೆಳಗಿರುವ ಈ ಶಿಲೆಗಳು ಆ ಕಾಲದಿಂದೀಚೆಗೆ ಸ್ವಲ್ಪ ಬದಲಾಗಿವೆ. ಆಳವಾಗಿ ಕೊರೆದ ರಂಧ್ರಗಳಿಂದ ಸಂಗ್ರಹಿಸಲಾದ ಶಿಲಾ ಪ್ರತಿಚಯಗಳ ವಿಶ್ಲೇಷಣೆಗಳಿಂದ ಮತ್ತು ಅವುಗಳ ಮೇಲೆ ನಡೆಸಲಾದ ಶೋಧನೆ ಮತ್ತು ವಯೋನಿರ್ಧಾರಗಳಿಂದ ಅಂಥ ಬದಲಾವಣೆಗಳನ್ನು ಗುರುತಿಸಲಾಗಿದೆ.

ಕೇಂಬ್ರಿಯನ್ ಕಾಲದ ಮೂರನೆಯ ಬಗೆಯ ಶಿಲೆಗಳು, ಆ ಕಾಲದಿಂದೀಚೆಗೆ ಉದ್ಭವಿಸಿದ ಪರ್ವತ ಶ್ರೇಣಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ವಿಪರೀತ ಮಾರ್ಪಾಡುಗೊಂಡ ಇವು ಅಪಾರ ಉಷ್ಣ ಮತ್ತು ಸಂಮರ್ದಗಳಿಂದ ರೂಪಾಂತರ ಹೊಂದಿ ಷಿಫ್ಸ್ ಮತ್ತು ನೈಸ್‌ಗಳಿಗೆ ಪರಿವರ್ತನೆಯಾಗಿ ಈ ಪರ್ವತ ಶ್ರೇಣಿಗಳಲ್ಲಿ ಅಡಕವಾಗಿವೆ. ಪಶ್ಚಿಮ ನಾರ್ವೆ ಅಪಲೇಷಿಯನ್ ಪರ್ವತಗಳು ಇದಕ್ಕೆ ಉದಾಹರಣೆಗಳು.

ಪ್ರತಿ ಭೂಖಂಡದ ವಿಶಾಲವಾದ ಪ್ರದೇಶದಲ್ಲೂ ಪೂರ್ವ ಕೇಂಬ್ರಿಯನ್ ಶಿಲಾ ಸ್ತೋಮಗಳು ವ್ಯಾಪಕವಾಗಿ ಹೊರಚಾಚಿರುವುದು ಕಂಡುಬರುತ್ತದೆ. ಇಂಥ ಪ್ರದೇಶಗಳಿಗೆ ಶೀಲ್ಡ್ ಭಾಗಗಳೆಂದು ಹೆಸರು. ಇವುಗಳ ಪೈಕಿ ಅತಿ ದೊಡ್ಡ ಶೀಲ್ಡುಗಳೆಂದರೆ ಕೆನಡಿಯನ್ ಶೀಲ್ಡ್, ಗ್ರೀನ್ಲೆಂಡ್, ಸ್ಕ್ಯಾಂಡಿನೇವಿಯ ಮತ್ತು ಸೋವಿಯತ್ ದೇಶದ ನೆರೆ ಭಾಗಗಳು (ಬಾಲ್ಟಿಕ್ ಶೀಲ್ಡ್), ಸೈಬೀರಿಯ, ಚೀನ, ಭಾರತದ ಪರ್ಯಾಯ ದ್ವೀಪ, ಗಯಾನ, ಬ್ರೆಜಿಲ್, ಅಂಟಾರ್ಟಿಕ್, ಅಟ್ಲಾಸ್ ಪರ್ವತಗಳ ದಕ್ಷಿಣಕ್ಕಿರುವ ಆಫ್ರಿಕ ಖಂಡದ ಬಹು ಭಾಗಗಳು ಮತ್ತು ಪಶ್ಚಿಮ ಆಸ್ಟ್ರೇಲಿಯ.

ಸಮತಟ್ಟಾದ ನವೀನ ನಿಕ್ಷೇಪಗಳ ಕೆಳಗೆ ಹುದುಗಿರುವ ಪೂರ್ವ ಕೇಂಬ್ರಿಯನ್ ಶಿಲಾ ಸಮೂಹಗಳಿಗೆ ಪ್ಲಾಟ್‌ಫಾರಮ್ ಎಂಬ ಶಬ್ದ ಬಳಕೆಯಲ್ಲಿದೆ. ಉದಾಹರಣೆಗೆ ರಷ್ಯ ಮತ್ತು ಅಮೆರಿಕದಲ್ಲಿರುವ ಪ್ಲಾಟ್‌ಫಾರಮುಗಳು ಬಹು ವ್ಯಾಪಕವಾಗಿ ವಿತರಣೆಯಾಗಿರುವ ಪೂರ್ವ ಕೇಂಬ್ರಿಯನ್ ಶಿಲಾ ಸಮೂಹಗಳು

ಪೂರ್ವ ಕೇಂಬ್ರಿಯನ್ ಕಾಲದಿಂದಲೇ ಭೂತೊಗಟೆಯ ರಚನೆಯಾಗಿದ್ದುದು ಇದರಿಂದ ವ್ಯಕ್ತವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಸೇಶೆಲ್ಸ್ ದ್ವೀಪಗಳ ಹೊರತಾಗಿ ಪ್ರಮುಖ ಸಾಗರಗಳ ಕೆಳಗೆ ಪೂರ್ವ ಕೇಂಬ್ರಿಯನ್ ಶಿಲೆಗಳು ದೊರೆಯುವುದಿಲ್ಲ. ಹಿಂದೆ ಭೂಖಂಡಗಳು ಅಲೆಯುತ್ತಿದ್ದ ವೇಳೆ ಭೂಖಂಡವೊಂದು ಒಡೆದು ಛಿದ್ರವಾದಾಗ ಅದರ ತುಂಡುಗಳಿಂದ ಸೇಶೆಲ್ಸ್ ದ್ವೀಪಗಳ ರಚನೆಯಾಯಿತು ಎಂಬ ಅಭಿಪ್ರಾಯವುಂಟು.

ಪೂರ್ವ ಕೇಂಬ್ರಿಯನ್ ಶಿಲೆಗಳು ತಿರುಳಿನಂತಿದ್ದು, ಇವುಗಳ ಸುತ್ತ ಪ್ರತಿ ಭೂಖಂಡವೂ ಕ್ರಮವಾಗಿ ಉದ್ಭವಿಸಿ ಕ್ರಮೇಣ ಒಂದರ ಮೇಲೊಂದರಂತೆ ಖಂಡಾಂತರ ವಲಯಗಳ ಹೊರಪದರಗಳು ಸೇರಿಕೊಂಡವು ಎಂಬ ಭಾವನೆ ಇತ್ತು. ಭೂವೈಜ್ಞಾನಿಕ ದೃಷ್ಟಿಯಿಂದ

ನೋಡಿದರೆ ಮಿಸಿಸಿಪ್ಪಿ ಅಥವಾ ನೈಲ್ ನದೀಮುಖಜ ಭೂಮಿಯಂಥ ಭಾಗಗಳು ಇತ್ತೀಚಿನ ಸೇರ್ಪಡೆಗಳಾಗಿದ್ದರೂ ಪ್ರಾಚೀನ ಜೀವಕಲ್ಪದ (ಜೀವಯುಗ) ಮತ್ತು ನವೀನ ಯುಗಗಳ ಪರ್ವತ ಶ್ರೇಣಿಗಳು ಶೀಲ್ಡುಗಳ ಅಂಚಿಗೆ ಲಗತ್ತಾಗಿರುವುದು ವಾಸ್ತವವೆನಿಸಿದರೂ ನವೀನ ಶಿಲೆಗಳ ಸತತ ಸೇರ್ಪಡೆಯಿಂದ ಖಂಡಗಳ ಬೆಳವಣಿಗೆ ಸಾಧ್ಯವೆಂಬ ಪರಿಕಲ್ಪನೆ ಸ್ವಲ್ಪ ಅಸಮಂಜಸವೆನಿಸುತ್ತದೆ. ಇದಕ್ಕೊಂದು ದೃಷ್ಟಾಂತ ಕೊಡಬಹುದು : ನಮಗೆ ತಿಳಿದಿರುವ ಪೂರ್ವ ಕೇಂಬ್ರಿಯನ್ ಶಿಲೆಗಳು ಭೂಖಂಡಗಳ ಅಂಚನ್ನು ಸಮೀಪಿಸಿದಾಗ ಅವು ಕ್ರಮಶಃ ನವೀನ ಅಥವಾ ಕಿರಿಯ ಶಿಲೆಗಳಾಗಿರದೆ ವಿವಿಧ ಕಾಲದ ಶಿಲೆಗಳ ಗುಂಪಿನ ಜಾಲಗಳನ್ನು ನಿರ್ಮಿಸುವುದು ಕಂಡುಬರುತ್ತದೆ. ಭೂಮ್ಯಾದ್ಯಂತ ವ್ಯಾಪಕವಾಗಿ ಹೊರಚಾಚಿರುವ ಪೂರ್ವ ಕೇಂಬ್ರಿಯನ್ ಶಿಲಾ ಭಾಗಗಳು ಕೆಲವು ನಿರ್ದಿಷ್ಟ ನಿಯಮಗಳಿಗೆ ಅನುಗುಣವಾಗಿರುವುದು ತಿಳಿದುಬರುತ್ತದೆ. ಇವುಗಳ ಪೈಕಿ ಕೆಲವು ಭಾಗಗಳ ಹೊರತಾಗಿ ಪೆಸಿಫಿಕ್ ಸಾಗರದ ತೀರಕ್ಕೆ ಸಮೀಪದಲ್ಲಿರುವ ಮತ್ತು ಆಲ್ಪ್ಸ್ ಮತ್ತು ಹಿಮಾಲಯ ಪರ್ವತ ಶ್ರೇಣಿಗಳುದ್ದಕ್ಕೂ ಚಾಚಿರುವ ಪೂರ್ವ ಕೇಂಬ್ರಿಯನ್ ಶಿಲೆಗಳು ಆ ಪರ್ವತ ಶ್ರೇಣಿಗಳ ಅಂಗಭಾಗಗಳಾಗಿವೆ. ಆ ಪ್ರದೇಶಗಳಲ್ಲಿ ಪ್ರತಿಯೊಂದು ಪೂರ್ವ ಕೇಂಬ್ರಿಯನ್ ಶಿಲೆಯೂ ತೀವ್ರ ಸ್ವರೂಪದ ರೂಪಾಂತರ ಕ್ರಿಯೆಗಳದಾಗಿರುವುದು ಕಂಡು ಬರುತ್ತದೆ.

ಮಧ್ಯ ಜೀವಯುಗದಿಂದೀಚೆಗೆ, ಭೂಖಂಡಗಳ ಮೇಲೆ, ಕಂಡುಬರುವ ಹೋಲಿಕೆಯಲ್ಲಿ ಹಿಂದೂ ಮಹಾಸಾಗರ ಅಥವಾ ಅಟ್ಲಾಂಟಿಕ್ ಸಾಗರಗಳಲ್ಲಿ ಹೊರಚಾಚಿರುವ ಪೂರ್ವ ಕೇಂಬ್ರಿಯನ್ ಶಿಲೆಗಳು ಈ ಕಿರಿಯ ಸಾಗರಗಳಿಗೆ ಸಮೀಪದಲ್ಲಿರುವ ಶೀಲ್ಡ್ ಪ್ರದೇಶಗಳಲ್ಲಿ ಸಿಗುತ್ತವೆ. ಇದೇ ರೀತಿ ಬ್ರೆಜಿಲ್, ಗಯಾನ, ಕೆನಡ, ಬಾಲ್ಟಿಕ್, ಮತ್ತು ಪಶ್ಚಿಮ ಆಫ್ರಿಕದ ಶೀಲ್ಡ್ ಭಾಗಗಳಲ್ಲಿ ಅಟ್ಲಾಂಟಿಕ್ ಸಾಗರದ ಅಂಚಿನಲ್ಲೂ ಪೂರ್ವ ಆಫ್ರಿಕ, ಭಾರತ, ಪಶ್ಚಿಮ ಆಸ್ಟ್ರೇಲಿಯ ಹಾಗೂ ಅಂಟಾರ್ಕ್‌ಟಿಕದ ಶೀಲ್ಡ್ ಭಾಗಗಳಲ್ಲಿ ಹಿಂದೂ ಮಹಾಸಾಗರದ ಸುತ್ತಲೂ ಪೂರ್ವ ಕೇಂಬ್ರಿಯನ್ ಶಿಲೆಗಳು ಸಿಗುತ್ತವೆ. ಸಮತಟ್ಟಾದ ಜಲಜಶಿಲೆಗಳ ಕೆಳಗೆ ಅಡಗಿರುವ ಪೂರ್ವ ಕೇಂಬ್ರಿಯನ್ ಶಿಲೆಗಳನ್ನು ಒಳಗೊಂಡ ಪ್ಲಾಟ್‌ಫಾರಮುಗಳು ಸಾಮಾನ್ಯವಾಗಿ ಶೀಲ್ಡ್ ಪ್ರದೇಶಗಳಿಗೂ ಯೌವನಾವಸ್ಥೆಯಲ್ಲಿರುವ ಆಲ್ಪೈನ್ ಅಥವಾ ಶಾಂತ ಮಹಾಸಾಗರದ ಸುತ್ತಲೂ ಹಬ್ಬಿರುವ ಪರ್ವತ ಶ್ರೇಣಿಗಳಿಗೂ ನಡುವೆ ತೀವ್ರವಾಗಿ ಮಾರ್ಪಾಡಾದ ಪೂರ್ವ ಕೇಂಬ್ರಿಯನ್ ಕಾಲದ ಅವಶೇಷಗಳಾಗಿ ನಿಂತಿವೆ.

ಭೂವೈಜ್ಞಾನಿಕ ಪ್ರಾಮುಖ್ಯ : ಒಟ್ಟಿನಲ್ಲಿ ಹೇಳುವುದಾದರೆ ಪೂರ್ವ ಕೇಂಬ್ರಿಯನ್ ಶಿಲೆಗಳು ಆ ಕಾಲದ ಸಂಪೂರ್ಣ ದಾಖಲೆಗಳನ್ನು ಒದಗಿಸಲು ಅಸಮರ್ಥವಾಗಿವೆ. ಭೂಸವೆತ ಮತ್ತು ಮಡ್ಡಿ ಅಥವಾ ಚರಟ ಸಂಚಯನದ ಕಾರ್ಯಕರ್ತೃಗಳು ಇಂದಿನಂತೆಯೇ ಸುಮಾರು ಮುನ್ನೂರ ಇಪ್ಪತ್ತು ಕೋಟಿ ವರ್ಷಗಳ ಹಿಂದೆಯೂ ಭೂತೊಗಟೆಯನ್ನು ಬಾಧಿಸುತ್ತಿದ್ದವು ಎಂಬ ಅಂಶವನ್ನು ತೋರಿಸಲು ಈ ಪೂರ್ವ ಕೇಂಬ್ರಿಯನ್ ಶಿಲೆಗಳು ಅಸಮರ್ಥವಾಗಿವೆ. ನೀಲಿ-ಹಸುರು ವರ್ಣದ ಸಮುದ್ರ ಪಾಚಿಗಳು ಮತ್ತೆ ಕೆಲವು ಜೀವಾಣುಗಳು ಪೂರ್ವ ಕೇಂಬ್ರಿಯನ್ ಕಾಲದಲ್ಲಿ ಆಗಲೇ ವಿಕಾಸಗೊಂಡಿದ್ದುವು. ಇವಲ್ಲದೆ ಕಾಲಕಾಲಕ್ಕೆ ಭೂತೊಗಟೆಯಲ್ಲಿ ವಿವಿಧ ಭಾಗಗಳು ಅತ್ಯುಷ್ಣದಿಂದ ಕಾದು ಬಿಸಿಯಾಗಿ ವಿಕೃತಗೊಂಡುದರಿಂದ ಸ್ಫಟಿಕ ರೂಪಾಂತರ ಶಿಲೆಗಳು ಉತ್ಪತ್ತಿಯಾದುವು. ಈ ಅಂಶವನ್ನು ಸಹ ಪೂರ್ವ ಕೇಂಬ್ರಿಯನ್ ಶಿಲೆಗಳ ಸ್ವರೂಪ ಅಥವಾ ಅವುಗಳ ಲಕ್ಷಣಗಳಿಂದ ಕಾಣಬಹುದು. ಈ ಶಿಲೆಗಳು ಇತ್ತೀಚೆಗೆ ಉದ್ಭವಿಸಿದ ಪರ್ವತ ಶ್ರೇಣಿಗಳ ಮಧ್ಯೆ ಇರುವ ಶಿಲೆಗಳನ್ನು ಹೋಲುತ್ತವೆ. ಆದರೆ ಪೂರ್ವ ಕೇಂಬ್ರಿಯನ್ ಕಾಲದ ಸ್ಫಟಿಕ ರೂಪಾಂತರ ಶಿಲೆಗಳು ಪರ್ವತಗಳ ರಚನೆಗೆ ಸಂಬಂಧಿಸಿದವೇ ಅಥವಾ ಭೂ ಇತಿಹಾಸದ ಪ್ರಾರಂಭಕ್ಕೂ ಮುನ್ನ ಭೂ ತೊಗಟೆಯೇ ವಿಕೃತಗೊಂಡು ನಾನಾ ರೂಪಗಳನ್ನು ತಳೆದವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಸಮಗ್ರ ವಯೋನಿರ್ಧಾರಗಳ ಪ್ರಾಮುಖ್ಯ ಮತ್ತು ಹಂಚಿಕೆ : ಪೂರ್ವ ಕೇಂಬ್ರಿಯನ್ ಕಾಲದ ಶಿಲೆಗಳ ವಯೋನಿರ್ಧಾರಗಳಿಂದ ಭೂಮಿಯ ಮೇಲೆ ಆ ಕಾಲದ ವಿವಿಧ ಹಂತಗಳನ್ನು ನಿರೂಪಿಸುವ ಕೆಲವು ನಿರ್ದಿಷ್ಟ ಭೂರಚನೆಗಳನ್ನು ತಿಳಿಯಬಹುದು. ಭೂ ಇತಿಹಾಸದಲ್ಲಿ ಮೊದಲ ಸುಮಾರು ನೂರು ಕೋಟಿ ವರ್ಷಗಳಷ್ಟು (ಸುಮಾರು ನಾನೂರ ಆರುವತ್ತು ಕೋಟಿ ವರ್ಷ ಪ್ರಾಚೀನದಿಂದ ಮುನ್ನೂರೈವತ್ತು ಕೋಟಿ ವರ್ಷ ಪ್ರಾಚೀನದ ತನಕ) ಪುರಾತನ ಶಿಲೆಗಳ ಮತ್ತು ಖನಿಜಗಳ ಪ್ರಾಯವನ್ನು ನಿರ್ಧರಿಸಲಾಗಿದೆ. ಆ ಒಂದು ಅವಧಿಯಲ್ಲಿ ಉತ್ಪತ್ತಿಯಾದ ಬಹಳಷ್ಟು ಶಿಲೆಗಳು ಕ್ರಮೇಣ ನಾಶ ಹೊಂದಿದ್ದುವು. ಅವುಗಳ ಮೂಲ ಲಕ್ಷಣಗಳಲ್ಲಿ ಗಣನೀಯವಾದ ಬದಲಾವಣೆಗಳಾಗಿರುವುದರಿಂದ ಅಂಥ ಶಿಲೆಗಳು ಉತ್ಪತ್ತಿಯಾದ ಕಾಲವನ್ನು ಕರಾರುವಾಕ್ಕಾಗಿ ರೇಡಿಯೋ ಮಾಪನ ವಿಧಾನಗಳಿಂದ ನಿರ್ಧರಿಸುವುದು ಸಾಧ್ಯವಿಲ್ಲ. ಈಗ ದೊರೆತಿರುವ ಸುಮಾರು ಮುನ್ನೂರ ಅರುವತ್ತು ಕೋಟಿ ವರ್ಷಗಳಿಗೂ ಪ್ರಾಚೀನದವೆಂದು ದೃಢೀಕರಿಸುವ ಶಿಲೆಗಳ ದಾಖಲೆಗಳು ಅತಿ ಅಪರೂಪ. ಗುರುತಿಸಲಾಗದಷ್ಟು ಬದಲಾದ ಅತಿ ಪುರಾತನ ಜಲಜ ಶಿಲೆಗಳು ಮತ್ತು ಅಗ್ನಿ ಶಿಲೆಗಳು ಸುಮಾರು ಮುವತ್ತೆಂಟು ಲಕ್ಷ ವರ್ಷಗಳಿಂದೀಚೆಗೆ ಕಂಡುಬಂದಿವೆ. ಇವಕ್ಕಿಂತ ಇನ್ನೂ ಪುರಾತನ ಶಿಲೆಗಳು ಪ್ರಾಯಶಃ ಇದ್ದಿರಬಹುದು. ಆದರೆ, ಅವುಗಳ ಅಸ್ತಿತ್ವವನ್ನು ರೇಡಿಯೋ ಮಾಪನ ವಿಧಾನಗಳಿಂದ ನಿರ್ಧರಿಸುವುದು ಇನ್ನೂ ಸಾಧ್ಯವಾಗಿಲ್ಲ. ಸುಮಾರು ಇನ್ನೂರ ಎಪ್ಪತ್ತು ಕೋಟಿ ವರ್ಷ ಪ್ರಾಚೀನದಿಂದ ಮೂವತ್ತೆಂಟು ಲಕ್ಷ ವರ್ಷ ಪ್ರಾಚೀನದ ತನಕ ಭೂಮಿಯ ಮೇಲೆ ಉತ್ಪತ್ತಿಯಾದ ಜಲಜ ಶಿಲೆ ಮತ್ತು ಅಗ್ನಿ ಶಿಲೆಗಳು ಯಾವಾಗಲೂ ವಿರೂಪಗೊಂಡಿರುವುದು ಕಂಡುಬಂದಿದೆ. ಅವು ರೂಪಾಂತರಗೊಂಡಿರುವುದೂ ಗಮನಾರ್ಹವಾದ ಅಂಶ. ಸಮತಟ್ಟಾಗಿ ರಚಿತವಾದ ಜಲಜ ಶಿಲೆಗಳ ಮತ್ತು ಅಗ್ನಿಶಿಲೆಗಳ ಪರಂಪರೆಗಳು ದಕ್ಷಿಣ ಆಫ್ರಿಕದ ವಿಟ್ ವಾಟರ್ಸ್ ರ್‍ಯಾಂಡ್ ತಗ್ಗು ಪ್ರದೇಶದ ಕೆಳಭಾಗದಲ್ಲಿವೆ. ಮಡ್ಡಿ ಸಂಸ್ತರಗಳುಳ್ಳ ಈ ಪ್ರದೇಶದ ನಿರ್ಮಾಣ ಸುಮಾರು ಇನ್ನೂರ ಎಪ್ಪತ್ತು ಕೋಟಿ ವರ್ಷಗಳ ಹಿಂದೆ ಪ್ರಾರಂಭವಾಯಿತು. ಇದು ಭೂಮಿಯ ವಿಕಾಸದಲ್ಲಿ ಒಂದು ಹೊಸ ಘಟ್ಟವನ್ನು ಸ್ಥಾಪಿಸಿದಂತೆ ಕಂಡುಬರುತ್ತದೆ. ಏಕೆಂದರೆ ಭೂತೊಗಟೆಯ ಒಂದು ಭಾಗ ಆ ವೇಳೆಗಾಗಲೇ ಸಾಕಷ್ಟು ಗಡಸಾಗಿದ್ದು ಅದರ ಮೇಲ್ಭಾಗದಲ್ಲಿ ಸಂಗ್ರಹವಾದ ಜಲಜ ಶಿಲೆಗಳು ಅಲ್ಪಸ್ವಲ್ಪ ಬದಲಾವಣೆಗಳಿಗೆ ಒಳಗಾಗಿರುವುದು ಇದರಿಂದ ವ್ಯಕ್ತವಾಗುತ್ತದೆ.

ಭೂತೊಗಟೆಯ ಒಳಭಾಗ ಕ್ರಮಶಃ ಗಡಸಾದುದನ್ನು ಅನೇಕ ಡಯಬೇಸಿಕ್ ಡೈಕುಗಳು ತೋರಿಸಿವೆ. ಭೂತೊಗಟೆಯಲ್ಲಿ ಹಲವು ನೂರು ಕಿಮೀ ಗಳಷ್ಟು ವ್ಯಾಪಕವಾಗಿ ಹರಡಿರುವ ದೊಡ್ಡ ಬಿರುಕುತನ ಅಥವಾ ಸಂದುಗಳಲ್ಲಿ ಈ ಡೈಕುಗಳು ತುಂಬಿ ಹೋಗಿವೆ. ಮೊತ್ತಮೊದಲು ರಚಿತವಾದ ಡೈಕ್ ಸಮುದಾಯಗಳು ಇನ್ನೂರ ಐವತ್ತು ಕೋಟಿ ವರ್ಷಗಳಷ್ಟು ಪ್ರಾಚೀನದಿಂದ ಇಪ್ಪತ್ತನಾಲ್ಕು ಲಕ್ಷ ವರ್ಷಗಳಷ್ಟು ಪ್ರಾಚೀನವಾದವೆಂದು ನಿರ್ಧರಿಸಲಾಗಿದೆ. ಈ ಡೈಕುಗಳು ರಚನೆಗೊಂಡಾಗ ಮತ್ತು ತಗ್ಗು ಪ್ರದೇಶಗಳಲ್ಲಿ ಬದಲಾವಣೆಗಳಾದಾಗ ಕೆಲವು ನಿಕ್ಷೇಪಗಳು ಬದಲಾಗದೆ ಉಳಿದವು. ಎಂದೇ ಕೆಲವು ನಿರ್ದಿಷ್ಟ ಸ್ಥಿರ ಭಾಗಗಳು ಇತರೆ ಚಲಿಸುವ ಸಾಮರ್ಥ್ಯವುಳ್ಳ ಭಾಗಗಳಿಂದ ನಿರ್ದಿಷ್ಟವಾಗಿ ಪ್ರತ್ಯೇಕಗೊಂಡು ಕಂಡುಬಂದಿವೆ. ಪೂರ್ವ ಕೇಂಬ್ರಿಯನ್ ಕಾಲದ ಪ್ರಾರಂಭದಲ್ಲಿ, ಚಲಿಸುವ ಸ್ಥಿತಿಯಲ್ಲಿದ್ದ ಪ್ರತಿಯೊಂದು ಭೂಭಾಗವನ್ನು ಪ್ರತ್ಯೇಕವಾಗಿ ಗುರುತಿಸುವುದು ಅಸಾಧ್ಯ. ಇಡೀ ಭೂತೊಗಟೆ ಚಲಿಸುವ ಸ್ಥಿತಿಯಲ್ಲಿದ್ದುದೇ ಇದರ ಕಾರಣ. ಆದರೆ ಒಮ್ಮೆ ಸ್ಥಿರ ಭಾಗಗಳ ರಚನೆಯಾಯಿತೆಂದರೆ, ಭೂಕಾಲದ ಯಾವುದೇ ವೇಳೆಯಲ್ಲಿ ಭೂತೊಗಟೆಯಲ್ಲಿ ಸ್ಥಿರ ಮತ್ತು ಗಡಸಾದ ಪ್ರದೇಶವನ್ನು ಒಳಗೊಂಡ ಮತ್ತು ಚಲಿಸುವ ಸ್ಥಿತಿಯಲ್ಲಿದ್ದ ಭಾಗಗಳ ಜಾಲವಿತ್ತೆಂದು ಪರಿಗಣಿಸಬಹುದು. *

**ಪೂರ್ವಘಟ್ಟಗಳು:** ದಕ್ಷಿಣ ಭಾರತದ ತ್ರಿಕೋಣಾಕಾರದ ಪರ್ಯಾಯ ಪ್ರಸ್ಥ ಭೂಮಿಯ ಪೂರ್ವದ ಅಂಚಿನಲ್ಲಿ ಹೊಂದಿಕೊಂಡಂತೆ ಹಬ್ಬಿರುವ ತಗ್ಗಿನ ಬೆಟ್ಟಗಳು. ಪೂರ್ವ ಘಟ್ಟಗಳು ಒರಿಸ್ಸ ರಾಜ್ಯದ ಬಾಲಸೂರ್‌ನಿಂದ ಪ್ರಾರಂಭವಾಗಿ ಆಂಧ್ರಪ್ರದೇಶದ ಮೂಲಕ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯವರೆಗೆ ಸು. 1,600 ಕಿಮೀ ದೂರ ಹಬ್ಬಿವೆ. ಗಂಜಾಮ್ ಮತ್ತು ವಿಶಾಖಪಟ್ಟಣಗಳ ಬಳಿ ಇವು ಬಂಗಾಳ ಕೊಲ್ಲಿಗೆ ಬಹಳ ಸಮೀಪದಲ್ಲಿ ಸಾಗಿವೆ. ಆದರೆ ದಕ್ಷಿಣದಲ್ಲಿ ಇವು ಒಳನಾಡಿನ ಕಡೆ ಸರಿಯುತ್ತ ಹೋಗುತ್ತವೆ. ಅಲ್ಲಿ ಪೂರ್ವ ಚಾಚುಗಳಿಗೂ ಸಮುದ್ರ ತೀರಕ್ಕೂ ನಡುವೆ 160 ರಿಂದ 240 ಕಿಮೀ ವರೆಗಿನ ಅಂತರದ ತಗ್ಗು ಭೂಮಿ ಇದೆ. ಚಿಲ್ಕ ಸರೋವರದ ಬಳಿ ಘಟ್ಟಗಳ ಎತ್ತರ 366–914 ಮೀ ವರೆಗೆ; ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಭಾಗಗಳಲ್ಲಿ 914 ಮೀ ಪೂರ್ವ ಘಟ್ಟಗಳು ಪಶ್ಚಿಮ ಘಟ್ಟಗಳಂತೆ ಅವಿಚ್ಛಿನ್ನವಾಗಿ ಹಬ್ಬಿಲ್ಲದೆ ಸಣ್ಣ ಸಣ್ಣ ಗಿರಿಗುಚ್ಛಗಳಲ್ಲಿ ಅನೇಕ ತೆರಪುಗಳೊಂದಿಗೆ ಸಾಗಿವೆ.

ಪೂರ್ವಘಟ್ಟಗಳು ಹಬ್ಬಿರುವ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ ಘಟ್ಟ ಸಾಲುಗಳಲ್ಲಿ ಬಗೆಬಗೆಯ ಶಿಲಾ ಪದರಗಳಿವೆ. ಗಂಜಾಮ್, ವಿಶಾಖಪಟ್ಟಣ ಹಾಗೂ ಗೋದಾವರಿ ಭಾಗಗಳ ಬೆಟ್ಟಗಳು ತಗ್ಗಾಗಿವೆ. ಅಲ್ಲಲ್ಲಿ ತೇಗದ ಮರಗಳ ಅರಣ್ಯಗಳಿಗೆ ಈ ಬೆಟ್ಟಗಳು ಕೊಂಡ, ಸಾವರ, ಕೋಯಿ ಮೊದಲಾದ ಆದಿವಾಸಿಗಳ ನೆಲೆಗಳಾಗಿವೆ. ಈ ಭಾಗದ ಅತ್ಯಂತ ಎತ್ತರವಾದ ಬೆಟ್ಟ ಗಂಜಾಮ್ ಜಿಲ್ಲೆಯ ಮಹೇಂದ್ರಗಿರಿ (1524 ಮೀ). ಮತ್ತಷ್ಟು ದಕ್ಷಿಣಕ್ಕೆ ದೂರದಲ್ಲಿ ಕರ್ನೂಲ್ ಜಿಲ್ಲೆಯ ಕಡೆ ಪೂರ್ವ ಘಟ್ಟಗಳಲ್ಲಿ ಅನೇಕ ಬೆಟ್ಟಗಳು ಅಡ್ಡಅಡ್ಡವಾಗಿ ಹಬ್ಬಿವೆ. ಅವಕ್ಕೆ ನಲ್ಲಮಲೈ ಎಂಬ ಹೆಸರಿದೆ. ಅವುಗಳ ಎತ್ತರ ಸು. 914 ಮೀ. ಅಲ್ಲಿ ವಾರ್ಷಿಕ ಮಳೆ 76–1,01 ಸೆಂಮೀ. ಆ ಬೆಟ್ಟಗಳಲ್ಲಿ ಚೆಂಚು ಎಂಬ ಆದಿವಾಸಿಗಳಿದ್ದಾರೆ. ಮತ್ತಷ್ಟು ದಕ್ಷಿಣದಲ್ಲಿ ಕಡಪದ ಕಡೆಗೆ ಪೂರ್ವ ಘಟ್ಟಗಳಿಗೆ ಪಾಲ್‌ಕೊಂಡ ಮೊದಲಾದ ಸ್ಥಳೀಯ ಹೆಸರುಗಳಿವೆ. ಅಲ್ಲಿಯ ಅರಣ್ಯಗಳಲ್ಲಿ ಕೆಂಪು ಗಂಧದ ಮರಗಳಿವೆ. ಆಂಧ್ರ ಪ್ರದೇಶದ ವೆಂಕಟಗಿರಿ, ಚಂದ್ರಗಿರಿ, ತಿರುಪತಿ, ಪೆನುಕೊಂಡ ಮೊದಲಾದ ಬೆಟ್ಟಗಳು ಪೂರ್ವ ಘಟ್ಟಗಳಿಗೆ ಸೇರಿವೆ.

ಪೂರ್ವ ಘಟ್ಟಗಳು ಆಂಧ್ರ ಪ್ರದೇಶದ ದಕ್ಷಿಣದಲ್ಲಿ ನೈರುತ್ಯಕ್ಕೆ ತಿರುಗಿ ತಮಿಳುನಾಡಿನ ಉತ್ತರ ಆರ್ಕಾಟ್, ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳ ಕಡೆಗೆ ಹಬ್ಬಿವೆ. ಈ ಭಾಗದಲ್ಲೂ ಅವುಗಳ ಸಾಲು ಸ್ಪಷ್ಟವಾಗಿಲ್ಲ. ಬೆಟ್ಟಗಳು ವಿಭಜಿತವಾಗಿವೆ. ಕರ್ನಾಟಕ

ಭಾಗದ ಬಿಳಿಗಿರಿರಂಗನ ಬೆಟ್ಟ ಪೂರ್ವ ಘಟ್ಟಗಳ ಶ್ರೇಣಿಗೆ ಸೇರಿದ್ದು. ಬಿಳಿಗಿರಿರಂಗನ ಬೆಟ್ಟದ ದಕ್ಷಿಣಕ್ಕೆ ತಮಿಳುನಾಡಿನ ನೀಲಗಿರಿ ಭಾಗದಲ್ಲಿ ಪೂರ್ವಘಟ್ಟಗಳು ಈಶಾನ್ಯಾಭಿಮುಖವಾಗಿ ಕವಲೊಡೆದು ಬರುವ ಪಶ್ಚಿಮ ಘಟ್ಟಗಳನ್ನು ಪಾಲಘಾಟ್ ತೆರಪಿನ ಉತ್ತರದಲ್ಲಿ ಸಂಧಿಸಿ ಅವುಗಳೊಂದಿಗೆ ಸೇರಿ ಹೋಗಿವೆ.

ತಮಿಳುನಾಡಿನಲ್ಲಿ ಪೂರ್ವ ಘಟ್ಟಗಳ ಉತ್ತರ ಭಾಗಕ್ಕೆ ಪಾಲಘಾಟ್, ದಕ್ಷಿಣ ಭಾಗಕ್ಕೆ ಪೈನ್ ಘಾಟ್ ಎಂಬ ಹೆಸರುಗಳಿದ್ದವು. ಈ ಭಾಗಗಳು 18 ನೆಯ ಶತಮಾನದ ಕರ್ನಾಟಕ ಯುದ್ಧಗಳಲ್ಲಿ ಪ್ರಸಿದ್ಧವಾಗಿವೆ. ಪೂರ್ವ ಘಟ್ಟಗಳಿಗೂ ಬಂಗಾಲ ಕೊಲ್ಲಿಗೂ ನಡುವೆ ಇರುವ, ಈಗಿನ ಆಂಧ್ರ ಹಾಗೂ ತಮಿಳುನಾಡಿನ ತೀರಪ್ರದೇಶಕ್ಕೆ ತೊಂಡಮಂಡಲಮ್ ಎಂಬ ಹೆಸರಿತ್ತು. ತಮಿಳುನಾಡಿನ ಕರಾವಳಿ ಪ್ರದೇಶವನ್ನು ಕೊರನಾಡು ಹಾಗೂ ಕೋರಮಂಡಲಮ್ ಎಂದೂ ಕರೆಯಲಾಗುತ್ತಿತ್ತು. ಪಶ್ಚಿಮ ಘಟ್ಟಗಳಂತಲ್ಲದೇ, ಪೂರ್ವ ಘಟ್ಟಗಳಲ್ಲಿ ಅನೇಕ ತೆರಪುಗಳಿದ್ದು ಅವು ಜನರ ಸಂಪರ್ಕಕ್ಕೆ ಅನುಕೂಲ ಉಂಟುಮಾಡಿವೆ. ಈ ಘಟ್ಟಗಳಿಗೂ ಬಂಗಾಲ ಕೊಲ್ಲಿಗೂ ನಡುವಣ ಬಯಲು ನಾಡಿನಲ್ಲಿ ಪೂರ್ವ ಚಾಳುಕ್ಯ, ಕಳಿಂಗ, ನೊಳಂಬ, ಗಂಗ, ಚೋಳ, ವಿಜಯನಗರ ಮೊದಲಾದ ಸಾಮ್ರಾಜ್ಯಗಳು ಸ್ಥಾಪಿತವಾಗಿದ್ದವು. ಪೂರ್ವ ಘಟ್ಟಗಳ ಭಾಗದ ಪ್ರಮುಖ ಸ್ಥಳಗಳು ಒರಿಸ್ಸಾದ ಪುರಿ ಮತ್ತು ಗಂಜಾಮ್; ಆಂಧ್ರಪ್ರದೇಶದ ಭದ್ರಾಚಲಮ್, ವಿಶಾಖಪಟ್ಟಣ, ರಾಜಮಹೇಂದ್ರಿ, ಎಲ್ಲೂರು, ದೇವರಕೊಂಡ, ವಿನುಕೊಂಡ, ಉದಯಗಿರಿ, ಕಡಪ, ನೆಲ್ಲೂರು, ವೆಂಕಟಗಿರಿ, ಪುಲಿಕಾಡು, ತಿರುಪತಿ ಮತ್ತು ಪೆನುಕೊಂಡ. ತಮಿಳುನಾಡಿನ ಕಾಂಚೀಪುರ, ವೆಲ್ಲೂರು, ಕೃಷ್ಣಗಿರಿ, ಜಾಲಾರ್‌ಪೇಟೆ, ತಿರುವಣ್ಣಾಮಲೈ, ಧರ್ಮಪುರಿ, ಏರ್ಕಾಡು, ಸೇಲಂ, ಮೆಟ್ಟೂರು, ಈರೋಡ್ ಹಾಗೂ ಭವಾನಿ.

ಪೂರ್ವ ಘಟ್ಟಗಳಲ್ಲಿ ಹುಟ್ಟಿ ಹರಿಯುವ ನದಿಗಳು ಕಡಿಮೆ. ಮಳೆ ಹೆಚ್ಚಾಗಿರುವ ಉತ್ತರದಲ್ಲಿ ಋಷಿಕುಲ್ಯಾ ಹಾಗೂ ಲಾಂಗುಲ್ಯಾ ನದಿಗಳು ಮತ್ತು ಗೋದಾವರಿಯ ಕೆಲವು ಉಪನದಿಗಳು ಉಗಮಿಸಿ ಹರಿಯುತ್ತವೆ. ಆದರೆ ದಕ್ಷಿಣದಲ್ಲಿ ಪ್ರಮುಖ ನದಿಗಳು ಯಾವುವೂ ಈ ಘಟ್ಟಗಳಿಂದ ಹರಿಯುವುದಿಲ್ಲ. ಅರಬ್ಬಿ ಸಮುದ್ರದಂಚಿನ ಪಶ್ಚಿಮ ಘಟ್ಟಗಳಲ್ಲಿ ಹುಟ್ಟುವ ಗೋದಾವರಿ, ಕೃಷ್ಣಾ, ಕಾವೇರಿ ನದಿಗಳು ಪೂರ್ವಾಭಿಮುಖವಾಗಿ ಸಾಗಿ ಪೂರ್ವ ಘಟ್ಟಗಳ ಹಲವಾರು ತೆರಪುಗಳ ಮೂಲಕ ಹರಿದು ಬಂಗಾಲ ಕೊಲ್ಲಿಯನ್ನು ಸೇರುತ್ತವೆ. (ವಿ.ಜಿ.ಕೆ.)

**ಪೃಥಕ್ಕರಣ:** ವಸ್ತುವಿನ ಬಗ್ಗೆ ಅತ್ಯಂತ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾದ ಹಾಗೂ ದಾಖಲಿಸಲ್ಪಡಬಹುದಾದ ಸಾಮರ್ಥ್ಯ. ದೂರಸಂವೇದಿ ವ್ಯವಸ್ಥೆಯಲ್ಲಿ ಪಡೆಯಲಾದ ವಸ್ತುವಿನ ಮಾಹಿತಿಯ ವಿವರಗಳು ಹಾಗೂ ವೀಕ್ಷಿಸಲಾದ ಒಟ್ಟು ಪ್ರದೇಶದ ಸಂವೇದಕ ದೂರ ಸಂವೇದಿ ಹಾಗೂ ಆ ವಸ್ತುಗಳಿಗೂ ಇರುವ ದೂರವನ್ನು ಅವಲಂಬಿಸಿರುತ್ತದೆ. ಸಂವೇದಕಗಳಿಂದ ವೀಕ್ಷಿಸಲಾದ ಪ್ರದೇಶ ವಿಶಾಲವಾಗಿದ್ದರೆ ವಸ್ತುಗಳ ಬಗ್ಗೆ ವಿವರಗಳು ಕಡಿಮೆಯಾಗುತ್ತವೆ. ಹಾಗೆಯೇ ಕಡಿಮೆ ಎತ್ತರದಿಂದ ಪಡೆಯಲಾದ ಮಾಹಿತಿಯು (ವಿಮಾನ) ಕಡಿಮೆ ಪ್ರದೇಶವನ್ನೊಳಗೊಂಡಿದ್ದು ಹೆಚ್ಚು ವಿವರಗಳನ್ನು ಹೊಂದಿರುತ್ತವೆ. ದೂರ ಸಂವೇದಿಯಲ್ಲಿ ನಾಲ್ಕು ಬಗೆಯ ಪೃಥಕ್ಕರಣಗಳನ್ನು ಗುರುತಿಸಬಹುದು.

1. ಪ್ರಾದೇಶಿಕ ಪೃಥಕ್ಕರಣ: ಒಂದು ದರ್ಶನದಲ್ಲಿ ದೊರೆಯಬಹುದಾದ ಒಟ್ಟು ವಿವರಗಳು ಉಪಗ್ರಹದಲ್ಲಿ ಅಳವಡಿಸಲಾದ ಸಂವೇದಕದ ಪ್ರಾದೇಶಿಕ ಪೃಥಕ್ಕರಣದ ಅಂಶಗಳನ್ನು ಅವಲಂಬಿಸಿರುತ್ತದೆ. ಅಂದರೆ ಅತ್ಯಂತ ಕಡಿಮೆ ಗಾತ್ರದ ವಸ್ತುಗಳನ್ನು ಪತ್ತೆ ಹಚ್ಚುವ ಸಾಮರ್ಥ್ಯ. ಸಾಮಾನ್ಯವಾಗಿ ಸಂವೇದಕದ ತತ್‌ಕ್ಷಣದ ವೀಕ್ಷಣೆಯನ್ನೂ ಅವಲಂಬಿಸಿರುತ್ತದೆ. ಇದು ಸಂವೇದಕಗಳನ್ನು ಇರಿಸಿದ ಕೋನ ಹಾಗೂ ಒಂದು ಕ್ಷಣದಲ್ಲಿ ಗೊತ್ತಾದ ಎತ್ತರದಲ್ಲಿ ಸಂವೇದಕ ನೋಡಬಹುದಾದ ಭೂಮಿಯ ಪಾರ್ಶ್ವ ಪ್ರದೇಶ ಹೆಚ್ಚು ಪೃಥಕ್ಕರಣ ಹೊಂದಿದ ದರ್ಶನದಲ್ಲಿ ಚಿಕ್ಕ ವಸ್ತುಗಳೂ ಕಡಿಮೆ ಪೃಥಕ್ಕರಣ ಹೊಂದಿದ ದರ್ಶನದಲ್ಲಿ ದೊಡ್ಡ ವಸ್ತುಗಳು ಮಾತ್ರ ಗೋಚರಿಸುತ್ತವೆ

2. ರೋಹಿತ ಪೃಥಕ್ಕರಣ: ರೋಹಿತ ಪೃಥಕ್ಕರಣ ತರಂಗಾಂತರದ ಮಧ್ಯಂತರವನ್ನು ಅವಲಂಬಿಸಿರುತ್ತದೆ. ಒಂದು ಉಪಗ್ರಹದಲ್ಲಿ ಹೆಚ್ಚು ರೋಹಿತ ಬ್ಯಾಂಡುಗಳಿದ್ದು ಅವುಗಳ ಅಂತರ ಕಡಿಮೆಯಿದ್ದರೆ ರೋಹಿತ ಪೃಥಕ್ಕರಣ ಹೆಚ್ಚಿರುತ್ತದೆ. ಹಾಗೆಯೇ ಕಡಿಮೆ ಬ್ಯಾಂಡುಗಳು ಹಾಗೂ ಅವುಗಳ ಮಧ್ಯಂತರ ಜಾಸ್ತಿಯಿದ್ದರೆ ಪೃಥಕ್ಕರಣ ಕಡಿಮೆಯಿರುತ್ತದೆ. ಬಹು ರೋಹಿತ ಸಂವೇದಕಗಳು ಹಲವಾರು ರೋಹಿತ ಬ್ಯಾಂಡುಗಳಲ್ಲಿ ವಿಷಯವನ್ನು ಅದರಲ್ಲೂ ವಿದ್ಯುತ್ ಕಾಂತೀಯ ವರ್ಣಪಟಲದ ಗೋಚರ ಹಾಗೂ ರಕ್ತಾತೀತ ಭಾಗಗಳಲ್ಲಿ ಪ್ರತಿಫಲಿಸುವ ವಿಕಿರಣಗಳನ್ನು ಸಂಗ್ರಹಿಸುತ್ತವೆ. ರೋಹಿತ ಪೃಥಕ್ಕರಣ ಹೆಚ್ಚಾಗಿರುವ ಸಂವೇದಕಗಳು ವಸ್ತುಗಳ ಅತಿ ಸೂಕ್ಷ್ಮ ವಿಂಗಡಣೆಯನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತವೆ.

3. ರೇಡಿಯೋ ಮಾಪನ ಪೃಥಕ್ಕರಣ: ರೇಡಿಯೋ ಮಾಪನ ಪೃಥಕ್ಕರಣ ದರ್ಶನದ ಒಂದು ನಿರ್ದಿಷ್ಟ ಭಾಗದಲ್ಲಿ ವಸ್ತುವಿನ ಬಗ್ಗೆ ಅಡಕವಾಗಿರುವ ಮಾಹಿತಿಯಾಗಿದೆ. ಇದನ್ನು ಇಂಗ್ಲಿಷಿನಲ್ಲಿ ಡಿಜಿಟಲ್ ನಂಬರ್ ಎಂದು ಕರೆಯುತ್ತಾರೆ. ಇದು ಒಂದು ಸಂವೇದಕದ ವಿದ್ಯುತ್ ಕಾಂತೀಯ ವಿಕಿರಣ ಶಕ್ತಿಯನ್ನು ಪತ್ತೆ ಹಚ್ಚುವ ಸಾಮರ್ಥ್ಯವೂ ಹೌದು. ಸಂವೇದಕದ ರೇಡಿಯೋ ಮಾಪನ ಪೃಥಕ್ಕರಣ ಹೆಚ್ಚಾಗಿದ್ದಾಗ ಅವು ಪ್ರತಿಫಲಿತ ಅಥವಾ ಉತ್ಸರ್ಜಿಸುವ ಶಕ್ತಿಯಲ್ಲಾಗುವ ಕಡಿಮೆ ವ್ಯತ್ಯಾಸವನ್ನು ಗುರುತಿಸಬಲ್ಲವು. ಒಂದು ಚಿತ್ರದಲ್ಲಿನ (ದರ್ಶನ) ಅಂಕಿ ಅಂಶಗಳು ಧನಅಂಕೆಗಳಲ್ಲಿ ಪ್ರತಿನಿಧಿಸುತ್ತಿದ್ದು ಈ ಬಿಟ್ಸ್‌ಗಳು 2, 4, 8, 16, 64 ಹಾಗೂ 256 ಅಂಕೀಯ ಮೌಲ್ಯದಲ್ಲಿ ಲಭ್ಯವಿರುತ್ತವೆ, ಕಂದು ಬಣ್ಣದ ಚಿತ್ರದಲ್ಲಿ ಕಪ್ಪುಬಣ್ಣದ ಮೌಲ್ಯದಲ್ಲಿ ಲಭ್ಯವಿರುತ್ತವೆ, ಕಂದು ಬಣ್ಣದ ಚಿತ್ರದಲ್ಲಿ ಕಪ್ಪುಬಣ್ಣದ ಅಂಕಿಯ ಮೌಲ್ಯ 0 (ಶೂನ್ಯ) ಆಗಿದ್ದು ಬಿಳಿ ಬಣ್ಣದ ಮೌಲ್ಯ 255 ಆಗಿರುತ್ತದೆ.

4. ಕಾಲಿಕ ಪೃಥಕ್ಕರಣ : ಕಾಲಿಕ ಪೃಥಕ್ಕರಣ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಪಡೆಯಲಾದ ದತ್ತಾಂಶಗಳ ಆವರ್ತನವನ್ನು ಸೂಚಿಸುತ್ತದೆ. ಇದು ಉಪಗ್ರಹ ಒಂದು ನಿರ್ದಿಷ್ಟ ಪ್ರದೇಶಕ್ಕೆ ಮತ್ತೆ ಮರಳಿ ಬರುವ ಅವಧಿಯೂ ಆಗಿರುತ್ತದೆ. ಉಪಗ್ರಹವು ಆ ಸ್ಥಾನಕ್ಕೆ ಬರಲು ಅನೇಕ ದಿವಸಗಳನ್ನು ತೆಗೆದುಕೊಳ್ಳಬಹುದು (ಉದಾ: ಭಾರತದ ಉಪಗ್ರಹಗಳು ಮತ್ತದೇ ಸ್ಥಾನಕ್ಕೆ ಬರಲು 22 ದಿವಸ ಬೇಕು). ಸಂವೇದಕದ ಕಾಲಿಕ ಪೃಥಕ್ಕರಣ ಅನೇಕ ಅಂಶಗಳನ್ನು ಅವಲಂಬಿಸಿದೆ. ಸಂವೇದಕದ ಸಾಮರ್ಥ್ಯ, ಎತ್ತರ ಹಾಗೂ ವೀಕ್ಷಿಸಲಾದ ಪ್ರದೇಶ ಅಥವಾ ಭೂ ಪಟ್ಟಿಯನ್ನು ಅವಲಂಬಿಸಿರುತ್ತದೆ. ಭೂ ಮೇಲ್ಮೈಯ ಬದಲಾವಣೆಗೊಳ್ಳುತ್ತಿರುವ ಚಟುವಟಿಕೆಗಳನ್ನು ಹೋಲಿಸಲು ಕಾಲಿಕ ಪೃಥಕ್ಕರಣ ಪರಿಣಾಮಕಾರಿ. (ಕೆ.ಎಂ.)

**ಪೆಟಗೋನಿಯ:** ದಕ್ಷಿಣ ಅಮೆರಿಕದ ಅರ್ಜಂಟೈನ ರಾಜ್ಯದ ಇಡೀ ದಕ್ಷಿಣ ಭಾಗ, ಬಹುಮಟ್ಟಿಗೆ ಮರುಭೂಮಿ. ಪೆಟಗೋನಿಯ (ಶಾಪಗ್ರಸ್ಥ ಭೂಮಿ) ಎಂಬುದು 16 ನೆಯ ಶತಮಾನದಲ್ಲಿ ಇಲ್ಲಿಯ ಕಡಲ ತೀರದಲ್ಲಿ ಸಂಚರಿಸಿದ ಪೋರ್ಚುಗೀಸ್ ನಾವಿಕ ಫರ್ಡಿನೆಂಡ್ ಮಜೆಲನ್ ಇಟ್ಟ ಹೆಸರು. ವಿಸ್ತೀರ್ಣ 6,73,000 ಚ.ಕಿಮೀ. ಉತ್ತರ ಹಾಗೂ ದಕ್ಷಿಣ ಅಮೆರಿಕ ಖಂಡಗಳಲ್ಲಿ ಅತ್ಯಂತ ದೊಡ್ಡದಾದ ಈ ಮರುಭೂಮಿ ಪ್ರದೇಶ. ದ.ಅ. $37^0$–$51^0$ ವರೆಗೆ ವ್ಯಾಪಿಸಿದೆ, ಇದರ ಪಶ್ಚಿಮಕ್ಕೆ ಆಂಡೀಸ್ ಪರ್ವತಗಳು. ಉತ್ತರಕ್ಕೆ ಕಾಲರಾಡೋ ನದಿ. ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ ; ದಕ್ಷಿಣಕ್ಕೆ ಕೊಯಿಗ್ ನದಿ ಇವೆ. ಪ್ಯಾಟಗೋನಿಯ ಮರುಭೂಮಿಯೊಳಗಿನ ಅರ್ಜೆಂಟೈನ ಪ್ರಾಂತ್ಯಗಳು ನ್ಯೂ ಗ್ಯುಯೆನ್ ರಿಯೋ ನಾಗ್ರೋ, ಚೂಭಟ್ ಮತ್ತು ಸಾಂತಕ್ರೂಜ್ ದಕ್ಷಿಣ ಅಮೆರಿಕದ ದಕ್ಷಿಣ ತುದಿಯ ಟೈರಾಡೆಲ್ ಫ್ಯೂಗೋ ದ್ವೀಪಗಳು ಈ ಮರುಭೂಮಿಯ ಭಾಗಕ್ಕೆ ಸೇರಿವೆ.

ಮೇಲ್ಮೈ ಲಕ್ಷಣ : ಪೆಟಗೋನಿಯ ಮರುಭೂಮಿ ಆಂಡೀಸ್ ಪರ್ವತದಿಂದ ಅಟ್ಲಾಂಟಿಕ್ ಸಾಗರದವರೆಗಿನ ಸಮತಲ ಭೂಮಿಯನ್ನು ಆವರಿಸಿದೆ. ಇದು ಹುಲ್ಲುಗಾಡು ಲಕ್ಷಣದ ಪ್ರದೇಶ. ಕಾಡು ಮರಗಳು ಕಡಿಮೆ. ಭೂಮಿ ಕಡಲ ತೀರದಿಂದ ಆಂಡೀಸ್ ಪರ್ವತದವರೆಗೆ ಮೆಟ್ಟಿಲು ಮೆಟ್ಟಿಲಾಗಿ ಏರಿದೆ. ನಾಗ್ರೋ ನದಿಯ ಉದ್ದಕ್ಕೂ ಭೂಮಿ ಸಮುದ್ರ ಮಟ್ಟದಿಂದ 900 ಮೀ ಎತ್ತರದಲ್ಲಿದೆ. ಲೀಮೆ ಮತ್ತು ನ್ಯೂಗ್ಯುಯನ ನದಿಗಳ ಸಂಗಮ ಸ್ಥಳದಲ್ಲಿ ಭೂಮಿ 400 ಮೀ ಎತ್ತರಕ್ಕಿದೆ. ಆಂಡೀಸ್ ಪರ್ವತಗಳಿಂದ ಪ್ರಸ್ತುತ ಹರಿಯುತ್ತಿರುವ ನದಿಗಳು ಕೊಲರಾಡೊ, ನಾಗ್ರೋ ಚೂಬಟ್, ಸೆನ್‌ಗ್ಯೂರ್, ಚೀಕೊ ಮತ್ತು ಸಾಂತಕ್ರೂಜ಼್ ಷೆಹ್ಯೂನ್, ಕೊಯಿಗ್, ಗಾಲೆಗೊಸ್ ಮೊದಲಾದ ಕೆಲವು ಚಿಕ್ಕ ನದಿಗಳು ಮಳೆಗಾಲದಲ್ಲಿ ಮಾತ್ರ ಹರಿಯುತ್ತವೆ. ವಿಯೆಗ್‌ಮಾ ಮತ್ತು ಅರ್ಜೆಂಟೈನ ಸರೋವರಗಳ ಹೊರತು ಉಳಿದವುಗಳಲ್ಲಿ ಹುಟ್ಟಿದ ನದಿಗಳು ಆಂಡೀಸ್ ಪರ್ವತಗಳ ಮೂಲಕ ಪಶ್ಚಿಮಕ್ಕೆ ಹರಿದು ಪೆಸಿಫಿಕ್ ಸಾಗರವನ್ನು ಸೇರುತ್ತವೆ.

ವಾಯುಗುಣ : ಪೆಸಿಫಿಕ್ ಸಾಗರದಿಂದ ಪೂರ್ವಕ್ಕೆ ಸಾಗಿಬರುವ ಆರ್ದ್ರ ವಾಯು ಆಂಡೀಸ್ ಪರ್ವತಗಳನ್ನು ದಾಟಿ ಪ್ಯಾಟಗೋನಿಯ ಮರುಭೂಮಿಗೆ ಬರುವ ಹೊತ್ತಿಗೆ ತನ್ನ ಆರ್ದ್ರತೆಯನ್ನು ಕಳೆದುಕೊಳ್ಳುತ್ತದೆ. ವಾಯುಗುಣರೀತ್ಯ ಪ್ಯಾಟಗೋನಿಯ ಮರುಭೂಮಿಯನ್ನು ಉತ್ತರ ಮತ್ತು ದಕ್ಷಿಣ ವಲಯಗಳಾಗಿ ವಿಭಾಗಿಸಲಾಗಿದೆ. 1.ಉತ್ತರದ ವಲಯದಲ್ಲಿ ಅರೆಬಂಜರು ಭೂಮಿ; ಇಲ್ಲಿ ವಾರ್ಷಿಕ ಗರಿಷ್ಠ ಉಷ್ಣತೆ $41^0$–$45^0$ಸೆ. ನಡುವೆ ಇರುತ್ತದೆ. ವಾರ್ಷಿಕ ಮಳೆ 10–42 ಸೆಂಮೀ. ನೈಋತ್ಯದಿಂದ ಬೀಸುವ ಗಾಳಿ ತೀರ ಬೆಚ್ಚಗೆ ಇಲ್ಲವೆ ತೀರ ಶೀತವಾಗಿರುತ್ತದೆ. 2 ದಕ್ಷಿಣ ವಲಯದ ಆಂಡೀಸ್ ಪರ್ವತ ಶ್ರೇಣಿಯ ಬೆಚ್ಚನೆಯ ಹವೆಗೆ ಭಿನ್ನವಾದ್ದು. ಸಮುದ್ರ ಮಟ್ಟಕ್ಕೆ ಎತ್ತರದ ಭೂಭಾಗಗಳಲ್ಲಿ ಪಶ್ಚಿಮದಿಂದ ಬೀಸುವ ಶೀತಗಾಳಿ ಹಾಗೂ ಫಾಕ್ಲೆಂಡ್ ದ್ವೀಪಗಳಿಂದ ಬರುವ ಶೀತ ಪ್ರವಾಹದಿಂದ ಈ ಪ್ರದೇಶ ಪ್ರಭಾವಿತವಾಗಿದೆ. ಇದರ ದಕ್ಷಿಣಕ್ಕೆ ಅಟ್ಲಾಂಟಿಕ್ ಸಾಗರದ ವಾಯುಗುಣವಿದೆ. ಅಲ್ಲಿಯ ಕರಾವಳಿ ಪ್ರದೇಶದಲ್ಲಿ ಉಷ್ಣತೆ ಅಧಿಕ. ಒಳನಾಡಲ್ಲಿ ಪಶ್ಚಿಮದಿಂದ ಶೀತಗಾಳಿ ಬೀಸುತ್ತದೆ. ವಾರ್ಷಿಕ ಗರಿಷ್ಠ ಉಷ್ಣತೆ ಸು. $42^0$ಸೆ. ಕನಿಷ್ಠ ಉಷ್ಣತೆ $9^0$–$33^0$ಸೆ. ಸರಾಸರಿ ವಾರ್ಷಿಕ ಮಳೆ 45 ಸೆಂಮೀ. ಪೆಟಗೋನಿಯ ಮಧ್ಯಭಾಗದ ಮರಳ್ಗಾಡಿನಲ್ಲಿ ಮಳೆ ಕಡಿಮೆ. ಬಿಸಿಲಿನ ತಾಪ ಅಧಿಕ.

ಸಸ್ಯ ಪ್ರಾಣಿವರ್ಗ : ಪೆಟಗೋನಿಯದ ಪಶ್ಚಿಮ ಅಂಚಿನ ಉದ್ದಕ್ಕೂ ಆಂಡೀಸ್ ಪರ್ವತಗಳಲ್ಲಿರುವಂಥ ಸಸ್ಯಗಳಿವೆ. ಮರುಭೂಮಿಯನ್ನು ಉತ್ತರ ಮತ್ತು ದಕ್ಷಿಣ ಸಸ್ಯ ವಲಯಗಳಾಗಿ ವಿಭಜಿಸಲಾಗಿದೆ. ಉತ್ತರ ಸಸ್ಯ ವಲಯದಲ್ಲಿ ನ್ಯೂಗ್ಯುಯೆನ್ ರೀಯೊ

ನಾಗ್ರೋ ಪ್ರಾಂತ್ಯದ ಬಹುಭಾಗವೂ ಚೊಬಟ್ ಪ್ರಾಂತ್ಯದ ಉತ್ತರ ಭಾಗವೂ ಇವೆ. ಆ ಭಾಗದಲ್ಲಿ ಗಿಡ್ಡ ಮರಗಿಡಗಳೂ ಮತ್ತು ಪೊದೆಗಳೂ ಇವೆ. ಹುಲ್ಲುಗಾವಲು ಅಧಿಕ. ನೀರಾವರಿಯಾಗುವ ಕಡೆಗಳಲ್ಲಿ ಪೀಚ್, ಪ್ಲಮ್, ದ್ರಾಕ್ಷಿ, ಖರ್ಜೂರ, ತರಕಾರಿ, ಅಲ್ಫಾಲ್ಫ ಮತ್ತು ಮೂಲಿಕೆಗಳು ಬೆಳೆಯುತ್ತವೆ. ಕೆಲವು ಭಾಗಗಳಲ್ಲಿ ಕುರುಚಲು ವನಗಳಿಂದ ಕೂಡಿದ ಬೆಂಗಾಡುಗಳಿವೆ.

ಪೆಟಗೋನಿಯದ ಸರೋವರಗಳಲ್ಲಿ ಹೆರೂನ್ ಮತ್ತು ಹಲವು ಜಲಚರ ಪಕ್ಷಿಗಳು ಇವೆ. ಮರುಭೂಮಿಯ ಕಡೆಗಳಲ್ಲಿ ಹದ್ದು, ಡೇಗೆ, ಉಷ್ಟ್ರಪಕ್ಷಿ ಜಾತಿಯ ನಂಡು ಎಂಬ ಪಕ್ಷಿ ಇವೆ. ಕಾಂಗರೂವಿನಂತೆ ಹೊಟ್ಟೆಯ ಚೀಲದಲ್ಲಿ ಮರಿಗಳನ್ನು ಇಟ್ಟುಕೊಳ್ಳುವ ಕೋಮದ್ರೆಜಾ, ಬಾವಲಿ, ನರಿ, ಸ್ಕಂಕ್, ಕಾಡು ಬೆಕ್ಕು, ಪ್ಯೂಮ, ಮೊಲ, ಕ್ವಾನಾಕೋ ವಿಷಸರ್ಪಗಳು, ಆಮೆ ಇವೆ. ಸರೋವರ ಹಾಗೂ ಸಮುದ್ರದಲ್ಲಿ ಮತ್ಸ್ಯ ಸಂಪತ್ತು ಹೇರಳವಾಗಿದೆ.

ಖನಿಜಗಳು: ಪೆಟಗೋನಿಯದ ಪ್ರಧಾನ ಖನಿಜೋತ್ಪನ್ನ ಪೆಟ್ರೋಲ್, ಕೊಮೋಡೊರೊ ರೀವಾದಾವಿಯಾ, ಪ್ಲಾಜಾ ಹುಯಿನ್ಕುಲ್ ಮುಂತಾದ ಕಡೆಗಳಲ್ಲಿ ಇದು ಹೆಚ್ಚಾಗಿ ಸಿಗುತ್ತದೆ. ಸೀಯರಾ ಗ್ರಾಂಡೇ ಬೆಟ್ಟದ ಪ್ರದೇಶದಲ್ಲಿ ಕಬ್ಬಿಣ ಅದಿರು, ನ್ಯೂಗ್ಯೂಯೆನ್ ಪ್ರಾಂತ್ಯದಲ್ಲಿ ತಾಮ್ರ ಹಾಗೂ ಚಿನ್ನ ಸಿಗುತ್ತವೆ. ಪೆಟಗೋನಿಯ ಮರುಭೂಮಿಯಲ್ಲಿ ನೈಟ್ರೇಟ್‌ಗಳು ಅಧಿಕ ಪ್ರಮಾಣದಲ್ಲಿ ದೊರೆಯುತ್ತವೆ. ಇವುಗಳನ್ನು ಯುರೋಪ್ ಮತ್ತು ಉತ್ತರ ಅಮೆರಿಕದ ಕೃಷಿ ಪ್ರದೇಶಗಳಲ್ಲಿ ಬಳಸುತ್ತಾರೆ. ಚಿಲಿದೇಶದ ಪೆಟಗೋನಿಯ ಕರಾವಳಿಯಿಂದ ರಫ್ತು ಮಾಡುವ ಬಂದರುಗಳನ್ನು ನೈಟ್ರೇಟ್ ಟೌನ್ಸ್ ಎಂದು ಕರೆಯುತ್ತಾರೆ.

ಸಾರಿಗೆ ಸಂಪರ್ಕ: ಬ್ಯೂನಸ್ ಏರೀಸ್ ಸರೋವರದಿಂದ ಬಾಹೀಯಾ ಬ್ಲಂಗ್ಕಾ ರೇವಿನವರೆಗೆ ಕರಾವಳಿಯಲ್ಲಿ 2880 ಕಿಮೀ ದೂರದ ಅರ್ಜೆಂಟೈನದ 3 ನೆಯ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತದೆ. ಮರುಭೂಮಿಯ ಕಡೆ ರಸ್ತೆಗಳು ಕಡಿಮೆ. ಅವು ಉತ್ತಮವಾಗಿಲ್ಲ. ಕರಾವಳಿಯಿಂದ ರೈಲು ಮಾರ್ಗಗಳು ಕಡಿಮೆ. ಅವೂ ಉತ್ತಮವಾದವಲ್ಲ. ರೈಲು ಮಾರ್ಗಗಳು ಪೂರ್ವದಿಂದ ಪಶ್ಚಿಮಕ್ಕೆ ಸಾಗಿವೆ. ಕರಾವಳಿಯ ಪಟ್ಟಣಗಳಿಗೆ ವಿಮಾನ ಸೌಲಭ್ಯವಿದೆ. ಮುಖ್ಯ ರೇವುಗಳು ರಾಸನ್, ಡೆಸೆಯಾಡೋ, ಸಾಂತಕ್ರೂಜ್, ಸಾನ್ ಅಂಟೋನಿಯೋ, ಸ್ಪೆಟ್ರೋಮದ್ರೈನ್, ಕಮರೊಗೀಸ್ ಮತ್ತು ಸಾನ್ ಜೂಲಿಯನ್. (ವಿ.ಜಿ.ಕೆ.)

**ಪೆಟ್ರೋಲಿಯಮ್:** ಸರ್ವೇಸಾಧಾರಣವಾಗಿ ಬಾವಿ ಕೊರೆದು ನೆಲದಡಿಯಿಂದ ಪಡೆಯಬೇಕಾಗಿರುವ, ಆದರೆ ವಿರಳವಾಗಿ ಊಟೆಗಳಲ್ಲಿ ಇಲ್ಲವೇ ಹೊಂಡಗಳಲ್ಲಿ ಕಾಣಸಿಗುವ, ಪ್ರಧಾನವಾಗಿ ಹೈಡ್ರೋಕಾರ್ಬನ್ನುಗಳಿಂದಾದ, ಎಣ್ಣೆಯಂತಿರುವ, ನಿಸರ್ಗಲಭ್ಯ ದಹನಶೀಲ ದ್ರವ. ಭೂಗರ್ಭದಿಂದ ಅನಿಲ, ದ್ರವ ಮತ್ತು ಘನ ರೂಪಗಳಲ್ಲಿ ದೊರೆಯುವ ಹೈಡ್ರೋಕಾರ್ಬನ್ನುಗಳ ಎಣ್ಣೆಯಂಥ ಮಿಶ್ರಣವನ್ನು, ನಿರ್ದೇಶಿಸಲು ಈ ಪದವನ್ನು ವ್ಯಾಪಕಾರ್ಥದಲ್ಲಿ ಬಳಸುವುದುಂಟು. ನೈಸರ್ಗಿಕ ಸ್ಥಿತಿಯಲ್ಲಿರುವ ಪೆಟ್ರೋಲಿಯಮ್‌ಗೆ ಕ್ರೂಡ್ ಆಯಿಲ್ ಅಥವಾ ಕಚ್ಚಾ ಪೆಟ್ರೋಲಿಯಮ್ ಎಂದು ಹೆಸರು. ಕಲ್ಲೆಣ್ಣೆ ಎಂದರೂ ಇದೇ. ಕಚ್ಚಾ ಪೆಟ್ರೋಲಿಯಮ್‌ನಿಂದ ಹೇಳಿಕೊಳ್ಳವಂಥ ಉಪಯೋಗವೇನೂ ಇಲ್ಲ. ಆದರೆ, ಸಂಸ್ಕರಣಾನಂತರ ಅದರಿಂದ ಗಚ್ಚೆಣ್ಣೆ (ಕೀಲೆಣ್ಣೆ), ಪ್ಯಾರಾಫಿನ್, ಸೀಮೆಎಣ್ಣೆ, ಪೆಟ್ರೋಲ್ ಮೊದಲಾದವು ಲಭಿಸುತ್ತವೆ. ಆಧುನಿಕ ಪ್ರಪಂಚ ತೀವ್ರ ಶಕ್ತ್ಯಾಧಾರಿತ ಜೀವನವನ್ನು ನಡೆಸುತ್ತಿದೆ. ಈ ಶಕ್ತಿಯನ್ನು ಬಹು ಹಂತಗಳಲ್ಲಿ ಬಹು ರೂಪಗಳಲ್ಲಿ ಒದಗಿಸುವ ಆಕರ ಪೆಟ್ರೋಲಿಯಮ್. ಪ್ರಪಂಚದ ಒಟ್ಟು ಉತ್ಪಾದಿತ ಶಕ್ತಿಯಲ್ಲಿ ಅರ್ಧದಷ್ಟು ಶಕ್ತಿ ಪೆಟ್ರೋಲಿಯಮ್‌ನಿಂದಲೇ ಪೂರೈಕೆ ಆಗುತ್ತದೆ.

ಪೆಟ್ರೋಲಿಯಮ್‌ನ ಘಟನೆ ಹಾಗೂ ಗುಣಧರ್ಮ: ಎಷ್ಟೋ ಶತಮಾನಗಳ ಕಾಲದಷ್ಟು ಹಿಂದೆ ಇದ್ದ ಸಸ್ಯ ಹಾಗೂ ಪ್ರಾಣಿಗಳಿಂದ ಪೆಟ್ರೋಲಿಯಮ್‌ನ ಉತ್ಪಾದನೆ ಆಗಿದೆ ಎಂದು ಈಗ ನಂಬಲಾಗಿದೆ. ಈಗಿನ ದಿನಗಳಲ್ಲೂ ಸಸ್ಯಗಳು ಹಾಗೂ ಪ್ರಾಣಿಗಳು ಭೂಮಿಯ ಬೇರೆ ಬೇರೆ ಭಾಗಗಳಲ್ಲಿ ವಿವಿಧವಾಗಿ ವಿತರಣೆ ಆಗಿರುವುದನ್ನು ಗಮನಿಸುವಾಗ ಪೆಟ್ರೋಲಿಯಮ್ ಉತ್ಪಾದನೆಗೆ ಮೂಲವಾದ ಸಸ್ಯಗಳ ಹಾಗೂ ಪ್ರಾಣಿಗಳ ಕಾಲದಲ್ಲಿ ಸಹ ಅವುಗಳ ವಿತರಣೆಯಲ್ಲಿ ವ್ಯತ್ಯಾಸವಿದ್ದಿರಲು ಸಾಕು. ಅಂದ ಮೇಲೆ ಈ ಮೂಲಗಳಿಂದ ಹುಟ್ಟಿದ ಉತ್ಪನ್ನಗಳ ಘಟನೆ ಸಹ ಅವುಗಳ ಅಣುರಚನಾ ಸಾಮ್ಯ ಮತ್ತು ಪ್ರಮಾಣಕ್ಕೆ ಸಂಬಂಧಿಸಿದಂತೆ ಸ್ಥಿರವಾಗಿರಲಾರದೆಂದು ನಿರೀಕ್ಷಿಸಬಹುದು. ಅದರಂತೆ ಪೆಟ್ರೋಲಿಯಮ್‌ನ ಘಟನೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಿರವಾಗಿಲ್ಲದಿರುವುದು ವಾಸ್ತವವಾಗಿ ಕಂಡುಬಂದಿದೆ. ಇಷ್ಟೇ ಅಲ್ಲ, ಕೆಲವೊಮ್ಮೆ ಒಂದೇ ಪ್ರದೇಶದಲ್ಲಿರುವ ಎರಡು ಕೊಳಗಳಲ್ಲಿಯ ಪೆಟ್ರೋಲಿಯಮ್‌ಗಳ ಘಟನೆ ಸ್ಥಿರವಾಗಿ ಇಲ್ಲದೆಯೂ ಇರಬಹುದು. ಆದ್ದರಿಂದ ಅದರ ಭೌತ ಗುಣಗಳಲ್ಲಿಯೂ ವ್ಯತ್ಯಾಸ ಇರುತ್ತದೆ.

ಭೂಮಿಯಿಂದ ಹೊರತೆಗೆದ ಪೆಟ್ರೋಲಿಯಮ್ ನೋಡಲು ಎಣ್ಣೆಯಂತಿದ್ದು ಅದರ ಮಾಂದ್ಯ ನೀರಿನಂತೆ ತೆಳುವಾಗಿರಬಹುದು. ಡಾಂಬರಿನಷ್ಟು ದಪ್ಪವಾಗಿಯೂ ಇರಬಹುದು. ಅದಕ್ಕೆ ಬಣ್ಣ ಇಲ್ಲದಿರಬಹುದು. ಅಥವಾ ಕಂದು, ಕೆಂಪು ಮತ್ತು ಕಪ್ಪು ಬಣ್ಣ ಇರಬಹುದು. ಹಾಗೂ ಹಸುರು ಪ್ರದೀಪ್ತಿ (ಫ್ಲೊರೆಸೆನ್ಸ್) ತೋರಿಸಬಹುದು. ತೆಳುವಾದ ಪೆಟ್ರೋಲಿಯಮ್ ಪಾರದರ್ಶಕವಾಗಿದೆ.

ಪೆಟ್ರೋಲಿಯಮ್‌ನ ಅಸ್ತಿತ್ವ : ಪೆಟ್ರೋಲಿಯಮ್ ಹಾಗೂ ಅದರ ಉತ್ಪನ್ನಗಳನ್ನು ಪ್ರಪಂಚದ ಎಲ್ಲ ಕಡೆ ಉಪಯೋಗಿಸುತ್ತಿದ್ದರೂ ಅದು ದೊರಕುವುದು ಮಾತ್ರ ಕೆಲವೇ ದೇಶಗಳಲ್ಲಿ. ಪ್ರಪಂಚದಲ್ಲಿ ಪೆಟ್ರೋಲಿಯಮ್ ಉತ್ಪಾದಕ ದೇಶಗಳು ನೂರಇಪ್ಪತ್ತೊಂದು ಇದ್ದರೂ ವಾರ್ಷಿಕ ಉತ್ಪಾದನೆಯ ಶೇ. 80 ಭಾಗವನ್ನು ಕೇವಲ ಎಂಟು ದೇಶಗಳೇ ಉತ್ಪಾದಿಸಿದ್ದುವು. ಸದ್ಯ ಪ್ರಪಂಚದಲ್ಲಿ ಪ್ರತಿವರ್ಷ ಸು. 250 ಕೋಟಿ ಮೆಟ್ರಿಕ್ ಟನ್ ಪೆಟ್ರೋಲಿಯಮ್ ಉತ್ಪಾದಿಸಲಾಗುತ್ತದೆ. ಭೂಗರ್ಭದಲ್ಲಿ ಇನ್ನೂ ಬಳಸದೇ ಇರುವ ಪೆಟ್ರೋಲಿಯಮ್ 8,800 ಕೋಟಿ ಮೆಟ್ರಿಕ್ ಟನ್ನುಗಳೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ಶೇ. 25 ರಷ್ಟು ನಿಕ್ಷೇಪ ಪೆಟ್ರೋಲಿಯಮ್ ಸೌದಿ ಅರೇಬಿಯ ಒಂದರಲ್ಲಿ ಇದೆ. ಕುವೈತ್, ಇರಾನ್ ಒಟ್ಟುಗೂಡಿ ಶೇ. 26 ರಷ್ಟು ಪೆಟ್ರೋಲಿಯಮ್ ನಿಕ್ಷೇಪ ಪಡೆದಿವೆ. ರಷ್ಯ ಹಾಗೂ ಅಮೆರಿಕ ದೇಶಗಳಲ್ಲಿರುವ ನಿಕ್ಷೇಪ ಪೆಟ್ರೋಲಿಯಮ್ ಪ್ರಮಾಣ ಅನುಕ್ರಮವಾಗಿ ಶೇ. 12 ಮತ್ತು ಶೇ. 7 ಇವೆ. ಲಿಬ್ಯ, ಸಂಯುಕ್ತ ಅರಬ್ ಎಮಿರೇಟ್ಸ್, ಚೀನ, ವೆನಿಜುವೇಲ ದೇಶಗಳಲ್ಲಿ ಒಟ್ಟುಗೂಡಿ ಶೇ. 12 ರಷ್ಟು ನಿಕ್ಷೇಪ ಪೆಟ್ರೋಲಿಯಮ್ ಇದ್ದು ಪ್ರತಿ ದೇಶದಲ್ಲಿರುವ ಪ್ರಮಾಣ ಶೇ. 2–4 ಇರುತ್ತದೆ. ಆಲ್ಜೀರಿಯ, ನೈಜೀರಿಯ, ಇಂಡೊನೇಷ್ಯ, ಕೆನಡ, ನಾರ್ವೆ ದೇಶಗಳು ತಲಾ ಶೇ. 1 ರಷ್ಟು ನಿಕ್ಷೇಪ ಪೆಟ್ರೋಲಿಯಮ್ ಪಡೆದಿವೆ. ಕ್ವೆಟಾರ್, ಎಕ್ವಡಾರ್, ಓಮಾನ್, ಯುನೈಟೆಡ್ ಕಿಂಗ್‌ಡಮ್ ಹಾಗೂ ಮೆಕ್ಸಿಕೊ ದೇಶಗಳಲ್ಲಿರುವ ನಿಕ್ಷೇಪ, ಪೆಟ್ರೋಲಿಯಮ್‌ನ ಪ್ರಮಾಣ ಶೇ. 1 ಕ್ಕಿಂತ ಕಡಿಮೆ ಇದ್ದರೂ ಅದನ್ನು ಗಣನೀಯ ಎಂದೇ ಹೇಳಬಹುದು. ಏಕೆಂದರೆ ಉಳಿದ 100 ದೇಶಗಳಲ್ಲಿರುವ ಒಟ್ಟು ನಿಕ್ಷೇಪ ಪೆಟ್ರೋಲಿಯಮ್‌ನ ಪ್ರಮಾಣ ಶೇ. 4.5. ಭಾರತದಲ್ಲಿ ಕಚ್ಚಾ ಪೆಟ್ರೋಲಿಯಮ್ ಶೋಧನೆಯನ್ನು ಅಸ್ಸಾಂ ಆಯಿಲ್ ಕಂಪನಿ, ಬರ್ಮಾ ಆಯಿಲ್ ಕಂಪನಿ ಮತ್ತು ಇವುಗಳ ಸಹ ವ್ಯವಹಾರಿಗಳು 19 ನೆಯ ಶತಮಾನದ ಕೊನೆಯ ದಶಕದಲ್ಲಿ ಪ್ರಾರಂಭಿಸಿದುವು. ಆದರೆ ಇದು ಅಸ್ಸಾಂ ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು. 1949–60 ರ ತನಕ ಸ್ಟಾಂಡರ್ಡ್ ವ್ಯಾಕೂಮ್ ಆಯಿಲ್ ಕಂಪನಿಯವರು ಪಶ್ಚಿಮ ಬಂಗಾಲದ ಕೊಲ್ಲಿಯನ್ನು ಪರಿಶೋಧಿಸಿದರು. ಇತ್ತೀಚೆಗೆ ಮುಂಬಯಿಯಿಂದ 160 ಕಿಮೀ ದೂರ ಅರಬ್ಬೀ ಸಮುದ್ರದಲ್ಲಿ ಬಾಂಬೆ ಹೈ ಎಂಬ ನೈಸರ್ಗಿಕ ರಚನೆಯಲ್ಲಿಯೂ ಬಸೀನ್ ಎಂಬಲ್ಲಿಯೂ ಪೆಟ್ರೋಲಿಯಮ್‌ನ್ನು ಶೋಧಿಸಲಾಗಿದೆ. 1964ರ ತರುವಾಯ ಹೊಸ ತೈಲ ನಿಧಿಗಳನ್ನು ಶೋಧಿಸುವಲ್ಲಿ ಹತಾಶವಾಗಿದ್ದ ಭಾರತಕ್ಕೆ ಬಾಂಬೆ ಹೈ ಒಂದು ಆಶಾಕಿರಣವಾಗಿದೆ.

ಪೆಟ್ರೋಲಿಯಮ್ ಸಂಸ್ಕರಣ : ಬಾವಿಯಿಂದ ದೊರೆತ ನೈಸರ್ಗಿಕ ಪೆಟ್ರೋಲಿಯಮ್‌ಗೆ ಕಚ್ಚಾ ಎಣ್ಣೆ ಎಂದು ಹೆಸರು. ಇದು ನಾನಾ ಹೈಡ್ರೋಕಾರ್ಬನ್ನುಗಳ ಮಿಶ್ರಣ. ಇದನ್ನು ನೇರವಾಗಿ ಯಾವ ಕೆಲಸಕ್ಕೂ ಉಪಯೋಗಿಸಲು ಆಗುವುದಿಲ್ಲ. ಉಪಯುಕ್ತ ವಸ್ತುಗಳಾದ ಪೆಟ್ರೋಲ್, ಸೀಮೆಎಣ್ಣೆ, ಡೀಸೆಲ್ ಎಣ್ಣೆ, ಕೀಲೆಣ್ಣೆ ಮುಂತಾದ ಉತ್ಪನ್ನಗಳನ್ನು (ಅಂಶಗಳನ್ನು) ಪೆಟ್ರೋಲಿಯಮ್‌ನಿಂದ ತಯಾರಿಸುವ ವಿಧಾನಕ್ಕೆ ಪೆಟ್ರೋಲಿಯಮ್ ಸಂಸ್ಕರಣೆ ಎಂದು ಹೆಸರು.

ಶುದ್ಧೀಕರಣ: ಪೆಟ್ರೋಲಿಯಮ್ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸುವ ಮೊದಲು ಅವುಗಳಲ್ಲಿರುವ ಅಶುದ್ಧತೆಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಇಂಥ ಶುದ್ಧೀಕೃತ ಉತ್ಪನ್ನಗಳನ್ನು ಹೆಚ್ಚು ಸಮರ್ಪಕವಾಗಿ ಉಪಯೋಗಿಸಲು ಸಾಧ್ಯವಿರುವುದರಿಂದ ಅವುಗಳ ಬೇಡಿಕೆ ಹಾಗೂ ಬೆಲೆ ಮಾರುಕಟ್ಟೆಯಲ್ಲಿ ಹೆಚ್ಚುತ್ತದೆ. (ಎಂ.ಆರ್.ಆರ್.)

**ಪೆಟ್ರೋಲಿಯಮ್ ರಫ್ತು ಮಾಡುವ ದೇಶಗಳ ಸಂಸ್ಥೆ:** ಈ ಸಂಸ್ಥೆ 1961ರಲ್ಲಿ ಸ್ಥಾಪಿಸಲ್ಪಟ್ಟಿತು. ಆದರೆ 1961ರಿಂದ 1973ರ ನಡುವೆ ಮಧ್ಯಪೂರ್ವ ರಾಷ್ಟ್ರಗಳ ಯುದ್ಧದಿಂದಾಗಿ ಸಂಸ್ಥೆ ಕಾರ್ಯನಿರ್ವಹಿಸುತ್ತಿರಲಿಲ್ಲ. ಈ ಸಂಸ್ಥೆ 13 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ. ಅವುಗಳಲ್ಲಿ 7 ರಾಷ್ಟ್ರಗಳು ಮಧ್ಯಪ್ರಾಚ್ಯ ಅರಬ್ ರಾಷ್ಟ್ರಗಳಾಗಿವೆ (ಆಲ್ಜೀರಿಯ, ಇರಾಕ್, ಕುವೈತ್, ಲಿಬಿಯ, ಕತಾರ, ಸೌದಿ ಅರೇಬಿಯ ಮತ್ತು ಯು.ಎ.ಇ), 2 ಆಫ್ರಿಕನ್ ರಾಷ್ಟ್ರಗಳು (ಗಾಬಾನ್ ಮತ್ತು ನೈಜಿರಿಯ), 2 ಏಷ್ಯನ್ ರಾಷ್ಟ್ರಗಳು (ಇಂಡೋನೇಷ್ಯ, ಇರಾನ್) ಮತ್ತು 2 ಲ್ಯಾಟಿನ್ ಅಮೆರಿಕನ್ (ಈಕ್ವೆಡಾರ್ ಮತ್ತು ವೆನುಜುವೇಲ) ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿವೆ. ಈ ಸಂಸ್ಥೆಯ ಮುಖ್ಯ ಉದ್ದೇಶ ಪೆಟ್ರೋಲಿಯಂ ಉತ್ಪಾದನೆ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದ ಬೆಲೆ ಬಗ್ಗೆ ನಿಯಂತ್ರಣ ಸಾಧಿಸುವುದಾಗಿದೆ. 1973ರಿಂದ 1975ರ ನಡುವೆ ತೈಲದ ಬೆಲೆ ನಾಲ್ಕು ಪಟ್ಟು ಹೆಚ್ಚಾಯಿತು. ಇದಕ್ಕೆ ಕಾರಣ

ತೈಲ ಆಮದು ಮಾಡಿಕೊಳ್ಳುವ ರಾಷ್ಟ್ರಗಳಲ್ಲಿ ಹಣದುಬ್ಬರ, ತೈಲ ಉತ್ಪಾದನೆಯಲ್ಲಿ ಇಳಿಕೆ, ಬೆಳೆಯುತ್ತಿರುವ ನಿರುದ್ಯೋಗ, ಬದಲಿ ಶಕ್ತಿ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವಲ್ಲಿ ನಿಧಾನ ಧೋರಣೆ ಮುಂತಾದವುಗಳು ತೈಲ ಬೆಲೆ ಹೆಚ್ಚಳಿಕೆಗೆ ಕಾರಣಗಳಾಗಿವೆ. ನಿಯಂತ್ರಿತ ತೈಲ ಉತ್ಪಾದನೆ ಹಣದ ಹರಿವನ್ನು ಸಹ ನಿಯಂತ್ರಿಸುತ್ತಿದೆ. ಈ ಕಾರಣದಿಂದಾಗಿ ಅನೇಕ ರಾಷ್ಟ್ರಗಳಲ್ಲಿ ಅಮೇರಿಕವೂ ಸೇರಿದಂತೆ, ಸಂದಾಯ ಸಮತೋಲನ ಸಮಸ್ಯೆ ಉಂಟಾಗಲು ಪ್ರಾರಂಭವಾಯಿತು. ಈ ಅಧಿಕ ತೈಲ ಬೆಲೆಯಿಂದಾಗಿ ಅಭಿವೃದ್ಧಿಶೀಲ ತೃತೀಯ ರಾಷ್ಟ್ರಗಳಲ್ಲಿ ರಾಷ್ಟ್ರದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತಿದೆ. ಅಮೇರಿಕ ಹಾಗೂ ಇತರೆ ಕೈಗಾರಿಕಾ ರಾಷ್ಟ್ರಗಳು, ಒಪೆಕ್ ರಾಷ್ಟ್ರಗಳ ತೈಲ ಬೆಲೆ ನಿಯಂತ್ರಣ ತಪ್ಪಿಸಲು ತೈಲ ಆಮದು ರಾಷ್ಟ್ರಗಳ ಸಂಸ್ಥೆ ಸ್ಥಾಪಿಸಿ ಸಾಮಾನ್ಯ ನೀತಿಯ ಮೂಲಕ ರಾಜ ತಾಂತ್ರಿಕವಾಗಿ ಆರ್ಥಿಕ ಒತ್ತಡವನ್ನು ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಸ್ಥೆಯ ಮೇಲೆ ಹಾಕಲು ಪ್ರಯತ್ನಗಳು ಪ್ರಾರಂಭವಾದವು. ಅಲ್ಲದೆ ಬದಲಿ ಶಕ್ತಿ ಸಂಪನ್ಮೂಲಗಳ ಉತ್ಪಾದನೆ ಹಾಗೂ ಬಳಕೆಯನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ. ಇಷ್ಟೆಲ್ಲಾ ಕ್ರಮಗಳನ್ನು ಜಾರಿಗೊಳಿಸಿದ್ದರೂ ಈ ಸಂಸ್ಥೆ ತನ್ನದೇ ಆದ ಹಿಡಿತವನ್ನು ತೈಲದ ಬೆಲೆ ಹಾಗು ಉತ್ಪಾದನೆಯ ಮೇಲೆ ಹೊಂದಿದೆ. (ಎಸ್.ಎಸ್.ಎಸ್.)

**ಪೆನಿಪ್ಲೇನ್:** ನದಿ, ಗಾಳಿ ಮೊದಲಾದ ನಗ್ನೀಕರಣ ಕರ್ತೃಗಳ ಕಾರ್ಯದಿಂದ ಸವಕಳಿಗೆ ಒಳಗಾಗಿ ಅಂತಿಮ ಹಂತವನ್ನು ಹೊಂದಿರುವ ಮಟ್ಟಸವಾದ ಮೈದಾನ ಪ್ರದೇಶ (ತೋರಿಕೆಯ ಮೈದಾನ). ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಕೃತಿಕ ಭೂವಿಜ್ಞಾನದ ಪ್ರಾಧ್ಯಾಪಕ ಮತ್ತು ಭೂಸ್ವರೂಪ ಶಾಸ್ತ್ರದಲ್ಲಿ ಪಾರಂಗತರಾಗಿದ್ದ ಡಬ್ಲ್ಯೂ. ಎಮ್. ಡೇವಿಸ್ (1850–1934) ಪೆನಿಪ್ಲೇನಿನ ಕಲ್ಪನೆಯನ್ನು ಪ್ರಥಮ ಬಾರಿಗೆ ಪ್ರತಿಪಾದಿಸಿದರು. ಭೂ ಸ್ವರೂಪ ಶಾಸ್ತ್ರದ ಆವರ್ತವನ್ನು (ಜಿಯೊಮಾರ್ಫಾಲಾಜಿಕಲ್ ಸೈಕಲ್) ಕುರಿತು ರಚಿಸಿದ (1895) ಪ್ರಬಂಧದಲ್ಲಿ ಪೆನಿಪ್ಲೇನ್ ಪದದ ಬಗ್ಗೆ ಸ್ಪಷ್ಟ ವಿವರಣೆ ಇದೆ. ಇದರ ಪ್ರಕಾರ ಪೆನಿಪ್ಲೇನ್ ಎಂಬುದು ಆಕಾರವಿಲ್ಲದ ಸಮತಲ ಭೂಮಿ ಅಥವಾ ಮೈದಾನ. ಇದರ ವಿನ್ಯಾಸ ಅಷ್ಟು ಮುಖ್ಯವಲ್ಲ. ಯಾವುದೇ ನೆಲ ತಳಮಟ್ಟವನ್ನು ಸಮೀಪಿಸಿದಾಗ ಮಾತ್ರ ಇದು ಮೈದಳೆಯುತ್ತದೆ. ಉದಾಹರಣೆಗೆ ನದಿಗಳ ನೆಲಸವೆತದ ಕೊನೆಯ ಹಂತದಲ್ಲಿ ಮಾತ್ರ ಪೆನಿಪ್ಲೇನ್ ರಚನೆಯಾಗುವುದು. ಭೂಮಿಯ ಮೇಲಿನ ಉನ್ನತ ಭಾಗಗಳು ನದಿಗಳು ಹಾಗೂ ಇನ್ನಿತರ ನಗ್ನೀಕರಣ ಕೃತಿಗಳು ನಡೆಸುವ ಕ್ರಿಯೆಯಿಂದ ಸವೆಯಲ್ಪಟ್ಟು ಕನಿಷ್ಠ ಪ್ರಮಾಣದ ಉಬ್ಬುತಗ್ಗುಗಳನ್ನು ಒಳಗೊಂಡ ಸಮತಲ ಪ್ರದೇಶವಾಗಿದ್ದರೆ ಅದಕ್ಕೆ ಪೆನಿಪ್ಲೇನ್ ಅಥವಾ ತೋರಿಕೆಯ ಮೈದಾನ ಎಂದು ಹೆಸರು.

ಹರಿಯುವ ನದಿಗಳ ತ್ರಾಣ ಕುಂದಿದಂತೆಲ್ಲ ಯೌವನಾವಸ್ಥೆಯಲ್ಲಿರುವ ಭೂಭಾಗದ ಸವೆತ ಸಹ ಮಂದಗತಿಯಲ್ಲಿ ಸಾಗುತ್ತದೆ. ಆದ್ದರಿಂದ ಪೆನಿಪ್ಲೇನಿನ ನಿರ್ಮಾಣ ಆಗಬೇಕಾದರೆ ಭೂಕಾಲಮಾನದಲ್ಲಿ ಹಲವು ಲಕ್ಷ ವರ್ಷಗಳೇ ಬೇಕಾಗಬಹುದು. ಕ್ರಮೇಣ ರೂಪುಗೊಂಡ ಪೆನಿಪ್ಲೇನಿನ ಮೇಲ್ಭಾಗದಲ್ಲಿ ಸ್ವಲ್ಪ ಎತ್ತರವೂ ಕಡಿದೂ ಆದ ಶೇಷಬೆಟ್ಟಗಳು (ಮೋನಾಡ್‌ನಾಕ್ಸ್) ಕಾಣಿಸಿಕೊಳ್ಳುತ್ತವೆ. ಇವು ಗಡಸುಶಿಲೆಗಳಿಂದ ರಚಿತವಾದವು. ಇವುಗಳಿಗೆ ಸವೆತವನ್ನು ನಿರೋಧಿಸುವ ಸಾಮರ್ಥ್ಯ ಉಂಟು. (ಎಂ.ಎಸ್.ಪಿ.)

**ಪೆನ್ನಾರ್:** ಈ ಹೆಸರಿನ ಎರಡು ನದಿಗಳಿವೆ. ಉತ್ತರ ಪೆನ್ನಾರ್ ಮತ್ತು ದಕ್ಷಿಣ ಪೆನ್ನಾರ್. ಇವನ್ನು ಉತ್ತರ ಪಿನಾಕಿನಿ ಮತ್ತು ದಕ್ಷಿಣ ಪಿನಾಕಿನಿ ಎಂದೂ ಕರೆಯುತ್ತಾರೆ. ನಂದಿ ಬೆಟ್ಟಗಳ ಸಮೀಪ ಉಗಮ ಹೊಂದುತ್ತವೆ. ಉತ್ತರ ಪೆನ್ನಾರ್ ನದಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಮೂಲಕ 560 ಕಿಮೀ ದೂರ ಹರಿದು ನೆಲ್ಲೂರ್ ಪಟ್ಟಣದ ದಕ್ಷಿಣದಲ್ಲಿ ಬಂಗಾಲ ಕೊಲ್ಲಿಯನ್ನು ಸೇರುತ್ತದೆ. ದಕ್ಷಿಣ ಪೆನ್ನಾರ್ ನದಿ ಕರ್ನಾಟಕ ಮತ್ತು ತಮಿಳುನಾಡುಗಳ ಮೂಲಕ 620 ಕಿಮೀ ಉದ್ದವಾಗಿ ಹರಿದು ಕೂಡ್ಲೂರು ಬಳಿ ಬಂಗಾಲ ಕೊಲ್ಲಿಯನ್ನು ಸೇರುವುದು. ಇದನ್ನು ತಮಿಳುನಾಡಿನಲ್ಲಿ ಪೊನ್ನಾಯರ್ ಎಂದು ಕರೆಯುವರು. (ಜಿ.ಎಸ್.ಎಸ್.)

**ಪೆನ್ಸಿಲ್ವೇನಿಯ:** ಅಮೇರಿಕ ಸಂಯುಕ್ತ ಸಂಸ್ಥಾನಗಳ ಒಂದು ರಾಜ್ಯ. ಉ.ಅ. $39^0 43'–42^0$ ಮತ್ತು ಪ.ರೇ. $79^0 43'–80^0 31'$ ನಡುವೆ ಹಬ್ಬಿದೆ. ಗಾತ್ರದ ದೃಷ್ಟಿಯಿಂದ ಅಮೇರಿಕ ಸಂಯುಕ್ತ ಸಂಸ್ಥಾನಗಳ 33 ನೆಯ ಸ್ಥಾನ ಪಡೆದಿರುವ ಈ ರಾಜ್ಯ ಜನಸಂಖ್ಯೆಯ ದೃಷ್ಟಿಯಿಂದ ಮೂರನೆಯದು. ಇದರ ವಿಸ್ತೀರ್ಣ 1,17,413 ಚ.ಕಿಮೀ; ರಾಜಧಾನಿ ಹ್ಯಾರಿಸ್ ಬರ್ಗ್. ಜನಸಂಖ್ಯೆ 1,22,81,054 (2000).

ಭೂಮೇಲ್ಮೈ ಲಕ್ಷಣ : ಡೆಲವೇರ್ ನದಿಯೆಡೆಯ ಸಮುದ್ರಮಟ್ಟದಿಂದ ಹಿಡಿದು ಸಮರ್‌ಸೆಟ್ ಕೌಂಟಿಯವರೆಗೆ (979 ಮೀ ಎತ್ತರ) ಏರಿಕೆಯಾಗುತ್ತದೆ. ವಾಯವ್ಯದಲ್ಲಿಯ ಮೂಲೆಯಲ್ಲಿ ಈರಿ ಸರೋವರದ ತೀರದ ಉದ್ದಕ್ಕೂ ತಗ್ಗಾದ ಬಯಲು ಪ್ರದೇಶವಿದೆ. ಈ ಪ್ರದೇಶದ ಆಗ್ನೇಯಕ್ಕೆ ಇರುವುದು ಆಲಿಗಾನಿ ತಪ್ಪಲು ಪ್ರದೇಶ. ಇದು ರಾಜ್ಯದ ಅತ್ಯಂತ ವಿಸ್ತಾರವಾದ ಸ್ವಾಭಾವಿಕ ವಿಭಾಗ. ಇಲ್ಲಿ ಬೆಟ್ಟ ಕಣಿವೆಗಳು ಅಲೆಅಲೆಯಾಗಿ ಹಬ್ಬಿವೆ. ಇದರ ಪೂರ್ವಕ್ಕೆ ಚೆಸ್‌ನಟ್‌ರಿಜ್, ಲಾರೆಲ್ ಹಿಲ್, ಆಲಿಗಾನಿ, ಟಸ್ಕರೋರ, ಬ್ಲ್ಯೂ, ರೊಕೋನೊ ಮತ್ತು ಕಿಟಟಿನೀ ಪರ್ವತಗಳ ಸಮಾಂತರ ಪಂಕ್ತಿಗಳನ್ನೊಳಗೊಂಡ ಅಪಲೇಷಿಯನ್ ಪ್ರಸ್ಥಭೂಮಿ ಇದೆ. ರಾಜ್ಯದ ಅತ್ಯುನ್ನತ ಸ್ಥಳ. ಡೇವಿಸ್ ಶಿಖರ (952 ಮೀ) ಪರ್ವತ ಪಂಕ್ತಿಗಳ ಮಧ್ಯದಲ್ಲಿ ಕಂಬರ್‌ಲೆಂಡ್ ಲೆಬನನ್, ಲೀಹೈ ಮೊದಲಾದ ಸುಂದರ ಕಣಿವೆಗಳಿವೆ. ಪ್ರಸ್ಥಭೂಮಿಯ ಆಗ್ನೇಯಕ್ಕೆ ಪೀಡ್‌ಮಾಂಟ್ ತಪ್ಪಲು ಮತ್ತು ಇನ್ನೂ ಆಗ್ನೇಯಕ್ಕೆ ತಗ್ಗಾದ ಬಯಲು ನೆಲ ಇವೆ.

ರಾಜ್ಯದ ಮುಖ್ಯ ನದಿಗಳು ಮೂರು. ನ್ಯೂಯಾರ್ಕ್‌ನಲ್ಲಿ ಉಗಮಿಸುವ ಡೆಲವೇರ್ ನದಿಗೆ ಪಶ್ಚಿಮದಿಂದ ಹರಿದು ಬರುವ ಲೀಹೈ, ಸ್ಕೂಲ್‌ಕಿಲ್ ಮತ್ತು ಅನೇಕ ಚಿಕ್ಕಪುಟ್ಟ ಹೊಳೆಗಳು ಕೂಡುತ್ತವೆ. ಇನ್ನೊಂದು ನದಿ ಸಸ್ಕಿಹ್ಯಾನ್. ಇದರ ಉತ್ತರದ ಕವಲು ನ್ಯೂಯಾರ್ಕಿನಲ್ಲೂ ಪಶ್ಚಿಮದ ಕವಲು ರಾಜ್ಯದ ಮಧ್ಯಭಾಗದಲ್ಲೂ ಉಗಮಿಸುತ್ತವೆ. ಈ ನದಿ ರಾಜ್ಯವನ್ನು ದಾಟಿ ಚೆಸಪೀಕ್ ಕೊಲ್ಲಿಯನ್ನು ಸೇರುತ್ತದೆ. ಇದರ ಉಪನದಿ ಜೂನಿಯಾಟ. ರಾಜ್ಯದಲ್ಲಿ ಹುಟ್ಟಿ ನ್ಯೂಯಾರ್ಕ್‌ನಲ್ಲಿ ಕೆಲವು ಕಿಮೀ ಹರಿದು ದಕ್ಷಿಣಕ್ಕೆ ತಿರುಗುವ ಆಲಿಗಾನಿ ನದಿ ಮತ್ತು ಪಶ್ಚಿಮ ವರ್ಜೀನಿಯದಲ್ಲಿ ಹುಟ್ಟಿ ಯಾಕಿಗಾನಿಯನ್ನು ಕೂಡಿ ಹರಿಯುವ ಮನಾಂಗಹೀಲ ನದಿ ಸೇರಿ ಒಹೈಯೊ ನದಿಯಾಗುತ್ತವೆ. ಹಲವು ಚಿಕ್ಕ ಹೊಳೆಗಳು ದಕ್ಷಿಣದಲ್ಲಿ ಪೋಟೊಮ್ಯಾಕ್ ನದಿಯನ್ನು ಇಲ್ಲವೇ ಉತ್ತರ ಈರೀ ಅಥವಾ ಆಂಟೇರಿಯೋ ಸರೋವರವನ್ನು ಸೇರುತ್ತವೆ. ಒಂದು ಕಾಲಕ್ಕೆ ನೀರ್ಗಲ್ಲಿನಿಂದ ಆಚ್ಛಾದಿತವಾಗಿದ್ದ ರಾಜ್ಯದ ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಿ 400 ಕ್ಕೂ ಹೆಚ್ಚು ಸ್ವಾಭಾವಿಕ ಸರೋವರಗಳಿವೆ.

ವಾಯುಗುಣ : ರಾಜ್ಯದ್ದು ಖಂಡಾಂತರ ವಾಯುಗುಣ. ಋತುವಿನಿಂದ ಋತುವಿಗೆ ಉಷ್ಣತೆಯಲ್ಲಿ ತೀವ್ರ ವ್ಯತ್ಯಾಸಗಳಿರುತ್ತವೆ. ನೈರುತ್ಯ ಭಾಗ, ಒಹೈಯೊ ಕಣಿವೆ ಮತ್ತು ಈರೀ ತಗ್ಗು ಪ್ರದೇಶಗಳಲ್ಲಿ ಹಿಮರಹಿತ ದಿನಗಳ ಸಂಖ್ಯೆ ಹೆಚ್ಚು. ಹೆಚ್ಚು ಎತ್ತರವಾದ ಪ್ರದೇಶಗಳಲ್ಲಿ ವರ್ಷದಲ್ಲಿ 3 ರಿಂದ 5 ತಿಂಗಳುಗಳ ವರೆಗಿನ ಕಾಲ ಹಿಮರಹಿತವಾಗಿರುತ್ತದೆ. ವರ್ಷದಲ್ಲಿ ಬೀಳುವ ಸು. 106 ಸೆಂಮೀ ಮಳೆ ಸಮಶೀತೋಷ್ಣವಲಯದ ಬೆಳೆ ಹಾಗೂ ಸಸ್ಯಗಳಿಗೆ ಸಾಕಾಗುತ್ತದೆ.

ಸಸ್ಯ ಪ್ರಾಣಿಜೀವನ : ರಾಜ್ಯದ ಅರ್ಧಕ್ಕೂ ಹೆಚ್ಚು ಭಾಗವನ್ನು ಕಾಡು ಆವರಿಸಿದೆ. ಇದರಲ್ಲಿ ಕೆಲವು ಪ್ರದೇಶಗಳು ಮಾತ್ರ ಮಾನವ ಸಂಪರ್ಕಕ್ಕೆ ದೂರವಾದಂತವು. ಹಿಕರಿ, ಲೋಕಸ್ಟ್, ಮ್ಯಾಪಲ್, ಚೆರ್ರಿ, ಬೀಚ್, ಕಪ್ಪಗ ವಾಲ್ನಟ್, ಎಲ್ಮ್, ಚೆಸ್‌ನಟ್, ಪಾಪ್ಲರ್, ಆಪ್, ಸೈಕಮೋರ್, ವಿಲ್ಲೋ, ಲಿಂಡನ್, ಬಿಳಿ ಮತ್ತು ಹಳದಿ ಪೈನ್ ಹಾಗೂ ಇತರ ಶಂಕುಪರ್ಣಿ ಮರಗಳೂ ರಾಜ್ಯದ ಅನೇಕ ಭಾಗಗಳಲ್ಲಿ ಸಾಮಾನ್ಯವಾಗಿವೆ. ಇಲ್ಲಿ ವನ್ಯಮೃಗಗಳು ವಿಶೇಷವಾಗಿರುವುದರಿಂದ ಬೇಟೆಯ ದೃಷ್ಟಿಯಿಂದ ಪ್ರಾಮುಖ್ಯತೆಗಳಿಸಿವೆ. ಕೆಂಪು ಮತ್ತು ಕಂದು ನರಿ, ಕಾಡು ಬೆಕ್ಕು ಹಾಗೂ ವೀಸೆಲ್ ಅರಕ್ಷಿತ ಮಾಂಸಹಾರಿಗಳಲ್ಲಿ ಸೇರುತ್ತವೆ. ಒಂದು ಕಾಲಕ್ಕೆ ಸಾಮಾನ್ಯವಾಗಿದ್ದ ಕಪ್ಪು ಕರಡಿ, ಕೆನಡ ಲಿಂಕ್ಸ್ ಅಪರೂಪವಾಗಿದೆ. ಸ್ಕಂಕ್, ರ್‍ಯಾಕೂನ್, ಫೆಸಂಟ್ ಮತ್ತು ಇತರ ಬೇಟೆ ಹಕ್ಕಿಗಳೂ ಕೆಲವು ಪ್ರದೇಶಗಳಲ್ಲಿ ಜಿಂಕೆಗಳು ವಿಪುಲವಾಗಿವೆ.

ರಾಜ್ಯದ ಪ್ರಮುಖ ಪಟ್ಟಣಗಳು ಫಿಲಡೆಲ್ಫಿಯ, ಪಿಟ್ಸ್‌ಬರ್ಗ್, ಸ್ಕ್ರಾಂಟನ್, ಆಲೆನ್‌ಟೌನ್, ರೀಡಿಂಗ್, ಬೆತ್ಲೆಹೆಮ್, ಅಪ್ಪರ್ ಡಾರ್ಬಿ, ಆಲ್ಟೂನ ಮತ್ತು ವಿಲ್ಕ್ಸ್‌ಬಾರ್.

ಆರ್ಥಿಕತೆ : ಕೈಗಾರಿಕೆ, ಗಣಿಗಾರಿಕೆ, ಕೃಷಿ, ಪ್ರವಾಸೋದ್ಯಮ ಈ ನಾಲ್ಕು ಕ್ಷೇತ್ರಗಳಲ್ಲಿ ರಾಜ್ಯ ಪ್ರಮುಖವಾಗಿದೆ. ಅಕ್ಷಯವೆನಿಸುವ ಕಲ್ಲಿದ್ದಲ ಪೂರೈಕೆ, ಯಾನಯೋಗ್ಯವಾದ ಜಲಮಾರ್ಗಗಳು, ಪೂರ್ವ ಕರಾವಳಿಯಲ್ಲಿ ಆಯಕಟ್ಟಿನ ಸನ್ನಿವೇಶ–ಇವುಗಳಿಂದಾಗಿ ಇದು ಅಮೇರಿಕದ ಶ್ರೀಮಂತ ರಾಜ್ಯಗಳಲ್ಲೊಂದಾಗಿದೆ. ಈಶಾನ್ಯದಲ್ಲಿ ಹೈನುಗಾರಿಕೆ, ನೈಋತ್ಯದಲ್ಲಿ ಪಶುಸಂಗೋಪನೆ ಅಭಿವೃದ್ಧಿಗೊಳ್ಳುತ್ತಿವೆ. ಆಗ್ನೇಯದಲ್ಲಿ ಕೃಷಿ ಪ್ರಧಾನವಾಗಿದೆ.

ದೇಶದ ಖನಿಜಗಳಲ್ಲಿ ಕಲ್ಲಿದ್ದಲು ಮುಖ್ಯವಾದದ್ದು. ಈ ದೃಷ್ಟಿಯಿಂದ ಪೆನ್ಸಿಲ್ವೇನಿಯದ್ದು ಎರಡನೆಯ ಸ್ಥಾನ. ಲೂಸಿಯಾನ, ಓಕ್ಲಹಾಮ, ಟೆಕ್ಸಾಸ್. ವೆನಿಜುವೇಲ ಮತ್ತು ಪಶ್ಚಿಮ ಏಷ್ಯಗಳಿಂದ ತರಲಾದ ತೈಲವನ್ನು ಡೆಲವೇರ್‌ನ ಉದ್ದಕ್ಕೂ ಇರುವ ದೊಡ್ಡ ದೊಡ್ಡ ಕೇಂದ್ರಗಳಲ್ಲಿ ಶುದ್ಧೀಕರಿಸಲಾಗುತ್ತದೆ. ನೈಸರ್ಗಿಕ ಅನಿಲದ ಉತ್ಪಾದನೆಯ ದೃಷ್ಟಿಯಿಂದ ರಾಜ್ಯದ ಸ್ಥಾನ ದೇಶದಲ್ಲಿ 13 ನೆಯದು. ಕಬ್ಬಿಣದ ಅದಿರು, ಸುಣ್ಣಕಲ್ಲು, ಬೆಳ್ಳಿ, ಚಿನ್ನ, ತಾಮ್ರ, ಕೋಬಾಲ್ಟ್, ಸತು ಮತ್ತು ತೈಲ ಇವೂ ಇಲ್ಲಿ ಸ್ವಲ್ಪಮಟ್ಟಿಗೆ ದೊರಕುತ್ತವೆ.

ರಾಜ್ಯದ ಕೈಗಾರಿಕೆಗಳೂ ವೈವಿಧ್ಯಪೂರಿತವಾದವು. ಲೋಹ ವಸ್ತುಗಳು, ಬಟ್ಟೆ, ರಾಸಾಯನಿಕ, ಚಪ್ಪಟೆಗಾಜು, ಜೇಡಿಮಣ್ಣಿನ ವಸ್ತುಗಳು, ವರ್ಣದ್ರವ್ಯ, ಚರ್ಮ ಹಾಗೂ ರಬ್ಬರ್ ಸರಕು, ಮುಂತಾದವು ಉತ್ಪಾದನೆಯಾಗುತ್ತವೆ. ಫಿಲಡೆಲ್ಫಿಯ, ಆಲಿಗಾನಿ ಮತ್ತು ಮಾಂಟಗ್ಗೊಮರಿ ಕೌಂಟಿಗಳಲ್ಲಿ ಕೈಗಾರಿಕೆಗಳು ಬಹಳ ಮಟ್ಟಿಗೆ ಕೇಂದ್ರೀಕೃತವಾಗಿವೆ.

ರಾಜ್ಯದ ಮೂರನೆಯ ಒಂದು ಭಾಗದಷ್ಟು ಪ್ರದೇಶದಲ್ಲಿ ಸಾಗುವಳಿ ನಡೆಯುತ್ತದೆ. ರಾಜ್ಯದ ಆಗ್ನೇಯ ಭಾಗದ ಲ್ಯಾಂಕಾಸ್ಟರ್, ಯಾರ್ಕ್ ಮತ್ತು ಬರ್ಕ್ಸ್ ಕೌಂಟಿಗಳಲ್ಲಿ ಹೆಚ್ಚು ಹಿಡುವಳಿಗಳಿವೆ. ಹಾಲು, ಮೊಟ್ಟೆ ಅಣಬೆ, ಹೊಗೆಸೊಪ್ಪು, ಸೇಬು ಮುಂತಾದವನ್ನು ಬೆಳೆಯುವರು.

ಸಾರಿಗೆ ಸಂಪರ್ಕ : ಪಿಟ್ಸ್‌ಬರ್ಗ್, ಫಿಲಡೆಲ್ಫಿಯ ಮತ್ತು ಈರೀ ಇವು ರಾಜ್ಯದ ಮೂರು ಉತ್ತಮ ಬಂದರುಗಳು. ಡೆಲವೇರ್, ಸಸ್ಕ್ವಿಹಾನ, ಆಲಿಗಾನಿ, ಒಹಿಯೊ ಮತ್ತು ಮನಾಂಗಹೀಲ ನದಿಗಳು ಮತ್ತು ಅನೇಕ ನಾಲೆಗಳು ಯಾನಕ್ಕೆ ಯೋಗ್ಯವಾಗಿವೆ. ರಾಜ್ಯದಲ್ಲಿ 1,50,422 ಕಿಮೀ ಉದ್ದದ ರಸ್ತೆ ಮಾರ್ಗಗಳು, 12,800 ಕಿಮೀ ಉದ್ದದ ರೈಲು ಮಾರ್ಗಗಳೂ ಇವೆ. ಫಿಲಡೆಲ್ಫಿಯ ಮತ್ತು ಪಿಟ್ಸ್‌ಬರ್ಗ್‌ನಲ್ಲಿ ಪ್ರಮುಖ ವಾಣಿಜ್ಯ ವಿಮಾನ ನಿಲ್ದಾಣಗಳಿವೆ. ಇತರ 14 ನಗರಗಳಿಗೂ ವಿಮಾನ ಸೌಲಭ್ಯಗಳುಂಟು. (ಜಿ.ಕೆಯು.)

**ಪೆರಿಯಾರ್:** ಕೇರಳ ರಾಜ್ಯದಲ್ಲಿ ಹರಿವ ಒಂದು ನದಿ. ಅದೇ ಹೆಸರಿನ ಸರೋವರವೂ ಇದೆ. ನದಿಯ ಉದ್ದ ಸು. 225 ಕಿಮೀ. ಇದು ತಮಿಳುನಾಡು ಮತ್ತು ಕೇರಳ ರಾಜ್ಯಗಳ ನಡುವಣ ಗಡಿಯ ಬಳಿಯ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಈ ನದಿಯ ಕೊನೆಯ 96 ಕಿಮೀ ಉದ್ದದ ಭಾಗ ಮಾತ್ರ ದೋಣಿಗಳ ಸಂಚಾರಕ್ಕೆ ಯೋಗ್ಯವಾಗಿದೆ. ಕೊಟ್ಟಾಯಂ ಜಿಲ್ಲೆಯಲ್ಲಿ 1895 ರಲ್ಲಿ ಈ ನದಿಗೆ ಕಟ್ಟೆಯನ್ನು ಕಟ್ಟಿ 31 ಚ.ಕಿಮೀ ವಿಸ್ತೀರ್ಣದ ಪೆರಿಯಾರ್ ಸರೋವರವನ್ನು ನಿರ್ಮಿಸಲಾಗಿದೆ. ಈ ಕೃತಕ ಸರೋವರ ಸಮುದ್ರಮಟ್ಟಕ್ಕೆ 850 ಮೀ ಎತ್ತರದಲ್ಲಿ ಬೆಟ್ಟಗುಡ್ಡಗಳ ನಡುವೆ ಹರಡಿದೆ. ಇದರ ಸುತ್ತಲೂ ವನ್ಯಮೃಗಗಳ ಅಭಯಾರಣ್ಯವಿದೆ. ಈ ಸರೋವರದ ನೀರನ್ನು 16 ಕಿಮೀ ಗೂ ಉದ್ದವಾದ ಸುರಂಗದ ಮೂಲಕ ಬೆಟ್ಟಗಳ ಆಚೆಗೆ ಪೂರ್ವಾಭಿಮುಖವಾಗಿ ರವಾನಿಸಿ ತಮಿಳುನಾಡಿನಲ್ಲಿ ವೈಗೈ ನದಿಗೆ ಸೇರಿಸಲಾಗಿದೆ. ಈ ನೀರನ್ನು ಮಧುರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಕೃಷಿ ನೀರಾವರಿಗೆ ಉಪಯೋಗಿಸಲಾಗುತ್ತಿದೆ. 1958 ರಲ್ಲಿ ಸರೋವರದ ನೀರಿನಿಂದ 1,05,000 ಕಿವಾ ವಿದ್ಯುತ್ತನ್ನು ತಯಾರಿಸುವ ಯೋಜನೆಯನ್ನು ಪ್ರಾರಂಭಿಸಲಾಯಿತು. ಪೆರಿಯಾರ್ ಸರೋವರದವರೆಗೆ ಉತ್ತರಾಭಿಮುಖವಾಗಿ ಹರಿಯುವ ನದಿ ಅಲ್ಲಿಂದ ಮುಂದೆ ಬೆಟ್ಟಗಳ ಮೂಲಕ ಸ್ಥೂಲವಾಗಿ ವಾಯುವ್ಯ ದಿಕ್ಕಿಗೆ ಹರಿದು ಬಯಲು ಪ್ರದೇಶದಲ್ಲಿ ಸಾಗಿ ಕೊಚ್ಚಿಯ ಸಮೀಪದ ಆಳ್ವಾಯಿಯ ಮೂಲಕ ಹರಿದು ಪೆರೂರಿನಲ್ಲಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. (ಜೆ.ಎಸ್.ಎಸ್.)

**ಪೆರಿಯಾರ್ ಅಭಯಾರಣ್ಯ:** ಕೇರಳ ಮತ್ತು ತಮಿಳುನಾಡುಗಳ ಗಡಿ ಪ್ರದೇಶದಲ್ಲಿ ಕೇರಳದ ಭಾಗದಲ್ಲಿರುವ ಪ್ರಸಿದ್ಧ ಅಭಯಾರಣ್ಯ. ಪೆರಿಯಾರ್ ನದಿಗೆ 1895 ರಲ್ಲಿ ಕಟ್ಟಿದ ಅಣೆಕಟ್ಟಿನ ಫಲವಾಗಿ ಉಂಟಾದ ಪೆರಿಯಾರ್ ಸರೋವರದ ಸುತ್ತಮುತ್ತಲು ಸು. 673 ಚ.ಕಿಮೀ ವಿಸ್ತೀರ್ಣದ ಪ್ರದೇಶವೇ ಪೆರಿಯಾರ್ ಅಭಯಾರಣ್ಯ. ಈ ಪ್ರದೇಶ ವೃಕ್ಷಾಚ್ಛಾದಿತ ಬೆಟ್ಟಗುಡ್ಡಗಳನ್ನೂ ಕಣಿವೆಗಳನ್ನೂ ವಿಸ್ತಾರವಾದ ಹುಲ್ಲುಗಾವಲನ್ನೂ ಒಳಗೊಂಡಿದ್ದು ತುಂಬ ಸುಂದರವಾದ ವಿಹಾರ ಸ್ಥಳವಾಗಿದೆ.

ಸರೋವರದ ಬಾಹುಗಳು ಬೆಟ್ಟಗುಡ್ಡಗಳ ನಡುವೆ ಅಲ್ಲಲ್ಲಿ ಪಸರಿಸಿಕೊಂಡು ಚೆಲುವಾದ ಜಲಮಾರ್ಗಗಳನ್ನೂ ನೀರ್ಚಾಚುಗಳನ್ನೂ ದ್ವೀಪಗಳನ್ನೂ ನಿರ್ಮಿಸಿರುವುದರಿಂದ ಸರೋವರ ಜಲ ವಿಹಾರಕ್ಕೆ ಸೊಗಸಾಗಿದೆ. ಇಲ್ಲಿಯ ಸುತ್ತಲ ಅರಣ್ಯದ ಪ್ರಮುಖ ವನ್ಯಪ್ರಾಣಿಗಳು ಹುಲಿ ಮತ್ತು ಆನೆ. ಇನ್ನಿತರ ವನ್ಯಪ್ರಾಣಿಗಳು ಕಾಡುಹಂದಿ, ಕಾಡುಕೋಣ, ಕಡವೆ, ಸಣ್ಣಗಾತ್ರದ ಪ್ರಾಣಿಗಳಲ್ಲಿ ಮುಖ್ಯವಾದವು ನೀರು ನಾಯಿ ಹಾಗೂ ಸಿಂಹಬಾಲದ ಮುಸುವ. ಇಲ್ಲಿಯ ಪಕ್ಷಿ ಸಂಕುಲವೂ ಸಂಪದ್ಭರಿತವಾಗಿದೆ. ಸು. 200 ಕ್ಕೂ ಹೆಚ್ಚು ತೆರನ ಹಕ್ಕಿಗಳಿವೆ ಎನ್ನಲಾಗಿದೆ. ಮಿಂಚುಳ್ಳಿ, ನೀರು ಕಾಗೆ (ಕಾರ್ಮೊರೆಂಟ್), ಕಾಡುಮೈನ, ಮಲಬಾರ್ ಹಾರ್ನ್‌ಬಿಲ್, ಪೈಡ್ ಹಾರ್ನ್‌ಬಿಲ್, ಗೂಬೆ, ಹಾವಕ್ಕಿ (ಸ್ನೇಕ್‌ಬರ್ಡ್) ಮುಂತಾದುವು ಇಲ್ಲಿಯ ಮುಖ್ಯ ಪಕ್ಷಿಗಳು.

ಇಲ್ಲಿಯ ವನ್ಯಪ್ರಾಣಿಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ದೋಣಿ ಸೌಲಭ್ಯವಿದೆ. ಪ್ರವಾಸಿಗರಿಗೆ ವಸತಿ ಸೌಕರ್ಯವೂ ಉಂಟು. ತೆಕ್ಕಾಡಿಯಲ್ಲಿ ಅರಣ್ಯ ನಿವಾಸ್ ಹೋಟೆಲ್ ಹತ್ತಿರದ ಎಡಪಾಲಯಮಿನಲ್ಲಿ ಪ್ರವಾಸಿ ಮಂದಿರವೂ ತಣ್ಣಿಕುಡಿ ಮತ್ತು ಮುಲಕುಡಿಗಳಲ್ಲಿ ವಿಶ್ರಾಂತಿ ಗೃಹಗಳೂ ಇವೆ. *

**ಪೆರಿಯಾರ್ ಯೋಜನೆ:** ತಮಿಳುನಾಡಿನ ಮಧುರೈ ಜಿಲ್ಲೆಯಲ್ಲಿ ಪೆರಿಯಾರ್ ನದಿಗೆ ಅಡ್ಡ ಕಟ್ಟಿರುವ ಎತ್ತರವಾದ ಕಟ್ಟೆ ಮತ್ತು ಇದರ ಘಟಕಗಳು. ಕಟ್ಟೆ ಕೆಲಸ 1887 ರಲ್ಲಿ ಆರಂಭವಾಗಿ, ನೀರಾವರಿ ಕಾಲುವೆಗಳು 1895 ರಲ್ಲಿ ಸಂಪೂರ್ಣಗೊಂಡಿತು. ಕಟ್ಟೆ ಇರುವ ಸ್ಥಳಕ್ಕೆ ಮಧುರೈಯಿಂದ ಸು. 135 ಕಿಮೀ ದೂರದ ತೆಕ್ಕಾಡಿಯ ಮಾರ್ಗವಾಗಿ ಹೋಗಬೇಕು. ಈ ಗುಡ್ಡಗಾಡಿನ ಪ್ರದೇಶದಲ್ಲಿ ವರ್ಷಕ್ಕೆ ಸರಾಸರಿ 225 ಸೆಂಮೀ ಮಳೆ ಬೀಳುತ್ತದೆ. ಮಾನವಾರೋಗ್ಯಕ್ಕೆ ಮಾರಕವಾಗಿದ್ದ ಈ ನೆಲೆಯಲ್ಲಿ ಕಟ್ಟೆ ಕಟ್ಟುವುದು ಬಲು ಪ್ರಯಾಸಕರವಾಯಿತು. ಕಟ್ಟೆಯ ಉದ್ದ 378 ಮೀ. ಸರೋವರದ ಜಲಾನಯನ ಭೂಮಿ 600 ಚ.ಕಿಮೀ. ಕಟ್ಟೆಯ ಬಳಿ ನದಿಯ ಮಹಾಪ್ರವಾಹ ಸೆಕೆಂಡಿಗೆ 5,184 ಘನ ಸೆಂಮೀ. ಸರೋವರದಲ್ಲಿ 28 ಚ.ಕಿಮೀ ಭೂಮಿ ಮುಳಗಡೆಯಾಗಿದೆ.

ಈ ಕಟ್ಟೆಯಿಂದಾಗಿ ಪೆರಿಯಾರ್ ನದಿ ಮುಂದಕ್ಕೆ ತನ್ನ ಪಾತ್ರದಲ್ಲಿ ಹರಿಯುವುದನ್ನೇ ನಿಲ್ಲಿಸುತ್ತದೆ. ಜಲಾಶಯದ ನೀರನ್ನು ಆ ಗುಡ್ಡಗಾಡಿನ ಪ್ರದೇಶದಲ್ಲಿ ನೀರಾವರಿಗಾಗಿ ಉಪಯೋಗಿಸುವುದು ಸಾಧ್ಯವಿಲ್ಲ. ಅದಕ್ಕಾಗಿ ತೂಬಿನಿಂದ ನೀರನ್ನು ಪರ್ಯಾಯ ದ್ವೀಪದ ನೀರನೆತ್ತಿಯ ಮೂಲಕ ಒಂದು ಸುರಂಗದಲ್ಲಿ ಪೂರ್ವಸಮುದ್ರದ ಕಡೆಗೆ ಹರಿಯುವ ವೈಗೈ ನದಿಗೆ ಬಿಟ್ಟು ಅಲ್ಲಿಂದ ನಾಲೆಗಳನ್ನು ತೆಗೆದುಕೊಂಡು ಹೋಗಿ ಮಳೆ ಕಡಿಮೆಯಾದ ವಿಶಾಲವಾದ ಪ್ರದೇಶಗಳಿಗೆ ನೀರಾವರಿಯನ್ನು ಒದಗಿಸಿದ್ದಾರೆ. ಈ ಯೋಜನೆಯಿಂದ ಒಟ್ಟು 80.900 ಹೆ. ನೀರು ದೊರಕುತ್ತದೆ. (ಎಚ್.ಸಿ.ಕೆ.)

**ಪೆರು:** ದಕ್ಷಿಣ ಅಮೆರಿಕದ ಪಶ್ಚಿಮ ಭಾಗದಲ್ಲಿರುವ ಒಂದು ಗಣರಾಜ್ಯ. ಉತ್ತರದಲ್ಲಿ ಎಕ್ವೆಡಾರ್ ಮತ್ತು ಕೊಲಂಬಿಯ, ಪಶ್ಚಿಮದಲ್ಲಿ ಪೆಸಿಫಿಕ್ ಸಾಗರ, ಪೂರ್ವದಲ್ಲಿ ಬ್ರೆಜಿಲ್ ಮತ್ತು ಬೊಲಿವಿಯ, ದಕ್ಷಿಣದಲ್ಲಿ ಚಿಲಿ ಇದೆ. $0^0$–$18^0$ ದ.ಅ. ಹಾಗೂ $68^0$–$82^0$ ಪ.ರೇ.ಗಳ ನಡುವೆ ಇದೆ. ಪೂರ್ವ ಪಶ್ಚಿಮವಾಗಿ 1408 ಕಿಮೀ ಉತ್ತರ ದಕ್ಷಿಣವಾಗಿ 1971 ಕಿಮೀ ಇರುವ ಇದರ ವಿಸ್ತೀರ್ಣ 1285216 ಚ.ಕಿಮೀ. ಜನಸಂಖ್ಯೆ 27925,628 (2002), ರಾಜಧಾನಿ ಲೀಮಾ. ಜನಸಂಖ್ಯೆ 7444,300 (2002).

ಮೇಲ್ಮೈ ಲಕ್ಷಣ: ದೇಶದ ಬಹುಭಾಗವನ್ನು ಆಂಡೀಸ್ ಪರ್ವತಗಳು ಆವರಿಸಿಕೊಂಡಿವೆ. ಕಾರ್ಡಿಲೆರೆ ಓರಿಯೆಂಟಾಲ್ ಮತ್ತು ಕಾರ್ಡಿಲೆರೆ ಸೆಂಟ್ರಾಲ್ ಪ್ರಮುಖ ಶ್ರೇಣಿಗಳು. ಅತ್ಯಂತ ಎತ್ತರವಾದ ಶಿಖರ ವಾಸ್ಕರಾನ್(6,767 ಮೀ), ನೆವಾಡೊ ಕಾರೊಪೂನ ಶಿಖರದ ಎತ್ತರ 6,424 ಮೀ. ಪೆರು ರಾಜ್ಯಕ್ಕೆ 2,330 ಕಿಮೀ ಉದ್ದದ ಸಮುದ್ರತೀರವಿದೆ. ಪೂರ್ವಭಾಗದ ಬೆಟ್ಟದ ತಪ್ಪಲುಗಳಲ್ಲಿ ಅಮೆಜಾನ್ ನದಿಯೂ ಅದರ ಉಪನದಿಗಳೂ ಹರಿಯುವ ಬಯಲು ನೆಲ ಹಾಗೂ ಕಣಿವೆಗಳಿವೆ. ದೇಶದ ಈಶಾನ್ಯ ಭಾಗ ವಿಶಾಲವಾದ ಮೈದಾನವಾಗಿದೆ.




ಪೆರುವಿನಲ್ಲಿ ಅನೇಕ ಸ್ವಾಭಾವಿಕ ವಿಭಾಗಗಳು ಕಾಣುತ್ತವೆ; ಪೆಸಿಫಿಕ್ ತೀರದ ಕಿರಿದಾದ ಒಣಮರುಭೂಮಿ, ಕಡಿದಾದ ಆಂಡೀಸ್ ಶ್ರೇಣಿಗಳು, ಪೂರ್ವದ ಇಳಿಜಾರಿನ ತೇವವಾದ, ಅರಣ್ಯಾವೃತ ಪ್ರದೇಶ. ಭೌಗೋಳಿಕವಾಗಿ ಇದನ್ನು ಎಂಟು ಪ್ರದೇಶಗಳಾಗಿ ವಿಭಜಿಸಲಾಗಿದೆ.

1. ಕರಾವಳಿ ಬಯಲು : ಸಮುದ್ರದ ಅಂಚಿನಿಂದ ಸಮುದ್ರಮಟ್ಟಕ್ಕೆ 500 ಮೀ ಎತ್ತರದವರೆಗೆ ಇರುವ ಪ್ರದೇಶ. ಸಮುದ್ರ ತಂದು ಹಾಕಿದ ಹಾಗೂ ಪ್ರಾಚೀನ ಪರ್ವತಗಳ ಸವೆತದಿಂದ ಹರಡಿದ ಗಸ್ಟಿನಿಂದ ಈ ಪ್ರದೇಶ ನಿರ್ಮಿತವಾಗಿದೆ. ಇದು ಮರುಭೂಮಿ. ಸಹರ ಮರುಭೂಮಿಗಿಂತ ಮಳೆ ಕಡಿಮೆ. ಆದರೂ ಇದು ಪೆರುವಿನ ಆರ್ಥಿಕ ಕೇಂದ್ರ. ಇದು ಜನನಿಬಿಡವಾದ ಪ್ರದೇಶ. ಹಲವು ದಶಕಗಳಿಗೊಮ್ಮೆ ಡಿಸೆಂಬರಿನಲ್ಲಿ ಇಲ್ಲಿ ವಿಪರೀತ ಮಳೆಯಾಗಿ ನೀರು ತುಂಬಿಕೊಂಡು ಇಲ್ಲಿಯ ಗಾಳಿ ಮಳೆ ಸಸ್ಯ ಪ್ರಾಣಿಗಳ ಸಮತೋಲದಲ್ಲಿ ಏರುಪೇರಾಗುವುದುಂಟು. ಆಗ ಮೀನುಗಳು ತೀರ ಸಮುದ್ರದಿಂದ ದೂರ ಸರಿಯುತ್ತವೆ.

2. ಸಮಶೀತೋಷ್ಣ ಪ್ರದೇಶ: ಸಮುದ್ರಮಟ್ಟದಿಂದ 2,300–3,500 ಮೀ. ನಡುವಣ ಪ್ರದೇಶ. ಇಲ್ಲಿ ನೆಲ ಅಲೆಯಲೆಯಾಗಿದೆ. ವಾಯುಗುಣ ಹಿತಕರವಾಗಿರುವುದರಿಂದ ಜನವಸತಿ ದಟ್ಟವಾಗಿದೆ. ಇಲ್ಲಿಯ ನೆಲ ಜ್ವಾಲಾಮುಖೀಯ ಮಣ್ಣಿನಿಂದ ಕೂಡಿದ್ದು ಫಲವತ್ತಾಗಿದೆ. ಹಣ್ಣು ಮತ್ತು ತರಕಾರಿ ಬೆಳೆಗೆ ಪ್ರಶಸ್ತವಾಗಿದೆ. ಪ್ರಾಚೀನ ಇಂಕ ಸಾಮ್ರಾಜ್ಯದ ಪ್ರಮುಖ ಪಟ್ಟಣಗಳು ಇದ್ದುದು ಇಲ್ಲೆ. ಈಗ ಅವುಗಳಿದ್ದ ಸ್ಥಳಗಳಲ್ಲಿ ಅಥವಾ ಆ ಸ್ಥಳಗಳ ಬಳಿಯಲ್ಲಿ ಕೂಸ್ಕೊ, ಕಜಮಾರ್ಕ, ಟರ್ಮ, ಚೌಜ ಮೊದಲಾದ ಪಟ್ಟಣಗಳಿವೆ.

3. ಆಂಡೀಸ್ ಶ್ರೇಣಿಗಳ ನಡುವಣ ಕಣಿವೆ ಪ್ರದೇಶ : ಇಕ್ಕಟ್ಟಾದ ಕಣಿವೆಗಳಿರುವ ಈ ಪ್ರದೇಶದಲ್ಲಿ ಮಳೆ ಹೆಚ್ಚು. ಸೆಕೆಯೂ ಹೆಚ್ಚು. ಇದು ಮಲೇರಿಯ, ಗಳಗಂಡ ಮುಂತಾದ ಹಲವು ವ್ಯಾಧಿಗಳ ಆಗರ. ಸಮುದ್ರಮಟ್ಟದಿಂದ 300 ಮೀ ನಿಂದ 2,300 ಮೀ ವರೆಗಿನ ಎತ್ತರದಲ್ಲಿರುವ ಪ್ರದೇಶವಿದು.

4. ಎತ್ತರದ ಬೆಂಗಾಡು ಪ್ರದೇಶ : ಈ ಪ್ರದೇಶ ಸಮುದ್ರಮಟ್ಟಕ್ಕೆ 3,500 ಮೀ ನಿಂದ 4,000 ಮೀ ವರೆಗಿನ ಎತ್ತರದಲ್ಲಿದೆ. ಇದು ಕಡಿದಾದ ಪರ್ವತ ಚಾಚುಗಳು ಹಾಗೂ ಪ್ರಪಾತಗಳಿಂದ ಕೂಡಿದೆ. ಇಲ್ಲಿಯದು ಶೀತಲ ವಾಯುಗುಣ. ಇಲ್ಲಿ ಪದೇ ಪದೇ ಮಂಜು ಕವಿಯುತ್ತದೆ. ಸಸ್ಯಗಳು ಕಡಿಮೆ. ಇಲ್ಲಿ ನೀಲಗಿರಿ ಜಾತಿಯ ಮರಗಳನ್ನು ಬೆಳೆಸಲಾಗಿದೆ.

5. ಉನ್ನತ ಆಂಡೀಸ್ ಪ್ರದೇಶ : ಸಮುದ್ರಮಟ್ಟಕ್ಕೆ 4,000 ಮೀ ನಿಂದ 4,785 ಮೀ ವರೆಗೆ ಎತ್ತರವಾಗಿರುವ ಪ್ರದೇಶವಿದು. ಇಲ್ಲಿ ವಿಶಾಲವಾದ ಚಪ್ಪಟೆ ನೆಲಗಳಿವೆ. ಇಲ್ಲಿ ಬಿಸಿಲಿನ ಹೊಡೆತ ಹೆಚ್ಚು. ಇದು ಸದಾ ಭಾರಿ ಗಾಳಿಗೆ ಪಕ್ಕಾಗಿರುತ್ತದೆ. ಇಲ್ಲಿಯದು ಶೀತ ವಾಯುಗುಣ. ಇಲ್ಲಿಯ ಉಷ್ಣತೆಯಲ್ಲಿ ತೀವ್ರ ಏರಿಳಿತಗಳಾಗುತ್ತವೆ. ಇಲ್ಲಿ ನಾನಾ ಬಗೆಯ ಹಣ್ಣು ಮತ್ತು ಆಲೂಗಡ್ಡೆ ಬೆಳೆಯುತ್ತವೆ. ನೀಲಗಿರಿ ಜಾತಿಯ ಮರಗಳನ್ನು ಬೆಳೆಸಲಾಗಿದೆ.

6. ಉನ್ನತ ಪರ್ವತ ಶ್ರೇಣಿ ಪ್ರದೇಶ : 4,785 ಮೀ ಗಿಂತ ಎತ್ತರದಲ್ಲಿರುವ ಕಡಿದಾದ, ಹಿಮಚ್ಛಾದಿತವಾದ, ಜ್ವಾಲಾಮುಖೀಯ ಕೋಡುಗಲ್ಲುಗಳ ಪ್ರದೇಶವಿದು. ವರ್ಷವಿಡೀ ಇಲ್ಲಿ ರಾತ್ರಿಯ ವೇಳೆಯ ಉಷ್ಣತೆ ಬರ್ಫ ಬಿಂದುವಿಗಿಂತ ಕೆಳಗಿರುತ್ತದೆ. ನೈಸರ್ಗಿಕ ಸಸ್ಯವಿಲ್ಲ. ಇಲ್ಲಿ ಖಾಯಂ ಜನವಸತಿ ಇಲ್ಲ. ಅತಿ ಎತ್ತರದ ಪರ್ವತ ಶಿಖರ ಹುಸ್ಕರನ್ 6,768 ಮೀ.

7. ಉನ್ನತ ಅರಣ್ಯ ಪ್ರದೇಶ : ಪೂರ್ವ ಭಾಗದಲ್ಲಿರುವ ತಗ್ಗಾದ ಕಣಿವೆಗಳ ಅರಣ್ಯಗಳ, ಕಡಿದಾದ ಬೆಟ್ಟದೇಣುಗಳ, ಮೈದಾನಗಳ ಭಾಗವಿದು. ಹಿತಕರ ಹವೆ ಇರುತ್ತದೆ. ವರ್ಷಕ್ಕೆ ಸು. 4,000 ಸೆಂಮೀ ಮಳೆಯಾಗುವ ಈ ಪ್ರದೇಶದಲ್ಲಿ ಸಂಮೃದ್ಧ ಹಸುರು ಜಾಲವಿದೆ. ಪಶುಪಾಲನೆ, ವ್ಯವಸಾಯ, ತೋಟಗಾರಿಕೆ ಮುಖ್ಯ ಕಸಬುಗಳು.

8. ಅಮೆಜಾನ್ ಪ್ರದೇಶ : ಅಮೆಜಾನ್ ಮತ್ತು ಅದರ ಉಪನದಿಗಳು ಹರಿಯುವ ಮೈದಾನವಿದು. ಅಲ್ಲಲ್ಲಿ ಇವುಗಳಿಂದ ನೆಲ ಜವುಗಾಗಿದೆ. ಸರೋವರಗಳುಂಟಾಗಿವೆ. ಇಲ್ಲಿಯ ನೆಲ ಫಲವತ್ತಾದ್ದು. ಇಲ್ಲಿಯದು ಉಷ್ಣ ವಾಯುಗುಣ. ವರ್ಷಕ್ಕೆ ಸು. 300 ಸೆಂಮೀ ಮಳೆಯಾಗುತ್ತದೆ. ಆಗಾಗ ನದಿಗಳು ದಡ ಮೀರಿ ಹರಿಯುತ್ತವೆ. ಬಗೆಬಗೆಯ ಮರಗಳಿಂದ ಕೂಡಿದ ಕಾಡುಗಳಿವೆ.

ನದಿಗಳು: ಆಂಡೀಸ್ ಶ್ರೇಣಿಗಳಿಂದ ಫಶ್ಚಿಮಕ್ಕೆ ಹರಿದು ಪೆಸಿಫಿಕ್ ಸಾಗರವನ್ನು ಸೇರುವ ನದಿಗಳು ಐವತ್ನಾಲ್ಕು. ಆದರೆ, ಅವುಗಳಲ್ಲಿ ನೌಕಾಯಾನ ಯೋಗ್ಯವಾದ ನದಿ ಎಂದರೆ ಟೂಂಬೇಸ್ ಒಂದೇ. ಈ ನದಿಗಳ ನೀರಿನಲ್ಲಿ ಐದನೆಯ ಒಂದರಷ್ಟನ್ನು ಮಾತ್ರ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಭೂಮಿಯಲ್ಲೇ ಅತ್ಯಂತ ಹೆಚ್ಚು ಪ್ರವಾಹದಿಂದ ಕೂಡಿದ ನದಿಯಾದ ಅಮೆಜಾನ್ ನದಿ ಪೆರುವಿನಲ್ಲಿ ಉಗಮಿಸುತ್ತದೆ. ಅನೇಕ ದೊಡ್ಡ ನದಿಗಳು ಆಂಡೀಸ್ ಪರ್ವತಗಳಿಂದ ಉತ್ತರ ಹಾಗೂ ಪೂರ್ವಕ್ಕೆ ಹರಿದು, ಪೂರ್ವ ಪೆರುವಿನ ಬಯಲು ಪ್ರದೇಶವನ್ನು ದಾಟಿ, ಅಮೆಜಾನ್ ನದಿಯನ್ನು ಸೇರುತ್ತವೆ. ಇವುಗಳಲ್ಲಿ ಅತಿ ದೊಡ್ಡ ನದಿಗಳೆಂದರೆ ಮಾರನಾನ್ ಹಾಗೂ ಉಕಯಾಲಿ. ಅಮೆಜಾನ್, ಮಾರನಾನ್, ಉಕಯಾಲಿ, ಯಲಾರಿ ಇವೆಲ್ಲ ನದಿಗಳೂ ನೌಕಾಯಾನಕ್ಕೆ ಯೋಗ್ಯವಾಗಿವೆ. ದಕ್ಷಿಣದಲ್ಲಿ ನಾಲ್ಕು ನದಿಗಳು ಕೋಲಾವೋ ಪ್ರಸ್ಥಭೂಮಿಯನ್ನು ದಾಟಿ ಟಿಟಿಕಾಕ ಸರೋವರವನ್ನು ಸೇರುತ್ತವೆ. ಬೊಲಿವಿಯ ಮತ್ತು ಪೆರು ದೇಶಗಳ ನಡುವೆ ಇರುವ ಈ ಸರೋವರ 8,300 ಚ.ಕಿಮೀ ವಿಸ್ತಾರವಾಗಿದೆ. ಸಮುದ್ರ ಮಟ್ಟದಿಂದ 3,810 ಮೀ ಎತ್ತರದಲ್ಲಿರುವ ಇದು ಪ್ರಪಂಚದ ಅತ್ಯುನ್ನತ ನೌಕಾಯಾನ ಯೋಗ್ಯ ಜಲಭಾಗ.

ವಾಯುಗುಣ: ಪೆರು ಉಷ್ಣವಲಯದಲ್ಲಿರುವ ದೇಶ. ಅದರ ಉತ್ತರದ ಅಂಚಿನಲ್ಲಿ ಸಮಭಾಜಕ ವೃತ್ತ ಹಾದು ಹೋಗುತ್ತದೆ. ಆದರೂ ಕರಾವಳಿ ಭಾಗದಲ್ಲಿ ಸಮಭಾಜಕೀಯ ವಾಯುಗುಣವಿಲ್ಲ. ಉಷ್ಣತೆ $12^0$ ಯಿಂದ $32^0$ ಸೆ. ವರೆಗೆ ವ್ಯತ್ಯಾಸವಾಗುತ್ತದೆ. ರಾಜಧಾನಿ ಲೀಮಾದಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $20^0$ಸೆ. ಪಶ್ಚಿಮದಲ್ಲಿ ಸಮುದ್ರದ ಶೀತ ಪ್ರವಾಹದ ಮೇಲಿಂದ ಬೀಸುವ ಗಾಳಿ ತಂಪಾಗಿರುತ್ತದೆ. ಪೂರ್ವದಿಂದ ಬೀಸುವ ಮೋಡದಿಂದ ಕೂಡಿದ ಗಾಳಿಯನ್ನು ಆಂಡೀಸ್‌ವ ಕಾರ್ಡಿಲೇರ ಆಕ್ಸಿಡೆಂಟಾಲ್ ಶ್ರೇಣಿ ತಡೆಯುತ್ತದೆ. ಸಮುದ್ರದಿಂದ ದಂಡೆಗೆ ಬೀಸುವ ಗಾಳಿಯಿಂದ ಇಬ್ಬನಿ ಕವಿಯುತ್ತದೆ. ಮೇ–ಅಕ್ಟೋಬರ್ ಕಾಲದಲ್ಲಿ ಇದು ಮಳೆಯಾಗಿ ಪರಿಣಮಿಸುತ್ತದೆ. ಸು. 50 ಸೆಂಮೀ ಮಳೆಯಾಗುತ್ತದೆ. ಪೆರುವಿನ ಪರ್ವತ ಪ್ರದೇಶದ ವಾಯುಗುಣದ ಮೇಲೆ ಅಕ್ಷಾಂಶಕ್ಕಿಂತಲೂ ಎತ್ತರದ ಪ್ರಭಾವ ಹೆಚ್ಚು. ಚಳಿಗಾಲದಲ್ಲಿ, ಅಂದರೆ ಅಕ್ಟೋಬರಿನಿಂದ ಏಪ್ರಿಲ್‌ವರೆಗೆ ಇಲ್ಲಿ ಮಳೆಗಾಲ. ಇದು ತೀರಪ್ರದೇಶಕ್ಕೆ ವಿರುದ್ಧವಾದ್ದು. ಋತುವಿನಿಂದ ಋತುವಿಗೆ ಹಗಲಿನಿಂದ ರಾತ್ರಿಗೆ ಉಷ್ಣತೆಯಲ್ಲಿ ಹೆಚ್ಚು ವ್ಯತ್ಯಾಸವಿರುತ್ತದೆ. ಪೂರ್ವದ ಕಾಡುಗಳಲ್ಲಿ ಮಳೆ ಹೆಚ್ಚು. ಅಲ್ಲಿ ವಾರ್ಷಿಕ ಮಳೆ 290 ಸೆಂಮೀ–310 ಸೆಂಮೀ. ಉಷ್ಣತೆ $24^0$ಸೆ ನಿಂದ $35^0$ಸೆ ವರೆಗೆ.

ಸಸ್ಯ ಮತ್ತು ಪ್ರಾಣಿಸಂಪತ್ತು: ವಿಭಿನ್ನ ವಾಯುಗುಣ ಮತ್ತು ಮೇಲ್ಮೈ ಲಕ್ಷಣಗಳಿಂದಾಗಿ ಇಲ್ಲಿಯ ಸಸ್ಯ ಹಾಗೂ ಪ್ರಾಣಿ ಜೀವನದಲ್ಲಿ ವೈವಿಧ್ಯವಿದೆ. ಸಮುದ್ರತೀರದ ಮರುಭೂಮಿಯಲ್ಲಿ ಅಲ್ಲಲ್ಲಿ ಕುರುಚಲು ಹಾಗೂ ಕಳ್ಳಿ ಗಿಡಗಳೂ ನೀರು ಇರುವೆಡೆಗಳಲ್ಲಿ ತಾಳೆ ಜಾತಿಯ ಮರಗಳೂ ಇವೆ. 800 ಮೀ – 2,400 ಮೀ ನಡುವಣ ಇಳುಕಲ ನೆಲದಲ್ಲಿ ಬಗೆಬಗೆಯ ಹೂಗಿಡಗಳು ಹಾಗೂ 3,600 ಮೀ ಎತ್ತರವಾದ ಕಡೆ ಟಂಡ್ರಾ ಹುಲ್ಲೂ ಬೆಳೆಯುತ್ತವೆ. ಅಮೆಜಾನ್ ನದೀ ವ್ಯವಸ್ಥೆ ಇರುವ ಪೂರ್ವದ ಮೈದಾನದಲ್ಲಿ ದಟ್ಟವಾದ ಅರಣ್ಯಗಳಿವೆ. ಸರಸಪರಿಲ, ಸಿಂಕೋನ, ಕೋಕೊ, ರಬ್ಬರ್, ಮಹಾಗನಿ ಮೊದಲಾದ ಮರಗಳೂ ಇವೆ.

ಪಶ್ಚಿಮ ಕರಾವಳಿಯಲ್ಲಿ ಸಾಗರಿಕ ಸಸ್ಯಗಳನ್ನು ಅವಲಂಬಿಸಿದ ಅನೇಕ ಬಗೆಯ ಸಾಗರಿಕ ಪ್ರಾಣಿಗಳು ಮೀನುಗಳೂ ಕಡಲಹಕ್ಕಿಗಳೂ ಇವೆ. ಆಂಡೀಸ್ ಪರ್ವತಗಳಲ್ಲಿ ರಣಹದ್ದು, ಬಾತು, ಕಾಡುಕೋಳಿ, ಪ್ಯೂಮ, ಲಾಮ, ಅಲ್ಪಾಕ, ಗ್ವಾನಾಕೊ ಮುಂತಾದ ಪ್ರಾಣಿಗಳಿವೆ. ಪೂರ್ವ ಪೆರುವಿನ ಕಾಡುಗಳಲ್ಲಿ ಗಿಳಿ, ಜಾಗ್ವಾರ್, ಚಿರತೆ, ಕೋತಿ, ಮೊಸಳೆ ಮುಂತಾದವು ಇವೆ.

ಜನ: ಸ್ಪಾನಿಷರು ಬರುವುದಕ್ಕೆ ಮುಂಚೆ ಪೆರುವಿನಲ್ಲಿ ಸ್ಥಳೀಯ ಇಂಡಿಯನ್ ಬಣಗಳು ಸುವ್ಯವಸ್ಥಿತ ಜೀವನವನ್ನು ಸಾಗಿಸುತ್ತಿದ್ದುವು. ಸ್ಪೇನ್ ದಾಳಿಕಾರರು ನಾಶ ಮಾಡಿದ ಇಂಡಿಯನ್ ಜನರ ಪಟ್ಟಣಗಳ ನಿವೇಶನಗಳಲ್ಲಿ ಸಮುದ್ರದಂಚಿನಲ್ಲಿ ಹಾಗೂ ಚಿಲುಮೆಗಳಿರುವ ಜಲಾಶಯ ಭಾಗಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿ ನೆಲೆಸಿದರು. ತಮ್ಮ ಸರ್ಕಾರ ಪದ್ಧತಿ, ಸಂಸ್ಕೃತಿ ಮತ್ತು ಆರ್ಥಿಕ ಜೀವನವನ್ನು ಸ್ಥಳೀಯ ಜನರ ಮೇಲೆ ಹೊರಿಸಿ ಅವರೊಡನೆ ಮಿಲನಗೊಂಡರು. ಸ್ಪ್ಯಾನಿಷ್ ಭಾಷೆ, ಕೆಥೊಲಿಕ್ ಧರ್ಮ ಇವು ಸ್ಥಳೀಯರ ಜೀವನದಲ್ಲಿ ಬೆಳೆದುಕೊಂಡುವು. ಸ್ಪ್ಯಾನಿಷರು ಬಂದಾಗ ತಮ್ಮೊಂದಿಗೆ ನೀಗ್ರೊ ಗುಲಾಮರನ್ನು ತಂದರು. ಕಾಲಕ್ರಮದಲ್ಲಿ ಗುಲಾಮ ಪದ್ಧತಿ ರದ್ದಾದಾಗ ಜಮೀನುಗಳಲ್ಲಿ ಕೆಲಸ ಮಾಡಲು ಚೀನೀ ಹಾಗೂ ಜಪಾನೀಯರನ್ನು ಸ್ವಾಗತಿಸಲಾಯಿತು. ರಾಜ್ಯದಲ್ಲಿ ಬುಡಕಟ್ಟುಗಳ ತಾರತಮ್ಯವಿಲ್ಲದ ಜೀವನವಿದೆ. ಪರಸ್ಪರ ಬೆರತಿರುವ ಜನರಲ್ಲಿ ಪ್ರಧಾನ ಗುಂಪುಗಳು ಇವು: 1. ಮೆಸ್ಟಿಜೊ: ಬಿಳಿಯರೊಂದಿಗೆ ಬೆರೆತ ಇಂಡಿಯನ್ ಜನ. 2. ಮುಲಾಟೊ: ಬಿಳಿಯರೊಂದಿಗೆ ಬೆರೆತ ಕಪ್ಪು ಜನ. 3. ಇನ್‌ಜರ್ಟೊ: ಚೀನೀ ಅಥವಾ ಜಪಾನೀಯರೊಡನೆ ಬೆರೆತ ಬಿಳಿಯ ಜನ. 4. ಜಾಂಬೋ: ಇಂಡಿಯನರೊಂದಿಗೆ ಬೆರೆತ ಕಪ್ಪು ಜನ. 5. ಚಿನೊಚೊಲೊ: ಚೀನೀ ಅಥವಾ ಜಪಾನೀಯರೊಡನೆ ಬೆರೆತ ಕಪ್ಪು ಜನ.

ಜನರ ಆಚಾರ ಹಾಗೂ ಆದರ್ಶಗಳಲ್ಲಿ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಮೆಸ್ಟಿಜೊ ಜನರು ಕರಾವಳಿಯ ಪಟ್ಟಣಗಳಲ್ಲಿ ವಾಸಿಸುತ್ತಾರೆ. ರಾಷ್ಟ್ರದ ಸಂಪತ್ತಿನಲ್ಲಿ ಬಹುಪಾಲು ಇವರದು. ಇಂಡಿಯನ್ನರಲ್ಲಿ ಶೇ. 79 ರಷ್ಟು ಮಂದಿ ಮೆಸ್ಟಿಜೊ ಮತ್ತು ಯುರೋಪಿಯನರಿಂದ ಬೇರೆಯಾಗಿ ಬೆಟ್ಟಗಾಡುಗಳಲ್ಲಿದ್ದು, ಲಾಮ ಪ್ರಾಣಿಗಳನ್ನು ಪೋಷಿಸುತ್ತ ಸಣ್ಣ ಹಿಡುವಳಿಗಳಲ್ಲಿ ಬೇಸಾಯ ಮಾಡಿ ಜೀವಿಸುತ್ತಾರೆ.

ಜನಸಂಖ್ಯೆ: ಇಂಕ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ ಪೆರು ದೇಶದ ಜನಸಂಖ್ಯೆ 1,20,00,000. ಲಕ್ಷ ಸ್ಪ್ಯಾನಿಷರ ಆಕ್ರಮಣದ ತರುವಾಯ 50 ವರ್ಷಗಳಲ್ಲಿ ಸು. 1,00,00,000 ಲಕ್ಷ ಮಂದಿ ಹತರಾದರು. 1793 ರಲ್ಲಿ ಜನಸಂಖ್ಯೆ 10,76,000 ಇತ್ತು. 1940–71 ರ ನಡುವೆ ಜನಸಂಖ್ಯೆ ಶೇ. 50 ರಷ್ಟು ಹೆಚ್ಚಿದೆ. ಸಾಕ್ಷರತೆ ಶೇ. 87.

ಪೆರುವಿನ ಪ್ರಮುಖ ನಗರಗಳು ಲಿಮಾ ಅರೆಕೀಪನಗರ, ಟುಜಿಲೊ, ಚೀಕ್ಲಾಯೊ.

ಆಂಡೀಸ್ ಪರ್ವತಗಳ ಮಡಿಲಿನಲ್ಲಿರುವ ಕುಸ್ಕೋ 3515 ಮೀ ಗಳಷ್ಟು ಎತ್ತರದಲ್ಲಿದೆ. ಸೂರ್ಯ ಮರೆಯಾದೊಡನೆ ಸಾಕಷ್ಟು ಚಳಿಯಾಗಬಲ್ಲ ಸ್ಥಳವಿದು. ಒಂದೇ ದಿನದಲ್ಲಿ $19^0$ ಸೆ ಇದ್ದದ್ದು 1.6 ಸೆ ಗೆ ಇಳಿಯಬಲ್ಲದು. ಕುಸ್ಕೋ ಏರು ಎತ್ತರದ ಬೆಟ್ಟಗಳ ನಡುವಿನ ವಿಶಾಲ ಕಣಿವೆಯಲ್ಲಿ ಅಡಗಿ ಮಲಗಿದೆ.

ಕುಸ್ಕೋ ಬಹಳ ಪ್ರಮುಖವಾದ ಐತಿಹಾಸಿಕ ತಾಣ. ಪುರಾತನ ಇನ್ಕಾ ಸಾಮ್ರಾಜ್ಯದ ರಾಜಕೀಯ ಮತ್ತು ಧಾರ್ಮಿಕ ರಾಜಧಾನಿ ಇದು. ಇನ್ಕಾಗಳಿಗೆ ಕುಸ್ಕೋ ಭೂಮಿಯ ಕೇಂದ್ರಬಿಂದುವಾಗಿತ್ತು. ಇನ್ಕಾಗಳ ಕೆಚುವಾ ಭಾಷೆಯಲ್ಲಿ ಕುಸ್ಕೋ ಎಂದರೆ ನಾಭಿ ಎಂದು ಅರ್ಥ. ಇದು ಭೂಮಿಯ ನಡುಮಧ್ಯದಲ್ಲಿ, ನಾಭಿಯಲ್ಲಿದೆ ಎಂದು ನಂಬಿದ್ದರು. ಇಲ್ಲಿಂದ ಕೆಚುವಾ ಸೇನೆ ನಾಲ್ಕು ದಿಕ್ಕಿಗೂ ಸಾಗಿ ಇನ್ಕಾ ಸಾಮ್ರಾಜ್ಯವನ್ನು ಕಟ್ಟಿ ಆಳಿತು.

ಇವರು ಸೂರ್ಯನ ಆರಾಧಕರು. ಸೂರ್ಯನ ಆರಾಧನೆ ಇಲ್ಲಿಂದ ಆರಂಭವಾಗಿ ಇಡೀ ಆಂಡಿಯನ್ ಪ್ರದೇಶವನ್ನು ಆವರಿಸಿತು.

ಕುಸ್ಕೋ 1100ದಲ್ಲಿ ಸ್ಥಾಪಿತವಾದ ನಗರ. ಪಶ್ಚಿಮ ಗೋಲದ ಅತ್ಯಂತ ಪುರಾತನ ನಗರ. ಕುಸ್ಕೋ ಇನ್ಕಾಗಳಿಗೆ ಮತ್ತು ಅವರ ಪ್ರಜೆಗಳಿಗೆ ಕೇವಲ ರಾಜಧಾನಿ ಮಾತ್ರವಾಗಿರಲಿಲ್ಲ. ಕುಸ್ಕೋ ಪವಿತ್ರ ಯಾತ್ರಾಸ್ಥಳವಾಗಿತ್ತು. ಮುಸ್ಲಿಮರಿಗೆ ಮೆಕ್ಕಾದಂತೆ, ಇಂದು ಇದು ಪೆರುವಿನ ಪ್ರಮುಖ ವಾಣಿಜ್ಯ ಕೇಂದ್ರ. 2,75000 ಲಕ್ಷ ಜನಸಂಖ್ಯೆಯ ಈ ನೆಲದಲ್ಲಿ ಬಹುಪಾಲು ಜನ ಕೆಚುವಾಗಳು.

ಅರಿಕೇಪಾ: ಅರಿಕೇಪಾ ದಕ್ಷಿಣ ಪೆರುವಿನಲ್ಲಿರುವ ನಗರ. ಒಂದು ಮಿಲಿಯನ್ ಜನಸಂಖ್ಯೆ. ಮಿಸ್ಟಿ, ಚಚಾನಿ ಮತ್ತು ಪಿಚು–ಪಿಚು ಎಂಬ ಮೂರು ಜ್ವಾಲಾಮುಖಿಗಳು ಈ ನಗರವನ್ನು ಸುತ್ತುಗಟ್ಟಿ ನಿಂತಿವೆ, ಅದರಲ್ಲಿ ಮಿಸ್ಟಿ ಜ್ವಾಲಾಮುಖಿ ಇಂದಿಗೂ ಜೀವಂತ. ಈ ಜ್ವಾಲಾಮುಖಿ ಲಾವಾ ಉಗುಳಿ 500 ವರ್ಷಗಳಾಗಿವೆ. ಯಾವ ಕ್ಷಣದಲ್ಲೂ ಮಿಸ್ಟಿ ಮತ್ತೆ ಸ್ಫೋಟಿಸಿ ಲಾವಾರಸವನ್ನು ಉಗಿದು, ಇಡೀ ನಗರವನ್ನು ಮುಚ್ಚಿ ಬಿಡಬಹುದು ಎಂಬುದು ಜ್ವಾಲಾಮುಖಿತಜ್ಞರ ಅಭಿಪ್ರಾಯ. ಈ ನಗರದ ಪ್ರಮುಖ ಕಟ್ಟಡಗಳೆಲ್ಲ ಬಿಳಿ ಬಣ್ಣದ ಜ್ವಾಲಾಮುಖಿಯ ಕಲ್ಲುಗಳಿಂದ ಕಟ್ಟಿದ್ದು, ಹಾಗೆಂದೇ ಈ ನಗರವನ್ನು ವೈಟ್ ಸಿಟಿ ಎನ್ನುವುದುಂಟು. ಚಚಾನಿ ಜ್ವಾಲಾಮುಖಿ ಉಗುಳಿದ ಲಾವಾರಸ ಕಠಿಣ ಕಲ್ಲಾಯಿತು. ಈ ಬೂಕಲ್ಲುಗಳಿಂದ ಕಟ್ಟಡಗಳನ್ನು ಕಟ್ಟಿದರು. ನೆಲಕ್ಕೆ ಹೊದಿಸಿರುವುದೂ ಅದೇ ಜ್ವಾಲಾಮುಖಿಯ ಕಲ್ಲುಗಳನ್ನು. ಇದು ಲೀಮಾ ನಂತರ ಪೆರುವಿನ ಅತಿ ದೊಡ್ಡ ನಗರ.

1540ರಲ್ಲಿ ಅರಿಕೇಪಾ ಸ್ಥಾಪಿತವಾಯಿತು. ಗೋದಿ, ಮೆಕ್ಕೆಜೋಳ, ದ್ರಾಕ್ಷಿ ಯಥೇಚ್ಛವಾಗಿ ಬೆಳೆವ ವಾಣಿಜ್ಯ ನಗರಿ. ಅರಿಕೇಪಾ ಎಂದರೆ ಕೆಚುವಾ ಭಾಷೆಯಲ್ಲಿ ಬನ್ನಿ, ಇರಿ ಎಂದು ಅರ್ಥ. ಅರಿಕೇಪಾ ಆಂಡೀಸ್ ಪರ್ವತ ಶಿಖರಗಳ ಬುಡದಲ್ಲಿಯ ಸುಂದರ ಕಣಿವೆಯಲ್ಲಿ ಸು. 7200 ಅಡಿ ಎತ್ತರದಲ್ಲಿರುವ ನಗರ.

ಇಕಿಟಸ್ ಪೆರುವಿನ ಅಮೆಜಾನ್ ಬಯಲಿನ ನಟ್ಟನಡುವಿದೆ. ಇಕಿಟಸ್ ಲೊರೆತೋ ಎಂಬ ಪೆರುವಿನ ಅತಿ ದೊಡ್ಡ ರಾಜ್ಯದ ರಾಜಧಾನಿ. ಅರಣ್ಯದ ನಡುವೆ ಸಿಕ್ಕಿಬಿದ್ದ ನಗರ ಇಕಿಟಸ್. ಸುತ್ತಲೂ ಅಮೆಜಾನ್ ಕಾಡು, ಅಮೆಜಾನ್ ನದಿಯ ಎಡ ತಟದಲ್ಲಿ ನಿಂತ ನಗರವಿದು. ನಾಪೋ ನದಿ ಮತ್ತು ಅಮೆಜಾನ್, ಇಕಿಟಸ್‌ಗೆ ಹತ್ತಿರವಾಗಿ ಸಂಗಮಗೊಳ್ಳುತ್ತವೆ. ಇಕಿಟಸ್ ಅನ್ನು ಹೊರಜಗತ್ತಿಗೆ ಸೇರ್ಪಡಿಸಲು ಇರುವುದು ಬರೀ ನದಿಗಳು ಮತ್ತು ಒಂದು ಸಣ್ಣ ವಿಮಾನ ನಿಲ್ದಾಣ. ಇದೊಂದು ವಿಶೇಷವಾದ ಬಂದರು ನಗರ. ಪೆರುವಿನ ಅಮೆಜಾನ್ ಜಂಗಲ್ ಬೇಸನಲ್ಲಿಯೇ ಅತ್ಯಂತ ಪ್ರಮುಖ ವಾಣಿಜ್ಯ ನಗರವಿದು. ಸುತ್ತುವರೆದ ಅರಣ್ಯದ ನಡುವೆ ಸಿಕ್ಕಿಬಿದ್ದರೂ ಆಧುನಿಕಗೊಂಡ ನಗರ. ಅಮೆಜಾನಿನ ಅದ್ಭುತಗಳನ್ನು ಇಕಿಟಸ್‌ನಲ್ಲಿ ಕಾಣಬಹುದು.

ಧರ್ಮ: ಪ್ರಾಚೀನ ಪೆರುವಿನಲ್ಲಿ ಶಕ್ತಿ ಪೂಜೆ, ಬಹುದೇವತಾರಾಧನೆ ಮತ್ತು ವಿಶ್ವ ದೇವೈಕ್ಯವಾದ ರೂಢಿಯಲ್ಲಿದ್ದುವು. ವಿರಕೋಪ ಸೃಷ್ಟಿದೇವತೆ. ಜನರು ಸೂರ್ಯ, ಚಂದ್ರ ಮತ್ತು ಮಿಂಚಿನ ದೇವತೆಗಳನ್ನು ಆರಾಧಿಸುತ್ತಿದ್ದರು. ಸ್ಥಳೀಯ ದೇವತೆಗಳಿಗೆ ಬೃಹತ್ ದೇವಾಲಯಗಳ ನಿರ್ಮಾಣವಾಗಿತ್ತು. ನರಬಲಿ ಸಾಮಾನ್ಯವಾಗಿತ್ತು.

ಇನ್ಕಾಗಳು ಸೂರ್ಯನನ್ನು ಪೂಜಿಸುತ್ತಿದ್ದರು. ಭೂಮಿ, ನೀರು, ಚಂದ್ರ, ತಾರೆಗಳನ್ನು, ಪರ್ವತಗಳನ್ನು, ಪರಿಸರವನ್ನು ಹಾಳು ಮಾಡದೆ ಪೂಜಿಸಿದರು. ಬೇಟೆಯನ್ನು ತೀವ್ರವಾಗಿ ನಿಯಂತ್ರಿಸಿದ್ದರು, ಎಂತಹ ಗಿಡಗಳನ್ನೂ ಎಂತಹ ಪ್ರದೇಶದಲ್ಲಾದರೂ ಬೆಳೆಯಬಲ್ಲವರಾಗಿದ್ದರು.

ಆಂಡೀಸ್ ಪರ್ವತ ಶ್ರೇಣಿಗಳಲ್ಲಿ ಪರ್ವತಗಳು ಒತ್ತೊತ್ತಾಗಿವೆ ಮತ್ತು ನಡುವಿನ ಕಣಿವೆ ಅತಿ ಕಿರಿದು. ವ್ಯವಸಾಯಕ್ಕೆ ಸಮತಟ್ಟು ಜಾಗದ ಕೊರತೆ, ಅದಕ್ಕಾಗಿ ಇನ್ಕಾ ಜನರು ಬೆಟ್ಟವನ್ನೇ ಕಡಿದು ಹಂತಗಳನ್ನು ಮಾಡಿ ಬೆಳೆ ಬೆಳೆದರು. ಇಂದಿಗೂ ಈ ಹಂತಗಳಲ್ಲಿ ಮೆಕ್ಕೆಜೋಳ ಬೆಳೆಯುತ್ತಿರುವುದನ್ನು ಕಾಣಬಹುದು.

ಸ್ಪ್ಯಾನಿಷರು ಇಂಡಿಯನರಲ್ಲೂ ಕೆಥೊಲಿಕ್ ಮತವನ್ನು ಹರಡಿ ನೂರಾರು ಚರ್ಚುಗಳನ್ನು ಕಟ್ಟಿಸಿದರು. ಪ್ರತಿಯೊಂದು ಗ್ರಾಮದಲ್ಲೂ ಸಂತರ ಜಾತ್ರೆಗಳು ನಡೆಯುತ್ತವೆ. ಇಲ್ಲಿ ರೋಮನ್ ಕೆಥೊಲಿಕ್ ಧರ್ಮ ಪ್ರಧಾನವಾಗಿದೆ. ಪ್ರಾಟೆಸ್ಟಂಟ್ ಮತವೂ ರೂಢಿಯಲ್ಲಿದೆ. ಇಂಡಿಯನರು ಹಿಂದಿನ ಮತೀಯ ಹಬ್ಬಗಳ ಜೊತೆಗೆ ಕೈಥೊಲಿಕ್ ಹಬ್ಬಗಳನ್ನೂ ಆಚರಿಸುತ್ತಾರೆ. ಸ್ಪ್ಯಾನಿಷ್ ಮತ್ತು ಕೆಚುವೀ ಭಾಷೆಗಳು ಆಡಳಿತ ಭಾಷೆಗಳಾಗಿವೆ.

ಆರ್ಥಿಕತೆ: ವ್ಯವಸಾಯ: 1970ರಲ್ಲಿ 30 ಲಕ್ಷ ಹೆ. ಕೃಷಿಭೂಮಿ ಇತ್ತು. ಪ್ರಧಾನ ಬೆಳೆಗಳು ಆಲೂಗಡ್ಡೆ, ಮೆಕ್ಕೆಜೋಳ, ಗೋದಿ, ಬಾರ್ಲಿ, ಹತ್ತಿ, ಕಬ್ಬು, ಬತ್ತ, ಕಾಫಿ, ಚಹ ಮತ್ತು ಹಣ್ಣು. ಬಂಜರು ಹಾಗೂ ಬೆಟ್ಟಗಾಡಿನ ಭೂಮಿಯಲ್ಲಿ ವ್ಯವಸಾಯಕ್ಕೆ ಹೆಚ್ಚು ಅವಕಾಶವಿಲ್ಲವಾಗಿ, ದೇಶದ ಅಗತ್ಯದಲ್ಲಿ ಶೇ. 20 ರಷ್ಟು ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಪೆರುವಿನಲ್ಲಿ ನೂರಕ್ಕೂ ಹೆಚ್ಚು ಬಗೆಯ ಆಲೂಗಡ್ಡೆಗಳಿವೆ. ಬಗೆಬಗೆಯ ಬಣ್ಣ ಮತ್ತು ಗಾತ್ರದ ಮೆಕ್ಕೆಜೋಳಗಳಿವೆ. ಇವು ಸಾಂಪ್ರದಾಯಿಕವಾಗಿ ಬೆಳೆದ ಮೆಕ್ಕೆಜೋಳಗಳು. ಈ ನೆಲದಲ್ಲಿ ಮೆಕ್ಕೆಜೋಳಗಳನ್ನು 5,000 ವರ್ಷಗಳಿಂದ ಬೆಳೆಯುತ್ತಾ ಬಂದಿದ್ದಾರೆ.

ಮೀನುಗಾರಿಕೆ: ಇತ್ತೀಚಿನ ದಶಕಗಳಲ್ಲಿ ಮೀನುಗಾರಿಕೆಯ ಅಭಿವೃದ್ಧಿಯಾಗಿದೆ. ಆಹಾರಕ್ಕಾಗಿ ಹೆಚ್ಚುಹೆಚ್ಚಾಗಿ ಮೀನನ್ನು ನಿರ್ಯಾತ ಮಾಡುವ ರಾಷ್ಟ್ರಗಳಲ್ಲಿ ಪೆರುದೇಶ ಒಂದು.

ಖನಿಜ: ರಾಜ್ಯದಲ್ಲಿ ವಿಪುಲ ಖನಿಜ ನಿಕ್ಷೇಪವಿದೆ. 1968ರಿಂದ ಕ್ರಾಂತಿಕಾರಿ ಸರ್ಕಾರ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿ ನಿಕ್ಷೇಪಗಳ ಪ್ರಯೋಜನ ಪಡೆಯಲು ಪ್ರಯತ್ನಿಸುತ್ತಿದೆ. ಕಬ್ಬಿಣ, ಮ್ಯಾಂಗನೀಸ್, ಕಲ್ಲಿದ್ದಲು, ತಾಮ್ರ, ಸೀಸ, ತವರ, ಬೆಳ್ಳಿ, ಚಿನ್ನ, ಟಂಗ್‌ಸ್ಟನ್ ಮೊದಲಾದ ಖನಿಜಗಳ ಉತ್ಪಾದನೆಯ ಗಣಿಗಳಿವೆ. ಪೆರುವಿನಲ್ಲಿ ಚಿನ್ನವೂ ದೊರಕುತ್ತದೆ. ಉತ್ತರದ ಮರಳುಗಾಡಿನಲ್ಲಿ ಪೆಟ್ರೋಲಿಯಮ್ ದೊರಕುತ್ತದೆ.

ಕೈಗಾರಿಕೆ: ಸ್ಥಳೀಯ ಬೇಡಿಕೆಗಳನ್ನು ಪೂರೈಸುವಷ್ಟರ ಮಟ್ಟಿಗೆ ಕೈಗಾರಿಕೆಗಳ ಪ್ರಗತಿಯಾಗಿದೆ. ಬಟ್ಟೆ, ಸಿಮೆಂಟ್, ಪಾದರಕ್ಷೆ, ಇಟ್ಟಿಗೆ, ಹೆಂಚು, ಬಣ್ಣ, ಅಲ್ಯೂಮಿನಿಯಮ್ ಪಾತ್ರೆ, ಕಾಗದ, ಪೀಠೋಪಕರಣಗಳು, ಗಾಜಿನ ಸಾಮಾನು, ರಾಸಾಯನಿಕ ವಸ್ತುಗಳು, ಟೈರ್, ರಬ್ಬರ್ ಸಾಮಾನು, ಡಬ್ಬದಲ್ಲಿ ಮೀನು ಪ್ಯಾಕ್ ಮಾಡುವುದು – ಇವು ಪ್ರಧಾನ ಕೈಗಾರಿಕೆಗಳು.

ಅರಣ್ಯಗಾರಿಕೆ: ಪೆರುವಿನ ಅರಣ್ಯ ಸಂಪತ್ತು ವಿಶಿಷ್ಟವಾದದ್ದು. ಅರಣ್ಯಗಳಿಂದ ಕೋಕೋ ಕಾಯಿಗಳನ್ನು ಸಂಗ್ರಹಿಸಲಾಗುತ್ತದೆ. ರಬ್ಬರ್ ಒಂದು ಮುಖ್ಯ ಅರಣ್ಯೋತ್ಪನ್ನ. ರಾಷ್ಟ್ರದ ಪೂರ್ವಭಾಗಗಳಲ್ಲಿ ಚೌಬೀನೆ ಕಾರ್ಖಾನೆಗಳಿವೆ. ಆದರೆ, ಕಾಡಿನಿಂದ ದಿಮ್ಮಿಗಳನ್ನು ಕಾರ್ಖಾನೆಗಳಿಗೆ ಸಾಗಿಸಲು ಸಾರಿಗೆ ಸೌಲಭ್ಯವಿಲ್ಲ. ಮಹಾಗನಿ, ಸಿಡಾರ್, ಓಕ್–ಇವುಗಳ ಚೌಬೀನೆಯಿಂದ ಮರದ ಸಾಮಾನುಗಳ ತಯಾರಿಕೆಯಾಗುತ್ತದೆ. ಕೆಲವು ಮರಗಳ ತೊಗಟೆಗಳು ಚರ್ಮ ಹದ ಮಾಡಲು ಉಪಯುಕ್ತವಾಗಿವೆ. ಮೃದು ತಿರುಳಿನ ಮರಗಳಿಂದ ಕಾಗದ ತಯಾರಿಕೆಯಾಗುತ್ತದೆ.

ವಿದ್ಯುಚ್ಛಕ್ತಿ: ನದಿಗಳಿಂದ ಜಲ ವಿದ್ಯುತ್ತನ್ನು ಉತ್ಪಾದಿಸಲು ಹೆಚ್ಚು ಅವಕಾಶವಿದೆ. ವಿದ್ಯುತ್ತಿನ ಬಳಕೆ ಕೈಗಾರಿಕೆಗಳಲ್ಲಿ ಅಧಿಕವಾಗುತ್ತಿದೆ. ರಾಷ್ಟ್ರದಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿನಲ್ಲಿ ಅರ್ಧ ಭಾಗದಷ್ಟನ್ನು ಲೀಮಾ ಪ್ರದೇಶದಲ್ಲಿ ಉತ್ಪಾದಿಸಲಾಗುತ್ತದೆ.

ಸಾರಿಗೆ ಸಂಪರ್ಕ: ಆಂಡೀಸ್ ಪರ್ವತಗಳ ಚಾಚು ಹಾಗೂ ಕಡಿದಾದ ಕಣಿವೆಗಳು, ಅಮೆಜಾನ್ ನದಿ ಜಾಲ–ಇವುಗಳಿಂದ ಪೆರು ರಾಜ್ಯದಲ್ಲಿ ರೈಲು ಮಾರ್ಗಗಳನ್ನು ಸಂಘಟಿಸಿ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲ. ರಸ್ತೆ ಹಾಗೂ ವಿಮಾನ ಸಂಚಾರ ಪ್ರಧಾನವಾಗಿವೆ.

1996 ರಲ್ಲಿ 70,000 ಕಿಮೀ ರಸ್ತೆಗಳಿದ್ದುವು. ಉತ್ತರದಿಂದ ದಕ್ಷಿಣಕ್ಕೆ ಸಾಗುವ ರಸ್ತೆಗಳ ಪೈಕಿ ಈಕ್ವೆಡಾರ್‌ನಿಂದ ಚಿಲಿ ಕಡೆಗೆ ಹೋಗುವ ಅಮೆರಿಕ ಹೆದ್ದಾರಿ – ಈಕ್ವೆಡಾರ್ ಮತ್ತು ಬೊಲಿವಿಯಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಮುಖ್ಯವಾದವು. ಪೆಸಿಫಿಕ್ ಸಾಗರದ ಅಂಚಿನಿಂದ ಪೂರ್ವದಲ್ಲಿಯ ಅಮೆಜಾನ್ ನದಿ ತೀರದ ಪಟ್ಟಣಗಳಿಗೆ ಹೋಗುವ ರಸ್ತೆಗಳು ರಾಷ್ಟ್ರಕ್ಕೆ ಅಡ್ಡಲಾಗಿ ಸಾಗಿವೆ.

ದೇಶದಲ್ಲಿ 19 ರೈಲು ಮಾರ್ಗಗಳಿವೆ. ಅವುಗಳಲ್ಲಿ 9 ಸರ್ಕಾರಿ, ಉಳಿದವು ಖಾಸಗಿ. ಸಾಗರದಂಚಿನ ಕಯಾವೊ ಪಟ್ಟಣಕ್ಕೂ ರಾಷ್ಟ್ರ ಮಧ್ಯದ ಸೆರೋದೆ ಪಾಸ್ಕೊ ಗಣಿ ಕೇಂದ್ರಕ್ಕೂ ಸಂಪರ್ಕ ಕಲ್ಪಿಸುವ ಮಾರ್ಗ ಪ್ರಧಾನವಾದ್ದು. ಸಮುದ್ರಮಟ್ಟಕ್ಕೆ 4,818 ಮೀ ಎತ್ತರದಲ್ಲಿ ಸಾಗುವ ಇದು ಪ್ರಪಂಚದ ಅತ್ಯಂತ ಎತ್ತರದ ರೈಲು ಮಾರ್ಗ. ಈ ಮಾರ್ಗ ಖನಿಜ ಸಾಗಣೆಗೆ ಅನುಕೂಲವಾಗಿದೆ. 1860ರಲ್ಲಿ ಈ ರೈಲು ಮಾರ್ಗದ ನಿರ್ಮಾಣ ಮಾಡುವ ಕಾರ್ಯ ಪ್ರಾರಂಭವಾಯಿತು. ಇದರ 344 ಕಿಮೀ ಮಾರ್ಗದಲ್ಲಿ 66 ಸುರಂಗಗಳೂ 59 ಸೇತುವೆಗಳೂ ಇವೆ. 1976ರಲ್ಲಿ ಪೆರು ರಾಜ್ಯದಲ್ಲಿದ್ದ ರೈಲುಮಾರ್ಗಗಳ ಉದ್ದ 2,544 ಕಿಮೀ.

ಕಯಾವೋ ಅತ್ಯಂತ ದೊಡ್ಡ ಬಂದರು. ಚೀಮೋಟೆ ಪ್ರಪಂಚದ ಅತ್ಯಂತ ಹಿರಿಯ ಮೀನುಗಾರಿಕೆ ರೇವುಪಟ್ಟಣ. ಅಮೆಜಾನ್ ನದಿಯ ಮೇಲಿರುವ ಇಕ್ವಿಟೋಸ್ ಪ್ರಧಾನ ನದಿ ಬಂದರು.

ಪರ್ವತಮಯವಾದ ಪೆರು ರಾಜ್ಯದಲ್ಲಿ ವಿಮಾನ ಸಂಚಾರ ಸುಗಮವಲ್ಲ. 1928ರಲ್ಲಿ ಪ್ರಯಾಣಿಕರಿಗಾಗಿ ವಿಮಾನ ಸಂಚಾರ ಪ್ರಾರಂಭವಾಯಿತು. ರಾಜ್ಯದಲ್ಲಿ 150 ವಿಮಾನ ನಿಲ್ದಾಣಗಳಿವೆ. ಲೀಮಾ ಹಾಗೂ ಕಯಾವೋ ನಗರಗಳಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ. ದಕ್ಷಿಣ ಅಮೆರಿಕದ ಇತರ ಗಣರಾಜ್ಯಗಳಿಗೆ, ಯುರೋಪ್ ಹಾಗೂ ಅಮೆರಿಕಕ್ಕೆ ಈ ನಿಲ್ದಾಣಗಳಿಂದ ವಿಮಾನಗಳು ಹಾರುತ್ತವೆ.

ಸಂಪರ್ಕ: ಪೆರು ರಾಜ್ಯದ ಪ್ರಧಾನ ದೈನಂದಿನ ಪತ್ರಿಕೆಗಳು ಎಲ್ ಪೆರೊವಾನೋ ಹಾಗೂ ಎಲ್ ಕೊರ್ಮರ್ಷಿಯೋ, 200 ಕ್ಕೂ ಹೆಚ್ಚು ಆಕಾಶವಾಣಿ ಪ್ರಸಾರ ಕೇಂದ್ರಗಳಿವೆ. ಲೀಮಾ ಮೊದಲಾದ ದೊಡ್ಡ ನಗರಗಳಲ್ಲಿ ದೂರದರ್ಶನ ಕೇಂದ್ರಗಳಿವೆ.

ಪೆರುವಿನಲ್ಲಿ ಶಿಕ್ಷಣ ರಾಜ್ಯದ ಸಾಮಾನ್ಯ ಹೊಣೆಗಾರಿಕೆಗೆ ಸೇರಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಶಿಕ್ಷಣ ಸಚಿವಾಲಯವೇ ವ್ಯವಸ್ಥೆಗೊಳಿಸಿ ನಡೆಸಿಕೊಂಡು ಬರುತ್ತಿವೆ. ಉನ್ನತ ಶಿಕ್ಷಣವನ್ನು ಸ್ವಯಮಾಡಳಿತ ಖಾಸಗಿ ವಿಶ್ವವಿದ್ಯಾಲಯಗಳೂ ಸಾಮಾನ್ಯ ಶಾಲೆಗಳು, ಕೆಲವು ಸ್ವತಂತ್ರ ಸಂಸ್ಥೆಗಳೂ ನಡೆಸುತ್ತಿವೆ. ಈ ಸಂಸ್ಥೆಗಳು ಶಿಕ್ಷಣ ಸಚಿವರ ಸಾಮಾನ್ಯ ನಿರ್ದೇಶನದಲ್ಲಿ ಕೆಲಸ ಮಾಡುತ್ತವೆ.

ಶಿಕ್ಷಣ ವಿಕೇಂದ್ರೀಕರಣವಾಗಿದ್ದರೂ ಶಿಕ್ಷಣದ ವೆಚ್ಚವನ್ನೆಲ್ಲ ಕೇಂದ್ರ ಸರ್ಕಾರವೇ ವಹಿಸಿಕೊಳ್ಳುತ್ತದೆ. ಶಿಕ್ಷಣ ಸಚಿವರು ಶಿಕ್ಷಣದ ಆದಾಯ ವೆಚ್ಚದ ಅಂದಾಜು ಪತ್ರವನ್ನು ಸಿದ್ಧಪಡಿಸಿ ಪ್ರತಿವರ್ಷ ಕಾಂಗ್ರೆಸ್ಸಿನ ಅನುಮೋದನೆ ಪಡೆಯುತ್ತಾರೆ. ಪ್ರತಿ ವಿದ್ಯಾರ್ಥಿಯ ಶಿಕ್ಷಣಕ್ಕೂ 50 ಡಾಲರ್ ವೆಚ್ಚವಾಗುವುದೆಂದು ಅಂದಾಜು. ಸಾಮಾನ್ಯವಾಗಿ ರಾಷ್ಟ್ರದ ಒಟ್ಟು ವೆಚ್ಚದಲ್ಲಿ ಸು. 1/5 ಭಾಗ ಶಿಕ್ಷಣಕ್ಕೆ ಮೀಸಲು.

ಉನ್ನತ ಶಿಕ್ಷಣ ಮುಖ್ಯವಾಗಿ 10 ರಾಷ್ಟ್ರೀಯ ವಿಶ್ವವಿದ್ಯಾಲಯಗಳಲ್ಲಿ ದೊರೆಯುತ್ತದೆ. ಅವುಗಳಲ್ಲಿ ಲೀಮಾ ವಿಶ್ವವಿದ್ಯಾಲಯವೇ ಪ್ರಮುಖವಾದದ್ದು. ಇವುಗಳ ಜೊತೆಗೆ ರೋಮನ್ ಕೆಥೊಲಿಕ್ ದೇವತಾಶಾಸ್ತ್ರದ ಹಾಗೂ ಪುರೋಹಿತರ ಶಿಕ್ಷಣದ ವಿಶ್ವವಿದ್ಯಾಲಯಗಳೂ ಇವೆ.

ಕಳೆದುಹೋದ ಇನ್ಕ ನಗರ–ಮಾಚುಪಿಚ್ಚು: ಆಂಡೀಸ್ ಪರ್ವತ ಶಿಖರಗಳ ತೊಟ್ಟಿಲಲ್ಲಿ, ದಕ್ಷಿಣ ಅಮೆರಿಕದ ಅತ್ಯಂತ ಮನೋಹರ ಐತಿಹಾಸಿಕ ಪಳಿಯುಳಿಕೆಯಾಗಿ ಮಾಚುಪಿಚುವನ್ನು ಗುರುತಿಸುತ್ತಾರೆ. ಈ ನೆಲದಲ್ಲಿ ನೂರಾರು ವರ್ಷಗಳು ಆಳಿ ನೆಲೆಸಿದ ಸ್ಪ್ಯಾನಿಷರಿಗೆ ಈ ನಗರ ಸಿಕ್ಕಿರಲಿಲ್ಲ. ಸ್ಥಳೀಯರ ಸಹಾಯದಿಂದ ಈ ನಗರ ಹೊರ ಪ್ರಪಂಚಕ್ಕೆ ಪರಿಚಯವಾಯಿತು (1911).

ಮಾಚುಪಿಚು ನಗರ ಎರಡು ಪರ್ವತ ಶಿಖರಗಳ ನಡುವೆ ತೂಗಿದ ತೊಟ್ಟಿಲಲ್ಲಿದೆ. ಮಾಚುಪಿಚು ಇಂದಿಗೂ ರಹಸ್ಯ ರೋಮಾಂಚನದ ನಗರವಾಗಿ ಉಳಿದಿದೆ. ಎರಡೂ ಪಕ್ಕಕ್ಕೂ ಆಳದ ಕಣಿವೆಗಳಿವೆ. ವೇಗವಾಗಿ ಹರಿಯುವ ಉರುಬಂಬಾ ನದಿ ಆಳವಾದ ಇಕ್ಕಟ್ಟು ಕಣಿವೆಯನ್ನು ಕೊರೆದು, ಮಾಚುಪಿಚುವನ್ನು ಬಳಸಿಕೊಂಡು ಹರಿದುಹೋಗಿದೆ.



ಮಾಚುಪಿಚ್ಚು

ಮಾಚುಪಿಚು ದಕ್ಷಿಣ ಅಮೆರಿಕದ ಅತ್ಯಂತ ರಮಣೀಯ ಪ್ರವಾಸಿ ತಾಣ. ಆಂಡಿಯನ್ ಸಂಸ್ಕೃತಿಯ ಉತ್ಕೃಷ್ಟ ಸಂಕೇತವಿದು. ಪುರಾತನ ಪೆರುವಿಯರು ಏರು ಎತ್ತರದಲ್ಲಿ ಸುತ್ತಲಿನ ಪ್ರಕೃತಿಯೊಡನೆ ಲೀನವಾಗದಂತೆ ಕಟ್ಟಿದ ಅಧ್ಯಾತ್ಮ ನಗರಿ–ಮಾಚುಪಿಚು. ಮಾಚುಪಿಚುವನ್ನು 14ನೆಯ ಶತಮಾನದಲ್ಲಿ ಇನ್ಕಾಗಳು ಕಟ್ಟಿದರು. 16ನೆಯ ಶತಮಾನದ ಮಧ್ಯಭಾಗದಲ್ಲಿಯೂ ಜೀವಂತವಿದ್ದ ನಗರವಿದು. ಮಾಚುಪಿಚು ನಗರದ ನಿಜವಾದ ಹೆಸರೇನೆಂದು ಯಾರಿಗೂ ಗೊತ್ತಿಲ್ಲ. ಮಾಚುಪಿಚು ಎಂದರೆ ಹಳೆಯ ಬೆಟ್ಟ ಎಂದಷ್ಟೇ ಅರ್ಥ. ಇದನ್ನು ಕಂಡು ಹಿಡಿದ ಹಿರಿಮೆ ಹಿರಮ್ ಬಿಂಗಮ ಎಂಬಾತನಿಗೆ ಸೇರಿದೆ. ಈತ ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ. ಈ ಸ್ಥಳ ಸ್ಥಳೀಯರಿಗೆ 19ನೆಯ ಶತಮಾನದಲ್ಲಿಯೇ ತಿಳಿದಿತ್ತು. ಬೆಟ್ಟದ ಬುಡದಿಂದೇ ಆರಂಭವಾಗುವ ಇನ್ಕಾಗಳ ಪುರಾತನ ಟೆರೇಸಸ್ ಮೇಲೆ ಬೆಳೆ ಬೆಳೆದವರೂ ಇದ್ದರು. ವಿಷದ ಹಾವುಗಳ ವಿಪರೀತದ ಕಾಟದಿಂದ ಮತ್ತಷ್ಟು ಬೆಟ್ಟವನ್ನು ಸವರಲು ಹೋಗದೆ ಕೈ ಬಿಟ್ಟಿದ್ದರು. ತಮ್ಮ ಪೂರ್ವಜರ ಭವ್ಯ ಸಂಸ್ಕೃತಿಯ ಭಗ್ನಾವಶೇಷಗಳು ಈ ಬೆಟ್ಟದಲ್ಲಿ ದಟ್ಟ ಕಾಡಿನಡಿಯಲ್ಲಿ ಅಡಗಿರುವುದು ಅವರಿಗೆ ತಿಳಿದಿತ್ತು.

ಇತ್ತೀಚಿನ ಅಧ್ಯಯನಗಳು ಇದು ಸೂರ್ಯನ ಸಂಕ್ರಮಣವನ್ನು ಅವಲೋಕಿಸಿದ ಖಗೋಳ ವೀಕ್ಷಣಾಲಯ ಎನ್ನುತ್ತವೆ. ಇನ್ಕಾಗಳು ಪ್ರಕೃತಿಯ ಆರಾಧಕರು. ಪ್ರಕೃತಿಯ ಪ್ರತಿಯೊಂದನ್ನೂ ಪೂಜಿಸಿದರು. ಗಾಳಿ, ನೀರು, ನೆಲ, ಭೂಮಿ, ಮಿಂಚು, ಕಾಮನ ಬಿಲ್ಲು, ಬೆಟ್ಟ ಗುಡ್ಡ, ಕಲ್ಲು, ಪ್ರಾಣಿ, ಪಕ್ಷಿ ಇವೆಲ್ಲದರಲ್ಲೂ ಹೊಕಾ ಅಂದರೆ ಆಧ್ಯಾತ್ಮ ಶಕ್ತಿ ಇದೆ ಎಂದು ನಂಬಿದವರು. ಮಾಚುಪಿಚು ಇನ್ಕಾಗಳ ಆಧ್ಯಾತ್ಮ ನಗರಿ ಎಂಬ ವಾದವೂ ಮುಂದುವರೆದಿದೆ.

ಇಲ್ಲಿ ಉತ್ಖನನದ ಮೂಲಕ ಹೊರತೆಗೆದ ಮಾನವ ಪಳಿಯುಳಿಕೆಗಳಲ್ಲಿ ಶೇ. 75ರಷ್ಟು ಹೆಂಗಸರದು ಎಂದು ಸಾರಿದ್ದರು. ಮಾಚುಪಿಚುವನ್ನು ಸೂರ್ಯದೇವರ ಕನ್ಯೆಯರ ಆಶ್ರಯತಾಣ ಎಂಬ ನಂಬುಗೆ ಮೂಡಿತ್ತು. ಆದರೆ ಈ ಅಸ್ಥಿಪಂಜರಗಳನ್ನು 1980ರ ದಶಕದಲ್ಲಿ ಆಧುನಿಕ ತಾಂತ್ರಿಕತೆಯ ಮೂಲಕ ಪರೀಕ್ಷಿಸಿದಾಗ, ಇಲ್ಲಿ ಗಂಡು ಹೆಣ್ಣು ಸಮಾನವಾಗಿರುವುದು ಕಂಡುಬಂದಿತು. ಮಾಚುಪಿಚು ಯಾರ ಆಕ್ರಮಣಕ್ಕೆ ಗುರಿಯಾಗದಿದ್ದರೂ ಅದನ್ನು ಇನ್ಕಾಗಳು ತಾವೇ ತೊರೆದರು. ಕಾರಣ ಇಂದಿಗೂ ತಿಳಿಯದು.

ಅಮೆಜಾನ್ ಮಹಾನದಿ: ಇದು ವಿಶಾಲವಾದ ನದಿ. ಇದು ಪೆರುವಿನಲ್ಲಿ ಹುಟ್ಟಿ 6,280 ಕಿಮೀ ದೀರ್ಘ ಹಾದಿಯನ್ನು ಭೋರ್ಗರೆದು ಸವೆಸಿ ಬ್ರೆಜಿಲ್‌ನಲ್ಲಿ ಸಮುದ್ರ ಸೇರುತ್ತದೆ. ಆಫ್ರಿಕದ ಜೀವನದಿ ನೈಲ್‌ಅನ್ನು ಬಿಟ್ಟರೆ, ಇದು ಪ್ರಪಂಚದ ಅತಿ ಉದ್ದನೆಯ ನದಿ. **(ಬಿ.ಕೆ.ಜಿ.)**

**ಪೆಷಾವರ್:** ಪಾಕಿಸ್ತಾನದ ವಾಯವ್ಯ ಗಡಿ ಪ್ರಾಂತ್ಯದ ರಾಜಧಾನಿ ; ಒಂದು ಜಿಲ್ಲೆ ವಿಭಾಗ. ಪಾಕಿಸ್ತಾನದ ಅತ್ಯಂತ ಪುರಾತನ ಹಾಗೂ ಚಾರಿತ್ರಿಕ ನಗರಗಳಲ್ಲೊಂದು. ಕಾಬೂಲ್ ನದಿಯ ಉಪನದಿಗಳಲ್ಲೊಂದಾದ ಬಾರಾ ನದಿಯ ಎಡದಂಡೆಯ ಮೇಲೆ ಖೈಬರ್ ಕಣಿವೆಯ ಬಳಿ ಇದೆ. ಸಮುದ್ರಮಟ್ಟಕ್ಕೆ ಸು. 319 ಮೀ ಎತ್ತರದಲ್ಲಿರುವ ಈ ನಗರ ಕಾಬೂಲ್ ಪಟ್ಟಣಕ್ಕೆ ಪೂರ್ವ–ಆಗ್ನೇಯದಲ್ಲಿ 304 ಕಿಮೀ ಮತ್ತು ಲಾಹೋರಿನ ವಾಯವ್ಯಕ್ಕೆ 442 ಕಿಮೀ ದೂರದಲ್ಲಿದೆ. ಇಲ್ಲಿಂದ ರಾವಲ್ಪಿಂಡಿ, ಹೈದರಾಬಾದ್ (ಪಾಕಿಸ್ತಾನ) ಮತ್ತು ಕರಾಚಿಗಳಿಗೆ ಹೆದ್ದಾರಿ ಮತ್ತು ರೈಲು ಮಾರ್ಗಗಳಿವೆ. ರಾವಲ್ಪಿಂಡಿ, ಚಿತ್ರಾಲ್ ಮತ್ತು ಕಾಬೂಲ್‌ಗಳೊಂದಿಗೆ ವಿಮಾನ ಸೌಕರ್ಯವಿದೆ. ಇಲ್ಲಿಯ ದಂಡು ಪ್ರದೇಶ ಪಾಕಿಸ್ತಾನದ ಪಶ್ಚಿಮ ಗಡಿಯ ಅತ್ಯಂತ ದೊಡ್ಡ ಸೇನಾ ಮಿಲಿಟರಿ ಕೇಂದ್ರ. ಖೈಬರ್ ಕಣಿವೆಯ ಸಮೀಪದಲ್ಲಿನ ಈ ನಗರ ಆಯಕಟ್ಟಿನ ಸ್ಥಳವಾಗಿ ಪ್ರಾಮುಖ್ಯ ಪಡೆದಿದೆ.

ಪೆಷಾವರ್ ನಗರದ ಪ್ರಮುಖ ಕೈಗಾರಿಕೆಗಳು ಬಟ್ಟೆ ಮತ್ತು ಸಕ್ಕರೆ ಉತ್ಪಾದನೆ, ಹಣ್ಣುಗಳ ಡಬ್ಬೀಕರಣ, ಪಾದರಕ್ಷೆ ತಯಾರಿಕೆ, ಚರ್ಮಗೆಲಸ, ಮಣ್ಣಿನ ಪಾತ್ರೆಗಳ ತಯಾರಿಕೆ, ಮೇಣ ಮತ್ತು ಕಸೂತಿ ಕೆಲಸ, ತಾಮ್ರದ ಪಾತ್ರೆ, ಲುಂಗಿ, ರುಮಾಲು, ರತ್ನಗಂಬಳಿ, ಅಲಂಕಾರದ ಕೆತ್ತನೆಗಳಿಂದ ಕೂಡಿದ ಮರದ ಪೀಠೋಪಕರಣ ಮುಂತಾದವುಗಳ ತಯಾರಿಕೆ, ದಂತದ ಕೆತ್ತನೆ ಕೆಲಸ, ಬಾಕು ಮತ್ತು ಸಣ್ಣ ಆಯುಧಗಳ ತಯಾರಿಕೆ. ಇಲ್ಲಿರುವ ಪುರಾತನವಾದ ಕಿಸ್ಸ ಕಹಾನಿ ಬಜಾರ್ ವಿದೇಶಿ ವರ್ತಕರು ಸಂಧಿಸುವ ಪ್ರಮುಖ ಸ್ಥಳವಾಗಿದೆ. ಪೆಷಾವರ್ ನಗರದ ಉದ್ಯಾನಗಳು ಮತ್ತು ಉಪನಗರಗಳು ಕೋಟೆಯ ಹೊರಭಾಗದಲ್ಲಿವೆ. ವಿಕ್ಟೋರಿಯ ಸ್ಮಾರಕ ಭವನ, ಗಾಂಧಾರ ಮೂರ್ತಿಶಿಲ್ಪಗಳ ದೊಡ್ಡ ಸಂಗ್ರಹಗಳಿರುವ ಮ್ಯೂಸಿಯಂ (1906), ಸರ್ಕಾರಿ ಭವನ–ಇವು ಕೆಲವು ಪ್ರಮುಖ ಕಟ್ಟಡಗಳು. ಪೆಷಾವರ್ ವಿಶ್ವವಿದ್ಯಾಲಯ (1950), ನಗರದ ಪೂರ್ವ ಭಾಗದಲ್ಲಿರುವ ಶಾಹ್‌ಜೀ–ಕೀ–ಢೇರಿ ದಿಬ್ಬಗಳಲ್ಲಿ ಈ ಉಪಖಂಡದಲ್ಲಿಯೇ ಅತ್ಯಂತ ದೊಡ್ಡದಾದ, ನಿರ್ಮಿತವಾದ ಬೌದ್ಧ ಸ್ತೂಪಗಳ ಅವಶೇಷಗಳಿವೆ (2 ನೆಯ ಶ.). ಉ.ಅ. $34^{0}1'$ ಮತ್ತು ಪೂ.ರೇ. $71^{0}35'$ ಮೇಲೆ ಇರುವ ಈ ನಗರದ ಜನಸಂಖ್ಯೆ 9,88,055 (1998). **(ಜಿ.ಎಸ್.ಎಸ್.)**

**ಪೆಸಿಫಿಕ್ ದ್ವೀಪಗಳು:** ಪೆಸಿಫಿಕ್ ಸಾಗರದ ಸಮೂಹ ದ್ವೀಪಗಳು. ಹೆಚ್ಚು ಖಚಿತವಾಗಿ ಹೇಳುವುದಾದರೆ ಮೆಲನೇಷ್ಯ, ಮೈಕ್ರೋನೇಷ್ಯ ಮತ್ತು ಪಾಲಿನೇಷ್ಯ ದ್ವೀಪಗಳು. ಉ.ಅ. $12^{0}$–$25^{0}$ ಮತ್ತು ಪೂ.ರೇ. $130^{0}$–$180^{0}$ ನಡುವೆ ಇರುವ ದ್ವೀಪಗಳನ್ನು – ಉತ್ತರದಲ್ಲಿ ಹಬ್ಬಿರುವ ಮೆರಿಯಾನ ದ್ವೀಪಗಳು, ಕರ್ಕಾಟಕ ವೃತ್ತದ ಮೇಲೆ ಈಶಾನ್ಯದಲ್ಲಿರುವ ಹವಾಯೀ

ದ್ವೀಪಗಳು, ದಕ್ಷಿಣದಲ್ಲಿರುವ ನ್ಯೂಜಿಲೆಂಡ್, ಆಗ್ನೇಯದಲ್ಲಿ ದೂರದಲ್ಲಿರುವ ಈಸ್ಟರ್ ದ್ವೀಪಗಳು ಇವನ್ನು ಬಿಟ್ಟು – ನಿರ್ದಿಷ್ಟಾರ್ಥದಲ್ಲಿ ಪೆಸಿಫಿಕ್ ದ್ವೀಪಗಳೆಂದು ಕರೆಯಲಾಗಿದೆ. ಇಲ್ಲಿ ಸು. 10,000 ದ್ವೀಪಗಳಿವೆ. ಇವುಗಳ ಒಟ್ಟು ವಿಸ್ತೀರ್ಣ 13,00,000 ಚ.ಕಿಮೀ.

ಪೆಸಿಫಿಕ್ ದ್ವೀಪಗಳನ್ನು ಜನಾಂಗೀಯವಾಗಿ ಮೂರು ಗುಂಪುಗಳಾಗಿ ವಿಭಾಗ ಮಾಡುವುದು ವಾಡಿಕೆಯಾಗಿದೆ. ಅವು ಮೆಲನೇಷ್ಯ, ಮೈಕ್ರೊನೇಷ್ಯ ಮತ್ತು ಪಾಲಿನೇಷ್ಯ. ಮೆಲನೇಷ್ಯ ಎಂಬ ಹೆಸರು ಕಪ್ಪು ದ್ವೀಪ ಎಂಬ ಅರ್ಥದ ಗ್ರೀಕ್ ಪದದಿಂದ ಬಂದದ್ದು. ಅಲ್ಲಿ ಕಪ್ಪು ಬಣ್ಣ ಜನರು ವಾಸಿಸುವುದರಿಂದ ಈ ಹೆಸರು ಬಂದಿದೆ. ಆಸ್ಟ್ರೇಲಿಯದ ಉತ್ತರ ಮತ್ತು ಪೂರ್ವಕ್ಕೆ ಸಮಭಾಜಕ ವೃತ್ತದ ದಕ್ಷಿಣಕ್ಕೆ ಹಬ್ಬಿರುವ ದ್ವೀಪಗಳ ಮಹಾವೃತ್ತವೇ ಮೆಲನೇಷ್ಯ. ನ್ಯೂಗಿನಿ, ಬಿಸ್ಮಾರ್ಕ್, ಸಾಲೊಮನ್ಸ್, ನ್ಯೂಹೆಬ್ರಿಡಸ್, ನ್ಯೂಕ್ಯಾಲೆಡೋನಿಯ ಮತ್ತು ಫಿಜಿ ದ್ವೀಪಗಳು ಇದರಲ್ಲಿ ಸೇರಿವೆ. ಸಮಭಾಜಕ ವೃತ್ತಕ್ಕೆ ಉತ್ತರದಲ್ಲಿ ಫಿಲಿಪೀನ್ಸ್‌ನ ಪೂರ್ವಕ್ಕೆ ಇರುವ ದ್ವೀಪಗಳ ಮಾಲೆ ಮೈಕ್ರೊನೇಷ್ಯ. ಇವು ಸಣ್ಣಗಾಗಿರುವುದರಿಂದ ಈ ಹೆಸರು ಬಂದಿದೆ. ಪಲಾವು, ಮೇರಿಯಾನ, ಕ್ಯಾರಲೀನ್ಸ್, ಮಾರ್ಷಲ್ ಮುಂತಾದ ದ್ವೀಪಗಳು ಈ ಗುಂಪಿಗೆ ಸೇರಿವೆ. ಇಲ್ಲಿಯ ನಿವಾಸಿಗಳು ತಾಮ್ರ ಬಣ್ಣದವರಾಗಿದ್ದು ಮುಂಗೊಲಾಯ್ಡ್ ಜನಾಂಗದವರನ್ನು ಹೋಲುತ್ತಾರೆ. ಪಾಲಿನೇಷಿಯ ಎಂದರೆ ಹಲವು ದ್ವೀಪಗಳು. ಇವು ಮಧ್ಯ ಪೆಸಿಫಿಕ್‌ನಲ್ಲಿ ಉತ್ತರದ ಹವಾಯಿ ದಕ್ಷಿಣದ ನ್ಯೂಜಿಲೆಂಡ್, ಪೂರ್ವದ ಈಸ್ಟರ್ ಇವುಗಳಿಂದಾದ ಬೃಹತ್ ತ್ರಿಕೋಣದ ನಡುವೆ ಹರಡಿವೆ. ಸಮೋವ, ಟೊಂಗ, ಸೊಸೈಟಿ, ಟವುಮೋಟೊ, ಮಾರ್ಕೆಸಸ್ ಮತ್ತು ಕುಕ್–ಇವು ಈ ವಿಸ್ತೃತ ಜಲಪ್ರದೇಶದ ಇತರ ದ್ವೀಪಗಳು.

ಈ ಮೂರೂ ವಿಭಾಗಗಳ ಜನರ ನಾಗರಿಕತೆ, ಸಮಾಜ ಪದ್ಧತಿ ಮುಂತಾದವು ಬೇರೆಬೇರೆಯಾಗಿವೆ. ಮೆಲನೇಷ್ಯದವರು ನೀಗ್ರೋ ಬುಡಕಟ್ಟುಗಳವರು. ಪಾಲಿನೇಷ್ಯನರು ಮೆಲನೇಷ್ಯನ್ನರಿಗಿಂತ ಮುಂದುವರಿದವರು. ಇಲ್ಲಿಯ ಜನರು ಎತ್ತರವಾಗಿ ಗಟ್ಟಿಮುಟ್ಟಾದವರು. ಇವರು ಒಳ್ಳೆಯ ನಾವಿಕರು. ಮೈಕ್ರೋನೇಷ್ಯದ ಜನರು ಕುಳ್ಳರು, ಕಂದು ಬಣ್ಣದವರು.

ಪೆಸಿಫಿಕ್ ದ್ವೀಪಗಳ ಭೌತಿಕ ಹಾಗೂ ಜೈವಿಕ ಪರಿಸರ ಅತ್ಯಂತ ವೈವಿಧ್ಯಮಯವಾದದ್ದು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನ ನಡೆಸುವವರಿಗೆ ಇವು ಇಂದಿಗೂ ಪ್ರಯೋಗ ಮಂದಿರಗಳಾಗಿವೆ. ಈ ದ್ವೀಪಗಳನ್ನು ಖಂಡೀಯ ಹಾಗೂ ಸಾಗರಿಕ ಎಂದು ಸ್ಥೂಲವಾಗಿ ವಿಂಗಡಿಸಬಹುದು. ಇವುಗಳ ವಾಯುಗುಣಗಳಲ್ಲೂ ವ್ಯತ್ಯಾಸಗಳಿವೆ. (ಜಿ.ಎಸ್.ಡಿ.)

**ಪೆಸಿಫಿಕ್ ಮಹಾಸಾಗರದ ಪ್ರವಾಹಗಳು:** ಪೆಸಿಫಿಕ್ ಮಹಾಸಾಗರದ ಪ್ರವಾಹಗಳನ್ನು ಉತ್ತರ ಪೆಸಿಫಿಕ್, ದಕ್ಷಿಣ ಪೆಸಿಫಿಕ್ ಹಾಗೂ ವಿಷುವದ್ ವೃತ್ತ ಪೆಸಿಫಿಕ್ ಸಾಗರ ಪ್ರವಾಹಗಳೆಂದು 3 ವಿಭಾಗದಲ್ಲಿ ವಿಂಗಡಿಸಬಹುದು. ಉತ್ತರದಲ್ಲಿ ಪ್ರವಾಹಗಳು ಎಡದಿಂದ ಬಲಕ್ಕೂ ಹಾಗೂ ದಕ್ಷಿಣದಲ್ಲಿ ಬಲದಿಂದ ಎಡಕ್ಕೂ ಪ್ರವಹಿಸಿ ಆವರ್ತವನ್ನು ಪೂರ್ಣಗೊಳಿಸುತ್ತವೆ.

ಸಮಭಾಜಕ ವೃತ್ತ ಪ್ರವಾಹ: ಇದನ್ನು ವಿಷುವದ್ ವೃತ್ತ ಪ್ರವಾಹ ಎಂದೂ ಕರೆಯಲಾಗಿದೆ. ಸಮಭಾಜಕ ವೃತ್ತದ ಎರಡು ಕಡೆಗಳಲ್ಲಿ ವಾಣಿಜ್ಯ ಮಾರುತಗಳ ಪ್ರಭಾವದಿಂದ ಉಗಮಗೊಳ್ಳುತ್ತವೆ. ಉತ್ತರ ವಿಷುವದ್ ವೃತ್ತ ಪ್ರವಾಹ ಮೆಕ್ಸಿಕೊ ಬಳಿಯ ರೆವಿಲ್ಲಾ ಗಿಗಿಡೋ ದ್ವೀಪದ ಬಳಿ ಆರಂಭವಾಗಿ ಫಿಲಿಫೈನ್ಸ್ ದ್ವೀಪದವರೆಗೂ ಹರಿದು. ಪಶ್ಚಿಮದಲ್ಲಿ ಇಬ್ಭಾಗವಾಗುವುದು. ಉತ್ತರದ ಶಾಖೆ ಬಲಿನ್ ಲಾಂಗ್ ಕಡಲ್ಗಾಲುವೆಯ ಮೂಲಕ ಚೀನಸಮುದ್ರವನ್ನು ದಾಟಿ ಚೈನೀಸ್ ಟೈಪೆ ದ್ವೀಪದ ಮೂಲಕ ಮುಂದುವರಿಯುವುದು. ಇನ್ನೊಂದು ಶಾಖೆ ದಕ್ಷಿಣಕ್ಕೆ ತಿರುಗಿ ವಿರುದ್ಧ ದಿಕ್ಕಿನಲ್ಲಿ ಮುಂದುವರೆಯುತ್ತಾ ವಿಷುವದ್ ವೃತ್ತ ಪ್ರತಿ ಪ್ರವಾಹವಾಗಿ ಚಲಿಸುವುದು. ದಕ್ಷಿಣ ವಿಷುವದ್ ವೃತ್ತ ಪ್ರವಾಹ ಅತ್ಯಂತ ಪ್ರಬಲವಾಗಿದೆ. ಇದು ಪೂರ್ವದ ಪೆರುವಿನ ತೀರದಲ್ಲಿ ಆರಂಭವಾಗಿ ಪಶ್ಚಿಮಾಭಿಮುಖವಾಗಿ ಚಲಿಸುವುದು. ಇಲ್ಲಿ ಜಲಂತರ್ಗತ ಭೂ ಸ್ವರೂಪಗಳಿಂದ 2 ಶಾಖೆ–ಯಾಗುವುದು. ಉತ್ತರದ ಶಾಖೆಯು ನ್ಯೂಗಿನಿ ದ್ವೀಪದ ಸಮೀಪ ಚಲಿಸಿ ಆಸ್ಟ್ರೇಲಿಯದ ಉತ್ತರ ಹಾಗೂ ಈಶಾನ್ಯ ತೀರ ತಲುಪುವುದು. ಉತ್ತರ ಮತ್ತು ದಕ್ಷಿಣ ವಿಷುವದ್ ವೃತ್ತದ ನಡುವೆ ಪ್ರತಿ ಪ್ರವಾಹ ಹರಿಯುವುದು. ಪಶ್ಚಿಮದಲ್ಲಿ ಮಿಂಡನಾವೊ ದ್ವೀಪದಿಂದ ಪೂರ್ವದ ಪನಾಮ ಖಾರಿಯವರೆಗೂ ಹರಿಯುವುದು.

ಉತ್ತರ ಪೆಸಿಫಿಕ್ ಸಾಗರದ ಪ್ರವಾಹಗಳು: ಕೇಂದ್ರ ಅಮೇರಿಕ ತೀರದಿಂದ ಪಶ್ಚಿಮಕ್ಕೆ ಫಿಲಿಫೈನ್ಸ್ ಮತ್ತು ಫಾರ್ಮೊಸಾ ದ್ವೀಪದ ಕಡೆ ಚಲಿಸುವುದು. ಇಲ್ಲಿಂದ ಉತ್ತರಕ್ಕೆ ತಿರುಗಿ ಜಪಾನಿನ ಪೂರ್ವ ತೀರದಲ್ಲಿ ಕ್ಯುರೋಶಿವೋ ಪ್ರವಾಹ ಎಂಬ ಹೆಸರಿನಿಂದ ಹರಿಯುವುದು. ಅನಂತರ ಪ್ರತಿ ವಾಣಿಜ್ಯ ಮಾರುತದ ಪ್ರಭಾವದಿಂದ ಪೂರ್ವದ ಕಡೆಗೆ ಚಲಿಸಿ ಉತ್ತರ ಪೆಸಿಫಿಕ್ ಪ್ರವಾಹ ಎನಿಸಿಕೊಂಡು. ಅಮೆರಿಕ ತೀರದ ಬಳಿ ಇದು ಎರಡು ಶಾಖೆಯಾಗುವುದು. ಒಂದು ಬ್ರಿಟಿಷ್ ಕೊಲಂಬಿಯ ತೀರದ ಬಳಿ ಇದೇ ಹೆಸರಿನಿಂದ ಚಲಿಸುತ್ತಾ, ಅಲಾಸ್ಕಾ ತೀರದಲ್ಲಿ ಅಪ್ರದಕ್ಷಿಣವಾಗಿ ಹರಿಯುವುದು. ಇದರ ಮುಂದುವರೆದ ಭಾಗ ಅಲ್ಯೂಷಿಯನ್ ಪ್ರವಾಹ ಎಂಬ ಹೆಸರಿನಿಂದ ಮುಂದುವರಿದು ಬೇರಿಂಗ್ ಜಲಸಂಧಿ ಪ್ರವೇಶಿಸುವುದು. ಮತ್ತೊಂದು ಕವಲು ಕ್ಯಾಲಿಫೋರ್ನಿಯ ತೀರದಲ್ಲಿ ಇದೇ ಹೆಸರಿನಿಂದ ಶೀತ ಪ್ರವಾಹವಾಗಿ ಹರಿಯುವುದು. ಅನಂತರ ದಕ್ಷಿಣ ದಿಕ್ಕಿನಿಂದ ಪಶ್ಚಿಮಕ್ಕೆ ತಿರುಗಿ ವಿಷುವದ್ ವೃತ್ತ ಪ್ರವಾಹವನ್ನು ಸೇರಿ ಆವರ್ತವನ್ನು ಪೂರೈಸುವುದು.

ಕ್ಯೂರೋವೊ ಪ್ರವಾಹದ ಒಂದು ಭಾಗ ಜಪಾನಿನ ಪಶ್ಚಿಮ ತೀರದ ಮೂಲಕ ಉತ್ತರಕ್ಕೆ ಹರಿದು ಸುಶಿಮಾ ಪ್ರವಾಹ ಎನಿಸಿಕೊಳ್ಳುವುದು. ಸಾಗರದ ಮಧ್ಯಭಾಗದಲ್ಲಿ ಹವಾಯಿ ದ್ವೀಪಗಳ ಪೂರ್ವಭಾಗದಲ್ಲಿ ಇದಕ್ಕೆ ವಿರುದ್ಧವಾಗಿ ಹರಿಯುವ ದೊಡ್ಡ ಆವರ್ತ ಪ್ರವಾಹವನ್ನು ಕ್ಯೂರೋಶಿವೊ ಪ್ರತಿ ಪ್ರವಾಹ ಎಂದು ಕರೆಯುವರು. ಪೆಸಿಫಿಕ್ ಸಾಗರದ ವಾಯವ್ಯ ಭಾಗಕ್ಕೆ ಉತ್ತರದಿಂದ ದಕ್ಷಿಣದ ಕಡೆಗೆ ಓಯೋಶಿವೋ ಮತ್ತು ಓಹೋಟ್‌ಸ್ಕ ಶೀತೋಹಕ ಪ್ರವಾಹಗಳು ಬಂದು ಸೇರುತ್ತವೆ.

ದಕ್ಷಿಣ ಪೆಸಿಫಿಕ್ ಸಾಗರದ ಪ್ರವಾಹಗಳು: ದಕ್ಷಿಣ ವಿಷುವದ್ ವೃತ್ತ ಪ್ರವಾಹವು ಆರಂಭವಾಗಿ, ಅನಂತರ ದಕ್ಷಿಣಕ್ಕೆ ತಿರುಗಿ ಆಸ್ಟ್ರೇಲಿಯದ ಪೂರ್ವ ತೀರದಲ್ಲಿ ಇದೇ ಹೆಸರಿನಿಂದ ಹರಿಯುವುದು. ನ್ಯೂಜಿಲೆಂಡ್ ದ್ವೀಪವನ್ನು ಸುತ್ತುವರಿದು, ಪ್ರತಿವಾಣಿಜ್ಯ ಮಾರುತದ ಪ್ರಭಾವಕ್ಕೊಳಪಡುವುದು. ಇದರಿಂದ ಶೀತೋದಕ ಪ್ರವಾಹವಾಗಿ ಪಶ್ಚಿಮ ಮಾರುತ ಪ್ರವಾಹ ಎನಿಸಿಕೊಳ್ಳುವುದು. ಅನಂತರ ಎರಡು ಶಾಖೆಗಳಾಗಿ ಒಂದು ದಕ್ಷಿಣಕ್ಕೆ ತಿರುಗಿ ಹಾರ್‍ನ ಭೂಶಿರ ಸುತ್ತಿ ಅಟ್ಲಾಂಟಿಕ್ ಸಾಗರ ಸೇರಿಕೊಳ್ಳುವುದು. ಮತ್ತೊಂದು ಉತ್ತರಕ್ಕೆ ತಿರುಗಿ ಅಮೆರಿಕದ ಪಶ್ಚಿಮ ತೀರದಲ್ಲಿ ಚಲಿಸಿ ಪೆರು ಪ್ರವಾಹ ಎನಿಸಿಕೊಳ್ಳುವುದು. ಆನಂತರ ಪಶ್ಚಿಮಕ್ಕೆ ತಿರುಗಿ ವಿಷುವದ್ ವೃತ್ತ ಸೇರುವ ಈ ಪ್ರವಾಹ ಹಂಬೋಲ್ಟ್ ಪ್ರವಾಹ ಎನಿಸಿಕೊಳ್ಳುವುದು. ಶೀತೋದಕವಾದ ಪೆರು ಪ್ರವಾಹ ಬೇಸಗೆಯಲ್ಲಿ ವಿಷುವದ್ ವೃತ್ತ ಸೇರಿದರೆ, ಚಳಿಗಾಲದಲ್ಲಿ ದಕ್ಷಿಣಕ್ಕೆ ಸ್ಥಳಾಂತರಗೊಳ್ಳುವುದು. ಇದನ್ನೇ ಪೆರು ಪ್ರತಿಪ್ರವಾಹ ಎನಿಸಿಕೊಳ್ಳುವುದು. ಹೀಗೆ ಒಂದು ಪೂರ್ಣ ಆವರ್ತ ಪೂರೈಸುವುದು. (ಎನ್.ಎಲ್)



**ಪೆಸಿಫಿಕ್ ಸಾಗರ:** ಶಾಂತ ಮಹಾಸಾಗರವೆಂದೂ ಕರೆಯಲ್ಪಡುವ ಈ ಸಾಗರ ಅತ್ಯಂತ ವಿಶಾಲವಾದದ್ದು. ಮೆಗಲನ್ ಎಂಬುವನು ಇದನ್ನು ಮೊದಲು ದಾಟಿದ ಹಾಗೂ ಇದರ ಪ್ರಶಾಂತತೆಯನ್ನು ಗುರುತಿಸಿ ಶಾಂತಸಾಗರವೆಂದು ಕರೆದ. ಇದು ಏಷ್ಯ ಖಂಡದ ಪೂರ್ವ ತೀರ ಮತ್ತು ಅಮೇರಿಕ ಖಂಡಗಳ ಪಶ್ಚಿಮ ತೀರಗಳ ನಡುವೆ ಹರಡಿದೆ. ಪ್ರಪಂಚದಲ್ಲೇ ಅತ್ಯಂತ ವಿಶಾಲವಾದ ಸಾಗರವಾಗಿದ್ದು, ವಿಸ್ತೀರ್ಣದಲ್ಲಿ $^1/_3$ ಭಾಗವನ್ನು ಆವರಿಸಿದೆ. ಪೂರ್ವ ಪಶ್ಚಿಮವಾಗಿ 16,000 ಕಿಮೀ ಉದ್ದವಾಗಿಯೂ ಮತ್ತು ದಕ್ಷಿಣೋತ್ತರವಾಗಿ ಬೇರಿಂಗ್ ಜಲಸಂಧಿಯಿಂದ ಅಂಟಾರ್ಕ್‌ಟಿಕ್ ಖಂಡದವರೆಗೆ 14,900 ಕಿಮೀ ಅಗಲವಾಗಿಯೂ ಹರಡಿದೆ. ಇದರ ಒಟ್ಟು ಕ್ಷೇತ್ರ 166.3 ಮಿ. ಚ.ಕಿಮೀ ಪೆಸಿಫಿಕ್ ಸಾಗರದ ಸರಾಸರಿ ಆಳ 4575 ಮೀ. ಈ ಸಾಗರದ ಒಟ್ಟು ಕ್ಷೇತ್ರದಲ್ಲಿ ಶೇ. 7 ಭಾಗ 900 ಮೀ ಗಿಂತ ಕಡಿಮೆ ಆಳದಿಂದಲೂ ಉಳಿದ ಬಹುಭಾಗ 4575 ಮೀ ಗಿಂತ ಹೆಚ್ಚು ಆಳದಲ್ಲಿದೆ.

ಪೆಸಿಫಿಕ್ ಸಾಗರದ ಖಂಡಾವರಣ ಪ್ರದೇಶ ತೀರದ ಸ್ವರೂಪಕ್ಕನುಗುಣವಾಗಿ ವ್ಯತ್ಯಾಸಗೊಳ್ಳುವುದು. ಇದು ಆಸ್ಟ್ರೇಲಿಯದ ಪೂರ್ವ ತೀರ, ಪೂರ್ವ ಇಂಡೀಸ್ ದ್ವೀಪ ಮತ್ತು ಏಷ್ಯದ ತೀರ ಭಾಗಗಳಲ್ಲಿ ಅಗಲವಾಗಿದೆ. ಈ ಭಾಗದಲ್ಲಿ ಅನೇಕ ದ್ವೀಪ ಸರಣಿಗಳಿವೆ. ಉದಾ: ಕ್ಯೂರೈಲ್, ಜಪಾನ್, ಫಿಲಿಫೈನ್ಸ್, ಇಂಡೋನೇಷ್ಯ ಮತ್ತು ನ್ಯೂಜಿಲೆಂಡ್. ಈ ದ್ವೀಪಗಳಿಗೆ ಸಂಬಂಧಪಟ್ಟ ಸಮುದ್ರಗಳು ಸಹ ಇಲ್ಲಿ ಕಂಡುಬರುತ್ತವೆ. ಉದಾ: ಬೇರಿಂಗ್ ಸಮುದ್ರ, ಚೀನ ಸಮುದ್ರ, ಜಾವ ಸಮುದ್ರ ಮತ್ತು ಕ್ಯೂರೈಲ್ ಸಮುದ್ರ. ಈ ಖಂಡಾವರಣದ ಸರಾಸರಿ ಆಳ 1000 ಮೀ ಗಿಂತ ಕಡಿಮೆ ಮತ್ತು ಅಗಲ 160 ರಿಂದ 1600 ಕಿಮೀ. ಆದರೆ ಅಮೆರಿಕ ಖಂಡಗಳ ಸಮೀಪದ ಖಂಡಾವರಣ ಪ್ರದೇಶ ಇಕ್ಕಟ್ಟಾಗಿದ್ದು 80 ಕಿಮೀ ಅಗಲವಾಗಿದೆ.

ಪೆಸಿಫಿಕ್ ಸಾಗರದ ತಳದಲ್ಲಿ ಜಲಾಂತರ್ಗತ ಶ್ರೇಣಿಗಳ ಹಂಚಿಕೆ ಬಹಳ ಕಡಿಮೆ. ಆದರೂ ಕೆಲವು ಅಲ್ಲಲ್ಲಿ ಕಂಡುಬರುತ್ತವೆ. ಇವು ಸಾಗರದ ಮಧ್ಯ ಭಾಗದಲ್ಲಿ ಹಂಚಿಕೆಯಾಗಿಲ್ಲ. ಕೆಲವೇ ಗಿರಿಶ್ರೇಣಿಗಳು ಸಾಗರದ ಪೂರ್ವ ಅಂಚಿನಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಪೂರ್ವ ಪೆಸಿಫಿಕ್ ಗಿರಿಶ್ರೇಣಿ ಅಥವಾ ಅಲ್ಬಾಟೋಸ್ ಪ್ರಸ್ಥಭೂಮಿ ಪ್ರಮುಖವಾದುದಾಗಿದೆ. ಇದು ಮಧ್ಯ ಅಮೇರಿಕದ ತೀರದಿಂದ ಪ್ರಾರಂಭಗೊಂಡು ನೈಋುತ್ಯದ ಕಡೆಗೆ ಹಬ್ಬುತ್ತಾ ಸು.1600 ಕಿಮೀ ಅಗಲವಾಗಿದೆ. $23^0$–$35^0$ ದ.ಅ.ಗಳ ಬಳಿ ಇದು ಎರಡು ಶಾಖೆಗಳಾಗಿರುತ್ತದೆ. ಪೂರ್ವ ಶಾಖೆಯೊಂದು ವಿಸ್ತಾರವಾದ ಪ್ರಸ್ಥಭೂಮಿಯಾಗಿದ್ದು ಅದು ಮುಂದೆ ಚಿಲಿ ತೀರವನ್ನು ಸೇರುತ್ತದೆ. ಮತ್ತೊಂದು ಶಾಖೆ ದಕ್ಷಿಣದ ಕಡೆಗೆ ಹಬ್ಬಿದೆ. ನ್ಯೂ ಕ್ಯಾಲಿಡೋನಿಯದ ಬಳಿ, $20^0$ ದ.ಅ.ದಲ್ಲಿರುವ ನ್ಯೂಜಿಲೆಂಡ್ ಶ್ರೇಣಿ, ಫಿಜಿ ದ್ವೀಪದ ಉತ್ತರದಲ್ಲಿರುವ ಫಿಜಿ ಪ್ರಸ್ಥಭೂಮಿ, ಆಸ್ಟ್ರೇಲಿಯದ ಗ್ರೇಟ್ ಬ್ಯಾರಿಯರ್ ರೀಫ್‌ನ ಪಶ್ಚಿಮದಲ್ಲಿರುವ ಕ್ವೀನ್ಸ್ ಲೆಂಡ್ ಪ್ರಸ್ಥಭೂಮಿಗಳು ಪೆಸಿಫಿಕ್ ಸಾಗರದ ಇತರ ಗಿರಿಶ್ರೇಣಿಗಳು. ಈ ಸಾಗರದ ಮಧ್ಯ ಭಾಗದಲ್ಲಿ 1960 ಕಿಮೀ ಅಗಲವಾದ ಮತ್ತು 3040 ಕಿಮೀ ಉದ್ದವಾದ ಹವಾಯಿಯನ್ ಸ್ವೆಲ್ ಗಿರಿಶ್ರೇಣಿಯೊಂದಿದೆ. ಈ ಗಿರಿಶ್ರೇಣಿಯ ಅಂಚಿನಲ್ಲಿ ಹವಾಯಿ ಮತ್ತು ಹೊನಲುಲು ದ್ವೀಪಗಳು ಕಂಡುಬರುತ್ತವೆ.

ಪೆಸಿಫಿಕ್ ಸಾಗರದ ಆಳ ಸಾಗರ ಮೈದಾನಗಳಲ್ಲಿ ಫಿಲಿಫೈನ್ಸ್ ದ್ವೀಪದ ಪೂರ್ವದಲ್ಲಿರುವ ಮೈದಾನ, ಫಿಜಿ ದ್ವೀಪದ ದಕ್ಷಿಣದಲ್ಲಿರುವ ಫಿಜಿ ಮೈದಾನ, ಪೂರ್ವ ಆಸ್ಟ್ರೇಲಿಯ ಮೈದಾನ, ದಕ್ಷಿಣ ಆಸ್ಟ್ರೇಲಿಯ ಮೈದಾನ, ಪೆರು–ಚಿಲಿಯ ಮೈದಾನಗಳು ಪ್ರಮುಖವಾದವು.

ಪೆಸಿಫಿಕ್ ಸಾಗರದಲ್ಲಿ 32 ಸಾಗರ ತಗ್ಗುಗಳು ಕಂಡುಬರುತ್ತವೆ. ಅವು ಹೆಚ್ಚಾಗಿ ಸಾಗರದ ಪಶ್ಚಿಮ ಭಾಗದಲ್ಲಿ ಕಂಡುಬರುತ್ತವೆ. ಪ್ರಪಂಚದ ಅತ್ಯಂತ ಆಳವಾದ ಸಾಗರ ತಗ್ಗುಗಳು ಸಹ ಈ ಸಾಗರದಲ್ಲಿ ಕಂಡುಬರುತ್ತವೆ. ಉದಾ: ಪಶ್ಚಿಮ ವಲಯದಲ್ಲಿರುವ ಗುವಾಂ ದ್ವೀಪಗಳಿಗೆ ಸಮೀಪದಲ್ಲಿರುವ ಮರಿಯಾನ ಮಹಾ ತಗ್ಗು (11,033 ಮೀ), ಪಿಲಿಫೈನ್ಸ್ ದ್ವೀಪಗಳ ಸಮೀಪದಲ್ಲಿರುವ ಎಮ್ಡನ್ ತಗ್ಗು (10,794 ಮೀ), ರಮೊಪೂ ತಗ್ಗು (10,374 ಮೀ), ಮಾನಸ್ಯೂ ತಗ್ಗು (9,866 ಮೀ), ಟಸ್ಕಾರೋರ (8000 ಮೀ), ಸ್ವೈರ್ (6000 ಮೀ), ನೆರೊ (9000 ಮೀ), ಜಪಾನ್ ತಗ್ಗು (8512 ಮೀ), ಪೆರುಬಿಲಿಯನ್ ತಗ್ಗು, ಮತ್ತೆ ಅಲ್ಯೂಷಿಯನ್ ತಗ್ಗು (6400 ಮೀ), ಟೊಂಗಾ–ಕರ್ಮಾಡೆಕ್ (8000 ಮೀ), ಬ್ರೂಕ್ (6000 ಮೀ), ಬೈಲೆ (6000 ಮೀ), ಪ್ಲಾನೆಟ್ ಡೀಪ್ (7000 ಮೀ). (ಪಿ.ಎಮ್.)

**ಪೇಸ್ ಪರಿಭಾವನೆ:** ಫ್ರಾನ್ಸಿನ ಮಾನವ ಭೂಗೋಳಶಾಸ್ತ್ರಜ್ಞ ವೈಡಾಲ್–ಡಿ–ಲಾ–ಬ್ಲಾಷ ನೀಡಿದ ಒಂದು ವಿವರಣೆ. ಕೈಗಾರಿಕಾ ಕ್ರಾಂತಿಯ ಅವಧಿಯಲ್ಲಿ ಫ್ರಾನ್ಸಿನ ಜಲಾನಯನ ಪ್ರದೇಶಗಳನ್ನು ಅಧ್ಯಯನ ಘಟಕಗಳೆಂದು ಪರಿಗಣಿಸಲು ಅನುವಾಗಿದ್ದರು. ಇದನ್ನು ಟೀಕಿಸಿದ ವೈಡಾಲ್ ಪೇಸ್ ಪರಿಭಾವನೆಯನ್ನು ನೀಡಿದರು. ಪೇಸ್ ಫ್ರೆಂಚ್ ಭಾಷೆಯ ಪದ. ಇದರ ಅರ್ಥ ಚಿಕ್ಕ ಪ್ರದೇಶಗಳು ಪರಿಭಾವನೆಯನ್ನು ನೀಡಲು ಕಾರಣಗಳೆಂದರೆ ಜಲಾನಯನ ಪ್ರದೇಶದ ಅಧ್ಯಯನ ನೈಜವಾಗಿ ಪ್ರದೇಶಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಕೀರ್ಣತೆಯನ್ನು ಉಂಟುಮಾಡುತ್ತದೆ. ಉದಾ: ಫ್ರಾನ್ಸ್‌ನ ಕೇಂದ್ರ ಮ್ಯಾಸ್ಸಿಫ್ ಒಂದು ಸಮೃದ್ಧ ಸ್ವಾಭಾವಿಕ ಪ್ರದೇಶ. ಇದನ್ನು ಜಲಾನಯನ ಘಟಕ ಎಂದು ಅಭ್ಯಸಿಸುವಾಗ, ಈ ಪ್ರದೇಶದ ಸಂಸ್ಕೃತಿ ಸಂಪ್ರದಾಯ, ಜನರ ಗುಣಸ್ವಭಾವಗಳು ಹಾಗೂ ಅವರ ಸಂಘ ಸಂಸ್ಥೆ, ರೀತಿ ರಿವಾಜುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಆದ್ದರಿಂದ ಭೂಮೇಲ್ಮೈನ ಪ್ರದೇಶವನ್ನು ಭೂಗೋಳ ವಿಜ್ಞಾನದ ಮೂಲ ಉದ್ದೇಶವನ್ನು ಇಟ್ಟುಕೊಂಡು ಅಧ್ಯಯನ ಮಾಡಬೇಕು ಎಂಬುದಾಗಿ ಹೇಳುತ್ತಾರೆ. ಇದು ಪ್ರಾದೇಶಿಕ ಭೂಗೋಳ ವಿಜ್ಞಾನದ ಅಭಿವೃದ್ಧಿಗೆ ಸಹಾಯಕವಾಯಿತು. (ಎನ್.ಎಲ್.)

**ಪೊಸಿಡೋನಿಯಸ್:** ಪ್ರ.ಶ.ಪೂ. 135–50. ಗ್ರೀಸಿನ ಒಬ್ಬ ಪ್ರಸಿದ್ಧ ಇತಿಹಾಸಕಾರ ಮತ್ತು ಭೂಗೋಳಶಾಸ್ತ್ರಜ್ಞ. ಇವನು ಭೂಗೋಳಶಾಸ್ತ್ರಕ್ಕೆ ಎರಡು ಪ್ರಮುಖ ಕೊಡುಗೆಗಳನ್ನಿತ್ತ: 1. ಪೃಥ್ವಿಯ ಸುತ್ತಳತೆ (ಪರಿಧಿ) ಮತ್ತು 2. ಸಮಭಾಜಕವೃತ್ತ ಪ್ರದೇಶಗಳ ವಾಸಯೋಗ್ಯತೆ. ಪೊಸಿಡೋನಿಯಸ್ ಪೃಥ್ವಿಯ ಪರಿಧಿಯ ಅಳತೆ ಮಾಡಿದ. ಇವನ ಪ್ರಕಾರ ಪೃಥ್ವಿಯ ಪರಿಧಿ 1,800 ಮೈಲಿಗಳಷ್ಟಿತ್ತು. ಆದರೆ ಅದು ಎರಟಾಸ್ತನೀಸ್‌ನ ಪರಿಧಿಗಿಂತ ಕಡಿಮೆಯಾಗಿತ್ತು. ಪೊಸಿಡೋನಿಯಸ್‌ನ ಅಳತೆಯನ್ನು ಆಧರಿಸಿ ಕೊಲಂಬಸ್‌ನು ಸ್ಪಾನಿಷ್ ನ್ಯಾಯಾಲಯದಲ್ಲಿ ಪಶ್ಚಿಮಕ್ಕೆ ಭಾರತದ ಕಡೆಗೆ ನೌಕಾಯಾನ (ಜಲ ಪ್ರಯಾಣ) ಮಾಡಬಲ್ಲನೆಂದು ವಾದಿಸಿದ್ದ.

ಎರಡನೆಯದಾಗಿ ಪೊಸಿಡೋನಿಯಸ್ ಸಮಭಾಜಕವೃತ್ತ ಪ್ರದೇಶಗಳು ಅಧಿಕ ಶಾಖದ ಕಾರಣ ವಾಸಯೋಗ್ಯವಾಗಿಲ್ಲವೆಂಬ ಅರಿಸ್ಟಾಟಲ್‌ನ ವಿಚಾರವನ್ನು ತಿರಸ್ಕರಿಸಿದ. ಇವನ ಪ್ರಕಾರ ಅತ್ಯಧಿಕ ಉಷ್ಣಾಂಶ ಮತ್ತು ಅತ್ಯಂತ ಶುಷ್ಕ ಮರುಭೂಮಿಗಳು ಉಷ್ಣವಲಯಗಳ ಸಮೀಪ ಸಮಶೀತೋಷ್ಣವಲಯಗಳಲ್ಲಿವೆ ಎಂದು ಒತ್ತಿ ಹೇಳಿದ. ತನ್ನ ಹೇಳಿಕೆಯ ಸಮರ್ಥನೆಗಾಗಿ ಸೂರ್ಯ ಉಷ್ಣವಲಯದ ಸಮೀಪ ಬಹಳ ಹೊತ್ತು ನಿಲ್ಲುತ್ತಾನೆ ಮತ್ತು ಸಮಭಾಜಕ ವೃತ್ತದ ಮೇಲೆ ಕಡಿಮೆ ಹೊತ್ತು ನೆತ್ತಿಯ ಮೇಲಿರುತ್ತಾನೆಂದು ಸೂಚಿಸಿದ. ಲಂಬಕೋನ ಧ್ರುವಶಿರೋಬಿಂದು ಪ್ರಕ್ಷೇಪ ಮತ್ತು ಘನರೇಖನ (ಗೋಳ) ಪ್ರಕ್ಷೇಪಗಳನ್ನು ರಚಿಸಿದ. ಈ ಪ್ರಕ್ಷೇಪಗಳು ಒಂದು ಗೋಳಾರ್ಧವನ್ನು ಮಾತ್ರ ತೋರಿಸುತ್ತವೆ. ಆದರೆ ಇಡೀ ಪೃಥ್ವಿಯನ್ನಲ್ಲ. ಇವನು ಗಡೆಸ್ ಬಂದರಿನ ಉಬ್ಬರವಿಳಿತದ ಕಾರಣಗಳನ್ನು ಪರಿಶೀಲಿಸಿದ ಮತ್ತು ಸಾರ್ಡಿನಿಯದಲ್ಲಿ ಸಮುದ್ರದ ಆಳವನ್ನು ಅಳೆದ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳ ಕಾಲಕ್ಕೆ ಗರಿಷ್ಠ ಭರತಗಳು ಹಾಗೂ ಮೊದಲ ಮತ್ತು ಕೊನೆಯ ಕಾಲುಭಾಗದಲ್ಲಿ ಕನಿಷ್ಠ ಭರತಗಳು ಸಂಭವಿಸುತ್ತವೆಂದು ಸೂಚಿಸಿದ.

(ಎಸ್.ಎಸ್.ಎನ್.)

**ಪೋರ್ಚುಗಲ್:** ಐಬೀರಿಯನ್ ಪರ್ಯಾಯ ದ್ವೀಪದ ಪಶ್ಚಿಮ ಭಾಗದಲ್ಲಿರುವ ಗಣರಾಜ್ಯ. ಹಾಗೂ ಯುರೋಪಿನ ಅತ್ಯಂತ ಪಶ್ಚಿಮದ ದೇಶ. ಉ.ಅ. $37^0$–$42^0.15'$ ಮತ್ತು ಪ.ರೇ. $6^0 11'$ – $9^0 30'$ ನಡುವೆ ಹಬ್ಬಿದೆ. ಇದರ ಉತ್ತರ ಮತ್ತು ಪೂರ್ವದಲ್ಲಿ ಸ್ಪೇನ್ ದೇಶ. ಪಶ್ಚಿಮ ಮತ್ತು ದಕ್ಷಿಣದಲ್ಲಿ ಅಟ್ಲಾಂಟಿಕ್ ಸಾಗರ ಇದೆ. ಇದರ ಆಕಾರ ಕಿರಿಯಗಲದ ಸಮಾಂತರ ಚತುರ್ಭುಜವನ್ನು ಹೋಲುತ್ತದೆ. ಇದರ ಗರಿಷ್ಠ ಉದ್ದ 579 ಕಿಮೀ ಮತ್ತು ಅಗಲ 128 ಕಿಮೀ – 224 ಕಿಮೀ ಗಳು. ಇದಕ್ಕೆ 800 ಕಿಮೀ ಉದ್ದದ ಕರಾವಳಿಯಿದೆ. ಈ ದೇಶದ ವಿಸ್ತೀರ್ಣ 92,000 ಚ.ಕಿಮೀ. ಪೋರ್ಚುಗಲ್ಲಿನ ಪಶ್ಚಿಮಕ್ಕೆ 1,280 ಕಿಮೀ ದೂರದಲ್ಲಿರುವ ಏಜೋರ್ಸ್ ದ್ವೀಪಸ್ತೋಮವನ್ನೂ ನೈಋುತ್ಯಕ್ಕೆ 960 ಕಿಮೀ ದೂರದಲ್ಲಿರುವ ಮಡೆರ ಮತ್ತು ಪೋರ್ಟೋಸ್ಯಾನ್ಟೋಗಳನ್ನೂ ಒಳಗೊಂಡಿದೆ. ಜನಸಂಖ್ಯೆ 1,05,66,212 (2004). ರಾಜಧಾನಿ ಲಿಸ್ಬನ್. ಜನಸಂಖ್ಯೆ 6,77,790 (2002).

ಮೇಲ್ಮೈ ಲಕ್ಷಣ : ಪೋರ್ಚುಗಲ್ ದೇಶವನ್ನು ಭೌಗೋಳಿಕವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ದೇಶದ ಮಧ್ಯದಲ್ಲಿ ಟಾಗಸ್ ನದಿ ಹರಿಯುತ್ತದೆ. ಇದರಿಂದ ಉತ್ತರ ಭಾಗವು ಪರ್ವತಗಳಿಂದಲೂ ಮತ್ತು ದಕ್ಷಿಣ ಭಾಗವು ತಗ್ಗು ಮೈದಾನವಾಗಿದೆ. ಈಶಾನ್ಯ ಮತ್ತು ಆಗ್ನೇಯ ಭಾಗಗಳು ಎತ್ತರವಾದ ಪ್ರಸ್ಥಭೂಮಿಗಳಾಗಿದ್ದು, ಅವು ಪಶ್ಚಿಮದ ಕಡೆಗೆ ತಗ್ಗಾದ ಇಳಿಜಾರನ್ನು ಹೊಂದಿವೆ. ಹೀಗಾಗಿ ಟಾಗಸ್ ಡ್ಯೂರೊನದಿಗಳು ಪೂರ್ವದಿಂದ ಪಶ್ಚಿಮಕ್ಕೆ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತವೆ. ಕಡಿದಾದ ಕಣಿವೆಗಳನ್ನುಳ್ಳ ಎತ್ತರದ ಪ್ರಸ್ಥ ಭೂಮಿ ಎಲ್ಲ ಕಡೆಗೂ ಹಬ್ಬಿದೆ. ಉತ್ತರದಿಂದ ದಕ್ಷಿಣದ ವರೆಗೆ ಹಬ್ಬಿರುವ

ಆಲ್ಟೊಅಲೆಂಟೇಜೊ ಪರ್ವತ ಶ್ರೇಣಿಗಳ ಪ್ರಮುಖ ಶಿಖರಗಳೆಂದರೆ, ಪೆನೆಡ (1,440ಮೀ), ಗೆರೆಜ್ (1,468 ಮೀ), ಮರಾವ್ (1,414 ಮೀ), ಎಸ್ಟ್ರೆಲ (2,021 ಮೀ), ಮಾಂಟಿಮುರೋ (1,382 ಮೀ), ಅಕರ್ (1,409 ಮೀ) ಮತ್ತು ಲೌಸ (1,202 ಮೀ) ಪೋರ್ಚುಗಲ್ಲಿನ ಅತ್ಯುನ್ನತ ಶಿಖರ ಎಸ್ಟ್ರೆಲ.

ನದಿಗಳು: ಮೀನ್ಯೊ, ಡೋರೊ, ಟಾಗಸ್, ಗ್ವಾಡಿಯಾನ–ಇವು ಸ್ಪೇನಿನಲ್ಲಿ ಉಗಮಿಸಿ ಇಲ್ಲಿ ಹರಿಯುವ ದೊಡ್ಡ ನದಿಗಳು. ಎಸ್ಟ್ರೆಲ ಶ್ರೇಣಿಯಲ್ಲಿ ಹುಟ್ಟುವ ಮಾಂಡೇಗೊ ಎಂಬುದು ಪೋರ್ಚುಗಲ್ಲಿನೊಳಗೇ ಹುಟ್ಟಿ ಹರಿಯುವ ನದಿಗಳ ಪೈಕಿ ದೊಡ್ಡದು. ವೋಗ, ಸಾಡೋ, ಜಜಿರ್–ಇವು ಇತರ ಮುಖ್ಯ ನದಿಗಳು. ಇವೂ ಪೋರ್ಚುಗಲ್ಲಿನಲ್ಲೇ ಹುಟ್ಟಿ ಹರಿಯುತ್ತವೆ. ಟೇಗಸ್ ಉಪನದಿ ಜೆಜಿರ್.

ವಾಯುಗುಣ: ಮೆಡಿಟರೇನಿಯನ್ ವಾಯುಗುಣ. ಸಮುದ್ರ ಮತ್ತು ಮೇಲ್ಮೈಲಕ್ಷಣಗಳಿಂದ ಹೆಚ್ಚು ಪ್ರಭಾವಿತವಾಗಿದೆ. ಚಳಿಗಾಲ ತಂಪು ಮತ್ತು ಮಳೆಯಿಂದ ಕೂಡಿದೆ. ಬೇಸಗೆಯಲ್ಲಿ ಕರಾವಳಿಪ್ರದೇಶಗಳು ಹೆಚ್ಚು ಶಾಖ ಮತ್ತು ಆರ್ದತೆಯಿಂದ ಕೂಡಿದ್ದರೆ, ಒಳನಾಡಿನಲ್ಲಿ ಅತಿಶಾಖ ಮತ್ತು ಒಣಹವೆಯಿರುತ್ತದೆ. ವಾಯವ್ಯದ ಪರ್ವತಗಳು ಅಟ್ಲಾಂಟಿಕ್ ಸಾಗರದಿಂದ ಬೀಸುವ ಮಳೆಮಾರುತಗಳನ್ನು ತಡೆದು ಹೆಚ್ಚು ಮಳೆಯನ್ನು ಸುರಿಸುತ್ತವೆ (100 ಸೆಂಮೀ). ಪೂರ್ವಕ್ಕೆ ಹೋದಂತೆ ಮಳೆಕಡಿಮೆ. ಚಳಿಗಾಲ ಅಲ್ಪ ಮತ್ತು ಬೇಸಗೆ ದೀರ್ಘ. ಚಳಿಗಾಲದಲ್ಲಿ ಎತ್ತರವಾದ ಪರ್ವತಗಳಲ್ಲಿ ಹಿಮವೃಷ್ಟಿಯಾಗುತ್ತದೆ. ಆಗ ಉಷ್ಣಾಂಶ ಕನಿಷ್ಠ. ಆಗಸ್ಟ್‌ನಲ್ಲಿ ಗರಿಷ್ಠ ಉಷ್ಣಾಂಶವಿರುತ್ತದೆ. ಅಕ್ಟೋಬರ್‌ನಿಂದ ಏಪ್ರಿಲ್‌ವರೆಗೆ ಮಳೆಗಾಲ.




ಸಸ್ಯ ಮತ್ತು ಪ್ರಾಣಿವರ್ಗ: ಹೆಚ್ಚು ಮಳೆ ಬೀಳುವ ಉತ್ತರಭಾಗದಲ್ಲಿ ಪೈನ್ ಓಕ್ ಮರಗಳ ಕಾಡುಗಳಿವೆ. ಚೆಸ್ಟ್‌ನಟ್, ಲಿಂಡನ್, ಎಲ್ಮ್ ಮತ್ತು ಆಲಿವ್ ಮರಗಳು ಎಲ್ಲ ಕಡೆಗೂ ಹಬ್ಬಿವೆ. ಕಾರ್ಕ್ ಮತ್ತು ನಿತ್ಯ ಹಸುರಿನ ಓಕ್ ಪ್ರಮುಖ ಮರಗಳು. ತೀರಾ ದಕ್ಷಿಣದ ಆಲ್ಗಾರ್ವೆ ಪ್ರದೇಶ ಬಾದಾಮಿ ಮತ್ತು ಅಂಜೂರಗಳಿಗೆ ಹೆಸರಾಗಿದೆ. ಡೋರೂ ನದಿಯ ದಂಡೆಯ ಮೇಲೂ ಬಾದಾಮಿ ಬೆಳೆಯಲಾಗುತ್ತದೆ. ಟೇಗಸ್ ಮತ್ತು ರಾಡೋರೋ ನದಿ ಕಣಿವೆಗಳಲ್ಲಿ ಆಸ್ಟ್ರೇಲಿಯನ್ ನೀಲಗಿರಿ ಮರ ಸಮೃದ್ಧವಾಗಿದೆ.

ಲಿಂಕ್ಸ್, ಕಾಡು ಬೆಕ್ಕು, ತೋಳ, ಜಿಂಕೆ, ಕೋರೆಹಲ್ಲಿನ ಹೆಗ್ಗಣದಂಥ ಮಧ್ಯ ಯುರೋಪಿನ ಪ್ರಾಣಿಗಳೂ ಆಫ್ರಿಕನ್ ಸಂಬಂಧವನ್ನು ತೋರಿಸುವ ಜೆನೆಟ್ (ಒಂದು ಜಾತಿಯ ಪುನುಗು ಬೆಕ್ಕು), ಗರುಡ, ಇಕ್‌ನ್ಯೂಮನ್ (ಒಂದು ಬಗೆಯ ಮುಂಗುಸಿ), ಗೋಸುಂಬೆ ಮೊದಲಾದ ಪ್ರಾಣಿಗಳೂ ಇವೆ. ಐಬೀರಿಯ ಪರ್ಯಾಯ ಭಾಗದಲ್ಲಿ ಪಕ್ಷಿ ಸಂಕುಲವಿದೆ. ಅವು ಋತುಕಾಲಗಳಲ್ಲಿ ಆಫ್ರಿಕದಿಂದ ವಲಸೆ ಬರುತ್ತವೆ ಹಾಗೂ ಹೋಗುತ್ತವೆ.

ಕೃಷಿ : ಒಂದು ಕಾಲದಲ್ಲಿ ಪೋರ್ಚುಗಲ್ಲಿನಲ್ಲಿ ಕೃಷಿಗೆ ಹೆಚ್ಚಿನ ಪ್ರಾಧಾನ್ಯವಿತ್ತು. ಈಗ ಅದು ಇಳಿಮುಖವಾಗುತ್ತಿದೆ. ಆದರೂ ಇದು ಪ್ರಮುಖ ವೃತ್ತಿ. ಅನುಕೂಲವಲ್ಲದ ವಾಯುಗುಣ ಕೃಷಿ ಸಾಧನ ಮತ್ತು ವಿಧಾನಗಳಲ್ಲಿ ಸುಧಾರಣೆ ಇಲ್ಲದಿರುವುದು, ತುಂಡು ಜಮೀನುಗಳೇ ಹೆಚ್ಚಾಗಿರುವುದು ಇದಕ್ಕೆ ಕಾರಣ. ಭಾರಿ ನೀರಾವರಿ ಯೋಜನೆಗಳು, ಸುಧಾರಿತ ವ್ಯವಸಾಯ ವಿಧಾನಗಳು, ಜಮೀನು ವ್ಯವಸ್ಥೆ–ಇವುಗಳ ಮೂಲಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನ ಈಗ ನಡೆದಿದೆ. ಗೋದಿಯನ್ನು ಸಾಕಷ್ಟು ಬೆಳೆಯಲಾಗುತ್ತಿದೆ. ಧಾನ್ಯಗಳು, ಆಲಿವ್, ಅಂಜೂರ, ಕಾಳುಗಳು, ಆಲೂಗಡ್ಡೆ–ಇವು ಇತರ ಕೃಷಿ ಉತ್ಪನ್ನಗಳು. ದೇಶದ ಕೊರತೆ ನೀಗಿಸಲು ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ಮೀನುಗಾರಿಕೆ : ಉದ್ದವಾದ ಕರಾವಳಿ, ನೀರಿನಲ್ಲಿ ಮೀನಿನ ವಿಪುಲತೆ–ಇವು ದೇಶದ ಮೀನುಗಾರಿಕೆಗೆ ಸಹಾಯಕವಾಗಿವೆ. ಮತ್ಸ್ಯೋದ್ಯಮ ಸಾಕಷ್ಟು ಅಭಿವೃದ್ಧಿಯಾಗಿದೆ. ಮೀನು ಇಲ್ಲಿಂದ ರಫ್ತಾಗುತ್ತವೆ. ದೇಶದಲ್ಲಿ ಸು.35,309 ನೋಂದಾಯಿತ ಮೀನುಗಾರರಿದ್ದಾರೆ. ಇನ್ನೂ 20,000 ಜನರು ಮೀನುಗಾರಿಕೆಯ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ. ಮ್ಯಾಟೊಸೀನ್ಯೂಷ್, ಸೆಟೂಬಲ್, ಪೋರ್ಟಿಮಾವು ಮತ್ತು ಊಲ್ಯಾವು ಮುಖ್ಯ ಮೀನುಗಾರಿಕೆಯ ಕೇಂದ್ರಗಳು.

ಖನಿಜಗಳು : ಖನಿಜಗಳ ಉತ್ಪಾದನೆಯಲ್ಲಿ ಸಾಕಷ್ಟು ಪ್ರಯತ್ನ ನಡೆಯದೇ ಇರುವುದು ಕಡಿಮೆ ಉತ್ಪಾದನೆಗೆ ಕಾರಣವಾಗಿದೆ. ಕಬ್ಬಿಣದ ಅದಿರು, ಕಲ್ಲಿದ್ದಲು, ಕಬ್ಬಿಣ ಮತ್ತು ತಾಮ್ರಗಳ ಸಲ್ಫೈಡುಗಳು, ವುಲ್ಫ್ರಮ್ ತವರ, ಆಂಟಿಮನಿ, ಮ್ಯಾಂಗನೀಸ್ ಮತ್ತು ಅಂತ್ರಸೈಟ್ ಅಲ್ಪ ಪ್ರಮಾಣಗಳಲ್ಲಿ ಉತ್ಪಾದನೆಯಾಗುತ್ತವೆ.

ಕೈಗಾರಿಕೆ: ಎರಡನೆಯ ಮಹಾಯುದ್ಧದ ಕಾಲದಿಂದ ಪೋರ್ಚುಗಲ್ಲಿನ ಆರ್ಥಿಕ ಜೀವನದಲ್ಲಿ ನಿಶ್ಚಿತ ಬದಲಾವಣೆಯಾಗಿದೆ. ಜನಸಂಖ್ಯೆ ಬೆಳೆದಂತೆ ಹೊಸ ಉದ್ಯಮಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. 1930 ರಿಂದ ದೇಶದ ಔದ್ಯೋಗಿಕ ನೆಲಗಟ್ಟನ್ನು ವಿಸ್ತರಿಸುವ ಪ್ರಯತ್ನ ನಡದೇ ಇದೆ. ಮಹಾಯುದ್ಧದ ಕಾಲದಿಂದ ಪೋರ್ಚುಗಲ್ಲಿನ ಆರ್ಥಿಕ ಜೀವನದಲ್ಲಿ ನಿಶ್ಚಿತ ಬದಲಾವಣೆಯಾಗಿದೆ. ಜನಸಂಖ್ಯೆ ಬೆಳೆದಂತೆ ಹೊಸ ಉದ್ಯಮಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

ಆಹಾರ ಪದಾರ್ಥ, ಪಾನೀಯ, ಬಟ್ಟೆ ಹಾಗೂ ಲೋಹ ಉದ್ಯಮಗಳು ದೇಶದ ಅರ್ಧಕ್ಕಿಂತಲೂ ಹೆಚ್ಚು ಕೈಗಾರಿಕಾ ಉತ್ಪಾದನೆಗೆ ಕಾರಣವಾಗಿವೆ. ಕೆಲಸಗಾರರಲ್ಲಿ ಶೇ. 55 ರಷ್ಟು ಜನರು ಇವುಗಳನ್ನವಲಂಬಿಸಿದ್ದಾರೆ. ಕೈಗಾರಿಕಾ ಕೇಂದ್ರಗಳು ದೇಶದಲ್ಲಿ ಅಸಮವಾಗಿ ಹರಡಿವೆ. ಹೆಚ್ಚು ಸಮೃದ್ಧ ಹಾಗೂ ತೀವ್ರ ಬೆಳೆಯುತ್ತಿರುವ ಕೈಗಾರಿಕೆಗಳು ದೊಡ್ಡ ನಗರಗಳ ವಿಶೇಷವಾಗಿ ಲಿಸ್ಬನ್ ಮತ್ತು ಓಪೋರ್ಟೋಗಳ ಸುತ್ತ ಇವೆ. ಬಿರಡೆಯ ತಯಾರಿಕೆಯಲ್ಲಿ ಈ ದೇಶ ಪ್ರಪಂಚದಲ್ಲಿ ಮುಂದಿದೆ. ಮದ್ಯ ತಯಾರಿಕೆ, ಮೀನುಗಳ ಡಬ್ಬೀಕರಣ, ಹಡಗು ನಿರ್ಮಾಣ ದೊಡ್ಡ ಉದ್ಯಮಗಳು. ಬಟ್ಟೆ, ಆಲಿವ್ ಎಣ್ಣೆ, ರಾಳ, ಕಾಗದ, ಗಾಜಿನ ಸಾಮಾನು, ಪೆಟ್ರೋಲಿಯಮ್ ಸರಕುಗಳು, ಪಿಂಗಾಣಿ, ಹೆಂಚು–ಇವು ಇಲ್ಲಿ ತಯಾರಾಗುವ ಇತರ ವಸ್ತುಗಳು. ಬಿರಡೆ, ಮದ್ಯ, ಉಪ್ಪು, ಮೀನು–ಇವು ಮುಖ್ಯ ರಫ್ತು ಸರಕುಗಳು. ಪ್ರವಾಸೋದ್ಯಮ ಗಮನಾರ್ಹವಾಗಿ ಬೆಳೆದಿದೆ.

ಪೋರ್ಚುಗಲ್ಲಿನ ಮೂಲವಾಸಿಗಳು ಲೂಸಿಟೇನಿಯನ್ನರು. ಅನಂತರ ರೋಮನ್ನರು, ಜರ್ಮನ್ ಹಾಗೂ ಆಫ್ರಿಕದ ಮೂಲದವರು ಬಂದು ನೆಲೆಸಿರುವರು. ಜನರು ಹೆಚ್ಚಾಗಿ ರೋಮನ್ ಕ್ಯಾಥೋಲಿಕ್ ಧರ್ಮದ ಅನುಯಾಯಿಗಳು. ಇತರ ಧರ್ಮೀಯರು ಕಡಿಮೆ. ಪೋರ್ಚುಗೀಸ್ ಪ್ರಮುಖ ಭಾಷೆ. (ಜಿ.ಕೆಯು.)

**ಪೋರ್ಟ್ ಆಫ್ ಸ್ಪೇನ್:** ವೆಸ್ಟ್ ಇಂಡೀಸಿನ ಟ್ರಿನಿಡಾಡ್ ಮತ್ತು ಟೊಬ್ಯಾಗೋ ದ್ವೀಪಗಳ ಮುಖ್ಯ ಪಟ್ಟಣ. ಟ್ರಿನಿಡಾಡ್ ದ್ವೀಪದ ವಾಯವ್ಯ ಭಾಗದಲ್ಲಿ, ಪರೀಯ ಕೊಲ್ಲಿಯಲ್ಲಿ ಉ.ಅ. $10^0 39'$ ಮತ್ತು ಪೂ.ರೇ. $61^0 31'$ ಮೇಲೆ ಇದೆ. ಇದೊಂದು ಅತ್ಯಂತ ಸುರಕ್ಷಿತ ರೇವು ಪಟ್ಟಣ; ಅಂತಾರಾಷ್ಟ್ರೀಯ ವಾಯು ಮತ್ತು ಜಲ ಮಾರ್ಗಗಳ ಸಂಧಿ ಸ್ಥಳ; ವಾಣಿಜ್ಯ ಮತ್ತು ವಿದ್ಯಾ ಕೇಂದ್ರ. ಜನಸಂಖ್ಯೆ 59,649 (2002).

ಇಲ್ಲಿಂದ ಸಕ್ಕರೆ, ಕೋಕೋ, ತೆಂಗು, ಕೆಂಪು ಮೂಲಂಗಿ, ಹಣ್ಣಿನ ರಸ, ಮದ್ಯ, ಔಷಧ, ಪೆಟ್ರೋಲಿಯಮ್, ಗ್ಯಾಸೋಲಿನ್, ಸಿಗರೇಟು – ಇವು ದಕ್ಷಿಣ ಅಮೆರಿಕದ ಉತ್ತರ ಕರಾವಳಿಯ ದೇಶಗಳಿಗೆ ರಫ್ತಾಗುತ್ತವೆ. ಆಹಾರ ಧಾನ್ಯ, ಹತ್ತಿ, ಜವಳಿ, ಗೊಬ್ಬರ ಪ್ರಮುಖ ಆಮದು ಸರಕುಗಳು.

ರಾಯಲ್ ವಿಕ್ಟೋರಿಯ ಸಂಸ್ಥೆ, ರಾಯಲ್ ಸಸ್ಯಶಾಸ್ತ್ರೀಯ ಉದ್ಯಾನ, ರೋಮನ್ ಕೆಥೊಲಿಕ್ ಕ್ರೈಸ್ತ ಮಂದಿರ, ಶ್ವೇತ ಭವನ, ಅನೇಕ ಶಿಕ್ಷಣ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯ – ಮುಂತಾದವು ನಗರದ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸಿವೆ. ಕೊಲಂಬಸ್ ಸ್ಮಾರಕ ಮಂದಿರ ಇಲ್ಲಿಯ ಇನ್ನೊಂದು ಚೆಲುವುದಾಣ. ಈ ನಗರ ಒಂದು ಪ್ರವಾಸಿ ಕೇಂದ್ರವೂ ಆಗಿದೆ.

ಇಲ್ಲಿ ರೈಲ್ವೆ ಕಾರ್ಯಾಗಾರ, ಹಡಗು ದುರಸ್ತಿ, ಮೋಟರು ಜೋಡಣೆ ಮುಂತಾದ ಅನೇಕ ಉದ್ಯಮಗಳಿವೆ. ದೇಶದ ಉಳಿದ ಭಾಗಗಳೊಂದಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಈ ನಗರದಲ್ಲಿ ಬಾನುಲಿ ಕೇಂದ್ರವಿದೆ. ಇಲ್ಲಿಂದ ಪೂರ್ವಕ್ಕೆ ಸು. 26 ಕಿಮೀ ದೂರದಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. (ವಿ.ಎಸ್.ಬಿಎಎನ್.)

**ಪೋರ್ಟ್ ಬ್ಲೇರ್:** ಭಾರತ ಗಣರಾಜ್ಯದ ಕೇಂದ್ರಾಡಳಿತ ಪ್ರದೇಶವಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಆಡಳಿತ ಕೇಂದ್ರ ಮತ್ತು ರೇವು ಪಟ್ಟಣ. ದಕ್ಷಿಣ ಅಂಡಮಾನ್ ದ್ವೀಪದ ಆಗ್ನೇಯ ತೀರದಲ್ಲಿ ಉ.ಅ. $11^0 39'$ ಮತ್ತು ಪೂ.ರೇ. $92^0 45'$ ಮೇಲೆ ಇದೆ. ಜನಸಂಖ್ಯೆ 74,955.

ಇದು ವಿಶ್ವದ ಅತ್ಯುತ್ತಮ ರೇವುಗಳಲ್ಲೊಂದು. ಇದು ಕೋಲ್ಕತದ ಆಗ್ನೇಯಕ್ಕೆ 1,296 ಕಿಮೀ ಮತ್ತು ಚೆನ್ನೈನ ನೈಋತ್ಯಕ್ಕೆ 1,344 ಕಿಮೀ ದೂರದಲ್ಲಿದೆ.

ಮೀನುಗಾರಿಕೆ, ಸಣ್ಣ ಉದ್ಯಮಗಳು, ವ್ಯಾಪಾರ–ಇವು ಇಲ್ಲಿಯ ಮುಖ್ಯ ಆರ್ಥಿಕ ಚಟುವಟಿಕೆಗಳು. (ಡಿ.ಎಸ್.ಜೆ.)

**ಪೋರ್ಟ್‌ಲೂಯಿಸ್:** ಪಶ್ಚಿಮ ಹಿಂದೂ ಸಾಗರದಲ್ಲಿ, ಮಲಗಾಸಿ ಗಣರಾಜ್ಯಕ್ಕೆ ಪೂರ್ವಭಾಗದಲ್ಲಿ ಸು. 720 ಕಿಮೀ ದೂರದಲ್ಲಿರುವ ಮಾರಿಷಸ್ ದೇಶದ ರೇವು ಪಟ್ಟಣ, ರಾಜಧಾನಿ. ದ.ಅ. $20^0 10'$ ಮತ್ತು ಪೂ.ರೇ. $57^0 30'$ ಮೇಲೆ ಇದೆ. ಜನಸಂಖ್ಯೆ 1,38,482 (2001). ಇದೊಂದು ಆಳ ಕಡಲಿನ ರೇವು. ಪಟ್ಟಣಕ್ಕೆ ಹೊಂದಿದಂತೆ ಅರ್ಧ ವರ್ತುಲಾಕಾರದಲ್ಲಿ ಹಬ್ಬಿರುವ ಪರ್ವತ ಶ್ರೇಣಿಯಿಂದಾಗಿ ಇದು ಸುರಕ್ಷಿತವಾಗಿದೆ. ರೇವಿನ ಮುಖದ ಬಳಿ ಇರುವ ಹವಳದ ದಿಬ್ಬಗಳ ಕಂಡಿ ಹಡಗುಗಳ ಪ್ರವೇಶಕ್ಕೆ ಅನುವು ಮಾಡಿಕೊಡುತ್ತದೆ. ಪಟ್ಟಣದ ವಾಯುವ್ಯದಲ್ಲಿ ಹರಿಯುವ ಗ್ರ್ಯಾಂಡ ನದಿ ಈ ನಗರಕ್ಕೆ ಕುಡಿಯುವ ನೀರನ್ನು ಪೂರೈಸುತ್ತದೆ. ಏಷ್ಯ ಮತ್ತು ಯುರೋಪ್ ಖಂಡಗಳ ನಡುವೆ ಸಂಚರಿಸುವ ನೌಕೆಗಳಿಗೆ ತಂಗುದಾಣವಾಗಿದೆ.

ಸಂಗೀತ ಮತ್ತು ಕಲಾಮಂದಿರಗಳು, ಗ್ರಂಥಾಲಯ, ಕ್ರೈಸ್ತ ಆರಾಧನ ಮಂದಿರಗಳು, ಕಾಲೇಜು ಕಟ್ಟಡಗಳು, ಸಾರ್ವಜನಿಕ ಮತ್ತು ಸಸ್ಯಶಾಸ್ತ್ರ ಉದ್ಯಾನಗಳು, ಉತ್ತಮ ರಸ್ತೆಗಳು, ಸುಂದರ ಚೌಕಗಳು, ಚಿತ್ರಮಂದಿರಗಳು ಇತ್ಯಾದಿ ನಗರದ ವೈವಿಧ್ಯಮಯ ಜೀವನದ ದ್ಯೋತಕವಾಗಿವೆ; ಇಲ್ಲಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸಿವೆ. ನಗರದ ಸುಮಾರು ಮಧ್ಯದಲ್ಲಿ ಗುಡ್ಡವೊಂದರ ಮೇಲೆ 1838 ರಲ್ಲಿ ಕಟ್ಟಿದ ದುರ್ಗವೊಂದಿದೆ.

ಸಿಗರೇಟು, ಬೆಂಕಿಕಡ್ಡಿ, ಕೊಬ್ಬರಿಎಣ್ಣೆ, ಸಾಬೂನು, ಸಕ್ಕರೆ, ಹಡಗು ನಿರ್ಮಾಣ ಮತ್ತು ದುರಸ್ತಿ, ಮೋಟರು ತಯಾರಿಕೆ, ರೈಲು ಕಾರ್ಯಾಗಾರ ಮುಂತಾದ ಕೈಗಾರಿಕೆಗಳ ಕೇಂದ್ರ ಹಾಗೂ ವಾಣಿಜ್ಯ ಕೇಂದ್ರಕೂಡ. (ಯು.ಎನ್.ಎಸ್.ಬಿ.ಎಸ್)

**ಪೋರ್ಟ್‌ಲೆಂಡ್[1]:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಅರೆಗಾನ್ ರಾಜ್ಯದ ರೇವು ಪಟ್ಟಣ. ಅತ್ಯಂತ ದೊಡ್ಡ ನಗರ. ಜನಸಂಖ್ಯೆ 4,37,319 (ಬಡಾವಣೆಗಳು ಸೇರಿದ ಮಹಾನಗರ. ಜನಸಂಖ್ಯೆ 15,15,452 (2001)). ಮಲ್ಟ್‌ನೋಮಕೌಂಟಿಯ ಆಡಳಿತ ಕೇಂದ್ರ. ವಿಲಾಮೆಟ್ಟೆ ನದಿಯ ದಡದಲ್ಲಿ ಅದು ಕೊಲಂಬಿಯದೊಂದಿಗೆ ಸಂಗಮಿಸುವ ಸ್ಥಳದ ಹತ್ತಿರದಲ್ಲಿ ಉ.ಅ. $45^0 33'$ ಮತ್ತು ಪ.ರೇ. $122^0 36'$ ಮೇಲೆ ಇದೆ. ಇದೊಂದು ವಾಣಿಜ್ಯ ಕೇಂದ್ರ. ಇಲ್ಲಿ ವ್ಯವಸಾಯ ಮತ್ತು ಅರಣ್ಯ ಉತ್ಪನ್ನಗಳ ಮಾರಾಟ ಹೆಚ್ಚು. ಇದೊಂದು ನೌಕಾನಿರ್ಮಾಣ ಮತ್ತು ಕೈಗಾರಿಕಾ ಕೇಂದ್ರ. ಇಲ್ಲಿ ರಾಸಾಯನಿಕ ಮತ್ತು ಲೋಹ ಕೈಗಾರಿಕೆಗಳೊಂದಿಗೆ, ಮಾಂಸ, ಹತ್ತಿ, ಜವಳಿ ಮುಂತಾದ ಕೈಗಾರಿಕೆಗಳಿವೆ. ಇದಕ್ಕೆ ಉತ್ತರ ಫೆಸಿಫಿಕ್ ಖಂಡಾಂತರ ರೈಲುಮಾರ್ಗ ಸಂಪರ್ಕದ. ಆಳ ಕಡಲು ರೇವು ಸೌಲಭ್ಯವಿದೆ. ಹಣ್ಣು ಮತ್ತು ತರಕಾರಿಗಳನ್ನು ಇಲ್ಲಿಂದ ಹೆಚ್ಚಾಗಿ ರಫ್ತು ಮಾಡಲಾಗುತ್ತಿದೆ. ಇದು ಪೋರ್ಟ್‌ಲೆಂಡ್ ವಿಶ್ವವಿದ್ಯಾಲಯದ ಕೇಂದ್ರ. ಇಲ್ಲಿ ವಿವಿಧ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿವೆ. 1829ರಲ್ಲಿ ಇಲ್ಲಿ ವಸತಿ ಪ್ರಾರಂಭವಾಯಿತು. ಇದರ ಸಮೀಪದಲ್ಲಿ 189ಮೀ ಎತ್ತರದ ಮಲ್ಟ್‌ನೋಮ ಜಲಪಾತವಿದೆ.

**ಪೋರ್ಟ್‌ಲೆಂಡ್[2]:** ಅಮೆರಿಕದ ಮೇನ್ ರಾಜ್ಯದ ಕಂಬರ್ಲೆಂಡ್ ಕೌಂಟಿಯ ಆಡಳಿತ ಕೇಂದ್ರ. ನೈಋತ್ಯ ಮೇನ್‌ನಲ್ಲಿ ಕ್ಯಾಸ್ಕೊ ಕೊಲ್ಲಿಯ ಮೇಲೆ ಉ.ಅ. $43^0 39'$ ಮತ್ತು ಪೂ.ರೇ. $70^0 17'$ ಮೇಲೆ ಇದೆ. ಈ ನಗರವನ್ನು ಕ್ಯಾಸ್ಕೊ ಕೊಲ್ಲಿ ಮತ್ತು ಅದರ ಕೆಲವು ದ್ವೀಪಗಳಿಗೆ ಎದುರಾಗಿ ಚಾಚಿರುವ ಎರಡು ದಿಬ್ಬಗಳ ಮೇಲೆ ನಿರ್ಮಿಸಲಾಗಿದೆ. ಜನಸಂಖ್ಯೆ 64,143 (2001). ಮಹಾನಗರ ಜನಸಂಖ್ಯೆ 2,21,095. ಈ ನಗರ ಮೊದಲಿನಿಂದಲೂ ಮೀನುಗಾರಿಕೆ ನೌಕಾ ನಿರ್ಮಾಣ ಮತ್ತು ವಾಣಿಜ್ಯಕ್ಕೆ ಹೆಸರಾಗಿದೆ. ಈಗ ಇದು ಮುಖ್ಯ ಸಾರಿಗೆ ಮತ್ತು ವಾಣಿಜ್ಯ ಕೇಂದ್ರವಾಗಿದೆ. ಪೆಟ್ರೋಲಿಯಮ್ ಸಾಗಣೆಯ ಮುಖ್ಯ ಬಂದರು. ಕಾಗದ ತಯಾರಿಕೆ, ಮುದ್ರಣ, ಆಹಾರ ಸಂಸ್ಕರಣ, ಹತ್ತಿ ಜವಳಿ ಮತ್ತು ಮರದ ಉತ್ಪನ್ನಗಳು ರಾಸಾಯನಿಕ ವಸ್ತುಗಳು, ಲೋಹ ವಸ್ತುಗಳು, ಯಂತ್ರೋಪಕರಣಗಳೂ ಮೊದಲಾದ ಕೈಗಾರಿಕೆಗಳಿವೆ. ಇದು ಮೇನ್ ವಿಶ್ವವಿದ್ಯಾಲಯದ ಕೇಂದ್ರ. ಇಲ್ಲಿ ಕಲೆ ಮತ್ತು ಜೀವವಿಜ್ಞಾನ ವಸ್ತು ಸಂಗ್ರಹಾಲಯಗಳಿವೆ.

**ಪೋರ್ಟ್‌ಲೆಂಡ್[3]:** ಅಮೆರಿಕದ ಕನೆಟಿಕಟ್ ರಾಜ್ಯದ ಮಿಡ್‌ಸೆಕ್ಸ್ ಕೌಂಟಿಯ ಒಂದು ಕೃಷಿಪ್ರಧಾನ ಪಟ್ಟಣ.

**ಪೋರ್ಟ್‌ಲೆಂಡ್[4]:** ಆಗ್ನೇಯ ಆಸ್ಟ್ರೇಲಿಯದಲ್ಲಿ ನೈಋತ್ಯ ವಿಕ್ಟೋರಿಯದ ಇದೇ ಹೆಸರಿನ ಒಂದು ಪಟ್ಟಣ. ಪೋರ್ಟ್‌ಲೆಂಡ್ ಬೇ ಮೇಲೆ ಇದೆ. ಮೆಲ್‌ಬರ್ನ್ ನಗರಕ್ಕೆ ಪಶ್ಚಿಮ ನೈಋತ್ಯದಲ್ಲಿ 296 ಕಿಮೀ ದೂರದಲ್ಲಿದೆ. ಇದೊಂದು ರೇವು ಪಟ್ಟಣ.

**ಪೋರ್ಟ್‌ಲೆಂಡ್[5]:** ದಕ್ಷಿಣ ಇಂಗ್ಲೆಂಡಿನ ಡಾರ್ಸೆಟ್‌ಷೈರ್‌ನ ಇದೇ ಹೆಸರಿನ ಒಂದು ನಗರ ಪ್ರದೇಶ. ವೇಮತ್‌ಗೆ 6.4 ಕಿಮೀ ದಕ್ಷಿಣದಲ್ಲಿದೆ. (ಡಿ.ಎಸ್.ಜೆ.)

**ಪೋರ್‌ಬಂದರ್:** ಗುಜರಾತ್ ರಾಜ್ಯದ ಒಂದು ಜಿಲ್ಲೆ ಮತ್ತು ರೇವುಪಟ್ಟಣ. ಅರಬ್ಬಿ ಸಮುದ್ರಾಭಿಮುಖವಾಗಿ ಉ.ಅ. $21^0$–$38^0$ ಮತ್ತು ಪೂ. ರೇ. $69^0$–$36^0$ ಮೇಲೆ ಇದೆ. ಮಹಾತ್ಮ ಗಾಂಧಿಯವರು ಹುಟ್ಟಿದ ನಗರ. ನಗರದ ಜನಸಂಖ್ಯೆ 1,97,414.

ಇದು ಪ್ರಾಚೀನ ಕಾಲದಿಂದ ಭಾರತದ ಪಶ್ಚಿಮ ಕರಾವಳಿಯ ಇತರ ರೇವುಗಳೊಡನೆ ವಾಣಿಜ್ಯ ಸಂಪರ್ಕ ಹೊಂದಿದೆ. ಈ ಸ್ಥಳ ಕಟ್ಟಡ ಕಲ್ಲಿಗೆ ಪ್ರಸಿದ್ಧ. ಈಗ ಅಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪಿತಾಗಿವೆ. ರೈಲ್ವೆ ಜಂಕ್ಷನ್, ವಿಮಾನ ನಿಲ್ದಾಣವಿದೆ. ಜಿಲ್ಲೆಯ ಜನಸಂಖ್ಯೆ 5,36,854. *

**ಪೋಲೆಂಡ್:** ಈಶಾನ್ಯ ಮಧ್ಯ ಯುರೋಪಿನ ಒಂದು ಗಣರಾಜ್ಯ. ಉ.ಅ. $49^0$–$54^0 50'$ (648 ಕಿಮೀ) ಹಾಗೂ ಪೂ.ರೇ. $14^0 67'$–$24^0 08'$ (ಸು. 684 ಕಿಮೀ) ನಡುವೆ ಹಬ್ಬಿದೆ. ವಿಸ್ತೀರ್ಣ 3,12,520 ಚ.ಕಿಮೀ. ಜನಸಂಖ್ಯೆ 3,86,44,000 (2002). ರಾಜಧಾನಿ ವಾರ್ಸಾ. ಇದರ ಜನಸಂಖ್ಯೆ 16,42,700 (2002).

ಮೇಲ್ಮೈ ಲಕ್ಷಣ : ಪೋಲ್ ಎಂದರೆ ಮೈದಾನ ಎಂದರ್ಥ. ಇದು ಬಹುತೇಕ ತಗ್ಗು ನೆಲ. ದೇಶದ ಬಹುಭಾಗ ಯುರೋಪಿನ ಬೃಹತ್ ಮೈದಾನ ಪ್ರದೇಶದಲ್ಲಿದೆ. ಪೋಲೆಂಡಿನ ಸರಾಸರಿ ಎತ್ತರ ಸಮುದ್ರಮಟ್ಟದಿಂದ ಸು. 168.8 ಮೀ. ದೇಶದ ದಕ್ಷಿಣ ಭಾಗದಲ್ಲಿ ಕಾರ್ಪೇತಿಯನ್ ಪರ್ವತಶ್ರೇಣಿ ವೃತ್ತಾಕಾರವಾಗಿ ಹಬ್ಬಿದೆ. ಈ ಶ್ರೇಣಿಯ ಉತ್ತರಕ್ಕೆ, ಕಣಿವೆಯಿಂದಾಚೆಗೆ ಬೊಹಿಮಿಯನ್ ಪರ್ವತ ಗ್ರಂಥಿ ಇದೆ. ಇದರಲ್ಲಿ ಸುಡೆಟೀಸ್ ಮುಂತಾದ ಪರ್ವತಗಳಿವೆ. ಇದು ಉನ್ನತ ಸೀಮೆ. ಪೋಲೆಂಡನ್ನು ಪೂರ್ವ ಪಶ್ಚಿಮವಾಗಿ ಹಬ್ಬಿದ ಹಲವು ವಲಯಗಳಾಗಿ ವಿಂಗಡಿಸಬಹುದು. ಉತ್ತರದ ವಲಯ ದಕ್ಷಿಣ ಬಾಲ್ಟಿಕ್ ಕರಾವಳಿ ಮೈದಾನದ ಭಾಗ. ಇದು ಅಲ್ಲಲ್ಲಿ ಜೌಗು ನೆಲದಿಂದಲೂ ಕುಪ್ಪೆಗಳಿಂದಲೂ ಕೂಡಿದೆ. ಇದಕ್ಕೆ ದಕ್ಷಿಣದಲ್ಲಿರುವುದು ಭೂ ಮಡಿಕೆಗಳಿಂದಲೂ




ಹಿಮನದಿಗಳಿಂದ ಉಂಟಾದ ಹಲವು ಸರೋವರಗಳಿಂದಲೂ ಕೂಡಿದ ವಲಯ. ಈಶಾನ್ಯದಲ್ಲಿ ಮಸುರಿಯ ಪ್ರದೇಶದಲ್ಲಿ ಸರೋವರಗಳು ಹೆಚ್ಚು ಒತ್ತಾಗಿವೆ. ಅವುಗಳ ಪೈಕಿ ಸ್ನಿಯಾರ್ಡ್ವಿ ಅತ್ಯಂತ ದೊಡ್ಡದು. ದೇಶದಲ್ಲಿ 1 ಹೆ. ಗಿಂತ ಹೆಚ್ಚು ವಿಸ್ತೀರ್ಣವಿರುವ ಸು. 9,300 ಸರೋವರಗಳಿವೆ. ಇವುಗಳ ಒಟ್ಟು ವಿಸ್ತೀರ್ಣ 3,200 ಚ.ಕಿಮೀ. ಮೂರನೆಯ ವಲಯ ಮಧ್ಯ ಪೋಲೆಂಡ್ ತಗ್ಗು ನೆಲ. ಇದು ಪೋಲೆಂಡಿನ ಹೃದಯ ಸದೃಶ ಪ್ರದೇಶ. ಕೃಷಿ ಕೈಗಾರಿಕೆಗಳ ತೊಟ್ಟಿಲು. ಪೋಲೆಂಡಿನ ರಾಜಧಾನಿಯಾದ ವಾರ್ಸಾ ಇಲ್ಲಿದೆ. ಇದಕ್ಕೆ ದಕ್ಷಿಣದಲ್ಲಿರುವುದು ಎತ್ತರದ ನೆಲ. ಇಲ್ಲಿ ಪೋಲೆಂಡಿನ ಹಲವು ನಿಸರ್ಗರಮ್ಯಪ್ರದೇಶಗಳಿವೆ.

ಪೋಲೆಂಡಿನಲ್ಲಿ ಹರಿಯುವ ನದಿ ನೀರಿನ ಶೇ.99.8 ರಷ್ಟು ಭಾಗ ಬಾಲ್ಟಿಕ್ ಸಮುದ್ರವನ್ನು ಸೇರುತ್ತದೆ. ಇದರಲ್ಲಿ ಅರ್ಧದಷ್ಟು ವಿಸ್ಚಲ ನದಿಯಲ್ಲಿ, ಮೂರನೆಯ ಒಂದು ಭಾಗ ಓಡರ್‌ನಲ್ಲಿ ಹರಿಯುತ್ತದೆ. ವಿಸ್ಚಲ ನದಿ ಕಾರ್ಪೇತಿಯನ್ ಪರ್ವತದ ಉತ್ತರ ಇಳಿಜಾರಿನಲ್ಲಿ ಹುಟ್ಟಿ ಈಶಾನ್ಯ, ಉತ್ತರ ಹಾಗೂ ವಾಯವ್ಯಾಭಿಮುಖವಾಗಿ ವೃತ್ತಾಕಾರದಲ್ಲಿ ಗಡಾನ್ಸ್ಕ್‌ನಲ್ಲಿ ಬಾಲ್ಟಿಕ್ ಸಮುದ್ರ ಸೇರುತ್ತದೆ. ಡುನಾಯೆಟ್ಸ್, ಸಾನ್, ಬಗ್ ಇದರ ಕೆಲವು ಉಪನದಿಗಳು.

ವಾಯುಗುಣ : ಪೋಲೆಂಡಿನದು ಪಶ್ಚಿಮದ ಮಾರುತಗಳಿಂದ ಪ್ರಭಾವಿತವಾದ, ಮೇಲಿಂದ ಮೇಲೆ ಬದಲಾಗುವ ಖಂಡಾಂತರ ವಾಯುಗುಣ. ಇಲ್ಲಿ ಆರು ಋತುಗಳನ್ನು ಗುರುತಿಸಬಹುದಾಗಿದೆ. ಹಿಮ ಬೀಳುವ, ಸು. ಮೂರು ತಿಂಗಳುಗಳ ಅವಧಿಯ ಚಳಿಗಾಲ. ಚಳಿ ಮತ್ತು ವಸಂತ ಕಾಲಗಳ ನಡುವೆ ಹೊಯ್ದಾಡುವ ಪೂರ್ವವಸಂತ. ಬಿಸಿಲಿನಿಂದ ಕೂಡಿದ ವಸಂತ. ಮಳೆ ಮತ್ತು ಬೇಸಗೆ ಬಿಸಿಲಿನಿಂದ ಕೂಡಿದ ಶರತ್ಕಾಲ. ಮುಂಬರುವ ಚಳಿಗಾಲವನ್ನು ಸೂಚಿಸುವ, ಮಂಜಿನಿಂದ ಕೂಡಿದ ಆರ್ದ್ರ ಹವೆಯ ಕಾಲ. ಪೋಲೆಂಡಿನ ಸ್ಥಾನದಿಂದಾಗಿ ಅದರ ಮೇಲೆ ಸಂಭವಿಸುವ ಸಾಗರೀಯ, ತಂಪು ಹಾಗೂ ಬಿಸಿ ಗಾಳಿಗಳ ಸಂಘಟನೆ ಇದಕ್ಕೆ ಕಾರಣವಾಗಿದೆ. ಜನವರಿ ಅತ್ಯಂತ ಹೆಚ್ಚು ಚಳಿಯ ತಿಂಗಳು. ದೇಶವೆಲ್ಲ ಹಿಮಾಚ್ಛಾದಿತವಾಗುತ್ತದೆ. ಮಧ್ಯವಾರ್ಷಿಕ ಉಷ್ಣತೆ ನೈಋತ್ಯದ ತಗ್ಗಿನ ನೆಲದಲ್ಲಿ $8^0$ಸೆ. ಯಿಂದ ಈಶಾನ್ಯದಲ್ಲಿ $6^0$ಸೆ. ವರೆಗೆ ವ್ಯತ್ಯಾಸವಾಗುತ್ತದೆ. ಪರ್ವತ ಪ್ರದೇಶದಲ್ಲಿ ಎತ್ತರಕ್ಕೆ ಅನುಗುಣವಾಗಿ ಉಷ್ಣತೆ ಬದಲಾಗುತ್ತದೆ. ವಾರ್ಷಿಕ ಸರಾಸರಿ ಅವಪಾತ 60 ಸೆಂಮೀ. ಪರ್ವತ ಪ್ರದೇಶದಲ್ಲಿ 80–120 ಸೆಂಮೀ. ಇದರಲ್ಲಿ ಬಹುಭಾಗ ಹಿಮರೂಪದಲ್ಲಿ ಬೀಳುತ್ತದೆ.

ನೈಸರ್ಗಿಕ ಸಸ್ಯಪ್ರಾಣಿಗಳು: ಇಲ್ಲಿ ಯುರೋಪಿನ ಉತ್ತರ ಮಧ್ಯ ಮತ್ತು ಪಶ್ಚಿಮ ಪ್ರದೇಶಗಳಲ್ಲಿ ಸಾಮಾನ್ಯವಾಗಿರುವ ಸಸ್ಯಗಳೂ ಪ್ರಾಣಿಗಳೂ ಇವೆ. ಬದಲಾಗುವ ವಾಯುಗುಣದಿಂದಾಗಿ ಅವುಗಳಲ್ಲಿ ವೈವಿಧ್ಯವಿದೆ. ದೇಶದ ಶೇ. 27 ಭಾಗ ಅರಣ್ಯಾವೃತ. ಅರಣ್ಯಗಳು ಹೆಚ್ಚಾಗಿರುವುದು ಪರ್ವತ ಪ್ರದೇಶಗಳಲ್ಲಿ. ಪೈನ್ ಅಧಿಕವಾಗಿರುವ ಶಂಕುಧಾರಿಗಳೂ (ಅರಣ್ಯ ಪ್ರದೇಶದ ಶೇ. 70) ಬರ್ಚ್, ಬೀಚ್ ಮತ್ತು ಎಲ್ಮ್ ಹೆಚ್ಚಾಗಿರುವ ಪರ್ಣಪಾತಿಗಳೂ ಇಲ್ಲಿ ಇವೆ. ಹಣ್ಣಿನ ಮರಗಳು ದೇಶದಲ್ಲೆಲ್ಲಾ ವಿಪುಲವಾಗಿವೆ. ಅಲ್ಪಸಂಖ್ಯೆಯಲ್ಲಿ ಇನ್ನೂ ಉಳಿದುಕೊಂಡಿರುವ ದೊಡ್ಡ ವನ್ಯಮೃಗಗಳಲ್ಲಿ ಲಿಂಕ್ಸ್, ಕಾಡು ಬೆಕ್ಕು, ಐರೋಪ್ಯ ಕಾಡುಕೋಣ, ಮೂಸ್, ಟಾರ್ಪಾನ್ ಮತ್ತು ಕಾಡು ಮೇಕೆ ಮುಖ್ಯವಾದವು. ಕಾರ್ಪೇತಿಯನ್ ಪರ್ವತ ಪ್ರದೇಶದ ಒಳಭಾಗವನ್ನು ಬಿಟ್ಟರೆ ಉಳಿದೆಡೆಗಳಲ್ಲಿ ವನ್ಯಮೃಗಗಳು ವಿರಳ. ಪಕ್ಷಿಗಳು, ಮೀನು ಮತ್ತು ಕೀಟಗಳು ಅಧಿಕ ಸಂಖ್ಯೆಯಲ್ಲಿವೆ.

ಭಾಷೆ : ಲ್ಯಾಟಿನ ವರ್ಣಮಾಲೆಯನ್ನು ಬಳಸುವ ಪೋಲಿಷ್ ಭಾಷೆ ಪಶ್ಚಿಮ ಸ್ಲಾವೋನಿಕ್ ಗುಂಪಿನದು. ಇದರಲ್ಲಿ ಹಲವು ಉಪಭಾಷೆಗಳಿವೆ. ಬಹಳಷ್ಟು ಪೋಲರು ಜರ್ಮನ್, ರಷ್ಯನ್ ಹಾಗೂ ಇಂಗ್ಲಿಷ್ ಭಾಷೆಗಳನ್ನು ಆಡಬಲ್ಲರು. ಅನೇಕರು ಇತರ ಸ್ಲಾವೊನಿಕ್ ಭಾಷೆಗಳನ್ನು ಅರ್ಥ ಮಾಡಿಕೊಳ್ಳಬಲ್ಲರು.

ಧರ್ಮ: ಶೇ. 95 ಜನರು ರೋಮನ್ ಕೆಥೊಲಿಕ್‌ರೆಂದು ಅಂದಾಜಿದೆ. ಉಳಿದವರಲ್ಲಿ ರಷ್ಯನ್ ಸಂಪ್ರದಾಯಸ್ಥರು, ಪ್ರಾಟೆಸ್ಟಂಟರು ಮತ್ತು ಯಹೂದಿಗಳು ಇದ್ದಾರೆ.

ಆರ್ಥಿಕತೆ: ಪೋಲೆಂಡ್ ಕೃಷಿ ಪ್ರಧಾನ ದೇಶವಾಗಿತ್ತು. ಆದರೆ ಎರಡನೆಯ ಮಹಾಯುದ್ಧದ ಅನಂತರ ಪಶ್ಚಿಮದಲ್ಲಿ ಹೊಸಪ್ರದೇಶಗಳು ಸೇರಿದ್ದು ಹೊಸ ಔದ್ಯೋಗೀಕರಣದ ನೀತಿ ಇವುಗಳಿಂದಾಗಿ ಉದ್ಯೋಗ ಮತ್ತು ಕೈಗಾರಿಕೆಗಳು ರಾಷ್ಟ್ರೀಯ ಆದಾಯದಲ್ಲಿ ಅರ್ಧಕ್ಕೂ ಹೆಚ್ಚಳಕ್ಕೆ ಕಾರಣವಾಗಿವೆ. ಐದು ಮುಖ್ಯ ಬಂದರುಗಳುಳ್ಳ ವಿಸ್ತಾರ ಸಾಗರತೀರ, ಅಭಿವೃದ್ಧಿಗೊಳ್ಳುತ್ತಿರುವ ಹಡಗು ನಿರ್ಮಾಣ ಕೈಗಾರಿಕೆ ಇವುಗಳಿಂದಾಗಿ ಪೋಲೆಂಡ್ ಗಮನಾರ್ಹ ಸಾಗರೀಯ ರಾಷ್ಟ್ರವಾಗಿದೆ. ಪೋಲೆಂಡಿನ ಆರ್ಥಿಕತೆ ಮುಖ್ಯವಾಗಿ ಸರ್ಕಾರ ಕೇಂದ್ರೀಕೃತ ಯೋಜನೆಯ ಸಿದ್ಧಾಂತದ ತಳಹದಿಯ ಮೇಲೆ ಬೆಳೆದಿದೆ. ಕೃಷಿಯೇತರ ಆರ್ಥಿಕತೆಯಲ್ಲಿ ಸಮಾಜೀಕೃತ ವಲಯಕ್ಕೆ ಪ್ರಾಧಾನ್ಯವಿದೆ.

ಕೃಷಿ : ದೇಶದ ಒಟ್ಟು ಆದಾಯದ ಶೇ. 4 ರಷ್ಟು ಕೃಷಿಯಿಂದ ಬರುತ್ತದೆ. ರೈ ಗೋದಿ, ಬಾರ್ಲಿ, ತೋಕೆಗೋದಿ, ಆಲೂಗೆಡ್ಡೆ, ಸಕ್ಕರೆ ಬೀಟ್, ತಂಬಾಕು ಮತ್ತು ಫ್ಲಾಕ್ಸ್ ಮುಖ್ಯ ಬೆಳೆಗಳು.

ಮೀನುಗಾರಿಕೆ : ಆಧುನಿಕ ಸಮುದ್ರ ಸಂಚಾರಿ ಮೀನುಗಾರಿಕೆ ಹಡಗುಗಳ ಸಂಖ್ಯೆಯಲ್ಲಿ ಏರಿಕೆ ಹಾಗೂ ಬಂದರು ಮತ್ತು ಬಂದರುಕಟ್ಟೆಗಳ ಸುಧಾರಣೆ–ಇವುಗಳಿಂದಾಗಿ ಮೀನುಗಾರಿಕೆ ರಾಷ್ಟ್ರೀಯ ಆರ್ಥಿಕತೆಯ ಒಂದು ಮುಖ್ಯ ವಿಕಾಸಶೀಲ ಅಂಗವಾಗಿದೆ. ಉದ್ಯೋಗದ ಬಹುಪಾಲು ಸರ್ಕಾರದ ಸ್ವಾಮ್ಯದಲ್ಲಿದೆ. ಬಾಲ್ಟಿಕ್ ಸಮುದ್ರ, ಉತ್ತರ ಸಮುದ್ರ ಮತ್ತು ಅಟ್ಲಾಂಟಿಕ್ ಸಾಗರಗಳಲ್ಲಿ ಮೀನುಗಾರಿಕೆ ನಡೆಯುತ್ತದೆ. ಸರೋವರ, ಕೊಳ ಮತ್ತು ನದಿಗಳು ಒಳನಾಡಿನ ಮೀನುಗಾರಿಕೆಗೆ ಯೋಗ್ಯವಾಗಿವೆ.

ಗಣಿಗಾರಿಕೆ : ಕಲ್ಲಿದ್ದಲು ಮುಖ್ಯವಾಗಿ ದೊರೆಯುತ್ತದೆ. ಗಂಧಕ ಎರಡನೆಯ ಮುಖ್ಯ ಖನಿಜ. ಉಪ್ಪು, ಕೆಯೋಲಿನ್, ಸುಣ್ಣದ ಕಲ್ಲು, ಜಿಪ್ಸಮ್, ಅಮೃತಶಿಲೆ–ಇವು ಇತರ ಕೆಲವು ಖನಿಜಗಳು. ಬಾಲ್ಟಿಕ್ ಸಮುದ್ರ ತೀರ ಪ್ರದೇಶದಲ್ಲಿ ಪೊಟ್ಯಾಸಿಯಮ್ ಮತ್ತು ಮೆಗ್ನೀಸಿಯಮ್ ಉಪ್ಪು, ದೊರಕುತ್ತವೆ. ಲೋಹ ಖನಿಜಗಳಲ್ಲಿ ಸತು ಮುಖ್ಯ. ಸತು ಮತ್ತು ಸೀಸಗಳ ನಿಕ್ಷೇಪಗಳು ಹೆಚ್ಚಾಗಿರುವ ದೇಶಗಳ ಪೈಕಿ ಪೋಲೆಂಡ್ ಒಂದು ಎಂದು ಹೇಳಲಾಗಿದೆ. ತಾಮ್ರ, ಕಬ್ಬಿಣದ ಅದಿರು, ವೆನೇಡಿಯಮ್, ಕೋಬಾಲ್ಟ್, ಬೆಳ್ಳಿ ಇವು ಇಲ್ಲಿ ದೊರಕುವ ಇತರ ಖನಿಜಗಳು.

ಕೈಗಾರಿಕೆ : ಸರ್ಕಾರ ಕೈಗಾರಿಕೆಗಳ ಬೆಳೆವಣಿಗೆಗೆ ಮಹತ್ತ್ವ ನೀಡುತ್ತದೆ. ಬಂಡವಾಳದ ಅಧಿಕಾಂಶ ಕೈಗಾರಿಕೆ ವಿಭಾಗಕ್ಕೆ ಮೀಸಲಾಗಿದೆ. ರಾಷ್ಟ್ರೀಯ ವರಮಾನದ ಅರ್ಧಕ್ಕೂ ಹೆಚ್ಚು ಭಾಗಕ್ಕೆ ಕೈಗಾರಿಕೆಗಳು ಕಾರಣ. ಎಂಜಿನಿಯರಿಂಗ್, ಆಹಾರ ಸಂಸ್ಕರಣ, ಕಬ್ಬಿಣ ಮತ್ತು ಇತರ ಲೋಹಗಾರಿಕೆ, ಬಟ್ಟೆ, ಇಂಧನ, ಕೋಕ್, ರಾಸಾಯನಿಕ ಮತ್ತು ಇತರ ರಾಸಾಯನಿಕ, ಹಡಗು ನಿರ್ಮಾಣ – ಇವು ಕೆಲವು ಮುಖ್ಯ ಕೈಗಾರಿಕೆಗಳು. ಮೋಟರು ವಾಹನ, ಟ್ರಾಕ್ಟರ್, ಭಾರಿ ಯಂತ್ರ, ವಿಮಾನ, ಮನೆಬಳಕೆಯ ವಸ್ತು, ಶೀತಕ, ಬಟ್ಟೆ ಒಗೆಯುವ ಯಂತ್ರ, ದೂರದರ್ಶಕ, ಮೋಟರ್ ಸೈಕಲ್ – ಇವು ಮಹತ್ತ್ವದ ತಯಾರಿಕಾ ವಸ್ತುಗಳು. ಮೂಲ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ. ಅವು ಆಯೋಜಿತ ಆರ್ಥಿಕತೆಯ ಅಡಿಯಲ್ಲಿವೆ.

ವಿದೇಶಿ ವ್ಯಾಪಾರ : ಪೋಲೆಂಡಿನ ಮುಖ್ಯ ವ್ಯಾಪಾರಿ ಪಾಲುದಾರ ರಷ್ಯ ದೇಶ. ಅದು ದೇಶದ ರಫ್ತಿನ $^1/_3$ ಭಾಗವನ್ನು ಕೊಳ್ಳುತ್ತದೆ ಮತ್ತು ಆಮದಿನ ಶೇ. 40 ಒದಗಿಸುತ್ತದೆ. 1970 ರ ದಶಕದ ಪ್ರಾರಂಭಕ್ಕೆ ಯಂತ್ರೋಪಕರಣ, ಶಕ್ತಿ ಮತ್ತು ವಿದ್ಯುತ್ ಯಂತ್ರಗಳು ಹಾಗೂ ಹಡಗುಗಳು ಒಟ್ಟು ರಫ್ತಿನ $^1/_3$ರಷ್ಟಿದ್ದುವು. ಇವು ಹೆಚ್ಚಾಗಿ ಸಮಾಜವಾದಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ರವಾನೆಯಾಗುತ್ತವೆ. ಉಳಿದ $^1/_3$ ಭಾಗದಲ್ಲಿ ಕಲ್ಲಿದ್ದಲು, ಕೋಕ್, ಕಬ್ಬಿಣ ಮತ್ತು ಉಕ್ಕು, ಇಂಧನ ಮತ್ತು ಕಚ್ಚಾ ಮಾಲುಗಳು ಸೇರುತ್ತವೆ. ಅನುಭೋಗ ಸರಕು ಮತ್ತು ಆಹಾರವೂ ರಫ್ತಾಗುತ್ತವೆ. ಎಣ್ಣೆ, ಲೋಹಗಳ ಅದಿರುಗಳು, ರಾಸಾಯನಿಕ ಮತ್ತು ಪ್ರಾಣಿ ಮೂಲ ಉತ್ಪನ್ನಗಳು, ಇಂಧನ ಮತ್ತು ಕಚ್ಚಾ ಸಾಮಗ್ರಿ, ಯಂತ್ರ, ಆಹಾರ, ಅನುಭೋಗ ಸರಕು – ಇವು ಆಮದುಗಳು.

ಸಾರಿಗೆ : ಎಲ್ಲ ತರಹದ ಸಾರಿಗೆಯ ರಾಷ್ಟ್ರೀಕರಣವಾಗಿದೆ. ಪ್ರಯಾಣಿಕರ ಹಾಗೂ ಸರಕಿನ ಸಾರಿಗೆಯ ಅಧಿಕಾಂಶ ನಡೆಯುವುದು ರೈಲು ಮಾರ್ಗಗಳ ಮೂಲಕ.

ಜಲಸಾರಿಗೆಯಲ್ಲೂ ದೇಶ ಮುಂದಿದೆ. ಎರಡನೆಯ ಮಹಾಯುದ್ಧದ ಪೂರ್ವದಲ್ಲಿ ಹಡಗು ಸಾರಿಗೆ ಸಂಪರ್ಕ ವಿಶೇಷವಾಗಿ ಪಶ್ಚಿಮದ ರಾಷ್ಟ್ರಗಳೊಡನೆ ಅದರಲ್ಲೂ ವಿಶೇಷವಾಗಿ ಅಮೆರಿಕದೊಡನೆ ಇತ್ತು. ಈಗ ಅದು ವಿಶೇಷವಾಗಿ ಏಷ್ಯನ್ ಹಾಗೂ ಆಫ್ರಿಕನ್ ದೇಶಗಳೊಡನೆ ಇದೆ. ಓಡರ್, ವಿಸ್ಚಲ ಮತ್ತು ವಾರ್ಟ ನದಿಗಳು ಮುಖ್ಯ ಜಲಸಂಚಾರ ಮಾರ್ಗಗಳು. 1922 ರಲ್ಲಿ ಸ್ಥಾಪನೆಗೊಂಡು ಯುದ್ಧಾನಂತರ ಪುನರ್ಘಟನೆ ಹೊಂದಿದ ಪೋಲೆಂಡಿನ ರಾಷ್ಟ್ರೀಕೃತ ವಿಮಾನ ವ್ಯವಸ್ಥೆ ಇದೆ. ವಾರ್ಸಾ ಮುಖ್ಯ ರೈಲ್ವೆ, ರಸ್ತೆ ಹಾಗೂ ವಿಮಾನ ಕೇಂದ್ರ. (ಜಿ.ಕೆಯು.)

**ಪ್ಯಾಂಥೋಗ್ರಾಫ್:** ಭೂಪಟ ರಚನೋಪಕರಣ. ಇದು ನಕ್ಷಾ ಪ್ರಮಾಣ ವ್ಯತ್ಯಾಸಕವಾಗಿಯೂ ಉಪಯೋಗಿಸಬಹುದು. ಇದರ ಬಳಕೆಗೆ ಸ್ವಲ್ಪ ಅಭ್ಯಾಸ ಅಗತ್ಯ. ಇದರಲ್ಲಿ ಭೂಪಟಗಳು ವಿಸ್ತರಣೆ ಮತ್ತು ನ್ಯೂನೀಕರಣ ಅನುರೂಪ ತ್ರಿಕೋನ ತತ್ತ್ವವನ್ನು (ಪ್ರಿನ್ಸಿಪಲ್ ಆಫ್ ಸಿಮಿಲರ್ ಟ್ರಯಾಂಗಲ್ಸ್) ಆಧರಿಸಿದೆ. ಈ ವಿಧಾನವನ್ನು ಫೋಟೋಸ್ಟಾಟ್ ಹಾಗೂ ಕಂಪ್ಯೂಟರೀಕರಣ ವಿಧಾನದ ಬಳಕೆಗೆ ಮೊದಲು ಹೆಚ್ಚಾಗಿ ಬಳಸಲಾಗುತ್ತಿದ್ದಿತು.



ಪ್ಯಾಂಥೋಗ್ರಾಫ್

ಈ ಉಪಕರಣ ಒಂದು ಚೌಕಟ್ಟನ್ನು ಹೊಂದಿದ್ದು ಅದರಲ್ಲಿ ಎರಡು ದೊಡ್ಡ ಎರಡು ಚಿಕ್ಕ ಕಡ್ಡಿಗಳಿವೆ (ಬಾರ್). ದೊಡ್ಡ ಕಡ್ಡಿಗಳನ್ನು ಒಂದು ಕಡೆ ಹಾಗೂ ಚಿಕ್ಕ ಕಡ್ಡಿಗಳನ್ನು ಮತ್ತೊಂದು ಕಡೆ ಪರಸ್ಪರ ಸೇರಿಸಲಾಗಿದೆ. ಚಿಕ್ಕ ಕಡ್ಡಿಗಳನ್ನು ದೊಡ್ಡ ಕಡ್ಡಿಗಳೊಡನೆಯೂ ಸೇರಿಸಲಾಗಿದೆ. ಈ ರೀತಿಯಲ್ಲಿ ಇದು ಒಂದು ಸಮಾಂತರ ಚತುರ್ಭುಜ ಅಂದರೆ ಪ್ಯಾರಲೆಲೊಗ್ರಾಮ್ ಆಗಿರುವುದು. (ಆರ್.ಎನ್.)

**ಪ್ಯಾರಿಸ್:** ಫ್ರಾನ್ಸ್ ದೇಶದ ರಾಜಧಾನಿ. ಮಹಾನಗರ, ನದಿಬಂದರು. ಫ್ರೆಂಚ್‌ನಲ್ಲಿ ಇದರ ಹೆಸರು ಪ್ಯಾರಿ. ಇಂಗ್ಲಿಷ್ ಕಡಲ್ಗಾಲುವೆಯ ಆಗ್ನೇಯಕ್ಕೆ ಸೀನ್ ನದಿಯ ಎರಡೂ ದಂಡೆಗಳ ಮೇಲೆ ನದಿಮುಖದಿಂದ ಸು. 176 ಕಿಮೀ ದೂರದಲ್ಲಿ ಉ.ಅ. $48^0 50'14''$ ಮತ್ತು ಪೂ.ರೇ. $20^0 20'14''$ ಮೇಲೆ ಇದೆ. ಸೀನ್ ನದಿಯ ನಡುಗಡ್ಡೆಯಾದ ಇಲ್ ದ ಲಾ ಸಿಟಿಯ ಸುತ್ತಲೂ ಪ್ಯಾರಿಸ್ ನಗರ ಹಬ್ಬಿದೆ. ಸೀನ್ ನದಿಯ ಮೇಲೆ 32 ಸೇತುವೆಗಳಿವೆ. ನಗರ ಪ್ರದೇಶದ ವಿಸ್ತೀರ್ಣ 12,008 ಚ.ಕಿಮೀ. ಅದರ ಯಾವ ಮೂಲೆಯೂ ನಾಟ್ರೆಡೇಮ್ ಪ್ರಾರ್ಥನ ಮಂದಿರದ ಎದುರಿಗಿನ ಚೌಕದಿಂದ 10 ಕಿಮೀ ಗಿಂತ ಹೆಚ್ಚು ದೂರದಲ್ಲಿಲ್ಲ. ನಗರದ ಜನಸಂಖ್ಯೆ 96,38,000 (2004).

ಪ್ಯಾರಿಸ್ ನಗರದ ಒಂದು ನೋಟ

ಭೌಗೋಳಿಕ ವಿವರ : ವಾಸ್, ಮಾರ್ನ್ ಮತ್ತು ಯಾನ್ ನದಿಗಳು ಸೀನ್ ನದಿಯನ್ನು ಸೇರುವ ಪ್ರದೇಶದಲ್ಲಿ ಶೇಖರವಾದ ಎರೆಮಣ್ಣಿನ ಫಲವತ್ತಾದ ತಗ್ಗು ಕೃಷಿಭೂಮಿಯ ಮಧ್ಯದಲ್ಲಿ ಈ ನಗರವಿದೆ. ಈ ತಗ್ಗು ನೆಲ ಪ್ಯಾರಿಸ್ ಬೋಗುಣಿ ಎಂದೇ ಪ್ರಸಿದ್ಧವಾಗಿದೆ. ಪೂರ್ವದಿಂದ ಪಶ್ಚಿಮಕ್ಕೆ ಪ್ರಶಾಂತವಾಗಿ ಹರಿಯುವ ಸೀನ್ ನದಿ ಈ ನಗರವನ್ನು ಹಾದು ಮುಂದೆ ಹೋಗುವಾಗ ಉತ್ತರಕ್ಕೆ ತಿರುಗುತ್ತದೆ. ಬಲದಂಡೆಯ (ಉತ್ತರದ) ನಗರ ಭಾಗವನ್ನು ಗುಡ್ಡಗಳು ಸುತ್ತುವರಿದಿವೆ. ಎಡದ ದಂಡೆಯ ಮೇಲೂ ಗುಡ್ಡಗಳಿವೆ. ಉಪನಗರಗಳ ಉನ್ನತ ಪ್ರದೇಶದಲ್ಲಿ ಒಂದು ಕಾಲದಲ್ಲಿ ಕೋಟೆಗಳಿದ್ದುವು. ಗುಡ್ಡಗಳು ನಗರದ ಸೌಂದರ್ಯವನ್ನು ಹೆಚ್ಚಿಸಿವೆ. ಪ್ಯಾರಿಸಿನದು ಸಮಶೀತೋಷ್ಣದ ಸಾಗರಿಕ ವಾಯುಗುಣ. ಇಲ್ಲಿಯ ಸರಾಸರಿ ಉಷ್ಣತೆ ಸು. $10.25^0$ಸೆ. ಫೆಬ್ರವರಿ ಮತ್ತು ಜುಲೈ ತಿಂಗಳುಗಳ ಸರಾಸರಿ ಉಷ್ಣತೆಗಳು ಅನುಕ್ರಮವಾಗಿ $2.5^0$ಸೆ. ಮತ್ತು $18.5^0$ಸೆ. ಸಾಮಾನ್ಯವಾಗಿ ವರ್ಷದಲ್ಲಿ 15 ದಿನಗಳ ಕಾಲ ಇಲ್ಲಿ ಹಿಮ ಬೀಳುತ್ತದೆ. ಪ್ಯಾರಿಸ್ ಫ್ರಾನ್ಸಿನ ಶುಷ್ಕವಲಯಗಳಲ್ಲೊಂದು. ವರ್ಷದ ಸರಾಸರಿ ಮಳೆ 56 ಸೆಂಮೀ. ಸೀನ್ ನದಿ, ಅದರ ದಂಡೆಯ ಮೇಲಿನ ಹಾಗೂ ವಿಸ್ತಾರವಾದ ರಸ್ತೆಗಳ ಅಂಚುಗಳ ಮರಗಳು, ಉದ್ಯಾನಗಳು ಮತ್ತು ತೋಟಗಳು ಇವುಗಳಿಂದಾಗಿ ನಗರದಲ್ಲಿ ನಿಜವಾಗಿ ಇರುವುದಕ್ಕಿಂತಲೂ ಹೆಚ್ಚು ಹಸುರುತೆರವು ಪ್ರದೇಶಗಳಿವೆ ಎಂಬ ಭಾವನೆ ಉಂಟಾಗುತ್ತದೆ.

ಪ್ಯಾರಿಸ್ ನಗರ ಪ್ರಸಿದ್ಧ ಪ್ರವಾಸಿಗರ ತಾಣವಾಗಿದೆ. ಇದು ಶಿಲ್ಪ ಕಲೆಗೆ ಪ್ರಸಿದ್ಧ. ಕಟ್ಟಡಗಳಿಗೆ, ಉದ್ಯಾನವನ, ಚರ್ಚ್ ಹಾಗೂ ಉತ್ತಮ ಸಂಪರ್ಕಕ್ಕೆ ಹೆಸರಾಗಿದೆ. ಚ್ಯಾಂಪ್‌ದ ಮಾರ್ಸ್‌ನಲ್ಲಿ ಪ್ರಸಿದ್ಧ ಐಫಲ್ ಗೋಪುರವಿದೆ. ಇದನ್ನು 1889ರಲ್ಲಿ ನಿರ್ಮಿಸಲಾಯಿತು. ಇದರ ಎತ್ತರ ಸು. 300 ಮೀ. ಪ್ಯಾರಿಸ್ ಸಂಯೋಜಿತ ಮತ್ತು ಸುನಿರ್ಮಿತನಗರ. ಇದು ಯೋಜನಾ ಬಹುವಾಗಿ ಬೆಳೆಯುತ್ತಾ ಬಂದಿದೆ. ಇಲ್ಲಿ ಪ್ರಸಿದ್ಧ ಕಟ್ಟಡಗಳು, ವಿದ್ಯಾಭವನ, ಚರ್ಚ್ ಹಾಗೂ ಇತರ ಮಂದಿರಗಳಿವೆ. ಇದು ವಾಣಿಜ್ಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದೆ. ಫ್ರಾನ್ಸ್ ಪ್ರಮುಖ ಕೈಗಾರಿಕಾ ಕೇಂದ್ರವಾಗಿದ್ದು ಮೋಟರು, ವಿದ್ಯುತ್, ಸಲಕರಣೆ, ರಾಸಾಯನಿಕ, ಔಷಧ, ಸುಗಂಧದ್ರವ್ಯ, ಯಂತ್ರ ಮತ್ತು ಲೋಹ ಸಾಮಗ್ರಿ ಕೈಗಾರಿಕೆಗಳಿವೆ. ಇವಲ್ಲದೆ ಚರ್ಮ, ಸಿಮೆಂಟ್, ಮದ್ಯ, ತಂಬಾಕಿನ ಕೈಗಾರಿಕೆ, ಪಿಂಗಾಣಿ, ಗಾಜಿನ ಸಾಮಾನು ಮತ್ತು ಗಡಿಯಾರದ ಕೈಗಾರಿಕೆಗಳು ಇವೆ. ಇಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ.

(ಜಿ.ಕೆಯು.)

**ಪ್ಯಾಲಸ್ತೀನ್:** ಮೆಡಿಟರೇನಿಯನ್ ಸಮುದ್ರಕ್ಕೆ ಆಗ್ನೇಯದಲ್ಲಿ ಬೈಬಲ್ಲಿನ ನಾಡೆಂದು ಪ್ರಸಿದ್ಧವಾಗಿ, ಬೈಬಲ್ಲಿನಲ್ಲಿ ಹಾಲು ಮತ್ತು ಜೇನುತುಪ್ಪ ಹರಿಯುವ ಭೂಮಿಯೆಂದು ಉಕ್ತವಾಗಿರುವ ಪ್ರದೇಶ. ಕ್ಯಾನಾನ್ ಅಥವಾ ಇಸ್ರೇಲ್ ಎಂದೂ ಕರೆಯಲ್ಪಡುತ್ತಿತ್ತು. ಬೈಬಲ್ಲಿನ ಕಾಲದಲ್ಲಿ ಇಲ್ಲಿಯ ಸಮುದ್ರ ತೀರದಲ್ಲಿ ವಾಸಿಸುತ್ತಿದ್ದ ಫಿಲಿಸ್ತೀನ್ ಜನರಿಂದ ಇದರ ಹೆಸರು ಪ್ಯಾಲಸ್ತೀನ್ ಎಂದಾಗಿದೆ. ಸಿರಿಯನ್ ಮರುಭೂಮಿಯ ಅಂಚಿನಲ್ಲಿ ಪ್ಯಾಲಸ್ತೀನ್‌ಗೆ ಉತ್ತರದಲ್ಲಿ ಲೆಬನಾನ್ ಪರ್ವತ ಪ್ರದೇಶ ಮತ್ತು ದಕ್ಷಿಣದಲ್ಲಿ ಸೆನಾಯ್ ಮರುಭೂಮಿ ಇದೆ. ಮಧ್ಯಪ್ರಾಚ್ಯದ ದೇಶವಾಗಿ 1923–1928 ರ ವರೆಗೆ ಆದೇಶಿತ ಪ್ರದೇಶವಾಗಿ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟು ಈಗ ಇಸ್ರೇಲ್, ಫ್ರಾನ್ಸ್, ಜಾರ್ಡನ್ ಮತ್ತು ಈಜಿಪ್ಟ್ ದೇಶಗಳ ನಡುವೆ ವಿಭಾಗಿಸಲ್ಪಟ್ಟಿದೆ. ಉ.ಅ. $31^0$–$33^0$ ಮತ್ತು ಪೂ.ರೇ. $34^0$–$37^0$ ನಡುವೆ ಪ್ರಸರಿಸಿದೆ. ಏಷ್ಯ, ಯುರೋಪ್ ಮತ್ತು ಆಫ್ರಿಕ ಖಂಡಗಳು ಸಂಧಿಸುವ ಆಯಕಟ್ಟಿನ ಸ್ಥಳ ಪ್ಯಾಲಸ್ತೀನ್. ಇದು ನೈಲ್ ನದಿ ಕಣಿವೆಯನ್ನು ಯಮಳ ನದಿಗಳ ಕಣಿವೆಯಿಂದ ಬೇರ್ಪಡಿಸುತ್ತದೆ. ಇದರ ವಾಯುಗುಣ ಹಿತಕರವಾಗಿದೆ. ಪುಟ್ಟ ದೇಶವಾದರೂ ಪ್ಯಾಲಸ್ತೀನ್‌ನಲ್ಲಿ ವಿವಿಧ ರೀತಿಯ ಭೂಪ್ರದೇಶಗಳೂ ವಾಯುಗುಣಗಳೂ ಇವೆ. ಪರ್ವತಗಳು, ಮೈದಾನ, ಮರುಭೂಮಿ, ಫಲವತ್ತಾದ ಮತ್ತು ಮನೋಹರವಾದ ಕಣಿವೆಗಳು, ಸರೋವರಗಳು, ಸಮುದ್ರ ತೀರ ಇವೆ. ಪಶ್ಚಿಮದಿಂದ ಪೂರ್ವಕ್ಕೆ ಹೋದಂತೆ ಪ್ಯಾಲಸ್ತೀನ್‌ನಲ್ಲಿ ನಾಲ್ಕು ವಿಭಾಗಗಳಿವೆ. ಫಲವತ್ತಾದ ಮತ್ತು ಜನಸಾಂದ್ರತೆ ಅಧಿಕವಾಗಿರುವ ಮೆಡಿಟರೇನಿಯನ್ ತೀರ ಪ್ರದೇಶ. ಇಲ್ಲಿ ಟೆಲ್ ಅವೀವ್, ಹೈಫ ಮತ್ತು ಜಾಫ ರೇವು ಪಟ್ಟಣಗಳಿವೆ. ಗೆಲಿಲಿ ಮತ್ತು ಜುಡಿಯಾಗಳನ್ನೊಳಗೊಂಡ ಪ್ರಸ್ಥಭೂಮಿಯಲ್ಲಿ ಪುರಾತನ ಪ್ರಸಿದ್ಧವಾದ ಜೆರೂಸಲೆಮ್ ನಗರವಿದೆ. ಪ್ರಸಿದ್ಧವಾದ ಜಾಫ ಕಿತ್ತಲೆಹಣ್ಣು, ದ್ರಾಕ್ಷಿ ಮತ್ತು ಬಾಳೆಹಣ್ಣು–ಇವು ತೀರಪ್ರದೇಶದ ಬೆಳೆಗಳು. ಮೀನು ಹಿಡಿಯುವುದು ಒಂದು ಮುಖ್ಯ ಕಸಬು. ರೈಲು ಮಾರ್ಗಗಳು ಅಭಿವೃದ್ಧಿ ಹೊಂದಿರುವ ಪ್ಯಾಲಸ್ತೀನ್, ಉತ್ತರ ಆಫ್ರಿಕದೊಡನೆಯೂ ಪಶ್ಚಿಮ ಏಷ್ಯದೊಡನೆಯೂ ಸಂಪರ್ಕ ಹೊಂದಿದೆ. ಲಿಡ್ಡ ನಾಗರಿಕ ವಿಮಾನ ನೆಲೆ, ಹಲವಾರು ಸೈನಿಕ ವಿಮಾನ ನಿಲ್ದಾಣಗಳೂ ಇವೆ. ಇವುಗಳನ್ನು ಎರಡನೆಯ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷ್ ವಿಮಾನ ದಳಗಳಿಗಾಗಿ ನಿರ್ಮಿಸಲಾಗಿತ್ತು.

(ಎ.ಎಚ್.ಎಸ್.;ಎಚ್.ಆರ್.ಆರ್.ಬಿ.)

**ಪ್ಯೂರ್ಟೋರಿಕೊ:** ಕೆರಿಬಿಯನ್ ಮತ್ತು ಅಟ್ಲಾಂಟಿಕ್ ಸಾಗರಗಳ ಪೂರ್ವಭಾಗದಲ್ಲಿರುವ ದ್ವೀಪಗಣರಾಜ್ಯ. ತಾಂತ್ರಿಕವಾಗಿ ಇದರ ಆಡಳಿತವನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಹೊಂದಿದೆ.

1493 ರಲ್ಲಿ ಈ ದ್ವೀಪವನ್ನು ಕೊಲಂಬಸ್ ಶೋಧಿಸಿದ. 1898 ರಲ್ಲಿ ಸ್ಪೇನ್ ಮತ್ತು ಅಮೆರಿಕ ನಡುವೆ ನಡೆದ ಯುದ್ಧದಲ್ಲಿ ಸ್ಪೇನ್ ಈ ದ್ವೀಪವನ್ನು ಅಮೆರಿಕಕ್ಕೆ ಬಿಟ್ಟುಕೊಟ್ಟಿತು. ಈ ದ್ವೀಪರಾಷ್ಟ್ರದಲ್ಲಿ 400 ವರ್ಷಗಳ ಸುದೀರ್ಘ ಸ್ಪೇನ್ ಸಂಸ್ಕೃತಿಯ ಸೊಗಡು ಕಂಡುಬರುತ್ತದೆ. ಅಮೆರಿಕದ ಸಂಸ್ಕೃತಿ ಸಹ ಅಲ್ಲಲ್ಲಿ ಕಾಣಬಹುದು.




ಈ ದ್ವೀಪದ ಸುತ್ತಳತೆ 170 ಕಿಮೀ ಉದ್ದ ಮತ್ತು 60 ಕಿಮೀ ಅಗಲ, 9104 ಚ.ಕಿಮೀ ಭೌಗೋಳಿಕ ಪ್ರದೇಶವನ್ನು ಹೊಂದಿದೆ. ಇದರ ಸ್ಥಾನ $18^0 29'$ ಉ. ಅಕ್ಷಾಂಶ ಹಾಗೂ $66^0 8'$ ಪ.ರೇ. ವ್ಯಾಪ್ತಿಯಲ್ಲಿ ಬರುತ್ತದೆ.

ಪ್ಯೂರ್ಟೋರಿಕೊ ದ್ವೀಪವನ್ನು ಹಾಲಿಡೇ ಪ್ಯಾರಡೈಸ್ ಎಂದು ಸಹ ಕರೆಯುತ್ತಾರೆ. ನೈಸರ್ಗಿಕವಾದ ಬೀಚ್‌ಗಳು, ಸುತ್ತಲೂ ಕಂಡುಬರುವ ಹರಿದ್ವರ್ಣ ಕಾಡುಗಳು, ಸುಂದರವಾದ ಮರಳುಗಾಡು ದಿಬ್ಬಗಳು ಈ ನಾಡಿನ ಸಹಜ ಸೌಂದರ್ಯವನ್ನು ಹೆಚ್ಚಿಸಿದೆ.

ಸ್ಯಾನ್‌ಜುವಾನ್ ಈ ದ್ವೀಪ ರಾಷ್ಟ್ರದ ರಾಜಧಾನಿ. ಇದನ್ನು ಮಾಡ್ರನ್ ಮೆಟ್ರೊಪೋಲಿಸ್ ಎಂದುಕರೆಯುತ್ತಾರೆ. ಕೆರೆಬಿಯನ್ ಸಮೂಹ ನಗರಗಳಲ್ಲಿ ಒಂದು ಮಿಲಿಯನ್ ಜನಸಂಖ್ಯೆಯನ್ನು ಹೊಂದಿರುವ ಏಕೈಕ ನಗರ – ಇದನ್ನು ಲಾ ಸಿಯೂಡಡ್ ಅಮುರಾಲ್

ಅಡ್ ಎಂತಲೂ ಕರೆಯುತ್ತಾರೆ. ಈ ನಗರಕ್ಕೆ 465 ವರ್ಷಗಳ ಹಳೆಯದಾದ ಇತಿಹಾಸವಿದೆ. ಅಮೆರಿಕದ ಎರಡನೆಯ ಪುರಾತನ ನಗರ ಎಂಬ ಹೆಗ್ಗಳಿಕೆಯಿದೆ. ಇದನ್ನು ಅರಮನೆಗಳ ನಗರ ಎಂತಲೂ ಕರೆಯುತ್ತಾರೆ. ಪ್ಲಾಜಾ ಸನ್ ಜ್ಯೊಸಿ, ಪ್ಲಾಝಾ ಡಿಲ್ ಕ್ವಿಂಟೊ ಸೆಂಟಿನಾರಿಯೇ, ಅರಮನೆಗಳು ಪ್ರೇಕ್ಷಣೀಯ.

ಅಮೆರಿಕದ ಏಕೈಕ ಮಳೆ ಅರಣ್ಯ ಪ್ರದೇಶವಾಗಿರುವ ಈ ದ್ವೀಪ ರಾಷ್ಟ್ರ ಉತ್ಕೃಷ್ಟ ಸಸ್ಯ ಸಂಪತ್ತನ್ನು ಹೊಂದಿದೆ. ಈ ಅರಣ್ಯದ ಮುಂಭಾಗದಲ್ಲಿರುವ ಲೂಕ್ವಿಲ್ಲೋ ಬೀಚ್ ಉತ್ತರ ಅಮೆರಿಕದ ಅತ್ಯುತ್ತಮ ಶುಭ್ರ ಬೀಚ್ ಎಂದು ಪರಿಗಣಿಸಲಾಗಿದೆ. ನೀಲಿ ಮಿಶ್ರಿತ ಹಸುರು ಬಣ್ಣದ ನೀರು ಪ್ರವಾಸಿಗರನ್ನು ಮೈಪುಳಕಗೊಳಿಸುವಂತಹದು, ಸಾಲು ಸಾಲು ತೆಂಗಿನ ಮರಗಳು, ಪ್ರವಾಸಿಗರಿಗಾಗಿ ನಿರ್ಮಾಣವಾಗಿರುವ ಬೀಚ್ ತಂಗುದಾಣಗಳು, ಅಟ್ಲಾಂಟಿಕ್ ಸಾಗರಿಕ ಕಡಲ ಅಲೆಗಳು ಪ್ರವಾಸಿಗರಿಗೆ ಮನೋಲ್ಲಾಸ ನೀಡುವ ತಾಣ.

ಪೊನ್ಸ್ ಈ ದ್ವೀಪದ ಎರಡನೆಯ ದೊಡ್ಡನಗರ ಇದನ್ನು ಲಾ ಪೆರ್ಲ ಡಿಲ್ ಸುರ್ ದಕ್ಷಿಣ ಭಾಗದ ಹವಳ ನಗರ – ಎಂದು ಕರೆಯುತ್ತಾರೆ. ಪ್ರವಾಸಿಗರನ್ನು ಆಕರ್ಷಿಸುವ ಮ್ಯೂಸಿಯಂ, ಆರ್ಟ್‌ಗ್ಯಾಲರಿ, ಉದ್ಯಾನವನ ಇತ್ಯಾದಿಗಳನ್ನೊಳಗೊಂಡಿದೆ. ಈ ಪ್ರದೇಶದಲ್ಲಿ ಪರಿಣತಿ ಹೊಂದಿರುವ ವ್ಯಕ್ತಿಗಳು ಈಜು, ಕುದುರೆ ಸವಾರಿ, ಎತ್ತರದಿಂದ ದುಮುಕುವುದು ಇತ್ಯಾದಿ ಸಾಹಸಮಯ ಕ್ರೀಡೆಗಳನ್ನು ಪ್ರದರ್ಶಿಸುತ್ತಾರೆ.

ಪ್ಯೊರ್ಟೊರಿಕೊ ಭೂ ಆಂತರಿಕ ರಚನೆ: ಭೂಗರ್ಭವಿಜ್ಞಾನದ ಪ್ರಕಾರ ಈ ದ್ವೀಪ ರಚನೆ ಕ್ರಿಟೇಷಿಯಸ್ ಯುಗದ ಇಯೋಸಿನ್ ಜ್ವಾಲಾಮುಖಿಯ ಅಂತರ್ಗತಿತ ಶಿಲೆಗಳನ್ನೊಳಗೊಂಡಿದೆ. ಇದರ ಮೇಲ್ಪದರ ಯಂಗರ್ ಒಲಿಜೊಸಿನೆ ನಿಂದ ಇತ್ತೀಚಿನ ಕಾರ್ಬನೇಟ್ಸ್ ಮತ್ತು ಕಣಶಿಲೆಗಳನ್ನು ಒಳಗೊಂಡಿದೆ. ಪುರಾತನ ಶಿಲೆಗಳು 190 ಮಿಲಿಯನ್ ವರ್ಷಗಳಷ್ಟು ಹಳೆಯದು (ಜುರಾಸಿಕ್). ಈ ಶಿಲೆಗಳು ಸಾಗರ ತಳದ ಅಂಶಗಳನ್ನು ಪ್ರತಿನಿಧಿಸುವುದರಿಂದ ಶಾಂತಮಹಾಸಾಗರದ ಒಂದು ಸಣ್ಣ ಭಾಗವಾಗಿರಬಹುದು ಎಂದು ಪರಿಗಣಿಸಲಾಗಿದೆ.

ಪ್ಯೊರ್ಟೊರಿಕೊ ಭೂಕವಚ ಕೆರೆಬಿಯನ್ ಭೂಫಲಕ ಮತ್ತು ಉತ್ತರ ಅಮೆರಿಕದ ಭೂಫಲಕಗಳ ಮಧ್ಯೆ ವಿಶ್ರಮಿಸಿದೆ. ಪ್ರಸ್ತುತ ಈ ಎರಡೂ ಫಲಕಗಳು ಆಂತರಿಕ ಸ್ಥಾನ ಪಲ್ಲಟಗೊಂಡಿವೆ. ಈ ಸ್ಥಾನಪಲ್ಲಟಕ್ಕೆ ಕಾರಣ ಭೂಗರ್ಭದಲ್ಲಿ ಉಂಟಾದ ಶಾಖ ಮತ್ತು ಒತ್ತಡಗಳಿಂದ, ಭೂಕಂಪನಗಳಿಂದ ಹಾಗೂ ಸುನಾಮಿಗಳಿಂದ ಎಂದು ಅಧ್ಯಯನ ತಿಳಿಸುತ್ತದೆ.

ಭೂಕಂಪನಗಳಿಂದ, ಭೂ ಅಸ್ಥಿರತೆಗೆ ಒಳಗಾಗಿ ಭೂಕುಸಿತಗಳು ಆಗಾಗ್ಗೆ ಸಂಭವಿಸುವುದು ಸಾಮಾನ್ಯ. ಸಂಭವಿಸಿದ ಭೂಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 7.5 ರಷ್ಟು ದಾಖಲಾಗಿತ್ತು (1918 ಅಕ್ಟೋಬರ್ 11).

ಪ್ಯೊರ್ಟೊರಿಕೊ ತಗ್ಗು (ಓಷನ್ ಡೀಪ್) ಅಟ್ಲಾಂಟಿಕ್ ಸಾಗರದಲ್ಲಿದೆ, ಆಳವಾದ ಹಾಗೂ ದೊಡ್ಡದಾದ ಈ ತಗ್ಗನ್ನು ಮಿಲ್‌ವಾಖಿ ಡೀಪ್ ಎಂದು ಕರೆಯುತ್ತಾರೆ. ಪ್ಯೊರ್ಟೊರಿಕೊ ದ್ವೀಪದ ಉತ್ತರಕ್ಕೆ 175 ಕಿಮೀ ಉದ್ದವಾಗಿಯೂ 97 ಕಿಮೀ ಅಗಲವನ್ನು ಹೊಂದಿದೆ. ಇದರ ಗರಿಷ್ಠ ಆಳವಾದ ಭಾಗ 8380 ಮೀ (8.38 ಕಿಮೀ).

19ನೆಯ ಶತಮಾನದ ರಾಜ್ಯಾಂಗದ ಅಧಿನಿಯಮಾವಳಿ ಅಡಿಯಲ್ಲಿ ಜನಸಂಖ್ಯೆ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಪೆರ್ಟೊರಿಕೊ ಕಂಡಿತು. ಈ ಸಂದರ್ಭದಲ್ಲಿ ದಕ್ಷಿಣ ಮತ್ತು ಮಧ್ಯ ಅಮೆರಿಕದ ರಾಜ್ಯಗಳು ತಮ್ಮ ಸ್ವಾತಂತ್ರ್ಯವನ್ನು ಗಳಿಸಿಕೊಂಡವು. ಪ್ಯೊರ್ಟೊರಿಕೊ ಮತ್ತು ಕ್ಯೂಬಗಳನ್ನು ನೂತನ ಪ್ರಪಂಚಕ್ಕೆ (ನ್ಯೂವರ್ಲ್ಡ್) ಸ್ಪೇನ್ ಚಕ್ರಾಧಿಪತ್ಯ ಕೊಟ್ಟಿರುವ ಕೊಡುಗೆ.

ಸ್ಥಾನ: ಪ್ಯೊರ್ಟೊರಿಕೊ ಪ್ರಮುಖ ದ್ವೀಪ ರಾಷ್ಟ್ರ. ಇದು ಹಲವಾರು ದ್ವೀಪಗಳನ್ನು ಒಳಗೊಂಡಿದೆ – ವಿಕ್ಯೂಸ್, ಕುಲಿಬ್ರಾ, ಮೊನಾ, ಡೆಸಿಚಿಯೊ ಮತ್ತು ಮಾರ್ಟೊಸ್ ಈ ಐದು ದ್ವೀಪಗಳಲ್ಲಿ ಕೇವಲ ಎರಡು ದ್ವೀಪಗಳಾದ ಕುಲಿಬ್ರಾ ಮತ್ತು ವಿಕ್ಯೂಸ್‌ಗಳಲ್ಲಿ ಮಾತ್ರ ವರ್ಷವಿಡಿ ಜನವಸತಿಗಳಿರುತ್ತವೆ. ಮೊನಾ ದ್ವೀಪದಲ್ಲಿ ವರ್ಷದ ಕೆಲವೇ ತಿಂಗಳು ಮಾತ್ರ ಜನರಿರುತ್ತಾರೆ.

ಮೇಲ್ಮೈ ಲಕ್ಷಣ: ಈ ದ್ವೀಪದ ಉತ್ತರ ಭಾಗ ಮತ್ತು ದಕ್ಷಿಣದಲ್ಲಿ ವಿಶಾಲವಾದ ಕರಾವಳಿ ಹಾಗೂ ಎತ್ತರವಾದ ಪರ್ವತಗಳಿಂದ ಕೂಡಿದೆ. ಪರ್ವತಗಳನ್ನು ಲಾ ಕಾರ್ಡಿಲಿರ ಸೆಂಟ್ರಲ್ ಎಂದು ಕರೆಯಲ್ಪಡುತ್ತದೆ. ಇಲ್ಲಿನ ಅತ್ಯುನ್ನತ ಶಿಖರ ಸ್ಸಿರೊ ಡಿ ಪುಂಟಾ 1338 ಮೀ, ಎರಡನೆಯ ಅತಿ ಎತ್ತರವಾದ ಎಲ್ ಯುನ್ಯೂ 1065 ಮೀ ಎತ್ತರ. ಈ ಪರ್ವತ ಶಿಖರಾಗ್ರ ಸ್ಸಿ ರಾ ಡಿ ಲೂಕ್ವಿಲ್ಲೊ ಪರ್ವತ ಶ್ರೇಣಿಯ ಕೆರೆಬಿಯನ್ ರಾಷ್ಟ್ರೀಯ ಅರಣ್ಯ ಪ್ರದೇಶದಲ್ಲಿದೆ.

ವಾಯುಗುಣ: ಪ್ಯೊರ್ಟೊರಿಕೊ ಉಷ್ಣವಲಯದಲ್ಲಿರುವುದರಿಂದ ವರ್ಷವಿಡಿ ಸರಾಸರಿ $28^{0}$ಸೆ. ಉಷ್ಣಾಂಶ ಹೊಂದಿರುತ್ತದೆ. ಋತುಗಳಲ್ಲಿ ಹೆಚ್ಚಿನ ಬದಲಾವಣೆ ಕಂಡುಬರುವುದಿಲ್ಲ. ಈ ದ್ವೀಪದ ದಕ್ಷಿಣದಲ್ಲಿ ಉಷ್ಣಾಂಶ ಉತ್ತರಭಾಗಕ್ಕಿಂತಲೂ ಹೆಚ್ಚಾಗಿರುತ್ತದೆ. ಕೇಂದ್ರ ಭಾಗದಲ್ಲಿ ದ್ವೀಪದ ಇತರೆ ಭಾಗಗಳಿಗಿಂತಲೂ ತಂಪಾಗಿರುತ್ತದೆ. ಈ ಭಾಗವು ಪರ್ವತಗಳಿಂದ ಕೂಡಿದೆ. ಚಂಡಮಾರುತಗಳು ಸಾಮಾನ್ಯವಾಗಿ ಜೂನ್ ಹಾಗೂ ನವೆಂಬರ್‌ಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಜನತೆ: ಪ್ಯೊರ್ಟೊರಿಕೊ ದ್ವೀಪವನ್ನು ಯುರೋಪಿಯನ್ (ಸ್ಪ್ಯಾನಿಷ್) ಮೂಲದ ತಾಣ ಎಂದೇ ಕರೆಯುತ್ತಿದ್ದರು. ಅಮೆರಿ ಇಂಡಿಯನ್, ಆಫ್ರಿಕ ಮತ್ತು ಏಷ್ಯ ಮೂಲದವರು ಒಟ್ಟು ಜನಸಂಖ್ಯೆಯಲ್ಲಿ ಸೇರಿದವರಾಗಿದ್ದಾರೆ. ಸ್ಪೇನ್ ಮತ್ತು ಅಮೆರಿಕನ್ ಇಂಡಿಯನ್ ಮಿಶ್ರ ಜನರು ಈ ದ್ವೀಪದಲ್ಲಿ ಕಂಡುಬರುತ್ತಾರೆ. 1991 ರಲ್ಲಿ ಪೋರ್ಟರಿಕೊ ವಿಶ್ವವಿದ್ಯಾಲಯ ನಡೆಸಿದ ಸಂಶೋಧನೆಯ ಪ್ರಕಾರ ಶೇ. 62 ರಷ್ಟು ಮಂದಿಯ ಡಿ.ಎನ್.ಎ. ಪರೀಕ್ಷೆಯ ಫಲಿತಾಂಶ ಅಮೆರಿ ಇಂಡಿಯನ್ ಮೂಲದವರೆಂದು ಪ್ರಕಟವಾಗಿದೆ. ಶೇ. 30 ರಷ್ಟು ಆಫ್ರಿಕ, ಶೇ. 8 ರಷ್ಟು ಕಕೇಶಿಯನ್ ಮೂಲದ ಸ್ತ್ರೀಯರು ಎಂದು ಡಿ.ಎನ್.ಎ.ಎಕ್ಸ್. ಕ್ರೊಮೋಜೂಮ್ ಫಲಿತಾಂಶ ತಿಳಿಸಿದೆ.

ವೈ-ಕ್ರೊಮೋಜೊಮ್ ಫಲಿತಾಂಶದ ಪ್ರಕಾರ ಶೇ. 70 ರಷ್ಟು ಪ್ಯೊರ್ಟೊರಿಕೊ ಪುರುಷರು ಯುರೋಪಿಯನ್ ಮೂಲದವರು ಎಂದು ಡಿ.ಎನ್.ಎ. ಪರೀಕ್ಷೆ ತಿಳಿಸಿದೆ. ಶೇ. 20 ರಷ್ಟು ಆಫ್ರಿಕ, ಶೇ. 10 ರಷ್ಟು ಅಮೆರಿಕ ಮೂಲದವರೆಂದು ತಿಳಿದುಬಂದಿದೆ.

ಡಿ.ಎನ್.ಎ. ಪರೀಕ್ಷೆಯ ಪ್ರಕಾರ ಮೂರು ಗುಂಪಿನ ಜನ – ಅಮೆರಿ ಇಂಡಿಯನ್ನರು, ಯುರೋಪಿಯನ್ನರು ಮತ್ತು ಆಫ್ರಿಕ ಮೂಲದವರು ಎಂದು ತಿಳಿದುಬಂದಿದೆ. ಪ್ಯೊರ್ಟೊರಿಕೊ ದ್ವೀಪದ ಮೂಲ ನಿವಾಸಿಗಳಾದ ಟೈನೊಜನಾಂಗ 16ನೆಯ ಶತಮಾನದ ಕೊನೆಯಿಂದ ಕಣ್ಮರೆಯಾಗಿದೆ.

ವಿದ್ಯಾಭ್ಯಾಸ: ಶಿಕ್ಷಣವನ್ನು ನಾಲ್ಕು ಹಂತಗಳಾಗಿ ವಿಭಾಗಿಸಲಾಗಿದೆ. ಪ್ರಾಥಮಿಕ, ಮಧ್ಯಮ, ಪ್ರೌಢ ಮತ್ತು ಪದವಿ. ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯಬಹುದು. 2000ದ ಶಿಕ್ಷಣ ಗಣತಿ ಅಂಕಿ-ಅಂಶಗಳ ಪ್ರಕಾರ ಶೇ. 18.3 ರಷ್ಟು ಪದವಿ ಹಾಗೂ ಉನ್ನತ ಶಿಕ್ಷಣ ಪಡೆದವರು, ಯು.ಎಸ್.ರಾಜ್ಯಗಳ ಸರಾಸರಿಯಲ್ಲಿ ಪ್ಯೊರ್ಟೊರಿಕೊ 6ನೆಯ ಕನಿಷ್ಠ ಸ್ಥಾನವನ್ನು ಪಡೆದಿದೆ.

ಸಾಕ್ಷರತೆ: 2002ರ ಗಣತಿಯ ಪ್ರಕಾರ ದೇಶದ ಸರಾಸರಿ ಸಾಕ್ಷರತೆ ಪ್ರಮಾಣ ಶೇ. 94 ಲಿಂಗಾವಾರು ಪ್ರಕಾರ ಪುರುಷರ ಸಾಕ್ಷರತೆಯ ಪ್ರಮಾಣ ಶೇ. 93.9 ಮತ್ತು ಸ್ತ್ರೀಸಾಕ್ಷರತೆ ಶೇ. 94.4. 1500 ಶಾಲೆಗಳು, 45,000 ಶಿಕ್ಷಕರು ಮತ್ತು 100,000 ವಿದ್ಯಾರ್ಥಿಗಳನ್ನು ಈ ದೇಶ ಹೊಂದಿದೆ. ಶಿಕ್ಷಣ ಇಲಾಖೆ ದೇಶದ ಅತಿದೊಡ್ಡ ಸಂಸ್ಥೆಯಾಗಿದೆ.

ಭಾಷೆ: ಈ ರಾಷ್ಟ್ರದಲ್ಲಿ ದ್ವಿಭಾಷೆಗಳಾದ ಸ್ಪ್ಯಾನಿಷ್ ಹಾಗೂ ಇಂಗ್ಲಿಷ್ ರೂಢಿಯಲ್ಲಿವೆ. ಆಡಳಿತ ಭಾಷೆ ಸ್ಪ್ಯಾನಿಷ್. ಇಂಗ್ಲಿಷ್ ಅನ್ನು ಕಡ್ಡಾಯವಾಗಿ ಶಾಲಾಕಾಲೇಜುಗಳಲ್ಲಿ ಕಲಿಯಬೇಕು. 2006ರ ಅಂಕಿ-ಅಂಶಗಳ ಪ್ರಕಾರ 3,860,120 ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾರೆ. ಇವರಲ್ಲಿ 82,000 ವಿದ್ಯಾರ್ಥಿಗಳು ಇಂಗ್ಲಿಷನ್ನು ಪ್ರಾಥಮಿಕ ಭಾಷಾವಿಷಯವಾಗಿ ಕಲಿಯುತ್ತಿರುವುದು ತಿಳಿದುಬಂದಿದೆ. (ವಿ.ಎಸ್.ಎ.)

**ಪ್ರತಾಪಗಢ[1]:** ಉತ್ತರ ಪ್ರದೇಶ ರಾಜ್ಯದ ಪೂರ್ವಭಾಗದಲ್ಲಿರುವ ಒಂದು ಜಿಲ್ಲೆ. ಫೈಜಾಬಾದ್ ವಿಭಾಗಕ್ಕೆ ಸೇರಿರುವ ಈ ಜಿಲ್ಲೆ ಉ.ಅ. $25^{0}32'$– $26^{0}21'$ ಮತ್ತು ಪೂ.ರೇ. $81^{0}19'$–$82^{0}27'$ ನಡುವೆ ಇದೆ. ಈ ಜಿಲ್ಲೆಯ ಉತ್ತರಕ್ಕೆ ರಾಯ್‌ಬರೇಲಿ ಮತ್ತು ಸುಲ್ತಾನಪುರ, ಪೂರ್ವಕ್ಕೆ ಜಾನ್‌ಪುರ, ದಕ್ಷಿಣಕ್ಕೆ ಅಲಹಾಬಾದ್ ಮತ್ತು ಪಶ್ಚಿಮಕ್ಕೆ ರೇಬರೇಲಿ ಜಿಲ್ಲೆಗಳಿವೆ. 3,730 ಕಿಮೀ ವಿಸ್ತೀರ್ಣವುಳ್ಳ ಈ ಜಿಲ್ಲೆಯ ಜನಸಂಖ್ಯೆ 27,27,156. ಆಡಳಿತ ಕೇಂದ್ರ ಬೇಲಾ. ಜಿಲ್ಲೆಯ ದಕ್ಷಿಣಭಾಗದಲ್ಲಿ ದಟ್ಟವಾದ ಅರಣ್ಯವಿದೆ. ಗಂಗಾ ನದಿಯ ಮೆಕ್ಕಲು ಮಣ್ಣಿನ ಮೈದಾನದ ಭಾಗವಾಗಿರುವ ಈ ಜಿಲ್ಲೆಯ ನೈರುತ್ಯ ಅಂಚಿನಲ್ಲಿ ಆ ನದಿಯಿದೆ. ಗಂಗಾನದಿಯ ಉಪನದಿಗಳಲ್ಲೊಂದಾದ ಸಾಯಿ ಈ ಜಿಲ್ಲೆಯಲ್ಲಿ ಹರಿಯುತ್ತದೆ. ಜಿಲ್ಲೆ ಫಲವತ್ತಾಗಿದೆ. ಒಂದು ಭಾಗ ಅರಣ್ಯಾವೃತ. ಅಲ್ಲಲ್ಲಿ ಚೌಳು ನೆಲವಿದೆ. ಇದು ಪಾಳು ಭೂಮಿ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 96 ಸೆಂಮೀ. ಬತ್ತ, ಗೋದಿ, ಕಬ್ಬು, ಬೇಳೆಯಕಾಳು, ಬಾರ್ಲಿ ಮುಖ್ಯ ಬೆಳೆಗಳು. ಉಪ್ಪು, ಪೆಟ್ಲುಪ್ಪು, ಸುಣ್ಣದ ಹರಳು-ಇವು ಇಲ್ಲಿಯ ಖನಿಜೋತ್ಪನ್ನಗಳು. (ಬಿ.ಎಸ್.ಎ.)

**ಪ್ರತಾಪಗಢ[2]:** ರಾಜಸ್ತಾನ ರಾಜ್ಯದ ಚಿತ್ತೋರಗಢ ಜಿಲ್ಲೆಯ ಒಂದು ಪಟ್ಟಣ. ಉ.ಅ. $24^{0}02'$ ಮತ್ತು ಪೂ.ರೇ. $74^{0}47'$ ಮೇಲೆ, ಉದಯಪುರದ ಆಗ್ನೇಯಕ್ಕೆ 121 ಕಿಮೀ ದೂರದಲ್ಲಿದೆ. ಪ್ರತಾಪಸಿಂಹನಿಂದ 1689ರಲ್ಲಿ ನಿರ್ಮಿತವಾಯಿತು. ಇದು ರಾಜಧಾನಿಯಾಗಿತ್ತು. ಇಲ್ಲಿ ಅರಮನೆಯೂ ಅನೇಕ ಜೈನ ಹಾಗೂ ಹಿಂದು ಮಂದಿರಗಳೂ ಇವೆ. ಇದು ವ್ಯವಸಾಯೋತ್ಪನ್ನಗಳ ವ್ಯಾಪಾರಸ್ಥಳ. ರಾಜಸ್ತಾನ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜಿದೆ. (ಬಿ.ಎಸ್.ಎ.)

**ಪ್ರತಿ ನಗರೀಕರಣ:** ನಾನಾ ಕಾರಣಗಳಿಗಾಗಿ ನಗರವಾಸಿಗಳು ಗ್ರಾಮಗಳಿಗೆ ಹೋಗಿ ನೆಲೆಸುವುದು ಇತ್ತೀಚೆಗೆ ಕಂಡು ಬರುತ್ತಿರುವ ಪ್ರವೃತ್ತಿ (ಕೌಂಟರ್ ಅರ್ಬನೈಜೇಷನ್). ಇದು ನಗರೀಕರಣ ಪ್ರಕ್ರಿಯೆಗೆ ಸಂಪೂರ್ಣವಾಗಿ ವಿರುದ್ಧವಾದುದು. ನಗರಗಳಲ್ಲಿನ ಸಮಸ್ಯೆಗಳು ಈ ಪ್ರಕ್ರಿಯೆಗೆ ಮೂಲಕಾರಣಗಳು. ಅನಾರೋಗ್ಯಕರವಾದ ಪರಿಸರ,

ಇಕ್ಕಟ್ಟಾದ ವಾಸದ ಮನೆಗಳು, ಸಾರಿಗೆ ಒತ್ತಡ, ಮೂಲ ಸೌಕರ್ಯಗಳ ಕೊರತೆ, ಸಾಮಾಜಿಕ ಪ್ರತ್ಯೇಕತೆಗಳಿಂದ ಜನರು ನಗರಗಳಿಂದ ಗ್ರಾಮೀಣ ಪ್ರದೇಶಗಳಿಗೆ ವಲಸೆ ಹೋಗಿ ನೆಲೆಸುವುದು ಕಂಡು ಬರುವುದು. (ಎಸ್.ಎನ್.)

**ಪ್ರತಿಚಯ ಮಾದರಿ ಸರ್ವೇಕ್ಷಣೆಗಳು:** ಸಮಷ್ಟಿಯ (ಯೂನಿವರ್ಸ್) ಬಗ್ಗೆ ಮಾಹಿತಿ ಬೇಕಾದಾಗ ಅದರಿಂದ ಕೆಲವು ಘಟಕಗಳನ್ನು ಮಾತ್ರ ಆಯ್ದು, ಅಭ್ಯಸಿಸಿ ಅದರ ಬಗ್ಗೆ ಅನುಗಮಿಸಲು (ಇಂಡಕ್ಷನ್) ನಡೆಸಬೇಕಾದ ಪರಿಕರ್ಮವೇ ಪ್ರತಿಚಯ (ಸ್ಯಾಂಪಲ್ ಸರ್ವೇಸ್). ಸಮಷ್ಟಿ ಎಂಬುದು ವ್ಯಕ್ತಿ, ವಸ್ತು, ಹೊಲ ಅಥವಾ ಸಂಸ್ಥೆಗಳ ಸಮೂಹವಾಗಿರಬಹುದು. ಪ್ರತಿಚಯ ಸರ್ವೇಕ್ಷಣೆಯ ತಂತ್ರ ವಸ್ತುಸ್ಥಿತಿಯನ್ನು ಅರಿಯಲು ಒದಗಿಸಿರುವ ಒಂದು ಸುವ್ಯವಸ್ಥಿತ ಉಪಕರಣ. ಆಧುನಿಕ ಯುಗಕ್ಕೆ ಸಾಮಾನ್ಯವಾಗಿ ಲಭ್ಯವಲ್ಲದ ಮಾಹಿತಿಯನ್ನು ಇದು ಸಾರಾಂಶ ರೂಪದಲ್ಲಿ ದೊರಕಿಸಿಕೊಟ್ಟು ಸಂಬಂಧಪಟ್ಟ ವ್ಯವಸ್ಥೆಯ ಕಾರ್ಯನಿರ್ವಹಣೆಗೆ ದಾರಿ ಮಾಡಿಕೊಡುವುದರ ಮೂಲಕ ಉಪಯುಕ್ತವೆನಿಸಿದೆ.

ಸರಕಿನ ಉತ್ಪಾದನೆಯಲ್ಲಿ, ಸರಕುಸಾಮಗ್ರಿಗಳ ಮತ್ತು ಸೇವಾಸೌಲಭ್ಯಗಳ ಉಳಿಕೆಯಲ್ಲಿ ಅಥವಾ ಬೇರಾವುದೇ ವಿದ್ಯಮಾನದಲ್ಲಿ ಯೋಜನೆ ಅವಶ್ಯ. ಯೋಜನೆಯೊಂದರ ರೂಪರಚನೆಯಲ್ಲಿ ಮತ್ತು ಅದನ್ನು ಕಾರ್ಯಗತಗೊಳಿಸುವಾಗ ಮಾಡಬೇಕಾದ ನಿರ್ಧಾರಗಳಿಗೆ ಆಧಾರರೂಪ ಅಂಕಿಅಂಶಗಳನ್ನು ಪಡೆಯುವಲ್ಲಿ ಹಾಗೂ ಕಾರ್ಯಕ್ರಮದ ಉಪಯುಕ್ತತೆಯನ್ನು ಅಳೆಯುವಲ್ಲಿ ಪ್ರತಿಚಯ ಸರ್ವೇಕ್ಷಣೆಯನ್ನು ಕೈಗೊಳ್ಳುವುದು ಬಹುತೇಕ ಅನಿವಾರ್ಯ. ಯೋಜನೆಗೆ ಅವಶ್ಯವಾದ ಅಂಕಿ ಅಂಶಗಳನ್ನು ಸಂಗ್ರಹಿಸಲು ವಿಶೇಷತಃ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಪ್ರತಿಯೊಬ್ಬನಿಗೆ ಪ್ರತಿ ಸಂಸ್ಥೆಗೆ ಅಥವಾ ಪ್ರತಿಹೊಲಕ್ಕೆ ವರ್ಷಪ್ರತಿ ಭೇಟಿ ಕೊಡುವುದು ಅತಿ ದುಬಾರಿ. ಸಮಷ್ಟಿಯ ಬಗ್ಗೆ ನಂಬಲರ್ಹವಾದ ಅಂದಾಜುಗಳನ್ನು ಮಾಡಲು ಪೂರ್ಣಗಣತಿ ಅತ್ಯವಶ್ಯವೇನಲ್ಲ. ಹಾಗೆ ಪೂರ್ಣಗಣತಿ ಯಾವಾಗಲೂ ನಿಖರ ಅಂಕಿ ಅಂಶಗಳನ್ನು ಒದಗಿಸುವುದೂ ಇಲ್ಲ. ಬಳಕೆಗಾಗಿ ಮಾಹಿತಿ ಅತ್ಯಂತ ನಿಖರವಾಗಿ ಇರಬೇಕೆಂದೂ ಇಲ್ಲ. ಅದೇ ಕಾಳಜಿಪೂರ್ವಕವಾಗಿ ಯೋಚಿಸಿ ಪಡೆದ ಪ್ರತಿಚಯ ಕಡಿಮೆ ವೆಚ್ಚದಲ್ಲಿ ಈ ಉದ್ದೇಶವನ್ನು ಸಾಧಿಸಬಲ್ಲದು. ಇದರಿಂದಾಗಿ ಪ್ರತಿಚಯ ಸರ್ವೇಕ್ಷಣೆ ಪ್ರಯೋಗಾರ್ಹತೆಯನ್ನು ಪಡೆಯುವುದಾಗಿದೆ. ಅಂದಮಾತ್ರಕ್ಕೆ ಇದನ್ನು ಯಾವಾಗಲೂ ಪೂರ್ಣಗಣತಿಗೆ ಬದಲಿ ಎಂದು ತೆಗೆದುಕೊಳ್ಳಬೇಕಾಗಿಲ್ಲ. ಪೂರ್ಣಗಣತಿಯ ಮಾಹಿತಿಯನ್ನು ಮೂಲಭೂತವಾಗಿಟ್ಟುಕೊಂಡು, ಅಲ್ಲದೆ ಪೂರ್ಣಗಣತಿಗೆ ಸಹಾಯಕ ಹಾಗೂ ಅನುಬಂಧವಾಗಿ ಕೂಡ ಪ್ರತಿಚಯವನ್ನು ನಡೆಸಲಾಗುತ್ತದೆ.

ಪ್ರತಿಚಯನ ಅಷ್ಟೇನೂ ಖಾತ್ರಿ ವಿಧಾನವಲ್ಲ ಎಂದೆನ್ನಿಸುವುದು ಸಹಜ. ಉತ್ಪಾದಿತ ವಸ್ತು ಸಮೂಹವೊಂದರಲ್ಲಿ ಶೇ. 10 ನ್ಯೂನತಾ ಯುಕ್ತವಸ್ತುಗಳಿರಬಹುದು. ಹೀಗಿದ್ದರೂ ಆ ಸಮೂಹದಿಂದ ಆಯ್ದ ಪ್ರತಿಚಯಗಳು ಪೂರ್ತಿ ಉತ್ತಮವಾದುವೇ ಆಗಿರುವುದು ಸಾಧ್ಯ. ಪ್ರತಿಚಯದಿಂದ ದೊರೆತ ಅಂಕಿ (ಸರಾಸರಿ, ಮೊತ್ತ ಇತ್ಯಾದಿ) ಸಮಷ್ಟಿಯ ಅಂಕಿಗೆ ಯಥಾರ್ಥವಾಗಿ ಸಮವಾಗಿರುವುದು ವಿರಳವೇ ಸರಿ. ಇಲ್ಲಿರುವ ದೋಷ ಪ್ರತಿಚಯಸಂಭೂತವಾದುದು. ಕೈಗೊಂಡ ಪ್ರತಿಚಯನ ವಿಧಾನ ನೀಡುವ ಅಂದಾಜುಕಾರಿಯ ಪ್ರತಿಚಯನ ದೋಷದ ಒಂದು ಮಾನವಾಗಿ ಶಿಷ್ಟದೋಷವನ್ನು (ಸ್ಟ್ಯಾಂಡರ್ಡ್ ಎರರ್) ಬಳಸಲಾಗುತ್ತದೆ. ಶಿಷ್ಟದೋಷ ಕಡಿಮೆ ಇರುವ ವಿಧಾನ ಹೆಚ್ಚು ದಕ್ಷ. ಪ್ರತಿಚಯನದೋಷವನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಆಧುನಿಕ ಪ್ರತಿಚಯನಶಾಸ್ತ್ರ ಅವಕಾಶ ಮಾಡಿಕೊಟ್ಟಿದೆ. ಪ್ರತಿಚಯವಾಗಲೀ ಪೂರ್ಣಗಣತಿಯಾಗಲೀ ಮಾಹಿತಿಯಲ್ಲಿ ಕೆಲವು ದೋಷಗಳು ಸೇರಿಕೊಳ್ಳುವುದು ಸಾಧ್ಯ. ಉದಾ: ವ್ಯಕ್ತಿಯ ಆದಾಯದ ಬಗ್ಗೆ ಕೇಳಿದ ಪ್ರಶ್ನೆಗೆ ನಿಖರವಾದ ಉತ್ತರ ದೊರೆಯುವುದು ಕಡಿಮೆ. ಕೆಲವು ಸಲ ಸಂದರ್ಶಕ ತಪ್ಪಾಗಿ ಬರೆದುಕೊಳ್ಳಲೂಬಹುದು–ಗೊತ್ತಿಲ್ಲದ ಅಥವಾ ಗೊತ್ತಿದ್ದು ಇವು ಕೆಲವು ಅಪ್ರತಿಚಯನ (ನಾನ್‌ಸ್ಯಾಂಪ್ಲಿಂಗ್) ದೋಷಗಳು, ನೈಜಸ್ಥಿತಿಯಲ್ಲಿ ಇವನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡುವುದು ಸಾಧ್ಯವಿಲ್ಲ. ಪ್ರತಿಚಯಗಾತ್ರ ಹೆಚ್ಚಿದಂತೆಲ್ಲ ಪ್ರತಿಚಯನದೋಷ ಕಡಿಮೆಯಾಗುತ್ತ ಹೋಗುವುದು. ಅಪ್ರತಿಚಯನ ದೋಷಗಳು ಸಾಧಾರಣವಾಗಿ ಹೆಚ್ಚುತ್ತ ಹೋಗುವುವು. ಇವನ್ನು ಅಂಕೆಯಲ್ಲಿಡಲು ಮತ್ತು ಇವುಗಳ ಪರಿಣಾಮವನ್ನು ಅಳೆಯಲು ಅನೇಕ ವಿಧಾನಗಳು ಪ್ರತಿಪಾದಿಸಲ್ಪಟ್ಟಿವೆ. ಪ್ರಶಾಂತಚಂದ್ರ ಮಹಾಲನೋಬಿಸ್ ಅವರ ಅಂತರಭೇದಕ ಉಪಪ್ರತಿಚಯನ ಇಂಥ ಒಂದು ಪ್ರಮುಖ ವಿಧಾನ.

ಪ್ರತಿಚಯ ಸರ್ವೇಕ್ಷಣೆಯೊಂದನ್ನು ಯೋಚಿಸುವಾಗ ಪರಿಗಣಿಸಬೇಕಾದ ಹಲವು ಪ್ರಮುಖ ಸಂಗತಿಗಳಿವು:

1. ಸರ್ವೇಕ್ಷಣೆಯ ಫಲಿತಗಳನ್ನು ಉಪಯೋಗಿಸುವಾತನ ಧ್ಯೇಯಗಳನ್ನು ಸಂಖ್ಯಾಕಲನದ ಭಾಷೆಯಲ್ಲಿ ಹೆಚ್ಚು ಸ್ಪಷ್ಟವಾಗಿ ಪುನಃರೂಪಿಸುವುದು.

2. ಮಾಹಿತಿಯಲ್ಲಿ ಗ್ರಾಹ್ಯದೋಷದ ಮಟ್ಟ ಎಷ್ಟಿರಬಹುದು? ಆ ಮಟ್ಟವನ್ನು ಮೀರದಂತೆ ಮಾಹಿತಿ ಸಂಗ್ರಹಿಸಲು ದಕ್ಷ ಪ್ರತಿಚಯನ ಸರ್ವೇಕ್ಷಣೆಯನ್ನು ಹೇಗೆ ಯೋಜಿಸುವುದು? ಸರ್ವೇಕ್ಷಣೆ ಕಂಡುಹಿಡಿಯುವ ಮಾಹಿತಿಯ ಮೇಲೆ ಕೈಗೊಳ್ಳಲಾಗುವ ನಿರ್ಧಾರಗಳಲ್ಲಿ ಹೊಂದಾಣಿಕೆ ಎಷ್ಟರಮಟ್ಟಿಗೆ ಸಾಧ್ಯ. ಎನ್ನುವುದನ್ನು ಅವಲಂಬಿಸಿ ಗ್ರಾಹ್ಯದೋಷದ ಮಟ್ಟವನ್ನು ನಿಗದಿ ಮಾಡಬೇಕು.

3. ಮಾಹಿತಿ ಸಂಗ್ರಹಣ ವಿಧಾನ: ವೈಯುಕ್ತಿಕ ಸಂದರ್ಶನ, ಅಂಚೆ ಮೂಲಕ, ನೋಂದಾವಣೆಯಿಂದ ಅಥವಾ ದಾಖಲೆಗಳಿಂದ ಬರೆದುಕೊಳ್ಳುವುದು.

4. ಪ್ರಶ್ನಾವಳಿ ಆಥವಾ ಮಾಹಿತಿ ಅನುಬಂಧ–ಇವುಗಳಲ್ಲಿ ಯಾವುದು ಹೆಚ್ಚು ಸಮಂಜಸವೆಂಬುದನ್ನು ಪರೀಕ್ಷಿಸುವುದು.

5. ಪ್ರತಿಚಯದ ಆಧಾರಬಂಧ: ಉದಾಹರಣೆಗೆ ನಗರವೊಂದರ ಸರಾಸರಿ ಕುಟುಂಬಗಾತ್ರ ತಿಳಿಯಲು ಆ ನಗರದ ಕುಟುಂಬಗಳ ಪಟ್ಟಿ ಮತ್ತು ಬ್ಲಾಕುಗಳ ಪಟ್ಟಿ ಇವುಗಳಲ್ಲಿ ಯಾವುದಾದರೊಂದನ್ನು ಘಟಕಗಳ ಆಯ್ಕೆಗಾಗಿ ಆಧಾರಬಂಧವಾಗಿ ಇಟ್ಟುಕೊಳ್ಳಬಹುದು.

6. ಪ್ರತಿಚಯನ ವಿಧಾನದ ಆಯ್ಕೆ.

7. ಎಣಿಕೆ, ವರ್ಗೀಕರಣ ಮತ್ತು ಮಾಪನ–ಇವುಗಳ ಸಮಂಜಸ ಬಳಕೆ.

8. ಮಾಹಿತಿಯ ಸಂಸ್ಕರಣ ವಿಧಾನದ ನಿರ್ಧಾರ.

ಒಂದು ಸಂಗತಿಯನ್ನು ಮಾತ್ರ ತಿಳಿಯಲು ಸರ್ವೇಕ್ಷಣೆ ಕೈಗೊಳ್ಳುವುದು ವಿರಳವಲ್ಲದಿದ್ದರೂ ಒಂದೇ ಸಲ ಅನೇಕ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಸರ್ವೇಸಾಮಾನ್ಯ. ಅದು ಮಿತವ್ಯಯಕರವೂ ಹೌದು. ಸಂಗ್ರಹಿಸಿದ ಮಾಹಿತಿಯ ಗುಣಮಟ್ಟ ಪ್ರತಿಚಯದ ಯೋಜನೆಯ ಊರ್ಜಿತತ್ವ ಮತ್ತು ದಕ್ಷತೆಗಳಷ್ಟೇ ಮಹತ್ತ್ವವುಳ್ಳದ್ದು. ಇದನ್ನು ಸಾಧಿಸಲು ವ್ಯವಸ್ಥಿತವಾಗಿ ನಡೆಯಬೇಕಾದ ಕ್ರಮವನ್ನೂ ಸಂಖ್ಯಾಶಾಸ್ತ್ರ ಬೆಳೆಸಿಕೊಂಡಿದೆ. ರಾಷ್ಟ್ರೀಯ ಯೋಜನಕಾರ್ಯದಲ್ಲಿ ಪ್ರತಿಚಯನ ಸರ್ವೇಕ್ಷಣೆಗಳ ಮಹತ್ತ್ವ ದೊಡ್ಡದು ಅಂತೆಯೆ ವಿಶ್ವಸಂಸ್ಥೆಯ ಈ ಸಂಖ್ಯಾಕಲನ ಕಾರ್ಯಾಲಯ ಪ್ರತಿಚಯನವನ್ನು ವಿವಿಧ ಕ್ಷೇತ್ರಗಳಲ್ಲಿ ಕಾರ್ಯರೂಪಗೊಳಿಸಲು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಹಕಾರ ನೀಡುತ್ತಿದೆ. ಸಂಖ್ಯಾಕಲನೀಯಪ್ರತಿಚಯ ಸರ್ವೇಕ್ಷಣೆಗಳೂ ಇಂದು ಪಡೆದಿರುವ ಮಾನ್ಯತೆ ಮತ್ತು ವಿಶ್ವಾಸಯೋಗ್ಯತೆಗೆ ಕಾರಣರಾದವರಲ್ಲಿ ಮಹಾಲನೊಬಿಸ್ ಒಬ್ಬರು.

ಭಾರತದ ರಾಷ್ಟ್ರೀಯ ಪ್ರತಿಚಯನ ಸರ್ವೇಕ್ಷಣೆ: ಭಾರತ ಸರ್ಕಾರಕ್ಕೆ ಮತ್ತು ಇತರ ಸಂಶೋಧನ ಸಂಘಸಂಸ್ಥೆಗಳಿಗೆ ಯೋಜನಯಲ್ಲಿ ಅವಶ್ಯವಾದ ಸಾಮಾಜಿಕ, ಆರ್ಥಿಕ ಮಾಹಿತಿಯನ್ನು ಒದಗಿಸಲು 1950ರಲ್ಲಿ ಪ್ರಾರಂಭಿಸಲಾದ ಈ ಸಂಸ್ಥೆ ಸುತ್ತು ರೂಪದಲ್ಲಿ ಮರುಕಳಿಸುತ್ತದೆ. 3–8 ತಿಂಗಳ ಅವಧಿಯ ಒಂದು ಸುತ್ತಿನಲ್ಲಿ ಆಗ ಪ್ರಚಲಿತ ವಿಷಯಗಳನ್ನು ಪರಿಗಣಿಸಲಾಗುತ್ತದೆ. ಕೇಂದ್ರವಿಭಾಗಗಳ, ಯೋಜನಾ ಆಯೋಗದ, ಕೇಂದ್ರ ಸಚಿವರ ಖಾತೆಗಳ ಸಲಹೆ ಪಡೆದು ಪ್ರತಿಸುತ್ತಿನ ವಿಷಯವ್ಯಾಪ್ತಿಯನ್ನು ನಿರ್ಧರಿಸುವುದು. ಯಾವುದೇ ಹಂತದಲ್ಲಿ ಪ್ರತಿಚಯವನ್ನು ಎರಡು ಹಂತಗಳ ಸ್ತರೀಕೃತ ಪ್ರತಿಚಯನವಿಧಾನದ ಮೂಲಕ ಆಯ್ಕೆಮಾಡಲಾಗುತ್ತದೆ. ಮೊದಲ ಹಲವು ಗ್ರಾಮಗಳನ್ನು ಮತ್ತು ಎರಡನೆಯ ಹಂತದಲ್ಲಿ ಮನೆ ಅಥವಾ ವಿಷಯಕ್ಕೆ ಸಮಂಜಸವಾದ ಬೇರೆ ಅವಲೋಕನ ಘಟಕಗಳನ್ನು ಆಯಲಾಗುತ್ತದೆ. ಮೊದಲ ಕೆಲವು ಸುತ್ತುಗಳಲ್ಲಿ ರಾಷ್ಟ್ರೀಯ ಆದಾಯದ ಲೆಕ್ಕಾಚಾರ, ಬಳಕೆದಾರನ ವೆಚ್ಚ, ಗೃಹಕೈಗಾರಿಕೆ–ಇವುಗಳಿಗೆ ಸಂಬಂಧಪಟ್ಟಿತ್ತು. ಜನನ, ಮರಣ, ನೌಕರಿ, ನಿರುದ್ಯೋಗ, ಸಣ್ಣಕೈಗಾರಿಕೆ, ಬೆಳೆ, ಶಾಲೆಗಳು, ಶಿಕ್ಷಕರು, ವೈದ್ಯರು, ಗ್ರಾಮಗಳು ಮುಂತಾದವಕ್ಕೆ ಸಂಬಂಧಪಟ್ಟ ಪ್ರಮುಖ ಅಂಕಿ ಅಂಶಗಳನ್ನು ಬೇರೆ ಬೇರೆ ಸುತ್ತುಗಳಲ್ಲಿ ಸಂಗ್ರಹಿಸಲಾಗಿದೆ. *

**ಪ್ರತಿಫಲನ ಪ್ರಮಾಣ:** ಅದೀಪ್ತತಲದ ಮೇಲೆ ಆಪಾತವಾದ ಸೂರ್ಯನ ವಿಕಿರಣದ (ಬೆಳಕಿನ) ಎಷ್ಟು ಅಂಶ ಅದರಿಂದ ಪ್ರತಿಫಲಿತವಾಗುವುದೆಂಬುದರ ಅಳತೆ. ಅಂದರೆ ಸೂರ್ಯನಿಂದ ಹೊರಬೀಳುವ ಬೆಳಕಿಗೆ ಸಂಬಂಧಿಸಿದಂತೆ ಸಮತಲದ ಪ್ರತಿಫಲಿತ ಗುಣಮಟ್ಟವನ್ನು ಶೇಕಡಗಳಲ್ಲಿ ವ್ಯಕ್ತಪಡಿಸುವುದು. ಉದಾ: ಭೂಮಿಯ ಪ್ರತಿಫಲನ ಪ್ರಮಾಣ 0.29, ಚಂದ್ರನದು 0.07, ಬುಧನದು 0.07, ಶುಕ್ರನದು 0.59, ಕುಜನದು 0.15, ಗುರುವಿನದು 0.44 ಮತ್ತು ಶನಿಗ್ರಹದ್ದು 0.42.

ಭೂಮಿಯ ಒಟ್ಟು ಪ್ರತಿಫಲನ ಪ್ರಮಾಣವನ್ನು ಅಳೆಯಲು ವಿವಿಧ ಪ್ರಯತ್ನ ಮಾಡಲಾಗಿದೆ. ವಿವಿಧ ಮಾಹಿತಿಯನ್ನಾಧರಿಸಿ ನೋಡಿದಾಗ ಅದು ಶೇ. 29 ರಿಂದ 34ರ ವರೆಗೆ ವ್ಯತ್ಯಾಸವಾಗುವುದು. ಸೂರ್ಯಜನ್ಯಶಾಖದಲ್ಲಿ ಶೇ. 40 ಭಾಗ ಮತ್ತೆ ಗಗನಕ್ಕೆ ಪ್ರತಿಫಲನವಾಗುತ್ತದೆ. ಅದಕ್ಕೆ ದೂಳಿನ ಕಣಗಳು, ಮೋಡಗಳು, ನೀರಾವಿ ಮುಂತಾದವು ಕಾರಣ. ಹಿಮದಿಂದಾವೃತ ತಲದಲ್ಲಿ ಹೆಚ್ಚು ಮತ್ತು ಕಪ್ಪು ಮಣ್ಣಿನ ತಲದಲ್ಲಿ ಪ್ರತಿಫಲತೆ ಕಡಿಮೆ. ಅಂದರೆ ಶ್ವೇತ ತಲದಲ್ಲಿ ಹೆಚ್ಚು ಮತ್ತು ಕಪ್ಪುತಲದಲ್ಲಿ ಕಡಿಮೆ ಪ್ರತಿಫಲನ ಪ್ರಮಾಣವಿರುತ್ತದೆ. ಜಲರಾಶಿಯ ಮೇಲೆ ಪ್ರಸರಿಸುವ ಓರೆಯಾದ ಸೂರ್ಯನ ಕಿರಣಗಳು ಪ್ರತಿಫಲನ ಪ್ರಮಾಣದ ಮೊತ್ತದ ಮೇಲೆ ಪ್ರಭಾವ ಬೀರುತ್ತವೆ. ಲಂಬ ಕಿರಣಗಳಿಗಿಂತ ಓರೆಯಾದ ಕಿರಣಗಳಿಂದ ಪ್ರತಿಫಲನ ಪ್ರಮಾಣದ ಮೊತ್ತ ಹೆಚ್ಚು. ಅದೇ ರೀತಿ ನಯವಾದ ಮೇಲ್ಮೈಯಲ್ಲಿ ಅಸಮ ಮೇಲ್ಮೈಗಿಂತ ಅದು ಹೆಚ್ಚು. ಪ್ರತಿಫಲನ ಪ್ರಮಾಣ ದರ ಸಂಕ್ರಾಂತಿ ವೃತ್ತಗಳ ($23.5^0$ ಉ. ಮತ್ತು $23.5^0$ದ) ಸಮೀಪ ಶೇ. 19 ರಿಂದ 38 ಗಳಾದರೆ ಧ್ರುವ ಪ್ರದೇಶಗಳಲ್ಲಿ ಶೇ. 80 ಆಗಿರುತ್ತದೆ.

ಪಟ್ಟಿ : ವಿವಿಧ ತಲದಲ್ಲಿ ಪ್ರತಿಫಲನದ ಪ್ರಮಾಣ.

| ತಲ (ಸರ್‌ಫೇಸ್) | ಪ್ರತಿಫಲನ (%) |
|---|---|
| ಪದರು ಮೋಡಗಳು | |
| 150 ಮೀ ದಪ್ಪದಲ್ಲಿ | 25–63 |
| 150–300 ಮೀ ದಪ್ಪದಲ್ಲಿ | 45–75 |
| 300–600 ಮೀ ದಪ್ಪದಲ್ಲಿ | 59–84 |
| ಸರಾಸರಿ | 50–54 |
| ಕಾಂಕ್ರೀಟ್ | 17–24 |
| ಹಸುರು ಬೆಳೆ | 5–25 |
| ಹಸುರು ಕಾಡು | 5–10 |
| ಹುಲ್ಲುಗಾವಲು | 5–25 |
| ಸಾಗುವಳಿ ಭೂಮಿ | 14–17 |
| ಶ್ವೇತ ಮರಳು | 30–60 |
| ಹಿಮ | 80–90 |
| ಕಪ್ಪುಮಣ್ಣು | 5–15 |
| ಲಘುವರ್ಣಮಣ್ಣು | 25–30 |
| ನೀರು | 8 |

(ಎಂ.ಜಿ.)

**ಪ್ರತಿಷ್ಠಿತ ವಲಯ:** ಪ್ರದೇಶ ನಗರಗಳಲ್ಲಿ ಕಂಡು ಬರುವ ಪ್ರಮುಖ ಭಾಗ. ಆಧುನಿಕ ಯುಗದಲ್ಲಿ ನಗರಗಳ ಬೆಳವಣಿಗೆ ಸರ್ವೇಸಾಮಾನ್ಯವಾದ ಸಂಗತಿ. ಅತಿ ವಿಸ್ತಾರವಾದ ನಗರಗಳ ಅಸ್ತಿತ್ವವನ್ನು ನಾವು ನೋಡಬಹುದು. ವಿಸ್ತಾರವಾದ ನಗರವಾಗಲಿ ಅಥವ ಚಿಕ್ಕದಾದ ನಗರವಾಗಲಿ, ಆ ನಿರ್ದಿಷ್ಟ ನಗರದಲ್ಲಿ ಕೆಲವು ಪ್ರತಿಷ್ಠಿತ ಭಾಗವನ್ನು ನಾವು ಕಾಣಬಹುದು. ನಗರದಲ್ಲಿ ಕಂಡುಬರುವ ಪ್ರತಿಷ್ಠಿತ ವಲಯಗಳು ಕೆಲವು ಅಂಶಗಳನ್ನು ಒಳಗೊಂಡಿರುತ್ತದೆ. ಆ ವಲಯ ಆರ್ಥಿಕವಾಗಿ ಅತ್ಯುತ್ತಮವಾಗಿರುತ್ತದೆ, ಜನಸಂಖ್ಯೆ ಅಧಿಕವಾಗಿದ್ದು ಆರ್ಥಿಕ ಚಟುವಟಿಕೆಗಳು ಹಾಗೂ ಹೆಚ್ಚು ಆರ್ಥಿಕ ಪ್ರಗತಿಯನ್ನು ಹೊಂದಿರುವ ನಗರ ಪ್ರದೇಶವನ್ನು ಪ್ರತಿಷ್ಠಿತ ವಲಯವೆನ್ನುವರು. ನಗರಗಳಲ್ಲಿ ಜನ ವಸತಿಯ ಹೊಸಬಡಾವಣೆಗಳನ್ನು ಕಾಣಬಹುದು. ಅವು ಪ್ರತಿಯೊಬ್ಬನ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತವೆ. ಕೆಲವು ಬಡಾವಣೆಗಳಲ್ಲಿ ಕೇವಲ ಆರ್ಥಿಕ ಸ್ಥಿತಿವಂತರು ಜೀವಿಸುತ್ತಿದ್ದು ಅವರ ಜೀವನ ಶೈಲಿ ಮಟ್ಟ ಉತ್ತಮವಾಗಿರುತ್ತದೆ, ಅಂತಹ ಭಾಗಗಳನ್ನೂ ಸಹ ಪ್ರತಿಷ್ಠಿತ ವಲಯಗಳೆಂದು ಕರೆಯುವರು. (ಎಚ್.ಎಸ್.ಡಿ.)

**ಪ್ರದೇಶಗಳ ಶ್ರೇಣಿ:** ಪ್ರದೇಶಗಳ ಅಥವಾ ಗ್ರಾಮ ನಗರಗಳ ಗುಣ, ವಿಶೇಷತೆಗಳನ್ನು ಗಮನಿಸಿ ಶ್ರೇಣೀಕರಿಸುವುದು. ಸಾಮಾನ್ಯವಾಗಿ ನಾವು ಪ್ರದೇಶವನ್ನು ದೊಡ್ಡದು, ಮಧ್ಯಮ ಮತ್ತು ಚಿಕ್ಕದೆಂದು ವಿಂಗಡಿಸುತ್ತವೆ. ಅದೇ ತರಹ ಜನಸಂಖ್ಯಾ ಆಧಾರದ ಮೇಲೆ ದೊಡ್ಡ ನಗರ, ಮಧ್ಯಮ ಗಾತ್ರದ ಪಟ್ಟಣ, ಚಿಕ್ಕ ಪಟ್ಟಣಗಳು ಮತ್ತು ಬೃಹತ್ ನಗರ ಎಂದು ನಗರ/ಪಟ್ಟಣವನ್ನು ಶ್ರೇಣಿಗೆ ಅಳವಡಿಸಬಹುದು. ಪ್ರಾದೇಶಿಕ ಯೋಜನಾಗಾರರು ಜನಸಂಖ್ಯೆಯ ಗಾತ್ರ ಮತ್ತು ಇತರ ಸೌಲಭ್ಯಗಳನ್ನು ಆಧಾರಿಸಿ ಪ್ರದೇಶಗಳನ್ನು ಶ್ರೇಣಿ ಮಾಡುತ್ತಾರೆ. ಅದೇ ರೀತಿ ನಗರದ ರಸ್ತೆಯನ್ನು ಪ್ರಧಾನ ಮಾರ್ಗ, ಉಪ ಪ್ರಧಾನದಾರಿ, ಮುಖ್ಯಮಾರ್ಗವೆಂದು ಶ್ರೇಣಿ ಮಾಡಬಹುದು. ವಾಲ್ಟರ್ ಕ್ರಿಸ್ಟಾಲರ್ ಎಂಬುವರು ಕೇಂದ್ರ ಸ್ಥಳ ಸಿದ್ಧಾಂತವನ್ನು ನಿರೂಪಿಸಿ, ಗ್ರಾಮ/ಪಟ್ಟಣಗಳನ್ನು ಶ್ರೇಣಿಗೆ ಅಳವಡಿಸಿದ್ದಾರೆ. ಪೆರಾಕ್ಸ್ ಎಂಬುವವರು ಬೆಳವಣಿಗೆಯ ಅಗ್ರ ಪಟ್ಟಣ ಮತ್ತು ಬೆಳವಣಿಗೆಯ ಕೇಂದ್ರದ ಸಿದ್ಧಾಂತವನ್ನು ಪ್ರಾದೇಶಿಕ ಯೋಜನೆಯಲ್ಲಿ ಅಳವಡಿಸಿದ್ದಾರೆ. ಪ್ರಾದೇಶಿಕ ಅಭಿವೃದ್ಧಿಯಲ್ಲೂ ಮುಂದುವರೆದ ಪ್ರದೇಶ, ಹಿಂದುಳಿದ ಪ್ರದೇಶ, ತಗ್ಗಿದ ಪ್ರದೇಶ (ಬೆಳವಣಿಗೆಗೆ ಅನುಗುಣವಾಗಿ) ಎಂದು ಪ್ರದೇಶಗಳನ್ನು ಶ್ರೇಣಿ ಮಾಡಬಹುದು. (ಎನ್.ಎಸ್.)

**ಪ್ರದೇಶದ ಪರಿಭಾವನೆ:** ಒಂದೇ ಬಗೆಯ ಸಮಾನವಾದ ಭೌತಿಕ ಮತ್ತು ಸಾಂಸ್ಕೃತಿಕ ಗುಣಲಕ್ಷಣಗಳನ್ನು ಹೊಂದಿರುವ ಕ್ಷೇತ್ರವನ್ನು ಪ್ರದೇಶ ಎಂದು ಪ್ರಾದೇಶಿಕ ಯೋಜನಕಾರರು ಪರಿಗಣಿಸುತ್ತಾರೆ. ಈ ಕ್ಷೇತ್ರಕ್ಕೆ ಯಾವ ತರಹದ ಮಿತಿ ಇರುವುದಿಲ್ಲ. ಒಂದು ಚಿಕ್ಕ ವಿಸ್ತಾರದ ಕ್ಷೇತ್ರವಾಗಲಿ ಅಥವ ದೊಡ್ಡ ವಿಸ್ತಾರದ ಕ್ಷೇತ್ರವಾಗಲಿ, ಸಮಾನ ಗುಣ ಲಕ್ಷಣಗಳನ್ನು ಹೊಂದಿದ್ದಲ್ಲಿ ಅದನ್ನು ಪ್ರದೇಶವೆಂದು ಪರಿಗಣಿಸಬಹುದು. ಬಹು ಸಂಖ್ಯಾತರು ಒಂದು ಕ್ಷೇತ್ರದಲ್ಲಿ ಒಂದೇ ಭಾಷೆಯನ್ನು ಆಡುತ್ತಿದ್ದರೆ, ಅದು ಒಂದು ಪ್ರದೇಶವೆಂದು ತಿಳಿಸುತ್ತಾರೆ. ಇದೇ ರೀತಿಯಲ್ಲಿ ದಟ್ಟ ಹರಿದ್ವರ್ಣ ಅರಣ್ಯ ಒಂದು ಪ್ರದೇಶವಾಗಬಹುದು. ಒಂದು ಖಂಡ ಅಥವಾ ಉಪ ಖಂಡ, ರಾಜ್ಯ ಅಥವಾ ಜಿಲ್ಲೆಯನ್ನು ಪ್ರದೇಶವೆಂದು ಪರಿಗಣಿಸಬಹುದು. ಇಲ್ಲಿ ಆಡಳಿತ ಮಿತಿ ಅಥವಾ ಭಾಷೆ ಅಥವಾ ಸಂಸ್ಕೃತಿ ಪರಿಗಣನೆಗೆ ಬರುತ್ತದೆ. ಭೂಗೋಳ ಶಾಸ್ತ್ರಜ್ಞರು ವಿಶಿಷ್ಟ ಪ್ರಾಣಿ ವಾಸವನ್ನು ಗುರುತಿಸಿ ಒಂದು ಪ್ರದೇಶವನ್ನು ಗುರುತಿಸುತ್ತಾರೆ. ಪ್ರಾದೇಶಿಕ ಭಾವನೆ ಅನ್ನುವುದು ಏಕರೀತಿಯ ಗುಣಲಕ್ಷಣವನ್ನು ಹೊಂದಿರುವುದು. ಒಂದು ಪ್ರದೇಶವನ್ನು ಗುರುತಿಸುವಲ್ಲಿ ಅಥವಾ ವಿಂಗಡನೆಯಲ್ಲಿ ಭೂಗೋಳ ವಿಜ್ಞಾನಿಗಳ ಪಾತ್ರ ವಿಶೇಷವಾಗಿರುತ್ತದೆ. ಹೆಚ್ಚು ಭೂಗೋಳ ವಿಜ್ಞಾನಿಗಳು ಪ್ರದೇಶದ ಸಂಶೋಧನೆಯಲ್ಲಿ ತೊಡಗಿದ್ದಾರೆ. (ಎನ್.ಎಸ್.)

**ಪ್ರಧಾನನಗರ:** ಒಂದು ಪ್ರದೇಶದ ಆಡಳಿತ ಕೇಂದ್ರ ವ್ಯಾಪಾರಕೇಂದ್ರ ಹಾಗೂ ಹೆಚ್ಚುವ ಜನಸಂಖ್ಯೆಯುಳ್ಳದ್ದು. ಈ ಪರಿಭಾವನೆಯನ್ನು ಮೊಟ್ಟಮೊದಲ ಬಾರಿಗೆ 1939ರಲ್ಲಿ ಮಾರ್ಕ್ ಜೆಫರ್‌ಸನ್ ತಮ್ಮ ದಿ ಲಾ ಆಫ್ ಪ್ರೈಮೇಟ್ ಸಿಟಿ ಎಂಬ ಗ್ರಂಥದಲ್ಲಿ ಪ್ರತಿಪಾದಿಸಿದರು. ಪ್ರದೇಶದ ಇತರ ನಗರಗಳೊಡನೆ ಹೋಲಿಸಿದರೆ, ಅದು ಅನೇಕ ಪಟ್ಟು ದೊಡ್ಡದಿರುತ್ತದೆ. ಇದನ್ನು ಪ್ರೈಮೇಟ್ ಸಿಟಿ ಅಥವಾ ಪ್ರಧಾನ ನಗರವೆನ್ನುವರು. ಈ ಪ್ರಧಾನ ನಗರ ಆ ಪ್ರದೇಶದಲ್ಲಿನ ಇತರ ನಗರಗಳಿಗಿಂತ ದೊಡ್ಡದ್ದಾಗಿದ್ದು ಆ ರಾಷ್ಟ್ರದ ಸಾಮರ್ಥ್ಯ ಹಾಗೂ ಜನರ ಅಭಿಪ್ರಾಯವನ್ನು ಪ್ರತಿಬಿಂಬಿಸುವುದು. ಇದು ಆ ರಾಷ್ಟ್ರದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕೇಂದ್ರವಾಗಿರುವುದು. ಇದು ಆರ್ಥಿಕಾಭಿವೃದ್ಧಿಯ ಮೊದಲ ಹಂತದಲ್ಲೇ ದೊಡ್ಡದಾಗಿದ್ದು, ಕ್ರಮೇಣ ಇತರ ನಗರಗಳಿಗಿಂತ ಹೆಚ್ಚು ವೇಗವಾಗಿ ಬೆಳವಣಿಗೆ ಹೊಂದುವುದು. ಇವು ಎಲ್ಲ ರಾಷ್ಟ್ರಗಳಲ್ಲಿ ಕಂಡುಬಂದರೂ ರಾಷ್ಟ್ರದಿಂದ ರಾಷ್ಟ್ರಕ್ಕೆ ವ್ಯತಾಸದಿಂದ ಕೂಡಿವೆ. ಒಂದು ದೇಶದ ಜನಸಂಖ್ಯೆ, ಇತಿಹಾಸ, ಆರ್ಥಿಕತೆಯ ವಿಧಾನ ಮತ್ತು ಸಾಮಾಜಿಕ ಸಂಘಟನೆಗಳಲ್ಲಿನ ವ್ಯತ್ಯಾಸದಿಂದಾಗಿ ಇವುಗಳ ಪ್ರಭಾವದಲ್ಲಿ ವ್ಯತ್ಯಾಸಗಳು ಕಂಡುಬರುವುದು. ಕೆಲವು ತಜ್ಞರು ಈ ನಗರಗಳು ಸಾಮಾನ್ಯವಾಗಿ ರಾಷ್ಟ್ರೀಯ ರಾಜಧಾನಿಗಳಾಗಿರುತ್ತವೆ ಎಂದಿದ್ದಾರೆ. ಇವುಗಳನ್ನು ಪ್ರಧಾನ ನಗರ, ರಾಷ್ಟ್ರದ ರಾಜಧಾನಿ, ಹೆಬ್ಬಾಗಿಲು ಎಂಬರ್ಥಗಳಲ್ಲಿ ಬಳಸಿದ್ದಾರೆ. ಈ ನಗರಗಳ ಪ್ರಾಧಾನ್ಯತೆಯನ್ನು ಕಂಡು ಹಿಡಿಯಲು ಈ ಕೆಳಗಿನ ಸೂತ್ರವನ್ನು ಬಳಸಲಾಗುವುದು.

$$\text{ಪ್ರಾಧಾನ್ಯತೆಯ ಸೂಚ್ಯಾಂಕ} = \frac{P_1}{P_2}$$

$P_1$ = ಪ್ರಧಾನ ನಗರ ಜನಸಂಖ್ಯೆ.
$P_2$ = ಎರಡನೆಯ ಶ್ರೇಣಿಯ ಜನಸಂಖ್ಯೆ. (ಎಸ್.ಎನ್.)

**ಪ್ರಪಂಚದ ರಾಜಕೀಯ ವಲಯಗಳು:** ಗೊತ್ತಾದ ಭೂಪ್ರದೇಶ ಹಾಗೂ ಜನಸಂಖ್ಯೆಯಿದ್ದು ಅವರದೇ ಆದ ಆಡಳಿತ ಹಾಗೂ ರಕ್ಷಣೆಯುಳ್ಳ ಪ್ರದೇಶಗಳನ್ನು ಅಲ್ಲಿನ ರಾಜಕೀಯದ ಮೇಲೆ ವಿಂಗಡಿಸಬಹುದು. ರಾಜಕೀಯ ಪ್ರದೇಶ ಒಂದು ಭೌಗೋಳಿಕ ಪ್ರದೇಶವಾಗಿದ್ದು, ರಾಜಕೀಯಕ್ಕೆ ಸಂಬಂಧಿಸಿದ ವಿಷಯಗಳು ಪರಸ್ಪರ ಸಂಬಂಧ ಹೊಂದಿ ರೂಪುಗೊಂಡ ಭೌಗೋಳಿಕ ಚೌಕಟ್ಟಿಗೆ ರಾಜಕೀಯ ವಲಯ ಎನ್ನುವರು. ಎರಡು ಅಥವಾ ಎರಡಕ್ಕಿಂತ ಹೆಚ್ಚು ರಾಷ್ಟ್ರಗಳು ಒಂದೇ ರೀತಿಯ ರಾಜಕೀಯ ಸಿದ್ಧಾಂತವನ್ನು ಅಳವಡಿಸಿಕೊಂಡಿರುವ ಪ್ರದೇಶವೇ ರಾಜಕೀಯ ವಲಯ. ಇದು ಸ್ಥಿರ ಕಲ್ಪನೆಯಾಗಿದ್ದು, ಇದರ ಬೇರುಗಳು ಪ್ರಾದೇಶಿಕ ಸಾಮ್ಯತೆ ಮತ್ತು ವೈವಿಧ್ಯತೆಯಲ್ಲಿ ಅಡಗಿವೆ, ಆದರೆ ಒಂದು ರಾಜಕೀಯ ಸಂಘವು ಸ್ಥಿರವಾದುದಲ್ಲ ಇದಕ್ಕೆ ಹಲವಾರು ಉದಾಹರಣೆಗಳಿವೆ; ರಾಜಕೀಯ ಸಂಸ್ಥೆಗಳು ಸ್ವಲ್ಪ ಕಾಲದವರೆಗೆ ಅಸ್ತಿತ್ವದಲ್ಲಿದ್ದು, ಅನಂತರ ಕಣ್ಮರೆಯಾಗುತ್ತವೆ. ಗೋಬ್ಲೆಟ್ (1955) ಎಂಬ ರಾಜಕೀಯ ಭೂಗೋಳಶಾಸ್ತ್ರಜ್ಞ ರಾಜಕೀಯ ವಲಯಗಳ ಬಗ್ಗೆ ಈ ರೀತಿ ಅಭಿಪ್ರಾಯ ಪಡುತ್ತಾರೆ: ದೊಡ್ಡದಾದ ರಾಜಕೀಯ ವಲಯಗಳು ಕೇವಲ ಹಲವು ರಾಷ್ಟ್ರಗಳನ್ನು ಒಳಗೊಂಡಿರುವುದಿಲ್ಲ. ಅದರ ಮೇರೆಗಳು ಸಾಗರಿಕ ಅಲ್ಲದೆ ಖಂಡಗಳಲ್ಲಿಯೂ ಹರಡಿರುತ್ತವೆ. ಕೆಲವೊಮ್ಮೆ ಮಧ್ಯಭಾಗದಲ್ಲಿಯೂ ಕಂಡುಬರುತ್ತವೆ. ಈ ರಾಜಕೀಯ ವಲಯಗಳ ಉಗಮಕ್ಕೆ ಭೌಗೋಳಿಕ, ಐತಿಹಾಸಿಕ, ಸಾಮಾಜಿಕ, ಸೈದ್ಧಾಂತಿಕ ಅಂಶಗಳು ಪ್ರಭಾವವನ್ನು ಬೀರುತ್ತವೆ. ಪ್ರಪಂಚದ ರಾಜಕೀಯ ವಲಯಗಳನ್ನು ಈ ಮೇಲಿನ ಅಂಶಗಳ ಆಧಾರದ ಮೇಲೆ ಗೋಬ್ಲೆಟ್ 11 ಪ್ರಮುಖ ವಲಯಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳು ಈ ಕೆಳಗಿನಂತಿವೆ.

1. ಉತ್ತರ ಅಟ್ಲಾಂಟಿಕ್, ಅಟ್ಲಾಂಟಿಕ್ ಯುರೋಪ್ ಮತ್ತು ಮೆಡಿಟರೇನಿಯನ್ ಪ್ರದೇಶ. 2. ಖಂಡಾಂತರ ಯುರೋಪ್ 3. ಯುರೋಪ್ 4. ಪೆಸಿಫಿಕ್ ಮಹಾಸಾಗರ 5. ಪೂರ್ವದ ಪ್ರತ್ಯೇಕ ಪ್ರದೇಶ 6. ಪೂರ್ವದ ಖಂಡಾಂತರ ಪ್ರದೇಶ 7. ಯುರೋಪ್ ಸ್ಟೆಫೆ 8. ಭಾರತದ ಉಪಖಂಡ 9. ಆಫ್ರಿಕ 10. ಮಧ್ಯಪೂರ್ವ ಮತ್ತು ಸಮೀಪ ಪ್ರದೇಶ ಮತ್ತು 11. ಧ್ರುವ ಪ್ರದೇಶ

1967ರಲ್ಲಿ ಬ್ರೂಸ್ ರುಸ್ಸೆಟ್ ರವರು ಜಗತ್ತಿನ ವಲಯಗಳು ಮತ್ತು ರಾಜಧಾನಿ ನಗರಗಳ ನಡುವೆ ಪರಸ್ಪರ ಭೌತಿಕ ಸಾಮಿಪ್ಯ ಅಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಏಕತೆ, ವ್ಯಾಪಾರ, ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ವಿಶ್ವಸಂಸ್ಥೆಯ ಮತದಾನದ ಲಕ್ಷಣಗಳು

ಇವುಗಳನ್ನು ಆಧರಿಸಿ ಜಗತ್ತಿನ ವಲಯಗಳು ಹಾಗೂ ರಾಜಧಾನಿ ನಗರಗಳ ನಡುವೆ ಸಂಬಂಧಗಳನ್ನು ಗುರುತಿಸಿದರು. ಅನಂತರ 1970ರಲ್ಲಿ ಲೂಯಿಸ್ ಕಾಂಟೋರಿ ಮತ್ತು ಸ್ಟೀವನ್ ಸ್ಪೇಯಿಜಿಲ್ ಕೂಡಿಕೊಂಡು ಜಗತ್ತಿನ ವಿವಿಧ ರಾಷ್ಟ್ರಗಳನ್ನು 15 ಪ್ರಾದೇಶಿಕ ವಲಯಗಳನ್ನಾಗಿ ವಿಂಗಡಿಸಿದರು. ಈ ವಿಂಗಡಣೆಯನ್ನು ರಾಷ್ಟ್ರ ಮತ್ತು ರಾಷ್ಟ್ರ ನಡುವಿನ ಹೊಂದಾಣಿಕಾ ಸಂಬಂಧ, ಅಲ್ಲದೆ ಅವುಗಳ ನಡುವಿನ ಸಂಪರ್ಕ, ರಾಷ್ಟ್ರಗಳ ಶಕ್ತಿಯ ಹಂತ ಮತ್ತು ಪರಸ್ಪರ ಸಂಬಂಧಗಳ ರಚನೆಗಳನ್ನು ಆಧಾರವಾಗಿಟ್ಟುಕೊಂಡು ಜಗತ್ತಿನ ರಾಜಕೀಯ ವಲಯಗಳನ್ನು ಗುರುತಿಸಲಾಯಿತು. ಪ್ರತಿಯೊಂದು ರಾಜಕೀಯ ವಲಯಗಳನ್ನು ಮತ್ತೆ ಕೇಂದ್ರ, ಅಂಚು ಮತ್ತು ಅವುಗಳ ಅಂತಸತ್ವ–ಪ್ರಭಾವಕ್ಕೆ ಒಳಗಾದ ಪ್ರದೇಶ ಎಂದು ವಿಂಗಡಿಸಲಾಗಿದೆ. ಆ 15 ಪ್ರಮುಖ ರಾಜಕೀಯ ವಲಯಗಳು ಈ ಕೆಳಗಿನಂತಿವೆ.

1. ಮಧ್ಯಪ್ರಾಚ್ಯ ಪ್ರದೇಶ (ಯು.ಎ.ಇ. ಒಮ್ಮಾನ್, ಸೌದಿ ಅರೇಬಿಯ, ಕುವೈತ್, ಇರಾಕ್, ಲೆಬನಾನ್, ಸುಡಾನ್, ಜೋರ್ಡಾನ್, ಸಿರಿಯ ಮತ್ತು ದಕ್ಷಿಣ ಯಮನ್)
2. ಪಶ್ಚಿಮ ಯುರೋಪ್ (ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆಲ್ಜಿಯಂ, ನೆದರ್ಲೆಂಡ್ಸ್, ಲುಕ್ಸಂಬರ್ಗ್)
3. ಪೂರ್ವ ಯುರೋಪ್ (ಪೋಲ್ಯೆಂಡ್, ಚೆಕೊಸ್ಲೊವಾಕಿಯ, ಹಂಗೆರಿ, ರೊಮೇನಿಯ ಮತ್ತು ಬಲ್ಗೇರಿಯ)
4. ರಷ್ಯ (ಸೋವಿಯತ್ ಒಕ್ಕೂಟ)
5. ಉತ್ತರ ಅಮೆರಿಕ (ಅ.ಸಂ.ಸಂ. ಮತ್ತು ಕೆನಡ)
6. ಲ್ಯಾಟಿನ್ ಅಮೆರಿಕ (ಅರ್ಜೆಂಟೈನ, ಬೊಲಿವಿಯ, ಬ್ರೆಜಿಲ್, ಚಿಲಿ, ಕೊಲಂಬಿಯ, ಕೋಸ್ಟರಿಕ, ಈಕ್ವೆಡಾರ್, ಎಲ್‌ಸಾಲ್ವಡಾರ್, ಗ್ವಾಟೇಮಾಲ, ಹೊಂಡುರಾಸ್, ಮೆಕ್ಸಿಕೊ, ಪನಾಮ, ಪೆರುಗ್ವೆ, ಪೆರು, ವೆನಿಜುವೇಲ)
7. ಪೂರ್ವ ಏಷ್ಯ (ರಿಪಬ್ಲಿಕ್ ಆಫ್ ಚೈನ)
8. ನೈಋತ್ಯ ಪೆಸಿಫಿಕ್ (ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್)
9. ಆಗ್ನೇಯ ಏಷ್ಯ (ಆಗ್ನೇಯ ಸಾಗರಿಕ ಏಷ್ಯ, ಇಂಡೊನೇಷ್ಯ, ಮಲೇಷ್ಯ, ಫಿಲಿಫೈನ್ಸ್, ಆಗ್ನೇಯ ಏಷ್ಯದ ಮುಖ್ಯ ಭೂಭಾಗ, ವಿಯಟ್ನಾಂ, ಕಾಂಬೋಡಿಯ ಮತ್ತು ಥೈಲೆಂಡ್)
10. ದಕ್ಷಿಣ ಏಷ್ಯ (ಭಾರತ)
11. ಉತ್ತರ ಆಫ್ರಿಕ (ಮೊರಾಕೊ, ಟೂನಿಷಿಯ ಮತ್ತು ಆಲ್ಜೇರಿಯ)
12. ಪಶ್ಚಿಮ ಆಫ್ರಿಕ (ಐವರಿಕೋಸ್ಟ್, ದಾಹೊಮೆ, ಜಿನೀವ, ಸೆನೆಗಲ್, ವೊಲ್ಟಾಸ್, ಮಾಲಿ, ನೈಜರ್ ಮತ್ತು ಟೋಗೊ)
13. ದಕ್ಷಿಣ ಆಫ್ರಿಕ (ದಕ್ಷಿಣ ಆಫ್ರಿಕ ಮತ್ತು ರೊಡೀಷಿಯ)
14. ಕೇಂದ್ರದ ಆಫ್ರಿಕ (ಕಾಂಗೊ, ರೂವಾಂಡ ಮತ್ತು ಬುರುಂಡಿ) ಮತ್ತು
15. ಪೂರ್ವ ಆಫ್ರಿಕ (ಉಗಾಂಡ, ಕೀನ್ಯ ಮತ್ತು ತಾಂಜನೀಯ) (ಎಸ್.ಎಸ್.ಎಸ್.)

**ಪ್ರಮಾಣಕ ಸಿದ್ಧಾಂತ ಅಥವಾ ಮಾದರಿ ಸಿದ್ಧಾಂತ:** ಯಾವುದೇ ವಿಷಯ ತಪ್ಪು ಅಥವಾ ಸರಿ ಎಂದು ನಿರ್ಣಯಿಸುವ ಹಾಗೂ ಭವಿಷ್ಯದಲ್ಲಿ ಆ ವಿಷಯ ಹೇಗಿರಬೇಕೆಂದು ತಿಳಿಸುವ ಸಿದ್ಧಾಂತ. ಜೆ.ಎನ್.ಕೇನ್ಸ್ ಪ್ರಕಾರ ಯಾವ ವಿಷಯ ಹೇಗಿರಬೇಕು ಎಂಬುದನ್ನು ವಿವೇಚಿಸುವ ಶಾಸ್ತ್ರವೇ ಮಾದರಿ ವಿಜ್ಞಾನ.

ಪ್ರಮಾಣಕ ಸಿದ್ಧಾಂತ ವಾಸ್ತವಿಕ ಸಿದ್ಧಾಂತಕ್ಕೆ (ಪಾಸಿಟಿವ್ ಥಿಯರಿ) ವಿರುದ್ಧವಾದುದು. ವಾಸ್ತವಿಕ ಸಿದ್ಧಾಂತ ಯಾವ ವಿಷಯ ಹೇಗಿದೆ ಎಂಬುದನ್ನು ತಿಳಿಸುವ ಕ್ರಮಬದ್ಧವಾದ ಶಾಸ್ತ್ರವಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಮಾಣಕ ಸಿದ್ಧಾಂತ ವಿಷಯ ಭವಿಷ್ಯದಲ್ಲಿ ಹೇಗಿರಬೇಕು ಎಂದು ವಿವೇಚಿಸಿದರೆ ವಾಸ್ತವಿಕ ಸಿದ್ಧಾಂತ ವಿಷಯ ಈಗ ಹೇಗಿದೆ ಎಂಬುದನ್ನು ತಿಳಿಸುತ್ತದೆ.

ವಾಸ್ತವಿಕ ವಿಜ್ಞಾನ ವಿಷಯಗಳ ಯಥಾಸ್ಥಿತಿಯನ್ನು ವಿವರಿಸುತ್ತವೆ. ಆದರೆ ಮಾದರಿ ವಿಜ್ಞಾನ ವಿಷಯಗಳ ಒಳಿತು ಕೆಡಕುಗಳನ್ನು ನಿಷ್ಕರ್ಷಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಯಾವುದೇ ವಿಷಯದ ವಾಸ್ತವ ವರ್ಣನೆ ವಾಸ್ತವಿಕ ವಿಜ್ಞಾನದ ಕೆಲಸ. ವಿಷಯಗಳ ಮೌಲ್ಯ ನಿರ್ಧಾರ ಮಾದರಿ ವಿಜ್ಞಾನದ ವ್ಯಾಪ್ತಿಗೆ ಸೇರಿದ್ದು. (ಜಿ.ಡಿ.)

**ಪ್ರಮಾಣಾನುಗುಣ ವೃತ್ತಗಳು:** ಯಾವುದಾದರೊಂದು ಅಂಕಿ–ಅಂಶ ಸರಣಿಯ ಸಂಖ್ಯೆಗಳ ಸಂಬಂಧವನ್ನು ರೂಪಿಸಲು ಇದನ್ನು ಬಳಸಲಾಗುವುದು. ಉದಾ: ಯಾವುದಾದರೊಂದು ಬೆಳೆಯ ಉತ್ಪಾದನೆಯನ್ನು ತೆಗೆದುಕೊಂಡು, ಅದರ ಉತ್ಪಾದನೆ ಕಂಡು ಬರುವ ದೇಶಗಳ ಅಂಕಿ ಅಂಶಗಳಿಗನುಗುಣವಾಗಿ ವೃತ್ತಗಳ ಗಾತ್ರದಲ್ಲಿ ವ್ಯತ್ಯಾಸವನ್ನು ತೋರಿಸುತ್ತೇವೆ. ಅದನ್ನು ಪ್ರಮಾಣಾನುಗುಣ ವೃತ್ತಗಳೆನ್ನುವರು. (ಜಿ.ಕೆ.)

**ಪ್ರಮುಖ ಕೈಗಾರಿಕಾ ಪ್ರದೇಶಗಳು:** ಬೇರೆ ಬೇರೆ ಕೈಗಾರಿಕೆಗಳು ದಟ್ಟವಾಗಿ ಒಂದೇ ವಿಶಾಲ ಪ್ರದೇಶದಲ್ಲಿ ಕೇಂದ್ರೀಕೃತವಾಗಿರುವುದನ್ನು ಕೈಗಾರಿಕಾ ಪ್ರದೇಶಗಳು ಎಂದು ಪರಿಗಣಿಸಲಾಗಿದೆ. ಮಾನವನ ಆರ್ಥಿಕ ಚಟುವಟಿಕೆಗಳು ಬಹುವಾಗಿ ಕೈಗಾರಿಕೋದ್ಯಮವನ್ನು ಅವಲಂಬಿಸಿವೆ. ಕೈಗಾರಿಕಾ ಪ್ರದೇಶದ ಬೆಳೆವಣಿಗೆ ಮತ್ತು ಅದರ ವ್ಯಾಪ್ತಿ ವಿಸ್ತರಣೆಯು ಶಕ್ತಿ ಸಾಧನಗಳ ಲಭ್ಯತೆ, ಕಚ್ಚಾ ಪದಾರ್ಥಗಳ ದೊರಕುವಿಕೆ, ಬಂದರು ಅಥವಾ ರೇವು ಪಟ್ಟಣಗಳ ಸಾಮೀಪ್ಯತೆ ಸಾರಿಗೆ ವ್ಯವಸ್ಥೆ ಹಾಗೂ ಜನಸಾಂದ್ರತೆ ಮತ್ತು ಮಾರುಕಟ್ಟೆ ಇವೇ ಮೊದಲಾದ ಅಂಶಗಳಿಂದ ಪ್ರಭಾವಿತಗೊಂಡಿದೆ.

ಅಮೆರಿಕ ಸಂಯುಕ್ತ ಸಂಸ್ಥಾನದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಪ್ರಗತಿ ಯುರೋಪ್ ಖಂಡಕ್ಕಿಂತ ವಿಳಂಬವಾಗದೆಯೇ ಆರಂಭವಾಯಿತು. ಆದರೆ ಇಂದು ಕೈಗಾರಿಕೆ ಮತ್ತು ತಾಂತ್ರಿಕತೆಯ ಕ್ಷೇತ್ರಗಳೆರಡರದಲ್ಲೂ ಮಹತ್ತರ ಸಾಧನೆ ಮಾಡಿದೆ.

ಈಶಾನ್ಯ ಕೈಗಾರಿಕಾ ಪ್ರದೇಶ: ಈ ಪ್ರದೇಶ ದೇಶದ ಒಟ್ಟು ಜನಸಂಖ್ಯೆಯ ಶೇ. 50 ರಷ್ಟನ್ನು, ದೇಶದ ವಿಸ್ತೀರ್ಣದಲ್ಲಿ ಶೇ. 10 ರಷ್ಟನ್ನು ಹಾಗೂ ಒಟ್ಟು ಕೈಗಾರಿಕೆಗಳಲ್ಲಿ ಶೇ.75 ರಷ್ಟನ್ನು ಮತ್ತು ಕಾರ್ಮಿಕರ ಸಂಖ್ಯೆಯಲ್ಲಿ $^{2}/_{3}$ ಭಾಗಕ್ಕಿಂತಲೂ ಹೆಚ್ಚು ಪ್ರಮಾಣವನ್ನು ಹೊಂದಿದೆ. ಇಲ್ಲಿನ ಐತಿಹಾಸಿಕ, ಭೌಗೋಳಿಕ ಹಾಗೂ ಆರ್ಥಿಕಾಂಶಗಳು ಪೂರಕವಾಗಿದ್ದು, ಕೈಗಾರಿಕೆಯನ್ನು ಪ್ರೋತ್ಸಾಹಿಸುತ್ತಿವೆ. ಅಪಲೇಷಿಯನ್ ಪರ್ವತ ಸರಣಿಯಲ್ಲಿ ಕಲ್ಲಿದ್ದಲು, ಪೆಟ್ರೋಲಿಯಮ್ ದೊರೆತರೆ ನ್ಯೂ ಇಂಗ್ಲೆಂಡ್ ಪ್ರಾಂತ್ಯದಿಂದ ಜಲವಿದ್ಯುತ್ ಪೂರೈಕೆಯಾಗುತ್ತದೆ. ಮೆಸಾಬಿ ಪ್ರಾಂತ್ಯದಲ್ಲಿ ಕಬ್ಬಿಣದ ಅದಿರಿನ ಜೊತೆಗೆ ಇತರೆ ಖನಿಜಗಳು ದೊರೆಯುತ್ತವೆ. ಒಳನಾಡ ಜಲಸಾರಿಗೆಯ ಜೊತೆಗೆ ರಸ್ತೆ ರೈಲು ಸಾರಿಗೆ ಸಂಪರ್ಕ ವ್ಯವಸ್ಥೆ ಉತ್ತಮವಾಗಿದೆ. ಇಲ್ಲಿನ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಕೃಷಿಯಿಂದ ಅಪರಿಮಿತ ಕಚ್ಚಾ ವಸ್ತುಗಳು ದೊರೆಯುತ್ತವೆ. ಉತ್ಪನ್ನಗಳಿಗೆ ಸ್ಥಳೀಯ ಹಾಗೂ ವಿದೇಶಿ ಮಾರುಕಟ್ಟೆ ಹತ್ತಿರವಿದೆ. ಅಲ್ಲದೆ ಹಿಂದಿನಿಂದ ನೆಲೆಸಿರುವ ಯುರೋಪಿಯನ್ನರ ಔದ್ಯೋಗಿಕ ಪರಿಣಿತಿ,ತಾಂತ್ರಿಕ ಮತ್ತು ಆರ್ಥಿಕ ನೆರವು ಸಿಗುತ್ತಲಿದೆ. ಈ ವಲಯದ ಪ್ರಮುಖ ಕೈಗಾರಿಕಾ ಜಿಲ್ಲೆಗಳೆಂದರೆ;

ಅ) ಪಿಟ್ಸ್ ಬರ್ಗ್ ಪ್ರದೇಶ: ಇದು ಪಿಟ್ಸ್‌ಬರ್ಗ್, ವ್ಹೀಲಿಂಗ್ ಮತ್ತು ಕ್ಲೀವ್‌ಲೆಂಡ್ ಜಿಲ್ಲೆಗಳನ್ನು ಒಳಗೊಂಡಿದೆ. ಕೈಗಾರಿಕಾ ಕೇಂದ್ರಗಳಿಗೆ ಓಹಿಯೋ ನದಿಯ ಮೂಲಕ ಕಲ್ಲಿದ್ದಲನ್ನು ಅಪಲೇಷಿಯನ್ ಪ್ರದೇಶದಿಂದ ಸಾಗಿಸುವರು. ಪಂಚ ಮಹಾಸಾಗರಗಳ ಜಲಸಾರಿಗೆಯ ಮೂಲಕ ಕಬ್ಬಿಣದ ಅದಿರನ್ನು ಲೇಕ್ ಸುಪಿರೀಯರ್‌ನಿಂದ ರವಾನಿಸುವರು. ಆದ್ದರಿಂದಲೇ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಪಿಟ್ಸ್‌ಬರ್ಗ್, ಗಾಜು ಮತ್ತು ಬಟ್ಟೆ ಕೈಗಾರಿಕೆ, ಆಕ್ರನ್‌ನಲ್ಲಿ ರಬ್ಬರ್ ಹಾಗೂ ಲಿವರ್‌ಪೂಲ್‌ನಲ್ಲಿ ಪಿಂಗಾಣಿ ಕೈಗಾರಿಕೆಗಳಿವೆ.

ಆ) ನ್ಯೂಯಾರ್ಕ್ – ಫಿಲಿಡೆಲ್ಫಿಯ ಬಾಲ್ಟಿಮೋರ್ ಜಿಲ್ಲೆಗಳು: ಇವು ಪೆನ್ಸಿಲ್ವೇನಿಯದ ಪೂರ್ವ ಹಾಗೂ ಉತ್ತರ ನ್ಯೂಜೆರ್ಸಿಗಳನ್ನೂ ಒಳಗೊಂಡಿವೆ. ಅಪಲೇಷಿಯನ್‌ನಿಂದ ಕಲ್ಲಿದ್ದಲು, ಬಂದರು, ಆಂತರಿಕ ವಿಶಾಲ ಮಾರುಕಟ್ಟೆಗಳು ಪೂರಕವಾಗಿವೆ. ಇಲ್ಲಿನ ಪ್ರಮುಖ ಕೈಗಾರಿಕೆಗಳೆಂದರೆ ಕಬ್ಬಿಣ ಮತ್ತು ಉಕ್ಕು, ಬಟ್ಟೆ, ತಾಮ್ರ, ಪೆಟ್ರೋಲಿಯಮ್ ಶುದ್ಧೀಕರಣ, ಫೌಂಡ್ರಿ ವಸ್ತುಗಳು, ವಿದ್ಯುತ್ ಉಪಕರಣ, ಸಿಗಾರ್, ಸಕ್ಕರೆ, ಚರ್ಮ, ರೈಲ್ವೆ ಎಂಜಿನ್ ತಯಾರಿಕೆ, ರೇಷ್ಮೆ, ರೆಯಾನ್, ನಿಟ್ಟಿಂಗ್ ವಸ್ತು ಹಾಗೂ ಸುಗಂಧ ವಸ್ತುಗಳ ತಯಾರಿಕಾ ಕೈಗಾರಿಕೆಗಳು.

ಇ) ದಕ್ಷಿಣ ನ್ಯೂ ಇಂಗ್ಲೆಂಡ್ ಪ್ರದೇಶ: ಜನಭರಿತ ಪ್ರದೇಶ, ಇಲ್ಲಿ ಕಲ್ಲಿದ್ದಲಿನ ಕೊರತೆ ಇದ್ದರೂ ನಯಾಗರ ಜಲಪಾತದಿಂದ ಸಿಗುವ ಜಲಶಕ್ತಿಯಿಂದ ಕೈಗಾರಿಕೆ ಅಭಿವೃದ್ಧಿಗೊಂಡಿದೆ. ಹತ್ತಿ ಗಿರಣಿಗಳು ಮೆಸ್ಸಾಚುಸೆಟ್ಸ್, ರೋಡ್ ಐಲೆಂಡ್, ಫಾಲ್‌ರಿವರ್ ಲಾರೆನ್ಸ್, ಲೋವೆಲ್, ಮ್ಯಾಂಚೆಸ್ಟರ್ ಮತ್ತು ಪ್ರಾವಿಡೆನ್ಸ್‌ಗಳಲ್ಲಿ ಕೇಂದ್ರೀಕರಿಸಿವೆ. ವೊರ್ಸೆಸ್ಟರ್ ಗಿರಣಿಯಂತ್ರ ತಯಾರಿಕೆಗೆ ಪ್ರಸಿದ್ಧವಾಗಿದೆ. ಅಲ್ಲದೆ ಮರದ ತಿರುಳು, ಕಾಗದ, ಪಾದರಕ್ಷೆ ಉದ್ಯಮಗಳೂ ಇವೆ.

ಈ) ಡೆಟ್ರಾಯಿಟ್ ಜಿಲ್ಲೆ: ಡೆಟ್ರಾಯಿಟ್,ಲಾನ್ಸಿಂಗ್, ಫ್ಲಿಂಟ್ ಪೊಂಟಿಯಾಕ್ ಮತ್ತು ಜಾಕ್ಸನ್ ನಗರಗಳನ್ನು ಒಳಗೊಂಡಿದೆ. ಫೋರ್ಡ್ ಕ್ರಿಸ್ಲರ್ ಮತ್ತು ಜನರಲ್ ಮೋಟರ್ ಕಂಪನಿಗಳು ಇಲ್ಲಿನ ಪ್ರಸಿದ್ಧ ವಾಹನ ತಯಾರಿಕಾ ಸಂಸ್ಥೆಗಳಾಗಿವೆ. ಇದಲ್ಲದೆ ಕಬ್ಬಿಣ ಮತ್ತು ಉಕ್ಕು, ಫೌಂಡ್ರಿ ಯಂತ್ರೋಪಕರಣ, ತಂತಿ, ಬಣ್ಣದ ಕೈಗಾರಿಕೆಗಳೂ ಇವೆ.

ಉ) ದಕ್ಷಿಣ ಮಿಶಿಗನ್ ಸರೋವರ ಪ್ರದೇಶ: ಇದು ಶಿಕಾಗೊ, ವಿಸ್ಕಾನ್ಸಿನ್ ಹಾಗೂ ಇಂಡಿಯಾನ ಭಾಗಗಳನ್ನೊಳಗೊಂಡಿದೆ. ಮಿಲ್ವಾಕೀ, ಗಾರಿ ಮತ್ತು ಸೌತ್‌ಬೆಂಡ್ ಪ್ರದೇಶಗಳು ಪಂಚಮಹಾಸರೋವರ ಪ್ರದೇಶಗಳಿಂದ ಕಬ್ಬಿಣದ ಅದಿರು, ಉತ್ತರ ಅಪಲೇಷಿಯನ್ ಪ್ರದೇಶದಿಂದ ಕಲ್ಲಿದ್ದಲನ್ನು ಪಡೆದು, ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಲ್ಲಿ ಅಭಿವೃದ್ಧಿಗೊಂಡಿವೆ. ಅಲ್ಲದೆ ಫೌಂಡ್ರಿ, ರೈಲ್ವೆಕಾರ್,ರೈಲ್ವೆ ಎಂಜಿನ್,ಕೃಷಿ ಯಂತ್ರಗಳು, ವಿದ್ಯುತ್ ಯಂತ್ರಗಳು, ಮೋಟರ್ ವಾಹನ, ರಾಸಾಯನಿಕ, ಮುದ್ರಣ ಕೈಗಾರಿಕೆ ಇತ್ಯಾದಿ, ಹಾಗೂ ಶಿಕಾಗೊ ಮಾಂಸ ಹದಮಾಡಿ ತುಂಬುವ ಸುಪ್ರಸಿದ್ಧ ಕೈಗಾರಿಕಾ ಕೇಂದ್ರವಾಗಿದೆ.

ಉ. ದಕ್ಷಿಣ ಕೈಗಾರಿಕಾ ಪ್ರದೇಶ: ಕೈಗಾರಿಕಾ ವಿಕೇಂದ್ರೀಕರಣದಿಂದ ಈ ಪ್ರದೇಶ ಕೈಗಾರಿಕೆಯಲ್ಲಿ ಅಭಿವೃದ್ಧಿಗೊಂಡಿದೆ. ಅಲ್ಲಿ ಸ್ಥಳೀಯವಾಗಿ ದೊರೆಯುವ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರು, ಜಲ ವಿದ್ಯುತ್, ಪೆಟ್ರೋಲಿಯಂ ಉತ್ಪಾದನೆ, ಜನಸಂಖ್ಯಾ ಬೆಳವಣಿಗೆ ಹಾಗೂ ಸ್ಥಳೀಯ ಮಾರುಕಟ್ಟೆಗಳು ಇದರ ಪ್ರಗತಿಗೆ ಪೂರಕವಾಗಿರುವ ಮೂಲಭೂತ ಅಂಶಗಳಾಗಿವೆ. ಈ ಪ್ರದೇಶ ಅಮೇರಿಕ ಸಂಯುಕ್ತ ಸಂಸ್ಥಾನದ ಬಹುಪಾಲು ಕಚ್ಚಾ ಹತ್ತಿ, ಹೊಗೆಸೊಪ್ಪು ಮತ್ತು ಕಬ್ಬುಗಳನ್ನು ಒದಗಿಸುತ್ತಿದೆ ಅಲಬಾಮದಲ್ಲಿ ಕಬ್ಬಿಣದ ಅದಿರು, ಪ್ಲೋರಿಡಾದಲ್ಲಿ ಶಿಲಾ ಫಾಸ್ಫೇಟ್, ಜಾರ್ಜಿಯದಲ್ಲಿ ಕಯೋಲಿನ್ ಹಾಗೂ ಅಪಲೇಷಿಯನ್‌ನಿಂದ ಅರಣ್ಯ ವಸ್ತುಗಳೂ ದೊರೆಯುತ್ತವೆ. ಈ ವಲಯ ಟೆಕ್ಸಾಸ್‌ನಿಂದ ಕೆರೋಲಿನಾದವರೆಗೂ ವಿಸ್ತರಿಸಿದ್ದು, ಇದನ್ನು ಆಗ್ನೇಯ ಮತ್ತು ನೈಋತ್ಯ ವಲಯಗಳು ಎಂದು ವಿಭಾಗಿಸಬಹುದು.

ಆಗ್ನೇಯ ವಲಯದಲ್ಲಿ ಅಲಬಾಮ, ಕರೋಲಿನ, ವರ್ಜಿನಿಯ, ಟೆನೆಸ್ಸಿ ಮತ್ತು ಜಾರ್ಜಿಯ ಪ್ರಾಂತ್ಯಗಳು ಸೇರಿವೆ. ಇವು ಜಲವಿದ್ಯುತ್ತನ್ನು ತಯಾರಿಸುವ ಘಟಕಗಳಿರುವ ಪೀಡ್ ಮೌಂಟ್ ಪ್ರಸ್ಥಭೂಮಿಯ ಹತ್ತಿರ ನೆಲೆಸಿವೆ. ಬರ್ಮಿಂಗ್ ಹ್ಯಾಂ, ಕೊಲಂಬಿಯ, ಚಾಲೋಟ್ಸ್, ನಾಕ್ಸ್‌ವಿಲ್ಲೆ, ಆಗುಸ್ಟ, ಅಟ್ಲಾಂಟ, ಬೆಸ್ಸೆಮರ್,ಅನ್ನಿಸ್ಟರ್, ಗಾಡ್ಸಡೆನ್ ಮತ್ತು ಚಟ್ಟಾನುಗ–ಇವು ಪ್ರಮುಖ ಕೈಗಾರಿಕಾ ಕೇಂದ್ರಗಳಾಗಿವೆ. ಇಲ್ಲಿ ಕಬ್ಬಿಣ ಮತ್ತು ಉಕ್ಕು, ಜವಳಿ ಉದ್ಯಮ ಅತಿ ಮುಖ್ಯವಾದವುಗಳು. ಅಲ್ಲದೆ ಹೊಗೆಸೊಪ್ಪು, ಪೀಠೋಪಕರಣ ತಯಾರಿಕೆಯ ಉದ್ಯಮಗಳೂ ಇವೆ.

ನೈಋತ್ಯ ವಿಭಾಗ ಟೆಕ್ಸಾಸ್, ಓಕ್ಲಹಾಮ ಮತ್ತು ಕಾನ್ಸಾಸ್ ಪ್ರಾಂತ್ಯಗಳನ್ನು ಒಳಗೊಂಡಿದೆ. ಇಲ್ಲಿ ಆಹಾರ ಪದಾರ್ಥಗಳ ಸಂಸ್ಕರಣ, ವಿಮಾನ ಕೈಗಾರಿಕೆ, ರಸಾಯನಿಕ ಮತ್ತು ತೈಲ ಶುದ್ಧೀಕರಣ ಉದ್ಯಮಗಳಿವೆ. ತೈಲ ನಿಕ್ಷೇಪ, ಕಚ್ಚಾ ಕಚ್ಚಾವಸ್ತು ಮೊದಲಾದವುಗಳ ಪೂರೈಕೆ, ಅಂದರೆ ಸಲ್ಫರ್, ಶಿಲಾಫಾಸ್ಫೇಟ್ ಇತ್ಯಾದಿ. ಪೂರ್ವ ಕರಾವಳಿಯ ಸನ್ನಿವೇಶ ಹಾಗೂ ಬಂಡವಾಳದ ಪೂರೈಕೆಯಿಂದ ಈ ಪ್ರದೇಶ ಅಭಿವೃದ್ಧಿ ಗೊಂಡಿವೆ. ಇಲ್ಲಿನ ಪ್ರಮುಖ ಕೈಗಾರಿಕಾ ಕೇಂದ್ರಗಳು ವಿಮಾಂಟ್, ಹೌಸ್ಟನ್, ಡಲ್ಲಾಸ್, ಫೋರ್ಟ್‌ವರ್ಥ್ ಮತ್ತು ವಿಚಿತಾಗಳು, ಹೌಸ್ಟನ್ ತೈಲ ಶುದ್ಧೀಕರಣಕ್ಕೆ ಪ್ರಸಿದ್ಧವಾಗಿದೆ. ಇಲ್ಲಿ 12 ತೈಲ ಶುದ್ಧೀಕರಣ ಸ್ಥಾವರಗಳಿದ್ದು, ಇದನ್ನೇ ಆಧರಿಸಿರುವ ರಾಸಾಯನಿಕ ಮತ್ತು ಕೃತಕ ರಬ್ಬರ್ ತಯಾರಿಕಾ ಘಟಕಗಳಿವೆ. ಪೋರ್ಡ್‌ವರ್ಥ ವಿಮಾನ ತಯಾರಿಕೆಗೆ ಮತ್ತು ಡಲ್ಲಾಸ್ ಹತ್ತಿ ಜವಳಿ ಉದ್ಯಮಕ್ಕೆ ಪ್ರಸಿದ್ಧವಾಗಿದೆ.

ಪೆಸಿಫಿಕ್ ಕರಾವಳಿ ಕೈಗಾರಿಕಾ ಪ್ರದೇಶ: ಇದು ಅಮೇರಿಕ ಸಂಯುಕ್ತ ಸಂಸ್ಥಾನದ ಅತಿ ಚಿಕ್ಕದಾದ ಕೈಗಾರಿಕಾ ವಲಯ. ಇದು ವಾಷಿಂಗ್‌ಟನ್, ಕ್ಯಾಲಿಫೋರ್ನಿಯ ಮತ್ತು ಓರೆಗಾನ್ ಪ್ರಾಂತ್ಯಗಳನ್ನು ಒಳಗೊಂಡಿದೆ. ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ತೈಲ ಶುದ್ಧೀಕರಣ, ಹಡಗು ನಿರ್ಮಾಣ, ಉಕ್ಕು ಸ್ಥಾವರ ಮತ್ತು ಆಹಾರ ಸಂಸ್ಕರಣ ಉದ್ಯಮಗಳು ಪ್ರಧಾನವಾಗಿವೆ. ಲಾಸ್ ಏಂಜಲೀಸ್ ಮತ್ತು ಸ್ಯಾನ್‌ಡಿಯಾಗೊಗಳಲ್ಲಿ ತೈಲ ಶುದ್ಧೀಕರಣ, ಉಕ್ಕು ತಯಾರಿಕೆ, ವಿಮಾನ ಮತ್ತು ಸಿನಿಮಾ ಉದ್ಯಮಗಳು ಅಭಿವೃದ್ಧಿಗೊಂಡಿವೆ. ಸೀಯಾಟಲ್ ಮತ್ತು ವಾಷಿಂಗ್‌ಟನ್‌ಗಳಲ್ಲಿ ಮೀನು ಸಂಸ್ಕರಣೆ, ಅಲ್ಯೂಮಿನಿಯಂ, ವಿಮಾನ ಹಾಗೂ ಮರಮಟ್ಟು ಉದ್ಯಮಗಳಿವೆ.

ಕೆನಡದ ಕೈಗಾರಿಕಾ ವಲಯ: ಈ ರಾಷ್ಟ್ರದ ಉತ್ತರ ಭಾಗ ಬಹು ಶೀತ ಹಾಗೂ ವಿರಳ ಜನಸಂಖ್ಯೆಯಿಂದ ಕೂಡಿದ್ದು ಕೈಗಾರಿಕೆಯೂ ಕೇವಲ ಪಂಚಮಹಾ ಸರೋವರಗಳ ಪರ್ಯಾಯ ಭಾಗಕ್ಕೆ ಮಾತ್ರ ಸೀಮಿತಗೊಂಡಿದೆ. ಹಾಗಾಗಿ ಇದು ಮಾಂಟ್ರಿಯಲ್, ಕ್ಯೂಬೆಕ್, ಟೊರಾಂಟೊ ಹಾಗೂ ಒಟ್ಟಾ ಪ್ರಾಂತ್ಯಗಳಿಗೆ ಸೀಮಿತಗೊಂಡಿದೆ. ಜಲವಿದ್ಯುತ್ ಹಾಗೂ ಬಂಡವಾಳದ ಲಭ್ಯತೆ ಕೈಗಾರಿಕೆಯ ಪ್ರಗತಿಗೆ ಕಾರಣವಾಗಿದೆ. ಎಂಜಿನಿಯರಿಂಗ್, ಸ್ವಯಂಚಾಲಿತ ವಾಹನ, ರಾಸಾಯನಿಕ, ಜವಳಿ, ಮರಕೊಯ್ಯುವುದು ಮತ್ತು ಆಹಾರ ಪದಾರ್ಥಗಳ ಸಂಸ್ಕರಣೆ ಇಲ್ಲಿನ ಪ್ರಮುಖ ಉದ್ಯಮಗಳು. ಇವು ಟೊರಾಂಟೊ ಮತ್ತು ಸುತ್ತಮುತ್ತ ಅಭಿವೃದ್ಧಿಗೊಂಡಿವೆ. ಇಲ್ಲಿರುವ ಇತರ ಕೇಂದ್ರಗಳೆಂದರೆ ಹ್ಯಾಮಿಲ್ಟನ್, ಎಂಡ್‌ಸಾರ್ ಮತ್ತು ಕಿಂಗ್‌ಸ್ಟನ್‌ಗಳು.

2. ಯುರೋಪಿನ ವಾಯವ್ಯ ಕೈಗಾರಿಕಾ ಪ್ರದೇಶ: ಬೃಹತ್ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಯುರೋಪ್‌ನಲ್ಲಿ ಕೈಗಾರಿಕಾ ಕ್ರಾಂತಿ ಆರಂಭಗೊಂಡಿತು. ತಾಂತ್ರಿಕ ನೈಪುಣ್ಯತೆ, ಕಲ್ಲಿದ್ದಲು ಪ್ರದೇಶ, ಹೊಸಯಂತ್ರ ತಯಾರಿಸುವ ಪ್ರವೃತ್ತಿಯ ಸ್ವಾಮ್ಯತೆ, ಕೈಗಾರಿಕಾ ಕಾರ್ಯದಲ್ಲಿ ನಿರತ ಜನಸಂಖ್ಯೆಯುಳ್ಳ ನಗರ ಮತ್ತು ಪಟ್ಟಣಗಳು ಮುಂತಾದವು ಯುರೋಪಿನ ಕೈಗಾರಿಕೆಯ ಪ್ರಾಧಾನ್ಯತೆಗೆ ಕಾರಣಗಳಾಗಿವೆ. ಈ ಖಂಡದ ವಾಯವ್ಯ ಭಾಗದಲ್ಲಿ ಕೈಗಾರಿಕೆಗಳು ವಿಶೇಷವಾಗಿ ಹಂಚಿಕೆಯಾಗಿವೆ.

ಅ) ರ್‍ಹೂರ್ ನದಿ ಬಯಲು ಪ್ರದೇಶ: ಜರ್ಮನಿಯ ರ್‍ಹೂರ್ ನದಿ ಬಯಲು ಪ್ರದೇಶ ಯುರೋಪ್‌ನಲ್ಲಿಯೇ ದೊಡ್ಡ ಕೈಗಾರಿಕಾ ವಲಯ. ಇದು ಸು. 80 ಕಿಮೀ ಪೂರ್ವ ಪಶ್ಚಿಮದಲ್ಲಿ ಅಗಲವಾಗಿದೆ. ಇಲ್ಲಿ ಕೈಗಾರಿಕೆ ಅಭಿವೃದ್ಧಿಗೆ ಹಲವು ಮೂಲಭೂತ ಅಂಶಗಳು ಕಾರಣವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ: ರ್‍ಹೂರ್ ನದಿ ಬಯಲಿನಲ್ಲಿರುವ ಸಮೃದ್ಧ ಕಲ್ಲಿದ್ದಲು ನಿಕ್ಷೇಪ, ವಿಶೇಷವಾಗಿ ಕೋಕಿಂಗ್ ಕಲ್ಲಿದ್ದಲು, ರ್‍ಹೈನ್ ಮತ್ತು ಅದರ ಉಪ ನದಿಗಳಿಂದ ಸುಲಭ ದರದ ಒಳನಾಡಿನ ಜಲಸಾರಿಗೆ ಸೌಲಭ್ಯ, ಜೊತೆಗೆ ಉತ್ತಮ ಮಟ್ಟದ ರಸ್ತೆ ಮತ್ತು ರೈಲು ಸಾರಿಗೆ ವ್ಯವಸ್ಥೆ. ಇವೆಲ್ಲದರ ಜೊತೆಗೆ ಜರ್ಮನ್ನರ ಪರಿಣತಿ ಮತ್ತು ಜಾಣತನಗಳು ಬಂಡವಾಳ, ತಾಂತ್ರಿಕತೆ, ವೈಜ್ಞಾನಿಕತೆ ಮೊದಲಾದವುಗಳು ಕಾರಣವಾಗಿವೆ.

ಇಲ್ಲಿರುವ ಪ್ರಮುಖ ಕೈಗಾರಿಕಾವಲಯಗಳೆಂದರೆ, ಡ್ಯೂಸೆಲ್ ಡಾರ್ಫ್ , ಜೆಲ್ಸಂಕಿಚನ್, ಡ್ಯೂಸ್ಬರ್ಗ್, ಎಸ್ಸೆನ್, ಬೊಚುಮ್ ಮತ್ತು ಡಾರ್ಟ್‌ಮಡ. ಇವು ಕಬ್ಬಿಣ ಮತ್ತು ಉಕ್ಕು, ಭಾರಿ ಎಂಜಿನಿಯರಿಂಗ್ ಮತ್ತು ಯಂತ್ರೋಪಕರಣಗಳ ಉದ್ಯಮವನ್ನು ಹೊಂದಿವೆ. ಸೊಲಿನ್‌ಜೆನ್, ಹೇಗೆನ್ ಮತ್ತು ಕಿಮ್‌ಷೆಡ್‌ಗಳು ಆಯುಧ ಮತ್ತು ಕಟ್ಲಲ್ಲರಿಗಳ ತಯಾರಿಕೆಗೆ ಪ್ರಸಿದ್ಧವಾಗಿದೆ. ಬ್ರಮನ್ ಮತ್ತು ಎಲ್ಬರ್ ಫೀಲ್ಡ್‌ಗಳು, ಉಣ್ಣೆ ಬಟ್ಟೆ, ರೇಷ್ಮೆ ಜವಳಿಗೆ ಪ್ರಸಿದ್ಧವಾಗಿವೆ. ಫ್ರಾಂಕ್‌ಫರ್ಟ್‌ನಲ್ಲಿ ರೈಲ್ವೆ ಎಂಜಿನಿಯರಿಂಗ್, ಮೇಂಜ್‌ನಲ್ಲಿ ಚರ್ಮೋದ್ಯಮ, ಮ್ಯಾನ್‌ಹೈಮ್‌ನಲ್ಲಿ ರಾಸಾಯನಿಕ ಮತ್ತು ವಿದ್ಯುದುಪಕರಣ, ಬರ್ಲಿನ್ ಹ್ಯಾಂಬರ್ಗ್‌ನಲ್ಲಿ ಪೀಠೋಪಕರಣಗಳ ತಯಾರಿಕೆ, ಮ್ಯೂನಿಚ್‌ನಲ್ಲಿ ಹಡಗು ನಿರ್ಮಾಣ, ಸ್ಟುಟ್‌ಗರ್ಟ್‌ನಲ್ಲಿ ಮದ್ಯ ತಯಾರಿಕೆ, ಹ್ಯಾನೋವರ್‌ನಲ್ಲಿ ಸ್ವಯಂಚಾಲಿತ ವಾಹನಗಳ ತಯಾರಿಕೆ, ಅಚೆನ್‌ನಲ್ಲಿ ಶಸ್ತ್ರ ಚಿಕಿತ್ಸಾ ಉಪಕರಣಗಳು ಹಾಗೂ ಸಾರ್‌ಬ್ರುಕೆನ್‌ಗಳಲ್ಲಿ ರಾಸಾಯನಿಕ ಮತ್ತು ಜವಳಿ ಉದ್ಯಮಗಳು ಪ್ರಗತಿಹೊಂದಿದೆ.

ಆ) ಸ್ವಿಸ್ ಪ್ರಸ್ಥಭೂಮಿ ಕೈಗಾರಿಕಾ ಪ್ರದೇಶ: ಈ ಪ್ರದೇಶ ಸು. 28 ಕಿಮೀ ಉದ್ದ ಹಾಗೂ 50 ಕಿಮೀ ಅಗಲವಾದ ಕ್ಷೇತ್ರವನ್ನು ಹೊಂದಿದೆ. ಇದು ಸ್ವಿಟ್ಜರ್ಲೆಂಡಿನ ಸು. ಶೇ. 70 ಭಾಗ ಜನಸಂಖ್ಯೆ ಹೊಂದಿದೆ. ಇಲ್ಲಿರುವ ಜನರಲ್ಲಿ 3/4 ಭಾಗದಷ್ಟು ಜನ ಕೈಗಾರಿಕೆಯಲ್ಲಿ ತೊಡಗಿದ್ದಾರೆ. ಇಲ್ಲಿನ ಕೈಗಾರಿಕಾ ಕೇಂದ್ರೀಕರಣಕ್ಕೆ ಆಲ್ಪ್ಸ್ ಪರ್ವತದಿಂದ ದೊರಕುವ ಜಲವಿದ್ಯುಚ್ಛಕ್ತಿ ಪ್ರಮುಖ ಕಾರಣ. ಜೊತೆಗೆ ಇದರ ಸುತ್ತಲಿರುವ ಸ್ವಿಟ್ಜರ್ಲೆಂಡಿನ ಭೂಭಾಗದಿಂದ ದೊರೆಯುವ ಸುಲಭ ದರದ ಸಮುದ್ರ ಮಾರ್ಗ ತೂಕವುಳ್ಳ ಕಚ್ಚಾಪದಾರ್ಥ ಮತ್ತು ಸಿದ್ಧವಸ್ತು ಸಾಗಿಸಲು ಸಹಕಾರಿಯಾಗಿದೆ. ಇಲ್ಲಿ ಗಡಿಯಾರ ತಯಾರಿಕೆ, ಲಘು ಎಂಜಿನಿಯರಿಂಗ್, ರಸಾಯನಿಕ, ಜವಳಿ, ಯಂತ್ರೋಪಕರಣ, ವಿದ್ಯುದುಪಕರಣ ಮತ್ತು ಸರ್ಜಿಕಲ್ ಉಪಕರಣಗಳ ತಯಾರಿಕೆಯ ಉದ್ಯಮಗಳು ಪ್ರಮುಖವಾಗಿವೆ. ಜ್ಯೂರಿಚ್, ಬಾಸೆಲ್ ಮತ್ತು ಬಾಡೆನ್‌ಗಳಲ್ಲಿ ಈ ಕೈಗಾರಿಕೆಗಳಿವೆ. ಜವಳಿ ಉದ್ಯಮ ಸೇಂಟ್‌ಗ್ಯಾಲೆನ್, ಅಪ್ಪೆಂಜೆನ್ ಮತ್ತು ಜ್ಯೂರಿಕ್‌ಗಳಲ್ಲಿ ನೆಲೆಸಿದೆ. ಜೊತೆಗೆ ಇಲ್ಲಿ ಗಡಿಯಾರ ತಯಾರಿಕೆಯು ಸಾಂಪ್ರದಾಯಕ ಉದ್ಯಮ. ಆದ್ದರಿಂದ ಇಲ್ಲಿನ ಗಡಿಯಾರಗಳಿಗೆ ಪ್ರಪಂಚದಾದ್ಯಂತ ಬೇಡಿಕೆಯಿದೆ.

ಇ) ಲಂಬಾರ್ಡಿ ಮೈದಾನ ಕೈಗಾರಿಕಾ ಪ್ರದೇಶ: ಇಟಲಿಯ ಉತ್ತರದ ಪೋ ನದಿ ಕಣಿವೆ ಅಥವಾ ಲಂಬಾರ್ಡೀಕ ಮೈದಾನ ವಿಶಾಲ ಹಾಗೂ, ಪ್ರಗತಿ ಹೊಂದಿದ ಕೈಗಾರಿಕೀಕೃತ ಪ್ರದೇಶವಾಗಿದೆ. ಪೂರ್ವ ಪಶ್ಚಿಮವಾಗಿ ಉತ್ತರದಲ್ಲಿ ಆಲ್ಪ್ಸ್ ಮತ್ತು ದಕ್ಷಿಣದಲ್ಲಿ ಪೆನೈನ್ ಪರ್ವತಗಳ ನಡುವೆ ನೆಲೆಸಿದೆ. ಈ ಎರಡೂ ಸರಣಿಯಿಂದ ಅನೇಕ ನದಿಗಳು ಪೋನದಿ ಸೇರುತ್ತವೆ. ಇಲ್ಲಿರುವ ಅಸಂಖ್ಯಾತ ಜಲಪಾತಗಳು ಜಲವಿದ್ಯುಚ್ಛಕ್ತಿ ತಯಾರಿಕೆಗೆ ಯೋಗ್ಯವಾಗಿವೆ. ಪೋ ನದಿಯ ಒಳನಾಡ ಜಲಸಾರಿಗೆ ಜೆನೀವದ ಬಂದರು ಹಾಗೂ ರೈಲು ಮಾರ್ಗಗಳು ಕಚ್ಚವಸ್ತು ಮತ್ತು ಸಿದ್ಧವಸ್ತುಗಳ ಸಾಗಣೆಗೆ ಅನುಕೂಲಕರವಾಗಿವೆ. ಮಿಲನ್, ಟುರಿನ್, ಜಿನೀವ ಮತ್ತು ವೆನಿಸ್ ನಗರಗಳಲ್ಲಿ ಕಬ್ಬಿಣ ಮತ್ತು ಉಕ್ಕು, ರಾಸಾಯನಿಕ, ಜವಳಿ, ಸ್ವಯಂ ಚಾಲಿತ ವಾಹಗಳು, ಕಾರ್‌ಗಳು, ಸ್ಕೂಟರ್‌ಗಳು, ಬೆರಳಚ್ಚು ಯಂತ್ರ, ಹೊಲಿಗೆ ಯಂತ್ರ, ವಿದ್ಯುತ್ತು ಮತ್ತು ಕೃಷಿ ಉಪಕರಣ ತಯಾರಿಕೆ ಪ್ರಮುಖವಾಗಿದೆ. ಟುರಿನ್‌ನಲ್ಲಿ ರೈಲು ಬೋಗಿ, ವಿಮಾನ ಮತ್ತು ಜವಳಿ ಉದ್ಯಮಗಳು ಪ್ರಸಿದ್ಧವಾಗಿದೆ. ಜಿನೀವ ಹಡಗು ನಿರ್ಮಾಣ ಮತ್ತು ದುರಸ್ತಿಗೂ ಹಾಗೂ ವೆನಿಸ್ ಕರಕುಶಲ ಕೈಗಾರಿಕೆಗೆ ಪ್ರಸಿದ್ಧವಾಗಿದೆ.

ಈ) ಬ್ರಿಟನ್ನಿನ ಪ್ರದೇಶ: ಬ್ರಿಟನ್ನಿನ ಕೈಗಾರಿಕಾ ವಲಯಗಳು ಕಲ್ಲಿದ್ದಲು ಪ್ರದೇಶಗಳಿಗೆ ಹೊಂದಿಕೊಂಡಂತೆ ಹಂಚಿಕೆಯಾಗಿವೆ. ಬ್ರಿಟನ್ನಿನಲ್ಲಿ ಮಿಡ್‌ಲ್ಯಾಂಡ್ಸ್ ಅತ್ಯಂತ ದೊಡ್ಡದಾದ ಕೈಗಾರಿಕಾ ವಲಯವಾಗಿದೆ. ಇದು ಬರ್ಮಿಂಗ್ ಹ್ಯಾಂ ನಗರವನ್ನೊಳಗೊಂಡಿದೆ. ಇದು ಥರ್ಮಲ್ ವಿದ್ಯುತ್ ಮತ್ತು ಆಮದು ತೈಲ ಶಕ್ತಿಯನ್ನು ಆಧರಿಸಿದೆ. ಇಲ್ಲಿನ ಪ್ರಮುಖ ಕೈಗಾರಿಕಾ ಕೇಂದ್ರಗಳೆಂದರೆ ಡಡ್ಲಿ, ವೂಲ್ವರ್ ಹ್ಯಾಮ್‌ಟನ್, ವಾಲ್‌ಸಾಲ್ ಮತ್ತು ಬ್ರೊಮ್‌ವಿಚ್‌ಗಳು ಕಬ್ಬಿಣ ಮತ್ತು ಉಕ್ಕು, ಎಂಜಿನಿಯರಿಂಗ್ ಸಾರಿಗೆ, ವಿದ್ಯುದುಪಕರಣಗಳು ಗಾಜು, ವಾಹನಗಳ ಬಿಡಿಭಾಗ ತಯಾರಿಕೆಯು ಪ್ರಮುಖ ಉದ್ಯಮಗಳು.

ಈಶಾನ್ಯ ಇಂಗ್ಲೆಂಡ್ ಪ್ರಾಂತ್ಯದಲ್ಲಿ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರು ಹಂಚಿಕೆ ಅಭಿವೃದ್ಧಿಗೆ ಕಾರಣವಾಗಿದೆ. ನ್ಯೂಕ್ಯಾಸಲ್, ರಹ್ಯಾಮ್, ಮಿಡ್ಲ್‌ಸ್‌ಬರೋ ಮತ್ತು ಡಾರ್ಲಿಂಗ್‌ಟನ್ ಪ್ರದೇಶಗಳಲ್ಲಿ ಕಬ್ಬಿಣ ಮತ್ತು ಉಕ್ಕು, ಹಡಗು ನಿರ್ಮಾಣ,

ಎಂಜಿನಿಯರಿಂಗ್, ರಾಸಾಯನಿಕ, ಗಾಜು ತಯಾರಿಕೆ, ಮೆಟಲರ್ಜಿ ಉದ್ಯಮಗಳು ಪ್ರಮುಖವಾದವು. ಯಾರ್ಕ್ ಷೈರ್, ನ್ಯಾಟಿಂಗ್ ಹ್ಯಾಂಷೈರ್, ಡರ್ಬಿಷೈರ್, ಬ್ರಾಡ್‌ಫೋರ್ಡ್, ಹ್ಯಾಲಿಫಾಕ್ಸ್ ಹಡ್ಡರ್ಸ್ ಫೀಲ್ಡ್, ವೇಕ್‌ಫೀಲ್ಡ್ ಮತ್ತು ಲೀಡ್ಸ್‌ಗಳು ಸುಪ್ರಸಿದ್ಧ ಜವಳಿ ಕೇಂದ್ರಗಳಾಗಿವೆ. ಶೆಫೀಲ್ಡ್ ಮತ್ತು ಡರ್ಬಿಷೈರ್‌ಗಳಲ್ಲಿ ಕಟ್ಲರಿ, ಕಬ್ಬಿಣ ಮತ್ತು ಉಕ್ಕು ಹಾಗೂ ಎಂಜಿನಿಯರಿಂಗ್ ಉದ್ಯಮಗಳು ನೆಲೆಸಿವೆ.

ಲಂಕಾಷೈರ್ ಹತ್ತಿಬಟ್ಟೆ ಕೈಗಾರಿಕಾ ಪ್ರದೇಶ. ಇದರ ಮ್ಯಾಂಚೆಸ್ಟರ್ ಪ್ರಪಂಚಪ್ರಸಿದ್ಧ ಹತ್ತಿ ಬಟ್ಟೆ ಕೇಂದ್ರ. ಈ ಪ್ರದೇಶದ ಲಿವರ್‌ಪೂಲ್ ಮತ್ತು ಬಕೆನ್‌ಹೆಡ್‌ನಲ್ಲಿ ಹಡಗು ನಿರ್ಮಾಣ, ವೈಡೈಸ್ ರಸ್‌ಕಾರ್ನ್ ಮತ್ತು ವಾರಿಂಗ್‌ಟನ್‌ಗಳಲ್ಲಿ ಸಾಗರ ತಂತ್ರಜ್ಞಾನ ಹಾಗೂ ತೈಲ ಶುದ್ಧೀಕರಣ ಉದ್ಯಮಗಳಿವೆ. ಗ್ರೇಟರ್ ಲಂಡನ್‌ನಗರ ರಾಜಧಾನಿ ಪ್ರದೇಶ, ಅಲ್ಲದೆ ಪ್ರಸಿದ್ಧ ಬಂದರು, ಲೇವಾದೇವಿ ಕೇಂದ್ರ, ಜನಭರಿತ ನಗರ ಮತ್ತು ಮಾರುಕಟ್ಟೆ ಕೇಂದ್ರ ಇಲ್ಲಿ ಸಿಮೆಂಟ್, ತೈಲಶುದ್ಧೀಕರಣ, ರಾಸಾಯನಿಕ ಸ್ವಯಂಚಾಲಿತ ವಾಹನ ಮತ್ತು ವಿದ್ಯುದುಪಕರಣಗಳು, ಸಂಗೀತ ಉಪಕರಣ, ಹೊಗೆಸೊಪ್ಪು, ಪೀಠೋಪಕರಣ, ಸುಗಂಧ ದ್ರವ್ಯಗಳು ಮುದ್ರಣ ವಸ್ತುಗಳನ್ನು ತಯಾರಿಸುವ ಕೇಂದ್ರಗಳಿವೆ.

ಕೇಂದ್ರ ಸ್ಕಾಟ್ಲೆಂಡ್ ಮತ್ತು ಬೆಲ್ಫಾಸ್ಟ್ ಪ್ರದೇಶಗಳಲ್ಲಿ ಕಬ್ಬಿಣ ಮತ್ತು ಉಕ್ಕು ಹಡಗು ನಿರ್ಮಾಣ ಎಂಜಿನಿಯರಿಂಗ್, ಮೆರಿನ್ ಎಂಜಿನಿಯರಿಂಗ್ ಕೈಗಾರಿಕೆಗಳಿವೆ. ಇಲ್ಲಿ ಗ್ಲಾಸ್ಲೊ ಪ್ರಮುಖ ಕೈಗಾರಿಕಾ ಕೇಂದ್ರ. ಇದಲ್ಲದೆ ಮಥರ್‌ವೆಲ್, ಕ್ರೋಟ್ ಬ್ರಿಡ್ಜ್, ಕ್ಲೈಸೈಡ್ ಡಂಬರ್ಟನ್ ಮತ್ತು ಪೊಫ್‌ಷೈರ್ ಇತರೆ ಕೈಗಾರಿಕಾ ಕೇಂದ್ರಗಳಾಗಿವೆ.

ಉ) ಫ್ರಾನ್ಸಿನ ಕೈಗಾರಿಕಾ ಪ್ರದೇಶ: ಈ ರಾಷ್ಟ್ರದಲ್ಲಿರುವ ಕೈಗಾರಿಕಾ ವಲಯಗಳನ್ನು 3 ಭಾಗವಾಗಿ ವಿಂಗಡಿಸಬಹುದು.

ಈಶಾನ್ಯ ಕೈಗಾರಿಕಾ ಪ್ರದೇಶ: ಇದು ಅತಿ ಪ್ರಮುಖ ಹಾಗೂ ದೊಡ್ಡ ವಲಯವಾಗಿದೆ. ಇಲ್ಲಿ ಕಬ್ಬಿಣ ಮತ್ತು ಉಕ್ಕು, ಜವಳಿ ಎಂಜಿನಿಯರಿಂಗ್ ಉದ್ಯಮಗಳಿದ್ದು, ಅವು ಹಂಕಿರ್ಕ್ ಡೆನಾಯಿನ್, ವೆಲೆನ್ಸಿಯನ್ನೆ, ಲಿಲ್ಲೆ, ರೊಬಾಬಿಕ್ಸ್, ಟೂರ್‌ಕಾಯಿಂಗ್ ನಲ್ಲಿ ಹಂಚಿಕೆಯಾಗಿದೆ.

ಲೊರೈನ್ ಪ್ರದೇಶ ಸಾಂಪ್ರದಾಯಿಕ ಕಬ್ಬಿಣ ಮತ್ತು ಉಕ್ಕು ತಯಾರಿಕಾ ಕೇಂದ್ರ ಏಕೆಂದರೆ ಇಲ್ಲಿ ಕಬ್ಬಿಣದ ಅದಿರು ಮತ್ತು ಕೋಕಿಂಗ್ ಕಲ್ಲಿದ್ದಲು ಯಥೇಚ್ಛವಾಗಿ ಸಿಗುತ್ತದೆ. ಮೆಟ್ಜ, ಥಿಯಾನ್‌ವಿಲ್ಲೆ, ಲಾಂಗ್ವೆ ಮತ್ತು ನಾನ್ಸಿಗಳು ಪ್ರಮುಖವಾಗಿವೆ. ಪ್ಯಾರಿಸ್ ನಗರ ಜನಭರಿತವಾಗಿದ್ದು, ಕೈಗಾರಿಕಾ ಚಟುವಟಿಕೆಯಲ್ಲಿದೆ. ಇಲ್ಲಿನ ಪ್ರಮುಖ ಕೈಗಾರಿಕೆಗಳೆಂದರೆ: ಸುಗಂಧ ದ್ರವ್ಯ, ಪೊರ್ಸಿಲಿನ್, ಸಿಗರೇಟ್, ಸಂಗೀತ, ವೈಜ್ಞಾನಿಕ ಉಪಕರಣಗಳು, ಪೀಠೋಪಕರಣ, ಸ್ವಯಂಚಾಲಿತ ವಾಹನ, ರೈಲ್ವೆ ಎಂಜಿನ್, ವಿಮಾನ ಮತ್ತು ರಾಸಾಯನಿಕ ತಯಾರಿಕಾ ಉದ್ಯಮಗಳು.

ಇತರೆ ವಲಯಗಳು: ಇದರಲ್ಲಿ ಗೇಟರ್ ಪ್ಯಾರಿಸ್, ಬೆಲ್ಜಿಯಂನ ಬ್ರುಸ್ಸೆಲ್ಸ್, ಆಂಟ್‌ವರ್ಪ್, ಸಾಂಬೆಮಿಯೂಸ್, ಸ್ಕೀಡ್ಯಾಮ್, ಆಮ್‌ಸ್ಟರ್‌ಡ್ಯಾಮ್, ಡೆನ್ಮಾರ್ಕಿನ ಕೋಪೆನ್‌ಹೇಗನ್, ಸ್ವೀಡನ್ನಿನ ಸ್ಟಾಕ್‌ಹೋಮ್ , ನಾರ್ವೆಯ ಓಸ್ಲೋಗಳು ಯುರೋಪಿನ ಇತರ ಕೈಗಾರಿಕಾ ಜಿಲ್ಲೆಗಳಾಗಿವೆ.

3. ರಷ್ಯದ ಕೈಗಾರಿಕಾ ಪ್ರದೇಶಗಳು: ರಷ್ಯದ ವಿವಿಧ ಭಾಗಗಳಲ್ಲಿ ವಿವಿಧ ಕೈಗಾರಿಕೆಗಳು ಅಭಿವೃದ್ಧಿಗೊಂಡಿದ್ದರೂ ಹಂಚಿಕೆಯಲ್ಲಿ ವೈವಿಧ್ಯತೆಯಿದೆ. ರಷ್ಯದ ಸಿಂಹಪಾಲು ಕಲ್ಲಿದ್ದಲು ನಿಕ್ಷೇಪ (ಶೇ. 10) ಬಹುಪಾಲು ಅರಣ್ಯ ಸಂಪತ್ತು ಮತ್ತು ಜಲವಿದ್ಯುಚ್ಛಕ್ತಿ ಸಂಪತ್ತು ಏಷಿಯಾಟಿಕ್ ರಷ್ಯದಲ್ಲಿ ಹಂಚಿಕೆಯಾಗಿದೆ. ಆದರೂ ಪ್ರಸ್ತುತ ರಷ್ಯದ ಕೈಗಾರಿಕೆಗಳಲ್ಲಿ ಶೇ. 75 ಭಾಗ ಯುರೋಪಿಯನ್ ರಷ್ಯದ ಭಾಗದಲ್ಲಿ ಕೇಂದ್ರೀಕೃತವಾಗಿದೆ. ಇಂದು ರಷ್ಯದ ಕೈಗಾರಿಕೆಗಳು 3 ಪ್ರಮುಖ ವಲಯಗಳಲ್ಲಿ ಕೇಂದ್ರೀಕೃತವಾಗಿದೆ.

ಅ) ಮಾಸ್ಕೊ – ಗಾರ್ಕಿ ಕೈಗಾರಿಕಾ ಪ್ರದೇಶ: ಇದರಲ್ಲಿ ಮಾಸ್ಕೊ, ಮಲಾ, ಗಾರ್ಕಿ, ಕಾಲಿನಿನ್, ಯುರೋಸ್ಲಾವಲ್, ಸ್ಮಲಲೆನ್ಸ್‌ಕ್ ಮತ್ತು ಇವಾನೋವೊ ಭಾಗಗಳು ಸೇರುತ್ತವೆ. ಇವುಗಳಲ್ಲಿ ಮಾಸ್ಕೊ ಕೇಂದ್ರ ಬಿಂದು ಇಲ್ಲಿ ಉತ್ತಮ ರೈಲ್ವೆ, ವಿಶಾಲ, ಮಾರುಕಟ್ಟೆ ಸಾಕಷ್ಟು ಕಾರ್ಮಿಕರು ಲಭ್ಯವಾಗುತ್ತಿರುವುದರಿಂದ ಕೈಗಾರಿಕೆ ಅಭಿವೃದ್ಧಿಗೊಂಡಿದೆ. ಮಾಸ್ಕೊ ಟುಲಾ ಪ್ರದೇಶದ ಕಡಿಮೆ ದರ್ಜೆ ಮತ್ತು ಆಮದಾದ ಕೋಕಿಂಗ್ ಕಲ್ಲಿದ್ದಲು, ವೊಲ್ಗ, ಯೂರಲ್ಸ್ ಮತ್ತು ಪಶ್ಚಿಮ ಸೈಬೀರಿಯದ ಜಲವಿದ್ಯುತ್ ಮತ್ತು ಕಚ್ಚ ತೈಲಗಳು ಶಕ್ತಿಯ ಆಕರಗಳಾಗಿವೆ. ಮಾಸ್ಕೋದಲ್ಲಿ ಜವಳಿ, ಯಂತ್ರೋಪಕರಣ, ರಾಸಾಯನಿಕ ಮತ್ತು ಲಘು ಉದ್ಯಮಗಳು ಕೇಂದ್ರೀಕೃತವಾಗಿವೆ. ಗಾರ್ಕಿ – ಟುಲಾ ಪ್ರದೇಶದಲ್ಲಿ ರೈಲ್ವೆ ಉಪಕರಣ, ಸ್ವಯಂಚಾಲಿತ ವಾಹನ, ಆಹಾರ ಸಂಸ್ಕರಣ ಉದ್ಯಮಗಳು ಪ್ರಗತಿಗೊಂಡಿವೆ. ಈ ಪ್ರದೇಶ ಎಂಜಿನಿಯರಿಂಗ್ ಉದ್ಯಮಕ್ಕೆ ಪ್ರಸಿದ್ಧವಾಗಿದೆ. ಇಲ್ಲಿ ಜವಳಿಯ ವಿವಿಧ ಬಗೆಗಳಾದ ಹತ್ತಿ ಬಟ್ಟೆ, ಉಣ್ಣೆ ಬಟ್ಟೆ, ರೇಷ್ಮೆ ಮತ್ತು ಕೃತಕ ರೇಷ್ಮೆ ಬಟ್ಟೆಯ ಉದ್ಯಮಗಳು ಪ್ರಗತಿಯಾಗಿದೆ. ಇವಾನೋವೊ ಸುಪ್ರಸಿದ್ಧ ಹತ್ತಿಬಟ್ಟೆ ಕೇಂದ್ರವಾಗಿದ್ದು ಇದನ್ನು ರಷ್ಯದ ಮ್ಯಾಂಚೆಸ್ಟರ್ ಎನ್ನುವರು. ರಬ್ಬರ್, ಚರ್ಮ ಹದಗೊಳಿಸುವುದು ಮತ್ತು ಮದ್ಯ ತಯಾರಿಕೆ ಇಲ್ಲಿನ ಪ್ರಮುಖ ಉದ್ಯಮಗಳಾಗಿವೆ.

ಆ) ಯೂರಲ್ಸ್ ಕೈಗಾರಿಕಾ ಪ್ರದೇಶಗಳು: ಎರಡನೆಯ ಮಹಾಯುದ್ಧದ ಅನಂತರ ಇದು ಅಭಿವೃದ್ಧಿಗೊಂಡಿದೆ. ಇದು ಮಾಗ್ನಿಟೊಗೊರ್‌ಸ್ಕ, ಕ್ಯೂಬಶೇವ್ ಮತ್ತು ಯೂರೈ ಕೇಂದ್ರಗಳನ್ನು ಒಳಗೊಂಡಿದೆ. ಯೂರಲ್ಸ್ ಪರ್ವತ ಸರಣಿಯಲ್ಲಿ ವಿವಿಧ ಖನಿಜಗಳು ಅದರಲ್ಲೂ ಕಬ್ಬಿಣದ ಅದಿರು ಕಡಿಮೆ ದರ್ಜೆಯ ಕೋಕಿಂಗ್ ಕಲ್ಲಿದ್ದಲು, ವಿಪುಲ ಜಲವಿದ್ಯುತ್ ಸಂಪತ್ತು, ಅಲ್ಲದೆ ತಾಮ್ರ, ಕ್ರೋಮಿಯಂ ನಿಕ್ಕಲ್, ಕೋಬಾಲ್ಟ್, ಮ್ಯಾಂಗನೀಸ್, ವನೇಡಿಯಂ, ಸೀಸ ಮತ್ತು ಸತುಗಳು ಲಭಿಸುತ್ತವೆ. ನೆರೆಯ ಕರಾಗಾಂಡ ಮತ್ತು ಕುಜೆನೆಟ್ಜ್ ಪ್ರದೇಶಗಳಿಂದ ಉತ್ತಮ ದರ್ಜೆಯ ಕೋಕಿಂಗ್ ಕಲ್ಲಿದ್ದಲು, ಯೂಫಾ ಮತ್ತು ಕ್ಯೂಬಿಶೇವ್‌ಗಳ ಸುತ್ತಮುತ್ತ ಸಾಕಷ್ಟು ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲಗಳು ಲಭಿಸುತ್ತವೆ. ಕಬ್ಬಿಣ ಮತ್ತು ಉಕ್ಕು, ಮೆಟಲರ್ಜಿಕಲ್ ಉದ್ಯಮ, ಬೃಹತ್ ಎಂಜಿನಿಯರಿಂಗ್ ಮತ್ತು ರಾಸಾಯನಿಕ ಕೈಗಾರಿಕೆಗಳು ಪ್ರಮುಖವಾಗಿದೆ. ಇತ್ತೀಚೆಗೆ ಯೂರಲ್ಸ್ ಮತ್ತು ವೋಲ್ಗ ತೈಲ ಪ್ರದೇಶಗಳ ಆವಿಷ್ಕಾರದಿಂದ ತೈಲ ಶುದ್ಧೀಕರಣ ಕೇಂದ್ರಗಳು ಮತ್ತು ಪೆಟ್ರೋಕೆಮಿಕಲ್ಸ್ ಉದ್ಯಮಗಳೂ ಅಭಿವೃದ್ಧಿಗೊಂಡಿವೆ.

ಇ) ಕುಬ್ಬಾಸ್ ಕೈಗಾರಿಕಾ ಪ್ರದೇಶ: ಇದು ಏಷಿಯಾಟಿಕ್ ರಷ್ಯದಲ್ಲಿದ್ದು, ಟ್ರಾನ್ಸ್ ಸೈಬೀರಿಯನ್ ರೈಲು ಮಾರ್ಗದ ಉದ್ದಕೂ ಹರಡಿದೆ. ಕುಜ್ಬಾಸ್ ಕುಜೆನೆಟ್‌ನಲ್ಲಿ ಕಲ್ಲಿದ್ದಲು, ಥರ್ಮಲ್ ವಿದ್ಯುತ್ತು ಮತ್ತು ಜಲವಿದ್ಯುತ್ತು ಸಹ ದೊರೆಯುತ್ತದೆ. ಆದರೆ ಅಗತ್ಯವಾದ ಕಚ್ಚಾ ತೈಲವನ್ನು ಯೂರಲ್ಸ್‌ನ ಪೂರ್ವಭಾಗದಿಂದ ಪಡೆಯುತ್ತದೆ. ಇಲ್ಲಿ ಕಬ್ಬಿಣದ ಅದಿರು, ಟಂಗಸ್ಟನ್, ಅಬ್ರಕ, ಕಲ್ನಾರು ಹಾಗೂ ಅಪರಿಮಿತವಾದ ಅರಣ್ಯ ಸಂಪತ್ತು ದೊರೆಯುವುದು. ಈ ಭಾಗದ ಉತ್ತರದಲ್ಲಿ ಮರ ಕೊಯ್ಯುವುದು, ಮರದ ತಿರುಳು ಮತ್ತು ಕಾಗದ ತಯಾರಿಕೆ ಸರ್ವೇ ಸಾಮಾನ್ಯ. ಇಲ್ಲಿ ಕಬ್ಬಿಣ ಮತ್ತು ಉಕ್ಕು, ಮೆಟಲರ್ಜಿಕಲ್, ಎಂಜಿನಿಯರಿಂಗ್ ಹಾಗೂ ರಾಸಾಯನಿಕ ಕೈಗಾರಿಕೆಗಳು ನೆಲೆಸಿವೆ. ನೋವೊಸಿಬಿರ್‌ಸ್ಕ, ಗೋವೊ, ಬರ್ನ್‌ಲ್‌ಗಳು ಇತರ ಪ್ರಮುಖ ಕೈಗಾರಿಕಾ ಕೇಂದ್ರಗಳು.

4. ಜಪಾನಿನ ಕೈಗಾರಿಕಾ ವಲಯಗಳು: ಪ್ರಪಂಚದ ಅತ್ಯಂತ ಕೈಗಾರಿಕೀಕೃತ ರಾಷ್ಟ್ರಗಳಲ್ಲಿ ಜಪಾನ್ ಅಗ್ರಮಾನ್ಯವಾದುದು ದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇ. 84 ರಷ್ಟು ಭಾಗ ಪರ್ವತಗಳಿಂದಾವೃತವಾಗಿದೆ. ಆಗಾಗ್ಗೆ ಭಯಂಕರವಾದ ಜ್ವಾಲಾಮುಖಿಗಳು, ಭೂಕಂಪಗಳು ಮತ್ತು ಚಂಡಮಾರುತಗಳಂಥ ನೈಸರ್ಗಿಕ ವಿಪತ್ತುಗಳು ಸರ್ವೆ ಸಾಮಾನ್ಯ. ಕೈಗಾರಿಕೆಗೆ ಪೂರಕವಾದಂತಹ ಕಲ್ಲಿದ್ದಲು, ಪೆಟ್ರೋಲಿಯಂ ಖನಿಜಗಳು ಇತ್ಯಾದಿ ಸ್ಥಳೀಯವಾಗಿ ದೊರೆಯುವುದಿಲ್ಲ. ಇಷ್ಟೆಲ್ಲಾ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಜಪಾನ್ ವಿಸ್ಮಯಕಾರಿಯಾದ ಕೈಗಾರಿಕಾ ಅಭಿವೃದ್ಧಿಯನ್ನು ಹೊಂದಿದೆ. ಆದರೂ ಇಲ್ಲಿ ಸಹ ಕೆಲವು ಪೂರಕವಾದ ಅಂಶಗಳಿವೆ. ಅವುಗಳೆಂದರೆ, ವಿಪುಲವಾಗಿ ದೊರೆಯುವ ಜಲವಿದ್ಯುತ್ ಅಂಕುಡೊಂಕಾದ ಕರಾವಳಿ ಮತ್ತು ಬಂದರು ವ್ಯವಸ್ಥೆ, ಪರಿಣಿತ ಕಾರ್ಮಿಕರ ಪೂರೈಕೆ, ಸ್ವದೇಶಿ ಮತ್ತು ವಿದೇಶಿಯ ವಿಶಾಲವಾದ ಮಾರುಕಟ್ಟೆ, ಸಾಗರಿಕ ವಾಯುಗುಣ, ದಕ್ಷ ವ್ಯವಸ್ಥಾಪಕತ್ವ, ಸರ್ಕಾರದ ಬೆಂಬಲ ಹಾಗೂ ಜನರ ದೃಢ ಸಂಕಲ್ಪಗಳು. ಜಪಾನಿನಲ್ಲಿ ನಾಲ್ಕು ಪ್ರಮುಖ ಕೈಗಾರಿಕಾ ಪ್ರದೇಶಗಳಿವೆ. ಅವುಗಳೆಂದರೆ ಕಿಹೀನ್, ಹಾನ್ಸಿನ್, ಐಸೆಖಾರಿ ಮತ್ತು ಕಿಟಾಕಿಯೂರು ಪ್ರದೇಶಗಳು.

ಅ) ಕಿಹೀನ್ ಪ್ರದೇಶಗಳು: ಜಪಾನಿನಲ್ಲೇ ಅತ್ಯಂತ ದೊಡ್ಡದಾದ ಕೈಗಾರಿಕಾ ಪ್ರದೇಶವಿದು. ಕ್ವಾಂಟೊ ಮೈದಾನವೆಂದೂ ಪ್ರಸಿದ್ಧಿ. ಇದು ಟೋಕಿಯೋ, ಯೋಕೋಹಾಮ ಮತ್ತು ಕವಾಸಾಕಿ ಮಹಾನಗರಗಳನ್ನೊಳಗೊಂಡಿದೆ. ಜಪಾನಿನ ಅರ್ಧಭಾಗ ಜನಸಂಖ್ಯೆ, ಶೇ.25 ರಷ್ಟು ಕೈಗಾರಿಕಾ ಉತ್ಪನ್ನ ಹೊಂದಿದ್ದು, ಟೋಕಿಯೊ ಯೋಕೋಹಾಮ ಕೈಗಾರಿಕಾ ಪ್ರದೇಶ ಎಂದು ಖ್ಯಾತಿ ಪಡೆದಿದೆ. ಕಬ್ಬಿಣ ಮತ್ತು ಉಕ್ಕು, ಜವಳಿ, ಯಂತ್ರೋಪಕರಣ, ಹಡಗು ನಿರ್ಮಾಣ, ರಾಸಾಯನಿಕ ತಯಾರಿಕೆ, ಮರದ ತಿರುಳು ಮತ್ತು ಕಾಗದ, ವಿಮಾನ ತಯಾರಿಕೆ ವಿದ್ಯುದುಪಕರಣ ಮತ್ತು ತೈಲಶುದ್ಧೀಕರಣ ಉದ್ಯಮಗಳನ್ನು ಹೊಂದಿದೆ. ಟೋಕಿಯೋ ವಿದ್ಯುತ್ ಎಂಜಿನಿಯರಿಂಗ್ ಉದ್ಯಮಕ್ಕೆ ಸುಪ್ರಸಿದ್ಧ. ಇದು ದೂರದರ್ಶನ, ರೆಫ್ರಿಜರೇಟರ್, ವಾಷಿಂಗ್‌ಮಿಷನ್ ಮತ್ತು ಕಂಪ್ಯೂಟರ್ ತಯಾರಿಕಾ ಘಟಕಗಳನ್ನು ಹೊಂದಿದೆ. ಯೋಕೋಹಾಮ ಹಡಗು ನಿರ್ಮಾಣ, ಎಂಜಿನಿಯರಿಂಗ್, ಪೆಟ್ರೋಕೆಮಿಕಲ್ಸ್, ತೈಲ ಶುದ್ಧೀಕರಣಕ್ಕೆ ಪ್ರಸಿದ್ಧಿ ಹೊಂದಿದೆ. ಕವಸಾಕಿ ಮೆರೈನ್ ಎಂಜಿನಿಯರಿಂಗ್, ಸಿಮೆಂಟ್, ಗಾಜು ತಯಾರಿಕೆ ಮತ್ತು ಸ್ವಯಂ ಚಾಲಿತ ವಾಹನ(ಬೈಕ್)ಗಳ ಉದ್ಯಮಗಳನ್ನು ಹೊಂದಿದೆ.

ಆ) ಹಾನ್ಸಿನ್ ಪ್ರದೇಶ: ಇದು ದೇಶದ ಒಟ್ಟು ಕೈಗಾರಿಕಾ ಉತ್ಪನ್ನದಲ್ಲಿ ಶೇ.20 ರಷ್ಟನ್ನು ಪೂರೈಸುತ್ತದೆ. ಇದು ಕಿಂಕಿ ಕೈಗಾರಿಕಾ ವಲಯವೆಂದು ಕರೆಯಲ್ಪಡುವುದು. ಒಸಾಕ ಖಾರಿಯ ಶಿರೋಭಾಗದಲ್ಲಿ ನೆಲೆಸಿದ್ದು, ಒಸಾಕ, ಕೋಟೆ ಮತ್ತು ಕಿಯಾರ್ ಪ್ರದೇಶಗಳನ್ನು ಒಳಗೊಂಡಿದೆ. ಅಲ್ಲದೆ ನಾಗಸಾಕಿ, ದಕ್ಷಿಣ ಯೋಕೋಹಾಮ ಮತ್ತು ಪಶ್ಚಿಮ ಹಿಮೇಜಿ ನಗರಗಳನ್ನೂ ಒಳಗೊಂಡಿದೆ. ಇಲ್ಲಿ ಜವಳಿ ಅದರಲ್ಲೂ ಹತ್ತಿ ಜವಳಿ ಪ್ರಸಿದ್ಧವಾಗಿದ್ದು, ಇತ್ತೀಚೆಗೆ ಲೋಹ ಆಧಾರಿತ ಉದ್ಯಮಗಳು ಪ್ರಗತಿ ಹೊಂದಿವೆ.

ಕಬ್ಬಿಣ ಮತ್ತು ಉಕ್ಕು, ಹಡಗು ನಿರ್ಮಾಣ, ರಾಸಾಯನಿಕ, ಯಂತ್ರೋಪಕರಣ, ಹಬೆ ಮತ್ತು ವಿದ್ಯುತ್‌ಚಾಲಿತ ರೈಲು ಎಂಜಿನ್‌ಗಳ ತಯಾರಿಕೆ, ಜವಳಿ ತಯಾರಿಕಾ ಘಟಕ, ಯಂತ್ರೋಪಕರಣಗಳ ಉದ್ಯಮಗಳು ಇಲ್ಲಿ ಅಭಿವೃದ್ಧಿಗೊಂಡಿವೆ. ಒಸಾಕ ಪ್ರಸಿದ್ಧ ಹತ್ತಿ ಜವಳಿ ಕೇಂದ್ರ. ಜೊತೆಗೆ ರೇಷ್ಮೆ ಮತ್ತು ಕೃತಕ ನಾರು ಬಟ್ಟೆಯ ಗಿರಣಿಗಳು ಸಹ ಅಭಿವೃದ್ಧಿಗೊಂಡಿವೆ. ಆದ್ದರಿಂದಲೇ ಇದನ್ನು ಜಪಾನಿನ ಮ್ಯಾಂಚೆಸ್ಟರ್ ಎನ್ನುವರು. ಇಲ್ಲಿ ಪ್ಲಾಸ್ಟಿಕ್ ಹಾಗೂ ಪಾದರಕ್ಷೆ ತಯಾರಿಕೆ ಉದ್ಯಮಗಳೂ ಇವೆ. ಕೋಬೆ ಕೇಂದ್ರದಲ್ಲಿ ಹಡಗು ನಿರ್ಮಾಣ, ತೈಲ ಶುದ್ಧೀಕರಣ ಮತ್ತು ಪೆಟ್ರೋ ಕೆಮಿಕಲ್ಸ್ ಕೈಗಾರಿಕೆಗಳು ಅಭಿವೃದ್ಧಿಗೊಂಡಿವೆ. ಆದರೆ ಕಿಯೊಟೊ ಕೇಂದ್ರ ಸಾಂಪ್ರದಾಯಕ ಕರಕುಶಲ ಉದ್ದಿಮೆ, ಪೋರ್ಸಲಿನ್‌ಗಳಂತಹ ವಸ್ತುಗಳನ್ನು ತಯಾರಿಸುತ್ತದೆ.

ಇ) ಐಸೆ ಖಾರಿ ಕೈಗಾರಿಕಾ ಪ್ರದೇಶ: ಇದು ಹೊನ್ಷು ದ್ವೀಪದ ಪೂರ್ವ ಕರಾವಳಿಗೆ ಹೊಂದಿಕೊಂಡಂತೆ ನೆಲೆಸಿದೆ. ಇಲ್ಲಿನ ಕೈಗಾರಿಕಾ ಪ್ರಗತಿ ನಗೋಯ ಮಹಾನಗರ ಹಾಗೂ ಸುತ್ತಲಿನ ಪ್ರದೇಶವನ್ನೊಳಗೊಂಡಿದೆ. ಹಾಗಾಗಿ ನಗೋಯ ಪ್ರದೇಶ ಎಂದು ಸಹ ಕರೆಯಲ್ಪಡುವುದು. ಜವಳಿ, ಎಂಜಿನಿಯರಿಂಗ್ ಉದ್ಯಮಗಳು ಪ್ರಸಿದ್ಧವಾಗಿವೆ. ಜವಳಿಯಲ್ಲಿ ಹತ್ತಿಬಟ್ಟೆ ಉಣ್ಣೆ ಬಟ್ಟೆ ಕೃತಕ ರೇಷ್ಮೆ ಬಟ್ಟೆಗಳು ಸೇರಿವೆ. ಎಂಜಿನಿಯರಿಂಗ್‌ನಲ್ಲಿ ಸ್ವಯಂಚಾಲಿತ ವಾಹನ, ಯಂತ್ರೋಪಕರಣ ರೈಲ್ವೆ ಎಂಜಿನ್, ವಿಮಾನ ತಯಾರಿಕೆ ಸೇರಿವೆ. ಹತ್ತಿರದಲ್ಲಿರುವ ತಾಜಿಮಿ ಮತ್ತು ಸೀಟೋ ನಗರಗಳು ಉತ್ತಮ ದರ್ಜೆ ಪೊರ್ಸಿಲಿನ್‌ಗೆ ಪ್ರಸಿದ್ಧವಾಗಿದೆ.

ಈ) ಕಿಯೂಶು ಕೈಗಾರಿಕಾ ಪ್ರದೇಶ: ಇದು ಉತ್ತರ ಕಿಯೂಶು, ಚಿಕಾಗೋ ಕಲ್ಲಿದ್ದಲು ವಲಯ, ಯವಾಟ, ಕೊಕುರ ಮತ್ತು ಮೋಜಿನಗರಗಳನ್ನೊಳಗೊಂಡಿದೆ. ಇದು ಜಪಾನಿನ ಏಕೈಕ ಕಲ್ಲಿದ್ದಲು ಹೊಂದಿದ ಪ್ರದೇಶ. ಇಲ್ಲಿ ಕಬ್ಬಿಣ ಮತ್ತು ಉಕ್ಕು ಹಡಗು ನಿರ್ಮಾಣ, ಯಂತ್ರಗಳ ಬಿಡಿಭಾಗ, ರಾಸಾಯನಿಕ ಮತ್ತು ಜವಳಿ ಉದ್ಯಮಗಳು ಪ್ರಮುಖವಾಗಿವೆ. ಯವಾಟಾ ನಗರ ದೊಡ್ಡ ಉಕ್ಕು ತಯಾರಿಕಾ ಕೇಂದ್ರ, ನಾಗಸಾಕಿ ಮತ್ತು ಶಿಮೊನೊಸಾಕಿಗಳು ಹಡಗು ನಿರ್ಮಾಣ ಕೇಂದ್ರಗಳಾಗಿವೆ.

ಇವಿಷ್ಟೆ ಅಲ್ಲದೆ ಮರೋರಾನ್ ಉಕ್ಕು ಘಟಕ, ಅಕಿತ ಮತ್ತು ನಿಗಾತದಲ್ಲಿ ತೈಲ ಶುದ್ಧೀಕರಣ, ಹಿರೋಶಿಮದಲ್ಲಿ ಎಂಜಿನಿಯರಿಂಗ್, ಕುರೆಯಲ್ಲಿ ಹಡಗು ನಿರ್ಮಾಣ ಮತ್ತು ಜವಳಿ ಉದ್ಯಮಗಳು ನೆಲೆಸಿವೆ.

ಚೀನದ ಕೈಗಾರಿಕಾ ಪ್ರದೇಶಗಳು: ಚೀನ ಕೃಷಿ ಪ್ರಧಾನ ದೇಶ. ಇದು ಸಾಕಷ್ಟು ಖನಿಜ ಮತ್ತು ಶಕ್ತಿ ಸಂಪನ್ಮೂಲಗಳನ್ನು ಹೊಂದಿದ್ದರೂ ಕಮ್ಯೂನಿಸ್ಟ್ ಸರ್ಕಾರ ಆಡಳಿತಕ್ಕೆ ಬರುವವರೆಗೂ ಕೈಗಾರಿಕೆಯಲ್ಲಿ ಪ್ರಗತಿ ಸಾಧಿಸಿರಲಿಲ್ಲ. ತರುವಾಯ, ಅಂದರೆ 1949ರ ಅನಂತರ ದೇಶದ ಕೈಗಾರಿಕಾಭಿವೃದ್ಧಿಗಾಗಿ ಪ್ರಯತ್ನಿಸಲಾಯಿತು. ಅದಕ್ಕೆ ಯೂರೋಪ್ ಹಾಗೂ ಉತ್ತರ ಅಮೆರಿಕಗಳು ಹಾಗೂ ಜಪಾನ್ ಮತ್ತು ರಷ್ಯಗಳ ತಾಂತ್ರಿಕ ಮತ್ತು ಆರ್ಥಿಕ ನೆರವನ್ನು ಪಡೆಯಲಾಯಿತು. ಸುಮಾರು ದಶಕಗಳ ಕಾಲ ನಿರಂತರವಾಗಿ ಔದ್ಯೋಗಿಕ ಪ್ರಗತಿಗೆ ಕಮ್ಯೂನಿಸ್ಟ್ ಸರ್ಕಾರ ಪ್ರಯತ್ನ ಮುಂದುವರಿಸಿತು. ಪರಿಣಾಮವಾಗಿ ಯಶಸ್ಸನ್ನೂ ಸಾಧಿಸಿತು. ಆದರೂ ಪರಿಪೂರ್ಣತೆ ಸಾಧಿಸುವುದರಲ್ಲಿ ಪ್ರಯತ್ನ ಮುಂದುವರಿಯಬೇಕಾಗಿದೆ. ಅಪಾರವಾದ ಮಾನವ ಶಕ್ತಿ, ಖನಿಜ ಮತ್ತು ಶಕ್ತಿ ಸಂಪತ್ತು, ರಸ್ತೆ ಮತ್ತು ರೈಲು ಸಾರಿಗೆಯ ಪ್ರಗತಿಗಳು ಚೀನದ ಕೈಗಾರಿಕಾ ಪ್ರಗತಿಗೆ ಪೂರಕವಾಗಿವೆ.

ಇತ್ತೀಚೆಗೆ ಚೀನದಲ್ಲಿ 7 ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಗುರುತಿಸಲಾಗಿದೆ. ಅವು ಈ ಕೆಳಕಂಡಂತಿವೆ.

1. ಮಂಚೂರಿಯ ಪ್ರದೇಶ
2. ಟಿಯಾಂಜಿನ್ – ಬೀಜಿಂಗ್ ಪ್ರದೇಶ
3. ಶಾಂಕ್ಸಿ–ಪಾವ್‌ಟೋವ್ ಪ್ರದೇಶ
4. ಚಾಂಗ್ ಜಿಯಾಂಗ್ ತಗ್ಗುವಲಯ
5. ವುಹಾನ್ ಪ್ರದೇಶ
6. ಕ್ಸಿ ಜಿಯಾಂಗ್ ಪ್ರದೇಶ
7. ಸಿಚುಆನ್ ಪ್ರದೇಶ

1. ಮಂಚೂರಿಯ ಪ್ರದೇಶ ಅನ್‌ಶಾನ್–ಫ್ಯೂಷನ್–ಶಷ್ಯಾಂಗ್ (ಮುಕ್ಡೆನ್) ಕೇಂದ್ರಗಳನ್ನೊಳಗೊಂಡಿದೆ. ಇದು ಚೀನದ ಅತ್ಯಂತ ಪ್ರಮುಖ ಹಾಗೂ ಬೃಹತ್ ಪ್ರಮಾಣದ ಕೈಗಾರಿಕೆಗಳಿಂದ ಕೂಡಿದ ಪ್ರದೇಶ. ಉದಾ: ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಎಂಜಿನಿಯರಿಂಗ್ ಮತ್ತು ರಾಸಾಯನಿಕ ಕೈಗಾರಿಕೆ. ಸ್ಥಳೀಯವಾಗಿ ಸಾಕಷ್ಟು ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರು ದೊರೆಯುವುದರಿಂದ ಇಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಪ್ರಧಾನವಾಗಿದೆ.

2. ಟಿಯಾಂಜಿನ್–ಬೀಜಿಂಗ್ ಪ್ರದೇಶ ವಾಸ್ತವವಾಗಿ ಉತ್ತಮ ಕಲ್ಲಿದ್ದಲು ಉತ್ಪಾದಿಸುವ ವಲಯವಾಗಿದ್ದು, ಲೋಹಾಂಶವುಳ್ಳ ಉದ್ಯಮ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿದೆ. ಹಡಗು ನಿರ್ಮಾಣ, ಜವಳಿ ಉದ್ಯಮ, ರಾಸಾಯನಿಕಗಳು ಮತ್ತು ಯಂತ್ರೋಪಕರಣ ತಯಾರಿಕಾ ಕೈಗಾರಿಕೆಗಳು ಈ ವಲಯದಲ್ಲಿ ಅಭಿವೃದ್ಧಿಗೊಂಡಿವೆ.

3. ಶಾಂಕ್ಸಿ ಪಾವ್ ಪ್ರದೇಶ ಸಹ ಕಲ್ಲಿದ್ದಲು ವಲಯವಾಗಿದ್ದು ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಪ್ರಗತಿಗೆ ಪೂರಕವಾಗಿದೆ. ಜೊತೆಗೆ ಇಲ್ಲಿ ಉತ್ತಮ ಕಬ್ಬಿಣದ ಅದಿರು ಸಾಕಷ್ಟು ದೊರೆಯುತ್ತದೆ. ಪಾವ್‌ಟೋವ್, ತೈಯು ಆನ್ ಮತ್ತು ತಾಟುಂಗ್‌ಗಳು ಪ್ರಮುಖ ಕಬ್ಬಿಣ ಮತ್ತು ಉಕ್ಕು ತಯಾರಿಸುವ ಕೇಂದ್ರಗಳಾಗಿವೆ. ಈ ವಲಯದಲ್ಲಿ ಕೃಷಿ ಉಪಕರಣಗಳನ್ನೂ ತಯಾರಿಸಲಾಗುವುದು.

4. ಚಾಂಗ್ ಜಿಯಾಂಗ್ ಚೀನದ ಹಳೆಯ ಕೈಗಾರಿಕಾ ಪ್ರದೇಶ. ಅಂದಿನಿಂದಲೂ ವಿದೇಶೀಯರ ಪ್ರಭಾವಕ್ಕೊಳಪಟ್ಟದ್ದಾಗಿದೆ. ಉದಾ: ಶಾಂಘೈ. ಇಲ್ಲಿ ಪಾಶ್ಚಿಮಾತ್ಯ ತಾಂತ್ರಿಕ ನೆರವಿನಿಂದ ಏಷ್ಯದಲ್ಲೇ ಅತಿದೊಡ್ಡ ಹತ್ತಿಗಿರಣಿಗಳು ಅಭಿವೃದ್ಧಿಗೊಂಡಿವೆ. ಜೊತೆಗೆ ಹಡಗು ನಿರ್ಮಾಣ, ತೈಲಶುದ್ಧೀಕರಣ, ಎಂಜಿನಿಯರಿಂಗ್, ಉಕ್ಕು ತಯಾರಿಕೆ ಮುಂತಾದ ಉದ್ಯಮಗಳು ಕಂಡುಬರುತ್ತವೆ.

5. ವುಹಾನ್ ಪ್ರದೇಶ ಯಾಂಗ್–ಟ್ಸೆ–ಕಿಯಾಂಗ್ ಬಯಲಿನ ಮಧ್ಯಭಾಗದಲ್ಲಿದ್ದು ಮೂರು ಪ್ರಮುಖ ಕೈಗಾರಿಕಾ ನಗರಗಳನ್ನೊಳಗೊಂಡಿದೆ. ಉದಾ: ವುಂಚಾಂಗ್, ಹನ್ಯಾಂಗ್ ಮತ್ತು ಹ್ಯಾಂಕೊ. ಈ ಪ್ರದೇಶದಲ್ಲಿ ದೊರೆಯುವ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರುಗಳು ಲೋಹಾಧಾರಿತ ಹಾಗೂ ಬೃಹತ್ ಪ್ರಮಾಣದ ಕೈಗಾರಿಕೆಗಳನ್ನು ಪ್ರೋತ್ಸಾಹಿಸುತ್ತವೆ. ಉದಾ: ಕಬ್ಬಿಣ ಮತ್ತು ಉಕ್ಕು, ಯಂತ್ರೋಪಕರಣ, ಹಡಗು ನಿರ್ಮಾಣ, ರೈಲ್ವೆ ಉಪಕರಣ ಮತ್ತು ರಾಸಾಯನಿಕ ಕೈಗಾರಿಕೆಗಳು.

6.ಕ್ಸಿ ಜಿಂಯಾಂಗ್ ಪ್ರದೇಶ ಸಿಕಿಂಯಾಂಗ್ ನದಿಯು ಮುಖಜ ಭೂಮಿಯನ್ನೊಳಗೊಂಡಿದೆ. ಇದೇ ಮುಖ ಭಾಗದಲ್ಲಿ ಬಂದರು ಇದೆ. ಉದಾ: ಕಾಂಟನ್ ಗುವಾಂಗ್ ಜೊ. ಇಲ್ಲಿನ ಪ್ರಮುಖ ಕೈಗಾರಿಕೆಗಳೆಂದರೆ ಕಬ್ಬಿಣ ಮತ್ತು ಉಕ್ಕು, ಹಡಗು ನಿರ್ಮಾಣ, ಜವಳಿ ಉದ್ಯಮ, ರಾಸಾಯನಿಕಗಳು, ಮದ್ಯ ತಯಾರಿಕೆ, ಕರಕುಶಲ ಮತ್ತು ಆಹಾರ ವಸ್ತುಗಳ ಸಂಸ್ಕರಣ.

7. ಸಿಚುಯಾನ್ ಪ್ರದೇಶ ಚುಂಕಿಂಗ್ ಮತ್ತು ಚೆಂಗ್ಡು ಕೇಂದ್ರಗಳನ್ನೊಳಗೊಂಡಿದೆ. ಇಲ್ಲಿನ ಕಲ್ಲಿದ್ದಲು, ಕಬ್ಬಿಣದ ಅದಿರು, ಮಿಶ್ರಲೋಹಗಳು ಮತ್ತು ಅಪರಿಮಿತ ಕೃಷಿ ಕಚ್ಚಾ ವಸ್ತುಗಳು ವಿವಿಧ ಕೈಗಾರಿಕೆಗಳ ಸ್ಥಾಪನೆಗೆ ನೆರವಾಗುವುವು. ಉದಾ: ಕಬ್ಬಿಣ ಮತ್ತು ಉಕ್ಕು, ಜವಳಿ ಉದ್ಯಮ, ಕಾಗದ ಮತ್ತು ಮರದ ತಿರುಳು, ಸಿಮೆಂಟ್, ಯಂತ್ರೋಪಕರಣ, ರಾಸಾಯನಿಕಗಳು ಇತ್ಯಾದಿ.

ಭಾರತದ ಕೈಗಾರಿಕಾ ಪ್ರದೇಶಗಳು: ಭಾರತದಲ್ಲಿ ಕೈಗಾರಿಕೆ ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಪ್ರಾಮುಖ್ಯತೆಯನ್ನು ಪಡೆಯಿತು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬೃಹತ್ ಉದ್ಯಮಗಳಿಗೆ ಬುನಾದಿಯನ್ನು ಹಾಕಲಾಯಿತು. ಆಧುನಿಕ ಕೈಗಾರಿಕೆಗಳ ಜೊತೆಗೆ ಸಾಂಪ್ರದಾಯಿಕ ಗೃಹ ಕೈಗಾರಿಕೆಗಳಿಗೆ ಕಾರ್ಯಕ್ರಮ ಆಯೋಜಿಸಿ ಕಾರ್ಯರೂಪಕ್ಕೆ ತರಲಾಯಿತು. ಇದರಿಂದಾಗಿ ಕಳೆದ ಐದು ದಶಕಗಳಲ್ಲಿ ಭಾರತ ಮಹತ್ತ್ವಪೂರ್ಣ ಪ್ರಗತಿಯನ್ನು ಸಾಧಿಸಿತು, ಮತ್ತು ಏಷ್ಯದಲ್ಲಿ ಪ್ರಮುಖ ಸ್ಥಾನ ಪಡೆಯಿತು. ರಾಷ್ಟ್ರೀಯ ಆದಾಯದ ಶೇ. 35 ರಷ್ಟು ಭಾಗ ಕೈಗಾರಿಕೆಗಳಿಂದ ದೊರೆಯುತ್ತಿದೆ. ಒಟ್ಟು ಉದ್ಯೋಗ ನಿರತರಲ್ಲಿ ಶೇ.16 ರಷ್ಟು ಕಾರ್ಮಿಕರಿಗೆ ಉದ್ಯೋಗ ಒದಗಿಸಿದೆ. ಈ ಎರಡೂ ವಿಭಾಗದಲ್ಲೂ ಕೃಷಿಯ ಅನಂತರ ಎರಡನೆಯ ಸ್ಥಾನವನ್ನು ಪಡೆದಿದೆ. ಭಾರತದಲ್ಲಿ 8 ಪ್ರಧಾನ ಕೈಗಾರಿಕಾ ಸಂಕೀರ್ಣ ಅಥವಾ ಕೈಗಾರಿಕಾ ಪ್ರದೇಶಗಳನ್ನುಗುರುತಿಸಲಾಗಿದೆ.

ಅ) ಹೂಗ್ಲಿ ಪ್ರದೇಶ: ಹೂಗ್ಲಿ ನದಿಯ ಉದ್ದಕ್ಕೂ ಸು. 75 ಕಿಮೀ ವರೆಗೆ ಹಬ್ಬಿದೆ. ಉತ್ತರದಲ್ಲಿ ಬಂಬೇರಿಯ ಮತ್ತು ನೈಋತಿಯಿಂದ ದಕ್ಷಿಣದಲ್ಲಿ ಬಡ್ಜ್ ಬಡ್ಜ್ ಮತ್ತು ಉಲುಬೇರಿಯದವರೆಗೆ ಹಂಚಿಕೆಯಾಗಿದೆ. ಇಲ್ಲಿನ ಕೇಂದ್ರ ಬಿಂದು ಕೋಲ್ಕತ, ಗುಹಾವಟಿ ಅಗರ್ಪಾರ, ಶ್ಯಾಮ್‌ನಗರ, ಬಾರ‍್ರಾಕ್ಪೋರ್, ಅಲಂಬಜಾರ್, ಟಿಟಾಗರ್ ಬಾಬಾನಗರ, ಬಡ್ಜ್, ಬಡ್ಜ್ ಹೂಗ್ಲಿ, ಶ್ರೀರಾಂಪುರ ಹೌರಾ ಮತ್ತು ರಿಶ್ರಾ ಇಲ್ಲಿನ ಪ್ರಮುಖ ಕೈಗಾರಿಕಾ ಪ್ರದೇಶಗಳು. ಇಲ್ಲಿ ಕೈಗಾರಿಕೆ ಅಭಿವೃದ್ಧಿಗೊಳ್ಳಲು ಹಲವು ಅಂಶಗಳು ಪೂರಕವಾಗಿವೆ. ಅವುಗಳೆಂದರೆ: ಕೋಲ್ಕತ ಬಂದರು, ಗಂಗಾ ಮತ್ತುಬ್ರಹ್ಮಪುತ್ರ ನದಿಗಳ ಫಲವತ್ತಾದ ಹಿನ್ನಾಡು, ಸೆಣಬು, ಹತ್ತಿ, ಚಹ, ಖನಿಜ ಮೊದಲಾದ ಕಚ್ಚಾವಸ್ತುಗಳು, ಹತ್ತಿರದ ದಾಮೋದರ್‌ನಿಂದ ಲಭಿಸುವ ಕಲ್ಲಿದ್ದಲು ಹಾಗೂ ಜಲವಿದ್ಯುತ್, ಕಾರ್ಮಿಕರು, ರಸ್ತೆ, ರೈಲು ಮತ್ತು ಒಳನಾಡಿನ ಜಲಸಾರಿಗೆಗಳ ಉತ್ತಮ ಸೌಲಭ್ಯ, ಶುದ್ಧನೀರಿನ ಅಪರಿಮಿತ ಪೂರೈಕೆ, ಹಿಂದಿನಿಂದಲೂ ಲಭಿಸಿರುವ ಬ್ರಿಟಿಷರ ನಿರ್ವಹಣೆ ಮತ್ತು ತಾಂತ್ರಿಕ ನೆರವು. ಇಲ್ಲಿನ ಪ್ರಮುಖ ಕೈಗಾರಿಕೆಗಳೆಂದರೆ ಸೆಣಬು, ಹತ್ತಿ, ರೇಷ್ಮೆಜವಳಿ, ಕಾಗದ, ಎಂಜಿನಿಯರಿಂಗ್ ಎಲೆಕ್ಟ್ರಾನಿಕ್ಸ್, ಸ್ವಯಂಚಾಲಿತ ವಾಹನ, ರಾಸಾಯನಿಕ, ಅಲ್ಯೂಮಿನಿಯಂ, ಸಿರಾಮಿಕ್ಸ್, ಚರ್ಮ, ಸೈಕಲ್, ಡೀಸೆಲ್, ಎಂಜಿನ್, ರಸಗೊಬ್ಬರ, ಹಡಗು, ರಬ್ಬರ್, ಪ್ಲಾಸ್ಟಿಕ್, ಸಾರಿಗೆ, ಯಂತ್ರಗಳು, ಔಷಧ ಉದ್ಯಮಗಳು.

ಆ) ಮುಂಬಯಿ: ಪುಣೆ ಪ್ರದೇಶದ ಭಾರತದ ಅತ್ಯಂತ ದೊಡ್ಡ ಸಂಘಟಿತ ಕೈಗಾರಿಕಾ ವಲಯವಾಗಿದ್ದು ಮಹಾರಾಷ್ಟ್ರದಲ್ಲಿದೆ. ಈ ಪ್ರದೇಶ ಮುಂಬಯಿ ಬೃಹತ್ ನಗರ ಮತ್ತು ಅದರ ಉಪನಗರಗಳಾದ ಕುರ್ಲಾ, ಘಾಟ್ಕೋಪುರ, ವಿಲೆ ಪಾರ್ಲೆ,

ಜೋಗೇಶ್ವರಿ, ಅಂಧೇರಿ, ಥಾಣೆ, ಭಂಡೂಪ್, ಕಲ್ಯಾಣ, ಪುಣೆ ಮತ್ತು ಅದರ ಉಪನಗರಗಳನ್ನು ಸೇರಿಸಿಕೊಂಡಿದೆ. ಇಲ್ಲಿ ಹತ್ತಿ ಬಟ್ಟೆ ಉದ್ಯಮ ಕೇಂದ್ರೀಕರಿಸಿದ್ದು ಮುಂಬಯಿ ಭಾರತದ ಮ್ಯಾಂಚೆಸ್ಟರ್ ಎಂದು ಖ್ಯಾತಿಗಳಿಸಿದೆ. ಅಲ್ಲದೆ ಉಣ್ಣೆ ಬಟ್ಟೆ, ರೇಷ್ಮೆ ಮತ್ತು ಕೃತಕ ರೇಷ್ಮೆ ಜವಳಿ, ರಾಸಾಯನಿಕಗಳು, ವನಸ್ಪತಿ , ಸಾಬೂನು, ರಬ್ಬರ್, ಪ್ಲಾಸ್ಟಿಕ್, ತೈಲ ಶುದ್ಧೀಕರಣ, ಕಾರು, ಜೀಪು, ಮೊಪೆಡ್ಸ್, ಬೈಸಿಕಲ್, ಎಲಕ್ಟ್ರಿಕಲ್, ಎಂಜಿನಿಯರಿಂಗ್, ಸಕ್ಕರೆ, ಸಿಮೆಂಟ್, ಔಷಧ ಉದ್ಯಮಗಳೂ ನೆಲೆಸಿವೆ.

ಇ) ಅಹಮದಾಬಾದ್–ವಡೋದರ ಪ್ರದೇಶ: ಗುಜರಾತ್‌ನ ಕ್ಯಾಂಬೆ ಖಾರಿಯ ಸುತ್ತಮುತ್ತಲಿನ ಭಾಗವನ್ನೊಳಗೊಂಡಿದೆ. ಅಹಮದಾಬಾದ್, ವಡೋದರ, ಕೊಯಾಲಿ, ಬರೂಚ್ ಮತ್ತು ಸೂರತ್‌ಗಳು ಪ್ರಮುಖವಾದವು. ಅಹಮದಾಬಾದ್ ಕೇಂದ್ರ ಬಿಂದುವಾಗಿದೆ. ಇಲ್ಲಿ ಹತ್ತಿ, ಉಣ್ಣೆ ಮತ್ತು ರೇಷ್ಮೆ ಜವಳಿ, ಕಾಗದ, ಪೆಟ್ರೋಕೆಮಿಲ್ಸ್ ಎಂಜಿನಿಯರಿಂಗ್, ಡೀಸೆಲ್ ಎಂಜಿನ್, ತೈಲಶುದ್ಧೀಕರಣ, ಔಷಧ ಹಾಗೂ ಕ್ಷೀರೋತ್ಪನ್ನದ ಉದ್ಯಮಗಳು ಪ್ರಮುಖವಾಗಿದೆ.

ಈ) ಮಧುರೈ–ಕೊಯಮತ್ತೂರು –ಬೆಂಗಳೂರು ಪ್ರದೇಶ: ಇದು ಕರ್ನಾಟಕ ತಮಿಳುನಾಡು ರಾಜ್ಯಗಳಲ್ಲಿ ಹಂಚಿಕೆಯಾಗಿದೆ. ಉತ್ತರದಲ್ಲಿ ಬೆಂಗಳೂರಿನಿಂದ ಹಾಗೂ ದಕ್ಷಿಣದಲ್ಲಿ ಮಧುರೈವರೆಗೆ ವಿಸ್ತರಿಸಿದೆ. ಬೆಂಗಳೂರು, ಚೆನ್ನೈ, ಮಧುರೈ, ಶಿವಕಾಶಿ, ಕೊಯಮತ್ತೂರು, ತಿರುಚಿರಾಪಳ್ಳಿ, ಮಂಡ್ಯ, ಮೈಸೂರು ಮತ್ತು ಮಧುಕೊಟ್ಟೈ–ಇವು ಪ್ರಮುಖ ಕೈಗಾರಿಕಾ ಪ್ರದೇಶಗಳು. ಹತ್ತಿ, ರೇಷ್ಮೆ, ಜವಳಿ, ಸಕ್ಕರೆ, ರಾಸಾಯನಿಕ, ಯಂತ್ರಗಳು, ರಬ್ಬರ್, ವಿದ್ಯುಜ್ಜನಕ ಉಪಕರಣಗಳು, ಟೆಲಿಫೋನ್, ರೈಲ್ವೆ ಬೋಗಿ, ತೈಲಶುದ್ಧೀಕರಣ ಉದ್ಯಮಗಳು ಪ್ರಮುಖವಾಗಿದೆ. ಚೆನ್ನೈ, ಮಧುರೈ ಮತ್ತು ಕೊಯಮತ್ತೂರು ಪ್ರಸಿದ್ಧ ಹತ್ತಿ ಜವಳಿ ಕೇಂದ್ರಗಳು. ಬೆಂಗಳೂರಿನಲ್ಲಿ ಹಿಂದೂಸ್ಥಾನ್ ಮಷೀನ್ ಟೂಲ್ಸ್ (ಎಚ್‌ಎಂಟಿ), ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (ಐಟಿಐ) ಹಿಂದೂಸ್ಥಾನ್ ಏರೋನಾಟಿಕ್ಸ್ ಲಿ. (ಎಚ್‌ಎಎಲ್), ಭಾರತ್ ಎಲೆಕ್ಟ್ರಾನಿಕ್ಸ್ ಮೊದಲಾದ ಕಾರ್ಖಾನೆಗಳಿವೆ.

ಉ) ಛೋಟನಾಗಪುರ ಪ್ರಸ್ಥಭೂಮಿ ಪ್ರದೇಶ: ಬಹುಭಾಗ ಜಾರ್ಖಂಡ್‌ನ ವಲಯ ಅದಕ್ಕೆ ಹೊಂದಿಕೊಂಡ ಪಶ್ಚಿಮ ಬಂಗಾಲ ಮತ್ತು ಒರಿಸ್ಸ ರಾಜ್ಯದ ಭಾಗಗಳನ್ನು ಒಳಗೊಂಡಿದೆ. ಜಂಷೆಡ್‌ಪುರ ಇಲ್ಲಿನ ಪ್ರಮುಖ ಕೇಂದ್ರ. ಅಲ್ಲದೆ ಬೊಕಾರೊ, ದುರ್ಗಾಪುರ, ಕುಲ್ಟಿ, ಹಿರಾಪುರ, ಅಸನ್‌ಸಾಲ್, ರಾಣಿಗಂಜ್, ಝರಿಯ, ಸಿಂದ್ರಿ ಧನಬಾದ್, ಹಜ್ಹಾರಿಬಾಗ್ ಮತ್ತು ರಾಂಚಿ ಕೇಂದ್ರಗಳೂ ಇವೆ. ಕಬ್ಬಿಣ ಮತ್ತು ಉಕ್ಕು, ರೈಲ್ವೆ ಬೋಗಿ, ಕೃಷಿ ಉಪಕರಣ, ಕಾಗದ, ವಿದ್ಯುತ್ ತಂತಿ, ರಾಸಾಯನಿಕ, ಅಲ್ಯೂಮಿನಿಯಂ, ಸಿಮೆಂಟ್, ರಸಗೊಬ್ಬರ, ರೈಲ್ವೆ ಎಂಜಿನ್ನುಗಳು, ಕಾಗದ, ಗಾಜು ಮತ್ತು ಸೆರಾಮಿಕ್ ತಯಾರಿಕೆಯ ಉದ್ಯಮಗಳು ಮುಖ್ಯವಾದವುಗಳು.

ಊ) ಆಗ್ರ–ದೆಹಲಿ–ಸಹರಾನ್ಪುರ–ಅಂಬಾಲ ಪ್ರದೇಶಗಳು: ಉತ್ತರ ಪ್ರದೇಶ, ದೆಹಲಿ, ಹರಿಯಾಣದ ಭಾಗಗಳನ್ನೊಳಗೊಂಡಿದೆ. ಆಗ್ರಾ, ಸಹರಾನ್ಪುರ, ಫರಿದಾಬಾದ್, ಮಥುರ, ದೆಹಲಿ, ಮೋದಿನಗರ, ಗಾಜಿಯಾಬಾದ್, ಫಿರೋಜ್‌ಬಾದ್, ನೊಯಿಡ, ಮೀರತ್, ಪಾಣಿಪತ್ ಮೊದಲಾದ ಕೇಂದ್ರಗಳನ್ನು ಒಳಗೊಂಡಿದೆ. ಇಲ್ಲಿ ದೆಹಲಿ ಅತಿ ಪ್ರಮುಖವಾದುದು. ಹತ್ತಿ ಗಿರಣಿ, ಗಾಜು, ರಸಾಯನಿಕಗಳು, ಸ್ವಯಂಚಾಲಿತ ವಾಹನಗಳು, ಎಂಜಿನಿಯರಿಂಗ್, ಕಾಗದ, ಸಾಬೂನು, ವನಸ್ಪತಿ, ಸಕ್ಕರೆ ಮತ್ತು ತೈಲ ಶುದ್ಧೀಕರಣಗಳು ಅಭಿವೃದ್ಧಿಗೊಂಡಿವೆ. ಇದನ್ನು ನ್ಯಾಷನಲ್ ಕ್ಯಾಪಿಟಲ್ ರೀಜನ್ (ಎನ್‌ಸಿಆರ್) ಎಂದೂ ಸಹ ಕರೆಯುವರು. ಏಕೆಂದರೆ ಇದು ದೆಹಲಿ ಮಹಾನಗರ ಮತ್ತು 138 ಪಟ್ಟಣಗಳನ್ನೊಳಗೊಂಡಿದೆ.

ಋ) ವಿಶಾಖಪಟ್ಟಣಂ – ಗುಂಟೂರು ಪ್ರದೇಶ: ಆಂಧ್ರ ಪ್ರದೇಶ, ವಿಶಾಖ ಪಟ್ಟಣಂ, ಕರ್ನೂಲು, ಪ್ರಕಾಶಂ, ಗುಂಟೂರು ಹಾಗೂ ಮಚಲಿ ಪಟ್ಟಣಗಳನ್ನು ಒಳಗೊಂಡಿದೆ. ಇಲ್ಲಿ ಕಬ್ಬಿಣ ಮತ್ತು ಉಕ್ಕು, ತೈಲ ಶುದ್ಧೀಕರಣ, ಹಡಗು ನಿರ್ಮಾಣ, ರಸಗೊಬ್ಬರ, ಸಿಮೆಂಟ್, ಅಲ್ಯೂಮಿನಿಯಂ ಹಾಗೂ ಪೆಟ್ರೋ ರಾಸಾಯನಿಕ ಕೈಗಾರಿಕೆಗಳು ನೆಲೆಸಿವೆ ಅಲ್ಲೂವ, ಕೊಚ್ಚಿನ್ ಮತ್ತು ಪುನಲೂರ್ ವಲಯಗಳೂ ಕೈಗಾರಿಕಾ ಕೇಂದ್ರಗಳಾಗಿವೆ. ಇವು ಇತ್ತೀಚೆಗೆ ಅಭಿವೃದ್ಧಿ ಹೊಂದುತ್ತಿವೆ. (ಎನ್.ಎಲ್.)

**ಪ್ರಮುಖ ಕೈಗಾರಿಕೆಗಳು:** ಲೀಡಿಂಗ್ ಅಥವಾ ಪ್ರಮುಖ ಕೈಗಾರಿಕೆಗಳು ಮತ್ತು ಸಂಚಾಲನ ಕೈಗಾರಿಕ ಘಟಕಗಳ ಧೃವೀಯ ಬೆಳವಣಿಗೆ ಸಿದ್ಧಾಂತದ ಮುಖ್ಯ ಪರಿಕಲ್ಪನೆಗಳು. ಇವುಗಳು ಇತರೆ ಆರ್ಥಿಕ ಘಟಕಗಳ ಮೇಲೆ ತಮ್ಮ ಪ್ರಾಬಲ್ಯವನ್ನು ಹೊಂದಿರುತ್ತದೆ. ಅದು ಒಂದೇ ಒಂದು ಪ್ರಾಬಲ್ಯ ಸಂಚಾಲನ ಘಟಕವಾಗಿರಬಹುದು. ಅಥವಾ ಕೈಗಾರಿಕಾ ಗುಂಪುಗಳ ಸಂಕೀರ್ಣವಾಗಿರಬಹುದು.

ಸಂಚಾಲನ ಕೈಗಾರಿಕ ಸಣ್ಣ ಘಟಕಗಳು ಮತ್ತು ಪ್ರಮುಖ ಕೈಗಾರಿಕೆಗಳ ವ್ಯಾಖ್ಯಾನಗಳು ಕೆಲವು ವ್ಯಾಖ್ಯಾನದಿಂದ ಲೀಡಿಂಗ್ ಕೈಗಾರಿಕೆಗಳನ್ನು ಹಾಗೂ ಸಂಚಾಲನ ಕೈಗಾರಿಕಾ ಘಟಕಗಳನ್ನು ಗುರುತಿಸಲು ಸಹಾಯವಾಗುತ್ತದೆ.

ಸಾಮಾನ್ಯವಾಗಿ ಸಂಚಾಲನ ಕೈಗಾರಿಕ ಘಟಕಗಳು: ಅ) ದೊಡ್ಡದಾಗಿರುತ್ತದೆ. ಆ) ಗುರುತರ ಬೆಳವಣಿಗೆಯನ್ನು ತಮ್ಮ ಸುತ್ತ ಮುತ್ತಲ ಪರಿಸರದಲ್ಲಿ ಪ್ರೇರೇಪಿಸುತ್ತವೆ. ಇ) ಹೆಚ್ಚಿನ ಪರಿಣಿತ ಸಾಮರ್ಥ್ಯವನ್ನು ಹೊಂದಿರುತ್ತವೆ. ಈ) ತೀವ್ರತರ ಕೈಗಾರಿಕಾ ಬೆಳವಣಿಗೆ ಗುಂಪಿಗೆ ಸೇರಿರುತ್ತದೆ.

ಲೀಡಿಂಗ್ ಕೈಗಾರಿಕೆ ಸಾಮಾನ್ಯವಾಗಿ: 1) ಹೊಸ ಹಾಗೂ ಚಲನಾತ್ಮಕ ಕೈಗಾರಿಕೆಯಾಗಿದ್ದು ಸುಧಾರಿತ ಅಥವಾ ಉನ್ನತ ತಾಂತ್ರಿಕತೆ ಪ್ರಾದೇಶಿಕ ಬೆಳವಣಿಗೆಯ ಸಂಕಲ್ಪ ಸದೃಢತೆ ರೂಪಿಸುತ್ತದೆ.

2) ಈ ಕೈಗಾರಿಕೆಗಳ ಉತ್ಪನ್ನಗಳಿಗೆ ರಾಷ್ಟ್ರ ಮಟ್ಟದ ಮಾರುಕಟ್ಟೆಯಲ್ಲಿ ಹೆಚ್ಚಿನ ಆದಾಯ ಸ್ಥಿತಿ ಸ್ಥಾಪಕ ಬೇಡಿಕೆ ಇರುತ್ತದೆ.

3) ಅಂತರ ಕೈಗಾರಿಕೆಗಳ ಸಹ ಸಂಬಂಧಗಳು ಬಲವಾಗಿದ್ದು ಇತರೆ ಕ್ಷೇತ್ರಗಳ ಉತ್ಪನ್ನಗಳೊಡನೆ ಸಂಪರ್ಕಕೊಂಡಿ ಏರ್ಪಟ್ಟಿರುತ್ತದೆ. ಅಲ್ಲದೆ ಈ ಕೈಗಾರಿಕೆಗಳ ಅರೆ ಉತ್ಪನ್ನಗಳು ಇತರೆ ಹಿಂದುಳಿದ ಪ್ರದೇಶಗಳ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳಾಗಿ ಉಪಯೋಗವಾಗುತ್ತವೆ.

ಧೃವೀಯ ಬೆಳವಣಿಗೆಯು ಎರಡು ರೀತಿಯ ಪ್ರಭಾವಕ್ಕೆ ಒಳಪಟ್ಟಿರುತ್ತದೆ.

1) ಚದುರಿದ ಪರಿಣಾಮಗಳು ಚಾಲನಾತ್ಮಕ ಮತ್ತು ಪ್ರೇರಣ ಬೆಳವಣಿಗೆಯು ಕೇಂದ್ರದಿಂದ ತನ್ನ ಸುತ್ತಲಿನ ಪ್ರದೇಶಗಳಿಗೆ ಪ್ರವಹಿಸುತ್ತವೆ.

2) ಧೃವೀಕರಣ ಆರ್ಥಿಕ ಚಟುವಟಿಕೆಗಳು ವಿವಿಧ ಗುಂಪುಗಳಾಗಿ ಅವುಗಳ ಗುಣಧರ್ಮಗಳಿಗೆ ಅನುಗುಣವಾಗಿ ಧೃವೀಕರಣಗೊಂಡು ಧೃವೀಯ ಆರ್ಥಿಕ ಬೆಳವಣಿಗೆಯ ರೂಪ ತಾಳುತ್ತವೆ. ಅಲ್ಲದೆ ಧೃವೀಕರಣಗೊಂಡ ಆರ್ಥಿಕ ಚಟುವಟಿಕೆಗಳು ಯಾವುದೇ ಪ್ರದೇಶದ ಕೆಲವೇ ಕೇಂದ್ರಗಳಲ್ಲಿ ಭೌಗೋಳಿಕವಾಗಿ ಸ್ಥಾನೀಕರಣಗೊಂಡು ಸಂಪನ್ಮೂಲಗಳ ಹರಿವಿಕೆಯಿಂದ ಆರ್ಥಿಕ ಚಟುವಟಿಕೆಗಳು ಕೇಂದ್ರೀಕರಣಗೊಳ್ಳುತ್ತವೆ. ಈ ರೀತಿ ಕೇಂದ್ರೀಕರಣದಿಂದ ಅನೇಕ ಆರ್ಥಿಕ ಅನುಕೂಲಗಳುಂಟಾಗುತ್ತವೆ. ಇವುಗಳನ್ನು ಮೂರು ವಿಧಗಳಲ್ಲಿ ಗುರುತಿಸಬಹುದು. ಅವುಗಳೆಂದರೆ:

ಅ) ಸಂಚಾಲನ ಘಟಕಗಳ ಆಂತರಿಕ ಅನುಕೂಲಗಳು (ಮಿತವ್ಯಯಗಳು): ಕೈಗಾರಿಕೆಯ ಉತ್ಪಾದನೆ ಹೆಚ್ಚಾದಂತೆ ಸರಕುಗಳ ಸರಾಸರಿ ವೆಚ್ಚದ ದರ ಕಡಿಮೆಯಾಗುವುದು. ಹೀಗೆ ಹೆಚ್ಚಿನ ಪ್ರಮಾಣದ ಉತ್ಪಾದನೆ ತಾಂತ್ರಿಕತೆಯ ಅಳವಡಿಕೆ, ಉದ್ಯೋಗ ಪರಿಣಿತಿಯ ನಿರ್ವಹಣೆ ಮತ್ತು ಮಾರುಕಟ್ಟೆ ಹಾಗೂ ಹಣಕಾಸಿನ ನಿರ್ವಹಣೆಗಳನ್ನು ಉತ್ತೇಜಿಸುತ್ತದೆ.

ಆ) ಸಂಚಾಲನ ಘಟಕಗಳಿಗೆ ಬಾಹ್ಯವಾಗಿ ಆದರೆ ಕೈಗಾರಿಕೆಗಳಿಗೆ ಆಂತರಿಕವಾಗಿಯೂ ಇರುವ ಅನುಕೂಲಗಳು: ಕೈಗಾರಿಕೆ ವಿಸ್ತಾರಗೊಂಡಂತೆ ಘಟಕದ ಉತ್ಪಾದನ ವೆಚ್ಚ ಗಣನೀಯವಾಗಿ ಕಡಿಮೆಯಿರುತ್ತದೆ. ನಿರ್ಬಂಧಿತ ಆರ್ಥಿಕತೆ, ಉದ್ಯಮಗಳ ಸ್ಥಾನಿಕ ಸಾಮೀಪ್ಯತೆ ಸಂಪರ್ಕಕೊಂಡಿಗೆ ಕಾರಣವಾಗಿದೆ. ನಿರ್ಬಂಧಿತ ಆರ್ಥಿಕತೆ ಉದ್ಯಮ ವಿಸ್ತಾರಗೊಳ್ಳಲು, ಪರಿಣಿತ ಕ್ರಮ ಕ್ರೋಡೀಕರಿಸಲು ಸುಲಭವಾಗಿ ಉತ್ಪನ್ನಗಳ ವಿನಿಮಯಗೊಳ್ಳಲು, ತ್ಯಾಜ್ಯ ವಸ್ತುಗಳನ್ನು ಪುನರ್ ಬಳಕೆ ಹಾಗೂ ವಿಶೇಷ ಸೇವೆಗಳು ಎಲ್ಲ ಉದ್ಯಮಗಳಿಗೂ ದೊರೆಯುವಂತೆ ಮಾಡಲು ಅನುವು ಮಾಡಿಕೊಳ್ಳುವುದಲ್ಲದೆ, ಹೆಚ್ಚು ಸಂಶೋಧನ ಸೌಲಭ್ಯಗಳು, ದುರಸ್ಥಿ ಸೇವೆಗಳು ಸ್ಥಳದಲ್ಲಿಯೆ ಲಭ್ಯವಾಗುವಂತೆ ಮಾಡಲು ಹೆಚ್ಚು ಸಹಕಾರಿಯಾಗಿರುತ್ತದೆ. ಇವುಗಳಿಂದ ಸರಕಿನ ಸರಾಸರಿ ವೆಚ್ಚ ಕಡಿಮೆಯಾಗುತ್ತದೆ.

ಇ) ಕೈಗಾರಿಕೆಗೆ ಬಾಹ್ಯವಾಗಿ ಆದರೆ ನಗರ ಪ್ರದೇಶಗಳಿಗೆ ಆಂತರಿಕವಾಗಿ ಇರುವ ಅನುಕೂಲಗಳು: ಸರಾಸರಿ ಕಡಿಮೆ ಉತ್ಪಾದನ ವೆಚ್ಚದ ಅನೇಕ ಕೈಗಾರಿಕೆಗಳಂತೆ ಒಂದೇ ಪ್ರದೇಶದಲ್ಲಿ ಬೆಳೆಯುತ್ತದೆ. ಹೀಗೆ ನಗರೀಕರಣ ವೃದ್ಧಿಗೊಂಡು ವಿವಿಧ ರೀತಿಯ ಸೇವೆಗಳನ್ನು ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳು, ಜನರು ಮತ್ತು ಕೈಗಾರಿಕೆಗಳಿಗೆ ಒದಗಿಸಿಕೊಡುತ್ತವೆ. ಅವುಗಳೆಂದರೆ, ಸಾರಿಗೆ ಸಂಪರ್ಕ, ವಾಣಿಜ್ಯ, ಹಣಕಾಸಿನ ಸೌಲಭ್ಯಗಳು ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇವೆಗಳಾದ ಆಸ್ಪತ್ರೆಗಳು, ಶಾಲೆಗಳು, ಸಿನಿಮ ಕೇಂದ್ರಗಳು ಮುಂತಾದ ಸೌಲಭ್ಯಗಳು ಅಲ್ಲದೆ ಪ್ರಮುಖ ಕೈಗಾರಿಕಾ ಸಂಕೀರ್ಣಗಳು ಸಹಾ ಧೃವೀಯ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತವೆ. ಹೆಚ್ಚು ಅಭಿವೃದ್ಧಿಗೊಂಡಿರುವ ಮೂಲ ಸೌಲಭ್ಯಗಳು ನಗರದ ಕೇಂದ್ರೀಯ ಭಾಗದಲ್ಲಿ ಧೃವೀಕರಣಗೊಳ್ಳುತ್ತವೆ.

ಹರ್ಷ್‌ಮನ್‌ರವರ ಪ್ರಕಾರ ಹೀಗೆ ಧೃವೀಕರಣಗೊಳ್ಳುವುದು ಬೆಳವಣಿಗೆಯನ್ನು ಪ್ರೋತ್ಸಾಹಿಸುವುದಿಲ್ಲ. ಅಲ್ಲದೆ ಆ ದೃಶ್ಯ ನಿರುದ್ಯೋಗವನ್ನು ಸ್ಥಂಭ ಬೆಳವಣಿಗೆ ತನ್ನಲ್ಲಿ ಲೀನಗೊಳಿಸುವುದಕ್ಕೆ ಬದಲಾಗಿ ಶ್ರಮಬಲದ ಬಹುಭಾಗ ಹರಿದುಹೋಗುವಂತೆ ಮಾಡುವುದರ ಮೂಲಕ ಬೆಂಬಲ ಪ್ರದೇಶವನ್ನು ಒಂದು ಮಾಡಬಹುದು. ಪ್ರಾದೇಶಿಕ ಅಭಿವೃದ್ಧಿಯಲ್ಲಿ ಬೆಳವಣಿಗೆ ಕೇಂದ್ರಗಳನ್ನು ಬೆರ್ರಿಯವರು ವಿಸ್ತರಣ ಪ್ರಕ್ರಿಯೆಯಲ್ಲಿ ಸಂಪರ್ಕಗೊಳಿಸಿದ್ದಾರೆ. ಬೆರ್ರಿಯವರು ಹೇಳಿರುವಂತೆ ಬೆಳವಣಿಗೆ ನಿರ್ದಿಷ್ಠ ರೀತಿಯಲ್ಲಿ ನವೀನತೆಯ ವಿಸ್ತರಣೆಯಾಗಲಿದ್ದು, ಹೀಗೆ ನವೀನಗೊಂಡ ಬೆಳವಣಿಗೆ ದೊಡ್ಡ ನಗರಗಳಿಂದ

ಸಣ್ಣ ನಗರಗಳು ಮತ್ತು ಪಟ್ಟಣಗಳಿಗೆ ಹರಿದು ಹೋಗುತ್ತದೆ. ವಿಸ್ತರಣೆ ಪರಿಕಲ್ಪನೆ ಬೆಳವಣಿಗೆ ಪ್ರಕ್ರಿಯೆ ನಗರಗಳಿಂದ ಹೇಗೆ ಸುತ್ತಮುತ್ತಲಿನ ಪ್ರದೇಶಗಳಿಗೆ ಹರಡಿಕೊಳ್ಳುತ್ತದೆ ಎಂಬುದನ್ನು ಸೋಸುವಿಕೆ ಎಂದು ಕರೆಯಲಾಗಿದೆ. ಆರ್ಥಿಕವಾಗಿ ಬೆಳೆಯಲ್ಪಡುವ ಕೇಂದ್ರಗಳು ಸೋಸುವಿಕೆಯನ್ನು ಹೆಚ್ಚಿಸುವ ಉಪಕರಣಗಳಂತೆ ಕಾರ್ಯ ನಿರ್ವಹಿಸುವುದರಿಂದ ನಗರಗಳ ಸುತ್ತ ಮುತ್ತಲಿನ ಪ್ರದೇಶಗಳು ನಗರ ಕೇಂದ್ರ ಪ್ರದೇಶಗಳ ತೆಕ್ಕೆಯಲ್ಲಿ ಬರುವಂತೆ ಕಾರ್ಯನಿರ್ವಹಿಸಲಾಗಿದೆ. ವ್ಯವಸ್ಥಿತ ರೀತಿಯ ನೀತಿ ನಿಯಮಗಳು ವಿಸ್ತರಣಾವಧಿಯನ್ನು ಹೆಚ್ಚಿಸಿದರೆ, ಬೆಳವಣಿಗೆ ಕೇಂದ್ರಗಳ ಮೂಲ ಸೌಲಭ್ಯ ನಿಯಮಗಳು ಸೋಸುವಿಕೆ ಸಮಯವನ್ನು ಕಡಿಮೆಗೊಳಿಸುವುದು. ಸೋಸುವಿಕೆ ಮತ್ತು ವಿಸ್ತರಣೆಗಳ ಸಮನ್ವಯ ಕಾರ್ಯ ರಾಷ್ಟ್ರೀಯ ಆರ್ಥಿಕತೆಯ ಸಮಗ್ರ ಬೆಳವಣಿಗೆಯನ್ನು ಸಾಧಿಸುವಲ್ಲಿ ಸಹಾಯಕಾರಿಯಾಗುತ್ತದೆ. ಆದ್ದರಿಂದ ಬೆಳವಣಿಗೆ ಕೇಂದ್ರದ ಅಭಿವೃದ್ಧಿ ನೀತಿ ನಿಯಮಗಳು ಅಭಿವೃದ್ಧಿ ವಾಹಿತಿ ಸಂಪರ್ಕ ಪ್ರಕ್ರಿಯೆಯು ಸಾರಿಗೆ ಸಂಪರ್ಕಗಳೊಡನೆ ಅವಲಂಬಿತವಾಗಿರುತ್ತದೆ. (ಟಿ.ಎಂ.ಎಂ.)

**ಪ್ರವಾಸ:** ವಿಹಾರ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವಸ್ಥಳದಿಂದ ಹೊರಗೆ ಹೋಗುವುದು. ಸಾಮಾನ್ಯವಾಗಿ ಪುರಾತನ ಕಾಲದಲ್ಲಿ ಮಾನವರು ಬಡತನದಿಂದ ಮತ್ತು ಕೆಲವು ವಿಶೇಷ ಸನ್ನಿವೇಶಗಳಲ್ಲಿ ಅಂದರೆ ಯುದ್ಧ, ಕ್ಷಾಮ, ಬರಗಾಲ ಇತ್ಯಾದಿಗಳ ಸಂದರ್ಭದಲ್ಲಿ ಆಹಾರ ಮತ್ತು ವಸತಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಪ್ರಯಾಣಿಸುತ್ತಿದ್ದರು. ಕಾಲಕ್ರಮೇಣ ಮಾನವನ ಆರ್ಥಿಕ, ಶೈಕ್ಷಣಿಕ, ಬೌದ್ಧಿಕಮಟ್ಟ ವೃದ್ಧಿಸಿದ ಮೇಲೆ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಮನುಷ್ಯ ಪ್ರಯಾಣ ಕೈಗೊಳ್ಳಲು ಪ್ರಾರಂಭಿಸಿದ. ಹಾಗಾಗಿ, ಪ್ರವಾಸಿ ಎಂದರೆ ಕನಿಷ್ಠ 24 ಗಂಟೆಗಳ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಯಲ್ಲಿ; ತನ್ನ ಸ್ವಂತ ಸ್ಥಳದಿಂದ ಬೇರೊಂದು ಆಕರ್ಷಣೀಯ ಸ್ಥಳಕ್ಕೆ ವಿಹಾರ, ಆನಂದ, ಆಹ್ಲಾದ, ಸಂತೋಷಕ್ಕಾಗಿ ಪ್ರಯಾಣಿಸುವ, ಮನಸ್ಸಿನ ಭಾರಗಳನ್ನು ಕಡಿಮೆ ಮಾಡಿಕೊಳ್ಳುವ ನೈಸರ್ಗಿಕ ಅಥವಾ ಕೃತಕವಾಗಿ ನಿರ್ಮಿಸಿದ ಸ್ಥಳಗಳಿಗೆ ಭೇಟಿ ನಿಡುವ, ದಿನವಿಡೀ ವ್ಯಾವಹಾರಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ಮಾನಸಿಕ ಒತ್ತಡಗಳಿಗೆ ಸಿಲುಕಿರುವವ, ತಮ್ಮ ಸಂಸಾರ ಅಥವಾ ಸ್ನೇಹಿತರೊಡನೆ ಆಕರ್ಷಣೀಯ ಸ್ಥಳಗಳಿಗೆ ಹೋಗುವವ, ವರ್ಷವಿಡೀ ಶಾಲಾ–ಕಾಲೇಜುಗಳಲ್ಲಿ ಪಠ್ಯ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಒಂದು ಸೀಮಿತ ಬದುಕನ್ನು ಸಾಗಿಸುತ್ತಿದ್ದ ತಮ್ಮ ಮಕ್ಕಳ ಇತರೆ ಜ್ಞಾನಾರ್ಜನೆಗಳಿಗಾಗಿ ಐತಿಹಾಸಿಕ, ಭೌಗೋಳಿಕ, ಸಾಂಸ್ಕೃತಿಕ, ಆಕರ್ಷಣೆಯ, ಪ್ರೇಕ್ಷಣೀಯ, ಯಾತ್ರಾ ಸ್ಥಳಗಳಿಗೆ ಭೇಟಿ ನೀಡುವವರಿಗೆ ಪ್ರವಾಸಿಗರು ಎನ್ನುವರು. ಉದಾ: ಐತಿಹಾಸಿಕ ಸ್ಥಳವಾದ ಅರಮನೆಗಳು, ದೇವಾಲಯಗಳು, ಸ್ಮಾರಕಗಳು, ಉದ್ಯಾನವನಗಳು, ಅಣೆಕಟ್ಟುಗಳು, ಜಲಪಾತಗಳು, ಅಭಯಾರಣ್ಯಗಳು, ರಾಷ್ಟ್ರೀಯ ಉದ್ಯಾನವನಗಳು, ಪಕ್ಷಿಧಾಮಗಳು, ಯಾತ್ರಾಸ್ಥಳಗಳು– ಈ ಸ್ವರೂಪದ ಸ್ಥಳಗಳಿಗೆ ಭೇಟಿ ನೀಡುವವರಿಗೆ ಪ್ರವಾಸಿಗರೆನ್ನಬಹುದು.

ಉನ್ನತ ವ್ಯಾಸಂಗಕ್ಕಾಗಿ ವೈವಿಧ್ಯಮಯವಾದ ಬೌಗೋಳಿಕ ಮತ್ತು ಸಾಂಸ್ಕೃತಿಕ ಆಕರ್ಷಣೀಯ, ಅಪರೂಪದ ಸ್ಥಳ, ಕೇಂದ್ರಗಳಿಗೆ ಭೇಟಿನೀಡುವವರಿಗೂ ಪ್ರವಾಸಿಗರೆನ್ನುವರು. ಪ್ರವಾಸಿಗರ ಉದ್ದೇಶಗಳು ಬೇರೆ ಬೇರೆಯಾಗಿರುತ್ತವೆ. ಉದಾ : ಮನರಂಜನೆ, ವಿನೋದ, ಉಲ್ಲಾಸ, ಅಧ್ಯಯನ, ವ್ಯಾಪಾರ ಇತ್ಯಾದಿ. (ಸಿ.ಸಿ.)

**ಪ್ರವಾಸ ನಿರ್ವಹಣೆ:** ಆಕರ್ಷಣೀಯ, ಮನರಂಜನ, ಐತಿಹಾಸಿಕ ಸ್ಥಳಗಳ ನಿರ್ವಹಣೆಯನ್ನು ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ನಿರ್ವಹಿಸಿಕೊಂಡು ಬರುತ್ತಿವೆ. ಕೇಂದ್ರ ಪ್ರವಾಸೋದ್ಯಮ ಮತ್ತು ರಾಜ್ಯ ಪ್ರವಾಸೋದ್ಯಮ ಸಂಸ್ಥೆಗಳು ಪ್ರೇಕ್ಷಣೀಯ ಸ್ಥಳದಲ್ಲಿನ ಮೂಲಭೂತ ಸೌಕರ್ಯಗಳ ಬಗ್ಗೆ ಕಾರ್ಯ ನಿರ್ವಹಿಸುತ್ತಿವೆ. ದೇವಾಲಯ, ಯಾತ್ರ ಸ್ಥಳಗಳು ಇತ್ಯಾದಿ ಐತಿಹಾಸಿಕ ಸ್ಮಾರಕಗಳನ್ನು ಮುಜರಾಯಿ ಇಲಾಖೆ ನಿರ್ವಹಿಸಿಕೊಂಡು ಬರುತ್ತಿದೆ. ಖಾಸಗಿ ಸಂಸ್ಥೆಗಳು ಸಹ ಕೆಲವು ಅಮ್ಯೂಸ್‌ಮೆಂಟ್ ಪಾರ್ಕ್‌ಗಳು, ವಸ್ತುಪ್ರದರ್ಶನ, ಗ್ಯಾಲರಿಗಳೂ ಇತ್ಯಾದಿಗಳನ್ನು ನಿರ್ವಹಿಸುತ್ತಿದ್ದು ಪ್ರವಾಸಿಗರಿಗೆ ಮನರಂಜನೆ ನೀಡುತ್ತಾ ದಾಪುಗಾಲು ಹಾಕಿವೆ. ಹಾಗಾಗಿ ಪ್ರವಾಸೋದ್ಯಮ ಇಂದು ಸರ್ಕಾರದ ನೀರಾವರಿ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಮುಜರಾಯಿ ಇಲಾಖೆ, ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ ಇವೆಲ್ಲದರ ಸಹಕಾರದೊಡನೆ ಕಾರ್ಯನಿರ್ವಹಿಸುವ ಮೂಲಕ ಹಳೆಯ ಸ್ಮಾರಕಗಳು, ಅಣೆಕಟ್ಟುಗಳು, ಉದ್ಯಾವನಗಳು, ವನ್ಯಧಾಮಗಳನ್ನು ಕಾಯ್ದಿರಿಸುವ ಮೂಲಕ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಖಾಸಗಿ ಸಂಸ್ಥೆಗಳು ಕೂಡ ಸಾರ್ವಜನಿಕ ಉದ್ಯಮದಷ್ಟೆ ಪ್ರಬಲ ಪೈಪೋಟಿ ನೀಡುತ್ತಿದೆ. ಅನೇಕ ಸಂಸ್ಥೆಗಳು ದೇಶಿಯ ಮತ್ತು ಅಂತಾರಾಷ್ಟ್ರೀಯ ಪ್ರವಾಸಗಳನ್ನು ಅಯೋಜಿಸಿ ನಿರ್ವಹಿಸುತ್ತವೆ. (ಸಿ.ಸಿ.)

**ಪ್ರವಾಸ ಮಾರ್ಗದರ್ಶಕ:** ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕೆಲವು ನುರಿತ ಮಾರ್ಗದರ್ಶಕರನ್ನು ನೇಮಕ ಮಾಡಿಕೊಂಡಿರುತ್ತಾರೆ. ಅವರು ಪ್ರವಾಸಿಗರು ಯಾವ ಯಾವ ಮಾರ್ಗಗಳ ಮೂಲಕ ಪ್ರಯಾಣ ಕೈಗೊಂಡರೆ, ಯಾವ ಯಾವ ಪ್ರವಾಸಿ ಸ್ಥಳಗಳನ್ನು ಭೇಟಿ ಮಾಡಬಹುದೆಂಬ ಅರಿವು ಹೊಂದಿರುತ್ತಾರೆ. ಇಂತಹವರಿಗೆ ಪ್ರವಾಸ ಮಾರ್ಗದರ್ಶಕರೆಂದು ಕರೆಯುತ್ತಾರೆ. ಇವರು ಒಂದು ಪ್ರವಾಸ ಕೈಗೊಳ್ಳಬೇಕಾದರೆ ಏನೆಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗಬೇಕು. ಎಲ್ಲೆಲ್ಲಿ ಯಾರನ್ನು ಭೇಟಿಮಾಡಿ ತಂಗುದಾಣಗಳನ್ನು ಪಡೆಯಬೇಕು. ಮಾರ್ಗ ಮಧ್ಯದ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವೇಶ ಶುಲ್ಕವೆಷ್ಟಿರುತ್ತದೆ ಇತ್ಯಾದಿಗಳ ಬಗ್ಗೆ ಮಾಹಿತಿ ತಿಳಿದುಕೊಂಡಿರುತ್ತಾರೆ. ಉದಾ: ಸಿಮ್ಲಾ, ಡಾರ್ಜಲಿಂಗ್‌ಗಳಂತಹ ಶೀತ ವಾತಾವರಣ ಹೊಂದಿರುವ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಬೇಕಾದರೆ ಯಾವ ತಿಂಗಳಲ್ಲಿ ಉತ್ತಮವಾಗಿರುತ್ತದೆ, ಯಾವ ಮಾದರಿಯ ಉಡುಪುಗಳನ್ನು ತೆಗೆದುಕೊಂಡು ಹೋದರೆ ಸೂಕ್ತ, ರಾಜಸ್ತಾನದಂತಹ ಮರುಭೂಮಿ ವೀಕ್ಷಣೆಗೆ ಏನೆಲ್ಲಾ ಸಿದ್ಧತೆಗಳೊಡನೆ ಹೋಗಬೇಕು. ಟ್ರಕ್ಕಿಂಗ್ ಹೋಗಬೇಕಾದರೆ ಯಾವ ರೀತಿ ಸಿದ್ಧತೆಮಾಡಿಕೊಂಡು ಹೋಗಬೇಕು. ಹೀಗೆಲ್ಲ ವಿವಿಧ ರೀತಿಯ ಪ್ರವಾಸಕ್ಕೆ ಸಂಬಂಧಿಸಿದ ಮಾಹಿತಿ ನೀಡುತ್ತಾರೆ. ಕೆಲವು ಮಾರ್ಗದರ್ಶಕರು ಕೆಲವು ಐತಿಹಾಸಿಕ ಸ್ಥಳಗಳ ಪೂರ್ಣ ಪ್ರಮಾಣದ ಇತಿಹಾಸವನ್ನು ನೆನಪಿಗೆ ತರುವಂತೆ ವ್ಯಾಖ್ಯಾನಮಾಡುತ್ತಾರೆ. ಹೀಗೆ ಪ್ರವಾಸ ಮಾರ್ಗದರ್ಶಕರಿಂದ ಪ್ರವಾಸಿಗರಿಗೆ ಪ್ರವಾಸ ಕೈಗೊಳ್ಳಲು ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. (ಸಿ.ಸಿ.)

**ಪ್ರವಾಸ ಮಾಹಿತಿ ಕೈಪಿಡಿ:** ಒಂದು ನಗರದ, ಜಿಲ್ಲೆಯ, ರಾಜ್ಯದ, ದೇಶದ ಪ್ರೇಕ್ಷಣೀಯ ಸ್ಥಳಗಳು, ಅಲ್ಲಿಗೆ ಪ್ರಯಾಣಿಸಲು ಇರುವ ರಸ್ತೆ, ರೈಲು ಸೌಲಭ್ಯ, ತಂಗುದಾಣಗಳು, ಹೊಟೇಲ್, ರೆಸಾರ್ಟ್‌ಗಳು ಇತ್ಯಾದಿಗಳನ್ನೊಳಗೊಂಡ ನಕ್ಷೆ ಸಹಿತ ತಯಾರಿಸಿದ ಪುಸ್ತಕಗಳು. ಇದರಲ್ಲಿ ಒಂದು ನಗರದ ಪ್ರಮುಖ ವೃತ್ತಗಳು, ಹೊಟೇಲ್‌ಗಳು, ಪ್ರವಾಸಿತಾಣಗಳು ಎಲ್ಲಿವೆ ಹೇಗೆ ಹೋಗಬೇಕು ಮುಖ್ಯ ಬಸ್‌ನಿಲ್ದಾಣ, ಸಿಟಿ ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣಗಳ ಮಾಹಿತಿ, ಪ್ರವಾಸಿ ತಾಣಗಳು, ಪ್ರವೇಶದ ಅವಧಿ, ಪ್ರವೇಶ ಶುಲ್ಕ, ಮಾಹಿತಿ ಕೇಂದ್ರಗಳು–ಇವುಗಳ ದೂರವಾಣಿ ಸಂಖ್ಯೆ ಇತ್ಯಾದಿಗಳನ್ನೊಡಗೊಂಡಂತೆ ಮುದ್ರಿಸಲಾಗಿರುತ್ತದೆ. ಇವು ಪ್ರಯಾಣಿಕರಿಗೆ ಕನ್ನಡಿ ಇದ್ದಂತೆ ಇವುಗಳ ಸಹಾಯದಿಂದ ನಾವು ನೋಡಲು ಬಯಸಿರುವ ಸ್ಥಳ, ಮನರಂಜನ ಕೇಂದ್ರ ಇತ್ಯಾದಿಗಳನ್ನು ಸುಲಭವಾಗಿ ಭೇಟಿ ಮಾಡಬಹುದು. ಪ್ರವಾಸಿಗರಿಗೆ ಖರೀದಿಸಬಹುದಾದ ಇಚ್ಛಿತ ವಸ್ತುಗಳನ್ನು ಕೊಂಡುಕೊಳ್ಳುವ ಅಂಗಡಿ ಮಳಿಗೆ ಮುಂತಾದವುಗಳು ಸಹ ಇದರಿಂದ ತಿಳಿಯುತ್ತದೆ. ಅಲ್ಲದೆ ಆರಕ್ಷಕ ಠಾಣೆಗಳು, ಪ್ರವಾಸೋದ್ಯಮ ಇಲಾಖೆಯ ಮಾರ್ಗದರ್ಶನ ಮತ್ತು ಮಾಹಿತಿ ಕೇಂದ್ರಗಳು ಹೊಂದಿರುತ್ತವೆ. (ಸಿ.ಸಿ.)

**ಪ್ರವಾಸ ವಸತಿ ಸೌಲಭ್ಯ:** ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ರಸ್ತೆಗಳು ಅಥವಾ ಮುಖ್ಯ ರಸ್ತೆಗಳ ಪಕ್ಕದಲ್ಲಿ ಕಂಡುಬರುವ ಮಧ್ಯಮ ಪ್ರಮಾಣದ ಭೋಜನಾಲಯಗಳಿಗೆ ಡಾಬಾ ಅಥವಾ ಮೋಟೆಲ್‌ಗಳೆಂತಲೂ ಕರೆಯಬಹುದು. ಇವುಗಳು ದೈನಂದಿನ ಪ್ರಯಾಣಿಕರಿಗೆ, ಪ್ರವಾಸಿಗರಿಗೆ ಅನುಕೂಲಕರವಾದವು. ಇವುಗಳಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರ ದೊರಕುತ್ತವೆ. ದಿನದ 24 ಗಂಟೆಗಳ ಸಮಯ ತೆರೆದಿರುವ ಡಾಬಾಗಳೂ ಇರುತ್ತವೆ. ಇವುಗಳಲ್ಲಿ ಪ್ರಯಾಣಿಕರಿಗೆ ಕೆಲವು ಕ್ರೀಡೆಗಳನ್ನು ಮೋಜಿನ ಆಟಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ.

ಧಾಮಗಳು: ಧಾಮಗಳು ಹೊಟೇಲ್‌ಗಳಿಗಿಂತ ದೊಡ್ಡದಾದ ಹಾಗೂ ಹೋಟೆಲ್‌ಗಳಷ್ಟೇ ಅಥವಾ ಅದಕ್ಕಿಂತಲೂ ವ್ಯವಸ್ಥಿತವಾದ ಸ್ಥಳಗಳಾಗಿರುತ್ತವೆ. ಸಾಮಾನ್ಯವಾಗಿ ಪ್ರಮುಖ ಪಟ್ಟಣ ಮತ್ತು ನಗರಗಳ ಹೊರವಲಯದಲ್ಲಿರುತ್ತವೆ. ಇವುಗಳಿಗೆ ರೆಸಾರ್ಟ್‌ಗಳೆಂತಲೂ ಕರೆಯುತ್ತಾರೆ. ಇವು ಭೋಜನ ವ್ಯವಸ್ಥೆ ಮತ್ತು ವಸತಿ ಸೌಕರ್ಯಗಳೆರಡನ್ನು ಹೊಂದಿರುತ್ತವೆ. ಕೆಲವು ರೆಸಾರ್ಟ್‌ಗಳಲ್ಲಿ ವಿಶೇಷ ಸಂದರ್ಭದಲ್ಲಿ ಕೆಲವು ಮನರಂಜನಾ ಕಾರ್ಯಕ್ರಮಗಳನ್ನು ನೀಡಲಾಗುತ್ತದೆ. ಹೊಸವರ್ಷಾಚರಣೆ, ಸುಗ್ಗಿ ಸಂದರ್ಭ, ದಸರದಂತಹ ರಾಷ್ಟ್ರೀಯ ಉತ್ಸವಗಳ ಸಂದರ್ಭದಲ್ಲಿ ಮನರಂಜನೆ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಹೊಟೇಲ್‌ಗಳಲ್ಲಿ ಸಾಮಾನ್ಯವಾಗಿ ಮಧ್ಯಮ ಆರ್ಥಿಕ ಮಟ್ಟದ ಜನರು ಭೋಜನ ವ್ಯವಸ್ಥೆ ಪಡೆದುಕೊಂಡರೆ, ರೆಸಾರ್ಟ್‌ಗಳಲ್ಲಿ ಶ್ರೀಮಂತ ವರ್ಗದ ಜನರು, ಪ್ರವಾಸಿಗರು ಭೋಜನ, ವಸತಿ ಸೌಲಭ್ಯಗಳೆರಡನ್ನು ಪಡೆದುಕೊಳ್ಳುತ್ತಾರೆ. ಶ್ರೀಮಂತ ವರ್ಗದ ಐರೋಪ್ಯ ಮತ್ತು ದೇಶೀಯ ಪ್ರವಾಸಿಗರಿಗೆ ಐಷಾರಾಮಿ ಜೀವನ ಇಚ್ಛಿಸುವ ಯಾತ್ರಾರ್ಥಿಗಳನ್ನು ಈ ರೆಸಾರ್ಟ್‌ಗಳು ಆಕರ್ಷಿಸುತ್ತವೆ. ಯಾತ್ರಾರ್ಥಿಗಳು ಧಾಮಗಳಲ್ಲಿ ಸೌಲಭ್ಯ ಪಡೆದುಕೊಳ್ಳಲಿಚ್ಛಿಸುತ್ತಾರೆ ಇದಲ್ಲದೆ ಕೆಲವು ಆಯುರ್ವೇದ ಔಷಧಿಗಳ ಮೂಲಕ ಆರೋಗ್ಯ ಸುಧಾರಿಸಲು ಇರುವ ಆರೋಗ್ಯ ಕೇಂದ್ರಗಳಿಗೆ ಧಾಮಗಳೆನ್ನುವರು.

ಮೋಟಲ್ ಫಲಾಹಾರ ಮಂದಿರಗಳಿಗಿಂತ ಭಿನ್ನವಾದುದು ಹೊಟೇಲ್, ಸಾಮಾನ್ಯವಾಗಿ ವಸತಿ ಮತ್ತು ಭೋಜನ ವ್ಯವಸ್ಥೆಗಳೆರಡನ್ನು ಪ್ರಯಾಣಿಕರಿಗೆ ಪೂರೈಸುವ ಕೇಂದ್ರ. ಕೆಲವು ಹೊಟೇಲ್‌ಗಳು ಇಂದು ಉದ್ದಿಮೆಗಳಾಗಿ ಮಾರ್ಪಾಡಾಗಿವೆ. ಇವು ಉಪಾಹಾರ ಮತ್ತು ಭೋಜನಗಳನ್ನು ತಯಾರಿಸುವ ಶಾಖೆಗಳಾಗಿವೆ. ಲಕ್ಷಾಂತರ ನಿರುದ್ಯೋಗಿ

ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟಿವೆ. ಸ್ವದೇಶಿ ಮತ್ತು ವಿದೇಶಿ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಇಚ್ಛೆಗನುಗುಣವಾಗಿ ಭೋಜನಾ ಪರಿಕರಗಳನ್ನು ತಯಾರಿಸುತ್ತಿವೆ. ಐಷಾರಾಮಿ ಹೋಟೇಲ್‌ಗಳಿಂದ ಹಿಡಿದು ಸಾಮಾನ್ಯ ಪ್ರಯಾಣಿಕರಿಗೂ ಎಟುಕುವಂತಹ ಹೋಟೆಲ್‌ಗಳು ಕಾರ್ಯನಿರ್ವಹಿಸುತ್ತಿವೆ. ಅನೇಕ ಮನರಂಜನ ಕಾರ್ಯಕ್ರಮಗಳನ್ನು ನೀಡುವ ಮೂಲಕ ಪ್ರವಾಸಿಗರನ್ನು ಸೆಳೆಯುತ್ತಿವೆ. (ಪಿ.ಪಿ.)

**ಪ್ರವಾಸ ಯೋಜನೆ:** ಪ್ರವಾಸಿಗರು ಪ್ರವಾಸ ಕೈಗೊಳ್ಳುವ ಮೊದಲು, ತಾವು ವೀಕ್ಷಿಸಬೇಕೆಂದಿರುವ ಸ್ಥಳಗಳು, ತಂಗುದಾಣಗಳು, ಭೋಜನ ವ್ಯವಸ್ಥೆ, ವಾಹನದ ಸುಸ್ಥಿತಿ ಇತ್ಯಾದಿಗಳ ಬಗ್ಗೆ ಯೋಜನಾಬದ್ಧವಾಗಿ ಪ್ರಾಯೋಜಿಸಿ ಮುಂದಾಲೋಚನಾ ಶೀಲರಾಗಿ ಪ್ರವಾಸ ಕೈಗೊಳ್ಳುವುದಕ್ಕೆ ಪ್ರವಾಸ ಯೋಜನೆ ಎನ್ನಬಹುದು. ಈ ರೀತಿ ಪೂರ್ವ ಯೋಜನಾ ಬದ್ಧವಾಗಿ ಪ್ರವಾಸ ಕೈಗೊಳ್ಳುವುದರಿಂದ ಪ್ರವಾಸಿಗರಿಗೆ ಪ್ರವಾಸ ಪ್ರಯಾಸವೆನಿಸುವುದಿಲ್ಲ. ಬದಲಿಗೆ ಯೋಜನಾ ರಹಿತ ಪ್ರವಾಸದಿಂದ ಹಣ, ಸಮಯ ಮನಃಶಾಂತಿ ಇತ್ಯಾದಿಗಳ ಮೇಲೆ ಅಪಾರ ಪ್ರಮಾಣದ ಪರಿಣಾಮ ಎದುರಾಗುತ್ತದೆ. ಉದಾ: ಅಂತರ ರಾಜ್ಯ ಪ್ರವಾಸ ಕೈಗೊಳ್ಳಬೇಕಾದರೆ ನಾವು ಭೇಟಿ ನೀಡಲು ಬಯಸಿರುವ ರಾಜ್ಯಗಳಿಂದ ಮುಂಚಿತವಾಗಿ ನಿಗದಿತ ಶುಲ್ಕಪಾವತಿಸಿ ಪರವಾನಗೆ ಪಡೆದುಕೊಂಡಿರಬೇಕು. ರೈಲ್ವೆ ಸಾರಿಗೆಯ ಮೂಲಕ ಪ್ರಯಾಣ ಕೈಗೊಳ್ಳುವುದಾದರೆ ಸುಮಾರು 2–3 ತಿಂಗಳ ಮೊದಲೇ ಮುಂಗಡ ಆಸನಗಳಿಗೆ ಕಾಯ್ದಿರಿಸಿ, ತಂಗುದಾಣಗಳಲ್ಲಿ ಕೊಠಡಿಗಳ ಕಾಯ್ದಿರಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಪ್ರವಾಸ ಪ್ರಯಾಸವಾಗುವುದಲ್ಲದೇ ಪ್ರವಾಸ ಮನರಂಜನೆ ನೀಡುವುದೇ ಇಲ್ಲ. ಆದ್ದರಿಂದ ಯೋಜನಾಬದ್ಧ ಪ್ರವಾಸ ಅತ್ಯಗತ್ಯ. (ಪಿ.ಪಿ.)

**ಪ್ರವಾಸ ವ್ಯಾಪಾರೋದ್ಯಮ:** ಪ್ರಸ್ತುತ ದಿನಗಳಲ್ಲಿ ಪ್ರವಾಸೋದ್ಯಮ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಾಣಿಜ್ಯೋದ್ಯಮವಾಗಿದೆ. ಪ್ರವಾಸೋದ್ಯಮದಿಂದ ಅನೇಕ ದುಡಿಯುವ ಕೈಗಳಿಗೆ ಉದ್ಯೋಗ ಲಭಿಸಿದೆ. ಹಲವಾರು ವರ್ತಕರಿಗೆ ಮನರಂಜನ ಪರಿಕರಗಳು ಮತ್ತು ದಿನನಿತ್ಯ ಬಳಕೆಯ ವಸ್ತು ಮಾರಾಟವಾಗುತ್ತಿದೆ. ಪ್ರವಾಸೋದ್ಯಮದ ಅಭಿವೃದ್ಧಿಯಿಂದ ಇಡೀ ರಾಜ್ಯ ಮತ್ತು ದೇಶ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಬಹುದು. ಸ್ಥಿರಬಂಡವಾಳದಿಂದ ಸಾಕಷ್ಟು ಹಣಗಳಿಕೆ ಸಾಧ್ಯ. ಇದಕ್ಕೆ ನವೀಕೃತ ಹಾಗೂ ಸ್ಥಿರಬಂಡವಾಳದ ಪ್ರಮಾಣ ಅತಿ ಕಡಿಮೆ. ಉದಾ: ಮೈಸೂರು ಅರಮನೆಯಂತಹ ಪ್ರೇಕ್ಷಣೀಯ, ಆಕರ್ಷಣೀಯ ಸ್ಥಳಗಳಿಗೆ ಸ್ಥಿರಬಂಡವಾಳ ಅತಿಹೆಚ್ಚಾಗಿ ಬೇಕಾಗಿರುವುದಿಲ್ಲ. ಅವು ತಲತಲಾಂತರದಿಂದ ಆದಾಯಗಳಿಕೆಯಲ್ಲಿ ತೊಡಗಿವೆ. ಹಾಗಾಗಿ ಯಾವ ರಾಜ್ಯ ಪ್ರವಾಸೋದ್ಯಮವನ್ನು ಒಂದು ಉದ್ದಿಮೆಯಾಗಿ ಅಭಿವೃದ್ಧಿ ಪಡಿಸುತ್ತದೆಯೋ ಅಂತಹ ರಾಜ್ಯ, ದೇಶ ಬಹಳ ಸುಲಭವಾಗಿ ಹಣಗಳಿಸಬಹುದು ಹಾಗೆಯೇ ಮೂಲ ಆದಾಯವನ್ನು ಹೆಚ್ಚಿಸಿಕೊಂಡು ಆರ್ಥಿಕವಾಗಿ ಮುಂದುವರಿಯಬಹುದು. ಉದಾ: ಕೇರಳ ರಾಜ್ಯ ಇಂದು ಇಡೀ ದೇಶದ ಜನರನ್ನು ತನ್ನೆಡೆ ಸೆಳೆಯುವ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುತ್ತ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದೆ. (ಪಿ.ಪಿ.)

**ಪ್ರವಾಸಿ ನಿಯೋಗಿ:** ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು, ಪ್ರೇಕ್ಷಣೀಯ ಮತ್ತು ಐತಿಹಾಸಿಕ ಸ್ಮಾರಕಗಳಿಗೆ ಪ್ರವಾಸಗಳನ್ನು ನಿಯೋಜಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಇವುಗಳಿಗೆ ಪ್ರವಾಸ ನಿಯೋಜಕರೆನ್ನಬಹುದು ಕೆಲವು ನಿರ್ದಿಷ್ಟ ಸ್ಥಳಗಳು, ಮನರಂಜನಾ ಕೇಂದ್ರಗಳು ಇತ್ಯಾದಿಗಳಿಗೆ ನಿರ್ದಿಷ್ಟ ದಿನಾಂಕಗಳಂದು ಪ್ರವಾಸಿಗರಿಂದ ನಿಗದಿತ ಶುಲ್ಕ ಪಾವತಿಸಿಕೊಂಡು ನಿಗದಿತ ಸಮಯಕ್ಕೆ ಪ್ರವಾಸ ಆರಂಭಿಸುವ ಮೂಲಕ ಪ್ರವಾಸಿಗರಿಗೆ ನೆರವಾಗುತ್ತವೆ. ಇಂತಹ ಸಂಸ್ಥೆಗಳಿಗೆ ಪ್ರವಾಸ ನಿಯೋಗಿ ಎಂದು ಕರೆಯಲಾಗಿದೆ. ಇವುಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಧೀನ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಕಾರ್ಯನಿರತವಾಗಿವೆ. ಉದಾ: ಐಟಿಡಿಸಿ, ಕೆಎಸ್‌ಟಿಡಿಸಿ, ವಿಆರ್‌ಎಲ್ ಇತ್ಯಾದಿ. ಒಂದು ನಿರ್ದಿಷ್ಟ ಸ್ಥಳಕ್ಕೆ ವ್ಯವಸ್ಥಿತವಾಗಿ ಭೇಟಿ ನೀಡಿ ಸುರಕ್ಷಿತವಾಗಿ ವಾಪಸ್ಸಾಗಲು ಪ್ರವಾಸ ನಿಯೋಜನೆ ಅತ್ಯಗತ್ಯ. (ಪಿ.ಪಿ.)

**ಪ್ರವಾಸೋದ್ಯಮ:** ಪ್ರವಾಸಿಗರಿಗೆ ಸೇವಾ ಸೌಲಭ್ಯಗಳ ಪೂರೈಕೆ ಮತ್ತು ನಿರ್ವಹಣಾ ಉದ್ಯಮ (ಟೂರಿಸಮ್). ಅಂದರೆ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ, ನಾಡು–ಸಂಸ್ಕೃತಿ–ನಾಗರಿಕತೆ, ಜನಜೀವನ ಪದ್ಧತಿ ಇತ್ಯಾದಿಗಳನ್ನು ಅರಿಯುವ ಉದ್ದೇಶದಿಂದ ಅಥವಾ ವಿಹಾರಾರ್ಥವಾಗಿ ದೇಶ ಹಾಗೂ ವಿದೇಶಗಳಲ್ಲಿ ಸಂಚರಿಸುವವರಿಗೆ ಸೇವಾ ಸೌಲಭ್ಯ ಕಲ್ಪಿಸುವ ಉದ್ಯಮ. ಇದೊಂದು ಮೂಲತಃ ಸೇವಾ ಉದ್ಯಮವಾಗಿದ್ದರೂ ಒಂದು ದೇಶ ಅಥವಾ ರಾಜ್ಯದ ಸಂಸ್ಕೃತಿ, ಕಲೆ, ಹಿರಿಮೆ–ಗರಿಮೆ, ಇತಿಹಾಸ, ಅವುಗಳ ಸಂರಕ್ಷಣೆ–ಉಳಿವುಗಳಿಗೆ ಪ್ರವಾಸೋದ್ಯಮ ನೆರವಾಗುತ್ತದೆ. ಸಾರಿಗೆ–ಸಂಪರ್ಕ ಮಾಧ್ಯಮಗಳಲ್ಲಿ ಕ್ರಾಂತಿಕಾರಿ ಪ್ರಗತಿ, ಶಿಕ್ಷಣದ ಅಭಿವೃದ್ಧಿ, ಜನರ ಆರ್ಥಿಕ ಮಟ್ಟದ ಸುಧಾರಣೆ, ರಜಾ ಸೌಲಭ್ಯ, ಸರ್ಕಾರ ನೀಡುವ ರಿಯಾಯಿತಿ, ವಿರಾಮದ ವಿಸ್ತರಣೆಗಳ ಫಲವಾಗಿ ಇತ್ತೀಚಿನ ವರ್ಷಗಳಲ್ಲಿ ಪ್ರವಾಸೋದ್ಯಮ ಹೆಚ್ಚು ಪ್ರಚಲಿತ ಹಾಗೂ ಪ್ರಗತಿಗೊಂಡಿದೆ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ತೈಲವಸ್ತುಗಳು ಪ್ರಥಮ ಸ್ಥಾನ ಹೊಂದಿದ್ದರೆ ಎರಡನೆಯ ಸ್ಥಾನದಲ್ಲಿ ಪ್ರವಾಸೋದ್ಯಮ ಬರುತ್ತದೆ. ಪ್ರವಾಸಿ ಎಂಬುದಕ್ಕೆ ನಿಘಂಟು ಪ್ರಯಾಣಿಕ ಅಥವಾ ಪಯಣಿಗ ಎಂದು ಅರ್ಥಕೊಡುತ್ತದೆ. ಹಲವು ಉದ್ದೇಶಗಳಿಗಾಗಿ ಜನರು ತಮ್ಮ ವಾಸಸ್ಥಳದಿಂದ ಪ್ರಯಾಣ ಮಾಡುವರು ಹಾಗೂ ತಂಗುವರು. ಹೀಗಾಗಿ ಪ್ರವಾಸಿ ಎಂಬ ಪದ ವಿಶಾಲಾರ್ಥವುಳ್ಳದ್ದು, ತನ್ನ ವಾಸ ಸ್ಥಳದಿಂದ ಪರಸ್ಥಳಕ್ಕೆ, ಅದು ಸ್ವದೇಶ ಅಥವಾ ವಿದೇಶದ ಸ್ಥಳವಾಗಿರಬಹುದು, ಪ್ರಯಾಣಮಾಡಿ ಕೊನೆ ಪಕ್ಷ 24 ತಾಸು ಅಥವಾ ಒಂದು ರಾತ್ರಿ ತಂಗುವ ವ್ಯಕ್ತಿಯನ್ನು ಪ್ರವಾಸಿ (ಟೂರಿಸ್ಟ್) ಎನ್ನಲಾಗುವುದು. ವಿಶ್ವ ಪ್ರವಾಸಿ ಸಂಸ್ಥೆಯ ಮತಾನುಸಾರ ತನ್ನ ನೆಲೆಯಿಂದ ಬೇರೊಂದು ಸ್ಥಳಕ್ಕೆ ಭೇಟಿ ನೀಡುವ ಮತ್ತು ಅಲ್ಲಿಂದ ಹಿಂದಿರುಗುವ ಮುಂಚೆ ಅಲ್ಲಿ ತಂಗುವ ವ್ಯಕ್ತಿಯೇ ಪ್ರವಾಸಿ. ವಿಹಾರಾರ್ಥಿ, ರಜಾನುಭವಿ, ಯಾತ್ರಾರ್ಥಿ, ವ್ಯಾಪಾರಿ, ಸಮ್ಮೇಳನ ಪ್ರತಿನಿಧಿ, ಅನ್ವೇಷಣಾಕಾರ, ಸಂಶೋಧಕ ಮುಂತಾದವರನ್ನು ಪ್ರವಾಸಿಗಳೆಂದು ಪರಿಗಣಿಸಲಾಗಿದೆ. ನಿವಾಸಿಯಾಗಿ ನೆಲಸಲು ಬಯಸುವ, ವೃತ್ತಿಗಾಗಿ, ವಿದ್ಯಾರ್ಥಿ, ದೇಶವೊಂದರಲ್ಲಿ ನೆಲಸಿ ನೆರೆಯ ರಾಷ್ಟ್ರದಲ್ಲಿ ಕಾರ್ಯನಿರ್ವಹಿಸುವವರು, ತಂಗದೇ ದೇಶವೊಂದರ ಮೂಲಕ ಹಾಯ್ದು ಹೋಗುವ ಪಯಣಿಗರು ಪ್ರವಾಸಿಗರಲ್ಲ.

ಪ್ರಾಮುಖ್ಯತೆ: ಯಾವುದೇ ದೇಶದ ಆರ್ಥಿಕತೆಯ ದೃಷ್ಟಿಯಿಂದ ಪ್ರವಾಸೋದ್ಯಮದ ಪಾತ್ರ ಮಹತ್ತ್ವವಾದುದು. ಇದೊಂದು ಬಹುಮುಖ್ಯ ಸೇವಾ ಕೈಗಾರಿಕೆ ಮತ್ತು ತೃತೀಯ ಆರ್ಥಿಕ ವೃತ್ತಿ. ಇದರಿಂದ ದೇಶಕ್ಕೆ ಸಾಮಾಜಿಕ ಹಾಗೂ ಆರ್ಥಿಕವಾಗಿ ವಿಶೇಷ ಲಾಭವುಂಟು ವಿದೇಶಿ ಪ್ರವಾಸಿಗಳು ಒಂದು ದೇಶಕ್ಕೆ ಆಗಮಿಸುವುದರಿಂದ ವಿದೇಶಿ ವಿನಿಮಯ ಸಂಪಾದನೆಯಾಗುತ್ತದೆ. ಅವರು ಆ ದೇಶದ ನಾಣ್ಯದಲ್ಲಿ ಮಾಡುವ ಖರ್ಚುಗಳಿಗೆಲ್ಲ ತಮ್ಮ ದೇಶದ ಹಣವನ್ನು ಪ್ರತಿಯಾಗಿ ಕೊಡುತ್ತಾರೆ. ಪ್ರವಾಸೋದ್ಯಮದಿಂದ ದೇಶದ ವಿದೇಶಿ ವಿನಿಮಯ ಸಂಪಾದನೆಯ ಜೊತೆಗೆ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಹೆಚ್ಚು ಉದ್ಯೋಗಗಳ ನಿರ್ಮಾಣವಾಗುತ್ತದೆ. ವಿವಿಧ ಮುಖವಾಗಿ ಆರ್ಥಿಕತೆಯ ವಿಸ್ತರಣೆಗೆ ಇದರಿಂದ ನೆರವಾಗುತ್ತದೆ. ಪ್ರವಾಸೋದ್ಯಮ ಮೂಲತಃ ಒಂದು ಸೇವಾಕೈಗಾರಿಕೆ. ಇದು ಶ್ರಮಪ್ರಧಾನವಾದ್ದು ಬಹು ಪರಿಮಾಣವುಳ್ಳ ಉದ್ಯಮವಾಗಿದ್ದು, ಇತರ ವೃತ್ತಿಗಳಿಗೆ ಪೂರಕ ಮತ್ತು ಅವಲಂಬಿತವಾದ ಉದ್ಯಮ. ಭಾರತದಂಥ ದೇಶದಲ್ಲಿ–ಅಲ್ಪೋದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿರುವಾಗ ಪ್ರವಾಸೋದ್ಯಮದಿಂದ ಕುಶಲ ಹಾಗೂ ಅರೆಕುಶಲ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.

ಪ್ರವಾಸೋದ್ಯಮದಿಂದ ಸಾರಿಗೆ–ಸಂಪರ್ಕ ಹಾಗೂ ಹೋಟೇಲ್ ಉದ್ಯಮಗಳಿಗೆ ವಿಶೇಷ ಲಾಭ ದೊರಕುತ್ತದೆ. ಈ ಎರಡೂ ವಲಯಗಳಲ್ಲಿ ಅನೇಕರಿಗೆ ಉದ್ಯೋಗ ಪ್ರಾಪ್ತವಾಗುತ್ತದೆ. ಸಿನೆಮಾ, ಗಿರಿಧಾಮ ಮತ್ತು ಉದ್ಯಾನಗಳು, ಪ್ರವಾಸ ನಿಯೋಜಕರು ಹಾಗೂ ಮಧ್ಯವರ್ತಿಗಳು ಮುಂತಾದವರಿಗೆ ಹೆಚ್ಚು ಲಾಭವಾಗುತ್ತದೆ. ಪ್ರವಾಸಿಗಳಿಂದಾಗಿ ಅನೇಕ ಉತ್ಪನ್ನಗಳಿಗೆ ಬೇಡಿಕೆಯುಂಟಾಗುತ್ತದೆ. ಅನೇಕ ಗೃಹಕೈಗಾರಿಕೆಗಳಿಗೆ ಇದರಿಂದ ಚಾಲನೆ ದೊರೆಯುತ್ತದೆ. ಸ್ಥಳೀಯ ಕರಕುಶಲ ಕಸಬುಗಳೂ ಸಾಂಪ್ರದಾಯಿಕ ಕಲೆಗಳೂ ಅಳಿಯದೆ ಉಳಿದುಕೊಳ್ಳುತ್ತವೆ. ಸಾಮಾಜಿಕ ಗತಿಶೀಲತೆಗೆ ಇದರಿಂದ ಪ್ರೋತ್ಸಾಹ ದೊರಕುತ್ತದೆ. ಬೇಡಿಕೆಯ ಹೆಚ್ಚಳದಿಂದಾಗಿ ಸ್ಥಳೀಯ ಸರಕುಗಳು ಪೂರೈಕೆಯನ್ನು ಹೆಚ್ಚಿಸಬೇಕಾಗಿ ಬರುವುದರಿಂದ ಸುಧಾರಿತ ಉತ್ಪಾದನೆ ವಿಧಾನಗಳನ್ನು ಬಳಸಬೇಕಾಗಿ ಬರಬಹುದು. ಪ್ರವಾಸ ಮಾಡುವವರು ಸಾಮಾನ್ಯವಾಗಿ ಉನ್ನತ ಜೀವನಮಟ್ಟ ಇರುವವರಾದ್ದರಿಂದ ಅವರ ಜೀವನ ಮಟ್ಟಗಳಿಗೆ ಅನುಗುಣವಾದ ಸಾರಿಗೆ, ವಸತಿ, ಆಹಾರ, ಮನರಂಜನೆ ಮುಂತಾದ ಸೇವಾಸೌಲಭ್ಯಗಳನ್ನು ನೀಡುವುದಕ್ಕಾಗಿ ಆಧುನೀಕರಣ ಅಗತ್ಯವೆನಿಸುತ್ತದೆ. ಹೀಗಾಗಿ ಪ್ರವಾಸೋದ್ಯಮದಿಂದ ಆಧುನಿಕತೆಗೆ ಪ್ರೋತ್ಸಾಹ ದೊರಕುವುದಲ್ಲದೆ ಪ್ರಾದೇಶಿಕ ಅಸಮತೆಗಳು ಕಡಿಮೆಯಾಗುತ್ತದೆ. ವರಮಾನದ ಅಂತರಗಳೂ ಕುಗ್ಗುತ್ತವೆ. ವಿದೇಶಿ ವಿನಿಮಯ ಸಂಪಾದನೆಯ ಜೊತೆಗೆ ಸರಕಾರಕ್ಕೆ ತೆರಿಗೆಗಳೂ ಬರುತ್ತವೆ. ಪ್ರವಾಸಿಗಳು ಡಾಲರುಗಳನ್ನು ತರುವುದರ ಜೊತೆಗೆ ದೇಶದ ಸರಕು ಸೇವೆಗಳಿಗೆ ಅವರಿಂದ ಬೇಡಿಕೆ ಉಂಟಾಗುವುದರಿಂದ ಗುಣಕ ಪರಿಣಾಮವುಂಟಾಗಿ ಆರ್ಥಿಕತೆಗೆ ಹಲವು ಶ್ರೇಣಿಗಳಲ್ಲಿ ಉತ್ತೇಜನ ದೊರಕುತ್ತದೆ.

ಸರ್ಕಾರಗಳ ಆಸಕ್ತಿ: ರಾಷ್ಟ್ರೀಯ ಆರ್ಥಿಕತೆಗೆ ಪ್ರವಾಸೋದ್ಯಮದಿಂದ ದೊರಕುವ ಅಪಾರ ಲಾಭಗಳಿಂದಾಗಿ ಅನೇಕ ಅಭಿವರ್ಧಿತ ಹಾಗೂ ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚು ಹೆಚ್ಚಾಗಿ ಸರ್ಕಾರಗಳ ಪೋಷಣೆ ಪ್ರೋತ್ಸಾಹ ದೊರಕುತ್ತಿದೆ. ಪ್ರವಾಸೋದ್ಯಮದ ಬೆಳವಣಿಗೆಯಿಂದ ಖಾಸಗಿ ವಲಯಕ್ಕೆ ಉತ್ತೇಜನ ದೊರಕುವುದರ ಜೊತೆಗೆ ಸರ್ಕಾರದ ಅಡಿಯಲ್ಲೂ ಉದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಸರ್ಕಾರಗಳ ಪ್ರವಾಸೋದ್ಯಮ ಇಲಾಖೆಗಳು ವಿಸ್ತರಿಸುತ್ತಿವೆ. ಪ್ರವಾಸ ಸಂಬಂಧಿ ಇಲಾಖೆಗಳ ಅಭಿಕರಣಗಳ

ಚಟುವಟಿಕೆಗಳು ಹೆಚ್ಚಿವೆ. ಪೌರಸಭೆಗಳು ಹೆಚ್ಚು ವರಮಾನ ಗಳಿಸುತ್ತಿವೆ. ಸಾಂಸ್ಕೃತಿಕ ಸಂಘಗಳ ಕಲಾಪಗಳು ಬೆಳೆಯುತ್ತಿವೆ. ಬ್ಯಾಂಕುಗಳು, ಹಣ, ಹೊಟೇಲ್ ಸಂಸ್ಥೆಗಳು ಮುಂತಾದ ಎಲ್ಲವೂ ಪ್ರವಾಸೋದ್ಯಮದಿಂದ ಉಪಕೃತವಾಗಿವೆ. ಒಂದು ದೇಶದ ಪ್ರವಾಸೋದ್ಯಮದ ಬೆಳವಣಿಗೆ ವೈವಿಧ್ಯಮಯವಾದ ನಿಸರ್ಗಸೌಂದರ್ಯ, ಇತಿಹಾಸಪ್ರಸಿದ್ಧ ಹಾಗೂ ಧಾರ್ಮಿಕ ಸ್ಥಳಗಳು ಮುಂತಾದವುಗಳ ಅಸ್ತಿತ್ವದ ಜೊತೆಗೆ ಕೆಲವು ಅಧೋರಚನಾತ್ಮಕ ಸೌಲಭ್ಯಗಳೂ ಕಲ್ಪಿತವಾಗಿರಬೇಕಾದ್ದು ಅತ್ಯವಶ್ಯ. ಮೊಟ್ಟ ಮೊದಲನೆಯದೆಂದರೆ ಸಾರಿಗೆ ಸೌಲಭ್ಯಗಳಾದ ರೈಲು, ರಸ್ತೆ ಹಾಗೂ ವಿಮಾನ ಮಾರ್ಗಗಳು ಅತ್ಯುತ್ತಮವಾಗಿದ್ದಷ್ಟೂ ಪ್ರವಾಸಿಗಳು ಹೆಚ್ಚು ಹೆಚ್ಚಾಗಿ ಬರುತ್ತಾರೆ. ವಿದೇಶಿ ಪ್ರವಾಸಿಗಳು ಸಾಮಾನ್ಯವಾಗಿ ಶ್ರೀಮಂತ ದೇಶಗಳವರು, ಅವರ ಪೈಕಿ ವಿಮಾನ ಸೌಲಭ್ಯವನ್ನು ಬಯಸುವವರೇ ಸಾಕಷ್ಟು ಸಂಖ್ಯೆಯಲ್ಲಿರುತ್ತಾರೆ. ಇದಕ್ಕೆ ಆಧುನಿಕ ವಿಮಾನ ನಿಲ್ದಾಣಗಳ ನಿರ್ಮಾಣದ ಜೊತೆಗೆ ಅತ್ಯಾಧುನಿಕ ವಿಮಾನಗಳ ಹಾರಾಟ ವ್ಯವಸ್ಥೆಯೂ ಇರಬೇಕಾಗುತ್ತದೆ. ಪ್ರವಾಸಿ ಕೇಂದ್ರಗಳಿಗೆ ಅತ್ಯಂತ ಹತ್ತಿರದ ಸ್ಥಳದವರೆಗೂ ವಿಮಾನಗಳ ಹಾರಾಟದ ಸೌಲಭ್ಯ ಇದ್ದಷ್ಟೂ ಉತ್ತಮ.

ಉತ್ತಮವಾದ, ನಾನಾ ವರಮಾನ ಮಟ್ಟಗಳ ಪ್ರವಾಸಿಗಳಿಗೆ ತಕ್ಕುದಾದ ವಸತಿ ಗೃಹಗಳ, ಹೊಟೇಲುಗಳ ನಿರ್ಮಾಣ ಅಗತ್ಯವಾಗುತ್ತದೆ. ಈ ವಸತಿಗೃಹಗಳೂ ಹೊಟೇಲುಗಳೂ ಆಧುನಿಕ ಸೌಲಭ್ಯಗಳನ್ನು ನೀಡುವುದರ ಜೊತೆಗೆ ದೇಶದ ವೈಶಿಷ್ಟ್ಯಗಳೆನಿಸಿದ ಕುಶಲ ವಸ್ತುಗಳ, ಕಲಾವಸ್ತುಗಳ ಮಾರಾಟಕ್ಕೂ ಕಲಾಕಾರ್ಯಕ್ರಮಗಳ ನಿರ್ವಹಣೆಗೂ ಅವಕಾಶ ನೀಡುವಂತಿರಬೇಕು. ಪ್ರಪಂಚದ ಅನೇಕ ಉದ್ಯಮ ಸಂಸ್ಥೆಗಳೂ ವೈಜ್ಞಾನಿಕ ಸಾಂಸ್ಕೃತಿಕ ಹಾಗೂ ಸಂಶೋಧನ ಸಂಘಗಳೂ ತಮ್ಮ ನಿಯತಕಾಲಿಕ ಸಭೆಗಳನ್ನು ಪ್ರಶಾಂತವಾದ ಪ್ರವಾಸಿ ಕೇಂದ್ರಗಳಲ್ಲಿ ನಡೆಸುವ ವಾಡಿಕೆಯುಂಟು. ಈ ಕೇಂದ್ರಗಳಲ್ಲಿ ದೊಡ್ಡ ಸಣ್ಣ ರಾಷ್ಟ್ರೀಯ ಅಂತಾರಾಷ್ಟ್ರೀಯ ಸಭೆ ಸಮ್ಮೇಳನಗಳನ್ನು ನಡೆಸಲು ತಕ್ಕುವಾದ ಸುಸಜ್ಜಿತ ಭವನಗಳ ನಿರ್ಮಾಣ ಅಗತ್ಯವೆನಿಸುತ್ತವೆ. ಇವುಗಳ ಇರುವಿಕೆಯಿಂದ ಪ್ರವಾಸಿಗಳ ಸಂಖ್ಯೆ ಹೆಚ್ಚುತ್ತದೆ.

ಪ್ರವಾಸಿ ಸ್ಥಳಗಳಲ್ಲಿ ನುರಿತ ಮಾರ್ಗದರ್ಶಿಗಳ ಜೊತೆಗೆ, ದೇಶ ವಿದೇಶಗಳ ಪ್ರವಾಸಿಗಳನ್ನು ಆಕರ್ಷಿಸಲು ಪ್ರಚಾರವೂ ಅತ್ಯವಶ್ಯ. ಇದು ಪ್ರವಾಸೋದ್ಯಮದ ಮಾರಾಟಗಾರಿಕೆ ಎನಿಸಿಕೊಂಡಿದೆ. ಭಾರಿ ಪ್ರವಾಸಿ ಗುಂಪುಗಳನ್ನು ಗುರುತಿಸಿ, ಅವರಿಗೆ ಅನುಕೂಲತಮ ತೃಪ್ತಿನೀಡುವ ಉದ್ದೇಶದಿಂದ ನಾನಾ ಪ್ರವಾಸೋದ್ಯಮ ಸಂಸ್ಥೆಗಳು ಸಂಘಟಿಸಿ ಕಾರ್ಯಪ್ರವೃತ್ತವಾಗುವುದು ಅಗತ್ಯವಾಗುತ್ತದೆ. ಈ ಪ್ರವಾಸೋದ್ಯಮ ಸಂಸ್ಥೆಗಳು ಖಾಸಗಿಯವರಿರಬಹುದು, ಸರ್ಕಾರಿಯದಾಗಿರಬಹುದು, ಸ್ಥಳೀಯ ಅಥವಾ ಪ್ರಾದೇಶಿಕ ಇಲ್ಲವೇ ರಾಷ್ಟ್ರೀಯ ಮಟ್ಟದ ಸಂಸ್ಥೆಗಳಿರಬಹುದು. ದೇಶದ ವಿವಿಧ ಪ್ರವಾಸಿ ಕೇಂದ್ರಗಳ ವೈಶಿಷ್ಟ್ಯಗಳು, ಅವುಗಳನ್ನು ಸಂದರ್ಶಿಸಲು ಅನುಸರಿಸಬೇಕಾದ ಮಾರ್ಗಗಳು, ಪ್ರವಾಸಿಗಳಿಗೆ ಲಭ್ಯವಿರುವ ಸೌಲಭ್ಯಗಳು ಮುಂತಾದವುಗಳ ಪ್ರಚಾರಕಾರ್ಯ ಆತ್ಯವಶ್ಯವನಿಸುತ್ತದೆ. ಇದಕ್ಕಾಗಿಯೂ ಪ್ರವಾಸ ಕೈಗೊಳ್ಳುವಂತೆ ಜನರ ಮನಸ್ಸುಗಳನ್ನು ಪರಿವರ್ತಿಸಿ ಅವರಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡಲೂ ಅನ್ಯದೇಶಗಳಲ್ಲಿ ಕೇಂದ್ರಗಳಿರಬೇಕು. ಇದೆಲ್ಲ ಪ್ರವಾಸೋದ್ಯಮದ ಮಾರಾಟಗಾರಿಕೆ ಎನಿಸುತ್ತದೆ.

ವಿಧಗಳು : ಉದ್ದೇಶ, ಪ್ರದೇಶ ಮತ್ತು ಪ್ರವಾಸಿಗರ ಸಂಖ್ಯೆಯನ್ನಾಧರಿಸಿ ಪ್ರವಾಸೋದ್ಯಮವನ್ನು ಈ ಕೆಳಕಂಡಂತೆ ವಿಂಗಡಿಸಬಹುದು.

1. ಉದ್ದೇಶದ ಆಧಾರದ ಮೇಲೆ : ಮನರಂಜನ, ಸಾಂಸ್ಕೃತಿಕ, ಕ್ರೀಡೆ, ಸಾಹಸ, ಆರೋಗ್ಯ, ಸಾಮಯಿಕ (ಕನ್‌ವೆಂಷನ್) ಮತ್ತು ಉತ್ತೇಜಕ ಪ್ರವಾಸೋದ್ಯಮವೆಂದು ವಿಂಗಡಿಸಬಹುದು.

ಮನರಂಜನ ಪ್ರವಾಸೋದ್ಯಮದಲ್ಲಿ, ಪ್ರವಾಸಿಗರು ತಮ್ಮ ವಿರಾಮದ ಸಮಯವನ್ನು ಗಿರಿಧಾಮ, ಸಮುದ್ರ ತೀರ ಮುಂತಾದ ಸ್ಥಳಗಳಲ್ಲಿ ಕಳೆಯುವರು. ಇದರಿಂದ ಕೆಲಕಾಲ ಪ್ರವಾಸಿಗರು ದಿನನಿತ್ಯದ ಜಂಜಾಟದಿಂದ ಹೊರಗುಳಿದು ತಮ್ಮ ಮಾನಸಿಕ ಪುನಶ್ಚೇತನ ಮತ್ತು ನೆಮ್ಮದಿ ಪಡೆಯುವ ಅವಕಾಶವಿರುತ್ತದೆ.

ಸಾಂಸ್ಕೃತಿಕ ಪ್ರವಾಸೋದ್ಯಮ ಪುರಾತನ ಸ್ಮಾರಕ ಐತಿಹಾಸಿಕ ಪ್ರಸಿದ್ಧ ಸ್ಥಳ ಹಾಗೂ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವುದನ್ನೊಳಗೊಂಡಿದೆ. ಇದು ಸಾಂಸ್ಕೃತಿಕ ಹಿರಿಮೆಯ ಸಂರಕ್ಷಣೆ ಮತ್ತು ಯಾತ್ರಾಸ್ಥಳಗಳ ಅಭಿವೃದ್ಧಿಗೆ ಪೂರಕ. ಜೊತೆಗೆ ಪ್ರವಾಸಿಗರ ಕೌತುಕವನ್ನು ತೃಪ್ತಿ ಪಡಿಸುತ್ತದೆ.

ಕ್ರೀಡೆ / ಸಾಹಸ ಪ್ರವಾಸೋದ್ಯಮದಲ್ಲಿ ಸಾಹಸಮಯ ಸ್ಥಳ ಹಾಗೂ ಕ್ರೀಡಾಧಾರಿತ ಸ್ಥಳಗಳಿಗೆ ಪ್ರಯಾಣ ಮಾಡುವುದನ್ನು ಒಳಗೊಂಡಿದೆ. ಇದರಿಂದ ಪ್ರವಾಸಿಗರು ಪ್ರಸಿದ್ಧ ಹಾಗೂ ಅಪರೂಪದ ಕ್ರೀಡಾ ಸ್ಥಳಗಳನ್ನು ನೋಡಿ ಆನಂದಿಸುವ ಅವಕಾಶ ದೊರೆಯುತ್ತದೆ.

ಆರೋಗ್ಯ ಪ್ರವಾಸೋದ್ಯಮದಲ್ಲಿ ರೋಗಗ್ರಸ್ಥ ಪ್ರವಾಸಿಗರಿಗೆ ರೋಗನಿವಾರಕ ಸ್ಥಳ ಅಥವಾ ಸೂಕ್ತ ಚಿಕಿತ್ಸೆ ಸ್ಥಳಗಳನ್ನು ಕಲ್ಪಿಸಲಾಗುವುದು. ಉದಾ: ಬಿಸಿನೀರು ಚಿಲುಮೆ, ಗಿರಿಧಾಮ ಇತ್ಯಾದಿ.

ಸಾಮೂಹಿಕ ಪ್ರವಾಸೋದ್ಯಮದಲ್ಲಿ ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ವೃತ್ತಿ ಚಟುವಟಿಕೆಗಳಿಗೆ ಸಂಬಂಧಿಸಿದ ಸಭೆ, ಕಾರ್ಯಾಗಾರಗಳನ್ನು ಏರ್ಪಡಿಸುವುದನ್ನೊಳಗೊಂಡಿದೆ.

ಉತ್ತೇಜಕ ಪ್ರವಾಸೋದ್ಯಮದಲ್ಲಿ ವ್ಯಾಪಾರಿ ಮತ್ತು ಮಾರಾಟಗಾರರಿಗೆ ಉತ್ತೇಜನ ನೀಡಲು ರಜಾದಿನಗಳಲ್ಲಿ ಪ್ರವಾಸ ಏರ್ಪಡಿಸಲಾಗುವುದು. ಇಂಥ ನಿರ್ವಹಣೆಯನ್ನು ದೊಡ್ಡ ಪ್ರವಾಸಿ ಸಂಸ್ಥೆಗಳು ನೆರವೇರಿಸುತ್ತವೆ.

2. ಪ್ರದೇಶದ ಆಧಾರದ ಮೇಲೆ : ಸ್ವದೇಶೀ ಮತ್ತು ಪ್ರಾಪಂಚಿಕ ಪ್ರವಾಸೋದ್ಯಮ ಗಳೆಂದು ವಿಂಗಡಿಸಬಹುದು.

ಸ್ವದೇಶೀ ಪ್ರವಾಸೋದ್ಯಮ ಸ್ಥಳೀಯರು ಅಥವಾ ಪ್ರವಾಸಿಗರು ನೆಲೆಸಿರುವ ಸ್ಥಳ / ದೇಶಗಳಲ್ಲೆ ಪ್ರವಾಸವನ್ನು ಒಳಗೊಂಡಿದೆ. ಇದಕ್ಕೆ ಯಾವುದೇ ದಾಖಲೆಗಳ ಋಜುವಾತು ಅಗತ್ಯವಿಲ್ಲ.

ಪ್ರಾಪಂಚಿಕ ಪ್ರವಾಸೋದ್ಯಮದಲ್ಲಿ ಪ್ರವಾಸಿಗರು ನೆಲೆಸಿರುವ ದೇಶಗಳಿಂದ ಬೇರೆ ದೇಶಗಳಿಗೆ ಪ್ರಯಾಣಸೌಲಭ್ಯ ಕಲ್ಪಿಸಲಾಗುವುದು. ಅದು ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನೊಳಗೊಂಡಿದ್ದು, ರಾಷ್ಟ್ರೀಯ ಗಡಿಗಳನ್ನು ದಾಟುವಾಗ ಸಂಬಂಧಪಟ್ಟ ರಹದಾರಿ ಅಥವಾ ದಾಖಲೆಗಳ ಋಜುವಾತು ನೀಡುವುದು ಕಡ್ಡಾಯ.

3. ಸಂಖ್ಯೆಯ ಆಧಾರದ ಮೇಲೆ : ವೈಯಕ್ತಿಕ ಮತ್ತು ಸಮೂಹ ಪ್ರವಾಸೋದ್ಯಮವೆಂದು ವಿಂಗಡಿಸಬಹುದು. ಮೊದಲನೆಯದು ವೈಯಕ್ತಿಕ ಪ್ರಯಾಣವನ್ನೊಳಗೊಂಡಿದೆ. ಇಂಥ ಪ್ರವಾಸವನ್ನು ವ್ಯಕ್ತಿಯ ಅನುಕೂಲ ಮತ್ತು ಬೇಡಿಕೆಗಳಿಗೆ ಅನುಗುಣವಾಗಿ ವ್ಯವಸ್ಥೆ ಮಾಡಲಾಗುವುದು. ಎರಡನೆಯದರಲ್ಲಿ ಪ್ರವಾಸಿ ಸಮೂಹದ ಸದಸ್ಯನಾಗಿ ಪ್ರಯಾಣ ಮಾಡುವುದನ್ನು ಒಳಗೊಂಡಿದ್ದು, ಯಾವುದೇ ಪ್ರತ್ಯೇಕ ವ್ಯವಸ್ಥೆ ಅಗತ್ಯವಿಲ್ಲ.

ಮೇಲ್ಕಂಡವುಗಳಲ್ಲದೆ ಸ್ವತಂತ್ರ, ಪ್ಯಾಕೇಜ್ ಟೂರ್, ಸಾಮಾಜಿಕ ಪ್ರವಾಸೋದ್ಯಮ ವೆಂತಲೂ ವಿಂಗಡಿಸಬಹುದು. ಸ್ವತಂತ್ರ ಪ್ರವಾಸೋದ್ಯಮದಲ್ಲಿ ಸಾರಿಗೆ, ವಸತಿ ಅಥವಾ ಇತರ ಎಲ್ಲ ಸೌಲಭ್ಯಗಳನ್ನೂ ಪ್ರವಾಸಿಗರೇ ಸ್ವತಂತ್ರ್ಯವಾಗಿ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಅವಶ್ಯವಿದ್ದರೆ ಟ್ರಾವೆಲ್ ಏಜೆಂಟ್‌ಗಳ ಸಹಾಯ ಪಡೆದುಕೊಳ್ಳಬಹುದು. ಪ್ಯಾಕೇಜ್ ಪ್ರವಾಸೋದ್ಯಮದಲ್ಲಿ ಪ್ರವಾಸದ ಸಮಗ್ರ ವ್ಯವಸ್ಥೆಯನ್ನು ಪ್ರವಾಸಿಗುಂಪಿನ ಸದಸ್ಯರೊಬ್ಬರಿಂದ ನಿರ್ವಹಿಸಲಾಗುವುದು. ವ್ಯವಸ್ಥೆಗಳಿಗೆಲ್ಲ ತಗಲುವ ಖರ್ಚುಗಳನ್ನು ಒಳಗೊಳ್ಳುವ ಹಣ ಪಡೆದು ಏರ್ಪಡಿಸುವ ಒಟ್ಟಾರೆ ವ್ಯವಸ್ಥೆ ಪ್ರವಾಸ.

ಸಾಮಾಜಿಕ ಪ್ರವಾಸೋದ್ಯಮ ಭಿನ್ನವಾದುದು. ಸಮಾಜದ ಆರ್ಥಿಕವಾಗಿ ಹಿಂದುಳಿದ ಜನರಿಗೆ ಹಲವು ಉತ್ತೇಜಕ ಮತ್ತು ರಿಯಾಯತಿಯೊಂದಿಗೆ ಸರ್ಕಾರ ಪ್ರವಾಸ ವ್ಯವಸ್ಥೆ ಪೂರೈಸುತ್ತದೆ. ಸ್ಥಳಗಳು, ಅವಧಿ ಮತ್ತು ಮಾರ್ಗ ಸೂಚಿಗಳನ್ನೆಲ್ಲ ಸರ್ಕಾರವೇ ನಿಯೋಜಿಸುತ್ತದೆ.

ಭಾರತದಂತಹ ವಿಶಾಲ ದೇಶದಲ್ಲಿ ಪ್ರವಾಸೋದ್ಯಮದ ಬೆಳವಣಿಗೆಯ ಸಾಧ್ಯತೆ ಅಪಾರವಾಗಿದೆ. ನಿಸರ್ಗಸೌಂದರ್ಯ, ಸಸ್ಯ, ಮೃಗಪಕ್ಷಿ ವೈವಿಧ್ಯ, ಐತಿಹಾಸಿಕ ಸ್ಥಳ, ವಿಹಾರಧಾಮಗಳು ಇವೆಲ್ಲವೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಬಲ್ಲವು. ಆದರೆ ಪ್ರವಾಸಿ ಸೌಲಭ್ಯಗಳು ಸಾಕಷ್ಟು ಇಲ್ಲದ್ದರಿಂದ ಪ್ರವಾಸೋದ್ಯಮ ಬೆಳೆಯಬೇಕಾದಷ್ಟು ಬೆಳೆದಿಲ್ಲ. ಪ್ರಪಂಚದ ಪ್ರವಾಸೋದ್ಯಮದಲ್ಲಿ ಭಾರತದ ಪಾಲು ಶೇ. 0.30ರಷ್ಟು ಮಾತ್ರ. 1958. ಮಾರ್ಚಿಯಲ್ಲಿ ಭಾರತೀಯ ಪ್ರವಾಸೋದ್ಯಮದ ಪ್ರಗತಿಗಾಗಿ ಕಾರ್ಯ ರೂಪುರೇಷೆಗಳಿಗಾಗಿ ಸಾರಿಗೆ ಸಚಿವಾಲಯದಲ್ಲಿ ಪ್ರತ್ಯೇಕ ಪ್ರವಾಸೋದ್ಯಮ ಇಲಾಖೆಯೊಂದನ್ನು ಸ್ಥಾಪಿಸಲಾಗಿದೆ. ಇದು 1967 ರಲ್ಲಿ ಪ್ರವಾಸೋದ್ಯಮ ಹಾಗೂ ನಾಗರಿಕ ವಿಮಾನಯಾನ ಸಚಿವಾಲಯವಾಗಿ ಪ್ರತ್ಯೇಕಗೊಂಡಿತು. 1966ರಲ್ಲಿ ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಲಿ (ಐಟಿಡಿಸಿ) ಅಸ್ತಿತ್ವಕ್ಕೆ ಬಂದಿತು. ಇದು 31 ಹೋಟೆಲುಗಳು / ಪ್ರವಾಸಿ ವಸತಿಗೃಹಗಳನ್ನು ಹೊಂದಿದೆ. ಆರ್ಥಿಕವಾಗಿ ಸುಧಾರಣೆ ಹೊಂದುವುದರೊಂದಿಗೆ ದೇಶದಲ್ಲಿ ಪ್ರವಾಸೋದ್ಯಮವನ್ನು ಈಗ ಹೆಚ್ಚು ಸುಧಾರಿಸಿದೆ.

ಕರ್ನಾಟಕದಲ್ಲಿ ಪ್ರವಾಸೋದ್ಯಮ ಸಾಮರ್ಥ್ಯ : ವೈವಿಧ್ಯತೆ ಹಾಗೂ ವೈಶಿಷ್ಟ್ಯತೆಯುಳ್ಳ ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವ ಕರ್ನಾಟಕ ರಾಜ್ಯ ಪ್ರವಾಸಿಗಳ ಸ್ವರ್ಗವೆನಿಸಿಕೊಂಡಿದೆ. ಪ್ರವಾಸೋದ್ಯಮದ ಸಮೃದ್ಧ ಸಾಮರ್ಥ್ಯವನ್ನು ಹೊಂದಿದೆ. ರಾಜ್ಯದ ಅನೇಕ ಪ್ರವಾಸಿ ಕೇಂದ್ರಗಳು ತಮ್ಮ ಆಕರ್ಷಣೆ ಹಾಗೂ ವೈಶಿಷ್ಟ್ಯತೆಗಳಿಂದ ಜಗತ್ಪ್ರಸಿದ್ಧವಾಗಿವೆ. ಅವು ದೇಶೀಯ ಹಾಗೂ ವಿದೇಶೀ ಪ್ರವಾಸಿಗರನ್ನು ಆಕರ್ಷಿಸುತ್ತವೆ. ರಾಜ್ಯದ ಸಮುದ್ರ ತೀರದಲ್ಲಿ ಸುಂದರವಾದ ಬೀಚ್‌ಗಳಿವೆ ಹಾಗೂ ಕರಾವಳಿಯ ದೇವಾಲಯಗಳಿವೆ. ಕಣ್ಮನಗಳನ್ನು ಸೆಳೆಯುವಂತಹ ಸೊಗಸಾದ ವಾಸ್ತುಶಿಲ್ಪವುಳ್ಳ, ದೇವಾಲಯಗಳು, ಐತಿಹಾಸಿಕ ಸ್ಮಾರಕಗಳು, ಅರಮನೆಗಳು, ಕೋಟೆ–ಕೊತ್ತಲ ಮತ್ತು ಮಸೀದಿಗಳು, ಸಂರಕ್ಷಿತ ವನಸಿರಿ– ವನ್ಯಜೀವಿ ಧಾಮ, ಗಿರಿಧಾಮ, ಪಕ್ಷಿಧಾಮಗಳು, ಉದ್ಯಾನವನಗಳು, ಕರಕುಶಲ ಕೇಂದ್ರಗಳು, ಜಲವಿಹಾರ ಕೇಂದ್ರಗಳು ಮುಂತಾದವುಗಳನ್ನು ನಮ್ಮ ರಾಜ್ಯದಲ್ಲಿ ಕಾಣಬಹುದು.

ಸಾರಿಗೆ–ಸಂಪರ್ಕ, ಅಗತ್ಯವಾದ ಇತರ ಮೂಲಭೂತ ಸೌಕರ್ಯ ಹಾಗೂ ನಿರ್ವಹಣಾ ವ್ಯವಸ್ಥೆಯ ಕೊರತೆಯಿಂದಾಗಿ ರಾಜ್ಯದ ಇನ್ನೂ ಅನೇಕ ಕೇಂದ್ರಗಳು ಬೆಳಕಿಗೆ ಬಂದಿಲ್ಲ ಅಥವಾ ಮೂಲೆಗುಂಪಾಗಿ ಉಳಿದಿವೆ. ರಾಜ್ಯದ ಪ್ರತಿಯೊಂದು ಜಿಲ್ಲೆಯೂ ಒಂದಲ್ಲ ಒಂದು ರೀತಿಯ ಪ್ರವಾಸಿ ಆಕರ್ಷಣೆಗಳನ್ನು ಹೊಂದಿವೆ. ಈಗಾಗಲೇ ಗುರುತಿಸಿರುವ ಅನೇಕ ಪ್ರವಾಸಿ ಕೇಂದ್ರಗಳು ಸಾರಿಗೆ–ಸಂಪರ್ಕ, ಹೊಟೇಲ್‌ಗಳ ಸೌಲಭ್ಯ ಮುಂತಾದ ಅಗತ್ಯವಾದ ಸೌಕರ್ಯಗಳ ಕೊರತೆಯಿಂದಾಗಿ ದುಸ್ಥಿತಿಯಲ್ಲಿರುತ್ತವೆ. ಇವೆಲ್ಲ ವಿಚಾರಗಳನ್ನು ಗಮನಿಸಿ ರಾಜ್ಯ ಸರ್ಕಾರ ಅನೇಕ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ. ಆದರೂ ಅದು ಇನ್ನೂ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರಬೇಕಾಗಿದೆ.

ಬೆಳೆವಣಿಗೆ : ರಾಜ್ಯದ ಹಲವು ಪ್ರೇಕ್ಷಣೀಯ ಸ್ಥಳಗಳ ಆಕರ್ಷಣೆ ಸರ್. ಎಂ. ವಿಶ್ವೇಶ್ವರಯ್ಯನವರ ದೃಷ್ಟಿಗೆ ಬಂದಿತು. ರಾಜ್ಯದ ಆರ್ಥಿಕ ಪ್ರಗತಿ ಮತ್ತು ಪ್ರವಾಸೋದ್ಯಮದ ಮಹತ್ತ್ವವನ್ನು ಗಮನದಲ್ಲಿಟ್ಟುಕೊಂಡು, ಅವರು ದಿವಾನರಾಗಿದ್ದಾಗ ಖಾಸಗಿ ವ್ಯವಸ್ಥಾಪಕರಿಗೆ ಈ ಉದ್ಯಮವನ್ನು ಅಭಿವೃದ್ಧಿಪಡಿಸುವುದಕ್ಕೆ ಉತ್ತೇಜನ ನೀಡಿದರು ಹಾಗೂ ಸೂಕ್ತ ಮಾರ್ಗದರ್ಶನವನ್ನು ಕೊಟ್ಟರು. ಈ ಉದ್ಯಮದ ಕ್ರಮಬದ್ಧವಾದ ಅಭಿವೃದ್ಧಿ ಮೂರನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಜಾಹಿರಾತು ಚೀಟಿ (ಪೋಸ್ಟರ್) ಗಳನ್ನು ಹಚ್ಚುವುದು, ವಸ್ತುಪ್ರದರ್ಶನ ಮುಂತಾದವುಗಳ ರೂಪದಲ್ಲಿ ಪ್ರಚಾರ ಮಾಡುವುದಕ್ಕಾಗಿ ಪ್ರವಾಸಿ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಯಿತು. 1974ರಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆಯನ್ನು (ಕೆ.ಎಸ್.ಟಿ.ಡಿ.ಸಿ.) ಸ್ಥಾಪಿಸಲಾಯಿತು. ಈ ಸಂಸ್ಥೆ ರಾಜ್ಯದ ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸಿ ಮಂದಿರಗಳ ನಿರ್ಮಾಣ, ಅವುಗಳ ನಿರ್ವಹಣೆ, ಪ್ರಚಾರ ಹಾಗೂ ಮಾರ್ಗದರ್ಶನಕ್ಕಾಗಿ ಪ್ರಾದೇಶಿಕ ಮಾಹಿತಿ ಕೇಂದ್ರಗಳನ್ನು ತೆರೆದು, ರಾಜ್ಯದಾದ್ಯಂತ ಪ್ರವಾಸಿ ಕೇಂದ್ರಗಳನ್ನು ಗುರುತಿಸಿ ಅವುಗಳ ಸುಧಾರಣೆ ಮತ್ತು ಸಂರಕ್ಷಣೆಗಾಗಿ ಕ್ರಮಗಳನ್ನು ಕೈಗೊಂಡಿತು. ಜೊತೆಗೆ ಅಂತಹ ಕಡೆಗಳಲ್ಲಿ ಪ್ರವಾಸಿಗರಿಗೆ ಅಗತ್ಯವಾದ ಪ್ರವಾಸಿ ಮಂದಿರ, ಯಾತ್ರಿ ನಿವಾಸ, ಉಪಾಹಾರಗೃಹ ಮುಂತಾದ ಸೌಲಭ್ಯಗಳನ್ನು ಪೂರೈಸುವ ಮೂಲಕ ಅಧಿಕ ಸಂಖ್ಯೆಯ ಪ್ರವಾಸಿಗರನ್ನು ಆಕರ್ಷಿಸಲು ಪ್ರಯತ್ನಿಸಿತು.

ಇತ್ತೀಚಿನ ಬೆಳೆವಣಿಗೆ : ಈವರೆಗೆ ರಾಜ್ಯದಲ್ಲಿ ಗುರುತಿಸಲ್ಪಟ್ಟ ಎಲ್ಲ ಪ್ರವಾಸಿ ಕೇಂದ್ರಗಳನ್ನು 5 ವಲಯಗಳಲ್ಲಿ ತರಲಾಗಿದೆ. 1. ಉತ್ತರ ವಲಯ, 2. ದಕ್ಷಿಣ ವಲಯ, 3. ಕರಾವಳಿ ವಲಯ 4. ವನ್ಯಜೀವಿ ವಲಯ ಮತ್ತು 5. ಗಿರಿಧಾಮ ವಲಯ.

ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಂಚವಾರ್ಷಿಕ ಯೋಜನೆಗಳ ಮೂಲಕ ಆರ್ಥಿಕ ನೆರವನ್ನು ನೀಡುತ್ತಾ ಉತ್ತೇಜನ ನೀಡುತ್ತಿವೆ. 2000ರ ವೇಳೆಗೆ 3776.59 ಲಕ್ಷ ರೂಪಾಯಿಗಳನ್ನು ಈ ಉದ್ಯಮಕ್ಕೆ ಬಂಡವಾಳ ತೊಡಗಿಸಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ನೆರವನ್ನು ಪಡೆದು ಕರ್ನಾಟಕ ರಾಜ್ಯ ಪ್ರವಾಸ ಅಭಿವೃದ್ಧಿ ಸಂಸ್ಥೆ ಊಟ, ವಸತಿಗಳಿಗಾಗಿ ಉತ್ತಮ ದರ್ಜೆಯ ಹೋಟೆಲ್‌ಗಳನ್ನು ನಿರ್ಮಿಸಿದೆ, ನಿರ್ಮಿಸುತ್ತಿದೆ. 1992ರಲ್ಲಿ ರಾಜ್ಯ ಸರ್ಕಾರ ಹೊಸ ನೀತಿಯೊಂದನ್ನು ಜಾರಿಗೆ ತಂದಿದೆ. ಅದರ ಪ್ರಕಾರ ಪ್ರವಾದೋದ್ಯಮದ ಅಭಿವೃದ್ಧಿಯಲ್ಲಿ ಖಾಸಗಿಯವರು ಬಂಡವಾಳ ಹೂಡಲು ಅವಕಾಶ ಕಲ್ಪಿಸುವ ಮೂಲಕ ಪ್ರೋತ್ಸಾಹ ನೀಡಲಾಗುವುದು.

ಪ್ರತಿವರ್ಷ 11,000 ದಿಂದ 13,000 ದಷ್ಟು ದಕ್ಷಿಣ ಕರ್ನಾಟಕ ಹಾಗೂ 10,000 ದಿಂದ 12,000 ದಷ್ಟು ಉತ್ತರ ಕರ್ನಾಟಕದಲ್ಲಿ ವಿದೇಶೀ ಪ್ರವಾಸಿಗರು, 3 ಲಕ್ಷ ದಕ್ಷಿಣ ಕರ್ನಾಟಕ ಮತ್ತು 2 ಲಕ್ಷ ಉತ್ತರ ಕರ್ನಾಟಕದಲ್ಲಿ ದೇಶೀಯ ಪ್ರವಾಸಿಗರು ಭೇಟಿ ನೀಡುವರೆಂದು ಅಂದಾಜು ಮಾಡಲಾಗಿದೆ. 1996–97ನೆಯ ಸಾಲಿನ ಪ್ರವಾಸೋದ್ಯಮ ಉತ್ತಮ ನಿರ್ವಹಣೆ ರಾಜ್ಯ ಪ್ರಶಸ್ತಿ ಕರ್ನಾಟಕಕ್ಕೆ ದೊರೆತಿರುವುದು ಶ್ಲಾಘನೀಯ. ಈ ಪ್ರಶಸ್ತಿ ರಾಜ್ಯದ ಪ್ರವಾಸೋದ್ಯಮ ಸಂಸ್ಥೆಯ ಸಮರ್ಥನೀಯ ವ್ಯವಸ್ಥಾಪಕತ್ವವನ್ನು ಪ್ರತಿಬಿಂಬಿಸುತ್ತದೆ. (ಪಿ.ಎಂ.)

**ಪ್ರವಾಸೋದ್ಯಮದ ವಿಧಗಳು:** ಪ್ರವಾಸೋದ್ಯಮವನ್ನು ಪ್ರವಾಸಿಗರ ಉದ್ದೇಶ ಮತ್ತು ಆಕರ್ಷಣೆಯನ್ನು ಆಧರಿಸಿ ವಿವಿಧ ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ;

ಜಲಾಧಾರಿತ ಪ್ರವಾಸೋದ್ಯಮ: ನೀರು, ಮಕ್ಕಳಿಂದ ವೃದ್ಧರವರೆವಿಗೂ ವಿಶಿಷ್ಟವಾಗಿ ಆಕರ್ಷಿಸುತ್ತದೆ. ಜಲಕ್ರೀಡೆ ಪ್ರತಿಯೊಬ್ಬರಿಗೂ ಇಷ್ಟವಾದ ಆಟವಾಗಿದೆ. ಇದನ್ನರಿತು ಕೆಲವು ವಿಶೇಷ ಸ್ಥಳಗಳನ್ನು ಇಂದು ಪ್ರವಾಸಿ ತಾಣಗಳೆಂದು ಗುರುತಿಸಿ ಅಭಿವೃದ್ಧಿಪಡಿಸಲಾಗಿದೆ. ಉದಾ: ಕರಾವಳಿ ತೀರ ಪ್ರದೇಶಗಳು, ಬೀಚುಗಳು ನದಿ ನಿರ್ಮಿತ ಪ್ರದೇಶಗಳು, ಸರೋವರಗಳು ಇತ್ಯಾದಿಗಳು. ಇವು ಸೂರ್ಯೋದಯ ಮತ್ತು ಸೂರ್ಯಾಸ್ತದ ವೀಕ್ಷಣೆಗೆ ಹೆಚ್ಚು ಪ್ರಸಿದ್ಧಿ. ಮೊದಲ ಬಾರಿಗೆ ಕರಾವಳಿ ತೀರಪ್ರದೇಶ ವೀಕ್ಷಿಸುವ ಪ್ರವಾಸಿಗರಿಗಂತೂ ಕಣ್ಣುಕಾಣುವವರೆಗೂ ನೀರೆ ನೀರು ಕಂಡುಬರುವುದರಿಂದ ಎಲ್ಲಿಲ್ಲದ ಆನಂದ ಪಡುತ್ತಾರೆ. ಅಲೆಗಳ ಅಪ್ಪಳಿಸುವಿಕೆಯಲ್ಲಿ ಕುಣಿದು ಕುಪ್ಪಳಿಸುತ್ತಾರೆ. ಜೋಗ್‌ಜಲಪಾತ, ಅಬ್ಬಿಫಾಲ್ಸ್, ಗಗನಚುಕ್ಕಿ, ಭರಚುಕ್ಕಿ ಜಲಪಾತಗಳು ಆಕರ್ಷಣೀಯವಾಗಿವೆ. ಜಲಪಾತಗಳ ನಿರ್ಮಾಣಕ್ಕೆ ನದಿಯ ಪಾತ್ರ ಪ್ರವೇಶದ ನಿರ್ಮಾಣದ ರೀತಿ ಅತಿಮುಖ್ಯ. ಆ ಪಾತ್ರ ಪ್ರವೇಶದಲ್ಲಿ ಕಡಿದಾದ ಇಳಿಜಾರಿನಿಂದ ಕೂಡಿದ್ದು, ನೀರು ಧುಮ್ಮಿಕ್ಕುವ ರಮಣೀಯವಾದ ನೋಟ ಪ್ರತಿಯೊಬ್ಬ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ. ಹಾಲಿನ ನೊರೆಯಂತಹ ನೀರಿನಡಿಯಲ್ಲಿ ಪ್ರವಾಸಿಗರು ಹರ್ಷೋದ್ಗಾರ ಪಡುತ್ತಾರೆ. ಸರೋವರಗಳು ಇಂದು ದೋಣಿವಿಹಾರ ಕೇಂದ್ರಗಳಾಗಿ ಮಾರ್ಪಟ್ಟಿವೆ. ಕೇರಳದ ಸರೋವರಗಳು, ಊಟಿಯ ಸರೋವರಗಳು, ಮೈಸೂರಿನ ಕುಕ್ಕರಹಳ್ಳಿ ಮತ್ತು ಕಾರಂಜಿಕೆರೆ ದೋಣಿವಿಹಾರ ಕೇಂದ್ರಗಳಾಗಿದ್ದು ಪ್ರೇಕ್ಷಣೀಯ ಸ್ಥಳಗಳಾಗಿವೆ ಹೀಗೆ ನೀರನ್ನು ಜನರು ವಿವಿಧ ರೀತಿಯಲ್ಲಿ ಮನರಂಜನೆಗೆ ಬಳಸಿಕೊಂಡಿದ್ದಾರೆ. ಇತ್ತೀಚೆಗೆ ಕೆಲವು ಅಮ್ಯೂಸ್‌ಮೆಂಟ್ ಪಾರ್ಕ್‌ಗಳು ನೀರನ್ನು ಕ್ರೀಡೆಯಾಗಿ ಬಳಸಿಕೊಂಡು ಜನರನ್ನು ಆಕರ್ಷಿಸುತ್ತಿವೆ. ಉದಾ: ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್ (ಮೈಸೂರು), ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್ (ಬೆಂಗಳೂರು) ಇತ್ಯಾದಿ.

ವಾಯು ಆಧಾರಿತ ಪ್ರವಾಸೋದ್ಯಮ: ಈ ಪ್ರವಾಸೋದ್ಯಮದಲ್ಲಿ ಹವಾಮಾನ ಮತ್ತು ವಾಯುಗುಣಗಳೆರಡು ಸೇರುತ್ತದೆ. ವಾಯುಮಂಡಲದಲ್ಲಿನ ಹಾರಾಟ, ವಿಮಾನ, ಪ್ಯಾರಸೈಲಿಂಗ್, ಬಿಸಿಗಾಳಿ ಬೆಲೂನ್‌ಗಳಲ್ಲಿ ಹಾರಾಡುವುದು, ಪ್ಯಾರಜಂಪಿಂಗ್ ಇತ್ಯಾದಿಗಳು ಪ್ರವಾಸಿಗರನ್ನು ಆಕರ್ಷಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ತಮಿಳುನಾಡಿನ ನೀಲಗಿರಿ ಸರಣಿಯ ದೊಡ್ಡ ಬೆಟ್ಟದ ಸಮೀಪದ ಉದಕಮಂಡಲ (ಊಟಿ) ಇಂದು ಪ್ರಸಿದ್ಧ ಗಿರಿಧಾಮವಾಗಲು ಇದು ಹೊಂದಿರುವ ಹವಾಮಾನವೇ ಕಾರಣ. ಬೇಸಗೆಯ ಬಿಸಿಲಿನಲ್ಲಿ ಸಿಲುಕಿ ನಲುಗಿದ ಜನರು ತಂಪಾದ ವಾತಾವರಣದಲ್ಲಿ ವಿಹರಿಸಿ ಉಲ್ಲಾಸಗೊಳ್ಳಲು ಇಂತಹ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಹಾಗೆಯೇ ಕೆಲವು ವಿಶೇಷ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಲು ವಾಯುಗುಣ ಅತ್ಯಗತ್ಯ. ಉದಾಹರಣೆಗೆ ಸಿಮ್ಲಾ, ಡಾರ್ಜಲಿಂಗ್, ನೈನಿತಾಲ್‌ಗಳಂತಹ ಹಿಮಾಲಯದ ತಂಪಿನ ಕೆಲವು ಪ್ರೇಕ್ಷಣೀಯ ಗಿರಿಧಾಮಗಳಿಗೆ ಭೇಟಿ ನೀಡಲು ಬೇಸಗೆ ಕಾಲ ಅತಿ ಉತ್ತಮವಾದುದು. ಮರುಭೂಮಿಗಳಲ್ಲಿ ಗಾಳಿಯೇ ಅತಿ ಮುಖ್ಯ ಆಕರ್ಷಣೆಯ ಬಿಂದು. ಅತಿ ವೇಗದ ಗಾಳಿಯ ಸೆಳೆತ ವಿವಿಧಾಕಾರದ ಮರಳಿನ ದಿಬ್ಬಗಳು ಪ್ರವಾಸಿಗರನ್ನು ಸೆಳೆಯುತ್ತವೆ. ಹೀಗೆ ವಾಯುಗುಣ ಕೂಡ ಪ್ರೇಕ್ಷಣೀಯ ಸ್ಥಳಗಳ ಆಕರ್ಷಣೆಯನ್ನು ನಿರ್ಧರಿಸುತ್ತದೆ.

ವನ್ಯಜೀವಿ ಆಧಾರಿತ ಪ್ರವಾಸೋದ್ಯಮ: ದೇಶದಾದ್ಯಂತ ಅನೇಕ ರಾಷ್ಟ್ರೀಯ ಉದ್ಯಾನವನಗಳು, ವನ್ಯಧಾಮಗಳು, ಪಕ್ಷಿಧಾಮಗಳನ್ನು ಕಾಣಬಹುದು. ಉದಾಹರಣೆಗೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನ, ರಂಗನತಿಟ್ಟು ಪಕ್ಷಿಧಾಮ ಇತ್ಯಾದಿ. ಪ್ರತಿ ಪ್ರವಾಸಿಗ ಅಪರೂಪದ ಪ್ರಾಣಿಗಳನ್ನು, ಕಣ್ಣಾರೆ ಹತ್ತಿರದಿಂದ ವೀಕ್ಷಿಸಲು ಇಚ್ಛೆಪಡುತ್ತಾನೆ. ಅದಕ್ಕಾಗಿ ಇಂತಹ ವಿಶೇಷ ಸ್ಥಳಗಳನ್ನು ಹುಡುಕಿಕೊಂಡು ಹೋಗುತ್ತಾನೆ. ವೈವಿಧ್ಯಮಯವಾದ ವೈಶಿಷ್ಟಮಯವಾದ ಹೂವುಗಳನ್ನು ಬಿಡುವ ಮರಗಳು, ಬೃಹದಾಕಾರವಾಗಿ, ಎತ್ತರವಾಗಿ ಬೆಳೆದಿರುವ ವನ್ಯಮರಗಳನ್ನು, ಪ್ರಾಣಿ ಪಕ್ಷಿಗಳನ್ನು ನೋಡಿ ಆನಂದ ಪಡುವ, ಉಲ್ಲಾಸಗೊಳ್ಳುವುದೊಂದೇ ಪ್ರವಾಸಿಗರ ಬಯಕೆ. ಅದಕ್ಕಾಗಿ ಇಂತಹ ಸ್ಥಳಗಳಿಗೆ ಪ್ರವಾಸ ಕೈಗೊಳ್ಳುತ್ತಾರೆ.

ಸಾಂಸ್ಕೃತಿಕ ಪ್ರವಾಸೋದ್ಯಮ: ಇದರಿಂದ ವೈವಿಧ್ಯಮಯವಾದ ಸಂಸ್ಕೃತಿಯ ಬಗ್ಗೆ ಅರಿವು ಪಡೆಯಲು ಸಾಧ್ಯವಾಗುತ್ತದೆ. ಭಾರತದಂತಹ ದೇಶದಲ್ಲಿ ಜನರ ಸಂಸ್ಕೃತಿಯು ಪ್ರಾದೇಶಿಕವಾಗಿ ವೈವಿಧ್ಯಮಯವಾಗಿರುತ್ತದೆ. ಒಂದೊಂದು ಪ್ರದೇಶದ ಆಚಾರ–ವಿಚಾರಗಳೇ ಬೇರೆ ಬೇರೆ ಇವುಗಳ ಅಧ್ಯಯನಕ್ಕಾಗಿಯೂ ಪ್ರವಾಸ ಕೈಗೊಳ್ಳುತ್ತಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ, ಪ್ರತಿಯೊಂದು ದೇಶದ ಜನರ ಉಡುಪು, ವೇಷಭೂಷಣಗಳೂ ವಿಭಿನ್ನವಾಗಿರುತ್ತವೆ ಅಥವಾ ಸ್ಥಳೀಯ ಬುಡಕಟ್ಟು ಜನರನ್ನು ಗಮನಿಸಿದರೂ ಅಪರೂಪದ ಸಾಂಸ್ಕೃತಿಕ ಜೀವನ ಶೈಲಿ ವೈಶಿಷ್ಟ್ಯಪೂರ್ಣವಾಗಿರುತ್ತದೆ. ಈ ರೀತಿಯ ಸಾಂಸ್ಕೃತಿಕ ಜೀವನದ ವೈವಿಧ್ಯತೆ ಕೂಡ ಪ್ರವಾಸಿಗರು ಪ್ರದೇಶದಿಂದ ಪ್ರದೇಶಕ್ಕೆ ಪ್ರವಾಸ ಕೈಗೊಳ್ಳಲು ಉತ್ತೇಜನ ನೀಡುತ್ತದೆ.

ಧಾರ್ಮಿಕ ಮತ್ತು ಯಾತ್ರಾ ಪ್ರವಾಸೋದ್ಯಮ: ವಿವಿಧ ಧರ್ಮದ ಜನರು ತಮ್ಮದೇ ಆದ ಕಟ್ಟುಪಾಡುಗಳಲ್ಲಿ ಜೀವಿಸುತ್ತಿದ್ದು, ತಮ್ಮದೇ ಆದ ಕೆಲವು ಆಯ್ದ ಸ್ಥಳಗಳನ್ನು ಯಾತ್ರಾಸ್ಥಳಗಳನ್ನಾಗಿ ಮಾಡಿಕೊಂಡಿದ್ದಾರೆ. ಉದಾಹರಣೆಗೆ ಮುಸ್ಲಿಂ ಜನಾಂಗಕ್ಕೆ ಮೆಕ್ಕ, ಕ್ರೈಸ್ತ ಜನಾಂಗಕ್ಕೆ ವಿವಿಧ ಚರ್ಚುಗಳು, ಹಿಂದು ಜನಾಂಗಕ್ಕೆ ಕಾಶಿ, ರಾಮೇಶ್ವರ, ತಿರುಪತಿ, ಹರಿದ್ವಾರ ಹೀಗೆ ಹಲವಾರು ಧಾರ್ಮಿಕ ಮತ್ತು ಯಾತ್ರಾಸ್ಥಳಗಳು ಇಂದು ಧಾರ್ಮಿಕಾಭಿಮಾನಿಗಳನ್ನು ಮತ್ತು ಯಾತ್ರಾರ್ಥಿಗಳನ್ನು ಸೆಳೆಯುತ್ತಿವೆ.

ಮುಸ್ಲಿಂ ಜನಾಂಗದಲ್ಲಿ, ಜೀವಿತಾವಧಿಯಲ್ಲಿ ಒಮ್ಮೆಯಾದರೂ ಮೆಕ್ಕಗೆ ಭೇಟಿ ನೀಡಬೇಕೆಂಬ ಹಂಬಲ ಇದೆ. ಇದು ಆ ಮಾರ್ಗವಾಗಿ ಕಂಡುಬರುವ ಇತರೆ ಪ್ರೇಕ್ಷಣೀಯ ಸ್ಥಳಗಳಿಗೂ ಸಹಕಾರಿಯಾಗಿದೆ. ಕ್ರೈಸ್ತಧರ್ಮದಲ್ಲಿ ಕೆಲವು ವಿಶೇಷ ಚರ್ಚುಗಳಿಗೆ, ಪ್ರಾರ್ಥನಾ

ಮಂದಿರಗಳಿಗೆ ಭೇಟಿ ನೀಡುವುದು ವಾಡಿಕೆ. ಹಿಂದುಗಳು ಹಲವಾರು ಧಾರ್ಮಿಕ ಮತ್ತು ಯಾತ್ರಾಸ್ಥಳಗಳಿಗೆ ಭೇಟಿ ನೀಡುವುದನ್ನು ಕಾಣುತ್ತೇವೆ. ಹಿಂದೂ ಧರ್ಮದಲ್ಲಿ ಹಲವಾರು ಒಳ ಪಂಗಡಗಳಿರುತ್ತವೆ. ಅವುಗಳ ಇಚ್ಛಾನುಸಾರ ವಿವಿಧ ಸ್ಥಳಗಳಿಗೆ ವಿಶೇಷ ಸಂದರ್ಭಗಳಲ್ಲಿ ಭೇಟಿ ನೀಡುವುದು ರೂಢಿಯಲ್ಲಿದೆ. ಉದಾ: ತಿರುಪತಿ, ಮಲೆಮಹದೇಶ್ವರ ಬೆಟ್ಟ, ಧರ್ಮಸ್ಥಳ, ಶಬರಿಮಲೈ ಮುಂತಾದ ಯಾತ್ರಾಸ್ಥಳಗಳಿಗೆ ಭಕ್ತಾದಿಗಳು ಯಾತ್ರಾರ್ಥಿಗಳು ವಿಶೇಷ ಸಂದರ್ಭದಲ್ಲಿ ವಿಶೇಷ ಪೂಜಾ ಸನ್ನಿವೇಶಗಳಂದು ಅಪಾರ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಇಂತಹ ಸ್ಥಳಗಳಿಗೆ ಭೇಟಿ ನೀಡುವುದರಿಂದ ತಮ್ಮ ಪಾಪ ಪರಿಹಾರವಾಗುತ್ತದೆಂದು ಭಾವಿಸುತ್ತಾರೆ. (ಪಿ.ಪಿ.)

**ಪ್ರವಾಹ:** ದಂಡೆಯ ನೈಸರ್ಗಿಕ ಮಿತಿಯನ್ನು ಅತಿಕ್ರಮಿಸಿ ಹರಿಯುವ ಹೊಳೆಯ ಹೊನಲು (ಫ್ಲಡ್). ಹೊಳೆಯಲ್ಲಿ ಪ್ರವಾಹ ಬಂದಾಗ ದಡದ ಪ್ರದೇಶಗಳಿಗೆ ಅಪಾಯವಾಗುವಷ್ಟು ಮಟ್ಟಿಗೆ ನೀರಿನ ಮಟ್ಟ ಏರುತ್ತದೆ. ಪ್ರವಾಹಗಳಿಗೆ ಮುಖ್ಯ ಕಾರಣಗಳಿವು: ಅತಿವೃಷ್ಟಿ, ಚಂಡಮಾರುತ, ಜ್ವಾಲಾಮುಖಿ ಕಾರ್ಯಾಚರಣೆ ಮಂಜು ಅಥವಾ ಮಂಜುಗಡ್ಡೆ ಕರಗುವುದು, ಪಟ್ಟಣಗಳ ಬಳಿ ನದಿಗಳ ನಾಲೆಗಳನ್ನು ಆಕ್ರಮಿಸಿರುವುದು, ಭೂಕಂಪನ, ಸಮುದ್ರ ಒಳಗೆ ನುಗ್ಗುವುದು, ಮೇಲಿನವುಗಳಲ್ಲಿ ಎರಡು ಮೂರು ಕಾರಣಗಳು ಒಟ್ಟಿಗೆ ಸೇರಿರುವುದು.

ಸುಮಾರು ನಲವತ್ತು ಶತಮಾನಗಳಿಂದಲೂ ಮಾನವ ತನ್ನ ಇತಿಹಾಸದಲ್ಲಿ ಪ್ರವಾಹಗಳಿಂದ ಆಗುವ ನಷ್ಟ ತಪ್ಪಿಸಿಕೊಳ್ಳಲು ಮಾಡಿರುವ ಪ್ರಯತ್ನಗಳು ವಿಫಲವಾಗಿವೆ. ಚೀನದ ಯಾಂಗ್ಸ್ಟೀ ಮತ್ತು ಹುಯಾಂಗ್‌ಹೊ ನದಿಗಳ ದಡಗಳಲ್ಲಿ ಪ್ರತಿಸಲವೂ ಆತ ವಿನಾಶಕಾರೀ ಪ್ರವಾಹದನಂತರ ಬಯಲನ್ನು ಮತ್ತೆ ಆಕ್ರಮಿಸಿಕೊಂಡು ಸಂಕಟಪಟ್ಟಿದ್ದಾನೆ. ಆದರೆ ಈಜಿಪ್ಟಿನ ನೈಲ್ ನದಿಯ ಕಣಿವೆಯಲ್ಲಿ ಹೀಗಲ್ಲ. ನಿಯಂತ್ರಿತವಾಗಿ ಬರುವ ಪ್ರವಾಹವನ್ನು ಪ್ರತಿವರ್ಷವೂ ಬೇಸಾಯಕ್ಕಾಗಿ ಬಳಸಿಕೊಳ್ಳುತ್ತಲೇ ಬಂದಿದ್ದಾನೆ. ಈ ವಿಚಾರದಲ್ಲಿ ಒಂದು ನದಿಯ ಹಾಗೆ ಮತ್ತೊಂದು ಇರುವುದಿಲ್ಲ.

ಕೆಲವು ಮಾರಕ ಪ್ರವಾಹಗಳು : 1555 ಸೆಪ್ಟೆಂಬರಿನಲ್ಲಿ ಗಾಳಿ ಪ್ರಬಲವಾಗಿ ಎದ್ದು ಮಳೆ ಸುರಿದಾಗ ವೆಸ್ಟ್‌ಮಿನಿಸ್ಟರಿನ ರಾಜನ ಅರಮನೆಯೂ ಸಭಾಂಗಣವೂ ನೀರಿನಲ್ಲಿ ಮುಳುಗಿದ್ದುವು. 1864 ಅಕ್ಟೋಬರಿನಲ್ಲಿ ಬಂಗಾಲ ಕೊಲ್ಲಿಯಲ್ಲಿ ಚಂಡಮಾರುತ ಎದ್ದು ಸಮುದ್ರ ಸಾಮಾನ್ಯಮಟ್ಟಕ್ಕಿಂತ 300 ಸೆಂಮೀ ಮೇಲಕ್ಕೆ ಉಬ್ಬಿ ಗಂಗಾನದಿಯ ಮುಖದ ಹತ್ತಿರ ಚಪ್ಪಟೆಯಾದ ಭೂಮಿಯನ್ನು ಮುಚ್ಚಿ 45,000 ಜನರ ಪ್ರಾಣಗಳನ್ನು ಆಹುತಿಯಾಗಿ ತೆಗೆದುಕೊಂಡಿತು. 1922–23ರಲ್ಲಿ ಅಭೂತಪೂರ್ವವಾಗಿ ಬಂದ ಮಳೆಯಿಂದ ತುಂಗಾನದಿಯ ನೀರು ಎಡದಡದ ಮೇಲಿರುವ ಶಿವಮೊಗ್ಗ ಪಟ್ಟಣಕ್ಕೆ ನುಗ್ಗಿ ಅಪಾರ ನಷ್ಟವನ್ನುಂಟುಮಾಡಿತು. 2006ರಲ್ಲೂ ಅದೇ ಪರಿಸ್ಥಿತಿ ಮರುಕಳಿಸಿದೆ. 1927 ಫೆಬ್ರುವರಿ ತಿಂಗಳಿನಿಂದ ಜುಲೈ ತನಕ ಅಮೆರಿಕದ ಮಿಸಿಸಿಪಿ ನದಿಯಲ್ಲಿ ಬಂದ ಮಹಾಪೂರಗಳು 20ನೆಯ ಶತಮಾನದ ಘೋರವಾದ ಆಪತ್ತುಗಳಲ್ಲಿ ಸೇರಿವೆ. ಆಗ ನೀರು ಹಳೆಯ ಮೈಸೂರು ಸಂಸ್ಥಾನದ ವಿಸ್ತಾರದಷ್ಟು ನೆಲವನ್ನು ಆಕ್ರಮಿಸಿತ್ತು.

ಪುರಾತನ ಕಾಲದಿಂದಲೂ ಶಾಂತವಾಗಿ ಹರಿಯುತ್ತಿದ್ದ ನದಿಗಳು ಆಗಾಗ ಮಾನವನಿಗೆ ವಿಪತ್ತನ್ನು ತಂದಿರುವ ನಿದರ್ಶನಗಳು ಅನೇಕ. ನದಿ ಪ್ರವಾಹಕ್ಕೆ ಧಾರಾಕಾರವಾಗಿ ಸುರಿಯುವ ಮಳೆ ಮತ್ತು ಕರಗುವ ಮಂಜು ಮುಖ್ಯ ಕಾರಣಗಳಾದರೂ ಇತರ ಕಾರಣಗಳಿಂದಲೂ ಸಂಭವಿಸಬಹುದು. ಪ್ರಬಲವಾದ ಮಾರುತಗಳು ಬೀಸುವುದರಿಂದ ಸಮುದ್ರದ ಬೃಹದಾಕಾರದ ಅಲೆಗಳು ಕರಾವಳಿಗೆ ನುಗ್ಗಿದಾಗ, ನೆಲವು ಮಳೆಯಿಂದ ಚೆನ್ನಾಗಿ ತೋಯ್ದಿದ್ದರೆ ಅಥವಾ ಗಡ್ಡೆಕಟ್ಟಿದ್ದರೆ ಅಲ್ಲಿ ನೀರು ಇಂಗದೆ ಅಷ್ಟು ದಂಡೆಗಳ ಮೇಲೆ ಹರಿಯಬಹುದು ಅಥವಾ ಎರಡು ಮೂರು ಉಪನದಿಗಳಿಂದ ಪ್ರಧಾನ ನದಿಗೆ ಒಂದೇ ಸಾರಿ ವಿಶೇಷವಾಗಿ ನೀರು ನುಗ್ಗುವುದರಿಂದಲೂ ಪ್ರವಾಹವುಂಟಾಗುವುದು. ಇದು ಹೇಗೂ ಇರಲಿ. ನಾಗರಿಕತೆ ಬೆಳೆದಂತೆಲ್ಲಾ ಹಾಗೆ ಪ್ರವಾಹದಿಂದ ಆಗುವ ನಷ್ಟವೂ ಹೆಚ್ಚುತ್ತಿದೆ. ನದಿಗಳ ದಡಗಳಲ್ಲಿಯೇ ಅಲ್ಲದೆ ನದಿಯ ಕಣಿವೆಗಳಲ್ಲಿಯೂ ನಗರಗಳು, ಪಟ್ಟಣಗಳು ಮತ್ತು ಕಾರ್ಖಾನೆಗಳು ಬೆಳೆದಿವೆ. ಸೇತುವೆಗಳೂ ನದಿಯಲ್ಲಿ ಪ್ರವಾಹದ ನೀರು ಸರಾಗವಾಗಿ ಹರಿಯುವುದನ್ನು ತಡೆಯುತ್ತವೆ.

ಇದುವರೆಗಿನ ದಾಖಲೆಗಳಲ್ಲಿ ಎದ್ದು ಕಾಣುವ ಮಹಾಪ್ರವಾಹಗಳು ಜ್ವಾಲಾಮುಖಿ ಚಟುವಟಿಕೆಗಳಿಂದ ಉಂಟಾಗಿವೆ. 1883ರ ಆಗಸ್ಟಿನಲ್ಲಿ ಜಾವ ಮತ್ತು ಸುಮಾತ್ರ ದ್ವೀಪಗಳಲ್ಲಿ ಕ್ರಕಟೋವ ಜ್ವಾಲಾಮುಖಿ ಸ್ಫೋಟಿಸಿದಾಗ ಸಮುದ್ರದ ಅಲೆಗಳು 3600 ಪ್ರಾಣಗಳನ್ನು ಬಲಿ ತೆಗೆದುಕೊಂಡವು. ದೀಪಸ್ತಂಭಗಳು ಬೆಂಕಿಯ ಕಡ್ಡಿಗಳಂತೆ ಕೊಚ್ಚಿಹೋದುವು. ಸುಮಾತ್ರದಲ್ಲಿ ನಿಂತಿದ್ದ ಯುದ್ಧ ಹಡಗು ಪ್ರವಾಹದಲ್ಲಿ ಪಕ್ಕಕ್ಕೆ ಸು. 3.2 ಕಿಮೀ ದೂರ ಕೊಚ್ಚಿಕೊಂಡು ಹೋಗಿ ಸಮುದ್ರಮಟ್ಟದ ಮೇಲೆ 9 ಮೀ ಎತ್ತರದಲ್ಲಿ ನಿಂತಿತು. 1868ರಲ್ಲಿ ಪೆರುವಿನಲ್ಲಿ ಭೂಕಂಪನಗಳಿಂದ ಆದ ಪ್ರವಾಹದಲ್ಲಿ ಎರಡು ಪಟ್ಟಣಗಳು ಹೆಚ್ಚುಪಾಲು ನಾಶವಾದುವು. ಜಪಾನಿನ ಈಶಾನ್ಯ ತೀರದಲ್ಲಿ 1869 ಜೂನ್ ತಿಂಗಳಲ್ಲಿ ಬಂದ ಪ್ರವಾಹದಲ್ಲಿ ಸಮುದ್ರದ ಅಲೆಗಳು ಸು. 18 ಮೀ ಎತ್ತರಕ್ಕೆ ಚಿಮ್ಮಿ 27,000 ಜನರನ್ನು ಆಹುತಿ ತೆಗೆದುಕೊಂಡವು. 2004 ಡಿಸೆಂಬರ್ 26 ರಂದು ಇಂಡೋನೇಷ್ಯದಲ್ಲಿ ಸಂಭವಿಸಿದ ದೈತ್ಯಾಕಾರದ ಸುನಾಮಿ ಅಲೆಗಳಿಂದ ಸು. 1.5 ಲಕ್ಷ ಜನರು ಪ್ರಾಣಕಳೆದುಕೊಂಡರು. ಜೊತೆಗೆ ಅಪಾರವಾದ ಆಸ್ತಿ–ಪಾಸ್ತಿಗಳಿಗೆ ಹಾನಿಯಾಯಿತು.

ಪ್ರಾಚೀನ ಕಾಲಗಳಲ್ಲಿಯೂ ಪ್ರವಾಹದ ಭಯ ಇದ್ದೇ ಇತ್ತು. ಆದರೆ ಇಂದಿನ ಕೈಗಾರಿಕೆಯ ಯುಗದಲ್ಲಿ ನೀರಿನ ಅನುಕೂಲತೆಗಾಗಿ ಪ್ರಾಯಶಃ ಎಲ್ಲ ನದಿಗಳ ದಡಗಳಲ್ಲಿಯೂ ಕಚ್ಚಾ ಸಾಮಗ್ರಿಗಳನ್ನು ಸುಲಭವಾಗಿ ಪಡೆಯುವ ಸೌಕರ್ಯಕ್ಕಾಗಿ ಬಗೆಬಗೆಯ ವಿವಿಧ ಗಾತ್ರದ ಕೈಗಾರಿಕಾ ಕ್ಷೇತ್ರಗಳು ಬೆಳೆದು ಅಲ್ಲಿ ಜನಸಂಖ್ಯೆ ಏರುತ್ತದೆ. ಈ ಪ್ರವೃತ್ತಿ ಭಾರತದಲ್ಲಿ ಇನ್ನೂ ವಿಶೇಷವಾಗಿ ಬೆಳೆಯುತ್ತಿದೆ. ಏಕೆಂದರೆ ಇಂದಿನ ಜನಜೀವನಕ್ಕೆ ಅವಶ್ಯವಾದ ಅನುಕೂಲತೆಗಳನ್ನೆಲ್ಲ ನಮ್ಮ ಕೈಗಾರಿಕೆಗಳಿಂದಲೇ ತಯಾರಿಸಬೇಕಾಗಿದೆ. ಈ ಸಡಗರದಲ್ಲಿ ನೈಸರ್ಗಿಕವಾಗಿ ಅಗಾಗ ಬರಲೇಬೇಕಾದ ಮಹಾಪ್ರವಾಹಗಳನ್ನು ಅಲಕ್ಷ್ಯ ಮಾಡುವ ಸಂಭವ ಉಂಟು. ದೊಡ್ಡ ನದಿಗಳ ದಡಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವಾಗ ನದಿಯಲ್ಲಿ ಅನಿವಾರ್ಯವಾದ ಮಹಾಪ್ರವಾಹಗಳ ಕಡೆಗೆ ಗಮನವಿಡಬೇಕಾಗುತ್ತದೆ. ದಾಖಲೆ ಆಗಿರುವ ಅತ್ಯಂತ ವಿನಾಶಕ ಪ್ರವಾಹವೆಂದರೆ ಆಗಸ್ಟ್ 1931ರಲ್ಲಿ ಚೀನದ ಹ್ವಾಂಗ್‌ಹೋ (ಹಳದಿ ನದಿ) ನದಿ ಉಕ್ಕೇರಿದ್ದು, ಸುಮಾರು ಮೂವತ್ತೇಳು ಲಕ್ಷ ಮಂದಿ ಇದಕ್ಕೆ ಬಲಿಯಾದರು.

ಪ್ರವಾಹದ ನಿಯಂತ್ರಣ : ಬಿಸಿಲು ಮತ್ತು ಬಿರುಗಾಳಿಯಂತೆ ಪ್ರವಾಹವೂ ನೈಸರ್ಗಿಕ ವಿಪತ್ತು. ಎಲ್ಲ ದೇಶಗಳಲ್ಲಿಯೂ ಹೆಚ್ಚಾಗಿಯೋ ಕಡಿಮೆಯಾಗಿಯೋ ಪ್ರವಾಹಗಳು ಪ್ರತಿವರ್ಷವೂ ಸಂಭವಿಸುತ್ತವೆ. ಈಜಿಪ್ಟಿನಲ್ಲಿ ನೈಲ್ ನದಿಯ ಪ್ರವಾಹಗಳನ್ನು ವಿಶಾಲ ಬಯಲುಗಳ ನೀರಾವರಿಗಾಗಿ ಬಳಸಿಕೊಂಡಿದ್ದಾರೆ. ಆದರೆ ಭಾರತದಲ್ಲಿ ಕೋಸಿ, ಮಹಾನದಿ ಮೊದಲಾದ ನದಿಗಳಲ್ಲಿ ಮತ್ತು ಚೀನದ ಕೆಲವು ನದಿಗಳಲ್ಲಿ ಇವು ಪ್ರಕೃತಿಯ ಪ್ರಕೋಪದ ಚಿಹ್ನೆಗಳಾಗಿ ಹೊಲಗದ್ದೆಗಳಿಗೂ ದನಕರುಗಳಿಗೂ ಆಸ್ತಿಪಾಸ್ತಿಗಳಿಗೂ ಅಪಾರ ನಷ್ಟವನ್ನು ಆಗಾಗ್ಗೆ ಉಂಟುಮಾಡುತ್ತವೆ. ನಾಗರಿಕತೆ ಬೆಳೆದಷ್ಟೂ ಇದು ಹೆಚ್ಚಾಗುತ್ತಿದೆ. ಪ್ರವಾಹ ಬಂದಾಗ ನದಿಯ ದಂಡೆಗಳಾಚೆಯ ಬಯಲನ್ನು ಆವರಿಸುತ್ತದೆ. ಇದಕ್ಕೆ ಪ್ರವಾಹದ ಬಯಲು ಅಥವಾ ಪ್ರವಾಹ ಮೈದಾನ ಎಂದು ಹೆಸರು. ಇಂಥ ಬಯಲುಗಳಲ್ಲಿ ನಗರಗಳೂ ಪಟ್ಟಣಗಳೂ ಕೈಗಾರಿಕಾ ಕ್ಷೇತ್ರಗಳೂ ಬೆಳೆಯುವುದು ವಾಡಿಕೆ. ಈಗ ಜಲಾನಯನ ಭೂಮಿಯಲ್ಲಿ ಹೆಚ್ಚುಮಳೆ ಬಂದು ಇಲ್ಲವೆ ಹಿಮ ಕರಗಿ ಉಪನದಿಗಳೆಲ್ಲ ಒಂದೇ ಕಾಲದಲ್ಲಿ ಹೆಚ್ಚು ನೀರನ್ನು ತಂದು ಪ್ರಧಾನ ನದಿಗೆ ಹರಿಸಿದಾಗ ಮಹಾಪ್ರವಾಹ ಬರುತ್ತದೆ. ಅನಾಹುತ ಸಂಭವಿಸುತ್ತವೆ. ಇದೇ ವೇಳೆ ಕೆರೆಯ ಏರಿ, ದೊಡ್ಡ ಜಲಾಶಯ ಕಟ್ಟೆ ಮುಂತಾದವೇನಾದರೂ ಒಡೆದರೆ ಸ್ಥಿತಿ ಚಿಂತಾಜನಕವಾಗುತ್ತದೆ. ನದಿಗಳು ವಿಪರೀತ ಗೋಡುಮಣ್ಣನ್ನು (ಸಿಲ್ಟ್) ಸ್ವಾಭಾವಿಕವಾಗಿ ಸಾಗಿಸುತ್ತವೆ. ನದಿಯ ಪ್ರವಾಹಕ್ಕೆ ಏನಾದರೂ ತಡೆ ಬಂದಾಗ ಆ ಗೋಡು ಒಂದು ಕಡೆ ಶೇಖರವಾಗುತ್ತದೆ. ಇದನ್ನು ಯಂತ್ರಗಳಿಂದ ಎತ್ತದೆ ಹೋದರೆ ನದಿಯ ತಳ ಮೇಲಕ್ಕೆದ್ದು ನೀರು ಹೊರಳಿ ದಡಗಳ ಮೇಲೆ ಹರಿಯುತ್ತದೆ. ಭಾರತದಲ್ಲಿ ಸಿಂಧು, ಚೀನದಲ್ಲಿ ಹಳದಿ, ಈಜಿಪ್ಟಿನಲ್ಲಿ ನೈಲ್, ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಮಿಸಿಸಿಪಿ ಈ ನದಿಗಳಲ್ಲಿ ಹೀಗೆ ನೀರು ದಡಗಳ ಮೇಲೆ ಉರುಳುತ್ತದೆ. ಪ್ರವಾಹದ ನೀರಿಗೆ ಎದುರಾಗಿ ನದೀಮುಖದಲ್ಲಿ ಎತ್ತರವಾದ ಅಲೆಗಳು ಎದುರಿಗೆ ಬಂದರೂ ಇದೇ ಪರಿಣಾಮವಾಗುತ್ತದೆ. ಪ್ರವಾಹ ನಿಯಂತ್ರಣದ ಕ್ರಮಗಳನ್ನು ಗೊತ್ತುಮಾಡುವುದಕ್ಕೆ ಮುಂಚೆ ಆ ನದಿಯ ಜಲಾನಯನ ಭೂಮಿಯಲ್ಲಿ ಅನೇಕ ವರ್ಷಗಳ ಅವಧಿಯಲ್ಲಿ ಬಿದ್ದ ಮಳೆ, ನದಿ, ಉಪನದಿಗಳಲ್ಲಿಯೂ ಹರಿದ ಪ್ರವಾಹದ ಅಳತೆ, ನದಿಯಲ್ಲಿ ಬರುವ ಗೋಡುಮಣ್ಣಿನ ಸ್ವಭಾವ, ನದೀಮುಖದಲ್ಲಿ ಅಲೆಗಳ ಎತ್ತರ ಮುಂತಾದ ಆಧಾರಾಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು.

ಪ್ರವಾಹಗಳನ್ನು ಎದುರಿಸುವುದರಲ್ಲಿ ಎರಡು ಮಾರ್ಗಗಳಿವೆ: 1 ಯುಕ್ತ ಅಣೆಕಟ್ಟೆಗಳನ್ನು ನಿರ್ಮಿಸಿ ಖಾಯಮ್ಮಾಗಿ ಪ್ರವಾಹ ನಿಯಂತ್ರಣ ಮಾಡುವುದು. ಇದು ಎಲ್ಲ ಕಡೆಗಳಲ್ಲಿಯೂ ಸಾಧ್ಯವಿಲ್ಲ. ಸಾಧ್ಯವಾಗುವಲ್ಲಿಯೂ ಬೇಗ ಆಗುವ ಕೆಲಸವಲ್ಲ. 2 ನದಿಯ ಬಯಲಿಗೆ ಅತಿಕ್ರಮ ಪ್ರವೇಶ ಮಾಡಿರುವ ಮಾನವನೇ ಪ್ರವಾಹದ ಸ್ವಭಾವವನ್ನು ಅರಿತು ಅದಕ್ಕೆ ಹೊಂದಿಕೊಳ್ಳುವುದು. ಒಂದೇ ಸಾರಿ ಪ್ರವಾಹ ನುಗ್ಗಬಹುದಾದ ವಿಶಾಲವಾದ ಬಯಲುಗಳನ್ನೆ ಬಿಟ್ಟು ಹಿಂದಕ್ಕೆ ಸರಿಯಬೇಕಾಗಿಯೂ ಇಲ್ಲ. ಮಾನವ ಒತ್ತುವರಿ ಮಾಡಿರುವುದರಿಂದ ಆಗಬಹುದಾದ ಅಪಾಯಗಳ ಕಡೆಗೆ ಲಕ್ಷ್ಯವಿದ್ದರೆ ಸಾಕು. ವಾಸ್ತವವಾಗಿ ಪ್ರವಾಹ ನುಗ್ಗುತ್ತಿರುವಾಗ ಮಾಡಬೇಕಾದ ರಕ್ಷಣೆ, ಪರಿಹಾರ ಮತ್ತು ಬಂದೋಬಸ್ತು ತಾತ್ಕಾಲಿಕ ಉಪಶಮನದ ದಾರಿಗಳು. ಪ್ರವಾಹದ ಮುನ್ಸೂಚನೆ, ನೊಂದವರಿಗೆ ಸೌಕರ್ಯಗಳು, ಪ್ರತ್ಯೇಕ ವಲಯಗಳ ನಿರ್ಮಾಣ ಇವು ಜಲಧರ್ಮಶಾಸ್ತ್ರಜ್ಞ, ಯೋಜನಾಶಾಖೆಯ ನೌಕರ, ಸಾಮಾಜಿಕ ಕಾರ್ಯಕರ್ತ, ಯಂತ್ರಶಿಲ್ಪಿ ಮುಂತಾದವರ ಸಹಕಾರವನ್ನು ಅಪೇಕ್ಷಿಸುತ್ತವೆ.

ಯಾವ ಸ್ಥಳದಲ್ಲಿ ಮನೆಗಳನ್ನು ಕಟ್ಟುವುದರಲ್ಲಿ ಪ್ರವಾಹದಿಂದ ಹೆಚ್ಚಿನ ಅಪಾಯವಿದೆಯೋ ಆ ಜಾಗವನ್ನು ಬೇಸಾಯಕ್ಕಾಗಿ ಉಪಯೋಗಿಸಬಹುದು. ಮನೆಗಳನ್ನು ಕಟ್ಟುವುದಕ್ಕೆ ಮುಂಚೆ ಮುನ್ನೆಚ್ಚರಿಕೆ ವಹಿಸಬೇಕು. ಮನೆಗಳನ್ನು ಕಟ್ಟಲೇಬೇಕಾದರೆ ಕೆಳಭಾಗವನ್ನು ಬಿಟ್ಟು ಕಾಂಕ್ರೀಟಿನ ಕಂಬಗಳ ಮೇಲೆ ವಾಸದಮನೆಗಳನ್ನು ನಿರ್ಮಿಸಬಹುದು. ತಗ್ಗಾದ ಪ್ರದೇಶಗಳಲ್ಲಿ ಕೊಳಗಳನ್ನು ಕಟ್ಟಿ ಗೋಮಾಳಗಳನ್ನು ಕಲ್ಪಿಸಬಹುದು.

ಜಲಶಾಸ್ತ್ರದ ಸಹಾಯದಿಂದ ಪೂರ್ವಭಾವಿಯಾಗಿ ಇಂಥ ಸ್ಥಳಗಳಿಗೆ ಅಪಾಯವಿರುವುದೆಂದು ಜನರು ಅರಿತರೆ ಸಕಾಲದಲ್ಲಿ ಆದಷ್ಟು ಬೇಗ ಅಲ್ಲಿಂದ ಹೊರ ಹೋಗಲು ಅನುಕೂಲವಾಗುತ್ತದೆ. ಈ ವಿಧವಾದ ಮುನ್ಸೂಚನೆಯನ್ನು ಮೊದಲಬಾರಿ 1854ರಲ್ಲಿ ಪ್ಯಾರಿಸ್ಸಿನ ಹತ್ತಿರ ಸೀನ್ ನದಿಯ ಬಯಲಿನಲ್ಲಿ ಮೂರು ದಿನಗಳಿಗೆ ಮುಂಚೆಯೇ ಕೊಟ್ಟರು. ಪ್ರವಾಹಕಾಲದಲ್ಲಿ ತಂತಿ ಮತ್ತು ದೂರವಾಣಿ ಕಂಬಗಳು ಉರುಳಿಹೋಗುತ್ತವೆ. ಆಗ ವರ್ತಮಾನವನ್ನು ಪ್ರಸರಿಸುವುದಕ್ಕೆ ರೇಡಿಯೊ ಒಂದೇ ನಂಬಿಕೆಯ ಮಾರ್ಗ. ಜಲಶಾಸ್ತ್ರಜ್ಞರು ಒಂದು ನದಿಯಲ್ಲಿ ಇಷ್ಟು ಸಲೆ-ಮೀಟರ್ ನೀರು ಬರಬಹುದೆಂದು ಹೇಳಬಲ್ಲರು. ಆ ನೀರು ಒಂದೊಂದು ಜಾಗದಲ್ಲಿಯೂ ಹೊಳೆಯಲ್ಲಿ ಎಷ್ಟು ಮೀಟರ್ ಎತ್ತರಕ್ಕೆ ಏರುವುದೆಂದು ಹೇಳುವುದು ಅಷ್ಟು ಸುಲಭವಲ್ಲ. ಕಳ್ಳ ಹೊಳೆಗಳಲ್ಲಂತೂ ಪ್ರವಾಹ ಬಲು ಬೇಗ ಏರುವುದರಿಂದ ಮುನ್ಸೂಚನೆ ಸಾಧ್ಯವೇ ಆಗಲಾರದು.

ಪ್ರವಾಹ ನಿಯಂತ್ರಣದಲ್ಲಿ ಸ್ಥೂಲವಾಗಿ ಎರಡು ಕ್ರಮಗಳಿವೆ. ಮೊದಲನೆಯದು ಪ್ರವಾಹದ ತೀಕ್ಷ್ಣತೆಯನ್ನು ಇಳಿಸದೆ ಬಂದ ಪ್ರವಾಹವೆಲ್ಲ ಹೊರಕ್ಕೆ ಹೋಗುವ ಹಾಗೆ ಅನುವು ಮಾಡುತ್ತಾರೆ. ಎರಡನೆಯದು ಮೇಲುಗಡೆ ಜಲಾಶಯದಲ್ಲಿ ನೀರನ್ನು ಶೇಖರಿಸಿ ಪ್ರವಾಹವನ್ನು ತಗ್ಗಿಸಿ ನದಿ ಪಾತ್ರದಲ್ಲಿ ಹೋಗುವ ಹಾಗೆ ಮಾಡುತ್ತಾರೆ. ನದಿಯ ಪಾತ್ರವನ್ನು ಕೊಂಚ ಅಗಲವಾಗಿ ಮಾಡಿ ಪ್ರವಾಹದ ತೀಕ್ಷ್ಣತೆಯನ್ನು ಕೊಂಚ ತಗ್ಗಿಸುವ ಮೂರನೆಯ ಕ್ರಮವನ್ನೂ ಅನುಸರಿಸಬಹುದು.

ಮೊದಲನೆಯ ವಿಧಾನದಲ್ಲಿ ನದಿಯ ಪಾತ್ರವನ್ನು ಅಗಲವಾಗಿಯೂ ಆಳವಾಗಿಯೂ ಮಾಡಿ ಇಲ್ಲವೆ ದಡಗಳಲ್ಲಿ ಮಣ್ಣಿನ ಏರಿಗಳನ್ನು ಕಟ್ಟಿ ಗರಿಷ್ಠ ಪ್ರವಾಹವನ್ನು ಒಯ್ಯುವಂತೆ ಮಾಡುತ್ತಾರೆ. ಹರಿಯುವ ನೀರಿನ ವೇಗವನ್ನು ಹೆಚ್ಚಿಸಿದರೆ ಪ್ರವಾಹದ ಆಳ ಕಡಿಮೆಯಾಗಿ ನೀರು ದಡದ ಬಯಲುಗಳ ಮೇಲೆ ದೂರವಾಗಿ ನುಗ್ಗುವುದಿಲ್ಲ. ಪ್ರವಾಹವೂ ಹೆಚ್ಚು ಕಾಲ ನದಿಯಲ್ಲಿ ನಿಲ್ಲುವುದಿಲ್ಲ, ಆಗಾಗ ಬಯಲುಗಳ ಮೇಲೆ ಉರುಳುವುದಿಲ್ಲ. ನದೀ ಪಾತ್ರ ಒರಟಾಗಿದ್ದಷ್ಟೂ ಹರಿಯುವ ನೀರು ಕಮ್ಮಿ. ಪ್ರವಾಹದ ಮೇಲ್ಮೈಯ ಓಟ ಹೆಚ್ಚಾದಷ್ಟೂ ಹೆಚ್ಚು ನೀರು ಹರಿಯುತ್ತದೆ. ಆದರೆ ಅನಿರೀಕ್ಷಿತವಾಗಿ ಬರುವ ಪ್ರವಾಹಗಳನ್ನೆಲ್ಲ ಈ ಕ್ರಮದಲ್ಲಿ ನದಿಯ ಪಾತ್ರದೊಳಗೆ ಬಿಡುವುದು ಸಾಧ್ಯವಿಲ್ಲ. ಎರಡನೆಯ ವಿಧಾನದಲ್ಲಿ ಯುಕ್ತವಾದ ಸ್ಥಳದಲ್ಲಿ ಒಂದು ಜಲಾಶಯವನ್ನು ನಿರ್ಮಾಣ ಮಾಡಿ ಪ್ರವಾಹದ ಒಂದು ಪಾಲನ್ನು ಅದರಲ್ಲಿ ಕೂಡಿಟ್ಟು ಉಳಿದುದ್ದನ್ನು ಅನುಕೂಲವಾದಾಗ ತೂಬುಗಳ ಮೂಲಕ ಬಿಡುತ್ತಾರೆ.

ಜಲಾನಯನ ಭೂಮಿಯ ಆಕಾರ : ಭೂಮಿಯ ಅಳತೆ, ಬೀಳುವ ಮಳೆ, ನೆಲದ ಮೇಲೆ ಹರಿಯುವ ನೀರು ಇವು ಒಂದೇ ಆಗಿದ್ದರೂ ಜಲಾನಯನ ಪ್ರದೇಶದ ಆಕಾರ ವ್ಯತ್ಯಾಸವಾದರೆ ಪ್ರವಾಹದ ಸಂಭವವೂ ವ್ಯತ್ಯಾಸವಾಗುತ್ತದೆ. ಮಡಚು ಬೀಸಣಿಗೆಯನ್ನು ತೆರೆದ ಹಾಗಿರುವ ಭೂಮಿಯಿಂದ ಉಪನದಿಗಳ ನೀರು ಜಲಾಶಯದ ಬಳಿಗೆ ಒಂದೇ ಕಾಲದಲ್ಲಿ ಬಂದು ಸೇರುವುದರಿಂದ ತೀವ್ರವಾದ ಪ್ರವಾಹ ಬರುತ್ತದೆ. ಹೀಗಲ್ಲದೆ ಉದ್ದ ಕಿರಿದಾಗಿರುವ ಭೂಮಿಯಿಂದ ಒಂದೊಂದು ಉಪನದಿಯ ಪ್ರವಾಹವೂ ಬೇರೆ ಬೇರೆ ಕಾಲದಲ್ಲಿ ಬಂದು ಉರುಳಿ ಹೋಗಿ, ಒಟ್ಟು ಬರುವ ನೀರಿನ ಗಾತ್ರ ಒಂದೇ ಆದರೂ ಒಂದೊಂದು ಪ್ರವಾಹವೂ ಅಷ್ಟು ತೀಕ್ಷ್ಣವಾಗಿರುವುದಿಲ್ಲ. ಸ್ವಾಭಾವಿಕವಾಗಿಯೇ ಸ್ವಲ್ಪಮಟ್ಟಿಗೆ ಪ್ರವಾಹ ನಿಯಂತ್ರಿತವಾಗುತ್ತದೆ. ತೆರೆದ ಬೀಸಣಿಗೆ ಆಕಾರದ ಜಲಾನಯನ ಭೂಮಿಯಲ್ಲಿ ಜಲಾಶಯವನ್ನು ಕಟ್ಟಿ ಪ್ರವಾಹವನ್ನು ನಿಯಂತ್ರಿಸಬೇಕಾಗುತ್ತದೆ.

ಏರಿಳಿತಗಳಿಂದ ರಕ್ಷಣೆ : ನದಿಯ ಎರಡು ದಡಗಳಲ್ಲಿಯೂ ಸುಮಾರಾಗಿ ಎತ್ತರವಾದ ಮಣ್ಣಿನ ಏರಿಗಳನ್ನು ಕಟ್ಟಿದರೆ ಪ್ರವಾಹ ಕಾಲದಲ್ಲಿ ನೀರು ಈ ಏರಿಗಳ ಮಧ್ಯೆ ನಿಂತು ತಗ್ಗಾದ ಬಯಲುಗಳಿಗೆ ನುಗ್ಗುವುದಿಲ್ಲ. ನದಿಗಳ ಕುದುರು ವಿಭಾಗದಲ್ಲಿ ಇದೊಂದು ಖಾತ್ರಿಯಾದ ಪ್ರವಾಹ ರಕ್ಷಣೆಯ ಕ್ರಮ. ಈ ಕ್ರಮದಲ್ಲಿ (ಅ) ಪ್ರವಾಹ ವೇಗವಾಗಿ ಹರಿದುಹೋಗುತ್ತದೆ. (ಆ) ನೀರಿನ ಮಟ್ಟ ಹೆಚ್ಚಾಗಿದ್ದು ಕೆಳಗಡೆ ಹೆಚ್ಚಿನ ಪ್ರವಾಹ ಮುಂದೆ ಸಾಗುತ್ತದೆ. (ಇ) ವೇಗ ಹೆಚ್ಚುವುದರಿಂದ ಹೊಳೆಯ ತಳದಲ್ಲಿರುವ ಮರಳು ಮತ್ತು ಮೆಕ್ಕಲು ಮಣ್ಣು ಕೆಳಕ್ಕೆ ಹೋಗುತ್ತವೆ. ಏರಿಗಳು ಇಲ್ಲದೇ ಇರುವ ಕಡೆ ನೀರು ತಗ್ಗಾದ ದಡಗಳ ಮೇಲೆ ಉರುಳಿ ಹಿಂದುಗಡೆ ಇರುವ ಗುಂಡಿಗಳನ್ನು ತುಂಬುತ್ತದೆ. (ಎಚ್.ಸಿ.ಕೆ.)

**ಪ್ರವಾಹ ಮೈದಾನ:** ನದಿಯಲ್ಲಿ ಹರಿಯುವ ನೀರಿನ ರಾಶಿ ಸಹಜ ಸ್ಥಿತಿಯನ್ನು ಮೀರಿದಾಗ ಅದು ಆಕ್ರಮಿಸುವ ಆಸುಪಾಸಿನ ಮಟ್ಟಸ ಪ್ರದೇಶ (ಫ್ಲಡ್ ಪ್ಲೇನ್). ನೆರೆ ಅಥವಾ ಮಹಾಪೂರವೆಂತಲೂ ಕರೆಯುವರು. ಇಕ್ಕಟ್ಟಾದ ನದೀಪಾತ್ರದಲ್ಲಿ ಅಥವಾ ನೀರು ಹರಿಯುವ ಎಂದಿನ ಜಾಡಿನಲ್ಲಿ ಅಧಿಕಗಾತ್ರದ ಪ್ರವಾಹ ಮುನ್ನುಗ್ಗಿ ಬಂದಾಗ ಅದನ್ನು ಒಮ್ಮೆಗೇ ಸಾಗಹಾಕಲು ಪಾತ್ರ ಸಾಕಾಗದು. ಆಗ ನೆರೆ ನೀರು ನದಿ ಪಾತ್ರ ತುಂಬಿ ದಂಡೆಗಳಾಚೆ ವ್ಯಾಪಿಸಿ ಏರುತ್ತದೆ. ಇದರೊಂದಿಗೆ ಪ್ರವಾಹದ ವೇಗ ಇಳಿಯುತ್ತದೆ. ಆದರೆ ಸಾಕಷ್ಟು ಕಾಲ ನೆರೆ ನೀರು ಹೆಚ್ಚುಕಡಿಮೆ ಸ್ಥಗಿತವಾಗಿ ಪ್ರವಾಹ ಮೈದಾನದ ಮೇಲೆ ನಿಂತಿರುತ್ತದೆ. ಬೆಟ್ಟಗುಡ್ಡಗಳ ಕಣಿವೆ ಕಮರಿಗಳ ಬಳಸುದಾರಿಗಳ ಮೂಲಕ ಧಾವಿಸಿಬರುವ ನೀರು ತನ್ನೊಡನೆ ಕೊಚ್ಚಿತಂದ ಬಗ್ಗಡ ಕಸ ಗಸಿ ಮಣ್ಣು ಮುಂತಾದವುಗಳ ಸಮ್ಮಿಶ್ರಣ ಅಲ್ಲೆ ತಳದಲ್ಲಿ ಸಂಚಯವಾಗುತ್ತದೆ. ಇದೇ ಮೆಕ್ಕಲುಮಣ್ಣು. ಕ್ರಮೇಣ ನೀರು ಹರಿದು ಹೋಗಿ ನೆರೆ ಇಳಿದಾಗ ಮೆಕ್ಕಲು ಮಣ್ಣು ಪ್ರವಾಹ ಮೈದಾನದಲ್ಲಿ ಉಳಿಯುತ್ತದೆ. ಹೀಗಾಗಿ ಪ್ರವಾಹ ಮೈದಾನಗಳು ಅತ್ಯಂತ ಫಲವತ್ತ್ರದೇಶಗಳಾಗಿ ಪರಿಣಮಿಸುತ್ತವೆ. ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದ ತನಕ ನಾಗರಿಕತೆಗಳ ತೂಗುತೊಟ್ಟಿಲುಗಳಾಗಿರುವುದೂ ಕಂಡುಬಂದಿದೆ. ಪ್ರವಾಹ ಮೈದಾನದಲ್ಲಿ ಮೆಕ್ಕಲುಮಣ್ಣಿನ ಪದರದ ದಪ್ಪ ಶತಮಾನಗಳ ಅವಧಿಗಳಲ್ಲಿ ಗುರುತಿಸಬಹುದಾದ ದರದಲ್ಲಿ ಕ್ರಮೇಣ ಬೆಳೆಯುತ್ತದೆ. ಇದು ಜೇಡಿ, ರೇವೆ, ಜೇಡಿಮರಳು, ಮರಳು, ಒರಟು ಮಡ್ಡಿ ಮತ್ತು ಸೂಕ್ಷ್ಮ ಶಿಲಾಕಣ ಮುಂತಾದ ಸ್ತರಗಳಿಂದ ಕೂಡಿರುತ್ತದೆ.

ಮೈದಾನದ ಮೇಲ್ಮೈ ಜೇಡಿ ಮತ್ತು ಜೇಡಿಮಿಶ್ರಿತ ಮರಳು ಮಣ್ಣಿನಿಂದ ಕೂಡಿರುತ್ತದೆ.




ಪ್ರವಾಹ ಮೈದಾನ, ಇತರ ಸ್ವರೂಪಗಳು

ಭಾರವೂ ಮತ್ತು ಒರಟಾದ ದ್ರವ್ಯಗಳು ನದಿಗೆ ಸಮೀಪದಲ್ಲಿ ಹಾಗೂ ಸೂಕ್ಷ್ಮವೂ ಮತ್ತು ಹಗುರವಾದವು ಪ್ರವಾಹದಲ್ಲಿ ಕೊಚ್ಚಿಹೋಗಿ ದೂರದಲ್ಲಿ ಸಂಚಯವಾಗಿರುತ್ತವೆ. ನದಿಯ ಕಾರ್ಯಾಚರಣೆಯಿಂದಾಗಿ ಪ್ರವಾಹ ಮೈದಾನದಲ್ಲಿ ಸ್ವಾಭಾವಿಕ ದಡಕಟ್ಟೆ, ಮರಳು ದಿಬ್ಬ, ಶೃಂಗಸರೋವರ ಮುಂತಾದ ಸ್ವರೂಪಗಳು ಸೃಷ್ಟಿಯಾಗುತ್ತವೆ ಅಥವಾ ಲಯಕೊಳಗಾಗಬಹುದು. ನದಿಯಸವೆತ ಕಾರ್ಯದಿಂದ ಪ್ರವಾಹ ಮೈದಾನದ ಕೆಲವೆಡೆ ತಗ್ಗುಗಳುಂಟಾದರೆ ಇನ್ನೊಂದೆಡೆ ಸಂಚಯದಿಂದ ದಿಬ್ಬಗಳು ಸೃಷ್ಟಿಯಾಗುತ್ತವೆ. ಹೀಗೆ ಸೃಷ್ಟಿ, ಲಯ ಮತ್ತು ಪುನನಿರ್ಮಾಣ ಪ್ರಕ್ರಿಯೆಗಳು ಸಾಗುತ್ತಾ ಪ್ರವಾಹ ಮೈದಾನಗಳು ರೂಪಾಂತರವಾಗುವ ಸಾಧ್ಯತೆಗಳಿವೆ. ಪ್ರವಾಹಮೈದಾನಗಳ ಸೃಷ್ಟಿ ವಿಸ್ತಾರ ಹಾಗೂ ರೂಪಾಂತರತೆಗಳು ಮಳೆಯ ಪ್ರಮಾಣ, ಉಪನದಿಗಳ ಸಂಖ್ಯೆ, ಜಲಾನಯನ ಪ್ರದೇಶ, ಇಳಿಜಾರು, ನದಿಭಾರವಸ್ತು ಹಾಗೂ ಸಸ್ಯವರ್ಗಗಳನ್ನಾಧರಿಸಿದೆ.

ಭಾರತದ ಗಂಗಾನದಿ ಬಯಲಿನಲ್ಲಿ ಪ್ರವಾಹ ಮೈದಾನಗಳಿವೆ. ವಿಶಾಲವಾದುದು ಉತ್ತರ ಪ್ರದೇಶದಲ್ಲಿದೆ. ಘಾಗ್ರ ಮತ್ತು ರಾಮಗಂಗಾ ಉಪನದಿಗಳು ಈ ವಿಶಾಲವಾದ ಪ್ರವಾಹ ಮೈದಾನಗಳಿಗೆ ಕಾರಣವಾಗಿವೆ. ಅದೇ ರೀತಿ ಬಿಹಾರ ಮತ್ತು ಜಾರ್ಖಂಡ್ ಹಾಗೂ ಮುಖಜ ಭೂಮಿಯಲ್ಲೂ ಪ್ರವಾಹ ಮೈದಾನಗಳು ನಿರ್ಮಾಣವಾಗಿದ್ದು, ಅವು ವಿಶಾಲ ಮತ್ತು ಫಲವತ್ತಾಗಿವೆ. ಈ ಮೈದಾನಗಳ ಮೆಕ್ಕಲು ಸಾಕಷ್ಟು ಮಂದವಾಗಿದೆ. (ಎ.ಎಸ್.ಎಸ್.ಐ.)

**ಪ್ರಸರಣ ಸಿದ್ಧಾಂತ:** ಸಾಂಸ್ಕೃತಿಕ ಅಂಶಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಿಯುವ ಪ್ರತಿಕ್ರಿಯೆಗೆ ಪ್ರಸರಣಕ್ರಿಯೆ ಎನ್ನುವರು. ಅನಾಗರಿಕರಲ್ಲಿಯೇ ಆಗಲಿ, ಆಧುನಿಕರಲ್ಲಿಯೇ ಆಗಲಿ ಈ ಕ್ರಿಯೆ ಅನಿವಾರ್ಯ. ಇದು ಸಂಸ್ಕೃತಿಯ ಮೂಲ ಕ್ರಿಯೆಗಳಲ್ಲಿ ಒಂದು. ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಇದು ಆಗಿಬಿಡುತ್ತದೆ. ಇದು ಒತ್ತಡ ಅಥವಾ ಆತ್ಮೀಯತೆಯಿಂದಲೂ ಆಗಬಹುದು. ಇದು ಯಾವ ನಿಯಮಗಳ ಮೇಲೆ ನಡೆಯುತ್ತದೆ ಎಂಬುದನ್ನು ತಿಳಿಸುವುದೆ ಪ್ರಸರಣ ಸಿದ್ಧಾಂತದ (ಡಿಫ್ಯೂಷನ್ ತಿಯರಿ) ಉದ್ದೇಶ. ಈ ಸಿದ್ಧಾಂತದ ಮೊದಲ ಪ್ರತಿಪಾದಕರು

ಮಾನವಶಾಸ್ತ್ರಜ್ಞರು. ಇವರಲ್ಲಿ ಎರಡು ಗುಂಪುಗಳಿವೆ. ಒಂದು, ಜರ್ಮನ್–ಆಸ್ಟ್ರಿಯನ್ ಪಂಥ. ಮತ್ತೊಂದು ಬ್ರಿಟಿಷ್ ಮಾನವಶಾಸ್ತ್ರಜ್ಞರ ಪಂಥ. ಮೊದಲ ಪಂಥದವರು ಪ್ರಸರಣವನ್ನು ಹಲವು ಮೂಲಗಳಿಂದ ಇತರ ಕಡೆಗಳಿಗೆ ಎಂದು ಹೇಳಿದರೆ ಎರಡನೆಯ ಪಂಥದವರು ಏಕಮೂಲವಾದ ಸಂಸ್ಕೃತಿಯಿಂದ ಅದರ ಅನಂತ ಪ್ರಸರಣ ಎಂದು ಪ್ರತಿಪಾದಿಸಿದರು. ಪ್ರಸರಣಕ್ರಿಯೆ ಸ್ವದೇಶೀಯ ಹಾಗೂ ಅನ್ಯದೇಶೀಯ ಎಂಬ ಎರಡು ರೀತಿಯಲ್ಲಿ ನಡೆಯುತ್ತದೆ. ಸ್ವದೇಶೀಯವಾದುದು ತನ್ನ ಸಂಸ್ಕೃತಿಯೊಳಗಿಂದ ಹೊಸ ಅಥವಾ ಒಂದು ಕಾಲದಲ್ಲಿ ಇದ್ದ ಅಂಶಗಳನ್ನು ಮತ್ತೆ ಪಡೆಯುತ್ತದೆ. ಇದಕ್ಕೆ ಆ ದೇಶದಲ್ಲಿ ಆಗುವ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳೇ ಕಾರಣ. ಅನ್ಯದೇಶೀಯ ಪ್ರಸರಣಕ್ರಿಯೆ, ವಲಸೆ, ಧರ್ಮಪ್ರಚಾರ, ವ್ಯಾಪಾರ, ದಾಳಿ, ಕ್ರಾಂತಿ ವಸಾಹತುಶಾಹಿಯ ಒತ್ತಡ ಮುಂತಾದವುಗಳಿಂದ ಆಗುತ್ತದೆ. ಭಾರತದಲ್ಲಿ ಇತ್ತೀಚಿನ ಎರಡು ಶತಮಾನಗಳಿಂದ ಆಗಿರುವ ಅನ್ಯದೇಶಿಯ ಸಂಸ್ಕೃತಿಯ ಪ್ರಭಾವ ಬ್ರಿಟಿಷ್ ವಸಾಹತುಶಾಹಿಯ ಒತ್ತಡದಿಂದ ಆದದ್ದು. ಅನುಕರಣಪ್ರಿಯತೆಯೂ ಸಾಂಸ್ಕೃತಿಕ ಕೇಂದ್ರವೊಂದರಿಂದ ಅಭಿವೃದ್ಧಿ ಹೊಂದುತ್ತಿರುವ ಇವರ ಸಂಸ್ಕೃತಿಗಳು ಹೊಸ ಬಗೆಯ ಸಾಂಸ್ಕೃತಿಕ ಅಂಶಗಳನ್ನು ಸ್ವೀಕಾರ ಮಾಡುವುದುಂಟು. ಈ ಸ್ವೀಕಾರ ವಿಜ್ಞಾನ ವಿಷಯವಾಗಿರಬಹುದು ಅಥವಾ ಸಾಮಾಜಿಕ ವಿಷಯವಾಗಿರಬಹುದು.

ಭೂಗೋಳವಿಜ್ಞಾನಿಗಳು ಸಾಂಸ್ಕೃತಿಕ ಅಂಶಗಳು ಪ್ರಾದೇಶಿಕವಾಗಿ ಹೇಗೆ ಪ್ರಸರಣಗೊಳ್ಳುತ್ತವೆ ಎಂಬುದರ ಬಗ್ಗೆ ಆಸಕ್ತಿವಹಿಸಿ ಅಧ್ಯಯನ ಮಾಡುತ್ತಾರೆ. ಈ ದಿಕ್ಕಿನಲ್ಲಿ ಸ್ವೀಡನ್ನಿನ ಭೂಗೋಳ ವಿಜ್ಞಾನಿಯಾದ ಹ್ಯಾಗರ್‌ಸ್ಟ್ರಾಂಡ್ ಅವರ ಕಾರ್ಯ ಮಹತ್ತರವಾದದ್ದು. ಇವರು ಯಾವುದೇ ಸಾಂಸ್ಕೃತಿಕ ಅಂಶ ಪ್ರಾದೇಶಿಕವಾಗಿ ಪ್ರಸರಣಗೊಳ್ಳುವ ಬಗ್ಗೆ ಕೂಲಂಕಷವಾದ ಅಧ್ಯಯನ ಮಾಡಿ, ಪ್ರಾದೇಶಿಕ ಪ್ರಸರಣ ಸಿದ್ಧಾಂತ ಎಂಬ ಒಂದು ಹೊಸ ಸಿದ್ಧಾಂತವನ್ನು ರೂಪಿಸಿ ಭೂಗೋಳಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. (ಎಚ್.ಎಸ್.ಆರ್.ಜಿ.)

**ಪ್ರಸ್ಥಭೂಮಿಗಳು:** ಸಾಪೇಕ್ಷವಾಗಿ ಸಮತಟ್ಟಾದ ಮೇಲ್ಮೈ ಮತ್ತು ಕಡಿದಾದ ಬದಿಗಳನ್ನು ಹೊಂದಿರುವ ಹೆಚ್ಚು ಎತ್ತರವಾದ ವಿಸ್ತೃತ ಭೂಭಾಗ. ಇದು ಸಾಮಾನ್ಯವಾಗಿ 150 ರಿಂದ 925 ಮೀ ಎತ್ತರವಾಗಿರುತ್ತದೆ. ಆದರೆ ಟಿಬೆಟ್ ಮತ್ತು ಬೊಲೀವಿಯ ಪ್ರಸ್ಥಭೂಮಿಗಳು 3000 ಮೀ ಹೆಚ್ಚು ಎತ್ತರವಾಗಿವೆ. ಹೀಗೆ ಪ್ರಸ್ಥಭೂಮಿಯ ಎತ್ತರ ಸುತ್ತಲಿನ ಪ್ರದೇಶದ ಎತ್ತರವನ್ನು ಅವಲಂಬಿಸಿದೆ. ಪರ್ವತಗಳ ಮಧ್ಯದಲ್ಲಿರುವ ಪ್ರಸ್ಥಭೂಮಿಗಳ ಎತ್ತರ ಕಡಿಮೆಯಾಗಿರುತ್ತದೆ.

ಪ್ರಸ್ಥಭೂಮಿ ವಿಧಗಳು: ಪ್ರಸ್ಥಭೂಮಿಗಳನ್ನು ಸ್ಥಾನ, ನಿರ್ಮಾಣ,ಆಕಾರ ವಾಯುಗುಣ ಮತ್ತು ವಿಕಾಸದ ಹಂತಗಳ ಆಧಾರದ ಮೇಲಿಂದ ವಿಂಗಡಿಸಬಹುದು.

ಪ್ರಸ್ಥಭೂಮಿಗಳನ್ನು ಸ್ಥಾನದ ಆಧಾರದ ಮೇಲಿಂದ ಅಂತರ್ ಪರ್ವತ ಪ್ರಸ್ಥಭೂಮಿ, ಪರ್ವತ ಪ್ರಸ್ಥಭೂಮಿ ಮತ್ತು ಖಂಡಾಂತರ ಪ್ರಸ್ಥಭೂಮಿಗಳೆಂದು ಮೂರು ವಿಧಗಳಾಗಿ ವಿಂಗಡಿಸಬಹುದು. ಅಂತರ್ ಪರ್ವತ ಪ್ರಸ್ಥಭೂಮಿ (ಇಂಟರ್‌ಮಾನ್‌ಟೇನ್ ಪ್ಲಾಟೋಸ್) ಪರ್ವತ ಶ್ರೇಣಿಗಳ ಮಧ್ಯದಲ್ಲಿರುತ್ತದೆ. ಪ್ರಪಂಚದ ಅತ್ಯಂತ ಎತ್ತರ ಮತ್ತು ವಿಸ್ತಾರವಾದ ಪ್ರಸ್ಥಭೂಮಿಗಳು ಈ ವರ್ಗಕ್ಕೆ ಸೇರುತ್ತವೆ. ದಕ್ಷಿಣದಲ್ಲಿ ಹಿಮಾಲಯ ಮತ್ತು ಉತ್ತರದಲ್ಲಿ ಕುನ್ಲುನ್ ಪರ್ವತ ಶ್ರೇಣಿಗಳ ಮಧ್ಯದಲ್ಲಿರುವ ಟಿಬೆಟ್ ಪ್ರಸ್ಥಭೂಮಿ ಪ್ರಪಂಚದಲ್ಲೇ ಅತ್ಯಂತ ಎತ್ತರವಾದ (ಸರಾಸರಿ 5000 ಮೀ) ಮತ್ತು ವಿಸ್ತಾರವಾದ (2.2 ದಶಲಕ್ಷ ಚ.ಕಿಮೀ) ಪ್ರಸ್ಥಭೂಮಿಯಾಗಿದ್ದು ಪ್ರಪಂಚದ ಮೇಲ್ಛಾವಣಿ (ರೂಫ್ ಆಫ್ ದ ವರ್ಲ್ಡ್) ಎಂದು ಕರೆಯಲ್ಪಡುತ್ತದೆ. ಅದರಂತೆ ಬೊಲಿವಿಯ ಪ್ರಸ್ಥಭೂಮಿ ದಕ್ಷಿಣ ಅಮೆರಿಕದಲ್ಲಿ ಪೂರ್ವ ಮತ್ತು ಪಶ್ಚಿಮ ಆಂಡೀಸ್ ಪರ್ವತ ಶ್ರೇಣಿಗಳ ಮಧ್ಯದಲ್ಲಿದೆ. ಕೊಲಂಬಿಯ, ಅನಾಟೋಲಿಯ, ಆರ್ಮೇನಿಯ, ಮಂಗೋಲಿಯ ಮೊದಲಾದವು ಈ ವಿಧದ ಪ್ರಸ್ಥಭೂಮಿಗಳು.

ಪರ್ವತದ ಅಡಿ ಭಾಗದಲ್ಲಿ ಪರ್ವತ ಮತ್ತು ಮೈದಾನಗಳ ನಡುವಣ ಅಥವಾ ಪರ್ವತ ಮತ್ತು ಸಮುದ್ರಗಳ ನಡುವಣ ಪ್ರಸ್ಥಭೂಮಿಯನ್ನು ಪರ್ವತಪಾದ ಪ್ರಸ್ಥಭೂಮಿ (ಪಿಡಮಾಂಟ್ ಪ್ಲೇಟೊ) ಎಂದು ಕರೆಯುವರು. ಉತ್ತರ ಅಮೆರಿಕದಲ್ಲಿನ ಕೊಲರಾಡೊ ಮತ್ತು ದಕ್ಷಿಣ ಅಮೆರಿಕದಲ್ಲಿನ ಪೆಟಗೋನಿಯ ಪ್ರಸ್ಥಭೂಮಿಗಳು ಪರ್ವತಪಾದ ಪ್ರಸ್ಥಭೂಮಿಗಳ ಉತ್ತಮ ಉದಾಹರಣೆಗಳಾಗಿವೆ.

ಆಂತರಿಕ ಶಕ್ತಿಗಳ ಮೂಲಕ ಮೈದಾನಗಳಲ್ಲಿ ಒಮ್ಮೆಲೆ ಮೇಲೆದ್ದ ಎತ್ತರವಾದ ಚಪ್ಪಟೆ ಮೇಲ್ಮೈಯುಳ್ಳ ವಿಸ್ತಾರವಾದ ಭೂಭಾಗವನ್ನು ಖಂಡಾಂತರ ಪ್ರಸ್ಥಭೂಮಿ (ಕಾಂಟಿನೆಂಟಲ್ ಪ್ಲಾಟೊ) ಎಂದು ಕರೆಯುವರು. ಆಫ್ರಿಕ ಅರಬಸ್ತಾನ್, ಸ್ಪೇನ್, ಆಸ್ಟ್ರೇಲಿಯ, ದಕ್ಷಿಣ ಭಾರತ, ಗ್ರೀನ್ಲೆಂಡ್ ಮತ್ತು ಅಂಟಾರ್ಕಟಿಕ ಪ್ರಸ್ಥಭೂಮಿಗಳು ಈ ವರ್ಗಕ್ಕೆ ಸೇರುತ್ತವೆ. ಈ ಪ್ರಸ್ಥಭೂಮಿಗಳ ಅಂಚುಗಳಲ್ಲಿ ಪರ್ವತಗಳು ಕಂಡುಬರುವುದಿಲ್ಲ. ಇವು ಪ್ರಪಂಚದ ಅತ್ಯಂತ ವಿಸ್ತಾರವಾದ ಪ್ರಸ್ಥಭೂಮಿಗಳಾಗಿವೆ.

ಪ್ರಸ್ಥಭೂಮಿಗಳನ್ನು ಉಗಮದ ಆಧಾರದ ಮೇಲೆ ಭೂಗರ್ಭ ಶಕ್ತಿಗಳಿಂದ ನಿರ್ಮಿತ ಪ್ರಸ್ಥಭೂಮಿ, ಅವಶೇಷ ಪ್ರಸ್ಥಭೂಮಿ ಮತ್ತು ಜ್ವಾಲಾಮುಖಿ ಪ್ರಸ್ಥಭೂಮಿಗಳೆಂದು ಮೂರು ಬಗೆಯಾಗಿ ವಿಂಗಡಿಸಬಹುದು. ಭೂಖಂಡ ಪ್ರಸ್ಥಭೂಮಿ, ಸ್ತೂಪಖಂಡ ಪ್ರಸ್ಥಭೂಮಿ ಹಾಗೂ ಓರೆಭೂಭಾಗ ಮತ್ತು ಮಡಿಕೆ ಪರ್ವತ ಶ್ರೇಣಿಗಳ ನಡುವಣ ಅಂತರ ಪರ್ವತ ಪ್ರಸ್ಥಭೂಮಿಗಳು ಭೂಗರ್ಭ ಶಕ್ತಿಗಳಿಂದ ನಿರ್ಮಿತ ಪ್ರಸ್ಥಭೂಮಿಗಳಾಗಿರುತ್ತವೆ. ಪ್ರಾಚೀನ ಮಡಿಕೆ ಪರ್ವತಗಳು ಅಥವಾ ಉಚ್ಚ ಭೂಮಿಗಳು, ನದಿ, ಹಿಮನದಿ, ಗಾಳಿ ಮೊದಲಾದ ನಗ್ನೀಕರಣ ಶಕ್ತಿಗಳಿಂದ ಸವೆದು ನಿರ್ಮಾಣವಾದ ಪ್ರಸ್ಥಭೂಮಿಗಳನ್ನು ಅವಶೇಷ ಪ್ರಸ್ಥಭೂಮಿಗಳೆಂದು ಕರೆಯುವರು. ಅರ್ಡೆನ್ನೆಸ್, ಮಧ್ಯ ರೈನ್ ಉಚ್ಚಭೂಮಿ, ಅಲೆಘನಿ ಕಂಬರ್ಲ್ಯಾಂಡ್ ಮೊದಲಾದವು ಈ ವರ್ಗದ ಪ್ರಸ್ಥಭೂಮಿಗಳಾಗಿವೆ. ಜ್ವಾಲಾಮುಖಿಯ ಸುತ್ತಲೂ ಹರಡಿದ ಶಿಲಾರಸ ಘನೀಭವಿಸಿ ನಿರ್ಮಾಣವಾದ ಪ್ರಸ್ಥಭೂಮಿಯನ್ನು ಜ್ವಾಲಾಮುಖಿ ಪ್ರಸ್ಥಭೂಮಿ ಎಂದು ಕರೆಯುವರು. ಆಂಟ್ರಿಮ್, ಅಬಿಸಿನಿಯ, ಕೊಲಂಬಿಯ, ವಾಯವ್ಯ ದಖನ್, ಐಸ್‌ಲೆಂಡ್, ಮೊದಲಾದವು ಈ ವಿಧದ ಪ್ರಸ್ಥಭೂಮಿಗಳಾಗಿವೆ. ಇವು ಅನೇಕ ಶಿಲಾರಸ ಪ್ರವಾಹಗಳಿಂದ ನಿರ್ಮಾಣವಾಗಿದ್ದು ಸಾವಿರಾರು ಚದರ ಕಿಲೊಮೀಟರು ವಿಸ್ತಾರವಾಗಿರುತ್ತವೆ.

ಪ್ರಸ್ಥಭೂಮಿಗಳನ್ನು ಆಕಾರದ ಆಧಾರದ ಮೇಲೆ ಗುಮ್ಮಟಾಕಾರದ ಪ್ರಸ್ಥಭೂಮಿ (ಛೋಟಾನಾಗಪುರ, ಓಜಾರ್ಕ್), ವಿಚ್ಛಿನ್ನ ಪ್ರಸ್ಥಭೂಮಿ (ಅಸ್ಸಾಂ) ಸೋಪಾನ ಪ್ರಸ್ಥಭೂಮಿ (ವಿಂಧ್ಯ) ಮತ್ತು ಚಪ್ಪಟೆ ಪ್ರಸ್ಥಭೂಮಿ (ಟಿಬೆಟ್)ಗಳೆಂದು ವಿಂಗಡಿಸಬಹುದು.

ವಾಯುಗುಣದ ಆಧಾರದ ಮೇಲೆ ಪ್ರಸ್ಥಭೂಮಿಗಳನ್ನು ಶುಷ್ಕ ಪ್ರಸ್ಥಭೂಮಿ(ಕೊಲರಾಡೊ ತರಿಮ್)ಆರ್ದ್ರ ಪ್ರಸ್ಥಭೂಮಿ (ಮೇಘಾಲಯ) ಮತ್ತು ಹಿಮಾಚ್ಛಾದಿತ ಪ್ರಸ್ಥಭೂಮಿ (ಗ್ರೀನ್‌ಲೆಂಡ್, ಅಂಟಾರ್ಕ್‌ಟಿಕ) ಗಳೆಂದು ಮೂರು ವಿಧಗಳಾಗಿ ವಿಂಗಡಿಸಬಹುದು.

ಪ್ರಸ್ಥಭೂಮಿಗಳನ್ನು ವಿಕಾಸದ ಹಂತದ ಆಧಾರದ ಮೇಲೆ ಬಾಲ್ಯ ಪ್ರಸ್ಥಭೂಮಿ (ಕೊಲರಾಡೊ), ಪ್ರೌಢ ಪ್ರಸ್ಥಭೂಮಿ (ಅಪಲೇಷಿಯನ್), ವೃದ್ಧ ಪ್ರಸ್ಥಭೂಮಿ (ರಾಂಚಿ) ಮತ್ತು ಪುನರ್ಯೌವನ ಹೊಂದಿದ ಪ್ರಸ್ಥಭೂಮಿಗಳೆಂದು (ಮಿಸ್ಸೂರಿ) ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

ಪ್ರಸ್ಥಭೂಮಿಗಳ ಮಹತ್ವ: ಪ್ರಸ್ಥಭೂಮಿಗಳು ವಿಶೇಷವಾಗಿ ಅಗ್ನಿಶಿಲೆ ಮತ್ತು ರೂಪಾಂತರ ಶಿಲೆಗಳಿಂದ ನಿರ್ಮಿತವಾಗಿರುವುದರಿಂದ ಖನಿಜ ನಿಕ್ಷೇಪಗಳನ್ನು ಹೊಂದಿರುತ್ತವೆ. ಆದ್ದರಿಂದ ಪ್ರಸ್ಥಭೂಮಿಗಳನ್ನು ಖನಿಜಗಳ ಆಗರಗಳೆಂದು ಕರೆಯುವರು. ಛೋಟಾನಾಗಪುರ, ಬೊಲಿವಿಯ, ಆಸ್ಟ್ರೇಲಿಯ, ಬ್ರೆಜಿಲ್, ದಕ್ಷಿಣ ಆಫ್ರಿಕ ಮೊದಲಾದ ಪ್ರಸ್ಥಭೂಮಿಗಳು ಖನಿಜಗಳ ಉತ್ಪಾದನೆಗಾಗಿ ಪ್ರಸಿದ್ಧಿ ಹೊಂದಿವೆ. ಅಲ್ಲಿ ಜಲವಿದ್ಯುಚ್ಛಕ್ತಿ ವಿಕಸಿತವಾಗಿರುತ್ತದೆ. ಆದ್ದರಿಂದ ಪ್ರಪಂಚದ ಅನೇಕ ಪ್ರಸ್ಥಭೂಮಿಗಳಲ್ಲಿ ವಿವಿಧ ಕೈಗಾರಿಕೆಗಳು ಕಂಡುಬರುತ್ತವೆ. ಆರ್ದ್ರ ಪ್ರಸ್ಥಭೂಮಿಗಳಲ್ಲಿ ದಟ್ಟವಾದ ಅರಣ್ಯಗಳಿರುತ್ತವೆ. ಆದ್ದರಿಂದ ಅಲ್ಲಿ ಅರಣ್ಯಾಧಾರಿತ ಕೈಗಾರಿಕೆಗಳು ಮತ್ತು ಅರಣ್ಯೋತ್ಪತ್ತಿಗಳನ್ನು ಸಂಗ್ರಹಿಸುವ ಕಾರ್ಯಗಳು ಪ್ರಮುಖವಾಗಿರುತ್ತವೆ. ಶುಷ್ಕ ಪ್ರಸ್ಥಭೂಮಿಗಳು ಹುಲ್ಲುಗಾವಲುಗಳನ್ನು ಒಳಗೊಂಡಿರುವುದರಿಂದ ಅಲ್ಲಿ ಪಶುಸಂಗೋಪನೆ ಮುಖ್ಯ ವೃತ್ತಿಯಾಗಿರುತ್ತದೆ, ಅಗ್ನಿಶಿಲೆಗಳಿಂದುಂಟಾದ ಪ್ರಸ್ಥಭೂಮಿಗಳಲ್ಲಿನ ಮಣ್ಣು ಖನಿಜಾಂಶಭರಿತವಾಗಿರುವುದರಿಂದ ಕೃಷಿಗೆ ಬಹು ಉಪಯುಕ್ತವಾಗಿರುತ್ತದೆ. ಕಪ್ಪುಮಣ್ಣಿನಿಂದ ಕೂಡಿದ ಭಾರತದ ವಾಯವ್ಯ ದಖನ್ ಪ್ರದೇಶ ಹತ್ತಿ ಬೆಳೆಗೆ ಪ್ರಸಿದ್ಧವಾಗಿದೆ. (ಎಸ್.ಎಸ್.ಎನ್.)

**ಪ್ರಾಂತೀಯತೆ:** ಪ್ರಾಂತೀಯತೆ ಅಥವಾ ಗಡಿ/ಎಲ್ಲೆಗಳೊಳಗಿನ ಭೂಭಾಗ. ಇದು ನನಗೆ/ ನಮಗೆ ಸೇರಿದ ಭಾಗ ಎನ್ನುವುದು ಮಾನವನಿಗೆ ಮತ್ತು ಸಕಲ ಜೀವ ಜಂತುಗಳಿಗೆ ಹುಟ್ಟಿನಿಂದ ಬರುವ ಒಂದು ಅನಿವಾರ್ಯ ಗುಣವೆಂದು ವಿದ್ವಾಂಸರು ಹೇಳಿದ್ದಾರೆ. ಇದು ಸತ್ಯವಾದ ಅಂಶವಾದರೂ ಮಾನವನಲ್ಲಿ ಅವನ ಸಂಸ್ಕೃತಿ, ನಾಗರಿಕತೆ, ಜೀವನ ಶೈಲಿ ಇತ್ಯಾದಿ ಗುಣಗಳಿಂದ ಪ್ರಾಂತ/ದೇಶ/ರಾಷ್ಟ್ರಗಳ ನಿರ್ಮಾಣ, ವಿಸ್ತರಣೆ ಹಾಗೂ ಅದರ ಗಾತ್ರ ವ್ಯತ್ಯಾಸವಾಗುತ್ತದೆ.

ರಾಬರ್ಟ್ ಆಂಡ್ರೆಯ ಪ್ರಕಾರ ಪ್ರಾಂತ್ಯವೆನ್ನವುದು ನೆಲ ಅಥವಾ ಜಲ ಹಾಗೂ ವಾಯುಮಂಡಲದ ಒಂದು ಭಾಗವಾಗಿದ್ದು ಅದನ್ನ ಒಂದು ಪ್ರಾಣಿ ಅಥವಾ ಪ್ರಾಣಿಗಳ ಗುಂಪು ತನ್ನ ಭಾಗವೆಂದು ರಕ್ಷಿಸುವ ಭಾಗವಾಗಿದೆ. ಮಾನವನಲ್ಲಿ ಅದು ಬರೀ ಸಹಜ ಪ್ರವೃತ್ತಿಯಾಗಿರದೇ ರಾಜಕೀಯ ಹಾಗೂ ಸಾಂಸ್ಕೃತಿಕ ವಿಕಾಸಗಳಿಂದ ತನ್ನದೇ ಆದ ಹೊಂದಾಣಿಕೆ ಮತ್ತು ರಚನಾತ್ಮಕ ಗುಣಲಕ್ಷಣ, ವಿಸ್ತಾರಗಳನ್ನು ಹೊಂದಿರುತ್ತದೆ. ಡೆಬ್ಲಿಜಿಯವರು ಇದನ್ನೇ ವಿಸ್ತರಿಸುತ್ತಾ ಇದು ಮಾನವರಿಂದ ನಿರ್ಮಿಸಲ್ಪಟ್ಟ ಜೀವಿತ ಭಾಗ ಎಲ್ಲೆಯನ್ನು ಹೊಂದಿ ವಿಭಜಿಸಲ್ಪಟ್ಟು ಹಾಗೂ ಉಲ್ಲಂಘಿಸಕೂಡದ ಭಾಗವಾಗಿದೆ. ಎನ್ನುತ್ತಾರೆ. ಇಂತಹ ಪ್ರಾಂತ್ಯಗಳನ್ನು ಕಾಪಾಡಿಕೊಳ್ಳುವಲ್ಲಿ ಮಾನವ ಜನಾಂಗ ಯುದ್ಧ, ಒಪ್ಪಂದ ಹಾಗೂ ಕಾದಾಡುತ್ತಿರುವುದನ್ನು ನಾವು ಮಾನವನ ನಾಗರಿಕತೆಯುದ್ದಕ್ಕೂ ನೋಡುತ್ತಾ ಬಂದಿದ್ದೇವೆ. ಈ ಕಾದಾಟಗಳು ಪ್ರಾಂತ್ಯವನ್ನು ಒಮ್ಮೆ ವಿಸ್ತರಿಸುತ್ತವೆ ಮತ್ತೊಮ್ಮೆ

ವಿಭಜಿಸುತ್ತವೆ. ಪ್ರಾಂತ್ಯಗಳ ಹತೋಟಿ ಮತ್ತು ಮರಳಿಪಡೆಯುವಿಕೆಗಾಗಿ ಇಂದೂ ಸಹ ಜನಾಂಗಗಳ ನಡುವೆ ತಿಕ್ಕಾಟ ಕದನಗಳು ನಡೆಯುತ್ತಲೇ ಬಂದಿವೆ. ಇಸ್ರೇಲ್, ಪ್ಯಾಲಸ್ತೀನ್, ಐರ್ಲೆಂಡ್, ವಿಯಟ್ನಾಮ್, ಕೊರಿಯಗಳ ಯುದ್ಧಗಳನ್ನು ಇಲ್ಲಿ ಸ್ಮರಿಸಬಹುದು.

ಪ್ರಾಂತ್ಯ ರಚನೆಯ ಬಗೆಗೆ ಇತಿಹಾಸದಲ್ಲಿ ನಾವು ಒಮ್ಮೊಮ್ಮೆ ಅಪಾಯಕಾರಿ ವಿವರಣೆಯನ್ನು ಕಾಣುತ್ತೇವೆ. ಇಲ್ಲಿ ಜರ್ಮನಿಯ ರ್‍ಯಾಟ್ಜೆಲ್–ಜೆಲೆನ್–ಹಾಸೋಫರ್‌ರವರ ಹೇಳಿಕೆಗಳನ್ನು ಸ್ಮರಿಸಬಹುದು. ಅವರ ಪ್ರಕಾರ ಪ್ರಾಂತ್ಯ/ರಾಷ್ಟ್ರ ಆಯಾ ಕಾಲದಲ್ಲಿ ಜನ ಸಂಖ್ಯಾಧಾರಿತವಾಗಿದ್ದು ಬಲಿಷ್ಠಜನಾಂಗ ತನ್ನ ಸಂಪನ್ಮೂಲಗಳಿಗಾಗಿ ಅದನ್ನ ಯುದ್ಧ/ ಆಕ್ರಮಣಗಳಿಂದ ವಿಸ್ತರಿಸಿಕೊಳ್ಳಬಹುದೆಂದು ತಿಳಿಸಿದ್ದಾರೆ.

ಅಬ್ರಹಾಮ್ ಲಿಂಕನ್‌ರವರ ಪ್ರಕಾರ ಒಂದು ರಾಷ್ಟ್ರ ಜನರಿಂದ, ಕಾನೂನು ಕಟ್ಟಳೆಗಳಿಂದ ಮತ್ತು ಅದರ ಪ್ರಾಂತ್ಯ (ಭೂಭಾಗ) ಗಳಿಂದ ಮೂರು ಅಂಶಗಳಿಂದಾಗಿದೆ. ಅವುಗಳಲ್ಲಿ ಪ್ರಾಂತ್ಯ ಮಿಕ್ಕ ಎರಡು ಅಂಶಗಳಿಗೆ ಹೋಲಿಸಿದಾಗ ಸಾಮಾನ್ಯವಾಗಿ ಬಹುಕಾಲವಿರುವ ಅಂಶವಾಗಿದೆ ಎಂದಿದ್ದಾರೆ. ಪ್ರಾಂತ್ಯಗಳನ್ನು ಹೊಸದಾಗಿ ಆಕ್ರಮಿಸಬಹುದು, ಕಳೆದುಕೊಳ್ಳಬಹುದು, ವಿಭಜಿಸಬಹುದು ಅಥವಾ ಅಣುಯುದ್ಧದಲ್ಲಿ ದೂಳಿಪಟ ಮಾಡಲೂಬಹುದು. (ಬಿ.ಇ.)

**ಪ್ರಾಕೃತಾವಸ್ಥೆ:** ಪ್ರಪಂಚದಲ್ಲಿ ರಾಜ್ಯ ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚಿನ ಅವಸ್ಥೆ (ಸ್ಟೇಟ್ ಆಫ್ ನೇಚರ್). ರಾಜ್ಯದ ಉಗಮ, ಸ್ವರೂಪ ಇವನ್ನು ಅರ್ಥಮಾಡಿಕೊಳ್ಳಲು ಹಲವಾರು ಚಿಂತನಶೀಲರು ರಾಜ್ಯಪೂರ್ವಸ್ಥಿತಿಯನ್ನು ಕುರಿತು ಊಹೆ ನಡೆಸಿದ್ದಾರೆ. ಭಾರತೀಯ ರಾಜನೀತಿಶಾಸ್ತ್ರದಲ್ಲಿ ಬರುವ ಮಾತ್ಸ್ಯನ್ಯಾಯದ ಕಲ್ಪನೆಗೂ ಪಾಶ್ಚಾತ್ಯರ ಊಹನೆಯ ಪ್ರಾಕೃತಾವಸ್ಥೆಗೂ ಹೋಲಿಕೆಯನ್ನು ಕಾಣಬಹುದು. ರಾಜ್ಯದ ಉಗಮಕ್ಕೆ ಮೊದಲಿನ ಅವಸ್ಥೆಯಲ್ಲಿದ್ದ ಮಾತ್ಸ್ಯನ್ಯಾಯದ ತೊಂದರೆಗಳಿಂದ ವಿಮೋಚನೆ ಪಡೆಯಲು ರಾಜ್ಯವನ್ನು ಸ್ಥಾಪಿಸಲಾಯಿತು. ರಾಜ್ಯವಿಲ್ಲದಿದ್ದರೆ, ಎಂದರೆ ಮನುಷ್ಯರು ಅವರ ಪ್ರಾಕೃತಾವಸ್ಥೆಯಲ್ಲೇ ಮುಂದುವರಿದರೆ ಮಾತ್ಸ್ಯನ್ಯಾಯ ತಪ್ಪದು, ಎಂದರೆ ಬಲಿಷ್ಠರು ದುರ್ಬಲರನ್ನು ನುಂಗಿಹಾಕುವ ನಾಶಗೊಳಿಸುವ ಪರಿಸ್ಥಿತಿಯ ನಿವಾರಣೆಯಾಗದು. ದುಷ್ಟರನ್ನು ದಂಡಿಸಿ ಶಿಷ್ಟರನ್ನು ಪಾಲಿಸಲು ರಾಜ್ಯ ಅಗತ್ಯವೆಂದು ಹೇಳಲಾಗಿದೆ.

ಇದನ್ನು ಕುರಿತ ಪಾಶ್ಚಾತ್ಯಚಿಂತನ ಪರಂಪರೆಯನ್ನು ಪ್ರಾಚೀನ ಗ್ರೀಕ್ ಚಿಂತಕರು ಆರಂಭಿಸಿದರು. ಪ್ರಾಕೃತಾವಸ್ಥೆಯಲ್ಲಿ ಮನುಷ್ಯರು ಪ್ರಕೃತಿಗೆ ಅನುಗುಣವಾಗಿ ವರ್ತಿಸುವರೆಂದು ಸೋಫಿಸ್ಟರೆಂಬ ಸಂಚಾರಿ ಬೋಧಕರು ಹೇಳಿದ್ದಾರೆ. ಪ್ರಾಕೃತಾವಸ್ಥೆಯಲ್ಲಿ ಯಾವುದೇ ಬಗೆಯ ಬಾಹ್ಯಕಟ್ಟಳೆ ಮತ್ತು ನಿಯಮಗಳಿರುವುದಿಲ್ಲ. ಇಂಥ ಅವಸ್ಥೆಯನ್ನು ಕೆಲವರು ಸ್ವರ್ಣಯುಗವೆಂದು ಭಾವಿಸಿ, ಮಾನವ ನೈತಿಕ ಪತನದಿಂದ ಪರಿಸ್ಥಿತಿ ಹದಗೆಟ್ಟು ರಾಜ್ಯದ ಅವಶ್ಯಕತೆ ಉಂಟಾಯಿತೆಂದು ವಾದಿಸಿದ್ದಾರೆ. ಪ್ರಾಕೃತಾವಸ್ಥೆ ಆರಂಭದಿಂದಲೇ ಸಂಘರ್ಷಮಯವಾಗಿತ್ತೆಂದೂ ಸ್ವಭಾವಸಿದ್ಧವಾದ ಈ ನ್ಯೂನತೆಯನ್ನು ಹತ್ತಿಕ್ಕಲು ರಾಜ್ಯವನ್ನು ನಿರ್ಮಿಸಲಾಯಿತೆಂದೂ ಇನ್ನೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಅನಂತರ ಮಧ್ಯಯುಗದ ಕೊನೆಯವರೆಗೂ ಈ ವಾದಸರಣಿಯಲ್ಲಿ ಗಮನಾರ್ಹ ಬೆಳವಣಿಗೆಗಳಾಗಲಿಲ್ಲ. ಆಧುನಿಕ ಯುಗದಲ್ಲಿ ಇದು ಪುನರುಜ್ಜೀವನಗೊಂಡು ಪ್ರಾಮುಖ್ಯ ಗಳಿಸಿತು. ಆಧುನಿಕಯುಗದಲ್ಲಿ ಈ ನಿಟ್ಟಿನಲ್ಲಿ ಚಿಂತನೆ ನಡೆಸಿದವರಲ್ಲಿ ಮುಖ್ಯರಾದವರೆಂದರೆ ಹಾಬ್ಸ್, ಲಾಕ್ ಮತ್ತು ರೂಸೋ.

ಹಾಬ್ಸನ ಪ್ರಕಾರ ಮನುಷ್ಯ ಸ್ವಭಾವತಃ ಸ್ವಾರ್ಥಿ. ಆತ್ಮರಕ್ಷಣೆಯ ಮತ್ತು ಸ್ವಂತ ಬಲದ ವೃದ್ಧಿಯ ಹಂಬಲಗಳೇ ಅವನ ಮನಸ್ಸಿನ ಪ್ರಬಲವಾದ ಪ್ರವೃತ್ತಿಗಳು. ಇತರರನ್ನು ಹತ್ತಿಕ್ಕಿ ಹೆಚ್ಚು ಹೆಚ್ಚು ಲಾಭ ಪಡೆಯುವುದಕ್ಕಾಗಿ ಸದಾ ಹೋರಾಟದಲ್ಲಿ ನಿರತನಾಗಿರುವುದೇ ಸಹಜ ಪ್ರವೃತ್ತಿ. ಪ್ರಾಕೃತಾವಸ್ಥೆಯಲ್ಲಿ ಸಭ್ಯತೆ ಸಂಸ್ಕೃತಿಗಳು ಹಾಗಿರಲಿ, ಜೀವಸಹಿತ ಉಳಿಯುವುದೇ ಅವನ ಮುಖ್ಯ ಸಮಸ್ಯೆಯಾಗಿರುತ್ತದೆ. ಸರ್ವಶಕ್ತವಾದ ರಾಜ್ಯದ ಸ್ಥಾಪನೆಯಿಂದಲೇ ಜೀವರಕ್ಷಣೆ ಸಾಧ್ಯವೆಂಬುದು ಅರಿವಿಗೆ ಬಂತು. ಇಂಥ ಆಲೋಚನೆಯ ಫಲವಾಗಿ ರಾಜ್ಯ ಸ್ಥಾಪನೆಯಾಯಿತು. ಪ್ರಬಲ ಮತ್ತು ನಿರಂಕುಶ ರಾಜ್ಯದ ಹೊರತು ಭದ್ರತೆ, ಶಾಂತಿ, ಸಭ್ಯತೆ ಮತ್ತು ಸಂಸ್ಕೃತಿ ಅಸಾಧ್ಯವೆಂದು ಹಾಬ್ಸ್ ಹೇಳಿದ.

ಪ್ರಾಕೃತಾವಸ್ಥೆಯನ್ನು ಕುರಿತಂತೆ ಲಾಕನ ವಿಚಾರಗಳು ಹಾಬ್ಸನ ವಿಚಾರಗಳಿಗಿಂತ ತೀರ ಭಿನ್ನವಾದಂಥವು. ಪ್ರಾಕೃತಾವಸ್ಥೆಯಲ್ಲಿ ಮಾನವರು ಪ್ರಕೃತಿ ನಿಯಮವನ್ನು ಅನುಸರಿಸಿ ನೀತಿಯಿಂದಲೂ ವಿವೇಕದಿಂದಲೂ ವರ್ತಿಸುತ್ತಾರೆ. ಸಮಾಜದಲ್ಲಿ ಶಾಂತಿ ಸಹಕಾರಗಳು ನೆಲೆಸಿರುತ್ತವೆ. ಆದರೂ ಈ ಅವಸ್ಥೆಯಲ್ಲಿ ಕೆಲವು ಬಿಕ್ಕಟ್ಟುಗಳು ಉದ್ಭವಿಸುತ್ತವೆ. ಮನುಷ್ಯ ಸ್ವಾಭಾವಿಕವಾಗಿ ಒಳ್ಳೆಯವನಾದರೂ ಅವನು ಪರಿಪೂರ್ಣನಲ್ಲ. ಸ್ವಾರ್ಥ ಮತ್ತು ಇತರ ಆಕಾಂಕ್ಷೆಗಳು ಅವನ ಮನಸ್ಸನ್ನು ಕಲುಷಿತಗೊಳಿಸುತ್ತವೆ. ಇಂಥ ಸ್ಥಿತಿಯಲ್ಲಿ ಪ್ರಾಕೃತಿಕ ಹಕ್ಕುಗಳು ಭದ್ರವಾಗಿರುವುದಿಲ್ಲ. ಈ ಬಿಕ್ಕಟ್ಟುಗಳನ್ನು ನಿವಾರಿಸುವುದಕ್ಕಾಗಿ ಮತ್ತು ಪ್ರಾಕೃತ ಹಕ್ಕುಗಳನ್ನು ಭದ್ರಪಡಿಸುವುದಕ್ಕಾಗಿ ಮನುಷ್ಯರು ರಾಜ್ಯವನ್ನು ಸ್ಥಾಪಿಸಲು ಒಪ್ಪಂದ ಮಾಡಿಕೊಳ್ಳುತ್ತಾರೆ. ರಾಜ್ಯಕ್ಕೆ ಸೀಮಿತ ಅಧಿಕಾರಗಳಿರುತ್ತವೆ. ನಿರ್ಣಯಗಳನ್ನು ಪ್ರಜಾತಾಂತ್ರಿಕವಾಗಿ, ಬಹುಮತದ ಆಧಾರದ ಮೇಲೆ, ತೆಗೆದುಕೊಳ್ಳಬೇಕಾಗುತ್ತದೆ. ಅಧಿಕಾರ ಒಬ್ಬನ ಅಥವಾ ಕೆಲವೇ ಜನರ ಕೈಯಲ್ಲಿದ್ದರೆ ಸ್ವಾರ್ಥವೇ ಮೊದಲಾದ ದೋಷಗಳಿಂದ ಮತ್ತೆ ಪ್ರಾಕೃತಾವಸ್ಥೆಯ ಬಿಕ್ಕಟ್ಟುಗಳು ಉಂಟಾಗುತ್ತವೆ. ಆದ್ದರಿಂದ ಪ್ರಜಾತಂತ್ರ ರಾಜ್ಯ ಪದ್ಧತಿಯೇ ಸೂಕ್ತವಾದ್ದೆಂದು ಲಾಕ್ ಪ್ರತಿಪಾದಿಸಿದ.

ಪ್ರಾಕೃತಾವಸ್ಥೆ ಕುರಿತಂತೆ ರೂಸೋನ ಕಲ್ಪನೆ ಲಾಕನದಕ್ಕಿಂತಲೂ ಉದಾತ್ತವಾಗಿದೆ, ಪ್ರಾಕೃತಾವಸ್ಥೆಯಲ್ಲಿ ಮಾನವನ ಜೀವನ ಅತ್ಯಂತ ಸುಖಮಯವಾಗಿರುತ್ತದೆ. ಆದರೆ ಕಾಲಕ್ರಮದಲ್ಲಿ ನೈತಿಕ ಪತನ ಆರಂಭವಾಗುತ್ತದೆ. ಮನುಷ್ಯನಲ್ಲಿ ಸ್ವಾರ್ಥ ಮತ್ತು ಸ್ಪರ್ಧೆಯ ಭಾವನೆಗಳ ಮೂಡುವಿಕೆ ಈ ಪತನಕ್ಕೆ ಮುಖ್ಯಕಾರಣ. ಸುಖಸಂಪತ್ತುಗಳ ಆಕಾಂಕ್ಷೆಯಿಂದ ಮಾನವನ ನೈತಿಕ ಪತನವಾಗುತ್ತದೆ. ಸಮಾಜದಲ್ಲಿ ದಬ್ಬಾಳಿಕೆ ಮತ್ತು ವೈಷಮ್ಯಗಳು ಹುಟ್ಟುತ್ತವೆ. ಇವನ್ನು ಕೊನೆಗೊಳಿಸಿ ಪ್ರಾಕೃತಾವಸ್ಥೆಗೆ ಹಿಂದಿರುಗುವುದು ಸಾಧ್ಯವಿಲ್ಲ. ಏಕೆಂದರೆ ಇತಿಹಾಸದ ಚಕ್ರವನ್ನು ಹಿಂತಳ್ಳಿದರೆ ಅದೇ ಪ್ರವೃತ್ತಿ ಬಲಗೊಳ್ಳುತ್ತದೆ. ಸಮಾಜದಲ್ಲಿ ದಬ್ಬಾಳಿಕೆ ಮತ್ತು ವೈಷಮ್ಯಗಳನ್ನು ನಿವಾರಿಸಬೇಕಾದರೆ ಇರುವುದು ಒಂದೇ ಮಾರ್ಗ: ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸಾಧಿಸುವ ರಾಜ್ಯವ್ಯವಸ್ಥೆ ಎಂದರೆ ನಿಜವಾದ ಪ್ರಜಾತಂತ್ರ. ಇಂಥ ಪ್ರಜಾತಂತ್ರ ಕೇವಲ ಬಾಹ್ಯ ಆಡಂಬರಗಳಿಗೆ ಸೀಮಿತವಾಗಿರದೆ ಜನಮನಗಳ ನಿಜವಾದ ಸಾಮರಸ್ಯವನ್ನು ಆಧರಿಸಬೇಕು. ಈ ಸಾಮರಸ್ಯ ವೈಯಕ್ತಿಕ ಪರಿಮಿತಿಗಳನ್ನು ತ್ಯಜಿಸಿ, ರಾಜ್ಯದಲ್ಲಿರುವ ಎಲ್ಲ ಜನರ ನೀತಿಯ ಮತ್ತು ವಿವೇಕದ ಸಾಂಘಿಕ ಅಭಿವ್ಯಕ್ತಿಯಾಗಿರಬೇಕು. ಫ್ರೆಂಚ್‌ಕ್ರಾಂತಿಯ ಫಲವಾದ ಪ್ರಜಾತಂತ್ರ ರಾಜ್ಯಪದ್ಧತಿಯ ಬೆಳವಣಿಗೆಯ ಮೇಲೆ ರೂಸೋ ಬಹಳ ವ್ಯಾಪಕವಾದ ಪ್ರಭಾವ ಬೀರಿದ. (ಎಸ್.ಎಚ್.ಐ.ವಿ.)

**ಪ್ರಾಕೃತಿಕ ಆಯ್ಕೆ:** ಜೀನುಗಳ ಮರುಸಂಯೋಗ ಅಥವಾ ಉತ್ಪರಿವರ್ತನೆಗಳ ಫಲವಾಗಿ ಉದ್ಭವಿಸುವ ಗುಣಲಕ್ಷಣಗಳ ಪೈಕಿ ಅಪೇಕ್ಷಿತವಾದವನ್ನು ಉಳಿಸಿಕೊಂಡು ಅವು ವಂಶಪಾರಂಪರ್ಯವಾಗಿ ಪ್ರವಹಿಸುವಂತೆ ಮಾಡುವುದರೊಂದಿಗೆ ಅನಪೇಕ್ಷಿತವಾದವನ್ನು ತೊಡೆದು ಹಾಕುತ್ತ, ಜೀವಿಗಳು ಪರಿಸರದ ವಿವಿಧ ಪರಿಸ್ಥಿತಿಗಳಿಗೆ ಹೊಂದಿಕೊಂಡು ಬದುಕಿ ಉಳಿಯುವಂತೆ ಮಾಡುವ ನೈಸರ್ಗಿಕ ಪ್ರಕ್ರಿಯೆ (ನ್ಯಾಚುರಲ್ ಸೆಲೆಕ್ಷನ್). ಈ ರೀತಿ ಯೋಗ್ಯತೆಯುಳ್ಳ ಜೀವಿಗಳ ಉಳಿಯುವಿಕೆ ಎಂಬ ತತ್ತ್ವಕ್ಕನುಸಾರವಾಗಿ ಪ್ರಕೃತಿಯಲ್ಲಿ ಜೀವಿಗಳ ಆಯ್ಕೆ ಆಗುತ್ತದೆ ಎಂಬುದನ್ನು ಚಾರ್ಲ್ಸ್ ಡಾರ್ವಿನ್ (1809–82) ಪ್ರತಿಪಾದಿಸಿದ (1859). ಈತನ ಜೀವವಿಕಾಸ ಸಿದ್ಧಾಂತ ಅಥವಾ ಪ್ರಾಕೃತಿಕ ಆಯ್ಕೆ ಸಿದ್ಧಾಂತ ಎಷ್ಟು ಚಿರಪರಿಚಿತ ಎಂದರೆ ಇದಕ್ಕೆ ಲೋಕರೂಢಿಯಲ್ಲಿ ಡಾರ್ವಿನಿಸಮ್ ಎಂದೇ ಹೆಸರು. ಆದರೆ ಇದನ್ನು ಡಾರ್ವಿನಿಸಮ್ ಎಂದು ನಿರ್ದೇಶಿಸುವುದು ತಪ್ಪಾಗುತ್ತದೆ. ಏಕೆಂದರೆ, ಡಾರ್ವಿನ್ನನಿಗೂ ಹಿಂದೆ ಗ್ರೀಕ್ ತತ್ತ್ವಜ್ಞಾನಿಗಳು ಈ ವಿಚಾರದಲ್ಲಿ ಆಲೋಚನೆ ನಡೆಸಿ ಕೆಲವು ವಿಷಯಗಳನ್ನು ಬೆಳಕಿಗೆ ತಂದಿದ್ದರು. ಹೀಗಿದ್ದರೂ ಇತರರಿಗಿಂತ ಡಾರ್ವಿನ್ನನ ಹೆಸರು ಪ್ರಾಕೃತಿಕ ಆಯ್ಕೆಯ ಸಿದ್ಧಾಂತದೊಡನೆ ಹಾಸುಹೊಕ್ಕಾಗಿದೆ. ಏಕೆಂದರೆ, ಡಾರ್ವಿನ್ನನು ಈ ವಿಚಾರದಲ್ಲಿ ನಡೆಸಿದ ಅಧ್ಯಯನ ಬಹಳ ಆಳವಾಗಿಯೂ ವಿಶಾಲವಾಗಿಯೂ ಇತ್ತು.

ಜೀವರಾಶಿಗಳಲ್ಲಿ ಅಗತ್ಯ ಪರಿಮಾಣವನ್ನು ಮೀರಿ, ಧಾರಾಳ ಪರಿಮಾಣದಲ್ಲಿ ಸಂತಾನೋತ್ಪತ್ತಿ ಆಗುತ್ತದೆ ಎಂಬ ವಿಷಯವನ್ನು ಎಲ್ಲ ಜೀವವಿಜ್ಞಾನಿಗಳೂ ಒಪ್ಪಿಕೊಂಡಿದ್ದಾರೆ. ಪ್ರಪಂಚದಲ್ಲಿ ಲಭ್ಯವಿರುವ ಆಹಾರ ಮತ್ತು ವಸತಿಗೆ ಒಂದು ಮಿತಿಯುಂಟಷ್ಟೆ. ಉದ್ಭವವಾಗುವ ಕೋಟ್ಯಂತರ ಜೀವಿಗಳಿಗೆಲ್ಲ ಆಹಾರ ಮತ್ತು ವಸತಿ ಸಿಗುವುದು ಅಸಾಧ್ಯ. ಹೀಗಾಗಿ ಬಹುಪಾಲು ಜೀವಿಗಳು ವಸತಿ ಮತ್ತು ಆಹಾರ ಸಿಗದೆ ಅಳಿಯುತ್ತವೆ, ಉಳಿವ ಅಲ್ಪಸಂಖ್ಯೆಯ ಜೀವಿಗಳು ಮಾತ್ರ ಬದುಕಿ ಜೀವನ ನಿರ್ವಹಿಸುವುವು.

ನಿಯಮಿತ ಮೊತ್ತದಲ್ಲಿ ಮಾತ್ರ ಆಹಾರ ಮತ್ತು ವಸತಿ ದೊರಕುವುದರಿಂದ ಹುಟ್ಟುವ ಜೀವಿಗಳ ನಡುವೆ ಆಹಾರ ಮತ್ತು ವಸತಿ ದೊರಕಿಸಿಕೊಳ್ಳಲು ಸ್ಪರ್ಧೆ ನಡೆಯುತ್ತದೆ. ಸ್ಪರ್ಧೆಗಳು ಪ್ರಭೇದಗಳ ನಡುವೆ ಮಾತ್ರವಲ್ಲದೆ ಒಂದೇ ಪ್ರಭೇದದ ವಿವಿಧ ಜೀವಿಗಳಲ್ಲೂ ನಡೆಯುತ್ತದೆ. ಇಲ್ಲೂ ಬಹಳಷ್ಟು ಸಂಖ್ಯೆಯ ಜೀವಿಗಳು ಸೋತು ಅಳಿಯುತ್ತವೆ ಮತ್ತು ಅಲ್ಪಸಂಖ್ಯೆಯ ಜೀವಿಗಳು ಗೆದ್ದು ಉಳಿಯುತ್ತವೆ. ಈ ಪೈಪೋಟಿ ಜೀವಿಸಂಖ್ಯೆಯ ಸ್ಫೋಟವನ್ನು ತಡೆಹಿಡಿಯುವ ಒಂದು ನೈಸರ್ಗಿಕ ನಿಯಂತ್ರಣೋಪಾಯ. ಪ್ರಪಂಚದಲ್ಲಿ ಜೀವಪ್ರಭೇದಗಳು ಯಾವ ಯಾವ ಪ್ರಮಾಣದಲ್ಲಿರಬೇಕೆಂಬುದನ್ನು ನಿಸರ್ಗ ಗೊತ್ತುಪಡಿಸಿದೆ.

ಒಂದು ಜೀವಜಾತಿಯ ವೈಯಕ್ತಿಕ ಜೀವಿಗಳಲ್ಲಿ ಸಮಾನ ಗುಣರೂಪಗಳಿರದೆ ವಿವಿಧ ತೆರನ ಮತ್ತು ವಿವಿಧ ಪರಿಣಾಮದ ವ್ಯತ್ಯಾಸಗಳು ಇರುವುವು ಎಂಬ ವಿಷಯ ಜೀವವಿಜ್ಞಾನದಲ್ಲಿ ಹಿಂದಿನಿಂದಲೂ ತಿಳಿದು ಬಂದದ್ದೇ. ಡಾರ್ವಿನ್ನನ ಪ್ರಕಾರ ಒಂದು ನಿಖರವಾದ ಪರಿಸರದಲ್ಲಿ ಜೀವಪ್ರಭೇದದ ಕೆಲವು ಜೀವಿಗಳಲ್ಲಿ ಬದಲಾಗುವ ಭೌಗೋಳಿಕ ಪರಿಸರಕ್ಕೆ ಹೊಂದಿಕೊಳ್ಳುವಂಥ ಯೋಗ್ಯತಾಗುಣಗಳಿರುವುವು. ಇನ್ನುಳಿದ ಜೀವಿಗಳಲ್ಲಾದರೋ ಇಂಥ ಯೋಗ್ಯತಾಗುಣಗಳಿರುವುದಿಲ್ಲ. ಬದಲಾಗುವ ಪರಿಸರಕ್ಕೆ ಹೊಂದಿಕೊಳ್ಳುವ ಅನುಕೂಲ ಗುಣಗಳಿರುವ ಜೀವಿಗಳೇ ಅಸ್ತಿತ್ವಕ್ಕಾಗಿ ನಡೆಯುವ ಸ್ಪರ್ಧೆಯಲ್ಲಿ ಗೆದ್ದು ಉಳಿಯುವ ಜೀವಿಗಳು ಎಂದೂ, ಹೊಂದಿಕೊಳ್ಳಲಾರದಂಥ ಗುಣಗಳನ್ನು ಪಡೆದಿರತಕ್ಕ ಜೀವಿಗಳು

ಅಳಿಯುತ್ತವೆ ಎಂದೂ ಡಾರ್ವಿನ್ ತಿಳಿಸಿದ. ಈ ಹೋರಾಟದಲ್ಲಿ ಸಫಲವಾಗುವಂಥ ಜೀವಿಗಳು ಮಾರ್ಪಾಟಾದ ಪರಿಸರಕ್ಕೆ ಹೊಂದಿಕೊಳ್ಳುವಂಥ ತಮ್ಮ ಯೋಗ್ಯ ಗುಣಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುತ್ತವೆ. ಈ ತೆರನ ವರ್ಗಾವಣೆ ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುತ್ತ ಹೋಗುತ್ತದೆ. ಡಾರ್ವಿನ್ನನು ಇದನ್ನು ಯೋಗ್ಯತಾಗುಣವುಳ್ಳದ್ದರ ಉಳಿಯುವಿಕೆ ಎಂದು ಹೆಸರಿಸಿ ಇದು ಆಯ್ಕೆಯ ಒಂದು ವಿಧಾನ ಎಂದು ತಿಳಿಸಿದ. ಇದು ಡಾರ್ವಿನ್ನನ ಪ್ರಾಕೃತಿಕ ಆಯ್ಕೆ ಸಿದ್ಧಾಂತ ಎಂದು ಪ್ರಸಿದ್ಧವಾಗಿದೆ.

ಡಾರ್ವಿನ್ನನ ಜೀವವಿಕಾಸ ಸಿದ್ಧಾಂತ ಎಬ್ಬಿಸಿದಷ್ಟು ಕೋಲಾಹಲವನ್ನು ಇನ್ನಾವ ಸಿದ್ಧಾಂತವೂ ಉಂಟುಮಾಡಲಿಲ್ಲ. ಡಾರ್ವಿನ್ನನ ಸಿದ್ಧಾಂತವನ್ನು ಅನೇಕ ಜೀವವಿಜ್ಞಾನಿಗಳು ಪೂರ್ತಿಯಾಗಿ ಮತ್ತೆ ಕೆಲವರು ಭಾಗಶಃ ಮಾತ್ರ ಒಪ್ಪಿಕೊಂಡಿದ್ದಾರೆ. ಡಾರ್ವಿನ್ನನ ಮೂಲಪ್ರತಿಪಾದನೆಗಳು ಅಂದರೆ ವಿಪುಲ ಉತ್ಪಾದನೆ, ಪೈಪೋಟಿ, ವೈವಿಧ್ಯ, ಯೋಗ್ಯತೆ ಉಳ್ಳಜೀವಿಯ ಉಳಿಯುವಿಕೆ ಎಂಬವು ಖಂಡಿತ ಒಪ್ಪಿಕೊಳ್ಳುವಂಥ ವಿಚಾರಗಳೇ. ಆದರೆ ಡಾರ್ವಿನ್ನನ ಪ್ರತಿಪಾದನೆಯ ಬಹುವಿವಾದಾತ್ಮಕ ಅಂಶಗಳೆಂದರೆ ವಿನೂತನಗುಣಗಳು ವಂಶಪಾರಂಪರ್ಯವಾಗಿ ಮುಂದಿನ ಪೀಳಿಗೆಗಳಿಗೆ ರವಾನೆಯಾಗುವುದು ಮತ್ತು ಪ್ರಾಕೃತಿಕ ಆಯ್ಕೆಯಿಂದ ಉದ್ಭವವಾಗುವ ಜೀವಿಗಳ ಮಾರ್ಪಾಟು. ತನ್ನ ಪ್ರತಿಪಾದನೆಯ ದುರ್ಬಲತೆಯನ್ನು ಡಾರ್ವಿನ್ ಗಮನಿಸಿದ್ದ. ಅಂದರೆ ಪ್ರಾಕೃತಿಕ ಆಯ್ಕೆ ಜೀವವಿಕಾಸಕಾರ್ಯದ ಒಂದು ಅಂಶವೇ ಹೊರತು, ಅದ್ದರಿಂದಲೇ ಜೀವವಿಕಾಸ ನಡೆಯುವುದಿಲ್ಲ ಎಂಬ ವಿಚಾರ ಡಾರ್ವಿನ್ನನ ಪ್ರತಿಪಾದನೆಯ ಬಗ್ಗೆ ಇರುವ ಇನ್ನೊಂದು ಟೀಕೆ. ಅಂದರೆ ಒಗ್ಗದಿರುವ ಗುಣಗಳ ಬಗ್ಗೆ ಜೀವಿಗಳು ಪರಿಸರಕ್ಕೆ ಹೊಂದಿಕೊಳ್ಳಲು ಪ್ರಾಕೃತಿಕ ಆಯ್ಕೆಯಲ್ಲಿ ತಮ್ಮ ರಚನೆಯಲ್ಲಿ ಅನೇಕ ಮಾರ್ಪಾಡುಗಳನ್ನು ಅಳವಡಿಸಿಕೊಳ್ಳುತ್ತವೆ. ಪರಿಸರಕ್ಕೆ ಯಶಸ್ವೀ ಹೊಂದಾಣಿಕೆಯೆಂದರೆ ಜೀವಿ ತನ್ನ ಸುತ್ತಲಿರುವ ಜಟಿಲ ಪರಿಸ್ಥಿತಿಯನ್ನು ಎದುರಿಸಿ ಜೀವಿಸಲು ಗುಣಶಕ್ತಿ ಪಡೆಯುವುದು ಈ ಅಮೂಲ್ಯ ಯೋಗ್ಯಗುಣಗಳ ಜೊತೆಯಲ್ಲಿ ಅನೇಕ ಜೀವಿಗಳು ಗಣನೀಯವಲ್ಲದ ಮತ್ತು ಪರಿಸ್ಥಿತಿಗೆ ಹೊಂದಿಕೊಳ್ಳಲು ಯಾವ ಪ್ರಯೋಜನವೂ ಇಲ್ಲದೆ ಕೆಲವು ಗುಣಗಳನ್ನು ಪಡೆದಿರುವುವು. ಅನುಪಯುಕ್ತ ಗುಣಗಳು ಜೀವಿಗಳ ಅಳಿವು ಮತ್ತು ಉಳಿವುಗಳಿಗೆ, ಪರಿಸರಕ್ಕೆ ಹೊಂದಿಕೊಳ್ಳುವುದಕ್ಕೆ ಯಾವ ಒತ್ತಾಸೆಯನ್ನೂ ಕೊಡಲಾರವಾದ್ದರಿಂದ ಸಸ್ಯಗಳಲ್ಲೇ ಆಗಲಿ, ಪ್ರಾಣಿಗಳಲ್ಲೇ ಆಗಲಿ ಜೀವಪ್ರಭೇದಗಳನ್ನು ಅವುಗಳ ಗುಣ ಲಕ್ಷಣ ಆಧಾರದ ಮೇಲೆ ವಿಂಗಡಿಸುವುದು ಅಮುಖ್ಯ ಮತ್ತು ನಿರರ್ಥಕ. ಡಾರ್ವಿನ್ನನ ಜೀವವಿಕಾಸವಾದ ಯೋಗ್ಯಗುಣಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ; ಯೋಗ್ಯವಲ್ಲದ ಗುಣಗಳಿಗೆ ಯಾವ ಪ್ರಾಮುಖ್ಯವನ್ನು ಕೊಟ್ಟಿಲ್ಲ. ಜೀವಪ್ರಭೇದಗಳಲ್ಲಿ ಅನೇಕ ಸಲ ಯೋಗ್ಯವಲ್ಲದ ಗುಣಗಳೇ ಪ್ರಧಾನ ವ್ಯತ್ಯಾಸ ಅಂಶಗಳಾಗಿರುತ್ತವೆ.

ಡಾರ್ವಿನ್ನನ ವಾದದ ಬಗ್ಗೆ ಇರುವ ಇನ್ನೂ ಒಂದು ಟೀಕೆಯೆಂದರೆ ಆತ ಪಿತ್ರಾರ್ಜಿತ ಮತ್ತು ಅಪಿತ್ರಾರ್ಜಿತ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ಮತ್ತು ಎಲ್ಲ ಗುಣವ್ಯತ್ಯಾಸಗಳು ಪಿತ್ರಾರ್ಜಿತವೆಂದು ತಿಳಿದದ್ದು. ಹೀಗೆ ಡಾರ್ವಿನ್ನನ ಪ್ರಾಕೃತಿಕ ಆಯ್ಕೆ ಸಿದ್ಧಾಂತದಲ್ಲಿ ಕೆಲವು ದೋಷಗಳಿದ್ದರೂ, ಜೀವವಿಜ್ಞಾನದಲ್ಲಿ ಇದು ಒಂದು ಕ್ರಾಂತಿಕಾರಕ ಪ್ರತಿಪಾದನೆ ಎಂಬುದರಲ್ಲಿ ಸಂಶಯವಿಲ್ಲ. (ಕೆ.ಆರ್.ಜಿ.ಎ.;ಎಸ್.ಎಚ್.ವಿ.;ಎ.ಎನ್.ಸಿ.)

**ಪ್ರಾಕೃತಿಕ ಪರಿಸರ:** ಭೂಮಿಯ ಮೇಲೆ ಪ್ರಕೃತಿಯಿಂದ ಅಥವಾ ಸ್ವಾಭಾವಿಕವಾಗಿ ನಿರ್ಮಿತಗೊಂಡಿರುವ ಎಲ್ಲಾ ಬಗೆಯ ಲಕ್ಷಣಗಳನ್ನೂ ಪ್ರಾಕೃತಿಕ ಪರಿಸರ ಅಥವಾ ಭೌತಿಕ ಪರಿಸರ ಅಥವಾ ಸ್ವಾಭಾವಿಕ ಪರಿಸರ ಎಂದು ಕರೆಯುವರು. ಇದು ಎಲ್ಲಾ ಬಗೆಯ ಪ್ರಾಕೃತಿಕ ಸಂಪನ್ಮೂಲಗಳ ಅವಕಾಶಗಳನ್ನು ಒಳಗೊಂಡಿದೆ. ಇದರಿಂದ ಮಾನವನು ವಿವಿಧ ಬಗೆಯ ಉದ್ಯೋಗಗಳನ್ನು ರೂಢಿಸಿಕೊಂಡು ಜೀವನ ನಿರ್ವಹಿಸಲು ಸಾಧ್ಯ. ಮಾನವನು ಇಂದು ತಾಂತ್ರಿಕ– ವೈಜ್ಞಾನಿಕವಾಗಿ ಮಹತ್ತರ ಸಾಧನೆಯನ್ನು ಮಾಡಿದ್ದರೂ, ಆತನ ಭೌತಿಕ ಅವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಪ್ರಾಕೃತಿಕ ಪರಿಸರ ಮಾತ್ರ ಒಳಗೊಂಡಿದೆ. ಇದರಿಂದಾಗಿಯೆ ಮಾನವನ ಮೇಲೆ ಪ್ರಕೃತಿಯ ಪ್ರಭಾವ ನಿಚ್ಚಳವಾಗಿ ಕಂಡುಬರುವುದನ್ನು ಕಾಣಬಹುದು. ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿಯೂ ಪ್ರಕೃತಿಯ ಪ್ರಭಾವವು ಕಂಡುಬರುವುದು. ಮಾನವನ ಆಹಾರ ಹಾಗೂ ಆತನ ಕೈಗಾರಿಕೆಗಳ ಕಚ್ಚಾ ವಸ್ತುಗಳ ಮೂಲವಾಗಿರುವುದು ಪ್ರಾಕೃತಿಕ ಪರಿಸರ. ಪ್ರಾಕೃತಿಕ ಪರಿಸರ ಮಾನವನ ಹಾಗೂ ಎಲ್ಲಾ ಜೀವಿಗಳ ಜೀವನಕ್ರಮದ ಮೇಲೆ ಪ್ರತ್ಯಕ್ಷವಾಗಿ ಪ್ರಭಾವ ಬೀರುವುದನ್ನು ಕಾಣಬಹುದಾಗಿದೆ. (ಎಚ್.ಎಸ್.ಡಿ.)

**ಪ್ರಾಕೃತಿಕ ಭೂಗೋಳ ವಿಜ್ಞಾನದ ಬೋಧನ ಪರಿಕರಗಳು:** ಭೂಗೋಳ ವಿಜ್ಞಾನದ ವಿಷಯಗಳನ್ನು ವಿದ್ಯಾರ್ಥಿಗಳು ಚೆನ್ನಾಗಿ, ಸ್ಪಷ್ಟವಾಗಿ, ಪರಿಪೂರ್ಣವಾಗಿ ಮನನ ಮಾಡಿಕೊಳ್ಳುವಂತೆ ಮಾಡಲು ಬೋಧನೆಯಲ್ಲಿ ಬಳಸುವ ಪರಿಕರಗಳು ಹಿಂದಿನ ಕಾಲದಲ್ಲಿ ಶಿಕ್ಷಕರು ಬೋಧನೆಯನ್ನು ನಿಸರ್ಗ ಪರಿಸರದಲ್ಲಿಯೇ ಮಾಡುತ್ತಿದ್ದರು. ಆದರೆ ಹೊಸ ಹೊಸ ಆವಿಷ್ಕಾರಗಳಾದಂತೆ, ತಂತ್ರಜ್ಞಾನದ ಬೆಳವಣಿಗೆಯಾಗುತ್ತಿದ್ದಂತೆ ಔಪಚಾರಿಕವಾಗಿರುವ ಶಾಲೆಯ ತರಗತಿಗಳನ್ನೇ ಸ್ವಾಭಾವಿಕ ಪರಿಸರವನ್ನಾಗಿ ಪರಿವರ್ತನೆ ಮಾಡುವ ಸಾಮರ್ಥ್ಯ, ಕಲೆ, ವಿಜ್ಞಾನ ಇಂದು ಶೈಕ್ಷಣಿಕ ಪ್ರಕ್ರಿಯೆಯ ದೃಷ್ಟಿಯಲ್ಲಿ ಭೂಗೋಳ ವಿಜ್ಞಾನದ ಬೋಧನೆಯಲ್ಲಿ ಹಲವಾರು ಪರಿಕರಗಳನ್ನು ಬಳಸಬಹುದಾಗಿದೆ. ಅವುಗಳಲ್ಲಿ ಬಹಳ ಪ್ರಮುಖವಾದವುಗಳೆಂದರೆ:

ಗೋಳ: ಭೂಗೋಳ ವಿಜ್ಞಾನವನ್ನು ಪರಿಣಾಮಕಾರಿಯಾಗಿ ಬೋಧಿಸಲು ಬಳಸುವ ಭೂಮಿಯ ಪ್ರತಿಕೃತಿಯೇ ಗೋಳ, ಯಾವುದೇ ಭೌಗೋಳಿಕ ಪಾಠಗಳನ್ನು ಪರಿಣಾಮಕಾರಿಯಾಗಿ ಬೋಧನೆ ಮಾಡಲು ಅಗತ್ಯ ಮತ್ತು ಅವಶ್ಯಕವೆನಿಸಿರುವ ಯಥಾಕೃತಿಯಾಗಿದೆ. ಅಕ್ಷಾಂಶ, ರೇಖಾಂಶ, ಪ್ರಾದೇಶಿಕ ವಿಭಾಗಗಳು, ಭೂಮಿಯ ಆಕಾರ, ಹಗಲು, ರಾತ್ರಿ, ಅಂತಾರಾಷ್ಟ್ರೀಯ ಕಾಲಮಾನ, ಸಾಗರಗಳು, ವಾಯುಗುಣ ಮುಂತಾದ ವಿಷಯದ ಬೋಧನೆಗೆ ಅನುಕೂಲಕರವಾಗಿದೆ.

ಭೂಪಟಗಳು: ಭೂಗೋಳ ವಿಜ್ಞಾನದ ಬೋಧನೆಯಲ್ಲಿ ಗೋಳದ ಅನಂತರದ ಸ್ಥಾನವನ್ನು ಭೂಪಟ ಆಕ್ರಮಿಸಿದೆ. ಮೆಕೆನ್ಜಿಯ ಪ್ರಕಾರ ಭೂಗೋಳ ವಿಜ್ಞಾನ ಬೋಧನೆ ಭೂಪಟದ ಬಳಕೆಯಿಲ್ಲದೆ ಯಶಸ್ವಿಯಾಗದು. ಭೂಪಟದಲ್ಲಿ ಅಕ್ಷಾಂಶ, ರೇಖಾಂಶ, ಸ್ಥಳಗಳ ಸ್ಥಾನಮಾನ, ವಾಯುಗುಣ, ಸ್ವಾಭಾವಿಕ ವಿಭಾಗಗಳು, ಖಂಡಗಳು, ಸಮುದ್ರಗಳು, ಭೂದೃಶ್ಯಗಳು, ಖನಿಜಸಂಪತ್ತು ಮುಂತಾದವುಗಳಲ್ಲದೆ ಮಾನವನ ಸಾಂಸ್ಕೃತಿಕ ಚಟುವಟಿಕೆಗಳ ಬಗೆಗೆ ಮಾಹಿತಿಯನ್ನು ಪರಿಣಾಮಕಾರಿಯಾಗಿ ನೀಡಬಹುದಾಗಿದೆ.

ಆಲೇಖಗಳು: ಭೌಗೋಳಿಕ ಅಂಕಿ ಅಂಶಗಳನ್ನು ಹೋಲಿಕೆ ಮಾಡಲು, ವ್ಯತ್ಯಾಸಗಳನ್ನು ಗುರುತಿಸಲು, ಉತ್ಪಾದನೆಯನ್ನು ತಿಳಿಯಲು, ವ್ಯಾಪಾರ ವಹಿವಾಟುಗಳನ್ನು ತಿಳಿಯಲು ಸ್ತಂಭ, ಒಂಟಿ, ಬಹು, ವೃತ್ತ ಮುಂತಾದ ಆಲೇಖಗಳು ಸಹಾಯಕವಾಗಿದೆ.

ಚಿತ್ರಪಟಗಳು: ಭೂಗೋಳ ವಿಜ್ಞಾನದ ವಿಷಯಗಳನ್ನು ಸುಲಭವಾಗಿ ಬೋಧಿಸಲು ಚಿತ್ರಪಟಗಳು ಸಹಾಯವಾಗಿವೆ. ಇಂದು ಸರಕಾರಿ ಮತ್ತು ಖಾಸಗಿಯವರು ಮುದ್ರಿಸಿರುವ ಚಿತ್ರಗಳು, ಛಾಯಾ ಚಿತ್ರಗಳು, ಸ್ವತಃ ಶಿಕ್ಷಕ ಮತ್ತು ವಿದ್ಯಾರ್ಥಿಗಳು ರಚಿಸಿರುವ ಚಿತ್ರಪಟಗಳು ಹಲವಾರು ರೀತಿಯಲ್ಲಿ ಲಭ್ಯವಾಗಿವೆ.

ನೈಜ, ಸ್ವಾಭಾವಿಕ ವಸ್ತುಗಳು: ಭೂಗೋಳ ವಿಜ್ಞಾನದ ಬೋಧನೆಯಲ್ಲಿ ಪ್ರಕೃತಿಯಲ್ಲಿ ಲಭ್ಯವಿರುವ ನೈಜ ವಸ್ತುಗಳನ್ನು ಪರಿಣಾಮಕಾರಿಯಾಗಿ ಬಳಸಬಹುದು. ಖನಿಜಗಳು, ಶಿಲೆಗಳು, ಮಣ್ಣುಗಳು, ಮಾದರಿ ಮಾನವನಿಂದ ತಯಾರಿಸಲ್ಪಟ್ಟ ಸಕ್ಕರೆ, ಕಾಗದ, ಬಟ್ಟೆ ಮುಂತಾದ ಸಿದ್ಧ ವಸ್ತುಗಳನ್ನು ತರಗತಿಯ ಬೋಧನಾ ವೇಳೆ ಬಳಸಬಹುದು.

ಈ ಮೇಲೆ ತಿಳಿಸಿರುವ ಸಾಧನಗಳಲ್ಲದೆ, ಸ್ಲೈಡುಗಳು, ಫಿಲಂ ಸ್ಟ್ರಿಪ್‌ಗಳು, ಪ್ಲಾಸ್ಟಿಕ್ ಹಾಳೆಯಲ್ಲಿ ರಚಿಸಿದ ಚಿತ್ರಗಳು, ಅಂಕಿ ಅಂಶಗಳು, ಚಲನಚಿತ್ರಗಳು, ದೂರದರ್ಶನ, ಗಣಕಯಂತ್ರ, ವೈವಿಧ್ಯಮಯವಾದ ಸಿಡಿಗಳು. ಟೇಪ್‌ರೆಕಾರ್ಡರ್, ಉಪಗ್ರಹದಿಂದ ಲಭ್ಯವಿರುವ ಚಿತ್ರಗಳು, ಅಟ್ಲಾಸ್‌ಗಳು, ತ್ರೀಡಿ ಭೂಪಟಗಳು, ಪ್ರಕಟಣಾ ಮತ್ತು ಸೂಚನಾ ಫಲಕಗಳು, ಆಲ್ಬಂ, ಫ್ಲಾನೆಲ್ ಬೋರ್ಡ್‌ಗಳು, ಕಪ್ಪುಹಲಗೆ, ನಕಲು ಮಾಡುವ ಮೇಜು, ಮೋಜಣಿ ಉಪಕರಣಗಳು, ಕ್ಯಾಮರಾಗಳು, ಪತ್ರಿಕೆಗಳು, ನಿಯತಕಾಲಿಕೆಗಳು, ಪೂರಕ ಸಾಮಗ್ರಿಗಳು ಮುಂತಾದ ಬೋಧನಾ ಪರಿಕರಗಳನ್ನು ಭೂಗೋಳ ವಿಜ್ಞಾನದ ಬೋಧನೆಯಲ್ಲಿ ಬಳಸಬಹುದು.

ಇವೆಲ್ಲವೂ ವಿಷಯ, ಶಿಕ್ಷಕ ಮತ್ತು ವಿದ್ಯಾರ್ಥಿಗಳನ್ನು ಅವಲಂಬಿಸಿದೆ. ಸಮಯ ಸಂದರ್ಭಕ್ಕನುಗುಣವಾಗಿ ಪರಿಣಾಮಕಾರಿಯಾಗಿ ಬಳಸುವುದು ಅತ್ಯಂತ ಅಗತ್ಯವೂ ಆಗಿರುತ್ತದೆ. (ಪಿ.ಎಸ್.ಎಸ್.)

**ಪ್ರಾಗ್:** ಚೆಕ್ ಗಣರಾಜ್ಯದ ರಾಜಧಾನಿ. ಯುರೋಪಿನ ಅತ್ಯಂತ ಸುಂದರ ನಗರಗಳ ಪೈಕಿ ಒಂದು. ಮಾಲ್‌ಡೌ (ವಲ್ಟವ) ನದಿಯ ಉಭಯದಂಡೆಗಳ ಮೇಲೆ ವ್ಯಾಪಿಸಿರುವ ಈ ನಗರ ರೋಮ್ ನಗರದಂತೆ ಏಳು ಬೆಟ್ಟಗಳ ನಡುವೆ ಹರಡಿದೆ. ಸಮುದ್ರಮಟ್ಟಕ್ಕೆ ನಗರದ ಕನಿಷ್ಠ ಎತ್ತರ ಸು. 190ಮೀ ವೈಟ್ ಮೌಂಟನ್ ಶಿಖರದಿಂದ ಸು. 380ಮೀ ಬೇಸಗೆಯ ಉಷ್ಣತೆ $19^0$ ಸೆ ಹಿಮಗಾಲದ ಉಷ್ಣತೆ $0^0$ಸೆ ಇಳಿಯುವುದು ನಗರದ ವಿಸ್ತೀರ್ಣ 496 ಚ. ಕಿಮೀ, ಜನಸಂಖ್ಯೆ 4178,576 (2001).

ಪ್ರಸಿದ್ಧ ವ್ಯಾಪಾರ ಕೇಂದ್ರ, ಗಾತಿಕ್ ಶೈಲಿ ಮತ್ತು ಆಧುನಿಕ ಕಟ್ಟಡ ಶಿಲ್ಪಕ್ಕೆ ಪ್ರಸಿದ್ಧಿ. ನೂರು ಗೋಪುರಗಳ ನಗರವೆಂದೇ ಖ್ಯಾತಿಯಾಗಿದೆ. ಆಧುನಿಕ ವಿವಿಧ ಕೈಗಾರಿಕೆಗಳಿವೆ. ಇಲ್ಲಿನ ಟೈನ್ ಚರ್ಚ್ ಸುಪ್ರಸಿದ್ಧ. ಉತ್ತಮ ರೈಲು ಸಂಪರ್ಕವಿದೆ. (ವಿ.ಜಿ.ಕೆ.)

**ಪ್ರಾಣಿಜೀವ ಪರಿಸರ:** ಪ್ರಾಣಿ ಜೀವ ಪರಿಸರ ಸಸ್ಯಜೀವ ಪರಿಸರದಷ್ಟೆ ಪೃಥ್ವಿಯ ವಿಶಿಷ್ಟ ಪರಿಸರವಾಗಿದೆ. ವಿಶ್ವದ ಇತರ ಯಾವುದೇ ಗ್ರಹದಲ್ಲಿ ಪ್ರಾಣಿಜೀವ ಪರಿಸರವಿಲ್ಲದೆ ಭೂಗ್ರಹ ಒಂದರಲ್ಲೆ ಅದರ ಅಸ್ತಿತ್ವವುಂಟು. ಭೂಮಿ ಮೇಲೆ ಸಸ್ಯಗಳ ಅಸ್ತಿತ್ವದಿಂದ ಪ್ರಾಣಿಗಳ ಅಸ್ತಿತ್ವ ಸಾಧ್ಯ. ಸಸ್ಯಗಳು ಸೂರ್ಯನ ಶಾಖ ಹಾಗೂ ಮಣ್ಣು, ನೀರುಗಳನ್ನು ಅವಲಂಬಿಸಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡಿವೆ. ಇವುಗಳನ್ನು ಅವಲಂಬಿಸಿ ಸಸ್ಯಹಾರಿ ಪ್ರಾಣಿಗಳು, ಸಸ್ಯಹಾರಿ ಪ್ರಾಣಿಗಳನ್ನು ಅವಲಂಬಿಸಿ ಹಲವು ಮಾಂಸಹಾರಿ ಪ್ರಾಣಿಗಳು ಅಸ್ತಿತ್ವ ಪಡೆದಿದೆ.

ಇದಲ್ಲದೆ ನೀರಿನಲ್ಲೂ ಸಹ ಹಲವು ಜಲಚರಗಳ ಅಸ್ತಿತ್ವವನ್ನು ಕಾಣಬಹುದು. ಭೂಮಿಯ ಮೇಲೆ ಜೀವಿಸುತ್ತಿರುವ ಪ್ರತಿಯೊಂದು ಪ್ರಾಣಿಯು ಮತ್ತೊಂದು ಜೀವಿಯನ್ನು ತನ್ನ ಒಂದು ಅಸ್ತಿತ್ವಕ್ಕೆ ಅವಲಂಬಿಸಿದೆ. ಹೀಗೆ ಪ್ರಾಣಿಗಳನ್ನು ಮತ್ತೊಂದು ಜೀವಿಯನ್ನು ಅವಲಂಬಿಸಿ ಬದುಕುತ್ತಿದ್ದು ಭೂಮಿಯ ಮೇಲೆ ಪ್ರಾಣಿಜೀವ ಪರಿಸರ ಅಸ್ತಿತ್ವ ಹೊಂದುವುದಕ್ಕೆ ಕಾರಣವಾಗಿದೆ. ಪ್ರಾಣಿಜೀವ ಪರಿಸರದಲ್ಲಿ ಜೀವಿಗಳು ಒಂದಕ್ಕೊಂದು ಹೇಗೆ ಅವಲಂಬಿತವಾಗಿವೆ ಹಾಗೂ ಈ ಅವಲಂಬನೆಯಿಂದ ಅವುಗಳು ಯಾವ ರೀತಿ ಪರಿಸರದಲ್ಲಿ ತಮ್ಮ ಅಸ್ತಿತ್ವವನ್ನು ಸಾಧಿಸಿವೆ ಎಂಬುದನ್ನು ಅಧ್ಯಯನ ಮಾಡಬಹುದು. ಪ್ರಾಣಿ ಜೀವ ಪರಿಸರದಲ್ಲಿ ಪ್ರತಿಯೊಂದು ಜೀವಿಯ ಅಸ್ತಿತ್ವದ ಬಗ್ಗೆ ಕಾರಣವನ್ನು ತಿಳಿಯಬಹುದಾಗಿದೆ. (ಎಚ್.ಎಸ್.ಡಿ.)

**ಪ್ರಾತಿನಿಧಿಕ ಭಿನ್ನಾಂಶ:** ನಕ್ಷೆಗಳಲ್ಲಿ ಮಾಪಕವನ್ನು ತಿಳಿಸುವ ಮುಖ್ಯ ವಿಧಾನ (ರೆಪ್ರಸೆಂಟೇಷನ್ ಫ್ರ್ಯಾಕ್ಷನ್). ಈ ವಿಧಾನದಲ್ಲಿ ಮಾಪಕವನ್ನು ಭಿನ್ನರಾಶಿಯ ರೂಪದಲ್ಲಿ ನಿರೂಪಿಸಲಾಗಿದೆ. ನಕ್ಷೆಯ ಮೇಲಿನ ದೂರವನ್ನು ಅಂಶದಿಂದಲೂ ಅದು ಪ್ರತಿನಿಧಿಸುವ ಭೂಮಿಯ ಮೇಲಿನ ದೂರವನ್ನು ಛೇದದಿಂದಲೂ ತಿಳಿಯಲಾಗುವುದು. ಅಂಶ ಮತ್ತು ಛೇದಗಳೆರಡೂ ಒಂದೇ ಅಳತೆಯ ಮೂಲಮಾನದಲ್ಲಿರುತ್ತವೆ. ಉದಾ: ಅಂಶ ಸೆಂಮೀ. ನಲ್ಲಿದ್ದರೆ, ಛೇದವೂ ಸಹ ಸೆಂಮೀ ನಲ್ಲಿರುವುದು. ಅಲ್ಲದೆ ಅಂಶ ಯಾವಾಗಲೂ 1 ಆಗಿರುವುದು. ಉದಾಹರಣೆಗೆ ಪ್ರಾತಿನಿಧಿಕ ಭಿನ್ನಾಂಶ 1/10,000 ಎಂದಿದ್ದರೆ ನಕ್ಷೆಯ ಮೇಲಿನ 1 ಅಳತೆ ಭೂಮಿಯ ಮೇಲಿನ ಅದೇ ಅಳತೆಯ 10,000ಕ್ಕೆ ಸಮ ಎಂದರ್ಥ. ಇದರಲ್ಲಿ ನಕ್ಷೆಯ ಮೇಲಿನ ದೂರವನ್ನು 1 ಸೆಂಮೀ ಎಂದು ಪರಿಗಣಿಸಿದರೆ ಅದು ಭೂಮಿಯ ಮೇಲಿನ 10,000 ಸೆಂಮೀ ಗಳನ್ನು ಪ್ರತಿನಿಧಿಸುವುದು. ಇದಕ್ಕೆ ಬದಲಾಗಿ ನಕ್ಷೆಯ ಮೇಲಿನ ದೂರವನ್ನು 1 ಅಂಗುಲ ಎಂದು ಪರಿಗಣಿಸಿದರೆ ಅದು ಭೂಮಿಯ ಮೇಲಿನ 10,000 ಅಂಗುಲಗಳನ್ನು ಪ್ರತಿನಿಧಿಸುವುದು. ವಿವಿಧ ಅಳತೆಯ ಮೂಲ ಮಾನಗಳು ವಿವಿಧ ದೇಶಗಳಲ್ಲಿ ರೂಢಿಯಲ್ಲಿವೆ. ಇದರಿಂದ ಯಾವುದೇ ರಾಷ್ಟ್ರದಲ್ಲಿ ಯಾವುದೇ ಅಳತೆಯ ಮೂಲಮಾನದಲ್ಲಿಬೇಕಾದರೂ ಪ್ರಾತಿನಿಧಿಕ ಭಿನ್ನಾಂಶದ ಮೂಲಕ ನಕ್ಷೆಯ ಮಾಪಕವನ್ನು ತಿಳಿದುಕೊಳ್ಳಬಹುದು. ಇದಕ್ಕಾಗಿ ಮಾಪಕವನ್ನು ಪ್ರಾತಿನಿಧಿಕ ಭಿನ್ನಾಂಶಕ್ಕೆ ಪರಿವರ್ತಿಸಬೇಕಾಗುವುದು. ಉದಾಹರಣೆಗೆ ಒಂದು ನಕ್ಷೆಯ ಮಾಪಕ 1 ಸೆಂಮೀ = 1 ಕಿಮೀ ಆಗಿದ್ದರೆ ಅದನ್ನು ಪ್ರಾತಿನಿಧಿಕ ಭಿನ್ನರಾಶಿಯ ರೂಪದಲ್ಲಿ ಈ ಕೆಳಕಂಡಂತೆ ಬರೆಯಬೇಕಾಗುವುದು.

$$\text{ಪ್ರಾತಿನಿಧಿಕ ಭಿನ್ನಾಂಶ} = \frac{\text{ನಕ್ಷೆಯ ಮೇಲಿನ ದೂರ}}{\text{ಭೂಮಿಯ ಮೇಲಿನ ದೂರ}}$$

$$= \frac{1 \text{ ಸೆಂಮೀ}}{1 \text{ ಕಿಮೀ}} = \frac{1 \text{ ಸೆಂಮೀ}}{100{,}000 \text{ ಸೆಂಮೀ}}$$

$$= \frac{1}{1{,}00{,}000} = \text{ಪ್ರಾ. ಭಿ} = 1 : 1{,}00{,}000$$

(ಆರ್.ಎನ್.)

**ಪ್ರಾಥಮಿಕ ಅನುಭೋಗಿ:** ಜೀವ ಪರಿಸರ ವ್ಯವಸ್ಥೆಯಲ್ಲಿ ತಮ್ಮ ಆಹಾರವನ್ನು ತಾವೇ ಉತ್ಪಾದನೆ ಮಾಡಿಕೊಳ್ಳುವ ಜೀವಿಗಳನ್ನು ಉತ್ಪಾದಕರು ಎನ್ನಲಾಗುತ್ತದೆ. ದ್ಯುತಿಸಂಶ್ಲೇಷಣೆ ಕ್ರಿಯಾವಧಿಯಲ್ಲಿ ಸಸ್ಯಗಳು ಸೌರಶಕ್ತಿ ಪಡೆದು ಅದನ್ನು ರಾಸಾಯನಿಕ ರೂಪಗಳನ್ನಾಗಿ ಪರಿವರ್ತನೆ ಮಾಡಿಕೊಂಡು ಸ್ವಯಂ ಆಹಾರ ತಯಾರಿಸಿಕೊಳ್ಳುತ್ತವೆ. ಆದ್ದರಿಂದ ಸಸ್ಯಗಳು ಯಾವುದೇ ಆಹಾರ ಸರಪಳಿಯಲ್ಲಿ ಮೊದಲನೆಯ ಸ್ಥಾನ ಅಲಂಕರಿಸಿರುವುದರಿಂದ ಪ್ರಾಥಮಿಕ ಉತ್ಪಾದಕರುಗಳು ಎಂದೂ ಕರೆಯಬಹುದು. ಸಸ್ಯಗಳು ತಯಾರಿಸುವ ಆಹಾರವನ್ನು ಸಸ್ಯಹಾರಿ ಜೀವಿಗಳು ಸೇವಿಸುವುದರಿಂದ ಅವುಗಳನ್ನು ಪ್ರಾಥಮಿಕ ಅನುಭೋಗಿ ಎಂದು ಕರೆಯಬಹುದು. (ವೈ.ಪಿ.ಆರ್.)

**ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಆರ್ಥಿಕ ಚಟುವಟಿಕೆಗಳು:** ಇಂದು ಮಾನವ ಉತ್ಪಾದನೆ, ಹಂಚಿಕೆ ಮತ್ತು ಅನುಭೋಗಕ್ಕೆ ಸಂಬಂಧಿಸಿದಂತೆ ವಸ್ತುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸಿ ಪೂರೈಸುತ್ತಿದ್ದಾನೆ. ಮಾನವ ಸಮಾಜ ವಿಕಾಸಹೊಂದಿ ಮಾನವನ ಆರ್ಥಿಕ ಚಟುವಟಿಕೆಗಳು ಹೆಚ್ಚು ಸಂಕೀರ್ಣಗೊಂಡಿವೆ. ಮೊದಲು ಅಲೆಮಾರಿಯಾಗಿದ್ದ ಮಾನವ, ಕಾಲಕ್ರಮೇಣ ಸಂಗ್ರಹಣಕಾರನಾಗಿ, ಬೇಟೆಗಾರನಾಗಿ, ಕೃಷಿಕನಾಗಿ, ಕೈಗಾರಿಕೋದ್ಯಮಿಯಾಗಿ, ಮಾಹಿತಿ ತಂತ್ರಜ್ಞಾನಿಯಾಗಿ ಅಭಿವೃದ್ಧಿ ಹೊಂದಿದ್ದಾನೆ. ಇವನು ನಿರ್ವಹಿಸುವ ಆರ್ಥಿಕ ಚಟುವಟಿಕೆಗಳನ್ನು ಮೂರುಭಾಗಗಳಾಗಿ ವಿಂಗಡಿಸಲಾಗಿದೆ.

ಪ್ರಾಥಮಿಕ ಆರ್ಥಿಕ ಚಟುವಟಿಕೆ: ಇದು ಮಾನವನ ವೃತ್ತಿಗಳಲ್ಲಿಯೇ ಅತ್ಯಂತ ಪ್ರಾಚೀನವಾದುದು. ಅವನ ಜ್ಞಾನದ ಬೆಳವಣಿಗೆಯೊಂದಿಗೆ ಈ ಚಟುವಟಿಕೆಗಳು ಅಭಿವೃದ್ಧಿ ಹೊಂದಿದವು. ಇಲ್ಲಿ ಮಾನವ ನೇರವಾಗಿ ಅಥವಾ ಪ್ರತ್ಯಕ್ಷವಾಗಿ ಪರಿಸರದಿಂದ ತನ್ನ ಬೇಕು ಬೇಡಗಳನ್ನು ಪೂರೈಸಿಕೊಳ್ಳುವನು. ಇಲ್ಲಿ ಪರಿಸರದ ಪಾತ್ರ ಪ್ರಮುಖವಾಗಿದ್ದು, ಮಾನವನ ಪಾತ್ರ ಕಡಿಮೆ ಇರುವುದು. ಇಂದು ಇದು ಅಭಿವೃದ್ಧಿ ಹೊಂದುತ್ತಿರುವ ಹಾಗೂ ಅನಭಿವೃದ್ಧಿ ಹೊಂದಿದ ರಾಷ್ಟ್ರದಲ್ಲಿನ ಜನರ ಮುಖ್ಯ ಕಸಬಾಗಿದೆ. ಪ್ರಮುಖವಾದ ಪ್ರಾಥಮಿಕ ಚಟುವಟಿಕೆಗಳೆಂದರೆ ಕೃಷಿ, ಪಶುಸಂಗೋಪನೆ, ಅರಣ್ಯಗಾರಿಕೆ, ಗಣಿಗಾರಿಕೆ, ತೋಟಗಾರಿಕೆ, ಮೀನುಗಾರಿಕೆ, ಸಂಗ್ರಹಣೆ ಮುಂತಾದವು.

ದ್ವಿತೀಯ ಆರ್ಥಿಕ ಚಟುವಟಿಕೆಗಳು : ಇವು ಬಹುಮುಖ್ಯವಾಗಿ ಪ್ರಾಥಮಿಕ ಚಟುವಟಿಕೆಗಳನ್ನು ಅವಲಂಬಿಸಿವೆ. ಪ್ರಾಥಮಿಕ ಚಟುವಟಿಕೆಗಳಿಂದ ದೊರೆಯುವ ಅನೇಕ ಉತ್ಪನ್ನಗಳು ಮಾನವನ ನೇರ ಬಳಕೆಗೆ ಬರುವುದಿಲ್ಲ. ತನ್ನ ಕೌಶಲ್ಯವನ್ನು ಉಪಯೋಗಿಸಿ, ಇವುಗಳನ್ನು ತನಗೆ ಅನುಕೂಲವಾಗುವ ಹಾಗೆ ಮಾರ್ಪಾಡಿಸಿಕೊಳ್ಳುವನು. ಪ್ರಾಕೃತಿಕವಾಗಿ ದೊರೆತ ಕಚ್ಚಾವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ಮಾರ್ಪಾಡಿಸುವ ಮಾನವನ ಆರ್ಥಿಕ ಚಟುವಟಿಕೆಗಳನ್ನು ದ್ವಿತೀಯ ಚಟುವಟಿಕೆಗಳೆನ್ನುವರು. ಉದಾ: ಕೈಗಾರಿಕೆಗಳು, ಕೈಗಾರಿಕಾ ಕ್ರಾಂತಿಯೊಂದಿಗೆ ಇದರ ಪಾತ್ರ ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚಾಗಿದ್ದು, ಇಂದು ಅಭಿವೃದ್ಧಿ ಹೊಂದಿದ ಎಲ್ಲಾ ರಾಷ್ಟ್ರಗಳು ಕೈಗಾರಿಕೃತ ರಾಷ್ಟ್ರಗಳಾಗಿವೆ.

ತೃತೀಯ ಆರ್ಥಿಕ ಚಟುವಟಿಕೆಗಳು: ಇದನ್ನು ಸೇವಾವಲಯವೆಂದೂ ಕರೆಯುವರು. ಇದು ಪ್ರಾಥಮಿಕ ಮತ್ತು ದ್ವಿತೀಯ ಆರ್ಥಿಕ ಚಟುವಟಿಕೆಗಳ ಅಭಿವೃದ್ಧಿಗೆ ಮತ್ತು ಸಮನ್ವಯಕ್ಕೆ ತೀರಾ ಅವಶ್ಯಕ. ಇಲ್ಲಿನ ಪ್ರಮುಖ ಚಟುವಟಿಕೆಗಳೆಂದರೆ – ವ್ಯಾಪಾರ, ಬ್ಯಾಂಕಿಂಗ್, ಸಾರಿಗೆ, ಸಂಪರ್ಕ, ವಿಮೆ, ಹಣಕಾಸು, ಶಿಕ್ಷಣ, ನ್ಯಾಯವಾದಿಗಳು, ಹೋಟೆಲ್ ಉದ್ಯಮ, ಸಮಾಜಸೇವೆ ಮೊದಲಾದವು ಇತ್ತೀಚಿನ ವರ್ಷಗಳಲ್ಲಿ ಸೇವಾ ಕ್ಷೇತ್ರ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತಿದೆ. (ಎಸ್.ಕೆ.ಪಿ.)

**ಪ್ರಾದೇಶಿಕ ಅಥವಾ ರಾಜ್ಯ ಮಟ್ಟದ ಯೋಜನೆ:** ಯಾವುದೋ ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಸೀಮಿತವಾದ ಯೋಜನೆ. ಆ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸುವುದು ಇದರ ಗುರಿಯಾಗಿರುತ್ತದೆ. ಇದನ್ನು ಪ್ರಾಂತೀಯ ಯೋಜನೆ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಇದು ರಾಷ್ಟ್ರೀಯ ಯೋಜನೆಯ ಒಂದು ಭಾಗವಾಗಿರುತ್ತದೆ. ವೈವಿಧ್ಯಮಯವಾದ ಸಂಪನ್ಮೂಲಗಳನ್ನು ಹೊಂದಿರುವ ವಿಸ್ತಾರವಾದ ದೇಶದಲ್ಲಿ ವಿವಿಧ ಪ್ರದೇಶಗಳ ನಡುವೆ ವ್ಯಾಪಕವಾದ ವ್ಯತ್ಯಾಸಗಳಿರುವುದು ಸ್ವಾಭಾವಿಕ. ಆದ್ದರಿಂದ ಯೋಜನೆಗಳನ್ನು ರೂಪಿಸುವಿಕೆ, ಅವುಗಳ ಅನುಷ್ಠಾನ ಮತ್ತು ಉಸ್ತುವಾರಿಯಲ್ಲಿ ಪ್ರಾದೇಶಿಕ ವಿಕೇಂದ್ರೀಕರಣ ಅವಶ್ಯಕವಾಗುತ್ತದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಿಕೇಂದ್ರೀಕೃತ ಯೋಜನೆಯನ್ನೇ ಪ್ರಾದೇಶಿಕ ಯೋಜನೆ ಎಂದು ಕರೆಯಬಹುದು.

ಭೂಗೋಳವಿಜ್ಞಾನಿಯಾದ ರ್‍ಯ್ಯೆಗ್ ಅಭಿಪ್ರಾಯಪಡುವಂತೆ ಈ ರೀತಿಯ ಯೋಜನೆಯನ್ನು ನಿರ್ದಿಷ್ಟ ಪ್ರದೇಶದ ವಿಶೇಷ ಆವಶ್ಯಕತೆಗಳು ಮತ್ತು ಅಲ್ಲಿನ ಜನರ ಬಯಕೆಗಳನ್ನು ಈಡೇರಿಸಲು ರಾಷ್ಟ್ರೀಯ ಯೋಜನೆಯ ಚೌಕಟ್ಟಿನಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಯೋಜನೆಗಳ ರಚನೆ, ಅನುಷ್ಠಾನ ಮತ್ತು ಉಸ್ತುವಾರಿಯನ್ನು ಕುರಿತ ಪ್ರಾಂತೀಯ ಕ್ಷೇತ್ರದ ಬಗೆಗಿನ ನಿರ್ದಿಷ್ಟ ಅಧಿಕಾರಗಳನ್ನು ಪ್ರಾದೇಶಿಕ ಅಧಿಕಾರಿಗಳು ಹೊಂದಿರುತ್ತಾರೆ. ತನ್ನ ಪ್ರದೇಶವು ವಿಸ್ತಾರವಾಗಿರುವ ಪ್ರತಿಯೊಂದು ದೇಶ ಉನ್ನತ ಶ್ರೇಣಿಯ ಪ್ರಾದೇಶಿಕ ವಿಕೇಂದ್ರೀಕರಣವನ್ನು ಬಯಸುತ್ತದೆ. ಆ ಪ್ರಕಾರ ಪ್ರತಿಯೊಂದು ಪ್ರದೇಶದ ಪೂರ್ಣ ಸಾಮರ್ಥ್ಯ ಬಳಕೆಯಾಗುವಂತೆ ಮಾಡುವುದು ಪ್ರಾದೇಶಿಕ ಯೋಜನೆಯ ಪ್ರಮುಖ ಧ್ಯೇಯೋದ್ದೇಶವಾಗಿರುತ್ತದೆ. ಈ ಯೋಜನೆಯಲ್ಲಿ ವಿಸ್ತಾರವಾದ ದೇಶದಲ್ಲಿ ಅಸ್ತಿತ್ವದಲ್ಲಿರುವ ಆರ್ಥಿಕ ಮತ್ತು ಸಾಮಾಜಿಕ ವ್ಯತ್ಯಾಸಗಳನ್ನು ಸಮರ್ಪಕವಾಗಿ ಅಂದಾಜು ಮಾಡಲಾಗುತ್ತದೆ ಮತ್ತು ಅವುಗಳನ್ನು ಯಶಸ್ವಿಯಾಗಿ ಕಡಿಮೆ ಮಾಡಲು ಯೋಜಿಸಲಾಗುತ್ತದೆ.

ವಿಕೇಂದ್ರೀಕೃತ ಯೋಜನಾ ಪದ್ಧತಿಯಲ್ಲಿ ರಾಜ್ಯ ಸರ್ಕಾರಗಳೂ ಸಹ ಯೋಜನೆಯನ್ನು ಅನುಷ್ಠಾನಗೊಳಿಸುವುದು ಆವಶ್ಯಕವಾಗಿದೆ. ಆದ್ದರಿಂದ ಯೋಜನಾ ಆಯೋಗ ಸಿದ್ಧಪಡಿಸುವ ರಾಷ್ಟ್ರೀಯ ಯೋಜನೆಯ ಜೊತೆಗೆ ಪ್ರತಿಯೊಂದು ರಾಜ್ಯಕ್ಕೂ ಅನ್ವಯಿಸುವಂತೆ ಪ್ರತ್ಯೇಕ ಯೋಜನೆ ಇರುತ್ತದೆ. ರಾಜ್ಯಗಳ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಯ ಜೊತೆಯಲ್ಲಿಯೇ ಮತ್ತು ಅದೇ ವಿಧಾನಗಳಲ್ಲಿ ಸಿದ್ಧಪಡಿಸಲಾಗುತ್ತದೆ. ಈ ಎಲ್ಲಾ ಯೋಜನೆಗಳು ಪರಸ್ಪರ ಸುಸಂಗತವಾಗಿರುವಂತೆ ಒಟ್ಟು ಉದ್ದೇಶಿತ ಹೂಡಿಕೆಗೆ ಅನುರೂಪವಾಗಿರುವಂತೆ ವ್ಯವಸ್ಥೆ ಮಾಡುವುದು ಯೋಜನಾ ಆಯೋಗದ ಪ್ರಮುಖ ಕಾರ್ಯವಾಗಿದೆ.

ಪ್ರತಿಯೊಂದು ರಾಜ್ಯವೂ ತನ್ನ ಯೋಜನಾ ಕರಡನ್ನು ಸಿದ್ಧಪಡಿಸಿ ಯೋಜನಾ ಆಯೋಗಕ್ಕೆ ಮತ್ತು ತನ್ನ ಶಾಸನಸಭೆಗೆ ಸಲ್ಲಿಸಬೇಕಾಗಿರುತ್ತದೆ. ಆಯೋಗದೊಡನೆ ಚರ್ಚೆಗಳನ್ನು ನಡೆಸಿದ ಅನಂತರ ಯೋಜನೆಯನ್ನು ಅಂತಿಮಗೊಳಿಸಲಾಗುತ್ತದೆ. ರಾಜ್ಯಗಳೂ ಸಹ ರಾಷ್ಟ್ರೀಯ ಯೋಜನೆಯಂತೆ ಪಂಚವಾರ್ಷಿಕ ಹಾಗೂ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುತ್ತವೆ. ತನ್ನ ಯೋಜನೆಯನ್ನು ರೂಪಿಸಲು ಪ್ರತಿಯೊಂದು

ರಾಜ್ಯವೂ ಯೋಜನಾ ಯಂತ್ರವನ್ನು ಹೊಂದಿರಬೇಕಾದುದು ಅಗತ್ಯವಾಗಿದೆ. ರಾಜ್ಯ ಸರ್ಕಾರದಲ್ಲಿರುವ ಯೋಜನಾ ಇಲಾಖೆಯೇ ಇಂತಹ ಯಂತ್ರವಾಗಿದೆ. ರಾಜ್ಯ ಸರ್ಕಾರ ಪ್ರತ್ಯೇಕ ಆಯೋಜನಾ ಇಲಾಖೆಯನ್ನು ಹೊಂದಿರುತ್ತದೆ. ಈ ಇಲಾಖೆಯು ಸಚಿವರೊಬ್ಬರ ಉಸ್ತುವಾರಿಗೆ ಒಳಪಟ್ಟಿರುತ್ತದೆ. ಅಧಿಕಾರಶಾಹಿ ಮಟ್ಟದಲ್ಲಿ ಈ ಇಲಾಖೆಯು ಸರ್ಕಾರದ ಕಾರ್ಯದರ್ಶಿಯ ನೇತೃತ್ವದಲ್ಲಿರುತ್ತದೆ. ರಾಜ್ಯದಲ್ಲಿ ಯೋಜನಾ ಇಲಾಖೆಯು ಇತರ ಇಲಾಖೆಗಳೊಂದಿಗೆ ನಿಕಟವಾಗಿ ಸಂಪರ್ಕಿಸಿ ರಾಜ್ಯದ ಯೋಜನಾ ವರದಿಯನ್ನು ತಯಾರಿಸಿ ಯೋಜನಾ ಆಯೋಗಕ್ಕೆ ಒಪ್ಪಿಸುತ್ತದೆ.

ರಾಜ್ಯದ ಯೋಜನೆಗಳಿಗೆ ಸಂಬಂಧಿಸಿದಂತೆ ಯೋಜನಾ ಆಯೋಗಕ್ಕೂ ರಾಜ್ಯ ಸರ್ಕಾರಕ್ಕೂ ನೇರ ಸಂಪರ್ಕವಿರುತ್ತದೆ. ಯೋಜನಾ ನೀತಿಯ ವಿಷಯವನ್ನು ಮುಖ್ಯಮಂತ್ರಿಗಳೊಡನೆಯೂ ರಾಜ್ಯಮಟ್ಟದ ಆಡಳಿತ ಸಮನ್ವಯ ವಿಷಯಗಳನ್ನು ರಾಜ್ಯದ ಯೋಜನಾ ಇಲಾಖೆಗಳೊಡನೆಯೂ ಮತ್ತು ನಿರ್ದಿಷ್ಟ ವಿಷಯಗಳನ್ನು ನೇರವಾಗಿ ಸಂಬಂಧಿಸಿದ ಇಲಾಖೆಗಳೊಡನೆಯೂ ಚರ್ಚಿಸುವ ಮೂಲಕ ಯೋಜನಾ ಆಯೋಗ ವಿಕೇಂದ್ರೀಕೃತ ಪದ್ಧತಿಯನ್ನು ಯಶಸ್ವಿಗೊಳಿಸುವಲ್ಲಿ ಮುನ್ನಡೆದಿದೆ.

ಯೋಜನೆಯನ್ನು ಸಿದ್ಧಪಡಿಸುವಿಕೆ ಮತ್ತು ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ರಾಜ್ಯದಲ್ಲಿಯೂ ಒಂದು ಸಂಪುಟ ಸಮಿತಿ ಇರುತ್ತದೆ. ವಿವಿಧ ಸಚಿವಾಲಯಗಳು ತಯಾರಿಸಿದ ಯೋಜನೆಗಳನ್ನು ಸಮನ್ವಯಗೊಳಿಸುವ ಕಾರ್ಯದಲ್ಲಿ ಈ ಸಮಿತಿಗೆ ನೆರವು ನೀಡಲು ಅಧಿಕಾರಿಗಳ ಒಂದು ಸಮಿತಿ ಇರುತ್ತದೆ. ಕೆಲವು ರಾಜ್ಯಗಳಲ್ಲಿ ಶಾಸನ ಸಭಾ ಸದಸ್ಯರುಗಳನ್ನೊಳಗೊಂಡ ಅಧಿಕಾರೇತರ ಸಲಹಾ ಸಮಿತಿಗಳಿವೆ.

ಅನುಕೂಲತೆಗಳು: ಪ್ರಾದೇಶಿಕ ಯೋಜನೆಯಲ್ಲಿ ನಿರ್ದಿಷ್ಟ ಪ್ರದೇಶದ ಅಭಿವೃದ್ಧಿಗಾಗಿ ಯೋಜನೆಯನ್ನು ಕೈಗೊಳ್ಳುವುದರಿಂದ ಆ ಪ್ರದೇಶದಲ್ಲಿ ಉತ್ಪಾದನೆ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಹಾಗೂ ಆರ್ಥಿಕ ಅಸಮಾನತೆಗಳನ್ನು ಕಡಿಮೆ ಮಾಡಲು ವ್ಯಾಪಕ ಅವಕಾಶಗಳು ಲಭಿಸುತ್ತವೆ. ನಿರ್ದಿಷ್ಟ ಪ್ರದೇಶದ ಅಭಿವೃದ್ಧಿಗಾಗಿ ಪ್ರಯತ್ನಗಳನ್ನು ಕೇಂದ್ರೀಕರಿಸಲಾಗುವುದರಿಂದ ಸಂಪನ್ಮೂಲಗಳನ್ನು ವ್ಯರ್ಥವಾಗದಂತೆ ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಾದೇಶಿಕ ಯೋಜನೆಯಲ್ಲಿ ವಿಕೇಂದ್ರೀಕರಣ ವಾಸ್ತವವಾಗಿ ಅನುಷ್ಠಾನದಲ್ಲಿರುತ್ತದೆ. ಪರಿಣಾಮವಾಗಿ ಜನರು ಯೋಜನೆಯ ಎಲ್ಲಾ ಹಂತದಲ್ಲಿಯೂ ಭಾಗಿಗಳಾಗಲು ಸಾಧ್ಯವಿರುತ್ತದೆ.

ಅವಗುಣಗಳು: ಪ್ರಾದೇಶಿಕ ಯೋಜನೆಯಲ್ಲಿ ಕೆಲವೇ ನಿರ್ದಿಷ್ಟ ಪ್ರದೇಶಗಳ ಅಭಿವೃದ್ಧಿಗೆ ಗಮನಹರಿಸಲಾಗುವುದರಿಂದ ರಾಷ್ಟ್ರದ ಒಟ್ಟಾರೆ ಅಭಿವೃದ್ಧಿಯು ಕಡೆಗಣಿಸಲ್ಪಡುತ್ತದೆ. ಈ ವಿಧದ ಯೋಜನೆಯಲ್ಲಿ ಕೆಲವೇ ಕ್ಷೇತ್ರಗಳ ಅಥವಾ ವಲಯಗಳ ಪ್ರಗತಿ ಸಾಧನೆಗೆ ತೀವ್ರವಾದ ಪ್ರಯತ್ನಗಳನ್ನು ಕೈಗೊಳ್ಳಲಾಗುವುದರಿಂದ ಸಮಗ್ರ ಅಭಿವೃದ್ಧಿಯು ಫಲಿಸಲಾರದು. (ಟಿ.ಎಂ.ಎಂ.)

**ಪ್ರಾದೇಶಿಕ ಬೆಳೆವಣಿಗೆ:** ಒಂದು ಪ್ರದೇಶದ ಆರ್ಥಿಕ ಬೆಳೆವಣಿಗೆಯು ಆದಾಯ ಅಥವಾ ತಲಾ ಆದಾಯದ ಒಟ್ಟಾರೆ ಹೆಚ್ಚಳವಾಗಿರುತ್ತದೆ. ಆಯಾ ಪ್ರದೇಶದ ಬೆಳೆವಣಿಗೆ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳಗಳ ಸಮರ್ಪಕ ಬಳಕೆಯ ಪರಿಣಾಮವೆಂದು ಹೇಳಬಹುದು. ಉತ್ಪಾದನಾಂಗಗಳ ಬಳಕೆಯಲ್ಲದೆ ದೇಶದ ವಿವಿಧ ಪ್ರದೇಶಗಳಿಂದ ಉತ್ಪನ್ನ ವಸ್ತುಗಳ ಮೇಲಿನ ಬೇಡಿಕೆಯ ಮಟ್ಟದಲ್ಲಿನ ಗಣನೀಯ ಹೆಚ್ಚಳವೂ ಸಹ ಪ್ರಾದೇಶಿಕ ಬೆಳೆವಣಿಗೆಗೆ ಕಾರಣವಾಗಿದೆ. ಪ್ರಾದೇಶಿಕ ಬೆಳೆವಣಿಗೆ ಆಂತರಿಕ ಅಥವಾ ಬಾಹ್ಯ ಅಂಶಗಳ ಪರಿಣಾಮವೆಂದು ವಿಶ್ಲೇಷಿಸಲಾಗಿದೆ. ಈ ಕುರಿತ ಕೆಲವು ಸಿದ್ಧಾಂತಗಳು ಪ್ರಾದೇಶಿಕ ಬೆಳೆವಣಿಗೆಯಲ್ಲಿ ಆಂತರಿಕಾಂಶಗಳು ಕಾರಣವಾಗಿವೆಯೆಂತಲೂ ಮತ್ತೆ ಕೆಲವು ಬಾಹ್ಯಾಂಶಗಳು ಕಾರಣವೆಂದು ವಿವರಿಸಲು ಯತ್ನಿಸಿವೆ.

ಪ್ರಾದೇಶಿಕ ಬೆಳೆವಣಿಗೆ ಏಕಾಗ್ರ ರೂಪವಾಗಿರುತ್ತದೆಯೋ ಅಥವಾ ಭಿನ್ನ ರೂಪವಾಗಿರುತ್ತದೆಯೋ ಎಂಬುದು ಪ್ರಾದೇಶಿಕ ಯೋಜಕರ ಚಿಂತನೆಯಾಗಿದೆ. ಅಲ್ಲದೆ ಹಿರ್ಷ್ ಮ್ಯಾನ್, ಫ್ರೈಡ್‌ಮ್ಯಾನ್ ಮತ್ತು ಮಿರ್ಡಾಲ್ ಅವರು ಕೇಂದ್ರ ಪರಿಧಿ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಅಂತಹ ಸಿದ್ಧಾಂತಗಳು ಎ ಮತ್ತು ಬಿ ಎಂಬ ಎರಡು ಪ್ರದೇಶಗಳಿಗೆ ಸಂಬಂಧಿತ ಬೆಳೆವಣಿಗೆಯನ್ನು ಕುರಿತು ಚರ್ಚಿಸಿವೆ. ಎ ಪ್ರದೇಶ ಬಿ ಪ್ರದೇಶಕ್ಕಿಂತ ಹೆಚ್ಚು ಲಭ್ಯವಿರುವ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ಅನುಕೂಲತೆಗಳನ್ನು ಉಪಯೋಗಿಸಿಕೊಂಡು ಬಿ ಪ್ರದೇಶಕ್ಕಿಂತ ಪ್ರಾರಂಭದಲ್ಲಿ ಅತಿವೇಗದಲ್ಲಿ ಅಭಿವೃದ್ಧಿಹೊಂದುವುದು. ಏನೇ ಆದರೂ ಇದು ಅನೇಕ ಬೆಳೆವಣಿಗೆ ಸಿದ್ಧಾಂತಗಳಿಗೆ ವಿರೋಧವಾಗಿದ್ದರೂ ಭಿನ್ನಾಭಿಮುಖ ಬೆಳೆವಣಿಗೆ ಸಹಜವಾಗಿ ಕಂಡುಬರುವುದಲ್ಲದೆ ಒಟ್ಟಾರೆ ಬೆಳೆವಣಿಗೆಯ ಪ್ರಕ್ರಿಯೆಯು ಶ್ರೀಮಂತರನ್ನು ಶ್ರೀಮಂತರನ್ನಾಗಿಯೂ ಮತ್ತು ಬಡವರನ್ನು ಬಡವರಾಗಿಯೂ ರೂಪುಗೊಳಿಸುತ್ತದೆ.

ಗುನಾರ್ ಮಿರ್ಡಾಲ್ ಅವರು ಒಟ್ಟುಗೂಡಿದ ಸಕಾರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಚದುರಿದ ಮತ್ತು ಹಿಂತೊಳೆತ ಪರಿಣಾಮಗಳನ್ನು ಕುರಿತು ವಿವರಿಸಿದ್ದಾರೆ. ಚದುರಿದ ಪರಿಣಾಮಬಲ ಸಮೃದ್ಧ ಪ್ರದೇಶಗಳ ಮತ್ತು ಹಿಂದುಳಿದ ಪ್ರದೇಶಗಳ ನಡುವೆ ಏಕಾಗ್ರ ಮುಖ ಬೆಳೆವಣಿಗೆಗೆ ಸಹಕಾರಿಯಾಗಿವೆ. ಸಮೃದ್ಧ ಪ್ರದೇಶಗಳು ಬೆಳೆವಣಿಗೆಯಾದಂತೆ ಸಮೃದ್ಧ ಮತ್ತು ಹಿಂದುಳಿದ ಪ್ರದೇಶಗಳ ನಡುವಣ ಅಂತರ ಕಾಲಕಾಲಕ್ಕೆ ವ್ಯತ್ಯಾಸಹೊಂದುತ್ತವೆ. ಕೆಲವು ಪ್ರಾದೇಶಿಕ ಬೆಳೆವಣಿಗೆ ಸಿದ್ಧಾಂತಗಳ ಪ್ರಕಾರ ಪ್ರದೇಶಗಳ ನಡುವಿನ ಅಸಮತೋಲನ ಸರಿಪಡಿಸಲು ಮಧ್ಯಸ್ಥಿಕೆಯ ಅಗತ್ಯವಿದೆ. ವಿಭಾಗೀಯ ಸಿದ್ಧಾಂತ ಸಲಹೆ ಮಾಡಿರುವಂತೆ ಕೃಷಿಕ್ಷೇತ್ರ ಆಂತರಿಕ ಸಂಪನ್ಮೂಲಗಳ ಹಂಚಿಕೆಯಲ್ಲಿ ಅಭಿವೃದ್ಧಿ ಪ್ರದೇಶಗಳಿಗಿಂತ ಹಿಂದುಳಿದ ಕೃಷಿಕ್ಷೇತ್ರ ಪ್ರದೇಶಗಳಿಗೆ ಹೆಚ್ಚು ಒತ್ತು ಕೊಡುವುದರಿಂದ ಕ್ರಮೇಣ ಪ್ರಾದೇಶಿಕ ಅಭಿವೃದ್ಧಿ ಏಕಾಗ್ರಮುಖ ಬೆಳೆವಣಿಗೆ ಹೊಂದುವುದೆಂದು ಸಲಹೆ ನೀಡಿವೆ. ಹೀಗೆ ಅಂತರ ಪ್ರಾದೇಶಿಕ ವ್ಯಾಪಾರ ಮಾದರಿ ಅಂಶಗಳ ಹರಿವಿಕೆಯಿಂದ ತಲಾದಾಯ ಹೆಚ್ಚಳಗೊಂಡು ಪ್ರಾದೇಶಿಕ ಏಕಾಗ್ರಮುಖ ಬೆಳೆವಣಿಗೆ ಪಡೆಯುತ್ತದೆ.

ಏಕಾಗ್ರಮುಖ ಬೆಳೆವಣಿಗೆಯ ಪ್ರವೃತ್ತಿಯು ಉತ್ಪಾದನಾಂಗಗಳ ಅಚಲನಾತ್ಮಕತೆಗೆ ಕಾರಣವಾಗಿದ್ದು, ವಿವಿಧ ಕ್ಷೇತ್ರಗಳು ಮತ್ತು ಪ್ರದೇಶಗಳ ನಡುವೆ ಚಲನೆ ಕಂಡುಬರದೆ ಅಸಮತೋಲನಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಯಾವುದೇ ಪ್ರದೇಶದ ಸಮತೋಲನವನ್ನು ಕಾಯ್ದುಕೊಳ್ಳಲು ಸೂಕ್ತ ರೀತಿಯ ಆರ್ಥಿಕ ನಿಯಮಗಳನ್ನು ರೂಪಿಸುವುದು ಅತ್ಯಗತ್ಯವಾಗಿದೆ.

ಮಿಶ್ರತಳಿಯಂತಿರುವ ಒಂದು ಗುಂಪಿನ ಪ್ರಾದೇಶಿಕ ಬೆಳೆವಣಿಗೆ ಸಿದ್ಧಾಂತಗಳು ತಿಳಿಸಿರುವಂತೆ ಪ್ರಾದೇಶಿಕ ಬೆಳೆವಣಿಗೆ ಸಾಮಾನ್ಯವಾಗಿ ಏಕಾಗ್ರಮುಖತೆಗೆ ಬದಲಾಗಿ ಭಿನ್ನಮುಖ ಬೆಳೆವಣಿಗೆ ಹೊಂದುತ್ತವೆ. ಉತ್ಪನ್ನಗಳಿಗೆ ಗಣನೀಯ ಪ್ರಮಾಣದಲ್ಲಿ ಬೇಡಿಕೆ ಹೆಚ್ಚಳಗೊಳ್ಳುವುದರ ಮೂಲಕ ಬೆಳೆವಣಿಗೆ ಉದ್ದೀಪನಗೊಳ್ಳುತ್ತದೆ. ಹೀಗೆ ಹಿಂದುಳಿದ ಪ್ರದೇಶಗಳಿಂದ ಜನರು ವಲಸೆ ಹೋಗುವುದರಿಂದ ಸಂಪನ್ಮೂಲಗಳ ಪುನರ್ ಹಂಚಿಕೆಯಾಗುವುದರ ಮೂಲಕ ಸಂಪನ್ಮೂಲಗಳ ಸಮರ್ಪಕ ಬಳಕೆಯಾಗಿ, ಆಂತರಿಕವಾಗಿ ಕಡಿಮೆ ಕೂಲಿ ದರ ಹೆಚ್ಚಾಗಿ ಉತ್ಪಾದನಾ ಕ್ಷೇತ್ರಗಳಲ್ಲಿ ಉತ್ಪಾದನೆ ಗಣನೀಯವಾಗಿ ಹೆಚ್ಚಳಗೊಂಡು ಬೆಳೆವಣಿಗೆಯು ವೃದ್ಧಿಸುತ್ತದೆ. ಅಲ್ಲದೆ ಮಿರ್ಡಾಲ್‌ರು ಹಿಂತೊಳೆತ ಪರಿಣಾಮಗಳಿಗಿಂತ ಚದುರಿದ ಪರಿಣಾಮಗಳ ಬಗ್ಗೆ ಹೆಚ್ಚು ನಂಬಿಕೆ ಹೊಂದಿರುವರು.

ಪ್ರಾದೇಶಿಕ ಬೆಳೆವಣಿಗೆ ಅನೇಕ ಅಂಶಗಳ ಪರಿಣಾಮವಾಗಿದ್ದು, ಕೆಲವು ಆಂತರಿಕ ಅಂಶಗಳು ಮತ್ತೆ ಕೆಲವು ಬಾಹ್ಯಾಂಶಗಳಾಗಿವೆ. ಯಾವುದೇ ಪ್ರದೇಶದ ಬೆಳೆವಣಿಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಂಶಗಳಿಂದ ಕೂಡಿದೆ. ಆದ್ದರಿಂದ ಸಾಮಾನ್ಯವಾಗಿ ಒಮ್ಮತವಾಗುವ ಮತ್ತು ಸಮಗ್ರ ಪ್ರಾದೇಶಿಕ ಬೆಳೆವಣಿಗೆಯ ಸಿದ್ಧಾಂತ ರೂಪಿಸುವುದು ಕಷ್ಟ. ವಿಭಾಗೀಯ ಅಥವಾ ಕ್ಷೇತ್ರೀಯ ಸಿದ್ಧಾಂತ ಮತ್ತು ರಫ್ತು ಆಧಾರಿತ ಸಿದ್ಧಾಂತಗಳು ಸ್ವಲ್ಪ ಮಟ್ಟಿಗೆ ಸರಳ ಸಮಷ್ಟಿ ಮಾದರಿಗಳನ್ನು ರೂಪಿಸುವಲ್ಲಿ ಯಶಸ್ವಿಯಾಗಿವೆ.

ಅಭಿವೃದ್ಧಿಗೆ ಸಂಬಂಧಿಸಿದಂತೆ ಹೊಸ ಸಮಷ್ಟಿ ಆರ್ಥಿಕ ಮಾದರಿಗಳು ಆಸಕ್ತಿಯುಂಟು ಮಾಡಿವೆ. ಆದರೆ, ಪ್ರಾದೇಶಿಕ ಬೆಳೆವಣಿಗೆ ಕುರಿತು ವಿವರಿಸುವಲ್ಲಿ ಯಾವುದೇ ಸಿದ್ಧಾಂತ ಪರಿಪೂರ್ಣತೆ ಪಡೆದಿರುವುದಿಲ್ಲ. ಸೈದ್ಧಾಂತಿಕ ಪರಂಪರೆಯ ಪ್ರಾದೇಶಿಕ ಬೆಳೆವಣಿಗೆಯಲ್ಲಿನ ಆಂತರಿಕ ಮತ್ತು ಬಾಹ್ಯ ನಿರ್ಧಾರಾಂಶಗಳನ್ನು ಗುರುತಿಸಲು ಪ್ರಯತ್ನಗಳು ನಡೆದಿವೆ. (ಟಿ.ಎಂ.ಎಂ.)

**ಪ್ರಾದೇಶಿಕ ಯೋಜನೆ:** ಯಾವುದೇ ವಿಸ್ತಾರವಾದ ದೇಶದಲ್ಲಿ ಆರ್ಥಿಕ ಸಂಪನ್ಮೂಲಗಳು ದೇಶದ ಪ್ರತಿಯೊಂದು ವಿಭಾಗಗಳಲ್ಲೂ ಒಂದೇ ಸಮನಾಗಿ ಹರಡಿಕೊಂಡಿರುವುದಿಲ್ಲ. ಖನಿಜಗಳು, ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳು ಮತ್ತು ವಿದ್ಯುತ್ತು, ಕೃಷಿಗೆ ಅಗತ್ಯವಾದ ಉತ್ತಮ ಭೂಮಿ, ನೀರು ಮುಂತಾದವು ಅಸಮವಾಗಿಯೆ ಪಸರಿಸಿರುತ್ತದೆ. ಕೆಲವು ಪ್ರದೇಶಗಳು ಉಳಿದವುಗಳಿಗಿಂತ ಹೆಚ್ಚು ಸಂಪನ್ನವಾಗಿರುತ್ತವೆ.

ಆದರೆ ಲಾಭೋದ್ದೇಶದ ಉದ್ಯಮಶೀಲತೆ ಹೆಚ್ಚು ಸಂಪದ್ಯುಕ್ತ ಪ್ರದೇಶಗಳಿಗೆ ಪ್ರಾಶಸ್ತ್ಯನೀಡಿ ಉಳಿದ ಪ್ರದೇಶಗಳನ್ನು ಕಡೆಗಣಿಸುವುದರಿಂದ ಪ್ರದೇಶಗಳಲ್ಲಿ ಅಸಮಾನ ಬೆಳೆವಣಿಗೆ ಉಂಟಾಗುತ್ತದೆ. ಪ್ರಾಶಸ್ತ್ಯ ನೀಡಿದ ಪ್ರದೇಶಗಳಲ್ಲಿ ಔದ್ಯೋಗಿಕ ಒತ್ತಡ ಏರ್ಪಡುತ್ತದೆ. ಒಂದೇ ಬಗೆಯ ಸರಕನ್ನು ತಯಾರಿಸುವ ಅನೇಕ ಉದ್ಯಮಗಳು ಹುಟ್ಟಿಕೊಳ್ಳುತ್ತಿದ್ದು ಆ ಪ್ರದೇಶದ ಅಭಿವೃದ್ಧಿಯಾಗುತ್ತಿದೆ. ಇಂಥ ಸಾಂದ್ರೀಕರಣ ಬೆಳವಣಿಗೆಯಿಂದ ಕಾಲಾನುಕ್ರಮದಲ್ಲಿ ಉತ್ಪಾದನೆಯ ವೆಚ್ಚ ಏರುವುದರಿಂದ ಸ್ಪರ್ಧಾನಿರತರಾದ ಉತ್ಪಾದಕರು ತಾವಾಗಿಯೇ ಇತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗುವರೆಂದೂ ಆದ್ದರಿಂದ ಸ್ಪರ್ಧಾ ಪ್ರಪಂಚದಲ್ಲಿ ಕ್ರಮೇಣ ಸಹಜವಾಗಿಯೇ ಪ್ರಾದೇಶಿಕ ಸಮತೋಲ ಏರ್ಪಡುವುದೆಂದೂ ವಾದಿಸಲಾಗಿದೆ.

ಆದರೆ ಈ ಪ್ರಕ್ರಿಯೆ ದೀರ್ಘಕಾಲದ್ದಾದ್ದರಿಂದ ಸಮಾಜದ ದೃಷ್ಟಿಯಲ್ಲಿ ತಾಪದಾಯಕವೂ ಸಂಪನ್ಮೂಲಗಳ ವೃಥಾ ನಷ್ಟಕ್ಕೆ ಕಾರಣವೂ ಆಗಬಹುದು. ಅಲ್ಲದೆ ಪರಿಪೂರ್ಣ ಸ್ಪರ್ಧಾತ್ಮಕ ಪರಿಸ್ಥಿತಿ ಕೇವಲ ಆದರ್ಶವಷ್ಟೆ. ಆದ್ದರಿಂದ ಪ್ರಾದೇಶಿಕ ಅಸಮತೆ ಕಡಿಮೆಯಾಗುವ ಬದಲು ಹೆಚ್ಚುತ್ತಲೇ ಹೋಗುತ್ತದೆ. ಇಂಥ ಪರಿಸ್ಥಿತಿಯನ್ನು ತಪ್ಪಿಸುವ ಉದ್ದೇಶದಿಂದ

ಪ್ರಾದೇಶಿಕ ಯೋಜನೆಗಳನ್ನು ಜಾರಿಗೆ ತರುವುದು ಅಗತ್ಯವೆನಿಸುತ್ತದೆ. ಭೂಮಿಯ ಯಾವುದೇ ಪ್ರದೇಶದ ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲಗಳ ಕಾರ್ಯಾದಕ್ಷತೆಯ ಬಗ್ಗೆ ಅಮೂಲಾಗ್ರವಾಗಿ ಮತ್ತು ವ್ಯವಸ್ಥಿತವಾಗಿ ಅಧ್ಯಯನ ಮಾಡಿ, ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುವುದನ್ನ ಪ್ರಾದೇಶಿಕ ಯೋಜನೆಯೆಂದು ಕರೆಯಲಾಗಿದೆ. ರಾಜ್ಯಶಾಸ್ತ್ರಜ್ಞರು, ಎಂಜಿನಿಯರುಗಳು, ಸಮಾಜಶಾಸ್ತ್ರಜ್ಞರು, ಭೂಗೋಳವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು ಮುಂತಾದವರು ಪ್ರಾದೇಶಿಕ ಯೋಜನೆಗೆ ಹೆಚ್ಚು ಹೆಚ್ಚು ಗಮನ ನೀಡತೊಡಗಿದ್ದಾರೆ. ಒಂದು ಅಥವಾ ಹೆಚ್ಚು ದೇಶಗಳಲ್ಲಿ ಹರಡಿರುವ ವಿಸ್ತಾರವಾದ ಭೂಪ್ರದೇಶವಾಗಲಿ ಯಾವುದೊಂದು ನದೀಕಣಿವೆ ಅಥವಾ ನಗರ ವಸತಿ ಪ್ರದೇಶದಂಥ ಹೆಚ್ಚು ಸೀಮಿತ ಪ್ರದೇಶವಾಗಲಿ ಇಂಥ ಯೋಜನೆಗೆ ಒಳಪಡಬಹುದು. ಐರೋಪ್ಯ ಆರ್ಥಿಕ ಸಮುದಾಯ, ಕೊಲಂಬೋ ಯೋಜನೆ ಇವು ಅಂತಾರಾಷ್ಟ್ರೀಯ ಪ್ರಾದೇಶಿಕ ಯೋಜನೆಗಳ ಉದಾಹರಣೆಗಳು. ಇವು ಹಲವು ರಾಷ್ಟ್ರಗಳನ್ನು ಇಡಿಯಾಗಿ ಒಳಗೊಂಡ ಯೋಜನೆಗಳು. ಎರಡು ಅಥವಾ ಹೆಚ್ಚು ರಾಷ್ಟ್ರಗಳ ಭಾಗಗಳನ್ನು ಒಳಗೊಳ್ಳುವುವೆಂದರೆ ಸೇಂಟ್ ಲಾರೆನ್ಸ್ ಸಮುದ್ರ ದ್ವಾರ, ನೈಲ್ ನದಿ ಕಣಿವೆ ಮತ್ತು ಮೆಕಾಂಗ್ ನದಿ ಯೋಜನೆಗಳು. ಒಂದೇ ದೇಶದಲ್ಲಿ ಹಲವು ರಾಜ್ಯಗಳ ಭಾಗಗಳನ್ನೊಳಗೊಳ್ಳುವ, ಆ ರಾಜ್ಯಗಳ ಪರಸ್ಪರ ಸಹಕಾರ ಅಗತ್ಯವಾಗಿರುವ ಯೋಜನೆಗಳ ಉದಾಹರಣೆಗಳು ಅಮೆರಿಕದ ಟೆನೆಸೀ ಕಣಿವೆ ಪ್ರಾಧಿಕಾರ ಮತ್ತು ಭಾರತದ ದಾಮೋದರ್ ಕಣಿವೆ ಯೋಜನೆ. ಒಂದೇ ರಾಜ್ಯದ ಹಲವು ಜಿಲ್ಲೆಗಳನ್ನು ಅಥವಾ ಹಲವು ಜಿಲ್ಲೆಗಳ ಭಾಗಗಳನ್ನೊಳಗೊಂಡು ರೂಪಿತವಾದ ಪ್ರಾದೇಶಿಕ ಯೋಜನೆಗಳಿಗೆ ಉದಾಹರಣೆಗಳೆಂದರೆ ಆಂಧ್ರಪ್ರದೇಶದ ತೆಲಂಗಾಣ ಅಭಿವೃದ್ಧಿ ಯೋಜನೆ, ಕರ್ನಾಟಕದ ಮಲೆನಾಡು ಅಭಿವೃದ್ಧಿ ಯೋಜನೆ ಇತ್ಯಾದಿಗಳು. ಅದರಂತೆ ಹಲವು ನಗರ ಯೋಜನೆಗಳು ಸಹ ಪ್ರಾದೇಶಿಕ ಯೋಜನೆಗಳೆ. ಉದಾಹರಣೆಗೆ ರಾಷ್ಟ್ರೀಯ ರಾಜಧಾನಿ ಪ್ರದೇಶದ (ದೆಹಲಿ) ಯೋಜನೆ, ಬೆಂಗಳೂರು ಮಹಾನಗರದ ಅಭಿವೃದ್ಧಿ ಯೋಜನೆ ಇತ್ಯಾದಿ.

ಪ್ರಾದೇಶಿಕಯೋಜನಾತಂತ್ರಗಳು ಹಾಗೂ ಕಾರ್ಯಗಳು ಕಾಲಕಾಲಕ್ಕೆ ಬದಲಾಗುತ್ತಿದ್ದರೂ ಮೂಲತತ್ತ್ವಗಳು ಬದಲಾಗಿಲ್ಲ.

ಪ್ರಾದೇಶಿಕ ಯೋಜನೆಯಲ್ಲಿ ಒಂದು ಭೌಗೋಳಿಕ ಘಟಕದ ಸಮಗ್ರ ವಿಕಾಸದ ಸಂಭಾವ್ಯತೆಯನ್ನು ಗಣನೆಗೆ ತೆಗೆದುಕೊಂಡು ಅದಕ್ಕೆ ಅನುಗುಣವಾಗಿ ಕಾರ್ಯಕ್ರಮವನ್ನು ರೂಪಿಸಲಾಗುತ್ತದೆ. ಫ್ರೆಂಚ್ ಎಂಜನಿಯರ್ ಹಾಗೂ ಅರ್ಥಶಾಸ್ತ್ರಜ್ಞ ಪ್ಲೇಯ (1806–82) ಪ್ರಕಾರ ಪರಿಸರ, ಉದ್ಯೋಗ, ಜನತೆ ಇವು ಪರಸ್ಪರ ಪ್ರಭಾವ ಬೀರುತ್ತವೆ. ಉದಾಹರಣೆಗೆ ನದೀಮುಖಜಭೂಮಿಯೊಂದನ್ನು ತೆಗೆದುಕೊಳ್ಳಬಹುದು. ಅಲ್ಲಿಯ ಜನತೆ ಭೂಮಿಯನ್ನೇ ಹೆಚ್ಚಾಗಿ ಅವಲಂಬಿಸಬೇಕಾದ್ದು ಆವಶ್ಯಕವೆಂಬುದು ಪರಿಸರದ ನಿಯಮ. ಬಹಳಮಟ್ಟಿಗೆ ಅದಕ್ಕೆ ಅನುಗುಣವಾಗಿಯೇ ಅಲ್ಲಿಯ ಆರ್ಥಿಕ ವಿಕಾಸ ಆಗಬೇಕಾಗುತ್ತದೆ. ಆದರೆ ಮಹಾನಗರ ಅಥವಾ ಕೈಗಾರಿಕಾ ಪ್ರದೇಶವೊಂದರ ಅಭಿವೃದ್ಧಿ ಯೋಜನೆಯಲ್ಲಿ ಜನರು ಕೆಲಸದ ಮೂಲಕ ಅಲ್ಲಿಯ ಪರಿಸರವನ್ನೇ ತಮ್ಮ ವಿಶಿಷ್ಟ ಆವಶ್ಯಕತೆಗಳಿಗೆ ಅನುಗುಣವಾಗಿ ತಕ್ಕಮಟ್ಟಿಗೆ ಪರಿವರ್ತಿಸಿಕೊಳ್ಳುವುದು ಸಾಧ್ಯವಿದೆ.

ಒಟ್ಟಿನಲ್ಲಿ ಪ್ರಾದೇಶಿಕ ಯೋಜನೆಯನ್ನು ಅನ್ವಯಿಸುವಾಗ ಪ್ರಾದೇಶಿಕತೆಯ ಅನೇಕ ಅಂಶಗಳು ಪರಸ್ಪರವಾಗಿ ಪ್ರಭಾವ ಬೀರುವುವಲ್ಲದೆ ಅವುಗಳಿಂದ ಪ್ರತಿಕ್ರಿಯೆಯೂ ಉಂಟಾಗುವುದು. ಈ ಪರಸ್ಪರ ಕ್ರಿಯೆ ಹಾಗೂ ಪ್ರತಿಕ್ರಿಯೆಗಳಿಂದ ಯಾವುದೇ ಒಂದು ಅಂಶದಲ್ಲಾದ ಪರಿವರ್ತನೆಯು ಫಲವಾಗಿ ಉಳಿದ ಅಂಶಗಳಲ್ಲೂ ಪರಿವರ್ತನೆಯುಂಟಾಗುವುದು. ಇದೊಂದು ಸರಪಳಿ ಪರಿಣಾಮವಿದ್ದಂತೆ ಇದ್ದು ಎರಡು ಬಗೆಯದು: ಒಂದು ಆ ಪ್ರದೇಶದಲ್ಲಿ ಆಂತರಿಕವಾಗಿ ನಡೆಯುವಂಥದು. ಇನ್ನೊಂದು ಬಾಹ್ಯಪರಿಸರಕ್ಕೆ, ನೆರೆಯ ಪ್ರದೇಶಗಳಿಗೆ ಪಸರಿಸುವಂಥದು.

ಪ್ರಾದೇಶಿಕ ಯೋಜನೆಯ ಅಡಿಯಲ್ಲಿ ಆರಂಭದಲ್ಲಿ ಕೇವಲ ಸ್ಥೂಲ ಚೌಕಟ್ಟನ್ನು ಮಾತ್ರ ಸ್ಥಾಪಿಸಬಹುದು. ಮುಂದಿನ 15–20 ವರ್ಷಗಳಲ್ಲಿ ಅಭಿವೃದ್ಧಿಯ ಸ್ವರೂಪ ಹೇಗಿರಬೇಕೆಂಬುದನ್ನಷ್ಟೇ ಸೂಚಿಸಬಹುದು. ನಿರ್ದಿಷ್ಟವಾದ ಈ ಸ್ಥೂಲ ರೂಪುರೇಷೆಯೊಳಗೆ ಕಾರ್ಯಗತಗೊಳಿಸಬೇಕಾದ ಸ್ಥಾನಿಕ ಕಾರ್ಯಕ್ರಮಗಳನ್ನು ನಿರ್ಧರಿಸಲಾಗುವುದು. ಸಾಮಾನ್ಯವಾಗಿ ಈ ರೀತಿಯ ಪ್ರಾದೇಶಿಕ ಯೋಜನೆಗಳು ಒಂದು ಪ್ರದೇಶದಲ್ಲಿಯ ಅಭಿವೃದ್ಧಿಯ ಮುನ್ನೋಟಗಳಾಗಿರುತ್ತವೆ. ಇವು ನಿರ್ದಿಷ್ಟ ಅವಧಿಯಲ್ಲಿ ಪೂರ್ತಿಗೊಳಿಸಬೇಕಾದ ಯಾವುದೇ ವ್ಯಾಪಕವಾದ ಪ್ರಾದೇಶಿಕ ಇಲ್ಲವೇ ರಾಷ್ಟ್ರೀಯ ಯೋಜನೆಗಳನ್ನು ರಚಿಸುವವರಿಗೆ ದೀರ್ಘಕಾಲದವರೆಗೆ ಮಹತ್ತ್ವದ ಮಾರ್ಗದರ್ಶನ ನೀಡಬಲ್ಲ ಸಾಧನಗಳಾಗಿರುತ್ತವೆ. ಬೇರೆ ಬೇರೆ ಪ್ರದೇಶಗಳ ಯೋಜನೆಗಳ ವಿವರಗಳಲ್ಲಿ ಅಥವಾ ವ್ಯಾಪ್ತಿಗಳಲ್ಲಿ ಅಂತರಗಳಿದ್ದರೂ ತಾತ್ವಿಕ ಹಾಗೂ ಕಾರ್ಯವಿಧಾನದ ದೃಷ್ಟಿಯಿಂದ ಅವೆಲ್ಲ ಸ್ಥೂಲವಾಗಿ ಒಂದೇ ಆಗಿರುತ್ತವೆ.

ಪ್ರಾದೇಶಿಕ ಯೋಜನೆಯಲ್ಲಿ ಸ್ಥೂಲವಾಗಿ ಅನೇಕ ಹಂತಗಳನ್ನು ಗುರುತಿಸಬಹುದು: ಯೋಜನೆಗೆ ಒಳಪಡಿಸಬೇಕಾದ ಪ್ರದೇಶದ ಗಡಿಯ ನಿರ್ಧಾರ. ಆ ಪ್ರದೇಶದ ತೀವ್ರ ಸರ್ವೇಕ್ಷಣೆ ಮತ್ತು ಸುತ್ತಣ ಪ್ರದೇಶದ ವ್ಯಾಪಕ ಸರ್ವೇಕ್ಷಣೆ ; ಆ ಪ್ರದೇಶದ ಜನರ ಅಗತ್ಯತೆಗಳನ್ನು ಗುರುತಿಸುವುದು. ಆ ಪ್ರದೇಶದ ಮತ್ತು ಅದರ ಉಪವಿಭಾಗಗಳ ಅಭಿವೃದ್ಧಿಗಾಗಿ ಸಾಮಾನ್ಯವಾದ ಮತ್ತು ವಿವರವಾದ ಯೋಜನೆಗಳನ್ನು ತಯಾರಿಸುವುದು; ಯೋಜನೆಯನ್ನು ಅನುಷ್ಠಾನಗೊಳಿಸುವ ಕನಿಷ್ಠ ವೆಚ್ಚದ ಮಾರ್ಗವನ್ನು ಸೂಚಿಸುವುದು; 6. ಯೋಜನೆಯನ್ನು ಅನುಷ್ಠಾನಗೊಳಿಸಿ ಅದರ ಮೌಲ್ಯಮಾಪನ ಮಾಡುವುದು.

ಒಂದು ಪ್ರದೇಶದ ವ್ಯವಸ್ಥಿತ ಭವಿಷ್ಯವನ್ನು ಮನಗಂಡು ಅದನ್ನು ಸಾಧಿಸಲು ಅಗತ್ಯವಾದ ಕ್ರಮಗಳನ್ನು ಜಾರಿಗೆ ತರುವುದೇ ಪ್ರಾದೇಶಿಕ ಯೋಜನೆಯ ತತ್ತ್ವ. ನೈಸರ್ಗಿಕ ಸಂಪನ್ಮೂಲಗಳು ಸಾಕಷ್ಟು ಪ್ರಮಾಣದಲ್ಲಿ ದೊರಕುವ ಪ್ರದೇಶಗಳು ರಾಜಕೀಯವಾಗಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದರೂ ಅವನ್ನೆಲ್ಲ ಒಂದೇ ಸೀಮೆಯೆಂದು ಬಗೆಯುವುದು ಪ್ರಾದೇಶಿಕ ಯೋಜನೆಯ ಪರಿಕಲ್ಪನೆ. ಇದಾದ ಮೇಲೆ ಪ್ರಸ್ತುತದಲ್ಲಿ ಹಾಗೂ ಮುಂದೆ ದೊರೆಯಬಹುದಾದ ಸಂಪನ್ಮೂಲಗಳ ವಿಷಯವಾಗಿ ಮಾಡಿದ ಸರ್ವೇಕ್ಷಣೆಯ ಆಧಾರದ ಮೇಲೆ ಆ ಪ್ರದೇಶದಲ್ಲಿ ಎಂಥ ಆರ್ಥಿಕ ವ್ಯವಸ್ಥೆ ನೆಲೆಗೊಳ್ಳಬೇಕೆಂಬುದನ್ನು ನಿರ್ಣಯಿಸಿ ಅದರಂತೆ ಆರ್ಥಿಕ ವಿಕಾಸಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ದೇಶದ ಪ್ರತಿಯೊಂದು ಪ್ರದೇಶವೂ ತನ್ನ ವಿಭವಕ್ಕೆ (ಪೊಟೆನ್ಷಿಯಾಲಿಟಿ) ಅನುಗುಣವಾಗಿ ಬೆಳವಣಿಗೆ ಹೊಂದಲು ಅವಕಾಶವನ್ನುಂಟುಮಾಡುವುದೇ ಪ್ರಾದೇಶಿಕ ಯೋಜನೆಯ ಉದ್ದೇಶ. ಆದರೆ ಕೇಂದ್ರೀಕೃತ ರಾಷ್ಟ್ರೀಯ ಯೋಜನೆಯ ಮುಖ್ಯ ಉದ್ದೇಶ ಇಡೀ ದೇಶದ ಸಂಪತ್ತನ್ನು ನಿಗದಿಯಾದ ಪ್ರಮಾಣದಲ್ಲಿ ಹೆಚ್ಚಿಸುವುದಾಗಿರುತ್ತದೆ. ರಾಷ್ಟ್ರೀಯ ಸಂಪತ್ತನ್ನು ಸಮಾಜದ ಆವಶ್ಯಕತೆಗನುಸಾರವಾಗಿಯಾಗಲಿ ಮತ್ತು ಎಲ್ಲ ಪ್ರದೇಶಗಳ ಸಮತೋಲ ಬೆಳವಣಿಗೆಯ ದೃಷ್ಟಿಯಿಂದಾಗಲಿ ವಿಭಾಗಿಸಲು ಕೇಂದ್ರೀಕೃತ ಯೋಜನೆ ಅಸಮರ್ಥವೆನಿಸುತ್ತದೆ. ಆದ್ದರಿಂದ ರಾಷ್ಟ್ರೀಯ ಯೋಜನೆಗೆ ಪೂರಕವಾಗಿ ಪ್ರಾದೇಶಿಕ ಯೋಜನೆಯನ್ನು ರೂಪಿಸಬೇಕಾಗುತ್ತದೆ. ರಾಷ್ಟ್ರೀಯ ಯೋಜನೆ ಇಡೀ ದೇಶದ ದೃಷ್ಟಿಯಿಂದ ಪೂರ್ಣೋದ್ಯೋಗ ಹಾಗೂ ರಾಷ್ಟ್ರೀಯ ಸಂಪತ್ತಿನ ಹೆಚ್ಚಳವನ್ನು ಸಾಧಿಸಬಹುದಾದರೂ ದೇಶದ ಎಲ್ಲ ಭಾಗಗಳ ಸಮತೋಲ ಆರ್ಥಿಕ ಪ್ರಗತಿಯನ್ನು ಸಾಧಿಸುವುದರತ್ತ ಅದು ಗಮನ ಹರಿಸದಿರಬಹುದು. ಅಲ್ಲದೆ ಎಲ್ಲ ಪ್ರದೇಶಗಳೂ ಸರಿಯಾಗಿ ಬೆಳವಣಿಗೆ ಹೊಂದದೆ ಹೋದರೆ ಕನಿಷ್ಠ ವೆಚ್ಚದಲ್ಲಿ ಹೆಚ್ಚಿನ ಉತ್ಪಾದನೆ ಮಾಡುವ ಗುರಿಯನ್ನು ತಲುಪಲು ಸಾಧ್ಯವಾಗದು. ರಾಷ್ಟ್ರೀಯ ವರಮಾನ ಸಹ ಎಲ್ಲ ಪ್ರದೇಶಗಳಲ್ಲೂ ಸಾಮ್ಯವಾಗಿ ವಿತರಣೆಯಾಗದಿದ್ದರೆ ಯೋಜನೆಯ ಲಾಭವನ್ನು ದೇಶದ ಎಲ್ಲ ಜನರೂ ಪಡೆದುಕೊಳ್ಳಲಾರರು. ಉದ್ಯೋಗಾವಕಾಶಗಳು ಎಲ್ಲೆಡೆಯಲ್ಲೂ ಉಂಟಾಗಬೇಕಾದರೆ ಪ್ರಾದೇಶಿಕ ಅಸಮತೆಯನ್ನು ತೊಡೆದುಹಾಕುವುದು ಅವಶ್ಯ. ಪ್ರಾದೇಶಿಕ ಯೋಜನೆ ಈ ಗುರಿಯನ್ನು ಸಾಧಿಸುತ್ತದೆ.

ಪ್ರಾದೇಶಿಕತೆ ಹಾಗೂ ಪ್ರಾಂತೀಯತೆಗಳು ಒಂದೇ ಎಂದು ಗ್ರಹಿಸುವುದು ಸರಿಯಲ್ಲ. ಪ್ರತಿಯೊಂದು ಪ್ರಾಂತ್ಯವೂ ತನಗೆ ಅವಶ್ಯವಿದ್ದ ಎಲ್ಲ ಸರಕುಗಳ ಉತ್ಪಾದನೆಯಲ್ಲಿ ಸ್ವಯಂಪೂರ್ಣತೆಯನ್ನು ಹೊಂದಬೇಕೆಂಬ ವಾದ ಅವಾಸ್ತವಿಕವಾದದ್ದು. ದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳಿಂದ ಪರಿಪೂರ್ಣ ಉಪಯುಕ್ತತೆಯನ್ನು ಪಡೆಯುವುದೇ ಪ್ರಾದೇಶಿಕ ಯೋಜನೆಗಳ ಮುಖ್ಯ ಗುರಿ. ಪ್ರಾಂತ್ಯ ಪ್ರಾಂತ್ಯಗಳಲ್ಲಿ ನಡುವೆ ಆರ್ಥಿಕ ಅಭಿವೃದ್ಧಿಯ ವಿಷಯವಾಗಿ ಅಸೂಯೆ ಹಾಗೂ ಮಹತ್ವಾಕಾಂಕ್ಷೆಗಳುಂಟಾದರೆ ಅವು ಪ್ರಾದೇಶಿಕ ಯೋಜನಾ ತತ್ತ್ವಕ್ಕೆ ವಿಸಂಗತವಷ್ಟೇ ಅಲ್ಲ, ದೇಶಕ್ಕೆ ಹಾನಿಕರವಾಗುತ್ತವೆ.

ಯೋಜನೆಯ ಅಡಿಯಲ್ಲಿ ಒಂದು ಪ್ರದೇಶ ಅಭಿವೃದ್ಧಿ ಹೊಂದಿದಂತೆ ಆ ಅಭಿವೃದ್ಧಿಯ ವೇಗ ಹಾಗೂ ದಿಕ್ಕನ್ನೂ ಅಂದಿನ ಪರಿಸ್ಥಿತಿಯನ್ನೂ ಪರಿಶೀಲಿಸಬೇಕು. ಅವುಗಳಲ್ಲಿ ಹೂಡಿದ ಬಂಡವಾಳ, ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ, ಸದ್ಯದಲ್ಲಿ ವಿಸ್ತರಣೆಗೆ ಅವಕಾಶ, ಕೆಲಸಗಾರರ ಕುಶಲತೆ, ಇತರ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶ, ಕಚ್ಚಾ ಸಾಮಗ್ರಿಯ ಲಭ್ಯತೆ ಮತ್ತು ಆ ಪ್ರದೇಶಗಳ ಸಾಧನೆ ಮುಂತಾದವುಗಳನ್ನು ತಿಳಿದುಕೊಳ್ಳಬೇಕು. ಇದಾದ ಮೇಲೆ ಪ್ರಾದೇಶಿಕ ಯೋಜನೆ ಯಶಸ್ವಿಯಾಗುವಂತೆ ಕೆಲವು ಕಾರ್ಯಗಳನ್ನು ಪೂರೈಸುವುದು ಅವಶ್ಯವಾಗಿದೆ. ಅವುಗಳಲ್ಲಿ ಅತ್ಯಂತ ಮುಖ್ಯವಾದುದ್ದೆಂದರೆ ಸಾರಿಗೆ ಸೌಕರ್ಯವನ್ನು ಹೆಚ್ಚಿಸುವುದು ಹಾಗೂ ದರಗಳಲ್ಲಿ ಆವಶ್ಯಕ ಬದಲಾವಣೆಗಳನ್ನು ಮಾಡುವುದು. ಕೇವಲ ವ್ಯಾಪಾರದ ದೃಷ್ಟಿಯಿಂದ ನಿರ್ಣಯಿಸಿದ ದರಗಳು ಕೈಗಾರಿಕೆಗಳ ಸುಸಂಬದ್ಧ ಪ್ರಾದೇಶಿಕ ವಿತರಣೆಗೆ ಸಹಾಯಕವಾಗಲಾರವು. ಆದ್ದರಿಂದ ಯೋಜನಾ ಆಯೋಗದ ಪ್ರಥಮ ಕರ್ತವ್ಯವೆಂದರೆ ಸಾರಿಗೆ ದರಗಳಲ್ಲಿ ಯೋಗ್ಯ ಬದಲಾವಣೆ ಮಾಡುವ ಕಾರ್ಯಕ್ಕೆ ಗಮನಹರಿಸುವುದು. ಸಾರಿಗೆ ದರಗಳು ಹೆಚ್ಚಿಗೆ ಇರುವುದರಿಂದಲೇ ಕೈಗಾರಿಕೆಗಳು ಕೆಲವು ಸಲ ನಷ್ಟ ಅನುಭವಿಸುವ ಪ್ರಸಂಗ ಉಂಟಾದಲ್ಲಿ ಸರ್ಕಾರ ಮುಂದಿನ ಸಮತೋಲ ಬೆಳವಣಿಗೆಯ ದೃಷ್ಟಿಯಿಂದ ಆ ನಷ್ಟವನ್ನು ಸಹಾಯಧನದಿಂದ ತುಂಬಿಕೊಡಬೇಕು. ಅಲ್ಲದೆ ಸಧ್ಯದ ಮತ್ತು ಮುಂದೆ ಬೆಳೆಯಬಹುದಾದ ಸಮಗ್ರ ಸಾರಿಗೆ ವ್ಯವಸ್ಥೆಯನ್ನು ಕೂಡ ಪ್ರಾದೇಶಿಕ ಯೋಜನೆಗೆ ಪೂರಕವಾಗುವ ರೀತಿಯಲ್ಲಿ ಪುನಃ ರಚಿಸುವುದು ಮಹತ್ತ್ವದ್ದಾಗುತ್ತದೆ. ಏಕೆಂದರೆ ಮುಂದೆ ಉತ್ಪಾದಿಸಬಹುದಾದ ಸರಕುಗಳು ರಾಷ್ಟ್ರದ ಎಲ್ಲ ಭಾಗಗಳಲ್ಲೂ ಸಮನಾಗಿ ಹಂಚಿಕೆಯಾಗಬೇಕು. ಪ್ರಾದೇಶಿಕ ಯೋಜನೆ ಅತ್ಯಂತ ದಕ್ಷತೆಯಿಂದ ತೀರ್ಮಾನಿಸಬೇಕಾದ ವಿಷಯ.

ಭಾರತದ ಆರ್ಥಿಕ ವ್ಯವಸ್ಥೆ 1950ರ ವರೆಗೂ ಯೋಜನಾಬದ್ಧವೂ ಸಮನ್ವಯವುಳ್ಳದ್ದೂ ಆಗಿರಲಿಲ್ಲ. ಪರಿಣಾಮವಾಗಿ ದೇಶದ ಆರ್ಥಿಕ ಬೆಳವಣಿಗೆ ಮಂದಗತಿಯದಾಗಿತ್ತು; ಪ್ರಾದೇಶಿಕ ಅಸಮಾನತೆಯನ್ನು ಹೆಚ್ಚಿಸುವಂಥದಾಗಿತ್ತು. ಕೈಗಾರಿಕೆಗಳು ಮುಂಬಯಿ, ಬಂಗಾಳ ಪ್ರಾಂತ್ಯಗಳಲ್ಲಿ ವಿಶೇಷವಾಗಿ ಕೇಂದ್ರೀಕೃತವಾಗಿದ್ದುವು. ಚೆನ್ನೈ, ಸಂಯುಕ್ತ ಪ್ರಾಂತ್ಯ (ಉತ್ತರ ಪ್ರದೇಶ), ಪಂಜಾಬ್ ಈ ಪ್ರಾಂತ್ಯಗಳಲ್ಲಿ ಕೃಷಿ ಬೆಳೆವಣಿಗೆ ಹೊಂದಿತ್ತು. ದೇಶದ ಉಳಿದ ಪ್ರಾಂತ್ಯಗಳು ಹಿಂದುಳಿದಿದ್ದುವು. ಇಂಥ ಆರ್ಥಿಕ ದುರವಸ್ಥೆಯನ್ನು ಸರಿಪಡಿಸುವುದಕ್ಕಾಗಿಯೇ ಯೋಜನೆಯನ್ನು ದೇಶ ಸ್ವೀಕರಿಸಿತು ಹಾಗೂ ರಾಷ್ಟ್ರೀಯ ಯೋಜನೆಯಿಂದ ಪ್ರಾದೇಶಿಕ ವಿಷಮತೆಯನ್ನು ಕ್ರಮೇಣ ಇಲ್ಲದಂತೆ ಮಾಡಬಹುದೆಂದು ಭಾವಿಸಲಾಯಿತು. ಆದರೆ ರಾಷ್ಟ್ರೀಯ ಯೋಜನೆಯಿಂದಲೇ ಅದು ಸಾಧ್ಯವಾಗದಿದ್ದಾಗ ಭಾರತದ ಪಂಚವಾರ್ಷಿಕ ಯೋಜನೆಗಳು ಸ್ಪಷ್ಟವಾಗಿ ಪ್ರಾದೇಶಿಕತೆಯ ತತ್ತ್ವವನ್ನು ಒಪ್ಪಿಕೊಂಡಿವೆ. ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಹಿಂದುಳಿದ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ, ಸರಕುಗಳ ಸಾಗಾಟಕ್ಕೆ ಬೇಕಾಗುವ ಸಾರಿಗೆ ಸೌಲಭ್ಯ ಕಲ್ಪಿಸುವಿಕೆ ಮುಂತಾದ ಸಾಮಾಜಿಕ ಸೌಲಭ್ಯಗಳನ್ನು ಹೆಚ್ಚಿಸುವುದರಲ್ಲಿ ಬಂಡವಾಳವನ್ನು ತೊಡಗಿಸುವುದರಿಂದ ಸಹಜವಾಗಿಯೇ ಆ ಪ್ರದೇಶಗಳು ಬೆಳೆವಣಿಗೆಯ ಧ್ರುವಕೇಂದ್ರಗಳಾಗುತ್ತವೆ. ಅರ್ಥಶಾಸ್ತ್ರಜ್ಞರನ್ನೂ ಭೂಗೋಳ ವಿಜ್ಞಾನಿಗಳನ್ನೂ ನುರಿತ ಆಡಳಿತಗಾರರನ್ನೂ ಒಳಗೊಂಡ ಒಂದು ಪ್ರಾದೇಶಿಕ ಆಡಳಿತ ಮಂಡಲಿಯನ್ನು ಇದಕ್ಕಾಗಿ ರಚಿಸಬೇಕು. ಪ್ರಾದೇಶಿಕ ಯೋಜನೆಗಳನ್ನು ತಯಾರಿಸುವ ಜವಾಬ್ದಾರಿ ಅವುಗಳ ಮೇಲಿರಬೇಕು. ಇಂಥ ಪ್ರಾದೇಶಿಕ ಆಡಳಿತ ಮಂಡಲಿಗಳು ರಚಿಸಿದ ಯೋಜನೆಗಳನ್ನು ಸಮಗ್ರ ರಾಷ್ಟ್ರದ ಆರ್ಥಿಕ ದೃಷ್ಟಿಯಿಂದ ಪರಿಶೀಲಿಸಿ ರಾಷ್ಟ್ರೀಯ ಯೋಜನೆಯಲ್ಲಿ ಸಮಾವೇಶಗೊಳಿಸುವ ಕಾರ್ಯವನ್ನು ಕೇಂದ್ರ ಯೋಜನಾ ಆಯೋಗ ಕೈಗೊಳ್ಳಬೇಕು. (ಐ.ಕೆ.ವಿ.)

**ಪ್ರಾದೇಶಿಕ ಯೋಜನೆಯಲ್ಲಿ ಪರಿಸರ ನೀತಿ:** ಪ್ರಪಂಚದ ಬಹುಪಾಲು ರಾಷ್ಟ್ರಗಳು ಕೈಗಾರಿಕೆಯಿಂದ ಅಭಿವೃದ್ಧಿಹೊಂದಿದಂತೆ ಆರ್ಥಿಕ ಪ್ರಗತಿಯ ಜೊತೆಗೆ ದೇಶದ ಪರಿಸರದಲ್ಲಿ ಆಮೂಲಾಗ್ರ ಬದಲಾವಣೆಯನ್ನು ಕಂಡವು. ಕೈಗಾರಿಕಾಭಿವೃದ್ಧಿಗಾಗಿ ರಾಷ್ಟ್ರಗಳು ಹೊಸ ಹೊಸ ಯೋಜನೆಗಳನ್ನು ರೂಪಿಸಿ, ಉತ್ಪಾದನೆ ಹೆಚ್ಚಿಸಿ ಪರಿಸರದಲ್ಲಿ ಹೆಚ್ಚು ಹೆಚ್ಚು ವಿಷಾನಿಲವನ್ನು ಮತ್ತು ನೀರಿನಲ್ಲಿ ವಿಷಕಾರಿ ವಸ್ತುವನ್ನು ಬಿಡುಗಡೆ ಮಾಡಿ, ವಾಯು ಮತ್ತು ಜಲಮಾಲಿನ್ಯಕ್ಕೆ ಕಾರಣವಾಗಿವೆ. ಪರಿಣಾಮವಾಗಿ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಇಂದು ನಾವು ಸೇವಿಸುವ ಗಾಳಿ, ನೀರು, ಆಹಾರ, ಬಹುಪಾಲು ಕಲುಷಿತವಾಗಿದೆ. ಆಟೋಮೊಬೈಲ್ ಕಾರ್ಖಾನೆಗಳ ಬೆಳೆವಣಿಗೆಯಿಂದ, ಕಾರ್ಬನ್ ಮಾನಾಕ್ಸೈಡ್‍ನ ಪ್ರಮಾಣ ದುಪ್ಪಟ್ಟು ಕಂಡುಬಂದಿದೆ. ಸೂಪರ್ ಜೆಟ್ ಬೋಯಿಂಗ್ (707) ವಿಮಾನದಿಂದ ಓಝೋನ್ ಪದರ ಹಾಳಾಗತೊಡಗಿದೆ. ಅದೇ ರೀತಿ ಡಿಡಿಟಿಯ ಬಳಕೆಯಿಂದ ಜೀವಗೋಳದ ಮೇಲೆ ಭಯಾನಕ ಪರಿಣಾಮವನ್ನುಂಟು ಮಾಡಿದೆಯಲ್ಲದೆ, ಕೈಗಾರಿಕೆಗೆ ಕಲ್ಲಿದ್ದಲು ಮತ್ತು ಪೆಟ್ರೋಲಿಯಂನ್ನು ಯಥೇಚ್ಛವಾಗಿ ಬಳಸುತ್ತಿರುವ ಪರಿಣಾಮವಾಗಿ ಪ್ರಪಂಚದ ಅರ್ಧದಷ್ಟು ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ನಿಕ್ಷೇಪಗಳು ಮುಂದಿನ 10 ವರ್ಷದಲ್ಲಿ ಮುಗಿಯಬಹುದು. ಕೈಗಾರೀಕರಣದ ಪರಿಣಾಮವಾಗಿ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪರಿಸರ ಮಾಲಿನ್ಯ ಹೆಚ್ಚಾಗಿ ಕಂಡುಬಂದಿವೆ. ಕೋಲ್ಕತ, ಮುಂಬಯಿ, ದೆಹಲಿ, ಚೆನ್ನೈಗಳಂತಹ ನಗರ ಪ್ರದೇಶದಲ್ಲಿ ವಾಯುಮಾಲಿನ್ಯ ಅತಿ ಹೆಚ್ಚಾಗಿ ಕಂಡು ಬರುತ್ತಿದ್ದು ಮುಂಬಯಿ ನಗರದಲ್ಲಿ ಸಿಗರೇಟುಗಳನ್ನು ಸೇದದ ಒಬ್ಬ ಮನುಷ್ಯ ದಿನಕ್ಕೆ 20 ಸಿಗರೇಟನ್ನು ಸೇದಿದಷ್ಟು ವಾಯುಮಾಲಿನ್ಯದ ಪ್ರಭಾವಕ್ಕೆ ಒಳಗಾಗುತ್ತಿದ್ದಾನೆ. ಭಾರತದಲ್ಲಿನ ಶೇ. 70 ನದಿಗಳು ಮಾಲಿನ್ಯಕ್ಕೆ ಒಳಗಾಗಿವೆ. ಬೊಕಾರೊ ಮತ್ತು ದುರ್ಗಾಪುರದ ಬಳಿ ಇರುವ ದಾಮೋದರ ನದಿ ರಾಸಾಯನಿಕ ಮತ್ತು ಕಲ್ಲಿದ್ದಲಿನ ತ್ಯಾಜ್ಯದಿಂದ ಮಾಲಿನ್ಯಕ್ಕೆ ಒಳಗಾಗಿದ್ದು ಇದೇ ರೀತಿ ಕೋಲ್ಕತ ಸಮೀಪದ ಹೂಗ್ಲಿ ನದಿಯು ಸಹ ಕೈಗಾರಿಕಾ ಮತ್ತು ಘನ ತ್ಯಾಜ್ಯಗಳಿಂದ ಮಾಲಿನ್ಯತೆಯನ್ನು ಹೊಂದುತ್ತಿದೆ.

ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ನೋಡುವುದಾದರೆ ಆರ್ಥಿಕ ತಜ್ಞರಿಗೆ ಉತ್ಪಾದನೆ ಮತ್ತು ಅನುಭೋಗದತ್ತ ಗಮನ ಕೇಂದ್ರೀಕೃತವಾಗಿದ್ದು ಆರ್ಥಿಕ ಚಟುವಟಿಕೆಯಿಂದಾಗುವ ಪರಿಸರಮಾಲಿನ್ಯ ನಗಣ್ಯವಾಗಿ ಕಾಣುತ್ತದೆ. ಕೈಗಾರಿಕೆ ಉತ್ಪಾದನೆಯಲ್ಲಿ ತೊಡಗಿದಾಗ ಉತ್ಪಾದನಾ ತ್ಯಾಜ್ಯಗಳನ್ನು ನದಿಗಳಲ್ಲಿ ಬಿಡಲಾಗುತ್ತದೆ. ಪರಿಣಾಮವಾಗಿ ಪರಿಸರ ಮಾಲಿನ್ಯ ಸಂಭವಿಸುತ್ತದೆ. ಇದರ ಜೊತೆಗೆ ಮಾನವ ಮತ್ತು ಆತನ ಸಮಾಜ ಸಹ ಘನ ತ್ಯಾಜ್ಯ ವಸ್ತುಗಳನ್ನು ಪರಿಸರದಲ್ಲಿ ಸೃಷ್ಟಿಸಿ ಮಾಲಿನ್ಯಕ್ಕೆ ಕಾರಣನಾಗುತ್ತಾನೆ. ಆದ್ದರಿಂದ ಪ್ರಾದೇಶಿಕ ಯೋಜನಾಕಾರರು ಪ್ರತಿಯೊಂದು ಆರ್ಥಿಕ ಚಟುವಟಿಕೆಯಿಂದ ಪರಿಸರ ಮತ್ತು ಸಮಾಜದ ಮೇಲಾಗುವ ಪ್ರಭಾವವನ್ನು ವಿವೇಚಿಸಬೇಕು. ಜೊತೆಗೆ ಯೋಜನಾಕಾರರು ಪರಿಸರದ ಮೇಲೆ ಮಾಡುವ ವೆಚ್ಚವನ್ನು ಆರ್ಥಿಕ ಯೋಜನೆಯೊಡನೆ ತೂಗುಹಾಕಬೇಕು. ಪರಿಸರಕ್ಕೆ ಮಾಡುವ ವೆಚ್ಚ ಸಮಾಜಕ್ಕೆ ಮಾಡುವ ವೆಚ್ಚದ ಭಾಗವೆಂದು ಮನಗಾಣಬೇಕು. ಏಕೆಂದರೆ ಪರಿಸರದ ಮೇಲೆ ಹೆಚ್ಚು ವೆಚ್ಚ ಮಾಡಿದಂತೆ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಗೆ ಮಾಡುವ ವೆಚ್ಚ ಕಡಿಮೆಯಾಗುತ್ತದೆ. ಆದರೆ ಬಹುತೇಕ ರಾಷ್ಟ್ರಗಳು ಪರಿಸರದ ಮೇಲೆ ಮಾಡುವ ವೆಚ್ಚ ತೀರ ಕಡಿಮೆ ಎಂದು ಕಂಡುಬರುತ್ತದೆ. ಆರ್ಥಿಕ ಮತ್ತು ಪರಿಸರ ಯೋಜನೆ ರಚಿಸಲು ಸ್ನೇಹ–ಅಭಿವೃದ್ಧಿ–ಪರಿಸರ ಮಾದರಿಯು ಸಹಾಯಕವಾಗಿದ್ದು ಇದರ ಬಳಕೆಯಿಂದ ಭವಿಷ್ಯದಲ್ಲಿ ಸಂಭವಿಸಬಹುದಾದ ಪರಿಸರದ ವಿಷಾನಿಲವನ್ನು ಕಡಿಮೆ ಮಾಡಲು ಸಹಾಯಕವಾಗುತ್ತದೆ. ಜೊತೆಗೆ ಪರಿಸರದ ಅಭಿವೃದ್ಧಿಯೊಡನೆ, ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗುವ ಅಂಶಗಳನ್ನು ಕುರಿತು ವಿವೇಚಿಸುವ ಮತ್ತು ಭವಿಷ್ಯದ ಯೋಜನೆಯನ್ನು ರೂಢಿಸಲು ಸಹಾಯಕವಾಗುತ್ತದೆ. (ಎಂ.ಎಸ್.ಕೆ.)

**ಪ್ರಾದೇಶಿಕ ಯೋಜನೆಯಲ್ಲಿ ಸಾಮಾಜಿಕ ನೀತಿ:** ಪ್ರಪಂಚದ ಬಹುಪಾಲು ಹಿಂದುಳಿದ ರಾಷ್ಟ್ರಗಳು ಮುಂದುವರೆದ ರಾಷ್ಟ್ರಗಳ ಯೋಜನೆಯನ್ನು ತನ್ನ ಅಭಿವೃದ್ಧಿ ಯೋಜನೆಗಳಲ್ಲಿ ಅಳವಡಿಸಿಕೊಳ್ಳುತ್ತಿರುವುದರಿಂದ, ಆರ್ಥಿಕ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತಿದೆ. ಇದರ ಪ್ರಕಾರ ಬಂಡವಾಳವನ್ನು ಹೆಚ್ಚು ಹೂಡುವುದರಿಂದ ಆರ್ಥಿಕ ಪ್ರಗತಿ ಸಾಧಿಸುತ್ತವೆ. ಆರ್ಥಿಕ ಪ್ರಗತಿ ಸಾಧಿಸುವುದರಿಂದ ಸಾಮಾಜಿಕ ಅಭಿವೃದ್ಧಿ ತಾನಾಗಿಯೇ ಆಗುತ್ತದೆಂಬುದು ಒಂದು ವಾದ. ಈ ರೀತಿ ಬಂಡವಾಳ ಹೂಡಿಕೆ ಎಲ್ಲಾ ಚಟುವಟಿಕೆಯ ಮೂಲ ಜೀವಾಳವಾಗಿದ್ದು ಇಡೀ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ. ವಲಯವಾರು ಕ್ಷೇತ್ರಗಳಲ್ಲಿ ಹಾಗೂ ಪ್ರಾದೇಶಿಕವಾಗಿ ವಿಭಜಿಸಿ ನೇರ ಬಂಡವಾಳವನ್ನು ಅತ್ಯಧಿಕವಾಗಿ ಹೂಡುವುದರಿಂದ ಪರಿಣಾಮಕಾರಿಯಾಗಿ ಯಶಸ್ಸು ಸಾಧಿಸಬಹುದು. ಕೆಲವು ರಾಷ್ಟ್ರಗಳಲ್ಲಿ ಯಾವುದೇ ನೀತಿಯಲ್ಲಿ ಮಧ್ಯ ಪ್ರವೇಶಿಸದೆ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ನಿರ್ವಹಿಸಿ ಆರ್ಥಿಕ ದೃಢೀಕರಣಕ್ಕೆ ಕಾರಣವಾಗುವುದರಿಂದ ಕೆಲವು ಸಾಮಾಜಿಕ ಸಮಸ್ಯೆಗಳು ಉದ್ಭವವಾಗುತ್ತದೆ.

ಸಾಮಾಜಿಕ ಅಭಿವೃದ್ಧಿಯ ಗುರಿ ಮತ್ತು ಉದ್ದೇಶಗಳಿಗೂ ಆರ್ಥಿಕ ಗುರಿಗಳಿಗೂ ಘರ್ಷಣೆ ಸಂಭವಿಸುತ್ತದೆ. ಏಕೆಂದರೆ ಕೇವಲ ಆರ್ಥಿಕ ಅಭಿವೃದ್ಧಿಯಿಂದ ಸಮಾಜದ ಎಲ್ಲಾ ವರ್ಗದ ಜನರಿಗೂ ಸಮಾನ ಅವಕಾಶಗಳು, ಆದಾಯದ ಹಂಚಿಕೆ, ಇತ್ಯಾದಿಗಳು ದೊರಕುವುದು. ಇವುಗಳಿಂದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯಗಳು ಸಹಜವಾಗಿ ಉಂಟಾಗುತ್ತವೆ. ಇವೆಲ್ಲವನ್ನು ಹೋಗಲಾಡಿಸಲು ಸಾಮಾಜಿಕ ನೀತಿಯ ಅಳವಡಿಕೆ ಅತ್ಯಗತ್ಯ.

ಸಾಮಾಜಿಕ ಯೋಜನೆಯ ಅನುಸಂಧಾನ ಮಾರ್ಗಗಳು ಕೆಲವೊಂದು ಉದ್ದೇಶಗಳನ್ನು ಒಳಗೊಂಡಿವೆ. ಅಂತಹ ಉದ್ದೇಶಗಳನ್ನು ಸ್ಥೂಲವಾಗಿ 3 ವಿಭಾಗಗಳಾಗಿ ವಿಂಗಡಿಸಬಹುದು: 1) ಸಾಮಾಜಿಕ ನ್ಯಾಯ 2) ಸಾಮಾಜಿಕ ವರ್ಗಾವಣೆ 3) ಸಾಮಾಜಿಕ ಮೂಲಭೂತ ಸೌಕರ್ಯಗಳ ಹಂಚಿಕೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇಂತಹ ಯೋಜನೆಗಳು ಜನರಿಗೆ ಅಗತ್ಯವಾದವುಗಳಾಗಿರುತ್ತವೆ. (ಎಂ.ಎಸ್.ಕೆ.)

**ಪ್ರಾದೇಶಿಕತೆ ಮತ್ತು ವಿಭಾಗೀಯತೆ:** ಪ್ರಾದೇಶಿಕತೆ ಎನ್ನುವುದು ಆ ಪ್ರದೇಶದ ಒಂದು ಸಿದ್ಧಾಂತ (ಐಡಿಯಾಲಜಿ) ಅಥವಾ ಪರಿಕಲ್ಪನೆ. ಇದು ಒಂದು ಸಾಮಾಜಿಕ ಸೈದ್ಧಾಂತಿಕ ಚಳವಳಿ, ಈ ಚಳವಳಿಯ ಒಂದು ತತ್ತ್ವ ಪ್ರಾದೇಶಿಕ ಯೋಜನೆಗೆ ಆಧಾರ. ಪ್ರಾದೇಶಿಕತೆಯು ಒಂದು ತರಹದ ಜೀವನ ಶೈಲಿ ಮತ್ತು ವಿಚಾರ. ಈ ಏಕ ರೂಪ ಅಧಾರದ ಮೇಲೆ ಪ್ರಾದೇಶಿಕ ಯೋಜನೆಗೆ ಪ್ರದೇಶವನ್ನು ರೂಪಿಸಲಾಗುತ್ತದೆ. ಪ್ರಾದೇಶಿಕತೆ ಎನ್ನುವುದು ಹೆಚ್ಚಾಗಿ ಸಮಾಜಶಾಸ್ತ್ರಕ್ಕೆ ಅನ್ವಯವಾದುದ್ದು ಇದನ್ನು ಭೌತಿಕವಾಗಿ ಗುರುತಿಸುವುದಕ್ಕೆ ಪ್ರಾದೇಶಿಕತೆಯನ್ನು ಉಪಯೋಗಿಸಿಕೊಂಡು ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಬಹುದು. ಪ್ರಾದೇಶಿಕತೆಯನ್ನು ಪರಿಗಣಿಸದಿದ್ದರೆ ಸಂಘರ್ಷಕ್ಕೆ ಎಡೆಕೊಟ್ಟಂತಾಗುವುದು. ಪ್ರಾದೇಶಿಕತೆ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಹುಟ್ಟಿ ಬಂದಿದ್ದು, ಈಚಿನ ವರ್ಷಗಳಲ್ಲಿ ಭಾರತಕ್ಕೂ ಹಬ್ಬಿದೆ. ಉದಾಹರಣೆಗೆ ಉತ್ತರ ಐರ್ಲೆಂಡ್, ವಿದರ್ಭ, ತೆಲಾಂಗಣ ಮುಂತಾದ ಪ್ರಾದೇಶಿಕತೆಯ ಚಳವಳಿಗಳು.

ವಿಭಾಗೀಯತೆ ಅಥವಾ ಪಂಥೀಯತೆ ಒಂದು ಕೆಡಕಿನ ಸ್ವಭಾವವಾಗಿದೆ. ವಿಭಾಗದ ಲಕ್ಷಣಗಳೆಂದರೆ ಅಸಹಿಷ್ಣುತೆ, ಅವರೇ ಉತ್ತಮರು, ಅವರ ಭಾಷೆಯೇ ಶ್ರೇಷ್ಠ ಗತಕಾಲದ ವೈಭವಗಳು, ಹಿಂಜರಿಕೆ, ಯಾರಿಗೂ ಎಡೆಗೊಡದ ಮನೋವೃತ್ತಿ ಮತ್ತು ಬೇರೆ ದೇಶದ ಬಗ್ಗೆ ತಿಳುವಳಿಕೆ ಇಲ್ಲದಿರುವುದು ವಿಭಾಗೀಯತೆ, ದೇಶದ ಏಕತೆಗೆ ಧಕ್ಕೆ ತರುವುದು ಆತಂಕ ಹುಟ್ಟಿಸುತ್ತದೆ. ಉಗ್ರರ ಬೆಳವಣಿಗೆ ವಿಭಾಗೀಯತೆಯ ಒಂದು ಸ್ವರೂಪ. ವಿಭಾಗೀಯತೆಯನ್ನು ಆರಂಭದಲ್ಲೆ ತಡೆಯದಿದ್ದರೆ ದೇಶಕ್ಕೆ ಹಾನಿಯು ಸಂಭವಿಸಬಹುದು. ಶ್ರೀಲಂಕ ಮತ್ತು ಈಶಾನ್ಯ ಭಾರತದಲ್ಲಿ ಈ ವಿಭಾಗೀಯತೆಯ ಬೆಳವಣಿಗೆಯನ್ನು ಗುರುತಿಸಬಹುದು. (ಎನ್.ಎಸ್.)

**ಪ್ರಾದೇಶಿಕರಣ:** ಸ್ವಯಂ ಅನ್ವೇಷಣೆಯ ಒಂದು ವಿಧಾನ. ಈ ವಿಧಾನ ಯೋಜನೆಯನ್ನು ಅನುಷ್ಠಾನಗೊಳಿಸಲು ಮತ್ತು ಆಡಳಿತ ನಡೆಸಲು ಸಹಕಾರಿಯಾಗಿದೆ. ಜನಸಂಖ್ಯೆ ಮತ್ತು ಪ್ರದೇಶಗಳ ನಿರ್ದಿಷ್ಟ ಗುಣಲಕ್ಷಣಗಳ ವಿಂಗಡನೆ ಪ್ರಾದೇಶಿಕರಣದ

ಒಂದು ಕ್ರಿಯೆ. ಪ್ರಾದೇಶಿಕರಣದಲ್ಲಿ ಭೂಗೋಳ ವಿಜ್ಞಾನಿಗಳು ವಿಶೇಷ ಪಾತ್ರವನ್ನು ವಹಿಸುತ್ತಾರೆ. ಏಕೆಂದರೆ ಪ್ರದೇಶದ ಜ್ಞಾನ ಮತ್ತು ಮಾನವ ಸಂಪನ್ಮೂಲದ ಅಂಶಗಳು ಇವರಿಗೆ ಚೆನ್ನಾಗಿ ಅರಿವಿರುತ್ತದೆ. ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಜನರ ಸಂಸ್ಕೃತಿ ಜನರ ಸಂರಚನೆಯನ್ನು ಸರಿಯಾಗಿ ನಿರೂಪಿಸಿ, ಯೋಜನೆ ಮತ್ತು ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗುತ್ತಾರೆ. ಆರ್. ಇ. ಡಿಕನ್ಸನ್ನರು ಪ್ರಾದೇಶಿಕರಣವನ್ನು ಗುರುತಿಸಿದವರಲ್ಲಿ ಮೊದಲಿಗರು. (ಎನ್.ಎಸ್.)

**ಪ್ರಿಟೋರಿಯ:** ದಕ್ಷಿಣ ಆಫ್ರಿಕ ಗಣರಾಜ್ಯದ ಆಡಳಿತ ಕೇಂದ್ರ. ಟ್ರಾನ್ಸ್‌ವಾಲ್ ಪ್ರಾಂತ್ಯದ ರಾಜಧಾನಿ. ಮೆಗಲೆಸ್‌ಬರ್ಗ್ ಬೆಟ್ಟದ ಪಶ್ಚಿಮ ತಪ್ಪಲಲ್ಲಿ ಹರಿಯುವ ಎಪೀಸ್ ನದಿಯ ಎರಡೂ ದಂಡೆಗಳ ಮೇಲೆ ದ. ಅ. $25^0 45'$ ಮತ್ತು ಪೂ.ರೇ $28^0 10'$ ಮೇಲಿದೆ. ಜನಸಂಖ್ಯೆ 10,25,790 (2001).

ಪ್ರಿಟೋರಿಯವನ್ನು ಬೋಯರ್ ರಾಜಕಾರಣಿ ಆಂಡ್ರೀಸ್ ಪ್ರೆಟೂರಿಯಸ್‌ನ ಹೆಸರಿನಲ್ಲೆ ಅವನ ಮಗ ಮಾರ್ತಿನಸ್ ಪ್ರೆಟೂರಿಯಸ್ 1855ರಲ್ಲಿ ಸ್ಥಾಪಿಸಿದ. ಇದು 1860ರಲ್ಲಿ ಟ್ರಾನ್ಸ್‌ವಾಲ್ ಪ್ರಾಂತ್ಯದ ರಾಜಧಾನಿಯಾಯಿತು. 1910ರಲ್ಲಿ ದಕ್ಷಿಣ ಆಫ್ರಿಕದ ಆಡಳಿತ ಕೇಂದ್ರವಾಯಿತು. 1931ರಲ್ಲಿ ಇದಕ್ಕೆ ಪುರಸಭೆಯ ಸ್ಥಾನ ದೊರಕಿತು.

ಆಧುನಿಕ ರೀತಿಯಲ್ಲಿ ನಿರ್ಮಿತವಾಗಿರುವ ಈ ನಗರ ಅನೇಕ ಸುಂದರ ಉದ್ಯಾನಗಳಿಂದಲೂ ಉಪ್ಪರಿಗೆಯ ಪುಷ್ಪವಾಟಿಕೆಗಳಿಂದಲೂ ರಸ್ತೆಗಳ ಎರಡೂ ಬದಿಗಳ ಸಾಲುಮರಗಳಿಂದಲೂ ಕೂಡಿ ಸುಂದರವಾಗಿದೆ. ಚರ್ಚ್‌ಬೀದಿ ಪೂರ್ವದಿಂದ ಪಶ್ಚಿಮಕ್ಕೆ ಸು. 20 ಕಿಮೀ ಸಾಗಿದೆ. ಬೋಯರ್ ಯುದ್ಧಕ್ಕೆ ಸಂಬಂಧಿಸಿದ ಹಲವು ಸ್ಮಾರಕಗಳು ಈ ನಗರದಲ್ಲಿವೆ. ಅವುಗಳ ಪೈಕಿ ವೂರ್‌ಟ್ರೆಕ್ಕರ್ ಸ್ಮಾರಕವೂ ಪಾಲ್ ಕ್ರೂಗರ್ ಹಾಗೂ ಲೂಯಿ ಬೋಟಾ ಇವರ ಪ್ರತಿಮೆಗಳೂ ಮುಖ್ಯವಾದುವು. ನಗರದಲ್ಲಿ 19ನೆಯ ಶತಮಾನದ ಪ್ರಾಟೆಸ್ಟಂಟ್ ಮತ್ತು ರೋಮನ್ ಕೆಥೊಲಿಕ್ ಚರ್ಚುಗಳಿವೆ. ಪ್ರಿಟೋರಿಯ ವಿಶ್ವವಿದ್ಯಾಲಯದ ಸ್ಥಾಪನೆಯಾದದ್ದು 1908ರಲ್ಲಿ; ಇಲ್ಲಿ ರಾಷ್ಟ್ರೀಯ ವಸ್ತುಸಂಗ್ರಹಾಲಯ ಮತ್ತು ಪ್ರಾಣಿಸಂಗ್ರಹಾಲಯಗಳಿವೆ. ವೈದ್ಯಸಂಶೋಧನ ಸಂಸ್ಥೆ ಈ ನಗರದ ಅಂಚಿನಲ್ಲಿದೆ.

ಇದು ವಾಣಿಜ್ಯ ಹಾಗೂ ಕೈಗಾರಿಕೆಗಳ ನಗರ. ಇಲ್ಲಿ ಅನೇಕ ಯಂತ್ರೋಪಕರಣಗಳು ತಯಾರಾಗುತ್ತವೆ. ಈ ಪ್ರಾಂತ್ಯದಲ್ಲಿ ವಜ್ರದ ಗಣಿಗಳಿವೆ. (ವಿ.ಜಿ.ಕೆ.)

**ಪ್ರೈರಿ:** ಉತ್ತರ ಅಮೆರಿಕದ ಸಮಶೀತೋಷ್ಣವಲಯದ ಹುಲ್ಲುಗಾವಲು. ಸಮತಲ ಹಾಗೂ ಏರಿಳಿತಗಳಿಂದ ಕೂಡಿದ ಈ ಪ್ರದೇಶ, ಕೆನಡ ದೇಶದ ಆಲ್ಬರ್ಟ್ ಪ್ರಾಂತ್ಯದಿಂದ ದಕ್ಷಿಣಕ್ಕೆ ಅಮೆರಿಕ ಸಂಯುಕ್ತ ಸಂಸ್ಥಾನದ ಟೆಕ್ಸಾಸ್ ರಾಜ್ಯದವರೆಗೆ, ಪಶ್ಚಿಮದ ಬೆಂಗಾಡಿನಿಂದ ಪೂರ್ವದ ಆರ್ದ್ರ ಅರಣ್ಯಗಳ ವರೆಗೆ ಹಬ್ಬಿದೆ. ಪೂರ್ವ ತುದಿಯ ಅರಣ್ಯಗಳ ಅಂಚಿನ, 10 ಸೆಂಮೀ ಗಿಂತ ಕಡಿಮೆ ಮಳೆಯಾಗುವ ಬೆಂಗಾಡು ಹಾಗೂ ಮರಳುಗಾಡಿನ ವರೆಗೆ ಮಳೆ ಕಡಿಮೆಯಾಗುತ್ತ ಹೋಗುವ ಪ್ರದೇಶದಲ್ಲಿ ಹುಲ್ಲು ಯಥೇಚ್ಛವಾಗಿ ಬೆಳೆದಿದೆ.

ಎತ್ತರ ಮಧ್ಯಮ ಹಾಗೂ ಗಿಡ್ಡು ಎಂದು ಮೂರು ಬಗೆಯಾಗಿ ಇಲ್ಲಿಯ ಹುಲ್ಲುಗಳನ್ನು ವಿಂಗಡಿಸಲಾಗಿದೆ. ಸಮುದ್ರದಂಚಿನ ಪ್ರೈರಿ, ಪೆಸಿಫಿಕ್ ಅಥವಾ ಕ್ಯಾಲಿಫೋರ್ನಿಯ ಪ್ರೈರಿ, ಪ್ಯಾಲಾಸ್ ಪ್ರೈರಿ ಹಾಗೂ ಬೆಂಗಾಡಿನ ಪ್ರೈರಿ–ಹೀಗೆ ಹುಲ್ಲುಗಾವಲನ್ನು ಪ್ರಾದೇಶಿಕವಾಗಿಯೂ ವಿಂಗಡಿಸಲಾಗಿದೆ. ರಷ್ಯದ ಸ್ಟೆಪ್, ದಕ್ಷಿಣ ಆಫ್ರಿಕದ ವೆಲ್ಡ್ ಹಾಗೂ ದಕ್ಷಿಣ ಅಮೆರಿಕದ ಪಾಂಪಾಸ್ ಹುಲ್ಲುಗಾವಲುಗಳು ಉತ್ತರ ಅಮೆರಿಕದ ಪ್ರೈರಿಯ ಲಕ್ಷಣಗಳನ್ನೇ ಹೊಂದಿವೆ. ಪ್ರೈರಿಯಲ್ಲಿ ನಡುನಡುವೆ ಮರಗಳಿಲ್ಲ; ಇದ್ದರೂ ಎಲ್ಲೋ ಅಲ್ಲಲ್ಲಿ ಮಾತ್ರ. ಲಂಬವಾದ ಹುಲ್ಲು ಹೆಚ್ಚು ಮಳೆ ಬೀಳುವ, ಪರ್ಣಪಾತಿ ಅರಣ್ಯಗಳ ಅಂಚಿನಲ್ಲಿ ಅಧಿಕವಾಗಿದೆ. ಉತ್ತರ ಅಮೆರಿಕದ ಪೂರ್ವಭಾಗದಿಂದ ಪ.ರೇ. $100^0$ ಯವರೆಗಿನ ಪ್ರೈರಿ ಪ್ರದೇಶದಲ್ಲಿ ಹುಲ್ಲು ಎರಡೂವರೆಯಿಂದ ಮೂರು ಮೀ ಎತ್ತರಕ್ಕೆ ಬೆಳೆಯುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ಗುಚ್ಛಗಳಲ್ಲಿ ಹರಡಿ ಬೆಳೆದ ಎತ್ತರದ ಹುಲ್ಲು ಇರುತ್ತದೆ. ಇದು ಸು. 1.2 ಮೀ ಎತ್ತರಕ್ಕಿರುತ್ತದೆ. ಪಶ್ಚಿಮದ ರಾಕೀ ಪರ್ವತಗಳ ಕಡೆಯ ಮೇಲ್ನಾಡಿನ ಹುಲ್ಲು ಗಿಡ್ಡಗಿರುತ್ತದೆ, ಕೇಲವೇ ಸೆಂಮೀ ಎತ್ತರವಾಗಿರುತ್ತದೆ. ಬೇಸಗೆಯ ಧಗೆ, ಬಿಸಿಗಾಳಿ, ಬೇಸಗೆಯ ಉತ್ತರಾರ್ಧದಲ್ಲಿ ಜಲಕ್ಷಾಮ, ಒಣಗಿದ ಸಸ್ಯಗಳು ಇವುಗಳಿಂದ ಇಲ್ಲಿ ಸಹಜವಾಗಿಯೆ ಆಗಾಗ್ಗೆ ಕಾಳ್ಗಿಚ್ಚು ಸಂಭವಿಸುತ್ತಿರುತ್ತದೆ.

ಎಲ್ಲ ಋತುಗಳಲ್ಲೂ ಹುಲ್ಲು ಯಥೇಚ್ಛವಾಗಿರುವುದು ಪ್ರೈರಿ ಹುಲ್ಲುಗಾವಲಿನ ವೈಶಿಷ್ಟ್ಯ. ವಸಂತ ಹಾಗೂ ಶರತ್ಕಾಲಗಳಲ್ಲಿ ಬಣ್ಣಬಣ್ಣದ ಹೂ ಬಿಡುವ ಸಸ್ಯಗಳಿರುತ್ತವೆ. ಹಿಂದೆ ಈ ಹುಲ್ಲುಗಾವಲುಗಳಲ್ಲಿ ಕಾಡುಕೋಣಗಳ, ಕವಲು ಕೊಂಬಿನ ಜಿಂಕೆಗಳ ಮಂದೆಗಳಿದ್ದುವು. ಉತ್ತರ ಅಮೆರಿಕದ ಪರಿಶೋಧನೆಯ ಕಾಲದಲ್ಲಿ ಹಾಗೂ ಇಲ್ಲಿ ಯುರೋಪಿನ ಜನರು ನೆಲೆಸಿದಾಗ ಇವು ಬಹುತೇಕ ನಾಶವಾದುವು. ಪ್ರೈರಿ ನಾಯಿ, ಪ್ರೈರಿ ಕೋಳಿ, ಬಯಲು ಬಾನಾಡಿ, ಕಿರೀಟದ ಬಾನಾಡಿ, ವಿವಿಧ ಬಗೆಯ ಡೇಗೆಗಳು, ಚಿಟ್ಟೆ ಹಾಗೂ ನೊಣಗಳು ಇವೆ.

ಪ್ರೈರಿಯ ನೆಲ ಫಲವತ್ತಾಗಿದ್ದು, ಧಾನ್ಯದ ಬೆಳೆಗೆ ಅನುಕೂಲವಾದ ವಾಯುಗುಣ ಇಲ್ಲಿರುವುದರಿಂದ ವಲಸೆಗಾರರು ಹುಲ್ಲುಗಾವಲುಗಳನ್ನು ಸವರಿ ಭೂಮಿಯನ್ನು ಸಾಗುವಳಿಗೆ ತಂದರು. ಈಗ ಪ್ರೈರಿ ನೆಲದಲ್ಲಿ ವ್ಯವಸಾಯ ವ್ಯಾಪಕವಾಗಿದೆ. ಇಲ್ಲಿಯ ಪ್ರಧಾನ ಬೆಳೆಗಳು, ಪೂರ್ವ ಭಾಗದಲ್ಲಿ ಮೆಕ್ಕೆಜೋಳ ಮತ್ತು ಮಧ್ಯ ಅಮೆರಿಕದಲ್ಲಿ ಗೋದಿ. ಉಳಿದ ಕೆಲವು ಕಡೆಗಳಲ್ಲಿ ಪ್ರೈರಿ ಹುಲ್ಲುಗಾಡನ್ನು ರಕ್ಷಿಸಲಾಗಿದೆ. (ವಿ.ಜಿ.ಕೆ.)

**ಪ್ಲಾನಿ ಮೀಟರ್:** ನಕ್ಷೆಯ ಕ್ಷೇತ್ರವನ್ನು ಅಳೆಯಲು ಬಳಸುವ ಉಪಕರಣ (ಕ್ಷೇತಫಲಮಾಪಕ). ಇದನ್ನು ಸ್ವಿಟ್ಜರ್‌ಲೆಂಡಿನ ಗಣಿತ ವಿಜ್ಞಾನಿ ಆ್ಯಮ್‌ಸ್ಲೆರ್ ಮೊದಲಬಾರಿಗೆ ರಚಿಸಿದ. ಇದಕ್ಕೆ ಎರಡು ಬಾಹುಗಳಿವೆ. ಒಂದು ಸ್ಥಿರ ಭಾಗ, ಇದನ್ನು ಫಿಕ್ಸ್‌ಡ್ ಆರ್ಮ್ ಪ್ಲಾನಿಮೀಟರ್ ಎಂದೂ ಮತ್ತೊಂದು ಭಾಗವನ್ನು ಸ್ಲೈಡಿಂಗ್ ಬಾರ್ ಪ್ಲಾನಿಮೀಟರ್ ಎಂದೂಕರೆಯುವರು.



ಕಾರ್ಯವಿಧಾನ: ನಕ್ಷೆಯ ಮೇಲಿನ ಸಮತಲ ನಿವೇಶನವನ್ನು ಅಳೆಯಲು ಅದರ ಕ್ಷೇತ್ರಫಲವನ್ನು ತಿಳಿಯಲು ಇದರ ಬಳಕೆ ಸೂಕ್ತ, ನಕ್ಷೆಯ ಆಯಕಟ್ಟಿನ ಮೇಲಾಗಲಿ, ಗಡಿರೇಖೆಯ ಮೇಲಾಗಲಿ ಅಥವಾ ಯಾವುದೇ ಅವಶ್ಯವಿರುವ ವೃತ್ತ ಪರಿಧಿ ಅಥವಾ ರೇಖೆಯ ಮೇಲೆ ಕ್ಷೇತ್ರಫಲ ಮಾಪಕವನ್ನಿರಿಸಿ ಗಡಿಯಮೇಲೆ ಜಾಗ್ರತೆಯಿಂದ ಚಲಿಸುವಿಕೆಯಿಂದ ಮಾಪಕದ ಚಕ್ರವು ಕ್ರಮಿಸಿರುವ ದೂರವನ್ನು ಸೂಚಿಸುತ್ತದೆ. ಈ ಅಳತೆಯನ್ನು ಸೂಕ್ತಮಾನಶ್ರೇಣಿಗೆ ಅನುಸಾರವಾಗಿ ಪರಿವರ್ತನೆ ಮಾಡಿಕೊಳ್ಳಬೇಕು. (ಆರ್.ಎನ್.)

**ಪ್ಲಿನಿ:** 23–79. ರೋಮನ್ ವಿದ್ವಾಂಸ. ಪ್ಲಿನಿಯಸ್ ಸಿಕಂಡಸ್ ಎಂಬುದು ಈತನ ಲ್ಯಾಟನ್ ಹೆಸರು. ಹಿರಿಯ ಪ್ಲಿನಿ ಎಂದು ಪ್ರಸಿದ್ಧನಾಗಿದ್ದಾನೆ. ಇಟಲಿಯ ಕೋಮೊ (ಕೋಮಮ್) ಎಂಬಲ್ಲಿ 23 ರಲ್ಲಿ ಜನಿಸಿದ. ವೆಸೂವಿಯಸ್ ಅಗ್ನಿಪರ್ವತದ ಸ್ಫೋಟವನ್ನು ಹತ್ತಿರದಿಂದ ವೀಕ್ಷಿಸಲು ಯತ್ನಿಸಿ 79 ರಲ್ಲಿ ನಿಧನನಾದ. ರೋಮಿನಲ್ಲಿ ಉತ್ತಮ ಗುರುಗಳಿಂದ ವಿದ್ಯೆ ಕಲಿತು ಜರ್ಮನಿಯಲ್ಲೂ ಆಫ್ರಿಕದಲ್ಲೂ ಸೈನಿಕನಾಗಿ ಸೇವೆ ಸಲ್ಲಿಸಿದ. ಸ್ಪೇನಿನಲ್ಲಿ ನಿಯೋಗಿಯಾಗಿ ಕೆಲಸ ಮಾಡಿದ. ಇತಿಹಾಸ, ಭೂಗೋಳ, ಅಲಂಕಾರಶಾಸ್ತ್ರ, ಪ್ರಾಕೃತಿಕವಿಜ್ಞಾನ, ಯುದ್ಧವಿಜ್ಞಾನ ಮುಂತಾದ ನಾನಾ ಕ್ಷೇತ್ರಗಳಲ್ಲಿ ಇವನು ಗ್ರಂಥಗಳನ್ನು ರಚಿಸಿದ. ಇವನು ಅಭ್ಯಾಸಮಾಡಿದ ಪುಸ್ತಕಗಳಿಂದೆಲ್ಲ ಟಿಪ್ಪಣಿ ಬರೆದಿಟ್ಟುಕೊಂಡ. ಇಂಥ ಟಿಪ್ಪಣಿಗಳ ಆಧಾರದ ಮೇಲೆ ಪ್ರಾಕೃತಿಕ ಇತಿಹಾಸವನ್ನು (ಹಿಸ್ಟೋರಿಯ ನ್ಯಾಚುರಾಲಿಸ್) ಬರೆದು ಪ್ರಕಟಿಸಿದ. ಇದೊಂದೇ ಇಂದು ಲಭ್ಯವಿರುವ ಇವನ ಗ್ರಂಥ. ಇದರಲ್ಲಿ 27 ವಿಭಾಗಗಳು ಇವೆ. ಸು. 2,000 ಗ್ರಂಥಗಳಿಂದ ವಿಷಯ ಸಂಗ್ರಹಿಸಿ ಇದನ್ನು ಬರೆದದ್ದಾಗಿ ಪ್ಲಿನಿ ಹೇಳಿಕೊಂಡಿದ್ದಾನೆ. ಪ್ರಕೃತಿ ವಿಜ್ಞಾನದ ವಿಶ್ವಕೋಶ ಸದೃಶಗ್ರಂಥವಿದು. ಪ್ರಕೃತಿಯ ವ್ಯಾಪಕಾರ್ಥವನ್ನು ಗಮನಿಸಿ, ಅದರ ಕಕ್ಷೆಯಲ್ಲಿ ಬರುವ ಅನೇಕ ವಿಷಯಗಳನ್ನು ಅನುಲಕ್ಷಿಸಿ, ಈ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ 1ನೆಯ ಶತಮಾನದ ಜೀವನವನ್ನು ಅರಿಯಬಹುದು. ಭಾರತ ಮತ್ತು ರೋಮ್‌ಗಳ ನಡುವೆ ಸಾಗುತ್ತಿದ್ದ ವ್ಯಾಪಾರದ ಕಾರಣ, ರೋಮ್ ಜನರ ಹಣಕಾಸುಗಳ ನಡುವೆ ಸಾಗುತ್ತಿದ್ದ ವ್ಯಾಪಾರದ ಕಾರಣ, ರೋಮ್ ಜನರ ಹಣಕಾಸು ಪರಿಸ್ಥಿತಿ, ಭಾರತದ ಮುತ್ತು, ಹವಳ, ರೇಷ್ಮೆ, ವಜ್ರ, ವೈಡೂರ್ಯಗಳ ಬಗ್ಗೆ ರೋಮನ್ ಸ್ತ್ರೀಯರಿಗೆ ಇದ್ದ ವ್ಯಾಮೋಹ ಮುಂತಾದವೆಲ್ಲವುಗಳ ವರ್ಣನೆಯನ್ನು ಇಲ್ಲಿ ಕಾಣಬಹುದು. (ಎಸ್.ಎಸ್.ಎನ್.)

**ಪ್ಲಿಯೊಸೀನ್ ಸ್ತೋಮ:** ಚತುರ್ಥ ಕಾಲದ (ಸೀನೋಜೋಯಿಕ್ ಕಲ್ಪದ) ಐದು ಪ್ರಧಾನ ವಿಭಾಗಗಳ ಪೈಕಿ ಅತ್ಯಂತ ತರುಣವಾದ ಕಲ್ಪ. ಪ್ಲಿಯೊಸೀನ್ ಸ್ತೋಮವನ್ನು ಚಾರಲ್ಸ್ ಲಯಲ್ 1833ರಲ್ಲಿ ವ್ಯಾಖ್ಯಾನಿಸಿದ. ಪ್ಲಿಯೊಸೀನ್ ಎಂದರೆ ಇಯೊಸೀನ್ ಕಾಲಕ್ಕಿಂತ ಈ ಕಾಲದಲ್ಲಿ ಪ್ರಾಣಿವರ್ಗ ಹೆಚ್ಚು ಗಾತ್ರದಲ್ಲಿ ಈಗ ಜೀವಿಸುತ್ತಿರುವ ಪ್ರಕಾರಗಳಿಂದ ಪ್ರತಿನಿಧಿಸಲ್ಪಟ್ಟಿದೆ ಎಂದರ್ಥ. ಯುರೋಪ್ ಖಂಡದಲ್ಲಿ ಈ ಯುಗದ ಸಸ್ಯವರ್ಗ ಮಿಯೊಸೀನ್ ಕಾಲದ ಉಷ್ಣವಲಯದ ಸಸ್ಯವರ್ಗ ಮತ್ತು ಈಗಿನ ಸಮಶೀತೋಷ್ಣವಲಯದ ಸಸ್ಯವರ್ಗಗಳ ಮಧ್ಯಾವಸ್ಥೆಯದಾಗಿತ್ತು. ಆಂಗ್ಲೊ–ಫ್ರಾಂಕ್–ಬೆಲ್ಜಿಯನ್ ನಿಕ್ಷೇಪ ಪ್ರದೇಶದಿಂದ ಹಿಂಜರಿದಿದ್ದ ಸಮುದ್ರ ಈ ಕಾಲದಲ್ಲಿ ಹಿಂತಿರುಗಿ ಇಂಗ್ಲೆಂಡಿನ ದಕ್ಷಿಣ ಮತ್ತು ಆಗ್ನೇಯದ ಪ್ರದೇಶಗಳನ್ನು ಆಕ್ರಮಿಸಿಕೊಂಡು ಹಾಲೆಂಡ್ ಮತ್ತು ಬೆಲ್ಜಿಯಮ್‌ಗಳ ಮೇಲೆ ಪ್ರಸರಿಸಿ, ಫ್ರಾನ್ಸಿನ ಉತ್ತರಭಾಗದ ಸ್ವಲ್ಪಪ್ರದೇಶಕ್ಕೂ ವಿಸ್ತರಿಸಿತು. ಮೆಡಿಟರೇನಿಯನ್ ಸಮುದ್ರ ಪಶ್ಚಿಮಕ್ಕೆ ಇಟಲಿಯ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಂಡು ರಿವೆರ ಮತ್ತು ರೋಹೀನ್ ಕಣಿವೆಗಳಿಗೂ ನುಗ್ಗಿತು. ಇವಲ್ಲದೆ ಕೆಲವು ಸ್ಥಳಗಳಲ್ಲಿ ಸರೋವರ ಮತ್ತು ನದೀ ನಿಕ್ಷೇಪಗಳೂ ರೂಪುಗೊಂಡಿವೆ. ಈ ನಿಕ್ಷೇಪಗಳಲ್ಲಿ ಸ್ತನಿಗಳ ಮತ್ತು ಭೂಸಸ್ಯಗಳ ಅವಶೇಷಗಳೂ ಸಿಕ್ಕಿವೆ. ಸಾಮಾನ್ಯವಾಗಿ ಪ್ಲಿಯೊಸೀನ್ ಸ್ತೋಮವನ್ನು ಪ್ಲೈಸಾನ್ಸಿಯನ್, ಆಸ್ಟಿಯನ್ ಮತ್ತು ಸಿಸಿಲಿಯನ್ ಎಂಬ ಮೂರು ಶಿಲಾಭಾಗಗಳಾಗಿ ವಿಭಜಿಸಲಾಗಿದೆ. *

**ಪ್ಲೀಸ್ಟೊಸೀನ್ ಯುಗ:** ತೃತೀಯ ಜೀವಕಲ್ಪದ ಅನಂತರ ಆರಂಭವಾದ ಯುಗ. ಇದನ್ನು ಚತುರ್ಥ ಜೀವಕಲ್ಪಕ್ಕೆ ಸೇರಿಸಲಾಗಿದೆ. ಇದರ ಕಾಲ ಅಲ್ಪಾವಧಿಯದಾದರೂ ಈ ಕಾಲದಲ್ಲೇ ಇಂದು ಕಾಣುವ ಭೂಮಿಯ ಮೇಲ್ಮೈಲಕ್ಷಣಗಳು ರೂಪುಗೊಂಡವು. ಅಲ್ಲದೆ ಈಗ ಕಾಣಬರುತ್ತಿರುವ ಪ್ರಾಣಿ ಮತ್ತು ಸಸ್ಯ ವರ್ಗಗಳ ಹಂಚಿಕೆಯೂ ಈ ಯುಗದ ಮೊದಲ ಭಾಗದಲ್ಲೇ ಆಯಿತು. ಈ ಕಾಲದ ಶಿಲಾಸಮುದಾಯದ ಒಟ್ಟು ಸಲೆ 4,03,336 ಚ.ಕಿಮೀ ಗಳೆಂದು ಅಂದಾಜು ಮಾಡಲಾಗಿದೆ. ಯುಗದ ಆರಂಭದಲ್ಲಿಯೇ ಉತ್ತರಗೋಳಾರ್ಧದಲ್ಲಿ ತೀವ್ರ ಶೀತಲ ವಾಯುಗುಣ ತಲೆದೋರಿತು. ಈಗ ಸಮಶೀತೋಷ್ಣ ಹವೆಯುಳ್ಳ ಹಲವು ಪ್ರದೇಶಗಳಲ್ಲಿ ಅತಿಶೀತ ವಾಯುಗುಣವಿತ್ತೆಂಬುದಕ್ಕೆ ಈ ಯುಗಕ್ಕೆ ಸೇರಿದ ಶಿಲೆಗಳಲ್ಲಿ ಖಚಿತ ಆಧಾರಗಳಿವೆ. ಅನೇಕ ಶಿಲೆಗಳಲ್ಲಿ ಹಿಮಾಶ್ಮ ಪ್ರವಾಹದ ಲಕ್ಷಣಗಳಿದ್ದು ಅಂದು ನಡೆದುಹೋದ ಹಿಮಯುಗದ ಅಚ್ಚಳಿಯದ ಮುದ್ರೆಯನ್ನು ಸುಲಭವಾಗಿ ಗುರುತಿಸಬಹುದು. ಆದ್ದರಿಂದಲೇ ಈ ಯುಗವನ್ನು ಮಹಾ ಹಿಮಯುಗ ಎಂದು ಕರೆಯಲಾಗಿದೆ. ತೃತೀಯ ಜೀವಕಲ್ಪದಲ್ಲಿದ್ದ ಹಿತಕರ ವಾಯುಗುಣ ಈ ವೇಳೆಗಾಗಲೇ ಇಳಿಮುಖವಾಗಿ ಹವೆ ಅತಿಶೀತಲವಾಯಿತು. ಇಂಥ ಶೈತ್ಯಕ್ಕೆ ನಿರ್ದಿಷ್ಟ ಕಾರಣಗಳೇನೆಂಬುದು ಸ್ಪಷ್ಟಗೊಂಡಿಲ್ಲ. ಭೂವಿಜ್ಞಾನಿಗಳಲ್ಲಿ ಈ ವಿಷಯದ ಬಗ್ಗೆ ಒಮ್ಮತವಿಲ್ಲ. ಅಂತೂ ಹಿಮಯುಗಕ್ಕೆ ಒಳಗಾದ ಕಾರಣ ಪ್ಲೀಸ್ಟೊಸೀನ್ ಕಾಲದ ನಿಕ್ಷೇಪಗಳು ಹೆಚ್ಚಾಗಿ ಹಿಮಾಶ್ಮ ಪ್ರವಾಹದ ಮೋರೇನುಗಳು, ಪರದೇಶಿ ಬಂಡೆಗಳು, ಮರಳು, ಗುಂಡುಶಿಲೆ, ಟಿಲ್ ಎಂಬ ಅಸ್ತಾವಸ್ಥೆಯ ಹಿಮಾಶ್ಮ ಪ್ರವಾಹದ ನಿಕ್ಷೇಪಗಳು ಹಾಗೂ ನೀಲಿ ಊದಾ ಮತ್ತು ಹಳದಿ ಬಣ್ಣದ ಜೇಡು ಪ್ರಸ್ತರಗಳು ಮತ್ತು ಒಂಡು (ಸಿಲ್ಟ್) ಶಿಲೆಗಳಿಂದ ಕೂಡಿದೆ. ಇವೆಲ್ಲ ಅಲ್ಲದೆ ಮತ್ತೊಂದು ದೃಷ್ಟಿಯಿಂದಲೂ ಈ ಯುಗ ಭೂಚರಿತ್ರೆಯಲ್ಲಿ ಸಾಕಷ್ಟು ಪ್ರಮುಖವಾದುದು. ಜೀವವಿಕಾಸದ ಉತ್ತುಂಗ ಸೃಷ್ಟಿ ಎನಿಸಿದ ಮಾನವ ಕಂಡು ಬಂದುದು ಈ ಯುಗದಲ್ಲೇ. ಹೀಗಾಗಿ ಮಾನವನ ವಿಕಾಸದ ದೃಷ್ಟಿಯಿಂದಲೂ ಈ ಯುಗಕ್ಕೆ ತುಂಬ ಪ್ರಾಮುಖ್ಯವುಂಟು.

ಭೂವಿಜ್ಞಾನಿಗಳು ಈ ಕಾಲದಲ್ಲಿ ಪ್ರಧಾನವಾಗಿ ನಾಲ್ಕು ಹಿಮಪ್ರವಾಹಗಳು ಸಂಭವಿಸಿದ್ದವೆಂದೂ ಇವು ಪರಸ್ಪರ ಅಂತರ ಹಿಮಾಶ್ಮಪ್ರವಾಹ ಕಾಲಗಳಿಂದ ಬೇರಾಗಿದ್ದುವೆಂದೂ ಅಭಿಪ್ರಾಯಪಟ್ಟಿದ್ದಾರೆ. ಇವರ ಲೆಕ್ಕಾಚಾರದಂತೆ ನಾವೀಗ ಐದನೆಯ ಹಿಮಾಶ್ಮ ಪ್ರವಾಹಯುಗದಲ್ಲಿದ್ದೇವೆ. ಹಿಮಾಶ್ಮ ಪ್ರವಾಹಗಳಾದಲ್ಲಿ ಇಡೀ ಉತ್ತರಗೋಳಾರ್ಧವೇ ಹಿಮದ ಹಾಳೆಗಳಿಂದ ಆವೃತವಾಗಿ ನಿರ್ನಾಮವಾದಾವು. (ಬಿ.ವಿ.ಜಿ.)

**ಪ್ಲೂಟೋ:** ಇತ್ತೀಚಿನವರೆಗೂ ಸೌರವ್ಯೂಹದ ಒಂಬತ್ತನೆಯ ಮತ್ತು ಕೊನೆಯ ಗ್ರಹವಾಗಿತ್ತು. ಉಳಿದ ಎಂಟು ಗ್ರಹಗಳು, ಸೂರ್ಯನಿಂದ ಆರೋಹಿ ದೂರಗಳಲ್ಲಿ, ಅನುಕ್ರಮವಾಗಿ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್. ಶನಿಯಿಂದ ಆಚೆಗಿನ ಗ್ರಹಗಳು_ಯುರೇನಸ್, ನೆಪ್ಚೂನ್ ಮತ್ತು ಪ್ಲೂಟೋ_ದೃಗ್ಗೋಚರವಲ್ಲ. ಯುರೇನಸ್ ಆವಿಷ್ಕಾರ 1781ರಲ್ಲಿ, ಅದೃಷ್ಟದ ಆಕಸ್ಮಿಕ ಘಾತವಾದರೆ ನೆಪ್ಚೂನ್ ಆವಿಷ್ಕಾರ 1846ರಲ್ಲಿ, ಪ್ರಯತ್ನದ ಪ್ರತ್ಯಕ್ಷ ಫಲ 1930 ರಲ್ಲಿ ಪ್ಲೂಟೊವನ್ನು ಕಂಡುಹಿಡಿಯಲಾಯಿತು.

ಗ್ರಹನಾಮಕರಣದಲ್ಲಿ ಅನುಸರಿಸುತ್ತಿದ್ದ ಸಂಪ್ರದಾಯದ ಪ್ರಕಾರ ಇದಕ್ಕೆ ಪ್ಲೂಟೋ (ರೋಮನ್ ಪುರಾಣದಲ್ಲಿ ಅಧೋಲೋಕಾಧಿಪತಿ) ಎಂದು ಹೆಸರಿಸಲಾಯಿತು. ಪ್ಲೂಟೋವಿನ ಸರಾಸರಿ ಕಕ್ಷಾವೇಗ ಸೆಕೆಂಡಿಗೆ 4.74 ಕಿಮೀ ಎಂದೇ ಇದರ ವರ್ಷ (ಅಂದರೆ ಒಂದು ಸೌರಪ್ರದಕ್ಷಿಣೆಗೆ ತಾಗುವ ಅವಧಿ) 248 ಭೂವರ್ಷಗಳು ಮತ್ತು 157 ಭೂ ದಿವಸಗಳು, ದಿವಸ 6.39 ಭೂ ದಿವಸಗಳು. ಬಿಂಬದ ಕೋನವ್ಯಾಸ ಸು. 0.62 ಸೆಂಮೀ. ಆದ್ದರಿಂದ ಇದರ ವ್ಯಾಸ ಸು. 5860 ಕಿಮೀ (ಭೂಮಿಯ ವ್ಯಾಸ 12,700 ಕಿಮೀ) ರಾಶಿ ಅಂದಾಜು ಭೂರಾಶಿಯ 0.11 ರಷ್ಟು. ಸಾಂದ್ರತೆ ಅಂದಾಜು 6.2 g-cm-3 (ಭೂಮಿ 5.52 g-cm-3). ಅಂದರೆ ಪ್ಲೂಟೋವಿನ ಸರಾಸರಿ ಸಾಂದ್ರತೆ ಭೂಮಿಯದ್ದಕ್ಕಿಂತ ಜಾಸ್ತಿ ಇದೆ ಎಂದಾಯಿತು. ಆದರೆ ಈ ಎಲ್ಲ ಬೆಲೆಗಳೂ ಕೇವಲ ನಾಲ್ಕೈದು ದಶಕಗಳ ಅವಧಿಯಲ್ಲಿ ಪ್ಲೂಟೋ ವರ್ತನೆಯನ್ನು ಗಮನಿಸಿದುದರ ಫಲವಾಗಿ ದೊರೆತಂಥವು. ಒಂದು ಪೂರ್ತಿ ಪರಿಭ್ರಮಣಾವಧಿಯಾದರೂ–ನಮ್ಮ 248 ವರ್ಷಗಳಿಗೂ ಮಿಕ್ಕಿದ ಅವಧಿ–ಇದನ್ನು ವೀಕ್ಷಿಸಿದ ವಿನಾ ಕರಾರುವಾಕ್ಕಾಗಿ ಏನನ್ನೂ ಹೇಳಲಾಗುವುದಿಲ್ಲ. 1978ರಲ್ಲಿ ಕ್ರಿಸ್ಟೀ ಎಂಬಾತ ಇದಕ್ಕೊಂದು ಉಪಗ್ರಹವಿರುವುದನ್ನು ಕಂಡುಹಿಡಿದ. ಪರಿಭ್ರಮಣಾವಧಿ 6.3 ದಿನಗಳು. ಇದಕ್ಕೆ ಚೆರಾನ್ ಎಂದು ಹೆಸರು.

ಆದರೆ 2006ರ ಆಗಸ್ಟ್ 6 ರಂದು ಪ್ರಪಂಚದ ಖಗೋಳ ವಿಜ್ಞಾನಿಗಳ ಸಮಾವೇಶದಲ್ಲಿ ಪ್ಲೂಟೋ ಬಗ್ಗೆ ಕೂಲಂಕಷ ಚರ್ಚೆ ನಡೆದು ಇದನ್ನು ಗ್ರಹಪಟ್ಟದಿಂದ ಇಳಿಸಲಾಯಿತು ಮತ್ತು ಇದನ್ನು ಕ್ಷುದ್ರ ಗ್ರಹವೆಂದು ಪರಿಗಣಿಸಲಾಗಿದೆ. ಹಾಗಾಗಿ ಈಗ ಸೌರವ್ಯೂಹದಲ್ಲಿ 8 ಗ್ರಹಗಳು ಮಾತ್ರ ಇವೆ. (ಆರ್.ಆರ್.ಯು.)

**ಪ್ಲೇಟ್ ಟೆಕ್ಟಾನಿಕ್ಸ್:** ಅನೇಕ ಬಿಲಿಯನ್ ವರ್ಷಗಳ ಹಿಂದೆ ಭೂಮಿಯ ಉಗಮವಾದಾಗ ಅದರ ಮೇಲ್ಮೈನ ಶಿಲಾಚಿಪ್ಪು ಶಿಲಾದ್ರವದ ಘನೀಕರಿಸುವಿಕೆಯಿಂದಾಗಿ ಉಂಟಾಯಿತು. ಈ ಚಿಪ್ಪು ಅಥವಾ ಶಿಲಾ ಕವಚ (ಲಿತೋಸ್ಫಿಯರ್) ಕಠಿಣವಾಗಿರದೆ ಅನೇಕ ರೀತಿಯಲ್ಲಿ ಛಿದ್ರವಾದ ತಟ್ಟೆಗಳಂತೆ (ಪ್ಲೇಟ್ಸ್) ರೂಪುಗೊಂಡಿದ್ದು, ಇವುಗಳ ತಳಭಾಗದಲ್ಲಿರುವ ಮೃದುವಾದ ಪ್ಲಾಸ್ಟಿಕ್ ಹಾಳೆಗಳಂತಿರುವ ಅಸ್ತನೋಸ್ಫಿಯರ್ ಅಥವಾ ಮ್ಯಾಂಟಲ್ ಎಂಬ ವಸ್ತುರಾಶಿಯ ಮೇಲೆ ಜಾರುತ್ತದೆ. ಇದರ ಕೆಳಭಾಗದಲ್ಲಿ ಅತಿಕಠಿಣವಾದ ಕೇಂದ್ರ ಘನಗೋಳವಿದೆ.

ಭೂತಟ್ಟೆಗಳು ಶಿಲೆಗಳಿಂದ ರೂಪುಗೊಂಡಿದ್ದು, ಭೂಗೋಳದ ಮೇಲ್ಮೈಯಲ್ಲಿ ಚಲಿಸುತ್ತವೆ. ಇವುಗಳ ಚಲನೆ ಸಮತಲ ಹಾಗೂ ಲಂಬಾಭಿಮುಖವಾಗಿರುತ್ತದೆ (ಮೇಲೆ ಕೆಳಗೆ). ದೀರ್ಘ ಭೂಕಾಲಗಳಲ್ಲಿ ಈ ತಟ್ಟೆಗಳ ಗಾತ್ರ ಮತ್ತು ಆಕಾರಗಳು ಅವುಗಳ ಅಂಚುಗಳಲ್ಲಿ ವ್ಯತ್ಯಾಸಗೊಳ್ಳುತ್ತಿರುತ್ತವೆ. ಮುರಿಯುವಿಕೆ, ಮಡಿಚಿಕೊಳ್ಳುವಿಕೆ ಮುಳುಗುವಿಕೆಯೇ ಮುಂತಾದ ಕ್ರಿಯೆಗಳಿಂದ ಈ ಬದಲಾವಣೆಗಳಾಗುತ್ತವೆ. ಈ ಭೂತಟ್ಟೆಗಳು 80 ರಿಂದ 400 ಕಿಮೀ ಮಂದವಾಗಿರುತ್ತವೆ.

ಈ ಸಿದ್ಧಾಂತವನ್ನು 1960 ರಲ್ಲಿ ಜೇಸನ್ ಮಾರ್ಗನ್ ಅವರು ಪ್ರತಿಪಾದಿಸಿದರು. ಇದಕ್ಕೆ ಮೊದಲೇ ಅನೇಕ ವಿದ್ವಾಂಸರು ಈ ಪರಿಭಾವನೆಯನ್ನು ಅಲ್ಲಲ್ಲಿ ಪ್ರಸ್ತಾಪಿಸಿದ್ದರು. ಆಲ್ಫ್ರೆಡ್ ವೆಗನರರ ಖಂಡಾಂತರ ಚಲನೆಯ ಪರಿಭಾವನೆಯೇ ಮುಂದಿನ ಎಲ್ಲಾ ಪರಿಭಾವನೆಗಳ ಬೆಳೆವಣಿಗೆಗೆ ಮೂಲ. ಈ ನೂತನ ಸಿದ್ಧಾಂತವನ್ನು ಈಗ ಪ್ರಪಂಚದಾದ್ಯಂತ ಭೂವಿಜ್ಞಾನಿಗಳು ಒಪ್ಪಿಕೊಂಡಿರುತ್ತಾರೆ. ಈಚೆಗಿನ ವರ್ಷಗಳಲ್ಲಿನ ಒಂದು ಕ್ರಾಂತಿಕಾರಿ ವೈಜ್ಞಾನಿಕ ಬೆಳವಣಿಗೆ ಇದಾಗಿದೆ. ಈ ಸಿದ್ಧಾಂತದ ಪ್ರಮುಖವಾದವೆಂದರೆ ಶಿಲಾಗೋಳ ಅಥವಾ ಲಿತೊಸ್ಫಿಯರ್ ಅನೇಕ ನಿರ್ದಿಷ್ಟವಾದ ತಟ್ಟೆಗಳಾಗಿದ್ದು ಭೂಖಂಡಗಳು ಮತ್ತು ಸಾಗರ ತಳಗಳೆರಡನ್ನೂ ಒಳಗೊಂಡಿದೆ. ಹಾಗೂ ಅಸ್ಥನೋಸ್ಫಿಯರ್‌ನ ಮೇಲೆ ಚಲಿಸುತ್ತವೆ. ಈ ತಟ್ಟೆಗಳು ಅವುಗಳ ಅಂಚುಗಳಲ್ಲಿ ಚಲನಾತ್ಮಕವಾಗಿದ್ದು ಭೂಶಕ್ತಿಗಳ ಉಗಮ ಹಾಗೂ ಕಾರ್ಯಕ್ಷೇತ್ರಗಳಾಗಿವೆ. ಭೂಕಂಪಗಳು ಜ್ವಾಲಾಮುಖಿಗಳು, ಸಾಗರಿಕ ಕಮರಿಗಳು, ಪರ್ವತಪಂಕ್ತಿಗಳು ಮೊದಲಾದ ಭೂಸಾದೃಶ್ಯಗಳನ್ನು ಉಂಟುಮಾಡುತ್ತವೆ. ಪೆಸಿಫಿಕ್ ಮಹಾಸಾಗರದ ಸುತ್ತಲೂ ಇರುವ ಅಗ್ನಿವರ್ತುಲ (ರಿಂಗ್ ಆಫ್ ಫೈರ್) ಇದಕ್ಕೆ ನಿದರ್ಶನ. ಭೂತಟ್ಟೆಗಳು, ಖಂಡಾಂತರ, ಸಾಗರಿಕ ಹಾಗೂ ಇವೆರಡರ ಸಂಯುಕ್ತ ಭಾಗಗಳಾಗಿರಬಹುದು. ಉದಾ. ಆಫ್ರಿಕದ ತಟ್ಟೆ, ಆಫ್ರಿಕ ಖಂಡ, ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳ ಭಾಗಗಳಿಂದ ಕೂಡಿದೆ.

ಭೂತಟ್ಟೆಗಳಲ್ಲಿ ಮೂರು ರೀತಿಯ ಅಂಚುಗಳು ಅಥವಾ ಎಲ್ಲೆಗಳಿವೆ (ಬೌಂಡರಿ). ಬದಲಾದ ಅಥವಾ ರೂಪಾಂತರಿತ ಅಂಚು ತಟ್ಟೆಗಳು ಒಂದರ ಕೆಳಗೊಂದು ನುಸುಳುವ ಅಥವ ಉಜ್ಜಿಕೊಂಡು ಹೋಗುವ ಭಾಗ. ವಿಮುಖದಿಕ್ಕಿನ ಚಲನಾ ಅಂಚು: ಎರಡು ತಟ್ಟೆಗಳು ವಿರುದ್ಧ ದಿಕ್ಕಿನಲ್ಲಿ ಚಲಿಸುವ ಅಂಚು. ಉದಾ: ಮಧ್ಯ ಅಟ್ಲಾಂಟಿಕ್ ಉಬ್ಬು. ಕೂಡು ಮುಖದ ಅಂಚು: ಎರಡು ತಟ್ಟೆಗಳು ಒಂದರೆಡೆಗಿನ್ನೊಂದರ ಚಲನೆ. ಈ ರೀತಿಯ ಚಲನೆಯಿಂದ ಮುಳುಗು ವಲಯ (ಸಬ್‌ಡಕ್ಷನ್ ಜೋನ್) ಏರ್ಪಡುತ್ತದೆ.

ಉದಾ: ದಕ್ಷಿಣ ಅಮೆರಿಕದ ಆಂಡಿಸ್‌ಪರ್ವತ ವಲಯ ಮತ್ತು ಜಪಾನ್ ದ್ವೀಪಸ್ತೋಮ.

ಸಾಮಾನ್ಯವಾಗಿ ರೂಪಾಂತರ ಅಂಚುಗಳು ಎರಡು ತಟ್ಟೆಗಳ ಮಿಲನದಿಂದಾಗಿ ಹೆಚ್ಚುಮಂದವಾಗುತ್ತವೆ. ಇವುಗಳನ್ನು ಸಂರಕ್ಷಕ ಅಂಚುಗಳೆಂದು ಕರೆಯುವರು. ವಿಮುಖ ಅಂಚುಗಳು ರಚನಾತ್ಮಕವಾಗಿರುತ್ತವೆ. ಹೊಸ ಭಾಗಗಳ ಬೆಳವಣಿಗೆಗೆ ಇವು ಸಹಾಯಕ. ಕೂಡು ಮುಖ ಅಂಚುಗಳು ತಟ್ಟೆಗಳ ಪರಸ್ಪರ ಘರ್ಷಣೆಯಿಂದಾಗಿ ವಿಧ್ವಂಸಕಕಾರಿಯಾಗಿರುತ್ತವೆ.

ಭೂತಟ್ಟೆಗಳ ಚಲನೆಗೆ ಪ್ರಮುಖ ಕಾರಣಗಳೆಂದರೆ ಉಷ್ಣತೆಯ ವಿಕಿರಣ ಮತ್ತು ಪ್ರಸರಣ ಶಕ್ತಿ, ತಟ್ಟೆಗಳ ನಡುವಿನ ಘರ್ಷಣೆ, ಮುಕೂಡುಗಳು, ಭೂತಳಪದರದ ಮೆದುತ್ವ, ಗುರುತ್ವಾಕರ್ಷಣೆ, ಬಾಹ್ಯ ಶಕ್ತಿಗಳು ಹಾಗೂ ಅವುಗಳ ನಡುವಿನ ಪ್ರಕ್ರಿಯೆಗಳ ಪ್ರಾಮುಖ್ಯತೆ. 1967ರಲ್ಲಿ ಡಬ್ಲ್ಯು. ಜೇಸನ್ ಮಾರ್ಗನ್‌ರವರು ಭೂಶಿಲಾಚಿಪ್ಪು ಹನ್ನೆರಡು ಕಠಿಣವಾದ ತಟ್ಟೆಗಳಿಂದ ಕೂಡಿದೆ. ಹಾಗೂ ಈ ತಟ್ಟೆಗಳು ಪರಸ್ಪರ ಚಲನೆಯಲ್ಲಿವೆ ಎಂದರು. 1968ರಲಿ ಜ್ಸಾವಿಯರ್ ಲಿ ಪಿಚಾನ್‌ರವರು ಆರು ಪ್ರಮುಖ ತಟ್ಟೆಗಳು ಹಾಗೂ ಅನೇಕ ಸಣ್ಣ ತಟ್ಟೆಗಳಿಂದ ಕೂಡಿದ ಪರಿಪೂರ್ಣ ಮಾದರಿಯನ್ನು ಮುಂದಿಟ್ಟರು. ಇವರು ಪ್ರಚುರಪಡಿಸಿದ ಮಾದರಿ ಇಂದು ಹೆಚ್ಚು ಪ್ರಚಲಿತವಾಗಿದೆ. ಆರು ಪ್ರಮುಖ ತಟ್ಟೆಗಳೆಂದರೆ ಯುರೋಪಿನ ತಟ್ಟೆ, ಉತ್ತರ ಅಮೆರಿಕ ತಟ್ಟೆ, ದಕ್ಷಿಣ ಅಮೆರಿಕ ತಟ್ಟೆ, ಆಫ್ರಿಕದ ತಟ್ಟೆ, ಇಂಡಿಯ–ಆಸ್ಟ್ರೇಲಿಯ ತಟ್ಟೆ ಮತ್ತು ಪೆಸಿಫಿಕ್ ಸಾಗರ ತಟ್ಟೆ. ಈ ಆರು ತಟ್ಟೆಗಳು ಭೂ ಕವಚದ ಶೇ. 85 ಭಾಗವನ್ನು ಆಕ್ರಮಿಸಿವೆ. ಉಳಿದ ಸಣ್ಣತಟ್ಟೆಗಳು ಶೇ. 15 ಭಾಗವನ್ನು ಆಕ್ರಮಿಸಿವೆ. ಇವುಗಳಲ್ಲಿ ಪ್ರಮುಖವಾದವು ಕೆರೇಬಿಯನ್ ತಟ್ಟೆ, ಜುವಾನ್ ಡಿಫುಕ, ಕೋಕೋಸ, ನಾಜ್ಕಾಸ್, ಸ್ಕಾಟಿಯ, ಅಂಟಾರ್ಕ್‌ಟಿಕ, ಅರೇಬಿಯನ್ ಮತ್ತು ಫಿಲಿಫೈನ್ ತಟ್ಟೆಗಳು. ಪ್ಲೇಟ್ ಟೆಕ್ಟಾನಿಕ್, ಪರಿಭಾವನೆಯ ಬಗ್ಗೆ ಇನ್ನೂ ಅಧ್ಯಯನಗಳು ಪ್ರಯೋಗಗಳು ನಡೆಯುತ್ತಲೆ ಇವೆ. ಈ ಸಿದ್ಧಾಂತವೂ ಇನ್ನು ಪರಿಪೂರ್ಣವಾಗಿ ಪಕ್ವವಾಗಬೇಕಿದೆ. (ಕೆ.ಎನ್.ಯು.)




# ಫ

**ಫರೋಎ ದ್ವೀಪಗಳು:** ಈ ದ್ವೀಪಗಳು ನಾರ್ವೆ ಸಮುದ್ರ ಮತ್ತು ಉತ್ತರ ಅಟ್ಲಾಂಟಿಕ್ ಸಮುದ್ರದ ಮಧ್ಯದಲ್ಲಿ ಕಂಡುಬರುತ್ತವೆ. (62$^{0}$ ಉ. ಅ. ಮತ್ತು 6$^{0}$47' ಪ.ರೇ.) ಇದರ ಇನ್ನೊಂದು ಹೆಸರು ನೀಫ್ ದ್ವೀಪಗಳು. ಈ ದ್ವೀಪಗಳು 1948ರಿಂದ ಸ್ವಾಯತ್ತ ಡೆನ್ಮಾರ್ಕಿನ ಅಧೀನಕ್ಕೊಳಪಟ್ಟಿದೆ. ಇವುಗಳ ಅಂತಾರಾಷ್ಟ್ರೀಯ ಸಂಬಂಧ ಹಾಗೂ ಕಾನೂನು ವ್ಯವಸ್ಥೆ ಡೆನ್ಮಾರ್ಕಿನ ಹಿಡಿತದಲ್ಲಿದೆ. ಈ ದ್ವೀಪಗಳಲ್ಲಿ ಹಿತವಾದ ಬೇಸಗೆ, ಮಂದವಾದ ಚಳಿಗಾಲ, ಮೋಡಕವಿದ ಆಕಾಶ, ಅತೀ ಹೆಚ್ಚಿನ ಮಂಜು ಮತ್ತು ಹೆಚ್ಚುವೇಗವಾದ ಮಾರುತಗಳು ಕಂಡುಬರುತ್ತವೆ. ರಾಷ್ಟ್ರದ ಸಾರಿಗೆ ವ್ಯವಸ್ಥೆಯಲ್ಲಿ ಮಂಜು ಅತ್ಯಂತ ಅನಾನುಕೂಲಕರವಾಗಿ ಪರಿಣಮಿಸಿದೆ. ಈ ದ್ವೀಪಗಳು ಒರಟಾದ ಶಿಲೆಗಳ ಮೇಲ್ಮೈಯಿಂದ ಆವೃತವಾಗಿವೆ ಹಾಗೂ ನಡುಗಡ್ಡೆಗಳ ಕರಾವಳಿ ಪ್ರದೇಶಗಳು ಕಡಿದಾದ ಬಂಡೆಗಳಿಂದ ಮೇರೆಯನ್ನು ನಿರ್ಮಿಸಿದೆ. ಈ ನಡುಗಡ್ಡೆಗಳಲ್ಲಿರುವ ಅತ್ಯಂತ ಎತ್ತರವಾದ ಪರ್ವತ ಸ್ಲೆಟ್ಟಾರ್ ಸಿಂದೂರ್. ಇದು ಸಮುದ್ರಮಟ್ಟದಿಂದ 877 ಮೀ ಎತ್ತರವಾಗಿದೆ. ಈ ನಡುಗಡ್ಡೆಗಳಲ್ಲಿ ಕೆಲವೊಂದು ಪ್ರದೇಶಗಳು ಸಮುದ್ರಮಟ್ಟಕ್ಕಿಂತ ಕೆಳಭಾಗದಲ್ಲಿಯೂ ಕಂಡುಬರುತ್ತವೆ. (ಎಚ್.ಎನ್.)

**ಫರ್ಡಿನೆಂಡ್ ಮೆಗಲನ್:** 1480–1571. ಪೋರ್ಚುಗೀಸ್ ನಾವಿಕ. ಸಬ್ರೋವದಲ್ಲಿ 1480ರಲ್ಲಿ ಜನಿಸಿದ. ಸ್ಪೇನ್ ದೇಶದ ನಾವಿಕನಾಗಿ ಚಕ್ರವರ್ತಿಯ ಆದೇಶದ ಮೇರೆಗೆ ಇಂಡೊನೇಷ್ಯ ಮತ್ತು ಪೂರ್ವ ಇಂಡೀಸ್ ದ್ವೀಪಗಳಿಗೆ ಪಶ್ಚಿಮಾಭಿಮುಖವಾಗಿ ಸಮುದ್ರ ಮಾರ್ಗವನ್ನು ಹುಡುಕಲು ನಿಯೋಜಿತನಾಗಿದ್ದ. ಇವನು ಕೈಗೊಂಡ ಈ ಭೂ ಅನ್ವೇಷಣಾ ಕಾರ್ಯ ಪ್ರಪಂಚದ ಸಂಪೂರ್ಣ ಭೂ ಪ್ರದಕ್ಷಿಣೆಯ ಮೊಟ್ಟ ಮೊದಲ ಪ್ರಯತ್ನವೆಂದು ಪ್ರಸಿದ್ಧವಾಗಿದೆ. ಈತ ಈ ಸಮುದ್ರಯಾನವನ್ನು ಪೂರ್ಣಗೊಳಿಸುವಲ್ಲಿ

ವಿಫಲನಾದ. ಈ ಕಾಲಕ್ಕಾಗಲೇ ಮೆಗಲಿನ್ ಸಂಬಾರ ದ್ವೀಪಗಳಿಗಿಂತಲೂ ಬಹಳ ಮುಂದೆ ಹೋಗಿದ್ದ. ಪ್ರಪಂಚದ ಎಲ್ಲಾ ರೇಖಾಂಶಗಳನ್ನು ದಾಟಿದ್ದ. ಯುರೋಪಿನ್ನಿಂದ ಪಶ್ಚಿಮಾಭಿಮುಖವಾಗಿ ಸಮುದ್ರಯಾನ ಮಾಡಿ ಪೆಸಿಫಿಕ್ ಮಹಾಸಾಗರವನ್ನು ದಾಟಿ ಏಷ್ಯವನ್ನು ತಲುಪಿದ ಮೊಟ್ಟ ಮೊದಲ ನಾವಿಕನೆಂಬ ಈತನಿಗೆ ಸಲ್ಲುತ್ತದೆ. ಇದೇ ಕಾಲದಲ್ಲಿ ಇವನು ಮೆಗಲನ್ ಜಲಸಂಧಿಯನ್ನು ಹಾಯ್ದು ಹೋದ. ಇವನ ಹೆಸರೆ ಆ ಜಲಸಂಧಿಗಿದೆ. ಆದರೆ ಮೆಗಲನ್ ಈ ಸಮುದ್ರಯಾನಗಳಲ್ಲಿ ಅನೇಕ ಕಷ್ಟನಷ್ಟಗಳನ್ನು ಅನುಭಿಸಬೇಕಾಯಿತು. ಇವನೊಂದಿಗೆ ಪ್ರಯಾಣ ಬೆಳೆಸಿದ 270 ನಾವಿಕರಲ್ಲಿ ಕೇವಲ 18 ಜನಮಾತ್ರ ಸ್ಪೇನ್‌ಗೆ ಹಿಂತಿರುಗಿದರು. ಮೆಗಲನ್ (1521 ಏಪ್ರಿಲ್ 27ರಂದು ಮೆಕ್ಟಾನ ದ್ವೀಪದ ಸ್ಥಳೀಯರೊಂದಿಗಿನ ಕಾದಾಟದಲ್ಲಿ) ಮರಣಾನಂತರ ಇವನ ವಿಕ್ಟೋರಿಯ ಹಡಗಿನ ಅಧಿಪತ್ಯವನ್ನು ಸೆಬಾಸ್ಟಿಯನ್ ಎಲ್‌ಕಾನೂ ವಹಿಸಿ ಅಳಿದುಳಿದ ನಾವಿಕರೊಡನೆ ಸ್ವದೇಶಕ್ಕೆ ಮರಳಿದ. (ಕೆ.ಎನ್.ಯು.)

**ಫಲವಾದ:** ಜ್ಞಾನದ ಕ್ರಿಯಾಶೀಲತೆ ಅಥವಾ ಜ್ಞಾನ ನಿರೀಕ್ಷಿತ ಫಲವನ್ನು, ಪರಿಣಾಮವನ್ನು ಅಥವಾ ಪ್ರಯೋಜನವನ್ನು ನೀಡಿದಲ್ಲಿ ಮಾತ್ರ ಸತ್ಯ; ಇಲ್ಲದಿದ್ದಲ್ಲಿ ಅದು ಅಸತ್ಯ. ಮಾನವ ಬದುಕಿನ ಯಶಸ್ಸು ಬರಿಯ ಸಿದ್ಧಾಂತದಲ್ಲಿರದೇ ಅದರ ಪ್ರಾಯೋಗಿಕ ಔಚಿತ್ಯದಲ್ಲಿದೆಯೆಂಬುದು ಈ ವಾದದ ತಿರುಳು. ನಮ್ಮ ಸೈದ್ಧಾಂತಿಕ ಚಿಂತನೆಗಳು ಕಾರ್ಯಶೀಲವಾದಾಗ ಅಥವಾ ಉಪಯುಕ್ತವಾದಾಗ ಅವು ಅರ್ಥಪೂರ್ಣ; ಇಲ್ಲದಿದ್ದರೆ ಅವು ಅರ್ಥ ರಹಿತ.

ಡೀವೆ ಪ್ರಕಾರ ಸಿದ್ಧಾಂತ ಉಪಯುಕ್ತತೆ ಕೆಲವು ಹಂತಗಳಿಂದ ನಿರ್ಧರಿಸಲ್ಪಡುತ್ತದೆ. ಒಂದು ನಮ್ಮ ಮನಸ್ಸನ್ನು ಆಲೋಚನೆಗೆ ಪ್ರೇರೇಪಿಸುವ ಒಂದು ಕ್ಲಿಷ್ಟ ಸಂದರ್ಭ. ಈ ಸಂದರ್ಭ ಅಥವಾ ಸನ್ನಿವೇಶ ನಮ್ಮ ಮನಸ್ಸಿನಲ್ಲಿ ಒತ್ತಡವನ್ನು ಸೃಷ್ಟಿಸಿ ಆ ಸಂದರ್ಭವನ್ನು ವಿಶ್ಲೇಷಿಸುವಂತೆ ಮಾಡುತ್ತದೆ. ಎರಡನೆಯದಾಗಿ ಸಮಸ್ಯೆಯನ್ನು ಜಾಗರೂಕವಾಗಿ ಪರಿಶೀಲಿಸಿದಾಗ ಅದರ ನೈಜಸ್ವರೂಪ ತಿಳಿಯುತ್ತದೆ. ಇಲ್ಲಿ ಸಮಸ್ಯೆಯ ಅಸ್ಪಷ್ಟ ಸ್ವರೂಪ ಮತ್ತು ಅದರ ನೈಜಸ್ವರೂಪ ಅರ್ಥವಾಗುತ್ತದೆ. ಮೂರನೆಯದಾಗಿ ಸಮಸ್ಯೆ ಅರ್ಥವಾದ ಮೇಲೆ ಮನಸ್ಸು ಅದರ ಕಲ್ಪನಾ ಶಕ್ತಿಗೆ ಅನುಗುಣವಾಗಿ ವಿವಿಧ ಪರಿಹಾರಗಳನ್ನು ಹುಡುಕುತ್ತದೆ. ಈ ಪರಿಹಾರಗಳಿಗೆ ಉಪಕಲ್ಪನೆ ಎಂದು ಹೆಸರು. ಉಪಕಲ್ಪನೆಯೆಂದರೆ ಸಮಸ್ಯೆಯನ್ನು ಬಿಡಿಸಲು ಮಾಡಿಕೊಳ್ಳುವ ತಾತ್ಕಾಲಿಕ ಊಹೆ, ಕೊನೆಯ ಹಂತದಲ್ಲಿ ನಾವು ಪ್ರತಿ ಉಪಕಲ್ಪನೆಯನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಒಂದು ಉಪಕಲ್ಪನೆ ನಿರೀಕ್ಷಿತ ಫಲವನ್ನು ನೀಡಿದಲ್ಲಿ ಅದು ಸ್ವೀಕೃತ, ಇಲ್ಲದಿದ್ದರೆ ಅದು ತಿರಸ್ಕೃತ. ಒಂದು ಉಪಕಲ್ಪನೆ ಸ್ವೀಕೃತವಾದಲ್ಲಿ ಉಳಿದೆಲ್ಲ ಉಪಕಲ್ಪನೆಗಳೂ ತಾನೇ ತಾನಾಗಿ ತಿರಸ್ಕೃತವಾಗುತ್ತದೆ. ಒಟ್ಟಿನಲ್ಲಿ ಫಲವಾದಿಯ ಪ್ರಕಾರ ಜ್ಞಾನವೊಂದರ ಸತ್ಯತೆಯು ಬದುಕಿನಲ್ಲಿ ಅದು ಎಷ್ಟರ ಮಟ್ಟಿಗೆ ಕಾರ್ಯ ಸಾಧ್ಯ ಎಂಬ ಅಂಶವನ್ನು ಅವಲಂಬಿಸಿದೆ. ಆದರೆ ಜ್ಞಾನದ ಉಪಯುಕ್ತತೆಯು ಸಾರ್ವಕಾಲಿಕವಲ್ಲ. ಬದಲಾಗುವ ಸನ್ನಿವೇಶಗಳಿಗೆ ಅನುಗುಣವಾಗಿ ಸಿದ್ಧಾಂತಗಳ ಉಪಯುಕ್ತತೆಯೂ ಬದಲಾಗುತ್ತದೆ. ಫಲವಾದಿಯ ಪ್ರಕಾರ ವಿವಿಧತೆ ಮತ್ತು ಬದಲಾವಣೆ ಪಾತ್ರದ ಮುಖ್ಯ ಲಕ್ಷಣ. (ಎಚ್.ಎಲ್.ಸಿ.)

**ಫಲಾಹಾರ ಮಂದಿರಗಳು:** ಸಾಮಾನ್ಯವಾಗಿ ವಿಸ್ತಾರದಲ್ಲಿ ಹೋಟೆಲ್‌ಗಳಿಗಿಂತ ಚಿಕ್ಕದಾದ ವಸತಿ ಗೃಹ ರಹಿತವಾದ ಆಹಾರ ಪೂರೈಕಾ ಕೇಂದ್ರಗಳು. ಸುಲಭದರದಲ್ಲಿ, ಸಕಾಲದಲ್ಲಿ ಆಹಾರ ಪೂರೈಕೆ ಮಾಡುವ ಕೇಂದ್ರಗಳೆನ್ನಬಹುದು. ಕೆಲವು ನಿರ್ದಿಷ್ಟ ಸಮಯದಲ್ಲಿ ಇವುಗಳಲ್ಲಿ ಭೋಜನ ವ್ಯವಸ್ಥೆ ಕಂಡುಬರುತ್ತದೆ ಹಾಗೂ ಸೀಮಿತ ತಿಂಡಿ ತಿನಿಸುಗಳನ್ನು ತಯಾರಿಸುವ ಪಾಕಶಾಲೆಗಳಾಗಿವೆ. ಇವುಗಳಲ್ಲಿ ಇತ್ತೀಚೆಗೆ ಬಹುಪಾಲು ಸ್ವಸಹಾಯ ಪದ್ಧತಿಗೊಳಪಟ್ಟಿರುವುದೇ ಹೆಚ್ಚು. ಅಂದರೆ ಪ್ರಯಾಣಿಕ, ಪ್ರವಾಸಿಗ ಹಣ ಪಾವತಿ ಮಾಡಿ ಅವನಿಗೆ ಇಷ್ಟವಾದ ಉಪಹಾರ, ಭೋಜನಗಳನ್ನು ಕೇಳಿ ಆಯ್ಕೆಮಾಡಿಕೊಂಡು ಆತನೇ ಪಡೆದುಕೊಂಡು ತಿನ್ನುವುದು ಈ ಬಗೆಯ ವ್ಯವಸ್ಥೆ ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿದೆ. (ಪಿ.ಪಿ.)

**ಫಾಕ್ಲೆಂಡ್ ದ್ವೀಪಗಳು:** ದಕ್ಷಿಣ ಅಮೆರಿಕದ ಮಚೆಲನ್ ಜಲಸಂಧಿಗೆ ಸು. 480 ಕಿಮೀ ದೂರದಲ್ಲಿ ಹಾರ್ನ್ ಭೂಶಿರಕ್ಕೆ ಸು. 768 ಕಿಮೀ ಈಶಾನ್ಯದಲ್ಲಿ, ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿರುವ ಬ್ರಿಟಿಷ್ ವಸಾಹತು ದ್ವೀಪಗಳು. ಇವು $51^0 42'$ ದಕ್ಷಿಣ ಅಕ್ಷಾಂಶ ಹಾಗೂ $57^0 51'$ ಪಶ್ಚಿಮ ರೇಖಾಂಶಗಳ ಮೇಲೆ ಕಂಡುಬರುತ್ತವೆ. ಈ ದ್ವೀಪಸ್ತೋಮದಲ್ಲಿನ ಪ್ರಧಾನ ದ್ವೀಪಗಳು 2; ಉಳಿದ 200 ದ್ವೀಪಗಳು ಸಣ್ಣವು. ಪ್ರಧಾನ ದ್ವೀಪಗಳು ಅಂಕುಡೊಂಕಾಗಿವೆ. ಅವುಗಳ ಮಧ್ಯೆ ಫಾಕ್ಲೆಂಡ್ ಸೌಂಡ್ ಎಂಬ ಪ್ರಧಾನ ದ್ವೀಪಗಳೂ ಕೊಲ್ಲಿಗಳೂ ಖಾರಿಗಳೂ ಇವೆ. ಇವುಗಳ ಒಟ್ಟು ವಿಸ್ತೀರ್ಣ ಸು. 12,173 ಚ.ಕಿಮೀ ಪೂರ್ವ ಫಾಕ್ಲೆಂಡ್ ದ್ವೀಪ 6,760 ಚ.ಕಿಮೀ ಮತ್ತು ಪಶ್ಚಿಮ ಫಾಕ್ಲೆಂಡ್ ದ್ವೀಪ 5,413 ಚ.ಕಿಮೀ ವಿಸ್ತಾರವಾಗಿದೆ. ಜನಸಂಖ್ಯೆ 2564 (1996). ಮುಖ್ಯಪಟ್ಟಣ ಸ್ಟಾನ್ಲೆ.

ದ್ವೀಪಗಳದು ಸಮಶೀತೋಷ್ಣವಾಯುಗುಣ. ಪಶ್ಚಿಮದಿಂದ ಬೀಸುವ ಬಲವಾದ ಮಾರುತದಿಂದ ಇದು ಪ್ರಭಾವಿತವಾಗಿದೆ. ಸರಾಸರಿ ವಾರ್ಷಿಕ ಉಷ್ಣತೆ $16^0$ಸೆ. ವರ್ಷವಿಡೀ ಸಮನಾಗಿ ಮಳೆಯ ಹಂಚಿಕೆಯಾಗಿದೆ. ಸರಾಸರಿಯಲ್ಲಿ ದಿನಕ್ಕೆ ನಾಲ್ಕು ಗಂಟೆ ಬಿಸಿಲು ಇರುತ್ತದೆ. ಕುರುಚಲು ಗಿಡಗಳೂ ಹುಲ್ಲೂ ಹೆಚ್ಚಾಗಿವೆ. ಅಲ್ಲಲ್ಲಿ ನೆಲ ಬರಡು, ಇಲ್ಲಿ ಕಾಡುಗಳಿಲ್ಲ. ನರಿ ತೋಳ ಮೊದಲಾದವು ಸ್ವಾಭಾವಿಕ ಪ್ರಾಣಿಗಳು. 60 ಬಗೆಯ ಪಕ್ಷಿಗಳಿವೆ. ಕಡಲ ತೀರದಲ್ಲಿ ಪೆಂಗ್ವಿನ್, ಡೇಗೆ, ಸೀಲ್ ಇವೆ. ತುಪ್ಪುಳು ಸೀಲ್ ಅಪರೂಪ.

ಇಲ್ಲಿರುವ ಜನ ಕ್ರೈಸ್ತರು. ಮುಖ್ಯವಾಗಿ ಪ್ರಾಟೆಸ್ಟಂಟ್ ಮತ್ತು ರೋಮನ್ ಕೆಥೊಲಿಕ್ ಪಂಗಡದವರು. ಇವರ ಭಾಷೆ ಇಂಗ್ಲಿಷ್, ಕುರಿ ಸಾಕುವುದು ಪ್ರಧಾನ ಕಸಬು. ದ್ವೀಪಗಳ ಆದಾಯ ಮುಖ್ಯವಾಗಿ ಉಣ್ಣೆಯ ನಿರ್ಯಾತದಿಂದ, ದ್ವೀಪಗಳ ಸುತ್ತ ತೈಲ ಸಿಕ್ಕುವ ಸಾಧ್ಯತೆಯಿದೆ. ಮತ್ಸ್ಯ ಸಂಪತ್ತು ಅಧಿಕವಾಗಿದೆ.

ಅರ್ಜೆಂಟೈನ ರಾಜ್ಯದ ವಿಮಾನಗಳು ಈ ದ್ವೀಪಗಳಿಗೆ ವಾರಕ್ಕೊಂದು ಸಲ ಬರುತ್ತವೆ. ದಕ್ಷಿಣ ಅರ್ಜೆಂಟೈನದ ಕಾಮಡೋರೋ ರೀವಡಾವಿಯದಿಂದ ಸ್ಟಾನ್ಲಿ ನಗರದ ವರೆಗೆ ಸಂಚರಿಸುತ್ತವೆ. ಫಾಕ್ಲೆಂಡ್ ದ್ವೀಪವಾಸಿಗಳ ಅಂಚೆ, ಸರಕು ಸಾರಿಗೆ ಹಾಗೂ ಪ್ರಯಾಣಕ್ಕಾಗಿ ಒಂದು ಹಡಗು ವರ್ಷಕ್ಕೆ 4 ಬಾರಿ ಬಂದು ಹೋಗುತ್ತದೆ. 1977ರಲ್ಲಿ ಬ್ರಿಟಿಷ್ ಸರ್ಕಾರ ಇಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪಿಸಿತು.

ಕಾಡುಪ್ರಾಣಿಗಳು ಹಾಗೂ ಟ್ರೌಟ್ ಮೀನು ಹಿಡಿಯುವಿಕೆ ಇವು ಪ್ರವಾಸಿಗರಿಗೆ ಇಲ್ಲಿಯ ಪ್ರಧಾನ ಆಕರ್ಷಣೆಗಳು. (ಎಚ್.ಎನ್.)

**ಫಿಜಿ:** ದಕ್ಷಿಣ ಪೆಸಿಫಿಕ್ ಸಾಗರದ ನೈರುತ್ಯದಲ್ಲಿರುವ ದ್ವೀಪಸ್ತೋಮ. ನ್ಯೂಜಿಲೆಂಡಿನ ಆಕ್ಲೆಂಡಿಗೆ ಉತ್ತರದಲ್ಲಿ 2,100 ಕಿಮೀ ದೂರದಲ್ಲಿ ಹರಡಿರುವ ಈ ದ್ವೀಪಸ್ತೋಮದ ಒಟ್ಟು ವಿಸ್ತೀರ್ಣ 18,376 ಚ.ಕಿಮೀ. ಜನಸಂಖ್ಯೆ 931,741 (2009). ಮುಖ್ಯ ಆಡಳಿತ ಕೇಂದ್ರ ಸುವ.

ಫಿಜಿ ದ್ವೀಪಸ್ತೋಮದಲ್ಲಿ ಸಣ್ಣ ಪುಟ್ಟ ದ್ವೀಪಗಳನ್ನೆಲ್ಲ ಸೇರಿಸಿ ಒಟ್ಟು 844 ದ್ವೀಪಗಳಿವೆ. ಇವುಗಳ ಪೈಕಿ ಸು. 100 ದ್ವೀಪಗಳಲ್ಲಿ ಮಾತ್ರ ಜನವಸತಿಯಿದೆ. ಈ ದ್ವೀಪಸ್ತೋಮ ನ್ಯೂ ಹೆಬ್ರಿಡೀಜ್ ದ್ವೀಪಗಳ ಪೂರ್ವದಲ್ಲೂ ಸಮೋವ ದ್ವೀಪಗಳ ನೈರುತ್ಯದಲ್ಲೂ ಇದ್ದು ದಕ್ಷಿಣ ಅಕ್ಷಾಂಶ $16^0$–$19^0 20'$ ಮತ್ತು ಪಶ್ಚಿಮ ರೇಖಾಂಶ $178^0$ ಯಿಂದ ಪೂರ್ವ ರೇಖಾಂಶ $177^0$ ವರೆಗೆ ಹರಡಿದೆ. ಫಿಜಿ ದ್ವೀಪಸ್ತೋಮದ ಎರಡು ದೊಡ್ಡ ದ್ವೀಪಗಳಲ್ಲಿ ವೀಟಿಲೆವು 10,385 ಚ.ಕಿಮೀ ವಿಸ್ತೀರ್ಣವುಳ್ಳದ್ದು. ಎರಡನೆಯದು ವನೂವ ಲೆವು 5,535 ಚ.ಕಿಮೀ ವಿಸ್ತೀರ್ಣವಿದೆ. ಟವೇಯಾನಿ, ಕಾಂಡಾವೂ, ಕೊರೊ, ಎನ್ಗೂ, ಊವಲು ಮತ್ತು ಲಕೆಂಬ, ಯಸಾವ ದ್ವೀಪಗಳ ಗುಂಪುಗಳಿವೆ. ಫಿಜಿ ದ್ವೀಪಸ್ತೋಮ ಮುಳುಗಡೆಯಾಗಿರುವ ಚಪ್ಪಟೆ ನೆಲದ ಮೇಲಿದ್ದು ಇಲ್ಲಿಯ ಭೂಪ್ರದೇಶ ವೈವಿಧ್ಯದಿಂದ ಕೂಡಿದೆ. ಇದರಲ್ಲಿಯ ದೊಡ್ಡ ದ್ವೀಪಗಳು ಅಗ್ನಿ ಪರ್ವತದಿಂದಲ್ಲೂ ಸಣ್ಣ ದ್ವೀಪಗಳು ಹವಳದ ದಿಬ್ಬಗಳಿಂದ ನಿರ್ಮಿತವಾಗಿವೆ. ದ್ವೀಪಗಳ ಸುತ್ತಲೂ ಇರುವ ಹವಳದ ದಿಬ್ಬಗಳು ಹಡಗುಗಳಿಗೆ ಅಪಾಯಕಾರಿ. ಪಶ್ಚಿಮದ ವೀಟಿಲೆವು ಉತ್ತರದ ವನೂವಲೆವು ಅಗ್ನಿಪರ್ವತಗಳಿಂದ ಹೊರಬಂದ ವಸ್ತುಗಳಿಂದ ನಿರ್ಮಾಣಗೊಂಡಿವೆ. ಡ್ರೆಕೆಟಿ, ಸಿಗಾಟೊಕೀ, ರೀವಾ, ಬಾ ಮತ್ತು ನವುಳ ಈ ದ್ವೀಪಗಳಲ್ಲಿ ಹರಿಯುವ ಮುಖ್ಯ ನದಿಗಳು. ವೀಟಿಲೆವುನಲ್ಲಿಯ ಅತ್ಯಂತ ಎತ್ತರದ ಸ್ಥಳ ಮೌಂಟ್ ಟೊಮಾನಿನಿ (1323 ಮೀ). ವನೂವ ಲೆವುನಲ್ಲಿಯ ಅತ್ಯಂತ ಎತ್ತರದ ಸ್ಥಳ ಮೌಂಟ್ ನಸೊರೊಲೆವು (1032 ಮೀ). ದ್ವೀಪಗಳಲ್ಲಿ ಅನೇಕ ನಿರ್ಜೀವ ಜ್ವಾಲಾಮುಖಿಗಳಿದ್ದು ಅವುಗಳಲ್ಲಿ ಪ್ರಸಿದ್ಧವಾದುದು ಜೋಸ್ಕಸ್ ಥಂಬ್.

ಫಿಜಿ ದ್ವೀಪಸ್ತೋಮದಲ್ಲಿ ಉಷ್ಣವಲಯದ ಹವಾಗುಣವಿದೆ. ಇಲ್ಲಿಯ ಉಷ್ಣತೆ $16^0$ಸೆ ನಿಂದ $32^0$ಸೆ ವರೆಗೆ ಇರುತ್ತದೆ. ದ್ವೀಪಸ್ತೊಮ ಆಗ್ನೇಯ ವಾಣಿಜ್ಯ ಮಾರುತಗಳ ಹಾದಿಯಲ್ಲಿದ್ದು ವರ್ಷವಿಡಿ ತೇವಾಂಶದಿಂದ ಕೂಡಿರುತ್ತದೆ. ಹವಾಮಾನ ಡಿಸೆಂಬರಿನಿಂದ ಏಪ್ರಿಲ್ ತನಕ ಅತ್ಯಂತ ಬಿಸಿಯಾಗಿದ್ದು ಜೂನ್‌ನಿಂದ ಸೆಪ್ಟೆಂಬರ್ ತನಕ ಅತ್ಯಂತ ತಂಪಾಗಿರುತ್ತದೆ. ಮಳೆ ಹೆಚ್ಚು. ಡಿಸೆಂಬರ್ ಮತ್ತು ಏಪ್ರಿಲ್ ತಿಂಗಳುಗಳ ನಡುವೆ ಈ ದ್ವೀಪಸ್ತೋಮ ಚಂಡಮಾರುತದ ಹಾವಳಿಗೆ ಒಳಗಾಗುವ ಭಯವಿರುತ್ತದೆ. ಎರಡು ಮುಖ್ಯ ದ್ವೀಪಗಳ ಮಧ್ಯಪ್ರದೇಶದಲ್ಲಿ ವರ್ಷಕ್ಕೆ 304 ಸೆಂಮೀ ಗಳಿಗಿಂತ ಹೆಚ್ಚಾಗಿ ಮಳೆ ಬೀಳುವುದು. ಈ ಪ್ರದೇಶದಲ್ಲಿ ದಟ್ಟವಾದ ಕಾಡುಗಳಿವೆ. ಪಶ್ಚಿಮದಲ್ಲಿ ಒಳಸವನ್ನಾ ರೀತಿಯ

ಹಲ್ಲುಗಾವಲಿದೆ. ಪೂರ್ವಭಾಗದ ತೀರಪ್ರದೇಶದಲ್ಲಿ ಮ್ಯಾಂಗ್ರೋವ್‌ಗಳಿಂದ ಕೂಡಿದ ಜೌಗು ಪ್ರದೇಶವಿದೆ. ತೆಂಗು ಹಾಗೂ ಬಾಳೆ ತೋಟಗಳೂ ಇದ್ದು ಸ್ಪ್ರೂಸ್ ಪೈನ್ ಮತ್ತು ಆಲದ ಮರಗಳೂ ಇಲ್ಲಿ ಬೆಳೆಯುತ್ತವೆ. ಕಾಡಿನಲ್ಲಿ ಚೌಬೀನೆ ಮರಗಳಿವೆ. ಇಲ್ಲಿ ಪ್ರಾಣಿಗಳು ಕಡಿಮೆ. ಹಂದಿ, ಮಂಗೂಸ್, ಬಾವಲ್, ಮೈನಾ, ಬುಲ್‌ಬುಲ್, ಪಾರಿವಾಳ, ಗಿಳಿ ಮುಂತಾದವನ್ನು ಕಾಣಬಹುದು.




ಈ ದ್ವೀಪಸ್ತೋಮದ ಜನಜೀವನ ವೈವಿಧ್ಯಮಯ, ಸ್ಥಳೀಯ ನಿವಾಸಿಗಳಾದ ಫಿಜಿಯನ್ನರು ಮೆಲನೇಷಿಯನ್ ಸಮುದಾಯ ಸೇರಿದ ಕ್ರಿಶ್ಚಿಯನ್ನರು, ಪಿಜಿಭಾಷೆ ಮಲಯೋಪಾಲಿನೇಷಿಯನ್ ಭಾಷಾವರ್ಗಕ್ಕ ಸೇರಿದ್ದು. ಅದರಲ್ಲಿ ಅನೇಕ ಆಡುಭಾಷೆಗಳಿವೆ. 1879ರಲ್ಲಿ ಇಲ್ಲಿಗೆ ಕೆಲಸಮಾಡಲು ವಲಸೆ ಬಂದು ನೆಲಸಿರುವ ಇಂಡಿಯನ್ನರು ಫಿಜಿಯನ್ ಮೂಲನಿವಾಸಿಗಳಿಗಿಂತ ಹೆಚ್ಚಾಗಿದ್ದಾರೆ. ಇತ್ತೀಚೆಗೆ ತಾಂತ್ರಿಕ, ವಾಣಿಜ್ಯ ಹಾಗೂ ವೃತ್ತಿನಿರತ ಇಂಡಿಯನ್ನರೂ ಇಲ್ಲಿಗೆ ವಲಸೆ ಬಂದಿದ್ದಾರೆ. ಇಲ್ಲಿಯ ಇಂಡಿಯನ್ನರಲ್ಲಿ ಬಹುಪಾಲು ಹಿಂದುಗಳು. ಮುಸ್ಲಿಮರೂ ಇದ್ದಾರೆ. ಇವರಲ್ಲದೆ ಗ್ರೇಟ್‌ಬ್ರಿಟನ್, ಆಸ್ಟ್ರೇಲಿಯ, ನ್ಯೂಜಿಲೆಂಡುಗಳಿಂದ ಬಂದ ಯುರೋಪಿಯನ್ನರೂ ಇಲ್ಲಿ ನೆಲಸಿದ್ದು ಅವರಲ್ಲಿ ಬ್ರಿಟಿಷರೇ ಹೆಚ್ಚಾಗಿದ್ದಾರೆ. ಇಲ್ಲಿರುವ ಇತರ ಮೂರು ಪ್ರಮುಖ ಪಂಗಡಗಳು ಚೀನಿಯರು, ಇತರ ಪೆಸಿಫಿಕ್ ದ್ವೀಪವಾಸಿಗಳು ಮತ್ತು ರೋಟುಮನ್ನರು.

ಪಿಜಿ ದ್ವೀಪಸ್ತೋಮದ ಆರ್ಥಿಕತೆ ಪ್ರಮುಖವಾಗಿ ವ್ಯವಸಾಯದ ಮೇಲೆ ಅವಲಂಬಿತವಾಗಿದೆ. ಇದರ ಆರ್ಥಿಕ ಪರಿಸ್ಥಿತಿ ಇತರ ಅಭಿವೃದ್ಧಿಶೀಲ ರಾಷ್ಟ್ರಗಳಿಗಿಂತ ಉತ್ತಮವಾಗಿದೆ. ಮತ್ತಷ್ಟು ಆರ್ಥಿಕ ಪ್ರಗತಿಗೆ ಇಲ್ಲಿಯ ಬೆಳೆಗಳ ವೈವಿಧ್ಯ, ಕೈಗಾರಿಕೆಗಳ ಬೆಳವಣಿಗೆ ಮತ್ತು ಖನಿಜಗಳ ಪರಿಶೋಧನೆಯ ತೀವ್ರ ಅಗತ್ಯ ಇದೆ. ಇಲ್ಲಿ ವ್ಯವಸಾಯದ ಅಭಿವೃದ್ಧಿಗೆ ಪ್ರಮುಖ ಅಡಚಣೆಯೆಂದರೆ ಭೂಹಿಡುವಳಿ ಪದ್ಧತಿ. ವ್ಯವಸಾಯಯೋಗ್ಯ ಭೂಮಿಯಲ್ಲಿ ಶೇ. 80ಕ್ಕೂ ಹೆಚ್ಚು ಭಾಗ ಪಿಜಿಯನ್ನರಿಗೆ ಸೇರಿದ್ದು ಇಂಡಿಯನ್ನರು ಅದನ್ನು ಬಾಡಿಗೆಗೆ ಪಡೆಯುತ್ತಾರೆ. ಇಲ್ಲಿಂದ ರಫ್ತಾಗುವ ಮುಖ್ಯ ಪದಾರ್ಥಗಳೆಂದರೆ ಸಕ್ಕರೆ ಮತ್ತು ಕೊಬ್ಬರಿ. ಇತರ ವಸ್ತುಗಳು ಕೊಬ್ಬರಿ ಎಣ್ಣೆ ಚಿನ್ನ, ಬಾಳೆಹಣ್ಣು, ಕಾಕಂಬಿ, ಮ್ಯಾಂಗನೀಸ್, ಬಿಸ್ಕತ್ತುಗಳೂ ಇತ್ಯಾದಿ. ಫಿಜಿಯ ವಿದೇಶಿ ಗ್ರಾಹಕರಲ್ಲಿ ಇಂಗ್ಲೆಂಡ್ ಮೊದಲನೆಯದಾಗಿದ್ದು ಅನಂತರ ಅಮೆರಿಕ, ಕೆನಡ, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ಗಳು ಬರುತ್ತವೆ.

ಫಿಜಿಯಲ್ಲಿಯ ಎರಡು ಪ್ರಮುಖ ಪ್ರವೇಶ ದ್ವಾರಗಳು ನಾಂದೀ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಸೂವ ಬಂದರು. ನಾಂದೀ ವಿಮಾನ ನಿಲ್ದಾಣ ಹೊನೊಲುಲುವಿಗೆ 5100 ಕಿಮೀ, ಸಿಡ್ನಿಗೆ 3200 ಕಿಮೀ ಆಕ್ಲೆಂಡ್‌ಗೆ 2000 ಕಿಮೀ ದೂರದಲ್ಲಿದ್ದು ವಿಮಾನಗಳ ಇಂಧನ ತುಂಬಲು ಹಾಗೂ ಪ್ರವಾಸಿಗಳು ಇಳಿಯಲು ಪ್ರಮುಖ ಕೇಂದ್ರವಾಗಿದೆ. ನಾಂದೀಯಿಂದ 271 ಕಿಮೀ ದೂರದಲ್ಲಿ ಸೂವದ ಪ್ರತ್ಯೇಕ ವಿಮಾನನಿಲ್ದಾಣವಿದೆ. ಸೂವ ಆಳನೀರಿನ ಬಂದರಾಗಿದ್ದು ಎಲ್ಲ ಬಗೆಯ ಹಡಗುಗಳ ನಿಲ್ದಾಣವಾಗಿದೆ. ವೀಟಿಲೆವು ಪಶ್ಚಿಮತೀರದ ಲಾಟೋಕ ಎಂಬಲ್ಲಿ ಮತ್ತೊಂದು ಬಂದರಿದೆ. ಫಿಜಿಯಲ್ಲಿ ಸರ್ವಋತು ರಸ್ತೆಗಳು ಕಡಿಮೆಯಿದ್ದು ಒಳಭಾಗಕ್ಕೆ ರಸ್ತೆ ಸೌಕರ್ಯ ಸಮರ್ಪಕವಾಗಿಲ್ಲ. ನದಿಗಳ ಮೂಲಕ ವ್ಯವಸಾಯೋತ್ಪನ್ನಗಳನ್ನು ಸಾಗಿಸಲಾಗುತ್ತದೆ.

ಫಿಜಿ ದ್ವೀಪಸ್ತೋಮದ ರಾಜಧಾನಿ ಸೂವ ಆ ದ್ವೀಪಸ್ತೋಮದಲ್ಲೇ ದೊಡ್ಡ ಬಂದರು ನಗರ. ಹತ್ತಿರದಲ್ಲೆ ವಿಮಾನ ನಿಲ್ದಾಣವಿದ್ದು ಇದೊಂದು ಉತ್ತಮ ಬಂದರೂ ಆಗಿದೆ. ಶಾಲಾ ಕಾಲೇಜುಗಳೂ ಸೌತ್ ಪೆಸಿಫಿಕ್ ವಿಶ್ವವಿದ್ಯಾಲಯವೂ ಇಲ್ಲಿದೆ.

ಆರ್ಥಿಕವಾಗಿ ಫಿಜಿ ಇತರ ಅಭಿವೃದ್ಧಿಶೀಲ ರಾಷ್ಟ್ರಗಳಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಆರ್ಥಿಕತೆಯನ್ನು ವೈವಿಧ್ಯಗೊಳಿಸಲು ಹಾಗೂ ದೇಶದ ಖನಿಜ ಸಂಪತ್ತನ್ನು ಹಾಗೂ ಇತರ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸಲು ಇಲ್ಲಿಯ ಸರ್ಕಾರ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. *

**ಫಿಟ್ಟರ್ ಸಿದ್ಧಾಂತ:** ಸ್ಥಳ ನಿರ್ದೇಶನಕ್ಕೆ ಸಂಬಂಧಿಸಿದ ಕೈಗಾರಿಕಾ ಸ್ಥಾನಿಕ ಸಿದ್ಧಾಂತಗಳಲ್ಲಿ ಪ್ರಮುಖವಾದುದು. ಇವರು ತಮ್ಮ ಸಿದ್ಧಾಂತದಲ್ಲಿ ಎರಡು ಉದ್ಯಮ ಕೇಂದ್ರಗಳ ನಡುವೆ ಇರುವ ಉದ್ಯಮದ ಪ್ರದೇಶಗಳ ಗಡಿ ಪ್ರದೇಶವನ್ನು ಗುರುತಿಸುವ ಪರಿಭಾವನೆಯನ್ನು ಮೊದಲಬಾರಿಗೆ ಪರಿಚಯಿಸಿದ್ದಾರೆ. ಇವರು X ಮತ್ತು Y ಎಂಬ ಎರಡು ಉದ್ಯಮ ಕೇಂದ್ರಗಳು ಮೂರು ಪರಿಸ್ಥಿತಿಗಳಲ್ಲಿ ಹೇಗೆ ಸಂಪರ್ಕದಿಂದ ಕೂಡಿರುತ್ತವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಈ ಸಿದ್ಧಾಂತ ಮುಖ್ಯವಾಗಿ ಎರಡು ಕೈಗಾರಿಕೆಗಳು ಪರಿಪೂರ್ಣ ಪೈಪೋಟಿ ಮಾರುಕಟ್ಟೆಯನ್ನು ಹೊಂದಿ ಇಬ್ಬರು ಸಗಟು ವ್ಯಾಪಾರದಲ್ಲಿ ತೊಡಗಿದ್ದು, ಯಾವುದಾದರೂ ವ್ಯಾಪಾರದಲ್ಲಿ ಇಬ್ಬರು ಸ್ಪರ್ಧಿಗಳು ಮಾರಾಟದಲ್ಲಿ ಪಾಲ್ಗೊಂಡಾಗ ಅವರಿಬ್ಬರಿಗೂ ಸಾರಿಗೆ ಹಾಗೂ ಉತ್ಪಾದನಾ ವೆಚ್ಚಗಳು ಹೇಗೆ ಸಂಬಂಧಿಸಿರುತ್ತವೆ ಎನ್ನುವುದನ್ನು ಈ ಸಿದ್ಧಾಂತದಲ್ಲಿ ನಿರೂಪಿಸಲಾಗಿದೆ. ಇಲ್ಲಿ X ಮತ್ತು Y ಎಂಬ ಬಿಂದುಗಳು ಇಬ್ಬರು ವ್ಯಾಪಾರಿಗಳ ಸ್ಥಾನವನ್ನು ಸೂಚಿಸುತ್ತವೆ. ಇದನ್ನು ಅವರು ಮೂರು ಹಂತಗಳಲ್ಲಿ ಅಥವಾ ಮೂರು ಪರಿಸ್ಥಿತಿಗಳಲ್ಲಿ ಕೆಳಗಿನಂತೆ ವಿವರಿಸಿದ್ದಾರೆ.

ಮಾದರಿ ಪರಿಸ್ಥಿತಿ: 1. ಮೊದಲನೆಯ ಪರಿಸ್ಥಿತಿ (ಕೇಸ್ ಎ) X ಮತ್ತು Yಗಳು ಒಂದು ಅವಧಿಯಲ್ಲಿ ಸಮಾನ ರೂಪದ ಉತ್ಪಾದನಾ ವೆಚ್ಚ ಮತ್ತು ಸಾರಿಗೆ ವೆಚ್ಚಗಳನ್ನು ಹೊಂದಿರುತ್ತವೆ ಎಂದೂ ಒಂದು ಸ್ಥಳದಿಂದ ಮತ್ತೊಂದು ಸ್ಥಳವು ಸರಿಯಾಗಿ ಸಾವಿರ ಮೈಲಿಗಳ ಎಲ್ಲೆಯನ್ನು ಹೊಂದಿರುತ್ತದೆ ಎಂದು ಭಾವಿಸಲಾಗಿದೆ. ಪ್ರತಿಯೊಂದು ವೃತ್ತ ಮತ್ತು ವೃತ್ತಖಂಡಗಳು ತಮ್ಮ ಸ್ವಂತ ಸ್ಥಳದಿಂದ ಇರುವ ಅಂತರವನ್ನು ಚಿತ್ರದಲ್ಲಿ ತೋರಿಸಿರುವಂತೆ ಪ್ರತಿನಿಧಿಸುತ್ತವೆ. ಚಿತ್ರದಲ್ಲಿ ಗುರುತಿಸುವ D.E ಮತ್ತು F ಬಿಂದುಗಳು ಗಡಿರೇಖೆಯಾಗಿದ್ದು, ಇಲ್ಲಿ Y ನಿಂದ Xನ ಪ್ರದೇಶವನ್ನು ಪ್ರತ್ಯೇಕಿಸಲಾಗಿದೆ. ಏಕೆಂದರೆ ಇಲ್ಲಿ X ಮತ್ತು Y ಇಬ್ಬರು ಒಂದೇ ಸಾರಿಗೆ ವೆಚ್ಚದ ಭಾರವನ್ನು ಹೊರಬೇಕಾಗಿರುತ್ತದೆ. ಸ್ಥಳಗಳ ಮಹತ್ವವನ್ನು ಗಡಿರೇಖೆಯ ಮೇಲೆ ಗುರುತಿಸುವ ಅವಶ್ಯಕತೆ ಇರುವುದಿಲ್ಲ. ಬದಲಾಗಿ ಅವರಿಬ್ಬರೂ ಅವರ ವ್ಯಾಪಾರ ಕೇಂದ್ರಗಳಿಗೆ ಪ್ರತಿಯೊಂದು ಪರಿಸ್ಥಿತಿಯಲ್ಲೂ ಸಮಾನವಾಗಿರುವ ಅಂಶವನ್ನು ಕಾಣಬಹುದು.

ಈ ಪ್ರಕಾರವಾಗಿ ಎಲ್ಲಾ ಅಂಶಗಳು ಸರಿಸಮವಾಗಿದ್ದು, ಒಂದು ವೇಳೆ ಸಾರಿಗೆ ವೆಚ್ಚ ಮತ್ತು ಉತ್ಪಾದನಾ ವೆಚ್ಚಗಳ ಎರಡುಕೇಂದ್ರಗಳ ಸುತ್ತಲೂ ಒಂದೇ ವಿಧವಾಗಿದ್ದರೆ, ಅವುಗಳ ವ್ಯಾಪಾರ ಪ್ರದೇಶಗಳ ಗಡಿ ರೇಖೆ ನೇರವಾಗಿದ್ದು ಅದು ಲಂಬಕೋನವಾಗಿ ಎರಡು ಕೇಂದ್ರಗಳನ್ನು ಜೋಡಿಸುತ್ತದೆ. ಇದನ್ನು ಚಿತ್ರದಲ್ಲಿರುವ ರೇಖೆ–2ರಲ್ಲಿರುವಂತೆ ಕಾಣಬಹುದು.

2. ಎರಡನೆ ಪರಿಸ್ಥಿತಿ (ಕೇಸ್ ಬಿ): ಒಂದು ವೇಳೆ ಸಾರಿಗೆ ವೆಚ್ಚಗಳು ಎರಡು ಕೇಂದ್ರಗಳ ಸುತ್ತಲು ಸಮಾನವಾಗಿ ನಿರ್ಮಾಣವಾಗುತ್ತವೆ. ಆದರೆ ಉತ್ಪಾದನಾ ವೆಚ್ಚಗಳು ಅಸಮಾನವಾಗಿ ನಿರ್ಮಾಣವಾಗುತ್ತವೆ. ಆಗ ವ್ಯಾಪಾರಪ್ರದೇಶದ ಗಡಿರೇಖೆ ಹೆಚ್ಚಾಗಿ ಉತ್ಪಾದನಾ ವೆಚ್ಚವನ್ನು ತೊಡಗಿಸುವ ಕೇಂದ್ರದ ಕಡೆಗೆ ಬಾಗಿದ ರೇಖೆಯಂತೆ ಇರುತ್ತದೆ. ಇದನ್ನು ಚಿತ್ರದಲ್ಲಿರುವ ರೇಖೆ–1 ರಲ್ಲಿ ಕಾಣಬಹುದು. ಇದು ಸಂಧಿಸುವ ಎಲ್ಲಾ ಬಿಂದುಗಳು ಸಮಾನವಾದ ಒಟ್ಟು ವೆಚ್ಚವಾಗಿದ್ದು ಇದು X ಮತ್ತು Yಗಳಿಗೆ ಸಂಬಂಧಿಸಿರುತ್ತದೆ.

ವಿವರಣೆ: X ಮತ್ತು Y ಇಬ್ಬರು ಸಗಟು ವ್ಯಾಪಾರದ ಸರಕುಗಳ ಕೇಂದ್ರಗಳನ್ನು ಹೊಂದಿದ್ದು, ಸರಕುಗಳ ತಯಾರಿಕೆಯನ್ನು ದೂರದಲ್ಲಿ Yನ ಬಲಭಾಗದಿಂದ ಹೊಂದಿರುತ್ತದೆ ಎಂದು ಭಾವಿಸಿಕೊಳ್ಳಬೇಕು. ಸಗಟು ವ್ಯಾಪಾರದ ಮಾರಾಟಗಾರರಿಗಾಗಿ ಕಾರ್ಖಾನೆಯ ನಿಯಮಗಳನ್ನು ಅನುಸರಿಸಿ, ಸರಕುಗಳನ್ನು ಸಾಗಿಸಲು ವೆಚ್ಚ ಮಾಡಬೇಕಾಗುತ್ತದೆ. ಆಗ X ನಗರ ಅಥವಾ ಪಟ್ಟಣವನ್ನು ಹಾದು ಹೋಗಲೇಬೇಕು.

ಆದರೆ, Y ಅವನಿಗಿಂತ ಮೊದಲೇ ತಲುಪುತ್ತಾನೆ. ಇದರಿಂದ ಪ್ರತಿಯೊಂದು ಸರಕಿನ ಘಟಕದ ರಿಯಾಯಿತಿ ದರ Y ಸರಕಿನ ಘಟಕಕ್ಕಿಂತ X ಸರಕಿನ ಘಟಕದ ಬೆಲೆ ಹೆಚ್ಚಾಗಿರುತ್ತದೆ. ಅಂದರೆ Yನ ಸರಕಿನ ಸಗಟು ವ್ಯಾಪಾರದ ದರ 50 ಡಾಲರ್ ಇದ್ದರೆ, X ಸರಕಿನ ಸಗಟು ವ್ಯಾಪಾರದ ದರ 54 ಡಾಲರ್ ಆಗಿರುತ್ತದೆ. X ಮತ್ತು Y ಎಂಬ ಎರಡು ಕೇಂದ್ರಗಳ ಸುತ್ತ ಇರುವ ವೃತ್ತಗಳು ಒಂದೇ ಕೇಂದ್ರವನ್ನು ಹೊಂದಿದ್ದು, ಇವುಗಳ ನಡುವಿನ ಅಂತರ ಸರಕಿನ ಮೇಲಿನ ಸಾರಿಗೆ ವೆಚ್ಚವನ್ನು ಸೂಚಿಸುತ್ತದೆ ಎಂದು ಭಾವಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ G ಬಿಂದು ವ್ಯಾಪಾರ ಪ್ರದೇಶದ ಗಡಿರೇಖೆಯಾಗಿರುತ್ತದೆ. ಏಕೆಂದರೆ, X ಒಟ್ಟು ವೆಚ್ಚ 61 ಡಾಲರ್ [$54+$7] ಮತ್ತು Y ನ ಒಟ್ಟು ವೆಚ್ಚವೂ 61 ಡಾಲರ್ [$ 50 + $ 11] ಆಗಿರುತ್ತದೆ. ಅದೇ ರೀತಿ H ಬಿಂದುವು ಸಹ ಗಡಿರೇಖೆಯಾಗಿದ್ದು ಇಲ್ಲಿ ಒಟ್ಟು ವೆಚ್ಚ 59 ಡಾಲರ್ [$54+$5] ಆಗಿರುತ್ತದೆ.

ಪಿಟ್ಟರ್‌ರವರ ಸಿದ್ಧಾಂತ

G (ಬಿಂದುವಿನಲ್ಲಿ ಒಟ್ಟು ವೆಚ್ಚ)

Y=11(ಸಾರಿಗೆ ವೆಚ್ಚ) +50(ಉತ್ಪಾದನಾವೆಚ್ಚ) = 61 (ಒಟ್ಟು ವೆಚ್ಚ)

X=7(ಸಾರಿಗೆ ವೆಚ್ಚ) +54 (ಉತ್ಪಾದನಾವೆಚ್ಚ) = 61 (ಒಟ್ಟು ವೆಚ್ಚ)

H (ಬಿಂದುವಿನಲ್ಲಿ ಒಟ್ಟು ವೆಚ್ಚ)

Y=9 (ಸಾರಿಗೆ ವೆಚ್ಚ) +50 (ಉತ್ಪಾದನಾ ವೆಚ್ಚ) = 59 (ಒಟ್ಟು ವೆಚ್ಚ)

X=5 (ಸಾರಿಗೆ ವೆಚ್ಚ) +54 (ಉತ್ಪಾದನಾ ವೆಚ್ಚ) = 59 (ಒಟ್ಟು ವೆಚ್ಚ)

3. ಮೂರನೆಯ ಪರಿಸ್ಥಿತಿ (ಕೇಸ್ 'ಸಿ'): ಒಂದು ವೇಳೆ ಹಿಂದಿನ ಪರಿಸ್ಥಿತಿಗಳು ತದ್ವಿರುದ್ಧವಾದರೆ ಉತ್ಪಾದನಾ ವೆಚ್ಚ ಸ್ಥಿರವಾಗಿರುತ್ತದೆ. ಆದರೆ ಸಾರಿಗೆ ವೆಚ್ಚಗಳು ವ್ಯತ್ಯಾಸವಾಗುತ್ತದೆ. ಆಗ ವ್ಯಾಪಾರಸ್ಥಳದ ಗಡಿರೇಖೆ ವಕ್ರವಾಗಿ ಕೇಂದ್ರದ ಸುತ್ತ ಬಾಗುತ್ತದೆ. ಜೊತೆಗೆ ಸಾರಿಗೆ ವೆಚ್ಚಗಳು ಹೆಚ್ಚಾಗಿರುತ್ತವೆ. ಇದನ್ನು ಚಿತ್ರ ರೇಖೆ–3ರಲ್ಲಿ ಕಾಣಬಹುದು. ಇದು ಸಂಧಿಸುವ ಬಿಂದುಗಳು X ಮತ್ತು Yನಲ್ಲಿ ಸಮಾನಾಂತರ ಒಟ್ಟು ವೆಚ್ಚ ಆಗಿರುತ್ತದೆ.

ವಿವರಣೆ: X ಮತ್ತು Yನ ಪ್ರತಿಯೊಂದು ಘಟಕದ ಸರಕಿನ ಉತ್ಪಾದನಾ ವೆಚ್ಚ 50 ಡಾಲರ್ ಆಗಿರುತ್ತದೆ ಎಂದು ಭಾವಿಸಬೇಕು. ಆದರೆ ಸಾರಿಗೆ ವೆಚ್ಚಗಳು Y ಸುತ್ತಲೂ 2 ಡಾಲರ್‌ಗಳ ದರದಲ್ಲಿ ಅಂತರ ಹೆಚ್ಚಾಗುತ್ತಿರುತ್ತದೆ. ಅದೇ ವೇಳೆಯಲ್ಲಿ X ಕೇಂದ್ರದ ಸುತ್ತಲೂ 2 ಡಾಲರ್‌ನಷ್ಟು ದರ ಹೆಚ್ಚಾಗುತ್ತದೆ. ಆಗ J ಬಿಂದು ವ್ಯಾಪಾರ ಪ್ರದೇಶದ ಗಡಿರೇಖೆಯಾಗಿರುವುದನ್ನು ಕಾಣಬಹುದು. ಇಲ್ಲಿ ಸಾರಿಗೆ ಮತ್ತು ಉತ್ಪಾದನಾ ವೆಚ್ಚಗಳು ವ್ಯಾಪಾರದಲ್ಲಿ ಸಂಯೋಜಿಸಲ್ಪಡುತ್ತವೆ. ಜೊತೆಗೆ X ಮತ್ತು Y ಕೇಂದ್ರಗಳು 58 ಡಾಲರ್‌ಗಳನ್ನು ವೆಚ್ಚವಾಗಿ ಹೊಂದಿರುತ್ತವೆ. K ಬಿಂದು ಸಹ ಅಲ್ಲಿಯೇ ಗಡಿರೇಖೆಯಾಗಿರುವುದನ್ನು ಕಾಣಬಹುದು. ಇದು ಸಾರಿಗೆ ಮತ್ತು ಉತ್ಪಾದನಾ ವೆಚ್ಚಗಳು X ಮತ್ತು Y ಕೇಂದ್ರಗಳಲ್ಲಿ 62 ಡಾಲರ್‌ಗಳಷ್ಟಾಗಿರುತ್ತವೆ.

K) ಬಿಂದುವಿನಲ್ಲಿ

Y=12+50=62

X=12+50=62

J) ಬಿಂದುವಿನಲ್ಲಿ

Y=8+50=58

X=8+50=58 (ಪಿ.ಜೆ.)

**ಫಿನಿಷಿಯ:** ಪಶ್ಚಿಮ ಸಿರಿಯ ಪ್ರದೇಶದಲ್ಲಿ ಪ್ರಾಚೀನಕಾಲದಲ್ಲಿದ್ದ ಒಂದು ನಾಡು. ಆಗ (ಪ್ರ.ಶ.ಪೂ.ಸು. 1600) ಇದು ಆಕರ್, ಟೈರ್, ಸಿಡನ್ ಮುಂತಾದ ನಗರರಾಜ್ಯಗಳಿಂದ ಕೂಡಿತ್ತು.

ಫಿನಿಷಿಯದ ಪ್ರಾಚೀನ ಚರಿತ್ರೆ ಅಸ್ಪಷ್ಟವಾದದ್ದು. ಫಿನಿಷಿಯನ್ನರ ನಾಗರಿಕತೆಯ ವಿಚಾರವಾಗಿ ನಿರ್ದಿಷ್ಟ ಆಧಾರಗಳಿಲ್ಲ. ಇವರು ಸೆಮಿಟಿಕ್ ಮೂಲದವರಾದ್ದರಿಂದ ಇವರ ನಾಗರಿಕತೆಯನ್ನು ಸೆಮಿಟಿಕ್ ನಾಗರಿಕತೆ ಎಂದು ಕರೆಯಲಾಗಿದೆ. ಬಹುಶಃ ಪ್ರ.ಶ.ಪೂ. 3000 ಅನಂತರ ಅರೇಬಿಯದ ಮರುಭೂಮಿಯನ್ನು ಬಿಟ್ಟು ಬಂದು ಇವರು ಫಿನಿಷಿಯ ಭಾಗದಲ್ಲಿ ನೆಲೆಸಿದರೆಂದು ಅಭಿಪ್ರಾಯಪಡಲಾಗಿದೆ.

ಫಿನಿಷಿಯ ಪ್ರದೇಶ ಸಮುದ್ರ ಮತ್ತು ಪರ್ವತಶ್ರೇಣಿಯಿಂದ ಸುತ್ತುವರಿಯಲ್ಪಟ್ಟಿದ್ದರಿಂದ ವ್ಯವಸಾಯಕ್ಕೆ ಯೋಗ್ಯವಾಗಿರಲಿಲ್ಲ. ಆದ್ದರಿಂದ ಅವರು ವ್ಯಾಪಾರವನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದರು. ಕಾಲಕ್ರಮದಲ್ಲಿ ಅವರು ವ್ಯಾಪಾರವನ್ನು ಅಭಿವೃದ್ಧಿಗೊಳಿಸಿಕೊಂಡು ಪ್ರಖ್ಯಾತರಾದರು. ಮೆಡಿಟರೇನಿಯನ್ ಕರಾವಳಿಯಲ್ಲಿ ಫಿನಿಷಿಯನ್ನರು ಅನೇಕ ವಸಾಹತುಗಳನ್ನು ಸ್ಥಾಪಿಸಿ ಅನೇಕ ನಗರಗಳನ್ನು ನಿರ್ಮಿಸಿಕೊಂಡಿದ್ದರು. ಫಿನಿಷಿಯನ್ನರು ಸಾಹಸಿಗಳೂ ವ್ಯಾಪಾರ ಚತುರರೂ ಕಷ್ಟಸಹಿಷ್ಣುಗಳೂ ಆಗಿದ್ದು ಪ್ರಪಂಚದ ನಾಗರಿಕತೆಗೆ ಹಲವು ಕಾಣಿಕೆಗಳನ್ನು ಸಲ್ಲಿಸಿದರು.

ಆರ್ಥಿಕ ಜೀವನ : ಫಿನಿಷಿಯನ್ನರ ರಾಜಕೀಯ ಇತಿಹಾಸಕ್ಕಿಂತ ಅವರ ಆರ್ಥಿಕ ಜೀವನವೂ ಅವರ ಇತರ ಕೊಡುಗೆಗಳೂ ಮಾನವನ ನಾಗರಿಕತೆಯ ಇತಿಹಾಸದಲ್ಲಿ ಗಮನಾರ್ಹವಾಗಿವೆ.

ಫಿನಿಷಿಯನ್ನರು ಸಾಹಸಿಗಳೂ ವ್ಯಾಪಾರ ಚತುರರೂ ಶಕ್ತಿವಂತರೂ ಆಗಿದ್ದರು. ಅವರು ಮುಖ್ಯ ಬಂದರುಗಳಾದ ಟೈರ್, ಸಿಡನ್ ಮತ್ತು ಬಿಬ್ಲಸ್‌ಗಳ ಮೂಲಕ ದೂರದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದರು. ಅವರು ಸೈಪ್ರಸ್, ಕ್ರೀಟ್ ಮತ್ತು ಏಜಿಯನ್ ಸಮುದ್ರ ದ್ವೀಪಗಳಲ್ಲಿ, ಕಪ್ಪುಸಮುದ್ರದ ಬಂದರುಗಳಲ್ಲಿ, ಸಾರ್ಡಿನಿಯ, ಮಾರ್ಸೆಲಸ್, ಕ್ಯಾಡಿಜ್ ಕಾರ್ನ್‌ವಾಲ್, ಕಾರ್ತೇಜ್ ಮುಂತಾದ ಕಡೆಗಳಲ್ಲಿ ವ್ಯಾಪಾರ ಸಂಸ್ಥೆಗಳನ್ನು ಸ್ಥಾಪಿಸಿದರು. ಅವರು ಮಾಲ್ಟ, ಸಿಸಿಲಿ ಮತ್ತು ಕಾರ್ಸಿಕದಲ್ಲಿ ರಕ್ಷಣೆಗಾಗಿ ಸೈನ್ಯವನ್ನಿಟ್ಟುಕೊಂಡಿದ್ದರು.

ಸ್ಪೇನ್‌ನಿಂದ ಬೆಳ್ಳಿ, ಸೀಸ ಮತ್ತು ಕಬ್ಬಿಣವನ್ನು, ಕಾರ್ನ್‌ವಾಲ್‌ನಿಂದ ಟಿನ್, ಆಫ್ರಿಕದಿಂದ ಉಷ್ಟ್ರಪಕ್ಷಿಯ ಗರಿಗಳು ಮತ್ತು ಚಿನ್ನ, ಭಾರತದಿಂದ ಸಂಬಾರ ಪದಾರ್ಥಗಳು ಮತ್ತು ಹತ್ತಿ ವಸ್ತುಗಳನ್ನು, ಅರೇಬಿಯದಿಂದ ಹಾಲುಮಡ್ಡಿ ಮತ್ತು ಸುಗಂಧ ದ್ರವ್ಯಗಳನ್ನು, ಸಿರಿಯದಿಂದ ಮದ್ಯವನ್ನು ತರಿಸಿಕೊಳ್ಳುತ್ತಿದ್ದರು. ಅವರು ಹೋದ ಕಡೆಗಳಲ್ಲಿ ತಮ್ಮ ವಸ್ತುಗಳನ್ನು ಮಾರಿ ಅಲ್ಲಿ ದೊರೆಯುತ್ತಿದ್ದ ವಸ್ತುಗಳನ್ನು ಉಪಯೋಗಿಸಿಕೊಂಡು ಬಗೆಬಗೆಯ ವಸ್ತುಗಳನ್ನು ತಯಾರಿಸಿ ಬೇರೆ ದೇಶಗಳಿಗೆ ಮಾರುತ್ತಿದ್ದರು. ಈ ರೀತಿಯ ವ್ಯಾಪಾರ ಅನೇಕ ಜನರಿಗೆ ಉದ್ಯೋಗ ಒದಗಿಸಿ ಕೊಟ್ಟಿತ್ತಲ್ಲದೆ ದೇಶದ ಪ್ರಗತಿಗೂ ಕಾರಣವಾಯಿತು.

ಕೊಡುಗೆಗಳು : ಕಷ್ಟಸಹಿಷ್ಣುಗಳಾಗಿದ್ದು, ವ್ಯಾಪಾರಗಾರರಾಗಿ ಪ್ರಸಿದ್ಧರಾಗಿದ್ದರು. ಮೆಡಿಟರೇನಿಯನ್ ಸಮುದ್ರದಲ್ಲಿ ವಸಾಹತುಗಳನ್ನು ಸ್ಥಾಪಿಸಿ, ತೀರಪ್ರದೇಶದಲ್ಲಿ ಅನೇಕ ಪಟ್ಟಣಗಳು ಮತ್ತು ಬಂದರುಗಳನ್ನು ನಿರ್ಮಿಸಿಕೊಂಡು ಆ ಮೂಲಕ ಅವರು ಪ್ರಪಂಚ ನಾಗರಿಕತೆಗೆ ಹಲವು ಕಾಣಿಕೆಗಳನ್ನು ಸಲ್ಲಿಸಿರುತ್ತಾರೆ. ಈಜಿಪ್ಟ್ ಸ್ಥಳಗಳಿಗೆ ಹರಡಿದ ಫಿನಿಷಿಯನ್ನರು ಮಾನವನ ನಾಗರಿಕತೆಯ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಫಿನಿಷಿಯನ್ನರು ಪೂರ್ವ ರಾಷ್ಟ್ರಗಳಿಗೆ ಭೇಟಿ ನೀಡಿ ಅಲ್ಲಿಯ ಜನರ ಜ್ಞಾನ ಮತ್ತು ಜೀವನಮಾರ್ಗವನ್ನು ಅರಿತರು.

ಕಮಲ, ಸ್ಫಿಂಕ್ಸ್ ವಿಗ್ರಹ, ಅನೇಕ ರೆಕ್ಕೆಗಳುಳ್ಳ ರಾಕ್ಷಸರ ವಿಗ್ರಹ ಮುಂತಾದವು ಪಾಶ್ಚಾತ್ಯರಿಗೆ ಫಿನಿಷಿಯನ್ ಶಿಲ್ಪಿಗಳಿಂದ ಪರಿಚಯವಾದುವು ಎಂದು ಹೇಳಲಾಗಿದೆ. ವಿವಿಧ ರೀತಿಯ ಉಡುಪುಗಳನ್ನು ಫಿನಿಷಿಯನ್ನರು ಇತರ ದೇಶಗಳಿಗೆ ಪರಿಚಯ ಮಾಡಿಸಿಕೊಟ್ಟರು. ಫಿನಿಷಿಯನ್ನರು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಕೊಂಡಿಯಂತಿದ್ದರು. ಇವರು ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಪ್ರಖ್ಯಾತರಾಗಿದ್ದರು.

ಫಿನಿಷಿಯನ್ನರು ಕೈಗಾರಿಕೆ ಮತ್ತು ಕುಶಲವಿದ್ಯೆಗಳಲ್ಲಿ ಪ್ರಾವೀಣ್ಯ ಪಡೆದಿದ್ದರೆಂಬುದು ಹೋಮರ್ ಕವಿಯ ವರ್ಣನೆಯಿಂದ ತಿಳಿದುಬರುತ್ತದೆ. ಇವರು ಕೈಗಾರಿಕೆಯಲ್ಲಿ ಮುಂದುವರಿದಿದ್ದರು. ಬಟ್ಟೆ ತಯಾರಿಕೆ ಇವರ ಒಂದು ಮುಖ್ಯ ಕೈಗಾರಿಕೆಯಾಗಿತ್ತು. ಇವರು ಬಟ್ಟೆಗೆ ಹಾಕುತ್ತಿದ್ದ ಕೆಂಪುಬಣ್ಣ ಬೇರೆ ಯಾರಿಗೂ ತಿಳಿದಿರಲಿಲ್ಲವೆಂದು ವ್ಯಕ್ತವಾಗುತ್ತದೆ. ಇವರು ಒಂದು ಜಾತಿಯ ಮೀನಿನ ಶರೀರದ ಸಣ್ಣ ಚೀಲವೊಂದರಲ್ಲಿ ಸಿಕ್ಕಿದ ವಸ್ತುಗಳನ್ನು ಉಪಯೋಗಿಸಿಕೊಂಡು ವಿಶೇಷ ರೀತಿಯ ಬಣ್ಣವನ್ನು ತಯಾರಿಸಿಕೊಳ್ಳುತ್ತಿದ್ದರು. ಗಾಜಿನ ತಯಾರಿಕೆಯೂ ಫಿನಿಷಿಯನ್ನರಿಗೆ ಗೊತ್ತಿತ್ತು. ಅದರಿಂದ ಇವರು ಅನೇಕ ಉತ್ತಮ ವಸ್ತುಗಳನ್ನು ತಯಾರಿಸುತ್ತಿದ್ದರು. ಗಾಜು ಅವರ ವ್ಯಾಪಾರದ ಒಂದು ವಿಶೇಷ ಸರಕಾಗಿತ್ತು. ಅವರು ತಾಮ್ರ ಮತ್ತು ಕಂಚಿನಿಂದ ಆಯುಧಗಳನ್ನು ತಯಾರಿಸಿಕೊಳ್ಳುತ್ತಿದ್ದರು. ದಂತದಲ್ಲಿ ಸುಂದರ ಕೆತ್ತನೆ ಕೆಲಸ ಮಾಡುತ್ತಿದ್ದರು. ಅವರು ಲೋಹಗೆಲಸದಲ್ಲಿ ನುರಿತಿದ್ದರು. ಕುಶಲ ಶಿಲ್ಪಿಗಳು ಚಿನ್ನ, ಬೆಳ್ಳಿ, ಕಂಚು ಮುಂತಾದ ಲೋಹಗಳಲ್ಲಿ ಮೂರ್ತಿಗಳೇ ಮುಂತಾದವನ್ನು ನಿರ್ಮಿಸುತ್ತಿದ್ದರು. ಫಿನಿಷಿಯನ್ನರು ಗಣಿ ಕೆಲಸದಲ್ಲಿ ಪರಿಶ್ರಮ ಪಡೆದಿದ್ದರು. ಕಾಗದ, ಲೇಖನಿ ಮತ್ತು ಶಾಯಿಯ ಉಪಯೋಗವನ್ನು ತಿಳಿದಿದ್ದು ಅವನ್ನು ಯುರೋಪಿನ ಜನರಿಗೆ ಪರಿಚಯ ಮಾಡಿಕೊಟ್ಟರು. ಬಿಬ್ಲಸ್ ನಗರ ಕಾಗದಕ್ಕೆ ಹೆಸರಾಗಿತ್ತು. ಬೈಬಲ್ ಎಂಬ ಪದ ಫಿನಿಷಿಯನ್ನರ ಬಿಬ್ಲಸ್ ಎಂಬುದರಿಂದ ಬಂದಿದೆ ಎಂಬುದು ಕೆಲವರ ಅಭಿಪ್ರಾಯ. ನೌಕಾಯಾನದಲ್ಲಿ ಪ್ರಸಿದ್ಧರಾಗಿದು ಅಸ್ಸಿರಿಯನ್ ದೊರೆ ಸೆನಾಕೆರಿಬ್ ಮತ್ತು ಅಲೆಗ್ಸಾಂಡರ್ ಫಿನಿಷಿಯದ ನಾವಿಕರನ್ನು ನೌಕಾಯುದ್ಧಕ್ಕಾಗಿ ಮತ್ತು ವಸ್ತುಗಳ ರಫ್ತಿಗಾಗಿ ನೇಮಿಸಿಕೊಂಡಿದ್ದರೆಂದು ತಿಳಿದು ಬಂದಿದೆ. ಫಿನಿಷಿಯನರು ರೋಮನರನ್ನು ಎದುರಿಸುವಷ್ಟು ಸಮರ್ಥರಾದ ನೌಕಾಬಲವನ್ನು ಇವರು ಹೊಂದಿದ್ದರು. ಅವರು ಹಡಗು ದೋಣಿಗಳನ್ನು ನಿರ್ಮಿಸಿಕೊಳ್ಳುವುದರಲ್ಲೂ ಪ್ರವೀಣರಾಗಿದ್ದರು.

ಪ್ರಾಚೀನ ಕಾಲದಲ್ಲಿ ನಾವಿಕರಿಗೆ ದಿಕ್ಸೂಚಿಯ ಉಪಯೋಗ ತಿಳಿಯದಿದ್ದಾಗ ಫಿನಿಷಿಯನ್ನರು ಆಕಾಶದಲ್ಲಿ ಧ್ರುವ ನಕ್ಷತ್ರವನ್ನು ಗುರುತಿಸಿಕೊಂಡು ಅದರ ಸಹಾಯದಿಂದ ರಾತ್ರಿಯ ವೇಳೆಯಲ್ಲಿ ಸಮುದ್ರಯಾನ ಮಾಡುವಾಗ ದಿಕ್ಕನ್ನು ಕಂಡುಕೊಳ್ಳುತ್ತಿದ್ದರು. ಅದರ ನೆರವಿನಿಂದ ದೂರದೇಶಗಳಿಗೆ ಯಾನ ಕೈಗೊಳ್ಳುತ್ತಿದ್ದರು. ಪ್ರಾಚೀನ ಕಾಲದಲ್ಲಿ ಫಿನಿಷಿಯನ್ನರು

ಅಭಿವೃದ್ಧಿ ಹೊಂದಿದ ದೇಶಗಳಿಗೆ ಭೇಟಿ ನೀಡಿ ಅಲ್ಲಿಯ ಜನರ ಕಲೆ, ವಿಜ್ಞಾನ ಮುಂತಾದವನ್ನು ಕಲಿತು ಅವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. ಬೇರೊಬ್ಬರಿಂದ ಕಲಿತದ್ದನ್ನು ದೂರದೇಶಗಳ ಜನರಿಗೆ ತಮ್ಮ ವ್ಯಾಪಾರದ ಮೂಲಕ ಸಾಗಿಸಿದರು.

ಫಿನಿಷಿಯನ್ನರು ಮರದಿಂದಲೂ ಕಲ್ಲಿನಿಂದಲೂ ದೇವಾಲಯಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಅವರು ಸಂಚರಿಸಿದ ಕಡೆಗಳಲ್ಲಿ ಮತ್ತು ಅವರ ವಸಾಹತುಗಳಲ್ಲಿ ತಮ್ಮ ಮತವನ್ನು ಪ್ರಚಾರಕ್ಕೆ ತಂದರು. ಫಿನಿಷಿಯನ್ನರು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನೂ ಸೆಮಿಟಿಕ್ ಗುಂಪಿನವರು ಪೂಜಿಸುತ್ತಿದ್ದ ಬಾಲ್ ಎಂಬ ದೇವರನ್ನೂ ಪೂಜಿಸುತ್ತಿದ್ದರು. ಬಿಬ್ಲಸ್ ನಗರದ ದೇವರ ಹೆಸರು ಎಲ್. ಅಶ್‍ತರ್ತೆ ಎಂಬುದು ಇವರ ಒಂದು ಹೆಣ್ಣು ದೇವತೆ. ನರಬಲಿಯನ್ನು ಕೊಡುವ ಪದ್ಧತಿ ಇವರಲ್ಲಿತ್ತು. ಬಹುದೇವತಾರಾಧಕರಾಗಿದ್ದರು. ಮೆಲೋಖ್ ಎಂಬ ದೇವರಿಗೆ ಮಕ್ಕಳನ್ನು ಬಲಿ ಕೊಡುತ್ತಿದ್ದರು.

ಫಿನಿಷಿಯನ್ನರು ಖಗೋಳವಿಜ್ಞಾನ, ಭೂಗೋಳ ವಿಜ್ಞಾನ, ಗಣಿತಶಾಸ್ತ್ರಗಳಲ್ಲಿ ಜ್ಞಾನ ಸಂಪಾದಿಸಿದ್ದರು. ಫಿನಿಷಿಯದಲ್ಲಿ ಪ್ರ.ಶ.ಪೂ. 12ನೆಯ ಶತಮಾನದಲ್ಲಿ ಸಂಚೋನಿಯಾತನ್ ಎಂಬ ಇತಿಹಾಸಕಾರ ಮತ್ತು ಮೋಸ್ಕಸ್ ಎಂಬ ತತ್ತ್ವಜ್ಞಾನಿ ಜೀವಿಸಿದ್ದರೆಂದು ತಿಳಿದುಬರುತ್ತದೆ. (ಟಿ.ವಿ.ಜಿ.ಯು.;ಎಂ.ವಿ.ಎಸ್.ಆರ್.)

**ಫಿನ್ಲೆಂಡ್:** ಉತ್ತರ ಯುರೋಪಿನಲ್ಲಿರುವ ಒಂದು ಗಣರಾಜ್ಯ. ಉ.ಅ.59$^0$48′30″–70$^0$5′3″ ಮತ್ತು ಪೂ.ರೇ.19$^0$7′3″–31$^0$35′20″ ನಡುವೆ ಇರುವ ಈ ದೇಶದ ವಿಸ್ತೀರ್ಣ 3,37,032 ಚ.ಕಿಮೀ. ಜನಸಂಖ್ಯೆ 52,44,749 (2009). ರಾಜಧಾನಿ ಹೆಲ್ಸಿಂಕಿ.




ಮೇಲ್ಮೈಯ ಲಕ್ಷಣ : ಪಶ್ಚಿಮದ ಸ್ಕಾಂಡಿನೇವಿಯನ್ ಪರ್ವತಗಳಿಗೂ ಪೂರ್ವದ ಯುರೋಪಿಯನ್ ಮೈದಾನಕ್ಕೂ ನಡುವೆ ಇರುವ ಫಿನ್ಲೆಂಡ್ ಬಹುತೇಕ ತಗ್ಗಾದ ನಾಡು. ದಕ್ಷಿಣ ಮತ್ತು ಪಶ್ಚಿಮದ ಕರಾವಳಿಯ ಪ್ರದೇಶ ಮೈದಾನವಾಗಿದೆ. ಇದರ ತೀರ ಬಹಳ ಅಂಕುಡೊಂಕು. ಸಾವಿರಾರು ಸಣ್ಣ ಪುಟ್ಟ ದ್ವೀಪಗಳು ಬಾತ್ನಿಯ ಖಾರಿಯಲ್ಲಿರುವ ಆಕ್ವೆನಾಮ್ಮಾ (ಓಲಾಂಡ್) ದ್ವೀಪಸ್ತೋಮದತ್ತ ಚಾಚಿಕೊಂಡಂತೆ ಸಾಲಾಗಿವೆ. ಮಧ್ಯ ಫಿನ್ಲೆಂಡ್ ವ್ಯಾಪಕವಾದ ಸರೋವರ ಪ್ರಸ್ಥಭೂಮಿ. ಫಿನ್ಲೆಂಡಿನ 60,000 ಸರೋವರಗಳ ಪೈಕಿ ಹೆಚ್ಚು ಸಂಖ್ಯೆಯಲ್ಲಿ ಇರುವುದು ಇಲ್ಲಿ. ಮಿಕಲೀ ಪ್ರಾಂತ್ಯದ ಶೇ. 40 ಭಾಗ ನೀರು. ಉತ್ತರ ಫಿನ್ಲೆಂಡ್ ಉಳಿದ ಭಾಗಕ್ಕಿಂತ ಎತ್ತರವಾಗಿದೆ. ಇದು ನಿಬಿಡ ಕಾಡಿನಿಂದ ಕೂಡಿದೆ. ನಾರ್ವೆಯ ಎಲ್ಲೆ ಬಳಿಯ ಪ್ರದೇಶ ಫಿನ್ಲೆಂಡಿನಲ್ಲೇ ಅತ್ಯುನ್ನತವಾದುದ್ದು. ಎನಾಂಟಕಿಯೊ ಬಳಿ ಇರುವ ಹಾಲ್ಟಿಯಟುಂಟರೀ ಶಿಖರ ಸಮುದ್ರಮಟ್ಟದಿಂದ 1,324 ಮೀ ಎತ್ತರವಾಗಿದೆ.

ಇಲ್ಲಿ ವ್ಯಾಪಕವಾದ, ಪರಸ್ಪರ ಕೂಡಿಕೊಂಡಿರುವ ಸಾಗರ ಮತ್ತು ನದೀ ವ್ಯವಸ್ಥೆಯಿದೆ. ಇದರಿಂದ ಫಿನ್ಲೆಂಡಿಗೆ ನೈಸರ್ಗಿಕ ಜಲಮಾರ್ಗ ಸೌಲಭ್ಯವುಂಟಾಗಿದೆ.

ವಾಯುಗುಣ : ಫಿನ್ಲೆಂಡಿನ ಮೂರನೆಯ ಒಂದು ಭಾಗದಷ್ಟು ಪ್ರದೇಶ ಆರ್ಕ್‍ಟಿಕ್ ವೃತ್ತದ ಉತ್ತರಕ್ಕಿದೆ. ಆ ಪ್ರದೇಶದಲ್ಲಿ ಚಳಿಗಾಲ ಹೆಚ್ಚು ದೀರ್ಘ, ಬಹಳ ತೀವ್ರ. ಅಲ್ಲಿ–30$^0$ಸೆ. ನಷ್ಟು ಕೆಳಕ್ಕೆ ಉಷ್ಣತೆ ಇಳಿಯುವುದುಂಟು. ಆ ಪ್ರದೇಶದಲ್ಲಿರುವ ಪರ್ವತಗಳ ಉತ್ತರದ ಬದಿಯಲ್ಲಿ ಹಿಮ ಕರಗುವುದೇ ಇಲ್ಲ. ಬೇಸಗೆ ಕಿರಿದು. ಮೇ–ಜುಲೈ ಅವಧಿಯಲ್ಲಿ 27$^0$ಸೆ. ವರೆಗೂ ಉಷ್ಣತೆ ಏರುತ್ತದೆ. ದಕ್ಷಿಣಕ್ಕೆ ಬಂದಂತೆ ಚಳಿಗಾಲ ಬೇಸಗೆ ಕಾಲಗಳ ಉಷ್ಣತೆಗಳ ಅಂತರ ಕಡಿಮೆಯಾಗುತ್ತದೆ. ಅಕ್ಷಾಂಶದ ಜೊತೆಗೆ ಪಕ್ಕದ ಸಮುದ್ರದ ಗಲ್ಫ್ ಸ್ಟ್ರೀಮ್ ಉಷ್ಣೋದಕ ಪ್ರವಾಹ, ಮಾರುತಗಳ ದಿಕ್ಕು ಇವು ಇದಕ್ಕೆ ಕಾರಣ. ವಾರ್ಷಿಕ ವೃಷ್ಟಿ ದಕ್ಷಿಣದಲ್ಲಿ 61 ಸೆಂಮೀ. ಉತ್ತರದಲ್ಲಿ ಸ್ವಲ್ಪ ಕಡಿಮೆ. ಇದರಲ್ಲಿ ಮೂರನೆಯ ಒಂದು ಭಾಗದಷ್ಟು ಹಿಮರೂಪದಲ್ಲಿ ಬೀಳುತ್ತದೆ. ಫಿನ್ಲೆಂಡಿನ ಎಲ್ಲ ನದೀ ಸರೋವರಗಳ ಮೇಲುಭಾಗಗಳು ಚಳಿಗಾಲದಲ್ಲಿ ಸ್ವಲ್ಪ ಕಾಲಾವಾದರೂ ಹೆಪ್ಪುಗಟ್ಟಿರುತ್ತವೆ.

ಸಸ್ಯ ಪ್ರಾಣಿ ಸಂಪತ್ತು : ಫಿನ್ಲೆಂಡಿನ ಬಹುಭಾಗ ದಟ್ಟವಾದ ಶಂಕುಪರ್ಣಿ ಸಸ್ಯಗಳಿಂದ ಕೂಡಿದೆ. ಅತ್ಯಂತ ದಕ್ಷಿಣ ಭಾಗದಲ್ಲಿ ಪರ್ಣಪಾತಿ ಸಸ್ಯಗಳುಂಟು ಶಂಕುಪರ್ಣಿ ಮರಗಳು ಪೀತದಾರು ಮತ್ತು ಸ್ಪ್ರೂಸ್, ಪರ್ಣಪಾತಿಗಳು ಹೇಜೆಲ್, ಆಸ್ಪೆನ್, ಮೇಪಲ್, ಎಲ್ಮ್, ನಿಂಬೆ ಮತ್ತು ಆಲ್ಡರ್, ತೀರ ಉತ್ತರಕ್ಕೆ ಹೋದಂತೆ ಶಿಲಾವಲ್ಕ ಸಾಮಾನ್ಯ. ಫಿನ್ಲೆಂಡಿನಲ್ಲಿ 1,000 ಕ್ಕೂ ಹೆಚ್ಚು ಪುಷ್ಪಜಾತಿಗಳಿವೆ.

ಫಿನ್ಲೆಂಡಿನಲ್ಲಿ ವನ್ಯಮೃಗಪಕ್ಷಿ ಸಂಪತ್ತು ಹೆಚ್ಚಾಗಿದೆ. ಕಡಲ ಕರೆಯ ದ್ವೀಪಗಳಲ್ಲಿ ಕಪ್ಪುಕೊಕ್ಕಿನ ಗಲ್‍ಗಳೂ ಟರ್ನ್‍ಗಳೂ ಗೂಡು ಕಟ್ಟಿ ವಾಸಿಸುತ್ತವೆ. ನೀರುಕೋಳಿಗಳು ಒಳನಾಡಿನ ಸರೋವರಗಳಲ್ಲಿವೆ. ಸೈಬೀರಿಯನ್ ಜೇ, ಬಣ್ಣ ಬಣ್ಣದ ದಾಸರಹಕ್ಕಿ, ಹದ್ದು ಮುಂತಾದವೂ ಇವೆ. ಹಲವು ಹಕ್ಕಿಗಳು ಚಳಿಗಾಲದಲ್ಲಿ ದಕ್ಷಿಣಕ್ಕೆ ವಲಸೆ ಬರುತ್ತವೆ. ಮುಖ್ಯ ವನ್ಯಮೃಗಗಳು ಕರಡಿ, ತೋಳ, ವುಲ್ವರೀನ್, ಲಿಂಕ್ಸ್ ಮತ್ತು ಫಿನ್ನಿಪ್ ಕಡವೆ; ಕಾಡು ಹಿಮಸಾರಂಗಗಳು ಬಹುತೇಕ ಅದೃಶ್ಯವಾಗಿವೆ. ಉತ್ತರದಲ್ಲಿ ಉಳಿದಿರುವ ಹಿಮಸಾರಂಗಗಳು ಸಾಕುಪ್ರಾಣಿಗಳು. ಉತ್ತರದ ನದಿಗಳಲ್ಲಿ ಸಾಲ್ಮನ್, ಟ್ರಾಟ್, ಮತ್ತು ಸೈಕಾ ಮೀನುಗಳು ಯಥೇಚ್ಛವಾಗಿವೆ. ಪೈಕ್, ಚಾರ್ ಮತ್ತು ಪರ್ಚ್‍ಗಳೂ ಇವೆ.

ಜನವಸತಿ: ಕೈಗಾರಿಕೀಕರಣದಿಂದ ಪಟ್ಟಣಿಗರ ಪ್ರಮಾಣ ಕ್ರಮವಾಗಿ ಬೆಳೆಯುತ್ತಿದೆಯಾದರೂ ಜನಸಂಖ್ಯೆಯಲ್ಲಿ ಶೇ.25 ಭಾಗ ಈಗಲೂ ಕೃಷಿ ಹಾಗೂ ಅರಣ್ಯಗಾರಿಕೆಯನ್ನೇ ಅವಲಂಬಿಸಿದೆ. ಗ್ರಾಮೀಣ ವಸತಿ ದಟ್ಟವಾಗಿದೆ. ಕೃಷಿಕ್ಷೇತ್ರಗಳು ಸಾಮಾನ್ಯವಾಗಿ ಚಿಕ್ಕವು. ಒಡೆಯರೇ ಸಾಗುವಳಿದಾರರು. ಪಟ್ಟಣಗಳು ದಕ್ಷಿಣ ಭಾಗದಲ್ಲಿ ಅಧಿಕ. ಹಲವು ಪಟ್ಟಣಗಳೂ ನಗರಗಳೂ ಕಡಲ ತೀರದಲ್ಲಿವೆ. ಫಿನ್ಲೆಂಡಿನ ರಾಜಧಾನಿಯಾದ ಹೆಲ್ಸಿಂಕೀ ಇರುವುದು ಫಿನ್ಲೆಂಡ್ ಖಾರಿಯ ಮೇಲೆ. ಬಾತ್ನಿಯ ಖಾರಿಯ ಮೇಲಿರುವ ಪ್ರಮುಖ ಪಟ್ಟಣಗಳು ವಾಸ ಮತ್ತು ಆವುಲೂ. ಉತ್ತರದಲ್ಲಿ ತಕ್ಕಮಟ್ಟಿಗೆ ದೊಡ್ಡದೆನ್ನಬಹುದಾದ ಪಟ್ಟಣವೆಂದರೆ ರೋವನೀಯೆಮೀ. ನೈರುತ್ಯ ಫಿನ್ಲೆಂಡಿನ ಪ್ರಮುಖ ಬಂದರು ಟುರ್ಕೂ.

ಭಾಷೆ : ಫಿನ್ಲೆಂಡಿನಲ್ಲಿ ಫಿನ್ನಿಷ್ ಮತ್ತು ಸ್ವೀಡಿಷ್ ಅಧಿಕೃತ ಭಾಷೆಗಳು. ಶೇ. 90 ಜನರು ಫಿನ್ನಿಷ್ ಭಾಷೆಯನ್ನೂ ಶೇ. 7 ಕ್ಕಿಂತ ಸ್ವಲ್ಪ ಹೆಚ್ಚು ಸ್ವೀಡಿಷ್ ಭಾಷೆಯನ್ನೂ ಆಡುವವರು. ಇವರು ಬಹುತೇಕ ಆಗ್ನೇಯ ಭಾಗದಲ್ಲಿಯೂ ಮುಖ್ಯವಾಗಿ ಆಕ್ವೆನಾಮ್ಮದಲ್ಲಿದ್ದಾರೆ. ಸ್ವೀಡಿಷ್ ಭಾಷೆ ಆಡುವವರ ಸಂಖ್ಯೆ ಕಡಿಮೆಯಾಗುತ್ತಿದೆ.

ಧರ್ಮ : ಕ್ರೈಸ್ತಧರ್ಮ ಸು. 12ನೆಯ ಶತಮಾನದಲ್ಲಿ ಪೂರ್ವ ಮತ್ತು ಪಶ್ಚಿಮದ ಕಡೆಗಳಿಂದ ಫಿನ್ಲೆಂಡನ್ನು ಪ್ರವೇಶಿಸಿತು. ಶೇ. 93ರಷ್ಟು ಮಂದಿ ಇವಾಂಜೆಲಿಕಲ್ ಲೂತೆರನ್ ಚರ್ಚಿಗೆ ಸೇರಿದವರು. ಇದು ರಾಷ್ಟ್ರೀಯ ಚರ್ಚ್. ಇದರ ಬಿಷಪ್‍ಗಳನ್ನು ರಾಜ್ಯದ ಮುಖ್ಯಸ್ಥ ನೇಮಿಸುತ್ತಾನೆ. ಶೇ. 1ರಷ್ಟು ಜನರು ಗ್ರೀಕ್ ಆರ್ತೊಡಾಕ್ಸ್ ಚರ್ಚಿಗೆ ಸೇರಿದ್ದಾರೆ. ಶೇ. 5ರಷ್ಟು ಮಂದಿ ಯಾವುದೇ ಚರ್ಚಿಗೆ ಸೇರಿದವರೆಂದು ಹೇಳಿಕೊಂಡಿಲ್ಲ.

ಆರ್ಥಿಕತೆ: ಫಿನ್ಲೆಂಡ್ ಪ್ರಪಂಚದ ಅತ್ಯಂತ ಸಂಪತ್ಭರಿತ ದೇಶವಲ್ಲ. ಸ್ಕಾಂಡಿನೇವಿಯನ್ ದೇಶಗಳಲ್ಲೂ ಇದು ಮುಂದಿಲ್ಲ. ಇದರ ಉತ್ಪಾದಕತೆ ಕೆಳಮಟ್ಟದಲ್ಲಿದೆ. ಇದರ ಜನಸಂಖ್ಯೆ ಕಡಿಮೆ ಇರುವುದರಿಂದ ಸ್ಥೂಲ ರಾಷ್ಟ್ರೀಯ ಉತ್ಪನ್ನದಲ್ಲಿ ತಲಾ ಪಾಲು ಬ್ರಿಟನ್, ಆಸ್ಟ್ರಿಯ, ಇಟಲಿಗಳಲ್ಲಿರುವುದಕ್ಕಿಂತ ಅಧಿಕವಾಗಿದೆ. ಫಿನ್ಲೆಂಡ್ ಹಿಂದಿನಿಂದ ಕೃಷಿ ಪ್ರಧಾನ ದೇಶವಾಗಿತ್ತು. ಇತ್ತೀಚೆಗೆ ಕೈಗಾರಿಕೆಯ ಪ್ರಾಮುಖ್ಯ ಬೆಳೆಯುತ್ತಿದೆ.

ಖನಿಜ ಸಂಪತ್ತು: ಫಿನ್ಲೆಂಡಿನಲ್ಲಿ ಸಾಕಷ್ಟು ಖನಿಜ ಸಂಪತ್ತಿಲ್ಲ. ಕಲ್ಲಿದ್ದಲಾಗಲೀ ಪೆಟ್ರೋಲಿಯಂ ಆಗಲಿ ಇಲ್ಲ. ಪ್ರೀ ಕೇಂಬ್ರಿಯನ್ ಶಿಲಾಸ್ತರಗಳಲ್ಲಿ ಹಲವು ಖನಿಜಗಳಿವೆ. ಆದರೆ ಗಣಿಗಾರಿಕೆ ಅಭಿವೃದ್ಧಿ ಹೊಂದಿಲ್ಲ. ಪೂರ್ವದಲ್ಲಿರುವ ಔಟೊಕುಂಪುವಿನಲ್ಲಿ ಫಿನ್ಲೆಂಡಿನ ಅತ್ಯಂತ ದೊಡ್ಡ ತಾಮ್ರದ ಗಣಿ ಇದೆ. ಕಬ್ಬಿಣ, ವೆನೆಡಿಯಮ್ ಮತ್ತು

ಟೈಟಾನಿಯಮ್ ಇವು ಅಲ್ಪ ಪರಿಮಾಣಗಳಲ್ಲಿ ಒಟಾನ್ಮಾಕಿಯಲ್ಲಿ ದೊರಕುತ್ತವೆ. ಅಕಾಸ್ಲಾಂಪೋಲೋದಲ್ಲಿ ಹೊಸ ಕಬ್ಬಿಣ ಅದಿರು ನಿಕ್ಷೇಪಗಳಿರುವುದು ಗೋಚರವಾಗಿದೆ. ಗ್ರಾನೈಟನ್ನೂ ತೆಗೆಯಲಾಗುತ್ತಿದೆ. ನೈಋತ್ಯದ ಪರ್ಗಾಸ್ ಮತ್ತು ಲೋಜಗಳಲ್ಲೂ ಆಗ್ನೇಯದ ಲ್ಯಾಪಿನ್ರಾಂಟದಲ್ಲೂ ಸಿಮೆಂಟ್ ಉತ್ಪಾದನೆ ಬೆಳೆಯುತ್ತಿದೆ.

ಕೃಷಿ : ದೇಶದ ಒಟ್ಟು ಜನಸಂಖ್ಯೆಯ ಶೇ. 20ರಷ್ಟು ಮಂದಿಯ ಕಸಬು ಕೃಷಿ ಮತ್ತು ಅರಣ್ಯಗಾರಿಕೆ. ಮೂರನೆಯ ಒಂದು ಭಾಗದಷ್ಟು ಹಿಡುವಳಿಗಳಲ್ಲಿ ಸು. 5 ಹೆಕ್ಟೇರುಗಳಿಗಿಂತ ವಿಸ್ತೀರ್ಣದ ಸಾಗುವಳಿ ಜಮೀನುಗಳಿವೆ. ಮುಖ್ಯ ಬೆಳೆಗಳು ಹುಲ್ಲು, ಕ್ಲೋವರ್, ಓಟ್ಸ್, ಬಾರ್ಲಿ, ಆಲೂಗಡ್ಡೆ, ಗೋದಿ, ರೈ, ಸಕ್ಕರೆ ಬೀಟ್ ಮತ್ತು ರೇಪ್.

ಅರಣ್ಯಗಾರಿಕೆ : ಫಿನ್ಲೆಂಡಿನ ಶೇ. 65ರಷ್ಟು ಭೂಮಿ ಅರಣ್ಯಗಳಿಂದ ಆವೃತವಾಗಿದೆ. ಮರ ಇಲ್ಲಿಯ ಮುಖ್ಯ ಕಚ್ಚಾ ಸಾಮಗ್ರಿ. ಆದರೆ ಉತ್ತರ ಭಾಗದಲ್ಲಿ ಅರಣ್ಯಸಂಪತ್ತು ಬೇಗ ಕ್ಷೀಣಿಸುತ್ತಿದೆ. ನಷ್ಟವಾದ ಕಾಡಿನ ಬದಲು ಹೊಸ ಅರಣ್ಯಗಳನ್ನು ಬೆಳೆಸುವ ಕಾರ್ಯ ನಿಧಾನವಾಗಿ ಸಾಗಿದೆ. ಹೆಚ್ಚು ದೂರದಿಂದ ಮರದ ದಿಮ್ಮಿಗಳನ್ನು ಸಾಗಿಸುವುದರ ಖರ್ಚು ಅಧಿಕವಾಗಿರುವುದರಿಂದ ಅದು ಲಾಭದಾಯಕವಾಗಿಲ್ಲ. ಆದರೂ ನದಿ ಸರೋವರಗಳ ಮೂಲಕ ಮತ್ತು ರಸ್ತೆಗಳ ಮೂಲಕ ಮರವನ್ನು ಸಾಗಿಸುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕಳೆದ ದಶಕದ ಅಂತ್ಯದಲ್ಲಿ ಮರದ ದಿಮ್ಮಿ ಮತ್ತು ಇತರ ಅರಣ್ಯ ಸಾಮಗ್ರಿಗಳ ರಫ್ತು ಒಟ್ಟು ರಫ್ತಿನ ಸು. 2/3ರಷ್ಟಿತ್ತು.

ವಿದ್ಯುತ್: ಫಿನ್ಲೆಂಡಿನ ವಿದ್ಯುತ್ ಉತ್ಪಾದನೆ ಮುಖ್ಯವಾಗಿ ಜಲಮೂಲವಾದುದು. ಸ್ವೀಡನ್ನಿನೊಂದಿಗೆ ವಿದ್ಯುತ್ ಜಾಲವನ್ನು ನಿರ್ಮಿಸಿ, ಅಲ್ಲಿಂದಲೂ ವಿದ್ಯುತ್ತನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ಕೈಗಾರಿಕೆ : ಫಿನ್ಲೆಂಡಿನ ಕೈಗಾರಿಕೆಯ ಮೂಲಾಧಾರ ಮೆದು ಮರ. ಈ ಮರದ ತಿರುಳು ಮತ್ತು ಕಾಗದ ಕೈಗಾರಿಕೆಗಳು ಸರೋವರ, ನದಿ ಮತ್ತು ಅಳಿವೆಗಳ ದಡಗಳ ಮೇಲೆ ಸ್ಥಾಪಿತವಾಗಿವೆ. ಗೋಡೆಹಲಗೆ, ಪ್ಲೈವುಡ್, ವೆನೀರ್ ಮುಂತಾದವನ್ನು ತಯಾರಿಸುವ ಕಾರ್ಖಾನೆಗಳೂ ಇವೆ. ಪೀಠೋಪಕರಣವೇ ಮುಂತಾದವು ತಯಾರಾಗುತ್ತವೆ. ಇವನ್ನು ಸ್ವೀಡನ್, ಪಶ್ಚಿಮ ಜರ್ಮನಿ, ಅಮೆರಿಕ, ರಷ್ಯ ಮುಂತಾದ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಅಭಿವೃದ್ಧಿ ಹೊಂದುತ್ತಿದೆ. ಹಡಗು ನಿರ್ಮಾಣ ಮತ್ತು ಎಂಜನಿಯರಿಂಗ್ ಕೈಗಾರಿಕೆಗಳು 1944ರಿಂದ ಈಚೆಗೆ ಹೆಚ್ಚಾಗಿ ಬೆಳೆದಿವೆ. ಟ್ಯಾಂಟರೇಯಲ್ಲಿ ರೈಲುಗಾಡಿ ಮತ್ತು ಎಂಜಿನ್‍ಗಳು ತಯಾರಾಗುತ್ತವೆ. ಟುರ್ಕೂ ಮತ್ತು ಹೆಲ್ಸಿಂಕಿಯಲ್ಲಿ ಹಡಗುಗಳು ನಿರ್ಮಾಣವಾಗುತ್ತವೆ. ಹೆಲ್ಸಿಂಕಿಯಲ್ಲಿ ವಿದ್ಯುದುಪಕರಣಗಳೂ ತಯಾರಾಗುತ್ತವೆ. ತೈಲಶುದ್ಧೀಕರಣ ಕೇಂದ್ರಗಳೂ ಜವಳಿ ಗಿರಣಿಗಳೂ ಪಿಂಗಾಣಿ ಮತ್ತು ಗಾಜಿನ ಕಾರ್ಖಾನೆಗಳೂ ಚರ್ಮ ಕೈಗಾರಿಕೆಗಳೂ ಫಿನ್ಲೆಂಡಿನಲ್ಲಿವೆ. ಬೀರ್, ವೋಡ್ಕ ಮುಂತಾದವೂ ತಯಾರಾಗುತ್ತವೆ.

ಸಾರಿಗೆ : ದೇಶದಲ್ಲಿ ಒಳ್ಳೆಯ ರಸ್ತೆ ವ್ಯವಸ್ಥೆಯುಂಟು. ಆದರೆ ಅಡ್ಡ ಬರುವ ಸರೋವರಗಳಿಂದಾಗಿ ರಸ್ತೆಗಳು ಬಳಸಾಗಿವೆ. ಆರ್ಕ್‍ಟಿಕ್ ವೃತ್ತದ ಉತ್ತರಕ್ಕೆ ಕೆಲವೇ ರಸ್ತೆಗಳುಂಟು. ದೇಶದ ನೈಋತ್ಯ ಭಾಗದಲ್ಲಿ ಹೆಚ್ಚು ರೈಲು ಮಾರ್ಗಗಳಿವೆ. ರೈಲ್ವೆಗಳು ಸರ್ಕಾರದ ಒಡೆತನದಲ್ಲಿವೆ.

ಫಿನ್ಲೆಂಡಿನಲ್ಲಿ 6400 ಕಿಮೀ ಒಳನಾಡಿನ ಜಲಮಾರ್ಗಗಳಿವೆ. ಮರದ ದಿಮ್ಮಿಗಳನ್ನು ಸಾಗಿಸಲು ಅನುಕೂಲವಾದ ಜಲಮಾರ್ಗಗಳ ಉದ್ದ 41,600 ಕಿಮೀ. ಸೈಮಾ ಸರೋವರದಿಂದ ಫಿನ್ಲೆಂಡ್ ಖಾರಿಗೆ ಸಂಪರ್ಕ ಕಲ್ಪಿಸುವ ಕಾಲುವೆಯ ರಷ್ಯ ದೇಶದ ಕಡೆಯ ಭಾಗವನ್ನು ಆ ದೇಶ 1963ರಲ್ಲಿ ಫಿನ್ಲೆಂಡಿಗೆ ಎರವಲಾಗಿ ನೀಡಿತು. 1903ರಲ್ಲಿ ಅದನ್ನು ಹಡಗು ಸಂಚಾರಕ್ಕೆ ತೆರೆಯಲಾಯಿತು. ಫಿನ್ಲೆಂಡಿನಿಂದ ಡೆನ್ಮಾರ್ಕ್, ಸ್ವೀಡನ್ ಮತ್ತು ಪೂರ್ವಜರ್ಮನಿಗೆ ಪ್ರಯಾಣಿಕರ ಹಡಗುಗಳು ಸಂಚರಿಸುತ್ತವೆ. ಫಿನ್ಲೆಂಡಿನಲ್ಲಿ ಹೆಲ್ಸಿಂಕಿಯಲ್ಲದೆ ಇತರೆಡೆಗಳಲ್ಲಿ 16 ವಿಮಾನ ನಿಲ್ದಾಣಗಳಿವೆ. ಈನಾರೀ ಸರೋವರದ ದಡದಲ್ಲಿರುವ ಈವಾಲೋದಲ್ಲಿ ಫಿನ್ಲೆಂಡಿನ ಅತ್ಯಂತ ಉತ್ತರದ ವಿಮಾನ ನಿಲ್ದಾಣವಿದೆ. (ಕೆ.ಆರ್.)

**ಫಿಲಡೆಲ್ಫಿಯ[1]:** ಅಮೆರಿಕದ ಪೆನ್ಸಿಲ್ವೇನಿಯ ರಾಜ್ಯದ ಒಂದು ನಗರ. ಅಮೆರಿಕದ ಮಹಾನಗರಗಳಲ್ಲಿ 4ನೆಯದು. ಡೆಲವೇರ್ ಮತ್ತು ಸ್ಕೂಲ್‍ಕಿಲ್ ನದಿಗಳ ಸಂಗಮಪ್ರದೇಶದಲ್ಲಿರುವ ಈ ಮಹಾನಗರದ ವಿಸ್ತೀರ್ಣ 333 ಚ.ಕಿಮೀ. ಪೆನ್ಸಿಲ್ವೇನಿಯ ರಾಜ್ಯದ ಆಗ್ನೇಯದಲ್ಲಿರುವ ಈ ನಗರದ ಈಶಾನ್ಯಕ್ಕೆ ಸು. 145 ಕಿಮೀ ದೂರದಲ್ಲಿ ನ್ಯೂಯಾರ್ಕ್‍ನಗರವೂ ನೈಋತ್ಯಕ್ಕೆ ಸು. 217 ಕಿಮೀ ದೂರದಲ್ಲಿ ವಾಷಿಂಗ್‍ಟನ್ ನದಿ ನ್ಯೂಜರ್ಸಿಯನ್ನು ಫಿಲಡೆಲ್ಫಿಯದಿಂದ ಪ್ರತ್ಯೇಕಿಸಿದೆ. ಈ ಮಹಾನದಿ ಸಂಚಾರಕ್ಕೆ ಅನುಕೂಲವಾಗಿದ್ದು ಫಿಲಡೆಲ್ಫಿಯ ನಗರಕ್ಕೂ ಅಟ್ಲಾಂಟಿಕ್ ಸಾಗರಕ್ಕೂ ಸಂಪರ್ಕ ಕಲ್ಪಿಸಿದೆ. ಜನಸಂಖ್ಯೆ 1517550 (2000).

ವಿವಿಧ ಪ್ರಕಾಶನ ಹಾಗೂ ಪತ್ರಿಕೆಗಳ ಪ್ರಕಟಣೆಯ ಮಹಾಕೇಂದ್ರಗಳಲ್ಲೊಂದು. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಮೊತ್ತಮೊದಲ ದಿನಪತ್ರಿಕೆ ಪೆನ್ಸಿಲ್ವೇನಿಯ ಪ್ಯಾಕೆಟ್ ಪ್ರಕಟವಾದದ್ದು ಫಿಲಡೆಲ್ಫಿಯದಲ್ಲಿ (1784). ಇಲ್ಲಿಯ ಮತ್ತೊಂದು ಹಳೆಯ ಪತ್ರಿಕೆ ಸಾಟರ್ಡೇ ಈವ್ನಿಂಗ್ ಪೋಸ್ಟ್ ಪ್ರಕಟನೆ ಪ್ರಾರಂಭವಾದದ್ದು 1821ರಲ್ಲಿ. ಇಂದು ಫಿಲಡೆಲ್ಫಿಯ ಭಾರಿ ಕೈಗಾರಿಕೆಗಳ ನಗರ. ಇಲ್ಲಿ ಸು. 5000 ಕ್ಕೂ ಹೆಚ್ಚಿನ ಕಾರ್ಖಾನೆಗಳಿವೆ. ವಿದ್ಯುತ್ ಹಾಗೂ ರಾಸಾಯನಿಕ ವಸ್ತುಗಳು, ಚರ್ಮದ ಸಾಮಾನು, ವಿಜ್ಞಾನ ಸಂಬಂಧವಾದ ಯಂತ್ರೋಪಕರಣ, ಔಷಧ, ಕ್ಯಾಮರಾ, ಟೇಪ್‍ರೆಕಾರ್ಡರ್, ರೇಡಿಯೊ ಟೆಲಿವಿಷನ್ ಮುಂತಾದವುಗಳ ತಯಾರಿಕೆಗೆ ಪ್ರಸಿದ್ಧ. (ವಿ.ಜಿ.ಕೆ.)

**ಫಿಲಡೆಲ್ಫಿಯ[2]:** ಮಿಸಿಸಿಪಿ ರಾಜ್ಯದ ನಸೂಬ ಕೌಂಟಿಯ ಆಡಳಿತ ಕೇಂದ್ರ ಪಟ್ಟಣ. ಈ ಹೆಸರಿನ ಪಟ್ಟಣಗಳು ಪ್ರಾಚೀನ ತುರ್ಕಿಯಲ್ಲಿ ಎರಡು, ಜಾರ್ಡನಿನಲ್ಲಿ ಒಂದು ಮತ್ತು ಈಜಿಪ್ಟಿನಲ್ಲಿ ಒಂದು ಇದ್ದುವು. ಪಶ್ಚಿಮ ತುರ್ಕಿಯ ಆಲ್ ಇ ಸೆಹಿರ್ ನದಿ ದಡದಲ್ಲಿ ಪ್ರ.ಶ.ಪೂ.ಸು. 150ರಲ್ಲಿ ಪೆರ್ಗಾಮ್ ರಾಜ್ಯದ ದೊರೆಯಾಗಿದ್ದ ಎರಡನೆಯ ಅಟಾಲಸ್ (ಫಿಲಡೆಲ್ಫಸ್) ಕಟ್ಟಿದ ನಗರಕ್ಕೆ ಫಿಲಡೆಲ್ಫಿಯ ಎಂಬ ಹೆಸರಿದ್ದು ಈಗ ಅದರ ಹೆಸರು ಅಲ್ ಇ ಸೆಹರ್ ಎಂದಾಗಿದೆ. ಜಾರ್ಡನಿನ ಉತ್ತರದಲ್ಲಿದ್ದ ನಗರವನ್ನು ಎರಡನೆಯ ಟಾಲೆಮಿ ಫಿಲಡೆಲ್ಫಸ್ (ಪ್ರ.ಶ.ಪೂ. 285–246) ಅಭಿವೃದ್ಧಿಪಡಿಸಿದ. ಅವನ ಹೆಸರಿನಿಂದಲೇ ನಗರವನ್ನು ಫಿಲಡೆಲ್ಫಿಯ ಎಂದು ಕರೆಯಲಾಯಿತು. ಮುಂದೆ ನಗರ ಅಭಿವೃದ್ಧಿಯಾಗಿ ಇಂದಿನ ಜಾರ್ಡನ್ ರಾಜ್ಯದ ರಾಜಧಾನಿ ಅಮ್ಮಾನ್ ಎಂದು ಪ್ರಸಿದ್ಧವಾಗಿದೆ. (ವಿ.ಜಿ.ಕೆ.)

**ಫಿಲಿಪೈನ್ಸ್:** ಏಷ್ಯದ ಆಗ್ನೇಯ ತೀರದಿಂದ ಸು. 800 ಕಿಮೀ ದೂರದಲ್ಲಿ ಪೆಸಿಫಿಕ್ ಸಾಗರದಲ್ಲಿರುವ ದ್ವೀಪಸ್ತೋಮದಲ್ಲಿ ಸು. 7,100 ದ್ವೀಪಗಳಿವೆ. ಇವು ಉ. ಅ. $4^0 40'$–$21^0$ $115^0$–$130^0$ ಪೂ.ರೇ. ನಡುವೆ ಹರಡಿವೆ. ಫಿಲಿಪೈನ್ಸ್‌ನ ಪಶ್ಚಿಮದಲ್ಲಿ ದಕ್ಷಿಣ ಚೀನ ಸಮುದ್ರ, ಪೂರ್ವದಲ್ಲಿ ಪೆಸಿಫಿಕ್‍ಸಾಗರ, ದಕ್ಷಿಣದಲ್ಲಿ ಸೆಲೆಬೀಸ್ ಸಮುದ್ರ ಇವೆ. ಫಿಲಿಪೈನ್ಸ್‌ನ ಒಟ್ಟು ವಿಸ್ತೀರ್ಣ 2,99,404 ಚ.ಕಿಮೀ. ಜನಸಂಖ್ಯೆ 9,26,81,453 (2009). ಅಧಿಕೃತ ರಾಜಧಾನಿ ಕೇಸಾನ್ ನಗರವಾದರೂ ಮನಿಲ ಆಡಳಿತ ಕೇಂದ್ರವಾಗಿ ಮುಂದುವರಿದಿದೆ. ಎರಡು ನಗರಗಳೂ ಲೂಝಾನ್ ದ್ವೀಪದಲ್ಲಿ ಪಕ್ಕಪಕ್ಕದಲ್ಲಿವೆ.




ಮೇಲ್ಮೈಲಕ್ಷಣ: ಫಿಲಿಪೈನ್ಸ್ ಸಮಭಾಜಕ ವೃತ್ತಕ್ಕೆ ಉತ್ತರದಿಂದ ದಕ್ಷಿಣಕ್ಕೆ ಸು. 1843 ಕಿಮೀ ಪೂರ್ವದಿಂದ ಪಶ್ಚಿಮಕ್ಕೆ ಸು. 1,100 ಕಿಮೀ ಹರಡಿವೆ. ದ್ವೀಪಗಳ ನಡುವೆ ವಿಸ್ತಾರವಾದ ಹಲವು ಸಮುದ್ರಗಳಿವೆ. ಇವುಗಳ ಪೈಕಿ ಸೂಲೂ, ಮಿಂಡನಾವೊ, ವಿಸೈಯನ್, ಸೀಬುಯಾನ್, ಸಾಮಾರ್ ಮುಖ್ಯವಾದವು. ದ್ವೀಪಗಳ ತೀರಗಳು ಡೊಂಕಾಗಿವೆ. ಮನಿಲ ಕೊಲ್ಲಿ ಲಿಂಗಾಯೆನ್ ಖಾರಿ, ಲೇಟೀ ಖಾರಿ, ಇಲೀಗನ್ ಕೊಲ್ಲಿ, ದಾವೌ ಕೊಲ್ಲಿ, ಮುಂತಾದವುಗಳಲ್ಲಿ ಉತ್ತಮ ರೇವುಗಳಿವೆ. ದ್ವೀಪಸ್ತೋಮದ ನಡುವೆ ಹಾಗೂ ದಕ್ಷಿಣ ದ್ವೀಪಗಳ ಅಂಚಿನಲ್ಲಿ ಹವಳದ ದಿಬ್ಬಗಳಿವೆ. ದಕ್ಷಿಣದ ಕಡಲಂಚು ಮತ್ತು ಉತ್ತರ, ಪೂರ್ವ, ಪಶ್ಚಿಮ ದ್ವೀಪಗಳ ನಡುವಣ ಕಡಲ್ಗಾಲುವೆಗಳು, ಮಿಂಡನಾವೋ ದ್ವೀಪಗಳ ನಡುವಣ ಕಡಲ್ಗಾಲುವೆಗಳು ಬಹು ಆಳವಾಗಿವೆ. ಮಿಂಡನಾವೋ ದ್ವೀಪದ ಉತ್ತರ ತೀರದ ಕಡಲ ಮಡುವಿನ ಆಳ 1,353 ಮೀ. ಪ್ರಪಂಚದ ಆಳವಾದ ಸಮುದ್ರ ಭಾಗಗಳಲ್ಲಿ ಇದೂ ಒಂದು. ಫಿಲಿಪೈನ್ಸ್‌ನಲ್ಲಿ 1,03,475 ಚ.ಕಿಮೀ ವಿಸ್ತೀರ್ಣದ ದ್ವೀಪದಿಂದ (ಲೂಝಾನ್) ಹಿಡಿದು, ಬಂಡೆಗಳಿಂದ ಕೂಡಿದ ಕಿರುಭೂಪ್ರದೇಶಗಳವರೆಗೆ ದ್ವೀಪಗಳಿವೆ. ಒಟ್ಟು ದ್ವೀಪಗಳ ಪೈಕಿ 2,773ಕ್ಕೆ ಮಾತ್ರ ಹೆಸರುಗಳಿವೆ. 462 ದ್ವೀಪಗಳು ತಲಾ 2.59 ಚ.ಕಿಮೀ ಉಳ್ಳವು. 730 ದ್ವೀಪಗಳಲ್ಲಿ ಮಾತ್ರ ಜನರು ವಾಸಿಸುತ್ತಾರೆ. ಅನೇಕ ದ್ವೀಪಗಳು ಅಗ್ನಿಪರ್ವತಗಳಿಂದ ಕೂಡಿವೆ.

ಫಿಲಿಫೈನ್ಸ್ ದ್ವೀಪಗಳನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು; 1. ಲೂಜಾನ್ ಗುಂಪು; ಲೂಜಾನ್. ಮಿಂಡೋರೋ ಮತ್ತು ಅವುಗಳ ಸಮೀಪದ ದ್ವೀಪಗಳು ಉತ್ತರದ ಈ ದ್ವೀಪಗುಚ್ಛಕ್ಕೆ ಸೇರಿವೆ. 2. ವಿಸ್ಸೆಯನ್ ಗುಂಪು: ಇದರಲ್ಲಿ ಬೋಹಾಲ್, ಸೇಬು, ಲೇಟೀ, ಮಾಸ್ಬಾಟೀ, ನೇಗ್ರೋಸ್, ಪಲಾವನ್, ಪನ್ಯೆ ಮತ್ತು ಸಾಮಾರ್ ಸೇರಿವೆ. 3. ಮಿಂಡನಾವೋ ಗುಂಪು; ದಕ್ಷಿಣ ಭಾಗದಲ್ಲಿರುವ ಈ ಗುಂಪಿನಲ್ಲಿ ಮಿಂಡನಾವೋ ಮತ್ತು ಸೂಲೂ ದ್ವೀಪಸ್ತೋಮ ಸೇರಿವೆ.

ಫಿಲಿಫೈನ್ಸ್ ದ್ವೀಪಗಳ ಪ್ರದೇಶ ಪಶ್ಚಿಮ ಪೆಸಿಫಿಕ್ ಸಾಗರದ ಅಗ್ನಿಪರ್ವತಗಳ ಶ್ರೇಣಿಗೆ ಸೇರಿದೆ, ಬಹುತೇಕ ದ್ವೀಪಗಳಲ್ಲಿ ಕರಾವಳಿಗೆ ತೀರ ಹತ್ತಿರದಲ್ಲೇ ಪರ್ವತಗಳು ಹಬ್ಬಿವೆ. ನದಿಗಳು ಸಾಮಾನ್ಯವಾಗಿ ಉತ್ತರಕ್ಕೆ ಹರಿಯುತ್ತವೆ. ದ್ವೀಪಗಳಲ್ಲಿ ಹಲವಾರು ಸರೋವರಗಳಿವೆ. ಪರ್ವತಶ್ರೇಣಿಗಳು ಹಾಗೂ ಶಿಖರಗಳಲ್ಲಿ ಪ್ರಧಾನವಾದವು ಇವು. ಲೂಜ಼ಾನ್ ದ್ವೀಪದ ಈಶಾನ್ಯದಲ್ಲಿ ಹಬ್ಬಿರುವ ಸೀಯೆರ ಮಾದ್ರೆ ಶ್ರೇಣಿ, ಆಗ್ನೇಯದ ಮಾಯೋನ್ ಅಗ್ನಿಪರ್ವತ (2,316 ಮೀ) ಉತ್ತರದಲ್ಲಿರುವ ಕಾಗ್ವ ಅಗ್ನಿಪರ್ವತ (1,197 ಮೀ) ನೇಗ್ರೋಸ್ ದ್ವೀಪದಲ್ಲಿರುವ ಕಾನ್ಲನಾನ್ ಅಗ್ನಿಪರ್ವತ (2,460 ಮೀ) ಕಮಿಗ್ವೀನ್ ದ್ವೀಪದಲ್ಲಿರುವ ಕಮಿಗ್ವೀನ್ ಅಗ್ನಿಪರ್ವತ (2,936 ಮೀ) ಮತ್ತು ಮಿಂಡನಾವೋ ದ್ವೀಪದ ಅಪೋ ಅಗ್ನಿಪರ್ವತ (2,954 ಮೀ) ಆಪೋ ಫಿಲಿಫೈನ್ಸಿನ ಅತ್ಯುನ್ನತ ಶಿಖರ.

ಮಿಂಡನಾವೋ, ಲೂಜ಼ಾನ್ ಮೊದಲಾದ ಪ್ರಮುಖ ದ್ವೀಪಗಳಲ್ಲಿ ನದಿಗಳು ರಭಸದಿಂದ ಹರಿದು ಸಾಗರವನ್ನು ಸೇರುತ್ತವೆ. ಮಳೆಗಾಲದಲ್ಲಿ ಈ ನದಿಗಳ ಪ್ರವಾಹದಿಂದ ಸುತ್ತಮುತ್ತಲ ಪ್ರದೇಶಗಳು ಮುಳುಗಡೆಯಾಗುವುದೂ ಉಂಟು. ಕೆಲವು ನದಿಗಳಲ್ಲಿ ಮಾತ್ರವೇ ಸಣ್ಣ ದೋಣಿಗಳ ಸಂಚಾರ ಸಾಧ್ಯ. ಫಿಲಿಫೈನ್ಸ್‌ನ ಅತ್ಯಂತ ಉದ್ದವಾದ ನದಿ ಕಾಗುಯನ್. ಇದು ಲೂಜ಼ಾನ್ ದ್ವೀಪದ ಫಲವತ್ತಾದ ಕಣಿವೆಗಳ ಮೂಲಕ ಉತ್ತರಾಭಿಮುಖವಾಗಿ 352 ಕಿಮೀ ಹರಿದು ಪೆಸಿಫಿಕ್ ಸಾಗರವನ್ನು ಸೇರುತ್ತದೆ. ಫಿಲಿಫೈನ್ಸ್‌ನ ಇತರ ಮುಖ್ಯ ನದಿಗಳು ಲೂಜ಼ಾನ್ ದ್ವೀಪದ ಆಗ್ನೋ ಮತ್ತು ಪಾಂಪಾಂಗ ಮತ್ತು ಮಿಂಡನಾವೋ ದ್ವೀಪದ ಆಗೂಸಾನ್. ಫಿಲಿಫೈನ್ಸಿನ ಅತ್ಯಂತ ದೊಡ್ಡ ಸರೋವರ ಮನಿಲ ನಗರದ ಆಗ್ನೇಯಕ್ಕಿರುವ ಲಗೂನ ದಬೈ. ಮಿಂಡನಾವೋ ದ್ವೀಪದಲ್ಲಿ ಲನಾವು ಮತ್ತು ಮೇಯೀನಿಟ್ ಸರೋವರಗಳು ಮುಖ್ಯವಾದವು.

ವಾಯುಗುಣ: ಮಧ್ಯ ಅಮೆರಿಕದಲ್ಲಿರುವಂತೆ ಕಡಲ ನೆರೆಯ ಹಾಗೂ ಉಷ್ಣವಲಯದ ವಾಯುಗುಣ ಇಲ್ಲಿಯದು. ಮಳೆಗಾಲ, ಬೇಸಗೆಕಾಲ ಹೀಗೆ ಎರಡು ಪ್ರಧಾನ ಋತುಗಳಿವೆ. ಮಳೆ ಅಧಿಕ. ವರ್ಷದ ಉಷ್ಣತೆಯಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ. ಸರಾಸರಿ ವಾರ್ಷಿಕ ಉಷ್ಣತೆ ಸಾಮಾನ್ಯವಾಗಿ $38^{0}$ಸೆ. ಗಿಂತ ಮೇಲೆ ಹೋಗುವುದಿಲ್ಲ. $21^{0}$ಸೆ. ಗಿಂತ ತಗ್ಗುವುದಿಲ್ಲ.

ಮಳೆಗಾಲ ಜೂನ್‌ನಿಂದ ನವೆಂಬರ್ ವರೆಗೆ. ಸಾಗರದಿಂದ ಬರುವ ಮಳೆಯ ಮೋಡಗಳನ್ನು ಬೆಟ್ಟಗಳು ತಡೆಯುವುದರಿಂದ ಕಡಲತೀರದ ತಗ್ಗುಪ್ರದೇಶಗಳಲ್ಲಿ ಮೇಲ್ನಾಡಿಗಿಂತ ಮಳೆ ಅಧಿಕ. ವಾರ್ಷಿಕ ಸರಾಸರಿ ಮಳೆ 127 – 357 ಸೆಂಮೀ. ಆಗಸ್ಟ್—ಅಕ್ಟೋಬರ್‌ನಲ್ಲಿ ಪನ್ಯೆ ದ್ವೀಪದ ಉತ್ತರದಲ್ಲಿ, ಹೆಚ್ಚಾಗಿ ಮನಿಲದ ಉತ್ತರದ ಕಡೆಯ ದ್ವೀಪಭಾಗಗಳಲ್ಲಿ ಪ್ರಬಲ ಚಂಡಮಾರುತುಗಳು ಬೀಸುತ್ತವೆ. ಅವುಗಳಿಂದ ಅಗಾಧ ಅನಾಹುತಗಳಾಗುತ್ತವೆ. ಅನೇಕ ದ್ವೀಪಗಳು ಭಾರಿ ಭೂಕಂಪಗಳಿಗೂ ಒಳಗಾಗುತ್ತಿರುತ್ತವೆ. ಹೆಚ್ಚು ಭೂಕಂಪಗಳಾಗುವುದು ಮಿಂಡನಾವೋ ದ್ವೀಪದಲ್ಲಿ.

ಸಸ್ಯ ಹಾಗೂ ಪ್ರಾಣಿ ಸಂಪತ್ತು: ಫಿಲಿಫೈನ್ಸ್‌ನ ಸಸ್ಯಗಳು ಪ್ರಧಾನವಾಗಿ ಮಲಯ ಪರ್ಯಾಯ ದ್ವೀಪವನ್ನು ಹೋಲುತ್ತವೆ. ಚೀನ ಮತ್ತು ಆಸ್ಟ್ರೇಲಿಯದಲ್ಲಿ ಬೆಳೆಯುವ ಸಸ್ಯಗಳನ್ನೂ ಇಲ್ಲಿ ಕಾಣಬಹುದು. ಅರ್ಧದಷ್ಟು ಭೂಮಿಯನ್ನು ದಟ್ಟ ಕಾಡುಗಳು ಆಕ್ರಮಿಸಿವೆ. ಕಾಡುಗಳಲ್ಲಿ ಚೌಬೀನೆಗೆ ಯೋಗ್ಯವಾದ ಸು. 3,000 ಬಗೆಯ ಮರಗಳಿವೆ. ಮಹಾಗನಿ,ಪೈನ್, ಕರಿ ಮರ, ಸಿಡಾರ್, ಆಲ ಮೊದಲಾದವು ಬೆಳೆಯುತ್ತವೆ. ಕರಾವಳಿಯಲ್ಲಿ ತೆಂಗು ಅಧಿಕ. ಬಿದಿರು ಮೆಳೆಗಳು ದಟ್ಟವಾಗಿವೆ. ಅರಣ್ಯಗಳಲ್ಲಿ ಸು. 10,000 ಬಗೆಯ ಹೂಗಿಡಗಳಿವೆ.

ಫಿಲಿಫೈನ್ಸಿನ ವನ್ಯಮೃಗಗಳು ಕೋಡಗ, ಕಾಡುಹಂದಿ, ಜಿಂಕೆ, ಕಸ್ತೂರಿಮೃಗ, ಟಮಾರು ಎಂಬ ಗಿಡ್ಡುಕೋಣ. ನದಿಗಳಲ್ಲಿ 5 ಮೀ ವರೆಗೂ ಉದ್ದವಿರುವ ಮೊಸಳೆಗಳಿವೆ. ಸರ್ಪದಲ್ಲಿ ನಾನಾ ಬಗೆ. ಭಾರಿ ಹೆಬ್ಬಾವುಗಳು 10 ಮೀ ಗಳಷ್ಟು ಉದ್ದವಿರುತ್ತವೆ. ಪಾರಿವಾಳ, ಗಿಳಿ, ಕೊಕ್ಕರೆ ಹಾಗೂ ಇತರ ಜಲಚರ ಪಕ್ಷಿಗಳೂ ಸೇರಿ ಸು. 750 ಬಗೆಯ ಹಕ್ಕಿಗಳಿವೆ. ಕಡಲ ತೀರಗಳಲ್ಲಿ ತಿಮಿಂಗಿಲ, ಸು. 2,000 ಬಗೆಯ ಮೀನುಗಳು ಉಂಟು. ಮೀನುಗಳಲ್ಲಿ ಸಾರ್ಡೈನ್, ಹೆರ್ರಿಂಗ್ ಮತ್ತು ಟೂನಾ ಜಾತಿಯ ಮೀನುಗಳು, ಚಿಪ್ಪು ಮೀನುಗಳು, ಏಡಿ, ಸಿಂಪಿ ಅಧಿಕವಾಗಿವೆ. ದ್ವೀಪಸ್ತೋಮದ ದಕ್ಷಿಣಭಾಗದ ದ್ವೀಪಗಳ ಕಡಲ ಜಲದಲ್ಲಿ ಸ್ಪಂಜು ಯಥೇಚ್ಛವಾಗಿ ಬೆಳೆದಿವೆ. ಸೂಲೂ ಪರ್ಯಾಯ ದ್ವೀಪದ ಬಳಿ ಕಡಲ ತಳದಲ್ಲಿ ಹವಳದ ಚಿಪ್ಪುಗಳಿವೆ.

ಆರ್ಥಿಕತೆ: ಗ್ರಾಮಾಂತರ ಪ್ರದೇಶಗಳಲ್ಲಿ ಜನರು ತೆಂಗಿನಗರಿ ಮತ್ತು ಬಿದಿರಿನಿಂದ ನಿರ್ಮಿತವಾದ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ನೆಲಕ್ಕೂ ಬಿದಿರಿನ ಸಿಬಿರುಗಳನ್ನು ಹಾಕಿರುತ್ತಾರೆ. ಬಿದರಿನ ತಡಿಕೆಗಳಿಂದ ಗೋಡೆಗಳು ರಚಿತವಾಗಿವೆ. ಅನ್ನ ಮತ್ತು ಮೀನು ಜನರ ಮುಖ್ಯ ಆಹಾರ. ನಗರಗಳಲ್ಲಿ ಆಧುನಿಕ ಕಟ್ಟಡಗಳಿವೆ. ಇಲ್ಲಿಯ ಜನಜೀವನ ಆಧುನಿಕವಾದದ್ದು. ಫಿಲಿಫೈನ್ಸ್ ಜನರ ಪ್ರಧಾನ ಕಸಬುಗಳು ಬೇಸಾಯ, ಮೀನುಗಾರಿಕೆ, ವ್ಯಾಪಾರ. ಬೇಸಾಯ ಮತ್ತು ಸರಕುಸಾಗಣಿಕೆಗೆ ಎಮ್ಮೆಗಳನ್ನು ಉಪಯೋಗಿಸುತ್ತಾರೆ.

ಫಿಲಿಫೈನ್ಸ್‌ನ ಪ್ರಮುಖ ಪಟ್ಟಣಗಳು ಎಂದರೆ ಮನಿಲ, ಕೇಸಾನ್, ಡಾವಾ, ಸೇಬೂ, ಕ್ಯಾಲವೂಕಾನ್, ಜ಼ಾಂಬವಾಂಗ, ಈಲವೀಲೊ, ಪಾಸ್ಯೆ, ಕಾಗಯಾನ್ ದ ಓರೋ, ಬಾಕೋಲಾಡ್, ಆಂಘೇಲೇಸ್, ಓಲಾಂಗ ಪೋ, ಬಟೂವಾನ್, ಬಸೀಲಾನ್, ಬಟಾಂಗಾಸ್, ಕಾಡಿಜ಼್, ಇಲೀಗಾನ್, ಸ್ಯಾನ್ ಪಾಬ್ಲೋ ಮತ್ತು ಕಾಬನಟ್ವಾನ್.

ವ್ಯವಸಾಯ: ಪರ್ವತಗಳ ತಪ್ಪಲುಗಳು ಬೇಸಾಯಕ್ಕೆ ಯೋಗ್ಯವಾಗಿವೆ. ಮುಖ್ಯ ಬೆಳೆಗಳು ಬತ್ತ, ಮುಸುಕಿನ ಜೋಳ, ತೆಂಗು, ಕಬ್ಬು, ಸೆಣಬು, ಗೆಣಸು, ಬಾಳೆ, ಮಾವು ಮತ್ತು ನಿಂಬೆ ಜಾತಿಯ ಹಣ್ಣುಗಳು. ತೆಂಗಿನ ಬೆಳೆಯಲ್ಲಿ ಫಿಲಿಫೈನ್ಸ್‌ಗೆ ಪ್ರಧಾನ ಸ್ಥಾನವಿದೆ. ರಾಷ್ಟ್ರೀಯ ವ್ಯವಸಾಯ ಯೋಜನೆಯಲ್ಲಿ ಬತ್ತವನ್ನು ಹೆಚ್ಚಾಗಿ ಬೆಳೆಯಲು ಪ್ರಾಮುಖ್ಯತೆ ನೀಡಲಾಗಿದೆ. ಮೀನುಗಾರಿಕೆಗೆ ವ್ಯವಸಾಯದಷ್ಟೇ ಪ್ರಾಮುಖ್ಯವಿದೆ. ಸಮುದ್ರ, ಸರೋವರ ಮತ್ತು ನದಿಗಳಲ್ಲಿ ಮತ್ಸ್ಯಸಂಪತ್ತು ಅಧಿಕವಾಗಿದೆ.

ಖನಿಜ ಸಂಪತ್ತು: ಫಿಲಿಫೈನ್ಸಿನ ಖನಿಜಸಂಪತ್ತು ಅಧಿಕ. ಪ್ರಮುಖ ಖನಿಜಗಳು ತಾಮ್ರ, ಕಬ್ಬಿಣದ ಅದಿರು, ಚಿನ್ನ, ಮ್ಯಾಂಗನೀಸ್, ಕ್ರೋಮೈಟ್, ಸುಣ್ಣ ಮತ್ತು ಕಟ್ಟಡಕಲ್ಲು. ಕೆಲವು ದ್ವೀಪಗಳಲ್ಲಿ ಕಲ್ಲಿದ್ದಲು ಗಣಿಗಳಿವೆ. ಸೇಬೂ, ಲೇಟೀ ಮತ್ತು ಲೂಜ಼ಾನ್ ದ್ವೀಪಗಳಲ್ಲಿ ತೈಲ ದೊರಕುತ್ತದೆ. ಲೂಜ಼ಾನ್, ಮಿಂಡನಾವೋ ಮತ್ತು ಮಾಸ್ಬಾಟೀ ದ್ವೀಪಗಳಲ್ಲಿ ಚಿನ್ನವನ್ನು ಉತ್ಪಾದಿಸಲಾಗುತ್ತದೆ. ರಾಜ್ಯದಲ್ಲಿ ತಾಮ್ರದ ನಿಕ್ಷೇಪಗಳೂ ಇವೆ.

ಕೈಗಾರಿಕೆ ಮತ್ತು ವಾಣಿಜ್ಯ: ಮೀನು, ಹಣ್ಣು ಮತ್ತು ಆಹಾರ ವಸ್ತುಗಳ ಡಬ್ಬೀಕರಣ, ಪೆಟ್ರೋಲ್ ಶುದ್ಧೀಕರಣ, ಜವಳಿ, ಕಾಗದ, ರಬ್ಬರ್, ಸರಕು, ಔಷದ ಹಾಗೂ ರಾಸಾಯನಿಕ ವಸ್ತುಗಳ ತಯಾರಿಕೆ ಇವು ಪ್ರಮುಖ ಕೈಗಾರಿಕೆಗಳು. ಫಿಲಿಫೈನ್ಸ್‌ನಿಂದ ಕೊಬ್ಬರಿ, ಕೊಬ್ಬರಿ ಎಣ್ಣೆ, ಸಕ್ಕರೆ ಹೆಚ್ಚಾಗಿ ರಫ್ತಾಗುತ್ತವೆ.

ಜನ: ಫಿಲಿಫೈನ್ಸ್ ನಿವಾಸಿಗಳಲ್ಲಿ ಬಹುಮಂದಿ ಫಿಲಿಫೀನೊ–ಮಲೇಷಿಯನ್ ಬುಡಕಟ್ಟಿನವರು. ಪ್ರ.ಶ.ಪೂ. ಸು. 200ರಿಂದ ಇವರ ಮೂಲಪುರುಷರು ಆಗ್ನೇಯ ಏಷ್ಯದಿಂದ ಈ ದ್ವೀಪಗಳಿಗೆ ವಲಸೆ ಬರಲಾರಂಭಿಸಿದರು. ಧರ್ಮ ದೃಷ್ಟಿಯಿಂದ ಇವರನ್ನು ಕ್ರೈಸ್ತರು, ಮುಸಲ್ಮಾನರು, ಸರ್ವಚೇತನ ಪಂಥದ ಆದಿವಾಸಿಗಳು ಎಂದು ವಿಂಗಡಿಸಬಹುದು. ಕ್ರೈಸ್ತ ಫಿಲಿಫಿನೋ ಮಲೇಷಿಯನ್ ಜನರು ಎಲ್ಲ ದ್ವೀಪಗಳಲ್ಲೂ ಹರಡಿಕೊಂಡಿದ್ದಾರೆ. ಮುಸಲ್ಮಾನರು ಪ್ರಧಾನವಾಗಿ ಮಿಂಡನಾವೋ ದ್ವೀಪ ಮತ್ತು ಸೂಲೂ ದ್ವೀಪಸ್ತೋಮದಲ್ಲಿ ವಾಸವಾಗಿದ್ದಾರೆ. ನಾಣ್ಯ: ಫಿಲಿಫೈನ್ಸ್‌ನ ನಾಣ್ಯ ಫಿಲಿಫೈನ್ ಪೇಸೋ. ಇದನ್ನು 100 ಸೆಂಟಾವೋಗಳಾಗಿ ವಿಭಾಗಿಸಲಾಗಿದೆ.

ಸಾರಿಗೆ ಸಂಪರ್ಕ: ಭೂ ಸಾರಿಗೆ: ಎರಡನೆಯ ಮಹಾಯುದ್ಧ ಕಾಲದಲ್ಲಿ ಜಪಾನಿ ದಾಳಿಗಳಿಂದ ರೈಲು ಮಾರ್ಗಗಳಿಗೆ ಭಾರಿ ನಷ್ಟವಾಯಿತು. ಯುದ್ಧಾನಂತರ ರೈಲ್ವೆಯನ್ನು ಪುನರ್ವ್ಯವಸ್ಥೆಗೊಳಿಸಲಾಯಿತು ರೈಲು ಮಾರ್ಗಗಳು ಪ್ರಧಾನವಾಗಿ ಲೂಜ಼ಾನರ ದ್ವೀಪದಲ್ಲಿವೆ. ಪನ್ಯೆ ದ್ವೀಪದಲ್ಲಿ ಕೆಲವು ಕಿಮೀ ರೈಲುಮಾರ್ಗಗಳಿವೆ. 1990 ರಲ್ಲಿ 478 ಕಿಮೀ ಉದ್ದದ ರೈಲುಮಾರ್ಗಗಳಿದ್ದುವು. ಮನಿಲದಿಂದ ಸ್ಯಾನ್ ಫರ್ನಾಂಡೋ, ಲಾಯೂನಿಯನ್ ಲೆಗಾಸ್ಪೀ ಮತ್ತು ಆಲ್‌ಬೈಗೆ ರೈಲುಮಾರ್ಗಗಳಿವೆ.

1900 ರಲ್ಲಿ 22,238 ಕಿಮೀ ಸರ್ವಋತು ರಸ್ತೆಗಳಿದ್ದುವು ಫಿಲಿಫೈನ್ಸಿನಲ್ಲಿ ಬಸ್ಸು ಹೆಚ್ಚು ಸಂಚರಿಸುತ್ತವೆ.

ವಾಯುಸಾರಿಗೆ: ಒಳನಾಡಿನಲ್ಲೂ ಹೊರದೇಶಗಳಿಗೂ ವಿಮಾನ ವ್ಯವಸ್ಥೆಯಿದೆ. ಮನಿಲ, ಸೇಬೂ ದ್ವೀಪದ ಮ್ಯಾಕ್‌ಟನ್ ಮತ್ತು ಜಾಂಬವಾಂಗಗಳಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ. ಮನಿಲದಿಂದ ಅಮೆರಿಕ, ಯುರೋಪ್, ಏಷ್ಯ, ಆಸ್ಟ್ರೇಲಿಯ ಖಂಡಗಳಿಗೆ ನೇರ ವಿಮಾನ ಸಂಚಾರವಿದೆ.

ಸಾಗರ ಸಾರಿಗೆ: ಫಿಲಿಫೈನ್ ದ್ವೀಪಗಳ ನಡುವೆ ಹಡಗುಗಳ ಸಂಚಾರ ಹೆಚ್ಚಾಗಿದೆ. ಪ್ರಯಾಣಿಕರ ಹಾಗೂ ಸರಕುಗಳ ಸಾಗಾಟದಲ್ಲಿ ನೌಕೆಗಳ ಪಾತ್ರ ಗಣನೀಯವಾದದ್ದು. ಫಿಲಿಫೈನ್ಸ್‌ನಲ್ಲಿ 97 ರಾಷ್ಟ್ರೀಯ ಹಾಗೂ 502 ಪೌರ ಬಂದರುಗಳಿವೆ. ಅಮೆರಿಕ, ಹಾಂಗ್‌ಕಾಂಗ್, ಜಪಾನ್ ಮತ್ತು ಪ್ರಪಂಚದ ಇತರ ಕಡೆಗಳಿಗೆ ಇಲ್ಲಿಯ ಪ್ರಮುಖ ಬಂದರುಗಳಿಂದ ಹಡಗುಗಳ ಸಂಚಾರವಿದೆ. (ವಿ.ಜಿ.ಕೆ.)

**ಫೀನಿಕ್ಸ್ ದ್ವೀಪಗಳು:** ಪೆಸಿಫಿಕ್ ಸಾಗರದ ಪಶ್ಚಿಮ ಮಧ್ಯಭಾಗದಲ್ಲಿರುವ ಎಂಟು ಚಿಕ್ಕ ಹವಳದ ಅಡಲು ಕೂಟ. ಹವಾಯಿಯಿಂದ ನೈರುತ್ಯಕ್ಕೆ 2650 ಕಿಮೀ ದೂರದಲ್ಲಿದೆ. ದ.ಅ. $4^{0}$ ಪೂ.ರೇ $172^{0}$ ಮೇಲೆ ಇದೆ. ವಿಸ್ತೀರ್ಣ 17.6 ಕಿಮೀ. 19ನೆಯ ಶತಮಾನದಲ್ಲಿ

ಈ ದೀಪಗಳನ್ನು ಪತ್ತೆಹಚ್ಚಲಾಯಿತು. 1889ರಲ್ಲಿ ಬ್ರಿಟನ್ ಇದನ್ನು ವಶಪಡಿಸಿಕೊಂಡಿತು. ಈಗ ಈ ದ್ವೀಪ ಸಮೂಹ ಗಿಲ್‌ಬರ್ಟ್ ಮತ್ತು ಎಲ್ಲೀಸ್‌ದ್ವೀಪ ವಸಾಹತಿನ ಭಾಗವಾಗಿದ್ದು ಅಮೆರಿಕ ಮತ್ತು ಬ್ರಿಟನ್ನುಗಳ ಜಂಟಿ ನಿಯಂತ್ರಣದಲ್ಲಿದೆ. (ಡಿ.ಎಸ್.ಜಿ.)

**ಫ್ರಾನ್ಸ್:** ಅಧಿಕೃತವಾಗಿ ರೇಪಬ್ಲೀಕ್ ಫ್ರಾನ್ಸೇಸ್. ಪಶ್ಚಿಮ ಯುರೋಪಿನ ಗಣರಾಜ್ಯ. ಪಶ್ಚಿಮ ಯುರೋಪಿನಲ್ಲಿ ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ಸಮುದ್ರಗಳ ನಡುವೆ ಉ.ಅ. 42°20′–51°5′ ಮತ್ತು ಪೂ.ರೇ. 4°42′–ಪೂ.ರೇ. 8°11′ ನಡುವೆ ಹಬ್ಬಿದೆ. ಹೆಚ್ಚು ಕಡಿಮೆ ಷಟ್ಕೋನಾಕೃತಿಯಲ್ಲಿರುವ ಈ ದೇಶದ ಉತ್ತರದಲ್ಲಿ ಇಂಗ್ಲಿಷ್ ಕಡಲ್ಗಾಲುವೆ, ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗ್, ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಬಿಸ್ಕೇಕೊಲ್ಲಿ, ದಕ್ಷಿಣದಲ್ಲಿ ಸ್ಪೇನ್ ಮತ್ತು ಮೆಡಿಟರೇನಿಯನ್ ಸಮುದ್ರ, ಪೂರ್ವದಲ್ಲಿ ಪಶ್ಚಿಮ ಜರ್ಮನಿ, ಸ್ವಿಟ್ಜರ್ಲೆಂಡ್ ಮತ್ತು ಇಟಲಿ ಇವೆ. ಫ್ರಾನ್ಸಿನ ವಿಸ್ತೀರ್ಣ 5,43,965 ಚ.ಕಿಮೀ. ಜನಸಂಖ್ಯೆ 6,40,57,790 (2009). ರಾಜಧಾನಿ ಪ್ಯಾರಿಸ್.




ಮೇಲ್ಮೈಲಕ್ಷಣ : ಫ್ರಾನ್ಸ್ ಯುರೋಪಿನಲ್ಲೆ ಅತ್ಯಂತ ವೈವಿಧ್ಯಮಯವಾದ ಮೇಲ್ಮೈ ಲಕ್ಷಣಹೊಂದಿರುವ ದೇಶ. ಸಮುದ್ರ ಪಾತಳಿಯಿಂದ ಹಿಡಿದು ಯುರೋಪಿನ ಅತ್ಯುನ್ನತ ಶಿಖರವಾದ ಮೌಂಟ್ ಬ್ಲ್ಯಾಂಕಿನ (4,807 ಮೀ) ವರೆಗೆ ಫ್ರಾನ್ಸಿನ ನೆಲದ ಎತ್ತರದಲ್ಲಿ ವ್ಯತ್ಯಾಸಗಳಿವೆ. ದೇಶದ ಬಹುಭಾಗವನ್ನು ಪರ್ವತಗಳು ಸುತ್ತುವರಿದಿವೆ. ಉತ್ತರ ಮತ್ತು ಪಶ್ಚಿಮಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ಸೀನ್, ಲವಾರ್ ಮತ್ತು ಗರಾನ್‌ನದಿಗಳ ಬಯಲು ಫ್ರಾನ್ಸಿನ ಅರ್ಧಕ್ಕೂ ಹೆಚ್ಚು ಪ್ರದೇಶವನ್ನು ಆವರಿಸಿದೆ. ವಾಯವ್ಯದಲ್ಲಿರುವ ಬ್ರಿಟನಿ ಮತ್ತು ನಾರ್ಮಂಡಿಯಲ್ಲಿ ತಗ್ಗಾದ ಬೆಟ್ಟಗಳಿವೆ. ಈಶಾನ್ಯದಲ್ಲಿರುವ ಆರ್ಡೆನ್, ನೆರೆಯ ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗ್‌ಗಳಿಗೆ ಹಬ್ಬಿದೆ. ಪೂರ್ವದಲ್ಲಿರುವ ಪರ್ವತಗಳು ವೋಷ್‌ಜಸ ಆಲ್ಪ್ಸ್ ಮತ್ತು ಜುರಾ. ಸ್ಪೇನ್ ದೇಶದ ಕಡೆಯಲ್ಲಿರುವ ಎಲ್ಲೆಯಲ್ಲಿ ಪಿರನೀಸ್ ಪರ್ವತಶ್ರೇಣಿಗಳಿವೆ. ಆಲ್ಪ್ಸ್‌ನಂತೆ ಪಿರನೀಸ್ ಶ್ರೇಣಿಯು ಉನ್ನತವೂ ದುರ್ಗಮವೂ ಆಗಿದೆ.

ಇಲ್ಲಿಯ ನದಿಗಳ ಪೈಕಿ ಲವಾರ್, ಗರಾನ್, ಡಾರ್ಡೋನ್, ಅಡುರ್ ಇವು ಬಿಸ್ಕೇ ಕೊಲ್ಲಿಯನ್ನೂ ಸೀನ್, ಸಾಮ್ ಇಂಗ್ಲಿಷ್ ಕಡಲ್ಗಾಲುವೆಯನ್ನೂ ರೋನ್ ಮೆಡಿಟರೇನಿಯನ್ ಸಮುದ್ರವನ್ನೂ ಸೇರುತ್ತವೆ.

ವಾಯುಗುಣ : ಫ್ರಾನ್ಸಿನಲ್ಲಿ ಮೂರು ಬಗೆಯ ವಾಯುಗುಣಗಳಿವೆ. ದೇಶದ ಪಶ್ಚಿಮ ಭಾಗದ ವಾಯುಗುಣ ಸಾಗರಿಕ. ಅದರಲ್ಲಿ ಹೆಚ್ಚಿನ ವ್ಯತ್ಯಾಸವಾಗಿದೆ. ಬೇಸಗೆ ತಂಪಾಗಿರುತ್ತದೆ. ಚಳಿಗಾಲದಲ್ಲಿ ಹೆಚ್ಚಿನ ಚಳಿ ಇರುವುದಿಲ್ಲ. ಇಲ್ಲಿ ಯಥೇಚ್ಛ ಮಳೆ ಬೀಳುತ್ತದೆ. ಪೂರ್ವ ಮತ್ತು ಮಧ್ಯ ಫ್ರಾನ್ಸಿನ ಹೆಚ್ಚು ಭಾಗದ ವಾಯುಗುಣ ಖಂಡೀಯ. ಇಲ್ಲಿಯ ಬೇಸಗೆ ಪಶ್ಚಿಮದಲ್ಲಿರುವುದಕ್ಕಿಂತ ಹೆಚ್ಚು ಉಷ್ಣವಾಗಿರುತ್ತದೆ. ಚಳಿಗಾಲದಲ್ಲಿ ಚಳಿಯೂ ಹೆಚ್ಚು. ಮಳೆ ಸಾಕಷ್ಟು ಬೀಳುತ್ತದೆ. ಚಳಿಗಾಲದಲ್ಲಿ ಉನ್ನತ ಪ್ರದೇಶಗಳಲ್ಲಿ ಹಿಮ ಬೀಳುತ್ತದೆ. ನೈಋತ್ಯದ ಪರ್ವತ ಪ್ರದೇಶವನ್ನುಳಿದು ದಕ್ಷಿಣ ಫ್ರಾನ್ಸಿನಲ್ಲೆಲ್ಲ ಮೆಡಿಟರೇನಿಯನ್ ವಾಯುಗುಣವಿರುತ್ತದೆ. ಇಲ್ಲಿ ಬೇಸಗೆ ಉಷ್ಣವಾಗಿಯೂ ಚಳಿಗಾಲ ತಂಪಾಗಿಯೂ ಇರುತ್ತವೆ. ಸೀಮಿತವಾಗಿ ಮಳೆಯಾಗುತ್ತದೆ. ಸರಾಸರಿ ಉಷ್ಣತೆ ಪ್ಯಾರಿಸಿನಲ್ಲಿ 10°ಸೆ. ನೀಸ್‌ನಲ್ಲಿ 14°ಸೆ. ದೇಶದ ಮಧ್ಯ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಮಳೆ ಸಾಧಾರಣ. ಪ್ಯಾರಿಸ್ ಮತ್ತು ಮಾರ್ಸೇಲ್‌ಗಳಲ್ಲಿ 56 ಸೆಂಮೀ ನಿಂದ ಬಾರ್ಡೋ ಮತ್ತು ಲೈಯನ್ಸ್‌ನಲ್ಲಿ 79 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ. ಬ್ರಿಟನಿ, ಉತ್ತರ ಕರಾವಳಿ ಮತ್ತು ಪರ್ವತ ಪ್ರದೇಶಗಳಲ್ಲಿ ಹೆಚ್ಚು ಮಳೆಯಾಗುತ್ತದೆ. ಅಲ್ಲಿ 140 ಸೆಂಮೀ ಮಳೆ ಆಗುತ್ತದೆ.

ಸಸ್ಯ ಸಂಪತ್ತು : ಫ್ರಾನ್ಸಿನ ಸಸ್ಯ ಸಂಪತ್ತು ವೈವಿಧ್ಯಮಯವಾದುದ್ದು. ಉತ್ತರ ಮತ್ತು ಮಧ್ಯ ಭಾಗಗಳಲ್ಲಿ ಓಕ್, ಬೀಚ್, ಪೈನ್, ಬರ್ಚ್ ಪಾಪ್ಲರ್ ಮತ್ತು ವಿಲೋ ವೃಕ್ಷಗಳ ಕಾಡುಗಳಿವೆ. ಮಧ್ಯದ ಪರ್ವತ ಸಮುದಾಯ ಪ್ರದೇಶದಲ್ಲಿ ಚೆಸ್‌ನಟ್ ಮತ್ತು ಬೀಚ್ ಮರಗಳು ಹೆಚ್ಚು. ಆಲ್ಪ್ಸ್ ಪರ್ವತಗಳ ಎಲ್ಲೆಯಲ್ಲಿ ಜ್ಯೂನಿಪರ್ ಮತ್ತು ಡ್ವಾರ್ಫ್ ಪೈನ್ ಮರಗಳೂ ದಕ್ಷಿಣದಲ್ಲಿ ಪೈನ್ ಹಾಗೂ ವಿವಿಧ ಓಕ್ ಮರಗಳೂ ಇವೆ. ಪ್ರಾವೆನ್ಸ್‌ನಲ್ಲಿ ನೀಲಗಿರಿ ಮತ್ತು ಡ್ವಾರ್ಫ್ ಪೈನ್ ಮರಗಳು ಹೇರಳವಾಗಿವೆ. ಮೆಡಿಟರೇನಿಯನ್ ಸಮುದ್ರತೀರದ ಪ್ರದೇಶದಲ್ಲಿ ದ್ರಾಕ್ಷಿಬಳ್ಳಿ, ಆಲಿವ್, ಹಿಪ್ಪನೇರಳೆ ಮತ್ತು ಅಂಜೂರ ವೃಕ್ಷಗಳು ಹಾಗೂ ಲಾರೆಲ್ ಗುಲ್ಮ ಮತ್ತು ಮಾಕ್ವಿಸ್ ಕುರುಚಲು ಗಿಡಳು ಬೆಳೆಯುತ್ತವೆ.

ಧರ್ಮ : ಫ್ರಾನ್ಸಿನ ನಿವಾಸಿಗಳಲ್ಲಿ ಶೇ. 90 ರಷ್ಟು ಮಂದಿ ರೋಮನ್ ಕೆಥೊಲಿಕರು ಶೇ. 1 ಪ್ರಾಟೆಸ್ಟಂಟರು ಶೇ. 1 ಯಹೂದ್ಯರು ಶೇ 1 ಮುಸ್ಲಿಮರು ಸ್ವತಂತ್ರ ವಿಚಾರಿಗಳ ಅನೇಕ ಸಂಸ್ಥೆಗಳು ಇಲ್ಲಿವೆ. ಯಾವ ಧರ್ಮದಲ್ಲೂ ನಂಬಿಕೆಯಿಲ್ಲದವರು ಮತ್ತು ನಾಸ್ತಿಕವಾದಿ ಯುವಕರ ಸಂಖ್ಯೆಯೂ ಗಮನಾರ್ಹವಾಗಿದೆ. ಒಟ್ಟು ಜನಸಂಖ್ಯೆಯ ಶೇ. 75 ಜನರು ನಗರವಾಸಿಗಳು.

ಭಾಷೆ : ರಾಷ್ಟ್ರಭಾಷೆಯಾದ ಫ್ರೆಂಚಿನ ಬಳಕೆ ಸಾಮಾನ್ಯ. ದೇಶದ ಎಲ್ಲೆಡೆ ಕಲಿಸಲಾಗುತ್ತದೆ. ಗ್ರಾಮ ಪ್ರದೇಶಗಳಲ್ಲಿ ಉಪಭಾಷೆಗಳು ಬಳಕೆಯಲ್ಲಿವೆ. ದೇಶದ ಉತ್ತರ ಮತ್ತು ಪೂರ್ವ ಪ್ರದೇಶಗಳಲ್ಲಿ ಫ್ಲೆಮಿಷ್ ಮತ್ತು ಅಲ್ಸೇಷಸ್ ದಕ್ಷಿಣ ಪ್ರಾವೆನ್ಸ್‌ನಲ್ಲಿ ಕಾರ್ಸ್ ಮತ್ತು ಕ್ಯಾಟರಾನ್ ಭಾಷೆಗಳು ಕೇಳುಬರುತ್ತವೆ. ಬ್ರಿಟನಿನಲ್ಲಿ ಬಳಕೆಯಲ್ಲಿರುವ ಬ್ರಿಟನ್ ಮತ್ತು ನೈಋತ್ಯದಲ್ಲಿ ಬಳಕೆಯಲ್ಲಿರುವ ಬಾಸ್ಕ್ ಮೊದಲಿನಿಂದಲೂ ಇರುವ ಭಾಷೆಗಳು. ಅವುಗಳಲ್ಲಿ ಶಿಕ್ಷಣ ದೊರೆಯುವಂತಾಗಬೇಕು, ಫ್ರೆಂಚಿಗಿರುವ ಸ್ಥಾನ ಅವಕ್ಕೂ ದೊರಕಬೇಕು ಎನ್ನುವ ಬೇಡಿಕೆಗಳಿವೆ.

ಆರ್ಥಿಕತೆ: ಸಮತೋಲನ ಸಂಪನ್ಮೂಲಗಳ ದೃಷ್ಟಿಯಿಂದ ಫ್ರಾನ್ಸ್ ಯುರೋಪಿನ ಅದೃಷ್ಟ ಶಾಲಿ ದೇಶಗಳಲ್ಲೊಂದು. ಅನುಕೂಲಕರ ವಾಯುಗುಣ, ಫಲವತ್ತಾದ ವಿಶಾಲ ಮೈದಾನಗಳು, ಪರಂಪರೆಯಿಂದ ಬಂದ ವ್ಯವಸಾಯ ಕೌಶಲ್ಯ ಇವು ಕೃಷಿಯ ಅಭ್ಯುದಯಕ್ಕೆ ಕಾರಣವಾಗಿವೆ. ಕಬ್ಬಿಣದ ಅದುರಿನ ವ್ಯಾಪಕ ನಿಕ್ಷೇಪಗಳು, ಜಲ ಮತ್ತು ಶಾಖ ವಿದ್ಯುತ್ ಉತ್ಪಾದನ ಕೇಂದ್ರಗಳ ಜಾಲ, ಉತ್ತಮ ಸಾರಿಗೆ ವ್ಯವಸ್ಥೆ, ಉನ್ನತ ಮಟ್ಟದ ಸಾಂಪ್ರದಾಯಿಕ ಕೈಗಾರಿಕಾ ಕೌಶಲ ಇವು ಫ್ರಾನ್ಸಿನ ಸಂಕೀರ್ಣ ಕೈಗಾರಿಕೆಗಳು ಆಧುನಿಕ ರೀತಿಯಲ್ಲಿ ತೀವ್ರಗತಿಯಿಂದ ಬೆಳೆಯಲು ನೆರವಾಗಿವೆ.

ಕೃಷಿ : ದೇಶದ ಆರ್ಥಿಕತೆಯಲ್ಲಿ ಕೃಷಿಯ ಪಾತ್ರ ಪ್ರಧಾನವಾದುದ್ದು. ಯುರೋಪಿನ ಆಹಾರೋತ್ಪಾದನೆಯಲ್ಲಿ ಗೋದಿ ಮುಖ್ಯ ಆಹಾರಧಾನ್ಯ ಬಾರ್ಲಿ ಮತ್ತು ಓಟ್ಸ್ ಅನಂತರ ಬರುತ್ತವೆ. ರೋನ್ ನದೀಮುಖದ, ನೀರಾವರಿ ಸೌಲಭ್ಯವಿರುವ, ನೆರೆಮಣ್ಣಿನ ಪ್ರದೇಶದಲ್ಲಿ ಬತ್ತ ಬೆಳೆಯುವರು. ಇದರಿಂದ ಮೊದಲು ನೈಋತ್ಯಕ್ಕೆ ಸೀಮಿತವಾಗಿದ್ದ ಮುಸುಕಿನ ಜೋಳದ ಬೆಳೆ ಈಗ ಎಲ್ಲ ಕಡೆಗೂ ಹಬ್ಬಿದೆ. ದಕ್ಷಿಣಾರ್ಧದಲ್ಲಿ ಮತ್ತು ವಿಶೇಷವಾಗಿ ಮೆಡಿಟರೇನಿಯನ್ ಸಮುದ್ರತೀರದ ಪ್ರದೇಶಗಳಲ್ಲಿ ದ್ರಾಕ್ಷಿ ಬೆಳೆಯುತ್ತದೆ. ಮದ್ಯ ತಯಾರಿಕೆ, ರೇಷ್ಮೆಯ ವ್ಯವಸಾಯ ಗಮನಾರ್ಹವಾಗಿದೆ, ಹಣ್ಣು ಮತ್ತು ತರಕಾರಿ ಬೆಳೆಗಳು ಪ್ರಾಮುಖ್ಯಗಳಿಸುತ್ತಿವೆ. ಹಣ್ಣುಗಳಲ್ಲಿ ಸೇಬು, ಏಪ್ರಿಕಾಟ್, ಪೀಚ್, ಪ್ಲಮ್, ಪೇರು ಮತ್ತು ಚೆರಿ ಮುಖ್ಯವಾದವು. ಟೊಮಾಟೋ, ಈರುಳ್ಳಿ, ಕೋಸು, ಕಾಲಿಫ್ಲವರ್, ಬಟಾಣಿ, ಫ್ರೆಂಚ್ ಬೀನ್ಸ್ ಮುಂತಾದ ತರಕಾರಿಗಳು ಬೆಳೆಯುತ್ತವೆ. ಸಕ್ಕರೆಗಡ್ಡೆ, ಬಟಾಟೆ, ಮೇವಿನ ಬೀಟು ಮತ್ತು ಮೇವಿನ ಟರ್ನಿಪ್ ಮುಖ್ಯ ಗಡ್ಡೆಗಳು. ನೈಋತ್ಯ ಪ್ರದೇಶ ಮತ್ತು ಅಲ್ಸೇಸ್‌ನಲ್ಲಿ ಹೊಗೆಸೊಪ್ಪು ಬೆಳೆಯುತ್ತದೆ. ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಫ್ರಾನ್ಸ್ ಬಹಳ ಪ್ರಸಿದ್ಧವಾಗಿದೆ. ಅವುಗಳ ಮತ್ತು ಔಷಧಿಗಳ ತಯಾರಿಕೆಗೆ ಅಗತ್ಯವಾದ ಗಿಡಗಳನ್ನು ಬೆಳೆಸಲಾಗುತ್ತದೆ.

ಪಶುಪಾಲನೆ : ದೇಶದ ಅನೇಕ ಕಡೆಗಳಲ್ಲಿ ಕೃಷಿಗಿಂತ ಪಶುಪಾಲನೆಗೆ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ. ಜಾನುವಾರುಗಳಲ್ಲಿ ಅರ್ಧಕ್ಕೂ ಹೆಚ್ಚು ಸಂಖ್ಯೆ ದನಕರುಗಳದು, ಕುರಿ ಮತ್ತು ಹಂದಿ ಅನಂತರ ಬರುವ ಜಾನುವಾರುಗಳು. ಮೆಡಿಟರೇನಿಯನ್

ಸಮುದ್ರ ತೀರ ಪ್ರದೇಶದ ಹೊರತಾಗಿ ಉಳಿದ ಎಲ್ಲ ಕಡೆಯಲ್ಲೂ ದನಕರು ಸಾಕಣೆ ನಡೆಯುತ್ತದೆ. ಮಧ್ಯ ಮತ್ತು ದಕ್ಷಿಣದ ಪರ್ವತ ಪ್ರದೇಶಗಳಲ್ಲಿ ಕುರಿಸಾಕಣೆ ಪ್ರಧಾನ. ಮಾಂಸ ಮತ್ತು ಉಣ್ಣೆಗಾಗಿ ಕುರಿ ಸಾಕಣೆ ಇದೆ. ಪಶ್ಚಿಮ, ಮಧ್ಯ ಮತ್ತು ಆಗ್ನೇಯ ಪ್ರದೇಶಗಳಲ್ಲಿ ಗಿಣ್ಣು ತಯಾರಿಕೆಗಾಗಿ ಆಡುಗಳನ್ನು ಸಾಕುತ್ತಾರೆ, ಕೋಳಿ ಮತ್ತು ಮೊಲಗಳನ್ನೂ ಸಾಕಲಾಗುತ್ತಿದೆ. ಉತ್ತರದಲ್ಲಿ ಕುದುರೆಗಳನ್ನು ಸಾಕುತ್ತಾರೆ. ಹಾಲು ಬೆಣ್ಣೆಗಳ ಉತ್ಪಾದನೆ ಮತ್ತು ವಿಶೇಷ ಗಿಣ್ಣಿನ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಇದರದು ದ್ವಿತೀಯ ಸ್ಥಾನ.

ಮೀನುಗಾರಿಕೆ : ಅನೇಕ ಸಣ್ಣ ಬಂದರುಗಳಿಂದ ಕೂಡಿರುವ ಫ್ರಾನ್ಸಿನ ಕರಾವಳಿ ಮತ್ತು ಸಮುದ್ರ ಇವು ಮೀನುಗಾರಿಕೆಗೆ ಸಹಾಯಕವಾಗಿವೆ.

ಅರಣ್ಯಗಾರಿಕೆ : ದೇಶದ ಸು. ಕಾಲು ಭಾಗವನ್ನು ಅರಣ್ಯಗಳು ಆವರಿಸಿವೆ. ಅವು ಆರ್ಥಿಕತೆಯ ಅವಶ್ಯಕ ಅಂಗವಾಗಿವೆ. ಆರ್ಡೆನ್, ಕೊಂಪೈನ್, ಫೌಂಟನ್ ಬ್ಲ್ಯೂ ಮತ್ತು ಆರ್ಲೇಯಾನ್ ಅರಣ್ಯಗಳು ಮುಖ್ಯವಾದವು. ಅರಣ್ಯಗಳ ಸು. ಶೇ. 70 ಪ್ರದೇಶದಲ್ಲಿ ಓಕ್, ಬೀಚ್ ಮತ್ತು ಪಾಪ್ಲರ್ ಮರಗಳೂ ಉಳಿದ ಪ್ರದೇಶಗಳಲ್ಲಿ ರಾಳ ವೃಕ್ಷಗಳು ಇವೆ. ಆಲ್ಪ್ಸ್, ಜುರಾ, ವೋಷ್ ಮತ್ತು ಪಿರನೀಸ್ ಪರ್ವತ ಪ್ರದೇಶಗಳಲ್ಲಿ ಶಂಕುಧಾರಿ ವೃಕ್ಷಗಳು ವಿಶೇಷವಾಗಿವೆ. ಲಾಂಡ್ ಪ್ರದೇಶ ರಾಳ ಮತ್ತು ಚೌಬೀನೆಗಳ ದೃಷ್ಟಿಯಿಂದ ಮಹತ್ತ್ವದ್ದಾಗಿದೆ.

ಗಣಿಗಾರಿಕೆ: ಕಲ್ಲಿದ್ದಲು, ಕಬ್ಬಿಣದ ಅದಿರು ಮತ್ತು ಬಾಕ್ಸೈಟ್ ಮುಖ್ಯ ಖನಿಜಗಳು. ಉತ್ತರದಲ್ಲಿ ಮತ್ತು ಲೊರೇನ್‌ನಲ್ಲಿ ಕಲ್ಲಿದ್ದಲು ದೊರಕುತ್ತದೆ. ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ ಫ್ರಾನ್ಸಿನ ಸ್ಥಾನ ಪ್ರಪಂಚದಲ್ಲಿ ಮೂರನೆಯದು; ರಷ್ಯ ಮತ್ತು ಅಮೆರಿಕಗಳ ಅನಂತರ ಇದು ಬರುತ್ತದೆ. ಲೊರೇನ್, ನಾರ್ಮಂಡಿ, ಅಂಜೂ ಬೋಗುಣಿ, ಪಿರನೀಸ್‌ಗಳಲ್ಲಿ ಕಬ್ಬಿಣದ ಅದಿರು ದೊರಕುತ್ತದೆ. ಬಾಕ್ಸೈಟಿನ ಉತ್ಪಾದನೆಯಲ್ಲಿ ಫ್ರಾನ್ಸ್ ಪ್ರಪಂಚದ ಪ್ರಮುಖ ದೇಶಗಳಲ್ಲಿ ಒಂದಾಗಿದೆ. ಸತು, ಸೀಸ, ತಾಮ್ರ, ತವರ, ಚಿನ್ನ, ಕಲ್ಲರಗು, ಕಲ್ಲುಪ್ಪು, ಪೊಟ್ಯಾಷ್ ಇವು ಇತರ ಖನಿಜಗಳು. ಮಧ್ಯದ ತಪ್ಪಲು ಮತ್ತು ವಾಂಡೇ ಪ್ರದೇಶಗಳಲ್ಲಿ ಯುರೇನಿಯಮ್ ದೊರಕುತ್ತದೆ. ಲಾಂಡ್ ಪ್ರದೇಶದಲ್ಲಿ ಪೆಟ್ರೋಲಿಯಮ್ ದೊರಕುತ್ತದೆಯಾದರೂ ಆವಶ್ಯಕತೆಯ ಹೆಚ್ಚುಭಾಗವನ್ನು ದೇಶ ಆಮದು ಮಾಡುತ್ತದೆ. ನೈಋತ್ಯ ಪ್ರದೇಶದಲ್ಲಿ ನೈಸರ್ಗಿಕ ಅನಿಲ ದೊರಕುತ್ತದೆ. ಚಿನ್ನದ ಉತ್ಪಾದನೆಯಲ್ಲಿ ಫ್ರಾನ್ಸಿನ ಸ್ಥಾನ ಮೂರನೆಯದು.

ವಿದ್ಯುಚ್ಛಕ್ತಿ: ದೇಶದಲ್ಲಿ ಜಲಸಂಪತ್ತು ಗಮನಾರ್ಹವಾಗಿರುವುದರಿಂದ ವಿದ್ಯುತ್ತಿನ ಉತ್ಪಾದನೆಗೆ ಸಹಾಯವಾಗಿದೆ. ಬ್ರಿಟನಿ ತೀರದಲ್ಲಿ ಉಬ್ಬರವಿಳಿತದಿಂದ ವಿದ್ಯುತ್ತನ್ನು ಉತ್ಪಾದಿಸುವ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದು ಪ್ರಪಂಚದಲ್ಲೇ ಮೊದಲನೆಯದು. ಪರಮಾಣುಶಕ್ತಿ ಉತ್ಪಾದನ ಕೇಂದ್ರಗಳೂ ಇವೆ.

ಕೈಗಾರಿಕೆ: ಎರಡನೆಯ ಮಹಾಯುದ್ಧದಿಂದ ಈಚೆಗೆ ಆಗಿರುವ ಕೈಗಾರಿಕಾ ವಿಸ್ತರಣೆ ಗಮನಾರ್ಹ. ಎಲೆಕ್ಟ್ರಾನಿಕ್ಸ್, ಸಾರಿಗೆ, ಸಂಸ್ಕರಣ ಮತ್ತು ವೈಜ್ಞಾನಿಕ ಉಪಕರಣ ಕ್ಷೇತ್ರಗಳಲ್ಲಿ ವಿಶೇಷವಾದ ಅಭಿವೃದ್ಧಿಯಾಗಿದೆ. ಉಕ್ಕು, ರಸಾಯನಿಕ, ಬಟ್ಟೆ, ಮದ್ಯ ಸುಗಂಧದ್ರವ್ಯ, ವಿಮಾನ, ಹಡಗು, ವಿಜ್ಞಾನೋಪಕರಣ, ಉಡುಪು, ರಬ್ಬರ್ ಸರಕು, ಮರದ ಸರಕು, ಸಕ್ಕರೆ, ಕಾಗದ ಪಿಂಗಾಣಿ, ಆಹಾರ, ಪ್ಲಾಸ್ಟಿಕ್, ಮೋಟಾರುವಾಹನ ಇವು ಮುಖ್ಯ ಕೈಗಾರಿಕೆಗಳು. ಉಕ್ಕನ್ನು ರಫ್ತುಮಾಡುವ ಪ್ರಪಂಚದ ಪ್ರಮುಖ ದೇಶಗಳಲ್ಲಿ ಫ್ರಾನ್ಸ್ ಒಂದು. ಫ್ರಾನ್ಸ್ ಅಲ್ಯೂಮಿನಿಯಮನ್ನೂ ಉತ್ಪಾದಿಸುತ್ತಿದೆ. ಕ್ಯಾರವಿಲ್, ಮಿರಾಜ್ ಮೊದಲಾದ ಫ್ರೆಂಚ್ ವಿಮಾನಗಳನ್ನು ಪ್ರಪಂಚದ ಅನೇಕ ದೇಶಗಳು ಬಳಸುತ್ತಿವೆ. ಗಂಧಕ ಇನ್ನೊಂದು ಪ್ರಮುಖ ಉತ್ಪನ್ನ, ದೂರದರ್ಶನ, ಗಡಿಯಾರ, ಚರ್ಮ ಸರಕು ರೇಡಿಯೋ ತಯಾರಾಗುತ್ತವೆ. ಇವೂ ತಯಾರಾಗುತ್ತವೆ. ಪ್ಯಾರಿಸಿನ ಸುತ್ತುಮುತ್ತಲಿನ ಪ್ರದೇಶ, ಉತ್ತರ ಫ್ರಾನ್ಸಿನ ಕಲ್ಲಿದ್ದಲು ಬೋಗುಣಿ ಆಲ್ಸೇಸ್ ಮತ್ತು ಲೊರೈನ್, ಕ್ಲೆರ್ಮಾನ್ ಮತ್ತು ಫೆರಾಂಡ್ ಸುತ್ತಮುತ್ತಲಿನ ಪ್ರದೇಶ: ಇವುಗಳಲ್ಲಿ ಕೈಗಾರಿಕೆಗಳು ವಿಶೇಷವಾಗಿ ಕೇಂದ್ರೀಕೃತವಾಗಿವೆ. ಜಮಖಾನೆ ಮತ್ತು ಚಿತ್ರನೇಯ್ಗೆ ಬಟ್ಟೆಗಳೂ ಪ್ರಸಿದ್ಧವಾಗಿವೆ. ಕಲಾಬತ್ತು ಮತ್ತು ಕೈಚೀಲಗಳ ತಯಾರಿಕೆಯಲ್ಲೂ ಫ್ರಾನ್ಸ್ ಮುಂದಿದೆ. ಫ್ರಾನ್ಸಿನಲ್ಲಿ ರೇಷ್ಮೆ ಕೈಗಾರಿಕೆಯೂ ಬೆಳೆದಿದೆ. ಬಣ್ಣ ಹಾಕುವ ಮತ್ತು ಕ್ಯಾಲಿಕೊ ಮುದ್ರಣದ ಉದ್ಯಮಗಳು ಅಭಿವೃದ್ಧಿಹೊಂದಿವೆ.

ಸಾರಿಗೆ ಸಂಪರ್ಕ: ಯುರೋಪಿನಲ್ಲಿ ಅಭಿವೃದ್ಧಿ ಹೊಂದಿದ ಸಾರಿಗೆ ವ್ಯವಸ್ಥೆಗಳಲ್ಲಿ ಫ್ರಾನ್ಸಿನದೂ ಒಂದು. ದೀರ್ಘಕಾಲದಿಂದಲೂ ಇದು ಪ್ಯಾರಿಸಿನಲ್ಲಿ ಕೇಂದ್ರೀಕೃತವಾಗಿದೆ. ದೇಶದ ವಿಭಿನ್ನ ಭಾಗಗಳಿಗೆ ಅಲ್ಲಿಂದ ಸಾರಿಗೆ ಮಾರ್ಗಗಳು ಹೋಗುತ್ತವೆ. ಫ್ರಾನ್ಸಿನಲ್ಲಿ ರಸ್ತೆಗಳ ಒಟ್ಟು ಉದ್ದ 7,89,000 ಕಿಮೀ. ಇವುಗಳಲ್ಲಿ ಪ್ರಥಮದರ್ಜೆಯ ಹೆದ್ದಾರಿಗಳು, ದ್ವಿತೀಯ ದರ್ಜೆಯ ಮಾರ್ಗಗಳು, ಗ್ರಾಮೀಣರಸ್ತೆಗಳು ಮತ್ತು ವೇಗದ ಪ್ರಯಾಣದ ಮಾರ್ಗಗಳು ಸೇರಿವೆ. ರೈಲು ಮಾರ್ಗಗಳ ಉದ್ದ 37,000 ಕಿಮೀ. ಜಲಮಾರ್ಗಗಳ ಉದ್ದ ಸು. 10,300 ಕಿಮೀ. ಅವುಗಳಲ್ಲಿ ಕಾಲುವೆ ಮಾರ್ಗಗಳೂ ನದೀಮಾರ್ಗಗಳೂ ಸೇರುತ್ತವೆ, ವಾಣಿಜ್ಯ ನೌಕೆಗಳ ಕ್ಷೇತ್ರದಲ್ಲಿ ಫ್ರಾನ್ಸಿನದು ಸ್ಥೂಲವಾಗಿ 10ನೆಯ ಸ್ಥಾನ. ಮಾರ್ಸೇಲ್, ಲ ಹಾವ್ರೆ ಡಂಕರ್ಕ್, ರೂವೆನ್‌ಬೋರ್ಡೋ ಮತ್ತು ಚೆರ್ಬಗ್ ಮುಖ್ಯ ಬಂದರುಗಳು. ಫ್ರಾನ್ಸಿನ ರಾಷ್ಟ್ರೀಯ ವಿಮಾನ ಸಂಸ್ಥೆ ಏರ್ ಫ್ರಾನ್ಸ್ ಸರ್ಕಾರದಿಂದ ಸಹಾಯಧನ ಪಡೆಯುತ್ತದೆ. ಇದರ ವಿಮಾನಗಳು ಎಲ್ಲ ಕಡೆಗಳಿಗೂ ಹೋಗುತ್ತವೆ. ಇದಲ್ಲದೆ ಎರಡು ಪ್ರಮುಖ ಖಾಸಗಿ ವಿಮಾನ ಸಂಸ್ಥೆಗಳಿವೆ. ಫ್ರಾನ್ಸಿನ ಸು.71 ಪಟ್ಟಣಗಳಲ್ಲಿ ವಿಮಾನ ನಿಲ್ದಾಣಗಳಿವೆ. (ಜಿ.ಎಂ.ಎಸ್.)

**ಫ್ರಾನ್ಸಿಸ್ ಡ್ರೇಕ್:** 1540–96. ಇಂಗ್ಲೆಂಡಿನ ಎಲಿಜಬೆತ್ ರಾಣಿ ಆಳ್ವಿಕೆಯ ಕಾಲದ ಪ್ರಸಿದ್ಧನಾವಿಕ, ಅಡ್ಮಿರಲ್. ಖಾಸಗಿ ಯುದ್ಧ ನೌಕೆಗಳ ನಾವಿಕ, ಗುಲಾಮರ ವ್ಯಾಪಾರಿ. ರಾಜಕಾರಣಿ ಮತ್ತು ಎಲಿಜಬೆತ್ ಕಾಲದಲ್ಲಿ ಯಂತ್ರಶಾಸ್ತ್ರಜ್ಞ. ಈತ 1540ರಲ್ಲಿ ಪ್ಯಾರಿಸ್‌ನ ಕ್ರೌಂಡೇಲಿ ಎಂಬಲ್ಲಿ ಜನಿಸಿದ. ಈತನ ತಂದೆ ಎಡ್ಮಂಡ್ ಡ್ರೇಕ್ ಪ್ರಾಟೆಸ್ಟಂಟ್ ಪುರೋಹಿತ. ಡ್ರೇಕ್ 1588ರಲ್ಲಿ ಸ್ಪಾನಿಷ್ ನೌಕಾಪಡೆಯ ವಿರುದ್ಧ ಇಂಗ್ಲಿಷರ ತುಕಡಿಗೆ ಯುದ್ಧನೌಕೆಯ ಎರಡನೆಯ ಅಧಿಕಾರಿಯಾಗಿ ಕೆಲಸವಾಡಿದ್ದ. 1596ರಲ್ಲಿ ಪೋರ್ಟರಿಕೊವನ್ನು ಮುತ್ತಿಗೆ ಹಾಕಲು ವಿಫಲನಾದ ಈತ ಅದೇ ವರ್ಷ ನಿಧನನಾದ.

ಈತನ ಪರಾಕ್ರಮ ದಂತಕತೆಯಾಗಿ ಉಳಿದಿದೆ. ಈತ ಇಂಗ್ಲಿಷರಿಗೆ ನಾಯಕನಾಗಿದ್ದ. ಸ್ಪೇನಿನ ಜನರು ಇವನನ್ನು ಭೂತ ಎಂದೇ ತಿಳಿದಿದ್ದರು. ಈತನ ಕಾರ್ಯ ಸಾಹಸಗಳಿಗೆ ಎಲ್ ಡ್ರೇಗನ್ ಎಂದು ಇವರ ವಂಶದವರು ಕರೆಯುತ್ತಿದ್ದರು. ಎರಡನೆಯ ರಾಜ ಫಿಲಿಪ್ಸ್ ಈತನಿಗೆ 20,000 ಡೂಕ್ಯಾಟ್ಸ್ ಪ್ರೋತ್ಸಾಹಧನವನ್ನಾಗಿ ನೀಡಿದ್ದ. ಈತ ನಿಧನನಾದಾಗ ಇಂಗ್ಲೆಂಡಿನಾದ್ಯಂತ ಮೌನಾಚರಣೆಗಳು ಜರುಗಿದವು ಆದರೆ ಸ್ಪೈನಿನಲ್ಲಿ ಸಂಭ್ರಮೋತ್ಸಹಗಳು ನಡೆದಿದ್ದವು.

ಈತ ಅನುಭವಿ ನಾವಿಕನಾಗಿ ದಕ್ಷಿಣ ಅಮೆರಿಕದ ಪೂರ್ವ ಕರಾವಳಿ ಮೂಲಕ ಮೆಗಲಾನ್ ಜಲಸಂಧಿಯಲ್ಲಿ ಪ್ರಯಾಣಿಸಿ ದಕ್ಷಿಣದ ಭೂ ರಾಶಿಯ ಮೇರು ತುದಿಯನ್ನು ಮುಟ್ಟಿದ. ಆಕಾರಣ ಈ ಭಾಗವನ್ನು ಡ್ರೇಕ್ ಜಲಸಂಧಿ ಎಂದು ಕರೆಯಲಾಗಿದೆ. ಈ ಮೇರು ಭಾಗವಾದ ಟಿಯಾರ ಡಿಲ್ ಫ್ಯೂಗೊ ಕೇಪ್‌ಹಾರ್ನ್ ಸುತ್ತಲ್ಲಿರುವ ಭಾಗವನ್ನು 1616ರರೆಗೂ ಯಾರೂ ಗುರ್ತಿಸಿರಲಿಲ್ಲ. ಮೆಗಲಾನ್ ಜಲಸಂಧಿಯನ್ನು ಅಟ್ಲಾಂಟಿಕ್ ಮೂಲಕ ಶಾಂತಸಾಗರಕ್ಕೆ ಪ್ರಯಾಣಿಸಲು ಅನುಸರಿಸಿದ್ದ. ಈತನ ಹಡಗು ಬಿರುಗಾಳಿಗೆ ಸಿಕ್ಕಿ ಟಿಯಾರಡಿಲ್ ಪೂಗೋ ದ್ವೀಪತುದಿಗಿಂತ ದಕ್ಷಿಣಕ್ಕೆ ಸರಿದು ಹೋಗಿತ್ತು, ಈತ ಈ ದ್ವೀಪಭಾಗವನ್ನು ದಕ್ಷಿಣ ಖಂಡದ ಒಂದು ಭಾಗ ಎಂದು ಪರಿಗಣಿಸಿರಲಿಲ್ಲ. ಈತ ಅಂಟಾರ್ಕ್‌ಟಿಕ ಸಾಹಸ ಯಾತ್ರೆ ಮಾಡಿದ ಪ್ರಥಮ ನಾವಿಕ ಎಂಬ ಹೆಗ್ಗಳಿಕೆಯಿದೆ. ಈತನ ದಕ್ಷಿಣಮೇರುಯಾನದಲ್ಲಿ ಕನಿಷ್ಠ $56^0$ ವರೆಗೂ ತಲುಪಿದ್ದ ಎಂದು ಪುರಾವೆಗಳ ಸಹಿತ ಹಕ್ಲೈಟ ಎಂಬಾತ ತಿಳಿಸಿದ್ದಾನೆ. ಈತನ ಕಾರ್ಯಾಸಾಧನೆಯನ್ನು 1773ರಲ್ಲಿ ಜೇಮ್ಸ್ ಕುಕ್ ಸಮುದ್ರಯಾನ ಕೈಗೊಳ್ಳುವವರೆಗೂ ಯಾರೂ ಹಿಂದೆ ಹಾಕಿರಲಿಲ್ಲ.

ಈತನ ಕಾರ್ಯ ಸಾಧನೆಗಳಲ್ಲಿ ಸ್ಪಾನಿಷ್ ಹಡಗುಗಳನ್ನು ಈತ ವಶಪಡಿಸಿಕೊಂಡಿದ್ದು, ಪೆರುವಿನ ಶ್ರೀಮಂತರಿಂದ 25,000 ಡ್ಯೀಕ್ಯಾಟ್ಸ್ ಸಂಗ್ರಹಿಸಿದ್ದ, 37,000 ಡ್ಯುಕ್ಯಾಟ್ಸ್ ಬೆಲೆಯುಳ್ಳ ಶುದ್ಧ ಚಿನ್ನವನ್ನು ಸ್ಪೇನಿನಿಂದ ವಶಪಡಿಸಿಕೊಂಡ ಹಡಗೊಂದು ಲಿಮಾದ ಸನಿಹದಲ್ಲಿ ಪನಾಮದ ಕಡೆಸಾಗುತ್ತಿತ್ತು. ಆ ಹಡಗನ್ನು ವಶಪಡಿಸಿಕೊಂಡಾಗ ಅಪಾರ ಹಣ ಹಾಗೂ ಚಿನ್ನ ಡ್ರೇಕ್‌ನ ವಶವಾಯಿತು. ಅದರಲ್ಲಿ 26 ಟನ್ ಬೆಳ್ಳಿ, 80 ಪೌಂಡ್ ಚಿನ್ನ ಲೆಕ್ಕವಿಲ್ಲದಷ್ಟು ಆಭರಣಗಳು ದೊರೆಕಿದ್ದವು. (ವಿ.ಎಸ್.ಎ.)

**ಫ್ರೆಂಚ್ ಗಿಯಾನ:** ಫ್ರಾನ್ಸಿನ ಆಡಳಿತಕ್ಕೊಳಪಟ್ಟಿರುವ ಸಾಗರಾಂತರ ರಾಜ್ಯ. ದಕ್ಷಿಣ ಅಮೆರಿಕ ಖಂಡದ ಈಶಾನ್ಯ ಕರಾವಳಿಯಲ್ಲಿ ಸಮಭಾಜಕ ವೃತ್ತದ ಉತ್ತರಕ್ಕಿದೆ. ಈ ರಾಜ್ಯಕ್ಕೆ ಸೇರಿದ ಕೆಲವು ದ್ವೀಪಗಳಿವೆ. ಈ ರಾಜ್ಯದ ವಿಸ್ತೀರ್ಣ 91,000 ಚ.ಕಿಮೀ. ಜನಸಂಖ್ಯೆ 172000 (2002). ರಾಜಧಾನಿ ಕೈಯೆನ್.

ಫ್ರೆಂಚ್ ಗಿಯಾನವನ್ನು ಭೌಗೋಳಿಕವಾಗಿ ಮೂರು ವಲಯಗಳಾಗಿ ವಿಂಗಡಿಸಬಹುದು. ಉತ್ತರದ ಕರಾವಳಿ ಬಯಲು. ಸು. 15ರಿಂದ 20 ಕಿಮೀ ಅಗಲದ ಈ ಪ್ರದೇಶ ಮೆಕ್ಕಲುಮಣ್ಣಿನ ತಗ್ಗುಬಯಲುಗಳಿಂದ ಕೂಡಿದೆ. ಮಧ್ಯ ಭಾಗದ ಬೆಟ್ಟಗಾಡು

ಪ್ರಸ್ಥಭೂಮಿ 350 ಮೀ ಗಿಂತ ಹೆಚ್ಚು ಎತ್ತರವಿಲ್ಲದ ಇಲ್ಲಿಯ ಗುಡ್ಡಗಳು ಕಡಿದಾದ ಮಗ್ಗುಲು ಹಾಗೂ ಚಪ್ಪಟೆ ಮೇಲ್ಭಾಗವುಳ್ಳವು. ಈ ಪ್ರದೇಶ ಕರಾವಳಿಗೆ ಸಮಾಂತರವಾಗಿ ಸಾಗುತ್ತದೆ. ದಕ್ಷಿಣದ ಟಮಾಕ್ ಹಮಾಕ್ ಪರ್ವತಶ್ರೇಣಿ ಪ್ರಾಚೀನ ಗ್ರಾನೈಟ್ ಶಿಲೆಗಳಿಂದ ರೂಪುಗೊಂಡಿದ್ದರೆ, ಕೆಲವು ಪರ್ವತಗಳು ಜ್ವಾಲಾಮುಖಿಗಳಿಂದ ಉಗಮಗೊಂಡಿವೆ. ಫ್ರೆಂಚ್ ಗಿಯಾನ ಉ.ಅ. $2^0$–$6^0$ ನಡುವೆ ಸಮಭಾಜಕ ವೃತ್ತದ ಉಷ್ಣವಲಯದಲ್ಲಿದ್ದರೂ ಸಾಗರಕ್ಕೆ ಅತ್ಯಂತ ಸಮೀಪದಲ್ಲಿ ಇರುವುದರಿಂದ ಅದರ ಪ್ರಭಾವ ಈ ರಾಜ್ಯದ ವಾಯುಗುಣದ ಮೇಲಾಗಿದೆ. ಸತತವಾದ ವಾಣಿಜ್ಯ ಮತ್ತು ಈಶಾನ್ಯ ಮಾರುತಗಳ ಪರಿಣಾಮವಾಗಿ ವರ್ಷಾದ್ಯಂತ ಉಷ್ಣತೆ ಸಮಮಟ್ಟದಲ್ಲಿರುತ್ತದೆ ಎನ್ನಬಹುದು. ಜನವರಿ ತಿಂಗಳಲ್ಲಿ ಸರಾಸರಿ $25^0$ಸೆ. ಇದ್ದರೆ ಅಕ್ಟೋಬರ್ ತಿಂಗಳಲ್ಲಿ $27^0$ಸೆ. ಇರುತ್ತದೆ.

ವಿಪುಲವಾದ ಮಳೆ ಹಾಗೂ ಹೆಚ್ಚುನೀರನ್ನು ಹೀರಲಾಗದ ಭೂ ಗುಣದಿಂದಾಗಿ ಫ್ರೆಂಚ್ ಗಿಯಾನದಲ್ಲಿ ಹೆಚ್ಚು ಸಂಖ್ಯೆಯ ನದಿಗಳಿವೆ. ಪರ್ವತ ಪ್ರದೇಶಗಳ ಬುಡದ ಬಳಿಯಲ್ಲಿಯ ತಗ್ಗುಗಳು ಹೆಚ್ಚಿನ ನೀರನ್ನು ಸಂಗ್ರಹಿಸುವುದರ ಫಲವಾಗಿ ನದಿಗಳ ಮಟ್ಟ ವರ್ಷಾದ್ಯಂತ ಒಂದೇ ಸಮನಾಗಿರುತ್ತದೆ. ಇಲ್ಲಿಯ ಇಪ್ಪತ್ತಕ್ಕೂ ಹೆಚ್ಚು ನದಿಗಳು ಉತ್ತರ ಮತ್ತು ಈಶಾನ್ಯಾಭಿಮುಖವಾಗಿ ಹರಿದು ಅಟ್ಲಾಂಟಿಕ್ ಸಾಗರ ಸೇರುತ್ತವೆ. ಮುಖ್ಯ ನದಿಗಳೆಂದರೆ ಮರೋನಿ ಮತ್ತು ಅಯಾಪಾಕ್. ಮರೋನಿ ಫ್ರೆಂಚ್‌ಗಿಯಾನದ ಪಶ್ಚಿಮದ ಗಡಿಯಾಗಿ ಸುರಿನಾಮನ್ನು, ಅಯಾಪಾಕ್ ನದಿ ಪೂರ್ವದ ಗಡಿಯಾಗಿ ಬ್ರೆಜಿಲ್ ದೇಶವನ್ನು ವಿಂಗಡಿಸಿವೆ. ಆಪ್ರವಾಣ್, ಕಾಮ್ಪೆ, ಕೌರಾ, ಸಿನ್ನಾಮಾರಿ, ಐರಾಕೌಬೊ ಮತ್ತು ಮಾನಾ ಇವೂ ಮುಖ್ಯ ನದಿಗಳಾಗಿವೆ.

ಫ್ರೆಂಚ್ ಗಿಯಾನದ ಅತ್ಯಂತ ಪ್ರಮುಖ ಖನಿಜ ಸಂಪನ್ಮೂಲಗಳು ಮೂರು: ಚಿನ್ನ, ಟ್ಯಾಂಟಾಲಿಕ್ ಕೊಲಂಬೈಟ್ ಮತ್ತು ಬಾಕ್ಸೈಟ್. ಬಂಗಾರ ಗಣಿಗಾರಿಕೆಯನ್ನು 1964ರಿಂದ ನಿಲ್ಲಿಸಲಾಗಿತ್ತು. 1966ರಿಂದ ಪಾಲ್ ಐಲೆಂಡ್‌ನ ಮೆಕ್ಕಲು ಗಣಿ ಪ್ರದೇಶದಲ್ಲಿ ಹೊಸ ಕೆಲಸವನ್ನು ಆರಂಭಿಸಲಾಗಿದೆ.

ಜನ: ಫ್ರೆಂಚ್ ಗಿಯಾನದ ಶೇ. 90 ಪ್ರಜೆಗಳು 16 ಮತ್ತು 17ನೆಯ ಶತಮಾನಗಳಲ್ಲಿ ಫ್ರೆಂಚ್ ಗಿಯಾನಕ್ಕೆ ಕರೆತಂದ ಗುಲಾಮ ಸಂತತಿಯ ನೀಗ್ರೋ ಅಥವಾ ಕ್ರಿಯೋಲರು (ನೀಗ್ರೋ ಹಾಗೂ ಬಿಳಿ ಜನಾಂಗದ ಮಿಶ್ರ ಸಂತತಿ). ಉಳಿದವರಲ್ಲಿ ಅಮೆರಿಕನ್ ಇಂಡಿಯನ್ನರು, ಚೀನಿಯರು, ಐರೋಪ್ಯರು, ಇಂಡೋಚೀನಿಯರು, ಲೆಬನಾನಿಯರು ಮತ್ತು ಸಿರಿಯನ್ನರು ಇದ್ದಾರೆ. ಫ್ರೆಂಚ್ ಗಿಯಾನದ ಮೂಲ ನಿವಾಸಿಗಳಾದ ಅಮೆರಿಕನ್ ಇಂಡಿಯನ್ನರು ಇಂದು ಒಳನಾಡಿನಲ್ಲಿ ಜೀವಿಸುತ್ತಿದ್ದಾರೆ. ಗಿಯಾನದ ಹೆಚ್ಚು ಮಂದಿ ಕರಾವಳಿಯ ಉದ್ದಕ್ಕೂ ಹರಡಿಕೊಂಡಿದ್ದಾರೆ. ಬಹಳಷ್ಟು ಫ್ರೆಂಚ್ ಗಿಯಾನೀಯರ ಭಾಷೆ ಫ್ರೆಂಚ್. ರಾಜ್ಯದ ಅಧಿಕೃತ ಭಾಷೆಯೂ ಫ್ರೆಂಚ್. ಹಲವು ಕ್ರಿಯೋಲರು ಫ್ರೆಂಚ್ ಮತ್ತು ಇಂಗ್ಲಿಷ್ ಮಿಶ್ರವಾದ ಉಪ ಭಾಷೆ ಆಡುತ್ತಾರೆ. ಹೆಚ್ಚು ಮಂದಿ ರೋಮನ್ ಕೆಥೊಲಿಕರು.

ಫ್ರೆಂಚ್ ಗಿಯಾನ ಹೆಚ್ಚು ಅಭಿವೃದ್ಧಿಯಾಗದಿರುವ ರಾಜ್ಯ. ಸರ್ಕಾರ ನಿರ್ವಹಿಸಲು, ಉದ್ಯಮಗಳಿಗೆ ಬೆಂಬಲ ನೀಡಲು, ಆರೋಗ್ಯ ಪಾಲನೆಗೆ ಮತ್ತಿತರ ಸೇವೆಗಳಿಗೆ ಫ್ರಾನ್ಸಿನಿಂದಲೇ ಆರ್ಥಿಕ ನೆರವು ದೊರೆಯಬೇಕು. ಇಲ್ಲಿಯ ಬಹುಪಾಲು ಕಾರ್ಮಿಕರು ಸರ್ಕಾರದ ಉದ್ಯೋಗಿಗಳೇ ಆಗಿದ್ದಾರೆ. ಫ್ರೆಂಚ್ ಗಿಯಾನದ ಒಳನಾಡಿನಲ್ಲಿ ಖನಿಜ ಹಾಗೂ ಅರಣ್ಯ ಸಂಪತ್ತು ಉಂಟು. ಆದರೆ ಅವನ್ನು ಅಭಿವೃದ್ಧಿಪಡಿಸಿಲ್ಲ. ಪ್ರಮುಖ ಉದ್ಯಮಗಳೆಂದರೆ ಚಿನ್ನ, ಗಣಿಗಾರಿಕೆ, ವ್ಯಾವಸಾಯಿಕ ಹಾಗೂ ಅರಣ್ಯ ಉತ್ಪನ್ನಗಳ ಸಂಸ್ಕರಣೆ, ಸೀಗಡಿ ಉದ್ಯಮ. ಈ ಉದ್ಯಮಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇಲ್ಲಿಯ ಮುಖ್ಯ ಬೆಳೆಗಳೆಂದರೆ ಯಾಮ್ ಗೆಡ್ಡೆ, ಮರಗೆಣಸು, ಬಾಳೆಹಣ್ಣು, ಕಬ್ಬು, ಮೆಕ್ಕೆಜೋಳ, ಅನಾನಸು ಇತ್ಯಾದಿ. ಇಲ್ಲಿಯ ಜನರಿಗೆ ಸಾಕಾಗುವಷ್ಟು ಆಹಾರ ಉತ್ಪಾದನೆಯಾಗದೆ ಆಹಾರ ಸರಕುಗಳನ್ನು ಆಮದು ಮಾಡಿಕೊಳಲಾಗುತ್ತದೆ. ಇಲ್ಲಿಯ ಮುಖ್ಯ ರಫ್ತುಗಳೆಂದರೆ ರೋಸ್‌ವುಡ್ ಮತ್ತು ರಬ್ಬರ್.

ಕೈಯೆನ್ ಈ ರಾಜ್ಯದ ದೊಡ್ಡ ನಗರ. 1643ರಲ್ಲಿ ಫ್ರೆಂಚರು ಇದನ್ನು ಸ್ಥಾಪಿಸಿದರು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸು. 1/3 ಭಾಗ ಈ ನಗರದಲ್ಲಿ ವಾಸಿಸುತ್ತಾರೆ. ಜನಸಂಖ್ಯೆ 50594 (2002). ಮಾಂಟ್‌ಸಿನರಿ, ಬಿಯ್ನೆವೆನ್ಯೂ, ಕಮೋಪಿ, ಕಾರ್ಬೆಟ್‌ಮೊಯ್ಸ, ಪೇಸನ್ಸ್ ಸೇಂಟ್‌ಲೂಯಿಸ್, ಸೇಂಟ್ ಲಾರೆಟ್, ಸೇಂಟ್ ಜಾನ್, ಸಿಟ್ರಾನ್, ಕಾಲರ್, ಗರೆಟಗ್ರೆ ಕೌರ, ಕಾ, ಗ್ರೈಸ್‌ಬರ್ಗ್, ಸೇಂಟ್ ಜಾರ್ಜ್ ಮುಂತಾದ ಈ ಪಟ್ಟಣಗಳಿಗೆ ವಿಮಾನ ಸಂಪರ್ಕವಿದೆ. ಹಡುಗುಗಳ ಸಂಚಾರ, ರೈಲು ಮುಂತಾದ ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ. ಉತ್ತಮ ರಸ್ತೆ ಮಾರ್ಗಗಳು ಇನ್ನೂ ಅಭಿವೃದ್ಧಿ ಸ್ಥಿತಿಯಲ್ಲಿವೆ. (ಎಸ್.ಎಸ್.ಎಂ.ಯು.)

**ಫ್ರೆಂಚ್ ಪಾಲಿನೇಷ್ಯ:** ಫ್ರಾನ್ಸ್‌ನ ಆಡಳಿತಕ್ಕೆ ಸೇರಿರುವ ದ್ವೀಪ ಸಮೂಹ. ಇವುಗಳನ್ನು ಫ್ರಾನ್ಸ್‌ನ 'ಸಾಗರೋತ್ತರ ಪ್ರದೇಶ' ಎಂದು ಕರೆಯುವರು. ಈ ದ್ವೀಪಗಳು ಪೆಸಿಫಿಕ್ ಮಹಾಸಾಗರದ ದಕ್ಷಿಣ ಭಾಗದಲ್ಲಿ ಕಂಡುಬರುತ್ತವೆ. ಈ ದ್ವೀಪಗಳು 2,500,000 ಚ.ಕಿಮೀ ಸಮುದ್ರ ಭಾಗದಲ್ಲಿ ಹರಡಲ್ಪಟ್ಟಿವೆ. ಇದರಲ್ಲಿ ತಹಿಲೆ ಪ್ರಸಿದ್ಧವಾದ ದ್ವೀಪ. ಈ ದ್ವೀಪದ ಒಟ್ಟು ವಿಸ್ತೀರ್ಣ 41,167 ಚ.ಕಿಮೀ. ಅಸ್ಟ್ರಲ್ ದ್ವೀಪಗಳು, ಬಾಸ್ ದ್ವೀಪಗಳು, ಗ್ಯಾಂಬೀಕ್ ದ್ವೀಪಗಳು, ಸೊಸೈಟಿ ದ್ವೀಪಗಳು ಇಲ್ಲಿನ ಕೆಲವು ಪ್ರಮುಖ ದ್ವೀಪಗಳು.

ತಹಿಲೆ ಕಂಕಣ ದ್ವೀಪ ಮತ್ತು ನಡುಗಡ್ಡೆಗಳಲ್ಲದೆ ಇನ್ನೂ ಹಲವಾರು ದ್ವೀಪಗಳು ಈ ದೇಶಕ್ಕೆ ಸೇರಿವೆ. ಅವುಗಳು; ಆಹೇ, ಬೋರಾ ಬೋರಾ, ಹೀವ್ವಾ, ಮಯಾಹೋ, ತುಬುಡಿ, ತುಡಾಯಿ ಮುಂತಾದವು. ಈ ದ್ವೀಪಗಳಲ್ಲಿ ಫ್ರೆಂಚ್ ಸರ್ಕಾರದ ಸಹಾಯದಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗಿದೆ. ಸೂಕ್ತ ಸೌಲಭ್ಯಗಳನ್ನು ಪ್ರಮುಖ ದ್ವೀಪಗಳಲ್ಲಿ ಫ್ರೆಂಚ್ ಸರಕಾರ ಒದಗಿಸಿದೆ. ಕೃಷಿ, ವ್ಯಾಪಾರ ಇತರ ಪ್ರಮುಖ ಉದ್ಯೋಗಗಳಾಗಿವೆ. (ಎಚ್.ಎನ್.)

**ಫ್ರೆಡ್ರಿಚ್ ರ್ಯಾಟ್ಜೆಲ್:** 1844 – 1904. ಮಾನವ ಭೂಗೋಳವಿಜ್ಞಾನ ಹಾಗೂ ಪರಿಸರ ಪ್ರಭುತ್ವವಾದ ಪ್ರತಿಪಾದಿಸಿದ ಪ್ರಸಿದ್ಧ ಭೂಗೋಳವಿಜ್ಞಾನಿ. ಇವನು 1844 ರಲ್ಲಿ ಜರ್ಮನಿಯ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ. ಈತನ ತಂದೆ ಗ್ರಾಂಡ್ ಆಫ್ ಬಾಡೆನ್ ನಲ್ಲಿ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದ. ಈತ ಜರ್ಮನಿಯ ವಿವಿಧ ಶಾಲೆ ಮತ್ತು ವಿಶ್ವ ವಿದ್ಯಾಲಯಗಳಲ್ಲಿ ಶಿಕ್ಷಣವನ್ನು ಮುಗಿಸಿದ. ಈತ ಮೊದಲಿಗೆ ಪ್ರಾಣಿವಿಜ್ಞಾನ ಅಧ್ಯಯನ ಮಾಡಿದ. ಅನಂತರ ಹೈಡೆಲ್‌ಬರ್ಗ್‌ನಲ್ಲಿ ಭೂಗರ್ಭ ವಿಜ್ಞಾನ ಮತ್ತು ಜೀವವಿಜ್ಞಾನಗಳ ಹೋಲಿಕೆಯ ತೌಲನಿಕ ವಿಜ್ಞಾನದಲ್ಲಿ ತರಬೇತಿ ಪಡೆದ. 19ನೆಯ ಶತಮಾನದಲ್ಲಿ ಭೂಗೋಳವಿಜ್ಞಾನಕ್ಕೆ ಅಮೋಘ ಕೊಡುಗೆಗಳನ್ನು ನೀಡಿದ. ಈತನಿಂದಲೇ ಮಾನವ ಭೂಗೋಳಶಾಸ್ತ್ರ ಮತ್ತು ಪರಿಸರ ಪ್ರಭುತ್ವವಾದ ಪ್ರತಿಪಾದಿಸಲ್ಪಟ್ಟವು. ಈತ ಡಾರ್ವಿನ್ನನ ಜೀವವಿಕಾಸ ಸಿದ್ಧಾಂತದಿಂದ ಪ್ರಭಾವಿತಗೊಂಡು ಕ್ರಮಬದ್ಧಾತ್ಮಕ ಭೂಗೋಳವಿಜ್ಞಾನಕ್ಕೆ ಅಡಿಪಾಯ ಹಾಕಿದ.

ಮ್ಯೂನಿಚ್‌ನಲ್ಲಿ ಪ್ರಾಧ್ಯಾಪಕನಾಗಿದ್ದಾಗ ಮಾನವ ಕುಲದ ಚರಿತ್ರೆ ಹಾಗೂ ಮಾನವ ಭೂಗೋಳದ ಮೊದಲ ಸಂಪುಟವನ್ನು ರಚಿಸಿದ (1875–76). ಈತ ಭೌಗೋಳಿಕ ಅಧ್ಯಯನ ಕ್ಷೇತ್ರದಲ್ಲಿ ಮೊದಲಬಾರಿಗೆ ಮಾನವ ಭೂಗೋಳ ಎಂಬ ಪದ ಬಳಸಿದ.

ಆಂಥ್ರಪೊಜಿಯೋಗ್ರಫಿ ಎಂಬ ಎರಡು ಸಂಪುಟಗಳನ್ನು ರಚಿಸಿದ. 1872 ರಲ್ಲಿ ಇದರ ಮೊದಲ ಸಂಪುಟ ಎನ್ ಇಂಟ್ರುಡಕ್ಷನ್ ಟು ಅಪ್ಲಿಕೇಷನ್ ಆಫ್ ಜಿಯೋಗ್ರಫಿ ಟು ಹಿಸ್ಟರಿ ಮೂಲಕ ಭೂಗೋಳ ವಿಜ್ಞಾನವನ್ನು ಪರಿಚಯಿಸಿದ. ಹಾಗೆಯೇ 1899 ರಲ್ಲಿ ದ ಜಿಯೋಗ್ರಫಿಕಲ್ ಡಿಸ್ಟ್ರಿಬ್ಯೂಷನ್ ಆಫ್ ಮ್ಯಾನ್ ಎಂಬ ಎರಡನೆಯ ಸಂಪುಟವನ್ನು ಪ್ರಕಟಿಸಿದ. ಈ ಗ್ರಂಥಗಳಲ್ಲಿ ಮಾನವರ ಹಂಚಿಕೆ, ಗುಂಪುಗೂಡುವಿಕೆ, ವಲಸೆ ಹಾಗೂ ಭೌತಿಕ ಪರಿಸರದ ಘಟಕಗಳಾದ ವಾಯುಗುಣ, ಭೂ ಸಾದೃಶ್ಯ ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ.

ಈತ 1871ರಲ್ಲಿ ಅನಂತರ ಕಾಲಕಾಲಕ್ಕೆ ಹಂಗರಿ ಮತ್ತು ಪೆನ್ಸಿಲ್ವೇನಿಯ ದೇಶಗಳಿಗೆ ಭೇಟಿ ನೀಡುತ್ತಿದ. ಈ ಅವಧಿಯಲ್ಲಿ ಫ್ರಾನ್ಕೋ ಪರ್ಷಿಯನ್ ಯುದ್ಧ ನಡೆದಿತ್ತು. 1874 ಮತ್ತು 1875 ರಲ್ಲಿ ಈತ ದೀರ್ಘ ಪ್ರವಾಸವನ್ನು ಉತ್ತರ ಮತ್ತು ಕೇಂದ್ರ ಅಮೆರಿಕಗಳಲ್ಲಿ ಕೈಗೊಂಡ. ಇಲ್ಲಿನ ಜೈನಿ ಕೇಂದ್ರದ ಮೂಲಕ ಕೈಗೊಂಡ ಸಂಶೋಧನೆಗಳಲ್ಲಿ ಕೇಂದ್ರ ಪಶ್ಚಿಮ ಅಮೆರಿಕ ಕ್ಯಾಲಿಫೋರ್ನಿಯದ ಕೇಂದ್ರ ಪಶ್ಚಿಮ ಭಾಗದಲ್ಲಿ ನೆಲೆಸಿದ್ದ ರೆಡ್‌ಇಂಡಿಯನ್ನರು ಹಾಗೂ ನೀಗ್ರೋಗಳ ಜೀವನ ಕ್ರಮವನ್ನು ಹೋಲಿಸಿ ಅಧ್ಯಯನ ಮಾಡಿದ. ಇದರಲ್ಲಿ ಈ ಜನತೆಯ ಆರ್ಥಿಕತೆ, ಸಾಮಾಜಿಕ ಜೀವನ ಮತ್ತು ಜನಾಂಗಗಳನ್ನು ವಿಶೇಷವಾಗಿ ವಿಶ್ಲೇಷಿಸಿದ್ದಾನೆ. 1878–80 ರ ಅವಧಿಯಲ್ಲಿ ಈತ ಎರಡು ಸಂಪುಟಗಳಲ್ಲಿ ಒಂದು ಗ್ರಂಥವನ್ನು ರಚಿಸಿ, ಅದಕ್ಕೆ ಯುನೈಟೆಡ್ ಸ್ಟೇಟ್ಸ್ ಫಿಸಿಕಲ್ ಅಂಡ್ ಕಲ್ಚರಲ್ ಜಿಯೋಗ್ರಫಿ ವಿತ್ ಸ್ಪೆಶಿಯಲ್ ಕನ್ಸಿಡರೇಷನ್ ಆಫ್ ಎಕನಾಮಿಕ್ ಕಂಡಿಷನ್ ಎಂದು ಹೆಸರಿಸಿದ. 1893 ರಲ್ಲಿ ಈ ಗ್ರಂಥವನ್ನು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ವಿತ್ ಸ್ಪೆಷಲ್ ರೆಫರೆನ್ಸ್ ಟು ನ್ಯಾಚುರಲ್ ಅಂಡ್ ಎಕನಾಮಿಕ್ ಕಂಡಿಷನ್ ಎಂಬ ಶೀರ್ಷಿಕೆಯಲ್ಲಿ ಬಿಡುಗಡೆ ಮಾಡಲಾಯಿತು.

1876 ರಲ್ಲಿ ಈತ ಲೀಪ್‌ಜಿಗ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ನೇಮಕಗೊಂಡ. ಈ ಅವಧಿಯಲ್ಲಿ ರಚಿಸಿದ ಗ್ರಂಥಗಳು ಜರ್ಮನಿಯಾದ್ಯಂತ ಜನಪ್ರಿಯಗೊಂಡವು. ಈತನ ರಾಜಕೀಯ ಅನೇಕ ಭೂಗೋಳವಿಜ್ಞಾನ ಎಂಬ ಗ್ರಂಥದಲ್ಲಿ ಶ್ರೇಷ್ಠ ಜನರು ಎಂಬ ಪದ ಬಳಕೆಗೆ ಬಂದಿತು. ಅನಂತರ ಟೆರಿಟರಿ ಎಂಬ ಕಲ್ಪನೆ ಜೊತೆಗೆ ಪರಕೀಯ

ಎಂಬ ಭಾವನೆ ಬೆಳಕಿಗೆ ಬಂದಿತು. ಈ ವಿಷಯಗಳು ತತ್ವಶಾಸ್ತ್ರದಂತೆ – ಜರ್ಮನಿಯ ನೀತಿನಿಯಮಗಳು ನಿರ್ದೇಶಿಸಲ್ಪಟ್ಟವು. ಈ ವಿಚಾರಗಳು 1930 ರ ಅನಂತರವೂ ಅಂದರೆ ಎರಡನೆಯ ಮಹಾಯುದ್ಧದವರೆಗೂ ಮುಂದುವರೆದವು. ಈ ಗ್ರಂಥದಲ್ಲಿ ಈತ ರಾಜ್ಯವನ್ನು ಒಂದು ಜೀವಿಗೆ ಹೋಲಿಸಿ ರಾಜ್ಯ ಬೆಳೆಯುತ್ತದೆ ಅಥವಾ ಸಾಯುತ್ತದೆ, ಆದರೆ ಎಂದಿಗೂ ನಿಂತಲ್ಲೇ ನಿಲ್ಲುವುದಿಲ್ಲ ಎಂದು ಪ್ರತಿಪಾದಿಸಿದ್ದಾರೆ. (ಎನ್.ಎಲ್.)

**ಫ್ರಾಂಕ್‌ಫರ್ಟ್[1]:** ಪಶ್ಚಿಮ ಜರ್ಮನಿಯ ಹೆಸ್ ರಾಜ್ಯದಲ್ಲಿ ಮೇನ್ ನದಿಯ ದಡದಲ್ಲಿರುವ ನಗರ. ಇದರ ಪೂರ್ಣ ಹೆಸರು ಫ್ರಾಂಕ್‌ಫರ್ಟ್ ಅನ್‌ಮೇನ್. ಇದು ಮೈಂಟ್ಸ್ ಬಳಿ ಮೇನ್ ಮತ್ತು ರೈನ್ ನದಿಗಳ ಸಂಗಮದ ಪೂರ್ವಕ್ಕೆ 30 ಕಿಮೀ ದೂರದಲ್ಲಿದೆ. ಜನಸಂಖ್ಯೆ 6,41,076 (2002).

ಮೇನ್ ನದಿಯ ಎರಡೂ ದಂಡೆಗಳಲ್ಲಿ ವ್ಯಾಪಿಸಿರುವ ಈ ನಗರ ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರ. ರಾಸಾಯನಿಕ ಮತ್ತು ಔಷಧ ವಸ್ತುಗಳು, ವಿದ್ಯುತ್ ಉಪಕರಣಗಳು, ಚರ್ಮದ ವಸ್ತುಗಳಿಗೆ ಸಂಬಂಧಿಸಿದ ಕಾರ್ಖಾನೆಗಳಿವೆ. ಮುದ್ರಣ ಮತ್ತು ಪುಸ್ತಕ ವ್ಯಾಪಾರ ಇಲ್ಲಿಯ ಮುಖ್ಯ ಆರ್ಥಿಕ ಚಟುವಟಿಕೆಗಳಲ್ಲಿ ಒಂದು. ಮಾಂಸ ಭಕ್ಷ್ಯಗಳ ತಯಾರಿಕೆಯ ಉಪಕರಣಗಳಿಗೆ ಈ ನಗರ ಪ್ರಸಿದ್ಧಿ. ಇದು ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹಣಕಾಸು ವ್ಯವಹಾರದ ಕೇಂದ್ರ.

ಈ ನಗರದ ಬಳಿ ರಾಷ್ಟ್ರೀಯ ಹೆದ್ದಾರಿಗಳು ಕೂಡುತ್ತವೆ. ಫ್ರಾಂಕ್‌ಫರ್ಟ್ ಪಶ್ಚಿಮ ಜರ್ಮನಿಯ ರೈಲುಮಾರ್ಗ ಸಂಪರ್ಕ ಜಾಲದ ಮುಖ್ಯ ಕೇಂದ್ರ. ಹೊಸ ಉಪನಗರ ನಾರ್ತ್‌ವೆಸ್ಟ್ ಷಟಾಟನಲ್ಲಿ ಅತ್ಯಾಧುನಿಕ ಸೌಲಭ್ಯಗಳಿವೆ. 1950ರ ತರುವಾಯ ಹಲವಾರು ಗಗನಚುಂಬಿ ಕಟ್ಟಡಗಳು ನಿರ್ಮಿತವಾಗಿವೆ. ನಗರದ ಪೂರ್ವಭಾಗದಲ್ಲಿ ಪ್ರಾಣಿವಿಜ್ಞಾನ ಸಂಬಂಧವಾದ ಉದ್ಯಾನಗಳಿವೆ. ಐತಿಹಾಸಿಕ ವಸ್ತುಸಂಗ್ರಹಾಲಯ, ಕಲಾ ಅಕಾಡೆಮಿ ಮತ್ತು ಪ್ರಾಕೃತಿಕ ಇತಿಹಾಸದ ಸೆಂಕೆನ್‌ಬರ್ಗ್ ವಸ್ತುಸಂಗ್ರಹಾಲಯವಿದೆ. ಇಲ್ಲಿ ಪ್ರಪಂಚ ಪ್ರಸಿದ್ಧ ಸಾಹಿತಿ ಗಯಟೆ ಹುಟ್ಟಿದ ಮನೆ ಮತ್ತು ವಸ್ತುಸಂಗ್ರಹಾಲಯವಿದೆ. ಅವನ ಹೆಸರಿನಲ್ಲಿ ಯೊಹಾನ್ ವೂಲ್ಫ್‌ಗ್ಯಾಂಗ್ ಗಯಟೆ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ. (ಡಿ.ಎಸ್.ಜಿ.)

**ಫ್ರಾಂಕ್‌ಫರ್ಟ್[2]:** ಪೂರ್ವ ಜರ್ಮನಿಯ ಒಂದು ಜಿಲ್ಲೆ ಮತ್ತು ಜಿಲ್ಲಾ ಆಡಳಿತ ಕೇಂದ್ರ. ಈ ಕೈಗಾರಿಕಾನಗರವನ್ನು ಫ್ರಾಂಕ್‌ಫರ್ಟ್ ಆನ್ ಓಡರ್ ಎಂದೂ ಗುರುತಿಸಲಾಗುತ್ತದೆ. ಫ್ರಾಂಕ್‌ಫರ್ಟ್ ಜಿಲ್ಲೆಯ ವಿಸ್ತೀರ್ಣ 7,185 ಚ.ಕಿಮೀ. ಫ್ರಾಂಕ್‌ಫರ್ಟ್ ನಗರ ಬರ್ಲಿನ್‌ಗೆ ಆಗ್ನೇಯದಲ್ಲಿ 96 ಕಿಮೀ ದೂರದಲ್ಲಿದೆ.

ಹಿಂದೆ ಈ ನಗರದ ಉಪನಗರವಾಗಿದ್ದ ಓಡರ್ ನದಿಯ ಬಲದಂಡೆಯ ಭಾಗವನ್ನು 1945ರಲ್ಲಿ ಪೋಲೆಂಡಿಗೆ ವರ್ಗಾಯಿಸಲಾಯಿತು. ಅದನ್ನು ಈಗ ಸ್ಲುಬೆಟ್ಸ್ ಎಂದು ಕರೆಯುತ್ತಾರೆ. ಫ್ರಾಂಕ್‌ಫರ್ಟ್ ಕೈಗಾರಿಕಾ ನಗರ ಹಾಗೂ ವಿದೇಶಿ ವ್ಯಾಪಾರ ಕೇಂದ್ರ. ಇಲ್ಲಿ ಯಂತ್ರಗಳು, ಪೀಠೋಪಕರಣ, ಆಹಾರ ವಸ್ತುಗಳು, ಬೂಟುಗಳು ಮತ್ತು ಹತ್ತಿಬಟ್ಟೆಗಳ ತಯಾರಿಕಾ ಉದ್ಯಮಗಳಿವೆ. ಈ ನಗರ ಬರ್ಲಿನ್–ವಾರ್ಸಾ–ಮಾಸ್ಕೋ ರೈಲುಮಾರ್ಗದಲ್ಲಿದೆ. ಇಲ್ಲಿ ವಿವಿಧ ಉನ್ನತ ಶಿಕ್ಷಣ ಸಂಸ್ಥೆಗಳಿವೆ. (ಡಿ.ಎಸ್.ಜಿ.)

**ಫ್ರಾಂಕ್‌ಫರ್ಟ್[3]:** ಅಮೆರಿಕ ಸಂಯುಕ್ತ ಸಂಸ್ಥಾನದ ಕೆಂಟುಕಿ ರಾಜ್ಯದ ಆಡಳಿತ ಕೇಂದ್ರ. ಫ್ರಾಂಕಲಿನ್ ಜಿಲ್ಲೆಯ ಮುಖ್ಯ ನಗರ. ಲೂಯೀವಿಲ್ ನಗರಕ್ಕೆ ಪೂರ್ವದಲ್ಲಿ 72 ಕಿಮೀ ದೂರದಲ್ಲಿ ಕೆಂಟುಕಿ ನದಿ ದಡದಲ್ಲಿರುವ ಈ ನಗರದ ಸುತ್ತಲೂ ಹಸುರು ಮೈದಾನ ಮತ್ತು ಬೆಟ್ಟಗಳಿದ್ದು ಈ ನಗರವನ್ನು ಬ್ಲೂಗ್ರಾಸ್ ಕ್ಯಾಪಿಟಲ್ ಎಂದೂ ಕರೆಯುತ್ತಾರೆ. ಜನಸಂಖ್ಯೆ 648300 (2004).

ಜನರಲ್ ಜೇಮ್ಸ್ ವಿಲ್ಕಿನ್‌ಸನ್ 1786ರಲ್ಲಿ ಸ್ಥಾಪಿಸಿದ ಈ ನಗರ 1792ರಿಂದ ಕೆಂಟುಕಿ ರಾಜ್ಯದ ಆಡಳಿತಕೇಂದ್ರವಾಗಿದೆ. ನಗರ ಎರಡು ಸಾರಿ ಬೆಂಕಿಗೂ 1937ರಲ್ಲಿ ಓಹಿಯೋ ನದಿಯ ಪ್ರವಾಹಕ್ಕೂ ಗುರಿಯಾಗಿ ನಷ್ಟ ಅನುಭವಿಸಿತು. ಇದೊಂದು ಪ್ರಮುಖ ವ್ಯಾಪಾರ ಕ್ರೇಂದ್ರ. ಹೊಗೆಸೊಪ್ಪು, ಉತ್ತಮತಳಿಯ ಕುದುರೆಗಳಿಗೆ ಪ್ರಸಿದ್ಧ. ವಿಸ್ಕಿ, ಕ್ಯಾಂಡಿ, ಮರದ ಸಾಮಾನುಗಳು ವಿದ್ಯುತ್ ಮತ್ತು ಲೋಹ ವಸ್ತುಗಳು, ನೇಯ್ಗೆ ಬಟ್ಟೆ ಮುಂತಾದವನ್ನು ತಯಾರಿಸುತ್ತಾರೆ. ಕೆಂಟುಕಿ ರಾಜ್ಯ ಕಾಲೇಜು, ಕೆಲವು ಚರಿತ್ರಾರ್ಹ ಕಟ್ಟಡಗಳೂ ಇಲ್ಲಿವೆ. (ಡಿ.ಎಸ್.ಜಿ.)

**ಫ್ರಾಂಕ್‌ಫರ್ಟ್[4]:** ಅಮೆರಿಕ ಸಂಯುಕ್ತ ಸಂಸ್ಥಾನದ ಇಂಡಿಯಾನ ರಾಜ್ಯದ ಕ್ಲಿಂಟನ್ ಕೌಂಟಿಯ ಆಡಳಿತ ಕೇಂದ್ರ. ಕೊಕೊಮೋಗೆ ನೈಋತ್ಯದಲ್ಲಿ ಸು. 32 ಕಿಮೀ ದೂರದಲ್ಲಿದೆ. ಸುತ್ತಲ ಬೇಸಾಯಗಾರರ ವ್ಯಾಪಾರ ಕೇಂದ್ರ. ವಿದ್ಯುತ್ ಉಪಕರಣಗಳು, ಲೋಹ ವಸ್ತುಗಳು, ಆಹಾರ ಪದಾರ್ಥಗಳು ಮತ್ತು ಗೊಬ್ಬರ ಇಲ್ಲಿನ ಮುಖ್ಯ ತಯಾರಿಕೆಗಳು.

ಫ್ರಾಂಕ್‌ಫರ್ಟ್ ಎನ್ನುವ ಇನ್ನೆರಡು ಚಿಕ್ಕ ಪಟ್ಟಣಗಳುಂಟು. ಸಂಯುಕ್ತ ಸಂಸ್ಥಾನದ ಮಿಚಿಗನ್ ರಾಜ್ಯದ ಬೆಂಜಿ ಕಾಂಟಿಯಲ್ಲಿರುವ ಫ್ರಾಂಕ್‌ಫರ್ಟ್ ಬೆಟ್ಸಿ ನದಿ ಮುಖಜದಲ್ಲಿ ಮಿಚಿಗನ್ ಸರೋವರದ ದಂಡೆಯಲ್ಲಿದೆ. ಮತ್ಸ್ಯೋದ್ಯಮ ಈ ಪಟ್ಟಣದ ಪ್ರಮುಖ ಕೈಗಾರಿಕೆ. ಇನ್ನೊಂದು ನ್ಯೂಯಾರ್ಕ್ ರಾಜ್ಯದ ಹರ್ಕಿಮರ್ ಕೌಂಟಿಯ ಆಡಳಿತ ಪಟ್ಟಣ. ಯಾಟಿಕಾ ನಗರಕ್ಕೆ ಆಗ್ನೇಯದಲ್ಲಿ 16 ಕಿಮೀ ದೂರದಲ್ಲಿದೆ. ಕೈಗಾರಿಕಾ ಪಟ್ಟಣ. (ಡಿ.ಎಸ್.ಜಿ.)

**ಫ್ಲಾರಿಡ:** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ಈ ರಾಜ್ಯವನ್ನು ಸೂರ್ಯ ಬೆಳಗುವ ನಾಡೆಂದೂ ಪರ್ಯಾಯ ದ್ವೀಪ ರಾಜ್ಯವೆಂದೂ ಕರೆಯಲಾಗುತ್ತದೆ. ಇದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಆಗ್ನೇಯದ ತುತ್ತ ತುದಿಯಲ್ಲಿದೆ. ಈ ರಾಜ್ಯವನ್ನು ಉತ್ತರದಲ್ಲಿ ಅಲಬಾಮ ಮತ್ತು ಜಾರ್ಜಿಯ ರಾಜ್ಯಗಳೂ ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರ, ದಕ್ಷಿಣದಲ್ಲಿ ಫ್ಲಾರಿಡಕ್ಕೆ 160 ಕಿಮೀ ದೂರದಲ್ಲಿರುವ ಕ್ಯೂಬವನ್ನು ಬೇರ್ಪಡಿಸಿರುವ ಫ್ಲಾರಿಡ ಜಲಸಂಧಿ ಮತ್ತು ಪಶ್ಚಿಮದಲ್ಲಿ ಮೆಕ್ಸಿಕೊ ಕೊಲ್ಲಿ ಮತ್ತು ಅಲಬಾಮ ರಾಜ್ಯ ಸುತ್ತು ವರೆದಿವೆ. ಉತ್ತರ ಅಕ್ಷಾಂಶ $24^0 30'$–$31^0$ ಪಶ್ಚಿಮ ರೇಖಾಂಶ $80^0$–$87^0 38'$ಗಳ ನಡುವೆ ಹಬ್ಬಿರುವ ಈ ರಾಜ್ಯ ದಕ್ಷಿಣದಲ್ಲಿ ಸಮುದ್ರದೊಳಕ್ಕೆ 640 ಕಿಮೀ ಚಾಚಿಕೊಂಡಿದೆ. ವಿಸ್ತೀರ್ಣ 1,51,982 ಚ.ಕಿಮೀ. ಜನಸಂಖ್ಯೆ 15982378 (2000). ರಾಜಧಾನಿ ಟಲಹಸಿ.

ಮೇಲ್ಮೈಲಕ್ಷಣ: ಫ್ಲಾರಿಡದ ಭೂಮಿ ಚಪ್ಪಟೆ ಎನ್ನಬಹುದು. ಇದನ್ನು ಭೌಗೋಳಿಕವಾಗಿ ಮೂರು ಸಾಮಾನ್ಯ ವಿಭಾಗಗಳನ್ನು ಮಾಡಬಹುದು. ಇವುಗಳಲ್ಲಿ ಮೊದಲನೆಯ ಅಟ್ಲಾಂಟಿಕ್ ಸಮುದ್ರ ತೀರದ ತಗ್ಗು ಬಯಲು ಪೂರ್ವಭಾಗದ ಉದ್ದಕ್ಕೂ ಆವರಿಸಿ ಒಳನಾಡಿಗೆ 48 ಕಿಮೀ ರಿಂದ 161 ಕಿಮೀ ಗಳವರೆಗೆ ಪ್ರಸರಿಸಿದೆ. ತೀರದ ಅನತಿದೂರದಲ್ಲಿ ಮರಳಿನ ಕಟ್ಟೆಗಳು, ಅವುಗಳ ಹಿಂದೆ ಉಪ್ಪುನೀರಿನ ಹರವುಗಳು ಹಾಗೂ ಮರಳಿನ ದಿಬ್ಬಗಳು ಮತ್ತು ಜೌಗುಗಳು ಇರುವುದು ಈ ಪ್ರದೇಶದ ವೈಶಿಷ್ಟ್ಯ. ದಕ್ಷಿಣದಲ್ಲಿ ಬಿಸ್ಕೇನಿ ಕೊಲ್ಲಿಯಿಂದ ಕೀವೆಸ್ಟ್‌ವರೆಗೆ ಫ್ಲಾರಿಡದ ತಗ್ಗು ದ್ವೀಪಗಳು ಮಣಿ ಮಾಲೆಯಂತೆ ದಕ್ಷಿಣಕ್ಕೆ ಹಬ್ಬಿವೆ. ಈ ತಗ್ಗು ದ್ವೀಪಗಳಲ್ಲಿ ಕೀವೆಸ್ಟಿನ ಪಶ್ಚಿಮಕ್ಕಿರುವ ಡ್ರೈಟಾರ್ಟುಗಸ್ ದ್ವೀಪಗಳ ಗುಂಪು ಕೊನೆಯದು. ಕಿಲಾರ್ಗೊ ಇಲ್ಲಿನ ದೊಡ್ಡ ದ್ವೀಪ. ಎರಡನೆಯ ಭೂ ವಿಭಾಗದ ಬಯಲು ಭೂಶಿರದ ಪಶ್ಚಿಮ ಭಾಗದಲ್ಲಿದೆ. ಇದರ ಅಗಲ 48 ಕಿಮೀ, ಇದರ ತೀರ ಒರಟಾಗಿದ್ದು ಅನೇಕ ಕೊಲ್ಲಿಗಳನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಗುಲ್ಮಗಳಿರುವ ಜವಳು ಭೂಮಿ ಕೆಲವು ಕಡೆ ಬಹುದೂರದವರೆಗೆ ಒಳಸರಿದಿದೆ. ಕೊನೆಯ ವಿಭಾಗದಲ್ಲಿ ಬಯಲು ಭೂಶಿರದ ಉತ್ತರ ಮಧ್ಯಭಾಗ ಮತ್ತು ವಾಯವ್ಯದ ಉದ್ದನ್ನ ತೋಳು ಸೇರುತ್ತವೆ. ಇದರ ಸರಾಸರಿ ಎತ್ತರ ಸಮುದ್ರ ತೀರದಿಂದ 61–91 ಮೀ. ಲೇಕ್‌ವುಡ್ಡಿನ ಉತ್ತರಕ್ಕೆ ವಾಲ್ಟನ್ ಕೌಂಟಿಯಲ್ಲಿರುವ ಒಂದು ಅನಾಮಧೇಯ ಗುಡ್ಡವೇ ಈ ರಾಜ್ಯದ ಅತಿ ಎತ್ತರ ಪ್ರದೇಶ (105 ಮೀ). ಈ ವಿಭಾಗ ಗುಡ್ಡ ಮತ್ತು ಸರೋವರಗಳಿಂದ ಕೂಡಿದೆ. ಮೇಲ್ಭೂಮಿ ಪ್ರದೇಶದ ಪಶ್ಚಿಮ ತೋಳಿನ ಅಗಲ 48 ಕಿಮೀ ನಿಂದ 80 ಕಿಮೀ. ಉದ್ದ ಸು. 443 ಕಿಮೀ, ಇಲ್ಲಿ ಕೆಂಪು ಜೇಡಿಮಣ್ಣಿನ ಗುಡ್ಡ ಹಾಗೂ ಫಲವತ್ತಾದ ಕೊಳ್ಳಗಳು ಇವೆ. ಒಕಚೋಬಿ ಸರೋವರದ ದಕ್ಷಿಣಕ್ಕೆ ಸಿಹಿ ನೀರಿನ ಜೌಗು ಮತ್ತು ಜವುಳು ಭೂಮಿಯ ಪ್ರದೇಶವಿದೆ.

ಈ ರಾಜ್ಯದ ನದಿಗಳಲ್ಲಿ 443 ಕಿಮೀ ಉದ್ದನೆಯ ಸೆಂಟ್ ಜಾನ್ಸ್ ನದಿಯೇ ದೊಡ್ಡದು. ಅದು ಒಕಚೋಬಿ ಜಲಾಶಯದ ಹತ್ತಿರದ ತನ್ನ ಮೂಲದಿಂದ ಪೂರ್ವ ತೀರಕ್ಕೆ ಸಮಾಂತರದಲ್ಲಿ ಉತ್ತರದತ್ತ ಹರಿದು ಫ್ಲಾರಿಡಾ ಮತ್ತು ಜಾರ್ಜಿಯಾಗಳ ನಡುವಿನ ಭಾಗಶಃ ಗಡಿಯಾಗಿ ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ ಪೆರ್ಡಿಡೊ ಫ್ಲಾರಿಡದ ಎಲ್ಲೆಯಲ್ಲಿ ಹರಿದು ಮೆಕ್ಸಿಕೊ ಕೊಲ್ಲಿಯನ್ನು ಸೇರುತ್ತದೆ ಫ್ಲಾರಿಡದ ವಾಯವ್ಯದಲ್ಲಿ ಹರಿಯುವ ಅಪಲಾಚಿ ಕೊಲ ಒಂದು ಮುಖ್ಯ ನದಿ. ಫ್ಲಿಂಟ್ ಮತ್ತು ಚಟ ಹೂಚೀ ನದಿಗಳು ಕೂಡುವಲ್ಲಿ ಹುಟ್ಟುವ ಈ ನದಿ ಮೆಕ್ಸಿಕೊ ಕೊಲ್ಲಿಯನ್ನು ಸೇರುತ್ತದೆ. ಇವಲ್ಲದೆ ಸೆಂಟ್‌ಮೇರಿ, ಸವಾನಿ, ಅಸಿಲ್ಲ, ಹಿಲ್ಸ್ ಬರೋ, ಇಂಡಿಯನ್, ಕಿಸ್ಮೀ, ಪೀಸ್ ಮತ್ತು ಯಲ್ಲೋ ನದಿಗಳಿವೆ. ಸು. 30,000 ಸರೋವರಗಳು ಮಧ್ಯ ಫ್ಲಾರಿಡದಲ್ಲಿವೆ. ಇವುಗಳಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ ಮಿಚಿಗನ್ ಸರೋವರ ಬಿಟ್ಟರೆ ಫ್ಲಾರಿಡದ ಒಕಚೋಬಿ ಸರೋವರ ಒಂದೇ ದೊಡ್ಡದು. ಇದು 1800 ಚ.ಕಿಮೀ ವಿಸ್ತೀರ್ಣವನ್ನಾಕ್ರಮಿಸಿದೆ. ರಾಜ್ಯದಲ್ಲಿ 17 ದೊಡ್ಡ ಹಾಗೂ ಅಸಂಖ್ಯ ಸಣ್ಣಸಣ್ಣ ಬುಗ್ಗೆಗಳಿವೆ. ಅನೇಕ ಬುಗ್ಗೆಗಳ ನೀರು ದೇಹಾರೋಗ್ಯಕರವೆನಿಸಿವೆ. ಟಲಹಸಿ ಬಳಿ ಇರುವ ವಾಕುಲ್ಲಾ ಬುಗ್ಗೆ ಆಳವಾದದ್ದು. ಸಿಲ್ವರ್‌ಸ್ಪ್ರಿಂಗ್ಸ್ ರಾಜ್ಯದ ಅತಿ ದೊಡ್ಡ ಚಿಲುಮೆ. ಅನೇಕ ಚಿಲುಮೆಗಳ ನೀರು ಅವುಗಳ ತಳ ಕಾಣುವಷ್ಟು ಶುದ್ಧವಾಗಿವೆ.

ಹವಾಗುಣ: ಸೌಮ್ಯ ಹವಾಗುಣ. ಚಳಿಗಾಲದಲ್ಲಿ ಮಿಸಿಸಿಪಿಯ ಪೂರ್ವಕ್ಕಿರುವ ಎಲ್ಲ ರಾಜ್ಯಗಳಿಗಿಂತಲೂ ಇಲ್ಲಿ ಹೆಚ್ಚು ಬಿಸಿಲು ಇರುತ್ತದೆ. ವಾರ್ಷಿಕ ಸರಾಸರಿ ಮಳೆ ಸು. 135 ಸೆಂಮೀ ಅದರಲ್ಲಿ ಹೆಚ್ಚು ಭಾಗ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಬೀಳುವ ಕಾರಣ ಬೇಸಗೆಯ ಉಷ್ಣತೆ ಮಿತವಾಗುತ್ತದೆ. ಸರಾಸರಿ ಉಷ್ಣತೆ $21^0$ಸೆ. ಇರುವುದಾದರೂ ರಾಜ್ಯ ಕೆಲವೊಮ್ಮೆ ಕೊರೆಯುವ ಚಳಿಗೆ ತುತ್ತಾಗುವುದು. ಕೆರಿಬಿಯನ್ ಸಮುದ್ರದಿಂದ ಬೀಸುವ ಸುಂಟರಗಾಳಿಗಳಿಂದಾಗಿ ಅನೇಕ ಸಲ ಇಲ್ಲಿ ಆಸ್ತಿ ಮತ್ತು ಪ್ರಾಣಹಾನಿಗಳಾಗುವುದುಂಟು.

ಸಸ್ಯ ಮತ್ತು ಪ್ರಾಣಿಸಂಪತ್ತು: ಈ ರಾಜ್ಯದಲ್ಲಿ 300ಕ್ಕೂ ಹೆಚ್ಚು ಜಾತಿಯ ಮರಗಳಿವೆ. ಪೈನ್, ಓಕ್, ಸೈಪ್ರೆಸ್, ತಾಳೆ ಮತ್ತು ಗುಲ್ಮಗಳು ಹಾಗೂ ಮ್ಯಾಗ್ನೋಲಿಯ, ಯೂ, ಹಾಲಿ ಮತ್ತು ಹಿತರಿ ಸ್ಥಳೀಯ ಮುಖ್ಯ ಮರಗಳು. ರಾಯಲ್ ಪಾಮ್ (ರಾಜತಾಳೆ) ಮತ್ತು ತೆಂಗು ಉಷ್ಣವಲಯದವು, ರೆಡ್‌ಮೇಪಲ್, ಸ್ವೀಟ್‌ಗಮ್ ಮತ್ತು ಟುಲಿಪ್ ಮರ ಉತ್ತರದ ಜಾತಿಗಳಲ್ಲಿ ಸೇರುತ್ತವೆ. ಇಲ್ಲಿನ ಕಾಡು, ಹುಲ್ಲು ಗಾಡು ಮತ್ತು ಜವುಳು ಪ್ರದೇಶಗಳಲ್ಲಿ 3500ಕ್ಕೂ ಹೆಚ್ಚು ಜಾತಿಯ ಸಸ್ಯಗಳಿವೆ.

ಕೃಷಿ: ಕೃಷಿ ಉತ್ಪಾದನೆಗೆ ಫ್ಲಾರಿಡದಲ್ಲಿ ಸು. 6 ಮಿ. ಹೆ. ಭೂಪ್ರದೇಶವನ್ನು ಬಳಸಿಕೊಳ್ಳಲಾಗಿದೆ. ವರ್ಷಕ್ಕೆ ಸು. 1.5 ಬಿ ಡಾಲರ್‌ಗಳ ನಿವ್ವಳ ಆದಾಯವಿದ್ದು ರಾಜ್ಯದ ಒಟ್ಟು ಉತ್ಪಾದನೆಯ 1/5 ಭಾಗ ಕೃಷಿಯಿಂದ ಬರುತ್ತಿದೆ. ಕಿತ್ತಳೆ ಮತ್ತು ಜಂಬೀರ ಜಾತಿಯ ಹಣ್ಣುಗಳ ಬೆಳೆಗೆ ಫ್ಲಾರಿಡ ಪ್ರಸಿದ್ಧ. ಇದು ಕಬ್ಬಿನ ಬೆಳೆಯಲ್ಲೂ ಮುಂದಿದೆ. ತರಕಾರಿ ಮುಖ್ಯ ಬೆಳೆಗಳಲ್ಲಿ ಆಲೂಗೆಡ್ಡೆ, ಟೊಮಟೋ, ಹುರುಳಿಕಾಯಿ, ಗೆಣಸು, ಕರಬೂಜ, ನಿಂಬೆ, ಟ್ಯಾಂಜೆರೀನ್, ನೆಲಗಡಲೆ, ಹತ್ತಿ, ತಂಬಾಕು, ನೆಲಮುಳ್ಳಿಹಣ್ಣು ಮುಂತಾದವನ್ನು ಬೆಳೆಯುತ್ತಾರೆ. ಕೋಳಿ ಮತ್ತು ದನದ ಮಾಂಸದ ಉತ್ಪಾದನೆಯಲ್ಲೂ ಈ ರಾಜ್ಯ ಮುಂಚೂಣಿಯಲ್ಲಿದೆ. ಮೀನುಗಾರಿಕೆ ಮುಖ್ಯ ಉದ್ಯೋಗಗಳಲ್ಲಿ ಒಂದು.

ಕೈಗಾರಿಕೆ: ಫ್ಲಾರಿಡದ ಕೈಗಾರಿಕಾ ಅಭಿವೃದ್ಧಿ ಮುಖ್ಯವಾಗಿ 20ನೆಯ ಶತಮಾನದಿಂದ ಪ್ರಾರಂಭವಾಯಿತು. ಆಹಾರ ಸಂಸ್ಕರಣ, ವಿದ್ಯುತ್ ಉಪಕರಣಗಳು, ಸಾರಿಗೆಯ ಉಪಕರಣಗಳು, ಲೋಹಗಳ ಉತ್ಪಾದನೆ, ಕಾಗದ, ಕೃತಕ ನಾರು, ಪ್ಲಾಸ್ಟಿಕ್ ಮತ್ತು ರಾಳ ಇವು ಇಲ್ಲಿನ ಮುಖ್ಯ ಕೈಗಾರಿಕೆಗಳು. ರಾಷ್ಟ್ರದ ಟರ್ಪೆಂಟೈನ್ ರಾಳದ ಉತ್ಪಾದನೆಯಲ್ಲಿ ನಾಲ್ಕನೆಯ ಒಂದು ಭಾಗ ಫ್ಲಾರಿಡದ್ದು. 1956ರಿಂದ ಅನೇಕ ಕ್ಷಿಪಣಿ ಮತ್ತು ಜೆಟ್ ಎಂಜಿನ್ನುಗಳ ಕಾರ್ಖಾನೆಗಳನ್ನು ಫ್ಲಾರಿಡದಲ್ಲಿ ಸ್ಥಾಪಿಸಲಾಗಿದೆ. 1963ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಕ್ಷಿಪಣಿ ಸಂಶೋಧನಾ ಕೇಂದ್ರ ಕೇಪ್ ಕೆನಡಿಯಲ್ಲಿದೆ.

ಖನಿಜಗಳು: ಫಾಸ್ಫೇಟ್ ಶಿಲೆ ಮತ್ತು ಚವಳು ಮಣ್ಣು ಇವುಗಳ ಉತ್ಪಾದನೆ ಮತ್ತು ಅಲ್ಯೂಮಿನಿಯಮ್ ಯುರೇನಿಯಮ್‌ಗಳನ್ನು ಫಾಸ್ಫೇಟ್‌ಶಿಲೆಯಿಂದ ಸಂಗ್ರಹಿಸಲಾಗುತ್ತದೆ. ಟೈಟಾನಿಯಮ್ಮಿನ ಉತ್ಪಾದನೆಯಲ್ಲಿ ಫ್ಲಾರಿಡದ ಸ್ಥಾನ ರಾಷ್ಟ್ರದಲ್ಲಿ ಎರಡನೆಯದು. ಜಿರ್ಕೋನಿಯಮ್ ಮತ್ತು ಹ್ಯಾಫ್ನಿಯಮ್ ಈ ಹೊಸ ಖನಿಜಗಳು ಇಲ್ಲಿ ದೊರೆಯುತ್ತವೆ.

ಪ್ರವಾಸೋದ್ಯಮ: ಫ್ಲಾರಿಡದ ಪ್ರವಾಸೋದ್ಯಮ ರಾಜ್ಯಕ್ಕೆ ಅತಿಹೆಚ್ಚು ಆದಾಯವನ್ನು ತರುತ್ತಿದೆ. ಸ್ವಯಂಯಾನಗಳು, ಉತ್ತಮ ಮಾರ್ಗಗಳು ಎರಡನೆಯ ಮಹಾ ಯುದ್ಧದಿಂದೀಚೆಗೆ ಹೆಚ್ಚಿದ ವಿಮಾನಸಂಚಾರದಿಂದ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಗಿದೆ. ಪ್ರವಾಸಿಗಳಿಗೆ ಇಲ್ಲಿಯೇ ಉತ್ತಮ ಹವಾಗುಣ, ಪ್ರವಾಸಿಧಾಮಗಳು ಮತ್ತು ಜಲಕ್ರೀಡಾ ಸೌಕರ್ಯಗಳ ಜೊತೆಗೆ ವಿವಿಧ ಅನೇಕ ಬಗೆಯ ಆಕರ್ಷಣೆಗಳಿವೆ. ಪ್ರಸಿದ್ಧ ಬಾಹ್ಯಾಕಾಶಯಾನ ಕೇಂದ್ರ ಕೇಪ್ ಕೆನಡಿ, ಆಫ್ರಿಕದ ಪ್ರಾಣಿಗಳು, ಅಪರೂಪದ ಪಕ್ಷಿಗಳು ಇರುವ ಬುಷ್ ಗಾರ್ಡನ್ಸ್, ಸೈಪ್ರಸ್ ಗಾರ್ಡನ್ಸ್, ಗಿಳಿಗಳ ಕಾಡು, ಮಿಯಾಮಿ ನಗರ ಮತ್ತು ಹೆಚ್ಚು ವಿಲಾಸೀ ಹೋಟೆಲುಗಳನ್ನು ಹೊಂದಿರುವ ಮಿಯಾಮೀತೀರ, ಪಾಮ್‌ಬೀಚ್, ಸಂಯುಕ್ತ ಸಂಸ್ಥಾನಗಳ ಅತ್ಯಂತ ಹಳೆಯನಗರ ಸೇಂಟ್ ಆಗಸ್ಟೈನ್, ಫೋರ್ಟ್‌ಲ್ಯಾಂಡರ್‌ಡೇಲ್, ಸಾರಾಸಾಟಾ, ಕೀವೆಸ್ಟ್, ಸೇಂಟ್ ಪೀಟರ್ಸ್‌ಬರ್ಗ್, ಪೆನ್ಸಕೊಲ, ಪನಾಮ ನಗರ, ಎವರ್‌ಗ್ಲೈಡ್ಸ್ ರಾಷ್ಟ್ರೀಯ ಉದ್ಯಾನ ಮೊದಲಾದ ಸ್ಥಳಗಳಲ್ಲಿ ವಿಶೇಷ ಆಕರ್ಷಣೆಗಳಿವೆ.

ಸಾರಿಗೆ ಮತ್ತು ಸಂಪರ್ಕ: ರಾಜ್ಯದಲ್ಲಿ ಸು. 7567 ಕಿಮೀ ಉದ್ದದ ರೈಲುಮಾರ್ಗಗಳಿವೆ. 22540 ಕಿಮೀ ಉದ್ದದ ರಾಜ್ಯ ಸರ್ಕಾರದಾಡಳಿತಕ್ಕೆ ಸೇರಿದ ಮಾರ್ಗಗಳೂ 66,010 ಕಿಮೀ ಉದ್ದದ ರಾಜ್ಯ ಸರ್ಕಾರದಾಡಳಿತಕ್ಕೆ ಸೇರಿದ ಮಾರ್ಗಗಳೂ ಹಾಗೂ 32640 ಕಿಮೀ ಉದ್ದದ ಕಚ್ಚಾರಸ್ತೆಯೂ ಇವೆ. ಮಿಯಾಮಿ ಮತ್ತು ಟಂಪಾಗಳಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ. ಸ್ಥಳೀಯ ಮತ್ತು ಅನೇಕ ವಿದೇಶೀ ವಿಮಾನ ಸಂಸ್ಥೆಗಳು, 100ಕ್ಕೂ ಹೆಚ್ಚು ವಾಣಿಜ್ಯ ಹಾಗೂ ಪೌರಸಂಸ್ಥೆಗಳ ವಿಮಾನ ನಿಲ್ದಾಣಗಳನ್ನು ಬಳಸುತ್ತವೆ. 50ಕ್ಕೂ ಹೆಚ್ಚು ಮಿಲಿಟರಿ ವಿಮಾನ ನಿಲ್ದಾಣಗಳು ಇಲ್ಲಿವೆ. 13 ಆಳನೀರಿನ ಬಂದರುಗಳು ಆಮದು ಮತ್ತು ರಫ್ತು ವ್ಯಾಪಾರಕ್ಕೆ ಸಂಬಂಧಿಸಿದ ಸರಕನ್ನು ನಿರ್ವಹಿಸುತ್ತವೆ. (ಜಿ.ಕೆಯು.)

**ಫ್ಲಾರೆನ್ಸ್:** ಇಟಲಿ ದೇಶದ ಪ್ರಸಿದ್ಧ ಪ್ರವಾಸಿ ಮತ್ತು ಕಲಾಕೇಂದ್ರ, ಕಲಾಭವನಗಳ ತವರು. ಪುಷ್ಪನಗರ, ಇಟಲಿಯ ಅಥೆನ್ಸ್ ಎಂದು ಹೆಸರಾದ ಈ ನಗರ ಇಟಲಿಯ ಫೀರೆಂಟ್ಸಾ (ಫ್ಲಾರೆನ್ಸ) ಪ್ರಾಂತ್ಯದ ಆಡಳಿತ ಕೇಂದ್ರ. ವಿಸ್ತೀರ್ಣ 102 ಚ.ಕಿಮೀ, ಜನಸಂಖ್ಯೆ 4,03,294 (2001). ನಗರ ಫೈಸಾಲ್ ಗುಡ್ಡಗಳ ಬುಡದಲ್ಲಿ ಆರ್ನೊ ನದಿಯ ಫಲವತ್ತಾದ ಕಣಿವೆಯ ಎರಡು ದಂಡೆಗಳ ಮೇಲೆ ಅಸಮಭಾಗಗಳಲ್ಲಿ ಹರಡಿದೆ. ನಗರದ ಅಧಿಕಭಾಗ ನದಿಯ ಉತ್ತರದ ದಂಡೆಯ ಮೇಲಿದೆ. ನಗರ ಸಂಪರ್ಕಕ್ಕೆ ನೇರವಾಗಿ ನದಿಯ ಮೇಲೆ ಆರು ಕಡೆ ಸೇತುವೆಗಳನ್ನು ಕಟ್ಟಲಾಗಿದೆ. ಸಾಂತಾ ಟ್ರೆನಿಲಾ ಸೇತುವೆಯನ್ನು ಅಲ್ಲೆ ಮೊದಲಿದ್ದ ಸೇತುವೆಯ ರಚನಾ ಕ್ರಮಕ್ಕೆ ಅಳವಡಿಸಿ ಪುನಃ ರಚಿಸಲಾಗಿದೆ. ಫ್ಲಾರೆನ್ಸ್ ನಗರದುದ್ದಕ್ಕೂ ಆರ್ನೊನದಿ ಕಿರಿಯಗಲದಲ್ಲಿ ಹರಿಯುವುದು. ನಗರದ ಲಾಂಛನ ಹೂವಿನ ಚಿತ್ರ ಫ್ಲಾರೆನ್ಸ್ ನಗರದ ಒಳರಚನೆ ಹೆಚ್ಚು ಕಡಿಮೆ ರೋಮನ್ನರ ಮ್ಯುನಿಸಿಪಿಯಮ್ಮನ್ನು ಹೋಲುತ್ತದೆ. ರೋಮನ್ನರ ಕಾಲದ ವಾಣಿಜ್ಯ ಕೇಂದ್ರ ಮತ್ತು ಸಾರ್ವಜನಿಕರು ಸೇರುತ್ತಿದ್ದ ಸಭಾಸ್ಥಾನ ಇಂದಿನ ನಗರ ಕೇಂದ್ರವಾಗಿರುವ ಪಿಯಾಜಾ ಡೆಲ್ಲಾ ರಿಪಬ್ಲಿಕಾ. ನಗರದ ದಕ್ಷಿಣ ಗುಡ್ಡಗಳಲ್ಲಿರುವ ಆಧುನಿಕ ನಿರ್ಮಾಣ ವಯಲ್ ಡಿ ಕಾಲಿ ವಿಹಾರಪಥದ ಪಿಯಾಸೆಲೆ ಮೈಕೆಲೆಂಜಲೊದಿಂದ ಕಾಣುವ ನದಿ, ಸೇತುವೆ, ಗುಮ್ಮಟ, ಮಾರುಕಟ್ಟೆ, ಸುಂದರವಾದ ನಗರ ಚೌಕ ಮತ್ತು ವಿಶಾಲ ಬೀದಿಗಳ ದೃಶ್ಯ ಆಕರ್ಷಕವಾದದ್ದು. ಇದು ಇಟಲಿಯ ಸಾಹಿತ್ಯ ಮತ್ತು ಕಲೆಗಳ ಪುನರುಜ್ಜೀವನದ ತೊಟ್ಟಿಲೆನಿಸಿದೆ. ಫ್ಲಾರೆನ್ಸ್ ಇಂದು ಪ್ರಪಂಚದ ಒಂದು ಮುಖ್ಯ ಕಲಾಕೇಂದ್ರವೆನಿಸಿದೆ. ಈ ನಗರದ ಸುತ್ತು ಮುತ್ತಲಿನ ಗುಡ್ಡಗಳಲ್ಲಿ ನೈಸರ್ಗಿಕ ದೃಶ್ಯ ಫ್ಲಾರೆನ್ಸಿನ ಮತ್ತೊಂದು ಮುಖ್ಯ ಆಕರ್ಷಣೆ.

ಜನಜೀವನ: ಫ್ಲಾರೆನ್ಸಿನ ಸಹಸ್ರಾರು ನಿವಾಸಿಗಳು ಉಪನಗರಗಳಲ್ಲಿಯ ಕಾರ್ಖಾನೆಗಳಲ್ಲಿ ದುಡಿಯುತ್ತಾರೆ. ಜೊತೆಗೆ ಪ್ರವಾಸೋದ್ಯಮ ಹಾಗೂ ಕಾಚು, ಮಣ್ಣು ಮತ್ತು ಕಬ್ಬಿಣ ಸಾಮಾನುಗಳ ಮತ್ತು ಚರ್ಮದ ವಸ್ತುಗಳು, ಬೆಳ್ಳಿ ಬಂಗಾರಗಳು, ಆಭರಣಗಳ ತಯಾರಿಕೆ, ಕಲೆಗಳ ನಕಲುಗಳು, ಉನ್ನತಮಟ್ಟದ ಬಟ್ಟೆ ಮತ್ತು ಪಾದರಕ್ಷೆ ತಯಾರಿಕೆ ಮೊದಲಾದ ಸಾಂಪ್ರದಾಯಿಕ ಕಲಾ ಕೌಶಲಗಳು ಇಲ್ಲಿಯ ಜನರಿಗೆ ಮುಖ್ಯ ಜೀವನಾಧಾರಗಳಾಗಿವೆ. (ಜಿ.ಕೆಯು.;ಎಸ್.ಕೆ.ಎಸ್.)

**ಫ್ಲ್ಯಾಮ್‌ಸ್ಟೀಡ್, ಜಾನ್:** 1646–1719. ಇಂಗ್ಲೆಂಡಿನ ಖಗೋಳವಿಜ್ಞಾನಿ. ಇವನು 1646 ಆಗಸ್ಟ್ 19 ರಂದು ಜನಿಸಿದ. ತಂದೆ ಸ್ಟೀಫನ್ ಫ್ಲ್ಯಾಮ್‌ಸ್ಟೀಡ್, ತಾಯಿ ಮೇರಿ ಸ್ಪೇಟ್‌ಮನ್. ಚಿಕ್ಕಂದಿನಲ್ಲೇ ತಾಯಿ ಹಾಗೂ ಮಲತಾಯಿಯರನ್ನು ಕಳೆದುಕೊಂಡ ಇವನು ಡರ್ಬಿಯಲ್ಲಿಯ ಉಚಿತಶಾಲೆ ಸೇರಬೇಕಾಯಿತು. ಉನ್ನತ ಶಿಕ್ಷಣಕ್ಕಾಗಿ ಪೂರ್ವಭಾವೀ ಶಿಕ್ಷಣ ಪಡೆದನಾದರೂ ತೀವ್ರ ಅನಾರೋಗ್ಯದ ಪರಿಣಾಮವಾಗಿ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ. ಪದೇ ಪದೇ ಕಾಯಿಲೆ ಬೀಳುತ್ತಿದ್ದುದರಿಂದ ವಿಶ್ವವಿದ್ಯಾಲಯ ಅಧ್ಯಯನಕ್ಕೆ ಅವಕಾಶ ಒದಗಲಿಲ್ಲ.

ಹಾಸಿಗೆ ಹಿಡಿದು ಮಲಗಿದ್ದ ವೇಳೆ ಖಗೋಳವಿಜ್ಞಾನಿಗಳೊಡನೆ ವ್ಯವಹರಿಸಿ ಖಗೋಳವಿಜ್ಞಾನವನ್ನು ಬಹಳ ಆಸಕ್ತಿಯಿಂದ ಓದಿದ. 1662 ಸೆಪ್ಟೆಂಬರ್ 12ರಂದು ಸಂಭವಿಸಿದ ಸೂರ್ಯಗ್ರಹಣವನ್ನು ವೀಕ್ಷಿಸಿ ಇದರ ಬಗ್ಗೆ ಖಗೋಳವಿಜ್ಞಾನ ವಿಷಯಗಳನ್ನು ಕುರಿತ ಇವನ ಕೆಲವು ಪ್ರಕಟಣೆಗಳಿಂದ (1670) ಖಗೋಳ ವಿಜ್ಞಾನಿಗಳ ಗಮನ ಇವನತ್ತ ಹರಿಯಿತು. ಅದೇ ವರ್ಷ ಈತನಿಗೆ ನ್ಯೂಟನ್ನನ ಪರಿಚಯವಾಯಿತು.

ಭೂಮಿಯ ಸುತ್ತ ಚಂದ್ರನ ಚಲನೆಯನ್ನೂ ಚಂದ್ರನಿಂದ ನಕ್ಷತ್ರಗಳು ಮರೆಯಾಗುವ ಸನ್ನಿವೇಶವನ್ನೂ (ನಕ್ಷತ್ರಗ್ರಹಣ) ಕುರಿತಂತೆ ಇವನು ಬಹಳಷ್ಟು ಅಧ್ಯಯನಗಳನ್ನೂ ವೀಕ್ಷಣೆಗಳನ್ನೂ ನಡೆಸಿದ. ಚಾಂದ್ರ ಸಿದ್ಧಾಂತ ಎಂದು ಕರೆಯಲಾಗುವ ಈ ವಿಷಯ ಇವನ ಜೀವನದ ಬಲು ಮುಖ್ಯ ಸಾಧನೆಯಾಯಿತು. ಪ್ರಚಲಿತವಾಗಿದ್ದ ಪ್ರಾಚೀನ ಚಾಂದ್ರ ಸಿದ್ಧಾಂತವೊಂದನ್ನು (ಜೆರಿಮೈಯ ಹಾರೋಕ್ಸ್) ಮೂರುಬಾರಿ (1680, 1690 ಮತ್ತು 1703) ಪರಿಷ್ಕರಿಸಿ, ಚಾಂದ್ರಚಲನಗತಿಗಳನ್ನು ಕುರಿತ ನಿರ್ದಿಷ್ಟ ನಿರೂಪಣೆ ಕೊಟ್ಟ ಖ್ಯಾತಿ ಇವನದು. ಇವನ ನಿರೂಪಣೆಯನ್ನು ಆಧಾರವಾಗಿರಿಸಿಕೊಂಡು ಮುಂದೆ ನ್ಯೂಟನ್ ಚಂದ್ರನಚಲನೆ ವೀಕ್ಷಿಸಿ ಚಾಂದ್ರ ಸಿದ್ಧಾಂತವನ್ನು ಮತ್ತಷ್ಟು ಉತ್ತಮಪಡಿಸಿದ. 1690ರ ದಶಕದ ವರ್ಷಗಳಲ್ಲಿ ಈತ ನಡೆಸಿದ ಮೂಲಭೂತ ಖಗೋಳವೀಕ್ಷಣೆಗಳು ಬ್ರಾಡ್ಲೀಯ ವೀಕ್ಷಣೆಗಳಿಗಿಂತಲೂ ಹೆಚ್ಚು ನಿಖರವಾಗಿದ್ದುವು. ಗ್ರೀನಿಚ್‌ನ ರೇಖಾಂಶವನ್ನೂ ಕ್ರಾಂತಿವೃತ್ತದ ಬಾಗುವನ್ನೂ ಅಯನಬಿಂದುಗಳ ಸ್ಥಾನಗಳನ್ನೂ ನಿಖರವಾಗಿ ನಿರ್ಧರಿಸಿ ಮುಂದೆ ನಿರಪೇಕ್ಷ ಘಂಟಾವೃತ್ತಾಂಶಗಳ ವೀಕ್ಷಣೆಗೆ ಕೌಶಲಯುಕ್ತ ವಿಧಾನವೊಂದನ್ನು ರೂಪಿಸಿದ. ಪ್ರತಿಯೊಂದು ಅಯನಬಿಂದುವಿನ ಸಮೀಪದಲ್ಲೂ ಸೂರ್ಯನಿಗೆ ಏಕರೂಪದ ಯಾಮ್ಯೋತ್ತರ ಉನ್ನತಿ (ಐಡೆಂಟಿಕಲ್ ಮೆರಿಡಿಯನ್ ಆಲ್ಟಿಟ್ಯೂಡ್) ಇದ್ದಾಗ, ಸೂರ್ಯ ಯಾಮ್ಯೋತ್ತರ ರೇಖೆ ಹಾಯುವುದಕ್ಕೂ ಮತ್ತೊಂದು ಪ್ರಕಾಶಮಾನ ನಕ್ಷತ್ರ ಆ ರೇಖೆ ಹಾಯುವುದಕ್ಕೂ ನಡುವೆ ಸಂದ ಅವಧಿಯನ್ನು ಲೆಕ್ಕ ಹಾಕಿದ. ಈ ಅವಧಿಯ ಅರ್ಧವನ್ನು ಬಳಸಿಕೊಂಡು ಅಯನಸಂಕ್ರಾಂತಿ ಬಿಂದುವನ್ನು ಗುರುತಿಸುವುದರಿಂದ ಆ ನಕ್ಷತ್ರದ ಘಂಟಾವೃತ್ತಾಂಶವನ್ನು ತಿಳಿಯುವುದು ಸಾಧ್ಯವಾಯಿತು. (ಎಸ್.ಎನ್.ಆರ್.ಎ.)

# ಬ

**ಬಂಗಾರಪೇಟೆ:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು; ಈ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕು ಜಿಲ್ಲೆಯ ದಕ್ಷಿಣ ಭಾಗದಲ್ಲಿ, ಕೋಲಾರ ಉಪವಿಭಾಗದಲ್ಲಿ ಇದೆ. ರಾಬರ್ಟ್‍ಸನ್‍ಪೇಟೆ, ಬಂಗಾರಪೇಟೆ, ಕ್ಯಾಸಂಬಳ್ಳಿ, ಬೇತಮಂಗಲ, ಕಾಮಸಂದ್ರ, ಬೂದಿಕೋಟೆ ಈ ತಾಲ್ಲೂಕಿನ ಹೋಬಳಿಗಳು. ಇದರಲ್ಲಿ ಎರಡು ಪಟ್ಟಣಗಳಿವೆ. ಗ್ರಾಮಗಳ ಸಂಖ್ಯೆ 389. ತಾಲ್ಲೂಕಿನ ವಿಸ್ತೀರ್ಣ 868 ಚ. ಕಿಮೀ ಜನಸಂಖ್ಯೆ 421058. ಉ.ಅ. $13^0$ ಮತ್ತು ಪೂ.ರೇ. 78.12ರಲ್ಲಿ ವಿಸ್ತರಿಸಿದೆ.

ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಹಲವು ಸಣ್ಣ ಗುಡ್ಡಗಳಿವೆ. ಇಲ್ಲಿಯ ಮುಖ್ಯ ನದಿ ಪಾಲಾರ್. ಇದು ದಕ್ಷಿಣ ಮತ್ತು ಆಗ್ನೇಯ ದಿಕ್ಕುಗಳಿಗೆ ಹರಿದು ಬೇತಮಂಗಲ ಮತ್ತು ರಾಮಸಾಗರ ಕೆರೆಗಳಿಗೆ ನೀರು ಒದಗಿಸುತ್ತದೆ. ಇದು ಗುಂಡಲಪಳ್ಳಿಯ ಬಳಿಯಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯನ್ನು ಪ್ರವೇಶಿಸುತ್ತದೆ. ವಕ್ಕಲಗೇರಿ ಬೆಟ್ಟದ ನೈಋತ್ಯಕ್ಕೆ ಒಂದು ತೊರೆ ಹುಟ್ಟುತ್ತದೆ. ಮಾಲೂರು ತಾಲ್ಲೂಕಿನ ಬೇಕಲ್ ಬೆಟ್ಟದಲ್ಲಿ ಇನ್ನೊಂದು ಉಗಮಿಸುತ್ತದೆ. ಇವೆರಡೂ ಬೂದಿಕೋಟೆಯ ಬಳಿ ಕೂಡಿವೆ. ಒಂದಾದ ನದಿಗೆ ಮಾರ್ಕಂಡೇಯ ಎಂದು ಹೆಸರು. ಇದು ತಾಲ್ಲೂಕಿನ ದಕ್ಷಿಣದಲ್ಲಿ ಹರಿಯುತ್ತದೆ. ವಕ್ಕಲಗೇರಿ ಬೆಟ್ಟದಲ್ಲಿ ಹುಟ್ಟುವ ವೃಷಭಾವತಿ ನದಿ ದಕ್ಷಿಣ ದಿಕ್ಕಿಗೆ ಹರಿದು ಕೊಪ್ಪ ದೊಡ್ಡ ಕೆರೆಗೆ ನೀರನ್ನು ಒದಗಿಸುತ್ತದೆ. ಇದು ಕಡನಟ್ಟದ ಬಳಿ ತಮಿಳುನಾಡನ್ನು ಪ್ರವೇಶಿಸುತ್ತದೆ. ತಾಲ್ಲೂಕಿನಲ್ಲಿ ವರ್ಷಕ್ಕೆ ಸರಾಸರಿ 69 ಸೆಂಮೀ ಮಳೆಯಾಗುತ್ತದೆ.

ತಾಲ್ಲೂಕಿನ ಮಣ್ಣು ಕೆಂಪುಜೇಡಿ, ದಪ್ಪ ಮರಳು ಮತ್ತು ನುರುಜುನಿಂದ ಕೂಡಿದ್ದು. ಒಟ್ಟು 86,224 ಹೆ ನೆಲದಲ್ಲಿ 2,711 ಹೆ ಅರಣ್ಯ, 18,494 ಹೆ ಹುಲ್ಲುಗಾವಲು ಸಾಗುವಳಿಗೆ ಒಳಪಟ್ಟ ನೆಲ 31,245 ಹೆ. ಪಾಲಾರ್ ನದಿಯಿಂದ ಪೋಷಿತವಾಗುವ ಬೇತಮಂಗಲ ಮತ್ತು ರಾಮಸಾಗರ ಕೆರೆಗಳೂ ವೃಷಭಾವತಿಯಿಂದ ತುಂಬುವ ಕಾಮಸಂದ್ರ ಕೆರೆಯೂ ಹಲವಾರು ಸಣ್ಣ ಕೆರೆಗಳೂ ನೀರಾವರಿಗೆ ಉಪಯುಕ್ತವಾಗಿವೆ. ಬಾವಿಗಳೂ ಬೇಸಾಯಕ್ಕೆ ನೀರೊದಗಿಸುತ್ತವೆ. ತಾಲ್ಲೂಕಿನ ಬೆಳೆಗಳು ರಾಗಿ, ಬತ್ತ, ನೆಲಗಡಲೆ, ಮೆಣಸಿನಕಾಯಿ, ಈರುಳ್ಳಿ ಮತ್ತು ಬೇಳೆಕಾಳುಗಳು. ಮಾವು, ದ್ರಾಕ್ಷಿ ಮತ್ತು ತರಕಾರಿಗಳು. ತಾಲ್ಲೂಕಿನಲ್ಲಿ ಹಲಗೆ, ಬಳಪ, ಸಿಮೆಂಟ್ ಕೊಳವೆ, ಸಾಬೂನು, ಹುಣಿಸೆ ಬೀಜದ ಪುಡಿ, ಕೈಮಗ್ಗದ ಬಟ್ಟೆ ತಯಾರಾಗುತ್ತವೆ. ಬೆಂಗಳೂರು–ಚೆನ್ನೈ ಬ್ರಾಡ್‍ಗೇಜ್ ರೈಲುಮಾರ್ಗ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತದೆ. ತಾಲ್ಲೂಕಿನಲ್ಲಿ ಒಳ್ಳೆಯ ರಸ್ತೆಗಳಿವೆ.

ತಾಲ್ಲೂಕಿನಲ್ಲಿರುವ ಎರಡು ಪಟ್ಟಣಗಳ ಪೈಕಿ ಒಂದು ರಾಬರ್ಟ್‍ಸನ್ ಪೇಟೆ. ಜನಸಂಖ್ಯೆ 156961. ಇದು 1964ರ ವರೆಗೂ ಕೋಲಾರ ಚಿನ್ನದ ಗಣಿ ಸ್ಯಾನಿಟರಿ ಬೋರ್ಡಿನ ಆಡಳಿತಕ್ಕೊಳಪಟ್ಟಿತ್ತು–ಆ ವರ್ಷ ಇದನ್ನು ಪ್ರತ್ಯೇಕಗೊಳಿಸಿ ಇದಕ್ಕೊಂದು ಪುರಸಭೆಯನ್ನು ಸ್ಥಾಪಿಸಲಾಯಿತು. ಉರಿಗಾಂ ಚಿನ್ನದ ಗಣಿಪ್ರದೇಶವೂ ಈ ಪುರಸಭೆಯ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ 1875ರಲ್ಲಿ ಚಿನ್ನದ ಅದಿರು ತೆಗೆಯಲು ಮೊದಲನೆಯ ಸುರಂಗವನ್ನು ಕೊರೆಯಲಾಯಿತು. ಇಲ್ಲಿ ಪ್ರಥಮ ದರ್ಜೆಯ ಕಾಲೇಜು ಶಾಲೆ ಆಸ್ಪತ್ರೆಗಳು ಇವೆ. ಬಂಗಾರಪೇಟೆ ಪಟ್ಟಣ ಈ ತಾಲ್ಲೂಕಿನ ಮುಖ್ಯ ಸ್ಥಳ. ಬೆಂಗಳೂರಿಗೆ 78 ಕಿಮೀ ಪೂರ್ವದಲ್ಲಿ ಕೋಲಾರಕ್ಕೆ 18 ಕಿಮೀ ದಕ್ಷಿಣದಲ್ಲಿದೆ. ಬೆಂಗಳೂರು–ಚೆನ್ನೈ ಮತ್ತು ಬೆಂಗಳೂರು–ಕೋಲಾರ ರೈಲುಮಾರ್ಗಗಳ ಮೇಲೆ ಇದೊಂದು ನಿಲ್ದಾಣ. ಬಂಗಾರಪೇಟೆಯಿಂದ ಉರಿಗಾಂ ಚಿನ್ನದ ಗಣಿ ಪ್ರದೇಶಕ್ಕೆ ರೈಲುಮಾರ್ಗವಿದೆ. ಇಲ್ಲಿಂದ ಸುತ್ತಣ ಪಟ್ಟಣಗಳಿಗೆ ಒಳ್ಳೆಯ ರಸ್ತೆ ಸಂಪರ್ಕವುಂಟು. ಶಾಲಾಕಾಲೇಜುಗಳಿವೆ. ಹಲವು ಸಣ್ಣ ಕೈಗಾರಿಕೆಗಳುಂಟು. ಭಾನುವಾರ ಸಂತೆಯ ದಿನ. ಇಲ್ಲಿ ಪುರಸಭೆ ಇದೆ. (ಪಿ.ಬಿ.)

**ಬಂಗಾಲಕೊಲ್ಲಿ:** ಹಿಂದೂ ಸಾಗರದ ಈಶಾನ್ಯ ಭಾಗದಲ್ಲಿರುವ ಕೊಲ್ಲಿಸ್ಥೂಲವಾಗಿ ಉ.ಅ. $5^0$–$22^0$ ಮತ್ತು ಪೂ.ರೇ $80^0$–$95^0$ ನಡುವೆ ವ್ಯಾಪಿಸಿದೆ. ಇದರ ಪಶ್ಚಿಮಕ್ಕೆ ಭಾರತ ಮತ್ತು ಶ್ರೀಲಂಕ ದೇಶಗಳು ಉತ್ತರಕ್ಕೆ ಬಾಂಗ್ಲಾದೇಶ ಮತ್ತು ಪೂರ್ವಕ್ಕೆ ಮಯನ್ಮಾರ್ ಮತ್ತು ಮಲಯ ಪರ್ಯಾಯದ್ವೀಪದ ಉತ್ತರಭಾಗ ಇವೆ. ಶ್ರೀಲಂಕದ ದಕ್ಷಿಣ ತುದಿಯಿಂದ ಸುಮಾತ್ರ ದ್ವೀಪದ ಉತ್ತರ ತುದಿಯವರೆಗೆ ಇದರ ದಕ್ಷಿಣ ಮೇರೆ ಹಬ್ಬಿದೆ. ವಿಸ್ತೀರ್ಣ 21,72,000 ಚ.ಕಿಮೀ ಅಗಲ ಸು. 1600 ಕಿಮೀ, ಸರಾಸರಿ ಆಳ 790 ಮೀ ಗಳಿಗಿಂತ ಹೆಚ್ಚು. ಗರಿಷ್ಠ ಅಳ 4,500 ಮೀ.

ಬಂಗಾಲಕೊಲ್ಲಿಯನ್ನು ಸೇರುವ ನದಿಗಳು ಹಲವು, ಉತ್ತರದಲ್ಲಿ ಗಂಗ ಮತ್ತು ಬ್ರಹ್ಮಪುತ್ರ, ಪೂರ್ವದಲ್ಲಿ ಇರವಾಡಿ, ಪಶ್ಚಿಮದಲ್ಲಿ ಗೋದಾವರಿ, ಮಹಾನದಿ, ಕೃಷ್ಣ ಮತ್ತು ಕಾವೇರಿ, ಈ ಕೊಲ್ಲಿಯನ್ನು ಸೇರುವುವು. ಕೊಲ್ಲಿಯಲ್ಲಿ ಇರುವ ದ್ವೀಪಸ್ತೋಮಗಳು ಅಂಡಮಾನ್ ಮತ್ತು ನಿಕೋಬಾರ್. ಪ್ರಮುಖ ಭಾರತೀಯ ಬಂದರುಗಳು ಕೊಲ್ಕತ್ತ, ಕಡಲೂರು, ಕಾಕಿನಾಡ, ಮಚಲಿಪಟ್ಟಣ, ಚೆನ್ನೈ ಪಾರದೀಪ್ ಮತ್ತು ವಿಶಾಖಪಟ್ಟಣ.

ಭೌತಿಕಲಕ್ಷಣ: ಉತ್ತರ ಭಾಗದಲ್ಲಿ ಸು. 160 ಕಿಮೀ ಅಗಲದ ಖಂಡೀಯ ಮರಳು ದಿಬ್ಬವಿದೆ. ದಕ್ಷಿಣಕ್ಕೆ ಸಾಗಿದಂತೆ ಇದು ಕಿರಿದಾಗುತ್ತದೆ. ತಳ ಸಾಮಾನ್ಯವಾಗಿ ದಕ್ಷಿಣಕ್ಕೆ ಇಳಿಜಾರಾಗಿದ್ದು ಮಟ್ಟಸವಾಗಿದೆಯೆಂದು ಈಚಿನವರೆಗೂ ನಂಬಲಾಗಿತ್ತು. ಹಿಂದೂ ಸಾಗರದ ಅಂತಾರಾಷ್ಟ್ರೀಯ ಅನ್ವೇಷಣೆಯಿಂದ ಹೆಚ್ಚಿನ ವಾಸ್ತವ ಸಂಗತಿಗಳು ಹೊರಬಿದ್ದಿವೆ. ನೀರಿನ ಅಡಿಯಲ್ಲಿ ಅನೇಕ ಪರ್ವತ ಶ್ರೇಣಿ, ಅಳ ಕಮರಿ ಮತ್ತು ನಾಲೆ ಇರುವುದು ಗೊತ್ತಾಗಿದೆ. ನಿಕೋಬಾರ್–ಸುಮಾತ್ರ ಭಾಗದಲ್ಲಿ ಗರಿಷ್ಠ 4500 ಮೀ ಆಳದ ಒಂದು ಕೊಳ್ಳವಿದೆ. ಕೊಲ್ಲಿಯ ತಲೆಯ ಬಳಿ ಅರಂಭವಾಗುವ ಕಮರಿ ಖಂಡೀಯ ಮರಳು ದಿಬ್ಬಕ್ಕೆ ಅಡ್ಡವಾಗಿ ಅದನ್ನು ಕತ್ತರಿಸಿದಂತೆ 160 ಕಿಮೀ ದೂರ ಸಾಗುತ್ತದೆ. ಇದರ ಅಗಲ ಸು. 13 ಕಿಮೀ ಭಾರತ ತೀರದಿಂದಾಚೆಗೆ ಕಂಡುಬಂದಿರುವ ಕಮರಿಗಳ ಪೈಕಿ ಮಹಾನದಿ, ಕೃಷ್ಣಾ, ಸ್ವರ್ಣಮುಖಿ, ಪೆನ್ನಾರ್, ಮದ್ರಾಸ್, ನಾಗಾರ್ಜುನ, ಗೋದಾವರಿ ಮತ್ತು ಗೌತಮಿ ಕಮರಿಗಳು ಮುಖ್ಯವಾದವು. ಇವುಗಳ ಪೈಕಿ ಕೆಲವು ಪ್ಲೀಸ್ಟೊಸಿನ್ ಯುಗದಲ್ಲಿ (ಸು. 10,000–25,00,000 ವರ್ಷಗಳ ಹಿಂದೆ) ರೂಪುತಳೆದವು.

ಈ ಕೊಲ್ಲಿಯ ಭೌತಗುಣಗಳು ವ್ಯತ್ಯಾಸಗೊಳ್ಳುತ್ತಿರುವುದು ಇದರ ಒಂದು ವೈಶಿಷ್ಟ್ಯ. ತೀರದಾಚೆಯ ಪ್ರದೇಶಗಳಲ್ಲಿ ಉಷ್ಣತೆ ಸಾಮಾನ್ಯವಾಗಿ ಎಲ್ಲ ಋತುಗಳಲ್ಲೂ ಏಕರೀತಿಯದಾಗಿರುತ್ತದೆ, ಉತ್ತರಕ್ಕೆ ಹೋದಂತೆ ಉಷ್ಣತೆ ಕಡಿಮೆಯಾಗುತ್ತದೆ. ಮೇಲ್ಭಾಗದ ಸಾಂದ್ರತೆ ವಸಂತ ಋತುವಿನಲ್ಲಿ ಅಧಿಕ, ಮೇಲಣ ನೀರಿನ ಚಲನೆಯ ದಿಕ್ಕು ಋತುವಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಈಶಾನ್ಯ ಮಾನ್ಸೂನ್ ಕಾಲದಲ್ಲಿ ಇದು ಪ್ರದಕ್ಷಿಣವಾಗಿಯೂ ನೈಋತ್ಯ ಮಾನ್ಸೂನ್ ಕಾಲದಲ್ಲಿ ಅಪ್ರದಕ್ಷಿಣವಾಗಿಯೂ ಚಲಿಸುತ್ತದೆ. ಮಾನ್ಸೂನಿನ ಬದಲಾವಣೆಯ ಕಾಲದಲ್ಲಿ, ಮುಖ್ಯವಾಗಿ ಅಕ್ಟೋಬರಿನ್ನಲ್ಲಿ ತೀವ್ರ ಚಂಡಮಾರುತಗಳು ಸಂಭವಿಸುತ್ತದೆ. ಅಲೆ ಹಾಗೂ ಭರತದ ಪರಿಣಾಮವಾಗಿ ನೀರಿನ ಮಟ್ಟದಲ್ಲಾಗುವ ಬದಲಾವಣೆಗಳ ಜೊತೆಗೆ ವರ್ಷ ಪೂರ ಸಮುದ್ರದ ಮಟ್ಟ ವ್ಯತ್ಯಾಸವಾಗುತ್ತಲೇ ಇರುತ್ತದೆ. ವಂಶಧಾರಾ, ನಾಗಾವಳಿ, ವಶಿಷ್ಠ, ಗೋದಾವರಿ ಮತ್ತು ವೈನತೆಯಂ, ಕಾವೇರಿ, ಮುಖಜ ಭೂಮಿಗಳ ಪ್ರದೇಶದಲ್ಲಿ ತೈಲ ನಿಕ್ಷೇಪಗಳ ಅನ್ವೇಷಣೆಯಾಗುತ್ತಿದೆ. (ಎಚ್.ಎಸ್.ಕೆ.)

**ಬಂಟ್ವಾಳ:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಬಂಟ್ವಾಳ, ಪಾಣೆಮಂಗಳೂರು ಮತ್ತು ವಿಟ್ಲ ಹೋಬಳಿಗಳು. 84 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 715 ಚ.ಕಿಮೀ ಜನಸಂಖ್ಯೆ 36120.

ಬಂಟ್ವಾಳ ತಾಲ್ಲೂಕು ಅಲ್ಲಲ್ಲಿ ಹರಡಿರುವ ಸಣ್ಣ ಬೆಟ್ಟಗುಡ್ಡಗಳಿಂದಲೂ ವಿಶಾಲ ಮಟ್ಟಸ ಪ್ರದೇಶಗಳಿಂದಲೂ ಕೂಡಿದೆ. ತಾಲ್ಲೂಕಿನ ಮುಖ್ಯನದಿ ನೇತ್ರಾವತಿ. ಇದು ತಾಲ್ಲೂಕಿನಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಮಂಗಳೂರು ಬಳಿ ಅರಬ್ಬಿ ಸಮುದ್ರ ಸೇರುವುದು. ಬಂಟ್ವಾಳದಿಂದ ಮಂಗಳೂರಿನವರೆಗೆ ಈ ನದಿ ಜಲಮಾರ್ಗವಾಗಿದೆ. ಸರಾಸರಿ ಮಳೆ 378 ಸೆಂಮೀ ನೇತ್ರಾವತಿ ನದಿಗೆ ಈ ತಾಲ್ಲೂಕಿನ ಹಂಚಿಕಟ್ಟೆ ಮತ್ತು ಬಂಟ್ವಾಳಗಳಲ್ಲಿ ಕಟ್ಟೆ ಕಟ್ಟಿದ್ದಾರೆ. ತಾಲ್ಲೂಕಿನ ಒಟ್ಟು 71,758 ಹೆ. ಭೂಮಿಯಲ್ಲಿ 6,103 ಹೆ. ಅರಣ್ಯ ಪ್ರದೇಶವಿದ್ದು 23,528 ಹೆ. ಗಳಲ್ಲಿ ಬೆಳೆ ತೆಗೆಯಲಾಗುತ್ತಿದೆ. 1,915 ಹೆ. ಹುಲ್ಲುಗಾವಲಿದೆ. ಬತ್ತ, ಅಡಿಕೆ, ತೆಂಗು ಮತ್ತು ಗೋಡಂಬಿ ಈ ತಾಲ್ಲೂಕಿನ ಪ್ರಮುಖ ಬೆಳೆಗಳು. ರಾಗಿ, ಕೆಲವು ದ್ವಿದಳ ಧಾನ್ಯಗಳು, ಮೆಣಸು, ಮೆಣಸಿನಕಾಯಿ, ಶುಂಠಿ, ತರಕಾರಿಗಳನ್ನೂ ಮಿಶ್ರ ಬೆಳೆಯಾಗಿ ಕೋಕೋವನ್ನು ಬೆಳೆಯಲಾಗುತ್ತಿದೆ. ಹಲಸು, ಪಪಾಯಿ, ಬಾಳೆ, ಮಾವು ಮುಂತಾದ ಫಲಗಳುಂಟು.

ಬೀಡಿ ತಯಾರಿಕೆ ಇಲ್ಲಿನ ಪ್ರಮುಖ ಕೈಗಾರಿಕೆ. ಹಂಚು, ಇಟ್ಟಿಗೆ ಮತ್ತು ಮಡಕೆ ಕುಡಿಕೆಗಳ ತಯಾರಿಕೆ, ಜೇನು ಸಾಕಣೆ, ಪಶುಪಾಲನೆ ಮುಂತಾದವುಗಳಿವೆ. ಈ ತಾಲ್ಲೂಕಿನಲ್ಲಿ ವಿದ್ಯುತ್ ಅಂಚೆ ತಂತಿ ಸೌಲಭ್ಯಗಳು, ಶಾಲಾ ಕಾಲೇಜುಗಳೂ ಸರ್ಕಾರಿ ಸಾರ್ವಜನಿಕ ಆಸ್ಪತ್ರಿ ಮತ್ತು ಪ್ರಾಥಮಿಕ ಆರೋಗ್ಯಕೇಂದ್ರಗಳೂ ಇವೆ.

ನೇತ್ರಾವತಿ ನದಿಯ ಉತ್ತರ ದಂಡೆಯ ಮೇಲೆ ಮಂಗಳೂರಿನ ಪೂರ್ವಕ್ಕೆ ಸು. 25 ಕಿಮೀ ದೂರದಲ್ಲಿರುವ ಬಂಟ್ವಾಳ ತಾಲ್ಲೂಕಿನ ಆಡಳಿತ ಕೇಂದ್ರ. ಜನಸಂಖ್ಯೆ 36829. ಸುತ್ತಲ ಮಂಗಳೂರು, ಪುತ್ತೂರು, ಕೇರಳದ ಮಂಜೇಶ್ವರ, ಕಾಸರಗೋಡು ಮುಂತಾದ ಕಡೆಗೆ ಇಲ್ಲಿಂದ ಸಂಪರ್ಕ ಸೌಲಭ್ಯಗಳಿವೆ. ಹಾಸನ–ಮಂಗಳೂರು ರೈಲು

ಮಾರ್ಗದ ಒಂದು ಮುಖ್ಯ ನಿಲ್ದಾಣ ಬಂಟ್ವಾಳ. ವ್ಯಾಪಾರ ಕೇಂದ್ರ. ನೇತ್ರಾವತಿ ನದಿ ಮೂಲಕ ಮಂಗಳೂರು ಬಂದರಿಗೆ ಇಲ್ಲಿಂದ ಸರಕು ಸಾಗಣೆಯುಂಟು. ವಿದ್ಯುತ್, ಅಂಚೆ, ತಂತಿ, ಸರ್ಕಾರಿ ಆಸ್ಪತ್ರೆ, ಶಾಲಾಕಾಲೇಜುಗಳ ಸಾಲಭ್ಯಗಳಿದ್ದು ಈ ಊರು ಪುರಸಭಾಡಳಿತಕ್ಕೆ ಸೇರಿದೆ. (ಎಚ್.ಎಸ್.ಎಂ.)

**ಬಂಡೀಪುರ:** ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ದಕ್ಷಿಣಕ್ಕೆ 19 ಕಿಮೀ ದೂರದಲ್ಲಿದೆ. ಇದು ವನ್ಯಮೃಗ ಸಂರಕ್ಷಣಾ ಕೇಂದ್ರದಿಂದಾಗಿ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ.

ಆನೆಗಳು ಹಿಂಡು

ಬಂಡೀಪುರ ವನ್ಯಮೃಗ ಸಂರಕ್ಷಣಾ ಕೇಂದ್ರ ಸು. 57 ಚ.ಕಿಮೀ ವಿಸ್ತಾರವಾಗಿದೆ. ಇದು 1941 ರಿಂದ ವೇಣುಗೋಪಾಲ ವನ್ಯಮೃಗ ಉದ್ಯಾನವನದ ಒಂದು ಭಾಗವಾಗಿ ಪರಿಗಣಿತವಾಗಿದೆ. ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಮೈಸೂರು ನಗರದ ದಕ್ಷಿಣಕ್ಕೆ 80 ಕಿಮೀ ದೂರದಲ್ಲಿದ್ದು, ಸಮುದ್ರಮಟ್ಟಕ್ಕಿಂತ 1,022 ರಿಂದ 1,454 ಮೀ ಎತ್ತರದಲ್ಲಿದೆ. ವರ್ಷದ ಸರಾಸರಿ ಮಳೆ 90 ಸೆಂಮೀ ಉಷ್ಣತೆ $11^0$–$38^0$ ಸೆ. ಇರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಅಧಿಕ ಉಷ್ಣತೆ. ಮಳೆ ಕಡಿಮೆಯಾದ್ದರಿಂದ ಬಂಡೀಪುರದ ಕಾಡು ದಟ್ಟವಾಗಿಲ್ಲ. ಸ್ವಾಭಾವಿಕವಾಗಿ ಎಲೆ ಉದುರುವ ಮರದ ಕಾಡು ಇಲ್ಲಿಯ ಮುಖ್ಯ ಸಸ್ಯವರ್ಗ. ಸವನ್ನ ಕಾಡಿನಲ್ಲಿರುವ ಹಾಗೆ ಇಲ್ಲಿ ತೇಗ, ಮತ್ತಿ, ದಿಂಡಲು. ಹೊನ್ನೆ, ಜಾಲಾರಿ, ಯತಿಗ, ಬೀಟೆ, ತಡಸಲು, ನೇರಳೆ ಬೂರುಗ ಮತ್ತು ತಾರೆ ಮರಗಳು ಅಲ್ಲಲ್ಲಿ

ಜಿಂಕೆಗಳು

ಗುಂಪಾಗಿ ಬೆಳೆದು ಕಾಡಿನ ಬಹುಭಾಗವನ್ನು ಆಕ್ರಮಿಸಿವೆ. ಮರದ ಗುಂಪುಗಳ ಮಧ್ಯಭಾಗದಲ್ಲಿ ಅಖಂಡವಾಗಿ ಬೆಳೆದಿರುವ ಆನೆಹುಲ್ಲನ್ನು ಕಾಣಬಹುದು. ಇಲ್ಲಿ ನೀರಿನ ಸಣ್ಣ ಬುಗ್ಗೆಗಳು ಹೇರಳವಾಗಿವೆ. ನೈರುತ್ಯ ಶೀತಮಾರುತ ಬರುವ ಮುನ್ನವೇ ಅವು ಬತ್ತಿಹೋಗುತ್ತವೆ. ಸದಾ ನೀರು ತುಂಬಿ ಹರಿಯುವ ಕೆಕ್ಕನ ಹಳ್ಳವೇ ಕಾಡಿನ ಮೃಗಗಳ ನೀರಿಗೆ ಆಧಾರ, ಈ ನದಿ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳನ್ನು ಬೇರ್ಪಡಿಸುವ ಗಡಿರೇಖೆಯಂತಿದೆ. ಕಾಡಿನಲ್ಲಿರುವ ಕೆಸರುಗುಂಡಿಗಳು ಕಾಡಾನೆಗಳಿಗೆ ಬೇಸಗೆಯಲ್ಲಿ ಮರಳು ಗಾಡಿನ ಓಯಸಿಸ್ ಇದ್ದಹಾಗೆ. ಆದುದರಿಂದಲೇ ಕಾಡಾನೆಗಳು ಬಂಡೀಪುರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತವೆ. ಕೆಸರುಗುಂಡಿಯ ಮತ್ತು ಸಣ್ಣ ಝರಿಗಳ ಅಂಚಿನಲ್ಲಿ ದಟ್ಟವಾಗಿ ಬೆಳೆದಿರುವ ಬಿದಿರುಮೆಳೆ ಸಣ್ಣ ಪ್ರಾಣಿಗಳಿಗೆ ವಾಸಸ್ಥಾನ. ವನ್ಯಮೃಗಗಳು ನೆಕ್ಕಲು ಬೇಕಾಗುವ ಉಪ್ಪು ಮಣ್ಣಿನನೆಲ ಈ ಕಾಡಿನಲ್ಲಿ ಯಥೇಚ್ಛವಾಗಿ ಕಂಡುಬರುತ್ತದೆ.

ಹುಲಿರಕ್ಷಣೆ ಯೋಜನೆಯ ಕಾರ್ಯಕ್ರಮದಲ್ಲಿ ಭಾರತದ ಒಂಬತ್ತು ಹುಲಿ ರಕ್ಷಣಾಕೇಂದ್ರಗಳಲ್ಲಿ ಬಂಡೀಪುರ ಅಭಯಾರಣ್ಯವೂ ಸೇರಿತ್ತು. ಈ ಯೋಜನೆಗೆ 36 ಲಕ್ಷ ರೂ. ಗಳನ್ನು ಕೇಂದ್ರ ಒದಗಿಸಿತ್ತು. ಬಂಡೀಪುರದ ವನ್ಯ ಮೃಗಗಳಲ್ಲಿ ಸಾಮಾನ್ಯವಾಗಿ ನಾವು ಕಾಣುವುದು ಆನೆ, ಕಾಡು ಕೋಣ, ಚಿಕ್ಕೆಜಿಂಕೆ, ಬೊಗಳುವ ಜಿಂಕೆ, ಕಾಡುಹಂದಿ, ಕಾಡುನಾಯಿ, ನರಿ, ಮುಂಗುಸಿ, ಕಪ್ಪು ಮುಖದ ಮುಸುವ. ಆಗಾಗ ಕಾಣಿಸಿಕೊಳ್ಳುವ ಪ್ರಾಣಿಗಳಲ್ಲಿ ಹುಲಿ, ಚಿರತೆ, ಕಾಡುಕುರಿ, ಕರಡಿ, ಕಾಡುಬೆಕ್ಕು ಮುಖ್ಯವಾದವು. ಜೊತೆಗೆ ನವಿಲು, ಹಸುರು ಪಾರಿವಾಳ, ಮುಳ್ಳುಹಂದಿ, ಹೆಬ್ಬಾವು, ನಾಗರಹಾವು, ಹಸುರು ಹಾವು, ಮಂಡಲದ ಹಾವು ಮೊದಲಾದವನ್ನು ಕಾಣಬಹುದು.

ಕಾಡೆಮ್ಮೆಗಳ ಹಿಂಡು

ವನ್ಯಮೃಗಗಳನ್ನು ನೋಡುವುದಕ್ಕೆ ಮಾರ್ಚಿಯಿಂದ ಆಗಸ್ಟ್ ತಿಂಗಳುಗಳು ಒಳ್ಳೆಯ ಕಾಲ. ಪ್ರವಾಸೀ ಕೇಂದ್ರವಾಗಿ ಅಭಿವೃದ್ಧಿಹೊಂದಿರುವ ಬಂಡೀಪುರದಲ್ಲಿ ತಂಗಲು ಪ್ರವಾಸೀ ಮಂದಿರ ಇದೆ. ವನ್ಯಮೃಗಗಳನ್ನು ನೋಡಲು ಸಾರಿಗೆ ಮತ್ತು ಅರಣ್ಯ ಅಧಿಕಾರಿಗಳ ಸಹಾಯ ದೊರಕುತ್ತದೆ. *

**ಬಂದರು:** ಹಡಗು ತಂಗುಸ್ಥಳ ಮಾರುತಗಳಿಂದ ರಕ್ಷಣೆ ಪಡೆದು, ಸರಕು ಮತ್ತು ಪ್ರಯಾಣಿಕರನ್ನು ಏರಿಸುವ ಮತ್ತು ಇಳಿಸುವ ವ್ಯವಸ್ಥೆ ಹೊಂದಿರುವ ಪಟ್ಟಣ ಅಥವಾ ನಗರಕ್ಕೆ ಬಂದರು ಎಂದು ಕರೆಯುವರು. ಬಂದರು ಭೂಮಾರ್ಗ ಮತ್ತು ಜಲಮಾರ್ಗ ಕೂಡುವ ಸ್ಥಳವಾಗಿದೆ. ಆದ್ದರಿಂದ ಇದನ್ನು ಭೂಮಿಯಿಂದ ಸಮುದ್ರಕ್ಕೆ ಮತ್ತು ಸಮುದ್ರದಿಂದ ಭೂಮಿಗೆ ಸಂಪರ್ಕ ಒದಗಿಸುವ ಹೆಬ್ಬಾಗಿಲು ಎಂದು ಕರೆಯುವರು. ಬಂದರುಗಳು ಹಡಗುಗಳ, ಸರಕು ಹಾಗೂ ಪ್ರಯಾಣಕರನ್ನು ನಿರ್ವಹಿಸುವುದಕ್ಕೆ ಹಡಗುಕಟ್ಟೆ, ಮಳಿಗೆ ಮತ್ತು ಇತರ ಸೌಲಭ್ಯಗಳನ್ನು ಹೊಂದಿರುತ್ತವೆ. ಬಂದರುಗಳು ದೇಶ–ದೇಶಗಳ ನಡುವೆ ನಡೆಯುವ ವಾಣಿಜ್ಯ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಬಂದರುಗಳು ಹಡಗುಕಟ್ಟೆ, ಉಗ್ರಾಣಗಳು, ರಸ್ತೆ ಮತ್ತು ರೈಲು, ಸಾರಿಗೆ ಸೌಲಭ್ಯ, ಅಸಂಖ್ಯೆ ಪ್ರಯಾಣಿಕರ ಮತ್ತು ಸರಕುಗಳ ಸಾಗಣಿಕೆ ವ್ಯವಸ್ಥೆ, ವಿಸ್ತಾರವಾದ ಹಾಗು ಉತ್ಪಾದಕ ಹಿನ್ನಾಡು ಕಟ್ಟಡಗಳು, ಸರಕುಗಳನ್ನು ಏರಿಸಲು ಮತ್ತು ಇಳಿಸುವುದಕ್ಕೆ ಅವಶ್ಯವಾದ ಯಂತ್ರೋಪಕರಣಗಳು, ಇಂಧನ ಲಭ್ಯತೆ ಮುಂತಾದ ಮೂಲ ಸೌಲಭ್ಯ ಹೊಂದಿದರೆ ಅವುಗಳಿಗೆ ಅಭಿವೃದ್ಧಿ ಹೊಂದಿದ ಪ್ರಮುಖ ಬಂದರುಗಳೆಂದು ಕರೆಯುವರು.

ಭಾರತವು 6,100 ಕಿಮೀ ಉದ್ದವಾದ ಸಮುದ್ರ ತೀರ ಹೊಂದಿದ್ದು 12 ಪ್ರಮುಖ ಬಂದರುಗಳು, 184 ಸಣ್ಣ ಪ್ರಮಾಣದ ಬಂದರುಗಳನ್ನೊಳಗೊಂಡಿದೆ. ಪ್ರಮುಖ ಬಂದರುಗಳು ನೇರವಾಗಿ ಕೇಂದ್ರ ಸರಕಾರದಿಂದ ನಿರ್ವಹಿಸಲ್ಪಟ್ಟರೆ, ಸಣ್ಣ ಬಂದರುಗಳನ್ನು ಆಯಾ ರಾಜ್ಯ ಸರಕಾರಗಳು ನಿರ್ವಹಿಸುತ್ತವೆ. ಕಾಂಡ್ಲ, ಮುಂಬಯಿ, ಮರ್ಮಗೋವ, ನವ ಮಂಗಳೂರು, ಕೊಚ್ಚಿ, ತುತಕುಡಿ, ಚೆನ್ನೈ, ವಿಶಾಖಪಟ್ಟಣ, ಪಾರಾದೀಪ, ಕೋಲ್ಕತ ಮತ್ತು ನವಶೇವಾ ಭಾರತದ ಪ್ರಮುಖ ಬಂದರುಗಳು ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸರಕು–ಸೇವೆ ನಿರ್ವಹಿಸುವ ಕೇಂದ್ರಗಳಾಗಿವೆ. (ಎಲ್.ಟಿ.ಎನ್.)

**ಬಂದರು ಮತ್ತು ರೇವು:** ಹಡಗುಗಳು ತೇಲುವುದಕ್ಕೆ ಸಾಕಷ್ಟು ಆಳವಾದ ನೀರಿದ್ದು ಸಮುದ್ರಯಾನಕ್ಕೆ ತಡೆಗಳಿಲ್ಲದೆ ಗಾಳಿ ಮತ್ತು ಅಲೆಗಳಿಂದ ರಕ್ಷಿತವಾಗಿ ಹಡಗುಗಳು ತಂಗಬಹುದಾದ ತೀರಪ್ರದೇಶ ಬಂದರು (ಹಾರ್ಬರ್). ಈ ಎಲ್ಲ ಅನುಕೂಲತೆಗಳ

ಜೊತೆಗೆ ಹಡಗುಗಳಿಗೆ ಸಾಮಾನನ್ನು ಹೇರುವುದಕ್ಕೂ ಅಲ್ಲಿಂದ ಇಳಿಸುವುದಕ್ಕೂ ಅನೇಕ ವ್ಯಾಪಾರಿಗಳು ಒಂದೇ ಕಾಲದಲ್ಲಿ ಉಪಯೋಗಿಸುವ ಹಾಗೆ ಸೌಕರ್ಯಗಳಿರುವ ಸ್ಥಳ ರೇವು (ಪೋರ್ಟ್). ಉಗಿ ತಿರುಬಾನಿಯ ವ್ಯಾಪಕ ಅನ್ವಯದಿಂದ ಸಮುದ್ರಯಾನ 19ನೇ ಶತಮಾನದ ಕೊನೆಯ ಭಾಗದಲ್ಲಿ ಪ್ರಪಂಚ ವ್ಯಾಪಿಯಾದ ಬಳಿಕ ಎಲ್ಲ ಬಂದರುಗಳೂ ರೇವುಗಳಾಗಿವೆ. ಜಲಯಾನ ಯೋಗ್ಯವಾದ ನದೀಮುಖಗಳಲ್ಲಿಯೋ ಸಮುದ್ರದ ಮರೆಯಾದ ಶಾಖೆಗಳಲ್ಲಿಯೋ ಸಾಮಾನ್ಯವಾಗಿ ರೇವುಗಳನ್ನು ಕಟ್ಟುವುದು ವಾಡಿಕೆ.

ರೇವುಗಳ ವ್ಯವಸ್ಥೆಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು ಹಡಗುಗಳು ನಿಲ್ಲುವ ಭಾಗ, ಇನ್ನೊಂದು ಹಡಗಿನ ಸರಕುಗಳ ವಿಲೇವಾರಿಯ ಭಾಗ, ಹಡಗು ರೇವಿಗೆ ಬಂದ ಕೂಡಲೆ ಆರೋಗ್ಯಶಾಖೆಯ ವೈದ್ಯರು ಬಂದು ಸಾಂಕ್ರಾಮಿಕ ರೋಗಗಳಿಂದ ನರಳುವವರಿದ್ದರೆ ಅವರನ್ನು ಆಸ್ಪತ್ರೆಗೆ ಕಳಿಸುತ್ತಾರೆ. ಸರಕಿನ ಇಲ್ಲವೆ ಜನರ ಸಾಗಣೆಯ ನಿಯಮಗಳನ್ನು ತಿಳಿಸುತ್ತಾರೆ. ರೇವಿನ ಸಂಸ್ಥೆಯೇ ಅಲ್ಲದೆ ಖಾಸಗಿ ಸಂಸ್ಥೆಗಳೂ ಹಡಗನ್ನು ಸರಪಳಿಗಳಿಂದ ಬೇಕಾದ ಕಡೆಗೆ ಎಳೆಯುತ್ತವೆ. ಜಗ್ಗುದೋಣಿಗಳು (ಟಗ್ಸ್) ದೊಡ್ಡ ಹಡಗುಗಳನ್ನು ಹಡಗು ಕಟ್ಟೆಗಳ (ಡಾಕ್ಸ್) ಒಳಕ್ಕೂ ಹೊರಕ್ಕೂ ಎಳೆಯುತ್ತವೆ.

ಹಡಗು ಸಾಮಾನನ್ನು ಮಾತ್ರ ಸಾಗಿಸುತ್ತಿದ್ದರೆ ಅದನ್ನು ಇಳಿಸುವುದಕ್ಕೂ ಸಾಗಿಸುವುದಕ್ಕೂ ಅನುಕೂಲವಾಗುವಂತೆ ಇಳಿದಾಣದ (ಕ್ವೇ) ಪಕ್ಕದಲ್ಲಿ ನಿಲ್ಲಿಸಿ ಸಾಮಾನನ್ನು ಬೇರೆಯ ದೋಣಿಗಳಿಗೆ ಎತ್ತಿ ಹಾಕುತ್ತಾರೆ. ಕೆಲವು ಬಂದರುಗಳಲ್ಲಿ ಭರತದ ಉಬ್ಬರವಿಳಿತಗಳ ಕಾಲದಲ್ಲಿ ಸಮುದ್ರಮಟ್ಟ ಬಹಳ ವ್ಯತ್ಯಾಸವಾಗುವುದರಿಂದ ಹಡಗುಕಟ್ಟೆಗಳಿಗೆ ಪ್ರಾಕಾರಗಳನ್ನು ಕಟ್ಟಿ ಒಳಗಿನಿಂದ ಬೇಕಾದಾಗ ಪಂಪುಗಳಿಂದ ನೀರನ್ನು ಎತ್ತಿ ಒಂದೇ ಮಟ್ಟಕ್ಕೆ ನಿಲ್ಲಿಸುತ್ತಾರೆ.

ಎಲ್ಲ ರೇವುಗಳಲ್ಲಿಯೂ ನೀರಿಲ್ಲದ ಹಡಗುಕಟ್ಟೆಗಳಲ್ಲಿ ಹಡಗಿನ ರಿಪೇರಿಯನ್ನೂ ಸುಸ್ಥಿತಿಯನ್ನೂ (ಮೇಂಟೆನೆನ್ಸ್) ನೋಡಿಕೊಳ್ಳುತ್ತಾರೆ. ನೀರಿನ ಕೆಳಗಡೆ ಸಾಮಾನ್ಯವಾಗಿ ಇರುವ ಭಾಗಗಳನ್ನು ಒಣಕಟ್ಟೆಗಳಲ್ಲಿ ಎಂಜಿನಿಯರುಗಳು ಪರೀಕ್ಷಿಸುತ್ತಾರೆ. ಅವಶ್ಯವಾದ ಕಡೆ ಬಣ್ಣವನ್ನು ಹಚ್ಚಲಾಗುತ್ತದೆ. ಹಡಗುಗಳಿಗೆಲ್ಲ ಸಿಹಿನೀರು ಎಣ್ಣೆ, ಕಲ್ಲಿದ್ದಲು, ಪೆಟ್ರೋಲ್ ಇವನ್ನು ಒದಗಿಸುವ ವ್ಯವಸ್ಥೆ ಉಂಟು.

ರೇವಿಗೆ ಸಾಮಾನನ್ನು ಒಳನಾಡಿನಿಂದ ರಫ್ತು ಮಾಡುವ ಇಲ್ಲವೆ ಆಮದು ಮಾಡುವ ಜನರು ಬರಲು ಯಾವಾಗಲೂ ಅವಕಾಶವಿರುವ ಹಾಗೆ ರೇಲ್ವೆ ಮತ್ತು ರಸ್ತೆಯ ಸೌಕರ್ಯಗಳಿರಬೇಕು. ರೇಲ್ವೆ ಎಂಜಿನ್ನುಗಳು, ಮೋಟರುಗಳು ಮೊದಲಾದ ಯಂತ್ರಗಳನ್ನು ಎತ್ತಿ ಇಳಿಸುವುದಕ್ಕೆ 150ರಿಂದ 200 ಟನ್ ತೂಕ ಹೊರಬಲ್ಲ ಕ್ರೇನುಗಳು ದೊಡ್ಡ ರೇವುಗಳಲ್ಲಿರುತ್ತವೆ. ಉಕ್ಕಿನ ಕಂಬಗಳ ಮೇಲೆ ಇರುವ ಕಪ್ಪಿಗಳ ಮೂಲಕ ಕೊನೆಯಿರದ ಬೆಲ್ಟ್ ಇಲ್ಲವೆ ಉಕ್ಕಿನ ಹಗ್ಗದ ಮೇಲೆ ಸಾಮಾನನ್ನು ಸಾಗಿಸುವ ಸಾಗುಪಟ್ಟಿಗಳು, ಸಣ್ಣ ಕ್ರೇನುಗಳು, ಕಪ್ಪಿಗಳ ಮೇಲೆ ಸಾಮಾನನ್ನು ಎತ್ತುವ ಹಾಯಿಸ್ಟುಗಳು ವಿಶೇಷವಾಗಿ ಬೇಕಾಗುತ್ತವೆ. ಕೆಲಸದಾಳುಗಳಂತೂ ಯಾವಾಗಲೂ ಸಿದ್ಧರಾಗಿರಬೇಕು.

ಬಂದರಿನ ವಿನ್ಯಾಸ: ಒಂದು ಬಂದರನ್ನು ಕಟ್ಟುವಾಗ ಆ ಸಮುದ್ರತೀರ ಎಷ್ಟರ ಮಟ್ಟಿಗೆ ಹೊರಗಡೆಗೆ ತೆರೆದಿದೆ. ಗಾಳಿಯ ರಭಸ ಮತ್ತು ದಿಕ್ಕು, ಚಂಡಮಾರುತಗಳ ಸಂಖ್ಯೆ, ಅಲೆಗಳ ಎತ್ತರ ಮತ್ತು ರಭಸ, ಭರತದ ಬಲ ಮತ್ತು ವ್ಯಾಪ್ತಿ, ಭರತದ ಏರಿಳಿತಗಳಿಗೆ ನಡುವೆ ಇರುವ ಅಂತರ ಮುಂತಾದ ವಿಚಾರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಸಮುದ್ರದ ಆಳ ಮತ್ತು ತಳದ ಇಳಿಜಾರನ್ನು ನೋಡಿ ತಳದಲ್ಲಿ ಕೊರೆದು ನೆಲವನ್ನು ಪರೀಕ್ಷಿಸಬೇಕು.

ಬಂದರಿನ ಮುಖ್ಯ ಉದ್ದೇಶ ಗೊತ್ತಾದ ಒಂದು ಜಾಗವನ್ನು ಅಲೆಗಳ ಹೊಡೆತದಿಂದ ರಕ್ಷಿಸುವುದು. ಅಲೆಗಳು ಸಂಚರಿಸುವ ದೂರ, ಗಾಳಿಯ ಬಲ ಮತ್ತು ಬೀಸುವ ಅವಧಿಗೆ ಅನುಸಾರವಾಗಿ ಅಲೆಗಳ ಎತ್ತರವಿರುತ್ತದೆ. ಆಳವಾದ ನೀರಿನ ಮೇಲೆ ಸಾಕಷ್ಟು ಕಾಲ ಬೀಸಿದರೆ 40 ನಾಟುಗಳ ವೇಗದ ಮಾರುತ 16 ಕಿಮೀ ದೂರ ಸಂಚರಿಸಿದಾಗ 2.1 ಮೀ ಎತ್ತರದ ಅಲೆಯನ್ನೂ 160 ಕಿಮೀ ದೂರ ಹೋದಾಗ 5.8 ಮೀ ಎತ್ತರದ ಅಲೆಯನ್ನೂ 1600 ಕಿಮೀ ದೂರ ಹೋದಾಗ 11 ಮೀ ಎತ್ತರದ ಅಲೆಯನ್ನೂ ಉತ್ಪತ್ತಿ ಮಾಡುತ್ತದೆ. 40 ನಾಟುಗಳೆಂದರೆ ಗಂಟೆಗೆ ಸು. 74 ಕಿಮೀ ವೇಗ. ಬಂದರಿನೊಳಕ್ಕೆ ನುಗ್ಗುವ ಅಲೆಗಳ ಎತ್ತರವನ್ನು ಬಂದರಿನ ಅಗಲವನ್ನು ಹೆಚ್ಚಿಸುವುದರಿಂದ ಇಲ್ಲವೆ ಕಲ್ಲಿನ ತಗ್ಗುಗೋಡೆಗಳಿಂದ ಅಲೆಗಳನ್ನು ತಡೆಯುವುದರಿಂದ ತಗ್ಗಿಸಬಹುದು.

ಬಂದರುಗಳು ನೈಸರ್ಗಿಕವಾಗಿರಬಹುದು: ನೈಸರ್ಗಿಕ ಸನ್ನಿವೇಶದಲ್ಲಿ ಯಂತ್ರ ಶಿಲ್ಪದ ಸಹಾಯ ದೊರೆಕಿರಬಹುದು. ಇಲ್ಲವೆ ಮನುಷ್ಯನಿರ್ಮಿತವಾಗಿರಬಹುದು. ಅವನ್ನು ಈ ಮುಂದಿನಂತೆ ವರ್ಗೀಕರಿಸಬಹುದು.

1. ನೈಸರ್ಗಿಕ ಬಂದರುಗಳು: ಇವು ನೆಲದಿಂದ ಸುತ್ತುಗಟ್ಟಿರಬಹುದು ಇಲ್ಲವೆ ದ್ವೀಪಗಳಿಂದ ರಕ್ಷಿತವಾಗಿರಬಹುದು. ಹೀಗೆ ಗಾಳಿಯ ಮರೆಯಲ್ಲಿರುವ ನೀರು ಹಡಗುಗಳು ನಿಲ್ಲುವುದಕ್ಕೆ ಅನುಕೂಲವಾಗಿರುತ್ತದೆ. ಆದರೆ ಸುತ್ತ ನೆಲವಿದ್ದು ಕಿರಿದಾದ ನಾಲೆಗಳು ಸಮುದ್ರಕ್ಕೆ ಸಂಬಂಧವನ್ನು ಕಲ್ಪಿಸಿರುವ ಸಮುದ್ರದ ಕೋಚುಗಳನ್ನು ನೈಸರ್ಗಿಕ ಬಂದರುಗಳೆಂದು ಕರೆಯಲಾಗುತ್ತದೆ. ಇಂಥ ಕಡೆ ಹಡಗುಗಳ ಪ್ರವೇಶಮಾರ್ಗದಲ್ಲಿಯೂ ಲಂಗರು ಹಾಕಿ ನಿಲ್ಲುವ ಕಡೆಗಳಲ್ಲಿಯೂ ಸಮುದ್ರದ ಮೇಲಿನ ವಾಣಿಜ್ಯಮಾರ್ಗಗಳಲ್ಲಿ ನೀರಿನ ಆಳ ಸಾಕಷ್ಟಿದ್ದರೆ ತುಂಬ ಅನುಕೂಲವಾಗುತ್ತದೆ. ಕ್ಯಾಲಿಫೋರ್ನಿಯದ ಸಾನ್‌ಫ್ರಾನ್ಸಿಸ್ಕೊ ಬಂದರು ಇಂಥ ಸನ್ನಿವೇಶದಲ್ಲಿದೆ. ಇದರ ಕೊಲ್ಲಿ 89 ಕಿಮೀ ಉದ್ದವಾಗಿದೆ. ನೀರಿನ ವಿಸ್ತಾರ 104 ಚದರ ಕಿಮೀ ಗಳು. ಇಲ್ಲಿ ಸಮುದ್ರತೀರದ ಉದ್ದ 322 ಕಿಮೀ ಕೊಲ್ಲಿಯೊಳಕ್ಕೆ ಸ್ಯಾಕ್ರಮೆಂಟೊ ಮತ್ತು ಸ್ಯಾನ್‌ಜೋಕ್ವಿನ್ ನದಿಗಳು ಬೀಳುತ್ತವೆ. ಇದರ ಗೋಲ್ಡನ್ ಗೋವ್ ಪ್ರವೇಶಮಾರ್ಗ 1.6 ಮೀ ಅಗಲ, ಗರಿಷ್ಠ ಆಳ 110 ಕಿಮೀ ಇಲ್ಲಿ ಪ್ರಪಂಚದ ಸೇತುವೆಗಳ ಕಣ್ಣಿನ ಅಗಲದಲ್ಲಿ ಎರಡನೆಯದಾದ 1280 ಮೀ ಕಣ್ಣಿನ ಗೋಲ್ಡನ್ ಗೇಟ್ ತೂಗುಸೇತುವೆಯನ್ನು ಕಟ್ಟಿದ್ದಾರೆ.

ಹಡ್ಸನ್ ನದಿಯ ಮುಖದಲ್ಲಿರುವ ನ್ಯೂಯಾರ್ಕಿನ ಬಂದರಿನ ಜಾಗವೂ ಹೀಗೆಯೇ ಇದೆ. ಇಲ್ಲಿ ಸಮುದ್ರತೀರ ಕೋಚುಕೋಚಾಗಿದ್ದು ಒಟ್ಟು 77 ಕಿಮೀ ಉದ್ದವಾಗಿದೆ. ನೀರಿನ ವಿಸ್ತಾರವೂ ಆಳವೂ ಹೆಚ್ಚು. ಭರತದ ಏರಿಳಿತಗಳ ಅಂತರ ಬಂದರಿನಲ್ಲಿ ಎರಡು ಭಾಗಗಳಿವೆ. ಹೊರಗಿನ ಬಂದರಿಗೆ ಒಂದು ಕಡೆ ನ್ಯೂಜೆರ್ಸಿ ಸಮುದ್ರತೀರವೂ ಇನ್ನೊಂದು ಕಡೆ ಲಾಂಗ್ ದ್ವೀಪವೂ ರಕ್ಷಣೆ ಒದಗಿಸುತ್ತವೆ. ಇದರ ಪ್ರವೇಶ ಮಾರ್ಗ ಅಟ್ಲಾಂಟಿಕ್ ಸಾಗರಕ್ಕೆ ತೆರೆದಿದೆ. ಒಳಗಿನ ಬಂದರಿನ ಪಶ್ಚಿಮಕ್ಕೆ ಸ್ಟೇಟನ್ ದ್ವೀಪಕ್ಕೂ ಪೂರ್ವಕ್ಕೆ ಬ್ರೂಕ್‌ಲಿನ್ನಿಗೂ ನಡುವೆ ಇರುವ ನ್ಯಾರೋಸ್ ಎಂಬ ನಾಲೆಯ ಮೂಲಕ ಪ್ರವೇಶ. ಈಚೆಗೆ ಈ ಬಂದರನ್ನು ಉಪಯೋಗಿಸುವ ಹಡಗುಗಳ ಅಳತೆ ಹೆಚ್ಚಿದ ಮೇಲೆ ಹೂಳು ಎತ್ತಿ ಸಮುದ್ರದ ನಾಲೆಗಳನ್ನು ಆಳವಾಗಿ ಮಾಡಿದ್ದಾರೆ. ಇಲ್ಲಿ ಗೋಲ್ಡನ್ ಗೇಟ್ ಸೇತುವೆಗಿಂತಲೂ ಅಗಲವಾದ 1408 ಮೀ ಕಣ್ಣಿನ ನ್ಯಾರೋಸ್ ತೂಗುಸೇತುವೆ ಕಟ್ಟಿದ್ದಾರೆ. ಮುಂಬಯಿಯ ನೈಸರ್ಗಿಕ ಬಂದರು ಮುಂಬಯಿ ದ್ವೀಪಕ್ಕೂ ಭೂಭಾಗಕ್ಕೂ ನಡುವೆ ಇರುವ ಸುರಕ್ಷಿತವಾದ ಸಮುದ್ರದ ಶಾಖೆ. ಕೋಲ್ಕತ ಮತ್ತು ರಂಗೂನ್ ಈ ಎರಡು ನದಿಯ ಬಂದರುಗಳಲ್ಲಿಯೂ ಆಳ ಕಡಿಮೆಯಾದ ಸ್ಥಳಗಳಲ್ಲಿ ಮರುಳು ದಿಣ್ಣೆಗಳು ತೊಂದರೆಯನ್ನು ಕೊಡುತ್ತಲೇ ಇರುತ್ತವೆ. ಸಿಂಗಾಪುರ ಪ್ರಾಚ್ಯದೇಶಗಳಲ್ಲಿ ವ್ಯಾಪಾರ ವಿಶೇಷವಾಗಿರುವ ರೇವು, ಹತ್ತಿದಲ್ಲಿರುವ ದ್ವೀಪಗಳಿಂದಾಗಿ ಬಂದರು ಸುರಕ್ಷಿತವಾಗಿದೆ. ನೀರಿನಆಳವೂ ಸಾಕಾದಷ್ಟಿದೆ. ಹೂಳು ಎತ್ತುವ ಪ್ರಮೇಯವಿಲ್ಲ. ಹಾಂಗ್ ಕಾಂಗ್‌ದ್ವೀಪ ಕ್ಯಾಂಟನ್ ನದಿಯ ಮುಖದಲ್ಲಿದೆ. ಇದಕ್ಕೂ ಸಮುದ್ರಕ್ಕೂ ನಡುವೆ ವಿಶಾಲವಾದ ಸುರಕ್ಷಿತವಾದ ನೈಸರ್ಗಿಕ ಬಂದರಿದೆ. ಜಪಾನಿನ ಮುಖ್ಯ ಬಂದರಾದ ಯಾಕೋಹಾಮ ಟೋಕಿಯೊ ಕೊಲ್ಲಿಯಲ್ಲಿದೆ. ಆದರೂ ಇಲ್ಲಿ ಅಗಾಧವಾದ ಅಲೆತಡೆಗಳನ್ನು ಕಟ್ಟಬೇಕಾಯಿತು.

2. ಅಳಿವೆಯ ಬಂದರುಗಳು: ಕೊನೆಯ ಮಜಲಿನಲ್ಲಿ ಕೆಲವು ನದಿಗಳು ದೊಡ್ಡ ಹಡಗುಗಳನ್ನು ಸಾಗಿಸುವಷ್ಟು ಆಳವಾಗಿರುತ್ತವೆ. ಆದರೆ ಸಮುದ್ರವನ್ನು ಸೇರುವ ಕಡೆ ಮರಳಿನ ದಿಣ್ಣೆಗಳಿರುತ್ತವೆ. ಇನ್ನು ಕೆಲವು ನದಿಗಳ ಆಳಸಾಕಷ್ಟಿರುವುದಿಲ್ಲ. ಆದರೆ ಸಮುದ್ರದ ಕಡೆಯ ನಾಲೆಗಳು ಆಳವಾಗಿರುತ್ತವೆ. ಇಂಗ್ಲೆಂಡಿನ ಮರ್ಸೆ ನದಿಯಲ್ಲಿರುವ ಹಾಗೆ ಮರಳು ದಿಣ್ಣೆಗಳು ಮಾತ್ರ ಇರಬಹುದು. ಇಂಥ ಕಡೆಗಳಲ್ಲಿ ಯಂತ್ರಗಳಿಂದ ಹೂಳು ಎತ್ತಿ ಆಳ ಸಾಕಷ್ಟು ಹೆಚ್ಚಿಸಬಹುದು. ನ್ಯೂಯಾರ್ಕ್ ಬಂದರು ನದೀಮುಖದಲ್ಲಿದೆಯಷ್ಟೆ. ಇಲ್ಲಿ 7.3 ಮೀ ಆಳವಾದ ನೈಸರ್ಗಿಕವಾದ ಪ್ರವೇಶ ಮಾರ್ಗವೇ 1885ರ ವರೆಗೂ ಸಾಕಾಗಿತ್ತು. 1892ರ ವೇಳೆಗೆ ನಾಲೆಯಿಂದ ಹೂಳುಎತ್ತಿ ಕನಿಷ್ಠ ಆಳವನ್ನು 9.1 ಮೀ ಗೆ ಹೆಚ್ಚಿಸಿದರು. ಏಳು ವರ್ಷಗಳ ಮೇಲೆ ಮತ್ತೆ ಹೂಳು ಎತ್ತಿ ಕೃತಕವಾಗಿ ಇನ್ನೊಂದು ನಾಲೆ ತೋಡಿ ನಾಲೆಯನ್ನು 12.2 ಮೀ ಆಳವಾಗಿ ಮಾಡಬೇಕಾಯಿತು 1939ರಲ್ಲಿ ಎರಡು ನಾಲೆಗಳನ್ನೂ ಇನ್ನೂ 1.5 ಮೀ ಆಳವಾಗಿ ತೋಡಿದರು.

3. ಲ್ಯಾಗೂನ್ ಮತ್ತು ಜೆಟ್ಟಿಯ ಬಂದರುಗಳು: ನದೀಮುಖಗಳು ಮತ್ತು ಲಗೂನುಗಳಲ್ಲಿ ಜೆಟ್ಟಿಗಳನ್ನು ದಡಕ್ಕೆ ಲಂಬಕೋನದಲ್ಲಿ ಕಟ್ಟಿ ಬಂದರುಗಳನ್ನು ನಿರ್ಮಿಸುವ ಪದ್ಧತಿ ಎರಡು ಶತಮಾನಗಳಿಂದಲೂ ಬಳಕೆಯಲ್ಲಿದೆ. ಇದರಿಂದ ಪ್ರವೇಶ ಮಾರ್ಗದ ಎರಡು ದಡಗಳನ್ನೂ ಅಲೆಗಳಿಂದ ರಕ್ಷಿಸಬಹುದು. ಆಗ ನದಿ ಒಳಕ್ಕೆ ತಂದ ಮೆಕ್ಕಲು ಮಣ್ಣನ್ನು ತೆಗೆಯುವುದಕ್ಕೂ ಅನುಕೂಲವಾಗುತ್ತದೆ. ನದಿಯಲ್ಲಿ ನೀರನ್ನು ಸರಿಯಾದ ದಾರಿಯಲ್ಲಿ ಹೆಚ್ಚಿನ ವೇಗದಲ್ಲಿ ಸಾಗಿಸುವ ಕಾಮಗಾರಿಗಳನ್ನು ಮಾಡಿದರೆ ಅದರಲ್ಲಿರುವ ಮೆಕ್ಕಲುಮಣ್ಣು ಬಂದರಿನ ಬಾಯಿಯ ಆಚೆಗೆ ಭರತದ ಪ್ರವಾಹದಲ್ಲಿ ಸಾಗಿಹೋಗುತ್ತದೆ. ವಿಶಾಖಪಟ್ಟಣದ ನೈಸರ್ಗಿಕ ಬಂದರಿನಲ್ಲಿ ಒಂದು ಕಡಲ ಚಾಚುವೂ ಕಿರಿದಾದ ಪ್ರವೇಶ ಮಾರ್ಗವಿರುವ ಲಗೂನಿನ ನಿಂತ ನೀರೂ ಇವೆ. ಈ ಪ್ರವೇಶ ಮಾರ್ಗದಲ್ಲಿ ಹೂಳು ತೆಗೆದು 9.1 ಮೀ ಆಳದ ನಾಲೆ ತೋಡಿ ಉತ್ತರ ದಿಕ್ಕಿನಲ್ಲಿ ಭರ್ತಿಕಲ್ಲಿನ ಜೆಟ್ಟಿ ಕಟ್ಟಿದ್ದಾರೆ. ಬಂದರಿನೊಳಕ್ಕೆ ಬರುವ ನಾಲೆಯನ್ನು ದಕ್ಷಿಣದ ಕಡೆ 305 ಮೀ ಉದ್ದದ ಭರ್ತಿಕಲ್ಲಿನ ಅಲೆತಡೆ ಕಟ್ಟಿ ಸುರಕ್ಷಿತವಾಗಿ ಮಾಡಿದ್ದಾರೆ. ಕರಾಚಿಯ ನೈಸರ್ಗಿಕ ಬಂದರಿನ ಪ್ರವೇಶಮಾರ್ಗದಲ್ಲಿ ಜೆಟ್ಟಿಗಳನ್ನು ಕಟ್ಟಿ ಹೂಳು ತೆಗೆದು ಒಳಗಡೆ ಆಳವಾದ ನೀರಿರುವ ಹಡಗಿನ ಭರ್ತಿ ಕಟ್ಟೆಗಳನ್ನು ಕಟ್ಟಿದ್ದಾರೆ.

4. ಒಂದು ಅಲೆತಡೆಯಿಂದ ರಕ್ಷಿತವಾದ ಕೊಲ್ಲಿಯ ಬಂದರುಗಳು: ಆಳವಾದ ನೀರಿರುವ ಕೊಲ್ಲಿಯಲ್ಲಿ ಬಂದರಿದ್ದರೆ ಕೃತಕ ರಕ್ಷಣೆಯ ಅವಶ್ಯಕತೆ ಹೆಚ್ಚಾಗಿರುವುದಿಲ್ಲ. ಆಳವೂ ಕಿರಿದೂ ಆದ ಕೊಲ್ಲಿಯ ಒಂದು ದಡದಿಂದ ಇನ್ನೊಂದಕ್ಕೆ ಒಂದೇ ಅಲೆತಡೆ

ಕಟ್ಟಿ ಅದರಲ್ಲಿ ಹಡಗುಗಳಿಗೆ ಒಂದು ಪ್ರವೇಶಮಾರ್ಗ ಇಟ್ಟರೆ ಸಾಕಾಗುತ್ತದೆ. ಒಂದು ಕಡೆ ನೈಸರ್ಗಿಕ ರಕ್ಷಣೆಯಿದ್ದರೆ ಎದುರು ದಡದಲ್ಲಿ ಸಮುದ್ರತೀರಕ್ಕೆ ಲಂಬಕೋನವಾಗಿ ಒಂದು ಅಲೆತಡೆ ಕಟ್ಟಿ ಅದರ ಕೊನೆಯನ್ನು ಕೊಲ್ಲಿಯ ಕಡೆಗೆ ಬಾಗಿಸಬಹುದು. ದಕ್ಷಿಣ ಅಮೆರಿಕದಲ್ಲಿ ದಕ್ಷಿಣ ಪೆಸಿಫಿಕ್ ಸಾಗರ ತೀರದ ವಾಲ್ಪರೈಸೊ ಬಂದರಿನಲ್ಲಿ ಹಡಗಿನ ಭರ್ತಿಕಟ್ಟೆಯಲ್ಲಿ ಜಾಗವನ್ನು ಹೆಚ್ಚಿಸಲು 1912ರಲ್ಲಿ ಒಂದು ಅಲೆತಡೆಯನ್ನು ಕಟ್ಟಿ 1930ರ ತನಕವೂ ಬಂದರಿನಲ್ಲಿ ಮೇಲ್ಪಾಡುಗಳನ್ನು ಮಾಡಿದರು. ಇಲ್ಲಿ 55 ಮೀ ಆಳದ ನೀರಿನಲ್ಲಿ 975 ಮೀ ಉದ್ದದ ಒಂದು ಅಲೆತಡೆಯನ್ನು ಕಟ್ಟಬೇಕಾಯಿತು. ದಡದಿಂದ ಮರಳನ್ನು ಬಲಿಷ್ಠವಾದ ಹೂಳೆತ್ತುವ ಯಂತ್ರಗಳಿಂದ ತೆಗೆದು 305 ಮೀ ಉದ್ದವೂ 46 ಮೀ ಎತ್ತರವೂ ಆದ ಏರಿಯನ್ನು ಕಟ್ಟಿ ಅದರ ಮೇಲೆ ಭರ್ತಿಕಲ್ಲನ್ನು ತುಂಬಿ ಈ ತಳಪಾಯದ ಮೇಲೆ ಅಲೆತಡೆಯ ನಿರ್ಮಾಣವಾಯಿತು.

5. ಎರಡು ಅಥವಾ ಹೆಚ್ಚು ಅಲೆತಡೆಗಳುಳ್ಳ ಕೊಲ್ಲಿಯ ಬಂದರುಗಳು: ಆಳವಾದ ಕೊಲ್ಲಿಯ ಬಂದರುಗಳ ಸಮುದ್ರತೀರದಲ್ಲಿ ಕೊಲ್ಲಿಯ ಎರಡು ದಡಗಳಿಂದಲೂ ಪ್ರಾರಂಭಿಸಿ ಅಲೆತಡೆಗಳನ್ನು ಕೊಲ್ಲಿಗೆ ಅಡ್ಡವಾಗಿ ತೆಗೆದುಕೊಂಡು ಹೋಗಿ ಒಂದು ಕೊನೆಯಲ್ಲಿ ಹಡಗುಗಳಿಗೆ ಪ್ರವೇಶ ಮಾರ್ಗವನ್ನು ಕಲ್ಪಿಸಿರುತ್ತಾರೆ. ಈ ಪೈಕಿ ಒಂದು ಅಲೆತಡೆಯನ್ನು ಕೊಂಚ ಮುಂದಕ್ಕೆ ನೂಕಿ ಹಿಂದಿನದಕ್ಕಿಂತಲೂ ಆಚೆಗೆ ಚಾಚುವ ಹಾಗೆ ಮಾಡಿದರೆ ಹೆಚ್ಚು ರಕ್ಷಣೆ ದೊರೆಕುತ್ತದೆ. ಶ್ರೀಲಂಕದ ಕೊಲಂಬೊ ಕೃತಕ ಬಂದರಿನ ಅಲೆತಡೆಗಳು ಹಿಂದೂಮಹಾಸಾಗರದ ಪಶ್ಚಿಮ ಮಾರುತಗಳನ್ನು ಎದುರಿಸಬೇಕಾಗುತ್ತದೆ. 128 ಮೀ ಉದ್ದವಾದ ಅಲೆತಡೆಯನ್ನು 1885ರಲ್ಲಿ ಕಟ್ಟಿದರು. ಆಮೇಲೆ 800 ಮೀ ಉದ್ದವಾದ ವಾಯವ್ಯ ದಿಕ್ಕಿನ ಅಲೆತಡೆಯನ್ನು 1892ರಲ್ಲಿಯೂ 330 ಮೀ ಉದ್ದವಾದ ಈಶಾನ್ಯದ ಅಲತಡೆಯನ್ನು 1906ರಲ್ಲಿಯೂ ಕಟ್ಟಬೇಕಾಯಿತು. 1912ರಲ್ಲಿ ನೈಋತ್ಯದ ಅಲೆತಡೆಯನ್ನು 550 ಮೀಟರಿನಷ್ಟು ಉದ್ದವಾಗಿ ಮಾಡಿ ಬಂದರಿನ ಉತ್ತರ ಭಾಗವನ್ನು ನೈಋತ್ಯ ಮಾರುತಗಳ ಹೊಡೆತದಿಂದ ಕಾಪಾಡಿದ್ದಾರೆ. ಬಂದರಿನ ವಿಸ್ತೀರ್ಣ 260 ಹೆಕ್ಟೇರುಗಳು. ಇದರಲಿ ಹೂಳು ತೆಗೆದು ನೀರಿನ ಆಳವನ್ನು 9 ಮೀ ನಿಂದ 11 ಮೀ ವರೆಗೆ ಕಟ್ಟಿದ್ದಾರೆ.

6. ತೆರೆದ ಸಮುದ್ರತೀರಗಳ ಮೇಲೆ ಕೃತಕ ಬಂದರುಗಳು; ನೈಸರ್ಗಿಕವಾದ ರಕ್ಷಣೆಯೇ ಇಲ್ಲದೆ ಇರುವ ಕೆಲವು ಸ್ಥಳಗಳಲ್ಲಿಯೂ ಬಂದರುಗಳನ್ನು ಕಟ್ಟಬೇಕಾಗುತ್ತದೆ. ಅಂಥಕಡೆಗಳಲ್ಲಿ ಬಂದರಿನ ಸುತ್ತಲೂ ಅಲೆತಡೆ ಕಟ್ಟಿ ರಕ್ಷಣೆ ಒದಗಿಸಬೇಕಾಗುತ್ತದೆ. ಈ ಕ್ರಮ ಸಮುದ್ರದ ಅಲೆಗಳನ್ನು ಎದುರಿಸಿ ರಕ್ಷಣೆ ಮಾಡುತ್ತದೆ. ಈ ಅಲೆತಡೆಗಳನ್ನು ದಡದಿಂದಲೇ ಪ್ರಾರಂಭಿಸಬಹುದು. ಇಲ್ಲವೆ ಸಮುದ್ರದ ಪ್ರವಾಹಗಳಿಗೆ ಅಡ್ಡ ಬರದಂತೆ ದ್ವೀಪಗಳ ಹಾಗೆ ಕಟ್ಟಬಹುದು.

ಭೂಮಧ್ಯಸಮುದ್ರ ಮೊದಲಾದ ಅಲೆಗಳೆ ಇಲ್ಲದೆ ಇರುವ ಸಮುದ್ರದಲ್ಲಿ ತೀರದಿಂದ ಸ್ವಲ್ಪ ದೂರದಲ್ಲಿ ಅದಕ್ಕೆ ಸಮಾಂತರವಾಗಿ ಅಲೆತಡೆಗಳನ್ನು ಕಟ್ಟಿ ಅದರಲ್ಲಿ ಅಲ್ಲಲ್ಲಿ ಸಂದುಗಳನ್ನು ಬಿಡುತ್ತಾರೆ. ಈ ಅಲೆತಡೆಗಳ ರಕ್ಷಣೆಯಲ್ಲಿ ಬಂದರಿಂದ ಒಳಗಿನ ಕಾಮಗಾರಿಗಳನ್ನು ಕಟ್ಟುತ್ತಾರೆ.

ಶಿಕಾಗೊ, ಟೊರಂಟೊ ಮೊದಲಾದ ಅಮೆರಿಕದ ಮಹಾ ಸರೋವರದ ದಡಗಳ ಮೇಲಿನ ನೆಲದಿಂದ ಸುತ್ತುವರಿದ ನೈಸರ್ಗಿಕ ಬಂದರುಗಳಲ್ಲಿಯೂ ಸಮುದ್ರತೀರಕ್ಕೆ ಸಮಾಂತರವಾದ ಅಲೆತಡೆಗಳನ್ನು ಕಟ್ಟುತ್ತಾರೆ. (ಎಚ್.ಸಿ.ಕೆ.)

**ಬಗೋಟ:** ಕೊಲಂಬಿಯ ಗಣರಾಜ್ಯದ ರಾಜಧಾನಿ ಹಾಗೂ ಕೊಲಂಬಿಯದ ಕೊಂಡಿನಮಾರ್ಕ ಪ್ರಾಂತ್ಯದ ಆಡಳಿತ ಕೇಂದ್ರನಗರ. ಸಮುದ್ರಮಟ್ಟದಿಂದ 2639 ಮೀ ಎತ್ತರದಲ್ಲಿ ಉ.ಅ. $4^0 36'$ ಪ.ರೇ. $74^0 05'$ ಗಳ ನಡುವೆ ಇದೆ. ವಿಸ್ತೀರ್ಣ ಸು. 1578 ಚ.ಕಿಮೀ ಜನಸಂಖ್ಯೆ 1945,448 (2004). ಸುತ್ತಲೂ ಪರ್ವತಗಳಿಂದಾವೃತವಾಗಿದ್ದು ಹವೆ ತಂಪಾಗಿರುವುದು.

ಬಗೋಟ ರೈಲುಮಾರ್ಗ ಹೆದ್ದಾರಿ ಮತ್ತು ವಾಯು ಮಾರ್ಗಗಳ ಉತ್ತಮ ಸಂಪರ್ಕ ಪಡೆದಿದೆ. ಇದೊಂದು ವ್ಯಾಪಾರ ವಾಣಿಜ್ಯ ಕೇಂದ್ರ. ಕಲೆ, ಶಿಕ್ಷಣ ಹಾಗೂ ಸಾಂಸ್ಕೃತಿಕ ಕೇಂದ್ರ ಕೂಡ. ದಕ್ಷಿಣ ಅಮೆರಿಕದ ಅಥೆನ್ಸ್ ಎಂದು ಪ್ರಸಿದ್ಧ. ನಗರದ ಮಧ್ಯದಲ್ಲಿ ಇಟಲಿಯ ವಾಸ್ತುಶಿಲ್ಪಿಯಿಂದ ನಿರ್ಮಿತವಾದ ಸೈಮನ್ ಬೊಲಿವರನ ವಿಗ್ರಹವಿದೆ. ನಗರ ಅನೇಕ ಹಳೆಯ ಹಾಗೂ ಹೊಸ ಮಾದರಿಯ ಕಟ್ಟಡಗಳಿಂದಲೂ ಉದ್ಯಾನಗಳಿಂದಲೂ ಕೂಡಿದೆ. ಬೊಲಿವರನ ನಿವಾಸವಾಗಿದ್ದು ಸುಂದರ ಮನೆಯಿರುವ ನ್ಯಾಷನಲ್ ಪಾರ್ಕ್ ಬೊಗೋಟದ ಪ್ರಮುಖ ಉದ್ಯಾನ.

ತಂಬಾಕು, ರಾಸಾಯನಿಕ ವಸ್ತುಗಳು, ಗಾಜು, ಬಟ್ಟೆ, ಚರ್ಮದ ವಸ್ತುಗಳು, ಹಿಟ್ಟು, ಸಿಮೆಂಟ್, ಸಕ್ಕರೆ, ಸುಗಂಧ ದ್ರವ್ಯಗಳು, ಬಿಯರ್, ಬಣ್ಣ, ಇಟ್ಟಿಗೆಗಳು, ಬೆಂಕಿಪೆಟ್ಟಿಗೆ ಹಾಗೂ ಚಾಕೊಲೇಟ್ ಪ್ರಮುಖ ಉತ್ಪಾದನೆಗಳು. *

**ಬಣ್ಣದ ವಿಧಾನ :** ವಿವಿಧ ಸಾಂದ್ರತೆ ಅಥವಾ ವಿವಿಧ ಎತ್ತರವನ್ನು ಭೂಪಟದ ಮೇಲೆ ಬೇರೆ ಬೇರೆ ಬಣ್ಣದಿಂದ ಪ್ರತಿನಿಧಿಸುವ ವಿಧಾನ (ಟಿಂಟ್ ಮೆಥೆಡ್). ಇದನ್ನು ಕ್ರೋರೋ ಕ್ರೊಮ್ಯಾಟಿಕ್ ವಿಧಾನವೆಂತಲೂ ಕರೆಯುವರು. ಇದು ಅತ್ಯಂತ ಸರಳ ವಿಧಾನ. ಉದಾಹರಣೆಗೆ ಅರಣ್ಯ ಪ್ರದೇಶವನ್ನು ಗಾಢಹಸುರುಬಣ್ಣದಿಂದ, ಹುಲ್ಲುಗಾವಲುಗಳನ್ನು ತೆಳು ಹಸುರು ಬಣ್ಣದಿಂದ, ಮರುಭೂಮಿಯನ್ನು ಕಂದುಬಣ್ಣದಿಂದ ತೋರಿಸಬಹುದು. ಇದೇ ರೀತಿಯಲ್ಲಿ ಭೂಸ್ವರೂಪಗಳ ವಿವಿಧ ಎತ್ತರ ಹಾಗೂ ಸಾಗರಗಳ ವಿವಿಧ ಆಳವನ್ನು ತೋರಿಸಲೂ ಸಹ ವಿವಿಧ ಬಣ್ಣಗಳನ್ನು ಬಳಸಲಾಗುವುದು. ಇದನ್ನೇ ಪದರ ಬಣ್ಣದ ವಿಧಾನವೆಂದೂ ಕರೆಯವರು. ಈ ಬಣ್ಣಗಳ ಸೂಚಿಯನ್ನು ನಕ್ಷೆಯ ಒಂದು ಕಡೆ ಸೂಚಿಸಲಾಗುವುದು. (ಆರ್.ಎನ್.)

**ಬತ್ತ:** ಪ್ರಪಂಚದ ಎರಡನೆಯ (ಗೋಧಿಯ ಅನಂತರ) ಪ್ರಮುಖ ಆಹಾರ ಬೆಳೆ. ಇದು ಒರೈಸಸಟೈವಾ ಕುಟುಂಬಕ್ಕೆ ಸೇರಿದ ಹುಲ್ಲಿನ ಜಾತಿಯ ಸಸ್ಯ. ಇದು ಮೂಲತಃ ಉಷ್ಣವಲಯದ ಬೆಳೆ. ಬತ್ತದ ಮೂಲಸ್ಥಾನ ಚೀನ ಅಥವಾ ಭಾರತ ಎಂದು ಊಹಿಸಲಾಗಿದೆ. ಬತ್ತವನ್ನು ಮಾನವನ ಆಹಾರ, ಸ್ವಲ್ಪಮಟ್ಟಿಗೆ ಮದ್ಯ ತಯಾರಿಸಲು ಬಳಸಲಾಗುವುದು. ಬತ್ತದ ಉಪವಸ್ತುಗಳಾದ ತೌಡು ಮತ್ತು ಹುಲ್ಲನ್ನು ದನಕರುಗಳ ಮೇವಿಗಾಗಿ ಬಳಸಲಾಗುವುದು. ಬತ್ತದ ಹುಲ್ಲನ್ನು ಕಾಗದ, ಚಾಪೆ, ಟೋಪಿ, ಸೌಂಡ್‌ಪ್ರೂಫ್, ಗೋಡೆ, ಗುಡಿಸಲುಗಳ ಮೇಲ್ಚಾವಣಿಗೆ ಮತ್ತು ಅಣಬೆ ಬೆಳೆಯಲು ಬಳಸಲಾಗುವುದು.

ಬತ್ತ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳು: ಬತ್ತ ಬೆಳೆಯಲು $21^0$ ಯಿಂದ $24^0$ ಸೆ. ಉಷ್ಣಾಂಶ ಮತ್ತು 100 ರಿಂದ 150 ಸೆಂಮೀ ವಾರ್ಷಿಕ ಮಳೆ ಇರಬೇಕು. ಬತ್ತದ ಸಸಿಯ ಬುಡದಲ್ಲಿ ಸು. 6 ಸೆಂಮೀ ನೀರು ಸದಾ ನಿಂತಿರಬೇಕು. ಮೆಕ್ಕಲು ಅಥವಾ ಮರಳು ಮಿಶ್ರಿತ ಜೇಡಿಮಣ್ಣು ಬಹಳ ಸೂಕ್ತ, ನೀರಾವರಿ, ಸಮತಟ್ಟಾದ ನೆಲ ಮತ್ತು ಕಾರ್ಮಿಕರು ಬೇಕು.

ಬತ್ತದ ವಿಧಗಳು: ಬತ್ತವನ್ನು ಬಣ್ಣ, ಆಕಾರ, ಗಾತ್ರ, ಬೆಳೆಯುವ ಪ್ರದೇಶ ಮುಂತಾದವುಗಳ ಆಧಾರದ ಮೇಲೆ ವಿಂಗಡಿಸಲಾಗಿದೆ. ಬತ್ತ ಬೆಳೆಯುವ ಕ್ರಮದ ಆಧಾರದ ಮೇಲೆ ಬತ್ತವನ್ನು ಜಪಾನಿಕಾ ಮತ್ತು ಇಂಡಿಕಾ ಎಂದೂ ಬತ್ತ ಬೆಳೆಯುವ ಆಧಾರದ ಮೇಲೆ ಬೆಟ್ಟ ಪ್ರದೇಶದ ಬತ್ತ ಮತ್ತು ತಗ್ಗು ಪ್ರದೇಶದ ಬತ್ತ ಎಂದು ವಿಂಗಡಿಸಲಾಗಿದೆ.

ಜಪಾನಿಕ ಬತ್ತ: ಇದು ಸಮಶೀತೋಷ್ಣವಲಯದ ಬೆಳೆ. ಇದು ಗಿಡ್ಡವಾಗಿದ್ದು ಕಾಳು ದುಂಡಾಗಿ ಅಗಲವಾಗಿದ್ದು ಹೆಚ್ಚು ಸಾರಜನಕಾಂಶವನ್ನು ಒಳಗೊಂಡಿರುತ್ತದೆ. ಇದು ಅಲ್ಪಾವಧಿಯ ಬೆಳೆ. ಸಾಲಾಗಿ ನಾಟಿಮಾಡಿ ವೈಜ್ಞಾನಿಕವಾಗಿ ಬೆಳೆಯುವುದರಿಂದ ಹೆಚ್ಚು ಇಳುವರಿ ಪಡೆಯಬಹುದು.

ಇಂಡಿಕಾ ಬತ್ತ: ಇದನ್ನು ವಿವಿಧ ವಾಯುಗುಣಗಳಲ್ಲಿ ಬೆಳೆಯಲಾಗುತ್ತದೆ. ಇದು ದೀರ್ಘಾವಧಿ ಬೆಳೆ. ಇದರ ಕಾಳು ಉದ್ದವಾಗಿದ್ದು ಚಿಕ್ಕದಾಗಿರುತ್ತದೆ. ಇದರಲ್ಲಿ ಅಧಿಕ ಪಿಷ್ಟಾಂಶವಿದೆ. ಅವೈಜ್ಞಾನಿಕವಾಗಿ ಬೆಳೆಯುವುದರಿಂದ ಇಳುವರಿ ಕಡಿಮೆ.

ಬೆಟ್ಟ ಪ್ರದೇಶದ ಬತ್ತ: ಇದನ್ನು ಸಾಕಷ್ಟು ಮಳೆ ಬೀಳುವ ಬೆಟ್ಟಗಳ ಇಳಿಜಾರುಗಳಲ್ಲಿ ಸೋಪಾನಗಳಂತೆ ರಚಿಸಿದ ಗದ್ದೆಗಳಲ್ಲಿ ಬೆಳೆಯಲಾಗುತ್ತದೆ. ಈ ರೀತಿ ಬತ್ತ ಬೆಳೆಯುವ ಕ್ಷೇತ್ರ ಅತಿಕಡಿಮೆ.

ತಗ್ಗು ಪ್ರದೇಶದ ಬತ್ತ: ಇದನ್ನು ನದಿ ಬಯಲು, ಮುಖಜಭೂಮಿ, ಮತ್ತು ಜೌಗು ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ನೀರಾವರಿ ಆಶ್ರಯದಲ್ಲಿ ನಾಟಿವಿಧಾನದಲ್ಲಿ ಬೆಳೆಯಲಾಗುತ್ತದೆ. ಇಂತಹ ಬತ್ತ ಬೆಳೆಯುವ ಕ್ಷೇತ್ರ ಹೆಚ್ಚು.

ಬತ್ತವನ್ನು ಪ್ರಮುಖವಾಗಿ ಚೀನ, ಭಾರತ, ಬಾಂಗ್ಲಾದೇಶ, ಇಂಡೋನೇಷ್ಯ, ಜಪಾನ್, ಥೈಲೆಂಡ್, ಮಯನ್ಮಾರ್, ಕೊರಿಯ, ವಿಯೆಟ್ನಾಂ, ಫಿಲಿಫೈನ್ಸ್, ಪಾಕಿಸ್ತಾನ, ಬ್ರೆಜಿಲ್, ಈಜಿಪ್ಟ್, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಶ್ರೀಲಂಕಗಳಲ್ಲಿ ಬೆಳೆಯಲಾಗುತ್ತದೆ. ಮಾನ್ಸೂನ್ ಪ್ರದೇಶಗಳಲ್ಲಿ ಬತ್ತದ ಬೇಸಾಯ ವ್ಯಾಪಕವಾಗಿದೆ. (ಪಿ.ಟಿ.ಬಿ.)

**ಬದಲಿಕೆಯ ತತ್ತ್ವ:** ಆರ್ಥಿಕ ಸಿದ್ಧಾಂತದಲ್ಲಿ ಒಂದು ಮಹತ್ವದ ನಿಯಮ. ಇದು ಪ್ರಮುಖವಾಗಿ ಅನುಭೋಗ ಸಿದ್ಧಾಂತಕ್ಕೆ ಹೊಂದಿಕೊಂಡಿದೆ. ಮಾನವನ ಬಯಕೆಗಳು ಅಪರಿಮಿತವಾಗಿವೆ. ಆದರೆ ಅವುಗಳನ್ನು ಈಡೇರಿಸಿಕೊಳ್ಳಲು ಲಭ್ಯವಿರುವ ಸಾಧನಸಂಪನ್ಮೂಲಗಳ ಕೊರತೆ ಇದೆ. ಆದ್ದರಿಂದ ಬಯಕೆಗಳು ಒಂದಕ್ಕೊಂದು ಸ್ಪರ್ಧಿಯಾಗಿವೆ. ಪರಿಮಿತ ಸಂಪನ್ಮೂಲಗಳಲ್ಲಿ ಎಲ್ಲಾ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಕೆಲವೇ ಬಯಕೆಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಅನುಭೋಗಿ ಸಾಧ್ಯವಾದಷ್ಟು ವಿವೇಕಯುತವಾಗಿ ಹಣವನ್ನು ಬಳಸಿ ತಾನು ಕೊಳ್ಳುವ ವಸ್ತುಗಳಿಂದ ಗರಿಷ್ಠ ತೃಪ್ತಿಯನ್ನು ಪಡೆಯಲು ಪ್ರಯತ್ನಿಸುತ್ತಾನೆ. ಈ ದೃಷ್ಟಿಯಿಂದ ಅವನು ವಸ್ತುವಿಗೆ ನೀಡುವ ಬೆಲೆ ಮತ್ತು ಅದರಿಂದ ದೊರೆಯುವ ತುಷ್ಟಿ ಗುಣವನ್ನು ಹೋಲಿಕೆ ಮಾಡುತ್ತಾನೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ತಾನು ಕೊಂಡುಕೊಳ್ಳಲು ಇಚ್ಛಿಸುವ ಯಾವುದೇ ಒಂದು ವಸ್ತುವಿನ ತುಷ್ಟಿ ಗುಣವನ್ನು ಲಭ್ಯವಿರುವ ಇತರ ಎಲ್ಲಾ ವಸ್ತುಗಳ ತುಷ್ಟಿಗುಣದೊಡನೆ ಅನುಭೋಗಿ ಹೋಲಿಕೆ ಮಾಡುತ್ತಾನೆ.

ತಾನು ಕೊಡುವ ಹಣಕ್ಕೆ ಯಾವ ವಸ್ತುವಿನಿಂದ ತನಗೆ ಗರಿಷ್ಠ ತುಷ್ಟಿಗುಣ ದೊರೆಯುವಂತಿರುತ್ತದೆಯೋ ಆ ವಸ್ತುವನ್ನು ಕೊಳ್ಳುವುದು ಅವನ ಗುರಿಯಾಗಿರುತ್ತದೆ. ಆದ್ದರಿಂದ ಒಂದು ವಸ್ತುವನ್ನು ಇನ್ನೊಂದು ವಸ್ತುವಿನೊಡನೆ ತುಲನೆ ಮಾಡಲು ಹಣ ಸಾಧನವಾಗುತ್ತದೆ. ಆ ಮೇರೆಗೆ ಒಂದು ವಸ್ತುವಿಗೆ ಬದಲಾಗಿ ಮತ್ತೊಂದು ವಸ್ತುವನ್ನು ಆಯ್ಕೆ ಮಾಡಲು ಸಾಧ್ಯವಾಗುತ್ತದೆ. ತೃಪ್ತಿಯನ್ನು ಗರಿಷ್ಠಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ಅನುಭೋಗಿ ಕಡಿಮೆ ಪ್ರಯೋಜನಕಾರಿಯಾದ ವಸ್ತುವಿಗೆ ಬದಲಾಗಿ ಹೆಚ್ಚು ಪ್ರಯೋಜನಕಾರಿಯಾದ ವಸ್ತುವನ್ನು ಕೊಳ್ಳುತ್ತಾನೆ.

ಅನುಭೋಗಿ ತನ್ನಲ್ಲಿರುವ ಮಿತವಾದ ಹಣವನ್ನು ವಿವಿಧ ವಸ್ತುಗಳ ಮೇಲೆ ವೆಚ್ಚ ಮಾಡುವಾಗ ಪ್ರತಿಯೊಂದು ವಸ್ತುವಿನಿಂದ ದೊರೆಯುವ ಸೀಮಾಂತ ತುಷ್ಟಿಗುಣ ಅದರ ಬೆಲೆಗೆ ಸಮವಾಗಿರುವಂತೆ ನೋಡಿಕೊಳ್ಳುತ್ತಾನೆ. ಆಗ ಮಾತ್ರ ಅವನಿಗೆ ಗರಿಷ್ಠ ತೃಪ್ತಿ ದೊರೆಯುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ವಿವಿಧ ವಸ್ತುಗಳ ಮೇಲೆ ಅನುಭೋಗಿ ವೆಚ್ಚ ಮಾಡಿದ ಹಣದಿಂದ ಗರಿಷ್ಠ ತೃಪ್ತಿ ಪಡೆಯಬೇಕಾದರೆ. ಆ ಎಲ್ಲಾ ವಸ್ತುಗಳ ಅಂಚಿನ (ಸೀಮಾಂತ) ತುಷ್ಟಿ ಗುಣಗಳು ಅವುಗಳಿಗೆ ನೀಡುವ ಬೆಲೆಗಳಿಗೆ ಸಮವಾಗಿರಬೇಕು. ವಿವಿಧ ವಸ್ತುಗಳಿಂದ ಅಥವಾ ವಿವಿಧ ಉಪಯೋಗಗಳಿಂದ ಸಿಗುವ ಸೀಮಾಂತ ತುಷ್ಟಿ ಗುಣ ಸಮವಾಗಿದ್ದಾಗ ಅನುಭೋಗಿಗೆ ಗರಿಷ್ಠ ತೃಪ್ತಿ ಲಭಿಸುತ್ತದೆ ಎಂಬ ಸಾಮಾನ್ಯ ತತ್ವವನ್ನು ಬೋಧಿಸುವುದರಿಂದ ಈ ನಿಯಮಕ್ಕೆ ಸಮ ಸೀಮಾಂತ ತುಷ್ಟಿಗುಣ ನಿಯಮ ಎಂದು ಹೆಸರು ಬಂದಿದೆ. ಈ ನಿಯಮವನ್ನು ಬದಲಿಕೆಯ ನಿಯಮ (ದಿ ಲಾ ಆಫ್ ಸಬ್‌ಸ್ಟಿಟ್ಯೂಷನ್) ಎಂತಲೂ ಕರೆಯುತ್ತಾರೆ. ಏಕೆಂದರೆ ಅನುಭೋಗಿಯು ಕಡಿಮೆ ತುಷ್ಟಿಗುಣವಿರುವ ವಸ್ತುವಿಗೆ ಬದಲಾಗಿ ಹೆಚ್ಚು ತುಷ್ಟಿಗುಣವಿರುವ ವಸ್ತುವನ್ನು ಕೊಳ್ಳುತ್ತಾ ಹೋಗುತ್ತಾನೆ. ಪ್ರತಿಯೊಂದು ವಸ್ತುವಿನಿಂದ ದೊರೆಯುವ ಸೀಮಾಂತ ತುಷ್ಟಿಗುಣವನ್ನು ಅನುಭೋಗಿಯು ಹೋಲಿಸುವುದರಿಂದ ಇದನ್ನು ಸೀಮಾಂತ ಹೋಲಿಕೆಯ ನಿಯಮ (ದಿ ಪ್ರಿನ್ಸಿಪಲ್ ಆಫ್ ಮಾರ್ಜಿನಲ್ ಕಂಪ್ಯಾರಿಸನ್) ಎಂದೂ ಕರೆಯಲಾಗುತ್ತದೆ. ಅನುಭೋಗಿ ತಾನು ಸೇವಿಸುವ ಎಲ್ಲಾ ವಸ್ತುಗಳಿಂದ ಪರಮಾವಧಿ ತೃಪ್ತಿಯನ್ನು ಪಡೆಯುವ ಗುರಿಯನ್ನಿಟ್ಟು ಕೊಂಡಿರುವುದರಿಂದ ಇದು ಗರಿಷ್ಠ ತೃಪ್ತಿಯ ನಿಯಮ (ದಿ ಲಾ ಆಫ್ ಮ್ಯಾಕ್ಸಿಮಮ್ ಸ್ಯಾಟಿಸ್‌ಫ್ಯಾಕ್ಷನ್) ಎಂತಲೂ ಗುರುತಿಸಲ್ಪಟ್ಟಿದೆ.

ಬದಲಿಕೆಯ ನಿಯಮ ಅನುಭೋಗಿಯ ವರ್ತನೆಗೆ ಸಂಬಂಧಿಸಿದ ಪ್ರಮುಖ ನಿಯಮವಾಗಿದೆ. ಆಲ್ಪ್ರೆಡ್ ಮಾರ್ಷಲ್‌ನಿಂದ ಪ್ರತಿಪಾದಿಸಲ್ಪಟ್ಟ ಈ ನಿಯಮ ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮದಿಂದ ಹೊರ ಹೊಮ್ಮಿದೆ. ಅರ್ಥಶಾಸ್ತ್ರದಲ್ಲಿ ಈ ನಿಯಮ ಕೇಂದ್ರ ಬಿಂದುವಾಗಿದೆ ಎಂದರೆ ತಪ್ಪಾಗುವುದಿಲ್ಲ. ಏಕೆಂದರೆ ಈ ನಿಯಮವೇ ಪ್ರತಿಯೊಂದು ಆರ್ಥಿಕ ಚಟುವಟಿಕೆಗೆ ಗುರಿಯನ್ನು ತೋರುವಂತಹುದಾಗಿದೆ. **(ಹೆಚ್.ಆರ್.ಕೆ.)**

**ಬನವಾಸಿ:** ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಒಂದು ಇತಿಹಾಸ ಪ್ರಸಿದ್ಧ ಗ್ರಾಮ. ಕಸಬೆಯಿಂದ ಆಗ್ನೇಯಕ್ಕೆ ಸು. 22 ಕಿಮೀ ದೂರದಲ್ಲಿ ವರದಾನದಿಯ ಎಡದಂಡೆಯ ಮೇಲಿದೆ. ಇದರ ಜನಸಂಖ್ಯೆ 6138. ಇದು ಕದಂಬರ ರಾಜಧಾನಿಯಾಗಿತ್ತು.

ಈಗಿನ ಗ್ರಾಮದೊಳಗೆ, ವರದಾನದಿಯಿಂದ ಅನತಿದೂರದಲ್ಲಿರುವ ಮಧುಕೇಶ್ವರಾಲಯ ಇಲ್ಲಿಯ ವಾಸ್ತು ನಿರ್ಮಾಣಗಳಲ್ಲಿ ಪ್ರಮುಖವಾದುದು. ಇದು ಕದಂಬ, ಬಾದಾಮಿ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ವಿಜಯನಗರ ಮತ್ತು ಸೋದೆ ದೊರೆಗಳ ಕಾಲದ ಸಂಕೀರ್ಣವಾಗಿದೆ. ಇದೇ ಆವರಣದಲ್ಲಿರುವ ಸದಾಶಿವ ಮಂದಿರ ವಿಜಯನಗರ ಅರಸರ ಕಾಣಿಕೆ. **(ಬಿ.ಕೆ.ಜಿ.)**

**ಬನಾಸ್ ಕಂಠಾ:** ಗುಜರಾತ್ ರಾಜ್ಯದ ಅತ್ಯಂತ ಉತ್ತರದ ಒಂದು ಜಿಲ್ಲೆ. ಈ ಜಿಲ್ಲೆಯನ್ನು ಹಾದು ಹೋಗುವ ಬನಾಸ್ ನದಿಯಿಂದ ಇದಕ್ಕೆ ಈ ಹೆಸರು ಬಂದಿದೆ. ಭಾರತ ಸ್ವಾತಂತ್ರ್ಯ ಪಡೆದ ತರುವಾಯ ಕೆಲವು ಸಣ್ಣ ಮುಸ್ಲಿಂ ಹಾಗೂ ರಜಪೂತ್ ಸಂಸ್ಥಾನಗಳನ್ನೂ ಜಾಗೀರುಗಳನ್ನೂ ಸೇರಿಸಿ ಈ ಜಿಲ್ಲೆಯನ್ನು ರಚಿಸಲಾಯಿತು. ಜಿಲ್ಲೆಯ ವಿಸ್ತೀರ್ಣ 12,702 ಚ.ಕಿಮೀ. ಜನಸಂಖ್ಯೆ 2502843. ಕಛ್ ನಿಂದ ಪೂರ್ವದ ಆರಾವಳಿ ಪರ್ವತ ಶ್ರೇಣಿಯವರಗೆ ವಿಸ್ತರಿಸಿದ ಬನಾಸ್ ಕಂಠಾದ ಉತ್ತರದಲ್ಲಿ ರಾಜಸ್ತಾನ ರಾಜ್ಯವಿದೆ. ಥಾರ್ ಮರುಭೂಮಿಯ ದಕ್ಷಿಣ ಅಂಚಿನಲ್ಲಿ ಇರುವ ಈ ಜಿಲ್ಲೆಯ ಬಹುಭಾಗ ಮರಳಿನಿಂದ ಕೂಡಿದ ಸಮತಲ ಪ್ರದೇಶ. ಜಿಲ್ಲೆಯ ಆರನೆಯ ಒಂದು ಭಾಗದಷ್ಟು ನೆಲ ಬಂಜರು. ಕೆಲವು ಭಾಗಗಳಲ್ಲಿ ದಟ್ಟವಾದ ಅರಣ್ಯಗಳೂ ಇನ್ನು ಕೆಲವು ಭಾಗಗಳಲ್ಲಿ ಹುಲ್ಲುಗಾವಲುಗಳೂ ಇವೆ, ರಾಗಿ ಮತ್ತು ಗೋದಿ ಇಲ್ಲಿಯ ಪ್ರಮುಖ ಬೆಳೆಗಳು, ಮುಸುಕಿನ ಜೋಳ, ಆಲೂಗಡ್ಡೆ, ಮೋಪು, ಮರಮುಟ್ಟುಗಳು ಮತ್ತು ಕೈಮಗ್ಗದ ಬಟ್ಟೆ ಮುಖ್ಯ ರಫ್ತುವಸ್ತುಗಳು. ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಉತ್ತಮ ಶಿಲೆಗಳು ಸಿಗುವ ಕಲ್ಲುಗಣಿಗಳು ಈ ಜಿಲ್ಲೆಯಲ್ಲಿವೆ. ಜಿಲ್ಲೆಯ ಸಂಚಾರಮಾರ್ಗಗಳು ಉತ್ತಮವಾಗಿಲ್ಲದಿರುವುದರಿಂದ ಸಾರಿಗೆ ವ್ಯವಸ್ಥೆ ಅಷ್ಟೇನೂ ಚೆನ್ನಾಗಿಲ್ಲ. ಆದರೆ ಜಿಲ್ಲೆಯ ಆಡಳಿತ ಕೇಂದ್ರವಾದ ಪಾಲನಪುರ ಮತ್ತು ಇತರ ಕೆಲವು ಪಟ್ಟಣಗಳು ಪಶ್ಚಿಮ ರೈಲ್ವೆ ಮಾರ್ಗದ ಮೇಲಿವೆ. ಪಾಲನಪುರ ಈ ಜಿಲ್ಲೆಯ ಪ್ರಮುಖ ವ್ಯಾಪಾರಸ್ಥಳವಾಗಿದೆ. ಇದೊಂದು ಪ್ರಾಚೀನ ಪಟ್ಟಣ. **(ಎಚ್.ಜಿ.ಎ.)**

**ಬನ್ನೂರು:** ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ಮೈಸೂರಿಗೆ ಪೂರ್ವದಲ್ಲಿ 23 ಕಿಮೀ ದೂರದಲ್ಲಿ ಕಾವೇರಿಯ ಎಡದಂಡೆಯಲ್ಲಿರುವ ಪಟ್ಟಣ. ಜನಸಂಖ್ಯೆ 23190.

ಇದು ಕುರಿಸಾಕಣಿಕೆಗೆ ಹೆಚ್ಚು ಪ್ರಸಿದ್ಧ. ಬನ್ನೂರು ತಳಿ (ಬಂಡಲೂರು ತಳಿ) ಎಂಬ ವಿಶೇಷ ತಳಿಯ ಕುರಿಗಳಿಗೆ ಹೆಚ್ಚು ಬೇಡಿಕೆ ಇದೆ. ಈ ಊರಿನಲ್ಲಿ ಭಾನುವಾರ ಸಂತೆ ನಡೆಯುತ್ತದೆ. ಸುತ್ತಲೂ ಗದ್ದೆ ತೋಟಗಳಿಂದ ಸಮೃದ್ಧವಾಗಿರುವ ಈ ಊರಿನಲ್ಲಿ ವಿದ್ಯುತ್, ವೈದ್ಯಕೀಯ ಸೌಲಭ್ಯಗಳು ಹಾಗೂ ಪ್ರಥಮ ದರ್ಜೆಕಾಲೇಜು ಇವೆ. ಕಾವೇರಿ ನದಿಗೆ ದೊಡ್ಡ ಸೇತುವೆಯನ್ನು ಕಟ್ಟಲಾಗಿದೆ. ಈ ಊರು ಮೊದಲು ಹಳೆಯ ಅಷ್ಟಗ್ರಾಮ ತಾಲ್ಲೂಕಿಗೆ ಸೇರಿತ್ತು. 1882ರಲ್ಲಿ ಇದನ್ನು ತಿರುವಕೂಡಲು ನರಸೀಪುರ ತಾಲ್ಲೂಕಿಗೆ ಸೇರಿಸಲಾಯಿತು. ಪೌರಸಭೆ ಇದೆ. **(ವಿ.ಜಿ.ಕೆ.)**

**ಬನ್ನೇರುಘಟ್ಟ:** ಬೆಂಗಳೂರು ಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಒಂದು ಗ್ರಾಮ. ಬೆಂಗಳೂರು ನಗರದಿಂದ ದಕ್ಷಿಣಕ್ಕೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 3958.

ಸರ್ಕಾರದ ರಾಷ್ಟ್ರೀಯ ಉದ್ಯಾನವನ ಯೋಜನೆಯನ್ವಯ ಬನ್ನೇರುಘಟ್ಟ ಪ್ರದೇಶವನ್ನು ಆವರಿಸಿಕೊಂಡಿದೆ. ಈ ರಾಷ್ಟ್ರೀಯ ಉದ್ಯಾನದ ಒಟ್ಟು ಪ್ರದೇಶ ಸು. 129 ಚ.ಕಿಮೀ. ಇದರಲ್ಲಿ ನಾನಾಜಾತಿಯ ಮರಗಿಡಗಳುಂಟು. ದೇಶದ ಹಲವು ಭಾಗಗಳಿಂದ ತಂದ ವಿವಿಧ ಕಾಡುಪ್ರಾಣಿಗಳನ್ನು ಇಲ್ಲಿಯ ಸ್ವಾಭಾವಿಕ ಪರಿಸರದಲ್ಲಿ ಸಂರಕ್ಷಿಸುವುದು ಈ ಯೋಜನೆಯ ಉದ್ದೇಶ. ಪ್ರಾಣಿಗಳಿಗೆ ಬೇಕಾದ ನೀರಿನ ಸೌಲಭ್ಯಕ್ಕಾಗಿ ಇಲ್ಲಿ ಹರಿಯುವ ಸಣ್ಣ ತೊರೆಗಳಿಗೆ ಅಡ್ಡಗಟ್ಟೆಹಾಕಿ ನೀರನ್ನು ಸಂಗ್ರಹಿಸಲಾಗಿದೆ. ಸಫಾರಿ ಪಾರ್ಕ್‌ನ ನಿರ್ಮಾಣ ಈ ಯೋಜನೆಯ ಗಮನಾರ್ಹ ಅಂಶ. ಇಲ್ಲಿ ಸಿಂಹ, ಹುಲಿ, ಆಫ್ರಿಕನ್ ಗೊರಿಲ್ಲಾಗಳನ್ನು ಸಂರಕ್ಷಿಸಿ ಅವುಗಳ ವಂಶಾಭಿವೃದ್ಧಿಗೆ ಅನುವು ಮಾಡಲಾಗುತ್ತಿದೆ, ಮೋಸಳೆಕೇಂದ್ರ ಈ ಉದ್ಯಾನದ ಮತ್ತೊಂದು ಗಮನಾರ್ಹ ಸ್ಥಳ. ಮೊಸಳೆಗಳ ವಂಶಾಭಿವೃದ್ಧಿಗಾಗಿ ಇಲ್ಲಿ ಒಂದು ಸಣ್ಣ ಕೃತಕ ಸರೋವರ ನಿರ್ಮಿಸಿ ಅದರೊಳಗೆ ವಿವಿಧ ಜಾತಿಯ ಮೊಸಳೆಗಳನ್ನು ಬಿಡಲಾಗಿದೆ. *

**ಬಯಲು ತಿಪ್ಪೆ:** ಮನುಷ್ಯನ ದೈನಂದಿನ ಚಟುವಟಿಕೆಯಿಂದ ವಿವಿಧ ಮೂಲಗಳಿಂದ (ಮನೆ, ಕೃಷಿ, ಕೈಗಾರಿಕೆ, ವ್ಯಾಪಾರ ವಾಣಿಜ್ಯ ಇತ್ಯಾದಿ) ತ್ಯಾಜ್ಯ ವಸ್ತುಗಳು ಹೊರದೂಡಲ್ಪಡುತ್ತವೆ. ಈ ರೀತಿ ಹೊರದೂಡಲ್ಪಟ್ಟ ಅನಗತ್ಯವಸ್ತುಗಳ ಸಂಗ್ರಹ.

ನಗರ ಪ್ರದೇಶಗಳಲ್ಲಿ ಇವುಗಳಿಗೆ ಕಸದ ತೊಟ್ಟಿ (ನಗರ ಪಾಲಿಕೆಯ ಕಸದ ತೊಟ್ಟಿ) ಗಳೆಂದು ಕರೆದರೆ, ಗ್ರಾಮೀಣ ಪ್ರದೇಶದಲ್ಲಿ ತಿಪ್ಪೆಗಳೆಂದು ಕರೆಯುವರು. ಈ ತಿಪ್ಪೆ ಅಥವಾ ತೊಟ್ಟಿಗೆ ಹಾಕುವ ವಸ್ತುಗಳ ವರ್ಗೀಕರಣವಿಲ್ಲದಿರುವಿಕೆ ಮತ್ತು ಅವುಗಳ ಅವೈಜ್ಞಾನಿಕ ನಿರ್ಹಣೆಯು ಪರಿಸರದಲ್ಲಿ ವಿವಿಧ ರೀತಿಯ ಮಾಲಿನ್ಯಕ್ಕೆ ಕಾರಣವಾಗುತ್ತಿವೆ. ಒಂದು ರೀತಿಯಲ್ಲಿ ಹೇಳುವುದಾದರೆ ಈ ತಿಪ್ಪೆಯ ವಸ್ತುಗಳೇ (ಗ್ರಾಮೀಣ) ಜೈವಿಕ ಕೃಷಿಗೆ ಆಧಾರವಾದ ಗೊಬ್ಬರದ ಮೂಲಗಳು. ಉದಾ: ಸೆಗಣಿ, ಗೋಮೂತ್ರ, ಹುಲ್ಲು. ಆದರೆ ಇಲ್ಲಿ ಕರಗುವ ಮತ್ತು ಮಣ್ಣಿನಲ್ಲಿ ಕರಗದಿರುವ ಎರಡೂ ರೀತಿಯ ವಸ್ತುಗಳನ್ನು ಮಿಶ್ರಗೊಳಿಸುವುದರಿಂದ ಜೈವಿಕ ಗೊಬ್ಬರವೇ ಗ್ರಾಮಾಂತರ ಪ್ರದೇಶದಲ್ಲಿ ಮಲಿನಗೊಳ್ಳುತ್ತದೆ.

ನಗರ ಪ್ರದೇಶದಲ್ಲಿ ಬಯಲು ತಿಪ್ಪೆಯ ವಸ್ತುಗಳ ನಿರ್ವಹಣೆಯು 3 ಹಂತಗಳನ್ನು ಒಳಗೊಂಡಿದೆ. 1) ವಿವಿಧ ಆಕರಗಳಿಂದ ವಸ್ತುಗಳ ಸಂಗ್ರಹಣೆ 2) ಸಂಗ್ರಹಿಸಿದ ವಸ್ತುಗಳನ್ನು ಸಂಸ್ಕರಿಸುವ ಜಾಗಕ್ಕೆ ಸಾಗಿಸುವುದು 3) ಅಂತಿಮವಾಗಿ ಅವುಗಳನ್ನು ಸಂಸ್ಕರಿಸುವುದು.

ಸಂಸ್ಕರಿಸಿದ ಅನಂತರ ವಸ್ತುಗಳನ್ನು ಹಲವಾರು ಕ್ರಮಗಳ ಮೂಲಕ ನಾಶಗೊಳಿಸಲಾಗುತ್ತದೆ. ಕೆಲವನ್ನು ಬೆಂಕಿಯಲ್ಲಿ ಸುಟ್ಟರೆ ಮತ್ತೆ ಕೆಲವನ್ನು ಆಳವಾದ ಗುಂಡಿ ತೆಗೆದು ಅದರಲ್ಲಿ ಹೂಳಲಾಗುತ್ತದೆ. ಇನ್ನು ಕೆಲವು ಕಡೆ ಇವನ್ನು ಬಯಲು ಪ್ರದೇಶ ಇಲ್ಲವೇ ಸಮುದ್ರಕ್ಕೆ ಎಸೆಯುವ ಪದ್ಧತಿಯು ರೂಢಿಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ಸಮುದ್ರಕ್ಕೆ ಎಸೆಯುವಿಕೆಯನ್ನು ನಿಷೇಧಿಸಲಾಗಿದೆ.

ಮಣ್ಣಿನಲ್ಲಿ ಕರಗದಿರುವ ಘನತ್ಯಾಜ್ಯವಸ್ತುಗಳನ್ನು ಯಾವುದೇ ರೀತಿಯಲ್ಲಿ ನಾಶಪಡಿಸಿದರೂ ಅದರಿಂದ ಪರಿಸರಕ್ಕೆ ಅಪಾಯ ತಪ್ಪಿದ್ದಲ್ಲ. ಹಾಗೆಂದು ಅವುಗಳನ್ನು ಉತ್ಪತ್ತಿ ಮಾಡದೆ ಮಾನವ ಆರ್ಥಿಕ ಜೀವನದ ನಿರ್ವಹಣೆ ಅಸಾಧ್ಯ. ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ಅವುಗಳ ಬಳಕೆಯನ್ನು ಕಡಿಮೆ ಮಾಡುವುದಲ್ಲದೆ ಅವುಗಳನ್ನು ಅಧಿಕವಾಗಿ ಮರುಬಳಕೆ ಅಥವಾ ಮಣ್ಣಿನಲ್ಲಿ ಕರಗುವ ವಸ್ತುಗಳ ಪರ್ಯಾಯ ಬಳಕೆಯ

ಮೂಲಕ ತ್ಯಾಜ್ಯವಸ್ತುಗಳ ಗಾತ್ರದ ಪ್ರಮಾಣವನ್ನು ಕಡಿಮೆ ಮಾಡಿ ಪರಿಸರದಲ್ಲಿ ಸ್ವಲ್ಪ ಮಟ್ಟಿಗಾದರೂ ಸಮತೋಲನವನ್ನು ಉಂಟು ಮಾಡಲು ಪ್ರಯತ್ನಿಸುವುದು ಪ್ರತಿಯೊಬ್ಬ ಪ್ರಜ್ಞಾವಂತ ನಾಗರೀಕರನ ಕರ್ತವ್ಯವಾಗಿದೆ. ಇದರಿಂದಾಗಿ ಪ್ರತಿಯೊಂದು ಹಂತದಲ್ಲಿಯೂ ವಸ್ತುವನ್ನು ಬಿಸಾಡುವ ಮುನ್ನ (ಒಂದು ಚಾಕ್ಲೇಟ್ ಕವರ್ ಸಹಿತ) ಯೋಚಿಸಿ ಬಿಸಾಡುವುದು ಚಿಂತಿಸಿ ಪುನರ್ ಬಳಸುವುದು ಅಗತ್ಯ. (ಕೆ.ಎಸ್.)

**ಬಯೋಮ್:** ಒಂದು ನಿರ್ದಿಷ್ಟ ವಾಯುಗುಣ ಪ್ರದೇಶದ ನಿರ್ವಹಣೆಯಲ್ಲಿ ಬರುವ ಜೀವಿಗಳ ಬೃಹತ್ ಸಮುದಾಯ. ಒಂದು ಜೀವಸಮುದಾಯ ವಿವಿಧ ಪ್ರಕಾರದ ಜೈವಿಕ ಸಮೂಹಗಳಿಂದ ಕೂಡಿದ್ದು ಅವು ಒಂದೇ ವಿಧದ ವಾಯುಗುಣದ ಸ್ಥಿತಿಯಲ್ಲಿ ಸಮಾವೇಶಗೊಂಡಿರುತ್ತವೆ. ಒಟ್ಟಾರೆ ವಾಯುಗುಣ ಪರಿಸ್ಥಿತಿ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳು ಜೀವ ಸಮೂಹವನ್ನು ನಿರ್ಣಯಿಸುತ್ತವೆ. ಅವು ಜಾಗತಿಕ ಜೀವ ಸಮೂಹಗಳನ್ನು ವರ್ಗೀಕರಿಸಲು ನೆರವಾಗುತ್ತವೆ. ಪ್ರಪಂಚದ ಪ್ರಮುಖ ಜೀವ ಸಮೂಹಗಳೆಂದರೆ ಉಷ್ಣ ವಲಯದ ಕಾಡುಗಳು, ಪರ್ಣಪಾತಿ ಕಾಡುಗಳು, ಹುಲ್ಲುಗಾವಲು, ಸೂಚಿ ಪರ್ಣ ಕಾಡುಗಳು ಮತ್ತು ತಂಡ್ರಾ ಸಮುದಾಯಗಳು ಜಲ ಜೀವಸಮೂಹಗಳೆಂದರೆ ಸಮುದ್ರ, ನದಿ ಇತ್ಯಾದಿ.

ಜೀವಸಮೂಹಗಳ ಭೌಗೋಳಿಕ ವ್ಯಾಪ್ತಿಯನ್ನು ಮುಖ್ಯವಾಗಿ ಹವಾಮಾನದ ಅಂಶಗಳಾದ ಅವಪಾತ ಉಷ್ಣತೆ, ಸೂರ್ಯನಬೆಳಕು, ಮಳೆ ಮತ್ತಿತರ ಅಂಶಗಳು ನಿರ್ಧರಿಸುತ್ತವೆ. ಉದಾ: ಪ್ರಪಂಚದ ಸಮಶೀತೋಷ್ಣ ಮತ್ತು ಉಷ್ಣವಲಯದ ಪ್ರದೇಶಗಳ ಮಳೆಯ ಹಂಚಿಕೆ ಜೀವಿಸಮೂಹಗಳ ವಿಧಗಳನ್ನು ನಿರ್ಧರಿಸುತ್ತವೆ. ಉಷ್ಣವಲಯದಲ್ಲಿ ಸರಾಸರಿ 200 ಸೆಂಮೀ ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನಿತ್ಯಹರಿದ್ವರ್ಣ ಕಾಡುಗಳಿವೆ. ಪರ್ಣಪಾತಿ ಕಾಡುಗಳು ಬೆಳೆಯಲು 100 ರಿಂದ 200 ಸೆಂಮೀ ನಷ್ಟು ಮಳೆ ಸಾಕು. 100 ಸೆಂಮೀ ಗಿಂತ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹುಲ್ಲುಗಾವಲುಗಳು ಮತ್ತು ಕನಿಷ್ಠ 25 ಸೆಂಮೀ ಮಳೆ ಬೀಳುವ ಪ್ರದೇಶಗಳಲ್ಲಿ ಮರುಭೂಮಿ ಜೀವಸಮೂಹಗಳಿರುತ್ತವೆ.

ಪ್ರಪಂಚದ ಜೀವಸಮೂಹಗಳಲ್ಲಿ ಎರಡು ವಿಧಗಳಿವೆ: 1) ಭೂ ಜೀವಸಮೂಹಗಳು: ಭೂಭಾಗಗಳಲ್ಲಿ ಕಂಡು ಬರುವ ಜೈವಿಕ ರಾಶಿ ಜಲೀಯ ವ್ಯವಸ್ಥೆಗಳಿಗಿಂತ ಸಂಪೂರ್ಣ ಭಿನ್ನವಾದವು. ಉಭಯವಾಸಿಗಳು ಮಾತ್ರ ಇದಕ್ಕೆ ಸೇರುವವು. ಭೂ ವಲಯಗಳಲ್ಲಿಯೂ ವಿವಿಧ ಕಡೆಗಳಲ್ಲಿಯೂ ಕಾಣುವ ಜೀವಿ ನೆಲೆಗೆ ಅನುಗುಣವಾಗಿ ವಿವಿಧ ಜೀವ ಪರಿಸರ ವ್ಯವಸ್ಥೆಗಳು ರೂಪಿತಗೊಂಡಿರುತ್ತವೆ. ಇವುಗಳನ್ನು ಹಲವು ವಿಧಗಳಾಗಿ ವಿಂಗಡಿಸಬಹುದು. ಉದಾ: ಉಷ್ಣ ವಲಯದ ನಿತ್ಯ ಹರಿದ್ವರ್ಣ ಅರಣ್ಯ ಅಥವಾ ಮಳೆ ಕಾಡುಗಳ ಜೀವಸಮೂಹ, ಪರ್ಣಪಾತಿ ಕಾಡುಗಳ ಜೀವಸಮೂಹ, ಹುಲ್ಲುಗಾವಲು ಜೀವಸಮೂಹ, ಮರುಭೂಮಿ ಜೀವಸಮೂಹ ತಂಡ್ರಾ ಜೀವಸಮೂಹ.

ಉಷ್ಣವಲಯದ ನಿತ್ಯಹರಿದ್ವರ್ಣ ಅರಣ್ಯ(ಮಳೆಯ ಕಾಡುಗಳ) ಜೀವಸಮೂಹ: ಸಮಭಾಜಕ ವೃತ್ತದ ಇಕ್ಕಡೆಗಳಲ್ಲಿ $10^0$ ಉ. ಮತ್ತು $10^0$ ದ. ಅಕ್ಷಾಂಶ ವಲಯದಲ್ಲಿ ಇಂಥ ಕಾಡುಗಳಿದ್ದು ಪ್ರಪಂಚದ 3 ಮುಖ್ಯ ಪ್ರದೇಶಗಳಿಗೆ ಸೀಮಿತಗೊಂಡಿವೆ. ಅವುಗಳೆಂದರೆ; ದಕ್ಷಿಣ ಅಮೆರಿಕದ ಅಮೆಜಾನ್ ಮತ್ತು ಓರಿನೋಕೋ ನದಿಗಳ ಪ್ರದೇಶ, ಆಫ್ರಿಕದ ಕಾಂಗೋ ನೈಜರ್ ಮತ್ತು ಜಾಂಬೆಸಿ ನದಿಗಳ ಪ್ರದೇಶ, ಇಂಡೋನೇಷ್ಯ ಮತ್ತು ಮಲೇಷ್ಯವಲಯ.

ಈ ಕಾಡುಗಳು ಅತಿ ದಟ್ಟವಾಗಿದ್ದು ಅತಿ ಹೆಚ್ಚು ಪ್ರಭೇದದ ಜೀವ ಸಂಕುಲಗಳನ್ನು ಪೋಷಿಸುತ್ತಿರುವುದರಿಂದ ಇವುಗಳನ್ನು ಪ್ರಪಂಚದ ಶ್ವಾಸಕೋಶಗಳೆಂದು ಸಹ ಕರೆಯುವರು. ಪ್ರಪಂಚದ ಸಸ್ಯ ಮತ್ತು ಪ್ರಾಣಿ ಪ್ರಭೇದಗಳ ಪೈಕಿ ಅರ್ಧಭಾಗಕ್ಕಿಂತ ಹೆಚ್ಚಿನವು ಈ ಕಾಡುಗಳಲ್ಲಿವೆ. ಕೇವಲ ಒಂದು ಹೆಕ್ಟೇರ್ ಪ್ರದೇಶದಲ್ಲಿ ಸು. 200 ಪ್ರಭೇದದ ಮರಗಳಿರಬಹುದು. ಕಾಡುಗಳು ದಟ್ಟವಾಗಿದ್ದು ಅನೇಕ ಸ್ತರಗಳನ್ನು ಪಡೆದಿರುತ್ತವೆ. ಅತ್ಯಂತ ಎತ್ತರವಾಗಿರುವ ಮತ್ತು ಕಾಡಿನ ಸಾಮಾನ್ಯ ಮಟ್ಟದಿಂದ ಮೇಲಕ್ಕೆ ಚಾಚಿಕೊಂಡಿರುವ 50–100 ಮೀ ಎತ್ತರದ ಮರಗಳು ಇಲ್ಲಿವೆ. ಅತ್ಯಲ್ಪ ಬೆಳಕು ಮಾತ್ರ ವೃಕ್ಷಗಳ ವಿವಿಧ ಸ್ತರಗಳ ಮೂಲಕ ಹಾದು ಕಾಡಿನ ತಳಭಾಗವನ್ನು ತಲುಪಿ ಅಲ್ಲಿನ ಅಲ್ಪ ಸಸ್ಯ ವರ್ಗಕ್ಕೆ ಆಧಾರವಾಗಿರುವುದು. ಈ ಕಾಡುಗಳಲ್ಲಿ ಋತುಭೇದಗಳು ಕಂಡು ಬರುವುದಿಲ್ಲ. ಪ್ರಖರ ಸೂರ್ಯಪ್ರಕಾಶ ಮತ್ತು ಮಳೆ ವರ್ಷಪೂರ್ತಿ ಹರಡಿರುತ್ತವೆ. ವಿವಿಧ ರೀತಿಯ ಅಪ್ಪು ಸಸ್ಯಗಳು (ಆರ್ಕಿಡ್ ಸಸ್ಯಗಳು, ಜರಿಸಸ್ಯಗಳು ಇತ್ಯಾದಿ) ಮತ್ತು ಅಡರು ಬಳ್ಳಿಗಳು ಈ ಕಾಡುಗಳಲ್ಲಿ ಬೆಳೆಯುತ್ತವೆ. ಭಾರತದಲ್ಲಿ ಉಷ್ಣವಲಯದ ಮಳೆ ಕಾಡುಗಳ ಒಂದು ಬಗೆ ಪಶ್ಚಿಮಘಟ್ಟ ಮತ್ತು ಈಶಾನ್ಯ ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ನಿತ್ಯ ಹರಿದ್ವರ್ಣದ ಅರಣ್ಯಗಳಲ್ಲಿ ಚೌಬೀನೆ ಮರಗಳಾದ ಎಬೊನಿ, ಬೀಟೆ, ಸಾಂಬಾರ ಸಸ್ಯಗಳಾದ ಲವಂಗ, ದಾಲ್ಚಿನ್ನಿ, ಜಾಯಿಕಾಯಿ ಮರಗಳು ಸಮೃದ್ಧವಾಗಿ ಬೆಳೆಯುತ್ತವೆ. ದಕ್ಷಿಣ ಆಫ್ರಿಕದ ಈ ರೀತಿಯ ಕಾಡುಗಳಲ್ಲಿ ಬೆಳೆಯುವ ಸಸ್ಯಗಳಿಗೆ ಸೆಲ್ವಾಸ್ ಎಂದು ಕರೆಯುವರು. ನೆಲದ ಮೇಲೆ ಬಿದ್ದ ಎಲೆಗಳಿಂದ ತರಗು ಸಂಗ್ರಹಗೊಂಡು ತೇವವಾಗಿರುವ ಮತ್ತು ಭಾಗಶಃ ಕೊಳೆತ ಸ್ಥಿತಿಯಲ್ಲಿ ಅದು ಅನೇಕ ಪೂತಿಜನ್ಯ ಸಸ್ಯಗಳಿಗೆ (ಸ್ಯಾಪ್ರೊಫೈಟ್ಸ್) ಮತ್ತು ಬ್ಯಾಕ್ಟೀರಿಯಗಳಿಗೆ ಒದಗುತ್ತದೆ. ಕಾಡುಗಳಲ್ಲಿರುವ ಪ್ರಾಣಿಗಳೆಂದರೆ ನೆಲದ ಮೇಲೆ ಓಡಾಡಿಕೊಂಡಿರುವ ಪ್ರಾಣಿಗಳು ಮತ್ತು ಮರಗಳ ಮೇಲೆ ವಾಸಿಸುವಂಥವು. ಮೇಲಿನ ಸ್ತರಗಳಲ್ಲಿ ಪ್ರಧಾನವಾಗಿರುವ ಕಶೇರುಕಗಳೆಂದರೆ ಪಕ್ಷಿಗಳು, ಮರದ ಮೇಲಿನ ಕೋತಿ ಮತ್ತು ಕಾಡುಪಾಪ ಮುಂತಾದವುಗಳು ವಿವಿಧ ರೀತಿಯ ಪ್ರಭೇದಗಳು ಈ ಕಾಡುಗಳಲ್ಲಿ ಕಂಡು ಬರುತ್ತವೆ.

ಪರ್ಣಪಾತಿ ಕಾಡುಗಳ ಜೀವಸಮೂಹ: ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣ ಪ್ರದೇಶಗಳೆರಡಲ್ಲಿಯೂ ಕಾಣಬಹುದು.

ಉಷ್ಣವಲಯದ ಪರ್ಣಪಾತಿ ಕಾಡುಗಳು ಪೂರ್ವ ಬ್ರೆಜಿಲ್, ವೆಸ್ಟ್ ಇಂಡೀಸ್, ಆಫ್ರಿಕದ ದಕ್ಷಿಣ ಭಾಗದ ಉಷ್ಣವಲಯ ಪ್ರದೇಶ, ಭಾರತದ ಮಧ್ಯ ಪ್ರಸ್ಥಭೂಮಿ ಮತ್ತು ಪಶ್ಚಿಮಘಟ್ಟಗಳಲ್ಲಿ ಕಂಡು ಬರುತ್ತವೆ. ಬೇಸಗೆಯಲ್ಲಿ ಇಲ್ಲಿನ ಮರಗಳ ಎಲೆಗಳು ಉದುರುತ್ತವೆ. ಕರ್ನಾಟಕದ ಪಶ್ಚಿಮಘಟ್ಟಗಳ ಪರ್ಣಪಾತಿ ಕಾಡುಗಳಲ್ಲಿ ಆನೆಗಳು, ಕಾಡೆಮ್ಮೆ, ಚಿರತೆ ಮುಂತಾದ ಪ್ರಾಣಿಗಳಿವೆ. ತೇಗ, ಜಾಲಾರಿ, ಹೊನ್ನೆ, ಶ್ರೀಗಂಧ, ನೆಲ್ಲಿ, ಮುತ್ತುಗ ಮತ್ತು ನೇರಳೆ ಇವು ಇಲ್ಲಿ ಸಾಮಾನ್ಯವಾಗಿ ಬೆಳೆಯುವ ಮರಗಳು.

ಸಮಶೀತೋಷ್ಣ ವಲಯದ ಪರ್ಣಪಾತಿ ಕಾಡುಗಳು ಪೂರ್ವಾರ್ಧ ಮತ್ತು ಪಶ್ಚಿಮಾರ್ಧ ಗೋಳಗಳೆರಡರಲ್ಲೂ ಕಂಡು ಬರುತ್ತವೆ. ಈ ಕಾಡುಗಳಲ್ಲಿ ಚಳಿಗಾಲ ತೀವ್ರವಾಗಿಯೂ ಸಾಮಾನ್ಯವಾಗಿ ಮಂಜಿನಿಂದಲೂ ಆವೃತವಾಗಿರುತ್ತದೆ. ಅಗಲವಾದ ಎಲೆಗಳ ಎಲ್ಮ್, ಮೇಪಲ್ ಮತ್ತು ಓಕ್ ಮರಗಳು ಇಲ್ಲಿ ಬೆಳೆಯುತ್ತವೆ. ಬಗೆಬಗೆಯ ಕೀಟಗಳು, ಜೇಡಗಳು, ಹಕ್ಕಿಗಳು ಮತ್ತು ಚಿಕ್ಕ ಸಸ್ತನಿಗಳು ಇಲ್ಲಿನ ವಿಶೇಷ ಪ್ರಾಣಿಗಳು.

ಹುಲ್ಲು ಗಾವಲು ಜೀವಸಮೂಹ: ಪ್ರಪಂಚದ ಶೇ 19 ರಷ್ಟು ಭೂ ಪ್ರದೇಶಗಳು ಹುಲ್ಲುಗಾವಲುಗಳಿಂದ ಆವೃತವಾಗಿವೆ. ಹುಲ್ಲುಗಾವಲುಗಳು ಉಷ್ಣವಲಯ ಮತ್ತು ಸಮಶೀತೋಷ್ಣವಲಯ ಈ ಎರಡೂ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಇಲ್ಲಿ ಹುಲ್ಲು ಜಾತಿಯ ಸಸ್ಯಗಳು ಪ್ರಧಾನ. ಏಕೆಂದರೆ ಈ ಪ್ರದೇಶಗಳು ಎತ್ತರವಾದ ಮರಗಳನ್ನು ಪೋಷಿಸಲು ಅಗತ್ಯವಾದ ಮಳೆಯನ್ನು ಪಡೆಯುವುದಿಲ್ಲ. ಸಮಶೀತೋಷ್ಣ ವಲಯದ ಹುಲ್ಲುಗಾವಲುಗಳನ್ನು ಯುರೇಷಿಯದಲ್ಲಿ ಸ್ಟೆಪಿ, ಉತ್ತರ ಅಮೆರಿಕದಲ್ಲಿ ಪ್ರೈರೀ, ದಕ್ಷಿಣ ಅಮೆರಿಕದಲ್ಲಿ ಪಾಂಪಾಸ್, ದಕ್ಷಿಣ ಆಫ್ರಿಕದಲ್ಲಿ ವೆಲ್ಡ್, ಹಂಗೇರಿಯಲ್ಲಿ ಪುಸ್ಟಜ್, ಆಸ್ಟ್ರೇಲಿಯದಲ್ಲಿ ಡೌನ್ಸ್, ನ್ಯೂಜಿಲೆಂಡಿನಲ್ಲಿ ಕ್ಯಾಂಟನ್‌ಬರಿ ಹೆಸರುಗಳಿಂದ ಕರೆಯುವರು.

ಉಷ್ಣವಲಯದಲ್ಲಿಯೂ ವಿಸ್ತಾರವಾದ ಪ್ರದೇಶದಲ್ಲಿ ಹುಲ್ಲುಗಾವಲುಗಳು ಕಂಡು ಬರುತ್ತವೆ. ಆಫ್ರಿಕದಲ್ಲಿ ಇವುಗಳನ್ನು ಸವನ್ನಾ ಎಂದು ಕರೆಯುವರು. ಈ ವಲಯದ ಅತಿ ಮುಖ್ಯ ಸಸ್ಯವರ್ಗಗಳ ಪ್ರಭೇದವಾಗಿರುವುದು ಹುಲ್ಲು. ಪೊದೆ ಹಾಗೂ ಗಿಡ್ಡವಾದ ಮರಗಳು ಆಹಾರವನ್ನು ಉತ್ಪಾದಿಸುತ್ತವೆ. ಮರಗಳ ಸಂಖ್ಯೆ ಕಡಿಮೆ ಮತ್ತು ಕುಬ್ಜವಾಗಿರುತ್ತವೆ. ಇದಕ್ಕೆ ಬದಲಾಗಿ ಹುಲ್ಲು ಈ ವಲಯದಲ್ಲಿ ವ್ಯಾಪಕವಾಗಿದೆ. ಹೀಗಾಗಿ ಈ ವಲಯದ ಸಸ್ಯವರ್ಗವನ್ನು ಹುಲ್ಲುಗಾವಲು ಸ್ಟೆಪ್ಪಿ ಎಂದೇ ಕರೆಯಲಾಗಿದೆ. ಹುಲ್ಲಿನ ಎತ್ತರ 150 ರಿಂದ 250 ಸೆಂಮೀ. ಆಂಡ್ರೋಪೋಗನ್, ಪ್ಯಾನಿಕಂ ಸಾರ್ಗಾಸ್ಟ್ರಂ ಬಫೆಲೊ ಗ್ರಾಸ್ ಮೊದಲಾದವು ಇಲ್ಲಿನ ಪ್ರಭೇದಗಳು. ಈ ಹುಲ್ಲುಗಾವಲು ಬಗೆಬಗೆಯ ಪ್ರಾಣಿ ಪ್ರಭೇದಗಳನ್ನು ಪೋಷಿಸುತ್ತದೆ. ಅವುಗಳಲ್ಲಿ ದನ, ಎಮ್ಮೆ, ಕುರಿ, ಮೇಕೆ, ಜಿಂಕೆ, ಮೊಲ, ಕಾಡೆಮ್ಮೆ ಅತಿಮುಖ್ಯವಾದವು. ಭಾರತದಲ್ಲಿ ಇಂತಹ ಸಹಜ ಹುಲ್ಲುಗಾವಲುಗಳಿಲ್ಲ. ಆದರೆ ಕ್ಷೀಣಿಸಿದ ರೀತಿಯ ಹುಲ್ಲುಗಾವಲುಗಳು ಕಾಡು ಕಡಿದ ಅನಂತರ ಉದ್ಭವಿಸುವುದನ್ನು ಗುಜರಾತ್, ಹಿಮಾಲಯದ ತಪ್ಪಲು ಮತ್ತು ದಕ್ಷಿಣ ಭಾರತಗಳಲ್ಲಿ ಕಾಣಬಹುದು. ಕೀಟಗಳ ಅನೇಕ ಪ್ರಭೇದಗಳು, ಮೊಲಗಳು ಮೊದಲಾದ ದಂಶಕಗಳು ಮತ್ತು ಇತರ ಸಸ್ಯಹಾರಿ ಪ್ರಾಣಿಗಳು ಹಾಗೂ ಹಾವುಗಳು ಇಲ್ಲಿ ಸರ್ವೇಸಾಮಾನ್ಯ.

ಮರುಭೂಮಿ ಜೀವಸಮೂಹ: ವಾರ್ಷಿಕ 25 ಸೆಂಮೀ ಗಿಂತ ಕಡಿಮೆ ಮಳೆಯಾಗುವ ಪ್ರದೇಶಗಳನ್ನು ಮರುಭೂಮಿಗಳೆಂದು ಕರೆಯುವರು. ಮರುಭೂಮಿಗಳು ಉಷ್ಣವಲಯ, ಸಮಶೀತೋಷ್ಣ ವಲಯ ಹಾಗೂ ಶೀತವಲಯ ಹೀಗೆ ಮೂರು ವಲಯಗಳಲ್ಲಿ ಕಂಡು ಬರುತ್ತವೆ. ಪ್ರಪಂಚದ ಪ್ರಮುಖ ಮರುಭೂಮಿಗಳೆಂದರೆ ಆಫ್ರಿಕದ ಸಹರ, ಆಸ್ಟ್ರೇಲಿಯದ ಮಹಾ ಮರುಭೂಮಿ ಮತ್ತು ಪಶ್ಚಿಮ ಏಷ್ಯ ದೇಶಗಳ ಮರುಭೂಮಿಗಳಾದ ಅರೇಬಿಯ ಮುಂತಾದವುಗಳು. ಭಾರತದಲ್ಲಿ ಥಾರ್ ಮರುಭೂಮಿಯಿದೆ. ಇಲ್ಲಿ ಕಂಡುಬರುವ ವಿಶಿಷ್ಟವಾದ ಸ್ವಾಭಾವಿಕ ಸಸ್ಯವರ್ಗಕ್ಕೆ ಉಷ್ಣ ಪೋಷಿತ ಸಸ್ಯವರ್ಗವೆಂದು ಕರೆಯುವರು. ಮರುಭೂಮಿಗಳಲ್ಲಿ ಸಸ್ಯಗಳು ವಿರಳ. ಇಲ್ಲಿ 3 ಬಗೆಯ ಸಸ್ಯವರ್ಗವನ್ನು ಕಾಣಬಹುದು:

ವರ್ಷವೆಲ್ಲ ಹಸುರಾಗಿರುವ ಸಸ್ಯವರ್ಗ, ನೀರನ್ನು ಸಂಗ್ರಹಿಸುವ ಸಸ್ಯವರ್ಗ ಮತ್ತು ಪೊದೆಗಳಂತಹ ಸಸ್ಯವರ್ಗ.

ಮರುಭೂಮಿಯ ಪ್ರಮುಖ ಪ್ರಾಣಿಗಳೆಂದರೆ ಒಂಟೆ, ಮೊಲ, ಇಲಿ, ನರಿ, ಗೂಬೆ, ಡೇಗೆ, ಮರುಭೂಮಿಯ ಹಲ್ಲಿ ಮತ್ತು ಹಾವುಗಳು.

ತಂಡ್ರಾ ಜೀವಸಮೂಹ: ಟೈಗಾ ಅರಣ್ಯಗಳಿಂದ ಉತ್ತರಕ್ಕೆ ಸದಾ ಹಿಮದಿಂದಾವೃತ ಅರ್ಕ್ಟಿಕ್ ಧ್ರುವ ಪ್ರದೇಶವೇ ತಂಡ್ರ, ಸದಾ ಹೆಪ್ಪು ಗಟ್ಟಿದ ಪರಿಸ್ಥಿತಿಯ ಈ ವಾಯುಗುಣದಲ್ಲಿ ಸಸ್ಯವರ್ಗ ಬಹುವಿರಳ. ಅಲ್ಲಿ ಅಲ್ಪಾವಧಿಯ ಬೇಸಿಗೆಯಲ್ಲಿ ಬೆಳೆಯುವಂತಹ ಮರಗಳಿರುವುದಿಲ್ಲ. ಅಲ್ಲಲ್ಲಿ ಎಲ್ಲೋ ಮತ್ತು ಬರ್ಚ್ ವೃಕ್ಷಗಳಿವೆ. ಹಲವು ಕುರುಚಲು ಸಸ್ಯಗಳು ಬೆಳೆಯುತ್ತವೆ. ಅದರಲ್ಲಿ ಕಲ್ಲು ಹೂ, ಹಾವಸೆ, ಹುಲ್ಲು, ಕೊನ್ನಾರಿ, ಲಿಲ್ಲಿ, ಸವ್ಲೆ, ಬಟರ್‌ಕಪ್ ಮತ್ತು ಸಣ್ಣ ಪೊದೆಗಳಂತೆ ಬೆಳೆದುಕೊಳ್ಳುವ ಇತರೆ ಕೆಲವು ಸಸ್ಯಗಳು ಕಂಡು ಬರುತ್ತವೆ. ತಂಡ್ರಾದ ಮುಖ್ಯ ಲಕ್ಷಣವೆಂದರೆ ಶಾಶ್ವತವಾಗಿ ಹೆಪ್ಪುಗಟ್ಟಿರುವ ಭೂ ಕೆಳಸ್ತರ. ಇದಕ್ಕೆ ಪರ್ಮಾಫ್ರಾಸ್ಟ್ ಎಂದು ಹೆಸರು. ಅಲಾಸ್ಕ, ಗ್ರೀನ್‌ಲೆಂಡ್‌ಗಳಲ್ಲಿ ಇಂಥ ಜೀವಸಮುದಾಯವಿದೆ. ನಮ್ಮ ದೇಶದ ಹಿಮಾಲಯದಲ್ಲಿ ಆಲ್ಪೈನ್ ಮಾದರಿಯ ತಂಡ್ರ ಇದೆ. ಇಲ್ಲಿರುವ ಸಸ್ಯವರ್ಗ ಕೆಲವು ಬಗೆಯ ಕೀಟಗಳಿಗೆ, ಹಕ್ಕಿಗಳಿಗೆ ಮತ್ತು ಸ್ತನಿಗಳಿಗೆ ಆಶ್ರಯ ತಾಣವಾಗಿದೆ. ಉದಾ: ಧ್ರುವ ಕರಡಿ, ಧ್ರುವ ತೋಳ, ಧ್ರುವನರಿ, ನಾಯಿ, ವೃಷಭ, ಹಿಮಸಾರಂಗ ಹಾಗೂ ಕ್ಯಾರಿಬೂ ಸಾರಂಗಗಳು.

2. ಜಲ ಜೀವಸಮೂಹ: ಭೂಮೇಲ್ಮೈನ ಶೇ. 71 ಭಾಗ ಸಾಗರ–ಸಮುದ್ರಗಳಿಂದಾವೃತವಾಗಿರುವುದರಿಂದ ಭೂಮಂಡಲದ ಜೀವ ಸಮೂಹದಲ್ಲಿ 2/3 ಭಾಗ ಜಲರಾಶಿಗಳಲ್ಲಿ ಕಂಡುಬರುತ್ತದೆ. ಜಲ ಜೀವಸಮೂಹ ಭೂಜೀವ ಸಮೂಹಕ್ಕಿಂತ ಭಿನ್ನವಾಗಿದ್ದು ಕೆಲವು ವಿಶೇಷ ಗುಣ ಲಕ್ಷಣಗಳನ್ನು ಹೊಂದಿವೆ. ಅವು ಆಳವಿಲ್ಲದ ಹಾಗೂ ಆಳವುಳ್ಳ ಜಲರಾಶಿಗಳಲ್ಲಿ ವೈವಿಧ್ಯಮಯ ನೆಲೆಗಳನ್ನು ಹೊಂದಿದ್ದು ಜೀವಿಸುತ್ತಿವೆ. ಇವುಗಳ ಅಸ್ತಿತ್ವ ಜಲರಾಶಿಗಳ ಉಷ್ಣಾಂಶ, ಲವಣತೆ, ಚಲನೆ, ಪೋಷಕ ವಸ್ತುಗಳು, ತಳದ ಸ್ವರೂಪ ಇತ್ಯಾದಿಗಳನ್ನವಲಂಬಿಸಿದೆ.

ಜಲ ಜೀವಸಮೂಹಗಳನ್ನು ಹಲವು ಪ್ರಕಾರಗಳಾಗಿ ವಿಂಗಡಿಸಬಹುದು. ವಿಂಗಡಣೆ ಜಲಜೀವಿಗಳ ನೆಲೆಯನ್ನಾಧರಿಸಿದೆ. ನೆಲೆ ಸಮುದ್ರ ಪರಿಸರವನ್ನಾಧರಿಸಿದೆ. ಸಮುದ್ರ ಪರಿಸರ ಸೂರ್ಯನ ಬೆಳಕು, ಪೋಷಕಾಂಶಗಳ ಲಭ್ಯತೆ, ಇಂಗಾಲದ ಡೈ ಆಕ್ಸೈಡ್, ಆಮ್ಲಜನಕಗಳ ಹಂಚಿಕೆ ಮುಂತಾದವುಗಳ ಸಂಯೋಜನೆಯನ್ನಾಧರಿಸಿದೆ. ಹೀಗಾಗಿ ಜೈವಿಕ ಸಮುದಾಯಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು: 1. ಪ್ಲವಕ (ಪ್ಲಾಂಕ್ಟನ್) 2. ಈಜಬಲ್ಲ ಪ್ರಾಣಿ (ನೆಕ್ಟಾನ್) 3. ಆಳದ ನೀರಿನ ಜೀವಿ (ಬೆಂಥಾಸ್).

ಸಮುದ್ರ–ಸಾಗರಗಳಲ್ಲಿ ತೇಲುವ ಮತ್ತು ಸಂಚಲನವುಳ್ಳ ಪ್ರಾಣಿ ಮತ್ತು ಸಸ್ಯಗಳೇ ಪ್ರಲವಕಗಳು. ಇವುಗಳನ್ನು ಸಸ್ಯ ಪ್ಲವಕ ಮತ್ತು ಪ್ರಾಣಿ ಪ್ಲವಕಗಳೆಂದು ವಿಂಗಡಿಸಬಹುದು. ಸಸ್ಯಪ್ಲವಕಗಳು ಡೈಟಮ್, ಡಿನೊಫ್ಲಾಗೆಲ್ಲೇಟ್ ಹಾಗೂ ಶೈವಲ ಸಸ್ಯಗಳನ್ನೊಳಗೊಂಡಿವೆ. ಇವು ಸೂಕ್ಷ್ಮ ಸಸ್ಯಗಳಾದರೂ ಪುನರುತ್ಪತ್ತಿ ಸಾಮರ್ಥ್ಯವುಳ್ಳವು. ಹೀಗಾಗಿ ಅವು ಸಮುದ್ರ ಜೈವಿಕ ಸಮತೋಲನದಲ್ಲಿ ಮುಖ್ಯಪಾತ್ರವಹಿಸುತ್ತವೆ. ಪ್ರಾಣಿ ಪ್ಲವಕದಲ್ಲಿ ಅಸಂಖ್ಯಾತ ಪ್ರಾಣಿ ಸಂಕುಲಗಳು ಸೇರಿವೆ. ಅವು ಸೂಕ್ಷ್ಮವೂ ಹಾಗೂ ಬೃಹತಾಕಾರವುಳ್ಳವೂ ಆಗಿವೆ. ಅವುಗಳನ್ನು ಸಸ್ಯಹಾರಿ, ಮಾಂಸಹಾರಿ ಮತ್ತು ಉಭಯಹಾರಿಗಳೆಂದು ವಿಂಗಡಿಸಬಹುದು. ಸಸ್ಯ ವಸ್ತುಗಳನ್ನು ಪ್ರಾಣಿ ಆಹಾರ ವಸ್ತುಗಳಾಗಿ ಪರಿವರ್ತಿಸುವಲ್ಲಿ ಇವುಗಳ ಪಾತ್ರ ಮಹತ್ವವುಳ್ಳದ್ದಾಗಿದೆ.

ದೊಡ್ಡದೂ ಪ್ರಬಲವೂ ಹಾಗೂ ತೇಲುವ–ಈಜುವ ಪ್ರಾಣಿಗಳೇ ಎರಡನೆಯ ವರ್ಗ. ಉದಾ: ಮೀನುಗಳು. ಇವು ಸಮುದ್ರ–ಸಾಗರಗಳೆಲ್ಲ ಸಂಚರಿಸುವವು. ಇವುಗಳಿಗೆ ಪ್ಲವಕ ಮುಖ್ಯ ಆಹಾರ. ಇವೆಲ್ಲ ಕಶೇರುಕ ಪ್ರಾಣಿಗಳು. ಅಸಂಖ್ಯಾತ ಪ್ರಭೇದಗಳಿಂದ ಕೂಡಿವೆ.

ಆಳದ ನೀರಿನ ಜೀವಿಗಳಲ್ಲಿ ಅನೇಕ ಪ್ರಭೇಧಗಳಿವೆ. ಅವುಗಳಲ್ಲಿ ಬಹಳಷ್ಟು 200ಮೀ ಆಳ ಅಥವಾ ಸಾಗರ ತಳದಲ್ಲಿ ಬದುಕುತ್ತವೆ. ಇಲ್ಲಿನ ಸಸ್ಯ ಮತ್ತು ಪ್ರಾಣಿಗಳ ಸಮುದ್ರತಳದ ಸ್ವರೂಪ ಮತ್ತು ಸಂಯೋಜನೆಯನ್ನುವಲಂಬಿಸಿವೆ. ಸಮುದ್ರ ಕಳೆ, ಶೈವಲ, ಈಲ್‌ಗ್ರಾಸ್ ಮತ್ತು ಟರ್ಟಲ್ ಗ್ರಾಸ್ ಪ್ರಮುಖ ಸಸ್ಯಗಳು. ಪ್ರಾಣಿಗಳಲ್ಲಿ ವಿವಿಧ ಜಾತಿಯ ಮೃದ್ವಂಗಿಗಳಿಗೆ ಸೇರಿದವುಗಳಾಗಿದೆ. (ಕೆ.ಎಸ್.)

**ಬರಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳು:** ಭಾರತದಲ್ಲಿ ಮಳೆಯ ಹಂಚಿಕೆ ಅಸಮತೋಲನದಿಂದ ಕೂಡಿದೆ. ಅಂದರೆ ಕೆಲವು ಪ್ರದೇಶಗಳು ಅತಿ ಹೆಚ್ಚು ಮಳೆಯನ್ನು ಪಡೆದರೆ ಕೆಲವು ಪ್ರದೇಶಗಳು ಅತೀ ಕಡಿಮೆ ಪ್ರಮಾಣದ ಮಳೆಯನ್ನು ಪಡೆಯುತ್ತವೆ. ಮಳೆಯ ವಿರಳತೆಯಿರುವ ಪ್ರದೇಶಗಳು ಅಭಿವೃದ್ಧಿಯಾಗಿಲ್ಲ. ಭಾರತದಲ್ಲಿ ಒಟ್ಟು ಭೂ ಪ್ರದೇಶದ ಸು. 1/5 ರಷ್ಟು ಭಾಗ ಮಳೆಯ ವಿರಳತೆಯನ್ನು ಅನುಭವಿಸುತ್ತಿವೆ. ಮಳೆಯ ಕೊರತೆಯೇ ಬರಕ್ಕೆ ಮೂಲ ಕಾರಣವಾಗಿದೆ. ಇಂತಹ ಪ್ರದೇಶಗಳಲ್ಲಿ ಭಾರತ ಸರ್ಕಾರವು ಗ್ರಾಮೀಣ ಕೆಲಸಗಳ ಯೋಜನೆಯನ್ನು ಆರ್.ಡಬ್ಲ್ಯೂಪಿ (ರೂರಲ್ ವರ್ಕ್ಸ್ ಪ್ರೋಗ್ರಾಂ) ಆರಂಭಿಸಿತು (1970). ಇದು ಒಂದು ಉದ್ಯೋಗ ಆಧಾರಿತ ಯೋಜನೆಗಾಗಿ, ವಿಶೇಷವಾಗಿ ಕಾರ್ಮಿಕರಿಗೆ ಉದ್ಯೋಗದ ಅವಕಾಶಗಳನ್ನು ಕಲ್ಪಿಸುವುದು. ಮಣ್ಣಿನ ಸಂರಕ್ಷಣೆಯಲ್ಲಿ ತೊಡಗುವುದು, ಅರಣ್ಯೀಕರಣ, ರಸ್ತೆ, ಕಾಮಗಾರಿ, ನೀರಾವರಿ ಸೌಲಭ್ಯಗಳಲ್ಲಿ ನಿರಂತರವಾಗಿ ಉದ್ಯೋಗವನ್ನು ನೀಡುವ ಯೋಜನೆಯಾಗಿತ್ತು. ಅನಂತರ 1972–73ರ ವೇಳೆಯಲ್ಲಿ ಆರ್.ಡಬ್ಲ್ಯೂಪಿ ಗ್ರಾಮೀಣ ಕೆಲಸಗಳ ಯೋಜನೆಯನ್ನು ಆಧುನೀಕರಿಸಿ ಬರಪೀಡಿತ ಪ್ರದೇಶಗಳ ಯೋಜನೆ (ಡ್ರಾಟ್ ಪ್ರೋನ್ ಏರಿಯಾ ಪ್ರೋಗ್ರಾಂ) ಎಂಬ ಹೊಸ ಹೆಸರನ್ನು ನೀಡಲಾಯಿತು. ಬರಪೀಡಿತ ಪ್ರದೇಶಗಳ ಯೋಜನೆ (ಡಿಪಿಎಪಿ)ಯು ಪ್ರಾರಂಭದಲ್ಲಿ ಉದ್ಯೋಗ ಸೃಷ್ಟಿ ಮಾಡುವ ಯೋಜನೆಯಾಗಿತ್ತು. ಆದರೆ ಕಾಲಾಂತರದಲ್ಲಿ ಅಭಿವೃದ್ಧಿ ಕಾರ್ಯಗಳ ಕಡೆಗೆ ಗಮನ ಹರಿಸಿ, ಬರದ ಸಮಸ್ಯೆ ಮತ್ತು ನಿರುದ್ಯೋಗದ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಹುಡುಕಲು ಪ್ರಯತ್ನಿಸಿತು. ಬರಪೀಡಿತ ಪ್ರದೇಶಗಳ ಯೋಜನೆಯ (ಡಿಪಿಎಪಿ) ಕಾರ್ಯಗಳು ಜಿಲ್ಲಾ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದೊಂದಿಗೆ (ಡಿಆರ್‌ಡಿಎ) ನಿರ್ವಹಿಸಲ್ಪಡುತ್ತಿವೆ. ಈ ಯೋಜನೆಯ ಮೂಲ ಉದ್ದೇಶ ಬರಪೀಡಿತ ಪ್ರದೇಶಗಳ ಭೂಮಿ, ನೀರು, ಜೀವಿಗಳು ಮತ್ತು ಮಾನವ ಸಂಪನ್ಮೂಲಗಳ ಸಂರಕ್ಷಣೆ, ಮಿತ ಬಳಕೆ ಮತ್ತು ಅಭಿವೃದ್ಧಿ ಪಡಿಸುವುದಾಗಿರುತ್ತದೆ ಮತ್ತು ಪರಿಸರದ ಸಮತೋಲನದೊಂದಿಗೆ ಸಂರಕ್ಷಿಸಲು ಮಾರ್ಗದರ್ಶನ ನೀಡುವುದು.

ಪ್ರಸ್ತುತ ಈ ಯೋಜನೆ 13 ರಾಜ್ಯಗಳ 155 ಜಿಲ್ಲೆಗಳು ಮತ್ತು 947 ತಾಲ್ಲೂಕು (ಬ್ಲಾಕ್)ಗಳಲ್ಲಿ ನಿರ್ವಹಿಸಲ್ಪಡುತ್ತಿದೆ. ಈ ಯೋಜನೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೇ. 50:50 ರ ಅನುಪಾತದಲ್ಲಿ ಯೋಜನಾ ವೆಚ್ಚವನ್ನು ಒಳಗೊಂಡಿರುತ್ತದೆ.

ಬರಪೀಡಿತ ಪ್ರದೇಶಗಳ ಯೋಜನೆಯು 1974–75 ಮತ್ತು 1979–80 ರ ಅವಧಿಯಲ್ಲಿ 384 ಕೋಟಿ ರೂಪಾಯಿಗಳನ್ನು ಯೋಜನಾ ವೆಚ್ಚವನ್ನಾಗಿ ಹೊಂದಿತ್ತು. ಅದರಲ್ಲಿ 328.66 ಕೋಟಿ ರೂಪಾಯಿಗಳನ್ನು ವ್ಯಯಮಾಡಿತ್ತು. ಆರನೆಯ ಪಂಚವಾರ್ಷಿಕ ಯೋಜನೆ (1980–85) ಬರಪೀಡಿತ ಪ್ರದೇಶಗಳ ಯೋಜನೆಗೋಸ್ಕರ (ಡಿಪಿಎಪಿ) 350 ಕೋಟಿ ರೂಪಾಯಿಗಳ ಯೋಜನಾ ವೆಚ್ಚವನ್ನು ಒಳಗೊಂಡಿತ್ತು. ಆದರೆ 310 ಕೋಟಿ ರೂಪಾಯಿಗಳನ್ನು ವ್ಯಯಮಾಡಿತ್ತು. ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತು 426.76 ಕೋಟಿ ರೂಪಾಯಿಗಳನ್ನು ಯೋಜನಾ ವೆಚ್ಚ ಹೊಂದಿತ್ತು. 459.45 ಕೋಟಿ ರೂಪಾಯಿಗಳನ್ನು ವ್ಯಯಮಾಡಿತ್ತು.

ಈ ಯೋಜನಾವಧಿಯಲ್ಲಿ 2,23,685 ಸಾವಿರ ಹೆಕ್ಟೇರ್‌ಗಳನ್ನು ನೀರಾವರಿಯನ್ನಾಗಿಸಲು ಯೋಜನೆ ಮಾಡಲಾಗಿತ್ತು. ದುರದೃಷ್ಟವಶಾತ್ ಬರ ಪೀಡಿತ ಪ್ರದೇಶಗಳು ವಿಸ್ತಾರಗೊಳ್ಳುತ್ತಿವೆಯೆಂದು ಹಲವಾರು ಅಧ್ಯಯನ ತಂಡಗಳು ತಿಳಿಸಿವೆ. ದೊಡ್ಡ ಹಿಡುವಳಿದಾರರು, ಹೆಚ್ಚು ಸಂಪತ್ಭರಿತರಾಗಿ ಕಂಡು ಬರುತ್ತಾರೆ. ಅವರು ಆಧುನಿಕ ಬೇಸಾಯವನ್ನು ಬೇಗ ಅಳವಡಿಸಿಕೊಳ್ಳುತ್ತಾರೆ. ಅದಕ್ಕೆ ವಿರುದ್ಧವಾಗಿ ಸಣ್ಣ ಹಿಡುವಳಿದಾರರು, ಬಂಡವಾಳದ ಕೊರತೆಯನ್ನು ಅನುಭವಿಸುತ್ತಿರುವರು ಮತ್ತು ಅನಕ್ಷರಸ್ಥರು ಆದ ಕಾರಣ ಅವರು ನಿಧಾನ ಗತಿಯಲ್ಲಿ ಆಧುನಿಕ ಬೇಸಾಯವನ್ನು ಅಳವಡಿಸಿಕೊಳ್ಳುತ್ತಾರೆ ಆದ ಕಾರಣ ಬರಪೀಡಿತ ಪ್ರದೇಶದಲ್ಲಿ ದೊಡ್ಡ ಹಿಡುವಳಿಗಾರರು, ಲೇವಾದೇವಿಗಾರರು ಮತ್ತು ವ್ಯಾಪಾರಸ್ಥರು ಕಡಿಮೆ ನಷ್ಟವನ್ನು ಅನುಭವಿಸುತ್ತಿರುವರು. ಆದರೆ ಸಣ್ಣ ಹಿಡುವಳಿದಾರರು ಆಹಾರಕ್ಕಾಗಿ ಹೆಚ್ಚು ಬಂಡವಾಳವನ್ನು ತೊಡಗಿಸಬೇಕಾಗಿರುವುದರಿಂದ ಬರದಿಂದ ಹೆಚ್ಚು ನಷ್ಟವನ್ನು ಅನುಭವಿಸುತ್ತಾರೆ. (ಎಚ್.ಆರ್.ವಿ.)

**ಬರುಂಡಿ:** ಪೂರ್ವ ಆಫ್ರಿಕದ ಒಂದು ಸಣ್ಣ ರಾಷ್ಟ್ರ, 1962 ಜುಲೈ 1 ರಲ್ಲಿ ಸ್ವಾತಂತ್ರ ರಾಷ್ಟ್ರವಾಯಿತು. ಸ್ವಾತಂತ್ರ ಪೂರ್ವದಲ್ಲಿ ಬರುಂಡಿ ಬೆಲ್ಜಿಯಂ ಅಧೀನಕ್ಕೊಳಪಟ್ಟು ಆಡಳಿತ ಭಾಗವಾಗಿ, ಅಂತಾರಾಷ್ಟ್ರೀಯ ವಿಶ್ವಾಸ ಒಪ್ಪಂದದ ಪ್ರಾಂತ್ಯವಾಗಿತ್ತು. ಬರುಂಡಿ ಒಂದು ಭೂವೇಷ್ಟಿತ ದೇಶ. ಇದರ ಪೂರ್ವಕ್ಕೆ ಹಿಂದು ಮಹಾಸಾಗರ, ಉತ್ತರದಲ್ಲಿ ಕೀನ್ಯ ಮತ್ತು ಉಗಾಂಡ, ಪಶ್ಚಿಮಕ್ಕೆ ಜೈರೆ ಮತ್ತು ದಕ್ಷಿಣದಲ್ಲಿ ತಾಂಜಾನಿಯ ದೇಶಗಳ ಜೊತೆ ಗಡಿ ಭಾಗಗಳನ್ನು ಹಂಚಿಕೊಂಡಿದೆ. ದ.ಅ. $2^0$ ಯಿಂದ $5^0$ ಮತ್ತು ಪೂ.ರೇ. $30^0$ ಯಿಂದ $35^0$ ರಲ್ಲಿ ಸ್ಥಾನೀಕರಣವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ 27,834 ಚ.ಕಿಮೀ. ಜನಸಂಖ್ಯೆ 86,91,005 (2009). ರಾಜಧಾನಿ ಬುಜಂಬುರ. ಜನಸಂಖ್ಯೆ 300,000. ಗಿಟಟಾ ಮತ್ತೊಂದು ಪ್ರಮುಖ ನಗರ.

ಭೌಗೋಳಿಕ ಲಕ್ಷಣ: ಬರುಂಡಿಯ ಭೂಮೇಲ್ಮೈ ಸ್ವರೂಪಗಳನ್ನು ಪ್ರಮುಖವಾಗಿ 3 ವಿಭಾಗಗಳಾಗಿ ವಿಂಗಡಿಸಬಹುದು: 1. ಪೂರ್ವ ಕರಾವಳಿ ತೀರ ಪ್ರದೇಶ ಹಾಗೂ ಅದಕ್ಕೆ ಹೊಂದಿಕೊಂಡಿರುವ ದ್ವೀಪಗಳು. ಕರಾವಳಿ ಸು. 400 ಕಿಮೀ ಉದ್ದವಾಗಿಯೂ, 50 ರಿಂದ 100 ಕಿಮೀ ಅಗಲವಾಗಿಯೂ ಇದೆ.. ಇದರ ಸರಾಸರಿ ಎತ್ತರ 183 ಮೀ ಈ ಭಾಗ ಅಧಿಕ ಆರ್ದ್ರತೆಯಿಂದ ಸದಾ ತೇವಾಯುತವಾಗಿರುತ್ತದೆ. 2. ಕರಾವಳಿಯಿಂದ ಪಶ್ಚಿಮದ ಕಡೆಗೆ ಭೂಮೇಲ್ಮೈ ಎತ್ತರವಾಗಿದ್ದು. 457 ಮೀ ಗಳಿಂದ 918 ಮೀ ಈ ಭಾಗದ ಸರಾಸರಿ ಎತ್ತರ 687 ಮೀ. 3. ಉತ್ತರ ಮತ್ತು ಪಶ್ಚಿಮದಲ್ಲಿ ಮೇಲ್ಮೈ ಸ್ವರೂಪ ಏರಿಳಿತಗಳಿಂದ ಕೂಡಿದ್ದು, ಅಲ್ಲಲ್ಲಿ ಪರ್ವತಗಳು, ಗಿರಿ ಪಂಕ್ತಿಗಳು ಕಂಡು ಬರುತ್ತವೆ. ಈ ಭಾಗದ ಸರಾಸರಿ ಎತ್ತರ 1829 ಮೀ ಈ ದೇಶದ ಗಡಿ ಭಾಗದಲ್ಲಿರುವ ಕಿಲಿಮಾಂಜರೋ (5944 ಮೀ) ಪರ್ವತ ಆ ಭಾಗದ ಅತ್ಯುನ್ನತ ಭೂ ರಾಶಿಯಾಗಿದೆ. ಇದರ ಆಗ್ನೇಯದಲ್ಲಿ ವಿಕ್ಟೋರಿಯ ಸರೋವರ ಬರುಂಡಿಯ ಗಡಿಭಾಗದ ಎಲ್ಲೆಗಳನ್ನು ಸೂಚಿಸುತ್ತದೆ.

ವಾಯುಗುಣ ಈ ದೇಶ ಉಷ್ಣವಲಯದಲ್ಲಿದ್ದು ಸಮಭಾಜಕ ವೃತ್ತದ ಪ್ರಭಾವಕ್ಕೊಳಪಟ್ಟಿದೆ, ಹೀಗಾಗಿ, ಬೇಸಗೆಯಲ್ಲಿ ತಾಪಮಾನ ಅಧಿಕವಾಗಿದ್ದು, ತೇವಯುತವಾಗಿರುತ್ತದೆ ಚಳಿಗಾಲದಲ್ಲಿ ಕಡಿಮೆ ತಾಪಮಾನವಿದ್ದು ಬೆಚ್ಚನೆಯ ವಾತಾವರಣವಿರುತ್ತದೆ. ಬೇಸಗೆಯಲ್ಲಿ $36^0$ ಸೆ. ಮತ್ತು ಚಳಿಗಾದಲ್ಲಿ $24^0$ ಸೆ. ಉಷ್ಣಾಂಶವಿರುತ್ತದೆ. ವಾರ್ಷಿಕ ಮಳೆ 150 ಸೆಮೀ 250 ಸೆಮೀ ವಾಣಿಜ್ಯ ಮಾರುತಗಳ ಪ್ರಭಾವದಿಂದ ಈ ಭಾಗದಲ್ಲಿ ಸಾಕಷ್ಟು ಮಳೆಯಾಗುತ್ತದೆ.




ಬರುಂಡಿ ಕೃಷಿ ಪ್ರಧಾನವಾದ ರಾಷ್ಟ್ರ. ಶೇ 40 ರಷ್ಟು ಕೃಷಿಕರನ್ನು ಹೊಂದಿರುವ ಈ ರಾಷ್ಟ್ರ ವ್ಯವಸಾಯದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿಲ್ಲ, ಆಲೂಗೆಡ್ಡೆ, ಗೆಣಸು, ಲವಂಗ, ಅಗಸೆ, ಹತ್ತಿ, ಕಬ್ಬು, ಕಾಫಿ, ಹೊಗೆಸೊಪ್ಪು, ಮುಸುಕಿನಜೋಳ ಮತ್ತು ನೆಲಗಡಲೆಯನ್ನು ಬೆಳೆಯುತ್ತಾರೆ. ಕಾಫಿ ಮತ್ತು ಹತ್ತಿ ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಗಳು.

ಖನಿಜಗಳು: ಬರುಂಡಿಯ ಉತ್ತರ ಭಾಗದಲ್ಲಿ ತಾಮ್ರ, ನಿಕ್ಕಲ್, ಯುರೇನಿಯಂ, ಕೋಬಾಲ್ಟ್, ಚಿನ್ನ ಮತ್ತು ವಜ್ರದ ನಿಕ್ಷೇಪಗಳನ್ನು ಹೊಂದಿದೆ. ಸೀಸ ಮತ್ತು ಸತು ಹಾಗೂ ಅಭ್ರಕದ ನಿಕ್ಷೇಪಗಳು ದಕ್ಷಿಣ ಮತ್ತು ಕೇಂದ್ರ ಭಾಗದಲ್ಲಿ ಕಂಡುಬಂದಿವೆ. ವಾಣಿಜ್ಯ ದೃಷ್ಟಿಯಿಂದ ಲೋಹ ಮತ್ತು ಗಣಿಗಾರಿಕೆ ಅಭಿವೃದ್ಧಿಯಾಗಿಲ್ಲ. ಲಘು ಕೈಗಾರಿಕೆಗಳು, ಜವಳಿ, ಆಹಾರ ಸಂಸ್ಕರಣ, ನಿರ್ಮಾಣ ಕಾಮಗಾರಿ ಪ್ರಮುಖ ಕಸುಬುಗಳಾಗಿವೆ.

ಈ ರಾಷ್ಟ್ರದ ಜನಸಂಖ್ಯೆ ಪ್ರಮುಖವಾಗಿ ಹುಟೊ ಅಥವಾ ಬಹುಟೊ ಬುಡಕಟ್ಟು ಜನರನ್ನು ಹೊಂದಿದೆ. ಟುಸ್ಸೆಸ್ಯ ಅಥವಾ ವಾಟುಸ್ಸಸ್ಯೆ ಬುಟಕಟ್ಟು ಮತ್ತು ತ್ವಾ ಅಥವಾ ಬಾತ್ವಾ ಪಿಗ್ಮಿಯ ಬುಡಕಟ್ಟಿನ ಜನರೂ ಇದ್ದಾರೆ. ಇಲ್ಲಿನ ಭಾಷೆ ಫ್ರೆಂಚ್ ಮತ್ತು ಕಿರುಂಡಿ. ಧರ್ಮ, ಬುಡಕಟ್ಟು ಸಂಪ್ರದಾಯ ಮತ್ತು ಕ್ರೈಸ್ತ ಧರ್ಮ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವಿದೆ. ಶೇ. 30 ಸಾಕ್ಷರತೆಯಿದೆ. ಇಲ್ಲಿನ ಹಣ ಬರುಂಡಿ ಫ್ರಾಂಕ್. (ವಿ.ಎಸ್.ಎ.)

**ಬರೋಡ :** ಗುಜರಾತ್ ರಾಜ್ಯದ ಒಂದು ಜಿಲ್ಲೆ ; ಆ ಜಿಲ್ಲೆಯ ಮುಖ್ಯ ಪಟ್ಟಣ. ವಡೋದರ ಎಂಬುದು ಇದರ ಈಗಿನ ಅಧಿಕೃತ ಹೆಸರು. ಈ ಜಿಲ್ಲೆ ನರ್ಮದಾ ಮತ್ತು ಮಾಹಿ ನದಿಗಳ ನಡುವೆ ಹಬ್ಬಿದೆ. ಜಿಲ್ಲೆಯಲ್ಲಿರುವ ತಾಲ್ಲೂಕುಗಳು ವಡೋದರ (ಬರೋಡ), ಕರ್ಜನ್, ಪಾದ್ರ, ಸಾವ್ಲಿ, ವಾಘೋಡಿಯ, ದಾಭೋಯಿ, ಸಂಖೇಡ, ಜಬುಗಾಮ್, ಛೋಟಾ ಉದಯಪುರ, ನಸ್‌ವಾಡಿ, ತಿಲಕವಾಡ ಮತ್ತು ಸಿಮೋರ್. ಜಿಲ್ಲೆಯ ವಿಸ್ತೀರ್ಣ 7,788 ಚ.ಕಿಮೀ ಜನಸಂಖ್ಯೆ 36,39,775. ಇದು ಸ್ಥೂಲವಾಗಿ ಹಿಂದಿನ ಬರೋಡ ಸಂಸ್ಥಾನದ ಬರೋಡ ಜಿಲ್ಲೆಯ ಪ್ರದೇಶವನ್ನೊಳಗೊಂಡಿದೆ. ಬರೋಡ ಸಂಸ್ಥಾನದಲ್ಲಿ ಈ ಪ್ರದೇಶವಲ್ಲದೆ ದಕ್ಷಿಣದಲ್ಲಿ ತಪತಿ ನದಿ ಕಣಿವೆ ಮತ್ತು ಅದರ ಆಚೆಗಿನ ಪ್ರದೇಶವೂ ಕಾಠಿಯಾವಾಡ ಮತ್ತು ಉತ್ತರ ಗುಜರಾತ್ ಭಾಗಗಳೂ ಸೇರಿದ್ದುವು. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಈ ಜಿಲ್ಲೆಯಲ್ಲಿ ಪತ್ತೆಯಾದ ತೈಲನಿಕ್ಷೇಪಗಳಿಂದಾಗಿ ಈ ಜಿಲ್ಲೆಗೆ ಹೊಸ ಮಹತ್ತ್ವ ಪ್ರಾಪ್ತವಾಗಿದೆ. ಬರೋಡ ನಗರದಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಕಾರ್ಯಾಗಾರವಿದೆ. ಅಲ್ಲದೆ ತೈಲ ಶುದ್ಧೀಕರಣ, ರಸಗೊಬ್ಬರ ಮತ್ತು ಸಿಮೆಂಟ್ ಕಾರ್ಖಾನೆಗಳು ಸ್ಥಾಪಿತವಾಗಿವೆ. ಈ ಜಿಲ್ಲೆಯಲ್ಲಿ ಫ್ಲೂರೈಡ್ ಧಾತುವಿನ ನಿಕ್ಷೇಪಗಳಿವೆ.

ಜಿಲ್ಲೆಯಲ್ಲಿ ವರ್ಷಕ್ಕೆ ಸರಾಸರಿ 76 ಸೆಂಮೀ ಮಳೆಯಾಗುತ್ತದೆ. ಫಲವತ್ತಾದ ಭೂಮಿ ಇರುವ ಈ ಜಿಲ್ಲೆಯ ಮುಖ್ಯ ಬೆಳೆಗಳು ಗೋದಿ, ಜೋಳ, ಬಾಜ್ರ, ದ್ವಿದಳ ಧಾನ್ಯಗಳು, ಎಣ್ಣೆಕಾಳು, ಸಜ್ಜೆ, ಬತ್ತ, ಹತ್ತಿ, ಕಬ್ಬು, ತಂಬಾಕು ಮತ್ತು ಹಣ್ಣು, ಬೇಸಾಯ, ಶಿಕ್ಷಣ, ಆರೋಗ್ಯ ಮತ್ತು ಕೈಗಾರಿಕಾರಂಗಗಳಲ್ಲಿ ಸಾಧಿಸಿದ ಪ್ರಗತಿಯಿಂದಾಗಿ ಈ ಜಿಲ್ಲೆ ಗುಜರಾತಿನ ಇತರ ಜಿಲ್ಲೆಗಳಿಗಿಂತ ಮುಂದುವರಿದಿದೆ.

ವಡೋದರ ಈ ಜಿಲ್ಲೆಯ ಮುಖ್ಯ ಪಟ್ಟಣ. ವಿಶ್ವಾಮಿತ್ರ ನದಿಯ ಎರಡೂ ದಂಡೆಗಳ ಮೇಲೆ ಹಬ್ಬಿರುವ ಈ ನಗರ ಮುಂಬೈಯಿಂದ ಉತ್ತರಕ್ಕೆ 390 ಕಿಮೀ ಮತ್ತು ಅಹಮದಾಬಾದಿನಿಂದ ಆಗ್ನೇಯಕ್ಕೆ 105 ಕಿಮೀ ದೂರದಲ್ಲಿದೆ. ಇದು 25.17 ಚ.ಕಿಮೀ ವಿಸ್ತಾರವಾಗಿದೆ. ಭಾರತದ ಮಹತ್ತ್ವದ ನಗರಗಳಲ್ಲೊಂದೆಂದು ಪ್ರಖ್ಯಾತವಾದ ಈ ನಗರ ಆಧುನಿಕವಾದುದ್ದು. ಇದರ ಜನಸಂಖ್ಯೆ 1306035. ಇದು ವಿಶಾಲವಾದ ರಸ್ತೆಗಳಿಂದಲೂ ಸುಂದರವಾದ ಉದ್ಯಾನಗಳಿಂದಲೂ ಭವ್ಯವಾದ ಕಟ್ಟಡಗಳಿಂದಲೂ ಕೂಡಿದೆ. ಇಲ್ಲಿರುವ ಐತಿಹಾಸಿಕ ಕಟ್ಟಡಗಳ ಪೈಕಿ ಮುಖ್ಯವಾದುದ್ದು ಹಜಿರಾ ಎಂಬುದು. ಇದು ಮೊಗಲರ ಕಾಲದ್ದು (16ನೆಯ ಶತಮಾನ). ಹಳೆಯ ನಗರಭಾಗದ ಮಧ್ಯದಲ್ಲಿರುವ ಮಾಂಡ್ವಿದ್ವಾರ 1736ರಲ್ಲಿ ನಿರ್ಮಿತವಾಯಿತು. ಮೊಗಲರ ಮೇಲೆ ಮರಾಠರು ಗಳಿಸಿದ ವಿಜಯದ ಸ್ಮಾರಕವಾಗಿ ಇದನ್ನು ದಾಮಾಜಿ ಗಾಯಕವಾಡ್ ಕಟ್ಟಿಸಿದ. ಭಾದರ್ ಅರಮನೆ ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ನಿರ್ಮಿತವಾಯಿತು. ಇದರ ಅಮೃತಶಿಲೆಯ ಕಮಾನು ಗವಾಕ್ಷ ಅತ್ಯಂತ ಸುಂದರವಾಗಿದೆ.

ಬರೋಡದಿಂದ ಮುಂಬಯಿ, ಅಹಮದಾಬಾದ್ ಮತ್ತು ದೆಹಲಿಗೆ ರೈಲ್ವೆ ಸಂಪರ್ಕವಿದೆ. ಜಿಲ್ಲೆಯ ಹಲವು ಸ್ಥಳಗಳನ್ನು ಇದರೊಂದಿಗೆ ಕೂಡಿಸುವ ನ್ಯಾರೋಗೇಜ್ ರೈಲುಮಾರ್ಗಗಳೂ ಇಲ್ಲಿ ಸಂಧಿಸುತ್ತವೆ. ಇಲ್ಲೊಂದು ವಿಮಾನ ನಿಲ್ದಾಣವುಂಟು. ಬರೋಡದ ಮುಖ್ಯ ಕೈಗಾರಿಕೆಗಳು ರಸಾಯನಿಕ, ಹತ್ತಿ ಮತ್ತು ಉಣ್ಣೆ ಜವಳಿ, ಲೋಹ ತಯಾರಿಕೆ, ಹರಳೆಣ್ಣೆ ತಯಾರಿಕೆ. (ಬಿ.ಎ.ಎಸ್.)

**ಬರ್ಕ್‌ಲಿ[1]:** ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿನ ಕ್ಯಾಲಿಫೋರ್ನಿಯ ರಾಜ್ಯದ ಅಲಮೇಡ ಜಿಲ್ಲೆಯ ಒಂದು ಪಟ್ಟಣ. ಸ್ಯಾನ್‌ಫ್ರಾನ್ಸಿಸ್ಕೋ ಕೊಲ್ಲಿಯ ಈಶಾನ್ಯ ದಂಡೆಯ ಮೇಲಿರುವ ಈ ಪಟ್ಟಣ 1933–37ರಲ್ಲಿ ಕಟ್ಟಿದ ಪ್ರಪಂಚದಲ್ಲೇ ಎರಡನೆಯದಾದ ಅತಿ ಉದ್ದದ ಗೋಲ್ಡನ್ ಗೇಟ್ ಸೇತುವೆಗೆ ನೇರ ಪೂರ್ವದಲ್ಲಿದೆ.

ಈ ಪಟ್ಟಣ 1820ರಲ್ಲಿ ಪೆರಾಲ್ಟ ಕುಟುಂಬಕ್ಕೆ ನೀಡಿದ್ದ ರ್‍ಯಾಂಕೊಸಾನ್ ಆಂಟೋನಿಯೊದ ಭಾಗವಾಗಿತ್ತು. 1853ರಲ್ಲಿ ಓಷನ್ ವ್ಯೂ ಎಂಬ ಹೆಸರಿನೊಂದಿಗೆ ಪಟ್ಟಣದ ಸ್ಥಾಪನೆಯಾಯಿತು. 1868ರಲ್ಲಿ ಸ್ಥಾಪಿತವಾದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಬಯಲನ್ನು ಬಿಷಪ್ ಜಾರ್ಜ್ ಬರ್ಕ್‌ಲಿ ಎಂಬಾತನ ಹೆಸರಿನಲ್ಲಿ ಬರ್ಕ್‌ಲಿ ಕ್ಯಾಂಪಸ್ ಎಂದು 1873ರಲ್ಲಿ ನಾಮಕರಣ ಮಾಡಲಾಯಿತು. 1878ರಲ್ಲಿ ಪೌರಸಭೆಯನ್ನು ಸ್ಥಾಪಿಸಲಾಯಿತು. ಸ್ಯಾನ್‌ಫ್ರಾನ್ಸಿಸ್ಕೊ ಭೂಕಂಪನದ ತರುವಾಯ (1906) ನಿರಾಶ್ರಿತರು ಪಟ್ಟಣಕ್ಕೆ ಬಂದು ನೆಲಸಿದರು. 1909ರಲ್ಲಿ ಇದನ್ನು ನಗರವೆಂದು ಪರಿಗಣಿಸಲಾಯಿತು. 1923ರಲ್ಲಿ ಬೆಂಕಿ ಅನಾಹುತಕ್ಕೆ ಈಡಾಗಿ ಈ ನಗರ ಪುನಾರಚನೆಗೊಂಡಿತು. ಸ್ಯಾನ್‌ಫ್ರಾನ್ಸಿಸ್ಕೋ ಕೊಲ್ಲಿಯ ಸೇತುವೆ ಕಟ್ಟಿದ ಮೇಲೆ ವಾಹನ ಸಂಚಾರಕ್ಕೆ ಅನುಕೂಲವಾಗಿ ಅನೇಕ ಕಾಲೇಜುಗಳು ಹಾಗೂ ವಾಣಿಜ್ಯಶಾಲೆಗಳು ಪ್ರಾರಂಭಿಸಲ್ಪಟ್ಟವು: 1918ರಲ್ಲಿ ಆರ್ಮ್‌ಸ್ಟ್ರಾಂಗ್ ಕಾಲೇಜು ಸ್ಥಾಪನೆಯಾಯಿತು. ಬರ್ಕ್‌ಲಿ ಮತ್ಸ್ಯಸಂಗ್ರಹಾಲಯ ಇಲ್ಲಿಯ ಕೊಲ್ಲಿಗೆ ಎದುರಾಗಿದೆ. ಆಹಾರ ವಸ್ತುಗಳ ಪ್ಯಾಕಿಂಗ್, ಯಂತ್ರಗಳು ಸೋಪು ಹಾಗೂ ಮೋಟಾರುವಾಹನಗಳ ತಯಾರಿಕೆ ಪಟ್ಟಣದ ಪ್ರಧಾನ ಕೈಗಾರಿಕೆಗಳು.

ಇವಲ್ಲದೆ ದಕ್ಷಿಣ ಕರೋಲೀನ ಮತ್ತು ಪಶ್ಚಿಮ ವರ್ಜೀನಿಯ ರಾಜ್ಯಗಳಲ್ಲಿ ಬರ್ಕ್‌ಲಿ ಹೆಸರಿನ ಜಿಲ್ಲೆಗಳಿವೆ. ದಕ್ಷಿಣ ಕರೋಲೀನದ ಬರ್ಕ್‌ಲಿ ಆ ರಾಜ್ಯದ ಆಗ್ನೇಯಕ್ಕಿದೆ. ವಿಸ್ತಾರ ಸು. 2875 ಚ.ಕಿಮೀ ಪಶ್ಚಿಮ ವರ್ಜೀನಿಯದಲ್ಲಿರುವ ಬರ್ಕ್‌ಲಿ ಆ ರಾಜ್ಯದ ಈಶಾನ್ಯಕ್ಕಿದೆ. ವಿಸ್ತಾರ ಸು. 818 ಚ.ಕಿಮೀ. ಇಲಿನಾಯ್ಸ್ ರಾಜ್ಯದ ಕುಕ್ ಜಿಲ್ಲೆಗೆ ಸೇರಿದ ಬರ್ಕ್‌ಲಿ ಶಿಕಾಗೊ ನಗರದ ಪಶ್ಚಿಮಕ್ಕೆ ಸು. 23 ಕಿಮೀ ದೂರದಲ್ಲಿರುವ ಒಂದು ಗ್ರಾಮ. ಮಿಸ್ಸೋರಿ ರಾಜ್ಯದ ಪೂರ್ವದಲ್ಲಿರುವ ಸೇಂಟ್ ಲೂಯಿ ಜಿಲ್ಲೆಯಲ್ಲಿರುವ ಬರ್ಕ್‌ಲಿ ಪಟ್ಟಣವನ್ನು 1937ರಲ್ಲಿ ನಗರವೆಂದು ಪರಿಗಣಿಸಲಾಯಿತು. (ವಿ.ಜಿ.ಕೆ.)

**ಬರ್ಕ್‌ಲಿ[2]:** ಇಂಗ್ಲೆಂಡಿನ ಗ್ಲಾಸ್ಟರ್ ಷೈರ್ ಜಿಲ್ಲೆಯ ಪಟ್ಟಣ. ಬರ್ಕ್‌ಲಿ ಕಣಿವೆಯಲ್ಲಿ ಹರಿಯುವ ಸವರ್ನ್ ನದಿ ದಡದಲ್ಲಿ, ಗ್ಲಾಸ್ಟರ್ ನಗರಕ್ಕೆ ನೈಋತ್ಯದಲ್ಲಿ ಸು. 26 ಕಿಮೀ ದೂರದಲ್ಲಿದೆ. ಪಟ್ಟಣಕ್ಕೆ ಸಮೀಪದಲ್ಲಿರುವ ದುರ್ಗ 1153ರಿಂದ ಬರ್ಕ್‌ಲಿ ಶ್ರೀಮಂತ ಕುಟುಂಬದ ನಿವಾಸ. ಈ ದುರ್ಗದಲ್ಲಿ 2ನೆಯ ಎಡ್ವರ್ಡ್ ದೊರೆಯನ್ನು ಬಂಧನದಲ್ಲಿಟ್ಟು ಕೊಲ್ಲಲಾಯಿತು. (1327). ಸವರ್ನ್ ನದಿ ಬಳಿ 1957ರಿಂದ ಒಂದು ಪರಮಾಣು ವಿದ್ಯುತ್‌ಸ್ಥಾವರ ಕಾರ್ಯನಿರತವಾಗಿದೆ. (ವಿ.ಜಿ.ಕೆ.)

**ಬರ್ಕ್‌ಲಿ ಪಂಥ :** ಕಾರ್ಲ್ ಸಾರ್ ಪ್ರತಿಪಾದಿಸಿದ ಸಾಂಸ್ಕೃತಿಕ ದೃಶ್ಯಾವಳಿ–(ಕಲ್ಚುರಲ್ ಲ್ಯಾಂಡ್‌ಸ್ಕೇಪ್)–ನ ಅಧ್ಯಯನ ಪಂಥ (ಬರ್ಕ್‌ಲಿ ಸ್ಕೂಲ್ ಆಫ್ ಥಾಟ್). ಕಾರ್ಲ್‌ಸಾರ್ 20ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ (1889–1975) ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಮುಖ ಭೂಗೋಳ ವಿಜ್ಞಾನಿ. ಇವನು ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಬರ್ಕ್‌ಲಿಯಲ್ಲಿ, ಜರ್ಮನಿಯ ಆಟ್ಟೋ ಶ್ಲುಚರ್‌ನಿಂದ ಆರಂಭಿಸಲ್ಪಟ್ಟ

ಸಾಂಸ್ಕೃತಿಕ ಭೂದೃಶ್ಯಾವಳಿಯನ್ನು ಮುಂದುವರಿಸಿದ. ಸಾಂಸ್ಕೃತಿಕ ಪ್ರಕ್ರಿಯೆಗಳಿಂದ ಚಾರಿತ್ರಿಕವಾಗಿ ಸಾಂಸ್ಕೃತಿಕ ದೃಶ್ಯಾವಳಿಗಳು ನಿರ್ಮಿತವಾಗುವ ವಿಧಾನಗಳನ್ನು ಭೂಗೋಳವಿಜ್ಞಾನದಲ್ಲಿ ಅಭ್ಯಸಿಸುವ ಅಗತ್ಯತೆಯನ್ನು ಕುರಿತು ಪ್ರತಿ ಪಾದಿಸಿದ. ಇದನ್ನು 1925ರಲ್ಲಿ ತನ್ನ ಲೇಖನ ದಿ ಮಾರ್ಫಾಲಜಿ ಆಫ್ ಲ್ಯಾಂಡ್ ಸ್ಕೇಪ್‌ದಲ್ಲಿ ನಿರೂಪಿಸಿದ. ಇವನ ಪ್ರಸಿದ್ಧ ಕೃತಿ ಅಗ್ರಿಕಲ್ಚರಲ್ ಆರಿಜಿನ್ಸ್ ಆಂಡ್ ಡಿಸ್ಪರ್ಸಲ್. ಇದರಿಂದ ಸಾಂಸ್ಕೃತಿಕ ಭೂಗೋಳ ವಿಜ್ಞಾನವು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಅಭಿವೃದ್ಧಿ ಹೊಂದಿತು. ಭೂಗೋಳ ವಿಜ್ಞಾನ ಮಾನವ ಕೇಂದ್ರಿತವಾದುದೆಂದು ಇವನು ಪರಿಭಾವಿಸಿದ. ಆದರೆ ಇವನ ನಿರೂಪಣೆಯ ವಿಧಾನ ರ್‍ಯಾಟ್ಸಲ್ ಹಾಗೂ ಸೆಂಪಲ್ ಅನುಸರಿಸಿದ ಪರಿಸರ ಪ್ರಭುತ್ವವಾದಕ್ಕೆ ವಿರುದ್ಧವಾಗಿ ಮಾನವನ ಕ್ರಿಯಾಶಕ್ತಿಯನ್ನು ಆಧರಿಸಿದ ಸಂಭವವಾದಕ್ಕೆ ಅನುಗುಣವಾಗಿದ್ದಿತು. ಇವನು ಪ್ರತಿಪಾದಿಸಿದ ಸಾಂಸ್ಕೃತಿಕ ದೃಶ್ಯಾವಳಿ ವಿಧಾನವನ್ನು ಹಲವಾರು ಭೂಗೋಳ ವಿಜ್ಞಾನಗಳು ಮುಂದುವರಿಸಿದರು. ಕಾರ್ಲ್‌ಸಾರ್ ಎರಡುಬಾರಿ ಅಮೆರಿಕದ ಭೂಗೋಳ ವಿಜ್ಞಾನ ಸಂಘದ ಅಧ್ಯಕ್ಷನಾಗಿದ್ದ. (ಆರ್.ಎಸ್.)

**ಬರ್ನ್:** ಸ್ವಿಟ್ಜರ್ಲೆಂಡಿನ ರಾಜಧಾನಿ. ಒಂದು ರಾಜ್ಯ (ಕ್ಯಾಂಟನ್) ಮತ್ತು ರಾಜ್ಯಾಡಳಿತದ ಕೇಂದ್ರ ನಗರ. ಜನಸಂಖ್ಯೆ ಮತ್ತು ವಿಸ್ತೀರ್ಣದಲ್ಲಿ ಎರಡನೆಯ ಸ್ಥಾನ ಪಡೆದಿರುವ ಈ ರಾಜ್ಯದ ವಿಸ್ತೀರ್ಣ 6,887 ಚ.ಕಿಮೀ. ಜನಸಂಖ್ಯೆ 1,45,000 (2001). ಸ್ವಿಟ್ಜರ್ಲೆಂಡಿನ ಪಶ್ಚಿಮದಲ್ಲಿರುವ ಈ ರಾಜ್ಯದಲ್ಲಿ ಅರ್ ನದಿ ತನ್ನ ಕೂಡು ನದಿಗಳಾದ ಸಾನ್ ಮತ್ತು ಎಮ್‌ಗಳೊಡಗೂಡಿ ಹರಿಯುತ್ತ ಮಾರ್ಗದಲ್ಲಿ ಬ್ರೀಯನ್ಸ್ ಮತ್ತು ತೂನ್ ಸರೋವರಗಳನ್ನು ಹಾದು ಮುಂದೆ ಹೋಗುತ್ತದೆ. ವ್ಯವಸಾಯ, ಪಶುಪಾಲನೆ, ದ್ರಾಕ್ಷಿ ಬೇಸಾಯ ರಾಜ್ಯದ ಮುಖ್ಯ ಕಸಬುಗಳು. ಗಡಿಯಾರಗಳ ತಯಾರಿಕೆ ಇಲ್ಲಿಯ ಮುಖ್ಯ ಉದ್ಯೋಗಗಳಲ್ಲಿ ಪ್ರಥಮವಾದದ್ದೆನ್ನಬಹುದು. ಬ್ರೀಯನ್ಸ್, ತೂನ್, ಕೆನಟ್ಸ್, ಬರ್ಕಡಾರ್ಫ್, ಬೋಲಿನ್ ಜನ್ ಮತ್ತು ಪೊರ್‍ರ್ಯಾನ್ ಟ್ರವೀ ಇವು ರಾಜ್ಯದ ಕೆಲವು ಮುಖ್ಯ ಪಟ್ಟಣಗಳು.

ಬರ್ನ್‌ನಗರದ ಪ್ರಧಾನ ಕೈಗಾರಿಕೆಗಳು ಚಾಕೊಲೆಟ್, ಯಂತ್ರೋಪಕರಣ, ಬಟ್ಟೆ, ರಾಸಾಯನಿಕ ವಸ್ತು ಹಾಗೂ ಔಷಧಗಳ ತಯಾರಿಕೆ. ನಗರಕ್ಕೆ ಸು. 10 ಕಿಮೀ ದೂರದಲ್ಲಿ ಬೆಲ್ಪ್ ಮೂಸ್ ವಿಮಾನ ನಿಲ್ದಾಣವಿದೆ. ಈ ನಗರ ಇಲ್ಲಿಯ ಪ್ರಮುಖ ರೈಲ್ವೆ ಕೂಡು ನಿಲ್ದಾಣಗಳಲ್ಲೊಂದು.

ಬರ್ನ್ ನಗರದ ಹೊಸ ಬಡಾವಣೆಗಳಿಗೆ ಅರ್ ನದಿಯ ಮೇಲಣ ಹಲವಾರು ಸೇತುವೆಗಳಿಂದ ಸಂಪರ್ಕಹೊಂದಿರುವ ಹಳೆಯ ನಗರ ಮಧ್ಯಯುಗದ ವಾತಾವರಣದಲ್ಲೇ ಇದೆ. ಕಮಾನು ಸೇತುವೆಗಳ ಮೇಲಣದಾರಿಗಳು, ಕಟ್ಟಡಗಳ ಗೋಪುರಗಳು 16ನೆಯ ಶತಮಾನದ ಕಾರಂಜಿಗಳು ಈ ನಗರದ ವೈಶಿಷ್ಟ್ಯ. 100 ಮೀ ಎತ್ತರದ ಗಾತಿಕ್ ಶಿಲ್ಪ ಶೈಲಿಯ ಚರ್ಚ್ ಪ್ರಧಾನವಾಗಿ ಸುತ್ತಲೂ ಕಾಣುವ ಕಟ್ಟಡ, ಹಳೆಯ ದುರ್ಗದ ನಿವೇಶನದಲ್ಲಿ ನೈಡಚ್ ಚರ್ಚ್ ನಿರ್ಮಾಣವಾಗಿದೆ (1674). ಹಳೆಯ ಅರಮನೆಯಲ್ಲಿ ಪಾರ್ಲಿಮೆಂಟ್ ಮತ್ತು ನ್ಯಾಷನಲ್ ಲೈಬ್ರರಿ, ಇತಿಹಾಸ, ಪ್ರಾಣಿಶಾಸ್ತ್ರ ಹಾಗೂ ಕಲೆಗಳಿಗೆ ಸಂಬಂಧಪಟ್ಟ ವಸ್ತುಸಂಗ್ರಹಾಲಯಗಳು ಇವೆ. (ವಿ.ಜಿ.ಕೆ.)

**ಬರ್ಮದ ಬಾಡ್‌ವಿನ್ ಗಣಿ:** ಪ್ರಪಂಚದ ಅತ್ಯುತ್ತಮ ಸೀಸದ ಗಣಿಗಳಪೈಕಿ ಒಂದು. ಇಲ್ಲಿಯ ಅದಿರುಗಳಲ್ಲಿ ಸೀಸ ಮತ್ತು ಸತುವು ಮುಖ್ಯವಾದವು. ತಾಮ್ರ ಮತ್ತು ಬೆಳ್ಳಿ ಅದಿರುಗಳು ಸಹ ಸಿಗುತ್ತವೆ. ನಿಕ್ಕಲ್, ಕೊಬಾಲ್ಟ್, ಆಂಟಿಮೊನಿ ಮತ್ತು ಕ್ಯಾಡ್ಮಿಯಮ್ ಅದಿರುಗಳು ಅತ್ಯಲ್ಪ ಪ್ರಮಾಣದಲ್ಲಿವೆ. ಗಣಿ ಪ್ರದೇಶದಲ್ಲಿ ರಯಲೈಟ್, ಟುಫ್, ಪೆಂಟೆಶಿಲೆ ಮತ್ತು ಫೆಲ್‌ಸ್ಪ್ಯಾತಿಕ್ ಮರಳುಶಿಲೆಗಳು ಇವೆ. ಇವೆಲ್ಲ ಪ್ರಾಗ್ಜೀವಕಲ್ಪದ ಪೂರ್ವಾರ್ಧ ಕಾಲಕ್ಕೆ ಸೇರಿದವು. ಈ ಶಿಲೆಗಳಲ್ಲಿ ಸ್ತರಭಂಗಗಳಾಗಿ ಶಿಲಾಶ್ರೇಣಿಗಳು ಮೇಲ್ಬಾಚಿ, ಎಲ್ಲವೂ ಛಿದ್ರ ವಿಚ್ಛಿದ್ರವಾಗಿವೆ. ಛಿದ್ರವಲಯದಲ್ಲಿ 2440 ಮೀ ಉದ್ದ ಮತ್ತು 150 ಮೀ ಅಗಲದ ಅದಿರು ನಿಕ್ಷೇಪ ಪ್ರದೇಶವಿದೆ. ಇದಕ್ಕೆ ಉತ್ತರದಲ್ಲಿರುವುದು ಷಾನ್ ಅದಿರು ಕಾಯ, ದಕ್ಷಿಣದಲ್ಲಿರುವುದು ಮೈಂಗ್‌ಥ ಅದಿರು ಕಾಯ. ಚೈನಾಮ್ಯಾನ್ ಮತ್ತು ಷಾನ್ ಅದಿರು ಕಾಯಗಳನ್ನು ಯುನಾನ್ ಸ್ತರಭಂಗ ಬೇರ್ಪಡಿಸಿ ನೈರುತ್ಯಕ್ಕೆ 210 ಮೀ ದೂರ ಪಾರ್ಶ್ವಪಲ್ಲಟಗೊಳಿಸಿದೆ; ಚೈನಮ್ಯಾನ್ ಮತ್ತು ಮೈಂಗ್‌ಥ ಅದಿರು ಕಾಯಗಳನ್ನು ಹೆಸ್ವಿ ಸ್ತರಭಂಗ ಬೇರ್ಪಡಿಸಿ ಆಗ್ನೇಯಕ್ಕೆ 365 ಮೀ ದೂರ ಪಾರ್ಶ್ವಪಲ್ಲಟಗೊಳಿಸಿದೆ; ಆಳದಲ್ಲಿರುವ ಗ್ರಾನೈಟ್ ಶಿಲಾಪಾಕದಿಂದ ಹೊರಬಿದ್ದ ಖನಿಜದ್ರಾವಣಕ್ಕೆ ಛಿದ್ರಗೊಂಡಿರುವ ಈ ಶಿಲೆಗಳು ಮೇಲಕ್ಕೆ ಹಾಯಲು ಹಾದಿ ಒದಗಿಸಿವೆ. ಈ ದ್ರಾವಣ ರಯಲೈಟ್ ಮತ್ತು ಟುಫ್ ಶಿಲೆಗಳಲ್ಲಿಯ ಯುಕ್ತ ಖನಿಜಗಳನ್ನು ಪಲ್ಲಟಿಸಿ ಗೆಲಿನ ಸ್ಫಾಲರೈಟ್ ಮತ್ತು ಚಾಲ್ಕೊಪೈರೈಟುಗಳ ಮಿಶ್ರಣ ಅದಿರನ್ನು ರೂಪಿಸಿದೆ. (ಡಿ.ಆರ್.)

**ಬರ್ಮಿಂಗ್‌ಹ್ಯಾಮ್[1]:** ಇಂಗ್ಲೆಂಡಿನ ಒಂದು ನಗರ. ವಾರ್ವಿಕ್‌ಷೈರ್ ಕೌಂಟಿಯಲ್ಲಿ ಲಂಡನ್ನಿಗೆ ವಾಯವ್ಯದಲ್ಲಿ 157 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,017,500 (1995). ವಿಸ್ತೀರ್ಣ 283 ಚ.ಕಿಮೀ

ಬರ್ಮಿಂಗ್‌ಹ್ಯಾಮ್ ಪ್ರಪಂಚದ ಪ್ರಮುಖ ಕೈಗಾರಿಕಾ ನಗರಗಳಲ್ಲೊಂದು. ಇಲ್ಲಿ ಲೋಹ ಸರಕುಗಳ ತಯಾರಿಕೆ ಪ್ರಧಾನವಾಗಿದೆ. ಮೋಟಾರು ಕಾರು, ಸ್ಕೂಟರ್, ಸೈಕಲ್, ಎಂಜಿನಿಯರಿಂಗ್ ಸರಕು ಹಾಗೂ ರಬ್ಬರ್ ಸರಕು ತಯಾರಾಗುತ್ತವೆ. ಈ ಬೃಹತ್ ನಗರಕ್ಕೆ 117 ಕಿಮೀ ದೂರದಲ್ಲಿ ವೇಲ್ಸ್‌ನಲ್ಲಿರುವ ಎರಡು ಸರೋವರಗಳಿಂದ ನೀರು ಪೂರೈಕೆಯಾಗುತ್ತದೆ. ಎರಡನೆಯ ಮಹಾಯುದ್ಧದಲ್ಲಿ ಜರ್ಮನ್ ವಿಮಾನ ದಾಳಿಗಳಿಂದ ನಗರಕ್ಕೆ ಭಾರಿ ನಷ್ಟವಾಯಿತು. ತರುವಾಯ ನಗರ ವಿಸ್ತರಣೆಗೊಂಡಿತು. 1945ರಿಂದ ಬೃಹತ್ ಕಟ್ಟಡಗಳ ನಿರ್ಮಾಣವಾಗುತ್ತಿದೆ. ಲಂಡನ್–ಬರ್ಮಿಂಗ್‌ಹ್ಯಾಮ್ ನಡುವೆ 160 ಕಿಮೀ ದೂರದ ಅತಿ ಶೀಘ್ರ ರೈಲು ಸಂಚಾರವಿದೆ.

ಇದೊಂದು ಸಾಂಸ್ಕೃತಿಕ ಕೇಂದ್ರ. ಇಲ್ಲಿಯ ರಿಪರ್ಟರಿ ಥಿಯೇಟರ್ ಸ್ಥಾಪನೆಯಾದ್ದು 1913ರಲ್ಲಿ. ಇಲ್ಲಿಯ ಕಲಾಮಂದಿರದಲ್ಲಿ ಅನೇಕ ಅಮೂಲ್ಯ ತೈಲಚಿತ್ರಗಳಿವೆ. (ವಿ.ಜಿ.ಕೆ.)

**ಬರ್ಮಿಂಗ್‌ಹ್ಯಾಮ್[2]:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಲಬಾಮ ಮತ್ತು ಮಿಷಿಗನ್ ರಾಜ್ಯಗಳಲ್ಲಿ ಈ ಹೆಸರಿನ ಒಂದೊಂದು ನಗರವಿದೆ. ಅಲಬಾಮದ ಬರ್ಮಿಂಗ್‌ಹ್ಯಾಮ್ ನಗರ ಅಪಲೇಚಿಯನ್ ಪರ್ವತ ಶ್ರೇಣಿಯ ದಕ್ಷಿಣ ತುದಿಯ ಜೋನ್ಸ್ ಕಣಿವೆಯ ಬಳಿ ಇದೆ. ಇದೊಂದು ಕೈಗಾರಿಕಾ ಕೇಂದ್ರ. ಇಲ್ಲಿ ವಸತಿ ಸ್ಥಾಪಿತವಾದುದ್ದು 1813ರಲ್ಲಿ. ಅಮೆರಿಕದ ರೈಲುಮಾರ್ಗಗಳ ಪ್ರಾಮುಖ್ಯದಿಂದ 1871ರಲ್ಲಿ ಈ ಸ್ಥಳ ಸಣ್ಣ ನಗರವಾಯಿತು. ಕಬ್ಬಿಣ ಹಾಗೂ ಕಲ್ಲಿದ್ದಲು ದೊರೆತದ್ದರ ಫಲವಾಗಿ ಇಂಗ್ಲೆಂಡಿನ ಬರ್ಮಿಂಗ್‌ಹ್ಯಾಮ್ ರೀತಿಯಲ್ಲಿ ಇದು ಅಭಿವೃದ್ಧಿಗೊಂಡಿದ್ದರಿಂದ ಈ ಪಟ್ಟಣಕ್ಕೂ ಇದೇ ಹೆಸರು ಬಂತು. ಇಲ್ಲಿ ಕಬ್ಬಿಣದ ಸಾಮಾನುಗಳು, ಯಂತ್ರಗಳು, ಮೋಟಾರು, ವಿಮಾನ, ರಾಸಾಯನಿಕಗಳು ತಯಾರಾಗುತ್ತವೆ.

ಮಿಷಿಗನ್ ರಾಜ್ಯದಲ್ಲಿರುವ ಬರ್ಮಿಂಗ್‌ಹ್ಯಾಮ್ ಡೆಟ್ರಾಯಿಟ್ ನಗರದ ವಾಯವ್ಯಕ್ಕೆ ರೋಗ್ ನದಿ ದಂಡೆಯ ಮೇಲಿದೆ. ಇಲ್ಲಿ ವ್ಯವಸಾಯ ಸಲಕರಣೆಗಳ ತಯಾರಿಕೆ ಪ್ರಧಾನವಾಗಿದೆ. (ವಿ.ಜಿ.ಕೆ.)

**ಬರ್ಮುಡ:** ಈ ದ್ವೀಪಗಳು ಉತ್ತರ ಅಟ್ಲಾಂಟಿಕ್ ಸಮುದ್ರದಲ್ಲಿರುವ ಬ್ರಿಟೀಷರ ಸಾಗರೋತ್ತರ ಭೂ ಪ್ರದೇಶ ದ್ವೀಪ ಸಮೂಹ. ಇವನ್ನು ಬರ್ಮುಡ ದ್ವೀಪಗಳು ಅಥವಾ ಸೋಮರ್ಸ್ ಐಲ್ಸ್ ಎಂದು ಕರೆಯುತ್ತಾರೆ. ಇದು ಅಮೆರಿಕ ಸಂಯುಕ್ತ ಸಂಸ್ಥಾನದ ಪೂರ್ವ ಕರಾವಳಿಯಲ್ಲಿದೆ. ಈ ದ್ವೀಪಗಳು ಮಿಯಾಮಿಯಿಂದ ಈಶಾನ್ಯಕ್ಕೆ ಸು. 1770 ಕಿಮೀ ದೂರದಲ್ಲಿವೆ. ಹಾಲಿಫ್ಯಾಕ್ಸ್‌ನ ದಕ್ಷಿಣಕ್ಕೆ 1350 ಕಿಮೀ. ಇದಕ್ಕೆ ಹತ್ತಿರದ ಭೂರಾಶಿ ಎಂದರೆ ಕೇಪ್ ಹೆಟ್ಟಾರ್ಸ್. ಉತ್ತರ ಕರೋಲಿನ ಸು. 1030 ಕಿಮೀ ದೂರದಲ್ಲಿದೆ. ಈ ದ್ವೀಪ ಉ.ಅ. $32^0 18'$ ಮತ್ತು ಪ.ರೇ. $64^0 47'$ರ ನಡುವೆ ಹಂಚಿಕೆಯಾಗಿದೆ. ಬರ್ಮುಡ 138 ದ್ವೀಪಗಳನ್ನೊಳಗೊಂಡಿರುವ ಒಂದು ಸಮೂಹ ಒಟ್ಟು ಭೂ ಕ್ಷೇತ್ರ 53.3 ಚ.ಕಿಮೀ. ಜನಸಂಖ್ಯೆ 65,773 (2006), ಜನಸಾಂದ್ರತೆ; 1239 ಚ.ಕಿಮೀ ಗೆ ರಾಜಧಾನಿ ಹ್ಯಾಮಿಲ್ಟನ್. ಅಧಿಕೃತ ಭಾಷೆ ಇಂಗ್ಲಿಷ್. ಸರ್ಕಾರ; ಬ್ರಿಟೀಷರ ಸಾಗರೋತ್ತರ ಭಾಗ, ತಲಾವಾರು ಆದಾಯ: 76,403 ಡಾಲರು.

ಈ ದ್ವೀಪಗಳಲ್ಲಿ ಹಲವು ದ್ವೀಪಗಳಿಗೆ ಒಂದಕ್ಕಿಂತ ಹೆಚ್ಚು ಹೆಸರುಗಳಿವೆ, ಹಾಗೆಯೆ ಇಡೀ ದ್ವೀಪ ಸಮೂಹವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಈ ಹಿಂದೆ ಇದನ್ನು ಲಾಗರ್ಜಾ, ವರ್ಜಿನಿಯೊಲ ಮತ್ತು ಭೂತ ದ್ವೀಪಗಳು ಎಂದು ಕರೆಯುತ್ತಿದ್ದರು ಹಾಗೆಯೆ ಎರಡು ದ್ವೀಪಗಳನ್ನು ಲಾಂಗ್ ಐಲ್ಯಾಂಡ್ಸ್ ಎಂದು, ಮೂರು ಕೊಲ್ಲಿಗಳನ್ನು ಲಾಂಗ್ ಬೇಸ್ ಎಂದು ಕರೆಯಲಾಗುತ್ತದೆ.

ಬರ್ಮುಡ ದ್ವೀಪಗಳು ಸವನ್ನ, ಉಪ ಉಷ್ಣವಲಯಕ್ಕೆ ಸೇರಿದ್ದು ಇಲ್ಲಿ ತಾಪಮಾನ ಗಲ್ಫ್ ಉಷ್ಣೋದಕ ಪ್ರವಾಹದಿಂದಾಗಿ ಹೆಚ್ಚಾಗಿರುತ್ತದೆ, ಹವಾಮಾನ ಆರ್ದ್ರತೆಯಿಂದ ಕೂಡಿರುತ್ತದೆ. ಬೇಸಗೆಯಲ್ಲಿ ತಾಪಮಾನ ಹೆಚ್ಚುವುದು ಆಗಸ್ಟ್ ಮಧ್ಯಭಾಗದಲ್ಲಿ $30^0$ ಸೆ.ಗಿಂತ ಹೆಚ್ಚಾಗುತ್ತದೆ. ಚಳಿಗಾಲದಲ್ಲಿ ತಾಪಮಾನ ಸಾಮಾನ್ಯವಾಗಿರುತ್ತದೆ. ಜನವರಿ–ಫೆಬ್ರವರಿಯಲ್ಲಿ ದಿನದ ಹಗಲಿನ ಉಷ್ಣಾಂಶ $20^0$ ಸೆ. ಅಟ್ಲಾಂಟಿಕ್ ಸಾಗರದ ಶೀತ ಮಾರುತಗಳು ಅಧಿಕ ಮಳೆಯನ್ನು ಸುರಿಸುತ್ತವೆ.

ಈ ದ್ವೀಪಗಳಿಗೆ ಸಿಹಿನೀರಿನ ಮೂಲ ಮಳೆ. ಮಳೆಗಾಲದಲ್ಲಿ ನೀರನ್ನು ಛಾವಣಿಗಳಿಂದ ಸಂಗ್ರಹಿಸಿ ಕೊಳವೆಗಳ ಮೂಲಕ ಭೂ ಅಂತರಾಳದ ತೊಟ್ಟಿಗಳಲ್ಲಿ ಸಂಗ್ರಹಿಸಿ ಉಪಯೋಗಿಸುತ್ತಾರೆ. ಪ್ರತಿ ಕುಟುಂಬವೂ ಈ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಮಾಡಿಕೊಂಡಿದೆ.

ಆರ್ಥಿಕ ವ್ಯವಸ್ಥೆ: ಡಾಲರ್ ಇಲ್ಲಿಯ ಹಣ. ಈ ದ್ವೀಪ ವಾಣಿಜ್ಯವನ್ನು ಆರ್ಥಿಕ ಬಂಡವಾಳಕ್ಕೆ ಅವಲಂಬಿಸಿದೆ. ಉನ್ನತ ಆರ್ಥಿಕ ಜೀವವಿಮೆ, ಹಣಕಾಸಿನ ಸೇವೆಗಳು, ಬ್ಯಾಂಕಿಂಗ್, ಪ್ರವಾಸೋದ್ಯಮ ಇತ್ಯಾದಿಗಳು ಅಭಿವೃದ್ಧಿಯಾಗಿವೆ. ಈ ದ್ವೀಪದ ತಲಾ ಆದಾಯ ಯು.ಎಸ್. ಆದಾಯಕ್ಕಿಂತ ಶೇ. 50ರಷ್ಟು ಅಧಿಕವಾಗಿದೆ. ಅಂಕಿ–ಅಂಶಗಳ

ಪ್ರಕಾರ 2005ರಲ್ಲಿ ರಾಷ್ಟ್ರೀಯ ಆದಾಯ 4,857 ಬಿಲಿಯನ್ ಡಾಲರ್. ತಲಾವಾರು ಆದಾಯ 76,403 ಡಾಲರ್. ಪ್ರಪಂಚದ ಅತ್ಯಂತ ಹೆಚ್ಚಿನ ತಲಾ ಆದಾಯ ಹೊಂದಿರುವ ದೇಶ ಇದಾಗಿದೆ. 2003ರಲ್ಲಿ ನಡೆಸಿದ ವಾಸಗೃಹಗಳ ಅಂದಾಜು ಬೆಲೆಯ ಪ್ರಕಾರ ಪ್ರತಿ ಮನೆಯ ಮೂಲಬೆಲೆ 10ಲಕ್ಷ ಡಾಲರ್ ಎಂದು ತಿಳಿದು ಬಂದಿದೆ. ಈ ಮೂಲ ಬೆಲೆ ಪ್ರಪಂಚದಲ್ಲಿಯೆ ದುಬಾರಿಯಾದದು.

ಈ ದ್ವೀಪ ಕಡಲ ತೀರ ವಾಣಿಜ್ಯ ವ್ಯವಹಾರಗಳ ಸೀಮಾರೇಖೆಯನ್ನು ಹೊಂದಿದೆ. ಕಡಿಮೆದರದ ನೇರ ತೆರಿಗೆಯನ್ನು ಆದಾಯದ ಮೇಲೆ ವಿಧಿಸಲಾಗುತ್ತದೆ. ಸ್ಥಳೀಯ ತೆರಿಗೆಗಳನ್ನು ಆಮದು ಸುಂಕದ ರೂಪದಲ್ಲಿ ಪಡೆಯುತ್ತದೆ. ಉಪಭೋಗಿ ವಸ್ತುಗಳ ಮೇಲೆ ಕೊಟ್ಟು ಖರೀದಿಸುವ ತೆರಿಗೆಯನ್ನು ವಿಧಿಸಿದೆ. ಈ ದ್ವೀಪಭಾಗದಲ್ಲಿ ಪ್ರಪಂಚದ ಹಲವಾರು ಅಂತಾರಾಷ್ಟ್ರೀಯ ಜೀವವಿಮಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ಇಲ್ಲಿನ ವಿಶೇಷವೆಂದರೆ ಅತಿ ದೊಡ್ಡ ಪುನರ್ ವಿಮಾ ಸಂಸ್ಥೆಗಳು ಇಲ್ಲಿವೆ. ಸು. 400 ಅಂತಾರಾಷ್ಟ್ರೀಯ ಕಂಪನಿಗಳು ಭೌತಿಕವಾಗಿ ಬರ್ಮುಡದ್ವೀಪದಲ್ಲಿ ತಳವೂರಿ ಅಂತಾರಾಷ್ಟ್ರೀಯ ವಾಣಿಜ್ಯಗಳನ್ನು ನಡೆಸುತ್ತಿವೆ.

ಪ್ರವಾಸೋದ್ಯಮ ಎರಡನೆಯ ಸ್ಥಾನದಲಿರುವ ಅತಿದೊಡ್ಡ ಕೈಗಾರಿಕೆ ಪ್ರತಿವರ್ಷ ಒಂದುವರೆ ಮಿಲಿಯನ್ ಪ್ರವಾಸಿಗರು ಈ ದ್ವೀಪಕ್ಕೆ ಬರುತ್ತಾರೆ, ಇದರಲ್ಲಿ ಶೇ. 80 ಯು.ಎಸ್. ಪ್ರವಾಸಿಗರು. ಉಳಿದವರು ಕೆನಡ ಮತ್ತು ಬ್ರಿಟನ್‌ನಿನವರು ಇಲ್ಲಿಗೆ ಬರಲು ಹಡಗು ವ್ಯವಸ್ಥೆಯಿದೆ. ಈ ದ್ವೀಪ ಏಕೈಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಹೊಂದಿದೆ.

ಬರ್ಮುಡ ಟ್ರೈಯಾಂಗಲ್ ಎಂದೇ ಸುದ್ಧಿಯಲ್ಲಿರುವ ಈ ದ್ವೀಪಸಮೂಹದ ತ್ರಿಕೋನಾಕಾರದ ಒಂದು ಭಾಗ ಹಲವಾರು ವಿಸ್ಮಯಗಳಿಗೆ ಕಾರಣವಾಗಿದೆ. ಹಲವು ಹಡಗುಗಳು, ವಿಮಾನಗಳು ಈ ಟ್ರೈಯಾಂಗಲ್ ಪ್ರದೇಶದಲ್ಲಿ ಕಣ್ಮರೆಯಾಗುತ್ತಿರುತ್ತವೆ. ಇದು ಆಧುನಿಕ ವಿಜ್ಞಾನದ ಯುಗಕ್ಕೆ ಒಂದು ಸವಾಲಾಗಿದೆ.

ಈ ದ್ವೀಪಗಳಲ್ಲಿ ವಿವಿಧ ಬುಡಕಟ್ಟಿನವರಿದ್ದು, 1970ರ ಜನಗಣತಿಯಂತೆ ನಿಗ್ರೋಗಳ ಸಂಖ್ಯೆ ಶೇ. 59ರಷ್ಟಿದ್ದು ಉಳಿದವರು ಪೋರ್ಚುಗಲ್, ಸ್ಪೇನ್, ಇಂಗ್ಲೆಂಡ್ ಮೊದಲಾದ ದೇಶಗಳಿಂದ ಬಂದು ನೆಲೆಸಿದವರು. ಇಲ್ಲಿಂದ ನ್ಯೂಯಾರ್ಕ್, ಕೆನಡ, ಲಂಡನ್ ಮತ್ತು ವೆಸ್ಟ್ ಇಂಡೀಸ್‌ಗಳಿಗೆ ವಿಮಾನ ಸಂಪರ್ಕವಿದೆ. ನ್ಯೂಯಾರ್ಕ್‌ನಿಂದ ಮೂರುಗಂಟೆಗಳ ಕಾಲದಲ್ಲಿ ವಿಮಾನಗಳು ಈ ದ್ವೀಪಗಳನ್ನು ಮುಟ್ಟುತ್ತವೆ. (ಕೆ.ಎಂ.)

**ಬರ್ಲಿನ್:** ಹಿಂದಿನ ಪೂರ್ವ ಜರ್ಮನಿಯ ಕೈಗಾರಿಕಾ ಮತ್ತು ಇತಿಹಾಸ ಪ್ರಸಿದ್ಧನಗರ. ಎರಡನೆಯ ಮಹಾಯುದ್ಧದ (1945) ತರುವಾಯ ಈ ನಗರವನ್ನು ಪೂರ್ವ ಬರ್ಲಿನ್ ಮತ್ತು ಪಶ್ಚಿಮ ಬರ್ಲಿನ್ ಎಂದು ವಿಂಗಡಿಸಲಾಗಿತ್ತು. ಯುದ್ಧಾನಂತರ ಪಶ್ಚಿಮ ಮತ್ತು ಪೂರ್ವ ಜರ್ಮನಿಗಳೆಂದು ಎರಡು ಪ್ರತ್ಯೇಕ ದೇಶಗಳನ್ನಾಗಿ ಭಾಗಮಾಡಿದಾಗ, ಬರ್ಲಿನ್ ನಗರವನ್ನು ಸಹ ಪಶ್ಚಿಮ ಮತ್ತು ಪೂರ್ವ ನಗರಗಳನ್ನಾಗಿ ವಿಂಗಡಿಸಲಾಯಿತು. ಪೂರ್ವ ಜರ್ಮನಿ ದೇಶಕ್ಕೆ (ಕಮ್ಯುನಿಸಂ ಸರ್ಕಾರ) ಪೂರ್ವ ಬರ್ಲಿನ್ ರಾಜಧಾನಿಯಾಗಿಯೂ ಪಶ್ಚಿಮ ಜರ್ಮನಿಗೆ (ಪ್ರಜಾಪ್ರಭುತ್ವ ಸರ್ಕಾರ) ಪಶ್ಚಿಮ ಬರ್ಲಿನ್ ರಾಜಧಾನಿಯಾಗಿ ವಿಭಾಗಿಸಿ 1949ರಲ್ಲಿ ಸ್ಥಾಪಿಸಲಾಯಿತು.

ಪೂರ್ವ ಜರ್ಮನಿಯು ರಷ್ಯದೇಶದ ಕಮ್ಯುನಿಸ್ಟ್ ತತ್ವ ಪ್ರಭಾವಕ್ಕೆ ಒಳಗಾಗಿದ್ದು ರಷ್ಯದ ಕಮ್ಯುನಿಸ್ಟ್ ತತ್ವ ದುರ್ಬಲವಾಗುತ್ತಿದ್ದ ಸಮಯದಲ್ಲಿ 1989ರಲ್ಲಿ ಎರಡು ದೇಶಗಳ ಜನ ಒಗ್ಗೂಡಿ ಎರಡು ಬರ್ಲಿನ್ ನಗರಗಳ ಮಧ್ಯಕ್ಕೆ ಕಟ್ಟಲ್ಪಟ್ಟಿದ್ದ ಗೋಡೆಯನ್ನು ಕೆಡವಿ ಈ ಎರಡು ದೇಶಗಳೂ ಒಗ್ಗೂಡಲ್ಪಟ್ಟವು.

ಈಗ ಬರ್ಲಿನ್ ನಗರ ಒಂದಾಗಿದೆ. ಈ ನಗರದ ಒಟ್ಟು ವಿಸ್ತೀರ್ಣ 883 ಚ.ಕಿಮೀ. ಜನಸಂಖ್ಯೆ 3,388,000 (2002).

ಕೈಗಾರಿಕೆ ಪ್ರಧಾನವಾಗಿರುವ ಈ ಒಟ್ಟುಗೂಡಿರುವ ನಗರದಲ್ಲಿ 15ಲಕ್ಷ ಕಾರ್ಮಿಕರಿದ್ದಾರೆ, ಮುಖ್ಯ ಕೈಗಾರಿಕಾ ಉತ್ಪನ್ನಗಳು ಎಲೆಕ್ಟ್ರಿಕ್ ಸಾಮಾನುಗಳು, ಯಂತ್ರೋಪಕರಣಗಳು, ರಾಸಾಯನಿಕ ವಸ್ತುಗಳು, ಔಷಧಗಳು, ಬಟ್ಟೆ ಮುಂತಾದವು. (ಡಿ.ವೈ.)

**ಬಲೂಚಿಸ್ತಾನ:** ಪಾಕಿಸ್ತಾನದ ನೈರುತ್ಯ ಭಾಗದಲ್ಲಿರುವ ಪ್ರಾಂತ್ಯ. ಇದರ ಉತ್ತರದಲ್ಲಿ ಆಫ್ಘಾನಿಸ್ತಾನ, ಪೂರ್ವದಲ್ಲಿ ಪಾಕಿಸ್ತಾನದ ವಾಯವ್ಯಗಡಿ, ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳು, ದಕ್ಷಿಣದಲ್ಲಿ ಅರಬ್ಬಿ ಸಮುದ್ರ, ಪಶ್ಚಿಮದಲ್ಲಿ ಇರಾನ್ ಇವೆ. ವಿಸ್ತೀರ್ಣ: 3,47,188 ಚ.ಕಿಮೀ. ಪಾಕಿಸ್ತಾನದ ಪ್ರಾಂತ್ಯಗಳಲ್ಲೆಲ್ಲ ಈ ಪ್ರಾಂತ್ಯ ದೊಡ್ಡದಾದರೂ ಇದರ ಜನಸಾಂದ್ರತೆ ಕಡಿಮೆ. ಜನಸಂಖ್ಯೆ 560307 (1998). ಮುಖ್ಯ ಪಟ್ಟಣ ಕ್ವೆಟ್ಟ.

ಭೌತಿಕ ಲಕ್ಷಣ: ಬಲೂಚಿಸ್ತಾನದಲ್ಲಿ ನಾಲ್ಕು ಭೌಗೋಳಿಕ ವಿಭಾಗಗಳಿವೆ : 1. ಮಧ್ಯ ಹಾಗೂ ಈಶಾನ್ಯ ಭಾಗಗಳ ಮಲೆನಾಡು. ಇದಕ್ಕೆ ಖೊರಾಸಾನ್ ಎಂದು ಹೆಸರಿದೆ. ಈ ಪ್ರದೇಶದ ಪೂರ್ವ ಭಾಗದಲ್ಲಿ ಸುಲೇಮಾನ್ ಪರ್ವತಗಳೂ ವಾಯವ್ಯ ಭಾಗದಲ್ಲಿ ತೋಬ ಕಾಕರ್ ಬೆಟ್ಟಗಳೂ ಇವೆ. ಸುಲೇಮಾನ್ ಶ್ರೇಣಿಗಳ ಮಧ್ಯಭಾಗದಲ್ಲಿರುವ ಕೈಸರ್‌ಘರ್ ಶಿಖರ ಸಮುದ್ರಮಟ್ಟಕ್ಕೆ 3,411 ಮೀ ಎತ್ತರದಲ್ಲಿದೆ. ಸುಲೇಮಾನ್ ಪರ್ವತಗಳಿಂದ ಅನೇಕ ಬೆಟ್ಟಚಾಚುಗಳು ಪಶ್ಚಿಮಕ್ಕೆ ಕ್ವೆಟ್ಟ–ಫಿಷೀನ್ ಪ್ರದೇಶದ ಕಡೆಗೆ ಸಾಗಿವೆ. ಈ ಭಾಗದ ಶಿಖರಗಳಲ್ಲಿ ಅತ್ಯಂತ ಎತ್ತರವಾದವು ಖಲೀಫತ್ (3,485 ಮೀ) ಮತ್ತು ಕ್ವೆಟ್ಟದ ಈಶಾನ್ಯದಲ್ಲಿರುವ ಜರ್‌ಗೂನ್ (3,578 ಮೀ). 2. ಬೋಲನ್ ಮತ್ತು ಖೋಜಕ್ ಕಣಿವೆಗಳಿಂದಾದ ಮಹಾತೆರಪು: ಇದು ಉತ್ತರದ ಮಲೆನಾಡನ್ನೂ ದಕ್ಷಿಣದ ಇಳುಕಲು ಪ್ರದೇಶವನ್ನೂ ಪ್ರತ್ಯೇಕಿಸಿದೆ. ದಕ್ಷಿಣದ ಇಳಿಜಾರಿನಲ್ಲಿ ಸುಲೇಮಾನ್ ಶ್ರೇಣಿಯ ಪೂರ್ವ ಚಾಚುಗಳೂ ಪಶ್ಚಿಮದಲ್ಲಿ ಮಕ್ರಾನ್, ಖಾರಾನ್ ಮತ್ತು ಚಾಗೈ ಬೆಟ್ಟಗಳೂ ಆಗ್ನೇಯದಲ್ಲಿ ಪಬ್ ಮತ್ತು ಕೀರ್ತರ್ ಬೆಟ್ಟಗಳೂ ಹಬ್ಬಿವೆ. 3. ಕರಾವಳಿ: ಇದು ಕೀರ್ತರ್ ಬೆಟ್ಟಸಾಲುಗಳ ಅಂಚಿನಲ್ಲಿ ಸಾಗಿ ಉತ್ತರದ ಸಿಬಿ ಪ್ರದೇಶದವರೆಗೂ ಹರಡಿದೆ. 4. ವಾಯವ್ಯದಲ್ಲಿರುವ ಚಾಗೈ, ಖಾರಾನ್ ಮತ್ತು ಮಕ್ರಾನ್ ಮರಳು ಗಾಡುಗಳು ಹಾಗೂ ಆಫ್ಘಾನಿಸ್ತಾನದ ಲೋರಾ ಜೌಗು ಪ್ರದೇಶ.

ಮೇಲ್ಮೈ ಲಕ್ಷಣಕ್ಕನುಗುಣವಾಗಿ ನೆಲ ವೈವಿಧ್ಯಮಯವಾಗಿದೆ. ನಾಡಿನ ಬಹುಭಾಗ ಮರುಭೂಮಿಯಿಂದ ಕೂಡಿದೆ. ಕರಾವಳಿ, ಜೌಗು ಹಾಗೂ ಸರೋವರ ಭಾಗಗಳಲ್ಲಿ ಚೌಳು ಮಣ್ಣಿದೆ. ಮೈದಾನದ ಕೆಲವು ಕಡೆ ಮರಳು ಮಿಶ್ರವಾದ ಮಣ್ಣೂ ಬೆಟ್ಟಗಳ ನಡುವಣ ಬೆಂಗಾಡುಗಳಲ್ಲಿ ಪುಡಿಗಲ್ಲು ಮಿಶ್ರವಾದ ಮಣ್ಣೂ ಇವೆ. ಸಿಬಿ, ಕಚ್ಚಿ ಹಾಗೂ ಲಾಸ್ ಬೇಲಾ ಬಯಲುಗಳು ಮೆಕ್ಕಲು ಮಣ್ಣಿನಿಂದ ಕೂಡಿವೆ.

ಉತ್ತರದ ಪರ್ವತ ಪ್ರದೇಶದ ನದಿಗಳು ಸಿಂಧೂ ನದಿಯನ್ನು ಕೂಡುತ್ತವೆ. ಪ್ರಾಂತ್ಯದ ಮಧ್ಯಭಾಗದಲ್ಲಿ ಹುಟ್ಟುವ ನದಿಗಳು ದಕ್ಷಿಣಕ್ಕೆ ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಜ್ಹೋಹೀಬ್, ನಾರಿ, ದಷ್ಟ್, ಹಿಂಗೋಲ್, ಪೊರಾಲಿ, ಹಬ್ ಇವು ಇಲ್ಲಿ ಹರಿಯುವ ನದಿಗಳು.

ವಾಯುಗುಣ: ಬಲೂಚಿಸ್ತಾನದ ವಾಯುಗುಣ ಮೂರು ಬಗೆ. 1. ಅರಬ್ಬಿ ಸಮುದ್ರ ತೀರಭಾಗದಲ್ಲಿ ಸಮಶೀತೋಷ್ಣ ವಾಯುಗುಣವಿದೆ. ಅಲ್ಲಿಯ ಸರಾಸರಿ ವಾರ್ಷಿಕ ಉಷ್ಣತೆ $30^0$ ಸೆಂ. 2. ಒಳನಾಡಿನ ಮರಳುಗಾಡು ಹಾಗೂ ಬಂಜರು ಪ್ರದೇಶಗಳ ಉಷ್ಣತೆ $37^0$ ಸೆಂ. ಇಲ್ಲಿ ಬೇಸಗೆಯಲ್ಲಿ ಹೆಚ್ಚು ಸೆಕೆ. ಆಗ ಇಲ್ಲಿಯ ಗರಿಷ್ಠ ಉಷ್ಣತೆ $50^0$ ಸೆಂ. 3. ಪರ್ವತ ಪ್ರದೇಶಗಳು ಹೆಚ್ಚು ತಂಪು. ಅಲ್ಲಿಯ ವಾರ್ಷಿಕ ಸರಾಸರಿ ಉಷ್ಣತೆ $24^0$ ಸೆಂ. ಕಲಾತ್ ಮತ್ತು ಕ್ವೆಟ್ಟ–ಫಿಷೀನ್ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಅತಿಯಾದ ಚಳಿ ಇರುತ್ತದೆ, ಆಗ ಅಲ್ಲಿ ಹಿಮ ಬೀಳುತ್ತದೆ. ವಾರ್ಷಿಕ ಮಳೆ ತೀರ ಪ್ರದೇಶದಲ್ಲಿ 10–28 ಸೆಂಮೀ ಪರ್ವತ ಸೀಮೆಯಲ್ಲಿ 15–41 ಸೆಂಮೀ.

ಸಸ್ಯ ಹಾಗೂ ಪ್ರಾಣಿಸಂಪತ್ತು: ಕಲಾತ್, ಕ್ವೆಟ್ಟ–ಫಿಷೀನ್ ಮತ್ತು ಜಿಯಾರತ್ ಪರ್ವತ ಪ್ರದೇಶದಲ್ಲಿ ಜೂನಿಪರ್, ಪಿಸ್ತಾಚಿಯೋ, ಆಲಿವ್, ಆಷ್, ಪೈನ್, ಪಾಪ್ಲರ್ ಮತ್ತು ವಿಲ್ಲೋ ಮರಗಳಿವೆ. ಬಯಲುಗಳಲ್ಲಿ ಕುರುಚಲು, ಜಾಲಿ, ಮುಳ್ಳುಪೊದೆಗಳು ಬೆಳೆಯುತ್ತವೆ. ಕಣಿವೆಗಳಲ್ಲಿ ನಾನಾ ಬಗೆಯ ಹಣ್ಣಿನ ಗಿಡಗಳು, ಮೂಲಿಕೆಗಳು ಇವೆ. ಜಿಯಾರತ್ ಮತ್ತು ಕಲಾತ್ ಪರ್ವತ ಸೀಮೆಯಲ್ಲಿ ಜೀರಿಗೆ, ಹಿಸಪ್ ಎಂಬ ಸುವಾಸನೆಯ ಮೂಲಿಕೆ ಇವು ಅಧಿಕ. ಇಂಗು ನೀಡುವ ಬೇರಿನ ಗಿಡಗಳು ಕೋ–ಇ–ಸುಲ್ತಾನ್ ಪ್ರದೇಶದಲ್ಲಿವೆ. ಕ್ವಾಜಾ ಅಮ್ರಾನ್ ಬೆಟ್ಟಗಳಲ್ಲಿ ವಿರೇಚಕ ಔಷಧಿಗೆ ಉಪಯೋಗಿಸುವ ರುಬರ್ಬ್ ಸಸ್ಯಗಳಿವೆ. ದಷ್ಟ್ ನದಿಯ ಕಣಿವೆಗಳಲ್ಲಿ ಉತ್ತಮ ಜಾತಿಯ ಖರ್ಜೂರ ಗಿಡಗಳು ಬೆಳೆಯುತ್ತವೆ. ಖಾರಾನ್ ಹುಲ್ಲುಗಾಡಿನ ವಿಶಿಷ್ಟವಾದ ಹುಲ್ಲಿನ ಬೀಜಗಳನ್ನು ಕ್ಷಾಮಕಾಲದಲ್ಲಿ ಜನರು ಆಹಾರವಾಗಿ ಬಳಸುತ್ತಾರೆ.

ಬಲೂಚಿಸ್ತಾನದ ಪಶ್ಚಿಮ ಬೆಟ್ಟಗಳಲ್ಲಿ ಚಿರತೆ ಹಾಗೂ ಕಪ್ಪು ಕರಡಿಗಳಿವೆ, ಮರಳ್ಗಾಡುಗಳಲ್ಲಿ ಕಾಡುಕತ್ತೆ, ಪರ್ಷಿಯನ್ ಜಿಂಕೆ, ತೋಳ ಇವೆ. ಅರಣ್ಯಗಳಲ್ಲಿ ನರಿ, ಕತ್ತೆಕಿರುಬ ಸಾಮಾನ್ಯ, ಪರ್ವತ ಪ್ರದೇಶಗಳಲ್ಲಿ ನೀಳ್ಗೊಂಬಿನ ಕಾಡುಮೇಕೆ ಮತ್ತು ಐಬೆಕ್ಸ್ ಇವೆ. ಬಲೂಚಿಸ್ತಾನ ನಾನಾ ಬಗೆಯ ಕುರಿ, ರಾಸು ಹಾಗೂ ಕುದುರೆಗಳಿಗೆ ಪ್ರಸಿದ್ಧವಾಗಿದೆ.

ಜನಜೀವನ: ಬಲೂಚಿಸ್ತಾನದ ಎರಡು ಮುಖ್ಯ ಬುಡಕಟ್ಟುಗಳು ಬಲೂಚ್ ಮತ್ತು ಪಠಾಣ್. ಮೂರನೆಯದು ಪ್ರಧಾನವಾಗಿ ಸಿಂಧಿಗಳೊಂದಿಗೆ ಮಿಶ್ರಗೊಂಡ ಬಣ. ಇವಲ್ಲದೆ ಕಡಲಂಚಿನ ಪ್ರದೇಶಗಳಲ್ಲಿ ಮೇದ್ ಬಣದ ಜನರೂ ಬಲೂಚರ ನೆಲೆಗಳ ಕಡೆ ಲೂರ್ ಎಂಬ ಜನರೂ ಸಿಬಿ ಕಚ್ಚಿ ಹಾಗೂ ಲಾಸ್‌ಬೇಲಾ ಜಿಲ್ಲೆಗಳಲ್ಲಿ ಜಾಳ್ ಜನರೂ ವಾಸವಾಗಿದ್ದಾರೆ.

ಬಲೂಚಿಸ್ತಾನದ ಬಂಜರು ಹಾಗೂ ಅರೆಬೆಂಗಾಡಿನ ಗ್ರಾಮ ಪ್ರದೇಶಗಳಲ್ಲಿ ಅಲೆಮಾರಿ ಜನರು ಮಳೆಗಾಲದಲ್ಲಿ ಬಂದು ವಾಸಿಸುತ್ತಾರೆ. ಅಲ್ಲಿಯ ಹುಲ್ಲುಬಯಲುಗಳು ಅವರ ಜಾನುವಾರುಗಳಿಗೆ ಆಗ ಅನುಕೂಲವಾಗಿರುತ್ತವೆ. ಸಮುದ್ರ ತೀರದಲ್ಲಿ ಬೆಸ್ತರ ಗ್ರಾಮಗಳಿವೆ. ಒಳನಾಡಿನ ಗಣಿಗಳಲ್ಲಿ ಕೆಲಸ ಮಾಡಲು ಅವಕಾಶವಿದ್ದರೂ ಬಹುಮಂದಿ ನೆಲೆನಿಲ್ಲದೆ ಅಲೆಮಾರಿ ಜೀವನವನ್ನು ನಡೆಸುತ್ತಾರೆ. 1947ರ ತರುವಾಯ ಕೈಗಾರಿಕೆಗಳ ಸ್ಥಾಪನೆಯಿಂದಲೂ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಿಂದಲೂ ಪಟ್ಟಣಗಳಲ್ಲಿ

ಜನಸಾಂದ್ರತೆ ಹೆಚ್ಚಿತು. ಪ್ರಮುಖ ಪಟ್ಟಣಗಳು ಕ್ವೆಟ್ಟ (ರಾಜಧಾನಿ). ಸಾಂಡೆಮನ್ ಕೋಟೆ, ಹಿಂದೂಬಾಗ್, ಚಮನ್, ಮಸ್ತುಂಗ್, ಮಚ್, ಸಿಬಿ, ಕಲಾತ್, ಖುಜ್‍ದಾಸ್, ಬಂಜ್ಗೂರ್, ತರ್ಬತ್, ಬೇಲ, ಸೋನ್‍ಮೈಯಾನಿ ಮತ್ತು ಗ್ವಾದಾರ್.

ಭಾಷೆ: ಬಲೂಚಿಸ್ತಾನದಲ್ಲಿ ಹಲವಾರು ಭಾಷೆಗಳು ಪ್ರಚಲಿತವಾಗಿವೆ. ಬಹುಮಂದಿ ಎರಡು ಭಾಷೆಗಳನ್ನು ತಿಳಿದವರು. ಬಲೂಚಿ, ಬ್ರಾಹೂ ಮತ್ತು ಸಿಂಧಿ–ಇವು ಕಲಾತ್ ವಿಭಾಗದ ಮುಖ್ಯ ಭಾಷೆಗಳು. ಪುಷ್ಟೊ, ಬಲೂಚಿ, ಸಿಂಧಿ ಮತ್ತು ಸೆರೈಕಿ ಭಾಷೆಗಳು ಕ್ವೆಟ್ಟ ವಿಭಾಗದಲ್ಲಿ ಪ್ರಧಾನವಾಗಿವೆ. ಕಲಾತ್ ಮತ್ತು ಮಸ್ತುಂಗ್ ಪ್ರದೇಶಗಳ ದ್ವೆವಾರರು ಪಾರಸಿ ವರ್ಗದ ದ್ವೆವಾರಿ ಭಾಷೆಯನ್ನಾಡುತ್ತಾರೆ. ನಗರ ಪ್ರದೇಶಗಳಲ್ಲಿ ನೆಲೆಸಿರುವ ಪಂಜಾಬಿ ಜನರು ಪಂಜಾಬಿ ಭಾಷೆಯನ್ನಾಡುತ್ತಾರೆ. ಉರ್ದು ಬಲೂಚಿಸ್ತಾನದ ವ್ಯವಹಾರ ಭಾಷೆ.

ಧರ್ಮ: ಬಲೂಚರು ಹಾಗೂ ಪಠಾಣರಲ್ಲಿ ಬಹುಮಂದಿ ಸುನ್ನಿ ಮುಸಲ್ಮಾನರು. ಮಕ್ರಾನ್ ಮತ್ತು ಲಾಸ್ ಬೇಲಾ ಜಿಲ್ಲೆಗಳ ಬಲೂಚಿ ಬಣಗಳಲ್ಲಿ ಅನೇಕರು ಜೌನ್‍ಪುರದ ಮಿರಾನ್ ಮಹಮದ್ ಮಹದೀ ಎಂಬ 16ನೆಯ ಶತಮಾನದ ಸಂತನ ಅನುಯಾಯಿಗಳಾಗಿದ್ದು ತಮ್ಮದೇ ಧರ್ಮಪಂಥವನ್ನು ಸ್ಥಾಪಿಸಿಕೊಂಡಿದ್ದಾರೆ. ಕ್ವೆಟ್ಟದಲ್ಲಿ ಕೆಲವು ಹಿಂದು, ಪಾರಸಿ ಮತ್ತು ಕ್ರೈಸ್ತರು ನೆಲೆಸಿದ್ದಾರೆ.

ಆರ್ಥಿಕ ಸ್ಥಿತಿ: ಅನಿರ್ದಿಷ್ಟ ಮಳೆ ಹಾಗೂ ನೀರಿನ ಅಭಾವದಿಂದ ವ್ಯವಸಾಯ ಪರಿಮಿತವಾಗಿದೆ. ಜನರು ಬಹುಮಟ್ಟಿಗೆ ದನ ಕುರಿಮೇಕೆಗಳನ್ನು ಸಾಕುವ ಅಲೆಮಾರಿಗಳು, ಪ್ರಾಂತ್ಯದ ಶೇ. 90ರಷ್ಟು ಮಂದಿಯ ಉದ್ಯಮ ಕುರಿ ಸಾಕಣೆ. ಉತ್ತಮ ಕುರಿ ತುಪ್ಪಟವನ್ನು ಹೊರದೇಶಗಳಿಗೆ ರಫ್ತು ಮಾಡುತ್ತಾರೆ. ಅರಣ್ಯಗಳಲ್ಲಿ ಖರ್ಜೂರ ಒಂದು ಮುಖ್ಯ ಉತ್ಪನ್ನ.

ಅರಬ್ಬೀಸಮುದ್ರದ ಅಂಚಿನಲ್ಲಿ ಮೀನುಗಾರಿಕೆಗೆ ಸಾಕಷ್ಟು ಅವಕಾಶವಿದೆ. ಮೀನುಗಳ ಶೈತ್ಯಾಗಾರ ಗ್ವಾದರ್ ರೇವುಪಟ್ಟಣದಲ್ಲಿದೆ.

ಕೈಗಾರಿಕೆ: ಪಾಕಿಸ್ತಾನದ ಒಟ್ಟು ಕೈಗಾರಿಕೆಯ ಉತ್ಪನ್ನದಲ್ಲಿ ಬಲೂಚಿಸ್ತಾನದ ಕೊಡುಗೆ ಶೇ. 1 ರಷ್ಟು ಮಾತ್ರ. 1970ರಿಂದ ಈಚೆಗೆ ಹತ್ತಿ ಮತ್ತು ಉಣ್ಣೆ ಬಟ್ಟೆ ಕಾರ್ಖಾನೆಗಳು ಬೆಳೆದಿವೆ. ಹಣ್ಣುಗಳ ಡಬ್ಬೀಕರಣ ಇನ್ನೊಂದು ಮುಖ್ಯ ಉದ್ಯಮ. ಕಸೂತಿ ಮೊದಲಾದ ಕುಶಲಕೈಗಾರಿಕೆಗಳೂ ಇವೆ.

ಕಲ್ಲಿದ್ದಲು, ಕ್ರೋಮೇಟ್, ಸುಣ್ಣಕಲ್ಲು, ಜಿಪ್ಸಂ, ತಾಮ್ರ, ಸೀಸ ಮೊದಲಾದ ಖನಿಜಗಳು ಇಲ್ಲಿ ಸಿಗುತ್ತವೆ.

ಸಾರಿಗೆ ಸಂಪರ್ಕ: ಪ್ರಾಂತ್ಯದ ರೈಲುಮಾರ್ಗಗಳ ಒಟ್ಟು ಉದ್ದ 1,600 ಕಿಮೀ. ಕ್ವೆಟ್ಟಕ್ಕೂ ಇರಾನಿನ ಜಾಹೆದಾನ್‍ಗೂ ನಡುವಣ ಮಾರ್ಗ, ಆಫ್ಘಾನಿಸ್ತಾನದ ಗಡಿ ಭಾಗದ ಚಮನ್ ಮಾರ್ಗ, ಚೋಲನ್ ಕಣಿವೆಯಿಂದ ಕರಾಚಿ ಮತ್ತು ಲಾಹೋರ್ ಪಟ್ಟಣಗಳಿಗೆ ಹೋಗುವ ಸಿಬಿ ಮಾರ್ಗ, ಉತ್ತರದ ಸಾಂಡೆಮನ್ ಕೋಟೆ ಮಾರ್ಗ. ಈಶಾನ್ಯದ ಲೋರಾಲೈ ಮಾರ್ಗ ಇವು ಮುಖ್ಯವಾದವು.

ರಸ್ತೆಗಳ ಒಟ್ಟು ಉದ್ದ ಸು. 11,200 ಕಿಮೀ. ಇರಾನ್ ಕಡೆಗೆ ಹೋಗುವ ಕ್ವೆಟ್ಟ–ಮೀರ್‍ಜಾವೆಲ್ ರಸ್ತೆ, ಕರಾಚಿ ಮತ್ತು ಲಾಹೋರ್ ನಗರಗಳಿಗೆ ಹೋಗುವ ಕ್ವೆಟ್ಟ–ಸಿಬಿ ರಸ್ತೆ ಇವು ಹಳೆಯ ಪ್ರಮುಖ ಹೆದ್ದಾರಿಗಳು. ಇತ್ತೀಚೆಗೆ ಪಾಕಿಸ್ತಾನ, ಇರಾನ್ ಮತ್ತು ತುರ್ಕಿ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಅಂತಾರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಿಸಲಾಗಿದೆ.

ಪಾಕಿಸ್ತಾನದ ವಿಮಾನಗಳು ಕ್ವೆಟ್ಟದಿಂದ ಕರಾಚಿ, ಲಾಹೋರ್ ಮತ್ತು ರಾವಲ್ ಪಿಂಡಿ ನಗರಗಳಿಗೆ ಸಂಚರಿಸುತ್ತವೆ. ಸಮುದ್ರತೀರದಲ್ಲಿದ್ದ ಸೋನ್‍ಮಿಯನಿ, ಜೀವಾನಿ, ಪಸ್ನಿ ಮತ್ತು ಗ್ವಾದರ್‌ಗಳಿಗೂ ಕರಾಚಿಗೂ ನಡುವೆ ಹಡಗುಗಳ ಸಂಚಾರವಿದೆ. (ವಿ.ಜಿ.ಕೆ.)

**ಬಲೂಚಿಸ್ತಾನ (ಇರಾನಿನ):** ಇರಾನಿನ ಪ್ರಮುಖಪಟ್ಟಣ. ಈ ಪ್ರದೇಶ ದಕ್ಷಿಣ ಇರಾನಿನ ಬಲೂಚಿ ಸ್ತಾನ್–ವಾ–ಸಿಸ್ತಾನ್–ಓಸ್ತಾನ್ ಪ್ರಾಂತ್ಯದಲ್ಲಿದೆ. ಇದು ಬಂಜರುನಾಡು. ಸಾಮಾಜಿಕವಾಗಿ ಹಿಂದುಳಿದಿದೆ, ಆರ್ಥಿಕವಾಗಿ ಪ್ರಗತಿ ಹೊಂದಿಲ್ಲ. ಮಳೆ ಕಡಿಮೆ. ವರ್ಷದಲ್ಲಿ 8 ತಿಂಗಳು ಇಲ್ಲಿ ತೀವ್ರ ಬಿಸಿಲು ಇರುತ್ತದೆ. ಇರಾನಿನ ಆದಿವಾಸಿ ಜನ, ಬ್ರಾಹೂಇ ಮತ್ತು ಬಲೂಚಿ ಬುಡಕಟ್ಟಿನವರು ಹಾಗೂ ಭಾರತದ ಜಾಟ್ ಜನರು ಕೆಲವರು ಈ ಪ್ರದೇಶದಲ್ಲಿ ವಾಸಿಸುತ್ತಾರೆ. ಒಂಟೆ ಪಡೆಗಳ ದಾಳಿ ಹಾಗೂ ಅಂತರ್ಯುದ್ಧಗಳು ಹಿಂದೆ ಇಲ್ಲಿ ಸಾಮಾನ್ಯವಾಗಿದ್ದುವು.

ಇರಾನ್ ಸರ್ಕಾರ ಜಲಾಶಯಗಳನ್ನು ಕಟ್ಟಿಸಿ ಜನರು ವ್ಯವಸಾಯದಲ್ಲಿ ನಿರತರಾಗಲು ನೆರವು ನೀಡಿದೆ. ಬಲೂಚಿಸ್ತಾನ್–ವಾ–ಸಿಸ್ತಾನ್–ಓಸ್ತಾನ್ ಪ್ರಾಂತ್ಯದ ಆಡಳಿತ ಕೇಂದ್ರ ಜ಼ಾಹೆದಾನ್ ನಗರದಿಂದ ಚಾಹಿ ಬಹಾರ್ ರೇವಿಗೆ ರಸ್ತೆ ಇದೆ. ಜ಼ಾಹೆದಾನ್ ಹಾಗೂ ಪಾಕಿಸ್ತಾನಗಳ ನಡುವೆ ರೈಲುಮಾರ್ಗವಿದೆ. ಪ್ರಮುಖ ಪಟ್ಟಣಗಳು ಜಾಬೊಲ್ ಮತ್ತು ಜ಼ಾಹೆದಾನ್. (ವಿ.ಜಿ.ಕೆ.)

**ಬಲ್ಗೇರಿಯ:** ಆಗ್ನೇಯ ಯುರೋಪಿನ ಒಂದು ಸ್ವತಂತ್ರ ಗಣರಾಜ್ಯ. ಅಧಿಕೃತ ಹೆಸರು ಬಲ್ಗೇರಿಯ ಜನತಾ ಗಣರಾಜ್ಯ. ಉತ್ತರದಲ್ಲಿ ರೊಮೇನಿಯ, ಪೂರ್ವದಲ್ಲಿ ಕಪ್ಪು ಸಮುದ್ರ, ದಕ್ಷಿಣದಲ್ಲಿ ಟರ್ಕಿ ಮತ್ತು ಗ್ರೀಸ್, ಪಶ್ಚಿಮದಲ್ಲಿ ಯೂಗೋಸ್ಲಾವಿಯ ಈ ರಾಜ್ಯವನ್ನು ಸುತ್ತುವರೆದಿವೆ. ಬಲ್ಗೇರಿಯ ಪೂರ್ವ ಪಶ್ಚಿಮವಾಗಿ 492 ಕಿಮೀ, ಉತ್ತರ ದಕ್ಷಿಣವಾಗಿ 274 ಕಿಮೀ ಅಂತರ ಉಳ್ಳದಾಗಿದ್ದು ಉ.ಅ. $41^0$–$45^0$ ಹಾಗೂ ಪೂ.ರೇ. $23^0$–$29^0$ ವರೆಗೆ ಹರಡಿದೆ. 282 ಕಿಮೀ ಉದ್ದದ ಸಮುದ್ರತೀರ ಪಡೆದಿದೆ. ಒಟ್ಟು ವಿಸ್ತೀರ್ಣ 11,0912 ಚ.ಕಿಮೀ. ಜನಸಂಖ್ಯೆ 78,90,000 (2002). ರಾಜಧಾನಿ ಸೋಫಿಯ. ಜನಸಂಖ್ಯೆ 1,113,674 (2002).

ಮೇಲ್ಮೈ ಲಕ್ಷಣ: ಬಲ್ಗೇರಿಯದ ಉತ್ತರದಲ್ಲಿ ಡ್ಯಾನ್ಯೂಬ್ ನದಿ ಮತ್ತು ಪೂರ್ವದಲ್ಲಿ ಕಪ್ಪು ಸಮುದ್ರ ನೈಸರ್ಗಿಕ ಗಡಿಗಳಾಗಿವೆ. ದೇಶದಲ್ಲಿ ಪೂರ್ವಪಶ್ಚಿಮವಾಗಿ ಬಾಲ್ಕನ್ ಮತ್ತು ನೈರುತ್ಯದಲ್ಲಿ ರಾಡಪೀ, ರೀಲ ಮತ್ತು ಪಿರಿನ್ ಪರ್ವತ ಶ್ರೇಣಿಗಳು ಹಬ್ಬಿವೆ. ಬಾಲ್ಕನ್ ಶ್ರೇಣಿಗಳು ದೇಶವನ್ನು ಹೆಚ್ಚು ಕಡಿಮೆ ಸಮವಾದ ಎರಡು ಭಾಗಗಳಾಗಿ ವಿಂಗಡಿಸಿದರೂ ಇವು ಅಷ್ಟು ಉನ್ನತವಾಗಿಲ್ಲ. ಇವುಗಳಲ್ಲಿ ಸುಲಭವಾಗಿ ದಾಟಬಹುದಾದ ಅನೇಕ ಕಣಿವೆಗಳು ಇವೆ. ಈ ಶ್ರೇಣಿಗಳ ದಕ್ಷಿಣಕ್ಕೆ ಆ್ಯಂಡಿ ಬಾಲ್ಕನ್ ಎಂಬ ಇನ್ನೊಂದು ಚಿಕ್ಕ ಶ್ರೇಣಿಯುಂಟು. ದೇಶದ ಅತ್ಯುನ್ನತ ಶಿಖರವಾದ ಮೂಸಾಲ 2925 ಮೀ ಎತ್ತರವಾಗಿದೆ. ಬಾಲ್ಕನ್ ಶ್ರೇಣಿಗಳ ಉತ್ತರದಲ್ಲಿರುವ ಡ್ಯಾನ್ಯೂಬ್ ನದಿ ದಂಡೆಯ ಪ್ರದೇಶ ಸ್ವಲ್ಪಮಟ್ಟಿಗೆ ಎತ್ತರವಾದ ಚಪ್ಪಟೆ ನೆಲ. ದಕ್ಷಿಣದಲ್ಲಿರುವ ತ್ರೇಸಿಯನ್ ಮೈದಾನ ಮರೀಟ ನದಿಯ ಜಲೋತ್ಸಾರಣ ಪ್ರದೇಶ. ಡ್ಯಾನ್ಯೂಬ್ ಒಂದೇ ಬಲ್ಗೇರಿಯದ ನೌಕಾಯೋಗ್ಯ ನದಿ.




ವಾಯುಗುಣ: ಬಲ್ಗೇರಿಯದ ವಾಯುಗುಣದಲ್ಲಿ ಅತಿ ಶೀತೋಷ್ಣಗಳಿಲ್ಲ. ಸರಾಸರಿ ಉಷ್ಣತೆ $13^0$ಸೆ. ಜನವರಿಯಲ್ಲಿ $0^0$ಸೆ ಯಿಂದ ಜುಲೈಯ $22^0$ಸೆ ವರೆಗೆ ಉಷ್ಣತೆ ವ್ಯತ್ಯಾಸಗೊಳ್ಳುತ್ತದೆ. ಉತ್ತರದ ಪರ್ವತಶ್ರೇಣಿಗಳಲ್ಲಿ ಸ್ವಲ್ಪ ಶೈತ್ಯಾಧಿಕ್ಯತೆ ಇದೆ. ಮಳೆ ಅಷ್ಟು ಸಮರ್ಪಕವಾಗಿಲ್ಲ. ವರ್ಷಕ್ಕೆ ಸರಾಸರಿ 64 ಸೆಂಮೀ.

ಸಸ್ಯ ಹಾಗೂ ಪ್ರಾಣಿ ಸಂಪತ್ತು: ಬಲ್ಗೇರಿಯದ ಈಶಾನ್ಯದಲ್ಲಿ ಡಾಬ್ರುಜಾ ಪ್ರದೇಶ ಸ್ಟೆಪ್ಪಿ ಹುಲ್ಲುಗಾವಲು. ಇದರಿಂದ ಮುಂದಕ್ಕೆ ಡ್ಯಾನ್ಯೂಬ್ ದಿಣ್ಣೆ ಪ್ರದೇಶದ ಹುಲ್ಲುಗಾಡು ಪ್ರದೇಶವಿದೆ. ಈ ಪ್ರದೇಶದಲ್ಲಿ ನಡುನಡುವೆ ಇರುವ ಮರಗಳನ್ನು ಬಹುತೇಕ ಕಡಿದುಹಾಕಿ ನೆಲವನ್ನು ಸಾಗುವಳಿಗೆ ಬಳಸಲಾಗಿದೆ. ಬಾಲ್ಕನ್ ಪರ್ವತ ಪ್ರದೇಶದ ಕಡಿಮೆ ಎತ್ತರದ ನೆಲದಲ್ಲಿ ಅಗಲ ಎಲೆಯ ಮರಗಳ ಕಾಡುಗಳೂ ಹೆಚ್ಚು ಎತ್ತರದ ನೆಲದಲ್ಲಿ ಸೂಜಿಮೊನೆಯ ಶಂಕುಪರ್ಣಿ ಮರಗಳು ಇವೆ. ತ್ರೇಸ್ ಮೈದಾನದಲ್ಲಿ ಮಧ್ಯ ಅಕ್ಷಾಂಶ ಪ್ರದೇಶದ ಕಾಡು ಮೆಡಿಟರೇನಿಯನ್ ಪ್ರದೇಶದ ಸಸ್ಯವರ್ಗವೂ ಇವೆ. ಕಾಡುಗಳನ್ನು ಕಡಿದಿರುವುದರಿಂದ ಬಲ್ಗೇರಿಯದಲ್ಲಿ ವನ್ಯಮೃಗ ಸಂಪತ್ತು ಕಡಿಮೆಯಾಗಿದೆ. ಕರಡಿ, ತೋಳ, ನರಿ, ಅಳಿಲು, ಎಲ್ಕ್, ಕಾಡುಬೆಕ್ಕು, ದಂಶಕಗಳು ಇವೆ. ಕಪ್ಪು ಸಮುದ್ರ ಪ್ರದೇಶದಲ್ಲಿ ಮೀನು ಹೆಚ್ಚು ವ್ಯಾಪಕವಾಗಿಲ್ಲ.

ಜನಾಂಗ: ಬಲ್ಗೇರಿಯದ ಜನಸಂಖ್ಯೆಯಲ್ಲಿ ಶೇ. 90 ರಷ್ಟು ನೆರೆಯ ಬಾಲ್ಕನ್ ಹಾಗೂ ರಷ್ಯನ್ ಪ್ರದೇಶದ ಸ್ಲಾವಿಕ್ ಮತ್ತು ಬಲ್ಗರ್ ಮೂಲದವರು, ಶೇ. 6 ರಷ್ಟು ತುರ್ಕಿ, ಶೇ. 2 ರಷ್ಟು ಜಿಪ್ಸಿಗಳು ಇದ್ದಾರೆ. ಧಾರ್ಮಿಕವಾಗಿ ಶೇ. 82ರಷ್ಟು ಮಂದಿ ಕ್ರೈಸ್ತರು, ಶೇ. 12 ರಷ್ಟು ಮುಸಲ್ಮಾನರು ಮತ್ತು ಶೇ. 6 ರಷ್ಟು ಇತರರು.

ಕೃಷಿ: ಡ್ಯಾನ್ಯೂಬ್ ನದಿ, ಬಾಲ್ಕನ್ ಶ್ರೇಣಿ ನಡುವಣ ಬಯಲೇ ನಾಡಿನ ಅತ್ಯಂತ ಫಲವತ್ತಾದ ಭೂಮಿ. ಇಲ್ಲಿ ಗೋದಿ, ಮೆಕ್ಕೆಜೋಳಗಳಲ್ಲದೆ ವಾಣಿಜ್ಯ ಬೆಳೆಗಳಾದ ತಂಬಾಕು, ಸಕ್ಕರೆ ಬೀಟ್, ಸೂರ್ಯಮುಖಿ ಚೆನ್ನಾಗಿ ಬೆಳೆಯುತ್ತವೆ. ಬಾಲ್ಕನ್ ಮತ್ತು ಆ್ಯಂಟಿ ಬಾಲ್ಕನ್‌ಗಳ ನಡುವಣ ಕಣಿವೆಗೆ ಗುಲಾಬಿ ಕಣಿವೆಯೆಂದೇ ಹೆಸರಿದೆ. ಅಲ್ಲಿ ಸಿದ್ಧವಾಗುವ ಗುಲಾಬಿ, ಅತ್ತರ್ ಅಂತಾರಾಷ್ಟ್ರೀಯ ಖ್ಯಾತಿ ಪಡೆದಿದೆ. ಬಾಲ್ಕನ್ ಶ್ರೇಣಿಯ ದಕ್ಷಿಣಕ್ಕೆ ತ್ರೇಸ್ ಬಯಲಿನಲ್ಲಿ ಹರಿಯುವ ಮರಿಟ್ಸ ನದೀ ಗಾತ್ರದಲ್ಲಿ ಡ್ಯಾನ್ಯೂಬಿಗೆ ಸರಿದೂಗದಿದ್ದರೂ ಬಲ್ಗೇರಿಯಕ್ಕೆ ಅದು ಅತಿ ಮಹತ್ತ್ವದ್ದು. ಈ ಬಯಲು ಹಣ್ಣು, ತರಕಾರಿ, ದ್ರಾಕ್ಷಿ ಬೇಸಾಯಕ್ಕೆ ಹೆಸರಾಗಿದೆ. ಬತ್ತ, ಮೆಕ್ಕೆಜೋಳ, ಗೋದಿ ಬೆಳೆಯುತ್ತವೆ. ರೈ, ಬಾರ್ಲಿ, ಬಟಾಟೆ ಮೊದಲಾದವು ಬಲ್ಗೇರಿಯದ ಇತರ ಆಹಾರ ಬೆಳೆಗಳು.

ಆರ್ಥಿಕ ಸ್ಥಿತಿ: ಕೃಷಿ ಪ್ರಧಾನ ಆಲ್ಬೇನಿಯವನ್ನು ಬಿಟ್ಟರೆ ಪೂರ್ವ ಯುರೋಪಿನಲ್ಲೇ ಕೈಗಾರಿಕಾ ರಂಗದಲ್ಲಿ ಅತ್ಯಂತ ಹಿಂದುಳಿದಿದ್ದ ಬಲ್ಗೇರಿಯ ಇಂದು ಆ ಪ್ರದೇಶದಲ್ಲೇ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದೆ. ಕೈಗಾರಿಕೆ, ವಾಣಿಜ್ಯ ಎರಡನ್ನೂ ಹೆಚ್ಚು ಕಡಿಮೆ ಸಂಪೂರ್ಣವಾಗಿ ರಾಷ್ಟ್ರೀಕರಿಸಲಾಗಿದೆ.

ಖನಿಜ ಸಂಪತ್ತು: ಇಲ್ಲಿನ ವಿದ್ಯುತ್ ಉತ್ಪಾದನೆ ಸು. 2520 ಕೋಟಿ ಕಿವ್ಯಾ (ಇದರಲ್ಲಿ ಮೂರರಲ್ಲೊಂದಂಶ ಜಲವಿದ್ಯುತ್) ಕಚ್ಚಾ ತೈಲ, ನೈಸರ್ಗಿಕ ಅನಿಲ, ಲಿಗ್ನೈಟ್, ಕಲ್ಲಿದ್ದಲು, ತಾಮ್ರ, ಸೀಸ, ಸತು, ಮ್ಯಾಂಗನೀಸ್, ಬಂಗಾರ, ಕ್ರೋಮ್, ಮಾಲಿಬ್ಡಿನಂ ಇವು ಪ್ರಮುಖ ಖನಿಜಗಳು.

ಇಲ್ಲಿನ ಆಮದುಗಳಲ್ಲಿ ಮುಖ್ಯ ಯಂತ್ರೋಪಕರಣ, ಕಚ್ಚಾ ಸಾಮಗ್ರಿ, ರಾಸಾಯನಿಕಗಳು, ಗಡಿಯಾರ, ರೇಡಿಯೊ, ಕಾರು ಮತ್ತು ಮೋಟರ್ ಸೈಕಲ್. ಮುಖ್ಯ ರಫ್ತುಗಳು ತಂಬಾಕು, ಹಣ್ಣು, ಜವಳಿ, ದ್ರಾಕ್ಷಾರಸ, ಅತ್ತರ್ ಮತ್ತು ಪಾದರಕ್ಷೆ. ಇಲ್ಲಿ ಕಬ್ಬಿಣ ಮತ್ತು ಉಕ್ಕು, ಸಿಮೆಂಟ್, ರಾಸಾಯನಿಕ, ಗಡಿಯಾರ, ಪಾದರಕ್ಷೆ ಮುಂತಾದವುಗಳ ಕೈಗಾರಿಕೆಗಳಿವೆ.

ನಾಣ್ಯ: ಪ್ರಾಚೀನ ಐತಿಹಾಸಿಕ ಹೆದ್ದಾರಿಯಲ್ಲಿರುವ ಬಲ್ಗೇರಿಯದಲ್ಲಿ ಯೂಗೊಸ್ಲಾವಿಯ ಗಡಿಯಿಂದ ಟರ್ಕಿ ಗಡಿಯವರೆಗಿನ ಹೆಸರಾಂತ ರೈಲುಮಾರ್ಗವಲ್ಲದೆ ದಕ್ಷಿಣೋತ್ತರವಾಗಿಯೂ ಹಲವು ರೈಲುಮಾರ್ಗಗಳಿವೆ. ಡ್ಯಾನ್ಯೂಬ್ ನದಿ ಒಂದು ಪ್ರಮುಖ ಜಲಮಾರ್ಗ. ಯುರೋಪಿನ ಪ್ರಧಾನ ನಗರಗಳೊಡನೆ ಈ ದೇಶ ವಿಮಾನ ಸಂಪರ್ಕ ಹೊಂದಿದೆ.

ಸುಂದರ ಗಿರಿಕಂದರಗಳಿಂದಲೂ ಕಪ್ಪು ಸಮುದ್ರದ ಆಕರ್ಷಕ ದಂಡೆಯಿಂದಲೂ ಕೂಡಿದ ಈ ದೇಶದಲ್ಲಿ ಪ್ರವಾಸೋದ್ಯಮ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಪ್ರಮುಖ ನಗರಗಳು ಪ್ಲಾವ್‌ಡಿಫ್, ವಾರ್ನ, ರೂಸೇ, ಬರ್ಗಾಸ್ ಮತ್ತು ಸ್ವಾರ ಜಗಾರ. (ಪಿ.ವಿ.ಎ.)

**ಬವೇರಿಯ:** ಜರ್ಮನಿಯ ಒಂದು ರಾಜ್ಯ. ವಿಸ್ತೀರ್ಣ 70,547 ಚ.ಕಿಮೀ ಜನಸಂಖ್ಯೆ 12333000 (2002).

ಬವೇರಿಯದ ಮೇಲ್ಮೈಲಕ್ಷಣವನ್ನು ಬವೇರಿಯನ್ ಆಲ್ಪ್ಸ್ ವಲಯ ಹಾಗೂ ಪ್ರಸ್ಥಭೂಮಿ ಎಂದು ವಿಂಗಡಿಸಿದ್ದಾರೆ. ಇದು ಪರ್ವತಗಳ ಪ್ರದೇಶ. ದಕ್ಷಿಣದಲ್ಲಿ ಆಲ್ಪ್ಸ್ ಪರ್ವತ, ಉತ್ತರದಲ್ಲಿ ಫ್ರಾಂಕನ್ ವಾಲ್ಡ್ ಮತ್ತು ಈಶಾನ್ಯದಲ್ಲಿ ಬೊಹೀಮಿಯನ್ ಅರಣ್ಯ ಪ್ರದೇಶ ಇವೆ. ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಡ್ಯಾನ್ಯೂಬ್ ನದಿ ಬವೇರಿಯವನ್ನು ಸ್ಥೂಲವಾಗಿ ಉತ್ತರ ಮತ್ತು ದಕ್ಷಿಣ ಪ್ರದೇಶವಾಗಿ ವಿಭಾಗಿಸುತ್ತದೆ. ವಿಶೇಷವಾಗಿ ಡ್ಯಾನ್ಯೂಬ್ ನದಿಯ ದಕ್ಷಿಣಕ್ಕಿರುವ ಬವೇರಿಯದ ಒಂದು ದೊಡ್ಡ ಭಾಗ ಸಮುದ್ರ ಪಾತಳಿಯಿಂದ ಸರಾಸರಿ 487.5 ಮೀ ಎತ್ತರವಿರುವ ಉನ್ನತ ಪ್ರಸ್ಥಭೂಮಿ. ಈ ಪ್ರದೇಶವನ್ನು ಅನೇಕ ದೊಡ್ಡ ಹಳ್ಳಿಗಳೂ ಸಾಮಾನ್ಯ ಎತ್ತರವಿರುವ ಗುಡ್ಡಗಳೂ ಸುತ್ತುವರಿದಿವೆ. ಆಸ್ಟ್ರಿಯದ ದಕ್ಷಿಣ ಗಡಿಯಾಗಿರುವ ಅಲ್ಗಾವರ್ ಆಲ್ಪ್ಸ್ ಬವೇರಿಯನ್ ಆಲ್ಪ್ಸ್ ಮತ್ತು ಸಾಲ್ಜಬರ್ಗರ್ ಆಲ್ಪ್ಸ್ ಪರ್ವತ ಶ್ರೇಣಿಗಳು ನಾರಿಕ್ ಆಲ್ಪ್ಸ್‌ನ ಒಂದು ಶಾಖೆ. ಆಲ್ಪ್ಸ್ ಪರ್ವತಗಳ ಕವಲುಗಳು ಪ್ರಸ್ಥಭೂಮಿಯೊಳಕ್ಕೆ ಚಾಚಿವೆ. ಈ ಪರ್ವತಶ್ರೇಣಿಗಳಲ್ಲಿ ಹೆಚ್ಚು ಎತ್ತರವಿರುವ ಟ್ಸುಗ್‌ಸ್ಪಿಟ್ಸೆ ಸು. 2963 ಮೀ ವಾಟ್ಸ್‌ಮಾನ್ ಸು. 3016 ಮೀ ಹಾಗೂ ಹೊಕ್ ಫೋಗೆಲ್ ಮತ್ತು ಮೆಡ್ಲಗಾಬಲ್ ಶಿಖರಗಳಿವೆ. ಇದರ ಉತ್ತರಕ್ಕೆ ಚೆಕೊಸ್ಲೊವಾಕಿಯ ಗಡಿ ಬೊಹೀಮಿಯನ್ ಅರಣ್ಯ ಮತ್ತು ಆಗ್ನೇಯದಿಂದ ವಾಯವ್ಯದತ್ತ ಹಬ್ಬಿ ಇಲರ್ ನದಿಯ ಕೊಳ್ಳದಲ್ಲಿ ಅಂತ್ಯಗೊಳ್ಳುವ ಬೋಹೀಮಿಯನ್ ಪರ್ವತ ಶ್ರೇಣಿಯಿಂದ ರಚಿತವಾಗಿದೆ. ರಾಚೆಲ್ ಮತ್ತು ಅರ್ಬರ್ ಇಲ್ಲಿನ ಅತಿ ಎತ್ತರದ ಶಿಖರಗಳು. ಬವೇರಿಯದ ವಾಯವ್ಯ ಪರ್ವತಗಡಿ ಮೇನ್ ನದಿಯ ಉತ್ತರಕ್ಕೆ ಕಾಡಿನಿಂದ ಕೂಡಿರುವ ಮರಳುಗಲ್ಲಿನ ಸ್ಪೈಗರ್‌ವಾಲ್ಡ್ ಶ್ರೇಣಿ ಹಾಗೂ ಪಶ್ಚಿಮದ ಗಡಿ ಸ್ಟೇಬಿತನ್ ಶ್ರೇಣಿಗಳಿಂದ ಕೂಡಿದೆ. ಬವೇರಿಯನ್ ಆಲ್ಪ್ಸ್ ಕೆಲವು ಸರೋವರಗಳನ್ನೊಳಗೊಂಡ ಸುಂದರ ಪ್ರದೇಶ.

ಬವೇರಿಯ ಮುಖ್ಯವಾಗಿ ಡ್ಯಾನ್ಯೂಬ್ ಮತ್ತು ಮೇನ್ ನದಿಗಳ ಜಲಾನಯನ ಪ್ರದೇಶದಂತಿದೆ. ಈ ಎರಡು ನದಿಗಳನ್ನು ನೌಕಾಸಂಚಾರ ಸೌಲಭ್ಯಕ್ಕಾಗಿ ಲುಡ್‌ವಿಕ್ ಕಾಲುವೆಯಿಂದ ಸಂಪರ್ಕಿಸಿದೆ. ಡ್ಯಾನ್ಯೂಬ್ ನದಿ ಬವೇರಿಯದ ಬಹುಭಾಗಕ್ಕೆ ನೀರಾವರಿ ಸೌಲಭ್ಯಗಳನ್ನೊದಗಿಸುತ್ತದೆ. ಬವೇರಿಯದ ಮಧ್ಯ ಪಶ್ಚಿಮದಿಂದ ಪೂರ್ವಕ್ಕೆ ಹರಿದು ರಾಜ್ಯವನ್ನು ದಾಟುವ ಡ್ಯಾನ್ಯೂಬನ್ನು ದಕ್ಷಿಣದಿಂದ ನಾರಿಕ್, ಆಲ್ಪ್ಸ್‌ನಲ್ಲಿ ಹುಟ್ಟುವ ಇಲರ್, ಈಸಾರ್, ಲೆಖ್ ಮತ್ತು ಇನ್ ನದಿಗಳೂ ಉತ್ತರದಿಂದ ವಾರ್ನಿಟ್ಜ, ನಾಪ್ ಮತ್ತು ರೀಗೆನ್ ನದಿಗಳೂ ಕೂಡುತ್ತವೆ. ಅದು ರೈನ್ ನದಿಯನ್ನು ಸೇರುವೆಡೆಯಿಂದ ಹ್ಯಾಂಬರ್ಗ್ ವರೆಗೂ ಸಂಚಾರಯೋಗ್ಯವಾಗಿದೆ.

ಸಾಮಾನ್ಯವಾಗಿ ಮಧ್ಯ ಯುರೋಪಿನ ಖಂಡಾಂತರ ವಾಯುಗುಣವಿರುವ ಬವೇರಿಯನ್ ಪ್ರಸ್ಥಭೂಮಿಯಲ್ಲಿ ಚಳಿ ಹೆಚ್ಚು. ಬೇಸಗೆ ತಂಪು, ರೈನ್ ಹಾಗೂ ನೆಕರ್, ಮೇನ್ ಮೋಸಲ್ ಕಣಿವೆಗಳಲ್ಲಿ ಉಷ್ಣತೆ ಹೆಚ್ಚು. ಬೇಸಗೆಯ ಸರಾಸರಿ ಉಷ್ಣತೆ $19^0$ ಸೆ. ಈ ಬಗೆಯ ಹವಾಗುಣ ದ್ರಾಕ್ಷಿಬೆಳೆಗೆ ಬಲು ಅನುಕೂಲಕರ.

ಬವೇರಿಯದ ಕೃಷಿಯೋಗ್ಯ ಭೂಮಿಯಲ್ಲಿ ಅರ್ಧಕ್ಕಿಂತ ಹೆಚ್ಚುಭಾಗ ಬೇಸಾಯಕ್ಕೆ, ಅದರ ಕಾಲುಭಾಗ ತೋಟ ಮತ್ತು ಹುಲ್ಲುಗಾವಲುಗಳಿಗೆ ಮೀಸಲಾಗಿದೆ. ರೈ, ಓಟ್ಸ್, ಬೀಟ್ ಮತ್ತು ಆಲೂಗೆಡ್ಡೆ ಹಾಗೂ ತರಕಾರಿ ಬೆಳೆಸುತ್ತಾರೆ. ಹಣ್ಣುಗಳಲ್ಲಿ ದ್ರಾಕ್ಷಿ ಬೆಳೆ ಹೆಚ್ಚು. ಪಶುಪಾಲನೆ ರೈತರ ಎರಡನೆ ಮುಖ್ಯ ಕಸಬು, ಆಲ್ಗಾನ್ ಜರ್ಮನಿಯ ಬೆಣ್ಣೆ ಮತ್ತು ಗಿಣ್ಣುಗಳ ಉತ್ಪಾದನಾಕೇಂದ್ರ. ಹಂದಿ ಮತ್ತು ಕೋಳಿ ಸಾಕಣೆಯುಂಟು. ಬವೇರಿಯದ ಅರಣ್ಯಗಳಲ್ಲಿ ಸ್ಪ್ರೂಸ್ ಮತ್ತು ಪೈನ್ ಮರಗಳು ಪ್ರಧಾನವಾಗಿವೆ. ಮಣ್ಣು ಫಲವತ್ತಾಗಿರದ ಕಡೆಗಳಲ್ಲಿ ಅರಣ್ಯಗಳನ್ನು ನಿರ್ಮಿಸುವುದಕ್ಕೆ ಪ್ರಯತ್ನ ನಡೆಯುತ್ತಿದೆ.

ಬವೇರಿಯದ ಆರ್ಥಿಕ ಅಭಿವೃದ್ಧಿಗೆ ಅದರ ಒಟ್ಟು ಉತ್ಪನ್ನದ ಅರ್ಧಕ್ಕೂ ಹೆಚ್ಚು ಕೈಗಾರಿಕೆ ಮತ್ತು ಕರಕುಶಲ ಉತ್ಪಾದನೆಗಳೂ ಉಳಿದದ್ದು ವ್ಯಾಪಾರ, ಸಾರಿಗೆ ಮತ್ತು ಸಾರ್ವಜನಿಕ ಸೇವೆಗಳೂ ಕೃಷಿ ಮತ್ತು ಆಸ್ತಿಗಳೂ ಕಾರಣವಾಗಿವೆ. ಎರಡನೆಯ ಮಹಾಯುದ್ಧದ ಅನಂತರ ಕೈಗಾರಿಕಾ ಅಭಿವೃದ್ಧಿಗಾಗಿ ಮಾಡಿದ ಪ್ರಯತ್ನಗಳಿಂದಾಗಿ ಬವೇರಿಯದಲ್ಲಿ ಜರ್ಮನಿಯ ಉಳಿದ ಭಾಗಗಳಿಗಿಂತ ಕೈಗಾರಿಕೆಗಳ ಬೆಳವಣಿಗೆ ಹೆಚ್ಚು ಪ್ರಮಾಣದಲ್ಲಾಯಿತು. ಮ್ಯೂನಿಕ್, ನ್ಯೂರೆಂಬರ್ಗ್, ಆಗ್ಸ್‌ಬರ್ಗ್‌ಗಳಲ್ಲಿ ಹಾಗೂ ಇತರ ನಗರಗಳಲ್ಲಿ ವಿವಿಧ ಕೈಗಾರಿಕೆಗಳಿದ್ದು ವಿದ್ಯುತ್ ಉಪಕರಣಗಳು, ರಾಸಾಯನಿಕಗಳು, ಬಟ್ಟೆ ಆಹಾರ ಸಂಸ್ಕರಣೆ ಮುಂತಾದವು ಇವೆ. ಫ್ರಾಂಕೋನಿಯದಲ್ಲಿ ಬಟ್ಟೆ ಮತ್ತು ಕುಂಭಕಲೆಯ ಕೈಗಾರಿಕೆಗಳುಂಟು, ಬವೇರಿಯದಲ್ಲಿ ಪ್ರವಾಸೋದ್ಯಮ ವಿಶೇಷ ಮಹತ್ತ್ವ ಪಡೆದಿರುವ ಉದ್ದಿಮೆ.

ಬವೇರಿಯದಲ್ಲಿ ರೈಲು ಸಾರಿಗೆ 19ನೆಯ ಶತಮಾನದ ಉತ್ತರಾರ್ಧದಲ್ಲಿ ಅಭಿವೃದ್ಧಿಗೊಂಡಿತು. 1835ರಲ್ಲಿ ಅದು ಪ್ರಾರಂಭವಾದದ್ದು. ಮ್ಯೂನಿಕ್‌ನಿಂದ ಫ್ರಾಂಕ್‌ಫರ್ಟ್, ಬರ್ಲಿನ್ ಮತ್ತು ಸಾಲ್ಜ್‌ಬರ್ಗ್‌ಗಳಿಗೆ ಹೆದ್ದಾರಿಗಳಿವೆ. ಬ್ಯಾರಿಬರ್ಗ್‌ದವರೆಗೆ ಮೇನ್ ನದಿಮೂಲಕ ಜಲಸಂಚಾರ ಉಂಟು. ಡ್ಯಾನ್ಯೂಬ್ ನದಿಯಲ್ಲಿ ಕೆಲ್ ಹೈಮ್ ವರೆಗೂ ಹಡಗುಗಳು ಹೋಗ ಬಲ್ಲವು. ಮ್ಯೂನಿಕ್ ಮತ್ತು ನ್ಯೂರೆಂಬರ್ಗ್‌ಗಳಲ್ಲಿ ವಿಮಾನ ನಿಲ್ದಾಣಗಳಿವೆ.

ಬವೇರಿಯದ ರಾಜಧಾನಿ ಮ್ಯೂನಿಕ್, ವಿಸ್ತೀರ್ಣದಲ್ಲಿ ಇಡೀ ರಾಜ್ಯಕ್ಕೆ ದೊಡ್ಡದೂ ಹಾಗೇ ಜರ್ಮನಿಯಲ್ಲಿ ಮೂರನೆಯ ಮಹಾನಗರ. ಇದರ ಜನಸಂಖ್ಯೆ 1893715 (2002). ಕೈಗಾರಿಕೆ ಮತ್ತು ವ್ಯಾಪಾರಗಳ ಮುಖ್ಯ ಕೇಂದ್ರ, ವಿದ್ಯುತ್ ಉಪಕರಣಗಳು, ಸೂಕ್ಷ್ಮ ಯಂತ್ರೋಪಕರಣಗಳು, ವಿಮಾನ ಮತ್ತು ಇತರ ವಿವಿಧ ಆಧುನಿಕ ಯಂತ್ರಗಳು ಇಲ್ಲಿ ತಯಾರಾಗುತ್ತವೆ. ಬ್ಯಾಂಕ್ ವ್ಯವಹಾರ, ವಿಮೆ ಮತ್ತು ಭೋಜನಕಲೆಗಳಿಗೆ (ಪಾಕಶಾಸ್ತ್ರ) ಪ್ರಸಿದ್ಧ. ಜರ್ಮನಿಯ ಅತಿ ದೊಡ್ಡ ವಿಶ್ವವಿದ್ಯಾಲಯ, ವಸ್ತುಸಂಗ್ರಹಾಲಯ ಮತ್ತು ಚಿತ್ರಶಾಲೆಗಳನ್ನು ಹೊಂದಿರುವ ಮ್ಯೂನಿಕ್ ಕಲಾಕೇಂದ್ರವೂ ಆಗಿದೆ. 1972ರಲ್ಲಿ ಒಲಿಂಪಿಕ್ ಸ್ಪರ್ಧೆಗಳು ಅಲ್ಲಿ ನಡೆದವು. ನ್ಯೂರೆಂಬರ್ಗ್, ಆಗ್ಸ್‌ಬರ್ಗ್, ರೀಗೆನ್ಸ್‌ಬರ್ಗ್ ಮತ್ತು ವರ್ಟ್ಸ್‌ಬರ್ಗ್ ಈ ರಾಜ್ಯದ ಕೆಲವು ದೊಡ್ಡ ನಗರಗಳು. (ಜಿ.ಕೆಯು.)

**ಬಸಾಲ್ಟ್:** ಲಾವಾ ಪ್ರವಾಹದಿಂದ ಉಂಟಾದ ಲ್ಯಾಬ್ರಡೊರೈಟ್ ಮತ್ತು ಪೈರೊಕ್ಸೀನ್ ಫಲಕಗಳಿಂದಾದ ಮತ್ತು ಸ್ತಂಭ ರಚನೆಯುಳ್ಳ ಕಡುಬಣ್ಣದ ಅಗ್ನಿಶಿಲೆ. ಭೂಮಿಯ ಮೇಲೆ ಸಾಮಾನ್ಯವಾಗಿ ಕಾಣಬರುವ ಶಿಲೆಗಳೆಲ್ಲವನ್ನೂ ಎರಡು ಮುಖ್ಯ ವರ್ಗಗಳಾಗಿ ವಿಂಗಡಿಸಲಾಗಿದೆ. ಒಂದು, ಅಧಿಕ ಸಿಲಿಕಾಂಶವನ್ನೊಳಗೊಂಡ ಹರಳು ಹರಳಾಕಾರದ, ತಿಳಿಬಣ್ಣದ ಗ್ರಾನೈಟ್ ವರ್ಗ. ಇನ್ನೊಂದು, ಕನಿಷ್ಠ ಸಿಲಿಕಾಂಶ (ಶೇ. 45–50) ಒಳಗೊಂಡಿರುವ ಕಪ್ಪು ಛಾಯೆಯ ಗಡುಸಾದ ಶಿಲಾವರ್ಗ. ಇದೇ ಬಸಾಲ್ಟ್. ಈ ವರ್ಗದ ಶಿಲೆ ಪಶ್ಚಿಮದಲ್ಲಿ ಮುಂಬಯಿಯಿಂದ ಹಿಡಿದು ಪೂರ್ವದಲ್ಲಿ ರಾಜಮಹೇಂದ್ರಿಯವರೆಗೆ, ದಕ್ಷಿಣದಲ್ಲಿ ಬೆಳಗಾವಿಯಿಂದ ಉತ್ತರದಲ್ಲಿ ವಿಂಧ್ಯಪರ್ವತ ಪ್ರದೇಶದವರೆಗೆ ವ್ಯಾಪಿಸಿದೆ. ದಖನ್ ಶಿಲಾಸ್ತೋಮವೆಂದು ಇದು ಪ್ರಸಿದ್ಧಿಯಾಗಿದೆ.

ಬಸಾಲ್ಟ್ ಶಿಲೆಯನ್ನು ಮೊದಲಿಗೆ ಇಥಿಯೊಪಿಯ ದೇಶದಲ್ಲಿ ಗುರುತಿಸಿದ ಅಲ್ಲಿಯ ಜನರು ಇದನ್ನು ಬಸಲ್ ಎಂದು ಕರೆಯುತ್ತಿದ್ದುದರಿಂದ ಈ ಶಿಲೆಗೆ ಬಸಾಲ್ಟ್ ಎಂದು ನಾಮಕರಣವಾಯಿತೆಂದೂ ಪ್ರತೀತಿ. ಕಲ್ಲು ನೋಡುವುದಕ್ಕೆ ಕಪ್ಪು. ಗುಲ್ಬರ್ಗ, ಬೆಳಗಾವಿ, ಬಿಜಾಪುರ, ಬೀದರ್ ಜಿಲ್ಲೆಗಳ ಬಹುಭಾಗ ಈ ಕಲ್ಲಿನಿಂದ ಆವರಿಸಿದೆ. ಗಾಳಿ ಮಳೆಗಳ ಹೊಡೆತಕ್ಕೆ ಸಿಕ್ಕಾಗ ಮಾತ್ರ ಕಲ್ಲು ಕಂದುಬಣ್ಣದ ಛಾಯೆ ಪಡೆಯುತ್ತದೆ. ಹರಳು ಲಕ್ಷಣವನ್ನು ತೋರಿಸದೆ ಕಪ್ಪು ಗಾಜಿನಂತಿರುವ ಬಸಾಲ್ಟಿಗೆ ಟಾಕಿಲೈಟ್ ಎಂದು ಹೆಸರು. ಸಾಮಾನ್ಯವಾಗಿ ಕಪ್ಪುಬಣ್ಣದ ಸೂಕ್ಷ್ಮ ಹರಳುಗಳಿರುವ ಅಗ್ನಿಶಿಲೆಗಳೆಲ್ಲವನ್ನೂ ಬಸಾಲ್ಟ್ ಶಿಲೆಗಳೆಂದು ಕರೆಯುವುದು ವಾಡಿಕೆ.

ಈಚಿಗಿನ ಅಗ್ನಿಪರ್ವತಗಳ ಬಾಯಿಯಿಂದ ಹೊರಹರಿಯುತ್ತಿರುವ ಕಾದ ಲಾವಾ ಪ್ರವಾಹ ಬಸಾಲ್ಟಿನಿಂದ ಕೂಡಿರುತ್ತದೆ. ಈ ಬಗೆಯ ಶಿಲಾಪಾಕ ಅಗ್ನಿಪರ್ವತದಿಂದ ಹೊರ ಹರಿಯುವಾಗ ಪ್ರವಾಹದಂತೆ ಹರಿದು ನುಣುಚಿಕೊಂಡು ಹಗ್ಗದ ಆಕಾರ ಪಡೆದಿರುತ್ತದೆ. ಶಿಲೆ ಆರುವಾಗ ಅದರೊಳಗೆ ಅಡಗಿದ್ದ ಗಾಳಿ ಹೊರಬಂದು ಉಕ್ಕಿನ ನೊರೆಯಂತೆ ನೂರಾರು ರಂಧ್ರಗಳಿರುವ ಕಲ್ಲು ಫಲಿಸುತ್ತದೆ. ರಂಧ್ರಗಳಲ್ಲಿ ಕ್ರಮೇಣ ಬಗೆ ಬಗೆ ಬಣ್ಣದ ಖನಿಜಗಳು ರೂಪುಗೊಂಡು, ರಮಣೀಯ ಆಕೃತಿಗಳನ್ನು ತೋರಿಸುತ್ತವೆ. ಪುಣೆ ಮತ್ತು ಮುಂಬಯಿ ನಡುವೆ ರೈಲುಮಾರ್ಗ ಕೊರೆಯುವಾಗ ಹೊರಬಿದ್ದ ಶಿಲೆಗಳಲ್ಲಿ ಈ ಬಗೆಯ ಸುಂದರ ಸಿಯಾಲೈಟ್ ಹರಳುಗಳನ್ನೊಳಗೊಂಡ ಬಸಾಲ್ಟ್ ಶಿಲೆಯನ್ನು ಕಾಣಬಹುದು.

ಬಸಾಲ್ಟ್ ಸಾಮಾನ್ಯವಾಗಿ ಭೂಮಿಯಲ್ಲಿ ಸೀಳುಗಳ ಮೂಲಕ ಹೊರಬಿದ್ದು, ದಟ್ಟವಾಗಿ ಭೂಮಿಯ ಮೇಲೆ ಹರಿದು ಬಹು ವಿಸ್ತಾರವಾದ ಪ್ರದೇಶವನ್ನು ಆವರಿಸಿರುವ ಶಿಲಾವರ್ಗ. ಭಾರತದ ದಖನಿನ ಶಿಲಾಪ್ರವಾಹ 500,000 ಚ.ಕಿಮೀ ಪ್ರದೇಶ ಆವರಿಸಿಕೊಂಡು ಭೂಮಿಯ ಅತಿ ವಿಸ್ತಾರ ಬಸಾಲ್ಟ್ ಶಿಲಾಪ್ರವಾಹವೆಂದು ಹೆಸರುವಾಸಿಯಾಗಿದೆ. ಈ ಪ್ರವಾಹ 3,000 ಮೀ ಮಂದ ಹಾಗೂ ಪದರ ಪದರವಾಗಿ ಒಂದರ ಮೇಲೊಂದು ಜೋಡಿಸಿದಂತೆ ಶೇಖರವಾಗಿದೆ. ಕೆಲವೊಮ್ಮೆ ಈ ಶಿಲೆಗಳು ತಾಪಕಳೆದು ಆರುವಾಗ ಸ್ತಂಭಗಳಂತೆ ಬಿಟ್ಟುಕೊಳ್ಳುವುದುಂಟು. ದಕ್ಷಿಣ ಕನ್ನಡ ಜಿಲ್ಲೆಯ ಮಲ್ಪೆ ಬಂದರಿನ ಬಳಿ ಇರುವ ಸೇಂಟ್ ಮೇರಿ ದ್ವೀಪಗಳಲ್ಲಿ ಈ ಬಗೆಯ ಸ್ತಂಭಾಕಾರದ ಬಸಾಲ್ಟ್ ರಾಕ್ಷಸನ ಮೆಟ್ಟಲು (ಜಯಂಟ್ಸ್ ಕಾಸ್‌ವೇ) ಎಂದು ಪ್ರಸಿದ್ಧಿ ಹೊಂದಿದೆ. ಭೂಮಿಯಲ್ಲಿ ಗುರುತಿಸಿರುವ ಎಲ್ಲ ಬಗೆಯ ಅಗ್ನಿಶಿಲೆಗಳಿಗೂ ಬಸಾಲ್ಟ್ ಮೂಲ. *

**ಬಸ್ತಾರ್:** ಚತ್ತೀಸಘರ್ ರಾಜ್ಯದ ಅತ್ಯಂತ ದಕ್ಷಿಣ ಭಾಗದಲ್ಲಿರುವ ಒಂದು ಜಿಲ್ಲೆ. ಉ.ಅ. $17^{0}46'$–$20^{0}14'$ ಮತ್ತು ಪೂ.ರೇ. $80^{0}15'$–$82^{0}15'$ ನಡುವೆ ವ್ಯಾಪಿಸಿದೆ. ಬ್ರಿಟಿಷ್ ಭಾರತದಲ್ಲಿ ಬಸ್ತಾರ್ ಒಂದು ಸಂಸ್ಥಾನವಾಗಿತ್ತು. ಸಂಸ್ಥಾನಗಳನ್ನು ವಿಲೀನಗೊಳಿಸಿದಾಗ ಬಸ್ತಾರ್ ಮತ್ತು ಕಾಂಕೇರ್ ಸಂಸ್ಥಾನಗಳನ್ನು ಸೇರಿಸಿ ಬಸ್ತಾರ್ ಜಿಲ್ಲೆಯನ್ನು ರಚಿಸಲಾಯಿತು. ಈ ಜಿಲ್ಲೆಯ ವಿಸ್ತೀರ್ಣ 39,060 ಚ.ಕಿಮೀ. ಜನಸಂಖ್ಯೆ 13,02,253. ಜಿಲ್ಲೆಯ ಆಡಳಿತ ಕೇಂದ್ರ ಜಗದಾಲ್‌ಪುರ.

ಜಿಲ್ಲೆಯ ದಕ್ಷಿಣ ಭಾಗದ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಬೈಲದಿಲ್ಲ ಶ್ರೇಣಿ ಹಬ್ಬಿದೆ. ಇಲ್ಲಿ ಕಬ್ಬಿಣ ಅದಿರಿನ ನಿಕ್ಷೇಪಗಳಿವೆ. ಈ ಶ್ರೇಣಿಯ ಪಶ್ಚಿಮಕ್ಕಿರುವ ನೆಲ ಗೋದಾವರಿ ನದಿ ಕಡೆಗೆ ಇಳಿಜಾರಾಗಿದೆ. ಜಿಲ್ಲೆಯ ಪೂರ್ವಭಾಗ ಸ್ಥೂಲವಾಗಿ ಪ್ರಸ್ಥಭೂಮಿಯಾಗಿದೆ. ಇದರ ಎತ್ತರ 457–610 ಮೀ. ಜಗದಾಲ್‌ಪುರ ಇರುವುದು ಈ ಭಾಗದಲ್ಲೇ. ಪಕ್ಕದ ಒರಿಸ್ಸದ ಕೋರಾಪುಟ್ ಜಿಲ್ಲೆಯಿಂದ ಇಲ್ಲಿಗೆ ಇಂದ್ರಾವತಿ ನದಿ ಹರಿದು ಬರುತ್ತದೆ. ಇದು ಜಗದಾಲ್‌ಪುರದ ಉತ್ತರದಲ್ಲಿ ಸಾಗಿ ಜಗದಾಲ್‌ಪುರದ ಪಶ್ಚಿಮಕ್ಕೆ ಸು. 96 ಕಿಮೀ ದೂರದಲ್ಲಿ ಚಿತ್ರಕೋಟ್ ಬಳಿ ಪ್ರಸ್ಥಭೂಮಿಯನ್ನು ಬಿಟ್ಟು ಮುಂದೆ ಹರಿಯುತ್ತದೆ. ಇದು ಪ್ರಸ್ಥಭೂಮಿಯಿಂದ ಇಳಿಯುವ ಎಡೆಯಲ್ಲಿ ಒಂದು ಸುಂದರ ಜಲಪಾತವಿದೆ. ಈ ನದಿ ಪಶ್ಚಿಮಾಭಿಮುಖವಾಗಿ ಮುಂದುವರಿದು ಜಿಲ್ಲೆಯ ಪಶ್ಚಿಮಗಡಿಯಲ್ಲಿ ಸ್ವಲ್ಪ ದೂರ ಗಡಿ ಎಲ್ಲೆಯಾಗಿ ಹರಿದು ದಕ್ಷಿಣಕ್ಕೆ ತಿರುಗಿ ಮುಂದೆ ಗೋದಾವರಿಯನ್ನು ಸೇರಿಕೊಳ್ಳುತ್ತದೆ. ಜಿಲ್ಲೆಯ ಈಶಾನ್ಯ ಭಾಗದಲ್ಲಿ ಮಹಾನದಿ ಹರಿದು ಗಡಿಯನ್ನು ದಾಟಿ ಮುಂದುವರಿಯುತ್ತದೆ.

ಜಿಲ್ಲೆಯ ಬಹುಭಾಗ ಅರಣ್ಯಾವೃತ. ಶೇ. 10ಕ್ಕಿಂತ ಕಡಿಮೆ ಭೂಮಿ ಸಾಗುವಳಿಗೆ ಒಳಪಟ್ಟಿದೆ. ಜಿಲ್ಲೆಯ ಅರಣ್ಯಸಂಪತ್ತು ಯಥೇಚ್ಛವಾಗಿದೆ. ಇಲ್ಲಿಯ ಅರಣ್ಯಗಳಲ್ಲಿ ತೇಗ ಮತ್ತು ಸಾಲ ವೃಕ್ಷಗಳಿವೆ. ಜಿಲ್ಲೆಯ ಪ್ರಮುಖ ಬೆಳೆಗಳು ಬತ್ತ, ಜೋಳ, ಸಜ್ಜೆ. ಈ ಜಿಲ್ಲೆಯ ಜನರಲ್ಲಿ ಶೇ. 66ರಷ್ಟು ಮಂದಿ ಗೋಂಡ್ ಆದಿವಾಸಿಗಳು. ಹಲ್ಬಿಗಳೂ ಇದ್ದಾರೆ. ಈ ಜನ ಅರಣ್ಯಗಳಿಂದ ಕಟ್ಟಿಗೆ, ಮೇಣ, ಜೇನು ಮುಂತಾದುವನ್ನು ಸಂಗ್ರಹಿಸಿ ಮಾರಾಟಮಾಡಿ, ಬೇಟೆಯಾಡಿ ಜೀವಿಸುತ್ತಾರೆ. ಜಿಲ್ಲೆಯಲ್ಲಿ ಕಬ್ಬಿಣದ ಅದಿರಲ್ಲದೆ ಅಭ್ರಕವೂ ಸಿಗುತ್ತದೆ.

ಈ ಜಿಲ್ಲೆಯ ಆಡಳಿತ ಕೇಂದ್ರ ಜಗದಾಲ್‌ಪುರ. ಜಿಲ್ಲೆಗೆ ಹೆಸರು ನೀಡಿರುವ ಬಸ್ತಾರ್ ಗ್ರಾಮ ಜಗದಾಲ್‌ಪುರಕ್ಕೆ ಸು. 19 ಕಿಮೀ ವಾಯವ್ಯದಲ್ಲಿದೆ. ಜಿಲ್ಲೆಯ ಇತರ ಪ್ರಮುಖ ಸ್ಥಳಗಳು ಕಾಂಕೇರ್ (1085,6) ಮತ್ತು ಕಿರಾಂದುಲ್ (15,710). ಬಸ್ತಾರ್ ಜಿಲ್ಲೆಯ ತಹಸೀಲುಗಳು ಭಾನುಪ್ರತಾಪಪುರ, ಕಾಂಕೇರ್, ನಾರಾಯಣಪುರ, ಕೊಂಡಗಾಂವ್, ಬಿಜಾಪುರ, ದಾಂತೇವಾರ, ಜಗದಾಲ್‌ಪುರ ಮತ್ತು ಕೋಂಟಾ. *

**ಬಹಮಾಸ್:** ಉತ್ತರ ಅಟ್ಲಾಂಟಿಕ್ ಸಾಗರದ ಪಶ್ಚಿಮದಲ್ಲಿರುವ ಸು. 3000 ಸಣ್ಣಪುಟ್ಟ ಹವಳ ದ್ವೀಪಗಳ ಸಮೂಹ. ಫ್ಲಾರಿಡದ ಪೂರ್ವತೀರದಿಂದ 80 ಕಿಮೀ ದೂರದಲ್ಲಿದೆ. ಉ. ಅ. $20^{0}50'$–$27^{0}25'$ ಮತ್ತು ಪೂ. ರೇ. $72^{0}37'$–$80^{0}30'$ ನಡುವೆ ಕ್ಯೂಬದ ಈಶಾನ್ಯ ದಿಕ್ಕಿನವರೆಗೆ 800 ಕಿಮೀ ವ್ಯಾಪ್ತಿಯಲ್ಲಿ ಹರಡಿದೆ. ಸು. 20 ದ್ವೀಪಗಳಲ್ಲಿ ಮಾತ್ರ ಜನವಸತಿ ಇದೆ. ಗ್ರೇಟ್ ಅಬಕೊ, ಐಲೂತರ, ಅಂಡ್ರಸ್, ಸಾನ್ ಸಾಲ್ವಡಾರ್, ಗ್ರಾಂಡ್ ಬಹಮಾಸ್, ನ್ಯೂಪ್ರಾವಿಡೆನ್ಸ್, ಗ್ರೇಟ್ ಇಕ್ಸೂಮ, ಲಾಂಗ್ ಐಲ್ಯಾಂಡ್, ಕ್ಯಾಟ್ ಐಲ್ಯಾಂಡ್, ಅಕ್ಲಿನ್ಸ್, ಮೇಗ್ವಾನ ಮತ್ತು ಇನಾಗ್ವ ಮುಖ್ಯ ದ್ವೀಪಗಳು. ಈ ಪೈಕಿ ನ್ಯೂ ಪ್ರಾವಿಡೆನ್ಸ್ ಮತ್ತು ಗ್ರಾಂಡ್ ಬಹಾಮ ದ್ವೀಪಗಳಲ್ಲಿ ಒಟ್ಟು ಜನಸಂಖ್ಯೆಯ ಐದನೆಯ ನಾಲ್ಕು ಭಾಗ (4/5) ನೆಲೆಸಿದೆ. ಒಟ್ಟು ವಿಸ್ತೀರ್ಣ 13.939 ಚ.ಕಿಮೀ. ಜನಸಂಖ್ಯೆ 3,07,451 (2009). ರಾಜಧಾನಿ ನಾಸೊ. ಜನಸಂಖ್ಯೆ 1,71,542 (2002).




ಹಿತಕರ ವಾಯುಗುಣ ಈ ದ್ವೀಪಗಳ ಒಂದು ಮುಖ್ಯ ಆಕರ್ಷಣೆ. ವರ್ಷದ ಸರಾಸರಿ ಉಷ್ಣಾಂಶ ಚಳಿಗಾಲದಲ್ಲಿ $22^{0}$ಸೆ. ಬೇಸಗೆ ಕಾಲದಲ್ಲಿ $29^{0}$ಸೆ.ವರ್ಷದ ಸರಾಸರಿ ಮಳೆ ಸು. 114 ಸೆಂಮೀ. ಸಣ್ಣಕಲ್ಲುಗಳ ತೆಳುಪದರದ ಮೇಲ್ಮೈ. ಹೀಗಾಗಿ ಈ ದ್ವೀಪಗಳ ನೆಲ ಫಲವತ್ತಾಗಿಲ್ಲ. ಅನೇಕ ದ್ವೀಪಗಳಲ್ಲಿ ಪೀತದಾರು ಮರಗಳ ಕಾಡುಗಳಿವೆ. ಬಾಳೆಹಣ್ಣು, ಅನಾನಸ್, ಟೊಮಾಟೊ, ಜಂಬೀರ ಜಾತಿಯ ವಿವಿಧ ಫಲಗಳು, ಸೌತೇಕಾಯಿ ಇಲ್ಲಿಯ ಮುಖ್ಯ ಬೆಳೆಗಳು. ದ್ವೀಪದ ಜನರಿಗೆ ಬೇಕಾಗುವ ಆಹಾರ, ಮಾಂಸ ಇತ್ಯಾದಿಗಳನ್ನು ಹೊರಗಿನಿಂದ ಆಮದು ಮಾಡಿಕೊಳ್ಳುತ್ತಾರೆ. ಒಟ್ಟು 2,543 ಕಿಮೀ ಉದ್ದದ ಕಡಲ ತೀರವನ್ನೊಳಗೊಂಡಿದ್ದು ಮೀನುಗಾರಿಕೆ ಇಲ್ಲಿಯ ಮುಖ್ಯ ಉದ್ಯಮವಾಗಿದೆ. ವಿವಿಧ ಬಗೆಯ ಮೀನುಗಳನ್ನು ಹಿಡಿದು ರಫ್ತುಮಾಡುತ್ತಾರೆ.

ಇಲ್ಲಿನ ಕೈಗಾರಿಕೆಯಲ್ಲಿ ಸಿಮೆಂಟ್ ತಯಾರಿಕೆ, ಪೆಟ್ರೋಲ್ ಶುದ್ಧೀಕರಣ, ರಮ್ ತಯಾರಿಕೆ ಮತ್ತು ಅಹಾರ ಸಂಸ್ಕರಣೆ ಮುಖ್ಯವಾದವು. ಔಷಧ ವಸ್ತುಗಳ ಮತ್ತು ವಿವಿಧ ಪಾನೀಯಗಳ ತಯಾರಿಕೆ ಉಂಟು. ಇವನ್ನೆಲ್ಲ ಅಮೆರಿಕ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್, ಕೆನಡ, ನೆದರ್ಲೆಂಡ್ಸ್ ಮತ್ತು ಪೋರ್ಟೊರಿಕೊಗಳಿಗೆ ರಫ್ತುಮಾಡುತ್ತಾರೆ. ಕಚ್ಚಾ ಪೆಟ್ರೋಲ್, ವಿವಿಧ ವಿದ್ಯುತ್ ಯಂತ್ರಗಳು, ಇತರ ಉಪಕರಣಗಳು, ಮಾಂಸ, ಮಾಂಸೋತ್ಪನ್ನಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್, ನೈಜೀರಿಯ ಮತ್ತು ಇಟಲಿಗಳಿಂದ ಆಮದು ಮಾಡಿಕೊಳ್ಳುತ್ತಾರೆ. ಇಲ್ಲಿನ ಆರ್ಥಿಕ ಮೂಲೋತ್ಪನ್ನದಲ್ಲಿ ಪ್ರವಾಸೋದ್ಯಮ ಮುಖ್ಯವಾದದ್ದು. ಇದನ್ನು ಅವಲಂಬಿಸಿ ಅನೇಕ ಹೋಟೆಲು ಮತ್ತು ಬ್ಯಾಂಕ್ ಉದ್ಯಮಗಳಿವೆ. ಇವು ಇಲ್ಲಿಯ ಜನರಿಗೆ ಉದ್ಯೋಗ ಕೇಂದ್ರಗಳಾಗಿವೆ. ಪ್ರತಿ ವರ್ಷ ಸಹಸ್ರಾರು ಪ್ರವಾಸಿಗಳು ಇಲ್ಲಿಗೆ ಭೇಟಿಕೊಡುವುದುಂಟು. ಸು. 1600 ಕಿಮೀ ಉದದ್ದ ರಸ್ತೆಗಳಿವೆ. ಇವು ಮುಖ್ಯ ನಗರಗಳಿಗೆ ಸಂಪರ್ಕ ಕಲ್ಪಿಸಿವೆ. ಇಲ್ಲಿಯ ವಿವಿಧ ಬಗೆಯ ದೋಣಿ ಮತ್ತು ಹಡಗುಗಳು ದ್ವೀಪಗಳ ಮಧ್ಯೆ ಓಡಾಡುವುದಲ್ಲದೆ ಇತರ ದೇಶಗಳ ಜೊತೆ ಸಂಪರ್ಕವನ್ನೂ ಇಟ್ಟುಕೊಂಡಿವೆ. ನಾಸೊ ಪ್ರಮುಖ ಬಂದರು, ಜೊತೆಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕೂಡ.

ಇಲ್ಲಿಯ ಶೇ. 90 ಮಂದಿ ಓದು ಬರೆಹ ಬಲ್ಲವರು. 5 ವರ್ಷದಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣ ಕಡ್ಡಾಯ. ಅಂಚೆ, ತಂತಿ, ದೂರವಾಣಿ ಮತ್ತು ವೈದ್ಯಕೀಯ ಸೌಲಭ್ಯಗಳುಂಟು.

ಬಹಾಮಸಿನ ಒಟ್ಟು ಜನಸಂಖ್ಯೆಯಲ್ಲಿ ಐದನೆಯ ನಾಲ್ಕರಷ್ಟು ನೀಗ್ರೊಗಳು. ಉಳಿದವರಲ್ಲಿ ಬಿಳಿಯರೂ ಕಪ್ಪು ಬಿಳಿ ಜನಾಂಗದ ಮಿಶ್ರ ಸಂತತಿಯವರೂ ಇದ್ದಾರೆ. *

**ಬಹಾಯಿ ಧರ್ಮ:** ಪರ್ಷಿಯ ದೇಶದಲ್ಲಿ ಬಹವುಲ್ಲಾ ಅವರಿಂದ 19ನೆಯ ಶತಮಾನದಲ್ಲಿ ಸ್ಥಾಪಿತವಾದ ಒಂದು ಧರ್ಮ. ದೇವರು ಒಬ್ಬ, ವಿಶ್ವದಲ್ಲಿರುವ ಎಲ್ಲ ಧರ್ಮಗಳೂ ಒಂದೇ, ವಿಶ್ವ ಒಂದು ರಾಷ್ಟ್ರ. ಆ ರಾಷ್ಟ್ರದಲ್ಲಿರುವ ಪ್ರಜೆಗಳೆಲ್ಲರೂ ಒಂದೇ ಮಾನವ ಕುಲಕ್ಕೆ ಸೇರಿದವರು ಎಂಬುದು ಇದರ ಸಂದೇಶ. ಈ ಧರ್ಮ ಬಾಬೀ ಧರ್ಮದಿಂದ ಪ್ರಭಾವಿತವಾದ ಒಂದು ಧಾರ್ಮಿಕ ಸುಧಾರಣೆ. ಈ ಧರ್ಮದ ಬೋಧನೆಗಳು ಹೀಗಿವೆ: ಬಹಾಯಿಗಳ ಪ್ರಕಾರ ದೇವರು ಒಬ್ಬನೇ. ಅವನು ಪ್ರಪಂಚಾತೀತ. ಅವನೇ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣ. ಪರಮಾತ್ಮ ಪ್ರೀತಿ, ಕರುಣೆ, ನ್ಯಾಯ ಮುಂತಾದ ಗುಣಗಳಿಂದ ಕೂಡಿರುವನು. ಇವನನ್ನು ಅರಿಯುವುದೇ ಮಾನವನ ಉದ್ದೇಶ. (ಎಸ್.ಎಸ್.ಆರ್.)

**ಬಹುಕೇಂದ್ರೀಯ ಸಿದ್ಧಾಂತ:** ಅಮೆರಿಕದ ಸಿ.ಡಿ. ಹ್ಯಾರಿಸ್ ಮತ್ತು ಈ.ಎಲ್. ಉಲ್‌ಮನ್‌ರವರಿಂದ 1945ರಲ್ಲಿ ಪ್ರತಿಪಾದಿಸಲ್ಪಟ್ಟ ಈ ಸಿದ್ಧಾಂತ ಗುರುತಿಸಿದ ಅಂಶವೆಂದರೆ, ನಗರಗಳು, ಏಕಕೇಂದ್ರಿಯ ಮತ್ತು ವಿಭಾಗೀಯ ವ್ಯವಸ್ಥೆಗಳೆರಡನ್ನು ಹೊಂದಿದ್ದರೂ ಕೂಡ, ದೊಡ್ಡ ನಗರಗಳಲ್ಲಿ ಅನೇಕ ಉಪಕೇಂದ್ರಗಳ ಸಂಕೀರ್ಣತೆಯಿಂದಾಗಿ, ಅಂತಹ ನಗರಗಳ ಕೇಂದ್ರಗಳಿಂದ ಹೊರಭಾಗಗಳ ಕಡೆಗೆ ಬೆಳೆವಣಿಗೆಯು ಹೆಚ್ಚು ಸಂಕೀರ್ಣಮಯವೂ ಕ್ಲಿಷ್ಟಕರವೂ ಆಗುತ್ತದೆ. ಈ ಸಿದ್ಧಾಂತವನ್ನು ಬೆಳೆವಣಿಗೆಯನ್ನು ಹೊಂದುತ್ತಿರುವ ಅನೇಕ




ನಗರಗಳಿಗೆ ಅನ್ವಯಿಸಿ ನೋಡಿದಾಗ, ಇಂತಹ ನಗರಗಳು ತಮ್ಮ ಸುತ್ತಮುತ್ತಲಿನ ಅನೇಕ ಸಣ್ಣಪುಟ್ಟ ನಗರಗಳನ್ನು ಆವರಿಸಿ ತಮ್ಮೊಳಗೆ ಸೇರಿಸಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಇಂತಹ ಕೆಲವು ಸಣ್ಣ ನಗರಗಳು ಈಗಲೂ ತಮ್ಮ ಸ್ವಂತಿಕೆಯನ್ನು, ಕಾರ್ಯಕ್ರಮಗಳನ್ನು ಉಳಿಸಿಕೊಂಡು ದೊಡ್ಡ ಮಹಾನಗರಗಳ ಪರಿಧಿಯೊಳಗೆ ಉಳಿದುಕೊಂಡಿರುವುದು ವಿಧಿತವಾಗಿದೆ. ಇದಕ್ಕೆ ಅತ್ಯುತ್ತಮ ನಿದರ್ಶನವನ್ನು ಲಂಡನ್‌ನಗರದ ಬೆಳೆವಣಿಗೆಯಲ್ಲಿ ಗುರುತಿಸಬಹುದಾಗಿದೆ. ಈ ನಗರ ಅನೇಕ ಸಣ್ಣಪುಟ್ಟ ನಗರಗಳನ್ನು ತನ್ನೊಳಗೆ ಕಬಳಿಸಿದ್ದರೂ ಈ ಸಣ್ಣನಗರಗಳು ಈಗಲೂ ಬೆಳೆವಣಿಗೆಯ ಕೇಂದ್ರಗಳಾಗಿ ಕರ್ತವ್ಯ ನಿರ್ವಹಿಸುತ್ತಿವೆ. ಇಂತಹ ಉಪಕೇಂದ್ರಗಳ ಸುತ್ತಲೂ ನಗರಾಭಿವೃದ್ಧಿಯಾಗುತ್ತಲಿದೆ. ಕೆಲವು ವಿಶೇಷ ರೀತಿಯ ಔದ್ಯೋಗಿಕ, ವಾಣಿಜ್ಯ, ಮನರಂಜನೆ, ವಿದ್ಯಾಕೇಂದ್ರಗಳು ಇತ್ಯಾದಿ ಚಟುವಟಿಕೆಗಳು ಇಲ್ಲಿ ಕೇಂದ್ರೀಕೃತವಾಗಿರುತ್ತವೆ. ಈ ಸಿದ್ಧಾಂತ ಹಿಂದೆ ಪ್ರಚುರವಾಗಿದ್ದ ಅನೇಕ ಸಿದ್ಧಾಂತಗಳಿಗಿಂತಲೂ ಹೆಚ್ಚು ಅರ್ಥಪೂರ್ಣ, ಉಪಯುಕ್ತವೂ ಆಗಿದ್ದು ಅಭಿವೃದ್ಧಿ ಹೊಂದಿದ, ಹೊಂದುತ್ತಲಿರುವ ದೇಶಗಳಲ್ಲಿನ ನಗರ ಬೆಳೆವಣಿಗೆಯ ಅಧ್ಯಯನಕ್ಕೆ ಹೆಚ್ಚು ಉಪಯುಕ್ತವಾಗಿದೆ. (ಕೆ.ಎನ್.ಯು.)

**ಬಹುಭೇದ ವಿಶ್ಲೇಷಣಾ ವಿಧಾನಗಳು:** ಒಂದು ಮಾದರಿ ಸಮೀಕ್ಷೆಯಲ್ಲಿ ಎರಡಕ್ಕಿಂತ ಹೆಚ್ಚು ವೀಕ್ಷಿಸಿದ ಅಂಶಗಳನ್ನು ಸಂಖ್ಯಾ ಶಾಸ್ತ್ರದ ವಿಧಾನಗಳನ್ನು ಬಳಸಿ ವಿಶ್ಲೇಷಿಸುವುದು. ಒಂದು ವಿಷಯ ಅಥವಾ ವಸ್ತುವಿಗೆ ಮೌಲ್ಯವನ್ನು ನೀಡುವಲ್ಲಿ ಇದು ಸಹಕಾರಿ. ಬಹುತೇಕ ಸಂಶೋಧನೆಗಳಲ್ಲಿ ಸ್ವತಂತ್ರ ಮತ್ತು ಅವಲಂಬಿತ ಅಂಶಗಳಿದ್ದು, ಅವುಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸಲು ಈ ವಿಧಾನ ಉಪಯುಕ್ತ.

ಕಳೆದ 50 ವರ್ಷಗಳಿಂದೀಚೆಗೆ ಅನೇಕ ಸಂಖ್ಯಾಶಾಸ್ತ್ರಜ್ಞರು ವಿವಿಧ ಬಹುಭೇದ ವಿಶ್ಲೇಷಣ ತಂತ್ರಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಇಂದು ಈ ತಂತ್ರವನ್ನು ಭೂಗೋಳವಿಜ್ಞಾನ, ಅರ್ಥವಿಜ್ಞಾನ, ಸಮಾಜವಿಜ್ಞಾನ, ಮಾನವವಿಜ್ಞಾನ, ಮನಃವಿಜ್ಞಾನ, ಕೃಷಿ, ಜೀವವಿಜ್ಞಾನ, ವೈದ್ಯಕೀಯ ವಿಜ್ಞಾನಗಳಲ್ಲಿ ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಗಣಕ ಯಂತ್ರಗಳ ಅಳವಡಿಕೆಯಿಂದ ಈ ತಂತ್ರದ ಬಳಕೆ ಹೆಚ್ಚಾಗುತ್ತಿದೆ. ಇದರ ಪ್ರಮುಖ ಉದ್ದೇಶವೆಂದರೆ ಸಂಗ್ರಹಿಸಿದ ಸಂಕೀರ್ಣ ಅಂಕಿ ಅಂಶಗಳನ್ನು ಸರಳೀಕರಿಸುವುದಾಗಿದೆ.

ಬಹುಭೇದ ವಿಶ್ಲೇಷಣಾ ತಂತ್ರಗಳನ್ನು ಪ್ರಮುಖವಾಗಿ ಅವಲಂಬಿತ ವಿಧಾನ ಮತ್ತು ಅಂತರ್ ಅವಲಂಬಿತ ವಿಧಾನಗಳು ಎಂದು ವರ್ಗೀಕರಿಸಲಾಗಿದೆ.

ಈ ರೀತಿಯ ವಿಂಗಡಣೆಯಲ್ಲಿ ಚರಗಳು ಇತರ ಅಂಶಗಳನ್ನು ಅವಲಂಬಿಸಿದ್ದರೆ, ಅವಲಂಬಿತ ವಿಧಾನವನ್ನು ಬಳಸಬೇಕಾಗುತ್ತದೆ. ಇಲ್ಲವಾದರೆ ಅಂತರ್ ಅವಲಂಬಿತ ವಿಧಾನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಕೆಲವು ಚರಗಳು ಸ್ವತಂತ್ರವಾಗಿ ಮತ್ತು ಕೆಲವೊಂದು ಅವಲಂಬಿತವಾಗಿರುತ್ತವೆ. ಈ ರೀತಿಯಿದ್ದಾಗ ಬಹುವಿಧ ಸಮಾಶ್ರಯಣ ವಿಶ್ಲೇಷಣೆ, ಬಹುವಿಧ ತಾರತಮ್ಯ ವಿಶ್ಲೇಷಣೆ, ಬಹುಚರ ವಿಶ್ಲೇಷಣೆ ವಿಧಾನಗಳನ್ನು ಬಳಸಬಹುದು.

ಕೆಲವು ಚರಗಳು ಪರಸ್ಪರ ಅವಲಂಬಿತವಾಗಿಲ್ಲದಿದ್ದಾಗ ಅಪವರ್ತನ ವಿಶ್ಲೇಷಣೆ, ಗುಂಪು ವಿಶ್ಲೇಷಣೆ, ಬಹುಆಯಾಮ ಶ್ರೇಣಿ ಮತ್ತು ಗುಪ್ತ ವಿನ್ಯಾಸ ವಿಶ್ಲೇಷಣೆ ವಿಧಾನಗಳನ್ನು ಬಳಸಬಹುದು.

ಬಹುಭೇದ ವಿಶ್ಲೇಷಣೆಯಲ್ಲಿ ಚರಗಳು ಈ ಕೆಳಕಂಡಂತಿರುತ್ತವೆ:

ವಿವರಣೆ ಅಥವಾ ಸ್ವತಂತ್ರ ಮತ್ತು ಪ್ರಭಾರವಿತ, ವೀಕ್ಷಣಾತ್ಮಕ ಮತ್ತು ವೀಕ್ಷಣಾತ್ಮಕವಲ್ಲದ, ವಿಚ್ಛಿನ್ನ ಮತ್ತು ಅವಿಚ್ಛಿನ್ನ, ನಿಷ್ಕ್ರಿಯ ಅಥವಾ ಸೂಡೋ ಚರಗಳು.

ಬಹುಭೇದ ವಿಶ್ಲೇಷಣಾ ವಿಧಾನದಲ್ಲಿನ ಪ್ರಮುಖ ತಂತ್ರಗಳೆಂದರೆ, ಬಹುವಿಧ ಸಮಾಶ್ರಯಣ, ಬಹುವಿಧ ತಾರತಮ್ಯ ವಿಶ್ಲೇಷಣೆ, ಚರಗಳ ಬಹುಚರ ವಿಶ್ಲೇಷಣೆ, ಅಪವರ್ತನ ವಿಶ್ಲೇಷಣೆ, ಗುಂಪು ವಿಶ್ಲೇಷಣೆ, ಗುಪ್ತ ವಿನ್ಯಾಸ ವಿಶ್ಲೇಷಣೆ.

ಅಪವರ್ತನಾ ವಿಶ್ಲೇಷಣೆ (ಫ್ಯಾಕ್ಟರ್ ಅನಾಲಿಸಿಸ್): ಬಹುಭೇದ ವಿಶ್ಲೇಷಣಾ ತಂತ್ರಗಳಲ್ಲಿ ಅತ್ಯಂತ ಪ್ರಮುಖವಾದ ವಿಧಾನವಾಗಿ, ಇದನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ವಿಶೇಷವಾಗಿ ಸಾಮಾಜಿಕ ಮತ್ತು ವರ್ತನಾ ವಿಜ್ಞಾನಗಳಲ್ಲಿ ವ್ಯಾಪಕವಾಗಿ ಬಳಸಲಾಗುವುದು. ಪರಸ್ಪರ ಅವಲಂಬಿತವಾದ ವೀಕ್ಷಿಸಿದ ಚರಗಳಲ್ಲಿ ಯಾವುದು ಮೂಲಭೂತವಾದುದು ಎಂಬುದನ್ನು ಸಂಶೋಧಿಸಲು ಇದನ್ನು ಬಳಸಲಾಗುವುದು. ಇದು ದೊಡ್ಡ ಪ್ರಮಾಣದಲ್ಲಿ ವೀಕ್ಷಿಸಿದ ಚರಗಳನ್ನು ಅಂಶಗಳಾಗಿ ಸಂಕ್ಷಿಪ್ತಗೊಳಿಸುವುದಾಗಿದೆ. ಈ ವಿಧಾನದಲ್ಲಿ ಸಂಶೋಧಕರಿಗೆ ಚರಗಳನ್ನು ಅಂಶಗಳನ್ನಾಗಿ (ಚರಗಳಲ್ಲಿನ ಸಹ ಸಂಬಂಧವನ್ನು ಆಧಾರಿಸಿ) ಮತ್ತು ಗಳಿಸಿದ ಅಂಶಗಳನ್ನು ಹೊಸ ಚರಗಳಾಗಿ ಹಾಗೂ ಮೊದಲ ಚರಗಳ ಮೊತ್ತವನ್ನು ಅಂಶಗಳಾಗಿ ಗುಂಪುಗಳನ್ನು ಮಾಡಬಹುದಾಗಿದೆ. ಈ ರೀತಿ ಪಡೆದ ಹೊಸ ಅಂಶಗಳಿಗೆ ಸಂಶೋಧಕರು ಹೆಸರಿಸಬೇಕಾಗುತ್ತದೆ. ನೀಳಾವಾದ ಅಂಕಿಅಂಶಗಳ ಪಟ್ಟಿ ಮತ್ತು ವೀಕ್ಷಿಸಿದ ಅಂಶಗಳು ಪರಸ್ಪರ ಭೇದಿಸುವುದನ್ನೇ ಅಪವರ್ತನ ಹೊರೆ ಎಂದು ಕರೆಯುವರು. ಇದು ನಿರ್ದಿಷ್ಟ ಚರ ಮತ್ತು ಅಂಶಗಳ ನಡುವಿನ ಸಹ ಸಂಬಂಧವನ್ನು ತಿಳಿಸುವುದು. ಇದನ್ನು ಸಾಮಾನ್ಯವಾಗಿ ಒಂದು ಮಾತ್ರಿಕೆ ಮ್ಯಾಟ್ರಿಕ್ಸ್ ಸೂಚಿಸಲಾಗುವುದು. ಈ ರೀತಿಯ ಮ್ಯಾಟ್ರಿಕ್ಸ್ ಅನ್ನು ಮಾಹಿತಿ ಮಾತೃಕೆ ಎಂದು ಕರೆಯುತ್ತೇವೆ. ಇದನ್ನು ಸಾಂಕೇತಿಕವಾಗಿ ಆಂಗ್ಲಭಾಷೆಯ ಎಸ್. (S) ಅಕ್ಷರದಿಂದ ಗುರ್ತಿಸಲಾಗಿದೆ.

ಅಪವರ್ತನ ವಿಶ್ಲೇಷಣೆಯ ವಿಧಾನಗಳು: ಇದು ಒಂದೇ ವಿಧಾನವಾಗಿರದೆ, ಬದಲಾಗಿ ಅನೇಕ ವಿಧಾನಗಳ ಸಮೂಹ ಅಥವಾ ಗುಂಪು. ಇದರಲ್ಲಿ ಪ್ರಮುಖವಾದವುಗಳೆಂದರೆ: ಗುರುತ್ವ ಕೇಂದ್ರ ವಿಧಾನ, ಪ್ರಧಾನ ಘಟಕಗಳ ವಿಧಾನ ಮತ್ತು ಗರಿಷ್ಠ ಸಂಭವನೀಯ ವಿಧಾನ. ಅಂಶ ಅಥವಾ ಅಪವರ್ತನ ವಿಶ್ಲೇಷಣೆಯಲ್ಲಿ ಅನೇಕ ಮೂಲಾಂಶಗಳನ್ನು ಬಳಸಲಾಗುತ್ತದೆ. ಅವುಗಳೆಂದರೆ:

ಅಂಶ ಅಥವಾ ಅಪವರ್ತನ, ಫ್ಯಾಕ್ಟರ್ ಲೋಡಿಂಗ್ ಅಥವಾ ಅಪವರ್ತನ ವ್ಯತ್ಯಯ ಪರಸ್ಪರ ಸಂಬಂಧ, ಕಮ್ಯುನಾಲಿಟಿ ($h^2$) ಐಗೆನ್ ವ್ಯಾಲ್ಯೂ ಅಥವಾ ಲ್ಯಾಟೆಂಟ್ ರೂಟ್ ಅಥವಾ ಚೌಕಗಳ ಒಟ್ಟು ಮೊತ್ತ, ಆವರ್ತ, ಅಂಶ ಅಥವಾ ಅಪವರ್ತನಾ ಮೊತ್ತ. ಪ್ರಧಾನ ಭಾಗಗಳ ವಿಧಾನ: ಇದನ್ನು ಎಚ್. ಹೋಟೆಲಿಂಗ್ ರವರು ಅಭಿವೃದ್ಧಿಪಡಿಸಿದ್ದಾರೆ. ಇದನ್ನು ಸರಳವಾಗಿ P.C. ವಿಧಾನವೆಂದೂ ಕರೆಯುವರು. ಪ್ರತಿಯೊಂದು ಅಂಶ

ಅಥವಾ ಅಪವರ್ತನದ ಘಾತ (ಸ್ಕ್ವೇರ್) ಒಟ್ಟು ಮೊತ್ತವಾಗಿದೆ. ಇದು ಇತರ ವಿಧಾನಗಳಿಗಿಂತ ಹೆಚ್ಚು ಭಿನ್ನವಾಗಿದೆ. ಒಟ್ಟಾರೆ ಅಪವರ್ತನದ ಅಂಶಗಳ ರಚನೆಯೇ ಇದರ ಪ್ರಮುಖ ಉದ್ದೇಶವಾಗಿದೆ. ಇದನ್ನು ಈ ಕೆಳಕಂಡಂತೆ ಸೂತ್ರೀಕರಿಸಬಹುದು.

$X_j s (j = 1, 2 \ldots\ldots k)$

ಹೊಸ ಅಂಶ ಅಥವಾ ಅಪವರ್ತನಗಳನ್ನು (Pi) ಪ್ರಧಾನ ಭಾಗಗಳ ವಿಧಾನ ಎಂದು ಕರೆಯಲಾಗಿದೆ. ಇದು 'Xi' ನ ರೇಖಾತ್ಮಕ ಸಂಯೋಜನೆಯನ್ನು ಹೊಂದಿದೆ (Linear Combination).

$P_1 = a_{11} X_1 + a_{12} X_1 + \ldots\ldots + a_{1k} {}^1 X_k$

$P_2 = a_{21} X_1 + a_{22} X_2 + \ldots\ldots + a_2 k_x X_k$

$P_k = a_{k1} X_1 + a_{k2} X_2 + \ldots\ldots + a_{kk} X_k.$

ಪ್ರಧಾನ ಭಾಗಗಳ ವಿಧಾನ ಎರಡು ನಿಯಮ (conditions) ಗಳನ್ನು ಪೂರೈಸಬೇಕು. ಅವುಗಳೆಂದರೆ:

ಎ. ಇವು ಪರಸ್ಪರ ಸಂಬಂಧಿತವಾಗಿರಬಾರದು (un correlated)

ಬಿ. ಮೊದಲ ಪ್ರಧಾನ ಭಾಗ ಹೆಚ್ಚು ವ್ಯತ್ಯಾಸದಿಂದಿರಬೇಕು ($P_1$), ಎರಡನೆಯ ಪ್ರಧಾನ ಭಾಗ ($P_2$) ಅನಂತರ ಹೆಚ್ಚು ವ್ಯತ್ಯಾಸದಿಂದಿರಬೇಕು (Variance).

ಹೊಂದಾಣಿಕೆ ಸಹ ಗುಣಕ (co-efficient of correlation) ವನ್ನು ಈ ಕೆಳಗಿನ ಮಾತ್ರಿಕೆಯಿಂದ ತಿಳಿಯಬಹುದಾಗಿದೆ.

ಹೊಂದಾಣಿಕೆಯ ಸಹ ಗುಣಕ ಮಾತ್ರಿಕೆ, R

| | | | ಚರಗಳು | |
|---|---|---|---|---|
| $X_1$ | $X_2$ | $X_3$ | $X_k$ | |
| $X_1$ | $r_{11}$ | $r_{12}$ | $r_{13}$ | $r_{1k}$ |
| $X_2$ | $r_{21}$ | $r_{22}$ | $r_{23}$ | $r_{2k}$ |
| $X_k$ | $r_{k1}$ | $r_{k2}$ | $r_{k3}$ | $R_{3k}$ |

(ಎಸ್.ಕೆ.ಪಿ.)

**ಬಹುಹಂತೀಯ ಯೋಜನೆ:** ಇದು ವಿಕೇಂದ್ರೀಕರಣ, ಜನತೆಯ ಪಾಲ್ಗೊಳ್ಳುವಿಕೆ ಹಾಗೂ ಸ್ಥಳೀಯ ಮಟ್ಟದಲ್ಲಿ ಯೋಜನೆಯ ತಯಾರಿಕೆಯನ್ನು ಸಾಕಾರಗೊಳಿಸುತ್ತದೆ. ಹೆಸರೇ ಸೂಚಿಸುವಂತೆ ಈ ಯೋಜನೆಯ ತಯಾರಿಕೆ ಮತ್ತು ಅನುಷ್ಠಾನದಲ್ಲಿ ಅನೇಕ ಹಂತಗಳಿರುತ್ತವೆ. ವಿಕೇಂದ್ರೀಕರಣ ನೀತಿಗೆ ಬದ್ಧವಾಗಿ ಮತ್ತು ಜನತೆಯ ಸಹಭಾಗಿತ್ವವನ್ನು ಒಳಗೊಳ್ಳುವಂತೆ ಯೋಜನೆಯನ್ನು ರೂಪಿಸಲಾಗತ್ತದೆ ಮತ್ತು ಅದನ್ನು ಅನುಷ್ಠಾನಗೊಳಿಸಲಾಗುತ್ತದೆ. ಬಹು ಹಂತೀಯ ಯೋಜನೆಯ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ:

ಬಹು ಹಂತೀಯ ಯೋಜನೆಯನ್ನು ಸಾಮಾನ್ಯವಾಗಿ ಕೆಳಮಟ್ಟದಿಂದ ಸಿದ್ಧಪಡಿಸಿ ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ. ಅಂದರೆ ಒಂದು ಗ್ರಾಮ ಅಥವಾ ಒಂದು ಕೇರಿಯನ್ನು ಘಟಕವನ್ನಾಗಿ ಇಟ್ಟುಕೊಂಡು ಯೋಜನೆಯನ್ನು ತಯಾರಿಸಲಾಗುತ್ತದೆ. ಗ್ರಾಮಸಭೆಯನ್ನು ನಡೆಸುವಿಕೆ, ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆ, ಚಟುವಟಿಕೆಗಳ ಆಯ್ಕೆ ಮುಂತಾದವು ಪ್ರಮುಖ ಅಂಶಗಳಾಗಿರುತ್ತವೆ. ಬಹುಹಂತೀಯ ಯೋಜನೆಯನ್ನು ರೂಪಿಸಲು ಜಿಲ್ಲೆ ಅತ್ಯುತ್ತಮ ಘಟಕವಾಗಿರುತ್ತದೆ. ಜಿಲ್ಲಾ ಯೋಜನಾ ಸಮಿತಿ ಬಹು ಹಂತೀಯ ಯೋಜನೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಈ ಯೋಜನೆ ಗ್ರಾಮ ಅಥವಾ ಕೇರಿ, ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲೆ, ರಾಜ್ಯ ಮುಂತಾದ ಹಂತಗಳಲ್ಲಿ ಅನುಷ್ಠಾನಗೊಳ್ಳುತ್ತದೆ. ಬಹು ಹಂತದ ಸಮೀಕ್ಷೆ (ಎಂ.ಎಂ.ಆರ್.) ಈ ವಿದಧ ಯೋಜನೆಯ ಮತ್ತೊಂದು ಮುಖ್ಯ ಲಕ್ಷಣವಾಗಿರುತ್ತದೆ. ಯೋಜನಾ ಕಾರ್ಯಕ್ರಮಗಳ ಆರ್ಥಿಕ ಮತ್ತು ಭೌತಿಕ ಪರಿಶೀಲನೆಯನ್ನು ನಡೆಸಲು ಮಾಹೆವಾರು ಆರ್ಥಿಕ ಹಾಗೂ ಭೌತಿಕ ಗುರಿಗಳನ್ನು ನಿಗದಿಪಡಿಸುವುದೇ ಬಹು ಹಂತದ ಸಮೀಕ್ಷೆಯಾಗಿರುತ್ತದೆ. ಉದಾಹರಣೆಗೆ ಕೃಷಿ ಮತ್ತು ಅದಕ್ಕೆ ಹೊಂದಿಕೊಂಡ ವಲಯಗಳಿಗೆ ಬಹು ಹಂತೀಯ ಸಮೀಕ್ಷೆಯನ್ನು ರೂಪಿಸುವಾಗ ಋತುಗಳಿಗೆ ಮತ್ತು ಕೃಷಿ ಚಟುವಟಿಕೆಗಳಿಗೆ ಅನುಗುಣವಾಗಿ ಮಾಹೆವಾರು ಗುರಿಗಳನ್ನು ನಿಗದಿಪಡಿಸಲಾಗುತ್ತದೆ. ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮೊದಲೇ ನಿಗದಿಪಡಿಸಿದ್ದಂತೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

ಬಹು ಹಂತೀಯ ಯೋಜನೆ ವ್ಯಾಪಕವಾಗಿ ಈ ಕೆಳಗಿನ ಧ್ಯೇಯೋದ್ದೇಶಗಳನ್ನು ಹೊಂದಿರುತ್ತದೆ: ಜನರ ಆವಶ್ಯಕತೆಗಳನ್ನು ಅಂದಾಜು ಮಾಡುವುದು, ಸ್ಥಳೀಯ ಸಂಪನ್ಮೂಲಗಳನ್ನು ಮತ್ತು ಪ್ರತಿ ವಲಯದ ಅಭಿವೃದ್ಧಿ ಅಂತರಗಳ ಪ್ರಮಾಣ ಮತ್ತು ಸಮಸ್ಯೆಗಳನ್ನು ಗುರುತಿಸುವುದು. ವೈಜ್ಞಾನಿಕ ಮತ್ತು ಪಾಲ್ಗೊಳ್ಳುವಿಕೆ ಮಾದರಿಯಲ್ಲಿ ಸಮಗ್ರ ಯೋಜನೆಗಳನ್ನು ತಯಾರಿಸಿ ಆದ್ಯತೆಗೊಳಿಸುವುದು. ಸ್ಥಳೀಯ ಸಂಸ್ಥೆಗಳು, ಮಂಡಳಿಗಳು ಮತ್ತು ನಗರಪಾಲಿಕೆಗಳ ಮೂಲಕ ವಾರ್ಷಿಕ ಯೋಜನೆಗಳಲ್ಲಿ ಸೇರ್ಪಡೆಗೊಳಿಸುವುದು.

ಬಹು ಹಂತೀಯ ಯೋಜನೆಗಳನ್ನು ರೂಪಿಸಲು ಅನುಸರಿಸಬೇಕಾದ ವಿಭಿನ್ನ ಹಂತಗಳು ಈ ಕೆಳಗಿನಂತಿವೆ; ಪ್ರಕ್ರಿಯೆಯನ್ನು ಆರಂಭಿಸಲು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರ, ಜಿಲ್ಲಾ ಯೋಜನಾ ಸಮಿತಿಗಳು ವಲಯವಾರು ಉಪ ಸಮಿತಿಗಳನ್ನು ರಚಿಸುತ್ತವೆ. ವಲಯವಾರು ಉಪಸಮಿತಿಗಳು ಅವುಗಳ ವಲಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ದೂರದೃಷ್ಟಿ ಯೋಜನೆಯನ್ನು ತಯಾರಿಸಿ, ಜಿಲ್ಲಾ ಯೋಜನಾ ಸಮಿತಿಯ ಕೇಂದ್ರ ಸಮಿತಿಯ ಮುಂದೆ ಇಡುತ್ತವೆ. ಕೇಂದ್ರ ಸಮಿತಿ ದೂರದೃಷ್ಟಿಯನ್ನು ಕ್ರೋಡೀಕರಿಸಿ ಅನುಮೋದನೆಗಾಗಿ ಜಿಲ್ಲಾ ಯೋಜನಾ ಸಮಿತಿಯ ಮುಂದಿಡುತ್ತದೆ. ಜಿಲ್ಲಾ ಯೋಜನಾ ಸಮಿತಿ ದೂರದೃಷ್ಟಿ ದಾಖಲೆಗಳನ್ನು ಪರಿಗಣಿಸಿ ಅನುಮೋದಿಸುತ್ತದೆ. ದೂರದೃಷ್ಟಿ ದಾಖಲೆಯನ್ನು ತಾಲ್ಲೂಕುವಾರು ವಿಂಗಡಿಸಿ ಅನಂತರ ಸಂಬಂಧಪಟ್ಟ ತಾಲ್ಲೂಕಿನ ಸ್ಥಳೀಯ ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ. ಸ್ಥಳೀಯ ಸಂಸ್ಥೆಗಳು ಕಾರ್ಯತಂಡಗಳನ್ನು ರಚಿಸುತ್ತದೆ. ಕಾರ್ಯತಂಡಗಳು ಅವುಗಳ ದೂರದೃಷ್ಟಿಯನ್ನು ತಯಾರಿಸಿ ಸ್ಥಳೀಯ ಸಂಸ್ಥೆಯ ಅನುಮೋದನೆಯ ಬಳಿಕ ಗ್ರಾಮ ಸಭೆ/ವಾರ್ಡ್ ಸಮಿತಿಗಳಿಗೆ ಕಳುಹಿಸುತ್ತವೆ. ಗ್ರಾಮ ಸಭೆ/ ವಾರ್ಡ್ ಸಮಿತಿಗಳು ಆವಶ್ಯಕತೆಗಳನ್ನು ಮತ್ತು ಅಂತರಗಳನ್ನು ಗುರುತಿಸಿ ಕರಡು ದೂರದೃಷ್ಟಿಯ ಬಗ್ಗೆ ಚರ್ಚಿಸುತ್ತವೆ. ಸ್ಥಳೀಯ ಸಂಸ್ಥೆ ಮಟ್ಟದಲ್ಲಿ ಅಭಿವೃದ್ಧಿ ವಿಚಾರಗೋಷ್ಠಿಯನ್ನು ನಡೆಸುವುದು. ಕಾರ್ಯತಂಡಗಳು, ಮುನ್ನೋಟ ಯೋಜನೆಗಳನ್ನು ರೂಪಿಸುತ್ತವೆ ಮತ್ತು ಅದನ್ನು ಅನುಮೋದನೆಗಾಗಿ ಜಿಲ್ಲಾ ಯೋಜನಾ ಸಮಿತಿಗೆ ಕಳಿಸುತ್ತವೆ. ವಲಯವಾರು ಉಪಸಮಿತಿಗಳು ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚಿಸಿ ಅವುಗಳ ಮುನ್ನೋಟ ಯೋಜನೆಗಳನ್ನು ಅಂತಿಮಗೊಳಿಸುತ್ತವೆ. ಜಿಲ್ಲಾ ಯೋಜನಾ ಸಮಿತಿಯಿಂದ ಜಿಲ್ಲಾ ಅಭಿವೃದ್ಧಿ ಮುನ್ನೋಟದ ಅನುಮೋದನೆಯಾಗುತ್ತದೆ.

(ಎಚ್.ಆರ್.ಕೆ.)

**ಬಹ್ರೇನ್:** ಅರೇಬಿಯನ್ ಪರ್ಯಾಯ ದ್ವೀಪದ ಎಲ್‌ಹಾಸನನ್ ಪೂರ್ವ ಭಾಗದ ಪರ್ಷಿಯನ್ ಕೊಲ್ಲಿಯಲ್ಲಿರುವ 35 ದ್ವೀಪಗಳ ಸಮೂಹವನ್ನು ಹೊಂದಿರುವ ಅರಬ್ ರಾಜ್ಯ. ಈ ದ್ವೀಪಗಳಲ್ಲಿ ಬಹ್ರೇನ್ ದೊಡ್ಡ ದ್ವೀಪ. ಆದ ಕಾರಣ ಇಡೀ ದ್ವೀಪ ಸಮೂಹಕ್ಕೆ ಬಹ್ರೇನ್ ಅನ್ವರ್ಥಕನಾಮವಾಗಿದೆ. 1971ರ ಆಗಸ್ಟ್ 15ರಂದು ಸ್ವತಂತ್ರ ರಾಷ್ಟ್ರವಾಯಿತು. ಸೌದಿ ಅರೇಬಿಯ ಮತ್ತು ಕತಾರ್‌ಗಳಿಂದ ಸುತ್ತುವರಿದಿವೆ. ಭೂಮಿ ಸಮತಟ್ಟಾದ ಮರುಭೂಮಿ ವಲಯ. ನದಿ, ಸರೋವರ ಮುಂತಾದ ಜಲಭಾಗಗಳಿವೆ. ಉ.ಅ. $26^0 0'$ ಮತ್ತು ಪೂ.ರೇ. $50^0 35'$ ರಲ್ಲಿ ಸ್ಥಾನೀಕರಣ ಹೊಂದಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ 669 ಚ.ಕಿಮೀ. ಸಮುದ್ರಮಟ್ಟದಿಂದ ಸರಾಸರಿ 183 ಮೀ ಎತ್ತರದಲ್ಲಿದೆ. ಜನಸಂಖ್ಯೆ 718306 (2009). ರಾಜಧಾನಿ ಮನಾಮ. ಭಾಷೆ ಅರೇಬಿಕ್ ಮತ್ತು ಇಂಗ್ಲೀಷ್, ಧರ್ಮ ಇಸ್ಲಾಂ. ಕ್ರಿಯೋಲಿ, ಮುಹಾರಕ್ ಇನ್ನೊಂದು ಮುಖ್ಯನಗರ.




ವಾಯುಗುಣ: ವರ್ಷ ಪೂರ್ತಿ ಶುಷ್ಕ ವಾತಾವರಣದಿಂದ ಕೂಡಿರುವ ವಾಯುಗುಣವನ್ನು ಹೊಂದಿದೆ. ಪರ್ಷಿಯನ್ ಕೊಲ್ಲಿ ಇಲ್ಲಿನ ವಾಯುಗುಣದ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ. ಅತ್ಯಂತ ಶಾಖ, ಅತ್ಯಲ್ಪ ಮಳೆ ಹಾಗೂ ನೀರಿನ ಕೊರತೆ ಸಾಮಾನ್ಯ ಲಕ್ಷಣಗಳು. ಸ್ವಲ್ಪಮಟ್ಟಿಗೆ ವಾಣಿಜ್ಯ ಮಾರುತಗಳ ಪ್ರಭಾವ ಈ

ನಾಡಿನ ಮೇಲಿದೆ. ಬೇಸಗೆಯಲ್ಲಿ ಸರಾಸರಿ 34$^0$ಸೆ ಮತ್ತು ಚಳಿಗಾಲದಲ್ಲಿ 18$^0$ಸೆ ಉಷ್ಣಾಂಶವಿರುತ್ತದೆ. ಸಾಪೇಕ್ಷ ಆರ್ದ್ರತೆಯ ಪ್ರಮಾಣ ಸರಾಸರಿ ಶೇ 65 ರಷ್ಟಿರುತ್ತದೆ ಮತ್ತು ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 31 ಸೆಮೀ.

ವೃತ್ತಿ: ಬಹ್ರೇನ್ ಮೂಲತಃ ಕೃಷಿ ಪ್ರಧಾನ ರಾಷ್ಟ್ರ. ಇಲ್ಲಿನ ಮುಖ್ಯ ಕಸಬು ಪಶುಸಂಗೋಪನೆ, ಮೀನುಗಾರಿಕೆ ಮತ್ತು ವ್ಯವಸಾಯ. ಖರ್ಜೂರ, ಹಣ್ಣುಗಳು, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಮಾಂಸಕ್ಕಾಗಿ ದನಗಳು ಮತ್ತು ಒಂಟೆಗಳನ್ನು ಸಾಕುತ್ತಾರೆ. ಮೀನುಗಾರಿಕೆ ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಯಾಗಿದೆಯಾದರೂ ಸ್ಥಳೀಯ ಮಾರುಕಟ್ಟೆಗಳಿಗೆ ಮಾತ್ರ ಪೂರೈಕೆಯಾಗುತ್ತಿದೆ.

ಇತ್ತೀಚೆಗೆ ಆಧುನಿಕ ಕೈಗಾರಿಕೆಗಳು ಅಭಿವೃದ್ಧಿಯಾಗಿವೆ. ತೈಲ ಸಂಸ್ಕರಣೆ, ಅಕ್ಕಿ ಗಿರಣಿಗಳು, ದವಸ ಧಾನ್ಯಗಳನ್ನು ಬೇರ್ಪಡಿಸುವ ಯಂತ್ರಗಳು, ತಂಬಾಕು, ತೈಲ ಸಂಗ್ರಹಣೆಯ ಟ್ಯಾಂಕರ್‌ಗಳು, ಕೊಳವೆಯಂತ್ರಗಳು, ಹೊರ ರಾಷ್ಟ್ರಗಳ ಸಹಯೋಗದೊಂದಿಗೆ ಬೆಳೆಯುತ್ತಿವೆ. ತೈಲೋತ್ಪಾದನೆ ಬೃಹತ್ ಪ್ರಮಾಣದಲ್ಲಿ ಬೆಳೆದಿದೆ. ತೈಲ ನಿಕ್ಷೇಪಗಳು ಹೆಚ್ಚಾಗಿಲ್ಲದಿದ್ದರೂ ವಾರ್ಷಿಕ ಮೂರು ಮಿಲಿಯನ್ ಮೆಟ್ರಿಕ್ ಟನ್‌ಗಿಂತಲೂ ಅಧಿಕವಾಗಿ ಉತ್ಪಾದಿಸುತ್ತಿದೆ. ಪೆಟ್ರೋಲ್ ಸಂಸ್ಕರಣ ಕೇಂದ್ರವನ್ನು ಬಹ್ರೇನ್ ನಗರದಲ್ಲಿ ಸ್ಥಾಪಿಸಲಾಗಿದೆ. ಇಲ್ಲಿ ಸ್ಥಳೀಯ ಹಾಗೂ ಸೌದಿ ಅರೇಬಿಯದ ಕಚ್ಚಾ ತೈಲವನ್ನು ಸಂಸ್ಕರಿಸಲಾಗುತ್ತದೆ. ಮಧ್ಯ ಪ್ರಾಚ್ಯ ತೈಲ ಉತ್ಪಾದನಾ ದೇಶಗಳಲ್ಲಿ ಬಹ್ರೇನ್ ಸಹ ಪ್ರಮುಖ ರಾಷ್ಟ್ರವಾಗಿದೆ. ಪರ್ಷಿಯನ್ ಕೊಲ್ಲಿಯ ರಾಷ್ಟ್ರಗಳ ತಟಸ್ಥ ವಲಯದ ಭಾಗವಾದ ಬಹ್ರೇನ್ ಸಂಯುಕ್ತ ರಾಷ್ಟ್ರಗಳ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ತೈಲೋತ್ಪಾದನೆಯಲ್ಲಿ ಬ್ರಿಟನ್, ಫ್ರಾನ್ಸ್, ನೆದರ್ಲೆಂಡ್ ಮತ್ತು ಜಪಾನ್ ದೇಶಗಳು ಹಣ ಹೂಡಿಕೆ ಮಾಡಿವೆ. ಈ ವಿದೇಶೀ ಕಂಪನಿಗಳು ಇಂಧನ ಮತ್ತು ತೈಲವನ್ನು ಹೊರತೆಗೆದು ಸಂಸ್ಕರಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ರವಾನಿಸುವ ಅಧಿಕಾರಗಳನ್ನು ಪಡೆದಿವೆ. ಅಧಿಕ ಪ್ರಮಾಣದ ತೈಲವನ್ನು ಸಂಸ್ಕರಣ ರಹಿತವಾಗಿ ಹಡಗಿನ ಮೂಲಕ ಮಾರುಕಟ್ಟೆಗೆ ಕಳುಹಿಸುತ್ತಾರೆ. ಈ ರಾಷ್ಟ್ರದ ಪ್ರಮುಖ ಆರ್ಥಿಕ ನೆಲೆಗಟ್ಟು ತೈಲ ವಾಣಿಜ್ಯದಿಂದಲೇ, ತೆರಿಗೆಯ ರೂಪದಲ್ಲಿ ಪಾವತಿಗಳು ವಿದೇಶಿ ಕಂಪನಿಗಳಿಂದ ಬೃಹತ್ ಮೊತ್ತದ ಆದಾಯ ಸರ್ಕಾರಕ್ಕೆ ಲಭಿಸುತ್ತಿದೆ. ಆದಕಾರಣ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಬಹ್ರೇನ್ ಅಳವಡಿಸಿಕೊಳ್ಳುತ್ತಿದೆ. ರಸ್ತೆ ಸಾರಿಗೆ, ವಿಮಾನಯಾನ, ಜಲಸಾರಿಗೆಗಳನ್ನು ಅಭಿವೃದ್ಧಿಗೊಳಿಸುತ್ತಿದೆ. ನಗರಾಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದೆ.

ತಾಂತ್ರಿಕವಾಗಿ ಪರಿಣತಿ ಹೊಂದಿರುವ ಅಂತಾರಾಷ್ಟ್ರೀಯ ವಲಸಿಗರು 1980ರ ಅನಂತರ ಈ ರಾಷ್ಟ್ರಕ್ಕೆ ಬರಲಾರಂಭಿಸಿದರು. ಭಾರತ, ಪಾಕಿಸ್ತಾನ, ಬಾಂಗ್ಲದೇಶ, ಶ್ರೀಲಂಕ ದೇಶಗಳ ಜನರು ಇಲ್ಲಿನ ಕಾರ್ಮಿಕ ವರ್ಗದವರು. ತೈಲ ಘಟಕಗಳಲ್ಲಿ ವಸತಿ ನಿರ್ಮಾಣ ಕಾರ್ಯ, ಶಿಕ್ಷಣ, ಸಾರಿಗೆ, ನಗರಾಭಿವೃದ್ಧಿ, ಆಸ್ಪತ್ರೆ, ಹೋಟೆಲ್ ಇತ್ಯಾದಿಗಳಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

ಸಿದ್ಧ ಆಹಾರ ಪದಾರ್ಥಗಳು, ಉಡಿಗೆ-ತೊಡಿಗೆ, ಯಂತ್ರೋಪಕರಣಗಳು ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ದಿನನಿತ್ಯದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ. ತಲಾವಾರು ಆದಾಯ ಅತ್ಯಧಿಕವಾಗಿರುವುದರಿಂದ ವಿದೇಶಿ ಕಂಪನಿಗಳು ಬೃಹತ್ ಉತ್ಪಾದನಾ ಘಟಕಗಳನ್ನು ಇಲ್ಲಿ ಸ್ಥಾಪಿಸಿವೆ.

ಈ ರಾಷ್ಟ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದೆ. ಉನ್ನತ ವ್ಯಾಸಂಗಕ್ಕೆ ಸರ್ಕಾರದಿಂದ ಸಹಾಯಧನದ ವ್ಯವಸ್ಥೆನ್ನು ಮಾಡಲಾಗಿದೆ. ಪರ್ಷಿಯನ್ ಮತ್ತು ಆಂಗ್ಲ ಮಾಧ್ಯಮದ ಶಾಲೆಗಳು ಕಂಡುಬರುತ್ತವೆ. ಇಲ್ಲಿನ ಹಣ ಬಹ್ರೇನ್ ದಿನಾರ್.

ಭೌತಿಕ ಲಕ್ಷಣ: ಬಹ್ರೇನಿನಲ್ಲಿ ಎರಡು ಪ್ರತ್ಯೇಕ ದ್ವೀಪಸ್ತೋಮಗಳಿವೆ. ಮೊದಲನೆಯ ಗುಂಪಿನಲ್ಲಿ ಅತ್ಯಂತ ದೊಡ್ಡದಾದ ಬಹ್ರೇನ್ ದ್ವೀಪದ ಸುತ್ತ ಹಲವು ಸಣ್ಣ ದ್ವೀಪಗಳಿವೆ. ಇವುಗಳ ಪೈಕಿ ಅಲ್-ಮುಹಾರಕ್ ಮತ್ತು ಸಿತ್ರಾ ದ್ವೀಪಗಳಿಗೂ ಬಹ್ರೇನ್ ದ್ವೀಪಕ್ಕೂ ಸೇತುವೆಗಳಿವೆ. ಈ ಗುಂಪಿನ ಇತರ ದ್ವೀಪಗಳು ಅನ್-ನಬೀ ಸಾಲಿಹ್ ಉಮ್ ಅಸ್ಸಬಾನ್, ಉಮ್‌ನಸಾನ್ ಮತ್ತು ಜಿದ್ದಾ. ಎರಡನೆಯ ಗುಂಪಿನ ಹೊವಾರ್ ದ್ವೀಪಗಳು ಕಟಾರ್ ತೀರಕ್ಕೆ ಸಮೀಪದಲ್ಲಿವೆ. ಇವು ಬಲು ಸಣ್ಣವು ಮತ್ತು ಬಂಡೆಗಳಿಂದ ಕೂಡಿದವು. ಇಲ್ಲಿ ಜನ ಹೆಚ್ಚು ಸಂಖ್ಯೆಯಲ್ಲಿಲ್ಲ. ಇರುವವರು ಪ್ರಮುಖವಾಗಿ ಮೀನುಗಾರರು ಹಾಗೂ ಕಲ್ಲುಕುಟಿಗ ಕೆಲಸಗಾರರು.

ಎರಡೂ ಗುಂಪುಗಳ ಸಣ್ಣ ದ್ವೀಪಗಳೆಲ್ಲ ಬಂಡೆಗಳಿಂದ ಕೂಡಿದ್ದು ಸಮುದ್ರ ಮಟ್ಟದಿಂದ ಕೆಲವೇ ಮೀ ಎತ್ತರದಲ್ಲಿವೆ. ಮುಖ್ಯ ದ್ವೀಪ ವೈವಿಧ್ಯಪೂರಿತ ಕಮಾನಿನಂತಿರುವ ಅದರ ಬಂಡೆಗಳು, ಸುಣ್ಣಕಲ್ಲು, ಮರುಳುಗಲ್ಲು ಮತ್ತು ಜೇಡಿಮಣ್ಣು ಮರುಳುಮಿಶ್ರಿತ ಕಲ್ಲುಗಳಿಂದ ಕೂಡಿವೆ. ಈ ದ್ವೀಪದ ಮಧ್ಯಭಾಗದಲ್ಲಿ ಸಮುದ್ರ ಮಟ್ಟದಿಂದ ಸು. 135 ಮೀ ಎತ್ತರಕ್ಕಿರುವ ಜಬದ್ ಅದ್-ದುಖಾನ್ ಎಂಬ ಬೆಟ್ಟವಿದೆ. ಇದೂ ಶಿಲೆಯಿಂದ ಕೂಡಿದೆ. ಜೊತೆಗೆ ಬಂಜರು ಕೂಡ. ದಕ್ಷಿಣ ಮತ್ತು ಪಶ್ಚಿಮದ ತಗ್ಗು ನೆಲಗಳು ಮರುಳು ಮೈದಾನಗಳು. ಅಲ್ಲಲ್ಲಿ ಚವುಳು ಜೌಗುಗಳುಂಟು. ಉತ್ತರ ಹಾಗೂ ವಾಯವ್ಯ ಪ್ರದೇಶಗಳು ಭಿನ್ನ. ಇಲ್ಲಿ ಖರ್ಜೂರ ಮತ್ತು ತರಕಾರಿ ತೋಟಗಳ ಸಾಲುಗಳಿವೆ. ಇಲ್ಲಿಯ ಜನರು ಆರ್ಟೀಸಿಯನ್ ಬಾವಿಯ ನೀರು ಬಳಸಿಕೊಂಡು ಬೇಸಾಯ ಮಾಡುತ್ತಾರೆ.

ಸಸ್ಯ ಮತ್ತು ಪ್ರಾಣಿ ಸಂಪತ್ತು: ಈ ದ್ವೀಪಗಳ ನಗ್ನ ಶುಷ್ಕ ಭಾಗಗಳಲ್ಲಿ ಸು. 200 ಬಗೆಯ ಮರುಭೂಮಿ ಸಸ್ಯಗಳು ಬೆಳೆಯುತ್ತವೆ. ನೀರಾವರಿ ಸೌಲಭ್ಯವಿರುವ ಬೇಸಾಯದ ನೆಲದಲ್ಲಿ ಹಣ್ಣಿನ ಮರ, ಪ್ರಾಣಿಗಳ ಮೇವು ಮತ್ತು ತರಕಾರಿ ಬೆಳೆಸುತ್ತಾರೆ. ಮರುಭೂಮಿಗೆ ಹೊಂದಿಕೊಳ್ಳಬಲ್ಲ ಪ್ರಾಣಿಗಳು ಮಾತ್ರ ಇಲ್ಲಿವೆ. ಗಜೆಲ್ ಮತ್ತು ಮೊಲ ಪೂರ್ಣ ನಷ್ಟಜೀವಿಗಳಾಗಿಲ್ಲ. ಹಲ್ಲಿಗಳೂ ಮರುಭೂಮಿ ಇಲಿಗಳೂ ಸಾಮಾನ್ಯ. ನೀರಾವರಿ ಪ್ರದೇಶಗಳಲ್ಲಿ ಮುಂಗುಸಿಗಳಿವೆ. ಬಹುಶಃ ಇವನ್ನು ಭಾರತದಿಂದ ತಂದಿರಬೇಕು. ಯುರೋಪ್, ಏಷ್ಯ ಮತ್ತು ಆಫ್ರಿಕ ಮೂಲದ ಅನೇಕ ಬಗೆಯ ಹಕ್ಕಿಗಳು ಇಲ್ಲಿವೆ.

ಮಾನವ ವಸತಿ: ಬಹ್ರೇನ್ ದ್ವೀಪದ ಉತ್ತರದಲ್ಲಿ ನೆಲ ಫಲವತ್ತಾಗಿದೆ. ಇಲ್ಲಿ ನೀರಾವರಿ ಸೌಲಭ್ಯವಿರುವುದರಿಂದ ಖರ್ಜೂರ, ಬಾಳೆ, ನಿಂಬೆ ಜಾತಿಯ ಹಣ್ಣುಗಳು, ಮಾವು ಮುಂತಾದವು ಬೆಳೆಯುತ್ತವೆ. ಮರಗಳ ನೆರಳಿನಲ್ಲಿ ತರಕಾರಿಗಳನ್ನೂ ಅಲ್ಪ ಪ್ರಮಾಣದಲ್ಲಿ ಹುಲ್ಲನ್ನೂ ಬೆಳೆಸಲಾಗುತ್ತದೆ. ದನಗಳೂ ಇವೆ. ಇಲ್ಲಿಯ ಹಳ್ಳಿಗಳಲ್ಲಿಯ ಮನೆಗಳು ಸಾಮಾನ್ಯವಾಗಿ ಸ್ಥಳೀಯವಾಗಿ ದೊರಕುವ ಕಲ್ಲುಗಳಿಂದ ಅಥವಾ ಸಿಮೆಂಟಿನಿಂದ ನಿರ್ಮಿಸಿದವು. ಇವುಗಳ ತಾರಸಿಗಳು ಮಟ್ಟಸವಾಗಿರುತ್ತವೆ. ಮೀನುಗಾರರು ಹಾಗೂ ಬಡವರು ಖರ್ಜೂರದ ಗಿಡಗಳ ಕಡ್ಡಿಗಳಿಂದ ಕಟ್ಟಿದ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ದಕ್ಷಿಣ ಬಹ್ರೇನಿನಲ್ಲಿ ಖಾಯಂ ಜನವಸತಿ ಬಲುವಿರಳ.

ಬಹ್ರೇನ್ ರಾಜ್ಯದ ದೊಡ್ಡ ಪಟ್ಟಣಗಳು ಎರಡು. ಅಲ್-ಮನಾಮಾ ಪಟ್ಟಣ ರಾಜಧಾನಿ. ಜನಸಂಖ್ಯೆ 140401 (2002). ಪೂರ್ವ-ಪಶ್ಚಿಮ ಶೈಲಿಗಳ ಮಿಶ್ರಣ. ಇಲ್ಲಿ ಅನೇಕ ದೊಡ್ಡ ಹೋಟೆಲುಗಳು, ಮುಖ್ಯ ಸರಕಾರಿ ಕಛೇರಿ, ಶಾಲೆ, ಪಾಶ್ಚಾತ್ಯ ಶೈಲಿಯ ಅಂಗಡಿ ಮತ್ತು ಅರಬ್ ಬಜಾರ್ ಇವೆ. ಇದೊಂದು ರೇವು ಪಟ್ಟಣ. ಅಲ್-ಮುಹರ್ಕ್ ಇಂದಿಗೂ ಹಳೆಯ ಅರಬ್ ಶೈಲಿಯಲ್ಲೇ ಇದೆ. ಇದರ ಬೀದಿಗಳು ಕಿರಿದು ಹಾಗೂ ಅಂಕುಡೊಂಕು. ಜನನಿಬಿಡ ಪಟ್ಟಣವಿದು. ಅವಾಲೀಯಲ್ಲಿ ಸಾಲು ಮರಗಳಿಂದ ಕೂಡಿದ ಅಗಲ ರಸ್ತೆಗಳಿವೆ. ಬಹ್ರೇನ್ ಪೆಟ್ರೋಲಿಯಮ್ ಕಂಪೆನಿಯಿಂದ ನಿವೃತ್ತಿಹೊಂದಿದ ನೌಕರರು ಇಲ್ಲಿ ಜಂಗಲ್ ಮಾದರಿಯ ಮನೆಗಳಲ್ಲಿ ವಾಸಿಸುತ್ತಾರೆ. ಇಸ ಪಟ್ಟಣ 1968ರಲ್ಲಿ ಸ್ಥಾಪಿತವಾಯಿತು. ಇಲ್ಲಿ ಸು. 15,000 ಆಧುನಿಕ ರೀತಿಯ ಮನೆಗಳನ್ನು ನಿರ್ಮಿಸಲಾಗಿದೆ.

ಇಲ್ಲಿಯ ಜನರಲ್ಲಿ ಶೇ. 82.5ರಷ್ಟು ಮಂದಿ ಬಹ್ರೇನಿಯನರು, ಶೇ. 5ರಷ್ಟು ಮಂದಿ ಒಮಾನಿಗಳು, ಉಳಿದವರ ಪೈಕಿ ಭಾರತೀಯರೂ ಪಾಕಿಸ್ತಾನಿಗಳೂ ಇರಾನಿಗಳೂ ಮತ್ತು ಬ್ರಿಟಿಷರೂ ಇದ್ದಾರೆ. ಮುಸ್ಲಿಮರಲ್ಲಿ ಸುನ್ನಿಗಳು, ಷಿಯಾಗಳು ಸಮಸಮ ಇದ್ದಾರೆ. ಸುನ್ನಿಗಳು ಅರಸು ಮನೆತನದವರಾಗಿದ್ದು ಶ್ರೀಮಂತರೂ ಪ್ರಭಾವಶಾಲಿಗಳೂ ಆಗಿದ್ದಾರೆ.

ಅರಬ್ಬಿ ಇಲ್ಲಿಯ ಅಧಿಕೃತ ಭಾಷೆ. ಇಂಗ್ಲಿಷ್ ಕೂಡ ಬಳಕೆಯಲ್ಲಿದೆ. (ವಿ.ಎಸ್.ಎ.)

**ಬಳ್ಳಾರಿ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಇವುಗಳ ಮುಖ್ಯ ಪಟ್ಟಣ.

ಜಿಲ್ಲೆ: ಕರ್ನಾಟಕ ರಾಜ್ಯದ ಈಶಾನ್ಯ ಭಾಗದಲ್ಲಿರುವ ಜಿಲ್ಲೆ. ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸಿರುಗುಪ್ಪ, ಸಂಡೂರು-ಇವು ತಾಲ್ಲೂಕುಗಳು, ಜನಸಂಖ್ಯೆ 2025242.

ಜಿಲ್ಲೆಯ ಪಶ್ಚಿಮ, ವಾಯವ್ಯ, ಉತ್ತರ ಮತ್ತು ಈಶಾನ್ಯದಲ್ಲಿ ಗಡಿಯಾಗಿ ಹರಿಯುವ ತುಂಗಭದ್ರಾ ನದಿ ಈ ಜಿಲ್ಲೆಯನ್ನು ಪಶ್ಚಿಮದಲ್ಲಿ ಧಾರವಾಡ ಜಿಲ್ಲೆಯಿಂದಲೂ ಉತ್ತರದಲ್ಲಿ ರಾಯಚೂರು ಜಿಲ್ಲೆಯಿಂದಲೂ ಬೇರ್ಪಡಿಸುತ್ತದೆ. ಜಿಲ್ಲೆಯ ಹೆಚ್ಚು ಭಾಗ ತುಂಗಭದ್ರಾ ನದಿಯ ಕಡೆ ಉತ್ತರಕ್ಕೆ ಇಳಿಜಾರಾಗಿದೆ. ವಾಯವ್ಯದಿಂದ ಆಗ್ನೇಯದವರೆಗೂ ಹಬ್ಬಿರುವ ಸಂಡೂರು ಬೆಟ್ಟಗಳು ಜಿಲ್ಲೆಯನ್ನು ಪೂರ್ವಪಶ್ಚಿಮವಾಗಿ ಎರಡು ಮುಖ್ಯ ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಿವೆ. ಪೂರ್ವಭಾಗ ಬಳ್ಳಾರಿ ಮತ್ತು ಸಿರಗುಪ್ಪ ತಾಲ್ಲೂಕುಗಳನ್ನೊಳಗೊಂಡಿದೆ. ಈ ಪ್ರದೇಶ ಸಮತಟ್ಟಿನ ಹತ್ತಿಬೆಳೆಯುವ ಕಪ್ಪುಮಣ್ಣಿನ ಬಯಲು. ಅಲ್ಲಲ್ಲಿ ಕಲ್ಲು ಬೆಟ್ಟಗಳು ಉಂಟು. ಪಶ್ಚಿಮದಲ್ಲಿ ಕಪ್ಪುಮಣ್ಣಿನ ಬಯಲುಗಳೂ ಹೆಚ್ಚುಭಾಗದಲ್ಲಿ ಮಿಶ್ರಿತ ಮತ್ತು ಕೆಂಪು ಮಣ್ಣಿನ ಪ್ರದೇಶಗಳೂ ಇವೆ. ಇಲ್ಲಿ ಹಡಗಲಿ ತಾಲ್ಲೂಕನ್ನು ಬಿಟ್ಟು ಉಳಿದೆಡೆ ಅಲ್ಲಲ್ಲಿ ಕಾಡು ಮತ್ತು ಬೆಟ್ಟಗುಡ್ಡಗಳು ಕಂಡುಬರುತ್ತವೆ. ಪಶ್ಚಿಮಭಾಗ ಪೂರ್ವಭಾಗಕ್ಕಿಂತ ಹೆಚ್ಚು ಎತ್ತರ, ಇಲ್ಲಿ ಮಳೆಯೂ ಅಧಿಕ. ಸಂಡೂರು ಬೆಟ್ಟಸಾಲು ಮಲ್ಲಾಪುರಮ್ ಬಳಿ ತುಂಗಭದ್ರಾ ನದಿಯ ದಂಡೆಯಿಂದ ಹಿಡಿದು ಆಗ್ನೇಯದ ಕಡೆಗೆ ಸು. 48 ಕಿಮೀ ದೂರ ಹಬ್ಬಿದೆ. ಬೆಟ್ಟಸಾಲಿನ ನಡುವೆ ಒಂದು ಕಡೆ ನಾರಿಹಳ್ಳದ ಎರಡು ಕಮರಿಗಳಿವೆ. ಈ ಶ್ರೇಣಿಯ ದಕ್ಷಿಣ ಭಾಗಕ್ಕಿರುವ ಕುಮಾರಸ್ವಾಮಿ ದೇವಾಲಯವಿರುವ ಬೆಟ್ಟದ ಎತ್ತರ 1036 ಮೀ, ಮಧ್ಯದಲ್ಲಿರುವ ರಾಮನ ಮಲೈ ಎತ್ತರ 992 ಮೀ, ತೀರ ಉತ್ತರದಲ್ಲಿರುವ ಜಂಬುನಾಥ ಶಿಖರದ ಎತ್ತರ 908 ಮೀ. ಸಂಡೂರು

ಬೆಟ್ಟಸಾಲಿನ ಪೂರ್ವಕ್ಕೆ ವಾಯವ್ಯದಿಂದ ಆಗ್ನೇಯಕ್ಕೆ ಹಬ್ಬಿರುವ ಸುಗ್ಗ ಮಹದೇವಿ ಬೆಟ್ಟ ಅಥವಾ ತಾಮ್ರಪರ್ವತ ಶ್ರೇಣಿ ದರೋಜಿ ಕೆರೆಯವರೆಗೂ ಸು. 42 ಕಿಮೀ ಉದ್ದಕ್ಕೆ ವ್ಯಾಪಿಸಿದೆ. ಇದರಲ್ಲಿಯ ಅತ್ಯುನ್ನತ ಶಿಖರದ ಎತ್ತರ ಸು. 1002 ಮೀ. ಸಂಡೂರು ಬೆಟ್ಟ ಸಾಲಿಗೆ ನೈಋತ್ಯಕ್ಕೆ ಸು. 48 ಕಿಮೀ ದೂರದಲ್ಲಿರುವ ಮಲ್ಲಪ್ಪನ ಗುಡ್ಡದ ಶ್ರೇಣಿ ಹಡಗಲಿ ತಾಲ್ಲೂಕಿನಲ್ಲಿ ವ್ಯಾಪಿಸಿದೆ. ಇದು ತುಂಗಭದ್ರಾ ಬಳಿ ಹೊನ್ನೂರಿನ ಹತ್ತಿರ ಪ್ರಾರಂಭವಾಗಿ ಆಗ್ನೇಯದ ಕಡೆಗೆ ಹಬ್ಬಿದೆ.

ಬಳ್ಳಾರಿ ಜಿಲ್ಲೆಯ ನದಿಗಳಲ್ಲಿ ತುಂಗಭದ್ರಾ ಮತ್ತು ಇದರ ಉಪನದಿಗಳಾದ ಹಗರಿ ಮತ್ತು ಚಿಕ್ಕಹಗರಿಗಳು ಮುಖ್ಯವಾದವು. ತುಂಗಭದ್ರಾ ನದಿ ಜಿಲ್ಲೆಯ ಪಶ್ಚಿಮ ಮತ್ತು ಉತ್ತರದ ಅಂಚಿನಲ್ಲಿ ಗಡಿ ರೇಖೆಯಾಗಿ ಹರಿಯುತ್ತದೆ. ಇವುಗಳ ಜೊತೆಗೆ ಈ ಜಿಲ್ಲೆಯಲ್ಲಿ ಅನೇಕ ದೊಡ್ಡ ಸಣ್ಣ ಕೆರೆಗಳೂ ಇವೆ.




ಈ ಜಿಲ್ಲೆಯಲ್ಲಿ ಮಳೆ ಕಡಿಮೆ ಬೀಳುವುದರಿಂದ ದಟ್ಟ ಅರಣ್ಯಗಳಿಲ್ಲ. ಸಂಡೂರು ತಾಲ್ಲೂಕಿನ ಬೆಟ್ಟಪ್ರದೇಶಗಳನ್ನು ಬಿಟ್ಟರೆ ಉಳಿದೆಡೆ ಗಿಡಮರಗಳು ವಿರಳ. ಅರಣ್ಯಪ್ರದೇಶ ಜಿಲ್ಲೆಯ ಒಟ್ಟು ವಿಸ್ತೀರ್ಣದ ಸು. ಶೇ. 16 ಮಾತ್ರ. ಇದರಲ್ಲಿ ಸ್ವಲ್ಪಭಾಗ ಎಲೆ ಉದುರುವ ಕಾಡಿನಿಂದಲೂ ಉಳಿದ ಹೆಚ್ಚುಭಾಗ ಕುರುಚಲು ಕಾಡಿನಿಂದಲೂ ಕೂಡಿದೆ. ಇಲ್ಲಿ ಕಮ್ಮರ, ದಿಂಡಿಗ, ಹರಗಲು ಹಾಗೂ ಇತರ ಸಣ್ಣಜಾತಿಯ ಮರಗಳಿವೆ. ಸಂಡೂರು ಶ್ರೇಣಿಯಲ್ಲಿ ಮಾತ್ರ ಶ್ರೀಗಂಧ ಮತ್ತು ಬೀಟೆ ಮರಗಳಿವೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಈಚಲು ಗಣನೀಯವಾಗಿ ಕಂಡುಬರುತ್ತದೆ. ಜಿಲ್ಲೆಯ ಪೂರ್ವದ ಕಡೆ ಕುರುಚಲು ಕಾಡುಗಳಿವೆ. ಕಾಡುಗಳಲ್ಲಿ ಹುಣಿಸೆ, ಬೇವು, ಮಾವು, ತೂಪರ, ಸೀತಾಫಲ ಮುಂತಾದವು ಬೆಳೆಯುತ್ತವೆ. ಜೇನು ಮತ್ತು ದಿಂಡಿಗದ ಅಂಟು ದೊರೆಯುವುದುಂಟು. ಕಡವೆ, ಜಿಂಕೆ, ಕಾಡುಹಂದಿ, ಚಿರತೆ ಮೊದಲಾದವು ಕಂಡುಬರುತ್ತವೆ. ಹಿಂದೆ ಸಂಡೂರು ತಾಲ್ಲೂಕಿನಲ್ಲಿ ಹುಲಿಗಳು ಆಗಾಗ ಕಾಣಿಸಿಕೊಳ್ಳುತ್ತಿದ್ದುವು. ಇಲ್ಲಿಯ ಕಾಡುಗಳಲ್ಲಿ ಕಾಡುಕುರಿಗಳೂ ಇವೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಕರಡಿಗಳಿವೆ. ಜಿಂಕೆ, ಕಿರುಬ ಮತ್ತು ತೋಳಗಳು ಇವೆ.

ಈ ಜಿಲ್ಲೆಯಲ್ಲಿ ಕಬ್ಬಿಣ, ಮ್ಯಾಂಗನೀಸ್, ತಾಮ್ರ ಮತ್ತು ಸೀಸದ ನಿಕ್ಷೇಪಗಳಿವೆ. ಜಿಪ್ಸಮ್, ಮ್ಯಾಗ್ನಸೈಟ್, ಕ್ಯಾಲ್ಸೈಟ್, ಗ್ರಾನೈಟ್ ಬೆಣಚುಕಲ್ಲು, ಕಲ್ನಾರು, ಕುರುಂಗದ ಕಲ್ಲು, ಕಾವಿಮಣ್ಣು, ಸೋಪಿನಕಲ್ಲು, ಜೇಡಿಮಣ್ಣು ಮೊದಲಾದ ಸಂಪನ್ಮೂಲಗಳಿವೆ. ಸಂಡೂರು ಶ್ರೇಣಿಯಲ್ಲಿ ಬಳ್ಳಾರಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಕಬ್ಬಿಣದ ಅದಿರು ಹೆಚ್ಚಾಗಿ ಕಂಡುಬರುತ್ತದೆ. ಜಿಲ್ಲೆಯಲ್ಲಿ ಒಟ್ಟು 1,000 ದಿಂದ 1,250 ಮಿ ಟನ್ ಕಬ್ಬಿಣದ ಅದಿರು ಇದೆ ಎಂದು ಅಂದಾಜು. ಸಂಡೂರು, ಹೊಸಪೇಟೆ ತಾಲ್ಲೂಕಿನಲ್ಲಿ ಮ್ಯಾಂಗನೀಸ್ ಅದಿರು ಹೆಚ್ಚಾಗಿದೆ. ಹೊಸಪೇಟೆ ತಾಲ್ಲೂಕಿನಲ್ಲಿ ಸೀಸದ ಅದಿರು ಇದೆ.

ಈ ಜಿಲ್ಲೆಯಲ್ಲಿ ವರ್ಷದ ಹೆಚ್ಚು ಕಾಲ ಒಣಹವೆ ಇರುತ್ತದೆ. ಮಾರ್ಚಿಯಿಂದ ಮೇ ತನಕ ಬೇಸಗೆಯ ಉಷ್ಣಾಂಶ ಹೆಚ್ಚು. ಜೂನ್‌ನಿಂದ ನವೆಂಬರ್‌ವರೆಗೆ ಮಳೆಗಾಲ. ಡಿಸೆಂಬರ್‌ನಿಂದ ಫೆಬ್ರವರಿಯ ತನಕ ಒಣಹವೆ ಇದ್ದು ತಂಪಾಗಿರುತ್ತದೆ. ಉಷ್ಣತೆ ಕಡಿಮೆ ಇರುವ ಡಿಸೆಂಬರ್ ತಿಂಗಳಲ್ಲಿ ಸರಾಸರಿ ದಿನದ ಗರಿಷ್ಠ ಉಷ್ಣತೆ $29.7^{0}$ಸೆ ಇದ್ದರೆ ಸರಾಸರಿ ದಿನದ ಕನಿಷ್ಠ ಉಷ್ಣತೆ $16.7^{0}$ಸೆ ಇರುತ್ತದೆ. ಅತ್ಯಂತ ತಾಪಭರಿತ ಏಪ್ರಿಲ್ ತಿಂಗಳಲ್ಲಿನ ದಿನದ ಗರಿಷ್ಠ ಉಷ್ಣತೆ $39.2^{0}$ಸೆ ಮತ್ತು ದೈನಿಕ ಕನಿಷ್ಠ ಉಷ್ಣತೆ $25.2^{0}$ಸೆ ಇರುತ್ತದೆ. ಈ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 52 ಸೆಂಮೀ.

ಈ ಜಿಲ್ಲೆಯ ಒಟ್ಟು ವಿಸ್ತೀರ್ಣದ ಅರ್ಧದಷ್ಟು ಭಾಗವನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ. ಇದರಲ್ಲಿ ಆಹಾರ ಬೆಳೆಗಳಾದ ಬತ್ತ, ಜೋಳ, ರಾಗಿ, ಸಜ್ಜೆ, ದ್ವಿದಳಧಾನ್ಯಗಳು, ಕಬ್ಬು, ತೆಂಗು, ಕಡಲೆಕಾಯಿ ಮತ್ತು ಹತ್ತಿಗಳನ್ನು ಬೆಳೆಯುತ್ತಾರೆ. ಬಾಳೆ, ಮಾವು, ನಿಂಬೆ ಮೊದಲಾದ ಹಣ್ಣುಗಳನ್ನೂ ಮೆಣಸಿನಕಾಯಿ, ಈರುಳ್ಳಿ, ಟೊಮ್ಯಾಟೊ, ಬದನೆಕಾಯಿ ಮುಂತಾದ ತರಕಾರಿ ಬೆಳೆಗಳನ್ನೂ ಬೆಳೆಯುತ್ತಾರೆ. ತೋಟಗಾರಿಕೆ ಇಲಾಖೆ ತೆಂಗು ಮತ್ತು ಗೋಡಂಬಿ ಬೆಳೆಯುವ ಪ್ರದೇಶವನ್ನು ವಿಸ್ತರಿಸುವ ಯೋಜನೆಯನ್ನು ಹಮ್ಮಿಕೊಂಡಿದೆ.

ಬಳ್ಳಾರಿ ಜಿಲ್ಲೆ ಇಂದು ಅಧಿಕ ಪ್ರಮಾಣದಲ್ಲಿ ನೀರಾವರಿ ಸೌಕರ್ಯ ಪಡೆದಿರುವ ಜಿಲ್ಲೆಗಳ ಪೈಕಿ ಒಂದು. ತುಂಗಭದ್ರಾ ಜಲಾಶಯ ಯೋಜನೆ ಕಾರ್ಯಗತವಾದಾಗ (1953) ಈ ಜಿಲ್ಲೆಯಲ್ಲಿ ಹಸುರುಕ್ರಾಂತಿ ಪ್ರಾರಂಭವಾಯಿತು. 1970–71ರ ಹೊತ್ತಿಗೆ ಸು. 73,385 ಹೆ. ಪ್ರದೇಶಕ್ಕೆ ನೀರಾವರಿ ಒದಗಿತ್ತು. ಅದರಲ್ಲಿ ತುಂಗಭದ್ರಾ ಜಲಾಶಯ ಮತ್ತು ಭದ್ರಾ ಯೋಜನೆಗಳಿಂದ ಕ್ರಮವಾಗಿ 37,150 ಹೆ. ಮತ್ತು 4,047 ಹೆ.; ಹಾಗೆಯೇ ವಿಜಯನಗರ ಕಾಲದಲ್ಲಿ ನಿರ್ಮಿಸಿದ ನಾಲೆಗಳಿಂದ ಸು. 7,120, ಹಗರಿಬೊಮ್ಮನಹಳ್ಳಿ ಯೋಜನೆಯಿಂದ 2,975, ಹಳೆಯ ಕೆರೆಗಳಿಂದ 7,298, ಹೊಸ ಕೆರೆಗಳಿಂದ 2,069 ಮತ್ತು ಮತ್ತಿತರ ಸಾಧನಗಳಿಂದ 973 ಹೆ.ಗಳು.

ಹಗರಿ ಮತ್ತು ಸಿರುಗುಪ್ಪ ಬಳಿ 1906 ಮತ್ತು 1937ರಷ್ಟು ಹಿಂದೆಯೇ ಆಗಿನ ಮದರಾಸು ಸರ್ಕಾರ ಪ್ರಾರಂಭಿಸಿದ ವ್ಯವಸಾಯ ಸಂಶೋಧನ ಕೇಂದ್ರಗಳಿವೆ. ಬಳ್ಳಾರಿಯಲ್ಲಿ 1954ರಲ್ಲಿ ಕೇಂದ್ರ ಸರ್ಕಾರ ಸ್ಥಾಪಿಸಿದ ದಕ್ಷಿಣ ಪ್ರಾದೇಶಿಕ ಮಣ್ಣು ಸಂರಕ್ಷಣ ಸಂಶೋಧನ ಉಪಕೇಂದ್ರವಿದೆ. ಹೊಸಪೇಟೆ ತಾಲ್ಲೂಕಿನ ಕಂಪ್ಲಿಯಲ್ಲಿ ವ್ಯವಸಾಯ ತರಬೇತಿ ಶಾಲೆ ಇದೆ. ಜಿಲ್ಲೆಯ ಈ ವಿವಿಧ ಸಂಸ್ಥೆಗಳ ಜತೆಗೆ ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ಸೇರಿಕೊಂಡು ಈ ಜಿಲ್ಲೆಯ ವ್ಯವಸಾಯಕ್ಷೇತ್ರದಲ್ಲಿ ವೈಜ್ಞಾನಿಕ ಸಾಗುವಳಿ ಹಾಗೂ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಲು ಸಹಾಯಕವಾಗಿವೆ. 1970–71ರಿಂದ ಒಣಭೂಮಿ ವ್ಯವಸಾಯಾಭಿವೃದ್ಧಿ ಯೋಜನೆಯನ್ನೂ ಪ್ರಾರಂಭಿಸಲಾಗಿದೆ.

ಮೀನುಗಾರಿಕೆಗೂ ಈ ಜಿಲ್ಲೆಯಲ್ಲಿ ತುಂಬ ಅವಕಾಶಗಳಿವೆ. ತುಂಗಭದ್ರಾ ಜಲಾಶಯದಲ್ಲೇ ವರ್ಷಕ್ಕೆ ಸು. 600 ಟನ್ನುಗಳಷ್ಟು ಮೀನು ಹಿಡಿಯಲಾಗುತ್ತಿದೆ. ಜಿಲ್ಲೆಯಲ್ಲಿ ಅನೇಕ ಪಶುವೈದ್ಯಾಲಯಗಳೂ ಕೃತಕ ಗರ್ಭಧಾರಣ ಕೇಂದ್ರಗಳೂ ಇವೆ. ಕುರಿಕುಪ್ಪಿಯಲ್ಲಿ 1948–49ರಲ್ಲಿ ಆಗಿನ ಮದರಾಸು ಸರ್ಕಾರ ಸ್ಥಾಪಿಸಿದ ಕುರಿ ಮತ್ತು ದನದ ಸಂಯುಕ್ತ ಫಾರಮ್ ಇದೆ. ಕುರಿಕುಪ್ಪಿ ಫಾರಮಿಗೆ ಸೇರಿದಂತೆ ಕೋಳಿ ಸಾಕಣೆ ಕೇಂದ್ರ ಪ್ರಾರಂಭವಾಗಿದೆ.

ಬಳ್ಳಾರಿ ಜಿಲ್ಲೆ ಕೈಗಾರಿಕಾ ಕ್ಷೇತ್ರದಲ್ಲೂ ಗಣನೀಯ ಸ್ಥಾನಗಳಿಸಿದೆ. ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ತಾಲ್ಲೂಕುಗಳಲ್ಲಿ ಸು. 21 ಗಣಿಗಳಿವೆ. ಇಲ್ಲಿ ಕಬ್ಬಿಣ, ಮ್ಯಾಂಗನೀಸ್ ಅದಿರುಗಳು ಹಾಗೂ ರೆಡ್ ಆಕ್ಸೈಡುಗಳನ್ನು ತೆಗೆಯಲಾಗುತ್ತದೆ. ಸಂಡೂರು ತಾಲ್ಲೂಕಿನಲ್ಲಿ ಉತ್ಪಾದನೆಯಾದ ಮ್ಯಾಂಗನೀಸ್ ಅದಿರು ಕಾರವಾರ, ಮರ್ಮಗೋವ ಮತ್ತು ಚೆನ್ನೈ ಬಂದರುಗಳ ಮೂಲಕ ರಫ್ತಾಗುತ್ತದೆ. ಹೊಸಪೇಟೆ ಮತ್ತು ಕಂಪ್ಲಿಗಳಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಇವುಗಳ ಉಪ ಉತ್ಪನ್ನಗಳಿಂದ ಸ್ಪಿರಿಟ್ ಮತ್ತು ಮಾದಕ ಪಾನೀಯಗಳನ್ನು ತಯಾರಿಸುವ ಒಂದು ಕಾರ್ಖಾನೆ ಹೊಸಪೇಟೆಯಲ್ಲಿದೆ. ಕಂಪ್ಲಿ ಸಕ್ಕರೆ ಕಾರ್ಖಾನೆ ಸಹಕಾರಿ ವ್ಯವಸ್ಥೆಯಿಂದ ಸ್ಥಾಪನೆಯಾದ ಸಕ್ಕರೆ ಕಾರ್ಖಾನೆಗಳಲ್ಲಿ ಇಡೀ ರಾಜ್ಯದಲ್ಲೇ ಮೊಟ್ಟಮೊದಲನೆಯದು. ತುಂಗಭದ್ರಾ ಉಕ್ಕಿನ ಉತ್ಪನ್ನಗಳ ಕಾರ್ಯಾಗಾರ ಹೊಸಪೇಟೆಯಲ್ಲಿದೆ. ಇದು ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಕೇಂದ್ರ ಸರ್ಕಾರಗಳ ಪಾಲುದಾರಿಕೆಯಲ್ಲಿ ನಡೆಯುತ್ತಿದೆ. ಹೊಸಪೇಟೆ ತಾಲ್ಲೂಕಿನ ತೋರಣಗಲ್ಲಿನಲ್ಲಿ ಕೇಂದ್ರ ಸರ್ಕಾರದಿಂದ ಯೋಜಿತವಾಗಿರುವ ವಿಜಯನಗರ ಉಕ್ಕಿನ ಕಾರ್ಖಾನೆ ಜಿಲ್ಲೆಯ ಭಾರಿ ಉದ್ಯಮ. ಎಂ.ಜಿ.ಆಟೊಮೊಬೈಲ್ಸ್ ಎಂಜಿನಿಯರಿಂಗ್ ಕಂಪನಿ (1924) ಜಿಲ್ಲೆಯ ಬೃಹತ್ ಉದ್ಯಮಗಳಲ್ಲೊಂದು. ಇದು ತಿಂಗಳಿಗೆ 30 ಬಸ್‌ಗಳಿಗೆ ಹೊಸ ಮೈಕಟ್ಟುಗಳನ್ನು ನಿರ್ಮಿಸುವ ಸಾಮರ್ಥ್ಯ ಪಡೆದಿದೆ.

ಈ ಜಿಲ್ಲೆಯಿಂದ ಹತ್ತಿ, ನೆಲಗಡಲೆ, ಸಕ್ಕರೆ, ಜೋಳ, ಬತ್ತ, ಈರುಳ್ಳಿ, ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು, ಜಮಖಾನಗಳು, ಉಣ್ಣೆಕಂಬಳಿ ಮೊದಲಾದವು ರಫ್ತಾಗುತ್ತವೆ. ಹತ್ತಿಬಟ್ಟೆಗಳು, ಸಿಮೆಂಟ್, ಗೋದಿ, ಮಸಾಲೆ ಸಾಮಾನುಗಳು, ಮರಮುಟ್ಟು ಆಭರಣಗಳು, ಟೀ, ಕಾಫಿಬೀಜ, ಯಂತ್ರೋಪಕರಣಗಳು, ಔಷಧಿಗಳು, ಕಾಗದ ಮತ್ತಿತರ ವಸ್ತುಗಳನ್ನು ತರಿಸಿಕೊಳ್ಳಲಾಗುತ್ತದೆ. ಆಂತರಿಕ ವ್ಯಾಪಾರಕ್ಕೆ ಬಳ್ಳಾರಿ ಹೊಸಪೇಟೆ ಮತ್ತು ಕೊಟ್ಟೂರುಗಳು ಮುಖ್ಯ ಕೇಂದ್ರಗಳಾಗಿವೆ. ತಾಲ್ಲೂಕು ಕೇಂದ್ರಗಳಲ್ಲೂ ಸಗಟು ವ್ಯಾಪಾರ ನಡೆಯುತ್ತದೆ. ಹತ್ತಿ, ಕಡಲೆಕಾಯಿ, ಕಡಲೆಕಾಯಿ ಎಣ್ಣೆ, ಜೋಳ, ದ್ವಿದಳದಾನ್ಯ, ಕಂಬಳಿ ಮುಂತಾದವು ಸಗಟು ವ್ಯಾಪಾರದ ಪ್ರಮುಖ ವಸ್ತುಗಳು. ಈ ಜಿಲ್ಲೆಯಲ್ಲಿ ಸು. 40 ಸ್ಥಳಗಳಲ್ಲಿ ವಾರಕ್ಕೊಮ್ಮೆ ಸಂತೆಗಳು ನಡೆಯುತ್ತವೆ. ಈ ಸಂದರ್ಭಗಳಲ್ಲಿ ನಡೆಯುವ ಜಾನುವಾರು ವ್ಯಾಪಾರ ಪ್ರಮುಖವಾದದ್ದು. ಜಿಲ್ಲೆಯ ಅನೇಕ ಸ್ಥಳಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳಿವೆ.

ತಾಲ್ಲೂಕು: ಜಿಲ್ಲೆಯ ಪೂರ್ವದಂಚಿನಲ್ಲಿ ಇರುವ ಈ ತಾಲ್ಲೂಕು ಮೋಕ, ಬಳ್ಳಾರಿ, ರೂಪನಗುಡಿ, ಕೋಳೂರು, ಕುರುಗೋಡು ಹೋಬಳಿಗಳನ್ನೊಳಗೊಂಡು ಒಟ್ಟು 104 ಗ್ರಾಮಗಳೂ ಇವೆ. ವಿಸ್ತೀರ್ಣ 1.681 ಚ.ಕಿಮೀ. ಜನಸಂಖ್ಯೆ 625429.

ಪಟ್ಟಣ: ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರವಾಗಿರುವ ಬಳ್ಳಾರಿ ಬೆಂಗಳೂರು–ರಾಯಚೂರು ಹೆದ್ದಾರಿಯಲ್ಲಿ ಬೆಂಗಳೂರಿನಿಂದ ಉತ್ತರಕ್ಕೆ 314 ಕಿಮೀ ದೂರದಲ್ಲಿದೆ. ಗುಂತಕಲ್ಲು–ಹುಬ್ಬಳ್ಳಿ ರೈಲುಮಾರ್ಗ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. ಪಟ್ಟಣದ ಜನಸಂಖ್ಯೆ 3,17,000.

ಜಿಲ್ಲಾ ಕೇಂದ್ರವಾಗಿ ಅನೇಕ ಸರ್ಕಾರಿ ಕಚೇರಿಗಳು ಮತ್ತು ಸಂಸ್ಥೆಗಳನ್ನು ಹೊಂದಿರುವ ಬಳ್ಳಾರಿ ಪಟ್ಟಣ ಕೈಗಾರಿಕೆ ಮತ್ತು ವಾಣಿಜ್ಯದಲ್ಲೂ ಮುಖ್ಯ ಸ್ಥಾನ ಪಡೆದಿದೆ. ಈ ಜಿಲ್ಲೆಯ ತುಂಗಭದ್ರಾ ಜಲಾಶಯ ಯೋಜನೆ, ಗಣಿ ಉದ್ಯಮಗಳು, ಉಕ್ಕಿನ ಕಾರ್ಖಾನೆಗಳು ಬಳ್ಳಾರಿಯ ಬೆಳೆವಣಿಗೆಗೆ ಪೂರಕವಾಗಿವೆ. ಆಟೋಮೊಬೈಲ್, ನೂಲುವ ಮತ್ತು ನೇಯ್ಗೆ ಕಾರ್ಖಾನೆಗಳು, ಎಣ್ಣೆ ತಯಾರಿಕಾ ಘಟಕಗಳು, ಬಳೆ, ಉಡುಪು ತಯಾರಿಕೆ ಉದ್ಯಮ, ಹೊಗೆಸೊಪ್ಪು ಸಿದ್ಧಪಡಿಸುವ ಕೇಂದ್ರಗಳು, ಎಂಜಿನಿಯರಿಂಗ್ ಕಾರ್ಯಾಗಾರಗಳು, ಮರದ ಕೈಗಾರಿಕೆಗಳು, ಮುದ್ರಣ, ಚರ್ಮ ಮತ್ತು ರಬ್ಬರ್ ವಸ್ತುಗಳ ತಯಾರಿಕಾ ಕೇಂದ್ರಗಳು, ರಾಸಾಯನಿಕ ವಸ್ತುಗಳ ತಯಾರಿಕಾ ಘಟಕಗಳು, ಪ್ಲಾಸ್ಟಿಕ್ ಮತ್ತು ಕೈಮಗ್ಗ ತಾಂತ್ರಿಕ ಕಾಲೇಜು, ಆಯುರ್ವೇದ ಕಾಲೇಜು, ಕಲೆ, ವಿಜ್ಞಾನ ಮತ್ತು ವಾಣಿಜ್ಯ ವೈದ್ಯಶಾಲೆ, ಸಹಕಾರ ಸಂಘಗಳು ಇಲ್ಲಿ ಸ್ಥಾಪಿತವಾಗಿವೆ. ವಿದ್ಯುಚ್ಛಕ್ತಿ, ಅಂಚೆತಂತಿ, ದೂರವಾಣಿ ಸೌಲಭ್ಯಗಳಿವೆ. ರಕ್ಷಿತ ಕುಡಿಯುವ ನೀರು ಸರಬರಾಜಿದೆ. *

**ಬಾಂಗ್ಲಾದೇಶ:** ದಕ್ಷಿಣ ಏಷ್ಯದ ಒಂದು ಗಣರಾಜ್ಯ. ಗಂಗ–ಬ್ರಹ್ಮಪುತ್ರ ನದೀ ಮುಖಜ ಭೂಪ್ರದೇಶದಲ್ಲಿದೆ. $24^0$–$26^0$ ಉ.ಅ. ಮತ್ತು $88^0$–$93^0$ ಪೂ.ರೇ. ದಲ್ಲಿ ಹಬ್ಬಿದೆ. ಉತ್ತರದಿಂದ ದಕ್ಷಿಣಕ್ಕೆ 747 ಕಿಮೀ ಪೂರ್ವದಿಂದ ಪಶ್ಚಿಮಕ್ಕೆ 463 ಕಿಮೀ ಇರುವ ಇದರ ಒಟ್ಟು ವಿಸ್ತೀರ್ಣ 1,48,393 ಚ.ಕಿಮೀ. ಜನಸಂಖ್ಯೆ, 15,35,46,901 (2009) ರಾಜಧಾನಿ ಢಾಕ. 1947 ರಿಂದ ಪಾಕಿಸ್ತಾನದ ಒಂದು ಭಾಗವಾಗಿದ್ದ ಈ ದೇಶ 1971 ರಲ್ಲಿ ಸ್ವತಂತ್ರ ಗಣರಾಜ್ಯವಾಯಿತು.




ಭೌತಿಕಲಕ್ಷಣ: ಈ ದೇಶದ ಮುಖ್ಯ ಮೇಲ್ಮೈ ಲಕ್ಷಣವೆಂದರೆ ಅದರ ನದೀ ವ್ಯವಸ್ಥೆ. ಅಲ್ಲಿಯ ಭೌತಲಕ್ಷಣವನ್ನೇ ಅಲ್ಲದೆ ಜನಜೀವನದ ಮೇಲೂ ಈ ವ್ಯವಸ್ಥೆ ವಿಶೇಷ ಪ್ರಭಾವ ಬೀರಿದೆ. 1. ಗಂಗ ಅಥವಾ ಪದ್ಮ 2. ಮೇಘನ ಮತ್ತು ಸುರ್ಮಾ 3. ಬ್ರಹ್ಮಪುತ್ರ ಮತ್ತು ಅದರ ಕವಲುಗಳು 4. ಉತ್ತರದ ನದಿಗಳು ಮತ್ತು 5. ಚಿತ್ತಗಾಂಗ್ ಬೆಟ್ಟಗಾಡಿನ ಹಾಗೂ ಬಯಲು ಸೀಮೆಯ ನದಿಗಳು ಎಂದು ಇಲ್ಲಿಯ ನದಿಗಳನ್ನು ಐದು ಭಾಗಗಳಾಗಿ ವಿಂಗಡಿಸಬಹುದು.

ಗಂಗಾನದಿ ಬಂಗಾಲದ ನದೀಮುಖಜ ಭೂಪ್ರದೇಶದ ಶಿಖೆಯಂತಿದೆ. ಇದು ಬ್ರಹ್ಮಪುತ್ರ ನದಿಯ ಕವಲೊಂದಿಗೆ ಸೇರಿ ಪದ್ಮ ಎನಿಸಿದೆ. ಈ ನದಿಯೂ ಇದರ ಉಪನದಿಗಳೂ ಪಶ್ಚಿಮ ಬಂಗಾಲದ ಕುಷ್ಟಿಯಾ, ಜೆಸ್ಸೂರ್, ಖುಲ್ನಾ, ಫರೀದ್‌ಪುರ, ಪಟುವಾಖಾಲಿ ಮತ್ತು ಬೇಕರ್‌ಗಂಜ್ ಜಿಲ್ಲೆಗಳಲ್ಲಿ ಹರಿಯುತ್ತವೆ. ಈ ನದಿ ರಾಜಶಾಹಿ ಜಿಲ್ಲೆಯ ಪಶ್ಚಿಮದ ತುದಿಯಲ್ಲಿ ಬಾಂಗ್ಲಾದೇಶವನ್ನು ಪ್ರವೇಶಿಸಿ ಸು. 150 ಕಿಮೀ ದೂರ ಭಾರತ–ಬಾಂಗ್ಲಾ ದೇಶಗಳ ನಡುವಣ ಗಡಿಯಾಗಿ ಹರಿಯುತ್ತದೆ.

ಸಿಲ್ಹೆಟ್–ಸುರ್ಮಾ ಮತ್ತು ಕುಸಿಯಾರ ನದಿಗಳು ಕೂಡಿ ಮೇಘನ ಆಗಿದೆ. ಇವೆರಡೂ ನದಿಗಳು ಬರಾಕ್ ನದಿಯ ಕವಲುಗಳು. ಇವು ಭಾರತದ ಮಣಿಪುರ ಪ್ರದೇಶದಲ್ಲಿ ಹುಟ್ಟುತ್ತವೆ. ಇದರ ಮುಖ್ಯ ಕವಲಾದ ಸುರ್ಮಾ ನದಿಯನ್ನು ಸಿಲ್ಹೆಟ್ ಜಿಲ್ಲೆಯಲ್ಲಿ ಕಾಳಿನಿ ನದಿ ಕೂಡುತ್ತದೆ. ಇನ್ನೂ ಕೆಳಗೆ ಕುಸಿಯಾರ ನದಿ ಸಂಗಮಿಸುತ್ತದೆ. ಜಮುನಾ ನದಿಯ ಒಂದು ಶಾಖೆಯಾದ ಧವಲೇಶ್ವರಿ ನದಿಯನ್ನು ಕೂಡಿಕೊಂಡ ಮೇಲೆ ಮೇಘನ ನದಿ ಗಂಗೆಯೊಂದಿಗೆ ಸೇರಿ ಮುಂದುವರಿದು ಬುರ್ಹಿ ಗಂಗ ಮುಂತಾದ ಅನೇಕ ನದಿಗಳನ್ನು ಕೂಡಿ ವಿಶಾಲವಾಗಿ ಹರಿಯುತ್ತದೆ.

ಬ್ರಹ್ಮಪುತ್ರ ಮತ್ತು ಅದರ ಹಲವು ಕವಲುಗಳು ಉತ್ತರ ಬಂಗಾಲದ ಜಿಲ್ಲೆಗಳ ಪೂರ್ವಭಾಗಗಳಿಂದ ಹಿಡಿದು ಆಗ್ನೇಯದ ಮೇಘನ ನದಿಯವರೆಗೆ ವಿಶಾಲವಾದ ಪ್ರದೇಶವನ್ನು ಆವರಿಸಿಕೊಂಡಿವೆ. ಬ್ರಹ್ಮಪುತ್ರದ ದಕ್ಷಿಣದ ಭಾಗಕ್ಕೆ ಜಮುನ ಎಂಬ ಹೆಸರಿದೆ. ಪೂರ್ವ ಭಾಗದಿಂದ ಹಲವಾರು ನದಿಗಳು ಇದನ್ನು ಸೇರಿಕೊಳ್ಳುತ್ತವೆ. ಪದೇ ಪದೇ ದಡಮೀರಿ ಹರಿದು ಪಾತ್ರವನ್ನು ಬದಲಿಸುವ ಬ್ರಹ್ಮಪುತ್ರದಿಂದ ಬಾಂಗ್ಲಾದೇಶದ ಉತ್ತರ–ದಕ್ಷಿಣ ಭಾಗಗಳ ನಡುವಣ ಸಂಪರ್ಕಕ್ಕೆ ತೊಡಕು ಉಂಟಾಗುತ್ತಿರುತ್ತದೆ.

ಬಾಂಗ್ಲಾದೇಶದ ಉತ್ತರ ಜಿಲ್ಲೆಗಳಿಗೆ ನೀರುಣಿಸುವ ಪ್ರಮುಖ ನದಿ ತಿಸ್ತ. ಭಾರತದ ಡಾರ್ಜಿಲಿಂಗ್ ಬಳಿ ಹಿಮಾಲಯದಲ್ಲಿ ಉಗಮಿಸುವ ಈ ನದಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. 1787ರಲ್ಲಿ ಇದು ಪಾತ್ರ ಬದಲಿಸಿದ್ದರಿಂದ ಉತ್ತರ ಬಂಗಾಲದ ಹಲವು ನದಿಗಳಿಗೆ ನೀರಿನ ಆಕರಗಳು ಕಡಿದುಹೋದವು. ಇದರ ಫಲವಾಗಿ ಆ ಪ್ರದೇಶದ ಜಲೋತ್ಸಾರಣ ವ್ಯವಸ್ಥೆ ಹದಗೆಟ್ಟಿತು. ಈ ನದಿಗಳ ಪಾತ್ರಗಳಲ್ಲಿ ಮರಳು ತುಂಬಿಕೊಳ್ಳುತ್ತಿದೆ. ನೈಋತ್ಯ ಭಾಗದ ಅನೇಕ ಸಣ್ಣ ಹಾಗೂ ಮಧ್ಯಮ ಗಾತ್ರದ ನದಿಗಳ ಪಾತ್ರಗಳೂ ಮುಚ್ಚಿಹೋಗುತ್ತಿವೆ. ಚಿತ್ತಗಾಂಗ್ ಗುಡ್ಡಗಾಡು ಮತ್ತು ನೆರೆಯ ಬಯಲುಸೀಮೆಯ ನದೀ ವ್ಯವಸ್ಥೆಯ ಪ್ರಮುಖ ನದಿಗಳು ನಾಲ್ಕು : ಫೇನಿ, ಕರ್ಣಫುಲಿ, ಸಾಂಗು ಮತ್ತು ಮಾತಾ ಮುಹರಿ. ಇವು ಪಶ್ಚಿಮ ಹಾಗೂ ನೈಋತ್ಯಾಭಿಮುಖವಾಗಿ ಹರಿದು ಬಂಗಾಲಕೊಲ್ಲಿಯನ್ನು ಸೇರುತ್ತವೆ.

ಬಾಂಗ್ಲಾ ದೇಶವನ್ನು 20 ಸ್ವಾಭಾವಿಕ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ 11 ಪ್ರದೇಶಗಳನ್ನು ಮುಖ್ಯವೆಂದು ಪರಿಗಣಿಸಲಾಗಿದೆ.

ಬಾರಿಂದ್ ಪ್ರದೇಶ: ಗಂಗ–ಬ್ರಹ್ಮಪುತ್ರ ನದಿಗಳ ನಡುವಣ ಈಗಿನ ರಾಜಶಾಹಿ ವಿಭಾಗ. ಈ ಪ್ರದೇಶದ ನೆಲ ಸ್ವಲ್ಪ ಎತ್ತರಕಿದೆ. ಗಟ್ಟಿಯಾದ ಕೆಂಪು ಜೇಡಿ ಮಣ್ಣಿನಿಂದ ಕೂಡಿದೆ.

ಭಾರ್‌ಕೊಳ್ಳ: ಬಾರಿಂದ್ ಪ್ರದೇಶದ ಆಗ್ನೇಯಕ್ಕಿರುವ ತಗ್ಗಿನ ಭಾಗ ರಾಜಶಾಹಿ ಮತ್ತು ಪಾಬ್ನ ಜಿಲ್ಲೆಗಳ ಭಾಗಗಳನ್ನೊಳಗೊಂಡಿದೆ. ಇದರ ನಡುವೆ ಇರುವ ವಿಶಾಲವಾದ ಜವುಗು ನೆಲಕ್ಕೆ ಚಲನ್ ಬೀಲ್ ಎಂದು ಹೆಸರು.

ಬ್ರಹ್ಮಪುತ್ರ ಪ್ರವಾಹದ ಬಯಲು: ಉತ್ತರದಲ್ಲಿ ರಂಗಪುರ ಜಿಲ್ಲೆಯ ಭುರುಂಗಮಾರಿಯಿಂದ ದಕ್ಷಿಣದಲ್ಲಿ ಪಾಬ್ನ ಜಿಲ್ಲೆಯ ಬೇರಾವರೆಗೂ ಪೂರ್ವಪಶ್ಚಿಮವಾಗಿ ಮೈಮೆನ್‌ಸಿಂಗ್ ಜಿಲ್ಲೆಯ ದೇವಗಂಜ್ ಜಮಾಲ್‌ಪುರ ಪ್ರದೇಶದಿಂದ ಭಾರತದ ಗಡಿಯವರೆಗೂ ಹಬ್ಬಿದೆ. ಬ್ರಹ್ಮಪುತ್ರ ನದಿ ಇಲ್ಲಿ ಆಗಾಗ್ಗೆ ದಡಮೀರಿ ಹರಿದು ಈ ಪ್ರದೇಶವನ್ನು ಆವರಿಸುತ್ತದೆ.

ಮಧುಪುರ ಪ್ರದೇಶ: ಪೂರ್ವದಲ್ಲಿರುವ ಈ ಪ್ರದೇಶ ಪ್ರಸ್ಥಭೂಮಿಗಳಿಂದಲೂ ಬೆಟ್ಟಗುಡ್ಡಗಳಿಂದಲೂ ಕೂಡಿದೆ. ಇಲ್ಲಿಯ ಕಾಡಿನಲ್ಲಿ ಸಾಲು ವೃಕ್ಷಗಳಿವೆ.

ಈಶಾನ್ಯ ತಗ್ಗುನೆಲ: ಸಿಲ್ಹೆಟ್ ಜಿಲ್ಲೆಯ ದಕ್ಷಿಣ ಹಾಗೂ ನೈಋತ್ಯ ಭಾಗಗಳು ಮತ್ತು ಮೇಮನ್‌ಸಿಂಗ್ ಜಿಲ್ಲೆಯ ಉತ್ತರಭಾಗ. ಇಲ್ಲಿ ಚಿಕ್ಕ ದೊಡ್ಡ ಅನೇಕ ಸರೋವರಗಳಿವೆ.

ಸಿಲ್ಹೆಟ್ ಬೆಟ್ಟ ಸೀಮೆ: ಇಲ್ಲಿ ಸು. 31 ಮೀ ನಿಂದ ಸು. 332 ಮೀ ವರೆಗಿನ ಎತ್ತರಗಳ ಹಲವಾರು ಬೆಟ್ಟಗಳಿವೆ. ಕೆಲವು ಬೆಟ್ಟಗಳು ಭಾರತದ ಗಡಿಯೊಳಕ್ಕೆ ಚಾಚಿಕೊಂಡಿವೆ.

ಮೇಘನಕೊಳ್ಳ: ಬ್ರಹ್ಮಪುತ್ರ ನದಿಯ ಹಳೆಯ ಪಾತ್ರ ಮೇಘನ ನದಿಯ ಪ್ರವಾಹದ ಕೊಳ್ಳವಾಗಿ ಪರಿಣಮಿಸಿದೆ. ಇಲ್ಲಿ ಫಲವತ್ತಾದ ಭೂಪ್ರದೇಶವಿದೆ.

ಮಧ್ಯದ ಮುಖಜಭೂಮಿ ಪ್ರದೇಶ: ಹಲವು ಸರೋವರಗಳಿಂದ ಕೂಡಿದ್ದು ಫರೀದ್‌ಪುರ್ ಜಿಲ್ಲೆಯಲ್ಲಿದೆ.

ಅಸ್ಥಿರ ಮುಖಜಭೂಮಿ: ದಕ್ಷಿಣ ಬಾಂಗ್ಲಾದೇಶದ ಭೂಪಟ್ಟೆ ಬಂಗಾಲ ಕೊಲ್ಲಿಯ ಅಂಚಿನಲ್ಲಿದೆ. ಸು. 3,000 ಚ.ಕಿಮೀ ವಿಸ್ತೀರ್ಣದ ಈ ತಗ್ಗು ನೆಲದಲ್ಲಿ ಸುಂದರಬನಗಳೆಂಬ ದೊಡ್ಡ ಕಾಡಿದೆ. ಇದರ ಉತ್ತರಕ್ಕಿರುವ ನೆಲ ಕೃಷಿ ಭೂಮಿ. ದಕ್ಷಿಣ ಖುಲ್ನಾ ಮತ್ತು ನೈರುತ್ಯ ಬೇಕರ್‌ಗಂಜ್ ಭಾಗದಲ್ಲಿ ಹರಿಯುವ ಅನೇಕ ತೊರೆಗಳು ಬಲೆಗಳಂತೆ ಹೆಣೆದುಕೊಂಡು ಹಲವಾರು ಪುಟ್ಟ ದ್ವೀಪಗಳನ್ನು ರಚಿಸಿವೆ.

ಕ್ರಿಯಾಶೀಲ ಮುಖಜಭೂಮಿ: ಧವಳೇಶ್ವರಿ, ಪದ್ಮಾ ನದಿಗಳ ನಡುವಣ ನೆಲ ಮತ್ತು ಅಳಿವೆಯೊಳಗಿನ ದ್ವೀಪಗಳ ಪ್ರದೇಶ. ಪಶ್ಚಿಮದಲ್ಲಿ ಖುಲ್ನಾ ಜಿಲ್ಲೆಯ ಪುಸುರ್ ನದಿಯಿಂದ ಪೂರ್ವದಲ್ಲಿ ಚಿತ್ತಗಾಂಗ್ ಜಿಲ್ಲೆಯ ಸಂದ್ವೀಪ್‌ವರೆಗೆ ಹಬ್ಬಿದೆ.

ಚಿತ್ತಗಾಂಗ್ ಪ್ರದೇಶ: ಫೇನಿ ನದಿಯ ದಕ್ಷಿಣದಿಂದ ಕಾಕ್ಸ್‌ಬಜಾರ್‌ವರೆಗೆ ಹರಡಿದೆ. ಈ ಪ್ರದೇಶದಲ್ಲಿ ಅನೇಕ ಬೆಟ್ಟಗುಡ್ಡಗಳೂ ಕಣಿವೆಗಳೂ ಕಾಡುಗಳೂ ಇವೆ. ಇದು ಬಾಂಗ್ಲಾದೇಶದ ಇತರ ಕಡೆಗಳಿಗಿಂತ ಭಿನ್ನ. ಕರಾವಳಿ ಬಯಲು ಮರಳು ಮತ್ತು ಚವುಳು ಮಣ್ಣಿನಿಂದ ಕೂಡಿದ್ದು ಇದರ ತೀರದಲ್ಲಿ ಹಲವು ದ್ವೀಪಗಳಿವೆ. ಇವುಗಳ ಪೈಕಿ ಒಂದು ಹವಳ ದ್ವೀಪ.

ವಾಯುಗುಣ: ಇಲ್ಲಿಯದು ಮಾನ್‌ಸೂನ್ ವಾಯುಗುಣ. ತಕ್ಕಮಟ್ಟಿಗೆ ಬೆಚ್ಚಗಿನ ಹವೆ ಏಪ್ರಿಲ್‌ನಿಂದ ಸೆಪ್ಟಂಬರ್ ತನಕದ ಬೇಸಗೆಯ ದಿನಗಳಲ್ಲಿ ಗರಿಷ್ಠ ಉಷ್ಣತೆ $33^0$ಸೆ ಯಿಂದ $36^0$ಸೆ ನಡುವೆ ವ್ಯತ್ಯಾಸವಾಗುತ್ತಿರುತ್ತದೆ. ಏಪ್ರಿಲ್ ಹೆಚ್ಚು ಉಷ್ಣತೆಯ ($28^0$ಸೆ) ತಿಂಗಳು. ಜನವರಿ ಹೆಚ್ಚು ತಂಪಿನ ಮಾಸ ($18^0$ಸೆ.). ಅಕ್ಟೋಬರಿನಿಂದ ಮಾರ್ಚ್ ತನಕ ಚಳಿಗಾಲ. ಜೂನ್ – ಜುಲೈ ತಿಂಗಳುಗಳಲ್ಲಿ ಬಾಂಗ್ಲಾ ದೇಶದಲ್ಲಿ ಅತ್ಯಂತ ಕಡಿಮೆ ಒತ್ತಡವಿರುತ್ತದೆ. ಚಳಿಗಾಲದಲ್ಲಿ ಉತ್ತರ ಹಾಗೂ ಈಶಾನ್ಯ ದಿಕ್ಕುಗಳಿಂದ ಗಾಳಿ ಬೀಸುತ್ತದೆ. ಮಾರ್ಚ್ – ಮೇ ಅವಧಿಯಲ್ಲಿ ವಾಯವ್ಯದಿಂದ ಬೀಸುವ ಗಾಳಿಯ ವೇಗ ಅಧಿಕ. ಮಾರ್ಚಿಯಿಂದ ಅಕ್ಟೋಬರ್ ತನಕ ಬಾಂಗ್ಲಾ ದೇಶದಲ್ಲಿ ವಾರ್ಷಿಕ ಸರಾಸರಿ 250 ಸೆಂಮೀ ಮಳೆಯಾಗುತ್ತದೆ. ದೇಶದ ಪಶ್ಚಿಮ ಭಾಗದಲ್ಲಿ ಸರಾಸರಿ 165 ಸೆಂಮೀ ಈಶಾನ್ಯ ಭಾಗದಲ್ಲಿ 635 ಸೆಂಮೀ ವರೆಗೂ ಮಳೆಯಾಗುವುದುಂಟು, ಈ ಕಾಲದಲ್ಲಿ ನದಿಗಳು ದಡ ಮೀರಿ ಹರಿದು ಸುತ್ತಲ ತಗ್ಗು ಪ್ರದೇಶಗಳು ಪ್ರವಾಹದಿಂದ ಜಲಾವೃತವಾಗುತ್ತವೆ. ಬೇಸಗೆಯ ಆರಂಭದಲ್ಲಿ ಅಥವಾ ಮಾನ್ಸೂನಿನ ಕೊನೆಗಾಲದಲ್ಲಿ ವೇಗವಾಗಿ ಗಾಳಿ ಬೀಸುವುದುಂಟು. ಕೆಲವೇಳೆ ಗಂಟೆಗೆ 161 ಕಿಮೀ ಗಳಿಗಿಂತ ಹೆಚ್ಚು ವೇಗದಲ್ಲಿ ಬೀಸುವ ಗಾಳಿಯಿಂದ ಬಂಗಾಳ ಕೊಲ್ಲಿಯ ನೀರು ಸು. 5.5 ಮೀ ಗಳಿಗಿಂತ ಹೆಚ್ಚಾಗಿ ಮೇಲೆದ್ದು ಕರಾವಳಿಯ ಹಾಗೂ ತೀರದ ದ್ವೀಪಗಳ ಮೇಲೆ ಅಪ್ಪಳಿಸಿ ಸಿಕ್ಕಿದ್ದನ್ನೆಲ್ಲ ಕೊಚ್ಚಿಕೊಂಡು ಹೋಗುವುದು.

ಸಸ್ಯ ಹಾಗೂ ಪ್ರಾಣಿ ಸಂಪತ್ತು: ಬಾಂಗ್ಲಾದೇಶ ಶೇ. 16 ರಷ್ಟು ಅರಣ್ಯಾವೃತ ಇದು ಹೆಚ್ಚಾಗಿ ಚಿತ್ತಗಾಂಗ್, ಚಿತ್ತಗಾಂಗ್‌ಬೆಟ್ಟಗಾಡು, ಸಿಲ್ಹೆಟ್ ಮತ್ತು ಖುಲ್ನಾ ಜಿಲ್ಲೆಗಳಲ್ಲಿದೆ. ಢಾಕಾ, ಮೈಮೆನ್‌ಸಿಂಗ್ ಜಿಲ್ಲೆಗಳಲ್ಲೂ ಕಾಡುಗಳುಂಟು. ದೇಶದಲ್ಲಿ ಗಿಡಮರಗಳು ಸಮೃದ್ಧವಾಗಿ ಬೆಳೆಯುತ್ತವೆ. ಇಲ್ಲಿಯ ಗ್ರಾಮಗಳು ಮಾವು, ಹಲಸು, ಬಿದಿರು, ಅಡಕೆ, ತಾಳೆ ಮರಗಳಿಂದ ಸುತ್ತುವರಿದಿವೆ. ಸಸ್ಯ ಪ್ರರೂಪಗಳಿಗೆ ಅನುಗುಣವಾಗಿ ಬಾಂಗ್ಲಾದೇಶವನ್ನು ನಾಲ್ಕು ವಲಯಗಳಾಗಿ ವಿಂಗಡಿಸಬಹುದು.

ಸಿಲ್ಹೆಟ್ ಮತ್ತು ಚಿತ್ತಗಾಂಗ್ ಜಿಲ್ಲೆಗಳ ಭಾಗಗಳನ್ನೊಳಗೊಂಡ ಉತ್ತರ ವಲಯ: ಈ ವಲಯದ ಹಲವು ತಗ್ಗು ಬೆಟ್ಟಗಳನ್ನು ದಟ್ಟ ಹಸುರು ಕವಿದಿದೆ. ಇಲ್ಲಿ ಬಿದಿರು ಮತ್ತು ಬೆತ್ತ ಅಧಿಕ. ಢಾಕ ಮತ್ತು ಮೇಮೆನ್‌ಸಿಂಗ್ ಜಿಲ್ಲೆಗಳ ಭಾಗಗಳನ್ನೊಳಗೊಂಡ ಮಧ್ಯ ವಲಯ: ಈ ವಲಯದಲ್ಲಿ ಸರೋವರಗಳು ಹೆಚ್ಚು. ಬಹಳಷ್ಟು ನೆಲಜೌಗು. ಮಧುಪುರ ಕಾಡುಗಳಿಂದ ಕೂಡಿದೆ. ಬ್ರಹ್ಮಪುತ್ರದ ವಾಯವ್ಯಕ್ಕೆ ಮತ್ತು ಪದ್ಮ ನದಿಯ ನೈಋತ್ಯಕ್ಕೆ ಇರುವ ಪ್ರದೇಶ ಚಪ್ಪಟೆಯಾದ ಬಯಲು. ಸಾಗುವಳಿಗೆ ಒಳಪಟ್ಟಿರುವ ಈ ಬಯಲು ಹಲವು ಪೈರುಗಳಿಂದಲೂ ತೋಟತುಡಿಕೆಗಳಿಂದಲೂ ಕೂಡಿದೆ. ಬಾಬುಲ್ ಇಲ್ಲಿನ ಪ್ರಮುಖವಾದ ಮರ. ಖುಲ್ನಾ ಮತ್ತು ಬರಿಸಾಲ್ ಜಿಲ್ಲೆಗಳ ದಕ್ಷಿಣ ವಲಯದಲ್ಲಿ ಗುಲ್ಮ ವೃಕ್ಷ ಪ್ರಧಾನ. ಇಲ್ಲಿ ಸುಂದರಬನ್ ಅರಣ್ಯ ಪ್ರದೇಶವಿದೆ. ವಾಣಿಜ್ಯ ದೃಷ್ಟಿಯಿಂದ ಉಪಯುಕ್ತವಾದ ಅನೇಕ ಮರಗಳು ಇಲ್ಲಿ ಬೆಳೆಯುತ್ತವೆ. ಬಾಂಗ್ಲಾ ದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಮರಗಳೆಂದರೆ ಮಾವು, ಅಡಕೆ, ತೆಂಗು, ತಾಳೆ, ಅರಳಿ, ಇಲ್ಲಿ ಚೆಂಡುಮಲ್ಲಿಗೆ, ಬಂಗಾಲ ಗುಲಾಬಿ, ನೈದಿಲೆ, ಸುಗಂಧರಾಜ, ಬೋಕುಲ್ ಮತ್ತು ಕಾಮಿನಿ ಇವುಗಳ ಜೊತೆಗೆ ಇತರ ಹೂವುಗಳನ್ನೂ ಕಾಣಬಹುದು.

ಬಾಂಗ್ಲಾದೇಶದಲ್ಲಿ ಸು. 200 ಬಗೆಯ ಸ್ತನಿಗಳೂ 750 ಬಗೆಯ ಹಕ್ಕಿಗಳೂ 150 ಬಗೆಯ ಸರೀಸೃಪಗಳೂ 200 ಬಗೆಯ ಮೀನುಗಳೂ ಇವೆ. ಚಿತ್ತಗಾಂಗ್ ಬೆಟ್ಟಗಾಡು ಪ್ರದೇಶದಲ್ಲಿ ಹಿಂಡು ಹಿಂಡಾಗಿ ಆನೆ, ಎಮ್ಮೆ, ಕಾಡುಕೋಣ, ಕಾಡೆಮ್ಮೆ, ಜಿಂಕೆ, ಸಾರಂಗ ಸಾಂಬರ್ ಮುಂತಾದ ಸಸ್ಯಾಹಾರಿ ಪ್ರಾಣಿಗಳೂ ಹುಲಿ, ಚಿರತೆ, ಕಿರುಬ ಮುಂತಾದ ಮಾಂಸಾಹಾರಿಗಳೂ ಇವೆ. ಕರಡಿ, ಮುಂಗುಸಿ, ರ್ಹಿಸಸ್ ಕೋತಿ ಇವು ಇತರ ಮೃಗಗಳು. ಬುಲ್ಬುಲ್, ರಾಬಿನ್, ಕೋಗಿಲೆ, ನೊಣ ಹಿಡುಕ, ಗೊರವಂಕ, ಹದ್ದು, ಗೂಬೆ, ಮಿಂಚುಳ್ಳಿ ಕೊಂಬುಕೊಕ್ಕಿನ ಹಕ್ಕಿ, ಮರಕುಟಕ, ಹೆರನ್ ಕೊಕ್ಕರೆ, ಬಾತು, ಕಾಡುವರಟೆ ಮುಂತಾದ ಪಕ್ಷಿಗಳಿವೆ.

ಬಾಂಗ್ಲಾದಲ್ಲಿ ಹೆಚ್ಚು ಸಂಖ್ಯೆಯಲ್ಲಿ ನಗರ ಪಟ್ಟಣಗಳಿಲ್ಲ. ನಗರಗಳು 3 ಮಾತ್ರ. 80 ಚಿಕ್ಕ ದೊಡ್ಡ ಪಟ್ಟಣಗಳಿವೆ. ಢಾಕ ಬಾಂಗ್ಲಾ ದೇಶದ ರಾಜಧಾನಿ. ಅತ್ಯಂತ ದೊಡ್ಡ ನಗರ. ಢಾಕದಿಂದ ಸು. 19 ಕಿಮೀ ದೂರದಲ್ಲಿರುವ ನಾರಾಯಣಗಂಜ್ ಸೆಣಬು, ಮತ್ತು ಚರ್ಮೋದ್ಯೋಗ ಕೇಂದ್ರ. ಢಾಕ ನಾರಾಯಣಗಂಜ್‌ಗಳನ್ನು ಒಂದಾಗಿ ಸೇರಿಸಿ ಮಹಾ ಢಾಕ ನಗರವೆಂದು ವ್ಯವಹರಿಸುವುದೂ ಉಂಟು. ಜನಸಂಖ್ಯೆ: 8,500,000 (2002).

ಚಿತ್ತಗಾಂಗ್ ಎರಡನೆಯ ಮುಖ್ಯ ನಗರ. ಜನಸಂಖ್ಯೆ 1392860 (1991). ಇದೊಂದು ಪ್ರಮುಖ ಬಂದರು ಕೂಡ. ಇದರ ಸುತ್ತ ಕಾಲೂರ್‌ಘಾಟ್, ಷೋಲಾಷ್‌ಪುರ್, ಫೌಜ್‌ದಾರ್ ಹಟ್ ಮುಂತಾದ ಕೈಗಾರಿಕಾ ಕೇಂದ್ರಗಳು ತಲೆಯೆತ್ತಿವೆ. ಖುಲ್ನಾ ನೈಋತ್ಯದ ಪ್ರಮುಖ ವಾಣಿಜ್ಯ ಹಾಗೂ ಕೈಗಾರಿಕಾ ಕೇಂದ್ರ. ಇದರ ಬಳಿ ಚಾಲ್ನ ಬಂದರು ಸ್ಥಾಪಿತವಾಗಿದೆ. ಬಳಿಯಲ್ಲೇ ದೌಲತ್‌ಪುರ್ ಕೈಗಾರಿಕಾ ಕೇಂದ್ರ ಬೆಳೆದಿದೆ.

ಬಾಂಗ್ಲಾದೇಶದ ಹಳ್ಳಿಗಳು ದಟ್ಟವಾದ ಜನಸಂದಣಿಯಿಂದ ಕೂಡಿವೆ. ಆಗಾಗ್ಗೆ ನದಿಗಳ ಪ್ರವಾಹದ ನೀರು ತಗ್ಗಿನಲ್ಲೆಲ್ಲ ನಿಲ್ಲುವುದರಿಂದ ಹಳ್ಳಿಗಳನ್ನು ಎತ್ತರ ಪ್ರದೇಶಗಳಿಗೆ ಸ್ಥಳಾಂತರಿಸುತ್ತಿದ್ದಾರೆ. ರಸ್ತೆಗಳ ಬದಿಗಳಲ್ಲಿ ಉದ್ದಕ್ಕೂ ಹಳ್ಳಿಗಳು ಹಬ್ಬಿವೆ. ಕುಷ್ಟಿಯ, ಜೆಸ್ಸೂರ್, ಫರೀದ್‌ಪುರ್ ಜಿಲ್ಲೆಗಳಲ್ಲೂ ಖುಲ್ನಾ, ಬೇಕರ್‌ಗಂಜ್, ಪಟುವಾಖಾಲಿ ಮುಂತಾದ ಜಿಲ್ಲೆಗಳ ಭಾಗಗಳಲ್ಲೂ ಇದು ಸಾಮಾನ್ಯ ನೋಟ. ಬಾಂಗ್ಲಾದೇಶದಲ್ಲಿ 4 ಆಡಳಿತ ವಿಭಾಗಗಳೂ 19 ಜಿಲ್ಲೆಗಳು ಇವೆ. ಚಿತ್ತಗಾಂಗ್, ಚಿತ್ತಗಾಂಗ್ ಬೆಟ್ಟ ಸೀಮೆ, ಕೊಮಿಲ್ಲಾ, ನೌಖಾಲಿ, ಸಿಲ್ಹೆಟ್ ಜಿಲ್ಲೆಗಳು ಚಿತ್ತಗಾಂಗ್ ವಿಭಾಗದಲ್ಲೂ ಢಾಕ, ಫರೀದ್ ಪುರ್, ಮೈಮೆನ್‌ಸಿಂಗ್, ತಂಗೇಲ್ ಜಿಲ್ಲೆಗಳು ಢಾಕ ವಿಭಾಗದಲ್ಲೂ ಬೇಕರ್‌ಗಂಜ್ (ಬರಿಸಾಲ್), ಜೆಸ್ಸೂರ್, ಖುಲ್ನಾ ವಿಭಾಗದಲ್ಲೂ ಬೋಗ್ರಾ, ದಿನಾಜ್‌ಪುರ್, ದಾಬ್ನಾ, ರಾಜ್‌ಶಾಹಿ, ರಂಗ್‌ಪುರ್ ಜಿಲ್ಲೆಗಳು ರಾಜ್‌ಶಾಹಿ ವಿಭಾಗದಲ್ಲೂ ಇವೆ.

ಆರ್ಥಿಕತೆ: ಇಲ್ಲಿಯದು ಕೃಷಿ ಪ್ರಧಾನ ಆರ್ಥಿಕತೆ. ಶೇ. 80ಕ್ಕಿಂತ ಹೆಚ್ಚು ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಬಾಂಗ್ಲಾದೇಶದ ಒಟ್ಟು ಭೂಪ್ರದೇಶವಾದ 1,50,00,000 ಹೆ. ಗಳಲ್ಲಿ ಸು. 10,28,100 ಹೆ. ಪ್ರದೇಶ ಸಾಗುವಳಿಗೆ ಒಳಪಟ್ಟಿದೆ. ಮಣ್ಣು ಸಾರಯುಕ್ತವಾದ್ದು.

ಬಾಂಗ್ಲಾ ಬಹಳ ಫಲವತ್ತಾದ ನಾಡೆಂದು ಪ್ರಸಿದ್ಧವಾಗಿದೆ. ಸೆಣಬು, ಬತ್ತ ಬಹು ಮುಖ್ಯವಾದ ಬೆಳೆಗಳು. ಇತರ ಕೃಷಿ ಉತ್ಪನ್ನಗಳು ದ್ವಿದಳಧಾನ್ಯ, ಆಲೂಗೆಡ್ಡೆ, ಎಣ್ಣೆ, ಬೀಜ, ಕಬ್ಬು, ಹೊಗೆಸೊಪ್ಪು ಮತ್ತು ಹಣ್ಣುಗಳು. ಇಲ್ಲಿಯ ಕೃಷಿ ಮಳೆಯನ್ನೇ ಆಧರಿಸಿದೆ. ಈಚೆಗೆ ಹಲವು ನೀರಾವರಿ ಯೋಜನೆಗಳು ಕಾರ್ಯಗತವಾಗಿವೆ. ಕರ್ಣಫುಲಿ ವಿವಿಧೋದ್ದೇಶ ಯೋಜನೆ, ತೀಸ್ತ ಕಟ್ಟೆ ಯೋಜನೆ, ಗಂಗ–ಕೋಬಡಾಕ್ ಯೋಜನೆ ಮುಖ್ಯವಾದುವು. ಕರ್ಣಫುಲಿ ಯೋಜನೆ ಚಿತ್ತಗಾಂಗ್ ಜಿಲ್ಲೆಯ ಆಗ್ನೇಯ ಭಾಗದಲ್ಲೂ ತೀಸ್ತ ಯೋಜನೆ ಉತ್ತರದಲ್ಲೂ ಇವೆ. ಗಂಗ– ಕೋಬಡಾಕ್ ಯೋಜನೆಯಿಂದ ಕುಷ್ಟಿಯ ಜೆಸೂರ್ ಮತ್ತು ಖುಲ್ನಾ ಜಿಲ್ಲೆಗಳಿಗೆ ಹೆಚ್ಚು ಅನುಕೂಲವಾಗಿದೆ.

ಮೀನುಗಾರಿಕೆ ಇಲ್ಲಿಯ ಒಂದು ಮುಖ್ಯ ಕಸಬು. ಕಡಲು ನೀರಿನ ರೂಪ ಚಂದ, ನದೀ ನೀರಿನ ಹಿಲ್ಸ ಇವು ಮುಖ್ಯವಾದ ಮೀನು ಜಾತಿಗಳು.

ಬಾಂಗ್ಲಾದೇಶದಲ್ಲಿ ಹೇಳಿಕೊಳ್ಳುವಂಥ ತೈಲ ನಿಕ್ಷೇಪಗಳೇನೂ ಇಲ್ಲ. ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತಿದೆ. ಸಿಲ್ಹೆಟ್ ಮತ್ತು ಬೋಗ್ರಾಗಳಲ್ಲಿ ಕಲ್ಲಿದ್ದಲು ನಿಕ್ಷೇಪಗಳು ಪತ್ತೆಯಾಗಿವೆ. ನೈಸರ್ಗಿಕ ಅನಿಲ ಸಿಲ್ಹೆಟ್ ಜಿಲ್ಲೆಯ ಹರೀಪುರ, ಛಾತಕ್, ಕೈಲಾಷ್–ತಿಲ, ರಷೀದ್‌ಪುರ್, ಷಾಹಿ ಬಜಾರ್‌ಗಳಲ್ಲೂ ಕೊಮಿಲ್ಲಾ ಜಿಲ್ಲೆಯ ಬ್ರಾಹ್ಮಣಬಾರಿಯಾ ಮತ್ತು ಬೇಕರಾಬಾದ್‌ಗಳಲ್ಲೂ ದೊರಕುತ್ತದೆ. ಸಿಲ್ಹೆಟ್‌ನ ನೈಸರ್ಗಿಕ ಅನಿಲ ರಸಗೊಬ್ಬರ ಕಾರ್ಖಾನೆಗೆ ತಿಲದಿಂದ ನೈಸರ್ಗಿಕ ಅನಿಲ ಪೂರೈಕೆಯಾಗುತ್ತದೆ. ಢಾಕ ಮತ್ತು ಅದರ ಉಪನಗರಗಳ ಕೈಗಾರಿಕೆಗಳಿಗೆ ಬ್ರಾಹಣಬಾರಿಯಾ ಗಣಿಗಳಿಂದ ಅನಿಲ ಒದಗುತ್ತದೆ. ಢಾಕ ಜಿಲ್ಲೆಯ ಘೋರಾ ಸಾಲ್‌ನಲ್ಲೂ ಚಿತ್ತಗಾಂಗಿನಲ್ಲೂ ಶಾಖ ವಿದ್ಯುತ್ತು ಉತ್ಪಾದನೆಯಾಗುತ್ತದೆ. ರೂಪ್‌ಪುರದಲ್ಲಿ ಪರಮಾಣು ವಿದ್ಯುತ್ ಕೇಂದ್ರವಿದೆ. ಕಚ್ಚಾ ಸೆಣಬಿನ ರಫ್ತು ಲಾಭದಾಯಕವಲ್ಲವಾದ್ದರಿಂದ ದೇಶದಲ್ಲೇ ಸೆಣಬಿನ ಕೈಗಾರಿಕೆಯನ್ನು ವಿಸ್ತರಿಸುವ ಪ್ರಯತ್ನ ನಡೆದಿದೆ. ಸುಮಾರು ಅರ್ಧದಷ್ಟು ಕಚ್ಚಾ ಸಾಮಗ್ರಿಯನ್ನು ಬಳಸಿಕೊಳ್ಳುವ ಮಟ್ಟಿಗೆ ಸೆಣಬು ಗಿರಣಿಗಳು ಬೆಳೆದಿವೆ. ಉಳಿದದ್ದು ರಫ್ತಾಗುತ್ತದೆ. ಚಿತ್ತಗಾಂಗ್ ಬೆಟ್ಟ ಸೀಮೆಯ ಬಿದಿರನ್ನೂ ಸುಂದರಬನ್‌ಗಳ ಮೆದುಮರಗಳನ್ನೂ ಬಳಸಿಕೊಂಡು ಕಾಗದವನ್ನು ತಯಾರಿಸಲು ಅವಕಾಶಗಳಿವೆ. ಚೆಂದ್ರಘೋನಾ, ಪಾಕ್ಸೆಗಳಲ್ಲಿ (ಚಿತ್ತಗಾಂಗ್) ಕಾಗದದ ಕಾರ್ಖಾನೆಗಳಿವೆ. ಖುಲ್ನಾದಲ್ಲಿ ಕಾಗದ ಮತ್ತು ರಟ್ಟಿನ ಕಾರ್ಖಾನೆಯಿದೆ. ಹಲವು ರಸಗೊಬ್ಬರ

ಕಾರ್ಖಾನೆಗಳು ಒಂದು ಸಿಮೆಂಟ್ ಕಾರ್ಖಾನೆಯೂ (ಛಾಕತ್) ಇವೆ. ಚಿತ್ತಗಾಂಗ್ ಖುಲ್ನಾಗಳಲ್ಲಿ ಹಡಗು ರಿಪೇರಿ ಹಾಗೂ ನಿರ್ಮಾಣಕ್ಕೆ ಅನುಕೂಲಿಸುವ ಸಲುವಾಗಿ ಬೇಕಾದಾಗ ನೀರನ್ನು ಹೊರಹಾಕುವ ಒಣಬಂದರು (ಡ್ರೈಡಾಕ್) ಕಟ್ಟೆಗಳನ್ನು ನಿರ್ಮಿಸಿದ್ದಾರೆ. ಇಲ್ಲಿಯ ಅತ್ಯಂತ ಮುಖ್ಯ ಗುಡಿಸಲು ಕೈಗಾರಿಕೆ ಬಟ್ಟೆ ನೇಯ್ಗೆ. ಇದನ್ನೇ ಅವಲಂಬಿಸಿರುವ ಸು. 3 ಲಕ್ಷಕ್ಕೂ ಅಧಿಕ ಮಂದಿ ನೇಕಾರರಿದ್ದಾರೆಂದು ಅಂದಾಜು. ಬೀಡಿ ತಯಾರಿಕೆ, ಜಮಾಖಾನೆ ನೇಯ್ಗೆ, ಮಣ್ಣಿನ ಪದಾರ್ಥಗಳ ಹಾಗೂ ಬೆತ್ತದ ಕುರ್ಚಿಗಳೇ ಮುಂತಾದವುಗಳ ತಯಾರಿಕೆ ಇಲ್ಲಿಯ ಇತರ ಕಸಬುಗಳು. (ಎಚ್.ಎಸ್.ಕೆ.)

**ಬಾಂಡ ದ್ವೀಪಗಳು:** ಇಂಡೋನೇಷ್ಯ ದೇಶದ ದಕ್ಷಿಣ ಮಲಕ್ಕಾ ದ್ವೀಪಗಳ ಗುಂಪಿಗೆ ಸೇರಿದ ಕಿರುದ್ವೀಪಗಳು. ಸೇರಾಂದ್ವೀಪದ ಪೂರ್ವಭಾಗದ ದಕ್ಷಿಣದಲ್ಲಿ 106 ಕಿಮೀ ದೂರದಲ್ಲಿದೆ. ಈ ದ್ವೀಪಗಳ ಸಂಖ್ಯೆ ಹತ್ತು. ಒಟ್ಟು ವಿಸ್ತೀರ್ಣ 186 ಚ.ಕಿಮೀ. ಈ ದ್ವೀಪಗಳ ಪೈಕಿ ದೊಡ್ಡವು ಬಾಂಡ ಬೆಸರ್ ಅಥವಾ ಮಹಾಬಾಂಡ, ಗುನಂಗ್ ಅಪಿ ಮತ್ತು ಬಾಂಡನೈರ್; ಈ ದ್ವೀಪಗಳೆಲ್ಲವೂ ಜ್ವಾಲಾಮುಖಿಯಿಂದಾದವು. ಇವುಗಳ ನಡುವಣ ಕಡಲಿನ ಅಂಚುಗಳಲ್ಲಿ ಹಡಗುಗಳ ನಿಲುಗಡೆಗೆ ಉತ್ತಮ ಬಂದರುಗಳಿವೆ. ದ್ವೀಪಗಳ ಸುತ್ತ ಪ್ರಪಂಚದಲ್ಲಿ ಮತ್ತೆಲ್ಲೂ ಇಲ್ಲದಂಥ ಸುಂದರ ಸಾಗರಾಂತರ ವನವಿದೆ. ಬಾಂಡ ಬೇಸರ್ ದ್ವೀಪದಲ್ಲಿ ಪ್ರವಾಳ ಶಿಲೆಯ ಗುಡ್ಡಗಳು 120 ಮೀ ಎತ್ತರಕ್ಕಿವೆ. ಗುನಂಗ್ ಅಪಿಯ ಅಗ್ನಿಪರ್ವತದ ಶಿಖರ ಸಮುದ್ರ ಮಟ್ಟಕ್ಕೆ 670 ಮೀ ಎತ್ತರದಲ್ಲಿದೆ. ಈ ಅಗ್ನಿಪರ್ವತದಿಂದ 1820 ಹಾಗೂ 1852 ರಲ್ಲಿ ಉಂಟಾದ ಸ್ಫೋಟದಿಂದ ಅಪಾರ ನಷ್ಟ ಸಂಭವಿಸಿತು.

ಬಾಂಡ ದ್ವೀಪಗಳ ಲಾವ ಹರಡಿರುವ ಭೂಮಿ ಜಾಕಾಯಿ ಮತ್ತು ಲವಂಗದ ಮರಗಳ ಬೆಳೆಗೆ ಅನುಕೂಲವಾಗಿದೆ. ದ್ವೀಪಗಳ ಇತರ ಬೆಳೆಗಳು ತೆಂಗು, ಮರ ಗೆಣಸು ಮತ್ತು ಉಷ್ಣವಲಯದ ಹಣ್ಣುಗಳು. ತೀರ ಕಡಲಲ್ಲಿ ನಾನಾ ಬಗೆಯ ಮೀನುಗಳು ಹೇರಳವಾಗಿದೆ.

ಬಾಂಡ ದ್ವೀಪವಾಸಿಗಳು ಜಾವ ಮತ್ತು ಸುತ್ತಮುತ್ತಲಿನ ದ್ವೀಪಗಳಿಂದ ಬಂದು ನೆಲಸಿದವರ ವಂಶಜರು. ಹಿಂದೆ ಡಚ್ಚರು ತೋಟಗಳಲ್ಲಿ ಕೆಲಸ ಮಾಡಲುಕರೆ ತಂದ ಗುಲಾಮರೂ ಈ ಜನರೊಂದಿಗೆ ಸಂಮಿಶ್ರಗೊಂಡಿದ್ದಾರೆ. ದ್ವೀಪಗಳ ಒಟ್ಟು ಜನರಲ್ಲಿ ಅರ್ಧ ಭಾಗದಷ್ಟು ಮಂದಿ ಬಾಂಡ ನೈರ ಪಟ್ಟಣದಲ್ಲಿ ವಾಸಿಸುತ್ತಾರೆ. ಅದು ಈ ದ್ವೀಪಗಳ ಆಡಳಿತ ಕೇಂದ್ರ ಹಾಗೂ ಪ್ರಧಾನ ರೇವು. ಬಾಂಡ ನೈರ ಮತ್ತು ಅಂಬಾನ್ (ಅಂಬಾಯ್ನ) ದ್ವೀಪಗಳ ನಡುವೆ ಹಡಗು ಸಂಚಾರವಿದೆ. (ವಿ.ಜಿ.ಕೆ.)

**ಬಾಂಡುಂಗ್:** ಇಂಡೊನೇಷ್ಯದ ಪಶ್ಚಿಮ ಜಾವ ಪ್ರಾಂತ್ಯದ ರಾಜಧಾನಿ. ಜಾವ ದ್ವೀಪದ ಒಳಭಾಗದಲ್ಲಿ, ಸಮುದ್ರಮಟ್ಟಕ್ಕೆ ಸು. 730 ಮೀ ಎತ್ತರವಾದ ಪ್ರಸ್ಥಭೂಮಿಯ ಉತ್ತರಭಾಗದ ಅಂಚಿನಲ್ಲಿ ಜಕಾರ್ತದ ಆಗ್ನೇಯಕ್ಕೆ ಸು. 120 ಕಿಮೀ ದೂರದಲ್ಲಿ, ದ.ಅ. $6^0 54'$ ಮತ್ತು ಪೂ.ರೇ. $107^0 36'$ ಮೇಲೆ ಇದೆ. ಜನಸಂಖ್ಯೆ 24,29,000 (1996). ಇಂಡೋನೇಷ್ಯದಲ್ಲಿ ಇದು ಮೂರನೆಯ ದೊಡ್ಡ ನಗರ. ಇದನ್ನು ಪರ್ವತಗಳೂ, ಜಲಪಾತಗಳೂ, ಸುಂದರವಾದ ಬತ್ತದ ಗದ್ದೆಗಳೂ ಸುತ್ತುವರಿದಿವೆ. ಹಿತಕರವಾದ ವಾಯುಗುಣದಿಂದ ಕೂಡಿರುವುದರಿಂದ ತೀರ ಪ್ರದೇಶದ ಜನಕ್ಕೆ ಇದೊಂದು ಆರೋಗ್ಯಧಾಮ. ಇಲ್ಲಿಂದ ಜಾವದ ಇತರ ಮುಖ್ಯ ಸ್ಥಳಗಳಿಗೆ ರೈಲ್ವೆ ಸಂಪರ್ಕವುಂಟು. ಈ ನಗರದ ಪಶ್ಚಿಮಕ್ಕೆ 8 ಕಿಮೀ ದೂರದಲ್ಲಿ ವಿಮಾನ ನಿಲ್ದಾಣವಿದೆ. ಉತ್ತಮ ಸಂಪರ್ಕ ಸೌಲಭ್ಯ ಪಡೆದಿರುವುದರಿಂದ ಇದೊಂದು ಪ್ರಮುಖ ವ್ಯಾಪಾರಕೇಂದ್ರ. ಇಲ್ಲಿ ಅನೇಕ ನೇಯ್ಗೆ ಕಾರ್ಖಾನೆಗಳಿವೆ. ಅವುಗಳ ಪೈಕಿ ಹಲವು ಕಾರ್ಖಾನೆಗಳು ಚೀನಿಯರ ಮಾಲೀಕತ್ವದಲ್ಲಿವೆ. ಕ್ವಿನೈನ್ ತಯಾರಿಸುವ ದೊಡ್ಡ ಕಾರ್ಖಾನೆಯೂ ಇದೆ. ಒಂದನೆಯ ಮಹಾಯುದ್ಧಕ್ಕೆ ಮೊದಲು ಪ್ರಪಂಚದ ಶೇ. 30ರಷ್ಟು ಕ್ವಿನೈನ್ ಇಲ್ಲೇ ತಯಾರಾಗುತ್ತಿತ್ತು. ಇಲ್ಲಿ ತಯಾರಾಗುವ ಇತರ ಪದಾರ್ಥಗಳು ರಬ್ಬರ್ ಹಾಗೂ ಯಂತ್ರೋಪಕರಣಗಳು.

ಇಲ್ಲಿಯ ಭೂವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿ ಖನಿಜಗಳ ಮತ್ತು ಪಳೆಯುಳಿಕೆಗಳ ಒಳ್ಳೆಯ ಸಂಗ್ರಹವಿದೆ. ಸರ್ಕಾರಿ ತಾಂತ್ರಿಕ ಸಂಶೋಧನಾಲಯ, ನೂಲು, ಬಣ್ಣ ಮತ್ತು ರಾಸಾಯನಿಕಗಳ ಉಪಯೋಗದ ಬಗ್ಗೆ ತಾಂತ್ರಿಕ ಸಲಹೆ ನೀಡುತ್ತದೆ ಮತ್ತು ಸಂಶೋಧನೆ ನಡೆಸುತ್ತದೆ. ಸರ್ಕಾರದ ಕೈಗಾರಿಕಾ ಇಲಾಖೆಗೆ ಒಳಪಟ್ಟ ಕುಂಭಕಲಾ ಸಂಶೋಧನಾಲಯವಿದೆ. ಇದು ಕುಂಭಕಲೆಗೆ ಬೇಕಾದ ಕಚ್ಚಾ ಸಾಮಗ್ರಿ ಹಾಗೂ ಕುಂಭ ಕೈಗಾರಿಕೆಯ ಬಗ್ಗೆ ಸಲಹೆ ನೀಡುತ್ತದೆ. ಇಲ್ಲಿಯ ಪೇಟೆ ಬೀದಿಗಳಲ್ಲಿ ಪ್ರಮುಖವಾದದ್ದು ಪಾಸೆರ್ ಬಾರು. ಬಾಂಡುಂಗ್‍ನಲ್ಲಿ ಅನೇಕ ಚರ್ಚುಗಳೂ ದೊಡ್ಡ ಮಸೀದಿಯೂ ಇವೆ. ಉತ್ತರದಲ್ಲಿ ಲೆಂಬಾಂಗ್ ಪ್ರಸ್ಥಭೂಮಿಯಲ್ಲಿ ಬೋಷ್ಷ ಖಗೋಳವೀಕ್ಷಣಾಲಯವಿದೆ. 1964ರಲ್ಲಿ ಪ್ರಾರಂಭಿಸಲಾದ ಪರಮಾಣು ಸಂಶೋಧನ ಕೇಂದ್ರದಲ್ಲಿ ಪರಮಾಣು ರಿಯಾಕ್ಟರ್ ಇದೆ. (ಜಿ.ಎಸ್.ಎಸ್.)

**ಬಾಕು:** ಅಜರ್‌ಬೈಜಾನ್ ರಾಜ್ಯದ ರಾಜಧಾನಿ. ಬಾಕು ಕೊಲ್ಲಿಯಲ್ಲಿರುವ ಬಂದರು. ಕ್ಯಾಸ್ಪಿಯನ್ ಸಮುದ್ರದ ಪಶ್ಚಿಮ ದಂಡೆಯ ಅಪ್ಸರಾನ್ ಪರ್ಯಾಯ ದ್ವೀಪದ ದಕ್ಷಿಣ ಭಾಗದಲ್ಲಿದೆ. ಬಾಕು ಕೊಲ್ಲಿಯ ದ್ವೀಪಸ್ತೋಮಗಳು ಮತ್ತು ಅಪ್ಸರಾನ್ ಪರ್ಯಾಯ ದ್ವೀಪಗಳು ಬಾಕು ನಗರವನ್ನು ಶೀತ ಮಾರುತಗಳಿಂದ ರಕ್ಷಿಸುತ್ತವೆ. ಇಲ್ಲಿ ಗಂಟೆಗೆ ಸು. 65 ಕಿಮೀ ವೇಗದಲ್ಲಿ ಬೀಸುವ ಗಾಳಿಗೆ ಈ ನಗರ ಆಗಾಗ ಪಕ್ಕಾಗುವುದುಂಟು. ಅದಕ್ಕಾಗಿ ಈ ನಗರವನ್ನು ಬಾಕು (ವಾಯುನಗರ) ಎಂದು ಕರೆದರು. ಜನಸಂಖ್ಯೆ 1727200 (1997).

ಹಳೆಯ ಕೋಟೆ ಗೋಡೆಯ ಸುತ್ತ ಆಧುನಿಕ ನಗರದ ನಿರ್ಮಾಣವಾಗಿದೆ. ಈ ಬೃಹತ್ ಪ್ರದೇಶ 10 ಜಿಲ್ಲೆಗಳನ್ನೊಳಗೊಂಡಿದ್ದು ಇಡೀ ಅಪ್ಸರಾನ್ ಪರ್ಯಾಯ ದ್ವೀಪವನ್ನು ಆಕ್ರಮಿಸಿಕೊಂಡಿದೆ. ನಗರದ ಪೂರ್ವ ಭಾಗ ಕೈಗಾರಿಕೆಯ ಕೇಂದ್ರ. ಆಡಳಿತ ಪಟ್ಟಣವಾಗಿ ಹೊಂದಿರುವ ಪ್ರಾಮುಖ್ಯತೆ ಹಾಗೂ ಪೆಟ್ರೋಲ್ ಎಣ್ಣೆಯ ಕೈಗಾರಿಕೆಗಳಿಂದ ಬಾಕು ನಗರಕ್ಕೆ ರಷ್ಯದ ಮಹಾನಗರಗಳ ಪೈಕಿ ಐದನೆಯ ಸ್ಥಾನವಿದೆ.

ಸ್ಥಳೀಯವಾಗಿ ಶುದ್ಧೀಕರಿಸಿದ ಎಣ್ಣೆಯನ್ನು ಈ ನಗರದಿಂದ ಕಪ್ಪು ಸಮುದ್ರದ ಪೂರ್ವದ ಅಂಚಿನಲ್ಲಿರುವ ಬಟ್ಯೂಮಿ ಪಟ್ಟಣಕ್ಕೆ ಭಾರಿ ಕೊಳವೆಗಳಲ್ಲಿ ರವಾನಿಸಲಾಗುತ್ತದೆ. ಹಡಗು ನಿರ್ಮಾಣ ಹಾಗೂ ವಿದ್ಯುತ್ ಉಪಕರಣಗಳು, ಬಟ್ಟೆ, ಪಾದರಕ್ಷೆ ಮೊದಲಾದವುಗಳ ಉದ್ಯಮಗಳು ಬಾಕು ನಗರದ ಇತರ ಕೈಗಾರಿಕೆಗಳು.

ಇದು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೇಂದ್ರ. ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಿವೆ. ಅಜರ್‌ಬೈಜಾನ್‌ನ ವೈಜ್ಞಾನಿಕ ಸಂಶೋಧನ ಅಕಾಡೆಮಿ ಇದೆ. (ವಿ.ಜಿ.ಕೆ.)

**ಬಾಕ್ಸೈಟ್:** ಅಲ್ಯೂಮಿನಿಯಮ್‍ನ ಒಂದು ಆಕ್ಸೈಡ್. ಆದ್ದರಿಂದ ಅಲ್ಯೂಮಿನಿಯಮ್ ಲೋಹದ ತಯಾರಿಕೆಯಲ್ಲಿ ಬಳಸಲಾಗುವುದು. ಅಲ್ಲದೆ ಇದನ್ನು ಸಿಮೆಂಟ್, ರಾಸಾಯನಿಕ ಕೈಗಾರಿಕೆ, ಇನ್ಸುಲೇಟಿಂಗ್ ವಸ್ತುವಾಗಿ, ತುಕ್ಕು ನಿರೋಧಕವಾಗಿ ಮತ್ತು ಪೆಟ್ರೋಲಿಯಂ ಶುದ್ಧೀಕರಣದಲ್ಲಿಯೂ ಉಪಯೋಗಿಸಲಾಗುವುದು. ಬಾಕ್ಸೈಟ್ ಅದಿರು ಕಬ್ಬಿಣದ ಆಕ್ಸೈಡ್ ಮತ್ತು ಮರಳಿನೊಂದಿಗೆ ಮಿಶ್ರಣವಾಗಿದ್ದು ಅಶುದ್ಧ ಮಿಶ್ರಣ ವಸ್ತುವಾಗಿ ದೊರೆಯುತ್ತದೆ. ಉತ್ತಮ ಬಾಕ್ಸೈಟ್ ಖನಿಜ ಸಂಯೋಜನೆಯಲ್ಲಿ ಸರಾಸರಿ ಶೇ.55 ರಷ್ಟು ಅಲ್ಯೂಮಿನಿಯಮ್, ಶೇ. 28 ಸಂಯೋಜಿತ ನೀರು ಇರುತ್ತದೆ. ಬಾಕ್ಸೈಟನ್ನು ಮೊಟ್ಟಮೊದಲಿಗೆ ದಕ್ಷಿಣ ಫ್ರಾನ್ಸಿನಲ್ಲಿರುವ ಲೇಸ್ ಬಾಕ್ಸ್ ಎಂಬ ಗ್ರಾಮದ ಬಳಿ ಕಂಡು ಹಿಡಿಯಲಾಯಿತು. ಉತ್ತಮ ದರ್ಜೆಯ ಬಾಕ್ಸೈಟ್ ಅದಿರು ನಿಕ್ಷೇಪ ಹೆಚ್ಚಾಗಿ ಉಷ್ಣವಲಯ ಮತ್ತು ಉಪ ಉಷ್ಣವಲಯದಲ್ಲಿ ಹಂಚಿಕೆಯಾಗಿರುವುದು. ಇದು ಸಾಮಾನ್ಯವಾಗಿ ಮೇಲ್ಪದರದಲ್ಲಿ ದೊರೆಯುವುದರಿಂದ ಉತ್ಪಾದನೆ ಸುಲಭ.

ಬಾಕ್ಸೈಟ್ ಅಲ್ಯೂಮಿನಿಯಮ್ ಮುಖ್ಯ ಅದಿರಾದರೂ ಅದನ್ನು ಕಯೋಲೈಟ್, ಕಯೋಲಿನ್ ಮತ್ತು ಕಾರಂಡಂ ಎಂಬ ಅದಿರಿನಿಂದಲೂ ಉತ್ಪಾದಿಸಲಾಗುವುದು. ಇಂದಿನ ಆಧುನಿಕ ಯುಗದಲ್ಲಿ ಅಲ್ಯೂಮಿನಿಯಮ್ ತುಕ್ಕು ಹಿಡಿಯದೆ, ಹೆಚ್ಚು ಉಪಯುಕ್ತ ಲೋಹವಾಗಿದೆ. ಇದು ಹಗುರ, ಅಗ್ಗ ಮತ್ತು ಗಟ್ಟಿಯಾದ್ದರಿಂದ ಇದನ್ನು ವಿಮಾನ, ವಾಹನ, ರೈಲುಬೋಗಿ ಮುಂತಾದ ಕೈಗಾರಿಕೆಯಲ್ಲಿ ವಿದ್ಯುತ್ ಉಪಕರಣಗಳ ತಯಾರಿಕೆಯಲ್ಲಿ, ಬಣ್ಣ ಹಾಗೂ ಕ್ಯಾನುಗಳನ್ನು ತಯಾರಿಸಲು, ಶಾಖವಾಹಕವಾದ್ದರಿಂದ ಅಡುಗೆ ಪಾತ್ರೆಗಳ ತಯಾರಿಕೆ, ಅಲ್ಲದೆ ಪೀಠೋಪಕರಣಗಳ ತಯಾರಿಕೆ, ಕಿಟಕಿ, ಬಾಗಿಲು ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುವುದು.

ಉತ್ಪಾದನೆ ಮತ್ತು ಹಂಚಿಕೆ: ಪ್ರಪಂಚದಲ್ಲಿ ಒಟ್ಟು 34 ಬಿಲಿಯನ್ ಟನ್‍ಗಳಿಗಿಂತಲೂ ಹೆಚ್ಚಿನ ಪ್ರಮಾಣದ ಬಾಕ್ಸೈಟ್ ಅದಿರು ನಿಕ್ಷೇಪವಿದೆಯೆಂದು ಅಂದಾಜು ಮಾಡಲಾಗಿದೆ. ಪ್ರಪಂಚದ ಒಟ್ಟು ಬಾಕ್ಸೈಟ್ ಉತ್ಪಾದನೆ 139 ಮಿ ಟನ್ (2001), ಇದನ್ನು ಹೆಚ್ಚು ಉತ್ಪಾದಿಸುವ ರಾಷ್ಟ್ರಗಳು ಆಸ್ಟ್ರೇಲಿಯ, ಗಿನಿ, ಜಮೈಕ, ಬ್ರೆಜಿಲ್, ಭಾರತ, ಚೀನ, ರಷ್ಯ, ಸುರಿನಾಮ್, ವೆನಿಜುವೇಲ, ಕಜಕೀಸ್ತಾನ್, ಗಯಾನ, ಕೆನಡ ಮತ್ತು ಸರ್ಬಿಯ, ಹಂಗೇರಿ, ಘಾನ. ವ್ಯಾಪಾರ: ಪ್ರಮುಖ ಬಾಕ್ಸೈಟ್ ರಫ್ತು ಮಾಡುವ ದೇಶಗಳು ಜಮೈಕ, ಸುರಿನಾಮ್, ಹಂಗೆರಿ, ಫ್ರಾನ್ಸ್, ಗ್ರೀಸ್, ಯೂಗೋಸ್ಲೋವಿಯ, ಭಾರತ, ಘಾನ, ಗಿನಿ, ಇಂಡೋನೇಷ್ಯ, ಆಸ್ಟ್ರೇಲಿಯ ಮತ್ತು ಬ್ರೆಜಿಲ್. ಪ್ರಮುಖ ಬಾಕ್ಸೈಟ್ ಆಮದು ಮಾಡಿಕೊಳ್ಳುವ ರಾಷ್ಟ್ರಗಳು ಅಮರಿಕ, ಕೆನಡ, ರಷ್ಯ, ಜರ್ಮನಿ, ಜಪಾನ್, ಬ್ರಿಟನ್ ಮತ್ತು ಯುರೋಪ್ ರಾಷ್ಟ್ರಗಳು. (ಬಿ.ಸಿ.ಕೆ.)

**ಬಾಗ್ ಸ್ತರಗಳು:** ಮಧ್ಯಪ್ರದೇಶದ ಬಾಗ್ ಎಂಬ ಊರಿನ ಬಳಿಯ ಕ್ರಿಟೇಷಸ್ ಕಾಲಕ್ಕೆ ಸೇರಿದ ಸಾಗರ ಸಂಚಯನ ಶಿಲೆಗಳು. ಇವುಗಳ ಪಳೆಯುಳಿಕೆಗಳನ್ನು ನರ್ಮದ ನದಿಯ ಕಣಿವೆಯಲ್ಲಿ, ಪಶ್ಚಿಮದಲ್ಲಿ ವಾದ್ವಾನಿನಿಂದ ಹಿಡಿದು ಪೂರ್ವದಲ್ಲಿ ಬರವಾಹದವರೆಗೂ ಸು. 350 ಕಿಮೀ ಉದ್ದಕ್ಕೆ ಅಲ್ಲಲ್ಲಿ ಕಾಣಬಹುದು. ಬಾಗ್‍ಸ್ತರಗಳು ವಿಶೇಷವಾಗಿ ಆರ್ಕೇಯನ್ ರೂಪಾಂತರಿತ ಶಿಲೆಗಳ ಮೇಲೆ ಶೇಖರವಾಗಿವೆ. ಇವುಗಳ ಮೇಲೆ ಲೆಮೀಟಾ ಸ್ತರಗಳು ಇಲ್ಲವೇ ದಖ್ಖನ್ ಟ್ರಾಪ್ ಶಿಲೆಗಳು ಹರಡಿವೆ.

ಬಾಗ್ ಬಳಿಯಲ್ಲಿ ನಿಮಾರ್ ಶಿಲೆಗಳು ತಳಭಾಗದಲ್ಲಿ ಕಂಗ್ಲಾಮರೇಟ್ ಶಿಲೆಯಿಂದಲೂ ಮೇಲ್ಭಾಗದಲ್ಲಿ ಮರಳುಶಿಲೆ ಮತ್ತು ಷೇಲ್ ಶಿಲೆಗಳಿಂದಲೂ ಕೂಡಿವೆ. ಈ ಸ್ತರಗಳು ಪಶ್ಚಿಮಕ್ಕೆ ಮುಂದುವರಿಯುತ್ತ ದಪ್ಪವಾಗುತ್ತ ಹೋಗುತ್ತವೆ. ಇತ್ತೀಚೆಗೆ ನಿಮಾರ್ ಮರಳುಶಿಲೆಗಳಲ್ಲಿ ಕೆಲವು ಮೇಲು ಗೊಂಡ್ವಾನ ಯುಗವನ್ನು ಸೂಚಿಸುವ ಸಸ್ಯಾವಶೇಷಗಳು ಕಂಡುಬಂದಿರುವುದರಿಂದ, ಈ ವಿಭಾಗ ಗೊಂಡ್ವಾನ ಯುಗಕ್ಕೆ ಸೇರಿರಬಹುದೆಂದೂ ಭಾವಿಸಲಾಗಿದೆ. ಮೇಲ್ಭಾಗದ ಬಾಗ್‌ಸ್ತರಗಳಲ್ಲಿ ಜೀವ್ಯವಶೇಷಗಳು ವಿಶೇಷವಾಗಿ ದೊರಕಿವೆ. ಈ ಅವಶೇಷಗಳ ಆಧಾರದ ಮೇಲೆ ಬಾಗ್‌ಸ್ತರಗಳು ಕ್ರಿಟೇಷಸ್ ಕಾಲದ ಸೊನೋಮೇನಿಯನ್–ಟ್ಯುರೋನಿಯನ್ ಅವಧಿಗೆ ಸೇರಿದ್ದೆಂದು ಭಾವಿಸಲಾಗಿದೆ. ಕೆಲವು ಕಡೆಗಳಲ್ಲಿ ಬಾಗ್‌ಸ್ತರಗಳ ಮೇಲೆ ಕ್ರಿಟೇಷಸ್ ಕಾಲಕ್ಕೇ ಸೇರಿದ ಲೆಮಿಟಾ ಸ್ತರಗಳು ಹರಡಿರುವುದು ಕಂಡುಬಂದಿರುವುದರಿಂದ ಬಾಗ್‌ಸ್ತರಗಳು ಲೆಮಿಟಾ ಸ್ತರಗಳಿಗಿಂತ ಪುರಾತನವಾದವೆಂದು ಹೇಳಬಹುದು. (ಎಂ.ವಿ.ಎ.ಎಸ್.)

**ಬಾಗಲಕೋಟೆ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಇವುಗಳ ಆಡಳಿತ ಕೇಂದ್ರ ನಗರ. ಇದು ಕರ್ನಾಟಕದ ಉತ್ತರದಲ್ಲಿದ್ದು $15^0 48'$ ರಿಂದ $16^0 46'$ ಉ. ಅ. ಮತ್ತು $74^0 59'$ ದಿಂದ $76^0 20'$ ಪೂ. ರೇ. ದಲ್ಲಿ ವಿಸ್ತರಿಸಿದೆ. ಜಿಲ್ಲೆಯ ಉತ್ತರಕ್ಕೆ ಬಿಜಾಪುರ, ಪಶ್ಚಿಮಕ್ಕೆ ಬೆಳಗಾಂವಿ, ದಕ್ಷಿಣಕ್ಕೆ ಗದಗ ಮತ್ತು ಕೊಪ್ಪಳ ಹಾಗೂ ಪೂರ್ವಕ್ಕೆ ರಾಯಚೂರು ಜಿಲ್ಲೆಗಳಿವೆ. ವಿಸ್ತೀರ್ಣ 6594 ಚ.ಕಿಮೀ ಇದು ಆರು ತಾಲ್ಲೂಕುಗಳನ್ನು ಒಳಗೊಂಡಿದೆ. ಬಾಗಲಕೋಟೆ, ಹುನಗುಂದ, ಬಾದಾಮಿ, ಬೀಳಗಿ, ಮುಧೋಳ ಮತ್ತು ಜಮಖಂಡಿ. ಜನಸಂಖ್ಯೆ 16,52,232. ಜನಸಾಂದ್ರತೆ ಚ.ಕಿಮೀಗೆ 251 ಜನರು.




ಭೂಸ್ವರೂಪ: ವಾಯವ್ಯದಲ್ಲಿ ಜಮಖಂಡಿ ಬೆಟ್ಟಗಳು, ದಕ್ಷಿಣದಲ್ಲಿ ಬಾದಾಮಿ ಬೆಟ್ಟಗಳನ್ನು ಬಿಟ್ಟರೆ ಈ ಜಿಲ್ಲೆ ಸಮತಟ್ಟಾಗಿದೆ. ನದಿಗಳು: ಬೆಳಗಾಂವಿಯಿಂದ ಹರಿದು ಬರುವ ಕೃಷ್ಣ ನದಿಯು ಜಮಖಂಡಿಯನ್ನು ಪ್ರವೇಶಿಸಿ ಅನಂತರ ಜಿಲ್ಲೆಯ ಅಂಚಿನಲ್ಲಿ ಹರಿಯುತ್ತದೆ. ಘಟಪ್ರಭಾ ಮತ್ತು ಮಲಪ್ರಭಾ ನದಿಗಳು ಕೃಷ್ಣನದಿಯ ಉಪನದಿಗಳಾಗಿದ್ದು ಜಿಲ್ಲೆಯ ನೀರಾವರಿಗೆ ಉಪಯುಕ್ತವಾಗಿವೆ.

ವಾಯುಗುಣ: ಬಾಗಲಕೋಟೆ ಹೆಚ್ಚು ಉಷ್ಣತೆವುಳ್ಳ ಜಿಲ್ಲೆ. ಇಲ್ಲಿ ಚಳಿಗಾಲದ ಹಗಲಿನ ವೇಳೆ $29^0$–$30^0$ಸೆ. ರಾತ್ರಿ ವೇಳೆ $15^0$–$18^0$ಸೆ. ಉಷ್ಣಾಂಶ ಬೇಸಗೆಯಲ್ಲಿ ಹಗಲು $36^0$–$39^0$ಸೆ. ರಾತ್ರಿ ವೇಳೆ $27^0$–$28^0$ಸೆ. ಇರುತ್ತದೆ. ವಾರ್ಷಿಕ ಸರಾಸರಿ ಮಳೆ 55 ಸೆಂಮೀ.

ಮಣ್ಣು: ಜಿಲ್ಲೆಯ ದಕ್ಷಿಣ ಪ್ರದೇಶದಲ್ಲಿ ದಟ್ಟವಾದ ಕಪ್ಪು ಮಣ್ಣು, ಉತ್ತರ ಹಾಗೂ ಪಶ್ಚಿಮ ಭಾಗಗಳಲ್ಲಿ ಮಧ್ಯಮ ಪ್ರಮಾಣದ ಕಪ್ಪು ಮಣ್ಣಿದೆ.

ಸಸ್ಯ ಮತ್ತು ಪ್ರಾಣಿವರ್ಗ: ಜಿಲ್ಲೆಯಲ್ಲಿ 81,000 ಹೆ. ಅರಣ್ಯವಿದೆ. ಕಾಡು ದಟ್ಟವಿಲ್ಲ. ಇಲ್ಲಿನ ಪ್ರಮುಖ ಮರಗಳೆಂದರೆ ಹಲಗತ್ತಿ, ಬೇವು, ಮಾವು, ಹುಣಿಸೆ, ಅತ್ತಿ, ದಿಂಡಲು ಇತ್ಯಾದಿ. ಜಿಲ್ಲೆಯ ಪ್ರಮುಖ ಪ್ರಾಣಿವರ್ಗವೆಂದರೆ ಕತ್ತೆ ಕಿರುಬ, ಕಾಡು ಬೆಕ್ಕು, ನರಿ, ತೋಳ, ಮುಳ್ಳುಹಂದಿ, ಕೆಂಪು ನರಿ, ಜಿಂಕೆ, ಕೋತಿ ಮತ್ತು ಮೊಲ.

ನೀರಾವರಿ ಮತ್ತು ವ್ಯವಸಾಯ: ಜಿಲ್ಲೆಯ ಒಟ್ಟು ನೀರಾವರಿ ಪ್ರದೇಶ 2,22,768 ಹೆ. (2001). ಇದರಲ್ಲಿ 64,283 ಹೆ. ಕಾಲುವೆ, 1553 ಹೆ. ಕೆರೆ, 30603 ಹೆ. ಬಾವಿ, 40287 ಹೆ. ಕೊಳವೆ ಬಾವಿ, 476 ಹೆ. ಏತ ನೀರಾವರಿ ಮತ್ತು 85566 ಹೆ ಇತರೆ ಮೂಲದ ನೀರಾವರಿ ಪದ್ಧತಿಗಳಿವೆ. ವ್ಯವಸಾಯ ಪ್ರಮುಖ ವೃತ್ತಿ. ಪ್ರಮುಖ ಆಹಾರ ಬೆಳೆಗಳು ಜೋಳ, ಸಜ್ಜೆ, ಬೇಳೆಕಾಳು, ಮುಸಕಿನ ಜೋಳ, ದ್ವಿದಳ ಧಾನ್ಯಗಳು ಇಲ್ಲಿನ ವಾಣಿಜ್ಯ ಬೆಳೆಗಳೆಂದರೆ ಹತ್ತಿ, ಕಬ್ಬು, ಬಾಳೆ, ಶೇಂಗ ಮತ್ತು ಮೆಣಸಿನಕಾಯಿ.

ಕೈಗಾರಿಕೆಗಳು: ಜಿಲ್ಲೆಯಲ್ಲಿ ಸುಣ್ಣಕಲ್ಲು ಹೆಚ್ಚು ಕಂಡುಬರುವುದರಿಂದ ಸಿಮೆಂಟ್ ಕೈಗಾರಿಕೆಯಿದೆ. ಇದಲ್ಲದೆ ಜವಳಿ, ಹಾಲಿನ ಪುಡಿ ಉತ್ಪಾದನೆ ಮತ್ತು ರಾಸಾಯನಿಕ ವಸ್ತುಗಳ ಕೈಗಾರಿಕೆಗಳಿವೆ.

ಸಾರಿಗೆ: ಜಿಲ್ಲೆಯಲ್ಲಿ 77 ಕಿಮೀ ಉದ್ದದ ರೈಲುಮಾರ್ಗ ಮತ್ತು 5558 ಕಿಮೀ ಉದ್ದದ ರಸ್ತೆಮಾರ್ಗವಿದೆ. ಒಟ್ಟು ರಸ್ತೆ ಮಾರ್ಗದಲ್ಲಿ 60 ಕಿಮೀ ಉದ್ದದ ರಾಷ್ಟ್ರೀಯ ಮತ್ತು 331 ಕಿಮೀ ಉದ್ದದ ರಾಜ್ಯ ಹೆದ್ದಾರಿಯಿದೆ.

ಬಾಗಲಕೋಟೆ ತಾಲ್ಲೂಕು: ಜಿಲ್ಲೆಯ ಮಧ್ಯಭಾಗದಲ್ಲಿವೆ. ಇದು $16^0 04'$ ರಿಂದ $16^0 21'$ ಉ.ಅ. ದಲ್ಲೂ $76^0 26'$ ದಿಂದ $76^0 32'$ ಪೂ. ರೇ. ದಲ್ಲಿದೆ. ತಾಲ್ಲೂಕಿನ ದಕ್ಷಿಣಕ್ಕೆ ಹುನಗುಂದ ಮತ್ತು ಬಾದಾಮಿ ತಾಲ್ಲೂಕುಗಳು ಪಶ್ಚಿಮಕ್ಕೆ ಮುಧೋಳ ಹಾಗೂ ಉತ್ತರಕ್ಕೆ ಬೀಳಗಿ ತಾಲ್ಲೂಕು ಮತ್ತು ಬಿಜಾಪುರ ಜಿಲ್ಲೆಯಿದೆ. ವಿಸ್ತೀರ್ಣ 936 ಚ.ಕಿಮೀ ಘಟಪ್ರಭ ನದಿ ತಾಲ್ಲೂಕಿನಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿದು ಅನಂತರ ಉತ್ತರದಲ್ಲಿ ಕೃಷ್ಣಾ ನದಿಯನ್ನು ಸೇರುತ್ತವೆ. ಪ್ರಮುಖ ಬೆಳೆ ಜೋಳ, ಸಜ್ಜೆ, ಮುಸುಕಿನ ಜೋಳ, ಗೋದಿ, ಕಾಳುಗಳು, ಕಬ್ಬು, ಹತ್ತಿ ಮತ್ತು ಎಣ್ಣೆಕಾಳುಗಳು. ಪ್ರಮುಖ ಕೈಗಾರಿಕೆಗಳೆಂದರೆ ಹತ್ತಿ ಬಟ್ಟೆ, ಸಿಮೆಂಟ್ ಕೈಗಾರಿಕೆಗಳಿವೆ.

ತಾಲ್ಲೂಕಿನಲ್ಲಿ 41 ಕಿಮೀ ಉದ್ದದ ರೈಲು ಮಾರ್ಗ ಮತ್ತು 1024 ಕಿಮೀ ಉದ್ದದ ರಸ್ತೆಮಾರ್ಗವಿದೆ. ಜನಸಂಖ್ಯೆ 247870. ಬಾಗಲಕೋಟೆ ಪಟ್ಟಣ ತಾಲ್ಲೂಕು ಮತ್ತು ಜಿಲ್ಲೆಯ ಆಡಳಿತ ಕೇಂದ್ರ. ಘಟಪ್ರಭಾ ನದಿಯ ಬಲದಂಡೆಯ ಮೇಲಿದೆ. ಜನಸಂಖ್ಯೆ 91596. ಹುಬ್ಬಳಿ ಸೋಲ್ಲಾಪುರ ರೈಲು ಮಾರ್ಗ, ಬೆಳಗಾಂವಿ–ರಾಯಚೂರು ರಸ್ತೆ ಹೆದ್ದಾರಿ. ಇದರ ಮೂಲಕ ಸಾಗುತ್ತವೆ. ಇದು ಪ್ರಮುಖ ವಾಣಿಜ್ಯ, ಔದ್ಯಮಿಕ ಹಾಗೂ ಶೈಕ್ಷಣಿಕ ಕೇಂದ್ರ. ಜಿಲ್ಲೆಯ ಎಲ್ಲಾ ಭಾಗಗಳೊಡನೆ ರಸ್ತೆ ಸಂಪರ್ಕ ಹೊಂದಿದೆ. ಇದು ಹತ್ತಿ ಬೀಜ ಬೇರ್ಪಡಿಸುವ, ಹತ್ತಿ ಬಟ್ಟೆ ಮತ್ತು ಸಿಮೆಂಟ್ ಕೈಗಾರಿಕೆಯನ್ನು ಹೊಂದಿದೆ. ಇದೊಂದು ವ್ಯಾಪಾರ ಕೇಂದ್ರ ಹಾಗೂ ವಿದ್ಯಾಕೇಂದ್ರ. (ಬಿ.ಸಿ.ಕೆ.)

**ಬಾಗೇಪಲ್ಲಿ:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕಿನಲ್ಲಿ ಮಿಟ್ಟೆಮರಿ, ಬಾಗೇಪಲ್ಲಿ, ಚೇಳೂರು, ಪಾತಪಾಳ್ಯ ಮತ್ತು ಗೂಳೂರು ಹೋಬಳಿಗಳಿವೆ. ಒಂದು ಪಟ್ಟಣ, 228 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 932.9 ಚ.ಕಿಮೀ ಜನಸಂಖ್ಯೆ 169523.

ತಾಲ್ಲೂಕು ಅಲ್ಲಲ್ಲಿ ಹರಡಿರುವ ಕಣಶಿಲೆಯ ಬೆಟ್ಟಗಳಿಂದ ಕೂಡಿದ ಪ್ರದೇಶ. ಬಾಗೇಪಲ್ಲಿಯ ಪೂರ್ವಕ್ಕೆ ಉತ್ತರ–ದಕ್ಷಿಣವಾಗಿ ಹರಡಿರುವ ದೊಂಗಲಕೊಂಡ ಬೆಟ್ಟಗಳು ಗುಮ್ಮನಾಯಕನ ಪಾಳ್ಯದಿಂದ ಹೊರಟು, ಬಾಗೇಪಲ್ಲಿ ತಾಲ್ಲೂಕಿನ ಚಿತ್ರಾವತಿ ಮತ್ತು ಪಾಪಘ್ನಿ ನದೀಕಣಿವೆಗಳನ್ನು ವಿಂಗಡಿಸುತ್ತವೆ. ತಾಲ್ಲೂಕಿನ ಆಗ್ನೇಯದಲ್ಲಿ ಹರಿಯುವ ಪಾಪಾಘ್ನಿ ನದಿಗೆ ಅಡ್ಡಲಾಗಿ ವ್ಯಾಸಸಮುದ್ರ ಕೆರೆಯನ್ನು ನಿರ್ಮಿಸಲಾಗಿದೆ. ಚಿತ್ರಾವತಿ ನದಿ ತಾಲ್ಲೂಕಿನ ಪಶ್ಚಿಮದಲ್ಲಿ ಸು. 25 ಕಿಮೀ ದೂರ ಹರಿಯುವ ವಂಡಮನ ಹೊಳೆ ಪಾಪಘ್ನಿಯ ಒಂದು ಉಪನದಿ.

ಈ ತಾಲ್ಲೂಕಿನಲ್ಲಿ ಮಳೆ ಕಡಿಮೆ, ವಾರ್ಷಿಕ ಸರಾಸರಿ 68 ಸೆಂಮೀ ಸೆಖೆ ಹೆಚ್ಚು ಎನ್ನಬಹುದು. ಕೆಲವೆಡೆ ಕುರುಚಲು ಕಾಡುಗಳು, ಶ್ರೀಗಂಧ, ಹುಣಿಸೆ, ಸೀತಾಫಲ, ಹೊಂಗೆ, ಮುತ್ತುಗ, ಜಾಲಿ ಗಿಡಗಳೂ ಸ್ವಲ್ಪ ಹುಲ್ಲುಗಾವಲೂ ಇವೆ. ವ್ಯವಸಾಯಕ್ಕೆ ತಾಲ್ಲೂಕಿನಲ್ಲಿರುವ ಅನೇಕ ಕೆರೆ, ಕಟ್ಟೆ ಬಾವಿಗಳು ನೀರೊದಗಿಸುತ್ತವೆ. ಚಿತ್ರಾವತಿ ನದಿ ಆಸರೆಯ ರೆಡ್ಡಿಹಳ್ಳಿ ಕೆರೆ ಮತ್ತು ರಾಮಸಂದ್ರ ಕೆರೆಗಳಿಂದ ನೀರಾವರಿಗೆ ಅನುಕೂಲವಾಗಿದೆ. ರಾಗಿ, ಬತ್ತ, ಕಬ್ಬು, ತೊಗರಿ, ಹುರುಳಿ, ಮೆಣಸಿನಕಾಯಿ, ಈರುಳ್ಳಿ ಮೊದಲಾದವನ್ನು ಬೆಳೆಸುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆ ಇದ್ದು ಅವುಗಳ ಅಭಿವೃದ್ಧಿಗೆ, ರಕ್ಷಣೆಗೆ ತಾಲ್ಲೂಕು ಮತ್ತು ಗ್ರಾಮ ಮಟ್ಟದ ಪಶುವೈದ್ಯಾಲಯಗಳಿವೆ.

ತಾಲ್ಲೂಕು ಮತ್ತು ಹೋಬಳಿ ಆಡಳಿತ ಕೇಂದ್ರವಾಗಿರುವ ಬಾಗೇಪಲ್ಲಿ ಪಟ್ಟಣ ಚಿತ್ರಾವತಿ ನದಿಯ ಬಲದಂಡೆಯ ಮೇಲೆ, ಕೋಲಾರಕ್ಕೆ ವಾಯವ್ಯದಲ್ಲಿ 110 ಕಿಮೀ ದೂರದಲ್ಲಿದೆ. ಜನಸಂಖ್ಯೆ 20,120. ಬೆಂಗಳೂರು – ಅನಂತಪುರ ರಸ್ತೆ ಬಾಗೇಪಲ್ಲಿ ಮುಖಾಂತರ ಹಾದು ಹೋಗಿದೆ. ಪುರಸಭೆಯ ಆಡಳಿತಕ್ಕೆ ಈ ಪಟ್ಟಣ ಒಳಪಟ್ಟಿದೆ. (ವಿ.ಜಿ.ಕೆ.)

**ಬಾಗ್ದಾದ್:** ಇರಾಕಿನ ರಾಜಧಾನಿ. ಬಾಗ್ದಾದ್ ಪ್ರಾಂತ್ಯದ (ಮುಹಾಫಜ಼) ಆಡಳಿತ ಕೇಂದ್ರ. ಪ್ರಾಚೀನ ಮೆಸೊಪೊಟೇಮಿಯದ ಪ್ರಮುಖ ನಗರ. ಟೈಗ್ರಿಸ್ ನದಿಯ ಎರಡೂ ದಂಡೆಗಳ ಮೇಲೆ, ಪರ್ಷಿಯನ್ ಕೊಲ್ಲಿಯ ವಾಯವ್ಯಕ್ಕೆ 560 ಕಿಮೀ ದೂರದಲ್ಲಿ, ಇರಾಕಿನ ಉತ್ತರ ಮಧ್ಯದಲ್ಲಿ ಇದೆ. ಜನಸಂಖ್ಯೆ 4,689,000 (1999). ನಗರದ ನಿವೇಶನ

ಸಮತಟ್ಟಾಗಿದೆ. ಅದು ಸಮುದ್ರಮಟ್ಟದಿಂದ ಸು. 34 ಮೀ ಎತ್ತರದಲ್ಲಿದೆ. ಮೂಲ ನಗರವನ್ನು ಟೈಗ್ರಿಸ್ ನದಿಯ ಪಶ್ಚಿಮ ದಂಡೆಯ ಮೇಲೆ ಸ್ಥಾಪಿಸಲಾಗಿತ್ತಾದರೂ 1000 ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ಈ ನಗರದ ಬಹುಭಾಗ ನದಿಯ ಪೂರ್ವ ದಂಡೆಯ ಮೇಲೆ ಬೆಳೆದಿದೆ. ಅಲ್–ಕರ್ಕ್ ಕರಾಡೆಟ್, ಮರಿಯಮ್ ಮತ್ತು ಅಲ್–ಮನ್ಸೂರ್ ವಸತಿಗಳಿರುವ ಉಪನಗರ ಪಶ್ಚಿಮ ದಂಡೆಯ ಮೇಲೆ ಬೆಳೆಯುತ್ತಿದೆ. ಪೂರ್ವದಂಡೆಯ ನಗರ ಭಾಗವನ್ನೂ ವಸತಿಗಳನ್ನೂ ಕೂಡಿಸುವ ಸೇತುವೆಗಳಿವೆ. ಅವುಗಳಲ್ಲೊಂದರ ಮೇಲೆ ರೈಲುಮಾರ್ಗವಿದೆ.

ವಾಯುಗುಣ: ಮೇ ಇಂದ ಅಕ್ಟೋಬರ್‌ವರೆಗೆ ಇಲ್ಲಿ ಸುಡು ಬೇಸಗೆ. ಆಗ ಒಣ ಹವೆ ಇರುತ್ತದೆ. ಜುಲೈ ಆಗಸ್ಟ್ ತಿಂಗಳುಗಳಲ್ಲಿ ದಿನದ ಸರಾಸರಿ ಉಷ್ಣತೆ ಸೂರ್ಯೋದಯಕ್ಕೆ ಮುಂಚೆ $27^0$ ಸೆ. ಇರುವುದಾದರೂ ನಡುಹಗಲಿನಲ್ಲಿ ಅದು $41^0$ ಸೆ ನಿಂದ $43^0$ ಸೆ. ವರೆಗೂ ಕೆಲವು ವೇಳೆ $50^0$ಸೆ. ವರೆಗೂ ಏರುತ್ತದೆ. ಆದರೆ ರಾತ್ರಿಯಲ್ಲಿ $24^0$ಸೆ. ಗೆ ಇಳಿಯುತ್ತದೆ. ಚಳಿಗಾಲದಲ್ಲಿ ತಂಪಾಗಿರುತ್ತದೆ. ಆಗ ದಿನದ ಸರಾಸರಿ ಉಷ್ಣತೆ $13^0$ಸೆ. ಬೇಸಗೆಯಲ್ಲಿ ಬೀಸುವ ವಾಯವ್ಯದ ಮಾರುತಗಳು ಉಷ್ಣತೆಯ ತೀವ್ರತೆಯನ್ನು ಸ್ವಲ್ಪಮಟ್ಟಿಗೆ ಶಮನ ಮಾಡುವುವಾದರೂ ಅವು ಕೆಲವುವೇಳೆ–ವಿಶೇಷವಾಗಿ ಜುಲೈನಲ್ಲಿ ದೂಳಿನ ಬಿರುಗಾಳಿಗಳನ್ನು ಉಂಟುಮಾಡುತ್ತವೆ. ವರ್ಷದಲ್ಲಿ ಸು. 13 ಸೆಂಮೀ ಮಳೆ ಬೀಳುತ್ತದೆ.

ಜನ: ನಗರವಾಸಿಗಳಲ್ಲಿ ಅರಬ್ಬರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕುರ್ದ್, ಅಫ್ಘನ್, ಆರ್ಮೇನಿಯನ್ ಮುಂತಾದವರೂ ಇದ್ದಾರೆ. ಇಲ್ಲಿಯ ಮುಖ್ಯ ಧರ್ಮ ಇಸ್ಲಾಮ್. ಮುಸ್ಲಿಮರಲ್ಲಿ ಷಿಯಾ ಮತ್ತು ಸುನ್ನಿಗಳಿದ್ದಾರೆ. ಕ್ರೈಸ್ತರ ಸಂಖ್ಯೆಯೂ ಗಮನಾರ್ಹವಾಗಿದೆ. ಮುಖ್ಯ ಭಾಷೆ ಅರಬ್ಬೀ. ಹಲವರಿಗೆ ಅರ್ಥವಾಗುವ ವಿದೇಶಿ ರಾಷ್ಟ್ರಭಾಷೆಗಳಲ್ಲಿ ಇಂಗ್ಲಿಷ್ ಮುಖ್ಯವಾದುದ್ದು.

ತೀವ್ರ ಗತಿಯಲ್ಲಿ ಬೆಳೆಯುತ್ತಿರುವ ನಗರದಲ್ಲಿ ವಸತಿ ಸೌಕರ್ಯದ ಕೊರತೆಯಿದೆ. ಹೊಸದಾಗಿ ನಿರ್ಮಿಸಲಾಗುತ್ತಿರುವ ಮನೆಗಳ ಸಂಖ್ಯೆಗೂ ಬೆಳೆಯುತ್ತಿರುವ ಜನಸಂಖ್ಯೆಗೂ ಹೊಂದಾಣಿಕೆಯಾಗುತ್ತಿಲ್ಲ. ನದಿಯ ಎರಡೂ ದಂಡೆಗಳ ಮೇಲೆ ಉಪನಗರಗಳು ಬೆಳೆಯುತ್ತಿವೆ. ದುರ್ಬಲ ವರ್ಗದವರಿಗಾಗಿ ವಸತಿಗಳನ್ನು ನಿರ್ಮಿಸಲಾಗುತ್ತಿದೆ. 1956ರಲ್ಲಿ ಪೂರ್ಣಗೊಂಡ ಟೈಗ್ರೀಸ್ ಕಟ್ಟೆಯಿಂದಾಗಿ ಪ್ರವಾಹದ ಹಾವಳಿ ಕಡಿಮೆಯಾಗಿರುವುದರಿಂದ ನಗರ ಬೆಳೆಯುವುದಕ್ಕೆ ಸಹಾಯಕವಾಗಿದೆ. ನದಿಯ ಎರಡೂ ಪಾರ್ಶ್ವಗಳನ್ನೊಳಗೊಂಡಿರುವ ಹೊಸ ನಗರ ಯೋಜನೆ ವರ್ತುಲಾಕಾರದಲ್ಲಿದೆ. ವಿದ್ಯುತ್ ಮತ್ತು ನೀರು ಪೂರೈಕೆಯ ವ್ಯವಸ್ಥೆಯನ್ನು ಸರ್ಕಾರವಹಿಸಿಕೊಂಡಿದೆ.

ಸಾರಿಗೆ: 1950ರಿಂದೀಚೆಗೆ ಮೋಟಾರ್ ವಾಹನಗಳ ಸಂಖ್ಯೆ ತೀವ್ರಗತಿಯಲ್ಲಿ ಬೆಳೆದಿದೆ. ಸರ್ಕಾರದ ಅಧೀನದಲ್ಲಿ ರೈಲ್ವೆ ವ್ಯವಸ್ಥೆಯ ಮೂರು ಮಾರ್ಗಗಳು ಬಾಗ್ದಾದಿನಲ್ಲಿ ಸೇರುತ್ತವೆ. ನಗರದಲ್ಲಿ ಎರಡು ನಾಗರಿಕ ವಿಮಾನ ನಿಲ್ದಾಣಗಳಿವೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಇರುವುದು ಹುನ್ಯೆದಿಯಲ್ಲಿ. ಬಾಗ್ದಾದ್ ದೊಡ್ಡ ನದೀ ಬಂದರೂ ಆಗಿದೆ.

ಆರ್ಥಿಕ ಜೀವನ: ದೇಶದ ಸಾರಿಗೆ, ಕೈಗಾರಿಕೆ, ವಾಣಿಜ್ಯ ಮತ್ತು ಹಣಕಾಸಿನ ವ್ಯವಹಾರಗಳಿಗೆ ಬಾಗ್ದಾದ್ ಕೇಂದ್ರ. ದೇಶದ ಕೈಗಾರಿಕೆಗಳಲ್ಲಿ, ವಿಶೇಷವಾಗಿ ಜವಳಿ ಚರ್ಮ, ಉಡುಪು ಮತ್ತು ಆಹಾರ ಕೈಗಾರಿಕೆಗಳಲ್ಲಿ, ಶೇ. 25ರಷ್ಟು ಬಾಗ್ದಾದಿನಲ್ಲಿವೆ. ಎರಡನೆಯ ಮಹಾಯುದ್ಧದ ಅನಂತರ ತೈಲದಿಂದಾಗಿ ಇರಾಕಿನ ವರಮಾನ ಹೆಚ್ಚಿತು. ಇದರ ಪ್ರಭಾವ ಬಾಗ್ದಾದಿನ ಮೇಲೆ ಆಗಿದೆ. ಹತ್ತಿರವೇ ಒಂದು ತೈಲ ಸಂಸ್ಕರಣ ಕೇಂದ್ರವಿದೆ. ಪಾದರಕ್ಷೆ, ಹತ್ತಿ, ರೇಷ್ಮೆ, ಉಡುಪು, ಇಟ್ಟಿಗೆ, ಸಿಮೆಂಟು, ತಂಬಾಕಿನ ಪದಾರ್ಥಗಳು ಬಾಗ್ದಾದಿನಲ್ಲಿ ತಯಾರಾಗುತ್ತವೆ. ಖರ್ಜೂರ ಮತ್ತು ದ್ರಾಕ್ಷಿಯಿಂದ ಮದ್ಯ ತಯಾರಿಕೆಯೂ ಇಲ್ಲಿ ಆಗುತ್ತದೆ. ಇಲ್ಲಿ ರೈಲ್ವೆ ಕಾರ್ಯಾಗಾರವೂ ಉಕ್ಕಿನ ಕಾರ್ಖಾನೆಯೂ ಇವೆ. ಇರಾಕಿನ ಕೇಂದ್ರೀಯ ಬ್ಯಾಂಕ್ ಇರುವುದು ಇಲ್ಲಿ.

1990–91 ರಲ್ಲಿ ಪ್ರಾರಂಭವಾದ ಪರ್ಷಿಯನ್ ಗಲ್ಫ್ ಯುದ್ಧದಲ್ಲಿ, ಅಮೆರಿಕ ಹಾಗೂ ಅದರ ಮಿತ್ರರಾಷ್ಟ್ರಗಳ ಬಾಂಬ್ ದಾಳಿಯಿಂದ ಬಾಗ್ದಾದಿನ ಅನೇಕ ಆರ್ಥಿಕ ಸ್ಥಾವರಗಳು ನಾಶವಾಗಿವೆ. ಇನ್ನೂ ಸಹ ಇಲ್ಲಿ ಅಶಾಂತಿ, ಯುದ್ಧ, ಭಯೋತ್ಪಾದನೆ ಮುಂದುವರಿಯುತ್ತಿದೆ. (ಜಿ.ಕೆಯು.)

**ಬಾಣಾವರ:** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಒಂದು ಹೋಬಳಿ ಮತ್ತು ಆಡಳಿತ ಕೇಂದ್ರ. ಅರಸೀಕೆರೆಗೆ ವಾಯವ್ಯದಲ್ಲಿ 14 ಕಿಮೀ ದೂರದಲ್ಲಿದೆ. ಬೆಂಗಳೂರು–ಹುಬ್ಬಳ್ಳಿ ರೈಲು ಮಾರ್ಗದ ಒಂದು ನಿಲ್ದಾಣ. ಜನಸಂಖ್ಯೆ 8327. 1883ರ ತನಕವೂ ಬಾಣಾವರ ಇದೇ ಹೆಸರಿನ ತಾಲ್ಲೂಕು ಕೇಂದ್ರವಾಗಿದ್ದು ಕಡೂರು ಜಿಲ್ಲೆಗೆ ಸೇರಿತ್ತು. ಅರಸೀಕೆರೆ ತಾಲ್ಲೂಕು ರಚನೆಯಾದಾಗ (1886) ಆ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿತು. 1924ರಲ್ಲಿ ಪುರಸಭೆ ಸ್ಥಾಪನೆಯಾಯಿತು. ಇಲ್ಲಿನ ಬಾಣೇಶ್ವರ ದೇವಾಲಯದಿಂದ ಈ ಊರಿಗೆ ಬಾಣಾವರ ಎಂಬ ಹೆಸರು ಬಂದಿರಬೇಕೆಂಬ ಅಭಿಪ್ರಾಯವಿದೆ.

(ಎ.ಎಸ್.ಕೆ.ವಿ.ಎಸ್.ಎಸ್.)

**ಬಾನ್:** ಹಿಂದಿನ ಪಶ್ಚಿಮ ಜರ್ಮನಿ ಗಣರಾಜ್ಯದ ರಾಜಧಾನಿ. ಆಡಳಿತ ಕೇಂದ್ರ ನಗರವಾದ ಇದು ಕಾಲೋನ್‌ನಿನ ದಕ್ಷಿಣಕ್ಕೆ 32 ಕಿಮೀ ದೂರದಲ್ಲಿದೆ. ನಗರ ರೈನ್ ನದಿಯ ಎರಡೂ ದಂಡೆಯ ಮೇಲೆ ಬೆಳೆದಿದೆ. ಉತ್ತರ ಅಕ್ಷಾಂಶ $50^0 44'$ ಮತ್ತು ಪೂರ್ವರೇಖಾಂಶ $7^0 5'$ಯಲ್ಲಿದೆ. ಜನಸಂಖ್ಯೆ 306000 (2002). ಜೀಕ್‌ಬರ್ಗ್ ಸೇರಿದಂತೆ ಈ ನಗರದ ಜನಸಂಖ್ಯೆ 878700 (2002).

ಇದೊಂದು ಕೈಗಾರಿಕಾ ನಗರವೆನ್ನುವುದಕ್ಕಿಂತ ಪ್ರಸಿದ್ಧ ರಾಜಕೀಯ ಮತ್ತು ವಾಣಿಜ್ಯ ಕೇಂದ್ರವೆನ್ನಬಹುದು. ಆದರೂ ಇಲ್ಲಿ ರಾಸಾಯನಿಕ ವಸ್ತುಗಳು, ವಿದ್ಯುತ್ ಉಪಕರಣಗಳು, ಮರದ ಸಾಮಾನುಗಳು, ಕಾಗದ, ಔಷಧಗಳು ಮತ್ತು ವಿವಿಧ ಸೂಕ್ಷ್ಮ ಲೋಹ ಉಪಕರಣಗಳು ತಯಾರಾಗುತ್ತವೆ.

ಇದನ್ನೊಂದು ಪ್ರಾಚೀನ ಕಾಲದ ವಸತಿ ಎಂದು ಗುರುತಿಸಲಾಗಿದೆ. ಇಲ್ಲಿಯ ಬೋನೇಷಿಯ ಎಂಬ ಕೋಟೆ 5 ನೆಯ ಶತಮಾನದ ತನಕ ರೋಮನ್ನರ ವಶದಲ್ಲಿತ್ತು. ರೋಮನ್ ಚಕ್ರಾಧಿಪತ್ಯದ ಪತನಾನಂತರ ಖಾಸಗಿ ವಸತಿ ನೆಲೆಯಾಗಿ ಉಳಿಯಿತು. ಅನಂತರ 13 ರಿಂದ 19ನೆಯ ಶತಮಾನದ ತನಕ ಅಷ್ಟು ಹೆಚ್ಚು ವಿಸ್ತರಿಸಲ್ಪಡದಿದ್ದರೂ ಕಾಲೋನ್‌ನಿನ ಆರ್ಚ್‌ಬಿಷಪ್ ಚರ್ಚಿನ ಆಡಳಿತ ಕೇಂದ್ರವಾಗಿ ಪ್ರಾಮುಖ್ಯತೆಗಳಿಸಿತು. ಫ್ರೆಂಚ್ ಆಕ್ರಮಣಾನಂತರ 1794ರಲ್ಲಿ ಬಿಷಪ್‌ರ ಆಡಳಿತ ಅಂತ್ಯಗೊಂಡಿತು. ನೆಪೋಲಿಯನ್ನನ ಆಕ್ರಮಣಕ್ಕೆ ಆಗಾಗ ಒಳಗಾದ ಈ ಪಟ್ಟಣ ಬಡವಾಯಿತು. 1815ರಲ್ಲಿ ಇದನ್ನು ಪ್ರಷ್ಯಕ್ಕೆ ಸೇರಿಸಲಾಯಿತು. 1818ರಲ್ಲಿ ಪ್ರಸಿದ್ಧ ಬಾನ್ ವಿಶ್ವವಿದ್ಯಾಲಯ ಸ್ಥಾಪಿತವಾಗಿ ನಗರದ ಇತಿಹಾಸದಲ್ಲಿ ಒಂದು ತಿರುವಾಗಿ ಪರಿಣಮಿಸಿತು. ಆದರೂ 19ನೆಯ ಶತಮಾನದ ಆದಿಭಾಗದ ತನಕವೂ ಈ ಪಟ್ಟಣ ಅಷ್ಟೇನೂ ಅಭಿವೃದ್ಧಿ ಸಾಧಿಸಲಿಲ್ಲ. ಅನಂತರ 1914ರಲ್ಲಿ ನಗರಕ್ಕೆ ಸುತ್ತಮುತ್ತಲಿನ ಹಳ್ಳಿಗಳನ್ನು ಸೇರಿಸಿ ದೊಡ್ಡ ಬಡಾವಣೆಗಳನ್ನು ಕಟ್ಟಲಾಯಿತು. ಅದರಿಂದಾಗಿ ಪಟ್ಟಣ ಶೀಘ್ರವಾಗಿ ಬೆಳೆಯಿತು. ಪ್ರಥಮ ಮಹಾಯುದ್ಧಾನಂತರ ಧನಿಕರೆಲ್ಲ ಇಲ್ಲಿಂದ ಬೇರೆಡೆಗೆ ಓಡಿಹೋದಾಗ ಈ ನಗರ ಮತ್ತೆ ಬಡವಾಗಿ ಎರಡನೆಯ ಮಹಾಯುದ್ಧದ ವಿಧ್ವಂಸಕ ಕೃತ್ಯಕ್ಕೆ ಈಡಾಗಿ ಅನೇಕ ಕಟ್ಟಡಗಳು ಧ್ವಂಸವಾಗಿ ಹೋದುವು. 1949 ರಲ್ಲಿ ಇದು ಅಂದಿನ ಪಶ್ಚಿಮ ಜರ್ಮನಿಯ ರಾಜಧಾನಿಯಾದ ಬಳಿಕ ಇದರ ಬೆಳವಣಿಗೆ ಆಯಿತು. 1969ರ ಬಾನ್ ಕಾಯಿದೆ ಪ್ರಕಾರ ಜೀಕ್‌ಬರ್ಗ್ 30 ಗ್ರಾಮಗಳನ್ನು ಒಳಗೊಂಡ ಬೃಹತ್ ನಗರ ನಿರ್ಮಾಣವಾಯಿತು. ಹಾಗೆಯೇ ಹಳೇ ನಗರದ ಸುತ್ತಮುತ್ತ ಅನೇಕ ಆಧುನಿಕ ಬಡಾವಣೆಗಳು ಬೆಳೆದುವು. ನಗರದ ಬಳಿಯ ರೈನ್ ನದಿಗೆ ಸಮೀಪದಲ್ಲಿ ತಗ್ಗಾದ ಬಯಲು ದಕ್ಷಿಣದಲ್ಲಿ ಹಬ್ಬಿದೆ. ನದಿಯ ಉತ್ತರಭಾಗಕ್ಕೆ ಬೆಟ್ಟದ ದಿಣ್ಣೆ ಕಂಡುಬರುತ್ತದೆ. ಈ ಎರಡು ಪ್ರದೇಶಗಳನ್ನೂ ಹಾದುಬರುವ ರೈನ್ ನದಿಯ ಇಕ್ಕೆಲಗಳಲ್ಲೂ ನಗರ ಹಬ್ಬಿದ್ದು, ಉತ್ತರ ದಕ್ಷಿಣವಾಗಿ ಹಾದು ಹೋಗುವ ಅನೇಕ ರಸ್ತೆ ಮತ್ತು ರೈಲು ಮಾರ್ಗಗಳು ಒಂದಕ್ಕೊಂದು ಹೆಣೆದುಕೊಂಡು ರೈಲು, ರಸ್ತೆಗಳ ಕೇಂದ್ರ ನಿಲ್ದಾಣವಾಗಿದೆ. 19ನೆಯ ಶತಮಾನದಲ್ಲಿ ಇಲ್ಲಿಗೆ ವಲಸೆ ಹೋದ ಜನ ಕೈಗಾರಿಕೆಗಳನ್ನು ಈ ಪಟ್ಟಣದ ಹೊರವಲಯದಲ್ಲಿ ಸ್ಥಾಪಿಸಿ ಒಳಭಾಗವನ್ನು ವಾಸಿಸಲು ಯೋಗ್ಯವಾದ ನಗರವಾಗಿ ಮಾಡಿದರು. ಇದರಿಂದಾಗಿ ಬಾನ್ ಕೈಗಾರಿಕೆಯಲ್ಲಿ ಹಿಂದುಳಿಯಿತು. ಆದರೆ ಇದು ಪಶ್ಚಿಮ ಜರ್ಮನಿ ರಾಷ್ಟ್ರದ ರಾಜಧಾನಿಯಾದುದರಿಂದ ಅನೇಕ ಸೇವಾ ಸಂಸ್ಥೆಗಳ ಕೈಗಾರಿಕೆಗಳು ಬೆಳೆದು ಸುಮಾರು ಅರ್ಧದಷ್ಟು ಮಂದಿ ಇವುಗಳಲ್ಲೇ ವೃತ್ತಿನಿರತರಾಗಿದ್ದಾರೆ.

ಇಲ್ಲಿ ಸರ್ಕಾರಿ ಮುಖ್ಯ ಕಛೇರಿಗಳು ಇರುವುವಲ್ಲದೆ ಅನೇಕ ಪ್ರಾಂತೀಯ ಸಂಸ್ಥೆಗಳು, ಪ್ರಾಚೀನ ವಾಸ್ತುಶಿಲ್ಪ ಆಡಳಿತ ಕಛೇರಿ, ರಸ್ತೆ ಸರ್ವೇಕ್ಷಣ ಕಛೇರಿ, ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರ ಕಛೇರಿಗಳು ಮತ್ತು ನ್ಯಾಯಾಲಯಗಳು ಇವೆ. ರೈಲು, ವಿಮಾನ, ಆಸ್ಪತ್ರೆ ಮುಂತಾದ ಆಧುನಿಕ ನಗರದ ಇತರೆ ಸೌಕರ್ಯಗಳೂ ಈ ನಗರದಲ್ಲಿವೆ.

ಇದು ಬಿತೋವೆನ್ನನ ಜನ್ಮಸ್ಥಳ. ಸಂಗೀತ ಕಲೆಗೆ ಪ್ರಸಿದ್ಧ. ನಗರಸಭೆ ಸಮೂಹ ಸಂಗೀತ ಹಾಗೂ ಪ್ರಖ್ಯಾತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಗೀತ ಮೇಳಗಳನ್ನು ಏರ್ಪಡಿಸುತ್ತದೆ. ಬಿತೋವೆನ್ನನ ಆಧುನಿಕ ಸ್ಮಾರಕ ಭವನ ಈ ನಗರ ಸಂಗೀತ ಸಮ್ಮೇಳನಗಳ ಜೀವನಾಡಿಯಾಗಿದೆ. ವಸ್ತುಸಂಗ್ರಹಾಲಯ, ಚಿತ್ರಶಾಲೆ ಮತ್ತು ಬಾನ್ ವಿಶ್ವವಿದ್ಯಾಲಯ, 11–13ನೆಯ ಶತಮಾನದ ರೊಮೆನೆಸ್ಕ್ ಬೆಸಿಲಿಕ ಚರ್ಚ್ ಪ್ರೊಪೆಲ್ಸ್ ಡಾರ್ಫ್ ಅರಮನೆ, ಸುಂದರ ಉದ್ಯಾನಗಳೂ, ವಿಹಾರ ಕೇಂದ್ರಗಳೂ ಇವೆ. (ಡಿ.ವೈ.)

**ಬಾಬಾಬುಡನ್ ಶ್ರೇಣಿ:** ಕರ್ನಾಟಕದ ಅತ್ಯುನ್ನತ ಪರ್ವತಶ್ರೇಣಿ. ಕಪ್ಪುಹಾರ್ನ್‌ಬ್ಲೆಂಡ್‌ಯುಕ್ತ ಶಿಲೆಗಳಿಂದಲೂ ಸ್ತರೀಕೃತ ಹಿಮಟೈಟ್–ಕ್ವಾರ್ಟ್ಸೈಟ್ ಆ್ಯಂಫಿಬೋಲೈಟ್ ಮುಂತಾದ ಶಿಲೆಗಳಿಂದಲೂ ಕೂಡಿ ಬಾಬಾಬುಡನ್ ಗಿರಿಶ್ರೇಣಿಯನ್ನು ರೂಪಿಸಿರುವ ಶಿಲಾ ಸ್ತೋಮ. ಚಿಕ್ಕಮಗಳೂರು ಪಟ್ಟಣದ ಉತ್ತರಕ್ಕೆ $13^0 23'$–$13^0 35'$ ಉತ್ತರ ಅಕ್ಷಾಂಶಗಳ ನಡುವೆ $75^0 57'$ ಪೂರ್ವ ರೇಖಾಂಶದ ನೇರ, ಖಂಡಚಂದ್ರ

ಅಥವಾ ಕುದುರೆಲಾಳದ ಆಕೃತಿಯಲ್ಲಿ ವ್ಯಾಪಿಸಿದೆ. ಶ್ರೇಣಿಯ ಸರಾಸರಿ ಎತ್ತರ ಸಮುದ್ರಮಟ್ಟದಿಂದ 1830 ಮೀ ಒಟ್ಟು ವ್ಯಾಪ್ತಿ ಸು. 1280 ಚ.ಕಿಮೀ ಹೆಬ್ಬೆ ಬೆಟ್ಟದಲ್ಲಿ (1337 ಮೀ) ಶ್ರೇಣಿಯ ಉತ್ತರ ಚಾಚು ಆರಂಭ; ಅಲ್ಲಿಂದ ಸು. 24 ಕಿಮೀ ದೂರ ಪೂರ್ವಾಭಿಮುಖವಾಗಿ ಹಬ್ಬಿ ಅಲ್ಲಿ ದಕ್ಷಿಣಕ್ಕೆ ಬಾಗಿ ಮತ್ತೆ ಪೂರ್ವಾಭಿಮುಖವಾಗಿ ಸು. 3 ಕಿಮೀ ದೂರ ಹರಿದಿದೆ. ಶ್ರೇಣಿಯ ದಕ್ಷಿಣ ಚಾಚಿನಲ್ಲಿ ಬಸವನ ಗುಡ್ಡ ಮತ್ತು ವೊಡ್ಡಿನ ಗುಡ್ಡ ಎಂಬ ಎರಡು ಬೆಟ್ಟಗಳಿವೆ.

ಮುಳ್ಳಯ್ಯನ ಗಿರಿ ಇಲ್ಲಿಯ ಅತ್ಯುನ್ನತ ಶಿಖರ (1925 ಮೀ). ಇದು ಶ್ರೇಣಿಯ ದಕ್ಷಿಣದಲ್ಲಿದೆ. ಇದರ ಈಶಾನ್ಯಕ್ಕೆ ಬಾಬಾಬುಡನ್ ಗಿರಿ (1894 ಮೀ) ಇದೆ. ವೇದ ಮತ್ತು ಆವತಿ ನದಿಗಳ ಉಗಮಸ್ಥಾನ ಇಲ್ಲಿಯೇ. ಬಾಬಾಬುಡನ್ ಗಿರಿಯ ಪೂರ್ವಭಾಗದಲ್ಲಿ ದೇವೀರಮ್ಮನ ಗುಡ್ಡವಿದೆ. ಶ್ರೇಣಿಯ ಈಶಾನ್ಯ ಮೂಲೆಯಲ್ಲಿ ಕಲ್ಲತ್ತಗಿರಿ (1876 ಮೀ) ಇದೆ. ಇದರ ಉತ್ತರದಲ್ಲಿ ಕೆಮ್ಮಣ್ಣು ಗುಂಡಿಯ ಬಳಿ ಪ್ರವಾಸಿಗೃಹಗಳನ್ನು ಕಟ್ಟಲಾಗಿದೆ. ಬಾಬಾಬುಡನ್ ಗಿರಿಯ ದಕ್ಷಿಣ ಭಾಗ ಕಾಫಿ ಬೆಳೆಯಲು ಯೋಗ್ಯ ಸ್ಥಳ. ಬೆಟ್ಟಗಳ ತಪ್ಪಲುಗಳಲ್ಲಿಯೂ ಜಾಗರ್ ಕಣಿವೆಯಲ್ಲಿಯೂ ಕಾಫಿ ತೋಟಗಳು (ಸ್ಥಾಪನೆ ಪ್ರಾಯಶಃ 1840) ಹರಡಿವೆ. ಬಾಬಾಬುಡನ್‌ಗಿರಿಯ ಈಶಾನ್ಯದಲ್ಲಿ ಭದ್ರಾ ನದಿಯನ್ನು ಕೂಡುವ ಹೊಳೆ ಹೆಚ್ಚು ಎತ್ತರದಿಂದ ದುಮುಕುತ್ತದೆ.

ಬಾಬಾಬುಡನ್ ಪ್ರದೇಶದ ಉತ್ತರ ಭಾಗದಲ್ಲಿರುವ ಕೆಮ್ಮಣ್ಣುಗುಂಡಿ ಗಣಿಗಳಿಂದ ಕಬ್ಬಿಣದ ಅದಿರನ್ನು ತೆಗೆಯಲಾಗುತ್ತಿದೆ. ಕಬ್ಬಿಣದ ಅದಿರು ನಿಕ್ಷೇಪಗಳು ಸಿಗುವ ಮುಖ್ಯ ಸ್ಥಳಗಳೆಂದರೆ, ಕೆಮ್ಮಣ್ಣುಗುಂಡಿ, ಕಲ್ಲತ್ತಗಿರಿ, ಅತ್ತಿಗುಂಡಿ, ಪೀಠಕೈಕಂಬ, ಜೇನುಸುರಿಗುಡ್ಡ, ಹೊನ್ನಮ್ಮನ ಹಳ್ಳ, ಮುಳ್ಳಯ್ಯನ ಗಿರಿ. ಈ ಪರ್ವತ ಪ್ರದೇಶದಲ್ಲಿ ಹರಡಿರುವ ಎಲ್ಲ ದರ್ಜೆಯ ಕಬ್ಬಿಣದ ಅದಿರಿನ ಒಟ್ಟು ಪ್ರಮಾಣ ಸು. 3000 ಮಿ ಟನ್ ಇರಬಹುದೆಂದು ಅಂದಾಜಿಸಲಾಗಿದೆ. ಇದರಿಂದ ಶೇ. 66 ಇರುವ ಕಬ್ಬಿಣದ ಸಾರ ಪಡೆಯುವುದು ಸಾಧ್ಯ ಎಂದು ದೃಢಪಟ್ಟಿದೆ.

ಇಲ್ಲಿಯ ಕಬ್ಬಿಣ ಸಂಯೋಜಿತ ಖನಿಜಗಳಲ್ಲಿ ಹಿಮಟೈಟ್ ಮತ್ತು ಲೈಮೊನೈಟ್ ಮುಖ್ಯವಾದುವು. ಇವುಗಳೊಡನೆ ಒಂದೆರಡು ಕಡೆ ಮ್ಯಾಗ್ನಟೈಟ್ ಸಿಗುವುದೂ ಉಂಟು. ಕಬ್ಬಿಣದ ಅದಿರು ಕಬ್ಬಿಣ ಬೆಣಚು ಪದರ ಶಿಲೆಗಳ ಮೇಲ್ಭಾಗದಲ್ಲಿಯೂ ಹಬ್ಬಿರುತ್ತದೆ. ಕೆಮ್ಮಣ್ಣುಗುಂಡಿ ಪ್ರದೇಶದಲ್ಲಿ ಏಣು ನಿಕ್ಷೇಪ (ರಿಡ್ಜ್‌ಡಿಪಾಸಿಟ್) ಮತ್ತು ಒಳವೋರೆ ನಿಕ್ಷೇಪ (ಸ್ಕಾರ್ಪ್ ಡಿಪಾಸಿಟ್) ಎಂಬ ಎರಡು ನಿಕ್ಷೇಪಗಳಿವೆ. ಏಣು ನಿಕ್ಷೇಪ ಕೆಮ್ಮಣ್ಣುಗುಂಡಿಯ ಸಮೀಪದಲ್ಲಿದೆ. ಒಳವೋರೆ ನಿಕ್ಷೇಪ ದೂಪದಗಿರಿಯ ಹತ್ತಿರದಲ್ಲಿದೆ. ಈ ಎರಡು ನಿಕ್ಷೇಪಗಳಿಂದ ಅದಿರನ್ನು ಹೊರತೆಗೆದು ಉಕ್ಕಿನ ಹಗ್ಗದಿಂದ ಗಗನಮಾರ್ಗವಾಗಿ ಬೆಟ್ಟದ ಬುಡಕ್ಕೆ ತಂದು ಅಲ್ಲಿಂದ ಟ್ರಾಮ್‌ವೇ ಮುಖಾಂತರ ಭದ್ರಾವತಿ ಕಾರ್ಖಾನೆಗೆ ರವಾನಿಸಲಾಗುತ್ತದೆ. ಈ ಪ್ರದೇಶದಲ್ಲಿ ವರ್ಷಕ್ಕೆ ಸುಮಾರು ಒಂದೂವರೆ ಲಕ್ಷ ಟನ್ನುಗಳಷ್ಟು ಅದಿರನ್ನು ಹೊರತೆಗೆಯಲಾಗುತ್ತದೆ. ಕೆಮ್ಮಣ್ಣುಗುಂಡಿಯ ಅದಿರಿನಿಂದ ಭದ್ರಾವತಿಯ ಕಾರ್ಖಾನೆಯ ಕುಲುಮೆಗಳಲ್ಲಿ ವರ್ಷಕ್ಕೆ ಸುಮಾರು ಎಪ್ಪತ್ತರಿಂದ ಎಂಬತ್ತು ಸಾವಿರ ಟನ್ನು ಬೀಡುಕಬ್ಬಿಣ ತಯಾರಿಸಲಾಗುತ್ತಿದೆ. (ವಿ.ಜಿ.ಕೆ.;ಕೆ.ಜಿ.ಎಸ್.;ವೈ.ಎಲ್.)

**ಬಾರಕರ್ ಶ್ರೇಣಿ:** ರಾಣಿಗಂಜ್ ಕಲ್ಲಿದ್ದಲು ಗಣಿಯ ಬಳಿ ಹರಿಯುವ ಬಾರಕರ್ ನದಿಯ ಸಮೀಪದಲ್ಲಿ ಕಂಡುಬರುವ ಪ್ರಾಚೀನ ಶಿಲಾಪ್ರಸ್ತರ. ಇವು ಯಾವ ತೆರನಾದ ಅವ್ಯವಸ್ಥೆಯನ್ನೂ ತೋರಗೊಡದೆ ಟಾಲ್‌ಚಿರ್ ಶಿಲಾ ಶ್ರೇಣಿಯ ಮೇಲೆ ನಿಕ್ಷೇಪಗೊಂಡಿವೆ. ಹಲವು ಕಡೆ ಈ ಎರಡು ಶಿಲಾವರ್ಗಗಳು ಒಂದರೊಡನೊಂದು ಕ್ರಮವಾಗಿ ಬೆರೆತು ಹೋಗಿವೆ. ಅಂಥ ಪ್ರದೇಶಗಳಲ್ಲಿ ಇವೆರಡರ ಮಧ್ಯೆ ಸೀಮಾರೇಖೆ ಎಳೆದು ಗುರುತಿಸಲು ಸಾಧ್ಯವೇ ಇಲ್ಲ. ಆದರೆ ಝರಿಯಾ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಟಾಲ್‌ಚಿರ್–ಬಾರಕರ್ ಶ್ರೇಣಿಗಳ ನಡುವೆ ಸೀಮಾವಿಳಂಬವನ್ನು ಸ್ಪಷ್ಟವಾಗಿ ಗುರುತಿಸಬಹುದು. ಹೀಗೆಯೇ ಕರನ್‌ಪುರ ಪ್ರದೇಶದಲ್ಲಿ ಬಾರಕರ್ ಶಿಲಾಪ್ರಸ್ತರಗಳು ಟಾಲ್‌ಚಿರ್ ವರ್ಗದ ಶಿಲೆಗಳೇ ಇಲ್ಲದೆ ನೇರವಾಗಿ ಆರ್ಷೇಯ ಯುಗದ ಶಿಲೆಗಳ ಮೇಲೆ ನಿಕ್ಷೇಪಗೊಂಡಿರುವುದು ಸುಸ್ಪಷ್ಟವಾಗಿದೆ.

ಝರಿಯಾ ಪ್ರಾಂತದಲ್ಲಿ ಬಾರಕರ್ ಶ್ರೇಣಿಯ ದಪ್ಪ ಸು. 600 ಮೀ ಗಳಿಗಿಂತಲೂ ಜಾಸ್ತಿ ಇದೆ. ರಾಣಿಗಂಜ್‌ನಲ್ಲಿ ಈ ಶಿಲಾ ಶ್ರೇಣಿಯ ದಪ್ಪ ಸು. 600 ಮೀ ಕರನ್‌ಪುರ ಪ್ರದೇಶದಲ್ಲಿ ಸು. 450 ಮೀ ಬಹುಶಃ ರಾಮಘರ್ ಬಳಿ ಇವು ಅತ್ಯಂತ ಹೆಚ್ಚು ದಪ್ಪವಾಗಿ ಅಂದರೆ ಸು. 900 ಮೀ ಗಳಷ್ಟಿವೆ ಎನ್ನಬಹುದು. ಹೀಗಿದ್ದರೂ ಕೆಲವು ಪ್ರದೇಶಗಳಲ್ಲಿ, ಉದಾಹರಣೆಗೆ ಛತ್ತೀಸ್‌ಘರ್‌ನ ಬಿಸ್ರಾಂಪುರದ ಬಳಿ ಇವು 150 ಮೀ, ಗೋದಾವರಿ ಕಣಿವೆಯ ಚಾಂದಾ ಬಳಿ ಕೇವಲ 75 ಮೀ ಮತ್ತು ಭದ್ರಾಚಲಮ್ ಬಳಿ 180 ಮೀ ದಪ್ಪವಾಗಿವೆ.

ಬಾರಕರ್ ವರ್ಗದ ಶಿಲೆಗಳ ಕಣರಚನೆ ರಾಣಿಗಂಜ್ ವರ್ಗದ ಶಿಲೆಗಳದ್ದಕ್ಕಿಂತ ದಪ್ಪ ಇವು ಸಹ ಗೊಂಡ್ವಾನಯುಗದ ಇತರ ಶಿಲಾಶ್ರೇಣಿಗಳಂತೆ ಗುಂಡುಶಿಲೆ, ಮರಳುಶಿಲೆ, ನುರುಜುಶಿಲೆ, ಜೇಡುಶಿಲೆ ಮತ್ತು ಕಲ್ಲಿದ್ದಲಿನ ಸ್ತರಗಳಿಂದ ಕೂಡಿವೆ. ಕದಂಬಶಿಲೆಯಲ್ಲಿಯ (ಗುಂಡುಶಿಲೆ) ಪೆಂಟೆಗಳ ಪೈಕಿ ಕೆಲವು ಗಾತ್ರದಲ್ಲಿ ದೊಡ್ಡವು. ಅವುಗಳ ಅಗಲ 25 ಸೆಂಮೀ ಗೂ ಜಾಸ್ತಿ ಇದೆ. ಅಲ್ಲದೆ ಅವು ಧಾರವಾಡ ಯುಗದ ಶಿಲೆಗಳಿಂದ ಉಂಟಾದವೆಂಬುದನ್ನೂ ಸೂಚಿಸುತ್ತವೆ. ಬಾರಕರ್ ಕದಂಬಶಿಲೆಯಲ್ಲಿ ಸಾಮಾನ್ಯವಾಗಿ ಗಾತ್ರದಲ್ಲಿ ಸಣ್ಣದಾದ ಮತ್ತು ಆಕಾರದಲ್ಲಿ ಗುಂಡಾಗಿರುವ ಬಿಳಿಯಬಣ್ಣದ ಬೆಣಚಿನ ಪೆಂಟೆಗಳನ್ನು ಕಾಣಬಹುದು.

ಭಾರತದಲ್ಲಿ ಕಲ್ಲಿದ್ದಲು ನಿಕ್ಷೇಪಗಳು ದೊರೆಯುವ ರೀತಿಯನ್ನು ವಿವೇಚಿಸುವಾಗ ಬಾರಕರ್ ಶಿಲಾಶ್ರೇಣಿಗೆ ಪ್ರಮುಖ ಸ್ಥಾನ ನೀಡಬೇಕು. ಇದರಲ್ಲಿ ನಾನಾ ದರ್ಜೆಯ ಮತ್ತು ನಾನಾ ಬಗೆಯ ಕಲ್ಲಿದ್ದಲನ್ನು ಕಾಣಬಹುದು. ಬಾರಕರ್ ಶಿಲಾ ಶ್ರೇಣಿಯಲ್ಲಿ ಪ್ರಾಚೀನ ಸಸ್ಯಾವಶೇಷಗಳನ್ನು ನೋಡಬಹುದು. ಇವುಗಳಲ್ಲಿ ಸ್ಫಿನೋಫಿಲ್ಲಮ್ ಮತ್ತು ಸೈಕ್ಯಾಡೊಫೈಟ ಮುಖ್ಯವಾದುವು. ಅಲ್ಲದೆ ಈಕ್ವಿಸಿಟೇಲುಗಳ ವರ್ಗಕ್ಕೆ ಸೇರಿದ ಫಿಲ್ಲೋಥಿಕಾ ಸಹ ಈ ಶಿಲೆಗಳ ವಿಶಿಷ್ಟ ಜೀವ್ಯವಶೇಷ. ಮಿರ್ಜಾಪುರದ ಬಳಿ ದೊರೆಯುವ ಬಾರಕರ್ ಶ್ರೇಣಿಯ ಶಿಲೆಗಳಲ್ಲಿ ಬೀಜಕಣಗಳೂ ಮೆತುಗಂಟುಗಳೂ ಕಂಡುಬಂದಿವೆ. (ಬಿ.ವಿ.ಜಿ.)

**ಬಾರ್ಬಡೋಸ್:** ವೆಸ್ಟ್ ಇಂಡೀಸ್ ದ್ವೀಪ ಸಮೂಹದಲ್ಲಿ ಅತ್ಯಂತ ಪೂರ್ವಕ್ಕಿರುವ ಸ್ವತಂತ್ರ್ಯದ್ವೀಪ. ವೆನಿಜುವೇಲಕ್ಕೆ ಈಶಾನ್ಯದಲ್ಲಿ ಸು. 402 ಕಿಮೀ ದೂರದಲ್ಲೂ ಸೇಂಟ್ ವಿನ್ಸೆಂಟ್ ದ್ವೀಪದ ಪೂರ್ವಕ್ಕೆ ಸು. 160 ಕಿಮೀ ದೂರದಲ್ಲೂ ಇದೆ. ತ್ರಿಕೋನಾಕೃತಿಯಲ್ಲಿರುವ ಈ ದ್ವೀಪ ಉತ್ತರ ದಕ್ಷಿಣವಾಗಿ 34 ಕಿಮೀ ಪೂರ್ವ ಪಶ್ಚಿಮವಾಗಿ 23 ಕಿಮೀ ಇದೆ. $13^0 10'$ ಉ.ಅ. ಮತ್ತು $55^0 30'$ ಪ.ರೇ. ಗಳ ಮೇಲಿದೆ. ಒಟ್ಟು ವಿಸ್ತೀರ್ಣ 431 ಚ.ಕಿಮೀ. ಜನಸಂಖ್ಯೆ 270,000 (2002). ಬ್ರಿಡ್ಜ್‌ಟೌನ್ ಇದರ ರಾಜಧಾನಿ ಹಾಗೂ ಏಕೈಕ ಬಂದರು. ಜನಸಂಖ್ಯೆ 8789.




ಈ ದ್ವೀಪ ಕಣಶಿಲೆಗಳಿಂದ ಕೂಡಿದ್ದು ಸು. 70 ದಶಲಕ್ಷ ವರ್ಷಗಳಿಗೂ ಪ್ರಾಚೀನವಾದ ಜೇಡುಶಿಲೆ, ಮರಳು ಶಿಲೆ ಮತ್ತು ಕಾಂಗ್ಲೋಮರೇಟ್ಸ್ ಶಿಲೆಗಳಿಂದ ಕೂಡಿದೆ. ಸುಣ್ಣಕಲ್ಲುಗಳ ಸಂಚಯದ ಮೇಲೆ ಸು. 92 ಮೀ ದಪ್ಪವಾದ ಹವಳ ಪದರ ಆವೃತವಾಗಿದೆ. ದ್ವೀಪದ ಅತ್ಯಂತ ಎತ್ತರ ಪ್ರದೇಶ ಹಿಲಬೀ ಶಿಖರ (340 ಮೀ). ಪಶ್ಚಿಮದ ಭೂಭಾಗ ಅಸಮ ಇಳಿಜಾರಿನ ಹಸುರು ಮೈದಾನ. ಹಿಲಬೀಶಿಖರದ ಭಾಗ ಕಡಿದಾದ ಇಳಿಜಾರಿನಿಂದ ಕೂಡಿದ್ದು ಸೇಂಟ್ ಜಾರ್ಜ್ ನದಿ ಕಣಿವೆಯ ವಿಶಾಲ ಪ್ರದೇಶದಲ್ಲಿ ಕೊನೆಗೊಳ್ಳುತ್ತದೆ.

ಬಾರ್ಬಡೋಸ್‌ನಲ್ಲಿ ಅಹ್ಲಾದಕರ ವಾಯುಗುಣವಿದೆ. ಉಷ್ಣತೆ ಸಾಮಾನ್ಯವಾಗಿ $21^0$–$31^0$ ಸೆ. ಡಿಸೆಂಬರ್‌ನಿಂದ ಮೇ ತನಕ ಶುಷ್ಕ ಹವೆ. ಉಳಿದ ಭಾಗ ಶೀತ ಹವಾಗುಣದಿಂದ ಕೂಡಿರುತ್ತದೆ. ಚಿಕ್ಕ ದ್ವೀಪವಾದರೂ ಮಳೆಯ ಹಂಚಿಕೆಯಲ್ಲಿ ಅಸಮತೆ ಕಂಡುಬರುತ್ತದೆ. ಉತ್ತರದಲ್ಲಿ ವಾರ್ಷಿಕ 200 ಸೆಂಮೀ ಮಳೆಯಾದರೆ ದಕ್ಷಿಣದಲ್ಲಿ 100–150 ಸೆಂಮೀ. ಈ ದ್ವೀಪದ ಮೇಲೆ ಚಂಡಮಾರುತ ಬೀಸಿಹೋಗುವುದುಂಟು. ದ್ವೀಪದ ಉತ್ತರಭಾಗದಲ್ಲಿ ನಿತ್ಯಹರಿದ್ವರ್ಣ ಸಸ್ಯವರ್ಗವಿದೆ. ಒಟ್ಟು ಭೂಮಿಯ ಶೇ. 85 ಭಾಗವನ್ನು ತೋಟಗಾರಿಕೆ ಮತ್ತು ಉಳುಮೆಗೆ ಬಳಸಬಹುದಾಗಿದೆ. ದ್ವೀಪದಲ್ಲಿ ಮಹಾಗನಿ, ಹುಣಿಸೆ, ತಾಳೆ, ದೀವಿ, ಹಲಸು, ಸರ್ವೇಮರ, ನೀರುಕಾಯಿ ಮರ, ಗುಲ್‌ಮೊಹರ್ ಮತ್ತು ದೇವಕಣಿಗಿಲೆ ಮರಗಳಿವೆ. ವನ್ಯಮೃಗಗಳಲ್ಲಿ ಕೋತಿ, ಮೊಲ, ಮುಂಗುಸಿ ಮುಂತಾದ ಪ್ರಾಣಿಗಳೂ ಪಾರಿವಾಳ, ಗುಬ್ಬಚ್ಚಿ ಮುಂತಾದ ಪಕ್ಷಿಗಳು ಇವೆ.

ದ್ವೀಪದ ಸು. 4/5ರಷ್ಟು ಕೃಷಿಭೂಮಿ ದೊಡ್ಡ ಹಿಡುವಳಿದಾರರ ವಶದಲ್ಲಿದೆ. ಸಾಮಾನ್ಯವಾಗಿ ಗೇಣಿದಾರರು ಸ್ಥಳೀಯವಾಗಿ ಚ್ಯಾಟಲ್‌ಗಳೆಂದು ಕರೆಯುವ ಮರದ ಪುಟ್ಟ ಮನೆಗಳಲ್ಲಿ, ದೊಡ್ಡ ಹಿಡುವಳಿಯ ಅಂಚಿನಲ್ಲಿ ಗುಂಪಾಗಿ ವಾಸಿಸುತ್ತಾರೆ. ಗೇಣಿದಾರರಲ್ಲಿ

ಒಬ್ಬರಿಂದೊಬ್ಬರಿಗೆ ಇವನ್ನು ವರ್ಗಾಯಿಸಬಹುದು ಅಥವಾ ಸ್ಥಳಾಂತರಿಸಬಹುದು. ಕೆಲವು ವಿದ್ಯುತ್ ದೀಪ ಮತ್ತು ಕೊಳವೆ ಬಾವಿಗಳ ಅನುಕೂಲ ಪಡೆದಿರುತ್ತವೆ. ದನ, ಕುರಿ, ಆಡುಗಳ ಸಾಕಣೆಯುಂಟು. ಗ್ರಾಮಗಳಲ್ಲಿ ಸಾಮಾನ್ಯವಾಗಿ ಕಲ್ಲಿನ ಮನೆಗಳನ್ನು ಉದ್ದಕ್ಕೂ ಸಾಲಾಗಿ ಕಟ್ಟಿರುತ್ತಾರೆ.

ಸಕ್ಕರೆ ಮತ್ತು ಅದರ ಉಪ ವಸ್ತುಗಳು ಈ ದ್ವೀಪದಿಂದ ರಫ್ತಾಗುವ ಪದಾರ್ಥಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಒಳಗೊಂಡಿವೆ. ಒಟ್ಟು ವ್ಯವಸಾಯ ಭೂಮಿಯಲ್ಲಿ ಶೇ. 70 ಭಾಗದಲ್ಲಿ ಕಬ್ಬು ಬೆಳೆಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಸಲುವಾಗಿ ಆರ್ಥಿಕ ವ್ಯವಸ್ಥೆಯಲ್ಲಿ ವೈವಿಧ್ಯ ತರಲಾಗುತ್ತಿದೆ. ಮೀನುಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಸ್ಥಳೀಯ ಗುಡಿ ಕೈಗಾರಿಕೆಗಳು ಸೇರಿದಂತೆ ಆಹಾರ ಸಂಸ್ಕರಣೆ, ಗಿರಣಿಗಳು, ಗಾಜು ಹಾಗೂ ಮರಮುಟ್ಟು ಸಾಮಾನುಗಳ ತಯಾರಿಕೆ ಮುಂತಾದ ಸಣ್ಣ ಕೈಗಾರಿಕೆಗಳು ಬೆಳೆಯುತ್ತಿವೆ. ಇತ್ತೀಚೆಗೆ ಪ್ರವಾಸೋದ್ಯಮ ಹೆಚ್ಚು ಆರ್ಥಿಕ ಬದಲಾವಣೆ ತರುವಷ್ಟು ಪ್ರಬುದ್ಧಮಾನವಾಗಿ ಬೆಳೆಯುತ್ತಿದೆ. 1968 ರಿಂದೀಚೆಗೆ ಸಕ್ಕರೆ ಆದಾಯಕ್ಕಿಂತ ಹೆಚ್ಚಿನ ವಿದೇಶಿ ವಿನಿಮಯವನ್ನು ಪ್ರವಾಸೋದ್ಯಮ ತಂದಿದೆ. ಅನೇಕ ಹೊಸ ಹೋಟೆಲ್ ಮತ್ತು ವಸತಿ ಗೃಹಗಳು ಬೆಳೆದು ಇಲ್ಲಿಯ ಭೂಮಿ ಬೆಲೆ ಅಧಿಕಗೊಂಡಿದೆ. ಸಕ್ಕರೆ ಕೈಗಾರಿಕೆ ಬಂಡವಾಳದ ಅಭಾವ, ರೈತರ ಆಲಸ್ಯ, ಯಂತ್ರೋಪಕರಣಗಳ ಅಭಾವದಿಂದ ಹೆಚ್ಚು ಕುಂಠಿತಗೊಂಡಿದೆ. ಜೀವನ ಸ್ಥಿತಿ ಬೆಲೆಗಳ ಹೆಚ್ಚಳ ಮತ್ತು ರಾಷ್ಟ್ರೀಯ ಸಾಲದ ಹೊರೆಗಳಿಂದ ದುಸ್ಥಿತಿಗೆ ಇಳಿದಿದೆ. ಆಮದು ಮತ್ತು ರಫ್ತು ಕೇವಲ ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳೊಡನೆ ನಡೆಯುತ್ತಿದೆ. ಈ ದ್ವೀಪ ಒಳ್ಳೆಯ ರಸ್ತೆ ಜಾಲಗಳಿಂದ ಕೂಡಿದೆ. ಬ್ರಿಡ್ಜ್‌ಟೌನ್ ಆಳವಾದ ಸ್ವಾಭಾವಿಕ ಬಂದರು. ಅಂತಾರಾಷ್ಟ್ರೀಯ ಮತ್ತು ಬ್ರಿಟಿಷ್ ವೆಸ್ಟ್ ಇಂಡಿಯನ್ ವಾಯು ಮಾರ್ಗಗಳು ದ್ವೀಪದ ದಕ್ಷಿಣ ತೀರದಲ್ಲಿರುವ ಸೀವೆಲ್ ವಾಯುನಿಲ್ದಾಣವನ್ನು ಸಂಧಿಸುತ್ತವೆ. ಪೂರ್ವ ಕೆರಿಬಿಯನ್ ಮೀನುಗಾರಿಕೆ ಕೇಂದ್ರ ಮತ್ತು–ನೌಕಾ ಸಂಸ್ಥೆಯ ಅಂಚೆ ಮತ್ತು ತಂತಿ ಕೇಂದ್ರ ಈ ದ್ವೀಪದಲ್ಲಿದೆ. (ಎಸ್.ವಿ.)

**ಬಾಲಿ:** ಇಂಡೊನೇಷ್ಯ ದ್ವೀಪ ಸಮೂಹದ ಒಂದು ಪುಟ್ಟ ದ್ವೀಪ ಮತ್ತು ಪ್ರಾಂತ್ಯ. ಲೆಸ್ಸರ್ ಸೂಂದ ದ್ವೀಪಗಳ ಗುಂಪಿನಲ್ಲಿ ಜಾವ ದ್ವೀಪದ ಪೂರ್ವಕ್ಕೆ 1.6 ಕಿಮೀ ದೂರದಲ್ಲಿದೆ. ವಿಸ್ತೀರ್ಣ 5623 ಚ.ಕಿಮೀ. ಜನಸಂಖ್ಯೆ 3151162 (2000). ಆಡಳಿತ ಕೇಂದ್ರ ದೆನ್ ಪಸಾರ್.

ಬೆಟ್ಟಗುಡ್ಡಗಳ ಪ್ರದೇಶವಿದು. ಅತ್ಯಂತ ಎತ್ತರವಾದ ಬೆಟ್ಟ ಅಗುಂಗ್ ಅಥವಾ ಬಾಲಿ ಶಿಖರ (3142 ಮೀ). ದ್ವೀಪದ ಜನ ಇದನ್ನು ವಿಶ್ವದ ನಾಭಿ ಎನ್ನುತ್ತಾರೆ. ಇದರ ಸಮೀಪದ ಬಟಾರ್ ಅಗ್ನಿಪರ್ವತ ಮಾರ್ಚ್ 1963ರಲ್ಲಿ ಸಿಡಿದು 1,600 ಜನ ಮಡಿದು ಸಾವಿರಾರು ಮಂದಿ ನಿರಾಶ್ರಿತರರು. ದ್ವೀಪದ ಮಧ್ಯದಲ್ಲಿ ಬೆಟ್ಟಸಾಲು, ಅವುಗಳ ದಕ್ಷಿಣದಲ್ಲಿ ಇಳುಕಲು ಭೂ ಪ್ರದೇಶವಿದೆ. ಈ ದ್ವೀಪದ ಸಸ್ಯ ಹಾಗೂ ಪ್ರಾಣಿಗಳು ಜಾವ ದ್ವೀಪವನ್ನು ಹೋಲುತ್ತವೆ. ಸಾರಗ ಮತ್ತು ಕಾಡುಹಂದಿಗಳು ಅಧಿಕ. ಹುಲಿಗಳು ಪಶ್ಚಿಮದಲ್ಲಿವೆ. ಅರಣ್ಯಗಳಲ್ಲಿ ತೇಗ ಹಾಗೂ ವಾರಿಂಜಿನ್ ಮರಗಳುಂಟು.

ಪ್ರಧಾನ ಕಸಬು ವ್ಯವಸಾಯ. ಬತ್ತ, ಗೆಣಸು, ಮೆಕ್ಕೆಜೋಳ, ತೆಂಗು, ಕಾಫಿ ತಂಬಾಕು ಬೆಳೆಸುತ್ತಾರೆ. ಜಾನುವಾರುಗಳ ಸಾಕಣೆಯುಂಟು. ಮಾಂಸವನ್ನು ಡಬ್ಬಗಳಲ್ಲಿ ತುಂಬುವುದು, ಮನೆಗೆಲಸ ಹಾಗೂ ಬಟ್ಟೆ ತಯಾರಿಕೆ ಇಲ್ಲಿಯ ಕೈಗಾರಿಕೆಗಳು. ಇತ್ತೀಚೆಗೆ ಜನಸಂಖ್ಯೆ ಹೆಚ್ಚಿರುವ ಕಾರಣದಿಂದಾಗಿ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ. ಡಬ್ಬಗಳಲ್ಲಿ ತುಂಬಿದ ಮಾಂಸ, ಕಾಫಿ, ಕೊಬ್ಬರಿ, ಚೌಬೀನೆ ಹಾಗೂ ಕೊಬ್ಬರಿಎಣ್ಣೆ ಇಲ್ಲಿಂದ ಹೊರದೇಶಗಳಿಗೆ ರಫ್ತಾಗುವ ವಸ್ತುಗಳು. ಪ್ರವಾಸಿ ಆಕರ್ಷಣೆಯಿದೆ. (ವಿ.ಜಿ.ಕೆ.)

**ಬಾಲ್ಕನ್ ಪರ್ಯಾಯ ದ್ವೀಪ:** ಆಲ್ಬೇನಿಯ, ಗ್ರೀಸ್, ಬಲ್ಗೇರಿಯ ಯುರೋಪಿಗೆ ಸೇರಿದ ಟರ್ಕಿ ಪ್ರದೇಶ ಮತ್ತು ಯೂಗೊಸ್ಲಾವಿಯದ ಬಹುಭಾಗಗಳಿಂದ ಕೂಡಿದ ಪ್ರದೇಶ. ಇದು ಯುರೋಪಿನ ಆಗ್ನೇಯ ದಿಕ್ಕಿನಲ್ಲಿ ಉತ್ತರ ಅಕ್ಷಾಂಶ $36^0$ ಯಿಂದ $44^0$ ಮತ್ತು ಪೂರ್ವ ರೇಖಾಂಶ $18^0$ ಯಿಂದ $28^0$ ನಡುವೆ ವ್ಯಾಪಿಸಿದೆ. ಈ ಪ್ರದೇಶದ ವಿಸ್ತೀರ್ಣ ಸು. 5,51,700 ಚ.ಕಿಮೀ. ಬಲ್ಗೇರಿಯ ಹಾಗೂ ಯೂಗೊಸ್ಲಾವಿಯದ ಬಾಲ್ಕನ್ ಬೆಟ್ಟಸಾಲುಗಳಿಂದ ಈ ಪ್ರದೇಶಕ್ಕೆ ಬಾಲ್ಕನ್ ಎಂಬ ಹೆಸರು ಬಂದಿದೆ. ಟರ್ಕಿ ಭಾಷೆಯಲ್ಲಿ ಬಾಲ್ಕನ್ ಎಂದರೆ ಬೆಟ್ಟ. ಈ ದ್ವೀಪದ ಪೂರ್ವದಲ್ಲಿ ಏಜಿಯನ್ ಮತ್ತು ಕಪ್ಪುಸಮುದ್ರ, ದಕ್ಷಿಣದಲ್ಲಿ ಮೆಡಿಟರೇನಿಯನ್ ಸಮುದ್ರ, ಪಶ್ಚಿಮದಲ್ಲಿ ಏಡ್ರಿಯಾಟಿಕ್ ಮತ್ತು ಅಯೋನಿಯನ್ ಸಮುದ್ರಗಳು ಸುತ್ತುವರಿದಿವೆ. ರೊಮೇನಿಯ ಭೌಗೋಳಿಕವಾಗಿ ಈ ಪರ್ಯಾಯದ್ವೀಪದ ಅಂಗವಾಗಿರದಿದ್ದರೂ ಅಲ್ಲಿಯ ಇತಿಹಾಸ ಮತ್ತು ರಾಜಕೀಯಗಳಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ ಕಾರಣದಿಂದಾಗಿ ಅದನ್ನೂ ಬಾಲ್ಕನ್ ದೇಶವೆಂದು ಪರಿಗಣಿಸಲಾಗಿದೆ.

ಈ ಪರ್ಯಾಯದ್ವೀಪದ ಬಹುಭಾಗ ಬೆಟ್ಟಗಾಡು ಪ್ರದೇಶ. ಯೂಗೊಸ್ಲಾವಿಯದ ಪೂರ್ವಗಡಿಯಿಂದ ಆರಂಭವಾಗಿ ಮಧ್ಯ ಬಲ್ಗೇರಿಯ ಮೂಲಕ ಪೂರ್ವಾಭಿಮುಖವಾಗಿ ಬಾಲ್ಕನ್ ಬೆಟ್ಟಸಾಲು ಹಬ್ಬಿದೆ. ಇತರ ಬೆಟ್ಟಸಾಲುಗಳಲ್ಲಿ ಪಶ್ಚಿಮ ಯೂಗೊಸ್ಲಾವಿಯದ ಆಲ್ಬೇನಿಯನ್ ಆಲ್ಪ್ಸ್, ಡೈನರಿಕ್ ಆಲ್ಪ್ಸ್, ಮಧ್ಯಗ್ರೀಸಿನ ಪಿಂಡಸ್, ದಕ್ಷಿಣ ಬಲ್ಗೇರಿಯದ ರೊಡೋಪ್ ಮುಂತಾದವು ಮುಖ್ಯವಾದವು. ಈ ಭಾಗಗಳಲ್ಲಿ ಅರಣ್ಯಾವಲಂಬಿತ ಕೈಗಾರಿಕೆಗಳೇ ಹೆಚ್ಚು. ದ್ವೀಪದ ಉತ್ತರದಲ್ಲಿ ಡ್ಯಾನ್ಯೂಬ್, ಕೂಪಾ ಹಾಗೂ ಸಾವಾ ಮುಂತಾದ ನದಿಗಳಿವೆ. ಡ್ಯಾನ್ಯೂಬ್ ನದಿ ಬಾಲ್ಕನ್ ಜನರಿಗೆ ಪ್ರಮುಖ ಜಲಮಾರ್ಗ. ಮೊರಾವಾ, ಬಾರ್ದಾರ್, ಮೆಸ್ತಾ ಹಾಗೂ ಸ್ಟ್ರೂಮಾ ಇತರ ಮುಖ್ಯ ನದಿಗಳು. ಮ್ಯಾಂಗನೀಸ್, ತಾಮ್ರ, ಸೀಸ ಮುಂತಾದ ಖನಿಜಗಳು ದೊರೆಯುತ್ತವೆ.

ಅರವತ್ತಾರು ದಶಲಕ್ಷಕ್ಕೂ ಹೆಚ್ಚು ಜನ ವಾಸಿಸುವ ಈ ಪರ್ಯಾಯದ್ವೀಪದಲ್ಲಿ ಆಲ್ಬೇನಿಯನ್ನರು, ಗ್ರೀಕರು, ರೊಮೇನಿಯನ್ನರು, ಸ್ಲಾವರು (ಬಲ್ಗೇರಿಯನ್ಸ್ ಕ್ರೋಟ್ಸ್, ಮ್ಯಾಸಿಡೋನಿಯನ್ಸ್, ಸರ್ಬ್ ಹಾಗೂ ಸ್ಲೋವನ್ಸ್) ಮತ್ತು ಟರ್ಕಿ ಜನರಿದ್ದಾರೆ. ಬಹುಪಾಲು ಜನ ಈಸ್ಟರ್ನ್ ಆರ್ಥೊಡಾಕ್ಸ್ ಚರ್ಚಿಗೆ ಸೇರಿದವರು. ಕೆಲವು ರೋಮನ್ ಕೆಥೊಲಿಕರೂ ಮತ್ತೆ ಕೆಲವು ಮುಸ್ಲಿಮರೂ ಇದ್ದಾರೆ. ಬಹುಪಾಲು ಜನ ರೈತವರ್ಗಕ್ಕೆ ಸೇರಿದವರು.

(ಎಚ್.ಎಂ.ಎಸ್.ಆರ್.)

**ಬಾಲ್ಟಿಕ್ ಸಮುದ್ರ :** ಸ್ವೀಡನ್, ಡೆನ್ಮಾರ್ಕ್, ಜರ್ಮನಿ, ಫಿನ್ಲೆಂಡ್, ಪೋಲೆಂಡ್, ರಷ್ಯ ಮುಂತಾದ ದೇಶಗಳಿಂದ ಆವೃತವಾಗಿರುವ ಸಮುದ್ರ. ಉತ್ತರ ಅಕ್ಷಾಂಶ $54^0$–$66^0$ ಮತ್ತು ಪೂರ್ವ ರೇಖಾಂಶ $90^0$–$30^0$ ಇವುಗಳ ನಡುವೆ ವ್ಯಾಪಿಸಿದೆ. ವಿಸ್ತೀರ್ಣ 4,14,400 ಚ.ಕಿಮೀ.

ಲೆನಿನ್‌ಗ್ರಾಡ್, ರೀಗ್, ಹೆಲ್ಸಿಂಕಿ, ಸ್ಟಾಕ್‌ಹೋಮ್, ಕೈಲ್, ಕೋಪನ್ ಹೇಗನ್ ಮತ್ತು ಸ್ಟೆಟಿನ್ ಇಲ್ಲಿಯ ಪ್ರಮುಖ ಬಂದರುಗಳು. ವರ್ಷದಲ್ಲಿ ನಾಲ್ಕಾರು ತಿಂಗಳುಗಳಷ್ಟು ಕಾಲ ನೀರು ಹೆಪ್ಪುಗಟ್ಟಿರುವುದರಿಂದ ಈ ಬಂದರುಗಳ ಉಪಯೋಗ ಕಡಿಮೆ ಎನ್ನಬಹುದು. ಮಂಜುಗಡ್ಡೆ ತೆರವು ಮಾಡುವ ಯಂತ್ರಗಳನ್ನು ಬಳಸಿ ಕೆಲವು ಹಡಗುಗಳು ಬಂದರನ್ನು ತಲುಪುತ್ತವೆ. ಇಂಥ ಹಡಗುಗಳಿಂದಾಗಿ ವ್ಯಾಪಾರ ನಡೆಯುವುದು.

ಸಮುದ್ರದ ಆಳ ಕಡಿಮೆ, ನೀರಿನಲ್ಲಿ ಉಪ್ಪಿನ ಅಂಶವೂ ಅಲ್ಪ. ರಷ್ಯದ ಒಂದು ಸರೋವರದ ನೀರು ಮತ್ತು ಕೆಲವು ನದಿಗಳ ನೀರು ಬಾಲ್ಟಿಕ್ ಸಮುದ್ರ ಸೇರುವುವು. ಮಳೆ ಕಡಿಮೆಯಾದರೆ ಸಮುದ್ರದಮಟ್ಟವೂ ಕಡಿಮೆ.

ಬಾತ್ನಿಯ, ಫಿನ್ಲೆಂಡ್, ರೀಗ್ ಇಲ್ಲಿಯ ಮೂರು ಮುಖ್ಯ ಕೊಲ್ಲಿಗಳು. ಸಮುದ್ರದಲ್ಲಿ ಅನೇಕ ದ್ವೀಪಗಳೂ ಮರಳು ದಂಡೆಗಳೂ ಇವೆ. ಗಾಳಿ, ಮಳೆಗಳ ರಭಸ ಹೆಚ್ಚು. ಇವುಗಳಿಂದಾಗಿ ಹಡಗುಗಳ ಸುಗಮ ಸಂಚಾರವಿಲ್ಲ. ಬಾಲ್ಟಿಕ್ ಸಮುದ್ರದಲ್ಲಿ ಜಲಚರಗಳು ಕಡಿಮೆ. ಉತ್ತರ ಸಮುದ್ರದಲ್ಲಿರುವುದರ ಹತ್ತನೆಯ ಒಂದಂಶ ಬಾಲ್ಟಿಕ್ ಸಮುದ್ರದಲ್ಲಿವೆ. ಜಲಚರಗಳ ಆಕಾರವೂ ಸಣ್ಣ. *

**ಬಾಲ್ಟಿಮೋರ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೇರಿಲ್ಯೆಂಡ್ ರಾಜ್ಯದ ಒಂದು ಕೌಂಟಿ ಮತ್ತು ಆಡಳಿತ ಕೇಂದ್ರ ನಗರ. ಕೈಗಾರಿಕಾ ಕೇಂದ್ರ, ದೊಡ್ಡಬಂದರು ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನದ ಮಹಾನಗರಗಳಲ್ಲಿ ಏಳನೆಯದು. ಚೆಸ್‌ಪೀಕ್ ಕೊಲ್ಲಿಯ ಉತ್ತರಕ್ಕೆ ಪಟ್ಯಾಪ್‌ಸ್ಕೊ ನದಿಯ ಅಳಿವೆ ಭಾಗದಲ್ಲಿರುವ ಬಾಲ್ಟಿಮೋರ್ ಸ್ವತಂತ್ರಾಡಳಿತ ನಗರ. ನಗರ ವಿಸ್ತೀರ್ಣ 238 ಚ.ಕಿಮೀ. ಜನಸಂಖ್ಯೆ 651154 (2005). ಬೃಹತ್ ನಗರದ ವಿಸ್ತೀರ್ಣ 6,123 ಚ.ಕಿಮೀ. ಜನ ಸಂಖ್ಯೆ 2.6 ಮಿಲಿಯನ್ (2005).

ಈ ನಗರದಲ್ಲಿ ಸು. 200ಕ್ಕೂ ಹೆಚ್ಚು ವಿವಿಧ ಕಾರ್ಖಾನೆಗಳಿವೆ. ಉಕ್ಕು, ತಾಮ್ರ, ಕಬ್ಬಿಣ, ರಾಸಾಯನಿಕ ವಸ್ತುಗಳು, ವಿದ್ಯುತ್ ಉಪಕರಣ ಮುಂತಾದವುಗಳ ತಯಾರಿಕೆಗೆ ನಗರ ಹೆಸರಾಗಿದೆ. ಮೊದಲು ಈ ನಗರ ಸ್ಥಾಪಕರು ಸ್ಥಳೀಯವಾಗಿ ಹೊಗೆಸೊಪ್ಪನ್ನು ಬೆಳೆಯುತ್ತಿದ್ದರು. ಗೋದಿಯ ನಿರ್ಯಾತ ಪ್ರಾರಂಭದೊಡನೆ ನಗರ ವ್ಯಾಪಾರ ವಾಣಿಜ್ಯದಲ್ಲಿ ಅಭಿವೃದ್ಧಿಗೊಂಡಿತು. ಈ ನಗರ ಅಭಿವೃದ್ಧಿಗೆ ಪ್ರಕೃತಿದತ್ತ ಬಾಲ್ಟಿಮೋರ್ ಬಂದರೂ ಕಾರಣವೆನ್ನಬಹುದು. ಚೆಸ್‌ಪೀಕ್‌ಕೊಲ್ಲಿ ಮತ್ತು ಪಟ್ಯಾಪ್‌ಸ್ಕೊ ನದಿ ಜಲಮಾರ್ಗ ಸೌಲಭ್ಯ ಈ ನಗರಕ್ಕಿದೆ. ಬಂದರಿನಲ್ಲಿ ನಡೆಯುವ ವ್ಯಾಪಾರ ವ್ಯವಹಾರದ ಮೊತ್ತ ಒಟ್ಟು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲೇ ಆರನೆಯ ಸ್ಥಾನ ಪಡೆದಿದೆ. 1797ರಲ್ಲಿ ಅಮೆರಿಕದ ಸಂಸತ್ತು ಅಮೆರಿಕದ ನೌಕಾಪಡೆಯ ಸ್ಥಾಪನೆಗೆ ಅನುಮೋದನೆ ನೀಡಿದಾಗ ಮೊದಲ ನೌಕೆ ಕಾನ್ಸ್‌ಟಲೇಷನ್ ಬಾಲ್ಟಿಮೋರ್ ರೇವಿನಿಂದ ಹೊರಟಿತು. ಆ ಹಡಗನ್ನು ಈಗ ಬಾಲ್ಟಿಮೋರ್ ರೇವಿನಲ್ಲಿ ಸ್ಮರಣಾರ್ಥವಾಗಿ ಇರಿಸಿದ್ದಾರೆ. ಬ್ರಿಟಿಷರು ಫಿಲಡೆಲ್ಫಿಯ ನಗರವನ್ನು ಹಿಡಿದಾಗ ಅಮೆರಿಕ ಕಾಂಗ್ರೆಸ್ 1776 ಡಿಸೆಂಬರ್ ಹಾಗೂ 1777 ಮಾರ್ಚ್‌ನಲ್ಲಿ ಬಾಲ್ಟಿಮೋರ್‌ನಲ್ಲಿ ಸಭೆ ಸೇರಿತ್ತು. ಅಮೆರಿಕದ ಪ್ರಥಮ ರೈಲುದಾರಿ ಬಾಲ್ಟಿಮೋರ್ ಮತ್ತು ಓಹಿಯೋ ನಗರಗಳ ನಡುವೆ 1827ರಲ್ಲಿ ಪ್ರಾರಂಭವಾಯಿತು. 1904 ಫೆಬ್ರುವರಿ 7ರಂದು ಬಾಲ್ಟಿಮೋರ್‌ನಲ್ಲಿ

ಆದ ಬೆಂಕಿ ಅನಾಹುತ ಅನೇಕ ವಾಣಿಜ್ಯ ಬಡಾವಣೆಗಳನ್ನು ನಾಶ ಮಾಡಿತು. ಒಂದನೆಯ ಮಹಾಯುದ್ಧದ (1914–18) ತರುವಾಯ ಉಕ್ಕಿನ ಕೈಗಾರಿಕೆಯಲ್ಲಿ ಪ್ರಗತಿ ಕಂಡುಬಂತು. ಪೆಟ್ರೋಲ್ ಶುದ್ಧೀಕರಣ ಕಾರ್ಖಾನೆಗಳು ಸ್ಥಾಪಿತವಾದುವು. ನಗರ ಮತ್ತೆ ಹೊಸ ರೂಪ ತಳೆದು ಬೆಳೆಯಲಾರಂಭಿಸಿತು. ಬಾಲ್ಟಿಮೋರ್ ಇಂದು ಹಡಗು ನಿರ್ಮಾಣದಲ್ಲಿ ವ್ಯಾಪಾರ–ವಾಣಿಜ್ಯಗಳಲ್ಲಿ ಇತರ ಸಾವಿರಾರು ಉದ್ಯಮಗಳಲ್ಲಿ ಮುಂದುವರಿದಿದೆ.

ಬಾಲ್ಟಿಮೋರ್ ಉನ್ನತ ಶಿಕ್ಷಣ ಕೇಂದ್ರ. ಇಲ್ಲಿ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ (1976), ಗ್ಲೌಷೆರ್ (1885), ಲಿಯೋಲಾ (1852), ಮೇರಿಲೈಂಡ್‌ನ ನಾಟ್ರಡಾಮ್ (1873), ಮಾರ್ಗಾನ್ ಸ್ಟೇಟ್ (1867) ಕಾಲೇಜುಗಳಿವೆ. ಮೇರಿಲೈಂಡ್ ವಿಶ್ವವಿದ್ಯಾಲಯ (1807), ಬಾಲ್ಟಿಮೋರ್ ವಿಶ್ವವಿದ್ಯಾಲಯ (1928) ಮುಂತಾದವುಗಳಿವೆ. ಗ್ರಂಥಾಲಯಗಳು, ವಸ್ತುಸಂಗ್ರಹಶಾಲೆ (1913) ಬಾಲ್ಟಿಮೋರ್ ಕಲಾಶಾಲೆ (1914), ವಾಲ್ಟರ್ ಆರ್ಟ್ ಗ್ಯಾಲರಿ (1931), 1806–21ರ ನಡುವೆ ಕಟ್ಟಿದ ರೋಮನ್ ಕೆಥೊಲಿಕ್ ಚರ್ಚ್ ಮುಂತಾದ ಪ್ರೇಕ್ಷಣೀಯ ಸ್ಥಳಗಳಿವೆ. 1729ರಲ್ಲಿ ಈ ನಗರ ಸ್ಥಾಪನೆಯಾಯಿತು. ಆ ವರ್ಷ ಮೇರಿಲೆಂಡ್‌ನ ಶಾಸಕಾಂಗದ ನಿರ್ಣಯದಂತೆ ಪಟ್ಯಾಪ್‌ಸ್ಕೋನದಿ ದಂಡೆಯಲ್ಲಿ 24 ಹೆಕ್ಟೇರ್ ಭೂಪ್ರದೇಶವನ್ನು ಕೊಂಡು ಅದನ್ನು ಹೊಗೆಸೊಪ್ಪು ವ್ಯಾಪಾರದ ಕೇಂದ್ರವಾಗಿ ಪರಿವರ್ತಿಸಿ ಬಾಲ್ಟಿಮೋರ್ ಎಂದು ನಾಮಕರಣ ಮಾಡಲಾಯಿತು. ಅಮೆರಿಕ ರಾಷ್ಟ್ರದ ರಾಜಧಾನಿಯಾಗಿ ಅಂತರ್ಯುದ್ಧದ ಕಾಲದಲ್ಲಿ ಬಾಲ್ಟಿಮೋರ್ ಪ್ರಸಿದ್ಧವಾಯಿತು. 1796ರಲ್ಲಿ ಪಟ್ಟಣವೆಂದು ಪರಿಗಣಿಸಲಾಯಿತು. 1814ರಲ್ಲಿ ಬ್ರಿಟಿಷರ ಧಾಳಿಯನ್ನು ಎದುರಿಸಿತು. ಮಾಕ್‌ಹೆನ್ರಿ ಬಂದರಿನಲ್ಲಿ ಹಾರಾಡುತ್ತಿದ್ದ ಅಮೆರಿಕ ಧ್ವಜವನ್ನು ಈ ಹೋರಾಟದ ಕಾಲದಲ್ಲಿ ಕಂಡ ಕವಿ ಫ್ರಾನ್ಸಿಸ್ ಸ್ಕಾಟ್ ದಿ ಸ್ಟಾರ್ ಸ್ಪಾಂಗಲ್ಡ್ ಬ್ಯಾನರ್ ಎಂಬ ಗೀತೆ ರಚಿಸಿದ. ಅದನ್ನು ಅಮೆರಿಕ ಸಂಯುಕ್ತ ಸಂಸ್ಥಾನ ತನ್ನ ರಾಷ್ಟ್ರಗೀತೆಯಾಗಿ ಸ್ವೀಕರಿಸಿತು. ಬಾಲ್ಟಿಮೋರ್‌ನಿಂದ ಓಹಿಯೋ, ಇಂಡಿಯಾನ, ಇಲಿನಾಯ್ಸ್ ಮುಂತಾದ ಕಡೆಗೆ ರಾಷ್ಟ್ರೀಯ ಹೆದ್ದಾರಿ ಸಂಪರ್ಕವಿದೆ. ಭೂ, ಜಲ ಮಾರ್ಗಗಳಲ್ಲದೆ ಇದೊಂದು ವಾಯುಮಾರ್ಗದ ಮುಖ್ಯ ನಿಲ್ದಾಣ ಕೂಡ. *

**ಬಾವಿ:** ಭೂಮಿಯೊಳಗಿಂದ ದ್ರವವನ್ನು ಹೊರತೆಗೆಯಲು ಲಂಬವಾಗಿ ತೋಡಿರುವ ಕುಣಿ, ಗುಂಡಿ (ವೆಲ್). ಅಂತರ್ಜಲವನ್ನೇ ಅಲ್ಲದೆ ಪೆಟ್ರೋಲ್, ಕಲ್ಲೆಣ್ಣೆ ಮತ್ತು ನೈಸರ್ಗಿಕ ಅನಿಲಗಳನ್ನು ಪಡೆಯಲು ಕೊಳವೆಬಾವಿ ತೋಡುತ್ತಾರೆ. ನೀರಿನ ಬಾವಿ ಹಲವಾರು ಮೀಟರ್ ಆಳವಿದ್ದರೆ, ಎಣ್ಣೆ ಮತ್ತು ಅನಿಲ ಬಾವಿಗಳು ಸಾವಿರಾರು ಮೀಟರ್ ಆಳವಿರುತ್ತವೆ. ಜ್ವಾಲಾಮುಖಿಗಳು ಶಿಲಾರಸ ಕಾರುವ ಮೊದಲೇ ಅವುಗಳ ಸುತ್ತಮುತ್ತ ಕೊಳವೆ ಬಾವಿಗಳನ್ನು ಕೊರೆದು ಭೂಮಿಯೊಳಗಿನ ಶಿಲಾರಸದ ಉಷ್ಣತೆಯನ್ನು ಕಡಿಮೆ ಮಾಡಿ ಸ್ಫೋಟಗೊಳ್ಳದಂತೆ ತಡೆಹಿಡಿದ ಪ್ರಕರಣಗಳು ವರ್ತಮಾನ ಯುಗದಲ್ಲಿವೆ. ಭೂಮಿಯಿಂದ ದ್ರವವನ್ನು ಹೊರ ತೆಗೆಯುವುದಲ್ಲದೆ ಒಳಹೋಗಿಸಲೂ ಬಾವಿಗಳನ್ನು ನಿರ್ಮಿಸುತ್ತಾರೆ. ಬಾವಿ ದೀರ್ಘಕಾಲ ಉಪಯುಕ್ತವಾಗಿರಬೇಕಾದರೆ ಅದು ಕಲುಷಿತವಾಗದಂತೆ ಅದನ್ನು ಸಂರಕ್ಷಿಸುವುದು ಅತ್ಯಗತ್ಯ.

ವರ್ಗೀಕರಣ: ಉಪಯುಕ್ತತೆ, ನಿರ್ಮಾಣ ವಿಧಾನ, ಆಕಾರ, ವ್ಯಾಸ, ಆಳ ಮುಂತಾದ ಆಧಾರಗಳ ಮೇಲೆ ಬಾವಿಗಳನ್ನು ವರ್ಗೀಕರಿಸಬಹುದು. ಉಪಯುಕ್ತತೆ ಮೇರೆಗೆ ಮಾಡಿದ ವರ್ಗೀಕರಣವಿದು: ಉತ್ಪಾದನೆ, ಅಂತರ್ಗತ, ಸಮೀಕ್ಷಣ.

ಉತ್ಪಾದನ ಬಾವಿ: ಕುಡಿಯುವ ನೀರು ಮತ್ತು ವ್ಯವಸಾಯಕ್ಕೋಸ್ಕರ ನಿರ್ಮಿಸಿದ ಉತ್ಪಾದನ ಬಾವಿಗಳು ಪ್ರಪಂಚದಲ್ಲಿ ಅಸಂಖ್ಯಾತವಾಗಿವೆ. ಪೆಟ್ರೋಲ್, ಕಲ್ಲೆಣ್ಣೆ ಮತ್ತು ನೈಸರ್ಗಿಕ ಅನಿಲಗಳನ್ನು ಉತ್ಪಾದಿಸುವ ಬಾವಿಗಳು ಎರಡನೆಯ ಸ್ಥಾನವನ್ನೂ, ಕಲ್ಲುಪ್ಪು ಮೆಗ್ನೀಸಿಯಮ್ ಮತ್ತು ಪೊಟ್ಯಾಸಿಯಮ್ ಲವಣ ಉತ್ಪಾದನ ಬಾವಿಗಳು ಮೂರನೆಯ ಸ್ಥಾನವನ್ನೂ ಪಡೆದಿದೆ.

ಅಂತರ್ಗತ ಬಾವಿ: ಭೂಮಿಯೊಳಕ್ಕೆ ದ್ರವ ಅಥವಾ ಅನಿಲವನ್ನು ಸಾಗಿಸಲು ನಿರ್ಮಿಸಿದ ಬಾವಿಗೆ ಈ ಹೆಸರಿದೆ. ಕರಾವಳಿಯಲ್ಲಿ ಭೂಖಂಡದೊಳಗೆ ಕಡಲ ನೀರು ಹರಿದುಬಂದು ಸಿಹಿನೀರಿನ ಬಾವಿಗಳನ್ನು ಕಲುಷಿತಗೊಳಿಸುವುದನ್ನು ತಡೆಹಿಡಿಯಲು ಅಂತರ್ಗತ ಬಾವಿಗಳ ಮೂಲಕ ನೀರನ್ನು ರೇಚಿಸಿ ನೀರಿನ ಒತ್ತಡವನ್ನು ಸಮತೋಲಿಸುತ್ತಾರೆ.

ಸಮೀಕ್ಷಣ ಬಾವಿ: ಜಲಮಟ್ಟ ಕಾಲಾನುಕ್ರಮದಲ್ಲಿ ತೋರುವ ಏರುಪೇರುಗಳ ಮಾಹಿತಿ ಪಡೆಯಲು ನಿರ್ಮಿಸಿದ ಬಾವಿಗೆ ಈ ಹೆಸರಿದೆ. ಇದರಿಂದ ಆ ಪ್ರದೇಶದಲ್ಲಿ ದೊರೆಯಬಹುದಾದ ಜಲಸಂಪತ್ತನ್ನು ತಿಳಿಯಬಹುದು. ಇದೇ ರೀತಿ ಅನಿಲ ಸಮೀಕ್ಷಣ ಬಾವಿಗಳಿಗೆ ಜೋಡಿಸಿದ ಅನಿಲ ಸಂಮರ್ದ ಮಾಪಕಗಳ ಮಾಹಿತಿಯಿಂದ ಅಲ್ಲಿ ದೊರೆಯುವ ಅನಿಲದ ಮೊತ್ತವನ್ನು ಊಹಿಸಬಹುದು.

ವಿವಿಧ ರೀತಿಯ ಬಾವಿಗಳು: ಅಂತರ್ಜಲ ಅಭಿವೃದ್ಧಿಗೊಳಿಸುವಲ್ಲಿ ಬಾವಿಗಳ ನಿರ್ಮಾಣ ಪ್ರಮುಖವಾದುದು. ಬಾವಿ ತೋಡುವಾಗ ಭೂಮಿಯಿಂದ ಮಣ್ಣು ಕಲ್ಲುಗಳನ್ನು ಪುಡಿಮಾಡಿ ಹೊರತೆಗೆದು ದಡ ಕುಸಿಯದಂತೆಯೂ ಇನ್ನಿತರ ದ್ರವಗಳು ಹಾಗೂ ಕಲುಷಿತ ನೀರು ಒಳಗೆನುಗ್ಗದಂತೆಯೂ ಮಾಡಬೇಕು. ಹೀಗೆ ನಿರ್ಮಿಸಿದ ಆಧುನಿಕ ರೀತಿಯ ಬಾವಿಗಳು ಕಲ್ಮಶರಹಿತ ಶುಭ್ರ ತಿಳಿನೀರನ್ನು ಕೊಡುತ್ತವೆ.

ಬಾವಿಯ ನಿರ್ಮಾಣ ವಿಧಾನ ಅನುಸರಿಸಿ ತೋಡು ಬಾವಿ, ಕೊಳವೆ ಬಾವಿ, ಕೊರೆ ಬಾವಿ ನೀರ್ಕೊರೆತ ಬಾವಿ ಮತ್ತು ಬೈರಿಗೆ ಬಾವಿ ಎಂಬ ಐದು ಬಗೆಗಳಿವೆ.

ತೋಡುಬಾವಿ: ಪುರಾತನ ಕಾಲದಿಂದಲೂ ನಾಗರಿಕತೆ ಬೆಳೆದ ಪ್ರದೇಶಗಳಲ್ಲಿ ಕುಡಿಯಲು ಮತ್ತು ವ್ಯವಸಾಯ ಮಾಡಲು ತೋಡಿದ ಬಾವಿಗಳು ಕಂಡುಬಂದಿವೆ. ಇವು ಲಂಬವಾಗಿದ್ದು, ಆಕಾರದಲ್ಲಿ ಗುಂಡಾಗಿ, ಅಂಡಾಕಾರ, ಚಚ್ಚೌಕ ಅಥವಾ ನೀಳಚೌಕವಾಗಿರುತ್ತವೆ. ಕರ್ನಾಟಕ ರಾಜ್ಯದ ಬೀದರ್ ಜಿಲ್ಲೆಯಲ್ಲಿ ಅಡ್ಡಡ್ಡ ತೋಡಿರುವ ಸುರಂಗ ಬಾವಿಗಳಿವೆ. ಅಂತರ್ಜಲ ಒತ್ತಡವಿಲ್ಲದ ಪ್ರದೇಶಗಳಲ್ಲಿ ತೋಡಿದ ಬಾವಿಗೆ ಜಲಮಂಚಬಾವಿ ಎಂದು ಹೆಸರು. ಹೆಚ್ಚು ಜಲ ಒತ್ತಡವಿರುವ ಪ್ರದೇಶದ ಬಾವಿಗಳಲ್ಲಿ ನೀರು ಮೇಲಕ್ಕೇರುವುದಕ್ಕೆ ಕಾರಂಜಿ ಬಾವಿ ಎಂದು ಹೆಸರು. ಮಹತ್ತರ ಜಲ ಒತ್ತಡವಿರುವಲ್ಲಿ ಬಾವಿಗಳಿಂದ ನೀರು ಮೇಲಕ್ಕೆ ಚಿಮ್ಮಿ ಹರಿಯುವುದಕ್ಕೂ ಚಿಮ್ಮುವ ಅಥವಾ ಹರಿವ ಕಾರಂಜಿ ಬಾವಿ ಎಂದು ಹೆಸರು. ತೋಡಿದ ಬಾವಿಗಳ ವ್ಯಾಸ 2 ರಿಂದ 20 ಮೀ ಮತ್ತು ಆಳ 6 ರಿಂದ 30 ಮೀ ಇರುವುವು. ದಡ ಕುಸಿಯದಂತೆ ಬಾವಿಗಳಿಗೆ ಕಲ್ಲು, ಇಟ್ಟಿಗೆ ಅಥವಾ ಸಿಮೆಂಟಿನ ವಾಡೆಗಳಿಂದ ಸುತ್ತುಗಟ್ಟೆ ಕಟ್ಟಿರುತ್ತಾರೆ.

ಕೊಳವೆ ಬಾವಿ: ಕೊರೆವ ಉಕ್ಕಿನ ತುಂಡು ಇರುವ ಕೊಳವೆಯನ್ನು ಬೈರಿಗೆ ಹಿಡಿಯುವ ರೀತಿ ಯಂತ್ರದ ಸಹಾಯದಿಂದ ರಭಸವಾಗಿ ತಿರುಗಿಸಿ ಎಂಥ ಶಿಲೆಯನ್ನಾದರೂ 5 ರಿಂದ 30 ಸೆಂಮೀ ವ್ಯಾಸ ಮತ್ತು 10 ರಿಂದ 100 ಮೀ ಆಳದ ವರೆಗೆ ಕೊರೆದು ಬಾವಿಯನ್ನು ನಿರ್ಮಿಸುತ್ತಾರೆ, ಆವರಣ ಕೊಳವೆಯನ್ನು ದಡಕುಸಿಯದಂತೆಯೂ ರಂಧ್ರಗಳುಳ್ಳ ಆವರಣ ಕೊಳವೆಯನ್ನು ಬಾವಿಯ ತಳಭಾಗದಲ್ಲಿ ಅಂತರ್ಜಲ ಶೇಖರಣೆಗೊಳ್ಳುವಂತೆಯೂ ಹುದುಗಿಸಿರುತ್ತಾರೆ.

ಕೊರೆದ ಬಾವಿ: ಶಂಖಾಕೃತಿಯ ತಳವುಳ್ಳ ಹಕ್ಕಿನ ಕಾಂಡದ ಕೊಳವೆಯನ್ನು ಸುಮಾರು 100 ಕೆಜಿ ತೂಕವುಳ್ಳ ಕಬ್ಬಿಣದ ತುಂಡು ಸುತ್ತಿಗೆಯೋಪಾದಿಯಲ್ಲಿ ಬಡಿಯುವುದರ ಮೂಲಕ ಶಿಲಾಪದರಗಳನ್ನು ಪುಡಿಪುಡಿ ಮಾಡಿ ಬಾವಿ ಕೊರೆಯುತ್ತಾರೆ. ಈ ಬಾವಿಗಳ ವ್ಯಾಸ 5 ರಿಂದ 20 ಸೆಂಮೀ. ಆಳ 10 ರಿಂದ 30 ಮೀ. ದಡಕುಸಿಯದಂತೆ ಆವರಣ ಕೊಳವೆಯನ್ನೂ ನೀರು ಶೇಖರಣೆಗೊಳ್ಳಲು ರಂಧ್ರಗಳುಳ್ಳ ಆವರಣ ಕೊಳವೆಯನ್ನೂ ಬಾವಿಯೊಳಗೆ ಹುದುಗಿಸಿರುತ್ತಾರೆ.

ನೀರ್ಕೊರಗೆ ಬಾವಿ: ಒಂದು ಸೆಕೆಂಡಿಗೆ 50 ಲೀಟರ್ ರಭಸದಿಂದ ಹರಿದ ನೀರನ್ನು ಕೊಳವೆ ಮುಖಾಂತರ ಹಾಯಿಸಿ 3 ರಿಂದ 8 ಸೆಂಮೀ ವ್ಯಾಸ ಮತ್ತು 15 ರಿಂದ 20 ಮೀಟರ್ ಆಳದವರೆಗೆ ಮಣ್ಣು ಮತ್ತು ಮೆದು ಶಿಲಾ ಪದರುಗಳನ್ನು ಕೊರೆದು, ರಂಧ್ರ ಆವರಣ ಕೊಳವೆಯನ್ನು ಕೊರೆದಂತೆ ಹುದುಗಿಸಿ ಬಾವಿಯನ್ನು ನಿರ್ಮಿಸುತ್ತಾರೆ.

ಬೈರಿಗೆ ಬಾವಿ: ಬೈರಿಗೆ ಬಾವಿಗಳನ್ನು ಅತಿಗಡಸು ಶಿಲಾಸಮೂಹಗಳಲ್ಲಿ ನಾಲ್ಕು ಬಗೆಗಳಲ್ಲಿ ನಿರ್ಮಿಸುತ್ತಾರೆ. ಸಂಘಟನಾ ಬಗೆ, ಚಲನಾ ಬಗೆ, ಪ್ರತಿಲೋಮ ಜಲವೃತ್ತ ಚಲನಾ ಬಗೆ, ವಾಯು ಸಂಕುಚನಾ ಬಗೆ.

ಸಂಘಟನಾ ಬಗೆ: ಚೀನಿಯರು ಪ್ರ.ಶ.ಪೂ. 6ನೆಯ ಶತಮಾನದಿಂದಲೂ ಬಾವಿಗಳನ್ನು ಈ ಬಗೆಯಲ್ಲಿ ನಿರ್ಮಿಸುತ್ತಿದ್ದರು. ಈಗ 50 ರಿಂದ 1550 ತೂಕವುಳ್ಳ ಮತ್ತು 2 ರಿಂದ 10 ಮೀಟರ್ ಉದ್ದವಾದ ಬಾಣದಂತಿರುವ ಉಕ್ಕಿನ ಕಾಂಡವನ್ನು ಎತ್ತರದಲ್ಲಿ ಗಾಲಿಯೊಂದಕ್ಕೆ ಕಟ್ಟಿ ಯಂತ್ರದ ಸಹಾಯದಿಂದ ಮಿನಿಟಿಗೆ 40 ರಿಂದ 60 ಬಾರಿ, 40 ರಿಂದ 100 ಸೆಂಮೀಟರ್ ಎತ್ತರದಿಂದ ಕುಟ್ಟಿ ಬಾವಿಯನ್ನು ಕೊರೆಯುತ್ತಾರೆ. ಬಾವಿ ಕೊರೆದಾಗ ಪುಡಿಯಾದ ಕಲ್ಲನ್ನು ನೀರೆತ್ತುವ ಯಂತ್ರದ ಸಹಾಯದಿಂದ ಹೊರತೆಗೆಯುತ್ತಾರೆ. ಈ ಬಾವಿಗಳ ವ್ಯಾಸ 6 ರಿಂದ 60 ಸೆಂಮೀ, ಆಳ 30 ರಿಂದ 2000 ಮೀ, ನ್ಯೂಯಾರ್ಕಿನಲ್ಲಿ 3,400 ಮೀ ಆಳವಾಗಿ ಕೊರೆದಿರುವ ಬಾವಿ ಈ ವಿಧಾನಕ್ಕೆ ಉತ್ತಮ ನಿದರ್ಶನ.

ಜಲವೃತ್ತ ಚಲನಾ ಬಗೆ: ಈಜಿಪ್ಟಿಯನರು ಬಂಡೆಗಳನ್ನು ಕೊರೆಯಲು ಉಪಯೋಗಿಸುತ್ತಿದ್ದ ಈ ವಿಧಾನವನ್ನು ಆಧುನೀಕರಿಸಿ ಇಂದು ನೀರಿನ ಮತ್ತು ಎಣ್ಣೆಯ ಬಾವಿಗಳನ್ನು ನಿರ್ಮಿಸಲು ಬಳಸಲಾಗುತ್ತಿದೆ. ಅತಿಕಠಿಣವಾದ ಕಾರ್ಬೈಡ್ ಉಕ್ಕಿನ ಹಲವಾರು ಶಂಖಾಕೃತಿಯ ಗುಂಡಿಗಳನ್ನು ಉಕ್ಕಿನ ಪೈಪಿಗೆ ಲಗತ್ತಿಸಿ, ಅಗಾಧ ಒತ್ತಡವನ್ನು ಯಂತ್ರದ ಸಹಾಯದಿಂದ ಕೇಂದ್ರೀಕರಿಸಿ ಪ್ರತಿನಿಮಿಷಕ್ಕೆ ಗುಂಡಿಗಳು 30 ರಿಂದ 60 ಸುತ್ತುಗಳು ತಿರುಗುವಂತೆ ಮಾಡಿ ಎಂಥ ಗಡಸು ಕಲ್ಲನ್ನೂ ಕೊರೆಯಲಾಗುವುದು. ಆಗ ಕೀಳಲಾದ ಕಲ್ಲು ಚೂರುಗಳನ್ನು ಕೊಳವೆಯ ಮುಖಾಂತರ ಮಣ್ಣು ಮತ್ತು ನೀರು ಹಾಯಿಸಿ ಹೊರ ತೆಗೆಯುತ್ತಾರೆ. ಇದರಿಂದ ಬಾವಿಗೋಡೆಯ ಮೇಲೆ ಮಣ್ಣಿನ ಪದರವುಂಟಾಗಿ ಅದು ದಡಕುಸಿಯದಂತೆ ತಡೆ ಹಿಡಿಯುತ್ತದೆ.

ಪ್ರತಿಲೋಮ ಜಲವೃತ್ತ ಚಲನ ಬಗೆ: ಎಲ್ಲ ರೀತಿಯಲ್ಲೂ ಇದು ಜಲವೃತ್ತ ಚಲನಾ ಬಗೆಯಂತಿದ್ದು ಕೊರೆದ ಕಲ್ಲು ಚೂರುಗಳನ್ನು ತೆಗೆಯುವಾಗ ಮಣ್ಣು ನೀರು ವ್ಯತಿರಿಕ್ತವಾಗಿ ಕೊಳವೆಯ ಸುತ್ತ ಪರಿಷ್ಕೃತಗೊಂಡು ಕಲ್ಲು ಚೂರುಗಳ ಸಮೇತ ಮೇಲಕ್ಕೆ ಬರುತ್ತದೆ.

ಈ ನೀರು ಅದಕ್ಕಾಗಿ ಕಟ್ಟಿದ ತೊಟ್ಟಿಯಲ್ಲಿ ಕಲ್ಲು ಚೂರುಗಳನ್ನು ಸಂಚಯನ ಗೊಳಿಸಿ ಪುನಃ ಗುರುತ್ವಬಲದಿಂದ ಕೊಳವೆಯೊಳಕ್ಕೆ ಹೋಗಿ ಮತ್ತೆ ಕಲ್ಲು ಚೂರುಗಳ ಸಮೇತ ಹೊರ ಬರುತ್ತದೆ. ಜಲವೃತ್ತ ಚಲನಾ ಬಗೆಯಿಂದ ಕೊರೆಯಲು ಅಸಾಧ್ಯವಾದ ಶಿಲೆಗಳಲ್ಲಿ ಈ ವಿಧಾನದಿಂದ 120 ಸೆಂಮೀ ವ್ಯಾಸದವರೆಗೆ ಬಾವಿಗಳನ್ನು ಕೊರೆಯಬಹುದು.

ವಾಯು ಸಂಕುಚನಾ ವಿಧಾನ: ವಾಯು ಸಂಕುಚನವನ್ನು ಅಳವಡಿಸಿರುವ ಸಂಘಟನಾ ಬಗೆಯನ್ನೊಳಗೊಂಡ ಜಲವೃತ್ತ ಚಲನಾ ಯಂತ್ರ, ಚ.ಸೆಂಮೀ ಜಾಗಕ್ಕೆ 7 ರಿಂದ 18 ಕೆಜಿ ತೂಕದ ಬೈರಿಗೆ ಸುತ್ತಿಗೆಯಿಂದ 1 ಸೆಂಮೀ ಪ್ರದೇಶಕ್ಕೆ 30 ರಿಂದ 150 ಕೆಜಿ ಒತ್ತಡದಿಂದ ಪ್ರತಿ ಸೆಕೆಂಡಿಗೆ 10 ರಿಂದ 20 ಘರ್ಷಣಾ ಹೊಡೆತವನ್ನು ಕುಟ್ಟುತ್ತ ನಿಮಿಷಕ್ಕೆ 15 ರಿಂದ 50 ಸುತ್ತು ತಿರುಗುತ್ತದೆ. ಇದು ಗಡಸು ಶಿಲೆಗಳನ್ನು ಛಿದ್ರಗೊಳಿಸಿ ಬಾವಿಯನ್ನು ಕೊರೆಯುತ್ತ ಹೋಗುತ್ತದೆ. ವಾಯು ಒತ್ತಡದಿಂದ ನೀರನ್ನು ಬಾವಿಯೊಳಕ್ಕೆ ಹಾಯಿಸಿ ಕಲ್ಲು ಚೂರುಗಳನ್ನು ಹೊರತೆಗೆಯಲಾಗುವುದು. ಬೈರಿಗೆ ಸುತ್ತಿಗೆ ಸುತ್ತುವುದನ್ನು ನಿಯಂತ್ರಿಸುವದರ ಮೂಲಕ ಮಹಾಗಡಸು ಶಿಲೆಗಳನ್ನು ಗಂಟೆಗೆ 2 ರಿಂದ 3 ಮೀಟರ್ ಆಳ ಕೊರೆಬಹುದು.

ಕರ್ನಾಟಕ ಹಾಗೂ ದಕ್ಷಿಣ ಭಾರತದ ಹೆಚ್ಚು ಭಾಗ ಅತಿ ಗಡುಸಾದ ರೂಪಾಂತರ ಶಿಲೆ, ಅಗ್ನಿಶಿಲೆ, ಮತ್ತು ಜ್ವಾಲಾಮುಖಜ ಶಿಲೆಗಳಿಂದ ಆವೃತವಾಗಿದ್ದು ಈ ಪ್ರದೇಶಗಳಲ್ಲಿ ಅಂತರ್ಜಲ ಅಭಿವೃದ್ಧಿಗೆ ಬಾವಿಗಳನ್ನು ನಿರ್ಮಿಸಲು ವಾಯುಸಂಕುಚನಾ ವಿಧಾನ ಅತ್ಯುತ್ತಮವಾದುದು. (ಪಿ.ಎಂ.)

**ಬಾವಿ ನೀರಾವರಿ:** ಪ್ರಪಂಚದ ನೀರಾವರಿ ಪದ್ಧತಿಯಲ್ಲಿ ಬಾವಿ ನೀರಾವರಿ ಪ್ರಮುಖವಾದುದು. ಪ್ರಸ್ತುತ ಬಾವಿನೀರಾವರಿಯು ತಂತ್ರಜ್ಞಾನದ ಪ್ರಗತಿಯಿಂದ ಪ್ರಮುಖ ನೀರಾವರಿ ಪದ್ಧತಿಯಾಗಿದೆ. ಭೂಮಿಯ ಒಳಭಾಗವನ್ನು ತೋಡಿ ಅಥವಾ ಅಗೆದು ಅಂತರ್ಜಲವನ್ನು ಹೊರತೆಗೆದು ಕೃಷಿಗೆ ಬಳಸುವುದೇ ಬಾವಿ ನೀರಾವರಿ. ಸಾಮಾನ್ಯವಾಗಿ ಬಾವಿಗಳು 15–35 ಮೀ ಆಳದವರೆಗೆ ಕಂಡುಬರುತ್ತವೆ. ಪ್ರಮುಖವಾಗಿ ಬಾವಿ ನೀರಾವರಿಯು ಅಧಿಕ ಅಂತರ್ಜಲಮಟ್ಟ ಕಂಡುಬರುವ ಹಾಗೂ ಸಮತಟ್ಟಾದ ಪ್ರದೇಶಗಳಲ್ಲಿ ಕಂಡುಬರುತ್ತದೆ. ಬಾವಿ ನೀರಾವರಿ ರೈತರ ಹಿಡಿತದಲ್ಲಿರುತ್ತದೆ. ಇದರಿಂದ ನೀರಿನ ಸದ್ಬಳಕೆ, ಉತ್ತಮ ನೀರಾವರಿವ್ಯವಸ್ಥೆ ಮತ್ತು ಅನವಶ್ಯಕವಾಗಿ ನೀರು ಪೋಲಾಗುವುದನ್ನು ತಡೆಯಬಹುದು. ಇದು ರೈತರ ಹಿಡಿತದಲ್ಲಿರುವುದರಿಂದ ಕೃಷಿ ಬೆಳೆಗೆ ಬೇಕಾದಷ್ಟು ನೀರನ್ನು ಮಾತ್ರ ಪೂರೈಸಬಹುದಾಗಿದೆ. ಬಾವಿನೀರಾವರಿಯ ಸಮಸ್ಯೆಯೆಂದರೆ ಅಂತರ್ಜಲಮಟ್ಟ ಕಾಲದಿಂದ ಕಾಲಕ್ಕೆ ಬದಲಾಗುವುದರಿಂದ ಅನಿಶ್ಚಿತತೆಯಿಂದ ಕೂಡಿರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಬಾವಿಯಿಂದ ಹೊರ ತೆಗೆಯುವ ನೀರು ಕಂದು ಮಿಶ್ರಿತ ಬಣ್ಣದಿಂದ ಕೂಡಿದ್ದು ಕೃಷಿ ಬೆಳೆಗಳಿಗೆ ಹಾನಿಯನ್ನುಂಟುಮಾಡುತ್ತದೆ. ಬಾವಿಗಳಲ್ಲಿ 2 ವಿಧ: ತೆರೆದ ಬಾವಿಗಳು, ಕೊಳವೆ ಬಾವಿಗಳು.

ತೆರೆದ ಬಾವಿಗಳು: ಅಂತರ್ಜಲಮಟ್ಟ ಭೂಮಿಯ ಸಮೀಪದಲ್ಲಿರುವ ಸಮತಟ್ಟಾದ ಪ್ರದೇಶಗಳಲ್ಲಿ ತೆರೆದ ಬಾವಿಗಳನ್ನು ನಿರ್ಮಾಣ ಮಾಡುತ್ತಾರೆ. ತೆರೆದ ಬಾವಿಗಳಿಂದ ನೀರನ್ನು ಕೃಷಿ ಪ್ರದೇಶಗಳಿಗೆ ಮಾನವ, ಪ್ರಾಣಿಗಳು ಹಾಗೂ ಯಂತ್ರಗಳ ಸಹಾಯದಿಂದ ತೆಗೆದು ಬಳಸಲಾಗುತ್ತದೆ. ತೆರೆದ ಬಾವಿಗಳು ಚಿಕ್ಕ ಭೂಹಿಡುವಳಿಗಳಿಗೆ ನೀರನ್ನು ಒದಗಿಸಲು ಹೆಚ್ಚು ಸೂಕ್ತ. ತೆರೆದಬಾವಿಗಳು ಅಧಿಕ ಜನಸಂಖ್ಯೆ ಮತ್ತು ಕಡಿಮೆ ಭೂಹಿಡುವಳಿಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಹೆಚ್ಚು. ಉದಾ: ಭಾರತ.

ಕೊಳವೆ ಬಾವಿಗಳು: ಪ್ರಸ್ತುತ ಅತ್ಯಂತ ಹೆಚ್ಚು ಚಾಲನೆಯಲ್ಲಿರುವುದು ಕೊಳವೆ ಬಾವಿ ನೀರಾವರಿ ಪದ್ಧತಿಯಾಗಿದೆ. ಅಂತರ್ಜಲ ಮಟ್ಟ ಹೆಚ್ಚು ಆಳದಲ್ಲಿರುವ ಭಾಗಗಳಲ್ಲಿ ಸು. 15 ಮೀ ನಿಂದ 30 ಮೀ ಅಥವಾ ಅದಕ್ಕಿಂತಲೂ ಹೆಚ್ಚು ಆಳದವರೆಗೆ ಭೂಮಿಯನ್ನು ಕೊರೆಯಲಾಗುತ್ತದೆ–ನಂತರ ಡೀಸಲ್ ಅಥವಾ ವಿದ್ಯುಚ್ಛಕ್ತಿಯ ಯಂತ್ರಗಳ ಸಹಾಯದಿಂದ ನೀರನ್ನು ಹೊರತೆಗೆದು ಕೃಷಿ ಪ್ರದೇಶಗಳಿಗೆ ಬಳಸಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಕೊಳವೆ ಬಾವಿಯನ್ನು ಕೇವಲ ಕೃಷಿ ಪ್ರದೇಶಕ್ಕೆ ಮಾತ್ರವಲ್ಲದೆ ಕುಡಿಯುವ ನೀರು, ಕೈಗಾರಿಕೆ ಮುಂತಾದವುಗಳಲ್ಲಿಯೂ ಬಳಸಿಕೊಳ್ಳಲಾಗುತ್ತಿದೆ. (ಕೆ.ಕೆ.)

**ಬಾಸ್ಟನ್:** ಅಮೆರಿಕ ಸಂಯುಕ್ತ ಸಂಸ್ಥಾನದ ಮೆಸಾಚ್ಯುಸೆಟ್ಸ್ ರಾಜ್ಯದ ಮತ್ತು ಸಫೋಕ್ ಕೌಂಟಿಯ ಆಡಳಿತ ಕೇಂದ್ರ ಮತ್ತು ಒಂದು ಮಹಾನಗರ. ಅಟ್ಲಾಂಟಿಕ್ ಸಾಗರದ ಒಂದು ಪ್ರಮುಖ ಬಂದರು. ಚಾರ್ಲ್ಸ್, ಮಿಸ್ಟಿಕ್, ಚೆಲ್ಸೀ ಮತ್ತು ನೆಪಾನಸೆಟ್ ನದೀ ಮುಖಜ ಭೂಮಿಯಲ್ಲಿ ವಿಸ್ತರಿಸಿಕೊಂಡಿರುವ ಈ ನಗರ ನ್ಯೂಯಾರ್ಕ್ ನಗರದ ಈಶಾನ್ಯಕ್ಕೆ ಸು. 368 ಕಿಮೀ ದೂರದಲ್ಲಿದೆ. ವಿಸ್ತೀರ್ಣದ ದೃಷ್ಟಿಯಿಂದ ಈ ನಗರ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಐದನೆಯದು. ವಿಸ್ತೀರ್ಣ 132 ಚ.ಕಿಮೀ. ಜನಸಂಖ್ಯೆ 589141 (2000).

ಬಾಸ್ಟನ್ ಎಚ್ಚೆತ್ತ ಅಮೆರಿಕದ ಲಾಂಛನ. ಅಮೆರಿಕ ಕ್ರಾಂತಿಯ ಮತ್ತು ರಾಷ್ಟ್ರದ ಮೂಲಸ್ಥಾನ ಮತ್ತು ಅಮೆರಿಕದ ಸಾಂಸ್ಕೃತಿಕ ಕೇಂದ್ರ. ಶೈಕ್ಷಣಿಕ, ವೈದ್ಯಕೀಯ, ವೈಜ್ಞಾನಿಕ ಚಟುವಟಿಕೆಗಳ ಅತ್ಯಂತ ವೈವಿಧ್ಯಮಯ ಹಾಗೂ ಕ್ರಿಯಾತ್ಮಕ ಸಂಯೋಗದ ಕೇಂದ್ರ ನಗರವೆಂದು ಹೆಸರು ಪಡೆದಿದೆ.

ಬಾಸ್ಟನ್ ಸಮುದ್ರಪಾತಳಿಯಿಂದ 6.4 ಮೀ ಎತ್ತರದಲ್ಲಿದೆ. ನಗರ ಮಿಸ್ಟಿಕ್, ಚೆಲ್ಸೀ ಮತ್ತು ಚಾರ್ಲ್ಸ್ ನದಿಗಳ ಸಂಯೋಜಿತ ಹರಿವಿನಿಂದ ಪ್ರವಾಹಗಳು ಬೇರ್ಪಟ್ಟು ದ್ವೀಪದಂತಿರುವ ಭೂಭಾಗ ಮತ್ತು ಚಾರ್ಲ್ಸ್ ನದಿಯಿಂದ ಬೇರ್ಪಟ್ಟು ಇರುವ ಚಾರ್ಲ್ಸ್ ಟೌನ್ ಮತ್ತು ಚಾರ್ಲ್ಸ್ ನದಿ ಮತ್ತು ಬಂದರು ನಡುವೆ ಪಶ್ಚಿಮದತ್ತ ಹಬ್ಬಿರುವ ಮುಖ್ಯ ಬಾಸ್ಟನ್ ಪ್ರದೇಶಗಳನ್ನು ಒಳಗೊಂಡಿದೆ. ಮೊದಲಲ್ಲಿ ಪ್ರತ್ಯೇಕ ಪಟ್ಟಣಗಳೇ ಆಗಿದ್ದ ಪೂರ್ವ ಬಾಸ್ಟನ್, ಚಾರ್ಲ್ಸ್ ಟೌನ್, ಬೀಕನ್‌ಹಿಲ್, ಬ್ಯಾಕ್‌ಬೇ, ಜಮೈಕಾಪ್ಲೇನ್, ರಾಕ್ಸ್‌ಬರಿ, ಸೌತ್ ಬಾಸ್ಟನ್, ಡಾರ್ಚೆಸ್ಟರ್, ಹೈಡ್‌ಪಾರ್ಕ್, ಬ್ರೈಟನ್ ಮುಂತಾದ ಪಟ್ಟಣಗಳು ಈಗ ಬಾಸ್ಟನ್‌ನಲ್ಲಿ ಸೇರಿಹೋಗಿವೆ.

ಈ ಮಹಾನಗರಕ್ಕೆ ಸೇರಿರುವ ಸು. 6.5 ಮೀ ಎತ್ತರವಿರುವ ಗುಡ್ಡ ಪಶ್ಚಿಮ ರಾಕ್ಸ್ ಬರಿಯಲ್ಲಿದೆ. ಬಾಸ್ಟನ್ನಿನ ಹವಾಗುಣ ಸಾಮಾನ್ಯವಾಗಿ ಹಿತವಾಗಿದ್ದು ಜನವರಿ ತಿಂಗಳಲ್ಲಿ– $2^0$ಸೆ ವರೆಗೂ ಇಳಿದು ಜುಲೈ ತಿಂಗಳಲ್ಲಿ $22^0$ ಸೆ ವರೆಗೂ ಏರುವುದುಂಟು. ಸರಾಸರಿ ಮಳೆ 188 ಸೆಂಮೀ ಬೀಳುತ್ತದೆ.

ಬಾಸ್ಟನ್ ಮಹಾನಗರ ಬ್ಯಾಂಕ್ ವ್ಯವಹಾರ, ವಿಮೆ, ಬಂಡವಾಳ ನಿರ್ವಹಿಸುವಿಕೆ ಮತ್ತು ಇತರ ಆರ್ಥಿಕ ಹಾಗೂ ವ್ಯವಹಾರ ಸೇವಾ ಚಟುವಟಿಕೆಗಳ ಈಶಾನ್ಯ ಕೇಂದ್ರ. 50 ವಿಮಾ ಸಂಸ್ಥೆಗಳ ನೆಲೆ. 20 ಶತಕೋಟಿ ಡಾಲರುಗಳ ಠೇವಣಿ ಹೊಂದಿರುವ ನ್ಯೂ ಇಂಗ್ಲೆಂಡಿನ ಬ್ಯಾಂಕ್ ವ್ಯವಹಾರದ ಕೇಂದ್ರ. ಆಹಾರ ಪದಾರ್ಥಗಳು, ಉಡುಪು, ಮುದ್ರಣ, ಪ್ರಕಾಶನ ಮತ್ತು ವಿದ್ಯುತ್ ಸಾಮಾನುಗಳಿಗೆ ನಗರ ಪ್ರಸಿದ್ಧ. ಎರಡನೆಯ ಮಹಾಯುದ್ಧದ ಅನಂತರ ತಲೆಯೆತ್ತಿರುವ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಯ ಅಧಿಕ ಪಾಲು ಬಾಸ್ಟನ್ ಮಹಾನಗರ ಪ್ರದೇಶದಲ್ಲಿ ಬೆಳೆದುಕೊಂಡಿವೆ. *

**ಬಾಹ್ಯ ಶಕ್ತಿಗಳು :** ಭೂಮೇಲ್ಮೈ ಮೇಲೆ ನಗ್ನೀಕರಣ ಕಾರ್ಯ ನಿರ್ವಹಿಸುವ ಶಕ್ತಿ (ಎಕ್ಸೋಜೆನೆಟಿಕ್ ಫೋರ್ಸಸ್). ಇದು ಶಿಥಿಲೀಕರಣ, ಶಿಲಾರಾಶಿ ಚಲನೆ, ಸವೆತ, ಸಾಗಾಣಿಕೆ ಮತ್ತು ಸಂಚಯನ ಕಾರ್ಯಗಳನ್ನು ಒಳಗೊಂಡಿರುತ್ತದೆ. ಶಿಥಿಲೀಕರಣ ಸೂರ್ಯತಾಪ (ಉಷ್ಣಾಂಶ) ಮಳೆ, ವನಸ್ಪತಿ ಮತ್ತು ಪ್ರಾಣಿಗಳ ಭೌತ ಮತ್ತು ರಾಸಾಯನಿಕ ಕಾರ್ಯಗಳಿಂದಲೂ ಶಿಲಾರಾಶಿ ಚಲನೆ ಮಳೆ ಮತ್ತು ಗುರುತ್ವ ಶಕ್ತಿಯಿಂದಲೂ ಸವೆತ ಸಾಗಾಣಿಕೆ, ಮತ್ತು ಸಂಚಯನ ಕಾರ್ಯಗಳು ನದಿ, ಹಿಮನದಿ ಅಂತರ್ಜಲ, ಗಾಳಿ ಮತ್ತು ಸಮುದ್ರದ ಅಲೆಗಳಿಂದಲೂ ನಿರ್ವಹಿಸಲ್ಪಡುತ್ತವೆ. ಆಂತರಿಕ ಶಕ್ತಿಗಳಿಂದ ನಿರ್ಮಾಣವಾದ ಭೂಸ್ವರೂಪಗಳು ಬಾಹ್ಯ ಶಕ್ತಿಗಳಿಂದ ಪರಿವರ್ತನೆ ಹೊಂದುತ್ತವೆ.

ಭೌತಿಕ, ರಾಸಾಯನಿಕ ಮತ್ತು ಜೈವಿಕ ಶಿಥಿಲೀಕರಣಗಳಿಂದ ಶಿಲೆಗಳು ವಿಭಜನೆಹೊಂದಿ ಚೂರುಗಳಾಗುತ್ತವೆ ಅಥವಾ ಪುಡಿಯಾಗುತ್ತವೆ. ಹೀಗೆ ಅವು ಕೊನೆಗೆ ಮಣ್ಣಾಗಿ ಪರಿವರ್ತನೆ ಹೊಂದುತ್ತವೆ. ಶಿಲಾರಾಶಿಗಳು ಗುರುತ್ವದ ಪ್ರಭಾವದಿಂದ ಪರ್ವತದ ಇಳಿವೋರೆಗುಂಟ ಚಲಿಸುತ್ತವೆ. ನೀರು ಶಿಲಾರಾಶಿಗಳ ಚಲನೆಗೆ ಸಹಾಯ ಮಾಡುತ್ತದೆ. ಶಿಲಾರಾಶಿಗಳು, ಭೂಪಾತ, ಶಿಲಾಪಾತ, ಮಣ್ಣು ಪ್ರವಾಹ, ಕೆಸರು ಪ್ರವಾಹ ಮತ್ತು ಮಣ್ಣು ಜರಿತಗಳ ರೂಪದಲ್ಲಿ ಚಲಿಸುತ್ತವೆ. ಈ ಪ್ರಕ್ರಿಯೆಯನ್ನು ಶಿಲಾರಾಶಿ ಚಲನೆ ಎಂದು ಕರೆಯುವರು. ನಗ್ನೀಕರಣದ ಕರ್ತೃಗಳಾದ ನದಿ, ಹಿಮನದಿ, ಅಂತರ್ಜಲ, ಗಾಳಿ ಮತ್ತು ಸಮುದ್ರದ ಅಲೆಗಳು ಭೂಮೇಲ್ಮೈಯನ್ನು ಸವೆಸುತ್ತವೆ. ಸವೆಸಿದ ಶಿಲಾವಸ್ತುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಿ ಸಂಚಯನ ಮಾಡುತ್ತವೆ. ಶಿಥಿಲೀಕರಣ ಮತ್ತು ಸವೆತ ಕಾರ್ಯಗಳಿಂದ ಪರ್ವತಗಳು ಸವೆತಕ್ಕೀಡಾಗುತ್ತವೆ; ಹಾಗೂ ಸಂಚಯನ ಕಾರ್ಯದಿಂದ ತಗ್ಗು ಪ್ರದೇಶಗಳು ಶಿಲಾವಸ್ತುಗಳಿಂದ ತುಂಬಿ ಮೈದಾನಗಳಾಗಿ ಪರಿಣಮಿಸುತ್ತವೆ. ಉದಾಹರಣೆಗೆ ಒಂದಾನೊಂದು ಕಾಲದಲ್ಲಿ ಪ್ರಪಂಚಲ್ಲೆ ಅತ್ಯುನ್ನತವಾದ ಅರಾವಳಿ ಪರ್ವತಗಳು ಶಿಥಿಲೀಕರಣ ಮತ್ತು ನಗ್ನೀಕರಣ ಕರ್ತೃಗಳಿಂದ ಸವೆದು ಈಗ ಬೆಟ್ಟಗಳಾಗಿ ಪರಿಣಮಿಸಿವೆ. ಅದರಂತೆ ಒಂದಾನೊಂದು ಕಾಲದಲ್ಲಿ ಹಿಮಾಲಯದ ದಕ್ಷಿಣದ ಅಡಿ ಭಾಗದಲ್ಲಿದ್ದ ಮಹಾ ತಗ್ಗು ಸಿಂಧೂ, ಗಂಗ ಮತ್ತು ಬ್ರಹ್ಮಪುತ್ರ ಹಾಗೂ ಅವುಗಳ ಉಪನದಿಗಳು ಹಿಮಾಲಯ ಪರ್ವತದಿಂದ ಸಾಗಿಸಿ ತಂದು ಹಾಕಿದ ಶಿಲಾವಸ್ತುಗಳಿಂದ ತುಂಬಿ ಮಹಾ ಮೈದಾನವಾಗಿ ಪರಿಣಮಿಸಿದೆ. ನಗ್ನೀಕರಣ ಕರ್ತೃಗಳ ಸವೆತ ಮತ್ತು ಸಂಚಯ ಕಾರ್ಯಗಳಿಂದುಂಟಾದ ಭೂಸ್ವರೂಪಗಳು ಕೆಳಗಿನಂತಿವೆ:

1. ನದಿ : ವಿ – ಆಕಾರದ ಕಣಿವೆ, ಕಂದರ, ಮಹಾಕಂದರ ಮೆಕ್ಕಲು ಬೀಸಣಿಗೆ ನದಿತಿರುವು ಕುಂಭಕುಳಿ ಜಲಪಾತ, ಶೃಂಗ ಸರೋವರ, ಮಹಾಪೂರ, ಮೈದಾನ, ಸ್ವಾಭಾವಿಕ ದಡಕಟ್ಟೆ ನದಿ ಮುಖಜಭೂಮಿ, ಇತ್ಯಾದಿ.

2. ಹಿಮನದಿ: ಹಿಮಗಹ್ವರ, ಶಿಲಾಸೋಪಾನ, ಮೇಷಶಿಲೆ, ಮುರುಕಲುಗುಪ್ಪೆ, ಅಂಡಾಕಾರದ ಗಿರಿಶೃಂಗ ಯು– ಆಕಾರದ ಕಣಿವೆ, ದಿನ್ನೆ, ತ್ರಿಕೋನಾಕಾರದ ದಿನ್ನೆ, ತೂಗುಕಣಿವೆ, ಪರ್ವತ ಕಟಕ, ತಾತ್ಕಾಲಿಕ ಮೈದಾನ, ಕಲ್ಲು ಮರಳು ಮಣ್ಣುಗಳು, ಮೈದಾನ, ಇತ್ಯಾದಿ.

3. ಅಂತರ್ಜಲ : ನುಂಗುಬಿಲ, ಡೊಲೈನ್, ಪೋನಾರ್, ಅವರೋಹಿ ಶಂಕು, ಆರೋಹಿ, ಯುವಾಲಾ, ಪೋಲ್ಜೆ, ಗುಹೆ, ಲೆಪೀಸ್, ಶಂಕು, ಗುಹಾ ಮೊರಡಿ, ಸ್ವಾಭಾವಿಕ ಸೇತುವೆ, ಶುಷ್ಕಕಣಿವೆ. ಚಿಲುಮೆ ನಿಕ್ಷೇಪ ಇತ್ಯಾದಿ.

4. ಗಾಳಿ : ವಿವಿಧ ಆಕಾರದ ತಗ್ಗುಗಳು, ಹಮಡಾ, ಮರಳು ದಿನ್ನೆಗಳು ಮತ್ತು ಗಾರಾ, ಝೂಜನ್, ಯಾರ್ಡಂಗ್ ಲೋಯೆಸ್ ಮೈದಾನಗಳು ಡ್ರೈಕಾಂಟರ್, ಶಿಲಾದ್ವೀಪ, ಚಿಕ್ಕಶಿಲಾ ಪೀಠ, ಶಿಲಾಗೋಪುರ, ಶಿಲಾಸೋಪನ ದಿನ್ನೆ, ಅಣಬೆ ಶಿಲೆ.

5. ಸಮುದ್ರದ ಅಲೆ: ಶಿಲಾಪ್ರಪಾತ, ಗುಹೆ, ಗಾಳಿಕಿಂಡಿ, ಕಮಾನು, ಮರಳುದಂಡೆ, ನಾಲಿಗೆ, ಬಿಡಿಬಂಡೆ, ಮೆಟ್ಟಿಲುದಂಡೆ, ಶಿಲೆ, ನೆಲಚಾಚು, ಆಸನ, ಪೀಠಭೂಮಿ, ದ್ವೀಪಕೂಟಕ, ಅಡ್ಡಮರಳು, ದಿಬ್ಬ, ಮರಳು ದಂಡೆ ಶೃಂಗ, ಇತ್ಯಾದಿ. (ಎಸ್.ಎಸ್.ಎನ್.)

**ಬಾಳೆಹೊನ್ನೂರು:** ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ. ಚಿಕ್ಕಮಗಳೂರಿನಿಂದ ಸು. 51 ಕಿಮೀ ದೂರದಲ್ಲಿ ಭದ್ರಾನದಿಯ ಪಶ್ಚಿಮ ದಂಡೆಯ ಮೇಲಿದೆ. ಇಲ್ಲಿನ ಜನಸಂಖ್ಯೆ 9930.

ಚಿಕ್ಕಮಗಳೂರು–ಕೊಟಿಗೆಹಾರ ಹೆದ್ದಾರಿ ಬಾಳೆಹೊನ್ನೂರು ಮೂಲಕ ಹಾದುಹೋಗುತ್ತದೆ. ಈ ಊರಿನಲ್ಲಿ ಒಂದು ಕಾಫಿ ಸಂಶೋಧನ ಕೇಂದ್ರವಿದೆ. ಈ ಊರು ಬಿ. ಕಣಬೂರು ಎಂಬ ಕಂದಾಯ ಗ್ರಾಮದ ಒಂದು ಭಾಗವಾಗಿದೆ. (ಬಿ.ಎಸ್.ಎಸ್.)

**ಬಿಂದು ವಿಧಾನ :** ಭೌಗೋಳಿಕ ಅಂಕಿ–ಅಂಶಗಳ ನಿರೂಪಣೆಗೆ ಬಳಸುವ ವಿಧಾನ (ಡಾಟ್ ಮೆಥಡ್). ಜನಸಂಖ್ಯೆ, ವ್ಯವಸಾಯೋತ್ಪನ್ನಗಳು ಹಾಗೂ ಖನಿಜಗಳ ಉತ್ಪಾದನೆ ಮೊದಲಾದವುಗಳನ್ನು ಈ ವಿಧಾನದಿಂದ ಸರಳವಾಗಿ ಪ್ರತಿನಿಧಿಸಿ ಅವುಗಳ ಹಂಚಿಕೆಯನ್ನು ವಿಶ್ಲೇಷಿಸಲಾಗುವುದು. ಈ ವಿಧಾನದಲ್ಲಿ ಅಂಕಿ–ಅಂಶಗಳನ್ನು ಒಂದೇ ಗಾತ್ರದ ಬಿಂದುಗಳನ್ನು ಅಥವಾ ಚುಕ್ಕೆಗಳನ್ನು ನಕ್ಷೆಯಲ್ಲಿ ಹಾಕುವುದರ ಮೂಲಕ ಹಂಚಿಕೆಯನ್ನು ಸೂಚಿಸಲಾಗುವುದು. ಪ್ರತಿ ಬಿಂದು ಒಂದು ಪೂರ್ವನಿರ್ಧರಿತ ಮೌಲ್ಯವನ್ನು ಪ್ರತಿನಿಧಿಸುವುದು. ಉದಾಹರಣೆಗೆ 1 ಬಿಂದು = 1000 ಜನಸಂಖ್ಯೆ ಅಥವಾ 1 ಬಿಂದು = 100 ಟನ್ನುಗಳು. ಇದರಿಂದ ಒಂದು ಬಿಂದು ಎಷ್ಟು ಮೌಲ್ಯವನ್ನು ಪ್ರತಿನಿಧಿಸಬೇಕೆಂದು ಮೊದಲೇ ನಿರ್ಧರಿಸಬೇಕು ಅಂದರೆ ಅಳತೆಯನ್ನು ತೆಗೆದು ಕೊಳ್ಳಬೇಕು. ಹೆಚ್ಚು ಸಾಂದ್ರತೆಯಿರುವ ಕಡೆಗಳಲ್ಲಿ ಹೆಚ್ಚು ಬಿಂದುಗಳನ್ನು ಹಾಕುವುದು ಸೂಕ್ತ. ಬಿಂದುಗಳ ಗಾತ್ರ ಒಂದೇ ಸಮನಾಗಿರಬೇಕು. ಹೀಗೆ ಬಿಂದುಗಳ ಮೂಲಕ ನಿರೂಪಿಸಿದ ಅಂಕಿ ಅಂಶಗಳನ್ನು ಆಧರಿಸಿ ಸಮಮೌಲ್ಯ ರೇಖೆಗಳು ಹಾಗೂ ಕ್ಲೋರೋಪ್ಲೆತ್ ನಕ್ಷೆಗಳನ್ನು ರಚಿಸಬಹುದು. ಜೊತೆಗೆ ವಿಭಿನ್ನ ರೀತಿಯ ಅಂಕಿ–ಅಂಶಗಳ ನಿರೂಪಣೆಗೆ ವಿವಿಧ ಗಾತ್ರದ ಬಿಂದುಗಳನ್ನೂ ಸಹ ಬಳಸಿ ನಕ್ಷೆಗಳು ಹೆಚ್ಚು ಮಾಹಿತಿ ನೀಡುವಂತೆ ರಚಿಸಬಹುದು. ಉದಾಹರಣೆಗೆ ವಿವಿಧ ಗಾತ್ರದ ವಸತಿಗಳನ್ನು ನಿರೂಪಿಸಲು ಈ ರೀತಿಯ ಬಹು ಬಿಂದು ವಿಧಾನವನ್ನು ಬಳಸಬಹುದು. (ಆರ್.ಎನ್.)

**ಬಿಜಾಪುರ :** ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ಒಂದು ಜಿಲ್ಲೆ. ಉತ್ತರಕ್ಕೆ ಮಹಾರಾಷ್ಟ್ರ ರಾಜ್ಯವನ್ನು, ದಕ್ಷಿಣಕ್ಕೆ ಬೆಳಗಾಂವಿ ಜಿಲ್ಲೆಯನ್ನು ಹೊಂದಿದೆ. ಐತಿಹಾಸಿಕವಾಗಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಇದು $15^0 20'$ ದಿಂದ $17^0 28'$ ಉ. ಅ. ದಲ್ಲೂ ಹಾಗೂ $74^0 50'$ ದಿಂದ $76^0 27'$ ಪೂ. ರೇ. ದಲ್ಲಿದೆ. ವಿಸ್ತೀರ್ಣ 10,541 ಚ.ಕಿಮೀ ಇದು ರಾಜ್ಯದ ಶೇ 8.9 ರಷ್ಟಿದ್ದು, ಜಿಲ್ಲೆಗಳಲ್ಲಿ 4ನೆಯ ಸ್ಥಾನ ಪಡೆದಿವೆ. 5 ತಾಲ್ಲೂಕುಗಳನ್ನು ಒಳಗೊಂಡಿದೆ. ಬಸವನ ಬಾಗೇವಾಡಿ, ಬಿಜಾಪುರ, ಮುದ್ದೇಬಿಹಾಳ, ಸಿಂದಗಿ ಮತ್ತು ಇಂಡಿ.

ಭೂಸ್ವರೂಪ: ಜಿಲ್ಲೆಯಲ್ಲಿ ಯಾವುದೇ ಬೆಟ್ಟಗುಡ್ಡಗಳು ಕಂಡುಬರುವುದಿಲ್ಲ ಹಾಗೂ ಪೂರ್ಣ ಬಯಲು ಸೀಮೆಯನ್ನು ಹೊಂದಿದೆ. ಮುದ್ದೇಬಿಹಾಳ ತಾಲ್ಲೂಕಿನ ತಾಳಿಕೋಟೆ ಭಾಗದಲ್ಲಿ ತಾರಸಿ ಕಲ್ಲುಗಳು ದೊರೆಯುತ್ತವೆ.

ನದಿಗಳು: ಜಿಲ್ಲೆಯ ಉತ್ತರದಲ್ಲಿ ಭೀಮ ನದಿ ಹಾಗೂ ದಕ್ಷಿಣದಲ್ಲಿ ಕೃಷ್ಣ ನದಿ ಹರಿದು ಜಿಲ್ಲೆಯ ಸರಹದ್ದಾಗಿದೆ. ಇದಕ್ಕೆ ಸೇರುವ ಚಿಕ್ಕ ನದಿಗಳು ಜಿಲ್ಲೆಯಲ್ಲಿ ಹರಿಯುತ್ತವೆ. ಅವುಗಳಲ್ಲಿ ದೋಣಿ ಪ್ರಮುಖವಾದ್ದುದು.

ಮಣ್ಣುಗಳು: ಭೀಮಾ ನದಿಯ ದಕ್ಷಿಣದಲ್ಲಿ ಆಳವಾದ ಕಪ್ಪುಮಣ್ಣಿದೆ. ಉಳಿದಷ್ಟು ಮಧ್ಯಮ ಪ್ರಮಾಣದ ಕಪ್ಪು ಮಣ್ಣುಗಳಿವೆ. ಪಶ್ಚಿಮದಲ್ಲಿ ಸಾಧಾರಣ ಮಟ್ಟದ ಕಪ್ಪು ಮಣ್ಣಿದೆ.

ವಾಯುಗುಣ: ಇಲ್ಲಿ ಸಾಮಾನ್ಯವಾಗಿ ಉಷ್ಣಾಂಶ ಹೆಚ್ಚು. ಮಾರ್ಚ್–ಮೇ ತಿಂಗಳ ಅವಧಿಯಲ್ಲಿ ಉಷ್ಣಾಂಶ $36^0$ಸೆ ವರೆಗೆ ಇರುತ್ತದೆ. ಚಳಿಗಾಲದ ಉಷ್ಣಾಂಶ $18^0$ಸೆ ವಾರ್ಷಿಕ ಸರಾಸರಿ ಉಷ್ಣತೆ $38^0 5$ ಸೆ ಸರಾಸರಿ ವಾರ್ಷಿಕ ಮಳೆ 58 ಸೆಂಮೀ. ಸೆಪ್ಟೆಂಬರ್ ಅತಿ ಹೆಚ್ಚು ಮಳೆಯಾಗುವ ತಿಂಗಳಾಗಿದ್ದು 15 ಸೆಂಮೀ ನಷ್ಟು ಮಳೆಯಾಗುವುದು.

ಸಸ್ಯ ಮತ್ತು ಪ್ರಾಣಿವರ್ಗ: ಜಿಲ್ಲೆಯಲ್ಲಿ 2022 ಹೆ. ಅರಣ್ಯವಿದೆ. ಜಾಲಿ, ನೇರಳೆ, ಬೇವು, ಹುಣಿಸೆ, ಬೋರೆ, ಆಲ ಮುಂತಾದ ಮರಗಳಿವೆ. ಕಂಟಿ, ಪಾಪಸಕಳ್ಳಿ ಮತ್ತು ದಬ್ಬಿಕಳ್ಳಿಗಳಂತಹ ಸಸ್ಯಗಳೂ ಇವೆ. ಮಧ್ಯೆ ಮಧ್ಯೆ ಹುಲ್ಲುಗಾವಲು ಸಹ ಕಂಡು ಬರುತ್ತವೆ. ಜಿಲ್ಲೆಯಲ್ಲಿ ದಟ್ಟವಾದ ಅರಣ್ಯವಿಲ್ಲದ ಕಾರಣ ಪ್ರಾಣಿಗಳ ಸಂಖ್ಯೆ ಕಡಿಮೆ. ಕಾಡು ಬೆಕ್ಕು, ನರಿ, ಮೊಲ, ಅಲ್ಲಲ್ಲಿ ಕಡಿಮೆ ಸಂಖ್ಯೆಗಳಲ್ಲಿ ಮಂಗಗಳೂ ಕಂಡುಬರುತ್ತವೆ. ವಿವಿಧ ಜಾತಿಯ ಹಕ್ಕಿಗಳೂ ಮತ್ತು ಉರುಗಗಳೂ ಇವೆ.




ನೀರಾವರಿ: ಈ ಜಿಲ್ಲೆಯಲ್ಲಿ ನಿವ್ವಳ 1,28,600 ಹೆ. ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಕಾಲುವೆ (23500 ಹೆ.), ಕೆರೆ (164 ಹೆ.), ಬಾವಿ (52480 ಹೆ.), ಕೊಳವೆಬಾವಿ (35424 ಹೆ.) ಮತ್ತು ಇತರ ಮೂಲಗಳ (17000ಹೆ.) ನೀರಾವರಿ ಕಂಡುಬರುತ್ತದೆ.

ವ್ಯವಸಾಯ: ಜಿಲ್ಲೆಯ ಬಿತ್ತನೆಯಾದ ಪ್ರದೇಶ 7.87 ಲಕ್ಷ ಹೆ. ಪ್ರಮುಖ ಬೆಳೆಗಳೆಂದರೆ ಜೋಳ, ಗೋದಿ, ಶೇಂಗಾ, ಹತ್ತಿ ಮತ್ತು ಮೆಣಸಿನಕಾಯಿ. ಇತರ ಬೆಳೆಗಳೆಂದರೆ ಸಜ್ಜೆ, ಮುಸಕಿನ ಜೋಳ, ಬೇಳೆ ಕಾಳುಗಳು, ಕಬ್ಬು, ಹಿಪ್ಪುನೇರಳೆ ಮತ್ತು ಸೂರ್ಯ ಕಾಂತಿ.

ಜಿಲ್ಲೆಯಲ್ಲಿ ಪಶುಸಂಗೋಪನೆ ಇದೆ.

ಕೈಗಾರಿಕೆಗಳು: ಖನಿಜ, ಸಂಪನ್ಮೂಲಗಳು ಇಲ್ಲಿ ಕಂಡು ಬರದ ಕಾರಣ ಪ್ರಮುಖ ಕೈಗಾರಿಕೆಗಳೆಂದರೆ ಹತ್ತಿಯನ್ನು ಬೀಜದಿಂದ ಬೇರ್ಪಡಿಸುವ ಕೈಗಾರಿಕೆ, ಸಕ್ಕರೆ ಕೈಗಾರಿಕೆ, ರಾಸಾಯನಿಕ ವಸ್ತು, ವಿದ್ಯುತ್ ಚಾಲಿತ ಕೈ ಮಗ್ಗಗಳು, ಚರ್ಮ ವಸ್ತುಗಳು, ಎಂಜಿನಿಯರಿಂಗ್ ಕೈಗಾರಿಕೆ, ಕಾಗದ, ಪ್ಲಾಸ್ಟಿಕ್, ಗಾಜು, ಪಿಂಗಾಣಿ, ಆಹಾರ ಸಂಸ್ಕರಣ ಮತ್ತು ಪಾನೀಯ ಕೈಗಾರಿಗಳಿವೆ.

ಸಾರಿಗೆ: ಜಿಲ್ಲೆ 67 ಕಿಮೀ ಉದ್ದದ ರೈಲು ಮಾರ್ಗವನ್ನು ಮತ್ತು 20 ರೈಲು ನಿಲ್ದಾಣಗಳನ್ನು ಹೊಂದಿದೆ. 127 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, 510 ಕಿಮೀ ಉದ್ದದ ರಾಜ್ಯ ಹೆದ್ದಾರಿ ಇದ್ದು ಇತರೆ ರಸ್ತೆ ಮಾರ್ಗಗಳು ಸೇರಿ ಒಟ್ಟು 1420 ಕಿಮೀ ಉದ್ದದ ರಸ್ತೆ ಮಾರ್ಗವಿದೆ.

ಜನಸಂಖ್ಯೆ: ಜಿಲ್ಲೆಯ ಒಟ್ಟು ಜನಸಂಖ್ಯೆ 18.06 ಲಕ್ಷ. ಇವರಲ್ಲಿ ಪುರಷರು 9.26 ಲಕ್ಷ ಮತ್ತು ಸ್ತ್ರೀಯರು 8.80 ಲಕ್ಷ. ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀ 172 ಜನ.

ಬಿಜಾಪುರ ತಾಲ್ಲೂಕು ಜಿಲ್ಲೆಯ ಪಶ್ಚಿಮ ಭಾಗಕ್ಕಿದೆ. ಇದರ ಪಶ್ಚಿಮಕ್ಕೆ ಬೆಳಗಾಂವಿ, ದಕ್ಷಿಣಕ್ಕೆ ಬಾಗಲಕೋಟೆ ಜಿಲ್ಲೆಗಳಿವೆ. ಇದರ ಆಗ್ನೇಯಕ್ಕೆ ಬಸವನ ಬಾಗೇವಾಡಿ, ಪೂರ್ವಕ್ಕೆ ಸಿಂದಗಿ ಹಾಗೂ ಉತ್ತರಕ್ಕೆ ಮಹಾರಾಷ್ಟ್ರ ರಾಜ್ಯವಿದೆ. ಇಲ್ಲಿ ಹರಿಯುವ ಪ್ರಮುಖ ನದಿ ಕೃಷ್ಣಾನದಿಯ ಉಪನದಿಯಾದ ದೋಣಿ ನದಿ. ವಿಸ್ತೀರ್ಣ 2650 ಚ.ಕಿಮೀ. ಜನಸಂಖ್ಯೆ 5.69 ಲಕ್ಷ. ಒಟ್ಟು ಬಿತ್ತನೆಯಾದ ಪ್ರದೇಶ 1.7 ಲಕ್ಷ ಹೆ. ಪ್ರಮುಖ ಬೆಳೆಗಳೆಂದರೆ ಜೋಳ, ಸಜ್ಜೆ, ಮುಸುಕಿನ ಜೋಳ, ಗೋದಿ, ಕಾಳುಗಳು, ಶೇಂಗಾ, ಸೂರ್ಯಕಾಂತಿ ಹಾಗೂ ಹಣ್ಣುಗಳು. ಪಶುಸಂಗೋಪನೆ ಕಂಡುಬರುತ್ತದೆ.

ಈ ತಾಲ್ಲೂಕಿನ ಮುಖ್ಯ ಕೈಗಾರಿಕೆಗಳೆಂದರೆ ಜವಳಿ, ರಾಸಾಯನಿಕ, ಎಂಜಿನಿಯರಿಂಗ್, ಗಾಜು, ಕಾಗದ, ಪ್ಲಾಸ್ಟಿಕ್ ಮತ್ತು ರಬ್ಬರ್. ಇದು 21 ಕಿಮೀ ಉದ್ದದ ಬ್ರಾಡ್‌ಗೇಜ್ ರೈಲು ಮಾರ್ಗ ಮತ್ತು 328 ಕಿಮೀ ಉದ್ದದ ರಸ್ತೆಮಾರ್ಗವನ್ನು ಹೊಂದಿದೆ.

ಬಿಜಾಪುರನಗರ ಜಿಲ್ಲೆಯ ಕೇಂದ್ರ ಭಾಗದಲ್ಲಿದೆ. ಇದು ಕಲ್ಯಾಣದ ಚಾಳುಕ್ಯರಿಂದ ಸ್ಥಾಪಿತವಾದ ನಗರ. ಆಗ ಇದನ್ನು ವಿಜಯಪುರವೆಂದು ಕರೆಯಲಾಗುತ್ತಿತ್ತು. ವಾಸ್ತು ಶಿಲ್ಪ ಸಂಗ್ರಹಾಲಯ, ಭಾರತದಲ್ಲಿರುವ ಅತ್ಯಂತ ಸುಂದರವಾದ ಮಹಮ್ಮದೀಯ ಕಲಾಕೃತಿಗಳಲ್ಲಿ ಗೋಳ್ ಗುಂಬಜ್ ಇಬ್ರಾಹಿಂ ರೋಜ ಒಂದು. ಬಾರಾ ಕಮಾನ್, ಮೆಹ್ತರ್ ಮಹಲ್, ಮಲ್ಲಿಕ್–ಎ–ಮೈದಾನ್, ಉಪರಿ ಬುರುಜು, ಆಸಾರ ಮಹಲ್, ಜೋಡು ಗುಂಬಝ್ ಮತ್ತು ತಾಜ ಬಾವಡಿ. ಇದಲ್ಲದೆ ಸಹಸ್ರಫಣಿ ಪಾರ್ಶ್ವನಾಥ ಮಂದಿರವಿದೆ. ಇವುಗಳಿಂದ ಬಿಜಾಪುರ ಒಂದು ಪ್ರೇಕ್ಷಣೀಯ ಸ್ಥಳವಾಗಿದೆ. ಜನಸಂಖ್ಯೆ 2.8 ಲಕ್ಷ.



ಗೋಳಗುಮ್ಮಟ

ಬ್ರಾಡ್‌ಗೇಜ್ ರೈಲುಮಾರ್ಗ ಈ ನಗರದ ಮುಖಾಂತರ ಹಾದು ಹೋಗಿದೆ. ಇಲ್ಲಿ ಜವಳಿ, ರಾಸಾಯನಿಕ, ವಿದ್ಯುತ್ ಚಾಲಿತ ಕೈ ಮಗ್ಗ, ಉಣ್ಣೆ, ಪ್ಲಾಸ್ಟಿಕ್, ಕಾಗದ, ಎಂಜಿನಿಯರಿಂಗ್ ವಸ್ತುಗಳು ಮತ್ತು ವಿದ್ಯುತ್ ಉಪಕರಣ ಕೈಗಾರಿಕೆಗಳಿವೆ. (ಬಿ.ಸಿ.ಕೆ.)

**ಬಿಟ್ಯುಮೆನ್:** ನೈಸರ್ಗಿಕ ಅಥವಾ ಅಗ್ನಿಕಾರ್ಯಜನ್ಯ ಹೈಡ್ರೊಕಾರ್ಬನ್ನುಗಳ ಮಿಶ್ರಣ. ಅಮೆರಿಕನ್ ಸೊಸೈಟಿ ಫಾರ್ ಮೆಟೀರಿಯಲ್ಸ್ ಅಂಡ್ ಟೆಸ್ಟಿಂಗ್ (ಎಎಸ್‌ಎಂಟಿ) ನೀಡಿರುವ ವ್ಯಾಖ್ಯೆ ಇದು. ಈ ಮಿಶ್ರಣದಲ್ಲಿ ಅನಿಲ, ದ್ರವ, ಅರ್ಧಘನ ಹಾಗೂ ಘನ ಈ ಎಲ್ಲ ರೂಪದ ಹೈಡ್ರೊಕಾರ್ಬನ್ನುಗಳೂ ಇದ್ದು ಅವು ಕಾರ್ಬನ್ ಡೈಸಲ್ಫೈಡಿನಲ್ಲಿ ಸುಲಭವಾಗಿ ಲೀನವಾಗುತ್ತವೆ. ಆದರೆ ಮಾರುಕಟ್ಟೆಯಲ್ಲಿ ಬಳಸುವ ಬಿಟ್ಯುಮೆನ್ ಎಂಬ ಪದ ಕಪ್ಪು ಅಥವಾ ಕಂದು ಬಣ್ಣದ ಅರ್ಧಘನ ಅಥವಾ ಘನರೂಪದ ಹೈಡ್ರೊಕಾರ್ಬನ್ನುಗಳಿಗೆ ಮಾತ್ರ ಸೀಮಿತವಾಗಿದೆ. ಇದರಲ್ಲಿ ಆಸ್ಫಾಲ್ಟ್, ಡಾಂಬಾರೆಣ್ಣೆ ಮತ್ತು ಪಿಚ್ ಇರುತ್ತವೆ. ಎಎಸ್‌ಎಂಟಿ ಪ್ರಕಾರ ಆಸ್ಫಾಲ್ಟ್, ಅಂದರೆ ಕಚ್ಚಾ ಎಣ್ಣೆಯನ್ನು (ಪೆಟ್ರೋಲಿಯಮ್) ಬಟ್ಟಿ ಇಳಿಸಿ ಪೆಟ್ರೋಲ್, ಡೀಸಲ್ ಎಣ್ಣೆ, ಮೇಣ ಮುಂತಾದವನ್ನು ಬೇರ್ಪಡಿಸಿದ ಬಳಿಕ ಉಳಿಯುವ ಕಪ್ಪು ಬಣ್ಣದ ಅರ್ಧಘನ ರೂಪದ ವಸ್ತು. ಆದರೆ ಯುರೋಪಿನಲ್ಲಿ ಇದನ್ನೇ ಬಿಟುಮೆನ್ ಎನ್ನುವರು. ಯುರೋಪಿಯನ್ನರ ಪ್ರಕಾರ ಆಸ್ಫಾಲ್ಟ್ ಅಂದರೆ ಭೂಗರ್ಭದಿಂದ ಸೋರಿ ಬಂದ ಪೆಟ್ರೋಲಿಯಮ್ ಬಾಷ್ಪೀಭವನ ಹೊಂದಿ ಅನಂತರ ಉಳಿಯುವ ಕಪ್ಪು ಬಣ್ಣದ ನೈಸರ್ಗಿಕ ವಸ್ತು. (ಎಸ್.ವೈ.ಎ.)

**ಬಿಡದಿ:** ರಾಮನಗರ ಜಿಲ್ಲೆಯ ಕಸಬ ತಾಲ್ಲೂಕಿನ ಒಂದು ಹೋಬಳಿ. ಬೆಂಗಳೂರು–ಮೈಸೂರು ರಸ್ತೆಯಲ್ಲಿ, ಬೆಂಗಳೂರಿನ ನೈರುತ್ಯಕ್ಕೆ 32 ಕಿಮೀ ದೂರದಲ್ಲೂ ರಾಮನಗರದ ಈಶಾನ್ಯಕ್ಕೆ 16 ಕಿಮೀ ದೂರದಲ್ಲೂ ಇದೆ. ಮೈಸೂರು–ಬೆಂಗಳೂರು ರೈಲು ಮಾರ್ಗದಲ್ಲಿ ಇದೊಂದು ನಿಲ್ದಾಣ. ಈ ಊರಿನ ಸುತ್ತ ಬಂಜರು ಭೂಮಿ ಇದ್ದು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಆದರೂ ಕೊಳವೆ ಬಾವಿಗಳ ಸಹಾಯದಿಂದ ಹಣ್ಣಿನ ತೋಟಗಳನ್ನು ಮಾಡುವ ಪ್ರಯತ್ನ ನಡೆದಿದೆ. ರಾಗಿ, ಅವರೆ, ಹುರುಳಿ, ಹಿಪ್ಪುನೇರಳೆ ಬೆಳೆಸುತ್ತಾರೆ. ರೇಷ್ಮೆ ಸಾಕಣೆ ಉಂಟು. ಊರಿಗೆ ಸು. 4 ಕಿಮೀ ದೂರದಲ್ಲಿ ಹಾಗಲಹಳ್ಳಿಯ ಬಳಿ ಸಣ್ಣ ಬೆಟ್ಟವಿದೆ. ಬೆಂಗಳೂರು ಕೈಗಾರಿಕ ಪ್ರಾಧಿಕಾರ ಈ ಪಟ್ಟಣವನ್ನು ಬೆಂಗಳೂರಿಗೆ ಸೇರಿದಂತೆ ಕೈಗಾರಿಕ ವಲಯವಾಗಿ ಬೆಳೆಸುತ್ತಿದೆ. ಟಯೋಟದಂತಹ ಬೃಹತ್ ಕೈಗಾರಿಕೆಯು ಇಲ್ಲಿ ಬೆಳೆದಿದೆ. (ವಿ.ಜಿ.ಕೆ.)

**ಬಿಡುವು:** ಪ್ರಾಣಿ–ಮನುಷ್ಯ ಯಾರಿಗಾದರೂ ಬಿಡುವು ಅತಿ ಅಗತ್ಯ. ಬೆಳಗ್ಗೆಯಿಂದ ಸಂಜೆಯವರೆಗೆ ಕಾರ್ಯನಿರತರಾಗಿರುವ ಜನ ಜೀವನದಲ್ಲಿ ಉಲ್ಲಾಸ, ನೆಮ್ಮದಿ, ಹಸನ್ಮುಖಿ ಭಾವನೆ ಅಸಾಧ್ಯ. ಅದಕ್ಕಾಗಿ ಕೆಲವು ಕಛೇರಿ ಕೆಲಸಗಳಲ್ಲಿ ಅಥವಾ ವ್ಯವಸ್ಥಿತವಾದ ಜೀವನ ನಡೆಸುವ ಸಂಸಾರಗಳು ದಿನದ ಕೆಲವು ಸಮಯದಲ್ಲಿ, ವಾರದ ಕೆಲವು ದಿನಗಳಲ್ಲಿ, ತಿಂಗಳ ಕೆಲವು ದಿನಗಳಲ್ಲಿ ನಿರ್ದಿಷ್ಟ ಕೆಲಸ ಕಾರ್ಯಗಳಿಗೆ ವಿರಾಮ ಹಾಕಿ ಕೊಂಡಿರುವುದಕ್ಕೆ ಬಿಡುವು ಎನ್ನಬಹುದು. ನಿರ್ವಹಿಸುತ್ತಿರುವ ಸಕ್ರೀಯ ಕಾರ್ಯವನ್ನು ಸ್ವಲ್ಪ ಸಮಯ, ದಿನಗಳು ಸ್ಥಗಿತಗೊಳಿಸುವುದನ್ನು ಬಿಡುವು ಎನ್ನಬಹುದು. ಬಿಡುವು ಮನುಷ್ಯನ ಜೀವನದಲ್ಲಿ ಕಾರ್ಯ ಪ್ರವೃತ್ತಿಯನ್ನು ವೃದ್ಧಿಸಿಕೊಳ್ಳಲು, ಕ್ರಿಯಾಶೀಲತೆ, ಉತ್ಸಾಹ ಕೌಶಲ್ಯ ಶಾಂತಿ ಇತ್ಯಾದಿಗಳಿಗೆ ಸಹಕಾರಿಯಾಗುತ್ತದೆ. ಮನುಷ್ಯನ ಮನಸ್ಸಿನ ಮೇಲೆ ಒತ್ತಡಕ್ಕೆ ವಿರಾಮ ನೀಡುವುದೇ ಬಿಡುವು. ಇಂತಹ ಬಿಡುವಿನ ದಿನಗಳಲ್ಲಿ ಮನುಷ್ಯ ಪ್ರೇಕ್ಷಣೀಯ ಸ್ಥಳಗಳು, ಯಾತ್ರಾ ಸ್ಥಳಗಳು, ಮನರಂಜನಾ ಸ್ಥಳಗಳಿಗೆ ಭೇಟಿ ನೀಡುವ ಮೂಲಕ ಮನಸ್ಸಿನ ಒತ್ತಡವನ್ನು ಇಳಿಸಿಕೊಳ್ಳಲು ಪ್ರಯತ್ನಿಸುತ್ತಾನೆ. (ಸಿ.ಪಿ.)

**ಬಿದಿರು:** ಉಷ್ಣ ಹಾಗೂ ಉಪೋಷ್ಣ ವಲಯಗಳಲ್ಲಿ ಸ್ವಾಭಾವಿಕವಾಗಿ ಮರದೋಪಾದಿಯಲ್ಲಿ ಬೆಳೆಯುವ ದಾರುಮಯ ಹುಲ್ಲುಸಸ್ಯ (ಬ್ಯಾಂಬೂ) ಬೊಂಬು, ಬಂಬು ಪರ್ಯಾಯನಾಮಗಳು. ಪೋಯೇಸಿ (ಏಕದಳಧಾನ್ಯ ಸಸ್ಯ ಹಾಗೂ ಹುಲ್ಲುಗಳ) ಕುಟುಂಬದ ಬ್ಯಾಂಬೂಸಾಯ್‌ಡೀ ಉಪಕುಟುಂಬಕ್ಕೆ ಸೇರಿದೆ. ವಾಸ್ತವವಾಗಿ ಬಿದಿರಿನಲ್ಲಿ ಸು. 500 ಪ್ರಭೇದಗಳಿವೆ. ಯುರೋಪ್ ವಿನಃ ಮಿಕ್ಕೆಲ್ಲ ಖಂಡಗಳಲ್ಲಿ ಇವು ಬೆಳೆಯುತ್ತಿದ್ದು ಅಲ್ಲಿಯ ಅರಣ್ಯಗಳ ಮುಖ್ಯ ಅಂಶಗಳಾಗಿವೆ. ಭಾರತದಿಂದ ತೊಡಗಿ ಚೀನ, ಜಪಾನ್‌ವರೆಗಿನ ಆಗ್ನೇಯ ಹಾಗೂ ಈಶಾನ್ಯ ಏಷ್ಯದ ದೇಶಗಳಲ್ಲಿ ಬಿದಿರಿನ ಸಂಖ್ಯಾಸಮೃದ್ಧಿಯನ್ನೂ ರೂಪ ವೈವಿಧ್ಯವನ್ನೂ ಗರಿಷ್ಠ ಮಟ್ಟದಲ್ಲಿ ಕಾಣಬಹುದು. ಆಫ್ರಿಕವೂ ಬಿದಿರಿನ ಸಂಪತ್ತಿಗೆ ಹೆಸರಾಗಿದೆ. ಮೆಲಗ್ಯಾಸಿಯಲ್ಲಂತೂ ಅತ್ಯಧಿಕ ಸಂಖ್ಯೆಯ ಸ್ಥಾನಿಕಪ್ರಭೇದಗಳನ್ನು (ಎಂಡೆಮಿಕ್ ಸ್ಪೀಶೀಸ್) ಕಾಣಬಹುದು. ಇಲ್ಲಿಯ ಪ್ರಭೇದಗಳ ಸಂಖ್ಯೆ ಆಫ್ರಿಕದಲ್ಲಿ ಕಾಣಬರುವ ಎಲ್ಲ ಪ್ರಭೇದಗಳ ಸಂಖ್ಯೆಗಿಂತ ಬಹುಪಾಲು ಹೆಚ್ಚು. ಆಸ್ಟ್ರೇಲಿಯದಲ್ಲೂ ಬಿದಿರಿನ ಪ್ರಭೇದಗಳ ಸಂಖ್ಯೆ ಗಣನೀಯವಾಗಿದೆ. ಪಶ್ಚಿಮಗೋಳಾರ್ಧದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ದಕ್ಷಿಣ ಭಾಗದಿಂದ ಹಿಡಿದು ಅರ್ಜೆಂಟೈನ, ಚಿಲಿಗಳ ದಕ್ಷಿಣ ಅಂಚಿನವರೆಗೂ ಬಿದಿರಿನ ವ್ಯಾಪ್ತಿಯುಂಟು. ಟಿಬೆಟ್ ಮತ್ತು ಚೀನಗಳ ಉತ್ತರ ಹಾಗೂ ವಾಯವ್ಯ ದಿಕ್ಕಿನ ಯೂರೇಷ್ಯ ಭಾಗದಲ್ಲಿ ಬಿದಿರು ಸ್ವಾಭಾವಿಕವಾಗಿ ಬೆಳೆದಿಲ್ಲವಾದರೂ ಬೇರೆಡೆಯಿಂದ ತಂದು ಬೆಳೆಸಿದ ಪ್ರಭೇದಗಳನ್ನು ಕಾಣಬಹುದು. ಭಾರತ, ಚೀನ, ಜಪಾನ್ ಹಾಗೂ ಇತರ ಆಗ್ನೇಯ ಏಷ್ಯ ದೇಶಗಳಲ್ಲಂತೂ ಬಿದಿರು ಅಲ್ಲಿಯ ಜನಜೀವನದಲ್ಲಿ ಅನೇಕ ವಿಧಗಳಲ್ಲಿ–ಮನೆಗಳ ನಿರ್ಮಾಣ ವಸ್ತುವಾಗಿ, ಆಹಾರವಾಗಿ, ಕಾಗದ ಮತ್ತಿತರ ಸಾಮಗ್ರಿಗಳ ತಯಾರಿಕೆಯ ಕಚ್ಚಾ ಪದಾರ್ಥವಾಗಿ, ಕರಕುಶಲಕಲೆಗೆ ಒದಗುವ ವಸ್ತುವಾಗಿ, ಕಲಾವಿದರ, ಕವಿಗಳ ರಚನೆಗಳಿಗೆ ಸ್ಫೂರ್ತಿಯ ಸೆಲೆಯಾಗಿ ಪ್ರಮುಖ ಪಾತ್ರವಹಿಸುತ್ತ ಬಂದಿದೆ. ಇಷ್ಟೆಲ್ಲ ಇದ್ದರೂ ಬಿದಿರಿನ ಸಸ್ಯ ವೈಜ್ಞಾನಿಕ ತಿಳಿವಳಿಕೆ ಅತ್ಯಲ್ಪವೆಂದೇ ಹೇಳಬೇಕು. ಬಿದಿರು ಹುಲ್ಲಿನ ಕುಟುಂಬಕ್ಕೆ ಸೇರಿದ್ದು ತೃಣಸಸ್ಯಗಳ ಸಂಬಂಧಿಯಾಗಿದೆಯಾದರೂ ಇದಕ್ಕೂ ಹುಲ್ಲುಗಳಿಗೂ ಗುಣಲಕ್ಷಣಗಳಲ್ಲಿ ಅನೇಕ ವ್ಯತ್ಯಾಸವುಂಟು.

ಚೀನ ಮತ್ತು ಭಾರತಗಳಲ್ಲಿ ಬಿದಿರು, ಕಾಗದ ತಯಾರಿಕೆಗೆ ಪ್ರಧಾನ ಕಚ್ಚಾ ಸಾಮಗ್ರಿಯಾಗಿದೆ. ಭಾರತದ ಒಟ್ಟು ಕಾಗದದಲ್ಲಿ ಶೇ. 70 ಬಿದಿರಿನಿಂದ ತಯಾರಾಗುತ್ತದೆ. ಬಾಂಗ್ಲಾ, ಥೈಲೆಂಡ್, ಇಂಡೊನೇಷ್ಯ, ತೈವಾನ್, ಫಿಲಿಪೈನ್ಸ್ ಮತ್ತು ಬ್ರೆಜಿಲ್‌ಗಳೂ ಬಿದಿರಿನ ಕಾಗದ ತಯಾರಿಕೆಗೆ ಪ್ರಸಿದ್ಧವಾಗಿವೆ.

ಬಿದಿರು ರೇಯಾನ್ ಎಳೆಯ ಉತ್ಪಾದನೆಗೂ ಒದಗುತ್ತದೆ. ತಿರುವಾಂಕೂರಿನಲ್ಲಿ ಬಿದಿರಿನಿಂದ ರೇಯಾನ್ ತಯಾರಿಸುವ ಕಾರ್ಖಾನೆ 1947ರಲ್ಲಿ ಆರಂಭವಾಯಿತು. ಪಾಕಿಸ್ತಾನದಲ್ಲೂ ರೇಯಾನ್ ತಯಾರಿಸುವ ಕಾರ್ಖಾನೆ 1972ರಲ್ಲಿ ಸ್ಥಾಪಿತವಾಯಿತು. *

**ಬಿಲೀಜ್:** ಮಧ್ಯ ಅಮೇರಿಕದ ಕೆರಿಬಿಯನ್ ಕರಾವಳಿಯ ಉತ್ತರ ಭಾಗದಲ್ಲಿರುವ ರಾಷ್ಟ್ರ. ಇದರ ಭೌಗೋಳಿಕ ಸ್ಥಾನ $17^{0}15'$ ಉ. ಅ. ಹಾಗೂ $88^{0}46'$ ಪ. ರೇ. ದಲ್ಲಿ ಹಂಚಿಕೆಯಾಗಿದೆ. ಒಟ್ಟು 22966 ಚ.ಕಿಮೀ ಭೂ ಪ್ರದೇಶವನ್ನು ಮತ್ತು ಶೇ. 07 ರಷ್ಟು ಜಲ ಪ್ರದೇಶವನ್ನು ಹೊಂದಿದೆ. ಇದರ ಗಡಿಗಳು ಉತ್ತರ ಭಾಗದಲ್ಲಿ ಮೆಕ್ಸಿಕೊ ದೇಶದ ಕ್ವಿಂಟಾನ ರೋ ರಾಜ್ಯ, ಪಶ್ಚಿಮದಲ್ಲಿ ಗ್ವಾಟೆಮಾಲದ ಪೀಟನ್ ದಕ್ಷಿಣದಲ್ಲಿ ಗ್ವಾಟೆಮಾಲದ ಇಝಬಲ್ ಪ್ರಾಂತ್ಯದ ಜೊತೆ ಹಾಗೂ ಪೂರ್ವ ಭಾಗದಲ್ಲಿ ಕೆರೆಬಿಯನ್ ಸಮುದ್ರದ ಜೊತೆ ಹಂಚಿಕೊಂಡಿದೆ. ರಾಜಧಾನಿ ಬೆಲ್ಮೊಪಾನ್. ಜನಸಂಖ್ಯೆ 6000 (2002).

ಪ್ರಪಂಚದ ಎರಡನೆಯ ಅತಿ ಉದ್ದವಾದ ಬ್ಯಾರಿಯರ್ ರೀಫ್ಗಿನ ಕೆರೆಬಿಯನ್ ಜವುಗಿನ ಕರಾವಳಿಯ ಒಂದು ಭಾಗದ ಸು. 690 ಚ.ಕಿಮೀ ವ್ಯಾಪ್ತಿಯಲ್ಲಿ ಸಣ್ಣ ದ್ವೀಪ ಸಮೂಹ ಕಂಡುಬರುತ್ತದೆ. ಇದರ ಒಂದು ಭಾಗ ಬಿಲೀಜ್. ಇದು ಎಲ್ ಸಾಲ್ವೆಡಾರ್ ಅಥವಾ ಮೆಸಾಚುಸೆಟ್ಸ್‌ಗಿಂತ ಗಾತ್ರದಲ್ಲಿ ಸ್ವಲ್ಪದೊಡ್ಡದು. ಕರಾವಳಿಯ ಉದ್ದಕ್ಕೂ ಲಗೋನ್‌ಗಳು ನಿರ್ಮಾಣವಾಗಿರುವುದರಿಂದ ಬಿಲೀಜ್‌ನ ಉತ್ತರದ ಅನೇಕ ಭೂಭಾಗಗಳು ನೀರಿನಿಂದ ಆವೃತ್ತವಾಗಿವೆ. ಇದರಿಂದ ಒಟ್ಟು ಭೌಗೋಳಿಕ ಪ್ರದೇಶದ ಸ್ವಲ್ಪ ಪ್ರಮಾಣದ ಭಾಗ ಮೊಟಕುಗೊಂಡಿದೆ.

ಬಿಲೀಜ್ ಉತ್ತರ–ದಕ್ಷಿಣವಾಗಿ 280 ಕಿಮೀ ಮತ್ತು ಪೂರ್ವ–ಪಶ್ಚಿಮವಾಗಿ 100 ಕಿಮೀ ವ್ಯಾಪ್ತಿಯನ್ನು ಹೊಂದಿದೆ. ಒಟ್ಟು 516 ಕಿಮೀ ಭೂ ಪ್ರದೇಶದ ಗಡಿಭಾಗವನ್ನು ಹೊಂದಿದೆ. ಉತ್ತರ ಮತ್ತು ದಕ್ಷಿಣ ಭಾಗದ ಗಡಿಪ್ರದೇಶಗಳಲ್ಲಿ ಎರಡು ಪ್ರಮುಖ ನದಿಗಳಾದ ಹೊಂಡೊ ಮತ್ತು ಸರ್‌ಸ್ಟೋನ್ ಪ್ರತಿನಿಧಿಸುತ್ತವೆ. ಬಿಲೀಜ್‌ನ ಪೂರ್ವಕ್ಕೆ ಯಾವುದೇ ಸ್ವಾಭಾವಿಕ ಎಲ್ಲೆಗಳು ಕಂಡುಬರುವುದಿಲ್ಲ. ದಕ್ಷಿಣೋತ್ತರವಾಗಿ ಹರಡಿರುವ ಗಡಿಭಾಗ ತಗ್ಗಾದ ಅರಣ್ಯಗಳನ್ನು ಹೊಂದಿದೆ. ಎತ್ತರವಾದ ಭೂಭಾಗಗಳು ಪ್ರಸ್ಥಭೂಮಿಯನ್ನು ಒಳಗೊಂಡಿವೆ.




ಮೇಲ್ಮೈಲಕ್ಷಣ: ಬಿಲೀಜ್ ಎರಡು ಪ್ರಮುಖ ಭೂಸ್ವರೂಪಗಳನ್ನು ಒಳಗೊಂಡಿದೆ. ಮಾಯಾ ಪರ್ವತ ಶ್ರೇಣಿ ಮತ್ತು ಕಣಿವೆ ಹಾಗೂ ಪ್ರಸ್ಥಭೂಮಿ, ದಕ್ಷಿಣದ ಕಡೆ ಕರಾವಳಿ ತೀರ ಕಿರಿದಾಗಿ ಮುಂದುವರಿದಿರುವುದರಿಂದ ಪರ್ವತ ಶ್ರೇಣಿ ಸರಾಸರಿ 1110 ಮೀ ಮಾತ್ರವಿದೆ. ವಿಕ್ಟೋರಿಯ ಶಿಖರ ಅತ್ಯಂತ ಎತ್ತರವಾದ ಭಾಗ 1120 ಮೀ. ಇದು ಕಾಕ್ಸ್‌ಕೂಂಬ್ ಪರ್ವತ ಶ್ರೇಣಿಯಲ್ಲಿದೆ. ಈ ಶ್ರೇಣಿ ತೆಳುವಾದ ಮೇಲ್ಮೈ ಸ್ವರೂಪ ಹೊಂದಿರುವುದರಿಂದ ಈ ಭಾಗದಲ್ಲಿ ಹೆಚ್ಚಿನ ಸವಕಳಿ ಕಂಡುಬರುತ್ತದೆ ಮತ್ತು ಕಡಿಮೆ ಪ್ರಮಾಣದ ಫಲವತ್ತಾದ ಮಣ್ಣಿನಿಂದ ಕೂಡಿದೆ. ಎತ್ತರವಾದ ಪ್ರದೇಶಗಳು ದಟ್ಟವಾದ ಅರಣ್ಯಗಳನ್ನು ಹೊಂದಿರುವುದರಿಂದ ಚದುರಿದಂತಹ ವಸತಿಗಳು ಕಂಡುಬರುತ್ತವೆ.

ಎರಡನೆಯ ಭೌಗೋಳಿಕ ಪ್ರದೇಶ – ಉತ್ತರ ಕರಾವಳಿಯ ತಗ್ಗುಪ್ರದೇಶ – ಈ ವಲಯದಲ್ಲಿ ಸು. 18 ಪ್ರಮುಖ ನದಿಗಳು ಹರಿಯುತ್ತವೆ. ಇವುಗಳು ಅದಕ್ಕೆ ಹೊಂದಿಕೊಂಡಿರುವ ಕಾಲುವೆಗಳು ಸದಾ ಹರಿಯುವಂತಹವು. ಉತ್ತರದ ಕರಾವಳಿ ಪ್ರದೇಶ ಸಮತಟ್ಟಾದ ಮೇಲ್ಮೈಲಕ್ಷಣವನ್ನು ಹೊಂದಿದೆ. ಈ ವಲಯ ಸದಾ ಜವುಗಿನಿಂದ ಕೂಡಿರುತ್ತದೆ. ಬಿಲೀಜ್‌ನ ಉತ್ತರ ಹಾಗೂ ಮಧ್ಯಭಾಗದಲ್ಲಿ ಹಲವಾರು ಲಗೂನ್‌ಗಳು ಕಂಡುಬರುತ್ತವೆ. ಪಶ್ಚಿಮದಿಂದ ಉತ್ತರದ ಕಡೆ ಹೋದಂತೆ ಕಣಿವೆ ಪ್ರದೇಶಗಳಲ್ಲಿ ಸಸ್ಯವರ್ಗ ಮ್ಯಾಂಗ್ರೋವ್ ವಿಧದಿಂದ ಮೊದಲುಗೊಂಡು ಉಷ್ಣವಲಯದ ಪೈನ್, ಸವನ್ನ ಮತ್ತು ಗಟ್ಟಿ ಮರದ ಅರಣ್ಯಗಳು ಇವೆ.

ಅಂತರ್ಗತಿಕ ಬೆಟ್ಟದ ಮುಂಚಾಚು ನದಿವ್ಯವಸ್ಥೆ, ಲಗೂನ್‌ಗಳು, ಸರೋವರಗಳು, ಕಂದರಗಳು, ಭೂಮೇಲ್ಮೈ ಸ್ವರೂಪದ ಮೇಲೆ ತಮ್ಮ ಪರಿಣಾಮವನ್ನು ಬೀರಿವೆ. ಬಿಲೀಜ್‌ನ 1/4 ಭೂಭಾಗದ ಮೇಲೆ ನದಿಗಳ ಪಾತ್ರ ಪರಿಣಾಮಕಾರಿಯಾಗಿವೆ. ಮಾರುತಗಳು ಬಿಲೀಜ್‌ನ ಹೃದಯ ಭಾಗದಲ್ಲಿರುವ ಮಾಯಾ ಪರ್ವತ ಶ್ರೇಣಿಯ ಕಡೆಯಿಂದ ಬಿಲೀಜಿ ಪಟ್ಟಣದವರಿಗೂ ಬೀಸುತ್ತದೆ. ಈ ವಲಯ ಹಳೇನದಿ ಪ್ರದೇಶ (ಓಲ್ಡ್ ರಿವರ್ ರೀಜನ್) ಎಂದು ಕರೆಯಲ್ಪಡುತ್ತದೆ. ಈ ನದಿ ನೌಕಾಯಾನಕ್ಕೆ ಯೋಗ್ಯವಾಗಿರುವುದರಿಂದ ಗ್ವಾಟೆಮಾಲ ತೀರದವರಿಗೂ ವಾಣಿಜ್ಯ ದೃಷ್ಟಿಯಿಂದ 20ನೆಯ ಶತಮಾನದ ಕೊನೆಯವರಿಗೂ ಉಪಯೋಗದಲ್ಲಿತ್ತು. ಸಿಬುನ್ ಮತ್ತೊಂದು ಇತಿಹಾಸ ಪ್ರಸಿದ್ಧವಾದ ನದಿ. ಇದು ಮಾಯಾ ಪರ್ವತದ ಈಶಾನ್ಯದವರಿಗೂ ಹರಿಯುತ್ತದೆ. ನ್ಯೂರಿವರ್ ಬಿಲೀಜ್‌ನ ಉತ್ತರದ ಭಾಗದವರಿಗೂ ಹರಿಯುವುದರಿಂದ ಆ ಭಾಗದಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಈ ನದಿಯು ಕಡೆಗೆ ಚೀಟುಮಾಲ್ ಕೊಲ್ಲಿಯನ್ನು ಸೇರುತ್ತದೆ. ಎರಡೂ ನದಿಗಳ ಬಯಲು ಪ್ರದೇಶಗಳು ಫಲವತ್ತಾದ ಮೆಕ್ಕಲು ಮಣ್ಣನ್ನು ಹೊಂದಿರುವುದರಿಂದ ಕೃಷಿ ಹಾಗೂ ಮಾನವನ ವಸತಿಗೆ ಪೂರಕವಾಗಿವೆ.

ವಾಯುಗುಣ: ಈ ದೇಶ ಉಷ್ಣವಲಯ ವಾಯುಗುಣವನ್ನು ಹೊಂದಿದೆ. ತೇವ ಮತ್ತು ಶುಷ್ಕ ವಾತಾವರಣ ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನತೆ ಕಂಡುಬರುತ್ತದೆ. ಸಮುದ್ರ ಮಟ್ಟದಿಂದ ಎತ್ತರವಾದ ಭೂ ಪ್ರದೇಶಗಳು, ಕರಾವಳಿ ಪ್ರದೇಶಗಳು, ಈಶಾನ್ಯ ವಾಣಿಜ್ಯ ಮಾರುತಗಳು ಕೆರಿಬಿಯನ್ ಸಮುದ್ರದ ಕಡೆಯಿಂದ ಬೀಸುತ್ತವೆ. ಕರಾವಳಿ ಪ್ರದೇಶದಲ್ಲಿ ಸರಾಸರಿ ಜನವರಿಯಲ್ಲಿ ಉಷ್ಣಾಂಶ $24^0$ಸೆ ಮತ್ತು ಜುಲೈ ತಿಂಗಳಲ್ಲಿ $27^0$ಸೆ ಕಂಡುಬರುತ್ತದೆ. ಒಳ ಆವರಣ ಪ್ರದೇಶದಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ಬಿಲೀಜ್‌ನ ದಕ್ಷಿಣದಲ್ಲಿ ಎತ್ತರವಾದ ಪ್ರಸ್ಥಭೂಮಿಯ ಮೌಂಟನ್ ಪೈನ್ ರಿಜ್ಡ್ ಪ್ರದೇಶದಲ್ಲಿ ವರ್ಷವಿಡೀ ತಂಪಾದ ಹವಾಮಾನ ಕಂಡುಬರುತ್ತದೆ. ಸರಾಸರಿ ಮಳೆಯ ಪ್ರಮಾಣ 135 ಸೆಂಮೀ ಗಳಷ್ಟು. ಉತ್ತರ ಭಾಗದಲ್ಲಿ ಮಳೆಯ ಪ್ರಮಾಣ 450 ಸೆಂಮೀ ಒಣ ಹವಾಮಾನದ ಅವಧಿಯು ಅಲ್ಪಕಾಲದವರೆಗೆ ಫೆಬ್ರವರಿಯಿಂದ ಮುಂದುವರಿದು ಏಪ್ರಿಲ್‌ನಲ್ಲಿ ಅಂತ್ಯಗೊಳ್ಳುತ್ತದೆ. ಮಳೆಗಾಲ ಅಲ್ಪಕಾಲವಾದುದರಿಂದ ಸ್ಥಳೀಯವಾಗಿ ಲಿಟಲ್ ಡ್ರಯ ಎಂದು ಕರೆಯುತ್ತಾರೆ. ಈ ದೇಶದ ವಾಯುಗುಣದ ಮೇಲೆ ಚಂಡಮಾರುತಗಳ ಪ್ರಭಾವ ಮತ್ತು ದಾಳಿಯನ್ನು ಮರೆಯಲು ಅಸಾಧ್ಯ. 1931 ರಲ್ಲಿ ಬೀಸಿದ ಚಂಡಮಾರುತ ಬಿಲೀಜ್ ನಗರದ 2/3 ರಷ್ಟು ಕಟ್ಟಡಗಳನ್ನು ನಾಶಪಡಿಸಿತು ಹಾಗೂ 1000 ಜನ ನಾಗರಿಕರು ನಿಧನಗೊಂಡರು. 1955 ರಲ್ಲಿ ಜಾನೆಟ್ ಎಂಬ ಚಂಡಮಾರುತ ಉತ್ತರ ಬಿಲೀಜ್‌ನ ಕೂರೋಜಾಲ್ ನಗರವನ್ನು ಸಂಪೂರ್ಣ ನಾಶಪಡಿಸಿತು. 1961ರಲ್ಲಿ ಹಟ್ಟೆ ಚಂಡಮಾರುತ ಬಿಲೀಜ್‌ನ ಮಧ್ಯ ಕರಾವಳಿಯನ್ನು ಧ್ವಂಸಗೊಳಿಸಿತ್ತು – ಗಾಳಿಯ ವೇಗ ಗಂಟೆಗೆ 300 ಕಿಮೀ ಗಳು ಹಾಗೂ 4 ಮೀ ಎತ್ತರದ ಅಲೆಗಳನ್ನು ಸೃಷ್ಟಿಸಿತ್ತು. ಕೇವಲ 30 ವರ್ಷಗಳ ಅವಧಿಯಲ್ಲಿ ಬಿಲೀಜ್ ನಗರ ಎರಡು ಭಾರಿ ಚಂಡಮಾರುತಗಳಿಂದ ಧ್ವಂಸವಾಗಿತ್ತು. ಈ ಕಾರಣದಿಂದ ಬಿಲೀಜ್ ನಗರದಿಂದ 8 ಕಿಮೀ ದೂರದಲ್ಲಿರುವ ಬೆಲ್‌ಮೋಪಾನ್ ಎಂಬ ಯೋಜಿತ ನಗರಕ್ಕೆ ರಾಜಧಾನಿಯನ್ನು ವರ್ಗಾಯಿಸಲಾಯಿತು. 1978ರಲ್ಲಿ ಗ್ರೀವ ಎಂಬ ಚಂಡಮಾರತ ಬಿಲೀಜ್ ಅನ್ನು ಅಪ್ಪಳಿಸಿದ್ದರ ಪರಿಣಾಮ ಸು. 25 ಮಿಲಿಯನ್ ಯು.ಎಸ್. ಡಾಲರ್ ಮೊತ್ತದ ಹಾನಿ ಸಂಭವಿಸಿತು.

ಭೂ ರಚನೆ: ಬಿಲೀಜ್‌ನ ಭೂಗರ್ಭ ಸ್ವರೂಪ ವೈವಿಧ್ಯಮಯ ಸುಣ್ಣದಕಲ್ಲಿನ ನಿಕ್ಷೇಪಗಳಿಂದ ಕೂಡಿದ್ದಾಗಿದೆ. ಅಂತರ್ಗತಶಿಲೆಗಳು, ಗ್ರಾನೈಟ್ ಮತ್ತು ಕಣಶಿಲೆಗಳು ಪೇಲಿಯೋ ಶಿಲಾಯುಗದ ಅವಶೇಷಗಳೆಂದು ತಿಳಿದುಬಂದಿದೆ.

ಸ್ತರ ಭಂಗಗಳಿಂದ ಕೂಡಿರುವ ಉನ್ನತವಾದ ಭಾಗಗಳು ನದಿಗಳ ಉಗಮಕ್ಕೆ ದಾರಿಯಾಗಿವೆ. ಬಿಲೀಜ್ ಭೂ ಕಂಪನ ಸೂಕ್ಷ್ಮವಲಯದಿಂದ ಪ್ರತ್ಯೇಕಿತವಾಗಿದೆ. ಬಿಲೀಜ್‌ನ ಪೂರ್ವಭಾಗದ ಇಂದಿನ ಮಾಯಾ ಪರ್ವತ ಶ್ರೇಣಿ ಕ್ರೆಟೇಷಿಯಸ್ ಯುಗದಲ್ಲಿ ಮೌಂಟನ್ ಪೈನ್ ರಿಜ್ಡ್ ಪ್ಲೇಟ್ ಆಗಿತ್ತು ಎಂದು ತಿಳಿದುಬರುತ್ತದೆ. ಹೀಗಾಗಿ ಮಾಯಾ ಪರ್ವತ ಶ್ರೇಣಿ ಮಧ್ಯ ಅಮೆರಿಕದ ಅತ್ಯಂತ ಪುರಾತನ ಭೂಭಾಗ ಎಂದು ತಿಳಿದುಬರುತ್ತದೆ. ಬಿಲೀಜ್‌ನ ಉತ್ತರಭಾಗಕ್ಕೂ ಅರ್ಧದಷ್ಟು ಸಮತಟ್ಟಾದ ಪ್ರದೇಶವನ್ನು ಹೊಂದಿದೆ. ಇದನ್ನು ಯಾಕ್‌ಲೆನ್ ಪ್ಲಾಲ್ ಫ್ಹಾರಂ ಎಂದು ಕರೆಯುತ್ತಾರೆ. ಈ ವಲಯದ ಭೂ ಅಂತರಾಳದ ಭಾಗ ಗಟ್ಟಿಯಾಗಿಯೂ ಮೇಲ್ಮೈ ಸಮತಟ್ಟಾಗಿದ್ದರು ಅಲ್ಲಲ್ಲಿ ಉಬ್ಬಿರುವ ಮೇಲ್ಮೈ ಬೆಟ್ಟಗಳನ್ನು ಕಾಣಬಹುದು. ಸುಣ್ಣದಕಲ್ಲಿನ ಅಂತರ್ಗತಿತ ಶಿಲೆಗಳನ್ನು ಒಳಗೊಂಡ ಯಾಲ್‌ಬ್ಯಾಕ್ ಬೆಟ್ಟಗಳು, ಗ್ವಾಟೆಮಾಲದ ಪಶ್ಚಿಮದ ಗಡಿಭಾಗಗಳು ಹಾಗೂ ಮಾನಟೀ ಬೆಟ್ಟಗಳು ಬಿಲೀಜ್ ದೇಶದ ನದಿ ವ್ಯವಸ್ಥೆಯನ್ನು ಮತ್ತು ಅವುಗಳ ಎಲ್ಲೆಗಳನ್ನು ಸೂಚಿಸುತ್ತವೆ. ಕರಾವಳಿಯ ಉದ್ದಕ್ಕೂ ಮೆಕ್ಕಲು ಮಣ್ಣಿನ ಸಂಗ್ರಹಣೆಯಿರುವುದರಿಂದ ಈ ಪ್ರದೇಶ ಸಮತಟ್ಟಾದ ಭೂಭಾಗವಾಗಿದೆ.

ಸ್ವಾಭಾವಿಕ ಸಂಪನ್ಮೂಲಗಳು : ಈ ದೇಶದಲ್ಲಿ ಖನಿಜ ಸಂಪತ್ತು ಹೇರಳವಾಗಿದ್ದರೂ ಯಾವುದೇ ನಿಕ್ಷೇಪದ ಪ್ರಮಾಣವೂ ಅಧಿಕವಾಗಿಲ್ಲ ಡೋಲೋಮೈಟ್, ಬಾಕ್ಸೈಟ್, ಬ್ಯಾರೈಟ್, ತವರ ಮತ್ತು ಚಿನ್ನದ ನಿಕ್ಷೇಪಗಳು ಕಂಡುಬರುತ್ತದೆ.

ಈ ದೇಶದ ಭೂ ಅಂತರಾಳ ಮೆಕ್ಸಿಕೊ ಹಾಗೂ ಗ್ವಾಟೆಮಾಲ ಮಾದರಿಯನ್ನೇ ಹೊಂದಿರುವುದರಿಂದ ಸಾಗರಿಕ ಮತ್ತು ಖಂಡಾಂತರ ಪ್ರದೇಶಗಳಲ್ಲಿ ತೈಲ ನಿಕ್ಷೇಪಗಳು ಅಧಿಕ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ತೈಲ ಕಂಪನಿಗಳು 1980ರ ವರೆಗೂ ತೈಲವನ್ನು ತೆಗೆಯುವ ಕಾರ್ಯದಲ್ಲಿ ನಿರತವಾಗಿದ್ದವು. ಇತ್ತೀಚಿಗೆ ಅಲ್ಪಪ್ರಮಾಣದಲ್ಲಿ ತೈಲೋತ್ಪತ್ತಿಯಾಗುತ್ತಿರುವುದರಿಂದ ಬಿಲೀಜ್ ಆಮದು ಮಾಡಿಕೊಳ್ಳುತ್ತಿದೆ. ಬಿಲೀಜ್ ಸೌರ ಶಕ್ತಿ, ಜೈವಿಕ ಅನಿಲ, ಜಲವಿದ್ಯುಚ್ಛಕ್ತಿ ಮೂಲಗಳನ್ನು ಹೊಂದಿದೆ.

ಅರ್ಥವ್ಯವಸ್ಥೆ: ಕೃಷಿಯಿಂದ ಒಟ್ಟು ಆರ್ಥಿಕ ಮೌಲ್ಯದ ಶೇ. 15 ರಷ್ಟು ಜಿ.ಡಿ.ಪಿ.ಯನ್ನು ಈ ದೇಶ ಹೊಂದಿದೆ. ಪ್ರಮುಖ ಬೆಳೆಗಳು ಕಬ್ಬು, ಹಣ್ಣು (ಹುಳಿ ಹಣ್ಣುಗಳು) ಹಾಗೂ ಬಾಳೆ.

ಬಿಲೀಜ್ ಕೈಗಾರಿಕಾ ವಲಯದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿಲ್ಲ. ಸಕ್ಕರೆ ಕಾರ್ಖಾನೆಗಳು ಮತ್ತು ಜವಳಿ ಉದ್ದಿಮೆಯಲ್ಲಿ ಸ್ವಲ್ಪ ಮಟ್ಟಿಗೆ ಅಭಿವೃದ್ಧಿಯನ್ನು ಕಂಡಿವೆ. ರಾಷ್ಟ್ರದ ಶೇ. 12 ರಷ್ಟು ಆದಾಯ ಈ ಉದ್ದಿಮೆಗಳು ನೀಡುತ್ತಿವೆ.

ಸಮಾಜ: ಜನಸಂಖ್ಯೆ 2002 ರ ಜನಗಣತಿಯ ಪ್ರಕಾರ 2,51,000. ವಾರ್ಷಿಕ ಜನ ಸಂಖ್ಯೆ ಹೆಚ್ಚಳ ಪ್ರಮಾಣ ಶೇ. 3.0.

ಸಾಕ್ಷರತೆ ಮತ್ತು ವಿದ್ಯಾಭ್ಯಾಸ: ಸರ್ಕಾರಿ ಮೂಲಗಳ ಪ್ರಕಾರ ಬಿಲೀಜ್‌ನ ಸಾಕ್ಷರತೆಯ ಪ್ರಮಾಣ ಶೇ. 92 ಎಂದು ತಿಳಿದುಬರುತ್ತದೆ. ಸಾಮಾನ್ಯ ಶಿಕ್ಷಣವನ್ನು ಕ್ರೈಸ್ತ ಸಂಸ್ಥೆಗಳು ಹಾಗೂ ಸರ್ಕಾರದ ಸಹಯೋಗದೊಂದಿಗೆ ನಡೆಸಲಾಗುತ್ತದೆ. ಕಡ್ಡಾಯ ಶಿಕ್ಷಣವನ್ನು 5 ವರ್ಷದಿಂದ 14 ವರ್ಷ ವಯೋಮಾನದವರಿಗೆ (ಪ್ರಾಥಮಿಕ) ನೀಡಲಾಗುತ್ತದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಂಶಗಳಿಗನುಗುಣವಾಗಿ ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ನೀಡಲಾಗುತ್ತದೆ. ಈ ರಾಷ್ಟ್ರ ಒಂದು ವಿಶ್ವವಿದ್ಯಾಲಯ ಹಾಗೂ ಒಂದು ಪದವಿ ಕಾಲೇಜನ್ನು ಹೊಂದಿದೆ.

ವರ್ಣಗುಂಪುಗಳು: ಶೇ. 40 ರಷ್ಟು ಜನ ಕ್ರಿಯೊಲ್ ವರ್ಗದ ಆಫ್ರಿಕ ಮೂಲದವರು, ಶೇ. 33 ರಷ್ಟು ಮೆಸ್ಟಿಜೂ, ಹಿಸ್ಪಾನಿಕ್ ಜನ, ಶೇ. 10 ರಷ್ಟು, ಮಾಯನ್ನರು ಶೇ. 7 ರಷ್ಟು ಗ್ಯಾರಿಫುನ ಆಫ್ರೊ–ಕರಿಬ್ ಮೂಲದವರು. ಅಲ್ಪ ಪ್ರಮಾಣದ ಈಸ್ಟ್–ಇಂಡೀಸ್, ಚೈನೀಸ್, ಅರಬ್ ಮತ್ತು ಯುರೋಪಿಯನ್ ಜನ ಮುಖ್ಯವಾಹಿನಿಯಲ್ಲಿ ಕಂಡುಬರುತ್ತಾರೆ. 1980ರ ದಶಕದಲ್ಲಿ ವಲಸಿಗರು ಹೆಚ್ಚಾಗಿ ಬಿಲೀಜ್ ಬಂದಕಾರಣ ಈ ರಾಷ್ಟ್ರದಲ್ಲಿ ವರ್ಣಗುಂಪುಗಳು ಕಾಣಿಸಿಕೊಂಡವು.

ಭಾಷೆ : ಇಂಗ್ಲಿಷ್ ಸಾಮಾನ್ಯ ಭಾಷೆ ಹಾಗೆಯೇ ಬಿಲೀಜಿಯನ್ – ಕ್ರಿಯೋಲ್ ಸಾಮಾನ್ಯ ಭಾಷೆಯ ಸ್ಥಾನಮಾನವನ್ನು ಹೊಂದಿದೆ. ಬಿಲೀಜ್ ನಗರದ ಹೊರಭಾಗದ ಜನ ಸ್ಪಾನಿಷ್ ಭಾಷೆಯನ್ನು ಮಾತನಾಡುತ್ತಾರೆ. ಇತರೆ ಚಾಲ್ತಿಯಲ್ಲಿರುವ ಭಾಷೆಗಳೆಂದರೆ ಗ್ಯಾರಿಫುನ್ನ ಮತ್ತು ಲೊಜರ್ಮನ್.

ಧರ್ಮ: ರೋಮನ್ ಕೆಥೊಲಿಕ್ ಪ್ರಮುಖ ಧರ್ಮ. ಅಲ್ಪ ಪ್ರಮಾಣದ ಪ್ರಾಟೆಸ್ಟಂಟ್‌ರು, ಆಂಗ್ಲಿಕನ್ನರು ಮತ್ತು ಮೆಥೊಡಿಸ್ಟ್‌ಗಳು ಬೆಲೀಜ್‌ನಗರವಾಸಿಗಳು. ಇವ್ಯಾಂಜಿಲಿಕಲ್ ಪ್ರಾಟೆಸ್ಟಂಟ್ ಮತ್ತು ಪ್ರವಾದಿಗಳು ಹೆಚ್ಚಾಗಿ ಗ್ರಾಮೀಣವಾಸಿಗಳು.

ಸಾರಿಗೆ ಮತ್ತು ಸಂಪರ್ಕ: ಬಿಲೀಜ್ 2700 ಕಿಮೀ ವ್ಯಾಪ್ತಿಯ ರಸ್ತೆಗಳನ್ನು ಹೊಂದಿದೆ. 500 ಕಿಮೀ ಉತ್ತಮ ಡಾಂಬರು ರಸ್ತೆ, 1600 ಕಿಮೀ ಉದ್ದದ ಜಲ್ಲಿ ಕಲ್ಲು ರಸ್ತೆ ಮತ್ತು ಉಳಿದದ್ದು ಮಣ್ಣಿನ ರಸ್ತೆಗಳು. ಸು. 800 ಕಿಮೀ ವ್ಯಾಪ್ತಿಯ ಆಂತರಿಕ ನೌಕಾಯಾನಕ್ಕೆ ಯೋಗ್ಯವಾದ ನದಿ ವ್ಯವಸ್ಥೆಯಿದೆ. ಬಿಲೀಜ್ ಬಂದರು ನಗರ ಹಾಗೂ ಬೃಹತ್ ಹಡಗುಗಳ ಯಾನಕ್ಕೆ ಯೋಗ್ಯವಾಗಿದೆ. ಬಿಲೀಜ್ – ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಹೊಂದಿದೆ. ಇದನ್ನು ಫ಼ಿಲಿಪ್ ಗೋಲ್ಡ್‌ಸ್ಟ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರಿಸಲಾಗಿದೆ ಹಾಗೂ ಆಂತರಿಕ ವಿಮಾನ ಯಾನವನ್ನೂ ಸಹ ಪೂರೈಸುತ್ತದೆ. (ವಿ.ಎಸ್.ಎ.)

**ಬಿಹಾರ:** ಭಾರತದ ಒಂದು ರಾಜ್ಯ. ಭಾರತದ ಉತ್ತರದಲ್ಲಿರುವ ಈ ರಾಜ್ಯವನ್ನು ದಕ್ಷಿಣದಲ್ಲಿ ಜಾರ್ಖಂಡ್, ಪೂರ್ವದಲ್ಲಿ ಪಶ್ಚಿಮ ಬಂಗಾಲ, ಪಶ್ಚಿಮದಲ್ಲಿ ಉತ್ತರ ಪ್ರದೇಶ ರಾಜ್ಯಗಳೂ ಉತ್ತರದಲ್ಲಿ ನೇಪಾಲ ದೇಶವೂ ಸುತ್ತುವರಿದಿವೆ. ಉ.ಅ. $24^0$–$26^0$ ಪೂ.ರೇ. $83^0$–$89^0$ ಗಳ ನಡುವೆ ಹಬ್ಬಿದೆ. ಈ ರಾಜ್ಯದ ವಿಸ್ತೀರ್ಣ 94163 ಚ.ಕಿಮೀ. ಜನಸಂಖ್ಯೆ 8,28,78,796. ರಾಜಧಾನಿ ಪಟ್ಟಣ (ಪಾಟ್ನ). ಜನಸಂಖ್ಯೆ 1,707,429.

ಮೇಲ್ಮೈ ಲಕ್ಷಣ: ಬಿಹಾರ ರಾಜ್ಯದ ಉತ್ತರಭಾಗ ಗಂಗಾನದಿ ಬಯಲಿನಿಂದ ಕೂಡಿದೆ. ಮೇಲಿನ ಗಂಗಾನದಿ ಬಯಲು ಮಧ್ಯ ಗಂಗಾನದಿ ಬಯಲಿನ ಒಂದು ಭಾಗ. ಅದನ್ನು ಗಂಗಾನದಿ ಉತ್ತರ ಮತ್ತು ದಕ್ಷಿಣ ಬಯಲು ಪ್ರದೇಶವೆಂದು ವಿಂಗಡಿಸಿದೆ. ರಾಜ್ಯದ ವಾಯವ್ಯ ಪ್ರದೇಶ ಹಿಮಾಲಯ ಪರ್ವತ ಪಾದ ಪ್ರದೇಶದ ಇಳಿಜಾರು ಭೂಮಿಯಿಂದ ಕೂಡಿದೆ. ಇದನ್ನು ಬಿಟ್ಟು ಉಳಿದ ಗಂಗಾನದಿಯ ಉತ್ತರ ಬಯಲು ಸಮುದ್ರ ಮಟ್ಟಕ್ಕೆ 75 ಮೀ ಎತ್ತರದಲ್ಲಿದ್ದು ನೆರೆಗೆ ಒಳಗಾಗುವುದಲ್ಲದೆ ಆ ಪ್ರದೇಶವೆಲ್ಲ ಮೆಕ್ಕಲು ಮಣ್ಣಿನಿಂದ ಕೂಡಿದೆ. ಘಾಗ್ರ, ಗಂಡಕ್, ಭಾಗಮತಿ, ಕೋಸಿ, ಮಹಾನಂದ ಮತ್ತು ಇತರ ನದಿಗಳು ಹಿಮಾಲಯ ಮತ್ತು ನೇಪಾಲಗಳಿಂದ ಹರಿದುಬಂದು ಗಂಗಾನದಿಯನ್ನು ಕೂಡಿಕೊಳ್ಳುತ್ತವೆ. ಇವು ಕೆಲವೊಮ್ಮೆ ತಮ್ಮ ಪ್ರವಾಹದ ಮಾರ್ಗ ಬದಲಾಯಿಸುವುದುಂಟು. ಇದರಿಂದ ಅಲ್ಲಲ್ಲೆ ಸಣ್ಣ ಹಳ್ಳಕಂದಕಗಳೂ ಸರೋವರಗಳೂ ಉಂಟಾಗುತ್ತವೆ. ಈ ಪ್ರದೇಶ ನಯವಾದ ಮೆಕ್ಕಲು ಮಣ್ಣಿನಿಂದ ಕೂಡಿರುತ್ತದೆ. ದಕ್ಷಿಣ ಗಂಗಾನದಿಯ ಬಯಲು ಹೆಚ್ಚು ವೈವಿಧ್ಯಮಯವಾದದ್ದು. ಇಲ್ಲಿ ಅನೇಕ ಬೆಟ್ಟಗುಡ್ಡಗಳಿವೆ. ಸೋನ್ ನದಿ ಬಿಟ್ಟರೆ ಉಳಿದೆಲ್ಲ ಚಿಕ್ಕ ಪುಟ್ಟ ನದಿಗಳು. ಈ ನದಿಗಳ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ. ಬಿಹಾರದ ವಾಯವ್ಯದಲ್ಲಿ ಸೋನ್ ನದಿ ಕಣಿವೆಯ ಆಚೆ ಕೈಮುರ್ ಪ್ರಸ್ಥಭೂಮಿ ಇದೆ. ಇಲ್ಲಿಯ ಪ್ರಸ್ಥಭೂಮಿಯಲ್ಲಿ ಕೆಂಪು ಮಣ್ಣು, ಗುಡ್ಡ ಪ್ರದೇಶಗಳಲ್ಲಿ ಜಂಬುಮಣ್ಣು ಇವೆ.

ಗಂಗಾ ಬಿಹಾರದ ಪ್ರಮುಖ ನದಿ. ರಾಜ್ಯದ ಉತ್ತರದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಬಿಹಾರವನ್ನು ಉತ್ತರ–ದಕ್ಷಿಣವೆಂದು ವಿಂಗಡಿಸಿ ಈ ನದಿ ಹರಿಯುತ್ತದೆ. ಗಂಡಕಿ, ಬೂರಿ ಗಂಡಕಿ, ಕೋಸಿ, ಕಮಲ, ಮಹಾನಂದ ಮತ್ತು ಭಾಗಮತಿ ನದಿಗಳು ಬಿಹಾರದ ಉತ್ತರದ ನದಿಗಳು. ಇವು ನೇಪಾಳದಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿದು ಬಿಹಾರದಲ್ಲಿ ಗಂಗಾನದಿಯನ್ನು ಕೂಡಿಕೊಳ್ಳುತ್ತವೆ. ದಕ್ಷಿಣದ ನದಿಗಳಲ್ಲಿ ದಾಮೋದರ, ಅಜಯ್, ಬರಕಾರ್ ಇವು ಪೂರ್ವಾಭಿಮುಖವಾಗಿ ಹರಿದು ಪಶ್ಚಿಮ ಬಂಗಾಲವನ್ನು ಸೇರುತ್ತವೆ. ಮೋಹನ, ಸೋನ್, ಕೋಯಿಲ್, ಬಾಂದುವ, ಚಂದನ್, ಪೂನ್‌ಪೂನ್ ಈ ನದಿಗಳು ಉತ್ತರಾಭಿಮುಖವಾಗಿ ಹರಿದು ಗಂಗಾನದಿಯನ್ನು ಕೂಡಿಕೊಳ್ಳುತ್ತವೆ. ಕೋಸಿನದಿ ನೇಪಾಲದಲ್ಲಿ ಹುಟ್ಟಿ ಬಿಹಾರದ ಭಾಗಲ್ಪುರ ಜಿಲ್ಲೆಯಲ್ಲಿ ಪ್ರವೇಶಿಸಿ ಗೌರಿ ನದಿಯನ್ನು ಕೂಡಿಕೊಂಡು ಪೂರ್ಣಿಯ ಜಿಲ್ಲೆಯಲ್ಲಿ ಗಂಗಾನದಿಯನ್ನು ಸೇರುತ್ತದೆ. ಕೋಸಿ ಅತಿ ಚಂಚಲ ನದಿ. ರಭಸದಿಂದ ಹರಿಯುತ್ತ ಆಗಾಗ್ಗೆ ತನ್ನ ಪಾತ್ರ ಬದಲಾಯಿಸುತ್ತಿರುತ್ತದೆ. ಕಟೀಹಾರ್ ಬಳಿ ಈ ನದಿಗೆ ರೈಲ್ವೆ ಸೇತುವೆ ನಿರ್ಮಿಸಲಾಗಿದೆ. ಬಿಹಾರದ ದುಃಖನದಿ ಎಂದು ಹೆಸರಾದ ಕೋಸಿಯ ಪ್ರವಾಹ ನಿಯಂತ್ರಣ ಮತ್ತು ವಿವಿಧೋದ್ದೇಶ ಯೋಜನೆಯೊಂದು ಕಾರ್ಯಗತವಾಗಿ ಅನೇಕ ಅಭಿವೃದ್ಧಿ ಕಾರ್ಯ ನಡೆದಿದೆ. ಗಂಡಕಿ ನೇಪಾಲದ ಹಿಮಾಲಯ ಪರ್ವತ ಭಾಗದಲ್ಲಿ ಹುಟ್ಟಿ ಬಿಹಾರದ ಚಂಪಾರಣ್, ಸಾರನ್ ಮತ್ತು ಮುಜಫರ್‌ಪುರ ಜಿಲ್ಲೆಗಳಲ್ಲಿ ಹರಿದು ಪಟ್ನಾದ ಬಳಿ ಗಂಗಾನದಿಯನ್ನು ಸೇರಿಕೊಳ್ಳುತ್ತದೆ. ಕೋಸಿ, ಗಂಡಕಿ, ಸೋನ್, ಬಾಂದುವ, ಚಂದನ್, ಉತ್ತರ ಕೋಯಿಲ್ ಮತ್ತು ಭಾಗಮತಿ ನದಿಗಳನ್ನು ಅವಲಂಬಿಸಿ ಮುಖ್ಯ ನೀರಾವರಿ ಯೋಜನೆ ರೂಪಿಸಲಾಗಿದೆ. ಬಾಂದುವ ಮತ್ತು ಚಂದನ್ ಯೋಜನೆಯ ಕಾರ್ಯ ಮುಗಿದಿದೆ. ಅನೇಕ ಪ್ರವಾಹ ನಿಯಂತ್ರಣ ಕಾರ್ಯಗಳನ್ನು ಯೋಜನೆಯಲ್ಲಿ ಕೈಗೊಳ್ಳಲಾಗಿದೆ. ದಾಮೋದರ ವಿವಿಧೋದ್ದೇಶ ನದಿ ಕಣಿವೆ ಯೋಜನೆ ಬಿಹಾರದ ಒಂದು ಮಹತ್ವಪೂರ್ಣ ಯೋಜನೆ. ಇದು ಬಿಹಾರ ಮತ್ತು ಪಶ್ಚಿಮ ಬಂಗಾಲ ಎರಡೂ ರಾಜ್ಯಗಳ ನೀರಾವರಿ, ವಿದ್ಯುತ್ ಮತ್ತು ಪ್ರವಾಹ ನಿಯಂತ್ರಣ ಯೋಜನೆಯನ್ನು ಒಳಗೊಂಡಿದ್ದು, ಪತ್ರಾತು, ಬರೌನಿ, ಥರ್ಮಲ್ ವಿದ್ಯುತ್ ಯೋಜನೆ, ಸುಬರ್ಣರೇಖಾ, ಕೋಸಿನದಿ ಜಲ



ವಿದ್ಯುತ್ ಯೋಜನೆ, ಬಿಹಾರ ರಾಜ್ಯ ವಿದ್ಯುತ್ ಮಂಡಳಿಗೆ ಸೇರಿದೆ. ಬೊಕಾರೋ, ಚಂದ್ರಪುರ ಶಾಖ ವಿದ್ಯುತ್ ಕೇಂದ್ರಗಳು ಮತ್ತು ತಿಲ್ಯೆಯ ಮೈತಾನ್ ಮತ್ತು ಪಂಚೆಟ್‌ಹಿಲ್ ಜಲ ವಿದ್ಯುತ್ ಕೇಂದ್ರಗಳು ದಾಮೋದರ ಕಣಿವೆ ಸಂಸ್ಥೆಗೆ ಸೇರಿವೆ.

ವಾಯುಗುಣ: ಬಿಹಾರ ರಾಜ್ಯದ ವಾಯುಗುಣವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮಾರ್ಚ್‌ನಿಂದ ಜೂನ್ ಮಧ್ಯದ ತನಕ ಬೇಸಗೆಕಾಲ. ಮಧ್ಯ ಜೂನ್‌ನಿಂದ ಅಕ್ಟೋಬರ್ ತನಕ ಮಳೆಗಾಲ. ನವೆಂಬರ್‌ನಿಂದ ಫೆಬ್ರವರಿ ತನಕ ಚಳಿಗಾಲ. ಮೇ ಅತ್ಯಂತ ಹೆಚ್ಚು ಉಷ್ಣತೆಯ ಕಾಲ. ಜೂನ್ ನಿಂದ ಅಕ್ಟೋಬರ್ ಮಧ್ಯದ ತನಕ ಹೆಚ್ಚು ಮಳೆಯಾಗುತ್ತದೆ. ಉಳಿದ ಕಡೆ ಸಾಮಾನ್ಯವಾಗಿ 101.5 ಸೆಂಮೀ ಮಳೆ ಬೀಳುತ್ತದೆ. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 0.85 ಭಾಗ ಅರಣ್ಯಗಳಿಂದ ಕೂಡಿದೆ. ಒಟ್ಟು 5720 ಚ.ಕಿಮೀ ಇರುವ ಕಾಡು ಪ್ರದೇಶ ಹೆಚ್ಚಾಗಿ ಹಿಮಾಲಯ ತಪ್ಪಲು ಪ್ರದೇಶ ಮತ್ತು ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶಗಳಲ್ಲಿದೆ. ಈ ಕಾಡುಗಳಲ್ಲಿ ಸಾಲವೃಕ್ಷ, ಬೊಂಬು, ಹುಲ್ಲು ಮತ್ತು ಜೊಂಡು ಹೆಚ್ಚಾಗಿ ಬೆಳೆಯುತ್ತದೆ. ಇವಲ್ಲದೆ ಅರಗಿನ ಮರ, ತಾಳೆಜಾತಿಯ ಮರ ಹಾಗೂ ಆಲ, ಅರಳಿ ಮುಂತಾದ ಮರಗಳು ಕೂಡ ಬೆಳೆಯುತ್ತವೆ. ದಟ್ಟಕಾಡುಗಳಲ್ಲಿ ಹುಲಿ, ಚಿರತೆ, ಕರಡಿ, ಆನೆ ಮುಂತಾದ ಪ್ರಾಣಿಗಳ ಜೊತೆಗೆ ಇತರ ಕಾಡು ಪ್ರಾಣಿಗಳನ್ನೂ ಕಾಣಬಹುದು. ಬೆಲೆ ಬಾಳುವ ಮರ, ಅರಗು, ಬೊಂಬು, ಅಂಟು ಮುಂತಾದ ಅರಣ್ಯೋತ್ಪಾದನೆಗಳಿಂದ ರಾಜ್ಯಕ್ಕೆ ಆದಾಯವುಂಟು.

ಕೃಷಿ: ಬಿಹಾರ ರಾಜ್ಯ ಕೃಷಿ ಅವಲಂಬಿತವಾದದ್ದು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 82 ಭಾಗ ಕೃಷಿ ಆಧಾರಿತರು. ರಾಜ್ಯದ 10,383,000 ಹೆ. ಜಮೀನಿನಲ್ಲಿ ಬೇಸಾಯ ನಡೆಯುತ್ತಿದೆ. ಅದರಲ್ಲಿ 2,688,000 ಹೆ. ಮಾತ್ರ ನೀರಾವರಿ ಸೌಕರ್ಯ ದೊರೆತಿದೆ. ಈ ರಾಜ್ಯದ ಮುಖ್ಯ ಬೆಳೆ ಬತ್ತ. ಇತರ ಬೆಳೆಗಳೆಂದರೆ, ಗೋದಿ, ಜೋಳ, ಗೋವಿನ ಜೋಳ, ಸಜ್ಜೆ, ರಾಗಿ, ದ್ವಿದಳ ಧಾನ್ಯಗಳು, ಬಾರ್ಲಿ, ಅವರೆ ಜಾತಿಯ ಕಾಳುಗಳು, ಕಬ್ಬು, ಹತ್ತಿ, ಆಲೂಗೆಡ್ಡೆ, ಸೆಣಬು, ನೆಲಗಡಲೆ, ಹೊಗೆಸೊಪ್ಪು, ಔಡಲ ಮುಂತಾದವುನ್ನೂ ಬೆಳೆಸುವರು.

ಕೈಗಾರಿಕೆ: ಬಿಹಾರದಲ್ಲಿ ವಿಪುಲವಾಗಿ ದೊರೆಯುವ ವಿವಿಧ ಖನಿಜಗಳಿಂದ ಅಲ್ಲಿ ಅನೇಕ ದೊಡ್ಡ ಪ್ರಮಾಣ ಕೈಗಾರಿಕೆಗಳು ಬೆಳೆದಿವೆ. ಮುಖ್ಯವಾಗಿ ತಾಮ್ರ, ಅಭ್ರಕ, ಚೀನಿಮಣ್ಣು, ಕಲ್ಲಿದ್ದಲು, ಕಬ್ಬಿಣ, ಮ್ಯಾಂಗನೀಸ್, ಸುಣ್ಣಕಲ್ಲು, ಗ್ರಾಫೈಟ್, ಕ್ರೋಮೈಟ್, ಕಲ್ನಾರು, ಡಾಲೊಮೈಟ್, ಸ್ಫಟಿಕ ಶಿಲೆ, ಗಾಜುಮರಳು, ಅಪಟೈಟ್, ಕಯನೈಟ್ ಮತ್ತು ವಿಕಿರಣ ಪಟು ಖನಿಜಗಳು ಇಲ್ಲಿ ದೊರೆಯುತ್ತವೆ. ಈ ರಾಜ್ಯದಲ್ಲಿ ಗಾಜಿನ ಕಾರ್ಖಾನೆಗಳು, ರಾಸಾಯನಿಕ ಗೊಬ್ಬರ ಕಾರ್ಖಾನೆಗಳು, ಸೆಣಬಿನ ಗಿರಣಿಗಳು, ಕಲ್ಲಿದ್ದಲು ಸಂಸ್ಕರಣ ಕಾರ್ಖಾನೆಗಳು, ಸಕ್ಕರೆ ಕಾರ್ಖಾನೆಗಳು, ರೇಷ್ಮೆ ಕಾರ್ಖಾನೆಗಳು, ಶೀತಸಂಗ್ರಹಾಲಯಗಳು ಮತ್ತು ಕಾಗದ ಕಾರ್ಖಾನೆಗಳು ಇವೆ. ತೈಲಶುದ್ಧೀಕರಣ, ತಾಮ್ರ ಸಂಸ್ಕರಣ, ಸೀಸ ಶುದ್ಧೀಕರಣ, ರೈಲು ಎಂಜಿನ್‌ಗಳ ನಿರ್ಮಾಣ, ತಂಬಾಕು, ಸ್ಫೋಟಕ ವಸ್ತುಗಳ ತಯಾರಿಕೆಯುಂಟು. ಗೋಮಿಯಾದಲ್ಲಿರುವ ಸ್ಫೋಟಕ ವಸ್ತುಗಳ ಕಾರ್ಖಾನೆ ಮತ್ತು ಬೇರೆ ಬೇರೆ ಸ್ಥಳಗಳಲ್ಲಿರುವ ಸಿಮೆಂಟ್ ಕಾರ್ಖಾನೆಗಳು, ಬರೌನಿ ತೈಲಶುದ್ಧೀಕರಣ ಕಾರ್ಖಾನೆ, ಮುರಿಯ ಅಲ್ಯೂಮಿನಿಯಂ ಕಾರ್ಖಾನೆ, ದಾಲ್ಮಿಯ ನಗರದಲ್ಲಿರುವ ಕಾಗದದ ಕಾರ್ಖಾನೆ, ಘಾಟ್‌ಸಿಲದ ಹಿಂದುಸ್ಥಾನ್ ತಾಮ್ರ ಸಂಸ್ಥೆ ಮುಂತಾದ ಮಹತ್ತ್ವದ ಉದ್ಯಮಗಳಿದ್ದು ಈ ರಾಜ್ಯದ ಜನರಿಗೆ ವಿಪುಲವಾದ ಉದ್ಯೋಗಾವಕಾಶ ಒದಗಿಸುವುದರ ಜೊತೆಗೆ ರಾಜ್ಯದ ಆರ್ಥಿಕ ಪ್ರಗತಿಗೂ ಸಹಾಯಕವಾಗಿವೆ. ಬಿಹಾರ ರಾಜ್ಯದ ಕೈಗಾರಿಕಾಭಿವೃದ್ಧಿ ಕಾರ್ಪೊರೇಷನ್ ಸ್ಕೂಟರ್ ಕಾರ್ಖಾನೆ ಸ್ಥಾಪಿಸಿದೆ. ಬಿಳಿ ಸಕ್ಕರೆ ಉತ್ಪಾದನೆಯಲ್ಲಿ ಉತ್ತರ ಪ್ರದೇಶದ ತರುವಾಯ ಬಿಹಾರದ್ದೇ ಪ್ರಮುಖ ಸ್ಥಾನ. ಭಾರತದ ಒಟ್ಟು ಬಿಳಿಸಕ್ಕರೆಯಲ್ಲಿ 1/4 ಭಾಗ ಬಿಹಾರ ರಾಜ್ಯವೊಂದರಲ್ಲೇ ಉತ್ಪಾದನೆ ಆಗುತ್ತದೆ.

ಸಾರಿಗೆ ಸಂಪರ್ಕ: ಬಿಹಾರದಲ್ಲಿ ಮೊದಲು ಜಲಮಾರ್ಗಾವಲಂಬಿತ ಸಾರಿಗೆ ಸಂಪರ್ಕ ಪ್ರಧಾನವಾಗಿತ್ತು. ಅದಕ್ಕೆ ಅಲ್ಲಿರುವ ಅನೇಕ ನದಿಗಳೇ ಕಾರಣವಾಗಿ ಅಲ್ಲಿಯ ವ್ಯಾಪಾರ, ಸರಕು ಸಾಗಣೆಗಳೆಲ್ಲ ಈ ನದೀ ಮಾರ್ಗಗಳ ಮೂಲಕವೇ ನಡೆಯುತ್ತಿತ್ತು. ಮುಂದೆ ಒಳ್ಳೆಯ ರಸ್ತೆಗಳ ನಿರ್ಮಾಣವಾದಂತೆ, ರೈಲುಗಳ ಬಳಕೆ ಹೆಚ್ಚಾದಂತೆ ಈ ನದೀ ಮಾರ್ಗ ಪ್ರಾಮುಖ್ಯತೆ ಕಳೆದುಕೊಂಡಿತು. ಬಿಹಾರದಲ್ಲಿ ಹೆಚ್ಚು ನ್ಯಾರೊ ಗೇಜ್ ರೈಲುಮಾರ್ಗವಿದೆ. ಹೆಚ್ಚು ಸೇತುವೆಗಳ ನಿರ್ಮಾಣದ ಶ್ರಮಕ್ಕೆ ಬದಲು ಈ ರೈಲು ಮಾರ್ಗಗಳು ನದಿಗಳ ಪಕ್ಕದಲ್ಲೇ ಹರಿದು ಹೋಗಿವೆ. ಇದರಲ್ಲಿ ಮೂರು ಮಾರ್ಗಗಳು ಕೋಲ್ಕತದಲ್ಲಿ ಪ್ರಾರಂಭವಾಗಿ ಸಾಹಿಬ್ ಗಂಜ್, ಮಾಧುಷಾರ್ ಮತ್ತು ಗೋಮಾಹ್ ಮೂಲಕ ಹಾದುಹೋಗುತ್ತವೆ. ಸೋನ್ ನದಿಗೆ ದೆಹ್ರಿ, ಕೊಯಲ್‌ವರ್ ಎಂಬಲ್ಲೂ ಗಂಗಾನದಿಗೆ ಮೊಕಮೆಹ್ ಎಂಬಲ್ಲೂ ರಸ್ತೆ ಮತ್ತು ರೈಲು ಮಾರ್ಗಗಳ ಸೇತುವೆಗಳನ್ನು ನಿರ್ಮಿಸಲಾಗಿದೆ. ಗಂಗಾನದಿಗೆ ಕಟ್ಟಿರುವ ಸೇತುವೆಯಿಂದ ಉತ್ತರ ದಕ್ಷಿಣ ಬಿಹಾರ ಮತ್ತು ಜಾರ್ಖಂಡ್ ಸಂಪರ್ಕಕ್ಕೆ ಅನುಕೂಲವಾಗಿದೆ. ಬಿಹಾರದಲ್ಲಿ ಒಟ್ಟು 1913 ಕಿಮೀ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದೆ. ರಾಜ್ಯದಲ್ಲಿರುವ ಸು. 43,470 ಕಿಮೀ ರಸ್ತೆಯಲ್ಲಿ ಒಟ್ಟು ಸು. 11,270 ಕಿಮೀ ಶೇ. 25 ರಷ್ಟು ಪಕ್ಕಾ ರಸ್ತೆಯಾಗಿದ್ದು ಉಳಿದದ್ದು ಕಚ್ಚಾ ರಸ್ತೆಯಾಗಿ ಉಳಿದಿದೆ. ಉತ್ತರ ಬಿಹಾರದಲ್ಲಿ ಹೆಚ್ಚು ಕಚ್ಚಾ ರಸ್ತೆಗಳಿದ್ದು ದಕ್ಷಿಣ ಬಿಹಾರದಲ್ಲಿ ಹೆಚ್ಚು ಪಕ್ಕಾ ರಸ್ತೆಗಳಿವೆ. ಪಾಟ್ನ ಗಯಾ ಸುತ್ತಮುತ್ತಲಿನಲ್ಲಿ ಒಳ್ಳೆಯ ರಸ್ತೆಯ ಸಂಪರ್ಕವಿದೆ. ರಾಂಚಿ (ಜಾರ್ಖಂಡ್), ಪಟ್ಟಣ ನಗರಗಳಿಗೆ ವಿಮಾನ ಸಂಪರ್ಕವಿದೆ.

ರಾಜ್ಯದ ಇತರೆ ಪ್ರಮುಖ ನಗರಗಳೆಂದರೆ ಗಯಾ, ಭಾಗಲಪುರ, ದರ್ಭಾಂಗ ಮುಝಫರಪುರ ಮತ್ತು ಮೊಂಘೀರ್. (ಜಿ.ಬಿ.ಆರ್.)

**ಬಿಳಿಗಿರಿರಂಗನ ಬೆಟ್ಟ:** ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಆಗ್ನೇಯಕ್ಕೆ ಯಳಂದೂರಿನಿಂದ ಸು. 19 ಕಿಮೀ ದೂರದಲ್ಲಿರುವ ಬೆಟ್ಟ. ಸಮುದ್ರಮಟ್ಟದಿಂದ ಸು. 1552 ಮೀ ಎತ್ತರವಿದೆ. ಈ ಬೆಟ್ಟವನ್ನು ಬಿಳಿಗಿರಿಬೆಟ್ಟ, ಬಿಳಿಕಲ್ಲಬೆಟ್ಟ, ಶ್ವೇತಾದ್ರಿ ಎಂದೂ ಕರೆಯುತ್ತಾರೆ. ಬೆಟ್ಟದ ಮೇಲೆ ಬಿಳಿಗಿರಿರಂಗನಾಥ ಸ್ವಾಮಿ ದೇವಾಲಯವಿದ್ದು ಪುಣ್ಯಕ್ಷೇತ್ರವೆನಿಸಿದೆ.

ಬೆಟ್ಟದ ಇಳಿಜಾರು ಪ್ರದೇಶಗಳಲ್ಲಿ ದಟ್ಟ ಕಾಡಿದೆ. ಇಲ್ಲಿ ಶ್ರೀಗಂಧ, ಹೊನ್ನೆ, ಮತ್ತಿ, ಬೀಟೆ, ಬನ್ನಿ ಮೊದಲಾದ ಅಮೂಲ್ಯ ಮರಗಳಿವೆ. ಕಾಡಿನಲ್ಲಿ ಹುಲಿ, ಚಿರತೆ, ಕರಡಿ, ಆನೆ, ಕಾಡೆಮ್ಮೆ, ವಿವಿಧ ರೀತಿಯ ಜಿಂಕೆ ಮೊದಲಾದ ವನ್ಯ ಪ್ರಾಣಿಗಳಿವೆ. ಬೆಟ್ಟದ ಸುತ್ತಮುತ್ತಣ ಪ್ರದೇಶಗಳಲ್ಲಿ ಆನೆಯ ಹಾವಳಿಯುಂಟು. ಇಲ್ಲಿಯ ಹವೆ ಹಿತಕರ. ಬೆಟ್ಟದ ಮೇಲಿನಿಂದ ಕಾಣುವ ನಿಸರ್ಗ ದೃಶ್ಯ ರಮಣೀಯ. ಇಲ್ಲಿ ವಾಸಿಸುವ ಜನರು ಹೆಚ್ಚಾಗಿ ಸೋಲಿಗರು. ಬೆಟ್ಟದ ಮೇಲೆ ಕೆಲವೆಡೆ ಕಾಫಿ, ಕಿತ್ತಳೆ, ಬಾಳೆ, ಹಿಪ್ಪನೇರಳೆ ಬೆಳೆಯುವ ಸಣ್ಣ ತೋಟಗಳಿವೆ. ಬೆಟ್ಟದ ಮೇಲೆ ಕರ್ನಾಟಕ ಸರ್ಕಾರದ ರೇಷ್ಮೆ ಸಂಶೋಧನ ಕೇಂದ್ರವಿದೆ. ಇಲ್ಲಿಯ ಪ್ರವಾಸಿ ಬಂಗಲೆಯ ಸುತ್ತಲೂ ಸಿಂಕೋನ ಮರಗಳಿವೆ.

ದೇವಾಲಯದ ಪ್ರಾಕಾರ ನವರಂಗ ಹಾಗೂ ಮುಖಮಂಟಪ ಮೊದಲಾದವು ಸಾಮಾನ್ಯ ರೀತಿಯ ದ್ರಾವಿಡಶೈಲಿಯ ಕಟ್ಟಡ. ಮುಖ್ಯ ದೇವರು ಬಿಳಿಗಿರಿರಂಗಸ್ವಾಮಿ (ಶ್ರೀನಿವಾಸ). ನವರಂಗದ ಬಲಭಾಗದ ಮೂರು ಗೂಡುಗಳಲ್ಲಿ ಲೋಹ ನಿರ್ಮಿತ ಬಿಳಿಗಿರಿರಂಗ, ಹನುಮಂತ ಮಣವಾಳ ಮಹಾಮುನಿಗಳ ಮೂರ್ತಿಗಳಿವೆ. ಬಲ ಭಾಗದಲ್ಲಿ ಅಲಮೇಲು ಮಂಗೈ ಅಮ್ಮನವರ ಸನ್ನಿಧಿ ಇದೆ.

ದೇವಸ್ಥಾನದಿಂದ ಸು. 16 ಕಿಮೀ ದೂರದಲ್ಲಿ ಭಾರ್ಗವಿ ನದಿ ಹರಿಯುತ್ತದೆ. ಪರಶುರಾಮ ಮಾತೃಹತ್ಯಾ ದೋಷ ಪರಿಹಾರಕ್ಕಾಗಿ ಈ ಪರ್ವತದ ಮೇಲೆ ತಪಸ್ಸು ಆಚರಿಸಿ ವಿರಜಾ ನದಿಯ ನೀರಿನಿಂದ ಭಗವಂತನ ಪಾದ ತೊಳೆದುದರಿಂದ ಆ ನೀರಿನಿಂದಲೇ ಒಂದು ಪುಣ್ಯನದಿ ಉದ್ಭವಿಸಿತೆಂದೂ ಇದನ್ನೇ ಭಾರ್ಗವಿ ಎಂದು ಕರೆಯಲಾಯಿತೆಂದೂ ಐತಿಹ್ಯ. *

**ಬೀಚ್:** ಫ್ಯಾಗೇಸೀ ಕುಟುಂಬಕ್ಕೆ ಸೇರಿದ ಫೇಗಸ್ ಜಾತಿಯ ಸು. 8 ಸಸ್ಯ ಪ್ರಭೇದಗಳ ಸಾಮಾನ್ಯ ಹೆಸರು. ಉತ್ತರ ಗೋಳಾರ್ಧಕ್ಕೆ ಸೀಮಿತವಾಗಿರುವ ಇದು ಅಲ್ಲಿಯ ಸಮಶೀತೋಷ್ಣವಲಯದ ಪ್ರಸಿದ್ಧ ವನ್ಯವೃಕ್ಷ. ಇಡೀ ಯುರೋಪ್, ಏಷ್ಯ ಮೈನರ್, ರಷ್ಯ, ಜಪಾನ್, ಇರಾನ್, ಉತ್ತರ ಅಮೆರಿಕದ ನ್ಯೂ ಬ್ರನ್ಸ್‌ವಿಕ್‌ದಿಂದ ತೊಡಗಿ ಮಿನೆಸೋಟ, ದಕ್ಷಿಣ ಫ್ಲಾರಿಡ, ಟೆಕ್ಸಾಸ್ ವರೆಗಿನ ಪ್ರದೇಶಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಅಮೆರಿಕದ ಈಶಾನ್ಯ ಪ್ರದೇಶದ ಕ್ಲೈಮ್ಯಾಕ್ಸ್ ಕಾಡುಗಳ ಪ್ರಮುಖ ಸಸ್ಯವೆನಿಸಿದೆ. ಅಂತೆಯೇ ಯುರೋಪಿನಲ್ಲಿ ದಕ್ಷಿಣ ನಾರ್ವೆ–ಸ್ವೀಡನ್ನುಗಳಿಂದ ಹಿಡಿದು ಮೆಡಿಟರೇನಿಯನ್ ಕಾಡುಗಳಲ್ಲಿ ಇದು ಬಲು ಸಾಮಾನ್ಯ. ಸ್ವಿಸ್ ಆಲ್ಪ್ಸ್ ಪರ್ವತದಲ್ಲಿ ಸು. 1700 ಮೀ ಎತ್ತರದವರೆಗೆ ಇದು ಕಾಣದೊರೆಯುತ್ತದೆ. ಭಾರತದ ನೀಲಗಿರಿ, ಕುಲುಪ್ರದೇಶಗಳಲ್ಲಿ ಬೆಳೆಸಲಾಗಿದೆ.

ಪರ್ಣಪಾತಿ ವೃಕ್ಷ. ಚಳಿಗಾಲದ ಕೊನೆಗೆ ಎಲೆಗಳೆಲ್ಲ ಉದುರಿ ಮತ್ತೆ ವಸಂತದಲ್ಲಿ ಹೊಸ ಎಲೆಗಳು ಹುಟ್ಟುವುವು. ಇದು ಸು. 30 ಮೀ ಎತ್ತರಕ್ಕೆ ಬೆಳೆಯುವುದು. ತೊಗಟೆ ಮೃದುವಾಗಿದೆ. ಇದರ ಬಣ್ಣ ಬೂದು. ಎಲೆಗಳು ಸರಳ ಬಗೆಯವು. ಅಂಚು ದಂತಿತ. ಬೀಚ್ ಮರಗಳು ಅಲಂಕಾರ ವೃಕ್ಷಗಳಾಗಿ ಮಾತ್ರವಲ್ಲದೆ ಬೇರೆ ತೆರನಾಗಿಯೂ ಉಪಯುಕ್ತವಾಗಿವೆ. ಇವುಗಳ ಚೌಬೀನೆ ಗಟ್ಟಿ ಮತ್ತು ಬಾಳಿಕೆ ಬರುವಂಥದು. ಹಲವಾರು ಮರಗೆಲಸಗಳಿಗೆ ಒದಗುತ್ತದೆ. ಬೀಚ್ ಮರದ ಬೀಜಗಳು ಜಾನುವಾರುಗಳಿಗೆ ಮತ್ತು ಕೋಳಿಗಳಿಗೆ ಉತ್ತಮ ಆಹಾರ. ಮನುಷ್ಯರು ಕೂಡ ತಿನ್ನಬಹುದು. ಬೀಜದಿಂದ ಖಾದ್ಯತೈಲವನ್ನು ತಯಾರಿಸುತ್ತಾರೆ. (ಪಿ.ಕೆ.ಆರ್.ಜಿ.)

**ಬೀಜ ಕೃಷಿ:** ವರ್ತಮಾನ ಕಾಲದ ಕೃಷಿ ವಿಧಾನ. ವರ್ಷದಲ್ಲಿ ಒಂದು ಮತ್ತು ಒಂದಕ್ಕಿಂತ ಹೆಚ್ಚು ಬೆಳೆಗಳನ್ನು ಸಾಗುವಳಿ ಮಾಡಲು ಬೀಜ ಬಿತ್ತನೆ ಮಾಡಿ ಬೆಳೆ ಬೆಳೆಯಲಾಗುತ್ತದೆ. ಈ ವಿಧಾನವನ್ನು ಬೀಜ ಕೃಷಿ ಎನ್ನುವರು. ಉದಾಹರಣೆಗೆ ಬತ್ತ, ಜೋಳ, ರಾಗಿ ಇತ್ಯಾದಿ ಇವು ಬೆಳೆದು ಬಲಿತ ಅನಂತರ ಧಾನ್ಯ ಅಥವಾ ಬೀಜಗಳನ್ನು ನೀಡುತ್ತವೆ.

ನೈಋತ್ಯ ಏಷ್ಯದಲ್ಲಿ ಮೊದಲು ಬೀಜ ಕೃಷಿಯು ಪ್ರಾರಂಭವಾಯಿತೆಂದು ತಿಳಿಯಲಾಗಿದೆ. ಈ ಭಾಗವೇ ಮೊಟ್ಟ ಮೊದಲ ಬಾರಿಗೆ ಬೀಜಗಳಿಂದ ವ್ಯವಸಾಯವನ್ನು ಕೈಗೊಳ್ಳುವ ವಿಧಾನವನ್ನು ಪ್ರಪಂಚಕ್ಕೆ ಪರಿಚಯಿಸಿತು. ಸಾಯರ್ ರವರು ಬೀಜ ಕೃಷಿ ನೈಋತ್ಯ ಏಷ್ಯದಲ್ಲಿ ಉಗಮವಾಗಿಲ್ಲ, ಅದು ಪೂರ್ವಗೋಳಾರ್ಧದ ಪಶ್ಚಿಮ ಭಾರತ, ಉತ್ತರ ಚೀನ ಮತ್ತು ಇಥಿಯೋಪಿಯಗಳಲ್ಲಿ ಉಗಮವಾಯಿತು ಎಂದಿದ್ದಾರೆ. ನೈಋತ್ಯ ಏಷ್ಯದ ಜನರು ಶೀಘ್ರವಾಗಿ ಬೀಜ ಕೃಷಿಯನ್ನು ಕೈಗೊಂಡಿದ್ದಾರೆ. ಇವರು ಗೋದಿ ಮತ್ತು ಬಾರ್ಲಿ ಈ ಎರಡು ಧಾನ್ಯಗಳನ್ನು ಬೆಳೆಯಲಾರಂಭಿಸಿದರು. ಅನಂತರ ಈ ಧಾನ್ಯ ಯುರೋಪಿನ ನಾಗರಿಕತೆಯಲ್ಲಿ ಮಹತ್ತ್ವ ಪಡೆಯಿತು. ಅಲ್ಲದೆ ಪಶ್ಚಿಮಾರ್ಧಗೋಳದಲ್ಲಿಯೂ ಸಹ ಬೀಜ ಕೃಷಿಯ ಎರಡು ಪ್ರಮುಖ ಉಗಮ ಕೇಂದ್ರಗಳಿವೆ. ಮೆಕ್ಸಿಕೋದ ದಕ್ಷಿಣ ಭಾಗ ಮೆಕ್ಕೆಜೋಳ ಮತ್ತು ಆಲೂಗೆಡ್ಡೆಯ ಉಗಮ ಸ್ಥಾನವಾಗಿದೆ. ಆ್ಯಂಡಿಯನ್ ಪ್ರದೇಶ ಆಲೂಗೆಡ್ಡೆಯ ಮೂಲ ಸ್ಥಾನವಾಗಿದೆ. ಬೀಜ ಬಿತ್ತನೆಗೆ ಮೊದಲು ನೆಲವನ್ನು ಹದಗೊಳಿಸಲು ಉಳುಮೆ ಮಾಡಬೇಕು. ಅದಕ್ಕಾಗಿ ನೈಋತ್ಯ ಏಷ್ಯದಲ್ಲಿ ಸಾಕುಪ್ರಾಣಿಗಳನ್ನು ಬಳಕೆಮಾಡಲಾಗುತ್ತದೆ. ಈ ಪ್ರಾಣಿಗಳಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆಯಬಹುದು.

ಬೀಜ ಕೃಷಿಯ ಪ್ರಸರಣ: ಇದು ನೈಋತ್ಯ ಏಷ್ಯದಿಂದ ಪಶ್ಚಿಮದ ಕಡೆಗೆ ಉತ್ತರ ಆಫ್ರಿಕದ ಮೂಲಕ ಜಗತ್ತಿನ ಇತರ ಭಾಗಗಳಿಗೆ ಹರಡಿತು. ಯುರೋಪಿನ ಗ್ರೀಸ್, ಕ್ರೇಟ್ ಮತ್ತು ಸೈಪ್ರಸ್‌ನಲ್ಲಿ ಈ ರೀತಿಯ ವ್ಯವಸಾಯ ಹಿಂದೆ ರೂಢಿಯಲ್ಲಿದ್ದುದ್ದಕ್ಕೆ ಅನೇಕ ಪುರಾವೆಗಳಿವೆ. ಈ ಪ್ರದೇಶಗಳಿಂದ ವಾಯವ್ಯ ಭಾಗದ ಮೂಲಕ ಡ್ಯಾನ್ಯೂಬ್ ನದಿ ಬಯಲು ಬಾಲ್ಟಿಕ್ ಮತ್ತು ಉತ್ತರ ಸಮುದ್ರ ಹಾಗೂ ಯುಕ್ರೇನ್‌ನ ಈಶಾನ್ಯ ಭಾಗದವರೆಗೆ ಹರಡಿದೆ. ಇದೇ ರೀತಿ ಬೀಜಕೃಷಿಯು ವಾಯವ್ಯ ಭಾರತ ಮತ್ತು ಸಿಂಧೂನದಿ ಮೈದಾನದ ಕಡೆಗೆ ವಿಸ್ತರಿಸಿದೆ. ಬತ್ತದ ತಳಿಯು ಆಗ್ನೇಯ ಏಷ್ಯದಲ್ಲಿ ಉಗಮಿಸಿರಬಹುದೆಂದು ಭೂಗೋಳ ವಿಜ್ಞಾನಿಗಳ ನಂಬಿಕೆ. ಇಥಿಯೋಪಿಯದಲ್ಲಿ ಸಾಸಿವೆ, ನವಣೆ ಮೊದಲಾದ ಧಾನ್ಯಗಳು ಉಗಮಿಸಿರಬಹುದೆಂದು ಸಾಯರ್ ರವರು ಅಭಿಪ್ರಾಯಪಟ್ಟಿದ್ದಾರೆ. ಪಶ್ಚಿಮ ಗೋಳಾರ್ಧದಲ್ಲಿ 2 ಪ್ರಮುಖ ಕೇಂದ್ರಗಳಿಂದ ಬೀಜ ಕೃಷಿಯು ಉಗಮಗೊಂಡಿದೆ. ಮೆಕ್ಸಿಕೊ, ಗ್ವಾಟೆಮಾಲ ಮತ್ತು ಹೊಂಡುರಾಸ್ ಮೊದಲಾದವುಗಳಲ್ಲಿ ಮೆಕ್ಕೆಜೋಳವನ್ನು ಬೆಳೆಯಲಾಯಿತು. ಸಾಕು ಪ್ರಾಣಿಗಳು ಇವರಿಗೆ ಪರಿಚಯವಿರಲಿಲ್ಲ. 16ನೆಯ ಶತಮಾನದಲ್ಲಿ ಯುರೋಪಿಯನ್ನರ ವಸಾಹತು ನೀತಿಯಿಂದಾಗಿ ಇವರು ಪ್ರಾಣಿಗಳನ್ನು ಸಾಕುವುದನ್ನು ಕಂಡುಕೊಂಡರು. ಲಾಮ, ಅಲ್ಪಾಕ ಮತ್ತು ಟರ್ಕಿ ಮೊದಲಾದ ಪ್ರಾಣಿಗಳನ್ನು ಸಾಕತೊಡಗಿದರು. ಪಶ್ಚಿಮ ಗೋಳಾರ್ಧದ ಮತ್ತೊಂದು ಮುಖ್ಯ ಕೇಂದ್ರವೆಂದರೆ ಪೆರುವಿನ ಉತ್ತರ ಭಾಗ. ಇಲ್ಲಿ ಸ್ಕ್ವಾಷ್ ಬೀನ್ ಮತ್ತು ಹತ್ತಿಯನ್ನು ಬೆಳೆಯಲಾರಂಭಿಸಿದರು. ಈ ಎರಡು ಕೇಂದ್ರಗಳಿಂದ ಪಶ್ಚಿಮ ಗೋಳಾರ್ಧದ ಇತರ ಕಡೆಗಳಿಗೆ ವ್ಯವಸಾಯ ಹರಡಿತು. (ಡಿ.ಆರ್.)

**ಬೀಜಿಂಗ್:** ಚೀನ ಜನತಾ ಗಣರಾಜ್ಯದ ರಾಜಧಾನಿ. ಪ್ರಪಂಚದ ಅತ್ಯಂತ ಪ್ರಾಚೀನ ನಗರಗಳಲ್ಲೊಂದು. ಹಿಂದೆ ಇದನ್ನು ಪೀಕಿಂಗ್ ಎಂದು ಕರೆಯಲಾಗುತ್ತಿತ್ತು. ಉತ್ತರ ಚೀನ ಬಯಲಿನ ತುದಿಯಲ್ಲಿ ಹೋಪೇ ಪ್ರಾಂತ್ಯದೊಳಗೆ ಬೇ ಮತ್ತು ಯಂಗ್–ಡಿಂಗ್ ನದಿಗಳ ನಡುವೆ (ಉ.ಅ. $39^0 54'$ ಮತ್ತು ಪು. ರೆ, $116^0 28'$ ಮೇಲೆ) ಇದೆ. ಚೀನದ ಮಹಾಗೋಡೆಯ ಆಗ್ನೇಯಕ್ಕೆ 56 ಕಿಮೀ ದೂರದಲ್ಲಿರುವ ಬೀಜಿಂಗ್ ಚೀನದ ಚರಿತ್ರೆಯ ಸಾಕಾರ ರೂಪದಂತಿದೆ. ದೀರ್ಘಕಾಲದಿಂದಲೂ ಚೀನದ ಬೃಹತ್ ಸಾಮ್ರಾಜ್ಯದ ರಾಜಧಾನಿಯಾಗಿದೆ. ತನ್ನ ಸಾಂಸ್ಕೃತಿಕ ಮತ್ತು ಕಲಾನೈಪುಣ್ಯದ ಪರಂಪರೆಯಿಂದಾಗಿ ಇದೊಂದು ಅತೀ ಪ್ರಾಚೀನ ನಗರವಾಗಿರುವಂತೆ, 1949 ರಲ್ಲಿ ಚೀನ ಜನತಾ ಗಣರಾಜ್ಯದ ರಾಜಧಾನಿಯಾದಂದಿನಿಂದ ಅತ್ಯಾಧುನಿಕತೆ ಪಡೆದಿದೆ. ವಿಸ್ತೀರ್ಣ 16,800 ಚ.ಕಿಮೀ. ಜನಸಂಖ್ಯೆ 13,833,00 (2002).

ಬೀಜಿಂಗ್‌ನ ವಾಯುಗುಣ ಮಾನ್‌ಸೂನ್ ಮಾದರಿಯದು. ಅಕ್ಟೋಬರಿನಿಂದ ಮಾರ್ಚ್ ತಿಂಗಳವರೆಗಿನ ಚಳಿಗಾಲದಲ್ಲಿ ತಣ್ಣಗಿನ ಮತ್ತು ಶುಷ್ಕ ವಾತಾವರಣವಿರುತ್ತದೆ. ಆಗ ನೀರು ಹೆಪ್ಪುಗಟ್ಟುತ್ತದೆ. ಬೇಸಗೆಯಲ್ಲಿ ಉಷ್ಣತೆ $26^0$ ಸೆ ಗಿಂತ ಹೆಚ್ಚಾಗುತ್ತದೆ. ಜುಲೈನಲ್ಲಿ ಉಷ್ಣತೆ ಗರಿಷ್ಠವಾಗುತ್ತದೆ. ಆಗ ಆರ್ದ್ರತೆಯೂ ಹೆಚ್ಚು. ವರ್ಷದ ಸರಾಸರಿ ಮಳೆ 63 ಸೆಂಮೀ. ಇದರಲ್ಲಿ ಶೇ. 75 ರಷ್ಟು ಮಳೆ ಬೇಸಗೆಯಲ್ಲಿ ಬೀಳುತ್ತದೆ. ಜುಲೈ ಹೆಚ್ಚು ಮಳೆಯ ತಿಂಗಳು. ಆಗ ಸರಾಸರಿ 22 ಸೆಂಮೀ ಮಳೆಯಾಗುತ್ತದೆ. ಏಪ್ರಿಲ್ ತಿಂಗಳ ಕೆಲವು ದಿನಗಳಲ್ಲಿ ಗೋಬಿ ಮರುಭೂಮಿಯಿಂದ ಅಹಿತಕರ ದೂಳಿನ ಬಿರುಗಾಳಿ ಬೀಸುವುದುಂಟು.

ಬೀಜಿಂಗ್ ಚೀನದ ಪ್ರಮುಖ ರೈಲ್ವೇ ಕೇಂದ್ರ. ಇಲ್ಲಿ ನಾಲ್ಕು ಪ್ರಧಾನ ಮತ್ತು ಮೂರು ಸ್ಥಳೀಯ ರೈಲ್ವೇ ಮಾರ್ಗಗಳು ಸಂಧಿಸುತ್ತವೆ. ಪ್ರಧಾನ ರೈಲ್ವೇ ಮಾರ್ಗಗಳು ಪ್ರಮುಖ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳೊಂದಿಗೆ ಬೀಜಿಂಗಿಗೆ ಸಂಪರ್ಕ ಕಲ್ಪಿಸಿವೆ. ಸ್ಥಳೀಯ ರೈಲ್ವೇ ಮಾರ್ಗಗಳು ನಗರ ಪ್ರದೇಶದ ದೂರದ ಸ್ಥಳಗಳನ್ನು ಸಂಪರ್ಕಿಸುತ್ತವೆ.

ಒಂದನೆಯ ಪಂಚವಾರ್ಷಿಕ ಯೋಜನೆ, ನಗರದ ಪುನರ್ರಚನೆ ಮತ್ತು ಕೈಗಾರಿಕೀಕರಣಕ್ಕೆ ಮಹತ್ತ್ವ ನೀಡಿತು. ಮುಖ್ಯ ನಗರಕ್ಕೆ 40 ಕಿಮೀ ದೂರದಲ್ಲಿ ಷಿ ಚಿಂಗ್ ಷಾನ್‌ನಲ್ಲಿರುವ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಚೀನದ ಅತ್ಯಂತ ದೊಡ್ಡ ಕಾರ್ಖಾನೆಗಳಲ್ಲಿ ಒಂದು. ವಿಶಿಷ್ಟ ಗುಣಗಳ ಉಕ್ಕನ್ನು ತಯಾರಿಸುವ ಅನೇಕ ಕಾರ್ಖಾನೆಗಳೂ ಇಲ್ಲಿವೆ. ಎತ್ತುಗ ಯಂತ್ರ, ಉಗಿಬಂಡಿ, ಮೋಟಾರು ಬಿಡಿಭಾಗಗಳು, ಟ್ರ್ಯಾಕ್ಟರ್‌ಗಳು, ಕೊಯ್ಲು ಯಂತ್ರಗಳು ಮತ್ತು ಗಣಿ ಯಂತ್ರಗಳು ಬೀಜಿಂಗ್‌ನಲ್ಲಿ ತಯಾರಾಗುತ್ತವೆ. ಇದು ಚೀನದ ಪ್ರಮುಖ ಜವಳಿ ಕೇಂದ್ರಗಳಲ್ಲೊಂದು. ಕೀಟನಾಶಕ, ರಸಗೊಬ್ಬರ ಮತ್ತು ಪ್ಲಾಸ್ಟಿಕ್ ಹಾಳೆಗಳ ತಯಾರಿಕೆಯೂ ಇಲ್ಲಿ ನಡೆಯುತ್ತದೆ. ಅನೇಕ ಕಲಾ ಮತ್ತು ಕರಕುಶಲ ಕೈಗಾರಿಕೆಗಳು ಇಲ್ಲಿವೆ. ಬೀಜಿಂಗ್‌ನ ಕಂಬಳಿ ಮತ್ತು ಜಮಖಾನ, ಪಿಂಗಾಣಿ, ಜೇಡಶಿಲೆ ಮತ್ತು ಹಸ್ತಿದಂತದ ಕೆತ್ತನೆಯ ವಸ್ತುಗಳು, ಕಂಚು, ಎನೇಮಲ್, ರಾಳದ ಮೆರುಗಿನ ವಸ್ತುಗಳ, ಲೇಸ್ ಮತ್ತು ಕಸೂತಿಯ ಬಟ್ಟೆಗಳು ಹೆಸರುವಾಸಿಯಾಗಿವೆ. ಆಗಸ್ಟ್ 2008ರಲ್ಲಿ ಪ್ರಸಿದ್ಧ ಒಲಂಪಿಕ್ ಕ್ರೀಡಾಕೂಟ ಇಲ್ಲಿ ಏರ್ಪಟ್ಟಿತ್ತು.

ಕ್ವಾನ್–ಟಿಂಗ್‌ನಲ್ಲಿರುವ ಜಲ ವಿದ್ಯುತ್ ಕೇಂದ್ರ 1956 ರಿಂದ ಬೀಜಿಂಗ್ ನಗರಕ್ಕೆ ವಿದ್ಯುತ್ತನ್ನು ಒದಗಿಸುತ್ತಿದೆ. ಉತ್ತರ ಚೀನ ಬಯಲಿನ ಅತ್ಯಂತ ದೊಡ್ಡ ಮಾನವ ನಿರ್ಮಿತ ಜಲಾಶಯದಿಂದ ನಗರ ಪ್ರದೇಶಕ್ಕೆ ಅಗತ್ಯವಾದ ನೀರಿನ ಹೆಚ್ಚಿನ ಭಾಗದ ಪೂರೈಕೆ ಆಗುತ್ತದೆ. ಚೀನದ ಪ್ರಧಾನ ಪ್ರಸಾರ ಕೇಂದ್ರ ಬೀಜಿಂಗ್‌ನಲ್ಲಿದೆ. (ಜಿ.ಕೆಯು.)

**ಬೀದರ್:** ಕರ್ನಾಟಕ ರಾಜ್ಯದ ಗುಲ್ಬರ್ಗ ವಿಭಾಗಕ್ಕೆ ಸೇರಿದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಪಟ್ಟಣ.

ಜಿಲ್ಲೆ: ರಾಜ್ಯದ ಉತ್ತರ ತುದಿಯಲ್ಲಿರುವ ಈ ಜಿಲ್ಲೆಯನ್ನು, ಪೂರ್ವದಲ್ಲಿ ಆಂಧ್ರಪ್ರದೇಶದ ಮೇಡಕ್ ಮತ್ತು ನಿಜಾಮಾಬಾದ್ ಜಿಲ್ಲೆಗಳು, ಉತ್ತರ ಮತ್ತು ಪಶ್ಚಿಮದಲ್ಲಿ ಮಹಾರಾಷ್ಟ್ರ ರಾಜ್ಯದ ನಾಂದೇಡ್ ಮತ್ತು ಉಸ್ಮಾನಾಬಾದ್ ಜಿಲ್ಲೆಗಳು, ದಕ್ಷಿಣದಲ್ಲಿ ಗುಲ್ಬರ್ಗ ಜಿಲ್ಲೆಯ ಆಳಂದ, ಗುಲ್ಬರ್ಗ ಮತ್ತು ಚಿಂಚೋಳಿ ತಾಲ್ಲೂಕುಗಳು ಸುತ್ತುವರಿದಿವೆ. ಜಿಲ್ಲೆ $17^0 30'$ – $18^0 30'$ ಉತ್ತರ ಅಕ್ಷಾಂಶ ಹಾಗೂ $76^0 42'$ – $77^0 36'$ ಪೂರ್ವ ರೇಖಾಂಶಗಳ ನಡುವೆ ಹಬ್ಬಿದೆ. ಜಿಲ್ಲೆಯ ವಿಸ್ತೀರ್ಣ 5.451 ಚ.ಕಿಮೀ. ಜನಸಂಖ್ಯೆ 1502373 (2001). ಜಿಲ್ಲೆಯಲ್ಲಿ ಔರಾದ, ಬೀದರ್, ಭಾಲ್ಕಿ, ಹುಮನಾಬಾದ್ ಮತ್ತು ಬಸವಕಲ್ಯಾಣ ತಾಲ್ಲೂಕುಗಳು, 617 ಗ್ರಾಮಗಳು ಮತ್ತು 5 ನಗರಗಳು ಇವೆ.

ಬೀದರ್ ಜಿಲ್ಲೆ ದಖನ್ ಪ್ರಸ್ಥಭೂಮಿಯ ಒಂದು ಭಾಗ. ಹೆಚ್ಚು ಬೆಟ್ಟಗುಡ್ಡಗಳಿಲ್ಲದೆ ವಿಶಾಲ ಮಟ್ಟಸ ಪ್ರದೇಶಗಳಿಂದ ಕೂಡಿದೆ. ಔರಾದ ಹಾಗೂ ಭಾಲ್ಕಿ ತಾಲ್ಲೂಕುಗಳು ಕಪ್ಪು ಮಣ್ಣಿನ ಪ್ರದೇಶ. ಹುಮನಾಬಾದ, ಬಸವಕಲ್ಯಾಣ ಹಾಗೂ ಬೀದರ್ ತಾಲ್ಲೂಕು ಪ್ರದೇಶಗಳಲ್ಲಿ ಜಂಬುಕಲ್ಲಿನ ಮಿಶ್ರಣವಿರುವ ಭೂಮಿ ಇದೆ. ಈ ಜಿಲ್ಲೆಯ ಯಾವ ಭಾಗದಲ್ಲೂ ಖನಿಜ ನಿಕ್ಷೇಪಗಳಿಲ್ಲ. ಮಾಂಜರಾ ಇಲ್ಲಿಯ ಪ್ರಮುಖ ನದಿ. ಗೋದಾವರಿಯ ಉಪನದಿಯಾಗಿರುವ ಇದು ಜಿಲ್ಲೆಯ ಮಧ್ಯದಲ್ಲಿ ಉಗಮಿಸಿ ಪೂರ್ವಾಭಿಮುಖವಾಗಿ ಭಾಲ್ಕಿ, ಔರಾದ, ಬೀದರ್ ತಾಲ್ಲೂಕುಗಳ ಗಡಿಯಲ್ಲಿ ಸಾಗಿ ಮುಂದೆ ಸ್ವಲ್ಪ ದೂರ ಆಂಧ್ರಪ್ರದೇಶದಿಂದ ಬೀದರ್ ಜಿಲ್ಲೆಯನ್ನು ವಿಂಗಡಿಸುವ ಗಡಿಯಾಗಿಯೂ ಹರಿಯುತ್ತದೆ.




ಜಿಲ್ಲೆಯಲ್ಲಿ ಈ ನದಿಯ ಹರಿವಿನ ಉದ್ದ 97 ಕಿಮೀ. ನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ 1,295 ಚ.ಕಿಮೀ. ಕಾರಂಜ ಈ ಜಿಲ್ಲೆಯ ಮತ್ತೊಂದು ಮುಖ್ಯ ನದಿ. ಇದು ಭಾಲ್ಕಿ ತಾಲ್ಲೂಕಿನಲ್ಲಿ ವಾಯವ್ಯಾಭಿಮುಖವಾಗಿ ಹರಿದು, ಮಾಂಜರಾ ನದಿಯನ್ನು

ಕೂಡಿಕೊಳ್ಳುವುದು. ಮುಲ್ಲಾಮಾರಿ ನದಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಹುಟ್ಟಿ ಆಗ್ನೇಯಾಭಿಮುಖವಾಗಿ ಹರಿದು ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸುವುದು. ಚುಳಕಿ, ಗಂಡೋರಿ, ನಗರವಾಲಾ, ಹುಡಗಿ ಹಾಗೂ ಹಳ್ಳಿಖೆಡನಾಲಾ–ಇವು ಚಿಕ್ಕ ನದಿಗಳು. ಜಿಲ್ಲೆಯ ನೈಋತ್ಯದಲ್ಲಿ ಬೆಣ್ಣೆ ತೊರೆ ಜಿಲ್ಲೆಯ ಗಡಿಯನ್ನು ಮುಟ್ಟಿ ಹೋಗುತ್ತದೆ. ಹೆಚ್ಚಿನ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವಾದರೂ ಬೇಸಗೆಯಲ್ಲಿ ಬತ್ತಿ ಹೋಗುವುದುಂಟು.

ಜಿಲ್ಲೆಯ ಉತ್ತರ ಭಾಗ ಸಮತಟ್ಟಾಗಿದ್ದು, ದಕ್ಷಿಣ ಭಾಗ ಪ್ರಸ್ಥಭೂಮಿಯಾಗಿದೆ. ಸಮುದ್ರ ಮಟ್ಟದಿಂದ 715 ಮೀ ಎತ್ತರವಿದ್ದು, ಇಲ್ಲಿಯ ಹವಾಗುಣ ಆರೋಗ್ಯಕರವಾಗಿದೆ. ಬೇಸಗೆಯಲ್ಲಿ ಉಷ್ಣತೆ ಹೆಚ್ಚು. ಜೂನ್ ನಿಂದ ಅಕ್ಟೋಬರ್ ತನಕ ಮಳೆಗಾಲ, ವಾರ್ಷಿಕ ಸರಾಸರಿ ಮಳೆ 84 ಸೆಂಮೀ. ಜಿಲ್ಲೆಯಲ್ಲಿ 27,707 ಹೆ ಪ್ರದೇಶದಲ್ಲಿ ಅರಣ್ಯವಿದೆ. (2001)

ಬೀದರ್ ಕೃಷಿ ಪ್ರಧಾನ ಜಿಲ್ಲೆ. ಜಿಲ್ಲೆಯ ಸು. 47,697 ಹೆ. ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಭೂಪ್ರದೇಶದಲ್ಲಿ ಸು. 452611 ಹೆ. ಸಾಗುವಳಿಗೆ ದೊರೆಯುವ ಭೂಮಿಯಾಗಿದ್ದು ಒಟ್ಟು ಸು. 3,35,000 ಹೆ. ಗಳಲ್ಲಿ ಬಿತ್ತನೆ ಮಾಡಲಾಗಿತ್ತು. ಇತ್ತೀಚೆಗೆ ಜಿಲ್ಲೆಯಲ್ಲಿ ಮೂರು ನೀರಾವರಿ ಯೋಜನೆಗಳು ಪ್ರಾರಂಭವಾಗಿವೆ. ಕಾರಂಜಾ, ಚುಳಕಿನಾಲಾ ಹಾಗೂ ಮುಲ್ಲಾಮಾರಿ ನದಿಗಳಿಗೆ ಅಣೆಕಟ್ಟು ಕಟ್ಟಲಾಗಿದೆ. ಹಳ್ಳಿಖೇಡದ ಹತ್ತಿರ ಕಾರಂಜ ನದಿಗೆ ಅಣೆಕಟ್ಟು ನಿರ್ಮಿಸಲಾಗಿದೆ. ಈ ಜಿಲ್ಲೆಯ ಮುಖ್ಯ ಬೆಳೆ ಜೋಳ. ಸಜ್ಜೆ, ಗೋದಿ, ಮುಸುಕಿನ ಜೋಳ. ಬತ್ತ, ದ್ವಿದಳ ಧಾನ್ಯಗಳು, ಹೊಗೆಸೊಪ್ಪು, ಕಬ್ಬು ಹತ್ತಿ, ಕಡಲೆ, ತೊಗರಿ, ಕಡಲೆಕಾಯಿ ಮತ್ತು ಸೂರ್ಯಕಾಂತಿ ಬೆಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸುತ್ತಾರೆ. ಜಿಲ್ಲೆಯಲ್ಲಿ ಪಶುಪಾಲನೆ, ಮತ್ಸ್ಯೋದ್ಯಮ ಅಲ್ಪಪ್ರಮಾಣದಲ್ಲಿದೆ.

ಈ ಜಿಲ್ಲೆಯಲ್ಲಿ ಬೃಹತ್ ಉದ್ಯಮಗಳ ಅಭಿವೃದ್ಧಿಗೆ ಸೌಕರ್ಯಗಳಿಲ್ಲ. ಇತರ ಸಣ್ಣ ಕೈಗಾರಿಕೆಗಳು ಇವೆ. ಇತ್ತೀಚಿನ ಔದ್ಯಮಿಕ ಯೋಜನೆಗಳಿಂದ ಕೃಷಿ ಉಪಕರಣಗಳ ಕಾರ್ಖಾನೆ, ಗೊಬ್ಬರ ಕಾರ್ಖಾನೆ, ಖಂಡಸಾರಿ ಕಾರ್ಖಾನೆ ಇವುಗಳ ಅಭಿವೃದ್ಧಿ ಸಾಗಿದೆ. ನೂಲಿನ ಗಿರಣಿ ಸ್ಥಾಪಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಕೆಲವು ತಾಲ್ಲೂಕುಗಳಲ್ಲಿ ಕುಶಲ ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಕೇಂದ್ರಗಳು ಸ್ಥಾಪಿತವಾಗಿವೆ. ಬೀದರ್ ಹಾಗೂ ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಕೈಗಾರಿಕಾ ಕೇಂದ್ರಗಳಿವೆ. ಬಡಗಿತನ, ಕಬ್ಬಿಣದ ಕೆಲಸ ಇನ್ನಿತರ ಕಸಬುಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಇಲ್ಲಿಯ ಬಿದರೀ ವಸ್ತುಗಳ ಕೈಗಾರಿಕೆ ಪ್ರಸಿದ್ಧ. ಕುಶಲ ಕೆಲಸಗಾರರು ತಾಮ್ರ, ಸತುವು ಧಾತುಗಳನ್ನು ಮಿಶ್ರಮಾಡಿ ಸುಂದರ ಮೂರ್ತಿಗಳನ್ನೂ ಕೈಗುಂಡಿಗಳನ್ನೂ ತಟ್ಟೆ, ಹೂಜಿ ಮುಂತಾದ ಅನೇಕ ಆಕರ್ಷಕ ವಸ್ತುಗಳನ್ನೂ ತಯಾರಿಸುತ್ತಾರೆ. ಇವುಗಳ ಮೇಲೆ ಬಂಗಾರದ ಹಾಗೂ ಬೆಳ್ಳಿಯ ಕುಸುರಿ ಕೆಲಸವನ್ನೂ ಮಾಡುತ್ತಾರೆ. ಬೀದರ್‌ನಲ್ಲಿ ತಯಾರಾದ ಇಂಥ ವಸ್ತುಗಳಿಗೆ ವಿದೇಶಗಳಲ್ಲಿಯೂ ಬೇಡಿಕೆಯಿದೆ. ಈ ಜಿಲ್ಲೆಯಲ್ಲಿ ಆಧುನಿಕ ರೀತಿಯಲ್ಲಿ ನೇಯ್ಗೆಯ ಉದ್ಯಮವನ್ನು ಅಭಿವೃದ್ಧಿಪಡಿಸುವ ಯೋಜನೆಗಳು ನಡೆದಿವೆ. ಜಿಲ್ಲೆಯಾದ್ಯಂತ ಚಿಕ್ಕ ಉದ್ಯಮ ಘಟಕಗಳಿವೆ. ಎಂಜಿನಿಯರಿಂಗ್, ಮುದ್ರಣ ಉದ್ಯಮ, ಮರಕೆಲಸ, ಆಹಾರ ವಸ್ತುಗಳ ತಯಾರಿಕೆ, ರಾಸಾಯನಿಕ ಕಾರ್ಖಾನೆ, ಸಾಬೂನು ಕಾರ್ಖಾನೆ ಇತ್ಯಾದಿ ಬೆಳೆಯುತ್ತಲಿವೆ. ತೊಗಲಿನ ಮತ್ತು ಉಣ್ಣೆಯ ಅಭಿವೃದ್ಧಿ ಕೇಂದ್ರಗಳಿವೆ. ಸಹಕಾರಿ ಸಕ್ಕರೆ ಕಾರ್ಖಾನೆಯಿದೆ. ವ್ಯಾಪಾರ ವಾಣಿಜ್ಯಕ್ಕೆ ನೆರವಾಗುವ ವಾಣಿಜ್ಯ, ಭೂ ಅಭಿವೃದ್ಧಿ, ಕೇಂದ್ರ ಸಹಕಾರ ಮತ್ತು ಕೈಗಾರಿಕಾ ಸಹಕಾರ ಬ್ಯಾಂಕುಗಳೂ ಅನೇಕ ಸಹಕಾರ ಸಂಘಗಳೂ ನಿಯಂತ್ರಿತ ಮಾರುಕಟ್ಟೆಗಳೂ ಇವೆ.

ಈ ಜಿಲ್ಲೆಯ ಔರಾದ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಬಿಟ್ಟರೆ ಜಿಲ್ಲೆಯಾದ್ಯಂತ ಉತ್ತಮ ಸಾರಿಗೆ ಸಂಪರ್ಕದ ಸೌಲಭ್ಯಗಳಿವೆ. ಔರಾದ ತಾಲ್ಲೂಕಿನಲ್ಲಿ ಕೆಲವೆಡೆ ಪ್ರಯಾಣಕ್ಕೆ ಒಂಟೆಯನ್ನು ಬಳಸುತ್ತಾರೆ. ಅನೇಕ ಪಂಚವಾರ್ಷಿಕ ಯೋಜನೆಗಳಲ್ಲಿ ಈ ತನಕ 3346 ಕಿಮೀ ಉದ್ದದ ರಸ್ತೆ (2001) ಮಾರ್ಗವಿದೆ. ಮುಂಬಯಿ–ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ ಹುಮನಾಬಾದ್, ಬೀದರ್, ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಹಾದುಹೋಗಿದೆ. ಬೀದರ್‌ನಿಂದ ಸುತ್ತಿನ ತಾಲ್ಲೂಕು ಮತ್ತು ಇತರ ಮುಖ್ಯ ಸ್ಥಳಗಳಿಗೆ ರಸ್ತೆ ಸಂಪರ್ಕವಿದೆ. ಕಾರಂಜ ಹಾಗೂ ಮಾಂಜರಾ ನದಿಗಳಿಗೆ ಸೇತುವೆಗಳನ್ನು ಕಟ್ಟಲಾಗಿದ್ದು ಜಿಲ್ಲೆಯ ಸಂಚಾರ ಮಾರ್ಗ ಸುಧಾರಿಸಿದೆ. ದಕ್ಷಿಣ ಮಧ್ಯ ರೈಲ್ವೆಗೆ ಸೇರಿದ ಒಂದು ಮಾರ್ಗ ವಿಕಾರಾಬಾದಿನಿಂದ ಬೀದರ್, ಭಾಲ್ಕಿ ಮುಖಾಂತರ ಪರಳಿ ವೈಜನಾಥಕ್ಕೆ ಹೋಗುತ್ತದೆ. ಈ ಜಿಲ್ಲೆಯ ರೈಲು ಹಾದಿಯ ಉದ್ದ 89 ಕಿಮೀ. ಬೀದರ್‌ನಲ್ಲಿ ಒಂದು ವೈಮಾನಿಕ ತರಬೇತಿ ಶಾಲೆಯಿದೆ. ಆದರೆ ಅದನ್ನು ನಾಗರಿಕ ಉಪಯೋಗಕ್ಕೆ ತೆರೆದಿಲ್ಲ.

ಜಿಲ್ಲೆಯ ಪ್ರಸಿದ್ಧ ಸ್ಥಳಗಳಲ್ಲಿ ಐತಿಹಾಸಿಕ ವೈಭವದ ಬೀದರ್ ಮತ್ತು ಬಸವಕಲ್ಯಾಣ ವಿಖ್ಯಾತವಾಗಿವೆ. ಔರಾದದಲ್ಲಿರುವ ಅಮರೇಶ್ವರ ದೇವಸ್ಥಾನ ಹುಮನಾಬಾದಿನ ವೀರಭದ್ರ ದೇವಸ್ಥಾನ ಬಲುಪ್ರಾಚೀನ ಹಾಗೂ ಪವಿತ್ರ ತಾಣಗಳು. ಹುಮನಾಬಾದಿನ ಮಾಣಿಕ ಪ್ರಭುಗಳ ಮಠ, ಕರಕನಹಳ್ಳಿಯ ಚಿಕ್ಕ ಪ್ರಭುಗಳ ಮಠ, ಬಸವ ಕಲ್ಯಾಣದ ಸದಾನಂದ ಮಠ ಪ್ರಖ್ಯಾತವಾಗಿವೆ. ಬೀದರ್ ಹಾಗೂ ಬಸವಕಲ್ಯಾಣಗಳಲ್ಲಿ ಬಸವ ಮಂಟಪಗಳು ಮತ್ತು ಮಠಗಳು ಇದ್ದು ಅವು ಜಿಲ್ಲೆಯ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾಗಿವೆ. ಈ ಜಿಲ್ಲೆಯ ಅನಂತಶಯನ ದೇವರ ಗುಡಿ, ತಾದಲಾಪುರದ ದತ್ತಾನಂದ ಮಠ, ಸಾಥೋ ಘಾಟ್ ವಿಠಲ ಮಂದಿರ, ಖಾನಾಪುರದ ಮಲ್ಲಾರಿ ದೇವಸ್ಥಾನ, ಬಿದರೆ, ಅಷ್ಟೂರ, ಭಾಲ್ಕಿಗಳಲ್ಲಿರುವ ಕೆಲವು ಮುಸ್ಲಿಂ ದರ್ಗಾಗಳೂ ಪ್ರಸಿದ್ಧವಾದುವು.

ತಾಲ್ಲೂಕು: ಜಿಲ್ಲೆಯ ಪೂರ್ವಭಾಗದಲ್ಲಿರುವ ಈ ತಾಲ್ಲೂಕು ಪಶ್ಚಿಮದಲ್ಲಿ ಭಾಲ್ಕಿ, ದಕ್ಷಿಣ ಮತ್ತು ನೈಋತ್ಯದಲ್ಲಿ ಹುಮನಾಬಾದ್, ಉತ್ತರದಲ್ಲಿ ಔರಾದ ತಾಲ್ಲೂಕುಗಳು, ಪೂರ್ವದಲ್ಲಿ ಆಂಧ್ರ ಪ್ರದೇಶದ ನಿಜಾಮಾಬಾದ್ ಜಿಲ್ಲೆಯಿಂದ ಸುತ್ತುವರೆದಿದೆ. ತಾಲ್ಲೂಕಿನಲ್ಲಿ ಉತ್ತರ ಮತ್ತು ದಕ್ಷಿಣ ಬೀದರ್, ಜಾನವಾಡ, ಕಮಠಾಣ, ಬಾಗದಳ ಮತ್ತು ಮನಹಳ್ಳಿ ವೃತ್ತಗಳಿದ್ದು ಒಟ್ಟು 134 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 926 ಚ.ಕಿಮೀ. ಜನಸಂಖ್ಯೆ 4,05,540.

ಈ ತಾಲ್ಲೂಕಿನ ಹೆಚ್ಚು ಭಾಗ ಜಂಬುಕಲ್ಲಿನ ಮೈದಾನ ಪ್ರದೇಶ. ತಾಲ್ಲೂಕಿನ ಉತ್ತರದಲ್ಲಿ ಮಾಂಜರಾನದಿ ಪೂರ್ವಾಭಿಮುಖವಾಗಿ ಹರಿದು ಔರಾದ ತಾಲ್ಲೂಕಿನಿಂದ ಬೀದರ್ ತಾಲ್ಲೂಕನ್ನು ವಿಂಗಡಿಸಿದೆ. ತಾಲ್ಲೂಕಿನ ಅಂತರ್ಜಲ ಸಂಪತ್ತು ಗಮನಾರ್ಹವಾಗಿದೆ. ಸರಾಸರಿ ವಾರ್ಷಿಕ ಮಳೆ 90 ಸೆಂಮೀ. 4655 ಹೆ. ಅರಣ್ಯ ಪ್ರದೇಶವಿದೆ. ಬತ್ತ, ಜೋಳ, ಸಜ್ಜೆ, ಕಡಲೆ, ಶೇಂಗಾ, ಗೋದಿ, ಕಬ್ಬು, ತೊಗರಿ–ಇವು ಮುಖ್ಯ ಬೆಳೆಗಳು.

ಬೀದರ್ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕಾರ್ಖಾನೆಗಳಿವೆ. ಅವುಗಳೆಂದರೆ ರಾಸಾಯನಿಕ, ತಾಂತ್ರಿಕ, ಖಂಡಸಾರಿ ಘಟಕಗಳು, ಕೈಮಗ್ಗಗಳು, ಬೀದರಿ ವಸ್ತು ತಯಾರಿಕಾ ಘಟಕಗಳಿವೆ. ತಾಲ್ಲೂಕಿನಲ್ಲಿ ಉತ್ತಮ ರಸ್ತೆ ಮಾರ್ಗಗಳಿವೆ. ಹೈದರಾಬಾದ್–ಸೊಲ್ಲಾಪುರ ಮತ್ತು ಹೈದರಾಬಾದ್–ನಾಂದೇಡ್ ಹೆದ್ದಾರಿಗಳು ಇಲ್ಲಿಯ ಮೂಲಕ ಸಾಗಿವೆ. ಜಿಲ್ಲೆಯ ಎಲ್ಲ ಕಡೆಗೂ ಸಾರಿಗೆ ರಸ್ತೆ ಸಂಪರ್ಕವಿದೆ. ವಿಕಾರಾಬಾದ್–ಪರಳಿ ವೈಜನಾಥ ರೈಲುಮಾರ್ಗ ಈ ತಾಲ್ಲೂಕಿನ ಮುಖಾಂತರ ಹಾದು ಹೋಗುತ್ತದೆ.

ಸನಾನಕ ಝರಾದ ಗುರುನಾನಕರ ಉತ್ಸವ, ಝರಣಿ ನರಸಿಂಹ ಕ್ಷೇತ್ರದ ನರಸಿಂಹ ಜಯಂತಿ, ಶಿವರಾತ್ರಿಯ ದಿವಸ ಪಾಪನಾಶಿನಿ ದೇವಾಲಯದಲ್ಲಿ ಜರುಗುವ ಮಹಾ ದೇವ ಜಯಂತಿ ಇಲ್ಲಿಯ ಪ್ರಸಿದ್ಧ ಉತ್ಸವಗಳು. ತಾದಲಾಪುರದ ದತ್ತಾನಂದ ಮಠ ಆನಂದ ಸಂಪ್ರದಾಯಕ್ಕೆ ಸೇರಿದ್ದು. ಈ ದೇವಸ್ಥಾನ ಹಿಂದು ಮುಸ್ಲಿಂ ಬಾಂಧವ್ಯದ ಸಂಕೇತವಾಗಿದೆ.

ಪಟ್ಟಣ: ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣ ಬೀದರ್. ಮಹಮ್ಮದಾಬಾದ್–ಬೀದರ್ ಎಂದೂ ಬಳಕೆಯಲ್ಲಿದೆ. ಬೆಂಗಳೂರಿನ ಉತ್ತರಕ್ಕೆ 670 ಕಿಮೀ ದೂರದಲ್ಲೂ ಗುಲ್ಬರ್ಗದ ಈಶಾನ್ಯಕ್ಕೆ 122 ಕಿಮೀ ದೂರದಲ್ಲೂ ಇರುವ ಪಟ್ಟಣವಿದು. ಇದು ಪುರಸಭಾಡಳಿತಕ್ಕೆ ಒಳಪಟ್ಟಿದೆ. ಜನಸಂಖ್ಯೆ 174,257.

ಬೀದರ್ ಸಮುದ್ರಮಟ್ಟದಿಂದ 644 ಮೀ ಎತ್ತರದ ಪ್ರಸ್ಥಭೂಮಿಯ ಪ್ರದೇಶದಲ್ಲಿದ್ದು ಇಲ್ಲಿಯ ಹವಾಗುಣ ವರ್ಷಪೂರ್ತಿ ಹಿತಕರವಾಗಿರುತ್ತದೆ. ಬೇಸಗೆಯಲ್ಲಿ ಮಾತ್ರ ಸ್ವಲ್ಪ ಸೆಖೆ ಹೆಚ್ಚು. ಇದು ವ್ಯಾಪಾರ ವಾಣಿಜ್ಯ ಕೇಂದ್ರವಾಗಿರುವುದರಿಂದ ಬ್ಯಾಂಕುಗಳು, ನಿಯಂತ್ರಿತ ಮಾರುಕಟ್ಟೆ ಮುಂತಾದವುಗಳಿವೆ. ಇಲ್ಲಿ ಆಲಿವ್ ಎಣ್ಣೆ ತಯಾರಿಸುವ ಉದ್ಯಮ ಉಂಟು. ಬೆಲ್ಲ, ಶೇಂಗಾ ಮತ್ತು ಬಿದರಿನ ವಸ್ತುಗಳು ಇಲ್ಲಿಂದ ರಫ್ತಾಗುತ್ತವೆ. ಬೀದರ್‌ಗೆ ಹೈದರಾಬಾದ್, ನಾಂದೇಡ್, ಗುಲ್ಬರ್ಗಗಳಿಂದ ಉತ್ತಮ ರಸ್ತೆ ಸಂಪರ್ಕವಿದೆ. ಇದು ವಿಕಾರಾಬಾದ್–ಪರಳಿ ವೈಜನಾಥ ರೈಲುಮಾರ್ಗದ ಮುಖ್ಯ ನಿಲ್ದಾಣಗಳಲ್ಲೊಂದು.

ಈ ಸ್ಥಳ ಎತ್ತರವಾದ ಪ್ರಸ್ಥ ಭೂಮಿಯ ಮೇಲಿದ್ದು ಸುತ್ತಮುತ್ತಲ ಪ್ರದೇಶಗಳಿಗಿಂತ ಹಿತಕರವಾದ ಹವೆಯಿಂದ ಕೂಡಿ ಹಸುರು ಗಿಡಮರಗಳಿಂದಾವೃತವಾಗಿ ಬಹಳ ಹಿಂದಿನಿಂದಲೂ ಪ್ರಾಮುಖ್ಯ ಪಡೆದಿದ್ದು, ಮಹಾಭಾರತದ ಕಾಲಕ್ಕೆ ಇದು ವಿದುರ ನಗರವೆಂದು ಪ್ರಸಿದ್ಧಿ ಪಡೆದಿತ್ತೆಂದು ಪ್ರತೀತಿ. *

**ಬೀರೂರು:** ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹೋಬಳಿ ಕೇಂದ್ರ ಮತ್ತು ಪಟ್ಟಣ. ಕಡೂರಿನ ವಾಯವ್ಯಕ್ಕೆ 7 ಕಿಮೀ ದೂರದಲ್ಲಿದೆ. ಜನಸಂಖ್ಯೆ 22,601. ಬೆಂಗಳೂರು, ಪುಣೆ ರೈಲು ಮಾರ್ಗ ಮತ್ತು ಬೆಂಗಳೂರು–ಹೊನ್ನಾವರ ರಸ್ತೆ ಈ ಊರಿನ ಮೂಲಕ ಹಾದುಹೋಗುತ್ತವೆ.

ಇದೊಂದು ಪ್ರಮುಖ ವಾಣಿಜ್ಯ ಕೇಂದ್ರ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಪ್ರಾಮುಖ್ಯತೆಗೆ ಬರುವ ತನಕವೂ ಬೀರೂರು ಅಡಿಕೆ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. ತೆಂಗಿನ ಕಾಯಿ, ಅಡಿಕೆ, ದಿನಸಿ ಸರಕುಗಳ ವ್ಯಾಪಾರ ಈಗ ಗಣನೀಯ ಪ್ರಮಾಣದಲ್ಲಿ ನಡೆಯುತ್ತದೆ. ವ್ಯವಸಾಯಕ್ಕೆ ಸಂಬಂಧಿಸಿದ ಉಪಕರಣಗಳು, ಬಳೆ, ಸುಣ್ಣ ಮುಂತಾದವು ಇಲ್ಲಿ ತಯಾರಾಗುತ್ತವೆ. ಕಂಬಳಿ ತಯಾರಿಸುವ ಮಗ್ಗಗಳೂ ಇವೆ. ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ.

ಕನ್ನಿಕಾಪರಮೇಶ್ವರಿ, ರಾಮದೇವರು, ಆಂಜನೇಯ, ವೀರಭದ್ರ, ಜೈನ ದೇವಾಲಯಗಳಿವೆ. ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ವೀರಭದ್ರಸ್ವಾಮಿ ಜಾತ್ರೆ ನಡೆಯುವುದು. ಸುಗ್ಗಿಯ ಕಾಲದಲ್ಲಿ ನಡೆಯುವ ಅಂತರಘಟ್ಟಪ್ಪನ ಜಾತ್ರೆ ರೈತರಿಗೆ ಮುಖ್ಯವಾದುದು. ದಸರ ಸಮಯದಲ್ಲಿ ಮೈಲಾರಿ ಲಿಂಗನ ಜಾತ್ರೆ ನಡೆಯುವುದು. *

**ಬೀಳಗಿ:** ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವ ಮತ್ತು ಈಶಾನ್ಯ ದಿಕ್ಕಿನಲ್ಲಿ ಬಸವನ ಬಾಗೇವಾಡಿ, ಆಗ್ನೇಯ ಮತ್ತು ದಕ್ಷಿಣ ದಿಕ್ಕಿನಲ್ಲಿ ಬಾಗಲಕೋಟೆ, ನೈಋತ್ಯದಲ್ಲಿ ಮುಧೋಳ, ವಾಯವ್ಯದಲ್ಲಿ ಜಮಖಂಡಿ ಮತ್ತು ಉತ್ತರದಲ್ಲಿ ಬಿಜಾಪುರ ತಾಲ್ಲೂಕುಗಳು ಸುತ್ತುವರಿದಿವೆ. ಜಮಖಂಡಿ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನಲ್ಲಿ ಕಸಬೆ, ಅನಗವಾಡಿ ಹೋಬಳಿಗಳಿದ್ದು 66 ಗ್ರಾಮಗಳಿವೆ. ವಿಸ್ತೀರ್ಣ 782 ಚ.ಕಿಮೀ. ಜನಸಂಖ್ಯೆ 1,41,843. ಈ ತಾಲ್ಲೂಕಿನ ಭಾಗ ಹಿಂದೆ ಉಪತಾಲ್ಲೂಕಾಗಿ ಜಮಖಂಡಿಗೆ ಒಳಪಟ್ಟಿತ್ತು. 1959ರಲ್ಲಿ ಇದೇ ಒಂದು ಪ್ರತ್ಯೇಕ ತಾಲ್ಲೂಕಾಯಿತು.

ಬೀಳಗಿ ಹೆಚ್ಚಿನ ಮಟ್ಟಿಗೆ ಕರಿ ಎರೆಮಣ್ಣಿನ ಮಟ್ಟಸ ಪ್ರದೇಶ. ತಾಲ್ಲೂಕಿನ ಮಧ್ಯಭಾಗದಲ್ಲಿ ಪಶ್ಚಿಮದ ಎಲ್ಲೆಯಿಂದ ಸುಮಾರು ಬೀಳಗಿ ಪಟ್ಟಣದವರೆಗೆ ಕಣಶಿಲೆಯ ಬೆಟ್ಟಪ್ರದೇಶವಿದೆ. ದಕ್ಷಿಣದ ಎಲ್ಲೆಯಲ್ಲಿ ಸಹ ಘಟಪ್ರಭಾ ನದಿಯ ದಂಡೆಗುಂಟ ಚಿಕ್ಕ ಬೆಟ್ಟಗಳ ಸಾಲಿವೆ. ಉತ್ತರ ಗಡಿರೇಖೆಯಾಗಿ ಕೃಷ್ಣಾ ನದಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ದಕ್ಷಿಣ ಮತ್ತು ಪೂರ್ವದ ಗಡಿಯಾಗಿರುವ ಘಟಪ್ರಭಾ ನದಿ ತಾಲ್ಲೂಕಿನ ದಕ್ಷಿಣಭಾಗದಲ್ಲಿ ಕೃಷ್ಣ ನದಿಯನ್ನು ಸೇರುವುದು.

ಇಲ್ಲಿಯ ವಾರ್ಷಿಕ ಸರಾಸರಿ ಮಳೆ 78 ಸೆಂಮೀ. ಜೋಳ, ಹತ್ತಿ, ನೆಲಗಡಲೆ, ಗೋದಿ ಮುಖ್ಯ ಬೆಳೆಗಳು. ಸಜ್ಜೆ, ದ್ವಿದಳಧಾನ್ಯಗಳು ಮತ್ತು ಕಬ್ಬನ್ನು ಬೆಳೆಸುತ್ತಾರೆ. ಘಟಪ್ರಭಾ ಎಡದಂಡೆ ಯೋಜನೆಯಿಂದ ಹೆಚ್ಚು ಭೂಮಿ ವ್ಯವಸಾಯಕ್ಕೆ ಒಳಪಡಲಿದೆ. ತಾಲ್ಲೂಕಿನಲ್ಲಿ ಹತ್ತಿ ಎಕ್ಕುವ ಕಾರ್ಖಾನೆಗಳಿವೆ. ಬಿಜಾಪುರ–ಹುಬ್ಬಳ್ಳಿ ಹೆದ್ದಾರಿ ಈ ತಾಲ್ಲೂಕಿನ ಮಧ್ಯದಲ್ಲಿ ಹಾದು ಹೋಗಿದೆ.

ಗಲಗಲಿ, ಕುಂದರಗಿ, ವಜ್ರಮಟ್ಟಿ, ಮಂಟೂರು, ತೆಗ್ಗಿ, ರೊಳ್ಳಿ, ಅನಗವಾಡಿ ಈ ತಾಲ್ಲೂಕಿನ ದೊಡ್ಡ ಗ್ರಾಮಗಳು, ವಾಯವ್ಯದಲ್ಲಿ ಕೃಷ್ಣ ನದಿಯ ಬಲದಂಡೆಯಲ್ಲಿರುವ ಗಲಗಲಿ ಹಿಂದೆ ಗಾಲವ ಕ್ಷೇತ್ರವೆಂದು ಪ್ರಸಿದ್ಧವಾಗಿತ್ತು. ಎಲ್ಲಮ್ಮನ ಒಂದು ದೇವಾಲಯವೂ ಇದೆ. ಘಟಪ್ರಭಾ ನದಿಯ ಎಡದಂಡೆಯಲ್ಲಿರುವ ಕುಂದರಗಿ ಗ್ರಾಮದ ಕಂಬಳಿಗಳು ಹೆಸರುವಾಸಿಯಾಗಿವೆ. ಅನಗವಾಡಿಯಲ್ಲಿ ಪ್ರಾಚೀನ ಶಿಲಾಯುಗದ ಅವಶೇಷಗಳು ಕಂಡು ಬಂದಿವೆ.

ಬೀಳಗಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಬಿಜಾಪುರದ ದಕ್ಷಿಣದಲ್ಲಿದ್ದು ಬಾಗಲಕೋಟೆಯ ವಾಯವ್ಯಕ್ಕೆ 29 ಕಿಮೀ ದೂರದಲ್ಲಿದೆ. ಜನಸಂಖ್ಯೆ 15,464. 300–400 ವರ್ಷಗಳ ಹಿಂದಿನ ಕೊಳಗಳು ಮತ್ತು ದೇವಾಲಯಗಳೇ ಊರಿನ ಮುಖ್ಯ ಆಕರ್ಷಣೆಗಳೆನಿಸಿವೆ. ಊರಿನ ಉತ್ತರ ಬಾಗಿಲಿನಿಂದ ಸು. 180 ಮೀ ದೂರದಲ್ಲಿ ಆರೆತ್ತಿನ ಬಾವಿ ಇದೆ. ಇದರ ಒಳಗಡೆ ಮಹದೇವ ಮಂದಿರವಿದೆ. ಇಲ್ಲಿಯ ಕನ್ನಡ, ಮರಾಠಿ, ಪಾರಸೀ ಮತ್ತು ಸಂಸ್ಕೃತ ಶಾಸನಗಳ ಪ್ರಕಾರ ಇದು 1708ರಲ್ಲಿ ನಿರ್ಮಿತವಾದದ್ದೆಂದು ತಿಳಿದುಬರುತ್ತದೆ. ಗ್ರಾಮದ ದಕ್ಷಿಣದಲ್ಲಿ ಸಿದ್ಧೇಶ್ವರ ದೇವಾಲಯವಿದ್ದು ಅದರ ಮುಂದೆ ಏಕಶಿಲೆಯಲ್ಲಿ ಕಡೆದಿರುವ ಒಂದು ದೀಪಸ್ತಂಭವಿದೆ. ಇದನ್ನು 1589ರಲ್ಲಿ ನಿರ್ಮಿಸಿದ್ದೆಂದು ಇಲ್ಲಿಯ ಒಂದು ಶಾಸನ ಉಲ್ಲೇಖಿಸುತ್ತದೆ. *

**ಬೀಳು ಭೂಮಿ:** ವ್ಯವಸಾಯಕ್ಕೆ ಅನುಪಯುಕ್ತ ಪ್ರದೇಶ ಹಾಗೂ ಬಂಜರು ಭೂಮಿಯನ್ನು ಹೊರತು ಪಡಿಸಿ, ಹಿಂದೆ ಕೃಷಿ ಚಟುವಟಿಕೆಗೆ ಒಳಪಟ್ಟಿದ್ದು ಈಗ ಅನೇಕ ಕಾರಣದಿಂದ ಯಾವುದೇ ಕೃಷಿ ಚಟುವಟಿಕೆಯನ್ನು ಮಾಡದೆ ಖಾಲಿ ಬಿಟ್ಟಿದ್ದರೆ ಆ ಪ್ರದೇಶವನ್ನು ಬೀಳುಬಿಟ್ಟ ಅಥವಾ ಉತ್ತಿಬಿಟ್ಟ ಭೂಮಿ ಎಂದು ಕರೆಯುವರು. ಒಂದು ನಿರ್ದಿಷ್ಟ ಭೂಮಿಯಲ್ಲಿ ಒಂದು ವರ್ಷಕ್ಕೆ ಕಡಿಮೆ ಇಲ್ಲದ ಹಾಗೂ ಐದುವರ್ಷಕ್ಕಿಂತ ಹೆಚ್ಚಿನ ಅವಧಿಯವರೆಗೆ ವ್ಯವಸಾಯ ಚಟುವಟಿಕೆಗಳು ನಡೆಯದಿದ್ದರೆ ಅದನ್ನು ಬೀಳುಬಿಟ್ಟ ಪ್ರದೇಶ ಎನ್ನಬಹುದು. ಈ ರೀತಿ ವ್ಯವಸಾಯ ಯೋಗ್ಯ ಭೂಮಿಯನ್ನು ಬೀಳುಬಿಡಲು ಅನೇಕ ಕಾರಣಗಳಿರುತ್ತವೆ. ಅವುಗಳಲ್ಲಿ ತಾತ್ಕಾಲಿಕ ನೀರಿನ ಕೊರತೆ, ಕೃಷಿಕರ ನಿರುತ್ಸಾಹ, ಬಂಡವಾಳದ ಕೊರತೆ, ಕಾರ್ಮಿಕರ ಕೊರತೆ, ಮಣ್ಣಿನ ನಿಸ್ಸಾರ ಇನ್ನೂ ಮುಂತಾದವುಗಳ ಕಾರಣದಿಂದ ಕೃಷಿ ವರ್ಷದಲ್ಲಿ ಯಾವುದೇ ಚಟುವಟಿಕೆಯನ್ನು ಕೈಗೊಳ್ಳದೆ ಖಾಲಿ ಬಿಟ್ಟಿರುತ್ತಾರೆ. ಅಲ್ಲದೆ ಒಂದು ವರ್ಷದ ಅವಧಿಯಲ್ಲಿ ಒಂದು ಬೆಳೆಯ ಅನಂತರ ಮತ್ತೊಂದು ಬೆಳೆಯನ್ನು ಬೆಳೆಯದೇ ಭೂ ಹಿಡುವಳಿಯನ್ನು ಖಾಲಿ ಬಿಟ್ಟರೆ ಅದನ್ನು ಪ್ರಚಲಿತ ಬೀಳುಬಿಟ್ಟ ಭೂಮಿ ಎನ್ನಲಾಗುತ್ತದೆ. ಆದುದರಿಂದ ಒಟ್ಟು ಬಿತ್ತನೆ ಪ್ರದೇಶ ಹಾಗೂ ಬೀಳುಬಿಟ್ಟ ಭೂಮಿಗಳ ನಡುವೆ ನೇರ ಸಂಬಂಧವಿರುತ್ತದೆ. ಸರಿಯಾದ ಸಮಯಕ್ಕೆ ಉತ್ತಮ ಮಳೆ, ವಾಯುಗುಣ ಪರಿಸ್ಥಿತಿ, ವ್ಯವಸಾಯ ಸಲಕರಣೆಗಳ ಬೆಲೆ, ಸ್ಥಿರ ರಾಜಕೀಯ, ಗೇಣಿಪದ್ಧತಿ ಮುಂತಾದವು ಪೂರಕವಾಗಿದ್ದರೆ ಒಟ್ಟು ಬಿತ್ತನೆ ಪ್ರದೇಶವನ್ನು ಹೆಚ್ಚಿಸಬಹುದು. (ಎಸ್.ಎಚ್.)

**ಬುಂದೇಲ್ ಖಂಡ:** ಉತ್ತರದಲ್ಲಿ ಯಮುನಾ, ದಕ್ಷಿಣದಲ್ಲಿ ವಿಂಧ್ಯಪರ್ವತಶ್ರೇಣಿ, ಪೂರ್ವದಲ್ಲಿ ಬೆತ್ವಾ ಮತ್ತು ಪಶ್ಚಿಮದಲ್ಲಿ ತಮಸಾ ನದಿಗಳ ನಡುವೆ ಇದ್ದ ಭಾರತದ ಒಂದು ಐತಿಹಾಸಿಕ ಪ್ರದೇಶ. ಇದರ ವಾಯವ್ಯಕ್ಕೆ ಚಂಬಲ ನದಿ ಮತ್ತು ಆಗ್ನೇಯಕ್ಕೆ ಪನ್ನಾ–ಅಜಯಘರ್ ಪರ್ವತಶ್ರೇಣಿಗಳಿವೆ. ಉತ್ತರ ಅಕ್ಷಾಂಶ $24^0$ ಯಿಂದ $26^0 30'$ ಮತ್ತು ಪೂರ್ವ ರೇಖಾಂಶ $78^0 10'$ ಯಿಂದ $81^0 30'$. ಬುಂದೇಲ್‌ಖಂಡ ಇಂದಿನ ಉತ್ತರ ಪ್ರದೇಶದ ಜಾಲಾಂವ್, ಝಾನ್ಸಿ, ಹಮೀರಪುರ ಮತ್ತು ಬಾಂದಾ ಜಿಲ್ಲೆಗಳನ್ನೂ ಮಧ್ಯಪ್ರದೇಶದ ದಾತಿಯಾ ತಿಕಮ್‌ಘರ್ ಛತ್ತರಪುರ ಮತ್ತು ಪನ್ನಾ ಜಿಲ್ಲೆಗಳನ್ನೂ ಭಿಂದ್ ಜಿಲ್ಲೆಯ ಲಹರ್ ಮತ್ತು ಗ್ವಾಲಿಯರ್ ಜಿಲ್ಲೆಯ ಬಂದೆರ್ ತಹಶೀಲುಗಳನ್ನೂ ಒಳಗೊಂಡಿದೆ. ವಿಸ್ತೀರ್ಣ 54,560 ಚ.ಕಿಮೀ.

ಬುಂದೇಲ್‌ಖಂಡದ ಪನ್ನಾ ಜಿಲ್ಲೆಯಲ್ಲಿ ವಜ್ರದ ಗಣಿಗಳಿವೆ. ಅಗೇಟ್ ಎಂಬ ಪ್ರಶಸ್ತ ಶಿಲೆ ಕೇನ್ ನದಿಯ ಪ್ರದೇಶದಲ್ಲಿ ದೊರೆಯುತ್ತದೆ. ಬೆಣಚುಕಲ್ಲು ಮತ್ತು ಮರಳುಗಲ್ಲು ಮುಂತಾದ ಶಿಲೆಗಳೂ ಹೇರಳವಾಗಿವೆ. ಬುಂದೇಲ್‌ಖಂಡದಲ್ಲಿ ಬೆಟ್ಟಗಾಡಿನ ಪ್ರದೇಶವೇ ಹೆಚ್ಚು. ಕೈಗಾರಿಕೆಗಳ ದೃಷ್ಟಿಯಿಂದ ಹಿಂದುಳಿದಿರುವ ಈ ಭಾಗದ ಪ್ರಧಾನ ಉದ್ಯಮಗಳೆಂದರೆ ಕೈಮಗ್ಗದ ಬಟ್ಟೆ ತಯಾರಿಕೆ, ಚರ್ಮ, ಮರಗೆಲಸ ಇತ್ಯಾದಿ. ಇಲ್ಲಿ ಬೇತ್ವಾ, ಧಸಾನ್, ವೀರಮಾ, ಕೇನ್, ವಾಗ ಮುಂತಾದ ನದಿಗಳಿವೆ. ಖಜುರಾಹೊ, ಕಾಲಂಜರ್ ಹಾಗೂ ಮಹೋಬಾ ಬುಂದೇಲ್‌ಖಂಡ ಪ್ರದೇಶದ ಪ್ರಮುಖ ಸ್ಥಳಗಳು.

ಮೊದಲು ಇಲ್ಲಿ ಗೊಂಡ ಜನ ನೆಲಸಿದರು. ವಾಸ್ತವವಾಗಿ ಬುಂದೇಲರು ಕಾಣಿಸಿಕೊಳ್ಳುವುದು 14ನೆಯ ಶತಮಾನದ ಅನಂತರ. ಇವರಿಂದಾಗಿಯೇ ಈ ಪ್ರದೇಶಕ್ಕೆ ಬುಂದೇಲ್ ಖಂಡವೆಂಬ ಹೆಸರು. ಇವರು ಗಾಹದ್ವಾಲ ಶಾಖೆಗೆ ಸೇರಿದವರೆನ್ನಲಾಗಿದೆ. ಬಾಂದಾ ಜಿಲ್ಲೆಯ ಮಾವ್ ಎಂಬಲ್ಲಿ ಆರಂಭವಾದ ಇವರ ಆಳ್ವಿಕೆ ಕ್ರಮೇಣ ಕಾಲಂಜರ್ ಮತ್ತು ಕಾಲ್ಪೀಗಳಿಗೆ ವಿಸ್ತೃತವಾಯಿತು. ಮನೋಣಿ ಇವರ ಮೊದಲ ರಾಜಧಾನಿ. 1776ರಲ್ಲಿ ಬ್ರಿಟಿಷ್ ಸೇನೆ ಈ ಪ್ರದೇಶಕ್ಕೆ ಕಾಲಿಟ್ಟು ಕ್ರಮೇಣ ಬ್ರಿಟಿಷ್ ಸಾರ್ವಭೌಮತ್ವ ಸ್ಥಾಪಿತವಾಯಿತು. ದಕ್ಷಿಣ ಬುಂದೇಲಖಂಡದ ಚಂದೇಲರು ಸಣ್ಣಪುಟ್ಟ ಅಧಿಪರಾಗಿ ಸೆಂಟ್ರಲ್ ಇಂಡಿಯ ಏಜನ್ಸಿಯ ಕೈಕೆಳಗೆ ಇರಬೇಕಾಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಬುಂದೇಲ್‌ಖಂಡ ಪ್ರದೇಶ, ಉತ್ತರಪ್ರದೇಶ ಹಾಗೂ ಮಧ್ಯ ಪ್ರದೇಶಗಳಿಗೆ ಹಂಚಿಹೋಯಿತು. (ಎಚ್.ಎಸ್.ಎಂ.ಆರ್.)

**ಬುಡಕಟ್ಟು:** ಭಾರತೀಯ ನಿರ್ದಿಷ್ಟ ಪ್ರದೇಶದಲ್ಲಿ ನೆಲಸಿದ್ದು, ನಿರ್ದಿಷ್ಟ ಭಾಷೆ ಮಾತಾಡುವ ಒಬ್ಬ ಮೂಲ ಪುರುಷ, ಒಂದು ಅಧಿದೈವ, ಒಬ್ಬ ಸರ್ವಾನುಮತದ ಮುಖ್ಯಸ್ಥನನ್ನು ಹೊಂದಿರುವ, ಏಕಪ್ರಕಾರವಾದ ನೈಸರ್ಗಿಕ ಕಾಯಿದೆ ಕಟ್ಟಳೆ ಅನುಸರಿಸುವ ಮತ್ತು ಸಮಾನ ಸಂಸ್ಕೃತಿ ಹಾಗೂ ಸುಸಂಘಟಿತ ಸಾಮಾಜಿಕ ವ್ಯವಸ್ಥೆಯನ್ನು ರೂಢಿಸಿಕೊಂಡಿರುವ ಸಾಮಾಜಿಕ ಗುಂಪು. ಒಂದು ಸಣ್ಣ, ಸ್ವತಂತ್ರ ಮತ್ತು ಅನ್ಯೋನ್ಯವಾಗಿ ಒಂದುಗೂಡುವ ಜನರ ಸಮೂಹ; ರಕ್ತಸಂಬಂಧದ ಎಳೆಯ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಿಂದ ಬಂಧಿತವಾಗಿರುತ್ತದೆ. ಅದರ ರಾಜಕೀಯ ವ್ಯವಸ್ಥೆ ವ್ಯಾಪಕವಾದ ತಳಹದಿಯ ಮೇಲೆ ಪುರಾತನ ಪ್ರಜಾಪ್ರಭುತ್ವ ಕ್ರಮವನ್ನಾಧರಿಸಿದೆ.

ಸಾಂಸ್ಕೃತಿಕವಾಗಿ ಭಾರತೀಯ ಬುಡಕಟ್ಟುಗಳು ವಿಶಿಷ್ಟ ಗುಣವುಳ್ಳವು. ಭಾರತದಲ್ಲಿ ಇಂದಿಗೂ ಆಹಾರ ಸಂಗ್ರಹಣ ಹಂತದಲ್ಲೇ ಬದುಕು ನಡೆಸುತ್ತಿರುವ ಅನೇಕ ಬುಡಕಟ್ಟು ಜನರಿದ್ದಾರೆ. ಇವರು ನಗರ ಬದುಕಿಗೆ ದೂರವಿದ್ದು ಸರಳ ಸಾಮಾಜಿಕ ವ್ಯವಸ್ಥೆ ಹೊಂದಿದ್ದಾರೆ (ಅಂಡಮಾನ್ ದ್ವೀಪನಿವಾಸಿಗಳು, ಕಾಡಾರರು). ಅಂಡಮಾನ್ ದ್ವೀಪವಾಸಿಗಳು ಉತ್ತಮ ನೆಲೆ ದೊರಕಿಸಿಕೊಳ್ಳುವುದಕ್ಕಾಗಿ ಒಳ್ಳೆಯ ಆಹಾರ ಪಡೆಯುವುದಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಾರೆ. ಆದರೆ ಈ ಸಂಚಾರ ಗೊತ್ತಾದ ಗಡಿರೇಖೆಯೊಳಗೆ ನಡೆಯುತ್ತದೆ. ಕೆಲವು ಬುಡಕಟ್ಟುಗಳು ಹುಲ್ಲುಗಾವಲಿನಲ್ಲಿ ನೆಲಸಿ ಜೀವನ ನಡೆಸುತ್ತಿವೆ. ನಾಗರಿಕತೆಯ ಸ್ಪರ್ಶವೇ ಇಲ್ಲದಿರುವ ಸಂಕೀರ್ಣ ಮಾದರಿಯ ಸಾಮಾಜಿಕ ವ್ಯವಸ್ಥೆ ಹೊಂದಿದ ಜನ. ಇವರು (ತೋಡರು) ಗುಡ್ಡ ಬೆಟ್ಟಗಳಲ್ಲಿ ವಾಸಿಸುತ್ತಿದ್ದು ಸ್ಥಳಾಂತರ ಕೃಷಿಕ್ರಮ ಉಳಿಸಿಕೊಂಡಿರುವ, ಪ್ರಗತಿಪರ ಸಾಮಾಜಿಕ ವ್ಯವಸ್ಥೆ ಹೊಂದಿರುವ ಬುಡಕಟ್ಟುಗಳೂ ಇವೆ (ಖಾಸಿ ನಾಗ). ಕೆಲವು ಬುಡಕಟ್ಟುಗಳು ಕೃಷಿಯನ್ನೇ ಪ್ರಧಾನ ವೃತ್ತಿಯಾಗಿ ಅವಲಂಬಿಸಿದ್ದು ಹೆಚ್ಚು ಅಭಿವೃದ್ಧಿಪರವಾದ ಸಾಮಾಜಿಕ ವ್ಯವಸ್ಥೆ ಹೊಂದಿದ್ದು ನಾಗರಿಕ ಜೀವನದಿಂದ ಪ್ರಭಾವಿತವಾಗಿವೆ (ಗೋಂಡ್, ಭಿಲ್, ಸಂತಾಲ್, ಒರಾಓ).

ವೈವಿಧ್ಯದಲ್ಲಿ ಏಕತೆ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಇಲ್ಲಿಯ ಬುಡಕಟ್ಟುಗಳು ಭಾರತದ ವಿವಿಧ ಭಾಗಗಳಲ್ಲಿ ಚದರಿದಂತೆ ನೆಲಸಿದ್ದರೂ ಇವುಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಗುರುತಿಸಬಹುದಾದ ಹಲವಾರು ಸಾಮ್ಯತೆಗಳಿವೆ. ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಭಿನ್ನತೆ ಪಡೆದಿರುವ ಬುಡಕಟ್ಟು ಜನರ ಬೇರೆ ಬೇರೆ ದೈವಗಳಿಗೆ ನಡೆದುಕೊಳ್ಳುತ್ತಾರೆ. (ಎ.ಎಚ್.)

**ಬುಧ:** ಸೌರ ಮಂಡಲದ ಒಂದು ಗ್ರಹ. ಸೂರ್ಯನಿಗೆ ಅತ್ಯಂತ ಸಮೀಪದಲ್ಲಿರುವ ಗ್ರಹ (ಮರ್ಕ್ಯುರಿ) ಹಾಗೂ ಅತ್ಯಂತ ಚಿಕ್ಕದು. ಭೂ ಕಕ್ಷೆಯ ಒಳಗೆ ಇದರ ಕಕ್ಷೆ ಇರುವುದರಿಂದ ಇದನ್ನು ನೀಚಗ್ರಹವೆಂದು ಕರೆಯುತ್ತಾರೆ. ಚಂದ್ರನಿಗೆ ಇರುವಂತೆ ಈ ಗ್ರಹಕ್ಕೆ ವಿವಿಧ ಕಲೆಗಳುಂಟು. ಇದನ್ನು ಮೊದಲಿಗೆ ಹೀವೀಲಿಯಸ್ ಎಂಬುವನು ಪತ್ತೆಮಾಡಿದ್ದ.

ಬುಧಗ್ರಹ ಸೂರ್ಯನಿಗೆ ಅತಿ ಸಮೀಪದಲ್ಲಿರುವುದರಿಂದ ಇದನ್ನು ನೋಡಲು ಕಷ್ಟ. ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತದ ಅನಂತರ ಸ್ವಲ್ಪಕಾಲ (1 ಗಂ. 30 ನಿ.) ನೋಡಲು ಸಾಧ್ಯ. ಇದು ಸೂರ್ಯನಿಂದ 57.9 ಮಿ. ಕಿಮೀ ದೂರದಲ್ಲಿದೆ, ವ್ಯಾಸ 4880 ಕಿಮೀ. ಇದು ಭೂಮಿಯ ವ್ಯಾಸದ 2/5 ರಷ್ಟಿದೆ. ತನ್ನ ಅಕ್ಷದಲ್ಲಿ 58 ದಿನ ಮತ್ತು 17 ಗಂಟೆಗಳಿಗೊಮ್ಮೆ ಭ್ರಮಿಸುತ್ತ ಸೂರ್ಯನ ಸುತ್ತ 88 ದಿನಗಳಿಗೊಮ್ಮೆ ಪರಿಭ್ರಮಿಸುವುದು. ಇದರ ಒಂದು ಭಾಗ ಸೂರ್ಯನಿಗೆ ಅಭಿಮುಖವಾಗಿದ್ದು ಆ ಭಾಗ ಹಗಲಾಗಿರುತ್ತದೆ. ಹಾಗೂ ಅತಿ ಶಾಖದಿಂದ ಕೂಡಿರುತ್ತದೆ. ವಿರುದ್ಧ ಭಾಗವು ಕತ್ತಲಾಗಿದ್ದು ಅತಿ ಶೀತವಾಗಿರುತ್ತದೆ ($-268^0$ಸೆ.). ಅತ್ಯಂತ ಕಡಿಮೆ ಗುರುತ್ವಾಕರ್ಷಣ ಶಕ್ತಿಯುಳ್ಳ ಈ ಗ್ರಹ ಅನಿಲಗಳನ್ನು ಹೊಂದಿರಲು ಸಾಧ್ಯವಿಲ್ಲ. ಇದರಲ್ಲಿ ಇಂಗಾಲದ ಡೈ–ಆಕ್ಸೈಡ್ ಮಾತ್ರ ಕಂಡುಬರುವುದು. ಇದು ಯಾವುದೇ ಜೀವಿಯ ಅಸ್ತಿತ್ವವನ್ನು ಹೊಂದಿಲ್ಲ. ಚಂದ್ರನಿಗೂ ಮತ್ತು ಈ ಗ್ರಹಕ್ಕೂ ಸಾಮತ್ಯೆಯಿದೆ. (ಆರ್.ಆರ್.ಯು.)

**ಬುರ್ಕಿನ ಫ್ಲಾಸೋ:** ಭೂವೇಷ್ಟಿತ ದೇಶ. ಆಫ್ರಿಕ ಖಂಡದ ಪಶ್ಚಿಮದಲ್ಲಿರುವ ಇದು ಸಹಾರ ಮರುಭೂಮಿಯ ದಕ್ಷಿಣಕ್ಕಿದೆ. ಈ ರಾಷ್ಟ್ರ 30 ಪ್ರಾಂತ್ಯವಾಗಿ ವಿಂಗಡಿಸಲ್ಪಟ್ಟಿದೆ. 1960ರಲ್ಲಿ ಫ್ರಾನ್ಸ್‌ನಿಂದ ಸ್ವತಂತ್ರ ಪಡೆದುಕೊಂಡಿತು. ಅಪ್ಪರ್ ವೋಲ್ಟ ಎಂಬುದು ಹಿಂದಿನ ಹೆಸರು.

ಇದು 2,74,200 ಚ.ಕಿಮೀ ವಿಸ್ತೀರ್ಣವನ್ನು ಹೊಂದಿದೆ. ದಕ್ಷಿಣೋತ್ತರವಾಗಿ 1300 ಕಿಮೀ ಮತ್ತು ಪೂರ್ವ ಪಶ್ಚಿಮವಾಗಿ 200 ಕಿಮೀ ಹಬ್ಬಿರುತ್ತದೆ. ಇದರ ಒಟ್ಟು ಗಡಿ ಪ್ರದೇಶ 3,193 ಕಿಮೀ ಇದರ ಭೌಗೋಳಿಕ ಹಂಚಿಕೆಯು $8^0$ ಉ.ಅ. ದಿಂದ $15^0$ಉ.ಅ. ಹಾಗೂ $4^0$ ಪೂರೇ. ದಿಂದ $8^0$ ಪ.ರೇ. ಗಳವರೆಗೆ ಇರುವುದು.

ಈ ದೇಶದ ಪಶ್ಚಿಮ ಹಾಗೂ ದಕ್ಷಿಣದಲ್ಲಿ ಹೇರಳವಾಗಿ ಹರಡಿಕೊಂಡಿರುವ ಮರಳುಗಲ್ಲು ಪ್ರದೇಶ ಶುಷ್ಕ ಹಾಗೂ ಶಿಲಾವೃತ. ದೇಶದ ಉದ್ದಗಲಕ್ಕೂ ಸಮತಟ್ಟಾದ ಭೂಮೇಲ್ಮೈಸ್ವರೂಪವನ್ನು ಒಳಗೊಂಡಿದೆ. ಆಗ್ನೇಯ ಮತ್ತು ಪಶ್ಚಿಮ ಭಾಗಗಳಲ್ಲಿ ಪರ್ವತಗಳು ಕಂಡುಬರುತ್ತವೆ. ವರ್ಷವಿಡೀ ಅಧಿಕ ಉಷ್ಣತೆ, ಮಳೆ ಕಡಿಮೆ. ಇಲ್ಲಿ ಎತ್ತರವಾದ ಭೂಭಾಗ ಕಾತೇನಾಕಾರು (749 ಮೀ.) ಮತ್ತು ತಗ್ಗಾದ ಪ್ರದೇಶ ಮೌಡೌನ್.

ಭೂಬಳಕೆ ಶೇ. 10 ರಷ್ಟು ಕೃಷಿಗೆ ಯೋಗ್ಯ, ಶೇ. 37 ಹುಲ್ಲುಗಾವಲು, ಶೇ. 26 ಅರಣ್ಯ, ಶೇ. 27 ಇತರ ಉಪಯೋಗಕ್ಕೆ ಅಳವಡಿಸಲಾಗಿದೆ. ಈ ದೇಶದ ಪ್ರಮುಖ ಬೆಳೆಗಳೆಂದರೆ ನೆಲಗಡಲೆ, ಹತ್ತಿ, ಎಳ್ಳು, ಬತ್ತ ಮತ್ತು ದವಸ ಧಾನ್ಯಗಳು.

ಉದ್ಯಮ : ಕೃಷಿ ಉತ್ಪನ್ನಗಳ ಸಂಸ್ಕರಣೆ, ಮದ್ಯತಯಾರಿಕೆ ಬಟ್ಟೆಗಿರಣಿ ಸಿಮೆಂಟು ಮತ್ತು ಇಟ್ಟಿಗೆ ಉತ್ಪಾದನೆ ಈ ರಾಷ್ಟ್ರದ ಪ್ರಮುಖ ಉದ್ಯಮಗಳು.

ನೈಸರ್ಗಿಕ ಸಂಪತ್ತು : ಮ್ಯಾಂಗನೀಸ್, ಸುಣ್ಣದ ಕಲ್ಲು, ಅಮೃತಶಿಲೆ, ಅಲ್ಪ ಪ್ರಮಾಣದಲ್ಲಿ ಚಿನ್ನ, ತಾಮ್ರ, ನಿಕಲ್, ಬಾಕ್ಸೈಟ್ ಮತ್ತು ಆ್ಯಂಟಿಮಾನಿ.

ಪ್ರಮುಖ ನಗರಗಳು : ಊಗಡೌಗು (ರಾಜಧಾನಿ). ಜನಸಂಖ್ಯೆ, 500000 (2002). ಬೋಬೋಡಿ ಯಾಲಸೋ.

ಪ್ರಮುಖ ನದಿಗಳು : ನಾಕಾಂಬೇ ಮತ್ತು ನಜನಾನ್. ಬೇಸಗೆಯಲ್ಲಿ ನೀರಿನ ಅಭಾವ ಸರ್ವೇಸಾಮಾನ್ಯ.

ಈ ದೇಶದ ಒಟ್ಟು ಜನಸಂಖ್ಯೆ 13,902,972. ಇದರಲ್ಲಿ ಶೇ. 65 ರಷ್ಟು ಸ್ಥಳೀಯರು, ಶೇ. 25 ರಷ್ಟು ಮುಸ್ಲಿಮರು ಮತ್ತು ಶೇ. 10 ರಷ್ಟು ಕ್ರಿಶ್ಚಿಯನ್ನರು. ಇಲ್ಲಿನ ರಾಷ್ಟ್ರಭಾಷೆ ಫ್ರೆಂಚ್, ಶೇ. 78 ರಷ್ಟು ಸಾಕ್ಷರತೆಯನ್ನು ಹೊಂದಿದೆ. ದೇಶ ಆಹಾರ ಧಾನ್ಯಗಳ ಆಮದಿನ ಮೇಲೆ ಅವಲಂಬಿತವಾಗಿದೆ.

ಜನಸಂಖ್ಯೆ ಬೆಳವಣಿಗೆಯ ದರ ಶೇ. 3, ಜನನ ಪ್ರಮಾಣ ದರ ಪ್ರತಿ ಸಾವಿರಕ್ಕೆ ಶೇ. 45.62 ಹಾಗೂ ಮರಣ ದರ ಶೇ. 15.6. ವಯೋಮಾನದ ಅನುಸಾರ ಈ ರಾಷ್ಟ್ರದಲ್ಲಿ 14 ವರ್ಷಕ್ಕೆ ಒಳಪಟ್ಟವರು ಶೇ. 48 ರಷ್ಟು, 15 ರಿಂದ 64 ವರ್ಷ ವಯೋಮಾನದವರ ಸಂಖ್ಯೆ ಶೇ. 50.7 ಹಾಗೂ 65 ವರ್ಷ ಮೇಲ್ಪಟ್ಟವರ ಸಂಖ್ಯೆ ಶೇ. 2.5 ರಷ್ಟು.

ಈ ರಾಷ್ಟ್ರ ಸು. 12,506 ಕಿಮೀ ಉದ್ದವಾದ ರಸ್ತೆ ಸಂಪರ್ಕ, 622 ಕಿಮೀ ಉದ್ದವಾದ ರೈಲು ಸಂಪರ್ಕವನ್ನು ಹೊಂದಿದೆ. ಸು. 34 ಸಾರಿಗೆ ವಿಮಾನಗಳು ಸೇವೆಯಲ್ಲಿವೆ.

ಜನ ಜೀವನ ಹಾಗೂ ಆಡಳಿತ: ಇಲ್ಲಿನ ಜನರನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಪಶ್ಚಿಮ ಹಾಗೂ ನೈಋತ್ಯ ಭಾಗದಲ್ಲಿರುವವರು ಪುರಾ ನಿಗ್ರೀಷಿಯೊ ಆದಿವಾಸಿ ಜನ. ಇವರು ವಿರಳ ವಸ್ತ್ರಧಾರಿಗಳು. ಈ ಜನರ ಮುಖ್ಯ ಕಸುಬು ಬೇಸಾಯ, ಬೇಟೆ ಮತ್ತು ಇಲ್ಲಿ ಕುಲಾಡಳಿತಕ್ಕಿಂತ ಹೆಚ್ಚಿನ ಆಡಳಿತ ವ್ಯವಸ್ಥೆಯಿಲ್ಲ. ಉಳಿದ ಭಾಗಗಳಲ್ಲಿನ ಜನ ಸೂಡಾನ್ ಮಾದರಿಯ ತುಂಬುಡುಪು ಧರಿಸುತ್ತಾರೆ. ಇವರಲ್ಲಿ ಊಳಿಗಮಾನ್ಯ ರೀತಿಯ ಹಲವಾರು ಆಡಳಿತವ್ಯವಸ್ಥೆಗಳುಂಟು.

ಇವರಲ್ಲಿ ಬಹುಸಂಖ್ಯೆಯ ಜನ ಪ್ರಕೃತಿಯ ಆರಾಧಕರು. ಈಚೆಗೆ ಇಲ್ಲಿ ಕ್ರೈಸ್ತ ಧರ್ಮ ಪ್ರಚಾರವಾಗುತ್ತಿದೆ. ಮುಸ್ಲಿಮರೂ ಇದ್ದಾರೆ. ಹಲವು ವೊಲ್ಟಾಯಿಕ್ ಭಾಷೆಗಳನ್ನಾಡುವ ಇಲ್ಲಿನ ಜನರ ಅಧಿಕೃತ ಹಾಗೂ ವಾಣಿಜ್ಯ ಭಾಷೆ ಫ್ರೆಂಚ್.

ಅರ್ಥವ್ಯವಸ್ಥೆ: ಇಲ್ಲಿರುವವರು ಬಹುತೇಕ ರೈತಜನ, ವ್ಯವಸಾಯ ಪಶುಪಾಲನೆಗಳು ಇವರ ಮುಖ್ಯ ಉದ್ಯೋಗ. ಆದರೆ ಒಟ್ಟು ನೆಲದಲ್ಲಿ ಬೇಸಾಯವಾಗುತ್ತಿರುವ ಭಾಗ 6% ಮಾತ್ರ. ಜನಸಂದಣಿ ಹೆಚ್ಚಾಗಿರುವುದರಿಂದ ಜೋಳ, ಮೆಕ್ಕೆಜೋಳ, ಸಾರ್ಗಂ, ಬತ್ತ ಮುಂತಾದ ಆಹಾರ ಬೆಳೆಗಳೇ ಹೆಚ್ಚು. ನೆಲಗಡಲೆ, ಮರಬೆಣ್ಣೆ, ಹತ್ತಿ ಮುಂತಾದ ನಿರ್ಯಾತ ಬೆಳೆಗಳಿಗೆ ಹೆಚ್ಚು ನೆಲ ಮೀಸಲಿಡುವುದು ಸಾಧ್ಯವಾಗಿಲ್ಲ. ಉತ್ತಮ ವ್ಯವಸಾಯ, ನೆಲದ ನಗ್ನೀಕರಣದ ತಡೆ, ನದಿಕಟ್ಟೆ ರಚನೆ ಇವುಗಳಿಂದ ಪರಿಸ್ಥಿತಿ ಸುಧಾರಿಸುತ್ತಿದೆ. ಪಶುಪಾಲನೆಗೆ ಸರ್ಕಾರ ಹೆಚ್ಚು ಗಮನ ಕೊಡುತ್ತಿದೆ. ನದಿ ಮೀನುಗಳೂ ವನಗಳ ಸಂಪತ್ತೂ ವಾಣಿಜ್ಯ ದೃಷ್ಟಿಯಿಂದ ಮುಖ್ಯವಾದವು.




ಚಿನ್ನ, ಬಾಕ್ಸೈಟ್, ಮ್ಯಾಂಗನೀಸ್ ನಿಕ್ಷೇಪಗಳಿವೆಯಾದರೂ ಗಣಿಗಾರಿಕೆ ಹೆಚ್ಚಾಗಿ ಬೆಳೆದಿಲ್ಲ. ಕಚ್ಚಾ ಸಾಮಾಗ್ರಿ ಹಾಗೂ ಶಕ್ತಿಯ ಅಭಾವದಿಂದ ಕೈಗಾರಿಕೆಯ ಬೆಳವಣಿಗೆ ಕಡಿಮೆ. ವಾಗಡೂಗೂವಿನ ಕಟ್ಟಡ ನಿರ್ಮಾಣ, ಬೋಬೋ ಡೈಯೂಲಾಸೊವಿನ ಎಣ್ಣೆ ಗಿರಣಿ, ಸಕ್ಕರೆ ಕಾರ್ಖಾನೆ, ಹತ್ತಿ ಹಿಂಜುವ ಉದ್ಯಮ ಇವು ಮುಖ್ಯ ಕೈಗಾರಿಕೆಗಳು. 1963 ರಿಂದೀಚೆಗೆ ಈ ದೇಶ ಅಭಿವೃದ್ಧಿ ಯೋಜನೆಯ ಹಾದಿಯಲ್ಲಿ ಸಾಗಿದೆ.

ಈ ರಾಜ್ಯಕ್ಕೆ ಸಮುದ್ರ ತೀರವಿಲ್ಲ. ಅಂತರ್‌ದೇಶೀಯ ಭೂಮಾರ್ಗಗಳು ಈ ರಾಜ್ಯದ ಮೂಲಕ ಹಾದುಹೋಗುತ್ತವೆ. ವಿದೇಶೀ ವ್ಯಾಪಾರ ನಡೆಯುವುದು ಬಹಳಮಟ್ಟಿಗೆ ಐವರಿ ಕೋಸ್ಟ್ ಮೂಲಕ. ವಾಗಡೂಗೂ ಹಾಗೂ ಬೋಬೋ ಡೈಯೂಲಾಸೊ ಮುಖ್ಯವಾದ ರಸ್ತೆ ರೈಲು ಹಾಗೂ ವಿಮಾನ ಮಾರ್ಗಗಳ ಸಂಧಿ ಸ್ಥಾನಗಳು. (ವಿ.ಎಸ್.ಎ.)

**ಬುಷ್‌ಮನ್:** ದಕ್ಷಿಣ ಆಫ್ರಿಕದ ಒಂದು ಆದಿವಾಸಿ ಜನಾಂಗ. ಇವರು ಶಾರೀರಿಕ ಮತ್ತು ಭಾಷಿಕ ಲಕ್ಷಣಗಳಲ್ಲಿ ಹಾಟನ್‌ಟಾಟ್ ಜನರನ್ನು ತುಂಬ ಹೋಲುತ್ತಾರೆ. ಕೆಲವೊಮ್ಮೆ ಇವೆರಡೂ ಜನರನ್ನು ಖೊಯ್ಸನ್ ಎಂಬ ಹೆಸರಿನಿಂದ ಕರೆಯಲಾಗಿದೆ. ಇಂದು ಬುಷ್‌ಮನ್‌ರ ಸಂಖ್ಯೆ ಸು. 55,000 ಎಂದು ಅಂದಾಜು ಮಾಡಲಾಗಿದೆ. ಬೆಚುವನ್ ಲ್ಯಾಂಡ್, ನೈಋತ್ಯ ಆಫ್ರಿಕ ಮತ್ತು ಅಂಗೋಲಗಳ ಶುಷ್ಕ ಪ್ರದೇಶಗಳಲ್ಲಿ ಹಂಚಿಹೋಗಿರುವ ಈ ಜನಾಂಗ ಹಿಂದೊಮ್ಮೆ ದಕ್ಷಿಣ ಮತ್ತು ಪೂರ್ವ ಆಫ್ರಿಕದ ಎಲ್ಲ ಕಡೆಯೂ ವಾಸಿಸುತ್ತಿದ್ದರೆಂದು ಮಾನವ ಪಳೆಯುಳಿಕೆಗಳ ಅಧ್ಯಯನದಿಂದ ತಿಳಿದುಬರುತ್ತದೆ. ಮಧ್ಯ ಶಿಲಾಯುಗದ ಬಾಸ್ಕೊಪಾಯ್ಡ್ ಪೂರ್ವಜರಿಂದ ಬುಷ್‌ಮನ್ನರು ಉಗಮಿಸಿದರೆಂದು ಹೇಳಲಾಗಿದೆ. ಭಾಷಿಕವಾಗಿ ಈ ಜನರನ್ನು ಉತ್ತರ, ಮಧ್ಯ ಮತ್ತು ದಕ್ಷಿಣ ಬುಷ್ ಮನ್ನರೆಂದು ಮೂರು ಗುಂಪುಗಳಾಗಿ ವಿಂಗಡಿಸಿದೆ; ಇವುಗಳಲ್ಲಿ ಕೊನೆಯ ಗುಂಪು ಬಲುಮಟ್ಟಿಗೆ ನಶಿಸಿಹೋಗಿದೆ. ಉಳಿದೆರಡು ಗುಂಪುಗಳು ಬಂಟು ಮತ್ತು ಯುರೋಪಿಯನ್

ಜನರೊಡನೆ ಉಂಟಾದ ಸಂಬಂಧ ಸಂಪರ್ಕಗಳಿಂದಾಗಿ ತಮ್ಮ ಅಲೆಮಾರಿ ಸ್ವಭಾವ ಬಿಟ್ಟು ನೆಲೆನಿಂತಿವೆ. ಹಾಟನ್‌ಟಾಟ್ ಜನರನ್ನು ಹೊರತುಪಡಿಸಿ ಬುಷ್‌ಮನ್ನರನ್ನು ಮೊದಲ ನೋಟದಲ್ಲಿಯೆ ಸುಲಭವಾಗಿ ಗುರುತಿಸಲು ಸಾಧ್ಯ. ಸಣ್ಣ ಆಕೃತಿ, ಸುರುಳಿ ಸಿಂಬಿ ಕೂದಲಿನ ಸಣ್ಣತಲೆ, ತ್ರಿಕೋನಾಕಾರವನ್ನು ಹೋಲುವ ಮುಖ, ಚಪ್ಪಟೆಮೂಗು, ತುಸು ಓರೆಯಾದ ಕಣ್ಣು, ಪುಟ್ಟ ಅಂಗೈ ಅಂಗಾಲುಗಳಿಂದ ಕೂಡಿದ ಈ ಜನರು ಹಳದಿ ಅಥವಾ ಹಳದಿಮಿಶ್ರಿತ ಕಂದುಬಣ್ಣದ ಆರೋಗ್ಯವಂತ ದೃಢಕಾಯರು.

ಬುಷ್‌ಮನ್ ದಂಪತಿಗಳು

ಈಗ ಕಲಹರಿ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಮಾತ್ರವೆ ಅಪ್ಪಟ ಬುಷ್ ಮನ್ನರು ಕಾಣಸಿಗುತ್ತಾರೆ. ಕಳೆದ ಶತಮಾನದಲ್ಲಿ ಇವರು ಹೆಚ್ಚು ಪ್ರದೇಶಗಳಲ್ಲಿ ಕಂಡುಬರುತ್ತಿದ್ದ ವಿಷಯ ಯುರೋಪಿಯನ್ ಪ್ರವಾಸಿಗರ ವೃತ್ತಾಂತಗಳಿಂದ ತಿಳಿದುಬರುತ್ತದೆ. ಬುಷ್ ಮನ್ನರ ಜೀವನ ವಿಧಾನವನ್ನು ತಿಳಿಯಲು ಈ ವೃತ್ತಾಂತಗಳು ಬಲುಮಟ್ಟಿಗೆ ಸಹಾಯಕವಾಗಿವೆ. ಬುಷ್‌ಮನ್ನರ ಭೌತಿಕ ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆ ಅತ್ಯಂತ ಸರಳವಾದುದ್ದು. ಮೂವತ್ತರಿಂದ ನೂರರವರೆಗೆ ಸಣ್ಣ ಸಣ್ಣ ಬೇಟೆ ಗುಂಪುಗಳಾಗಿ ವಾಸಿಸುವ ಈ ಜನರಿಗೆ ಆಯಾ ಗುಂಪಿನ ಹಿರಿಯ ಅನುಭವಿಯ ಮಾರ್ಗದರ್ಶನವಿರುತ್ತದೆ. ಪ್ರಾಣಿಗಳ ಸ್ವಭಾವ ಇವರಿಗೆ ಸುಪರಿಚಿತ. ದನಕರುಗಳನ್ನು ಬೇಟೆಯಾಡುತ್ತಿದ್ದುದರಿಂದ ಸ್ವಾಭಾವಿಕವಾಗಿಯೆ ಇವರಿಗೂ ರೈತಾಪಿವರ್ಗದ ಜನರಿಗೂ ತಿಕ್ಕಾಟ ಉಂಟಾಯಿತು; ಪರಿಣಾಮವಾಗಿಯೆ ಬುಷ್‌ಮನ್ನರು ಪಲಾಯನ ಮಾಡುತ್ತ ಕಲಹರಿ ಮರುಭೂಮಿಯತ್ತ ಸಾಗಬೇಕಾಯಿತು. ಇವರ ಮುಖ್ಯ ಆಯುಧ ಬಿಲ್ಲು ಮತ್ತು ವಿಷಪೂರಿತ ಬಾಣ. ಗಂಡಸರು ಬೇಟೆ ಮತ್ತು ಜೇನು ಸಂಗ್ರಹಣೆಯಲ್ಲಿ ನಿರತರಾಗಿದ್ದರೆ ಹೆಂಗಸರು ಗೆಡ್ಡೆಗೆಣಸುಗಳನ್ನು ಶೇಖರಿಸುತ್ತಾರೆ. ಇವರಿಗೆ ನಿರ್ದಿಷ್ಟ ಆಹಾರವೆಂಬುದಿಲ್ಲ. ಹಾವು ಹುಳು, ಹಲ್ಲಿ ಸಹ ಇವರ ಆಹಾರ; ಇರುವೆ ಮೊಟ್ಟೆ ಹೆಚ್ಚುಪ್ರಿಯ. ಇವರು ಆಡುವ ಭಾಷೆ ಹಾಟನ್‌ಟಾಟರು ಆಡುವ ಭಾಷೆಗೆ ಹತ್ತಿರವಾದುದ್ದು. ಏಕಾಕ್ಷರ ಲಿಪಿಯಿಂದ ಕೂಡಿದ ಇವರ ಭಾಷೆ ಉಚ್ಚಾರಮಾಡಲು ಕಷ್ಟವಾದದ್ದು. ಇದನ್ನು ಕ್ಲಿಕ್ ಲ್ಯಾಂಗ್ವೇಜ್ ಎಂದು ಕರೆಯುತ್ತಾರೆ.

ಪ್ರಾಣಿಚರ್ಮ, ಮರದ ತೊಗಟೆ ಹಾಗೂ ಎಲೆಗಳಿಂದ ಇವರು ತಮ್ಮ ಉಡುಪನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಗಂಡಸರು ತೀರ ಕಡಿಮೆ ಬಟ್ಟೆ, ಹೆಂಗಸರು ಸೊಂಟದಿಂದ ಮೊಣಕಾಲಿನವರೆಗೆ ಮಾತ್ರ ಬಟ್ಟೆ ಧರಿಸುತ್ತಾರೆ. ರಾತ್ರಿಯ ವೇಳೆ ಚಳಿ ಮತ್ತು ಹಿಮದಿಂದ ರಕ್ಷಿಸಿಕೊಳ್ಳಲು ಟೋಪಿ ಧರಿಸುವುದುಂಟು. ಗಾಳಿ ತಡೆಯುವ ತಡಿಕೆಗಳಷ್ಟೆ ಇವರ ಆಶ್ರಯಸ್ಥಾನ. ಹಿಂದೆ ಎಂದರೆ ಕಲಹರಿ ಪ್ರದೇಶಕ್ಕೆ ವಲಸೆಹೋಗುವ ಮೊದಲು ಇವರ ವಸತಿ ನಿಸರ್ಗದತ್ತವಾದ ಗುಹೆ ಅಥವಾ ಕಲಾತ್ಮಕ ಗುಣದವಾಗಿದ್ದು ಗಮನಾರ್ಹವೆನಿಸಿವೆ. ಈ ಗುಹೆಗಳಲ್ಲಿನ ಚಿತ್ರಗಳು ಉತ್ತರ ಶಿಲಾಯುಗದ ಬುಷ್‌ಮನ್ನರ ಜೀವನ ಮತ್ತು ಹವ್ಯಾಸಗಳನ್ನು ಕುರಿತ ಒಂದು ಪ್ರಮುಖ ದಾಖಲೆ ಎನಿಸಿವೆ. ಇವುಗಳಲ್ಲಿ ಬೇಟೆ ಮತ್ತು ಗೃಹ ಜೀವನಕ್ಕೆ ಸಂಬಂಧಿಸಿದ ದೃಶ್ಯಗಳಿವೆ. ಇಂದು ಕೆಲವು ಭಾಗಗಳಲ್ಲಿ ಬುಷ್‌ಮನ್ನರು ವಾಸಿಸುತ್ತಿದ್ದ ಕುರುಹುಗಳು ಹೇರಳವಾಗಿ ಕಂಡುಬಂದರೂ ಆ ಭಾಗಗಳಲ್ಲಿ ಬುಷ್‌ಮನ್ನರು ಕಾಣಸಿಗುವುದಿಲ್ಲ. (ಕೆ.ಎನ್.ಯು.)

**ಬೂಕರೆಸ್ಟ್:** ರೊಮೇನಿಯ ಸಮಾಜವಾದಿ ಗಣರಾಜ್ಯದ ರಾಜಧಾನಿ. ಡ್ಯಾನ್ಯೂಬಿನ ಉಪನದಿಯಾದ ಡಿಂಬವಿಟ್ಸಾನದಿಯ ಎರಡೂ ದಂಡೆಗಳ ಮೇಲೆ ಇರುವ ನಗರ. ಉ.ಅ. $44^{0}25'$ ಮತ್ತು ಪೂ.ರೇ. $26^{0}10'$ ನಲ್ಲಿರುವ ಈ ನಗರ ಉದ್ಯಾನ ನಗರವೆಂದು ಹೆಸರುಗಳಿಸಿದೆ. ರಮಣೀಯ ಪ್ರಾಕೃತಿಕ ಪರಿಸರದಿಂದ ಹಸುರ ಸಿರಿವಂತಿಕೆಯಿಂದ ಹಾಗೂ ಸುಂದರ ಸರೋವರಗಳಿಂದ ಕೂಡಿದ್ದು ಪ್ರವಾಸಿಗಳನ್ನು ಆಕರ್ಷಿಸುವ ವಿಶ್ರಾಂತಿಧಾಮವೂ ವಿಹಾರ ತಾಣವೂ ಆಗಿದೆ. ಈ ನಗರವನ್ನು ಎಂಟು ಆಡಳಿತ ಘಟಕಗಳಾಗಿ ವಿಂಗಡಿಸಲಾಗಿದೆ. ಉಪನಗರ ಪ್ರದೇಶವನ್ನೊಳಗೊಂಡಂತೆ ಇದರ ವಿಸ್ತಾರ 605 ಚ.ಕಿಮೀ. ಜನಸಂಖ್ಯೆ 2,351,000 (2001).

ಬೂಕರೆಸ್ಟ್ ಪ್ರಮುಖ ವಾಣಿಜ್ಯೋದ್ಯಮ ಕೇಂದ್ರ. ರಾಸಾಯನಿಕ ಪದಾರ್ಥಗಳು, ಪೀಠೋಪಕರಣ ವಸ್ತುಗಳು, ಇಟ್ಟಿಗೆ, ಸಾಬೂನು, ಲೋಹದ ವಸ್ತುಗಳು, ಕಾಗದ ಮುಂತಾದವು ಇಲ್ಲಿ ತಯಾರಾಗುತ್ತವೆ. ಎಣ್ಣೆ ಮತ್ತು ಟೆಕ್ಸ್‌ಟೈಲ್ ಉದ್ಯಮವೂ ಗಮನಾರ್ಹವಾಗಿ ಬೆಳೆದಿದೆ. ಬಟ್ಟೆ ಕಾರ್ಖಾನೆ, ಹಿಟ್ಟಿನ ಗಿರಣಿ, ಮಾಂಸವನ್ನು ಡಬ್ಬಗಳಿಗೆ ತುಂಬುವ ಕೇಂದ್ರ, ಮದ್ಯ ತಯಾರಿಕಾ ಕೇಂದ್ರ ಮುಂತಾದವು ಹೆಚ್ಚಿನ ಸಂಖ್ಯೆಯಲ್ಲಿವೆ. ಇಲ್ಲಿಯ ವಿಶ್ವವಿದ್ಯಾಲಯ 1864ರಲ್ಲಿ ಸ್ಥಾಪಿತವಾಯಿತು. ದಿ ಲೈಬ್ರರಿ ಆಫ್ ದಿ ಅಕಾಡೆಮಿ ಆಫ್ ಸೋಷಿಯಲಿಸ್ಟ್ ರಿಪಬ್ಲಿಕ್ ಆಫ್ ರೊಮೇನಿಯ ಮತ್ತು ಸೆಂಟ್ರಲ್ ಸ್ಟೇಟ್ ಲೈಬ್ರರಿಗಳಲ್ಲಿ ಅಮೂಲ್ಯ ಚಾರಿತ್ರಿಕ ದಾಖಲೆಗಳಿವೆ. ಲಲಿತಕಲೆಗಳ ಬೀಡಾದ ಈ ನಗರದಲ್ಲಿ 33 ವಸ್ತುಸಂಗ್ರಹಾಲಯಗಳಿವೆ. ಕೆಥೊಲಿಕ್ ಹಾಗೂ ಪ್ರಾಟೆಸ್ಟೆಂಟ್ ಪಂಥಗಳಿಗೆ ಸೇರಿದ ಹಲವಾರು ಚರ್ಚುಗಳಿವೆ. ಇವುಗಳಲ್ಲಿ ಹೆಚ್ಚಿನವು ಚಿಕ್ಕವು ಹಾಗೂ ಬಿಜ಼ಾನ್‌ಟಿಯನ್ ಶೈಲಿಗೆ ಸೇರಿದವು. ನಗರದ ಪಾರ್ಕ್ ಆಫ್ ಕಲ್ಚರ್ ಅಂಡ್ ರೆಸ್ಟ್ ಉದ್ಯಾನ ಬಹು ವಿಶಾಲವಾದುದು. 23 ಆಗಸ್ಟ್ ಎಂಬ ನಗರದ ಅತಿ ದೊಡ್ಡ ಕ್ರೀಡಾರಂಗದಲ್ಲಿ ಸು. 80 ಸಾವಿರ ಜನರಿಗೆ ಸ್ಥಳಾವಕಾಶವಿದೆ. ಅಕಾಡೆಮಿ ಆಫ್ ಸೈನ್ಸ್, ರೊಮೇನಿಯನ್ ಅಕಾಡೆಮಿ, ಬೂಕರೆಸ್ಟ್ ಹಿಸ್ಟರಿ ಮ್ಯೂಸಿಯಮ್, ಮ್ಯೂಸಿಯಮ್ ಆಫ್ ಫೋಕ್ ಆರ್ಟ್ಸ್ ಮುಂತಾದ ಹಲವಾರು ಸಂಘ ಸಂಸ್ಥೆಗಳು ಇಲ್ಲಿವೆ. ನಗರದ ಆಧುನಿಕ ಕಟ್ಟಡಗಳಲ್ಲಿ ಒಂದಾದ ಇಂಟರ್‌ಕಾಂಟಿನೆಂಟಲ್ ಹೋಟೆಲ್ ಇಪ್ಪತ್ತೈದು ಅಂತಸ್ತುಗಳ ಅತಿ ಎತ್ತರದ ಕಟ್ಟಡ. ಬೂಕರೆಸ್ಟ್ ನಗರ ಸೌಂದರ್ಯಕ್ಕೆ, ವಿಲಾಸಕ್ಕೆ ಹೆಸರಾಗಿದೆ. ಇದನ್ನು ಲಿಟಲ್ ಪ್ಯಾರಿಸ್ ಎಂದು ಕರೆಯುವುದುಂಟು. *

**ಬೂಡಪೆಸ್ಟ್:** ಹಂಗೇರಿ ಗಣರಾಜ್ಯದ ರಾಜಧಾನಿ; ಆಡಳಿತ ಕೇಂದ್ರ ನಗರ. ಮತ್ತು ಪೆಸ್ಟ್ ಕೌಂಟಿ ಮತ್ತು ಬೂಡಜಿಲ್ಲೆಗಳ ಆಡಳಿತ ಕೇಂದ್ರ. ಈ ನಗರದ ಮಧ್ಯ ಡ್ಯಾನ್ಯೂಬ್ ನದಿ ಹರಿಯುತ್ತದೆ. ಇದರ ಪೂರ್ವ ಪಶ್ಚಿಮ ದಂಡೆಗಳ ಮೇಲೆ ನಗರ ಬೆಳೆದಿದೆ. ಪೂರ್ವದಂಡೆಯ ಮೇಲಿನ ಪೆಸ್ಟ್ ಮತ್ತು ಪಶ್ಚಿಮ ದಂಡೆಯ ಮೇಲಿನ ಬೂಡ ನಗರಗಳನ್ನು 1872ರಲ್ಲಿ ಒಂದುಗೂಡಿಸಿ ಏಕನಗರವಾಗಿ ಪರಿಗಣಿಸಲಾಗಿದೆ. ಎರಡೂ ನಗರಭಾಗಗಳಿಗೆ ನದಿಯ ಮೇಲಣ ಎರಡು ರೈಲು ಮತ್ತು ಆರು ರಸ್ತೆ ಸೇತುವೆಗಳು ಸಂಬಂಧ ಕಲ್ಪಿಸಿವೆ. ಉ.ಅ. $47^{0}30'$, ಪೂ.ರೇ. $19^{0}5'$ ನಲ್ಲಿರುವ ಈ ಮಹಾ ನಗರದ ವಿಸ್ತೀರ್ಣ ಸು. 525 ಚ.ಕಿಮೀ. ಜನಸಂಖ್ಯೆ 2,008,546 (2004).

ಬೃಹತ್ ಹಂಗೇರಿ ಮೈದಾನದ ಪಾಶ್ಚಾತ್ಯ ಮಾರ್ಗಗಳ ಮೇಲೆ ಬೂಡಪೆಸ್ಟ್ ಇರುವುದರಿಂದ ಇದರ ಸ್ಥಾನ ಮಹತ್ತ್ವದ್ದಾಗಿದೆ. ಸಮಶೀತೋಷ್ಣ ವಾಯುಗುಣವಿದೆ. ವಾರ್ಷಿಕ ಸರಾಸರಿ ಉಷ್ಣತೆ $11^{0}$ಸೆ. ಜುಲೈ ತಿಂಗಳಲ್ಲಿ $28^{0}$ಸೆ, ಇದ್ದರೆ ಜನವರಿ ತಿಂಗಳಲ್ಲಿ $-1^{0}$ಸೆ ವಾರ್ಷಿಕ ಮಳೆ ಸರಾಸರಿ 60 ಸೆಂಮೀ. ಪ್ರಪಂಚದ ಅತಿ ಸುಂದರ ಪಟ್ಟಣಗಳಲ್ಲಿ ಒಂದೆಂದು ಪರಿಗಣಿಸಿರುವ ಈ ನಗರವನ್ನು ಒಂದು ಕಾಲದಲ್ಲಿ ಡ್ಯಾನ್ಯೂಬಿನ ರಾಣಿ ಎಂದು ಕರೆಯುತ್ತಿದ್ದರು. ಇದು ಮಧ್ಯ ಯುರೋಪಿನ ಅತಿ ದೊಡ್ಡ ನಗರ. ಆರ್ಥಿಕ ಮಹತ್ತ್ವವೊಂದೆ ಇದಕ್ಕೆ ಕಾರಣವಲ್ಲ, ಇದರ ಆಯಕಟ್ಟಿನ ಸ್ಥಾನ, ಸೊಗಸಾದ ನೈಸರ್ಗಿಕ ಹಿನ್ನೆಲೆ, ಐತಿಹಾಸಿಕ ಅವಶೇಷಗಳು ಮತ್ತು ಸಂಗ್ರಹಗಳು, ಪ್ರಸಿದ್ಧ ಬಿಸಿನೀರಿನ ಊಟೆಗಳು, ಅಂತಾರಾಷ್ಟ್ರೀಯ ಸುಗಮ್ಯತೆ ಎಲ್ಲವೂ ಬೆಸುಗೆಗೊಂಡು ಈ ಮಹಾನಗರ ರೂಪುಗೊಂಡಿದೆ.

ಎರಡನೆಯ ಮಹಾಯುದ್ಧದಿಂದೀಚೆಗೆ ಎಲೆಕ್ಟ್ರಾನಿಕ್ಸ್ ಮತ್ತು ನಿರ್ವಾಯು ಯಂತ್ರಗಳ ಉತ್ಪಾದನೆ ಅಧಿಕವಾಗಿದೆ. ಇಲ್ಲಿಯ ಅನೇಕ ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ಪನ್ನಗಳು ಅಂತಾರಾಷ್ಟ್ರೀಯ ಬಳಕೆಯುಳ್ಳವು. ಹಂಗೇರಿಯ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯಲ್ಲಿ ಬೂಡಪೆಸ್ಟಿಗೆ ಮಹತ್ತ್ವದ ಸ್ಥಾನವಿದೆ. ನಗರ ಪ್ರಮುಖ ರಸ್ತೆ ಮತ್ತು ರೈಲು ದಾರಿಗಳ ಕೇಂದ್ರವಾಗಿದ್ದು ಡ್ಯಾನ್ಯೂಬ್ ನದಿಯ ಜಲಮಾರ್ಗ ಅದರ ಕೇಂದ್ರೀಯ ಸ್ಥಾನದ ಮಹತ್ತ್ವವನ್ನು ಇನ್ನಷ್ಟು ಹೆಚ್ಚಿಸಿದೆ. ನಗರದಲ್ಲಿ ರಾಜ್ಯದ ಅತಿ ದೊಡ್ಡ ರೈಲು ನಿಲ್ದಾಣಗಳಿದ್ದು ರೈಲ್ವೆ ಸೌಕರ್ಯವಿದೆ. ಬಸ್ ಮತ್ತು ಟ್ರಾಲಿ ಬಸ್ಸುಗಳು ಕೆಲಮಟ್ಟಿಗೆ ಪ್ರಯಾಣ ಸೌಲಭ್ಯ ಒದಗಿಸುತ್ತವೆ.

ಬೂಡಪೆಸ್ಟ್ ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ಕಲಾ ಕೇಂದ್ರವೂ ಆಗಿದೆ. ದಿ ಹಂಗೇರಿಯನ್ ಅಕಾಡೆಮಿ ಆಫ್ ಸೈನ್ಸಸ್ ಇಲ್ಲಿದ್ದು ಅದರ ಎಲ್ಲ ಸಂಶೋಧನ ಸಂಸ್ಥೆಗಳ ಕಾರ್ಯಕಲಾಪಗಳು ಇಲ್ಲಿಯೆ ನಡೆಯುತ್ತವೆ. ಅನೇಕ ನಾಟಕ ಗೃಹಗಳು, ಗಾನಗೋಷ್ಠಿ ಸಭಾಂಗಣಗಳು ಇವೆ. ಹಂಗೇರಿಯ ಪ್ರಸಿದ್ಧ ಬೂಡಪೆಸ್ಟ್ ವಿಶ್ವವಿದ್ಯಾಲಯ, ಕೃಷಿ ಮತ್ತು ಆರ್ಥಿಕ ವಿಜ್ಞಾನಗಳ ಕಾಲೇಜುಗಳಿವೆ. ಆಧುನಿಕ ನಗರ ಸೌಕರ್ಯಗಳೆಲ್ಲ ಇರುವ ಈ ನಗರದಲ್ಲಿ ಹಿಂದಿನ ರಾಜರ ಕೋಟೆ, ಅನೇಕ ಅರಮನೆಗಳೂ, ಚರ್ಚುಗಳೂ ಮತ್ತು ಕೆಲವು ಮಹೋನ್ನತ ಕಟ್ಟಡಗಳೂ ಇವೆ. (ಜಿ.ಕೆಯು.)

**ಬೆಂಗಳೂರು:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ಬೃಹತ್ ನಗರ ಮತ್ತು ರಾಜ್ಯದ ರಾಜಧಾನಿ. ಜಿಲ್ಲೆಯ ಮತ್ತು ಇದೇ ಹೆಸರಿನ ತಾಲ್ಲೂಕುಗಳ (ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ) ಆಡಳಿತ ಕೇಂದ್ರ. ಜಿಲ್ಲೆಯ ಜನಸಂಖ್ಯೆ 6523110.

ಜಿಲ್ಲೆಯಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ಲು ಎಂಬುದಾಗಿ ಮೂರು ತಾಲ್ಲೂಕುಗಳಿವೆ.




ಆನೇಕಲ್ಲು ತಾಲೂಕು: ಬೆಂಗಳೂರು ಜಿಲ್ಲೆಯ ಒಂದು ತಾಲೂಕು ಮತ್ತು ತಾಲೂಕಿನ ಆಡಳಿತ ಕೇಂದ್ರ. ಜನಸಂಖ್ಯೆ 298,961. ವಿಸ್ತೀರ್ಣ 53518 ಹೆ.

ಈ ತಾಲೂಕು ಬಯಲು ಪ್ರದೇಶವಾಗಿದ್ದು ಕೆಂಪು ಮಣ್ಣಿನಿಂದ ಕೂಡಿದೆ. ಸರಾಸರಿ ಮಳೆ 67 ಸೆಂಮೀ. ಚನ್ನಕೇಶವ ಬೆಟ್ಟದಲ್ಲಿ ಉಗಮವಾಗಿ ಈ ತಾಲೂಕಿನಲ್ಲಿ ಹರಿಯುವ ನದಿ ಪಿನಾಕಿನಿ. ಇದು ಒಂದು ಸಣ್ಣ ನದಿಯಾಗಿದ್ದು ನೀರಾವರಿಗೆ ಇದರಿಂದ ಯಾವುದೇ ಪ್ರಯೋಜನವಿಲ್ಲ. ತಾಲ್ಲೂಕು ವ್ಯವಸಾಯ ಪ್ರಧಾನವಾಗಿದ್ದು, ಖುಷ್ಕಿ ಬೇಸಾಯ ಪ್ರಮುಖವಾಗಿ ಕಂಡು ಬರುತ್ತದೆ. ಇಲ್ಲಿನ ಮುಖ್ಯ ಬೆಳೆ ರಾಗಿ. ಸಾಗುವಳಿ ಭೂಮಿಯ ಶೇ. 50 ರಲ್ಲಿ ರಾಗಿಯನ್ನು ಬೆಳೆಯುತ್ತಾರೆ. ಇತರೆ ಬೆಳೆಗಳೆಂದರೆ ಬತ್ತ, ತೊಗರಿ, ಹುರುಳಿ, ಹಲಸಂದೆ, ಅವರೆ, ಹತ್ತಿ ಮತ್ತು ತರಕಾರಿಗಳು.

ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣ ಆನೇಕಲ್ಲು. ಇದರ ಜನಸಂಖ್ಯೆ 33160.

ಬೆಂಗಳೂರು ಉತ್ತರ ತಾಲ್ಲೂಕು: ಈ ತಾಲ್ಲೂಕು ಬೆಂಗಳೂರು ನಗರ ಸಭಾ ಪ್ರದೇಶದ ಬಹುಭಾಗ ಹಾಗೂ ಬೆಂಗಳೂರು ನಗರ ಸಮೂಹಕ್ಕೆ ಸೇರಿರುವ ಬಿಇಎಲ್, ದೇವರಜೀವನಹಳ್ಳಿ, ಎಚ್.ಎಂ.ಟಿ., ಜಾಲಹಳ್ಳಿ, ಕಾಡುಗೊಂಡನಹಳ್ಳಿ ಈ ಉಪನಗರಗಳನ್ನೂ ಯಲಹಂಕ ಪಟ್ಟಣವನ್ನೂ 173 ಗ್ರಾಮಗಳನ್ನೂ ಒಳಗೊಂಡಿವೆ. ಒಟ್ಟು ವಿಸ್ತೀರ್ಣ 487 ಚ.ಕಿಮೀ. ಇದರಲ್ಲಿ 340.1 ಚ.ಕಿಮೀ ಗ್ರಾಮೀಣ ಪ್ರದೇಶ. ಉಳಿದದ್ದು ನಗರ ಮತ್ತು ಕಾರ್ಖಾನೆಗಳ ಪ್ರದೇಶ.

ತಾಲ್ಲೂಕಿನ ಬಹುಭಾಗ ವಿಶಾಲಬಯಲುಗಳಿಂದ ಕೂಡಿದ್ದು ಅಲ್ಲಲ್ಲಿ ಕಣಶಿಲೆಯ ಗುಡ್ಡಗಳಿವೆ. ಯಲಹಂಕದಿಂದ ಉತ್ತರದಲ್ಲಿರುವ ದೊಡ್ಡಬೆಟ್ಟಹಳ್ಳಿ, ಬೆಂಗಳೂರಿನ ವೈಯಾಲಿಕಾವಲ್ ದಿಣ್ಣೆ ತಾಲ್ಲೂಕಿನ ಎತ್ತರದ ಭಾಗಗಳು. ದೊಡ್ಡಬಳ್ಳಾಪುರ ತಾಲ್ಲೂಕಿನಿಂದ ಬರುವ ಅರ್ಕಾವತಿ ಈ ತಾಲ್ಲೂಕಿನ ವಾಯವ್ಯದಲ್ಲಿ ಪ್ರವೇಶಿಸಿ, ಹೆಸರಘಟ್ಟ ಜಲಾಶಯಕ್ಕೆ ನೀರುಣಿಸಿ ಮುಂದೆ ಹರಿದು ನೆಲಮಂಗಲ ತಾಲ್ಲೂಕಿನೆಡೆಗೆ ಸಾಗುತ್ತದೆ. ಬೆಂಗಳೂರಿನ ಗವಿಪುರದ ಬಳಿ ಹುಟ್ಟುವ ವೃಷಭಾವತಿ ತೊರೆ ದಕ್ಷಿಣದತ್ತ ಪ್ರವಹಿಸುತ್ತದೆ. ತಾಲ್ಲೂಕಿನ ಬಹುಭಾಗ ಕೆಂಪು ಮಣ್ಣಿನಿಂದ ಕೂಡಿದ್ದು ರಾಗಿ, ತರಕಾರಿ ಮತ್ತು ಹಣ್ಣುಗಳ ಬೆಳೆಗಳಿಗೆ ಉಪಯುಕ್ತವಾಗಿದೆ. ಇವುಗಳ ವ್ಯವಸಾಯ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿದೆ. ನಗರ ಪ್ರದೇಶದಲ್ಲಿ ಕೈಗಾರಿಕೆಗಳು ಹೆಚ್ಚು. ಬೆಂಗಳೂರಿನಿಂದ ಹೊರಡುವ ಮುಖ್ಯ ರೈಲು ಮತ್ತು ರಸ್ತೆ ಮಾರ್ಗಗಳು ಈ ತಾಲ್ಲೂಕಿನ ಸ್ವಲ್ಪ ಭಾಗವನ್ನು ಕ್ರಮಿಸಿ ಸಾಗುತ್ತವೆ.

ಬೆಂಗಳೂರು ಮಹಾನಗರ ಪ್ರದೇಶವನ್ನು ಬಿಟ್ಟರೆ ತಾಲ್ಲೂಕಿನ ಮುಖ್ಯಸ್ಥಳಗಳಲ್ಲಿ ಯಲಹಂಕ ಪ್ರಮುಖ ಪಟ್ಟಣ ಈಗ ಉಪನಗರವಾಗಿದೆ. ಐತಿಹಾಸಿಕ ಸ್ಥಳವಾದ ಈ ಊರು ಈಗ ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ. ಬೆಂಗಳೂರಿನ ವಾಯವ್ಯದಲ್ಲಿ ನೆಲಮಂಗಲದ ಈಶಾನ್ಯಕ್ಕೆ 10 ಕಿಮೀ ದೂರದಲ್ಲಿರುವ ಹೆಸರಘಟ್ಟ ಅಲ್ಲಿನ ಜಲಾಶಯ ಮತ್ತು ಸುಂದರ ಸನ್ನಿವೇಶದಿಂದ ವಿಹಾರ ಕೇಂದ್ರವಾಗಿದೆ. ಅಲ್ಲಿಯ ದೇವಾಲಯದಲ್ಲಿ ದೂರ್ವಾಸಮುನಿ ಆರಾಧಿಸುತ್ತಿದ್ದನೆನ್ನಲಾದ ಲಕ್ಷ್ಮೀನರಸಿಂಹ ವಿಗ್ರಹವಿದೆ. ಆ ದೇವಾಲಯದ ಮುಂಭಾಗ ವಿಜಯನಗರದ ಅಚ್ಯುತರಾಯ ಕಟ್ಟಿಸಿದ್ದು. ನೆಲಮಂಗಲಕ್ಕೆ ಈಶಾನ್ಯದಲ್ಲಿ 13 ಕಿಮೀ ದೂರದಲ್ಲಿ, ಬೆಂಗಳೂರಿಗೆ ವಾಯವ್ಯ ದಿಕ್ಕಿನಲ್ಲಿರುವ ಐಗಂಡಪುರ ಸಹ ಐತಿಹಾಸಿಕ ಸ್ಥಳ. ಬೆಂಗಳೂರಿಗೆ ವಾಯವ್ಯದಲ್ಲಿ ನೆಲಮಂಗಲದಿಂದ 14 ಕಿಮೀ ದೂರದಲ್ಲಿರುವ ಕೊಡಿಗೆ ತಿರುಮಲಾಪುರದ ಆಶುರ್‌ಖಾನದಲ್ಲಿ ಟಿಪ್ಪುವಿನ ಅರಮನೆಯಲ್ಲಿ ಇದ್ದವೆನ್ನಲಾದ ಲೋಹದ ಮೂರು ಪಂಜಾಗಳಿವೆ. ಶ್ರೀರಂಗಪಟ್ಟಣದ ಪತನಾನಂತರ ಅವನ್ನು ಇಲ್ಲಿಗೆ ತರಲಾಯಿತಂತೆ.

ಕೆಂಪೆಗೌಡರ ಪ್ರತಿಮೆ

ಬೆಂಗಳೂರು ದಕ್ಷಿಣ ತಾಲ್ಲೂಕು: ಈ ತಾಲ್ಲೂಕು ಬೆಂಗಳೂರು ನಗರದ ದಕ್ಷಿಣದ ಅಂಚಿನ ಭಾಗ. ಎಚ್.ಎ.ಎಲ್. ಮತ್ತು ಐಟಿಐ ಉಪನಗರಗಳನ್ನೂ 218 ಗ್ರಾಮಗಳನ್ನೂ ಒಳಗೊಂಡಿದೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 539.4 ಚ.ಕಿಮೀ. ಇದರಲ್ಲಿ 509 ಚ.ಕಿಮೀ ಗ್ರಾಮೀಣ ಪ್ರದೇಶ. ಉಳಿದದ್ದು ಕಾರ್ಖಾನೆ ಮತ್ತು ನಗರ ಪ್ರದೇಶ.

ಈ ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಕಣಶಿಲೆಯ ಬೆಟ್ಟಗುಡ್ಡಗಳು ಇವೆ. ಉಳಿದ ಭಾಗ ಬಯಲು. ವೃಷಭಾವತಿ ಬೆಂಗಳೂರು ನಗರದ ಗವಿಪುರದೆಡೆಯಿಂದ ಬಂದು ಕೆಂಗೇರಿ ಮುಖಾಂತರ ದಕ್ಷಿಣಕ್ಕೆ ಹರಿಯುತ್ತದೆ. ತಾಲ್ಲೂಕಿನ ಬಹುಭಾಗದಲ್ಲಿ ಕೆಂಪುಮಣ್ಣಿನ ಭೂಮಿ ಇದೆ. ಸರಾಸರಿ ವಾರ್ಷಿಕ ಮಳೆ 92 ಸೆಂಮೀ. ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಕೆರೆಗಳಿಂದ ಸ್ವಲ್ಪಮಟ್ಟಿಗೆ ನೀರಾವರಿ ಸೌಲಭ್ಯ ಇದೆ. ರಾಗಿ, ತರಕಾರಿ, ಹಣ್ಣು, ಹೂವುಗಳನ್ನು ವಿಶೇಷವಾಗಿ ಬೆಳೆಯುತ್ತಾರೆ.

ನಗರ ಭಾಗಗಳ ಪರಿಸರದಲ್ಲಿ ಕೈಗಾರಿಕೆಗಳಿವೆ. ಬೆಂಗಳೂರಿನಿಂದ ಮೈಸೂರು, ಚೆನ್ನೈ, ಸೇಲಂಗಳಿಗೆ ಹೋಗುವ ರೈಲು ಮಾರ್ಗಗಳು ಮತ್ತು ಚೆನ್ನೈ, ಸರ್ಜಾಪುರ, ಹೊಸೂರು, ಕನಕಪುರ ಮತ್ತು ಮೈಸೂರಿಗೆ ಹೋಗುವ ರಸ್ತೆಗಳು ಈ ತಾಲ್ಲೂಕಿನ ಮೂಲಕ ಸಾಗುತ್ತವೆ.

ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಮುಖ್ಯ ಸ್ಥಳಗಳಲ್ಲಿ ಬೆಂಗಳೂರಿನ ಆಗ್ನೇಯಕ್ಕೆ 13 ಕಿಮೀ ದೂರದಲ್ಲಿರುವ ಬೇಗೂರು ಇತಿಹಾಸ ಪ್ರಸಿದ್ಧ ಸ್ಥಳ. ಬೆಂಗಳೂರು ನಗರದ ದಕ್ಷಿಣದ ಅಂಚಿನಲ್ಲಿರುವ ವಸಂತಪುರದಲ್ಲಿ ವಸಂತ ವಲ್ಲಭರಾಯಸ್ವಾಮಿ ದೇವಾಲಯವಿದೆ. ಇದು ಮಾಂಡವ್ಯ ಮುನಿಯಿಂದ ಆರಾಧಿತವಾದುದೆಂದು ಸ್ಥಳ

ಪುರಾಣ ತಿಳಿಸುತ್ತದೆ. ಇಲ್ಲಿ ಎಂಟು ತೀರ್ಥಗಳಿವೆ. ಈ ದೇವಾಲಯದಲ್ಲಿ ವಿವಾಹ ಮಾಡುವುದು ಹೆಚ್ಚು ಶುಭವೆಂದು ಪರಿಗಣಿಸಲಾಗಿದೆ. ಬೆಂಗಳೂರಿನ ಆಗ್ನೇಯದಲ್ಲಿರುವ ಅಗರ ಗ್ರಾಮದಲ್ಲಿ 8ನೆಯ ಶತಮಾನದಲ್ಲೂ ಇದ್ದವೆಂದು ಹೇಳುವ ಕೆಲವು ದೊಡ್ಡ ಕೆರೆಗಳಿವೆ. ಈ ಗ್ರಾಮ ಆನಂದರಾಮಾಯಣವನ್ನು ರಚಿಸಿದ ತಿಮ್ಮಕವಿಯ (18ನೆಯ ಶತಮಾನ) ಜನ್ಮಸ್ಥಳ. ಬೆಂಗಳೂರು ನಗರದ ನೈರುತ್ಯಕ್ಕೆ 16 ಕಿಮೀ ದೂರದಲ್ಲಿ, ಮೈಸೂರು ಮಾರ್ಗದಲ್ಲಿರುವ ಕೆಂಗೇರಿ ಉಪನಗರ ವ್ಯಾಪಾರ ಸ್ಥಳ; 1873ರ ತನಕ ಇದು ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಈ ಗ್ರಾಮ ಬ್ರಿಟಿಷ್ ಸೈನ್ಯಕ್ಕೆ ತಂಗುದಾಣವಾಗಬಾರದೆಂಬ ಉದ್ದೇಶದಿಂದ ಇದನ್ನು ಟಿಪ್ಪುಸುಲ್ತಾನ್ ಒಮ್ಮೆ ಹಾಳುಗೆಡವಿದ್ದ. ಇಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಒಂದು ವಿದ್ಯಾಪೀಠ, ಹತ್ತಿರದಲ್ಲಿ ಒಂದು ಚಲನಚಿತ್ರ ಸ್ಟುಡಿಯೋ ಮತ್ತು ಕೆಂಗೇರಿಯ ಪೂರ್ವಕ್ಕೆ ಸು. ಒಂದೂವರೆ ಕಿಮೀ ದೂರದಲ್ಲಿ ಒಂದು ಆಯುರ್ವೇದ ಸಂಶೋಧನ ಕೇಂದ್ರ ಇವೆ. ಎಚ್.ಎ.ಎಲ್. ನಿಂದ 8 ಕಿಮೀ ದೂರದಲ್ಲಿರುವ ಬೆಳ್ಳಂದೂರಿನಲ್ಲಿ ಬೃಹತ್ ಶಿಲಾ ಸಮಾಧಿಗಳು ಇವೆ.

ಬೆಂಗಳೂರು ನಗರ: ಕರ್ನಾಟಕ ರಾಜ್ಯದ ರಾಜಧಾನಿ. ಈ ಹೆಸರಿನ ಜಿಲ್ಲಾ ಹಾಗೂ ತಾಲ್ಲೂಕುಗಳ ಆಡಳಿತ ಕೇಂದ್ರ ಮತ್ತು ರಾಜ್ಯದ ಅತಿ ದೊಡ್ಡ ನಗರ. ಬೆಂಗಳೂರು ಜಿಲ್ಲೆಯ ಮಧ್ಯವರ್ತಿ ತಾಣದಲ್ಲಿ, ದಕ್ಷಿಣಪಿನಾಕಿನಿ ಮತ್ತು ಅರ್ಕಾವತಿ ನದೀ ಕಣಿವೆಗಳನ್ನು ಬೇರ್ಪಡಿಸುವ ಏಣುಭೂಮಿಯ ಮೇಲೆ (ಸಮುದ್ರಮಟ್ಟದಿಂದ ಸು.930 ಮೀ) ಮೈಸೂರಿನ ಈಶಾನ್ಯಕ್ಕೆ 138 ಕಿಮೀ ದೂರದಲ್ಲೂ ಕೆಜಿಎಫ್‌ನ ಪಶ್ಚಿಮಕ್ಕೆ 96 ಕಿಮೀ ದೂರದಲ್ಲೂ ತುಮಕೂರಿನ ಆಗ್ನೇಯಕ್ಕೆ 70 ಕಿಮೀ ದೂರದಲ್ಲೂ ಇದೆ.

12ನೆಯ ಶತಮಾನದಲ್ಲಿ, ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರ ಬಲ್ಲಾಳ ಒಮ್ಮೆ ಬೇಟೆಗೆ ಹೋಗಿದ್ದಾಗ ಒಂದು ಒಂಟಿ ಗುಡಿಸಲನ್ನು ತಲುಪಿದ. ಅಲ್ಲಿ ವಾಸವಾಗಿದ್ದ ಒಬ್ಬ ಮುದುಕಿ ರಾಜನಿಗೆ ಸ್ವಲ್ಪ ಬೆಂದಕಾಳನ್ನು, ನೀರನ್ನು ಕೊಟ್ಟು ಸತ್ಕರಿಸಿ ಆತನ ಬಳಲಿಕೆಯನ್ನು ಪರಿಹರಿಸಿದಳು. ಈ ಆತಿಥ್ಯದಿಂದ ಹರ್ಷಿತನಾದ ರಾಜ ಆ ಮುದುಕಿಯ ಗೌರವಾರ್ಥವಾಗಿ ಆ ಸ್ಥಳದಲ್ಲಿ ಒಂದು ಊರನ್ನು ಸ್ಥಾಪಿಸಿ ಅದಕ್ಕೆ ಬೆಂದಕಾಳೂರೆಂದು ಹೆಸರಿಟ್ಟ. ಮುಂದೆ ಅದು ಬೆಂಗಳೂರಾಗಿ ಬೆಳೆಯಿತು ಎಂಬುದು ಸ್ಥಳದ ಐತಿಹ್ಯ.

16ನೆಯ ಶತಮಾನದಲ್ಲಿ ಯಲಹಂಕನಾಡಿನ ಪಾಳೆಯಗಾರನಾಗಿದ್ದ ಕೆಂಪೇಗೌಡ ಬೇಟೆಗೆ ಹೋಗಿದ್ದಾಗ ಒಂದು ಮೊಲ ಬೇಟೆನಾಯಿಯ ಮೇಲೆ ತಿರುಗಿಬಿದ್ದದ್ದನ್ನು ಕಂಡು ಆ ಸ್ಥಳ ಗಂಡುಭೂಮಿಯೆಂದು ಭಾವಿಸಿ, ಅಲ್ಲಿ ಒಂದು ಗ್ರಾಮವನ್ನು ಸ್ಥಾಪಿಸಿ, ಅದರ ಸುತ್ತ ಕೋಟೆಯನ್ನು ಕಟ್ಟಿಸಿದ. ಮುಂದೆ ಕೆಂಪೇಗೌಡ ತನ್ನ ರಾಜಧಾನಿಯನ್ನು ಯಲಹಂಕದಿಂದ ಇಲ್ಲಿಗೆ ವರ್ಗಾಯಿಸಿ ಬೆಂಗಳೂರು ಬೆಳವಣಿಗೆಗೆ ಕಾರಣನಾದನೆಂದು ಇನ್ನೊಂದು ಐತಿಹ್ಯ.

ವಿಧಾನ ಸೌಧ

ಇಂದಿನ ಬೆಂಗಳೂರು ಬೃಹನ್ನಗರ. ನಗರಸಭಾ ಕಕ್ಷೆಯಲ್ಲಿರುವ ಪ್ರದೇಶವನ್ನಲ್ಲದೆ ಇದಕ್ಕೆ ಹೊಂದಿಕೊಂಡಂತಿರುವ ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿ ಕಕ್ಷೆಯಲ್ಲಿರುವ ಪ್ರದೇಶಗಳು ಹಾಗೂ ದೇವರಜೀವನಹಳ್ಳಿ, ಬಿಇಎಲ್, ಎಚ್.ಎ.ಎಲ್., ಎಚ್.ಎಂ.ಟಿ., ಐಟಿಐ, ಜಾಲಹಳ್ಳಿ ಮತ್ತು ಕಾಡಗೊಂಡನಹಳ್ಳಿ ಈ ಉಪನಗರಗಳನ್ನು ಒಳಗೊಂಡಿದೆ. ಒಟ್ಟಾರೆಯಾಗಿ ನಗರದ ವಿಸ್ತೀರ್ಣ 531 ಚ.ಕಿಮೀ (2001). ಜನಸಂಖ್ಯೆ 56,86,844 (2001). ಭಾರತದ ಬೃಹನ್ನಗರಗಳಲ್ಲಿ ಇದು ಆರನೆಯ ಸ್ಥಾನ ಪಡೆದಿದೆ.

ರಾಜ್ಯದ ರಾಜಧಾನಿಯಾಗಿರುವ ಕಾರಣ ಈ ನಗರದಲ್ಲಿ ರಾಜಭವನ, ಶಾಸನಸಭಾ ಭವನ ಮತ್ತು ಕಚೇರಿ, ಸಚಿವಾಲಯ, ರಾಜ್ಯಸರ್ಕಾರದ ಬಹುತೇಕ ಎಲ್ಲ ಇಲಾಖೆಗಳ ಮುಖ್ಯಾಧಿಕಾರಿಗಳ ಕಚೇರಿಗಳು, ಉಚ್ಚ ನ್ಯಾಯಾಲಯ, ರಾಜ್ಯ ಲೋಕಸೇವಾ ಆಯೋಗದ ಕಚೇರಿ, ರಾಜ್ಯ ಸರ್ಕಾರದಿಂದ ಸ್ಥಾಪಿತವಾಗಿರುವ ಕರ್ನಾಟಕ ವಿದ್ಯುಚ್ಛಕ್ತಿ, ವ್ಯವಸಾಯೋದ್ಯಮ, ಚಲನಚಿತ್ರ ಉದ್ಯಮ, ಸಣ್ಣ ಉದ್ಯಮ, ರಸ್ತೆ ಸಾರಿಗೆ, ಹಣಕಾಸು, ಪ್ರವಾಸೋದ್ಯಮ ಮೊದಲಾದ ಮಂಡಲಿಗಳ ಮುಖ್ಯ ಕಚೇರಿಗಳು ಇವೆ. ಅಲ್ಲದೆ ರಕ್ಷಣಾಪಡೆಯ ಸಬ್ ಏರಿಯಾ ಘಟಕದ ಕೇಂದ್ರ, ವಿಮಾನದಳದ ಉಪಕೇಂದ್ರ, ಅಕೌಂಟೆಂಟ್ ಜನರಲ್‌ರವರ ಕಚೇರಿ, ರಿಸರ್ವ್ ಬ್ಯಾಂಕಿನ ಶಾಖೆ ಹಾಗೂ ಕೇಂದ್ರ ಸರ್ಕಾರದ ಪುರಾತತ್ತ್ವ, ಪರಮಾಣುಶಕ್ತಿ ಮತ್ತು ಜನ ಗಣತಿ, ತನಿಖೆ, ಗುಪ್ತಚಾರ, ನಾಗರಿಕ ವಿಮಾನ, ಹವಾ ಮತ್ತು ಎನ್‌ಸಿಸಿ ನಿರ್ದೇಶನ, ಆದಾಯ ತೆರಿಗೆ, ವಾರ್ತಾ ಮತ್ತು ಪ್ರಸಾರ, ದಕ್ಷಿಣ ರೈಲ್ವೆ, ಭೂಗರ್ಭವಿಜ್ಞಾನ, ಸರ್ವೆ ಆಫ್ ಇಂಡಿಯಾ, ಅಂಚೆ ಮತ್ತು ತಂತಿ ಈ ಮೊದಲಾದವುಗಳ ಪ್ರಾದೇಶಿಕ ಕಚೇರಿಗಳೂ ರಾಷ್ಟ್ರೀಯ ಉಳಿತಾಯ ಯೋಜನಾ ಸಂಸ್ಥೆ, ಕಾಫಿ ಬೋರ್ಡಿನ ಮುಖ್ಯ ಆಡಳಿತ ಕಚೇರಿ, ಲೈಫ್ ಇನ್ಷೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯ, ರೇಷ್ಮೆ ಮಂಡಲಿ, ವ್ಯವಸಾಯ ಪುನರ್ಧನ ಹೂಡಿಕೆ ಸಂಸ್ಥೆ, ವ್ಯವಸಾಯೋದ್ಯಮ ಅಭಿವೃದ್ಧಿ ಮಂಡಲಿ ಮೊದಲಾದವುಗಳ ಶಾಖಾ ಕಚೇರಿಗಳೂ ಸಹ ಇಲ್ಲಿವೆ.

ಉಚ್ಚ ನ್ಯಾಯಾಲಯ

ಬೆಂಗಳೂರು ನಗರ ಕರ್ನಾಟಕದ ಪ್ರಮುಖ ಔದ್ಯಮಿಕ ಮತ್ತು ವಾಣಿಜ್ಯ ಕೇಂದ್ರ. ನಗರದಲ್ಲಿ ಸಾವಿರಾರು ವಿವಿಧ ಕೈಗಾರಿಕಾ ಘಟಕಗಳಿದ್ದು ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸಿವೆ. ಬೃಹತ್ ಪ್ರಮಾಣದ ಉದ್ಯಮಗಳಲ್ಲಿ ಕೇಂದ್ರ ಸರ್ಕಾರದ ವತಿಯಿಂದ ನಡೆಯುತ್ತಿರುವ ಹಿಂದುಸ್ತಾನ್ ಮೆಷಿನ್ ಟೂಲ್ಸ್ (ಎಚ್.ಎಂ.ಟಿ.), ಹಿಂದೂಸ್ತಾನ್ ಏರ್‌ಕ್ರಾಫ್ಟ್ ಲಿಮಿಟೆಡ್ (ಎಚ್.ಎ.ಎಲ್.), ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (ಐಟಿಐ), ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಪ್ರಮುಖವಾದುವು. ಅಲ್ಲದೆ ರೇಡಿಯೋ ಅಂಡ್ ಎಲೆಕ್ಟ್ರಿಕಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ (ಈಗ ಭಾರತ್ ಹೆವಿ ಎಲೆಕ್ಟ್ರಿಕಲ್ ಸಂಸ್ಥೆಯ ಭಾಗ) ಮತ್ತು ಭಾರತ್ ಅರ್ತ್‌ಮೂವರ್ಸ್ ಲಿಮಿಟೆಡ್‌ನ ಒಂದು ಘಟಕ ಸಹ ಇಲ್ಲಿ ಸ್ಥಾಪಿತವಾಗಿವೆ. ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಮತ್ತು ನ್ಯೂ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಮೈಸೂರ್ ಪೋರ್ಸೆಲಿನ್ ಲಿಮಿಟೆಡ್, ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ ಇವು ರಾಜ್ಯ ಸರ್ಕಾರದ ವತಿಯಿಂದ ಸ್ಥಾಪಿತವಾಗಿರುವ ಬೃಹತ್ ಕಾರ್ಖಾನೆಗಳು, ಇಲ್ಲಿಯ ಸರ್ಕಾರಿ ಡೈರಿ ಸಹ ಬೃಹತ್ ಉದ್ಯಮ. ಸರ್ಕಾರಿ ಮುದ್ರಣಾಲಯ ರಾಜ್ಯದ ಅತಿ ದೊಡ್ಡ ಮುದ್ರಣಾಲಯ. ಖಾಸಗಿ ಒಡೆತನದಲ್ಲಿರುವ ಬೃಹತ್ ಉದ್ಯಮಗಳಲ್ಲಿ ಬೆಂಗಳೂರು ಉಲ್ಲನ್ ಕಾಟನ್ ಮತ್ತು ಸಿಲ್ಕ್ ಕಂಪನಿ, ರಾಜಾ ಮತ್ತು ಮಿನರ್ವ–ಈ ಬಟ್ಟೆ ತಯಾರಿಕಾ ಕಾರ್ಖಾನೆಗಳು, ಕಿರ್ಲೋಸ್ಕರ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಮೋಟಾರ್ ಇಂಡಸ್ಟ್ರೀಸ್ ಕಂಪನಿ (ಮೈಕೊ), ಹೆಗ್ಗಡೆ ಅಂಡ್ ಗೋಲೆ ಗಡಿಯಾರ ಕಾರ್ಖಾನೆ ಮುಂತಾದವನ್ನು ಹೆಸರಿಸಬಹುದು. ಅಲ್ಲದೆ ಅಗರಬತ್ತಿ, ವಿವಿಧ ರೀತಿಯ ಯಂತ್ರಗಳು ಮತ್ತು ಯಂತ್ರೋಪಕರಣಗಳು, ರಾಸಾಯನಿಕ ವಸ್ತುಗಳು, ಗಾಜು ಮತ್ತು ಗಾಜಿನ ಸಾಮಾನುಗಳು, ಇಟ್ಟಿಗೆ ಮತ್ತು ಪೋರ್ಸೆಲಿನ್ ವಸ್ತುಗಳು, ಪಾತ್ರೆಗಳು, ಕುಕ್ಕರ್ ಮುಂತಾದ ಗೃಹೋಪಯೋಗಿ ಸಲಕರಣೆಗಳು, ಸಿದ್ಧ ಉಡುಪುಗಳು, ಸುಗಂಧ ದ್ರವ್ಯಗಳು, ಉಕ್ಕು, ಔಷಧಗಳು, ಸಿದ್ಧ ಆಹಾರ ಪದಾರ್ಥಗಳು, ಮದ್ಯಪಾನೀಯಗಳು, ಅಲ್ಯೂಮಿನಿಯಮ್ ಮತ್ತು ಸ್ಟೇನ್‌ಲೆಸ್ ಸ್ಟೀಲ್ ವಸ್ತುಗಳು, ಪ್ಲೈವುಡ್ ಮೊದಲಾದವನ್ನು ತಯಾರಿಸುವ ಮತ್ತು ಹಿಟ್ಟು, ರವೆ ಮುಂತಾದವನ್ನು ಉತ್ಪಾದಿಸುವ, ಮುದ್ರಣ ಪ್ರಕಾಶನ ಮುಂತಾದವುಗಳಲ್ಲಿ ನಿರತವಾಗಿರುವ ಹಲವಾರು ಉದ್ಯಮಗಳು ಈ ನಗರದಲ್ಲಿವೆ. ಬೆಂಗಳೂರು ರೇಷ್ಮೆ ಬಟ್ಟೆಗಳ ಉತ್ಪಾದನೆಯಲ್ಲೂ ಪ್ರಮುಖ ಸ್ಥಾನ ಪಡೆದಿದೆ. ಇಲ್ಲಿ ಕೋಳಿಸಾಕಣೆ ಒಂದು ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ.

ಇತ್ತೀಚೆಗೆ ಬೆಂಗಳೂರು ನಗರ ಸಾಫ್ಟ್‌ವೇರ್ ಉದ್ಯಮದಲ್ಲಿ ಅಭಿವೃದ್ಧಿ ಹೊಂದಿ ಭಾರತದ ಸಿಲಿಕಾನ್ ವ್ಯಾಲಿ ಎಂದು ಪ್ರಸಿದ್ಧವಾಗಿದೆ. ನಗರದಲ್ಲಿ ಈಗ ಸಾವಿರಾರು ಸಾಫ್ಟ್‌ವೇರ್ ಕಂಪನಿಗಳೂ ಸ್ಥಾಪಿಸಲ್ಪಟ್ಟಿದ್ದು ಭಾರತದ ಒಟ್ಟು ಸಾಫ್ಟ್‌ವೇರ್ ಉತ್ಪನ್ನದ ಬಹುಪಾಲು ಬೆಂಗಳೂರಿನಲ್ಲೇ ಆಗುತ್ತಿದೆ. ಈ ಉದ್ಯಮ ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸುವುದಲ್ಲದೆ, ದೇಶಕ್ಕೆ ರಫ್ತಿನ ಮೂಲಕ ಸಾವಿರಾರು ಕೋಟಿ ರೂಪಾಯಿಯ ವಿದೇಶಿ ಹಣವನ್ನು ತರುತ್ತಿದೆ. ಇನ್‌ಫೋಸಿಸ್, ವಿಪ್ರೊ, ಹೆಚ್‌ಸಿ, ಐಬಿಎಮ್ ಮುಂತಾದ ಸಂಸ್ಥೆಗಳು ಇಲ್ಲಿವೆ.

ಬೆಂಗಳೂರಿನ ಬೃಹತ್ ಕಾರ್ಖಾನೆಗಳಲ್ಲಿ ತಯಾರಾಗುವ ಲೇತ್ ಮೊದಲಾದ ಯಂತ್ರಗಳು, ವಿಮಾನಗಳು ಮತ್ತು ವಿಮಾನ ಸಲಕರಣೆಗಳು, ರೈಲ್ವೆಗಾಡಿಗಳು, ಟೆಲಿಫೋನ್ ಉಪಕರಣಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಗಡಿಯಾರಗಳು ಮುಂತಾದವು ಹಾಗೂ ಅಗರಬತ್ತಿ ಮೊದಲಾದವಕ್ಕೆ ಅಂತಾರಾಷ್ಟ್ರೀಯ ಬೇಡಿಕೆ ಇದ್ದು ತಮ್ಮದೇ ಆದ ಮಾರಾಟ ವಿಭಾಗಗಳನ್ನು ಹೊಂದಿವೆ. ಬೆಂಗಳೂರಿನ ಕೈಗಾರಿಕೋತ್ಪನ್ನಗಳು, ಮಾದಕ ಪಾನೀಯಗಳು ಮೊದಲಾದವು ಭಾರತಾದ್ಯಂತ ವ್ಯಾಪಾರವಾಗುತ್ತವೆ. ಬೆಂಗಳೂರಿನ ವಾಣಿಜ್ಯ ರಂಗದಲ್ಲಿ ಮುಖ್ಯ ಪಾತ್ರ ವಹಿಸಿರುವ ಅನೇಕ ವ್ಯಾಪಾರಸಂಸ್ಥೆಗಳು ಇಲ್ಲಿರುವುವಲ್ಲದೆ, ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ವ್ಯಾಪ್ತಿಯುಳ್ಳ ಅನೇಕ ವ್ಯಾಪಾರ ಸಂಸ್ಥೆಗಳು ತಮ್ಮ ಸ್ಥಳೀಯ ಅಥವಾ ಪ್ರಾದೇಶಿಕ ವಿಭಾಗಗಳನ್ನೂ ವ್ಯಾಪಾರದ ಕೋಠಿಗಳನ್ನೂ ಇಲ್ಲಿ ಸ್ಥಾಪಿಸಿವೆ.

ವ್ಯಾಪಾರ ಮತ್ತು ಉದ್ಯಮಗಳಿಗೆ ಪೋಷಕವಾಗಿ ಇಲ್ಲಿ ಕರ್ನಾಟಕ ಫೈನಾನ್ಸಿಯಲ್ ಕಾರ್ಪೊರೇಷನ್, ಇಂಡಸ್ಟ್ರೀಯಲ್ ಫೈನಾನ್ಸಿಯಲ್ ಕಾರ್ಪೋರೇಷನ್, ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೋರೇಷನ್, ಅಪೆಕ್ಸ್ ಬ್ಯಾಂಕ್ ಮೊದಲಾದ ಹಣಕಾಸು ಸಂಸ್ಥೆಗಳೂ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬ್ಯಾಂಕುಗಳ ಶಾಖೆಗಳೂ ಇವೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾ ಬ್ಯಾಂಕ್, ವಿಜಯ ಬ್ಯಾಂಕ್ ಮತ್ತು ವೈಶ್ಯಾ ಬ್ಯಾಂಕ್–ಇವುಗಳ ಪ್ರಧಾನ ಕಚೇರಿಗಳು ಇರುವುದೂ ಬೆಂಗಳೂರಿನಲ್ಲೇ; ಅಲ್ಲದೆ ಸ್ಟಾಕ್ ಎಕ್ಸ್‌ಚೇಂಜ್, ಕರ್ನಾಟಕ ಛೇಂಬರ್ಸ್ ಆಫ್ ಕಾಮರ್ಸ್ ಮೊದಲಾದವೂ ಇಲ್ಲಿ ಸ್ಥಾಪಿತವಾಗಿವೆ. ಜಿಲ್ಲೆಯ ಮತ್ತು ನಗರ ವ್ಯಾಪ್ತಿಯ ವ್ಯಾಪಾರ ವ್ಯವಹಾರಗಳಿಗಾಗಿ ಅನೇಕ ಸಗಟು ವ್ಯಾಪಾರದ ಮಳಿಗೆಗಳು, ರೆಗ್ಯುಲೇಟೆಡ್ ಮಾರ್ಕೆಟ್ ಮೊದಲಾದವೂ ಇವೆ.

ಬೆಂಗಳೂರಿನ ಆರ್ಥಿಕ ಚಟುವಟಿಕೆಗಳಿಗೆ ಇದರ ಸನ್ನಿವೇಶವೂ ಮುಖ್ಯ ಕಾರಣ. ಎರಡೂ ಕರಾವಳಿಗಳಿಂದ ಸುಮಾರು ಸಮದೂರದಲ್ಲಿರುವ ಈ ನಗರ ಉತ್ತಮ ಸಂಪರ್ಕಜಾಲ ಹೊಂದಿದೆ. ಬೆಂಗಳೂರಿನಲ್ಲಿ ನಾಗರಿಕ ವಿಮಾನ ನಿಲ್ದಾಣವಿದ್ದು ಇಲ್ಲಿಂದ ಮುಂಬಯಿ, ದೆಹಲಿ, ಚೆನ್ನೈ, ಹೈದರಾಬಾದ್, ಮಂಗಳೂರು, ಕೊಚ್ಚಿ ಮೊದಲಾದೆಡೆಗೆ ವಿಮಾನ ಸಂಪರ್ಕ ಇದೆ. ಈಚೆಗೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಗರದಿಂದ 35 ಕಿಮೀ ಗಳ ದೂರದಲ್ಲಿ ದೇವನಹಳ್ಳಿಯಲ್ಲಿ ಕಾರ್ಯಾರಂಭ ಮಾಡಿದೆ. ಬೆಂಗಳೂರಿನಿಂದ ಚೆನ್ನೈ, ಗುಂತಕಲ್ಲು, ಅರಸೀಕೆರೆ, ಮೈಸೂರು, ಸೇಲಂ ಮತ್ತು ಬಂಗಾರಪೇಟೆಗಳಿಗೆ ರೈಲು ಮಾರ್ಗಗಳು ಇವೆ. ಅಲ್ಲದೆ ಇಲ್ಲಿಂದ ಚೆನ್ನೈ, ಮುಂಬಯಿ, ಹೈದರಾಬಾದ್, ನೀಲಗಿರಿ, ಸೇಲಂಗಳ ಕಡೆಗೆ ಹೋಗುವ ಹಾಗೂ ರಾಜ್ಯದ ಬಹುತೇಕ ಎಲ್ಲ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಮಾರ್ಗಗಳು ಇರುವುದಲ್ಲದೆ, ರಾಜ್ಯದ ಮುಖ್ಯಸ್ಥಳಗಳು ಹಾಗೂ ಚೆನ್ನೈ, ತಿರುಪತಿ, ತಿರುಚಿರಾಪಳ್ಳಿ, ಮದುರೈ, ಕೊಯಮತ್ತೂರು, ಕಲ್ಲಿಕೋಟೆ, ಪಣಜಿ, ಮುಂಬಯಿ, ಹೈದರಾಬಾದ್ ಮೊದಲಾದೆಡೆಗಳಿಗೆ ನೇರ ಬಸ್ ಸಂಪರ್ಕ ಕೂಡ ಇದೆ. ನಗರದಲ್ಲಿ ಆಕಾಶವಾಣಿ ಕೇಂದ್ರ, ದೂರದರ್ಶನ ಕೇಂದ್ರ ಪ್ರಧಾನ ಅಂಚೆಕಛೇರಿ, ಹಲವು ಶಾಖಾ ಕಚೇರಿಗಳು, ದೂರವಾಣಿ ಕೇಂದ್ರ ಇವೆ.

ಬೆಂಗಳೂರು ನಗರದ ಅಭಿವೃದ್ಧಿ ಮತ್ತು ನಾಗರಿಕ ಸೌಲಭ್ಯಗಳ ಪೂರೈಕೆಗಾಗಿ ನಗರಸಭೆಯಲ್ಲದೆ ನಗರಾಭಿವೃದ್ಧಿ ವಿಶ್ವಸ್ಥಮಂಡಲಿ, ಬೆಂಗಳೂರು ಜಲಮಂಡಲಿ ಮೊದಲಾದವುಗಳು ಇವೆ. ವಿಶಾಲವಾಗಿ ಬೆಳೆಯುತ್ತಿರುವ ಬೆಂಗಳೂರಿಗೆ ಹೆಸರುಘಟ್ಟ ಮತ್ತು ತಿಪ್ಪಗೊಂಡನಹಳ್ಳಿ ಕೆರೆಗಳಿಂದ ಹಾಗೂ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ವ್ಯವಸ್ಥೆ ಇದೆ.

ವಿಕ್ಟೋರಿಯ ಮತ್ತು ಬೌರಿಂಗ್ ನಗರದ ದೊಡ್ಡ ಆಸ್ಪತ್ರೆಗಳು. ಇವು ಅಲ್ಲದೆ ನಗರದಲ್ಲಿ ಅನೇಕ ಆಸ್ಪತ್ರೆಗಳಿವೆ. ಆರೋಗ್ಯ ಕೇಂದ್ರಗಳು, ಔಷಧಾಲಯಗಳು, ಹೆರಿಗೆ ಮತ್ತು ಶಿಶುಕಲ್ಯಾಣಕೇಂದ್ರಗಳು, ಕುಟುಂಬ ಯೋಜನಾ ಕೇಂದ್ರಗಳು, ಮಕ್ಕಳ ಆಸ್ಪತ್ರೆಗಳು, ಕ್ಷಯರೋಗ ಆಸ್ಪತ್ರೆಗಳು, ಹೃದ್ರೋಗ, ಮಿದುಳು ರೋಗಗಳ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆ, ಕುಷ್ಠರೋಗ ಆಸ್ಪತ್ರೆ ಇವುಗಳ ಜೊತೆಗೆ ಅನೇಕ ಖಾಸಗಿ ಔಷಧಾಲಯಗಳೂ ಶುಶ್ರೂಷಾ ಗೃಹಗಳೂ ಇವೆ.

ಬೆಂಗಳೂರು ನಗರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯಗಳಲ್ಲದೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ವತಿಯಿಂದ ನಡೆಯುತ್ತಿರುವ ಆಡುಗೋಡಿ ಕ್ಷೀರೋದ್ಯಮ ಸಂಶೋಧನ ಕೇಂದ್ರ ಮುಂತಾದವುಗಳಿವೆ. ಈ ಸಂಸ್ಥೆಗಳಲ್ಲಿ ವಿಜ್ಞಾನದ ಹಲವು ವಿಭಾಗಗಳ ಉನ್ನತ ಶಿಕ್ಷಣದ ವ್ಯವಸ್ಥೆ ಇದೆ. ಬೆಂಗಳೂರಿನಲ್ಲಿ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಶಾಸ್ತ್ರ ಕಾಲೇಜುಗಳೂ ಗೃಹ ವಿಜ್ಞಾನ, ನ್ಯಾಯಶಾಸ್ತ್ರ, ಶಿಕ್ಷಣ ತರಬೇತಿ, ಸಂಸ್ಕೃತ, ದೈಹಿಕ ಶಿಕ್ಷಣ, ಆಯುರ್ವೇದ, ಹೋಮಿಯೋಪತಿ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಮುಂತಾದ ಕಾಲೇಜುಗಳೂ ಇವೆ. ಸೆಂಟ್ರಲ್ ಕಾಲೇಜು ಈ ನಗರದ ಅತ್ಯಂತ ಹಳೆಯ ಕಾಲೇಜು (1858). ಪಾಲಿಟೆಕ್ನಿಕ್ ಕಾಲೇಜುಗಳು, ಕೈಗಾರಿಕಾ ತರಬೇತಿ ಸಂಸ್ಥೆ, ಕಸಬು ತರಬೇತಿ ಸಂಸ್ಥೆಗಳು, ಕಚೇರಿ ವಿಧಾನ ತರಬೇತಿ ಸಂಸ್ಥೆ, ಸಹಕಾರ ತರಬೇತಿ ಕೇಂದ್ರ, ಬೆರಳಚ್ಚು ಮತ್ತು ಶೀಘ್ರಲಿಪಿ ಸಂಸ್ಥೆಗಳೂ ಪ್ರೌಢ ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳೂ ಕೇಂದ್ರಿಯ ವಿದ್ಯಾಲಯಗಳೂ ಇಲ್ಲಿವೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೊ ಸೈನ್ಸಸ್ ಇವು ಉನ್ನತ ಸಂಶೋಧನೆಯ ಸಂಸ್ಥೆಗಳೂ ಆಗಿವೆ. ಪ್ರಸಿದ್ಧ ವಿಜ್ಞಾನಿ ಸಿ.ವಿ.ರಾಮನ್ ರಿಂದ ಸ್ಥಾಪಿತವಾದ ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಭೌತ ವಿಜ್ಞಾನದಲ್ಲಿ ಉಚ್ಚಮಟ್ಟದ ಸಂಶೋಧನಾ ಕಾರ್ಯದಲ್ಲಿ ನಿರತವಾಗಿದೆ. ಬೃಹತ್ ಸಂಶೋಧನಾ ಸಂಸ್ಥೆಗಳಲ್ಲಿ ನ್ಯಾಷನಲ್ ಏರೋನಾಟಿಕಲ್ ಲ್ಯಾಬೊರೇಟರಿ, ಎಲೆಕ್ಟ್ರಿಕಲ್ ಅಂಡ್ ರೇಡಾರ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್, ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್, ಫಾರೆಸ್ಟ್ ರಿಸರ್ಚ್ ಲ್ಯಾಬೊರೇಟರಿ, ಇಂಡಿಯನ್ ವೆಟರನರಿ ರಿಸರ್ಚ್ ಇನ್‌ಸ್ಟಿಟ್ಯೂಟ್, ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರಿಸರ್ಚ್, ನ್ಯಾಷನಲ್ ಟ್ಯೂಬರ್ ಕ್ಯುಲಾಸಿಸ್ ಇನ್‌ಸ್ಟಿಟ್ಯೂಟ್, ವೈರಸ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಪ್ರಾದೇಶಿಕ ಕೇಂದ್ರ, ಟೆಲಿಕಮ್ಯುನಿಕೇಷನ್ ಸರ್ವಿಸ್ ಇನ್‌ಸ್ಟಿಟ್ಯೂಟ್, ಸೆಂಟ್ರಲ್ ಮೆಡಿಸನಲ್ ಪ್ಲಾಂಟ್ಸ್ ಆರ್ಗನೈಸೇಷನ್, ಸೆಂಟ್ರಲ್ ಮೆಷಿನ್ ಟೂಲ್ಸ್ ಇನ್‌ಸ್ಟಿಟ್ಯೂಟ್, ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್ ಆಫ್ ಬಯಾಲಾಜಿಕಲ್ ಕಂಟ್ರೋಲ್‌ನ ಶಾಖೆ, ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ ಇವು ಪ್ರಮುಖವಾದುವು. ಫೊರೆನ್‌ಸಿಕ್ ಲ್ಯಾಬೊರೇಟರಿ ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್, ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್, ಸ್ಮಾಲ್ ಇಂಡಸ್ಟ್ರೀಸ್ ಸರ್ವಿಸ್ ಇನ್‌ಸ್ಟಿಟ್ಯೂಟ್ ಮುಂತಾದವೂ ಔದ್ಯಮಿಕ ಮತ್ತು ವೈಜ್ಞಾನಿಕ ಸಂಶೋಧನೆಗೆ ಪೂರಕ ಸಂಸ್ಥೆಗಳಾಗಿವೆ. ಅಲ್ಲದೆ ಅನೇಕ

ಬೆಂಗಳೂರು ಅರಮನೆ

ಔದ್ಯಮಿಕ ಸಂಸ್ಥೆಗಳು ಮತ್ತು ಕೆಲವು ಸರ್ಕಾರಿ ಇಲಾಖೆಗಳು ಸ್ವಂತವಾದ ಸಂಶೋಧನಾ ವಿಭಾಗಗಳನ್ನು ಬೆಳೆಸಿಕೊಂಡಿವೆ. ರಾಜ್ಯಸರ್ಕಾರದ ಕೇಂದ್ರ ಗ್ರಂಥಾಲಯವಲ್ಲದೆ ಇತರ ಗ್ರಂಥಾಲಯಗಳೂ ಅನೇಕ ವಾಚನಾಲಯಗಳೂ ಇಲ್ಲಿವೆ.

ಕ್ರಮವಾಗಿ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಂದ ಸ್ಥಾಪಿತವಾಗಿರುವ ವಿಶ್ವೇಶ್ವರಯ್ಯ ಔದ್ಯಮಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ ಮತ್ತು ಸರ್ಕಾರಿ ವಸ್ತುಸಂಗ್ರಹಾಲಯ, ರಾಜ್ಯ ಸರ್ಕಾರದ ವತಿಯಿಂದ ಸ್ಥಾಪಿತವಾಗಿರುವ ಸಾಹಿತ್ಯ, ಲಲಿತಕಲೆ, ನಾಟಕ ಮತ್ತು ಸಂಗೀತ ಅಕಾಡೆಮಿಗಳು ಬೆಂಗಳೂರಿನಲ್ಲಿವೆ. ಇವಲ್ಲದೆ ನಗರದ ಬೌದ್ಧಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರತವಾಗಿರುವವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಮಿಥಿಕ್ ಸೊಸೈಟಿ, ಭಾರತೀಯ ವಿದ್ಯಾಭವನ ಪ್ರಾದೇಶಿಕ ಕೇಂದ್ರ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಗೋಖಲೆ ಸಾರ್ವಜನಿಕ ಸಂಸ್ಥೆ, ಅಲೈಯನ್ಸ್ ಫ್ರಾನ್ಸಿಸ್, ಮ್ಯಾಕ್ಸ್ ಮುಲ್ಲರ್‌ಭವನ, ಬೈಬಲ್ ಸೊಸೈಟಿ ಆಫ್ ಇಂಡಿಯ, ಮಹಾಬೋಧಿ ಸೊಸೈಟಿ, ಥಿಯಾಸಫಿಕಲ್ ಸೊಸೈಟಿ ಮೊದಲಾದವನ್ನು ಹೆಸರಿಸಬಹುದು.

ಬೆಂಗಳೂರು ನಗರ ಪತ್ರಿಕೋದ್ಯಮ ರಂಗದಲ್ಲೂ ಹೆಚ್ಚಿನ ಬೆಳವಣಿಗೆ ಸಾಧಿಸಿದೆ. ಇಲ್ಲಿಂದ ಪ್ರಕಟವಾಗುತ್ತಿರುವ ದಿನ, ವಾರ, ಮಾಸ, ತ್ರೈಮಾಸಿಕ, ಅರ್ಧವಾರ್ಷಿಕ ಕನ್ನಡ ಪತ್ರಿಕೆಗಳ ಸಂಖ್ಯೆ 92ಕ್ಕೂ ಹೆಚ್ಚು. ಕನ್ನಡವೇ ಅಲ್ಲದೆ ಇಂಗ್ಲಿಷ್, ತಮಿಳು, ತೆಲುಗು, ಮಲಯಾಳಂ, ಹಿಂದಿ, ಮರಾಠಿ, ಉರ್ದು ಮುಂತಾದ ಭಾಷೆಗಳಲ್ಲಿ ಪ್ರಕಟವಾಗುವ ಪತ್ರಿಕೆಗಳ ಒಟ್ಟು ಸಂಖ್ಯೆ 113. ಇತ್ತೀಚೆಗೆ ಕೆಲವು ಹೊಸ ಪತ್ರಿಕೆಗಳು ಪ್ರಕಟಣೆ ಆರಂಭಿಸಿವೆ.

ನಗರದಲ್ಲಿ ಮೂರು ಚಲನಚಿತ್ರ ಸ್ಟುಡಿಯೋಗಳೂ ಅನೇಕ ಚಲನಚಿತ್ರ ಮಂದಿರಗಳೂ ಇವೆ. ಇಲ್ಲಿರುವ ಆದರ್ಶ ಫಿಲಮ್ ಇನ್‌ಸ್ಟಿಟ್ಯೂಟ್ ಚಲನಚಿತ್ರಕ್ಕೆ ಸಂಬಂಧಿಸಿದ ಅನೇಕ ಕ್ಷೇತ್ರಗಳಲ್ಲಿ ತರಬೇತು ನೀಡುವ ಸಂಸ್ಥೆಯಾಗಿದೆ. ರವೀಂದ್ರ ಕಲಾಕ್ಷೇತ್ರ ಮತ್ತು ಇತರ ಸಭಾಭವನಗಳಲ್ಲಿ ವೃತ್ತಿ ಹಾಗೂ ಹವ್ಯಾಸಿಕಲಾವಿದರ ಸಂಗೀತ ಕಚೇರಿಗಳೂ ನಾಟಕ, ನೃತ್ಯ ಪ್ರದರ್ಶನಗಳೂ ಆಗಾಗ್ಗೆ ನಡೆಯುತ್ತವೆ. ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಸೇರಿದಂತಿರುವ ವೆಂಕಟಪ್ಪ ಆರ್ಟ್ ಗ್ಯಾಲರಿ ಮತ್ತು ಇತರ ಕೆಲವು ಖಾಸಗಿ ಭವನಗಳಲ್ಲಿ ಚಿತ್ರಕಲಾ ಪ್ರದರ್ಶನಗಳಿಗೆ ಅವಕಾಶವಿದೆ. ಕಂಠೀರವ ಸ್ಟೇಡಿಯಮ್ ಇಲ್ಲಿಯ ಬೃಹತ್ ಕ್ರೀಡಾಗಾರ. ಇದಲ್ಲದೆ ಇತರ 3 ಕ್ರೀಡಾಗಾರಗಳು, ಒಂದು ಗಾಲ್ಫ್ ಕ್ಲಬ್ ಹಾಗೂ ಬೆಂಗಳೂರು ಟರ್ಫ್‌ಕ್ಲಬ್ (ರೇಸ್‌ಕೋರ್ಸ್) ಇವೆ. ಚಿನ್ನಸ್ವಾಮಿ ಸ್ಟೇಡಿಯಮ್ ಪ್ರಸಿದ್ಧ ಕ್ರಿಕೆಟ್ ಕ್ರೀಡಾಂಗಣ. (ಕೆ.ವಿ.ಎನ್.)

**ಬೆಂಗಳೂರು-ಗ್ರಾಮಾಂತರ ಜಿಲ್ಲೆ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ಆಗ್ನೇಯ ದಿಕ್ಕಿನಲ್ಲಿದೆ. ಈ ಜಿಲ್ಲೆ $12^{0}15'$ ರಿಂದ $13^{0}35'$ ಉತ್ತರ ಅಕ್ಷಾಂಶ ಮತ್ತು $77^{0}05'$ ರಿಂದ $78^{0}$ ಪೂರ್ವ ರೇಖಾಂಶಗಳ ನಡುವೆ ಇದೆ ಮತ್ತು ಭೂಮಿಯ ಮೇಲ್ಮೈ ಸಮುದ್ರ ಮಟ್ಟದಿಂದ 629-950 ಮೀ ವ್ಯತ್ಯಾಸದ ಎತ್ತರದಲ್ಲಿದೆ. ಜಿಲ್ಲೆಯ ಪೂರ್ವಕ್ಕೆ ಕೋಲಾರ ಮತ್ತು ಉತ್ತರಕ್ಕೆ ಚಿಕ್ಕ ಬಳ್ಳಾಪುರ, ಕೋಲಾರ ವಾಯವ್ಯಕ್ಕೆ ತುಮಕೂರು, ನೈರುತ್ಯಕ್ಕೆ ರಾಮನಗರ, ದಕ್ಷಿಣಕ್ಕೆ ಬೆಂಗಳೂರು ಜಿಲ್ಲೆಗಳು ಸುತ್ತುವರಿದಿವೆ. ಈ ಜಿಲ್ಲೆಗೆ ಚನ್ನಪಟ್ಟಣ, ದೇವಿನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಕನಕಪುರ, ಮಾಗಡಿ, ನೆಲಮಂಗಲ ಮತ್ತು ರಾಮನಗರ ತಾಲ್ಲೂಕುಗಳು ಸೇರಿರುತ್ತವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಧ್ಯೆ ಉತ್ತರ ಮತ್ತು ಪೂರ್ವ ಭಾಗಗಳು ವಿಸ್ತಾರವಾದ ಏರು-ತಗ್ಗುಗಳಿಂದ ಕೂಡಿರುವ ಮೈದಾನಗಳಾಗಿವೆ. ಈ ಜಿಲ್ಲೆಯಲ್ಲಿ ಕಂಡು ಬರುವ ಎತ್ತರ ಪ್ರದೇಶಗಳಲ್ಲಿ ಸ್ವಲ್ಪ ಪ್ರಮಾಣದ ಕುರುಚಲು ಅರಣ್ಯಗಳು ಮತ್ತು ತಗ್ಗು ಪ್ರದೇಶಗಳಲ್ಲಿ ನೀರಾವರಿಗೆ ಬೇಕಾಗುವ ಕೆರೆಗಳಿವೆ. ಈ ಭಾಗಗಳಲ್ಲಿ ಸು. 900 ಮೀ ಎತ್ತರವಿರುವ ಅವಶೇಷ ಬೆಟ್ಟಗುಡ್ಡಗಳಿವೆ. ದಕ್ಷಿಣ ಭಾಗದಲ್ಲಿ ದಟ್ಟವಾದ ಸಸ್ಯ ವರ್ಗಗಳು ಕಂಡುಬರುತ್ತವೆ ಹಾಗೂ ದಕ್ಷಿಣದ ಕಡೆಗೆ ಹೋದಂತೆ ಮೇಲ್ಮೈ ಮಟ್ಟ ಕಡಿಮೆಯಾಗುತ್ತಾ ಹೋಗುತ್ತದೆ. ಈ ಪ್ರದೇಶದಲ್ಲಿ ಹಲವಾರು ಬೆಟ್ಟ ಗುಡ್ಡಗಳು ಹಂಚಿಕೆಯಾಗಿವೆ. ಕೆಲವು ಪ್ರಮುಖ ಬೆಟ್ಟಗಳೆಂದರೆ. ಶಿವಗಂಗೆ (1,380ಮೀ), ಸಾವನದುರ್ಗ (1,207ಮೀ), ರಾಮಗಿರಿ (919 ಮೀ), ಕಬ್ಬಲದುರ್ಗ (1,050 ಮೀ) ಮತ್ತು ನಿಜಗಲ್ (1,070 ಮೀ). ಜಿಲ್ಲೆಯಲ್ಲಿ ಪಿನಾಕಿನಿ, ಅರ್ಕಾವತಿ ಮತ್ತು ಕಣ್ವ ನದಿಗಳು ಹರಿಯುತ್ತವೆ ಮತ್ತು ಮಂಚನಬೆಲೆ ಸಣ್ಣ ನೀರಾವರಿ ಯೋಜನೆಗಳಿದ್ದು ನೀರಾವರಿಗೆ ಅನುಕೂಲವಾಗಿರುತ್ತದೆ. ಈ ಜಿಲ್ಲೆಯಲ್ಲಿ ಮರಳು – ಮಿಶ್ರಿತ ಕೆಂಪು ಮಣ್ಣು ಪ್ರಮುಖವಾಗಿ ಹಂಚಿಕೆಯಾಗಿದೆ. ಅಲ್ಲಲ್ಲಿ ಕಪ್ಪು ಹತ್ತಿ ಮಣ್ಣು ಸಹ ಕಂಡುಬರುತ್ತದೆ. ವಾಯುಗುಣ ಹಿತಕರವಾಗಿದ್ದು ಉಷ್ಣಾಂಶದಲ್ಲಿ ಹೆಚ್ಚು ವ್ಯತ್ಯಾಸ ಕಂಡು ಬರುವುದಿಲ್ಲ. ಒಟ್ಟು ಭೌಗೋಳಿಕ ಪ್ರದೇಶದ ಶೇ. 18.8 ರಷ್ಟು ಭಾಗ ಸಸ್ಯವರ್ಗದಿಂದ ಕೂಡಿದೆ. ಇಲ್ಲಿ ಅಭಯಾರಣ್ಯ, ರಕ್ಷಿತ ಅರಣ್ಯ ಮತ್ತು ಸಾಮಾಜಿಕ ಅರಣ್ಯ ಕಂಡುಬರುತ್ತದೆ. ಈ ಜಿಲ್ಲೆಯ ಪ್ರಮುಖ ಅಭಯಾರಣ್ಯ ಮತ್ತು ರಕ್ಷಿತ ಅರಣ್ಯಗಳೆಂದರೆ ದಂಡಕಾರಣ್ಯ, ಚಂದನ-ಅರಣ್ಯ, ಗುಂಜಾರಣ್ಯ ಮತ್ತು ಕುಂಬಾರಣ್ಯ ಹಾಗೂ ಸಾಮಾಜಿಕ ಅರಣ್ಯಗಳು ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹಾರೋಹಳ್ಳಿಗಳಲ್ಲಿ ಹಂಚಿಕೆಯಾಗಿದೆ. ಈ ಪ್ರದೇಶದಲ್ಲಿ ಕಂಡುಬರುವ ಪ್ರಮುಖ ಜಾತಿಯ ಸಸ್ಯಗಳೆಂದರೆ, ತೇಗ, ಬೀಟೆ, ಹೊನ್ನೆ, ಜಾಲಿ, ಅಂಟುಮರ, ಹೊಂಗೆ ಮತ್ತು ಮಾವು, ನೇರಳೆ, ಬಿದಿರು ಇತ್ಯಾದಿ ಸಾಧಾರಣ ಪ್ರಮಾಣದಲ್ಲಿ ಹಂಚಿಕೆಯಾಗಿದೆ. ಹುಣಸೆ, ಹಲಸು, ನೀಲಗಿರಿ ಮತ್ತು ಬೇವು ವಿರಳವಾಗಿ ಹಂಚಿಕೆಯಾಗಿವೆ. ಜಿಲ್ಲೆಯ ಅಭಯಾರಣ್ಯ ಮತ್ತು ರಕ್ಷಿತ ಅರಣ್ಯಗಳಲ್ಲಿ ಹುಲಿ, ಜಿಂಕೆ, ಮಂಗ, ಕರಡಿ, ಆನೆ, ನರಿ, ಕಾಡೆಮ್ಮೆ, ಕಾಡು ಬೆಕ್ಕು ಇತ್ಯಾದಿ ಪ್ರಾಣಿಗಳು ಕಂಡುಬರುತ್ತವೆ. ಕುರುಚಲು ಸಸ್ಯವರ್ಗ ಪ್ರದೇಶದಲ್ಲಿ ಚುಕ್ಕೆ ಜಿಂಕೆ, ನೀಲಗಾಯ್, ಮೊಲ, ನವಿಲು, ಮುಂಗುಸಿ ಹಾಗೂ ಜಲಚರಗಳಾದ ಕಪ್ಪೆ, ಹಾವು, ಆಮೆ, ಮೊಸಳೆಗಳು ಸಹ ಇವೆ.




ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. 53ರಷ್ಟು ಭೂಮಿ ಕೃಷಿಗೆ ಯೋಗ್ಯವಾಗಿದೆ. ಇಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಕಡಲೆ, ತೊಗರಿ, ಕಬ್ಬು, ಮಸಾಲೆ ಮತ್ತು ಸಾಂಬಾರ ಪದಾರ್ಥಗಳು, ತರಕಾರಿಗಳು, ಹಣ್ಣುಗಳು, ಎಣ್ಣೆ ಕಾಳುಗಳು, ಹತ್ತಿ ಮತ್ತು ಹಿಪ್ಪುನೇರಿಳೆ. ಈ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಸಾಕು ಪ್ರಾಣಿಗಳೆಂದರೆ ದನಕರ, ಎಮ್ಮೆ, ಕುರಿ, ಆಡು, ಹಂದಿ, ನಾಯಿ ಮತ್ತು ಕೋಳಿ. ಮೀನು, ಪಶುಪಾಲನೆಗಾಗಿ ಸು. 192 ಪಶುವೈದ್ಯ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.

ಈ ಜಿಲ್ಲೆಯ ನೈಸರ್ಗಿಕ ಸಂಪನ್ಮೂಲ, ಅರಣ್ಯ ಸಂಪತ್ತು, ಖನಿಜ ಸಂಪತ್ತು ಮತ್ತು ವನ್ಯ ಮೃಗಗಳು. ಅರಣ್ಯದಲ್ಲಿನ ಹಲವಾರು ಜಾತಿಯ ಮರಗಳು ಅರಣ್ಯಾಗಾರಿಕೆಗೆ ಸಹಾಯಕವಾಗಿವೆ. ಇಲ್ಲಿ ಕಂಡುಬರುವ ಪ್ರಮುಖ ಖನಿಜ ಸಂಪನ್ಮೂಲಗಳೆಂದರೆ ಕಲ್ನಾರು, ಗಾರ್ನೆಟ್, ಸುಣ್ಣದಕಲ್ಲು, ಬೆಣಚುಕಲ್ಲು (ಸ್ಫಟಿಕ ಶಿಲೆ) ಹಾಗೂ ಆಭರಣ ತಯಾರಿಕೆಯ ಅಮೂಲ್ಯ ರತ್ನಗಳು ಮತ್ತು ಕಟ್ಟಡಕ್ಕೆ ಉಪಯೋಗಿಸುವ ಕಲ್ಲುಗಳು. ಪ್ರಮುಖ ಕೈಗಾರಿಕೆಗಳೆಂದರೆ ಬಟ್ಟೆ, ರಾಸಾಯನಿಕ, ಎಂಜಿನಿಯರಿಂಗ್ ಮುಂತಾದವು. ಜಿಲ್ಲೆಯಲ್ಲಿ ಸು. 125 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ 476 ಕಿಮೀ ಉದ್ದದ ರಾಜ್ಯ ಹೆದ್ದಾರಿ ಮತ್ತು 170 ಕಿಮೀ ಗಳು ಜಿಲ್ಲಾ ರಸ್ತೆಗಳು ಕಾರ್ಯನಿರತವಾಗಿದ್ದು ರಾಜ್ಯದ ಮುಖ್ಯ ನಗರಗಳೊಂದಿಗೆ ಹೆಚ್ಚಿನ ಸಂಪರ್ಕಗಳಿಗೆ ಸಹಾಯಕವಾಗಿದೆ.

ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ ಇಲ್ಲಿನ ಪ್ರಮುಖ ಪಟ್ಟಣಗಳು. (ಎಚ್.ಎಲ್.ಪಿ.)

**ಬೆಂಚ್ ಮಾರ್ಕ್:** ಬೆಂಚ್ ಮಾರ್ಕ್ ವಿಧಾನ ಎಲ್ಲಾ ಬಗೆಯಲ್ಲಿಯೂ ಸ್ಥಳದ ಎತ್ತರದ ವಿಧಾನವನ್ನೇ ಹೋಲುತ್ತದೆ. ಬೆಂಚ್ ಮಾರ್ಕ್‌ಗಳು ಕಟ್ಟಡಗಳ, ಗೋಡೆಗಳ ಅಥವಾ ಕಲ್ಲುಗಳ ಮೇಲೆ ಬಾಣದ ರೀತಿಯಲ್ಲಿ ಎಲ್ಲೆಯ ಗಡಿಗಾಗಿ ಗುರುತಿಸಲ್ಪಟ್ಟಿರುವ ಚಿಹ್ನೆಗಳಾಗಿವೆ. ಅವುಗಳು ಹೊಂದಿರುವ ಎತ್ತರವನ್ನು ಸರ್ವೇಕ್ಷಣೆಯಲ್ಲಿ ಕರಾರುವಾಕ್ಕಾಗಿ ಅಳೆದು ಗುರುತಿಸಲಾಗಿದೆ. ಭೂಪಟದ ಮೇಲೆ ಈ ಸ್ಥಳಗಳನ್ನು ಬಿ.ಎಂ. ಎಂದು ಸಾಂಕೇತಿಕವಾಗಿ ಗುರುತಿಸಿ ಅವುಗಳ ಎತ್ತರವನ್ನು ಸೂಚಿಸಲಾಗುವುದು. ಬಿ.ಎಂ. 1500 ಸ್ಥಳದ ಎತ್ತರವು ಸಮುದ್ರಮಟ್ಟದಿಂದ ಆ ಸ್ಥಳದ ಎತ್ತರವನ್ನು ಸೂಚಿಸಿದರೆ ಬೆಂಚ್ ಮಾರ್ಕ್ ಆ ಚಿಹ್ನೆ ಇರುವ ಸ್ಥಳ ಸಮುದ್ರಮಟ್ಟದಿಂದ ಹೊಂದಿರುವ ಎತ್ತರವನ್ನು ಸೂಚಿಸುವುದು. (ಆರ್.ಎನ್.)

**ಬೆಟ್ಟದ ಛಾಯವಿಧಾನ:** ಯಾವುದಾದರೊಂದು ಭಾಗದಿಂದ ಬೆಳಕನ್ನು ಹಾಯಿಸಿದಾಗ ಭೂಸ್ವರೂಪಗಳು ಉಂಟುಮಾಡುವ ನೆರಳನ್ನು ಯಥಾವತ್ತಾಗಿ ಚಿತ್ರಿಸುವುದು. ಮೇಲಿನಿಂದ ಬೆಳಕನ್ನು ಹಾಯಿಸಿದಾಗ ಮಟ್ಟಸವಾದ ಭಾಗಗಳು ಯಾವುದೇ ನೆರಳನ್ನು

ಮೂಡಿಸದಿರುವುದರಿಂದ ಅವುಗಳು ಬಿಳಿಯ ಬಣ್ಣವನ್ನು ಹೊಂದಿರುತ್ತವೆ. ಎತ್ತರಕ್ಕೆ ಅನುಗುಣವಾಗಿ ಎತ್ತರವಾಗಿರುವ ಭೂಭಾಗಗಳು ಹೆಚ್ಚು ದಟ್ಟವಾದ ಕಪ್ಪು ಬಣ್ಣದಿಂದ ಪ್ರತಿನಿಧಿಸಲ್ಪಡುತ್ತವೆ. ಬೆಟ್ಟದ ಎರಡೂ ಇಳಿಜಾರುಗಳಲ್ಲಿ ಬೆಳಕು ಬೀಳದಿರುವುದರಿಂದ ನೆರಳಿನಿಂದಾಗಿ ಕಪ್ಪು ಬಣ್ಣದಿಂದ ಪ್ರತಿನಿಧಿಸಲ್ಪಡುತ್ತವೆ. ಉನ್ನತವಾದ ಪರ್ವತಗಳ ಹಾಗೂ ಕಣಿವೆಗಳ ಮಟ್ಟಸವಾದ ಭಾಗಗಳೂ ಸಹ ಬಿಳಿಯ ಬಣ್ಣದಿಂದ ಕೂಡಿರುತ್ತವೆ. ಬಿಳಿ ಬಣ್ಣ ಆ ವಲಯದಲ್ಲಿ ಬೆಳಕು ಬೀಳುವುದನ್ನು ಸೂಚಿಸುವುದು. ಛಾಯಾ ವಿಧಾನದ ಇನ್ನೊಂದು ರೀತಿಯಲ್ಲಿ ಬೆಳಕು ಆ ಪ್ರದೇಶದ ವಾಯವ್ಯದಲ್ಲಿರುವಂತೆ ಪರಿಗಣಿಸಿ ಭೂಸ್ವರೂಪಗಳನ್ನು ಚಿತ್ರಿಸಲಾಗುವುದು. ಇದರಿಂದ ದಕ್ಷಿಣ ಮತ್ತು ಪೂರ್ವದ ಇಳಿಜಾರುಗಳು



ಬೆಟ್ಟದ ಛಾಯಾವಿಧಾನ

ನೆರಳಿನಿಂದ ಹಾಗೂ ಉಳಿದ ಭಾಗಗಳು ಬೆಳಕಿನಿಂದ ಕೂಡಿರುವಂತೆ ನಿರೂಪಿಸಲ್ಪಡುತ್ತವೆ. ಈ ವಿಧಾನದಲ್ಲಿ ಅತಿಚಿಕ್ಕದಾದ ಪ್ರದೇಶದ ಗುಣಲಕ್ಷಣಗಳನ್ನೂ ಯಥಾವತ್ತಾಗಿ ಚಿತ್ರಿಸಬಹುದು. ಆದರೆ ಈ ವಿಧಾನದಲ್ಲಿ ಆ ಪ್ರದೇಶದ ಎತ್ತರವನ್ನಾಗಲೀ ಅಥವಾ ಇಳಿಜಾರಿನ ರೀತಿನೀತಿಯನ್ನಾಗಲೀ ನಿಖರವಾಗಿ ಸೂಚಿಸುವುದಿಲ್ಲ. ಭೂಸ್ವರೂಪಗಳ ವಿನ್ಯಾಸವನ್ನು ಮಾತ್ರ ಇದರಲ್ಲಿ ನಿರೂಪಿಸಬಹುದಾಗಿದೆ. ಅಲ್ಲದೆ ಈ ವಿಧಾನದ ನಿರೂಪಣೆಗೆ ಹೆಚ್ಚು ವೇಳೆ ಹಾಗೂ ನೈಪುಣ್ಯತೆ ಬೇಕಾಗುವುದು. ಇದರಿಂದಾಗಿ ಈ ವಿಧಾನದ ಬಳಕೆ ಇಂದು ಅತಿ ಕಡಿಮೆ. (ಆರ್.ಎನ್.)

**ಬೆತ್ಲೆಹೆಮ್:** ಜೋರ್ಡಾನ್ ದೇಶದ ಒಂದು ಮುಖ್ಯ ಪಟ್ಟಣ. ಏಸುಕ್ರಿಸ್ತನ ಜನ್ಮಸ್ಥಳವೆಂದು ಪ್ರಸಿದ್ಧಿ. ಜೆರೂಸಲೇಮ್ ನಗರದ ನೈಋತ್ಯದಲ್ಲಿ ಸು. 8 ಕಿಮೀದೂರದಲ್ಲಿದೆ. ಜನಸಂಖ್ಯೆ 11,079 (1997). ಇಲ್ಲಿ ಅನೇಕ ಕ್ರಿಶ್ಚಿಯನ್ ಮಿಷನರಿ ಶಾಲೆಗಳು ಹಾಗೂ ದತ್ತಿ ಸಂಸ್ಥೆಗಳು ಹಿಂದಿನಿಂದಲೂ ನಡೆದುಕೊಂಡು ಬರುತ್ತಿವೆ. ಇದೊಂದು ಕ್ರಿಶ್ಚಿಯನ್ ಧರ್ಮದ ಕೇಂದ್ರವಾಗಿದೆ. ಈ ಪಟ್ಟಣದಲ್ಲಿ ಮುಸ್ಲಿಮರಿಗಿಂತಲೂ ಕ್ರಿಶ್ಚಿಯನ್ನರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಪಟ್ಟಣವನ್ನು ಆಧುನೀಕರಿಸಲಾಗಿದ್ದು ಸುಂದರ ಕಟ್ಟಡಗಳು, ಆಲಿವ್ ಮರದ ತೋಪುಗಳು, ದ್ರಾಕ್ಷಿತೋಟಗಳು ಎಲ್ಲೆಲ್ಲೂ ಕಂಡುಬರುತ್ತವೆ. ಈ ಪಟ್ಟಣ ಒಂದು ಪ್ರಮುಖ ಮಾರುಕಟ್ಟೆ. ಇಲ್ಲಿಯ ಜನರು ಮರ ಕೆತ್ತನೆ ಹಾಗೂ ಧಾರ್ಮಿಕ ಕೆತ್ತನೆಯ ವಸ್ತುಗಳೇ ಮೊದಲಾದವನ್ನು ನಿರ್ಮಿಸುವ ಕುಶಲ ಕೆಲಸಗಾರರು. ಬೆತ್ಲೆಹೆಮ್ ಅನೇಕ ಯಾತ್ರಿಗಳ ಹಾಗೂ ಪ್ರೇಕ್ಷಕರ ಒಂದು ಪ್ರಮುಖ ಪ್ರವಾಸೋದ್ಯಮ ಕೇಂದ್ರ. ಈ ಪಟ್ಟಣದ ಸುತ್ತಲಿನ ಫಲವತ್ತಾದ ಪ್ರದೇಶದಲ್ಲಿ ವಿವಿಧ ಧಾನ್ಯಗಳನ್ನೂ ಆಲಿವ್ ಮರಗಳನ್ನೂ ಬೆಳೆಯಲಾಗುತ್ತಿದೆ. ಇಲ್ಲಿ ತಯಾರಾಗುವ ದ್ರಾಕ್ಷಾರಸ ಬಲು ಪ್ರಸಿದ್ಧಿ. ಇಲ್ಲಿಯ ಜನರ ಆದಾಯದ ಪ್ರಮುಖ ಮೂಲವೆಂದರೆ ಕಸೂತಿ ಹಾಗೂ ಕೆತ್ತನೆಯ ಕೆಲಸ ಮತ್ತು ಧಾರ್ಮಿಕ ವೃತ್ತಿಗಳು.

ಬೆತ್ಲೆಹೆಮ್ ಪಟ್ಟಣಕ್ಕೆ ಡೇವಿಡ್ ದೊರೆಯ ಕಾಲದಲ್ಲಿ ಕೋಟೆ ಕಟ್ಟಲಾಯಿತು. ಮುಂದೆ ಈ ಪಟ್ಟಣ ಗ್ರೀಕ್ ರೋಮನ್ ಮತ್ತು ಅರಬ್ ಮುಸ್ಲಿಮರ ಆಳಿಕೆಗೆ ಒಳಗಾಯಿತು. 1000 ದಲ್ಲಿ ಕ್ರಿಶ್ಚಿಯನ್ನರು ಧರ್ಮಯುದ್ಧ ಮಾಡಿ (ಕ್ರುಸೇಡ್) ಬೆತ್ಲೆಹೆಮನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮುಂದೆ ಟರ್ಕಿ ಮುಸಲ್ಮಾನರ ಆಡಳಿತಕ್ಕೆ ಒಳಪಟ್ಟಿತು. 1500ರಲ್ಲಿ ಒಟ್ಟೊಮನ್ ಟರ್ಕರು ಈ ಪ್ರದೇಶದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದರು. ಒಂದನೆಯ ಮಹಾಯುದ್ಧದ ಕಾಲದಲ್ಲಿ (1917) ಬ್ರಿಟಿಷರು ಬೆತ್ಲೆಹೆಮನ್ನು ತಮ್ಮ ವಶಕ್ಕೆ ತೆಗೆದುಕೊಂಡರು. 1923–48ರ ತನಕ ಪ್ಯಾಲಸ್ಟೀನಿನ ನಿಯಂತ್ರಣಕ್ಕೆ ಸೇರಿತ್ತು. 1948ರಿಂದ ಜೋರ್ಡನ್ ದೇಶದ ಒಂದು ಪಟ್ಟಣವಾಯಿತು.

ಇಲ್ಲಿಯ ಏಸುಕ್ರಿಸ್ತನ ಜನ್ಮಸ್ಥಳದ ಮೇಲೆ ಪ್ರ.ಶ.ಪೂ. 326ರಲ್ಲಿ ಕಟ್ಟಿರುವ ಪ್ರಸಿದ್ಧ ಚರ್ಚಿದೆ. ಇದು ಬೆತ್ಲೆಹೆಮ್ ಪಟ್ಟಣದ ಪ್ರಮುಖ ಆಕರ್ಷಣೆ. ಇದರ ದಕ್ಷಿಣ ಭಾಗದಲ್ಲಿರುವ ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸುತ್ತಿರುವ ಅಮೃತ ಶಿಲೆಯ ಕೆತ್ತನೆ ಮನೋಹರವಾಗಿದೆ. ಈ ಮಹಾ ಚರ್ಚಿನ ಅಕ್ಕಪಕ್ಕದಲ್ಲಿ ರೋಮನ್ನರ, ಗ್ರೀಕರ ಹಾಗೂ ಅರ್ಮೇನಿಯನ್ನರ ಚರ್ಚುಗಳೂ ಇವೆ. (ಪಿ.ಬಿ.)

**ಬೆನಿನ್:** ಆಫ್ರಿಕ ಖಂಡದ ಪಶ್ಚಿಮ ಕರಾವಳಿಯಲ್ಲಿರುವ ದೇಶ. ಹಿಂದೆ ಈ ನಾಡನ್ನು ಪಶ್ಚಿಮ ಆಫ್ರಿಕದ ಸಾಮ್ರಾಜ್ಯ ಎಂದು ಕರೆಯುತ್ತಿದ್ದರು. ಇದು ಫ್ರೆಂಚರ ಕಾಲೋನಿಯಾಗಿತ್ತು. 1960 ಆಗಸ್ಟ್ 1 ರಂದು ಸ್ವತಂತ್ರ ರಾಷ್ಟ್ರವಾಯಿತು. ಪಶ್ಚಿಮ ಆಫ್ರಿಕದ ನೈಜೀರಿಯ ಮತ್ತು ಟೋಗೋಗಳ ನಡುವೆ ಇರುವ ಇದು 1,12,620 ಚ.ಕಿಮೀ ಭೂ ಪ್ರದೇಶವನ್ನು ಒಳಗೊಂಡಿದೆ. ಈ ದೇಶ $7^0$ ಉ.ಅ. ದಿಂದ $12^0$ ಉ.ಅ. ಹಾಗೂ $3^0$ ಪೂ.ರೇ. ದಿಂದ $6^0$ ಪೂ.ರೇ. ವರೆಗೆ ವಿಸ್ತರಿಸಿದೆ. ಇದರಲ್ಲಿ 2000 ಚ.ಕಿಮೀ ಜಲಭಾಗವಾಗಿದೆ. ಈ ರಾಷ್ಟ್ರ ಒಟ್ಟು 1989 ಕಿಮೀ ಉದ್ದದ ಗಡಿಯನ್ನು ಬುರ್ಕಿನ ಪಾಸೊ (306 ಕಿಮೀ), ನೈಜೀರಿಯ (773 ಕಿಮೀ), ನೈಜರ್ 226 (ಕಿಮೀ), ಟೋಗೋ (644 ಕಿಮೀ) ಮತ್ತು ಅಟ್ಲಾಂಟಿಕ್ ಕರಾವಳಿಗಳ (212 ಕಿಮೀ) ಜೊತೆ ಹಂಚಿಕೊಂಡಿದೆ. ರಾಜಧಾನಿ ಪೋರ್ಟೊನೋವೋ. ಜನಸಂಖ್ಯೆ 177640 (2002).




ಬೆನಿನ್ ಫಲವತ್ತಾದ ತಗ್ಗು ಪ್ರದೇಶ, ಸಮತಟ್ಟಾದ ಭೂಮೇಲ್ಮೈ ಸ್ವರೂಪ ಹಾಗೂ ಅಲ್ಲಲ್ಲಿ ಏರಿಳಿತಗಳನ್ನು ಹೊಂದಿದೆ. ಈ ದೇಶದ ಅತ್ಯಂತ ಎತ್ತರದ ಭೂಭಾಗವೆಂದರೆ ಮೌಂಟ್ ಸೋಕ್ ಬಾರೋ (658 ಮೀ). ಈ ಪ್ರದೇಶ ಸಮಭಾಜಕ ವೃತ್ತದ ಬಳಿ ಸಮುದ್ರ ಮಟ್ಟದಿಂದ ಕೆಲವೇ ಮೀ ಎತ್ತರವಿರುವುದರಿಂದ ವರ್ಷವಿಡೀ ಉಷ್ಣಾಂಶ ಅಧಿಕವಾಗಿ ಕಂಡುಬರುತ್ತದೆ.

ದೇಶದ ಒಟ್ಟು ಭೂಪ್ರದೇಶದ ಶೇ. 12 ರಷ್ಟು ಮಾತ್ರ ಕೃಷಿಗೆ ಯೋಗ್ಯವಾಗಿದೆ. ಶೇ. 4 ರಲ್ಲಿ ಶಾಶ್ವತ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಶೇ. 4ರಷ್ಟು ಹುಲ್ಲುಗಾವಲು ಮತ್ತು ಗೋಮಾಳಗಳನ್ನು, ಶೇ. 35 ರಷ್ಟು ಅರಣ್ಯ ಪ್ರದೇಶ ಮತ್ತು ಶೇ. 45 ರಷ್ಟು ಇತರೆ ಬಳಕೆಯಲ್ಲಿದೆ. ಕೃಷಿಗೆ ನೀರಾವರಿ ಪದ್ಧತಿಯನ್ನು ಸು. 120 ಚ.ಕಿಮೀ ಪ್ರದೇಶಕ್ಕೆ ಅಳವಡಿಸಲಾಗಿದೆ. ಹತ್ತಿ, ತಾಳೆ, ಕಾಫಿ, ತಂಬಾಕು ಮತ್ತು ಬತ್ತ ಪ್ರಮುಖ ಬೆಳೆಗಳು. ಈ ರಾಷ್ಟ್ರದ ಪ್ರಮುಖ ಉದ್ಯಮವೆಂದರೆ ತಾಳೆಎಣ್ಣೆ ಮತ್ತು ತಾಳೆ ತಿರುಳು ಸಂಸ್ಕರಣೆ ಹಾಗೂ ಜವಳಿ ಉದ್ಯಮ. ಸಣ್ಣ ಪ್ರಮಾಣದಲ್ಲಿರುವ ತೈಲ ನಿಕ್ಷೇಪ, ಸುಣ್ಣದ ಕಲ್ಲು, ಅಮೃತ ಶಿಲೆ ಮತ್ತು ಮರಮುಟ್ಟು ಇಲ್ಲಿನ ನೈಸರ್ಗಿಕ ಸಂಪತ್ತು. ಬೆನಿನ್ 7,862,944 (2002) ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಶೇ. 70 ರಷ್ಟು ಮೂಲವಾಸಿ

ಮತಾವಲಂಬಿಗಳು, ಉಳಿದವರು ಮುಸ್ಲಿಮರು, ಕ್ರಿಶ್ಚಿಯನ್ನರು ಹಾಗೂ ಇತರರು. ವಯೋಮಾನದ ಪ್ರಕಾರ ಶೇ. 44 ರಷ್ಟು 14 ವರ್ಷಕ್ಕೂ ಒಳಪಟ್ಟವರು. ಶೇ. 53.6 ರಷ್ಟು 15 ರಿಂದ 64 ವರ್ಷದವರು ಮತ್ತು ಶೇ. 2.4 ರಷ್ಟು 65 ಕ್ಕೂ ಮೇಲ್ಪಟ್ಟವರು.

ಬೆನಿನ್‌ನ ರಾಷ್ಟ್ರೀಯ ಆದಾಯ 8.55 ಬಿ. ಡಾಲರ್‌ಗಳು, ತಲಾವಾರು ಆದಾಯ 1,100 ಡಾಲರ್‌ಗಳು, ರಾಷ್ಟ್ರೀಯ ಆದಾಯದ ಬೆಳವಣಿಗೆಯ ದರ ಶೇ. 3.5 ರಷ್ಟು. ರಾಷ್ಟ್ರದ ಒಟ್ಟು ಆದಾಯದ ಶೇ. 54.6 ರಷ್ಟು ಸೇವಾ ವಲಯದಿಂದ ಪೂರೈಕೆಯಾಗುತ್ತಿದೆ. ಕೃಷಿಯಿಂದ ಶೇ. 31.6 ರಷ್ಟು ಮತ್ತು ಕೈಗಾರಿಕೆಗಳು ಶೇ. 13.8 ರಷ್ಟು ಆದಾಯವನ್ನು ಪೂರೈಸುತ್ತಿದೆ. ಬೆನಿನ್ ರಫ್ತುಮಾಡುವ ಪ್ರಮುಖ ಪದಾರ್ಥಗಳೆಂದರೆ ಹತ್ತಿ, ಎಣ್ಣೆ, ಕೋಕೋ. ಆಮದು ಮಾಡಿಕೊಳ್ಳುವ ದೇಶಗಳೆಂದರೆ ಚೀನ (ಶೇ. 31.3), ಇಂಡೊನೇಷ್ಯ (ಶೇ. 8.1), ಭಾರತ (ಶೇ. 7.4), ನೈಜರ್ (ಶೇ. 6), ಟೋಗೋ (ಶೇ. 4.8), ಥೈಲೆಂಡ್ (ಶೇ. 4.8) ಮತ್ತು ನೈಜೀರಿಯ (ಶೇ. 6.4).

ಈ ರಾಷ್ಟ್ರವು ತನಗೆ ಅಗತ್ಯವಾದ ಆಹಾರ ಪದಾರ್ಥಗಳು, ಪೆಟ್ರೋಲ್ ಹಾಗೂ ಇತರೆ ವಸ್ತುಗಳನ್ನು ಫ್ರಾನ್ಸ್ (ಶೇ. 21.8), ಘಾನ (ಶೇ. 7.1), ಚೀನ (ಶೇ. 6.7), ಕೆನಡ (ಶೇ. 5.2), ಬೆಲ್ಜಿಯಂ (ಶೇ. 4.9), ಟೋಗೋ (ಶೇ. 4.5) ಥೈಲೆಂಡ್ (ಶೇ. 4.2) ಮತ್ತು ನೈಜೀರಿಯಗಳಿಂದ (ಶೇ. 4) ಆಮದು ಮಾಡಿಕೊಳ್ಳುತ್ತದೆ.

ಈ ರಾಷ್ಟ್ರ ಶೇ. 23 ರಷ್ಟು ಸಾಕ್ಷರತೆಯನ್ನು ಸಾಧಿಸಿದೆ ಹಾಗೂ ಉನ್ನತ ಶಿಕ್ಷಣದ ಸೌಲಭ್ಯವಿದೆ. ಭಾಷೆ: ಫ್ರೆಂಚ್ ಮತ್ತು ಬುಡಕಟ್ಟು ಭಾಷೆ: ಹಣ ಫ್ರಾಂಕ್. (ವಿ.ಎಸ್.ಎ.)

**ಬೆರಿಂಗ್ ಸಮುದ್ರ:** ಉತ್ತರ ಪೆಸಿಫಿಕ್ ಸಾಗರದ ಒಂದು ಭಾಗ. ಈ ಸಮುದ್ರದ ಸುತ್ತಲೂ ಪೂರ್ವದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಲಾಸ್ಕ, ಆಗ್ನೇಯ ಹಾಗೂ ದಕ್ಷಿಣದಲ್ಲಿ ಅಲೂಷನ್ ದ್ವೀಪಗಳು, ನೈಋತ್ಯದಲ್ಲಿ ಕಾಮ್‌ಚಟ್ಕ ಪರ್ಯಾಯ ದ್ವೀಪ, ಪಶ್ಚಿಮ ಹಾಗೂ ವಾಯವ್ಯದಲ್ಲಿ ಸೈಬೀರಿಯ ಇವೆ. ಬೆರಿಂಗ್ ಸಮುದ್ರವನ್ನೂ ಆರ್ಕ್‌ಟಿಕ್ ಸಾಗರವನ್ನೂ ಬೆರಿಂಗ್ ಜಲಸಂಧಿ ಕೂಡಿಸುತ್ತದೆ. ಅಲಾಸ್ಕ ಮತ್ತು ಸೈಬೀರಿಯ ಭೂಭಾಗಗಳ ಮಧ್ಯೆ ಸು. 80 ಕಿಮೀ ಅಂತರವಿರುವ ಬೆರಿಂಗ್ ಖಾರಿಯಿಂದ ಏಷ್ಯ ಮತ್ತು ಅಮೆರಿಕ ಭೂ ಭಾಗಗಳು ಬೇರ್ಪಟ್ಟಿವೆ. ಬೆರಿಂಗ್ ಸಮುದ್ರದ ಗರಿಷ್ಠ ಆಳ 4,091 ಮೀ ಪರಮಾವಧಿ ಅಗಲ ಪೂರ್ವಪಶ್ಚಿಮವಾಗಿ ಸು. 1930 ಕಿಮೀ ಉದ್ದ 1530 ಕಿಮೀ ಈ ಸಮುದ್ರವನ್ನು ಸೇರುವ ಯೂಕಾನ್ ನದಿ ಕೆನಡದಿಂದ ಅಲಾಸ್ಕ ಮೂಲಕ ಹರಿದುಬರುತ್ತದೆ.

ಬೆರಿಂಗ್ ಸಮುದ್ರ ಮತ್ತು ಇಂಗ್ಲೆಂಡ್ ಇವೆರಡೂ ಒಂದೇ ಅಕ್ಷಾಂಶದಲ್ಲಿದ್ದರೂ ಈ ಸಮುದ್ರದ ವಾಯುಗುಣ ಹೆಚ್ಚು ತೀವ್ರ. ಇದರ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಬೇಸಗೆಯಲ್ಲಿ ಮಳೆಯಾಗುತ್ತದೆ. ವಾಯುಗುಣ ತಂಪಾಗಿರುತ್ತದೆ. ಚಳಿಗಾಲದಲ್ಲಿ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಚಳಿ ಹೆಚ್ಚು. ಆಗ ಚಂಡಮಾರುತಗಳು ಬೀಸುತ್ತವೆ. ಇವುಗಳಿಂದ ಸಮುದ್ರದಲ್ಲಿ 12 ಮೀ ಗಳಿಗೂ ಹೆಚ್ಚು ಎತ್ತರಕ್ಕೆ ಅಲೆಗಳು ಏಳುತ್ತವೆ. ಸಮುದ್ರದ ದಕ್ಷಿಣದಲ್ಲಿ ಸರಾಸರಿ ವಾರ್ಷಿಕ ಮಳೆ 100 ಸೆಂಮೀ ಉತ್ತರದಲ್ಲಿ ಸು. 50 ಸೆಂಮೀ ಮಂಜು, ಮಳೆ, ತೇಲುವ ಹಿಮಗೆಡ್ಡೆ ಇವುಗಳಿಂದಾಗಿ ಬೆರಿಂಗ್ ಸಮುದ್ರದ ಉತ್ತರ ಭಾಗದಲ್ಲಿ ನೌಕಾಯಾನ ಕಷ್ಟಕರ. ಚಳಿಗಾಲದಲ್ಲಿ ಸಮುದ್ರದ ಉತ್ತರ ಭಾಗ ಹೆಪ್ಪುಗಟ್ಟಿ ಮಂಜಿನ ಬಯಲಾಗಿ ಪರಿಣಮಿಸುತ್ತದೆ.

ಬೆರಿಂಗ್ ಸಮುದ್ರ ಮತ್ತು ಜಲಸಂಧಿಯಲ್ಲಿ ಅನೇಕ ದ್ವೀಪಗಳುಂಟು. ಅವುಗಳಲ್ಲಿ ಅಲೂಷನ್ ದೀಪಗಳು, ನೂನವಾಕ್, ಸೇಂಟ್ ಲಾರೆನ್ಸ್, ಕರಾಗಿನ್ಸ್, ನಲ್ಸನ್ ಮತ್ತು ಕಮ್ಯಾಂಡರ್ ಅಥವಾ ಕಾಮಂಡಾರ್‌ಸ್ಕಿಯ ದ್ವೀಪಗಳು ದೊಡ್ಡವು.

ಬೆರಿಂಗ್ ಸಮುದ್ರದ ಪರಿಶೋಧನೆ 18ನೆಯ ಶತಮಾನದಿಂದ ನಡೆದಿದೆ. ರಷ್ಯದ ಪೀಟರ್ ಚಕ್ರವರ್ತಿಯ ಸೇವೆಯಲ್ಲಿದ್ದ ಡೆನ್‌ಮಾರ್ಕ್ ದೇಶದ ನಾವಿಕ ವೀಟುಸ್ ಬೆರಿಂಗ್ 1728 ಮತ್ತು 1741ರಲ್ಲಿ ಬೆರಿಂಗ್ ಸಮುದ್ರವನ್ನೂ ಬೆರ್ರಿಂಗ್ ಜಲಸಂಧಿಯನ್ನೂ ಪರಿಶೋಧಿಸಿದ್ದರಿಂದ ಆತನ ಹೆಸರನ್ನೇ ಇಡಲಾಗಿದೆ. (ವಿ.ಜಿ.ಕೆ.)

**ಬೆರ್ರಿ, ಬಿ.ಜೆ.ಎಲ್. :** 1934 – ಸುಪ್ರಸಿದ್ಧ ಭೂಗೋಳವಿಜ್ಞಾನಿ ಮತ್ತು ರಾಜಕೀಯ ಅರ್ಥಶಾಸ್ತ್ರಜ್ಞ; 1934 ಫೆಬ್ರವರಿ 16ರಂದು ಇಂಗ್ಲೆಂಡಿನ ಸೆಡ್‌ಗ್ಲ ಎಂಬಲ್ಲಿ ಜನಿಸಿದರು. 1965 ನವೆಂಬರ್ 2ರಲ್ಲಿ ಅಮೆರಿಕದ ಪೌರತ್ವವನ್ನು ಪಡೆದು ಆ ದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿದರು. ಭೂಗೋಳವಿಜ್ಞಾನಕ್ಕೆ ಅಮೂಲ್ಯ ಸೇವೆ ಸಲ್ಲಿಸಿರುವ ಇವರು ಭೂಗೋಳ ಕ್ಷೇತ್ರಕ್ಕೆ ಹೊಸ ಆಯಾಮ ನೀಡಿದರು. 1960ರ ದಶಕದಲ್ಲಿ ಭೂಗೋಳವಿಜ್ಞಾನದಲ್ಲಿ ಉಂಟಾದ ಪರಿಮಾಣಾತ್ಮಕ ಕ್ರಾಂತಿಯ ಹರಿಕಾರರಲ್ಲಿ ಇವರು ಪ್ರಮುಖರೆನ್ನಬಹುದು. ಭೂಗೋಳವಿಜ್ಞಾನದಲ್ಲಿ ಇತ್ತೀಚೆಗೆ ಬೆಳವಣಿಗೆ ಹೊಂದಿದ ಸಂಖ್ಯಾಭೂಗೋಳ, ನಗರ ಭೂಗೋಳ, ಸ್ಥಾನಿಕ ವಿಶ್ಲೇಷಣೆ, ಮಾರುಕಟ್ಟೆ ಭೂಗೋಳ, ಆರ್ಥಿಕ ಅಭಿವೃದ್ಧಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಇವರ ಕೊಡುಗೆ ಪ್ರಪಂಚದಾದ್ಯಂತ ಪ್ರಸಿದ್ಧಿ ಹೊಂದಿದೆ. ಇವರು ಹಾರ್ವರ್ಡ್, ಶಿಕಾಗೊ, ಮೆಲನ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಸೇವೆಸಲ್ಲಿಸಿದ್ದಾರೆ. ಇವರ ಕೆಲವು ಪ್ರಸಿದ್ಧ ಗ್ರಂಥಗಳು. ಜಿಯಾಗ್ರಫಿ ಆಫ್ ಮಾರ್ಕೆಟ್ ಸೆಂಟರ್ ಅಂಡ್ ರಿಟೈಲ್ ಡಿಸ್ಟ್ರಿಬ್ಯೂಷನ್, ಸೋಷಿಯಲ್ ಅನಾಲಿಸಿಸ್, ಎ ರೀಡರ್ ಇನ್ ಸ್ಟಾಟಿಸ್ಟಿಕಲ್ ಅನಾಲಿಸಿಸ್, ಕಾನ್ಟೆಂಪರರಿ ಅರ್ಬನ್ ಇಕಾಲಜಿ, ಅರ್ಬನೈಜೇಷನ್ ಅಂಡ್ ಕೌಂಟರ್ ಅರ್ಬನೈಜೇಷನ್, ಲಾಂಗ್ ವೇವ್ ರಿದಮ್ಸ್ ಇನ್ ಎಕಾನಾಮಿಕ್ ಡೆವಲಂಪ್‌ಮೆಂಟ್ ಅಂಡ್ ಪೊಲಿಟಿಕಲ್ ಬಿಹೇವಿಯರ್. (ಬಿ.ಸಿ.ಎಸ್.)

**ಬೆರಿಂಗ್ ಜಲಸಂಧಿ:** ಅಟ್ಲಾಂಟಿಕ್ ಸಾಗರದ ಉತ್ತರದ ಕೊನೆಯಲ್ಲಿ ಆರ್ಕ್‌ಟಿಕ್ ಸಾಗರವನ್ನೂ ಬೆರಿಂಗ್ ಸಮುದ್ರವನ್ನೂ ಸೇರಿಸುವ ಜಲಸಂಧಿ. ಇದರಿಂದ ಏಷ್ಯ (ರಷ್ಯದ ಸೈಬೀರಿಯ ಭಾಗ) ಮತ್ತು ಉತ್ತರ ಅಮೆರಿಕ (ಅಮೆರಿಕ ಸಂಯುಕ್ತ ಸಂಸ್ಥಾನದ ಅಲಾಸ್ಕ) ಪ್ರತ್ಯೇಕಗೊಂಡಿವೆ. ಜಲಸಂಧಿಯಲ್ಲಿ ಸಮುದ್ರದ ಆಳ 30–60 ಮೀ ಮಾತ್ರ. ಇದರ ಅತ್ಯಂತ ಕಿರಿದಾದ ಭಾಗ 85 ಕಿಮೀ ಅಗಲವಿದೆ. ಜಲಸಂಧಿಯ ನಡುವೆ ಪರಸ್ಪರ 3 ಕಿಮೀ ದೂರದಲ್ಲಿ ಡೈಯಮೀಡ್ ಎಂಬ ಎರಡು ದ್ವೀಪಗಳಿವೆ. ಈ ದ್ವೀಪಗಳ ನಡುವೆ ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯೆತ್ ದೇಶಗಳ ಮಧ್ಯದ ಗಡಿರೇಖೆ ಮತ್ತು ಅಂತಾರಾಷ್ಟ್ರೀಯ ದಿನರೇಖೆ ಹಾದುಹೋಗಿವೆ. ದೊಡ್ಡ ಡೈಯಮೀಡ್ ದ್ವೀಪ ರಷ್ಯ ದೇಶಕ್ಕೂ ಚಿಕ್ಕ ಡೈಯಮೀಡ್ ದ್ವೀಪ ಅಮೆರಿಕಕ್ಕೂ ಸೇರಿವೆ. ಈ ಎರಡೂ ದ್ವೀಪಗಳಲ್ಲಿ ಎಸ್ಕಿಮೋ ಜನ ವಾಸಿಸುತ್ತಾರೆ. ದೊಡ್ಡ ಡೈಯಮೀಡ್‌ನಲ್ಲಿ ರಷ್ಯ ಹವಾ ವೀಕ್ಷಣಾಲಯವಿದೆ. (ವಿ.ಜಿ.ಕೆ.)

**ಬೆಲರೂಸ್:** ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟದ ಸ್ವಯಂ ಆಡಳಿತವುಳ್ಳ ಒಂದು ರಾಜಕೀಯ ವಿಭಾಗ. ಇದನ್ನು ಬೈಲೋ ರಷ್ಯನ್ ಸೋವಿಯತ್ ಸಮಾಜವಾದಿ ಗಣರಾಜ್ಯವೆಂದು ಕರೆಯಲಾಗುತ್ತದೆ. ಈ ರಾಜ್ಯ ಉ. ಅ. $50^0$15'–$56^0$45' ಪೂ. ರೇ. $23^0$30'–$34^0$ ವರೆಗೆ ಪ್ರಸರಿಸಿದೆ. ಉತ್ತರ ದಕ್ಷಿಣವಾಗಿ 560 ಕಿಮೀ ಪೂರ್ವಪಶ್ಚಿಮವಾಗಿ 650 ಕಿಮೀ ಇರುವ ಇದರ ಒಟ್ಟು ವಿಸ್ತೀರ್ಣ 2,07,600 ಚ.ಕಿಮೀ. ಜನಸಂಖ್ಯೆ 9,93,300 (2002). ರಾಜಧಾನಿ ಮಿನ್ಸ್‌ಕ್. ಜನಸಂಖ್ಯೆ 1,666,000 (2002).

ಬೆಲರೂಸ್ ಜನರಲ್ಲಿ ಬಹುಪಾಲು ಇತರರೆಂದರೆ ರಷ್ಯನ್, ಉಕ್ರೇನಿಯನ್, ಪೋಲಿಷ್, ಯಹೂದಿ, ಲಿಥುವೇನಿಯನ್ ಮುಂತಾದವರು. ಬೆಲರೂಸ್‌ದ ಮಧ್ಯಭಾಗದಲ್ಲಿ ಜನಸಾಂದ್ರತೆ ದಟ್ಟವಾಗಿಯೂ ದಕ್ಷಿಣಭಾಗದಲ್ಲಿ ವಿರಳವಾಗಿಯೂ ಇದೆ. ಹವಾಗುಣ ಜುಲೈನಲ್ಲಿ $17^0$–$19^0$ಸೆ. ವರೆಗೆ ಇದ್ದು ಜನವರಿಯಲ್ಲಿ $51^0$ಸೆ. ಯಿಂದ $8^0$ಸೆ. ವರೆಗೆ ಇರುತ್ತದೆ. ವರ್ಷಕ್ಕೆ ಸರಾಸರಿ 60 ಸೆಂಮೀ ಮಳೆ ಬೀಳುತ್ತದೆ.

ಬೆಲರೂಸ್‌ನ ಮೇಲ್ಮೈಲಕ್ಷಣ ಹಳ್ಳ ದಿಣ್ಣೆ ಬಯಲುಗಳಿಂದ ಕೂಡಿದ ಪ್ರದೇಶ. ಸಮುದ್ರ ಮಟ್ಟದಿಂದ 346 ಮೀ ಎತ್ತರ ಇರುವ ಜಿರ್‌ಷಿನ್‌ಸ್ಕಿ ಪರ್ವತವೇ ಅತಿ ಎತ್ತರವಾದ್ದು. ಬೆಲರೂಸ್‌ದ ಮೂರನೆಯ ಒಂದು ಭಾಗ ಅರಣ್ಯಪ್ರದೇಶದಿಂದ ಕೂಡಿದೆ. ಜಿಂಕೆ, ಕರಡಿ, ಮೊಲ, ಅಳಿಲು, ಯುರೋಪಿಯನ್ ಕಾಡೆಮ್ಮೆ, ಎಲ್ಕ್, 'ರೋ'ಜಿಂಕೆ ಹೆಚ್ಚಾಗಿವೆ. ತೋಳ, ನರಿ, ಬ್ಯಾಡರ್, ಅರ್ಮಿನ್ ಮಾರ್ಟನ್, ನೀರುನಾಯಿ, ಮಿಂಕ್, ಬೀವರ್ ಮುಂತಾದವು ಸಹ ಕಂಡುಬರುತ್ತವೆ.

ಇಲ್ಲಿಯ ಬಹುಭಾಗ ಜವುಗು ಭೂಮಿ. ಕಾಳು, ಆಲೂಗಡ್ಡೆ, ತರಕಾರಿ, ಹೊಗೆಸೊಪ್ಪು, ಗೋದಿ ವಿವಿಧ ತೆರನ ನಾರಿನ ಗಿಡಗಳನ್ನೂ ಮೇವಿನ ಹುಲ್ಲನ್ನೂ ವಿಶೇಷವಾಗಿ ಬೆಳೆಯಲಾಗುತ್ತದೆ. ರಬ್ಬರ್ ತಯಾರಿಕೆಯಲ್ಲಿ ಬಳಸುವ ಕೊಸಾಗಿಜ್ ಗಿಡ ಬೆಳೆಯುತ್ತದೆ. ಜೇನು, ಕೋಳಿ, ಹಂದಿ ಮುಂತಾದವುಗಳ ಸಾಕಣೆ, ಡೈರಿ ಫಾರಮ್ ಇತ್ಯಾದಿ ಕಸುಬುಗಳಲ್ಲಿ ಇಲ್ಲಿಯ ರೈತಾಪಿಜನ ನಿರತರು. ಮಿಂಕ್ ಮತ್ತು ಬೆಳ್ಳಿ ನರಿಗಳ ತಳಿ ಅಭಿವೃದ್ಧಿ ಇಲ್ಲಿಯ ವಿಶಿಷ್ಟ ಲಕ್ಷಣ.

ರಾಜಧಾನಿ ಮಿನ್ಸ್ಕ್‌ನಲ್ಲಿಯ ಯಾಕೂಬ್ ಕೋಲಾಸ್ ಚೌಕ ಬಹಳ ಪ್ರಸಿದ್ಧವಾಗಿದೆ.

ಬೆಲರೂಸ್ ನದಿಸರೋವರಗಳ ನಾಡು. ಸು. 3,000 ನದಿಗಳು ಒಟ್ಟು 51,000 ಕಿಮೀ ದೂರ ಕ್ರಮಿಸುತ್ತವೆ. ಒಟ್ಟು ಸರೋವರಗಳ ಸಂಖ್ಯೆ ಸು. 11,000. ಇವುಗಳಲ್ಲಿ ಹೆಚ್ಚಿನವು ಉತ್ತರಭಾಗದಲ್ಲಿವೆ. ಪಶ್ಚಿಮ ದ್ವಿನಾ, ಬಿರ್ಯೆಜಿನಾ, ನೀಪರ್, ಪ್ರಿಪ್ಯಾತ್, ಸೋಷ್ ಹಾಗೂ ನೀಮನ್ ಇಲ್ಲಿಯ ಮುಖ್ಯ ನದಿಗಳು. ನರೊಕ್, ಆಸ್ವೆಯ್‌ಸ್ಕಾಯ್ ಹಾಗೂ ಡ್ರಿಸ್ವ್ಯಾತಿ ದೊಡ್ಡ ಸರೋವರಗಳು. ದೋಣಿಯಾನ, ಮರದ ದಿಮ್ಮಿಗಳ ಸಾಗಾಣಿಕೆ ಮತ್ತು ವಿದ್ಯುತ್ ಉತ್ಪಾದನೆಗೆ ನದಿಗಳು ಅನುವುಮಾಡಿಕೊಟ್ಟಿವೆ.

ಖನಿಜ ಸಂಪತ್ತಿನಲ್ಲಿ ಬೆಲರೂಸ್ ಶ್ರೀಮಂತರಾಜ್ಯ. ಕಲ್ಲಿದ್ದಲಿನಂತೆ ಬಳಸಲಾಗುವ ಪೀಟ್ ಹೇರಳವಾಗಿ ದೊರೆಯುತ್ತದೆ. ಎಣ್ಣೆ, ಕಲ್ಲಿದ್ದಲು, ಉಪ್ಪು, ಫಾಸ್ಫೇಟ್, ಕಬ್ಬಿಣದ ಅದಿರು ಮುಂತಾದವು ಮತ್ತು ಉತ್ತಮವಾದ ಗಾಜಿನ ತಯಾರಿಕೆಗೆ ಆವಶ್ಯಕವಾದ ಸುಣ್ಣಕಲ್ಲು, ಡಾಲೊಮೈಟ್, ಮರಳು, ಬೆಣಚು ಮರಳು, ಸುಣ್ಣ, ಜೇಡಿಮಣ್ಣು ಸಿಗುತ್ತವೆ. ಹೆಂಚು ಮತ್ತು ಕೊಳವೆ ತಯಾರಿಕೆಯಲ್ಲಿ ಬಳಸುವ ಬಿರುಸು ಜೇಡಿಮಣ್ಣು ಬ್ರೆಸ್ಟ್ ಲಟಾಪಸ್ಕ್ ಎಂಬ ನಗರದ ಬಳಿ ದೊರೆಯುತ್ತದೆ.




ಮಹಾಯುದ್ಧಗಳ ಅನಂತರ ಬೆಲರೂಸ್‌ನಲ್ಲಿ ಕೈಗಾರಿಕೆಗಳು ಶೀಘ್ರವಾಗಿ ಬೆಳೆದಿವೆ. ಮಿನ್ಸ್ಕ್, ಗೋಮಲ್ ಮತ್ತು ಮಗೀಲ್ಯೆಫ್‌ಗಳಲ್ಲಿ ಕೃಷಿಗೆ ಸಂಬಂಧಿಸಿದ ಯಂತ್ರಗಳು, ಟ್ರ್ಯಾಕ್ಟರ್, ಲೋಹ ಕತ್ತರಿಸುವ ಸಾಧನಗಳು, ವಾಹನಗಳು, ಎಲೆಕ್ಟ್ರಾನಿಕ್ ಉಪಕರಣಗಳನ್ನು ಉತ್ಪಾದಿಸುವ ಘಟಕಗಳಿವೆ. ಸೊಲಗಾರ್ಸ್ಕ್ ಗ್ರಾಡ್ನೋ ಹಾಗೂ ಗೋಮಲ್ ನಗರಗಳಲ್ಲಿ ರಾಸಾಯನಿಕ ಗೊಬ್ಬರ, ರಬ್ಬರ್ ಸಾಧನಗಳು, ಪ್ಲಾಸ್ಟಿಕ್, ಬಣ್ಣ, ಶಾಖ ನಿರೋಧಕ ಗಾಜಿನ ಕೊಳವೆಗಳು ಇತ್ಯಾದಿ ತಯಾರಾಗುತ್ತವೆ. ಪ್ಲೈವುಡ್, ಬೆಂಕಿಕಡ್ಡಿ, ಪೀಠೋಪಕರಣ, ಲಿನನ್, ಉಲ್ಲನ್, ಸಿಲ್ಕ್ ಹಾಗೂ ಸಿಂಥೆಟಿಕ್ ದಾರಗಳು, ಸ್ಟಾರ್ಚ್, ಸೆಲ್ಯೂಲೋಸ್. ಚರ್ಮದ ಪದಾರ್ಥಗಳು ಮುಂತಾದವನ್ನು ಇಲ್ಲಿ ಸಿದ್ಧಪಡಿಸಲಾಗುತ್ತದೆ.

ಬೈಲೋ ಎಂದರೆ ಬಿಳಿ ಎಂದರ್ಥ. ಬೈಲೋರಸ್‌ವನ್ನು ಬಿಳಿ ರಷ್ಯ ಎಂದೂ ಕರೆಯುವುದುಂಟು. ಮನೆಯಲ್ಲಿ ನೆಯ್ದ ಬಿಳಿಯ ಸಾಂಪ್ರದಾಯಿಕ ಉಡುಪುಗಳನ್ನು ಇಲ್ಲಿಯ ಜನ ಧರಿಸುತ್ತಿದ್ದುದರಿಂದ ಈ ಹೆಸರು ಬಂದಿತು. (ವಿ.ಎಸ್.ಎ.)

**ಬೆಲ್ಗ್ರೇಡ್:** ಸರ್ಬಿಯ ಮತ್ತು ಮೊಂಟೆನೀಗ್ರೊ (ಹಿಂದಿನ ಯೂಗೊಸ್ಲಾವಿಯ) ಗಣರಾಜ್ಯದ ರಾಜಧಾನಿ ಹಾಗೂ ಆಡಳಿತ ಕೇಂದ್ರ. ನಗರ ಡ್ಯಾನ್ಯೂಬ್ ನದಿಯ ಬಲದಂಡೆಯ ಮೇಲಿದೆ. ಈ ನಗರದ ಬಳಿಯೇ ಸಾವನದಿ ಡ್ಯಾನ್ಯೂಬ್ ನದಿಯನ್ನು ಕೂಡಿಕೊಳ್ಳುತ್ತದೆ. ಬೆಟ್ಟ ಸಾಲಿನ ಮೇಲೆ ಸಮುದ್ರ ಪಾತಳಿಯಿಂದ ಸು. 110 ಮೀ ಎತ್ತರದಲ್ಲಿರುವ ಈ ನಗರದ ಭೌಗೋಳಿಕ ಸ್ಥಾನ ಮಹತ್ವದ್ದು. ಡ್ಯಾನ್ಯೂಬ್ ನದಿ ಕೊಳ್ಳದ ಮಾರ್ಗ ವಿಯೆನ್ನದಿಂದ ಕಪ್ಪುಸಮುದ್ರದ ದಂಡೆಯವರೆಗೆ ಹೋಗುವ ಪೂರ್ವ ಮತ್ತು ಪಶ್ಚಿಮ ಮಾರ್ಗ, ಪಶ್ಚಿಮದತ್ತ ಸಾಗುವ ಸಾವ ಕೊಳ್ಳದ ಮಾರ್ಗ ಟ್ರೀಯಸ್ಟೀ ಮತ್ತು ಉತ್ತರ ಇಟಲಿಯ ಮಾರ್ಗ ಹಾಗೂ ಆಗ್ನೇಯದ ಮೊರಾವಾ ಮತ್ತು ವರ್ಡರ್ ನದಿ ಕೊಳ್ಳಗಳ ಮಾರ್ಗ, ಏಜಿಯನ್ ಸಮುದ್ರ ತಲುಪುವ ಮಾರ್ಗಗಳು ಕೂಡುವಲ್ಲಿ ಈ ನಗರವಿದೆ. ಜನಸಂಖ್ಯೆ 1168454 (1999).

ಇಲ್ಲಿ ಅನೇಕ ಆಧುನಿಕ ಕಾರ್ಖಾನೆಗಳಿವೆ. ಹತ್ತಿ ಬಟ್ಟೆ ಮತ್ತು ಇತರ ವಸ್ತುಗಳು, ಸಕ್ಕರೆ, ಮದ್ಯ, ಚರ್ಮವಸ್ತುಗಳು ವಿವಿಧ ವಿದ್ಯುತ್ ಉಪಕರಣಗಳು ತಯಾರಾಗುತ್ತವೆ. 1970ರಲ್ಲಿ ಹಿಂದಿನ ಯುಗೊಸ್ಲಾವಿಯದ ಕೈಗಾರಿಕಾ ಉತ್ಪನ್ನದ ಶೇ. 8ರಷ್ಟು ಈ ನಗರದಲ್ಲಿ ತಯಾರಾಗುತ್ತಿತ್ತು. ಮೋಟಾರ್, ಟ್ರಾಕ್ಟರ್ ಮತ್ತು ಅವುಗಳ ಉಪಸಂಯೋಜಕಗಳು, ಯಾಂತ್ರಿಕ ಉಪಕರಣ, ವಿದ್ಯುತ್ ಸಲಕರಣೆ, ರಾಸಾಯನಿಕ, ಬಟ್ಟೆ ಮತ್ತು ಕಟ್ಟಡ ವಸ್ತುಗಳು ತಯಾರಾಗುತ್ತವೆ. ಮೂರು ಅಂತಾರಾಷ್ಟ್ರೀಯ ರೈಲು ಮಾರ್ಗಗಳ ಸುಮಾರು ಹತ್ತು ಹೆದ್ದಾರಿಗಳ ಸಂಪರ್ಕವಿದೆ. ಅಂತೆಯೇ ಆರು ನದಿಗಳ ನೌಕಾ ಸಂಪರ್ಕವಿರುವ ಬೆಲ್ಗ್ರೇಡ್ ಇಡೀ ರಾಜ್ಯದ ಅರ್ಧಕ್ಕೂ ಹೆಚ್ಚು ವಿದೇಶಿ ವ್ಯಾಪಾರವನ್ನು ನಿರ್ವಹಿಸುತ್ತದೆ. ನಗರದ ಪಶ್ಚಿಮಕ್ಕೆ 16 ಕಿಮೀ ದೂರದ ಸರ್ಚಿನ್ನಿನಲ್ಲಿ ವಿಮಾನ ನಿಲ್ದಾಣವಿದೆ. ಬೆಲ್ಗ್ರೇಡ್ ಒಂದು ದೊಡ್ಡ ವ್ಯಾಪಾರ ವಾಣಿಜ್ಯ ಹಾಗೂ ರಾಜಕೀಯ ಚಟುವಟಿಕೆಗಳ ಕೇಂದ್ರ ಅನೇಕ ಸರಕಾರಿ ಸಂಘ ಸಂಸ್ಥೆಗಳೂ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಸ್ಥೆಗಳೂ ಇವೆ. ವಿಶ್ವವಿದ್ಯಾಲಯ 1863ರಲ್ಲಿ ಸ್ಥಾಪಿತವಾಯಿತು. ಅನೇಕ ಉಚ್ಚ ಶಿಕ್ಷಣ ಸಂಸ್ಥೆಗಳು, ಶಾಲಾ ಕಾಲೇಜುಗಳೂ ಇವೆ. ಇಲ್ಲಿ 10 ವಸ್ತು ಸಂಗ್ರಹಾಲಯ ಮತ್ತು ಚಿತ್ರಶಾಲೆಗಳಿವೆ. (ಜಿ.ಕೆಯು.)

**ಬೆಲ್ಜಿಯಂ:** ಪಶ್ಚಿಮ ಯುರೋಪಿನಲ್ಲಿರುವ ಒಂದು ದೇಶ. $48^0$–$53^0$ ಉ.ಅ. ಮತ್ತು $2^0$–$7^0$ ಪೂ.ರೇ. ದಲ್ಲಿ ಹಬ್ಬಿದೆ. ಯುರೋಪಿನ ಅತಿ ಚಿಕ್ಕ ರಾಜ್ಯಗಳಲ್ಲೊಂದಾದ ಬೆಲ್ಜಿಯಂನ ವಿಸ್ತೀರ್ಣ 30,513 ಚ.ಕಿಮೀ. ಜನಸಂಖ್ಯೆ 10280000 (2002). ರಾಜಧಾನಿ ಬ್ರಸೆಲ್ಸ್. ಜನಸಂಖ್ಯೆ 947070 (2002).




ಭೌತಿಕಲಕ್ಷಣ: ಬೆಲ್ಜಿಯಂನ ಸುಮಾರು ಮೂರನೆಯ ಎರಡು ಭಾಗ ಸಮುದ್ರಮಟ್ಟಕ್ಕೆ ಸಮವಾಗಿದೆ. ನೆದರ್ಲೆಂಡಿನಂತೆ ಬೆಲ್ಜಿಯಂನ ಯಾವ ಭಾಗವೂ ಸಮುದ್ರ ಮಟ್ಟಕ್ಕಿಂತ ಕೆಳಗೆ ಇಲ್ಲವಾದರೂ ಕಡಲು ನೆಲವನ್ನು ಕೊರೆಯದಂತೆ ಕರಾವಳಿಯ ಉದ್ದಕ್ಕೂ ಸರ್ಕಾರ ಯುಕ್ತ ಎಚ್ಚರಿಕೆ ವಹಿಸಿದೆ. ಬೆಲ್ಜಿಯಂನ ಉತ್ತರ ಭಾಗ ಮತ್ತು ಕರಾವಳಿ ಮೈದಾನ ಪ್ರದೇಶಗಳು, ಉತ್ತರ ಭಾಗದಲ್ಲಿರುವ ಫ್ಲಾಂಡರ್ಸ್‌ನಲ್ಲಿ ಬಲುತಗ್ಗಾದ ಬೆಟ್ಟಗಳಿವೆ. ಆಗ್ನೇಯ ಬೆಲ್ಜಿಯಂನಲ್ಲಿರುವ ಆರ್ಡೆನ್ ಗಿರಿ ಶ್ರೇಣಿಗಳು ನೆರೆಯ ಲಕ್ಸ್‌ಂಬರ್ಗ್ ಮತ್ತು ಫ್ರಾನ್ಸಿಗೂ ಹಬ್ಬಿವೆ. ಜರ್ಮನಿಯ ಗಡಿ ಬಳಿ ಇವು 694 ಮೀ ಎತ್ತರಕ್ಕೆ ಏರುತ್ತವೆ. ಲೀಸ್, ಸ್ಕೆಲ್ಟ್, ಮ್ಯೂಸ್ ಮತ್ತು ಸಾಂಬ್ರ್ ಇವು ಇಲ್ಲಿಯ ಮುಖ್ಯ ನದಿಗಳು.

ವಾಯುಗುಣ: ಇಲ್ಲಿಯದು ಸಮಶೀತೋಷ್ಣ ವಾಯುಗುಣ. ನೆರೆಯ ಸಮುದ್ರದಿಂದ ಇದು ಪ್ರಭಾವಿತವಾಗಿದೆ. ಅಟ್ಲಾಂಟಿಕ್‌ದಿಂದ ಬೀಸುವ ಗಾಳಿಯಿಂದ ಇಲ್ಲಿಯ ಹವಾಗುಣ ಆಗಾಗ ವ್ಯತ್ಯಾಸವಾಗುತ್ತಿದ್ದು ಪದೇ ಪದೇ ಮಳೆ ಬೀಳುತ್ತಿರುತ್ತದೆ. ವಾರ್ಷಿಕ ಮಳೆ 75–100 ಸೆಂಮೀ ವಾರ್ಷಿಕ ಮಧ್ಯ ಉಷ್ಣತೆ $10^0$ ಸೆ ಸಮುದ್ರದಿಂದ ಇರುವ ದೂರ ಹಾಗೂ ಪ್ರದೇಶದ ಎತ್ತರಕ್ಕೆ ಅನುಗುಣವಾಗಿ ಇಲ್ಲಿಯ ವಾಯುಗುಣ ಬದಲಾಗುತ್ತಿರುತ್ತದೆ.

ಸಸ್ಯ ಹಾಗೂ ಪ್ರಾಣಿ ಸಂಪತ್ತು: ಬೆಲ್ಜಿಯಂ ಪರ್ಣಪಾತಿ ಅರಣ್ಯ ಪ್ರದೇಶದಲ್ಲಿದೆ. ಪ್ರಮುಖ ಮರ ಓಕ್. ಇತರ ಮರಗಳು ಬೀಚ್, ಬರ್ಚ್ ಮತ್ತು ಎಲ್ಮ್. ಕಳೆದ ಒಂದು ಶತಮಾನದಿಂದ ಶಂಕುಪರ್ಣ ಮರಗಳನ್ನು ನೆಡುತ್ತಿರುವುದರಿಂದ ಅರಣ್ಯಗಳ ಸ್ವರೂಪ ಬದಲಾಗಿದೆ. ಮಾನವನ ಮಿತಿಮೀರಿದ ಬೇಟೆಯಿಂದಾಗಿ ಕಾಡು ಪ್ರಾಣಿ ಸಂಪತ್ತು ಕಡಿಮೆಯಾಗಿವೆ. ಯೂರೇಷಿಯನ್ ಪ್ರಾಣಿಗಳು ಇಲ್ಲಿವೆ. ಕಾಡು ಹಂದಿ, ಕಾಡುಬೆಕ್ಕು ಮತ್ತು ಜಿಂಕೆಗಳು ಅರ್ಡೆನ್ನಿನ ಕಾಡುಗಳಲ್ಲಿವೆ.

ಕೃಷಿ: ಬೆಲ್ಜಿಯಂ ಕೃಷಿ ಕೈಗಾರಿಕೆಗಳೆರಡರಲ್ಲೂ ಮುಂದುವರಿದಿದೆ. ಇಲ್ಲಿ ಬೆಳೆಯುವ ಮುಖ್ಯವಾದ ಧಾನ್ಯಗಳು ಓಟ್ಸ್, ರೈ, ಗೋದಿ ಮತ್ತು ಬಾರ್ಲಿ. ಆಲೂಗೆಡ್ಡೆ, ಸಕ್ಕರೆಬೀಟ್ ಇನ್ನೆರಡು ಮುಖ್ಯ ಕೃಷಿ ಉತ್ಪನ್ನಗಳು. ದೊಡ್ಡ ಪಟ್ಟಣಗಳ ಸುತ್ತಮುತ್ತ ಹಣ್ಣು ತರಕಾರಿಗಳನ್ನು

ಹೆಚ್ಚಾಗಿ ಬೆಳೆಸುತ್ತಾರೆ. ಇವು ಇಂಗ್ಲೆಂಡಿಗೂ ರಫ್ತಾಗುತ್ತವೆ. ಹೈನುಗಾರಿಕೆ ಇನ್ನೊಂದು ಮುಖ್ಯ ಉದ್ಯಮ.

ಬೆಲ್ಜಿಯಂನ ಶೇ. 60ರಷ್ಟು ಭೂಮಿ ಬೇಸಾಯಕ್ಕೆ ಒಳಪಟ್ಟಿದೆ. ಮಧ್ಯ ಬೆಲ್ಜಿಯಂ ವಿಶೇಷವಾಗಿ ಬೇಸಾಯದಲ್ಲಿ ಮುಂದುವರಿದಿದೆ. ಬೆಲ್ಜಿಯಂ ವೈಜ್ಞಾನಿಕ ಹಾಗೂ ಸಾಂದ್ರ ವ್ಯವಸಾಯ ವಿಧಾನಗಳನ್ನು ಅನುಸರಿಸುತ್ತಿದೆ. ಆದಾಗ್ಯೂ ಇಲ್ಲಿಯ ಬೇಡಿಕೆಯನ್ನು ಪೂರೈಸುವಷ್ಟು ಉತ್ಪಾದನೆಯಾಗುತ್ತಿಲ್ಲ. ಹಾಲೆಂಡಿನಿಂದ ಇದು ಬೆಣ್ಣೆ, ಚೀಸ್ ಮತ್ತು ಇತರ ಕೆಲವು ಕೃಷಿ ವಸ್ತುಗಳನ್ನು ಆಮದುಮಾಡಿಕೊಳ್ಳುತ್ತಿದೆ. ಕಡಲತೀರದಲ್ಲಿ ಮೀನುಗಾರಿಕೆ ಒಂದು ಮುಖ್ಯ ಕಸುಬು.

ಕೈಗಾರಿಕೆ: ಬೆಲ್ಜಿಯಂ ಕೈಗಾರಿಕೆಯಲ್ಲೂ ಮುಂದುವರಿದಿದೆ. ಇಲ್ಲಿಯ ಕಲ್ಲಿದ್ದಲು, ಕಬ್ಬಿಣದ ಅದಿರು ಮತ್ತು ತವರ ನಿಕ್ಷೇಪಗಳು ಕೈಗಾರಿಕೆಗೆ ಸಹಾಯಕ. ಕಲ್ಲಿದ್ದಲು ಗಣಿಗಳು ಮುಖ್ಯವಾದವು. ವಾಯವ್ಯ ಬೆಲ್ಜಿಯಂನಲ್ಲಿ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರುಗಳು ಪಕ್ಕಪಕ್ಕದಲ್ಲೇ ಸಿಗುತ್ತವೆ. ಹೇನಾಟ್, ಲಿಯಾಷ್ ಮತ್ತು ಲಿಂಬರ್ಗ್ ಪ್ರಾಂತ್ಯಗಳಲ್ಲಿ ಕಲ್ಲಿದ್ದಲು ಗಣಿಗಳಿವೆ. ಲಿಯಾಷ್, ಸೆರಾನ್, ಹರ್ಸ್ಟಲ್ ಮತ್ತು ಆಂಗ್ಲರ್‌ನಲ್ಲಿ ದೊಡ್ಡ ಉಕ್ಕು ಕಾರ್ಖಾನೆಗಳೂ ಇತರ ಲೋಹ ಕೈಗಾರಿಕೆಗಳೂ ಇವೆ. ಗೆಂಟ್, ಕರ್ಟ್ರಾ ಮತ್ತು ರೀನೇಕ್ಸ್ ಮಧ್ಯಯುಗದ ಕಾಲದಿಂದಲೂ ಲಿನನ್ ಬಟ್ಟೆಯ ತಯಾರಿಕೆಗೆ ಪ್ರಸಿದ್ಧವಾಗಿವೆ. ಹೇನಾಟ್ ಪ್ರಾಂತ್ಯದ ಟುರ್ನೇ ಮತ್ತು ಇತರ ಪಟ್ಟಣಗಳಲ್ಲಿ ಒಳ್ಳೆಯ ಜಮಖಾನೆಗಳು ತಯಾರಾಗುತ್ತವೆ. ವರ್ವ್ಯೇ ಉಣ್ಣೆ ಬಟ್ಟೆ ತಯಾರಿಕೆಯ ಕೇಂದ್ರ. ಬ್ರಸೆಲ್ಸ್‌ನಲ್ಲಿ ಉಡುಪು ಮತ್ತು ಕೈಚೀಲಗಳನ್ನು ತಯಾರಿಸುತ್ತಾರೆ. ಬೆಲ್ಜಿಯಂನಲ್ಲಿ ಬೆಳೆಯುವ ಬೀಟಿನಿಂದ ಸಕ್ಕರೆ ತಯಾರಿಸುವ ಕಾರ್ಖಾನೆಗಳು ಅಲ್ಲಲ್ಲಿವೆ. ಮಾನ್ಸ್, ಷಾರ್ಲ್‌ರಾಯ್, ಸಾಮುರ್ ಮತ್ತು ವರ್ವ್ಯೇ ಮುಖ್ಯ ಕೈಗಾರಿಕಾ ಕೇಂದ್ರಗಳು. ಯಂತ್ರ ಮತ್ತು ವಿದ್ಯುತ್ ಸಲಕರಣೆಗಳೂ ಸೇರಿದಂತೆ ಬೆಲ್ಜಿಯಂನಲ್ಲಿ ಅನೇಕ ಲೋಹ ಸರಕುಗಳು ತಯಾರಾಗುತ್ತವೆ. ದೇಶದ ರಫ್ತಿನಲ್ಲಿ ಶೇ. 18 ರಷ್ಟು ಇಂಥ ಸರಕುಗಳು, ಎರಕ ಉಕ್ಕು, ಹಾಳೆ, ಕಬ್ಬಿಣ, ರೈಲ್ವೆ ಉಪಕರಣ, ಹಡಗು, ಮೋಟಾರುವಾಹನ, ಯಂತ್ರಸಲಕರಣೆಗಳ ತಯಾರಿಕೆ ಮುಖ್ಯವಾದುವು. ರಾಸಾಯನಿಕ, ಗಾಜು, ಕುಂಭ, ರಬ್ಬರ್ ಮತ್ತು ಕಾಗದ ಇತರ ತಯಾರಿಕೆಗಳು.

ಸಾರಿಗೆ: ಯುರೋಪಿನ ಪಶ್ಚಿಮ ಭಾಗದಲ್ಲಿ ಅಟ್ಲಾಂಟಿಕ್ ಸಾಗರದ ಮುಖದಬಳಿ ಇರುವ ಬೆಲ್ಜಿಯಮ್ಮಿನ ಸಾರಿಗೆ ವ್ಯವಸ್ಥೆ ಬಹಳ ಸಮರ್ಪಕ. ಭೂಜಲ ವಾಯು ಮಾರ್ಗಗಳು ಚೆನ್ನಾಗಿ ವಿಕಾಸಹೊಂದಿವೆ. ಬ್ರಸೆಲ್ಸ್ ರೈಲ್ವೆ ಕೇಂದ್ರ. ಬೆಲ್ಜಿಯಂನ ನದಿಗಳು ನೌಕಾಯೋಗ್ಯವಾದುವು. ಅವನ್ನು ಕಾಲುವೆಗಳಿಂದ ಪರಸ್ಪರ ಕೂಡಿಸಲಾಗಿದೆ. ಬೆಲ್ಜಿಯಂ ವಿಮಾನ ಸಂಸ್ಥೆ ಯುರೋಪಿನ ಎಲ್ಲ ಪ್ರಮುಖ ನಗರಗಳೊಂದಿಗೂ ಸಂಪರ್ಕ ಕಲ್ಪಿಸಿದೆ.

ಸ್ಕೆಲ್ಡ್ ನದಿ ಮುಖಜ ಭೂಮಿಯಲ್ಲಿರುವ ಆಂಟ್‌ವರ್ಪ್ ಬೆಲ್ಜಿಯಂನ ಅತ್ಯಂತ ಪ್ರಮುಖ ಬಂದರು. ಇತರ ದೇಶಗಳಿಂದ ಸರಕುಗಳನ್ನು ತರಿಸಿ ಮತ್ತೆ ರಫ್ತು ಮಾಡುವ ವ್ಯಾಪಾರ ಇಲ್ಲಿ ನಡೆಯುತ್ತದೆ. ಈ ವಿಚಾರದಲ್ಲಿ ಇದು ಹ್ಯಾಂಬರ್ಗ್, ರಾಟರ್‌ಡ್ಯಾಮ್‌ಗಳೊಡನೆ ಸ್ಪರ್ಧಿಸುತ್ತದೆ. ಬೆಲ್ಜಿಯಂ ಮಾತ್ರವೇ ಅಲ್ಲದೆ ಪೂರ್ವ ಫ್ರಾನ್ಸಿನ ಭಾಗಗಳೂ ರೂರ್ ಮತ್ತು ರೈನ್ ಕಣಿವೆಗಳೂ ಇದರ ಹಿನ್ನಾಡಿನಲ್ಲಿ ಸೇರಿವೆ. ಆಂಟ್‌ವರ್ಪ್ ದೊಡ್ಡ ಕೈಗಾರಿಕಾ ಕೇಂದ್ರ. ವಜ್ರ ಕೈಗಾರಿಕೆಗೆ ಬಲು ಪ್ರಸಿದ್ಧವಾಗಿದೆ.

ಬೆಲ್ಜಿಯಮ್ಮಿನ ಕಲ್ಲಿದ್ದಲು ಗಣಿ ಪ್ರದೇಶದ ಹೃದಯಸ್ಥಾನದಲ್ಲಿರುವ ಲಿಯಾಷ್ ಒಂದು ಪ್ರಮುಖನಗರ. ರಾಸಾಯನಿಕಗಳು, ಗಾಜು, ಲೋಹ ಕೆಲಸ ಇವು ಇಲ್ಲಿಯ ಮುಖ್ಯ ಕೈಗಾರಿಕೆಗಳು. ಗೆಂಟ್‌ಲಿನನ್ ತಯಾರಿಕಾಕೇಂದ್ರ. ಉಣ್ಣೆ ಕೈಗಾರಿಕಾ ಕೇಂದ್ರವಾದ ವರ್ವ್ಯೇ ದಕ್ಷಿಣದ ಬೆಟ್ಟನಾಡಿನಲ್ಲಿದೆ. ಬ್ರಸೆಲ್ಸ್ ಬೆಲ್ಜಿಯಂನ ರಾಜಧಾನಿ. ಯುರೋಪಿನ ಅತ್ಯಂತ ಸುಂದರ ಹಾಗೂ ಆಕರ್ಷಕ ನಗರಗಳಲ್ಲೊಂದೆಂದು ಪ್ರಸಿದ್ಧವಾಗಿದೆ. ಅದು ಕಲೆ ಕೈಗಾರಿಕೆ ವಾಣಿಜ್ಯಗಳ ಕೇಂದ್ರ. ಅನೇಕ ಹೊಸ ಕಟ್ಟಡಗಳಿಂದ ಕೂಡಿದ ಈ ನಗರವನ್ನು ಬಲು ಅಚ್ಚುಕಟ್ಟಾಗಿ ಇಡಲಾಗಿದೆ. ಬೆಲ್ಜಿಯಂನ ಮಧ್ಯದಲ್ಲಿ ಉತ್ತರ ಸಮುದ್ರದಿಂದ ಸು. 90 ಕಿಮೀ ದೂರದಲ್ಲಿರುವ ಬ್ರಸೆಲ್ಸ್ ಚಿಕ್ಕ ಪ್ಯಾರೀಸ್ ಎಂದೇ ಹೆಸರಾಗಿದೆ. ಮ್ಯಾಲೀನ್, ಡರ್ನ್, ಅಸ್ಪಾಂಡ್ ಮತ್ತು ಬ್ರೂಷ್ ಬೆಲ್ಜಿಯಂನ ಇತರ ನಗರಗಳು.

ಜನಜೀವನ: ಬೆಲ್ಜಿಯಂ ಪ್ರಪಂಚದ ಅತ್ಯಂತ ಜನಸಾಂದ್ರ ದೇಶಗಳಲ್ಲೊಂದು. ಇಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಬಹುಸಂಖ್ಯಾತರು ರೋಮನ್ ಕೆಥೊಲಿಕರು. ದೇಶದಲ್ಲಿ ಪ್ರಮುಖವಾಗಿ ಎರಡು ಭಾಷೆ ಆಡುವ ಜನರಿದ್ದಾರೆ. ಉತ್ತರ ಭಾಗದ ಜನರು ಫ್ಲೆಮಿಂಗರು. ಇವರ ಭಾಷೆ ಫ್ಲೆಮಿಷ್. ಲಿಖಿತ ಫ್ಲೆಮಿಷ್ ಭಾಷೆ ಡಚ್ ಭಾಷೆಯನ್ನು ಹೋಲುತ್ತದೆ. ಆದರೆ ಉಚ್ಚಾರಣೆಯಲ್ಲಿ ಅದರಿಂದ ಭಿನ್ನವಾಗಿದೆ. (ಎಚ್.ಎಸ್.ಕೆ.)

**ಬೆಲ್‌ಫಾಸ್ಟ್:** ಉತ್ತರ ಐರ್ಲೆಂಡಿನ ಆಡಳಿತ ಕೇಂದ್ರ. ಬಂದರು ಮತ್ತು ನಗರ. ಬೆಲ್‌ಫಾಸ್ಟ್ ಕೊಲ್ಲಿಯನ್ನು ಲಾಗನ್ ನದಿ ಕೂಡುವಲ್ಲಿ ಈ ನಗರವಿದೆ. ಈ ನಗರ ಆಂಟ್ರಿಮ್ ಮತ್ತು ಡೌನ್ ಕೌಂಟಿಗಳೆರಡರಲ್ಲೂ ವಿಸ್ತರಿಸಿ ಬೆಳೆದುಕೊಂಡಿದೆ. ವಿಸ್ತೀರ್ಣ 65 ಚ.ಕಿಮೀ. ಜನಸಂಖ್ಯೆ 297200 (1999).

ಬೆಲ್‌ಫಾಸ್ಟಿನಿಂದ ಇಂಗ್ಲೆಂಡಿನ ಹೆಷಾಮ್, ಲಿವರ್‌ಪೂಲ್ ಮತ್ತು ಮ್ಯಾಂಚೆಸ್ಟರ್ ಹಾಗೂ ಸ್ಕಾಟ್ಲೆಂಡಿನ ಗ್ಲಾಸ್ಗೊ ಮತ್ತು ಅಡ್ರಾಸಾನ್‌ಗಳಿಗೆ ನೌಕಾ ಸಂಪರ್ಕವಿದೆ. ಆಲ್ಡರ್ ಗ್ರೋವ್‌ನಲ್ಲಿ ವಿಮಾನ ನಿಲ್ದಾಣವಿದೆ. ಇಲ್ಲಿಂದ ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡುಗಳ ಮುಖ್ಯ ನಗರಗಳಿಗೆ ವಿಮಾನ ಸಂಪರ್ಕವಿದೆ. ಹಿಟ್ಟು ಮಾಡುವುದು, ಆಹಾರ ಸಂಸ್ಕರಣ ಮತ್ತು ಡಬ್ಬಗಳಲ್ಲಿ ತುಂಬುವುದು, ಬಟ್ಟೆ, ಸೆಣಬು, ಪಾದರಕ್ಷೆ, ತಂಬಾಕು, ಹಗ್ಗ, ಕೇಬಲ್, ಲೋಹದ ವಸ್ತುಗಳು, ಯಂತ್ರ, ವಿಮಾನ ಮತ್ತು ರಾಸಾಯನಿಕ ವಸ್ತುಗಳ ತಯಾರಿಕೆ ಇಲ್ಲಿ ನಡೆಯುತ್ತಿದೆ. ನೌಕಾ ನಿರ್ಮಾಣ ಮತ್ತು ದುರಸ್ತಿ ಇಲ್ಲಿಯ ಮುಖ್ಯ ಕೈಗಾರಿಕೆ. ನೌಕೆ, ವಿಮಾನ, ವ್ಯವಸಾಯೋತ್ಪನ್ನಗಳು ಮತ್ತು ಜಾನುವಾರು ಹಾಗೂ ಲಿನನ್ ಬಟ್ಟೆ ಇವು ಮುಖ್ಯ ರಫ್ತುಗಳು. (ಜಿ.ಕೆಯು.)

**ಬೆಳಗಾಂವಿ:** ಕರ್ನಾಟಕ ರಾಜ್ಯದ ಒಂದು ವಿಭಾಗ, ಜಿಲ್ಲೆ, ತಾಲ್ಲೂಕು ಮತ್ತು ಅವುಗಳ ಆಡಳಿತಕೇಂದ್ರ ನಗರ. ಬೆಳಗಾಂವಿ ವಿಭಾಗಕ್ಕೆ, ಬಾಗಲಕೋಟೆ, ಬಿಜಾಪುರ, ಧಾರವಾಡ, ಹಾವೇರಿ, ಗದಗ ಉತ್ತರಕನ್ನಡ ಮತ್ತು ಬೆಳಗಾಂವಿ ಜಿಲ್ಲೆಗಳು ಸೇರಿವೆ. ಈ ಜಿಲ್ಲೆ ಕರ್ನಾಟಕ ರಾಜ್ಯದ ವಾಯವ್ಯ ಭಾಗದಲ್ಲಿ ಉ. ಅ. $15^{0}23'$ – $16^{0}28'$ ಮತ್ತು ಪೂ.ರೇ. $74^{0}5'$ – $75^{0}28'$ ನಡುವೆ ಹಬ್ಬಿದೆ. ಜಿಲ್ಲೆಯ ಉತ್ತರದಲ್ಲಿ ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳು, ಪಶ್ಚಿಮದಲ್ಲಿ ರತ್ನಗಿರಿ ಮತ್ತು ಕೊಲ್ಹಾಪುರ ಜಿಲ್ಲೆಗಳು ಹಾಗೂ ಒಕ್ಕೂಟ ಪ್ರದೇಶವಾದ ಗೋವ, ಪೂರ್ವದಲ್ಲಿ ಬಾಗಲಕೋಟೆ, ಆಗ್ನೇಯದಲ್ಲಿ ಗದಗ ಮತ್ತು ಧಾರವಾಡ ಜಿಲ್ಲೆಗಳು ಮತ್ತು ದಕ್ಷಿಣದಲ್ಲಿ ಗೋವ. ಅಥಣಿ, ರಾಯಬಾಗ, ಬೆಳಗಾಂವಿ, ಸವದತ್ತಿ, ಬೈಲಹೊಂಗಲ, ಖಾನಾಪುರ, ರಾಮದುರ್ಗ, ಗೋಕಾಕ, ಹುಕ್ಕೇರಿ, ಚಿಕ್ಕೋಡಿ – ಇವು ಈ ಜಿಲ್ಲೆಯ ತಾಲ್ಲೂಕುಗಳು. ಈ ಜಿಲ್ಲೆಯಲ್ಲಿ 35 ಹೋಬಳಿಗಳೂ 1,125 ಗ್ರಾಮಗಳೂ 17 ಪಟ್ಟಣಗಳೂ ಇವೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 13,415 ಚ.ಕಿಮೀ. ಜನಸಂಖ್ಯೆ 4,214,505.




ಜಿಲ್ಲೆಯ ಪಶ್ಚಿಮ ಅಂಚು ಪಶ್ಚಿಮ ಘಟ್ಟಗಳ ಪೂರ್ವ ಪಾರ್ಶ್ವದಲ್ಲಿದೆ. ಜಿಲ್ಲೆಯ ಪೂರ್ವದ ಬಹು ಭಾಗ ಚಪ್ಪಟೆಯಾದ ಮೈದಾನ. ಅಲ್ಲಲ್ಲಿ ಕಡಿದಾದ ದಿಣ್ಣೆಗಳ ಸಾಲುಗಳಿವೆ. ಜಿಲ್ಲೆಯಲ್ಲಿ ಹರಿಯುವ ಪ್ರಮುಖ ನದಿಗಳು ಕೃಷ್ಣ, ಘಟಪ್ರಭ, ಮಲಪ್ರಭ ಮತ್ತು ಡೋಣಿ. ಘಟಪ್ರಭ ನದಿಯ ಗೋಕಾಕ ಜಲಪಾತ ಹೆಸರಾದದ್ದು. ಬೆಳಗಾವಿ ಜಿಲ್ಲೆಯ ದಕ್ಷಿಣ ಭಾಗ ನೈಸ್ ಶಿಲೆಗಳಿಂದ ಕೂಡಿದೆ. ಅಲ್ಲಿ ಧಾರವಾಡ ವಿಭಾಗದ ಹೆಮಟೈಟ್ ಶಿಸ್ಟ್ ಶಿಲೆಗಳೂ ಇವೆ. ಜಿಲ್ಲೆಯ ಮಧ್ಯಭಾಗದಲ್ಲಿ ಬೆಣಚುಕಲ್ಲು ಹಾಗೂ ಕಲಾದಗಿ ಗುಂಪಿನ ಸುಣ್ಣದ ಶಿಲಾಸ್ತರ ಇವೆ. ಪಶ್ಚಿಮ ಹಾಗೂ ಉತ್ತರ ಭಾಗದಲ್ಲಿ ದಕ್ಷಿಣ ಪ್ರಸ್ತರಕ್ಕೆ ಸಂಬಂಧಿಸಿದ ಬೆಸಾಲ್ಟ್ ಹಾಗೂ ಲ್ಯಾಟರೈಟ್ ಶಿಲಾಸ್ತರಗಳುಂಟು. ನದಿ ಕೊಳ್ಳಗಳಲ್ಲಿ ಪ್ಲೀಸ್ಟೊಸೀನ್ ಯುಗದ ರೇವೆಮಣ್ಣು, ಉಸುಕು ಹಾಗೂ ಹರಳುಗಳು ಹರಡಿವೆ. ಗೋಕಾಕದಿಂದ ಈಶಾನ್ಯಕ್ಕೆ 5 ಕಿಮೀ ದೂರದಲ್ಲಿ ಘಟಪ್ರಭ ನದಿಯ ದಡದಲ್ಲಿ ಬಿಕಡೌಳಿ ಎಂಬ ಗ್ರಾಮದಲ್ಲಿ ಶಿಲಾ ಪಳೆಯುಳಿಕೆಗಳಿವೆ. ಕಪ್ಪು, ಕೆಂಪು ಹಾಗೂ ಉಸುಕು ಮಿಶ್ರಿತ ಕಪ್ಪು ಮಣ್ಣುಗಳು ಜಿಲ್ಲೆಯಲ್ಲಿ ವ್ಯಾಪಕವಾಗಿವೆ.

ಬೆಳಗಾಂವಿ ಹಾಗೂ ಖಾನಾಪುರ ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯಾಗುತ್ತದೆ. ಈ ಭಾಗದ ವಾರ್ಷಿಕ ಸರಾಸರಿ ಮಳೆ 127 ಸೆಂಮೀ ಜಿಲ್ಲೆಯ ಉಳಿದ ಭಾಗದಲ್ಲಿ ಸರಾಸರಿ 63–76 ಸೆಂಮೀ ಮಳೆ ಬೀಳುವುದು. ಜಿಲ್ಲೆಯಲ್ಲಿ ಸಾಮಾನ್ಯವಾಗಿ ತಂಪಾದ ವಾಯುಗುಣ ಇರುತ್ತದೆ. ಜಿಲ್ಲೆಯ ಉಷ್ಣತೆ $14^{0}$ ಸೆ.– $35^{0}$ ಸೆ. ಖಾನಾಪುರ ಹಾಗೂ ಬೆಳಗಾಂವಿ ತಾಲ್ಲೂಕುಗಳಲ್ಲಿ ನಿತ್ಯ ಹರಿದ್ವರ್ಣ ಕಾಡುಗಳಿವೆ.

ಜಿಲ್ಲೆಯಲ್ಲಿ ಬೆಳೆಯುವ ಮರಗಳು ತೇಗ, ಬೀಟೆ, ಹಳದಿ ನೇರಳೆ ಮತ್ತು ಗೊಬ್ಬಳಿ. ಜಿಲ್ಲೆಯ ನೈಋತ್ಯ ಭಾಗದ ಕಾಡುಗಳಲ್ಲಿ ಬಿದಿರು, ಶ್ರೀಗಂಧ ಮತ್ತು ಇತರ ಎತ್ತರದ ಮರಗಳಿವೆ. ಪೂರ್ವಕ್ಕೆ ಹೋದಂತೆ ಅರಣ್ಯ ವಿರಳವಾಗುತ್ತದೆ. ಜಿಲ್ಲೆಯಲ್ಲಿ ಮೆದು ತಿರುಳಿನ ಮತ್ತು ಇತರ ಮರಗಳನ್ನು ಬೆಳೆಸಲಾಗುತ್ತಿದೆ. ಗೋಡಂಬಿ ಗಿಡಗಳನ್ನೂ ನೆಡಲಾಗಿದೆ.

ಜಿಲ್ಲೆಯ ಮುಖ್ಯ ಬೆಳೆಗಳು ಸಜ್ಜೆ, ಗೋದಿ, ಬತ್ತ, ಕಬ್ಬು, ಜೋಳ, ಕಬ್ಬು, ಶೇಂಗಾ, ಬೇಳೆಕಾಳು, ಹತ್ತಿ, ದ್ರಾಕ್ಷಿ, ಮೆಣಸಿನಕಾಯಿ ಮತ್ತು ಹೊಗೆಸೊಪ್ಪು. ನಿಪ್ಪಾಣಿಯ ಹೊಗೆಸೊಪ್ಪು ಪ್ರಸಿದ್ಧವಾಗಿದೆ. ಹಣ್ಣು, ತರಕಾರಿ, ಹಿಪ್ಪನೇರಳೆಗಳೂ ಬೆಳೆಯುತ್ತವೆ. ಬೆಳಗಾಂವಿ ಜಿಲ್ಲೆಯಲ್ಲಿ ಕರೆಯುವ ಹಸುಗಳ ಸಂಖ್ಯೆ ಹೆಚ್ಚಾಗಿವೆ. ದನ, ಎಮ್ಮೆ, ಕತ್ತೆ, ಕುರಿ, ಆಡು ಇವು ಜಿಲ್ಲೆಯ ಪ್ರಮುಖ ಸಾಕು ಪ್ರಾಣಿಗಳು.

ಜಿಲ್ಲೆ ಕೈಗಾರಿಕೆಯಲ್ಲೂ ಮುಂದುವರಿಯುತ್ತಿದೆ. ಅಲ್ಯೂಮಿನಿಯಮ್, ಜವಳಿ ಗಿರಣಿ ಮತ್ತು ಸಕ್ಕರೆ ಕೈಗಾರಿಕೆಗಳಿವೆ. ಯಂತ್ರೋಪಕರಣ, ಉಕ್ಕಿನ ವಸ್ತುಗಳು, ಸಿಮೆಂಟ್, ರಾಸಾಯನಿಕ, ಬಣ್ಣ, ಮರದ ಸಾಮಾನು, ಮೋಟಾರಿನ ಬಿಡಿ ಭಾಗಗಳು, ಸಾಬೂನು, ವೈಜ್ಞಾನಿಕ ಉಪಕರಣ, ಪಾತ್ರೆ, ಅಗರಬತ್ತಿ, ಮಗ್ಗದ ಬಟ್ಟೆ ಇವು ಸಣ್ಣ ಗಾತ್ರದ ಕೈಗಾರಿಕೆಗಳು.

ಬೆಂಗಳೂರು–ಮಿರಜ್ ಮೀಟರ್‌ಗೇಜ್ ರೈಲುಮಾರ್ಗ ಜಿಲ್ಲೆಯನ್ನು ಹಾದು ಹೋಗುತ್ತದೆ. ಲೋಂಡದಿಂದ ಗೋವೆಗೆ ಕ್ಯಾಸಲ್‌ರಾಕ್ ಮೂಲಕ ರೈಲ್ವೆ ಸಂಪರ್ಕವಿದೆ. ಲೋಂಡ, ಖಾನಾಪುರ, ಬೆಳಗಾಂವಿ, ಧೂಪದಾಳ, ಗೋಕಾಕ, ರಾಯಬಾಗ, ಕುಡಚಿ, ಶೇಡಬಾಳ ಇವು ಮುಖ್ಯ ರೈಲ್ವೆ ನಿಲ್ದಾಣಗಳು. ಜಿಲ್ಲೆಯಲ್ಲಿರುವ ರೈಲು ಮಾರ್ಗಗಳ ಉದ್ದ 225 ಕಿಮೀ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಜಿಲ್ಲೆಯ ಮೂಲಕ ಸಾಗುತ್ತದೆ. ಬೆಳಗಾಂವಿಯಿಂದ ನೆರೆಯ ಗೋವ, ಮಹಾರಾಷ್ಟ್ರಗಳಿಗೂ ಕರ್ನಾಟಕದ ಪ್ರಮುಖ ಸ್ಥಳಗಳಿಗೂ ರಸ್ತೆ ಸಂಪರ್ಕವಿದೆ. ಜಿಲ್ಲೆಯಲ್ಲಿರುವ ಉತ್ತಮ ರಸ್ತೆಗಳ ಉದ್ದ 3696 ಕಿಮೀ ಬೆಳಗಾಂವಿ ನಗರದಿಂದ ಮಂಗಳೂರು, ಮುಂಬಯಿ ಮುಂತಾದ ಸ್ಥಳಗಳಿಗೆ ವಿಮಾನ ಸಂಪರ್ಕವಿದೆ.

ಅಥಣಿ, ಬೈಲಹೊಂಗಲ, ಬೆಳಗಾಂವಿ, ಬೆಳಗಾಂವಿ ದಡು, ಚಿಕ್ಕೋಡಿ, ಗೋಕಾಕ ಹುಕ್ಕೇರಿ, ಖಾನಾಪುರ, ಕೊಣ್ಣೂರು, ಕುಡಚಿ, ಲೋಂಡ, ಮೂಡಲಗಿ, ನಿಪ್ಪಾಣಿ, ರಾಯಬಾಗ, ರಾಮದುರ್ಗ, ಸಾಂದಲ್ಗಾ, ಸೌದತ್ತಿ ಇವು ಜಿಲ್ಲೆಯ ಪಟ್ಟಣಗಳು.

ತಾಲ್ಲೂಕು: ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ಈ ತಾಲ್ಲೂಕು ಬಾಗೇವಾಡಿ, ಬೆಳಗಾವಿ, ಉಚಗಾಂವ ಮತ್ತು ಕಾಕತಿ ಎಂಬ ಹೋಬಳಿಗಳನ್ನು ಒಳಗೊಂಡಿದೆ. 136 ಗ್ರಾಮಗಳಿವೆ. ವಿಸ್ತೀರ್ಣ 1,036,9 ಚ.ಕಿಮೀ ಜನಸಂಖ್ಯೆ 815113.

ಪಶ್ಚಿಮ ಘಟ್ಟಗಳ ಅಂಚಿನಲ್ಲಿರುವ ಈ ತಾಲ್ಲೂಕು ಮಲೆನಾಡ ಪ್ರದೇಶ. ತಂಪಾದ ಹವಾಮಾನವಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 155 ಸೆಂಮೀ. ಖಾನಾಪುರ ತಾಲ್ಲೂಕನ್ನು ಬಿಟ್ಟರೆ ಇಡೀ ಜಿಲ್ಲೆಯಲ್ಲಿ ಇದು ಅಧಿಕ ಮಳೆ ಬೀಳುವ ಪ್ರದೇಶ. ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಅರಣ್ಯವಿದೆ. ಅರಣ್ಯ ಪ್ರದೇಶದಲ್ಲಿ ಬೆಲೆಬಾಳುವ ಉಪಯುಕ್ತ ಮರಗಳು ಬೆಳೆಯುತ್ತವೆ. ಈ ತಾಲ್ಲೂಕಿನ ವಾಯವ್ಯ ಭಾಗದಲ್ಲಿ ತಾಲ್ಲೂಕು ಗಡಿಯಾಗಿ ಸ್ವಲ್ಪದೂರ ಘಟಪ್ರಭ ನದಿ ಹರಿಯುವುದು. ತಾಲ್ಲೂಕು ಘಟಪ್ರಭ ಮತ್ತು ಮಲಪ್ರಭ ನದಿಗಳೆರಡರ ಮಧ್ಯ ಪ್ರದೇಶವಾಗಿದೆ. ಈ ತಾಲ್ಲೂಕಿನಲ್ಲಿ ಕೆಲವು ತೊರೆಗಳು ಮಳೆಗಾಲದಲ್ಲಿ ತುಂಬಿ ಹರಿದು ಬೇಸಿಗೆಯಲ್ಲಿ ಬತ್ತಿಹೋಗುತ್ತವೆ. ಹೆಸರಿಸಬಹುದಾದ ನದಿಯೆಂದರೆ ಮಾರ್ಕಂಡೇಯ ಒಂದೇ. ಇದು ನೈಋತ್ಯದಿಂದ ಈಶಾನ್ಯಾಭಿಮುಖವಾಗಿ ಹರಿಯುವುದು. ಬಿಲಾರಿ ಮತ್ತು ಇತರ ತೊರೆಗಳು ಈ ನದಿಯನ್ನು ದಕ್ಷಿಣದಿಂದ ಕೂಡಿಕೊಳ್ಳುವುವು. ತಾಲ್ಲೂಕಿನ ಬಹುಭಾಗದಲ್ಲಿ ವ್ಯವಸಾಯಕ್ಕೆ ಅನುಕೂಲವಾದ ಕಸುವಿನ ಎರೆಭೂಮಿ ಇದೆ. ನದಿ ತೊರೆಗಳ ಬಯಲು ಪ್ರದೇಶವೆಲ್ಲ ಫಲವತ್ತಾಗಿದ್ದು ಬತ್ತ, ಕಬ್ಬು ಬೆಳೆಗೆ ಪ್ರಶಸ್ತವಾಗಿದೆ. ಇವುಗಳ ಜೊತೆಗೆ ಜೋಳ, ಗೋದಿ, ದ್ವಿದಳ ಧಾನ್ಯಗಳು, ಶೇಂಗಾ ಮತ್ತು ವಿವಿಧ ತರಕಾರಿಗಳನ್ನು ಬೆಳೆಯುತ್ತಾರೆ.

ಬೆಳಗಾಂವಿ ನಗರ. ಈ ವಿಭಾಗದ ಹಾಗೂ ಜಿಲ್ಲೆಯ ಆಡಳಿತ ಕೇಂದ್ರ. ಇದು ಕರ್ನಾಟಕದ ಹೆಬ್ಬಾಗಿಲಿನಂತಿದ್ದು, ಮಲೆನಾಡು ಹಾಗೂ ಬಯಲುಸೀಮೆ ಕೂಡುವಲ್ಲಿ ಇದೆ. ಬೆಂಗಳೂರು–ಮೀರಜ್ ರೈಲುಮಾರ್ಗ ಹಾಗೂ ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿಯ ಮೇಲಿದ್ದು ಧಾರವಾಡದ ವಾಯವ್ಯಕ್ಕೆ ಸು. 77 ಕಿಮೀ ದೂರದಲ್ಲಿದೆ. ನಗರದ ಉತ್ತರಕ್ಕೆ ಸು. 5 ಕಿಮೀ ದೂರದಲ್ಲಿ ಮಾರ್ಕಂಡೇಯ ನದಿಯೂ ದಕ್ಷಿಣಕ್ಕೆ ಸು. 3 ಕಿಮೀ ದೂರದಲ್ಲಿ ಅದರ ಉಪನದಿಯಾದ ಬಿಲಾರಿಯೂ ಹರಿಯುತ್ತವೆ. ನಗರ ಸಮುದ್ರಮಟ್ಟದಿಂದ 640–688 ಮೀ ಎತ್ತರದಲ್ಲಿದೆ. ನಗರದ ಬಳಿ ಸಣ್ಣ ಸಣ್ಣ ಗುಡ್ಡಗಳೂ ಮಾವಿನತೋಪುಗಳೂ ಇವೆ. ಇಲ್ಲಿ ವಾಯುಗುಣ ಸಾಮಾನ್ಯವಾಗಿ ತಂಪಾಗಿರುತ್ತದೆ. ಬೆಳಗಾಂವಿ ನಗರ ನಾಗರಿಕ ಹಾಗೂ ದಂಡಿನ ಪ್ರದೇಶಗಳಿಂದ ಕೂಡಿದೆ. ದಂಡಿನ ಪ್ರದೇಶ ಮರಾಠ ಪದಾತಿ ದಳದ ಕೇಂದ್ರ. ದಂಡಿನ ಪ್ರದೇಶವೂ ಸೇರಿ ನಗರದ ಜನಸಂಖ್ಯೆ 506235.

ಬೆಳಗಾಂವಿಯಲ್ಲಿ ಕೈಮಗ್ಗ ಹಾಗೂ ವಿದ್ಯುತ್ ಮಗ್ಗದ ಸೀರೆಗಳು ತಯಾರಾಗುತ್ತವೆ. ಅಲ್ಲದೆ ಇಲ್ಲಿ ಅನೇಕ ಚಿಕ್ಕ ಕಾರ್ಖಾನೆಗಳಿವೆ. ಅಲ್ಯೂಮಿನಿಯಮ್ ಕಾರ್ಖಾನೆ ನಗರದ ಉತ್ತರಕ್ಕೆ ಇದೆ. ನೈಋತ್ಯದಲ್ಲಿ ಔದ್ಯಮಿಕ ವಿಭಾಗವಿದೆ. ಕಿತ್ತೂರ ರಾಣಿ ಚೆನ್ನಮ್ಮ ಹಾಗೂ ಮಹಾತ್ಮ ಬಸವೇಶ್ವರರ ಪ್ರತಿಮೆಗಳು ನಗರದಲ್ಲಿ ಆಕರ್ಷಕ ತಾಣಗಳು. ನಗರದಲ್ಲಿ ವೈದ್ಯಕೀಯ, ಕಲೆ ಮತ್ತು ವಿಜ್ಞಾನ ಹಾಗೂ ವಾಣಿಜ್ಯ ಮತ್ತು ನ್ಯಾಯಶಾಸ್ತ್ರ ಕಾಲೇಜುಗಳೂ ಅನೇಕ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು ಇವೆ. ನಗರಕ್ಕೆ ರಕ್ಷಿತ ಜಲಪೂರೈಕೆ, ವಿದ್ಯುತ್ ಮತ್ತು ಒಳಚರಂಡಿ ವ್ಯವಸ್ಥೆ ಹಾಗೂ ವೈದ್ಯಕೀಯ ಸೌಕರ್ಯಗಳಿವೆ. ನಗರದ ಪೂರ್ವಭಾಗದಲ್ಲಿ ಕೋಟೆಯಿದೆ. ಕೋಟೆಯ ಅಗಸೆಯೊಂದರಲ್ಲಿ ದುರ್ಗಿಗುಡಿ, ಖಿಲ್ಲೇದಾರ್ ಅಸದ್‌ಖಾನನ ಮಸೀದಿ ಇವೆ. ಇಲ್ಲಿಯ ಸೇಂಟ್ ಮೇರಿ ಚರ್ಚ್ ಒಂದು ಪ್ರಮುಖ ಕಟ್ಟಡ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಸ್ನಾತಕೋತ್ತರ ಕೇಂದ್ರ ಸಹ ಇಲ್ಲಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವಿದೆ. **(ಎಸ್.ಎನ್.ಎ.ಆರ್.ಇ.)**

**ಬೆಳೆಗಳ ಆವರ್ತ:** ಒಂದೇ ಕೃಷಿ ಭೂಮಿಯಲ್ಲಿ ಯೋಜಿತ ಸರದಿಯ ಮೇಲೆ ನಿಯಮಿತ ಬೆಳೆ ಬೆಳೆಯುವ ಪದ್ಧತಿ. ಮಣ್ಣಿನ ಸಾರವನ್ನು ಕಾಪಾಡುವುದಕ್ಕಾಗಿ ಬೇರೆ ಬೇರೆ ಬೆಳೆಗಳನ್ನು ಒಂದಾದ ಮೇಲೆ ಮತ್ತೊಂದನ್ನು ವೈಜ್ಞಾನಿಕವಾಗಿ ಸಾಗುವಳಿ ಮಾಡುವ ವಿಧಾನ. ಮೊದಲ ಬೆಳೆಗಿಂತ ತರುವಾಯದ ಬೆಳೆಗಳ ತಳಿ, ಪ್ರಭೇದ, ಉಪ–ಪ್ರಭೇದ ಅಥವಾ ಪ್ರಕಾರಗಳು ಭಿನ್ನವಾಗಿರುವುದು ಸಹ ಬೆಳೆಗಳ ಆವರ್ತಕ್ಕೆ ಅನ್ವಯ. ಯೋಜಿತ ಬೆಳೆ ಆವರ್ತ 2, 3 ವರ್ಷಗಳು ಅಥವಾ ದೀರ್ಘಾವಧಿವರೆಗೆ ಮುಂದುವರಿಯಬಹುದು. ಒಂದೇ ಕೃಷಿ ಭೂಮಿಯಲ್ಲಿ ಪದೇ ಪದೇ ಒಂದೇ ಬೆಳೆ ಸಾಗುವಳಿ ಮಾಡುವುದರಿಂದ ಉಂಟಾಗುವ ರೋಗ ಮತ್ತು ಕೀಟಗಳ ಹಾವಳಿ, ಅವುಗಳ ನಿಯಂತ್ರಣ ಮತ್ತು ಮಣ್ಣಿನ ಫಲವತ್ತನ್ನು ಕಾಪಾಡುವುದು ಹಾಗೂ ಬೆಳೆಗಳ ಇಳುವರಿಯನ್ನು ಸುಧಾರಿಸಲು ಬೆಳೆಗಳ ಆವರ್ತ ಹೆಚ್ಚು ಸಹಾಯಕ.

ವಿವಿಧ ಕುಟುಂಬಕ್ಕೆ ಸೇರಿದ ಬೆಳೆಗಳನ್ನು ಸರದಿಯ ಮೇಲೆ ಸಾಗುವಳಿ ಮಾಡುವ ಬೆಳೆಗಳ ಆವರ್ತದಿಂದ ಲಾಭ ಹೆಚ್ಚು. ಮುಂಗಾರಿನಲ್ಲಿ ಬತ್ತ, ರಾಗಿ, ಜೋಳಗಳಂತಹ ಏಕದಳ ಧಾನ್ಯಗಳನ್ನು ಸಾಗುವಳಿ ಮಾಡಿದರೆ ಹಿಂಗಾರಿನಲ್ಲಿ ತೊಗರಿ, ತಿಂಗಳ ಅವರೆ, ಹೆಸರು, ಉದ್ದು, ಹುರುಳಿ ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುವುದು. ಈ ವಿಧಾನದ ಬೆಳೆಗಳ ಆವರ್ತವು ಭಾರತದಲ್ಲಿ ರೂಢಿಯಲ್ಲಿದೆ.

ಬೆಳೆ ಆವರ್ತದ ಪ್ರಮುಖ ಉದ್ದೇಶಗಳೆಂದರೆ: ಮಣ್ಣಿನ ಆಹಾರದ ಬೇಡಿಕೆಯನ್ನು ಸಮತೋಲನಗೊಳಿಸುವುದು ಮತ್ತು ತನ್ಮೂಲಕ ಮಣ್ಣಿನ ಫಲವತ್ತನ್ನು ಸುಧಾರಿಸುವುದು ಅಥವಾ ಫಲವತ್ತತೆಯನ್ನು ಕಾಪಾಡುವುದು. ರೋಗ ಮತ್ತು ಕೀಟಗಳ ಹಾವಳಿಯ ನಿವಾರಣೆ ಹಾಗೂ ಕಳೆ ನಾಶಕ ಮತ್ತು ಕೀಟ ನಾಶಕಗಳ ಬಳಕೆ ನಿಯಂತ್ರಣ. ಮಣ್ಣಿನ ಮಾಲಿನ್ಯ ನಿಯಂತ್ರಣ. ಮಣ್ಣಿನ ಸಾರಜನಕ ಮತ್ತು ತೇವಾಂಶವನ್ನು ವೃದ್ಧಿಸುವುದು. ಹವಾಗುಣದ ಪ್ರತಿಕೂಲದಿಂದಾಗುವ ನಷ್ಟವನ್ನು ಮಿತಗೊಳಿಸುವುದು ಮತ್ತು ಕೃಷಿ ಉತ್ಪನ್ನಗಳ ಹೆಚ್ಚಳ. **(ಪಿ.ಎಂ.)**

**ಬೆಳೆಗಳ ಕೇಂದ್ರೀಕರಣ:** ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ, ಒಂದೇ ಅವಧಿಯಲ್ಲಿ, ಬೆಳೆಗಳ ನಡುವಿನ ಸಾಂದ್ರತೆಯನ್ನು ಹಾಗೂ ವ್ಯತ್ಯಾಸವನ್ನು ಬೆಳೆಗಳ ಕೇಂದ್ರೀಕರಣ ಎನ್ನಲಾಗುತ್ತದೆ ಅಥವಾ ಒಟ್ಟು ವ್ಯವಸಾಯ ಪ್ರದೇಶದಲ್ಲಿ ಒಂದು ಬೆಳೆಯ ಶೇಕಡವಾರು ಹಂಚಿಕೆಯನ್ನು ನಿರೂಪಿಸುವುದು. ಒಂದು ಬೆಳೆಯು ಒಂದೇ ಪ್ರದೇಶದಲ್ಲಿ ಕೇಂದ್ರೀಕರಣಗೊಳ್ಳಲು ಆ ಪ್ರದೇಶದ ಭೂ ಮೇಲ್ಮೈಲಕ್ಷಣ, ವಾಯುಗುಣ, ತೇವಾಂಶ ಮತ್ತು ಮಣ್ಣಿನ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಪ್ರತಿಯೊಂದು ಬೆಳೆಯನ್ನು ಬೆಳೆಯಲು, ಕನಿಷ್ಠ, ಗರಿಷ್ಠ ಹಾಗೂ ಸಾಧಾರಣದಂತೆ, ವಿವಿಧ ಪ್ರಮಾಣದ ಉಷ್ಣಾಂಶದ ಅವಶ್ಯಕತೆ ಇರುತ್ತದೆ. ಆದುದರಿಂದ ಯಾವ ಪ್ರದೇಶ ಈ ವಾಯುಗುಣ ಪರಿಸ್ಥಿತಿ ಒಂದು ಬೆಳೆಗೆ ಸೂಕ್ತವಾಗಿರುತ್ತದೆಯೂ ಅಲ್ಲಿ ಆ ಒಂದು ಬೆಳೆಯು ಕೇಂದ್ರೀಕೃತವಾಗುತ್ತದೆ. ಈ ಕೇಂದ್ರೀಕರಣದಲ್ಲಿ ಇತರ ಭೌಗೋಳಿಕ ಅಂಶಗಳೂ ಸಹ ಹೆಚ್ಚಿನ ಪ್ರಭಾವವನ್ನು ಬೀರುತ್ತವೆ. ಆದುದರಿಂದ ಈ ಕೃಷಿಯೋಗ್ಯ ವಾಯುಗುಣ ಮತ್ತು ಭೌಗೋಳಿಕ ಪರಿಸ್ಥಿತಿ, ಉತ್ತಮವಾಗಿರುವುದರಿಂದ ಭಾರತದಲ್ಲಿ ಕಪ್ಪುಮಣ್ಣು ಪ್ರದೇಶದಲ್ಲಿ ಹತ್ತಿಯು ಕೇಂದ್ರೀಕೃತವಾಗಿರುವುದು. ಪಂಜಾಬ್ ಮತ್ತು ಹರಿಯಾಣದಲ್ಲಿ ಗೋದಿ, ರಾಜಸ್ತಾನದಲ್ಲಿ ಸಜ್ಜೆ ಹಾಗೂ ಅಸ್ಸಾಂ, ಪಶ್ಚಿಮ ಬಂಗಾಳ, ಒರಿಸ್ಸ, ಆಂಧ್ರಪ್ರದೇಶದ ತೀರ, ತಮಿಳುನಾಡು, ಕೇರಳಗಳಲ್ಲಿ ಬತ್ತ ಪ್ರಮುಖ ಬೆಳೆಯಾಗಿರುವುದು. ಇಂದು ಅನೇಕ ಸಂಖ್ಯಾಶಾಸ್ತ್ರದ ತಂತ್ರಗಳನ್ನು ಅಳವಡಿಸಿಕೊಂಡು ಈ ಬೆಳೆಗಳ ಕೇಂದ್ರೀಕರಣದ ಪ್ರದೇಶವನ್ನು ಗುರುತಿಸಲಾಗುತ್ತದೆ. ಈ ರೀತಿ ಒಂದು ಪ್ರದೇಶದ ಬೆಳೆಗಳ ಕೇಂದ್ರೀಕರಣವನ್ನು ಗುರುತಿಸುವುದರಿಂದ ಆ ಪ್ರದೇಶದಲ್ಲಿ ಒಂದು ನಿರ್ದಿಷ್ಟ ಬೆಳೆಗೆ ಕನಿಷ್ಠ ನೀಡಿಕೆಯನ್ನು ಪೂರೈಸಿ ಅಧಿಕ ಇಳುವರಿಯನ್ನು ಗಳಿಸುವುದರ ಜೊತೆಗೆ ಉತ್ತಮ ವ್ಯವಸಾಯದ ಯೋಜನೆಗಳನ್ನು ಕೈಗೊಂಡು ಅಭಿವೃದ್ಧಿಯನ್ನು ಸಾಧಿಸಲು ಸಹಾಯಕವಾಗುತ್ತದೆ. **(ಎಸ್.ಎಚ್.)**

**ಬೆಳೆಗಳ ಮಾದರಿ:** ಒಂದು ನಿರ್ದಿಷ್ಟ ಅವಧಿಯಲ್ಲಿ, ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ಬೆಳೆಯಬಹುದಾದ ವಿವಿಧ ಬೆಳೆಗಳು. ಸಾಮಾನ್ಯವಾಗಿ ಬೆಳೆಗಳ ಮಾದರಿಯ ಅಂಕಿಅಂಶಗಳನ್ನು ಸರ್ಕಾರ ತನ್ನ ಪ್ರಕಟಣೆಯಲ್ಲಿ ತಿಳಿಸುತ್ತದೆ. ಒಂದು ಪ್ರದೇಶದ ಬೆಳೆಗಳ ಮಾದರಿಯು ಅಲ್ಲಿನ ಭೂ ವಾಯುಗುಣ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಐತಿಹಾಸಿಕ ಅಂಶಗಳಿಂದ ನಿರ್ಧರಿಸಲ್ಪಡುತ್ತಿದೆ. ಈ ಅಂಶಗಳಲ್ಲಿ ಭೌಗೋಳಿಕ ಪರಿಸರ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ. ಇವುಗಳ ಜೊತೆಗೆ ಮಾನವನ ಪಾತ್ರ ಅತಿ ಪ್ರಮುಖವಾಗಿದೆ.

ಒಂದು ಪ್ರದೇಶದ ಬೆಳೆಗಳ ಮಾದರಿ ಆ ಪ್ರದೇಶದ ಪ್ರತಿಯೊಂದು ಬೆಳೆಗಳ ಪ್ರಮಾಣವನ್ನು ಪ್ರತಿಬಿಂಬಿಸುತ್ತದೆ. ಅವುಗಳಲ್ಲಿ ಮೊದಲ ಮೂರು ಬೆಳೆಗಳನ್ನು ಪ್ರಮುಖ ಬೆಳೆಗಳೆಂದು ಪರಿಗಣಿಸಲಾಗುತ್ತದೆ. ಈ ಬೆಳೆಗಳು ಹೆಚ್ಚು ಕಡಿಮೆ ಗರಿಷ್ಠ ಭೂ ಹಿಡುವಳಿಯ ಪ್ರದೇಶವನ್ನು ಆವರಿಸಿರುತ್ತದೆ. ಇದರಿಂದ ಒಬ್ಬ ರೈತ ಆ ಪ್ರದೇಶದಲ್ಲಿ ಲಾಭದಾಯಕವಾಗಿ ತನ್ನ ಬೇಡಿಕೆಯನ್ನು ಪೂರೈಸಿಕೊಳ್ಳುವ ಬೆಳೆಯನ್ನು ಬೆಳೆಯಲು ದೊರೆಯಬಹುದಾದ ನೀರಿನ ಪ್ರಮಾಣ, ಬೇಡಿಕೆ, ನೀಡಿಕೆ, ಬೆಲೆ ಮುಂತಾದ ಅಂಶಗಳನ್ನು ತಿಳಿಯಲು ಈ ಬೆಳೆಗಳ ಮಾದರಿಯು ಸಹಾಯಕವಾಗುತ್ತದೆ.

ಭಾರತದಲ್ಲಿ ದೊರೆಯುವ ನೀರಿನ ಪ್ರಮಾಣ ಮತ್ತು ಮೇಲಿನ ಪೂರಕ ಅಂಶಗಳಿಂದ ವರ್ಷವೆಲ್ಲಾ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಉತ್ತರ ಭಾರತದಲ್ಲಿ ಬೆಳೆ ಬೆಳೆಯುವ ಎರಡು ಸ್ಪಷ್ಟ ಕಾಲಗಳನ್ನು ಕಾಣಬಹುದು: 1) ಜುಲೈಯಿಂದ ಅಕ್ಟೋಬರ್ ವರೆಗೆ ಖಾರಿಫ್ ಅಕ್ಟೋಬರ್ ನಿಂದ ಮಾರ್ಚಿವರೆಗೆ ರಾಬಿ ಹಾಗೂ ಮಾರ್ಚಿ ಮತ್ತು ಜೂನ್‌ಗಳ ನಡುವೆ ಬೆಳೆಯುವ ಬೆಳೆಗಳನ್ನು ಜಾಯಿದ್ ಎಂದು ಕರೆಯುವರು. ಈ ವಿಂಗಡಣೆಯು ದೇಶದೆಲ್ಲೆಡೆ ಒಂದೇ ರೀತಿಯಾಗಿರುವುದಿಲ್ಲ. ಈ ಅಂಕಿಅಂಶಗಳನ್ನು ಮೊದಲಿಗೆ ಗ್ರಾಮಪ್ರದೇಶಗಳಲ್ಲಿ ಕಂದಾಯ ಅಧಿಕಾರಿಗಳು ಸಂಗ್ರಹಿಸಿ ಅನಂತರ ತಾಲ್ಲೂಕು, ಜಿಲ್ಲೆ, ರಾಜ್ಯವಾರು ಕ್ರೋಡೀಕರಿಸಿ ದೇಶವು ಪ್ರದೇಶವಾರು ಬೆಳೆಗಳ ಮಾದರಿಯನ್ನು ಪ್ರಕಟಿಸುತ್ತದೆ. (ಎಸ್.ಎಚ್.)

**ಬೆಳೆಗಳ ವೈವಿಧ್ಯತೆ:** ಏಕ ಬೆಳೆ ಪದ್ಧತಿಗೆ ವಿರುದ್ಧವಾಗಿ ಅನೇಕ ಬೆಳೆಗಳ ಉತ್ಪಾದನೆ. ಒಂದು ನಿರ್ದಿಷ್ಟ ಭೂಹಿಡುವಳಿಯಲ್ಲಿ ಏಕಕಾಲದಲ್ಲಿ ವಿವಿಧ ಬೆಳೆಗಳನ್ನು ಬೆಳೆವಂತೆ ಮಾಡುವುದು. ಹೆಚ್ಚಾಗಿ ಸಾಂದ್ರ ಬೇಸಾಯವನ್ನು ಹೊಂದಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಂಡುಬರುತ್ತದೆ. ಈ ಬೆಳೆಗಳ ವೈವಿಧ್ಯತೆಯ ಪ್ರಮಾಣವನ್ನು ಆ ಪ್ರದೇಶದ ಭೂಮಿ, ವಾಯುಗುಣ, ಸಾಮಾಜಿಕ ಆರ್ಥಿಕ ಪರಿಸ್ಥಿತಿ, ತಂತ್ರಜ್ಞಾನದ ಅಭಿವೃದ್ಧಿಯು ನಿರ್ಧರಿಸುತ್ತವೆ. ಸಾಮಾನ್ಯವಾಗಿ ಯಾವ ಪ್ರದೇಶದಲ್ಲಿ ತಂತ್ರಜ್ಞಾನದ ಅಭಿವೃದ್ಧಿಯು ಹೆಚ್ಚಾಗಿ ಇರುತ್ತದೆಯೋ ಅಲ್ಲಿ ಈ ಬೆಳೆಗಳ ವೈವಿಧ್ಯತೆಯ ಪ್ರಮಾಣ ಕಡಿಮೆ ಇರುತ್ತದೆ ಹಾಗೂ ಹಿಡುವಳಿಯ ಗಾತ್ರ ದೊಡ್ಡದಿದ್ದು ಆರ್ಥಿಕವಾಗಿ ಬಲಿಷ್ಠವಿರುವ ರೈತರು ಏಕ ಬೆಳೆಯ ಪದ್ಧತಿಯನ್ನು ಅನುಸರಿಸುತ್ತಾರೆ. ಆದರೆ ಸಣ್ಣ ಹಿಡುವಳಿದಾರರು, ಸರಾಸರಿ ಆರ್ಥಿಕ ಮಟ್ಟಕ್ಕಿಂತ ಕೆಳಗಿನ ರೈತರು ಈ ಬಗೆಯ ಬೆಳೆಗಳ ವೈವಿಧ್ಯತೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತಾರೆ.

ಕೆಲವು ಪ್ರದೇಶಗಳಲ್ಲಿ ನೀರಾವರಿಯ ಪ್ರಮಾಣ ಕಡಿಮೆ ಇದ್ದು, ಮಳೆ ಅನಿಶ್ಚಿತವಾಗಿರುತ್ತದೆ, ಅಲ್ಲಿ ರೈತರು ಒಂದೇ ಭೂಮಿಯಲ್ಲಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಆದರಿಂದ ಯಾವುದಾದರೂ ಒಂದು ಬೆಳೆಯಲ್ಲಿ ತಮ್ಮ ಕನಿಷ್ಠ ಆದಾಯವನ್ನು ನಿರೀಕ್ಷಿಸುತ್ತಾರೆ. ಸಾಂಪ್ರದಾಯಿಕ ಜೀವನಾಧಾರ ಬೇಸಾಯದಲ್ಲಿಯೂ ತಮ್ಮ ಕುಟುಂಬದ ಮೂಲ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಈ ಬಹುಬೆಳೆ ಪದ್ಧತಿಯನ್ನು ಅನುಸರಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ಮಣ್ಣಿನ ಸಾರವನ್ನು ಕಾಪಾಡಿಕೊಳ್ಳಲು ಕೃಷಿ ತಂತ್ರಜ್ಞರು ಪ್ರಕಟಿಸುತ್ತಿರುವಂತೆ ಬಹುಬೆಳೆ ಅದರಲ್ಲಿಯೂ ದ್ವಿದಳ ಧಾನ್ಯಗಳನ್ನು ಹೆಚ್ಚು ಬೆಳೆಯುವುದರಿಂದ ಸ್ವಾಭಾವಿಕವಾಗಿ ಮಣ್ಣಿನ ಸಾರವನ್ನು ಹೆಚ್ಚಿಸಬಹುದು. ಈ ಎಲ್ಲಾ ಕಾರಣದಿಂದ ಬೆಳೆಗಳ ವೈವಿಧ್ಯತೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತಿದೆ. (ಎಸ್.ಎಚ್.)

**ಬೆಳೆಗಳ ಸಮೂಹ:** ಕೃಷಿ ಭೂಗೋಳವಿಜ್ಞಾನದಲ್ಲಿ ಪ್ರಾದೇಶಿಕ ಬೆಳೆಗಳ ಸಮೂಹದ ಬಗೆಗಿನ ಅಧ್ಯಯನ ಒಂದು ಪ್ರಮುಖ ವಿಷಯವಾಗಿದೆ. ಏಕೆಂದರೆ ಇದು ಪ್ರಾದೇಶಿಕ ಬೆಳೆಗಳ ಹಂಚಿಕೆಯ ಬಗ್ಗೆ ಹೆಚ್ಚಿನ ಜ್ಞಾನವನ್ನು ಕೊಡುತ್ತದೆ. ಸಾಮಾನ್ಯವಾಗಿ ಒಂದು ಪ್ರದೇಶದ ಬೇಡಿಕೆಗೆ ಅನುಗುಣವಾಗಿ ಕೃಷಿ ಪ್ರದೇಶದಲ್ಲಿ ಅನೇಕ ಬೆಳೆಗಳನ್ನು ಬೆಳೆಯಲಾಗುತ್ತದೆ. ಸಂಪೂರ್ಣವಾಗಿ ಒಂದು ಪ್ರದೇಶದಲ್ಲಿ ಒಂದೇ ಬೆಳೆಯನ್ನು ಬೆಳೆಯುವುದು ಕಂಡುಬರುವುದಿಲ್ಲ. ಯಾವುದೇ ಒಂದು ಪ್ರದೇಶದಲ್ಲಿ ಕೃಷಿಯೋಜನೆಗಳನ್ನು ಕೈಗೊಳ್ಳಲು ಏಕಬೆಳೆ ಹಂಚಿಕೆಯ ನಕ್ಷೆಯು ಅನುಕೂಲಕರವಾಗಿರುತ್ತದೆ. ಅಲ್ಲದೆ ವಿವಿಧ ಬೆಳೆಗಳ ಹಂಚಿಕೆಯನ್ನು ತಿಳಿಯುವುದು ಅಷ್ಟೇ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಉದಾ: ಭಾರತದಲ್ಲಿ ಬತ್ತ ಮತ್ತು ಗೋದಿ ಬೆಳೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಆದರೆ ಬತ್ತ ಬೆಳೆಯುವ ಪ್ರದೇಶದಲ್ಲಿ ಗೋದಿಯನ್ನು ಉತ್ಪಾದಿಸಲಾಗುತ್ತಿದೆ. ಹಾಗೂ ಗೋದಿ ಬೆಳೆಯುವ ಪ್ರದೇಶದಲ್ಲಿ ಇತರೆ ದ್ವಿದಳ ಧಾನ್ಯ, ಕಾಳುಗಳು, ಜೋಳ, ಸಜ್ಜೆ, ನವಣೆ, ಸಾಸುವೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಏಕ ಬೆಳೆಯ ನಕ್ಷೆಗೆ ಅನುಗುಣವಾಗಿ ಯೋಜನೆಯನ್ನು ಕೈಗೊಂಡರೆ ಅದು ಸಂಪೂರ್ಣವಾಗಿ ಕೃಷಿ ಅಭಿವೃದ್ಧಿಗೆ ಸಹಾಯಕವಾಗುವುದಿಲ್ಲ. ಅದುದರಿಂದ ಈ ಪ್ರಾದೇಶಿಕ ಬೆಳೆಗಳ ಸಮೂಹವು ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಈ ಬೆಳೆಗಳ ಸಮೂಹ ಎಂಬ ವಿಷಯಕ್ಕೆ ಭೂಗೋಳವಿಜ್ಞಾನಿಗಳು ಮತ್ತು ಕೃಷಿ ಭೂ ಬಳಕೆಯ ಯೋಜನಾಕಾರರು ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದಾರೆ. ಅಲ್ಲದೆ ಸಣ್ಣಸಣ್ಣ ಭೂ ಹಿಡುವಳಿಗಳಲ್ಲಿ ಬೆಳೆಗಳ ಸಮೂಹವನ್ನು ಗುರುತಿಸುವುದರ ಜೊತೆಗೆ ಒಂದು ಪ್ರದೇಶ ಹಾಗೂ ದೇಶದ ಬೆಳೆಗಳ ಸಮೂಹದ ನಕ್ಷೆಗಳನ್ನು ತಯಾರಿಸಲಾಗುತ್ತಿದೆ.

ಬೆಳೆಗಳ ಸಮೂಹವನ್ನು ಗುರುತಿಸಲು ಅನೇಕ ವಿಧಾನಗಳಿವೆ. ಅವುಗಳಲ್ಲಿ ಮಧ್ಯಸ್ಥಿಕೆಯ ಆಯ್ಕೆ ವಿಧಾನದಲ್ಲಿ ಒಂದು ಪ್ರದೇಶದಲ್ಲಿ ಉತ್ಪಾದಿಸಲ್ಪಡುವ ಪ್ರಮುಖ 3 ಬೆಳೆಗಳನ್ನು ಆಯ್ಕೆಮಾಡಿ ಯಾವುದೇ ಸಂಖ್ಯಾಶಾಸ್ತ್ರದ ಸಹಾಯ ಪಡೆಯದೆ ಪ್ರದೇಶಗಳನ್ನು ರಚಿಸುವುದಾಗಿದೆ. ಮತ್ತೊಂದು ಸಂಖ್ಯಾಶಾಸ್ತ್ರದ ಸಹಾಯದಿಂದ ಅನೇಕ ಅಂಶಗಳನ್ನು ಕ್ರೋಡೀಕರಿಸಿ ಪರಿಮಾಣಾತ್ಮಕವಾಗಿ ರಚಿಸುವುದಾಗಿದೆ. ಇಂದು ಈ ಎರಡೂ ವಿಧಾನಗಳ ಸಹಾಯದಿಂದ ಪ್ರದೇಶಗಳ ಬೆಳೆಗಳ ಸಮೂಹ ಗುರುತಿಸಲಾಗುತ್ತಿದೆ. ಇದರಿಂದ ಆ ಪ್ರದೇಶದಲ್ಲಿ ಕೃಷಿ ಯೋಜನೆಗಳನ್ನು ಕೈಗೊಳ್ಳಲು ಅತ್ಯಂತ ಸಹಾಯಕವಾಗಿದೆ. (ಎಸ್.ಎಚ್.)

**ಬೆಳವಣಿಗೆಯ ಪರಿಕಲ್ಪನೆ:** ಆರ್ಥಿಕ ಬೆಳವಣಿಗೆ ಹಾಗೂ ಆರ್ಥಿಕ ಅಭಿವೃದ್ಧಿಗೂ ಸಂಬಂಧವಿದ್ದರೂ ಇವೆರಡರ ನಡುವೆ ವ್ಯತ್ಯಾಸವಿದೆ. ಇಲ್ಲಿ ಆರ್ಥಿಕ ಬೆಳವಣಿಗೆಯು ಸಾಮಾನ್ಯವಾಗಿ ಒಂದು ದೇಶದ ರಾಷ್ಟ್ರೀಯ ವರಮಾನದ ಹೆಚ್ಚುವಿಕೆಯನ್ನು ಸೂಚಿಸುತ್ತದೆ. ಆ ದೇಶದ ಆರ್ಥಿಕತೆಯಲ್ಲಿ ಎಲ್ಲಾ ಉತ್ಪಾದನಾ ಘಟಕಗಳು ಬೆಳವಣಿಗೆಯನ್ನು ಹೊಂದುವುದರಿಂದ ರಾಷ್ಟ್ರೀಯ ವರಮಾನ ಹೆಚ್ಚುತ್ತದೆ. ಅಭಿವೃದ್ಧಿ ಆ ದೇಶದಲ್ಲಿ ಆಡಳಿತಾತ್ಮಕವಾಗಿ, ಸಾಮಾಜಿಕವಾಗಿ ಗುಣಾತ್ಮಕ ಬದಲಾವಣೆಗಳಾಗಿ ಜನರ ಅಸಮಾನತೆ, ಬಡತನವನ್ನು ನಿವಾರಣೆ ಮಾಡುವುದೇ ಆಗಿದೆ.

ಆರ್ಥಿಕ ಬೆಳವಣಿಗೆ ಒಂದು ರೀತಿಯ ಜನ ಸಂಬಂಧ ಉತ್ಪಾದನಾ ಅಂಗ (ಭೂಮಿ, ಬಂಡವಾಳ, ಕಾರ್ಮಿಕರು ಇತ್ಯಾದಿ)ಗಳ ಬೆಳವಣಿಗೆ ದರದಲ್ಲಿ ಹೆಚ್ಚಿನ ಬೆಳವಣಿಗೆ. ಇದರಿಂದ ದೇಶದ ಆಂತರಿಕ ಆರ್ಥಿಕತೆಯಲ್ಲಿ ಉತ್ಪಾದನೆ ಹೆಚ್ಚಾಗಿ ವ್ಯಾಪಾರ ವಹಿವಾಟು ಮತ್ತು ವಸ್ತು / ಸೇವೆಗಳ ನಿರ್ಯಾತದಲ್ಲಿ ಸತತವಾಗಿ ಹೆಚ್ಚಳವನ್ನು ಸೂಚಿಸುತ್ತದೆ. ವಸ್ತು, ಸೇವೆಗಳ ಹೆಚ್ಚಳ ದೇಶದ ಆರ್ಥಿಕತೆಯನ್ನು ಬೆಳವಣಿಗೆಯ ಹಾದಿಯಲ್ಲಿ ಒಯ್ದಾಗ ಜನರಿಗೆ ವಸ್ತುಗಳು ವಿಪುಲವಾಗಿ ದೊರೆಯುತ್ತವೆ ಹಾಗೂ ವಿವಿಧ ಐಷಾರಾಮದ ವಸ್ತುಗಳು ಮಧ್ಯಮವರ್ಗ ಹಾಗೂ ಆರ್ಥಿಕತೆಯ ತಳವರ್ಗದವರಿಗೆ ಲಭಿಸಲಾರಂಬಿಸುತ್ತವೆ. ಉದಾ: ಭಾರತ ಮತ್ತು ಚೀನದೇಶಗಳಲ್ಲಿ 2000ದಿಂದೀಚೆಗೆ ದೂರದರ್ಶನ, ರೆಫ್ರಿಜಿರೇಟರ್, ವಿದ್ಯುತ್ ಉಪಕರಣಗಳು, ಗೃಹೋಪಯೋಗಿ ವಸ್ತುಗಳು, ವಿದ್ಯುತ್, ಮನರಂಜನೆಯ ವಸ್ತುಗಳು, ಮೋಟಾರು ವಾಹನಗಳು ಇತ್ಯಾದಿ ವಿಪುಲವಾಗಿ ಉತ್ಪಾದನೆಯಾಗಿ, ನಿರ್ಯಾತ ಹಾಗೂ ಆಂತರಿಕ ಬಳಕೆಯಲ್ಲಿ ಹೆಚ್ಚಳವನ್ನು ಕಾಣುತ್ತಿವೆ. ಇದು ಬೆಳವಣಿಗೆಯ ಧನಾತ್ಮಕ ಪರಿಣಾಮ.

ಆದರೆ ಈ ಬಗೆಯ ಆರ್ಥಿಕ ಬೆಳವಣಿಗೆಯು ಸಮಾಜದ ಜನರಿಗೆ ವಿಪುಲ ಹಾಗೂ ವಿವಿಧ ಬಗೆಯ ಸೇವಾಸೌಲಭ್ಯಗಳನ್ನು ಒದಗಿಸಿಕೊಟ್ಟರೂ ಅದು ಇವುಗಳೊಂದಿಗೆ ಬರುವ ತನ್ನದೇ ಆದ ಕೆಲವು ಅಹಿತಕರ ಹಾಗೂ ಋಣಾತ್ಮಕ ಅಂಶಗಳನ್ನು ಹೊಂದಿರುತ್ತದೆ. ಅಂದರೆ ಒಂದು ಕಡೆ ದೇಶದ ಆರ್ಥಿಕ ಬೆಳವಣಿಗೆಯೊಂದಿಗೆ ಕೈಗಾರಿಕೆಗಳು ಬೆಳೆಯುತ್ತಿವೆ. ಅವುಗಳಿಂದ ಆಗುವ ಪರಿಸರ ಹಾನಿ (ವಾಯು, ಜಲ ನೆಲ ಮುಂತಾದವುಗಳ) ಗಳ ಜೊತೆಗೆ ಇದು ನಗರೀಕರಣಕ್ಕೆ ಅನುವುಮಾಡಿಕೊಟ್ಟು ಭಾರತದಂತಹ ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ನಗರೀಕರಣದ ಕೆಲವು ಸಾಮಾಜಿಕ ಸಮಸ್ಯೆಗಳನ್ನು ಸಹ ಹುಟ್ಟುಹಾಕುತ್ತದೆ. ಕುಟುಂಬಗಳ ಒಡೆಯುವಿಕೆ, ಮಾನಸಿಕ ಕಾಯಿಲೆಗಳ ಹೆಚ್ಚಳ, ಕೊಳಚೆ ಪ್ರದೇಶಗಳ ನಿರ್ಮಾಣ, ಕಳ್ಳತನ, ಹಿಂಸೆ ಮುಂತಾದುವು ಸಮಾಜದಲ್ಲಿ ಹೆಚ್ಚುವುದನ್ನು ಕಾಣುತ್ತೇವೆ.

ಒಟ್ಟಿನಲ್ಲಿ ಹೇಳುವುದಾದರೆ ಬೆಳವಣಿಗೆ ಆರ್ಥಿಕತೆಯಲ್ಲಿ ಹೆಚ್ಚಳ ಸೂಚಿಸಿದರೂ ಅದರೊಂದಿಗೆ ಬರುವ ನಗರೀಕರಣ, ಪರಿಸರ ಮಾಲಿನ್ಯಗಳು, ಸಮಾಜದಲ್ಲಿನ ನವೀನತೆಗಳು, ಜನರಲ್ಲಿ ವೈಯಕ್ತಿಕತೆ, ಐಶ್ವರ್ಯದ ಅಮಲನ್ನು ಹೆಚ್ಚಿಸುತ್ತವೆ ಹಾಗೂ ವ್ಯಕ್ತಿಗಳು, ತಮ್ಮ ಇತರೇ ಸಮಾಜದವರನ್ನು ನೋಡಿಕೊಳ್ಳುವ ರೀತಿಯಲ್ಲಿ ಬದಲಾವಣೆಯಾಗಿ ಪೂರ್ವ ಸಮಾಜದ ಕೆಲ ಒಳಿತಾದ ಅಂಶಗಳು ಕಡಿಮೆಯಾಗುತ್ತವೆ. (ಬಿ.ಇ.)

**ಬೆಳವಣಿಗೆಯ ಮಿತಿಗಳು :** 1972ರಲ್ಲಿ ಕ್ಲಬ್ ಆಫ್ ರೋಮ್ ಕಂಪ್ಯೂಟರ್ ಸಿಮ್ಯೂಲೇಷನ್ ಆಧರಿಸಿ ಪ್ರಕಟಿಸಿದ ಪುಸ್ತಕದ ಹೆಸರು (ಲಿಮಿಟ್ಸ್ ಟು ಗ್ರೋಥ್). ಇದು ಆರ್ಥಿಕ ಅಭಿವೃದ್ಧಿಗೆ ಒಂದು ಗರಿಷ್ಠ ಮಿತಿಯಾಗಿದೆ. ನಿರಂತರವಾದ ಜನಸಂಖ್ಯೆಯ ಬೆಳವಣಿಗೆ, ಕೈಗಾರಿಕಾಭಿವೃದ್ಧಿ, ಪ್ರಾಕೃತಿಕ ಸಂಪನ್ಮೂಲಗಳು ಮುಗಿದು ಹೋಗುವುದು

ಪರಿಸರ ಮಾಲಿನ್ಯ ಹಾಗೂ ಅದರ ನಾಶ–ಪರಿಣಾಮವಾಗಿ ಆಹಾರದ ಕೊರತೆ–ಇವುಗಳಿಂದ ಪೃಥ್ವಿಯು ವಿನಾಶದತ್ತ ಮುಂದುವರಿಯುತ್ತಿದೆಯೆಂದು ವಿವರಿಸಲಾಯಿತು. ಮಾಲ್ಥಸ್‌ನ ಸಿದ್ಧಾಂತದ ದೀರ್ಘ ಅವಧಿಯ ಅನಂತರ ಪ್ರಕಟಗೊಂಡ ನಿರಾಶಾವಾದದ ಪರಿಭಾವನೆ ಬೆಳವಣಿಗೆಯ ಮಿತಿಗಳು.

ಈ ಪರಿಭಾವನೆ ತೀವ್ರವಾಗಿ ಟೀಕೆಗೊಳಪಟ್ಟಿದೆ. ಆದರೆ ಇದು ಪ್ರಪಂಚದಾದ್ಯಂತ ಕುತೂಹಲ ಹಾಗೂ ಪರಿಸರದ ಬಗ್ಗೆ ಜಾಗೃತಿಯನ್ನುಂಟುಮಾಡಿ, ಪರಿಸರ ಮಾಲಿನ್ಯದ ಬಗ್ಗೆ ಎಚ್ಚರಿಕೆ ಮೂಡಿಸಿದೆ. ಅಲ್ಲದೆ ಹೆಚ್ಚುತ್ತಿರುವ ಉಷ್ಣಾಂಶದ ಹೆಚ್ಚಳ, ವಾಯುಗುಣದ ಬದಲಾವಣೆ ಮೊದಲಾದ ಪ್ರಕ್ರಿಯೆಗಳು ಬೆಳವಣಿಗೆಯ ಮಿತಿ ಪರಿಭಾವನೆಯ ನೈಜತೆಗಳನ್ನು ನಿರೂಪಿಸುವುದು. ಕ್ಲಬ್ ಆಫ್ ರೋಂ, 1992ರಲ್ಲಿ ಅಂದರೆ ಲಿಮಿಟ್ಸ್ ಟು ಗ್ರೋಥ್ ಪ್ರಕಟಗೊಂಡ ಎರಡು ದಶಕಗಳ ಅನಂತರ ಬಿಯಾಂಡ್ ದಿ ಲಿಮಿಟ್ಸ್ ಗ್ರಂಥವನ್ನು ಪ್ರಕಟಿಸಿದೆ. ಬೆಳವಣಿಗೆಯ ಮಿತಿ ಪರಿಭಾವನೆ ಸುಸ್ಥಿರ ಅಭಿವೃದ್ಧಿ ಪರಿಭಾವನೆಯ ಪ್ರತಿಪಾದನೆಗೆ ಮುಖ್ಯ ಹಿನ್ನಲೆ. (ಆರ್.ಎನ್.)

**ಬೆಳ್ತಂಗಡಿ:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕಿನ ವೇಣೂರು, ಬೆಳ್ತಂಗಡಿ ಮತ್ತು ಕೊಕ್ಕಡ ಇವು ಮೂರು ಹೋಬಳಿಗಳೂ 84 ಗ್ರಾಮಗಳೂ ಇವೆ. ಒಟ್ಟು ವಿಸ್ತೀರ್ಣ 1,375 ಚ.ಕಿಮೀ ಜನಸಂಖ್ಯೆ 246443.

ತಾಲ್ಲೂಕಿನ ಪೂರ್ವಭಾಗ ಮಲೆನಾಡು. ಪಶ್ಚಿಮ ಘಟ್ಟಗಳ ಕುದುರೆಮುಖ ಶ್ರೇಣಿ ದಕ್ಷಿಣೋತ್ತರವಾಗಿ ಹಬ್ಬಿದೆ. ಪೂರ್ವ ಗಡಿಯಲ್ಲಿ ಚಾರ್ಮಾಡಿಘಾಟ್ ಇದೆ. ಇದರಿಂದ ಚಿಕ್ಕಮಗಳೂರಿಗೆ ಸಂಬಂಧ ಕಲ್ಪಿತವಾಗಿದೆ. ನೇತ್ರಾವತಿ ನದಿ ಈ ತಾಲ್ಲೂಕಿನ ಪರ್ವತಶ್ರೇಣಿಯಲ್ಲಿ ಹುಟ್ಟಿ ಉತ್ತರದಿಂದ ದಕ್ಷಿಣಾಭಿಮುಖವಾಗಿಯೂ ಅನಂತರ ನೈರುತ್ಯಾಭಿಮುಖವಾಗಿಯೂ ಹರಿಯುತ್ತದೆ. ಹೆಚ್ಚು ಮಳೆಯಾಗುತ್ತದೆ. ವಾರ್ಷಿಕ ಸರಾಸರಿ ಮಳೆ 405 ಸೆಂಮೀ.

ಇಲ್ಲಿಯ ಘಟ್ಟದ ಭಾಗ ದಟ್ಟ ಅರಣ್ಯದಿಂದ ಕೂಡಿದೆ. ಅರಣ್ಯ ಪ್ರದೇಶದ ವಿಸ್ತೀರ್ಣ 56,411 ಹೆ. ಬೀಟೆ, ತೇಗ, ಮಾವು, ಹತ್ತಿ, ಕಿರಲ್ ಬೋಗಿ, ಹೊನ್ನೆ, ಸೀಗೆ ಮೊದಲಾದ ಮರಗಳೂ, ಮೆಣಸು, ಶುಂಠಿ, ಏಲಕ್ಕಿ, ದಾಲ್ಚಿನ್ನಿ, ಅಡಕೆ, ಬತ್ತ, ತೆಂಗು, ಗೋಡಂಬಿ ಇವು ಮುಖ್ಯ ಬೆಳೆಗಳು.

ತಾಲ್ಲೂಕಿನ ಕೇಂದ್ರವಾಗಿರುವ ಬೆಳ್ತಂಗಡಿ ಮಂಗಳೂರು–ಚಾರ್ಮಾಡಿ–ಕಡೂರು ರಾಜ್ಯ ಹೆದ್ದಾರಿಯಲ್ಲಿ ಮಂಗಳೂರಿನಿಂದ ಪೂರ್ವಕ್ಕೆ ಸು. 60 ಕಿಮೀ ದೂರದಲ್ಲಿದೆ. ಪುತ್ತೂರಿನಿಂದ ಇಲ್ಲಿಗೆ 35 ಕಿಮೀ. ಜನಸಂಖ್ಯೆ 7302. ಬೆಳ್ತಂಗಡಿಯಿಂದ ಕಾರ್ಕಳ, ಮಂಗಳೂರು, ಚಿಕ್ಕಮಗಳೂರು, ಪುತ್ತೂರು ಈ ಸ್ಥಳಗಳಿಗೆ ರಸ್ತೆಗಳುಂಟು.

ಚಾರ್ಮಾಡಿ ಗ್ರಾಮ ಬೆಳ್ತಂಗಡಿಯ ಪೂರ್ವಕ್ಕೆ 19 ಕಿಮೀ ದೂರದಲ್ಲಿದೆ. ಉಜಿರೆ ಎಂಬಲ್ಲಿ ಕಾಲೇಜು, ಹೈಸ್ಕೂಲು, ಗುರುಕುಲಗಳಿವೆ. ಇದು ಧರ್ಮಸ್ಥಳದ ಬಾಗಿಲಿನಂತಿದೆ. ಬೆಳ್ತಂಗಡಿಯಿಂದ 16 ಕಿಮೀ ದೂರದಲ್ಲಿರುವ ಧರ್ಮಸ್ಥಳ ಒಂದು ಸುಪ್ರಸಿದ್ಧ ಪುಣ್ಯಕ್ಷೇತ್ರ. ಇಲ್ಲಿ ಮಂಜುನಾಥ ದೇವಾಲಯವಿದೆ. (ಎಂ.ವಿ.)

**ಬೆಳ್ಳಿ:** ಮಾನವ ಉಪಯೋಗಿಸಿದ ಮೊಟ್ಟಮೊದಲ ಲೋಹಗಳಲ್ಲಿ ಒಂದು. ಇದು ಹೆಚ್ಚು ಸಲ್ಫೈಟ್ ರೂಪದಲ್ಲಿಯೂ ಸೀಸದೊಡನೆ ಸಂಯೋಜಿತವಾದ ರೂಪದಲ್ಲಿಯೂ ದೊರೆಯುತ್ತದೆ. ಇದು ಭೂಮಿಯಲ್ಲಿ ವ್ಯಾಪಕವಾಗಿ ಪಸರಿಸಿಕೊಂಡಿಲ್ಲ. ಅಧಿಕ ಪ್ರಮಾಣದಲ್ಲಿಯೂ ಇಲ್ಲ. ಆದ್ದರಿಂದ ಇದರ ಉತ್ಪಾದನೆ ಮತ್ತು ಬಳಕೆ ಕಡಿಮೆ. ಅಮೂಲ್ಯ ಲೋಹಗಳಲ್ಲಿ ಚಿನ್ನದ ಅನಂತರ ಬೆಳ್ಳಿಗೆ ಎರಡನೆಯ ಸ್ಥಾನ. ಬೆಳ್ಳಿ ಬೆಳ್ಳಗೆ ಹೊಳೆಯುವ ಲೋಹ. ಅಪರೂಪದ ವಸ್ತು, ಕರಕುಶಲ ಕೆಲಸಕ್ಕೆ ಉಪಯುಕ್ತ ಲೋಹ. ಆದ್ದರಿಂದ ಆಭರಣ ಮಾಡಲು, ನಾಣ್ಯ ಟಂಕಿಸಲು, ಬೆಲೆಯುಳ್ಳ ಪಾತ್ರೆ ಮಾಡಲು ಮತ್ತು ಆಪದ್ಧನವಾಗಿ ಸಂಗ್ರಹಿಸಿಡಲು ಯೋಗ್ಯ ಲೋಹವಾಗಿದೆ. ಶುದ್ಧ ಬೆಳ್ಳಿ ಬಲು ಮೃದು. ಇದಕ್ಕೆ ಶೇ. 10 ಭಾಗಕ್ಕಿಂತ ಕಡಿಮೆ ಪ್ರಮಾಣದಲ್ಲಿ, ತಾಮ್ರ ಬೆರಸಿ ಹದಮಾಡಲಾಗುವುದು. ಇದನ್ನು ಚಿನ್ನದಂತೆ ತಂತಿಯಾಗಿ ಎಳೆಯಬಹುದು. ಬೆಳ್ಳಿಯನ್ನು ವೈದ್ಯಕೀಯ ಕ್ಷೇತ್ರದಲ್ಲೂ ಬಳಸಲಾಗುತ್ತದೆ.

ಚಿನ್ನದಂತೆ ಬೆಳ್ಳಿಯೂ ಕೂಡ ಸಹಜ ಸ್ಥಿತಿಯಲ್ಲೂ ದೊರೆಯುತ್ತದೆ. ಆದರೆ ಆರ್ಥಿಕವಾಗಿ ಪ್ರಾಮುಖ್ಯವಾದ ಬೆಳ್ಳಿ ನಿಕ್ಷೇಪಗಳಿರುವುದು ಅತಿ ವಿರಳ. ಚಿನ್ನ, ತಾಮ್ರ, ಸೀಸ ಮತ್ತು ಸತು ಅದಿರುಗಳನ್ನು ಸಂಸ್ಕರಿಸುವಾಗ ಬೆಳ್ಳಿಯನ್ನು ಉಪಉತ್ಪನ್ನವಾಗಿ ಪಡೆಯಲಾಗುತ್ತಿದೆ. ಪ್ರಪಂಚದಲ್ಲಿ ಅನೇಕ ದೇಶಗಳಲ್ಲಿ ಬೆಳ್ಳಿಯನ್ನು ಉತ್ಪಾದಿಸಲಾಗುತ್ತದೆ. 1950ರ ತನಕ ಉತ್ಪಾದನೆಯಲ್ಲಿ ಮೆಕ್ಸಿಕೊ ದೇಶಕ್ಕೆ ಪ್ರಥಮ ಸ್ಥಾನವಿತ್ತು. ತರುವಾಯ ಅಮೆರಿಕ, ಕೆನಡ ದೇಶಗಳು ಮೆಕ್ಸಿಕೊಗಿಂತ ಮುಂದಾದವು. ಬೆಳ್ಳಿಯನ್ನು ಉತ್ಪಾದಿಸುವ ಇತರ ಮುಖ್ಯ ರಾಷ್ಟ್ರಗಳೆಂದರೆ, ಪೆರು, ರಷ್ಯ, ಆಸ್ಟ್ರೇಲಿಯ, ಬೊಲಿವಿಯ, ಜರ್ಮನಿ ಮತ್ತು ಸ್ವೀಡನ್.

ಭಾರತ ಸ್ವಲ್ಪ ಪ್ರಮಾಣದಲ್ಲಿ ಬೆಳ್ಳಿ ಉತ್ಪಾದಿಸುತ್ತದೆ. ಭಾರತದಲ್ಲಿ ಸು. 1600 ದ.ಲ. ಟನ್ನುಗಳಷ್ಟು ಬೆಳ್ಳಿ ಅದಿರಿದೆ ಎಂದು ಅಂದಾಜು ಮಾಡಲಾಗಿದೆ. ಮುಖ್ಯವಾಗಿ ಆಂಧ್ರಪ್ರದೇಶ, ಕರ್ನಾಟಕ, ಮೇಘಾಲಯ, ಒರಿಸ್ಸ, ರಾಜಸ್ತಾನ, ಸಿಕ್ಕಿಂ, ತಮಿಳುನಾಡು, ಉತ್ತರ ಪ್ರದೇಶಗಳಲ್ಲಿ ಹಂಚಿಕೆಯಾಗಿದೆ. ಭಾರತದಲ್ಲಿ ಬೆಳ್ಳಿಯನ್ನು ಉತ್ಪಾದಿಸಲು ಯಾವ ಪ್ರತ್ಯೇಕ ಗಣಿ ಇಲ್ಲ. ಬೆಳ್ಳಿಯನ್ನು ಉಪ ಉತ್ಪನ್ನವಾಗಿ ಉತ್ಪಾದಿಸುತ್ತಿರುವ ಘಟಕಗಳಿವೆ.

ಭಾರತದ ಬೆಳ್ಳಿಯ ಉತ್ಪಾದನೆ. 53,365 ಕಿಗ್ರಾಂ ಗಳು (1998–99). ಬೆಳ್ಳಿಯನ್ನು ಉತ್ಪಾದಿಸುವ ಯಾವುದೇ ಪ್ರಮುಖ ರಾಷ್ಟ್ರವಿಲ್ಲವಾದ್ದರಿಂದ ಬೆಳ್ಳಿಯ ಅಂತಾರಾಷ್ಟ್ರೀಯ ವ್ಯಾಪಾರ ಹೆಚ್ಚಿನ ಮಟ್ಟದಲ್ಲಿ ನಡೆಯುವುದಿಲ್ಲ. (ಬಿ.ಸಿ.ಕೆ.)

**ಬೇಲೂರು:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಆಡಳಿತ ಕೇಂದ್ರ ಪಟ್ಟಣ. ಬೇಲೂರು, ಬಿಕ್ಕೋಡು, ಅರೆಹಳ್ಳಿ, ಮಾದಹಳ್ಳಿ ಮತ್ತು ಹಳೇಬೀಡು ಈ ತಾಲ್ಲೂಕಿನ ಹೋಬಳಿಗಳು. 383 ಹಳ್ಳಿಗಳನ್ನೊಳಗೊಂಡಿದೆ. ಒಟ್ಟು ವಿಸ್ತೀರ್ಣ 840.2 ಚ.ಕಿಮೀ. ಜನಸಂಖ್ಯೆ 183080.

ಬೇಲೂರು ತಾಲ್ಲೂಕು ಮಲೆನಾಡ ಪ್ರದೇಶಕ್ಕೆ ಸೇರಿದ್ದು, ಸಮುದ್ರಮಟ್ಟದಿಂದ ಸು. 968 ಮೀ ಎತ್ತರದಲ್ಲಿದೆ. ಇದರ ಪೂರ್ವಭಾಗ ಅರೆಮಲೆನಾಡು ಪ್ರದೇಶ. ಪಶ್ಚಿಮ ಮತ್ತು ಉತ್ತರ ಭಾಗ ಗುಡ್ಡ ಪ್ರದೇಶವಾಗಿದ್ದು, ಸ್ವಲ್ಪ ಭಾಗ ಕಾಡುಪ್ರದೇಶವೂ ಉಂಟು. ಇಲ್ಲಿಯ ಮುಖ್ಯ ನದಿ ಯಗಚಿ. ಇದು ತಾಲ್ಲೂಕಿನ ಮಧ್ಯದಲ್ಲಿ ವಾಯವ್ಯದಿಂದ ಆಗ್ನೇಯಕ್ಕೆ ಹರಿಯುತ್ತದೆ. ಹೇಮಾವತಿ ನದಿ ತಾಲ್ಲೂಕಿನ ನೈರುತ್ಯದಲ್ಲಿ ಸ್ವಲ್ಪದೂರ ಸಕಲೇಶಪುರ ತಾಲ್ಲೂಕನ್ನು ಬೇಲೂರು ತಾಲ್ಲೂಕಿನಿಂದ ಬೇರ್ಪಡಿಸುವ ಗಡಿಯಾಗಿ ಹರಿಯುತ್ತಿದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 103 ಸೆಂಮೀ. ಬೇಲೂರು ತಾಲ್ಲೂಕಿನಲ್ಲಿ 67 ದೊಡ್ಡ ಕೆರೆಗಳೂ 126 ಬಾವಿಗಳೂ ಇವೆ. ಜಿಲ್ಲೆಯಲ್ಲೆ ಹೆಚ್ಚು ನೀರಾವರಿ ಪ್ರದೇಶ ಈ ತಾಲ್ಲೂಕಿಗೆ ಸೇರಿದ್ದು. ಇಲ್ಲಿಯ ಕೆಂಪು ಮತ್ತು ಹಳದಿ ಮಣ್ಣಿನ ಭೂಮಿಯಲ್ಲಿ ಬತ್ತ, ಕಬ್ಬು, ಕಾಫಿ, ಅಡಕೆ, ಏಲಕ್ಕಿ, ಮೆಣಸು ಇವುಗಳೊಂದಿಗೆ ರಾಗಿ, ನೆಲಗಡಲೆ ಮುಂತಾದವನ್ನೂ ಬೆಳೆಸುತ್ತಾರೆ. ತಾಲ್ಲೂಕಿನ ಮುಖ್ಯ ಸ್ಥಳ ಹಳೇಬೀಡು.

ಬೇಲೂರು ಈ ತಾಲ್ಲೂಕಿನ ಆಡಳಿತಕೇಂದ್ರ ಪಟ್ಟಣ. ಯಗಚಿ ನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 20205. ಪುರಸಭೆಯ ಆಡಳಿತಕ್ಕೆ ಒಳಪಟ್ಟಿರುವ ಈ ಪಟ್ಟಣ ಅಂಚೆ, ದೂರವಾಣಿ, ಆಸ್ಪತ್ರೆ, ಶಾಲೆಗಳು, ರಕ್ಷಿತ ನೀರು ಸರಬರಾಜು, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಒಳಗೊಂಡಿದೆ. ಬೇಲೂರು ಕರ್ನಾಟಕ ರಾಜ್ಯದ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಒಂದು. ಬೇಲೂರಿನ ಮುಖ್ಯ ಆಕರ್ಷಣೆಯೆಂದರೆ ಹೊಯ್ಸಳರ ಕಾಲದ ಚೆನ್ನಕೇಶವ ದೇವಾಲಯ. ಇದು ಹೊಯ್ಸಳ ಶೈಲಿಯ ಸುಂದರ ಕಟ್ಟಡಗಳಲ್ಲಿ ಒಂದು. ದೇವಾಲಯದ ಉತ್ತರ ಗೋಡೆಯ ಮೇಲೆ ಬಾಗಿಲ ಪೂರ್ವದ ಬಳಿಯ ಒಂದು ಶಾಸನ ಮತ್ತು ಅದೇ ದೇವಾಲಯದ ಒಂದು ತಾಮ್ರ ಶಾಸನದಿಂದ ತಲಕಾಡುಗೊಂಡ ವಿಷ್ಣುವರ್ಧನ ಹೇವಿಳಂಬಿ ಸಂವತ್ಸರದ ಚೈತ್ರ ಶುದ್ಧ ಪಂಚಮಿ ಶನಿವಾರದಂದು (1117 ಮಾರ್ಚ್ 20) ಈ ದೇವಾಲಯವನ್ನು ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ. ದೇವಾಲಯದ ಮೂಲವಿಗ್ರಹ ಪೀಠದ ಮೇಲಿನ ಶಾಸನದಲ್ಲಿ ದೇವರನ್ನು ವಿಜಯನಾರಾಯಣನೆಂದು ಕರೆಯಲಾಗಿದೆ. ದೇವಾಲಯ ಗರ್ಭಗುಡಿಯಿಂದ ಕೂಡಿ ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದೆ. ಈ ಗುಡಿಯ ಸುತ್ತ ಎತ್ತರವಾದ ಪ್ರಾಕಾರಗೋಡೆಗಳಿವೆ. ಕೇಶವ ದೇವಾಲಯದ ಬಲಗಡೆಗೆ ಸ್ವಲ್ಪ ಹಿಂದೆ ಕಪ್ಪೆಚೆನ್ನಿಗರಾಯನ ಗುಡಿಯಿದೆ. ದೇವಾಲಯದ ನೇರ ಹಿಂಭಾಗದಲ್ಲಿ ವೀರನಾರಾಯಣ ಗುಡಿಯಿದೆ. ಹೊಯ್ಸಳ ಶಿಲ್ಪಿಗಳು ತಮ್ಮ ಶಿಲ್ಪಕಲಾ ಕೌಶಲವನ್ನು ಈ ದೇವಾಲಯಗಳ ಮುಖಾಂತರ ತೋರಿಸಿದ್ದಾರೆ. ಇಲ್ಲಿಯ ಒಂದೊಂದು ವಿಗ್ರಹವೂ ಒಂದೊಂದು ಸುಂದರ ಕಲಾಕೃತಿ. (ಕೆ.ಆರ್.)

**ಬೈಕಲ್ ಸರೋವರ:** ದಕ್ಷಿಣ ಸೈಬೀರಿಯದಲ್ಲಿರುವ ಸಿಹಿನೀರಿನ ಒಂದು ದೊಡ್ಡ ಸರೋವರ. ರಷ್ಯ ದೇಶದ ಬುರ‍್ಯಾತ್ ಪ್ರಾಂತ್ಯದಲ್ಲಿದೆ. ಇದರ ವಿಸ್ತಾರ 31,500 ಚ.ಕಿಮೀ. ಇದ್ದು ಪ್ರಪಂಚದ ಸರೋವರಗಳ ಪೈಕಿ ವಿಸ್ತಾರದಲ್ಲಿ ಎಂಟನೆಯದು. ನೈರುತ್ಯ ಈಶಾನ್ಯಾಭಿಮುಖವಾಗಿ ವ್ಯಾಪಿಸಿದೆ. ಉದ್ದ 636 ಕಿಮೀ. ಸರಾಸರಿ ಅಗಲ 48 ಕಿಮೀ. ಗರಿಷ್ಠ ಆಳ 1620 ಮೀ. ಪ್ರಪಂಚದ ಅತ್ಯಂತ ಆಳದ ಸರೋವರವಿದು. ಭೂಮಿಯ ಮೇಲಿರುವ ಒಟ್ಟು ಸಿಹಿ ನೀರಿನ ಶೇ. 20 ಭಾಗ ಈ ಒಂದು ಸರೋವರದಲ್ಲೇ ಇದೆ ಎನ್ನಲಾಗುತ್ತದೆ.

ಇದರ ದಕ್ಷಿಣದಲ್ಲಿ ಏಷ್ಯದ ಅತ್ಯುನ್ನತ ಪ್ರಸ್ಥಭೂಮಿಯೂ ಸುತ್ತ ಪರ್ವತಗಳೂ ಇವೆ. ಪರ್ವತಗಳಿಂದ ಹರಿದುಬರುವ ಸು. 336 ನದಿ ತೊರೆಗಳು ಇಲ್ಲಿವೆ. ಇವುಗಳಲ್ಲಿ ಮುಖ್ಯವಾಗಿ ಸೆಲೆಂಗ, ಬಾರ್‌ಗುಜನ್ ಮತ್ತು ಮೇಲಣ ಅಂಗಾರ ಮೊದಲಾದ ನದಿಗಳಿಂದಲೂ ನೀರು ಪಡೆಯುತ್ತದೆ. ಸಾಮಾನ್ಯವಾಗಿ ಡಿಸೆಂಬರ್ ಅಂತ್ಯದಲ್ಲಿ ಅಥವಾ ಜನವರಿ ಆದಿಯಲ್ಲಿ ಹೆಪ್ಪುಗಟ್ಟುವ ಈ ಸರೋವರದ ನೀರು ಮೇ ಉತ್ತರಾರ್ಧದ ತನಕವೂ ಘನೀಭವಿಸಿರುತ್ತದೆ. ಸರೋವರದ ಸುತ್ತಣ ವಾಯುಗುಣ ಬೇಸಗೆ ಕಾಲದಲ್ಲಿ ತಂಪಾಗಿಯೂ ಚಳಿಗಾಲದಲ್ಲಿ ಬೆಚ್ಚಗೂ ಇರುತ್ತದೆ.

ಈ ಸರೋವರ ವಿಶಿಷ್ಟವಾದ ಸಸ್ಯ ಮತ್ತು ಪ್ರಾಣಿ ಸಂಪತ್ತಿಗೆ ಹೆಸರಾಗಿದೆ. ಜುರಾಸಿಕ್ ಯುಗದಲ್ಲಿಯೇ ಇದ್ದಿತೆಂದು ಊಹಿಸಬಹುದಾದ ಹಾಗೂ ಮಯೋಸೀನ್ ಯುಗದಲ್ಲಿ ಇದ್ದ ಅತ್ಯಂತ ಪ್ರಾಚೀನ ಸರೋವರವಾಗಿದ್ದು ಇದರಲ್ಲಿ ಪ್ರಪಂಚದ ಜಲಚರ ಪ್ರಾಣಿಗಳ ವರ್ಗದಲ್ಲಿ ಅರ್ಧದಷ್ಟು ಇವೆ. ಸು. 1700 ಬಗೆಯ ವಿಶಿಷ್ಟ ಸಸ್ಯ ಮತ್ತು ಪ್ರಾಣಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1083 ಬಗೆಯವು ಪ್ರಪಂಚದ ಬೇರೆಲ್ಲೂ ಸಿಗದಂಥವು. ಇವುಗಳಲ್ಲಿ 184 ರಷ್ಟು ವಿಶಿಷ್ಟವಾದ ಜೀವಜಾತಿಗಳನ್ನು ಈ ಸರೋವರದಲ್ಲಿ ಮಾತ್ರ ಕಾಣಲು ಸಾಧ್ಯ. ಮುಖ್ಯ ಆಹಾರವಾಗಿ ಉಪಯೋಗಿಸಲಾಗುವ ಬೈಕಲ್ ಬಿಳಿಮೀನು ಹಾಗೂ ಇನ್ನಿತರ ಮೀನುಗಳು ಬೈಕಲ್ ಸೀಲ್ ಪ್ರಾಣಿಗಳು ಇರುವ ಈ ಸರೋವರದಲ್ಲಿ ಅನೇಕ ವಿಶಿಷ್ಟ ಜೀವರಾಶಿಗಳನ್ನೂ ಕಾಣಬಹುದು.

1643ರಲ್ಲಿ ಮೊತ್ತ ಮೊದಲು ಅನ್ವೇಷಿಸಲಾದ ಬೈಕಲ್ ಸರೋವರದಲ್ಲಿ 1844ರಿಂದ ಯಾನಕ್ಕಾಗಿ ಉಗಿಹಡಗುಗಳನ್ನು ಬಳಸಲಾಗುತ್ತಿದೆ. ನೀರು ಹೆಪ್ಪುಗಟ್ಟಿರುವಾಗ ಸರೋವರ ಯಾನಕ್ಕೆ ಸ್ಲೆಜ್ ಗಾಡಿಗಳನ್ನೂ ಬಳಸಲಾಗುತ್ತದೆ. ಅನಿರೀಕ್ಷಿತ ಬಿರುಗಾಳಿಗಳಿಂದಾಗಿ ಮತ್ತು ಉತ್ತಮ ರೇವುಗಳಿಲ್ಲದಿರುವುದರಿಂದ ಸರೋವರ ಜಲಯಾನಕ್ಕೆ ಅಡಚಣೆಯಿದ್ದರೂ ಸರೋವರದ ಸುತ್ತಲ ಕೆಲವು ಪಟ್ಟಣಗಳಿಗೆ ಹಡಗು ಸಂಪರ್ಕವುಂಟು. ಟ್ರಾನ್ಸ್ ಸೈಬೀರಿಯನ್ ರೈಲು ಹಾಗೂ ಮೋಟಾರು ದಾರಿ ಈ ಸರೋವರದ ದಕ್ಷಿಣಭಾಗದಲ್ಲಿ ಹಾದು ಹೋಗಿವೆ. ಈ ಸರೋವರ ಓಲ್ಕನ್ ಎಂಬ ದೊಡ್ಡ ದ್ವೀಪ ಸಹಿತ ಒಟ್ಟು 18 ದ್ವೀಪಗಳನ್ನೊಳಗೊಂಡಿದೆ.

(ಸಿ.ಜಿ.ಕೆ.)

**ಬೈಲಹೊಂಗಲ:** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ ಪಟ್ಟಣ. ಹಿಂದಿನ ಸಂಪಗಾಂವ ತಾಲ್ಲೂಕು ಈಗ ಈ ಹೆಸರಿನಲ್ಲಿ ರಚಿತವಾಗಿದೆ. ಈ ತಾಲ್ಲೂಕನ್ನು ಉತ್ತರದಲ್ಲಿ ಗೋಕಾಕ, ಪೂರ್ವದಲ್ಲಿ ಪರಸಗಡ, ದಕ್ಷಿಣದಲ್ಲಿ ಧಾರವಾಡ, ಪಶ್ಚಿಮದಲ್ಲಿ ಖಾನಾಪುರ ಮತ್ತು ಬೆಳಗಾಂವಿ ತಾಲ್ಲೂಕುಗಳು ಸುತ್ತುವರಿದಿವೆ. 125 ಗ್ರಾಮಗಳಿವೆ. ವಿಸ್ತೀರ್ಣ 1,122.2 ಚ.ಕಿಮೀ ಜನಸಂಖ್ಯೆ 3,56,435. ಬೈಲಹೊಂಗಲ ತಾಲ್ಲೂಕು ಬೆಳಗಾಂವಿ ಜಿಲ್ಲೆಯ ಪಶ್ಚಿಮ ಘಟ್ಟಗಳ ಪೂರ್ವದ ಸೆರಗಿನಲ್ಲಿದ್ದು ಏರುತಗ್ಗುಗಳಿಂದ ಕೂಡಿದೆ. ತಾಲ್ಲೂಕಿನ ಬಹುಭಾಗ ಕಪ್ಪು ಮತ್ತು ಕೆಂಪು ಮಣ್ಣಿನದು. ಸಮಶೀತೋಷ್ಣ ವಾಯುಗುಣವಿದೆ. ವಾರ್ಷಿಕ ಸರಾಸರಿ ಮಳೆ 69 ಸೆಂಮೀ. ತಾಲ್ಲೂಕಿನ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ಮಲಪ್ರಭಾನದಿ ವೀರಾಪುರದ ಬಳಿ ತಾಲ್ಲೂಕನ್ನು ಪ್ರವೇಶಿಸಿ ಮುಗಟಖಾನ, ಹುಬ್ಬಳ್ಳಿ, ಕುರಗುಂದ, ವಕ್ಕುಂದಗಳ ಮೂಲಕ ಹರಿದು ಕರ್ವಿಕೊಪ್ಪ ಗ್ರಾಮದ ಹತ್ತಿರ ಹರಿನಾಲಾಕ್ಕೆ ಒಡ್ಡುಕಟ್ಟಿ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಅಲ್ಲದೆ ಮಲಪ್ರಭಾ ನದಿಯ ಎರಡೂ ದಂಡೆಗಳಲ್ಲಿ ರೈತರಿಂದ ವಿದ್ಯುತ್ ಪಂಪು ಇತ್ಯಾದಿಗಳಿಂದ ವ್ಯವಸಾಯಕ್ಕೆ ನೀರನ್ನು ಬಳಸಿಕೊಳ್ಳಲಾಗುತ್ತಿದೆ. ಈ ತಾಲ್ಲೂಕಿನಲ್ಲಿ ಬೆಳವಲನಾಡಿನ ಮುತ್ತಿನಂಥ ಜೋಳ, ಹತ್ತಿ, ತೈಲಬೀಜ ಇತ್ಯಾದಿಗಳನ್ನು ಬೆಳೆಯಲಾಗುತ್ತಿದೆ.

ಇಲ್ಲಿ ಕೈಗಾರಿಕಾಪ್ರಗತಿ ಪ್ರಾರಂಭ ದಿಶೆಯಲ್ಲಿದೆ. ಮುಗಟಖಾನ ಹುಬ್ಬಳ್ಳಿಯಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಇದೆ. ಸೇಂಗಾ ಎಣ್ಣೆ, ಚರ್ಮದ ವಸ್ತುಗಳು ಮತ್ತು ಹತ್ತಿ ಈ ತಾಲ್ಲೂಕಿನ ಇತರ ಮುಖ್ಯ ಉತ್ಪನ್ನಗಳು. ಇಲ್ಲಿಯ ವ್ಯವಸಾಯ ವಾಣಿಜ್ಯಾಭಿವೃದ್ಧಿಗೆ ಸಹಾಯಕವಾಗಿ ಕೃಷಿ, ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳಿವೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳೂ ಒಂದು ಕಾಲೇಜೂ ಇವೆ. ಆಸ್ಪತ್ರೆ, ಅಂಚೆ ತಂತಿ, ವಿದ್ಯುತ್ ಮುಂತಾದ ಸೌಲಭ್ಯಗಳುಂಟು. ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಐತಿಹಾಸಿಕ ಸ್ಥಳಗಳಾದ ಕಿತ್ತೂರು, ದೇಗಾಂವಿ ಮತ್ತು ಸಂಪಗಾಂವ ಪ್ರಸಿದ್ಧವಾದುವು.

ಬೈಲಹೊಂಗಲ ಈ ತಾಲ್ಲೂಕಿನ ಮುಖ್ಯ ಪಟ್ಟಣ ಮತ್ತು ಆಡಳಿತ ಕೇಂದ್ರ. ಬೆಳಗಾಂವಿಯ ಆಗ್ನೇಯಕ್ಕೆ 43 ಕಿಮೀ ದೂರದಲ್ಲಿ ಸವದತ್ತಿ ಮಾರ್ಗದಲ್ಲಿದೆ. ಪುರಸಭಾಡಳಿತಕ್ಕೆ ಸೇರಿರುವ ಈ ಪಟ್ಟಣದ ಜನಸಂಖ್ಯೆ 43,215. ಬೆಳಗಾಂವಿ, ಧಾರವಾಡ, ಸವದತ್ತಿಗಳಿಂದ ಇಲ್ಲಿಗೆ ಉತ್ತಮ ಮಾರ್ಗ ಸಂಪರ್ಕವಿದೆ. ವ್ಯಾಪಾರಕೇಂದ್ರ. ಇಲ್ಲಿ ಹತ್ತಿ ಎಕ್ಕುವ ಮತ್ತು ಎಣ್ಣೆ ತಯಾರಿಸುವ ಕಾರ್ಖಾನೆಗಳೂ ಕೃಷಿ ಸಂಶೋಧನ ಕೇಂದ್ರವೂ ಇವೆ. ಶಾಲಾ ಕಾಲೇಜುಗಳು, ಬ್ಯಾಂಕುಗಳು, ಸಹಕಾರ ಸಂಘಗಳು, ಆಸ್ಪತ್ರೆ, ಅಂಚೆ ತಂತಿ, ವಿದ್ಯುತ್ ಮುಂತಾದ ಸೌಲಭ್ಯಗಳಿವೆ. (ಎಂ.ಆರ್.ಎಚ್.)

**ಬೊಟ್ಸ್‌ವಾನ:** ದಕ್ಷಿಣ ಆಫ್ರಿಕದ ಒಂದು ಗಣರಾಜ್ಯ. $16^0$–$26^0$ ಮತ್ತು $20^0$–$28^0$ ಪೂ.ರೇ. ಗಳ ನಡುವೆ ಇದೆ. ವಿಸ್ತೀರ್ಣ 5,69,797 ಚ.ಕಿಮೀ. ಜನಸಂಖ್ಯೆ 1679000 (2002). ರಾಜಧಾನಿ ಗ್ಯಾಬರೋನೆ. ಜನಸಂಖ್ಯೆ 1640100 (2001).

ಭೌತಿಕ ಲಕ್ಷಣ: ಜಾಂಬೆಜಿಯ ಉಪನದಿಯಾದ ಚೋಬೆಯಿಂದ, ಆರೆಂಜ್‌ನ ಉಪನದಿಯಾದ ಮೊಲೋಪೊವರೆಗೆ ಉತ್ತರದಿಂದ ದಕ್ಷಿಣಕ್ಕೆ ಹಬ್ಬಿರುವ ಬೊಟ್ಸ್‌ವಾನದ ಬಹುಭಾಗ ಕಲಹರಿ ಅರೆ ಮರುಭೂಮಿ ಪ್ರದೇಶದಲ್ಲಿದೆ. ಸು. 1219 ಮೀ ಎತ್ತರದ ಪ್ರಸ್ಥಭೂಮಿಯಿಂದ ಈ ದೇಶ ಎರಡು ಭಾಗಗಳಾಗಿ ಒಡೆದಿದೆ. ಎರಡೂ ಬೇರೆ ಬೇರೆ ಜಲೋತ್ಸಾರಣ ವ್ಯವಸ್ಥೆಗಳಿಗೆ ಒಳಪಟ್ಟಿವೆ. ಈ ಪ್ರಸ್ಥಭೂಮಿಯ ಪೂರ್ವದಲ್ಲಿ ಹಲವು ತೊರೆಗಳು ಅಕ್ಷಾಂಶ ವೃತ್ತಗಳ ನೇರ ಹರಿದು ಮೆರಿಕೊ, ಲಿಂಪೋಪೊ ಮತ್ತು ನಟ್ವಾನಿ ನದಿಗಳನ್ನು ಸೇರುತ್ತವೆ. ಪ್ರಸ್ಥಭೂಮಿಯ ಪಶ್ಚಿಮಕ್ಕಿರುವ ಪ್ರದೇಶ ಮರಳಿನಿಂದ ಕೂಡಿದೆ.




ಬೊಟ್ಸ್‌ವಾನದ ಸರಾಸರಿ ಎತ್ತರ ಸು. 1006 ಮೀ. ಇದು ಬಹುತೇಕ ಮಟ್ಟಸ ನೆಲ. ಅಲ್ಲಲ್ಲಿ ಭೂಮಿ ಸ್ವಲ್ಪಮಟ್ಟಿಗೆ ಅಲೆಗಳಂತೆ ಏರಿಳಿಯುತ್ತದೆ. ಬೊಟ್ಸ್‌ವಾನದ ಮುಖ್ಯ ಜಲೋತ್ಸಾರಣ ವ್ಯವಸ್ಥೆಯನ್ನೊದಗಿಸುವ ನದಿ ಓಕವಾಂಗೊ. ಅಂಗೋಲದ ಎಲ್ಲೆಯಿಂದ ಆಗ್ನೇಯ ದಿಕ್ಕಿಗೆ ಹರಿಯುವ ಈ ನದಿ ಸು. 10,359 ಚ.ಕಿಮೀ ವಿಸ್ತೀರ್ಣದ ತಗ್ಗು ನೆಲದಲ್ಲಿ ಹರಡಿ ಮುಂದುವರಿದು ನ್ಗಾಮಿ ಸರೋವರವಾಗಿ ಪರಿಣಮಿಸುತ್ತದೆ. ಪ್ರವಾಹಕಾಲದಲ್ಲಿ ಇದು ಪೂರ್ವಾಭಿಮುಖವಾಗಿ ಹರಿದು ಬೊಟೆಟಿ ನದಿಯನ್ನು ಕೂಡಿ ದೇಶದ ಮಧ್ಯದಲ್ಲಿರುವ ಕ್ಸಾವ್ ಸರೋವರ ದಾಟಿ ಮುಂದೆ ಮಕ್ಗಾಡಿಕ್ ಗಾಡಿ ಪಾನ್ಸ್ ಸೇರುತ್ತದೆ. ದೇಶದ ದಕ್ಷಿಣದ ಗಡಿಗಳಾಗಿ ಹರಿಯುವ ಮೊಲೊಪೊ, ರಾಮಟ್ಲಬಾಮಾ ಚಿಕ್ಕ ತೊರೆಗಳು.

ಕಲಹರಿಯನ್ನು ಮರುಭೂಮಿ ಎನ್ನುವುದಕ್ಕಿಂತ ದಾಹದ ನೆಲ ಎನ್ನಬಹುದು. ಇಲ್ಲಿ ಹುಲ್ಲು ಕಳ್ಳಿ ಜಾತಿಯ ಗಿಡಗಳೂ ಇವೆ. ಇಲ್ಲಿ ಬೆಳೆಯುವ ಕರಬೂಜ ಹಣ್ಣುಗಳು ಆದಿವಾಸಿಗಳ ಆಹಾರ. ನೆಲದ ಅಡಿಯಲ್ಲಿ ಬಲು ಹತ್ತಿರದಲ್ಲೇ ನೀರು ಇರುವ ಎಡೆಗಳಲ್ಲಿ ಸಸ್ಯ ಸಂಪತ್ತಿದೆ. ಬೊಟ್ಸ್‌ವಾನದ ನೈಋತ್ಯ ಮೂಲೆಯಲ್ಲಿ ಮಾತ್ರ ಮರಳ ರಾಶಿಗಳಿವೆ. ಆ ಭಾಗ ನಿಜಕ್ಕೂ ಮರುಭೂಮಿಯೇ.

ವಾಯುಗುಣ: ಮಕರಸಂಕ್ರಾಂತಿವೃತ್ತ ಈ ದೇಶದ ದಕ್ಷಿಣ ಮಧ್ಯದಲ್ಲಿ ಹಾದು ಹೋಗುತ್ತದೆ. ಬೊಟ್ಸ್‌ವಾನದ್ದು ಸಮಶೀತೋಷ್ಣ ಹಾಗೂ ಉಪೋಷ್ಣ ವಾಯುಗುಣ. ಅಕ್ಟೋಬರ್‌ನಿಂದ ಮಾರ್ಚ್ ತನಕ ಬೇಸಗೆ. ಆಗ ಉಷ್ಣತೆ $38^0$ಸೆ ವರೆಗೂ ಏರುವುದುಂಟು. ಏಪ್ರಿಲ್‌ನಿಂದ ಸೆಪ್ಟೆಂಬರ್ ತನಕ ಚಳಿಗಾಲ. ಆ ಋತುವಿನಲ್ಲಿ ಆಗಾಗ ಮಂಜು ಬೀಳುತ್ತದೆ. ಉಷ್ಣತೆ $0^0$ಸೆ ಗಿಂತ ಕೆಳಕ್ಕೆ ಇಳಿಯಬಹುದು. ಆಗಸ್ಟ್‌ನಲ್ಲಿ ಕಲಹರಿಯಿಂದ ಬೀಸುವ ಬಿಸಿಗಾಳಿ ಮರಳನ್ನು ಹೊತ್ತು ತಂದು ದೇಶದಲ್ಲೆಲ್ಲ ಎರಚುತ್ತದೆ. ಬೊಟ್ಸ್‌ವಾನದ ಸರಾಸರಿ ವಾರ್ಷಿಕ ಮಳೆ ಸು. 46 ಸೆಂಮೀ. ಗರಿಷ್ಠ ಹಾಗೂ ಕನಿಷ್ಠ ಮಳೆಗಳು ಅನುಕ್ರಮವಾಗಿ ಉತ್ತರದಲ್ಲಿ 63 ಸೆಂಮೀ ಮತ್ತು ನೈರುತ್ಯದಲ್ಲಿ 13 ಸೆಂಮೀ ಅಥವಾ ಅದಕ್ಕಿಂತ ಕಡಿಮೆ. ಡಿಸೆಂಬರ್‌ನಿಂದ ಏಪ್ರಿಲ್ ಕೊನೆಯತನಕ ಮಳೆಗಾಲ. ಮಳೆ ಸಾಮಾನ್ಯವಾಗಿ ಧಾರಾಕಾರ. ಚಕ್ರೀಯವಾಗಿ ಬರಗಾಲಗಳು ಸಂಭವಿಸಿ, ಅವು ಹಲವು ವರ್ಷಗಳ ಕಾಲ ಮುಂದುವರಿಯಬಹುದು. ಅಭಾವ ಪರಿಸ್ಥಿತಿ ಬಹಳ ತೀವ್ರವಾಗಿರುತ್ತದೆ. 1965–66ರಲ್ಲಿ ಇಂಥ ಪರಿಸ್ಥಿತಿ ಬಂದಿತ್ತು.

ಸಸ್ಯ ಹಾಗೂ ಪ್ರಾಣಿ ಸಂಪತ್ತು: ದೇಶದ ಬಹುಭಾಗದಲ್ಲಿ ಕಳ್ಳಿ ಜಾತಿಯ ಗಿಡಗಳಿಂದ ಕೂಡಿದ ಹುಲ್ಲುಗಾಡು (ಸವನ್ನ) ಇದೆ. ಈಶಾನ್ಯದಲ್ಲಿ ಸಾಮಾನ್ಯವಾಗಿರುವ ಸಸ್ಯಗಳು ಮೊಪೇನ್, ಮೊಗೊನೊನೊ ಮತ್ತು ಮೊಕುಸಿ, ಮಧ್ಯ ಕಲಹರಿಯಲ್ಲಿ ಸಾಮಾನ್ಯವಾಗಿರುವ ಸಸ್ಯ ಮೊರುಕುರು. ಚೋಬೆ ನದಿಯ ದಂಡೆಯ ಮೇಲೆ ಮಾತ್ರ ನಿಜವಾದ ಅರ್ಥದಲ್ಲಿ ಕಾಡು ಉಂಟು. ಇಲ್ಲಿ ಆಫ್ರಿಕನ್ ಮರಗಳು ಹಲವು ಇವೆ (ಮೋಕ್ವ, ಮೊಕುಸಿ, ಮೊನಾಟೊ).

ಮೈದಾನದಲ್ಲಿ ಹಲವಾರು ವನ್ಯಪ್ರಾಣಿಗಳು ಹಿಂಡುಹಿಂಡಾಗಿವೆ. ಚೋಬೆ, ಮೊರೆಮಿ, ಬಕವಾಂಗೊ ಮುಖಜಭೂಮಿ, ನ್ಗಾಮಿ ಸರೋವರ, ಮಕ್ಗಾಡಿಕಾಡಿ ಪಾನ್ಸ್ ಮತ್ತು ಕಲಹರಿ ಇವು ರಾಷ್ಟ್ರೀಯ ವನ್ಯಮೃಗ ಸಂರಕ್ಷಣ ಪ್ರದೇಶಗಳು. ಬಗೆಬಗೆಯ ಜಿಂಕೆಗಳು, ಸಿಂಹ, ಆನೆ, ಚಿರತೆ, ನೀರಾನೆ, ಜಿರಾಫೆ, ಕಾಡೆಮ್ಮೆ, ಮೊಸಳೆ ಮತ್ತು ಹಾವು ಮುಂತಾದವು ಇವೆ. ಉಷ್ಟ್ರಪಕ್ಷಿ, ಪೆಲಿಕಾನ್, ಗಿಡಗ ಸಾಮಾನ್ಯ. ಒಕಾವಾಂಗೊ ಮತ್ತು ಚೋಬೆ ನದಿಗಳಲ್ಲಿ ಹಲವು ಬಗೆಯ ಮೀನುಗಳುಂಟು.

ಜನಜೀವನ: ಬೋಟ್ಸ್‌ವಾನದ ಜನ ಸ್ಥೂಲವಾಗಿ ಎಂಟು ಮುಖ್ಯ ಆದಿವಾಸಿ ಪಂಗಡಗಳಿಗೆ ಸೇರಿದವರು. ಪ್ರತಿಯೊಂದು ಪಂಗಡಕ್ಕೂ ಅದರದೇ ಆದ ಪ್ರದೇಶವಿದೆ. ಅದಕ್ಕೊಬ್ಬ ಮುಖ್ಯಸ್ಥ ಇರುತ್ತಾನೆ. ಭೂಮಿಯ ಒಡೆತನ ಸಮುದಾಯಕ್ಕೆ ಸೇರಿದ್ದು, ಅದನ್ನು ಪರಭಾರೆ ಮಾಡುವಂತಿಲ್ಲ. ಅತ್ಯಂತ ದೊಡ್ಡ ಪಂಗಡ ನಗ್ವಾಟೊ. ಇದರ ಜನಸಂಖ್ಯೆ ದೇಶದ ಒಟ್ಟು ಜನಸಂಖ್ಯೆಯ ಮೂರನೆಯ ಒಂದರಷ್ಟು. ಒಟ್ಟು ಭೂಮಿಯ ಐದನೆಯ ಒಂದು ಭಾಗ ಇದಕ್ಕೆ ಸೇರಿದೆ. ಇತರ ಮುಖ್ಯ ಪಂಗಡಗಳು ಕ್ವೇನ, ನಗ್ವಾಕೇಟ್ಸೆ, ಕಗಾಟ್ಲ, ಬಮಲೆಟೆ ಮತ್ತು ಟ್ಲೋಕ್ವ.

ಬೋಟ್ಸ್‌ವಾನದ ಪಂಗಡಗಳು ಇತರ ಆಫ್ರಿಕನ್ ದೇಶಗಳ ಪಂಗಡಗಳಂತಲ್ಲ. ಪಟ್ಟಣಗಳಲ್ಲಿ ವಾಸಿಸುವ ಪದ್ಧತಿ ಹಿಂದಿನಿಂದ ಬಂದಿದೆ. ಆ ಪಟ್ಟಣಗಳು ದನಗಳ ಹುಲ್ಲುಗಾವಲುಗಳಿಗೆ ಬಲು ದೂರದಲ್ಲಿರುತ್ತವೆ. ನಿವಾಸಿಗಳು ಮುಖ್ಯವಾಗಿ ದನಗಾಹಿಗಳು. ಒಂದೊಂದು ಮಂದೆಯಲ್ಲೂ ಸಾವಿರಾರು ದನಗಳಿರುತ್ತವೆ.

ಬೋಟ್ಸ್‌ವಾನದ ಜನ ಜೀವನದಲ್ಲಿ ಅತ್ಯಂತ ಪ್ರಮುಖ ಆರ್ಥಿಕ ಮೂಲವೆಂದರೆ ಪಶುಪಾಲನೆ. ದನಗಳ ಬದುಕು ಮಳೆಯನ್ನೇ ಅವಲಂಬಿಸಿರುತ್ತದೆ. ಆದರೆ ಮಳೆ ಅನಿಶ್ಚಿತ. ವರ್ಷವರ್ಷವೂ ಸಾವಿರಾರು ಮಂದಿ ತರುಣರು ತಮ್ಮ ಹಳ್ಳಿಗಳನ್ನು ಬಿಟ್ಟು ಉದ್ಯೋಗ ಅಥವಾ ಶಿಕ್ಷಣಾಕಾಂಕ್ಷಿಗಳಾಗಿ ನೆರೆಯ ದಕ್ಷಿಣ ಆಫ್ರಿಕಕ್ಕೆ ವಲಸೆ ಹೋಗುತ್ತಾರೆ. ಆದಾಗ್ಯೂ ದೇಶದಲ್ಲಿ ನಗರೀಕರಣ ಪ್ರವೃತ್ತಿ ಬೆಳೆದಿಲ್ಲ. ದಕ್ಷಿಣ ಆಫ್ರಿಕ ಮತ್ತು ಜಿಂಬಾಬ್ವೆಯೊಂದಿಗೆ ಬೋಟ್ಸ್‌ವಾನವನ್ನು ಕೂಡಿಸುವ ರೈಲುಮಾರ್ಗದ ಉದ್ದಕ್ಕೂ ನೆಲೆಗೊಂಡಿರುವ ಆರು ಸಣ್ಣ ಪಟ್ಟಣಗಳಲ್ಲಿ ಮಾತ್ರ ಉದ್ಯೋಗಗಳು ಸ್ವಲ್ಪಮಟ್ಟಿಗೆ ದೊರಕುತ್ತವೆ. ಇವು ಹಳೆ ವ್ಯವಸ್ಥೆಯ ಕಟ್ಟುಕಟ್ಟಳೆಗಳಿಂದ ವಿಮೋಚನೆ ಸಾರುವ ಕೇಂದ್ರಗಳಂತಿವೆ. ರಾಷ್ಟ್ರೀಯ ಏಕತೆಯ ಕೇಂದ್ರಗಳೂ ಆಗಿವೆ.

ಬೋಟ್ಸ್‌ವಾನದ ಎರಡು ಅಧಿಕೃತ ಭಾಷೆಗಳು ಸೆಟ್ಸ್‌ವಾನ ಮತ್ತು ಇಂಗ್ಲಿಷ್. ವಿದ್ಯಾವಂತರು ಮಾತ್ರ ಇಂಗ್ಲಿಷ್ ಬಲ್ಲರು, ಆಫ್ರಿಕನ್ಸ್ ಭಾಷೆಯನ್ನು ಬಿಳಿಯ ಅಲ್ಪಸಂಖ್ಯಾತರು ಆಡುತ್ತಾರೆ. ಇಲ್ಲಿಯ ಬಹುತೇಕ ಜನರು ಹೆಸರಿಗೆ ಕ್ರೈಸ್ತರು. ಕ್ರೈಸ್ತಧರ್ಮವನ್ನು ದಿನಚರಿಯಲ್ಲಿ ಅನುಸರಿಸುತ್ತಿರುವವರು ಶೇ. 20–30 ಜನ ಮಾತ್ರ ವಿವಿಧ ಕ್ರೈಸ್ತಧರ್ಮೀಯ ಶಾಖೆಗಳು ಇಲ್ಲಿವೆ.

ನೀರಿನ ಅಭಾವದಿಂದ ಬೋಟ್ಸ್‌ವಾನದ ಜನಸಾಂದ್ರತೆ ಬಲು ವಿರಳ. ಜನಸಂಖ್ಯೆಯ ವಾರ್ಷಿಕ ಏರಿಕೆಯ ದರ ಶೇ. 3. ಕೃಷಿ ಯೋಗ್ಯ ಭೂಮಿಯಲ್ಲಿ ಶೇ. 5ರಷ್ಟು ಮಾತ್ರ ಸಾಗುವಳಿಯಾಗುತ್ತಿದೆ. ಜನಸಂಖ್ಯೆಯ ಶೇ. 80ರಷ್ಟು ಮಂದಿ ನೆಲಸಿರುವುದು ಪೂರ್ವ ಭಾಗದಲ್ಲಿ. ಇಲ್ಲಿ ಜನಸಾಂದ್ರತೆ ಚ.ಕಿಮೀ ಗೆ ಸು. 3 ಮಂದಿಯಾದರೆ ಉಳಿದ ಭಾಗದಲ್ಲಿ 1.

ಆರ್ಥಿಕ ಪರಿಸ್ಥಿತಿ: ಬೋಟ್ಸ್‌ವಾನದ ಆರ್ಥಿಕತೆಯಲ್ಲಿ ಪಶುಪಾಲನೆಯೇ ಮುಖ್ಯ. ಇವು ಬಹುತೇಕ ಅಡ್ಡ ತಳಿಗಳು. ಗಣಿಗಾರಿಕೆ ಬೆಳೆಯುತ್ತಿದೆ. ಫ್ರಾನ್ಸಿಸ್‌ಟೌನ್‌ಗೆ ಸು. 160 ಕಿಮೀ ದೂರದಲ್ಲಿ 3.7 ಕೋಟಿ ಟನ್ ನಿಕಲ್ ಮತ್ತು ತಾಮ್ರ ನಿಕ್ಷೇಪಗಳಿವೆ. ಹಣ ಬೆಲೆ ಬಹಳ ಕಡಿಮೆ, ಬೇಸಾಯ ಮುಖ್ಯವಾಗಿ ಜೀವನಾಧಾರ. ಬೋಟ್ಸ್‌ವಾನದಲ್ಲಿ ಆಗಾಗ್ಗೆ ಅಭಾವ ಸಂಭವಿಸಿ, ಆಹಾರದ ಆಮದು ಅಗತ್ಯವಾಗುತ್ತದೆ.

ದೇಶದ ಎರಡು ದೊಡ್ಡ ಕೊರತೆಗಳೆಂದರೆ ನೀರು ಮತ್ತು ಜನಬಲ. ಬೇಸಾಯ, ಗಣಿಗಾರಿಕೆ ಹಾಗೂ ವ್ಯವಸಾಯಗಳಿಗೆ ಸಾಕಷ್ಟು ಜನರಿಲ್ಲ, ಒರಾಪ ವಜ್ರಗಣಿಗಳು ಆಂಗ್ಲೊ–ಅಮೆರಿಕನ್ ಸಂಸ್ಥೆಗೆ ಒಳಪಟ್ಟಿವೆ. ಷಪಿ ಗಣಿಗಾರಿಕೆಯ ಸಂಕೀರ್ಣದಲ್ಲಿ ನಿಕ್ಕಲ್ ಮತ್ತು ತಾಮ್ರ ತೆಗೆಯುತ್ತಿರುವುದರಿಂದ ಈ ಪ್ರದೇಶ ಬೆಳೆಯುತ್ತಿದೆ. ಇದು ಅಮೆರಿಕನ್ ನಾಯಕತ್ವದ ಅಂತಾರಾಷ್ಟ್ರೀಯ ಆಸಕ್ತಿಗಳಿಗೆ ಒಳಪಟ್ಟಿದೆ.

ಮಾಂಸ ಸಂಸ್ಕರಣ ಮತ್ತು ಗಣಿಗಾರಿಕೆ ಅವಲಂಬಿಸಿದ ಕೆಲವು ಸಣ್ಣ ಉದ್ಯಮಗಳನ್ನು ಬಿಟ್ಟರೆ ಬೋಟ್ಸ್‌ವಾನದಲ್ಲಿ ಕೈಗಾರಿಕೆ ಬೆಳೆದಿಲ್ಲ.

ಸಾರಿಗೆ : ದೇಶದಲ್ಲಿ ಹಲವಾರು ಸಾವಿರಾರು ಕಿಮೀ ರಸ್ತೆಗಳಿವೆ. ಫ್ರಾನ್ಸಿಸ್ ಟೌನನ್ನು ನೆರೆಯ ಜಾಂಬಿಯದ ಲಿವಿಂಗ್‌ಸ್ಟನ್ನೊಂದಿಗೆ ಕೂಡಿಸುವ ರಸ್ತೆ ನಿರ್ಮಾಣವಾಗಿದೆ. ರೈಲು ಮಾರ್ಗದ ಉದ್ದ 634 ಕಿಮೀ. ದೇಶದ ಪ್ರಮುಖ ಪಟ್ಟಣಗಳಿಗೂ ನೆರೆಯ ದೇಶಗಳಿಗೂ ವಿಮಾನ ಸಂಪರ್ಕವಿದೆ. (ಎಸ್.ವಿ.)

**ಬೊಲಿವಿಯ:** ದಕ್ಷಿಣ ಅಮೆರಿಕದ ಒಂದು ಗಣರಾಜ್ಯ. ದ.ಅ. $9^0 40'$–$22^0 40'$ ಹಾಗೂ ಪ.ರೇ. $57^0 30'$–$69^0 40'$ ಗಳ ನಡುವೆಯಿದೆ. ಇದು ಖಂಡಾಂತರ ಸ್ಥಾನವನ್ನು ಹೊಂದಿದ್ದು, ಉತ್ತರ ಮತ್ತು ಪೂರ್ವದಲ್ಲಿ ಬ್ರೆಜಿಲ್, ದಕ್ಷಿಣದಲ್ಲಿ ಪರಗ್ವೆ, ಪಶ್ಚಿಮದಲ್ಲಿ ಪೆರು ಮತ್ತು ಚಿಲಿ ದೇಶಗಳು ಸುತ್ತುವರಿದಿವೆ. ವಿಸ್ತೀರ್ಣ 10,98581 ಚ.ಕಿಮೀ. ಜನಸಂಖ್ಯೆ 9281712 (2002). ಜನಸಾಂದ್ರತೆ ಪ್ರತಿ ಚ.ಕಿಮೀಗೆ 21. ಅಧಿಕೃತ ರಾಜಧಾನಿ ಸೂಕ್ರೆ. ಜನಸಂಖ್ಯೆ 131800 (2002). ಆಡಳಿತ ರಾಜಧಾನಿ ಲಾ ಪಾಜ಼್. ಜನಸಂಖ್ಯೆ 713,400 (2002).




ಮೇಲ್ಮೈ ಲಕ್ಷಣ: ಇದನ್ನು ಪ್ರಾಕೃತಿಕವಾಗಿ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. 1) ನೈರುತ್ಯದ ಉನ್ನತ ಪ್ರದೇಶ ಇದನ್ನು ಅಲ್‌ಟಪ್ಲಾನೊ ಎಂದು ಕರೆಯಲಾಗಿದೆ. ಇಲ್ಲಿ ಟಿಟಿಕಾಕಾ ಸರೋವರವಿದೆ. 2) ಆಂಡೀಸ್ ಪರ್ವತದ ಪೂರ್ವ ಮತ್ತು ಪಶ್ಚಿಮಭಾಗದಲ್ಲಿ ಅನೇಕ ಆಳವಾದ ನದಿ ಕಣಿವೆಗಳನ್ನು ಹೊಂದಿದೆ. ಇಲ್ಲಿ ದಟ್ಟವಾದ ಅರಣ್ಯ ಪ್ರದೇಶವಿದೆ. ಪಶ್ಚಿಮ ಭಾಗ ಉನ್ನತವಾದ ಪ್ರಸ್ಥಭೂಮಿಯಾಗಿದ್ದು ಅನೇಕ ಅಗ್ನಿ ಪರ್ವತಗಳಿಂದ ಸುತ್ತುವರೆದಿದೆ. ಅದರಲ್ಲಿ ಅತ್ಯುನ್ನತವಾದದು ಮೌಂಟ್ ಸಜ್‌ಮ (6542 ಮೀ). 3) ಉತ್ತರದ ತಗ್ಗಾದ ಮೈದಾನ ಪ್ರದೇಶ ರಾಷ್ಟ್ರದ ಉತ್ತರ ಹಾಗೂ ಪೂರ್ವ ಭಾಗದಲ್ಲಿ $^2/_3$ ಭಾಗವನ್ನು ಆವರಿಸಿದೆ.

ಈ ದೇಶದಲ್ಲಿ ಹಲವಾರು ನದಿಗಳು ಹರಿಯುತ್ತವೆ. ಅವುಗಳಲ್ಲಿ ಪ್ರಮುಖವಾದವು ಗೊಪುರೇ ಸ್ಯಾನ್ , ಎಮುರೆ, ಬಿನೀ ಪೆಲ್ಕೊಮಯಾ ಮತ್ತು ಗ್ರಾಂಡೆ.

ವಾಯುಗುಣ: ಬೊಲಿವಿಯ ಉಷ್ಣವಲಯದಲ್ಲಿದ್ದರೂ ಪರ್ವತಗಳ ಕಡು ಶೀತದಿಂದ ಬಯಲಿನ ಅತ್ಯುಷ್ಣದವರೆಗಿನ ಹವಾ ವೈವಿಧ್ಯತೆ ಇಲ್ಲಿದೆ. ಕಡಿಮೆ ಮಳೆಯ, ಚಳಿಗಾಳಿ ಬೀಸುವ ಪ್ರದೇಶ ಮತ್ತು ಕೆಲವು ಕಣಿವೆಗಳಲ್ಲಿ $18^0$ಸೆ. ಹಿತವಾದ ಉಷ್ಣತಾಮಾನವಿದೆ. ಪೂರ್ವದ ಬಯಲಲ್ಲಿ ಧಾರಾಕಾರ ಮಳೆ ಮತ್ತು ಅತಿ ಹೆಚ್ಚು ಉಷ್ಣಾಂಶವಿರುತ್ತದೆ. ನವೆಂಬರ್‌ನಿಂದ ಮಾರ್ಚಿ ತಿಂಗಳವರೆಗೆ ಸರಾಸರಿ 180 ಸೆಂಮೀ ಮಳೆಯಾದರೆ, ಜುಲೈನಿಂದ ನವೆಂಬರ್‌ವರೆಗೆ ಬರಗಾಲದ ಪರಿಸ್ಥಿತಿ ಇರುತ್ತದೆ.

ಸಸ್ಯ ಮತ್ತು ಪ್ರಾಣಿವರ್ಗ: ಈ ದೇಶದ ಶೇ. 40 ಭಾಗದಲ್ಲಿ ಅರಣ್ಯಗಳಿದ್ದು ಸು. 2000 ಜಾತಿಯ ವಿವಿಧ ವೃಕ್ಷಸಂಪತ್ತಿದೆ. ಆಲ್ಟಿಪ್ಲಾನೋ ಭಾಗದಲ್ಲಿ ಬಹುತರ ಕುರುಚಲು ಪೊದೆ, ಹುಲ್ಲು, ಬೆಳೆಸಿದ ನೀಲಗಿರಿ ತೋಪುಗಳು ಮಾತ್ರ ಕಾಣ ಬರುವುವು. ಈಶಾನ್ಯದ ನದಿ ತೀರದಲ್ಲಿ ದಟ್ಟ ಉಷ್ಣವಲಯಾರಣ್ಯಗಳಿವೆ. ಈ ಪ್ರದೇಶದಲ್ಲಿ ಮಹಾಗನಿ, ಸಿಡಾರ್, ಕ್ವಿನೈನ್ ಮತ್ತು ತಾಳೆ ಜಾತಿಯ ಮರಗಳಿವೆ.

ಅಲ್ಪಾಕ, ಲಾಮ ಮೊದಲಾದವು ಇಲ್ಲಿನ ಸ್ಥಳೀಯ ಪ್ರಾಣಿಗಳು. ಇವು ಉಣ್ಣೆ ಮತ್ತು ಮಾಂಸವನ್ನು ಒದಗಿಸುತ್ತವೆ. ದನಕರು, ಆಡು, ಕುರಿ ಮತ್ತು ಹಂದಿ ಸಾಕು ಪ್ರಾಣಿಗಳು. ಬಯಲು ಪ್ರದೇಶದಲ್ಲಿ ಮಂಗ, ಜಾಗ್ವಾರ್, ಪ್ಯೂಮಾ ಮತ್ತು ಜಿಂಕೆಗಳಿವೆ.

ಬೊಲಿವಿಯ ಕೃಷಿ ಪ್ರಧಾನವಾದ ರಾಷ್ಟ್ರ. ದೇಶದ ಶೇ. 70 ರಷ್ಟು ಜನರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಕಾಫಿ, ಮುಸುಕಿನ ಜೋಳ, ಆಲೂಗೆಡ್ಡೆ ಮತ್ತು ಕಾಳುಗಳು ಮುಖ್ಯ ಬೆಳೆಗಳು. ಸತು, ತವರ, ಸೀಸ, ಬೆಳ್ಳಿ, ಆಂಟಿಮನಿ ಮತ್ತು ಟಂಗ್‌ಸ್ಟನ್ ಮುಖ್ಯ ಖನಿಜ ಸಂಪತ್ತುಗಳು. ಗಣಿಗಾರಿಕೆ ದೇಶದ ಶೇ. 70 ರಷ್ಟು ವಿದೇಶಿ ವಿನಿಮಯ ಗಳಿಸುತ್ತಿದೆ. ಬೊಲಿವಿಯ ತವರ, ತಾಮ್ರ ಮತ್ತು ಸತುವನ್ನು ರಫ್ತುಮಾಡುತ್ತದೆ ಹಾಗೂ ಹತ್ತಿ, ಆಹಾರ ವಸ್ತುಗಳು, ಯಂತ್ರಗಳು, ಮೋಟರು ವಾಹನಗಳು, ಉಣ್ಣೆ ಮತ್ತು ಮರವನ್ನು ಆಮದು ಮಾಡಿಕೊಳ್ಳುತ್ತದೆ. ಜವಳಿ, ಆಹಾರ ಸಂಸ್ಕರಣೆ ಮತ್ತು ಪೆಟ್ರೋಲಿಯಂ ಶುದ್ಧೀಕರಣ ಮುಖ್ಯ ಕೈಗಾರಿಕೆಗಳು.

ಬೊಲಿವಿಯದಲ್ಲಿ ಸರಕು ಸಾಗಣೆ ಮತ್ತು ಸಂಪರ್ಕ ಒಂದು ಸಮಸ್ಯೆಯಾಗಿದೆ. ಕಾರಣ ಇದರ ಖಂಡಾಂತರ ಸ್ಥಾನ ಮತ್ತು ದೇಶದ ಮುಕ್ಕಾಲು ಭಾಗ ಆಂಡೀಸ್ ಪರ್ವತ ಸ್ತೋಮದಿಂದ ಆವರಿಸಿಕೊಂಡಿರುವುದು; ರೈಲುಮಾರ್ಗ ಮತ್ತು ರಸ್ತೆಮಾರ್ಗ ಕಡಿಮೆ ಪ್ರಮಾಣದಲ್ಲಿ ಅಭಿವೃದ್ಧಿಯಾಗಿವೆ. ಅಲ್ಪ ಪ್ರಮಾಣದಲ್ಲಿ ವಿಮಾನ ಮತ್ತು ಒಳನಾಡು ಜಲಮಾರ್ಗಗಳಿವೆ. ನಗರೀಕರಣ ಈ ದೇಶದಲ್ಲಿ ಕಡಿಮೆಯಿದೆ. ಆರ್ಥಿಕವಾಗಿ ಬೊಲಿವಿಯ ಹಿಂದುಳಿದ ರಾಷ್ಟ್ರವಾಗಿದೆ. ಬಡತನ ಮತ್ತು ನಿರುದ್ಯೋಗ ಇಲ್ಲಿನ ಪ್ರಮುಖ ಸಮಸ್ಯೆಗಳು. (ಪಿ.ವಿ.ಎ.)

**ಬೋರ್ನಿಯೊ:** ಇಂಡೊನೇಷ್ಯದ ಒಂದು ದ್ವೀಪ. ಮಲಯ ಪರ್ಯಾಯ ದ್ವೀಪದ ಆಗ್ನೇಯದಲ್ಲಿ ಸಿಂಗಾಪುರದ ಪೂರ್ವಕ್ಕೆ 640 ಕಿಮೀ ದೂರದಲ್ಲಿದೆ. ಪ್ರಪಂಚದ ಮೂರನೆಯ ದೊಡ್ಡದ್ವೀಪ. ವಿಸ್ತೀರ್ಣ 751929 ಚ.ಕಿಮೀ. ಪೆಸಿಫಿಕ್ ಸಾಗರದ ಹಿರಿಯ ಸುಂಡ ದ್ವೀಪಸ್ತೋಮಕ್ಕೆ ಸೇರಿದೆ. ಈ ದ್ವೀಪದ ವಾಯವ್ಯ ಹಾಗೂ ಪಶ್ಚಿಮದಲ್ಲಿ ದಕ್ಷಿಣ ಚೀನಸಮುದ್ರ ಹಾಗೂ ಮಕಾಸರ್ ಜಲಸಂಧಿ ಮತ್ತು ದಕ್ಷಿಣದಲ್ಲಿ ಜಾವ ಸಮುದ್ರ ಇವೆ. ದ್ವೀಪ ದಕ್ಷಿಣದಲ್ಲಿ ವಿಶಾಲವಾಗಿದ್ದು ಉತ್ತರದಲ್ಲಿ ಸಂಕುಚಿತಗೊಂಡಿದೆ. ಮುಕ್ಕಾಲುಭಾಗ ಇಂಡೊನೇಷ್ಯ ಗಣರಾಜ್ಯಕ್ಕೆ ಸೇರಿದ್ದು, ಉಳಿದ ಕಾಲುಭಾಗದಲ್ಲಿ ಹೆಚ್ಚು ಪ್ರದೇಶ ಮಲೇಷ್ಯಕ್ಕೆ ಮತ್ತು ಬ್ರೂನೈ ಸ್ವತಂತ್ರ ರಾಜ್ಯಕ್ಕೆ ಸೇರಿದೆ. ನೈರುತ್ಯದಿಂದ ಈಶಾನ್ಯಕ್ಕೆ ಇದರ ಉದ್ದ 1,336 ಕಿಮೀ. ಈ ದ್ವೀಪ ಉ.ಅ. $7^0$ ಯಿಂದ ದ.ಅ. $4^020'$ ವರೆಗೂ ಪೂ.ರೇ. $108^023'$ ರಿಂದ ಪೂ. ರೇ. $119^022'$ ವರೆಗೆ ವ್ಯಾಪಿಸಿದ್ದು ಸಮಭಾಜಕವೃತ್ತ ಈ ದ್ವೀಪದ ಮಧ್ಯೆ ಹಾದುಹೋಗಿದೆ.

ಒಳನಾಡು ಫಲವತ್ತಾದ ಬಯಲುಗಳಿಂದಲೂ ಸಮುದ್ರದ ಅಂಚು ಜೌಗು ಭೂಮಿಯಿಂದಲೂ ಕೂಡಿದೆ. ಪರ್ವತ ಹಾಗೂ ದಟ್ಟಡವಿಗಳಿಂದ ಕೂಡಿರುವ ಈ ದ್ವೀಪದಲ್ಲಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ 380 ಸೆಂಮೀ. ನಿತ್ಯಹರಿದ್ವರ್ಣದ ಅರಣ್ಯಗಳಿವೆ. ಅತ್ಯಂತ ಎತ್ತರದ ಪರ್ವತ ಈ ದ್ವೀಪದ ಉತ್ತರ ತುದಿಯ ಸಬಾ ರಾಜ್ಯದಲ್ಲಿರುವ ಕಿನಬಲೂ (4,101 ಮೀ).



ಕಮಡೊ ಡ್ರಾಗನ್

ಇಲ್ಲಿ ಅನೇಕ ನದಿಗಳಿವೆ. ಇವುಗಳಲ್ಲಿ ಸಾರವಾಕಿನ ರಾಜಾನ್, ಪಶ್ಚಿಮ ಬೋರ್ನಿಯೊದ ಕಾಪೊವಾಸ್, ದಕ್ಷಿಣದ ಬಾರಿಟೊ, ಪೂರ್ವದ ಮಹಾಕಮ್ ಮುಖ್ಯವಾದವು. ದ್ವೀಪದಲ್ಲಿ ಕೆಲವು ಬಂದರುಗಳಿವೆ. ಇವುಗಳ ಪೈಕಿ ಬಹು ಉಪಯೋಗದ ಮತ್ತು ಉತ್ತಮ ಬಂದರೆಂದರೆ ಬ್ರೂನೈಕೊಲ್ಲಿಯ ಬಂದರು. ಎರಡನೆಯ ಮಹಾ ಯುದ್ಧದಲ್ಲಿ ಈ ಬಂದರು ಜಪಾನಿನ ನೌಕಾ ಸೇನೆಯ ನೆಲೆಯಾಗಿತ್ತು. ಅಡವಿಗಳಲ್ಲಿ ಚೌಬೀನೆ ಗಟ್ಟಿ ಮರಗಳೂ ಸಾಂಬ್ರಾಣಿ ಮರ ಮತ್ತು ಬೆತ್ತದ ಗಿಡಗಳೂ ಚರ್ಮ ಹದಮಾಡಲು ಉಪಯೋಗಿಸುವ ತೊಗಟೆಯ ಗುಲ್ಮ ವೃಕ್ಷಗಳೂ ಬೆಳೆಯುತ್ತವೆ. ಕಡಲಂಚುಗಳಲ್ಲಿ ತೆಂಗು ಸಮೃದ್ಧ, ಪ್ರಪಂಚದಲ್ಲೆಲ್ಲ ಅತ್ಯಂತ ದೊಡ್ಡದಾದ ರಫ್ಲೇಸಿಯ ಹೂವಿನ ಗಿಡಗಳು ಇಲ್ಲಿವೆ. ಅರಣ್ಯಗಳಲ್ಲಿ ಒರಾಂಗುಟಾನ್ ಮತ್ತು ಗಿಬ್ಬನ್ ಕೋಡಗಗಳು, ಚಿರತೆ, ಆನೆ, ಖಡ್ಗಮೃಗ, ವಿವಿಧ ಪಕ್ಷಿಗಳು, ಉರಗ, ಮೊಸಳೆ ಮುಂತಾದ ಪಶು ಪಕ್ಷಿ ಪ್ರಾಣಿಗಳಿವೆ.

ಈ ದ್ವೀಪದಲ್ಲಿ ದೊರಕುವ ಚಿನ್ನ, ವಜ್ರ, ಆಂಟಿಮನಿ, ಪಾದರಸ, ಜಿಪ್ಸಮ್, ಕಬ್ಬಿಣ ಮೊದಲಾದ ಖನಿಜಗಳನ್ನು 19ನೆಯ ಶತಮಾನದ ಪ್ರಾರಂಭದಲ್ಲೇ ಖಾಸಗಿ ಕಂಪನಿಗಳು ಉತ್ಖನನ ಮಾಡಿದುವು. ದ್ವೀಪದ ದಕ್ಷಿಣದಲ್ಲಿ ಈಗಲೂ ಸ್ವಲ್ಪ ಚಿನ್ನ ದೊರಕುತ್ತದೆ. ತಾರಕಾನ್ ದ್ವೀಪ ಹಾಗೂ ಬ್ರೂನೈ ಪ್ರದೇಶದ ಸೆರೀಯ ಎಂಬಲ್ಲಿ ಪೆಟ್ರೋಲಿಯಂ ಬಾವಿಗಳಿವೆ. ನೈರುತ್ಯದ ಧಾತೂ ಭೂಶಿರದ ಬಳಿ ಬಾಕ್ಸೈಟ್, ಜೇಡಿಮಣ್ಣು ಸಿಗುತ್ತದೆ. ಇಲ್ಲಿ ದೊರಕುವ ವಜ್ರಗಳಿಂದಲೇ ಇಂಡೊನೇಷ್ಯನ್ನರು ಈ ದ್ವೀಪವನ್ನು ಕಾಲಿಮಾಂಟನ್ ಎಂದರೆ ವಜ್ರದ ನದಿ ಎಂದು ಕರೆದರು.

ಬೋರ್ನಿಯೊದಲ್ಲಿ ಅಗ್ನಿಪರ್ವತಗಳಿಂದಾದ ಫಲವತ್ತಾದ ಪ್ರದೇಶಗಳಿವೆ. ಮುಖ್ಯ ಬೆಳೆಗಳು ಬತ್ತ, ಮುಸುಕಿನ ಜೋಳ, ಗೆಣಸು, ಸೌತೆ ಹಾಗೂ ಕುಂಬಳಕಾಯಿ. ರಬ್ಬರ್ ಮರಗಳನ್ನು ತೋಟಗಳಲ್ಲಿ ಬೆಳೆಸಲಾಗಿದೆ. ಇಲ್ಲಿಯ ಚೀನೀಯರು ಬಹುಪ್ರಮಾಣದಲ್ಲಿ ಮೆಣಸು ಬೆಳೆಸುತ್ತಾರೆ. ದ್ವೀಪದಿಂದ ರಫ್ತಾಗುವ ವಸ್ತುಗಳು ಸೀಮೆ ಅಕ್ಕಿ (ಸಬ್ಬಕ್ಕಿ), ಕೊಬ್ಬರಿ, ಕಚ್ (ಗುಲ್ಮವೃಕ್ಷದ ಬಣ್ಣ ಗಟ್ಟುವ ರಸ) ಹಾಗೂ ಮೀನು. ದ್ವೀಪದ ಮಲೆನಾಡ ಭಾಗಗಳಲ್ಲಿ ಹೊಗೆಸೊಪ್ಪು, ಸೆಣಬು, ಕಾಫಿ, ಮತ್ತು ಕೋಕೊ ಬೆಳೆಸುತ್ತಾರೆ. (ವಿ.ಜಿ.ಕೆ.)

**ಬೋಸ್ನಿಯ ಹರ್ಜೆಗೋವಿನ:** ಯುರೋಪ್ ಖಂಡದ ಆಗ್ನೇಯ ಭಾಗದಲ್ಲಿನ ಈ ಸ್ವತಂತ್ರ ದೇಶ ತ್ರಿಕೋನಾಕಾರದ ಗಣರಾಜ್ಯವಾಗಿದೆ. ಇದು ಕೆಂಟುಕಿ ಪ್ರದೇಶದ ಅರ್ಧದಷ್ಟು ವಿಸ್ತಾರವಾಗಿದೆ ಎಂದರೆ ತಪ್ಪಾಗಲಾರದು. ಹಿಂದೆ ಯೂಗೋಸ್ಲಾವಿಯದ ಭಾಗವಾಗಿತ್ತು. ಬೋಸ್ನಿಯದ ಉತ್ತರ ಭಾಗ ಪರ್ವತಗಳಿಂದ ಮತ್ತು ದಟ್ಟವಾದ ಅರಣ್ಯಗಳಿಂದ ಆವೃತವಾಗಿದೆ. ದಕ್ಷಿಣ ಭಾಗ ಅತ್ಯಂತ ಉದ್ದವಾದ ಸಮತಟ್ಟಾದ ಪ್ರದೇಶವಾಗಿದೆ. ಸು. 20 ಕಿಮೀ ಎಡ್ರಿಯಾಟಿಕ್ ಸಮುದ್ರ ಕರಾವಳಿಯಿದೆ. $42^0$–$46^0$ ಉ. ಅ. ಮತ್ತು $16^0$–$19^0$ ಪೂ.ರೇ. ದ ನಡುವೆ ಇದೆ.




ಮಾಗ್ಲಿಕ್ ಪರ್ವತ ಅತಿ ಎತ್ತರದ ಪ್ರದೇಶ (2386 ಮೀ). ವಿಸ್ತೀರ್ಣ ಸು. 51,129 ಚ.ಕಿಮೀ. ಈ ಗಣರಾಜ್ಯದ ಒಟ್ಟು ಜನಸಂಖ್ಯೆ 4,498,976 (2004) ಮತ್ತು ಬೆಳವಣಿಗೆಯ ದರ ಶೇ. 1.4 ಇದ್ದು ಜನನ ಪ್ರಮಾಣ 8.8/1000 ಕ್ಕೆ ಇದ್ದು ಇದರಲ್ಲಿ ಶಿಶುಮರಣದ

ಸಂಖ್ಯೆ 9.8/1000. ಇವರ ನಿರೀಕ್ಷಿತ ಜೀವಿತಾವಧಿಯ 78.0. ಇದ್ದು ಜನಸಾಂದ್ರತೆಯು ಪ್ರತಿ ಚ.ಕಿಮೀಗೆ 228 ಕಂಡುಬರುತ್ತದೆ.

ಈ ರಾಷ್ಟ್ರದ ರಾಜಧಾನಿ ಸರ್‍ಯೆವೋ. ಜನಸಂಖ್ಯೆ 5,81,500 (2004). ಇದರ ಇನ್ನುಳಿದ ಪ್ರಮುಖ ನಗರಗಳೆಂದರೆ ಬಂಜಾಲಂಕಾ, ಟುಜ್‍ಲಾ, ಮೋಸ್ಟರ್. ಪ್ರಮುಖ ಭಾಷೆಗಳು ಸರ್ಬೊ, ಕ್ರುವೆಶಿಯನ್.

ಈ ಪ್ರದೇಶದ ಪ್ರಮುಖ ಧರ್ಮಗಳೆಂದರೆ ಇಸ್ಲಾಂ ಶೇ. 40, ಸಂಪ್ರದಾಯ ವಾದಿಗಳು ಶೇ. 31, ರೋಮನ್ ಕೆಥೊಲಿಕ್ ಶೇ.15, ಇತರೆ ಶೇ.14 ಕಂಡು ಬರುತ್ತಾರೆ. ಪ್ರೌಢ ಶಿಕ್ಷಣದಲ್ಲಿ ಪುರುಷರ ಸಂಖ್ಯೆ ಶೇ. 94.1, ಹೆಣ್ಣುಮಕ್ಕಳ ಪ್ರಮಾಣ ಶೇ. 78.0 ಇದೆ.

ಆರ್ಥಿಕವಾಗಿ ಜಿಡಿಪಿ ಒಟ್ಟಾರೆ $ 28.59 ಬಿಲಿಯನ್ ಇದ್ದು ತಲಾ ಆದಾಯ $ 6,800 ಇದೆ. ಇದರ ಬೆಳೆವಣಿಗೆಯ ದರ ಶೇ. 5.3 ಕಂಡು ಬರುತ್ತದೆ. ಶೇ. 14 ಭೂಭಾಗ ಬಳಕೆಯಲ್ಲಿ ಕೃಷಿಯಲ್ಲಿ ಸಾಮಾನ್ಯವಾಗಿ ಗೋದಿ, ಹಣ್ಣುಗಳು, ತರಕಾರಿಗಳು, ಇತ್ಯಾದಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಇಲ್ಲಿನ ಕೈಗಾರಿಕೆಗಳಲ್ಲಿ ಕಬ್ಬಿಣ ಮತ್ತು ಉಕ್ಕು, ಕಲ್ಲಿದ್ದಲು, ಕಬ್ಬಿಣದ ಅದಿರು, ಶಸ್ತ್ರಾಸ್ತ್ರಗಳ ತಯಾರಿಕೆ, ವಿಮಾನದ ಬಿಡಿಭಾಗಗಳು, ಮ್ಯಾಂಗನೀಸ್, ಬಾಕ್ಸೈಟ್, ಜವಳಿ, ಹೊಗೆಸೊಪ್ಪಿನ ಉತ್ಪನ್ನಗಳು, ಮರದ ಪೀಠೋಪಕರಣಗಳು ಇತ್ಯಾದಿ ಕಂಡು ಬರುತ್ತವೆ.

ಈ ಪ್ರದೇಶದ ಪ್ರಮುಖ ನೈಸರ್ಗಿಕ ಸಂಪನ್ಮೂಲಗಳೆಂದರೆ ಕಲ್ಲಿದ್ದಲು, ಕಬ್ಬಿಣದ ಅದಿರು, ಬಾಕ್ಸೈಟ್, ತಾಮ್ರ, ಗಾಜು, ತವರ, ಮ್ಯಾಂಗನೀಸ್, ನಿಕ್ಕಲ್, ಅರಣ್ಯಗಳು, ಜಲವಿದ್ಯುಚ್ಛಕ್ತಿ ಅತ್ಯಂತ ಪ್ರಮುಖವಾದವು. ಸಾಕಣೆಯಲ್ಲಿ ರೈಲು, ರಸ್ತೆ ಹಾಗೂ ವಿಮಾನ ಸೌಕರ್ಯಗಳಿವೆ. ನಿರಂತರವಾದ ಆಂತರಿಕ ಸಮಸ್ಯೆಗಳು ಮತ್ತು ಅಸ್ಥಿರತೆಯಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ. ಸರ್ಬರ ವಲಸೆಯಿಂದಾಗಿ ದೇಶ ಸಂಕಷ್ಟವನ್ನು ಅನುಭವಿಸುತ್ತಿದೆ. ವಿಶ್ವಸಂಸ್ಥೆಯ ಶಾಂತಿ ಸೇನೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ನಿರಂತರ ಶ್ರಮಿಸುತ್ತಿದೆ. (ಎಸ್.ಆರ್.)

**ಬೌದ್ಧಧರ್ಮ:** ಭಗವಾನ್ ಬುದ್ಧ ಬೋಧಿಸಿದ ಧರ್ಮ. ಪ್ರಪಂಚದಲ್ಲಿ ಪ್ರಸ್ತುತ ಪ್ರಚಲಿತವಿರುವ ಮಾನವ ಧರ್ಮಗಳಲ್ಲಿ ಸಂಖ್ಯಾಬಲದಿಂದ ಕ್ರೈಸ್ತ, ಇಸ್ಲಾಂಗಳ ಅನಂತರ ಮೂರನೆಯದು. ಇದು ಜನಸಾಮಾನ್ಯರ ಧರ್ಮವಾಗಿ ಭಾರತದಲ್ಲಿ ಆರಂಭಗೊಂಡು ಇತರದೇಶಗಳಿಗೆ ವಿಸ್ತರಿಸಿತು. ಭಾರತೀಯ ಧರ್ಮಗಳು ಜಿಜ್ಞಾಸೆಯ ಬಲದಿಂದಲೇ ಬಂದ ವಿಚಾರಗಳಲ್ಲ: ಜೀವನದ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸಿಕೊಳ್ಳಲು ಚಿತ್ತಸ್ಥೈರ್ಯ ಹಾಗೂ ಚಿತ್ತಶುದ್ಧಿಯ ಮಾರ್ಗ ಹುಡುಕುವ ಕಾತರದಿಂದ ಎದ್ದುಬಂದವು. ಈ ಮಾತಿಗೆ ಉತ್ತಮ ನಿದರ್ಶನ ಬೌದ್ಧಧರ್ಮ. ಈ ಧರ್ಮದ ಪ್ರವರ್ತಕ ಶಾಕ್ಯ ಮುನಿ ಬುದ್ಧನಿಗೆ ಬಾಳಿನ ಸಮಸ್ಯೆಗಳ ಒತ್ತಡ ಅತಿಯಾಗಿ, ತನಗೆ ಮಾತ್ರವಲ್ಲದೆ ಲೋಕದ ಎಲ್ಲ ಜನರಿಗೂ ಪರಿಹಾರ ಮಾರ್ಗ ಹುಡುಕಿಕೊಂಡಲೆಂದೇ ಆತನ ತಪಶ್ಚರ್ಯೆ ಆರಂಭವಾಯಿತೆಂದು ಸಂಪ್ರದಾಯ ಹೇಳುತ್ತದೆ. ದುಃಖದರ್ಶನದಿಂದಲೆ ಬೌದ್ಧದರ್ಶನದ ಪ್ರಥಮ ಪರಿಚ್ಛೇದ ಅಂಕುರವಾಯಿತು:

ಬುದ್ಧ ಬದುಕಿದ್ದ ಅವಧಿಯಲ್ಲಿ ಮಾಡಿದ ಪ್ರವಚನಗಳಿಂದ ಸಾವಿರಾರು ಮಂದಿ ಪ್ರತಿಭಾವಂತರು ಆತನ ಬಳಿ ಭಿಕ್ಷುಗಳಾಗಿ ಸೇರಿದರು. ಬುದ್ಧ ತೀರಿಕೊಂಡೊಡನೇ ಸಂಘ ಒಡೆಯದಂತೆ ತಡೆಗಟ್ಟಲು ವಿಧಿ ನಿಷೇಧಗಳನ್ನು ಕಟ್ಟಳೆಗಳನ್ನು ನಿರ್ದೇಶನ ಮಾಡುವ ಅಗತ್ಯ ಒದಗಿತು. ಆತನ ಶಿಷ್ಯರಿಗೆ ಗುರು ಧರ್ಮ, ಸಂಘ ಮತ್ತು ಶಿಕ್ಷೆ, ಪಾಠ ಹೀಗೆ ನಾಲ್ಕು ಆದರಣೀಯ ವಿವರಗಳು ಉಂಟಾದುವು. ಬುದ್ಧ ತೀರಿಕೊಂಡ ವರ್ಷವೇ ರಾಜಗೃಹದಲ್ಲಿ ಆತನ ಶಿಷ್ಯರೆಲ್ಲ ಸೇರಿ ಮೊದಲ ಸಂಗೀತಿ ವ್ಯವಸ್ಥೆಮಾಡಿದರು. ಇದರಲ್ಲಿ ಸಂಘಜೀವಿಗಳ ನಿಯಮಾವಳಿ ಬುದ್ಧನ ಆದೇಶದಂತೆಯೇ ಸಿದ್ಧವಾಯಿತು (ವಿನಯಪಿಟಕ); ಧರ್ಮದ ವಿವರಗಳು ಬುದ್ಧನಮಾತಿನಲ್ಲೇ ಸಂಗ್ರಹೀತವಾದುವು (ಸೂತ್ರಪಿಟಕ); ಧರ್ಮದ ಆಧಾರವಾಗಿ ಉಳಿದ ತತ್ತ್ವದ ಗಹನ ವಿಚಾರಗಳನ್ನು ಮೂರನೆಯ ಪಿಟಕದಲ್ಲಿ ಕೂಡಿಸಿದರು (ಅಭಿಧಮ್ಮ ಪಿಟಕ). ಬುದ್ಧನ ಅನುಯಾಯಿಗಳೆಲ್ಲ ಸೇರಿದ ಒಕ್ಕೂಟಕ್ಕೆ (ಸಂಘ) ಆಸರೆ, ಆಧಾರವಾಗಿ ನಿರ್ಮಿತವಾದದ್ದು ಬೌದ್ಧ ಧರ್ಮ. ಮೊದಲಿಗೆ ಬೌದ್ಧಧರ್ಮ ಭಿಕ್ಷುಗಳಿಗೆ ಮಾತ್ರ ಸೀಮಿತವಾಗಿತ್ತು. ಕಾಲಕ್ರಮದಲ್ಲಿ, ಇದು ನಿಷ್ಠೆಯ ನೆಪದಿಂದ ವ್ಯವಹಾರದಲ್ಲಿ ಪ್ರಸಕ್ತರಾದ ಜನರಿಗೂ ಹರಡಿತು. ಆದರೆ ಭಿಕ್ಷುಗಳಲ್ಲದವರಿಗೆ ಸಂಘದ ವಿಧಿ ನಿಷೇಧಗಳು ಅನ್ವಯವಾಗುವುದಿಲ್ಲ. ಅವರಿಗಾಗಿ ಬೇರೆ ಸಾಮಾನ್ಯಶೀಲಗಳು ಸಿದ್ಧವಾದುವು. ಅವರ ಪಾಲಿಗೆ ಬುದ್ಧ, ಧರ್ಮ, ಸಂಘ – ಈ ಮೂರೂ ಮಾನ್ಯವಾದವು. ತಮ್ಮ ಜೀವನವನ್ನು ಚೊಕ್ಕ ಮಾಡಿಕೊಳ್ಳಲು ಈ ಮೂರರಲ್ಲಿ ಶರಣುಹೋಗಬೇಕೆಂಬ ಪದ್ಧತಿ ಬೆಳೆದುಬಂದಿತು. ಇದು ಇಂದು ಶರಣಗಮನವೆನಿಸಿಕೊಳ್ಳುತ್ತದೆ. ಬೌದ್ಧಮತದ ದೀಕ್ಷೆಯುಳ್ಳವರು ಬುದ್ಧಂ ಶರಣಂ ಗಚ್ಛಾಮಿ, ಧರ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ ಎಂದು ಮೂರಾವರ್ತಿ ದಿನವೂ ಜ್ಞಾಪಿಸಿಕೊಳ್ಳುತ್ತಾರೆ. ಈ ಮೂರರಲ್ಲಿಯೂ ಆತ್ಮಸಮರ್ಪಣೆ ಮಾಡಿಕೊಳ್ಳುವುದು, ಅವುಗಳಲ್ಲೇ ಮನಸ್ಸನ್ನು ನಿಲ್ಲಿಸುವುದು, ಶಿಷ್ಯಭಾವದಿಂದ ಅವನ್ನು ಕಾಣುವುದು ಮತ್ತು ಅವುಗಳಿಗೆ ಸನ್ಮಾನ ಮಾಡುವುದು ಶರಣಗಮನದ ತಾತ್ಪರ್ಯ. ಅವನ್ನು ರತ್ನತ್ರಯವೆಂದು ವ್ಯವಹರಿಸುತ್ತಾರೆ.

ಪ್ರಪಂಚದ ಸಾಂಸ್ಕೃತಿಕ ದೃಶ್ಯಾವಳಿಯ ನಿರ್ಮಾಣದಲ್ಲಿ ಬೌದ್ಧಧರ್ಮದ ಕೊಡುಗೆ ಅನನ್ಯ. ಇದು ಭಾರತದಲ್ಲಿ ಉಗಮಗೊಂಡಿದ್ದರೂ ಇದರ ಪ್ರಭಾವವಿರುವುದು ಹೆಚ್ಚಾಗಿ ಭಾರತದ ಹೊರಗೆ. ಶ್ರೀಲಂಕ, ಆಗ್ನೇಯ ಏಷ್ಯ, ಚೀನ, ಜಪಾನ್, ತೈವಾನ್, ಕೊರಿಯ ಮೊದಲಾದ ರಾಷ್ಟ್ರಗಳು ಸಾಂಸ್ಕೃತಿಕ ರಾಷ್ಟ್ರಗಳು. ಪರಿಸರದ ನಿರ್ಮಾಣದಲ್ಲಿ ಬೌದ್ಧಧರ್ಮದ ಪ್ರಭಾವ ನಿರ್ಣಾಯಕವಾಗಿದೆ. (ಎಸ್.ಕೆ.ಆರ್.)

**ಬ್ಯಾಂಗ್‍ಕಾಕ್:** ಥೈಲೆಂಡಿನ ರಾಜಧಾನಿ, ಮುಖ್ಯ ಬಂದರು ಮತ್ತು ವಾಣಿಜ್ಯ ಸಾಂಸ್ಕೃತಿಕ ಕೇಂದ್ರನಗರ. ಜನಸಂಖ್ಯೆ 6,542,751 (2001). ಈ ನಗರ ಥೈಲೆಂಡ್ ಕೊಲ್ಲಿಗೆ ಸೇರುವ ಚಾವ್ ಫ್ರೈಯ ನದಿದಂಡೆಯ ಮೇಲೆ ಸಮುದ್ರಕ್ಕೆ ಸು. 40 ಕಿಮೀ ದೂರದಲ್ಲಿದೆ. ಇದರ ನೆಲೆ ಉ. ಅ. $30^{0}45'$ ಪೂ. ರೇ. $100^{0}31'$. ನದಿ ಕವಲುಗಳು ಮತ್ತು ಕಾಲುವೆಗಳಿಂದ ಆವೃತವಾಗಿರುವ ಈ ನಗರಕ್ಕೆ ಮೂರು ಮುಖ್ಯ ಸೇತುವೆಗಳ ಮೂಲಕ ಇದರ ವಿವಿಧ ಭಾಗಗಳೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದಲೇ ಈ ನಗರವನ್ನು ಪೂರ್ವದ ವೆನಿಸ್ ಎಂದು ಕರೆಯುವುದುಂಟು. ಬ್ಯಾಂಗ್‍ಕಾಕ್ ಆಧುನಿಕವಾಗಿ ಯೋಚಿಸಿ ನಿರ್ಮಿಸಿದ ನಗರವಲ್ಲ. ಅದು 18ನೆಯ ಶತಮಾನದ ಉತ್ತರಾರ್ಧದಿಂದ ಕ್ರಮೇಣ ಬೆಳೆದ ನಗರ. 1960 ರಿಂದ 1970ರ ನಡುವೆ ಒಂದುದಶಕದಲ್ಲಿ ಇಲ್ಲಿಯ ಜನಸಂಖ್ಯೆ ಎರಡುಪಟ್ಟು ಹೆಚ್ಚಿತು. ನಗರದ ಕೇಂದ್ರಭಾಗ ಕಿರಿದಾದ ರಸ್ತೆಗಳಿಂದ ಮತ್ತು

ಲುಂಪಿನಿ ಪಾರ್ಕ್

ಜನಜಂಗುಳಿಯಿಂದ ಕೂಡಿದೆ. ದೇಶದ ಪ್ರಮುಖ ರೈಲ್ವೆ ನಿಲ್ದಾಣ ಇಲ್ಲಿದೆ. ಬ್ಯಾಂಗ್‍ಕಾಕ್ ಇಂದು ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರ ಚಾವ್ ಫ್ರೈ ಪ್ರದೇಶದಲ್ಲಿ ಬಂದರಿದೆ. ಥೈಲೆಂಡಿನ ನೌಕಾ ಸಾರಿಗೆ ಮತ್ತು ಸಾಗಣೆಯ ಬಹುಭಾಗ ಈ ಬಂದರಿನ ಮೂಲಕ ನಡೆಯುತ್ತದೆ. ಇಲ್ಲಿಯ ನಗರ ಜಲಸಾರಿಗೆಯೂ ಮಹತ್ತ್ವದ್ದು. ಆಹಾರ ಸಂಸ್ಕರಣೆ, ಉಡುಪುಗಳು ಮತ್ತು ಮನೆನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳಿಗೆ ಸಂಬಂಧಿಸಿದ ಕಾರ್ಖಾನೆಗಳಿವೆ. (ಡಿ.ಎಸ್.ಜೆ.)

**ಬ್ಯಾಂಡ್ ಗ್ರಾಫ್ :** ಅಂಕಿ ಅಂಶಗಳ ಘಟಕಗಳನ್ನು ತೋರಿಸುವುದಕ್ಕಾಗಿ ಪುನರ್ವಿಭಾಗ ಮಾಡಿದ ರೇಖಾಲೇಖ (ಪಟ್ಟಿ ಆಲೇಖ). ಕ್ಷಿತಿಕ್ಷದಲ್ಲಿ ಒಂದು ವಸ್ತುವಿನ ಮೊತ್ತ ಮತ್ತು ಲಂಬಾಕ್ಷದಲ್ಲಿ ವರ್ಷಗಳನ್ನು ತೋರಿಸಲಾಗುತ್ತದೆ. ಕ್ಷಿತಿಜಾಕ್ಷದಲ್ಲಿ ಮೊದಲು ಒಂದು ವಸ್ತುವಿನ ವರ್ಷವಾರ ಒಟ್ಟು ಮೊತ್ತಗಳನ್ನು ತೋರಿಸುವ ವಕ್ರವಾದ ಗೆರೆ ಎಳೆದು ಅದರ ಘಟಕಗಳ ಮೊತ್ತಗಳನ್ನು ತೋರಿಸುವುದಕ್ಕಾಗಿ ಉಪ ವಿಭಾಗಗಳನ್ನು ಮಾಡಲಾಗುತ್ತದೆ. ಈ ಉಪ ವಿಭಾಗಗಳಿಗೆ ಬಗೆ ಬಗೆಯ ರೇಖಾಛಾಯೆ ಕೊಟ್ಟರೆ ಅವು ಪಟ್ಟಿಯಾಕಾರವಾಗಿ ತೋರುತ್ತವೆ. (ಜಿ.ಕೆ.)

**ಬ್ಯಾಡಗಿ:** ಹಾವೇರಿ ಜಿಲ್ಲೆಯ ಒಂದು ತಾಲ್ಲೂಕು, ಹೋಬಳಿ ಮತ್ತು ಆಡಳಿತಕೇಂದ್ರ ಪಟ್ಟಣ. ಹಾವೇರಿಯ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕು ಜಿಲ್ಲೆಯ ದಕ್ಷಿಣ ಭಾಗದಲ್ಲಿದೆ. ತಾಲ್ಲೂಕಿನ ವಿಸ್ತೀರ್ಣ 436 ಚ.ಕಿಮೀ. ಜನಸಂಖ್ಯೆ 1,27,944.

ಬ್ಯಾಡಗಿ ತಾಲ್ಲೂಕು ಬಹುತೇಕ ಸಮತಟ್ಟಾಗಿದೆ. ಕೆಲವು ಗುಡ್ಡಗಳು ಅಲ್ಲಲ್ಲಿವೆ. ತಾಲ್ಲೂಕಿನ ಎರೆಮಣ್ಣಿನ ಭಾಗ ವಿನಾ ಉಳಿದದ್ದು ಬೇಸಾಯಕ್ಕೆ ಅಷ್ಟು ಸಹಾಯಕವಾಗಿಲ್ಲ. ವ್ಯವಸಾಯಕ್ಕೆ ಮಳೆಯೆ ಆಧಾರ. ಇಲ್ಲಿ ವರ್ಷಕ್ಕೆ ಸರಾಸರಿ 65 ಸೆಂಮೀ ಮಳೆಯಾಗುತ್ತದೆ.

ದೊಡ್ಡ ನದಿಗಳು ಯಾವುವೂ ಇಲ್ಲ, ಕಾಗಿನೆಲೆಯ ಕೆರೆ, ಚಿಕ್ಕ ಬಾಸೂರು ಕೆರೆ, ತುಂಮೂರ ಕೆರೆ ಮತ್ತು ಬಾವಿಗಳು ಸ್ವಲ್ಪಮಟ್ಟಿಗೆ ನೀರಾವರಿ ಸೌಲಭ್ಯ ಒದಗಿಸುತ್ತವೆ. ಮೆಣಸಿನಕಾಯಿ, ಹತ್ತಿ, ರಾಗಿ, ಬಿಳಿಜೋಳ, ಸೇಂಗ, ಸಾಮೆ, ಬತ್ತ ಇಲ್ಲಿನ ಬೆಳೆಗಳು.

ತಾಲ್ಲೂಕಿನ ಮುಖ್ಯ ಸ್ಥಳಗಳು ಕದರಮಂಡಲಗಿ, ಕಾಗಿನೆಲೆ ಮತ್ತು ಮೋಟೆ ಬೆನ್ನೂರು. ಕದರಮಂಡಲಗಿ ರಾಣೆಬೆನ್ನೂರಿಗೆ 14 ಕಿಮೀ ಪಶ್ಚಿಮದಲ್ಲಿದೆ. ತಾಲ್ಲೂಕು 13 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಮತ್ತು 11 ಕಿಮೀ ಉದ್ದದ ಮುಖ್ಯ ಜಿಲ್ಲಾ ರಸ್ತೆಯನ್ನು ಹೊಂದಿದೆ. ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ ಬ್ಯಾಡಗಿ ಹುಬ್ಬಳ್ಳಿಯ ಆಗ್ನೇಯಕ್ಕೆ 88 ಕಿಮೀ ದೂರದಲ್ಲಿದೆ. ಬೆಂಗಳೂರು-ಧಾರವಾಡ ರೈಲುಮಾರ್ಗ, ಪುಣೆ-ಬೆಂಗಳೂರು ಹೆದ್ದಾರಿ ಈ ಪಟ್ಟಣದ ಮೂಲಕ ಹಾದುಹೋಗಿವೆ. ಬ್ಯಾಡಗಿ ಒಂದು ರೈಲುನಿಲ್ದಾಣ. ಜನಸಂಖ್ಯೆ 25,669. (ವಿ.ಎಸ್.;ಬಿ.ಎ.ಎಸ್.)

**ಬ್ಯಾತೊಲಿತ್-ತಳಅಗ್ನಿಶಿಲೆ:** ಭೂಮಿಯ ಮೇಲ್ಪದರದಿಂದ ಗಮನಾರ್ಹ ಆಳದಲ್ಲಿ ಸ್ಫಟಿಕೀಕರಿಸಿದ ಅಗ್ನಿಶಿಲೆಯ ಬೃಹತ್ ವಸ್ತು. ಗ್ರೀಕ್ ಭಾಷೆಯಲ್ಲಿ ಬ್ಯಾತೋಸ್ ಎಂದರೆ ಆಳ ಎಂದೂ ಲಿತೋಸ್ ಎಂದರೆ ಶಿಲೆ ಎಂದೂ ಅರ್ಥ. ಇದು ಅಸಮವಾದ ಅಡ್ಡಕೊಯ್ದದ ಮೇಲ್ಮೈಗಳಿಂದ ಇಲ್ಲವೆ ಸ್ತರಭಂಗಹೊಂದಿದ ತಲಗಳಿಂದ ಸುತ್ತುವರಿದಿರುತ್ತದೆ. ಬ್ಯಾತೊಲಿತುಗಳ ಮೇಲ್ಭಾಗ ನೆಲದ ಮೇಲಕ್ಕೆ ಚಾಚಲ್ಪಟ್ಟು ಮಿಕ್ಕ ಇಡೀ ಭಾಗ ದುಂಡನೆಯ ಗುಮ್ಮಟದಂತೆ ನೆಲದಾಳದಲ್ಲಿ ಅಗಲಗೊಳ್ಳುತ್ತ ಲೀನವಾಗಿರುತ್ತದೆ.

ಭೂಮಿಯ ಹೊರಪದರದ ತಳಭಾಗದಲ್ಲಿ ಅಲ್ಲಲ್ಲೇ ಶಿಲಾಪಾಕ ರೂಪುಗೊಂಡು ಭೂಮಿಯ ಹೊರಮೈಯತ್ತ ನುಗ್ಗಲು ಪ್ರಯತ್ನಿಸುತ್ತಿರುತ್ತದೆ. ಶಿಲಾಪಾಕ ಅತಿಯಾದ ಉಷ್ಣ ಮತ್ತು ಅಧಿಕ ಒತ್ತಡಗಳಿಂದ ಒಡಗೂಡಿರುವಂತದ್ದು. ಇಂಥ ಸ್ಥಿತಿಯಲ್ಲಿರುವ ಶಿಲಾಪಾಕ ಕಡಿಮೆ ಉಷ್ಣ ಮತ್ತು ಒತ್ತಡವಿರುವ ಹೊರಮೈಯತ್ತ ನುಗ್ಗುವುದು ಸಹಜವೇ. ಹೀಗೆ ಮೇಲಕ್ಕೆ ನುಗ್ಗುವಾಗ ಹಾದಿಯಲ್ಲಿ ಅನೇಕ ಸ್ತರಗಳನ್ನು ಭೇದಿಸಿಕೊಂಡು ಮುಂದುವರಿಯುತ್ತ ಕೆಲವೊಂದು ಶಿಲೆಗಳನ್ನು ತನ್ನಲ್ಲಿ ಅರಗಿಸಿಕೊಳ್ಳುವುದೂ ಉಂಟು. ಇಂಥ ಶಿಲಾಪಾಕಕ್ಕೆ ವಿಸಂಗತ (ಡಿಸ್‌ಕಾರ್ಡೆಂಟ್) ಉದ್ಭವಿ ಅಥವಾ ವಿಸಂಗತ ಅಂತಸ್ಸರಣ ಶಿಲಾಕೃತಿ ಎಂದು ಹೆಸರು. ಈ ಬೃಹತ್ ಶಿಲಾಕೃತಿಯ ಮೇಲ್ಭಾಗ ನೆಲದ ಸಮೀಪದವರೆಗೂ ಬರುತ್ತದೆ. ನೆಲದ ಮೇಲೆ ಆಗುವ ನೈಸರ್ಗಿಕ ಭೂಸವೆತ ಕಾರ್ಯಗಳಿಂದ ಅದರ ಮೇಲೆ ಹಿಂದೆ ಇದ್ದ ಶಿಲಾವರಣವೆಲ್ಲ ಶಿಥಿಲಗೊಂಡು ಬೇರೆಡೆಗೆ ಸಾಗಿಸಲ್ಪಡುತ್ತವೆ. ಈ ಸನ್ನಿವೇಶದಲ್ಲಿ ಬ್ಯಾತೊಲಿತುಗಳ ಶಿರ ಹೊರಚಾಚುತ್ತದೆ.

ಬ್ಯಾತೊಲಿತುಗಳು ಗಿರಿ ಪರ್ವತಗಳ ಸಾಲಿನಲ್ಲಿ ಕಂಡುಬರುತ್ತವೆ. ನಿರ್ದಿಷ್ಟ ಆಕಾರವಿಲ್ಲದೆ ಕೆಲವೊಮ್ಮೆ ಗುಡ್ಡದ ಹಾಗೆ ತೋರುವುದುಂಟು. ಬ್ಯಾತೊಲಿತುಗಳು ಸಾಮಾನ್ಯವಾಗಿ ಗ್ರಾನೈಟ್ ಅಥವಾ ಗ್ರಾನೋಡಯರೈಟುಗಳಿಂದ ಕೂಡಿರುತ್ತವೆ. ಶಿಲಾಕೃತಿಯಾದ್ಯಂತ ಒಂದೇ ಸಮವಾದ ಖನಿಜ ಸಂಯೋಜನೆ ಉಂಟು. ಕೆಲವು ಸ್ಟಾಕುಗಳು ಕ್ವಾರ್ಟ್ಸ್ ಡಯರೈಟ್ ಮತ್ತು ಡಯರೈಟ್ ಇಲ್ಲವೆ ಮಾನ್‌ಸೊನೈಟ್ ಮತ್ತು ಸಯನೈಟುಗಳಿಂದ ಕೂಡಿರುತ್ತವೆ. ಬ್ಯಾತೊಲಿತ್ತಿನ ಗಾತ್ರ ದೊಡ್ಡದು, ಗಾತ್ರವನ್ನು ಗುರುತ್ವಮಾಪಕ ಮತ್ತು ಕಾಂತಮಾಪಕಗಳ ಸಹಾಯದಿಂದ ಅಳೆಯಬಹುದು. ಕರ್ನಾಟಕ ರಾಜ್ಯದ ಅರಸೀಕೆರೆ, ಬಾಣಾವರ, ರಾಮನಗರ ಮತ್ತು ಬಳ್ಳಾರಿ ಪ್ರದೇಶಗಳಲ್ಲೂ ಬ್ಯಾತೊಲಿತ್ ಶಿಲಾಕೃತಿಗಳು ಕಾಣಬರುತ್ತವೆ.

ಭೂಮಿಯೊಳಗೆ ಉಂಟಾದ ಮಡಿಕೆಗಳು, ಕುಸಿತಗಳಿಂದ ಉಂಟಾದ ತೆರಪುಗಳಲ್ಲಿ ಶಿಲಾಪಾಕ ತುಂಬಿ ಬ್ಯಾತೊಲಿತ್ ಉಂಟಾಗಿರಬಹುದೆಂದು ಭೂವಿಜ್ಞಾನಿ ಇ. ಸುಯೆಸ್‌ನ ಊಹೆಯಾಗಿತ್ತು. ಇದಕ್ಕೆ ಪೂರಕವಾಗಿ ಭೂಮಿಯ ಬೃಹತ್ ಬಿರುಕುಗಳ ಉದ್ದಕ್ಕೂ ಬ್ಯಾತೊಲಿತುಗಳು ಕಂಡುಬರುತ್ತವೆ ಎಂದು ಭೂವಿಜ್ಞಾನಿಗಳಾದ ಇಡ್ಡಿಂಗ್ಸ್ ಮತ್ತು ಕ್ಲೂಸ್ ಎಂಬುವವರು ಅಭಿಪ್ರಾಯ ಪಟ್ಟಿದ್ದಾರೆ. (ವೈ.ಎಲ್.)

**ಬ್ಯಾಥಿಗೋಳ:** ಕಡಲಿನೊಳಗಿನ ಜೀವಿಗಳ ವೀಕ್ಷಣೆಗೆ ಉಪಯುಕ್ತವಾದ ಮತ್ತು ಇಬ್ಬರು ಇರಬಹುದಾದ ಸಾಧನ (ಬ್ಯಾಥಿಸ್ಫಿಯರ್). ಇದು ಆಳಕ್ಕೆ ಇಳಿಯಬಲ್ಲ ಗೋಳ (ಗ್ರೀಕ್ ಭಾಷೆಯಲ್ಲಿ ಬೇತಾಸ್ ಎಂದರೆ ಆಳ). ಸಮುದ್ರದ ಆಳದಲ್ಲಿ ಕೆಲಸ ಮಾಡುವಾಗ ಕೆಲವು ತೊಂದರೆಗಳು ಎದುರಾಗುತ್ತವೆ. ಮೊದಲನೆಯದಾಗಿ, ಪ್ರತಿ ಮೀಟರ್ ಆಳ ಹೆಚ್ಚಿದಂತೆ ಚದರ ಸೆಂಟಿಮೀಟರಿಗೆ 103.5 ಗ್ರಾಮ್ ತೂಕದಷ್ಟು ಸಂಮರ್ದ ಹೆಚ್ಚುತ್ತದೆ. ಎರಡನೆಯದಾಗಿ, ಉಸಿರಾಟಕ್ಕೆ ಬೇಕಾದ ವಾಯು ಸಮುದ್ರಗರ್ಭದಲ್ಲಿ ಅಲಭ್ಯ. ಮೂರನೆಯದಾಗಿ ಸು. 100 ಮೀ ಗಿಂತ ಆಳಕ್ಕೆ ಸೂರ್ಯಪ್ರಕಾಶ ತೂರಿ ಹೋಗದ್ದರಿಂದ ಅತಿ ಆಳದಲ್ಲಿ ಕತ್ತಲಿರುತ್ತದೆ. ಈ ಕಾರಣಗಳಿಂದ ಅಲ್ಲಿ ಭೂಮಿಯ ಮೇಲೆ ನಡೆಸುವಷ್ಟು ಸುಲಭವಾಗಿ ವೀಕ್ಷಣೆ ನಡೆಸಲಾವುದಿಲ್ಲ. ಮಾತ್ರವಲ್ಲ, ನೆಲದ ಮೇಲೆ ಚಲಿಸುವಷ್ಟು ಸಲೀಸಾಗಿ ಸಮುದ್ರದೊಳಗೆ ಚಲಿಸಲು ಸಾಧ್ಯವಿಲ್ಲ.

ಹಿಂದೆ ಪರಿಣತ ಮುಳುಗುಗಾರರು ತೀರದ ಸನಿಹದಲ್ಲೆ ಸಮುದ್ರ ತಳಕ್ಕೆ ಇಳಿದು ಸ್ವಲ್ಪ ಹೊತ್ತು ಅನ್ವೇಷಣೆ ನಡೆಸಿ ಮೇಲೆ ಬರುತ್ತಿದ್ದರು. ಮೊದಲಿಗೆ ಸಮುದ್ರ ತಳದ ಪರಿಶೋಧನೆಗೆ ಇದ್ದುದು ಈ ಮಾರ್ಗ ಮಾತ್ರ. ಮುಳುಗು ತೊಡುಗೆ (ಡೈವಿಂಗ್ ಸೂಟ್), ಮುಳುಗು ಗಂಟೆಗಳ (ಡೈವಿಂಗ್ ಬೆಲ್) ವಿನ್ಯಾಸದಿಂದ ಮುಳುಗುಗಾರರು ಇನ್ನಷ್ಟು ಆಳಕ್ಕೆ ಇಳಿಯುವಂತಾಯಿತು. ಆದರೆ ಬ್ಯಾಥಿಗೋಳದ ಸಹಾಯದಿಂದ ಇನ್ನೂ ಹೆಚ್ಚು ಆಳಕ್ಕೆ ಇಳಿದು ಸಂಶೋಧನೆ ನಡೆಸಲು ಸಾಧ್ಯವಾಗಿದೆ.

ಇದನ್ನು ವಿನ್ಯಾಸಗೊಳಿಸಿದವನು ಅಮೆರಿಕದ ಓಟಿಸ್ ಬಾರ್ಟನ್. ಉಕ್ಕನ್ನು ಎರಕ ಹೊಯ್ದು ತಯಾರಿಸಿದ ಸು. 2270 ಕೆಜಿ ತೂಕದ, 1.5 ಮೀ ವ್ಯಾಸದ ಈ ಗೋಳ ಸಮುದ್ರಗರ್ಭದಲ್ಲಿಯ ಸಂಮರ್ದವನ್ನು ತಾಳಬಲ್ಲದು. ಕಡಲಜೀವಿಗಳ ವೀಕ್ಷಣೆಗಾಗಿ ಇದರಲ್ಲಿ ದಪ್ಪನೆಯ ಕ್ವಾರ್ಟ್ಜ್ ಗಾಜಿನ ಮೂರು ವೃತ್ತಾಕಾರದ ಕಿಂಡಿಗಳಿವೆ. ಉಕ್ಕಿನ ಗೋಳ ವಾಯು, ಜಲಗಳಿಗೆ ಅಭೇದ್ಯ. ನೀರಾವಿಯನ್ನು ಹೀರಲು ಗೋಳದೊಳಗೆ ರಾಸಾಯನಿಕಗಳಿವೆ. ಉಕ್ಕಿನ ಬ್ಯಾಟರಿಗಳಲ್ಲಿ ಸಂಘನಿತ ವಾಯು ಉಂಟು. ಸಮುದ್ರದ ಮೇಲ್ಮೈಯಲ್ಲಿರುವ ಹಡಗಿನಿಂದ ಬ್ಯಾಥಿಗೋಳಕ್ಕೆ ಆಕ್ಸಿಜನ್ ಪೂರೈಕೆಯ ವ್ಯವಸ್ಥೆ ಇದೆ. ಕತ್ತಲೆಯಲ್ಲಿ ಅನ್ವೇಷಣೆ ನಡೆಸಲು ಪ್ರಬಲ ಶೋಧನದಿಂದ (ಸರ್ಚ್‌ಲೈಟ್) ಸಾಧ್ಯ. ಬ್ಯಾಥಿಗೋಳ ಮತ್ತು ಮಾತೃನೌಕೆ ನಡುವೆ ದೂರವಾಣಿ ಸಂಪರ್ಕ ಇರುವುದು. ಸು. 4 ಸೆಂಮೀ ದಪ್ಪದ ಹೊರಜಿಯಿಂದ ಬ್ಯಾಥಿಗೋಳವನ್ನು ಮೇಲಕ್ಕೆ, ಕೆಳಕ್ಕೆ ಚಲಿಸುವುದು ಸಾಧ್ಯ. ಆದರೆ ಹೆಚ್ಚಿನ ಸಮತಲಚಲನೆ ಮಾತ್ರ ಸಾಧ್ಯವಿಲ್ಲ.

ಸಾಗರಜೀವಿಗಳನ್ನು ವೀಕ್ಷಿಸಿ ಛಾಯಾಚಿತ್ರ ತೆಗೆಯಲು ಅಮೆರಿಕದ ಪ್ರಾಣಿವಿಜ್ಞಾನಿ ವಿಲಿಯಮ್ ಬೇಬ್ ಮತ್ತು ಓಟಿಸ್ ಬಾರ್ಟನ್ 1934ರಲ್ಲಿ ಬ್ಯಾಥಿಗೋಳವನ್ನು ಬಳಸಿ ಅಟ್ಲಾಂಟಿಕ್ ಸಾಗರದ ಬರ್ಮುಡ ಪ್ರದೇಶದಲ್ಲಿ 922.8 ಮೀ ಆಳಕ್ಕೆ ಇಳಿದು ವೀಕ್ಷಣೆ ನಡೆಸಿದರು. ಇದೇ ಥರದ, ಆದರೆ ಇನ್ನೂ ಹೆಚ್ಚಿನ ಸಂಮರ್ದವನ್ನು ತಾಳಬಲ್ಲ ಸಾಧನದಲ್ಲಿ ಓಟಿಸ್ ಬಾರ್ಟನ್ ಕ್ಯಾಲಿಫೋರ್ನಿಯ ತೀರದಿಂದಾಚೆ 1372 ಮೀ ಆಳಕ್ಕೆ ಇಳಿದು ಪರಿಶೋಧನೆ ನಡೆಸಿದ. ಈ ಸಾಧನಕ್ಕೆ ಬೆಂತೊಸ್ಕೋಪ್ ಎಂದು ಹೆಸರು.

ಪಾರ್ಶ್ವ ಕಿಂಡಿಗಳಿರುವ (ಪೋರ್ಟ್ ಹೋಲ್ಸ್) ಬ್ಯಾಥಿಸ್ಕೇಫ್ (ಆಳ ಹಡಗು) ಎಂಬ ಸಾಧನ ಇನ್ನೂ ಆಳದಲ್ಲಿ ವೀಕ್ಷಣೆ ನಡೆಸಲು ಸಹಾಯಕವಾಯಿತು. ಸ್ವಿಟ್ಜರ್‌ಲೆಂಡಿನ ವಿಜ್ಞಾನಿ ಆಗಸ್ಟ್ ಪಿಕಾರ್ಡ್ 3962 ಮೀ ಆಳದಲ್ಲಿ, ಚ.ಸೆಂಮೀ ಗೆ 399.8 ಕೆಜಿ ಸಂಮರ್ದ ತಾಳಬಲ್ಲ ಉಕ್ಕಿನ ಕೋಶ ರಚಿಸಿದ. ಇದರ ಭಾರವನ್ನು ಸಮತೋಲಗೊಳಿಸಲು ಸು. 31,800 ಲೀ ಪೆಟ್ರೋಲ್ ಬಳಸಿದ. ಸಮುದ್ರತಳದಲ್ಲಿ ಪ್ರೊಜೆಕ್ಟರ್ ದೃಢವಾಗಿ ನಿಲ್ಲಲು ಸಹಾಯಕವಾದ ಹಗ್ಗ (ಗೈಡ್ ರೋಪ್) ಮತ್ತು ತಿರುಗಣಿಗಳನ್ನು ಅದರ ಎಂಜಿನ್ನಿಗೆ ಅಳವಡಿಸಲಾಗಿತ್ತು. ಯಾವ ಪ್ರಯಾಣಿಕನನ್ನೂ ಒಳಗೊಳ್ಳದ ಇಂಥ ಬ್ಯಾಥಿಸ್ಕೇಫ್ 1948ರಲ್ಲಿ 1158 ಮೀ ಆಳಕ್ಕೆ ಇಳಿಯಲು ಶಕ್ತವಾಯಿತು, 1953ರ ವೇಳೆಗೆ ಪಿಕಾರ್ಡ್ ಬ್ಯಾಥಿಸ್ಕೇಫನ್ನು ಬಳಸಿ 3048 ಮೀ ಆಳಕ್ಕೆ ಇಳಿಯಲು ಸಮರ್ಥನಾದ. ಮುಂದೆ ಹಡಗಿಗೆ ಲಗತ್ತಿಸಿದ ಹೊರಜಿಯ ಸಹಾಯವಿಲ್ಲದೆ ತಾನಾಗಿ ಚಲಿಸಬಲ್ಲ ಬ್ಯಾಥಿಸ್ಕೇಫ್ ರಚಿತವಾಯಿತು. ಪೆಟ್ರೋಲನ್ನು ಮೇಲ್ಬದಿಗೆ ಸಾಗಿಸಿ ಕೆಳಭಾಗವನ್ನು ನೀರಿನಿಂದ ತುಂಬಿಸಿ ಕೆಳ ಇಳಿಯುವುದಕ್ಕೂ ಸೀಸದ ಗಟ್ಟಿಗಳನ್ನು ಹೊರತೆಗೆದು ಭಾರ ಕಡಿಮೆಮಾಡಿ ಮೇಲೇರುವುದಕ್ಕೂ ಸೌಲಭ್ಯ ಒದಗಿಸಿಕೊಂಡರು. ಬ್ಯಾಥಿಸ್ಕೇಫಿನ ಒಂದೊಂದು ಬದಿಯಲ್ಲಿ ಒಂದೊಂದು ನೋದಕ (ಪ್ರೊಪೆಲರ್) ಇದ್ದುದರಿಂದ ಬೇಕಾದ ದಿಕ್ಕಿಗೆ ಚಲಿಸಲು ಅನುಕೂಲವಾಯಿತು. ಬ್ಯಾಥಿಸ್ಕೇಫಿನ ತಳಭಾಗಕ್ಕೆ ಜೋಡಿಸಿದ ಗೋಳದೊಳಗಿಂದ ಸಮುದ್ರಗರ್ಭದ ವೀಕ್ಷಣೆ ನಡೆಸಬಹುದಾಗಿತ್ತು. 1960 ಜನವರಿಯಲ್ಲಿ ಟ್ರೀಸ್ಟ್ ಎಂಬ ಬ್ಯಾಥಿಸ್ಕೇಫ್ ಪೆಸಿಫಿಕ್ ಸಾಗರದ ಚಾಲೆಂಜರ್ ಡೀಪ್ ಪ್ರದೇಶದಲ್ಲಿ 10910 ಮೀ ಆಳಕ್ಕೆ ಇಳಿದು ದಾಖಲೆ ಸ್ಥಾಪಿಸಿತು. (ಎ.ಕೆ.ಬಿ.)

**ಬ್ಯಾಬಿಲಾನ್:** ಪ್ರಾಚೀನ ಬ್ಯಾಬಿಲೋನಿಯದ ರಾಜಧಾನಿ. ಈಗ ಪಾಳು ಬಿದ್ದಿರುವ ನಗರ. ಇರಾಕಿನಲ್ಲಿ ಬಾಗ್ದಾದ್ ನಗರದ ದಕ್ಷಿಣಕ್ಕೆ ಸು. 88 ಕಿಮೀ ದೂರದಲ್ಲಿ ಯೂಫ್ರೆಟೀಸ್ ನದಿಯ ಪೂರ್ವದಂಡೆಯಲ್ಲಿದೆ.

ಇತಿಹಾಸ, ಐತಿಹ್ಯ ಮತ್ತು ಸಾಹಿತ್ಯಗಳ ದೃಷ್ಟಿಯಿಂದ ಪುರಾತನ ನಾಗರಿಕತೆಗಳಲ್ಲಿ ಬೇರೆ ಯಾವ ನಗರಕ್ಕೂ ಇಲ್ಲದ ಪ್ರಸಿದ್ಧಿ ಈ ನಗರಕ್ಕಿದೆ. ಕಟ್ಟಡ ಶಿಲೆಗಳು ದೊರಕದ, ಮೆಕ್ಕಲುಮಣ್ಣಿನ ಈ ಪ್ರದೇಶದಲ್ಲಿ ಈ ನಗರದ ನಿರ್ಮಾಣಕ್ಕೆ ಹೇರಳವಾಗಿ ಬಳಸಿದ್ದ ಸುಟ್ಟ ಇಟ್ಟಿಗೆಗಳನ್ನು ಈಚಿನ ನಿವಾಸಿಗಳು ದೋಚಿ ಹೊಸ ಗೃಹಗಳನ್ನು ನಿರ್ಮಿಸಿರುವುದರಿಂದ ಈ ನಗರದ ನಿವೇಶನ ಹಾಳಾಗಿದೆ. ಇದರ ಬಳಿ ಇರುವ ಆಧುನಿಕ ಹಿಲ್ಲ ಪಟ್ಟಣದ ಮನೆಗಳ ನಿರ್ಮಾಣಕ್ಕೆ ಬ್ಯಾಬಿಲಾನಿನ ಇಟ್ಟಿಗೆಗಳನ್ನು ಬಳಸಿರುವುದನ್ನು ಕಾಣಬಹುದು. ಇಲ್ಲಿನ ಪಾಳುನಿವೇಶನದಲ್ಲಿ ಬ್ಯಾಬಿಲ್ ಎಂಬ ಐದಾರು ದಿಬ್ಬಗಳಲ್ಲಿ ಪ್ರಾಚೀನ ಕಟ್ಟಡಗಳ ಅವಶೇಷಗಳನ್ನು ಈಗಲೂ ಕಾಣಬಹುದು. ಈ ನಗರದ ಹೆಸರು ಸುಮೇರಿಯನ್ ಭಾಷೆಯಲ್ಲಿ ಕೆಡಿಂಗಿರಾ ಎಂದೂ ಸೆಮಿಟಿಕ್ ಭಾಷೆಯಲ್ಲಿ ಬ್ಯಾಬಿಲಿ ಎಂದೂ ಇತ್ತು. ಈ ಪದಗಳಿಗೆ ದೇವರ ಹೆಬ್ಬಾಗಿಲು ಎಂಬ ಅರ್ಥವಿದೆ.

ಈ ಮಹಾನಗರದ ಅತ್ಯಂತ ಪ್ರಸಿದ್ಧವೂ ಪುರಾತನವೂ ಆದ ಕಟ್ಟಡವೆಂದರೆ ಬ್ಯಾಬಿಲ್ ಗೋಪುರ. ಸ್ವರ್ಗ ಮತ್ತು ಭೂಮಿಗಳ ಪ್ರತಿಷ್ಠಾಪನ ಮಂದಿರವೆಂದೂ ಹೆಸರಿದ್ದ ಈ ಗೋಪುರವನ್ನು ಯುಫ್ರೇಟೀಸ್ ಸೇತುವೆಗೆ ಹೋಗುವ ರಸ್ತೆಯ ಉತ್ತರಭಾಗದಲ್ಲಿ ವಿಶಾಲ ಪ್ರಾಂಗಣದ ಮಧ್ಯೆ ನಿರ್ಮಿಸಲಾಗಿತ್ತು. ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ, ಕ್ರಮೇಣ ಕಿರಿದಾಗುವ, ಹಂತ ಹಂತವಾಗಿ ಮೇಲಕ್ಕೇರುವ, ಆಯಾಕಾರದ ಜಗಲಿಗಳ ರೂಪದ ಕೃತಕ ದಿಬ್ಬದ ಮೇಲೆ ಹೊಳೆಯುವ ನೀಲಿ ಬಣ್ಣದ ಗಾಜು ಲೇಪದ ಇಟ್ಟಿಗೆಗಳಿಂದ ಕಟ್ಟಿದ ಮಂದಿರವಿತ್ತು. ಮಂದಿರದಲ್ಲಿ ಮಂಚವೂ ಚಿನ್ನದ ಕಾಲುಮಣೆಯೂ ಇದ್ದುವು. ಇಂಥ ಕೃತಕ ದಿಬ್ಬದ ಮೇಲಿನ ಮಂದಿರಗಳನ್ನು ಜಿಗ್ಗುರಾಟ್ ಎಂದು ಕರೆಯಲಾಗಿತ್ತು ರಸ್ತೆಯ ಇನ್ನೊಂದು ಬದಿಯಲ್ಲಿ ಅನೇಕ ಗುಡಿಗಳ ಪ್ರಾಂಗಣಗಳಿಂದ ಕೂಡಿದ ಮಾರ್ಡುಕನ ಎಸಾಗಿಲಾ ಮಂದಿರವಿತ್ತು. ಆ ಮಂದಿರದ ಮುಖ್ಯದೇವತೆ ಆಸೀನ ಜ್ಯೂಸ್. ಅಲ್ಲಿ 48,000 ಪೌಂಡು ತೂಕದ ಚಿನ್ನದ ಸಿಂಹಾಸನ ಮತ್ತು ಕಾಲುಮಣೆಗಳಿದ್ದುವು ಎಂದು ಹಿರೊಡೊಟಸ್ ತಿಳಿಸಿದ್ದಾನೆ. ಮಂದಿರದ ಹೊರಭಾಗದಲ್ಲಿದ್ದ ವಿಶಾಲವಾದ ಬಲಿಪೀಠಗಳ ಬಳಿ ಸು. 6 ಮೀ ಎತ್ತರದ ಘನವಾದ ಪ್ರತಿಮೆಯಿತ್ತು.

ಪ್ರಪಂಚದ ಏಳು ಅದ್ಭುತಗಳಲ್ಲೊಂದಾದ ತೂಗು ಉದ್ಯಾನ ಬ್ಯಾಬಿಲಾನಿನ ಮಹತ್ತರ ನಿರ್ಮಾಣ. ಪರ್ವತ ಪ್ರದೇಶದಲ್ಲಿ ಹುಟ್ಟಿ ಬೆಳೆದ ತನ್ನ ಪತ್ನಿಗೆ ಅಲ್ಲಿಯಂತೆಯೇ ಪ್ರಕೃತಿ ಸೌಂದರ್ಯವನ್ನು ಒದಗಿಸಲು ಚಕ್ರವರ್ತಿ ನೆಬುಚಡ್ನೆಸರ್ ಜಿಗ್ಗುರಾಟ್ ದಿಬ್ಬದ ಹಂತಹಂತವಾದ ಮೇಲ್ಮೈಯಲ್ಲಿ ಬಗೆಬಗೆಯ ಫಲಪುಷ್ಪಗಳ ಗಿಡಮರಗಳನ್ನು ಬೆಳೆಸಿದ್ದನೆಂದೂ ಅವನ್ನು ತೂಗುವ ಉದ್ಯಾನಗಳೆಂದು ಹಿರೊಡೊಟಸ್ ವರ್ಣಿಸಿದ್ದನೆಂದೂ ನಂಬಲಾಗಿದೆ. (ಬಿ.ಕೆ.ಜಿ.)

**ಬ್ಯಾಲೀಯಾರಿಕ್ ದ್ವೀಪಗಳು:** ಸ್ಪೇನಿನ ಪೂರ್ವ ತೀರದ ಬಳಿ, ಅದಕ್ಕೆ 80–204 ಕಿಮೀ ದೂರದಲ್ಲಿ, ಪಶ್ಚಿಮ ಮೆಡಿಟರೇನಿಯನ್ ಸಮುದ್ರದಲ್ಲಿರುವ ದ್ವೀಪಸ್ತೋಮ. ಈ ದ್ವೀಪಗಳನ್ನು ಒಟ್ಟಾಗಿ ಸ್ಪೇನಿನ ಬ್ಯಾಲೀಯಾರಿಸ್ ಪ್ರಾಂತವಾಗಿ ರಚಿಸಲಾಗಿದೆ. ದ್ವೀಪಗಳ ಒಟ್ಟು ವಿಸ್ತೀರ್ಣ 4992 ಚ.ಕಿಮೀ. ಜನಸಂಖ್ಯೆ 8,41,669 (2001). ಪ್ರಾಂತ್ಯದ ಆಡಳಿತ ಕೇಂದ್ರ ಪಾಲ್ಮ.

ಬ್ಯಾಲೀಯಾರಿಕ್ ದ್ವೀಪಗಳನ್ನು ಭೌತಿಕವಾಗಿ ಎರಡು ನಿರ್ದಿಷ್ಟ ಗುಂಪುಗಳಾಗಿ ವಿಂಗಡಿಸಬಹುದು. ಪೂರ್ವ ಭಾಗದ ದ್ವೀಪಗಳ ಗುಂಪು ಈ ದ್ವೀಪ ಸ್ತೋಮದ ಪ್ರಧಾನ ವಿಭಾಗ. ಮಜೋರ್ಕ, ಮಿನಾರ್ಕ ಮತ್ತು ಕಬ್ರೆರ ದ್ವೀಪಗಳು ಈ ವಿಭಾಗದಲ್ಲಿವೆ. ಇವುಗಳ ಪೈಕಿ ಕಬ್ರೆರ ಚಿಕ್ಕದು. ಪಶ್ಚಿಮ ವಿಭಾಗದ ದ್ವೀಪಗಳಿಗೆ ಹಿಂದೆ ಪೈನ್ ದ್ವೀಪಗಳೆಂದು ಹೆಸರಿತ್ತು. ಈ ವಿಭಾಗದಲ್ಲಿ ಈವೀಜ, ಫಾರ್ಮೆಂಟೆರ ಹಾಗೂ ಹಲವು ಕಿರು ದ್ವೀಪಗಳಿವೆ. ಸ್ಪೇನ್ ಒಳ ನಾಡಿನಲ್ಲಿ ಹಬ್ಬಿರುವ ಪರ್ವತ ಶ್ರೇಣಿಗಳ ಸಮುದ್ರಾಂತರ ಚಾಚುಗಳಿಂದ ಹೊಮ್ಮಿರುವ ದ್ವೀಪಗಳು ಇವು. ಸಾಮಾನ್ಯವಾಗಿ ಇಲ್ಲಿ ನೆಲ ಸಮತಲ ಹಾಗೂ ತಗ್ಗಾಗಿದೆ. ಸುತ್ತ ಮತ್ತು ನಡುವೆ ಏರಿಳಿಯುವ ಬೆಟ್ಟಸಾಲುಗಳೂ ಕಣಿವೆಗಳೂ ಇವೆ.

ವ್ಯವಸಾಯ ಮತ್ತು ಜಾನುವಾರು ಸಾಕಣೆ ಇಲ್ಲಿಯ ನಿವಾಸಿಗಳ ಕಸಬು. ಆಹಾರ ಧಾನ್ಯ ಹಾಗೂ ಹಣ್ಣುಗಳು ಬೆಳೆಯುತ್ತವೆ. ವೈನ್ ತಯಾರಿಕೆ, ಮೀನುಗಾರಿಕೆ ಮತ್ತು ಕುಶಲ ಕೆಲಸ ಇತರ ಕಸಬುಗಳು. ಇಲ್ಲಿ ಲೇಸ್ ಪಟ್ಟಿ ಮತ್ತು ಕಸೂತಿ ವಸ್ತು ತಯಾರಾಗುತ್ತವೆ. ಬ್ಯಾಲೀಯಾರಿಕ್ ದ್ವೀಪಗಳು ಪ್ರವಾಸಿಗಳನ್ನು ಆಕರ್ಷಿಸುತ್ತಿವೆ ಹಾಗೂ ಪಶ್ಚಿಮ ಯುರೋಪಿನ ಜನರು ಈ ದ್ವೀಪಗಳಿಗೆ ಬರುತ್ತಾರೆ. (ವಿ.ಜಿ.ಕೆ.)

**ಬ್ಯೂನಸ್ ಐರಿಸ್:** ಅರ್ಜೆಂಟೈನದ ಒಂದು ಪ್ರಾಂತ್ಯ ಹಾಗೂ ಅರ್ಜೆಂಟೈನ ಒಕ್ಕೂಟದ ರಾಜಧಾನಿ. ಬ್ಯೂನಸ್ ಐರಿಸ್ ಪ್ರಾಂತ್ಯ ರೀಯೋ ಪರಾನಾದ ದಕ್ಷಿಣದಲ್ಲಿ ಹಾಗೂ ಅಟ್ಲಾಂಟಿಕ್ ಸಾಗರದ ಪಶ್ಚಿಮದಲ್ಲಿ ಹಬ್ಬಿದೆ. ಪ್ರಾಂತ್ಯದ ದಕ್ಷಿಣದಲ್ಲಿ ಡೆಲ್ ಟಂಡಿಲ್ ಮತ್ತು ದ ಲಾ ವೆಂಟನ ಎಂಬ ತಗ್ಗಾದ ಎರಡು ಪರ್ವತ ಶ್ರೇಣಿಗಳಿವೆ. ಅರ್ಜೆಂಟೈನದ ವಿಶಾಲವಾದ ಪಾಂಪಾಸ್ ಹುಲ್ಲುಗಾವಲಿನ ಬಹುಭಾಗವನ್ನು ಆವರಿಸಿರುವ ಈ ಪ್ರಾಂತ್ಯದ ವಿಸ್ತೀರ್ಣ 3,07,804 ಚ.ಕಿಮೀ. ಇದು ಅರ್ಜೆಂಟೈನದ ಅತ್ಯಂತ ಜನಸಂದಣಿ ಪ್ರದೇಶ, ಜನಸಂಖ್ಯೆ ಸು. 39537900 (2004). ಬಾಹಿಯ ಬ್ಲಾಂಕ, ಮಾರ್ದೆಲ್ ಪ್ಲಾಟ, ಲಪ್ಲಾಟ – ಇವು ಮುಖ್ಯ ಕೈಗಾರಿಕಾ ಹಾಗೂ ವಾಣಿಜ್ಯ ಕೇಂದ್ರಗಳು.

ಬ್ಯೂನಸ್ ಐರಿಸ್ ನಗರ ರೀಯೋದ ಲ ಪ್ಲಾಟದ ಪಶ್ಚಿಮ ಕರಾವಳಿಯಲ್ಲಿ, ಅಟ್ಲಾಂಟಿಕ್ ಕಡಲ ಕಡೆಯಿಂದ ಸು. 240 ಕಿಮೀ ದೂರದಲ್ಲಿದೆ. ದಕ್ಷಿಣ ಗೋಳಾರ್ಧದಲ್ಲಿ ಇದು ಅತ್ಯಂತ ದೊಡ್ಡ ನಗರ. ಕೇಂದ್ರಾಡಳಿತದ ಜಿಲ್ಲೆಯ ವಿಸ್ತೀರ್ಣ 200 ಚ.ಕಿಮೀ. ನಗರದ ಜನಸಂಖ್ಯೆ 12,431,000 (2004). 16ನೆಯ ಶತಮಾನದಲ್ಲಿ ಸ್ಪೇನಿನ ನಾವಿಕರು ತಮ್ಮ ಆರಾಧನೆಯ ಸಂತಳಾದ ಮರಿಯ ದಲ್ ಬ್ವೇನ್ ಐರ್‌ಳ ಹೆಸರಿನಿಂದ ಈ ನಗರವನ್ನು ಕರೆದರು ಎಂದು ಹೇಳಲಾಗಿದೆ. ಇಂದು ಬ್ಯೂನಸ್ ಐರಿಸಿನ ನಿವಾಸಿಗಳು ತಮ್ಮನ್ನು ಬಂದರಿನ ಜನರೆಂದು (ಪೋರ್ಟಿನೋಸ್) ವರ್ಣಿಸಿಕೊಳ್ಳುತ್ತಾರೆ.

ಬ್ಯೂನಸ್ ಐರಿಸ್ ನಗರ ರೀಯೋ–ಡಿ–ಲಾ ಪ್ಲಾಟಾದ ಅಳಿವೆಯ ದಂಡೆಯ ಮೇಲಿದೆ. ಇದು 1536ರಲ್ಲಿ ಸ್ಥಾಪನೆಗೊಂಡಿತಾದರೂ ಇದು ಬಹುತೇಕ ಆಧುನಿಕವಾಗಿದೆ. 1853ರಲ್ಲಿ ಅರ್ಜೆಂಟೈನದ ರಾಜಧಾನಿಯಾದ ಮೇಲೆ ಇದು ವೇಗವಾಗಿ ಬೆಳೆಯತೊಡಗಿತು. ನಗರದಲ್ಲಿ ಅನೇಕ ವಿಶಾಲ ಮಾರ್ಗಗಳಿವೆ.

ಗೋದಿ, ಮೆಕ್ಕೆಜೋಳ, ತರಕಾರಿ ಮತ್ತು ಹಣ್ಣುಗಳು ಇಲ್ಲಿನ ಮುಖ್ಯಬೆಳೆ. ಪಶುಪಾಲನೆ ಒಂದು ಮುಖ್ಯ ಕಸಬು.

ಬ್ಯೂನಸ್ ಐರಿಸ್‌ನಲ್ಲಿ ಅನೇಕ ಸುಂದರ ಉದ್ಯಾನಗಳುಂಟು. ಇವುಗಳ ಪೈಕಿ ಬಹಳ ಪ್ರಸಿದ್ಧವಾದುದು ಪಾಲೆರ್ಮೊ ಉದ್ಯಾನ. ಬ್ಯೂನಸ್ ಐರಿಸ್ ಒಂದು ಮುಖ್ಯ ರೈಲ್ವೆ ಕೇಂದ್ರ. ಟ್ರಾಮ್‌ವೇ ಸೌಲಭ್ಯವೂ ಇದೆ. ಗೋ ಮಾಂಸವನ್ನು ಪ್ಯಾಕ್ ಮಾಡುವ ಕೈಗಾರಿಕೆ ಇಲ್ಲಿ ಪ್ರಮುಖವಾದದ್ದು. ನಗರದ ಜನ ಮುಖ್ಯವಾಗಿ ಯುರೋಪಿನ ಮೂಲದವರು. ಸ್ಪಾನಿಷ್ ಹಾಗೂ ಇಟಾಲಿಯನ್ ಜನರು ಪ್ರಮುಖ. ಇಂಗ್ಲಿಷ್, ಫ್ರೆಂಚ್ ಮತ್ತು ಜರ್ಮನ್ ಸಮುದಾಯಗಳೂ ಉಂಟು. ಇತರ ಮೂಲಗಳವರು ಅಲ್ಪಸಂಖ್ಯೆಯಲ್ಲಿದ್ದಾರೆ.

ಪ್ರಪಂಚದ ದೊಡ್ಡ ಬಂದರುಗಳ ಪೈಕಿ ಬ್ಯೂನಸ್ ಐರಿಸ್ ಒಂದು. ಇದರ ರೇವು ಸಂಪೂರ್ಣವಾಗಿ ಮಾನವನಿರ್ಮಿತ. (ಎಚ್.ಎಸ್.ಕೆ.)

**ಬ್ಯೂಫೋರ್ಟ್ ಅಳತೆ :** ಮಾರುತಗಳ ವೇಗವನ್ನು ಅಳೆಯುವ, ತಿಳಿಸುವ ಮಾನದಂಡ (ಬ್ಯೂಫೋರ್ಟ್ ಸ್ಕೇಲ್). ಎಷ್ಟು ವೇಗದಲ್ಲಿ ಮಾರುತ ಬೀಸುತ್ತಿದೆ ಎಂಬುದನ್ನು ಸೂಚ್ಯವಾಗಿ ತಿಳಿಸುತ್ತದೆ. ಇದನ್ನು ಅಡ್ಮಿರಲ್ ಫ್ರಾನ್ಸಿಸ್ ಬ್ಯೂಫೋರ್ಟ್ ಶೋಧಿಸಿದ್ದು (1805), 1926 ರಲ್ಲಿ ಮಾರ್ಪಡಿಸಲಾಯಿತು. ಇದರಲ್ಲಿ 12 ಹಂತಗಳಿದ್ದು 0 ಪ್ರಶಾಂತ ಹಾಗೂ 12 ಅತಿ ಹೆಚ್ಚು ವೇಗದ ವಿಧ್ವಂಸಕ ಚಂಡಮಾರುತವನ್ನು ಸೂಚಿಸುವುದು. ಇದರಲ್ಲಿ 1 ರಿಂದ 3 ರವರೆಗೆ ಮಾರುತಗಳು ಶಾಂತವಾಗಿರುವುದನ್ನು 4 ರಿಂದ 6 ರವರೆಗೆ ಮಂದಮಾರುತ ಹಾಗೂ ಹೆಚ್ಚು ವೇಗದ ಮಾರುತಗಳನ್ನು ಸೂಚಿಸುತ್ತವೆ. 7 ರಿಂದ 12 ರವರೆಗೆ ಚಂಡಮಾರುತಗಳನ್ನು ಸೂಚಿಸುತ್ತವೆ. (ಆರ್.ಎನ್.)

**ಬ್ರಸೆಲ್ಸ್:** ಬೆಲ್ಜಿಯಮ್ ದೇಶದ ರಾಜಧಾನಿ. ಬ್ರಬಾಂಟ್ ಪ್ರಾಂತ್ಯದ ಮತ್ತು ಬ್ರಸೆಲ್ಸ್‌ನ ಆಡಳಿತ ಕೇಂದ್ರನಗರ. ಜನಸಂಖ್ಯೆ 959,300 (2001). ಪೂರ್ವಕಾಲದ ಮತ್ತು ಇತ್ತೀಚಿನ ಆಧುನಿಕ ಸುಂದರ ಕಟ್ಟಡಗಳಿಂದಲೂ ವಿಶಾಲ ಬೀದಿಗಳಿಂದಲೂ ಕಲೆ, ಸಾಹಿತ್ಯ, ಶಿಕ್ಷಣ ಮತ್ತು ವ್ಯಾಪಾರ ವಾಣಿಜ್ಯಗಳಿಂದಲೂ ಪ್ರಸಿದ್ಧವಾಗಿದೆ, ಈ ಸುಂದರ ನಗರವನ್ನು ಪುಟ್ಟ ಪ್ಯಾರಿಸ್ ಎಂದು ಕರೆಯುವುದುಂಟು.

ಪ್ರಪಂಚ ಪ್ರಸಿದ್ಧವಾದ ಲೇಸ್, ಹತ್ತಿ ಮತ್ತು ಉಣ್ಣೆಯ ಪದಾರ್ಥಗಳು, ಕಾಗದ, ಲೋಹದಸಾಮಾನುಗಳು, ಮಾದಕಪಾನೀಯಗಳು, ಬಟ್ಟೆ, ಸಕ್ಕರೆ ಶುದ್ಧೀಕರಣ ಯಂತ್ರಗಳು ತಯಾರಾಗುತ್ತವೆ. ಫಾಂಡ್ರಿ ರಾಸಾಯನಿಕಗಳು, ಔಷಧಿ, ಚರ್ಮ ವಸ್ತುಗಳ ತಯಾರಿಕೆ ಮೊದಲಾದ ಉದ್ಯಮಗಳೂ ಉಂಟು. ವಿಜ್ಞಾನ, ಕಲೆ, ಸಂಗೀತ ಕಾಲೇಜುಗಳು ಇವೆ. ರೈಲುಮಾರ್ಗಗಳು, ಕಾಲುವೆಗಳು, ಸಾರಿಗೆಯ ಮೂಲಗಳು. ಬೆಲ್ಜಿಯಮ್‌ನ ಎಲ್ಲ ಕಡೆಗೆ ಉತ್ತಮ ಸಂಪರ್ಕ ಉಂಟು. (ಕೆ.ವೈ.ಎಸ್.)

**ಬ್ರಹ್ಮಗಿರಿ[1]:** ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನಲ್ಲಿರುವ ಒಂದು ಗಿರಿಶಿಖರ. ಕೊಡಗು ಜಿಲ್ಲೆಯನ್ನು ನಾಲ್ಕು ದಿಕ್ಕುಗಳಿಂದ ಆವರಿಸಿರುವ ಪಶ್ಚಿಮಘಟ್ಟದ ಪರ್ವತಾವಳಿಯ ಶಾಖೆಗಳಲ್ಲಿ ಇದು ತುಂಬ ಮಹತ್ತ್ವದ್ದಾಗಿದೆ. ಬೇಂಗುನಾಡ್ ಪರ್ವತಶ್ರೇಣಿ ಮಡಿಕೇರಿ ಸಮೀಪ ಆರಂಭವಾಗಿ ಪಶ್ಚಿಮಾಭಿಮುಖವಾಗಿ ಸಾಗಿ ಮಡಿಕೇರಿ ತಾಲ್ಲೂಕಿನ ತಾವುನಾಡ್ ಸಮೀಪ ಪಶ್ಚಿಮಘಟ್ಟವನ್ನು ಸೇರುತ್ತದೆ. ಈ ಸ್ಥಳದಲ್ಲಿ ಬ್ರಹ್ಮಗಿರಿ ಇದೆ. ಇದರ ಎತ್ತರ ಸು. 1745 ಮೀ ಅಧಿಕ ಮಳೆ ಹಾಗೂ ಖನಿಜಮಿಶ್ರಿತ ಜಂಬುಮಣ್ಣಿನಿಂದಾಗಿ ಇಲ್ಲಿ ದಟ್ಟ ಕಾಡಿದೆ. ನಿತ್ಯ ಹರಿದ್ವರ್ಣ ಅರಣ್ಯದ ಮುಖ್ಯ ಸಸ್ಯವರ್ಗಗಳಲ್ಲೊಂದಾದ ಬಿದಿರು ಈ ಬೆಟ್ಟದಲ್ಲಿ ವಿಪುಲವಾಗಿ ಬೆಳೆಯುತ್ತದೆ.

ಇದು ಕಾವೇರಿ ಮತ್ತು ಕನ್ನಿಕಾ ನದಿಗಳ ಉಗಮಸ್ಥಾನ. ಈ ಗಿರಿಯ ನೆತ್ತಿಮೇಲೆ ನಿಂತು ಸುತ್ತಲೂ ಕಣ್ಣಾಡಿಸಿದರೆ ಕುದುರೆಮುಖ, ಬೆಟ್ಟದಪುರ ಹಾಗೂ ನೀಲಗಿರಿ ಬೆಟ್ಟಗಳ ಸೊಬಗನ್ನು ಕಾಣಬಹುದು.

ಈ ಗಿರಿ ಪೂರ್ವದಿಂದ ಪಶ್ಚಿಮದೆಡೆಗೆ ಇಳಿಜಾರಾಗಿದ್ದು ಕಿಗ್ಗಟ್ಟುನಾಡಿನಲ್ಲಿ ಅನೇಕ ಕವಲುಗಳಾಗಿ ಒಡೆದಿದೆ. ಇವುಗಳ ಪೈಕಿ ವೀರಾಜಪೇಟೆಯ ಅಂಬಟಿಬೆಟ್ಟ, ಬೆಟ್ಟಂಗಾಲದ ಬೆಟ್ಟ, ಹಾತೂರಿನ ಕುಂದದ ಬೆಟ್ಟ, ಸಿದ್ದೇಶ್ವರಬೆಟ್ಟ ಹಾಗೂ ಮಾಕಲ್ ಬೆಟ್ಟಗಳು ಮುಖ್ಯವಾದವು. *

**ಬ್ರಹ್ಮಗಿರಿ[2]:** ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಾಪುರ ಗ್ರಾಮದ ಬಳಿ ಇರುವ ಒಂದು ಬೆಟ್ಟ. ಇದು ಸುತ್ತಲೂ ಹರಡಿರುವ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಅವಶೇಷಗಳಿಂದ ಪ್ರಸಿದ್ಧ. ಇಲ್ಲೇ ಅಶೋಕನ ಬಂಡೆ ಶಾಸನ ದೊರಕಿದೆ. ಇದರ ಸಮೀಪದಲ್ಲಿ ಇರುವ ಪ್ರಾಚೀನ ನೆಲೆಯನ್ನು ಶಾಸನದಲ್ಲಿ ಉಕ್ತವಾಗಿರುವ

ಇಸಿಲ ಪಟ್ಟಣವೆಂದು ಗುರುತಿಸಲಾಗಿದೆ. ಅಶೋಕನ ಶಾಸನ ಬೆಟ್ಟದ ಉತ್ತರದಂಚಿನಲ್ಲಿ ಎತ್ತರದ ಬಂಡೆಯಮೇಲಿದೆ. ಈ ಶಾಸನದ ಬುಡದಲ್ಲಿ ಹಾಗೂ ಬೆಟ್ಟದ ಪೂರ್ವದ ಪಾದದಲ್ಲಿ ಉದ್ದಕ್ಕೂ ಬೃಹತ್ ಶಿಲಾಸಮಾಧಿ ಮತ್ತು ಆದಿಚಾರಿತ್ರಿಕ ಕಾಲದ ನೆಲೆಗಳ ಅವಶೇಷಗಳು ಹರಡಿವೆ. *

**ಬ್ರಹ್ಮಪುತ್ರ :** ಉತ್ತರ ಭಾರತದ ಒಂದು ಮಹಾನದಿ. ಚೀನ ಗಣರಾಜ್ಯದ ಟಿಬೆಟ್ ಸ್ವಾಯತ್ತ ಪ್ರದೇಶದಲ್ಲಿ ಹುಟ್ಟಿ, ಭಾರತದ ಮೂಲಕ ಹರಿದು, ಬಾಂಗ್ಲದೇಶದಲ್ಲಿ ಬಂಗಾಲಕೊಲ್ಲಿಯನ್ನು ಸೇರುತ್ತದೆ. ಇದರ ಒಟ್ಟು ಉದ್ದ 2900 ಕಿಮೀ. ದಕ್ಷಿಣ ಟಿಬೆಟ್‌ನಲ್ಲಿ ಮಾನಸ ಸರೋವರದಿಂದ 96 ಕಿಮೀ ಆಗ್ನೇಯದಲ್ಲಿ ಕೈಲಾಸ ಪರ್ವತದ ಬಳಿ ಚೇಮಾಯಾಂಗ್‌ಮಂಗ್ ಶ್ರೇಣಿಗೆ ಸಮಾನಾಂತರವಾಗಿ ಸು. 1125 ಕಿಮೀ ಪೂರ್ವಕ್ಕೆ ಹರಿದು, ಬಳಿಕ ಒಮ್ಮೆಲೆ ತಿರುಗಿ 7756 ಮೀ ಎತ್ತರದ ನಮಚಾ ಬರ್ವಾ ಪರ್ವತದ ಹತ್ತಿರ ಅಗಾಧವಾದ, ಇಕ್ಕಟ್ಟಾದ ಕೊರಕಲುಗಳನ್ನು ನಿರ್ಮಿಸುತ್ತ ಆಗ್ನೇಯಾಭಿಮುಖವಾಗಿ ಸಾಗಿ ಮುಂದುವರೆದು, ಅಸ್ಸಾಂ ಕೊಳ್ಳ ಹೊಕ್ಕು ಅಲ್ಲಿ ನೈಋತ್ಯಾಭಿಮುಖವಾಗಿ 125 ಕಿಮೀ ಹರಿದು ಗಾರೊ ಗುಡ್ಡ ದಾಟಿ, ಬಾಂಗ್ಲ ಪ್ರವೇಶಿಸಿ ದಕ್ಷಿಣಕ್ಕೆ ತಿರುಗುತ್ತದೆ. ಅಲ್ಲಿ ಟೀಸ್ತಾ, ಗಂಗ ಅನಂತರ ಮೆಘನಾ ನದಿಗಳೊಡನೆ ಕೂಡಿಕೊಂಡು ಹಲವು ಕವಲುಗಳಲ್ಲಿ ಬಂಗಾಲಕೊಲ್ಲಿಯನ್ನು ಸೇರುತ್ತದೆ.




ಈ ನದಿ ಬ್ರಹ್ಮಪುತ್ರ ಎಂದೇ ಪ್ರಸಿದ್ಧಿಯಾಗಿದ್ದರೂ ಇದಕ್ಕೆ ಟಿಬೆಟ್‌ನಲ್ಲಿ ಸಾಂಗ್–ಪೋ ಎಂದು ಕರೆಯಲಾಗುವುದು. ಇದರ ಜಲಾನಯನ ಪ್ರದೇಶದ ವಿಸ್ತೀರ್ಣ 58,01,000 ಚ.ಕಿಮೀ. ಬ್ರಹ್ಮಪುತ್ರದ ಉಪನದಿಗಳಿವು: ದಿಹಾಂಗ್, ದಿಬಾಂಗ್, ಸುಬನ್‌ಗಿರಿ, ಧನ್‌ಸಿರಿ, ಕಾಮೆಂಗ್, ಕೊಪಾಲಿ, ಭರೇಲಿ, ಲೂಹಿತ್ ಮತ್ತು ತಿಸ್ತಾ. ಮಳೆಗಾಲದಲ್ಲಿ ಪ್ರವಾಹದಿಂದ ಉಕ್ಕಿ ಹರಿಯುತ್ತದೆ. ಭಾರತ ಮತ್ತು ಬಾಂಗ್ಲದೇಶಗಳಲ್ಲಿ ನೀರಾವರಿ, ನೌಕಾಯಾನ ಮತ್ತು ಜಲವಿದ್ಯುತ್ ಉತ್ಪಾದನೆಗೆ ಉಪಯುಕ್ತವಾಗಿದೆ. ಬ್ರಹ್ಮಪುತ್ರ ಪ್ರದೇಶ ಭಾರತ ಉಪಖಂಡದಲ್ಲಿ ತೈಲ, ನೈಸರ್ಗಿಕ ಅನಿಲ ಮತ್ತು ಕಲ್ಲಿದ್ದಲು ನಿಕ್ಷೇಪಗಳಿಂದ ಕೂಡಿದೆ. (ಪಿ.ವಿ.ಎ.)

**ಬ್ರಹ್ಮಾವರ:** ದಕ್ಷಿಣ ಕನ್ನಡ ಜಿಲ್ಲೆ ಹಾಗೂ ತಾಲ್ಲೂಕಿನ ಒಂದು ಹಳ್ಳಿ. ಉಡುಪಿಯಿಂದ ಉತ್ತರಕ್ಕೆ 13 ಕಿಮೀ ದೂರದಲ್ಲಿ ಕುಂದಾಪುರಕ್ಕೆ ಹೋಗುವ ಹೆದ್ದಾರಿಯಲ್ಲಿದೆ. ಮೊದಲು ಇದೊಂದು ಅಗ್ರಹಾರವಾಗಿತ್ತು. ಬ್ರಹ್ಮಪುರ ಎಂಬ ಹೆಸರಿನ ಉಲ್ಲೇಖ 12–13 ನೆಯ ಶತಮಾನಗಳ ಶಾಸನಗಳಲ್ಲಿ ದೊರೆಯುತ್ತದೆ. ಇಲ್ಲಿ ಮಹಾಲಿಂಗೇಶ್ವರ, ಜನಾರ್ದನ ಮತ್ತು ಗೋಪಿನಾಥ ದೇವಾಲಯಗಳಿವೆ.

ಬ್ರಹ್ಮಾವರದ ಆಸುಪಾಸಿನಲ್ಲಿ ಕಾಮೇಶ್ವರ ಮತ್ತು ಕಪಿಲೇಶ್ವರ ದೇವಾಲಯಗಳೂ ವಿಜಯನಗರ ಕಾಲದ ಮತ್ತು ಕೆಳದಿನಾಯಕರ ಕಾಲದ ಒಂದೊಂದು ಅಗ್ರಹಾರವೂ ಕಂಡುಬರುತ್ತವೆ. ಇಲ್ಲಿ ಸೇಂಟ್ ಮೇರೀಸ್ ಚರ್ಚ್ ಇದೆ. ಈ ಊರಿನ ಉತ್ತರ ಮತ್ತು ಪೂರ್ವ ಭಾಗದಲ್ಲಿ ಸೀತಾನದಿ ಹರಿಯುತ್ತದೆ. *

**ಬ್ರಾಂಡೆನ್ ಬರ್ಗ್:** ಜರ್ಮನಿಯ ಪಾಟ್ಸ್‌ಡ್ಯಾಮ್ ಜಿಲ್ಲೆಯ ಒಂದು ಕೈಗಾರಿಕಾ ನಗರ. ಬರ್ಲಿನ್ ನಗರದ ನೈಋತ್ಯಕ್ಕೆ ಸು. 61 ಕಿಮೀ ದೂರದಲ್ಲಿ ಹಾವೆಲ್ ನದಿಯ ದಡದ ಮೇಲಿದೆ. ಇದನ್ನು ಬ್ರಾಂಡೆನ್ ಬರ್ಗ್ ಅಂಡೆರ್ ಹಾಫಲ್ ಎಂದೂ ಕರೆಯುವರು. ಈ ನಗರದ ಸುತ್ತ ಕೋಟೆಯಿದೆ. ಹಾವೆಲ್ ನದಿಯಿಂದ ನಗರ ಮೂರು ವಿಭಾಗಗಳಾಗಿವೆ. ನದಿಯ ಬಲಭಾಗದಲ್ಲಿ ಹಳೇ ನಗರ, ಎಡದಡದಲ್ಲಿ ಹೊಸ ನಗರ ಬೆಳೆದಿದ್ದು ಮಧ್ಯದ ದ್ವೀಪಭಾಗದಲ್ಲಿ ಕೆತೆಡ್ರಲ್ ಪಟ್ಟಣವಿದೆ.

ಈ ನಗರ ಹಿಂದೆ ಪ್ರಷ್ಯ ರಾಜ್ಯದ ಒಂದು ಪ್ರಾಂತ್ಯವಾಗಿತ್ತು. ಅನಂತರ ಜರ್ಮನಿಯ ಒಂದು ದೊಡ್ಡ ರಾಜ್ಯವಾಯಿತು. 1920 ರಲ್ಲಿ ಬರ್ಲಿನನ್ನು ಒಂದು ಪ್ರಾಂತ್ಯವೆಂದು ಪರಿಗಣಿಸಲಾಯಿತು. ಅಲ್ಲಿಯ ತನಕ ಬರ್ಲಿನ್ ಬ್ರಾಂಡೆನ್ ಬರ್ಗ್ ರಾಜ್ಯದ ರಾಜಧಾನಿಯಾಗಿತ್ತು. 1949 ರಲ್ಲಿ ಬ್ರಾಂಡೆನ್ ಬರ್ಗ್ ರಷ್ಯದ ಆಡಳಿತಕ್ಕೆ ಸೇರಿದ ಪೂರ್ವ ಜರ್ಮನಿಯ ಒಂದು ರಾಜ್ಯವಾಯಿತು. 1952ರಲ್ಲಿ ಇದನ್ನು ಫ್ರಾಂಕ್‌ಫರ್ಟ್, ಪಾಟ್ಸ್‌ಡ್ಯಾಮ್ ಮತ್ತು ಕಾಟ್‌ಬಸ್ ಎಂಬ ಮೂರು ಜಿಲ್ಲೆಗಳಾಗಿ ವಿಂಗಡಿಸಲಾಯಿತು. (ಕೆ.ಆರ್.)

**ಬ್ರಿಟಿಷ್ ವರ್ಜಿನ್ ದ್ವೀಪಗಳು:** ಬ್ರಿಟಿಷ್ ಸಾಗರೋತ್ತರ ಭೂ ಭಾಗಗಳು, ಕೆರೇಬಿಯನ್‌ನಿಂದ ಪೋರ್ಟೋರಿಕೋ ವರೆಗೆ ಇರುವ ಈ ದ್ವೀಪಗಳು ವರ್ಜಿನ್ ದ್ವೀಪ ಸಮೂಹದ ಒಂದು ಭಾಗ, ಉಳಿದ ದ್ವೀಪಗಳು ಸಂಯುಕ್ತ ಸಂಸ್ಥಾನಕ್ಕೆ ಸೇರಿರುವ ವರ್ಜಿನ್ ದ್ವೀಪಗಳು. ಈ ದ್ವೀಪಗಳಲ್ಲಿ ಪ್ರಮುಖವೆಂದರೆ ಟೊರ್‌ಟೋಲ ವರ್ಜಿನ್ ಗಾರ್ಡಾ, ಅನೆಗಡ ಮತ್ತು ಜೂಸ್ಟ್‌ವಾನ್ ಡೈಕ್. ಇವುಗಳೊಂದಿಗೆ ಇತರೆ ಸು. 50 ಸಣ್ಣ ದ್ವೀಪಗಳು ಸೇರುತ್ತವೆ. ಇಲ್ಲಿ ಸು. 15 ದ್ವೀಪಗಳಲ್ಲಿ ಜನವಸತಿ ಇದೆ. ದೊಡ್ಡ ದ್ವೀಪ ಟೊರ್ ಟೋಲ 20 ಕಿಮೀ ಉದ್ದ ಮತ್ತು 5 ಕಿಮೀ ಅಗಲ ಇದ್ದು 22,000 ಜನಸಂಖ್ಯೆ ಹೊಂದಿದೆ. ಈ ದ್ವೀಪದ ರಾಜಧಾನಿ ರೋಡ್ ಟೌನ್ ಇರುವುದು ಈ ದ್ವೀಪದಲ್ಲೇ.

ಜನಸಂಖ್ಯೆ 22,016 (2005). ಭೌಗೋಳಿಕ ಪ್ರದೇಶ 153 ಚ.ಕಿಮೀ. ಜಲ ಪ್ರದೇಶ ಶೇ. 1.6 ರಷ್ಟು. ಜನ ಸಾಂದ್ರತೆ ಪ್ರತಿ ಚ.ಕಿಮೀ ಗೆ 260. ಅಧಿಕೃತ ಭಾಷೆ ಇಂಗ್ಲಿಷ್. 1960ರಲ್ಲಿ ಯು. ಕೆ. ಪ್ರತ್ಯೇಕ ವಸಾಹತು ಸಾಗರೋತ್ತರ ಭಾಗವಾಗಿಯೂ 1967 ರಲ್ಲಿ ಸ್ವಾಯತ್ತ ಭಾಗವೆಂದೂ ಬೆಳಕಿಗೆ ಬಂದಿತು.

ಇಲ್ಲಿನ ಇತರೆ ದ್ವೀಪಗಳೆಂದರೆ ಬೀಫ್, ಕೋಫರ್, ಜಿಂಜರ್, ಗ್ರೇಟ್ ಕಮನೊಯಿ, ಗ್ರೇಟ್‌ಥ್ಯಾಚ್, ಗ್ವೂನ, ಮಸ್ಕಿಟೊ, ನೆಕ್ಕರ್, ನಾರ್ಮನ್, ಪೀಟರ್ ಮತ್ತು ಸಾಲ್ಟ್ ದ್ವೀಪಗಳು. ಈ ದ್ವೀಪಗಳು ಉಪಉಷ್ಣವಲಯದ ವಾಯುಗುಣವನ್ನು ಹೊಂದಿವೆ. ವಾಣಿಜ್ಯ ಮಾರುತಗಳ ಪ್ರಭಾವವಿರುವುದರಿಂದ ಉಷ್ಣಾಂಶದ ವ್ಯತ್ಯಾಸ ಕಡಿಮೆ. ಬೇಸಗೆಯ ಸರಾಸರಿ ಉಷ್ಣಾಂಶ $29^0$ಸೆ. ಚಳಿಗಾಲದ ಸರಾಸರಿ $25^0$ಸೆ. ವರೆಗೆ. ಚಂಡಮಾರುತ ಹಾವಳಿಯಿರುತ್ತದೆ.

ಆರ್ಥಿಕತೆ: ಒಟ್ಟು ತಲಾ ಆದಾಯವು 38,500 ಡಾಲರು (2004). ಪ್ರವಾಸೋದ್ಯಮ ಶೇ. 45 ಆದಾಯವನ್ನು ಒದಗಿಸುತ್ತಿದೆ. ಹಣಕಾಸಿನ ಸೇವೆಗಳಿಂದ ಶೇ. 50 ರಾಷ್ಟ್ರೀಯ ಆದಾಯ ಲಭಿಸುತ್ತಿದೆ. ಒಟ್ಟು ಜನಸಂಖ್ಯೆಯ ಶೇ. 83 ಆಫ್ರೊ–ಕೆರೀಬಿಯನ್ ಮೂಲದವರು. ಇವರನ್ನು ಬ್ರಿಟಿಷರು ಗುಲಾಮರನ್ನಾಗಿ ಈ ದ್ವೀಪಗಳಿಗೆ ಕರೆತಂದರು, ಇವರನ್ನು ಹೊರತು ಪಡಿಸಿ ಬ್ರಿಟಿಷ್ ಮತ್ತು ಯುರೋಪಿಯನ್ ಮೂಲದವರೂ ಇಲ್ಲಿದ್ದಾರೆ. (ವಿ.ಎಸ್.ಎ.)

**ಬ್ರಿಸ್ಟಲ್[1]:** ಇಂಗ್ಲೆಂಡಿನ ಒಂದು ಕೈಗಾರಿಕ ಹಾಗೂ ಬಂದರು ನಗರ. ಇದು ಇಗ್ಲೆಂಡಿನ ನೈಋತ್ಯಕ್ಕೆ ಹಾಗೂ ಬ್ರಿಸ್ಟಲ್ ಕೊಲ್ಲಿಯ ಪೂರ್ವಕ್ಕೆ 11 ಕಿಮೀ ದೂರದದಲ್ಲಿದೆ. ಇದು ಏವನ್ ಹಾಗೂ ಫ್ರೌಮ್‌ನದಿಗಳ ಸಂಗಮದಲ್ಲಿರುವುದರಿಂದ ನೌಕಾಯಾನಕ್ಕೆ ಉಪಯುಕ್ತವಾಗಿದೆ. ಉ ಅ. $51^0 27'$; ಪ.ರೇ. $2^0 35'$. ಇದೊಂದು ಕೌಂಟಿ (1373ರಿಂದ). ಜನಸಂಖ್ಯೆ 380615 (2001).

ಇಲ್ಲಿ ಮಾಂಸ, ಹೊಗೆಸೊಪ್ಪು, ಮದ್ಯಸಾರ ಮತ್ತು ಹಣ್ಣುಗಳ ವ್ಯಾಪಾರವಿದೆ. ಆಮದಾಗುವ ಪದಾರ್ಥಗಳಲ್ಲಿ ಪೆಟ್ರೊಲಿಯಮ್, ಮರದ ದಿಮ್ಮಿಗಳು, ಸತು ಮತ್ತು ಫಾಸ್ಫೇಟ್‌ಗಳು ಮುಖ್ಯವಾದವು. ರಫ್ತಿನ ಪದಾರ್ಥಗಳಲ್ಲಿ ಸಿದ್ಧವಸ್ತುಗಳು, ಯಂತ್ರೋಪಕರಣ, ಕಾರು, ಟ್ರಾಕ್ಟರ್ ಪ್ರಮುಖವಾದವು. ಇದರಿಂದ ಬ್ರಿಸ್ಟಲ್‌ನ ಸುತ್ತಮುತ್ತ ಅನೇಕ ಆಧುನಿಕ ಕೈಗಾರಿಕೆಗಳು ಬಂದರಿನ ಅನುಕೂಲತೆ ಪಡೆದು ಬೆಳೆದಿವೆ. ಅವುಗಳಲ್ಲಿ ಸಕ್ಕರೆ ಕೈಗಾರಿಕೆ, ಹೊಗೆಸೊಪ್ಪು ಸಂಸ್ಕರಣ, ಕೋಕೋ ಮತ್ತು ಚಾಕೊಲೇಟ್ ಕೈಗಾರಿಕೆ, ಮದ್ಯಸಾರ ತಯಾರಿಕೆ, ಗಾಜಿನ ಕೈಗಾರಿಕೆ, ಪೋರ್ಸಲಿನ್, ಪಾಟರಿ ಕೈಗಾರಿಕೆ ಮುಖ್ಯವಾದವು. ಆಧುನಿಕ ಕೈಗಾರಿಕೆಗಳಲ್ಲಿ ವಿಮಾನ ಕಾರ್ಖಾನೆಯನ್ನು ಹೆಸರಿಸಬಹುದು.

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬ್ರಿಸ್ಟಲ್ ಹೆಸರಿನ ಕೆಲವು ನಗರಗಳಿವೆ. ಅವುಗಳಲ್ಲಿ ಕೆಲವನ್ನು ಮುಂದೆ ಕೊಡಲಾಗಿದೆ.

**ಬ್ರಿಸ್ಟಲ್[2]:** ಅಮೆರಿಕ ಮಧ್ಯಕನೆಕ್ಟಿಕಟ್ ಪ್ರಾಂತ್ಯದ ಒಂದು ಕೈಗಾರಿಕ ನಗರ. ಪ್ರಾಂತ್ಯದ ಆಡಳಿತ ಕೇಂದ್ರವಾದ ಹಾರ್ಟ್‌ಫರ್ಡ್ ನಗರಕ್ಕೆ ನೈಋತ್ಯದಲ್ಲಿ ಸು. 24 ಕಿಮೀ ದೂರದಲ್ಲಿದೆ. 1727ರಲ್ಲಿ ನೆಲಸಿದ ಈ ವಸಾಹತು, ಫಾರ್ಮಿಂಗ್‌ಟನ್ನಿನ ಒಂದು ಭಾಗವಾಗಿದ್ದು ಅನಂತರ ನ್ಯೂ ಕೇಂಬ್ರಿಜ್ ಎಂಬ ಹೆಸರಿನಿಂದ ಪ್ರಖ್ಯಾತಿಗೆ ಬಂತು. ಇದನ್ನು 1785ರಲ್ಲಿ ಒಂದು ಪಟ್ಟಣವಾಗಿ ಗುರುತಿಸಲಾಯಿತು. 1911ರಲ್ಲಿ ಬ್ರಿಸ್ಟಲ್ ಬರೋ ಬಡಾವಣೆಯ ಸೇರ್ಪಡೆಯೊಂದಿಗೆ ನಗರವೆಂದು ಸಾರಲಾಯಿತು. ಇಲ್ಲಿರುವ ಚಿಪ್ಪನ್ಸ್ ಬೆಟ್ಟದ ಮೇಲಿರುವ ಗುಹೆ ಟೋರಿಗಳ ಗುಹೆ ಎಂದು ಹೆಸರಾಗಿದೆ. ಇದೊಂದು ವಾಣಿಜ್ಯ ಕೇಂದ್ರ. ಗಡಿಯಾರಗಳ ತಯಾರಿಕೆಗೆ ಪ್ರಸಿದ್ಧ. ಇಲ್ಲಿ ಅಮೆರಿಕ ಗಡಿಯಾರಗಳ ವಸ್ತು ಸಂಗ್ರಹಾಲಯವಿದೆ.

**ಬ್ರಿಸ್ಟಲ್[3]:** ಪೆನ್ಸಿಲ್‌ವೇನಿಯ ಪ್ರಾಂತ್ಯದ ಒಂದು ಕೈಗಾರಿಕ ನಗರ. ಬಕ್ಸ್ ಕೌಂಟಿಗೆ ಸೇರಿದೆ. ಡೆಲವೇರ್ ನದಿಯ ಪಶ್ಚಿಮ ದಂಡೆಯ ಮೇಲೆ ಫಿಲಿಡೆಲ್ಫಿಯದ ಈಶಾನ್ಯದಲ್ಲಿ ಸು. 37 ಕಿಮೀ ದೂರದಲ್ಲಿದೆ. ಈ ವಸಾಹತು 1697ರಲ್ಲಿ ಪ್ರಾರಂಭವಾಗಿ ನ್ಯೂಜೆರ್ಸಿಯ

ಬರ್ಲಿಂಗ್‌ಟನ್ನಿಗೆ ಜಲಮಾರ್ಗ ಸಂಪರ್ಕ ಬೆಳೆದಮೇಲೆ ಹೆಚ್ಚು ಅಭಿವೃದ್ಧಿಗೊಂಡಿತು. ಮುಂದೆ ಫಿಲಿಡೆಲ್ಫಿಯದಿಂದ ಮೊರಸ್‌ವಿಲೆಗೆ ಹೋಗುವ ಹೆದ್ದಾರಿ ರಚನೆಯಿಂದ ಈ ನಗರ ಮತ್ತಷ್ಟು ಬೆಳೆಯಿತು. ಇಲ್ಲಿರುವ ಭೂಜಲ ಚಿಲುಮೆಗಳು ಫಿಲಿಡೆಲ್ಫಿಯನ್ನರಿಗೆ ಹೆಚ್ಚು ಪ್ರಿಯ. ಡೆಲವೇರ್ ಕಾಲುವೆ ನಿರ್ಮಾಣ (1832) ಮತ್ತು ಪೆನ್ಸಿಲ್‌ವೇನೀಯ ರೈಲು ರಸ್ತೆ ನಿರ್ಮಾಣ (1834) ಈ ನಗರದ ಅಭಿವೃದ್ಧಿಗೆ ಸಹಕಾರಿಯಾದುವು. ಗಿರಣಿಗಳ ಸ್ಥಾಪನೆ. ಲೋಹಸಾಮಗ್ರಿಗಳು, ರಾಸಾಯನಿಕ ವಸ್ತುಗಳು, ಕಾಗದ ಮತ್ತು ರಗ್ಗುಗಳ ತಯಾರಿಕೆ ಕೈಗಾರಿಕೆಗಳಿವೆ. ಇಲ್ಲಿನ ಫಾಲ್ಸಿಂಗ್‌ಟನ್ ಕಟ್ಟಡ ವಸಾಹತು ಕಾಲದ ಸ್ಮಾರಕವಾಗಿದೆ.

**ಬ್ರಿಸ್ಟಲ್[4]:** ರೋಡೇ ಐಲೆಂಡ್ ಪ್ರಾಂತ್ಯದ ಒಂದು ಕೌಂಟಿ, ಕೌಂಟಿಯ ಮುಖ್ಯ ನಗರ ಹಾಗೂ ಬಂದರು. ಪ್ರಾವಿಡೆನ್ಸ್‌ಗೆ ಆಗ್ನೇಯದಲ್ಲಿ ಸು. 21 ಕಿಮೀ ದೂರದಲ್ಲಿದೆ. ಇದೊಂದು ಪ್ರವಾಸಿ ಕೇಂದ್ರವಾಗಿದೆ. ಇಲ್ಲಿ ಕ್ರೀಡಾನೌಕೆಗಳು ಹಾಗೂ ವಿಹಾರ ದೋಣಿಗಳನ್ನು ತಯಾರಿಸುತ್ತಾರೆ. ಕೈಗಾರಿಕ ಕೇಂದ್ರವಾಗಿ ಅಲ್ಯೂಮಿನಿಯಮ್, ವಿದ್ಯುತ್ ಹಾಗೂ ವಿವಿಧ ಯಂತ್ರೋಪಕರಣಗಳು, ಪ್ಲಾಸ್ಟಿಕ್ ಸರಕುಗಳು, ಗಿರಣಿ ವಸ್ತುಗಳು ಮತ್ತು ರಬ್ಬರ್ ಸಾಮಾನುಗಳನ್ನು ಉತ್ಪಾದಿಸಲಾಗುತ್ತಿದೆ.

**ಬ್ರಿಸ್ಟಲ್[5]:** ವರ್ಜೀನಿಯ ಮತ್ತು ಟೆನೆಸೀ ರಾಜ್ಯಗಳ ಗಡಿ ನಡುವೆ ಇರುವ ಒಂದು ನಗರ. ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಒಂದೇ ಆಗಿದ್ದರೂ ರಾಜಕೀಯವಾಗಿ ವರ್ಜೀನೀಯ ಮತ್ತು ಟೆನೆಸೀ ರಾಜ್ಯಗಳ ಆಡಳಿತಕ್ಕೆ ಸೇರಿದ ಎರಡು ನಗರ ಪ್ರದೇಶವನ್ನು ಒಳಗೊಂಡಿದೆ. ಇದೊಂದು ಕೈಗಾರಿಕಾನಗರ. ವಿವಿಧ ಲೋಹಗಳ ಗಣಿಗಾರಿಕೆ, ಮರಸಾಗಣೆ. ಹಡಗು ನಿರ್ಮಾಣಗಳ ಜೊತೆಗೆ ರೇಯಾನ್, ಕಾಗದ, ಚರ್ಮ ಮತ್ತು ಮರದ ಸಾಮಾನುಗಳ ತಯಾರಿಕೆಯುಂಟು.

ಇವಲ್ಲದೆ ಫ್ಲಾರಿಡ ರಾಜ್ಯದ ಲಿಬರ್ಟಿ ಕೌಂಟಿಯಲ್ಲೂ ನ್ಯೂಹ್ಯಾಂಪ್‌ಷೈರಿನ ಗ್ರಾಫ್ಟನ್ ಕೌಂಟಿಯಲ್ಲೂ ಮತ್ತು ವೆರ್‌ಮೌಂಟ್‌ನ ಅಡಿಸನ್ ಕೌಂಟಿಯಲ್ಲೂ ಇದೇ ಹೆಸರಿನ ನಗರಗಳಿವೆ.

ಬ್ರಿಸ್ಟಲ್ ಹೆಸರಿನ ನಗರಗಳಲ್ಲದೆ ಒಂದು ಕೊಲ್ಲಿ ಹಾಗೂ ಒಂದು ಕಡಲು ಕಾಲುವೆಯುಂಟು. ಕೊಲ್ಲಿ ಅಲಾಸ್ಕದ ನೈಋತ್ಯದಲ್ಲಿರುವ ಬೇರಿಂಗ್ ಸಮುದ್ರದ ಸು. 300 ಕಿಮೀ ಭೂ ಚಾಚು. ಸು. 435 ಕಿಮೀ ಅಗಲವಾಗಿದೆ. ಈ ಕೊಲ್ಲಿ ಹೆಚ್ಚು ಆಳವಾಗಿಲ್ಲ. ನೌಕಾಯಾನಕ್ಕೆ ಅನುಕೂಲವಾಗದಿದ್ದರೂ ಮೀನುಗಾರಿಕೆಗೆ ಅನುಕೂಲವಾಗಿದೆ.

ಬ್ರಿಸ್ಟಲ್ ಕಡಲು ಕಾಲುವೆ: ಗ್ರೇಟ್ ಬ್ರಿಟನ್ನಿನ ಪಶ್ಚಿಮದಲ್ಲಿರುವ ಅಟ್ಲಾಂಟಿಕ್ ಸಾಗರದ ಒಂದು ಕಿರುಗಾಲುವೆ. ಕಾಲುವೆಯ ಉತ್ತರ ತೀರ ಸೌತ್‌ವೇಲ್ಸಿನ ಕಲ್ಲಿದ್ದಲು ಗಣಿ ಪ್ರದೇಶವಾಗಿದ್ದು ಕೈಗಾರಿಕೆಗಳ ಕೇಂದ್ರವಾಗಿದೆ. ದಕ್ಷಿಣತೀರ ವ್ಯವಸಾಯ ಪ್ರಧಾನವಾಗಿದೆ. ಕಾಲುವೆಯ ಪೂರ್ವ ತುದಿಯಲ್ಲಿ ಸವೆರನ್ ನದಿ ಅಳಿವೆಯಿದೆ (ಕಾಲುವೆ ನೌಕಾಯಾನಕ್ಕೆ ಅನುಕೂಲವಾಗಿದೆ). (ಕೆ.ಆರ್.)

**ಬ್ರಿಸ್ಬೇನ್:** ಆಸ್ಟ್ರೇಲಿಯ ಖಂಡದ ಕ್ವೀನ್ಸ್‌ಲೆಂಡ್ ವಿಭಾಗದ ರಾಜಧಾನಿ ಆಡಳಿತ ಕೇಂದ್ರ ಮತ್ತು ಪ್ರಮುಖ ನಗರ. ಬ್ರಿಸ್ಬೇನ್ ನದಿಯ ಇಕ್ಕೆಲಗಳಲ್ಲಿ ಹರಡಿಕೊಂಡಿದೆ. ಪೆಸಿಫಿಕ್ ಸಾಗರದ ತೀರದಲ್ಲಿರುವ ಈ ನಗರ ಸಿಡ್ನಿಯಿಂದ 800 ಕಿಮೀ ಉತ್ತರದಲ್ಲಿದೆ. ಜನಸಂಖ್ಯೆ 18,10,943 (2006).

ಜಾನ್ ಅಕ್ಸ್ಲಿ ಈ ನಗರ ಪ್ರದೇಶವನ್ನು ಪ್ರಥಮವಾಗಿ 1823ರಲ್ಲಿ ಅನ್ವೇಷಿಸಿದ. ನ್ಯೂಸೌತ್‌ವೇಲ್ಸಿನ ಗವರ್ನರ್ ಆಗಿದ್ದ ಸರ್‌ತಾಮಸ್ ಬ್ರಿಸ್ಬೇನಿನ ಗೌರವಾರ್ಥ ಈ ನಗರಕ್ಕೆ ಬ್ರಿಸ್ಬೇನ್ ಎಂದು ನಾಮಕರಣಮಾಡಲಾಯಿತು (1834). 1859ರಲ್ಲಿ ಕ್ವೀನ್ಸ್‌ಲೆಂಡಿನ ರಾಜಧಾನಿಯಾಯಿತು. 1920ರಲ್ಲಿ ದಕ್ಷಿಣ ಬ್ರಿಸ್ಬೇನ್ ನಗರವನ್ನು ಈ ನಗರದೊಡನೆ ಒಂದುಗೂಡಿಸಿ ಬ್ರಿಸ್ಬೇನ್ ಮಹಾನಗರದ ರಚನೆಯಾಯಿತು. ಇದೊಂದು ಕೈಗಾರಿಕೆಗಳ ಮತ್ತು ಉದ್ಯೋಗಗಳ ಕೇಂದ್ರ ನಗರ. ಗೋದಿ, ಉಣ್ಣೆ, ಹೈನು ಉತ್ಪನ್ನಗಳು, ಸಂಸ್ಕರಿತ ಆಹಾರಪದಾರ್ಥಗಳು ಇಲ್ಲಿಯ ಮುಖ್ಯವ್ಯಾಪಾರ ವಸ್ತುಗಳು. ರೈಲು ಮತ್ತು ಹೆದ್ದಾರಿಯ ಕೇಂದ್ರ. ಪ್ರಸಿದ್ಧ ಹಡಗುಕಟ್ಟೆ. ಸಿಮೆಂಟ್, ರಬ್ಬರ್ ವಸ್ತುಗಳು, ಗೊಬ್ಬರ ಮುಂತಾದ ಕಾರ್ಖಾನೆಗಳಿವೆ. ವಿದ್ಯುತ್‌ರೈಲುಮಾರ್ಗ ಮತ್ತು ವಿಮಾನ ನಿಲ್ದಾಣಗಳಿವೆ. (ಎ.ಕೆ.ಬಿ.)

**ಬ್ರೂನಿ:** ಮಲೇಷ್ಯದ ಸಾರವಾಕ್ ರಾಜ್ಯದ ಉತ್ತರ ತೀರದಲ್ಲಿರುವ ಒಂದು ಸ್ವತಂತ್ರ ರಾಜ್ಯ. 1984 ಜನವರಿ 1ರಂದು ಸ್ವಾತಂತ್ರ ಗಳಿಸಿ ಆಗ್ನೇಯ ಏಷ್ಯರಾಷ್ಟ್ರಗಳ ಆರನೆಯ ಸದಸ್ಯರಾಷ್ಟ್ರವೆನಿಸಿಕೊಂಡಿತು. ಉ.ಅ. $1^0$–$7^0$ ಹಾಗೂ ಪೂ.ರೇ. $109^0$–$118^0$ಗಳ ನಡುವೆ ಇದೆ. ಸಾರವಾಕಿಗೆ ಸೇರಿದ ಲಿಂಬಾನ್ ನದಿ ಕಣಿವೆ ಬ್ರೂನೈದರುಸ್ಸಲ್ ಇಂದಿನ ಅಧಿಕೃತನಾಮ. ಇದನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ರಾಜ್ಯದ ಎರಡೂ ಭಾಗಗಳ ಉತ್ತರಕ್ಕೆ ದಕ್ಷಿಣ ಚೀನ ಸಮುದ್ರವಿದ್ದು ಮಿಕ್ಕ ಮೂರು ಕಡೆಗಳಲ್ಲೂ ಸಾರವಾಕ್ ರಾಜ್ಯ ಸುತ್ತುವರಿದಿದೆ. ಬ್ರೂನಿ ರಾಜ್ಯದ ಪಶ್ಚಿಮ ಭಾಗ ದೊಡ್ಡದು. ರಾಜ್ಯದ ವಿಸ್ತೀರ್ಣ 5.765 ಚ.ಕಿಮೀ. ರಾಜಧಾನಿ ಚಂದರ್ ಸೆರಿಟಗವಾನ್. ಜನಸಂಖ್ಯೆ 52,300 (2001).

ರಾಜ್ಯದ ಅಧಿಕೃತ ಭಾಷೆ ಮಲಯ್. ಆದರೆ ಸರ್ಕಾರಿ ವ್ಯವಹಾರಗಳಿಗೆ ಇಂಗ್ಲಿಷನ್ನು ಬಳಸಬಹುದಾಗಿದೆ. ಬ್ರಿಟಿಷ್ ಕಾಮನ್‌ವೆಲ್ತಿನ ತೈಲೋತ್ಪಾದನ ರಾಜ್ಯಗಳಲ್ಲಿ ಕೆನಡವನ್ನು ಬಿಟ್ಟರೆ ಇದೇ ಮುಖ್ಯವಾದದ್ದು. ಆಗ್ನೇಯ ಏಷ್ಯದಲ್ಲಿ ಉನ್ನತ ಜೀವನಮಟ್ಟ ಹಾಗೂ ವೈಯಕ್ತಿಕ ಆದಾಯ ತೆರಿಗೆಯಿಲ್ಲದ ಕೆಲವೇ ರಾಜ್ಯಗಳಲ್ಲಿ ಇದು ಒಂದಾಗಿದೆ.




ಬ್ರೂನಿ 121 ಕಿಮೀ ಸಮುದ್ರತೀರ ಪಡೆದಿದೆ. ಈ ಪ್ರದೇಶ ನದಿಗಳಿಂದ ತಂದುಹಾಕಲ್ಪಟ್ಟ ಮೆಕ್ಕಲುಮಣ್ಣು ಮತ್ತು ಸಸ್ಯಾಂಗಾರದಿಂದ ಕೂಡಿದ್ದು ಸಮತಲವಾಗಿದೆ. ರಾಜ್ಯ ಗುಡ್ಡಗಾಡು ಪ್ರದೇಶಗಳಿಂದ ಕೂಡಿದೆ. ಇವು ಕೆಂಪು ಜೇಡಿಮಣ್ಣಿನಿಂದಾದುವು. ರಾಜ್ಯದ ಆಗ್ನೇಯ ಭಾಗ ಸಮುದ್ರಮಟ್ಟಕ್ಕೆ ಸು. 914 ಮೀ ಎತ್ತರದಲ್ಲಿದೆ. ಬೆಲಾಯಿಟ್, ಟುಟೋಂಗ್, ಬ್ರೂನೈ ಮತ್ತು ಟೆಬುರಾಂಗ್ ಮೊದಲಾದ ಇಲ್ಲಿನ ಮುಖ್ಯ ನದಿಗಳೆಲ್ಲವೂ ಉತ್ತರದಿಕ್ಕಿಗೆ ಹರಿದು ದಕ್ಷಿಣ ಚೀನ ಸಮುದ್ರವನ್ನು ಸೇರುತ್ತವೆ.

ರಾಜ್ಯ ಉಷ್ಣವಲಯದಲ್ಲಿದ್ದು ಸರಾಸರಿ ಉಷ್ಣತೆ $24^0$ ಸೆ. ನಿಂದ $30^0$ ಸೆ. ನಡುವೆ ಇರುತ್ತದೆ. ನವೆಂಬರ್ ಮತ್ತು ಮಾರ್ಚ್‌ಗಳ ನಡುವೆ ಬೀಸುವ ಈಶಾನ್ಯ ಮಾನ್‌ಸೂನ್ ಮಾರುತಗಳಿಂದ ಬಹುಪಾಲು ಮಳೆ ಆಗುತ್ತದೆ. ಜೂನ್ ಮತ್ತು ಆಗಸ್ಟ್‌ಗಳ ನಡುವೆ ಬೀಸುವ ನೈಋತ್ಯ ಮಾನ್‌ಸೂನ್ ಮಾರುತಗಳು ಒಣಹವೆಯಿಂದ ಕೂಡಿರುತ್ತವೆ. ಸರಾಸರಿ ಮಳೆ 325 ಸೆಂಮೀ. ರಾಜ್ಯದ ಸುಮಾರು ಮುಕ್ಕಾಲು ಭಾಗ ಉಷ್ಣವಲಯದ ಕಾಡುಗಳಿಂದ ಕೂಡಿದ್ದು ಅನೇಕ ಕಡೆ ಮನುಷ್ಯ ಪ್ರವೇಶ ಅಸಾಧ್ಯವೆನಿಸುವಷ್ಟು ದಟ್ಟವಾಗಿವೆ. ಈ ಕಾಡುಗಳಲ್ಲಿ ಗಟ್ಟಿಯಾದ ಚೌಬೀನೆ ಮರಗಳು ಹೆಚ್ಚಾಗಿವೆ. ಸಮುದ್ರತೀರದುದ್ದಕ್ಕೂ ಮರಳು ಭೂಮಿಯಲ್ಲಿ ಕ್ಯಾಸರಿನಾ ಅಥವಾ ಸರ್ವೆಮರಗಳು ಬೆಳೆಯುತ್ತವೆ. ಪಶ್ಚಿಮ ಬ್ರೂನಿಯಲ್ಲಿರುವ ಮುವಾರಾ ಪಟ್ಟಣ ಹಾಗೂ ಬೆಲಾಯಿಟ್ ಮತ್ತು ಟುಟೋಂಗ್ ನದಿಗಳ ಮೇಲ್ಭಾಗದಲ್ಲಿ ಮ್ಯಾಂಗ್ರೋವ್ ಮತ್ತು ಸಸ್ಯಾಂಗಾರಗಳಿಂದ ಕೂಡಿದ ಜೌಗುಪ್ರದೇಶವಿದೆ. ಕಾಡುಗಳಲ್ಲಿ ಹುಲಿ, ಕೋತಿ ಮೊದಲಾದ ಪ್ರಾಣಿಗಳೂ ಅನೇಕ ರೀತಿಯ ಪಕ್ಷಿಗಳೂ ಇವೆ. ಇತ್ತೀಚೆಗೆ ಶೇ. 20ರಷ್ಟು ಕಾಡನ್ನು ಕಡಿದು ಸ್ಥಳೀಯ ಜನರ ಬೇಸಾಯಕ್ಕೆ ಅನುವು ಮಾಡಲಾಗಿದೆ. ಇಲ್ಲಿಯ ಪ್ರಮುಖ ಉತ್ಪನ್ನಗಳು ಬತ್ತ, ಮೆಣಸು, ಸೀಮೆ ಅಕ್ಕಿ, ತೆಂಗು, ಹಣ್ಣುಗಳು ಮತ್ತು ರಬ್ಬರ್. ತೀರ ಪ್ರದೇಶದಲ್ಲಿ ಬೇಸಾಯದ ಜೊತೆಗೆ ಮೀನುಗಾರಿಕೆಯೂ ನಡೆಯುತ್ತದೆ. ಇಲ್ಲಿ ಬೇಸಾಯದ ಉತ್ಪನ್ನ ಕಡಿಮೆ.

ಆಗ್ನೇಯ ಏಷ್ಯದ ಅನೇಕ ಸಮುದಾಯಗಳ ಜನರು ಇಲ್ಲಿ ವಾಸಿಸುತ್ತಾರೆ. ಇದರಲ್ಲಿ ಶೇ. 50ರಷ್ಟು ಮಲಯನ್ನರು, 28ರಷ್ಟು ಚೀನೀಯರು. 16ರಷ್ಟು ಇಬಾನ್ ಅಥವಾ ಕಡಾಜನ್ ಮತ್ತು 5ರಷ್ಟು ಭಾರತೀಯರು ಮತ್ತು ಯುರೋಪಿಯನ್ನರು ಇದ್ದಾರೆ. ಹೆಚ್ಚು ಮಂದಿ ಮುಸ್ಲಿಮರಿದ್ದಾರೆ. ಒಳಭಾಗದ ಪ್ರದೇಶಗಳಲ್ಲಿ ಇಂದಿಗೂ ಭೂತಾರಾಧಕರು ಇದ್ದಾರೆ. ಸ್ಥಳೀಯ ಕ್ರೈಸ್ತರಿದ್ದಾರೆ. ಚೀನೀಯರಲ್ಲಿ ಸಾಮಾನ್ಯವಾಗಿ ಬೌದ್ಧರು ಅಥವಾ ತಾವೊ ಧರ್ಮದವರಿದ್ದಾರೆ. ಜನಸಂಖ್ಯೆಯ ವಾರ್ಷಿಕ ಹೆಚ್ಚಳ ಶೇ. 16ರಷ್ಟಿದ್ದು ಇದರಲ್ಲಿ ಬಹುಭಾಗ ಹೊರಗಿನಿಂದ ವಲಸೆ ಬಂದವರಾಗಿದ್ದಾರೆ. ವಲಸೆ ಬರುವವರಲ್ಲಿ ಹೆಚ್ಚಿನವರು ಮಲೇಷ್ಯದ ಚೀನೀಯರು, ಮಲಯನ್ನರು, ಡಾಯಕರು ಹಾಗೂ ಸಿಂಗಪುರ ಮತ್ತು ಇಂಗ್ಲೆಂಡಿನಿಂದ ಬರುವ ಜನರು.

ಇಲ್ಲಿಯ ಜನರಲ್ಲಿ ಹೆಚ್ಚು ಭಾಗ ಸೆರಿಯಾ ಹಾಗೂ ಕುವಾಲಾ ಬೆಲಾಯಿಟ್‌ನಲ್ಲಿರುವ ತೈಲಬಾವಿಗಳ ಬಳಿ ವಾಸಿಸುತ್ತಾರೆ. ಪಟ್ಟಣವಾಸಿಗಳಲ್ಲಿ ಬಹುಪಾಲು ಜನ ರಾಜಧಾನಿಯಲ್ಲಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಜನ ಎತ್ತರಿಸಿದ ಸ್ಥಳಗಳಲ್ಲಿ ಕಟ್ಟಲಾದ ಹುಲ್ಲು ಚಾವಣಿಯಿರುವ

ಮರ ಅಥವಾ ಬೊಂಬಿನ ಮನೆಯಲ್ಲಿ ವಾಸಿಸುತ್ತಾರೆ. ನಗರದಲ್ಲಿ ಆಧುನಿಕ ಕಟ್ಟಡಗಳೂ ಅಪಾರ್ಟ್‌ಮೆಂಟ್‌ಗಳೂ ಹೊಟೇಲುಗಳೂ ವ್ಯಾಪಾರ ಕೇಂದ್ರಗಳೂ ಇವೆ. ನಗರದ ಆಧುನಿಕ ಭಾಗದ ಜೊತೆಯಲ್ಲಿಯೇ ಕಾಂಪೋಂಗ್ ಆಯೆರ್ ಎಂಬ ಹಳೆಯ ಭಾಗದಲ್ಲಿ ನದಿಯ ಉದ್ದಕ್ಕೂ ಎತ್ತರಿಸಿದ ಸ್ಥಳಗಳಲ್ಲಿ ಕಟ್ಟಲಾಗಿರುವ ಚಿಕ್ಕ ಚಿಕ್ಕ ಮನೆಗಳಲ್ಲಿ 10,000ಕ್ಕೂ ಹೆಚ್ಚು ಬ್ರೂನೈ ಮಲಯನ್ನರು ವಾಸಿಸುತ್ತಾರೆ. ಈ ಮನೆಗಳು ಕಾಲ್ನಡೆಯ ಸೇತುವೆಗಳು ಮತ್ತು ಸಣ್ಣ ಕೋಣೆಗಳ ಮೂಲಕ ಪರಸ್ಪರ ಸಂಪರ್ಕ ಪಡೆದಿವೆ.

ಸಮೃದ್ಧ ತೈಲನಿಕ್ಷೇಪವೇ ಬ್ರೂನಿಯ ಆರ್ಥಿಕ ಪ್ರಗತಿಯ ಬೆನ್ನೆಲುಬಾಗಿದೆ. ರಾಜ್ಯದ ಆದಾಯದ ಪ್ರಮುಖ ಮೂಲಗಳು ತೈಲ ಗ್ಯಾಸೊಲಿನ್ ಮೇಲಿನ ತೆರಿಗೆಗಳು, ತೈಲದ ಮೇಲಿನ ರಾಜಾದಾಯ ಮತ್ತು ವಿದೇಶಗಳಲ್ಲಿ ಬಂಡವಾಳ ತೊಡಗಿಸುವಿಕೆ. 1929ರಲ್ಲಿ ತೈಲನಿಕ್ಷೇಪವನ್ನು ಕಂಡುಹಿಡಿಯಲಾಗಿದ್ದು ಭೂಮಿಯ ಮೇಲಿನ ಹಾಗೂ ಸಮುದ್ರದಲ್ಲಿಯ ತೈಲಬಾವಿಗಳಲ್ಲಿ 1971ರಲ್ಲಿ ದಿನಕ್ಕೆ ಸು. 2,00,000 ಬ್ಯಾರಲ್‌ಗಳಷ್ಟು ತೈಲ ಉತ್ಪಾದಿಸಲಾಗುತ್ತಿತ್ತು. ಕಚ್ಚಾತೈಲವನ್ನು ಕೊಳವೆಗಳ ಮೂಲಕ ಸಾರವಾಕ್‌ನಲ್ಲಿಯ ಲಟೋಂಗ್ ತೈಲ ಶುದ್ಧೀಕರಣ ಕೇಂದ್ರಕ್ಕೆ ಒಯ್ಯಲಾಗುತ್ತದೆ. ಇಲ್ಲಿ ತೈಲನಿಕ್ಷೇಪಗಳ ಶೋಧನೆ ನಡೆಯುತ್ತಲಿದ್ದು ಇಲ್ಲಿರುವ ಒಟ್ಟು ತೈಲನಿಕ್ಷೇಪವೆಷ್ಟೆಂಬುದು ಇನ್ನೂ ನಿರ್ಧಾರವಾಗಿಲ್ಲ. ತೈಲದ ರಫ್ತಿನಿಂದ ಬರುವ ಆದಾಯ ದೇಶದ ಒಟ್ಟು ರಫ್ತಿನ ಆದಾಯದ ಶೇ. 99ರಷ್ಟಿದೆ. ಇನ್ನುಳಿದುದು ಶೇ.1ರಷ್ಟು ರಫ್ತಾಗುವ ರಬ್ಬರ್, ಮೆಣಸು, ಮರ, ಕಾರ್ಕ್ ಮೊದಲಾದವುಗಳಿಂದ ಲಭ್ಯ. ಇತರ ಬೇಸಾಯದ ಉತ್ಪನ್ನಗಳಾದ ಬತ್ತ, ಸೀಮೆಅಕ್ಕಿ ಮತ್ತು ಹಣ್ಣುಗಳು ಬಹಳ ಸಣ್ಣ ಪ್ರಮಾಣದಲ್ಲಿದ್ದು ಸ್ಥಳೀಯ ಬೇಡಿಕೆಯನ್ನೇ ಪೂರೈಸಲಾರವು.

ಬ್ರೂನಿ ತೀವ್ರವಾಗಿ ಅಭಿವೃದ್ಧಿ ಹೊಂದುತ್ತಲಿರುವ ರಾಜ್ಯವಾಗಿದ್ದು 1974ರಲ್ಲಿ ಜನರ ಆರ್ಥಿಕ ಸಾಮಾಜಿಕ ಜೀವನವನ್ನು ಉತ್ತಮಪಡಿಸಲು ಮೂರನೆಯ ಪಂಚವಾರ್ಷಿಕ ರಾಷ್ಟ್ರೀಯ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ತರಬೇತಾದ ಕಾರ್ಮಿಕ ವರ್ಗದ ಕೊರತೆಯಿಂದಾಗಿ ಇಲ್ಲಿಯ ಅಭಿವೃದ್ಧಿ ಸಲ್ಪಮಟ್ಟಿಗೆ ಕುಂಠಿತವಾಗಿದೆ. ರಸ್ತೆಸಾರಿಗೆ ಹೆಚ್ಚು ಅಭಿವೃದ್ಧಿಯಾಗಿಲ್ಲ. ರಾಜಧಾನಿಯಿಂದ ತೈಲೋತ್ಪಾದನ ಪ್ರದೇಶಗಳಾದ ಸೆರಿಯಾ ಹಾಗೂ ಕುವಾಲಾ ಜಿಲಾಯಿಟ್‌ಗಳಿಗೆ ಪ್ರಮುಖ ಹೆದ್ದಾರಿ ಇವೆ. ಒಳನಾಡಿನಲ್ಲಿ ನದಿಗಳೇ ಪ್ರಮುಖ ಸಂಪರ್ಕ ಸಾಧನ. ಬಂದಾರ್ ಸೆರಿ ಬೆಗಾವನ್ ಮತ್ತು ಕುವಾಲ ಜಿಲಾಯಿಟ್‌ಗಳಲ್ಲಿ ಸರಕು ಕಟ್ಟೆಗಳಿಂದ ಕೂಡಿದ ಬಂದರುಗಳಿವೆ. ಇಲ್ಲಿಂದ ಅನೇಕ ಕಡೆಗಳಿಗೆ ಪ್ರಯಾಣಿಕರ ದೋಣಿ ಸಂಚಾರವಿದೆ. ರಾಜಧಾನಿಯಲ್ಲಿ ವಿಮಾನ ನಿಲ್ದಾಣವಿದ್ದು ಇತರ ಅನೇಕ ಕಡೆಗಳಲ್ಲಿ ಅನುಕೂಲವಾದ ಹೆಲಿಕಾಪ್ಟರ್ ಠಾಣಗಳಿವೆ. ಇಲ್ಲಿಂದ ಸಾರವಾಕ್, ಸಾಬಾ, ಮಲೇಷ್ಯ, ಸಿಂಗಪುರ, ಹಾಂಗ್‌ಕಾಂಗ್, ಇಂಗ್ಲೆಂಡ್, ಮನಿಲಾಗಳಿಗೆ ವಿಮಾನ ಸೌಕರ್ಯವಿದೆ. ಆಂತರಿಕ ವಿಮಾನ ಸಂಚಾರವ್ಯವಸ್ಥೆ ರಕ್ಷಣಾ ಇಲಾಖೆಯ ಅಧೀನದಲ್ಲಿದೆ.

1959 ಸೆಪ್ಟೆಂಬರ್ 29ರಂದು ಸುಲ್ತಾನನಿಂದ ಜಾರಿಗೆ ತರಲ್ಪಟ್ಟ ಸಂವಿಧಾನದಂತೆ ರಾಜ್ಯದಲ್ಲಿ ಆಪ್ತಮಂತ್ರಿಮಂಡಲ, ಕಾರ್ಯಾಂಗ ಮತ್ತು ಶಾಸಕಾಂಗಗಳಿವೆ. ಎಕ್ಸಿಕ್ಯೂಟಿವ್ ಕೌನ್ಸಿಲ್‌ಗೆ ಮಂತ್ರಿಮಂಡಲ ಎಂದು ಹೆಸರಿಡಲಾಗಿದೆ. ಶಾಸಕಾಂಗದಲ್ಲಿ 20 ಸದಸ್ಯರಿದ್ದು ಸುಲ್ತಾನನಿಂದ ನೇಮಿಸಲ್ಪಟ್ಟ ಸಭಾಪತಿಯಿರುತ್ತಾನೆ. ಮಂತ್ರಿ ರಾಜ್ಯದ ಆಡಳಿತ ನಿರ್ವಹಣೆ ನಡೆಸುತ್ತಾನೆ ಮತ್ತು ಸುಲ್ತಾನನಿಗೆ ಜವಾಬ್ದಾರನಾಗಿರುತ್ತಾನೆ. ಚುನಾವಣೆ 5 ವರ್ಷಗಳಿಗೊಮ್ಮೆ ನಡೆಯುತ್ತದೆ. 1970ರಿಂದೀಚೆಗೆ ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ. ಇಲ್ಲಿನ ಹಣ ಬ್ರೂನಿ ಡಾಲರ್. ಅಧಿಕೃತ ಭಾಷೆ ಮಲ್ಯೆ. ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣ ಉಚಿತ. ಶೇ.45ರಷ್ಟು ಸಾಕ್ಷರತೆಯನ್ನು ಸಾಧಿಸಲಾಗಿದೆ. (ವಿ.ಎಸ್.ಎ.)

**ಬ್ರೆಜಿಲ್:** ದಕ್ಷಿಣ ಅಮೆರಿಕ ಖಂಡದ ಸಂಯುಕ್ತ ಗಣರಾಜ್ಯ. ಉ.ಅ. $5^0 15'$–$33^0 45'$ ಹಾಗೂ ಪ.ರೇ. $34^0 50'$–$70^0 0'$ ಗಳ ನಡುವೆ ಇದೆ. ಪ್ರಪಂಚದ ಐದನೆಯ ದೊಡ್ಡ ರಾಷ್ಟ್ರ ಇದು ದಕ್ಷಿಣ ಅಮೆರಿಕದ ಸುಮಾರು ಅರ್ಧ ಭಾಗದಷ್ಟನ್ನು ಆವರಿಸಿಕೊಂಡಿದೆ. ವಾಯವ್ಯದಲ್ಲಿ ಕೊಲಂಬಿಯ, ಉತ್ತರದಲ್ಲಿ ವೆನಿಜುವೇಲ, ಗಯಾನ, ಸುರಿನಾಮ್, ಫ್ರೆಂಚ್ ಗಯಾನ. ಪಶ್ಚಿಮದಲ್ಲಿ ಪೆರು, ಬೊಲಿವಿಯ ಮತ್ತು ಪರಗ್ವೆ ಹಾಗೂ ದಕ್ಷಿಣದಲ್ಲಿ ಅರ್ಜೆಂಟೈನ ಮತ್ತು ಉರಗ್ವೆಗಳಿಂದ ಸುತ್ತುವರೆದಿದೆ. ಉತ್ತರ ದಕ್ಷಿಣವಾಗಿ 4319 ಕಿಮೀ ಪೂರ್ವ ಪಶ್ಚಿಮವಾಗಿ 4328 ಕಿಮೀ ಇರುವ ಇದರ ಒಟ್ಟು ವಿಸ್ತೀರ್ಣ 8,511,965 ಚ.ಕಿಮೀ. ಜನಸಂಖ್ಯೆ. 186,112,800 (2004). ರಾಜಧಾನಿ ಬ್ರಸಿಲಿಯ. ಜನಸಂಖ್ಯೆ 18,00,000 (2001). ನಾಣ್ಯ ರೀಟ್.

ಮೇಲ್ಮೈಲಕ್ಷಣ: ಭೌತಿಕವಾಗಿ ಬ್ರೆಜಿಲ್ ದೇಶವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. 1. ಅಮೆಝಾನ್ ನದಿಯ ಉತ್ತರದ ಗಯಾನ ಉನ್ನತ ಪ್ರದೇಶಗಳು ದೇಶದ ಏರಿಳಿತದ ಪ್ರದೇಶವಾಗಿವೆ. 2. ಅಮೆಝಾನ್ ಉನ್ನತ ಪ್ರದೇಶಗಳ ನಡುವೆಯಿದೆ. ಇದು ಪಶ್ಚಿಮ ಭಾಗದಲ್ಲಿ ವಿಶಾಲವಾಗಿದೆ. ಇದರ ಪ್ರವಾಹ ಮೈದಾನ ವಿಶಾಲವಾಗಿದೆ. ಇದು ಹೆಚ್ಚು ಉಷ್ಣವಲಯದ ಅರಣ್ಯಗಳಿಂದ ಕೂಡಿದೆ. 3. ಬ್ರೆಜಿಲ್ ಉನ್ನತ ಪ್ರದೇಶ ಅಮೆಝಾನ್ ನದಿಯ ದಕ್ಷಿಣಕ್ಕಿದೆ. ಇದು ದಕ್ಷಿಣದಲ್ಲಿ ಉರಗ್ವೆವರೆಗೆ ಹಾಗೂ ಪೂರ್ವದಲ್ಲಿ ಅಟ್ಲಾಂಟಿಕ ಕರಾವಳಿಯವರೆಗೂ ಹರಡಿದೆ. 4. ಅಟ್ಲಾಂಟಿಕ್ ತೀರ ಅಟ್ಲಾಟಿಂಕ್ ಸಾಗರ ಮತ್ತು ಬ್ರೆಜಿಲ್ ಉನ್ನತ ಪ್ರದೇಶದ ನಡುವೆ ಹಬ್ಬಿದೆ. ಕರಾವಳಿಯ ಉತ್ತರದಲ್ಲಿ ಉಷ್ಣವಲಯದ ಹುಲ್ಲುಗಾವಲು, ಮಧ್ಯಭಾಗದಲ್ಲಿ ಉಷ್ಣವಲಯದ ಅರಣ್ಯ ಮತ್ತು ದಕ್ಷಿಣದಲ್ಲಿ ಆರ್ದ್ರ ಉಪ ಉಷ್ಣವಲಯದ ಪ್ರದೇಶವಿದೆ. ತೀರ ಪ್ರದೇಶದ ಒಟ್ಟು ಉದ್ದ 9687 ಕಿಮೀ.




ನದಿಗಳು: ಅಮೆಝಾನ್, ಪಾರನಾ ಮತ್ತು ಸ್ಯಾನ್‌ಫ್ರಾನ್ಸಿಸ್ಕೋ ಬ್ರೆಜಿಲ್‌ನ ಮುಖ್ಯ ನದಿಗಳು. ಅಮೆಝಾನ್ ನದಿ ಆಂಡಿಸ್ ಪರ್ವತದಲ್ಲಿ (ಪೆರು) ಹುಟ್ಟಿ ಪೂರ್ವಾಭಿಮುಖವಾಗಿ ಬ್ರೆಜಿಲ್‌ನ ಉತ್ತರ ಭಾಗದಲ್ಲಿ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಇದರ ಉಪನದಿಗಳೆಂದರೆ ಟೋಕನ್, ಟೀನ್ಸ್, ಅರಗ್ವೆಯ, ಹಿಂಗೂ, ಟ್ಯಾಪಜೋಸ್, ಮಂದಿರ (ದಕ್ಷಿಣದ), ನೇಗ್ರೊ, ಬ್ರೊಂಟೇಬಿಸ್ ಮತ್ತು ಜಲಿ (ಉತ್ತರ) ಪರಗ್ವೆ ಮತ್ತು ಉರಗ್ವೆ ಇತರ ಮುಖ್ಯನದಿಗಳು.

ವಾಯುಗುಣ: ಸಮಭಾಜಕ ವೃತ್ತ ಹಾದು ಹೋಗಿರುವ ಬ್ರೆಜಿಲ್‌ನಲ್ಲಿ ವಾಯುಗುಣದ ಮೇಲೆ ಅದರ ಪ್ರಭಾವವಿದೆ. ಆರ್ದ್ರತೆಯಿರುವುದರಿಂದ ಉಷ್ಣಾಂಶ ಕೆಲವೊಮ್ಮೆ $35^0$ಸೆ ನಷ್ಟಿರುತ್ತದೆ. ನದಿ ಹರಿಯುವ ಕಡೆ ಬೇಸಗೆಯ ಸರಾಸರಿ ಉಷ್ಣತೆ $26^0$ಸೆ, ಚಳಿಗಾಲದಲ್ಲಿ $23^0$ಸೆ. ಬಿಸಿಲಿನ ತಾಪ ಹೆಚ್ಚಿರುವ ಈಶಾನ್ಯದಲ್ಲಿ ಬೇಸಗೆ ಉಷ್ಣತೆ $37.8^0$ಸೆ ಗಿಂತ ಅಧಿಕ. ರೈಯೋ–ಡಿ–ಜನ್ಯೆರೊನಲ್ಲಿ ಚಳಿಗಾಲದ ಸರಾಸರಿ ಉಷ್ಣಾಂಶ $22^0$ಸೆ. ಇದ್ದರೆ ಬೇಸಗೆಯಲ್ಲಿ $27^0$ಸೆ ನಷ್ಟಿರುತ್ತದೆ. ಬ್ರೆಜಿಲ್‌ನ ಬಹುಭಾಗ ಸಾಧಾರಣ ಮಳೆ ಪಡೆಯುತ್ತದೆ. ಅದು 100–150 ಸೆಂಮೀ. ಅಮೆಝಾನ್ ತಗ್ಗು ಬಯಲಿನಲ್ಲಿ ಸರಾಸರಿ ಮಳೆಯು 200 ಸೆಂಮೀ ಗಿಂತ ಹೆಚ್ಚಿರುತ್ತದೆ. ಈಶಾನ್ಯ ಭಾಗ ಆಗಾಗ್ಗೆ ಪ್ರವಾಹ ಮತ್ತು ಬರಗಳನ್ನು ಎದುರಿಸುತ್ತಿರುತ್ತದೆ.

ಸಸ್ಯ ಹಾಗೂ ಪ್ರಾಣಿವರ್ಗ: ತೇವಾಂಶಭರಿತ ಸಮಭಾಜಕ ವೃತ್ತದ ಅಮೆಝಾನ್ ಬಯಲಿನಲ್ಲಿ ನಿತ್ಯ ಹರಿದ್ವರ್ಣದ ಕಾಡುಗಳಿವೆ. ಇದನ್ನು ಸೆಲ್ವ ಎಂದು ಕರೆಯಲಾಗಿದೆ. ಬ್ರೆಜಿಲ್‌ನ ಹೆಚ್ಚು ಭಾಗ ಉಷ್ಣವಲಯದ ಸವನ್ನಾ ಹುಲ್ಲುಗಾವಲಿನ ಪ್ರದೇಶವಾಗಿದೆ. ಈಶಾನ್ಯ ಭಾಗದಲ್ಲಿ ಪೊದೆ ಮತ್ತು ಮುಳ್ಳು ಜಾತಿಯ ಸಸ್ಯವರ್ಗವಿದೆ. ಉನ್ನತ ಭಾಗದಲ್ಲಿ ಸೂಚಿಪರ್ಣ ಅರಣ್ಯವಿದೆ. ಯಥೇಚ್ಛವಾಗಿ ವನ್ಯ ಮೃಗಗಳಿವೆ. ಜಾಗ್ವಾರ್, ಚಿರತೆ, ಸ್ಲಾತ್, ಜಿಂಕೆ, ಮೊಲ ಮೊದಲಾದ ಪ್ರಾಣಿಗಳಿವೆ. ಅಮೆಝಾನ್ ನದಿ ಪ್ರದೇಶದಲ್ಲಿ 50 ಬಗೆಯ ಚಪ್ಪಟ್ಟೆ ಮೂಗಿನ ಮಂಗಗಳಿವೆ. ನಾನ ಬಣ್ಣಗಳ ಪಕ್ಷಿಗಳಿವೆ, ಜಿಗಣೆ ಮತ್ತು ಕೀಟಗಳಿವೆ.

ಮಣ್ಣು: ಲ್ಯಾಟರೈಟ್ ವಿಧದ ಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಕೆಂಪು ಮಣ್ಣು ಮಂದವಾದ ಪದರದಲ್ಲಿದೆ. ಇದು ಹೆಚ್ಚು ಫಲವತ್ತಾಗಿಲ್ಲ. ಅಮೆಜಾನ್ ನದಿ ಬಯಲಿನಲ್ಲಿ ನದಿ ತಂದು ಹಾಕುವ ಸಂಚಯನ ವಸ್ತುಗಳಿಂದ ಫಲವತ್ತಾದ ಮೆಕ್ಕಲು ಮಣ್ಣಿದೆ. ದಕ್ಷಿಣ ಭಾಗದಲ್ಲಿ ದಟ್ಟವಾದ ಬಣ್ಣವುಳ್ಳ ಟೆರ್ರಾಕೊಟ ಮಣ್ಣಿದೆ. ಇದು ಕಾಫಿ ಬೆಳೆಗೆ ಸೂಕ್ತ.

ಖನಿಜಗಳು: ಬ್ರೆಜಿಲ್ ಅಪಾರವಾದ ಖನಿಜ ನಿಕ್ಷೇಪ ಹೊಂದಿದೆ. ಕಬ್ಬಿಣ ನಿಕ್ಷೇಪಗಳು ಅಮಪಾ ಮತ್ತು ಮಿನಾಸ್‌ನಲ್ಲಿವೆ. ರೀಯಾಗ್ರಾಂಡೀದ ಸೂಲ್‌ನಲ್ಲಿ ಕಲ್ಲಿದ್ದಲು ನಿಕ್ಷೇಪವಿದೆ. ಚಿನ್ನ, ಬೆಳ್ಳಿ, ವಜ್ರ, ಟಂಗ್‌ಸ್ಟನ್, ಸೀಸ, ನಿಕ್ಕಲ್, ಲವಣ ಮತ್ತು ತೈಲ ನಿಕ್ಷೇಪಗಳಿವೆ.

ಮೀನುಗಾರಿಕೆ: ಬ್ರೆಜಿಲ್ 9687 ಕಿಮೀ ಉದ್ದದ ತೀರವನ್ನು ಹೊಂದಿದ್ದು ವಿಪುಲವಾದ ಮತ್ಸ್ಯ ಸಂಪತ್ತನ್ನು ಹೊಂದಿದೆ. ಈಶಾನ್ಯ ಮತ್ತು ದಕ್ಷಿಣ ಭಾಗದಲ್ಲಿ ಮೀನುಗಾರಿಕೆ ಅಭಿವೃದ್ಧಿಯಾಗಿದೆ.

ವಿದ್ಯುತ್: ಬೃಹತ್ ನದಿಗಳು ಹರಿಯುತ್ತಿದ್ದು ವಿದ್ಯುತ್ ಉತ್ಪಾದನೆಗೆ ಹೆಚ್ಚು ಅವಕಾಶವಿದೆ.

ವ್ಯವಸಾಯ: ಬ್ರೆಜಿಲ್‌ನ ಕಸಬು ಪ್ರಮುಖವಾಗಿ ವ್ಯವಸಾಯ. ಪ್ರಮುಖ ಬೆಳೆಗಳೆಂದರೆ ಹತ್ತಿ, ಕಾಫಿ, ಮೆಕ್ಕೆಜೋಳ, ಬೀನ್ಸ್, ಬತ್ತ, ಗೋದಿ, ಆಲೂಗೆಡ್ಡೆ, ಸೋಯಾಬಿನ್ಸ್, ಕಬ್ಬು, ಕೊಕೋ, ಕಿತ್ತಳೆ, ರಬ್ಬರ್ ಇತ್ಯಾದಿ. ಕಾಫಿ ಮತ್ತು ಕಬ್ಬಿನ ಉತ್ಪಾದನೆಯಲ್ಲಿ ಬ್ರೆಜಿಲ್ ಪ್ರಪಂಚದಲ್ಲೇ ಮೊದಲ ಸ್ಥಾನ ಪಡೆದಿದೆ. ಕೊಕೋ, ಹೊಗೆಸೊಪ್ಪು ಮತ್ತು ಮುಸುಕಿನ ಜೋಳದ ಉತ್ಪಾದನೆಯಲ್ಲಿ ಮೂರನೆಯ ಸ್ಥಾನ ಪಡೆದಿದೆ. ಆಹಾರ ಸಂಸ್ಕರಣ, ಜವಳಿ, ಲೋಹ, ಕಬ್ಬಿಣ ಮತ್ತು ಉಕ್ಕು, ಯಂತ್ರೋಪಕರಣ ವಾಹನ, ಹಡಗು ಮತ್ತು ಪೆಟ್ರೋಲಿಯಂ ವಸ್ತು ತಯಾರಿಕೆಯ ಕೈಗಾರಿಕೆಗಳಿವೆ. ಬ್ರೆಜಿಲ್ ವಿಸ್ತೀರ್ಣಕ್ಕೆ ಹೋಲಿಸಿದರೆ ಸಾಕಷ್ಟು ಅಭಿವೃದ್ಧಿಯಾಗಿಲ್ಲ. ಆದರೆ ದಕ್ಷಿಣದಲ್ಲಿ ತಕ್ಕಮಟ್ಟಿಗೆ ಬೆಳದಿದೆ. ಇಲ್ಲಿ ರೈಲು ಮಾರ್ಗಗಳ ಬೃಹತ್ ಜಾಲವಿದೆ. ಅನೇಕ ನದಿಗಳು ಹಡಗು ಸಂಚಾರಕ್ಕೆ ಯೋಗ್ಯವಾಗಿವೆ. ಅಮೆಜಾನ್ ನದಿ ನೌಕಯಾನಕ್ಕೆ ಕೆಲವು ಭಾಗದಲ್ಲಿ ಯೋಗ್ಯವಾಗಿದೆ. ಇದರ ಕರಾವಳಿಯಲ್ಲಿ ನೌಕಯಾನದಿಂದ ವಿದೇಶಿ ವ್ಯಾಪಾರ ಸಂಪರ್ಕವಿದೆ. ರಿಯೋ–ಡಿ–ಜೆನ್ಯೆರೊ ನೌಕಯಾನ ಕೇಂದ್ರವಾಗಿದೆ. ಅರಣ್ಯ, ನದಿ, ಬೆಟ್ಟಗಳಿದ್ದರೂ ಬ್ರೆಜಿಲ್‌ನಲ್ಲಿ ರಸ್ತೆ ಸಾರಿಗೆ ಅಭಿವೃದ್ಧಿ ಹೊಂದಿದೆ. ವಿಮಾನ ಸಂಚಾರ ತಕ್ಕ ಮಟ್ಟಿಗೆ ಬೆಳೆದಿದೆ. ರಿಯೋ–ಡಿ–ಜೆನ್ಯೆರೊ, ಅಲೆಗ್ರ, ಕಾಂಪೋ, ಗ್ರಾಂಡ್, ಬ್ರಸಿಲಿಯ, ರಸೀಪ್, ಬಲೆರಿ ಮುಂತಾದವು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು. ಬ್ರೆಜಿಲ್ ಕಾಫಿ, ಸಕ್ಕರೆ, ಕಿತ್ತಳೆ ಮತ್ತು ಸೋಯಬೀನ್ಸ್‌ನ್ನು ರಫ್ತು ಮಾಡುತ್ತದೆ. ಕೈಗಾರಿಕಾ ಸಿದ್ಧವಸ್ತುಗಳನ್ನು, ಯಂತ್ರೋಪಕರಣ ವಾಹನಗಳನ್ನು ಆಮದು ಮಾಡಿಕೊಳ್ಳುತ್ತದೆ.

ರಿಯೋ–ಡಿ–ಜನೈರೊ ಬ್ರೆಜಿಲ್‌ನ ಒಂದು ಪ್ರಮುಖ ಪಟ್ಟಣ. ಜನಸಂಖ್ಯೆ 10,556,000 (2002). ಇದು ಗೌನಬಾರ ಕೊಲ್ಲಿದಂಡೆಯಲ್ಲಿದೆ. ಬ್ರೆಜಿಲ್‌ನ ಎರಡನೆಯ ದೊಡ್ಡ ನಗರ. 1960ರ ವರೆಗೆ ಇದು ಬ್ರೆಜಿಲ್ ದೇಶದ ರಾಜಧಾನಿಯಾಗಿತ್ತು. ಅನಂತರ ಅದು ಬ್ರೆಸಿಲಿಯಗೆ ಬದಲಾವಣೆ ಹೊಂದಿತು. ಸಾವೋ–ಪೊಲೊ ಅಟ್ಲಾಂಟಿಕ್ ಸಾಗರದಿಂದ 50 ಕಿಮೀ ದೂರದಲ್ಲಿ ಉನ್ನತ ಪ್ರದೇಶದಲ್ಲಿದೆ. ಇದು ಪ್ರಪಂಚದ ಒಂದು ಮುಖ್ಯ ನಗರವಾಗಿದೆ. ಅತಿಯಾದ ನಗರೀಕರಣದ ಸಮಸ್ಯೆಗಳನ್ನು ಎದುರಿಸುತ್ತಿದೆ. ಜನಸಂಖ್ಯೆ 17,711,000 (2002). (ಸಿ.ಕೆ.ಆರ್.)

**ಬ್ಲಾಕ್ ಚಿತ್ರಗಳು:** ಭೂ ಸ್ವರೂಪಗಳು ಹಾಗೂ ಅವುಗಳ ಉಗಮ, ಪರಸ್ಪರ ಸಂಬಂಧ ಮೊದಲಾದವುಗಳನ್ನು ವಿವರಿಸಲು ಅತ್ಯಂತ ಉಪಯುಕ್ತವಾದ ಚಿತ್ರಗಳು. ಈ ವಿಧಾನವನ್ನು ಜಿ.ಕೆ. ಗಿಲ್ಬರ್ಟ್ ಮೊದಲು ಬಳಕೆ ಮಾಡಿದ. ಅನಂತರ ಡಬ್ಲ್ಯೂ.ಎಂ ಡೇವಿಸ್ ಇವುಗಳನ್ನು ಮತ್ತಷ್ಟು ಪರಿಣಾಮಕಾರಿಯಾಗುವಂತೆ ಮಾರ್ಪಡಿಸಿದ. ಇವುಗಳು ಮೂರು ಆಯಾಮಗಳಾದ ಉದ್ದ, ಅಗಲ ಹಾಗೂ ಎತ್ತರವನ್ನು ಹೊಂದಿರುವುದರಿಂದ ಚಿತ್ರ ಮಾದರಿಯಲ್ಲಿ ಭೂ ಸ್ವರೂಪಗಳ ವಿವಿಧ ಬಗೆಯ ಲಕ್ಷಣಗಳನ್ನು ಯಥಾವತ್ತಾಗಿ ನಿರೂಪಿಸುತ್ತವೆ. ಅಲ್ಲದೆ ಇವುಗಳು ಸ್ವ ನಿರೂಪತೆಯಾಗುವಷ್ಟು ಸರಳ. ಇದರಿಂದಾಗಿ ಇವುಗಳು ಎರಡು ಆಯಾಮಗಳನ್ನು ಮಾತ್ರ ಹೊಂದಿರುವ ಉದ್ದ ಹಾಗೂ ಅಗಲ ನಕ್ಷೆಗಳಿಗಿಂತ ಹೆಚ್ಚು ಉಪಯುಕ್ತವಾದವು. ಈ ನಿರೂಪಣೆಯೊಂದಿಗೆ ಕೊಟ್ಟಿರುವ ಹಿಮನದಿ ದೃಶ್ಯಾವಳಿಯ ಬ್ಲಾಕ್ ಚಿತ್ರ ಹೀಗಿರುತ್ತದೆ: (ಆರ್.ಎನ್.)

# ಭ

**ಭಂಗರ್:** ಪ್ಲೀಸ್ಟೋಸೀನ್ ಯುಗ ಮತ್ತು ಅನಂತರ ಕಾಲದ ಮರಳು, ಜೇಡಿಮಣ್ಣು ಮತ್ತು ರಾಡಿಗಳಿಂದ ಕೂಡಿದ, ಉತ್ತರ ಭಾರತದ ಸಿಂಧೂ–ಗಂಗ ಬ್ರಹ್ಮಪುತ್ರ ನದಿಗಳ ವಿಸ್ತಾರ ಬಯಲಿನಲ್ಲಿ ಹಲವಾರು ಮೀಟರ್‌ಗಳ ಆಳದವರೆಗೆ ವ್ಯಾಪಿಸಿರುವ ಮೆಕ್ಕಲು ಮಣ್ಣಿನಿಂದ ಕೂಡಿದ ಪ್ರದೇಶ. ಈ ಬಯಲು ನೆಲದಲ್ಲಿ ಭೂವೈಜ್ಞಾನಿಕ ಕಾಲಮಾನದ ಬೇರೆ ಯಾವುದೇ ಶಿಲಾರಾಶಿಯೂ ಇಲ್ಲ. ಈ ತಗ್ಗು ಪ್ರದೇಶದ ರೂಪಣೆಗೂ ಹಿಮಾಲಯ ಪರ್ವತದ ಹುಟ್ಟು ಮತ್ತು ಏರಿಕೆಗೂ (ಅಪ್‌ಲಿಫ್ಟ್) ಸಂಬಂಧ ಉಂಟು. ಹಿಮಾಲಯದ ಏರಿಕೆಯಿಂದ ಹೊಸ ಹೊಸ ಶಿಲಾಭಾಗಗಳೂ ಶಿಥಿಲಗೊಂಡದ್ದರಿಂದಾಗಲೀ ನದಿಗಳ ಸಾಮಾನ್ಯ ಕಾರ್ಯಾಚರಣೆಯಿಂದಾಗಲೀ ಈ ತಗ್ಗುನೆಲ ಮೆಕ್ಕಲುಮಣ್ಣಿನಿಂದ ಆವೃತವಾಗುತ್ತ ಬಂದಿರಬೇಕು ಎಂಬುದು ಒಂದು ಅಭಿಪ್ರಾಯ. ಸಹಸ್ರಾರು ವರ್ಷಗಳ ಅವಧಿಯಲ್ಲಿ ನಡೆದ ಚಟುವಟಿಕೆಯಿಂದ ಈ ಬಯಲು ನಿರ್ಮಾಣಗೊಂಡು ಸಮುದ್ರದೆಡೆಗೆ ಸ್ವಲ್ಪ ಇಳಿಜಾರಾಗುತ್ತಾ ಬಂದು ಉತ್ತರ ರಾಜಸ್ತಾನದಿಂದ ಅಸ್ಸಾಮಿನ ಅರ್ಧಭಾಗ ವ್ಯಾಪಿಸಿಕೊಂಡಿದೆ. ಇಲ್ಲಿಯ ಮೆಕ್ಕಲುಮಣ್ಣು ದೆಹಲಿಯ ಸಮೀಪ ಅತ್ಯಂತ ದಪ್ಪವಾಗಿದೆ (4,572 ಮೀ) ರಾಜಸ್ತಾನ ಮತ್ತು ರಾಜಮಹಲ್ ಅಸ್ಸಾಮ್‌ಗಳ ನಡುವೆ ಕಡಿಮೆ ಆಳದಲ್ಲಿದೆ.

ಮೆಕ್ಕಲುಮಣ್ಣಿನ ಈ ನಿಕ್ಷೇಪವನ್ನು ಹಳೆಯಬಂಡು ಅಥವಾ ಬಂಗರ್ ಎಂದೂ ಹೊಸ ಬಂಡು ಅಥವಾ ಖದರ್ ಎಂದೂ ವಿಂಗಡಿಸಲಾಗಿದೆ. ಭಂಗರ್ ಎತ್ತರ ಪ್ರದೇಶದಲ್ಲಿ ಈಗ ನದಿಗಳು ಆಕ್ರಮಿಸಲಾಗದಂಥ ಸ್ಥಳಗಳಲ್ಲೂ ಖದರ್ ಈಗ ನದಿಗಳು ಹರಿಯುವ ಸ್ಥಳಗಳ ಸಮೀಪದಲ್ಲೂ ಇವೆ. ನೆಲದ ಆಳಕ್ಕೆ ಹೋದಂತೆಲ್ಲ ಈ ನಿಕ್ಷೇಪಗಳು ಗಟ್ಟಿಯಾಗುತ್ತವೆ. ಮಾತ್ರವಲ್ಲದೆ ಜಲ್ಲಿ ಶಿಲೆಯಾಗೂ ರೂಪುಗೊಳ್ಳುತ್ತವೆ. ಇದರಲ್ಲಿ ಸುಣ್ಣ ಮಿಶ್ರಿತ ವಸ್ತುಗಳು ದುಂಡನೆಯ ಹರಳುಗಳ ಆಕಾರದಲ್ಲಿ ಇರುವುವು. ನೆಲದಡಿಯಲ್ಲಿ ಜರಗುವ ಜಲಕ್ರಿಯೆಯೂ ಈ ಆಕಾರಕ್ಕೆ ಕಾರಣವಿರಬಹುದು. ಈ ಸುಣ್ಣಮಿಶ್ರಿತ ಹರಳುಗಳಿಗೆ ಕಂಕರ್ ಎಂದು ಹೆಸರು. ಭಂಗರ್ ನಿಕ್ಷೇಪದಲ್ಲಿ ಇಂಥ ಹರಳುಗಳು ಅಧಿಕ ಪ್ರಮಾಣದಲ್ಲಿವೆ. ಭಂಗರ್ ಪ್ರದೇಶದಲ್ಲಿ ಆನೆ, ಈಕ್ವಸ್ ನೊಮಾಡಿಕಾಸ್, ಖಡ್ಗಮೃಗ, ನೀರಾನೆ ಮೊದಲಾದ ನಶಿಸಿಹೋದ ಪ್ರಾಣಿಗಳ ಜೀವ್ಯವಶೇಷಗಳಿವೆ. ಕಂಕರ್ ಸಿಮೆಂಟ್ ತಯಾರಿಕೆಗೆ ಉಪಯುಕ್ತ ಭಂಗರ್ ಸುಭದ್ರ ಶಿಲೆಗಳಿಂದ ಕೂಡಿದೆಯಾಗಿ ಇದನ್ನು ದೊಡ್ಡ ಅಂತರ್ಜಲ ನಿಧಿ ಎಂದೇ ಹೇಳಬಹುದು. ಈ ಬಗೆಯ ಮೆಕ್ಕಲು ಮಣ್ಣು ಬಂಗಾಲ, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಅಧಿಕ. ನದಿಯ ಪ್ರವಾಹದ ದಿಶೆ ಬದಲಾದಂತೆ ಈ ಪ್ರದೇಶ ಸವೆತಕ್ಕೀಡಾಗಿದೆ. (ಎಂ.ವಿ.)

**ಭಟ್ಕಳ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ತಾಲ್ಲೂಕಿನಲ್ಲಿ 4 ಹೋಬಳಿಗಳೂ 63 ಗ್ರಾಮಗಳೂ ಇವೆ. ವಿಸ್ತೀರ್ಣ ಸು. 411 ಚ.ಕಿಮೀ. ಜನಸಂಖ್ಯೆ 1,49,311.

ಈ ತಾಲ್ಲೂಕಿನಲ್ಲಿ ವೆಂಕಟಪುರನದಿ, ಭಟ್ಕಳನದಿ ಮತ್ತು ಅನೇಕ ಸಣ್ಣ ತೊರೆಗಳು ಹರಿಯುತ್ತವೆ. ಸಮುದ್ರತೀರ ಪ್ರದೇಶ ಮರಳು ಆವೃತಭಾಗ. ಉಳಿದ ಪ್ರದೇಶ ಫಲವತ್ತಾದ ಜಂಬು ಮಣ್ಣಿನಿಂದ ಕೂಡಿದೆ. ತಾಲ್ಲೂಕಿನಲ್ಲಿ ಮಳೆ ಸಮೃದ್ಧಿಯಾಗಿ ಬೀಳುತ್ತದೆ. ಇಡೀ ಭಟ್ಕಳ ಕಣಿವೆ ಪ್ರದೇಶ ಬತ್ತದ ಗದ್ದೆಗಳಿಂದ ತುಂಬಿದೆ. ತಾಲ್ಲೂಕಿನ ಹೆಚ್ಚು ಭೂಪ್ರದೇಶ ವ್ಯವಸಾಯಕ್ಕೊಳಪಟ್ಟಿದೆ. ಬತ್ತ, ಅಡಿಕೆ, ತೆಂಗು ಇಲ್ಲಿಯ ಮುಖ್ಯ ವ್ಯವಸಾಯೋತ್ಪನ್ನಗಳು.

ತಾಲ್ಲೂಕಿನಲ್ಲಿರುವ ಹಲವು ಬಂದರುಗಳಲ್ಲಿ ಭಟ್ಕಳ ಮುಖ್ಯವಾದದ್ದು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆರಡರ ಮಧ್ಯೆ ಇರುವುದರಿಂದ ಈ ತಾಲ್ಲೂಕು ಎರಡೂ ಜಿಲ್ಲೆಗಳ ಸರಕುಗಳ ವ್ಯಾಪಾರ ಕೇಂದ್ರವಾಗಿದೆ. ಉತ್ತಮ ಸಾರಿಗೆ ಮಾರ್ಗಗಳಿವೆ. ದೋಣಿ ಸಂಚಾರ ಮತ್ತು ಸರಕು ಸಾಗಣೆಯ ಸೌಲಭ್ಯ ಉಂಟು. ವಿದ್ಯುಚ್ಛಕ್ತಿ, ಅಂಚೆ, ತಂತಿ, ದೂರವಾಣಿ, ಶಾಲಾಕಾಲೇಜುಗಳು, ಸಾರ್ವಜನಿಕ ಆರೋಗ್ಯ ಕೇಂದ್ರಗಳು ಮತ್ತು ಪಶುವೈದ್ಯಾಲಯಗಳೂ ಇವೆ.

ಭಟ್ಕಳಕ್ಕೆ ವಾಯವ್ಯದಲ್ಲಿ ಸು. 6 ಕಿಮೀ ದೂರದಲ್ಲಿರುವ ಚಾಲಿಕುಂಡ ಅಥವಾ ಹಾಗ್‌ದ್ವೀಪ ಸು. 91 ಮೀ ಎತ್ತರವಿದೆ. ಮುರ್ಡೇಶ್ವರ ಭಟ್ಕಳದ ಉತ್ತರದಲ್ಲಿರುವ ಒಂದು ಬಂದರು. ಹೊನ್ನಾವರ ಭಟ್ಕಳಗಳ ಮಧ್ಯದಲ್ಲಿರುವ ಕಂದುಗಿರಿ ಗುಡ್ಡದಮೇಲೆ ಮುರ್ಡೇಶ್ವರನ ದೇವಾಲಯವಿದೆ. ಇದರ ಸುತ್ತಲ ಪ್ರಕೃತಿ ಮನೋಹರ. ಭಟ್ಕಳಕ್ಕೆ ಉತ್ತರದಲ್ಲಿ ಸು. 6 ಕಿಮೀ ದೂರದಲ್ಲಿ ಶಿರಾಳಿ ಬಂದರಿದೆ. ವೆಂಕಟಪುರನದಿ ಇಲ್ಲಿ ಸಮುದ್ರವನ್ನು ಸೇರುತ್ತದೆ.

ಭಟ್ಕಳ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಕಾರವಾರಕ್ಕೆ ಆಗ್ನೇಯದಲ್ಲಿ 103 ಕಿಮೀ ದೂರದಲ್ಲಿಯೂ ಹೊನ್ನಾವರಕ್ಕೆ ದಕ್ಷಿಣದಲ್ಲಿ 19 ಕಿಮೀ ದೂರದಲ್ಲಿಯೂ ಇದೆ. ಜನಸಂಖ್ಯೆ 42,171. ಭಟ್ಕಳ ನದಿಯ ಮುಖಜಭೂಮಿಯಲ್ಲಿ ಈ ಊರು ಹರಡಿದೆ. ಇದೊಂದು ಸಣ್ಣ ಬಂದರು. *

**ಭದ್ರಾ:** ಕರ್ನಾಟಕ ರಾಜ್ಯದ ಒಂದು ನದಿ. ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹರಿಯುತ್ತದೆ. ತುಂಗಭದ್ರಾ ನದಿಯ ಮೂಲನದಿಗಳಲ್ಲಿ ಒಂದು. ಮೂಡಿಗೆರೆ ತಾಲ್ಲೂಕಿನ ಕಳಸದಿಂದ ಸು. 25 ಕಿಮೀ ಪಶ್ಚಿಮಕ್ಕೆ ಪಶ್ಚಿಮಘಟ್ಟದ ನೆತ್ತಿಯಲ್ಲಿರುವ ವರಾಹ ಪರ್ವತದ ಗಂಗಾಮೂಲ ಇದರ ಉಗಮ. ತುಂಗಾ ನದಿ ಹುಟ್ಟುವುದೂ ಇಲ್ಲಿಯೇ. ಉಗಮಸ್ಥಾನದಿಂದ ಕಳಸದವರೆಗೆ ಪೂರ್ವಾಭಿಮುಖವಾಗಿ ಹರಿದು, ಮುಂದೆ ಸಂಗಮೇಶ್ವರದ ಬಳಿಯಲ್ಲಿ ಉತ್ತರ ಈಶಾನ್ಯದಿಶೆಯಲ್ಲಿ ಖಾಂಡ್ಯ, ನರಸಿಂಹರಾಜಪುರಗಳ ಮೂಲಕ ಲಕ್ಕವಳ್ಳಿಯತ್ತ ಸಾಗುತ್ತದೆ. ಲಕ್ಕವಳ್ಳಿಯಿಂದ ಮುಂದೆ ಉತ್ತರಗಾಮಿಯಾಗಿ ಶಿವಮೊಗ್ಗ ಜಿಲ್ಲೆ ಪ್ರವೇಶಿಸಿ, ಭದ್ರಾವತಿ, ಹೊಳೆ ಹೊನ್ನೂರುಗಳ ಮೂಲಕ ಹರಿದು ಮುಂದೆ ಶಿವಮೊಗ್ಗದ ಈಶಾನ್ಯದಲ್ಲಿರುವ ಕೂಡಲಿಯ ಬಳಿ ತುಂಗಾನದಿಯನ್ನು ಕೂಡುತ್ತದೆ. ಈ ಸಂಯುಕ್ತ ನದಿ ತುಂಗಭದ್ರಾ ಎಂಬ ಹೆಸರಿನಿಂದ ಮುಂದೆ ಸಾಗಿ ಕೃಷ್ಣಾನದಿಯನ್ನು ಸೇರುತ್ತದೆ. ಇದು ಹೆಚ್ಚು ಮಲೆನಾಡು ಪ್ರದೇಶದಲ್ಲೇ ಹರಿಯುವ ನದಿ. ಸಹಜವಾಗಿ ಅನೇಕ ಸಣ್ಣ ಪುಟ್ಟ ಝರಿಗಳು, ಹಳ್ಳಗಳು ಇದನ್ನು ಕೂಡುತ್ತವೆ. ಆನೆಬಿದ್ದಹಳ್ಳ ಭದ್ರಾನದಿಯ ಮುಖ್ಯ ಉಪನದಿ. ಮೂಡಿಗೆರೆ ತಾಲ್ಲೂಕಿನ ದಕ್ಷಿಣದಿಂದ ಬರುವ ಈ ಉಪನದಿ ಸಂಗಮೇಶ್ವರದಲ್ಲಿ ಭದ್ರಾನದಿಯನ್ನು ಸೇರುತ್ತದೆ. ಮುಂದೆ ಚಿಕ್ಕಮಗಳೂರು ತಾಲ್ಲೂಕಿನ ಜಾಗರ್ ಕಣಿವೆಯಿಂದ ಹರಿದುಬರುವ ಸೋಮವಾಹಿನಿ ಹೆಬ್ಬೆಯ ಬಳಿಯಲ್ಲಿ ಸೇರುತ್ತದೆ. ಲಕ್ಕವಳ್ಳಿಯಲ್ಲಿ ಕಲ್ಲತ್ತಗಿರಿ ಮತ್ತು ಕಲ್ಲು ದುರ್ಗದ ಹೊಳೆಗಳು ಭದ್ರಾನದಿಯನ್ನು ಕೂಡುತ್ತವೆ.

ದಟ್ಟವಾದ ಕಾಡುಗಳಲ್ಲಿ ಹರಿಯುವುದರಿಂದ ತುಂಗಾನದಿಯ ನೀರಿನಷ್ಟು ಈ ನದಿಯ ನೀರು ಆರೋಗ್ಯಕರವಾಗಿಲ್ಲವೆಂದು ಹೇಳುವರು. ನದಿಯ ದಡಗಳು ತುಂಬ ಕಡಿದಾಗಿರುವುದರಿಂದ ಇದರ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಲು ಅಷ್ಟಾಗಿ ಅನುಕೂಲವಾಗಿಲ್ಲ. ಆದರೂ ಈ ನದಿಗೆ ಸು. 18 ಚಿಕ್ಕ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಬೆಂಗಳೂರು–ಶಿವಮೊಗ್ಗ ರಸ್ತೆ ಮಾರ್ಗದಲ್ಲಿ, ಬಾಳೆಹೊನ್ನೂರು ಮತ್ತು ಭದ್ರಾವತಿಗಳಲ್ಲಿ ಈ ನದಿಗೆ ಸೇತುವೆಗಳನ್ನು ಕಟ್ಟಿದ್ದಾರೆ. ಲಕ್ಕವಳ್ಳಿ ಬಳಿ ನಿರ್ಮಿಸಿರುವ ಭದ್ರಾ ಅಣೆಕಟ್ಟು ಕರ್ನಾಟಕದ ಬೃಹತ್ ನೀರಾವರಿ ಯೋಜನೆಗಳಲ್ಲಿ ಒಂದು. ಇದರಿಂದ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಒದಗಿದೆ.

ಭದ್ರಾವತಿ, ಲಕ್ಕವಳ್ಳಿ ಮತ್ತು ನರಸಿಂಹರಾಜಪುರ ಈ ನದಿಯ ದಡದಲ್ಲಿರುವ ದೊಡ್ಡ ಊರುಗಳು. ನದಿಯ ಉಗಮಸ್ಥಾನವಾದ ಗಂಗಾಮೂಲ, ನದಿಯ ಬಲದಂಡೆಯಲ್ಲಿರುವ ಕಳಸ, ಖಾಂಡ್ಯ – ಇವು ಪವಿತ್ರ ಕ್ಷೇತ್ರಗಳು. ಎಡದಂಡೆಯಲ್ಲಿರುವ ಬಾಳೆಹೊನ್ನೂರು ಪ್ರಸಿದ್ಧ ವೀರಶೈವ ಕೇಂದ್ರ.

ಭದ್ರಾಯೋಜನೆ: ಕರ್ನಾಟಕ ರಾಜ್ಯದ ವಿವಿಧೋದ್ದೇಶ ನೀರಾವರಿ ಯೋಜನೆಗಳ ಪೈಕಿ ಒಂದು. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಎಂಬ ಸ್ಥಳದ ಬಳಿ ಭದ್ರಾನದಿಗೆ ಅಡ್ಡವಾಗಿ ಕಟ್ಟೆಯೊಂದನ್ನು ಕಟ್ಟಿ ಭದ್ರಾ ಜಲಾಶಯ ನಿರ್ಮಿಸಲಾಗಿದೆ. ಈ ಯೋಜನೆಯನ್ನು 1947ರಲ್ಲಿ ಆರಂಭಿಸಲಾಯಿತು. ಇದರ ಪ್ರಕಾರ ನಿರ್ಮಿಸಲಾದ ಕಲ್ಲುಗಾರೆಯ ಕಟ್ಟೆಯ ಎತ್ತರ ಸು. 59 ಮೀ, ಉದ್ದ 440 ಮೀ, 1115 ಮೀ ಉದ್ದದ ಮಣ್ಣಿನ ಏರಿ ಇದೆ. ಜಲಾಶಯದ ಜಲಸಂಗ್ರಹಣ ಸಾಮರ್ಥ್ಯ ಸು. 2 ಲಕ್ಷ ಘಮೀ. ನದಿಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳಿಂದ ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಸು. ಒಂದು ಲಕ್ಷ ಹೆ. ಭೂಮಿಗೆ ನೀರಾವರಿ ಸೌಲಭ್ಯ ಒದಗಿದೆ. ಬಲದಂಡೆ ನಾಲೆ ಸು. 80 ಕಿಮೀ ದೂರ ಕೋಡುಮಾರ್ಗದ ಮೂಲಕ ಹರಿದು ಮುಂದೆ ಒಂದು ಸುರಂಗದ ಮೂಲಕ ಹಾದು ಉಬ್ರಾಣಿಗುಡ್ಡ ದಾಟುತ್ತದೆ. ಈ ಸುರಂಗಕ್ಕೆ ಉಬ್ರಾಣಿ ಸುರಂಗ ಎಂದು ಹೆಸರು. ಇದನ್ನು ದಾಟಿದ ಬಳಿಕ ನಾಲೆ ದಾವಣಗೆರೆ ಶಾಖೆ, ಮಲೆಬೆನ್ನೂರು ಶಾಖೆ ಎಂಬ ಎರಡು ಶಾಖೆಗಳಾಗುತ್ತದೆ.

ಭದ್ರಾ ವಿದ್ಯುದ್ಯೋಜನೆ : ನದಿಯ ಎರಡೂ ದಂಡೆಗಳಲ್ಲಿ ತಲಾ ಒಂದರಂತೆ ಎರಡು ವಿದ್ಯುಜ್ಜನಕಗಳಿವೆ. ದಂಡೆಯ ಯಂತ್ರಾಗಾರದ್ದು ಫ್ರೌನ್‌ಸಿಸ್ ತಿರುಬಾನಿಯಿಂದ ಚಲಿಸುವ ವಿದ್ಯುಜ್ಜನಕ. ಬಲದಂಡೆಯ ಯಂತ್ರಾಗಾರದ್ದು ಮತ್ತೊಂದು ವಿದ್ಯುಜ್ಜನಕ. ಈ ಎರಡೂ ವಿದ್ಯುಜ್ಜನಕಗಳಿಂದ 40 ಮೆಗಾವಾಟ್ ವಿದ್ಯುತ್ತು ಉತ್ಪತ್ತಿಯಾಗುತ್ತದೆ. (ಎಚ್.ಸಿ.ಕೆ.)

**ಭದ್ರಾವತಿ:** ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಹೋಬಳಿ ಹಾಗೂ ಇವುಗಳ ಆಡಳಿತ ಕೇಂದ್ರ ಮತ್ತು ಕೈಗಾರಿಕಾನಗರ. ಭದ್ರಾವತಿ ತಾಲ್ಲೂಕನ್ನು ಪಶ್ಚಿಮದಲ್ಲಿ ಶಿವಮೊಗ್ಗ, ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು, ಉತ್ತರವಾಯವ್ಯದಲ್ಲಿ ಹೊನ್ನಾಳಿ, ಈಶಾನ್ಯದಲ್ಲಿ ಚನ್ನಗಿರಿ ತಾಲ್ಲೂಕುಗಳು ಸುತ್ತುವರಿದಿವೆ. 161 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 687 ಚ.ಕಿಮೀ.

ಭದ್ರಾನದಿ ತಾಲ್ಲೂಕಿನ ದಕ್ಷಿಣದಲ್ಲಿ ಕಾರೇಹಳ್ಳಿಯ ಬಳಿ ಪ್ರವೇಶಿಸಿ ಉತ್ತರಾಭಿಮುಖವಾಗಿ ಹರಿಯುತ್ತದೆ. ಮುಂದೆ ಕೂಡಲಿಬಳಿ ತುಂಗಾನದಿಯನ್ನು ಕೂಡಿಕೊಂಡು ಸ್ವಲ್ಪದೂರ ಭದ್ರಾವತಿ–ಶಿವಮೊಗ್ಗ ತಾಲ್ಲೂಕುಗಡಿಯಾಗಿ ತುಂಗಭದ್ರ ಹರಿಯುವುದು, ಭದ್ರಾಯೋಜನೆಯ ಎಡನಾಲೆ ಮತ್ತು ವಿದ್ಯುದಾಗಾರ ಈ ತಾಲ್ಲೂಕಿಗೆ ಸೇರಿವೆ.

ತಾಲ್ಲೂಕು ಶಿವಮೊಗ್ಗ ಜಿಲ್ಲೆಯ ಪೂರ್ವಭಾಗದ ಬಯಲು ಪ್ರದೇಶದಲ್ಲಿದ್ದು ಹವೆ ಹಿತಕರವಾಗಿದೆ. ವಾರ್ಷಿಕ ಸರಾಸರಿ ಮಳೆ 110 ಸೆಂಮೀ. ಭದ್ರ ಮತ್ತು ತುಂಗಭದ್ರ ಜಲಾನಯನ ಪ್ರದೇಶಗಳು ತಾಲ್ಲೂಕಿನ ಪಶ್ಚಿಮ ಭಾಗದಲ್ಲಿದ್ದು ಸಾಗುವಳಿಗೆ ಯೋಗ್ಯವಾಗಿವೆ. ಮುಖ್ಯ ಬೆಳೆಗಳು ಬತ್ತ, ರಾಗಿ, ಜೋಳ, ಕಬ್ಬು, ತೆಂಗು, ಅಡಕೆ.

ಕೈಗಾರಿಕೆಯಲ್ಲಿ ಈ ತಾಲ್ಲೂಕು ಮುಂದುವರಿದಿದ್ದು ಕಬ್ಬಿಣ, ಉಕ್ಕು ಕಾರ್ಖಾನೆ, ಸಿಮೆಂಟ್ ಮತ್ತು ಕಾಗದದ ಕಾರ್ಖಾನೆಗಳಿವೆ. ಬತ್ತ ಮತ್ತು ತೈಲ ಗಿರಣಿಗಳು, ಖಾದಿ ಗ್ರಾಮೋದ್ಯೋಗ ಹಾಗೂ ಗೃಹಕೈಗಾರಿಕೆಗಳಿವೆ. ಭದ್ರಾವತಿ–ಕೆಮ್ಮಣ್ಣುಗುಂಡಿ, ಭದ್ರಾವತಿ–ಜೋಳದಾಳು ಮತ್ತು ಭದ್ರಾವತಿ–ಅಗಸನಹಳ್ಳಿ ಟ್ರಾಮ್ ಮಾರ್ಗಗಳ ಮೂಲಕ ಕಾರ್ಖಾನೆಗೆ ಅದಿರಿನ ಸಾಗಣೆ ನಡೆಯುತ್ತದೆ. ರಸ್ತೆ, ರೈಲು ಸಂಪರ್ಕಗಳಿವೆ.

ಭದ್ರಾವತಿ ನಗರ ಬೆಂಗಳೂರು–ಹೊನ್ನಾವರ ರಸ್ತೆ ಮತ್ತು ಬೀರೂರು–ತಾಳಗುಪ್ಪ ರೈಲುಮಾರ್ಗದಲ್ಲಿ ಭದ್ರಾನದಿಯ ಎರಡು ದಂಡೆಗಳ ಮೇಲೂ ಹಬ್ಬಿಕೊಂಡಿದೆ. ಶಿವಮೊಗ್ಗ ನಗರದ ಆಗ್ನೇಯದಲ್ಲಿ 18 ಕಿಮೀ ದೂರದಲ್ಲಿದೆ. ಹಿಂದೆ ಸಣ್ಣ ಕುಲುಮೆಗಳಲ್ಲಿ ಕಬ್ಬಿಣದ ಅದಿರುಗಳನ್ನು ಕರಗಿಸುತ್ತಿದ್ದುದರಿಂದ ಆ ಸ್ಥಳಕ್ಕೆ ಬೆಂಕಿಪುರ ಎಂದು ಹೆಸರಿದ್ದಿತು. ಭದ್ರಾವತಿ ನಗರ ಸ್ಥಾಪಿತವಾಗಿರುವ ಕಡೆ ಭದ್ರಾನದಿ ಬಾಗಿ ಹರಿಯುವುದರಿಂದ ಅದಕ್ಕೆ ವಂಕಿಯಪುರ ಅಥವಾ ಬಂಕಿಯಪುರ ಎಂಬ ಹೆಸರಾಯಿತೆಂದು ತಿಳಿದುಬರುತ್ತದೆ.

ಕೈಗಾರಿಕೆಗಳ ಸ್ಥಾಪನೆಯಿಂದ ಭದ್ರಾವತಿ ಅರ್ಧ ಶತಮಾನದೊಳಗೆ ದೊಡ್ಡನಗರವಾಗಿ ಅಭಿವೃದ್ಧಿಗೊಂಡಿತು. ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿಯ ಕಬ್ಬಿಣದ ಹೇರಳ ಅದಿರನ್ನು ಬಳಸಿಕೊಂಡು ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪಿಸುವ ಯೋಜನೆ 1918ರಲ್ಲಿ ರೂಪುಗೊಂಡು ಕಾರ್ಖಾನೆಯ ಕಟ್ಟಡ ಹಾಗೂ ಯಂತ್ರೋಪಕರಣಗಳು 1922ರಲ್ಲಿ ಸಿದ್ಧವಾಗಿ, ಕೆಲಸ ಪ್ರಾರಂಭವಾಯಿತು (1918–22–23). ಪ್ರಾರಂಭದಲ್ಲಿ ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ ಹಾಗೂ ಭದ್ರಾವತಿ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಗಳ ಮ್ಯಾನೇಜಿಂಗ್ ಏಜೆಂಟರಾಗಿದ್ದರು. 1924ರ ಹೊತ್ತಿಗೆ ಅಗಿನ ಮೈಸೂರು ಸಂಸ್ಥಾನದ ಸರ್ಕಾರ ಕಾರ್ಖಾನೆಯನ್ನು ಪೂರ್ಣ ವಹಿಸಿಕೊಂಡಿತು. ಈಗ ಕಾರ್ಖಾನೆ ಕರ್ನಾಟಕ ಮತ್ತು ಕೇಂದ್ರ ಸರ್ಕಾರಗಳ ಜಂಟಿ ಮಾಲೀಕತ್ವದಲ್ಲಿದೆ. ಭದ್ರಾವತಿಯಲ್ಲಿ ಮೈಸೂರು ಕಾಗದದ ಕಾರ್ಖಾನೆ 1936ರಲ್ಲಿ ಪ್ರಾರಂಭವಾಯಿತು. ಅದರ ಕಾರ್ಮಿಕರ ವಾಸಕ್ಕಾಗಿ ಹೊಸ ಬಡಾವಣೆಯೊಂದು ಪೇಪರ್ ಟೌನ್ ಎಂಬ ಹೆಸರಿನಲ್ಲಿ ಸ್ಥಾಪಿತವಾಯಿತು. ಸಿಮೆಂಟ್ ಕಾರ್ಖಾನೆ ಸಹ ಈ ನಗರದಲ್ಲಿದೆ. ಭದ್ರಾವತಿ ಒಂದು ಮುಖ್ಯ ರೈಲು ನಿಲ್ದಾಣ. ಇಲ್ಲಿಂದ ಶಿವಮೊಗ್ಗ, ತರೀಕೆರೆ ಚನ್ನಗಿರಿ, ಹೊನ್ನಾಳಿ, ತೀರ್ಥಹಳ್ಳಿ ಮೊದಲಾದ ಕಡೆಗಳಿಗೆ ರಸ್ತೆಗಳಿವೆ. ಪ್ರೌಢಶಾಲೆಗಳು, ಕಾಲೇಜುಗಳು, ತಾಂತ್ರಿಕ ತರಬೇತಿ ಮತ್ತು ಕೈಗಾರಿಕಾ ತರಬೇತಿ ಶಾಲೆಗಳೂ ಇವೆ. ನಗರದ ಇತರೆಲ್ಲ ಸೌಲಭ್ಯಗಳೊಂದಿಗೆ ಈ ಕೈಗಾರಿಕಾ ನಗರ ದಿನೇ ದಿನೇ ಬೆಳೆಯುತ್ತಿದೆ.

ಈ ಕಾರ್ಖಾನೆಗೆ ಅಗತ್ಯವಾದ ಕಬ್ಬಿಣದ ಅದಿರು ಕೆಮ್ಮಣ್ಣು ಗುಂಡಿಯಿಂದ, ಸುಣ್ಣದಕಲ್ಲು ಮತ್ತು ಡಾಲೋಮೈಟ್‌ಗಳು ಬಂಡಿಗುಡ್ಡದಿಂದ, ಜಲ ವಿದ್ಯುಚ್ಛಕ್ತಿ ಶರಾವತಿ ಯೋಜನೆಯಿಂದ ನೀರು ಭದ್ರಾನದಿಯಿಂದ ಹಾಗೂ ಮ್ಯಾಂಗನೀಸ್ ಸೊಂಡೂರಿನಿಂದ ಪೂರೈಕೆಯಾಗುತ್ತಿದೆ.

ಇಂದು ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ 2.1 ಲಕ್ಷಟನ್ ಬೀಡು ಕಬ್ಬಿಣ, 48,000ಟನ್ನು ವಿಶೇಷರೀತಿಯ ಉಕ್ಕು ಮತ್ತು 1.8ಲಕ್ಷಟನ್ ಉಕ್ಕಿನ ಗಟ್ಟಿಯಾಗಿರುತ್ತದೆ. ಈಗ ಅಲಾಯ್ ಮತ್ತು ಅತ್ಯುತ್ತಮ ದರ್ಜೆಯ ಉಕ್ಕನ್ನು ಉತ್ಪಾದಿಸುವಂತೆ ಇದನ್ನು ನವೀಕರಿಸಲಾಗಿದೆ. ನಗರದ ಜನಸಂಖ್ಯೆ 1,60,662. (ವಿ.ಜಿ.ಕೆ.)

**ಭರತಪುರ:** ರಾಜಸ್ಥಾನ ರಾಜ್ಯದ ಒಂದು ಜಿಲ್ಲೆ. ಜಿಲ್ಲಾ ಆಡಳಿತ ಕೇಂದ್ರ ಮತ್ತು ಜಿಲ್ಲೆಯ ಪ್ರಮುಖ ಪಟ್ಟಣ. ಈ ಜಿಲ್ಲೆಯ ಉ.ಅ. 26°20′ – 27°47′ ಮತ್ತು ಪೂ. ರೇ. 76°53′ – 78°15′ ನಲ್ಲಿದೆ. ಉತ್ತರಕ್ಕೆ ಹರಿಯಾಣ ರಾಜ್ಯದ ಗುರ್‌ಗಾಂವ್, ಪೂರ್ವದಲ್ಲಿ ಉತ್ತರ ಪ್ರದೇಶದ ಮಥುರ, ಆಗ್ರ, ದಕ್ಷಿಣಕ್ಕೆ ಮಧ್ಯ ಪ್ರದೇಶದ ಮೋರೇನ, ಪಶ್ಚಿಮದಲ್ಲಿ ಸವಾಯ್ ಮಾಧೋಪುರ್ ಮತ್ತು ಅಲ್ವರ್ ಜಿಲ್ಲೆಗಳಿವೆ. ನಗರ್, ಕಾಮನ್, ದೀಗ್, ನದ್‌ಬಾಯ್, ಭರತ್‌ಪುರ, ವೇರ್, ಬಯಾನ, ರುಪ್‌ಬಸ್, ಬಸೇರಿ, ಬಾರಿ, ಧೋಲ್‌ಪುರ್ ಮತ್ತು ರಾಜ್‌ಖೇರ ಇದರ 12 ತಾಲ್ಲೂಕುಗಳು. ಜಿಲ್ಲಾ ವಿಸ್ತೀರ್ಣ ಸು. 8098 ಚ.ಕಿಮೀ. ಜನಸಂಖ್ಯೆ 20,98,323.

ಜಿಲ್ಲಾ ಭೂಪ್ರದೇಶ ಸಮತಟ್ಟಾಗಿದ್ದು ಉತ್ತರ ಭಾಗದಲ್ಲಿ ಮಾತ್ರ ಅಲ್ಲಲ್ಲಿ ಸು. 60–61 ಮೀ ಎತ್ತರದ ಬೆಟ್ಟಗುಡ್ಡಗಳಿವೆ. ಇವುಗಳಲ್ಲಿ ಕಬ್ಬಿಣದ ಅದಿರಿನಿಂದ ಕೂಡಿರುವ ಶಿಲೆಗಳಿವೆ. ಇವು ಕಟ್ಟಡಕ್ಕೆ ಉಪಯುಕ್ತ. ಬನಗಂಗಾ ಈ ಜಿಲ್ಲೆಯ ಪ್ರಮುಖ ನದಿ. ಇದರ

ನೆಲೆ ಮಣ್ಣಿನ ಪ್ರದೇಶದಲ್ಲಿ ಬಾರ್ಲಿ, ದ್ವಿದಳ ಧಾನ್ಯಗಳನ್ನು ಮತ್ತು ಇಡೀ ಜಿಲ್ಲೆಯಲ್ಲಿ ಸಾಸಿವೆಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಸುತ್ತಾರೆ. ಇದರೊಂದಿಗೆ ಇತರ ಎಣ್ಣೆ ಬೀಜಗಳು ಹೆಚ್ಚು ಬೆಳೆಯುವುದರಿಂದ ಜಿಲ್ಲೆಯಲ್ಲಿ ಎಣ್ಣೆ ಗಿರಣಿಗಳು ಅಧಿಕ ಸಂಖ್ಯೆಯಲ್ಲಿವೆ.

ಈ ಜಿಲ್ಲೆಯಲ್ಲಿ ದಂತದ ಹಾಗೂ ಬೆಳ್ಳಿಯ ಹಿಡಿಗಳಿರುವ ಸುಂದರವಾದ ಚಾಮರಗಳನ್ನು ತಯಾರಿಸುತ್ತಾರೆ. ಇಲ್ಲಿಯ ಅರಣ್ಯಗಳಲ್ಲಿ ಲಾವಂಚದ ಗಿಡಗಳು ಬೆಳೆಯುತ್ತವೆ. ಲಾವಂಚದ ಬೇರನ್ನು ಹೆಚ್ಚಾಗಿ ಕನೌಜದ ಅತ್ತರ್ (ಸುಗಂಧ ದ್ರವ್ಯ) ತಯಾರಕರು ಬಳಸಿಕೊಳುತ್ತಾರೆ.

ಭರತಪುರ ಪಟ್ಟಣ ಪಶ್ಚಿಮ ರೈಲ್ವೇ ಹಾದಿಯಲ್ಲಿದೆ. ಇದು ಆಗ್ರದ ವಾಯವ್ಯಕ್ಕೆ ಸು. 55 ಕಿಮೀ ದೂರದಲ್ಲಿದೆ. ಜನಸಂಖ್ಯೆ 3 ಲಕ್ಷಕ್ಕಿಂತಲೂ ಅಧಿಕ. ಆಧುನಿಕ ನಗರ ಸೌಕರ್ಯಗಳೆಲ್ಲ ಇರುವ ಈ ಪಟ್ಟಣ ಶ್ರೀಗಂಧ, ದಂತ ಮತ್ತು ಬೆಳ್ಳಿಯ ಕುಶಲಕಲೆಗೆ ಪ್ರಸಿದ್ಧ. ಭರತಪುರಕ್ಕೆ ವಾಯವ್ಯದಲ್ಲಿ 33 ಕಿಮೀ ದೂರದಲ್ಲಿರುವ ದಿಗ್ ಪಟ್ಟಣದಲ್ಲಿ ಈಗಲೂ ಸೂರಜ್‌ಮಲ್‌ನ ಸುಂದರವಾದ ಅರಮನೆ ಇದೆ. ನಗರದಲ್ಲಿ ಪ್ರಾಚೀನ ಮಣ್ಣಿನ ಗೋಡೆಗಳ ಭಗ್ನಾವಶೇಷಗಳಿವೆ. (ಕೆ.ಆರ್.ಐ.)

**ಭರೂಚ್:** ಗುಜರಾತ್ ರಾಜ್ಯದ ಒಂದು ಜಿಲ್ಲೆ ಹಾಗೂ ಜಿಲ್ಲೆಯ ಆಡಳಿತ ಕೇಂದ್ರ ನಗರ. ಇದನ್ನು ಭರೂಚ್, ಬ್ರೋಚ್, ಬರೋಚ್ ಎಂಬುದಾಗಿ ಕರೆಯುವುದುಂಟು. ಮೊದಲು ಮುಂಬಯಿ ಪ್ರಾಂತ್ಯದ ಆಧಿಪತ್ಯಕ್ಕೆ ಸೇರಿದ್ದು, ರಾಷ್ಟ್ರ ಭಾಷಾವಾರು ಪುನರ್ವಿಂಗಡಣೆ ಆದಾಗ ಗುಜರಾತ್ ರಾಜ್ಯಕ್ಕೆ ಸೇರಿತು (1956). ಗುಜರಾತ್ ರಾಜ್ಯದ ಪೂರ್ವಕ್ಕೆ ಹಾಗೂ ರಾಜಧಾನಿ ಗಾಂಧಿನಗರದ ದಕ್ಷಿಣಕ್ಕಿರುವ ಈ ಜಿಲ್ಲೆಯನ್ನು ದಕ್ಷಿಣದಲ್ಲಿ ಸೂರತ್ ಉತ್ತರದಲ್ಲಿ ವಡೋದರ ಜಿಲ್ಲೆಗಳೂ ಪೂರ್ವದಲ್ಲಿ ಮಹಾರಾಷ್ಟ್ರ ರಾಜ್ಯವೂ ಪಶ್ಚಿಮದಲ್ಲಿ ಅರಬ್ಬಿ ಸಮುದ್ರದ ಕ್ಯಾಂಬೇ ಖಾರಿಯೂ ಸುತ್ತುವರಿದಿವೆ. ವಾಲಿಯ, ಸಗ್‌ಬರ, ಭರೂಚ್, ದೀದಿಯಪಾದ್, ನಂದೋದ್, ಜಗದಿಯಾ, ಅಮೋದ್ ಜಂಬುಸರ್, ವಾಗ್ರ, ಹನ್ಸಾಟ್ ಮತ್ತು ಅಂಕಲೇಶ್ವರ ತಾಲ್ಲೂಕುಗಳು. ಜಿಲ್ಲಾ ವಿಸ್ತೀರ್ಣ 9045 ಚ.ಕಿಮೀ. ಜನಸಂಖ್ಯೆ 20 ಲಕ್ಷಕ್ಕಿಂತಲೂ ಅಧಿಕ. ನರ್ಮದಾ ಮತ್ತು ಕಿಮ್ ಈ ಜಿಲ್ಲೆಯ ಮುಖ್ಯ ನದಿಗಳು. ನರ್ಮದಾ ಜಿಲ್ಲೆಯ ಉತ್ತರದಲ್ಲಿ ಪಶ್ಚಿಮಾಭಿಮುಖವಾಗಿ ಹರಿದು ಭರೂಚ್ ಬಳಿ ಕ್ಯಾಂಬೇ ಖಾರಿಯನ್ನು ಸೇರಿಕೊಳ್ಳುತ್ತದೆ. ಕಿಮ್ ಜಿಲ್ಲೆಯ ದಕ್ಷಿಣದಲ್ಲಿ ಹರಿದು ಹಿಂದು ಕ್ಯಾಂಬೇ ಖಾರಿಯನ್ನು ಸೇರುವುದು. ನದಿಮುಖಜ ಭೂಮಿ ಫಲವತ್ತಾಗಿದೆ. ಹತ್ತಿ, ಗೋದಿ, ಬಾಜ್ರಾ, ತಂಬಾಕು, ನೆಲಗಡಲೆ ಬೆಳೆಯುತ್ತಾರೆ. ಅರಣ್ಯ ಸಂಪತ್ತು ಕಡಿಮೆ. ಮ್ಯಾಂಗನೀಸ್ ಗಣಿಗಳಿವೆ. ಬೆಲೆಬಾಳುವ ಕಲ್ಲುಗಳನ್ನು ತೆಗೆದು ಬೇಡಿಕೆ ಇರುವೆಡೆ ಕಳುಹಿಸುವರು. ರಾಷ್ಟ್ರೀಯ ಹೆದ್ದಾರಿ ಹಾಗೂ ಪಶ್ಚಿಮ ರೈಲ್ವೆ ಸಂಪರ್ಕ ಜಿಲ್ಲೆಗೆ ಇದ್ದು ಇಲ್ಲಿಯ ವ್ಯಾಪಾರಾಭಿವೃದ್ಧಿಗೆ ಸಂಚಾರಕ್ಕೆ ಅನುಕೂಲ ಒದಗಿಸಿವೆ. ಭರೂಚ್ ಬಳಿ ನರ್ಮದಾ ನದಿಯ ಮೇಲೆ 67 ಕಮಾನುಗಳ ಕಬ್ಬಿಣದ ರೈಲು ಸೇತುವೆ ಕಟ್ಟಿದ್ದಾರೆ.

ಭರೂಚ್ ನಗರ ಈ ಜಿಲ್ಲೆಯ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ, ಮುಖ್ಯ ಬಂದರು ಮತ್ತು ವ್ಯಾಪಾರ ಕೇಂದ್ರ ಕೂಡ. ನರ್ಮದಾ ನದಿಯ ಬಲದಂಡೆಯ ಮೇಲಿದೆ. ಅರಬ್ಬಿ ಸಮುದ್ರಕ್ಕೆ 38 ಕಿಮೀ ಹಾಗೂ ವಡೋದರಕ್ಕೆ (ಬರೋಡ) 72 ಕಿಮೀ ದೂರದಲ್ಲಿದೆ. ಜನಸಂಖ್ಯೆ 4 ಲಕ್ಷಕ್ಕಿಂತಲೂ ಅಧಿಕ. ಇಲ್ಲಿ ಹತ್ತಿ ಬಿಡಿಸುವ ಹಾಗೂ ಬಟ್ಟೆ ತಯಾರಿಕೆಯ ಕಾರ್ಖಾನೆಗಳಿವೆ. ಕೈಮಗ್ಗದ ಬಟ್ಟೆ ತಯಾರಿಕೆಯೂ ಇದೆ. ಗಾಜಿನ ಸಾಮಾನುಗಳು, ಶಾಯಿ ತಯಾರಿಕೆಯುಂಟು. ಬಂದರಿನ ಮೂಲಕ ಗೋದಿ, ಹೆಂಚು, ಹತ್ತಿ ನಿರ್ಯಾತವಾಗುತ್ತವೆ. ನಗರದಲ್ಲಿ ಹಳೆಯ ಕೋಟೆ, ಮಸೀದಿ ಮುಂತಾದವುಗಳಿವೆ. (ವಿ.ಜಿ.ಕೆ.)

**ಭಾಕ್ರ – ನಂಗಲ್ ನದಿಕಣಿವೆ ಯೋಜನೆ:** ಭಾರತದಲ್ಲೇ ಅತ್ಯಂತ ದೊಡ್ಡ ನದಿಕಣಿವೆ ಯೋಜನೆ. ಪಂಜಾಬ್ ರಾಜ್ಯದ ರಾಜಧಾನಿ ಚಂದೀಗಢದಿಂದ ಸು. 115 ಕಿಮೀ ದೂರದ ಭಾಕ್ರ ಎಂಬಲ್ಲಿಯೂ ಇಲ್ಲಿಂದ 13 ಕಿಮೀ ದೂರದ ನಂಗಲ್ ಎಂಬಲ್ಲಿಯೂ ಸಟ್ಲೆಜ್ (ಶತದ್ರು) ನದಿಗೆ ಅಡ್ಡವಾಗಿ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಮಳೆಗಾಲದಲ್ಲಿ ಈ ನದಿಯಲ್ಲಿ ಉಂಟಾಗುವ ಮಹಾಪೂರದಿಂದ ಆಗುವ ಹಾನಿಯನ್ನು ತಡೆಗಟ್ಟಲು, ಬೇಸಗೆಯ ಕಾಲದಲ್ಲಿ ನದಿನೀರಿನ ಗಾತ್ರ ಕಡಿಮೆಯಾಗಿ ನೀರಿನ ಪೂರೈಕೆ ಅಸಾಧ್ಯವಾಗುವುದನ್ನು ತಪ್ಪಿಸಲು ಪಂಜಾಬ್, ಹರಿಯಾಣಗಳ ಭೂಮಿಯನ್ನು ನೀರಾವರಿಗೆ ಯೋಗ್ಯವಾಗಿ ಮಾಡಲು ಈ ಪ್ರದೇಶ ಹಾಗೂ ಇನ್ನಿತರ ಪ್ರದೇಶಗಳಿಗೆ ವಿದ್ಯುತ್‌ಪೂರೈಕೆ ಮಾಡಲು, ಭೂಸಂರಕ್ಷಣೆಮಾಡಲು ಇತ್ಯಾದಿ, ಈ ವಿವಿಧೋದ್ದೇಶ ಯೋಜನೆಯನ್ನು ಪಂಜಾಬ್, ಹರಿಯಾಣ ಮತ್ತು ರಾಜಸ್ತಾನ ರಾಜ್ಯಗಳು ಸಂಯುಕ್ತವಾಗಿ ಕೈಗೊಂಡವು.

1947ರಲ್ಲಿ ಪಂಜಾಬ್ ವಿಭಾಗವಾದ ಬಳಿಕ ಸಿಂಧು ಮತ್ತು ಚೀನಾಬ್ ನದಿಗಳ ನೀರಿನ ಶೇ. 80 ಭಾಗ ಪಾಕಿಸ್ತಾನಕ್ಕೆ ಸೇರಿಹೋಯಿತು, ಪೂರ್ವಪಂಜಾಬ್ ಪಾಟಿಯಾಲ ಮತ್ತು ರಾಜಸ್ತಾನಗಳಲ್ಲಿ ಮಳೆ ಕಡಿಮೆ ಬೀಳುತ್ತಿದ್ದುದರ ಕಾರಣ ಜನವಸತಿಗೂ ಪಶುಗಳಿಗೂ ನೀರಿನ ಅಭಾವ ತಲೆದೋರುತ್ತಿತ್ತು. ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಮೂಲ ಉದ್ದೇಶವಿಟ್ಟುಕೊಂಡು ಸಟ್ಲೆಜ್ ನದಿಗೆ ಅಡ್ಡಲಾಗಿ ಕಟ್ಟೆ ಕಟ್ಟಲು, ಜಲಾಶಯ ನಾಲೆ ಇತ್ಯಾದಿಗಳನ್ನು ನಿರ್ಮಿಸಲು ಈ ಯೋಜನೆ ಪ್ರಾರಂಭವಾಯಿತು (1952). ಕ್ರಮೇಣ ವಿವಿಧ ಉದ್ದೇಶಗಳಿಗೂ ಇದನ್ನು ವಿಸ್ತರಿಸಿ ಸಮಗ್ರವಾಗಿ ವಿವಿಧೋದ್ದೇಶ ಯೋಜನೆ ಎಂದು ಪರಿಗಣಿಸಲಾಯಿತು.

ಭಾಕ್ರ – ನಂಗಲ್ ಅಣೆಕಟ್ಟು

ಈ ಯೋಜನೆಯ ಅನ್ವಯ ನಿರ್ಮಿಸಲಾದ ನೇರಗುರುತ್ವಮಾದರಿಯ ಭಾಕ್ರ ಕಟ್ಟೆಯ ಎತ್ತರ 225.55 ಮೀ, ಉದ್ದ 518.16 ಮೀ; ನಂಗಲ್ ಕಟ್ಟೆಯ ಎತ್ತರ 29 ಮೀ; ಉದ್ದ 304.8 ಮೀ. ಭಾಕ್ರ ಕಟ್ಟೆ ನಿರ್ಮಾಣದ ಸಲುವಾಗಿ ಗೋವಿಂದಸಾಗರ ಎಂಬ ಬೃಹತ್ ಜಲಾಶಯ ಉಂಟಾಯಿತು. ಈ ಜಲಾಶಯದ ಜಲ ಸಂಗ್ರಹಣಸಾಮರ್ಥ್ಯ 9621 ದ.ಲ.ಘ.ಮೀ ಗಳು. ಭಾಕ್ರನಂಗಲ್ ಯೋಜನೆಯ ಇತರ ಘಟಕಗಳು: 64.5 ಮೀ ಉದ್ದದ ನಂಗಲ್ ಹೈಡಲ್‌ನಾಲೆ, ಭಾಕ್ರದ ಎಡದಂಡೆ ಬಲದಂಡೆಗಳಲ್ಲಿ ತಲಾ ಒಂದರಂತೆ ವಿದ್ಯುಚ್ಛಕ್ತಿ ಸ್ಥಾವರಗಳು, ಗಂಗುವಾಲ್ ಮತ್ತು ಕೋಟ್ಲ ಎಂಬಲ್ಲಿಯ 6 ವಿದ್ಯುಜ್ಜನಕಗಳು, ಸು. 1100 ಕಿಮೀ ಉದ್ದದ ಉಪಕಾಲುವೆಗಳು, ಸು. 3360 ಕಿಮೀ ಉದ್ದದ ವಿತರಣ ಕಾಲುವೆಗಳು. ಈ ಯೋಜನೆಯ ಪರಿಣಾಮವಾಗಿ 26 ಲಕ್ಷ ಹೆ. ಭೂಮಿ ನೀರಾವರಿಗೆ ಒಳಗಾಗಿದೆ; 9 ಲಕ್ಷ ಹೆಕ್ಟೇರುಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ಉತ್ತಮಗೊಂಡಿದೆ. ಈ ಪ್ರದೇಶದ 128 ಪಟ್ಟಣಗಳಿಗೆ ವಿದ್ಯುತ್ ಪೂರೈಕೆ ಆಗಿದೆ. 13,000 ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಒದಗಿದೆ.

ಭಾಕ್ರ ಕಟ್ಟೆ: ಪ್ರಪಂಚದ ಎತ್ತರದ ಕಾಂಕ್ರೀಟ್ ಕಟ್ಟೆಗಳ ಪೈಕಿ ಒಂದು. 1952ರಲ್ಲಿ ಇದರ ನಿರ್ಮಾಣ ಕಾರ್ಯ ಪ್ರಾರಂಭವಾದದ್ದು. ಭಾರತದ ಆಗಿನ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಪ್ರಾರಂಭೋತ್ಸವ ನೆರವೇರಿಸಿದರು. ಈ ಕಾಂಕ್ರೀಟಿನ ಕಟ್ಟೆಯ ಎತ್ತರ ತಳಪಾಯದಿಂದ 255.55 ಮೀ. ಹೊಳೆಯ ತಳಮಟ್ಟದಲ್ಲಿ ಕಣಿವೆಯ ಅಗಲ ಸು. 76 ಮೀ ತಳಪಾಯದ ಮಟ್ಟ ಸಮುದ್ರಮಟ್ಟಕ್ಕೆ ಸು. 293 ಮೀ ಎತ್ತರದಲ್ಲಿದೆ. ಕಟ್ಟೆಯ ತಲೆ ಮಟ್ಟ 518.16 ಮೀ ಕಟ್ಟೆಯನ್ನು ಮರಳುಗಲ್ಲಿನ ತಳಪಾಯದ ಮೇಲೆ ನಿರ್ಮಿಸಲಾಗಿದೆ. ಈ ಕಟ್ಟೆ ನಿರ್ಮಾಣಯೋಜನೆಯ ಅನ್ವಯ 7191 ದ.ಲ.ಘ. ಮೀ ಗಳಷ್ಟು ಜಲ ಸಂಗ್ರಹಣೆ, ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗಳಿಗೆ ಅವಕಾಶ ಒದಗಿದೆ.

ಎಡದಂಡೆಯ ಬಳಿಯ ವಿದ್ಯುಚ್ಛಕ್ತಿ ಸ್ಥಾವರ ತಲಾ 90 ಮೆಗಾವಾಟ್ ಸಾಮರ್ಥ್ಯದ ಐದು ವಿದ್ಯುಜ್ಜನಕಗಳನ್ನೂ ಬಲದಂಡೆ ಬಳಿಯ ವಿದ್ಯುಚ್ಛಕ್ತಿಸ್ಥಾವರ ತಲಾ 120 ಮೆಗಾವಾಟುಗಳ ಸಾಮರ್ಥ್ಯದ ಐದು ವಿದ್ಯುಜ್ಜನಕಗಳನ್ನೂ ಹೊಂದಿದೆ.

ಜಲಾಶಯದಿಂದ ಸು. 2.59 ಮೀ ವ್ಯಾಸದ ತೂಬುಗಳು ನೀರಾವರಿಗೂ ಸು. 4.5 ಮೀ ವ್ಯಾಸದ ತೂಬುಗಳು ವಿದ್ಯುದುತ್ಪಾದನೆಗೂ ನೀರನ್ನು ಹೊರಬಿಡುತ್ತವೆ. ಪಂಜಾಬಿನ ರ್‍ಹೋಟಕ್ ಮತ್ತು ಹಿಸ್ಸಾರ್ ಜಿಲ್ಲೆಗಳ ಸು. 26,30,550 ಹೆ. ಭೂಮಿಗೂ, ಪಕ್ಕದ ರಾಜಸ್ತಾನದ ಸು. 14,56,920 ಹೆ. ಭೂಮಿಗೂ ಈ ಯೋಜನೆಯಿಂದ ನೀರು ಒದಗುತ್ತದೆ.

ಕಮರಿಯ ಕೆಲಸ ಪ್ರಾರಂಭಮಾಡಲು ನೀರನ್ನು ಸು. 15 ಮೀ ವ್ಯಾಸದ ಎರಡು ಸುರಂಗಗಳಿಂದ ಆಚೆಗೆ ಒಯ್ದಿದ್ದಾರೆ. ಈ ಸುರಂಗಗಳಿಗೆ ನೀರಿನ ಪೂರೈಕೆಗಾಗಿ ಎರಡು ಮಣ್ಣಿನ ಏರಿಗಳನ್ನು ನಿರ್ಮಿಸಲಾಗಿದೆ. ಇವುಗಳ ಪೈಕಿ ಒಂದರ ಎತ್ತರ ಸು. 65 ಮೀ ಇದು ಭಾರತದಲ್ಲೇ ಅತ್ಯಂತ ಎತ್ತರದ ಏರಿ. ಕಟ್ಟೆಯ ನಿರ್ಮಾಣವನ್ನು ಭಾರತೀಯ ಎಂಜಿನಿಯರುಗಳು ಅತ್ಯಾಧುನಿಕ ಯಂತ್ರಗಳ ಹಾಗೂ ಅಮೆರಿಕದ ಪ್ರವೀಣರ ಸಹಾಯ ಸಹಕಾರದೊಂದಿಗೆ ನಡೆಸಿದರು. ಭಾಕ್ರ ಕಟ್ಟೆಯ ಜಲಾಶಯಕ್ಕೆ ಗೋವಿಂದ ಸಾಗರ ಎಂದು ಹೆಸರು. ಇದರ ಉದ್ದ 96.5 ಕಿಮೀ; ಜಲ ಶೇಖರಣ ಸಾಮರ್ಥ್ಯ 9,621 ದ.ಲ.ಘ.ಮೀ. ಪ್ರಮುಖ ಕಾಲುವೆ ರಾಯಪುರ ಎಂಬ ಸ್ಥಳದಿಂದ ಪ್ರಾರಂಭವಾಗುತ್ತದೆ. ಇದರ ಉದ್ದ 168 ಕಿಮೀ.

ನಂಗಲ್‌ಕಟ್ಟೆ: ಭಾಕ್ರ–ನಂಗಲ್ ನದಿಕಣಿವೆ ಯೋಜನೆಯ ಒಂದು ಘಟಕ. ಭಾಕ್ರ ಕಣಿವೆಗೆ 13 ಕಿಮೀ ದೂರದಲ್ಲಿ ನಂಗಲ್ ಎಂಬಲ್ಲಿ ನಿರ್ಮಿಸಲಾದ ಕಾಂಕ್ರೀಟ್ ಕಟ್ಟೆ. ಎತ್ತರ 29 ಮೀ, ಉದ್ದ 304.8 ಮೀ. ಇದಕ್ಕೆ ಸು. 9 ಮೀ ಅಗಲದ 26 ಅಂಕಣಗಳಿವೆ. ಕಟ್ಟೆಯ ಮೇಲ್ಮಟ್ಟದಿಂದ ಸು. 8 ಮೀ ಆಳಕ್ಕೆ ಸು. 1.75 ಮೀ ಅಗಲದ, ಸು. 2 ಮೀ, ಎತ್ತರದ ಎರಡು ತನಿಖಾಗ್ಯಾಲರಿಗಳಿವೆ. ಕಟ್ಟೆಯ ಕೆಳಭಾಗದಲ್ಲಿ ಸು. 103 ಮೀ ಉದ್ದದ ನೆಲಹಾಸು ಇದೆ.

ಭಾಕ್ರ ಕಟ್ಟೆಯ ಜಲಗಾತ್ರದಲ್ಲಿ ಪ್ರತಿದಿನವೂ ಉಂಟಾಗುವ ಏರುಪೇರುಗಳನ್ನು ಸಮತೋಲಿಸಲು ನಂಗಲ್ ಕಟ್ಟೆಯನ್ನು ನಿರ್ಮಿಸಲಾಗಿದೆ. ಇದರಿಂದ ನಂಗಲ್ ಹೈಡಲ್ ನಾಲೆಯ ಬಳಿಯಿರುವ ವಿದ್ಯುದಾಗಾರಗಳ ಮೇಲೆ ಒದಗುವ ವಿದ್ಯುತ್ತಿನ ಹೊರೆಯ ಏರುಪೇರುಗಳನ್ನು ಭರಿಸಿಕೊಳ್ಳುವುದೂ ಸಾಧ್ಯವಾಗಿದೆ.

ನಂಗಲ್ ಹೈಡಲ್ ನಾಲೆ: ಇದು ಸಟ್ಲೆಜ್ ನದಿಯ ಎಡದಂಡೆಯಿಂದ ಹೊರಟು ಸಿವಾಲಿಕ್ ಬೆಟ್ಟಗಳ ಪಕ್ಕದಲ್ಲಿ ಸಾಗುತ್ತದೆ. 1954ರಲ್ಲಿ ತೋಡಿದ ಈ ನಾಲೆ ಪ್ರಪಂಚದ ಅತ್ಯಂತ ಉದ್ದವಾದ ನಾಲೆಗಳ ಪೈಕಿ ಒಂದು. ನಾಲೆಯ ಉದ್ದ 64.5 ಕಿಮೀ, ಆಳ ಸು. 6 ಮೀ, ಇಳಿಜಾರು 1/10,000. ಗಂಗುವಾಲ್ ಮತ್ತು ಕೋಟ್ಲ ಎಂಬಲ್ಲಿ ಈ ನಾಲೆಯ ಸಹಜ ಜಲಪಾತಗಳಿವೆ. ಇವನ್ನು ವಿದ್ಯುದುತ್ಪಾದನೆಗೆ ಬಳಸಿಕೊಳ್ಳಲಾಗಿದೆ. ನಾಲೆಯ ಜಲವಾಹಕ ಸಾಮರ್ಥ್ಯ 12,500 ಕ್ಯೂಸೆಕುಗಳು. ಈ ನಾಲೆಯಿಂದ ಪಂಜಾಬ್, ರಾಜಸ್ತಾನ, ಪಾಟಿಯಾಲಗಳ 40,47,000 ಹೆ. ಗಳ ಪ್ರದೇಶದ ನೀರಾವರಿಗೆ ಒಳಪಟ್ಟಿದೆ. ಸು. 4 ಮೀ ಗಳ ಎತ್ತರಕ್ಕೆ ನೀರು ಇರುವ ಈ ನಾಲೆಯನ್ನು ಸು. 40 ಮೀ ಆಳದ ತೋಡುಗೆಸಲದಲ್ಲಿಯೂ ಸು. 30 ಮೀ ಎತ್ತರದ ಏರಿಗಳ ನಡುವಲ್ಲಿಯೂ ತೆಗೆದುಕೊಂಡು ಹೋಗಿದ್ದಾರೆ.

ನಂಗಲ್ ಹೈಡಲ್ ನಾಲೆಯ ಎರಡು ಪ್ರತ್ಯೇಕ ವಿದ್ಯುತ್‌ಕೇಂದ್ರಗಳಿವೆ: ನಂಗಲ್ ಕಟ್ಟೆಯ ಕೆಳಗೆ 19 ಕಿಮೀ ದೂರದಲ್ಲಿ ಗಂಗುವಾಲ್‌ನಲ್ಲಿ ಒಂದು; ಕಟ್ಟೆಯಿಂದ ಸು. 10 ಕಿಮೀ ದೂರದ ಕೋಟ್ಲ ಎಂಬಲ್ಲಿ ಇನ್ನೊಂದು. ಎರಡೂ ಸ್ಥಳಗಳಲ್ಲಿಯ ಸ್ಥಾವರಗಳ ಒಟ್ಟು ವಿದ್ಯುಚ್ಛಕ್ತಿ ಸಾಮರ್ಥ್ಯ 154 ಮೆಗಾ ವಾಟುಗಳು. ನಂಗಲ್ ಜಲವಿದ್ಯುತ್ ವ್ಯವಸ್ಥೆಯಿಂದ ರೂಪರ್, ಅಂಬಾಲ, ಕಾರ್ನಾಲ, ಪಾಣಿಪಟ್, ಹಿಸ್ಸಾರ್, ಕಸೌಲಿ, ರ್‍ಹೋಟಕ್, ನಾಭಾ, ಪಾಟಿಯಾಲ, ಫಿರೋಜಪುರ, ಫರೀದ್‌ಕೋಟೆ, ಕಾಲ್ಕ, ಸಿಮ್ಲ, ಜಲಂಧರ್, ಹೋಷಿಯಾರ್‌ಪುರ್, ಕಾಪುರ್‌ತಾಲ, ದಿಲ್ಲಾನ್ ಮತ್ತು ಇತರ ಪಟ್ಟಣಗಳಿಗೆ ವಿದ್ಯುತ್ ಪೂರೈಕೆ ಆಗುತ್ತಿದೆ. ಭಾಕ್ರಾ ಕಟ್ಟೆಯ ನಿರ್ಮಾಣ ಕಾರ್ಯದಲ್ಲಿ ಈ ಕೇಂದ್ರದಿಂದ ಉತ್ಪತ್ತಿಯಾದ ವಿದ್ಯುತ್ತನ್ನು ಬಳಸಿಕೊಂಡಿದ್ದಾರೆ. ಕೇಂದ್ರದ ಅಂತಿಮಘಟ್ಟ 10,000 ಕಿಲೊವಾಟುಗಳ ಸಾಮರ್ಥ್ಯದ 10 ವಿದ್ಯುಜ್ಜನಕಗಳನ್ನು ಒಳಗೊಂಡಿದೆ. ಭಾಕ್ರ ಯೋಜನೆಯ ವಿದ್ಯುತ್ಕೇಂದ್ರ ನಂಗಲ್ ಕೇಂದ್ರದೊಂದಿಗೆ ಕೂಡಿ ಕೆಲಸ ಮಾಡುತ್ತಿದೆ.

ಕೋಟ್ಲ ವಿದ್ಯುತ್ಕೇಂದ್ರ ನಂಗಲ್ ನಾಲೆಯಿಂದ ಸು. 30 ಕಿಮೀ ದೂರದಲ್ಲಿದೆ. ಇಲ್ಲಿ 24,000 ಕಿಲೊವಾಟುಗಳ ಸಾಮರ್ಥ್ಯದ ಎರಡು ವಿದ್ಯುಜ್ಜನಕಗಳಿವೆ. ಇವನ್ನು 33,500 ಅಶ್ವಸಾಮರ್ಥ್ಯದ ಕಪ್ಲಾನ್ ತಿರುಬಾನಿಗಳಿಗೆ ಜೋಡಿಸಿದೆ.

ನಂಗಲ್ ಕಟ್ಟೆಯ ಪ್ರದೇಶದಲ್ಲಿ ಮೂರನೆಯ ವಿದ್ಯುಜ್ಜನಕವನ್ನು ಸ್ಥಾಪಿಸುವುದಕ್ಕೂ ಅವಕಾಶ ಕಲ್ಪಿಸಲಾಗಿದೆ. ಇದರಿಂದ 29,000 ಕಿಲೊವಾಟುಗಳಷ್ಟು ವಿದ್ಯುತ್ತು ಉತ್ಪತ್ತಿಯಾಗುತ್ತದೆ. 1967ರ ಸೆಪ್ಟೆಂಬರಿನಿಂದಲೂ ಗಂಗುವಾಲ್ ಮತ್ತು ಕೋಟ್ಲ ವಿದ್ಯುದುತ್ಪಾದನಾ ಕೇಂದ್ರಗಳಿಂದ ದೆಹಲಿ, ಗೊರೆಗಾಂವ್, ಪಾಲ್‌ವಾಲ್ ಮತ್ತು ರೂವಾರಿಗಳಿಗೂ ವಿದ್ಯುತ್ತನ್ನು ಒದಗಿಸಲಾಗಿದೆ. (ಎಚ್.ಸಿ.ಕೆ.)

**ಭಾಗಮಂಡಲ:** ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಭಂಗಡೇಶ್ವರನೆಂಬ ಮುನಿ ಇಲ್ಲಿ ತಪಸ್ಸು ಮಾಡುತ್ತಿದ್ದುದರಿಂದ ಈ ಹೆಸರು ಬಂದಿದೆ ಎಂಬುದು ಐತಿಹ್ಯ. ಮಡಿಕೇರಿಗೆ ಪಶ್ಚಿಮದಲ್ಲಿ 40 ಕಿಮೀ ದೂರದಲ್ಲಿ ಕಾವೇರಿನದಿಯ ದಡದಲ್ಲಿದೆ. ಕಾವೇರಿಯ ಉಗಮಸ್ಥಾನ ತಲಕಾವೇರಿ ಭಾಗಮಂಡಲದಿಂದ ಸು. 6 ಕಿಮೀ ದೂರದಲ್ಲಿದೆ. ಸುತ್ತಲೂ ದಟ್ಟ ಅರಣ್ಯವಿದ್ದು ಪ್ರಕೃತಿಸೌಂದರ್ಯದಿಂದ ಶೋಭಿಸುತ್ತಿದೆ. ಜನಸಂಖ್ಯೆ 3000. ಇಲ್ಲಿ ಜೇನುಸಾಕಣೆ ತರಬೇತಿ ಕೇಂದ್ರವಿದೆ.

ಬ್ರಹ್ಮಗಿರಿಯಲ್ಲಿ ಉಗಮಿಸಿ ಹರಿದುಬರುವ ಕನ್ನಿಕೆ, ಕಾವೇರಿ ನದಿಗಳು ಭಾಗಮಂಡಲದಲ್ಲಿ ಸಂಗಮಿಸುತ್ತವೆ. ಅಲ್ಲದೆ ಸುಜ್ಯೋತಿ ಎಂಬ ಗುಪ್ತಗಾಮಿನಿಯೂ ಇಲ್ಲಿ ಸೇರುವುದೆಂಬ ನಂಬಿಕೆಯಿದ್ದು ಇದು ತ್ರಿವೇಣೀ ಸಂಗಮವೆಂದು ಪರಿಗಣಿತವಾಗಿದೆ. ಕೊಡಗಿನ ಜನ ಬಹುಸಂಖ್ಯೆಯಲ್ಲಿ ಇಲ್ಲಿ ಪರ್ವ ದಿನಗಳಂದು ಸೇರುತ್ತಾರೆ.

ಇಲ್ಲಿರುವ ಭಗಂಡೇಶ್ವರ ದೇವಾಲಯದಲ್ಲಿ ತಮಿಳು ಭಾಷೆ ಮತ್ತು ಗ್ರಂಥ ಲಿಪಿಯಲ್ಲಿರುವ ಒಂದು ಶಾಸನವಿದೆ. 1785–90 ಅವಧಿಯಲ್ಲಿ ಟಿಪ್ಪುಸುಲ್ತಾನ ಈ ದೇವಾಲಯವನ್ನು ಕೋಟೆಯಾಗಿ ಪರಿವರ್ತಿಸಿ ಇಲ್ಲೊಂದು ಸೈನ್ಯ ಇಟ್ಟಿದ್ದ. ಭಾಗಮಂಡಲವನ್ನು ಅಫಜಲಾಬಾದ್ ಎಂದು ಹೆಸರಿಸಿದ್ದ. 1790ರಲ್ಲಿ ಕೊಡಗಿನ ದೊಡ್ಡವೀರರಾಜೇಂದ್ರ ಭಾಗಮಂಡಲವನ್ನು ಗೆದ್ದುಕೊಂಡ. ಯುದ್ಧಕಾಲದಲ್ಲಿ ನಾಶವಾದ ದೇವಾಲಯದ ಮೂರು ತಾಮ್ರದ ಚಾವಣಿಗಳ ಬದಲಾಗಿ ದೊರೆ ನಾಲ್ಕು ಬೆಳ್ಳಿಯ ಹೆಂಚುಗಳನ್ನು ಹೊದಿಸಿದನಂತೆ. *

**ಭಾಗಲಪುರ:** ಬಿಹಾರ ರಾಜ್ಯದ ಒಂದು ವಿಭಾಗ, ಜಿಲ್ಲೆ, ತಾಲ್ಲೂಕು ಮತ್ತು ಇವೆಲ್ಲದರ ಆಡಳಿತ ಕೇಂದ್ರ ನಗರ. ಸಂತಾಲ್ ಪರಗಣ, ಭಾಗಲಪುರ, ಸಹರ್ಸಾ, ಪೂರ್ಣಿಯಾ ಮತ್ತು ಮೋಂಘಿರ್ ಜಿಲ್ಲೆಗಳು ಈ ವಿಭಾಗಕ್ಕೆ ಸೇರಿವೆ.

ಭಾಗಲಪುರ ಜಿಲ್ಲೆ ಬಿಹಾರ ರಾಜ್ಯದ ಪೂರ್ವದಲ್ಲಿದೆ. ಪಶ್ಚಿಮದಲ್ಲಿ ಮೋಂಘಿರ್, ಪೂರ್ವ ಮತ್ತು ದಕ್ಷಿಣದಲ್ಲಿ ಸಂತಾಲ್ ಪರಗಣಗಳು, ಉತ್ತರದಲ್ಲಿ ಸಹರ್ಸಾ, ಪೂರ್ಣಿಯಾ ಮತ್ತು ಕಟಿಹಾರ್ ಜಿಲ್ಲೆಗಳು ಸುತ್ತುವರಿದಿವೆ, ಜಗದೀಶ್‌ಪುರ, ಷಹಕುಂದ್, ಸುಲ್ತಾನ್‌ಗಂಜ್, ರತ್ನಗರ್, ಸಬೋರ್, ಕಾಲ್‌ಗಾಂಗ್, ಪಿರ್‌ಪೈಂತಿ. ಸೊನ್ಹಾಲ, ನೌಗಚಿಯ ಬಿಹಪುರ್, ಗೋಪಾಲ್‌ಪುರ್, ಬಂಕ, ಕಟೋರಿಯ, ಚನನ್, ಬೆಲ್ಹಾರ್, ಶಂಭುಗಂಜ್, ಅಮರ್‌ಪುರ, ರಾಜೌನ್, ಧುರೈಯ, ಬರ್ಹತ್ ಮತ್ತು ಚಾಸಿ ತಾಲ್ಲೂಕುಗಳು ಇವೆ. ಜಿಲ್ಲಾ ವಿಸ್ತೀರ್ಣ 5,656 ಚ.ಕಿಮೀ. ಜನಸಂಖ್ಯೆ 50 ಲಕ್ಷಕ್ಕಿಂತಲೂ ಅಧಿಕ.

ಜಿಲ್ಲೆಯ ಉತ್ತರಭಾಗ ಮೆಕ್ಕಲು ಮಣ್ಣಿನ ಮೈದಾನ. ದಕ್ಷಿಣದಲ್ಲಿ ಕಾಡಿನಿಂದ ಕೂಡಿದ ಛೋಟಾ ನಾಗಪುರದ ಪ್ರಸ್ಥಭೂಮಿ, ಗಂಗಾ ಮತ್ತು ಚಂದನ್ ನದಿಗಳು ಭೂಮಿಯನ್ನು ಫಲವತ್ತಾಗಿಸಿವೆ. ಕಾಳುಗಳು, ಎಣ್ಣೆಬೀಜ ಇಲ್ಲಿಯ ಮುಖ್ಯ ಬೆಳೆಗಳು.

ಅಕ್ಕಿ, ಸಕ್ಕರೆ ಹಾಗೂ ಹಿಟ್ಟು ತಯಾರಿಸುವ ಮಿಲ್ಲುಗಳು ಉಣ್ಣೆಯ ನೆಯ್ಗೆ, ಕಂಬಳಿ, ಜಮಖಾನ ತಯಾರಿಕೆ, ಬಿದರೆ ಕೆಲಸ, ಕೆತ್ತನೆ ಕೆಲಸ, ಎಣ್ಣೆ ಗಿರಣಿ, ಹಗ್ಗ ತಯಾರಿಕೆ ಇಲ್ಲಿಯ ಮುಖ್ಯ ಕೈಗಾರಿಕೆಗಳು.

ಭಾಗಲಪುರನಗರ ರಾಜಮಹಲ್‌ಬೆಟ್ಟಗಳ ಪಶ್ಚಿಮದಲ್ಲಿ ಗಂಗನದಿಯ ಬಲದಂಡೆಯಮೇಲೆ ಹರಡಿದೆ. ನಗರ ಜನಸಂಖ್ಯೆ ಐದು ಲಕ್ಷಕ್ಕಿಂತಲೂ ಅಧಿಕ. ಮೂರು ಪುಟ್ಟ ಹೊಳೆಗಳಾದ ಸುಂದರ್, ಚಂದನ್ ಮತ್ತು ಬುದುವಾ ಈ ನಗರದ ಬಳಿ ಗಂಗ ನದಿಯನ್ನು ಸೇರುತ್ತವೆ. ಇವುಗಳ ಮೂಲಕ ಗಂಗನದಿ ಬಯಲಿನ ಸುತ್ತಲಿನ ರಸ್ತೆ ಮತ್ತು ರೈಲುಮಾರ್ಗಗಳೊಂದಿಗೆ ಸಂಪರ್ಕ ಸಾಧಿಸಲಾಗಿದೆ. ಜೊತೆಗೆ ಗಂಗನದಿಯ ಜಹಜು ಪ್ರಯಾಣದ ಅನುಕೂಲವೂ ಈ ನಗರಕ್ಕಿದೆ. ರೈಲುಮಾರ್ಗದ ಮುಖಾಂತರ ಕೋಲ್ಕತಕ್ಕೆ 424 ಕಿಮೀ ದೂರದಲ್ಲೂ ನದಿಗಳ ಮುಖಾಂತರ 520 ಕಿಮೀ ದೂರದಲ್ಲೂ ಈ ನಗರವಿದೆ. *

**ಭಾಗೀರಥಿ:** ಗಂಗನದಿಯ ಉಗಮ ನಾಮ. ಕಮತ ಹಿಮಪರ್ವತದ ಬುಡದಲ್ಲಿ ಸು. 2364 ಮೀ ಎತ್ತರದಲ್ಲಿ ಗೋಮುಖ ಎಂಬಲ್ಲಿ ಹುಟ್ಟಿ ಅಲ್ಲಿಂದ ಸು. 25 ಕಿಮೀ ದೂರದಲ್ಲಿರುವ ಉತ್ತರ ಪ್ರದೇಶದ ತೆಹ್ರಿಘರ್‌ವಾಲ್ ಜಿಲ್ಲೆಯ ಗಂಗೋತ್ರಿ ಧಾಮದಲ್ಲಿ ಈ ನದಿ ಗೋಚರವಾಗುತ್ತದೆಂಬುದು ಭೂಗೋಳ ವಿಜ್ಞಾನಿಗಳ ಅಭಿಪ್ರಾಯ. ಈ ಗಂಗೋತ್ರಿಯಲ್ಲಿ ಗಂಗೆ, ಯಮುನೆ, ಸರಸ್ವತಿ, ಲಕ್ಷ್ಮಿ, ಪಾರ್ವತಿ ಮತ್ತು ಅನ್ನಪೂರ್ಣೆಯರ ಸ್ವರ್ಣಪ್ರತಿಮೆಗಳಿರುವ ಮಂದಿರವೂ ಭಗೀರಥ ಗಂಗೆಯ ಸಮ್ಮುಖದಲ್ಲಿ ಕೈಜೋಡಿಸಿ ನಿಂತಿರುವ ಪ್ರತಿಮೆಯೂ ಇವೆ. ಈ ಧಾಮದ ಸುತ್ತಲೂ ದೇವದಾರುವಿನ ಅರಣ್ಯವಿದೆ. ಅಲ್ಲಿಂದ ಕೆಳಗೆ ಹರಿದ ಭಾಗೀರಥಿಗೆ ಕೇದರಗಂಗ ನದಿ ಬಂದು ಸೇರುತ್ತದೆ. ಮುಂದೆ ಅರ್ಧ ಕಿಮೀ ಕೆಳಗೆ ಬಂದರೆ ಭಾಗೀರಥಿ ನದಿ ಅಲ್ಲಿರುವ ಒಂದು ಶಿವಲಿಂಗದ ಮೇಲೆ ದುಮುಕುತ್ತದೆ. ಇಲ್ಲಿಗೆ ಅನತಿ ದೂರದಲ್ಲಿ ಹರಶಿಲ ಎಂಬ ಸ್ಥಳವಿದ್ದು ಇಲ್ಲಿಂದ ಕೈಲಾಸ ಹಾಗೂ ಮಾನಸ ಸರೋವರಗಳಿಗೆ ಹೋಗುವ ದಾರಿಯಿದೆ. ಇದರ ಸಮೀಪದಲ್ಲಿಯೇ ಶ್ಯಾಮಪ್ರಯಾಗ ಎಂಬಲ್ಲಿ ಭಾಗೀರಥಿಗೆ ಶ್ಯಾಮಗಂಗ ನದಿ ಬಂದು ಸೇರುತ್ತದೆ. ಭಾಗೀರಥಿ ನದಿಯ ದಡದಲ್ಲಿ ಅನೇಕ ಪ್ರಾಚೀನ ಮಂದಿರಗಳಿರುವ ಉತ್ತರಕಾಶಿ ಎಂಬ ನಗರವಿದೆ. ಇಲ್ಲಿಯ ವಿಶ್ವನಾಥ, ಏಕಾದಶರುದ್ರ ಮತ್ತು ಶಕ್ತಿ ಮಂದಿರಗಳು ಪ್ರಮುಖವಾದವು. (ಕೆ.ಆರ್.ಐ.)

**ಭಾರತ:** ಏಷ್ಯ ಖಂಡದ ದಕ್ಷಿಣ ಭಾಗದಲ್ಲಿರುವ ಪರ್ಯಾಯ ದ್ವೀಪ. ಇದನ್ನು ಇಂಡಿಯ ಹಾಗೂ ಹಿಂದುಸ್ತಾನ್ ಎಂದೂ ಕರೆಯುವರು. ಇಂಡಿಯ ಎಂಬ ಹೆಸರು ಸಿಂಧೂ ನದಿಯಿಂದ ಬಳಕೆಗೆ ಬಂದಿದೆ. ಇದು $8^0 4'$ ಉ. ಅ. ದಿಂದ $37^0 6'$ ಉ. ಅ. ದವರೆಗೆ 3214 ಕಿಮೀ ಉದ್ದವಾಗಿದೆ. ದ್ವೀಪಗಳನ್ನೂ ಪರಿಗಣಿಸಿದಾಗ ಗ್ರೇಟ್ ನಿಕೋಬಾರ್ ದ್ವೀಪದ ಇಂದಿರಾ ಪಾಯಿಂಟ್ $6^0 45'$ ಉ. ಅ. ದಲ್ಲಿದ್ದು (ಹಿಂದಿನ ಹೆಸರು ಪಿಗ್ಮೇಲಿಯನ್ ಪಾಯಿಂಟ್) ಇದು ಭಾರತದ ಅತ್ಯಂತ ದಕ್ಷಿಣ ಭಾಗವಾಗಿದೆ. ರೇಖಾಂಶಿಕವಾಗಿ ಭಾರತ $68^0 7'$ ಪೂರ್ವದಿಂದ $97^0 25'$ ಪೂ.ರೇ. ಗಳಲ್ಲಿ ನೆಲೆಸಿದ್ದು ಪೂರ್ವಾರ್ಧ ಗೋಳದಲ್ಲಿದೆ. ಗುಜರಾತ್ ಭಾರತದ ಅತ್ಯಂತ ಪಶ್ಚಿಮದಲ್ಲಿದೆ. ಗುಜರಾತಿನ ತೀರ ಪ್ರದೇಶದಿಂದ ಭಾರತದ ಅತ್ಯಂತ ಪೂರ್ವ ಭಾಗ, ಅರುಣಾಚಲ ಪ್ರದೇಶದವರೆಗೆ ದೇಶವು 2,933 ಕಿಮೀ ಅಗಲವಾಗಿದೆ. ಅಲಹಾಬಾದಿನ ಮೂಲಕ ಹಾದು ಹೋಗುವ $82\frac{1}{2}^0$ ಪೂ. ರೇ. ವನ್ನು ಆಧರಿಸಿ ಭಾರತದ ನಿರ್ದಿಷ್ಟ ಕಾಲಮಾನವನ್ನು ಲೆಕ್ಕಾಚಾರ




ಭಾರತದ ಆಡಳಿತ ವಿಭಾಗಗಳು

ಮಾಡುವರು. ದೇಶ ಒಟ್ಟು 32,87,263 ಚ.ಕಿಮೀ ವಿಸ್ತಾರವಾಗಿದೆ. ಭೂ ಕ್ಷೇತ್ರದ ದೃಷ್ಟಿಯಿಂದ ಇದು ಪ್ರಪಂಚದ ಏಳನೆಯ ವಿಸ್ತಾರವಾದ ರಾಷ್ಟ್ರ, ಇದು ಪ್ರಪಂಚದ ಭೂ ಕ್ಷೇತ್ರದ ಶೇ. 2.4 ರಷ್ಟನ್ನು ಒಳಗೊಂಡಿದೆ (ಕಾಶ್ಮೀರದ ಪಾಕ್ ಆಕ್ರಮಿತ ಪ್ರದೇಶ (Pok) ಹಾಗೂ ಚೀನ ಆಕ್ರಮಿತ ಆಕ್‌ಸಾಯ್ ಚಿನ್ ಪ್ರದೇಶಗಳನ್ನು ಸೇರಿ). 2001 ರ ಜನಗಣತಿಯಂತೆ 102.7 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ. 16.7 ರಷ್ಟಿರುವುದು. ಪ್ರಪಂಚದಲ್ಲಿ ಭಾರತ, ಚೀನದೇಶದ ಅನಂತರ ಎರಡನೆಯ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾಗಿದೆ.

ಭಾರತ ಒಂದು ಪರ್ಯಾಯ ದ್ವೀಪವಾಗಿದ್ದು ಇದು ಭೂ ಹಾಗೂ ಜಲಮೇರೆಗಳೆರಡನ್ನು ಸಹ ಒಳಗೊಂಡಿದೆ. ಭಾರತ ಒಳಗೊಂಡಿರುವ ಭೂಮೇರೆಯ ಉದ್ದ ಸು. 15,200 ಕಿಮೀ. ಇದು ವಾಯವ್ಯದಲ್ಲಿ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನ, ಉತ್ತರದಲ್ಲಿ ಚೀನ, ನೇಪಾಲ ಮತ್ತು ಭೂತಾನ್ ಹಾಗೂ ಪೂರ್ವದಲ್ಲಿ ಮಯನ್ಮಾರ್ (ಬರ್ಮಾ) ಹಾಗೂ ಬಾಂಗ್ಲಾ ದೇಶಗಳೊಡನೆ ಭೂಗಡಿ ರೇಖೆಯನ್ನು ಹೊಂದಿದೆ. ಭಾರತದ ಗಡಿಯನ್ನು ನಿರ್ಧರಿಸುವ ರೇಖೆಗಳಲ್ಲಿ ಮೂರು ರೇಖೆಗಳು ಅತಿ ಮುಖ್ಯವಾದವು. ಅವುಗಳೆಂದರೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ರಾಡ್‌ಕ್ಲಿಫ್ ರೇಖೆ, ಭಾರತ ಮತ್ತು ಚೀನದ ನಡುವೆ ಮ್ಯಾಕ್‌ಮೊಹೋನ್ ರೇಖೆ ಭಾರತ ಮತ್ತು ಆಫ್ಘಾನಿಸ್ತಾನದ ನಡುವೆ ಡ್ಯೂರಾಂಡ್ ರೇಖೆ.

ಭಾರತವು ಪರ್ಯಾಯ ದ್ವೀಪವಾಗಿದ್ದು ಹಿಂದು ಮಹಾಸಾಗರದಲ್ಲಿ ತ್ರಿಕೋನಾಕಾರದಲ್ಲಿ ಚಾಚಿಕೊಂಡಿದೆ. ದೇಶದ ಹಿಂದು ಎಂಬ ಹೆಸರಿನಿಂದಲೇ, ಈ ಸಾಗರದ ಹೆಸರು ಸಹ ರೂಢಿಗೆ ಬಂದಿದೆ. ಪ್ರಪಂಚದಲ್ಲಿ ದೇಶದ ಹೆಸರಿನಿಂದಲೇ ಹೆಸರನ್ನು ಪಡೆದಿರುವ ಸಾಗರದ ಉದಾಹರಣೆ ಹಿಂದು ಮಹಾಸಾಗರ ಮಾತ್ರವಾಗಿದೆ. ಭಾರತದ ಪಶ್ಚಿಮ ಭಾಗದಲ್ಲಿ ಅರಬ್ಬಿ ಸಮುದ್ರ ಹಾಗೂ ಪೂರ್ವದಲ್ಲಿ ಬಂಗಾಲ ಕೊಲ್ಲಿಗಳು ಇದರ ಮೇರೆಗಳಾಗಿವೆ. ಭಾರತ ಪರ್ಯಾಯ ಭೂರಾಶಿಯು ಒಳಗೊಂಡಿರುವ ತೀರ ಪ್ರದೇಶವನ್ನು ಇದಕ್ಕೆ ಸೇರಿಸಿದಾಗ ಇದು ಸು. 7516.6 ಕಿಮೀ ಉದ್ದವಾಗಿರುವುದು. ಆಗ್ನೇಯದಲ್ಲಿ ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳು ಭಾರತ ಮತ್ತು ಶ್ರೀಲಂಕಗಳನ್ನು ಬೇರ್ಪಡಿಸಿವೆ. ಬಂಗಾಳ ಕೊಲ್ಲಿಯಲ್ಲಿರುವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಅರಬ್ಬಿ ಸಮುದ್ರದಲ್ಲಿರುವ ಲಕ್ಷ ದ್ವೀಪ ಮತ್ತು ಮಿನಿಕಾಂಯ್ ದ್ವೀಪಗಳು ಭಾರತದ ಪ್ರಾಂತ್ಯಗಳಾಗಿವೆ.

ಭಾರತವು ಏಳು ರಾಷ್ಟ್ರಗಳೊಡನೆ ಗಡಿರೇಖೆಯನ್ನು ಹಂಚಿಕೊಂಡಿದೆ. ಇವುಗಳೆಂದರೆ ವಾಯವ್ಯದಲ್ಲಿ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನ, ಉತ್ತರದಲ್ಲಿ ಚೀನ, ನೇಪಾಲ ಮತ್ತು ಭೂತಾನ್, ಪೂರ್ವದಲ್ಲಿ ಮಯನ್ಮಾರ್ ಹಾಗೂ ಆಗ್ನೇಯದಲ್ಲಿ ಬಾಂಗ್ಲಾದೇಶ. ಇದಲ್ಲದೆ ದೇಶದ ದಕ್ಷಿಣದಲ್ಲಿರುವ ಶ್ರೀಲಂಕ ಹಾಗೂ ನೈರುತ್ಯದಲ್ಲಿರುವ ಮಾಲ್ದೀವ್ಸ ದ್ವೀಪಗಳೂ ಸಹ ಭಾರತದ ನೆರೆಯ ರಾಷ್ಟ್ರಗಳಾಗಿವೆ.

ರಾಜಕೀಯ ವಿಭಾಗಗಳು: ಭಾರತ ಪ್ರಜಾಸತ್ತಾತ್ಮಕ ಗಣರಾಜ್ಯ. ಇದು ಪಾರ್ಲಿಮೆಂಟರಿ ಮಾದರಿಯ ಸರಕಾರವನ್ನು ಒಳಗೊಂಡಿದೆ. ಆಡಳಿತದ ಅನುಕೂಲಕ್ಕಾಗಿ ದೇಶವನ್ನು 28 ರಾಜ್ಯಗಳು ಹಾಗೂ 7 ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಕ್ಷೇತ್ರವನ್ನು ಪರಿಗಣಿಸಿದಾಗ ರಾಜಸ್ತಾನ ಅತಿ ದೊಡ್ಡದಾದ ರಾಜ್ಯ ಹಾಗು ಅತಿ ಚಿಕ್ಕ ರಾಜ್ಯವೆಂದರೆ ಗೋವ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಅತಿ ಹೆಚ್ಚು ವಿಸ್ತಾರವಾಗಿದೆ. ಇದಕ್ಕೆ ವಿರುದ್ಧವಾಗಿ ಲಕ್ಷ ದ್ವೀಪಗಳು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅತಿ ಚಿಕ್ಕವು. ಕೇಂದ್ರಾಡಳಿತ ಪ್ರದೇಶವಾದ ದೆಹಲಿಗೆ ಸುತ್ತಲಿನ ಇತರ ರಾಜ್ಯಗಳ ಜಿಲ್ಲೆಗಳ ಕೆಲವು ಭಾಗಗಳನ್ನು ಸೇರಿಸಿ ನ್ಯಾಷನಲ್ ಕ್ಯಾಪಿಟಲ್ ರೀಜನ್ (ಎನ್ ಸಿ ಆರ್) ಅಂದರೆ ರಾಷ್ಟ್ರೀಯ ರಾಜಧಾನಿ ಪ್ರದೇಶವೆಂದು ಕರೆಯಲಾಗಿದೆ. ಈ ಮುಂದಿನ ಪಟ್ಟಿ ಭಾರತದ ರಾಜ್ಯಗಳು ಕೇಂದ್ರಾಡಳಿತ ಪ್ರದೇಶಗಳು, ಅವುಗಳ ವಿಸ್ತಾರ ಮತ್ತು ರಾಜಧಾನಿಗಳನ್ನು ಸೂಚಿಸುವುದು.

**ಭಾರತದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು**

| ರಾಜ್ಯಗಳು | ವಿಸ್ತೀರ್ಣ (ಚ.ಕಿಮೀ) | ರಾಜಧಾನಿ |
|---|---|---|
| 1. ಆಂಧ್ರಪ್ರದೇಶ | 2,75,088 | ಹೈದರಾಬಾದ್ |
| 2. ಅರುಣಾಚಲ ಪ್ರದೇಶ | 83,743 | ಇಟಾನಗರ್ |
| 3. ಅಸ್ಸಾಂ | 78,438 | ದಿಸ್ಪುರ್ |
| 4. ಬಿಹಾರ | 94,163 | ಪಟಣ |
| 5. ಚತ್ತೀಸ್‌ಗರ್ | 1,35,133 | ರಾಯ್‌ಪುರ್ |

| | | |
|---|---|---|
| 6. ಗೋವ | 3,704 | ಪಣಜಿ |
| 7. ಗುಜರಾತ್ | 1,96,024 | ಗಾಂಧಿನಗರ |
| 8. ಹರಿಯಾಣ | 44,212 | ಚಂಡೀಗಢ |
| 9. ಹಿಮಾಚಲ ಪ್ರದೇಶ | 55,673 | ಶಿಮ್ಲಾ |
| 10. ಜಾರ್ಖಂಡ್ | 79,714 | ರಾಂಚಿ |
| 11. ಜಮ್ಮು ಮತ್ತು ಕಾಶ್ಮೀರ | 2,22,236 | ಶ್ರೀನಗರ (ಬೇಸಗೆ) ಜಮ್ಮು (ಚಳಿಗಾಲ) |
| 12. ಕರ್ನಾಟಕ | 1,91,791 | ಬೆಂಗಳೂರು |
| 13. ಕೇರಳ | 39,863 | ತಿರುವನಂತಪುರ |
| 14. ಮಧ್ಯ ಪ್ರದೇಶ | 3,08,690 | ಭೂಪಾಲ್ |
| 15. ಮಹಾರಾಷ್ಟ್ರ | 3,07,313 | ಮುಂಬೈ |
| 16. ಮಣಿಪುರ | 22,327 | ಇಂಫಾಲ |
| 17. ಮೇಘಾಲಯ | 22,429 | ಶಿಲ್ಲಾಂಗ್ |
| 18. ಮಿಜೋರಾಂ | 21,081 | ಐಜ್ವಾಲ್ |
| 19. ನಾಗಾಲ್ಯಾಂಡ್ | 16,579 | ಕೊಹಿಮಾ |
| 20. ಒರಿಸ್ಸ | 1,55,707 | ಭುವನೇಶ್ವರ |
| 21. ಪಂಜಾಬ್ | 50,362 | ಚಂಡೀಗಢ |
| 22. ರಾಜಸ್ತಾನ | 3,42,239 | ಜೈಪುರ |
| 23. ಸಿಕ್ಕಿಂ | 7,096 | ಗ್ಯಾಂಗ್‌ಟಕ್ |
| 24. ತಮಿಳುನಾಡು | 1,30,058 | ಚೆನ್ನೈ |
| 25. ತ್ರಿಪುರ | 10,486 | ಅಗರ್ತಲ |
| 26. ಉತ್ತರ ಪ್ರದೇಶ | 2,38,596 | ಲಖನೌ |
| 27. ಉತ್ತರಾಂಚಲ | 55,845 | ಡೆಹರಾಡೂನ್ |
| 28. ಪಶ್ಚಿಮ ಬಂಗಾಲ | 88,752 | ಕೋಲ್ಕತ |
| **ಕೇಂದ್ರಾಡಳಿತ ಪ್ರದೇಶಗಳು** | | |
| 1. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | 8,249 | ಪೋರ್ಟ್‌ಬ್ಲೇರ್ |
| 2. ಚಂಡೀಗಢ | 114 | ಚಂಡೀಗಢ |
| 3. ದಾದ್ರ ಮತ್ತು ನಗರ ಹವೇಲಿ | 491 | ಸಿಲ್ವಾಸ್ಸ |
| 4. ದೆಹಲಿ | 1,483 | ದೆಹಲಿ |
| 5. ಡಾಮನ್ ಮತ್ತು ಡಿಯು | 110 | ಡಾಮನ್ |
| 6. ಲಕ್ಷದ್ವೀಪ | 32 | ಕವರತ್ತಿ |
| 7. ಪಾಂಡಿಚೇರಿ | 42 | ಪಾಂಡಿಚೇರಿ |
| **ಭಾರತ** | **32,87,263** | **ನವದೆಹಲಿ** |

ಭೂ ಸ್ವರೂಪಗಳು: ಭಾರತವು ವಿವಿಧ ಬಗೆಯ ಭೂ ಸ್ವರೂಪಗಳನ್ನು ಒಳಗೊಂಡಿದೆ. ಇವುಗಳನ್ನು ಆಧರಿಸಿ ದೇಶವನ್ನು ನಾಲ್ಕು ಪ್ರಧಾನ ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಉತ್ತರದ ಪರ್ವತಗಳು, ಉತ್ತರದ ಮಹಾಮೈದಾನ, ಪರ್ಯಾಯ ಪ್ರಸ್ಥಭೂಮಿ ಹಾಗೂ ಕರಾವಳಿ ಮೈದಾನಗಳು. ಈ ನಾಲ್ಕು ಭೂ ಸ್ವರೂಪ ವಿಭಾಗಗಳು ಭೂ ಇತಿಹಾಸದ ವಿವಿಧ ಅವಧಿಯಲ್ಲಿ ವಿವಿಧ ರೀತಿಯಲ್ಲಿ ನಿರ್ಮಿತಗೊಂಡಿದೆ. ಇದರಿಂದ ಇವುಗಳು ಒಳಗೊಂಡಿರುವ ಮೇಲ್ಮೈ ಲಕ್ಷಣಗಳು ಸಹ ಭಿನ್ನವಾಗಿದೆ.

1. ಭಾರತದ ಉತ್ತರದಲ್ಲಿರುವ ಹಿಮಾಲಯ ಪರ್ವತಗಳು ದೇಶದ ಗಡಿಯಂತೆ ಹಬ್ಬಿವೆ. ಈ ಪರ್ವತಗಳು ಟರ್ಷಿಯರಿ ಭೂ ಯುಗದಲ್ಲಿ ನಿರ್ಮಾಣಗೊಂಡಿದ್ದು, ಮಡಿಕೆ ಪರ್ವತಗಳ ಗುಂಪಿಗೆ ಸೇರಿವೆ.

2. ಉತ್ತರದ ಮಹಾ ಮೈದಾನ ಅಥವಾ ಸಟ್ಲೆಜ್ ಗಂಗ ಮೈದಾನ ಹಿಮಾಲಯದಿಂದ ಹುಟ್ಟಿ ಹರಿಯುವ ನದಿಗಳು ಹೊತ್ತು ತಂದ ಮೆಕ್ಕಲು ಮಣ್ಣಿನ ಸಂಚಯನದಿಂದ ನಿರ್ಮಿತವಾಗಿದೆ. ಇದರಿಂದ ಇದು ಸಂಚಯನ ಕಾರ್ಯದಿಂದ ಇತ್ತೀಚಿನ ಅವಧಿಯಲ್ಲಿ ನಿರ್ಮಿತವಾದ ಮೈದಾನವಾಗಿದೆ.

3. ಪರ್ಯಾಯ ಪ್ರಸ್ಥಭೂಮಿಯು ಪುರಾತನವಾದ ಭೂರಾಶಿಯಾಗಿದೆ. ಇದರಲ್ಲಿ ಕಂಡು ಬರುವ ಪರ್ವತಗಳು ಅವಶೇಷ ಪರ್ವತಗಳ ಗುಂಪಿಗೆ ಸೇರಿವೆ. ಪರ್ಯಾಯ ಪ್ರಸ್ಥಭೂಮಿಯನ್ನು ಕೇಂದ್ರದ ಉನ್ನತ ಪ್ರದೇಶ ಮತ್ತು ದಖನ್ ಪ್ರಸ್ಥಭೂಮಿಯೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

4. ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿ ಕಂಡು ಬರುವ ಕರಾವಳಿ ಮೈದಾನಗಳು ಹಾಗೂ ಬಂಗಾಲಕೊಲ್ಲಿ ಮತ್ತು ಅರಬ್ಬಿ ಸಮುದ್ರದಲ್ಲಿರುವ ದ್ವೀಪಗಳು ಭಾರತದ ನಾಲ್ಕನೆಯ ಭೂಸ್ವರೂಪ ವಿಭಾಗವಾಗಿವೆ.

1. ಉತ್ತರದ ಪರ್ವತಗಳು: ಭಾರತದ ಉತ್ತರ ಭಾಗದಲ್ಲಿ ಪಾಮಿರ್ ಗ್ರಂಥಿಯಿಂದ ಮುಂದುವರಿದಿರುವ ಮಡಿಕೆ ಪರ್ವತ ಸರಣಿಗಳನ್ನು ಕಾಣಬಹುದು. ಇವುಗಳು ದೇಶದ ಉತ್ತರದ ಗಡಿಯುದ್ದಕ್ಕೂ ಹರಡಿವೆ. ಈ ಉತ್ತರದ ಪರ್ವತಗಳನ್ನು ಮೂರು ಉಪವಿಭಾಗಗಳಾಗಿ ವಿಂಗಡಿಸಬಹುದು ಅವುಗಳೆಂದರೆ;

ಅ. ಹಿಮಾಲಯ ಪರ್ವತಗಳು

ಆ. ಹಿಮಾಲಯದಾಚೆಯ ಪರ್ವತಗಳು

ಇ. ಈಶಾನ್ಯ ಬೆಟ್ಟಗಳು ಅಥವಾ ಪೂರ್ವಾಚಲ ಪ್ರದೇಶ

ಅ. ಹಿಮಾಲಯ ಪರ್ವತಗಳು: ಭಾರತದ ಭೂಸ್ವರೂಪಗಳಲ್ಲಿ ಹಿಮಾಲಯ ಪರ್ವತ ಸರಣಿಯು ಅತಿಮುಖ್ಯವಾದುದು. ಹಿಮಾಲಯ ಎಂದರೆ ಹಿಮದ ಮನೆ ಅಥವಾ ಹಿಮದಿಂದ ಕೂಡಿರುವ ಪ್ರದೇಶ ಎಂದರ್ಥ. ಇವುಗಳು ಇತ್ತೀಚೆಗೆ ನಿರ್ಮಿತಗೊಂಡಿರುವ ಮಡಿಕೆ ಪರ್ವತ ಸರಣಿಗಳಾಗಿವೆ. ಹಿಮಾಲಯ ಪರ್ವತ ಸರಣಿಯು ಪಶ್ಚಿಮದಲ್ಲಿ ಸಿಂಧೂ ನದಿ ಕಣಿವೆಯಿಂದ ಪೂರ್ವದಲ್ಲಿ ಬ್ರಹ್ಮಪುತ್ರ ನದಿ ಕಣಿವೆಯವರೆಗೆ ಸು. 2414 ಕಿಮೀ ದೂರ ಅವಿಚ್ಛಿನ್ನವಾಗಿ ಗೋಡೆಯಂತೆ ಹಬ್ಬಿವೆ. ಸು. ಅರ್ಧ ಚಂದ್ರಾಕೃತಿಯಲ್ಲಿರುವ ಈ ಪರ್ವತಗಳು ಭಾರತದ ಉತ್ತರದ ಗಡಿರೇಖೆಯಾಗಿವೆ. ಪಶ್ಚಿಮದ ಜಮ್ಮು ಮತ್ತು ಕಾಶ್ಮೀರದಲ್ಲಿ ಸು. 500 ಕಿಮೀ ಅಗಲವಾಗಿರುವ ಈ ಪರ್ವತಗಳು ಪೂರ್ವದ ಅರುಣಾಚಲ ಪ್ರದೇಶದಲ್ಲಿ ಕೇವಲ 200 ಕಿಮೀ ಗಳಷ್ಟು ಮಾತ್ರ ಅಗಲವನ್ನು ಹೊಂದಿವೆ. ಈ ಪರ್ವತಗಳು ಸು. 5 ದ.ಲ.ಚ.ಕಿಮೀ ಪ್ರದೇಶದಲ್ಲಿ ವಿಸ್ತರಿಸಿವೆ. ದಕ್ಷಿಣದಲ್ಲಿ ಮೈದಾನದ ಕಡೆಗೆ ಕಡಿದಾಗಿರುವ ಈ ಪರ್ವತಗಳು ಉತ್ತರದಲ್ಲಿ ಟಿಬೆಟ್ ಪ್ರಸ್ಥಭೂಮಿಯ ಕಡೆಗೆ ಇಳಿಜಾರನ್ನು ಹೊಂದಿವೆ.

ಹಿಮಾಲಯ ಪರ್ವತಗಳು ಇತ್ತೀಚಿನ ಮಡಿಕೆ ಪರ್ವತಗಳಾಗಿದ್ದು, ಭೂಮಿಯ ಆಂತರಿಕ ಕ್ರಿಯೆ ಅಂದರೆ ಭೂ ರಚನಾ ಕ್ರಿಯೆಯಿಂದ ನಿರ್ಮಿತವಾಗಿದೆ ಎಂದು ಭೂ ವಿಜ್ಞಾನಿಗಳ ಅಭಿಪ್ರಾಯ. ಸು. 200 ದ.ಲ.ವರ್ಷಗಳ ಹಿಂದೆ ಇಂದಿನ ಭೂಖಂಡಗಳೆಲ್ಲವು ಒಟ್ಟಿಗೆ ಸೇರಿಕೊಂಡಿದ್ದವು. ಈ ವಿಸ್ತಾರವಾದ ಭೂರಾಶಿಯನ್ನು ಆಲ್‌ಫ್ರೆಡ್ ವೆಗನೆರನು ಪ್ಯಾಂಜಿಯ ಎಂದು ಕರೆದಿರುವನು. ಅನಂತರ ಕಾಲಾಂತರದಲ್ಲಿ ಇದು ಎರಡು ವಿಭಾಗಗಳಾಗಿ ಒಡೆದು ಹೋಗಿದ್ದು, ಉತ್ತರ ಭಾಗವನ್ನು ಅಂಗಾರ ಅಥವಾ ಲಾರೇಷಿಯ, ಲಾರೇಷಿಯ ಪ್ಲೇಟ್ ಅಥವಾ ಲಾರೇಷಿಯ ಭೂರಾಶಿಯೆಂತಲೂ ದಕ್ಷಿಣಭಾಗವನ್ನು ಗೊಂಡ್ವಾನ ಅಥವಾ ಇಂಡಿಯನ್ ಪ್ಲೇಟ್ ಭೂ ರಾಶಿಯೆಂತಲೂ ಕರೆಯಲಾಗಿದೆ. ಇವುಗಳ ನಡುವೆ ನಿರ್ಮಿತವಾದ ಸಮುದ್ರವನ್ನು ಥೆತಿಸ್ ಸಮುದ್ರ ವೆಂದು ಕರೆದಿರುವರು. ಎರಡೂ ಭೂರಾಶಿಗಳಿಂದ ಅನೇಕ ನದಿಗಳು ಹರಿದು ಥೆತಿಸ್ ಸಮುದ್ರವನ್ನು ಸೇರುತ್ತಿದ್ದವು. ಇದರಿಂದ ಈ ನದಿಗಳ ಮೂಲಕ ಅಪಾರ ಪ್ರಮಾಣದಲ್ಲಿ ಕಣಶಿಲೆಗಳು ಥೆತಿಸ್ ಸಮುದ್ರದಲ್ಲಿ ಸಂಚಯಿಸಲ್ಪಟ್ಟವು.

ದಕ್ಷಿಣದ ಗೊಂಡ್ವಾನ ಭೂ ರಾಶಿಯು, ಸ್ಥಿರವಾಗಿದ್ದ ಉತ್ತರದ ಅಂಗಾರ ಭೂರಾಶಿಯ ಕಡೆಗೆ ನಿಧಾನವಾಗಿ ಚಲಿಸಿತು. ಇದರ ಒತ್ತಡದಿಂದ ಥೆತಿಸ್ ಸಮುದ್ರದಲ್ಲಿ ಸಂಚಯಿತವಾಗಿದ್ದ ಕಣಶಿಲೆಗಳು ಮೇಲೆತ್ತಲ್ಪಟ್ಟು ಮಡಿಕೆಗಳಾಗಿ ರೂಪಿತಗೊಂಡವು. ಇವುಗಳನ್ನೇ ಹಿಮಾಲಯ ಪರ್ವತಗಳೆಂದು ಕರೆಯಲಾಗಿದೆ. ಅಂದರೆ ಇಂದು ಹಿಮಾಲಯ ಪರ್ವತಗಳಿರುವ ಕಡೆ ಪುರಾತನ ಕಾಲದಲ್ಲಿ ಥೆತಿಸ್ ಸಮುದ್ರವಿದ್ದಿತು. ಅದರ ಕಣಶಿಲೆಗಳಿಂದಲೇ ಹಿಮಾಲಯ ಪರ್ವತಗಳು ನಿರ್ಮಿತವಾಗಿವೆ. ಇವುಗಳು ಸು. 70 ದ.ಲ ವರ್ಷಗಳ ಹಿಂದೆ ಟರ್ಷಿಯರಿ ಯುಗದಲ್ಲಿ ನಿರ್ಮಾಣಗೊಂಡಿವೆ.

ಹಿಮಾಲಯ ಪರ್ವತಗಳು ಗೊಂಡ್ವಾನ ಭೂರಾಶಿಯ ಒತ್ತರಿಸುವಿಕೆಯಿಂದ ವಿವಿಧ ಕಾಲಾವಧಿಯಲ್ಲಿ ನಿರ್ಮಿತಗೊಂಡಿವೆ. ಇದರಿಂದ ಈ ಪರ್ವತಗಳಲ್ಲಿ ಪರಸ್ಪರ ಸಮಾನಾಂತರವಾಗಿರುವ ಮೂರು ಪರ್ವತ ಸರಣಿಗಳನ್ನು ಕಾಣಬಹುದು. ಇವುಗಳೆಂದರೆ ಮಹಾ ಹಿಮಾಲಯ, ಮಧ್ಯಹಿಮಾಲಯ ಮತ್ತು ಹೊರಹಿಮಾಲಯ.

ಮಹಾ ಹಿಮಾಲಯ: ಈ ಸರಣಿಯನ್ನು ಉನ್ನತ ಹಿಮಾಲಯ ಅಥವಾ ಹಿಮಾದ್ರಿ ಎಂತಲೂ ಕರೆಯುವರು ಇದು ಪಶ್ಚಿಮದಲ್ಲಿ ಸಿಂಧೂ ಕಣಿವೆಯ ಬಳಿಯಿರುವ ನಂಗ ಪರ್ವತದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯಲ್ಲಿರುವ ನಾಮ್‌ಚೆಬಾರ್ವ ಶಿಖರದವರೆಗೆ ಅವಿಚ್ಛಿನ್ನವಾಗಿ ಹರಡಿವೆ. ಈ ಸರಣಿಯ ಪಶ್ಚಿಮ ಭಾಗವು ಕಾಶ್ಮೀರದಲ್ಲಿದ್ದು ಇದನ್ನು ಜಾಸ್ಕರ್ ಶ್ರೇಣಿ ಎಂದು ಕರೆಯುವರು. ಹಿಮಾಲಯ ಪರ್ವತಗಳಲ್ಲಿರುವ ಬಹುತೇಕ ಅತ್ಯುನ್ನತ ಶಿಖರಗಳೆಲ್ಲವೂ ಮಹಾಹಿಮಾಲಯ ಸರಣಿಯಲ್ಲಿಯೇ ಕಂಡು ಬರುತ್ತವೆ. ಅನೇಕ ಶಿಖರಗಳು 8000 ಮೀ ಗಳಿಗಿಂತಲೂ ಹೆಚ್ಚು ಎತ್ತರವಾಗಿದೆ. ಇವುಗಳಲ್ಲಿ ಮೌಂಟ್ ಎವರೆಸ್ಟ್ ಶಿಖರ (8848 ಮೀ) ಪ್ರಪಂಚದಲ್ಲಿಯೇ ಅತ್ಯುನ್ನತವಾದುದು




(ನೇಪಾಲ). ಈ ಸರಣಿಯಲ್ಲಿರುವ ಇತರ ಮುಖ್ಯ ಶಿಖರಗಳೆಂದರೆ ಕಾಂಚನ ಗಂಗಾ (8598 ಮೀ), ಧವಳಗಿರಿ (8172 ಮೀ), ಮಾಕಲು (8481 ಮೀ), ಮಾನಸ್ಲು (8156 ಮೀ), ಚೋಯು (8,153 ಮೀ) ಅನ್ನಪೂರ್ಣ (8078 ಮೀ), ನಂಗಪರ್ವತ (8126 ಮೀ), ನಂದಾದೇವಿ (7,817 ಮೀ) ಮತ್ತು ಗೌರಿಶಂಕರ (7,145 ಮೀ).

ಹಿಮನದಿಗಳು: ಮಹಾ ಹಿಮಾಲಯ ಸರಣಿಯು ಅನೇಕ ಹಿಮನದಿಗಳನ್ನು ಒಳಗೊಂಡಿದೆ. ಕೆಲವು ಹಿಮನದಿಗಳು 50 ಕಿಮೀ ಗಳಿಗಿಂತಲೂ ಹೆಚ್ಚು ದೂರ ಹರಿಯುತ್ತವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಸಯಾಚಿನ್ (70 ಕಿಮೀ) ಬಾಲ್ಟೋರೋ (60 ಕಿಮೀ), ಬೈಯೋಪೋ (60 ಕಿಮೀ), ಹಿಸ್ಪಾರ್ (62 ಕಿಮೀ), ಗಂಗೋತ್ರಿ (30 ಕಿಮೀ) ಮತ್ತು ಜೇಮು (20 ಕಿಮೀ).

ಮಹಾ ಹಿಮಾಲಯ ಸರಣಿ ಹಲವಾರು ಕಣಿವೆ ಮಾರ್ಗಗಳನ್ನು ಒಳಗೊಂಡಿದ್ದು, ಈ ಅಭೇದ್ಯ ಪ್ರದೇಶದ ಮೂಲಕ ಸಂಚಾರ ಮಾರ್ಗಗಳಿಗೆ ಅನುಕೂಲತೆಯನ್ನು ಒದಗಿಸಿವೆ. ಈ ಕಣಿವೆ ಮಾರ್ಗಗಳೂ ಸು. 4570 ಮೀ ಎತ್ತರದಲ್ಲಿವೆ. ಇವುಗಳಲ್ಲಿ ಕಾಶ್ಮೀರದ ಬುರ್ಜಿಲ್ ಮತ್ತು ಜೋಜಿಲಾ ಕಣಿವೆಗಳು ಹಿಮಾಚಲ ಪ್ರದೇಶದ ಬಾರಾ ಲಾಪ್‌ಚಾಲಾ ಮತ್ತು ಶಿಪ್‌ಕಿಲಾ; ಉತ್ತರಾಂಚಲದ ಥಾಗಲಾ, ನಿತಿ ಮತ್ತು ಲಿಪುಲೇಕ್ ಮತ್ತು ಸಿಕ್ಕಿಂನ ಜಿಲೀಪ್‌ಲಾ ಅತಿ ಮುಖ್ಯವಾದವು.

ಕೆಳಹಿಮಾಲಯ ಅಥವಾ ಒಳ ಹಿಮಾಲಯ: ಇದನ್ನು ಮಧ್ಯ ಹಿಮಾಲಯ ಅಥವಾ ಒಳ ಹಿಮಾಲಯವೆಂದೂ ಕರೆಯುವರು. ಈ ಸರಣಿಯು ಸರಾಸರಿ ಎತ್ತರ ಸು. 3000 ಮೀ– 4500 ಮೀ. ಇದು ಸು. 60–80 ಕಿಮೀ ಅಗಲವಾಗಿದೆ. ಈ ಸರಣಿಯು ಮಧ್ಯದಲ್ಲಿದ್ದು ಮಹಾ ಹಿಮಾಲಯ ಹಾಗೂ ಹೊರ ಹಿಮಾಲಯ ಸರಣಿಗಳನ್ನು ಪ್ರತ್ಯೇಕಿಸುವುದು. ಒಳ ಹಿಮಾಲಯ ಹಲವಾರು ಸಮಾನಾಂತರ ಸರಣಿಗಳನ್ನು ಒಳಗೊಂಡಿವೆ. ಇವುಗಳಲ್ಲಿ ಪಿರ್ ಪಂಜಾಲ್, ಧೌಲಾದರ್, ಮುಸ್ಸೋರಿ ಸರಣಿಗಳು ಮುಖ್ಯವಾದವು. ಒಳ ಹಿಮಾಲಯದಲ್ಲಿ ಹಲವಾರು ವಿಶಾಲವಾದ ಕಣಿವೆಗಳಿದ್ದು, ಇವು ಪ್ರಕೃತಿ ಸೌಂದರ್ಯಕ್ಕೆ ಹೆಸರಾಗಿವೆ. ಇವುಗಳಲ್ಲಿ ಕಾಶ್ಮೀರ ಕಣಿವೆ, ಕಾಂಗ್ರಾ, ಕುಲು ಲಾಹಲ್, ಸ್ಪಿತಿ ಮತ್ತು ಚಂದ್ರಾ ಕಣಿವೆಗಳು ಮುಖ್ಯವಾದವು. ಒಳ ಹಿಮಾಲಯ ಸರಣಿಯಲ್ಲಿ ಹಲವಾರು ಗಿರಿಧಾಮಗಳಿವೆ. ಸುಂದರವಾದ ಪ್ರಕೃತಿ ಹಾಗೂ ತಂಪಾದ ವಾಯುಗುಣಗಳು ಗಿರಿಧಾಮಗಳಿಗೆ ಸೂಕ್ತವಾಗಿವೆ. ಇಂತಹ ಗಿರಿಧಾಮಗಳಲ್ಲಿ ಶಿಮ್ಲಾ, ರಾಣಿಖೇತ್, ಚಕ್ರತಾ ಮುಸ್ಸೋರಿ, ನೈನಿತಾಲ್, ದಾರ್ಜಿಲಿಂಗ್ ಮುಖ್ಯವಾದವು.

ಹೊರ ಹಿಮಾಲಯ ಅಥವಾ ಶಿವಾಲಿಕ್ ಬೆಟ್ಟಗಳು: ಇದು ಅತ್ಯಂತ ದಕ್ಷಿಣದಲ್ಲಿರುವ ಸರಣಿ ಹಾಗೂ ಅತಿ ಕಡಿಮೆ ಎತ್ತರವನ್ನು ಹೊಂದಿದೆ. ಇದನ್ನು ಹಿಮಾಲಯದ ಪಾದ ಬೆಟ್ಟಗಳು ಎಂದೂ ಕರೆಯಲಾಗುವುದು. ಇದರ ಸರಾಸರಿ ಎತ್ತರ 1300 ಮೀ ಗಳು ಮಾತ್ರ ಹಾಗೂ ಅಗಲ 50 – 15 ಕಿಮೀ ಗಳಷ್ಟಿದ್ದು, ಪಶ್ಚಿಮದಿಂದ ಪೂರ್ವದವರೆಗೂ ಹಬ್ಬಿದೆ. ಈ ಪಾದ ಬೆಟ್ಟಗಳನ್ನು ವಿವಿಧ ಪ್ರದೇಶಗಳಲ್ಲಿ ಅನೇಕ ಸ್ಥಳೀಯ ಹೆಸರುಗಳಿಂದ ಕರೆಯಲಾಗುವುದು. ಅರುಣಾಚಲ ಪ್ರದೇಶದಲ್ಲಿ ಮಿಶ್ಮಿ, ಅಬೋರ್, ಮಿರಿ ಮತ್ತು ದಾಫ್ಲಾ; ನೇಪಾಳದಲ್ಲಿ ಡಾಂಗ ಸರಣಿ, ದುಂದ್ವಾ ಸರಣಿ ಮತ್ತು ಚೂರಿಯ ಘಾಟಿ ಬೆಟ್ಟಗಳು ಉತ್ತರ ಪ್ರದೇಶದಲ್ಲಿ ಶಿವಾಲಿಕ್ ಎಂಬ ಹೆಸರುಗಳು ಹೆಚ್ಚು ರೂಢಿಯಲ್ಲಿವೆ.

ಪಾದ ಬೆಟ್ಟಗಳ ಸರಣಿಯಲ್ಲಿ ಸಮತಟ್ಟಾದ ಕಿರಿದಾದ ಅನೇಕ ಮೈದಾನಗಳಿದ್ದು ಇವು ಶಿವಾಲಿಕ್ ಬೆಟ್ಟಗಳನ್ನು ಮಧ್ಯ ಹಿಮಾಲಯದಿಂದ ಬೇರ್ಪಡಿಸಿವೆ. ಇವುಗಳನ್ನು ಡೂನ್‌ಗಳೆಂದು ಕರೆಯುವರು. ಇವುಗಳು ಉತ್ತರಪ್ರದೇಶದಲ್ಲಿ ಹರಿದ್ವಾರದಿಂದ ಹೃಷಿಕೇಶದವರೆಗೆ ಹೆಚ್ಚು ಕಂಡುಬರುತ್ತವೆ. ಇವುಗಳಲ್ಲಿ ಡೆಹರಾಡೂನ್ ಅತಿಮುಖ್ಯವಾದುದು.

ಆ. ಹಿಮಾಲಯದಾಚೆಯ ಪರ್ವತಗಳು: ಮಹಾ ಹಿಮಾಲಯ ಸರಣಿಯ ಉತ್ತರಕ್ಕಿರುವ ಮಡಿಕೆ ಪರ್ವತಗಳಿದ್ದು ಹಿಮಾಲಯದಾಚೆಯ ಪರ್ವತ ಅಥವಾ ಟಿಬೆಟ್ ಹಿಮಾಲಯವೆಂದು ಕರೆಯುವರು. ಇದು ಎರಡು ಸರಣಿಗಳನ್ನು ಒಳಗೊಂಡಿವೆ. ಅವುಗಳೆಂದರೆ ಕಾರಾಕೋರಮ್ ಪರ್ವತ ಸರಣಿ ಮತ್ತು ಕೈಲಾಸ ಪರ್ವತ ಸರಣಿ. ಇವು ಹಿಮಾಲಯ ಪರ್ವತಕ್ಕೆ ಸಮಾನಾಂತರವಾಗಿ ಪೂರ್ವ ಪಶ್ಚಿಮವಾಗಿ ಜಮ್ಮು ಮತ್ತು ಕಾಶ್ಮೀರ ಹಾಗೂ ಪಶ್ಚಿಮ ಟಿಬೆಟ್ಟಿನಲ್ಲಿ ಹರಡಿವೆ. ಕಾರಾಕೋರಮ್ ಪರ್ವತ ಸರಣಿಯು ಅತಿ ಎತ್ತರವಾದ ಹಲವಾರು ಶಿಖರಗಳನ್ನು ಒಳಗೊಂಡಿದೆ. ಅವುಗಳಲ್ಲಿ ಗಾಡ್ವಿನ್ ಆಸ್ಟಿನ್ ಅಥವಾ ಕೆ2 ಎಂಬುದು ಭಾರತದಲ್ಲಿ ಅತಿ ಎತ್ತರವಾದ (8611 ಮೀ) ಶಿಖರವಾಗಿದೆ (ಇದು ಇಂದು ಚೀನದಿಂದ ಆಕ್ರಮಿತವಾಗಿರುವ ಅಕ್‌ಸಾಯ್‌ಚಿನ್ ಪ್ರದೇಶದಲ್ಲಿದೆ.).

ಕಾರಾಕೋರಮ್ ಪರ್ವತಗಳ ಈಶಾನ್ಯದಲ್ಲಿ ಲಡಾಖ್ ಪ್ರಸ್ಥಭೂಮಿಯಿದೆ. ಇದು ಭಾರತದಲ್ಲಿ ಅತಿ ಎತ್ತರವಾದ ಪ್ರಸ್ಥಭೂಮಿ. ಇದು ಪೂರ್ವಕ್ಕೆ ಟಿಬೆಟ್‌ನಲ್ಲಿ ಮುಂದುವರಿದಿದ್ದು, ಇದನ್ನು ಕೈಲಾಸ ಪರ್ವತವೆಂದು ಕರೆಯುವರು.

ಇ. ಈಶಾನ್ಯದ ಬೆಟ್ಟಗಳು ಅಥವಾ ಪೂರ್ವಚಲ: ಹಿಮಾಲಯ ಪರ್ವತಗಳು ಪೂರ್ವದಲ್ಲಿ ಬ್ರಹ್ಮಪುತ್ರ ನದಿಯ ದಿಹಾಂಗ್ ಕಣಿವೆಯಿಂದ ದಕ್ಷಿಣಕ್ಕೆ ತಿರುಗಿ ಮುಂದುವರಿದಿದೆ. ಈ ಪ್ರದೇಶದಲ್ಲಿ ಹಲವಾರು ಬೆಟ್ಟಗಳ ಸರಣಿಗಳಿದ್ದು, ಇವುಗಳನ್ನು ಈಶಾನ್ಯದ ಬೆಟ್ಟಗಳು ಅಥವಾ ಪೂರ್ವಾಚಲ ಪ್ರದೇಶವೆಂದು ಕರೆಯುವರು. ಈ ಬೆಟ್ಟದ ಸರಣಿಗಳು ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ ರಾಜ್ಯಗಳಲ್ಲಿ ಕಂಡು ಬರುತ್ತವೆ. ಇವುಗಳ ಸರಾಸರಿ ಎತ್ತರ 500–3000 ಮೀ ಗಳಷ್ಟಿರುವುದು. ಪೂರ್ವಾಚಲದ ಈ ಬೆಟ್ಟಗಳು ಭಾರತ ಮಯನ್ಮಾರ್‌ಗಳ (ಬರ್ಮಾ) ನಡುವೆ ಹಬ್ಬಿರುವ ಅರಕಾನ ಯೋಮ ಪರ್ವತದ ಕವಲುಗಳಾಗಿವೆ. ಇದರಿಂದಾಗಿಯೇ ಇವುಗಳನ್ನು ಪೂರ್ವದ ಕವಲುಗಳು ಎಂದೂ ಕರೆಯುವರು.

ಕಾಸಿ, ಜೈಂತಿಯಾ ಮತ್ತು ಗಾರೋ ಬೆಟ್ಟಗಳ ನಡುವೆಯೆ ಶಿಲ್ಲಾಂಗ್ ಪ್ರಸ್ಥಭೂಮಿಯಿದೆ. ಇದರಲ್ಲಿ ಶಿಲೆಗಳ ರಚನೆಯನ್ನು ಗಮನಿಸಿದಾಗ, ಹಿಮಾಲಯಗಳಿಗಿಂತಲೂ ಇದು ಪ್ರಸ್ಥಭೂಮಿಯೊಡನೆ ಹೆಚ್ಚು ಸಾಮ್ಯತೆ ಹೊಂದಿರುವುದನ್ನು ಕಾಣಬಹುದು. ಶಿಲ್ಲಾಂಗ್ ಪ್ರಸ್ಥಭೂಮಿಯಲ್ಲಿ ನೋಕ್ರೇಕ್ (1,412 ಮೀ) ಅತ್ಯುನ್ನತ ಶಿಖರವಾಗಿದ್ದು, ಇದು ಗಾರೋ ಬೆಟ್ಟಗಳಲ್ಲಿದೆ.

ಹಿಮಾಲಯ ಪರ್ವತಗಳು ಭಾರತದ ಜನ ಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

ಅ. ಹಿಮಾಲಯ ಪರ್ವತಗಳು ಸಾಕಷ್ಟು ಎತ್ತರವಾಗಿ, ಉತ್ತರದ ಗಡಿರೇಖೆಯಂತೆ ಹಬ್ಬಿದ್ದು, ದೇಶವನ್ನು ವಿದೇಶೀಯರ ದಾಳಿಯಿಂದ ರಕ್ಷಿಸಿವೆ.

ಆ. ವಾಯುಗುಣದ ಮೇಲೆ ಪ್ರಭಾವ: ಹಿಮಾಲಯ ಪರ್ವತಗಳು ಭಾರತದ ವಾಯುಗುಣದ ಮೇಲೆ ಬೀರಿರುವ ಪ್ರಭಾವಗಳು ಅಪಾರವಾದುದು. ಚಳಿಗಾಲದಲ್ಲಿ ಮಧ್ಯ ಏಷ್ಯದಿಂದ ಬೀಸುವ ಶೀತ ಮಾರುತಗಳನ್ನು ತಡೆದು ದೇಶವನ್ನು ರಕ್ಷಿಸಿವೆ. ಅಲ್ಲದೆ ಮಾನ್ಸೂನ್ ಮಾರುತಗಳನ್ನು ತಡೆದು ಮಳೆಯನ್ನು ಸುರಿಸುತ್ತವೆ. ದೇಶವು ಹೊಂದಿರುವ ಮಾನ್ಸೂನ್ ವಾಯುಗುಣಕ್ಕೆ ಹಿಮಾಲಯ ಪರ್ವತಗಳೇ ಮುಖ್ಯ ಕಾರಣ.

ಇ. ಅನೇಕ ನದಿಗಳು ಉಗಮ ಹೊಂದಿರುತ್ತವೆ. ಇವು ಸರ್ವಕಾಲಿಕ ನದಿಗಳಾಗಿದ್ದು, ಮಳೆಗಾಲದಲ್ಲಿ ಮಳೆಯ ನೀರಿನಿಂದ ಹಾಗೂ ಬೇಸಗೆಯಲ್ಲಿ ಹಿಮಕರಗಿದ ನೀರಿನಿಂದ ತುಂಬಿ ಹರಿಯುತ್ತವೆ.

ಈ. ಹಿಮಾಲಯದಿಂದ ಹುಟ್ಟಿ ಹರಿಯುವ ನದಿಗಳು ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಹಕಾರಿಯಾಗಿವೆ.

ಉ. ಉತ್ತರ ಭಾರತದ ಮಹಾ ಮೈದಾನ. ಸಂಪೂರ್ಣವಾಗಿ ಹಿಮಾಲಯದಿಂದ ಹರಿದು ಬರುವ ನದಿಗಳ ಕೊಡುಗೆಯಾಗಿದೆ.

ಊ. ಹಿಮಾಲಯ ಪರ್ವತಗಳು ಮೈದಾನದಿಂದ ಹಿಮಾವೃತಗೊಂಡಿರುವ ಶಿಖರದವರೆಗೆ ಎತ್ತರವನ್ನು ಹೊಂದಿವೆ. ಇದರಿಂದ ಇದರ ಇಳಿಜಾರುಗಳಲ್ಲಿ ವಿವಿಧ ಬಗೆಯ ವಾಯುಗುಣ ಪರಿಸ್ಥಿತಿಗಳನ್ನು ಕಾಣಬಹುದು. ಆದ್ದರಿಂದ ಹಿಮಾಲಯ ಇಳಿಜಾರುಗಳು ವೈವಿಧ್ಯಮಯವಾದ ಸಸ್ಯ ಮತ್ತು ಪ್ರಾಣಿಸಂಕುಲಗಳನ್ನು ಒಳಗೊಂಡಿವೆ.

ಋ. ಹಿಮಾಲಯ ಪರ್ವತಗಳು ಸುಂದರ ಪ್ರಕೃತಿಯ ಮಡಿಲು, ವೈವಿಧ್ಯಮಯ ಭೂ ದೃಶ್ಯಾವಳಿ, ತಂಪಾದ ವಾಯುಗುಣಗಳು ಪ್ರವಾಸೋದ್ಯಮದ ಅಭಿವೃದ್ಧಿಗೆ ಪೂರಕವಾಗಿವೆ. ಇದರಿಂದಾಗಿಯೇ ಅನೇಕ ಗಿರಿಧಾಮಗಳು ಅಭಿವೃದ್ಧಿ ಹೊಂದಿವೆ. ಉದಾ: ಆಲ್ಮೋರಾ, ಚಕ್ರತಾ, ಡಾಲ್‌ಹೌಸಿ, ಡೆಹರಾಡೂನ್, ಗುಲ್‌ಮಾರ್ಗ್, ಸಿಮ್ಲಾ, ಮುಸ್ಸೋರಿ, ನೈನಿತಾಲ್, ರಾಣಿಖೇಟ್ ಮೊದಲಾದವು. ಕಾಶ್ಮೀರದ ಕಣಿವೆ ಕಾಂಗ್ರ, ಕುಲು, ಕಿಷತ್‌ವಾರ್ ಮೊದಲಾದವು ಸುಂದರ ಕಣಿವೆಗಳಾಗಿದ್ದು, ಪ್ರವಾಸೋದ್ಯಮ ಕೇಂದ್ರಗಳಾಗಿವೆ. ಹಿಮಾಲಯ ಈ ಕಣಿವೆ ಪ್ರದೇಶಗಳಲ್ಲಿ ಪ್ರಸಿದ್ಧವಾದ ಅನೇಕ ಶೈಕ್ಷಣಿಕ ಕೇಂದ್ರ ಅನೇಕ ಪ್ರಸಿದ್ಧ ಪವಿತ್ರ ಕ್ಷೇತ್ರಗಳನ್ನೂ ಒಳಗೊಂಡಿವೆ. ಉದಾ: ಹರಿದ್ವಾರ, ಹೃಷಿಕೇಷ, ಕೇದಾರನಾಥ, ಬದರಿನಾಥ ಇತ್ಯಾದಿ.

2. ಉತ್ತರ ಭಾರತದ ಮಹಾ ಮೈದಾನ: ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂತಲೂ ಕರೆಯುವರು. ಇದು ಉತ್ತರದಲ್ಲಿ ಹಿಮಾಲಯ ಪರ್ವತಗಳು ಹಾಗೂ ದಕ್ಷಿಣದಲ್ಲಿ ಪರ್ಯಾಯ ಪ್ರಸ್ಥಭೂಮಿಯ ನಡುವೆ ಕಂಡು ಬರುವುದು. ಇದು ಪಶ್ಚಿಮದ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮ ಪುತ್ರ ಕಣಿವೆಯ ಸು. 2400 ಕಿಮೀ ಉದ್ದ, 70–500 ಕಿಮೀ ಅಗಲವಾಗಿದೆ. ಇದರ ಒಟ್ಟು ವಿಸ್ತೀರ್ಣ 6,52,000 ಚ.ಕಿಮೀ. ಈ ಮೈದಾನ ಅತಿ ಕಡಿಮೆ ಪ್ರಮಾಣದಲ್ಲಿ ಏರು ತಗ್ಗಿನ ವ್ಯತ್ಯಾಸವನ್ನು ಹೊಂದಿದ್ದು, ಸಂಪೂರ್ಣವಾಗಿ ಮಟ್ಟಸವಾಗಿದೆ. ಈ ಮಹಾ ಮೈದಾನವು ನದಿಗಳು ಹೊತ್ತು ತಂದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವ ಸಂಚಯನ ಮೈದಾನವಾಗಿದೆ. ಭೂ ಇತಿಹಾಸದ ಪ್ರಕಾರ ಇದು ಇತ್ತೀಚಿನ ಅವಧಿಯಲ್ಲಿ ನಿರ್ಮಿತವಾಗಿರುವ ಭಾರತದ ಭೂ ಸ್ವರೂಪದ ವಿಭಾಗವಾಗಿದೆ. ಹಿಮಾಲಯ ಪರ್ವತಗಳು ನಿರ್ಮಿತವಾದ ಅವಧಿಯಲ್ಲಿ ಅವುಗಳ ದಕ್ಷಿಣದಲ್ಲಿ ಆಳವಾದ ಭೂ ಕಂದರವಿದ್ದಿತೆಂದೂ ಅನಂತರ ನದಿಗಳು ಹೊತ್ತು ತಂದು ಸಂಚಯಿಸಿದ ಕಣ ಶಿಲೆಗಳಿಂದ ಮೈದಾನವು ನಿರ್ಮಿತವಾಗಿದೆಯೆಂದೂ ವಿವರಿಸಲಾಗಿದೆ.

ಉತ್ತರ ಮೈದಾನ ಸಂಪೂರ್ಣವಾಗಿ ಮಟ್ಟಸವಾಗಿದ್ದು ಏರು ತಗ್ಗುಗಳ ವ್ಯತ್ಯಾಸ ಕಡಿಮೆ. ಆದರೆ ಅದರಲ್ಲಿ ಎರಡು ಸ್ವರೂಪಗಳನ್ನು ಸ್ಪಷ್ಟವಾಗಿ ಕಾಣಬಹುದು. ಅವುಗಳೆಂದರೆ,

ಅ. ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾಚೂರುಗಳನ್ನು ಸಂಚಯಿಸಿವೆ. ಇದನ್ನೇ ಬಬರ್ ಎಂದು ಕರೆಯುವರು. ನದಿಗಳು ಈ ವಲಯವನ್ನು ಪ್ರವೇಶಿಸಿದಾಗ ಅವುಗಳ ನೀರು ಈ ವಲಯದಲ್ಲಿ ಇಂಗಿ ನದಿಗಳು ಅದೃಶ್ಯವಾಗುತ್ತವೆ.

ಆ. ಮೆಕ್ಕಲು ಮಣ್ಣಿನ ಮೈದಾನದ ಅಂಚಿನಲ್ಲಿ ಬಬರ್ ಪ್ರದೇಶದಲ್ಲಿ ಇಂಗಿಹೋದ ನೀರು ಪುನಃ ಮೇಲಕ್ಕೆ ಬರುವುದು. ಇದರಿಂದ ಈ ವಲಯವು ಜೌಗು ಪ್ರದೇಶವಾಗಿದೆ. ಇದನ್ನೇ ತೆರಾಯಿ ಪ್ರದೇಶವೆಂದು ಕರೆಯುವರು. ಈ ವಲಯದ ಹೆಚ್ಚು ಭಾಗವು ಅರಣ್ಯಗಳಿಂದ ಕೂಡಿದೆ. ತೆರಾಯಿ ವಲಯದಿಂದ ದಕ್ಷಿಣಕ್ಕೆ ಪುರಾತನ ಕಾಲದಲ್ಲಿ ಸಂಚಯಿತವಾಗಿರುವ ಮೆಕ್ಕಲು ಮಣ್ಣಿನ ವಲಯವನ್ನು ಭಂಗರ್ ಎಂದು ಕರೆಯುವರು. ಇದು ನದಿಯ ಪ್ರವಾಹ ಮೈದಾನಕ್ಕಿಂತ ಹೆಚ್ಚು ಎತ್ತರದಲ್ಲಿರುವುದು. ಈ ಮಣ್ಣು ಸುಣ್ಣದ ಕಲ್ಲಿನಕಣಗಳನ್ನು ಅಧಿಕ ಪ್ರಮಾಣದಲ್ಲಿ ಒಳಗೊಂಡಿರುವುದು. ಈ ಸುಣ್ಣದ ಕಲ್ಲಿನ ಕಣಗಳನ್ನು ಕಂಕರ್ ಎಂದು ಕರೆಯುವರು. ಇತ್ತೀಚಿನ ಅವಧಿಯಲ್ಲಿ ಸಂಚಯಿತಗೊಂಡು ನಿರ್ಮಿತವಾಗಿರುವ ಮೆಕ್ಕಲು ಮಣ್ಣನ್ನು ಖದರ್ ಎಂದು ಕರೆಯುವರು. ಇದರಲ್ಲಿ ನುಣುಪಾದ ಜೇಡಿಯ ಪ್ರಮಾಣ ಹೆಚ್ಚಾಗಿದ್ದು ಮರಳಿನ ಪ್ರಮಾಣ ಕಡಿಮೆ. ಉತ್ತರದ ಮೈದಾನವನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ 1. ಪಶ್ಚಿಮದ ಮೈದಾನ 2. ಪೂರ್ವದ ಮೈದಾನ, ಇವುಗಳನ್ನು ದೆಹಲಿ ನಗರವಿರುವ ಉನ್ನತ ಪ್ರದೇಶವು ಪ್ರತ್ಯೇಕಿಸುವುದು.

ಪಶ್ಚಿಮ ಮೈದಾನ: ಪಶ್ಚಿಮ ಮೈದಾನ ಸಿಂಧು ಮತ್ತು ಅದರ ಉಪನದಿಗಳ ಸಂಚಯನ ಕಾರ್ಯದಿಂದ ನಿರ್ಮಿತವಾಗಿದೆ. ಇದನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಪಂಜಾಬ್ ಮತ್ತು ಹರಿಯಾಣ ಮೈದಾನ ಪ್ರದೇಶ ಮತ್ತು ರಾಜಸ್ಥಾನ ಮೈದಾನ ಪ್ರದೇಶ, ಪಂಜಾಬ್ ಮತ್ತು ಹರಿಯಾಣ ಮೈದಾನದಲ್ಲಿ ಸಿಂಧೂ ಮತ್ತು ಅದರ ಮುಖ್ಯ ಉಪನದಿಗಳಾದ ಸಟ್ಲೇಜ್, ಬಿಯಾಸ್, ರಾವಿ, ಮುಂತಾದವು ಹರಿಯುತ್ತವೆ. ಈ ಐದು ನದಿಗಳ ಪ್ರದೇಶವನ್ನು ಪಾಂಚ್ ಅಬ್ ಪ್ರದೇಶ, ಪಂಜಾಬ್ ಎನ್ನಲಾಗಿದೆ.

ರಾಜಸ್ತಾನ ಮೈದಾನ ಪಂಜಾಬ್ ಹರಿಯಾಣ ಮೈದಾನಗಳ ದಕ್ಷಿಣಕ್ಕಿರುವುದು. ಅರಾವಳಿ ಪರ್ವತ ರಾಜಸ್ತಾನ ಮೈದಾನದ ಪೂರ್ವದ ಗಡಿರೇಖೆಯಾಗಿದೆ. ಇದರ ಪಶ್ಚಿಮ ಭಾಗವು ಮರುಳು ದಿಣ್ಣೆ ಹಾಗೂ ಉಪ್ಪಿನ ಸರೋವರಗಳಿಂದ ಕೂಡಿರುವ ಥಾರ್ ಮರುಭೂಮಿಯಾಗಿದೆ. ಇದನ್ನು ಮಾರುಸ್ಥಲಿ ಎಂದೂ ಕರೆಯುವರು. ಅರಾವಳಿ ಪರ್ವತದ ಪಶ್ಚಿಮದ ಇಳಿಜಾರು ಅರೆ ಮರುಭೂಮಿಯ ಲಕ್ಷಣವನ್ನು ಹೊಂದಿದ್ದು ಇದನ್ನು ರಾಜಸ್ತಾನ ಬಗಾರ್ ಎಂದು ಕರೆಯಲಾಗಿದೆ.

ಥಾರ್ ಮರುಭೂಮಿ: ಭಾರತದ ಮುಖ್ಯ ಸ್ವರೂಪಗಳಲ್ಲಿ ಮರುಭೂಮಿ ವಿಶಿಷ್ಟವಾದುದು ಇದು ಉಷ್ಣವಲಯದ ಮರುಭೂಮಿಯಾಗಿದೆ. ರಾಜಸ್ತಾನದ ಪಶ್ಚಿಮ ಭಾಗವನ್ನು ಆವರಿಸಿರುವ ಈ ಮರುಭೂಮಿಯನ್ನು ಥಾರ್ ಮರುಭೂಮಿ, ಮಾರುಸ್ಥಲಿ ಹಾಗೂ ಭಾರತದ ಮಹಾ ಮರುಭೂಮಿ – ಹೀಗೆ ವಿವಿಧ ಹೆಸರುಗಳಿಂದ ಕರೆಯುವರು. ಇದರ ವಿಸ್ತೀರ್ಣ 1,75,000 ಚ.ಕಿಮೀ. ಥಾರ್ ಮರುಭೂಮಿ 650 ಕಿಮೀ ಉದ್ದ ಹಾಗೂ 250–300 ಕಿಮೀ ಅಗಲವಾಗಿದ್ದು ಇದರ ಸರಾಸರಿ ಎತ್ತರ 200–250 ಮೀ ಗಳಷ್ಟಿರುವುದು. ಇದು ಸಂಪೂರ್ಣವಾಗಿ ಮರುಳು ದಿಣ್ಣೆಗಳಿಂದ ಕೂಡಿದೆ. ಇಲ್ಲಿ ಕಂಡುಬರುವ ಮರಳು ದಿಣ್ಣೆಗಳಲ್ಲಿ ಅರ್ಧ ಚಂದ್ರಾಕೃತಿಯ ಮರಳು ದಿಣ್ಣೆಗಳು ಹಾಗೂ ನೀಳ ಮರಳು ದಿಣ್ಣೆಗಳು ಮುಖ್ಯವಾದವು. ಈ ಮರಳು ದಿಣ್ಣೆಗಳನ್ನು ಧ್ರಿಯನ್ ಎಂದು ಕರೆಯುವುದು ರೂಢಿಯಲ್ಲಿದೆ. ಈ ಮರಳು ದಿಣ್ಣೆಗಳು ನೈರುತ್ಯ ಮಾನ್ಸೂನ್ ಮಾರುತಗಳೊಡನೆ ಈಶಾನ್ಯದ ಕಡೆಗೆ ವಿಸ್ತರಿಸುವುದು. ಇದನ್ನು ತಡೆಯಲು ಸಸ್ಯ ವರ್ಗಗಳನ್ನು ಬೆಳೆಸಿ ಮರಳು ದಿಣ್ಣೆಗಳನ್ನು ಸ್ಥಿರೀಕರಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಪೂರ್ವದ ಮೈದಾನ: ಉತ್ತರ ಭಾರತದ ಮಹಾ ಮೈದಾನವು ಗಂಗ ಮತ್ತು ಬ್ರಹ್ಮಪುತ್ರ ನದಿಗಳ ಮೈದಾನ ಪ್ರದೇಶಗಳನ್ನು ಒಳಗೊಂಡಿರುವುದು. ಗಂಗ ಮೈದಾನವು ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಕಂಡು ಬರುವುದು. ಬ್ರಹ್ಮಪುತ್ರ ಮೈದಾನವು ಅಸ್ಸಾಂ ರಾಜ್ಯದಲ್ಲಿದ್ದು ಅದನ್ನು ಅಸ್ಸಾಂ ಕಣಿವೆ ಯೆಂದೂ ಕರೆಯಲಾಗಿದೆ. ಗಂಗ ಮೈದಾನವನ್ನು ಗಂಗ – ಯಮುನ ಅಂತರ್ನದಿ ಪ್ರದೇಶ (ದೋ ಅಬ್ ಎಂದರೆ ಎರಡು ನದಿಗಳ ನಡುವಿನ ಪ್ರದೇಶ ಎಂದರ್ಥ) ರೋಹಿಲಖಂಡ, ಅವಧ್, ಮೈದಾನ, ಬಿಹಾರ ಮೈದಾನ ಮತ್ತು ಬಂಗಾಳ ಮೈದಾನಗಳೆಂದು ಐದು ವಿಭಾಗಗಳಾಗಿ ವಿಂಗಡಿಸಬಹುದು.

ಉತ್ತರದ ಮಹಾಮೈದಾನ ಮೆಕ್ಕಲು ಮಣ್ಣಿನಿಂದ ಕೂಡಿದ ಫಲವತ್ತಾದ ಮೈದಾನವಾಗಿದೆ. ನೀರಾವರಿಯ ಅನುಕೂಲತೆಯಿರುವುದರಿಂದ ವ್ಯವಸಾಯಕ್ಕೆ ಹೆಚ್ಚು ಉಪಯುಕ್ತವಾಗಿದೆ. ಇದು ಭಾರತದ ಅತ್ಯಂತ ಪ್ರಮುಖ ವ್ಯವಸಾಯ ಪ್ರದೇಶವಾಗಿದೆ.

ಉತ್ತರದ ಮೈದಾನವು ಅತ್ಯಧಿಕ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ದೇಶದ ಶೇ.40 ರಷ್ಟು ಜನಸಂಖ್ಯೆಯನ್ನು ಒಳಗೊಂಡಿರುವುದು. ಇದರಿಂದಾಗಿಯೇ ಈ ಮೈದಾನವನ್ನು ಭಾರತದ ಹೃದಯ ಭಾಗವೆಂದು ಕರೆಯಲಾಗಿದೆ. ವ್ಯವಸಾಯದ ಅಭಿವೃದ್ಧಿ

ಹಾಗೂ ಜನಸಾಂದ್ರತೆಯಿಂದ ಈ ಮೈದಾನದ ವಿವಿಧ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ಉದಾ: ಸೆಣಬಿನ ಕೈಗಾರಿಕೆ, ಸಕ್ಕರೆ ಕೈಗಾರಿಕೆ, ಚರ್ಮದ ಕೈಗಾರಿಕೆ, ಹತ್ತಿ ಗಿರಣಿ ಕೈಗಾರಿಕೆ, ರಸಗೊಬ್ಬರ ಕೈಗಾರಿಕೆ ಇತ್ಯಾದಿ. ಈ ಮೈದಾನದಲ್ಲಿ ಪವಿತ್ರಗಂಗ ನದಿಯು ಹರಿಯುತ್ತಿದ್ದು, ಇದರಲ್ಲಿಯೇ ಅನೇಕ ಧಾರ್ಮಿಕ ಪವಿತ್ರ ಕೇಂದ್ರಗಳಿವೆ. ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಮಾತ್ರವಲ್ಲದೆ, ಈ ಮೈದಾನವು ಭಾರತದ ರಾಜಕೀಯ ಕೇಂದ್ರವೂ ಆಗಿದೆ. ಈ ಮೈದಾನದಲ್ಲಿ ಅನೇಕ ನಗರಗಳು ಅಭಿವೃದ್ಧಿ ಹೊಂದಿವೆ. ಉತ್ತರದ ಮೈದಾನದ ರಾಜ್ಯಗಳು ಅತ್ಯಂತ ಜನಭರಿತವಾಗಿದ್ದು, ಭಾರತದ ರಾಜಕೀಯದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತಿವೆ.

3. ಪರ್ಯಾಯ ಪ್ರಸ್ಥಭೂಮಿ: ಪರ್ಯಾಯ ಪ್ರಸ್ಥಭೂಮಿಯು ಭಾರತದ ಭೂ ಸ್ವರೂಪ ವಿಭಾಗಗಳಲ್ಲಿ ಅತಿ ದೊಡ್ಡದು. ಅಲ್ಲದೆ ಭೂ ಇತಿಹಾಸದ ಪ್ರಕಾರ ಇದು ಅತಿ ಪುರಾತನವಾಗಿದ್ದು, ಭೂ ಖಂಡಗಳ ಆರಂಭದಲ್ಲಿದ್ದ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದೆಯೆಂದು ಭೂ ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವರು. ಈ ಪ್ರಸ್ಥಭೂಮಿಯು ಸಟ್ಲೇಜ ಗಂಗಾ ಬಯಲಿನ ದಕ್ಷಿಣದಲ್ಲಿ ಹಿಂದೂ ಮಹಾಸಾಗರದಲ್ಲಿ ಚಾಚಿಕೊಂಡಿವೆ. ಇದರ ಒಟ್ಟು ಕ್ಷೇತ್ರ ಸು. 10 ಲಕ್ಷ ಚ.ಕಿಮೀ. ಇದು ಉತ್ತರದಲ್ಲಿ ಅರಾವಳಿ ಪರ್ವತದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೂ ಹರಡಿವೆ. ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳ ಪೂರ್ವದಲ್ಲಿ ಜಾರ್ಖಂಡ್‌ನ ರಾಜಮಹಲ್ ಬೆಟ್ಟಗಳವರೆಗೆ ಸು. 1400 ಕಿಮೀ ಅಗಲವಾಗಿದೆ. ಈ ಪರ್ಯಾಯ ಪ್ರಸ್ಥಭೂಮಿಯು ತ್ರಿಕೋನಾಕೃತಿಯಿದ್ದು, ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿದೆ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಬಂಗಾಲಕೊಲ್ಲಿ ಹಾಗೂ ದಕ್ಷಿಣದಲ್ಲಿ ಹಿಂದೂ ಮಹಾಸಾಗರಗಳನ್ನು ಇದು ಒಳಗೊಂಡಿದೆ. ಇದರ ಸರಾಸರಿ ಎತ್ತರ ಸು. 300–2000 ಮೀ ಗಳಷ್ಟಿರುವುದು. ತಮಿಳುನಾಡಿನ ಅಣ್ಣಾಮಲೈ ಬೆಟ್ಟಗಳಲ್ಲಿರುವ ಆನೈಮುಡಿ (2695 ಮೀ) ಪರ್ಯಾಯ ಪ್ರಸ್ಥಭೂಮಿಯು ಅತಿ ಎತ್ತರವಾದ ಶಿಖರವಾಗಿದೆ.

ವಿಭಾಗಗಳು: ಭೂ ಸ್ವರೂಪಗಳ ಆಧಾರದ ಮೇಲೆ ಪರ್ಯಾಯ ಪ್ರಸ್ಥಭೂಮಿಯನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು. ಇವುಗಳೆಂದರೆ ಕೇಂದ್ರ ಉನ್ನತ ಪ್ರದೇಶ ಮತ್ತು ದಖನ್ ಪ್ರಸ್ಥಭೂಮಿ.

ಕೇಂದ್ರ ಉನ್ನತ ಪ್ರದೇಶ: ಪರ್ಯಾಯ ಭೂಮಿಯನ್ನು ಇದರ ಕೇಂದ್ರದಲ್ಲಿರುವ ನರ್ಮದಾ ಕಣಿವೆ, ಕೈಮೂರ್ ಮತ್ತು ಮೈಕಲಾ ಸರಣಿಗಳು ಎರಡು ವಿಭಾಗಗಳಾಗಿ ವಿಂಗಡಿಸಿವೆ. ಇವುಗಳ ಉತ್ತರಕ್ಕಿರುವ ಪ್ರಸ್ಥಭೂಮಿಯನ್ನು ಕೇಂದ್ರ ಉನ್ನತ ಪ್ರದೇಶವೆಂದು ಕರೆಯುವರು. ಈ ಪ್ರದೇಶವು ಸರಾಸರಿ 800–1200 ಮೀ ಎತ್ತರವನ್ನು ಹೊಂದಿದೆ. ಇದು ನೈರುತ್ಯದಿಂದ ಈಶಾನ್ಯದ ಕಡೆಗೆ ಅಂದರೆ ಗಂಗಾ ಬಯಲಿನ ಕಡೆಗೆ ಇಳಿಜಾರಾಗಿರುವುದು. ಈ ಕೇಂದ್ರ ಉನ್ನತ ಪ್ರದೇಶವು ದಕ್ಷಿಣದ ಹಾಗೂ ಹಿಮಾಲಯದ ನದಿಗಳ ಜಲಾನಯನ ಪ್ರದೇಶವನ್ನು ಬೇರ್ಪಡಿಸುತ್ತದೆ.

ಕೇಂದ್ರ ಉನ್ನತ ಪ್ರದೇಶದ ಪಶ್ಚಿಮ ಭಾಗದಲ್ಲಿ ಅರಾವಳಿ ಪರ್ವತಗಳಿವೆ. ಇದರ ಪೂರ್ವದಲ್ಲಿ ಮಾಳವ, ಬುಂದೇಲ್ ಖಂಡ ಮತ್ತು ಭಾಗೇಲ್ ಖಂಡ ಪ್ರಸ್ಥಭೂಮಿಗಳಿವೆ. ಅಲ್ಲದೆ ಇದರ ದಕ್ಷಿಣದಲ್ಲಿ ವಿಂಧ್ಯ ಪರ್ವತಗಳು ಕಂಡು ಬರುತ್ತವೆ.

ದಖನ್ ಪ್ರಸ್ಥಭೂಮಿ: ದಖ್ಖನ್ ಎಂದರೆ ದಕ್ಷಿಣ ಎಂದರ್ಥ. ಈ ಪ್ರಸ್ಥಭೂಮಿಯು ಭಾರತದ ದಕ್ಷಿಣ ಭಾಗದಲ್ಲಿರುವುದರಿಂದಲೇ ಇದನ್ನು ದಖನ್ ಪ್ರಸ್ಥಭೂಮಿಯೆಂದು ಕರೆಯುವರು. ಇದು ಭಾರತದಲ್ಲಿ ಅತ್ಯಂತ ವಿಸ್ತಾರವಾದ ಪ್ರಸ್ಥಭೂಮಿಯಾಗಿದ್ದು, ಸು. 7 ಲಕ್ಷ ಚ.ಕಿಮೀ ಕ್ಷೇತ್ರವನ್ನು ಒಳಗೊಂಡಿದೆ. ದಖನ್ ಪ್ರಸ್ಥಭೂಮಿಯು ಸುತ್ತಲೂ ಪರ್ವತ ಸರಣಿಗಳಿಂದ ಸುತ್ತುವರಿಯಲ್ಪಟ್ಟಿದೆ. ಉತ್ತರದಲ್ಲಿ ಸಾತ್ಪುರ, ಮಹದೇವೋ ಮತ್ತು ಮೈಕಲಾ ಸರಣಿಗಳು, ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳು ಹಾಗೂ ಪೂರ್ವದಲ್ಲಿ ಪೂರ್ವಘಟ್ಟಗಳಿವೆ. ಇದು ಪರಿಪೂರ್ಣವಾಗಿ ತ್ರಿಕೋನಕಾರವಾಗಿದ್ದು, ಉತ್ತರದಲ್ಲಿ ಅಗಲವಾಗಿದೆ ಹಾಗೂ ದಕ್ಷಿಣಕ್ಕೆ ಬಂದಂತೆ ಕಿರಿದಾಗಿದೆ. ಇದರ ಸರಾಸರಿ ಎತ್ತರ ಸು. 500–1000 ಮೀ. ದಖ್ಖನ್ ಪ್ರಸ್ಥಭೂಮಿಯು ಪೂರ್ವದ ಕಡೆಗೆ ಇಳಿಜಾರಾಗಿದೆ. ಇದರಿಂದಲೇ ಈ ಪ್ರದೇಶದ ಮುಖ್ಯ ನದಿಗಳೆಲ್ಲವೂ ಪೂರ್ವದ ಕಡೆಗೆ ಹರಿಯುತ್ತವೆ. ಪರ್ಯಾಯ ಪ್ರಸ್ಥಭೂಮಿಯು ಅತ್ಯಂತ ಪುರಾತನ ಭೂ ರಾಶಿಯಾಗಿದ್ದು ವಿವಿಧ ಬಗೆಯ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿದೆ. ಭಾರತದ ಬಹುತೇಕ ಖನಿಜ ಸಂಪನ್ಮೂಲಗಳನ್ನು ಈ ಪ್ರದೇಶ ಒಳಗೊಂಡಿದೆ. ಈ ಪ್ರಸ್ಥಭೂಮಿಯ ಪಶ್ಚಿಮಘಟ್ಟ, ಪೂರ್ವಘಟ್ಟ ಮತ್ತು ಕೇಂದ್ರ ಉನ್ನತ ಪ್ರದೇಶಗಳು ಅಪರಿಮಿತವಾದ ಅರಣ್ಯ ಸಂಪನ್ಮೂಲಗಳನ್ನು ಒಳಗೊಂಡಿದೆ. ಇಲ್ಲಿರುವ ಕಪ್ಪು ಮಣ್ಣು ಹತ್ತಿಯ ಉತ್ಪಾದನೆಗೆ, ಜಂಬಿಟ್ಟಿಗೆ ಮಣ್ಣು ಕಾಫಿ, ಟೀ ಸಾಂಬಾರ ಬೆಳೆಗಳು, ರಬ್ಬರ್‌ಗಳಿಗೆ, ಕೆಂಪು ಮಣ್ಣು, ಹೊಗೆಸೊಪ್ಪು, ನೆಲಗಡಲೆ ಮುಂತಾದ ಬೆಳೆಗಳಿಗೆ ಉಪಯುಕ್ತವಾಗಿದೆ. ಅಲ್ಲದೆ ವಿವಿಧ ಬಗೆಯ ಹಣ್ಣು ಮತ್ತು ತರಕಾರಿಗಳನ್ನು ಇಲ್ಲಿ ಉತ್ಪಾದಿಸಲಾಗುವುದು. ನೀರಾವರಿಯ ವಿಸ್ತರಣೆಯು ಈ ಪ್ರದೇಶದ ವ್ಯವಸಾಯದ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ. ಅಲ್ಲದೆ ಪ್ರಸ್ಥಭೂಮಿಯ ಪ್ರದೇಶವು ವಿವಿಧ ಬಗೆಯ ಮೇಲ್ಮೈ ಲಕ್ಷಣ ಹಾಗೂ ವಾಯುಗುಣವನ್ನು ಹೊಂದಿದ್ದು ಸಸ್ಯ ಸಮೃದ್ಧವಾಗಿದೆ. ಇದರಿಂದ ವಿವಿಧ ಬಗೆಯ ಪ್ರಾಣಿಗಳನ್ನು ಸಾಕುವುದಲ್ಲದೆ, ವನ್ಯಮೃಗ ರಾಶಿಯನ್ನು ಈ ವಲಯ ಒಳಗೊಂಡಿರುವುದು. ಪ್ರಸ್ಥಭೂಮಿಯಲ್ಲಿ ಹರಿಯುವ ನದಿಗಳು ಅನೇಕ ಜಲಪಾತಗಳನ್ನು ಹೊಂದಿವೆ. ಇವುಗಳು ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಬಹು ಉಪಯುಕ್ತವಾಗಿದೆ. ಪ್ರಸ್ಥಭೂಮಿ ಪ್ರದೇಶ ಚಾರಿತ್ರಿಕ ಮತ್ತು ಧಾರ್ಮಿಕ ಪ್ರಾಮುಖ್ಯತೆಯ ಹಿನ್ನೆಲೆಯನ್ನು ಒಳಗೊಂಡಿದೆ.

4. ಕರಾವಳಿ ಮೈದಾನಗಳು: ಭಾರತ ಸು. 6100 ಕಿಮೀ ಉದ್ದವಾದ ತೀರ ಪ್ರದೇಶವನ್ನು ಹೊಂದಿದೆ. ಇದು ಪಶ್ಚಿಮದಲ್ಲಿ ಗುಜರಾತಿನ ಕಛ್ ಪ್ರದೇಶದಿಂದ ಪೂರ್ವದಲ್ಲಿ ಗಂಗಾನದಿಯ ಮುಖಜ ಭೂಮಿಯುವರೆಗೂ ವಿಸ್ತರಿಸಿದೆ. ತೀರ ಪ್ರದೇಶದ ಉದ್ದಕ್ಕೂ ಕಂಡು ಬರುವ ಕಿರಿದಾದ ಮೈದಾನವನ್ನು ಕರಾವಳಿ ಮೈದಾನವೆಂದು ಕರೆಯುವರು. ಈ ಮೈದಾನಗಳು ನದಿಗಳ ಸಂಚಯನ ಹಾಗೂ ತೀರ ಪ್ರದೇಶಗಳ ಮೇಲೆತ್ತಲ್ಪಡುವಿಕೆಯಿಂದ ನಿರ್ಮಿತವಾಗಿವೆ. ತೀರಗಳು ಸರೋವರ ಹಾಗೂ ಹಿನ್ನೀರಿನ ಚಾಚುವಿಕೆಯನ್ನು ಕಾಣಬಹುದು. ಭಾರತದ ಪಶ್ಚಿಮ ಅರಬ್ಬಿ ಸಮುದ್ರ ಮತ್ತು ಪೂರ್ವದಲ್ಲಿ ಬಂಗಾಲ ಕೊಲ್ಲಿಗಳಿದ್ದು, ಈ ಕರಾವಳಿ ಮೈದಾನವನ್ನು (ಅ) ಪಶ್ಚಿಮ ಕರಾವಳಿ ಮೈದಾನ (ಆ) ಪೂರ್ವ ಕರಾವಳಿ ಮೈದಾನವೆಂದು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಭಾರತದ ಪಶ್ಚಿಮ ಮತ್ತು ಪೂರ್ವ ಕರಾವಳಿ ಮೈದಾನಗಳು ವಿಶಿಷ್ಟವಾದ ಲಕ್ಷಣಗಳನ್ನು ಹೊಂದಿದ್ದು ಪರಸ್ಪರ ಭಿನ್ನವಾಗಿವೆ.

ಕರಾವಳಿ ಮೈದಾನಗಳ ಪ್ರಾಮುಖ್ಯತೆ: ಭಾರತದ ಪಶ್ಚಿಮ ಕರಾವಳಿಯಲ್ಲಿರುವ ಅಳಿವೆಗಳು ಸ್ವಾಭಾವಿಕ ಬಂದರುಗಳ ಅಭಿವೃದ್ಧಿಗೆ ಅನುಕೂಲತೆಯನ್ನು ಒದಗಿಸಿವೆ. ಕರಾವಳಿ ಮೈದಾನವು ಮೀನುಗಾರಿಕೆಗೆ ಪ್ರಸಿದ್ಧವಾಗಿದೆ. ಈ ಮೈದಾನಗಳು ಫಲವತ್ತಾಗಿದ್ದು ಪ್ರಮುಖ ವ್ಯವಸಾಯ ಪ್ರದೇಶಗಳಾಗಿವೆ. ತೀರ ಪ್ರದೇಶವು ಅನೇಕ ವ್ಯಾಪಾರ ಕೇಂದ್ರಗಳನ್ನು ಒಳಗೊಂಡಿದೆ. ಈ ಪ್ರದೇಶಗಳು ಸುಂದರ ಪ್ರಕೃತಿ ಹಾಗೂ ಬೀಚುಗಳನ್ನು ಒಳಗೊಂಡಿದ್ದು, ಪ್ರವಾಸಿ ಕೇಂದ್ರಗಳಾಗಿವೆ. ತೀರ ಪ್ರದೇಶಗಳು ಉಪ್ಪಿನ ಕೈಗಾರಿಕೆಗೆ ಹೆಸರಾಗಿದೆ.

ದ್ವೀಪಗಳು: ಭಾರತ ಎರಡು ಮುಖ್ಯ ದ್ವೀಪ ಸಮೂಹಗಳನ್ನು ಹೊಂದಿವೆ. ಅವುಗಳೆಂದರೆ, ಬಂಗಾಲ ಕೊಲ್ಲಿಯಲ್ಲಿರುವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಮತ್ತು ಅರಬ್ಬಿ ಸಮುದ್ರದಲ್ಲಿರುವ ಲಕ್ಷದ್ವೀಪ ಮತ್ತು ಮಿನಿಕಾಯ್ ದ್ವೀಪಗಳು. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಬಂಗಾಲಕೊಲ್ಲಿಯಲ್ಲಿ $6^0 45'$ ದಿಂದ $13^0 45'$ ಉತ್ತರ ಅಕ್ಷಾಂಶದವರೆಗೆ ಹಬ್ಬಿವೆ. ಇವುಗಳು ಉತ್ತರದಿಂದ ದಕ್ಷಿಣಕ್ಕೆ 590 ಕಿಮೀ ಉದ್ದವಾಗಿದ್ದು, ಗರಿಷ್ಠ 58 ಕಿಮೀ ಅಗಲವಾಗಿವೆ. ಈ ದ್ವೀಪಸ್ತೋಮವು ಒಟ್ಟು 265 ದ್ವೀಪಗಳನ್ನು ಹೊಂದಿದ್ದು. ಇವುಗಳ ಒಟ್ಟು ಕ್ಷೇತ್ರ 8,236.85 ಚ.ಕಿಮೀ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು $10^0$ ಕಾಲುವೆಯು ಬೇರ್ಪಡಿಸುವುದು. ಈ ದ್ವೀಪಗಳಲ್ಲಿ ಹಲವಾರು ಜ್ವಾಲಾಮುಖಿಗಳಿವೆ. ಅವುಗಳಲ್ಲಿ ನಾರ್ಕೊಂಡಂ ಮತ್ತು ಬ್ಯಾರನ್ ದ್ವೀಪಗಳು ಮುಖ್ಯವಾದವು. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಜ್ವಾಲಾಮುಖಿ ನಿರ್ಮಿತ ಗಟ್ಟಿಯಾದ ಶಿಲೆಗಳಿಂದ ಕೂಡಿವೆ.

ನಿಕೋಬಾರ್ ದ್ವೀಪಗಳು $10^0$ ಕಾಲುವೆಯ ದಕ್ಷಿಣದಲ್ಲಿದ್ದು 18 ದ್ವೀಪಗಳನ್ನು ಒಳಗೊಂಡಿವೆ. ನಿಕೋಬಾರ್ ದ್ವೀಪಗಳಲ್ಲಿ ಗ್ರೇಟ್ ನಿಕೋಬಾರ್ ದ್ವೀಪ ಅತಿ ದೊಡ್ಡದು. ಈ ದ್ವೀಪದಲ್ಲಿರುವ ಇಂದಿರಾ ಪಾಯಿಂಟ್ (ಪಿಗ್ಮೇಲಿಯನ್ ಪಾಯಿಂಟ್) ಭಾರತದ ಆಧಿಪತ್ಯಕ್ಕೆ ಒಳಪಟ್ಟಿರುವ ಅತಿ ದಕ್ಷಿಣದ ಭಾಗವಾಗಿದೆ. ಲಕ್ಷದ್ವೀಪ ಮತ್ತು ಮಿನಿಕಾಯ್ ದ್ವೀಪಗಳು ಹೆಸರಿಗೆ ಲಕ್ಷ ದ್ವೀಪಗಳಾಗಿದ್ದರೂ ನಿಜವಾಗಿ 25 ಲಕ್ಷ ದ್ವೀಪಗಳನ್ನು ಒಳಗೊಂಡಿವೆ. ಕೇರಳದ ತೀರದಿಂದ ಪಶ್ಚಿಮಕ್ಕೆ ಅರಬ್ಬಿ ಸಮುದ್ರಗಳಲ್ಲಿರುವ ಇವುಗಳ ಒಟ್ಟು ಕ್ಷೇತ್ರ ಕೇವಲ 108.78 ಚ.ಕಿಮೀ. ಲಕ್ಷ ದ್ವೀಪಗಳು ಹವಳದ ಕ್ರಿಮಿಗಳಿಂದ ನಿರ್ಮಿತವಾಗಿರುವ ಹವಳದ ದ್ವೀಪಗಳಾಗಿವೆ.

ನದಿಗಳು: ಭಾರತದ ನದಿ ವ್ಯವಸ್ಥೆಯನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು ಅವುಗಳೆಂದರೆ, 1) ಹಿಮಾಲಯ ನದಿಗಳು ಅಥವಾ ಉತ್ತರ ಭಾರತದ ನದಿಗಳು. 2) ಪರ್ಯಾಯ ಪ್ರಸ್ಥಭೂಮಿಯ ನದಿಗಳು ಅಥವಾ ದಕ್ಷಿಣ ಭಾರತದ ನದಿಗಳು

ಭಾರತದ ನದಿಗಳು ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿಯನ್ನು ಅಥವಾ ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಹೀಗೆ ನದಿಗಳ ಜಲಾನಯನ ಪ್ರದೇಶಗಳನ್ನು ಬೇರ್ಪಡಿಸುವ ಉನ್ನತ ಭೂ ಭಾಗವನ್ನು ಜಲ ವಿಭಾಜಕ ರೇಖೆಯೆಂದು ಕರೆಯುವರು. ಭಾರತದ ಜಲ ವಿಭಾಜಕ ರೇಖೆಯು ಉತ್ತರದಲ್ಲಿ ಹಿಮಾಲಯ ಪರ್ವತಗಳಿರುವ ಪ್ರದೇಶದಿಂದ ಆರಂಭವಾಗಿ ದೆಹಲಿಯ ಮೂಲಕ ಕರಾವಳಿ ಪರ್ವತಗಳ ಮೂಲಕ ಪಶ್ಚಿಮ ಘಟ್ಟಗಳನ್ನು ಅನುಸರಿಸಿ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೂ ವಿಸ್ತರಿಸಿದೆ.

ಉತ್ತರ ಮತ್ತು ದಕ್ಷಿಣ ಭಾರತದ ನದಿಗಳ ಹೋಲಿಕೆ: ಉತ್ತರ ಮತ್ತು ದಕ್ಷಿಣ ಭಾರತದ ನದಿಗಳು ಹೊಂದಿರುವ ಗುಣಲಕ್ಷಣಗಳು ಪರಸ್ಪರ ತದ್ವಿರುದ್ಧವಾಗಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ; ಅ) ಉತ್ತರ ಭಾರತದ ಅಥವಾ ಹಿಮಾಲಯದ ನದಿಗಳು ಆ) ದಕ್ಷಿಣ ಭಾರತ ಅಥವಾ ಪರ್ಯಾಯ ಪ್ರಸ್ಥಭೂಮಿಯ ನದಿಗಳು

1. ಹಿಮಾಲಯದ ಅಥವಾ ಉತ್ತರ ಭಾರತದ ನದಿಗಳು: ಉತ್ತರ ಭಾರತವು ಮೂರು ಮುಖ್ಯ ನದಿ ವ್ಯವಸ್ಥೆಗಳನ್ನು ಒಳಗೊಂಡಿದೆ. ಅವುಗಳೆಂದರೆ,

ಅ. ಸಿಂಧೂನದಿ ವ್ಯವಸ್ಥೆ. ಆ. ಗಂಗನದಿ ವ್ಯವಸ್ಥೆ ಮತ್ತು ಇ. ಬ್ರಹ್ಮಪುತ್ರ ನದಿ ವ್ಯವಸ್ಥೆ.

ಈ ಮೂರು ನದಿಗಳು ಒಂದೇ ಪ್ರದೇಶದಲ್ಲಿಯೇ ಪರಸ್ಪರ ಅತಿ ಸಮೀಪದಲ್ಲಿಯೇ ಉಗಮ ಹೊಂದುತ್ತವೆ. ಆದರೆ ಪರಸ್ಪರ ವಿರುದ್ಧ ದಿಕ್ಕಿಗೆ ಹರಿಯುತ್ತವೆ. ಇದಕ್ಕೆ ಹಿಮಾಲಯ ಪರ್ವತಗಳು ಹೊಂದಿರುವ ಸಂಕೀರ್ಣ ಭೂಸ್ವರೂಪಗಳೇ ಮುಖ್ಯ ಕಾರಣ.

ಅ. ಸಿಂಧೂ ನದಿ ವ್ಯವಸ್ಥೆ: ಭಾರತ ಹೊಂದಿರುವ ಮತ್ತೊಂದು ಹೆಸರು ಇಂಡಿಯ ಎಂಬುದು ಸಿಂಧೂ ನದಿಯಿಂದ ಬಳಕೆಗೆ ಬಂದಿದೆ. ಈ ನದಿಯು ಟಿಬೆಟ್ಟಿನ ಕೈಲಾಸ ಪರ್ವತದ ಸಿಗ್ಗೆ ಕಂಬಾಚ್ ಎಂಬ ಸ್ಥಳದಲ್ಲಿ ಸಮುದ್ರಮಟ್ಟದಿಂದ 5182 ಮೀ ಎತ್ತರದಲ್ಲಿ ಉಗಮ ಹೊಂದುವುದು. ಆರಂಭದಲ್ಲಿ ಇದು ಪಶ್ಚಿಮದ ಕಡೆಗೆ ಲಡಾಕ್ ಮತ್ತು ಜಾಸ್ಕರ್ ಸರಣಿಗಳ ನಡುವೆ ಹರಿಯುವುದು. ಅನಂತರ ನಂಗ ಪರ್ವತದ ಬಳಿ ದಕ್ಷಿಣಕ್ಕೆ ತಿರುಗಿ ಪಾಕಿಸ್ತಾನವನ್ನು ಪ್ರವೇಶಿಸಿ, ಕರಾಚಿಯ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತವೆ. ಸಿಂಧು ನದಿಯ ಒಟ್ಟು ಉದ್ದ ಸು. 2,880 ಕಿಮೀ. ಆದರೆ ಇದರಲ್ಲಿ ಭಾರತ ಕೇವಲ 700 ಕಿಮೀ ಉದ್ದದ ಪಾತ್ರವನ್ನು ಮಾತ್ರ ಒಳಗೊಂಡಿದೆ.

ಉಪ ನದಿಗಳು: ಹಿಮಾಲಯ ಪರ್ವತ ಪ್ರದೇಶದಲ್ಲಿ ಹಲವಾರು ನದಿಗಳು ಈ ನದಿಯನ್ನು ಸೇರುತ್ತವೆ. ಇವುಗಳಲ್ಲಿ ಸ್ಕರ್ದು, ಶಿಯೋಕ್, ಜಾಸ್ಕರ್, ದ್ರಾಸ್, ಶಿಗಾರ್ ಮತ್ತು ಗಿಲ್‌ಗಿಟ್ ಮುಖ್ಯವಾದವು. ಇವುಗಳಿಗಿಂತ ಮೈದಾನ ವಲಯದಲ್ಲಿ ಸಿಂಧೂ ನದಿಯನ್ನು ಸೇರುವ ಉಪ ನದಿಗಳು ಅತಿ ಮುಖ್ಯವಾಗಿದೆ. ಅವುಗಳೆಂದರೆ ಜೀಲಂ, ಚೀನಾಬ್, ರಾವಿ, ಬಿಯಾಸ್ ಮತ್ತು ಸಟ್ಲೇಜ್ – ಈ ಐದು ನದಿಗಳು ಹರಿಯುವ ಭೂ ಪ್ರದೇಶವನ್ನೇ ಪಂಜಾಬ್ (ಪಾಂಚ್ – ಐದು, ಅಬ್ – ನದಿ) ಎಂದು ಕರೆಯಲಾಗಿದೆ. ಸಿಂಧೂ ನದಿಗಿಂತಲೂ ಹೆಚ್ಚಾಗಿ ಈ ಉಪನದಿಗಳನ್ನೇ ಭಾರತದಲ್ಲಿ ಹೆಚ್ಚು ಬಳಕೆ ಮಾಡಿಕೊಳ್ಳಲಾಗಿದೆ.

ಆ. ಗಂಗ ನದಿ ವ್ಯವಸ್ಥೆ: ಗಂಗ ನದಿಯು ಭಾರತದ ಅತಿ ದೊಡ್ಡದಾದ ಉದ್ದವಾದ, ಮುಖ್ಯವಾದ ಹಾಗೂ ಪವಿತ್ರವಾದ ನದಿಯಾಗಿದೆ. ಇದರ ಜಲಾನಯನ ಪ್ರದೇಶ ಸಹ ಇತರ ನದಿ ವ್ಯವಸ್ಥೆಗಳಿಗಿಂತ ಹೆಚ್ಚು ವಿಸ್ತಾರವಾದುದು. ದೇಶದ ಒಟ್ಟು ಜನಸಂಖ್ಯೆಯ ಶೇ. 30 ರಷ್ಟು ಜನರು ಈ ನದಿಯ ಉಪಯೋಗವನ್ನು ಪಡೆಯುವರು. ಅಲ್ಲದೆ ಈ ನದಿಯ ಮೈದಾನವು ಅತಿ ಹೆಚ್ಚು ವ್ಯವಸಾಯದ ಉತ್ಪಾದನೆಗೆ ಹೆಸರಿಸಲಾಗಿದೆ.

ಗಂಗನದಿಯು ಆರಂಭದಲ್ಲಿ ಎರಡು ನದಿ ಮೂಲಗಳನ್ನು ಒಳಗೊಂಡಿವೆ. ಅವುಗಳೆಂದರೆ ಭಾಗೀರಥಿ ಮತ್ತು ಅಲಕನಂದ ನದಿಗಳು. ಇವುಗಳಲ್ಲಿ ಭಾಗೀರಥಿಯು ಮುಖ್ಯವಾಗಿದ್ದು, ಇದು ಟಿಬೆಟ್ಟಿನ ಗಂಗೋತ್ರಿಯ ಬಳಿ ಗೋಮುಖ್ (ಹಸುವಿನ ಮುಖ ಎಂದರ್ಥ) ಎಂಬಲ್ಲಿ ಉಗಮ ಹೊಂದುವುದು. ಇದೇ ಗಂಗನದಿಯ ಉಗಮ ಕೇಂದ್ರ. ಅನಂತರ ದೇವ ಪ್ರಯಾಗ ಎಂಬಲ್ಲಿ ಇದು ಅಲಕನಂದ ನದಿಯನ್ನು ಸಂಧಿಸುವುದು. ಇಲ್ಲಿಂದ ಮುಂದೆ ಇದನ್ನು ಗಂಗನದಿಯೆಂದು ಕರೆಯುವರು. ಇದು ಹರಿದ್ವಾರ ಹೃಷಿಕೇಶದ ಬಳಿ ಮೈದಾನವನ್ನು ಪ್ರವೇಶಿಸುವುದು. ಅನಂತರ ಇದು ಮೈದಾನದಲ್ಲಿ ಪೂರ್ವಾಭಿಮುಖವಾಗಿ ಫರಕ್ಕಾ ಅಡ್ಡಗಟ್ಟೆಯವರೆಗೂ (ಪಶ್ಚಿಮ ಬಂಗಾಲ) ಹರಿದು ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಹಲವು ಶಾಖೆಗಳಾಗಿ ಒಡೆಯುವುದು, ಎಡಭಾಗದ ಮುಖ್ಯ ಶಾಖೆಯನ್ನು ಹೂಗ್ಲಿ (ಭಾಗೀರಥಿ) ಎಂದು ಕರೆಯುವರು. ಇದರ ದಡದಲ್ಲಿಯೇ ಕೋಲ್ಕತ ಬಂದರು ಇದೆ. ಬಲಭಾಗದ ಶಾಖೆಯನ್ನು ಪದ್ಮಾ ಎಂದು ಕರೆಯುವರು. ಇದು ಮುಂದುವರಿದು ಬಾಂಗ್ಲಾ ದೇಶದಲ್ಲಿ ಬ್ರಹ್ಮಪುತ್ರನದಿಯನ್ನು ಗೋಲುಂಡೊ ಬಳಿಯಲ್ಲಿ ಸೇರುವುದು. ಅನಂತರ ಮೇಘಾಲಯದಿಂದ ಹರಿದು ಬರುವ ಮೇಘನ ನದಿಯನ್ನು ಕೂಡಿದ ಅನಂತರ ಗಂಗಾನದಿಯನ್ನು ಮೇಘನ ಎಂಬ ಹೆಸರಿನಿಂದಲೇ ಕರೆಯುವರು. ಅಂತಿಮವಾಗಿ ಗಂಗಾ ನದಿಯು ಬಾಂಗ್ಲಾ ದೇಶದ ನೋಕಾಲಿ ಎಂಬಲ್ಲಿ ಬಂಗಾಲ ಕೊಲ್ಲಿಯನ್ನು ಸೇರುವುದು.

ಗಂಗನದಿಯ ಒಟ್ಟು ಉದ್ದ ಸು. 2465 ಕಿಮೀ. ಇದರಲ್ಲಿ ಭಾರತದಲ್ಲಿ ಇದು 2071 ಕಿಮೀ ದೂರ ಹರಿಯುವುದು. ಇದರ ಒಟ್ಟು ಜಲಾನಯನ ಪ್ರದೇಶ 9,51,600 ಚ.ಕಿಮೀ ವಿಸ್ತಾರವಾಗಿದೆ. ಈ ನದಿಯು ಬೇಸಾಯಕ್ಕೆ ಮಾತ್ರವಲ್ಲದೆ ಸಮುದ್ರ ತೀರದಿಂದ ಅಲಹಾಬಾದಿನವರೆಗೂ ನೌಕಾಯಾನಕ್ಕೆ ಉಪಯುಕ್ತವಾಗಿದೆ. ಉತ್ತರ ಮೈದಾನದ ಹೆಚ್ಚಿನ ನಗರಗಳು, ಪುಣ್ಯ ಕ್ಷೇತ್ರಗಳು ಈ ನದಿಯ ದಡದಲ್ಲಿಯೇ ನೆಲೆಸಿವೆ.

ಉಪನದಿಗಳು: ಗಂಗನದಿಯು ಹಲವಾರು ಉಪನದಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಎಡದಂಡೆಯ ಮೂಲಕ ಸೇರುವ ರಾಮಗಂಗ, ಗಘಾಗ್ರ, ಗಂಡಕ್, ಬೂರ್‍ಹಿ ಗಂಡಕ್, ಭಾಗಮತಿ ಮತ್ತು ಕೋಸಿ, ಬಲದಂಡೆಯ ಮೂಲಕ ಸೇರುವ ಯಮುನ ಚಂಬಲ್, ಬೆಟ್ವಾ, ಕೆನ್, ಸೋನ್, ಮತ್ತು ದಾಮೋದರ ಅತಿಮುಖ್ಯ ಉಪನದಿಗಳಾಗಿವೆ. ಇವುಗಳನ್ನು ಉತ್ತರದ ಮತ್ತು ದಕ್ಷಿಣದ ಉಪನದಿಗಳೆಂತಲೂ ವಿಂಗಡಿಸಬಹುದು.

ಇ. ಬ್ರಹ್ಮಪುತ್ರ ನದಿ ಟಿಬೆಟ್ಟಿನ ಮಾನಸ ಸರೋವರದ ಪೂರ್ವದಲ್ಲಿರುವ ಚೆಮಯೆಂಗ್ ಡೆಂಗ್ ಎಂಬಲ್ಲಿ ಉಗಮ ಹೊಂದುವುದು. ಟಿಬೆಟ್ಟಿನಲ್ಲಿ ಈ ನದಿಯನ್ನು ಯಾರ್ಲುಂಗ್ ಜಾಂಬೋ ಹಾಗೂ ಸಾಂಗ್ ಪೋ ಎಂದು ಕರೆಯುವರು. ಇದರ ಅರ್ಥ ಶುದ್ಧಿಗೊಳಿಸು ಎಂಬುದಾಗಿದೆ. ಈ ನದಿಯು ಒಟ್ಟು 2900 ಕಿಮೀ ಉದ್ದವಾಗಿದ್ದು, ಭಾರತದಲ್ಲಿ ಇದು ಕೇವಲ 885 ಕಿಮೀ ದೂರ ಹರಿಯುವುದು. ಅರುಣಾಚಲ ಪ್ರದೇಶದಲ್ಲಿ ಇದು ನಾಮ್‌ಚೆ ಬಾರ್ವ ಶಿಖರದ ಬಳಿ ಆಳವಾದ ಕಂದರವನ್ನು ಕೊರೆದು ಭಾರತವನ್ನು ಪ್ರವೇಶಿಸುವುದು. ಇದನ್ನು ದಿಹಾಂಗ್ ಕಂದರವೆಂದು ಕರೆಯುವರು. ಬ್ರಹ್ಮಪುತ್ರ ನದಿಯು ಅಸ್ಸಾಮಿನ ಮೇಲ್ಕಣಿವೆಯಲ್ಲಿರುವ ಸೈದ್ಯಾದಿಂದ ಪಶ್ಚಿಮಕ್ಕೆ ಹರಿಯುವುದು. ಅನಂತರ ಬಾಂಗ್ಲಾ ದೇಶದಲ್ಲಿ ದಕ್ಷಿಣಕ್ಕೆ ತಿರುಗಿ ಗೋಲುಂಡೋ ಎಂಬಲ್ಲಿ ಗಂಗ ನದಿಯನ್ನು ಸೇರುವುದು.

ಉಪನದಿಗಳು: ಅಸ್ಸಾಂ ಕಣಿವೆಯ ಪ್ರದೇಶದಲ್ಲಿ ಅನೇಕ ಉಪ ನದಿಗಳು ಬ್ರಹ್ಮಪುತ್ರಾ ನದಿಯನ್ನು ಸೇರುತ್ತವೆ. ಅವು ಹಿಮಾಲಯ ಪರ್ವತ ಹಾಗೂ ಪೂರ್ವಾಚಲ ಬೆಟ್ಟಗಳಲ್ಲಿ ಉಗಮ ಹೊಂದುತ್ತವೆ. ಈ ಉಪನದಿಗಳಲ್ಲಿ ಮುಖ್ಯವಾದವುಗಳೆಂದರೆ ಸುಬನ್‌ಸಿರಿ, ಕಾಮೆಂಗ್, ಧನಸಿರಿ (ಉತ್ತರ), ಜೈಬೋರೆಲ್ಲಿ, ಮನಾಸ್ ಮತ್ತು ಟಿಸ್ತಾ ಉತ್ತರದಿಂದಲೂ ನೋವಾದಿಹಿಂಗ್, ಬೂರ್‍ಹಿದಿ ಹಿಂಗ್, ದಿಸಾಂಗ್, ದಿಬೂ ಮತ್ತು ಕೊಪಿಲಿ ದಕ್ಷಿಣದಿಂದಲೂ ಹರಿದು ಬರುತ್ತವೆ.

ಬ್ರಹ್ಮಪುತ್ರ ನದಿಯು ಪ್ರವಾಹಗಳಿಗೆ ಹೆಸರಾದುದು. ಆದುದರಿಂದಲೇ ಇದನ್ನು ಅಸ್ಸಾಮಿನ ಕಣ್ಣೀರು ಎಂದು ಕರೆಯುವರು. ಮಳೆಗಾಲದಲ್ಲಿ ಈ ನದಿಯು ಸು. 8 ಕಿಮೀ ಅಗಲವಾಗಿದ್ದು 10 ಮೀ ಆಳವಾಗಿರುತ್ತದೆ. ಅಸ್ಸಾಂ ಕಣಿವೆಯಲ್ಲಿ ಈ ನದಿಯ ಪಾತ್ರವು ಅಲ್ಲಲ್ಲಿ ಛಿದ್ರವಾಗಿದ್ದು ಅನೇಕ ದ್ವೀಪಗಳಿವೆ. ಇವುಗಳಲ್ಲಿ ಅಸ್ಸಾಮಿನ ಮೇಲ್ಕಣಿವೆಯಲ್ಲಿರುವ ಮಜೂಲಿಯು ಪ್ರಪಂಚದ ನದಿ ದ್ವೀಪಗಳಲ್ಲಿಯೇ (ರಿವರ್ ಲೈನ್ ಐಲ್ಯಾಂಡ್) ಅತ್ಯಂತ ದೊಡ್ಡದು. ಇದು 60 ಕಿಮೀ ಉದ್ದ ಹಾಗೂ 20 ಕಿಮೀ ಅಗಲವಾಗಿದೆ. ಬ್ರಹ್ಮ ಪುತ್ರ ನದಿಯು ತೀರ ಪ್ರದೇಶದಿಂದ ಅಸ್ಸಾಮಿನ ದಿಬ್ರೂಗಡದವರೆಗೆ ಸು. 1280 ಕಿಮೀ ದೂರ ನೌಕಾಯಾನ ಯೋಗ್ಯವಾಗಿದೆ.

2. ಪರ್ಯಾಯ ದ್ವೀಪದ ನದಿಗಳು ಅಥವಾ ದಕ್ಷಿಣ ಭಾರತದ ನದಿಗಳು: ದಕ್ಷಿಣ ಭಾರತದ ನದಿಗಳು ಕೇವಲ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಆದುದರಿಂದ ಇವುಗಳು ಕೇವಲ ನಿಯತಕಾಲಿಕ ನದಿಗಳೇ ಹೊರತು ಸಾರ್ವಕಾಲೀಕವಲ್ಲ. ಇದರಿಂದ ಮಳೆ ಇಲ್ಲದ ಬೇಸಗೆಯಲ್ಲಿ ನೀರನ್ನು ಬಳಕೆ ಮಾಡಿಕೊಳ್ಳಲು, ಇವುಗಳಿಗೆ ಅಡ್ಡಲಾಗಿ ಅಣೆಕಟ್ಟೆಗಳನ್ನು ನಿರ್ಮಿಸುವುದು. ನೀರನ್ನು ಜಲಾಶಯಗಳಲ್ಲಿ ಸಂಗ್ರಹಿಸುವುದು ಅತ್ಯಾವಶ್ಯಕ. ಆದರೆ ಜಲಪಾತಗಳನ್ನು ಒಳಗೊಂಡಿರುವ ಈ ವಲಯದ ನದಿಗಳು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಬಹು ಉಪಯುಕ್ತ. ಇವುಗಳು ಕಿರಿದಾಗಿದ್ದು, ಜಲಪಾತಗಳೊಡನೆ ವೇಗವಾಗಿ ಹರಿಯುವ ನಿಯತಕಾಲಿಕ ನದಿಗಳಾಗಿರುವುದರಿಂದ ಇವುಗಳಲ್ಲಿ ಬಹುದೂರದವರೆಗೆ ನೌಕಾಯಾನವು ಸಾಧ್ಯವಿಲ್ಲ. ಆದರೆ ಕರಾವಳಿಯ ಮೈದಾನಗಳಲ್ಲಿ ಮಾತ್ರ ಇವುಗಳು ನೀರಾವರಿ ಮತ್ತು ನೌಕಾಯಾನಕ್ಕೆ ಹೆಚ್ಚು ಉಪಯುಕ್ತವಾಗುತ್ತದೆ.

ದಕ್ಷಿಣ ಭಾರತದ ನದಿಗಳು ಎರಡು ಪ್ರದೇಶಗಳಲ್ಲಿ ಉಗಮವನ್ನು ಹೊಂದುತ್ತವೆ. ಅವುಗಳೆಂದರೆ ಕೇಂದ್ರದ ಉನ್ನತ ಪ್ರದೇಶ ಮತ್ತು ಪಶ್ಚಿಮ ಘಟ್ಟಗಳು. ಈ ಪ್ರದೇಶಗಳಿಂದ ನದಿಗಳು ಪೂರ್ವ ಅಥವಾ ಪಶ್ಚಿಮಾಭಿಮುಖವಾಗಿ ಹರಿದು ಬಂಗಾಳಕೊಲ್ಲಿ ಅಥವಾ ಅರಬ್ಬಿ ಸಮುದ್ರವನ್ನು ಸೇರುತ್ತವೆ. ಆದುದರಿಂದ ದಕ್ಷಿಣ ಭಾರತದ ನದಿಗಳನ್ನು ಪೂರ್ವಕ್ಕೆ ಹರಿಯುವ ನದಿಗಳು ಹಾಗೂ ಪಶ್ಚಿಮಕ್ಕೆ ಹರಿಯುವ ನದಿಗಳೆಂದು ಎರಡು ವಿಧಗಳಾಗಿ ವಿಂಗಡಿಸಬಹುದು.

ಅ. ಪೂರ್ವಕ್ಕೆ ಹರಿಯುವ ನದಿಗಳು: ದಕ್ಷಿಣ ಭಾರತದಲ್ಲಿ ಪೂರ್ವಕ್ಕೆ ಹರಿಯುವ ನದಿಗಳು ಹೆಚ್ಚು ಪ್ರಮುಖ. ಏಕೆಂದರೆ ಇವುಗಳು ಹೆಚ್ಚು ಉದ್ದವಾಗಿದ್ದು, ವಿಸ್ತಾರವಾದ ಮುಖಜ ಭೂಮಿಗಳನ್ನು ನಿರ್ಮಿಸಿವೆ. ಪೂರ್ವಕ್ಕೆ ಹರಿಯುವ ದಕ್ಷಿಣ ಭಾರತದ ನದಿಗಳಲ್ಲಿ ನಾಲ್ಕು ನದಿಗಳು ಅತಿಮುಖ್ಯವಾದವು. ಅವುಗಳೆಂದರೆ ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ಇವುಗಳಲ್ಲದೆ ಇನ್ನಿತರ ಹಲವಾರು ಚಿಕ್ಕ ನದಿ ವ್ಯವಸ್ಥೆಗಳೂ ಇಲ್ಲಿ ಕಂಡು ಬರುತ್ತವೆ. ಉದಾ: ಪೆನ್ನಾರ್, ಪಾಲಾರ್, ವೈಗೈ, ಬ್ರಾಹ್ಮಣಿ ವೈತರಣಿ ಮತ್ತು ತಾಮ್ರಪರ್ಣಿ.

ಮಹಾನದಿಯು ಚತ್ತೀಸ್‌ಗಢ ರಾಜ್ಯದ ಜಗದಲ್‌ಪುರ (ಬಸ್ತಾರ್) ಜಿಲ್ಲೆಯಲ್ಲಿರುವ ಸಿಹಾವ ಎಂಬಲ್ಲಿ ಉಗಮವನ್ನು ಹೊಂದುವುದು. ಇದು ಚತ್ತೀಸ್‌ಗಢ ಹಾಗೂ ಒರಿಸ್ಸ ರಾಜ್ಯಗಳ ಮೂಲಕ ಪೂರ್ವಾಭಿಮುಖವಾಗಿ ಸು. 858 ಕಿಮೀ ದೂರ ಹರಿದು ಕಟಕ್ ಬಳಿಯಲ್ಲಿ ಬಂಗಾಲಕೊಲ್ಲಿಯನ್ನು ಸೇರುವುದು.

ಕೃಷ್ಣ ಮತ್ತು ಅದರ ಉಪನದಿಗಳ ನೀರಿನ ಬಳಕೆಗಾಗಿ ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಲ್ಲಿ ಹಲವಾರು ಯೋಜನೆಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ತುಂಗಭದ್ರ ಯೋಜನೆ, ನಾಗಾರ್ಜುನ ಸಾಗರ ಯೋಜನೆಗಳು ಅತಿ ಮುಖ್ಯವಾದವು.

ಕಾವೇರಿ ಇದು ದಕ್ಷಿಣ ಭಾರತದ ಅತಿ ಮುಖ್ಯ ಹಾಗೂ ಪವಿತ್ರವಾದ ನದಿಗಳಲ್ಲೊಂದು. ಆದುದರಿಂದಲೇ ಇದನ್ನು ದಕ್ಷಿಣ ಗಂಗೆಯೆಂತಲೂ ಕರೆಯುವರು. ಇದು ಕರ್ನಾಟಕದ ಕೊಡಗು ಜಿಲ್ಲೆಯಲ್ಲಿರುವ ಬ್ರಹ್ಮಗಿರಿ ಬೆಟ್ಟಗಳ ತಲಕಾವೇರಿ ಎಂಬಲ್ಲಿ ಉಗಮವನ್ನು ಹೊಂದುವುದು. ಇದು ಪೂರ್ವಾಭಿಮುಖವಾಗಿ ಸು. 805 ಕಿಮೀ ದೂರ ಹರಿದು ತಮಿಳುನಾಡಿನ ಕಾವೇರಿ ಪಟ್ಟಿಣಂ ಬಳಿಯಲ್ಲಿ ಬಂಗಾಳ ಕೊಲ್ಲಿಯನ್ನು ಸೇರುವುದು. ಈ ನದಿಯು ಮೂರು ಅಂತರ್ನದಿ ದ್ವೀಪಗಳನ್ನು ಒಳಗೊಂಡಿದೆ. ಅವುಗಳೆಂದರೆ ಶ್ರೀರಂಗಪಟ್ಟಣ, ಶಿವಸಮುದ್ರ ಮತ್ತು ಶ್ರೀರಂಗಂ – ಇವುಗಳನ್ನು ಕ್ರಮವಾಗಿ ಆದಿರಂಗ, ಮಧ್ಯರಂಗ ಮತ್ತು ಅಂತ್ಯ ರಂಗವೆಂತಲೂ ಕರೆಯುವರು.

ಕಾವೇರಿ ಹಲವಾರು ಉಪನದಿಗಳನ್ನು ಹೊಂದಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹೇಮಾವತಿ, ಶಿಂಷಾ, ಅರ್ಕಾವತಿ, ಲಕ್ಷ್ಮಣತೀರ್ಥ, ಕಬಿನಿ ಮತ್ತು ಸುವರ್ಣಾವತಿ. ಕಾವೇರಿ ನದಿಗೆ ಅಡ್ಡಲಾಗಿ ಕರ್ನಾಟಕದಲ್ಲಿ ಕೃಷ್ಣರಾಜ ಸಾಗರ ಮತ್ತು ತಮಿಳುನಾಡಿನಲ್ಲಿ ಮೆಟ್ಟೂರು ಅಣೆಕಟ್ಟೆ (ಸ್ಟಾನ್ಲಿ ಜಲಾಶಯ)ಗಳನ್ನು ನಿರ್ಮಿಸಲಾಗಿದೆ.

ಅ. ಪೂರ್ವಕ್ಕೆ ಹರಿಯುವ ಇತರ ನದಿಗಳು: ದಕ್ಷಿಣ ಭಾರತದಲ್ಲಿ ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿಯನ್ನು ಸೇರುವ ಇತರ ಅನೇಕ ನದಿ ವ್ಯವಸ್ಥೆಗಳಿವೆ. ಜಾರ್ಖಂಡ್ ರಾಜ್ಯದ ಛೋಟನಾಗಪುರ ಪ್ರಸ್ಥಭೂಮಿಯಲ್ಲಿ ಮೂರು ನದಿಗಳು ಪೂರ್ವಾಭಿಮುಖವಾಗಿ ಹರಿಯುತ್ತವೆ. ಅವುಗಳೆಂದರೆ ಸುವರ್ಣ ರೇಖಾ, ಕೋಯಲ್ ಮತ್ತು ಬ್ರಾಹ್ಮಣಿ ನದಿಗಳು. ವೈತರಣಿ ನದಿಯು ಒರಿಸ್ಸದ ಕಿಯೋಂಜರ್ ಪ್ರಸ್ಥಭೂಮಿಯಲ್ಲಿ ಪೂರ್ವಕ್ಕೆ ಹರಿಯುವುದು. ಮಹಾನದಿ ಮತ್ತು ಗೋದಾವರಿಗಳ ನಡುವೆ ವಸುಂಧರ ಮತ್ತು ನಾಗವಲ್ಲಿ ಎಂಬ ಎರಡು ಚಿಕ್ಕ ನದಿಗಳಿವೆ. ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿ ನಾಲ್ಕು ಚಿಕ್ಕ ನದಿ ವ್ಯವಸ್ಥೆಗಳು ಕಂಡು ಬರುತ್ತವೆ. ಅವುಗಳೆಂದರೆ ಪೆನ್ನಾರ್, ಪಾಲಾರ್, ವೈಗೈ ಮತ್ತು ತಾಮ್ರಪರ್ಣಿ.

ಆ. ಪಶ್ಚಿಮಕ್ಕೆ ಹರಿಯುವ ನದಿಗಳು: ದಕ್ಷಿಣ ಭಾರತದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ಎರಡು ಮುಖ್ಯ ನದಿಗಳಿವೆ. ಅವುಗಳೆಂದರೆ ನರ್ಮದ ಮತ್ತು ತಪತಿ. ಇವುಗಳಲ್ಲದೆ ಅನೇಕ ಚಿಕ್ಕ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ವೇಗವಾಗಿ ಕೆಳಗಿಳಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಮಾಂಡೋವಿ, ಜುವಾರಿ, ರಾಚೋಲ್, ಕಾಳಿ, ಗಂಗಾವತಿ, ಬೇಡ್ತಿ, ಶರಾವತಿ, ನೇತ್ರಾವತಿ, ಪೆರಿಯಾರ್ ಮತ್ತು ಪಂಬಾ – ಈ ನದಿಗಳು ಕಿರಿದಾಗಿದ್ದರೂ ಜಲವಿದ್ಯುತ್ತಿನ ಉತ್ಪಾದನೆಗೆ ಬಹು ಉಪಯುಕ್ತವಾಗಿದೆ.

ಭಾರತದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ನರ್ಮದ ಅತಿ ಉದ್ದವಾದುದು. ಇದು ಚತ್ತೀಸ್‌ಗಢ್ ರಾಜ್ಯದ ಮೈಕೆಲಾ ಶ್ರೇಣಿಯಲ್ಲಿರುವ ಅಮರಕಂಟಕ ಶಿಖರದಲ್ಲಿ ಉಗಮ ಹೊಂದುವುದು. ಇದು ಪಶ್ಚಿಮಾಭಿಮುಖವಾಗಿ ಸು. 1,312 ಕಿಮೀ ದೂರ ಹರಿದು ಗುಜರಾತಿನ ಭರೂಚ್ ಬಳಿಯಲ್ಲಿ ಅರಬ್ಬಿ ಸಮುದ್ರವನ್ನು ಸೇರುವುದು. ನರ್ಮದ ನದಿಯು ಹಲವಾರು ಉಪನದಿಗಳನ್ನು ಒಳಗೊಂಡಿದೆ. ಅವುಗಳಲ್ಲಿ ಉತ್ತರದಿಂದ ಬಂದು ಸೇರುವ ಬರ್ನರ್, ಬಂಜೋರ್, ಕಾರ್, ಶಕ್ಕರ್, ಧೂದಿ ಮತ್ತು ತಾವಾ ದಕ್ಷಿಣದಿಂದ ಹರಿಯುವ ಹಿರಾನ್, ಅರ್ಸಾಂಗ್ ಬರ್ನ ಮತ್ತು ಕೋಲಾರ್ ಮುಖ್ಯವಾದವು.

ತಪತಿ: ಇದನ್ನು ತಾಪಿ ನದಿಯೆಂದೂ ಕರೆಯುವರು. ಇದು ಮಧ್ಯ ಪ್ರದೇಶದ ಬೆಟುಲ್ ಜಿಲ್ಲೆಯ ಸಾತ್ಪುರ ಬೆಟ್ಟಗಳಲ್ಲಿರುವ ಮುಲ್ತಾಯ್ ಕರೆಯಲ್ಲಿ ಉಗಮವನ್ನು ಹೊಂದುವುದು. ಇದು ಪಶ್ಚಿಮಕ್ಕೆ ಹರಿಯುವ ದಕ್ಷಿಣ ಭಾರತದ ನದಿಗಳಲ್ಲಿ ಎರಡನೆಯ ಉದ್ದವಾದ ನದಿಯಾಗಿದೆ. ತಪತಿ ನದಿಯು ಉತ್ತರದಲ್ಲಿ ಸಾತ್ಪುರ ಮತ್ತು ದಕ್ಷಿಣದಲ್ಲಿ ಅಜಂತಾ ಬೆಟ್ಟಗಳ ನಡುವೆ ಪಶ್ಚಿಮದ ಕಡೆಗೆ 724 ಕಿಮೀ ದೂರ ಹರಿದು ಗುಜರಾತಿನ ಸೂರತ್ ಬಳಿಯಿರುವ ಸುವಾಲಿ ಎಂಬಲ್ಲಿ ಅರಬ್ಬಿ ಸಮುದ್ರವನ್ನು ಸೇರುವುದು.

ತಪತಿ ನದಿಯ ಉಪನದಿಗಳಲ್ಲಿ ಪೂರ್ಣ ಅತಿ ಮುಖ್ಯವಾದುದು. ಇದರ ಇತರ ಮುಖ್ಯ ನದಿಗಳೆಂದರೆ ಬೆಟುಲ್, ಪಾಟ್ಕಿ, ಗಂಜಾಲ್, ದತ್‌ರಂಜ್, ಬೊಕಾಡ್, ಭೋಕಲ್, ಸುಕಿ, ಮೋರ್, ಹರ್ಕಿ, ಅರುಣಾವತಿ, ಗೋಮಯ್ ಮತ್ತು ವಾಲೇರ್ ಉತ್ತರದಿಂದಲೂ ಅಂಬೋರಾ, ಖುರ್ಸಿ ಮತ್ತು ಅಮರಾವತಿ ದಕ್ಷಿಣದಿಂದಲೂ ತಪತಿಯನ್ನು ಸೇರುತ್ತವೆ.

ವಾಯುಗುಣ: ಭಾರತ ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಮಾನ್ಸೂನ್ ಎಂಬ ಪದ ಅರೇಬಿಕ್ ಭಾಷೆಯ ಮೌಸಿಮ್ ಎಂಬ ಪದದಿಂದ ರೂಢಿಗೆ ಬಂದಿದೆ. ಇದು ನಿಯತಕಾಲಿಕ ಅಥವಾ ಋತುಮಾನಿಕ ಎಂಬ ಅರ್ಥವನ್ನು ಒಳಗೊಂಡಿದೆ. ಈ ಮಾದರಿಯ ವಾಯುಗುಣದಲ್ಲಿ ಮಾರುತಗಳು ವರ್ಷದ ವಿವಿಧ

ಋತುಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿನಿಂದ ಬೀಸುತ್ತವೆ. ಈ ಋತುಮಾನಿಕ ಅಥವಾ ನಿಯತ ಕಾಲಿಕ ಮಾರುತಗಳು ಮಾನ್ಸೂನ್ ವಾಯುಗುಣದ ಮುಖ್ಯ ಲಕ್ಷಣಗಳು. ಭಾರತ ಮಾನ್ಸೂನ್ ವಾಯುಗುಣದ ಎಲ್ಲ ಬಗೆಯ ಲಕ್ಷಣಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವುದು. ವರ್ಷದ ಅರ್ಧಭಾಗ ನೈಋತ್ಯ ದಿಕ್ಕಿನಿಂದ ಈಶಾನ್ಯದ ಕಡೆಗೆ ಬೀಸುವ ಮಾನ್ಸೂನ್ ಮಾರುತಗಳು, ಉಳಿದ ಅವಧಿಯಲ್ಲಿ ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುತ್ತವೆ. ಹೀಗೆ ಭಾರತದ ಮಾನ್ಸೂನ್ ಮಾರುತಗಳು ದೀರ್ಘಾವಧಿಯ ವಿಸ್ತಾರವಾದ ಭೂಭಾಗದ ಸ್ಥಳೀಯ ಮಾರುತಗಳಂತೆ ಕಂಡುಬರುತ್ತವೆ. ಜೊತೆಗೆ ಭಾರತವು ಭೌಗೋಳಿಕ ಉಷ್ಣವಲಯದ ಹಾಗೂ ಸಮಶೀತೋಷ್ಣ ವಲಯಗಳೆರಡರಲ್ಲಿಯೂ ಹಂಚಿಕೆಯಾಗಿದೆ. ಆದರೆ ಇದು ಉಷ್ಣವಲಯದ ಲಕ್ಷಣಗಳನ್ನು ಪ್ರಧಾನವಾಗಿ ಒಳಗೊಂಡಿದೆ. ಇದರಿಂದಾಗಿಯೇ ಭಾರತವನ್ನು ಉಷ್ಣವಲಯದ ಮಾನ್ಸೂನ್ ವಾಯುಗುಣದ ದೇಶವೆಂದು ಕರೆದಿರುವರು.

ಋತುಗಳು: ಭಾರತದ ಹವಾಮಾನ ಇಲಾಖೆ, ದೇಶದ ವಾರ್ಷಿಕ ಪರಿಸ್ಥಿತಿಯನ್ನು ನಾಲ್ಕು ಋತುಗಳನ್ನಾಗಿ ವಿಂಗಡಿಸಿದೆ. ಅವುಗಳೆಂದರೆ –

1. ಬೇಸಗೆಯ ಕಾಲ: ಮಾರ್ಚ್– ಮೇ
2. ನೈಋತ್ಯ ಮಾನ್ಸೂನ್ ಮಾರುತಗಳ ಕಾಲ ಅಥವಾ ಮಳೆಗಾಲ: ಜೂನ್ – ಸೆಪ್ಟೆಂಬರ್
3. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ: ಅಕ್ಟೋಬರ್ – ನವೆಂಬರ್
4. ಚಳಿಗಾಲ : ಡಿಸೆಂಬರ್ –ಫೆಬ್ರವರಿ



**ಈಶಾನ್ಯ ಮಾನ್ಸೂನ್ ಮಾರುತಗಳು**

1. ಬೇಸಗೆಯ ಕಾಲ: ಭಾರತದಲ್ಲಿ ಬೇಸಗೆಯ ಕಾಲ ಮಾರ್ಚ್ ತಿಂಗಳ ಮಧ್ಯ ಭಾಗದಲ್ಲಿ ಆರಂಭಗೊಂಡು ಮೇ ತಿಂಗಳ ಕೊನೆಯವರೆಗೂ ಮುಂದುವರಿಯುವುದು. ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಕರ್ಕಾಟಕ ಸಂಕ್ರಾಂತಿ ವೃತ್ತದ ಮೇಲೆ ಬೀಳುತ್ತವೆ. ಇದರಿಂದ ಉಷ್ಣಾಂಶ ಅತಿ ಹೆಚ್ಚಾಗಿರುವುದು. ಉತ್ತರ ಮೈದಾನ ಪ್ರದೇಶಗಳಲ್ಲಿ ಸರಾಸರಿ ಉಷ್ಣಾಂಶವು $40^0$ಸೆ ಗಳಿಗಿಂತಲೂ ಹೆಚ್ಚು, ರಾಜಸ್ತಾನದ ಗಂಗಾನಗರವು $45^0$ಸೆ ಗರಿಷ್ಠ ಉಷ್ಣಾಂಶವನ್ನು ಹೊಂದುವುದು. ಉಷ್ಣಾಂಶದ ಝಳದಿಂದಾಗಿ ಉತ್ತರ ಮೈದಾನ ವಲಯದಲ್ಲಿ ಅನೇಕ ಜನರು ಮರಣ ಹೊಂದುವುದು ಸಾಮಾನ್ಯವಾಗಿದೆ. ಇದಕ್ಕೆ ವಿರುದ್ಧವಾಗಿ ಭಾರತದ ದಕ್ಷಿಣದ ತುದಿಯಲ್ಲಿ ಉಷ್ಣಾಂಶ ಸು. $32^0$–$35^0$ಸೆ. ಗಳಷ್ಟಿದ್ದು, ಉಷ್ಣಾಂಶದ ಪರಿಣಾಮ ಕಡಿಮೆ. ಅಂದರೆ ಉಷ್ಣಾಂಶ ದಕ್ಷಿಣದಿಂದ ಉತ್ತರಕ್ಕೆ ಹೋದಂತೆ ಅಧಿಕವಾಗುತ್ತಾ ಹೋಗುವುದು.

ಉತ್ತರ ಭಾಗದಲ್ಲಿ ಹೆಚ್ಚು ಉಷ್ಣಾಂಶದಿಂದ ಒತ್ತಡ ಅತಿ ಕಡಿಮೆಯಾಗಿರುವುದು. ಭಾರತದ ವಾಯವ್ಯ ಭಾಗದಲ್ಲಿ ಅತಿ ಕಡಿಮೆ ಒತ್ತಡ ಕೇಂದ್ರ ನಿರ್ಮಾಣಗೊಳ್ಳುವುದು. ಅನಂತರ ಇದು ನಿಧಾನವಾಗಿ ಉತ್ತರದ ಮೈದಾನವನ್ನು ಆವರಿಸಿಕೊಂಡು ಪೂರ್ವದಲ್ಲಿ ಛೋಟ ನಾಗಪುರ ಪ್ರಸ್ಥಭೂಮಿಯವರೆಗೂ ವಿಸ್ತರಿಸುವುದು.

ಬೇಸಗೆಯ ಅವಧಿ ಹೆಚ್ಚು ಉಷ್ಣಾಂಶದಿಂದ ಕೂಡಿದ್ದು ಪ್ರಬಲವಾದ ಮಾರುತಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಇದರಿಂದ ಸ್ಥಳೀಯ ಮಾರುತಗಳು ಹೆಚ್ಚಾಗಿರುತ್ತವೆ. ಇವುಗಳು ಹೆಚ್ಚು ವೇಗವಾಗಿ ಬೀಸುತ್ತವೆ ಹಾಗೂ ಕೆಲವು ವೇಳೆ ಗುಡುಗು, ಮಿಂಚು ಹಾಗೂ ಆಲಿಕಲ್ಲುಗಳಿಂದ ಕೂಡಿ ಮಳೆ ಸುರಿಸುತ್ತವೆ. ಇವುಗಳನ್ನು ವಾಯವ್ಯ ಭಾರತದಲ್ಲಿ ಲೂ ನಾರ್‌ವೆಸ್ಟರ್ ಎಂದು ಕರೆಯುವರು. ಉತ್ತರ ಪ್ರದೇಶದಲ್ಲಿ, ಇವುಗಳನ್ನು ಅಂಧಿಸ್ ಎಂತಲೂ ಪಶ್ಚಿಮ ಬಂಗಾಲದಲ್ಲಿ ಕಾಲ ಬೈಸಾಕಿ ಎಂತಲೂ ಕರೆಯುವರು. ಇವುಗಳಿಂದ ಕೆಲವು ವೇಳೆ ಆಸ್ತಿ ಪಾಸ್ತಿ ಹಾಗೂ ಜೀವಗಳಿಗೆ ಹಾನಿಯುಂಟಾಗುವುದು.

ಬೇಸಗೆಯ ಅವಧಿಯಲ್ಲಿ ಭಾರತ ತನ್ನ ವಾರ್ಷಿಕ ಮಳೆಯ ಶೇ. 10 ರಷ್ಟನ್ನು ಮಾತ್ರ ಪಡೆಯುವುದು. ಈ ಮಳೆಯು ಬತ್ತ, ಸೆಣಬು, ಕಾಫಿ, ಮಾವು ಮತ್ತು ಚಹ ಬೆಳೆಗಳಿಗೆ ಬಹು ಉಪಯುಕ್ತ. ದಕ್ಷಿಣ ಭಾರತದಲ್ಲಿ ಕಾಫಿ ಗಿಡಗಳು ಹೂ ಬಿಡಲು ಈ ಮಳೆಯು ಹೆಚ್ಚು ಉಪಯುಕ್ತವಾದುದರಿಂದ ಈ ಮಳೆಯನ್ನು ಕಾಫಿಯ ತುಂತುರು ಎಂತಲೂ ಮಾವಿನ ಹೂ ಬಿಡಲು ಉಪಯುಕ್ತವಾಗಿರುವುದರಿಂದ ಈ ಮಳೆಯು ಮಾವಿನ ಹುಯ್ಲು ಎಂದೂ ಕರೆಯುವರು. ದಕ್ಷಿಣ ಭಾರತ ಬೇಸಗೆಯ ಅವಧಿಯಲ್ಲಿ ಪರಿಸರಣ ಮಾದರಿಯಲ್ಲಿ ಮಳೆ ಪಡೆಯುವುದು.

2. ನೈಋತ್ಯ ಮಾನ್ಸೂನ್ ಮಾರುತಗಳ ಕಾಲ ಅಥವಾ ಮಳೆಗಾಲ. ಇದು ಭಾರತದಾದ್ಯಂತ ಮಳೆಗಾಲವಾಗಿರುವುದು. ಈ ಅವಧಿಯಲ್ಲಿ ಭಾರತ ತನ್ನ ವಾರ್ಷಿಕ ಮಳೆಯ ಶೇ. 75 ರಷ್ಟನ್ನು ಪಡೆಯುವುದು. ಇದರಿಂದಾಗಿ ಭಾರತದ ಹವಾಮಾನದ ಅವಧಿಗಳಲ್ಲಿ ಇದು ಅತಿ ಮುಖ್ಯವಾಗಿದೆ. ಇದು ಜೂನ್‌ನಿಂದ ಆರಂಭಗೊಂಡು ಸೆಪ್ಟೆಂಬರ್‌ವರೆಗೂ ಮುಂದುವರಿಯುವುದು. ಈ ಅವಧಿಯಲ್ಲಿ ಮಾನ್ಸೂನ್ ಮಾರುತಗಳು ನೈಋತ್ಯ ದಿಕ್ಕಿನಿಂದ ಜೂನ್ ಒಂದರಿಂದ ಉಮ್ಮಳಿಸುತ್ತವೆ (ಬರ್ಸ್ಟ್) ಅಂದರೆ ನೈಋತ್ಯ ಮಾನ್ಸೂನ್ ಮಾರುತಗಳು ಅತಿ ಶೀಘ್ರವಾಗಿ, ಪ್ರಬಲವಾಗಿ ಬೀಸುವುದರಿಂದಲೇ ಇವುಗಳನ್ನು ವಿವರಿಸಲು ಉಮ್ಮಳಿಸುವಿಕೆ ಎಂದು ಕರೆಯಲಾಗಿದೆ. ಜುಲೈ 1 ರ ವೇಳೆಗೆ ನೈಋತ್ಯ ಮಾನ್ಸೂನ್ ಮಾರುತಗಳು ದೇಶವನ್ನು ಪೂರ್ಣವಾಗಿ ಆವರಿಸುತ್ತವೆ. ಇದನ್ನೇ ಮಾನ್ಸೂನ್ ಮಾರುತಗಳ ಮುಂದುವರಿಕೆ ಎಂದು ಕರೆಯುವರು. ನೈಋತ್ಯ ಮಾನ್ಸೂನ್ ಮಾರುತಗಳು ಎರಡು ಶಾಖೆಗಳಿಂದ ಕೂಡಿವೆ.

ಅ. ಅರಬ್ಬಿ ಸಮುದ್ರದ ಶಾಖೆ: ಅರಬ್ಬಿ ಸಮುದ್ರದ ಮೂಲಕ ಹಾದು ಬರುವ ನೈಋತ್ಯ ಮಾನ್ಸೂನ್ ಮಾರುತವನ್ನೇ ಅರಬ್ಬಿ ಸಮುದ್ರದ ಶಾಖೆಯೆಂದು ಕರೆಯುವರು. ಈ ಶಾಖೆಯು ಕೇರಳದ ಮಲಬಾರ್ ತೀರವನ್ನು ಜೂನ್ ತಿಂಗಳ ಮೊದಲ ವಾರದಲ್ಲಿ ತಲುಪಿ, ಅನಂತರ ಉತ್ತರದ ಕಡೆಗೆ ಚಲಿಸುವುದು. ಇದು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು, ಇದರ ಗಾಳಿಗೆ ಎದುರಾಗಿರುವ ಭಾಗ ಅತಿ ಹೆಚ್ಚು ಮಳೆಯನ್ನು ಪಡೆಯುವುದು. ಕೇರಳದಲ್ಲಿ ಅಧಿಕ ಮಳೆ ಸುರಿಸುವ ನೈಋತ್ಯ ಮಾನ್ಸೂನ್ ಮಾರುತಗಳನ್ನು ವರ್ಷಾ ಎಂದು ಕರೆಯುವರು. ವರ್ಷಾ ಎಂದರೆ ಮಳೆ ಎಂದು ಅರ್ಥ. ಇದು ನಿಧಾನವಾಗಿ ಮುಂದುವರಿದು ಜೂನ್ ತಿಂಗಳ ಅಂತ್ಯದ ವೇಳೆಗೆ ಭಾರತವನ್ನು ಪೂರ್ತಿಯಾಗಿ ಆವರಿಸುತ್ತವೆ.

ಆ. ಬಂಗಾಲ ಕೊಲ್ಲಿಯ ಶಾಖೆ: ನೈಋತ್ಯ ಮಾನ್ಸೂನ್ ಮಾರುತಗಳ ಎರಡನೆಯ ಶಾಖೆಯು, ಬಂಗಾಳಕೊಲ್ಲಿಯ ಮೂಲಕ ಚಲಿಸಿ ಪೂರ್ವಾಚಲ ಪ್ರದೇಶಗಳ ಬೆಟ್ಟಗಳಿಂದ ತಡೆಯಲ್ಪಡುವುದು. ಈ ಪ್ರದೇಶದಲ್ಲಿ ಬೆಟ್ಟಗಳ ಸರಣಿಗಳು ಆಲಿಕೆಯಾಕಾರದಲ್ಲಿದ್ದು, ಈ ಕಣಿವೆಯನ್ನು ಬಂಗಾಳಕೊಲ್ಲಿಯ ಶಾಖೆಯು ಪ್ರವೇಶಿಸುವುದು. ಈ ಮಾರುತಗಳು ಬೆಟ್ಟಗಳ ಸರಣಿ ಹಾಗೂ ಹಿಮಾಲಯ ಪರ್ವತಗಳಿಂದ ತಡೆಯಲ್ಪಟ್ಟು ಉತ್ತರದ ಕಡೆಗೆ ಮುಂದುವರಿಯಲಾರವು. ಇದರಿಂದ ಈ ಪ್ರದೇಶವು ಅತ್ಯಧಿಕ ಮಳೆಯನ್ನು ಪಡೆಯುವುದು. ಮೇಘಾಲಯದ ಖಾಸಿ ಬೆಟ್ಟಗಳಲ್ಲಿ ಚಿರಾಪುಂಜಿಯಿಂದ ಸು. 13 ಕಿಮೀ ಪಶ್ಚಿಮಕ್ಕಿರುವ ಮಾಸಿನ್‌ರಾಮ್ ಪ್ರಪಂಚದಲ್ಲಿಯೇ ಅತಿ ಹೆಚ್ಚು ಮಳೆಯನ್ನು ಪಡೆಯುವುದು. ಇದು ಭೂಮಿಯ ಮೇಲೆ ಕಂಡು ಬರುವ ಅತ್ಯಂತ ತೇವಯುತ ಪ್ರದೇಶವಾಗಿದೆ. ಅಲ್ಲಿಂದ ಮಾರುತಗಳು ಪಶ್ಚಿಮದ ಕಡೆಗೆ ಉತ್ತರದ ಮೈದಾನದಲ್ಲಿ ಚಲಿಸುತ್ತವೆ. ಇದರಿಂದ ಈ ಮೈದಾನದಲ್ಲಿ ಮಳೆಯ ಪ್ರಮಾಣ ಪೂರ್ವದಿಂದ ಪಶ್ಚಿಮದ ಕಡೆಗೆ ಹೋದಂತೆ ಕಡಿಮೆಯಾಗುವುದು.

ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ: ನೈಋತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳ ಆರಂಭದೊಡನೆ ಹಿಂಜರಿತವಾಗಲು ಆರಂಭಿಸುತ್ತವೆ ಹಾಗೂ ನಿಧಾನವಾಗಿ ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಇವುಗಳು ಬೀಸುವುದು ಸಂಪೂರ್ಣವಾಗಿ ನಿಂತು ಹೋಗುವುದು. ಹೀಗೆ ಜೂನ್ ತಿಂಗಳಿನಲ್ಲಿ ಭಾರತದಾದ್ಯಂತ ವ್ಯಾಪಿಸಿದ ಮಾರುತಗಳು ನಿಧಾನವಾಗಿ ಹಿಂಜರಿತಗೊಳ್ಳುವುದನ್ನೇ ನೈಋತ್ಯ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲವೆಂದು ಕರೆಯುವರು.

3. ನೈಋತ್ಯ ಮಾನ್ಸೂನ್ ಮಾರುತಗಳು ಹಿಂಜರಿತಗೊಂಡು ಕ್ರಮೇಣ ನಿರ್ಗಮಿಸಲು ಉಷ್ಣಾಂಶದ ವ್ಯತ್ಯಾಸವೇ ಮುಖ್ಯ ಕಾರಣ. ಈ ಅವಧಿಯಲ್ಲಿ ಸೂರ್ಯನ ಕಿರಣಗಳು ದಕ್ಷಿಣಾರ್ಧ ಗೋಳದ ಮೇಲೆ ಲಂಬವಾಗಿ ಬೀಳುತ್ತವೆ. ಇದರಿಂದ ಉತ್ತರಾರ್ಧಗೋಳದಲ್ಲಿ ಉಷ್ಣಾಂಶ ಕ್ರಮೇಣ ಕಡಿಮೆಯಾಗುವುದು. ಅಲ್ಲದೆ ಬೇಸಗೆಯಲ್ಲಿ ಹೆಚ್ಚು ಉಷ್ಣಾಂಶದ ಪರಿಣಾಮವಾಗಿ ನಿರ್ಮಿತವಾಗಿದ್ದ ಕಡಿಮೆ ಒತ್ತಡ ಕೇಂದ್ರ ಕ್ರಮೇಣ ಕ್ಷೀಣಿಸಿ, ಕಾಣೆಯಾಗುವುದು. ಈ ಅವಧಿಯಲ್ಲಿ ಸಾಮಾನ್ಯವಾಗಿ ಶುಭ್ರವಾದ ಹವಾಮಾನ ಕಂಡುಬರುವುದು.

ಆವರ್ತ ಮಾರುತಗಳು: ನೈಋತ್ಯ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಉಷ್ಣವಲಯದ ಆವರ್ತ ಮಾರುತಗಳು ಬಂಗಾಲ ಕೊಲ್ಲಿ ಹಾಗೂ ಅರಬ್ಬಿ ಸಮುದ್ರಗಳಲ್ಲಿ ನಿರ್ಮಿತಗೊಳ್ಳುತ್ತವೆ. ಈ ಆವರ್ತ ಮಾರುತಗಳು ಬಂಗಾಲ ಕೊಲ್ಲಿಯಲ್ಲಿ ಹೆಚ್ಚಾಗಿ ನಿರ್ಮಿತವಾಗುವುವು. ಇವುಗಳು ಉತ್ತರ ಅಥವಾ ವಾಯವ್ಯ ದಿಕ್ಕಿಗೆ ಚಲಿಸಿ, ಪೂರ್ವದ ಕರಾವಳಿ ಮೈದಾನದಲ್ಲಿ ಅತ್ಯಧಿಕ ಮಳೆಯನ್ನು ಸುರಿಸುತ್ತವೆ. ಕೆಲವು ವೇಳೆ ಇವುಗಳ ಪ್ರಭಾವವನ್ನು ಪ್ರಸ್ಥಭೂಮಿಯ ಒಳನಾಡುಗಳಲ್ಲಿಯೂ ಕಾಣಬಹುದು. ಇವುಗಳು ಅಧಿಕ ವೇಗ ಹಾಗೂ ಮಳೆಯಿಂದ ಕೂಡಿದ್ದು, ಕೆಲವು ವೇಳೆ ಆಸ್ತಿ ಪಾಸ್ತಿ ಹಾಗೂ ಜೀವಹಾನಿಯನ್ನುಂಟುಮಾಡುತ್ತವೆ.

4. ಚಳಿಗಾಲ: ಭಾರತದಲ್ಲಿ ಚಳಿಗಾಲದ ಅವಧಿ ಡಿಸೆಂಬರ್‌ನಿಂದ ಆರಂಭವಾಗಿ ಫೆಬ್ರವರಿಯ ಕೊನೆಯವರೆಗೂ ಮುಂದುವರಿಯುವುದು. ಈ ಅವಧಿಯಲ್ಲಿ ಉತ್ತರದ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಹಾಗೂ ಉತ್ತರದ ಮೈದಾನ ಪ್ರದೇಶಗಳಲ್ಲಿ ಅತಿ ಕಡಿಮೆ ಉಷ್ಣಾಂಶ ಕಂಡುಬರುತ್ತದೆ. ಕೆಲವು ಕಡೆಗಳಲ್ಲಿ, ಉಷ್ಣಾಂಶವು ನೀರು ಹೆಪ್ಪುಗಟ್ಟುವ ಬಿಂದುವಿಗಿಂತಲೂ ಕಡಿಮೆ ಇರುವುದು. ಇದರಿಂದ ಅತಿ ಶೀತದಿಂದ ಕೂಡಿರುವ ಹವಾಮಾನದಿಂದ ಅನೇಕ ಜನರು ಸಾವನ್ನು ಅಪ್ಪುವುದು ಈ ಅವಧಿಯಲ್ಲಿ ಸಾಮಾನ್ಯ. ಇದನ್ನೇ ಶೀತ ಅಲೆ (ಕೋಲ್ಡ್ ವೇವ್) ಎಂದು ಕರೆಯುವರು. ಆದರೆ ದಕ್ಷಿಣ ಭಾರತದಲ್ಲಿ ಉಷ್ಣಾಂಶ ಸಾಧಾರಣವಾಗಿದ್ದು ಹವಾಮಾನ ಹಿತಕರವಾಗಿರುತ್ತದೆ. ಹೀಗಾಗಿ ಉಷ್ಣಾಂಶ ಉತ್ತರದಿಂದ ದಕ್ಷಿಣ ಕಡೆಗೆ ಹೋದಂತೆ ಕ್ರಮೇಣ ಹೆಚ್ಚಾಗುವುದು.

ಭಾರತದ ವಾಯವ್ಯ ಭಾಗದಲ್ಲಿ ಅತಿ ಕಡಿಮೆ ಉಷ್ಣಾಂಶವಿರುವುದರಿಂದ ಈ ವಲಯದಲ್ಲಿ ಅಧಿಕ ಒತ್ತಡ ಕೇಂದ್ರ ನಿರ್ಮಾಣಗೊಳ್ಳುವುದು. ಇದರಿಂದ ಮಾರುತಗಳು ಮೈದಾನ ವಲಯದಲ್ಲಿ ವಾಯವ್ಯದಿಂದ ಆಗ್ನೇಯದ ಕಡೆಗೆ ಬೀಸುತ್ತವೆ. ಬಂಗಾಳ ಕೊಲ್ಲಿಯನ್ನು ತಲುಪಿದ ಅನಂತರ ಈ ಮಾರುತಗಳು ವಾಣಿಜ್ಯ ಮಾರುತಗಳ ಪ್ರಭಾವದಿಂದ ಈಶಾನ್ಯ ಮಾನ್ಸೂನ್ ಮಾರುತಗಳಾಗಿ ಪರಿಣಮಿಸುತ್ತವೆ. ಬಂಗಾಳ ಕೊಲ್ಲಿಯನ್ನು ಹಾದು ಬರುವ ಈ ಮಾರುತಗಳು ಜಲಾಂಶವನ್ನು ಹೀರಿಕೊಂಡು ತಮಿಳುನಾಡಿನ ಕೋರಮಂಡಲ ತೀರಪ್ರದೇಶ ಹಾಗೂ ಆಂಧ್ರಪ್ರದೇಶದ ಕರಾವಳಿ ಮೈದಾನಗಳಿಗೆ ಹೆಚ್ಚು ಮಳೆಯನ್ನು ನೀಡುತ್ತವೆ. ಈ ಪ್ರದೇಶಗಳು ಭಾರತದಲ್ಲಿ ಚಳಿಗಾಲದ ಅವಧಿಯಲ್ಲಿ ಅಧಿಕ ಮಳೆಯನ್ನು ಪಡೆಯುವ ಪ್ರದೇಶಗಳಾಗಿವೆ. ಮಳೆಯ ಪ್ರಮಾಣ ಒಳನಾಡಿಗೆ ಹೋದಂತೆ ಕಡಿಮೆಯಾಗುವುದು.

ಚಳಿಗಾಲದ ಅವಧಿಯಲ್ಲಿ ಯುರೋಪ್ ಖಂಡ ದಕ್ಷಿಣದ ಮೆಡಿಟರೇನಿಯನ್ ಪ್ರದೇಶದಲ್ಲಿ ಸಮಶೀತೋಷ್ಣ ವಲಯದ ಆವರ್ತ ಮಾರುತಗಳು ನಿರ್ಮಿತವಾಗುತ್ತವೆ. ಇವುಗಳು ಕ್ರಮೇಣ ಪೂರ್ವದ ಕಡೆಗೆ ಇಸ್ರೇಲ್, ಸಿರಿಯ, ಇರಾನ್ ಮತ್ತು ಆಫ್ಘಾನಿಸ್ತಾನ ಹಾಗೂ ಪಾಕಿಸ್ತಾನಗಳನ್ನು ದಾಟಿ ಭಾರತದ ವಾಯವ್ಯ ಭಾಗವನ್ನು ತಲುಪುತ್ತವೆ. ಇವುಗಳನ್ನು ಪಶ್ಚಿಮದ ಅಸ್ತವ್ಯಸ್ಥತೆಯ ಮಾರುತಗಳೆಂದು ಕರೆಯುವರು. ಈ ಮಾರುತಗಳಿಂದ ವಾಯವ್ಯ ಭಾರತ 10–15 ಸೆಂಮೀ ಮಳೆಯನ್ನು ಪಡೆಯುವುದು. ಈ ಅತ್ಯಲ್ಪ ಮಳೆಯ ಪ್ರಮಾಣವು ಚಳಿಗಾಲದ ರಬಿ ಬೆಳೆಗಳ ಉತ್ಪಾದನೆಗೆ ಅತ್ಯಂತ ಉಪಯುಕ್ತವಾದುದು. ಈ ಮಾರುತಗಳಿಂದ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಂಚಲ ಹಾಗೂ ಉತ್ತರ ಪ್ರದೇಶದ ಉತ್ತರ ಭಾಗದಲ್ಲಿ ಅತ್ಯಧಿಕ ಹಿಮ ಬೀಳುವುದು.

ಚಳಿಗಾಲದ ಅವಧಿಯಲ್ಲಿ ಮಂಜು ಅಥವಾ ಕಾವಳ ಮುಸುಕುವುದು ಸಾಮಾನ್ಯವಾಗಿ ದೇಶದಾದ್ಯಂತ ಕಂಡುಬರುವುದು. ಇದು ಉಷ್ಣಾಂಶದ ವಿಪರ್ಯಯ ಕ್ರಿಯೆ (ಇನ್‌ವರ್ಷನ್ ಆಫ್ ಟೆಂಪರೇಚರ್) ಯಿಂದ ಉಂಟಾಗುವುದು. ಅಂದರೆ ಭೂ ಭಾಗದ ಹಾಗೂ ಅದಕ್ಕೆ ಹೊಂದಿಕೊಂಡಂತಿರುವ ವಾಯುರಾಶಿಯು ಅತ್ಯಂತ ಕಡಿಮೆ ಉಷ್ಣಾಂಶವನ್ನು ಹೊಂದಿದ್ದು, ಎತ್ತರಕ್ಕೆ ಹೋದಂತೆ ಸಾಮಾನ್ಯ ಸ್ಥಿತಿಯಂತೆ ಉಷ್ಣಾಂಶವು ಕಡಿಮೆಯಾಗದೆ ಅಧಿಕಗೊಳ್ಳುವುದು. ಇದಕ್ಕೆ ದೀರ್ಘಾವಧಿಯ ರಾತ್ರಿ ಹಾಗೂ ಮೋಡ ರಹಿತವಾದ ವಾತಾವರಣಗಳೇ ಮುಖ್ಯ ಕಾರಣ.

ವನ್ಯಜೀವಿ ಧಾಮಗಳು: ವಿವಿಧ ಪ್ರಾಣಿಗಳನ್ನು ಅವುಗಳ ಮೂಲ ಸ್ಥಳಗಳಲ್ಲಿಯೇ ಸಂರಕ್ಷಿಸಲು ವನ್ಯಜೀವಿ ಧಾಮಗಳನ್ನು ನಿರ್ಮಿಸಲಾಗಿದೆ. ಚೆನ್ನೈ ಬಳಿಯ ವೇದಾಂತಂಗಳ್ ಪಕ್ಷಿಧಾಮ ಭಾರತದಲ್ಲಿ ಸ್ಥಾಪಿತವಾದ ಮೊದಲ ವನ್ಯಜೀವಿಧಾಮವಾಗಿದೆ. ಭಾರತದಲ್ಲಿ ಇಂದು ಇಂತಹ ಒಟ್ಟು 492 ವನ್ಯಜೀವಿ ಧಾಮಗಳಿವೆ ಅವುಗಳಲ್ಲಿ ಅತಿಮುಖ್ಯವಾದವುಗಳೆಂದರೆ,

1. ಅಣ್ಣಾಮಲೈ ವನ್ಯಜೀವಿಧಾಮ, ಕೊಯಮತ್ತೂರು, ತಮಿಳುನಾಡು
2. ಜಾಲ್ದಾಪಾರ ವನ್ಯಜೀವಿಧಾಮ, ಮದಾರಿಹಾತ್, ಪಶ್ಚಿಮ ಬಂಗಾಲ
3. ಕಿವೋಲಾಡಿವೋ ಪಕ್ಷಿಧಾಮ, ಭರತ್‌ಪುರ, ರಾಜಸ್ತಾನ
4. ಸುಲ್ತಾನ್‌ಪುರ ಸರೋವರ ಪಕ್ಷಿಧಾಮ, ಗುರಗಾಂ, ಹರಿಯಾಣ.
5. ಬಿರ್ ಮೋತಿಬಾಗ್ ವನ್ಯಜೀವಿಧಾಮ, ಪಾಟಿಯಾಲ, ಪಂಜಾಬ್
6. ಶಿಕಾರಿದೇವಿ ವನ್ಯಜೀವಿಧಾಮ, ಮಂಡಿ, ಹಿಮಾಚಲ ಪ್ರದೇಶ
7. ದಚಿಗಾಂ ವನ್ಯಜೀವಿ ಧಾಮ, ಶ್ರೀನಗರ, ಜಮ್ಮು ಮತ್ತು ಕಾಶ್ಮೀರ
8. ಮದುಮಲೈ ವನ್ಯಜೀವಿಧಾಮ, ನೀಲಗಿರಿ, ತಮಿಳುನಾಡು
9. ನಾಗಾರ್ಜುನ ಸಾಗರ ವನ್ಯಜೀವಿಧಾಮ, ಗುಂಟೂರು, ಆಂಧ್ರಪ್ರದೇಶ
10. ಪೆರಿಯಾರ್ ವನ್ಯಜೀವಿಧಾಮ, ಕೇರಳ
11. ಚಿಲ್ಕಾ ಸರೋವರ ಪಕ್ಷಿಧಾಮ, ಬಾಲಗಾಂ, ಒರಿಸ್ಸ
12. ಮನಾಸ್ ವನ್ಯಜೀವಿಧಾಮ, ಕಾಮರೂಪ, ಅಸ್ಸಾಂ

ರಾಷ್ಟ್ರೀಯ ಉದ್ಯಾನವನ (ನ್ಯಾಷನಲ್ ಪಾರ್ಕ್) ವನ್ಯಪ್ರಾಣಿ ಸಂರಕ್ಷಿತ ಪ್ರದೇಶಗಳಾಗಿವೆ. ಭಾರತದಲ್ಲಿ ಒಟ್ಟು 81 ರಾಷ್ಟ್ರೀಯ ಉದ್ಯಾನವನಗಳಿವೆ. ಇವುಗಳಲ್ಲಿ ಮಾನವನ ಚಟುವಟಿಕೆಗಳ ಮೇಲೆ ಸಂಪೂರ್ಣ ನಿಷೇಧವಿರುವುದು.

ಇವುಗಳು ಸಂರಕ್ಷಿತ ಅರಣ್ಯ ಪ್ರದೇಶಗಳಾಗಿದ್ದು, ಇವುಗಳಲ್ಲಿ ಅರಣ್ಯಗಾರಿಕೆ ಪ್ರಾಣಿಗಳನ್ನು ಮೇಯಿಸುವುದು ಅಥವಾ ಬೇಸಾಯ ನಿಷೇಧಿತ. ಎಲ್ಲಾ ವಿಧಗಳಲ್ಲಿಯೂ ಮೂಲ ನೆಲೆಯೊಡನೆ (ಹ್ಯಾಬಿಟೇಟ್) ವನ್ಯ ಜೀವಿಗಳನ್ನು ಸಂರಕ್ಷಿಸಲಾಗುವುದು. ಉತ್ತರಾಂಚಲದ ಜಿಮ್ ಕಾರ್ಬೆಟ್ ಪ್ರದೇಶದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ. ಭಾರತದ ಅತಿ ಮುಖ್ಯ ರಾಷ್ಟ್ರೀಯ ಉದ್ಯಾನವನಗಳೆಂದರೆ;

1) ಕಾಜಿರಂಗ ನ್ಯಾಷನಲ್ ಪಾರ್ಕ್, ಸಿಬ್‌ಸಾಗರ್, ಅಸ್ಸಾಂ
2) ಸುಂದರ ಬನ, 24 ಪರಗಣ ಜಿಲ್ಲೆ, ಪಶ್ಚಿಮ ಬಂಗಾಲ
3) ಹಜಾರಿಬಾಗ್ ನ್ಯಾಷನಲ್ ಪಾರ್ಕ್, ಹಜಾರಿಬಾಗ್, ಬಿಹಾರ
4) ಜಿಮ್ ಕಾರ್ಬೆಟ್ ನ್ಯಾಷನಲ್ ಪಾರ್ಕ್, ನೈನಿತಾಲ್, ಉತ್ತರಾಂಚಲ
5) ಗಿರ್ ನ್ಯಾಷನಲ್ ಪಾರ್ಕ್, ಜುನಾಗಢ, ಗುಜರಾತ್
6) ಕನ್ಹಾ ರಾಷ್ಟ್ರೀಯ ಉದ್ಯಾನವನ, ಮಾಂಡ್ಲ ಮತ್ತು ಬಾಲಘಾಟ್, ಮಧ್ಯಪ್ರದೇಶ
7) ತಾಂಡೋಬಾ ನ್ಯಾಷನಲ್ ಪಾರ್ಕ್, ಚಂದ್ರಾಪುರ, ಮಹಾರಾಷ್ಟ್ರ
8) ಬಂಡಿಪುರ ನ್ಯಾಷನಲ್ ಪಾರ್ಕ್, ಚಾಮರಾಜನಗರ, ಕರ್ನಾಟಕ
9) ಮರುಭೂಮಿ ನ್ಯಾಷನಲ್ ಪಾರ್ಕ್, ಜೈಸಲ್ಮೇರ್, ರಾಜಸ್ತಾನ

ಜೈವಿಕ ಸಂರಕ್ಷಣಾ ವಲಯಗಳು: ಭಾರತ ಸಸ್ಯ ಸಮೃದ್ಧತೆಯ ಜೊತೆಗೆ ಪ್ರಾಣಿ ಸಂಪತ್ತಿನ ವೈವಿಧ್ಯತೆಯನ್ನೂ ಒಳಗೊಂಡಿದೆ. ಈ ಜೈವಿಕ ವ್ಯವಸ್ಥೆ (ಇಕೋ ಸಿಸ್ಟಂ) ಗಳನ್ನು ಕಾಪಾಡಲು ದೇಶದಲ್ಲಿ 13 ಜೈವಿಕ ವಲಯಗಳನ್ನು ಸಂರಕ್ಷಿಸಲಾಗುತ್ತಿದೆ. ಈ ವಲಯಗಳೆಂದರೆ ನೀಲಗಿರಿ, ನಂದಾದೇವಿ, ನೋಕ್ರೆಕ್, ಗ್ರೇಟ್ ನಿಕೋಬಾರ್ ಮನ್ನಾರ್ ಸೈಮೋವಾ, ದಿಹಾಂಗ್ ದಿಬಾಂಗ್, ಪಚ್‌ಮಾರಿ ಕಾಂಚನ ಗಂಗಾ ಮತ್ತು ಅಗಸ್ತ್ಯಮಲೈ 1968 ರಲ್ಲಿ ನೀಲಗಿರಿ ಸಂರಕ್ಷಣಾ ವಲಯವನ್ನು ಸ್ಥಾಪಿಸಿದ ಅನಂತರ ಇತರ ವಲಯಗಳನ್ನು ಸ್ಥಾಪಿಸಲಾಯಿತು. ಇವುಗಳಲ್ಲದೆ ಜೌಗು ಹಾಗು ತೇವಯುತ 6 ವಲಯಗಳನ್ನೂ ಸಂರಕ್ಷಿಸಲಾಗುತ್ತಿದೆ. ಅವುಗಳೆಂದರೆ ಭರತಪುರ, ಸಾಂಬಾರ್ (ರಾಜಸ್ತಾನ), ಚಿಲ್ಕಾ (ಒರಿಸ್ಸ), ಲೋಕ್‌ಟಕ್ (ಮಣಿಪುರ), ಊಲಾರ್ (ಜಮ್ಮು ಮತ್ತು ಕಾಶ್ಮೀರ) ಮತ್ತು ಹರಿಕೆ (ಪಂಜಾಬ್).

ಭಾರತದ ಜನಾಂಗಗಳು: ಭಾರತ ಹೊಂದಿರುವ ಎಲ್ಲಾ ಪ್ರಾಕೃತಿಕ ವೈವಿಧ್ಯತೆಗಳಂತೆಯೇ ಇದರಲ್ಲಿರುವ ಜನರು ಸಹ ವಿವಿಧ ಜನಾಂಗಗಳಿಗೆ ಸೇರಿರುವರು. ವಿವಿಧ ಅವಧಿಯಲ್ಲಿ ಈ ಜನರು ವಲಸೆ ಬಂದಿದ್ದು, ವಿವಿಧ ಪ್ರದೇಶಗಳಲ್ಲಿ ನೆಲೆಸಿ ಕ್ರಮೇಣ ಮಿಶ್ರಣಗೊಂಡಿರುವರು. ಇದರಿಂದಾಗಿಯೇ ಭಾರತದ ಜನರ ಬಣ್ಣ, ದೈಹಿಕ ರಚನೆ, ತಲೆಗೂದಲ ಬಣ್ಣ ಮತ್ತು ರಚನೆ (ಅಲೆ ಅಲೆಯಾದ, ಗುಂಗುರು ಕೂದಲಿನ, ನೀಳ ಕೂದಲಿನ), ಕಣ್ಣಿನ ಬಣ್ಣ, ಹುಟ್ಟಿನ ರಚನೆ, ದೇಹದ ಎತ್ತರ, ನಿಲುವು, ರಕ್ತದ ಗುಂಪು ಮೊದಲಾದ ಭೌತಿಕ ಲಕ್ಷಣಗಳು ಭಿನ್ನತೆಯಿಂದ ಕೂಡಿವೆ. ಇವುಗಳು ಅನುವಂಶೀಯವಾಗಿ ಬಂದಿರುವ ಲಕ್ಷಣಗಳು. ಭಾರತದಲ್ಲಿ ಕಂಡುಬರುವಷ್ಟು ಜನರ ವೈವಿಧ್ಯತೆಗಳು ಪ್ರಪಂಚದ ಯಾವುದೇ ರಾಷ್ಟ್ರಗಳಲ್ಲಿಯೂ ಕಂಡುಬರುವುದಿಲ್ಲ.

ಭಾರತ ಒಳಗೊಂಡಿರುವ ಜನತೆಯನ್ನು ವಿಂಗಡಿಸಿರುವವರಲ್ಲಿ ರೈಸ್ಲಿ ಮತ್ತು ಬಿ.ಸಿ.ಗುಹಾ ಅವರು ಪ್ರಮುಖರಾದವರು. ಇವುಗಳಲ್ಲಿ ಬಿ.ಸಿ.ಗುಹಾ ಅವರ ವಿಂಗಡನೆ ಹೆಚ್ಚು ಅಂಗೀಕೃತವಾಗಿದೆ. ಇವರು ಭಾರತದ ಜನರನ್ನು ಆರು ವಿಧಗಳಾಗಿ ಈ ಕೆಳಕಂಡಂತೆ ವಿಂಗಡಿಸಿರುವರು:

1. ನೀಗ್ರಿಟೋ: ಆಫ್ರಿಕ ಖಂಡದಿಂದ ವಲಸೆ ಹೋಗಿರುವ ನೀಗ್ರಾಯ್ಡ್ ಜನರನ್ನು ನೀಗ್ರಿಟೋ ಎಂದು ಕರೆಯಲಾಗಿದೆ. ಭಾರತಕ್ಕೆ ವಲಸೆ ಬಂದಿರುವವರಲ್ಲಿ ಇವರು ಮೊದಲಿಗರು. ಇವರು ಸು. 70,000 ವರ್ಷಗಳ ಹಿಂದೆ ಭಾರತಕ್ಕೆ ವಲಸೆ ಬಂದಿರುವರೆಂದು ತಿಳಿಯಲಾಗಿದೆ. ಅಂಡಮಾನ್ ನಿಕೋಬಾರ್ ದ್ವೀಪಗಳ ಓಂಗೆ, ಜಾರವ, ಸೆಂಟಿನಲೀಸ್, ಲಿಟ್ಲ್ ಅಂಡಮಾನಿನ ಮೂಲ ನಿವಾಸಿಗಳು, ನೀಲಗಿರಿ ಬೆಟ್ಟಗಳ ಉರಲಿಸ್, ಕೊಚ್ಚಿನ್ನಿನ ಕಾಡಾರ್, ಪಳಿನಿ ಬೆಟ್ಟಗಳ ಪುಳ್ಳಯನ್ನರು, ನಾಗಾಲೆಂಡಿನ ಅಂಗಮಿನಾಗಾ, ಜಾರ್ಖಂಡ್‌ನ ರಾಜಮಹಲ್ ಬೆಟ್ಟಗಳ ಬಡ್ಗಿ,

2. ಪ್ರೋಟೋ ಅಸ್ಟ್ರಾಲಾಯ್ಡ್ ನೀಗ್ರಿಟೋ ಜನರ ಅನಂತರ ಪೂರ್ವ ಮೆಡಿಟರೇನಿಯನ್ ಪ್ರದೇಶ ಅಂದರೆ ಇಸ್ರೇಲ್ ಪ್ರದೇಶದಿಂದ ಈ ಜನರು ವಲಸೆ ಬಂದಿರುವರು. ಭಿಲ್ಲರು, ಕೋಳರು, ಮುಂಡರು, ವಡ್ಡರು, ಸೋಲಿಗರು, ಇರುಳರು, ಕುರುಬರು, ಎರವರು, ಸಂತಾಲರು ಭಾರತದಲ್ಲಿ ಕಂಡುಬರುವ ಪ್ರೋಟೋ ಅಸ್ಟ್ರಾಲಾಯ್ಡ್ ಜನಾಂಗದ ಮುಖ್ಯ ಜನರು.

3. ಮಂಗೋಲಾಯ್ಡ್: ಈ ಜನರು ಟಿಬೆಟ್ ಪ್ರಸ್ಥಭೂಮಿ ಹಾಗೂ ಹಿಮಾಲಯವನ್ನು ದಾಟಿ ಭಾರತಕ್ಕೆ ಬಂದು ಹಿಮಾಲಯದ ತಪ್ಪಲು ಪ್ರದೇಶ ಹಾಗೂ ಈಶಾನ್ಯದ ರಾಜ್ಯಗಳಲ್ಲಿ ನೆಲೆಸಿರುವರು.

4. ಮೆಡಿಟರೇನಿಯನ್ ಜನರು: ಈ ಜನರು ಪಶ್ಚಿಮ ಏಷ್ಯದಿಂದ ಪ್ರ.ಶ.ಪೂ. 3000 ದಿಂದ ಪ್ರ.ಶ.ಪೂ. 2000 ವರ್ಷಗಳ ಅವಧಿಯಲ್ಲಿ ವಲಸೆ ಬಂದಿರುವರು. ದಕ್ಷಿಣ ಭಾರತದ ಬಹುತೇಕ ಜನರು ಈ ಗುಂಪಿಗೆ ಸೇರಿದವರು. ಇವರುಗಳನ್ನೇ ದ್ರಾವಿಡರೆಂದು ರೈಸ್ಲಿ ಕರೆದಿರುವರು. ಇವರು ಹರಪ್ಪ, ಮೊಹೆಂಜೊದಾರೋ ನಾಗರಿಕತೆಯ ನಿರ್ಮಾತೃಗಳು.

5. ಆಲ್ಪೈನ್ ಡೈನಾರಿಕ್ ಆಲ್ಪ್ಸ್ ಪ್ರದೇಶದಿಂದ ವಲಸೆ ಬಂದಿದ್ದು ಕೊಡವರು, ಪಾರ್ಸಿಗಳು ಈ ಗುಂಪಿನವರು.

6. ನಾರ್ಡಿಕ್:ಭಾರತಕ್ಕೆ ಅಧಿಕ ಸಂಖ್ಯೆಯಲ್ಲಿ ವಲಸೆ ಬಂದಿರುವ ಕೊನೆಯ ಗುಂಪು ನಾರ್ಡಿಕ್. ಈ ಜನರು ಮಧ್ಯ ಏಷ್ಯದಿಂದ ಪ್ರ.ಶ.ಪೂ. 2000 ರಲ್ಲಿ ವಲಸೆ ಬಂದಿದ್ದು, ಉತ್ತರ ಹಾಗೂ ವಾಯವ್ಯ ಭಾರತದಲ್ಲಿ ಕೇಂದ್ರೀಕೃತವಾಗಿರುವರು. ಇವರನ್ನೇ ಆರ್ಯರೆಂದೂ ಕರೆಯುವರು.

ಹೀಗೆ ಮೇಲೆ ವಿವರಿಸಿದಂತೆ ಭಾರತ ವಿವಿಧ ಅವಧಿಗಳಲ್ಲಿ ವಿವಿಧ ಜನರ ಒಳವಲಸೆಯನ್ನು ಪಡೆದಿದ್ದು ಇಂದು ಮಿಶ್ರಿತಗೊಂಡಿರುವರು. ಉತ್ತರ ಭಾರತದಲ್ಲಿ ನಾರ್ಡಿಕ್ (ಆರ್ಯನ್) ಹಾಗೂ ಮಂಗೋಲಾಯ್ಡ್ ಜನರು ಪ್ರಧಾನರಾಗಿರುವರು. ದಕ್ಷಿಣ ಭಾರತದಲ್ಲಿ ಮೆಡಿಟರೇನಿಯನ್ ಪ್ರದೇಶದ ದ್ರಾವಿಡರು ಹಾಗೂ ಇದಕ್ಕಿಂತಲೂ ಮೊದಲ ನೀಗ್ರಿಟೋ ಹಾಗೂ ಪ್ರೋಟೊ ಆಸ್ಟ್ರಾಲಾಯ್ಡ್ ಜನರು ನೆಲೆಸಿರುವರು. ನೀಗ್ರಿಟೋ ಮತ್ತು ಪ್ರೋಟ್ರೋ ಆಸ್ಟ್ರಾಲಾಯ್ಡ್ ಜನಾಂಗಗಳು ಬಹುತೇಕ ಬುಡಕಟ್ಟಿನ ಜನರಾಗಿದ್ದು (ಟ್ರೈಬ್ಸ್) ಮಧ್ಯ ಭಾರತದ ಬೆಟ್ಟ ಪ್ರದೇಶಗಳು, ಪಶ್ಚಿಮ ಘಟ್ಟಗಳು ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಕೇಂದ್ರೀಕೃತವಾಗಿರುವರು.

ಭಾರತದ ಜನಸಂಖ್ಯೆ ಹಾಗೂ ಜನಗಣತಿ: ಒಂದು ಪ್ರದೇಶದಲ್ಲಿ, ಒಂದು ನಿರ್ದಿಷ್ಟ ಅವಧಿಯಲ್ಲಿ ವಾಸಿಸುತ್ತಿರುವ ಜನರ ಪ್ರಮಾಣವೇ ಅದರ ಜನಸಂಖ್ಯೆ. ಜನರು ಅಲ್ಲಿಯ ಸಂಪನ್ಮೂಲ, ಹಾಗೂ ಸೇವೆಗಳ ಉತ್ಪಾದಕರು ಹಾಗೂ ಅನುಭೋಗಿಯಾಗಿರುವರು. ಒಂದು ಪ್ರದೇಶದಲ್ಲಿ ಒಂದು ಅವಧಿಯಲ್ಲಿ ವಾಸಿಸುತ್ತಿರುವ ಜನರಿಗೆ ಸಂಬಂಧಿಸಿದ ಸಂಖ್ಯೆ ಹಾಗೂ ಅವರ ಜೀವನಕ್ಕೆ ಸಂಬಂಧಿಸಿದ ಇತರ ಎಲ್ಲಾ ಬಗೆಯ ಅಂಕಿ ಅಂಶಗಳ ಸಂಗ್ರಹಣೆ ಹಾಗೂ ವಿಶ್ಲೇಷಣೆಯನ್ನು ಜನಗಣತಿ (ಸೆನ್ಸಸ್) ಎಂದು ಕರೆಯುವರು. ಭಾರತದಲ್ಲಿ 1872 ರಿಂದ ನಿರಂತರವಾಗಿ ಹತ್ತು ವರ್ಷಗಳಿಗೊಮ್ಮೆ ಜನಗಣತಿಯನ್ನು ನಡೆಸಲಾಗಿದೆ. ಈ ರೀತಿಯಲ್ಲಿ 2001 ರಲ್ಲಿ ನಡೆಸಿದ ಜನಗಣತಿ ಭಾರತದ 14 ನೆಯ ಜನಗಣತಿಯಾಗಿದೆ.

**ಭಾರತದ ಜನಸಂಖ್ಯಾ ಬೆಳೆವಣಿಗೆ**

| ಜನಗಣತಿ ವರ್ಷ | ಜನಸಂಖ್ಯೆ (ದ.ಲಕ್ಷಗಳಲ್ಲಿ) | ದಶಕವಾರು ಬೆಳೆವಣಿಗೆ (ಶೇ.) |
|---|---|---|
| 1901 | 238.39 | –– |
| 1911 | 252.09 | +5.75 |
| 1921 | 251.32 | –0.31 |
| 1931 | 278.97 | +11.00 |
| 1941 | 318.66 | +14.22 |
| 1951 | 361.08 | +13.31 |
| 1961 | 439.23 | +21.51 |
| 1971 | 548.16 | +24.80 |
| 1981 | 683.33 | +24.66 |
| 1991 | 843.93 | +23.86 |
| 2001 | 1027.01 | +21.34 |

ಜನಸಂಖ್ಯಾ ಬೆಳೆವಣಿಗೆ: ಭಾರತದ ಜನಸಂಖ್ಯೆಯ ಅಂಕಿ ಅಂಶಗಳನ್ನು ಗಮನಿಸಿದಾಗ ಕಂಡುಬರುವ ಅತಿ ಮುಖ್ಯ ಲಕ್ಷಣವೆಂದರೆ ಅದರ ತೀವ್ರಗತಿಯ ಬೆಳೆವಣಿಗೆ. ಭಾರತ ಅತ್ಯಧಿಕ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವುದು ಮಾತ್ರವಲ್ಲದೆ, ಅದರ ಬೆಳೆವಣಿಗೆಯ ವೇಗವೂ ಅಧಿಕವಾಗಿರುವುದು. ಈ ಮೇಲಿನ ಪಟ್ಟಿಯು ಜನಸಂಖ್ಯೆಯ ಬೆಳೆವಣಿಗೆ ಹಾಗೂ ಅದರ ದಶಕವಾರು ಬೆಳೆವಣಿಗೆಯ ಪ್ರಮಾಣವನ್ನು ನಿರೂಪಿಸುವುದು.

ಭಾರತದ 2001 ರ ಜನಗಣತಿಯ ವರದಿಯಲ್ಲಿ ದೇಶದ ಜನಸಂಖ್ಯಾ ಬೆಳೆವಣಿಗೆಯನ್ನು ನಾಲ್ಕು ಹಂತಗಳಾಗಿ ಈ ಕೆಳಕಂಡಂತೆ ವಿಂಗಡಿಸಿರುವರು:

1. 1901–1921 ಸ್ಥಿರ ಜನಸಂಖ್ಯೆ
2. 1921–1951 ನಿರಂತರ ಬೆಳೆವಣಿಗೆ
3. 1951–1981 ಶೀಘ್ರ ಅಧಿಕ ಬೆಳೆವಣಿಗೆ
4. 1981–2001 ಅಧಿಕ ಬೆಳೆವಣಿಗೆ ಹಾಗೂ ಕಡಿಮೆಯಾಗುವ ಸ್ಪಷ್ಟ ಸೂಚನೆ.

1901–11 ರ ಅವಧಿಯಲ್ಲಿ ಜನಸಂಖ್ಯೆಯ ಹೆಚ್ಚಳ ತೀರಾಕಡಿಮೆ. ಆದರೆ 1911–21 ರ ಅವಧಿಯಲ್ಲಿ ಬೆಳೆವಣಿಗೆ ಋಣಾತ್ಮಕವಾಗಿರುವುದನ್ನು ಶೇ.–0.31 ಸಂಖ್ಯೆ ಸೂಚಿಸುವುದು. ಈ ಅವಧಿಯಲ್ಲಿ ಪ್ಲೇಗ್, ಕಾಲರ ಮೊದಲಾದ ಸಾಂಕ್ರಾಮಿಕ ರೋಗಗಳಲ್ಲಿ ಅಪಾರ ಸಂಖ್ಯೆಯ ಜನರು ಮರಣ ಹೊಂದಿರುವುದರಿಂದ ಜನಸಂಖ್ಯೆ ಕಡಿಮೆಯಾಯಿತು. ಆದುದರಿಂದ 1911–21 ರ ಅವಧಿಯನ್ನು ಭಾರತದ ಜನಸಂಖ್ಯಾ ಬೆಳೆವಣಿಗೆಯ ಮಹಾವಿಭಾಜಕ (ಗ್ರೇಟ್ ಡಿವೈಡ್) ಎಂದು ಕರೆಯಲಾಗಿದೆ. ಇದರ ಅನಂತರದ ಅವಧಿಯಲ್ಲಿ ಎಲ್ಲಾ ದಶಕಗಳಲ್ಲಿಯೂ ಜನಸಂಖ್ಯೆಯ ತೀವ್ರ ಹೆಚ್ಚಳವನ್ನು ಕಾಣಬಹುದು. 1971 ರಲ್ಲಿ ಹೆಚ್ಚಳ ಶೇ. 24.80 ರಷ್ಟು ಅತ್ಯಧಿಕವಾಗಿದ್ದಿತು. ಇದು ಭಾರತದಲ್ಲಿ ಅತ್ಯಧಿಕ ಜನಸಂಖ್ಯಾ ಬೆಳೆವಣಿಗೆಯ ದರವನ್ನು ಹೊಂದಿರುವ ದಶಕವಾಗಿದೆ. ಅನಂತರದ ಅವಧಿಯಲ್ಲಿ 1981 ರಲ್ಲಿ ಶೇ. 24.66 ಹಾಗೂ 1991 ರಲ್ಲಿ ಶೇ. 23.86 ರಷ್ಟು ಬೆಳೆವಣಿಗೆಯು ಇದ್ದಿತು. ಆದರೆ 1991–2001 ರ ದಶಕದಲ್ಲಿ ದಶಕವಾರು ಬೆಳೆವಣಿಗೆಯ ಪ್ರಮಾಣ ಶೇ. 21.34 ರಷ್ಟಿದ್ದಿತು. ಹೀಗೆ 1971 ರ ಅನಂತರ ಈ ಬೆಳವಣಿಗೆಯ ದರ ನಿಧಾನವಾಗಿಯಾದರೂ ಇಳಿಮುಖವಾಗುತ್ತಿದೆ. ಆದರೆ ಬೆಳೆವಣಿಗೆಯ ದರ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸದಿಂದ ಕೂಡಿದೆ. 2001 ರ ಗಣತಿಯಲ್ಲಿ ದಶಕವಾರು ಬೆಳೆವಣಿಗೆಯ ದರ ಬಿಹಾರದಲ್ಲಿ ಶೇ.28.43 ರಷ್ಟಿದ್ದು, ದೇಶದ ಮುಖ್ಯ ರಾಜ್ಯಗಳಲ್ಲಿ ಇದು ಅತ್ಯಧಿಕವಾಗಿದೆ. ಬಿಹಾರದೊಡನೆ ಮಧ್ಯಪ್ರದೇಶ, ರಾಜಸ್ತಾನ ಮತ್ತು ಉತ್ತರ ಪ್ರದೇಶಗಳ ಜನಸಂಖ್ಯಾ ಹೆಚ್ಚಳ ಅಧಿಕ ಜನನದ ಪ್ರಮಾಣದೊಡನೆ ಅಧಿಕವಾಗಿದ್ದು ಈ ನಾಲ್ಕು ರಾಜ್ಯಗಳನ್ನು ರೋಗಿಷ್ಠ ರಾಜ್ಯಗಳೆಂದು ಕರೆಯಲಾಗಿದೆ. ಇತರ ರಾಜ್ಯಗಳನ್ನು ಪರಿಗಣಿಸಿದರೆ ನಾಗಾಲ್ಯಾಂಡ್ ದೇಶದಲ್ಲಿ ಅತ್ಯಧಿಕ ಬೆಳೆವಣಿಗೆಯ ದರವನ್ನು ಹೊಂದಿದೆ (ಶೇ.64.41).

2001ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ 1027 ದ.ಲಕ್ಷ (102.7 ಕೋಟಿ). ಅಲ್ಲದೆ ದಶಕವಾರು ಜನಸಂಖ್ಯಾ ಹೆಚ್ಚಳ ಶೇ.21.34 ರಷ್ಟು ಅಧಿಕವಾಗಿದೆ. ಭಾರತದ ಪ್ರತಿವರ್ಷದ ಜನಸಂಖ್ಯಾ ಹೆಚ್ಚಳ ಆಸ್ಟ್ರೇಲಿಯ ದೇಶದ ಒಟ್ಟು ಜನಸಂಖ್ಯೆಯನ್ನು ಭಾರತದ ಜನಸಂಖ್ಯೆಯಲ್ಲಿ ಸೇರ್ಪಡೆಯಾದಂತಾಗುವುದು. ಈ ಅಧಿಕ ಪ್ರಮಾಣದ ಬೆಳೆವಣಿಗೆಯನ್ನು ಜನಸಂಖ್ಯಾ ಸ್ಫೋಟ ವೆಂದು ಕರೆಯಲಾಗಿದೆ.

ತೀವ್ರಗತಿಯ ಜನಸಂಖ್ಯಾ ಬೆಳೆವಣಿಗೆಯ ಕಾರಣಗಳು: ಭಾರತದಲ್ಲಿ ಜನಸಂಖ್ಯೆ ತೀವ್ರಗತಿಯಲ್ಲಿ ಬೆಳೆವಣಿಗೆ ಹೊಂದಲು ಹಲವಾರು ಅಂಶಗಳು ಕಾರಣಗಳಾಗಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ; ಅಧಿಕ ಜನನ ಪ್ರಮಾಣ ಮತ್ತು ಕಡಿಮೆ ಮರಣದ ಪ್ರಮಾಣ.

ಜನನ ಪ್ರಮಾಣ ಅಧಿಕವಾಗಿದ್ದು ಮರಣದ ಸಂಖ್ಯೆ ಕಡಿಮೆಯಿರುವುದರಿಂದ ಜನ ಸಂಖ್ಯಾ ಸ್ಫೋಟ ಉಂಟಾಗಿದೆ. ಹೀಗೆ ಜನನ ಮತ್ತು ಮರಣದ ಪ್ರಮಾಣದಲ್ಲಿ ಕಂಡುಬರುವ ಅಂತರವೇ ಜನಸಂಖ್ಯೆಯ ಸ್ವಾಭಾವಿಕ ಹೆಚ್ಚಳವಾಗಿರುವುದು. ಭಾರತದಲ್ಲಿ ಕಂಡುಬರುವ ಜನನ ಮತ್ತು ಮರಣದ ಪ್ರಮಾಣವನ್ನು ಗಮನಿಸಿದಾಗ ಅವುಗಳ ಅಂತರ ವಿಸ್ತಾರಗೊಳ್ಳುತ್ತ ಬಂದಿರುವುದನ್ನು ಕಾಣಬಹುದು. ಇದರಿಂದಾಗಿಯೇ ಜನಸಂಖ್ಯೆ ತೀವ್ರಗತಿಯಲ್ಲಿ ಅಧಿಕಗೊಳ್ಳುತ್ತಿದೆ.

1. ಅಧಿಕ ಜನನ ಪ್ರಮಾಣ: ಭಾರತದ ಜನಸಂಖ್ಯೆಯ ಗುಣ ಲಕ್ಷಣಗಳನ್ನು ಗಮನಿಸಿದಾಗ ಕಂಡು ಬರುವ ಮುಖ್ಯ ಲಕ್ಷಣವೆಂದರೆ ಅಧಿಕ ಜನನ ಪ್ರಮಾಣ. ಈ ಶತಮಾನದ ಆರಂಭದಲ್ಲಿ ಇದು ಪ್ರತಿಸಾವಿರಕ್ಕೆ 49.2 ರಷ್ಟಿದ್ದು ನಿರಂತರವಾಗಿ ಅತ್ಯಲ್ಪ ಪ್ರಮಾಣದಲ್ಲಿ ಕಡಿಮೆಯಾಗಿ 2001ರ ವೇಳೆಗೆ 26.7 ರಷ್ಟಿದ್ದಿತು. ಆದರೆ ಇದೇ ಅವಧಿಯಲ್ಲಿ ಮರಣದ ಪ್ರಮಾಣ ಮಾತ್ರ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿದೆ (ಪ್ರತಿ ಸಾವಿರಕ್ಕೆ 8.7). ಆದುದರಿಂದ ಇವುಗಳ ನಡುವಿನ ಅಂತರ ನಿರಂತರವಾಗಿ ಅಧಿಕಗೊಂಡು, ಜನಸಂಖ್ಯೆಯ ತೀವ್ರ ಹೆಚ್ಚಳಕ್ಕೆ ಕಾರಣವಾಗಿದೆ. ಅಂದರೆ ಭಾರತದ ಜನಸಂಖ್ಯಾ ಸ್ಫೋಟಕ್ಕೆ ಅಧಿಕ ಜನನ ಪ್ರಮಾಣ ಮೂಲ ಕಾರಣವಾಗಿದೆ.

**ಭಾರತದಲ್ಲಿ ಜನನ ಮತ್ತು ಮರಣ ಪ್ರಮಾಣದ ಪ್ರವೃತ್ತಿ (ಪ್ರತಿಸಾವಿರ ಜನಸಂಖ್ಯೆಗೆ)**

| ವರ್ಷ | ಜನನ ಪ್ರಮಾಣ | ಮರಣ ಪ್ರಮಾಣ |
|---|---|---|
| 1901 | 49.2 | 42.6 |
| 1911 | 48.1 | 47.2 |
| 1921 | 46.4 | 36.3 |
| 1931 | 45.2 | 31.2 |
| 1941 | 39.9 | 27.4 |
| 1951 | 41.7 | 22.8 |
| 1961 | 41.1 | 18.9 |
| 1971 | 36.9 | 14.9 |
| 1981 | 33.9 | 12.5 |
| 1991 | 29.3 | 9.8 |
| 2001 | 26.7 | 8.7 |




ಅಧಿಕ ಜನನ ಪ್ರಮಾಣದ ಕಾರಣಗಳು: ಭಾರತದಲ್ಲಿ ಅಧಿಕ ಪ್ರಮಾಣದ ಜನನ ಕಂಡುಬರಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ: ಸಾರ್ವತ್ರಿಕ ವಿವಾಹ ಪದ್ಧತಿ, ಚಿಕ್ಕ ವಯಸ್ಸಿನಲ್ಲಿಯೇ ವಿವಾಹ, ಬಡತನ, ಅಧಿಕ ಪ್ರಮಾಣದ ಶಿಶುಮರಣ, ಅನಕ್ಷರತೆ ಮತ್ತು ಮೂಢನಂಬಿಕೆ, ಪುತ್ರ ವಾತ್ಸಲ್ಯ, ಉಷ್ಣ ವಾಯುಗುಣ, ಬಹುಪತ್ನಿತ್ವ, ಧಾರ್ಮಿಕ ನಂಬಿಕೆ, ಅವಿಭಕ್ತ ಕುಟುಂಬ ಪದ್ಧತಿ.

2) ಮರಣ ಪ್ರಮಾಣ ಇಳಿಕೆ: ಭಾರತದಲ್ಲಿ ಜನನ ಪ್ರಮಾಣಕ್ಕೆ ವ್ಯತಿರಿಕ್ತವಾಗಿ ಮರಣದ ಪ್ರಮಾಣ ಅತಿ ಕಡಿಮೆಯಾಗಿದೆ. ಈ ಶತಮಾನದ ಆರಂಭದಿಂದಲೂ ಮರಣದ ಪ್ರಮಾಣ ನಿರಂತರವಾಗಿ ಕಡಿಮೆಯಾಗುತ್ತಾ ಬಂದಿರುವುದು. ಇದು 1901 ರಲ್ಲಿ 42.6 ರಷ್ಟು ಗರಿಷ್ಠ ಪ್ರಮಾಣದಲ್ಲಿದ್ದಿತು. ಈ ಅವಧಿಯಲ್ಲಿ ಜನನ ಮತ್ತು ಮರಣ ಪ್ರಮಾಣಗಳ ನಡುವೆ ಇದ್ದ ಅಂತರ ಅತಿ ಕಡಿಮೆ. ಇದರಿಂದಾಗಿ ಜನಸಂಖ್ಯಾ ಹೆಚ್ಚಳ ಸಹ ಅತಿ ಕಡಿಮೆಯಾಗಿದ್ದಿತು. ಆದರೆ 1921 ರ ಅನಂತರ ಮರಣ ಪ್ರಮಾಣ ಇಳಿಮುಖವಾಗುತ್ತಾ ಮುಂದುವರಿದು 2001 ರಲ್ಲಿ ಇದು ಕೇವಲ 8.7 ರಷ್ಟಿದ್ದಿತು. ಹೀಗೆ ಮರಣ ಸಂಖ್ಯೆಯ ಇಳಿಕೆ ಜನಸಂಖ್ಯಾ ಹೆಚ್ಚಳಕ್ಕೆ ಮುಖ್ಯ ಕಾರಣವಾಗಿದೆ.

ಭಾರತದಲ್ಲಿ ಮರಣ ಸಂಖ್ಯೆ ಅತೀವವಾಗಿ ಕಡಿಮೆಯಾಗಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ: 1. ವೈದ್ಯಕೀಯ ಸೌಲಭ್ಯಗಳ ಪೂರೈಕೆ; 2. ಕುಡಿಯುವ ನೀರಿನ ಪೂರೈಕೆ; 3. ಆಹಾರ ಧಾನ್ಯಗಳ ಪೂರೈಕೆ; 4. ಆಹಾರ ಧಾನ್ಯಗಳ ಸ್ವಾವಲಂಬನೆ; 5. ನಾಗರಿಕ ಕಲ್ಯಾಣ ಕಾರ್ಯಕ್ರಮಗಳು.

ಭಾರತದ 2001ರ ಜನಗಣತಿಯ ಮುಖ್ಯ ಲಕ್ಷಣಗಳು:

1. ಭಾರತದ ಒಟ್ಟು ಜನಸಂಖ್ಯೆ – 1027 ದಶಲಕ್ಷ (102.7 ಕೋಟಿ)
2. ಸರಾಸರಿ ಸಾಂದ್ರತೆ – ಪ್ರತಿ ಚ.ಕಿಮೀ ಗೆ 324
3. ಅಧಿಕ ಜನಸಾಂದ್ರತೆಯುಳ್ಳ ರಾಜ್ಯ – ಪಶ್ಚಿಮ ಬಂಗಾಲ (ಪ್ರತಿ ಚ.ಕಿಮೀಗೆ 904 ಜನ)
4. ಅತಿ ಕಡಿಮೆ ಜನಸಾಂದ್ರತೆಯ ರಾಜ್ಯ – ಅರುಣಾಚಲ ಪ್ರದೇಶ (ಪ್ರತಿ ಚ.ಕಿಮೀಗೆ 13 ಜನ)
5. ಅತ್ಯಧಿಕ ಜನಸಂಖ್ಯಾ ಬೆಳವಣಿಗೆಯನ್ನು ಹೊಂದಿರುವ ರಾಜ್ಯ – ನಾಗಾಲ್ಯಾಂಡ್.
6. ಅತ್ಯಧಿಕ ಜನಸಂಖ್ಯಾ ಬೆಳವಣಿಗೆಯನ್ನು ದಾಖಲಿಸಿದ ಜಿಲ್ಲೆ – ವೋಖಾ, ನಾಗಾಲ್ಯಾಂಡ್ (ಶೇ.95.01).
7. ಅತಿ ಕಡಿಮೆ ಜನಸಂಖ್ಯಾ ಬೆಳವಣಿಗೆಯನ್ನು ದಾಖಲಿಸಿದ ಜಿಲ್ಲೆ– ಮಮಿತ್, ಮಿಜೋರಾಂ (ಶೇ.3.50).
8. ಸರಾಸರಿ ಸಾಕ್ಷರತೆ ಪ್ರಮಾಣ – ಶೇ. 65.38
9. ಗರಿಷ್ಠ ಸಾಕ್ಷರತೆಯ ರಾಜ್ಯ – ಕೇರಳ (ಶೇ. 90.92)
10. ಕನಿಷ್ಠ ಸಾಕ್ಷರತೆಯ ರಾಜ್ಯ – ಬಿಹಾರ (ಶೇ. 47.53)
11. ಅಧಿಕ ಜನಸಂಖ್ಯೆಯುಳ್ಳ ರಾಜ್ಯ – ಉತ್ತರ ಪ್ರದೇಶ (166 ದಶಲಕ್ಷ ಅಥವಾ ಶೇ.16.17)
12. ಅತಿ ಕಡಿಮೆ ಜನಸಂಖ್ಯೆಯುಳ್ಳ ರಾಜ್ಯ – ಸಿಕ್ಕಿಂ (5.4 ಲಕ್ಷ)
13. ಅಧಿಕ ಜನಸಂಖ್ಯೆಯುಳ್ಳ ಕೇಂದ್ರಾಡಳಿತ ಪ್ರದೇಶ – ದೆಹಲಿ (13.7 ದ.ಲ.)
14. ಭಾರತದ ಅತ್ಯಧಿಕ ಜನಸಾಂದ್ರತೆಯ ಜಿಲ್ಲೆ (2001) – ಈಶಾನ್ಯ ದೆಹಲಿ 29,395 (2001).
15. ಅತ್ಯಧಿಕ ಜನಸಂಖ್ಯೆ ಹೊಂದಿರುವ ಜಿಲ್ಲೆ (2001) – ಮೇದಿನಿಪುರ್ (ಪಶ್ಚಿಮ ಬಂಗಾಳ)
16. ಅತ್ಯಧಿಕ ಜನಸಂಖ್ಯೆ ಹೊಂದಿರುವ ಕೇಂದ್ರಾಡಳಿತ ಜಿಲ್ಲೆ – ಯಾನಮ್ (ಪಾಂಡಿಚೇರಿ)
17. ಅತಿಕಡಿಮೆ ಜನಸಂಖ್ಯೆಯುಳ್ಳ ಕೇಂದ್ರಾಡಳಿತ ಪ್ರದೇಶ – ಲಕ್ಷದ್ವೀಪ (60ಸಾವಿರ)
18. ಗರಿಷ್ಠ ನಗರಿಕರಣ ರಾಜ್ಯ – ತಮಿಳುನಾಡು (ಶೇ.44)
19. ಸರಾಸರಿ ಮರಣ ಸಂಖ್ಯೆ – ಪ್ರತಿ ಸಾವಿರಕ್ಕೆ 8.7
20. ಸರಾಸರಿ ಜನನ ಸಂಖ್ಯೆ – ಪ್ರತಿ ಸಾವಿರಕ್ಕೆ 26.7
21. ಸರಾಸರಿ ಲಿಂಗವಾರು ಅನುಪಾತ – ಪ್ರತಿ ಸಾವಿರ ಪುರುಷರಿಗೆ 933 ಸ್ತ್ರೀಯರು.
22. ಗರಿಷ್ಠ ಲಿಂಗವಾರು ಅನುಪಾತವನ್ನು ಹೊಂದಿದ ರಾಜ್ಯ – ಕೇರಳ (ಪ್ರತಿ ಸಾವಿರ ಪುರುಷರಿಗೆ 1058 ಸ್ತ್ರೀಯರು)
23. ಕನಿಷ್ಠ ಲಿಂಗವಾರು ಅನುಪಾತ ಹೊಂದಿದ ರಾಜ್ಯ – ಹರಿಯಾಣ (ಪ್ರತಿ ಸಾವಿರ ಪುರುಷ ಸಂಖ್ಯೆಗೆ 861 ಸ್ತ್ರೀಯರು.
24. ಭಾರತದ ಅತಿ ದೊಡ್ಡ ನಗರ – ಮುಂಬಯಿ 12.6 ದ.ಲ. ಜನಸಂಖ್ಯೆ
25. ಭಾರತದ ಪುರುಷ ಮತ್ತು ಮಹಿಳೆಯರ ಸಂಖ್ಯೆ ಕ್ರಮವಾಗಿ 531 ದ.ಲ ಹಾಗೂ 495.7 ದ.ಲ.

ಜನಸಾಂದ್ರತೆ ಮತ್ತು ಹಂಚಿಕೆ: ಭಾರತ ಅಪಾರವಾದ ಜನಸಂಖ್ಯೆಯನ್ನು ಹೊಂದಿರುವುದರ ಜೊತೆಗೆ, ಅದರ ಹಂಚಿಕೆಯೂ ಅಸಮರ್ಪಕವಾಗಿದೆ. ಕೆಲವು ಪ್ರದೇಶಗಳು ಅತ್ಯಧಿಕ ಜನಸಾಂದ್ರತೆಯನ್ನು ಹೊಂದಿದ್ದರೆ ಇಂದಿಗೂ ವಿಸ್ತಾರವಾದ ಕೆಲವು ಭಾಗಗಳಲ್ಲಿ ವಿರಳವಾದ ಜನಸಾಂದ್ರತೆಯನ್ನು ಕಾಣಬಹುದು.

ಜನಸಂಖ್ಯಾ ಹಂಚಿಕೆಯನ್ನು ವಿವರಿಸಲು ಸಾಂದ್ರತೆ ಎಂಬ ಪದವನ್ನು ಸಾಮಾನ್ಯವಾಗಿ ಬಳಸಲಾಗುವುದು. ನಿರ್ದಿಷ್ಟವಾದ ಪ್ರದೇಶದಲ್ಲಿ ಕಂಡು ಬರುವ ಸರಾಸರಿ ಜನರ ಸಂಖ್ಯೆಯನ್ನೇ ಜನಸಾಂದ್ರತೆಯೆಂದು ಕರೆಯುವರು. ಸಾಮಾನ್ಯವಾಗಿ ಇದನ್ನು ಚ.ಕಿಮೀ ಅಥವಾ ಚ.ಮೈಲಿ ಕಂಡುಬರುವ ಜನರ ಸಂಖ್ಯೆಯೆಂದು ವಿವರಿಸಲಾಗುವುದು.

ಸಾಂದ್ರತೆಯ ಮುಖ್ಯ ಲಕ್ಷಣಗಳು: ಭಾರತದ ಜನಸಾಂದ್ರತೆಯನ್ನು ವೀಕ್ಷಿಸಿದಾಗ ಹಲವಾರು ವೈವಿಧ್ಯತೆಗಳನ್ನು ಕಾಣಬಹುದು. 1991 ರ ಜನಗಣತಿಯ ಪ್ರಕಾರ ದೇಶದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 267 ಆಗಿದ್ದು, 2001ರ ಜನಗಣತಿಯಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಏರಿಕೆಯಾಗಿರುವುದರಿಂದ ಈ ಅವಧಿಯಲ್ಲಿ ಭಾರತದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 324 ರಷ್ಟಿರುವುದು. ಸಾಂದ್ರತೆಯ ಪ್ರಮಾಣ ಒಂದು ಜನಗಣತಿಯಿಂದ ಮತ್ತೊಂದಕ್ಕೆ ನಿರಂತರವಾಗಿ ಅಧಿಕಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. 1901 ರಲ್ಲಿ ಸಾಂದ್ರತೆಯ ಪ್ರಮಾಣ ಪ್ರತಿ ಚ.ಕಿಮೀ ಗೆ 77 ಆಗಿದ್ದು, ಇದು 1991 ರಲ್ಲಿ 267 ಕ್ಕೆ ಹಾಗೂ 2001 ರಲ್ಲಿ 324 ಕ್ಕೆ ಏರಿಕೆಗೊಂಡಿದೆ.

ಭಾರತದಲ್ಲಿ ರಾಜ್ಯವಾರು ಜನಸಾಂದ್ರತೆಯನ್ನು ಗಮನಿಸಿದಾಗ 2001 ರ ಜನಗಣತಿಯಲ್ಲಿ ಪಶ್ಚಿಮ ಬಂಗಾಲ ಪ್ರತಿ ಚ.ಕಿಮೀ ಗೆ 904 ಜನಸಾಂದ್ರತೆಯನ್ನು ಹೊಂದಿದೆ. 1981 ರ ಜನ ಗಣತಿಯಲ್ಲಿ ಮೊದಲ ಸ್ಥಾನದಲ್ಲಿದ್ದ ಕೇರಳ ಪ್ರತಿ ಚ.ಕಿಮೀ ಗೆ 819 ಜನರನ್ನು ಹೊಂದಿದ್ದು, ಪಶ್ಚಿಮ ಬಂಗಾಲ ಮತ್ತು ಬಿಹಾರದ ಅನಂತರ ಮೂರನೆಯ ಸ್ಥಾನದಲ್ಲಿದೆ. ಬಿಹಾರ ಪ್ರತಿ ಚ.ಕಿಮೀ ಗೆ 880 ಜನಸಂಖ್ಯೆಯನ್ನು

ಹೊಂದಿದ್ದು ಎರಡನೆಯ ಸ್ಥಾನದಲ್ಲಿದೆ. ಇದಕ್ಕೆ ವಿರುದ್ಧವಾಗಿ ಅರುಣಾಚಲ ಪ್ರದೇಶ ಅತಿ ಕಡಿಮೆ ಜನಸಾಂದ್ರತೆಯನ್ನು ಹೊಂದಿರುವ ರಾಜ್ಯವಾಗಿದೆ. ಕೇಂದ್ರಾಡಳಿತ ಪ್ರದೇಶಗಳನ್ನು ಪರಿಗಣಿಸಿದಾಗ ದೆಹಲಿ ಪ್ರತಿ ಚ.ಕಿಮೀ ಗೆ 9294 ಜನರನ್ನು ಹೊಂದಿದ್ದು ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆಯ ಪ್ರಮಾಣವನ್ನು ಹೊಂದಿರುವುದು. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 16.2 ರಷ್ಟನ್ನು ಉತ್ತರ ಪ್ರದೇಶವೊಂದೇ ಒಳಗೊಂಡಿದೆ. ಇದಕ್ಕೆ ವಿರುದ್ಧವಾಗಿ ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ರಾಜ್ಯವೆಂದರೆ ಸಿಕ್ಕಿಂ. ಮಹಾರಾಷ್ಟ್ರ (ಶೇ. 9.40) ಮತ್ತು ಬಿಹಾರ (ಶೇ. 8.07) ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನವನ್ನು ಪಡೆದಿವೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಲಕ್ಷ ದ್ವೀಪಗಳು ಅತಿ ಕಡಿಮೆ ಜನಸಂಖ್ಯೆಯನ್ನು (60 ಸಾವಿರ) ಹೊಂದಿವೆ ಹಾಗೂ ಅಂಡಮಾನ ಹಾಗೂ ನಿಕೋಬಾರ್ ಅತಿ ಕಡಿಮೆ ಜನಸಾಂದ್ರತೆಯನ್ನು ಹೊಂದಿವೆ (ಪ್ರತಿ ಚ.ಕಿಮೀ ಗೆ 43)

**ಜನಸಾಂದ್ರತೆಯ ಪ್ರವೃತ್ತಿ**

| ಜನಗಣತಿ ವರ್ಷ | ಸಾಂದ್ರತೆ (ಪ್ರತಿ ಚ.ಕಿಮೀ) |
|---|---|
| 1901 | 77 |
| 1911 | 82 |
| 1921 | 81 |
| 1931 | 90 |
| 1941 | 103 |
| 1951 | 117 |
| 1961 | 142 |
| 1971 | 177 |
| 1981 | 216 |
| 1991 | 267 |
| 2001 | 324 |

ಜನಸಂಖ್ಯಾ ರಚನೆ: ಭಾರತ ವೈವಿಧ್ಯತೆಯ ಪ್ರತೀಕವಾಗಿದ್ದು, ಈ ವೈವಿಧ್ಯತೆಯ ಲಕ್ಷಣಗಳು ಜನಸಂಖ್ಯಾ ರಚನೆಯಲ್ಲಿಯೂ ಪ್ರತಿಬಿಂಬಿತವಾಗಿವೆ. ಜನಸಂಖ್ಯೆಯ ಗುಣಲಕ್ಷಣಗಳು ಪ್ರದೇಶದಿಂದ ಪ್ರದೇಶಕ್ಕೆ ಅಪಾರ ವ್ಯತ್ಯಾಸದಿಂದ ಕೂಡಿವೆ. ದೇಶ ವಿವಿಧ ಭಾಷೆಯ, ಧರ್ಮದ ಹಾಗೂ ಜನಾಂಗದ ಜನರಿಂದ ಕೂಡಿದ್ದು, ಜನಸಂಖ್ಯಾ ಸಂಯೋಜನೆಯೂ ಭಿನ್ನವಾಗಿರಲು ಕಾರಣಗಳಾಗಿವೆ.

ಏಳು ವರ್ಷ ಮೀರಿದ ವಯಸ್ಸಿನ ವ್ಯಕ್ತಿ ಯಾವುದೇ ಭಾಷೆಯಲ್ಲಿ ಸರಳವಾದ ವಾಕ್ಯಗಳನ್ನು ಅರ್ಥ ಮಾಡಿಕೊಂಡು ಓದಿ ಬರೆಯಬಲ್ಲ ಸಾಮರ್ಥ್ಯವನ್ನೇ ಸಾಕ್ಷರತೆಯೆಂದು ಕರೆಯುವರು. 1991ರ ಜನಗಣತಿಯ ಪ್ರಕಾರ ಭಾರತದ ಸರಾಸರಿ ಸಾಕ್ಷರತೆಯ ಪ್ರಮಾಣ ಶೇ. 52.11 ರಷ್ಟಿದ್ದು ಇದು 2001 ರ ಜನಗಣತಿಯಲ್ಲಿ ಶೇ. 65.38 ಕ್ಕೆ ಏರಿಕೆಗೊಂಡಿದೆ. ಈ ಮುಂದಿನ ಪಟ್ಟಿ ಭಾರತದಲ್ಲಿ ಸಾಕ್ಷರತೆಯ ಪ್ರಮಾಣದ ಬೆಳೆವಣಿಗೆಯನ್ನು ನಿರೂಪಿಸುವುದು. 1901 ರಲ್ಲಿ ದೇಶ ಹೊಂದಿದ್ದ ಸಾಕ್ಷರತೆ ಕೇವಲ ಶೇ. 5.35 ರಷ್ಟಿದ್ದು 1951 ರ ವೇಳೆಗೆ ನಿಧಾನವಾಗಿ ಶೇ. 16.67 ಕ್ಕೆ ಏರಿಕೆಗೊಂಡಿತು. ಅನಂತರದ ದಶಕಗಳಲ್ಲಿ ಇದರಲ್ಲಿ ಗಮನಾರ್ಹ ಪ್ರಗತಿಯಾಗಿರುವುದನ್ನು ಕಾಣಬಹುದು. ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಗಳ ಸಾಕ್ಷರತೆಯ ಪ್ರಮಾಣದ ಬೆಳೆವಣಿಗೆಯಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸಿವೆ.

**ಸಾಕ್ಷರತೆ ಬೆಳೆವಣಿಗೆಯ ಪ್ರವೃತ್ತಿ**

| ವರ್ಷ | ಸಾಕ್ಷರತೆ(ಶೇ.) |
|---|---|
| 1901 | 5.35 |
| 1911 | 5.92 |
| 1921 | 7.16 |
| 1931 | 9.50 |
| 1941 | 16.10 |
| 1951 | 16.67 |
| 1961 | 24.02 |
| 1971 | 29.45 |
| 1981 | 36.17 |
| 1991 | 52.11 |
| 2001 | 65.38 |




ಸಾಕ್ಷರತೆಯ ಪ್ರಾದೇಶಿಕ ಹಂಚಿಕೆಯಲ್ಲಿ ಅಪಾರ ವ್ಯತ್ಯಾಸಗಳನ್ನು ಕಾಣಬಹುದು. ಇದರ ಪ್ರಮಾಣ ರಾಜ್ಯದಿಂದ ರಾಜ್ಯಕ್ಕೆ ಮಾತ್ರವಲ್ಲದೆ ಸ್ತ್ರೀ ಪುರುಷ ಹಾಗೂ ಗ್ರಾಮೀಣ ನಗರ ಪ್ರದೇಶಗಳ ನಡುವೆಯು ಅಪಾರ ವ್ಯತ್ಯಾಸದಿಂದ ಕೂಡಿದೆ. 2001 ರಲ್ಲಿ ದೇಶದ ಸರಾಸರಿ ಸಾಕ್ಷರತೆ ಶೇ. 65.38 ರಷ್ಟಿದ್ದಿತು. ಕೇರಳ ರಾಜ್ಯ ಶೇ. 90.59 ರಷ್ಟು ಸಾಕ್ಷರತೆಯನ್ನು ಹೊಂದಿದ್ದು ಅತ್ಯಧಿಕ ಸಾಕ್ಷರತೆಯ ರಾಜ್ಯವಾಗಿದೆ. ಮಿಜೋರಾಂ ಶೇ. 88.49 ರಷ್ಟು ಸಾಕ್ಷರತೆಯೊಡನೆ ಎರಡನೆಯ ಸ್ಥಾನದಲ್ಲಿದೆ. ಇದಕ್ಕೆ ವಿರುದ್ಧವಾಗಿ ಶೇ. 47.53 ರಷ್ಟು ಸಾಕ್ಷರತೆಯನ್ನು ಮಾತ್ರ ಹೊಂದಿರುವ ಬಿಹಾರ ಕನಿಷ್ಠ ಸಾಕ್ಷರತೆಯ ರಾಜ್ಯವಾಗಿದೆ. ಇದರಂತೆಯೇ ದೇಶ ಶೇ. 75.85 ರಷ್ಟು ಪುರುಷರ ಸಾಕ್ಷರತೆಯನ್ನು ಹೊಂದಿದ್ದರೆ ಮಹಿಳಾ ಸಾಕ್ಷರತೆಯ ಪ್ರಮಾಣ ಶೇ. 54.16 ರಷ್ಟಿರುವುದು. ಹೀಗೆ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ಅಂತರ 1991 ರಲ್ಲಿ 28.84 ರಿಂದ 2001 ರಲ್ಲಿ 21.70 ಗೆ ಇಳಿಕೆಗೊಂಡಿದೆ. ಇದು ಭಾರತದಲ್ಲಿ ಸಾಕ್ಷರತೆ ಅಭಿವೃದ್ಧಿಯನ್ನು ಸ್ಪಷ್ಟವಾಗಿ ಸೂಚಿಸುವುದು.

ಲಿಂಗವಾರು ಅನುಪಾತ: ಲಿಂಗವಾರು ಪ್ರಮಾಣ ಜನಸಂಖ್ಯಾ ಸಂಯೋಜನೆಯ ಒಂದು ಮುಖ್ಯ ಲಕ್ಷಣವಾಗಿದೆ. ಪ್ರತಿಸಾವಿರ ಅಥವಾ ನೂರು ಪುರುಷರ ಸಂಖ್ಯೆಗೆ ಕಂಡು ಬರುವ ಸ್ತ್ರೀಯರ ಅನುಪಾತವನ್ನೇ ಲಿಂಗವಾರು ಪ್ರಮಾಣವೆಂದು ಕರೆಯುವರು. ಇದರ ಪ್ರಮಾಣದ ಮೇಲೆ ಪ್ರಭಾವ ಬೀರುವ ಮುಖ್ಯ ಅಂಶಗಳೆಂದರೆ ಜನನದಲ್ಲಿ ಕಂಡು ಬರುವ ಲಿಂಗವಾರು ಪ್ರಮಾಣ, ಮರಣದ ಸಂಖ್ಯೆಯಲ್ಲಿ ಲಿಂಗವಾರು ಪ್ರಮಾಣ ಮತ್ತು ವಲಸೆ.

ಭಾರತದಲ್ಲಿ ಲಿಂಗವಾರು ಅನುಪಾತದ ಅಂಕಿ ಅಂಶಗಳನ್ನು ಗಮನಿಸಿದಾಗ ಕಂಡು ಬರುವ ಮುಖ್ಯ ಲಕ್ಷಣಗಳೆಂದರೆ ಸ್ತ್ರೀಯರ ಸಂಖ್ಯೆ ದಶಕದಿಂದ ದಶಕಕ್ಕೆ ನಿರಂತರವಾಗಿ ಕಡಿಮೆಯಾಗುತ್ತಾ ಬಂದಿರುವುದು. ಆದರೆ 1991 ಕ್ಕಿಂತ 2001 ರಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಏರಿಕೆಗೊಂಡಿದೆ.

1901 ರಲ್ಲಿ ಪ್ರತಿ ಸಾವಿರ ಪುರುಷರ ಸಂಖ್ಯೆಗೆ 972 ರಷ್ಟಿದ್ದ ಸ್ತ್ರೀಯರ ಅನುಪಾತ 1991 ರಲ್ಲಿ 929 ರಷ್ಟಕ್ಕೆ ಇಳಿಕೆಗೊಂಡಿದ್ದು, 2001 ರ ಗಣತಿಯಲ್ಲಿ 933 ರಷ್ಟು ದಾಖಲೆಗೊಂಡು ಸ್ವಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ಕೇರಳ ಪ್ರತಿ ಸಾವಿರ ಪುರುಷರಿಗೆ 1058 ಸ್ತ್ರೀಯರ ಅನುಪಾತವನ್ನು ಹೊಂದಿದ್ದು ಸ್ತ್ರೀಯರ ಅನುಪಾತ ಸಂಖ್ಯೆಯನ್ನು ಅಧಿಕವಾಗಿ ಹೊಂದಿರುವ ರಾಜ್ಯವಾಗಿದೆ. ಇದಕ್ಕೆ ವಿರುದ್ಧವಾಗಿ ಹರಿಯಾಣ ಪ್ರತಿ ಸಾವಿರ ಪುರುಷರ ಸಂಖ್ಯೆಗೆ ಕೇವಲ 861 ಸ್ತ್ರೀಯರ ಸಂಖ್ಯೆಯನ್ನು ಹೊಂದಿದ್ದು ಅತ್ಯಂತ ಕನಿಷ್ಠ ಪ್ರಮಾಣದ ಅನುಪಾತವನ್ನು ಒಳಗೊಂಡಿರುವ ರಾಜ್ಯವಾಗಿದೆ.

ನಗರ ಮತ್ತು ಗ್ರಾಮೀಣ ಜನಸಂಖ್ಯೆ: ಭಾರತ ವ್ಯವಸಾಯ ಪ್ರಧಾನವಾದ ರಾಷ್ಟ್ರವಾಗಿರುವುದರಿಂದ ಬಹುಪಾಲು ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ನೆಲೆಸಿರುವರು. ಇದರಿಂದ 2001ರ ಜನಗಣತಿಯ ಪ್ರಕಾರ ಗ್ರಾಮೀಣ ಜನಸಂಖ್ಯೆ ಶೇ. 72.2 ಭಾಗವಾಗಿದ್ದು, ನಗರ ಜನಸಂಖ್ಯೆ ಶೇ. 27.8 ರಷ್ಟಿರುವುದು. ನಗರ ಜನಸಂಖ್ಯೆಯ ಪ್ರಮಾಣ ನಿರಂತರವಾಗಿ ಅಧಿಕಗೊಳ್ಳುತ್ತಿದೆ. ಇದಕ್ಕೆ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಅಪಾರ ಜನಸಂಖ್ಯೆಯು ವಲಸೆ ಹೋಗುತ್ತಿರುವುದು ಮುಖ್ಯ ಕಾರಣವಾಗಿದೆ. 1901 ರಲ್ಲಿ ಭಾರತ ಹೊಂದಿದ್ದ ನಗರ ಜನಸಂಖ್ಯೆಯ ಪ್ರಮಾಣ ಕೇವಲ ಶೇ. 10.8 ರಷ್ಟು ಮಾತ್ರ. ಇದು 2001 ರ ವೇಳೆಗೆ ಶೇ.27.8ಕ್ಕೆ ಏರಿಕೆಗೊಂಡಿದೆ. ಭಾರತದಲ್ಲಿ ತಮಿಳುನಾಡು ಅಧಿಕ ಪ್ರಮಾಣದ ನಗರ ಜನಸಂಖ್ಯೆಯನ್ನು ಒಳಗೊಂಡಿರುವ ರಾಜ್ಯವಾಗಿದೆ (ಶೇ.44). ಮಹಾರಾಷ್ಟ್ರ, ಶೇ. 42 ರಷ್ಟು ನಗರ ಜನಸಂಖ್ಯೆಯನ್ನು ಹೊಂದಿದ್ದು ಎರಡನೆಯ ಸ್ಥಾನದಲ್ಲಿದೆ.

ಭಾರತದಲ್ಲಿ ಇಂದು 10 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ 34 ನಗರಗಳಿವೆ. ಮುಂಬಯಿ (ಬೊಂಬಾಯಿ) ನಗರ ಭಾರತದ ಅತಿ ದೊಡ್ಡ ನಗರವಾಗಿದೆ. ದೇಶದಲ್ಲಿ 36 ದಶಲಕ್ಷ ಜನ ಸಂಖ್ಯೆಯ ನಗರಗಳಿವೆ.

**ಭಾರತ ದಶಲಕ್ಷ ಜನಸಂಖ್ಯೆ ನಗರಗಳು (ಲಕ್ಷಗಳಲ್ಲಿ)**

| | | | | | |
|---|---|---|---|---|---|
| 1. | ಗ್ರೇಟರ್ ಮುಂಬಯಿ | 163 | 2. | ಕೋಲ್ಕೊತ | 132 |
| 3. | ದೆಹಲಿ | 127.9 | 4. | ಚೆನ್ನೈ | 64 |
| 5. | ಬೆಂಗಳೂರು | 56 | 6. | ಹೈದರಾಬಾದ್ | 55 |
| 7. | ಅಹಮದಾಬಾದ್ | 45 | 8. | ಪುಣೆ | 37 |
| 9. | ಸೂರತ್ | 28 | 10. | ಕಾನ್ಪುರ | 26.9 |
| 11. | ಜೈಪುರ | 23.2 | 12. | ಲಖನೌ | 22.6 |
| 13. | ನಾಗಪುರ | 21.2 | 14. | ಪಟಣ | 17.0 |
| 15. | ಇಂದೂರ್ | 16.3 | 16. | ವಡೋದರ | 14.9 |
| 17. | ಭೂಪಾಲ್ | 14.5 | 18. | ಕೊಯಮತ್ತೂರು | 14.4 |
| 19. | ಲೂಧಿಯಾನ | 13.9 | 20. | ಕೊಚ್ಚಿ | 13.5 |
| 21. | ವಿಶಾಖಪಟ್ಟಣ | 13.2 | 22. | ಆಗ್ರ | 13.2 |
| 23. | ವಾರಾಣಸಿ | 12.1 | 24. | ಮಧುರೈ | 11.9 |
| 25. | ಮೀರತ್ | 11.6 | 26. | ನಾಸಿಕ್ | 11.5 |
| 27. | ಜಬಲ್‌ಪುರ | 11.1 | 28. | ಜಂಷೆಡ್‌ಪುರ್ | 11.0 |
| 29. | ಅಸಾನ್‌ಸೋಲ್ | 10.9 | 30. | ಧನಬಾದ್ | 10.6 |
| 31. | ಫರಿದಾಬಾದ್ | 10.5 | 32. | ಅಲಹಾಬಾದ್ | 10.4 |
| 33. | ಅಮೃತಸರ | 10.1 | 34. | ವಿಜಯವಾಡ | 10..1 |
| 35. | ರಾಜಕೋಟ್ | 10.0 | | | |

ವಯೋಮಾನ ರಚನೆ: ವಯೋಮಾನ ರಚನೆ ಜನಸಂಖ್ಯಾ ಸಂಯೋಜನೆಯ ಮುಖ್ಯ ಲಕ್ಷಣಗಳಲ್ಲಿ ಒಂದು. ವಿವಿಧ ವಯಸ್ಸಿನ ಗುಂಪಿನಲ್ಲಿರುವ ಜನರ ಪ್ರಮಾಣವನ್ನೇ 'ವಯೋಮಾನ ರಚನೆ'ಯೆಂದು ಕರೆಯುವರು. ವಯಸ್ಸಿನ ಆಧಾರದ ಮೇಲೆ ಒಟ್ಟು ಜನಸಂಖ್ಯಾ ಸಮೂಹವನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ ಮಕ್ಕಳು (0–14 ವರ್ಷ), ವಯಸ್ಕರು (15–59 ವರ್ಷ), ವೃದ್ಧರು (60 ವರ್ಷದ ಮೇಲ್ಪಟ್ಟು), 1981 ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ ಶೇ.40 ರಷ್ಟು ಮಕ್ಕಳು ಶೇ.54 ರಷ್ಟು ವಯಸ್ಕರು ಹಾಗೂ ಉಳಿದ ಶೇ. 6 ರಷ್ಟು ವೃದ್ಧರಿಂದ ಕೂಡಿದ್ದಿತು.

ವಯೋಮಾನ ರಚನೆ ದುಡಿಯುವ ಕೆಲಸಗಾರರ ಪ್ರಮಾಣವನ್ನು ತಿಳಿಯಲು ಅತ್ಯಾವಶ್ಯಕ. ಭಾರತದಲ್ಲಿ ಮಕ್ಕಳ ಪ್ರಮಾಣ ಅಧಿಕ ಜನನ ಪ್ರಮಾಣದಿಂದ ಅತ್ಯಧಿಕವಾಗಿರುವುದಲ್ಲದೆ, ಅದು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದರಂತೆ ವಯಸ್ಕರ ಪ್ರಮಾಣ ಕಡಿಮೆಯಾಗುತ್ತಿದೆ. ಇದರಿಂದ

ಲಿಂಗವಾರು ಅನುಪಾತದ ಪ್ರವೃತ್ತಿ

| ವರ್ಷ | ಲಿಂಗವಾರು ಪ್ರಮಾಣ (ಸಾವಿರ ಪುರುಷ ಸಂಖ್ಯೆಗೆ) |
|---|---|
| 1901 | 972 |
| 1911 | 964 |
| 1921 | 955 |
| 1931 | 950 |
| 1941 | 945 |
| 1951 | 946 |
| 1961 | 941 |
| 1971 | 930 |
| 1981 | 934 |
| 1991 | 929 |
| 2001 | 933 |

ದುಡಿಯುವ ಜನರ ಮೇಲೆ ಅವಲಂಬಿತರಾಗಿರುವ ಜನಸಂಖ್ಯೆಯ ಪ್ರಮಾಣ ಹೆಚ್ಚುತ್ತಿರುವುದು. ಇದು ದೇಶದಲ್ಲಿ ಕಡಿಮೆ ತಲಾವಾರು ಆದಾಯ ಹಾಗೂ ಕಡಿಮೆ ಗುಣಮಟ್ಟದ ಜೀವನಕ್ಕೆ ಮುಖ್ಯ ಕಾರಣವಾಗಿದೆ.

ನಿರೀಕ್ಷಿತ ಜೀವಿತಾವಧಿ: ಹುಟ್ಟಿನಿಂದ ಸಾವಿನವರೆಗಿನ ಸರಾಸರಿ ವಯಸ್ಸನ್ನೇ ನಿರೀಕ್ಷಿತ ಜೀವಿತಾವಧಿಯೆಂದು ಕರೆಯುವರು. ಇದು ಜನನ ಮತ್ತು ಮರಣದ ಪ್ರಮಾಣ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಅವಲಂಬಿಸಿ ಪ್ರದೇಶದಿಂದ ಪ್ರದೇಶಕ್ಕೆ ಹೋದಂತೆ ವ್ಯತ್ಯಾಸವನ್ನು ಹೊಂದುವುದು. ಭಾರತೀಯರ ಸರಾಸರಿ ಜೀವಿತಾವಧಿ 56 ವರ್ಷಗಳಾಗಿದ್ದು, ಇದು ಪ್ರಪಂಚದ ಸರಾಸರಿ ಜೀವಿತಾವಧಿ 63.9 ಕ್ಕಿಂತ ಅತಿ ಕಡಿಮೆಯಿರುವುದು. ಮಾನವ ಸಂಪನ್ಮೂಲ ಪೋಷಣೆ ಉತ್ತಮವಾಗಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ನಿರೀಕ್ಷಿತ ಜೀವಿತಾವಧಿ ಹೆಚ್ಚಾಗಿರುವುದು.

ನಿರೀಕ್ಷಿತ ಜೀವಿತಾವಧಿ ದೇಶ ಆರ್ಥಿಕ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದಂತೆ ಅಧಿಕಗೊಳ್ಳುವುದು. 1901–11ರ ಅವಧಿಯಲ್ಲಿ ಭಾರತೀಯರ ಸರಾಸರಿ ಜೀವಿತಾವಧಿ ಕೇವಲ 22.95 ವರ್ಷಗಳಾಗಿದ್ದಿತು. ಸರಕಾರ ಕೈಗೊಂಡಿರುವ ಅಭಿವೃದ್ಧಿ ಹಾಗೂ ಕಲ್ಯಾಣ ಯೋಜನೆಗಳಿಂದ ಜನರ ಜೀವನ ಸಾಕಷ್ಟು ಉತ್ತಮಗೊಂಡಿದ್ದು ಇದರಿಂದ ನಿರೀಕ್ಷಿತ ಜೀವಿತಾವಧಿ ಹೆಚ್ಚಳಗೊಂಡಿದೆ. ನಿರೀಕ್ಷಿತ ಜೀವಿತಾವಧಿ ನಿರಂತರವಾಗಿ ಅಧಿಕಗೊಳ್ಳುತ್ತಿದ್ದು 2040 ರ ವೇಳೆಗೆ ದೇಶ 60 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಅಧಿಕ ಜನಸಂಖ್ಯೆಯನ್ನು ಹೊಂದುವ ಸಾಧ್ಯತೆಯಿದೆಯೆಂದು ಅಂದಾಜು ಮಾಡಲಾಗಿದೆ. ನೆರೆಗೂದಲಿನ ಜನರ ಪ್ರಮಾಣ ಈ ಹಂತದಲ್ಲಿ ಅಧಿಕವಾಗುವ ಸಾಧ್ಯತೆಯಿದ್ದು, ಇದನ್ನು ಗ್ರೇ ಇಂಡಿಯಾ ಎಂದು ವಿವರಿಸಲಾಗಿದೆ.

ಜನಸಂಖ್ಯಾ ಬೆಳೆವಣಿಗೆಯಿಂದ ಉಂಟಾಗಿರುವ ಪರಿಣಾಮಗಳು: ಮಾನವ ಸಂಪನ್ಮೂಲ ಆರ್ಥಿಕ ಅಭಿವೃದ್ಧಿಗೆ ಅತ್ಯಾವಶ್ಯಕ. ಆದರೆ ಅದರ ಪ್ರಮಾಣ ದೇಶದಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳಿಗೆ ಅನುಗುಣವಾಗಿ ಆದರ್ಶ ಪ್ರಮಾಣದಲ್ಲಿರಬೇಕು. ಜನಸಂಖ್ಯೆ ಅತೀವವಾಗಿದ್ದಲ್ಲಿ ಸಂಪನ್ಮೂಲಗಳ ಮೇಲೆ ಅದರ ಒತ್ತಡ ಅಧಿಕವಾಗಿದ್ದು, ಹಲವಾರು ಸಮಸ್ಯೆಗಳಿಗೆ ಕಾರಣವಾಗುವುದು. ಈ ದೃಷ್ಟಿಯಿಂದ ಪರಿಶೀಲಿಸಿದಾಗ ಭಾರತ ಈಗಾಗಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದನ್ನು ಕಾಣಬಹುದು. ಜನಸಂಖ್ಯಾ ಸ್ಫೋಟ ಆರ್ಥಿಕ ಪ್ರಗತಿಯ ಮೇಲೆ ದುಷ್ಪರಿಣಾಮವನ್ನು ಉಂಟುಮಾಡಿದೆ. ಆದರೆ ತೀವ್ರಗತಿಯ ಬೆಳೆವಣಿಗೆ ಹಲವಾರು ಸಮಸ್ಯೆಗಳನ್ನು ಸೃಷ್ಟಿಸಿದೆ. ಇದರಿಂದ ಜನಸಂಖ್ಯೆ ಸಂಪನ್ಮೂಲವಾಗಿರುವ ಬದಲು ಹೊರೆಯಾಗಿ ಪರಿಣಮಿಸಿದೆ. ಭಾರತದಲ್ಲಿ ಜನಸಂಖ್ಯೆಯ ಬೆಳೆವಣಿಗೆಯಿಂದ ಉಂಟಾಗುವ ಮುಖ್ಯ ಸಮಸ್ಯೆಗಳು ಹೀಗಿವೆ: ನಿರುದ್ಯೋಗ ಹಾಗೂ ಅರೆ ನಿರುದ್ಯೋಗ, ಆಹಾರ ಮತ್ತು ಪೌಷ್ಟಿಕಾಂಶದ ಕೊರತೆ, ಸಾಮಾಜಿಕ ಹಾಗೂ ನಾಗರಿಕ ಸೌಲಭ್ಯಗಳ ಮೇಲೆ ಅಧಿಕ ಒತ್ತಡ, ಕಡಿಮೆ ತಲಾವಾರು ಆದಾಯ, ಅನುತ್ಪಾದಕ ಜನಸಂಖ್ಯೆಯ ಹೆಚ್ಚಳ, ನಿಧಾನ ಗತಿಯ ಆರ್ಥಿಕಾಭಿವೃದ್ಧಿ, ರಾಜಕೀಯ ಕ್ಷೋಭೆ ಮತ್ತು ಸಾಮಾಜಿಕ ಸಮಸ್ಯೆಗಳು–

ಹೀಗೆ ದೇಶ ಎದುರಿಸುತ್ತಿರುವ ಹಲವಾರು ಜ್ವಲಂತ ಸಮಸ್ಯೆಗಳಿಗೆ ಜನಸಂಖ್ಯೆಯ ಹೆಚ್ಚಳ ಮೂಲಕಾರಣವಾಗಿದೆ. ಸಂಪನ್ಮೂಲಗಳ ಮೇಲೆ ಅಪಾರ ಪೈಪೋಟಿ ಮತ್ತು ಒತ್ತಡವನ್ನು ಹೇರಿದೆ. ಇದರಿಂದಾಗಿ ಪರಿಸರ ಮಾಲಿನ್ಯವೂ ಜನಸಂಖ್ಯಾ ಬೆಳೆವಣಿಗೆಯ ಕೊಡುಗೆಯೇ ಆಗಿದೆ.

ಭಾರತ ಸರಕಾರ ತ್ವರಿತಗತಿಯಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದೆ. ಈ ಎಲ್ಲಾ ಕ್ರಮಗಳ ಮುಖ್ಯ ಉದ್ದೇಶ ಜನನ ಪ್ರಮಾಣವನ್ನು ನಿಯಂತ್ರಿಸುವ ಮುಖ್ಯಗುರಿಯನ್ನು ಒಳಗೊಂಡಿದೆ. ಜನಸಂಖ್ಯಾ ನಿಯಂತ್ರಣದ ಮುಖ್ಯ ಕಾರ್ಯಕ್ರಮಗಳೆಂದರೆ:

ಕುಟುಂಬ ಯೋಜನೆ: ಜನನ ನಿಯಂತ್ರಣ ಭಾರತ ಸರಕಾರದ ಒಂದು ಮುಖ್ಯ ಕಾರ್ಯಕ್ರಮವಾಗಿರುವುದು. ಪ್ರಪಂಚದಲ್ಲಿ ಕುಟುಂಬ ಯೋಜನೆಯನ್ನು ಜಾರಿಗೊಳಿಸಿದ ಸರಕಾರಗಳಲ್ಲಿ ಭಾರತವೇ ಮೊದಲನೆಯದು. ಇದನ್ನು 1952 ರಲ್ಲಿ ಜಾರಿಗೆ ತರಲಾಯಿತು. ಇದಕ್ಕಿಂತಲೂ ಮೊದಲೇ ಮೈಸೂರು ಸಂಸ್ಥಾನ 1930 ಜೂನ್ 11 ರಂದು ಜನನ ನಿಯಂತ್ರಣ ವೈದ್ಯಕೀಯ ಸಂಸ್ಥೆಯನ್ನು ಆರಂಭಿಸಿತ್ತು. ಹೀಗೆ ಬಹು ಹಿಂದಿನಿಂದಲೂ ಭಾರತದಲ್ಲಿ ಜನನ ನಿಯಂತ್ರಣ ಕಾರ್ಯಕ್ರಮಗಳನ್ನು ಆರಂಭಿಸಿರುವುದನ್ನು ಕಾಣಬಹುದು.

ಕುಟುಂಬ ಯೋಜನೆ ಜನನ ನಿಯಂತ್ರಣವನ್ನು ಮುಖ್ಯ ಉದ್ದೇಶವನ್ನಾಗಿ ಹೊಂದಿರುವುದು. ಇದಕ್ಕಾಗಿ ಅನುಸರಿಸಲಾಗುತ್ತಿರುವ ಮುಖ್ಯ ವಿಧಾನಗಳೆಂದರೆ ಪುರುಷ ಹಾಗೂ ಮಹಿಳೆಯರಿಗೆ ಸಂತಾನ ಹರಣ ಚಿಕಿತ್ಸೆ (ಪುರುಷರಿಗೆ ವ್ಯಾಸೆಕ್ಟಮಿ ಮತ್ತು ಮಹಿಳೆಯರಿಗೆ ಟ್ಯೂಬೆಕ್ಟಮಿ), ಪುರುಷರಿಗೆ ನಿರೋಧ್, ಮಹಿಳೆಯರಿಗೆ ವಂಶಿ ಎಂಬ ಸಂತಾನ ನಿರೋಧದ ಅಳವಡಿಕೆ ಮೊದಲಾದವು. ವಿವಾಹವಾಗದಂತೆ ಪ್ರೇರೇಪಿಸುವುದು, ವಿವಾಹವನ್ನು ಮುಂದೂಡುವುದು, ಅಲ್ಲದೆ ಸ್ವಯಂ ಸಂತಾನ ನಿಯಂತ್ರಣ ಮೊದಲಾದವು ಸಂತಾನ ನಿಯಂತ್ರಣದ ಮುಖ್ಯ ವಿಧಾನಗಳಾಗಿವೆ. ಅಲ್ಲದೆ ಜನನ ನಿಯಂತ್ರಣದ ಪ್ರಾಮುಖ್ಯತೆಯನ್ನು ಕುರಿತು ಜನರಿಗೆ ಅರಿವು ಮೂಡಿಸಲು ಇದು ನಿರಂತರವಾಗಿ ಪ್ರಯತ್ನಿಸುವುದು.

ಆರಂಭದಲ್ಲಿ ಕುಟುಂಬ ಯೋಜನೆ ಭಾರತದಲ್ಲಿ ಯಶಸ್ವಿಯಾಗಲಿಲ್ಲ. ಜನರು ಸಂತಾನ ನಿಯಂತ್ರಣ ವಿಧಾನಗಳನ್ನು ಸುಲಭವಾಗಿ ಅಳವಡಿಸಿಕೊಳ್ಳಲು ಮಾನಸಿಕವಾಗಿ ಸಿದ್ಧರಿರಲಿಲ್ಲ. ಅನಕ್ಷರತೆ, ಬಡತನ, ಧಾರ್ಮಿಕ ಹಾಗೂ ಮೂಢನಂಬಿಕೆಗಳು ಇದಕ್ಕೆ ಮುಖ್ಯ ಕಾರಣಗಳಾಗಿದ್ದವು, ಆದರೆ 1981–2001 ರ ಅವಧಿಯಲ್ಲಿ ಈ ಕಾರ್ಯಕ್ರಮ ಸಾಕಷ್ಟು ಪ್ರಗತಿಯನ್ನು ಸಾಧಿಸಿತು. ಇದರಿಂದಾಗಿಯೇ 1981 ರಲ್ಲಿ 24.66 ರಷ್ಟಿದ್ದ ಜನಸಂಖ್ಯಾ ಬೆಳವಣಿಗೆಯ ಶೇಕಡ ಪ್ರಮಾಣ 1991 ರ ವೇಳೆಗೆ 23.34 ಹಾಗೂ 2001 ರಲ್ಲಿ ಶೇ. 21.34 ಕ್ಕೆ ಇಳಿಯಿತು. ಮುಂದಿನ ದಶಕಗಳಲ್ಲಿ ಬೆಳವಣಿಗೆಯ ಶೇಕಡ ಪ್ರಮಾಣ ಸಾಕಷ್ಟು ಕಡಿಮೆಯಾಗುವುದೆಂದು ಭಾವಿಸಲಾಗಿದೆ.

ಭಾರತ ಸರಕಾರ ಕುಟುಂಬ ಯೋಜನೆಯ ಯಶಸ್ವಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಉಚಿತವಾಗಿ ಸಂತಾನ ನಿಯಂತ್ರಣ ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ನಗದು ಹಣ ನೀಡಿಕೆ ಹಾಗೂ ನೌಕರರಿಗೆ ವಿಶೇಷ ವಾರ್ಷಿಕ ಬಡ್ತಿ ನೀಡಿಕೆ ಮೊದಲಾದವು ಇವುಗಳಲ್ಲಿ ಮುಖ್ಯವಾಗಿದೆ. (ಎಚ್.ಎಸ್.ಕೆ.)

**ಭಾರತ ಪರ್ಯಾಯ ದ್ವೀಪೋತ್ತರ ಭಾಗ:** ಉತ್ತರದಲ್ಲಿ ಹಿಮಾಲಯ ಪರ್ವತಗಳನ್ನೂ ಪಶ್ಚಿಮದಲ್ಲಿ ಆಫ್ಘಾನಿಸ್ತಾನದ ಮತ್ತು ಬಲೂಚಿಸ್ತಾನದ ಪರ್ವತಗಳನ್ನೂ ಪೂರ್ವದಲ್ಲಿ ಮೈಯನ್ಮಾರಿನ ಪರ್ವತಗಳನ್ನೂ ಒಳಗೊಂಡಿರುವ ಪ್ರದೇಶವೇ ಭಾರತ ಪರ್ಯಾಯ ದ್ವೀಪೋತ್ತರ (ಎಕ್ಸ್‌ಟ್ರಾಪೆನಿನ್ಸ್ಯುಲರ್ ಇಂಡಿಯ). ಈ ಭೌಗೋಳಿಕ ವಿಂಗಡಣೆ ನಾಡಿನ ಮೇಲ್ಮೈಲಕ್ಷಣ, ಶಿಲಾಚರಿತ್ರೆ ಮತ್ತು ಶಿಲಾರಚನೆ ಇವನ್ನು ಅಧರಿಸಿ ಆಗಿರುವಂಥದು.

ಮೇಲ್ಮೈಲಕ್ಷಣ: ಪರ್ವತಗಳು, ನದಿಗಳು, ನೀರ್ಗಲ್ಲು ನದಿಗಳು, ಸರೋವರಗಳು ಇಲ್ಲಿಯ ಮುಖ್ಯ ಮೇಲ್ಮೈಲಕ್ಷಣಗಳು. ಇಲ್ಲಿಯ ಪರ್ವತಗಳು ಪ್ರಪಂಚದ ಅತ್ಯುನ್ನತ ಪರ್ವತಶ್ರೇಣಿ ಪಂಕ್ತಿಗೆ ಸೇರಿವೆ. ಇವೆಲ್ಲ ಮುದುಡಿ, ಮಡಚಿರುವ ಶಿಲಾಸ್ತರಗಳಿಂದ ಆಗಿವೆ. ಈ ಪರ್ವತಶ್ರೇಣಿಗಳಲ್ಲಿ ಪರ್ಯಾಯದ್ವೀಪದ ಕಡೆ ಹೊರಬಾಗಿರುವ ಕಮಾನುರಚನೆ ಪ್ರಮುಖ. ಇವುಗಳಲ್ಲಿ ಕಾಶ್ಮೀರದಿಂದ ಅಸ್ಸಾಮಿನವರೆಗೆ ಹಬ್ಬಿರುವ ಭಾಗವೇ ಅತ್ಯಂತ ದೊಡ್ಡದು. ವಿಸ್ತಾರ 2400 ಚ.ಕಿಮೀ. ಇದರ ಪಶ್ಚಿಮಕ್ಕಿರುವ ಸಫೇದ್ ಖೋಹ್, ಸುಲೇಮಾನ್, ಕೀರ್ತಾರ್ ಮತ್ತು ಮೇಕ್ರಾನ್ ಶ್ರೇಣಿಗಳನ್ನು ಒಳಗೊಂಡ ಭಾಗ ಚಿಕ್ಕ ಚಿಕ್ಕ ತ್ರಿಜ್ಯಗಳುಳ್ಳ ಭಾಗಗಳಿಂದಾಗಿದೆ. ಹಿಮಾಲಯ ಪ್ರದೇಶವನ್ನು ಉದ್ದುದ್ದವಾಗಿ ಸಮಾಂತರವಾಗಿರುವ ಭಾಗಗಳಾಗಿ ವಿಂಗಡಿಸಬಹುದು. ಶಿವಾಲಿಕ್ ಪಾದಬೆಟ್ಟಗಳು, ಕೆಳಹಿಮಾಲಯಭಾಗ, ಮಹಾಹಿಮಾಲಯ ಭಾಗ, ಹೊರಹಿಮಾಲಯ ಭಾಗ ಅಥವಾ ಟಿಬೆಟ್ ಹಿಮಾಲಯ.

ಶಿವಾಲಿಕ್ ಪಾದಬೆಟ್ಟಗಳು ಭೂಚರಿತ್ರೆಯ ನವಜೀವಿಕಲ್ಪದಲ್ಲಿ (ಸೀನೊಯಿಕ್) ಸಂಚಯಿಸಿದ ಶಿಲೆಗಳಿಂದಾಗಿದ್ದು ಗಂಗಾ, ಸಿಂಧೂ ಮೆಕ್ಕಲು ಬಯಲಿನೊಂದಿಗೆ ಒಂದುಗೂಡುತ್ತವೆ. ಈ ವಲಯ ಭಾರತದ ಭೂ ಇತಿಹಾಸದಲ್ಲಿ ಇತ್ತೀಚೆಗೆ ಮೇಲೆತ್ತಲ್ಪಟ್ಟ ಭಾಗ. ಸರಾಸರಿ 3031 ಮೀ ಎತ್ತರವಿರುವ ಕೆಳ ಹಿಮಾಲಯ ಪ್ರದೇಶ ನಾಗತಿಬ್ಬ, ದೋಲ್‌ಧಾರ್, ಪೀರ್‌ಪಂಜಾಲ್, ಉತ್ತರ ಕಾಶ್ಮೀರ್ ಮುಂತಾದ ಸಮಾನಾಂತರ ಶ್ರೇಣಿಗಳಿಂದಾಗಿದೆ. ಈ ವಲಯ ಜೀವ್ಯವಶೇಷರಹಿತ ಪ್ರೀಕೆಂಬ್ರಿಯನ್ ಮತ್ತು ಅರ್ಕೀಯನ್ ಶಿಲಾ ವರ್ಗಗಳಿಂದಾಗಿದೆ. ಮಹಾಹಿಮಾಲಯ ಪ್ರದೇಶ ಅತ್ಯುನ್ನತ ಪ್ರದೇಶ. ಇದರ ಸರಾಸರಿ ಎತ್ತರ 6062 ಮೀ ಸರಾಸರಿ ಅಗಲ 10 ಕಿಮೀ ಅಲ್ಲದೆ ಇದು ಎವರೆಸ್ಟ್, ಕಾಂಚನಗಂಗ, ಧವಳಗಿರಿ, ನಂಗಪ್ರಭಾತ್, ನಂದಾದೇವಿ ಮುಂತಾದ ಹಿಮಾಚ್ಛಾದಿತ ಉತ್ತುಂಗಶಿಖರಗಳನ್ನು ಒಳಗೊಂಡಿದೆ. ಈ ವಲಯ ಹೆಚ್ಚಾಗಿ ಗ್ರಾನೈಟ್ ಮತ್ತು ನೈಸ್ ಶಿಲೆಗಳಿಂದಾಗಿದೆ. ಹೊರ ಹಿಮಾಲಯ ವಲಯ ಕೆಳಹಿಮಾಲಯದಂತೆಯೇ ಅನೇಕ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಮುಖ್ಯವಾದವು ಲಡಕ್, ಜ್ಹಾನ್ಸ್‌ಕಾರ್ ಮತ್ತು ಕೈಲಾಸ್ ಶ್ರೇಣಿಗಳು. ಈ ವಲಯದ ಸರಾಸರಿ ಅಗಲ 25 ಕಿಮೀ.

ಸಿಡ್ನಿ ಬುರ್ರಾರ್ಡ್ ಎಂಬಾತ ಹಿಮಾಲಯ ಪ್ರದೇಶವನ್ನು ಅಡ್ಡಡ್ಡವಾಗಿ ಅಸ್ಸಾಮ್ ನೇಪಾಲ, ಕುಮಾವನ್ ಮತ್ತು ಪಂಜಾಬ್ ಭಾಗಗಳೆಂದು ವಿಭಾಗಿಸಿದ್ದಾನೆ. ಪ್ರಪಂಚದ ಅತ್ಯುನ್ನತ ಶ್ರೇಣಿಯಾದ ಹಿಮಾಲಯ ಪರ್ವತ ಟಿಬೆಟ್ ಭೂಭಾಗಕ್ಕೂ ಭಾರತ ಪರ್ಯಾಯ ದ್ವೀಪದ ಭೂಭಾಗಕ್ಕೂ ಮಧ್ಯದಲ್ಲಿದ್ದ ಟಿತಿಸ್‌ಸಾಗರದಲ್ಲಿ ಸಂಚಯನಗೊಂಡ ಜಲಜಶಿಲೆಗಳ ಭೂಚಲನೆಗೊಳಪಟ್ಟು ಮುದುಡಿ, ಮಡಚಿ, ಮೇಲೆತ್ತಲ್ಪಟ್ಟದ್ದರಿಂದ ರೂಪುಗೊಂಡಂಥವು. ಈ ಮಹಾನಿಸರ್ಗಕಾರ್ಯ ನಾಲ್ಕು ಹಂತದಲ್ಲಿ ನಡೆದಿದೆ. ಭೂಚರಿತ್ರೆಯ ಇಯೊಸೀನ್ ಕಾಲದ ಮಧ್ಯಭಾಗದಲ್ಲಿ ಪ್ರಾರಂಭವಾಗಿ ಆಲಿಗೊಸೀನ್ ಕಾಲದಲ್ಲಿ ಪ್ರಬಲಗೊಂಡು ಮಿಯೊಸೀನ್ ಕಾಲದಲ್ಲಿ ಅತಿ ತೀವ್ರಗೊಂಡಿತು. ಮೇಲೆತ್ತುವಿಕೆಯ ಕೊನೆಯ ಹಂತ ಪ್ಲಿಯೊಸೀನ್ ಕಾಲದಲ್ಲಿ ಆದದ್ದು. ಮೂರನೆಯ ಹಂತದ ಬಳಿಕ ಮೊದಲಿನ ತಗ್ಗುಗಳಲ್ಲಿ ಶೇಖರವಾದ ನಿಕ್ಷೇಪಗಳೂ ಮೇಲೆತ್ತಲ್ಪಟ್ಟವು. ಈ ಶಿಲಾರಾಶಿಗೆ ಸಿವಾಲಿಕ್ ಶಿಲಾಸಮುದಾಯ ಎಂದು ಹೆಸರು.

ನದಿಗಳು: ವಾಯುವ್ಯದ ಕಿರಿದಾದ ಪ್ರದೇಶದಿಂದ ಈಶಾನ್ಯದಲ್ಲಿ ಬೀಸಾದ ಗಡಿಯವರೆಗೆ ಇರುವ ಹಿಮಾಲಯ ಪರ್ವತ ಪ್ರದೇಶದಲ್ಲಿ ಸು. 20 ಪ್ರಮುಖ ನದಿಗಳು ಹುಟ್ಟುತ್ತವೆ. ಇವೆಲ್ಲ ಹಿಮಾಲಯ, ಕಾರಾಕೊರಮ್, ಲಡಾಕ್, ಜ್ಹಾನ್ಸ್‌ಕಾರ್ ಕೈಲಾಸ್ ಮತ್ತು ಹೊರಹಿಮಾಲಯ ಶ್ರೇಣಿಗಳಲ್ಲಿ ಜನಿಸಿ ಅನೇಕ ಪರ್ವತಶ್ರೇಣಿಗಳನ್ನು ಛೇದಿಸಿಕೊಂಡು ದೊಡ್ಡ ಕಂದರಗಳ ಮೂಲಕ ಹಾದು, ಕ್ರಮೇಣ ಸಂಗಮಿಸಿ, ಕೊನೆಯ ಹಂತದಲ್ಲಿ ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರ ನದಿಸಮೂಹಗಳಾಗಿ ಪ್ರವಹಿಸುತ್ತವೆ. ಬುರಾರ್ಡ್ ಮತ್ತು ಹೇಡನ್ ಎಂಬ ಸಾಹಸಿಗಳು ಈ ಪ್ರದೇಶಗಳಲ್ಲಿ ಸಂಶೋಧನೆ ನಡೆಸಿ, ಈ ನದಿಗಳ ಬಗ್ಗೆ ಸ್ವಾರಸ್ಯವಾದ ಅನೇಕ ವಿಚಾರ ತಿಳಿಸಿರುವರು.

ಸಿಂಧೂ (ಸಿಂಧೂ ಎಂದರೆ ಸಮುದ್ರ ಎಂದರ್ಥ) ನದಿ ಪ್ರಪಂಚದ ಪ್ರಬಲ ನದಿಗಳ ಪೈಕಿ ಒಂದು. ಇದರ ಉದ್ದ 2896 ಕಿಮೀ. ತನ್ನ ಉಪನದಿಗಳೊಂದಿಗೆ ಇದು 6,00,200 ಚ.ಕಿಮೀ ಪ್ರದೇಶದಿಂದ ನೀರನ್ನು ಸಂಗ್ರಹಿಸುತ್ತದೆ. ಹೊರ ಹಿಮಾಲಯ ಪ್ರದೇಶದಲ್ಲಿ 5150 ಮೀ ಎತ್ತರದಲ್ಲಿ ಬೊಖಾರ್‌ಚು ನೀರ್ಗಲ್ಲು ನದಿಯ ಪಾದದಲ್ಲಿ ಜನಿಸುತ್ತದೆ. ಅನೇಕ ಉಪನದಿಗಳು ಇದನ್ನು ಕೂಡುತ್ತವೆ; ಜ್ಹಾನ್ಸ್‌ಕಾರ್, ಡ್ರಾಸ್, ಶ್ಯಾಕ್ ಶಿಗಾರ್, ಗಿಲ್ಗಿಟ್, ಕಾಬೂಲ್, ಜೀಲಮ್, ರಾವಿ, ಬೀಯಾಸ್ ಮತ್ತು ಸಟ್ಲೆಜ್ ಇವು ಮುಖ್ಯ ಉಪನದಿಗಳು. ಇವುಗಳಲ್ಲಿ ಪಂಜಾಬಿನ ಪಂಚನದಿಗಳೆನಿಸಿಕೊಂಡಿರುವ ಜೀಲಮ್ (ವಿತಸ್ತ), ರಾವಿ (ಪುರೂರ್ಣಿ ಅಥವಾ ಐರಾವತಿ), ಬೀಯಾಸ್ (ವಿಪನ ಅಥವಾ ಅರ್ಗಿಕೀಯ), ಚೀನಾಬ್ (ಚಂದ್ರಭಾಗಾ) ಮತ್ತು ಸಟ್ಲೆಜ್ (ಶತದ್ರು ಅಥವಾ ಶತದ್ರಿ) ಪ್ರಮುಖವಾದವು. ಇವು ಮಿಥಿನ್ ಕೋಟೆಯ ಸಮೀಪದಲ್ಲಿ ಸಿಂಧೂ ನದಿಯನ್ನು ಸಂಗಮಿಸುತ್ತವೆ.

ಗಂಗಾನದಿ ಭಾರತದ ಸಂಸ್ಕೃತಿ ವ್ಯಾಪಿಸಿರುವ ಪ್ರದೇಶಗಳೆಲ್ಲ ಮಹಾಪವಿತ್ರ ನದಿಯೆಂದು ಪ್ರಸಿದ್ಧವಾಗಿದೆ. ಇದು ಭಾಗೀರಥಿ ಮತ್ತು ಅಲಕನಂದ ನದಿಗಳ ಸಂಗಮದಿಂದಾದುದು. ಭಾಗೀರಥಿಯ ಮೂಲ ಕೇದಾರನಾಥ್‌ಗೆ ಉತ್ತರದಲ್ಲಿರುವ ಗಂಗೋತ್ರಿ ನೀರ್ಗಲ್ಲುನದಿಯ ಒಂದು ಗುಹಾಭಾಗದಲ್ಲಿದೆ. ಅಲಕನಂದ ನದಿಧಾಲಿ ಮತ್ತು ಕಾಮೆಟ್ ನದಿಗಳ ಸಂಗಮದಿಂದಾದುದು. ಗಂಗಾನದಿಯ ಉದ್ದ ಒಟ್ಟು 2,506 ಕಿಮೀ. ಇದು 63,600 ಚ.ಕಿಮೀ ಪ್ರದೇಶದಿಂದ ನೀರನ್ನು ಸಂಗ್ರಹಿಸುತ್ತದೆ. ಹೂಗ್ಲಿ, ಭಾಗೀರಥಿ, ಪದ್ಮ ಮೊದಲಾದವು ಇದರ ಉಪನದಿಗಳು. ಹಿಮಾಲಯ ಪರ್ವತದ ಹಿಮಾಚ್ಛಾದಿತ ಭಾಗಗಳಿಂದ ಹರಿದು ಬರುವ ಯಮುನ (ಜಮುನ), ರಾಮಗಂಗ, ಕಾಳಿ, ಕರ್ನಾಲಿ, ಗಂಡಕಿ, ಕೋಸೀ (ಕಣ್ಣೀರಿನ ನದಿ) ಮುಂತಾದ ನದಿಗಳೂ ಮಧ್ಯ ಭಾರತದ ಘಟ್ಟ ಪ್ರದೇಶಗಳಲ್ಲಿ ಜನಿಸಿ ಹರಿದು ಬರುವ ಚಂಬಲ್, ಬೆಟ್ಟ ಟೋನ್ಸ್, ಕೇನ್ಸ್ ಸೋನ್ ಮುಂತಾದ ಉಪನದಿಗಳೂ ಗಂಗಾನದಿಯೂ ಸೇರಿ ಹೇರಳವಾಗಿ ಮೆಕ್ಕಲನ್ನು ತಂದು ಹರಡಿ ತಾವು ಹರಿಯುವ ಬಯಲನ್ನು ಪ್ರಪಂಚದ ಅತ್ಯಂತ ಫಲವತ್ತಾದ ಪ್ರದೇಶಗಳಲ್ಲೊಂದನ್ನಾಗಿ ಮಾಡಿವೆ.

ಬ್ರಹ್ಮಪುತ್ರನದಿ ಸಟ್ಲೆಜ್ ಮತ್ತು ಕರ್ನಾಲಿ ನದಿಗಳ ಮೂಲದ ಸಮೀಪದಲ್ಲಿ ಚೇಮಾಯುಂಗ್‌ಡುಂಗ್ ನೀರ್ಗಲ್ಲುನದಿಯಿಂದ ಜನಿಸಿ, ಲಡಾಕ್ ಶ್ರೇಣಿಯ ತಪ್ಪಲಿನಲ್ಲಿ ಪ್ರವಹಿಸುತ್ತದೆ. ಟಿಬೆಟ್ ಪ್ರದೇಶದಲ್ಲಿ ಇದಕ್ಕೆ ಟ್ಸಾಂಗ್‌ಪೊ ಎಂದು ಹೆಸರು. ದಿಹಾಂಗ್ ಎಂಬ ಹೆಸರಿನಿಂದ ಉತ್ತರ ಅಸ್ಸಾಮ್ ಪ್ರದೇಶದಲ್ಲಿ ಹರಿದು, ಸೆಸ್ರಿ ದಿ ಬಾಂಗ್ ಮತ್ತು ನೋವಾದಿಹಿಂಗ್ ಉಪನದಿಗಳನ್ನು ಕೂಡಿದ ಮೇಲೆ ಬ್ರಹ್ಮಪುತ್ರ ಎಂಬ ಹೆಸರಿನಿಂದ ಪ್ರವಹಿಸುತ್ತವೆ. ಇದರ ಒಟ್ಟು ಉದ್ದ 2880 ಕಿಮೀ. 5,77,920 ಚ.ಕಿಮೀ ಪ್ರದೇಶದಿಂದ ನೀರು ಸಂಗ್ರಹಿಸುತ್ತದೆ.

ಪರ್ಯಾಯ ದ್ವೀಪಭಾಗದಲ್ಲಿ ಹರಿಯುವ ನದಿಗಳಿಗೂ ಭಾರತದ ಇತರ ನದಿಗಳಿಗೂ ಬಹಳ ವ್ಯತ್ಯಾಸವಿದೆ. ಪರ್ಯಾಯ ದ್ವೀಪಾಂತರ ನದಿಗಳು ಅತಿ ಪ್ರಬಲವಾದವು. ಅವು ಬಹಳ ಪ್ರಾಚೀನದಲ್ಲೇ ತಮ್ಮ ಪಾತ್ರಗಳನ್ನು ಬದಲಾಯಿಸಿವೆ. ವೇದಗಳ ಕಾಲದಲ್ಲಿ ಗಂಗಾ, ಸಿಂಧೂ ನದಿಗಳಿಗಿಂತ ಅಧಿಕ ಪ್ರಾಮುಖ್ಯ ಪಡೆದಿದ್ದ ಸರಸ್ವತಿ ನದಿ ಮಹಾಭಾರತದ ಕಾಲದ ವೇಳೆಗೆ ಬತ್ತಿ ಹೋಗಿ ಅನಂತರ ಗುಪ್ತ ಗಾಮಿನಿಯೆಂದು ಹೆಸರು ಪಡೆದಿದೆ.

ನೀರ್ಗಲ್ಲು ನದಿಗಳು (ಗ್ಲೇಷಿಯರ್ಸ್): ಹಿಮಾಲಯ ಪರ್ವತದಲ್ಲಿ ಆಲ್ಪ್ಸ್ ಪರ್ವತದಲ್ಲಿರುವುದಕ್ಕಿಂತ ಹೆಚ್ಚು ಸಂಖ್ಯೆಯ ಮತ್ತು ಹೆಚ್ಚು ಉದ್ದವಾಗಿರುವ ನೀರ್ಗಲ್ಲು ನದಿಗಳಿವೆ. ಇವುಗಳ ಉದ್ದ 2 ಕಿಮೀ ನಿಂದ 80 ಕಿಮೀಗಳಷ್ಟಿದೆ. ಟ್ರಾನ್ಸ್ ಆಲ್ಪೈನಲ್ಲಿರುವ ಫೆಡಂಕೊ (76.4 ಕಿಮೀ) ಮತ್ತು ಕುಮಾವನ್ ಹಿಮಾಲಯದಲ್ಲಿರುವ ಗಂಗೋತ್ರಿ (25.6 ಕಿಮೀ) ಇವುಗಳಲ್ಲಿ ಮುಖ್ಯವಾದವು.

ಸರೋವರಗಳು: ಇಲ್ಲಿಯ ಸರೋವರಗಳು ಭೂಮಿಯ ಮೇಲ್ಪದರದ ಚಲನೆಯಿಂದಾದವು. ಟಿಬೆಟ್ ಪ್ರಸ್ಥಭೂಮಿಯಲ್ಲಿ ಹೆಚ್ಚಿನ ಸಂಖ್ಯೆಯ ಸರೋವರಗಳಿವೆ. ಇದರಲ್ಲಿ ಟಿಯನ್‌ಷಾನ್ ಪ್ರದೇಶದಲ್ಲಿರುವ ಇಸ್ಸಿಕ್‌ಕಾಲ್ (3219 ಚ.ಕಿಮೀ) ಅತ್ಯಂತ ವಿಶಾಲವಾದದ್ದು. ಇದೇ ಪ್ರದೇಶದಲ್ಲಿರುವ ಕೋಕೊನೋರ್ (2623 ಚ.ಕಿಮೀ), ಮಾನಸ ಸರೋವರ (322 ಚ.ಕಿಮೀ), ರಖಿನ್‌ಚಾಲ್ (225 ಚ.ಕಿಮೀ), ಗುಂಚು (650 ಚ.ಕಿಮೀ), ಯಾಮ್ ಡ್ರೋಕ್ (541 ಚ.ಕಿಮೀ) ಪರ್ಯಾಯ ದ್ವೀಪಾಂತರ ಪ್ರದೇಶದ ಪ್ರಮುಖ ಸರೋವರಗಳು.

ಭೂಕಂಪನಗಳು: ಈ ಪ್ರದೇಶದಲ್ಲಿ ಹೇರಳವಾಗಿ ಭೂಕಂಪನಗಳಾಗುತ್ತವೆ. ಈಶಾನ್ಯದಲ್ಲಿ ಸಾವಿಯ ಪ್ರದೇಶದಿಂದ ಚೀನದ ಎಲ್ಲೆಯವರೆಗೂ ವಾಯುವ್ಯದಲ್ಲಿ ಕಾಶ್ಮೀರ, ಗಿಲ್ಗಿಟ್ ಮತ್ತು ಪಾಮಿರ್ ಭಾಗಗಳು, ಸುಲೇಮಾನ್ ಶ್ರೇಣಿಯ ಉತ್ತರ ಕೊನೆಯ ಭಾಗಗಳು

ಆಗಾಗ್ಗೆ ಕಂಪನಕ್ಕೊಳಗಾಗುತ್ತವೆ. ಈಚೆಗೆ ಒಂದೆರಡು ಶತಮಾನಗಳಲ್ಲಿಯೇ ಅತ್ಯಂತ ತೀವ್ರವಾದ ಭೂಕಂಪನಗಳಾಗಿವೆ. 1828ರ ಕಾಶ್ಮೀರ ಭೂಕಂಪನ. 1839ರ ಬರ್ಮ ಭೂಕಂಪನ. 1897ರ ಅಸ್ಸಾಮ್ ಭೂಕಂಪನ, 1905ರ ಕಾಂಗರು ಭೂಕಂಪನ, 1935ರ ಕ್ವೆಟ್ಟ ಭೂಕಂಪನ, 1950ರ ಅಸ್ಸಾಂ ಭೂಕಂಪನ, 1967ರ ಕೊಯ್ನ ಭೂಕಂಪನ 1975ರ ಹಿಮಾಚಲ ಪ್ರದೇಶದ ಭೂಕಂಪನ ಹಾಗೂ ಇತ್ತೀಚಿನ ಲಾಥೂರ್, ಶಿವಕಾಶಿ ಭೂಕಂಪನಗಳು ಕೆಲವು ಮುಖ್ಯ ಭೂಕಂಪನಗಳು. (ಎಸ್.ವಿ.)

**ಭಾರತದ ಕೈಗಾರಿಕಾ ನೀತಿ:** ಕೈಗಾರಿಕೆಗಳ ಸ್ಥಾಪನೆ, ಬೆಳವಣಿಗೆ, ಅವುಗಳ ಕಾರ್ಯಾಚರಣೆ ಮತ್ತು ಆಡಳಿತ ನಿರ್ವಹಣೆಯ ವಿಷಯಗಳಿಗೆ ಸಂಬಂಧಿಸಿದ ಸರ್ಕಾರದ ಸಮಗ್ರ ಧೋರಣೆ ಮತ್ತು ನೀತಿ. ಇದು ಕೈಗಾರಿಕೆಗಳ ಸ್ಥಾಪನೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಒಳಗೊಂಡಿರುವ ಎಲ್ಲಾ ತತ್ತ್ವಗಳು, ನೀತಿಗಳು, ನಿಯಮಗಳು ಮತ್ತು ನಿಯಂತ್ರಣಗಳ ವಿಷಯಗಳನ್ನು ಒಳಗೊಂಡಿರುತ್ತವೆ. ಸರ್ಕಾರ ಯಾವ ಕೈಗಾರಿಕೆಗಳನ್ನು ಸ್ಥಾಪಿಸಬೇಕು, ಖಾಸಗಿಯವರು ಯಾವ ಕೈಗಾರಿಕೆಗಳನ್ನು ಸ್ಥಾಪಿಸಬಹುದು, ಕೈಗಾರಿಕಾಕ್ಷೇತ್ರ ಎಲ್ಲಿರಬೇಕು, ಯಾವ ನಿಯಮ ಮತ್ತು ತತ್ತ್ವಗಳನ್ನು ಅನುಸರಿಸಬೇಕು ಎಂಬ ವಿಷಯಗಳನ್ನು ಕೈಗಾರಿಕಾ ನೀತಿಯಲ್ಲಿ ಸ್ಪಷ್ಟಪಡಿಸಲಾಗಿರುತ್ತದೆ.

ಭಾರತದೇಶದ ಕೈಗಾರಿಕಾನೀತಿಯನ್ನು ನೋಡಿದರೆ, ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕೆಗಳು ವಿಸ್ತೃತವಾಗಿ ಅಭಿವೃದ್ಧಿಹೊಂದತೊಡಗಿದುದರಿಂದ ಕೈಗಾರಿಕೋತ್ಪನ್ನಗಳ ಆಮದಿನ ಪ್ರಮಾಣ ನಿಧಾನವಾಗಿ ಇಳಿಮುಖಗೊಂಡಿತು. ಇದಕ್ಕೆ ಬದಲಾಗಿ ಇಂದು ದೇಶ ಅಪಾರ ಪ್ರಮಾಣದ ಕೈಗಾರಿಕಾ ವಸ್ತುಗಳನ್ನು ರಫ್ತು ಮಾಡುತ್ತಿವೆ. ದೇಶಿಯ ಕೈಗಾರಿಕಾ ಮತ್ತು ವಾಣಿಜ್ಯ ನೀತಿ ಈ ರೀತಿಯ ರಫ್ತಿಗೆ ಉತ್ತೇಜನವನ್ನು ನೀಡಿದೆ. 1991ರ ಅನಂತರ ಅನುಸರಿಸಲಾಗುತ್ತಿರುವ ಉದಾರ ಕೈಗಾರಿಕಾ ಮತ್ತು ಆರ್ಥಿಕ ನೀತಿ ಕೈಗಾರಿಕಾ ರಂಗದಲ್ಲಿ ಹೊಸಗಾಳಿ ಬೀಸಲು ಕಾರಣವಾಗಿದೆ. ಆಮದು ಮತ್ತು ರಫ್ತಿನ ಮೇಲಿನ ನಿರ್ಭಂಧವನ್ನು ಸಡಿಲಿಸಿದ್ದು, ಕೈಗಾರಿಕೆಗಳು ಪಾಶ್ಚಿಮಾತ್ಯ ವಸ್ತುಗಳ ಪೈಪೋಟಿಯನ್ನು ಎದುರಿಸಿ ನಿಲ್ಲಬೇಕಾಗಿದೆ. ಅಪಾರ ಪ್ರಮಾಣದಲ್ಲಿ ವಿದೇಶಿ ಬಂಡವಾಳವನ್ನು ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ತೊಡಗಿಸಲಾಗುತ್ತಿದೆ.

ವಿದೇಶಿ ತಂತ್ರಜ್ಞಾನ ಹಾಗೂ ಸಹಯೋಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸಹಾಯ ನೀಡಲಾಗುತ್ತಿದೆ. ಕೈಗಾರಿಕೆಗಳನ್ನು ಸ್ಥಾಪಿಸಲು ಪಡೆಯಬೇಕಾಗಿದ್ದ ರಹದಾರಿ, ನೋಂದಣಿ, ಮುಂತಾದವುಗಳನ್ನು ಅತ್ಯಂತ ಸರಳೀಕರಣಗೊಳಿಸಲಾಗಿದೆ. ಖಾಸಗೀಕರಣಕ್ಕೆ ಒತ್ತಾಸೆ ನೀಡಿವೆ. ಈ ಎಲ್ಲಾ ಕ್ರಮಗಳಿಂದ ಭಾರತದ ಕೈಗಾರಿಕೋದ್ಯಮ ಹೊಸ ಸರಳೀಕೃತ ಉದಾರ ಕೈಗಾರಿಕಾ ನೀತಿಗೆ ನಿಧಾನವಾಗಿ ಹೊಂದಿಕೊಳ್ಳುತ್ತಿದ್ದು, ಸ್ವಾವಲಂಬಿತನವನ್ನು ರೂಢಿಸಿಕೊಳ್ಳುತ್ತಿದೆ. ಭಾರತೀಯ ಕೈಗಾರಿಕಾ ಇತಿಹಾಸದಲ್ಲಿ 20ನೆಯ ಶತಮಾನದ ಅಂತಿಮ ದಶಕದ ಈ ಕೈಗಾರಿಕಾ ನೀತಿ ಹೊಸಶಕೆಯನ್ನು ರೂಪಿಸುತ್ತಿದೆ. (ಪಿ.ಜಿ.)

**ಭಾರತದ ಕೈಗಾರಿಕೆಗಳು:** 17ನೆಯ ಶತಮಾನದವರೆಗೂ ಭಾರತ ಪ್ರಪಂಚದ ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರಗಳ ಪೈಕಿ ಒಂದೆನಿಸಿತ್ತು. ಭಾರತದಿಂದ ಬಗೆಬಗೆಯ ಕಲಾತ್ಮಕ ಹಾಗೂ ಕುಶಲ ವಸ್ತುಗಳಾದ ಹತ್ತಿ, ರೇಷ್ಮೆ ಬಟ್ಟೆ, ಮೊದಲಾದವುಗಳನ್ನು ಪೋರ್ಚುಗಲ್, ಹಾಲೆಂಡ್ ಮತ್ತು ಇಂಗ್ಲೆಂಡ್‍ಗಳಿಗೆ ರಫ್ತುಮಾಡಲಾಗುತ್ತಿತ್ತು. ಆದರೆ ಭಾರತ ಬಲು ಬೇಗ ಕೈಗಾರಿಕೋದ್ಯಮದಲ್ಲಿ ತನ್ನ ಪೌರಮ್ಯವನ್ನು ಕಳೆದುಕೊಂಡಿತು. ಬ್ರಿಟಿಷರು ಭಾರತವನ್ನು ತಮ್ಮ ವಸಾಹತುವಾಗಿ ಮಾಡಿಕೊಂಡು, ತಮ್ಮ ಕೈಗಾರಿಕೋತ್ಪನ್ನದ ಮಾರುಕಟ್ಟೆ ಹಾಗೂ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಸರಬರಾಜು ಮಾಡುವ ಸಾಧನವಾಗಿ ಪರಿವರ್ತಿಸಿಕೊಂಡರು.

18ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಾದ ಕೈಗಾರಿಕಾಕ್ರಾಂತಿ ಭಾರತದ ಕೈಗಾರಿಕೋದ್ಯಮಗಳ ಅಂತ್ಯಕ್ಕೆ ಒಂದು ರೀತಿ ಕಾರಣವಾಯಿತು. ಸ್ಪಿನ್ನಿಂಗ್ ಜೆನ್ನಿ ಮತ್ತು ಹಬೆಯಂತ್ರಗಳ ಉಪಜ್ಞೆಗಳು ಹಾಗೂ ವಿದ್ಯುತ್ತಿನ ಬಳಕೆಯಿಂದ ಬ್ರಿಟಿಷ್ ಕೈಗಾರಿಕಾ ಸರಕುಗಳ ತಯಾರಿಕೆಯ ವೆಚ್ಚ ಕಡಿಮೆಯಾಯಿತು. ಬ್ರಿಟಿಷ್ ಸರಕುಗಳು ಭಾರತದಲ್ಲೂ ಹೊರದೇಶಗಳಲ್ಲೂ ಭಾರತದ ಸರಕುಗಳ ಸ್ಥಾನವನ್ನು ಆಕ್ರಮಿಸಿದವು. ಹೀಗಾಗಿ ಭಾರತೀಯ ಹತ್ತಿ ಬಟ್ಟೆ, ಕಬ್ಬಿಣ, ಗಾಜು, ಕಾಗದ ಮತ್ತು ಹಡಗು ತಯಾರಿಕೆ ಬ್ರಿಟಿಷ್ ಪೈಪೋಟಿಯ ಕಾರಣ ಹಿಂದುಳಿದವು. ಹಿಂದಿನಿಂದ ನಡೆಯುತ್ತಿದ್ದ ಭಾರತೀಯ ಕಲಾತ್ಮಕ ಮತ್ತು ಕುಶಲ ವಸ್ತುಗಳ ಕೈಗಾರಿಕೆಗಳು ನಾಶ ಹೊಂದಿದವು.

ಆದರೆ ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ಮುಂದೆ ಕ್ರಮೇಣ ಬದಲಾವಣೆ ಮತ್ತು ಚೇತರಿಕೆ ಕಂಡುಬರಲಾರಂಭಿಸಿತು. ಈಸ್ಟ್ ಇಂಡಿಯ ಕಂಪನಿಯ ಏಕಸ್ವಾಮ್ಯ ತೊಡೆದಿದ್ದರಿಂದ ವಿದೇಶಿ ಬಂಡವಾಳ ಮತ್ತು ಉದ್ಯಮಿಗಳು ಭಾರತಕ್ಕೆ ಬರಲಾರಂಭಿಸಿದರು, ಜೊತೆಗೆ ಆಧುನಿಕ ಕೈಗಾರಿಕೆಗಳಿಗೆ ಅವಶ್ಯವೆನಿಸಿದ ಕೌಶಲ್ಯವನ್ನು ತಂದರು. ಇಂಗ್ಲೀಷ್ ಭಾಷೆಯ ಕಲಿಕೆ ಭಾರತೀಯ ಯುವಕರು, ಆಧುನಿಕ ಕೈಗಾರಿಕೋದ್ಯಮಕ್ಕೆ ಬೇಕಾದ ಕುಶಲತೆಯನ್ನು ಪಡೆಯುವ ಅನುಕೂಲವನ್ನು ಹೆಚ್ಚು ಮಾಡಿಕೊಟ್ಟಿತು. ನೇರವಾಗಿ ಸ್ವದೇಶಿ ಚಳವಳಿ, ಪರೋಕ್ಷವಾಗಿ ಅಮೆರಿಕದ ಅಂತರ್ಯುದ್ಧ ಮತ್ತು ಕ್ರಿಮಿಯನ್ ಯುದ್ಧಗಳು ಭಾರತದಲ್ಲಿ ಆಧುನಿಕ ಕೈಗಾರಿಕೋದ್ಯಮ ಬೆಳೆಯಲು ಕಾರಣವಾದವು.

ಒಂದನೆಯ ಮಹಾಯುದ್ಧದ ತನಕ ಆಧುನಿಕ ಕೈಗಾರಿಕೆಗಳ ಬೆಳವಣಿಗೆ ತೀರ ಮಂದಗತಿಯಲ್ಲಿ ಸಾಗಿತ್ತು. ಯುದ್ಧ ಹಾಗೂ ಯುದ್ಧೋತ್ತರ ಅವಧಿಯಲ್ಲಿ ಕೈಗಾರಿಕಾ ಸರಕುಗಳಿಗೆ ಬಂದ ಹೆಚ್ಚಿನ ಬೇಡಿಕೆಯ ಕಾರಣ ಭಾರತೀಯ ಕೈಗಾರಿಕೆಗಳು ವೇಗವಾಗಿ ಬೆಳೆದವಲ್ಲದೆ ಸಣ್ಣ ಕೈಗಾರಿಕೋದ್ಯಮವನ್ನು ಬಲಪಡಿಸಿದವು. 1947ರಲ್ಲಿ ದೇಶ ಇಬ್ಭಾಗವಾದ ಕಾರಣ ಭಾರತ ಕಲ್ಲುಪ್ಪು, ಜಿಪ್ಸಮ್ ಮುಂತಾದ ಖನಿಜ ನಿಕ್ಷೇಪ ಪ್ರದೇಶಗಳನ್ನು ಪಾಕಿಸ್ತಾನಕ್ಕೆ ಬಿಟ್ಟು ಕೊಡಬೇಕಾಯಿತು. ಹೆಚ್ಚಿನ ಪ್ರಮಾಣದ ಕೈಗಾರಿಕೆಗಳು ಭಾರತದಲ್ಲೇ ಇರಬೇಕಾಗಿ ಬಂದಿತು. ಈ ಪರಿಸ್ಥಿತಿಯನ್ನು ಎದುರಿಸಿದ ಭಾರತ ಸರ್ಕಾರ ಕೈಗಾರಿಕೋತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಅನೇಕ ಕ್ರಮಗಳನ್ನು ಕೈಗೊಂಡಿತು. ಎಲ್ಲಾ ಪಂಚ ವಾರ್ಷಿಕ ಯೋಜನೆಗಳಲ್ಲೂ ಕೈಗಾರಿಕೆಯ ಅಭಿವೃದ್ಧಿಗೆ ವಿವಿಧ ರೀತಿಯಲ್ಲಿ ಒತ್ತುಕೊಟ್ಟಿದೆ.

ಭಾರತ ಸ್ವಾತಂತ್ರ್ಯವನ್ನು 1947ರಲ್ಲಿ ಪಡೆದನಂತರ ಕೈಗಾರಿಕಾ ಕ್ಷೇತ್ರದಲ್ಲಿ ಬದಲಾವಣೆ ಮತ್ತು ಚೇತರಿಕೆ ಕಂಡು ಬರಲಾರಂಭಿಸಿತು. ಭಾರತ ಸರ್ಕಾರ ತನ್ನ ಆರ್ಥಿಕ ಅಭಿವೃದ್ಧಿ ಪಡೆಯಲು ಪಂಚವಾರ್ಷಿಕ ಯೋಜನೆಗಳನ್ನು ಅಳವಡಿಸಿಕೊಂಡಿತು. ಭಾರತೀಯ ಕೈಗಾರಿಕೆಗಳ ಬೆಳವಣಿಗೆ ಆರ್ಥಿಕ ಯೋಜನೆಯಲ್ಲಿ ಹೆಚ್ಚಿನ ಉತ್ತೇಜನ ದೊರೆಯಿತು.

ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಮೊದಲು ಅನುಭೋಗಿ ಸರಕುಗಳನ್ನು ತಯಾರಿಸುವ ಕೈಗಾರಿಕೆಗಳಿಗೆ ಪ್ರಾಮುಖ್ಯತೆ ನೀಡಲಾಯಿತು.

ಆದಕಾರಣ ಮೂಲ ಬಂಡವಾಳ ವಸ್ತು ಹಾಗೂ ಮಧ್ಯವರ್ತಿ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳಾದ ಉಕ್ಕು ಮತ್ತು ಕಬ್ಬಿಣ, ಯಂತ್ರೋಪಕರಣಗಳು, ರಸಗೊಬ್ಬರ ಪೆಟ್ರೋಲಿಯಂ, ಬಟ್ಟೆ ಕೈಗಾರಿಕೆ ಮುಂತಾದವುಗಳನ್ನು ಪ್ರಮುಖವಾಗಿ ಅಭಿವೃದ್ಧಿಗೊಳಿಸಿತು.

ಪ್ರಾಮುಖ್ಯತೆ: ಭಾರತದಲ್ಲಿ ಕೈಗಾರಿಕೆಗಳ ಪಾತ್ರ ಅತ್ಯಂತ ಹಿರಿದಾದುದು. ಅವುಗಳು ದೇಶದ ಆಂತರಿಕ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಗಳಿಗೆ ಹಲವಾರು ಬಗೆಯ ವಸ್ತುಗಳನ್ನು ಪೂರೈಸುತ್ತವೆ. ಅಲ್ಲದೆ ಕೋಟ್ಯಾಂತರ ಜನರಿಗೆ ಉದ್ಯೋಗವನ್ನು ಕಲ್ಪಿಸುತ್ತವೆ. ವೈಜ್ಞಾನಿಕ, ತಾಂತ್ರಿಕ ಅಭಿವೃದ್ಧಿಯೊಡನೆ ಭಾರತದ ಕೈಗಾರಿಕೆಗಳಲ್ಲಿಯೂ ಮಹತ್ತರವಾದ ಬದಲಾವಣೆಯಾಗಿದೆ. ಸಾಂಪ್ರದಾಯಿಕ ಉದ್ಯಮಗಳ ಜೊತೆಗೆ ಕಂಪ್ಯೂಟರ್, ಸಾಫ್ಟ್‌ವೇರ್, ತೈಲಶುದ್ಧೀಕರಣ, ಪ್ರವಾಸೋದ್ಯಮ ಮೊದಲಾದವುಗಳು ಭಾರತದ ಕೈಗಾರಿಕೆಗಳಲ್ಲಿ ಇಂದು ಅತಿಮುಖ್ಯ ಸ್ಥಾನವನ್ನು ಪಡೆದಿವೆ. ಕೈಗಾರಿಕೋತ್ಪನ್ನಗಳು ಪ್ರಸ್ತುತ ದೇಶದ ವಿದೇಶಿ ವಿನಿಮಯ ಗಳಿಕೆಯ ಮುಖ್ಯ ವಸ್ತುಗಳು. ಭಾರತ ತನ್ನ ವಿದೇಶಿ ವಿನಿಮಯದ ಶೇ. 77.8ರಷ್ಟನ್ನು ಕೈಗಾರಿಕೋತ್ಪನ್ನಗಳ ರಫ್ತಿನಿಂದಲೇ ಪಡೆಯುವುದು. ಭಾರತ ಇಂದು ಸಾಂಪ್ರದಾಯಿಕ ವ್ಯವಸಾಯೋತ್ಪನ್ನಗಳಿಗೆ ಬದಲಾಗಿ ಕೈಗಾರಿಕೋತ್ಪನ್ನಗಳನ್ನು ಹೆಚ್ಚು ರಫ್ತು ಮಾಡುತ್ತಿದೆ.

ವಿಧಗಳು: ದೇಶದಲ್ಲಿ ವಿವಿಧ ರೀತಿಯ ಕಚ್ಚಾವಸ್ತುಗಳು ಹಾಗೂ ಕೈಗಾರಿಕೋತ್ಪನ್ನಗಳಿಗೆ ವಿಸ್ತಾರವಾದ ಮಾರುಕಟ್ಟೆಯಿರುವುದರಿಂದ ವಿವಿಧ ಬಗೆಯ ಕೈಗಾರಿಕೆಗಳ ಅಭಿವೃದ್ಧಿಗೆ ವಿಫುಲವಾದ ಅವಕಾಶವಿದೆ. ಕೃಷಿ ಆಧಾರಿತ ಕಚ್ಚಾವಸ್ತುಗಳು, ಖನಿಜಗಳು, ಅರಣ್ಯವಸ್ತುಗಳು, ಮೀನುಗಾರಿಕೆ ಉತ್ಪನ್ನಗಳು, ತಂತ್ರ ಜ್ಞಾನ, ಅಪಾರ ಜನಸಂಖ್ಯೆಗಳಿಂದಾಗಿ ಭಾರತ ವಿವಿಧ ಬಗೆಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿಕೊಂಡಿದೆ. ಅವುಗಳನ್ನು ವ್ಯವಸಾಯ ಆಧಾರಿತ ಕೈಗಾರಿಕೆಗಳು, ಖನಿಜ ಆಧಾರಿತ ಕೈಗಾರಿಕೆಗಳು, ಅರಣ್ಯ ಆಧಾರಿತ ಕೈಗಾರಿಕೆಗಳು ಹಾಗೂ ಪೆಟ್ರೋ ರಾಸಾಯನಿಕ ಕೈಗಾರಿಕೆಗಳೆಂದು ಹಲವು ಬಗೆಯಾಗಿ ವರ್ಗೀಕರಿಸಬಹುದು.

1. ವ್ಯವಸಾಯ ಆಧಾರಿತ ಕೈಗಾರಿಕೆಗಳು: ವ್ಯವಸಾಯದಿಂದ ಒದಗುವ ಕಚ್ಚಾವಸ್ತುಗಳನ್ನು ಆಧರಿತ ಕೈಗಾರಿಕೆಗಳನ್ನು ಈ ಹೆಸರಿನಿಂದ ಕರೆಯುವರು. ಭಾರತ ವ್ಯವಸಾಯ ಪ್ರಧಾನ ಆರ್ಥಿಕತೆಯನ್ನು ಹೊಂದಿದ್ದು ಕೈಗಾರಿಕೆಗಳಿಗೆ ವಿವಿಧ ರೀತಿಯ ಕಚ್ಚಾವಸ್ತುಗಳನ್ನು ಪೂರೈಸುವುದು. ಇದರಿಂದ ದೇಶದಲ್ಲಿ ಅನೇಕ ಕೃಷಿ ಆಧಾರಿತ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ಉದಾ: ಹತ್ತಿ ಬಟ್ಟೆ ಕೈಗಾರಿಕೆ, ಸಕ್ಕರೆ ಕೈಗಾರಿಕೆ ಮತ್ತು ಸೆಣಬಿನ ಕೈಗಾರಿಕೆ, ಆಹಾರ ಸಂಸ್ಕರಣೆ ಇತ್ಯಾದಿ.

2. ಖನಿಜ ಆಧಾರಿತ ಕೈಗಾರಿಕೆಗಳು: ಭಾರತ ಅನೇಕ ಬಗೆಯ ಖನಿಜ ಸಂಪತ್ತನ್ನು ಹೊಂದಿದೆ. ಇವುಗಳನ್ನು ಲೋಹಗಳನ್ನಾಗಿ ಪರಿವರ್ತಿಸುವ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ಇವುಗಳನ್ನು ಖನಿಜ ಆಧಾರಿತ ಕೈಗಾರಿಕೆ ಎಂದು ಕರೆಯುವರು. ಅವುಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಅಲ್ಯೂಮಿನಿಯಂ ಮತ್ತು ಸಿಮೆಂಟ್ ಕೈಗಾರಿಕೆಗಳು ಮುಖ್ಯವಾದವು.

3. ಅರಣ್ಯ ವಸ್ತು ಆಧಾರಿತ ಕೈಗಾರಿಕೆಗಳು: ಅರಣ್ಯ ವಸ್ತುಗಳನ್ನು ಕಚ್ಚಾ ವಸ್ತುಗಳನ್ನಾಗಿ ಬಳಸುವ ಕೈಗಾರಿಕೆಗಳು. ಇವುಗಳಲ್ಲಿ ಕಾಗದ ಕೈಗಾರಿಕೆ ಪ್ರಮುಖವಾದದು.

4. ಪೆಟ್ರೋ–ರಾಸಾಯನಿಕ ಕೈಗಾರಿಕೆಗಳು: ತೈಲ ಶುದ್ಧೀಕರಣದಿಂದ ದೊರೆಯುವ ನ್ಯಾಫ್ತ ಮತ್ತು ಸ್ವಾಭಾವಿಕ ಅನಿಲಗಳನ್ನು ಅವಲಂಬಿಸಿರುವ ಕೈಗಾರಿಕೆಗಳನ್ನು ಪೆಟ್ರೋ–

ರಾಸಾಯನಿಕ ಕೈಗಾರಿಕೆಗಳೆನ್ನುವರು. ಇವುಗಳಲ್ಲಿ ರಾಸಾಯನಿಕ ಗೊಬ್ಬರ ಕೈಗಾರಿಕೆ ಪ್ರಮುಖವಾದುದು.

5. ಜ್ಞಾನಾಧಾರಿತ ಕೈಗಾರಿಕೆಗಳು: ಭಾರತ ತಾಂತ್ರಿಕ ಮತ್ತು ವೈಜ್ಞಾನಿಕವಾಗಿ ಪ್ರಬುದ್ಧವಾಗಿದೆ. ಇದರಿಂದ ಜ್ಞಾನಾಧರಿತ ಕೈಗಾರಿಕೆಗಳಾದ ಸಾಫ್ಟ್‌ವೇರ್ ಮತ್ತು ಕಂಪ್ಯೂಟರ್ ತಯಾರಿಕಾ ಉದ್ದಿಮೆಗಳು ಸಾಕಷ್ಟು ಅಭಿವೃದ್ಧಿ ಹೊಂದಿವೆ.

ಇತರೆ ಕೈಗಾರಿಕೆಗಳು: ಮೇಲ್ಕಂಡವುಗಳಲ್ಲದೆ ಭಾರತದಲ್ಲಿ ಇನ್ನೂ ಹಲವು ಬಗೆಯ ಕೈಗಾರಿಕೆಗಳಿವೆ. ಉದಾ: ಚರ್ಮೋದ್ಯೋಗ, ಲೋಕೊಮೋಟಿವ್, ವ್ಯವಸಾಯೋಪಕರಣ ಯಂತ್ರೋಪಕರಣ ಇತ್ಯಾದಿ.

ವ್ಯವಸಾಯ ಆಧಾರಿತ ಪ್ರಮುಖ ಕೈಗಾರಿಕೆಗಳು ಈ ಕೆಳಕಂಡಂತಿವೆ:

ಹತ್ತಿ ಬಟ್ಟೆ ಕೈಗಾರಿಕೆ: ಭಾರತ ಪುರಾತನ ಕಾಲದಿಂದಲೂ ಹತ್ತಿ ಬಟ್ಟೆ ಉತ್ಪಾದನೆಗೆ ಪ್ರಸಿದ್ಧವಾದುದು. ಮಧ್ಯಯುಗದ ಕಾಲದಿಂದಲೂ ಭಾರತ ಹತ್ತಿಜವಳಿ ರಫ್ತು ಮಾಡುವುದರಲ್ಲಿ ಹೆಸರಾಗಿದೆ. ಈ ಕೈಗಾರಿಕೆ ದೇಶದಲ್ಲಿ ಸು. 35 ದಶಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿರುವುದು. ದೇಶದ ಜಾಯಿಂಟ್ ಸ್ಟಾಕ್ ಕಂಪನಿಗಳಲ್ಲಿನ ಶೇ 2 ರಷ್ಟು ಬಂಡವಾಳವನ್ನು ಹತ್ತಿ ಬಟ್ಟೆ. ಕೈಗಾರಿಕೆಗಳಲ್ಲಿ ತೊಡಗಿಸಲಾಗಿದೆ. ಹತ್ತಿಬಟ್ಟೆ ರಫ್ತಿನಿಂದ ದೇಶ ಒಟ್ಟು ರಫ್ತಿನಿಂದ ಶೇ. 15ರಷ್ಟು ವಿದೇಶೀ ವಿನಿಮಯವನ್ನು ಗಳಿಸುತ್ತಿವೆ. ಭಾರತದ ಹತ್ತಿಬಟ್ಟೆ ಕೈಗಾರಿಕೆ ಮೂರು ಮುಖ್ಯವಿಭಾಗಗಳನ್ನು ಒಳಗೊಂಡಿದೆ. ಅವುಗಳೆಂದರೆ: 1. ಕೈಗಾರಿಕಾ ವಿಭಾಗ 2. ಯಂತ್ರಚಾಲಿತ ಮಗ್ಗಗಳು 3. ಕೈಮಗ್ಗಗಳು.

ಅಭಿವೃದ್ಧಿ: ಭಾರತದ ಹತ್ತಿಬಟ್ಟೆ ಕೈಗಾರಿಕೆ ಸುಧೀರ್ಘ ಇತಿಹಾಸವನ್ನು ಹೊಂದಿದೆ. ಹತ್ತಿಬಟ್ಟೆ ಕೈಗಾರಿಕೆ ಮೊದಲು 1854ರಲ್ಲಿ ಮುಂಬೈ ಹಾಗೂ ಬರೂಚ್‌ಗಳಲ್ಲಿ ಸ್ಥಾಪಿಸಲ್ಪಟ್ಟಿತು. ಇದಕ್ಕಿಂತ ಮೊದಲು 1817ರಲ್ಲಿ ಕೋಲ್ಕತದ ಬಳಿ ಹಾಗೂ 1830ರಲ್ಲಿ ಪಾಂಡಿಚೇರಿಯಲ್ಲಿ ಸ್ಥಾಪಿತಗೊಂಡರೂ ಆ ಗಿರಣಿಗಳು ವಿಫಲವಾದವು. ಈ ಅವಧಿಯಲ್ಲಿ ಭಾರತ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದು, ಈ ಉದ್ಯಮದ ಮಂದಗತಿಗೆ ಕಾರಣವಾಯಿತು. ಸ್ವಾತಂತ್ರಾನಂತರ ಈ ಕೈಗಾರಿಕೆ ತ್ವರಿತವಾಗಿ ಅಭಿವೃದ್ಧಿ ಹೊಂದಿತು. 1951ರಲ್ಲಿ 378 ಕೈಗಾರಿಕೆಗಳಿದ್ದು 2005ಕ್ಕೆ 1789ಕ್ಕೆ ಏರಿತು. ಇಂದು ದೇಶದ 175 ಪಟ್ಟಣಗಳಲ್ಲಿ ಹಂಚಿಕೆಯಾಗಿದೆ.

ಸ್ಥಾನೀಕರಣ ಅಂಶಗಳು: ಈ ಕೈಗಾರಿಕೆಯನ್ನು ಮಾರುಕಟ್ಟೆ ಕೇಂದ್ರಿತ ಕೈಗಾರಿಕೆಯೆಂದು ಕರೆಯುವರು. ಇದಕ್ಕೆ ಕಾರಣ ಕಚ್ಚಾ ಹತ್ತಿ ತೂಕವನ್ನು ಕಳೆದುಕೊಳ್ಳದ ಶುದ್ಧ ಕಚ್ಚಾವಸ್ತು. ಹತ್ತಿ ಬೆಳೆಯುವ ಪ್ರದೇಶ ಅಥವಾ ಮಾರುಕಟ್ಟೆ ಕೇಂದ್ರಗಳಲ್ಲಿ ಯಾವುದರ ಸಮೀಪ ಸ್ಥಾಪಿಸಿದರೂ ಸಾರಿಗೆ ವೆಚ್ಚದಲ್ಲಿ ವ್ಯತ್ಯಾಸವಿಲ್ಲ.

ಕಚ್ಚಾ ಹತ್ತಿ ಬಟ್ಟೆ ಕೈಗಾರಿಕೆಯ ಮುಖ್ಯ ಕಚ್ಚಾವಸ್ತು. ಈ ಉಧ್ಯಮದ ಅಭಿವೃದ್ಧಿಗೆ ಸಾಕಷ್ಟು ಕಚ್ಚಾ ವಸ್ತು ಸರಬರಾಜಾಗಬೇಕು.

ಹತ್ತಿಯನ್ನು ನೂಲುವುದಕ್ಕೆ ತಂಪಾದ ಆರ್ದ್ರತೆಯುಳ್ಳ ಹವಾಮಾನ ಅಗತ್ಯ. ಇದರಿಂದ ಹತ್ತಿ ಗಿರಣಿಗಳು. ಆರ್ದ್ರ ಹವಾಮಾನದ ತೀರಪ್ರದೇಶದಲ್ಲಿ ಕೇಂದ್ರಿಕೃತವಾಗಿವೆ.

ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ಯಂತ್ರಗಳು ಚಲಿಸಲು ಶಕ್ತಿ ಸಂಪನ್ಮೂಲ ವಿಶೇಷವಾಗಿ ಸುಲಭ ದರದ ವಿದ್ಯುಚ್ಛಕ್ತಿ ಅವಶ್ಯಕ.

ಸಂಚಾರ ಸೌಲಭ್ಯಗಳು, ಕಾರ್ಮಿಕರು, ಬಂಡವಾಳ, ನೀರಿನ ಪೂರೈಕೆ, ರಾಸಾಯನಿಕಗಳ ಪೂರೈಕೆ ಮುಂತಾದವು ಹತ್ತಿ ಬಟ್ಟೆ ಕೈಗಾರಿಕೆಯ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಇತರ ಅಂಶಗಳು.

ಉತ್ಪಾದನಾ ಪ್ರಕ್ರಿಯೆಗಳು: ಹತ್ತಿ ಬಟ್ಟೆ ಉತ್ಪಾದನೆ ಐದು ಬಗೆಯ ಪ್ರಕ್ರಿಯೆಗಳನ್ನು ಒಳಗೊಂಡಿದೆ. ಅವುಗಳೆಂದರೆ ಹತ್ತಿಯನ್ನು ಬೀಜದಿಂದ ಬೇರ್ಪಡಿಸುವುದು (ಜಿನ್ನಿಂಗ್), ಹತ್ತಿಯ ಎಳೆಯನ್ನು ಸಮಾನಾಂತರಗೊಳಿಸುವುದು (ಕಾರ್ಡಿಂಗ್), ದಾರವನ್ನು ತಯಾರಿಸುವುದು (ಸ್ಪಿನ್ನಿಂಗ್), ನೇಯುವುದು (ವೀವಿಂಗ್) ಹಾಗೂ ಬಣ್ಣ ಹಾಕುವುದು (ಡೈಯಿಂಗ್). ಈ ಕಾರ್ಯಗಳನ್ನು ನಿರ್ವಹಿಸುವ ಪ್ರತ್ಯೇಕ ಕಾರ್ಖಾನೆಗಳಿದ್ದು ಅವುಗಳನ್ನು ವಿಶೇಷ ಕೈಗಾರಿಕೆಗಳೆಂದು ಕರೆಯುವರು, ಇದಕ್ಕೆ ಬದಲಾಗಿ ಈ ಐದು ಕಾರ್ಯಗಳನ್ನು ಒಂದೇ ಕಾರ್ಖಾನೆಯಲ್ಲಿಯೇ ನಿರ್ವಹಿಸಲಾಗುವುದು ಇದನ್ನು ಸಂಯುಕ್ತ ಹತ್ತಿಗಿರಣಿ ಎಂದು ಕರೆಯುವರು.

ಹಂಚಿಕೆ: ಹತ್ತಿಬಟ್ಟೆ ಕೈಗಾರಿಕೆ ಭಾರತದ ವಿವಿಧ ಭಾಗಗಳಲ್ಲಿ ಹಂಚಿಕೆಯಾಗಿದ್ದರೂ ಕೆಲವು ರಾಜ್ಯಗಳಲ್ಲಿ ಹೆಚ್ಚು ಅಭಿವೃದ್ಧಿಯಾಗಿದೆ.

ಮಹಾರಾಷ್ಟ್ರ: ಇದು ಬಟ್ಟೆ ಉತ್ಪಾದನೆಯಲ್ಲಿನ ಮೊದಲ ಸ್ಥಾನ ಹೊಂದಿದೆ. ಮುಂಬಯಿನ ಆರ್ದ್ರ ವಾಯುಗುಣ, ಉತ್ತಮ ಸಾರಿಗೆ, ಕಚ್ಚಾವಸ್ತು ಪೂರೈಕೆ, ವಿಶಾಲ ಮಾರುಕಟ್ಟೆ, ಬಂದರು ಸೌಲಭ್ಯ, ಕುಶಲ ಕಾರ್ಮಿಕರು ದೊರೆಯುವಿಕೆ ಮತ್ತು ವಿದ್ಯುತ್ ಸೌಲಭ್ಯ ಮುಂತಾದವುಗಳಿಂದ ಈ ಕೈಗಾರಿಕೆ ಅಭಿವೃದ್ಧಿ ಹೊಂದಿದೆ. ಈ ಕಾರಣದಿಂದ ಇದನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುವರು.

ಗುಜರಾತ್ ಉತ್ಪಾದನೆಯಲ್ಲಿ ಎರಡನೆಯ ಸ್ಥಾನ ಅಹಮದಾಬಾದ್ ಮತ್ತು ಸೂರತ್ – ಇವು ಗುಜರಾತಿನ ಮುಖ್ಯ ಹತ್ತಿ ಬಟ್ಟೆ ಕೈಗಾರಿಕೆಯ ಕೇಂದ್ರಗಳು.

ತಮಿಳುನಾಡು: ಇದು ಅತಿ ಹೆಚ್ಚು ಸಂಖ್ಯೆಯ ಹತ್ತಿ ಬಟ್ಟೆ ಕೈಗಾರಿಕೆಯನ್ನು ಹೊಂದಿದೆ. ಮುಖ್ಯ ಹತ್ತಿ ಗಿರಣಿ ಕೇಂದ್ರಗಳೆಂದರೆ; ಕೊಯಮತ್ತೂರು, ಮದುರೈ, ಸೇಲಂ, ತಿರುಪ್ಪೂರ್, ತಿರುನಲ್ವೇಲಿ, ಚೆನ್ನೈ, ಪೊಲ್ಲಾಚಿ ಮತ್ತು ವಿರುಧ್‌ನಗರ.

ಕರ್ನಾಟಕ: ದಾವಣಗೆರೆ, ಹುಬ್ಬಳ್ಳಿ, ಗದಗ, ಬಳ್ಳಾರಿ, ಗೋಕಾಕ್, ಮೈಸೂರು, ಬೆಂಗಳೂರು, ಬೆಳಗಾಂವಿ, ಹುಬ್ಬಳ್ಳಿ, ಚಾಮರಾಜನಗರ, ರಾಯಚೂರು, ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಹತ್ತಿ ಗಿರಣಿಗಳಿವೆ.

ಉತ್ತರಪ್ರದೇಶ: ಕಾನ್ಪುರ, ಆಗ್ರ, ಬರೇಲಿ, ಅಲಿಘಡ್, ಮೊರಾದಬಾದ್, ಮೋದಿನಗರ, ಘಾಜಿಯಾಬಾದ್, ಸೂರತ್, ರಾಂಪುರ ಮತ್ತು ಇಟಾವಗಳು ಪ್ರಮುಖ ಹತ್ತಿಗಿರಣಿ ಕೇಂದ್ರಗಳು.

ಮಧ್ಯಪ್ರದೇಶ: ಇಂದೂರ್, ಗ್ವಾಲಿಯರ್, ಉಜ್ಜೈನಿ, ಭೂಪಾಲ್ ಮತ್ತು ಜಬ್ಬಲ್‌ಪುರ. ಭಾರತದ ಇತರ ಹತ್ತಿ ಕೈಗಾರಿಕಾ ರಾಜ್ಯಗಳೆಂದರೆ ಹರಿಯಾಣ, ಪಂಜಾಬ್, ಚತ್ತಿಸ್‌ಘಡ್, ಆಂಧ್ರಪ್ರದೇಶ ಮತ್ತು ದೆಹಲಿ.

ಭಾರತ ಹತ್ತಿ ಬಟ್ಟೆ ಉತ್ಪಾದನೆಯಲ್ಲಿ ಚೀನದ ಅನಂತರದ ಎರಡನೆಯ ಸ್ಥಾನ ಪಡೆದಿದೆ. ಹಾಗೆಯೇ ರಫ್ತಿನಲ್ಲೂ ಎರಡನೆಯ ಸ್ಥಾನ ಪಡೆದಿದೆ. 2005ರಲ್ಲಿ ಭಾರತ 18512 ದ.ಲಕ್ಷ ಚ.ಮೀ ಬಟ್ಟೆ ಉತ್ಪಾದಿಸಿತು. 2004ರಲ್ಲಿ 44234 ಕೋಟಿ ರೂ. ಬೆಲೆ ಬಾಳುವ ಹತ್ತಿ ಬಟ್ಟೆಯನ್ನು ರಫ್ತುಮಾಡಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನ ಭಾರತದ ಹತ್ತಿ ಜವಳಿಗೆ ಪ್ರಮುಖ ಮಾರುಕಟ್ಟೆ. ಇದಲ್ಲದೆ ಕೊರಿಯ, ಥೈಲೆಂಡ್, ಜಪಾನ್, ರಷ್ಯ, ಕೆನಡ, ಮತ್ತು ಆಫ್ರಿಕ ರಾಷ್ಟ್ರಗಳಿಗೂ ಹತ್ತಿಗಿರಣಿ ವಸ್ತುಗಳು ರಫ್ತಾಗುತ್ತವೆ.

ಸಮಸ್ಯೆಗಳು: ಹಳೆ ಯಂತ್ರೋಪಕರಣಗಳು, ಕೃತಕನಾರಿನ ಪೈಪೋಟಿ, ಉತ್ತಮ ದರ್ಜೆ ಕಚ್ಚಾ ಹತ್ತಿಯ ಕೊರತೆ, ವಿದ್ಯುತ್ತಿನ ಕೊರತೆ, ಕಾರ್ಮಿಕ ಮುಷ್ಕರಗಳು.

ಈ ಸಮಸ್ಯೆಗಳನ್ನು ನಿವಾರಿಸಲು ಎನ್.ಟಿ.ಸಿ. (ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ನನ್ನು 1968ರಲ್ಲಿ ಸ್ಥಾಪಿಸಿ ಇದು ರೋಗಗ್ರಸ್ಥ ಕೈಗಾರಿಕೆಗಳನ್ನು ತನ್ನ ಸ್ವಾಮ್ಯಕ್ಕೆ ತೆಗೆದುಕೊಂಡು ಸುಧಾರಿಸಲು ಅಗತ್ಯಕ್ರಮಗಳನ್ನು ತೆಗೆದುಕೊಂಡಿದೆ.

ಸೆಣಬಿನ ಕೈಗಾರಿಕೆ: ಹತ್ತಿ ಬಟ್ಟೆ ಕೈಗಾರಿಕೆಯ ಅನಂತರ ಭಾರತದ ಎರಡನೆಯ ಪ್ರಮುಖ ಜವಳಿ ಉದ್ಯಮ. ಭಾರತಕ್ಕೆ ಸೆಣಬಿನ ಉತ್ಪಾದನೆಯಲ್ಲಿ ಮೊದಲಸ್ಥಾನ. ವಿದೇಶೀ ವಿನಿಮಯ ಗಳಿಕೆಯ ಮೂಲ. ಸೆಣಬು ಪರಿಸರ ಸ್ನೇಹಿ ಮತ್ತು ಮುಖ್ಯ ಪ್ಯಾಕಿಂಗ್ ವಸ್ತು. ವ್ಯವಸಾಯದಿಂದ ದೊರೆಯುವ ಸೆಣಬು ಈ ಕೈಗಾರಿಕೆಯ ಕಚ್ಚಾ ವಸ್ತು. ಆದ್ದರಿಂದ ಇದೊಂದು ಕೃಷಿ ಆಧಾರಿತ ಕೈಗಾರಿಕೆ.

ಸೆಣಬಿನ ಗಿಡವನ್ನು ಕತ್ತರಿಸಿ ನೀರಿನಲ್ಲಿ ಕೊಳೆಸಲಾಗುವುದು. ಅನಂತರ ಅದರ ಸಿಪ್ಪೆಯನ್ನು ತೆಗೆದು ತಿರುಳಿನ ನಾರನ್ನು ತೆಗೆದು ಸ್ವಚ್ಛಗೊಳಿಸಿ ಒಣಗಿಸಲಾಗುವುದು. ಈ ನಾರಿನಿಂದ ಗೋಣಿ ಚೀಲ, ದಾರ (ಸುತ್ತಲಿ), ಕ್ಯಾನ್ವಾಸ್ ಬಟ್ಟೆ ಮುಂತಾದವುಗಳನ್ನು ತಯಾರಿಸಲಾಗುವುದು. ಭಾರತದಲ್ಲಿ ಮೊದಲ ಸೆಣಬಿನ ಕೈಗಾರಿಕೆಯನ್ನು 1854ರಲ್ಲಿ ಹೂಗ್ಲಿ ನದಿಯ ದಡದಲ್ಲಿ ಕೋಲ್ಕತದ ಸಮೀಪ ರಿಶ್ರಾ ಎಂಬಲ್ಲಿ ಸ್ಥಾಪಿಸಲಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ಪ್ರಪಂಚದ ಏಕೈಕ ಸೆಣಬಿನ ಕೈಗಾರಿಕೆಯ ಮತ್ತು ರಫ್ತಿನ ರಾಷ್ಟ್ರವಾಗಿದ್ದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏಕಸ್ವಾಮ್ಯವನ್ನು ಹೊಂದಿತ್ತು; 1947ರಲ್ಲಿ ಸ್ವಾತಂತ್ರ್ಯದೊಡನೆ ದೇಶದ ವಿಭಜನೆಯಾಗಿದ್ದರಿಂದ ಇಂದಿನ ಬಾಂಗ್ಲಾದೇಶ ಆಗಿನ ಪೂರ್ವ ಪಾಕಿಸ್ತಾನಕ್ಕೆ ಸೆಣಬುಬೆಳೆಯುವ ಹೆಚ್ಚು ಪ್ರದೇಶ ಹೋಯಿತು. ಭಾರತದಲ್ಲಿ ಹೆಚ್ಚು ಸೆಣಬಿನ ಗಿರಣಿಗಳು ಉಳಿದವು. ಇದರಿಂದ ಭಾರತವು ಕಚ್ಚಾ ಸೆಣಬಿನ ಸಮಸ್ಯೆಯನ್ನು ಎದುರಿಸ ಬೇಕಾಯಿತು. ಅನಂತರ ರಾಷ್ಟ್ರದಲ್ಲೇ ಸೆಣಬಿನ ಉತ್ಪನ್ನ ಹೆಚ್ಚಿಸಲಾಯಿತು.

ಸ್ಥಾನೀಕರಣದ ಅಂಶಗಳೆಂದರೆ, ಕಚ್ಚಾವಸ್ತು ಸೆಣಬಿನ ಪೂರೈಕೆ (ಸೆಣಬು), ಯಥೇಚ್ಛವಾಗಿ ನೀರಿನ ಪೂರೈಕೆ, ಬಂದರಿನ ಅನುಕೂಲತೆ, ಜಲಸಾರಿಗೆಯ ಸೌಲಭ್ಯ ಮತ್ತು ಶಕ್ತಿ ಸಂಪನ್ಮೂಲದ ಪೂರೈಕೆ ಇತ್ಯಾದಿ.

ಹಂಚಿಕೆ: ಪಶ್ಚಿಮ ಬಂಗಾಲ ಭಾರತದ ಅಧಿಕ ಸೆಣಬು ಉತ್ಪನ್ನ ಉತ್ಪಾದಿಸುವ ರಾಜ್ಯ. ಇದು 61 ಸೆಣಬು ಗಿರಣಿಗಳನ್ನು ಹೊಂದಿದ್ದು, ಇವು ಹೂಗ್ಲಿ ನದಿ ದಂಡೆಯಲ್ಲಿ ಹಂಚಿಕೆಯಾಗಿವೆ. ಉದಾ: ಟಿಟಾಗರ್, ಜಗತ್‌ದಲ್, ಹೌರ, ಬಡ್ಜ್–ಬಡ್ಜ್, ಗೋಪಾಲಪುರ, ಬಾರಾನಗರ, ಪ್ರಬಾರ್ಕಲ್, ಕೆಲ್ವಿನ್, ಕಾಕಿನಾಡ, ಶ್ಯಾಂನಗರ, ಬಿರ್ಲಾಪುರ, ಭದ್ರೇಶ್ವರ, ಬೆಲೂರ್, ಮಾನಿರ‍್ಪುರ, ಬಿಹಾರಿನ ಗಯಾ, ಸಮಷ್ಟಿಪುರ, ಕಾನ್ಪುರ ಮತ್ತು ಶಿಯಾಜ ವನಮ್, ಒರಿಸ್ಸದ ಕಟಕ್, ಆಂಧ್ರಪ್ರದೇಶದ ಚಿತ್ತವಾಸಲ್, ಬಿಟ್ಲಾಲ್ವ್, ಗುಂಟೂರ್ ಮತ್ತು ಮಧ್ಯಪ್ರದೇಶದ ರಾಯಗಢದಲ್ಲೂ ಸೆಣಬಿನ ಗಿರಣಿಗಳಿವೆ.

ಉತ್ಪಾದನೆ: ಭಾರತದ ಸೆಣಬಿನ ಉತ್ಪನ್ನಗಳ ಉತ್ಪಾದನ ಸಾಮರ್ಥ್ಯ 17 ಲಕ್ಷಟನ್‌ಗಳು 2004–05 ರಲ್ಲಿ 16.1 ಲಕ್ಷ ಟನ್ ಸೆಣಬಿನ ಗಿರಣಿ ವಸ್ತುಗಳನ್ನು ಭಾರತ ಉತ್ಪಾದಿಸಿತು. ಭಾರತ ಸೆಣಬಿನ ಉತ್ಪನ್ನಗಳನ್ನು ಆಸ್ಟ್ರೇಲಿಯ, ನ್ಯೂಜಿಲೆಂಡ್, ಕ್ಯೂಬ, ಅಮೆರಿಕ ಸಂಯುಕ್ತಸಂಸ್ಥಾನ, ಕೆನಡ, ಅರ್ಜೆಂಟೈನ ಮತ್ತು ರಷ್ಯ ದೇಶಗಳಿಗೆ ರಫ್ತು ಮಾಡುತ್ತದೆ. 2004ರಲ್ಲಿ 1113 ಕೋಟಿ ರೂ ಮೌಲ್ಯದ ಸೆಣಬಿನ ವಸ್ತುಗಳನ್ನು ರಫ್ತು ಮಾಡಿತು.

ಭಾರತ ಬಾಂಗ್ಲಾದೇಶದಿಂದ ಕಚ್ಚಾ ಸೆಣಬನ್ನು ಆಮದು ಮಾಡಿಕೊಳ್ಳುತ್ತದೆ. ಕಚ್ಚಾ ಸೆಣಬಿನ ಕೊರತೆ, ಕೃತಕ ನಾರಿನ ಪೈಪೋಟಿ, ಇತರ ರಾಷ್ಟ್ರಗಳ ಪೈಪೋಟಿ (ಥೈಲೆಂಡ್, ಚೀನ), ಕಾರ್ಮಿಕರ ಮುಷ್ಕರ, ಹಳೆಯ ಯಂತ್ರೋಪಕರಣಗಳು – ಇವು ಸೆಣಬು ಕೈಗಾರಿಕೆಯ ಸಮಸ್ಯೆಗಳು.

ಸಕ್ಕರೆ ಕೈಗಾರಿಕೆ: ಭಾರತದ ಎರಡನೆಯ ಮುಖ್ಯ ಕೃಷಿ ಆಧಾರಿತ ಕೈಗಾರಿಕೆ. ಭಾರತದಲ್ಲಿ ಸುಮಾರು 35 ಮಿಲಿಯನ್ ಜನರು ಕಬ್ಬು ಬೇಸಾಯದಲ್ಲಿ ತೊಡಗಿರುವರು. ಇವರು ಉತ್ಪಾದಿಸಿದ ಕಬ್ಬಿನ ಬಹುಪಾಲನ್ನು ಸಕ್ಕರೆ ಕೈಗಾರಿಕೆಗೆ ಬಳಸಲಾಗುವುದು. ಇದರಿಂದ ರೈತರ ಆರ್ಥಿಕತೆಗೆ ನೆರವಾಗುವುದು. ಸಕ್ಕರೆಯನ್ನು ಸಿಹಿ ಖಾದ್ಯಗಳನ್ನು ತಯಾರಿಸಲು, ಹಣ್ಣಿನ ರಸ, ಮದ್ಯ ಮತ್ತು ಔಷಧಿಗಳ ತಯಾರಿಕೆಗೂ ಬಳಸಲಾಗುವುದು.

ಬೆಳವಣಿಗೆ: ಸಕ್ಕರೆ ತಯಾರಿಸುವ ಕಲೆ ಭಾರತೀಯರಿಗೆ ಪುರಾತನ ಕಾಲದಿಂದಲೂ ತಿಳಿದಿತ್ತು. ಆಧುನಿಕ ಸಕ್ಕರೆ ಕಾರ್ಖಾನೆ ಪ್ರಸಕ್ತ ಶತಮಾನದ ಆದಿಯಲ್ಲಿ ಪ್ರಾರಂಭಗೊಂಡಿತು. 1930–31ರ ಅನಂತರ ದೊರೆತ ತೆರಿಗೆ ರಕ್ಷಣೆಯಿಂದ ಸಕ್ಕರೆ ಕೈಗಾರಿಕೆ ಪ್ರಗತಿ ಚುರುಕುಗೊಂಡಿತು. ಸು. 2.5 ಲಕ್ಷ ಜನರಿಗೆ ಉದ್ಯೋಗ ದೊರೆತಿದೆ.

ಸ್ಥಾನೀಕರಣದ ಅಂಶಗಳು: ಸಕ್ಕರೆ ಕೈಗಾರಿಕೆಯ ಕಚ್ಚಾವಸ್ತು ಕಬ್ಬು ಹೆಚ್ಚು ತೂಕವನ್ನು ಕಳೆದುಕೊಳ್ಳುವುದರಿಂದ ಇದು ಕಚ್ಚಾ ಪದಾರ್ಥ ಆಧರಿತ ಕೈಗಾರಿಕೆ. ಆದ್ದರಿಂದ ಸಕ್ಕರೆ ಕೈಗಾರಿಕೆಯನ್ನು ಕಬ್ಬು ಬೆಳೆಯುವ ಪ್ರದೇಶದಲ್ಲಿ ಸ್ಥಾಪಿಸಲಾಗುವುದು. ಶಕ್ತಿ ಸಾಧನಗಳ ಪೂರೈಕೆ, ನೀರಿನ ಸರಬರಾಜು ಮಾರುಕಟ್ಟೆ ಮತ್ತು ಸರ್ಕಾರದ ನೆರವು ಸಕ್ಕರೆ ಕೈಗಾರಿಕೆಯ ಇತರ ಪ್ರಮುಖ ಸ್ಥಾನೀಕರಣದ ಅಂಶಗಳು.

ಹಂಚಿಕೆ: ಹಿಂದೆ ಸಕ್ಕರೆ ಕೈಗಾರಿಕೆ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಕೇಂದ್ರೀಕೃತಗೊಂಡಿತ್ತು. ಆದರೆ ಇತ್ತೀಚೆಗೆ ದಕ್ಷಿಣದ ರಾಜ್ಯಗಳಿಗೂ ಇದು ವಿಸ್ತರಿಸಿದೆ. ಮಹಾರಾಷ್ಟ್ರ ಉತ್ತರ ಪ್ರದೇಶ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಲ್ಲಿ ಸಕ್ಕರೆ ಕೈಗಾರಿಕೆ ಹೆಚ್ಚಾಗಿ ಕಂಡು ಬರುವುದು.

ಮಹಾರಾಷ್ಟ್ರ: ಸಕ್ಕರೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಇದು 156 ಸಕ್ಕರೆ ಕಾರ್ಖಾನೆಗಳನ್ನು ಹೊಂದಿದೆ. ರಾಷ್ಟ್ರದ ಶೇ 30ರಷ್ಟು ಸಕ್ಕರೆ ಉತ್ಪಾದಿಸುತ್ತವೆ, ನಾಸಿಕ್, ಪುಣೆ, ಸತಾರ, ಶೋಲಾಪುರ, ಸಾಂಗ್ಲಿ ಮತ್ತು ಕೊಲ್ಲಾಪುರ ಜಿಲ್ಲೆಗಳು ಪ್ರಮುಖ ಸಕ್ಕರೆ ಪ್ರದೇಶಗಳಾಗಿವೆ.

ಉತ್ತರ ಪ್ರದೇಶ: ಉತ್ಪಾದನೆ ಶೇ 28, ದ್ವಿತೀಯ ಸ್ಥಾನ. ಸಕ್ಕರೆ ಕೈಗಾರಿಕಾ ಜಿಲ್ಲೆಗಳು ಕಾನ್ಪುರ, ಗೋರಖಪುರ, ಮೀರತ್, ಲಖನೌ, ಅಲಹಾಬಾದ್, ದಿಯೋರಿಯ, ಖೇರಿ, ಬಸ್ತ್‌ರ್ ಸಹಾರಾನ್ಪುರ, ಮುಜಾಫರ್‌ನಗರ ಮತ್ತು ಗೊಂಡ.

ಕರ್ನಾಟಕ : ಸಕ್ಕರೆ ಉತ್ಪಾದನೆಯಲ್ಲಿ 3ನೆಯ ಸ್ಥಾನ. ಸಕ್ಕರೆ ಉತ್ಪಾದಕ ಕೇಂದ್ರಗಳು ಮಂಡ್ಯ, ಪಾಂಡವಪುರ, ಕಾಳಮುದ್ದನದೊಡ್ಡಿ (ಮಂಡ್ಯ ಜಿಲ್ಲೆ), ಕೊಳ್ಳೇಗಾಲ, ಸಮೀರವಾಡಿ, ನಂಜನಗೂಡು, ಚುಂಚನಕಟ್ಟೆ (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ), ಗೌರಿಬಿದನೂರು, ಶಿವಮೊಗ್ಗ, ಕಂಪ್ಲಿ, ಹೊಸಕೋಟೆ, ಹುಬ್ಬಳ್ಳಿ, ಹಾಸನ, ಹಿರಿಯೂರು ಮತ್ತು ಸಂಕೇಶ್ವರ.

ತಮಿಳುನಾಡು: ದಕ್ಷಿಣ ಮತ್ತು ಉತ್ತರ ಆರ್ಕಾಟ್, ಕೊಯಮತ್ತೂರು, ತಿರುಚರಾಪಳ್ಳಿ ಮತ್ತು ರಾಮನಾಥಪುರಂ ಜಿಲ್ಲೆಗಳಲ್ಲಿ ಸಕ್ಕರೆ ಕೈಗಾರಿಕೆ ಹಂಚಿಕೆಯಾಗಿವೆ.

ಬಿಹಾರ : ಚಂಪಕಂ, ಸಾರಾವ್, ಮುಜಫರ್‌ಪುರ್ ಮತ್ತು ದರ್ಭಾಂಗ, ಆಂಧ್ರಪ್ರದೇಶ: ಪಶ್ಚಿಮ ಮತ್ತು ಪೂರ್ವ ಗೋಧಾವರಿ, ವಿಶಾಖಪಟ್ಟಣ, ಕೃಷ್ಣ, ನಿಜಾಮಾಬಾದ್ ಮತ್ತು ಚಿತ್ತೂರು ಜಿಲ್ಲೆಗಳಲ್ಲಿವೆ.

ಇವುಗಳಲ್ಲದೆ ಪಂಜಾಬಿನ ಗುರುದಾಸ್ಪುರ, ಪಾಟಿಯಾಲ ಮತ್ತು ಅಮೃತಸರ ಜಿಲ್ಲೆಗಳು, ಹರಿಯಾಣದ ಕರ್ನಾಲ್, ಅಂಬಾಲ, ರ್‍ಹೋಟಕ್, ಹಿಸ್ಸಾರ್, ಮತ್ತು ಗುರುಗಾಂ ಜಿಲ್ಲೆಗಳು, ಮಧ್ಯಪ್ರದೇಶದ ಮೊರೇನ, ಗ್ವಾಲಿಯರ್ ಮತ್ತು ಶಿವಪುರಿ ಜಿಲ್ಲೆಗಳು, ರಾಜಸ್ತಾನದ ಉದಯಪುರ, ಗಂಗಾನಗರ, ಚಿತ್ತೂರ್‌ಗಢ್ ಮತ್ತು ಬಿಂಡಿ, ಪಶ್ಚಿಮ ಬಂಗಾಲದ ನಾಡಿಯಾ, ಮುರ್ಷಿದಬಾದ್, ಮತ್ತು ಬರ್ದವಾನ್ ಜಿಲ್ಲೆಗಳಲ್ಲೂ ಸಕ್ಕರೆ ಕೈಗಾರಿಕೆ ಹಂಚಿಕೆಯಾಗಿದೆ.

ಉತ್ಪಾದನೆ: ಭಾರತ ಪ್ರಪಂಚದಲ್ಲೇ ಅತಿ ಹೆಚ್ಚು ಸಕ್ಕರೆ ಉತ್ಪಾದಿಸುವ ರಾಷ್ಟ್ರ. ಇದು 2007ರಲ್ಲಿ 283 ಲಕ್ಷಟನ್ ಸಕ್ಕರೆ ಉತ್ಪಾದಿಸಿತು. ಇಂದು ಭಾರತ ಸಕ್ಕರೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿದ್ದು, ತನ್ನ ಉತ್ಪನ್ನದ ಬಹುಭಾಗವನ್ನು ದೇಶದ ಬೇಡಿಕೆ ಪೂರೈಸಿಕೊಳ್ಳಲು ಬಳಸಿಕೊಂಡು ಅಲ್ಪ ಪ್ರಮಾಣದ ಸಕ್ಕರೆಯನ್ನು ರಫ್ತು ಮಾಡುವುದು.

ಸಮಸ್ಯೆಗಳು: ಉತ್ತಮ ಕಚ್ಚಾವಸ್ತುವಿನ (ಕಬ್ಬು) ಕೊರತೆ; ಅಧಿಕ ಉತ್ಪಾದನೆ ವೆಚ್ಚ ಹೆಚ್ಚು ಹೆಚ್ಚಿನ ಕಬ್ಬನ್ನು ಬೆಲ್ಲ ಮತ್ತು ಖಂಡಸಾರಿಗಳ ತಯಾರಿಕೆಗೆ ಬಳಕೆ, ಅಸಮರ್ಪಕವಾದ ಕೈಗಾರಿಕೆಯ ಸ್ಥಾನೀಕರಣ, ಹಳೆಯ ಯಂತ್ರಗಳು ಮತ್ತು ಕಡಿಮೆ ಉತ್ಪಾದನೆ ಸಾಮರ್ಥ್ಯ ಮತ್ತು ಕಡಿಮೆ ಸಕ್ಕರೆ ಇಳುವರಿ ಪ್ರಮುಖವಾದವು.

ಖನಿಜ ಆಧಾರಿತ ಕೈಗಾರಿಕೆಗಳು: ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ: ಉಕ್ಕಿನ ಯುಗದಲ್ಲಿ ಬದುಕುತ್ತಿದ್ದೇವೆ. ಈ ಕೈಗಾರಿಕೆ ಎಂಜಿನಿಯರಿಂಗ್ ಕೈಗಾರಿಕೆ, ರೈಲ್ವೆ ಇಂಜಿನ್, ಯಂತ್ರೋಪಕರಣ, ಸಲಕರಣೆಗಳಿಗೆ ಪೂರಕ. ಆದ್ದರಿಂದ ಇದನ್ನು ಪ್ರಾಥಮಿಕ ಕೈಗಾರಿಕೆಯೆಂದು ಅಥವಾ ಕೈಗಾರಿಕೆಯ ಮಾತೃ ಎಂದು ಕರೆಯುವರು. ಇದರ ಜೊತೆಗೆ ರೈಲುಮಾರ್ಗಗಳು, ಮನೆ ನಿರ್ಮಾಣ, ಸೇತುವೆ, ಅಣೆಕಟ್ಟು, ಇತ್ಯಾದಿಗಳಿಗೂ ಉಕ್ಕು ಅವಶ್ಯಕ.

ಬೆಳವಣಿಗೆ: ಭಾರತದ ಲೋಹ ಕೈಗಾರಿಕೆಯಲ್ಲಿ ಅತ್ಯಂತ ಪ್ರಮುಖವಾದುದು. 19ನೆಯ ಶತಮಾನದಲ್ಲೆ ಭಾರತ ಕಬ್ಬಿಣ ಮತ್ತು ಉಕ್ಕು ತಯಾರಿಸಲು ಪ್ರಯತ್ನ ಮಾಡಿತ್ತು, ಆದರೆ ಪ್ರಯತ್ನ ಯಶಸ್ವಿಯಾಗಲಿಲ್ಲ. 1870ರಲ್ಲಿ ಪಶ್ಚಿಮ ಬಂಗಾಲದ ಕುಲ್ಟಿಯಲ್ಲಿ ಬೆಂಗಾಲ್ ಐರನ್ ವರ್ಕ್ಸ್ ಕಂಪನಿಯವರು ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಿದರು. ಬೀಡು ಕಬ್ಬಿಣ ಉತ್ಪಾದಿಸುವುದರಲ್ಲಿ ಯಶಸ್ವಿಯಾದರು, ತರುವಾಯ ತೊಂದರೆಗೊಳಗಾಗಿ ಇದು ಸ್ಥಗಿತಗೊಂಡಿತು. 20ನೆಯ ಶತಮಾನದಲ್ಲಿ ಈ ಉದ್ಯಮ ಯಶಸ್ವಿಯಾಯಿತು. ಆಧುನಿಕ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಜಾರ್ಖಂಡ್ (ಅಂದಿನ ಬಿಹಾರ) ಜಿಲ್ಲೆಯ ಸಾಕ್ಚಿ (ಇಂದಿನ ಜೆಮ್‌ಷೆಡ್‌ಪುರ) ಎಂಬಲ್ಲಿ 1907ರಲ್ಲಿ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಪ್ರಾರಂಭಗೊಂಡಿತು. 1918ರಲ್ಲಿ ಬರ್ನ್‌ಪುರ ಮತ್ತು 1923ರಲ್ಲಿ ಭದ್ರಾವತಿಯಲ್ಲಿ ಮತ್ತೆ ಎರಡು ಕಾರ್ಖಾನೆಗಳು ಸ್ಥಾಪನೆಯಾದವು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಉದ್ಯಮ ಚುರುಕುಗೊಂಡು ರೂರ್ಕೆಲ, ಬಿಲಾಯ್ ಮತ್ತು ದುರ್ಗಾಪುರಗಳಲ್ಲಿ ಮೂರು ಕೈಗಾರಿಕೆಗಳು ಸ್ಥಾಪನೆಯಾದವು. ಸ್ವಾತಂತ್ರ್ಯದ ಅನಂತರ ಈ ಕೈಗಾರಿಕೆಯ ಅಭಿವೃದ್ಧಿ ಚುರುಕುಗೊಂಡಿತು.

ಸ್ಥಾನೀಕರಣ : ಇದು ಕಚ್ಚಾವಸ್ತು ಆಧಾರಿತ ಕೈಗಾರಿಕೆ, ಇದಕ್ಕೆ ಬೇಕಾಗುವ ಕಚ್ಚಾವಸ್ತುಗಳೆಂದರೆ ಕಬ್ಬಿಣದ ಅದಿರು, ಮ್ಯಾಂಗನೀಸ್, ಸುಣ್ಣಕಲ್ಲು ಮತ್ತು ಡಾಲೋಮೈಟ್ ಶಕ್ತಿ ಸಂಪನ್ಮೂಲ: ಕಲ್ಲಿದ್ದಲು ಮತ್ತು ವಿದ್ಯುಚ್ಛಕ್ತಿ, ಮಾರುಕಟ್ಟೆ, ಕಾರ್ಮಿಕರ ದೊರೆಯುವಿಕೆ ಬಂಡವಾಳ ಸಾರಿಗೆ ಸೌಲಭ್ಯ ಮತ್ತು ನೀರಿನ ಪೂರೈಕೆ.

ಉತ್ಪಾದನ ವಿಧಾನಗಳು: ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಲ್ಲಿ ಕಬ್ಬಿಣದ ಅದಿರನ್ನು ಕರಗಿಸಿ ಅದರಲ್ಲಿನ ಕಲ್ಮಶಗಳನ್ನು ತೆಗೆಯಲಾಗುವುದು. ಮೊದಲಿಗೆ ಬೀಡು ಕಬ್ಬಿಣವನ್ನು ಉತ್ಪಾದಿಸುವರು. ಅನಂತರ ಇದಕ್ಕೆ ಸುಣ್ಣ ಹಾಗೂ ಮ್ಯಾಂಗನೀಸನ್ನು ನಿಗದಿತ ಪ್ರಮಾಣದಲ್ಲಿ ಸೇರಿಸಿ ಉತ್ತಮ ಗುಣಮಟ್ಟದ ಉಕ್ಕನ್ನು ಉತ್ಪಾದಿಸಲಾಗುವುದು. ಉಕ್ಕಿನಿಂದ ವಿವಿಧ ಬಗೆಯ ವಸ್ತುಗಳನ್ನು ತಯಾರಿಸಲಾಗುವುದು.

ಹಂಚಿಕೆ: ಭಾರತದಲ್ಲಿ ಒಟ್ಟು 9 ಬೃಹತ್ ಪ್ರಮಾಣದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿವೆ.

ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಜೆಂಷೆಡ್‌ಪುರ: ಇದು ಭಾರತದ ಮೊದಲ ಬೃಹತ್ ಪ್ರಮಾಣದ ಕೈಗಾರಿಕೆ. ಖಾಸಗಿ ಒಡೆತನದ್ದು. ಭಾರತದ ಅತಿ ದೊಡ್ಡ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ. ಅಗತ್ಯವಾದ ಕಬ್ಬಿಣದ ಅದಿರನ್ನು ಒರಿಸ್ಸಾದ ಮೈಯೂರಭಂಜ್ ನಿಂದಲೂ ಝರಿಯಾದಿಂದ ಕಲ್ಲಿದ್ದಲು, ಒರಿಸ್ಸದ ಸುಂದರ್‌ಗರ್‌ನಿಂದ ಸುಣ್ಣದ ಕಲ್ಲನ್ನು ಹಾಗೂ ಕೋಲ್ಕತದ ಬಂದರಿನ ಸೌಲಭ್ಯವನ್ನು ಹೊಂದಿದೆ. ಸುವರ್ಣರೇಖಾ ನದಿಯಿಂದ ನೀರಿನ ಸೌಲಭ್ಯವನ್ನು ಹೊಂದಿದೆ. ಉಕ್ಕಿನ ಉತ್ಪಾದನೆ 4.1 ದ.ಲ. ಟನ್ನು (2004–05).

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಭದ್ರಾವತಿ: 1923ರಲ್ಲಿ ಮೈಸೂರು ಸಂಸ್ಥಾನದಿಂದ ಸ್ಥಾಪನೆ. ಅಗತ್ಯ ವಸ್ತುಗಳನ್ನು ಶಿವಮೊಗ್ಗ ಜಿಲ್ಲೆಯಿಂದ ಮರದ ಇದ್ದಿಲು, ಬಾಬಾಬುಡನ್‌ಗಿರಿ ಬೆಟ್ಟದಿಂದ ಕಬ್ಬಿಣದ ಅದಿರು ಮತ್ತು ಸುತ್ತಲಿನ ಪ್ರದೇಶದಿಂದ ಮ್ಯಾಂಗನೀಸ್ ಮತ್ತು ಸುಣ್ಣಕಲ್ಲನ್ನು ಜೋಗ್ ಜಲಪಾತದಿಂದ ಜಲವಿದ್ಯುತ್ತನ್ನು ಪಡೆಯುತ್ತಿದೆ. ಈಗ ಇದ್ದಲಿಗೆ ಬದಲಾಗಿ ಜಲ ವಿದ್ಯುತ್ತನ್ನು ಬಳಸಲಾಗುತ್ತಿದೆ. ಇದನ್ನು 1989ರಲ್ಲಿ ಉಕ್ಕು ಪ್ರಾಧಿಕಾರದ ಆಡಳಿತಕ್ಕೆ ವಹಿಸಲಾಯಿತು. ಇದು ವರ್ಷಕ್ಕೆ ಒಂದು ಲಕ್ಷ ಟನ್ ಉಕ್ಕು ಉತ್ಪಾದಿಸುತ್ತದೆ.

ಭಾರತೀಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಬರ್ನ್‌ಪುರ; 1919ರಲ್ಲಿ ಪಶ್ಚಿಮ ಬಂಗಾಲದ ಬರ್ನ್‌ಪುರದಲ್ಲಿ ಸ್ಥಾಪನೆ. ಇದು ಕುಲ್ಟಿ, ಹಿರಾಪುರ ಮತ್ತು ಬರ್ನ್‌ಪುರಗಳಲ್ಲಿ ಮೂರು ಪ್ರತ್ಯೇಕ ಕಾರ್ಖಾನೆಗಳನ್ನು ಹೊಂದಿದೆ. ಕುಲ್ಟಿಯಲ್ಲಿ ಬೀಡು ಕಬ್ಬಿಣವನ್ನು ಉಳಿದೆರೆಡು ಕಬ್ಬಿಣ ಮತ್ತು ಉಕ್ಕನ್ನು ಉತ್ಪಾದಿಸುತ್ತವೆ. ಇವುಗಳು ಸಿಂಗ್‌ಭೂಮ್ ಮತ್ತು ಕಿಯೋಂಜ್ಹಾರ್‌ನಿಂದ ಕಬ್ಬಿಣದ ಅದಿರನ್ನು ಝರಿಯಾ ಮತ್ತು ರಾಣಿಗಂಜ್‌ನಿಂದ ಕಲ್ಲಿದ್ದಲನ್ನು, ಛತ್ತೀಸ್‌ಗಢದಿಂದ ಮ್ಯಾಂಗನೀಸ್ ಹಾಗೂ ದಾಮೋದರ್ ನದಿಯಿಂದ ನೀರನ್ನು ಪಡೆಯುತ್ತವೆ. ಉಕ್ಕಿನ ಉತ್ಪಾದನೆ 2.9 ಲಕ್ಷ ಟನ್ (2004–05).

ಹಿಂದೂಸ್ತಾನ್ ಉಕ್ಕಿನ ಕೈಗಾರಿಕೆ ರೂರ್ಕೆಲ : 1955ರಲ್ಲಿ ರೂರ್ಕೆಲದಲ್ಲಿ ಜರ್ಮನಿಯ ಸಹಯೋಗದೊಂದಿಗೆ ಸ್ಥಾಪನೆ. ಇದು ಅಗತ್ಯವಾದ ಕಲ್ಲಿದ್ದಲನ್ನು ಝರಿಯಾ ಮತ್ತು ಬೊಕಾರೋಗಳಿಂದಲೂ ಕಬ್ಬಿಣದ ಅದಿರನ್ನು ಬೊನಾಯ್‌ನಿಂದಲೂ ಸುಣ್ಣದ ಕಲ್ಲನ್ನು ಬರ್ಮಿತಪುರದಿಂದಲೂ ಜಲ ವಿದ್ಯುಚ್ಛಕ್ತಿಯನ್ನು ಹಿರಾಕುಡ್ ಯೋಜನೆಯಿಂದಲೂ ಮತ್ತು ಮ್ಯಾಂಗನೀಸ್‌ನ್ನು ಬಾರಿಜ್ಮಾದಿಂದಲೂ ಪಡೆಯಲಾಗುತ್ತದೆ. ಅಗತ್ಯವಾದ ನೀರನ್ನು ಮಂದಿರ ಯೋಜನೆ ಪೂರೈಸುವುದು. ಈ ಕೈಗಾರಿಕೆ ಉಕ್ಕಿನ ಹಾಳೆಯ ಉತ್ಪಾದನೆಗೆ ಹೆಸರಾಗಿದೆ. ಇದರ ಉಕ್ಕಿನ ಉತ್ಪಾದನೆ 1.5 ದ.ಲಕ್ಷ ಟನ್ನುಗಳು (2004–05).

ಬೊಕಾರೋ : ಇದು ಜಾರ್ಖಂಡದ ಬೊಕಾರೋದಲ್ಲಿ 1972ರಲ್ಲಿ ರಷ್ಯ ಸಹಯೋಗದಿಂದ ಸ್ಥಾಪಿತವಾಗಿದೆ. ಭಾರತದ ಅತಿ ದೊಡ್ಡ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಲ್ಲಿ ಒಂದಾಗಿದೆ. ಇದು ಬೊಕಾರೋ ಮತ್ತು ಝರಿಯಾದ ಕಲ್ಲಿದ್ದಲನ್ನು, ಕಿಯೊಂಜ್ಹಾರ್‌ನಿಂದ ಕಬ್ಬಿಣದ ಅದಿರನ್ನು, ಪಾಲಮಾವುದಿಂದ ಸುಣ್ಣದ ಕಲ್ಲನ್ನು ಬಿಲಾಸ್‌ಪುರದಿಂದ ಡಾಲೋಮೈಟನ್ನು ಪಡೆಯುತ್ತದೆ. ಇದು 3.5 ದಶಲಕ್ಷಟನ್ನು ಉಕ್ಕನ್ನು ಉತ್ಪಾದಿಸುತ್ತದೆ (2004–05).

ಭಿಲಾಯ್ : ಇದು ಚತ್ತೀಸ್‌ಗಢದ ಭಿಲಾಯ್‌ನಲ್ಲಿ ರಷ್ಯ ಸಹಯೋಗದಿಂದ 1957ರಲ್ಲಿ ಸ್ಥಾಪಿತಗೊಂಡಿದೆ. ಇದು ಕಲ್ಲಿದ್ದಲನ್ನು ಕೋರ್ಬಿ ಮತ್ತು ಕರ್ಗಾಲಿಯಿಂದಲೂ ಕಬ್ಬಿಣದ ಅದಿರನ್ನು ದಾಲಿ ಮತ್ತು ರಾಜ್ಹಾರ್‌ಗಳಿಂದಲೂ ಬಾಲ್ಘಾಟ್ ಮತ್ತು ಭಂಡಾರದಿಂದ ಮ್ಯಾಂಗನೀಸ್‌ನ್ನು, ಅಕಲ್‌ತಾರ ಗಣಿಗಳಿಂದ ಸುಣ್ಣದ ಕಲ್ಲನ್ನು ಪಡೆಯುವುದು. ಮುಂಬಯಿ ಕೋಲ್ಕತ ರೈಲು ಸಂಚಾರ ಸೌಲಭ್ಯವಿದೆ. ಉಕ್ಕಿನ ಉತ್ಪಾದನೆಯಲ್ಲಿ ದೇಶದಲ್ಲಿ ದ್ವಿತೀಯ ಸ್ಥಾನ. ಉತ್ಪಾದನೆ 3.9 ದ.ಲ ಟನ್ನು ಉಕ್ಕು (2004–05).

ದುರ್ಗಾಪುರ : ಪಶ್ಚಿಮ ಬಂಗಾಲದ ದುರ್ಗಾಪುರದಲ್ಲಿ 1956ರಲ್ಲಿ ಬ್ರಿಟನ್ನಿನ ಸಹಯೋಗದೊಂದಿಗೆ ಸ್ಥಾಪನೆ. ಇದು ಝರಿಯಾದಿಂದ ಕಲ್ಲಿದ್ದಲು, ನೌಮುಂಡಿಯಿಂದ ಕಬ್ಬಿಣದ ಅದಿರು, ದಾಮೋದರ ಯೋಜನೆಯಿಂದ ಜಲವಿದ್ಯುತ್, ಬರ್ಮಿತ್ರಪುರದಿಂದ ಸುಣ್ಣದ ಕಲ್ಲು ಮತ್ತು ಬೋನಾಯ್ ಗಣಿಯಿಂದ ಮ್ಯಾಂಗನೀಸ್ ಪಡೆಯುವುದು. ಉಕ್ಕಿನ ಉತ್ಪಾದನೆ 16 ಲಕ್ಷ ಟನ್ನು(2004–05).

ಸೇಲಂ : ಇದು ತಮಿಳುನಾಡಿನ ಸೇಲಂ ಬಳಿ ಸ್ಥಾಪನೆಯಾಗಿದ್ದು 1981ರಲ್ಲಿ ಕಾರ್ಯಾರಂಭ ಮಾಡಿತು. ಫ್ರಾನ್ಸ್‌ನಿಂದ ತಾಂತ್ರಿಕ ಪರಿಣತಿ ಪಡೆದಿದೆ. ಇದು ಸ್ಟೇನ್‌ಲೆಸ್ ಸ್ಟೀಲ್ ಉತ್ಪಾದನೆಗೆ ಹೆಸರಾದುದು. ಸಾಮರ್ಥ್ಯ 1.5 ಲಕ್ಷ ಟನ್ನ್ ಉಕ್ಕು ಉತ್ಪಾದನೆ. ಕೈಗಾರಿಕೆಗೆ ಬೇಕಾದ ಮಿಶ್ರ ಉಕ್ಕನ್ನು ದುರ್ಗಾಪುರ ಮತ್ತು ರೂರ್ಕೆಲದಿಂದ ಪಡೆಯುವುದು.

ವಿಶಾಖಪಟ್ಟಣ : ಭಾರತದ ತೀರ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಏಕೈಕ ಅತಿದೊಡ್ಡ ಉಕ್ಕಿನ ಕೈಗಾರಿಕೆ. ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ 1990ರಲ್ಲಿ 3 ದಶ ಲಕ್ಷಟನ್ನು ಸ್ಥಾಪಿತ ಸಾಮರ್ಥ್ಯದೊಡನೆ ಸ್ಥಾಪಿತವಾಯಿತು. ಇದು ರೈಲು ಸಾರಿಗೆ ಹಾಗೂ ಬಂದರಿನ ಸೌಲಭ್ಯ ಹೊಂದಿದೆ. ಇದು ಆಧುನಿಕ ತಂತ್ರಜ್ಞಾನವನ್ನು ಹೊಂದಿದೆ. ಕಬ್ಬಿಣದ ಅದಿರನ್ನು ಚತ್ತಿಸ್‌ಗಡದಿಂದ ಪಡೆಯುವುದು. ಇತರ ಕಚ್ಚಾವಸ್ತುಗಳನ್ನು ಸ್ಥಳೀಯವಾಗಿ ಪಡೆಯುವುದು. ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತದೆ. ವಾರ್ಷಿಕ ಉಕ್ಕಿನ ಉತ್ಪಾದನೆ 31.8 ಲಕ್ಷ ಟನ್ (2004–05).

ಇತ್ತೀಚೆಗೆ ಅನೇಕ ಖಾಸಗಿ ಸಂಸ್ಥೆಗಳು ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸುತ್ತಿವೆ. ಕರ್ನಾಟಕ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಬಳಿ ಜಿಂದಾಲ್ ಕಂಪನಿ ವಿಜಯನಗರ ಕಾರ್ಖಾನೆ ಸ್ಥಾಪಿಸಿದ್ದು, ಇದು 1.25 ಲಕ್ಷಟನ್ನ್ ಸಾಮರ್ಥ್ಯ ಹೊಂದಿದೆ. ಇಂಡಿಯನ್ ಸೀಮ್ ಲೆಸ್ ಕಂಪನಿ 1.25 ದ.ಲಕ್ಷ ಟನ್ನಿನ ಸಾಮರ್ಥ್ಯದ ಉಕ್ಕಿನ ಕೈಗಾರಿಕೆ, ಎಸ್ಸಾರ್ ಕಂಪನಿ ಗುಜರಾತಿನ ಹಾಜಿರಾದ ಬಳಿ, ಟಾಟಾ ಕಂಪನಿ ಒರಿಸ್ಸ ತೀರದ ಗೋಪಾಲಪುರದ ಬಳಿ ಉಕ್ಕಿನ ಕೈಗಾರಿಕೆಯನ್ನು ಸ್ಥಾಪಿಸುತ್ತಿವೆ.

ಉತ್ಪಾದನೆ: ಭಾರತ ಪ್ರಪಂಚದ ಎಂಟನೆಯ ಅತಿ ದೊಡ್ಡ ಉಕ್ಕು ಉತ್ಪಾದಿಸುವ ರಾಷ್ಟ್ರ. 2004ರಲ್ಲಿ 38 ದ.ಲಕ್ಷ ಟನ್ನು ಉಕ್ಕು ಉತ್ಪಾದಿಸಿತು. ಇದು 2003–04ರಲ್ಲಿ 5.36 ಲಕ್ಷ ಟನ್ ಉಕ್ಕನ್ನು ರಫ್ತು ಮಾಡಿತು. ಆದಾಗ್ಯೂ ಇದು ವಿಶಿಷ್ಟ ಬಗೆಯ ಉಕ್ಕನ್ನು ಆಮದು ಮಾಡಿಕೊಳ್ಳುತ್ತಿದೆ.

ಅಲ್ಯೂಮಿನಿಯಂ ಕೈಗಾರಿಕೆ: ಭಾರತದ ಲೋಹ ಕೈಗಾರಿಕೆಯಲ್ಲಿ ಕಬ್ಬಿಣ ಮತ್ತು ಉಕ್ಕನ್ನು ಬಿಟ್ಟರೆ ಅಲ್ಯೂಮಿನಿಯಂ ಎರಡನೆಯ ಮುಖ್ಯ ಕೈಗಾರಿಕೆಯಾಗಿದೆ.

ಪ್ರಾಮುಖ್ಯತೆ: ಮಾನವನಿಂದ ಅತಿ ಹೆಚ್ಚು ಬಳಕೆಯಾಗುತ್ತಿರುವ ಲೋಹ. ಇದು ಬೃಹತ್ ಪ್ರಮಾಣದ ವಿಮಾನ, ಹಡಗು ಹಾಗೂ ಕೃತಕ ಉಪಗ್ರಹಗಳಿಂದ ಹಿಡಿದು ಸಣ್ಣ ಚಮಚದ ಉತ್ಪಾದನೆಗೂ ಅಲ್ಯೂಮಿನಿಯಂ ಬಳಸುವರು. ಇದು ಹಗುರ, ಬೆಲೆ ಕಡಿಮೆ, ಉತ್ತಮ ವಿದ್ಯುತ್‌ವಾಹಕ, ತುಕ್ಕು ನಿರೋಧಕ, ಗುಣಗಳನ್ನು ಹೊಂದಿದೆ. ಇದನ್ನು ವಾಹನಗಳ ತಯಾರಿಕೆ, ಕಟ್ಟಡ, ಸೇತುವೆ, ಮೇಲ್ಛಾವಣಿಗಳ ನಿರ್ಮಾಣ, ಬಣ್ಣಗಳ ತಯಾರಿಕೆ, ವಿದ್ಯುತ್ ವಾಹಕ ತಂತಿ ಹಾಗೂ ಪ್ಯಾಕಿಂಗ್‌ನಲ್ಲೂ ಬಳಸಲಾಗುತ್ತದೆ.

ಅಭಿವೃದ್ಧಿ: ಭಾರತದಲ್ಲಿ ಅಲ್ಯೂಮಿನಿಯಂ ಕೈಗಾರಿಕೆಯನ್ನು 1944ರಲ್ಲಿ ಪಶ್ಚಿಮ ಬಂಗಾಲದ ಅಸನ್‌ಸೋಲ್‌ನಲ್ಲಿ ಸ್ಥಾಪಿಸಲಾಯಿತು. ಇದೇ ಸಮಯದಲ್ಲಿ ಮತ್ತೊಂದು ಕಾರ್ಖಾನೆಯನ್ನು ಕೇರಳದ ಅಲ್ವೇಯಿನಲ್ಲಿ ಆರಂಭಿಸಲಾಯಿತು. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೈಗಾರಿಕೆಯನ್ನು ಹೆಚ್ಚು ವಿಸ್ತರಿಸಲಾಯಿತು.

ಸ್ಥಾನೀಕರಣದ ಅಂಶಗಳು: ಯಥೇಚ್ಛ ವಿದ್ಯುಚ್ಛಕ್ತಿ, ಬಾಕ್ಸೈಟ್ ಪೂರೈಕೆ, ಪೆಟ್ರೋಲಿಯಂ, ಕೋಕ್, ಕಾಸ್ಟಿಕ್ ಸೋಡ, ಅಧಿಕ ಬಂಡವಾಳ, ಕಾರ್ಮಿಕರು ಹಾಗೂ ಉತ್ತಮ ತಾಂತ್ರಿಕ ಜ್ಞಾನ ಅವಶ್ಯಕ.

ಹಂಚಿಕೆ: ಭಾರತದ ಅಲ್ಯೂಮಿನಿಯಂ ಕೈಗಾರಿಕೆ ಬಾಕ್ಸೈಟ್ ಅದಿರು ಮತ್ತು ಜಲಶಕ್ತಿ ಸರಬರಾಜನ್ನು ಆಧರಿಸಿ ಹಂಚಿಕೆಯಾಗಿದೆ. ಪಶ್ಚಿಮ ಬಂಗಾಲದ ಜಾಯಕನಗರ: ಇದು ಪ್ರಥಮ ಅಲ್ಯೂಮಿನಿಯಂ ಲೋಹ ಉತ್ಪಾದಿಸಿದ ಕಾರ್ಖಾನೆ. ಅಲ್ಯೂಮಿನಿಯಂ ಕಾರ್ಪೋರೇಷನ್‌ಗೆ ಸೇರಿದೆ. ಪಶ್ಚಿಮ ಬಂಗಾಲದ ಅಸನ್‌ಸಾಲ್ ಬಳಿ ಇದೆ. ಇದು ಅಲ್ಯೂಮಿನಿಯಂ ತಗಡು ಉತ್ಪಾದನೆಗೆ ಪ್ರಸಿದ್ಧಿ. ಆಲಂಪುರ: ಇದು ಕೇರಳದ ಅಲ್ವೇಯಿ ಬಳಿ ಸ್ಥಾಪಿತವಾಗಿದೆ. ಇದು ಖಾಸಗಿ ಸಂಸ್ಥೆಯದು, ಇದು ಹೆಚ್ಚು ಅಲ್ಯೂಮಿನಿಯಂ ಪಾತ್ರೆಗಳನ್ನು ತಯಾರಿಸುತ್ತದೆ. ಬೆಳಗಾಂವಿ (ಕರ್ನಾಟಕ); ಖಾಸಗಿ ಒಡೆತನಕ್ಕೆ ಸೇರಿದೆ. ಇದು ಬಾಕ್ಸೈಟ್‌ನ್ನು ಕೊಲ್ಹಾಪುರದಿಂದಲೂ ಜಲಶಕ್ತಿಯನ್ನು ಶರಾವತಿ ಯೋಜನೆಯಿಂದ ಪಡೆಯುತ್ತದೆ. ಹಿರಾಕುಡ್: ಇದು ಭಾರತೀಯ ಅಲ್ಯೂಮಿನಿಯಂ ಕಂಪನಿಗೆ ಸೇರಿದೆ. ಹಿರಾಕುಡ್ ಬಳಿ (ಒರಿಸ್ಸ) ಇದೆ. ಹಿರಾಕುಡ್ ಯೋಜನೆಯ ವಿದ್ಯುತ್ತನ್ನು ಬಳಕೆ ಮಾಡಿಕೊಳ್ಳುತ್ತದೆ. ಮೆಟ್ಟೂರು: ಇದು ಮದರಾಸು ಅಲ್ಯೂಮಿನಿಯಂ ಕಂಪನಿಗೆ ಸೇರಿದೆ. ಸೇಲಂ ಜಿಲ್ಲೆಯ (ತಮಿಳುನಾಡು) ಮೆಟ್ಟೂರಿನಲ್ಲಿ ಸ್ಥಾಪಿಸಲಾಗಿದೆ. ಇದು ಬಾಕ್ಸೈಟ್‌ನ್ನು ಶೆವರಾಯ್ ಬೆಟ್ಟದಿಂದಲೂ ಜಲಶಕ್ತಿಯನ್ನು ಮೆಟ್ಟೂರು ವಿದ್ಯುದಾಗಾರದಿಂದ ಪಡೆದು ಕೊಳ್ಳಲಾಗುತ್ತದೆ. ರತ್ನಗಿರಿ: ಇದನ್ನು ಮಹಾರಾಷ್ಟ್ರದ ರತ್ನಗಿರಿಯಲ್ಲಿ ಸ್ಥಾಪಿಸಲಾಗಿದೆ. ಇದು ಸಾರ್ವಜನಿಕ ವಲಯದ ಅಲ್ಯೂಮಿನಿಯಂ ಕಾರ್ಖಾನೆ. ಇದು ಬಾಕ್ಸೈಟ್‌ನ್ನು ನೆರೆಯ ಜಿಲ್ಲೆಗಳಾದ ಕೊಲಬ, ಕೊಲ್ಹಾಪುರ ಮತ್ತು ಸತಾರ ಜಿಲ್ಲೆಗಳಿಂದ ಪಡೆದು ಕೊಳ್ಳುವುದು. ಜಲಶಕ್ತಿಯನ್ನು ಕೊಯ್ನಾ ವಿದ್ಯುದಾಗಾರದಿಂದ ಪಡೆದುಕೊಳ್ಳುವುದು. ರೇನು ಕೋಟ: ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಗೆ ಸೇರಿದ ರೇನುಕೋಟವೆಂಬಲ್ಲಿ ಹಿಂದೂಸ್ಥಾನ್ ಅಲ್ಯೂಮಿನಿಯಂ ಕಂಪನಿ ಖಾಸಗಿ ಸಂಸ್ಥೆಗೆ ಸೇರಿದೆ. ಚತ್ತಿಸ್‌ಗಡದ ಬಿಲಾಸಪುರ ಜಿಲ್ಲೆಯಿಂದ ಬಾಕ್ಸೈಟ್, ಸಮೀಪದ ಥರ್ಮಲ್ ವಿದ್ಯುದಾಗಾರದಿಂದ ವಿದ್ಯುತ್ ಪಡೆಯುತ್ತದೆ.




ಉತ್ಪಾದನೆ: ಅಲ್ಯೂಮಿನಿಯಂ ಉತ್ಪಾದನೆಯಲ್ಲಿ ಭಾರತ 11ನೆಯ ಸ್ಥಾನದಲ್ಲಿದೆ ಉತ್ಪಾದನೆ 6.9 ಲಕ್ಷಟನ್ನು (2003). ಭಾರತದಲ್ಲಿ ಯಥೇಚ್ಚ ಬಾಕ್ಸೈಟ್ ಇದ್ದು ಹಾಗೂ ಆಂತರಿಕ ಬೇಡಿಕೆಯಿದೆ. ಉತ್ಪಾದನೆ ಹೆಚ್ಚಿಸಿಕೊಳ್ಳುವ ಅವಕಾಶವಿದೆ. ಆದರೆ ಶಕ್ತಿ ಸಂಪನ್ಮೂಲದ ಕೊರತೆಯಿದೆ.

ಸಿಮೆಂಟ್ ಕೈಗಾರಿಕೆ: ಸುಣ್ಣಕಲ್ಲು, ಜೇಡಿ, ಸಿಲಿಕ ಮತ್ತು ಜಿಪ್ಸಮ್‌ಗಳ ಪ್ರಮಾಣಗುಣ ಮಿಶ್ರಣದ ಅಂತ್ಯಂತ ನುಣುಪಾದ ಹುಡಿಯನ್ನು ಸಿಮೆಂಟ್ ಎನ್ನುವರು. ಇದು ಕಟ್ಟಡದ ನಿರ್ಮಾಣಕ್ಕೆ ಅತಿ ಅಗತ್ಯವಾದ ವಸ್ತು. ಈ ಹುಡಿಯನ್ನು ನೀರಿನೊಡನೆ ಬೆರೆಸಿದಾಗ ಇದರ ಮಿಶ್ರಣ ವಸ್ತುಗಳು ಗಡುಸಾಗುತ್ತವೆ. ಆದ್ದರಿಂದ ಇಂದು ಬಹುತೇಕ ಎಲ್ಲಾ

ಬಗೆಯ ಕಟ್ಟಡ ನಿರ್ಮಾಣಗಳಿಗೆ ಅತಿ ಅಗತ್ಯವಾಗಿದೆ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ನಂತರ ಇದು ಕೈಗಾರಿಕಾ ಅಭಿವೃದ್ಧಿಗೆ ಎರಡನೆಯ ಅವಶ್ಯಕತೆಯಾಗಿದೆ. ಕೈಗಾರಿಕೆ, ರಸ್ತೆ, ಸೇತುವೆ, ಮನೆ, ಅಣೆಕಟ್ಟು, ಕಾಲುವೆ ಮೊದಲಾದವುಗಳ ನಿರ್ಮಾಣಕ್ಕೆ ಅಗತ್ಯವಾಗಿದೆ.

ಬೆಳೆವಣಿಗೆ: ಭಾರತದ ಸಿಮೆಂಟ್ ಕೈಗಾರಿಕೆ 20ನೆಯ ಶತಮಾನದ ಆದಿಯಲ್ಲಿ ಪ್ರಾರಂಭಗೊಂಡಿತು. ಮೊಟ್ಟಮೊದಲ ಸಿಮೆಂಟ್ ಕಾರ್ಖಾನೆಯನ್ನು 1904ರಲ್ಲಿ ಚೆನ್ನೈನಲ್ಲಿ ಸ್ಥಾಪಿಸಲಾಯಿತು. ಆದರೆ ಅದು ಯಶಸ್ವಿಯಾಗಲಿಲ್ಲ. ಈ ಉದ್ಯಮದ ಪ್ರಗತಿ ವಾಸ್ತವವಾಗಿ 1912–13ರಲ್ಲಿ ಪ್ರಾರಂಭವಾಯಿತು. 1913ರಲ್ಲಿ ಗುಜರಾತಿನ ಪೋರ್‌ಬಂದರಿನಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ತರುವಾಯ ಮಧ್ಯ ಪ್ರದೇಶದ ಕಟ್ನಿ (1915) ಮತ್ತು ರಾಜಸ್ತಾನದ ಲಖೇರಿಗಳಲ್ಲಿ (1916) ಎರಡು ಸಿಮೆಂಟ್ ಕಾಖಾನೆಗಳು ಸ್ಥಾಪಿತವಾದವು. 1934ರ ವೇಳೆಗೆ 11 ಸಿಮೆಂಟ್ ಕಾರ್ಖಾನೆಗಳಾದವು. 10 ಕಾರ್ಖಾನೆಗಳನ್ನು ಒಟ್ಟು ಗೂಡಿಸಿ ಅಸೋಸಿಯೇಟೆಡ್ ಸಿಮೆಂಟ್ ಕಂ. ಲಿ. (ಎ.ಸಿ.ಸಿ.) ಅಸ್ತಿತ್ವಕ್ಕೆ ಬಂದಿತು. 1937ರಲ್ಲಿ ದಾಲ್ಮಿಯ ಸಿಮೆಂಟ್ ಗ್ರೂಪ್ ಪ್ರಾರಂಭಗೊಂಡಿತು. 1947ರ ವೇಳೆಗೆ ದೇಶದಲ್ಲಿ 18 ಸಿಮೆಂಟ್ ಕಾರ್ಖಾನೆಗಳಾದವು. 1951ಕ್ಕೆ ಇದು 21ಕ್ಕೆ ಹೆಚ್ಚಿತು. 2004ಕ್ಕೆ ಭಾರತದಲ್ಲಿ 126 ಸಿಮೆಂಟ್ ಕಾರ್ಖಾನೆಗಳಿದ್ದವು. ಸ್ಥಾಪಿತ ಸಾಮರ್ಥ್ಯ 14498 ಮಿಲಿಯನ್ ಟನ್ನುಗಳು. ಜೊತೆಗೆ 310ಕ್ಕೂ ಹೆಚ್ಚು ಮಿನಿ ಸಿಮೆಂಟ್ ಕಾರ್ಖಾನೆಗಳಿವೆ. ಈ ಕೈಗಾರಿಕೆ ನೇರವಾಗಿ 1.5 ಲಕ್ಷ, ಪರೋಕ್ಷವಾಗಿ 1.2 ದ.ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿದೆ.

ಸ್ಥಾನಿಕರಣದ ಅಂಶಗಳು: ಸಿಮೆಂಟ್ ಕೈಗಾರಿಕೆಗೆ ಅಗತ್ಯವಾದ ಕಚ್ಚಾವಸ್ತುಗಳೆಂದರೆ ಸುಣ್ಣಕಲ್ಲು, ಮರಳು, ಜಿಪ್ಸಮ್, ಜೇಡಿಮಣ್ಣು, ಅಲ್ಯೂಮಿನಿಯಮ್ ಮತ್ತು ಸಿಲಿಕಗಳು ಬಂಡವಾಳ, ಶಕ್ತಿ ಸಾಧನ (ನೈಸರ್ಗಿಕ ಅನಿಲ, ಕಲ್ಲಿದ್ದಲು), ಮಾರುಕಟ್ಟೆ, ನುರಿತ ಕಾರ್ಮಿಕರು. ಉತ್ತಮ ಸಾರಿಗೆ, ಹಾಗೂ ಬಂಡವಾಳ ಅವಶ್ಯಕ.

ಹಂಚಿಕೆ: ಈ ಕೈಗಾರಿಕೆ ವಿಶೇಷವಾಗಿ ಆಂಧ್ರಪ್ರದೇಶ, ರಾಜಸ್ತಾನ, ಮಧ್ಯಪ್ರದೇಶ, ತಮಿಳುನಾಡು, ಗುಜರಾತ್, ಚತ್ತಿಸ್‌ಗಡ್, ಕರ್ನಾಟಕ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಕಂಡುಬರುತ್ತದೆ. ಪ್ರಮುಖ ಸಿಮೆಂಟ್ ಕೈಗಾರಿಕೆ ಕೇಂದ್ರಗಳಿವು: ಆಂಧ್ರಪ್ರದೇಶದ ಕರೀಮ್‌ನಗರ, ಸಿಮೆಂಟ್‌ನಗರ, ವಿಜಯವಾಡ, ಕೃಷ್ಣ, ಕಂದೂರ್, ಅನಂತಪುರ ಮತ್ತು ಸಲ್ಲೂರ್‌ಪೇಟೆ; ರಾಜಸ್ತಾನದ ಲಾಖೇರಿ, ಬುಂಡಿ, ಸನಯ್, ಮದೋಪುರ, ಚಿತ್ತೋರ್‌ಗಡ್, ನಿಂಬಾಹೇರ, ಬೀವಾರ್, ಬಿನಾಸ್ ಮತ್ತು ಉದಯಪುರ; ತಮಿಳುನಾಡಿನ ತಲೈಯುಡು, ಅಲಂಗುಲಮ್, ತಲೂಕಪಟ್ಟಿ, ದಾಲ್ಮಿಯಪುರಂ, ಪೂಲಿಯೂರ್, ಸಂತರಿದುರ್ಗ ಮತ್ತು ಮದುಕರೈ; ಗುಜರಾತಿನ ಅಹ್ಮದಾಬಾದ್, ಸಿಕ್ಕ, ಅಂಬುಜನಗರ, ದ್ವಾರಕ, ಪೋರ್‌ಬಂದರ್, ಸೆವಾಲಿಯಾ, ಅಂಕಲೇಶ್ವರ ಮತ್ತು ವಾದ್ಯಗರ; ಮಧ್ಯಪ್ರದೇಶದ ಕಟ್ನಿ, ಸಾತ್ನ, ಕೈಮೋರೆ, ಬಿನ್ಯೋರೆ, ಮಂಘಾಥ, ಇಟಾರ್ಸಿ, ಅಕಲ್ತಾರ, ವಿಶ್ರಮನಗರ ಮತ್ತು ನೀಮಚ್; ಛತ್ತಿಸ್‌ಗಢದ ಚಾಮರ್, ಮಂಧಾರ್, ಮೋದಿಗ್ರಾಮ ಮತ್ತು ದುರ್ಗಾ; ಕರ್ನಾಟಕದ ಶಾಹಬಾದ್, ವಾಡಿ, ಕುರ್ಕುಂಟ, ಬಾಗಲಕೋಟೆ, ಭದ್ರಾವತಿ, ಅಮ್ಮಸಂದ್ರ, ಕರೂರು ಮತ್ತು ಸೆಡಂ; ಜಾರ್ಖಂಡದ ಸಿಂಧ್ರಿ, ಖಾಲೇರಿ, ಭಾವನಾಥಪುರ, ಜೈಬಾಸ ಮತ್ತು ಜಾಪ್ಲ; ಒರಿಸ್ಸದ ರಾಜಗಂಗಾಪುರ ಮತ್ತು ಬರಗರ್, ಉತ್ತರ ಪ್ರದೇಶದ ಚುರ್ಕಡುನ್ ಮತ್ತು ಡಿಲ್ಲಿ; ಉತ್ತರಾಂಚಲದ ಡೆಹ್ರಾಡೂನ್; ಹರಿಯಾಣದ ದಾಲ್ಮಿಯದಾದ್ರಿ; ಹಿಮಾಚಲ ಪ್ರದೇಶದ ರಾಜ್ಬನ್ ಮತ್ತು ಗೋಗಲ್; ಪಂಜಾಬಿನ ಭೂಪೇಂದ್ರ, ಮಹಾರಾಷ್ಟ್ರದ ರತ್ನಗಿರಿ, ಚಂದ್ರ, ಮುಂಬಯಿ, ಕೊಲ್ಹಾಪುರ, ಪಶ್ಚಿಮ ಬಂಗಾಲದ ದುರ್ಗಾಪುರ ಮತ್ತು ಪೂರ್ಲಿಯ, ಮೇಘಾಲಯದ ಚಿರಾಪುಂಚಿ ಮತ್ತು ಗಾರೊ.

ಉತ್ಪಾದನೆ: ಭಾರತ ಪ್ರಪಂಚದ ಎರಡನೆಯ ಅತಿ ಹೆಚ್ಚು ಸಿಮೆಂಟ್ ಉತ್ಪಾದಿಸುವ ರಾಷ್ಟ್ರ. ಇದು ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 6ರಷ್ಟನ್ನು ಉತ್ಪಾದಿಸುತ್ತದೆ. 2003–04ರಲ್ಲಿ ಭಾರತ 128.44 ದ.ಲಕ್ಷ ಟನ್ನು ಸಿಮೆಂಟ್ ಉತ್ಪಾದಿಸಿತು. ಭಾರತ ಇತ್ತೀಚೆಗೆ ಸಿಮೆಂಟ್ ರಫ್ತು ಮಾಡುತ್ತಿದೆ. ಭಾರತದಿಂದ ಶ್ರೀಲಂಕ, ಮಯನ್ಮಾರ್, ಬಾಂಗ್ಲಾದೇಶ, ಪಾಕಿಸ್ತಾನ, ನೇಪಾಲ ಮತ್ತು ಮಧ್ಯ ಪ್ರಾಚ್ಯಗಳಿಗೆ ಸಿಮೆಂಟ್ ರಫ್ತಾಗುತ್ತಿದೆ.

ಭಾರತದ ಸಿಮೆಂಟ್ ಕೈಗಾರಿಕೆ ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳೆಂದರೆ ಕಲ್ಲಿದ್ದಲು ಸರಬರಾಜಿನ ಕೊರತೆ, ಉತ್ಪಾದನಾ ವೆಚ್ಚ ದುಬಾರಿ, ಸಾರಿಗೆ ಕೊರತೆ, ಬಂಡವಾಳ ಸಮಸ್ಯೆ, ದೇಶೀಯ ಸಿಮೆಂಟ್ ಯಂತ್ರಗಳ ಕೊರತೆ. ಆದಾಗ್ಯೂ ಈ ಉದ್ಯಮಕ್ಕೆ ಉತ್ತಮ ಭವಿಷ್ಯವಿದೆ.

ಅರಣ್ಯ ಆಧಾರಿತ ಕೈಗಾರಿಕೆಗಳು: ಇದು ಕಾಗದ, ಪ್ಲೈವುಡ್, ಬೆಂಕಿಪೊಟ್ಟಣ ತಯಾರಿಕೆ ಮುಂತಾದ ಕೈಗಾರಿಕೆಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಾಗದದ ಕೈಗಾರಿಕೆ ಪ್ರಮುಖವಾದುದು. ಒಂದು ದೇಶದ ಶಿಕ್ಷಣ ಮತ್ತು ಸಾಕ್ಷರತೆಯ ಮಟ್ಟ, ಜನಜೀವನ ಮತ್ತು ಸಂಸ್ಕೃತಿಗಳ ವಿಕಾಸವನ್ನು ಆ ದೇಶದ ಕಾಗದದ ಉತ್ಪಾದನೆ ಮತ್ತು ಬಳಕೆ ಮೊತ್ತದಿಂದ ನಿರ್ಧರಿಸಬಹುದು. ಶಿಕ್ಷಣ ಮತ್ತು ಜ್ಞಾನಾರ್ಜನೆಗೆ ಕಾಗದ ಅಗತ್ಯ. ಈ ಉದ್ಯಮದಲ್ಲಿ ವಿವಿಧ ಕಾಗದ ಮತ್ತು ರಟ್ಟನ್ನು ತಯಾರಿಸಲಾಗುವುದು. ಉದಾ: ಬರೆವಣಿಗೆ ಮತ್ತು ಮುದ್ರಣ ಕಾಗದ, ಗ್ರೀಸ್ ಪ್ರೂಫ್ ಕಾಗದ, ಆರ್ಟ್ ಪೇಪರ್, ಬಾಂಡ್ ಕಾಗದ, ಪ್ಯಾಕಿಂಗ್ ಕಾಗದ, ಕಾರ್ಬನ್, ಇನ್ಸುಲೇಷನ್, ವೃತ್ತ ಪತ್ರಿಕೆ; ಡುಪ್ಲೆಕ್ಸ್ ಬೋರ್ಡ್, ಕೋಟೆಡ್ ಬೋರ್ಡ್ ಮತ್ತು ಅಲಂಕಾರಿಕ ಕಾಗದ ಇತ್ಯಾದಿ.

ಬೆಳೆವಣಿಗೆ: ಭಾರತದಲ್ಲಿ ಕಾಗದ ತಯಾರಿಸುವ ಕಲೆ 10ನೆಯ ಶತಮಾನದ ಮುಸಲ್ಮಾನರ ಆಳ್ವಿಕೆಯಲ್ಲಿ ಪ್ರಾರಂಭವಾಯಿತು. ಕಾಗ್ಜಿಸ್ ಎಂಬ ಕುಶಲಕರ್ಮಿ ವಂಶಸ್ಥರು ಚಿಂದಿ ಬಟ್ಟೆ ಮತ್ತು ಗೋಣಿ ಚಿಂದಿಯನ್ನು ಬಳಸಿ ಕೈಯಿಂದಲೆ ಕಾಗದ ತಯಾರಿಸುತ್ತಿದ್ದರು. ಆದ್ದರಿಂದಲೆ ಕಾಗದ ಎಂಬ ಪದ ಬಂದಿರಬಹುದು. ಭಾರತದಲ್ಲಿ ಮೊದಲ ಕಾಗದದ ಕೈಗಾರಿಕೆ 1804ರಲ್ಲಿ ಪಶ್ಚಿಮ ಬಂಗಾಲದ ಸೇರಾಂಪುರದಲ್ಲಿ ಹೂಗ್ಲಿ ನದಿ ದಂಡೆಯಲ್ಲಿ ಸ್ಥಾಪಿತವಾದರೂ ಕ್ರಮೇಣ ಮುಚ್ಚಿ ಹೋಯಿತು. ಅನಂತರ 1867ರಲ್ಲಿ ಮತ್ತೊಂದು ಕಾರ್ಖಾನೆ ಕೋಲ್ಕತದ ಬಳಿ ಬಾಲ್ಕಿ ನಗರದಲ್ಲಿ ಆರಂಭಗೊಂಡಿತು. ಅನಂತರ ದೇಶದ ವಿವಿಧ ಭಾಗಗಳಲ್ಲಿ ಕಾಗದದ ಕೈಗಾರಿಕೆಗಳು ಸ್ಥಾಪನೆಗೊಂಡವು.

ಸ್ಥಾನ: ಕಾಗದ ಕೈಗಾರಿಕೆಯ ಸ್ಥಾಪನೆಗೆ ಅವಶ್ಯಕವಾದ ಕಚ್ಚಾವಸ್ತುಗಳೆಂದರೆ ಮರದ ತಿರುಳು, ಬಿದಿರು, ಸವಾಯ್, ಎಸ್ಪಿರಿಟೊ ಮತ್ತು ಬಾಬರ್ ಹುಲ್ಲು, ಬತ್ತ, ಗೋಧಿ, ಮತ್ತು ಬಾರ್ಲಿಯ ಹುಲ್ಲು, ಕಬ್ಬಿನ ಸಿಪ್ಪೆ, ಚಿಂದಿ ಕಾಗದ, ಚಿಂದಿ ಬಟ್ಟೆ ಇತ್ಯಾದಿ. ಕಾಗದದ ಕೈಗಾರಿಕೆ ಕಚ್ಚಾವಸ್ತು ಆಧರಿತ ಇದಲ್ಲದೆ ಮಾರುಕಟ್ಟೆ ಬಂಡವಾಳ, ರಾಸಾಯನಿಕ ವಸ್ತುಗಳಾದ ಕಾಸ್ಟಿಕ್ ಸೋಡ, ಸೋಡಿಯಂ, ಕ್ಲೋರಿನ್, ಸೋಡ ಆಶ್, ಸಲ್ಫೂರಿಕ್ ಆಸಿಡ್ ಇತ್ಯಾದಿಗಳ ಸರಬರಾಜು. ಯತೇಚ್ಛವಾದ ನೀರು, ಕಡಿಮೆ ದರದಲ್ಲಿ ದುಡಿಯುವ ಕಾರ್ಮಿಕರು, ಶಕ್ತಿ ಸಾಧಗನಳ ಪೂರೈಕೆ, ದಕ್ಷಸಾರಿಗೆ ಸೌಲಭ್ಯ ಇತ್ಯಾದಿ.

ಹಂಚಿಕೆ: ಪ್ರಮುಖ ಕಾಗದ ಕೈಗಾರಿಕೆಯ ಕೇಂದ್ರಗಳೆಂದರೆ ಮಹಾರಾಷ್ಟ್ರದ ಬಲ್ಲಾರ್ಪುರ, ಕಲ್ಯಾಣ, ಭಂಬೋರಿ, ಧಷ್ಕೋಡ, ಖೋಪೂಲಿ, ರೋಹ ಪಾರಿಡೆ, ಮಲಗಾಂ, ಪ್ರವಾರ ನಗರ, ಪೈಥಾನ್, ಕಾಂಪ್ಟಿ ಇತ್ಯಾದಿ. ಮಹಾರಾಷ್ಟ್ರ ಭಾರತದ ಪ್ರಮುಖ ಕಾಗದ ಉತ್ಪಾದಿಸುವ ರಾಜ್ಯ. ಗುಜರಾತಿನ ಸೂರತ್, ಬಾರೆ, ಚಾಡಿ, ಖಡ್ಕಿ, ವಾಪಿ, ನವಗಾಂ, ಭರೂಚ್, ಸೊಂಗದ್, ಗೊಂಡಾಲ್, ಉದ್ವಾಡ ಮತ್ತು ಬಿರ್ಲ, ಉತ್ತರ ಪ್ರದೇಶದ ಸಹರಾನ್ಪುರ, ಬಸಂತನಗರ, ಆಘನಾನ್ಪುರ, ರಾಯ್‌ಬರೇಲಿ, ಲಖನೌ, ರಾಂಪುರ, ಜಗದೀಶ್‌ಪುರ, ಉಜ್ಜಯಿನಿ, ಮೀರತ್, ಮೋದಿನಗರ, ನೈನಿ, ಬುಡಾನ್ ಮತ್ತು ಮೈನ್ಪುರಿ. ತಮಿಳುನಾಡಿನ ಈರೋಡ್, ಸ್ವಾಮಿನಾಥಪುರ, ವಿಲಂಪಟ್ಟಿ, ಮೆಟ್ಟುಪಾಳ್ಯಂ, ಪಶ್ವತ್ತೂರು, ಚರಣ್ ಮಹದೇವಿ ಮತ್ತು ಕಾಗಿತ ಪುರಂ, ಪುಗಲೂರಿನಲ್ಲಿ ವೃತ್ತ ಪತ್ರಿಕೆ ಕಾಗದವನ್ನು ಮುದ್ರಿಸುವ ಕಾರ್ಖಾನೆಗಳಿವೆ. ಆಂಧ್ರ ಪ್ರದೇಶದಲ್ಲಿ ರಾಜಮಂಡ್ರಿ, ರಂಗಂಪೇಟೆ, ಸಿರ್ಪುರ್, ಮರೇಡು ಬಾಕ, ಭದ್ರಾಚಲಂ, ತಿರುಪತಿ, ನೆಲ್ಲೂರು ಮತ್ತು ಶ್ರೀಕಾಕುಳಂ.

ಕರ್ನಾಟಕದ ಭದ್ರಾವತಿ, ದಾಂಡೇಲಿ, ನಂಜನಗೂಡು, ಕೃಷ್ಣರಾಜನಗರ ಮತ್ತು ಕುಶಾಲನಗರಗಳಲ್ಲೂ ಮಧ್ಯಪ್ರದೇಶದ ಭೂಪಾಲ್, ಇಂದೂರ್, ಮಬೆಂಗ್ರಾಗಳಲ್ಲೂ ಪಶ್ಚಿಮ ಬಂಗಾಲದ ಬಲ್ಲಾರ್ಪುರ್, ಟಿಟಾಗರ್, ರಾಣಿಗಂಜ್, ನೈಹಾತಿ, ಚಂದ್ರಹಾತಿ, ಕೋಲ್ಕತ, ಬಾರಾನಗರ ಮತ್ತು ಕಲ್ಯಾಣಿಯಲ್ಲೂ ಒರಿಸ್ಸ ಕೇರಳ, ಹರಿಯಾಣ, ಪಂಜಾಬ್ ಹಾಗೂ ಬಿಹಾರ ರಾಜ್ಯಗಳಲ್ಲೂ ಕಾಗದದ ಕೈಗಾರಿಕೆ ಕಂಡುಬರುತ್ತವೆ.

ಉತ್ಪಾದನೆ: ಭಾರತ 2002–03 ರಲ್ಲಿ 34.12 ಲಕ್ಷ ಟನ್ನು ಕಾಗದ ಉತ್ಪಾದಿಸಿತು. ಆದರೂ ಆಂತರಿಕ ಬೇಡಿಕೆಯನ್ನು ಪೂರೈಸಲು ಭಾರತ ಕಾಗದವನ್ನು ಆಮದು ಮಾಡಿಕೊಳ್ಳುತ್ತದೆ. ಭಾರತದ ತಲಾವಾರು ಕಾಗದದ ಬಳಕೆ ಕಡಿಮೆ. ಇದು ಕೇವಲ 600 ಗ್ರಾಂ.

ಭಾರತದ ಕಾಗದದ ಕೈಗಾರಿಕೆಯಲ್ಲಿ ಕಚ್ಚಾ ಪದಾರ್ಥದ ಕೊರತೆ, ದುಬಾರಿ ಉತ್ಪಾದನಾ ವೆಚ್ಚ, ರಾಸಾಯನಿಕಗಳ ಕೊರತೆ, ಮತ್ತು ವ್ಯರ್ಥ ವಸ್ತುಗಳನ್ನು ಹೊರಹಾಕುವ ಸಮಸ್ಯೆಗಳು ಕಂಡುಬರುತ್ತಿವೆ.

ಇತರೆ ಕೈಗಾರಿಕೆಗಳಲ್ಲಿ ತೈಲಶುದ್ಧೀಕರಣ, ರಾಸಾಯನಿಕ ಗೊಬ್ಬರ, ಚರ್ಮ ಹದಮಾಡುವುದು, ಮತ್ತು ರೈಲು ಇಂಜಿನ್ ತಯಾರಿಕೆಗಳು ಪ್ರಮುಖವಾದವು.

ತೈಲಶುದ್ಧೀಕರಣ: ಭೂಮಿಯಿಂದ ಹೊರತೆಗೆದ ಕಚ್ಚಾ ತೈಲವನ್ನು ಸಾಂದ್ರತೆಯನ್ನಾಧರಿತ ವಿವಿಧ ಹೈಡ್ರೋಕಾರ್ಬನ್ ಗುಂಪುಗಳಾಗಿ ಪ್ರತ್ಯೇಕಿಸುವ ಕಾರ್ಯವನ್ನೇ ಶುದ್ಧೀಕರಣವೆಂದು ಕರೆಯುವರು. ಈ ಗುಂಪುಗಳು ವಿವಿಧ ಪ್ರಮಾಣದ ಸಾಂದ್ರತೆಯನ್ನು ಹೊಂದಿರುತ್ತವೆ. ತೈಲ ಶುದ್ಧಿಕರಣದಿಂದ ಸೀಮೆ ಎಣ್ಣೆ, ಡೀಸಲ್, ಕೀಲೆಣ್ಣೆ, ಪೆಟ್ರೋಲ್ ಹಾಗೂ ಗ್ಯಾಸೋಲಿನ್‌ಗಳು ದೊರೆಯುತ್ತವೆ. ಶುದ್ಧೀಕರಣದ ನಂತರ ಉಳಿಯುವ ವಸ್ತುವೆ ನ್ಯಾಫ್ತಾ. ಇದನ್ನು ರಾಸಾಯನಿಕ ಗೊಬ್ಬರ ಹಾಗೂ ಇತರ ವಿವಿಧ ಬಗೆಯ ಪೆಟ್ರೋ ರಾಸಾಯನಿಕ ಕೈಗಾರಿಕೆಗಳಲ್ಲಿ ಕಚ್ಚಾವಸ್ತುವಾಗಿ ಬಳಸಲಾಗುವುದು. ಇಂದು ಒಟ್ಟು 18 ಸಾರ್ವಜನಿಕ ವಲಯದ ಹಾಗೂ 1 ಖಾಸಗಿ ವಲಯದ ಒಟ್ಟು 19 ತೈಲ ಶುದ್ಧೀಕರಣ ಕೇಂದ್ರಗಳಿದ್ದ ಇವುಗಳ ವಾರ್ಷಿಕ ಉತ್ಪಾದನಾ ಸಾಮರ್ಥ್ಯ 127.37 ದ.ಲ. ಟನ್ನುಗಳು.

ಭಾರತದ ತೈಲ ಶುದ್ಧೀಕರಣ ಕೇಂದ್ರಗಳೆಂದರೆ ದಿಗ್ಬಾಯಿ, ಮುಂಬಯಿ, ವಿಶಾಖಪಟ್ಟಣ, ಗುವಾಹತಿ, ಕೊಯಾಲಿ, ಕೊಚ್ಚಿ, ಚೆನ್ನೈ, ಹಾಲ್ದಿಯಾ, ಬೊಂಗೈ ಗಾನ್, ಮಥುರ, ನಾರಿಮನ್, ಮಂಗಳೂರು, ನುಮಾಲಿಗರ್, ಪಾಣಿಪತ್, ಜಾಮ್‌ನಗರ, ತಾಟಿಪಾಕ

ಮತ್ತು ಗುಜರಾತಿನ ವಡಿನಾರ್. ಇವುಗಳಲ್ಲದೆ ತಮಿಳುನಾಡಿನ ಕಡಲೂರು, ಒರಿಸ್ಸದ ಪಾರದೀಪ್, ಮಧ್ಯಪ್ರದೇಶದ ಬಿನ ಮತ್ತು ಪಂಜಾಬಿನ ಭಟಿಂಡಗಳಲ್ಲೂ ಹೊಸ ತೈಲ ಶುದ್ಧೀಕರಣ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಿದೆ.

ರಾಸಾಯನಿಕ ಗೊಬ್ಬರ ಕೈಗಾರಿಕೆ: ಪೆಟ್ರೋಲಿಯಂನ ಉಪವಸ್ತುಗಳನ್ನು ಕಚ್ಚಾ ವಸ್ತುಗಳನ್ನಾಗಿ ಆಧರಿಸಿ ರಸಗೊಬ್ಬರ ಕೈಗಾರಿಕೆಗಳು ಅಭಿವೃದ್ಧಿಹೊಂದಿವೆ. ಆದ್ದರಿಂದ ರಸಗೊಬ್ಬರ ಕೈಗಾರಿಕೆಯನ್ನು ಪೆಟ್ರೋ ರಾಸಾಯನಿಕ ಕೈಗಾರಿಕೆ ಎಂದು ಕರೆಯುವರು. ಭಾರತ ಕೃಷಿ ಪ್ರಧಾನವಾದ ರಾಷ್ಟ್ರವಾಗಿದ್ದು ವ್ಯವಸಾಯದ ಅಭಿವೃದ್ಧಿಯು ಅತಿ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಆದರೆ ಭಾರತದ ಬೇಸಾಯ ಹಲವು ಸಮಸ್ಯೆಯನ್ನು ಎದುರಿಸುತ್ತಿದ್ದು, ಅವುಗಳಲ್ಲಿ ಕಡಿಮೆ ಇಳುವರಿ ಅತಿ ಮುಖ್ಯವಾದುದು. ಇದನ್ನು ಹೋಗಲಾಡಿಸಲು ಹಸಿರುಕ್ರಾಂತಿ ಅವಶ್ಯಕ. ಇದಕ್ಕಾಗಿ ರಸಗೊಬ್ಬರ ಬಳಕೆ ಅಗತ್ಯ.

ವಿಧಗಳು: ರಾಸಾಯನಿಕ ಗೊಬ್ಬರಗಳಲ್ಲಿ ಮೂರು ವಿಧಗಳಿವೆ ಸಾರಜನಕ ಗೊಬ್ಬರಗಳು; ಉದಾ: ಯೂರಿಯಾ, ಅಮೋನಿಯಂ ಸಲ್ಫೇಟ್, ಅಮೋನಿಯಂ ನೈಟ್ರೇಟ್, ಅಮೋನಿಯಂ ಕ್ಲೋರೈಟ್ ಮತ್ತು ಸೋಡಿಯಂ ನೈಟ್ರೇಟ್, ರಂಜಕ ಗೊಬ್ಬರಗಳು; ಉದಾ: ಸೂಪರ್ ಪಾಸ್ಫೇಟ್, ಅಮೋನಿಯಂ ಫಾಸ್ಫೇಟ್ ಇತ್ಯಾದಿ. ಪೊಟಾಷ್ ಗೊಬ್ಬರಗಳು; ಪೊಟಾಶಿಯಂ ಸಲ್ಫೇಟ್, ಪೊಟಾಶಿಯಂ ಕ್ಲೋರೈಡ್ ಮತ್ತು ಪೊಟಾಶಿಯಂ ನೈಟ್ರೇಟ್ ಇತ್ಯಾದಿ.

ಸ್ಥಾನೀಕರಣ ಅಂಶಗಳು: ಕಚ್ಚಾ ವಸ್ತುಗಳ ಪೂರೈಕೆ (ಸ್ವಾಭಾವಿಕ ಅನಿಲ, ನ್ಯಾಫ್ತ, ಇಂಧನದ ಎಣ್ಣೆ, ಕಲ್ಲಿದ್ದಲು ಅನಿಲ, ಗಂಧಕ, ಜಿಪ್ಸಮ್ ಇತ್ಯಾದಿ) ಮಾರುಕಟ್ಟೆ, ಶಕ್ತಿ ಸಂಪನ್ಮೂಲ ಪೂರೈಕೆ, ನೀರಿನ ಪೂರೈಕೆ, ಬಂಡವಾಳ ದೊರೆಯುವಿಕೆ, ಸರ್ಕಾರದ ನೀತಿ ಇತ್ಯಾದಿಗಳು ಪ್ರಮುಖ.

ಭಾರತದಲ್ಲಿ ಮೊದಲ ರಸಗೊಬ್ಬರ ಕೈಗಾರಿಕೆ 1906ರಲ್ಲಿ ತಮಿಳುನಾಡಿನ ರಾಣಿಪೇಟೆಯ ಬಳಿ ಸ್ಥಾಪಿತಗೊಂಡಿತು. ಇಂದು ದೇಶದಲ್ಲಿ ಒಟ್ಟು 159 ರಸಗೊಬ್ಬರ ಕಾರ್ಖಾನೆಗಳಿವೆ (2002).

ಹಂಚಿಕೆ: ಉತ್ತರ ಪ್ರದೇಶದ ಮಥುರ, ಕಾನ್ಪುರ, ಗೋರಖ್‌ಪುರ ಮತ್ತು ವಾರಾಣಸಿ ಗುಜರಾತಿನ ಭಾವಾನಗರ, ಕಾಂಡ್ಲ, ಬರೋಡ ಮತ್ತು ಕರೋಲ್‌ನಲ್ಲಿ, ತಮಿಳುನಾಡಿನ ಚೆನ್ನೈ, ರಾಣಿಪೇಟೆ, ನೈವೇಲಿ, ಕೊಯಮತ್ತೂರು, ಅವಡಿ, ಮನಾಲಿ, ಟುಟಿಕಾರಿನ್, ಮೆಟ್ಟೂರು ಮತ್ತು ತಿರುಚಿರಾಪಳ್ಳಿ, ಜಾರ್ಖಂಡ್‌ನ ಜೆಮ್‌ಷೆಡ್‌ಪುರ ಮತ್ತು ಧನಬಾದ್, ಬಿಹಾರಿನ ಬಕಾನಿ, ಮಹಾರಾಷ್ಟ್ರದ ಮುಂಬಯಿ, ಟ್ರಾಂಬೆ, ಪುಣೆ ಮತ್ತು ತಾಲ್, ಕೇರಳದ ಅಲ್ವೇಯಿ ಮತ್ತು ಕೊಚ್ಚಿ, ಆಂಧ್ರಪ್ರದೇಶದ ವಿಶಾಖಪಟ್ಟಣ, ರಾಮಗುಂಡಂ ಹಾಗೂ ಕಾಕಿನಾಡ, ರಾಜಸ್ತಾನದ ತೋಟಖೆಕ್ರಿ ಮತ್ತು ದೇಬಾರಿ, ಚತ್ತಿಸ್‌ಗಡ್‌ನ ಭಿಲಾಯಿ ಮತ್ತು ಕೂರ್ಬ, ಪಂಜಾಬ್‌ನ ನಂಗಲ್ ಮತ್ತು ಭಟಿಂಡ, ಒರಿಸ್ಸದ ರೂರ್ಕೆಲ, ತಲ್ಚಾರ್, ಪಾರದೀಪ್ ಮತ್ತು ಭುವನೇಶ್ವರ, ಪಶ್ಚಿಮ ಬಂಗಾಲದ ಬರ್ನ್‌ಪುರ, ಹಾಲ್ದಿಯ, ದುರ್ಗಾಪುರ ಮತ್ತು ರಿಶ್ರಾ, ಅಸ್ಸಾಂನ ನಾಮರೂಪ ಮತ್ತು ಕರ್ನಾಟಕದ ಮುನಿರಬಾದ್, ಹೊಸಪೇಟೆ, ಮಂಗಳೂರಿನಲ್ಲಿ ರಸಗೊಬ್ಬರ ಕೈಗಾರಿಕೆಗಳು ಹಂಚಿಕೆಯಾಗಿವೆ.

ಭಾರತ ರಸಗೊಬ್ಬರ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಚೀನ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನದ ನಂತರ 3ನೆಯ ಸ್ಥಾನ ಪಡೆದಿದೆ. ಭಾರತವು ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 8.5 ರಷ್ಟನ್ನು ಉತ್ಪಾದಿಸುತ್ತದೆ. ಇದರ ಉತ್ಪಾದನೆ 151 ಸಾವಿರ ಟನ್ನುಗಳು (2003). ಭಾರತದಲ್ಲಿ ಸರಾಸರಿ ಒಂದು ಹೆಕ್ಟೇರ್‌ಗೆ 86 ಕಿ.ಗ್ರಾಂಷ್ಟು ರಸಗೊಬ್ಬರ ಬಳಸಲಾಗುವುದು. ಇದು ಬಹಳ ಕಡಿಮೆ.

ಚರ್ಮದ ಕೈಗಾರಿಕೆ: ಭಾರತದಲ್ಲಿ ಅಪಾರ ಪಶುಸಂಪತ್ತಿದೆ, ಹೀಗಾಗಿ ಚರ್ಮದ ಉದ್ಯಮಕ್ಕೆ ಉತ್ತಮ ಭವಿಷ್ಯವಿದೆ. ಭಾರತದಲ್ಲಿ ಚರ್ಮದ ಉತ್ಪನ್ನಗಳಿಗೆ ಅಪಾರ ಬೇಡಿಕೆಯಿದೆ. ಚರ್ಮ ಕೈಗಾರಿಕೆಯು ಭಾರತದ ಸಣ್ಣ ಕೈಗಾರಿಕೆ, ಗೃಹ ಕೈಗಾರಿಕೆ ಹಾಗೂ ಕರಕುಶಲ ಕೈಗಾರಿಕೆಯೂ ಆಗಿದೆ. 1970ರ ದಶಕದಿಂದ ಇದರ ರಫ್ತು ಅಧಿಕಗೊಂಡಿದೆ. ತಮಿಳುನಾಡು ಚರ್ಮ ಹದ ಮಾಡುವುದರಲ್ಲಿ ಅತಿ ಮುಖ್ಯವಾಗಿದೆ. ಪಶ್ಚಿಮಬಂಗಾಲ, ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿಯೂ ಈ ಚರ್ಮ ಉದ್ಯಮ ಕಂಡುಬರುತ್ತದೆ. ಪ್ರಮುಖ ಕೈಗಾರಿಕಾ ಕೇಂದ್ರಗಳೆಂದರೆ ಕಾನ್ಪುರ, ಪಾಟಿಯಾಲ, ಕರ್ನಲ್, ಆಗ್ರ, ಪಟಣ, ಜೈಪುರ, ದೆಹಲಿ ಜಲಂದರ್, ಪುಣೆ, ಕೋಲ್ಕತ, ಮುಂಬಯಿ, ಚೆನ್ನೈ, ಅಹಮದಾಬಾದ್, ಕೊಲ್ಲಾಪುರ, ಭೂಪಾಲ್, ಬೆಳಗಾಂವಿ ಮತ್ತು ಕಪೂರ್ತಲ.

ರೈಲ್ವೆ ಎಂಜಿನ್ ತಯಾರಿಕಾ ಉದ್ಯಮ. ಭಾರತದ ರೈಲ್ವೆ ಸಾರಿಗೆ ದೊಡ್ಡ ಉದ್ಯಮ, ಭಾರತದಲ್ಲಿ ರೈಲು ಎಂಜಿನ್‌ಗಳನ್ನು ತಯಾರಿಸುವ ಮೂರು ಕಾರ್ಖಾನೆಗಳಿವೆ–ಚಿತ್ತರಂಜನ್, ವಾರಾಣಸಿ ಮತ್ತು ಜೆಂಷೆಡ್ಪುರ.

ಇವುಗಳಲ್ಲದೆ ರೈಲ್ವೆ ಕೋಚ್ ಹಾಗೂ ಇನ್ನಿತರ ಬಿಡಿ ಭಾಗಗಳನ್ನು ತಯಾರಿಸುವ ಹಲವು ಘಟಕಗಳನ್ನು ಸಹ ಭಾರತದಲ್ಲಿ ಸ್ಥಾಪಿಸಲಾಗಿದೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ.

ಇಂಟಿಗ್ರೇಟ್ ಕೋಚ್ ಫ್ಯಾಕ್ಟರಿ, ಪೆರಂಬೂರು (ಚೆನ್ನೈ ಬಳಿ); ರೈಲ್ವೆ ಕೋಚ್ ಕೈಗಾರಿಕೆ, ಕಪುರ್ತಲ, ಪಂಜಾಬ್ ರೈಲ್ವೆ ವೀಲ್ ಅಂಡ್ ಆಕ್ಸೆಲ್ ಫ್ಯಾಕ್ಟರಿ ಯಲಹಂಕ, ಬೆಂಗಳೂರು, ಟೆಕ್ಸ್ ಮ್ಯಾಕೋ ಕೋಲ್ಕತ ಅಂಡ್ ವೈಟ್ ಕಂಪನಿ, ಕೋಲ್ಕತ.

ಜ್ಞಾನಾಧಾರಿತ ಕೈಗಾರಿಕೆ: ಭಾರತದಲ್ಲಿ ಅತಿವೇಗವಾಗಿ ಬೆಳವಣಿಗೆಯಾಗುತ್ತಿರುವ ಕೈಗಾರಿಕೆಯೆಂದರೆ ಮಾಹಿತಿ ತಂತ್ರಜ್ಞಾನ. ಮಾನವನ ಜ್ಞಾನವೇ ಇದಕ್ಕೆ ಆಧಾರವಾಗಿರುವುದರಿಂದ ಇವನ್ನು ಜ್ಞಾನಾಧಾರಿತ ಕೈಗಾರಿಕೆಯೆಂದೂ ಕರೆಯಲಾಗಿದೆ. ಇದು ಜನರ ಜೀವನ ಶೈಲಿ ಹಾಗೂ ಆರ್ಥಿಕತೆಯ ಮೇಲೆ ಅಪಾರವಾದ ಪ್ರಭಾವ ಬೀರಿದೆ. ಭಾರತದ ಉದ್ಯಮದ ಸಮಸ್ತ ಉತ್ಪನ್ನದಲ್ಲಿ ಸಾಫ್ಟ್‌ವೇರ್ ಶೇ 2 ರಷ್ಟಿದೆ. ಇಂದು ಭಾರತದಲ್ಲಿ ಸಾಫ್ಟ್‌ವೇರ್ ಬೃಹದಾಕಾರದಲ್ಲಿ ಬೆಳೆದಿದೆ. ಭಾರತದ ತಂತ್ರಜ್ಞಾನವನ್ನು ಪಾಶ್ಚಿಮಾತ್ಯ ರಾಷ್ಟ್ರಗಳು ಸಂಪೂರ್ಣವಾಗಿ ಮಾನ್ಯ ಮಾಡಿವೆ. ಭಾರತ ಸರ್ಕಾರವು ಸಾಫ್ಟ್‌ವೇರ್ ಉದ್ಯಮವನ್ನು ಪ್ರೋತ್ಸಾಹಿಸಿ. ರಫ್ತನ್ನು ಉತ್ತೇಜಿಸಲು 2004–05ರಲ್ಲಿ. ಇದರ ಮೂಲಕ ರಫ್ತಾದ ಸಾಫ್ಟ್‌ವೇರ್ ಉತ್ಪನ್ನದ ಮೌಲ್ಯ ಸು. ರೂ. 63371 ಕೋಟಿಗಳು.

ಹಂಚಿಕೆ: ಭಾರತದಲ್ಲಿ ಸಾಫ್ಟ್‌ವೇರ್ ಉದ್ದಿಮೆ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕರ್ನಾಟಕದ ಬೆಂಗಳೂರನ್ನು ಸಿಲಿಕಾನ್ ವ್ಯಾಲಿ ಆಫ್ ಇಂಡಿಯ ಎಂದು ಕರೆಯಲಾಗಿದೆ. ಮೂಲತಃ ಅಮೆರಿಕದ ಕ್ಯಾಲಿಫೋರ್ನಿಯ ಸಿಲಿಕಾನ್ ಕಣಿವೆ ಈ ಉದ್ಯಮಕ್ಕೆ ಹೆಸರಾಗಿದ್ದು ಬೆಂಗಳೂರನ್ನು ಇದೇ ಹೆಸರಿನಿಂದ ಕರೆಯಲಾಗಿದೆ. ಇದಲ್ಲದೆ, ಮಂಗಳೂರು, ಹುಬ್ಬಳ್ಳಿ, ಹೈದರಾಬಾದ್, ಗಾಂಧಿನಗರ, ಪುಣೆ, ನೋಯಿಡ, ಚೆನ್ನೈ ಮತ್ತು ಉಡುಪಿಯಲ್ಲೂ ಈ ಉದ್ದಿಮೆ ಕಂಡುಬರುತ್ತದೆ. (ಎಬಿ.ಎ.;ಪಿ.ಎಂ.)

**ಭಾರತದ ಖನಿಜಸಂಪತ್ತು ಮತ್ತು ಗಣಿಗಾರಿಕೆ:** ಖನಿಜಗಳಿಗೂ ಖನಿಜೋದ್ಯಮಕ್ಕೂ ಭಾರತ ಪ್ರಾಚೀನ ಕಾಲದಿಂದಲೂ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡಿತ್ತೆನ್ನುವುದು ಕೌಟಿಲ್ಯನ ಅರ್ಥವಿಜ್ಞಾನದಿಂದ ತಿಳಿದುಬರುತ್ತದೆ. ಖನಿಜಗಳು ಸಂಪತ್ತಿನ ಮೂಲ ಎನ್ನುವುದನ್ನೂ ಅವುಗಳ ಬಲದ ಮೇಲೆ ಸೈನ್ಯವನ್ನು ಕಟ್ಟಿ ಪ್ರಪಂಚವನ್ನೇ ಗೆಲ್ಲಬಹುದೆನ್ನುವುದನ್ನೂ ಆತ ವಿವರಿಸಿ ಹೇಳಿದ. ಖನಿಜಗಳ ಗಣಿಗಾರಿಕೆ ಬಹಳ ಮಹತ್ತ್ವದ್ದಾದ ಕಾರಣ ಅದು ಸರ್ಕಾರದ ವಶದಲ್ಲಿರಬೇಕೆಂದು ಆತ ನಿರ್ಣಯಿಸಿದ್ದ. ಗಣಿಗಳನ್ನು ಯಾವರೀತಿ ನಡೆಸಬೇಕು, ಅವುಗಳಿಂದ ರಾಜಾದಾಯ ಎಷ್ಟು ಪಡೆಯಬೇಕು, ದೇಶದ ಸಂಪತ್ತನ್ನು ಯಾವರೀತಿ ಅಭಿವೃದ್ಧಿಗೊಳಿಸಬೇಕು ಎನ್ನುವುದನ್ನು ವಿವರಿಸಿದ್ದಾನೆ. ಭಾರತದಲ್ಲಿ ಗಣಿಗಾರಿಕೆ ಎರಡು ಸಾವಿರ ವರ್ಷಗಳಿಗೂ ಹಳೆಯದೆಂದೂ ಈ ಕೈಗಾರಿಕೆ ಬಹಳವಾಗಿ ಮುಂದುವರಿದಿತ್ತೆಂದೂ ಅರ್ಥಶಾಸ್ತ್ರದಿಂದ ತಿಳಿದುಬರುತ್ತದೆ. ಕಾಲಾಂತರದಲ್ಲಿ ಮಿಕ್ಕ ಕಲೆಗಳಂತೆ ಖನಿಜವಿದ್ಯೆಯೂ ಗಣಿಗಾರಿಕೆ ಕಲೆಯೂ ಅಖಿಲವಾಗಿ ಭಾರತ ಬಡದೇಶವಾಯಿತು. ನೂರಾರು ವರ್ಷಕಾಲ ದಾಸ್ಯಕ್ಕೊಳಗಾಗಿ ತಗ್ಗಿ ನಡೆಯಬೇಕಾಗಿ ಬಂತು; ಖನಿಜಗಳ ಬಳಕೆಯೇ ಮರೆತು ಹೋಗಿ ಸ್ವಾವಲಂಬನೆಯ ಆಧಾರ ತಪ್ಪಿ ದೇಶ ಹೀನದೆಸೆಗಿಳಿಯಿತು. ಭಾರತ ದೇಶ ಅಭಿವೃದ್ಧಿಯ ದಾರಿಯಲ್ಲಿ ಮುಂದುವರಿಯಬೇಕಾದರೆ ಖನಿಜಸಂಪತ್ತನ್ನು ರೂಢಿಸಿಕೊಳ್ಳಬೇಕು, ಗಣಿಗಾರಿಕೆಯನ್ನು ಅಭಿವೃದ್ಧಿಗೊಳಿಸಬೇಕು ಎನ್ನುವುದು ಸ್ಪಷ್ಟವಾಗಿದೆ.

ಭಾರತಕ್ಕೆ ಸ್ವಾತಂತ್ರ ಬಂದ ಕಾಲಕ್ಕೆ ಅರುವತ್ತನಾಲ್ಕು ಕೋಟಿ ರೂಪಾಯಿ ಬಾಳುವ 22 ಖನಿಜಗಳು ಮಾತ್ರ ದೇಶದಲ್ಲಿ ಉತ್ಪತ್ತಿಯಾಗುತ್ತಿದ್ದುವು. 1980ರಲ್ಲಿ ಮುಖ್ಯ ಖನಿಜಗಳ ಸಂಖ್ಯೆ 63ರಕ್ಕೆ ಏರಿತ್ತು. ಮೌಲ್ಯ ರೂ 1,253 ಕೋಟಿ ಎಂದರೆ ಈ ಮೂವತ್ತು ವರ್ಷಗಳ ಅವಧಿಯಲ್ಲಿ ಖನಿಜೋತ್ಪನ್ನ ಇಪ್ಪತ್ತರಷ್ಟು ಅಭಿವೃದ್ಧಿ ಹೊಂದಿತೆಂದಾಯಿತು. ಮುಂದುವರಿದ ರಾಷ್ಟ್ರಗಳ ಖನಿಜಾಭಿವೃದ್ಧಿ ಮತ್ತು ಗಣಿಗಾರಿಕೆಯ ಬೆಳವಣಿಗೆ ಗಮನಿಸಿದರೆ ಭಾರತ ಸಾಧಿಸಬೇಕಾದದ್ದು ಇನ್ನೂ ಬಹಳವಿದೆ.

ಖನಿಜಗಳ ಉಪಯೋಗವನ್ನು ಅನುಸರಿಸಿ ಅವನ್ನು ಇಂಧನ ಖನಿಜಗಳು, ಲೋಹ ಖನಿಜಗಳು ಮತ್ತು ಕೈಗಾರಿಕೆಯಲ್ಲಿ ಉಪಯೋಗವಾಗುವ ಖನಿಜಗಳು ಎಂಬುದಾಗಿ ಕೂಡ ವರ್ಗೀಕರಿಸಬಹುದು.

ಭಾರತದಲ್ಲಿ ದೊರೆಯುವ ಮುಖ್ಯ ಖನಿಜಗಳೆಲ್ಲವನ್ನೂ ವಿಂಗಡಿಸಿ ಅವನ್ನು ಕೆಳಗಿನ ಪಟ್ಟಿಯಲ್ಲಿ ಕಾಣಿಸಿದೆ.

ದೇಶದ ಎಲ್ಲ ರಾಜ್ಯಗಳಲ್ಲೂ ಖನಿಜಗಳು ಸಮವಾಗಿ ವಿತರಣೆಗೊಂಡಿಲ್ಲ. ಬಿಹಾರ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶ ರಾಜ್ಯಗಳು ಕಲ್ಲಿದ್ದಲಿಗೆ ಹೆಸರುವಾಸಿಯಾದವು. ಅದರಿಂದಾಗಿ ಆ ರಾಜ್ಯಗಳು ಮೊದಲ ಸ್ಥಾನ ಪಡೆದಿವೆ. ಅದೇ ರೀತಿ ಈಚಿನ ವರ್ಷಗಳಲ್ಲಿ ಗುಜರಾತ್ ಮತ್ತು ಅಸ್ಸಾಮ್ ರಾಜ್ಯಗಳು ತಮ್ಮಲ್ಲಿ ದೊರೆಯುವ ಪೆಟ್ರೋಲ್ ಖನಿಜದಿಂದಾಗಿ ಮುಂದೆ ಬಂದಿವೆ. ತಮಿಳುನಾಡು ಲಿಗ್ನೈಟ್ ಖನಿಜವನ್ನು ಉತ್ಪಾದಿಸುವುದರಿಂದ

| ಖನಿಜ ವರ್ಗ | ಅಗತ್ಯ ಪೂರೈಸುವ ಪ್ರಮಾಣದಲ್ಲಿ ದೊರೆಯುವ ಖನಿಜಗಳು | ಅಲ್ಪ ಪ್ರಮಾಣದಲ್ಲಿ ದೊರೆತು ಇನ್ನೂ ಅಭಿವೃದ್ಧಿ-ಪಡಿಸಬೇಕಾದ ಖನಿಜಗಳು | ದೇಶದಲ್ಲಿ ದೊರೆಯದೆ ಇರುವ ಖನಿಜಗಳು |
|---|---|---|---|
| ಇಂಧನ ಖನಿಜಗಳು | ಕಲ್ಲಿದ್ದಲು | ಪೆಟ್ರೋಲ್ | – |
| ಲೋಹ ಖನಿಜಗಳು: ಕಬ್ಬಿಣ ಸಂಬಂಧದವು | ಕಬ್ಬಿಣ ಅದಿರು, ಮ್ಯಾಂಗನೀಸ್ ಅದಿರು, ಟೈಟೇನಿಯಮ್ ಕ್ರೋಮೈಟ್ | ನಿಕ್ಕಲ್ | ಮಾಲಿಬ್ಡಿನಮ್, ಕೊಬಾಲ್ಟ್ |
| ಕಬ್ಬಿಣ ಸಂಬಂಧವಿಲ್ಲದವು ಇತರ ಲೋಹಗಳು | ಅಲ್ಯೂಮಿನಿಯಮ್ ತೋರಿಯಮ್ | ತಾಮ್ರ, ಸೀಸ, ಯುರೇನಿಯಮ್, ಚಿನ್ನ, ಬೆಳ್ಳಿ, ಬೇರಿಯಮ್ | ಟಿನ್ ಆಂಟಿಮನಿ, ಆರ್ಸೆನಿಕ್ ಬಿಸ್ಮತ್ ಕ್ರಯೊಲೈಟ್ ಪಾದರಸ |
| ಕೈಗಾರಿಕೆಯಲ್ಲಿ ಉಪಯೋಗವಾಗುವ ಖನಿಜಗಳು | ಸುಣ್ಣಕಲ್ಲು, ಡಾಲೊಮೈಟ್ ಜೇಡಿಮಣ್ಣು, ಮೈಕ (ಕಾಗೆ ಬಂಗಾರ), ಜಿಪ್ಸಮ್, ಫೋರ್‍ಸೈಟ್, ಕಯನೈಟ್, ಮ್ಯಾಗ್ನಸೈಟ್, ಉಪ್ಪು, ವಜ್ರ | ಗ್ರಾಫೈಟ್, ಸಿರ್ಕಾನ್ ಗಂಧಕ, ರಂಜಕ, ಕಲ್ನಾರು ಪಿರೈಟೀಸ್ ವರ್ಮಿಕ್ಯೂಲೈಟ್ | |

ಮುಂದುವರಿದಿದೆ. ಕರ್ನಾಟಕ ರಾಜ್ಯದಲ್ಲಿ ನಾನಾತರದ ಉಪಯುಕ್ತವಾದ ಅನೇಕ ಖನಿಜಗಳು ದೊರೆತರೂ ಇಂಧನ ಖನಿಜಗಳು ಇಲ್ಲದಿರುವುದರಿಂದ ಇದು ಖನಿಜೋತ್ಪಾದನೆಯಲ್ಲಿ ಹನ್ನೊಂದನೆಯ ಸ್ಥಾನ ಪಡೆದಿದೆ. ಖನಿಜ ಸಂಪತ್ತು ಅಷ್ಟು ಹೆಚ್ಚಾಗಿಲ್ಲದ ರಾಜ್ಯಗಳೆಂದರೆ ಕಾಶ್ಮೀರ, ಕೇರಳ, ಹರಿಯಾಣ, ಪಂಜಾಬ್, ಮೇಘಾಲಯ ಮತ್ತು ಉತ್ತರ ಪ್ರದೇಶ

ಇಂಧನ ಖನಿಜಗಳು. ಕಲ್ಲಿದ್ದಲು: ಭಾರತದ ಖನಿಜ ಸಂಪತ್ತಿನಲ್ಲಿ ಬಲು ಮುಖ್ಯಸ್ಥಾನ ಪಡೆದಿರುವ ಖನಿಜವಿದು. 2,09,736 ಮಿಲಿಯನ್ ಟನ್ನುಗಳಷ್ಟು ಕಲ್ಲಿದ್ದಲು ದೇಶದಲ್ಲಿ ದೊರೆಯುವುದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 26,150 ಮಿಲಿಯನ್ ಟನ್ ಖಚಿತವಾಗಿ ದೊರೆಯುವ ವರ್ಗಕ್ಕೆ ಸೇರಿದೆ. ಕೋಕ್ ಉತ್ಪಾದನೆಗೆ ಬಳಸಲಾಗುವ ಕಲ್ಲಿದ್ದಲಿನ ಪ್ರಮಾಣ 19,396 ಮಿಲಿಯನ್ ಟನ್. ಕೋಕ್ ತಯಾರಿಕೆಗೆ ಸರಿಹೋಗದ, ಆದರೆ ರೈಲುಗಾಡಿ ನಡೆಸಲು ಹಬೆ ಮೂಲಕ ವಿದ್ಯುಚ್ಛಕ್ತಿ ಉತ್ಪಾದಿಸಲು ಉಪಯೋಗವಾಗುವ ಕಲ್ಲಿದ್ದಲು ದೊರೆಯುವ ಪ್ರಮಾಣ 63,675 ಮಿಲಿಯನ್ ಟನ್. ಮುಖ್ಯ ನಿಕ್ಷೇಪಗಳು ಪಶ್ಚಿಮಬಂಗಾಲ, ಬಿಹಾರ, ಒರಿಸ್ಸ, ಮಧ್ಯಪ್ರದೇಶ, ಜಾರ್ಖಂಡ್, ಚತ್ತೀಸ್‍ಗಡ್, ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲಿವೆ. ಕೋಕ್ ತಯಾರಿಕೆಗೆ ಅನುಕೂಲಿಸುವ ಕಲ್ಲಿದ್ದಲು ಮುಖ್ಯವಾಗಿ ಬಂಗಾಲ ಬಿಹಾರ ಪ್ರಾಂತ್ಯಗಳಲ್ಲಿ ದೊರೆಯುತ್ತದೆ. ಪೆಟ್ರೋಲ್ ಮತ್ತು ಇಂಧನ ತೈಲಗಳ ಬೆಲೆ ಇತ್ತೀಚಿನ ವರ್ಷಗಳಲ್ಲಿ ವಿಪರೀತವಾಗಿ ಹೆಚ್ಚಿರುವುದರಿಂದ ಕೈಗಾರಿಕೆಗಳು ಕಲ್ಲಿದ್ದಲಿನ ಬಳಕೆಯೆಡೆಗೆ ಗಮನ ಹರಿಸುತ್ತಿವೆ. ಈ ಕಾರಣವಾಗಿ ಕಲ್ಲಿದ್ದಲಿನ ಉತ್ಪತ್ತಿ ಪ್ರತಿ ವರ್ಷವೂ ಹೆಚ್ಚುತ್ತ ಹೋಗುತ್ತಿದೆ. 1970ರಲ್ಲಿ ಉತ್ಪತ್ತಿ 73 ಮಿಲಿಯನ್ ಟನ್ ಮಾತ್ರವಿದ್ದು 2003 ರಲ್ಲಿ 341 ಮಿಲಿಯನ್ ಟನ್ ಮಿತಿ ದಾಟಿದೆ.

ದೇಶದ ಎಲ್ಲ ಕಲ್ಲಿದ್ದಲು ಗಣಿಗಳೂ ಭಾರತ ಸರ್ಕಾರದ ಕೋಲ್ ಇಂಡಿಯ ಲಿಮಿಟೆಡ್ (ಸಿಐಎಲ್) ಎಂಬ ಕಂಪನಿಯ ಸ್ವಾಮ್ಯಕ್ಕೆ ಒಳಪಟ್ಟಿವೆ. ಇದು ಮುಂದಿನ ಹತ್ತು ವರ್ಷಗಳಲ್ಲಿ ಉತ್ಪಾದನೆಯನ್ನು ದ್ವಿಗುಣಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಗಣಿಯಿಂದ ಹೊರತಗೆದ ಕಲ್ಲಿದ್ದಲಿನಲ್ಲಿ ಇರುವ ಕಳಪೆ ವಸ್ತುಗಳನ್ನು ನಿವಾರಿಸಲು ಕಲ್ಲಿದ್ದಲನ್ನು ತೊಳೆದು ಶುದ್ಧೀಕರಿಸುವ ತೊಳೆಯಂತ್ರ (ವಾಷರಿ) ಸಮುದಾಯಗಳಿವೆ. ಇವು ಉಕ್ಕಿನ ಕೈಗಾರಿಕೆಗೆ ಬೇಕಾಗುವ ಶುದ್ಧ ಕಲ್ಲಿದ್ದಲನ್ನು ಒದಗಿಸುತ್ತವೆ. ಬಿಹಾರ ರಾಜ್ಯದಲ್ಲಿ ಕಾರ್ಗಲಿ, ಕಥಾರ, ಸವಾಂಗ್, ಗಿಡಿ, ದುಗ್ದ, ಭೋಜುಧಿ, ಪತಾರಧಿ ಮತ್ತು ಲೊಧ್ನ ಎಂಬ ಸ್ಥಳಗಳಲ್ಲಿವೆ. ವರ್ಷಂಪ್ರತಿ ಸು. 10 ಮಿ ಟನ್ನುಗಳಷ್ಟು ಶುದ್ಧ ಕಲ್ಲಿದ್ದಲನ್ನು ಈ ತೊಳೆಯಂತ್ರಗಳು ಉತ್ಪಾದಿಸಬಲ್ಲವು. ಹಾಗೆ ಶುದ್ಧಿಗೊಳಿಸಿದ ಕಲ್ಲಿದ್ದಲೆಲ್ಲವೂ ಉಕ್ಕಿನ ಕಾರ್ಯಾಗಾರಗಳಿಗೆ ಸರಬರಾಜಾಗುತ್ತದೆ. ಇವೇ ಅಲ್ಲದೆ ಇನ್ನೂ ನಾಲ್ಕು ಮುಖ್ಯ ತೊಳೆಯಂತ್ರಗಳನ್ನು ಬಿಹಾರದ ಸುದಾಮ್ಧಿ, ಮಣಿಧಿ, ರಾಮಗಡ ಮತ್ತು ಕೇಡಿಯ ಹತ್ತಿರ ಸ್ಥಾಪಿಸಲು ಕೋಲ್ ಇಂಡಿಯ ಕ್ರಮಕೈಗೊಂಡಿದೆ.

ದೇಶದ ಎಲ್ಲ ಕಲ್ಲಿದ್ದಲ ಗಣಿಗಳನ್ನೂ ಸರ್ಕಾರ 1972ರಲ್ಲಿ ತನ್ನ ವಶಕ್ಕೆ ತೆಗೆದುಕೊಂಡಿತು. ಅವುಗಳ ಕಾರ್ಯವನ್ನು ಕೋಲ್ ಇಂಡಿಯ ನೋಡಿಕೊಳ್ಳುತ್ತದೆ. ಇದರ ಅಧೀನದಲ್ಲಿ ಭಾರತ್ ಕೋಕಿಂಗ್ ಕೋಲ್, ಈಸ್ಟರ್ನ್ ಕೋಲ್‍ಫೀಲ್ಡ್ ಲಿಮಿಟೆಡ್ (ಇದು ಪಶ್ಚಿಮ ಬಂಗಾಲದ ರಾಣಿಗಂಜ್ ಗಣಿಗಳನ್ನೂ ಬಿಹಾರದ ಮುಂಗ್ರ ಗಣಿಗಳನ್ನೂ ನೋಡಿಕೊಳ್ಳುತ್ತದೆ), ಸೆಂಟ್ರಲ್ ಕೋಲ್‍ಫೀಲ್ಡ್ (ಇದು ಬಿಹಾರದ ಉತ್ತರ ಮತ್ತು ದಕ್ಷಿಣ ಕರನಪುರ ಗಣಿಗಳು, ಒರಿಸ್ಸ ರಾಜ್ಯದ ತಾಲಚೇರ್ ಗಣಿಗಳು, ಮಧ್ಯಪ್ರದೇಶದ ಸಿಂಗ್ರೌಲಿ ಗಣಿಗಳು ಇವುಗಳ ಉಸ್ತುವಾರಿ ನೋಡುತ್ತದೆ) ಮತ್ತು ಈಸ್ಟರ್ನ್ ಕೋಲ್‍ಫೀಲ್ಡ್ (ಇದು ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸ ರಾಜ್ಯದ ಗಣಿಗಳನ್ನು ನೋಡಿಕೊಳ್ಳುತ್ತದೆ) ಎಂಬ ಅಂಗ ಸಂಸ್ಥೆಗಳಿವೆ. ಆಂಧ್ರಪ್ರದೇಶದಲ್ಲಿರುವ ಸಿಂಗರಣಿ ಗಣಿಗಳು ಆಂಧ್ರ ಮತ್ತು ಭಾರತ ಸರಕಾರದ ಜಂಟಿ ಅಧೀನದಲ್ಲಿವೆ.

ರೈಲು ಎಂಜಿನ್ನುಗಳಿಗೆ ಬೇಕಾಗುವ ಕಲ್ಲಿದ್ದಲನ್ನು ಒದಗಿಸುವ ಸಲುವಾಗಿ ಕಲ್ಲಿದ್ದಲ ಗಣಿಗಾರಿಕೆಯನ್ನು ಪ್ರಾರಂಭಿಸಲಾಯಿತು (1857). ರಾಣಿಗಂಜ್ ಕಲ್ಲಿದ್ದಲ ಗಣಿಗಳು ಮೂರು ವರ್ಷಗಳಲ್ಲಿ ಸು. 50,000 ಟನ್ ಮಾತ್ರ ಉತ್ಪಾದಿಸಿದುವು. ಈಗ ಒಟ್ಟು ಉತ್ಪಾದನೆ ಸು. 341 ಮಿಲಿಯನ್ ಟನ್ನುಗಳಷ್ಟು ಹೆಚ್ಚಿದೆ. ಕಲ್ಲಿದ್ದಲಿನ ಮುಖ್ಯ ಉಪಯೋಗ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದರಲ್ಲಿದೆ (22 ಮಿಲಿಯನ್ ಟನ್). ಇದನ್ನು ಬಿಟ್ಟರೆ ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯಲ್ಲಿ 18 ಮಿಲಿಯನ್ ಟನ್ ಬಳಕೆಯಾಗುತ್ತಿದೆ. ರೈಲು ಎಂಜಿನ್ನಿಗಾಗಿ ಬಳಸಲಾಗುವ ಪ್ರಮಾಣ 14 ಮಿಲಿಯನ್ ಟನ್ ಮಾತ್ರ.

ಅಭಿವೃದ್ಧಿಯ ಹಾದಿಯಲ್ಲಿ ದೇಶ ಮುಂದುವರಿದಂತೆ ಕಲ್ಲಿದ್ದಲಿನ ಉಪಯೋಗ ಹೆಚ್ಚುತ್ತ ಹೋಗುತ್ತದೆ. ಸ್ವಲ್ಪ ಕಾಲ ಸುಲಭವಾಗಿ ದೊರೆಯುತ್ತಿದ್ದ ಪೆಟ್ರೋಲಿನಿಂದಾಗಿ ಕಲ್ಲಿದ್ದಲು ತನ್ನ ಪ್ರಾಮುಖ್ಯ ಕಳೆದುಕೊಂಡಿತ್ತು. 1973ರಿಂದೀಚೆಗೆ ಪಟ್ರೋಲಿನ ಬೆಲೆ ವಿಪರೀತವಾಗಿ ಏರಿಹೋಗಿರುವುದರಿಂದಲೂ ಅದನ್ನು ದೊರಕಿಸಿಕೊಳ್ಳುವುದು ಕಷ್ಟವಾಗಿರುವುದರಿಂದಲೂ ಮತ್ತೆ ಕಲ್ಲಿದ್ದಲಿನ ಕಡೆಗೆ ಹೆಚ್ಚು ಗಮನ ಕೊಡಲಾಗುತ್ತಿದೆ.

ವಿವಿಧ ರಾಜ್ಯಗಳಲ್ಲಿ ಕಲ್ಲಿದ್ದಲಿನ ಉತ್ಪಾದನೆ (2004-05ರಲ್ಲಿ)

| **ರಾಜ್ಯ** | | **ಉತ್ಪಾದನೆ** ದ.ಲ. (ಟನ್ನುಗಳಲ್ಲಿ) |
|---|---|---|
| ಆಂಧ್ರ | . . . | 33.2 |
| ಬಿಹಾರ್ | . . . | 78.7 |
| ಮಧ್ಯಪ್ರದೇಶ | . . . | 45.7 |
| ಮಹಾರಾಷ್ಟ್ರ | . . . | 31.4 |
| ಒರಿಸ್ಸ | . . . | 52.2 |
| ಪಶ್ಚಿಮ ಬಂಗಾಲ | . . . | 20.5 |
| ಚತ್ತೀಸ್‍ಗಡ್ | . . . | 56.7 |
| ಇತರೆ | . . . | 22.8 |
| **ಒಟ್ಟು** | | **376.6 ದ.ಲ. ಟನ್ನುಗಳು** |

ಲಿಗ್ನೈಟ್: ಕಲ್ಲಿದ್ದಲಿಗಿಂತ ಸ್ವಲ್ಪ ಕಡಿಮೆ ದರ್ಜೆಯ ಇಂಧನ ಖನಿಜ. ದೇಶದಲ್ಲಿ ಸು. 2,100 ಮಿಲಿಯನ್‍ಟನ್ನುಗಳಷ್ಟು ಲಿಗ್ನೈಟ್ ದೊರೆಯುವುದೆಂದು ಅಂದಾಜು. ಇದರಲ್ಲಿ ಸು. 1,900 ಮಿಲಿಯನ್‍ಟನ್ನುಗಳು ತಮಿಳುನಾಡಿನ ನೈವೇಲಿ ಪ್ರಾಂತ್ಯದಲ್ಲಿದೆ. ಮುಖ್ಯವಾದ ಗಣಿ ಇರುವುದು ಕಡಲೂರಿನ ಬಳಿ ಇರುವ ನೈವೇಲಿಯಲ್ಲಿ. ಅಗಾಧ ಕಮರಿಯಂತಿರುವ

ಇಲ್ಲಿಯ ಬೃಹದಾಕಾರದ ಗಣಿಯಿಂದ ವರ್ಷಂಪ್ರತಿ ಸು. 3.8 ಮಿಲಿಯನ್‌ಟನ್ನುಗಳಷ್ಟು ಲಿಗ್ನೈಟನ್ನು ಉತ್ಪಾದಿಸಲಾಗುತ್ತಿದೆ. 2000–01ರ ಹೊತ್ತಿಗೆ ಉತ್ಪಾದನೆಯನ್ನು 17 ಮಿಲಿಯನ್‌ಟನ್ನುಗಳಷ್ಟು ಹೆಚ್ಚಿಸಲು ಯೋಜನೆ ರೂಪಿತವಾಗಿದೆ. ದಕ್ಷಿಣ ಭಾರತದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆ ಆಗುತ್ತಿರುವುದರಿಂದ ಇನ್ನೊಂದು ಗಣಿಯನ್ನು ನೈವೇಲಿಯ ಬಳಿಯಲ್ಲೆ ತೆರೆದು ಸು. ಏಳು ಮಿಲಿಯನ್ ಟನ್ ಉತ್ಪಾದನೆ ಮಾಡಿ ಅದರಿಂದ ವಿದ್ಯುಚ್ಛಕ್ತಿ ಪಡೆಯಲು ಯೋಚಿಸಲಾಗಿದೆ. ತಮಿಳುನಾಡಿನ ಗಣಿ ಕೈಗಾರಿಕೆಯಲ್ಲಿ ಲಿಗ್ನೈಟ್ ಗಣಿಗಾರಿಕೆ ಮುಖ್ಯ ಸ್ಥಾನ ಪಡೆದುಕೊಂಡಿದೆ.

ಪೆಟ್ರೋಲಿಯಂ: ಪೆಟ್ರೋಲ್ ದ್ರವರೂಪದಲ್ಲಿರುವ ಅತಿ ಮುಖ್ಯ ಇಂಧನ ಖನಿಜ. ಇದರ ಬಳಕೆಯಿಂದ ಕೈಗಾರಿಕೆಗಳಲ್ಲಿ ದೊಡ್ಡ ಕ್ರಾಂತಿಯಾಗುತ್ತ ಬಂದಿದೆ. ಭಾರತದ ಮೊದಲ ಪೆಟ್ರೋಲ್ ಬಾವಿಯನ್ನು 1870ರಲ್ಲಿ ಅಸ್ಸಾಮಿನ ದಿಗ್ಬಾಯ್ ಎಂಬ ಪ್ರದೇಶದಲ್ಲಿ ಕೊರೆಯಲಾಯಿತು.

ಹಿಂದೆ ಪೆಟ್ರೋಲಿಯಮ್ ಉತ್ಪಾದನೆ ಅಸ್ಸಾಮ್ ಮತ್ತು ಗುಜರಾತ್ ರಾಜ್ಯಗಳಿಗೆ ಸೀಮಿತವಾಗಿತ್ತು. ಈ ರಾಜ್ಯಗಳ ಶಿಲೆಗಳಲ್ಲಿ ಸು. 700 ಮಿಲಿಯನ್‌ಟನ್ನುಗಳಷ್ಟು ಎಣ್ಣೆ ಇರುವುದಾಗಿ ಅಂದಾಜು. ಆದರೆ ಇದರಿಂದ ಸು. 200 ಮಿಲಿಯನ್ ಟನ್ನುಗಳಷ್ಟು ಮಾತ್ರ ಉತ್ಪಾದಿಸುವುದು ಸಾಧ್ಯ. 1950ರ ತನಕ ಬರ್ಮಾ ಆಯಿಲ್ ಕಂಪನಿ ಎಂಬ ಸಂಸ್ಥೆ ಅಸ್ಸಾಮ್ ರಾಜ್ಯದಲ್ಲಿ (ದಿಗ್ಬಾಯ್, ನಾಹೊರ್‌ಕಟಿಯ ಮತ್ತು ಮೊರಾನುಗಳಬಳಿ) ಎಣ್ಣೆ ಉತ್ಪಾದನೆ ಮಾಡುತ್ತಿತ್ತು. ದೇಶಕ್ಕೆ ಸ್ವಾತಂತ್ರ ಬಂದಮೇಲೆ 1956ರಲ್ಲಿ ಎಣ್ಣೆಯ ಅನ್ವೇಷಣೆಗಾಗಿಯೇ ತೈಲ ಮತ್ತು ನೈಸರ್ಗಿಕಾನಿಲ ಆಯೋಗ (ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮಿಶನ್, ಓಎನ್‌ಜಿಸಿ) ಎಂಬ ಸಂಸ್ಥೆ ಸ್ಥಾಪಿತವಾಯಿತು. 1960ರಲ್ಲಿ ಗುಜರಾತಿನ ಕ್ಯಾಂಬೆ ಪ್ರಾಂತ್ಯದಲ್ಲಿ ನಡೆಸಿದ ಶೋಧನೆಯ ಫಲವಾಗಿ ಮೊದಲಿಗೆ ಅಂಕಲೇಶ್ವರ ಕಲೋಲ್ ಮತ್ತು ನವಗಾಮ್ ಬಳಿ ಎಣ್ಣೆ ದೊರೆಯುವುದು ಕಂಡುಬಂದಿತು. ಅಲ್ಲಿಂದೀಚೆಗೆ ಈ ಸ್ಥಳಗಳಿಂದಲೂ ಎಣ್ಣೆ ಉತ್ಪತ್ತಿಯಾಗುತ್ತಿದೆ.

**ಭಾರತದಲ್ಲಿ ಪೆಟ್ರೋಲ್ ಉತ್ಪಾದನೆ (2004ರಲ್ಲಿ) ದ.ಲ. ಟನ್ನುಗಳಲ್ಲಿ.**

| | |
|---|---|
| ಬಾಂಬೆ ಹೈ | 21.9 |
| ಅಸ್ಸಾಂ | 4.6 |
| ಗುಜರಾತ್ | 6.1 |
| ಅರುಣಾಚಲಪ್ರದೇಶ | 0.1 |
| ಆಂಧ್ರಪ್ರದೇಶ | 0.7 |
| **ಒಟ್ಟು** | **33.6 ದ.ಲ. ಟನ್ನುಗಳು.** |

ಭೂಖಂಡದ ಮೇಲೆ ಅಲ್ಲದೆ ಸಮುದ್ರದಿಂದ ಆವೃತವಾಗಿರುವ ಕರಾವಳಿ ಅಂಚಿನಲ್ಲಿ ಕೂಡ ಎಣ್ಣೆಗಾಗಿ ಶೋಧನೆ ಹಲವಾರು ವರ್ಷಗಳಿಂದ ನಡೆಯುತ್ತ ಬಂದಿದೆ. ಮುಂಬಯಿಯ ಪಶ್ಚಿಮಕ್ಕೆ ಸಮುದ್ರ ಮಧ್ಯದಲ್ಲಿ ಕೊರೆದ (1974) ಮೊದಲಬಾವಿಯಲ್ಲಿ ದೊರೆಯಿತು. ಈ ಕೇಂದ್ರದಿಂದ (ಬಾಂಬೆಹೈ)ಈಗ ಸು. ಎರಡು ಮಿಲಿಯನ್ ಟನ್ನುಗಳಷ್ಟು ಎಣ್ಣೆ ಉತ್ಪತ್ತಿಯಾಗುತ್ತಿದೆ. ಕ್ರಮೇಣ ಉತ್ಪಾದನೆ ಹತ್ತು ಮಿಲಿಯನ್‌ಟನ್ನುಗಳಷ್ಟು ಗಾತ್ರ ಮುಟ್ಟುವ ನಿರೀಕ್ಷೆ ಇದೆ. ಪೆಟ್ರೋಲಿಯಮ್ ಬಳಕೆ ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಈಗ ದೇಶಕ್ಕೆ ವಾರ್ಷಿಕವಾಗಿ 80 ಮಿಲಿಯನ್ ಟನ್ನುಗಳಷ್ಟು ಎಣ್ಣೆ ಬೇಕಾಗಿದೆ. ದೇಶದಲ್ಲಿ ಉತ್ಪಾದನೆ ಆಗುತ್ತಿರುವುದು 33 ಮಿಲಿಯನ್ ಟನ್ ಮಾತ್ರ. 50 ಮಿಲಿಯನ್ ಎಣ್ಣೆಯನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಬೇಕಾಗುವ ವಿದೇಶೀ ವಿನಿಮಯ ಹಣ ಅಪಾರ. ಸ್ವಾವಲಂಬನೆಯ ಆಧಾರದ ಮೇಲೆ ಭವಿಷ್ಯವನ್ನು ರೂಪುಗೊಳಿಸಬೇಕಾದರೆ ಪೆಟ್ರೋಲ್ ಬಳಕೆ ಕಡಿಮೆ ಮಾಡದೆ ವಿಧಿ ಇಲ್ಲ.

ಲೋಹ ಖನಿಜಗಳು ಕಬ್ಬಿಣದ ಅದಿರು: ಕಬ್ಬಿಣದ ಅದಿರು ಭಾರತದ ಖನಿಜ ಸಂಪತ್ತಿನಲ್ಲಿ ಎರಡನೆಯ ಸ್ಥಾನಪಡೆದಿದೆ. ದೇಶದಲ್ಲಿ ದೊರೆಯುವ ಅದಿರಿನ ಪ್ರಮಾಣ 20,800 ಮಿಲಿಯನ್ ಟನ್ನುಗಳೆಂದು ಅಂದಾಜು. ಕಬ್ಬಿಣದ ಅದಿರನ್ನು ವಿಶೇಷವಾಗಿ ಹೊಂದಿರುವ ದೇಶಗಳಲ್ಲಿ ಭಾರತಕ್ಕೆ ಮುಖ್ಯಸ್ಥಾನ ಉಂಟು.

ಕಬ್ಬಿಣ ಅದಿರಿನ ಗಣಿಗಾರಿಕೆಯನ್ನು ಮೂರು ಮುಖ್ಯ ವರ್ಗಗಳಾಗಿ ವರ್ಗೀಕರಿಸಬಹುದು: 1. ಕಬ್ಬಿಣ ಮತ್ತು ಉಕ್ಕು ಲೋಹ ತಯಾರಿಸುವ ಕಾರ್ಖಾನೆಗಳು, ಲೋಹ ಉತ್ಪಾದನೆಗಾಗಿ ಬೇಕಾಗುವ ಅದಿರನ್ನು ಪಡೆಯುವುದಕ್ಕಾಗಿ ಸ್ಥಾಪಿಸಿರುವ ಗಣಿಗಳು; 2. ಭಾರತ ಸರ್ಕಾರ ಅದಿರನ್ನು ವಿದೇಶಗಳಿಗೆ ಅತಿ ಹೆಚ್ಚು ಪ್ರಮಾಣದಲ್ಲಿ ರಫ್ತುಮಾಡಲೆಂದೇ ಸ್ಥಾಪಿಸಿರುವ ಸಂಸ್ಥೆ. ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಎನ್.ಎಂ.ಡಿ.ಸಿ.); 3. ಖಾಸಗಿಯವರು ನಡೆಸುತ್ತಿರುವ ಸಣ್ಣ ಗಣಿಗಳು. ಖಾಸಗಿಯವರ ವಶದಲ್ಲಿರುವ ಗಣಿಗಳು ಮುಖ್ಯವಾಗಿ ಒರಿಸ್ಸ ರಾಜ್ಯದಲ್ಲೂ ಕರ್ನಾಟಕದ ಬಳ್ಳಾರಿ ಹೊಸಪೇಟೆ ಪ್ರದೇಶದಲ್ಲೂ ಇವೆ.

2006ರಲ್ಲಿ ಕಬ್ಬಿಣದ ಅದಿರಿನ ಉತ್ಪಾದನೆ 154 ಮಿಲಿಯನ್ ಟನ್. ಇದರಲ್ಲಿ ಶೇ. 32.3 ಭಾಗ ಒರಿಸ್ಸ ಶೇ. 21.8 ಭಾಗ ಮತ್ತು ಕರ್ನಾಟಕ ಶೇ. 16.0 ಭಾಗ ಚತ್ತೀಸ್‌ಗಡ್ ಗಳಿಂದ ಉತ್ಪಾದನೆಯಾಗಿದ್ದು, ಅವು ಮೊದಲ 3 ಸ್ಥಾನಗಳನ್ನು ಹೊಂದಿವೆ.

ಗೋವ ರಾಜ್ಯದಲ್ಲಿ ಕಬ್ಬಿಣದ ಗಣಿ ಕೈಗಾರಿಕೆ ಚೆನ್ನಾಗಿ ಅಭಿವೃದ್ಧಿ ಹೊಂದಿದೆ. ಈ ಸಣ್ಣ ರಾಜ್ಯ ಸು. 93.7 ಮಿಲಿಯನ್ ಟನ್ನುಗಳನ್ನು ಉತ್ಪಾದಿಸಿ ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ 4ನೆಯ ಸ್ಥಾನ ಪಡೆದಿದೆ. ಅದಿರೆಲ್ಲವೂ ಮುಖ್ಯವಾಗಿ ಜಪಾನ್ ಮತ್ತು ಇತರ ದೇಶಗಳಿಗೆ ರಫ್ತಾಗುತ್ತದೆ.




ಚೌಗಲೆ ಕಂಪನಿಯವರು ಕಬ್ಬಿಣದ ಅದಿರಿನ ದೂಳನ್ನು ಉಂಡೆಗಟ್ಟಿ ಅದರಿಂದ ಗೋಲಿ ಉಂಡೆಗಳನ್ನು ತಯಾರಿಸುತ್ತಾರೆ. ಗೋವ ರಾಜ್ಯದ ಪಾಲೆ ಬಳಿ ಇವರ ಪೆಲೆಟ್ (ಗೋಲಿ ಉಂಡೆ) ಕಾರ್ಖಾನೆ ಇದೆ. ವರ್ಷಂಪ್ರತಿ ಸು. 600,000 ಟನ್ ಪೆಲೆಟುಗಳು ಇಲ್ಲಿ ತಯಾರಿಸಿ ಜಪಾನಿಗೆ ರವಾನಿಸಲಾಗುತ್ತಿದೆ. ಮರ್ಮಗೋವ ಬಂದರಿನ ಹತ್ತಿರ ಇನ್ನೊಂದು ಇಂತಹುದೇ ಕಾರ್ಖಾನೆ ಚೌಗಲೆ ಕಂಪನಿಯವರ ಉಸ್ತುವಾರಿಯಲ್ಲಿ ರೂಪುಗೊಳ್ಳುತ್ತಿದೆ. ಇದರಲ್ಲಿ ವರ್ಷಂಪ್ರತಿ 1,800,000 ಟನ್ ಪೆಲೆಟುಗಳನ್ನು ತಯಾರಿಸಲಾಗುತ್ತಿದೆ.

ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖದ ಬಳಿ ದೊರೆಯುವ ಹೇರಳವಾದ ಮ್ಯಾಗ್ನಟೈಟ್ ಅದಿರನ್ನು ಬಳಕೆಗೆ ತರಲು ದೊಡ್ಡದೊಂದು ಯೋಜನೆ ರೂಪುಗೊಂಡಿತ್ತು. ಇಲ್ಲಿಯ ಗಣಿಗಳಿಂದ ವರ್ಷಂಪ್ರತಿ 7,500,000 ಟನ್ನುಗಳಷ್ಟು ಶುದ್ಧೀಕರಿಸಿದ ಅದಿರನ್ನು ಉತ್ಪಾದಿಸಲಾಗುತ್ತಿತ್ತು. ಸು. 1820 ಮೀ ಎತ್ತರದಲ್ಲಿರುವ ಕುದುರೆಮುಖ ಪ್ರದೇಶದಿಂದ ಸಮುದ್ರದ ಮಟ್ಟದಲ್ಲಿರುವ ಮಂಗಳೂರು ಬಂದರಿಗೆ ಶುದ್ಧೀಕರಿಸಿದ ಅದಿರನ್ನು ಒಯ್ಯಲು ಕೊಳಾಯಿ ಮಾರ್ಗ ಒಂದನ್ನು ನಿರ್ಮಿಸಲಾಗಿದೆ. ಕಬ್ಬಿಣ ಅದಿರಿನ ಸಾರವನ್ನು ನೀರಿನೊಂದಿಗೆ ಬೆರೆಸಿ ಕೆನೆಯ ರೂಪದಲ್ಲಿ ಪೈಪುಗಳ ಮೂಲಕ ಮಂಗಳೂರಿಗೆ ಕಳುಹಿಸಲಾಗುತ್ತಿತ್ತು. ಈ ಗಣಿ ಉದ್ಯಮ ಭಾರತದಲ್ಲಿ ಏಕೆ ಪೂರ್ವ ಏಷ್ಯದಲ್ಲಿಯೇ ಅತ್ಯಂತ ಭಾರಿ ಪ್ರಮಾಣದ ಉದ್ಯಮವೆಂದು ಪರಿಗಣಿಸಲಾಗಿತ್ತು.

ಪಶ್ಚಿಮಘಟ್ಟದ ಶ್ರೇಣಿಗಳಲ್ಲಿ ಹೆಸರಾಂತ ಕುದುರೆಮುಖ, ಗಂಗ್ರಿಕಲ್ಲು, ಗಂಗಾ ಮೂಲ, ಆಗುಂಬೆ, ಕೊಡಚಾದ್ರಿ, ಬಾಬಾಬುಡನ್ ಮೊದಲಾದ ಪರ್ವತ ಪ್ರದೇಶಗಳಲ್ಲಿ ಹೇರಳವಾಗಿ ಕಬ್ಬಿಣ ಅದಿರು ದೊರೆಯುತ್ತದೆ. ಇವೂ ಒಂದಾದ ಮೇಲೆ ಒಂದು ಗಣಿ ಕೈಗಾರಿಕೆ ಕೇಂದ್ರಗಳಾಗಿ ಪರಿವರ್ತನೆಗೊಳ್ಳುವ ಸೂಚನೆ ಉಂಟು. ಇಲ್ಲಿ ದೊರೆಯುವ ಕಬ್ಬಿಣ ಅದಿರಿನ ಆಧಾರದ ಮೇಲೆ ಮಂಗಳೂರು ಬಳಿ ಬೃಹತ್ ಪ್ರಮಾಣದಲ್ಲಿ ಉಕ್ಕನ್ನು ತಯಾರಿಸುವ ಯೋಜನೆಯೊಂದು ರೂಪುಗೊಳ್ಳುತ್ತಿದೆ.

ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅವರು ಚತ್ತೀಸ್‌ಗಡ್‌ನ ಬೈಲಾಡಿಲಾ ಬಳಿ ಕಬ್ಬಿಣದ ಅದಿರಿನ ದೊಡ್ಡ ಗಣಿಯನ್ನು ಸ್ಥಾಪಿಸಿದ್ದಾರೆ. ಇಲ್ಲಿಂದ ವರ್ಷಂಪ್ರತಿ ಸುಮಾರು ಆರು ಮಿಲಿಯನ್ ಟನ್ನುಗಳಷ್ಟು ಅದಿರನ್ನು ಪಡೆದು ವಿಶಾಖಪಟ್ಟಣ ಬಂದರಿಗೆ ರವಾನಿಸಿ ಜಪಾನಿಗೆ ರಫ್ತು ಮಾಡಲಾಗುತ್ತಿದೆ. ಬಳ್ಳಾರಿ ಜಿಲ್ಲೆಯ ಸೊಂಡೂರಿನ

ದೋಣಿಮಲೆ ಗುಡ್ಡದಲ್ಲಿ ಮುಖ್ಯವಾದ ಗಣಿ ಕೈಗಾರಿಕೆ ಸ್ಥಾಪಿಸಲಾಗಿದೆ. ಇಲ್ಲಿ ವರ್ಷಂಪ್ರತಿ 1.5 ಮಿಲಿಯನ್ ಟನ್ನುಗಳನ್ನು ಉತ್ಪಾದಿಸಲಾಗುವುದು.

ತಾತಾನಗರ, ಬೊಕಾರೋ, ದುರ್ಗಾಪುರ, ರೂರ್ಕೆಲ, ಭಿಲಾಯ್ ಸ್ಥಳಗಳಲ್ಲಿ ಸ್ಥಾಪಿಸಲಾಗಿರುವ ಬೃಹತ್ ಪ್ರಮಾಣದ ಕಬ್ಬಿಣ ಮತ್ತು ಉಕ್ಕು ಕಾರ್ಯಾಗಾರಗಳಿಗೆ ಬೇಕಾಗುವ ಅದಿರನ್ನು ಬಿಹಾರ ಮತ್ತು ಮಧ್ಯಪ್ರದೇಶಗಳಲ್ಲಿಯ ಗಣಿಗಳು ಒದಗಿಸುತ್ತವೆ.




154 ಮಿಲಿಯನ್ ಟನ್ನುಗಳಷ್ಟು ಒಟ್ಟು ಅದುರಿನ ಉತ್ಪಾದನೆಯಲ್ಲಿ ಶೇ. 60 ಭಾಗವು ರಫ್ತಾಗುತ್ತದೆ. ಇದರಿಂದ ಸು. 16,656 ಕೋಟಿ ರೂ. ವಿದೇಶಿ ವಿನಿಮಯ ಹಣವನ್ನು ಗಳಿಸಲಾಗುತ್ತಿದೆ (2006). ಕಬ್ಬಿಣ ಮತ್ತು ಉಕ್ಕನ್ನು ತಯಾರಿಸುವ ಯಂತ್ರ ಸ್ಥಾವರಗಳು ಭಿಲಾಯ್, ರೂರ್ಕೆಲ, ಬೊಕಾರೋ, ದುರ್ಗಾಪುರ, ಜಂಷೆಡ್‌ಪುರ ಮತ್ತು ಕರ್ನಾಟಕ ರಾಜ್ಯದ ಭದ್ರಾವತಿ ಬಳಿ ಇವೆ.

ಆಂಧ್ರಪ್ರದೇಶದ ವಿಶಾಖಪಟ್ಟಣ, ತಮಿಳುನಾಡಿನ ಸೇಲಮ್, ಕರ್ನಾಟಕದ ಹೊಸಪೇಟೆ ಈ ಸ್ಥಳಗಳಲ್ಲಿ ಉಕ್ಕು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಬೇಕೆನ್ನುವ ನಿರ್ಧಾರ ಕೈಗೊಂಡು ಈ ಸ್ಥಳಗಳಲ್ಲೆಲ್ಲ ಶಂಕುಸ್ಥಾಪನೆಯಾಗಿ ಸೇಲಮ್ ಮತ್ತು ವಿಶಾಖಪಟ್ಟಣ ಬಳಿ ಸ್ವಲ್ಪ ಮಟ್ಟಿಗೆ ಕೆಲಸ ನಡೆದಿದೆ. ಹೊಸಪೇಟೆಯ ಬಳಿ ಕಾರ್ಖಾನೆ ಸ್ಥಾಪನೆಯಾಗುವುದರಲ್ಲಿದೆ. ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಮಂಗಳೂರಿನ ಬಳಿ ಉಕ್ಕಿನ ಯಂತ್ರಸ್ಥಾವರ ಸ್ಥಾಪನೆಯಾಗುವ ನಿರೀಕ್ಷೆ ಉಂಟು.

ಜಂಷೆಡ್‌ಪುರದಲ್ಲಿಯ ಟಾಟಾ ಕಂಪನಿ ಹೊರತಾಗಿ ಮಿಕ್ಕೆಲ್ಲ ಉಕ್ಕಿನ ಕೈಗಾರಿಕೆಗಳು ಭಾರತ ಸರ್ಕಾರದ ವಶದಲ್ಲಿವೆ. ಕರ್ನಾಟಕದಲ್ಲಿರುವ ಭದ್ರಾವತಿಯ ಕಾರ್ಖಾನೆ ಸಣ್ಣ ಪ್ರಮಾಣದ್ದು. ಇಲ್ಲಿ ಮುಖ್ಯವಾಗಿ ಮಿಶ್ರಲೋಹಗಳನ್ನು ತಯಾರಿಸಲಾಗುತ್ತಿದೆ. ಈ ಕೈಗಾರಿಕೆ ಕರ್ನಾಟಕ ರಾಜ್ಯ ಸರ್ಕಾರದ ವಶದಲ್ಲಿದೆ.

ಮ್ಯಾಂಗನೀಸ್ ಅದಿರು: ಭಾರತ ದೇಶ ಮ್ಯಾಂಗನೀಸ್ ಅದಿರನ್ನು ಉತ್ಪಾದಿಸುವ ದೇಶಗಳಲ್ಲಿ ಮುಖ್ಯವಾದುದು. ಇಲ್ಲಿಯ ನಿಕ್ಷೇಪಗಳಿಂದ ಒಟ್ಟು 379 ಮಿಲಿಯನ್ ಟನ್ನುಗಳಷ್ಟು ಅದಿರು ಪಡೆಯಬಹುದೆಂದು ಅಂದಾಜು. ಮ್ಯಾಂಗನೀಸ್ ಅದಿರು ಮುಖ್ಯವಾಗಿ ಮಹಾರಾಷ್ಟ್ರ, ಮಧ್ಯಪ್ರದೇಶ ಬಿಹಾರ, ಒರಿಸ್ಸ, ಗೋವ ಮತ್ತು ಕರ್ನಾಟಕ ರಾಜ್ಯಗಳಲ್ಲಿ ದೊರೆಯುತ್ತದೆ. ಮುಖ್ಯವಾದ ಗಣಿಗಳಿರುವುದು ನಾಗಪುರದ ಬಳಿಯ ಭಂಡಾರ ಬಾಲಘಾಟ್ ಪ್ರದೇಶಗಳಲ್ಲಿ. ಬಳ್ಳಾರಿ ಜಿಲ್ಲೆಯ ಸೊಂಡೂರಿನ ಬಳಿಯ ಮ್ಯಾಂಗನೀಸ್ ಅದಿರಿನ ಗಣಿಗಳು ಪ್ರಸಿದ್ಧವಾದವು.

ವರ್ಷಂಪ್ರತಿ ಸು. 2 ಮಿಲಿಯನ್ ಟನ್ನುಗಳಷ್ಟು ಅದಿರನ್ನು ಉತ್ಪಾದಿಸಲಾಗುತ್ತಿದೆ.

ಕ್ರೋಮೈಟ್: ತುಕ್ಕು ಹಿಡಿಯದ ಉಕ್ಕಿನ ತಯಾರಿಕೆಯಲ್ಲಿ ಅತಿ ಮುಖ್ಯ ಖನಿಜ. ನಿಕ್ಷೇಪಗಳು ಕರ್ನಾಟಕ ಮತ್ತು ಒರಿಸ್ಸದಲ್ಲಿ ಇವೆ. ಅಲ್ಪ ಪ್ರಮಾಣದಲ್ಲಿ ಮಹಾರಾಷ್ಟ್ರ, ಜಾರ್ಖಂಡ್, ಮಧ್ಯಪ್ರದೇಶ, ಛತ್ತೀಸ್‌ಗಡ್ ಮತ್ತು ತಮಿಳುನಾಡುಗಳಲ್ಲಿ ಹಂಚಿಕೆಯಾಗಿದೆ. ಸು. 179 ಮಿಲಿಯನ್ ಕ್ರೋಮೈಟ್ ನಿಕ್ಷೇಪ ದೊರೆಯುವುದೆಂದು ಗುರ್ತಿಸಲಾಗಿದೆ (2000). ಇದರಲ್ಲಿ ಅಧಿಕ ಭಾಗ ರಫ್ತಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಮುಖ್ಯವಾದ ಗಣಿಗಳು ಚನ್ನರಾಯಪಟ್ಟಣ ತಾಲ್ಲೂಕಿನ ಬೈರಾಪುರ, ಭಕ್ತರಹಳ್ಳಿ, ಜಂಬೂರು, ನುಗ್ಗೆಹಳ್ಳಿ ಬಳಿ ಇವೆ.

ನಿಕ್ಕಲ್: ಮಿಶ್ರಲೋಹಗಳ ತಯಾರಿಕೆಯಲ್ಲಿ ಇದರದು ಮುಖ್ಯ ಪಾತ್ರ. ಭಾರತದಲ್ಲಿ ಇನ್ನೂ ಇದರ ಉತ್ಪತ್ತಿ ಇಲ್ಲ. ಉಕ್ಕಿನ ಕೈಗಾರಿಕೆಗೆ ವರ್ಷಂಪ್ರತಿ ಸು. 2,500 ಟನ್ನುಗಳಷ್ಟು ನಿಕ್ಕಲ್ ಬೇಕಾಗುತ್ತದೆ. ಇದನ್ನು ವಿದೇಶಗಳಿಂದ ಆಮದುಮಾಡಿಕೊಳ್ಳಲಾಗುತ್ತಿದೆ. ಒರಿಸ್ಸ ರಾಜ್ಯದ ಸುಕಿಂದ ಬಳಿ ನಿಕ್ಕಲ್ ಅದಿರನ್ನು ಪತ್ತೆ ಹಚ್ಚಲಾಗಿದೆ. ಇಲ್ಲಿ ಗಣಿಯನ್ನು ಅಭಿವೃದ್ಧಿಪಡಿಸಿ ದೇಶಕ್ಕೆ ಬೇಕಾದ ನಿಕ್ಕಲ್ ಲೋಹ ಪಡೆಯುವ ಕಾರ್ಯ ಬೇಗ ಕೈಗೊಳ್ಳಬೇಕಾಗಿದೆ.

ಕಬ್ಬಿಣಸಂಬಂಧವಲ್ಲದ ಲೋಹ ಖನಿಜಗಳು: ಮೇಲೆ ವಿವರಿಸಿದ ಕಬ್ಬಿಣ ಸಂಬಂಧದ ಲೋಹಗಳೇನೂ ಭಾರತದಲ್ಲಿ ಅಗತ್ಯ ಪೂರೈಸುವಷ್ಟು ಪ್ರಮಾಣದಲ್ಲಿ ದೊರೆತಿವೆ. ಆದರೆ ಕಬ್ಬಿಣ ಸಂಬಂಧವಲ್ಲದ ಲೋಹ ಖನಿಜಗಳು ಮಾತ್ರ ಹೇರಳ ಪ್ರಮಾಣದಲ್ಲಿ ದೊರೆಯದೆ ಹೋಗಿವೆ. ಈ ತನಕ ಪತ್ತೆಯಾಗಿರುವ ನಿಕ್ಷೇಪಗಳು ಸಣ್ಣವು. ಅವುಗಳಲ್ಲಿ ದೊರೆಯುವ ಅದಿರಿನಲ್ಲಿ ಲೋಹಾಂಶ ಕಡಿಮೆ. ಇದೇ ಕಾರಣವಾಗಿ ಹೇರಳ ಹಣ ವ್ಯಯಮಾಡಿ ವಿದೇಶಗಳಿಂದ ನಮಗೆ ಬೇಕಾಗುವ ತಾಮ್ರ, ಸೀಸ, ತವರ ಮುಂತಾದ ಕಬ್ಬಿಣ ಸಂಬಂಧವಲ್ಲದ ಲೋಹಗಳನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಈ ಲೋಹ ಖನಿಜಗಳ ಅನ್ವೇಷಣೆ ಕಾರ್ಯ ತ್ವರೆಯಿಂದ ಸಾಗುತ್ತಿದೆ.

ಅಲ್ಯೂಮಿನಿಯಮ್: ಈಚಿನ ವರ್ಷಗಳಲ್ಲಿ ಈ ಲೋಹದ ಮುಖ್ಯ ಅದಿರು ಬಾಕ್ಸೈಟನ್ನು ಒರಿಸ್ಸ, ಆಂಧ್ರಪ್ರದೇಶ, ಛತ್ತೀಸ್‌ಗಡ್, ಕರ್ನಾಟಕ, ಗುಜರಾತ್, ಮಹಾರಾಷ್ಟ್ರ, ಜಾರ್ಖಂಡ್ ಮತ್ತು ಆಂಧ್ರಪ್ರದೇಶಗಳಲ್ಲಿ ಪತ್ತೆಮಾಡಲಾಗಿದೆ. ಇಲ್ಲಿಯ ಅದಿರನ್ನು ಉಪಯೋಗಿಸಿ ಅಲ್ಯೂಮಿನಿಯಮ್ ಲೋಹವನ್ನು ತಯಾರಿಸುವ ಬೃಹತ್ ಯೋಜನೆಗಳು ರೂಪುಗೊಳ್ಳುತ್ತಿವೆ. ಭಾರತದಲ್ಲಿ ಅಲ್ಯೂಮಿನಿಯಮ್ ಅದಿರು ದೊರೆಯುವ ಪ್ರಮಾಣ 2401 ಮಿಲಿಯನ್ ಟನ್ನುಗಳೆಂದು ಅಂದಾಜು (2001).

ಭಾರತದಲ್ಲಿ ಅಲ್ಯೂಮಿನಿಯಮ್ ಲೋಹ ಕೈಗಾರಿಕೆ ಒಂದೇ ಸಮನೆ ಅಭಿವೃದ್ಧಿಗೊಳ್ಳುತ್ತ ಬಂದಿದೆ. 2007ರಲ್ಲಿ 7,19,100 ಟನ್ ಅಲ್ಯೂಮಿನಿಯಮ್ ಲೋಹ ಉತ್ಪತ್ತಿಯಾಯಿತು. ಈ ಲೋಹದ ತಯಾರಿಕೆಗೆ ಹೇರಳ ವಿದ್ಯುಚ್ಛಕ್ತಿ ಬೇಕು. ಇದರ ಅಭಾವದಿಂದಾಗಿ ಲೋಹ ಉತ್ಪಾದನೆ ಇನ್ನೂ ಹೆಚ್ಚದೆ ಇದೆ.

ಸದ್ಯದಲ್ಲಿ ಐದು ಮುಖ್ಯ ಕಂಪನಿಗಳು ಅಲ್ಯೂಮಿನಿಯಮ್ ಲೋಹವನ್ನು ಉತ್ಪಾದಿಸುತ್ತಿವೆ. ಹಿಂದೂಸ್ಥಾನ್ ಅಲ್ಯೂಮಿನಿಯಮ್ ಕಂಪನಿ (ಹಿಂಡಾಲಕೊ, 362300 ಟನ್), ಇಂಡಿಯನ್ ಅಲ್ಯೂಮಿನಿಯಮ್ ಕಂಪನಿ (ಇಂಡಾಲ್ 455000 ಟನ್), ಭಾರತ ಸರ್ಕಾರದ ಭಾರತ್ ಅಲ್ಯೂಮಿನಿಯಮ್ ಕಂಪನಿ (105000 ಟನ್), ತಮಿಳುನಾಡಿನ ಮೆಟ್ಟೂರು ಬಳಿ ಇರುವ ಮದರಾಸ್ ಅಲ್ಯೂಮಿನಿಯಮ್ ಕಂಪನಿ (36700 ಟನ್) ಮತ್ತು ಅಲ್ಯೂಮಿನಿಯಮ್ ಕಾರ್ಪೊರೇಷನ್ ಆಫ್ ಇಂಡಿಯ (359600 ಟನ್).

ಆಂಧ್ರಪ್ರದೇಶ ಮತ್ತು ಒರಿಸ್ಸ ರಾಜ್ಯಗಳಲ್ಲಿ ಈಚೆಗೆ ಪತ್ತೆ ಹಚ್ಚಲಾದ ಹೇರಳವಾದ ಬಾಕ್ಸೈಟ್ ಅದಿರನ್ನು ಉಪಯೋಗಿಸಿ ವರ್ಷಂಪ್ರತಿ 500,000 ಟನ್ ಅಲ್ಯೂಮಿನಿಯಮ್ ಲೋಹ ತಯಾರಿಸುವ ಎರಡು ಬೃಹತ್ ಯೋಜನೆಗಳು ಭಾರತ ಸರ್ಕಾರದ ಮುಂದಿವೆ. ಇವು ಕಾರ್ಯರೂಪಕ್ಕೆ ಬಂದಾಗ ಭಾರತ ಅಲ್ಯೂಮಿನಿಯಮ್ ಲೋಹ ತಯಾರಿಕೆಯಲ್ಲಿ ಮುಖ್ಯ ಸ್ಥಾನ ಪಡೆಯುತ್ತದೆ.

ತಾಮ್ರ: ಅನಾದಿಕಾಲದಿಂದಲೂ ಭಾರತದಲ್ಲಿ ಬಳಕೆಯಲ್ಲಿರುವ ಲೋಹ, ತಾಮ್ರ, ಹಿತ್ತಾಳೆ, ಕಂಚು ಈ ರೂಪಗಳಲ್ಲಿ ತಾಮ್ರ ಲೋಹವನ್ನು ಭಾರತದ ಸಾಮಾನ್ಯ ಜನ ಬಲು ಹಿಂದಿನ ಕಾಲದಿಂದಲೂ ಉಪಯೋಗಿಸುತ್ತ ಬಂದಿದ್ದಾರೆ. ಪುರಾತನರು ಕೆಲಸಮಾಡಿ ಕೈಬಿಟ್ಟ ಗಣಿಗಳು ದೇಶದಲ್ಲಿ ಅನೇಕ ಕಡೆ ಕಾಣಿಸುತ್ತವೆ. ಹಾಗಾದರೂ ಸದ್ಯ ಭಾರತದಲ್ಲಿ ಉತ್ಪತ್ತಿಯಾಗುತ್ತಿರುವ ತಾಮ್ರ ಲೋಹದ ಪ್ರಮಾಣ ತೀರ ಕಡಿಮೆ. ಬೆಳೆಯುತ್ತಿರುವ ಕೈಗಾರಿಕೆಗಳ ಅಗತ್ಯವನ್ನು ಪೂರೈಸುವುದಕ್ಕೆ ಆಗುತ್ತಿಲ್ಲ. 1977ರಲ್ಲಿ 23,489 ಟನ್ನುಗಳಷ್ಟು ತಾಮ್ರವನ್ನು ಮಾತ್ರ ಉತ್ಪಾದಿಸಲಾಯಿತು. 2000–01ರಲ್ಲಿ ಸು. 1,46,000 ಟನ್‌ಗಳನ್ನು ಉತ್ಪಾದಿಸಿತು. ತಾಮ್ರದ ಮುಖ್ಯ ಗಣಿಗಳು ಬಿಹಾರದ ಸಿಂಘಭೂಮ್ ಜಿಲ್ಲೆಯಲ್ಲೂ ರಾಜಸ್ಥಾನದ ಖೇತ್ರಿ ಬಳಿಯೂ ಇವೆ. ಮಧ್ಯಪ್ರದೇಶದ ಬಾಲಘಾಟ್ ಜಿಲ್ಲೆಯ ಮಲಂಜಖಂಡ ಎನ್ನುವ ಕಡೆ ದೊಡ್ಡ ಪ್ರಮಾಣದಲ್ಲಿ ತಾಮ್ರಕ್ಕಾಗಿ ಗಣಿ ತೋಡುವ ಕೆಲಸ ಮೊದಲಾಗಿದೆ.

ಕರ್ನಾಟಕ ರಾಜ್ಯದಲ್ಲಿಯ ತಾಮ್ರನಿಕ್ಷೇಪಗಳು ಸಣ್ಣವು. ಚಿತ್ರದುರ್ಗ ಕಾಪರ್ ಕಂಪನಿ 1968ರಲ್ಲಿ ಚಿತ್ರದುರ್ಗ ಜಿಲ್ಲೆಯ ಇಂಗಳದಾಳುವಿನ ಬಳಿ ತಾಮ್ರ ಗಣಿಗಾರಿಕೆಯನ್ನು ಸ್ಥಾಪಿಸಿದೆ. ಈ ಗಣಿಗಳಿಂದ ಸುಮಾರು ಎರಡು ಸಾವಿರ ಟನ್‌ತಾಮ್ರ ಸಾರವನ್ನು ಉತ್ಪಾದಿಸಿ




ಬಿಹಾರದಲ್ಲಿರುವ ಕುಲುಮೆಗಳಿಗೆ ರವಾನಿಸಲಾಗುತ್ತಿದೆ. ತಾಮ್ರ ಗಣಿ ಕೈಗಾರಿಕೆಯನ್ನು ರಾಜ್ಯದಲ್ಲಿ ಅಭಿವೃದ್ಧಿಗೊಳಿಸಲು ರಾಜ್ಯ ಸರ್ಕಾರ ಕರ್ನಾಟಕ ಕಾಪರ್ ಕನ್ಸಾರ್ಟಿಯಮ್ (ಕರ್ನಾಟಕ ತಾಮ್ರ ಕೂಟ) ಎಂಬ ಹೆಸರಿನ ಸಂಸ್ಥೆಯೊಂದನ್ನು ಸ್ಥಾಪಿಸಿದೆ. ಇದು ಹಾಸನ ಜಿಲ್ಲೆಯ ಕಲ್ಯಾಡಿ ಬಳಿ ತಾಮ್ರಕ್ಕಾಗಿ ಗಣಿಕಾರ್ಯವನ್ನು ಕೈಗೊಂಡಿದೆ.

ಸೀಸ ಮತ್ತು ಸತುವು: ಸೀಸ ಮತ್ತು ಸತುವು ಆಧುನಿಕ ಕೈಗಾರಿಕೆಗಳಲ್ಲಿ ಅಗತ್ಯವಾಗಿ ಬೇಕಾಗುವ ಲೋಹಗಳು. ಇವುಗಳ ನಿಕ್ಷೇಪಗಳು ದೇಶದಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿಲ್ಲ. ಅಂದಾಜೊಂದರ ಪ್ರಕಾರ 59.69 ಲಕ್ಷ ಟನ್ನು ಸೀಸ 187.3 ಲಕ್ಷ ಟನ್ನು ಸತುವು ನಿಕ್ಷೇಪವು ದೊರೆಯುತ್ತದೆ. ಅದು ರಾಜಸ್ತಾನ, ಬಿಹಾರ, ಪಶ್ಚಿಮ ಬಂಗಾಲ, ಆಂಧ್ರಪ್ರದೇಶ, ಗುಜರಾತ್, ಒರಿಸ್ಸ, ಉತ್ತರಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡುಗಳಲ್ಲಿ ಹಂಚಿಕೆಯಾಗಿದೆ. ಮುಖ್ಯವಾದ ಗಣಿ ರಾಜಸ್ತಾನದ ಉದಯಪುರ ಜಿಲ್ಲೆಯ ಸವಾರ್ ಬಳಿ ಇದೆ. ಇಲ್ಲಿಯ ಗಣಿಗಳಿಂದ ಸು. 55 ಸಾವಿರ ಟನ್ ಸೀಸವನ್ನೂ 40 ಸಾವಿರ ಟನ್ ಸತುವನ್ನು ಉತ್ಪಾದಿಸಲಾಗುತ್ತಿದೆ. ಆಂಧ್ರಪ್ರದೇಶದ ಅಗ್ನಿಗುಂಡಲ ಬಳಿ ಸಣ್ಣ ಪ್ರಮಾಣದಲ್ಲಿ ಸೀಸದ ಗಣಿಯೊಂದು ಕೆಲಸ ಮಾಡುತ್ತಿದೆ. ವಿಶಾಖಪಟ್ಟಣದ ಬಳಿ ಹತ್ತು ಸಾವಿರ ಟನ್ ಸೀಸ ಲೋಹವನ್ನು ಕರಗಿಸುವ ಕಾರ್ಖಾನೆ ರೂಪುಗೊಳ್ಳುತ್ತಿದೆ.

ಚಿನ್ನ ಮತ್ತು ಬೆಳ್ಳಿ : ಬೆಳ್ಳಿ ಬಂಗಾರಗಳು ಬಲು ಹಿಂದಿನ ಕಾಲದಿಂದಲೂ ಬಳಕೆಯಲ್ಲಿರುವ ಅಮೂಲ್ಯ ಲೋಹಗಳು. ಅವುಗಳ ಮಿರಮಿರುಗುವ ಬಣ್ಣ, ತೂಕ, ಕಿಲುಬುಹಿಡಿಯದಿರುವ ಗುಣ, ಅವಕ್ಕೆ ಹೆಚ್ಚಿನ ಪ್ರಾಶಸ್ತ್ಯ ಒದಗಿಸಿವೆ. ಬೆಳ್ಳಿ ಲೋಹದ ಬಳಕೆ ಸಾಮಾನ್ಯವಾಗಿದ್ದರೂ ಬೆಳ್ಳಿ ಗುಡ್ಡ, ರಜತಾದ್ರಿ ಎಂಬ ಹೆಸರುಳ್ಳ ಬೆಟ್ಟಗಳಿದ್ದರೂ ಬೆಳ್ಳಿಗೆಂದೇ ತೋಡಿರುವ ಗಣಿಗಳು ಯಾವುವೂ ಭಾರತದಲ್ಲಿ ಕಂಡುಬಂದಿಲ್ಲ. ಸೀಸ ಲೋಹದೊಂದಿಗೆ ಮಿಶ್ರಣ ಹೊಂದಿ ಸು. 40,000 ಕೆಜಿಯಷ್ಟು ಬೆಳ್ಳಿ ದೇಶದಲ್ಲಿ ಉತ್ಪತ್ತಿಯಾಗುತ್ತಿದೆ. ಬಂಗಾರದ ಗಣಿಗಳು ಮಾತ್ರ ಮುಖ್ಯವಾಗಿ ಕರ್ನಾಟಕ ರಾಜ್ಯದ ಹಲವಾರು ಕಡೆ ಕಾಣಸಿಗುತ್ತವೆ. ಈ ಹಳೆಯ ಗಣಿಗಳು ಬಲು ಹಿಂದಿನ ಕಾಲದಲ್ಲಿ ಪುರಾತನರು ಕೆಲಸಮಾಡಿ ಕೈಬಿಟ್ಟ ಗಣಿಗಳು. ಇವುಗಳಲ್ಲಿ ಕೋಲಾರಜಿಲ್ಲೆಯ ಉರಿಗಾಮ್ ಬಳಿಯೂ ರಾಯಚೂರು ಜಿಲ್ಲೆಯ ಹಟ್ಟಿ ಬಳಿಯೂ ಗಣಿಕಾರಿಕೆ ಅಭಿವೃದ್ಧಿ ಹೊಂದುತ್ತ ಬಂದಿದೆ. ಕೋಲಾರದ ಚಿನ್ನದ ಗಣಿಗಳು ಭೂಮಿಯೊಳಗೆ 3660 ಮೀ ಆಳ ಇಳಿದಿವೆ. ಪ್ರಪಂಚದಲ್ಲೆಲ್ಲ ಅತಿ ಆಳವಾದ ಚಿನ್ನದ ಗಣಿಗಳೆಂದು ಪ್ರಸಿದ್ಧಿ ಪಡೆದುಕೊಂಡಿವೆ. ಚಿನ್ನದ ಗಣಿಗಾರಿಕೆ ಇಪ್ಪತ್ತು ಸಾವಿರಕ್ಕೂ ಮೇಲ್ಪಟ್ಟು ಕಾರ್ಮಿಕರಿಗೆ ಉದ್ಯೋಗಾವಕಾಶ ಕಲ್ಪಿಸಿತ್ತು.

ಭಾರತದಲ್ಲಿ ಉತ್ಪನ್ನವಾಗುವ ಚಿನ್ನವೆಲ್ಲವೂ ಕರ್ನಾಟಕ ರಾಜ್ಯದ ಗಣಿಗಳಿಂದ ಬಂದುದು. ಬೇರೆ ಯಾವ ರಾಜ್ಯದಲ್ಲಿಯೂ ಚಿನ್ನ ಉತ್ಪತ್ತಿಯಾಗುತ್ತಿಲ್ಲ. ಈಚಿನ ವರ್ಷಗಳಲ್ಲಿ ವರ್ಷಂಪ್ರತಿ 3,000 ಕೆಜಿ ಚಿನ್ನ ಉತ್ಪತ್ತಿಯಾಗುತ್ತಿದೆ. ಪ್ರಂಪಚದ ಉತ್ಪನ್ನದಲ್ಲಿ ಇದು ಶೇ. 1ರಷ್ಟು ಭಾಗ ಮಾತ್ರ. ಕೋಲಾರದ ಚಿನ್ನದ ಗಣಿಗಳಲ್ಲಿ ಚಿನ್ನದ ಉತ್ಪನ್ನ ವರ್ಷ ಕಳೆದಂತೆ ಕಡಿಮೆ ಆಗುತ್ತಿದೆ. ಉತ್ತಮ ದರ್ಜೆಯ ಅದಿರು ದೊರೆಯದೆ ಹೋಗಿರುವುದೇ ಇದರ ಕಾರಣ. ಹಿಂದೆ ಒಂದು ಟನ್ ಅದಿರಿನಲ್ಲಿ 20 ಗ್ರಾಮ್ ವರೆಗೂ ಚಿನ್ನ ದೊರೆಯುತ್ತಿತ್ತು. ಈಗ 4 ಗ್ರಾಮ್ ದೊರೆಯುವುದೂ ಕಷ್ಟವಾಗುತ್ತಿದೆ. ಚಿನ್ನದ ಬೆಲೆ ವಿಪರೀತವಾಗಿ ಏರಿರುವುದರಿಂದ ಕಡಿಮೆ ದರ್ಜೆಯ ಅದಿರನ್ನು ಪುಡಿಮಾಡಿ ಚಿನ್ನವನ್ನೂ ಲಾಭದಾಯಕವಾಗಿ ಪಡೆಯಲು ಸಾಧ್ಯವಾಗಿದೆ. ದೇಶದಲ್ಲಿ ಇರುವ ಇತರ ಹಳೆಯ ಚಿನ್ನದ ಗಣಿಗಳನ್ನು ಊರ್ಜಿತಗೊಳಿಸುವ ಕಾರ್ಯತ್ವರೆಯಿಂದ ಕೈಗೊಳ್ಳಬೇಕಾಗಿದೆ.

ಯುರೇನಿಯಮ್ ಮತ್ತು ತೋರಿಯಮ್: ಈ ಲೋಹಗಳು ಪರಮಾಣು ಶಕ್ತಿಗೆ ಸಂಬಂಧಪಟ್ಟವು. ತೋರಿಯಮ್ ಲೋಹ ಕೇರಳದ ಕಡಲಂಚಿನಲ್ಲಿರುವ ಮರಳುರಾಶಿಯಲ್ಲಿ ತೋರಿಯನೈಟ್ ಮತ್ತು ಮಾನಸೈಟ್ ರೂಪದಲ್ಲಿ ದೊರೆಯುತ್ತದೆ. ಈ ಲೋಹವನ್ನು ಪರಮಾಣುಶಕ್ತಿ ಉತ್ಪಾದನೆಗೆ ಬಳಸುವ ಸಾಧ್ಯತೆ ಉಂಟು. ಅದಕ್ಕಾಗಿ ಶೋಧನೆ ನಡೆಯುತ್ತಿದೆ. ಪರಮಾಣು ಶಕ್ತಿ ಉತ್ಪಾದನೆ ಮುಖ್ಯವಾಗಿ ಉಪಯೋಗವಾಗುತ್ತಿರುವ ಯುರೇನಿಯಮ್ ಧಾತು ಬಿಹಾರದ ಜಾದುಗುಡ ಎಂಬಲ್ಲಿ ದೊರೆಯುತ್ತದೆ.

ಸುಣ್ಣಕಲ್ಲು : ಸಿಮೆಂಟ್ ತಯಾರಿಕೆಯಲ್ಲಿ ಮುಖ್ಯ ಪಾತ್ರವಹಿಸಿರುವ ಖನಿಜ. ಭಾರತದಲ್ಲಿ ಹೇರಳವಾಗಿ ದೊರೆಯುತ್ತದೆ. ದೊರೆಯಬಹುದಾದ ಸುಣ್ಣಕಲ್ಲಿನ ಪ್ರಮಾಣ 50,000 ಮಿಲಿಯನ್ ಟನ್‌ಗಳೆಂದು ಅಂದಾಜು.

ಸಿಮೆಂಟ್ ತಯಾರಿಕೆಯಲ್ಲಲ್ಲದೆ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಯಲ್ಲಿ ಕೂಡ ಸುಣ್ಣಕಲ್ಲು ಉಪಯೋಗವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿಯ ಸುಣ್ಣಕಲ್ಲು ನಿಕ್ಷೇಪಗಳು

ದೊಡ್ಡವು. ಇಲ್ಲಿ ಆರು ಮುಖ್ಯ ಸಿಮೆಂಟ್ ಕಾರ್ಖಾನೆಗಳಿದ್ದು ಇವುಗಳಲ್ಲಿ ಇಪ್ಪತ್ತು ಲಕ್ಷಟನ್ ಸಿಮೆಂಟ್ ಉತ್ಪತ್ತಿಯಾಗುತ್ತಿದೆ.

ಕಲ್ನಾರು: ಉತ್ಕೃಷ್ಟ ದರ್ಜೆಯ ಕಲ್ನಾರು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿಯೂ, ಕಡಿಮೆ ದರ್ಜೆಯ ಕಲ್ನಾರು ಬಿಹಾರ, ರಾಜಸ್ತಾನ ಮತ್ತು ಕರ್ನಾಟಕದಲ್ಲಿಯೂ ದೊರೆಯುತ್ತದೆ. ಇದರ ಮುಖ್ಯ ಉಪಯೋಗ ಸಿಮೆಂಟ್‌ಕಲ್ನಾರು ಹಲಗೆಗಳನ್ನು ತಯಾರಿಸುವುದರಲ್ಲಿದೆ. ಉತ್ತಮ ದರ್ಜೆಯ ಕಲ್ನಾರು ಸಾಕಷ್ಟು ಪ್ರಮಾಣದಲ್ಲಿ ದೊರೆಯದಿರುವುದರಿಂದ ಅದನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

ವಜ್ರ: ಭಾರತ ಒಂದು ಕಾಲದಲ್ಲಿ ವಜ್ರಕ್ಕೆ ಪ್ರಸಿದ್ಧಿಯಾಗಿತ್ತು. ಪ್ರಪಂಚ ಪ್ರಸಿದ್ಧ ವಜ್ರಗಳೆಲ್ಲವೂ ಭಾರತದಿಂದ ಬಂದವು. ಈಚೆಗೆ ಇಲ್ಲಿ ವಜ್ರದ ಉತ್ಪಾದನೆ ಬಹಳವಾಗಿ ಬಿದ್ದುಹೋಗಿದೆ. ರಷ್ಯ ಮತ್ತು ದಕ್ಷಿಣ ಆಫ್ರಿಕ ವಜ್ರದ ಉತ್ಪಾದನೆಯಲ್ಲಿ ಮುಖ್ಯಸ್ಥಾನ ಪಡೆದುಕೊಂಡಿವೆ. ಈಗ ಭಾರತದಲ್ಲಿ ವಜ್ರಕ್ಕಾಗಿ ಕೆಲಸ ನಡೆಯುತ್ತಿರುವುದು ಮಧ್ಯಪ್ರದೇಶದ ಪನ್ನಾ ಬಳಿ. ವರ್ಷಂಪ್ರತಿ ಸು. 30 ಸಾವಿರ ಕ್ಯಾರೆಟ್ ತೂಗುವ ವಜ್ರ ಉತ್ಪತ್ತಿಯಾಗುತ್ತಿದೆ. 2006–07ರಲ್ಲಿ ವಜ್ರದ ಉತ್ಪನ್ನ 2,33,365 ಕ್ಯಾರೆಟ್‌ಗಳು. ಮಧ್ಯಪ್ರದೇಶದಲ್ಲಿಯ ಗಣಿಗಳನ್ನು ಭಾರತ ಸರ್ಕಾರದ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಎನ್‌ಎಂಡಿಸಿ) ನಡೆಸುತ್ತಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ವಜ್ರಕರೂರು ಬಳಿ ಆಗೊಮ್ಮೆ ಈಗೊಮ್ಮೆ ವಜ್ರಸಿಗುವುದುಂಟು. ಇಲ್ಲಿ ಇನ್ನೂ ಹೆಚ್ಚಿನ ಶೋಧನೆ ನಡೆಯಬೇಕಾಗಿದೆ.

ಜಿಪ್ಸಮ್: ಸಿಮೆಂಟ್ ತಯಾರಿಕೆಯಲ್ಲಿ ರಾಸಾಯನಿಕ ಗೊಬ್ಬರಗಳ ತಯಾರಿಕೆಯಲ್ಲಿ ಮುಖ್ಯವಾಗಿ ಬೇಕಾದ ಖನಿಜ. ನಿಕ್ಷೇಪಗಳು ರಾಜಸ್ಥಾನ, ಗುಜರಾತ್, ಜಮ್ಮು ಕಾಶ್ಮೀರ ಹಾಗೂ ತಮಿಳುನಾಡಿನಲ್ಲಿಯೂ ಇವೆ. ವಾರ್ಷಿಕ ಉತ್ಪನ್ನ ಸುಮಾರು ಎಂಟು ಲಕ್ಷ ಟನ್.

ಮ್ಯಾಗ್ನಸೈಟ್: ಹಾಲುಗಲ್ಲಿನಂತಿರುವ ಶುಭ್ರವರ್ಣದ ಈ ಖನಿಜ ಮುಖ್ಯವಾಗಿ ವಿಪರೀತ ಉಷ್ಣವನ್ನು ತಡೆಯುವ ಕಾವಿಟ್ಟಿಗೆಗಳನ್ನು ತಯಾರಿಸುವುದರಲ್ಲಿ ಉಪಯೋಗವಾಗುತ್ತದೆ. ಕಬ್ಬಿಣ ಮತ್ತು ಉಕ್ಕು ತಯಾರಿಕೆಗಾಗಿ ಸ್ಥಾಪಿಸಲಾಗುವ ಕುಲುಮೆಗಳನ್ನು ಕಟ್ಟುವುದರಲ್ಲಿ ಇದನ್ನು ಬಳಸಲಾಗುತ್ತಿದೆ. ಮುಖ್ಯ ನಿಕ್ಷೇಪಗಳು ತಮಿಳುನಾಡು ಮತ್ತು ಕರ್ನಾಟಕದಲ್ಲಿವೆ. ಈಚಿನ ವರ್ಷಗಳಲ್ಲಿ ಹಿಮಾಲಯ ತಪ್ಪಲಿನಲ್ಲಿರುವ ಉತ್ತರಪ್ರದೇಶದ ಅಲ್ಮೋರಾ ಬಳಿ ಹೆಚ್ಚು ಪ್ರಮಾಣದಲ್ಲಿ ಮ್ಯಾಗ್ನಸೈಟ್ ದೊರೆಯುವುದು ಕಂಡುಬಂದಿದೆ. ವರ್ಷಂಪ್ರತಿ ಸುಮಾರು ನಾಲ್ಕು ಲಕ್ಷ ಟನ್ ಉತ್ಪತ್ತಿಯಾಗುತ್ತಿದೆ.

ಮೈಕ (ಕಾಗೆ ಬಂಗಾರ): ವಿದ್ಯುಚ್ಛಕ್ತಿ ಉಪಕರಣಗಳ ತಯಾರಿಕೆಯಲ್ಲಿ ವಿಶೇಷವಾಗಿ ಉಪಯೋಗವಾಗುವ ಖನಿಜ ಇದು. ಭಾರತದ ಮುಖ್ಯ ಖನಿಜ ಸಂಪನ್ಮೂಲಗಳಲ್ಲೊಂದು. ಮುಖ್ಯವಾಗಿ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯಲ್ಲೂ ಬಿಹಾರದ ಕೋಡರ್ಮ ಜಿಲ್ಲೆಯಲ್ಲೂ ದೊರೆಯುತ್ತದೆ. ಹತ್ತು ಸಾವಿರ ಟನ್ನುಗಳಷ್ಟು ಮೈಕ ಭಾರತದಲ್ಲಿ ಉತ್ಪತ್ತಿಯಾಗುತ್ತಿದೆ. ಹೆಚ್ಚಿನ ಭಾಗ ವಿದೇಶಗಳಿಗೆ ರಫ್ತಾಗಿ ಹೋಗುತ್ತಿದೆ. ಅಭ್ರಕವೆಂದೂ ಕರೆಯುತ್ತಾರೆ.

ವಿದೇಶಗಳೊಡನೆ ಖನಿಜ ವ್ಯಾಪಾರ: ಎಲ್ಲ ಖನಿಜಗಳೂ ಎಲ್ಲ ದೇಶಗಳಲ್ಲೂ ಸಮಸಮವಾಗಿ ಹರಡಿರುವುದಿಲ್ಲ. ಖನಿಜಗಳ ಹಂಚಿಕೆಯಲ್ಲಿ ಅನೇಕ ವ್ಯತ್ಯಾಸಗಳು ಕಾಣುತ್ತವೆ. ಒಂದು ಕಡೆ ಪೆಟ್ರೋಲಿಯಮ್ ಶೇಖರವಾಗಿರುತ್ತದೆ. ಮಿಕ್ಕ ಯಾವ ಖನಿಜಗಳೂ ಇರುವುದಿಲ್ಲ. ಇನ್ನೊಂದು ಕಡೆ ಲೋಹ ಖನಿಜಗಳಿದ್ದು ಅವನ್ನು ಕರಗಿಸಲು ಬೇಕಾಗುವ ಇಂಧನ ಖನಿಜ ಇಲ್ಲದೆ ಇರುತ್ತದೆ. ಇಂಥ ಪರಿಸ್ಥಿತಿಯಲ್ಲಿ ದೇಶದಲ್ಲಿ ದೊರೆಯದೆ ಹೋದ ಖನಿಜಗಳನ್ನು ಬೇರೆದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ತನ್ನ ಅಗತ್ಯ ಪೂರೈಸಿದ ಬಳಿಕ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ಖನಿಜಗಳನ್ನು ವಿದೇಶಗಳಿಗೆ ರಫ್ತು ಮಾಡಿ ಧನ ಸಂಪಾದನೆ ಮಾಡಬೇಕಾಗುತ್ತದೆ. ಈ ರೀತಿ ದೇಶ ದೇಶಗಳ ನಡುವಿನ ವ್ಯಾಪರದಲ್ಲಿ ಖನಿಜಗಳ ಪಾತ್ರ ಮುಖ್ಯ ಸ್ಥಾನ ಪಡೆಯುತ್ತದೆ.

ಮುಂದುವರಿದ ಜನಾಂಗಗಳು ಖನಿಜಗಳ ಮತ್ತು ಅವುಗಳಿಂದ ಪಡೆದ ಲೋಹಗಳ ಆಧಾರದ ಮೇಲೆ ತಮ್ಮ ನಾಗರಿಕ ಜೀವನವನ್ನು ಬಲುವಾಗಿ ಬೆಳೆಸಿಕೊಂಡಿವೆ. ಈ ರಾಜ್ಯಗಳು ತಮಗೆ ಬೇಕಾಗುವ ಖನಿಜಗಳನ್ನು ಪ್ರಪಂಚದ ನಾನಾ ಭಾಗಗಳಿಂದ ತರಿಸಿಕೊಳ್ಳುತ್ತಿವೆ. ಹಿಂದುಳಿದಿರುವ ಜನಾಂಗಗಳಾದರೋ ಲೋಹ ವಿದ್ಯೆಯಲ್ಲಿ ಅಷ್ಟು ಪರಿಶ್ರಮ ಪಡೆಯದೆ ಇರುವುದರಿಂದ, ಖನಿಜಗಳ ಬಳಕೆ ತಿಳಿಯದೆ ಅವನ್ನು ಮುಂದುವರಿದ ಜನಾಂಗಗಳಿಗೆ ಅಗ್ಗದ ಬೆಲೆಗೆ ಮಾರಬೇಕಾಗುತ್ತದೆ. ಖನಿಜ ಕೈಗಾರಿಕೆಯಲ್ಲಿ ಭಾರತ ಇನ್ನೂ ಹಿಂದುಳಿದಿದೆಯೆಂದೇ ಹೇಳಬೇಕು. ಖನಿಜದಲ್ಲಿ ಅಡಗಿರುವ ಲೋಹವನ್ನು ಪಡೆದು ತನ್ಮೂಲಕ ಕೈಗಾರಿಕೆಗಳನ್ನು ಬೆಳೆಸುವ ಜಾಣತನವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅದು ಗಳಿಸಿಕೊಳ್ಳಬೇಕಾಗಿದೆ. (ಬಿ.ಪಿ.ಆರ್.)

**ಭಾರತದ ದೈನಂದಿನ ಹವಾಮಾನ ವರದಿ:** ಭೂಮಿಯ ಅಥವಾ ಅದರ ಯಾವುದಾದರೂ ಒಂದು ಭಾಗದ ಹವಾಮಾನದ ಲಕ್ಷಣಗಳನ್ನು ಪ್ರತಿನಿಧಿಸುವ ನಕ್ಷೆಯನ್ನು ಹವಾಮಾನದ ವರದಿ ಅಥವಾ ಹವಾಮಾನದ ನಕ್ಷೆಯೆಂದು ಕರೆಯುವರು. ಇವುಗಳನ್ನು ಕೆಲವು ವೇಳೆ ಸೈನೋಪ್ಟಿಕ್ ನಕ್ಷೆಗಳೆಂದೂ ಕರೆಯುವರು. ಈ ನಕ್ಷೆಗಳು ಹವಾಮಾನದ ಮುಖ್ಯ ಘಟಕಗಳಾದ ಉಷ್ಣಾಂಶ, ಒತ್ತಡದ ಪರಿಸ್ಥಿತಿ, ಮಾರುತಗಳ ದಿಕ್ಕು ಮತ್ತು ವೇಗ, ಆರ್ದ್ರತೆ, ಮೋಡಗಳು, ವೃಷ್ಟಿಯ ವಿಧಗಳು ಮತ್ತು ಅವುಗಳ ಹಂಚಿಕೆ ಮೊದಲಾದವುಗಳನ್ನು ವಿವಿಧ ಬಗೆಯ ರೂಢ ಚಿಹ್ನೆಗಳ ಮೂಲಕ ತೋರಿಸಲಾಗುವುದು.

ಹವಾಮಾನದ ವರದಿಗಳನ್ನು ಪ್ರತಿದಿನ ಹಾಗೂ ಪ್ರತಿವಾರವೂ ಪ್ರಕಟಿಸಲಾಗುವುದು. ಇದಕ್ಕಾಗಿ ವಿವಿಧ ಭಾಗಗಳಿಂದ ಹವಾಮಾನಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸಬಹುದು. ಪ್ರಪಂಚದ ಮೊದಲ ಹವಾಮಾನದ ನಕ್ಷೆಯನ್ನು $30^0$ ಉ ಹಾಗೂ $30^0$ ದ ಅಕ್ಷಾಂಶಗಳ ನಡುವಿನ ವಾಣಿಜ್ಯ ಮಾರುತಗಳನ್ನು ತೋರಿಸಲು ಎಡ್ಮಂಡ್ ಹ್ಯಾಲೆ 1688 ರಲ್ಲಿ ತಯಾರಿಸಿದ. ಭಾರತದಲ್ಲಿದ್ದ ಬ್ರಿಟಿಷ್ ಸರಕಾರ 1864 ರಲ್ಲಿ ಹವಾಮಾನ ಇಲಾಖೆಯನ್ನು ಆರಂಭಿಸಿತು. ಇದರ ಕೇಂದ್ರ ಕಛೇರಿಯನ್ನು ಶಿಮ್ಲಾದಲ್ಲಿ ಸ್ಥಾಪಿಸಿದರು. ಒಂದನೆಯ ಮಹಾಯುದ್ಧದ ಅನಂತರ ಇದರ ಕಛೇರಿ ಪುಣೆಗೆ ಸ್ಥಳಾಂತರಗೊಂಡಿತು. ಭಾರತದಲ್ಲಿ ಪ್ರಸ್ತುತ 350 ಹವಾಮಾನ ವೀಕ್ಷಣಾ ಕೇಂದ್ರಗಳಿವೆ. ಇವುಗಳನ್ನು ಐದು ವರ್ಗಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಹವಾಮಾನದ ವರದಿಗಳನ್ನು ತಯಾರಿಸಲಾಗುವುದು. ಹವಾಮಾನ ನಕ್ಷೆಗಳನ್ನು ಪ್ರಕಟಿಸಲಾಗುವುದು. ಅಲ್ಲದೆ ವಿದ್ಯುನ್ಮಾನದ ಮೂಲಕವು ರವಾನಿಸಲಾಗುವುದು.

ಹವಾಮಾನದ ವರದಿಗಳಲ್ಲಿ ಒತ್ತಡದ ಹಂಚಿಕೆಯನ್ನು ಸಮಭಾರ ರೇಖೆಗಳ ಮೂಲಕ ಪ್ರತಿನಿಧಿಸಲಾಗುವುದು. ಒತ್ತಡವು ಉಷ್ಣಾಂಶದ ಹಂಚಿಕೆಯ ಪರಿಣಾಮವಾಗಿರುವುದು. ಒತ್ತಡದ ಹಂಚಿಕೆಯ ಜೊತೆಗೆ ಮಾರುತಗಳ ದಿಕ್ಕು ಮತ್ತು ವೇಗವನ್ನು ಸೂಚಿಸಲಾಗುತ್ತಿದೆ. ಮೋಡದ ಪ್ರಮಾಣವನ್ನು ವೃತ್ತಗಳ ಮೂಲಕ ಎಷ್ಟು ಭಾಗ ಆಕಾಶವನ್ನು ಮುಚ್ಚಿವೆಯೆಂಬುದನ್ನು ತೋರಿಸಲಾಗುವುದು. ಈ ವಿಧಾನವನ್ನು ಓಕ್ಟಾ ಎಂದು ಕರೆಯುವರು. ವೃತ್ತವನ್ನು ಎಂಟು ಭಾಗ ಮಾಡಿ ಎಷ್ಟು ಭಾಗ ಮೋಡಗಳಿಂದ ಮುಚ್ಚಿದೆ ಎಂಬುದನ್ನು ತೋರಿಸಲಾಗುವುದು. ಮಳೆಯ ಹಂಚಿಕೆಯನ್ನು ಸೆಂ.ಮೀಗಳಲ್ಲಿ ಆಯಾ ಸ್ಥಳಗಳಲ್ಲಿ ನಮೂದಿಸಲಾಗುವುದು.

ಹವಾಮಾನದ ಇನ್ನಿತರ ಲಕ್ಷಣಗಳನ್ನು ವಿವಿಧ ಬಗೆಯ ರೂಢ ಚಿಹ್ನೆಗಳ ಮೂಲಕ ಪ್ರತಿನಿಧಿಸಲಾಗುವುದು. ಕಾವಳ, ಮಿಂಚು, ಮೋಡ, ಆಲಿಕಲ್ಲು ಮುಂತಾದವುಗಳು ನಕ್ಷೆಗಳಲ್ಲಿ ದಾಖಲಿತವಾಗಿರುತ್ತವೆ. ಇದರ ಜೊತೆಗೆ ಸಮುದ್ರದ ಸ್ಥಿತಿಗತಿಗಳು ತುಂತುರು ಮಳೆ, ಹಿಮ, ಧೂಳಿನ ಬಿಂದುಗಳು ಈ ನಕ್ಷೆಯಲ್ಲಿ ನಿರೂಪಿತವಾಗಿರುವುವು. ಗರಿಷ್ಠ ಉಷ್ಣಾಂಶ ಹಾಗೂ ಕನಿಷ್ಠ ಉಷ್ಣಾಂಶದ ಅಪಗಮನಗಳೂ ಸಹ ಪ್ರತ್ಯೇಕ ನಕ್ಷೆಗಳ ಮೂಲಕ ದಾಖಲಿತವಾಗಿರುತ್ತವೆ. ಈ ಎಲ್ಲಾ ಬಗೆಯ ಅಂಕಿ ಅಂಶಗಳನ್ನು ಆಧರಿಸಿ ಹವಾಮಾನದ ಮುನ್ಸೂಚನೆಯ ವಿವರಣೆಗಳನ್ನು ಸಹ ನೀಡಲಾಗುವುದು. ಜೊತೆಗೆ ಮರು ದಿನದ ಹವಾಮಾನದ ಮುನ್ಸೂಚನೆಯ ನಕ್ಷೆಯನ್ನು ಸಹ ಮೂಲ ನಕ್ಷೆಯ ಜೊತೆಯಲ್ಲಿ ನೀಡುವುದು ಸಾಮಾನ್ಯ. ಇದರಿಂದ ಮುಂದಿನ 24 ಗಂಟೆಗಳ ಹವಾಮಾನದ ಮುನ್ಸೂಚನೆಯನ್ನು ಪಡೆಯಬಹುದು. (ಆರ್.ಎನ್.)

**ಭಾರತದ ನಗರ ಸಮಸ್ಯೆ:** ನಗರಗಳು ಇಂದಿನ ಆಧುನಿಕ ಮಾನವ ಸಮಾಜದ ಕೇಂದ್ರ ಬಿಂದುಗಳಾಗಿವೆ. ನವ ನಾಗರಿಕತೆಯ ಎಲ್ಲ ಬಗೆಯ ಚಟುವಟಿಕೆಗಳಿಗೆ ನೆಲೆವೀಡಾಗಿವೆ. ಡಬ್ಲ್ಯೂ. ಬಿ. ಮನ್ರೊ ಅವರ ಪ್ರಕಾರ ವಿಶಿಷ್ಟ ಲಕ್ಷಣಗಳಿಂದ ಕೂಡಿ, ಒಂದು ಸೀಮಿತ ಸ್ಥಳದಲ್ಲಿ ಒಟ್ಟಾಗಿ ಸೇರಿ, ಜನ ನಿಬಿಡತೆಯ ಕಾರಣದಿಂದ ಉದ್ಭವಿಸುವ ಅಸಂಖ್ಯಾತ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ನಿರತರಾಗಿರುವ ವ್ಯಕ್ತಿಗಳ ಬೃಹತ್ ಸಮೂಹವೇ ನಗರ. ನಗರವೂ ಒಂದು ಜೀವನಕ್ರಮ ಎಂಬುದು ಕೆಲವರ ಅಭಿಪ್ರಾಯ.

ಭಾರತ ಹಳ್ಳಿಗಳ ದೇಶವಾಗಿದ್ದರೂ ಪ್ರಾರಂಭದಿಂದಲೂ ಇಲ್ಲಿ ನಗರಗಳು ಇದ್ದುವು ಎಂಬುದು ಗಮನಾರ್ಹ. ಸಿಂಧೂನದಿ ಕಣಿವೆ ಪ್ರದೇಶದಲ್ಲಿ ಒಂದು ನಗರ ನಾಗರಿಕತೆ ಬೆಳೆದಿತ್ತು. ಪ್ರಾಚೀನ ಸಂಶೋಧಕರಿಂದ ಬೆಳಕು ಕಂಡ ಹರಪ್ಪ, ಮೊಹೆಂಜೋದಾರೊ ಪಟ್ಟಣಗಳು; ಮೆಗಸ್ತನೀಸ್, ಚೀನೀ ಯಾತ್ರಿಕರು ಮತ್ತು ಇತರರು ಪ್ರಶಂಸಿಸಿ ವರ್ಣಿಸಿರುವ ಪಾಟಲಿಪುತ್ರ, ವಿಜಯನಗರ, ನಾಲಂದ, ತಕ್ಷಶಿಲೆ, ಉಜ್ಜಯಿನಿ ಮುಂತಾದ ನಗರಗಳು ಸುಪ್ರಸಿದ್ಧ ಶೈಕ್ಷಣಿಕ ಹಾಗೂ ಸುಂದರ ಕಲಾತ್ಮಕ ಕೇಂದ್ರಗಳಾಗಿದ್ದುವು. ಬ್ರಿಟಿಷರ ಆಳ್ವಿಕೆಗೆ ಮೊದಲು ಭಾರತದಲ್ಲಿ ರಾಜಕೀಯವಾಗಿ ಪ್ರಮುಖವಾಗಿದ್ದ ನಗರಗಳು; ಧಾರ್ಮಿಕವಾಗಿ ಪ್ರಧಾನವಾಗಿದ್ದ ನಗರಗಳು, ಮತ್ತು ಪ್ರಗತಿಪರ ಕೈಗಾರಿಕೆ ಹಾಗೂ ವ್ಯಾಪಾರಗಳಿಗೆ ಕೇಂದ್ರಗಳಾಗಿದ್ದ ನಗರಗಳು ಎಂಬುದಾಗಿ ಮೂರು ಬಗೆಯ ನಗರಗಳಿದ್ದುವು. ನಗರಗಳು ಸಮಗ್ರ ಸಂಸ್ಕೃತಿಗೆ ಪ್ರತಿನಿಧಿಗಳಾಗಿದ್ದ ಕಲೆಗಾರರು, ದಾರ್ಶನಿಕರು, ಕವಿಗಳು, ಔದ್ಯೋಗಿಕ ಪರಿಣತರು ಮುಂತಾದವರಿಗೆ ಆಶ್ರಯಸ್ಥಾನವಾಗಿದ್ದವು ಮತ್ತು ಉಚ್ಛ್ರಾಯಸ್ಥಿತಿಯಲ್ಲಿದ್ದ ಸಾಂಸ್ಕೃತಿಕ ಜೀವನಕ್ಕೆ ಕೇಂದ್ರವಾಗಿದ್ದವು.

ಬ್ರಿಟಿಷರ ಆಳ್ವಿಕೆ ಆರಂಭವಾದ ಮೇಲೆ ತೀವ್ರವಾದ ಬದಲಾವಣೆಗಳು ಉಂಟಾಗಿ ಬ್ರಿಟಿಷರ ಸ್ವಾರ್ಥಪರ ನೀತಿ ಹಾಗೂ ಸ್ಥಳೀಯ ರಾಜ್ಯಗಳ ಅವನತಿಯ ಕಾರಣ ನಗರ ಕೈಗಾರಿಕೆಗಳು ನಶಿಸಿ ಹೋಗಿ, ಯಂತ್ರಗಳ ಮೇಲೆ ಅಧಾರಿತವಾಗಿದ್ದ ಆಧುನಿಕ ಕೈಗಾರಿಕೆಗಳು ಸ್ಥಾಪಿತವಾಗಿ ಕೈಗಾರಿಕೀಕರಣದ ಪ್ರಕ್ರಿಯೆ ಪ್ರಬಲವಾಯಿತು. ಇದರ ಫಲವಾಗಿ ಮುಂಬಯಿ, ಚೆನ್ನೈ, ಕೋಲ್ಕತ ಮುಂತಾದ ಮಹಾನಗರಗಳು ನವನಾಗರಿಕತೆಯ ಕೇಂದ್ರಗಳಾಗಿ ಬೆಳೆದವು. ಇತ್ತೀಚಿನ ದಶಕಗಳಲ್ಲಿ ನಗರಗಳು ಸಮರ್ಪಕ ಯೋಜನೆ ಹಾಗೂ ಮಾರ್ಗದರ್ಶನವಿಲ್ಲದೆ ಅತಿಯಾಗಿ ಬೆಳೆಯುತ್ತಿವೆ. ಇದರಿಂದಾಗಿ ಅನೇಕ ಕ್ಲಿಷ್ಟ ಸಮಸ್ಯೆಗಳು ತಲೆದೋರಿವೆ.

ಜನಬಾಹುಳ್ಯ ಇಂದು ಭಾರತನಗರಗಳದ್ದು ಪ್ರಧಾನ ಸಮಸ್ಯೆ. ನಗರಗಳಲ್ಲಿ ಕಂಡುಬರುವ ಉದ್ಯೋಗಾವಕಾಶ, ಮನರಂಜನೆ, ವ್ಯಾಪಾರೋದ್ಯಮಕ್ಕೆ ಅನುಕೂಲ, ಶಿಕ್ಷಣ ಸೌಲಭ್ಯ ಮುಂತಾದ ಸೌಕರ್ಯಗಳಿಂದ ಆಕರ್ಷಿತರಾಗಿ ಗ್ರಾಮಸ್ಥರು ಹಳ್ಳಿಗಳಿಂದ ನಗರಕ್ಕೆ ವಲಸೆ ಬರುತ್ತಿದ್ದಾರೆ. ನಗರದಲ್ಲಿಯೇ ಸ್ಥಿರವಾಗಿ ನೆಲಸದೆ ದಿನ ಬಂದು ಹೋಗುವ ಜನರ ಹಾಗೂ ಪ್ರವಾಸಿಗರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಇದರಿಂದ ನಗರದ ಜನಸಂಖ್ಯೆ ಹೆಚ್ಚಿ, ಇನ್ನೂ ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಜನಸಂಖ್ಯೆ ಹೆಚ್ಚಾಗಿರುವುದರ ಜೊತೆಗೆ ತಲೆಎತ್ತಿಕೊಂಡಿರುವ ಇನ್ನೊಂದು ಸಮಸ್ಯೆ ಎಂದರೆ ನಿರುದ್ಯೋಗ ಹಾಗೂ ಬಡತನ. ಉದ್ಯೋಗಗಳ ಸಂಖ್ಯೆ ಕಡಿಮೆ. ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಅಧಿಕ. ಭಾರತದ ನಗರಗಳಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಇದರ ಫಲವಾಗಿ ಅನೇಕರು ಬಡತನದಿಂದ ಬಳಲುತ್ತಿದ್ದಾರೆ. ಅನೇಕರಿಗೆ ಆಹಾರ, ಉಡುಪು, ವಸತಿ ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಸಾಧ್ಯವಾಗದೆ ಜೀವನ ದುರ್ಭರವಾಗಿ, ಉತ್ಸಾಹಹೀನರಾಗಿ ಬಾಳುತ್ತಿದ್ದಾರೆ. ಬಡವರು ನಗರದಲ್ಲಿ ವಾಸಕ್ಕೆ ಯೋಗ್ಯವಲ್ಲದ ಮನೆಗಳಲ್ಲಿ ವಾಸಮಾಡಬೇಕಾಗುತ್ತದೆ. ಯಾವ ಬಗೆಯ ಸೌಕರ್ಯಗಳೂ ಇಲ್ಲದೆ, ಅನಾರೋಗ್ಯ ಹಾಗೂ ಅನೀತಿಗಳಿಗೆ ಕೇಂದ್ರವಾದ ಕೊಳಚೆ ಪ್ರದೇಶಗಳಲ್ಲಿರುವ ಮನೆಗಳಲ್ಲಿ ಅವರು ಬಾಳಬೇಕಾಗುತ್ತದೆ. ಹೀಗೆ ಕೊಳೆಗೇರಿಗಳು ನಗರದ ಮತ್ತೊಂದು ಸಮಸ್ಯೆಯಾಗಿ ಪರಿಣಮಿಸಿವೆ. ಅತೀವ ಜನಸಂದಣಿಯಿಂದ ಕೂಡಿ, ಶಿಥಿಲವಾಗಿರುವ, ಅನಾರೋಗಕರವಾಗಿರುವ ಮತ್ತು ಅಲ್ಲಿ ವಾಸಿಸುವ ವ್ಯಕ್ತಿಗಳ ಆರೋಗ್ಯ, ರಕ್ಷಣೆ ಪೋಷಣೆ ಬೆಳೆವಣಿಗೆ, ನೀತಿ ಹಾಗೂ ಕ್ಷೇಮಾಭ್ಯುದಯದಕ್ಕೆ ಕಂಟಕಪ್ರಾಯವಾಗಿರುವ ಹಾಗೂ ನೀರು, ಗಾಳಿ, ಬೆಳಕು ಮುಂತಾದ ಯಾವ ವಿಧವಾದ ಮೂಲಭೂತ ಸೌಕರ್ಯಗಳೂ ಇಲ್ಲದ ವಾಸಗೃಹಗಳಿಂದ ಕೂಡಿರುವ ಕೊಳೆಗೇರಿಗಳು ನಗರದ ಸೌಂದರ್ಯಕ್ಕೆ ಕುಂದು ಹಾಗೂ ನಗರದ ವಿಕಾಸಕ್ಕೆ ದೊಡ್ಡ ತಡೆಯಾಗಿವೆ. ಇವು ಆನೇಕ ಬಗೆಯ ಸಮಸ್ಯೆಗಳಿಗೆ ಉಗಮಸ್ಥಾನ. ಬಡತನಕ್ಕೆ ಇವು ತವರುಮನೆ. ಕೆಲವರು ಆದಾಯದ ವಿಚಾರದಲ್ಲಿ ಮಾತ್ರವಲ್ಲದೆ, ಅರ್ಹತೆಯಲ್ಲೂ ಬಡವರಾಗಿರುವವರ ವಾಸಸ್ಥಳವಾಗಿರುವ ಈ ಕೊಳೆಗೇರಿಗಳಲ್ಲಿ ಮೈ ತುಂಬ ಬಟ್ಟೆ ಹಾಗೂ ಹೊಟ್ಟೆ ತುಂಬ ಅನ್ನವಿಲ್ಲದೆ ತಕ್ಕ ದೈಹಿಕ ಹಾಗೂ ಮಾನಸಿಕ ಬೆಳೆವಣಿಗೆ ಇಲ್ಲದ ಮಕ್ಕಳ ಗುಂಪೇ ಇರುತ್ತದೆ. ಕೊಳಚೆ ಪ್ರದೇಶಗಳು ಭಿಕ್ಷುಕರ ಬಾಲಾಪರಾಧಿ, ಅಪರಾಧಿ, ಕುಡುಕ, ವೇಶ್ಯೆ ಮುಂತಾದ ಎಲ್ಲ ಸಮಾಜವಿರೋಧಿಗಳ ಕೇಂದ್ರವಾಗಿ ಇದ್ದು ಸಾಮಾಜಿಕ ಅವ್ಯವಸ್ಥೆಯ ಪ್ರತಿರೂಪವಾಗಿದೆ.

ಮದ್ಯಪಾನ ಹಾಗೂ ವೇಶ್ಯಾವೃತ್ತಿ ಭಾರತದ ನಗರಗಳ ಪ್ರಮುಖ ಸಮಸ್ಯೆಗಳಲ್ಲಿ ಸೇರಿವೆ. ಕಾರ್ಖಾನೆಗಳಲ್ಲಿ ದಿನವಿಡೀ ದುಡಿಯುವ ಜನ ಹಾಗೂ ತಮ್ಮ ಪತ್ನಿಮಕ್ಕಳನ್ನು ದೂರ ಪ್ರದೇಶಗಳಲ್ಲಿ ಬಿಟ್ಟು ತಾವೇ ಬೇರೆ ಬೇರೆ ಇರುವ ಕಾರ್ಮಿಕರುದುಡಿತದಿಂದಾಗುವ ದಣಿವನ್ನು ಕುಡಿತದಿಂದ ಶಮನ ಮಾಡಿಕೊಳ್ಳಲು ಪ್ರಾರಂಭಿಸಿ ಅದೇ ದುಶ್ಚಟವಾಗಿ ಪರಿಣಮಿಸುತ್ತದೆ. ವಿದೇಶಿ ಮದ್ಯವನ್ನು ಕುಡಿಯುವ ಹಂಬಲ ಹೆಚ್ಚಾಗಿದೆ. ಮದ್ಯಪಾನ ಮತ್ತು ಧೂಮಪಾನ ಮಾಡಿದರೆ ತಮ್ಮ ಗೌರವ, ಘನತೆ ಅಂತಸ್ತು ಹೆಚ್ಚುತ್ತವೆಂದು ಭಾವಿಸುವ ಅನೇಕ ವ್ಯಕ್ತಿಗಳು ಉಂಟು. ಕೆಲವು ಸಂತೋಷಕೂಟಗಳಲ್ಲಿ ಮದ್ಯಪಾನ ಕಡ್ಡಾಯವಾಗಿರುವಂತೆ ಕಂಡುಬರುತ್ತಿದೆ. ಈ ಅಪಾಯಕಾರಿ ಚಟವನ್ನು ತಡೆಗಟ್ಟಲು ಯುಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಮದ್ಯಪಾನವಾದ ಮೇಲೆ ವ್ಯಕ್ತಿ ಕೆಲವೊಮ್ಮೆ ವೇಶ್ಯಾಗೃಹಗಳಿಗೆ ಭೇಟಿಕೊಡುವುದುಂಟು. ನಗರದಲ್ಲಿ ವೇಶ್ಯಾವೃತ್ತಿ ಒಂದು ಲಾಭದಾಯಕ ಉದ್ಯೋಗ. ಅಶ್ಲೀಲ ನೃತ್ಯಗಳಿಗೆ ಅವಕಾಶವಿರುವ ರಾತ್ರಿವಿಹಾರ ಮಂದಿರಗಳಲ್ಲಿ, ಗೌರವಾರ್ಹವಾಗಿರುವಂತೆ ಕಂಡುಬರುವ ದೊಡ್ಡ ಹೋಟಲು ಮುಂತಾದ ಸ್ಥಳಗಳಲ್ಲಿ, ಕೀಳು ದರ್ಜೆಯ ಮದ್ಯದಂಗಡಿಗಳಲ್ಲಿ ವೇಶ್ಯಾವೃತ್ತಿ ಯಾವ ಅಡೆತಡೆಗಳೂ ಇಲ್ಲದೆ ಬಹಿರಂಗವಾಗಿಯೇ ನಡೆಯುತ್ತದೆ. ವೇಶ್ಯೆಯರನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡು, ಬಲಾತ್ಕಾರದಿಂದ ಅನೇಕ ಮುಗ್ಧ ಹೆಣ್ಣು ಮಕ್ಕಳನ್ನು ವೇಶ್ಯರನ್ನಾಗಿಸಿ ಅವರ ಮುಖಾಂತರ ಹೊಟ್ಟೆ ಹೊರೆಯುವ ತಲೆಹಿಡುಕ ಜನರಿಗೇನೂ ಕೊರತೆ ಇಲ್ಲ. ವೇಶ್ಯಾವಾಟಿಕೆ ಇಂದು ವ್ಯವಸ್ಥಿತ ಸಂಸ್ಥೆಯಾಗಿರುವುದು ಸಮಾಜಕ್ಕೆ ದೊಡ್ಡ ಅಪಾಯ. ಈ ಸಮಸ್ಯೆ ಕೌಟುಂಬಿಕ ಹಾಗೂ ಸಮುದಾಯದ ಅವ್ಯವಸ್ಥೆಗೆ ಮೂಲಕಾರಣ. ಇದರ ವಿರುದ್ಧ ಎಷ್ಟೇ ಕಾನೂನುಗಳನ್ನು ಜಾರಿಗೆ ತಂದರೂ ಅತ್ಯಾಚಾರಗಳು ಕಾನೂನಿನ ಮುಸುಕಿನಲ್ಲಿಯೇ ನಡೆಯುತ್ತವೆ. ನಗರ ಜನರ ಆರೋಗ್ಯಕೆಡಿಸಿ ಅವರನ್ನು ನೀತಿಭ್ರಷ್ಟರನ್ನಾಗಿಸುವ ವೇಶ್ಯಾ ಸಮಸ್ಯೆ ಭಯಂಕರ ಸಾಮಾಜಿಕ ಜಾಡ್ಯವಾಗಿದೆ.

ಭಿಕ್ಷಾವೃತ್ತಿ ಭಾರತದ ನಗರಗಳಲ್ಲಿಯ ಇನ್ನೊಂದು ಸಾಮಾಜಿಕ ವ್ಯಾಧಿ. ಮಾರುಕಟ್ಟೆ, ರೈಲ್ವೆ ಹಾಗೂ ಬಸ್ ನಿಲ್ದಾಣಗಳಲ್ಲಿ ದೇವಾಲಯ ಹಾಗೂ ವಾಸಗೃಹಗಳ ಮುಂದೆ ಕೊಳಕಾಗಿರುವ ಚಿಂದಿಬಟ್ಟೆಗಳನ್ನು ಧರಿಸಿ ಕೈಚಾಚಿ ಭಿಕ್ಷೆಬೇಡುತ್ತಿರುವ ವ್ಯಕ್ತಿಗಳನ್ನು ನೋಡಬಹುದು. ಬಡತನ, ನಿರುದ್ಯೋಗ, ಕೌಟುಂಬಿಕ ವಿಘಟನೆ, ವ್ಯಾಧಿ ಮತ್ತು ಅಂಗವಿಕಲತೆ ಮತ್ತು ಧಾರ್ಮಿಕ ವಿಷಯ ಮುಂತಾದ ಅಂಶಗಳು ಭಿಕ್ಷಾವೃತ್ತಿಗೆ ಕಾರಣ. ದಾನ ಮಾಡುವುದರಿಂದ ಪುಣ್ಯ ಲಭ್ಯವಾಗುತ್ತದೆ ಎಂಬ ನಂಬಿಕೆಯಿಂದ ಅನೇಕರು ಭಿಕ್ಷೆ ನೀಡಿ ಭಿಕ್ಷಾವೃತ್ತಿಯನ್ನು ಹೆಚ್ಚಾಗಿ ಪ್ರೋತ್ಸಾಹಿಸುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಲ್ಲಿ ಕೆಲವರು ದುಶ್ಚಟಗಳಿಂದ ತಮ್ಮ ಆಸ್ತಿಪಾಸ್ತಿಗಳನ್ನು ಹಾಳುಮಾಡಿಕೊಂಡು ರಕ್ಷಕರಿಲ್ಲದೆ ನಿರ್ಗತಿಕರಾಗಿ ನಗರಕ್ಕೆ ಬಂದು ಭಿಕ್ಷಾಟನೆಗೆ ಇಳಿಯುತ್ತಾರೆ. ಮತ್ತೆ ಕೆಲವರು ಅಂಗಾಗಗಳು ಸರಿಯಾಗಿದ್ದರೂ ಕೆಲಸ ಮಾಡದೆ, ಮೈಗಳ್ಳರಾಗಿ ಭಿಕ್ಷಾವೃತ್ತಿ ಸಂಪಾದನೆಯ ಸುಲಭ ಮಾರ್ಗವೆಂದು ಅರಿತು ಅದನ್ನೇ ಒಂದು ಕಸುಬನ್ನಾಗಿಸಿಕೊಂಡು, ಅದರಲ್ಲಿ ಪ್ರವೀಣರಾಗಿ ನಗರಜೀವನಕ್ಕೆ ಕಳಂಕಪ್ರಾಯರಾಗಿ ಇದ್ದಾರೆ. ಕೆಲವರು ಮಕ್ಕಳನ್ನು ಹೊತ್ತುಕೊಂಡು ಹೋಗಿ, ಅವರನ್ನು ಅಂಗವಿಕಲರನ್ನಾಗಿಸಿ ಬಾಲ ಭಿಕ್ಷುಕರನ್ನಾಗಿ ಮಾರ್ಪಡಿಸಿ ಅವರ ಸಂಪಾದನೆಯ ಮೂಲಕ ಜೀವಿಸುತ್ತಾರೆ. ಭಿಕ್ಷುಕರ ವೇಷದಲ್ಲಿ ಕಳ್ಳತನ, ದರೋಡೆ ಖೂನಿ ಮಾಡುವವರಿದ್ದಾರೆ. ಭಿಕ್ಷುಕರನೇಕರು ಕೆಲವು ಅಂಟು ಜಾಡ್ಯಗಳಿಂದ ನರಳುತ್ತಿರುವುದರಿಂದ, ಅವರು ನಗರದಲ್ಲಿ ಎಲ್ಲ ಕಡೆ ರೋಗಗಳನ್ನು ಹರಡಿ ಜನಾರೋಗ್ಯಕ್ಕೆ ಸಮಸ್ಯೆಯಾಗಿದ್ದಾರೆ. ಅವರು ವ್ಯಭಿಚಾರಿಗಳೂ ಆಗಿರುವುದರಿಂದ ಸಾಮಾಜಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ. ಭಿಕ್ಷಾವೃತ್ತಿಯನ್ನು ಸರ್ಕಾರ ನಿಷೇಧಿಸಿದ್ದರೂ ಈ ದಂಧೆ ಧಾರ್ಮಿಕ ಸೋಗಿನಲ್ಲಿ ಮುಂದುವರಿದುಕೊಂಡು ಬರುತ್ತಿದೆ. ಅಂಗವಿಕಲರು, ರೋಗಿಗಳು, ಜನರ ದಯೆಯಿಂದಾಗಿ ಬದುಕುತ್ತಿದ್ದಾರೆ. ಭಿಕ್ಷೆ ಬೇಡುವ ಮಂದಿ ನಾನಾವಿಧವಾಗಿ, ದೇವರ ಹೆಸರು ಬಳಸಿಕೊಂಡು ಮುಗ್ಧಜನರನ್ನು ಸುಲಿಯುವುದುಂಟು, ಕಾನೂನು ನಿಷೇಧವಿದ್ದರೂ ಭಿಕ್ಷಾಟನೆಯನ್ನು ಸಂಪೂರ್ಣ ತೊಡೆದುಹಾಕಲಾಗದೆ ಅದೂ ಒಂದು ಸಮಸ್ಯೆಯಾಗಿ ಪರಿಣಮಿಸಿದೆ.

ವಿವಿಧ ಅಪರಾಧ ನಗರಗಳ ಮತ್ತೊಂದು ಸಮಸ್ಯೆ. ಕಾನೂನುಗಳನ್ನು ತಿಳಿದೋ ತಿಳಿಯದೆಯೋ ಉಲ್ಲಂಘಿಸುವುದು ಸಾಮಾನ್ಯವಾಗಿದೆ. ಸಾಮಾನ್ಯವಾಗಿ ಸಮಾಜ ವಿರೋಧಿ ಕೃತ್ಯವನ್ನು ಅಪರಾಧ ಎಂಬುದಾಗಿ ಎಣಿಸಲಾಗಿದೆ. ಕೆಲವು ಮಾನಸಿಕ ಹಾಗೂ ದೈಹಿಕ ದೌರ್ಬಲ್ಯಗಳ ಕಾರಣ, ಕೌಟುಂಬಿಕ ಅವ್ಯವಸ್ಥೆ, ಬಡತನ, ನಿರುದ್ಯೋಗ, ಸಾಮಾಜಿಕ ಹಾಗೂ ಭೌಗೋಳಿಕ ಬದಲಾವಣೆ ಮತ್ತು ಸಹವಾಸ ದೋಷ ಮುಂತಾದ ಅನೇಕ ಕಾರಣಗಳಿಂದ ವ್ಯಕ್ತಿ ಅಪರಾಧ ಮಾಡುತ್ತಾನೆ. ಗುಂಡಾಗಿರಿ, ಖೂನಿ, ಕಳ್ಳತನ, ದಗಾ, ಮೋಸ, ಸುಳ್ಳುಪತ್ರ, ಖೋಟಾ ನಾಣ್ಯ ಹಾಗೂ ಖೋಟಾ ವಸ್ತುಗಳನ್ನು ತಯಾರಿಸುವುದು, ಆಹಾರ, ಪಾನೀಯ ಹಾಗೂ ಔಷಧಿಗಳ ಕಲಬೆರಕೆ ಮಾಡುವುದು, ಸಮುದ್ರಗಳ್ಳತನ, ಕಳ್ಳಸಾಗಣೆ, ಸುಂಕಗಳ್ಳತನ ಮುಂತಾದ ಇನ್ನೂ ಅನೇಕ ಅಪರಾಧಗಳನ್ನು ಹೆಸರಿಸಬಹುದು. ಹಣವಂತರೂ ತಿಳಿದ ಮಂದಿಯೂ ಮಾಡುವ ಅಪರಾಧ ನಗರಗಳಲ್ಲಿ ತೀವ್ರವಾಗುತ್ತಿದೆ. ಭ್ರಷ್ಟಾಚಾರ, ಲಂಚಗುಳಿತನ ಎಲ್ಲೆಲ್ಲೂ ಕಂಡುಬರುತ್ತಿವೆ. ಹಣವಂತರು, ಶಿಕ್ಷೆ ತಪ್ಪಿಸಿಕೊಳ್ಳಬಹುದಾಗಿದೆ. ಅನುಸರಿಸುವ ಕ್ರಮ ಒಳ್ಳೆಯದೋ ಕೆಟ್ಟದೋ ಅದು ಗೌಣ. ಹೇಗಾದರೂ ಹಣ ಸಂಪಾದಿಸಿ ಶ್ರೀಮಂತರಾಗಬೇಕೆಂಬ ಹೆಬ್ಬಯಕೆ ಇಂದು ನಗರ ನಿವಾಸಿಗಳಲ್ಲಿ ಪ್ರಬಲವಾಗುತ್ತಿದೆ. ಜೀವನಮಟ್ಟ ಹೆಚ್ಚಿ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೇರುತ್ತಿರುವುದರಿಂದ ಜೀವನ ಸಾಗಿಸಲು ಪತಿಪತ್ನಿಯರಿಬ್ಬರೂ ಮನೆಯ ಹೊರಗಡೆ ದುಡಿಯಬೇಕಾಗುತ್ತದೆ. ಆದ್ದರಿಂದ ಮನೆಗಳಲ್ಲಿ ಮಕ್ಕಳಿಗೆ ಸರಿಯಾದ ಪಾಲನೆ ಪೋಷಣೆ ಇಲ್ಲದೆ ಅನೇಕರು ಬಾಲಾಪರಾಧಿಗಳಾಗುತ್ತಿದ್ದಾರೆ. ಅನೇಕ ಅವ್ಯವಸ್ಥಿತ ಹಾಗೂ ಸಮಸ್ಯಾತ್ಮಕ ಕುಟುಂಬಗಳು, ಮಕ್ಕಳು ಅಡ್ಡದಾರಿ ಹಿಡಿದು ಬಾಲಾಪರಾಧಿಗಳಾಗುವಂತೆ ಮಾಡುತ್ತಿವೆ. ಸಹವಾಸ ದೋಷ ಹಾಗೂ ನಗರದಲ್ಲಿರುವ ಕೆಟ್ಟ ಪರಿಸರ ಬಾಲಾಪರಾಧಕ್ಕೆ ಪ್ರೋತ್ಸಾಹ ನೀಡುತ್ತವೆ. ಸಾಧಾರಣವಾಗಿ ಮಕ್ಕಳು ಶಾಲೆಗಳ್ಳತನ, ಅಲೆಮಾರಿತನ, ಸಾಮಾನುಗಳ ಚೌರ್ಯ, ಜೇಬುಗಳ್ಳತನ, ಸುಲಿಗೆ, ದರೋಡೆ ಮುಂತಾದ ಅಪರಾಧಗಳನ್ನು ಮಾಡುತ್ತಾರೆ. ಕುಡಿತ, ಧೂಮಪಾನ, ಜೂಜು ಇವುಗಳ ಚಟಕ್ಕೆ ಬೀಳುತ್ತಾರೆ.

ಇಷ್ಟು ಮಾತ್ರವಲ್ಲದೆ ಭಾರತದ ನಗರಗಳಲ್ಲಿ ಸಾಕಷ್ಟು ಸಾರಿಗೆ ಸಂಪರ್ಕ, ವಸತಿ ಮತ್ತು ಶಿಕ್ಷಣ ಸೌಲಭ್ಯ, ವೈದ್ಯಕೀಯ ನೆರವು, ಕುಡಿಯುವ ಶುದ್ಧ ಜಲ ಪೂರೈಕೆ ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವುದು ಸಾಧ್ಯವಾಗುತ್ತಿಲ್ಲ. ಈ ಬಗೆಯ ಬೇಡಿಕೆಗಳನ್ನು ಈಡೇರಿಸಲು ತಕ್ಕ ಹಣಕಾಸಿನ ನೆರವಿಲ್ಲದೆ ನಗರಜೀವನ ಅಸ್ತವ್ಯಸ್ತವಾಗುತ್ತಿದೆ. ನಗರ ಪರಿಸರವೂ ಹಿತಕರವಾಗಿಲ್ಲ. ಕಾರ್ಖಾನೆ ವಾಹನ ಇತ್ಯಾದಿಗಳಿಂದ

ಹೊರಬೀಳುವ ವಿಷಪೂರಿತ ಅನಿಲಗಳು ವಾಯುಮಾಲಿನ್ಯಕ್ಕೆ ಮೂಲವಾಗಿ ಜನರ ಆರೋಗ್ಯ ಹದಗೆಡುತ್ತಿದೆ. ನಗರಗಳಲ್ಲಿಯ ಹೆಚ್ಚಿನ ಜನಸಂಖ್ಯೆ ಮತ್ತು ವಾಹನ ಹಾಗೂ ಯಂತ್ರೋಪಕರಣಗಳು ನೆಮ್ಮದಿಗೆ ಭಂಗ ತರುತ್ತಿವೆ. ಜೀವನ ಯಾಂತ್ರಿಕವಾಗುತ್ತಿದೆ. ಮುಂಜಾನೆಯಿಂದ ಇರುಳತನಕ ಸತತವಾಗಿ ದುಡಿಯಬೇಕಾಗಿರುವ ನಗರವಾಸಿಗೆ ನಿಜವಾದ ಸುಖಾನುಭವ ಕೇವಲ ಮರೀಚಿಕೆಯಾಗಿದೆ. ಪ್ರಾಥಮಿಕ ಬಾಂಧವ್ಯಗಳನ್ನು ಬೆಳೆಸಿಕೊಳ್ಳಲು ಸಾಕಷ್ಟು ಕಾಲಾವಕಾಶವಿಲ್ಲದಿರುವ ನಗರವಾಸಿಗೆ ನೆರೆಹೊರೆಯವರ ಪರಿಚಯವೇ ಇಲ್ಲದಂತಾಗಿದೆ. ನಗರವಾಸಿ ತಾನು ತನ್ನ ಪ್ರಪಂಚ ಎಂಬುದಾಗಿ ಇದ್ದುಕೊಂಡು ಸ್ವಾರ್ಥಪರವಾಗಿ ನಿಜವಾದ ಸುಖ ಸಂತೋಷದಿಂದ ವಂಚಿತನಾಗಿದ್ದಾನೆ. ಯಾಂತ್ರಿಕ ಜೀವನದ ಸುಳಿಯಲ್ಲಿ ಕೆಲವೊಂದು ಮಾನವ ಮೌಲ್ಯಗಳೆಲ್ಲ ನಶಿಸಿ ಹೋಗುತ್ತಿವೆ. ವಿಜ್ಞಾನ ರಂಗದಲ್ಲಿ ಅದ್ಭುತ ಸಾಧನೆಗಳು ಕಂಡುಬಂದಿದ್ದರೂ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಮರೆತ ನಗರವಾಸಿ ನೆಮ್ಮದಿ, ಶಾಂತಿ, ಸಮೃದ್ಧಿ ಕಳೆದುಕೊಂಡಿದ್ದಾನೆ.

ಈ ನಗರ ಸಮಸ್ಯೆಗಳು ಭಾರತ ಒಂದಕ್ಕೇ ಸೀಮಿತವಾಗಿಲ್ಲ. ಎಲ್ಲೆಲ್ಲಿ ನಗರಗಳು ಇವೆಯೋ ಮತ್ತು ಬೆಳೆಯುತ್ತಿದೆಯೊ ಅಲ್ಲೆಲ್ಲ ಹೆಚ್ಚು ಕಡಿಮೆ ಇದೇ ಬಗೆಯ ಸಮಸ್ಯೆಗಳಿರುತ್ತವೆ. ಭಾರತದ ನಗರ ಸಮಸ್ಯೆಗಳು ಹೆಚ್ಚಾಗತೊಡಗಿವೆ. ಅವಕ್ಕೆ ಮೂಲಕಾರಣ ಹೆಚ್ಚಿನ ಜನಸಂಖ್ಯೆ, ಸಂಪನ್ಮೂಲಗಳ ಮತ್ತು ಸಾಕಷ್ಟು ಹಣಕಾಸಿನ ಕೊರತೆ, ಇವುಗಳ ನಿವಾರಣೆಗೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಶಿಕ್ಷಣ ಮತ್ತು ಆರ್ಥಿಕ ಶಕ್ತಿಗಳು ಒಟ್ಟುಗೂಡಿ ವೈಜ್ಞಾನಿಕವಾಗಿ ಆದಷ್ಟು ಹೆಚ್ಚುಕಾಲ ಇರುವ ಸುಧಾರಣೆಗಳನ್ನು ಮಾಡಬೇಕಾಗಿದೆ. ಯಾವುದೇ ಒಂದು ಕ್ಷೇತ್ರದ ಸುಧಾರಣೆ ನಗರ ಸಮಸ್ಯೆಗಳಿಗೆ ಪರಿಹಾರವಾಗದು. (ಎಂ.ಡಿ.)

**ಭಾರತದ ಪರಿಸರ ಶಾಸನ:** ಭಾರತದಲ್ಲಿ ಪರಿಸರದ ರಕ್ಷಣೆಗಾಗಿ ಹಲವಾರು ಬಗೆಯ ಕಾನೂನುಗಳ ರಚನೆಯನ್ನು ಕಾಣಬಹುದು. ಸ್ವಾತಂತ್ರ್ಯ ಪೂರ್ವದಲ್ಲಿಯೂ ಪರಿಸರ ಸಂರಕ್ಷಣೆ ಹಾಗೂ ಅದರ ಮಾಲಿನ್ಯ ನಿಯಂತ್ರಣಕ್ಕೆ ಕೆಲವು ಕಾನೂನುಗಳನ್ನು ರಚಿಸಲಾಗಿತ್ತು. ಇಂತಹ ಕಾಯಿದೆಗಳಿಗೆ ಕೆಲವು ಉದಾ: ಇಂಡಿಯನ್ ಫಿಶರೀಸ್ ಆಕ್ಟ್–1887, ಇಂಡಿಯನ್ ಫೋರ್ಟ್ ಆಕ್ಟ್–1904, ಬೆಂಗಾಲ್ ಸ್ಮೋಕ್ ಕಂಟ್ರೋಲ್ ಆಕ್ಟ್–1905, ದಿ ಮೋಟಾರ್ ವೆಹಿಕಲ್ ಆಕ್ಟ್–1938, ದಿ ರಿವರ್ ಬೋರ್ಡ್ಸ್ ಆಕ್ಟ್–1956 ಮತ್ತು ದಿ ಆಟಾಮಿಕ್ ಎನರ್ಜಿ ಆಕ್ಟ್–1962.

ಪರಿಸರ ಕುರಿತು ಹೆಚ್ಚಿನ ಮತ್ತು ನೈಜ ಕಾಳಜಿ ಆರಂಭವಾದದ್ದು 1972ರಲ್ಲಿ, ವಿಶ್ವಸಂಸ್ಥೆ ಸ್ವೀಡನ್‌ನ ಸ್ಟಾಕ್ ಹೋಂನಲ್ಲಿ ಆಯೋಜಿಸಿದ್ದ ಹ್ಯೂಮನ್ ಎನ್‌ವಿರಾನ್‌ಮೆಂಟ್ ಸಮ್ಮೇಳನದ ಅಂತಾರಾಷ್ಟ್ರೀಯ ಸಮುದಾಯ ಪರಿಸರದ ಆರೋಗ್ಯವನ್ನು ಕುರಿತು ಆಳವಾಗಿ ಚಿಂತಿಸಲು ಒಂದು ವೇದಿಕೆಯಾಯಿತು. ಈ ಸಮ್ಮೇಳನದಲ್ಲಿ ಭಾರತದ ಅಂದಿನ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು ಭಾಗವಹಿಸಿದ್ದು, ಪರಿಸರದ ರಕ್ಷಣೆ ಹಾಗು ಅದರ ಅಭಿವೃದ್ಧಿಗೆ ಹಲವು ಶಾಸನಗಳನ್ನು ರಚಿಸಲಾಗಿತ್ತು. ಅವುಗಳು ಇಂದಿಗೂ ಕೂಡ ಜಾರಿಯಲ್ಲಿವೆ. ಭಾರತದ ಜಲ, ವಾಯು, ಶಬ್ದ ಮಾಲಿನ್ಯ ಜೈವಿಕ ವೈವಿಧ್ಯತೆಯ ರಕ್ಷಣೆಯ ಉದ್ದೇಶಕ್ಕಾಗಿ 5 ಪ್ರಮುಖ ಕಾಯಿದೆಗಳನ್ನು ಜಾರಿಗೆ ತರಲಾಗಿದೆ.

ಪರಿಸರ ಸಂರಕ್ಷಣಾ ಕಾಯಿದೆ–1986, ವಾಯು ಮಾಲಿನ್ಯ ನಿಯಂತ್ರಣ ಕಾಯಿದೆ–1981, ಜಲ ಮಾಲಿನ್ಯ ನಿಯಂತ್ರಣ ಕಾಯ್ದೆ–1974, ವನ್ಯಜೀವಿ ಸಂರಕ್ಷಣಾ ಕಾಯ್ದೆ, ಅರಣ್ಯ ಸಂರಕ್ಷಣೆ ಕಾಯ್ದೆ. *

**ಭಾರತದ ಪ್ರಾಣಿಸಂಪತ್ತು:** ಪ್ರಾಣಿವಿತರಣೆಯ ದೃಷ್ಟಿಯಿಂದ ಭಾರತ ಪೌರಸ್ತ್ಯ ದೇಶಗಳ (ಓರಿಯಂಟಲ್) ಗುಂಪಿಗೆ ಸೇರುತ್ತದೆ. ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಶ್ರೀಲಂಕ, ಬಾಂಗ್ಲಾದೇಶ, ನೇಪಾಲ, ಮಯನ್ಮಾರ್, ಇಂಡೋನೇಷ್ಯಗಳೂ ಇದೇ ಗುಂಪಿಗೆ ಸೇರುತ್ತದೆ. ನಾಲ್ಕು ದಶಲಕ್ಷ ಚ.ಕಿಮೀ ಗಳಿಗಿಂತಲೂ ಹೆಚ್ಚು ವಿಸ್ತಾರವಾದ ಭಾರತದಲ್ಲಿ ವಿಭಿನ್ನ ತೆರನಾದ ಭೌತ ಲಕ್ಷಣ, ಹವಾಗುಣ ವೈವಿಧ್ಯ ಮತ್ತು ಸಸ್ಯಸಂಪತ್ತು ಇವೆಯಾಗಿ ಅವಕ್ಕೆ ತಕ್ಕುದಾದ ಇಲ್ಲಿಯ ಪ್ರಾಣಿಸಂಪತ್ತು ಕೂಡ ವೈವಿಧ್ಯಮಯವಾಗಿದೆ.

ವಿಸ್ತಾರವಾದ ಈ ಉಪಖಂಡದ ಪ್ರಾಣಿಗಳನ್ನು ಸಾಮಾನ್ಯವಾಗಿ ಜಲ, ನೆಲ ಹಾಗೂ ವಾಯು ಎಂಬ ಮೂರು ಪರಿಸರ ವಲಯಗಳಲ್ಲಿ ವಾಸಿಸುವ 8 ಗುಂಪುಗಳಾಗಿ ವಿಂಗಡಿಸಬಹುದಾದರೂ ಇವುಗಳಲ್ಲಿ ಪ್ರತಿಯೊಂದೂ ವೈವಿಧ್ಯಮಯವಾಗಿರುವುದರಿಂದ ಪ್ರಾಣಿಗಳ ಹಂಚಿಕೆಯ ದೃಷ್ಟಿಯಿಂದ ಭಾರತವನ್ನು ಹಿಮಾಲಯದ ಉಪಪ್ರಾಂತ್ಯ ಮತ್ತು ಪರ್ಯಾಯ ದ್ವೀಪತಲದ ಉಪಪ್ರಾಂತ್ಯ ಎಂಬ ಎರಡು ಮುಖ್ಯ ಭಾಗಗಳಾಗಿ ವಿಭಾಗಿಸಬಹುದು.

1. ಹಿಮಾಲಯದ ಉಪಪ್ರಾಂತ್ಯ: ಪೂರ್ವಕ್ಕೆ ಬ್ರಹ್ಮಪುತ್ರ, ಪಶ್ಚಿಮಕ್ಕೆ ಸಿಂಧೂ ನದಿ ಇವುಗಳ ನಡುವೆಯಿರುವ ಹಿಮಾಲಯ ಪರ್ವತಗಳ ಸುತ್ತಮುತ್ತಲಿನ ಪ್ರದೇಶಗಳು ಈ ಪ್ರಾಂತ್ಯಕ್ಕೆ ಸೇರುತ್ತವೆ. ಪಾಕಿಸ್ತಾನದ ಕೆಲವು ಪ್ರದೇಶಗಳು ಮತ್ತು ನೇಪಾಲ ಕೂಡ ಇದಕ್ಕೆ ಸೇರಿಕೊಂಡಿವೆ. ವಿವಿಧ ಎತ್ತರಗಳ ಈ ಪರ್ವತ ವಿಭಾಗ ವಿಚಿತ್ರ ಮಾದರಿಯ ಪ್ರಾಣಿಗಳಿಗೆ ಆವಾಸಸ್ಥಾನವಾಗಿದೆ. ಈ ಪ್ರಾಂತ್ಯವನ್ನು ಪುನಃ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಬಹುದು.

ಅ. ಅರಣ್ಯ ವಿಭಾಗ: ಕಾಶ್ಮೀರ, ಭೂತಾನಗಳನ್ನೊಳಗೊಂಡ ಹಿಮಾಲಯದ ಪೂರ್ವಕ್ಕೆ ಈ ಇಳಿಜಾರು ಪ್ರದೇಶ ದಟ್ಟ ಮತ್ತು ಸದಾ ಹಸುರು ಕಾಡುಗಳಿಂದ ಕೂಡಿದೆ. ಪರ್ಯಾಯ ದ್ವೀಪಕಲ್ಪದ ಪ್ರಾಂತ್ಯದ ಕಾಡುಗಳಲ್ಲಿ ಕಾಣಸಿಗುವ ಹುಲಿ, ಆನೆ, ಕಾಟಿ, ಕಡವೆ ಮತ್ತು ಕಾಡುಕುರಿ (ಮಂಟ್‌ಜ್ಯಾಕ್) ಮುಂತಾದ ಪ್ರಾಣಿಗಳು ಇಲ್ಲಿಯೂ ಉಂಟು. ಪರ್ವತದ ತಪ್ಪಲಿನ ಜೌಗು ಪ್ರದೇಶಗಳಲ್ಲಿ ಹಾಗೂ ಅಡವಿಗಳಲ್ಲಿ ಕಾಟಿಯ ಬದಲು ಕಾಡೆಮ್ಮೆ (ವೈಲ್ಡ್ ಬಫೆಲೊ), ಹಂದಿ, ಜಿಂಕೆ, ಜೌಗುಜಿಂಕೆಗಳು ವಾಸಿಸುತ್ತವೆ. ಸಮುದ್ರ ಮಟ್ಟಕ್ಕಿಂತ 1525 ರಿಂದ 1830 ಮೀ ಎತ್ತರದ ಪ್ರದೇಶಗಳಲ್ಲಿ ಕಾಡುಗಳು ಮತ್ತಷ್ಟು ದಟ್ಟ. ಈ ಭಾಗಗಳಲ್ಲಿ ಭಾರತದ ಇತರ ಭಾಗಗಳಿಗೆ ಕಾಣದ ಪ್ಯಾಂಡ, ಅನ್ವೇಷಕ ಬ್ಯಾಡ್ಜರ್ (ಫೆರೆಟ್ ಬ್ಯಾಡ್ಜರ್), ಜೌಗುಜಿಂಕೆ, ಶಿಖರಹಿತ ಮುಳ್ಳುಹಂದಿ, ಕೂರುಹಂದಿ, ಕೆಲವು ಜಾತಿಯ ಚಿಗರೆಗಳು ವಾಸಿಸುತ್ತವೆ. ಇಲ್ಲಿಯ ಕೆಲವು ಪ್ರಾಣಿಗಳಿಗೂ ಚೀನದೇಶದ ಪ್ರಾಣಿಗಳಿಗೂ ಹೋಲಿಕೆಯುಂಟು.

ಅ. ಪಶ್ಚಿಮ ವಿಭಾಗ: ಲಡಾಕಿನಿಂದ ಕಾಶ್ಮೀರದ ಚಿತ್ರಾಲದವರೆಗಿನ ಪ್ರದೇಶಗಳನ್ನೊಳಗೊಂಡ ಈ ಭಾಗದಲ್ಲಿ ವಾಸಿಸುವ ಕೆಲವು ಪ್ರಾಣಿಗಳು ಯುರೋಪ್ ಹಾಗೂ ಉತ್ತರ ಏಷ್ಯದ ಮಾದರಿಗಳನ್ನು ಹೋಲುತ್ತವೆ. ಉಳಿದವು ಭಾರತಕ್ಕೆ ಸೀಮಿತವಾಗಿರುವ ಪ್ರಾಣಿಗಳು, ಕಾಡುಕುರಿ, ಕೃಷ್ಣಮೃಗ ಮತ್ತು ಚಿಂಕಾರಗಳು ಮುಖ್ಯವಾದವು. ಈ ಪ್ರದೇಶದ ಅತಿಮುಖ್ಯ ಹಾಗೂ ವಿಶಿಷ್ಟ ಪ್ರಾಣಿ ಎಂದರೆ ಕಾಶ್ಮೀರಿ ಜಿಂಕೆ.

ಇ. ಮಧ್ಯ ಭಾಗ: ವೃಕ್ಷರೇಖೆ ಮತ್ತು ರಸಭರಿತ ಹುಲ್ಲುಗಳ ಮೈದಾನ ಹಾಗೂ ಟಿಬೆಟಿನ ಒಣ ಮೈದಾನಗಳ ಭಾಗ. ಪರ್ವತ ಶ್ರೇಣಿಗಳಿಂದ ಸುತ್ತುವರಿದಿರುವ ಈ ಭಾಗ ವಾತಾವರಣದ ವೈಪರೀತ್ಯದಿಂದಾಗಿ ಪೌರಸ್ತ್ಯದೇಶಗಳ ಗುಂಪನ್ನು ಪುರಾತನ ಶೀತವಲಯದ ಗುಂಪಿನ ದೇಶಗಳಿಂದ ಬೇರ್ಪಡಿಸುತ್ತದೆ. ಈ ಭಾಗದ ಉತ್ತರಭಾಗದಲ್ಲಿ ಹೆಗ್ಗಣ (ಮೋಲ್), ನೀರಿಲಿ (ವಾಟರ್ ಶ್ರೂ), ಕುಂದಿಲಿ (ಮ್ಸ್ ಹೇರ್), ಕೃಷ್ಣಮೃಗ ಭರಲ್‌ಗಳೂ ದಕ್ಷಿಣದಲ್ಲಿ, ಬಾವಲಿ, ಮರಮೂಗಿಲಿ (ಟ್ರೀ ಶ್ರೂ), ಪನುಗು ಬೆಕ್ಕು, ಮುಂಗುಸಿ, ಹಾರುಬೆಕ್ಕು, ಅಳಿಲುಗಳೂ ವಾಸಿಸುತ್ತವೆ.

ಈ. ಟಿಬೆಟ್ ಭಾಗ: ಟಿಬೆಟಿನ ಮೈದಾನಗಳು, ಲಡಾಕಿನಿಂದ ಭೂತಾನದವರೆಗಿನ ಕಾಶ್ಮೀರದ ಮೈದಾನಗಳು, ಉತ್ತರ ಸರಹದ್ದಿನ ಪ್ರಾಂತ್ಯಗಳು ಈ ಭಾಗದಲ್ಲಿ ಸೇರಿಕೊಂಡಿವೆ. ಕಡಿಮೆ ಮಳೆ, ಕಡುಚಳಿ ಇಲ್ಲಿಯ ಹವಾ ವೈಶಿಷ್ಟ್ಯ. ಪ್ರಪಂಚದಲ್ಲಿ ಮರಳುಗಾಡು ಹಾಗೂ ಶೀತವಲಯಗಳೆರಡರ ಗುಣಗಳನ್ನೂ ಒಟ್ಟಿಗೆ ಪಡೆದಿರುವ ಪ್ರದೇಶವೆಂದರೆ ಇದೊಂದೇ. ಏಷ್ಯದ ಮರುಳುಗಾಡಿನಲ್ಲಿ ಕಂಡುಬರುವ ಕಾಡುಕತ್ತೆಗಳನ್ನು ಈ ಪ್ರದೇಶದಲ್ಲೂ ನೋಡಬಹುದು. ವೈವಿಧ್ಯಮಯ ಹವಾಗುಣ, ಸಸ್ಯ ಹಾಗೂ ಎತ್ತರ ಇವುಗಳಿಂದ ಈ ಭಾಗ ಪ್ರಾಣಿಗಳ ಹಂಚಿಕೆಯ ದೃಷ್ಟಿಯಿಂದ ಬಹು ಮುಖ್ಯವಾದ್ದು. ಅಸ್ಸಾಮ್, ಮಣಿಪುರ, ಮೇಘಾಲಯ, ಸಿಕ್ಕಿಮ್ ಮುಂತಾದ ಪ್ರದೇಶಗಳಲ್ಲಿ ವಾಸಿಸುವ ಪ್ರಾಣಿಗಳು ಹಿಮಾಲಯದ ಅರಣ್ಯಗಳ ಭಾಗದ ಪ್ರಾಣಿಗಳನ್ನೇ ಹೋಲುವುದರಿಂದ ಈ ಪ್ರದೇಶಗಳನ್ನೂ ಅರಣ್ಯಭಾಗಕ್ಕೆ ಸೇರಿಸಬಹುದು.

2. ಪರ್ಯಾಯ ದ್ವೀಪಕಲ್ಪ ಪ್ರಾಂತ್ಯ: ಭಾರತದ ಅಧಿಕ ಭಾಗವನ್ನು ಆವರಿಸಿಕೊಂಡಿರುವ ಈ ಉಪವಿಭಾಗ ಗಂಗಾನದಿಯದಂಡೆಯಿಂದ ಕನ್ಯಾಕುಮಾರಿಯವರೆಗೂ ಹರಡಿದೆ. ಗಂಗಾನದಿಯ ದಕ್ಷಿಣಕ್ಕೆ ತ್ರಿಕೋಣಾಕಾರದಲ್ಲಿರುವ ಇದರಲ್ಲಿ ವಿಂಧ್ಯಪರ್ವತ ಶ್ರೇಣಿಗಳು ಅಡಕವಾಗಿದೆ. ದಕ್ಷಿಣಭಾರತದ ಎರಡೂಕಡೆ ಸಮುದ್ರಗಳಿದ್ದು ಅಂಚಿನಲ್ಲಿ ಕರಾವಳಿಪ್ರದೇಶ ಉಂಟು. ಪಶ್ಚಿಮ ಕರಾವಳಿಗೆ ಹೊಂದಿಕೊಂಡಿರುವ ಪಶ್ಚಿಮ ಘಟ್ಟಗಳು, ಮಹಾರಾಷ್ಟ್ರ, ಕರ್ನಾಟಕ ಹಾಗೂ ಕೇರಳ ರಾಜ್ಯಗಳಿಗೆ ಚಾಚಿಕೊಂಡಿದ್ದು ದಖ್ಖನ್ ಪ್ರಸ್ಥಭೂಮಿಯನ್ನು ಕರಾವಳಿಯಿಂದ ಬೇರ್ಪಡಿಸಿದೆ. ಪೂರ್ವತೀರದಲ್ಲಿ ಪೂರ್ವಘಟ್ಟಗಳು ತಮಿಳು ನಾಡಿನ ಕೆಲವೆಡೆ ಹರಡಿಕೊಂಡಿವೆ. ಹವೆ ಹಾಗೂ ಔನ್ನತ್ಯದ ದೃಷ್ಟಿಯಿಂದ ಇವೆರಡು ಘಟ್ಟ ಪ್ರದೇಶಗಳು ವಿಭಿನ್ನವಾಗಿವೆ. ಈ ಭಾಗದಲ್ಲಿ ನೀಲಗಿರಿ, ಪಳನಿ ಬಾಬಾಬುಡನ್ ಗಿರಿ, ಬಿಳಿಗಿರಿರಂಗನ ಬೆಟ್ಟ ಮುಂತಾದ ಹಲವು ಬೆಟ್ಟಗಳೂ ಇವೆ. ದಕ್ಷಿಣದ ಕೆಲವು ಪ್ರಾಣಿಗಳು ವೈಶಿಷ್ಟ್ಯಪೂರ್ಣವಾಗಿದ್ದು ಅವು ಭಾರತಕ್ಕೆ ಮಾತ್ರ ಮೀಸಲಾಗಿವೆ. ಚುಕ್ಕೆ ಜಿಂಕೆ (ಚಿತಾಲ್), ನೀಲ್ಗಾಯ್, ಕೃಷ್ಣಮೃಗ, ನಾಲ್ಕು ಕೊಂಬಿನ ಚಿಗರೆ, ಅಲಸಿಕರಡಿ ಇವು ಇಲ್ಲಿಯ ಕೆಲವು ಮುಖ್ಯ ಪ್ರಾಣಿಗಳು. ಈ ವಿಭಾಗವನ್ನು ಕೂಡ ಹಿಮಾಲಯದ ಪ್ರಾಂತ್ಯದಂತೆಯೇ ಹಲವಾರು ಭಾಗಗಳಾಗಿ ವಿಂಗಡಿಸಬಹುದು.

ಅ. ಭಾರತದ ಮರುಭೂಮಿಯ ಪ್ರದೇಶ: ಗುಜರಾತ್ ಹಾಗೂ ರಾಜಸ್ತಾನ ರಾಜ್ಯಗಳ ಕೆಲವು ಭಾಗಗಳನ್ನು ಆವರಿಸಿಕೊಂಡಿರುವ ಈ ಪ್ರದೇಶ ಪಾಕಿಸ್ತಾನ, ಆಫ್ಘಾನಿಸ್ತಾನಗಳ ಕಡೆ ಮುಂದುವರಿಯುತ್ತದೆ. ಇಲ್ಲಿಯ ಪ್ರಾಣಿಗಳು ಉಳಿದ ಪ್ರದೇಶಗಳವಕ್ಕಿಂತ ಭಿನ್ನವಾಗಿದೆ. ಇವು ಪಶ್ಚಿಮದ ಮರಳುಗಾಡಿನ ಇತರ ಪ್ರದೇಶಗಳಿಂದ ವಲಸೆ ಬಂದಂಥವು. ಮರಳುಗಾಡಿನ ನರಿ, ಮೊಲ, ಜೆರ್‌ಬಿಲ್ ಇತ್ಯಾದಿಗಳು ಇಲ್ಲಿಯ ಮುಖ್ಯ ಪ್ರಾಣಿಗಳು.

ಆ. ಗಂಗಾನದಿಯ ತೀರದ ಮೈದಾನ ಪ್ರದೇಶ: ಈ ಭಾಗದಲ್ಲಿ ಸಾಧಾರಣ ಮಳೆ ಬೀಳುತ್ತದೆ. ಚಳಿಗಾಲದಲ್ಲಿ ಉಷ್ಣತೆ ಕಡಿಮೆ. ಗೆಜೆಲ್ ಎಂಬ ಜಿಂಕೆ ಮುಖ್ಯವಾದ್ದು. ಪೂರ್ವಭಾಗದಲ್ಲಿ ತಂಪು ಪ್ರದೇಶಗಳಿವೆ. ಪಶ್ಚಿಮದಲ್ಲಿ ಬಂಗಾಲದ ಸುಂದರಬನವಿದೆ.

ಇಲಿ ಸದಾ ಹಸುರಾಗಿರುವ ಸಮೃದ್ಧ ಸಸ್ಯಸಂಪತ್ತನ್ನು ಕಾಣಬಹುದು. ಈ ಭಾಗದಲ್ಲಿ ಜೌಗುಜಿಂಕೆ ಹಾಗೂ ಹುಲಿಗಳುಂಟು.

ಇ. ಮುಖ್ಯ ಪರ್ಯಾಯ ದ್ವೀಪಕಲ್ಪ ಭಾಗ: ಮಧ್ಯಭಾರತ, ದಕ್ಷಿಣ ಪ್ರಸ್ಥಭೂಮಿ ಹಾಗೂ ಇನ್ನುಳಿದ ಎಲ್ಲ ಪ್ರದೇಶಗಳೂ ಈ ಭಾಗದಲ್ಲಿ ಸೇರಿಕೊಂಡಿವೆ. ಪಶ್ಚಿಮಘಟ್ಟಗಳು ನೈರುತ್ಯ ಮಾರುತಗಳನ್ನು ತಡೆಯುವುದರಿಂದ ಪ್ರಸ್ಥಭೂಮಿಯಲ್ಲಿ ಕಡಿಮೆ ಮಳೆ ಬೀಳುತ್ತದೆ. ಈ ಪ್ರದೇಶಗಳಲ್ಲಿ ಸಸ್ಯಗಳು ವಿರಳ. ಕುರುಚಲು ಗಿಡಗಳೂ ಚಿಕ್ಕ ಮರಗಳೂ ಇಲ್ಲಿಯ ಪ್ರಧಾನ ಸಸ್ಯಗಳು. ಕೆಲವಡೆ ಹುಲ್ಲುಗಾವಲುಗಳೂ ಉಂಟು, ಮೈದಾನ, ಬೆಟ್ಟಗುಡ್ಡಗಳು, ತಗ್ಗುಗಳು ಎಲ್ಲವೂ ಈ ಪ್ರದೇಶದಲ್ಲಿವೆ. ಗೆಜೆಲ್, ಚಿಗರೆ ಇವು ಸಾಮಾನ್ಯವಾಗಿದ್ದು ಇವುಗಳೊಂದಿಗೆ ಮುಂಗುಸಿ, ತೋಳ ವಿವಿಧ ರೀತಿಯ ಅಳಿಲು, ಮೊಲ, ಇಲಿ ಕಾಣದೊರೆಯುವುವು. ಪರ್ಣಪಾತಿ ಕಾಡುಗಳಲ್ಲಿ ಕಾಟಿ, ಕಡವೆ, ಚುಕ್ಕೆಜಿಂಕೆ ಕರಡಿ, ಕಾಡುನಾಯಿ ಉಂಟು. ತೇವಪೂರಿತ ಕಾಡುಗಳಲ್ಲಿ ಕಾಡಾನೆ, ಕಾಟಿ ಜೌಗುಜಿಂಕೆ ವಾಸಿಸುತ್ತವೆ.

ಈ. ಪಶ್ಚಿಮಘಟ್ಟಗಳು ಹಾಗೂ ಕರಾವಳಿ ಪ್ರದೇಶ: ಈ ಭಾಗಗಳಲ್ಲಿ ಅತಿವೃಷ್ಟಿಯಾಗುತ್ತಿದ್ದು ಯಾವಾಗಲೂ ವಾತಾವರಣ ತಂಪಾಗಿರುತ್ತದೆ. ಪಶ್ಚಿಮಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ದಟ್ಟ ಕಾಡುಗಳಿವೆ. ಸದಾ ಹಸುರಾಗಿರುವ ಎತ್ತರವಾದ ಮರಗಳು, ಬೆತ್ತ, ಬಿದಿರು ಮುಂತಾದವು ಇಲ್ಲಿ ಸರ್ವೆಸಾಮಾನ್ಯ. ಹಲವಾರು ಹಳ್ಳಗಳೂ ಚಿಕ್ಕ ನದಿಗಳೂ ಇಲ್ಲಿವೆ. ನೀಲಗಿರಿ, ಪಳನಿ ಬಾಬಾಬುಡನ್‌ಗಿರಿ, ಬಿಳಿಗಿರಿರಂಗನ ಬೆಟ್ಟ ಮುಂತಾದವು ಇಲ್ಲಿಯ ಮುಖ್ಯ ಗಿರಿಗಳು. ನೀಲಗಿರಿ ಮುಸುವ, ಮಕಾಕ್ ಕೋತಿ, ನೀಲಗಿರಿಯ ಕಂದು ಮುಂಗುಸಿ, ರಾಮಳಿಲು, ಕೆಂಜಳಿಲು ಮಲಬಾರ್ ಪುನುಗು ಬೆಕ್ಕು, ಮುಳ್ಳಿಲಿ, ನೀರುನಾಯಿ, ಆನೆ, ಹುಲಿ ಇತ್ಯಾದಿ ಇಲ್ಲಿ ವಾಸಿಸುವ ಮುಖ್ಯ ಪ್ರಾಣಿಗಳು. (ಎಸ್.ಎನ್.ಎಚ್.)

**ಭಾರತದ ಮಣ್ಣುಗಳು:** ಪ್ರಪಂಚದ ಇತರ ಭೂಪ್ರದೇಶಗಳಲ್ಲಿ ಇರುವಂತೆ ಭಾರತದಲ್ಲೂ ತಾಯಿಬಂಡೆ ಮತ್ತು ಹವಾಗುಣ ಇವುಗಳಲ್ಲಿಯ ವೈವಿಧ್ಯದ ಕಾರಣ ಬಗೆ ಬಗೆಯ ಮಣ್ಣುಗಳು ಕಾಣಬರುತ್ತವೆ. ಇಲ್ಲಿಯ ಮಣ್ಣುಗಳ ಬಗ್ಗೆ ವ್ಯಾಪಕ ಅಧ್ಯಯನ ಹಾಗೂ ಸಮೀಕ್ಷೆ ನಡೆದು ಸು. 24 ಬಗೆಯ ಮಣ್ಣುಗಳನ್ನು ಗುರುತಿಸಲಾಗಿದೆ. ಇವನ್ನು ಸ್ಥೂಲವಾಗಿ 4 ಗುಂಪುಗಳಾಗಿ ವಿಂಗಡಿಸಲಾಗಿದೆ: ಕೆಂಪುಮಣ್ಣುಗಳು, ಜಂಬಿಟ್ಟಿಗೆ ಮಣ್ಣುಗಳು, ಕಪ್ಪು ಮಣ್ಣುಗಳು ಮತ್ತು ಮೆಕ್ಕಲು ಮಣ್ಣುಗಳು.

ಕೆಂಪುಮಣ್ಣುಗಳು : ಮಣ್ಣಿನ ಕೆಂಪು ಅಥವಾ ಕಂದು ಬಣ್ಣವೇ ಈ ಬಗೆಯ ವರ್ಗೀಕರಣಕ್ಕೆ ಆಧಾರ. ಇದರಲ್ಲಿರುವ ಕಬ್ಬಿಣದ ಆಕ್ಸೈಡ್ ಅಂಶವೇ ಈ ಬಣ್ಣಕ್ಕೆ ಕಾರಣ. ಕಬ್ಬಿಣದ ಆಕ್ಸೈಡ್ ಅಂಶ ಶೇ. 5–8 ಕ್ಕಿಂತ ಹೆಚ್ಚಿಲ್ಲ. ಜೊತೆಗೆ ಮಣ್ಣಿನಲ್ಲಿ ನೀರಿನ ಅಂಶವೂ ಇರುವುದರಿಂದ ಕಡುಕೆಂಪು ಛಾಯೆ ಬಂದಿದೆ. ಇಂಥ ಮಣ್ಣುಗಳನ್ನು ಪ್ರಧಾನವಾಗಿ ದಕ್ಷಿಣ ಭಾರತದಲ್ಲಿ ಕಾಣಬಹುದು. ಸಾಧಾರಣವಾಗಿ ಇವು ಕೆಂಪು ಮರಳು ಮಣ್ಣು, ಅಗ್ನಿಶಿಲೆ ಮತ್ತು ನೈಸ್ ಶಿಲೆಗಳಿಂದ ರೂಪುಗೊಂಡಿವೆ. ಮತ್ತೆ ಕೆಲವು ಮರಳುಶಿಲೆ, ಹಾರ್ನ್‌ಬ್ಲೆಂಡ್, ಮೈಕ, ಸಿಸ್ಟ್, ಆಮ್ಲಟ್ರ್ಯಾಪ್, ಕ್ವಾರ್ಟ್ಸ್‌ಜೈಟಿಸ್ ಮತ್ತು ಜೇಡಿ ಪದರುಗಲ್ಲುಗಳಿಂದ ಆಗಿವೆ. ಕೆಂಪುಮಣ್ಣು ಪೂರ್ವತೀರದ ಉದ್ದಕ್ಕೂ ಮುಂದೆ ಈಶಾನ್ಯದಲ್ಲಿ ಅಸ್ಸಾಮಿನಲ್ಲೂ ವ್ಯಾಪಿಸಿದೆ. ಪೂರ್ವ ಮಧ್ಯ ಭಾರತದಲ್ಲಿ ಕೆಂಪುಮಣ್ಣು ಇದೆ. ಆದರೆ ಈ ವಿವಿಧ ಪ್ರದೇಶಗಳ ಮಣ್ಣಿನ ಕಣಗಾತ್ರ ರಚನೆಯಲ್ಲಿ ಹೆಚ್ಚು ವ್ಯತ್ಯಾಸ ಕಂಡುಬರುತ್ತದೆ. ಮರಳು, ಗೋಡು, ಜೇಡಿ ಹೀಗೆ ವಿವಿಧ ಕಣಗಾತ್ರರಚನೆಯುಳ್ಳ ಕೆಂಪುಮಣ್ಣುಗಳನ್ನು ಕಾಣಬಹುದು. ಈ ವೈವಿಧ್ಯಕ್ಕೂ ಈ ಮಣ್ಣುಗಳ ಹುಟ್ಟಿಗೂ ತಾಯಿಬಂಡೆಯೇ ಕಾರಣ. ಕೆಂಪು ಮಣ್ಣನ್ನು ಕೆಂಪು ಗೋಡುಮಣ್ಣು, ಕೆಂಪು ಮರಳುಮಣ್ಣು ಎಂದು ಮತ್ತೆ ಉಪ ವಿಭಾಗಿಸಲಾಗಿದೆ.

ಕೆಂಪುಗೋಡುಮಣ್ಣು : ಇದು ನೈಸ್ ಚಾರ್ನಕೈಟ್, ಡೈಯೊರೈಟ್ಸ್ ಮುಂತಾದ ಶಿಲೆಗಳು ಶಿಥಿಲಗೊಂಡಿದ್ದರಿಂದ ಆದದ್ದು. ಇದರಲ್ಲಿ ಜೇಡಿಖನಿಜಗಳು ಹೆಚ್ಚಾಗಿವೆಯಲ್ಲದೆ ಆಮ್ಲಕಾರಕ ಸಿಲಿಕಾಂಶ ಕಡಿಮೆ ಇರುತ್ತದೆ. ಪ್ರತ್ಯಾಮ್ಲವಾಗಿ ಅಸಂಯುಕ್ತ ಸಿಲಿಕ ಇಲ್ಲದ್ದರಿಂದ ಹೆಚ್ಚು ನವುರು ಕಣಗಳಿರುವ ಗೋಡು ಮಣ್ಣು ರೂಪುಗೊಳ್ಳುತ್ತದೆ. ಕೆಲವೆಡೆ ಈ ಮಣ್ಣಿನಲ್ಲಿ ಸುಣ್ಣ ಹರಳು ಕೂಡ ಇರುವುದುಂಟು. ಸಾಧಾರಣವಾಗಿ ಈ ಮಣ್ಣಿನಲ್ಲಿ ಹೈಡ್ರೊಜನ್ ಅಯಾನ್ ಸಾರತೆ (pH) ಸ್ವಲ್ಪ ಆಮ್ಲೀಯತೆ ಇಲ್ಲವೆ ಸಮಧಾತುವಾಗಿದ್ದು 7ರ ಸಮೀಪದಲ್ಲಿರುತ್ತದೆ. ಸುಣ್ಣ ಇರುವಂಥಲ್ಲಿ pH 8ರವರೆಗೂ ಹೋಗಬಹುದು. ಎ ವಲಯದ್ದು, ಅಂದರೆ ಮೇಲ್ಮಣ್ಣು 25–40 ಸೆಂಮೀ ಆಳದವರೆಗೆ ಇದ್ದು ಕೆಂಪು ಕಂದುಬಣ್ಣ ಮತ್ತು ತಿರುಳು ಕಣಜೋಡಣೆ ಹೊಂದಿರುತ್ತದೆ. ಬಿ ವಲಯದ್ದು ಅಂದರೆ ತಳಮಣ್ಣು 76ರಿಂದ 90 ಸೆಂಮೀ ಆಳದವರೆಗೆ ಇದ್ದು ಕಂದುಬಣ್ಣದ ಗೋಡು ಇಲ್ಲವೆ ಜೇಡಿ ಕಣಜೋಡಣೆ ಹೊಂದಿರುತ್ತದೆ. ಇದರ ತಳದಲ್ಲಿ ಶಿಥಿಲಗೊಂಡ ಬಂಡೆ ಚೂರುಗಳಿರುತ್ತವೆ. ತಾಯಿಬಂಡೆಗಳಲ್ಲಿ ಸುಣ್ಣವಿದ್ದಾಗ ಗಟ್ಟಿ ಸುಣ್ಣ ಶೇಖರಣೆಯಾಗಿರುವುದು ಕಂಡುಬರುತ್ತದೆ. ಇಂಥ ಸನ್ನಿವೇಶಗಳಲ್ಲಿ ಬಿ ವಲಯದಲ್ಲೂ ಸುಣ್ಣದ ಹರಳು ಇರುವುದು ಸಾಧ್ಯ.

ಕೆಂಪು ಮರಳುಮಣ್ಣು : ಇದು ಸಾಮಾನ್ಯವಾಗಿ ಅಗ್ನಿಶಿಲೆ, ಗ್ರಾನೈಟ್, ನೈಸ್ ಕ್ವಾರ್ಟ್ಸ್‌ಜೈಟಿಸ್, ಮರಳು ಶಿಲೆ ಇಂಥವುಗಳಿಂದ ರೂಪುಗೊಂಡದ್ದು. ಇದರಲ್ಲಿ ಒರಟು ಮತ್ತು ಮರಳಿನ ಅಂಶ ಹೆಚ್ಚಾಗಿರುತ್ತದೆ. ಜೇಡಿ ಖನಿಜಗಳು, ಕೆಂಪು ಲಿಮೊನೈಟ್, ಹಳದಿ ಲಿಮೊನೈಟ್ ಮುಂತಾದ ಕಬ್ಬಿಣದ ಆಕ್ಸೈಡುಗಳಿಂದ ಆವೃತವಾಗಿದ್ದು ಕೆಂಪು ಅಥವಾ ಕೆಂಪು ಹಳದಿ ಬಣ್ಣ ಇರುತ್ತದೆ. ಹಳದಿ ಮಣ್ಣು ಜಲವಿಮುಕ್ತವಾದಾಗ ಅದರ ಬಣ್ಣ ಕೆಂಪಾಗುತ್ತದೆ. ಸಾಮಾನ್ಯವಾಗಿ ಈ ಮಣ್ಣಿನಲ್ಲಿ ಕಬ್ಬಿಣದ ಗ್ರಾವೆಲ್ ಇರುತ್ತದೆ. ಇದರ ಜೇಡಿಖನಿಜ ಮುಖ್ಯವಾಗಿ ಕೆಯೊಲಿನೈಟ್ ಮತ್ತು ಇಲೈಟುಗಳಿಂದ ಕೂಡಿದೆ. ಈ ಮಣ್ಣಿನ ಪ್ರತ್ಯಾಮ್ಲ ವಿನಿಮಯ ಸಾಮರ್ಥ್ಯ ಇದರಲ್ಲಿಯ ಜೇಡಿ ಅಂಶಕ್ಕೆ ಅನುಗುಣವಾಗಿ (100 ಗ್ರಾಮುಗಳಿಗೆ 5–25 ಮಿಲಿ ಈಕ್ವಿವಲೆಂಟ್) ಇರುತ್ತದೆ. ಇವುಗಳ pH 4.5–6.5. ಎ ವಲಯ ಸಾಧಾರಣ ಆಳದ್ದು. ಕಣಗಾತ್ರ ರಚನೆ ಸಾಮಾನ್ಯವಾಗಿ ಒರಟು. ಬಿ ವಲಯದ ಆಳ ಸು. 15 ಸೆಂಮೀ ಇದು ಮೇಲ್ಮಣ್ಣಿಗಿಂತಲೂ ಸ್ವಲ್ಪ ಹೆಚ್ಚು ಜೇಡಿಯುಳ್ಳದ್ದು. ಸಿ ವಲಯದ ಮಣ್ಣು ಹುಡಿಬಂಡೆ ಶಿಥಿಲಗೊಂಡು ಉಂಟಾಗಿರುವ ಒರಟು ಗ್ರಾನೈಟ್ ಅಥವಾ ಗ್ರಾನೆಟ್ ನೈಸ್ ವಸ್ತುಗಳನ್ನು ಒಳಗೊಂಡಿರುತ್ತದೆ. ಇವುಗಳ ಲಂಬಕೊಯ್ತವನ್ನು ಪರೀಕ್ಷಿಸಿದರೆ ತಾಯಿಬಂಡೆಗಳ ರಚನೆಯಲ್ಲೂ ಈ ಸ್ಥಿತಿ ಬಲು ಹಿಂದಿನಿಂದಲೂ ಉಳಿದಿರುವುದು ಕಂಡುಬರುತ್ತದೆ. ಮಣ್ಣನ್ನು ಅದುಮಿದರೆ ಪುಡಿಪುಡಿಯಾಗುತ್ತದೆ. ಈ ಮಣ್ಣುಗಳಲ್ಲಿ ಮಳೆ ಇಲ್ಲವೆ ನೀರಾವರಿ ಅನುಕೂಲಗಳಿಗೆ ಅನುಗುಣವಾಗಿ ಅನೇಕ ಬೆಳೆಗಳನ್ನು ತೆಗೆಯಬಹುದು.

ಜಂಬಿಟ್ಟಿಗೆ ಮಣ್ಣುಗಳು : ಇವುಗಳ ಬಣ್ಣ ಸಾಮಾನ್ಯವಾಗಿ ಕೆಂಪು ಇಲ್ಲವೆ ಹಳದಿಗೆಂಪು. ರಚನೆ ಜೇನುಗೂಡನ್ನು ಹೋಲುತ್ತದೆ. ಇವು ಸಾಂದ್ರವಾಗಿದ್ದು ಗಟ್ಟಿಯಾಗಿ ಇರಬಹುದು, ಇಲ್ಲವೆ ಕಬ್ಬಿಣದ ಸಣ್ಣ ಸಣ್ಣ ಗಂಟುಗಳ ಸಡಿಲವಾದ ಮೊತ್ತವಾಗಿಯೂ ಇರಬಹುದು. ಹದ ಎನ್ನುವಂಥ ತೇವವಿರುವ ಸನ್ನಿವೇಶಗಳಲ್ಲಿ ಈ ಮಣ್ಣನ್ನು ಕಿತ್ತು ತೆಗೆದು ಕತ್ತರಿಸಿ ಅನಂತರ ಒಣಗಿಸಿ ಇಟ್ಟಿಗೆಯಾಗಿ ಬಳಸುತ್ತಾರೆ. ಇಟ್ಟಿಗೆಗಳು ಒಣಗಿದಾಗ ಕಲ್ಲಿನಂತೆ ಗಟ್ಟಿಯಾಗುತ್ತವೆ. ಕಟ್ಟಡ ನಿರ್ಮಾಣಕ್ಕೆ ಇವನ್ನೂ ಬಳಸುತ್ತಾರೆ. ವಾಸ್ತವವಾಗಿ ಲ್ಯಾಟರೈಟ್ ಎಂಬ ಹೆಸರು ಇಟ್ಟಿಗೆ ಎಂಬ ಅರ್ಥವುಳ್ಳ ಲ್ಯಾಟಿನ್ ಪದದಿಂದ ಜನ್ಯವಾದದ್ದು. ವಿಶಿಷ್ಟ ಬಗೆಯ ಪ್ರತ್ಯಾಮ್ಲ ಶಿಲೆಗಳಿರುವ, ಹೆಚ್ಚು ಮಳೆ ಬೀಳುವ ಉಷ್ಣವಲಯ ಪ್ರದೇಶಗಳಲ್ಲಿ ಇಂಥ ಲ್ಯಾಟರೈಟ್‌ಕಾರಕ ಪ್ರತಿಕ್ರಿಯೆ ಉಂಟಾಗುತ್ತದೆ. ಅಧಿಕ ಬಸಿಯುವಿಕೆಯ ಕಾರಣ ಪ್ರತ್ಯಾಮ್ಲಗಳು ಕಳೆದುಹೋಗುತ್ತವೆ. ಬಸಿಯುವ ನೀರು ಕ್ಷಾರೀಯವಾದದ್ದರಿಂದ ಸಿಲಿಕ ವಿಲೀನವಾಗಿ, ಕೆಳಮುಖವಾಗಿ ಚಲಿಸಿ, ಮೇಲ್ಪೈಯಲ್ಲಿ ಕಬ್ಬಿಣ ಮತ್ತು ಅಲ್ಯೂಮಿನಿಯಮ್ ಆಕ್ಸೈಡ್ ಶೇಖರಣೆಯಾಗುತ್ತದೆ; ಲ್ಯಾಟರೈಟ್ ಕಲ್ಲುಗಳಿಂದ ವಿಭಜನೆಗೊಂಡ ವಸ್ತುವಿನಿಂದ ಕೂಡಿರುವ ಮಣ್ಣಿಗೆ ಲ್ಯಾಟರಿಟಿಕ್ ಅಥವಾ ಜಂಬಿಟ್ಟಿಗೆ ಮಣ್ಣು ಎಂದು ಹೆಸರು.

ಈ ಮಣ್ಣುಗಳಲ್ಲಿ ಮೂಲ ಜೇಡಿ ಖನಿಜಗಳಿಲ್ಲ. ಆದ್ದರಿಂದ ನಮ್ಯತೆ, ಜಿಗುಟುತನ, ಸಂಕೋಚನ ಸಾಮರ್ಥ್ಯ, ಪ್ರತ್ಯಾಮ್ಲ ವಿನಿಮಯ ಸಾಮರ್ಥ್ಯ (100 ಗ್ರಾಮ್ ಲ್ಯಾಟರೈಟಿಗೆ 2–4 ಮಿಲಿ ಈಕ್ವಿವಲೆಂಟ್) ಇವೆಲ್ಲ ಕಡಿಮೆ; ಲ್ಯಾಟರೈಟ್ ಮಣ್ಣುಗಳಿಗೆ ಪ್ರತ್ಯಾಮ್ಲ ವಿನಿಮಯ ಸಾಮರ್ಥ್ಯ 4 ರಿಂದ 6 ಇರಬಹುದು. ಸಿಲಿಕ ಸೆಸ್ಕ್ವಿ ಆಕ್ಸೈಡ್ ಅನುಪಾತ ಸು. 3:5 ಕ್ಕಿಂತಲೂ ಕಡಿಮೆ ಇರುತ್ತದೆ. ಎಲ್ಲೊ ಕೆಲವೆಡೆ ಹೊರತು ಉಳಿದೆಡೆ ಈ ಮಣ್ಣುಗಳ ಆಳ ಕಡಿಮೆ. ಹೆಚ್ಚು ಮಳೆ ಬೀಳುವ ಪಶ್ಚಿಮಕರಾವಳಿ, ಮತ್ತು ಅಸ್ಸಾಮಿನ ಗುಡ್ಡಪ್ರದೇಶಗಳಲ್ಲಿ ಈ ಬಗೆಯ ಮಣ್ಣು ಕಾಣಬರುತ್ತದೆ. ಕಾಫಿ, ಟೀ, ಏಲಕ್ಕಿ, ಅಡಿಕೆಯಂಥ ತೋಟದ ಬೆಳೆಗಳನ್ನು ಈ ಮಣ್ಣಿನಲ್ಲಿ ಬೆಳೆಸುತ್ತಾರೆ.

ಕಪ್ಪು ಮಣ್ಣುಗಳು : ಇವು ಭಾರತದ ಮಧ್ಯ ಮತ್ತು ದಕ್ಷಿಣ ಮಧ್ಯ ಭಾಗಗಳಲ್ಲಿ ಕಾಣ ಬರುತ್ತವೆ. ಬಣ್ಣ ದಟ್ಟಕಂದಿನಿಂದ ಅಚ್ಚ ಕಪ್ಪಿನವರೆಗೆ ವಿವಿಧ. ಮಣ್ಣಿನ ಆಳ ಅನುಸರಿಸಿ ಇವನ್ನು ವಿಂಗಡಿಸುವುದಿದೆ; 30 ಸೆಂಮೀ ಗಿಂತ ಕಡಿಮೆ ಆಳದಲ್ಲಿರುವುದು ಆಳವಿಲ್ಲದ ಕಪ್ಪು ಮಣ್ಣು; 80–100 ಸೆಂಮೀ ಆಳದಲ್ಲಿರುವುದು ಮಧ್ಯಮ ಆಳದ ಕಪ್ಪು ಮಣ್ಣು; 100–200 ಸೆಂಮೀ ಇಲ್ಲವೆ ಹೆಚ್ಚು ಆಳದಲ್ಲಿರುವುದು ಆಳದ ಕಪ್ಪು ಮಣ್ಣು; ಕಪ್ಪು ಮತ್ತು ಕೆಂಪು ಮಣ್ಣು ಮಿಶ್ರಣಗಳು ಈ ಮಣ್ಣುಗಳಲ್ಲಿ ಸಾಮಾನ್ಯವಾಗಿ ಜೇಡಿನ ಅಂಶ ಹೆಚ್ಚು (ಶೇ. 40–100). ಮಣ್ಣು ಒದ್ದೆ ಇರುವಾಗ ನಮ್ಯವಾಗೂ ಜಿಗುಟಾಗೂ ಇರುತ್ತದೆ. ಒಣಗಿರುವಾಗ ಹೆಚ್ಚುಗಟ್ಟಿಯಾಗೂ ಇರುವುದು. ಇವುಗಳ ಜೇಡಿ ಮಾಂಟಿಮರಿಲೊನೈಟ್ ಎಂಬ ಖನಿಜದಿಂದ ಕೂಡಿದೆ. ಈ ಕಾರಣ ಇವುಗಳಲ್ಲಿಯ ತೇವಾಂಶ ವ್ಯತ್ಯಾಸವಾದಂತೆ ಇವು ಉಬ್ಬುತ್ತವೆ ಮತ್ತು ತಗ್ಗುತ್ತವೆ ಕೂಡ. ಆಳ ಬಿರುಕುಗಳೂ ಉಂಟಾಗುತ್ತವೆ. ಈ ಬಿರುಕುಗಳಲ್ಲಿ ಮೇಲ್ಪೈ ಮಣ್ಣು ಕುಸಿದುಬಿದ್ದು ಮಣ್ಣಿನ ಚಲನೆ ತನ್ನಷ್ಟಕ್ಕೆ ತಾನೇ ಜರಗುತ್ತದೆ. ಈ ಕ್ರಿಯೆಗೆ ಸ್ವಯಂ ಉಳುಮೆ ಅಥವಾ ಸ್ವಯಂ ಆಚ್ಛಾದನೆ ಎಂದು ಹೆಸರು. ಅಂತಾರಾಷ್ಟ್ರೀಯ ವರ್ಗೀಕರಣದ ರೀತ್ಯ ಇವನ್ನು ವರ್ಟಿಸಾಲ್ ಎಂಬ ಗುಂಪಿಗೆ ಸೇರಿಸಬಹುದು. ಇವುಗಳಲ್ಲಿ ಹತ್ತಿ, ಜೋಳ, ಬೇಳೆ, ಎಣ್ಣೆಕಾಳು ಬೆಳೆಗಳನ್ನು ತೆಗೆಯುತ್ತಾರೆ. ಪ್ರಮುಖ ಬಗೆಯ ಕಪ್ಪು ಮಣ್ಣುಗಳು ದಕ್ಕನ್ ಪ್ರಸ್ಥಭೂಮಿ, ಮಧ್ಯಪ್ರದೇಶ, ಮಹಾರಾಷ್ಟ್ರ, ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ವ್ಯಾಪಿಸಿವೆ.

ಕಪ್ಪು ಮತ್ತು ಕೆಂಪುಮಣ್ಣು ಮಿಶ್ರಣಗಳು : ಕೆಲವೆಡೆ ಬೇರೆ ಬೇರೆ ವಿಸ್ತೀರ್ಣಗಳಲ್ಲಿ ಕೆಂಪುಮಣ್ಣು, ಕಪ್ಪು ಮಣ್ಣು ಒಂದರ ಬದಿಯಲ್ಲಿ ಒಂದು ಇರುವುದು ಸಾಮಾನ್ಯ. ಇದು ಯಾವುದೇ ನಿರ್ದಿಷ್ಟ ಕ್ರಮದಲ್ಲಿ ಇರುವುದಿಲ್ಲ. ಈ ಪರಿಸ್ಥಿತಿ ಕಪ್ಪು ಮತ್ತು ಕೆಂಪು ಮಣ್ಣುಗಳು ಒಂದಕ್ಕೊಂದು ಸೇರುವ ಸನ್ನಿವೇಶಗಳಲ್ಲಿ ಮಾತ್ರ ಕಂಡುಬರುತ್ತದೆ. ನಕಾಶೆಯಲ್ಲಿ ಇವುಗಳ ಸ್ಥಾನವನ್ನು ಗುರುತಿಸುವುದು ಕಷ್ಟ, ಆದ್ದರಿಂದ ಇವನ್ನು ಬೇರೆ ಗುಂಪಾಗಿಯೇ ಸೂಚಿಸಿದೆ. ಅನೇಕ ಸಂದರ್ಭಗಳಲ್ಲಿ ಕೆಂಪು ಮಣ್ಣಿನ ಪ್ರದೇಶಗಳಲ್ಲಿಯ ದಿಬ್ಬಗಳಲ್ಲಿ, ಎತ್ತರದ ಭೂಮಿಗಳಲ್ಲಿ ಕೆಂಪುಮಣ್ಣಿರುವುದು ಕಂಡುಬರುತ್ತದೆ. ಅಲ್ಲಿಯ ತಗ್ಗುಗಳಲ್ಲೂ ಕಪ್ಪುಮಣ್ಣು ಕಂಡುಬರುತ್ತದೆ. ಅಧಿಕ ತೇವ ಮತ್ತು ಸಾವಯುವ ಅಂಶ ಮಣ್ಣುಗಳಿಗೆ ಕಪ್ಪು ಅಥವಾ ದಟ್ಟ ಕಂದುಬಣ್ಣ ಉಂಟುಮಾಡುತ್ತದೆ. ಕೆಂಪುಮಣ್ಣಿನ ಪ್ರದೇಶಗಳಲ್ಲಿ ಕೆಲವೆಡೆ ಅಗ್ನಿಶಿಲೆಗಳ ಮಧ್ಯೆ ಅಲ್ಲೊಂದು ಇಲ್ಲೊಂದು ಪ್ರತ್ಯಾಮ್ಲೀಯ ಶಿಲೆ ಹೊರಹೊಮ್ಮಿ ಅವುಗಳಿಂದ ಕಪ್ಪುಮಣ್ಣುಗಳು ರೂಪಗೊಳ್ಳುತ್ತವೆ.

ಮೆಕ್ಕಲು ಮಣ್ಣುಗಳು : ಇವು ನದೀ ಬಯಲುಗಳಲ್ಲಿ ಸಮುದ್ರ ತೀರದಲ್ಲಿ ಪ್ರವಾಹ ಇಲ್ಲವೆ ಕೊಚ್ಚುನೀರಿನಿಂದ ಸಾಗಿಸಲ್ಪಟ್ಟು ಶೇಖರಣೆಗೊಂಡ ವಸ್ತುಗಳಿಂದ ಅಸ್ತಿತ್ವಕ್ಕೆ ಬಂದವು. ಇವುಗಳ ಬಣ್ಣ, ಕಣಗಾತ್ರ ರಚನೆ, ಇತರ ಗುಣಗಳು ಮತ್ತು ಮುಂದೆ ಈ ಮಣ್ಣುಗಳಲ್ಲಿ ಮೇಲ್ಮೈ (ಪ್ರೊಫೈಲ್) ಬೆಳವಣಿಗೆ ಇವೆಲ್ಲ ಸಾಗಣೆಯಾದ ಪ್ರದೇಶಗಳ ಮಣ್ಣುಗಳ ಗುಣದಿಂದ ಪ್ರಭಾವಿತವಾಗಿರುತ್ತವೆ. ಮೆಕ್ಕಲು ಹೊಸದಾದರೆ ಮೇಲ್ಮೈ ವ್ಯತ್ಯಾಸಗಳಿರುವುದಿಲ್ಲ. ಹಳೆಯದಾಗುತ್ತಾಹೋದಂತೆಲ್ಲಾ ಮೇಲ್ಮೈ ವಲಯಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಮೆಕ್ಕಲು ಮಣ್ಣುಗಳ ವಿಶಾಲ ವೈವಿಧ್ಯದ ಕಾರಣ ಅವನ್ನು ಸ್ಥೂಲವಾಗಿ ಕೆಲವು ಗುಂಪುಗಳಾಗಿ ವಿಂಗಡಿಸಿದೆ: ಮೆಕ್ಕಲು ಮಣ್ಣುಗಳಲ್ಲಿ ಅವುಗಳಿರುವ ಸ್ಥಳಕ್ಕೆ ಅನುಗುಣವಾಗಿ ತೀರಪ್ರದೇಶದ ಮಣ್ಣುಗಳು ಮತ್ತು ನದೀ ಮುಖಜ ಭೂಮಿಯ ಮೆಕ್ಕಲು ಮಣ್ಣುಗಳು ಎಂದು ಎರಡು ಭಾಗ ಮಾಡಬಹುದು.

ತೀರ ಪ್ರದೇಶದ ಮೆಕ್ಕಲು ಮಣ್ಣುಗಳು: ಇವು ದಕ್ಷಿಣ ಭಾರತದ ಪಶ್ಚಿಮ ಮತ್ತು ಪೂರ್ವ ತೀರಪ್ರದೇಶಗಳಲ್ಲಿ, ಸಮುದ್ರ ಮತ್ತು ಬೆಟ್ಟಸಾಲುಗಳ ಮಧ್ಯೆ ಇರುವ ಇತ್ತೀಚಿನ ಮೆಕ್ಕಲುಗಳು. ಈ ಮಣ್ಣುಗಳ ಕಣಗಾತ್ರ ರಚನೆ ಮರಳಿನಿಂದ ಜೇಡಿಯವರೆಗೂ ಇದೆ. ಹಳೆಯ ಮೆಕ್ಕಲುಗಳನ್ನು ಬಿಟ್ಟರೆ, ಇವುಗಳಲ್ಲಿ ವಲಯ ವ್ಯತ್ಯಾಸಗಳು ಕಂಡುಬರುವುದಿಲ್ಲ. ಇವು ಆಳದಲ್ಲಿದ್ದು ಬಣ್ಣದಲ್ಲಿ ಕೆಂಪು–ಕಂದಿನಿಂದ ತೆಳು ಅಥವಾ ದಟ್ಟಬೂದಿಯವರೆಗೂ ಇರುತ್ತವೆ. ಮಳೆ ಆಶ್ರಯ ಪಡೆದು ಈ ಮಣ್ಣುಗಳಲ್ಲಿ ಬತ್ತ ಬೆಳೆಸುತ್ತಾರೆ. ತೀರಪ್ರದೇಶದಲ್ಲಿ ಕೆಲವೆಡೆ ಮರಳು ಮಣ್ಣುಗಳಿವೆ. ಈ ಭೂಮಿಗಳು ಸಾಧಾರಣವಾಗಿ ತೆಟ್ಟೆಯಾಗಿದ್ದು ತಗ್ಗುಗಳಲ್ಲಿ ಚೌಳಿನಂತೆ ಕಂಡುಬರುತ್ತವೆ. ಇವುಗಳಲ್ಲಿಯ ಅಂತರ್ಜಲ ಮೇಲೆಯೇ ಇರುವುದರಿಂದ ತೆಂಗು ಮುಂತಾದವುಗಳ ಬೆಳೆಗೆ ಇವು ಬಲು ಉಪಯುಕ್ತ.

ನದೀ ಮುಖಜಭೂಮಿಗಳಿರುವ ಪ್ರದೇಶ : ಪೂರ್ವಾಭಿಮುಖವಾಗಿ ಹರಿಯುವ ಕಾವೇರಿ, ಕೃಷ್ಣಾ, ಗೋದಾವರಿ ನದಿಗಳು ಸಮುದ್ರ ಸೇರುವುದಕ್ಕೆ ಮೊದಲು ಇರುವ ಎಡೆಗಳಲ್ಲಿ ಇಂಥ ಮೆಕ್ಕಲು ಮಣ್ಣುಗಳು ಕಾಣಬರುತ್ತವೆ. ಅಂತೆಯೇ ಗಂಗಾ ಮತ್ತು ಬ್ರಹ್ಮಪುತ್ರ ನದಿಗಳು ಹಿಮಾಲಯದಿಂದ ಹೊತ್ತು ತರುವ ಮಣ್ಣನ್ನು ಸಮುದ್ರ ಸೇರುವ ಮುನ್ನವೇ ಬಂಗಾಲ ರಾಜ್ಯದಲ್ಲಿ ನದಿಯ ಅಕ್ಕಪಕ್ಕಗಳಲ್ಲಿ ಬಿಟ್ಟಿವೆ.

ಸಿಂಧೂ ಗಂಗಾನದೀಬಯಲುಗಳ ಮೆಕ್ಕಲು ಮಣ್ಣುಗಳು : ಮೆಕ್ಕಲು ಮಣ್ಣುಗಳಲ್ಲಿ ಅತಿ ಮುಖ್ಯವಾದದ್ದು ಸಿಂಧೂ ಗಂಗಾ ನದಿ ಬಯಲಿನವು. ಇವು ಪೂರ್ವ–ಪಶ್ಚಿಮಕ್ಕೆ 1600 ಕಿಮೀ ಮತ್ತು ಉತ್ತರ–ದಕ್ಷಿಣಕ್ಕೆ 320 ಕಿಮೀ ಹರಡಿವೆ. ಈ ಬಯಲಿನ ಬಹುತೇಕ ಪ್ರದೇಶ ತೆಟ್ಟೆ ಇಳಿಜಾರು ಶೇ. 1ಕ್ಕಿಂತ ಹೆಚ್ಚಿಲ್ಲ. ಮಣ್ಣುಗಳ ಬಣ್ಣ ತೆಳು ಬೂದಿನಿಂದ ಹಳದಿ ಕಂದು ಇಲ್ಲವೆ ಕಪ್ಪು ಬೂದಿ. ಬಹುತೇಕ ಮಣ್ಣುಗಳು ಆಳದಲ್ಲಿವೆ. ಕೆಲವೆಡೆ ನೂರಾರು ಸೆಂಮೀ ಆಳ ಇರುವುದುಂಟು. ಕಣಗಾತ್ರ ರಚನೆ ಮಡು ಇಲ್ಲವೆ ಜೇಡಿಗೋಡಿನಂತೆ. ಇವು ಬಲು ಫಲಪ್ರದವಾದವು. ಕೆಲವೆಡೆ ಉಪ್ಪು ಮಣ್ಣಿನ ಭೂಮಿಗಳೂ ಉಂಟು. ಗೋದಿ ಕಡಲೆ, ಎಣ್ಣೆಬೀಜಗಳ ಬೆಳೆಗೆ ಮೆಕ್ಕಲು ಮಣ್ಣು ಬಲುಶ್ರೇಷ್ಠ.

ಉತ್ತರ ಪ್ರದೇಶದ ಪೂರ್ವ ಭಾಗ ಮತ್ತು ಬಿಹಾರಿನ ಪಶ್ಚಿಮ ಭಾಗಗಳು ಸುಣ್ಣದಿಂದ ಕೂಡಿದ ಮೆಕ್ಕಲು ಮಣ್ಣುಗಳಿಂದ ಕೂಡಿವೆ. ಚೆಸ್ಟ್‌ನಟ್ ಕಂದುಬಣ್ಣದ ಮಣ್ಣುಗಳು, ಬೂದು ಕಂದುಬಣ್ಣದ ಮಣ್ಣುಗಳು, ಮರುಭೂಮಿಯ ಮಣ್ಣುಗಳು, ತೆರಯ್ ಮಣ್ಣುಗಳು, ಕಂದುಬೆಟ್ಟ ಮಣ್ಣುಗಳು, ಪರ್ವತ ಮಣ್ಣುಗಳು, ಪರ್ವತ ಹುಲ್ಲುಗಾವಲು ಮಣ್ಣುಗಳು, ಲವಣ ಮತ್ತು ಕ್ಷಾರ ಮಣ್ಣುಗಳು, ಇವೆಲ್ಲ ದೇಶದ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಇತರ ಮಣ್ಣುಗಳು. (ಬಿ.ವಿ.ವಿ.)

**ಭಾರತದ ಲವಣನಿಕ್ಷೇಪಗಳು:** ಅಡುಗೆ ಉಪ್ಪು ಎಂದು ಕರೆಯುವ ಸೋಡಿಯಮ್‌ಕ್ಲೋರೈಡ್ ಸಾಮಾನ್ಯವಾಗಿ ಕಡಲ ನೀರಿನಿಂದ ದೊರೆಯುತ್ತದೆ. ಆ ನೀರನ್ನು ಪಾತಿಗಳಿಗೆ ಹಾಯಿಸಿ ಸೂರ್ಯಶಾಖದಿಂದ ಇಂಗಿಸಿದಾಗ ಪಾತಿಯ ತಳದಲ್ಲಿ ಉಪ್ಪಿನ ಹರಳುಗಳ ಪದರ ಉಳಿಯುತ್ತದೆ. ಸಹಜವಾಗಿ ಈ ಕೆಲಸ ಸಮುದ್ರತೀರದ ಕೆಲವೊಂದು ಸ್ಥಳಗಳಿಗೆ ಸೀಮಿತ.

ಹಿಮಾಲಯದ ಲವಣ ಶಿಲಾಸ್ತೋಮಗಳು, ಪಂಜಾಬಿನ ಲವಣಬೆಟ್ಟಗಳು, ರಾಜಸ್ತಾನದ ಲವಣನಿಕ್ಷೇಪ ಮುಂತಾದವು ದೇಶಗಳ ಪ್ರಮುಖ ಲವಣನಿಕ್ಷೇಪಗಳು. ಪಂಜಾಬಿನ ಉಪ್ಪಿನ ಬೆಟ್ಟಗಳು ಪ್ರಪಂಚಖ್ಯಾತಿ ಗಳಿಸಿರುವಂಥವು. ಇವು ಸಮುದ್ರ ಮಟ್ಟಕ್ಕೆ ಸು. 762 ಮೀ–1214 ಮೀ ಎತ್ತರದಲ್ಲಿವೆ; ಕೇಂಬ್ರಿಯನ್ ಯುಗದ ಶಿಲೆಗಳ ಜೊತೆಯಲ್ಲಿರುವ ಲವಣ ಶಿಲಾಸ್ತೋಮಗಳ ಎತ್ತರ ಸು. 457 ಮೀ ಮೂರು ಹಂತಗಳಲ್ಲಿ ಶೇಖರವಾದ ಕಲ್ಲುಪ್ಪಿನ ಪದರಗಳಲ್ಲಿಯ ಕೆಲವು ಸು. 30.5 ಮೀ ದಪ್ಪವಾಗಿವೆ. ಝೀಲಮ್ ಜಿಲ್ಲೆಯ ಮೇಯೋ ಉಪ್ಪಿನ ಗಣಿಗಳಲ್ಲಿ ಸು. 168 ಮೀ ಎತ್ತರದ ಪದರಗಳಿವೆ. ಕೋಹತ್–ಪ್ರಾಂತದಲ್ಲಿ ಸು. 304 ಮೀ ಎತ್ತರಕ್ಕೆ ಶೇಖರವಾಗಿರುವ ಪದರಗಳಿವೆ. ಇವುಗಳ ಉದ್ದ ಸು. 12 ಕಿಮೀ. ಇಲ್ಲಿ ದೊರಕುವ ಉಪ್ಪು ಶುದ್ಧವಾದದ್ದು; ಅಡುಗೆಗೆ ಬಳಸಬಹುದಾದದ್ದು. ಕಲ್ಲುಪ್ಪಿನೊಡನೆ ಸಿಕ್ಕುವ ಮೆಗ್ನೀಸಿಯಮ್ ಮತ್ತು ಪೊಟಾಸಿಯಮ್ ಲವಣಗಳು ವ್ಯವಸಾಯ ಹಾಗೂ ಬೇರೆ ಬೇರೆ ಉದ್ಯಮಗಳಿಗೆ ಉಪಯೋಗಿಸುವಂಥವು. ಜಿಪ್ಸಮ್ (ಆನ್‌ಹೈಡ್ರೈಟ್) ಮತ್ತು ಜಿಪ್ಸಮ್ ($CaSO_4$) ಎರಡೂ ಕ್ಯಾಲ್ಸಿಯಮ್ ಲವಣಗಳೇ. ಕಲ್ಲುಪ್ಪಿನೊಡನೆ ದೊರೆಯುವ ಇವು ಗೊಬ್ಬರ, ಕಾಗದ, ಸಿಮೆಂಟ್ ಮುಂತಾದ ಕೈಗಾರಿಕೆಗಳಿಗೆ ಅಗತ್ಯ. ಇವುಗಳಿಂದ ಪ್ಲಾಸ್ಟರ್ ಆಫ್ ಪ್ಯಾರಿಸ್ ತಯಾರಾಗುತ್ತದೆ. ಗೊಬ್ಬರ ಮತ್ತು ಸಿಡಿಮದ್ದಿನ ಕೈಗಾರಿಕೆಗಳಿಗೆ ಬೇಕಾದ ಪೆಟ್ಲುಪ್ಪು ಉತ್ತರ ಭಾರತದ ಬಯಲಿನ ಪ್ರದೇಶಗಳಲ್ಲಿ ಹಾಗೂ ಚಿಲಿ, ಈಜಿಪ್ಟ್ ಮೊದಲಾದ ದೇಶಗಳಲ್ಲಿ ವಿಶೇಷವಾಗಿ ಸಿಕ್ಕುತ್ತದೆ. ಭಾರತದಲ್ಲಿ ದೊರೆಯುವ ಸುಣ್ಣಕಲ್ಲು (ಲೈಮ್‌ಸ್ಟೋನ್) ಸಿಮೆಂಟ್ ಮತ್ತು ಕಬ್ಬಿಣದ ಕಾರ್ಖಾನೆಗೆ ಅಗತ್ಯವಾದದ್ದು. ಈ ಶಿಲೆ ಸಾಮಾನ್ಯವಾಗಿ ಪ್ರತಿಯೊಂದು ಯುಗದಲ್ಲೂ ಸಂಚಿತಗೊಂಡಿರುತ್ತದೆ.

ಪಂಜಾಬಿನ ಕಲ್ಲುಪ್ಪಿನ ಪದರಗಳು ಕೇಂಬ್ರಿಯನ್ ಕಾಲದವು ಎಂದು ಮೊದಲೇ ತಿಳಿದಿತ್ತು. ಆದರೆ ಆಧುನಿಕ ಸಂಶೋಧನೆಗಳಿಂದ ಹಿಮಾಲಯಪರ್ವತದ ಜನಕಶಕ್ತಿಗಳ ಕ್ಷೋಭೆಯಿಂದ ಇವುಗಳ ಸ್ಥಾನ ಪಲ್ಲಟವಾಗಿದೆಯೆಂದು ವ್ಯಕ್ತವಾಗಿದೆ. ಈ ಪದರಗಳೊಡನೆ ಇರುವ ನವೀನ ಸಸ್ಯವರ್ಗ ಮತ್ತು ಜೀವ್ಯವಶೇಷಗಳ ಆಧಾರದಿಂದ ಇವು ನವೀನ ಜೀವಿಕಲ್ಪದ ಆದಿಯುಗದಲ್ಲಿ (ಇಯೊಸೀನ್–6 ಕೋಟಿ ವರ್ಷ ಪ್ರಾಚೀನ) ಸಂಚಿತವಾದವೆನ್ನಲಾಗಿದೆ.

ರಾಜಸ್ತಾನದ ಜೈಪುರ ಬಳಿ ಇರುವ ಸಾಂಬಾರ್ ಸರೋವರ ಬೇಸಗೆಯಲ್ಲಿ ಸಾಮಾನ್ಯವಾಗಿ ಬತ್ತಿಹೋಗುತ್ತದೆ; ನಡುವೆ ಕೊಂಚ ಜವುಗಿರಬಹುದು. ಆಗ ಇದರ ಬಹುಭಾಗ ಮಿನುಗುವ ಅಡುಗೆಉಪ್ಪಿನ ಹರಳುಗಳ ತೆಳುವಾದ ಪೊರೆಯಿಂದ ಆವೃತವಾಗುತ್ತದೆ. ಇದರ ವಿಸ್ತಾರ ಸು. 233 ಚ.ಕಿಮೀ. ಈ ಸರೋವರದ ನೀರಿನಲ್ಲಿ 99 ಸೋಡಿಯಮ್ ಲವಣಗಳಿರುವುದು ಗಮನಾರ್ಹ. (ಎ.ಎನ್.ಎಸ್.ಐ.)

**ಭಾರತದ ವಿದ್ಯುತ್ ಯೋಜನೆಗಳು:** ವಿದ್ಯುಚ್ಛಕ್ತಿ ಅತ್ಯಂತ ಉಪಯುಕ್ತವಾದ ಹಾಗೂ ಅನುಕೂಲಕರವಾದ ಶಕ್ತಿಯ ರೂಪವಾಗಿದೆ. ಇದನ್ನು ವಿವಿಧ ಮೂಲಗಳಿಂದ, ಅನುಕೂಲಕರ ಸ್ಥಳಗಳಲ್ಲಿ ಉತ್ಪಾದಿಸಿ ಬಹು ದೂರದ ಬಳಕೆಯ ಪ್ರದೇಶಗಳಿಗೆ ಲೋಹದ ತಂತಿಗಳ ಮೂಲಕ ಸುಲಭವಾಗಿ ಸಾಗಿಸಬಹುದು. ಬಹುತೇಕ ಎಲ್ಲಾ ಯಂತ್ರೋಪಕರಣಗಳ ಚಾಲನೆಗೆ ವಿದ್ಯುತ್ತನ್ನು ಬಳಸುವರು. ಕೈಗಾರಿಕಾ ಕ್ಷೇತ್ರವು ಇದರ ಬಳಕೆಯನ್ನೇ ಪ್ರಧಾನವಾಗಿ ಅವಲಂಬಿಸಿದೆ. ವಿದ್ಯುತ್ತಿನ ಬಳಕೆಯ ಪ್ರಮಾಣವು ಆರ್ಥಿಕ ಅಭಿವೃದ್ಧಿಯ ಮಟ್ಟವನ್ನು ಸೂಚಿಸುವುದು. ಇದು ಎಲ್ಲಾ ಆರ್ಥಿಕ ಕ್ಷೇತ್ರಗಳ ಅಭಿವೃದ್ಧಿಗೆ ಅಗತ್ಯವಾದ ವಿದ್ಯುತ್ತನ್ನು ವಿವಿಧ ಮೂಲಗಳಿಂದ ಉತ್ಪಾದಿಸುವರು. ಭಾರತದಲ್ಲಿ ಜಲಶಕ್ತಿ, ಕಲ್ಲಿದ್ದಲು, ಸ್ವಾಭಾವಿಕ ಅನಿಲ ಮತ್ತು ಅಣುಶಕ್ತಿಗಳಿಂದ ಬಹುತೇಕ ವಿದ್ಯುತ್ತನ್ನು ಉತ್ಪಾದಿಸಲಾಗುತ್ತದೆ. ಹರಿಯುವ ನೀರು ವೇಗವಾಗಿ ಚಲಿಸುವಂತೆ ಮಾಡಿ, ನೀರಿನ ಶಕ್ತಿಯನ್ನು ವಿದ್ಯುತ್ತಾಗಿ ಪರಿವರ್ತಿಸುವರು ಇದನ್ನು ಜಲ ವಿದ್ಯುಚ್ಛಕ್ತಿ ಎನ್ನುವರು. ವಿವಿಧ ಇಂಧನ ವಸ್ತುಗಳನ್ನು – ಕಲ್ಲಿದ್ದಲು, ಡೀಸಲ್, ಸ್ವಾಭಾವಿಕ ಅನಿಲ ಉರಿಸಿ ಅದರ ಶಾಖದಿಂದ ವಿದ್ಯುತ್ ಉತ್ಪಾದನೆ ಮಾಡಲಾಗುವುದು. ಇದನ್ನು ಶಾಖ ವಿದ್ಯುತ್ ಎನ್ನುವರು. ಅಣುವಿದಳನ ನಿರಂತರ ಪ್ರಕ್ರಿಯೆಯಿಂದುಂಟಾಗುವ ಶಾಖವನ್ನು ವಿದ್ಯುಚ್ಛಕ್ತಿ ಪಡೆಯುವುದನ್ನು ಅಣು ವಿದ್ಯುಚ್ಛಕ್ತಿ ಎಂದು ಕರೆಯುವರು.

ವಿದ್ಯುತ್ ಉತ್ಪಾದನೆಯ ಪ್ರಗತಿ: ಭಾರತದಲ್ಲಿ ವಿದ್ಯುತ್ತಿನ ಉತ್ಪಾದನೆ ಜಲವಿದ್ಯುತ್ತಿನ ಉತ್ಪಾದನೆಯೊಡನೆ ಆರಂಭಗೊಂಡಿತು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಕೆಲವೇ ಜಲ ವಿದ್ಯುತ್ ಕೇಂದ್ರಗಳಿದ್ದವು, ಭಾರತದಲ್ಲಿ ಅತ್ಯಲ್ಪ ಪ್ರಮಾಣದ ಜಲವಿದ್ಯುತ್ ಕೇಂದ್ರ 1897 ರಲ್ಲಿ ಡಾರ್ಜಲಿಂಗ್‌ನಲ್ಲಿ ಆರಂಭಿಸಲ್ಪಟ್ಟಿದ್ದು, ಅನಂತರ ವಾಣಿಜ್ಯ ಪ್ರಮಾಣದ ಜಲ ವಿದ್ಯುತ್ತಿನ ಉತ್ಪಾದನೆ 1902 ರಲ್ಲಿ ಶಿವಸಮುದ್ರದಲ್ಲಿ ಸ್ಥಾಪನೆಗೊಂಡಿತು. ಇದೇ ಪ್ರಸಿದ್ಧ ಶೇಷಾದ್ರಿ ಐಯ್ಯರ್ ಜಲ ವಿದ್ಯುತ್ ಕೇಂದ್ರ. ಇದು ಏಷ್ಯ ಖಂಡದ ಮೊದಲ ಜಲವಿದ್ಯುತ್ ಕೇಂದ್ರ. ಇದನ್ನು ನಯಾಗರಾ ಜಲವಿದ್ಯುತ್ ಕೇಂದ್ರ ಮಾದರಿಯನ್ನು ಅನುಸರಿಸಿ ನಿರ್ಮಿಸಲಾಗಿದೆ. ಕರ್ನಾಟಕದ ಶಿವಸಮುದ್ರ (1902), ಮಹಾರಾಷ್ಟ್ರದ ಟಾಟಾ ಜಲ

ವಿದ್ಯುತ್ ಕೇಂದ್ರ, ತಮಿಳುನಾಡಿನ ಮೆಟ್ಟೂರು, ಉತ್ತರ ಪ್ರದೇಶದ ಗಂಗಾ ಮೇಲ್ಮಟ್ಟ ಕಾಲುವೆ ಜಲವಿದ್ಯುತ್ ಕೇಂದ್ರ ಮತ್ತು ಹಿಮಾಚಲ ಪ್ರದೇಶದ ಮಂಡಿ ಜಲವಿದ್ಯುತ್‌ಕೇಂದ್ರಗಳು ಪ್ರಾರಂಭದ ವಿದ್ಯುತ್ತ ಉತ್ಪಾದನೆ ಯೋಜನೆಗಳು. 1971ರ ಅನಂತರ ವಿದ್ಯುತ್ ಉತ್ಪಾದನೆಯಲ್ಲಿ ಅಪಾರ ಪ್ರಗತಿಯುಂಟಾಯಿತು.

ಭಾರತ ವಿಪುಲವಾದ ಜಲಸಂಪತ್ತನ್ನು ಹೊಂದಿದ್ದು, ಇದರ ಪ್ರಮಾಣ 84044 ದ.ಲ.ವಾಟ್‌ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 12475 ದ.ಲ.ವಾ ವಿದ್ಯುತ್ತನ್ನು ಮಾತ್ರ ಉತ್ಪಾದಿಸಲಾಗುತ್ತಿದೆ. ಭಾರತದಲ್ಲಿ ದೊರೆಯುವ ಒಟ್ಟು ಜಲಶಕ್ತಿಯ ಶೇ. 14.8 ರಷ್ಟನ್ನು ಮಾತ್ರ ಉತ್ಪಾದಿಸಲಾಗುತ್ತಿದ್ದು, ದೇಶ ವಿದ್ಯುತ್ತಿನ ಉತ್ಪಾದನೆಯನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆ.

ಜಲವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಆಧಾರದ ಮೇಲೆ ಭಾರತವನ್ನು ಐದು ವಲಯಗಳನ್ನಾಗಿ ವಿಂಗಡಿಸಲಾಗಿದೆ.

ಭಾರತದಲ್ಲಿ ಭೌಗೋಳಿಕವಾಗಿ ಹಂಚಿಕೆಯಾಗಿರುವ ಜಲವಿದ್ಯುತ್ತಿನ ಉತ್ಪಾದನಾ ಸಾಮರ್ಥ್ಯ ಹಾಗೂ ಅಭಿವೃದ್ಧಿಯಲ್ಲಿ ಅಪಾರ ವ್ಯತ್ಯಾಸಗಳನ್ನು ಕಾಣಬಹುದು. ಕಲ್ಲಿದ್ದಲಿನ ಕೊರತೆ ಹೊಂದಿರುವ ಪಶ್ಚಿಮ ಮತ್ತು ದಕ್ಷಿಣ ವಲಯಗಳು ಅತಿ ಹೆಚ್ಚು ಜಲವಿದ್ಯುತ್ತನ್ನು ಉತ್ಪಾದಿಸುತ್ತಿವೆ. ಈ ಪ್ರದೇಶ ಬೆಟ್ಟ ಗುಡ್ಡದಿಂದ ಕೂಡಿದ್ದು ಜಲಪಾತಗಳನ್ನು ಹೊಂದಿರುವುದು. ದಕ್ಷಿಣ ಭಾರತ ವಿದ್ಯುತ್ ಉತ್ಪಾದನೆಗೆ ಅನುಕೂಲವಾಗಿವೆ. ಉತ್ತರ ಭಾರತದಲ್ಲಿ ಹೆಚ್ಚು ಸಾಮರ್ಥ್ಯವಿದ್ದರೂ ಇದು ಭೂಕಂಪ ವಲಯವಾಗಿವೆ; ಈಶಾನ್ಯ ಭಾರತದಲ್ಲಿ ಹೆಚ್ಚು ಕಲ್ಲಿದ್ದಲು ದೊರೆಯುವುದರಿಂದ ಉತ್ಪಾದನಾ ಸಾಮರ್ಥ್ಯದ ಬಳಕೆ ಕಡಿಮೆ.

ಪ್ರಮುಖ ಜಲ ವಿದ್ಯುತ್ ಯೋಜನೆಗಳು: ಭಾರತ ಜಲವಿದ್ಯುತ್ ಪ್ರಾಮುಖ್ಯತೆಯನ್ನು ಪರಿಗಣಿಸಿ ನ್ಯಾಷನಲ್ ಹೈಡ್ರೋ ಎಲೆಕ್ಟ್ರಿಕ್ ಪವರ್ ಕಾರ್ಪೋರೇಷನ್‌ನ್ನು 1975 ರಲ್ಲಿ ಸ್ಥಾಪಿಸಿ, ಜಲವಿದ್ಯುತ್ ಸ್ಥಾವರಗಳ ಸ್ಥಾಪನೆ, ನಿರ್ವಹಣೆ ಹಾಗೂ ಸಂಶೋಧನ ಕಾರ್ಯದಲ್ಲಿ ತೊಡಗಿದೆ. ಇದು ಕೇಂದ್ರ ವಲಯದ ಸಂಸ್ಥೆಯಾಗಿದ್ದು ಇದರ ಜೊತೆಗೆ ರಾಜ್ಯಗಳು ಸಹ ಹಲವಾರು ಜಲ ವಿದ್ಯುತ್ ಯೋಜನೆಯನ್ನು ನಿರ್ಮಿಸಿವೆ. ಇದಲ್ಲದೆ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳಲ್ಲಿ ಜಲ ವಿದ್ಯುತ್ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಟಾಟಾ ಜಲವಿದ್ಯುತ್ ಯೋಜನೆ: ಇದು ಭಾರತದ ಜಲವಿದ್ಯುತ್ ಯೋಜನೆಗಳಲ್ಲಿ ಒಂದು. ಇದು ಮುಂಬಯಿ ಸಮೀಪದ ಲೋಣವಾಲದ ಬಳಿ ನಿರ್ಮಿತಗೊಂಡಿವೆ. ಇದು 48000 ಕಿವಾ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಪಡೆದಿದೆ. ಇದರ ಸಮೀಪ ಭಾವ ಎಂಬಲ್ಲಿ ಟಾಟಾ ಕಂಪೆನಿ ಮೂಲ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದರ ಉತ್ಪಾದನಾ ಸಾಮರ್ಥ್ಯ 87,500 ಕಿವಾ. ಇವು ಕೊಯ್ನಾ ಯೋಜನೆಯ ಸಂಪರ್ಕವನ್ನು ಹೊಂದಿದೆ. ಕೊಯ್ನಾ ಜಲವಿದ್ಯುತ್ ಯೋಜನೆ ಕೊಯ್ನಾ ನದಿಗೆ ಅಡ್ಡಲಾಗಿ ದೇಶಮುಖವಾಡಿ ಎಂಬಲ್ಲಿ, ಅಣೆಕಟ್ಟನ್ನು ನಿರ್ಮಿಸಿ ಪೋಪಾಲಿ ಎಂಬಲ್ಲಿ ವಿದ್ಯುದ್ಗಾರವನ್ನು ಸ್ಥಾಪಿಸಲಾಗಿದೆ. ಇದನ್ನು ಮೂರು ಹಂತಗಳಲ್ಲಿ ನಿರ್ಮಿಸಲಾಗಿದೆ. ಇದರ ಒಟ್ಟು ಉತ್ಪಾದನಾ ಸಾಮರ್ಥ್ಯ 2,40,000 ಕಿವಾಗಳು. ಇದು ಭಾರತದ ಮೊದಲ ಜಲವಿದ್ಯುತ್ ಯೋಜನೆ. ಈ ಯೋಜನೆಯನ್ನು 1902ರಲ್ಲಿ ಮೈಸೂರು ಸಂಸ್ಥಾನದ ಸರ್ಕಾರ (ಕರ್ನಾಟಕ) ಕಾರ್ಯಾಗತಗೊಳಿಸಿತು. ಶರಾವತಿ ವಿದ್ಯುತ್ ಯೋಜನೆ (ಜೋಗ್) ಕರ್ನಾಟಕದ ಬಹುಮುಖ್ಯ ಯೋಜನೆ, ಇದರ ಮೊದಲ ಹಂತದಲ್ಲಿ ಲಿಂಗನಮಕ್ಕಿ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಯೋಜನೆಯಿಂದ 8,91,000 ಕಿವ್ಯಾ. ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ. ಪೈಕಾರ ಯೋಜನೆ 1932 ರಲ್ಲಿ ಪೂರ್ಣಗೊಳಿಸಲಾಯಿತು. ನೀಲಗಿರಿಬೆಟ್ಟದಲ್ಲಿ ಪೈಕಾರ ನದಿಯಿಂದ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಒಟ್ಟು ವಿದ್ಯುತ್ ಸಾಮರ್ಥ್ಯ 68,000 ಕಿವಾ.

**ಭಾರತದ ಪ್ರಮುಖ ಜಲವಿದ್ಯುತ್ ಕೇಂದ್ರಗಳು**

| ರಾಜ್ಯ | ವಿದ್ಯುತ್ ಉತ್ಪಾದನಾ ಕೇಂದ್ರಗಳು | ನದಿ |
|---|---|---|
| ಕರ್ನಾಟಕ | ಶಿವಸಮುದ್ರ | ಕಾವೇರಿ |
| | ತುಂಗಭದ್ರ ಯೋಜನೆ | ತುಂಗಭದ್ರ |
| | ಜೋಗ ವಿದ್ಯುತ್ ಕೇಂದ್ರ | ಶರಾವತಿ |
| | ಭದ್ರಯೋಜನೆ | ಭದ್ರನದಿ (ಲಕ್ಕವಳ್ಳಿಬಳಿ) |
| | ಕೃಷ್ಣ ಮೇಲ್ದಂಡೆ ಯೋಜನೆ | ಕೃಷ್ಣ |
| | ಮಲಪ್ರಭ ಯೋಜನೆ | ಮಲಪ್ರಭ |
| | ಕಾಳಿ ಯೋಜನೆ | ಕಾಳಿ |
| ತಮಿಳುನಾಡು | ಪೈಕಾರ ವಿದ್ಯುತ್ ಯೋಜನೆ | ಪೈಕಾರನದಿ (ನೀಲಗಿರಿ ಬಳಿ) |
| | ಮೆಟ್ಟೂರು ಯೋಜನೆ | ಕಾವೇರಿ |
| | ಪಾಪನಾಶಂ ಯೋಜನೆ | ತಾಮ್ರಪರ್ಣಿ |
| | ಪೆರಿಯಾರ್ ಯೋಜನೆ | ಪೆರಿಯಾರ್ |
| | ಕೊಡಯಾರ್ ಯೋಜನೆ | ಕೊಡಯಾರ್ |
| | ಮೋಯಾರ್ ಯೋಜನೆ | ಮೋಯಾರ್ |
| | ಕುಂದ್ಹಾ ಯೋಜನೆ | ಕುಂದ್ಹಾ |
| ಆಂಧ್ರ ಪ್ರದೇಶ | ನಾಗಾರ್ಜುನ ಯೋಜನೆ | ಕೃಷ್ಣ |
| | ಶ್ರೀಶೈಲಂ ಯೋಜನೆ | ಕೃಷ್ಣ |
| | ರಾಮಪಾದ ಸಾಗರ ಯೋಜನೆ | ಗೋದಾವರಿ ನದಿ |
| | ಸಿಲೇರು ಯೋಜನೆ | ಸಿಲೇರು ನದಿ |
| ಮಹಾರಾಷ್ಟ್ರ | ಟಾಟಾ ವಿದ್ಯುತ್ ಕೇಂದ್ರಗಳು | ಲೋಣವಾಲ, ಆಂಧ್ರಕಣಿವೆ |
| | ಕೊಯ್ನಾ ಯೋಜನೆ | ಕೊಯ್ನಾ |
| | ವೈತರಣಿ ಯೋಜನೆ | ವೈತರಣಿ |
| ಗುಜರಾತ್ | ಉಕ್ಕೆ ಯೋಜನೆ | ತಪತಿ |
| | ಕಕ್ರಪಾರ ಯೋಜನೆ | ತಪತಿ |
| ಬಿಹಾರ | ಕೋಸಿ ಯೋಜನೆ | ಕೋಸಿ |
| | ಸುವರ್ಣರೇಖಾ ಯೋಜನೆ | ಸುವರ್ಣರೇಖಾ |
| | ತಾವಾ ಯೋಜನೆ | ತಾವಾ |
| ರಾಜಸ್ತಾನ | ರಾಜಸ್ತಾನ ಕಾಲುವೆ ಯೋಜನೆ | |
| ಒರಿಸ್ಸ | ಹಿರಾಕುಡ್ ಯೋಜನೆ | ಮಹಾ |
| | ಟಿಕಾರಪಾರ ಯೋಜನೆ | ಮಹಾ |
| | ನಾರಾಜ ಯೋಜನೆ | ಮಹಾ |
| | ಬಲಿನೇಲಿ ಯೋಜನೆ | ಸಿಲೇರು |
| ಪಶ್ಚಿಮ ಬಂಗಾಲ | ಫರಕ್ಕಾ ಯೋಜನೆ | ಗಂಗಾ |
| ಮಯೂರಾಕ್ಷಿ ಯೋಜನೆ | | ಮಯೂರಾಕ್ಷಿ |
| ಉತ್ತರ ಪ್ರದೇಶ | ರಿಹಾಂದ್ ಯೋಜನೆ | ರಿಹಾಂದ್ |
| | ರಾಮಗಂಗಾ ಯೋಜನೆ | ರಾಮಗಂಗಾ |
| | ಗಂಗಾಕಾಲುವೆ ಯೋಜನೆ | |
| | ಯಮುನಾ ಯೋಜನೆ | ಯಮುನ |
| ಶಾರದಾ ಯೋಜನೆ | ಶಾರದಾ | |
| | ಮತಿಲ್ಲಾ ಯೋಜನೆ | ಬೆಟ್ವಾನದಿ |
| ಜಮ್ಮು | | |
| ಮತ್ತು ಕಾಶ್ಮೀರ | ಬಾರಾಮುಲ ಯೋಜನೆ | ಝೀಲಂ |
| | ಉರಿ ಯೋಜನೆ | ಝೀಲಂ |
| ಹಿಮಾಚಲ ಪ್ರದೇಶ | ಮಂಡಿ ಯೋಜನೆ | ಊಲ್ |
| ಪಂಜಾಬ್ | ಶಾನಂ ಯೋಜನೆ | – |
| | ಬಾರಿ – ದೋಆಬ್ | |
| | ಮೇಲ್ದಂಡೆ ಯೋಜನೆ | – |

ಮೆಟ್ಟೂರು ಯೋಜನೆ: 1937 ರಲ್ಲಿ ಕಾವೇರಿ ನದಿಗೆ ತಮಿಳುನಾಡಿನಲ್ಲಿರುವ ಮೆಟ್ಟೂರಿನ ಬಳಿ ಅಣೆಕಟ್ಟನ್ನು ನಿರ್ಮಿಸಿ ಸ್ಟ್ಯಾನ್ಲಿ ಜಲಾಶಯವನ್ನು ನಿರ್ಮಿಸಿ ಪೂರ್ಣಗೊಳಿಸಲಾಗಿದೆ. ಒಟ್ಟು ವಿದ್ಯುತ್ ಸಾಮರ್ಥ್ಯ 24000 ಕಿವಾ. ಗಳು ಮಚಕುಂದ್ ಯೋಜನೆ:– ಆಂಧ್ರ ಮತ್ತು ಒರಿಸ್ಸ ರಾಜ್ಯಗಳ ಸಂಯುಕ್ತಗೊಳಿಸಲಾಗಿದೆ. ಒಟ್ಟು ಉತ್ಪಾದನಾ ಸಾಮರ್ಥ್ಯ 1,14,750 ಕಿವಾ. ಗಂಗಾ ಮೇಲ್ಮಟ್ಟದ ಕಾಲುವೆ ವಿದ್ಯುತ್ ಯೋಜನೆ: ಹರಿದ್ವಾರ ಮತ್ತು ಅಲಿಘರ್ ನಡುವೆ ಗಂಗಾ ಮೇಲ್ಮಟ್ಟದ ಕಾಲುವೆಯು ಕೆಲವು ಜಲಪಾತ ಹೊಂದಿದ್ದು, ಅದರಿಂದ ಕೆಲವು ಕಡೆ ಉತ್ಪಾದಿಸಲಾಗುತ್ತಿದೆ. ಇದರ ಒಟ್ಟು ಉತ್ಪಾದನ ಸಾಮರ್ಥ್ಯ 2,41,000 ಕಿವಾ. ಯಮುನ ಜಲ ವಿದ್ಯುತ್ ಯೋಜನೆ: ಈ ಯೋಜನೆಯನ್ನು ಯಮುನ ಮತ್ತು ಅದರ ಉಪನದಿಯಾದ ಸಾನ್‌ನದಿ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಲಾಗಿದೆ. ಇದನ್ನು 2 ಹಂತಗಳಲ್ಲಿ ಪೂರ್ಣಗೊಳಿಸಲಾಗಿದೆ. ಮೊದಲನೆಯದು ಧ.ಕ್ರಾನಿ ಮತ್ತು ಧಾಲಿಪುರ್ ಬಳಿ ಎರಡನೆಯದು ಇಟರಿ (ಸಾನ್ ನದಿ) ಎಂಬಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಶಾರದ ವಿದ್ಯುತ್ ಯೋಜನೆ: ನೈನಿತಾಲ್ ಜಿಲ್ಲೆಯಲ್ಲಿ ಶಾರದ ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದು 3 ಘಟಕವನ್ನು ಹೊಂದಿದ್ದು ತಲಾ 13,800 ಕಿವಾ. ಉತ್ಪಾದನಾ ಸಾಮರ್ಥ್ಯ ಹೊಂದಿದೆ. ಶ್ರೀಶೈಲಂ ಯೋಜನೆ ಕೃಷ್ಣನದಿಗೆ ನಾಗಾರ್ಜುನ ಸಾಗರ ಅಣೆಕಟ್ಟಿನಿಂದ 105 ಕಿಮೀ ದೂರದಲ್ಲಿ ಈ ಯೋಜನೆ ನಿರ್ಮಿಸಲಾಗಿದೆ. ಇದು 4 ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿದೆ. ಕಾಳಿನದಿ

ಜಲವಿದ್ಯುತ್ ಯೋಜನೆ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುವ ಕಾಳಿನದಿಗೆ 3 ಹಂತಗಳಲ್ಲಿ ನಿರ್ಮಿಸಿರುವ ಯೋಜನೆಯಿದು (1977). ಇವುಗಳ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 910 ಮೆವಾ. ವರಾಹಿ ಯೋಜನೆ ಕರ್ನಾಟಕದಲ್ಲಿ ಪಶ್ಚಿಮಕ್ಕೆ ಹರಿಯುವ ವರಾಹಿ ನದಿಗೆ ಶಿವಮೊಗ್ಗದಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದರ ಒಟ್ಟು ಉತ್ಪಾದನಾ ಸಾಮರ್ಥ್ಯ 239 ಮೆವಾ. ಈ ಎಲ್ಲಾ ಯೋಜನೆಗಳಲ್ಲದೆ ಬೃಹತ್ ವಿವಿಧೋದ್ದೇಶ ಯೋಜನೆಗಳಲ್ಲೂ ಅಪಾರ ಪ್ರಮಾಣದ ಜಲ ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ.

ಜಲ ವಿದ್ಯುತ್ ಉತ್ಪಾದನೆಯ ಸಮಸ್ಯೆಗಳು ಋತುಮಾನಿಕ ಮಳೆಯ ಹಂಚಿಕೆ, ಅಂತರ ರಾಜ್ಯ ನೀರು ಹಂಚಿಕೆಯ ಸಮಸ್ಯೆ, ಆಂತರಿಕ ಶಿಲಾರಚನೆ, ಜಲವಿದ್ಯುತ್ತಿನ ಸಾಧ್ಯತೆಯ ರಾಜ್ಯದಲ್ಲಿ ಸೀಮಿತ ಬೇಡಿಕೆ, ಯೋಜನೆಗಳು ಪೂರ್ಣಗೊಳ್ಳಲು ಬೇಕಾಗುವ ದೀರ್ಘಾವಧಿ.

ಶಾಖ ವಿದ್ಯುಚ್ಛಕ್ತಿ: ಭಾರತದಲ್ಲಿ ಇಂದು ಬಳಸುತ್ತಿರುವ ವಿದ್ಯುತ್ತಿನ ಮೂಲಗಳಲ್ಲಿ ಇದು ಮುಖ್ಯವಾದುದು. ದೇಶದ ಒಟ್ಟು ಬಳಕೆಯ ಶೇ. 83.5 ರಷ್ಟು ವಿದ್ಯುತ್ತನ್ನು ಶಾಖ ವಿದ್ಯುತ್ ಕೇಂದ್ರಗಳು ಉತ್ಪಾದಿಸುತ್ತಿವೆ. ಶಾಖ ವಿದ್ಯುತ್ ಕೇಂದ್ರಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ಸ್ವಾಭಾವಿಕ ಅನಿಲ ಮುಂತಾದ ಇಂಧನಗಳನ್ನು ಅಗಾಧ ಪ್ರಮಾಣದಲ್ಲಿ ಉರಿಸಿ ನೀರನ್ನು ಕಾಯಿಸಿ ಹಬೆಯನ್ನು ಉತ್ಪತ್ತಿ ಮಾಡುವರು. ಇದರಿಂದ ಡೈನಾಮೋ ಚಲಿಸುವಂತೆ ಮಾಡಿ ವಿದ್ಯುತ್ ಪಡೆಯಲಾಗುವುದು.

ಶಾಖ ವಿದ್ಯುತ್ ಉತ್ಪಾದನಾ ಕೇಂದ್ರಗಳು ಸಾಮಾನ್ಯವಾಗಿ ಅತೀವ ವಿದ್ಯುತ್ತಿನ ಬೇಡಿಕೆಯಿರುವ ಮಾರುಕಟ್ಟೆಗಳಿಗೆ ಸಮೀಪದಲ್ಲಿಯೇ ಸ್ಥಾಪಿಸಲ್ಪಟ್ಟಿರುತ್ತವೆ. ಕಲ್ಲಿದ್ದಲು ಬಳಕೆಯ ಶಾಖ ವಿದ್ಯುತ್ ಸ್ಥಾವರಗಳು ಕಲ್ಲಿದ್ದಲಿನ ಗಣಿಗಳಿಗೆ ಸಾಕಷ್ಟು ಸಮೀಪದಲ್ಲಿರುತ್ತದೆ. ಇವುಗಳಿಗೆ ಅಗಾಧ ಪ್ರಮಾಣದ ನೀರಿನ ಪೂರೈಕೆಯು ಸಹ ಅವಶ್ಯಕ. ಇದರಿಂದಾಗಿ ಶಾಖ ವಿದ್ಯುತ್ ಕೇಂದ್ರಗಳು ನದಿ ದಂಡೆಯಲ್ಲಿಯೇ ನಿರ್ಮಿತಗೊಂಡಿರುತ್ತವೆ. ಭಾರತದಲ್ಲಿ ವಿವಿಧ ಪ್ರಮಾಣದ, ಸಾಮರ್ಥ್ಯದ ಹಲವಾರು ಶಾಖ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕರ್ನಾಟಕದ ರಾಯಚೂರು, ಆಂಧ್ರ ಪ್ರದೇಶದ ರಾಮಗುಂಡಂ, ಕೋತಗುಂಡಂ ಮತ್ತು ನೆಲ್ಲೂರು, ತಮಿಳುನಾಡಿನ ನೈವೇಲಿ ಮತ್ತು ಎನ್ನೂರು, ಚತ್ತೀಸ್‌ಗಡದ ಕೋರ್ಬ ಮತ್ತು ಅಮರಕಂಟಕ ಮಹಾರಾಷ್ಟ್ರದ ನಾಗಪುರ, ಬುಸಾವಲ್ ಮತ್ತು ನಾಸಿಕ್; ಗುಜರಾತಿನ ಧುವಾರನ್ ಮತ್ತು ಅಂಕಲೇಶ್ವರ; ಅಸ್ಸಾಮಿನ ನಹರ್‌ಕಟಿಯಾ ಮತ್ತು ನಾಮರೂಪ, ದೆಹಲಿಯ ಬಾಧರ್‌ಪುರ್, ಪಶ್ಚಿಮ ಬಂಗಾಲದ ದುರ್ಗಾಪುರ ಮತ್ತು ಸಂತಾಲ್‌ಧ್ವಿ, ಬಿಹಾರದ ಬಿತೌನಿ ಮತ್ತು ಪತ್ರತು; ಹರಿಯಾಣದ ಫರಿದಾಬಾದ್; ಒರಿಸ್ಸದ ತಲ್ಚೇರ್, ಉತ್ತರ ಪ್ರದೇಶದ ಓಬ್ರ ಮತ್ತು ಕಾನ್ಪುರ ಮತ್ತು ಪಂಜಾಬಿನ ಭಟಿಂಡ ಮುಂತಾದವು.

ಭಾರತ ಸರ್ಕಾರ ಶಾಖ ವಿದ್ಯುತ್ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ರಾಷ್ಟ್ರೀಯ ಶಾಖ ವಿದ್ಯುತ್ ನಿಗಮ (ಎನ್‌ಟಿಪಿಸಿ) ವನ್ನು 1975 ರಲ್ಲಿ ಸ್ಥಾಪಿಸಿದೆ. ಇದು ಸು. 50 ಶಾಖ ವಿದ್ಯುತ್ ಕೇಂದ್ರಗಳನ್ನು ನಿರ್ವಹಿಸುತ್ತಿದೆ.

ಅಣುವಿದ್ಯುತ್: ಭಾರತ ಅಪಾರ ವಿದ್ಯುತ್ತಿನ ಕೊರತೆಯನ್ನು ಹೊಂದಿದ್ದು, ಅಣು ವಿದ್ಯುತ್ ಸ್ಥಾವರಗಳ ಅಪಾರ ಅಗತ್ಯವನ್ನು ಹೊಂದಿದೆ. ಭಾರತದಲ್ಲಿ ಯುರೇನಿಯಮ್, ಥೋರಿಯಮ್ ಮತ್ತು ಬೆರಿಲಿಯಮ್‌ಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಒಟ್ಟು ವಿದ್ಯುತ್ತಿನ ಶೇ.2.7 ರಷ್ಟನ್ನು ಅಣು ಮೂಲದಿಂದ ಉತ್ಪಾದಿಸುತ್ತಿದೆ. ಅಣು ವಿದ್ಯುತ್ತಿನ ಉತ್ಪಾದನೆಗೆ ಕೆಲವು ಅಂಶಗಳು ಅತ್ಯಾವಶ್ಯಕ. ಅವುಗಳಲ್ಲಿ ಮುಖ್ಯವಾದವುಗಳು ಹೇಗಿವೆ: ದೇಶ ಸಾಕಷ್ಟು ಪ್ರಮಾಣದಲ್ಲಿ ರೇಡಿಯೋ ಆಕ್ಟಿವ್ ಖನಿಜಗಳನ್ನು ಹೊಂದಿರಬೇಕು. ಅಣು ತಾಂತ್ರಿಕತೆಯನ್ನು ಅಭಿವೃದ್ಧಿ ಪಡಿಸಿರಬೇಕು. ಉತ್ಪಾದಿಸಿದ ಅಣುವಿದ್ಯುತ್ತನ್ನು ಬಳಸಿಕೊಳ್ಳಲು ವಿಸ್ತಾರವಾದ ಮಾರುಕಟ್ಟೆಯಿರಬೇಕು. ಅಣುವಿದ್ಯುತ್ ಸ್ಥಾವರಗಳನ್ನು ನಿರ್ಮಿಸಲು ಅಧಿಕ ಬಂಡವಾಳವನ್ನು ಹೊಂದಿರಬೇಕು.

ಭಾರತ ಈ ಎಲ್ಲ ಅನುಕೂಲಕರ ಅಂಶಗಳನ್ನು ಒಳಗೊಂಡಿರುವುದು. ಇದು ಕೇರಳದ ಪಾಲಿಘಾಟ್ ಮತ್ತು ಕ್ವಿಲಾನ್ ಜಿಲ್ಲೆಗಳಲ್ಲಿ ರೇಡಿಯೋ ಆಕ್ಟೀವ್ ಅಣುವಿದ್ಯುತ್ ಕೇಂದ್ರಗಳಲ್ಲಿ ಬಳಸುವ ಥೋರಿಯಮ್ ಅನ್ನು ಉತ್ಪಾದಿಸಲಾಗುತ್ತಿದೆ. ಬಿಹಾರದ ಸಿಂಘಭೂಮ್ ಜಿಲ್ಲೆಯ ಜಾದುಗಡ ಗಣಿಗಳಿಂದ ಯುರೇನಿಯಮ್ ಉತ್ಪಾದಿಸಲಾಗುತ್ತಿದೆ. ಬೆರಿಲಿಯಮ್ ಖನಿಜವನ್ನು ರಾಜಸ್ತಾನದಲ್ಲಿ ಉತ್ಪಾದಿಸಲಾಗುವುದು. ಜೊತೆಗೆ ಭಾರತ ಅಪಾರ ವಿದ್ಯುತ್ತಿನ ಕೊರತೆಯನ್ನು ಹೊಂದಿದೆ. ಇದಲ್ಲದೆ ದೇಶ ಅಣು ತಾಂತ್ರಿಕತೆಯಲ್ಲಿ ಪರಿಣಿತಿಯನ್ನು ಹೊಂದಿದೆ. ಈ ಎಲ್ಲಾ ಅಂಶಗಳೂ ಅಣು ವಿದ್ಯುತ್ತಿನ ಉತ್ಪಾದನೆಗೆ ಸಹಾಯಕವಾಗಿದೆ.

ಅಣುವಿದ್ಯುತ್ ಕೇಂದ್ರಗಳು: ಭಾರತದಲ್ಲಿ ಇಂದು ಆರು ಅಣು ವಿದ್ಯುತ್ ಉತ್ಪಾದನೆ ಕೇಂದ್ರಗಳಿವೆ.

**ಭಾರತದ ಅಣು ವಿದ್ಯುತ್ ಕೇಂದ್ರಗಳು – 2001**

| ಕೇಂದ್ರ | ಜಿಲ್ಲೆ ಮತ್ತು ರಾಜ್ಯ | ಆರಂಭ ವಾದ ವರ್ಷ | ಉತ್ಪಾದನಾ ಸಾಮರ್ಥ್ಯ (ಮೆ.ವ್ಯಾ.) | |
|---|---|---|---|---|
| 1. ತಾರಾಪುರ | ಥಾಣೆ, ಮಹಾರಾಷ್ಟ್ರ | 1969 | 2 ಘಟಕ | 320 |
| 2. ರಾಣಾಪ್ರತಾಪಸಾಗರ | ಕೋಟ, ರಾಜಸ್ತಾನ | 1971 | 3 ಘಟಕ | 570 |
| 3. ಕಲ್ಪಾಕಂ | ಚೆಂಗಲ್‌ಪೆಟ್ಟು, ತಮಿಳುನಾಡು | | 2 ಘಟಕ | 440 |
| 4. ನರೋರ | ಬುಲಂದ್ ಶಹರ್, ಉತ್ತರ ಪ್ರದೇಶ | | 2 ಘಟಕ | 440 |
| 5. ಕಕ್ರಪಾರ | ಸೂರತ್, ಗುಜರಾತ್ | 1993 | 2 ಘಟಕ | 440 |
| 6. ಕೈಗಾ | ಕರ್ನಾಟಕ | 2000 | 1 ಘಟಕ | 220 |
| **ಒಟ್ಟು ಉತ್ಪಾದನ ಸಾಮರ್ಥ್ಯ** | | | | **2430** |

ಉತ್ಪಾದನೆ: ಭಾರತದಲ್ಲಿ ಅಣು ವಿದ್ಯುತ್ತಿನ ಉತ್ಪಾದನೆ 1971 ರಲ್ಲಿ 2.4 ಬಿ.ಕಿವಾ.ನಿಂದ 2004ರಲ್ಲಿ 17.8 ಬಿ.ಕಿ.ವಾಗಳಿಗೆ ಹೆಚ್ಚಿದೆ. ಹೊಸ ಅಣು ವಿದ್ಯುತ್ ಕೇಂದ್ರಗಳ ಸ್ಥಾಪನೆ ಹಾಗೂ ಮೊದಲಿನ ಘಟಕಗಳ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಿದ್ದದು ಉತ್ಪಾದನೆಯ ಹೆಚ್ಚಳಕ್ಕೆ ಕಾರಣವಾಗಿದೆ.

ಅನಾನುಕೂಲತೆಗಳು: ಅಣು ವಿದ್ಯುತ್ ಕೇಂದ್ರಗಳಲ್ಲಿ ಬಳಸುವ ರೇಡಿಯೋ ಆಕ್ಟೀವ್ ಖನಿಜಗಳು ಆರೋಗ್ಯಕ್ಕೆ ಅತ್ಯಂತ ಹಾನಿಕರ. ಇವು ಅಪಾರ ಜೀವ ಹಾನಿ ಹಾಗೂ ಪರಿಸರ ನಾಶಕ್ಕೆ ಕಾರಣವಾಗುವುವು. ಅಣು ವಿದ್ಯುತ್ ಕೇಂದ್ರಗಳಲ್ಲಿ ಅಂತ್ಯದಲ್ಲಿ ಉಳಿಯುವ ತ್ಯಾಜ್ಯ ವಸ್ತುಗಳನ್ನು ಸರಿಯಾಗಿ ಪರಿಸರ ಹಾಗೂ ಆರೋಗ್ಯಕ್ಕೆ ಹಾನಿಯಂಟಾಗದಂತೆ ವಿಸರ್ಜಿಸುವುದು ಒಂದು ಸಮಸ್ಯೆಯಾಗಿದೆ.

ಅಸಾಂಪ್ರದಾಯಿಕ ಶಕ್ತಿ ಮೂಲಗಳ ವಿದ್ಯುತ್ ಉತ್ಪಾದನೆ: ಸೌರಶಕ್ತಿ, ಪವನಶಕ್ತಿ ಮತ್ತು ಉಬ್ಬರವಿಳಿತಗಳು ಪ್ರಮುಖ ಅಸಾಂಪ್ರದಾಯಿಕ ಶಕ್ತಿ ಮೂಲಗಳಾಗಿದ್ದು ಇವುಗಳಿಂದಲೂ ವಿದ್ಯುತ್ ಉತ್ಪಾದಿಸಲು ಪ್ರಯತ್ನ ನಡೆಯುತ್ತಿದೆ.

ಸೌರ ವಿದ್ಯುಚ್ಛಕ್ತಿ: ಸೌರ ವಿಕಿರಣವನ್ನು ಫೋಟೋವೋಲ್ಟಾಯಿಕ್ ತಂತ್ರಜ್ಞಾನದ ಮೂಲಕ ವಿದ್ಯುತ್ತಾಗಿ ಪರಿವರ್ತಿಸಬಹುದು. ಇದು ಸಂಪೂರ್ಣವಾಗಿ ಪರಿಸರ ಮಾಲಿನ್ಯ ರಹಿತವಾದದ್ದು. ಇದರಲ್ಲಿ ಸೌರಕೋಶಗಳು ಸೂರ್ಯನ ಕಿರಣಗಳ ಉಷ್ಣಾಂಶವನ್ನು ವಿದ್ಯುತ್ತಾಗಿ ಪರಿವರ್ತಿಸುತ್ತವೆ. ಆದರೆ ಫೋಟೊ ವೋಲ್ಟಾಯಿಕ್ ಉಪಕರಣಗಳ ಬೆಲೆ ಹೆಚ್ಚು ಅಧಿಕ ಪ್ರಮಾಣದ ಸೌರವಿದ್ಯುತ್ತಿನ ಉತ್ಪಾದನೆಗೆ ತೊಡಗಿಸಬೇಕಾದ ಬಂಡವಾಳ ಅತ್ಯಧಿಕ. ಇದರಿಂದ ಕಡಿಮೆ ಪ್ರಮಾಣದಲ್ಲಿ ಸೌರ ವಿದ್ಯುತ್ತನ್ನು ಉತ್ಪಾದಿಸಿ ಹಳ್ಳಿಗಳ ವಿದ್ಯುತ್ ದೀಪ, ರೈಲ್ವೆ ಸಿಗ್ನಲ್, ನೀರೆತ್ತುವ ಪಂಪ್ ಹಾಗೂ ಸಂಪರ್ಕ ಮಾಧ್ಯಮಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಉದ್ದೇಶಗಳಿಗೆ ಸು. 40000 ಫೋಟೊ ವೋಲ್ಟಾಯಿಕ್ ಉಪಕರಣ ಬಳಸಿಕೊಳ್ಳಲಾಗಿದೆ. ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಾಜಸ್ತಾನದ ಬಾರ್‌ಮರ್‌ನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. ಇದರ ಸ್ಥಾಪಿತ ಸಾಮರ್ಥ್ಯ 150 ಮೆವಾ.

ಸೌರಶಕ್ತಿಯ ಉತ್ಪಾದನೆಗೆ ವಿಸ್ತಾರವಾದ ಪ್ರದೇಶದ ಸೌರತಾಪವನ್ನು ಬಳಸಿಕೊಳ್ಳಬೇಕಾಗುವುದು. ಸೌರಶಕ್ತಿಯ ಪ್ರಮಾಣವು ಗಂಟೆಯಿಂದ ಗಂಟೆಗೆ ಹಾಗೂ ದಿನದಿಂದ ದಿನಕ್ಕೆ ವ್ಯತ್ಯಾಸವಾಗುವುದು. ಇದು ಮುಗಿಯದ ಶಕ್ತಿ. ಅತಿ ಹೆಚ್ಚು ದೊರೆಯುತ್ತದೆ. ಬೆಲೆ ಕಡಿಮೆ. ಹೆಚ್ಚು ಉಪಯೋಗವಿಲ್ಲದ ಮರು ಭೂಮಿಯಲ್ಲಿ ಹೇರಳವಾಗಿ ದೊರೆಯುತ್ತದೆ.

ಪವನ ವಿದ್ಯುತ್‌ಚ್ಛಕ್ತಿ: ಭಾರತ ಪ್ರಪಂಚದಲ್ಲಿ ಗಾಳಿಯಿಂದ ವಿದ್ಯುತ್ತನ್ನು ಉತ್ಪಾದಿಸುವ ಮುಖ್ಯ ರಾಷ್ಟ್ರಗಳಲ್ಲಿ ಒಂದಾಗಿದೆ. ಭಾರತವು ಜರ್ಮನಿ, ಅಮೆರಿಕ, ಡೆನ್ಮಾರ್ಕ್ ಮತ್ತು ಸ್ಪೇನ್‌ಗಳ ಅನಂತರ ಪವನಶಕ್ತಿ ಉತ್ಪಾದನೆಯಲ್ಲಿ ಐದನೆಯದಾಗಿದೆ. ದೇಶದಲ್ಲಿ ಗಾಳಿಯಿಂದ 45000 ಮೆ.ವಾ ವಿದ್ಯುತ್‌ನ್ನು ಉತ್ಪಾದಿಸುವ ಸಂಭವನೀಯತೆಯಿದ್ದು ಇದರ ಶೇ.1 ರಷ್ಟನ್ನು ಮಾತ್ರ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಪ್ರಸ್ತುತ ಪವನ ಶಕ್ತಿಯನ್ನು ಉತ್ಪಾದಿಸುವ ಮುಖ್ಯ ರಾಜ್ಯಗಳೆಂದರೆ ತಮಿಳುನಾಡು, ಗುಜರಾತ್, ಆಂಧ್ರಪ್ರದೇಶ ಮತ್ತು ಕರ್ನಾಟಕ.

ಉಬ್ಬರವಿಳಿತ ಶಕ್ತಿ: ವಿದ್ಯುತ್ತಿನ ಕೊರತೆ ಹೊಂದಿರುವ ಭಾರತದಲ್ಲಿ ಉಬ್ಬರವಿಳಿತಗಳಿಂದ ವಿದ್ಯುತ್ತನ್ನು ಉತ್ಪಾದಿಸಬಹುದಾಗಿದೆ. ಇದಕ್ಕಾಗಿ ಯೋಜನೆಯನ್ನು ರೂಪಿಸಲಾಗಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಗುಜರಾತಿನ ತೀರಪ್ರದೇಶ, ತಮಿಳುನಾಡಿನ

ತೀರ ಪ್ರದೇಶ ಮೊದಲಾದ ಭಾಗಗಳಲ್ಲಿ ಈ ಬಗೆಯ ವಿದ್ಯುತ್‍ನ್ನು ಉತ್ಪಾದಿಸಬಹುದು. ಇವುಗಳಲ್ಲದೆ ಜೈವಿಕ ಅನಿಲದಿಂದ ಸಣ್ಣ ಕುಟುಂಬಗಳಿಗೆ ಅಗತ್ಯವಾದ ವಿದ್ಯುಚ್ಛಕ್ತಿ ಮತ್ತು ಅನಿಲವನ್ನು ಪಡೆಯಬಹುದು. ಹೀಗೆ ಭಾರತದಲ್ಲಿ ವಿವಿಧ ಬಗೆಯ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಯೋಜನೆಗಳಿವೆ. (ಬಿ.ಸಿ.ಕೆ.)

**ಭಾರತದ ಸಸ್ಯಸಂಪತ್ತು:** ಉತ್ತರ ಅಕ್ಷಾಂಶ $8^0$–$37^0$ ಮತ್ತು ಪೂರ್ವರೇಖಾಂಶ $68^0$–$98^0$ ವರೆಗೆ ವ್ಯಾಪಿಸಿರುವ ಭಾರತದ ಸಸ್ಯಸಂಪತ್ತು ವಿಶಿಷ್ಟವಾದ್ದು; ವೈವಿಧ್ಯಮಯವಾದ್ದು. ಹಿಮಾಲಯದ ಉನ್ನತ ಪರ್ವತ ಶ್ರೇಣಿಗಳ ವಲಯದಲ್ಲಿ ಶೀತವಲಯದ ಹವಾಗುಣ ಇದೆಯಾದರೆ ದೇಶದ ಉಳಿದ ಭಾಗಗಳಲ್ಲಿ ಉಷ್ಣವಲಯದ ವಿವಿಧತೆರನ ಹವಾಗುಣ ಇದೆ. ಇಲ್ಲಿ ಚಿರಾಪುಂಜಿಯಂಥ ಅತ್ಯಂತ ಹೆಚ್ಚು ಮೊತ್ತದ ಮಳೆಬೀಳುವ ಪ್ರದೇಶವೂ ಉಂಟು, ಅತ್ಯಂತ ಕನಿಷ್ಠ ಮಳೆಬೀಳುವ ರಾಜಸ್ತಾನದ ಮರುಭೂಮಿಯೂ ಉಂಟು. ಎಂದೇ ಸಸ್ಯಸ್ವರೂಪ ದೇಶದ ವಿಭಿನ್ನ ಭಾಗಗಳಲ್ಲಿ ವಿಭಿನ್ನರೀತಿಯದು.

ಭಾರತ ಬಲುಪ್ರಾಚೀನಕಾಲದಿಂದಲೂ ಸಸ್ಯಸಮೃದ್ಧಿಗೆ ಹೆಸರಾಗಿತ್ತು. ಸಸ್ಯಪಳೆಯುಳಿಕೆಗಳ ಆಧಾರದ ಮೇಲೆ ಸು. 35–22 ಕೋಟಿ ವರ್ಷಗಳಷ್ಟು ಹಿಂದೆಯೇ ಭಾರತ ಅರಣ್ಯದಿಂದ ತುಂಬಿತ್ತೆಂದೂ ಈಗಿನ ಅಸ್ಸಾಮ್, ಪಶ್ಚಿಮ ಬಂಗಾಲ, ಬಿಹಾರ ಪ್ರದೇಶಗಳೆಲ್ಲವೂ ಅನೇಕ ಬಗೆಯ ಸಸ್ಯಗಳಿಂದ ಕೂಡಿದ್ದವೆಂದೂ ಅಂದಾಜು ಮಾಡಲಾಗಿದೆ. ಸಿಂಧೂ ಬಯಲಿನ ಹರಪ್ಪ, ಮೊಹೆಂಜೋದಾರೋ ಸಂಸ್ಕೃತಿಯ ಕಾಲದಲ್ಲೂ (ಪ್ರ. ಪೂ. ಸು. 2500–1500) ಅರಣ್ಯ ಸಂಪತ್ತು ಚೆನ್ನಾಗಿಯೇ ಇತ್ತೆನ್ನಲಾಗಿದೆ.




ಭಾರತದ ಸಸ್ಯಗಳ ವೈಜ್ಞಾನಿಕ ಅಧ್ಯಯನ ಆರಂಭವಾದ್ದು ಹತ್ತೊಂಬತ್ತನೆಯ ಶತಮಾನದ ಮಧ್ಯದ ವೇಳೆಗೆ. ಇಂಗ್ಲೆಂಡಿನ ಸಸ್ಯವರ್ಗೀಕರಣ ತಜ್ಞ ಜೋಸೆಫ್ ಡಾಲ್ಟನ್ ಹೂಕರ್ (1817–1911) ಕಳೆದ ಶತಮಾನದ ಆದಿಯಲ್ಲಿ ಭಾರತಕ್ಕೆ ಬಂದು ಇಲ್ಲಿಯ ಗಿಡಮರಗಳ ಅನೇಕ ನಮೂನೆಗಳನ್ನು ಸಂಗ್ರಹಿಸಿ ಪರಿಶೀಲಿಸಿ 1872–97 ಅವಧಿಯಲ್ಲಿ ಫ್ಲೋರ ಆಫ್ ಬ್ರಿಟಿಷ್ ಇಂಡಿಯ ಎಂಬ ಗ್ರಂಥ ರಚಿಸಿ ಭಾರತದ ಸಸ್ಯಸಂಪತ್ತಿನ ವಿವರಕೊಟ್ಟ. ಏಳು ಸಂಪುಟಗಳ ಈ ಗ್ರಂಥದಲ್ಲಿ ಸು. 15,000 ಸಸ್ಯಗಳ ವಿವರಣೆ ಇದೆ. ಈ ಸಂಪುಟಗಳಲ್ಲಿ ಭಾರತ ಎನ್ನುವುದರ ಭೌಗೋಳಿಕ ವಿಸ್ತಾರ ಈಗಿನ ಭಾರತವಷ್ಟೇ ಅಲ್ಲದೆ ಮಯನ್ಮಾರ್ ಮುಂತಾದ ನೆರೆಹೊರೆಯ ಪ್ರದೇಶಗಳನ್ನೂ ಒಳಗೊಂಡಿದೆ. ಏಳು ವರ್ಷಗಳ ತರುವಾಯ ಪ್ರಕಟವಾದ ಎ ಸ್ಕೆಚ್ ಆಫ್ ದಿ ಫ್ಲೋರ ಆಫ್ ಬ್ರಿಟಿಷ್ ಇಂಡಿಯ (1904) ಪುಸ್ತಕದಲ್ಲಿ ಸಸ್ಯಸಂಪತ್ತಿನ ವೈವಿಧ್ಯದ ದೃಷ್ಟಿಯಿಂದ ಭಾರತವನ್ನು ಪೂರ್ವ ಹಿಮಾಲಯ, ಪಶ್ಚಿಮ ಹಿಮಾಲಯ, ಸಿಂಧೂನದಿಯ ಮೈದಾನ ಪ್ರದೇಶ, ಗಂಗಾನದಿಯ ಮೈದಾನ ಪ್ರದೇಶ, ಮಲಬಾರ್ (ಪಶ್ಚಿಮ ಘಟ್ಟವೂ ಸೇರಿದಂತೆ), ದಖನ್ ಪ್ರಸ್ಥಭೂಮಿ, ಸಿಲೋನ್–ಮಾಲ್ಡೀವ್ಸ್ ದ್ವೀಪಗಳು, ಮಯನ್ಮಾರ್ ಮತ್ತು ಮಲಯ ಪರ್ಯಾಯ ದ್ವೀಪ ಎಂಬ ಒಂಬತ್ತು ವಿಭಾಗಗಳಾಗಿ ಹೂಕರ್ ವಿಂಗಡಿಸಿದ್ದ. ಸ್ವಾತಂತ್ರ್ಯಾನಂತರ ಭಾರತ ಗಣರಾಜ್ಯವನ್ನು ಸ್ವಾಭಾವಿಕ ಸಸ್ಯವರ್ಗದ ಆಧಾರದ ಮೇಲೆ ಈ ಮುಂದಿನಂತೆ ವಿಭಾಗಿಸಲಾಗಿದೆ:

ಭಾರತದ ಸ್ವಾಭಾವಿಕ ಸಸ್ಯವರ್ಗಗಳನ್ನು ವಿಂಗಡಿಸಿರುವ ಹಲವಾರು ಪ್ರಯತ್ನಗಳಿವೆ ಇವುಗಳಲ್ಲಿ ಚಾಂಪಿಯನ್‍ರವರ 1956ರ ವಿಂಗಡಣೆ ಅತಿ ಮುಖ್ಯವಾದ್ದದು. ಇದರಲ್ಲಿ ಉಷ್ಣಾಂಶ, ಮಳೆ, ಮತ್ತು ಭೂಸ್ವರೂಪಗಳ ಪ್ರಭಾವಗಳನ್ನು ಆಧರಿಸಲಾಗಿದೆ.

ಅನಂತರ ಈ ವಿಂಗಡಣೆಯನ್ನು ಪುರಿ ಮತು ಲೆಗ್ರಿಸ್‍ರವರು ಮಾರ್ಪಡಿಸಿ ಭಾರತವನ್ನು ಸಸ್ಯವರ್ಗ ವಲಯಗಳನ್ನಾಗಿ ವಿಂಗಡಿಸಿದರು.

1. ಉಷ್ಣವಲಯದ ನಿತ್ಯ ಹರಿದ್ವರ್ಣದ ಸಸ್ಯವರ್ಗ: ಈ ಸಸ್ಯವರ್ಗಗಳು 250 ಸೆಂಮೀ ಗಳಿಗಿಂತ ಹೆಚ್ಚುಮಳೆ ಬೀಳುವ ಮತ್ತು 900 ಮೀ ಗಳಿಗಿಂತ ಕಡಿಮೆ ಎತ್ತರವನ್ನು ಹೊಂದಿರುವ ಪ್ರದೇಶಗಳಲ್ಲಿ ಕಾಣಬಹುದು.

ಪಶ್ಚಿಮ ಘಟ್ಟಗಳು, ಈಶಾನ್ಯದ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ತ್ರಿಪುರ, ಮಣಿಪುರ, ನಾಗಲ್ಯಾಂಡ್ ಹಾಗೂ ಅಂಡಮಾನ್–ನಿಕೋಬಾರ್ ಮತ್ತು ಲಕ್ಷ ದ್ವೀಪಗಳಲ್ಲಿ ಕಂಡುಬರುತ್ತವೆ. ಈ ಪ್ರದೇಶದಲ್ಲಿ ಸಸ್ಯವರ್ಗ ವರ್ಷವೆಲ್ಲಾ ಹಸುರಾಗಿರುವುದರಿಂದಲೇ ಇವುಗಳನ್ನು ನಿತ್ಯ ಹರಿದ್ವರ್ಣದ ಸಸ್ಯ ಅಥವಾ ಅರಣ್ಯವೆಂದು ಕರೆಯುವರು. ತೇಗ, ಬೀಟೆ, ಹೊನ್ನೆ, ಪಾಲಿಮರ, ಹೆಬ್ಬಲಸು, ದೊಡ್ಡ ಸಂಪಿಗೆ, ಬಿದಿರು ಮುಖ್ಯವಾದವು. ಇವು ಅನೇಕ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತವೆ.

2. ಉಷ್ಣವಲಯದ ಎಲೆ ಉದುರುವ ಅಥವಾ ಮಾನ್ಸೂನ್ ಅರಣ್ಯಗಳು: ಈ ವರ್ಗದ ಅರಣ್ಯಗಳು ಭಾರತದಲ್ಲಿ ಅತಿ ಹೆಚ್ಚು ವಿಸ್ತಾರವಾಗಿ ಹರಡಿವೆ. ಇವುಗಳು 75 ರಿಂದ 250 ಸೆಂಮೀ ಮಳೆ ಪಡೆಯುವ ಪ್ರದೇಶಗಳಲ್ಲಿ ವ್ಯಾಪಕವಾಗಿ ವಿಸ್ತರಿಸಿವೆ. ಮಳೆ ಹಂಚಿಕೆ ಅಲ್ಪಾವಧಿಯ ಮಳೆಗಾಲಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಒಣ ಹವೆಯ ಉಳಿದ ಧೀರ್ಘಾವಧಿಯಲ್ಲಿ ಜಲಾಂಶದ ಪೂರೈಕೆ ಅತಿಕಡಿಮೆ ಇರುವುದು. ಆದ್ದರಿಂದ ಈ ಅವಧಿಯಲ್ಲಿ ಮರಗಳು ಎಲೆಗಳನ್ನು ಉದುರಿಸುವುದನ್ನು ರೂಡಿಸಿಕೊಂಡಿದೆ.

ಈ ವರ್ಗದ ಅರಣ್ಯದಲ್ಲಿ ಎರಡು ಬಗೆಯ ಗುಂಪುಗಳು ಕಂಡುಬರುವುದು, ತೇವಯುತ ಎಲೆಯುದುರುವ ಅರಣ್ಯಗಳು ಮತ್ತು ಶುಷ್ಕ ಎಲೆಯುದುರುವ ಅರಣ್ಯಗಳು. ಪ್ರಮುಖವಾಗಿ ಕಂಡು ಬರುವ ಮರಗಳು ತೇಗ, ಹೊನ್ನೆ, ತಾಳೆಮರ, ಕರಿಮರ, ಬಿಳಿ ಮತ್ತಿ, ದೊಡ್ಡ ಬಾಗೆ, ಬಿಂಡಿ, ಶ್ರೀಗಂಧ, ಮಾವು, ಬೇವು, ಹಲಸು, ಆಲ, ಬಿದುರು, ಮುಂತಾದವು. ಈ ಅರಣ್ಯಗಳನ್ನು ವ್ಯವಸಾಯಕ್ಕೋಸ್ಕರ ಬಹುಭಾಗ ಪ್ರದೇಶಗಳಲ್ಲಿ ನಾಶ ಮಾಡಲಾಗಿದೆ.

3. ಉಷ್ಣವಲಯದ ಹುಲ್ಲು ಗಾವಲುಗಳು: ಭಾರತದಲ್ಲಿ 60ರಿಂದ 75 ಸೆಂಮೀ ಮಳೆ ಪಡೆಯುವ ಪ್ರದೇಶಗಳಲ್ಲಿ ಹುಲ್ಲುಗಾವಲು ಸಸ್ಯವರ್ಗ ಪ್ರಧಾನವಾಗಿ ಕಂಡುಬರುವುದು. ಎತ್ತರವಾದ ಹುಲ್ಲು ಹಾಗೂ ಅಲ್ಲಲ್ಲಿ ಕುಬ್ಜ ಮರಗಳನ್ನು ಸಾಮಾನ್ಯವಾಗಿ ಕಾಣಬಹುದು. ದಖ್ಖನ್ ಪ್ರಸ್ಥಭೂಮಿಯ ಕೇಂದ್ರಭಾಗ, ಅರಾವಳಿ ಪರ್ವತದ ಪಶ್ಚಿಮದಲ್ಲಿರುವ ಥಾರ್ ಮರುಭೂಮಿಯ ಅಂಚಿನ ವಲಯಗಳಲ್ಲಿ ಈ ಬಗೆಯ ಸಸ್ಯವರ್ಗವಿದೆ. ಈ ಹುಲ್ಲುಗಾವಲುಗಳು ಪಶು ಸಂಗೋಪನೆಗೆ ಹೆಸರಾದವು. ಕಾಗದ ತಯಾರಿಕೆಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ.

4. ಮರುಭೂಮಿ ಸಸ್ಯವರ್ಗ: ಈ ಸಸ್ಯವರ್ಗ ರಾಜಸ್ತಾನದ ಪಶ್ಚಿಮ ಭಾಗವನ್ನು ಆವರಿಸಿರುವ ಥಾರ್ ಮರುಭೂಮಿ ಹಾಗೂ ನೆರೆಯ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಹಾಗೂ ಗುಜರಾತ್‍ನ ಅಂಚಿನ ವಲಯಗಳಲ್ಲಿ ವಿಸ್ತರಿಸಿದೆ. ಮರುಭೂಮಿ ಹೊಂದಿರುವ ವಾಯುಗುಣ ಪರಿಸ್ಥಿತಿ ಹೆಚ್ಚು ಉಷ್ಣ ಮತ್ತು ಕಡಿಮೆ ಮಳೆ ಸ್ವಭಾವ ಹೊಂದಿರುತ್ತದೆ. ಮರುಭೂಮಿ ಸಸ್ಯವರ್ಗವನ್ನು ಉಷ್ಣ ಪೋಷಕ ಸಸ್ಯವರ್ಗವೆಂದು ಕರೆಯುವರು. ಗಿಡಗಳು ಅತಿ ಕುಬ್ಜ, ಎಲೆಗಳು ಕಡಿಮೆಯಿದ್ದು ರಬ್ಬರಿನ ಹಾಳೆಗಳಂತೆ ಮಂದವಾಗಿರುತ್ತವೆ. ಇವು ಮುಳ್ಳುಗಳಿಂದ ತುಂಬಿದ್ದು ಪ್ರಾಣಿಗಳಿಂದಲೂ ರಕ್ಷಣೆ ಹೊಂದಿವೆ. ಕಳ್ಳಿ, ಕತ್ತಾಳೆ, ಜಾಲಿಮರ, ಕರಿ ಗೊಬ್ಬಳಿ, ತಾಳೆ, ಈಚಲು ಮುಂತಾದವು ಪ್ರಮುಖ ಬಗೆಯ ಸಸ್ಯಗಳು.

5. ಮ್ಯಾಂಗ್ರೂವ್ ಅರಣ್ಯಗಳು: ತೀರ ಪ್ರದೇಶಗಳ ತಗ್ಗು ವಲಯಗಳು ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಲ್ಪಡುತ್ತವೆ. ಆದ್ದರಿಂದ ಅಲೆಗಳಿಂದ ಸಾಗಿಸಲ್ಪಟ್ಟ ಕೆಸರು, ಮಡ್ಡಿ ಈ ತಗ್ಗು ವಲಯಗಳಲ್ಲಿ ಸಂಚಯಿತಗೊಳ್ಳುತ್ತವೆ. ಈ ಪ್ರದೇಶಗಳಲ್ಲಿ ಕಂಡುಬರುವ ಸಸ್ಯವರ್ಗಗಳನ್ನು ಮ್ಯಾಂಗ್ರೂವ್ ಅರಣ್ಯ ಮತ್ತು ಉಬ್ಬರದ ಅರಣ್ಯಗಳೆಂದೂ ಕರೆಯುವರು. ಈ ಪ್ರದೇಶಗಳಲ್ಲಿ ನಿತ್ಯಹರಿದ್ವರ್ಣದ ಅರಣ್ಯಗಳಿದ್ದು, ಇವುಗಳ ರೆಂಬೆಗಳು

ಬಹು ಉದ್ದವಾಗಿ ಚಾಚಿ ಕೊಂಡಿರುತ್ತದೆ. ಇವುಗಳು ಅಸಂಖ್ಯಾತ ಬೇರಿನಂತಿರುವ ಬಿಳಲುಗಳಿಂದ ಕೂಡಿರುತ್ತವೆ. ಈ ಅರಣ್ಯಗಳು ಗಂಗಾ, ಮಹಾನದಿ, ಗೋದಾವರಿ, ಮತ್ತು ಕೃಷ್ಣನದಿಗಳ ಮುಖಜ ಭೂಮಿಗಳಲ್ಲಿ ಹಂಚಿಕೆಯಾಗಿವೆ.

ಸುಂದರಿ ಮರಗಳು ಗಂಗಾ ನದಿಯ ಮುಖಜಭೂಮಿಯಲ್ಲಿ ಹೆಚ್ಚು ಕಂಡುಬರುವುದರಿಂದ ಇವುಗಳನ್ನು ಸುಂದರಬನವೆಂದು ಕರೆಯುವುದು ರೂಢಿಗೆ ಬಂದಿದೆ. ಸುಂದರಿ ಮರಗಳು ಪೀಠೋಪಕರಣ, ದೋಣಿ ಹಾಗೂ ಹಡಗು ನಿರ್ಮಾಣಕ್ಕೆ ಹೆಚ್ಚು ಉಪಯುಕ್ತವಾಗಿವೆ.

6. ಹಿಮಾಲಯದ ಆಲ್ಪೈನ್ ಸಸ್ಯವರ್ಗ: ಹಿಮಾಲಯ ಪರ್ವತಗಳಲ್ಲಿ ವಿವಿಧ ಬಗೆಯ ಅರಣ್ಯಗಳು ಕಂಡುಬರುತ್ತವೆ. ಎತ್ತರ ಹೆಚ್ಚಿದಂತೆ ಉಷ್ಣಾಂಶ ಕಡಿಮೆಯಾಗುವುದು. ಇದಕ್ಕೆ ಅನುಗುಣವಾಗಿ ವಿವಿಧ ಪ್ರಕಾರದ ಸಸ್ಯವರ್ಗಗಳು ಇಲ್ಲಿ ಕಂಡುಬರುವುವು. ಹಿಮಾಲಯ ಪರ್ವತದ ಕೆಳವಲಯಗಳಲ್ಲಿ ಸು. 1500 ಮೀ ಎತ್ತರದವರೆಗೆ ಉಷ್ಣವಲಯದ ನಿತ್ಯ ಹರಿದ್ವರ್ಣದ ಅರಣ್ಯಗಳು ಕಂಡುಬರುತ್ತವೆ. ಇಲ್ಲಿ ಬೆಳೆಯುವ ಮುಖ್ಯಮರಗಳು– ಸಾಲ್, ಬೈರಾ ಮತ್ತು ಟೂನ್, 1500 ರಿಂದ 3650 ಮೀ ಎತ್ತರದ ವಲಯಗಳಲ್ಲಿ ಎಲೆ ಮೊನಚಾದ ಅರಣ್ಯಗಳು ಪ್ರಧಾನವಾಗಿ ಬೆಳೆದಿರುತ್ತವೆ. ದೇವದಾರು, ಸಿಲ್ವರ್, ಫಿರ್‌ಓಕ್, ಸ್ಪ್ರೂಸ್, ಲಾರೆಲ್ ಮತ್ತು ಚೆಸ್ಟ್‌ನಟ್ ಇಲ್ಲಿಯ ಮುಖ್ಯವೃಕ್ಷಗಳು. ಅನಂತರ 3650 ರಿಂದ 4870 ಮೀ ಎತ್ತರದ ಇಳಿಜಾರುಗಳಲ್ಲಿ ಹುಲ್ಲುಗಾವಲು ಕಂಡುಬರುತ್ತವೆ. ರೋಡೋಡೆಂಡ್ರಾನ್, ವಿಲ್ಲೊ, ಜನಿಫರ್ ಮತ್ತು ಪ್ರಿಮ್‌ರೋಜ್ಹ್ ಪ್ರಮುಖ ಸಸ್ಯಗಳು. (ಎ.ಎಸ್.ಆರ್.ಎಂ.)

**ಭಾರತದ ಸಾರಿಗೆ ವ್ಯವಸ್ಥೆ:** ವಸ್ತುಗಳು, ಸೇವೆಗಳು ಹಾಗೂ ಜನರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ವ್ಯವಸ್ಥೆ. ಭಾರತದ ಸಾರಿಗೆ ವ್ಯವಸ್ಥೆಯಲ್ಲಿ ರಸ್ತೆಸಾರಿಗೆ, ರೈಲುಸಾರಿಗೆ, ಜಲಸಾರಿಗೆ, ವಾಯುಸಾರಿಗೆ ಎಂಬ ವಿಧಾನಗಳಿವೆ.

ರಸ್ತೆ ಸಾರಿಗೆ: ಪುರಾತನ ಕಾಲದಿಂದಲೂ ಭಾರತ ರಸ್ತೆ ಸಾರಿಗೆಗೆ ವಿಶೇಷ ಮಹತ್ತ್ವ ಕೊಡುತ್ತ ಬಂದಿದೆ. ಆದರೆ ರಾಜ್ಯವಿಸ್ತರಣೆ ಮತ್ತು ಸೈನ್ಯ ಸಾಗಣೆಯೇ ಆಗಿನ ಮುಖ್ಯ ಗುರಿಯಾದ್ದರಿಂದ ಹಳ್ಳಿ ಮೂಲೆಗಳು ರಸ್ತೆ ಸಂಪರ್ಕರಹಿತ ದ್ವೀಪಗಳಾಗಿಯೇ ಉಳಿದುವು. 19 ನೆಯ ಶತಮಾನದಲ್ಲಿ ಬ್ರಿಟಿಷರ ಆಳ್ವಿಕೆ ಆರಂಭವಾದ ಬಳಿಕ ದೇಶದಲ್ಲಿ ಸಾಗಣೆ ಸಾಧನಗಳು ವೃದ್ಧಿಸಿದಂತೆ ರಸ್ತೆ ನಿರ್ಮಾಣ ಕಾರ್ಯ ಅಧಿಕ ಲಕ್ಷ್ಯ ಪಡೆಯಿತು– ಯಾವುದೇ ಭದ್ರ ಆಡಳಿತೆಯ ರಹಸ್ಯ ದೇಶವ್ಯಾಪಿ ರಸ್ತೆಜಾಲ ಎಂಬುದನ್ನು ಅರಿತಿದ್ದ ಬೆಂಟಿಂಕ್ ರಿಪ್ಪನ್ ಮತ್ತು ಮೇಯೊ ಈ ದಿಶೆಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿದರು. 20 ನೆಯ ಶತಮಾನದ ಆದಿಯಲ್ಲಿ ಮೋಟಾರ್ ವಾಹನಯುಗ ಭಾರತವನ್ನು ಪ್ರವೇಶಿಸಿದಾಗ ದೇಶದ ರಸ್ತೆಸಾರಿಗೆ ವ್ಯವಸ್ಥೆಯಲ್ಲಿ ಪೂರ್ತಿ ಬದಲಾವಣೆಗೆ ಸಿದ್ಧವಾಗಿತ್ತು. 1927 ರಲ್ಲಿ ಬ್ರಿಟಿಷ್ ಸರ್ಕಾರ ರಸ್ತೆ ಅಭಿವೃದ್ಧಿ ಸಮಿತಿಯೊಂದನ್ನು ರಚಿಸಿ 1934ರಿಂದಾಚೆಗೆ ವಾಹನ ತೆರಿಗೆ ಮತ್ತು ಸುಂಕದ ಹಣವನ್ನು ರಸ್ತೆಗಳ ದುರಸ್ತಿಗಾಗಿ ವಿನಿಯೋಗಿಸಿಕೊಳ್ಳಬಹುದೆಂದು ಸಲಹೆಮಾಡಿತು. ಪ್ರಾಂತೀಯ ಸರ್ಕಾರಗಳು ಕೈಗೊಳ್ಳುವ ರಸ್ತೆ ಅಭಿವೃದ್ಧಿಕಾರ್ಯಗಳಿಗೆ ಧನಸಹಾಯನೀಡುವ ಉದ್ದೇಶದಿಂದ 1930 ರಲ್ಲಿ ಕೇಂದ್ರೀಯ ರಸ್ತೆ ನಿಧಿ ಸ್ಥಾಪಿತವಾಯಿತು. ಆದರೆ ಈ ನಿಧಿಯಿಂದ ಲಭ್ಯವಿದ್ದ ಸಹಾಯವನ್ನು ಪ್ರಾಂತೀಯ ಸರ್ಕಾರಗಳು ಸದುಪಯೋಗಪಡಿಸಿಕೊಳ್ಳಲಿಲ್ಲ; ಬದಲಾಗಿ ರಸ್ತೆ ನಿರ್ಮಾಣ ವೆಚ್ಚಗಳನ್ನು ಕಡಿಮೆಮಾಡಿದವು. ಗ್ರಾಮ ರಸ್ತೆಗಳ ನಿರ್ಮಾಣ ಕಾರ್ಯ ಸ್ಥಗಿತಗೊಂಡಿತು. ಪ್ರಾಂತೀಯ ಸರ್ಕಾರಗಳ ಅಲಕ್ಷ್ಯ ಅಸಹಕಾರಗಳಿಂದಾಗಿ ರಸ್ತೆ ನಿಧಿಯ ಉದ್ದೇಶ ಸಫಲವಾಗಲಿಲ್ಲ; ರಸ್ತೆಸಾರಿಗೆಯ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಹತ್ತಾರು ನೀಲ ನಕ್ಷೆಗಳು ಸಿದ್ಧವಾದುವು.

ರಸ್ತೆಸಾರಿಗೆ ಮತ್ತು ಪಂಚವಾರ್ಷಿಕ ಯೋಜನೆಗಳು: ಪಂಚವಾರ್ಷಿಕ ಯೋಜನೆ ಪ್ರಾರಂಭವಾದ ಕಾಲದಿಂದ ಸರ್ಕಾರ ರಸ್ತೆ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಗಮನಹರಿಸಿದೆ. ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆಯನ್ನು ಕೇಂದ್ರ ಸರ್ಕಾರವೂ ಪ್ರಾಂತೀಯ ಹೆದ್ದಾರಿಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರಗಳೂ ಜಿಲ್ಲೆ ಮತ್ತು ಗ್ರಾಮಾಂತರ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ಅನುಕ್ರಮವಾಗಿ ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳೂ ವಹಿಸಿಕೊಂಡಿವೆ.

1951 ಕ್ಕೆ ಮೊದಲು ದೇಶದಲ್ಲಿ 1,58,000 ಕಿಮೀ ಉದ್ದದ ಸುಧಾರಿಸಿದ ಪಕ್ಕಾ ರಸ್ತೆಗಳೂ 2,43.000 ಕಿಮೀ ಉದ್ದದ ಕಚ್ಚಾ ರಸ್ತೆಗಳೂ ಇದ್ದುವು. ತರುವಾಯದ ವರ್ಷಗಳ ಸುಧಾರಣೆ ಕೆಳಗಿನಂತಿದೆ:

| 1000 ಕಿಮೀಗಳಲ್ಲಿ | 1951 | 1971 | 1981 | 2001 |
|---|---|---|---|---|
| ಸುಧಾರಿಸಿದ ರಸ್ತೆಗಳು | 158 | 421 | 690 | 1394 |
| ಕಚ್ಚಾ ರಸ್ತೆಗಳು | 243 | 543 | 954 | 1071 |
| ಮೊತ್ತ | 401 | 964 | 1635 | 2465 |

ರಾಷ್ಟ್ರೀಕರಣ: ಮೋಟಾರ್ ಸಾರಿಗೆಯ ಅನಿರ್ಬಂಧಿತ ವಿಸ್ತರಣೆಯಿಂದ ಜನರಿಗೂ ರಾಷ್ಟ್ರಕ್ಕೂ ತಟ್ಟುವ ನಷ್ಟ ಹಾಗೂ ಅಸೌಕರ್ಯ ನಿವಾರಿಸಿ ವ್ಯವಸ್ಥಿತ ರಾಷ್ಟ್ರೀಕೃತ ವಿಸ್ತರಣೆ ಸಾಧಿಸುವ ಸಲುವಾಗಿ ಭಾರತ ಸರ್ಕಾರ 1950 ರಲ್ಲಿ ಒಂದು ಅಧಿನಿಯಮ ಜಾರಿಗೆ ತಂದು ರಾಜ್ಯಗಳಿಗೆ ಪ್ರಯಾಣಿಕರ ಸಾರಿಗೆಯನ್ನು ರಾಷ್ಟ್ರೀಕರಿಸಲು ಅನುಮತಿ ನೀಡಿತು. ಬಹುತೇಕ ರಾಜ್ಯಗಳು ತಮ್ಮವೇ ಆದ ರಸ್ತೆ ಸಾರಿಗೆ ನಿಗಮಗಳನ್ನು ಸ್ಥಾಪಿಸಿಕೊಂಡು ಪ್ರಯಾಣಿಕರ ಸಾರಿಗೆಯನ್ನು ರಾಷ್ಟ್ರೀಕರಿಸಿವೆ. ಆದರೆ ಸರಕು ಸಾಗಣೆ ಮಾತ್ರ ಇನ್ನೂ ಖಾಸಗಿ ವ್ಯಕ್ತಿಗಳ ಕೈಯಲ್ಲೇ ಇದೆ. ಇಡೀ ರಾಷ್ಟ್ರ ಕುರಿತಂತೆ ಶೇ. 41 ರಷ್ಟು ಪ್ರಯಾಣಿಕರ ಸಾರಿಗೆಯನ್ನು ರಾಷ್ಟ್ರೀಕರಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿಗಳು: ರಾಜ್ಯಗಳ ರಾಜಧಾನಿ ನಗರಗಳನ್ನು ಮುಖ್ಯ ಬಂದರುಗಳನ್ನೂ ಕೈಗಾರಿಕಾ ಸಂಕೀರ್ಣಗಳನ್ನು ಸಂಯೋಜಿಸುವ ಇವು ದೇಶದ ಉದ್ದಗಲ ವ್ಯಾಪಿಸಿದ್ದು ಪ್ರಮುಖ ಸಂಪರ್ಕ ಜಾಲವನ್ನು ರಚಿಸುತ್ತವೆ. ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ ಸು. 66,750 ಕಿಮೀ (2008). ಈ ಹೆದ್ದಾರಿಗಳನ್ನು ಕೇಂದ್ರೀಯ ಲೋಕೋಪಯೋಗಿ ಇಲಾಖೆ ಮೇಲುಸ್ತುವಾರಿಕೆ ನೋಡಿ ಕೊಳ್ಳುತ್ತದೆ. ಅಲ್ಲದೆ, 1,28,000 ಕಿಮೀ ರಾಜ್ಯ ಹೆದ್ದಾರಿ, 4,70,000 ಪ್ರಮುಖ ಜಿಲ್ಲಾ ರಸ್ತೆ ಹಾಗೂ 26,50,000 ಕಿಮೀ ಗ್ರಾಮೀಣ ಇತರೆ ರಸ್ತೆಗಳಿವೆ.

2 ರೈಲು ಸಾರಿಗೆ: ಇದು ದೇಶದ ಅತ್ಯಂತ ದೊಡ್ಡ ರಾಷ್ಟ್ರೀಕೃತ ಉದ್ಯಮ, ಏಷ್ಯದಲ್ಲಿ ಇದರದು ಪ್ರಥಮ ಸ್ಥಾನ ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನ. ಇದರಲ್ಲಿ ಹೂಡಲಾಗಿರುವ ಬಂಡವಾಳ ಅತ್ಯಧಿಕ. ಇದು ಭಾರತದ ಎಲ್ಲ ಖಾಸಗಿ ಕೂಡು ಬಂಡವಾಳ ಕಂಪನಿಗಳ ಬಂಡವಾಳಕ್ಕಿಂತಲೂ ಹೆಚ್ಚು. ಇತರ ಎಲ್ಲ ಕೈಗಾರಿಕೆಗಳ ಒಟ್ಟು 30 ಲಕ್ಷ ಜನರಿಗೆ ಉದ್ಯೋಗ ಒದಗಿಸಿದರೆ ರೈಲು ಸಾರಿಗೆಯೊಂದೇ 15 ಲಕ್ಷ ಜನರಿಗೆ ಉದ್ಯೋಗ ಒದಗಿಸಿದೆ. 12 ಸಾವಿರ ಎಂಜಿನ್ನುಗಳು. 39,852 ಸಾವಿರ ಪ್ರಯಾಣ ಡಬ್ಬಿ ಮತ್ತು 4 ಲಕ್ಷ ವ್ಯಾಗನ್ನುಗಳು ಇದರ ಜಂಗಮ ರೂಪ. ನಿತ್ಯ ಇದು 75 ಲಕ್ಷ ಪ್ರಮಾಣಿಕರನ್ನೂ 5.5 ಲಕ್ಷಟನ್ನು ಸರಕನ್ನೂ ಸಾಗಿಸುತ್ತದೆ. ಭಾರತದ ಒಟ್ಟು ರೈಲುಮಾರ್ಗ 63,122 ಕಿಮೀ ಇರುತ್ತದೆ. ಇದರಿಂದ ಸರ್ಕಾರಕ್ಕೆ ವರ್ಷಂಪ್ರತಿ ರೂ 2400 ಕೋಟಿ ಆದಾಯ ಬರುತ್ತದೆ.

ಭಾತದಲ್ಲಿ ರೈಲುಮಾರ್ಗ ನಿರ್ಮಾಣ ಕಾರ್ಯ 1844 ರಲ್ಲಿ ಆರಂಭವಾಯಿತು. 1845ರಲ್ಲಿ ಈಸ್ಟ್ ಇಂಡಿಯ ಪೆನಿನ್ಸ್ಯುಲರ್ ಮತ್ತು ಗ್ರೇಟ್ ಇಂಡಿಯ ಪೆನಿನ್ಸ್ಯುಲರ್ ಎಂಬ ಎರಡು ವಿದೇಶೀ ಖಾಸಗಿ ರೈಲ್ವೆ ಕಂಪನಿಗಳು ಸ್ಥಾಪನೆಯಾದುವು. ಇವಕ್ಕೆ ಸರ್ಕಾರ ಧನಸಹಾಯ ನೀಡಿ ರೈಲುಮಾರ್ಗ ನಿರ್ಮಾಣಕಾರ್ಯವನ್ನು ಕೈಗೊಳ್ಳಲು ಪ್ರೋತ್ಸಾಹಿಸಿತು. ಡಾಲ್‌ಹೌಸಿ ರೈಲ್ವೆ ಅಭಿವೃದ್ಧಿಗಾಗಿ ಒಂದು ಯೋಜನೆ ರೂಪಿಸಿದ. ಆ ಪ್ರಕಾರ ಖಾಸಗಿ ರೈಲ್ವೆ ಕಂಪನಿಗಳು ಸರ್ಕಾರದ ಮೇಲ್ವಿಚಾರಣೆಯಲ್ಲಿ ರೈಲುಮಾರ್ಗ ನಿರ್ಮಾಣಕಾರ್ಯ ಆರಂಭಿಸಿದುವು. ಭಾರತದಲ್ಲಿ ಪ್ರಪ್ರಥಮವಾಗಿ 1853 ರಲ್ಲಿ ಮುಂಬಯಿಯಿಂದ ಥಾಣಕ್ಕೆ 33 ಕಿಮೀ ಉದ್ದದ ರೈಲು ಸಂಚಾರ ಆರಂಭವಾಯಿತು. 1854 ರಲ್ಲಿ ಕೋಲ್ಕತ್ತ – ರಾಣಿಗಂಜ್‌ಗಳ ನಡುವೆ ಈಸ್ಟ್ ಇಂಡಿಯ ರೈಲು ಮಾರ್ಗ ನಿರ್ಮಾಣವಾಯಿತು.

19 ನೆಯ ಶತಮಾನದ ಭಾರತದ ರೈಲ್ವೆ ಸಾರಿಗೆಯ ಬೆಳವಣಿಗೆಯನ್ನು ನಾಲ್ಕು ಹಂತಗಳಾಗಿ ವಿಂಗಡಿಸಬಹುದು: ಹಳೆಯ ಖಾಸಗಿ ಪದ್ಧತಿ, ಸರ್ಕಾರದ ಸ್ವಾಮ್ಯಾಡಳಿತ ಪದ್ಧತಿ, ಹೊಸ ಖಾಸಗಿ ಪದ್ಧತಿ ಮತ್ತು ಸೋಡಿ ಷರತ್ತುಗಳ ಪದ್ಧತಿ. ಹಳೆಯ ಖಾಸಗಿ ಪದ್ಧತಿ 1850 ರಿಂದ 1869 ರ ತನಕ ಜಾರಿಯಲ್ಲಿತ್ತು. ಇದರ ಪ್ರಕಾರ, ಸರ್ಕಾರಕ್ಕೆ ರೈಲ್ವೆಗಳ ಒಡೆತನ ಇರದಿದ್ದರೂ ಖಾಸಗಿ ಕಂಪನಿಗಳಿಗೆ ರೈಲುಮಾರ್ಗಗಳ ನಿರ್ಮಾಣಕ್ಕೆ ಉಚಿತವಾಗಿ ಭೂಮಿಯನ್ನು ಕೊಡಲಾಗುತ್ತಿತ್ತು. ಕಂಪನಿಗಳು ತೊಡಗಿಸಿದ ಬಂಡವಾಳಕ್ಕೆ ಕನಿಷ್ಠ ಶೇ. 5 ರಷ್ಟು ಬಡ್ಡಿ ಕೊಡುವುದಾಗಿ ಸರ್ಕಾರ ಖಾತರಿ ನೀಡಿತ್ತು. ಅವುಗಳಿಗೆ ಸಂಭವಿಸಿದ ನಷ್ಟವನ್ನು ಸರ್ಕಾರವೇ ತುಂಬಿಕೊಡಬೇಕಾಗಿತ್ತು. 25 ವರ್ಷಗಳ ತರುವಾಯ ಆ ರೈಲು ಮಾರ್ಗಗಳನ್ನು ಸರ್ಕಾರ ಕೊಂಡುಕೊಳ್ಳಬಹುದಾಗಿತ್ತು. ಸರ್ಕಾರದ ಕಾಗದಪತ್ರಗಳು, ಸೈನ್ಯ ಮತ್ತಿತರ ಸಾಮಗ್ರಿಗಳನ್ನು ರಿಯಾಯಿತಿ ದರದಲ್ಲಿ ರೈಲ್ವೆಗಳು ಸಾಗಿಸಬೇಕಾಗಿತ್ತು. ರೈಲು ದರಗಳನ್ನು ನಿಗದಿಮಾಡುವಾಗ ಕಂಪನಿಗಳು ಸರ್ಕಾರದ ಸಲಹೆ ಪಡೆಯಬೇಕಾಗಿತ್ತು. ನೌಕರರನ್ನು ಬಿಟ್ಟು ಉಳಿದ ಎಲ್ಲ ಮೇಲ್ವಿಚಾರಣೆಯೂ ಸರ್ಕಾರಕ್ಕೆ ಸೇರಿತ್ತು. ದೊರೆತ ಹೆಚ್ಚುವರಿ ಲಾಭದಲ್ಲಿ ಅರ್ಧದಷ್ಟನ್ನು ಸರ್ಕಾರ ತಾನು ಕಂಪನಿಗಳಿಗೆ ನೀಡಿದ ಹಣಕ್ಕಾಗಿ ವಿನಿಯೋಗಿಸಿಕೊಳ್ಳಬಹುದಾಗಿತ್ತು. ಈ ಪದ್ಧತಿ ಯಶಸ್ವಿಯಾಗಲಿಲ್ಲ. ಬಡ್ಡಿಯ ಗ್ಯಾರಂಟಿ ಇರತ್ತಿದ್ದಾದ ಕಾರಣ ಕಂಪನಿಗಳು ಆಡಳಿತ ನಿರ್ವಹಣೆಯಲ್ಲಿ ಅಲಕ್ಷ್ಯತಾಳಿದುವು. ಮಿತವ್ಯಯದ ಮಾರ್ಗಗಳನ್ನು ಅನುಸರಿಸುತ್ತಿರಲಿಲ್ಲ. ಪರಿಣಾಮವಾಗಿ ಮಾರ್ಗ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡಿತು. ಇದು ಸರ್ಕಾರದ ಸ್ವಯಮಾಡಳಿತ ಪದ್ಧತಿ.

ರೈಲು ಸಾರಿಗೆ ಅಭಿವೃದ್ಧಿಯ ನಾಲ್ಕನೆಯ ಘಟ್ಟ 1893 ರಲ್ಲಿ ಆರಂಭವಾಯಿತು. ಸೋಡಿ ಷರತ್ತುಗಳ ಪದ್ಧತಿಯ ಘಟ್ಟವಿದು. ಕಂಪನಿಗಳು ನಡೆಸುತ್ತಿದ್ದ ಮಾರ್ಗಗಳಿಂದ ಗಳಿಸಿದ ಒಟ್ಟು ಲಾಭದಲ್ಲಿ ಶೇಕಡ 2 ರಷ್ಟನ್ನು ಕಂಪನಿಗಳ ಬಂಡವಾಳಕ್ಕಾಗಿ ಕೊಡಬೇಕಿತ್ತು. 19ನೆಯ ಶತಮಾನದ ಕೊನೆಯತನಕ ರೈಲುಸಾರಿಗೆಯಿಂದ ಸರ್ಕಾರ ಹೇಳಿಕೊಳ್ಳುವಂಥ ಲಾಭವನ್ನೇನೂ ಸಂಪಾದಿಸಲಿಲ್ಲ. 1899-1900 ರಲ್ಲಿ ಬಂದ ಲಾಭ ರೂ 11 ಲಕ್ಷ. ಇದರಿಂದ ಹೊಸ ರೈಲುಗಳ ನಿರ್ಮಾಣಕ್ಕೆ ಉತ್ತೇಜನ ದೊರಕಿತು. 20 ನೆಯ ಶತಮಾನದ ಪ್ರಾರಂಭದಲ್ಲಿ ಸ್ಥಿತಿ ಉತ್ತಮ ಗೊಂಡಿತು. ಹೊಸ ಮಾರ್ಗಗಳ ಅವಶ್ಯಕತೆಯೂ ಸ್ಪಷ್ಟವಾಗಿತ್ತು. ಇದನ್ನು ಗಮನಿಸಿದ ಸರ್ಕಾರ 1901 ರಲ್ಲಿ ರಾಬರ್ಟ್‌ಸನ್ ಎಂಬುವರ ನೇತೃತ್ವದಲ್ಲಿ ಒಂದು ಸಮಿತಿ ನೇಮಿಸಿತು. ಇದು ರೈಲು ಸಾರಿಗೆಯ ಸಮಸ್ಯೆಗಳು ಮತ್ತು ಪುರೋಭಿವೃದ್ಧಿ ಇವನ್ನು ಪರಿಶೀಲಿಸಿ 1905ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆ ತನಕ ಲೋಕೋಪಯೋಗಿ ಇಲಾಖೆಯ ಒಂದು ಭಾಗವಾಗಿದ್ದ ರೈಲುಸಾರಿಗೆ ಉದ್ಯಮವನ್ನು ಈ ಸಮಿತಿಯ ಶಿಫರಸುಗಳ ಆಧಾರದಮೇಲೆ ಪ್ರತ್ಯೇಕಿಸಲಾಯಿತು. ಹೊಸ ಮಾರ್ಗ ನಿರ್ಮಾಣದ ಕಾರ್ಯ ತ್ವರಿತವಾಯಿತು, ರೈಲು ಸಾರಿಗೆಯ ಆಡಳಿತವನ್ನು ನಿರ್ವಹಿಸಲು ಒಬ್ಬ ಅಧ್ಯಕ್ಷ ಇಬ್ಬರು ಸದಸ್ಯರು ಮತ್ತು ಒಬ್ಬ ಕಾರ್ಯದರ್ಶಿಯನ್ನು ಒಳಗೊಂಡ ಒಂದು ಮಂಡಲಿಯ ರಚನೆಯಾಯಿತು. ಇವೆಲ್ಲದರ ಫಲವಾಗಿ 1914-19 ರ ನಡುವೆ ರೈಲು ಮಾರ್ಗಗಳ ಉದ್ದ ಸು. 39.852 ಕಿಮೀ ನಿಂದ 2000-01ರಲ್ಲಿ 65,000 ಕಿಮೀ ಉದ್ದಕ್ಕೆ ಹೆಚ್ಚಿತ್ತು.

ಈ ಮಂಡಲಿ ರೈಲು ಸಾರಿಗೆಯನ್ನು ಅಭಿವೃದ್ಧಿಗೊಳಿಸಲು ಕೆಲವು ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ.

1 ಹೊಸದಾಗಿ ಸಾರಿಗೆ ಮತ್ತು ಸಂಪರ್ಕ ಇಲಾಖೆಯೊಂದನ್ನು ಸ್ಥಾಪಿಸುವುದು. 2 ರೈಲ್ವೆ ಆಯವ್ಯಯವನ್ನು ದೇಶದ ಸಾಮಾನ್ಯ ಆಯವ್ಯಯದಿಂದ ಪ್ರತ್ಯೇಕಿಸುವುದು. 3 ರೈಲ್ವೆ ಅಭಿವೃದ್ಧಿಕಾರ್ಯಗಳಿಗೆ ಬೇಕಾಗುವ ಹಣವನ್ನು ಸರ್ಕಾರ ಸಾಲವಾಗಿ ಪಡೆಯುವುದು. 4, ರೈಲ್ವೆ ಆಡಳಿತ ಮಂಡಳಿಯ ಅಧಿಕಾರವ್ಯಾಪ್ತಿ ವಿಸ್ತರಿಸುವುದು. 5, ಸಾರ್ವಜನಿಕರು ಮತ್ತು ವಾಣಿಜ್ಯೋದ್ಯಮಿಗಳ ಹಿತ ದೃಷ್ಟಿಯಿಂದ ಕೇಂದ್ರೀಯ ಹಾಗೂ ಸ್ಥಳೀಯ ಸಲಹಾ ಸಮಿತಿಗಳನ್ನು ರಚಿಸುವುದು, 6 ರೈಲ್ವೆ ದರಗಳನ್ನು ನಿಗದಿಮಾಡಲು ಮಂಡಲಿಗಳನ್ನು ಸ್ಥಾಪಿಸುವುದು. 7 ಸರ್ಕಾರವೇ ರೈಲ್ವೆ ಆಡಳಿತವನ್ನು ವಹಿಸಿಕೊಳ್ಳುವುದು. ಈ ಸಲಹೆಗಳನ್ನು ಸರ್ಕಾರ ಅಂಗೀಕರಿಸಿ ಅನ್ವಯಗೊಳಿಸಿತು.

ಭಾರತದ ರೈಲುಸಾರಿಗೆ ಇತಿಹಾಸದಲ್ಲಿ 1950 ಮಹತ್ತ್ವದ ವರ್ಷ. ಆಗ ರೈಲು ಸಾರಿಗೆ ಸಂಪೂರ್ಣವಾಗಿ ರಾಷ್ಟ್ರೀಕರಣಗೊಂಡು ವಿವಿಧ ವಲಯಗಳ ಮತ್ತು ವ್ಯವಸ್ಥೆಗಳ ಪುನರ್‌ಸಂಘಟನೆಗೆ ಅವಕಾಶ ಉಂಟಾಯಿತು, ರಾಷ್ಟ್ರೀಕರಣದ ಕಾಲಕ್ಕೆ ದೇಶದಲ್ಲಿ 37 ರೈಲ್ವೆ ವ್ಯವಸ್ಥೆಗಳಿದ್ದುವು. ಕೆಲವು ಸರ್ಕಾರದ ಅಧೀನದಲ್ಲೂ ಮತ್ತೆ ಕೆಲವು ದೇಶೀಯ ಸಂಸ್ಥಾನಗಳ ಆಳ್ವಿಕೆಯಲ್ಲೂ ಇನ್ನು ಕೆಲವು ಖಾಸಗಿ ಕಂಪನಿಗಳ ಒಡೆತನದಲ್ಲೂ ಇದ್ದುವು. ಕೆಲವು ದಕ್ಷವಾಗಿ ನಡೆಯುತ್ತಿದ್ದರೆ ಹಲವು ಹೀನ ಸ್ಥಿತಿಯಲ್ಲಿದ್ದುವು. ಕೆಲವು ದೊಡ್ಡವು ಮತ್ತೆ ಕೆಲವು ತೀರ ಸಣ್ಣವು. ಸಾಂಗ್ಲಿ ಸಂಸ್ಥಾನದಲ್ಲಿ ಕೇವಲ 7 ಕಿಮೀ ಉದ್ದದ ಮಾರ್ಗವಿದ್ದರೆ ಹೈದರಾಬಾದ್ ಸಂಸ್ಥಾನದಲ್ಲಿ 2335 ಕಿಮೀ ಉದ್ದದ ಮಾರ್ಗವಿತ್ತು. ರಾಷ್ಟ್ರೀಕರಣದೊಂದಿಗೆ ನೇಮಕಗೊಂಡ ರೈಲ್ವೆಮಂಡಲಿಯ ಸಮಿತಿಯ ಶಿಫಾರಸಿನ ಮೇರೆಗೆ ದೇಶದ ಎಲ್ಲ ರೈಲ್ವೆ ವ್ಯವಸ್ಥೆಗಳನ್ನೂ ಕ್ರೋಡೀಕರಿಸಿ ಅವನ್ನು ಆರು ವಿಭಾಗಗಳಾಗಿ ವಿಂಗಡಿಸಲಾಯಿತು. ಅವುಗಳ ಆಡಳಿತ ನಿರ್ವಹಣೆ ಮತ್ತು ಹಣಕಾಸು ವ್ಯವಹಾರಗಳನ್ನು ಆಯಾ ವಿಭಾಗಗಳಿಗೆ ವಹಿಸಲಾಯಿತು. ಆಮೇಲೆ ಇವನ್ನು 9 ವಿಭಾಗಗಳಾಗಿ ಮತ್ತೆ ವಿಂಗಡಿಸಲಾಗಿತ್ತು. ಅನಂತರ ಆಡಳಿತ ನಿರ್ವಹಣೆ ದೃಷ್ಟಿಯಿಂದ ಇವುಗಳು 16 ವಲಯಗಳಿಗೆ ಹೆಚ್ಚಿಸಲಾಯಿತು.

**ಈ ವಲಯಗಳ ಅಥವಾ ವಿಭಾಗಗಳ ಹೆಸರು ಮತ್ತು ಅವುಗಳ ಪ್ರಧಾನ ಕಛೇರಿ ಸ್ಥಳಗಳನ್ನು ಇಲ್ಲಿ ಕೊಡಲಾಗಿದೆ.**

| ವಲಯ | ಕೇಂದ್ರ ಕಛೇರಿ |
|---|---|
| 1. ಉತ್ತರ ರೈಲ್ವೆ | ನವದೆಹಲಿ |
| 2. ಪಶ್ಚಿಮ ರೈಲ್ವೆ | ಚರ್ಚ್‌ಗೇಟ್, ಮುಂಬಯಿ |
| 3. ಆಗ್ನೇಯ ರೈಲ್ವೆ | ಕೋಲ್ಕತ |
| 4. ದಕ್ಷಿಣ ಕೇಂದ್ರ ರೈಲ್ವೆ | ಸಿಕಂದರಾಬಾದ್ |
| 5. ದಕ್ಷಿಣ ರೈಲ್ವೆ | ಚೆನ್ನೈ |
| 6. ಕೇಂದ್ರ ರೈಲ್ವೆ | ಛತ್ರಪತಿ ಶಿವಾಜಿ ಟರ್ಮಿನಸ್ ಮುಂಬಯಿ |
| 7. ಈಶಾನ್ಯ ರೈಲ್ವೆ | ಗೋರಖ್ ಪುರ್ |
| 8. ಪೂರ್ವ ರೈಲ್ವೆ | ಕೊಲ್ಕತ |
| 9. ಈಶಾನ್ಯ ಗಡಿನಾಡು ರೈಲ್ವೆ | ಮಲಿಗಾಂ, ಗುಹಾಹಟಿ (ಅಸ್ಸಾಮ್) |
| 10. ಪೂರ್ವ ಕರಾವಳಿ ರೈಲ್ವೆ | ಭುವನೇಶ್ವರ |
| 11. ಪೂರ್ವ ಕೇಂದ್ರ ರೈಲ್ವೆ | ಹಾಜಿಪುರ |
| 12. ಉತ್ತರ ಕೇಂದ್ರ ರೈಲ್ವೆ | ಅಲಹಾಬಾದ್ |
| 13. ವಾಯವ್ಯ ರೈಲ್ವೆ | ಜೈಪುರ |
| 14. ನೈರುತ್ಯ ರೈಲ್ವೆ | ಹುಬ್ಬಳ್ಳಿ |
| 15. ಪಶ್ಚಿಮ ಕೇಂದ್ರ ರೈಲ್ವೆ | ಜಬ್ಬಲ್ ಪುರ |
| 16. ಆಗ್ನೇಯ ರೈಲು ಕೇಂದ್ರ | ಬಿಲಾಸ್ ಪುರ |

ಪ್ರಸ್ತುತ ದೇಶದಲ್ಲಿ ರೈಲುಗಾಡಿಗಳ ಮೂರು ಉತ್ಪಾದನ ಘಟಕಗಳಿವೆ: 1 ಚಿತ್ತರಂಜನ್ ಲೋಕೋಮೋಟಿವ್ ವರ್ಕ್ಸ್, 2 ಇಂಟಿಗ್ರೇಲ್ ಕೋಚ್ ಫ್ಯಾಕ್ಟರಿ, ಪೆರಂಬೂರು 3 ಡೀಸಲ್ ಲೋಕೋಮೋಟಿವ್ ವರ್ಕ್ಸ್, ವಾರಾಣಸಿ ಇವುಗಳ ಜೊತೆಗೆ ಬೆಂಗಳೂರಿನಲ್ಲಿ ರೈಲ್ವೆ ಗಾಲಿ ಮತ್ತು ಅಚ್ಚು ತಯಾರಿಸುವ ಘಟಕವಿದೆ. ಲಖನೌದಲ್ಲಿ ರೈಲುಗಳ ಮಾದರಿ ವಿನ್ಯಾಸ ಮತ್ತು ಸಂಶೋಧನೆಗಳ ಘಟಕ ಸ್ಥಾಪನೆಯಾಗಿದೆ.

ಭಾರತದ ರೈಲುಸಾರಿಗೆ ಅಭಿವೃದ್ಧಿಯ ಪರಿಣಾಮಗಳು: ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ಸಾಮಗ್ರಿಗಳನ್ನು ಕಡಿಮೆ ವೆಚ್ಚದಲ್ಲಿ ಮತ್ತು ಶೀಘ್ರವಾಗಿ ದೂರದ ಪ್ರದೇಶಗಳಿಗೆ ಸಾಗಿಸಲು ಇದು ಉತ್ತಮ ಮತ್ತು ದಕ್ಷ ಸಾರಿಗೆ ಮಾಧ್ಯಮ ರೈಲುಸಾರಿಗೆ. ಅಭಿವೃದ್ಧಿ ದೇಶಾದ್ಯಂತ ಹಲವಾರು ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾಗಿದೆ. ಮುಂಬಯಿಯ ಹತ್ತಿಗಿರಣಿ ಕೈಗಾರಿಕೆ, ಬಂಗಾಲದ ಸೆಣಬು ಕೈಗಾರಿಕೆ, ಬಿಹಾರದ ಕಲ್ಲಿದ್ದಲು ಕೈಗಾರಿಕೆ, ಪ.ಬಂಗಾಲ, ಅಸ್ಸಾಮ್ ಮತ್ತು ಕೇರಳದ ಸಾಂದ್ರತೋಟ (ಪ್ಲಾಂಟೇಷನ್) ಬಹಳಮಟ್ಟಿಗೆ ರೈಲುಸಾರಿಗೆಯಿಂದ ಅನುಕೂಲಕರವಾಗಿದೆ.

3 ಜಲಸಾರಿಗೆ: 19 ನೆಯ ಶತಮಾನದ ಅಂತ್ಯದವರೆಗೆ ಭಾರತದ ಸಾರಿಗೆ ವ್ಯವಸ್ಥೆಯಲ್ಲಿ ಒಳನಾಡು ಜಲಸಾರಿಗೆ ಪ್ರಮುಖ ಪಾತ್ರ ವಹಿಸಿತ್ತು. ಆದರೆ ರೈಲುಸಾರಿಗೆಯ ವಿಸ್ತರಣೆ, ಸಾರಿಗೆಯ ಪ್ರಗತಿ ಮತ್ತು ಜಲವಿದ್ಯುಚ್ಛಕ್ತಿ ಅಭಿವೃದ್ಧಿಯ ಪರಿಣಾಮವಾಗಿ ಒಳನಾಡು ಜಲಸಾರಿಗೆಯ ಮಹತ್ತ್ವ ಕ್ರಮೇಣ ಕಡಿಮೆಯಾಗುತ್ತ ಬಂದಿದೆ. ಆದರೂ ಅಸ್ಸಾಮ್, ಪಶ್ಚಿಮ ಬಂಗಾಲ ಮತ್ತು ಬಿಹಾರ ರಾಜ್ಯಗಳಲ್ಲಿ ಇಂದಿಗೂ ನದಿ ಮತ್ತು ಕಾಲುವೆಗಳು ಮುಖ್ಯ ಸಾಗಣೆ ಮಾಧ್ಯಮಗಳಾಗಿ ಉಳಿದುಕೊಂಡಿವೆ. ಅಸ್ಸಾಮ್ ಮತ್ತು ಕೋಲ್ಕತಗಳ ನಡುವೆ ವರ್ಷಂಪ್ರತಿ ನಡೆಯುವ ಸು. 25 ಲಕ್ಷ ಟನ್ನುಗಳ ಸರಕುಸಾಗಣೆಯಲ್ಲಿ ಸು. ಅರ್ಧದಷ್ಟು ನದಿ ಮತ್ತು ಕಾಲುವೆಗಳ ಮೂಲಕವೇ ನಡೆಯುತ್ತದೆ. ಕೇರಳದಲ್ಲೂ ಬಹಳಷ್ಟು ಒಳನಾಡು ಪ್ರಯಾಣ ಮತ್ತು ಸರಕುಸಾಗಣೆ ನದಿ ಮತ್ತು ಸಿಹಿನೀರು ಕಾಲುವೆಗಳ ಮೂಲಕ ನಡೆಯುತ್ತದೆ. ಒರಿಸ್ಸ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲೂ ಒಳನಾಡು ಜಲಮಾರ್ಗಗಳು ಸರಕು ಸಾಗಣೆಯಲ್ಲಿ ಗಣನೀಯ ಪಾಲು ಪಡೆದಿದೆ.

ಭಾರತದಲ್ಲಿ ಒಟ್ಟು ಸು. 14150 ಕಿಮೀ ಉದ್ದದ ಒಳನಾಡು ಜಲಮಾರ್ಗಗಳಿವೆ. ಅವುಗಳಲ್ಲಿ 3500 ಕಿಮೀ ಉದ್ದದ ಮಾರ್ಗಗಳು ಯಾಂತ್ರಿಕ ದೋಣಿಸಂಚಾರಕ್ಕೆ ಯೋಗ್ಯವಾಗಿವೆ. ಗಂಗಾ, ಬ್ರಹ್ಮಪುತ್ರ ಮತ್ತು ಅವುಗಳ ಉಪನದಿಗಳು, ಕೃಷ್ಣ, ಗೋದಾವರಿ ಮತ್ತು ಅವುಗಳ ಕಾಲುವೆಗಳು, ಪಶ್ಚಿಮತೀರದ ಸಿಹಿನೀರು ಕಾಲುವೆಗಳು, ಕೇರಳದ ಕಾಲುವೆಗಳು, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳ ಬಕ್ಕಿಂಗ್‌ಹ್ಯಾಮ್ ಕಾಲುವೆ, ಒರಿಸ್ಸದ ದಖಿನ್ ಕಾಲುವೆ ಗೋವಾದ ಮಾಂಡವೀ ಮತ್ತು ಜುವಾರೀ ನದಿಗಳು– ಇಲ್ಲಿ ವರ್ಷ ಪೂರ್ತಿ ನೀರು ಹರಿಯುವುದರಿಂದ ಅವು ದೊಡ್ಡ ದೋಣಿಗಳ ಸಂಚಾರಕ್ಕೆ ಯೋಗ್ಯವಾಗಿವೆ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಸಾರಿಗೆ ಇಲಾಖೆ ರೈಲು ಸಾರಿಗೆ ಮೇಲಿನ ಒತ್ತಡ ಕಡಿಮೆಮಾಡುವ ಉದ್ದೇಶದಿಂದ ಒಳನಾಡು ಜಲಮಾರ್ಗಗಳ ಅಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ಕೈಗೊಂಡಿತು. ಆದರೂ ಹೇಳಿಕೊಳ್ಳುವಂಥ ಸುಧಾರಣೆ ಕಂಡುಬರಲಿಲ್ಲ. ಸ್ವಾತಂತ್ರ್ಯ ಬಂದ ತರುವಾಯ ಒಂದನೆಯ ಮತ್ತು ಎರಡನೆಯ ಯೋಜನೆಗಳ ಅವಧಿಯಲ್ಲಿ ಒಳನಾಡು ಜಲಸಾರಿಗೆ ಅಭಿವೃದ್ಧಿಗೆ ಅಷ್ಟಾಗಿ ಗಮನ ಹರಿಸಲಿಲ್ಲ. ಈ ಉದ್ದೇಶಕ್ಕಾಗಿ ಕೇವಲ 1 ಕೋಟಿಗೂ ಕಡಿಮೆ ಹಣವನ್ನೂ ವೆಚ್ಚಮಾಡಲಾಯಿತು. ಒಂದನೆಯ ಯೋಜನೆಯ ಮುಖ್ಯ ಸಾಧನೆಯಾಗಿ 1952 ರಲ್ಲಿ ಕೇಂದ್ರ ಸರ್ಕಾರ ಮತ್ತು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಲ ಮತ್ತು ಅಸ್ಸಾಮ್ ರಾಜ್ಯಗಳ ಜಂಟಿ ಜವಾಬ್ದಾರಿಯಮೇಲೆ ಗಂಗಾ-ಬ್ರಹ್ಮಪುತ್ರ ಜಲಸಾರಿಗೆ ಮಂಡಳಿ ಸ್ಥಾಪಿತವಾಯಿತು. ಇದರ ಆಶ್ರಯದಲ್ಲಿ ಗಂಗಾ ಮೇಲ್ದಂಡೆ ಯೋಜನೆ, ಅಸ್ಸಾಮಿನ ಫೀರ್ ನದಿ ಯೋಜನೆ ಮತ್ತು ಬ್ರಹ್ಮಪುತ್ರ ನದಿಯಲ್ಲಿ ಪ್ರಯಾಣಿಕರ ದೋಣಿ ಸಂಚಾರ ಕಾರ್ಯ ಪ್ರಾರಂಭವಾದವು. 1959 ರಲ್ಲಿ ನೇಮಕಗೊಂಡ ಒಳನಾಡು ಜಲಸಾರಿಗೆ ನಿಗಮದಿಂದ ಅಭಿವೃದ್ಧಿ ಕಾರ್ಯ ಕ್ರಮಗಳು ರೂಪುಗೊಂಡವು. ಯೋಜನಾವಧಿಯಲ್ಲಿ ಕೇಂದ್ರ ನಿರ್ವಹಿತ ಕಾರ್ಯಗಳಿಗಾಗಿ ರೂ 6 ಕೋಟಿಯನ್ನೂ ರಾಜ್ಯ ನಿರ್ವಹಿತ

ಕಾರ್ಯಗಳಿಗಾಗಿ ರೂ. 1.5 ಕೋಟಿಯನ್ನೂ ವೆಚ್ಚಮಾಡಲಾಯಿತು. ನಾಲ್ಕನೆಯ ಯೋಜನೆ ಒಳನಾಡು ಜಲ ಸಾರಿಗೆ ಅಭಿವೃದ್ಧಿಗಾಗಿ ರೂ 9 ಕೋಟಿ ಒದಗಿಸಿತು. ಈ ಹಣದಲ್ಲಿ ರೂ 5 ಕೋಟಿಯನ್ನು ಕೇಂದ್ರೀಯ ಒಳನಾಡು ಜಲಮಾರ್ಗ ಮಂಡಲಿ ಮತ್ತು ಪಾಂಡು ಹಾಗೂ ಜೋಗಿಘೋಪ ಬಂದರುಗಳ ಅಭಿವೃದ್ಧಿ ಸಂಸ್ಥೆಗಳ ಮೂಲಕ ವೆಚ್ಚಮಾಡಲಾಯಿತು. ಕೇಂದ್ರೀಯ ಒಳನಾಡು ಜಲಮಾರ್ಗ ಮಂಡಲಿ ಹಾಲ್ದಿಯ, ಬಾಂಗ್ಲಾದೇಶ ಮತ್ತು ಅಸ್ಸಾಮ್‌ಗಳ ನಡುವೆ ಜಲಮಾರ್ಗ ಸರಕು ಸಾಗಣೆ ಕಾರ್ಯವನ್ನು ನಿರ್ವಹಿಸುತ್ತಿರುವುದರ ಜೊತೆಗೆ ಹಾಲ್ದಿಯದಿಂದ ತ್ರಿಪುರದವರೆಗೆ ನದಿ ಮತ್ತು ರಸ್ತೆ ಸಾಗಣೆ ಕಾರ್ಯವನ್ನೂ ನೋಡಿಕೊಳ್ಳುತ್ತದೆ. ಕೋಲ್ಕತ್ತ ಬಂದರಿಗೆ ಸಹಾಯಕವಾಗಿ ಭಾಗೀರಥಿ ನದಿಯಲ್ಲಿ ಹೂಳೆತ್ತುವುದು ನೌಕೆಗಳ ದುರಸ್ತು ಮತ್ತು ಪಾಂಡು ಹಾಗೂ ಜೋಗಿಘೋಪ ಬಂದರುಗಳು ನಿರ್ವಹಣೆ–ಇವು ಮಂಡಲಿಯ ಇತರ ಮುಖ್ಯ ಕಾರ್ಯಗಳು. ನಾಲ್ಕನೆಯ ಯೋಜನೆಯ ಇನ್ನೊಂದು ಮುಖ್ಯ ಸಾಧನೆ ಎಂದರೆ ಫರಕ್ಕಾ ಯೋಜನೆ. ಪ್ರಾಧಾನವಾಗಿ ಕೋಲ್ಕತ್ತ ಬಂದರಿನ ನೌಕಾಸಂಚಾರ ಸಾಮರ್ಥ್ಯ ಹೆಚ್ಚಿಸುವುದಕ್ಕಾಗಿ ಕೈಗೊಂಡ ಈ ಯೋಜನೆ 1918 ರಲ್ಲಿ ಪೂರ್ಣ ಗೊಂಡಿತು. ಫರಕ್ಕಾ ಯೋಜನೆಯ ಆಶ್ರಯದಲ್ಲಿ ರಾಷ್ಟ್ರೀಯ ಜಲಮಾರ್ಗವೊಂದರ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ; ಫರಕ್ಕಾದಿಂದ ಹಾಲ್ದಿಯಾದವರೆಗೆ ಗಂಗಾ, ಭಾಗಿರಥಿ ಮತ್ತು ಹೂಗ್ಲಿ ನದಿಗಳನ್ನು ಒಳಗೊಂಡಂತೆ, ಯಾಂತ್ರೀಕೃತ ಸಣ್ಣ ನೌಕಾಸಂಚಾರಕ್ಕೆ ಯೋಗ್ಯವಾದ ಸರ್ವಋತು ಜಲ ಮಾರ್ಗ ನಿರ್ಮಾಣವಾಗಿದೆ. ಫರಕ್ಕಾ ಮತ್ತು ಅಲಹಾಬಾದ್‌ಗಳ ನಡುವೆ ಜಲ ಮಾರ್ಗ ನಿರ್ಮಿಸುವ ಸಾಧ್ಯತೆಗಳನ್ನು ಅನ್ವೇಷಿಸಲಾಗುತ್ತಿದೆ. ಇದು ಸಾಧ್ಯವಾದರೆ ಅಲಹಾಬಾದ್ ಮತ್ತು ಕೋಲ್ಕತಗಳ ನಡುವೆ ಸುದೀರ್ಘ ಜಲಮಾರ್ಗವೊಂದು ನಿರ್ಮಾಣವಾದಂತಾಗುತ್ತದೆ.

ನೌಕಾಸಾರಿಗೆ: 6083 ಕಿಮೀ ಉದ್ದದ ಕರಾವಳಿಯನ್ನು ಪಡೆದಿರುವ ಭಾರತದಲ್ಲಿ ನೌಕಾಸಾರಿಗೆಯ ಅಭಿವೃದ್ಧಿಗೆ ವಿಪುಲ ಅವಕಾಶಗಳುಂಟು. ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತೀಯ ನೌಕಾಸಾರಿಗೆಯ ಅಭಿವೃದ್ಧಿಗೆ ಉತ್ತೇಜನವಿರಲಿಲ್ಲ. ದೇಶೀಯ ಹಡುಗು ಕಂಪನಿಗಳು ವಿದೇಶಿ ಕಂಪನಿಗಳ ತೀವ್ರ ಪೈಪೋಟಿ ಎದುರಿಸಬೇಕಾಗಿತ್ತು. ಮೊದಲಿನವು ನಿರ್ವಹಣಾ ವೆಚ್ಚ ಭರಿಸಲು ಹೆಣಗಾಡಬೇಕಾದ ಪರಿಸ್ಥಿತಿಯಿದ್ದರೆ ಎರಡನೆಯವು ಸಾಗಣೆ ದರ ಇಳಿಸಿ ಸ್ವಾಮ್ಯ ಸ್ಥಾಪನೆಗೆ ಮುಂದಾಗುತ್ತಿದ್ದುವು. ಸರ್ಕಾರವೂ ಭಾರತೀಯ ಕಂಪನಿಗಳ ಬಗ್ಗೆ ಅಷ್ಟೇ ಉದಾಸೀನವಾಗಿತ್ತು. ಕಡಿಮೆ ಸಾಗಣೆ ಸಾಮರ್ಥ್ಯ ಹೊಂದಿದ್ದು ಭಾರತೀಯ ಹಡುಗುಗಳಿಗೆ ಬಂದರು ಸೌಕರ್ಯಗಳು ಸಾಕಷ್ಟು ದೊರೆಯುತ್ತಿರಲಿಲ್ಲ. ಅವುಗಳದೇ ಆದ ಹಡಗು ನಿರ್ಮಾಣಕೇಂದ್ರ ಇರಲಿಲ್ಲ. ಭಾರತೀಯ ಹಡಗುಗಳು ನೆರೆಯ ಕರಾವಳಿ ಪ್ರದೇಶಗಳನ್ನು ಬಿಟ್ಟು ಮುಂದೆ ಸಂಚರಿಸುತ್ತಿರಲಿಲ್ಲ. ಮುಖ್ಯವಾಗಿ, ನಾಲ್ಕು ಮಾರ್ಗಗಳಿಗೆ ಮಾತ್ರ ಸಂಚಾರ ಸೀಮಿತವಾಗಿತ್ತು. 1 ಭಾರತ ಮತ್ತು ಮಯನ್ಮಾರ್‌ಗಳ ನಡುವೆ; 2 ಭಾರತ ಉಪಖಂಡದ ಪೂರ್ವ ಪಶ್ಚಿಮ ಕರಾವಳಿಗಳ ನಡುವೆ, ಈ ಮಾರ್ಗ ಶ್ರೀಲಂಕ ಬಂದರುಗಳನ್ನೂ ಒಳಗೊಂಡಿತ್ತು; 3 ಪಶ್ಚಿಮ ಕರಾವಳಿಯ ಕರಾಚಿ ಮತ್ತು ಕೊಲಂಬೊಗಳ ನಡುವೆ; 4 ಕೋಲ್ಕತ ಮತ್ತು ದಕ್ಷಿಣ ಭಾರತದ ಪೂರ್ವ ಕರಾವಳಿಯ ಬಂದರುಗಳ ನಡುವೆ.

ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಭಾರತದ ನೌಕಾ ಸಾರಿಗೆ ಹಿಂಜರಿತ ಅನುಭವಿಸಬೇಕಾಯಿತು. ಭಾರತೀಯ ಹಡಗು ಕಂಪನಿಗಳ ಕಲಾಪಗಳು ಸ್ಥಗಿತಗೊಂಡವು. ಕೆಲವು ಸಣ್ಣ ಹಡಗುಗಳನ್ನು ಬಿಟ್ಟರೆ ಪ್ರಯಾಣಿಕರ ಹಡಗುಗಳೂ ಸೇರಿದಂತೆ ಬಹುತೇಕ ಹಡಗುಗಳು ಯುದ್ಧೋದ್ದೇಶಗಳಿಗಾಗಿ ಒದಗಿಬರಬೇಕಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ವಿದೇಶೀ ಕಂಪನಿಗಳ ತೀವ್ರತರ ಸ್ಪರ್ಧೆ ಎದುರಿಸುವ ಸಾಮರ್ಥ್ಯ ಹೊಂದಿದ್ದ ಏಕಮಾತ್ರ ಭಾರತೀಯ ಹಡಗು ಸಂಸ್ಥೆ ಸಿಂಧಿಯಾ ಸ್ಟೀಮ್ ನ್ಯಾವಿಗೇಷನ್ ಕಂಪನಿ, ಈ ಕಂಪನಿಗೆ ಸೇರಿದ 5,934 ಟನ್ ಸಾಗಣೆ ಸಾಮರ್ಥ್ಯ ಹೊಂದಿದ್ದ ಲಾಯಲ್ಟಿ ಎಂಬ ಹೆಸರಿನ ಭಾರತದ ಪ್ರಪ್ರಥಮ ಬೃಹತ್ ನೌಕೆ 1919 ಏಪ್ರಿಲ್ 5 ರಂದು ಭಾರತ ಬ್ರಿಟನ್ ನಡುವೆ ಸಂಚಾರ ಆರಂಭಿಸಿತು. ಭಾರತದ ಮೊತ್ತ ಮೊದಲನೆಯ ನೌಕಾನಿರ್ಮಾಣಾಂಗವನ್ನು ನಿರ್ಮಿಸಿದ ಹಿರಿಮೆಯೂ ಈ ಕಂಪನಿಯದು. ವಿಶಾಖಪಟ್ಟಣದಲ್ಲಿ 1941 ರಲ್ಲಿ ನಿರ್ಮಿತವಾದ ನೌಕಾಂಗಣ ಇಂದು ಭಾರತ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ. ಇಂದಿಗೂ ಖಾಸಗೀ ಕ್ಷೇತ್ರದಲ್ಲಿ ಅಗ್ರಗಣ್ಯ ಸ್ಥಾನಪಡೆದಿರುವ ಈ ಹಡಗು ಕಂಪನಿಯ ಗೌರವಾರ್ಥ 1965 ರಿಂದ ಪ್ರತಿವರ್ಷವೂ ಏಪ್ರಿಲ್ 5 ನೆಯ ದಿನಾಂಕವನ್ನು ರಾಷ್ಟ್ರೀಯ ನೌಕಾದಿನವಾಗಿ ಆಚರಿಸಲಾಗುತ್ತಿದೆ. ಆದರೂ 1944 ರ ತನಕ ಭಾರತದ ನೌಕಾಸಾರಿಗೆ ಸಾಧಿಸಿದ ಪ್ರಗತಿ ಅತ್ಯಲ್ಪ.

1947 ಆಗಸ್ಟ್ ತಿಂಗಳಿನಲ್ಲಿ ಭಾರತ ಕೇವಲ 59 ನೌಕೆಗಳನ್ನು ಹೊಂದಿತ್ತು. ಸಾಗಣೆ ಸಾಮರ್ಥ್ಯ ಸು. 2 ಲಕ್ಷ ಜಿಆರ್ ಟಿ (ಗ್ರಾಸ್ ರಿಜಿಸ್ಟರ್ಡ್ ಟನ್ನೇಜ್: ಸ್ಥೂಲ ನೋಂದಾಯಿತ ಟನ್ನೇಜ್). ಆ ವರ್ಷ ನೌಕಾಸಾರಿಗೆಯ ಅಭಿವೃದ್ಧಿಗಾಗಿ ನೀತಿ ನಿಯಮಗಳನ್ನು ರೂಪಿಸಲು ಭಾರತ ಸರ್ಕಾರ ನೌಕಾನೀತಿ ಸಮಿತಿಯನ್ನು ನೇಮಿಸಿತು. ಭಾರತದ ಆರ್ಥಿಕ ಬೆಳವಣಿಗೆಯಾದಂತೆ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟುಗಳ ಪ್ರಮಾಣ ನಿರಂತರವಾಗಿ ಹೆಚ್ಚಾಗಿರುವುದರಿಂದ ಇದಕ್ಕಾಗಿ ವಿದೇಶೀ ಹಡಗು ಕಂಪನಿಗಳನ್ನು ಆಶ್ರಯಿಸುವುದು ಒಳ್ಳೆಯದಲ್ಲವೆಂದು ಸಮಿತಿ ಅಭಿಪ್ರಾಯಪಟ್ಟಿತು. ರಾಷ್ಟ್ರದ ಹಿತದೃಷ್ಟಿಯಿಂದ, ಸಂಪೂರ್ಣವಾಗಿ ಅಲ್ಲದಿದ್ದರೂ ಒಂದು ಗಣನೀಯ ಪ್ರಮಾಣದ ವಿದೇಶಿಯ ವ್ಯಾಪಾರ ಸ್ವಂತ ಹಡಗುಗಳ ಮೂಲಕ ನಡೆಯುವಂತಾಗಬೇಕು. ಇದರಿಂದ ವಿದೇಶೀ ಕಂಪನಿಗಳಿಗೆ ತೆರುವ ಭಾರಿ ಮೊತ್ತದ ವಿದೇಶೀ ವಿನಿಮಯ ಉಳಿತಾಯವಾಗುತ್ತದೆ ಇಂಥ ಮುಖ್ಯ ಕ್ಷೇತ್ರದಲ್ಲಿ ಅನ್ಯರಾಷ್ಟ್ರಗಳನ್ನು ಅವಲಂಬಿಸುವುದರಿಂದ ಯುದ್ಧವೇ ಮೊದಲಾದ ಸಂದರ್ಭಗಳಲ್ಲಿ ತೊಂದರೆಗಳು ಉದ್ಭವವಾಗುತ್ತವೆ ಎಂಬುದನ್ನು ಪರಿಗಣಿಸಿ ನೌಕಾನೀತಿ ಸಮಿತಿ ಸರ್ಕಾರಕ್ಕೆ ಒಪ್ಪಿಸಿದ ಶಿಫಾರಸುಗಳು ಇವು: 1 ಕರಾವಳಿ ಪ್ರದೇಶದ ವ್ಯಾಪಾರ ಸಂಪೂರ್ಣವಾಗಿ ಭಾರತದ ವಶಕ್ಕೆ ಬರಬೇಕು. 2 ಮಯನ್ಮಾರ್, ಶ್ರೀಲಂಕ ಮೊದಲಾದ ನೆರೆಯ ನಾಡುಗಳೊಂದಿಗೆ ನಡೆಯುವ ವ್ಯಾಪಾರದಲ್ಲಿ ಶೇ. 75 ರಷ್ಟು ಮತ್ತು ವಿದೇಶೀ ವ್ಯಾಪಾರದಲ್ಲಿ ಶೇ. 50 ರಷ್ಟು ಪಾಲನ್ನು ಭಾರತ ಪಡೆಯುವಂತಾಗಬೇಕು. 3 ಭಾರತದ ನೌಕಾ ಸಾಮರ್ಥ್ಯ 1950 ರ ವೇಳೆಗೆ 9 ಲಕ್ಷ ಜಿಆರ್‌ಟಿಗಳಿಗೂ 1955–56ರ ವೇಳೆಗೆ 20 ಲಕ್ಷ ಜಿಆರ್‌ಟಿಗಳಿಗೂ ವೃದ್ಧಿಯಾಗಬೇಕು 4 ನೌಕಾ ಸೌಲಭ್ಯಗಳನ್ನು ವಿಸ್ತರಿಸುವುದರ ಮೂಲಕ ವಿದೇಶಿಹಡಗು ಕಂಪನಿಗಳು ಅನುಸರಿಸುವ ಇಳಿತಾಯ ಮತ್ತು ವಿಳಂಬಿತ ಸೋಡಿಕ್ರಮಗಳ ವಿರುದ್ಧ ದೇಶೀಯ ಹಡಗು ಕಂಪನಿಗಳಿಗೆ ರಕ್ಷಣೆ ನೀಡಬೇಕು. ಈಶಿಫಾರಸುಗಳು 1951ರಲ್ಲಿ ಪ್ರಾರಂಭವಾದ ಪಂಚವಾರ್ಷಿಕ ಯೋಜನೆಗಳ ಮೂಲಕ ಹಂತಹಂತವಾಗಿ ಕಾರ್ಯಗತವಾಗುತ್ತಿವೆ.

ಒಂಬತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ 12 ಪ್ರಮುಖ ಬಂದರುಗಳಿಂದ 344 ಮಿ. ಟನ್ ಸರಕು ಸಾಮಗ್ರಿಗಳನ್ನು ರವಾನಿಸುವ ಸಾಮರ್ಥ್ಯ ಹೊಂದಿದ್ದು, ಇದನ್ನು 10ನೆಯ ಯೋಜನೆಯಲ್ಲಿ 415 ಮಿ. ಟನ್‌ಗಳ ಸಾಮರ್ಥ್ಯಕ್ಕೆ ಹೆಚ್ಚಿಸಲು ಅಭಿವೃದ್ಧಿ ಪಡಿಸಲಾಗಿದೆ.

ಹಡಗು ಕಂಪನಿಗಳು: ನೌಕಾಸಾರಿಗೆಯ ಮಹತ್ತ್ವವನ್ನು ಮನಗಂಡಿರುವ ಭಾರತ ಸರ್ಕಾರ ಅದರ ಅಭಿವೃದ್ಧಿಗಾಗಿ ಎರಡು ನೌಕಾ ನಿಗಮಗಳನ್ನು ಸ್ಥಾಪಿಸಿತು. ಆಸ್ಟ್ರೇಲಿಯ ಮತ್ತು ದೂರ ಪ್ರಾಚ್ಯ ದೇಶಗಳೊಂದಿಗಿನ ವಾಣಿಜ್ಯ ನಿರ್ವಹಣೆಗಾಗಿ 1956 ರಲ್ಲಿ ಪೌರಸ್ತ್ಯ ನೌಕಾ ನಿಗಮ ಸ್ಥಾಪಿತವಾಯಿತು. ಇದೇ ವರ್ಷ ಅಸ್ತಿತ್ವಕ್ಕೆ ಬಂದ ಪಾಶ್ಚಾತ್ಯ ನೌಕಾ ನಿಗಮ ಭಾರತ–ಪರ್ಷಿಯಾ ಖಾರಿ. ಭಾರತ–ಕೆಂಪು ಸಮುದ್ರ ಮತ್ತು ಭಾರತ ಪೋಲೆಂಡ್ ಮಾರ್ಗವಾಗಿ ನಡೆಯುವ ವಾಣಿಜ್ಯವನ್ನು ನಿರ್ವಹಿಸುತ್ತಿತ್ತು. 1961 ರಲ್ಲಿ ಎರಡೂ ನಿಗಮಗಳನ್ನು ಒಗ್ಗೂಡಿಸಿ ಭಾರತ ನೌಕಾಸಾರಿಗೆ ನಿಗಮವನ್ನು ಸ್ಥಾಪಿಸಲಾಯಿತು. ನಿಗಮದ ಅಧಿಕೃತ ಬಂಡವಾಳ ರೂ 35 ಕೋಟಿ, ಪಾವತಿಯಾದ ಬಂಡವಾಳ ರೂ 27.95 ಕೋಟಿ. 1971 ರಲ್ಲಿ ಜಯಂತಿ ಎಂಬ ಹಡಗು ಕಂಪನಿಯನ್ನು ನಿಗಮದ ಸಹಾಯಕ ಸಂಸ್ಥೆಯಾಗಿ ಪರಿವರ್ತಿಸಲಾಯಿತು. 1972 ಜನವರಿ 1 ರಂದು ಜಯಂತಿ ಕಂಪನಿ ಈ ನಿಗಮದಲ್ಲಿ ವಿಲೀನಗೊಂಡಿತು. ಸರ್ಕಾರಿ ವಲಯದ ಇನ್ನೊಂದು ಹಡಗು ಕಂಪನಿ ಎಂದರೆ ಮೊಗಲ್ ಲೈನ್ಸ್ ಲಿಮಿಟೆಡ್ ಎಂಬುದು. ಈ ಕಂಪನಿ ಮೂಲತಃ ಬಾಂಬೆ ಅಂಡ್ ಪರ್ಷಿಯನ್ ಸ್ಟೀಮ್ ನ್ಯಾವಿಗೇಷನ್ ಲಿಮಿಟೆಡ್ ಎಂಬ ಹೆಸರಿನಿಂದ 1877 ರಲ್ಲಿ ಮುಂಬಯಿಯಲ್ಲಿ ಸ್ಥಾಪಿತವಾಗಿತ್ತು. ಇದು ಭಾರತದ ಅತ್ಯಂತ ಹಿರಿಯ ಹಡಗು ಕಂಪನಿ. 1960 ರಲ್ಲಿ ಭಾರತ ಸರ್ಕಾರ ಶೇಕಡ 92 ರಷ್ಟು ಷೇರುಗಳನ್ನು ಕೊಂಡು ಕಂಪನಿಯನ್ನು ತನ್ನ ಒಡೆತನಕ್ಕೆ ತೆಗೆದುಕೊಂಡಿತು. 1983ರಲ್ಲಿ ಮೊಘಲ್ ಲೈನ್ಸ್ ಸಂಸ್ಥೆಯಲ್ಲಿ 2,03,659 ಜಿ.ಆರ್.ಟಿ ಸಾಮರ್ಥ್ಯವುಳ್ಳ 17 ಹಡಗುಗಳಿದ್ದುವು. ಪ್ರಧಾನವಾಗಿ ಹಜ್ ಯಾತ್ರಿಕರನ್ನು ಒಯ್ಯುವ ಕಾರ್ಯದಲ್ಲಿ ತೊಡಗಿದ್ದ ಕಂಪನಿ ಇಂದು ತನ್ನ ಕಲಾಪಗಳನ್ನು ವಿಸ್ತರಿಸಿಕೊಂಡಿದೆ; ಖಾರಿ ರಾಷ್ಟ್ರಗಳೊಡನೆ ನಡೆಯುವ ವಾಣಿಜ್ಯವನ್ನು ನಿರ್ವಹಿಸುತ್ತಿದೆ. ಪ್ರಯಾಣಿಕರ ಹಡಗುಗಳನ್ನೂ ಹೊಂದಿದೆ.

ಸಿಂಧಿಯಾ ಸ್ಟೀಮ್ ನ್ಯಾವಿಗೇಷನ್ ಕಂಪನಿ ಅತ್ಯಂತ ದೊಡ್ಡ ಖಾಸಗಿ ಹಡಗು ಕಂಪನಿ. ಇದನ್ನು ಭಾರತದ ನೌಕಾಸಾರಿಗೆಯ ಮೂಲ ಆದ್ಯಪ್ರವರ್ತಕ ಸಂಸ್ಥೆ ಎಂದು ಪರಿಗಣಿಸಲಾಗಿದೆ. ಈ ಕಂಪನಿಯಲ್ಲದೆ ಜೊತೆಗೆ ಇನ್ನೂ 64 ಖಾಸಗಿ ಹಡಗು ಕಂಪನಿಗಳು ಭಾರತದಲ್ಲಿವೆ.

ಹಡಗು ನಿರ್ಮಾಣ: ಬಂದರುಗಳು, ನೌಕಾಯಾನ, ನೌಕೆಗಳ ನಿರ್ಮಾಣ ದುರಸ್ತಿ ಹಾಗೂ ನೌಕಾಸಾರಿಗೆ ಸಾಮಗ್ರಿಗಳ ತಯಾರಿಕೆ ಇವೆಲ್ಲವೂ ನೌಕಾಸಾರಿಗೆ ವ್ಯವಸ್ಥೆಯಲ್ಲಿ ಸಮಾವೇಶಗೊಳ್ಳುತ್ತದೆ. ಭಾರತದಲ್ಲಿ ಇಂದು ನಾಲ್ಕು ಹಡಗು ನಿರ್ಮಾಣ ಕೇಂದ್ರಗಳಿವೆ: ಕೋಲ್ಕತ್ತದಲ್ಲಿರುವ ಗಾರ್ಡನ್ ರೀಚ್ ಷಿಪ್ ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್, ವಿಶಾಖಪಟ್ಟಣದಲ್ಲಿರುವ ಹಿಂದೂಸ್ಥಾನ್ ಷಿಪ್‌ಯಾರ್ಡ್, ಕೇರಳದಲ್ಲಿರುವ ಕೊಚ್ಚಿ ಷಿಪ್‌ಯಾರ್ಡ್, ಮುಂಬಯಿಯಲ್ಲಿರುವ ಮಝಗಾಂವ್ ಡಾಕ್ ಇವೆಲ್ಲ ಸರ್ಕಾರಿವಲಯದವು. ಗಾರ್ಡನ್ ರೀಚ್ ಕೇಂದ್ರ ಇಂದು 26,000 DWT ಸಾಮರ್ಥ್ಯದ ನೌಕೆಗಳನ್ನು ನಿರ್ಮಿಸಬಲ್ಲದು. ಇಲ್ಲಿಯ ತನಕ ಇದು ಸಣ್ಣ ಪುಟ್ಟ ನೌಕೆಗಳನ್ನು ಮತ್ತು ಬಂದರುಗಳಲ್ಲಿ ಹೂಳೆತ್ತುವ ಯಂತ್ರೋಪಕರಣಗಳನ್ನು ತಯಾರಿಸುತ್ತಿತ್ತು. ಕೊಚ್ಚಿಕೇಂದ್ರ

75,000 DWT ಸಾಮರ್ಥ್ಯದ ಸರಕುಸಾಗಣೆ ಹಡಗುಗಳನ್ನು ಉತ್ಪಾದಿಸುತ್ತಿದೆ. ಈ ಕೇಂದ್ರದಲ್ಲಿರುವ ನಿರ್ಮಾಣ ಕಟ್ಟೆ ಮತ್ತು ದುರಸ್ತಿ ಕಟ್ಟೆಗಳು ಭಾರತದಲ್ಲೇ ಅತ್ಯಂತ ದೊಡ್ಡವು. ಇವು ಅನುಕ್ರಮವಾಗಿ 85,000 ಮತ್ತು 1,00,000 DWT ಸಾಮರ್ಥ್ಯವುಳ್ಳ ನೌಕೆಗಳಿಗೆ ಜಾಗ ಒದಗಿಸುತ್ತವೆ. ಈ ಕೇಂದ್ರ 1981ರಲ್ಲಿ ರಾಣಿ ಪದ್ಮಿನಿ ಮತ್ತು ರತ್ನದೀಪ್ ಎಂಬ ತಲಾ 75,000 DWT ಸಾಮರ್ಥ್ಯದ ಎರಡು ಬೃಹತ್ ನೌಕೆಗಳನ್ನು ನಿರ್ಮಾಣ ಮಾಡಿತು. ಪ್ರಾರಂಭದಲ್ಲಿ ಕೇವಲ ದುರಸ್ತಿ ಕಾರ್ಯದಲ್ಲಿ ನಿರತವಾಗಿದ್ದ ಮಝುಗಾಂವ್ ಕೇಂದ್ರ ಇಂದು ಯುದ್ಧನೌಕೆಗಳನ್ನು ತಯಾರಿಸುವುದರಲ್ಲಿ ವಿಶೇಷ ಪರಿಣತಿ ಪಡೆದಿದೆ. ಉಳಿದ ಹೆಚ್ಚಿನ ಸಾಮರ್ಥ್ಯವನ್ನು ಇದು ವಾಣಿಜ್ಯ ನೌಕೆಗಳ ನಿರ್ಮಾಣಕ್ಕೆ ವಿನಿಯೋಗಿಸುತ್ತಿದೆ. 25,000 DWT ಸಾಮರ್ಥ್ಯದ ನೌಕೆಗಳನ್ನು ಉತ್ಪಾದಿಸುವಷ್ಟು ಸಾಧನ ಸಜ್ಜುಗಳನ್ನು ಹೊಂದಿದೆ. ಹಿಂದೂಸ್ಥಾನ್ ಷಿಪ್‌ಯಾರ್ಡ್ ಭಾರತೀಯ ಹಡಗು ನಿರ್ಮಾಣದ ಆದ್ಯಕೇಂದ್ರ. ಇದು ಎಲ್ಲ ಬಗೆಯ ನೌಕೆಗಳನ್ನೂ ನಿರ್ಮಿಸುವ ಸಾಮರ್ಥ್ಯ ಪಡೆದಿದೆ.

4 ವಾಯುಸಾರಿಗೆ: ಭಾರತದಲ್ಲಿ 1911 ರಲ್ಲಿ ವಿಮಾನ ಸಂಚಾರ ಆರಂಭವಾಯಿತು. ಆ ವರ್ಷ ಪ್ರಯೋಗಾರ್ಥವಾಗಿ ಹಲವಾರು ವಿಮಾನ ಹಾರಾಟಗಳು ಜರಗಿದವು. ಆ ಪೈಕಿ ಎಂ. ಪಿಕ್ವೆಟ್ ಎಂಬ ಫ್ರೆಂಚ್ ಸಂಜಾತ ಕೈಗೊಂಡ ಹಾರಾಟ ಹೆಸರಿಸಬೇಕಾದದ್ದು. ಆತ ಭಾರತದಲ್ಲಿ ಮೊತ್ತಮೊದಲ ಬಾರಿಗೆ ಅಲಹಾಬಾದಿನಿಂದ ಸು. 16 ಕಿಮೀ ದೂರದಲ್ಲಿರುವ ನೈನಿ ಎಂಬ ಸ್ಥಳಕ್ಕೆ ಟಪಾಲು ವಿಮಾನ ಕೊಂಡೊಯ್ದ. ಇದನ್ನು ಪ್ರಪಂಚದ ಮೊತ್ತಮೊದಲನೆಯ ವಾಯು ಅಂಚೆ ಎಂದು ಹೇಳಲಾಗಿದೆ. ಆದರೆ ಭಾರತದಲ್ಲಿ ಕ್ರಮಬದ್ಧವಾಗಿ ವಾಯು ಸಂಚಾರ ಆರಂಭವಾದದ್ದು 1920 ರಲ್ಲಿ. ಆ ವರ್ಷ ಜನವರಿಯಲ್ಲಿ ಎರಡು ವಿಮಾನಗಳು ಕರಾಚಿಯಿಂದ ಮುಂಬಯಿಗೆ ಟಪಾಲು ಒಯ್ಯಲಾರಂಭಿಸಿದುವು. 1927 ರಲ್ಲಿ ನಾಗರಿಕ ವಿಮಾನಸಂಚಾರ ಖಾತೆ ಸ್ಥಾಪಿತವಾಯಿತು, ವಿಮಾನ ನಿಲ್ದಾಣಗಳು ನಿರ್ಮಾಣವಾದುವು. ವೈಮಾನಿಕ ಕ್ಲಬ್ಬುಗಳು ಅಸ್ತಿತ್ವಕ್ಕೆ ಬಂದುವು. 1929 ರಲ್ಲಿ ಇಂಪೀರಿಯಲ್ ಏರ್‌ವೇಸ್ ಸಂಸ್ಥೆ ಭಾರತ ಬ್ರಿಟನ್ ನಡುವೆ ವಾರಕ್ಕೆ ಒಮ್ಮೆ ವಿಮಾನ ಸಂಚಾರ ಆರಂಭಿಸಿತು. 1932ರಲ್ಲಿ ಇಂಡಿಯನ್ ನ್ಯಾಷನಲ್ ಏರ್‌ವೇಸ್ ಸಂಸ್ಥೆ ಕರಾಚಿ ಮದರಾಸ್ (ಚೆನ್ನೈ) ಸಂಚಾರ ಏರ್ಪಡಿಸಿತು. ಟಾಟಾ ಏರ್‌ವೇಸ್ ಸಂಸ್ಥೆ ಕರಾಚಿ ಲಾಹೋರ್ ನಡುವೆ ಯಾನ ಆರಂಭಿಸಿತು. ಈ ಎಲ್ಲ ಕಂಪನಿಗಳು ಅಂಚೆ ಮತ್ತು ತಂತಿ ಇಲಾಖೆಯ ಪರವಾಗಿ ಟಪಾಲು ಒಯ್ಯುತ್ತಿದ್ದುವು. 1937ರಲ್ಲಿ ಎಂಪೈರ್ ವಾಯು ಅಂಚೆ ವ್ಯವಸ್ಥೆ ಜಾರಿಗೆ ಬಂತು. ಆ ವ್ಯವಸ್ಥೆಯಲ್ಲಿ ಬ್ರಿಟಿಷ್ ವಸಾಹತು ದೇಶಗಳ ನಡುವೆ ಉಚಿತವಾಗಿ ಟಪಾಲು ಒಯ್ಯಬೇಕಾಗಿತ್ತು. 1939ರಲ್ಲಿ ಆರಂಭವಾದ ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಭಾರತದ ವಾಯುಸಾರಿಗೆ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು. ವಸಾಹತು ವಾಯು ಅಂಚೆ ವ್ಯವಸ್ಥೆ ರದ್ದಾಯಿತು. ವಿಮಾನ ಕಂಪನಿಗಳು ಸರ್ಕಾರದ ಆದೇಶದಂತೆ ರಕ್ಷಣೋದ್ದೇಶಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಬೇಕಾಯಿತು. ದೇಶ ರಕ್ಷಣೆಯಲ್ಲಿ ವಾಯುಸಾರಿಗೆಯ ಮಹತ್ತ್ವ ಹೆಚ್ಚಾದದ್ದು ಯುದ್ಧದಿಂದಾದ ಒಂದು ಪ್ರಯೋಜನ. ಪರಿಣಾಮವಾಗಿ ವಿಮಾನಗಳ ಸಂಖ್ಯೆ ಹೆಚ್ಚಿತು. ಇದೇ ಅವಧಿಯಲ್ಲಿ ಬೆಂಗಳೂರಿನಲ್ಲಿ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಸಂಚಾರ ಸೌಲಭ್ಯಗಳು ಬೆಳೆದುವು. ಇಂದು ಹಿಂದೂಸ್ತಾನ್ ವಿಮಾನ ತಯಾರಿಕಾ ಕಾರ್ಖಾನೆಗೆ ದೇಶಾದ್ಯಂತ ಹಲವಾರು ಶಾಖೆಗಳಿದ್ದು ಇವು ಅತ್ಯುತ್ತಮ ರೀತಿಯ ಪ್ರಯಾಣಿಕೆ ಹಾಗೂ ಯುದ್ಧ ವಿಮಾನಗಳನ್ನು ತಯಾರಿಸುತ್ತಿವೆ. 1945ರ ತರುವಾಯ ವಿಮಾನ ಪ್ರಯಾಣಿಕರು ಮತ್ತು ಸರಕುಸಾಗಣೆ ಗಣನೀಯವಾಗಿ ಹೆಚ್ಚಾಗತೊಡಗಿದುವು. 1946ರಲ್ಲಿ ನಿಯಮಿತ ವಾಯುಸಂಚಾರಕ್ಕೆ ಪರವಾನಿಗೆ ನೀಡುವ ಉದ್ದೇಶದಿಂದ ಸರ್ಕಾರ ವಾಯುಸಾರಿಗೆ ಪರವಾನಿಗೆ ಮಂಡಲಿಯನ್ನು ಸ್ಥಾಪಿಸಿತು. ಈ ಪ್ರಯೋಜನ ಪಡೆದು 1946 ರ ತರುವಾಯು 11 ಹೊಸ ವಿಮಾನ ಕಂಪನಿಗಳು ಹುಟ್ಟಿಕೊಂಡುವು. 1949ರಲ್ಲಿ ದೆಹಲಿ, ಕೋಲ್ಕತ್ತ, ಮುಂಬಯಿ, ಚೆನ್ನೈಗಳಿಗೆ ರಾತ್ರಿ ಟಪಾಲು ವಿಮಾನ ಸಂಚಾರ ಆರಂಭವಾಯಿತು. ಈ ವಿಮಾನಗಳಲ್ಲಿ ಮಿತ ಸಂಖ್ಯೆಯಲ್ಲಿ ಪ್ರಯಾಣಿಕರನ್ನೂ ಸರಕುಗಳನ್ನೂ ಸಾಗಿಸಲಾಗುತ್ತಿತ್ತು.

ಭಾರತವು ಸ್ವಾತಂತ್ರ್ಯವನ್ನು ಪಡೆದ ಅನಂತರ ಮೊದಲು ಅಸ್ತಿತ್ವದಲ್ಲಿದ್ದ ಎಲ್ಲಾ ಖಾಸಗಿ ವಿಮಾನ ಸಂಸ್ಥೆಗಳನ್ನು 1953ರಲ್ಲಿ ರಾಷ್ಟ್ರೀಕರಿಸಿ ಇವುಗಳ ನಿರ್ವಹಣೆಯನ್ನು ಎರಡು ಸಂಸ್ಥೆಗಳಿಗೆ ವಹಿಸಿಕೊಡಲಾಯಿತು. ಅವುಗಳು 1) ಇಂಡಿಯನ್ ಏರ್ ಲೈನ್ಸ್ ಕಾರ್ಪೋರೇಷನ್ ಮತ್ತು 2) ಏರ್ ಇಂಡಿಯ ಇಂಟರ್‌ನ್ಯಾಷನಲ್ ಕಾರ್ಪೋರೇಷನ್.

ಅನಂತರ ಕಡಿಮೆ ದೂರದ ವಾಯು ಯಾನದ ಸೌಲಭ್ಯವನ್ನು ಒದಗಿಸಲು 1981ರಲ್ಲಿ ವಾಯುದೂತ್ ವಿಮಾನ ಯಾನವನ್ನು ದೇಶದ ಕೆಲವು ಕಡೆ ಆರಂಭಿಸಲಾಯಿತು. ಭಾರತದ ಆಂತರಿಕ ವಾಯು ಸಾರಿಗೆಯ ಆಡಳಿತಕ್ಕಾಗಿ ದೇಶವನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳು ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ವಲಯಗಳು. ಇವುಗಳ ಆಡಳಿತ ಕಛೇರಿಗಳು ಕ್ರಮವಾಗಿ ಕೋಲ್ಕತ್ತ, ಮುಂಬೈ, ದೆಹಲಿ ಮತ್ತು ಚೆನ್ನೈಗಳಲ್ಲಿವೆ.

ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ವಿಕೇಂದ್ರಿಕರಣ ನೀತಿಯಿಂದ ಭಾರತದ ಆಂತರಿಕ ವಾಯು ಸಾರಿಗೆಯಲ್ಲಿ ಖಾಸಗಿ ಸಂಸ್ಥೆಗಳಿಗೆ ಪರವಾನಿಗೆಯನ್ನು ನೀಡಲಾಗುತ್ತಿದೆ.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು: ದಿ ಏರ್ ಪೋರ್ಟ್ ಅಥಾರಿಟಿ ಆಫ್ ಇಂಡಿಯ ಸಂಸ್ಥೆಯನ್ನು 1995ರಲ್ಲಿ ಸ್ಥಾಪಿಸಿ ದೇಶದ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ಇದಕ್ಕೆ ನೀಡಲಾಗಿದೆ. ಇದು 16 ಅಂತಾರಾಷ್ಟ್ರೀಯ ನಿಲ್ದಾಣ ಹಾಗೂ 85 ಇತರೆ ದೇಶೀಯ ನಿಲ್ದಾಣಗಳನ್ನು ನಿರ್ವಹಿಸುತ್ತಿದೆ.

ಭಾರತವು ಇಂದು ಹನ್ನೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಒಳಗೊಂಡಿದೆ:

1) ಇಂದಿರಾಗಾಂಧಿ ವಿಮಾನ ನಿಲ್ದಾಣ, ದೆಹಲಿ
2) ಛತ್ರಪತಿ ಶಿವಾಜಿ ವಿಮಾನ ನಿಲ್ದಾಣ, ಮುಂಬೈ
3) ಸುಭಾಷ್ ಚಂದ್ರಭೋಸ್ ವಿಮಾನ ನಿಲ್ದಾಣ (ಡಂಡಂ, ಕೋಲ್ಕತ್ತ)
4) ಅಣ್ಣಾ ವಿಮಾನ ನಿಲ್ದಾಣ (ಮೀನಾಬಾಕಂ, ಚೆನ್ನೈ)
5) ರಜಾನ್ಸಿ ವಿಮಾನ ನಿಲ್ದಾಣ, ಅಮೃತಸರ
6) ತಿರುವನಂತಪುರ ವಿಮಾನ ನಿಲ್ದಾಣ, ತಿರುವನಂತಪುರ
7) ಬೆಂಗಳೂರು ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು
8) ರಾಜೀವ್‌ಗಾಂಧಿ ವಿಮಾನ ನಿಲ್ದಾಣ, ಹೈದರಾಬಾದ್
9) ಸರ್ದಾರ್ ವಲ್ಲಬಾಯಿ ಪಟೇಲ್ ವಿಮಾನ ನಿಲ್ದಾಣ, ಅಹಮದಾಬಾದ್
10) ದಬೋಲಿಮ್ ವಿಮಾನ ನಿಲ್ದಾಣ, ಗೋವ
11) ಲೋಕಪ್ರಿಯ ಗೋಪಿನಾಥ್ ವಿಮಾನ ನಿಲ್ದಾಣ, ಗುವಾಹತಿ
12) ನೀಡುಂ ಬಾಸ್ಸೆರಿ ವಿಮಾನ ನಿಲ್ದಾಣ, ಕೊಚ್ಚಿ
13) ಆಗ್ರ ವಿಮಾನ ನಿಲ್ದಾಣ, ಆಗ್ರ
14) ಜೈಪುರ ವಿಮಾನ ನಿಲ್ದಾಣ, ಜೈಪುರ
15) ವಾರಾಣಸಿ ವಿಮಾನ ನಿಲ್ದಾಣ, ವಾರಾಣಸಿ
16) ಪೋರ್ಟ್‌ಬ್ಲೆರ್ ವಿಮಾನ ನಿಲ್ದಾಣ, ಅಂಡಮಾನ್ ದ್ವೀಪ (ಕೆ.ಜಿಬಿ.)

**ಭಾರತದ ಹವಾಮಾನ** : ವಾತಾವರಣದ ಉಷ್ಣತೆ, ಮಳೆ ಮತ್ತು ಗಾಳಿ-ಇವುಗಳ ಸ್ಥಿತಿಗೆ ಒಟ್ಟಾಗಿ ಹವಾಮಾನ (ವೆದರ್) ಎಂದು ಹೆಸರು. ಹವಾಮಾನ ಮುನ್ಸೂಚನೆ, ವಾತಾವರಣದ ಚಲನೆ ಮುಂತಾದವನ್ನು ಅಭ್ಯಸಿಸುವ ವಿಜ್ಞಾನ ಪವನವಿಜ್ಞಾನ ಅಥವಾ ಹವಾಮಾನವಿಜ್ಞಾನ (ಮೀಟಿಯರಾಲಜಿ). ಒಂದು ನಿರ್ದಿಷ್ಟಪ್ರದೇಶದ ದೀರ್ಘಕಾಲದ ಹವಾಮಾನವನ್ನು ಕುರಿತ ಅಂಕಿ ಅಂಶಗಳ ಗುಣಗಳೇ ಅಲ್ಲಿನ ವಾಯುಗುಣ (ಕ್ಲೈಮೇಟ್). ಈ ಅಂಶಗಳ ವೈಜ್ಞಾನಿಕ ಅಧ್ಯ ಯನ ವಾಯುಗುಣವಿಜ್ಞಾನ (ಕ್ಲೈಮೆಟಾಲಜಿ).

ಭಾರತದಲ್ಲಿ ಕೃಷಿ ಪ್ರಧಾನವಾಗಿ ಮಾನ್‌ಸೂನ್ ಮಳೆಯನ್ನು (ಹಿಂದೂ ಸಾಗರದಲ್ಲಿ ಬೀಸುವ ಒಂದು ಕ್ಲುಪ್ತ ಮಾರುತಕ್ಕೆ ಮಾನ್‌ಸೂನ್ ಎಂದು ಹೆಸರು. ಬೇಸಗೆಯಲ್ಲಿ ನೈಋತ್ಯದಿಂದಲೂ ಚಳಿಗಾಲದಲ್ಲಿ ಈಶಾನ್ಯದಿಂದಲೂ ಇದು ಬೀಸುತ್ತದೆ) ಅವಲಂಬಿಸಿದೆ. ಈ ಮಳೆ ದೇಶದ ಹವಾಮಾನವನ್ನು ಹವೆ ದೇಶದ ಭೌತವಿನ್ಯಾಸವನ್ನೂ ನಿಕಟವಾಗಿ ಹೊಂದಿಕೊಂಡಿರುವುದರಿಂದ ಇವೆಲ್ಲ ಅಂಶಗಳ ಸಮಗ್ರ ಅಧ್ಯಯನದಿಂದ ಮಾತ್ರ ಕೃಷಿಯ ಮೇಲೆ ಹವೆಯ ಪರಿಣಾಮಗಳನ್ನು ತಿಳಿದುಕೊಳ್ಳಬಹುದು. ಹಾಗೂ ಕೃಷಿಯ ಭವಿಷ್ಯವನ್ನು ರೂಪಿಸಬಹುದು.

ಭಾರತದ ಅತ್ಯಧಿಕ ಮಳೆ ಬೀಳುವ ಪ್ರದೇಶಗಳೆಂದರೆ ಪಶ್ಚಿಮ ಘಟ್ಟಗಳ ಭಾಗಗಳು, ಅಸ್ಸಾಮಿನ ಬೆಟ್ಟಗಳು ಹಾಗೂ ಹಿಮಾಲಯ ಸಾಲುಗಳು. ದೇಶದ ಪ್ರಧಾನ ನದೀ ವ್ಯವಸ್ಥೆಗಳು ಉಗಮಿಸುವುದು ಈ ಜಲಾನಯನ ಪ್ರದೇಶಗಳಲ್ಲಿ. ದಖನ್ನಿನ ಪೀಠಭೂಮಿಯಲ್ಲಿ, ಗಂಗಾ ಬಯಲುಗಳಲ್ಲಿ ಹಾಗೂ ಕರ್ನಾಟಕದ ಬಯಲುಗಳಲ್ಲಿ ಪರ್ವತಗಳಿಂದ ಉಂಟಾಗುವ ಪರಿಣಾಮಗಳು ಅತ್ಯಲ್ಪ, ಇಲ್ಲವೇ ಇಲ್ಲ ಎಂದರೂ ಸಲ್ಲುವುದು. ಅಲ್ಲದೇ ಇಲ್ಲಿ ಮಳೆ ಬಲು ಕಡಿಮೆ. ವಾಯವ್ಯ ದಿಕ್ಕಿನಲ್ಲಿರುವ ಪಂಜಾಬ್ ಹಾಗೂ ರಾಜಸ್ತಾನ ಮತ್ತು ಅವುಗಳ ಉತ್ತರಕ್ಕೂ ಪಶ್ಚಿಮಕ್ಕೂ ಒತ್ತಾಗಿರುವ ತಪ್ಪುಗಳು ಮಳೆಯ ದೃಷ್ಟಿಯಿಂದ ಭಾರತದ ಅತ್ಯಂತ ಒಣಪ್ರದೇಶಗಳು.

ಉತ್ತರದಲ್ಲಿ ಕಾಶ್ಮೀರ, ವಾಯವ್ಯ ಸರಹದ್ದಿನ ಪ್ರಾಂತ್ಯಗಳು ಹಾಗೂ ಬಲೂಚಿಸ್ತಾನ ಮತ್ತು ದಕ್ಷಿಣದಲ್ಲಿ ಆಗ್ನೇಯ ತಮಿಳುನಾಡು ಇವುಗಳ ಹೊರತಾಗಿ ಮಿಕ್ಕ ಪ್ರದೇಶಗಳಲ್ಲಿ ಬೀಳುವ ಮಳೆಯ ಅತ್ಯಧಿಕಾಂಶ ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ನೈಋತ್ಯ ಮಾನ್‌ಸೂನ್ ಶ್ರಾಯದಲ್ಲಿ ಆಗಿದೆ ಎಂಬುದು ಸ್ಪಷ್ಟ. ಅತಿ ಉತ್ತರದಲ್ಲಿ ಮಳೆಯ ಅಧಿಕಾಂಶ ಚಳಿಗಾಲದ ಹಿಮಪಾತವಾಗಿಯೋ ಅವಸಾದನವಾಗಿಯೋ ಉಂಟಾದಾಗ ಆಗ್ನೇಯ ತಮಿಳು ನಾಡಿನಲ್ಲಿ ವಾರ್ಷಿಕ ಮಳೆಯ ಸುಮಾರು ಅರ್ಧದಷ್ಟು ಮಾನ್‌ಸೂನ್-ಉತ್ತರ ಅಥವಾ ಹಿಂಗಾರು ಮಳೆಯ ಅವಧಿಯಲ್ಲಿ (ಸೆಪ್ಟೆಂಬರಿನ ಅನಂತರ) ಸುರಿಯುತ್ತದೆ.

ದಕ್ಷಿಣಾಭಿಮುಖವಾಗಿ ನಿಷ್ಕ್ರಮಿಸುವ ಮಾನ್‌ಸೂನಿನ ಜೊತೆಗೆ ಆವರ್ತಮಾರುತ ಜನ್ಯ ಬಿರುಗಾಳಿಗಳೂ ಸಮುದ್ರಗಳಲ್ಲಿ ತಲೆದೋರುವ ಒತ್ತಡಕುಸಿತಗಳೂ ಭಾರತದ ಹವೆಯ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರುತ್ತವೆ.

ಪೂರ್ವದಿಕ್ಕಿನ ಅಥವಾ ಮಾನ್‌ಸೂನ್ ಒತ್ತಡ ಕುಸಿತಗಳು : ಮಾನ್‌ಸೂನಿನ ತೀವ್ರತೆಯಲ್ಲಿನ ಏರಿಳಿತಗಳು ಹೆಚ್ಚಾಗಿ ಬಂಗಾಲ ಆಖಾತದ ಶಿರದಲ್ಲಿ ತಲೆದೋರುವ ಒತ್ತಡ ಕುಸಿತಗಳನ್ನು ಅವಲಂಬಿಸಿವೆ. ಇವು ಇನ್ನಷ್ಟು ಪೂರ್ವವಲಯದಿಂದ ಬಂದು ಬಂಗಾಲ ಆಖಾತವನ್ನು ಸೇರಿ ಅಲ್ಲಿನ ಕುಸಿತಗಳನ್ನು ಪುಷ್ಟಿಗೊಳಿಸಬಹುದು. ಅಲ್ಲಿಂದ ಅವು ವಾಯವ್ಯ ದಿಕ್ಕಿಗಭಿಮುಖವಾಗಿ ಸಾಗಿ ದೇಶದ ಅಡ್ಡಕ್ಕೂ ಹಾಯುತ್ತ ವಾಯವ್ಯ ಭಾರತವನ್ನು ತಲುಪುತ್ತವೆ. ಸಂಚಾರಪಥದ ಉದ್ದಕ್ಕೂ ಅವು ಮಳೆಸುರಿಸುವುದು ವಾಡಿಕೆ. ಮಾನ್‌ಸೂನ್ ಶ್ರಾಯದಲ್ಲಿ (ಜೂನ್‌ನಿಂದ ಸೆಪ್ಟೆಂಬರ್) ಇಂಥ ಕುಸಿತಗಳ ಆವೃತ್ತಿ ತಿಂಗಳೊಂದರ 3 ರಿಂದ 4. ಒತ್ತಡ ಕುಸಿತಗಳ ಆವೃತ್ತಿ ಬಲು ಕೆಳಮಟ್ಟಕ್ಕೆ ಬರುವ ಕೆಲವು ತಿಂಗಳುಗಳಲ್ಲಿ ಮಾನ್‌ಸೂನಿನ ಮಳೆಸುರಿತ ಪರ್ವತೀಯವಾಗುವುದುಂಟು. ಎಂದರೆ ಆಗ ಮಳೆ ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಉತ್ತರ ಹಾಗೂ ಮಧ್ಯ ಭಾರತದ ಬಯಲುಗಳಲ್ಲಿ ಮಳೆಯ ಸಮುಚಿತ ಪ್ರಾದೇಶಿಕ ವಿತರಣೆಯನ್ನು ಸಾಧಿಸುವಲ್ಲಿ ಈ ಒತ್ತಡಕುಸಿತಗಳ ಪಾತ್ರ ಪ್ರಧಾನವಾದದ್ದು.

ಪಶ್ಚಿಮದ ಒತ್ತಡಕುಸಿತಗಳು : ನವೆಂಬರ್–ಮೇ ಅವಧಿಯಲ್ಲಿ ಒತ್ತಡ ಕುಸಿತಗಳ ಒಂದು ಶ್ರೇಣಿಯೇ ಪಶ್ಚಿಮ ವಲಯದಲ್ಲಿ ತೊಡಗಿ ವಾಯವ್ಯ ಸರಹದ್ದು ಹಾಗೂ ಬಲೂಚಿಸ್ತಾನ ಪ್ರದೇಶಗಳ ಮೂಲಕ ಭಾರತ ಉಪಖಂಡವನ್ನು ಪ್ರವೇಶಿಸುತ್ತದೆ. ಇದು ಉತ್ತರ ಭಾರತದಲ್ಲಿ ಪೂರ್ವಭಿಮುಖವಾಗಿ ಚಲಿಸುತ್ತ ಅಸ್ಸಾಮ್ ಮತ್ತು ಬಂಗಾಲ ಪ್ರದೇಶವನ್ನು ತಲುಪುವುದು. ಈ ಕುಸಿತಗಳ ಪರಿಣಾಮವಾಗಿ ಬಯಲುಗಳಲ್ಲಿ ಮೋಡಮುಸುಕಿದ ಹವೆಯೂ ಹಿಮಾಲಯ ಪ್ರದೇಶದಲ್ಲಿ ಹಿಮಪಾತವೂ ಉಂಟಾಗುತ್ತವೆ. ಪ್ರತಿಯೊಂದು ಕುಸಿತವೂ ಪೂರ್ವಾಭಿಮುಖವಾಗಿ ಚಲಿಸುತ್ತಿದ್ದಂತೆ ಅದರ ಹಾದಿಯಲ್ಲಿ ಶೈತ್ಯತರಂಗಗಳನ್ನು ಎಬ್ಬಿಸುತ್ತ ಹೋಗುವುದು. ಸರಾಸರಿಯಾಗಿ ಹೇಳುವುದಾದರೆ ನವೆಂಬರಿನಲ್ಲಿ 2, ಡಿಸೆಂಬರಿನಿಂದ ಏಪ್ರಿಲ್‌ವರೆಗೆ ತಲಾ 4 ರಿಂದ 5 ಮತ್ತು ಮೇಯಲ್ಲಿ ಸು. 2 ಒತ್ತಡಕುಸಿತಗಳು ತಲೆದೋರುತ್ತವೆ.

ಆವರ್ತಮಾರುತಜನ್ಯ ಬಿರುಗಾಳಿಗಳು : ಸಾಮಾನ್ಯವಾಗಿ ಏಪ್ರಿಲ್–ಜೂನ್ ಮತ್ತು ಅಕ್ಟೋಬರ್–ಡಿಸೆಂಬರ್ ಮಧ್ಯಂತರ ಅವಧಿಗಳಲ್ಲಿ ತೀವ್ರ ಆವರ್ತಮಾರುತಜನ್ಯ ಬಿರುಗಾಳಿಗಳು ಬಂಗಾಲ ಆಖಾತದಲ್ಲೂ ಅರೇಬಿಯನ್ ಸಮುದ್ರದಲ್ಲೂ ಹುಟ್ಟುತ್ತವೆ. ಅವು ಒಳನಾಡನ್ನು ನುಗ್ಗಿ ಸಾಕಷ್ಟು ಉತ್ಪಾತವನ್ನು ಉಂಟುಮಾಡುವುವು. ಪ್ರಬಲಗಾಳಿ ಸಮೇತವಾದ ಬಿರುಮಳೆ ಬೆಳೆಗಳಿಗೂ ಹಣ್ಣು ಹಂಪಲ ತೋಟಗಳಿಗೂ ಅತಿನಷ್ಟಕಾರಿ. ಕರಾವಳಿ ಪ್ರದೇಶದಲ್ಲಿ ಭೀಕರ ತರಂಗಗಳೆದ್ದು ಜನ ಮತ್ತು ಸಂಪತ್ತನ್ನು ನಾಶಮಾಡುವುದುಂಟು. ಸರಾಸರಿಯಾಗಿ ಹೇಳುವುದಾದರೆ ಮಾನ್‌ಸೂನ್–ಪೂರ್ವ ಅವಧಿಯಲ್ಲಿ 1 ರಿಂದ 2 ಮತ್ತು ಮಾನ್‌ಸೂನ್–ಉತ್ತರ ಅವಧಿಯಲ್ಲಿ 2 ರಿಂದ 3 ತೀವ್ರ ಆವರ್ತಮಾರುತಗಳು ಜನಿಸುತ್ತವೆ.

ಭಾರತ ಉಪಖಂಡದ ಹವೆಯ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿ ಇಲ್ಲಿನ ಬೆಳೆಯ ವಾರ್ಷಿಕ ಉತ್ಪನ್ನದ ಮೇಲೆ ತೀವ್ರ ಪರಿಣಾಮವನ್ನು ಉಂಟುಮಾಡುವ ನೈಋತ್ಯ ಮಾನ್‌ಸೂನ್ ಈ ದೇಶದ ಹವಾವಿಜ್ಞಾನದಲ್ಲಿ ಒಂದು ಪ್ರಮುಖ ವಿದ್ಯಮಾನ. ಅದರ ಕೆಲವು ಲಕ್ಷಣಗಳನ್ನು ಮುಂದೆ ಕೊಡಲಾಗಿದೆ.

ಮಾನ್‌ಸೂನಿನ ಪ್ರಾರಂಭ : ಮಾನ್‌ಸೂನಿನ ಸಕಾಲಿಕ ಆರಂಭವನ್ನು ಭಾರತದ ರೈತ ಕುತೂಹಲ ಹಾಗೂ ಕಳವಳಗಳಿಂದ ಕಾಯುತ್ತಿರುತ್ತಾನೆ. ಈ ಮಳೆ ಇಡೀ ಶ್ರಾಯದಲ್ಲಿ ಸಮರ್ಪಕವಾಗಿ ಬೀಳಬೇಕು ಎಂದು ಅವನ ಹಂಬಲ. ಭಾರತದ ವಿವಿಧ ಪ್ರದೇಶಗಳಲ್ಲಿ ಮಾನ್‌ಸೂನ್ ಸಾಮಾನ್ಯವಾಗಿ ಆರಂಭವಾಗುವ ಮತ್ತು ಅಂತ್ಯವಾಗುವ ದಿವಸ ಹಾಗೂ ಮಳೆಗಾಲದಲ್ಲಿ ಅಲ್ಲಿ ಬೀಳುವ ಮಳೆಯ ಮೊತ್ತ ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ. ಉಪಖಂಡದ ನೈರುತ್ಯ ಕೊನೆಯಾದ ತಿರುವಾಂಕೂರು–ಕೊಚ್ಚಿ ಪ್ರದೇಶದಿಂದ ಉತ್ತರದಲ್ಲಿ ಮುಂಬಯಿ ಸಮೀಪದ ಕೊಲಾಬಕ್ಕೆ ಮಾನ್‌ಸೂನ್ ಸಾಗುವ ವೇಗದಲ್ಲಿ ಸಹ ಸಾಕಷ್ಟು ವಿಚಲನೆ ಇರುತ್ತದೆ. ಕೃಷಿಗೆ ಸಂಬಂಧಿಸಿದ ಮುಖ್ಯ ಕ್ರಿಯೆಗಳಲ್ಲಿ ಮಾನ್‌ಸೂನ್ ಮಳೆಯ ಆರಂಭದಲ್ಲಿಯೇ ತೊಡಗಬೇಕಾದ್ದರಿಂದ ದೇಶದ ಬೇರೆ ಬೇರೆ ಭಾಗಗಳಲ್ಲಿ ಮಾನ್‌ಸೂನಿನ ಪ್ರಾರಂಭದ ದಿವಸಗಳು, ಮಳೆಸುರಿಯುವ ದಿವಸಗಳು, ಮಳೆನಿಂತ ದಿವಸಗಳು ಇವೆಲ್ಲವನ್ನು ಕುರಿತ ಮುನ್ಸೂಚನೆಗಳು ರೈತರಿಗೆ ಬಲು ಮುಖ್ಯ ಮತ್ತು ಉಪಯುಕ್ತ ಮಾಹಿತಿಗಳು.

ಮಹಾಪೂರಗಳ ಹಾಗೂ ಅನಾವೃಷ್ಟಿಗಳ ಆವೃತ್ತಿ : ಕೃಷಿ, ನೀರಾವರಿ ಕಾರ್ಯಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಭವಿಷ್ಯದ ದೀರ್ಘಕಾಲೀನ ಯೋಜನೆಗಳನ್ನು ರೂಪಿಸುವಾಗ ನಮ್ಮ ಹಿಂದಿನ ಹವಾಗುಣವಿಜ್ಞಾನದ ಚರಿತ್ರೆಯಿಂದ ಕಲಿತ ಪಾಠಗಳನ್ನು ಪರಿಶೀಲಿಸುವುದು ಯುಕ್ತ.

ಮಳೆ ಉಪವಿಭಾಗದ ವಾರ್ಷಿಕ ಪ್ರಸಾಮಾನ್ಯ ಮಳೆಯ ಪರಿಮಾಣವನ್ನು (ಹಿಂದಿನ ಹಲವಾರು ವರ್ಷಗಳ ಸುರಿತಗಳ ಆಧಾರದಿಂದ) ಇಂತಿಷ್ಟೆಂದು ನಿಗದಿ ಮಾಡಿರುತ್ತಾರೆ. ಒಂದೊಂದು ವರ್ಷವೂ ಅಲ್ಲಿ ವಾಸ್ತವಿಕವಾಗಿ ಸುರಿಯುವ ಮಳೆಯನ್ನು ಈ ಪ್ರಸಾಮಾನ್ಯದೊಡನೆ ಹೋಲಿಸಿ ವಾರ್ಷಿಕ ವಿಚಲನೆಯನ್ನು (ಇವೆರಡರ ವ್ಯತ್ಯಾಸ) ನಿರ್ಧರಿಸುತ್ತಾರೆ. ಹಲವಾರು ವರ್ಷಗಳ ವಿಚಲನೆಗಳ ಪರಿಶೀಲನೆಯಿಂದ ವಾರ್ಷಿಕ ಸರಾಸರಿ ವಿಚಲನೆಯನ್ನು ಸಹ ನಿಗದಿ ಮಾಡಿರುತ್ತಾರೆ. ಯಾವುದೇ ವರ್ಷ ಒಂದು ಮಳೆ ಉಪವಿಭಾಗದಲ್ಲಿ ವಾಸ್ತವಿಕವಾಗಿ ಸುರಿದ ಮಳೆಯ ಮೊತ್ತ ಆ ಉಪವಿಭಾಗದ ಪ್ರಸಾಮಾನ್ಯ ಇವುಗಳ ವ್ಯತ್ಯಾಸ ಅದೇ ಸ್ಥಳದ ಸರಾಸರಿ ವಿಚಲನೆಯ ಎರಡರಷ್ಟಾದಾಗ, ವ್ಯತ್ಯಾಸ ಧನಾತ್ಮಕವಾಗಿದ್ದರೆ ಆ ವರ್ಷವನ್ನು ಮಹಾಪೂರದ ವರ್ಷವೆಂದೂ ಋಣಾತ್ಮಕವಾಗಿದ್ದರೆ ಆ ವರ್ಷವನ್ನು ಅನಾವೃಷ್ಟಿಯ ವರ್ಷವೆಂದೂ ವ್ಯಾಖ್ಯಿಸಲಾಗಿದೆ. ಅಧಿಕ ಸಂಖ್ಯೆಯ ವರ್ಷಗಳನ್ನು ಪರಿಶೀಲಿಸುವಾಗ ಒಂದು ಉಪವಿಭಾಗದಲ್ಲಿನ ಮಹಾಪೂರಗಳ ಮತ್ತು ಅನಾವೃಷ್ಟಿಗಳ ಸಂಖ್ಯೆಗಳು ಪರಸ್ಪರ ಸಮವಾಗುವ ಒಲವನ್ನು ಪ್ರದರ್ಶಿಸುತ್ತವೆ. ಗರಿಷ್ಠ ಸಂಖ್ಯೆಯ ವೈಪರಿತ್ಯಗಳು (ಅಂದರೆ ಮಹಾಪೂರಗಳು ಮತ್ತು ಅನಾವೃಷ್ಟಿಗಳು) ತಲೆದೋರುವುದು ಬಲುಕಡಿಮೆ. ಕಡಿಮೆ ಮಳೆ ಬೀಳುವ ಪ್ರದೇಶಗಳಾದ, ಸಿಂಧ್, ರಾಜಸ್ತಾನ ಮುಂತಾದೆಡೆಗಳಲ್ಲಿ, ಮಾನ್‌ಸೂನಿನ ಮಳೆ 80 ಸೆಂಮೀ ಅಥವಾ ಹೆಚ್ಚು ಸುರಿಯುವ ಕೊಂಕಣ, ಕೇರಳ, ಬಂಗಾಲ ಮುಂತಾದ ಪ್ರದೇಶಗಳಲ್ಲಿ ವೈಪರೀತ್ಯಗಳ ಸಂಖ್ಯೆ ತೀರ ಕನಿಷ್ಠ ಮಿತಿಗೆ ಇಳಿಯುತ್ತದೆ.

ಭಾರತದಲ್ಲಿ ಪ್ರತಿವರ್ಷದ ಸಾಪ್ತಾಹಿಕ ಮಳೆಯ ಮೊತ್ತ : ಹಲವಾರು ವರ್ಷಗಳ ಸಾಲಿನಲ್ಲಿ ಮಾನ್‌ಸೂನ್ ಮಳೆಯ ಮೊತ್ತ ಇಡೀ ಮಳೆಗಾಲದಲ್ಲಿ ಸುರಿದ ಮಳೆಗೆ ಒಂದು ಸಾಮಾನ್ಯ ಸೂಚ್ಯಂಕವಷ್ಟೆ. ಕೃಷಿಗೆ ಮಳೆಸುರಿತದ ಸಂಬಂಧವನ್ನು ತಿಳಿಯಲು ಈ ಮೊತ್ತ ಒಂದೊಂದು ವರ್ಷದ ಎಲ್ಲ ಶ್ರಾಯಗಳಲ್ಲೂ ವಾರದಿಂದ ವಾರಕ್ಕೆ ಹೇಗೆ ಹಂಚಿಹೋಗಿದೆ ಎಂಬುದನ್ನು ನೋಡಬೇಕು. ಇದಕ್ಕಾಗಿ ಭಾರತದ ಹವಾಗುಣವಿಜ್ಞಾನ ಇಲಾಖೆ ಕ್ರಮವಾಗಿ ಪ್ರಕಟಿಸುವ ಸಾಪ್ತಾಹಿಕ ಹವಾವರದಿಗಳಲ್ಲಿ ಇರುವ ಮಳೆಯ ವಿವರಗಳನ್ನು ನಾವು ಉಪಯೋಗಿಸಿಕೊಳ್ಳುತ್ತೇವೆ. ಒಂದೇ ಚಿತ್ರದಲ್ಲಿ ವಾಸ್ತವಿಕ ಮಳೆಸುರಿತವನ್ನು ಯಾವುದೇ ವರ್ಷದ 52 ವಾರಗಳಿಗೂ ನಿರೂಪಿಸುವ ವಿಧಾನ ಉಂಟು. ಅದನ್ನು ಭಾರತದ 30 ಮಳೆ ಉಪವಿಭಾಗಗಳಿಗೆ ಸಹ ಅನ್ವಯಿಸುತ್ತಾರೆ. ಪ್ರತಿಯೊಂದು ಉಪವಿಭಾಗಕ್ಕೂ ಪ್ರತಿವಾರಕ್ಕೂ ಎರಡು ಸಂಖ್ಯೆಗಳನ್ನು ಬರೆಯುತ್ತಾರೆ. ಮೇಲಿನ ಸಂಖ್ಯೆ ವಾಸ್ತವಿಕವನ್ನೂ ಕೆಳಗಿನ ಸಂಖ್ಯೆ ಪ್ರಸಾಮಾನ್ಯವನ್ನೂ ಸೂಚಿಸುವುವು. ವೈಪರೀತ್ಯಗಳನ್ನು ಇದೇ ಚಿತ್ರದಲ್ಲಿ ತೋರಿಸಲು ಅನುಕೂಲವಾಗುವಂತೆ ಅನಾವೃಷ್ಟಿ ಮತ್ತು ಮಹಾಪೂರಗಳನ್ನು ಈ ಕೆಳಗಿನಂತೆ ವ್ಯಾಖ್ಯಿಸುತ್ತಾರೆ : ವಾಸ್ತವಿಕ ಸಾಪ್ತಾಹಿಕ ಮಳೆ ಪ್ರಸಾಮಾನ್ಯ ಮಳೆ ಅರ್ಧಕ್ಕೆ ಸಮ ಅಥವಾ ಅದಕ್ಕಿಂತ ಕಡಿಮೆ ಆಗಿರುವ ವಾರಗಳು ಅನಾವೃಷ್ಟಿಗಳು ; ವಾಸ್ತವಿಕ ಸಾಪ್ತಾಹಿಕ ಮಳೆ ಪ್ರಸಾಮಾನ್ಯ ಮಳೆಯ ಎರಡರಷ್ಟಕ್ಕೆ ಸಮ ಅಥವಾ ಅದಕ್ಕಿಂತ ಹೆಚ್ಚು ಆಗಿರುವ ವಾರಗಳು ಮಹಾಪೂರಗಳು. ಇವನ್ನು ಅನುಕ್ರಮವಾಗಿ, ಬೇರೆ ಬೇರೆ ಸಂಕೇತಗಳಿಂದ ತೋರಿಸುತ್ತಾರೆ.

ಮಳೆಗಾಲದಲ್ಲಿ ಅನಾವೃಷ್ಟಿಗಳಾಗಲೀ ಮಹಾಪೂರಗಳಾಗಲೀ ಇಲ್ಲದಿರುವ ವರ್ಷಗಳ ಹೆಸರು ಆದರ್ಶ ವರ್ಷಗಳು. ಕೃಷಿ ಉತ್ಪನ್ನದ ಯಶಸ್ಸು ಶ್ರಾಯದಲ್ಲಿ ಸುರಿಯುವುದು ಮಳೆಯ ಒಟ್ಟು ಪರಿಮಾಣವನ್ನು ಅವಲಂಬಿಸಿರುವುದರ ಜೊತೆಗೆ ಸಕಾಲಿಕತೆಯನ್ನೂ ಸಮುಚಿತ ಪ್ರದೇಶ ವಿತರಣೆಯನ್ನೂ ಅವಲಂಬಿಸಿದೆ. ಅವು ಪ್ರಸಾಮಾನ್ಯ (ಪ್ರಸಾಮಾನ್ಯಕ್ಕಿಂತ ಕೆಳಗಿನ ಮಟ್ಟದ) ಮಳೆಯಾದರೂ ಸಮರ್ಪಕವಾಗಿ ಹಂಚಿಹೋಗಿದ್ದರೆ ಅದರಿಂದ ಒಳ್ಳೆ ಫಸಲಿನ ಉತ್ಪಾದನೆ ಆಗಬಲ್ಲದು. ಹಲವಾರು ವರ್ಷಗಳ ಅಂಕಿಅಂಶಗಳನ್ನು ಪರಿಶೀಲಿಸುವಾಗ ಅಲ್ಪಕಾಲದ ಅನಾವೃಷ್ಟಿ ಮತ್ತು ಮಹಾಪೂರ ತಲೆದೋರುವುದನ್ನೂ ಅವುಗಳಿಂದ ಶ್ರಾಯದ ಒಟ್ಟು ಮಳೆ ಮೇಲೆ ಏನೂ ಪ್ರಭಾವ ಆಗದಿರುವುದನ್ನೂ ನೋಡುತ್ತೇವೆ. 5, 10 ಅಥವಾ 20 ವರ್ಷಗಳಿಗೊಮ್ಮೆ ಅನಾವೃಷ್ಟಿ ಮಹಾಪೂರ ಹಲವಾರು ವಾರಗಳ ಕಾಲ ಸತತವಾಗಿ ಒಂದು ಪ್ರದೇಶದಲ್ಲಿ ಹಬ್ಬಿರಬಹುದು. ಸಸ್ಯಗಳ ಬೆಳೆವಣಿಗೆ ಅವಧಿಕ ಘಟ್ಟಗಳಲ್ಲಿ ತಲೆದೋರುವ ಇಂಥ ಸುದೀರ್ಘ ವೈಪರೀತ್ಯಗಳು ಬೆಳೆಗಳ ಮೇಲೆ ಸಾಕಷ್ಟು ದುಷ್ಪರಿಣಾಮಗಳನ್ನು ಬೀರಬಲ್ಲವು.

ಸ್ಥೂಲವಾಗಿ ಹೇಳುವುದಾದರೆ ಈಶಾನ್ಯಭಾರತದ ಆರ್ದ್ರಪಟ್ಟಿಗಳಲ್ಲೂ ತಿರುವಾಂಕೂರು–ಕೊಚ್ಚಿ ಮಲಬಾರ್ ಕರಾವಳಿಯ ಉದ್ದಕ್ಕೂ ಎರಡು ಮಳೆಗಾಲಗಳೂ ಒಂದರೊಳಗೆ ಇನ್ನೊಂದು ಸೇರಿಕೊಂಡು ಸಾಕಷ್ಟು ದೀರ್ಘಕಾಲದ ಶೀತಕಾಲವನ್ನು ಸೃಜಿಸುತ್ತವೆ. ಇದಾದ ತರುವಾಯ ಅಲ್ಪಾವಧಿಯ ಶುಷ್ಕಶ್ರಾಯ ಬರುತ್ತದೆ. ಭಾರತದ ಮಧ್ಯ ಪ್ರದೇಶಗಳಲ್ಲಿ, ದಖ್ಖನ್ನಿನ ಪೀಠಭೂಮಿಯಲ್ಲಿ ಮತ್ತು ತಮಿಳುನಾಡಿನ ಆಗ್ನೇಯ ಪ್ರದೇಶದಲ್ಲಿ ಉತ್ತರದಿಂದ ದಕ್ಷಿಣಕ್ಕೆ ನಾವು ಚಲಿಸಿದಂತೆ ಶೀತ ಶ್ರಾಯ ದೀರ್ಘವಾಗುತ್ತ ಹೋಗಿ ಅದು ಮುಗಿದ ತರುವಾಯ ಸ್ಪಷ್ಟವಾಗಿ ಗುರುತಿಸಲಾಗುವ ಶುಷ್ಕಶ್ರಾಯ ಬರುತ್ತದೆ.

| ಭಾರತದ 30 ಮಳೆ ಉಪವಿಭಾಗಗಳಲ್ಲಿ ಋತುಕಾಲಿಕ ಸರಾಸರಿ ಮಳೆ (ಸೆಂಮೀಗಳಲ್ಲಿ) | | | | | |
|---|---|---|---|---|---|
| ಉಪವಿಭಾಗ | ಚಳಿಗಾಲ ಡಿಸೆಂಬರ್‌ನಿಂದ ಫೆಬ್ರವರಿ ವರೆಗೆ ಸೆಂಮೀ | ಬೇಸಗೆ ಮಾರ್ಚಿಯಿಂದ ಮೇ ವರೆಗೆ ಸೆಂಮೀ | ಮಳೆಗಾಲ ಜೂನ್‌ನಿಂದ ಸೆಪ್ಟಂಬರ್ ವರೆಗೆ ಸೆಂಮೀ | ಈಶಾನ್ಯ ಮಾನ್‌ಸೂನ್ ಅಕ್ಟೋಬರ್‌ನಿಂದ ನವೆಂಬರ್ ವರೆಗೆ ಸೆಂಮೀ | ವಾರ್ಷಿಕ ಸರಾಸರಿ ಸೆಂಮೀ |
| ಅಸ್ಸಾಂ | 6.2 | 63.5 | 163.2 | 15.1 | 248.0 |
| ಪಶ್ಚಿಮ ಬಂಗಾಲ | 3.8 | 30 | 142.2 | 13.1 | 90.8 |
| ಒರಿಸ್ಸ | 4.6 | 14.2 | 113.0 | 12.6 | 144.5 |
| ಛೋಟಾ ನಾಗಪುರ | 6.5 | 9.2 | 108.4 | 5.7 | 130.0 |
| ಬಿಹಾರ | 3.6 | 8.3 | 104.0 | 6.4 | 122.4 |
| ಉತ್ತರಪ್ರದೇಶ | 3.9 | 2.8 | 87.4 | 5.1 | 99.3 |
| ಉತ್ತರಾಂಚಲ | 5.8 | 3.4 | 83.7 | 2.5 | 95.4 |
| ಪೂರ್ವ ಮತ್ತು ಉತ್ತರಪಂಜಾಬ್ | 7.4 | 4.8 | 46.3 | 0.9 | 59.0 |
| ನೈಋತ್ಯಪಂಜಾಬ್ | 3.2 | 3.4 | 16.7 | 0.3 | 23.7 |
| ಕಾಶ್ಮೀರ | 2.3 | 23 | 56.3 | 2.4 | 105.0 |
| ವಾಯವ್ಯ ಸರಹದ್ದಿನ ಪ್ರಾಂತ್ಯಗಳು | 8.5 | 10.6 | 21.9 | 1.6 | 42.7 |
| ಸಿಂಧ್ ಪ್ರಾಂತ್ಯ | 1.7 | 1.0 | 13.4 | 02 | 16.3 |
| ಪಶ್ಚಿಮ ರಾಜಸ್ಥಾನ | 1.6 | 1.4 | 29.8 | 0.3 | 31.2 |
| ಪೂರ್ವ ರಾಜಸ್ಥಾನ | 2.4 | 2.9 | 58.2 | 1.4 | 64.0 |
| ಗುಜರಾತ್ | 0.55 | 0.6 | 80.0 | 1.8 | 83.0 |
| ಪಶ್ಚಿಮ ಮಧ್ಯಭಾರತ | 2.1 | 1.2 | 80.1 | 1.9 | 85.4 |
| ಪೂರ್ವ ಮಧ್ಯಭಾರತ | 3.6 | 2.0 | 89.0 | 3.3 | 98.0 |
| ಬಿಹಾರ | 2.6 | 2.4 | 71.3 | 5.2 | 81.6 |
| ಪಶ್ಚಿಮ ಮಧ್ಯಪ್ರಾಂತ್ಯಗಳು | 3.7 | 2.9 | 104.2 | 4.5 | 115.3 |
| ಪೂರ್ವ ಮಧ್ಯಪ್ರಾಂತ್ಯಗಳು | 3.9 | 5.3 | 117.7 | 5.0 | 132.1 |
| ಕೊಂಕಣ | 0.7 | 4.7 | 260.2 | 12.0 | 277.6 |
| ಮುಂಬೈದಖ್ಖನ್ | 1.3 | 5.4 | 62.0 | 9.7 | 78.4 |
| ಉತ್ತರ ಹೈದರಾಬಾದ್ | 1.7 | 3.9 | 74.9 | 8.1 | 88.6 |
| ದಕ್ಷಿಣ ಹೈದರಾಬಾದ್ | 1.4 | 5.3 | 59.3 | 9.8 | 76.0 |
| ಮೈಸೂರು | 1.8 | 13.9 | 56.5 | 19.1 | 91.4 |
| ಮಲಬಾರ್ | 7.2 | 32.0 | 181.5 | 43.0 | 263.4 |
| ಆಗ್ನೇಯ ತಮಿಳುನಾಡು | 12.1 | 11.5 | 30.5 | 35.0 | 89.1 |
| ದಕ್ಷಿಣ ತಮಿಳುನಾಡು | 7.2 | 6.1 | 38.8 | 0.2 | 62.2 |
| ಉತ್ತರ ತಮಿಳುನಾಡು ಕರಾವಳಿ | 4.3 | 8.7 | 63.5 | 25.4 | 102.0 |

ಮೇಲೆ ವಿವರಿಸಿರುವಂಥ ಪಟ್ಟಿಗಳನ್ನು 40–50 ವರ್ಷಗಳವರೆಗೆ ಪ್ರತಿ ವರ್ಷಕ್ಕೂ ತಯಾರಿಸಿ ಪರಿಶೀಲಿಸುವುದುಂಟು. ಇಂಥವುಗಳ ಸಾರಾಂಶವನ್ನು ಮಳೆ ಉಪವಿಭಾಗವಾರು ಭಾರತದ 30 ಉಪವಿಭಾಗಗಳಲ್ಲಿ ಒಂದೊಂದಕ್ಕೂ ಪುನರ್ವಿತರಣೆ ಮಾಡಿ ಅಭ್ಯಸಿಸುತ್ತಾರೆ. ಕರ್ನಾಟಕ ರಾಜ್ಯದ ವಾರ್ಷಿಕ ಪ್ರಸಾಮಾನ್ಯ ಮಳೆ 75 ಸೆಂಮೀ ಸನಿಹದಲ್ಲಿದೆ. ಏಪ್ರಿಲ್ ತಿಂಗಳ ಎರಡನೆಯ ವಾರದಿಂದ ನವೆಂಬರ್ ಕೊನೆಯವರೆಗೆ (34 ವಾರಗಳ ಕಾಲ) ವ್ಯಾಪಿಸಿರುವುದು. ಡಿಸೆಂಬರ್‌ನಿಂದ ಮುಂದಿನ ಮಾರ್ಚ್‌ವರೆಗೆ ಸಾಮಾನ್ಯವಾಗಿ ಶುಷ್ಕಪ್ರಾಯ. ಐದು ಅಥವಾ ಹೆಚ್ಚು ವಾರಗಳ ಕಾಲ ಸುರಿಯುವಂಥ ಸಮರ್ಪಕ ಮಳೆ 42 ವರ್ಷಗಳಲ್ಲಿ 14 ಸಲ ಕಂಡುಬಂದಿದೆ. ನಾಲ್ಕು ವಾರಗಳ ಕಾಲದ ಮಹಾಪೂರ 1913ರಲ್ಲಿ ಸಂಭವಿಸಿದೆ. ಪ್ರಸಾಮಾನ್ಯ, ಮಹಾಪೂರ ಮತ್ತು ಅನಾವೃಷ್ಟಿ ವಾರಗಳ ಶೇಕಡಾ ಪ್ರಮಾಣ ಅನುಕ್ರಮವಾಗಿ 43.9, 16.3, 39.8. ಇಡೀ ದೇಶವನ್ನು ಪರಿಶೀಲಿಸುವಾಗ ವಾರ್ಷಿಕ ಮಳೆ 100 ಸೆಂಮೀ ಗಳಿಗಿಂತ ಹೆಚ್ಚು ಇರುವ ಈಶಾನ್ಯ ಭಾರತ, ಮಧ್ಯ ಪ್ರದೇಶಗಳು, ಕೊಂಕಣ ಮತ್ತು ಕೇರಳ ಈ ಪ್ರದೇಶಗಳಲ್ಲಿನ ಮಳೆಸುರಿತದ ವಿಚಲನೆ ಕನಿಷ್ಠ ಪ್ರಮಾಣದ್ದು. ಈ ಭಾಗಗಳಲ್ಲಿ ಮಳೆ ನೀರನ್ನು ಅವಲಂಬಿಸಿ ವ್ಯವಸಾಯ ಮಾಡಬಹುದು. ದೇಶದ ಉಳಿದ ಭಾಗಗಳಲ್ಲಿ ಯಶಸ್ವೀ ಕೃಷಿ ಉತ್ಪಾದನೆಗೆ ಮಳೆಯ ಜೊತೆಗೆ ನೀರಾವರಿಯ ನೆರವೂ ಬೇಕಾಗುತ್ತದೆ. ದೇಶಾದ್ಯಂತ ಅನಾವೃಷ್ಟಿ ಮತ್ತು ಕ್ಷಾಮ ದುರಂತಗಳನ್ನು ಒಂದು ಶತಮಾನದ ಅವಧಿಯಲ್ಲಿ 5 ಅಥವಾ 6 ಸಲ ನಿರೀಕ್ಷಿಸಬಹುದು. ಕೇವಲ ಕೆಲವೇ ವಲಯಗಳಿಗೆ ಸೀಮಿತವಾಗಿರುವ ಆಂಶಿಕ ದುರಂತಗಳು ಒಂದು ಶತಮಾನ ಕಾಲದಲ್ಲಿ 30 ರವರೆಗೂ ಇರಬಹುದು. ಅತಿಶಯ ಸಮೃದ್ಧ ವರ್ಷಗಳ ಅತಿ ಉತ್ಪಾದನೆಯನ್ನು ಕ್ಷೀಣ ವರ್ಷಗಳಲ್ಲಿ ಉಪಯೋಗಿಸಲೋಸ್ಕರ ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು. ಬೆಳೆವಿಮೆಯ ಮೂಲಕ ಸರ್ಕಾರ ರೈತರಿಗೆ ರಕ್ಷಣೆ ಒದಗಿಸಬಹುದು.

ಹವಾಗುಣ ಮತ್ತು ಕೃಷಿ : ಮಳೆ, ಉಷ್ಣತೆ, ಆರ್ದ್ರತೆ, ಗಾಳಿ, ಬಿಸಿಲು ಮುಂತಾದವುಗಳ ಅನುಕೂಲತಮ ಅಳವಡಿಕೆಯನ್ನು ಅವಲಂಬಿಸಿ ಪೈರುಗಳ ಆರೋಗ್ಯವಂತ ಬೆಳವಣಿಗೆ ಮತ್ತು ಇಳುವರಿ ಇವೆ. ಪ್ರವರ್ಧಿಸುತ್ತಿರುವ ಸಸ್ಯ ಸಮುದಾಯಗಳಿಗೆ ನಿಕಟ ಪರಿಸರವನ್ನು ಒದಗಿಸುವುದು ಇವೇ. ಆದ್ದರಿಂದ ಪ್ರತಿಕೂಲ ಹವೆಯನ್ನು ಕುರಿತ ಮುನ್ನೆಚ್ಚರಿಕೆಗಳು ಸಕಾಲದಲ್ಲಿ ಸರಿಯಾಗಿ ದೊರೆತರೆ ಅವುಗಳಿಂದ ರೈತರಿಗೆ ಖಂಡಿತ ಲಾಭ ಉಂಟು. ಉದಾಹರಣೆಗೆ ಮಾನ್‌ಸೂನ್ ಮಳೆಗಳ ಪ್ರಾರಂಭ ಎಂದು ಆಗಬಹುದು ಎಂಬುದನ್ನು ರೈತನಿಗೆ ಸಾಕಷ್ಟು ಮೊದಲೇ ತಿಳಿಸಿದರೆ ಮತ್ತು, ತರವಾಯ, ಆ ಶ್ರಾಯದಲ್ಲಿ ಮಳೆಸುರಿತ ಹೇಗೆ ಬದಲಾಗಬಹುದು, ಮಳೆಯಲ್ಲಿ ಎಂದು ತಡೆ ಉಂಟಾಗಬಹುದು ಎಂಬವೇ ಮುಂತಾದ ವಿವರಗಳನ್ನು ಮುಂದಾಗಿಯೇ ಪ್ರಕಟಿಸಿದರೆ ಕೃಷಿಯ ಹಲವಾರು ಚಟುವಟಿಕೆಗಳಾದ ಪಾತಿಯ ರಚನೆ, ಗೊಬ್ಬರ ಹಾಕುವುದು, ಬಿತ್ತನೆ, ನಾಟಿ, ಕಳೆ ಕೀಳುವಿಕೆ, ಕೊಯ್ಲು ಒಕ್ಕಲು, ಒಣಗಿಸುವುದು ಮುಂತಾದವನ್ನು ಯುಕ್ತವಾಗಿ ಅಳವಡಿಸಿಕೊಂಡು ಬೆಳೆಗೆ ಒದಗಬಹುದಾದ ನಷ್ಟವನ್ನು ಕನಿಷ್ಠ ಮಟ್ಟಕ್ಕೆ ಇಳಿಸಬಹುದು; ರೈತನ ಬಲು ಮಿತ ಮೂಲಗಳಾದ ಗೆಯ್ಮೆ, ಗೊಬ್ಬರ, ಬೀಜ, ನೀರು ಇವೇ ಮುಂತಾದವನ್ನು ಲಾಭದಾಯಕವಾಗಿ ಬಳಸಬಹುದು. ಬಿತ್ತನೆಯಿಂದ ಕೊಯ್ಲಿನವರೆಗಿನ ಬೆಳೆಯ ಜೀವಿತದಲ್ಲಿ ಅವಧಿಕ ಕಾಲಗಳಿವೆ. ಬಿತ್ತನೆಯ ಕಾಲವೇ ಸಾಕಷ್ಟು ಗಾಬರಿ ಹುಟ್ಟಿಸಬಹುದು. ಬಿತ್ತನೆ ಮುಗಿದೊಡನೆ ಬಿರುಮಳೆ ಸುರಿದರೆ ಬಹುಶಃ ಬೀಜಗಳು ತೊಳೆದು ಹೋಗಿ ಮೊಳಕೆ ಒಡೆಯುವ ಪ್ರಮಾಣ ಬಲು ಕಡಿಮೆ ಆಗುವುದೆಂಬುದು ರೈತನಿಗೆ ತಿಳಿದಿದೆ. ಬಿತ್ತನೆ ಮುಗಿದ ಬಳಿಕ ಸುದೀರ್ಘ ಅನಾವೃಷ್ಟಿ ತಲೆದೋರಿದರೆ ಎಳೆ ಅಗೆಗಳು ಒಣಗೀ ಹೋಗಬಹುದು; ಮತ್ತು ಈ ಕಾರಣದಿಂದ ಇಡೀ ಗದ್ದೆಯನ್ನು ಪುನಃ ಬಿತ್ತಬೇಕಾದೀತು. ಮೊದಲಿನ ಘಟ್ಟದಲ್ಲಿ (ಎಂದರೆ ಮೊಳಕೆ ಒಡೆಯುವಲ್ಲಿಂದ ತೊಡಗಿ ಚಿಗುರು ಒಡೆಯುವವರೆಗೆ) ಸನ್ನಿವೇಶಗಳೆಲ್ಲವೂ ಅನುಕೂಲಕರವಾಗಿದ್ದರೆ ಬೆಳೆಯ ಪ್ರಾರಂಭ ಉತ್ತಮವಾಗಿ ಆಗುತ್ತದೆ. ಆಮೇಲೆ ಮಳೆಯಿಲ್ಲದ ಸ್ವಚ್ಛ ಹವೆಯ ಅವಕಾಶ ಒದಗಿ ಎಡೆಹೊಡೆಯುವುದಕ್ಕೂ ಕಳೆ ಕೀಳುವುದಕ್ಕೂ ಅನುಕೂಲವಾಗುವುದು. ಎರಡನೆಯ ಘಟ್ಟದಲ್ಲಿ (ಎಂದರೆ ಸಸ್ಯದ ತೀವ್ರ ಬೆಳವಣಿಗೆಯ ಕಾಲ–ಇದನ್ನು ವೈಭವಕಾಲ ಎಂದು ಕರೆಯುವುದುಂಟು) ದ್ಯುತಿಸಂಶ್ಲೇಷಣೆಗೋಸ್ಕರ ನೀರಿನ ಮತ್ತು ಬಿಸಿಲಿನ ಆವಶ್ಯಕತೆ ಗರಿಷ್ಠವಾಗಿದೆ. ಮುಂದಕ್ಕೆ ಮೂರನೆಯ ಘಟ್ಟ ಹೂ ಬಿಡುವುದು, ತೆನೆಗೂಡುವುದು ಮತ್ತು ಕಾಳುಗಟ್ಟುವುದು. ಇದರಲ್ಲಿ ಸಸ್ಯದ ಎಲೆ ಕಾಂಡಗಳ ಬೆಳವಣಿಗೆ ಪೂರ್ಣಗೊಂಡ ತರುವಾಯ ಪುನರುತ್ಪತ್ತಿಯ ಅವಧಿ (ಎಂದರೆ ಮುಖ್ಯವಾಗಿ ಬೀಜಗಳ ಬಲಿಯುವಿಕೆ) ಪ್ರಾರಂಭವಾಗುವುದು. ಈ ವೇಳೆ ಹವೆ ಸ್ವಚ್ಛವಾಗಿರಬೇಕು. ಆದಷ್ಟು ಕಡಿಮೆ ಮೋಡಕವಿದ ವಾತಾವರಣವಿರಬೇಕು. ಹಾಗಲ್ಲದೇ ಈ ಅವಧಿಯಲ್ಲಿ ಮೋಡ ಮುಸುಕಿದ ಥಂಡಿ ಹವೆಯೇನಾದರೂ ಇತ್ತೊ ಅದುವರೆಗೂ ಹುಲುಸಾಗಿ ಬೆಳೆದುಬಂದಿದ್ದ ಪೈರು ತೀರ ನಿರಾಶೆ ಉಂಟುಮಾಡುವಂತೆ ಹಾಳಾಗಿಹೋಗಬಹುದು. ತೆನೆಗಳು ಒಡೆಯುವ ಕಾಲದಲ್ಲಿ, ಕಾಳುಗಳು ಇನ್ನೂ ಹಾಲಿನ ಸ್ಥಿತಿಯಲ್ಲಿಯೇ ಇರುವ ವೇಳೆಯಲ್ಲಿ, ಕೇವಲ ಒಂದು ದಿವಸದ ಬಿಸಿಗಾಳಿಯೂ ತೆನೆಗಳನ್ನು ಒಣಗಿಸಿ ಬೆಳೆಗೆ ಸರ್ವನಾಶ ತರಬಹುದು. ಈ ಶ್ರಾಯ ಯಾವ ಆತಂಕವೂ ಇಲ್ಲದಂತೆ ಕಳೆದು ಹೋದ ಮೇಲೆಯೂ ಪ್ರತಿಕೂಲ ಹವೆಯಿಂದ ಬೆಳೆಗೆ ಒದಗಬಹುದಾದ ಅಪಾಯ ಪೂರ್ಣವಾಗಿ ತಪ್ಪಿತೆನ್ನುವಂತಿಲ್ಲ. ಬಿರುಸು ಜಡಿಮಳೆ, ಆಲಿಕಲ್ಲುಗಳ ಕೆಡೆತ ಮುಂತಾದವು ಬೆಳೆಗೆ ಬಹಳ ಹಾನಿ ಉಂಟುಮಾಡಬಲ್ಲವು. ಇಂಥ ಅಪಾಯಕರ ಸನ್ನಿವೇಶಗಳನ್ನು ಕುರಿತ ಸಕಾಲಿಕ ಮುನ್ನೆಚ್ಚರಿಕೆಗಳನ್ನು ರೈತನಿಗೆ ಕೊಟ್ಟುದೇ ಆದರೆ ಆತ ಕೊಯ್ಲು ಕೆಲಸವನ್ನು ಒಡನೆಯೇ ಚುರುಕಾಗಿ ನಡೆಸಿ ಬೆಳೆಯನ್ನು ಉಳಿಸಿಕೊಳ್ಳಬಲ್ಲ. ಮುಂದೆ ಕಣದಲ್ಲಿ ಒಟ್ಟಿರುವ ಮೆದೆ ಹಠಾತ್ ಮಳೆ ಬಿರುಗಾಳಿಗಳಿಂದ ಹಾಳಾಗಿಹೋಗುವ ಸಂಭಾವ್ಯತೆಯೂ ಉಂಟು. ಇದುವರೆಗೆ ಹವೆಯ ನೇರ ಪ್ರಭಾವವನ್ನು ಹೇಳಲಾಗಿದೆ. ಹವೆಗೆ ಬೆಳೆಯ ಬೆಳವಣಿಗೆ ಮೇಲೆ ಪರೋಕ್ಷ ಪ್ರಭಾವವೂ ಉಂಟು. ಪೈರು ಬೆಳೆಯುತ್ತಿರುವ ವೇಳೆಯಲ್ಲಿ ಹಲವಾರು ರೋಗಗಳೂ ಕೀಟಪಿಡುಗುಗಳೂ ಅದರ ಮೇಲೆ ದಾಳಿಮಾಡುತ್ತವೆ. ಇಂಥ ದಾಳಿಗಳ ತೀವ್ರತೆ ಮತ್ತು ಪುನರಾವರ್ತನೆ ಹವೆಯ ಕೆಲವು ವಿಶಿಷ್ಟ ಪರಿಸ್ಥಿತಿಗಳನ್ನು ಅವಲಂಬಿಸಿವೆ. ಧಾನ್ಯಗಳಿಗೆ ತಗಲುವ ಬೂಷ್ಟು ರೋಗಗಳು, ಗೋದಿ ಹೊಲಗಳ ಮೇಲೆ ಎರಗುವ ಮಿಡತೆ ದಂಡುಗಳು ರೈತ ಎಂದೂ ಮರೆಯದ ವೈರಿಗಳು.

ಪ್ರತಿಕೂಲ ಹವೆಯ ವಿದ್ಯಮಾನಗಳು : ಹವೆಯಲ್ಲಿನ ಏರಿಳಿತಗಳೂ ಹೆಚ್ಚಾಗಿ ಪಕ್ಕನೆ ಸಂಭವಿಸುತ್ತವೆ. ಅವುಗಳ ಆಘಾತವನ್ನು ಬೆಳೆಗಳು, ಹಣ್ಣಿನ ತೋಟಗಳು, ಒತ್ತಟ್ಟಿಗಿರಲಿ, ರಸ್ತೆ ಬದಿಯ ಸಾಲು ಮರಗಳು ಸಹ ತಾಳಿಕೊಳ್ಳಲಾರವು. ಪ್ರತಿಕೂಲ ಹವೆಯ ಪರಿಣಾಮವಾಗಿ ಎದ್ದುಕಾಣುವ ವಿನಾಶಕಾರೀ ವಿದ್ಯಮಾನಗಳೆಂದರೆ.

**1.** ಅತಿವೃಷ್ಟಿ ಹಾಗೂ ಮಹಾಪೂರಗಳು : ಸತತವಾಗಿ ಹಲವಾರು ದಿವಸಗಳ ಕಾಲ ನದಿಗಳ ಜಲಾನಯನ ಪ್ರದೇಶಗಳಲ್ಲಿ ಬಿರುಮಳೆ ಸುರಿದಾಗ ಸಂಭವಿಸುವ ಮಹಾಪೂರಗಳ ಗಾತ್ರವನ್ನು ಊಹಿಸಿಕೊಳ್ಳಬಹುದು. ಜಲಾನಯನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆದ ಅರಣ್ಯಗಳು ಮತ್ತು ಅಲ್ಲಲ್ಲ ವ್ಯಾಪಿಸಿದ ಗಿಡಗಂಟಿಗಳು ನೀರಿನ ಪ್ರವಾಹವನ್ನು ನಿಯಂತ್ರಿಸುತ್ತವೆ. ಒಂದೇ ಸಲ ಕಿರುತೊರೆಗಳಿಗೆ ದುಮ್ಮಿಕ್ಕುವ ನೀರಿನ ಓಟವನ್ನೂ ಮೊತ್ತವನ್ನೂ ತಡೆಹಿಡಿದು ನಿಲ್ಲಿಸುವುದರ ಜೊತೆಗೆ ಮಣ್ಣಿನ ಸವಕಳಿಯನ್ನು ಕನಿಷ್ಠಗೊಳಿಸುವಲ್ಲಿ ಇವುಗಳ ಪಾತ್ರ ಹಿರಿದು. ಹೀಗೆ ಅತಿವೃಷ್ಟಿಯ ಪ್ರಸಾದವಾದ ನೀರು ತಗ್ಗಿನ ಹೊಳೆ, ನದಿಗಳಿಗೆ ಕೊಂಚ ಮಂದಗತಿಯಿಂದ ಪೂರೈಕೆ ಆಗುವುದರಿಂದ ಅವುಗಳಲ್ಲಿ ಪ್ರವಾಹದ ಮಟ್ಟ ಏರುವುದು ನಿಧಾನವಾಗಿ, ಸಂಭವಿಸಬಹುದಾದ ನಾಶ ಕಡಿಮೆ ಆಗುತ್ತದೆ. ಆದ್ದರಿಂದ ಜಲಾನಯನ ಪ್ರದೇಶಗಳಲ್ಲಿ, ಮುಖ್ಯವಾಗಿ, ಅರಣ್ಯಗಳ ಅಭಿವೃದ್ಧಿ ಹಾಗೂ ರಕ್ಷಣೆ ತೀರ ಅವಶ್ಯಕವಾದ ಒಂದು ಕಾರ್ಯ. ಇನ್ನು ಗದ್ದೆ, ಬಯಲುಗಳಲ್ಲಿ ರೈತರು ಕಾಲುವೆಗಳನ್ನೂ ಚರಂಡಿಗಳನ್ನೂ ತೆರೆದಿಟ್ಟು ಅತಿವೃಷ್ಟಿಯ ಅಧಿಕ ನೀರನ್ನು ಅಡೆತಡೆ ಇಲ್ಲದೇ ಹರಿದುಹೋಗಲು ಯುಕ್ತ ಅವಕಾಶ ಕಲ್ಪಿಸಿಕೊಡಬೇಕು. ಮಹಾಪೂರಗಳಿಂದ ಒದಗುವ ಹಾನಿಗಳನ್ನು ತಡೆದುಕೊಂಡು ಬಾಳಿ ಸಮೃದ್ಧ ಬೆಳೆಗಳನ್ನು ನೀಡಬಲ್ಲ ವಿಶಿಷ್ಟ ತಳಿಗಳ ಸಂಶೋಧನೆಯತ್ತ ಲಕ್ಷ್ಯ ಈಚಿನ ದಿವಸಗಳಲ್ಲಿ ಹರಿದಿದೆ.

**2.** ಅನಾವೃಷ್ಟಿಗಳು : ಇವುಗಳ ಪ್ರಮುಖ ದುಷ್ಪರಿಣಾಮ ಬೆಳೆನಾಶ ಮತ್ತು ಅದರಿಂದ ಕ್ಷಾಮ. ಅಂಕಿ ಅಂಶಗಳ ಆಧಾರದಿಂದ ಅನಾವೃಷ್ಟಿ ವರ್ಷಗಳ ಸಂಭಾವ್ಯತೆಯನ್ನು ಊಹಿಸಿ ಆ ಮೊದಲೇ ಅವನ್ನು ಎದುರಿಸಲು ಯುಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಹಿಂದಿನ ಸಮೃದ್ಧ ವರ್ಷಗಳಲ್ಲಿ ದೊರೆತ ನೀರನ್ನು ಮಿತವಾಗಿ ವ್ಯಯಿಸಬೇಕು : ಜೊತೆಯಲ್ಲೇ ಸಾಧ್ಯವಾಗುವಷ್ಟು ನೀರನ್ನು ಕೆರೆಕುಂಟೆಗಳಲ್ಲಿ ಜಲಾಶಯಗಳಲ್ಲಿ ಸಂಗ್ರಹಿಸಿಡಬೇಕು ; ನೀರಿನ ಅಪವ್ಯಯವನ್ನು ನಿಲ್ಲಿಸಬೇಕು. ಇವೆಲ್ಲ ಕಾರ್ಯಕ್ರಮಗಳಿಂದ ಅನಾವೃಷ್ಟಿಯ ದುಷ್ಪರಿಣಾಮಗಳನ್ನು ತಕ್ಕಮಟ್ಟಿಗೆ ಕಡಿಮೆ ಮಾಡಬಹುದು. ಇನ್ನು ಅವಭೂಮಿ (ಸಬ್‌ಸಾಯಿಲ್) ನೀರಾವರಿಯನ್ನು ತೊಡಗುವುದರಿಂದ ಬಿಸಿಲಿನಿಂದ ಕಾದು ಉಗಿಯಾಗಿ ಹೋಗುವ ನೀರಿನ ನಷ್ಟವನ್ನು ಬಲುಮಟ್ಟಿಗೆ ಪಡೆಯಬಹುದು. ಜಲಾಶಯಗಳಲ್ಲಿ ನೀರಿನ ಮೇಲುತಳದಿಂದ ಆವಿಯಾಗಿ ಹೋಗುವ ನೀರಿನ ಅಂಶವನ್ನು ಕಡಿಮೆ ಮಾಡಲು ಆ ಆವರಣದಲ್ಲಿ ಗಾಳಿಯ ಸ್ವಚ್ಛಂದ ಚಲನೆಗೆ ಅವಕಾಶ ಒದಗದಂತೆ ಸುತ್ತುಮುತ್ತಲೂ ಗಿಡಮರಗಳನ್ನು ವಿಪುಲವಾಗಿ ಬೆಳೆಸಬೇಕು. ಸೆಟೈಲ್ ಸ್ಟ್ರೈಲ್ ಆಲ್ಕೊಹಾಲ್ ಎಂಬ ದ್ರವವನ್ನು ನೀರಿನ ಮೇಲುತಳದ ಮೇಲೆ ತೆಳುವಾಗಿ ಪಸರಿಸಿ ಆವಿಯಾಗಿ ಹೋಗುವ ನೀರಿನ 20%–30% ಅಂಶವನ್ನು ತಡೆಹಿಡಿಯಲಾಗಿದೆ. ಕ್ಷಾಮ ಪರಿಸ್ಥಿತಿಗಳನ್ನು ಯಶಸ್ವಿಯಾಗಿ ಎದುರಿಸಿಯೂ ಬೆಳೆಯನ್ನು ನೀಡಬಲ್ಲ ಸಸ್ಯಜಾತಿಗಳ ಸಂಶೋಧನೆಯೂ ಕೃಷಿತಜ್ಞರಿಂದ ನಡೆದಿದೆ.

**3.** ಆವರ್ತ ಬಿರುಗಾಳಿಗಳು ಹಾಗೂ ಹವೆಯ ಒತ್ತಡ ಕುಸಿತಗಳು : ಇವು ಹವಾವಿಜ್ಞಾನದ ಮಹಾವಿದ್ಯಮಾನಗಳು. ಬಂಗಾಳ ಆಖಾತದಲ್ಲಿ ಅಥವಾ ಅರೇಬಿಯನ್ ಸಮುದ್ರದಲ್ಲಿ ಅವು ತಲೆದೋರುವ ಅವಧಿಗಳನ್ನು ಮುನ್ನುಡಿಯಬಹುದು. ವಾಸ್ತವಿಕವಾಗಿ ಅವು ಹುಟ್ಟಿದಾಗ ಆ ಸ್ಥಾನಗಳನ್ನು ಗುರುತಿಸಬಹುದು. ಒತ್ತಡ ಕುಸಿತಗಳಿಂದ ಉಂಟಾಗುವ ಆವರ್ತ ಬಿರುಗಾಳಿಗಳು ನಿರಂತರ ಸಂಚಾರಿಗಳು. ತಮಗೆ ಪ್ರಿಯವಾದ ಪಥದ ಮೇಲೆ ಸಂಚರಿಸುತ್ತ ದಾರಿಯಿಡೀ ಮಳೆ ಸುರಿಸುತ್ತ ಥಂಡಿ ಹವೆ ಬೀರುತ್ತ ಸಾಗುತ್ತವೆ. ಸಮುದ್ರದ ಅಂಚಿನಿಂದ ಅವು ನೆಲವನ್ನು ಪ್ರವೇಶಿಸುವ ದಿವಸಗಳನ್ನು ಮುಂದಾಗಿಯೇ ಹೇಳಲು ಸಾಧ್ಯ ಉಂಟು.

**4.** ಮಿಂಚು ಗುಡುಗಿನ ಬಿರುಗಾಳಿಗಳು, ಆಲಿಕಲ್ಲಿನ ಬಿರುಗಾಳಿಗಳು ಮತ್ತು ದೂಳುಮಯ ಬಿರುಗಾಳಿಗಳು : ಇಂಥ ಸ್ಥಾನಿಕ ಘಟನೆಗಳು ಸಾಧಾರಣವಾಗಿ ಮಾನ್‌ಸೂನ್ ಮಳೆಯ ಆಗಮನದ ಮೊದಲು ಹಾಗೂ ಕೊನೆಯ ಅವಧಿಯಲ್ಲಿ ಸಂಭವಿಸುತ್ತವೆ. ಹವೆಯಲ್ಲಿ ಆರ್ದ್ರತೆ ಇಲ್ಲದಿದ್ದರೆ ಕೇವಲ ದೂಳಿಮಯ ಬಿರುಗಾಳಿ ಉಂಟಾಗುತ್ತದೆ. ವಾತಾವರಣದಲ್ಲಿ ಸಾಕಷ್ಟು ತೇವ ಇದ್ದರೆ ಮಿಂಚು ಗುಡುಗುಗಳಿಂದ ಕೂಡಿದ ಮಳೆ ಗಾಳಿ ಉದ್ಭವವಾಗುವುದು. ಆಲಿಕಲ್ಲಿನ ಮಳೆಗಳೆಂದರೆ ವಿಶೇಷವಾಗಿ ಗುಡುಗು ಮಿಂಚಿನ ಬಿರುಗಾಳಿಗಳು. ವಾತಾವರಣದಲ್ಲಿ ಆಲಿಕಲ್ಲುಗಳನ್ನು ಉಂಟುಮಾಡಬಲ್ಲಷ್ಟು ಪ್ರಬಲವಾದ ಊರ್ಧ್ವಗಾಮಿ ಗಾಳಿ ಇದ್ದಾಗ ಆಲಿಕಲ್ಲಿನ ಮಳೆ ಸುರಿಯುತ್ತದೆ. ಇದರಿಂದ ಬೆಳೆಗಳಿಗೆ ಬಲು ಹಾನಿ ಉಂಟು. ಈ ಅಸ್ಥಿರ ಘಟನೆಗಳನ್ನು ಕುರಿತು ಯಾವ ವಿಧದ ಮುನ್ಸೂಚನೆಯನ್ನು ಕೊಡಲೂ ಸಾಧ್ಯವಾಗಿಲ್ಲ. ಆದರೆ ಒಂದು ಪ್ರಕಾರದ ಗುಡುಗು ಮಿಂಚಿನ ಬಿರುಗಾಳಿ ತಲೆದೋರುವ ಪ್ರದೇಶಗಳನ್ನು ಗುರುತಿಸಬಹುದು ಮತ್ತು ಅದು ಸಂಭವಿಸಲು ಅಗತ್ಯವಾದ ಪರಿಸ್ಥಿತಿಯನ್ನು ಮುಂಚಿತವಾಗಿ ಅರಿಯಬಹುದು. ಹಿಮಾಲಯದ ಪರ್ವತಮಯ ಪ್ರದೇಶಗಳು ಹಾಗೂ ಭಾರತದ ಈಶಾನ್ಯ ಭಾಗಗಳು ಇಂಥ ಗಾಳಿಗಳು ಹೆಚ್ಚಾಗಿ ಸಂಭವಿಸುವ ಪ್ರದೇಶಗಳು. ಕರಾವಳಿ ಪ್ರದೇಶಗಳಲ್ಲಿ ಇವುಗಳ ಸಂಭವ ಬಲು ಕಡಿಮೆ. ಆದರೆ ಒಳನಾಡುಗಳಲ್ಲಿ ಕರ್ನಾಟಕ ಹಾಗೂ ದಖನಿನ ತಪ್ಪಲುಗಳಲ್ಲಿ ಅವು ಮೇಲಿಂದ ಮೇಲೆ ಸಂಭವಿಸುವುದುಂಟು.

**5.** ಅತಿಶೀತಗಾಳಿ ಹಾಗೂ ಹಿಮಗಾಳಿ ಉತ್ಪಾತಗಳು : $18^0$ ಉ. ಅಕ್ಷಾಂಶದಿಂದ ಕೆಳಗಿನ ಭಾಗದಲ್ಲಿರುವ ಉಪಖಂಡದಲ್ಲಿ ಅತಿಶೀತ ತರಂಗದಿಂದ ಉಂಟಾಗುವ ಅಪಾಯ ಬಲು ಕಡಿಮೆ. ಉತ್ತರಾಭಿಮುಖವಾಗಿ ನಾವು ಸಾಗಿದಂತೆ ಶೀತ ತರಂಗಗಳಿಗೆ ಈಡಾಗುವ

ಸಂಭಾವ್ಯತೆ ಏರುತ್ತದೆ. ವಾಯವ್ಯ ಭಾರತದಲ್ಲಿ ಶೈತ್ಯದ ತೀಕ್ಷ್ಣತೆ ಗರಿಷ್ಠ. ಈ ಮೊದಲೇ ಹೇಳಿದಂತೆ ಚಳಿಗಾಲದ ಪುಂಖಾನುಪುಂಖ ಒತ್ತಡಕುಸಿತಗಳ ಪರಿಣಾಮವೇ ಈ ಶೀತ ತರಂಗಗಳು. ಇವು ವಾಯವ್ಯ ಭಾರತವನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಬಂಗಾಳ ಅಸ್ಸಾಮ್ ಕಡೆಗೆ ಚಲಿಸುತ್ತವೆ. ಮುಂದೆ ಮುಂದೆ ತೆರಳಿದಂತೆ ಅವು ದುರ್ಬಲಗೊಳ್ಳುತ್ತವೆ.

**6.** ಉಷ್ಣ ತರಂಗಗಳು : ಬೇಸಗೆ ತೊಡಗಿದಂತೆ ಭಾರತದ ಒಳಭಾಗದಲ್ಲಿ ಉಚ್ಚ ಉಷ್ಣತೆಯ ಒಂದು ಪಟ್ಟಿ ಮೈದಳೆಯುತ್ತದೆ. ಆದರೆ ಮಳೆಗಾಲ ಆರಂಭವಾದಂತೆ ಈ ಪಟ್ಟಿ ಸ್ಥಾನ ಬದಲಾಯಿಸಿ ವಾಯವ್ಯ ಭಾಗಕ್ಕೆ ಹೋಗುತ್ತದೆ.

**7.** ಅತಿವೇಗದ ಗಾಳಿಗಳು : ಗುಡುಗಿನಿಂದ ಕೂಡಿದ ಅತಿವೇಗದ ಗಾಳಿಗಳು, ಒತ್ತಡ ಕುಸಿತಗಳು ಮುಂತಾದವು ಬೆಳೆಗಳಿಗೆ, ಹಣ್ಣುತೋಟಗಳಿಗೆ ಮತ್ತು ಗಿಡಗಳ ಸಾಲುಗಳಿಗೆ ಹಾನಿಕಾರಿಗಳು. ಇವು ಉಷ್ಣಮಾರುತಗಳಾಗಿದ್ದರೆ ಸರೋವರಗಳ, ನೆಲದ ಮತ್ತು ಬೆಳೆಗಳ ಶೋಷಣೆ ಅಧಿಕ ಪ್ರಮಾಣದಲ್ಲಿ ಆಗುತ್ತದೆ. ಗಾಳಿ ತಡೆಗಳು ಇಂಥ ಗಾಳಿಗಳನ್ನು ತಡೆಯುವುದರಿಂದ ಲಭಿಸುವ ಉಪಯುಕ್ತ ಪರಿಣಾಮಗಳು ಎಲ್ಲರಿಗೂ ತಿಳಿದಿವೆ. ಆದರೆ ಎಂಥ ತಡೆಮರಗಳ ಸಾಲೇ ಇರಲಿ ಅದನ್ನು ಲೆಕ್ಕಿಸದೇ ಉತ್ಪಾತವೆಸಗುವ ತೀವ್ರಗಾಳಿಗಳು ಒಮ್ಮೊಮ್ಮೆ ಬೀಸುವುದುಂಟು. ತೀವ್ರ ಚಂಡಮಾರುತಗಳು ಕರಾವಳಿಯನ್ನು ಅಡ್ಡ ಹಾಯುವಾಗ ಆ ಪ್ರದೇಶಗಳ ಮೇಲೆ ಅವುಗಳ ಪ್ರಭಾವ ಅತ್ಯಧಿಕ.

ರೈತನಿಗೆ ಒದಗಿಸುವ ಹವಾಮಾನ ವರದಿಗಳು : ಜುಲೈ 1915ರಿಂದ ಭಾರತೀಯ ರೈತನಿಗೆ ಹವೆಗೆ ಸಂಬಂಧಿಸಿದ ವರದಿಗಳನ್ನು ಕ್ರಮವಾಗಿ ಒದಗಿಸಲಾಗುತ್ತಿದೆ. ಈ ಸೇವೆಯನ್ನು ಪೂರೈಸುತ್ತಿರುವುದು ಪುಣೆಯಲ್ಲಿರುವ ಭಾರತೀಯ ಹವಾಮಾನ ವಿಜ್ಞಾನ ಇಲಾಖೆ. ಇದರ ಅಂಗವಾಗಿ ದೇಶದ ಎಲ್ಲ ಜಿಲ್ಲೆಗಳಿಗೂ (ಸು. 300) ಅನ್ವಯವಾಗುವ ಜಿಲ್ಲಾವಾರು ಮತ್ತು ಬೆಳೆವಾರು ಬೆಳೆ–ಹವೆ ಪಂಚಾಂಗಗಳನ್ನು ಪ್ರಕಟಿಸಲಾಗಿದೆ. ಇದಲ್ಲದೇ ದೂರದರ್ಶನಗಳು ಮತ್ತು ಮೂಲಕ ಸ್ಥಳೀಯ ಮುನ್ಸೂಚನೆಗಳನ್ನೂ ನಿರ್ದೇಶನಗಳನ್ನೂ ನಿಯತಕಾಲಿಕವಾಗಿ ಬಿತ್ತರಿಸುತ್ತಲೇ ಇರುತ್ತವೆ. ಆಯಾ ವಾರಗಳ ವಾಸ್ತವಿಕ ಪರಿಸ್ಥಿತಿಗಳನ್ನು ಸಂಗ್ರಹಿಸಿ ಪುಣೆಯ ಹವಾಮಾನ ವಿಜ್ಞಾನ ಇಲಾಖೆ ಪ್ರತಿ ತಿಂಗಳ ಬೆಳೆ ಭವಿಷ್ಯವನ್ನು ರೂಪಿಸುವುದು. ಅಲ್ಲದೆ ರಾಜ್ಯಗಳ ಕೃಷಿ ಇಲಾಖೆಗಳು ಸಹ ಸ್ಥಳೀಯವಾಗಿ ಸವಿವರವಾಗಿ ಈ ಕೆಲಸಗಳನ್ನು ಮಾಡಿ ರೈತರಿಗೆ ಯುಕ್ತಮಾಹಿತಿಗಳನ್ನು ಒದಗಿಸುತ್ತವೆ.

ಕೃಷಿ ಹವಾಮಾನ ವಿಜ್ಞಾನ : ಪರಿಸರ ವಿಧಿಸುವ ನಿಯಂತ್ರಣಾನುಸಾರ ಸಸ್ಯದ ಬೆಳವಣಿಗೆ ಮೇಲೆ ಪ್ರಭಾವ ಬೀರುವ ಬೇರೆ ಬೇರೆ ಅಂಶಗಳ ಅಭ್ಯಾಸವೇ ಕೃಷಿ ಹವಾಮಾನ ವಿಜ್ಞಾನ. ಎಲ್.ಎ. ರಾಮದಾಸ್ ಅವರ ನೇತೃತ್ವದಲ್ಲಿ ಈ ವಿಭಾಗ ಭಾರತದಲ್ಲಿ (ಪುಣೆ) ಸ್ಥಾಪಿತವಾಯಿತು (1932). ಈ ವಿಭಾಗದ ಚಟುವಟಿಕೆಗಳು ಪ್ರಧಾನವಾಗಿ ಮೂರು : 1. ಪ್ರಾಯೋಗಿಕ ಸಂಶೋಧನೆ 2. ಅಂಕಿ ಅಂಶಗಳ ಸಂಶೋಧನೆ 3. ಹವಾಮಾನ ವಿಜ್ಞಾನ ಹಾಗೂ ಕೃಷಿ ನಡುವೆ ಸಂಪರ್ಕ.

**1.** ಪ್ರಾಯೋಗಿಕ ಸಂಶೋಧನೆ : ವಾಸ್ತವಿಕ ಪರಿಸ್ಥಿತಿಗಳಲ್ಲಿ ಸಸ್ಯಗಳ ಮೇಲೆ ಬೇರೆ ಬೇರೆ ಕಾರಕಗಳ ಪ್ರಭಾವಗಳನ್ನು ಪ್ರಾಯೋಗಿಕವಾಗಿ ಅಳೆಯುವುದು. ಇದಕ್ಕಾಗಿ ನಾನಾತರದ ಪ್ರಯೋಗಗಳನ್ನು ರಚಿಸುವುದು ಇವೇ ಮುಂತಾದವು ಇಲ್ಲಿನ ಪ್ರಧಾನೋದ್ದೇಶ. ಸಸ್ಯಗಳ ಮುಖ್ಯ ವಾಸ್ತವಿಕ ಪರಿಸರವೆಂದರೆ ಇವೆರೆಡರ ನೆಲಮಟ್ಟದ ಉಷ್ಣಸಮತೋಲ ಹಾಗೂ ತೇವಸಮತೋಲ. ಪ್ರಭಾವಗಳನ್ನು ಅರಿಯಲು ಸಂಕೀರ್ಣ ಪ್ರಯೋಗಗಳನ್ನು ರೂಪಿಸಬೇಕಾಗುತ್ತದೆ. ಭೂಮಿಗೆ ಲಭಿಸುವ ಉಷ್ಣಶಕ್ತಿಯ ಆಕರ ಸೂರ್ಯನಾದರೂ ನೆಲಮಟ್ಟದಲ್ಲಿನ ಉಷ್ಣಸಮತೋಲ ಸೂರ್ಯನ ಮೇಲೆ ಮಾತ್ರ ಅವಲಂಬಿಸಿರುವುದಿಲ್ಲ. ಉಷ್ಣಪ್ರತಿಫಲನ, ಗಾಳಿಯಲ್ಲಿನ ತೇವ, ಪರಿಸರದ ನೆಲ ನೀರು ಸಸ್ಯ ಮುಂತಾದವುಗಳ ವಿತರಣೆ, ವರ್ಷದ ಋತು, ಅಕ್ಷಾಂಶ ಮುಂತಾದ ಹಲವಾರು ಕಾರಕಗಳನ್ನು ಆಧರಿಸಿ ಉಷ್ಣಸಮತೋಲವಿದೆ. ಮಣ್ಣಿನ ಗುಣ, ನೆಲದ ವಿನ್ಯಾಸ, ಮಳೆ ಸ್ಥಳದ ಅಕ್ಷಾಂಶ ಇವೇ ಮುಂತಾದ ಹಲವಾರು ಕಾರಕಗಳನ್ನು ನೆಲಮಟ್ಟದ ತೇವಸಮತೋಲ ಅವಲಂಬಿಸಿದೆ. ಈ ಸಮತೋಲಗಳ ಅಭ್ಯಾಸ ಸಹಜವಾಗಿ ಸೂಕ್ಷ್ಮವಾಯುಗುಣವಿಜ್ಞಾನ (ಮೈಕ್ರೊಕ್ಲೈಮಟಾಲಜಿ) ಎಂಬ ಒಂದು ವಿಶಿಷ್ಟ ಅಧ್ಯಯನಕ್ಕೆ ಹಾದಿ ಮಾಡಿಕೊಡುತ್ತದೆ. ಈ ವಿಜ್ಞಾನ ವಿಭಾಗ ಬೃಹದ್ವಾಯು ಗುಣವಿಜ್ಞಾನಕ್ಕಿಂತ (ಮ್ಯಾಕ್ರೊಕ್ಲೈಮೆಟಾಲಜಿ) ಭಿನ್ನವಾದದ್ದು, ಎರಡನೆಯದು ಆಯಾ ಸ್ಥಳಕ್ಕೆ ಒಟ್ಟು ಸಂಬಂಧಿಸಿದಂತಿದ್ದರೆ ಮೊದಲನೆಯದು ಸಸ್ಯಗಳ ಒತ್ತಿನ ಪರಿಸರಕ್ಕೆ ಮಾತ್ರ ಅನ್ವಯಿಸಿದೆ. ಸೂಕ್ಷ್ಮ ವಾಯುಗುಣವಿಜ್ಞಾನ ಬೃಹದ್ವಾಯು ಗುಣವಿಜ್ಞಾನದಿಂದ ಪ್ರಭಾವಿತವಾಗುವುದಾದರೂ ಅಂತಿಮವಾಗಿ ಸಸ್ಯಗಳ ಬೆಳವಣಿಗೆ ಮೇಲೆ ಪ್ರಭಾವ ಸೂಕ್ಷ್ಮವಾಯುಗುಣವಿಜ್ಞಾನದ್ದೇ. ಬೆಳೆಯ ಈ ಸೂಕ್ಷ್ಮವಾಯುಗುಣ ಬೃಹದ್ವಾಯುಗುಣದಿಂದ ಎಷ್ಟು ವಿಚಲಿತವಾಗಿರುವುದೆಂಬುದು ಬೆಳೆಯ ಬೆಳವಣಿಗೆಯ ಹಂತ, ಅದರ ಸಸ್ಯಗಳ ಸಾಂದ್ರತೆ ಹಸುರಿನ ವಿತರಣೆ, ಮಟ್ಟಸಗಾಳಿಯ ಮೇಲೆ ಸಸ್ಯಗಳು ಒಡ್ಡುವ ತಡೆ ಮತ್ತು ಸೂರ್ಯ, ರಶ್ಮಿ–ಇವನ್ನು ಅವಲಂಬಿಸಿದೆ. ಕಬ್ಬಿನ ಪೈರನ್ನು ಪರಿಶೀಲಿಸಬಹುದು. ಅದರ ಬೆಳವಣಿಗೆಯ ಮುಂದುವರಿದ ಹಂತದಲ್ಲಿ ಇಡೀ ತೋಟವನ್ನು ವ್ಯಾಪಿಸುವ ಹಸುರಿನ ಹಂದರ ಕ್ರಿಯಾ ಮೇಲ್ಮೈ–ಎಂದರೆ ಉಷ್ಣಶಕ್ತಿಯನ್ನು ಹೀರಿಕೊಂಡು ಅದನ್ನು ಪುನರ್ವಿತರಣೆ ಮಾಡುವ ಮೇಲ್ಮೈ–ಆಗಿ ವರ್ತಿಸುತ್ತದೆ. ಇಲ್ಲಿ ನೆಲ ಈ ಕೆಲಸವನ್ನು ಮಾಡುವುದಿಲ್ಲ ಎಂಬುದನ್ನು ಗಮನಿಸಬೇಕು. ಇದರಿಂದಾಗಿ ತೋಟದ ಒಳಗಿನ ಉಷ್ಣತೆಯಲ್ಲಾಗಲಿ ಗಾಳಿಸಂಚಾರದಲ್ಲಾಗಲಿ ಹೊರಗಿನ ಪರಿಸರಕ್ಕಿಂತ ಹೆಚ್ಚಿನ ಸ್ಥಿರತೆ ಬಂದಿರುತ್ತದೆ. ಹೀಗೆ ಸೂಕ್ಷ್ಮವಾಯುಗುಣ ಕಬ್ಬಿನ ಬೆಳೆಯ ಮೇಲೆ (ಅದೇ ರೀತಿ ಬೇರೆ ಬೆಳೆಗಳ ಮೇಲೆ) ವಿಶೇಷ ಪರಿಣಾಮಕಾರಿಯಾಗಿ ವರ್ತಿಸುವುದು.

**2.** ಹವಾಮಾನ ಮತ್ತು ಬೆಳೆಗಳ ಸಂಬಂಧವನ್ನು ಕುರಿತ ಅಂಕಿಅಂಶಗಳ ಸಂಶೋಧನೆ: ಅಂಕಿಅಂಶಗಳ ಕ್ರಮಬದ್ಧ ಸಂಗ್ರಹವನ್ನು ದೀರ್ಘಕಾಲ ಸುಸಂಘಟಿತ ವಿಧಾನದಲ್ಲಿ ಮಾಡುವುದು ಯಾವುದೇ ವಿಜ್ಞಾನದ ಬೆಳೆವಣಿಗೆಗೆ ತೀರ ಅವಶ್ಯಕ. ಈ ದಿಶೆಯಲ್ಲಿ ಪುಣೆಯ ಹವಾವಿಜ್ಞಾನ ಇಲಾಖೆಯಲ್ಲಿ ಕಳೆದ ಹಲವಾರು ದಶಕಗಳಿಂದ ಕೃಷಿ ಮತ್ತು ಹವೆಗೆ ಸಂಬಂಧಿಸಿದಂಥ ಅಂಕಿಅಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಸಾಕಷ್ಟು ಸಂಗ್ರಹವಾದ ತರುವಾಯ ಕೃಷಿ–ಹವೆ ಸಂಬಂಧವನ್ನು ಕುರಿತ ನಿಖರ ಮುನ್ಸೂಚನೆಗಳನ್ನು ನೀಡಿ ತನ್ಮೂಲಕ ಕೃಷಿಸುಧಾರಣೆಗಳನ್ನು ಸಾಧಿಸಬಹುದು.

**3.** ಹವಾಮಾನ ವಿಜ್ಞಾನ ಮತ್ತು ಕೃಷಿ ಇವುಗಳ ನಡುವೆ ಸಂಪರ್ಕ : ಇಂಥ ಸಂಪರ್ಕವನ್ನು ನಿಕಟವಾಗಿ ಏರ್ಪಡಿಸಿರುವುದರಿಂದ ಕೃಷಿಯಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬಹುದು. ಈ ದಿಶೆಯಲ್ಲಿ ಕೇಂದ್ರ ಸರ್ಕಾರವೂ ರಾಜ್ಯ ಸರ್ಕಾರಗಳೂ ತೀವ್ರ ಕುತೂಹಲಿಗಳಾಗಿ ಪ್ರಾಯೋಗಿಕ ಕಾರ್ಯಕ್ರಮಗಳನ್ನು ರೂಪಿಸಿವೆ. ದೇಶದ ಆಹಾರ ಸಮಸ್ಯೆಯ ಪರಿಹಾರದಲ್ಲಿ ಇದೊಂದು ಯೋಗ್ಯ ಹೆಜ್ಜೆ. *

**ಭಾರತದ ಹಳ್ಳಿಗಳು:** ಭಾರತ ಹಳ್ಳಿಗಳ ನಾಡು. ಸು. 5,58,000 ಹಳ್ಳಿಗಳಿರುವ ಈ ನಾಡಿನಲ್ಲಿ ಮೂಲಭೂತ ಏಕತೆ ಇದ್ದರೂ ವೈಶಾಲ್ಯ ಹಾಗೂ ವೈವಿಧ್ಯದ ಕಾರಣ ಹಳ್ಳಿಗಳ ವಿನ್ಯಾಸ ವಿಭಿನ್ನವಾಗಿದೆ. ಜೀವನದ ಮೂಲತತ್ತ್ವಗಳ ಅಂತಃಪ್ರವಾಹ ಎಲ್ಲೆಲ್ಲೂ ಒಂದೇ ಆಗಿದೆ ಎಂಬ ವಿಷಯ ಭಾರತದ ಗ್ರಾಮಸಮುದಾಯಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದಿಂದಲೂ ಕೆಲವು ಗೃಹಗಳ ಗುಂಪು ಮತ್ತು ಅವನ್ನು ಸುತ್ತುವರಿದಿರುವ ಸಾಗುವಳಿ ಮಾಡಲಾದ ಜಮೀನು ಪ್ರದೇಶಗಳನ್ನು ಗ್ರಾಮಗಳು ಒಳಗೊಂಡಿರುತ್ತವೆ. ಮೊದಲಿನಿಂದಲೂ ಭಾರತದ ಹಳ್ಳಿಗಳಲ್ಲಿ ವಿವಿಧ ಕಾರ್ಯಕ್ರಮಗಳ ವಿಶಿಷ್ಟ ಜೀವನ ಕ್ರಮವಿದ್ದು ತಮ್ಮದೇ ಆದ ಗ್ರಾಮಾಡಳಿತವನ್ನು ಬೆಳೆಸಿಕೊಂಡಿದ್ದುವು. ಈ ಚಟುವಟಿಕೆಗಳನ್ನು ಗ್ರಾಮಜೀವನ ಮತ್ತು ಗ್ರಾಮಸರ್ಕಾರ ಎಂದು ವಿಂಗಡಿಸಬಹುದು. ಗ್ರಾಮಜೀವನದ ಮುಖ್ಯ ಘಟಕ ಕುಟುಂಬ. ಆದ್ದರಿಂದ ಇಲ್ಲಿ ಪ್ರಾಥಮಿಕ ಬಾಂಧವ್ಯಗಳು ಪ್ರಧಾನವಾಗಿರುತ್ತವೆ, ನೆರೆಹೊರೆ ಮುಖ್ಯವಾಗಿರುತ್ತದೆ; ಆಚಾರ ಪದ್ಧತಿ, ಲೋಕರೂಢಿ, ಲೋಕನೀತಿ ಮುಂತಾದ ಅನೌಪಚಾರಿಕ ಅಭಿಕರಣಗಳು ಪ್ರಮುಖವಾಗಿರುತ್ತವೆ. ಸರಳವಾದ ಆರ್ಥಿಕ ಜೀವನ, ಪ್ರಕೃತಿಯೊಡನೆ ನೇರ ಸಂಪರ್ಕ, ಜನರಲ್ಲಿ ಧಾರ್ಮಿಕ ಮನೋವೃತ್ತಿ, ಮೂಢನಂಬಿಕೆ ಇತ್ಯಾದಿಗಳು ಗ್ರಾಮಸಮುದಾಯದ ಗಮನಾರ್ಹ ಲಕ್ಷಣಗಳು. ಗ್ರಾಮ ನಿವೇಶನ ವಿಶಿಷ್ಟವಾಗಿರುತ್ತದೆ. ಗ್ರಾಮಕ್ಕೆ ಸೇರಿರುವ ಭೂಪ್ರದೇಶವನ್ನು ವಸತಿ, ಕೃಷಿ ಮತ್ತು ಹುಲ್ಲುಗಾವಲಿಗಾಗಿ ಮೀಸಲಾಗಿರಿಸಲಾದ ಪ್ರದೇಶಗಳೆಂದು ವಿಭಾಗಿಸಬಹುದು. ನೀರಿನ ಸೌಕರ್ಯವಿರುವ ಎಡೆಯಲ್ಲಿ ವಸತಿನಿರ್ಮಾಣ, ವಿಭಿನ್ನ ವೃತ್ತಿಗಳನ್ನು ಕೈಗೊಂಡವರಿಗೆ ಪ್ರತ್ಯೇಕ ವಾಸಸ್ಥಳ ಮತ್ತು ಗ್ರಾಮದ ಮಧ್ಯಭಾಗದಲ್ಲಿ ಮಾರುಕಟ್ಟೆ, ಕೆಲವು ಹಳ್ಳಿಗಳಲ್ಲಿ ವಾರದ ಸಂತೆಗಾಗಿ ಒಂದು ಪ್ರತ್ಯೇಕ ಸ್ಥಳ ಇರುತ್ತದೆ. ಕೃಷಿಯೋಗ್ಯ ಜಮೀನುಗಳ ಹಕ್ಕಿನ ವಿಚಾರಕ್ಕೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಪ್ರಾಚೀನ ಕಾಲದಿಂದಲೂ ಹಳ್ಳಿಗಳಲ್ಲಿ ಒಕ್ಕಲಿಗ ಒಡೆತನದ ವ್ಯವಸ್ಥೆ ಇದ್ದಿತು ಎಂಬುದಾಗಿ ಎ.ಎಸ್. ಆಲ್ಟೇಕರ್ ಅವರು ಅಭಿಪ್ರಾಯಪಟ್ಟರೆ ಗ್ರಾಮ ಮೊತ್ತಮೊದಲಿನಿಂದಲೂ ಸಮಗ್ರ ಗ್ರಾಮ ಸಮುದಾಯಕ್ಕೆ ಸೇರಿದ್ದಿತೇ ವಿನಾ ವ್ಯಕ್ತಿಗಲ್ಲ; ಒಟ್ಟಿನಲ್ಲಿ ರೈತವಾರಿ ಮತ್ತು ಕೂಡುಸ್ವಾಮ್ಯ ಎಂಬ ಎರಡು ತೆರನಾಗಿದ್ದ ವ್ಯವಸ್ಥೆಗಳಿದ್ದುವು ಎಂಬುದಾಗಿ ಹೆನ್ರಿ ಮೈನ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ಬ್ರಿಟಿಷರ ಆಳಿಕೆಯಲ್ಲಿ ಜಮೀನ್ದಾರಿ ಪದ್ಧತಿ ಪ್ರಮುಖವಾಗಿತ್ತು.

ಗ್ರಾಮೀಣ ಜನರು ಜೀವನೋಪಾಯಕ್ಕಾಗಿ ಬೇರೆ ಬೇರೆ ಕಸಬುಗಳನ್ನು ಅವಲಂಬಿಸಿದ್ದಾರೆ. ಅವುಗಳಲ್ಲಿ ಕೃಷಿಯೇ ಪ್ರಧಾನ, ಕಮ್ಮಾರ, ಬಡಗಿ, ಚಮ್ಮಾರ, ಕ್ಷೌರಿಕ, ಕುಂಬಾರ ಮುಂತಾದ ಇತರ ಗ್ರಾಮ ಕಸಬುದಾರರ ಅನುವಂಶಿಕ ವರ್ಗಗಳೂ ಮುಖ್ಯವಾಗಿವೆ. ಈ ವರ್ಗದ ಜನ ನಿರ್ವಹಿಸುವ ಕಾರ್ಯಗಳಿಗಾಗಿ ರೈತರು ಸುಗ್ಗಿಯ ಸಮಯದಲ್ಲಿ ವಾರ್ಷಿಕವಾಗಿ ಧಾನ್ಯರೂಪದಲ್ಲಿ ಸಂಭಾವನೆ ಕೊಡಲಾಗುತಿತ್ತು. ಅಂತೆಯೆ ಕಲ್ಲುಕುಟ್ಟಿಗ, ವ್ಯಾಪಾರಿ, ನೇಕಾರ, ಗಾಣಿಗ ಮುಂತಾದವರ ಸೇವೆಗೆ ತಕ್ಕ ಪ್ರತಿಫಲಗಳನ್ನು ಕೊಡಲಾಗುತಿತ್ತು. ಗ್ರಾಮಸ್ಥರು, ವೈಯಕ್ತಿಕ ಅವಶ್ಯಕತೆಗಳಲ್ಲದೆ ಸಮಗ್ರ ಗ್ರಾಮಕ್ಕೆ ಅನ್ವಯವಾಗುವ ದೇವಾಲಯ, ಚಾವಡಿ ಅಥವಾ ಸಭಾಭವನ, ಧರ್ಮಶಾಲೆ, ಬಾವಿ, ಕಾಲುವೆ, ಕೆರೆ, ರಸ್ತೆ ಹಾಗೂ ರಕ್ಷಣಾಕೋಟೆಗಳ ನಿರ್ಮಾಣ ಮತ್ತು ದುರಸ್ತಿ ಮುಂತಾದ ಸಾರ್ವಜನಿಕ ಉಪಯೋಗಿ ಕಾರ್ಯಗಳನ್ನೂ ಗ್ರಾಮವಾಸಿಗಳು ಮೊದಲು ಅಪ್ರೇರಿತ ಸಹಕಾರ ಹಾಗೂ

ತೆರಿಗೆಗಳನ್ನು ಕೊಡುವುದರ ಮೂಲಕ ನಿರ್ವಹಿಸುತ್ತಿದ್ದರು. ಅನಂತರ ಕೇಂದ್ರ ಸರ್ಕಾರದ ಸಹಾಯ, ಖಾಸಗಿಯವರಿಂದ ದಾನ ಅಥವಾ ಸಾಲ ಪಡೆದು ಈ ಕೆಲಸಗಳನ್ನು ಪೂರೈಸುತ್ತಿದ್ದರು.

ಹಳ್ಳಿಗಳಲ್ಲೇ ಶಿಕ್ಷಣ ಹಾಗೂ ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸಲು ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿತ್ತು. ಶಿಕ್ಷಣ ಕುಟುಂಬದ ಕರ್ತವ್ಯವಾಗಿದ್ದಿತು. ತಂದೆ ತನ್ನ ಮಗನಿಗೆ ಗುರುವಾಗಿ ಬೋಧಿಸುತ್ತಿದ್ದ. ಅನಂತರ ಗ್ರಾಮ ಪುರೋಹಿತ ಗುರುಮಠಗಳಲ್ಲಿ ಹಳ್ಳಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದ. ಪ್ರತಿ ಹಳ್ಳಿಯಲ್ಲೂ ವೈದ್ಯಕೀಯ ವ್ಯವಸ್ಥೆ ಇರಲಿಲ್ಲವಾದರೂ ಗ್ರಾಮದ ಹಿರಿಯರು ಸಾಧಾರಣ ರೋಗಗಳಿಗೆ ನಾಡು ಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿದ್ದರು. ಅನೇಕ ವೇಳೆ ಹಳ್ಳಿಯ ಶಿಕ್ಷಕ ಹಾಗೂ ಪುರೋಹಿತ ವರ್ಗದವರು ಗ್ರಾಮ ವೈದ್ಯರೂ ಆಗಿರುತ್ತಿದ್ದರು.

ಜಾತಿ ಗುಂಪು ಮತ್ತು ಅವಿಭಕ್ತ ಕುಟುಂಬ ವ್ಯವಸ್ಥೆ ಗ್ರಾಮಜೀವನದ ಮುಖ್ಯ ಲಕ್ಷಣಗಳು. ಜಾತಿ ವ್ಯಕ್ತಿಯ ವೃತ್ತಿ ನಿರ್ಧರಿಸುವುದರಲ್ಲಿ ಸಹಾಯಕವಾಗಿತ್ತು. ಈ ವೃತ್ತಿಸಮೂಹಗಳು ಸ್ಥಾಯಿಯಾಗಿದ್ದು ಶ್ರಮವಿಭಜನಾ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಿದ್ದುವು. ಅವಿಭಕ್ತ ಕುಟುಂಬ ಗ್ರಾಮಸಮುದಾಯದ ಘಟಕವಾಗಿದ್ದಿತು.

ಭಾರತದ ಹಳ್ಳಿಗಳಲ್ಲಿ ವಿಶಿಷ್ಟ ಸಾಂಸ್ಕೃತಿಕ ಚಟುವಟಿಕೆಗಳನ್ನು ನೋಡಬಹುದು. ರಾಮನವಮಿ, ದಸರ, ಹೋಳಿ ಮುಂತಾದ ಹಬ್ಬ ಹರಿದಿನ ಹಾಗೂ ವಿಶೇಷ ಸಂದರ್ಭಗಳಲ್ಲಿ ಮತ್ತು ಗ್ರಾಮಸಂತೆಗಳಲ್ಲಿ ಹಾಡು, ನೃತ್ಯ, ನಾಟಕ, ಕುಸ್ತಿ, ಗೂಳಿಕಾಳಗ, ಗಾನಗೋಷ್ಠಿ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ಪ್ರತಿಹಳ್ಳಿಯಲ್ಲೂ ಗ್ರಾಮದೇವತೆಯ ಗುಡಿಗಳನ್ನು ಕಾಣಬಹುದು. ಗ್ರಾಮದೇವಾಲಯ ಕೇವಲ ಆರಾಧನ ಸ್ಥಳ ಮಾತ್ರವಲ್ಲ. ಅದು ಒಂದು ಪಾಠಶಾಲೆ ನ್ಯಾಯಾಲಯ, ಪಥ ಶ್ರಮದಿಂದ ಬಳಲಿರುವ ಪ್ರಯಾಣಿಕನಿಗೆ ವಿಶ್ರಾಂತಿಧಾಮ, ಸಾಮಾಜಿಕ ಕೂಟ ಹಾಗೂ ಮನರಂಜನೆಗಳಿಗೆ ಕೇಂದ್ರವೂ ಆಗಿರುತ್ತದೆ. ಸಂಗೀತ ಗೋಷ್ಠಿಗಳಿಗಾಗಿ ಅಥವಾ ಸಾಮಾನ್ಯ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಗ್ರಾಮಸ್ಥರು ಚಾವಡಿಗಳಲ್ಲಿ ಒಂದುಗೂಡುತ್ತಾರೆ. ಅಪರಿಚಿತರಿಗೆ ಹಾಗೂ ಅತಿಥಿಗಳಿಗೆ ಆತಿಥ್ಯ ನೀಡುವುದು, ದಲಿತರಿಗೆ ಬಡಬಗ್ಗರಿಗೆ ಸಹಾಯಮಾಡುವುದು, ಅತಿಥಿಭವನ, ದೇವಾಲಯ, ಧರ್ಮಶಾಲೆಗಳ ಪೋಷಣೆಗಾಗಿ ಗ್ರಾಮಸ್ಥರು ಆರ್ಥಿಕ ಸಹಾಯ ಮಾಡುವುದುಂಟು.

ಪ್ರತಿ ಹಳ್ಳಿಯಲ್ಲೂ ಒಂದು ಸರ್ವ ಸಾಮಾನ್ಯ ಸಭೆ ಇರುತ್ತಿತ್ತು. ಈ ಸಭೆ ವರ್ಷದಲ್ಲಿ ಒಂದು ಸಲ ಗ್ರಾಮದ ಮುಖ್ಯರನ್ನು, ಗ್ರಾಮದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಚುನಾಯಿಸುತ್ತಿತ್ತು. ಲೇವಾದೇವಿ, ದಾನ, ಗ್ರಾಮರಕ್ಷಣೆ, ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳು ವ್ಯಾಜ್ಯಗಳ ತೀರ್ಮಾನ, ದೇವಾಲಯದ ಮೇಲ್ವಿಚಾರಣೆ ಮುಂತಾದ ಕಾರ್ಯಗಳನ್ನೆಲ್ಲ ಈ ಸಮಿತಿ ನಿರ್ವಹಿಸುತ್ತಿದೆ. ಆದ್ದರಿಂದ ಇದನ್ನು ಪ್ರಜಾರಾಜ್ಯದ ಬೆನ್ನುಮೂಳೆ ಎಂದು ಕರೆಯಲಾಗಿದೆ.

ಗ್ರಾಮದಲ್ಲಿ ಶಾಂತಿ, ಶಿಸ್ತುಪಾಲನೆ, ಸರ್ಕಾರಕ್ಕೆ ಸಂದಾಯವಾಗಬೇಕಾಗಿದ್ದ ಕಂದಾಯಗಳ ವಸೂಲಿ, ವ್ಯಾಜ್ಯನಿರ್ಣಯ ಮುಂತಾದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ಹಾಗೂ ಬಲುಮಟ್ಟಿಗೆ ಗ್ರಾಮಕ್ಕೆ ದೊರೆಯೇ ಆಗಿದ್ದ ಗ್ರಾಮಮುಖಂಡ (ಪಟೇಲ) ಗ್ರಾಮದ ವರಮಾನ–ವೆಚ್ಚ, ಜಮೀನು, ರೈತಾಪಿ ಜನ, ದನಕರು ಇತ್ಯಾದಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಇಡುತ್ತಿದ್ದ ಶಾನುಭೋಗ ಮತ್ತು ರಾತ್ರಿ ಕಾಲದಲ್ಲಿ ಪಹರೆ ಮಾಡುವುದು, ಎಲ್ಲ ಅಪರಿಚಿತರ ಮೇಲೆ ನಿಗಾ ಇಟ್ಟು ಸಂದೇಹಾಸ್ಪದ ವ್ಯಕ್ತಿಗಳು ಕಂಡು ಬಂದರೆ ತತ್‌ಕ್ಷಣ ಪಟೇಲನಿಗೆ ವರದಿಮಾಡುವುದು ಮತ್ತು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪಟೇಲ ಹಾಗೂ ಶಾನುಭೋಗನಿಗೆ ಸಹಾಯಮಾಡುವುದು ಮುಂತಾದ ಕರ್ತವ್ಯಗಳನ್ನು ನೆರವೇರಿಸುತ್ತಿದ್ದ ಚೌಕೀದಾರ ಭಾರತದ ಹಳ್ಳಿಗಳಲ್ಲಿ ಮುಖ್ಯ ಆಡಳಿತಾಧಿಕಾರಿಗಳಾಗಿದ್ದರು. ಗ್ರಾಮದ ವ್ಯಾಜ್ಯಗಳನ್ನು ತೀರ್ಮಾನಿಸುತ್ತಿದ್ದ ಗ್ರಾಮಪಂಚಾಯಿತಿ, ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದ ಶ್ರೇಣಿ ಮತ್ತು ಕುಟುಂಬಗಳ ವ್ಯಾಜ್ಯಗಳ ನಿರ್ಣಯಕ್ಕೆ ಸಂಬಂಧಿಸಿದ ಕುಲ ಇವು ಗ್ರಾಮದ ಮುಖ್ಯ ನ್ಯಾಯಾಲಯಗಳು. ಜಾತಿಗಳ ವ್ಯಾಜ್ಯಗಳನ್ನು ಪರಿಹರಿಸಲು ಜಾತಿಸಮಿತಿಗಳಿದ್ದುವು. ಮೊದಲಿನಿಂದಲೂ ಕೇಂದ್ರಸರ್ಕಾರದ ಆದಾಯಕ್ಕೆ ಮೂಲಾಧಾರವಾಗಿದ್ದ ಭೂಕಂದಾಯ, ತುಪ್ಪ, ಜೇನುತುಪ್ಪ ಇತ್ಯಾದಿ ಪದಾರ್ಥಗಳ ಮೇಲೆ ಹೇರಲಾಗುತ್ತಿದ್ದ ಸುಂಕ. ವ್ಯಾಪಾರಿಗಳು ಹಾಗೂ ಗ್ರಾಮ ಕಸಬುದಾರನ ಮೇಲೆ ವಿಧಿಸಲಾಗುತ್ತಿದ್ದ ವೃತ್ತಿತೆರಿಗೆ ಭಾರತದ ಹಳ್ಳಿಗಳಲ್ಲಿ ಮುಖ್ಯವಾಗಿದ್ದ ಮೂರು ಬಗೆಯ ತೆರಿಗೆಗಳಾಗಿದ್ದುವು.

ಬ್ರಿಟಿಷರ ಕಾಲದಲ್ಲಿ ಭಾರತದ ಹಳ್ಳಿಗಳು ಬದಲಾದವು. ಹಣಕಾಸಿನ ಮೇಲೆ ಆಧಾರಿತವಾಗಿದ್ದ ಆರ್ಥಿಕ ವ್ಯವಸ್ಥೆ ಮತ್ತು ವೈಯಕ್ತಿಕ ಸ್ವಾಮ್ಯ ಹಾಗೂ ಬೃಹತ್ ಪ್ರಮಾಣದ ಜಮೀನ್ದಾರಿ ಪದ್ಧತಿಗಳನ್ನು ಜಾರಿಗೆ ತರಲಾಯಿತು. ಜಮೀನುಗಳು ಮಾರಬಹುದಾದ, ಕೊಂಡುಕೊಳ್ಳಬಹುದಾದ, ಅಡವಿಡಬಹುದಾದ ಮಟ್ಟಕ್ಕೆ ಬಂದುವು; ಜಮೀನುಗಳನ್ನು ವಿಭಜಿಸಲಾಯಿತು. ಇದರಿಂದ ರೈತರು ಬಡವರಾದರು, ಗ್ರಾಮಗಳಲ್ಲಿ ಋಣಭಾರ ಹೆಚ್ಚಿತು. ಬ್ರಿಟಿಷರ ಆರ್ಥಿಕ ನೀತಿಯ ಫಲವಾಗಿ ವ್ಯವಸಾಯ ಹಾಗೂ ಗೃಹಕೈಗಾರಿಕೆಗಳು ಕುಂಠಿತಗೊಂಡವು. ಗ್ರಾಮ ಪಂಚಾಯಿತಿಗಳು ನಿರ್ವಹಿಸುತ್ತಿದ್ದ ಕಾರ್ಯಗಳನ್ನೆಲ್ಲ ಬ್ರಿಟಿಷ್ ಸರ್ಕಾರ ವಹಿಸಿಕೊಂಡಿದ್ದರಿಂದ ಬೇರೆ ಬಗೆಯ ಆಡಳಿತ ಬಂದು ಗ್ರಾಮ ಸಂಸ್ಥೆಗಳು ನಿರ್ಜೀವವಾದವು. ಜಮೀನುಗಳ ವಿಭಜನೆ ಸುದ್ದಿ, ಸಂಚಾರ ವ್ಯವಸ್ಥೆ, ಆಧುನಿಕ ಶಿಕ್ಷಣ ನಗರಗಳತ್ತ ಯುವಜನಾಂಗವನ್ನು ಆಕರ್ಷಿಸುತ್ತಿದ್ದ ಉದ್ಯೋಗಾವಕಾಶ ಮತ್ತು ಇತರ ಸೌಲಭ್ಯಗಳು ಹಳ್ಳಿಗಳ ಅವಿಭಕ್ತಕುಟುಂಬದ ಅಸ್ತಿಭಾರವನ್ನೇ ಅಲ್ಲಾಡಿಸಿದುವು. ಕಾಲಕ್ರಮೇಣ ವಾರ್ಧಾ ಗ್ರಾಮೋದ್ಧಾರ ಹಂಚಿಕೆ, ಚೆನ್ನೈ ಫರ್ಕ ಅಭಿವೃದ್ಧಿ ಯೋಜನೆ ಮುಂತಾದ ಅನೇಕ ಗ್ರಾಮ ಪುನರ್ನಿರ್ಮಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಭಾರತ ಸ್ವಾತಂತ್ರ್ಯ ಗಳಿಸಿದ ಬಳಿಕ ಹಳ್ಳಿಗಳನ್ನು ಅಭಿವೃದ್ಧಿಪಡಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. ಉದಾಹರಣೆಗೆ: ಭೂಭಾಗಗಳನ್ನು ಕೃಷಿಯೋಗ್ಯಪಡಿಸುವುದು, ಹೊಸ ನೀರಾವರಿ ಯೋಜನೆಗಳು, ಉತ್ತಮ ಬೀಜ, ಸಲಕರಣೆ ಹಾಗೂ ಗೊಬ್ಬರಗಳ ಉತ್ಪಾದನೆ ಹಾಗೂ ಸರಬರಾಜು ಮುಂತಾದ ವ್ಯವಸಾಯ ಸುಧಾರಣಾ ಕ್ರಮಗಳು, ಜಮೀನುಗಳನ್ನು ಪರಿಹಾರಧನ ಕೊಟ್ಟು ಕೊಳ್ಳುವುದು ಜಮೀನುಗಳಿಗೆ ಸಂಬಂಧಪಟ್ಟ ಸುಧಾರಣಾ ಯೋಜನೆ. ಸಾಲ ಕೊಟ್ಟವರ ದಬ್ಬಾಳಿಕೆಯಿಂದ ರೈತರನ್ನು ರಕ್ಷಿಸಿ ಹಳ್ಳಿಗಳಲ್ಲಿ ಸಣ್ಣ ಪ್ರಮಾಣದ ಗೃಹಕೈಗಾರಿಕೆಗಳನ್ನು ಬೆಳೆಸಿ ಪ್ರೋತ್ಸಾಹಿಸಲು ಬೇಕಾದ ಕ್ರಮಗಳು; ಗ್ರಾಮಗಳ ಸರ್ವತೋಮುಖ ಬೆಳವಣಿಗೆಗಾಗಿ ಸಾಮುದಾಯಿಕ ಅಭಿವೃದ್ಧಿ ಯೋಜನೆ, ಸಹಕಾರ ಸಂಘ ಹಾಗೂ ಗ್ರಾಮ ಪಂಚಾಯಿತಿಗಳ ಸ್ಥಾಪನೆ. ಇವುಗಳಲ್ಲಿ ಸಾಮುದಾಯಿಕ ಅಭಿವೃದ್ಧಿ ಯೋಜನೆ ಮುಖ್ಯವಾಗಿದೆ. ವ್ಯವಸಾಯ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳು; ನೀರಾವರಿ ವ್ಯವಸ್ಥೆ, ಸಾರಿಗೆ ಸಂಚಾರ ವ್ಯವಸ್ಥೆ, ಶಿಕ್ಷಣ, ತರಬೇತು, ಆರೋಗ್ಯ ವಸತಿ, ಸಮಾಜ ಕಲ್ಯಾಣ ಮತ್ತು ಇತರ ಪೂರಕ ಉದ್ಯೋಗಗಳು ಈ ಯೋಜನೆಯ ಪ್ರಮುಖಾಂಶಗಳು. ಗ್ರಾಮಗಳಲ್ಲಿ ಸಹಕಾರ ಸಂಘಗಳನ್ನು ಸುಧಾರಿಸಲು ಮತ್ತು ಸಮಾಜ ಶಿಕ್ಷಣವನ್ನು ಜಾರಿಗೆ ತರಲು ತಕ್ಕ ಕ್ರಮಗಳನ್ನು ಕೈಗೊಳ್ಳಲಾಗಿದೆ. 1952 ಅಕ್ಟೋಬರ್ 2 ರಂದು ಉದ್ಘಾಟಿಸಲಾದ ಈ ಯೋಜನೆ ಸರ್ಕಾರವನ್ನು ಅವಲಂಬಿಸಿರುವುದರಿಂದ ಆಂತರಿಕ ವಿರೋಧಗಳನ್ನು ಬಗೆಹರಿಸುವುದಕ್ಕಾಗಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಗ್ರಾಮಸ್ಥರಿಗೆ ತರಬೇತನ್ನು ನೀಡಲು ಇವನ್ನು ವ್ಯವಸ್ಥೆಗೊಳಿಸಲಾಯಿತು. ಅನಂತರದ ವರ್ಷಗಳಲ್ಲಿ ತಲೆದೋರಿದ ಆಹಾರಾಭಾವ ಉತ್ಪಾದನೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಯೋಜಿಸುವ ಅವಶ್ಯಕತೆಯನ್ನು ಎತ್ತಿತೋರಿಸಿತು. ಇದರ ಫಲವಾಗಿ ಸ್ವಾಭಾವಿಕವಾಗಿ ಫಲವತ್ತಾದ ಮಣ್ಣು ಹಾಗೂ ನೀರಾವರಿ ಸೌಲಭ್ಯಗಳಿಂದ ಕೂಡಿರುವ ಆಯ್ದ ಪ್ರದೇಶಗಳಲ್ಲಿ ವ್ಯವಸಾಯೋತ್ಪನ್ನವನ್ನು ಹೆಚ್ಚಿಸುವುದಕ್ಕಾಗಿ ಕೇಂದ್ರೀಕೃತ ವ್ಯವಸಾಯಾಭಿವೃದ್ಧಿ ಹಾಗೂ ಕೃಷಿ ಕ್ಷೇತ್ರ ಕಾರ್ಯಕ್ರಮ ಮುಂತಾದ ಯೋಜನೆಗಳು 1960ರ ಅನಂತರದ ವರ್ಷಗಳಲ್ಲಿ ಬೆಳಕಿಗೆ ಬಂದುವು. ಈ ಎಲ್ಲ ಸಂಚಿತ ಪ್ರಯತ್ನಗಳ ಪರಿಣಾಮವಾಗಿ ಮೂಡಿದುದೇ ಹಸುರು ಕ್ರಾಂತಿ.

1970ರ ತರುವಾಯ ಸಹಾಯ ಪಡೆಯಲು ಅರ್ಹವಾಗಿರುವ ಸಮೂಹದ ನಿರ್ದಿಷ್ಟ ಗುರಿಯ ಮೇಲೆ ಗಮನವನ್ನು ಕೇಂದ್ರೀಕರಿಸಲಾಯಿತು. ಸಣ್ಣಪುಟ್ಟ ರೈತರ ಭೂರಹಿತರ ಕೆಲಸಗಾರರ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಮತ್ತು ಆದಿವಾಸಿ ಜನರ ಸ್ಥಿತಿಗತಿಗಳನ್ನು ಸುಧಾರಿಸಲು ಅನೇಕ ಯೋಜನೆಗಳನ್ನು ಸರ್ಕಾರ ಕೈಗೊಂಡಿತು.

ಇತ್ತೀಚಿನ ವರ್ಷಗಳಲ್ಲಿ ಪರ್ವತಪ್ರದೇಶ, ಬಂಜರುಭೂಮಿ, ಗ್ರಾಮಕೈಗಾರಿಕೆ ಮತ್ತು ಗ್ರಾಮ ಕೈಕೆಲಸಗಾರರನ್ನು ಕುರಿತು ಮತ್ತು ವ್ಯವಸಾಯ, ಪಶುಸಂಗೋಪನೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ. (ಕೆ.ಬಿ.)

**ಭಾರತದಲ್ಲಿ ಕೃಷಿ:** ಕೃಷಿ ಭಾರತದ ಮುಖ್ಯ ಕಸಬು. ಶೇ. 70ಕ್ಕೂ ಹೆಚ್ಚು ಜನರಿಗೆ ಜೀವನಾಧಾರ. ಭಾರತದಲ್ಲಿ ಕೃಷಿಯ ಅಭಿವೃದ್ಧಿ ವೇದಗಳ ಕಾಲಕ್ಕೂ ಹಿಂದೆಯೇ ಪ್ರಾರಂಭವಾದಂತಿದೆ. ಋಗ್ವೇದದಲ್ಲಿ ಕೃಷಿಯ ಬಗ್ಗೆ ಅನೇಕ ಪ್ರಸ್ತಾಪಗಳಿವೆ. ಕೃಷಿಗೆ ಸಂಬಂಧಪಟ್ಟ ಹಲವಾರು ಗ್ರಂಥಗಳು, ಶಾಸ್ತ್ರಗಳು ಸಹಸ್ರಾರು ವರ್ಷಗಳ ಹಿಂದೆಯೇ ರಚಿತವಾಗಿದ್ದವು. ಅವುಗಳಲ್ಲಿ ಅನೇಕವು ಈಗ ದೊರಕುತ್ತಿಲ್ಲವಾದರೂ ದೊರಕಿರುವ ಹಲವು ಗ್ರಂಥಗಳ ಆಧಾರದಿಂದ ಕೃಷಿಯಲ್ಲಿ ನಮ್ಮ ಪೂರ್ವಿಕರು ಬಹಳಷ್ಟು ಮುಂದುವರಿದಿದ್ದರೆಂದು ತಿಳಿಯುತ್ತದೆ. ಆಗಿನವರಿಗೆ ಇಂದಿನ ವಿಜ್ಞಾನದ ನೆರವು ಇರಲಿಲ್ಲ. ಅವರ ಸ್ವಂತ ಅನುಭವ, ಅವಲೋಕನಗಳಷ್ಟೇ ಆ ಪ್ರಗತಿಗೆ ಕಾರಣವಾಗಿದ್ದವು.

ಕೃಷಿಗೆ ಹಾಗೂ ಸಸ್ಯಗಳ ಬೆಳವಣಿಗೆಗೆ ಮಣ್ಣು ಮೂಲ ಎಂದು ಗುರುತಿಸಲಾಗಿತ್ತು. ಮಣ್ಣಿನ ಗುಣಲಕ್ಷಣಗಳೂ ಅದರ ವಿಂಗಡಣೆ ಮತ್ತು ಯಾವ ಬೆಳೆ ಯಾವ ಮಣ್ಣಿಗೆ ಸೂಕ್ತವಾದದ್ದು ಎಂಬ ಅರಿವು ಪ್ರಾಚೀನ ಭಾರತೀಯರಿಗಿತ್ತು.

ವ್ಯವಸಾಯ ಭಾರತೀಯರ ಮುಖ್ಯ ಉದ್ಯೋಗವಾಗಿದೆ, ಇದು ದೇಶದ ಎಲ್ಲ ಭಾಗಗಳಲ್ಲಿಯೂ ವಿವಿಧ ರೂಪ ಹಾಗೂ ವಿವಿಧ ಉತ್ಪಾದನೆಗಳಲ್ಲಿ ತೊಡಗಿರುವುದನ್ನು ಕಾಣಬಹುದು.

1) ಪ್ರಪಂಚದಲ್ಲಿ ಚೀನದ ಅನಂತರ ಭಾರತ ಎರಡನೆಯ ಅತಿಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರ. ದೇಶದ ಅಗಾಧ ಜನಸಂಖ್ಯೆಗೆ ವ್ಯವಸಾಯ ಆಹಾರಧಾನ್ಯಗಳನ್ನು ಪೂರೈಸುತ್ತಿದೆ. ಭಾರತ ಆಹಾರ ಧಾನ್ಯಗಳಲ್ಲಿ ಸ್ವಾವಲಂಬನೆಯನ್ನು ಹೊಂದಿದೆ. ಇದಕ್ಕೆ ವ್ಯವಸಾಯ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿ ಮುಖ್ಯ ಕಾರಣವಾಗಿದೆ.

2) ಭಾರತ ಹಳ್ಳಿಗಳ ದೇಶ. ದೇಶದಲ್ಲಿ ಸು. 5,58,000 ಗ್ರಾಮಗಳಿದ್ದು ಇವುಗಳು ದೇಶದ ಬಹು ಪಾಲು ಜನಸಂಖ್ಯೆಯನ್ನು ಒಳಗೊಂಡಿವೆ. ಭಾರತದಲ್ಲಿ ಆರ್ಥಿಕತೆಯ ಉಳಿದ ಎಲ್ಲಾ ಕ್ಷೇತ್ರಗಳಿಗಿಂತಲೂ ವ್ಯವಸಾಯವು ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ.

3) ಭಾರತ ಉತ್ಪಾದಿಸುವ ಹಲವಾರು ಬಗೆಯ ವ್ಯವಸಾಯೋತ್ಪನ್ನಗಳನ್ನು ಕಚ್ಚಾ ವಸ್ತುಗಳನ್ನು ಆಧರಿಸಿ ಅಸಂಖ್ಯಾತ ಕೈಗಾರಿಕೆಗಳನ್ನು ಹೊಂದಿದೆ. ಸಕ್ಕರೆ ಕೈಗಾರಿಕೆ, ಹತ್ತಿ ಬಟ್ಟೆ ಕೈಗಾರಿಕೆ, ಸೆಣಬಿನ ಕೈಗಾರಿಕೆ, ಉಣ್ಣೆ ಕೈಗಾರಿಕೆ, ಕ್ಷೀರೋತ್ಪನ್ನ ಕೈಗಾರಿಕೆ ಮೊದಲಾದವು.

4) ವ್ಯವಸಾಯವು ಸಮಗ್ರ ರಾಷ್ಟ್ರೀಯ ಉತ್ಪನ್ನದ ಶೇ. 26ರಷ್ಟನ್ನು ನೀಡುವುದು.

5) ವ್ಯವಸಾಯ ಆಹಾರ ಧಾನ್ಯ ಹಾಗೂ ಕಚ್ಚಾ ವಸ್ತುಗಳ ಜೊತೆಗೆ ಜನರಿಗೆ ಅಗತ್ಯವಾದ ಹಣ್ಣು, ತರಕಾರಿ ಕಾಫಿ, ಟೀ, ರಬ್ಬರ್ ಮೊದಲಾದವುಗಳನ್ನು ಪೂರೈಸುವುದು.

6) ವ್ಯವಸಾಯ ಸಂಚಾರ, ಸಾರಿಗೆ, ವ್ಯಾಪಾರ ಮೊದಲಾದ ಹಲವಾರು ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ.

ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಬಗೆಯ ಬೇಸಾಯ ಪದ್ಧತಿಗಳು ರೂಢಿಯಲ್ಲಿವೆ. ವ್ಯವಸಾಯದ ಮುಖ್ಯ ಲಕ್ಷಣಗಳಾದ ಭೂ ಬಳಕೆಯ ವಿಧಾನ, ಉತ್ಪಾದಿಸುವ ಬೆಳೆಗಳು, ಇಳುವರಿ, ಬೆಳೆಯುವ ವಿಧಾನ, ಬಳಸುವ ಉಪಕರಣ, ರಾಸಾಯನಿಕಗೊಬ್ಬರಗಳ ಬಳಕೆ ಮುಂತಾದವುಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಅಪಾರ ವ್ಯತ್ಯಾಸಗಳು ಕಂಡುಬರುತ್ತವೆ.

ವ್ಯವಸಾಯದ ವಿಧಗಳು: ಬೆಳೆಯುವ ಅವಧಿಯ ಆಧಾರದ ಮೇಲೆ: ಭಾರತದಲ್ಲಿ ವರ್ಷದ ಎಲ್ಲಾ ಕಾಲದಲ್ಲಿಯೂ ವಿವಿಧ ಪ್ರದೇಶಗಳಲ್ಲಿ ಬೆಳೆಗಳನ್ನು ಉತ್ಪಾದಿಸುವರು. ಆದಾಗ್ಯೂ ಬಿತ್ತನೆಯ ಮೂರು ಅವಧಿಗಳು ಮುಖ್ಯವಾಗಿವೆ.

ಅ) ಮುಂಗಾರು ಬೇಸಾಯ: ಭಾರತದ ಬೇಸಾಯದ ಅವಧಿಗಳಲ್ಲಿ ಮುಂಗಾರು ಬೇಸಾಯವು ಅತಿ ಮುಖ್ಯವಾದುದು. ನೈರುತ್ಯ ಮಾನ್ಸೂನ್ ಮಾರುತಗಳು ಅಥವಾ ಮುಂಗಾರು ಬೆಳೆ ಬೇಸಾಯ ಎಂದು ಕರೆಯಲಾಗಿದೆ. ಈ ಅವಧಿಯ ಬೆಳೆಗಳನ್ನು ಜೂನ್ ತಿಂಗಳಲ್ಲಿ ಬಿತ್ತನೆ ಮಾಡಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಕಟಾವು ಮಾಡುವರು. ಬತ್ತ, ಹತ್ತಿ, ರಾಗಿ, ಜೋಳ, ಎಣ್ಣೆಕಾಳುಗಳು, ದ್ವಿದಳ ಧಾನ್ಯಗಳು ಮುಖ್ಯ ಮುಂಗಾರಿನ ಬೆಳೆಗಳು.

ಆ) ಹಿಂಗಾರು ಬೇಸಾಯ: ಭಾರತದಲ್ಲಿ ಚಳಿಗಾಲದ ಬೇಸಾಯವನ್ನು ಹಿಂಗಾರುಬೆಳೆ ಎಂದು ಕರೆಯುವರು, ಹತ್ತಿ, ಗೋದಿ, ಬಾರ್ಲಿ, ಎಣ್ಣೆಕಾಳುಗಳು ಚಳಿಗಾಲದ ಮುಖ್ಯಬೆಳೆಗಳು. ಚಳಿಗಾಲದಲ್ಲಿ ಮಳೆಯನ್ನು ಪಡೆಯುವ ಪಂಜಾಬ್, ಹರಿಯಾಣ, ಜಮ್ಮು ಮತ್ತು ಕಾಶ್ಮೀರ ಉತ್ತರ ಪ್ರದೇಶ, ತಮಿಳುನಾಡು, ಆಂಧ್ರಪ್ರದೇಶಗಳು ಚಳಿಗಾಲದ ಬೇಸಾಯಕ್ಕೆ ಹೆಸರಾಗಿವೆ. ಬೆಳೆಗಳನ್ನು ಅಕ್ಟೋಬರ್–ನವೆಂಬರ್‌ನಲ್ಲಿ ಬಿತ್ತನೆ ಮಾಡಿ, ಫೆಬ್ರವರಿ–ಮಾರ್ಚ್ ಕಾಲದಲ್ಲಿ ಕಟಾವು ಮಾಡುವರು. ಗೋದಿ ಹಿಂಗಾರು ಬೇಸಾಯದ ಮುಖ್ಯ ಬೆಳೆ.

ಇ) ಬೇಸಗೆಯ ಬೇಸಾಯ: ಈ ಅವಧಿಯ ಬೇಸಾಯ ನದಿಯ ಪ್ರವಾಹ ಮೈದಾನ ಹಾಗೂ ಮುಖಜಭೂಮಿಗಳಲ್ಲಿ ಅತಿಮುಖ್ಯವಾದುದು. ಈ ಪ್ರದೇಶಗಳಲ್ಲಿ ನೀರಾವರಿಯ ಸೌಲಭ್ಯವಿರುವುದರಿಂದ ಬೇಸಿಗೆಯಲ್ಲಿ ಬೆಳೆಗಳನ್ನು ಉತ್ಪಾದಿಸುವರು. ಬತ್ತ, ನೆಲಗಡಲೆ ಮುಖ್ಯ ಬೆಳೆಗಳು.

ಭಾರತದಲ್ಲಿ ಆಯಾ ಪ್ರದೇಶಗಳ ಉಷ್ಣಾಂಶ, ಮಳೆ, ನೆಲ, ಮಣ್ಣು, ನೀರಾವರಿ ಅನುಕೂಲತೆ, ಬೇಡಿಕೆ ಮುಂತಾದವುಗಳನ್ನು ಆಧರಿಸಿ ಈ ಕೆಳಕಂಡ ವಿಧಗಳು. ಸಾಂದ್ರಬೇಸಾಯ, ಏಕಬೆಳೆ ಬೇಸಾಯ, ಬಹುಬೆಳೆಬೇಸಾಯ, ಒಣ ಬೇಸಾಯ, ಆರ್ದ್ರಬೇಸಾಯ, ನೀರಾವರಿ, ಜೀವನಾಧರ, ವಾಣಿಜ್ಯ, ತೋಟಗಾರಿಕೆ, ಬಂಡವಾಳಶಾಹಿ, ಮುಂಗಾರು, ಹಿಂಗಾರು, ಬೇಸಗೆ ಎಂಬುದಾಗಿ ಅನೇಕ ವಿಧಗಳಿವೆ.

ಪಂಚವಾರ್ಷಿಕ ಯೋಜನೆಯ ವ್ಯವಸ್ಥೆಯಲ್ಲಿ ಭಾರತದ ವ್ಯವಸಾಯ ಬಹಳಷ್ಟು ಪ್ರಗತಿ ಹೊಂದಿದೆ. ಅನೇಕ ಅಣೆಕಟ್ಟುಗಳ ನಿರ್ಮಾಣವು ಎಲ್ಲಾ ಕಾಲದಲ್ಲಿಯೂ ನೀರನ್ನು ಒದಗಿಸುವ ಅವಕಾಶದಿಂದಾಗಿ ಸಮೃದ್ಧವಾಗಿ ಎಲ್ಲಾ ಬಗೆಯ ಬೆಳೆಗಳು ಬೆಳೆಯಲು ಅನುಕೂಲವಾಗಿದೆ. (ಜಿ.ವಿ.ಬಿ.ಎಸ್.)

**ಭಾರತದಲ್ಲಿ ನೀರಾವರಿ:** ಭಾರತದಲ್ಲಿ ನೀರಾವರಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಅಂದಿನ ಕೆರೆ ಬಾವಿ, ಅಣೆಕಟ್ಟು, ಕಾಲುವೆ ಇತ್ಯಾದಿಗಳ ಅವಶೇಷಗಳು ಭಾರತದ ನಾನಾ ಕಡೆಗಳಲ್ಲಿ ಕಾಣಬರುತ್ತವೆ. ಈ ದೇಶದಲ್ಲಿ ನೀರಾವರಿಗೆ ದೊರೆಯುವ ಒಟ್ಟು ವಿಸ್ತೀರ್ಣ ಬೇರೆ ದೇಶಗಳಿಗಿಂತಲೂ ಹೆಚ್ಚು. ನೀರಾವರಿ ವಿಧಾನಗಳನ್ನು ವೈಜ್ಞಾನಿಕವಾಗಿ ರೂಪಿಸಿಕೊಂಡು ತನ್ಮೂಲಕ ನಾಡಿನ ಕೃಷಿ ಆರ್ಥಿಕತೆಯನ್ನು ಸುಧಾರಿಸಿಕೊಳ್ಳುವ ಪ್ರಯತ್ನ ಇಲ್ಲಿ ನಡೆದಿದೆ. ಭಾರತದಲ್ಲಿ ಹಿಂದೆ ನಡೆಯುತ್ತಿದ್ದ ನೀರಾವರಿ ಕೆಲಸಗಳು ಮೂರು ಬಗೆಯವು:

(1) ನದಿಗೆ ಅಡ್ಡವಾಗಿ ನಿರ್ಮಿಸಿದ ಆಣೆಕಟ್ಟಿನಿಂದ ತೆಗೆದ ನಾಲೆ (2) ಮಳೆಗಾಲದಲ್ಲಿ ಹಳ್ಳಗಳಲ್ಲಿ ಹರಿದ ನೀರನ್ನು ಮಣ್ಣಿನ ಏರಿ ನಿರ್ಮಿಸಿ ತೂಬಿನ ಮೂಲಕ ನಾಲೆಗಳಿಂದ ಗದ್ದೆಗಳಿಗೆ ಸಾಗಿಸುವ ಏರ್ಪಾಡಿನ ಕೆರೆ ವ್ಯವಸ್ಥೆ (3) ನೀರಾವರಿಯ ಜೊತೆಗೆ ಕುಡಿಯುವ ನೀರಿಗಾಗಿ ಬಾವಿಗಳನ್ನು ತೋಡುವುದು. ಈ ಕೆಲಸಗಳಿಗೆ ಅಂದಿನ ರಾಜರು ಮಾತ್ರವಲ್ಲದೆ ಸಾರ್ವಜನಿಕರೂ ಹಣ ವಿನಿಯೋಗಿಸುತ್ತಿದ್ದರು. ನೀರಾವರಿ ಒಂದು ಭಾಗವಾಗಿದ್ದ ವಿವಿಧೋದ್ದೇಶ ಯೋಜನೆಗಳ ಉದ್ದೇಶ ವಿದ್ಯುದುತ್ಪಾದನೆ, ಪ್ರವಾಹನಿಯಂತ್ರಣ, ಕೈಗಾರಿಕೆಗಳ ಬೆಳವಣಿಗೆ ಮತ್ತು ವಿಹಾರಾನುಕೂಲತೆಗಳನ್ನು ಕಲ್ಪಿಸುವಿಕೆ. ಅಂದಿನ ಮೈಸೂರಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು 1911ರಲ್ಲಿ ಪ್ರಾರಂಭಿಸಿದ ಕೃಷ್ಣರಾಜಸಾಗರ ಪ್ರಪಂಚದಲ್ಲೇ ಮೊತ್ತಮೊದಲನೆಯ ವಿವಿಧೋದ್ದೇಶ ಯೋಜನೆಯಾಯಿತು.

ಹತ್ತೊಂಬತ್ತನೆಯ ಶತಮಾನದ ಬ್ರಿಟಿಷರ ಆಳಿಕೆಯ ದಿನಗಳಿಂದ ಭಾರತದಲ್ಲಿ ಹೊಸ ಹೊಸ ನಮೂನೆಯ ನೀರಾವರಿ ಕೆಲಸಗಳು ಕಾರ್ಯರೂಪಕ್ಕೆ ಬಂದವು. ಇದಕ್ಕೆ ಮುಂಚೆ ಆದ ನೀರಾವರಿ ಕೆಲಸಗಳ ಪೈಕಿ ಕಾವೇರಿ, ಗೋದಾವರಿ ಮತ್ತು ಕೃಷ್ಣ ನದಿಗಳಿಗೆ ಕಟ್ಟಿದ ಆಣೆಕಟ್ಟುಗಳು ಮತ್ತು ಅವುಗಳಿಂದ ಹೊರಡುವ ನಾಲೆಗಳ ನಿರ್ಮಾಣ, ಯಮುನಾನದಿಯಿಂದ ತೆಗೆದ ಎರಡು ನಾಲೆಗಳು, ಸಿಂಧೂ ಮತ್ತು ಅದರ ಉಪನದಿಗಳಿಂದ ತೆಗೆದ ಪ್ರವಾಹದ ನಾಲೆಗಳು ಮುಖ್ಯವಾದವು. 2 ನೆಯ ಶತಮಾನದಲ್ಲಿ ಕಾವೇರಿ ನದಿಗೆ ಅಡ್ಡವಾಗಿ ಕಟ್ಟಿದ ಗ್ರ್ಯಾಂಡ್ ಆಣೆಕಟ್ಟು ಒಂದು ಅದ್ಭುತ ಕೆಲಸ. ಅಲ್ಲಿಯ ಜಲಾಶಯದಿಂದ ತಮಿಳುನಾಡು ರಾಜ್ಯದ ತಂಜಾವೂರು ಜಿಲ್ಲೆಯ ಕಾವೇರಿ ಮುಖಜಭೂಮಿ ಸಮೃದ್ಧ ಪ್ರದೇಶವಾಯಿತು.

ಭಾರತದಲ್ಲಿ ಹಿಂದೆ ದೊಡ್ಡ ದೊಡ್ಡ ನದಿಗಳ ಅಡ್ಡ ಅಣೆಕಟ್ಟುಗಳನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಹೊತ್ತುಕೊಂಡ ಬ್ರಿಟಿಷ್ ಶಿಲ್ಪಿಗಳ ಪೈಕಿ ಆರ್ಥರ್ ಕಾಟನ್ ಪ್ರೋಬಿ ಕೌಟ್ಲೆ ಮತ್ತು ಕರ್ನಲ್ ಪೆನಿಕ್ವಿಕ್ ಪ್ರಮುಖರು. ಇವರ ಪ್ರಯತ್ನದ ಫಲವಾಗಿ ಕಾವೇರಿ ನದಿಗೆ ಅಡ್ಡವಾಗಿ ಕೊಲ್ಲಡಮ್ ಮೇಲೆ ಗ್ರ್ಯಾಂಡ್ ಅಣೆಕಟ್ಟು, ಗೋದಾವರಿ ನದಿಗೆ ಅಡ್ಡ ಧವಳೇಶ್ವರದಲ್ಲಿ ಅಣೆಕಟ್ಟು, ಕೃಷ್ಣ ನದಿಗೆ ಅಡ್ಡ ವಿಜಯವಾಡದಲ್ಲಿ ಕಟ್ಟೆ, ಉತ್ತರಭಾರತದಲ್ಲಿ ಯಮುನ ನದಿಯ ಬಲದಂಡೆ ನಾಲೆ, ಹರಿದ್ವಾರದ ಬಳಿ ಅಣೆಕಟ್ಟು, ರೂರ್ಕಿಯ ಬಳಿಯಲ್ಲಿ ಸೋಲಾನಿ ಮೇಲುಗಾಲುವೆ ಈ ಮುಂತಾದ ಕೆಲಸಗಳು ಆದುವು.

ಉತ್ತರ ಭಾರತದ ಗಂಗನದಿಯಲ್ಲಿ ಹರಿಯುವ ಒಟ್ಟು ನೀರಿನ ಅತ್ಯಲ್ಪಭಾಗ ನೀರಾವರಿಗೆ ಬಳಕೆಯಾಗುತ್ತಿತ್ತು. ಕಾಶೀಕ್ಷೇತ್ರದ ಮೇಲುಗಡೆ ಗಂಗ ಮತ್ತು ಯಮುನ ನದಿಗಳ ನೀರನ್ನು ಅಪ್ರತಿಮ ಶಿಲ್ಪಕೌಶಲದಿಂದ ಬಳಸಿಕೊಂಡಿದ್ದಾರೆ. ಹಿಮಾಲಯದ ಮೇಲಿನ ಮಂಜು, ಬೇಸಗೆಯಲ್ಲಿ ಕರಗಿ ನೀರಾಗುತ್ತದೆ. ಅಂತೆಯೇ ಮಳೆಗಾಲದಲ್ಲಿ ಬೀಳುವ ಮಳೆಯಿಂದ ನೀರು ಪೂರೈಕೆ ಅಗುತ್ತದೆ. ಆದರೆ ಈ ಜಲಸಮೃದ್ಧಿಯ ಶೇ. 3 ರಿಂದ 6ರಷ್ಟನ್ನು ಮಾತ್ರ ಬಳಸುವುದು ಸಾಧ್ಯವಾಗಿದೆ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಭಾರತದ ಕಾವೇರಿ, ಪೆನ್ನಾರ್, ಪಾಲಾರ್, ಕೃಷ್ಣ, ಗೋದಾವರಿ, ಪಶ್ಚಿಮ ತೀರದ ನದಿಗಳು, ನರ್ಮದ, ತಪತಿ, ಮಹಾನದಿ, ಕಾಶೀಕ್ಷೇತ್ರದ ಮೇಲುಭಾಗದ ಹಾಗೂ ಕೆಳಭಾಗದ ಗಂಗನದಿ, ಸಿಂಧೂ ಮೊದಲಾದ ನದೀಕಣಿವೆಗಳಲ್ಲಿಯ ನೀರನ್ನು ಯುಕ್ತವಾಗಿ ನೀರಾವರಿಗಾಗಿ ಬಳಸಲಾಗುತ್ತಿದೆ.

ಭಾರತದ ನೀರಾವರಿಯ ಕಾಮಗಾರಿಗಳನ್ನು ಕೆರೆಗಳು, ಅಣೆಕಟ್ಟುಗಳು ಮತ್ತು ಕಲ್ಲು ಗಾರೆಯ ಇಲ್ಲವೆ ಕಾಂಕ್ರೀಟಿನ ಕಟ್ಟೆಗಳು ಎಂದು ಮೂರು ವಿಧವಾಗಿ ವಿಂಗಡಿಸಲಾಗಿದೆ. ದಕ್ಷಿಣ ಭಾರತದಲ್ಲಿ ಒಂದು ಹಳ್ಳಕ್ಕೆ ಅಡ್ಡವಾಗಿ ಒಂದರ ಕೆಳಗೆ ಇನ್ನೊಂದು ಕೆರೆಯನ್ನು ಕಟ್ಟುವುದು ರೂಢಿ. ಮೇಲಿನ ಕೆರೆಯ ಕೋಡಿಯಲ್ಲಿ ಬಿದ್ದ ನೀರು ಕೆಳಗಿನ ಕೆರೆಗೆ ಹರಿಯುತ್ತದೆ. ಇಂಥ ಕೆರೆಗಳಿಗೆ ಸರಪಳಿ ಕೆರೆಗಳು ಎಂದರು. ಹೊಳೆಯಲ್ಲಿ ಹರಿಯುವ ನೀರನ್ನು ನೀರಾವರಿಗೆ ಎರಡು ಬಗೆಯ ಕಟ್ಟಡಗಳಿಂದ ಪೂರೈಸಿಕೊಳ್ಳುತ್ತಾರೆ. ಒಂದರಲ್ಲಿ ಹೊಳೆಯ ನೀರನ್ನೇ ನಾಲೆಯ ಕಡೆಗೆ ತಿರುಗಿಸುವುದಿದೆ. ಇನ್ನೊಂದರಲ್ಲಿ ನೀರನ್ನು ಕಟ್ಟೆಯಲ್ಲಿ ಕೂಡಿಡುತ್ತಾರೆ. ನೀರನ್ನು ಹೊಳೆಯಿಂದ ತಿರುಗಿಸುವ ಕಟ್ಟಡವೇ ಅಣೆಕಟ್ಟು. ಕಲ್ಲುಗಾರೆಯ ಕಟ್ಟೆಯ ಮೇಲ್ಭಾಗದಲ್ಲಿ ಹೊಳೆಯ ನೀರು ಶೇಖರಗೊಂಡು ಜಲಾಶಯ ಏರ್ಪಡುತ್ತದೆ. ಜಲಾಶಯಕ್ಕೆ ಸಂಬಂಧಿಸಿದಂತೆ ಕಟ್ಟೆ, ಮಳೆಗಾಲದಲ್ಲಿ ಹೆಚ್ಚಾಗಿ ಬಂದ ನೀರನ್ನು ಆಚೆಗೆ ಸಾಗಿಸಲು ಕೋಡಿ, ಕೂಡಿಟ್ಟ ನೀರನ್ನು ನಾಲೆಗೆ ಬಿಡಲು ತೂಬು, ಪ್ರವಾಹದಲ್ಲಿ ಬರುವ ಗೋಡುಮಣ್ಣನ್ನು ಸಾಗಿಸಲು ತಗ್ಗಿನ ಮಟ್ಟದಲ್ಲಿ ಕದಗಳು, ವಿದ್ಯುದುತ್ಪಾದನೆಗಾಗಿ ನೀರನ್ನು ಸಾಗಿಸುವ ತೂಬುಗಳು ಇದೆಲ್ಲ ಇರುತ್ತವೆ. ಈ ದೇಶದಲ್ಲಿಯ ನೀರಾವರಿ ಕೆಲಸಗಳಲ್ಲಿ ಇವೆಲ್ಲ ಪ್ರಮುಖಪಾತ್ರ ವಹಿಸುತ್ತವೆ.

ಅಣೆಕಟ್ಟಿನ ಅಥವಾ ಕಟ್ಟೆಯ ತೂಬಿನಿಂದ ಹೊರಬಂದ ನೀರು, ನಾಲೆಗಳ ಮಾರ್ಗವಾಗಿ ಸಾಗುವಳಿಯಾಗಬೇಕಾದ ಜಮೀನನ್ನು ತಲುಪುತ್ತದೆ. ಕಾವೇರಿನದಿಗೆ ಅಡ್ಡವಾಗಿ ಕೃಷ್ಣರಾಜಸಾಗರದ ಕಟ್ಟೆಯ ಎಡದಂಡೆಯಿಂದ ಹೊರಡುವ ವಿಶ್ವೇಶ್ವರಯ್ಯ ನಾಲೆ, ಮತ್ತು ಬಲದಂಡೆಯಿಂದ ಹೊರಡುವ ವರುಣನಾಲೆಗಳನ್ನು ಇಲ್ಲಿ ಹೆಸರಿಸಬಹುದು. ನಾಲೆಗಳ ಅಡ್ಡ ಬರುವ ಹಳ್ಳಗಳ ನೀರನ್ನು ಸಾಗಿಸುವ ನಿರ್ಮಾಣಗಳು ಎಂದರೆ ಮೇಲುಗಾಲುವೆ (ಅಕ್ವಿಡಕ್ಟ್), ಕೆಳಗಾಲುವೆ (ಸೂಪರ್ ಪ್ಯಾಸೇಜ್), ಸೈಫನ್, ಮೇಲುಗಾಲುವೆ, ಮಟ್ಟದಾಟು (ಲೆವೆಲ್ ಕ್ರಾಸಿಂಗ್), ಒಳಗಂಡಿ, ಹೊರಗಂಡಿ ಮತ್ತು ಮಳೆಯ ನೀರಿನ ಚರಂಡಿ, ಭಾರತದಲ್ಲಿ ನೀರಾವರಿಗೆ ಸಂಬಂಧಿಸಿದಂತೆ ಈ ನಿರ್ಮಾಣಗಳ ಪಾತ್ರ ಹಿರಿದು.

ಭಾರತ ಸರ್ಕಾರದ ನೀರಾವರಿ ಸಚಿವಖಾತೆಯ ನೇರ ನೇತೃತ್ವದಲ್ಲಿ ಭಾರತದ ನೀರಾವರಿಗೆ ಸಂಬಂಧಿಸಿದಂತೆ ವರ್ಷದ ವಿವಿಧ ಅವಧಿಗಳಲ್ಲಿಯ ಬೆಳೆಗಳಿಗೆ ಅಗತ್ಯವಾದ ನೀರನ್ನು ಒದಗಿಸುವುದು, ಅಶ್ರಾಯಿಕ ಪರಿಸ್ಥಿತಿಗಳಲ್ಲಿ ನೀರ್ಗಾಲುವೆಗಳ ಏರ್ಪಾಡು ಮತ್ತು ಅಧಿಕ ನೀರಿನ ಯುಕ್ತ ವಿಲೇವಾರಿ, ಪ್ರವಾಹಗಳಿಂದ ಉಂಟಾಗುವ ಅಪಘಾತಗಳನ್ನು ತಡೆಯುವುದು, ಬೇಸಗೆಯ ದಿನಗಳಲ್ಲಿ ಬಳಸಿಕೊಳ್ಳುವ ಸಲುವಾಗಿ ನೀರಿನ ಶೇಖರಣೆ, ಉನ್ನತ ಪ್ರದೇಶಗಳಲ್ಲಿ ಮಣ್ಣಿನ ಸಂರಕ್ಷಣೆ ಮತ್ತು ಕರಾವಳಿ ತೀರ ಪ್ರದೇಶಗಳಲ್ಲಿ ಸಮುದ್ರದ ನೀರಿನಿಂದ ಉಂಟಾಗುವ ಕ್ಷಯವನ್ನು ತಡೆಗಟ್ಟುವುದು ಮುಂತಾದವೆಲ್ಲ ನಡೆಯುತ್ತವೆ.

ಭಾರತದಲ್ಲಿ ಯಥೇಚ್ಛ ಜಲಾಕರಗಳು ಇವೆ. ದೇಶದ ಜಲಾಕರಗಳ ಒಟ್ಟು ಮೊತ್ತ 178 ಮಿ.ಹೆ. ಮೀ ಎಂದು ಅಂದಾಜು ಮಾಡಲಾಗಿದೆ. ಭೂಲಕ್ಷಣ, ಮೇಲ್ಮೈ ಲಕ್ಷಣ ಭೂ ವೃತ್ತಾಂತ, ಆಶ್ರಯ ಸಾಮರ್ಥ್ಯ, ಲಭ್ಯ ತಂತ್ರವಿದ್ಯೆಯ ಪರಿಮಾಣ, ಹಾಗೂ ಪ್ರಸ್ತುತ ಸ್ಥಿತಿ ಇವುಗಳ ಪರಮಿತಿಗಳಿಂದಾಗಿ ಈ ಮೊತ್ತದ ಸ್ವಲ್ಪಭಾಗ ಮಾತ್ರ ಬಳಕೆಯಾಗಿದೆ. ಮೇಲ್ಮೈ ನೀರಿನ ಸು. 67 ಮಿ.ಹೆ. ಮೀ ಮತ್ತು ಭೂ ಜಲನೀರಿನ 26.5 ಮಿ. ಹೆ.ಗಳಷ್ಟು ಭಾಗವನ್ನು ಮಾತ್ರ ಕಾರ್ಯಾನುಕೂಲಿಸಿಕೊಂಡು ಬಳಸಿಕೊಳ್ಳಬಹುದಾಗಿದೆ. ನೀರಾವರಿ ಸಾಮರ್ಥ್ಯದ ಪೂರ್ಣಾಭಿವೃದ್ಧಿಯಾದ ಮೇಲಿನ 210 ಮಿ.ಹೆ. ಗಳಲ್ಲಿಯ ಬೆಳೆ ತೆಗೆಯಬಹುದಾದ ಒಟ್ಟು ಸಾಧ್ಯ ಪ್ರದೇಶದ ಪೈಕಿ ಸು. 113 ಮಿ. ಹೆ.ಗಳಷ್ಟು ಪ್ರದೇಶವನ್ನು ಅಂತಿಮವಾಗಿ ನೀರಾವರಿಗೆ ಒಳಪಡಿಸಬಹುದೆಂದು ಅಂದಾಜು ಮಾಡಲಾಗಿದೆ.

ಕೇಂದ್ರ ಸರ್ಕಾರದ ನೀರಾವರಿ ಸಚಿವಖಾತೆ ಕೇಂದ್ರ ಜಲ ಆಯೋಗದೊಡನೆ ಸಮಾಲೋಚಿಸಿ, ಶಕ್ಯವೆಂದು ಕಂಡುಬರುವಂಥ ವಿವಿಧ ನದಿಗಳ ಬಳಿ ಅತ್ಯಧಿಕ ಸಾಮರ್ಥ್ಯದ ಜಲಾಶಯಗಳನ್ನು ನಿರ್ಮಿಸಲು ಮತ್ತು ಒಂದರೊಡನೊಂದು ಸಂಪರ್ಕ ಕಲ್ಪಿಸುವಂಥ ವ್ಯವಸ್ಥೆಗಳನ್ನು ನಿರ್ಮಾಣ ಮಾಡುವುದರಿಂದ ನೀರಿನ ಕೊರತೆ ಇರುವ ಸ್ಥಳಗಳಲ್ಲಿ ಬಳಸಿಕೊಳ್ಳಬಹುದಾದಂಥ ಹೆಚ್ಚುವರಿ ನೀರನ್ನು ಉಪಯೋಗಿಸಿಕೊಳ್ಳಲು ಅನುಕೂಲವಾಗುವಂಥ ಜಲಾಕರಗಳ ಅಭಿವೃದ್ಧಿಗಾಗಿ ರಾಷ್ಟ್ರೀಯ ಪೂರ್ವೇಕ್ಷಣಾ ಯೋಜನೆಯೊಂದನ್ನು ರೂಪಿಸಿಕೊಂಡಿದೆ. ಈ ಪೂರ್ವೇಕ್ಷಣೆಯಲ್ಲಿ ಎರಡು ಮುಖ್ಯ ಘಟಕಗಳಿವೆ: ಹಿಮಾಲಯ ಪರ್ವತದ ನದಿಗಳ ಅಭಿವೃದ್ಧಿ, ಪರ್ಯಾಯದ್ವೀಪದ ನದಿಗಳ ಅಭಿವೃದ್ಧಿ.

ಪರ್ಯಾಯದ್ವೀಪದ ನದಿಗಳ ಅಭಿವೃದ್ಧಿ ಕಾರ್ಯದಲ್ಲಿ ನಾಲ್ಕು ಪ್ರಧಾನ ಭಾಗಗಳಿವೆ:

1. ಮಹಾನದಿ–ಗೋದಾವರಿ–ಕೃಷ್ಣ–ಪೆನ್ನಾರ್–ಕಾವೇರಿ ಈ ನದಿಗಳ ನಡುವೆ ಸಂಪರ್ಕ ಕಲ್ಪಿಸುವುದು.

2. ಮುಂಬಯಿನ ಉತ್ತರಕ್ಕೆ ಮತ್ತು ತಾಪಿನದಿಯ ದಕ್ಷಿಣಕ್ಕೆ, ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ನಡುವೆ ಸಂಪರ್ಕ ಕಲ್ಪಿಸುವುದು.

3. ಕೆನ್ ಮತ್ತು ಚಂಬಲ್ ನದಿಗಳ ನಡುವೆ ಸಂಪರ್ಕ ಏರ್ಪಡಿಸುವುದು.

4. ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ದಿಶಾ ಬದಲಾವಣೆ.

ಈ ಎಲ್ಲ ಕಾರ್ಯಗಳ ಒಟ್ಟು ವೆಚ್ಚ ಸು. 50,000 ಕೋಟಿ ರೂಪಾಯಿಗಳು ಎಂದು ಈ ಮುಂಚೆ ಅಂದಾಜು ಮಾಡಲಾಗಿತ್ತು. ಇದರಿಂದಾಗಿ ನೆಲದ ಮೇಲ್ಮೈ ನೀರಿನ 25 ಮಿ. ಹೆ.ಗಳಷ್ಟು ಪ್ರದೇಶ ಮತ್ತು ಭೂಜಲದ ಅಧಿಕ ಬಳಕೆಯಿಂದ 10 ಮಿ. ಹೆ.ಗಳಷ್ಟು ಪ್ರದೇಶ ನೀರಾವರಿಗೆ ಒಳಪಡುವುವೆಂದು ನಿರೀಕ್ಷಿಸಲಾಗಿತ್ತು. ಇದಲ್ಲದೇ 40 ಮಿ.ಕಿವ್ಯಾ. ಗಳಷ್ಟು ವಿದ್ಯುಚ್ಛಕ್ತಿ ಉತ್ಪಾದನೆ, ಪ್ರವಾಹ ನಿಯಂತ್ರಣ, ನೌಕಾ ಸಂಚಾರದ ಅನುಕೂಲಗಳೂ ಇದಕ್ಕಿವೆ.

ಮುಂಗಾರು ಮಳೆಯ ಅನಿಶ್ಚಿತತೆಯಿಂದಾಗಿ ನೀರಾವರಿ ಯೋಜನೆಗೆ ಅಧಿಕ ಪ್ರಾಶಸ್ತ್ಯ ನೀಡಲಾಗಿದೆ.

ಭಾರತದ ನೀರಾವರಿ ಯೋಜನೆಗಳನ್ನು ಸ್ಥೂಲವಾಗಿ ದೊಡ್ಡ, ಮಧ್ಯಮ ಮತ್ತು ಸಣ್ಣ ಪರಿಮಾಣದವು ಎಂದು ವಿಂಗಡಿಸಲಾಗಿತ್ತು. ಇವುಗಳಿಗೆ ತಗಲುವ ಅಂದಾಜು ವೆಚ್ಚವನ್ನು ಆಧರಿಸಿ ವರ್ಗೀಕರಣವೂ ನಡೆದಿತ್ತು. ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ವೆಚ್ಚವನ್ನು ದೊಡ್ಡ ಯೋಜನೆಯೆಂದೂ, 15 ಲಕ್ಷ ರೂಪಾಯಿಗಳಿಂದ 5 ಕೋಟಿ ರೂಪಾಯಿಗಳ ವೆಚ್ಚವನ್ನು ಮಧ್ಯಮಯೋಜನೆಯೆಂದೂ 15 ಲಕ್ಷ ರೂಪಾಯಿಗಳಿಗಿಂತಲೂ ಕಡಿಮೆ ವೆಚ್ಚವನ್ನು ಸಣ್ಣ ಪರಿಮಾಣದ ಯೋಜನೆಯೆಂದೂ ಕರೆದಿತ್ತು. 1978–79ರಿಂದ ಈ ವರ್ಗೀಕರಣವನ್ನು ತಿದ್ದಿ 10,000 ಹೆ. ಗಳಿಗಿಂತ ಹೆಚ್ಚಿನ ಭೂಮಿಗೆ ನೀರು ಪೂರೈಕೆ ಸಾಮರ್ಥ್ಯ ಹೊಂದಿರುವುದನ್ನು ದೊಡ್ಡ ಯೋಜನೆಗಳೆಂದೂ, 2000 ಹೆ. ಗಳಿಗಿಂತ ಅಧಿಕ ಮತ್ತು 10,000ಹೆ.ಗಳಿಗಿಂತ ಕಡಿಮೆ ಭೂಮಿಗೆ ನೀರು ಪೂರೈಸುವ ಸಾಮರ್ಥ್ಯ ಹೊಂದಿರುವವನ್ನು ಮಧ್ಯಮ ಯೋಜನೆಗಳೆಂದೂ 2000 ಹೆಕ್ಟೇರುಗಳಿಗಿಂತ ಕಡಿಮೆ ಭೂಮಿಗೆ ನೀರು ಪೂರೈಕೆ ಸಾಮರ್ಥ್ಯ ಹೊಂದಿರುವುದನ್ನು ಸಣ್ಣ ಪರಿಮಾಣದ ಯೋಜನೆಗಳೆಂದೂ ಕರೆಯಲಾಗಿದೆ.

1951ಕ್ಕೆ ಮುಂಚೆ ನಾಡಿನಲ್ಲಿ ನೀರಾವರಿ 22.6 ಮಿಲಿಯನ್ ಹೆಕ್ಟೇರ್ ಇತ್ತು. ಇದರಲ್ಲಿ 9.7 ಮಿಲಿಯನ್ ಹೆಕ್ಟೇರ್ ಪ್ರದೇಶಗಳ ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳದ್ದು; 12.9 ಮಿ. ಹೆ. ಪ್ರದೇಶಗಳು ಅಲ್ಪ ಪ್ರಮಾಣದ (ಮೇಲ್ಮೈ ಜಲ ಮತ್ತು ಭೂಜಲ) ಯೋಜನೆಗಳದ್ದು. ಐದನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ (1977–78) ನೀರಾವರಿ ಸಾಮರ್ಥ್ಯ 36.7 ಮಿ. ಹೆ.ಗಳಿಗೆ ಹೆಚ್ಚಿತು. ಇದರಲ್ಲಿ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಯೋಜನೆಗಳ ಸಾಮರ್ಥ್ಯ 27.3 ಮಿಲಿಯನ್ ಹೆಕ್ಟೇರುಗಳು. 1978 ಮತ್ತು 1980 ನಡುವೆ 4–5 ಮಿ. ಹೆ.ಗಳಷ್ಟು ಹೆಚ್ಚಿನ ಸಾಮರ್ಥ್ಯ ಕಲ್ಪಿಸಲಾಯಿತು. ಇದರಲ್ಲಿ ದೊಡ್ಡ ಮತ್ತು ಮಧ್ಯಮ ಗಾತ್ರದ ನೀರಾವರಿ ಯೋಜನೆಗಳದ್ದು 1.8 ಮಿ. ಹೆ.ಗಳು ಮತ್ತು ಅಲ್ಪಪ್ರಮಾಣದ ಯೋಜನೆಗಳದ್ದು 2.7 ಮಿ.ಹೆ.ಗಳು. 1979–80ರ ಅವಧಿಯ ಅಂತ್ಯದ ವೇಳೆಗೆ (ಆರನೆಯ ಪಂಚವಾರ್ಷಿಕ ಯೋಜನೆಯ ಆರಂಭ) ಒಟ್ಟು ನೀರಾವರಿ ಸಾಮರ್ಥ್ಯ 38.7 ಮಿ.ಹೆ.ಗಳಷ್ಟು ಇತ್ತು. 1980–81ರ ಸಾಲಿನಲ್ಲಿ 40 ಮಿ.ಹೆ.ಗಳಾಯಿತು.

1999–2000ರಲ್ಲಿ 84.7 ದಶಲಕ್ಷ ಹೆ.ಗಳಿಗೆ ಅಧಿಕಗೊಂಡಿದೆ. ಇದು ನಿವ್ವಳ ಬಿತ್ತನೆ ಪ್ರದೇಶದ ಶೇ. 59.3 ರಷ್ಟಿರುವುದು. ಇದರಿಂದಾಗಿ ಭಾರತವು ನೀರಾವರಿಯ ಕ್ಷೇತ್ರದಲ್ಲಿ ಪ್ರಪಂಚದ ರಾಷ್ಟ್ರಗಳಲ್ಲಿ ಮೊದಲನೆಯ ಸ್ಥಾನ ಪಡೆಯಿತು.

ಭಾರತದಲ್ಲಿ ಮುಖ್ಯವಾಗಿ ಮೂರು ಪ್ರಕಾರದ ನೀರಾವರಿ ಸೌಲಭ್ಯಗಳಿವೆ: ಬಾವಿಗಳು, ಕೆರೆಗಳು ಮತ್ತು ನದಿ ಕಾಲುವೆಗಳು.

1. ಬಾವಿಗಳಿಂದ ನೀರಾವರಿ: ಬಾವಿಗಳನ್ನು ತೋಡಿ, ನೀರೆತ್ತಿ ಹೊಲಗಳಿಗೆ ನೀರು ಪೂರೈಸಿಕೊಳ್ಳುವುದು ಭಾರತದಲ್ಲಿ ಬಲು ಪ್ರಾಚೀನದಿಂದಲೂ ರೂಢಿಯಲ್ಲಿದೆ. ಭಾರತದಲ್ಲಿ 30 ಲಕ್ಷಕ್ಕೂ ಹೆಚ್ಚಿನ ಬಾವಿಗಳಿಂದ ನೀರಾವರಿ ಆಗುತ್ತಿದೆ. ಸಾಮಾನ್ಯವಾಗಿ ಒಂದು ಬಾವಿ ಸು. 1.82 ಹೆ. ಭೂಮಿಗೆ ನೀರನ್ನು ಒದಗಿಸಬಲ್ಲದು. ಬಾವಿ ತೋಡಲು ಸರ್ಕಾರ ನೆರವಾಗುತ್ತದೆ.

ನೆಲದಲ್ಲಿ ಆಳಕ್ಕೆ ರಂಧ್ರ ಕೊರೆದು ಅಂತರ್ಜಲವನ್ನು ಮೇಲೆತ್ತಿ ನೀರಾವರಿಗೆ ಒದಗಿಸಿಕೊಳ್ಳುವ ಏರ್ಪಾಡೂ ಇದೆ. ಇವಕ್ಕೆ ಕೊಳವೆ ಬಾವಿಗಳು ಅಥವಾ ಟ್ಯೂಬ್‌ವೆಲ್ಸ್ ಎನ್ನುತ್ತಾರೆ. ಇವುಗಳಿಂದ ಹೆಚ್ಚಿನ ನೀರು ಪಡೆಯಬಹುದು. ಭಾರತದಲ್ಲಿ ನೀರಾವರಿ ಸೌಲಭ್ಯವಿರುವ ಒಟ್ಟು ಭೂಮಿಯ ಶೇ. 63.8 ಭಾಗಕ್ಕೆ ಬಾವಿಗಳಿಂದ ನೀರಾವರಿ ಒದಗುತ್ತಿದೆ.

2. ಕೆರೆಗಳಿಂದ ನೀರಾವರಿ: ಕೆರೆಗಳ ನೀರನ್ನು ಮಳೆಯ ಅಭಾವವಿದ್ದಾಗ ನೀರಾವರಿಗೆ ಬಳಸಿಕೊಳ್ಳುವುದಿದೆ. ಕೆಲವು ಸ್ಥಳಗಳಲ್ಲಿ ಚಿಕ್ಕ ಹಳ್ಳಗಳಿಗೆ ಅಣೆಕಟ್ಟು ಕಟ್ಟಿ ದೊಡ್ಡ ಕೆರೆಗಳನ್ನು ನಿರ್ಮಿಸಲಾಗಿದೆ. ಪ್ರಾಕೃತಿಕ ಅನುಕೂಲದ ಕೆರೆಗಳು ದಕ್ಷಿಣ ಭಾರತದಲ್ಲಿ ಹೆಚ್ಚು. ಆಂಧ್ರ ಪ್ರದೇಶ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸ ಮತ್ತು ಬಿಹಾರ್ ರಾಜ್ಯಗಳಲ್ಲಿ ಕೆರೆಗಳಿಂದ ನೀರಾವರಿ ಮಾಡುವುದು ರೂಢಿಯಲ್ಲಿದೆ. ಈ ಸೌಲಭ್ಯ ಪಡೆಯುತ್ತಿರುವ ಹೆಚ್ಚು ಭೂಮಿ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿದೆ. ಅಸ್ಸಾಮ್ ಮತ್ತು ನಾಗಾಲ್ಯಾಂಡುಗಳನ್ನು ಬಿಟ್ಟರೆ ದೇಶದ ಎಲ್ಲ ಭಾಗಗಳಲ್ಲೂ ಕೆರೆಗಳಿವೆ. ತಮಿಳುನಾಡಿನಲ್ಲಿ ಇವುಗಳ ಸಂಖ್ಯೆ ಬಲು ಹೆಚ್ಚು.

3. ಕಾಲುವೆಗಳಿಂದ ನೀರಾವರಿ: ಇದು ನದಿಗಳ ಅಡ್ಡ, ಎತ್ತರವಾದ ಸ್ಥಳಗಳಲ್ಲಿ ಆಣೆಕಟ್ಟು ನಿರ್ಮಿಸಿ, ನೀರು ಸಂಗ್ರಹಿಸಿ, ಅದನ್ನು ಕಾಲುವೆಗಳ ಮೂಲಕ ಹೊಲಗದ್ದೆಗಳಿಗೆ ಹಾಯಿಸಿಕೊಳ್ಳುವ ಏರ್ಪಾಡು. ಕಾವೇರಿ ನದಿಗೆ ಅಡ್ಡವಾಗಿ ಕಟ್ಟಿರುವ ಕೃಷ್ಣರಾಜಸಾಗರ, ಮೆಟ್ಟೂರು ಕಟ್ಟೆಗಳು, ತುಂಗಭದ್ರಾ ನದಿಗೆ ಅಡ್ಡವಾಗಿ ನಿರ್ಮಿಸಿರುವ ಅಣೆಕಟ್ಟುಗಳು ದೊಡ್ಡ ಪರಿಮಾಣದ ನೀರಾವರಿ ಏರ್ಪಾಡುಗಳಾಗಿವೆ. ಉತ್ತರ ಪ್ರದೇಶ, ಪಂಜಾಬ್‌ಗಳಲ್ಲಿ ಬೃಹತ್ ಗಾತ್ರದ ನದಿಕಾಲುವೆ ನೀರಾವರಿ ಏರ್ಪಾಡಿವೆ. ಬಿಹಾರ್, ಪಶ್ಚಿಮ ಬಂಗಾಲ, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಕೂಡ ಕಾಲುವೆಗಳಿಂದ ನೀರಾವರಿ ನಡೆಯುತ್ತಿದೆ. ರಾಷ್ಟ್ರೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಅನೇಕ ವಿವಿಧೋದ್ದೇಶ ನದಿಕಣಿವೆಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ. ಇವುಗಳಿಂದ ನೀರಿನ ಪೂರೈಕೆ ಮಾತ್ರವಲ್ಲದೆ ವಿದ್ಯುದುತ್ಪಾದನೆ, ಜಲಯಾನ, ಮನರಂಜನೆ, ನೆರೆ (ಪ್ರವಾಹ) ನಿಯಂತ್ರಣ, ಕುಡಿಯುವ ನೀರಿನ ಪೂರೈಕೆ ಮೊದಲಾದ ಸೌಲಭ್ಯಗಳೂ ಒದಗಿವೆ.

**ಭಾರತದ ವಿವಿಧ ಮೂಲಗಳ ನೀರಾವರಿಯ ಕ್ಷೇತ್ರವನ್ನು ದಶಲಕ್ಷ ಹೆಕ್ಟೇರ್‌ಗಳಲ್ಲಿ ಕೆಳಗೆ ನಮೂದಿಸಿದೆ;**

| ನೀರಾವರಿಮೂಲಗಳು | 1950–51 | 1990–91 | 2000–2001 |
|---|---|---|---|
| 1. ಬಾವಿಗಳು | 5.97 | 25.0 | 28.6 |
| 2. ಕಾಲುವೆಗಳು | 8.29 | 17.3 | 18.2 |
| 3. ಕೆರೆಗಳು | 3.61 | 3.3 | 3.5 |
| 4. ಇತರೆ | 2.96 | 3.2 | 3.6 |
| **ಒಟ್ಟು** | **20.83** | **48.8** | **53.9** |

ನದೀಕಾಲುವೆಗಳಲ್ಲಿ ಮೂರು ಬಗೆಗಳುಂಟು: ಸಾರ್ವಕಾಲಿಕ ಕಾಲುವೆಗಳು (ಪೆರಿನಿಯಲ್ ಕೆನಾಲ್ಸ್), ಪ್ರವಾಹ ಕಾಲುವೆಗಳು (ಇನಂಡೇಷನ್ ಕೆನಾಲ್ಸ್) ಮತ್ತು ಶೇಖರಗೊಂಡ ನೀರಿನ ಕಾಲುವೆಗಳು (ಸ್ಟೋರೇಜ್ ವರ್ಕ್ ಕೆನಾಲ್ಸ್), ಸರ್ವಕಾಲಿಕ ಕಾಲುವೆಗಳಿಂದ ಒದಗುವ ನೀರಿನಿಂದ ವರ್ಷದಲ್ಲಿ ಎರಡು ಬೆಳೆ ತೆಗೆಯಬಹುದು. ನದಿಗಳ ಅಡ್ಡ ದೊಡ್ಡ ಅಣೆಕಟ್ಟು ನಿರ್ಮಿಸಿ ನೀರಾವರಿ ಮತ್ತು ಇನ್ನಿತರ ಉದ್ದೇಶ ಪೂರೈಸಿಕೊಳ್ಳುವ ಪ್ರದೇಶಗಳಲ್ಲಿ ಸಾರ್ವಕಾಲಿಕ ಕಾಲುವೆಗಳು ಕಾಣಬರುತ್ತದೆ. ನದಿಗಳಲ್ಲಿ ಪ್ರವಾಹ ಬಂದಾಗ ಮಾತ್ರ ತುಂಬಿ ಹರಿಯುವಂಥವು ಪ್ರವಾಹ ಕಾಲುವೆಗಳು. ಪಶ್ಚಿಮಬಂಗಾಲ, ಪೂರ್ವತೀರದ ನದಿಮುಖಜಭೂಮಿ ಪ್ರದೇಶಗಳು, ಬಿಹಾರ ಮೊದಲಾದ ಭಾಗಗಳಲ್ಲಿ ಪ್ರವಾಹ ಕಾಲುವೆಗಳಿವೆ. ಮಳೆಗಾಲದಲ್ಲಿ ನೀರನ್ನು ಶೇಖರಿಸಿ, ಅವಶ್ಯವಿದ್ದಾಗ ಮಾತ್ರ ಕಾಲುವೆಗಳ ಮೂಲಕ ಹರಿಯ ಬಿಡುವ ಕಾಲುವೆಗಳಿಗೆ ಶೇಖರಗೊಂಡ ನೀರಿನ ಕಾಲುವೆಗಳು ಎನ್ನುತ್ತಾರೆ.

ಭಾರತದ ಬಹುತೇಕ ರಾಜ್ಯಗಳಲ್ಲಿ ನದಿ ಕಾಲುವೆಗಳ ನೀರಾವರಿ ಯೋಜನೆಗಳಿವೆ. ಈ ಕಾಲುವೆಗಳಿಂದ ನೀರಾವರಿ ಸೌಲಭ್ಯ ಪಡೆದುಕೊಳ್ಳುವಲ್ಲಿ ಉತ್ತರಪ್ರದೇಶದ್ದು ಪ್ರಥಮಸ್ಥಾನ, ಪಂಜಾಬ್ ರಾಜ್ಯದ್ದು ದ್ವಿತೀಯ ಸ್ಥಾನ. ಹರಿಯಾಣ, ತಮಿಳುನಾಡು, ಪಶ್ಚಿಮಬಂಗಾಲಗಳಲ್ಲೂ ನದೀಕಾಲುವೆ ನೀರಾವರಿ ಸೌಲಭ್ಯಗಳಿವೆ. ಬಿಹಾರ, ರಾಜಸ್ತಾನ, ಮಧ್ಯಪ್ರದೇಶಗಳಲ್ಲಿ ಈ ಸೌಲಭ್ಯ ಕಡಿಮೆ. ಕರ್ನಾಟಕ, ಅಸ್ಸಾಮ್, ಮಹಾರಾಷ್ಟ್ರ, ಒರಿಸ್ಸಗಳಲ್ಲಿ ತೀರ ಕಡಿಮೆ. ವಿವಿಧೋದ್ದೇಶ ನದಿಕಣಿವೆ ಯೋಜನೆಗಳು: ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿ ಅಭಿವೃದ್ಧಿಗೆ ಅಗತ್ಯವಾದ ನೀರಾವರಿ ಸೌಲಭ್ಯ ಒದಗಿಸುವ ಮತ್ತು ವಿವಿಧ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸಲು ಈ ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ. ಇವನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ ಟೆನಸೀ ನದಿಕಣಿವೆ ಯೋಜನೆಯ ಮಾದರಿಯಲ್ಲಿ ರೂಪಿಸಲಾಗಿದೆ. ನದಿಗಳಿಗೆ ಅಡ್ಡಲಾಗಿ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ನೀರು ಸಂಗ್ರಹಿಸಿ, ನೀರಾವರಿ ವಿದ್ಯುದುತ್ಪಾದನೆ, ನೆರೆನಿಯಂತ್ರಣ, ನೌಕಾಸಾರಿಗೆ, ಮೀನುಗಾರಿಕೆ, ಕುಡಿಯುವ ನೀರಿನ ಪೂರೈಕೆ ಮನರಂಜನೆ ಮೊದಲಾದ ಉದ್ದೇಶಗಳನ್ನು ಪೂರೈಸಲಾಗುತ್ತಿದೆ. 1951 ಏಪ್ರಿಲ್ 1ರಿಂದ 1979 ಮಾರ್ಚ್ 31ರ ಅವಧಿಯಲ್ಲಿ ಶುರುವಾದ ಸು. 934 ದೊಡ್ಡ ಮತ್ತು ಮಧ್ಯಮ ಗಾತ್ರದ ನೀರಾವರಿ ಯೋಜನೆಗಳಲ್ಲಿ 526 ಯೋಜನೆಗಳು ಪೂರ್ಣಗೊಂಡಿವೆ. ದೊಡ್ಡ, ಮಧ್ಯಮ ಮತ್ತು ಸಣ್ಣ ಪರಿಮಾಣದ ನೀರಾವರಿ ಯೋಜನೆಗಳಿಂದ ನೀರಾವರಿಗೆ ಒಳಪಟ್ಟ ಭೂಮಿಯ ವಿಸ್ತೀರ್ಣ 1950–51ರಲ್ಲಿ 226 ಲಕ್ಷ ಹೆಕ್ಟೇರುಗಳಷ್ಟು ಇದ್ದುದ್ದು 1978–79ರಲ್ಲಿ 585 ಲಕ್ಷ ಹೆ.ಗಳಿಗೆ ಏರಿತು. 2001–01 ರಲ್ಲಿ 539 ಲಕ್ಷ ಹೆ.ಗಳಿಗೆ ಹೆಚ್ಚಿತು.

ಪ್ರಮುಖ ನದಿಕಣಿವೆ ಯೋಜನೆಗಳು. 1. ದಾಮೋದರ್ ನದಿಕಣಿವೆ ಯೋಜನೆ: ದಾಮೋದರ್ ನದಿ ಬಿಹಾರ ರಾಜ್ಯದ ಛೋಟಾ ನಾಗಪುರ್ ಬೆಟ್ಟಗಳಲ್ಲಿ ಹುಟ್ಟಿ ಬಿಹಾರ ರಾಜ್ಯದಲ್ಲಿ ಸು. 270 ಕಿಮೀ ದೂರ ಹರಿದು ಪಶ್ಚಿಮ ಬಂಗಾಲ ಸೇರುತ್ತದೆ. ಅಲ್ಲಿ ಸು. 235 ಕಿಮೀ ದೂರ ಹರಿದು ಹೂಗ್ಲೀ ನದಿಯನ್ನು ಸೇರುತ್ತದೆ. ಬಿಹಾರದಲ್ಲಿ ಈ ನದಿಗೆ ಅನೇಕ ಚಿಕ್ಕ ನದಿಗಳು ಸೇರುತ್ತವೆ. ಅವುಗಳಿಂದಾಗಿ ದಾಮೋದರ್ ನದಿಕಣಿವೆಯ ಕ್ಷೇತ್ರ ಸು. 21,437 ಚ.ಕಿಮೀ ಗಳಷ್ಟಿದೆ. ಈ ನದಿಯಲ್ಲಿ ಆಗಿಂದಾಗ್ಗೆ ಉಂಟಾಗುವ ನೆರಹಾವಳಿಯಿಂದ ಭೂಮಿ ಚೌಳಾಗಿ, ಜನರಿಗೆ ಚಳಿಜ್ವರದ ಪಿಡುಗು, ಬೇಸಗೆಯಲ್ಲಿ ನೀರಿನ ಕೊರತೆ ಇವೆಲ್ಲವನ್ನೂ ಗಮನಿಸಿ ಅಭಿವೃದ್ಧಿಕಾರ್ಯಗಳಿಗೆ ನದಿಯ ನೀರು ಬಳಸಿಕೊಳ್ಳುವ ಯೋಜನೆ ಸಿದ್ಧಪಡಿಸಲಾಯಿತು. ಇದರ ಪ್ರಕಾರ ದಾಮೋದರ್ ಮತ್ತು ಅದರ ಉಪನದಿಗಳಿಗೆ ಅಣೆಕಟ್ಟು ನಿರ್ಮಿಸಲಾಗಿದೆ. ತಿಲೈಯ ಕೋನಾರ, ಮೈಥಾನ ಮತ್ತು ಪಾಂಚೇಟ ಬೆಟ್ಟ ಎಂಬಲ್ಲಿ ನಾಲ್ಕು ಜಲಾಶಯಗಳು ನಿರ್ಮಾಣಗೊಂಡಿವೆ. ಕೋನಾರವನ್ನು ಬಿಟ್ಟು ಉಳಿದ ಮೂರು ಜಲಾಶಯಗಳ ಎಡೆಗಳಲ್ಲಿ ಸು. ಹತ್ತುಲಕ್ಷ ನಲವತ್ತು ಸಾವಿರ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಜೊತೆಗೆ ಬೊಕಾರೊ, ದುರ್ಗಾಪುರ, ಚಂದ್ರಪುರಗಳಲ್ಲಿ ವಿದ್ಯುತ್ತಿನ ಶಾಖೋತ್ಪನ್ನ ಘಟಕಗಳಿಂದ 9,57,000 ಕಿವ್ಯಾ.ಗಳಷ್ಟು ವಿದ್ಯುತ್ತು ಲಭಿಸುತ್ತದೆ. ನಾಲ್ಕು ಜಲಾಶಯಗಳಿಂದ ಒಟ್ಟು 4,16,841 ಹೆಕ್ಟೇರ್ ಭೂಮಿಗೆ ನೀರು ಪೂರೈಕೆಯಾಗುತ್ತದೆ. ಈ ಯೋಜನೆಯಿಂದ ನೆರೆಹಾವಳಿ ತಗ್ಗಿದೆ. ನೀರಾವರಿಯಿಂದ ವರ್ಷದಲ್ಲಿ ಎರಡು ಬೆಳೆ ಸಾಧ್ಯವಾಗಿದೆ. ವಿದ್ಯುತ್ತಿನ ಉತ್ಪತ್ತಿಯಿಂದಾಗಿ ಕೈಗಾರಿಕೆಗಳಿಗೆ ಲಾಭವಾಗಿದೆ. ಜಲಸಾರಿಗೆ ಸಾಧ್ಯವಾಗಿದೆ. ಮೀನುಗಾರಿಕೆಯ ಅಭಿವೃದ್ಧಿ, ರಮಣೀಯ ಉದ್ಯಾನ, ಚಳಿಜ್ವರದ ನಿರ್ಮೂಲನ ಇವೆಲ್ಲ ಈ ಯೋಜನೆಯಿಂದಾದ ಇತರ ಲಾಭಗಳು.

2. ಭಾಕ್ರ–ನಂಗಲ್ ನದಿಕಣಿವೆ ಯೋಜನೆ: ಪಂಜಾಬ್, ಹರಿಯಾಣ ಮತ್ತು ರಾಜಸ್ತಾನ ರಾಜ್ಯಗಳಿಗೆ ಸಂಬಂಧಿಸಿದ ವಿವಿಧೋದ್ದೇಶ ಯೋಜನೆ, ಭಾರತದಲ್ಲೇ ಅತ್ಯಂತ ದೊಡ್ಡದಾದ ನದಿಕಣಿವೆ ಯೋಜನೆ ಇದು. ಪಂಜಾಬಿನ ರಾಜಧಾನಿ ಚಂಡೀಗಢದಿಂದ ಸು. 115 ಕಿಮೀ ದೂರದ ಭಾಕ್ರ ಮತ್ತು ಅಲ್ಲಿಂದ ಸು. 12 ಕಿಮೀ ದೂರದಲ್ಲಿ ನಂಗಲ್ ಎಂಬಲ್ಲಿ ಸಟ್ಲೆಜ್ ನದಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಮೊದಲು ಈ ನದಿಯಲ್ಲಿನ ಮಹಾಪೂರದಿಂದ ಅಪಾರನಷ್ಟ, ಬೇಸಗೆಯಲ್ಲಿ ನೀರಿನ ಅಭಾವ ಮಾಮೂಲಾಗಿದ್ದುವು. ಇವಕ್ಕೆ ಪರಿಹಾರವಾಗಿ ಭಾಕ್ರದಲ್ಲಿ ಏಷ್ಯದಲ್ಲೇ ಅತ್ಯಂತ ಎತ್ತರವಾದ (226ಮೀ) ನೇರಗುರುತ್ವಮಾದರಿಯ ಅಣೆಕಟ್ಟನ್ನು ನಿರ್ಮಿಸಲಾಯಿತು. ಇದರಿಂದ ಗೋವಿಂದ ಸಾಗರ ಬೃಹತ್ ಜಲಾಶಯವೂ ನಿರ್ಮಾಣವಾಗಿದೆ. ಭಾಕ್ರ ಯೋಜನೆಯ ಪ್ರಮುಖ ಕಾಲವೆ ರಾಯಪುರದಿಂದ ಪ್ರಾರಂಭವಾಗುತ್ತದೆ. ಇದರ ಉದ್ದ 168 ಕಿಮೀ ಇದಲ್ಲದೆ ಈ ಯೋಜನೆಯಲ್ಲಿ 104 ಕಿಮೀ ಉದ್ದದ ಇನ್ನೊಂದು ಕಾಲುವೆಯೂ ಸೇರಿದೆ. ಇಲ್ಲಿಯ ಕಾಲುವೆಗಳ ಒಟ್ಟು ಉದ್ದ 1104 ಕಿಮೀ ಈ ಕಾಲುವೆಗಳ ಶಾಖೆಗಳು ವಿವಿಧ ದಿಕ್ಕುಗಳಲ್ಲಿ ಸು. 3360 ಕಿಮೀ ದೂರದವರೆಗೆ ಹರಡಿವೆ. ಭಾಕ್ರ ನಂಗಲ್ ಯೋಜನೆಯಿಂದ ಪ್ರತಿವರ್ಷ 22 ಲಕ್ಷ ಹೆ. ಭೂಮಿಗೆ ನೀರೊದಗುತ್ತಲಿದೆ. ಇಲ್ಲಿಯ ಜಲ ವಿದ್ಯುತ್ಕೇಂದ್ರಗಳಿಂದ 1204 ಕಿವ್ಯಾ. ಗಳಷ್ಟು ವಿದ್ಯುತ್ತು ಉತ್ಪಾದನೆಯಾಗುತ್ತಿದೆ. ನೆರೆನಿಯಂತ್ರಣ, ನೀರಾವರಿ ವಿದ್ಯುದುತ್ಪಾದನೆ, ಭೂಸಂರಕ್ಷಣೆಗಳ ಲಾಭವಾಗಿವೆ.

**ಹಿರಾಕುಡ್ ಅಣೆಕಟ್ಟು**

3. ಹಿರಾಕುಡ್ ನದಿಕಣಿವೆ ಯೋಜನೆ: ಒರಿಸ್ಸ ರಾಜ್ಯದ ಸಂಬಾಲ್‌ಪುರದಿಂದ 14.5 ಕಿಮೀ ದೂರದ ಎರಡು ಗುಡ್ಡಗಳ ಶ್ರೇಣಿಗಳ ನಡುವೆ ಹರಿಯುವ ಮಹಾನದಿಯ ಅಡ್ಡ ನಿರ್ಮಾಣವಾಗಿರುವ ಅಣೆಕಟ್ಟು. ಇದರ ಜಲಾಶಯದ ವಿಸ್ತೀರ್ಣ 746 ಚ.ಕಿಮೀ ಮಹಾನದಿ ಮಧ್ಯಪ್ರದೇಶದ ರಾಮಪುರ ಜಿಲ್ಲೆಯಲ್ಲಿ ಉಗಮಗೊಂಡು ಪೂರ್ವಾಭಿಮುಖವಾಗಿ ಹರಿದು ಬಂಗಾಲಕೊಲ್ಲಿ ಸೇರುತ್ತದೆ. ಹರಿವಿನ 853 ಕಿಮೀ ಉದ್ದಕ್ಕೂ ಅನೇಕ ಉಪನದಿಗಳು ಇದನ್ನು ಕೂಡಿಕೊಳ್ಳುತ್ತವೆ. ಮಳೆಗಾಲದಲ್ಲಿಯ ನೆರೆಹಾವಳಿ ತಪ್ಪಿಸುವುದು, ಜಲವಿದ್ಯುತ್ತಿನ ಉತ್ಪತ್ತಿ ಮತ್ತು ನೀರಾವರಿ ಇವು ಈ ಯೋಜನೆಯ

ಪ್ರಮುಖ ಉದ್ದೇಶಗಳು. ಈ ಯೋಜನೆಯ ಅನ್ವಯ ಹಿರಾಕುಡ್, ಟಿಕಾರ್‌ಪುರ ಮತ್ತು ನಾರಾಜ್ ಎಂಬ ಮೂರು ಸ್ಥಳಗಳಲ್ಲಿ ಅಣೆಕಟ್ಟು ನಿರ್ಮಿಸಲಾಗಿದೆ. ಪ್ರತಿಯೊಂದೆಡೆಯಲ್ಲೂ ಕಾಲುವೆ ಮತ್ತು ವಿದ್ಯುದುತ್ಪಾದನಾ ಕೇಂದ್ರಗಳು ಇವೆ. ಇಡೀ ಯೋಜನೆಯಿಂದ ಹತ್ತು ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ದೊರೆತಿದೆ. ವಿದ್ಯುದುತ್ಪಾದನಾ ಕೇಂದ್ರಗಳಿಂದ 5 ಲಕ್ಷ ಕಿವಾಗಳಷ್ಟು ವಿದ್ಯುತ್ತು ಉತ್ಪತ್ತಿಯಾಗುತ್ತದೆ. ಈ ಯೋಜನೆಯಿಂದ ಒರಿಸ್ಸರಾಜ್ಯದ ಕೃಷಿ ಹಾಗೂ ಕೈಗಾರಿಕಾಭಿವೃದ್ಧಿ ಮತ್ತು ಗಣಿ ಉದ್ಯಮ ಪ್ರಗತಿಹೊಂದಿವೆ. ಅಂತರಿಕ ಜಲಮಾರ್ಗ ಸಹ ಅಭಿವೃದ್ಧಿಯಾಗಿದೆ. ನೆರೆಹಾವಳಿ ನಿಯಂತ್ರಣವಾಗಿದೆ. ಹಿರಾಕುಡ್ ಯೋಜನೆಯನ್ನು ಮಹಾನದಿಯ ಮುಖಜಭೂಮಿ ಪ್ರದೇಶಕ್ಕೂ ವಿಸ್ತರಿಸುವುದರಿಂದ ಸು. 5.15 ಲಕ್ಷ ಹೆ.ಗಳಷ್ಟು ಹೆಚ್ಚಿನ ಭೂಮಿಗೆ ನೀರಾವರಿ ಸೌಲಭ್ಯ ಒದಗಿದೆ.

4. ನಾಗಾರ್ಜುನ ಸಾಗರ ಯೋಜನೆ: ಆಂಧ್ರಪ್ರದೇಶದ ನಾಲಗೊಂಡ ಜಿಲ್ಲೆಯ ಮಿರ್ಯಲಗೂಡ ತಾಲ್ಲೂಕಿನ ನಂದಿಕೊಂಡ ಎಂಬ ಗ್ರಾಮದ ಬಳಿ ಕೃಷ್ಣ ನದಿಗೆ ಅಡ್ಡವಾಗಿ 1450 ಮೀ ಉದ್ದದ ಬೃಹತ್‌ಗಾತ್ರದ ಅಣೆಕಟ್ಟೆ ಕಟ್ಟಲಾಗಿದೆ. ಕೃಷ್ಣ ನದಿಯ ನೀರನ್ನು ನೀರಾವರಿಗೂ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೂ ಬಳಸುವ ಗುರಿ ಈ ಯೋಜನೆಯದು. ನದಿಯ ಉಭಯ ಪಾರ್ಶ್ವಗಳಲ್ಲೂ ಕಾಲುವೆ ನಿರ್ಮಾಣ ಆಗಿದೆ. ಪ್ರತಿಯೊಂದರ ಬಳಿ ಒಂದೊಂದು ವಿದ್ಯುದುತ್ಪಾದನಾ ಕೇಂದ್ರ ಇದೆ. ಉತ್ಪಾದನಾ ಸಾಮರ್ಥ್ಯ 50,000 ಕಿವಾಗಳು. ನದಿಯ ಬಲದಂಡೆ ಕಾಲುವೆಯ ಉದ್ದ 204 ಕಿಮೀ ಇದು 21,000 ಕ್ಯೂಸೆಕ್ ಪರಿಮಾಣದ ನೀರನ್ನು ಸಾಗಿಸುವ ಸಾಮರ್ಥ್ಯ ಪಡೆದಿದೆ. ಇದರಿಂದ ಸು. 8,09,400 ಹೆ. ಭೂಮಿಗೆ ನೀರಾವರಿ ಸೌಲಭ್ಯ ಒದಗಿದೆ. ಈ ಕಾಲುವೆಯನ್ನು ಮತ್ತೆ ಸು. 97 ಕಿಮೀ ಉದ್ದಕ್ಕೆ ವಿಸ್ತರಿಸಿ ಸು. 1 ಲಕ್ಷ ಹೆ.ಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ಒದಗಿಸಲಾಗಿದೆ. ಈ ಯೋಜನೆಯ ಮೊದಲ ಹಂತದ ವಿದ್ಯುತ್ಕೇಂದ್ರದ ಉತ್ಪಾದನಾ ಸಾಮರ್ಥ್ಯ 110 ಮೆಗಾವಾಟುಗಳು.

5. ತುಂಗಭದ್ರಾ ಯೋಜನೆ: ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿಗೆ ಸಂಬಂಧಿಸಿದ ಸಂಯುಕ್ತ ವಿವಿಧೋದ್ದೇಶ ಯೋಜನೆ. ಕರ್ನಾಟಕದಲ್ಲಿ ಹೊಸಪೇಟೆಯಿಂದ ಸು. 5 ಕಿಮೀದೂರದಲ್ಲಿರುವ ಮಲ್ಲಾಪುರಮ್ ಎಂಬಲ್ಲಿ ತುಂಗಭದ್ರಾನದಿಗೆ ಅಡ್ಡವಾಗಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. 2,441 ಮೀ ಉದ್ದದ ಮತ್ತು 49.39 ಮೀ ಎತ್ತರದ ಅಣೆಕಟ್ಟು, 227 ಕಿಮೀ ಉದ್ದದ ಎಡೆದಂಡೆ ಕಾಲುವೆ, 349 ಕಿಮೀ ಉದ್ದದ ಕೆಳದಂಡೆ ಕಾಲುವೆ, 196 ಕಿಮೀ ಉದ್ದದ ಮೇಲ್ದಂಡೆ ಕಾಲುವೆ, ವಿದ್ಯುದುತ್ಪಾದನಾ ಕೇಂದ್ರ ಬೃಹತ್ ಜಲಾಶಯ– ಇವು ಈ ಯೋಜನೆಯ ವೈಶಿಷ್ಟ್ಯಗಳು. ಎಡದಂಡೆ ಮತ್ತು ಕೆಳದಂಡೆ ಕಾಲುವೆಗಳು ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿಯ 4 ಲಕ್ಷ 8 ಸಾವಿರ ಹೆ. ಭೂಮಿಗೆ ನೀರಾವರಿ ಒದಗಿಸುತ್ತವೆ. ಮೇಲ್ದಂಡೆ ಕಾಲುವೆ 1,80,000 ಹೆ. ಭೂಮಿಗೆ ನೀರು ಒದಗಿಸುತ್ತದೆ. ಇಲ್ಲಿಯ ಮೂರು ವಿದ್ಯುದುತ್ಪಾದನಾ ಕೇಂದ್ರಗಳಿಂದ ಒಟ್ಟು 99 ಮೆ.ವಾ. ಗಳಷ್ಟು ವಿದ್ಯುತ್ತು ಉತ್ಪತ್ತಿಯಾಗುತ್ತದೆ.

6. ಕೃಷ್ಣ ಮೇಲ್ದಂಡೆ ಯೋಜನೆ: ಕರ್ನಾಟಕ ರಾಜ್ಯದ ಒಣಜಿಲ್ಲೆಗಳೆಂದು ಹೆಸರು ಪಡೆದಿರುವ ಬಿಜಾಪುರ, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳ ಭೂಮಿಗೆ ನೀರು ಒದಗಿಸುವುದು ಈ ಯೋಜನೆಯ ಗುರಿ. ಈ ಜಿಲ್ಲೆಗಳು ಆಗಾಗ್ಗೆ ಅನಾವೃಷ್ಟಿಯಿಂದ ಬರಗಾಲಕ್ಕೆ ಈಡಾಗುತ್ತಿರುತ್ತವೆ. ಇಲ್ಲಿಯ ಕಪ್ಪುಮಣ್ಣಿನ ಭೂಮಿ ಫಲವತ್ತಾಗಿದೆ. ಮಳೆ ಹೆಚ್ಚಿಗೆ ಬೇಕಾಗುವುದಿಲ್ಲ. ಇಂಥ ಭೂಮಿಗೆ ನೀರುಣಿಸುವ ಹಾಗೂ ಅದೇ ವೇಳೆ ಜಲವಿದ್ಯುತ್ತನ್ನು ಉತ್ಪಾದಿಸುವ ಉದ್ದೇಶವಿಟ್ಟುಕೊಂಡೇ ಈ ಯೋಜನೆ ಕಾರ್ಯರೂಪಕ್ಕೆ ಬಂತು. ಇದನ್ನು ಎರಡು ಹಂತಗಳಲ್ಲಿ ಪೂರ್ತಿಗೊಳಿಸಲಾಗಿದೆ. ಮೊದಲನೆಯದಾಗಿ ಬಿಜಾಪುರ ಜಿಲ್ಲೆಯ ಆಲಮಟ್ಟಿ ಎಂಬಲ್ಲಿ ಕೃಷ್ಣ ನದಿಗೆ ಅಡ್ಡಕಟ್ಟೆಯ ನಿರ್ಮಾಣ. ಇಲ್ಲಿಯ ಜಲಾಶಯದ ಸಾಮರ್ಥ್ಯ 5094 ಘಮೀ ನೀರು. ಈ ಹಂತದ ಕೆಲಸ 1964ರಲ್ಲಿ ಪ್ರಾರಂಭಿಸಲಾಯಿತು. ಅಣೆಕಟ್ಟಿನ ಎಡದಂಡೆ ಕಾಲುವೆಯ ಉದ್ದ ಸು. 423 ಕಿಮೀ ರಾಯಚೂರು ಜಿಲ್ಲೆಯ 40,470 ಹೆ., ಬಿಜಾಪುರ ಜಿಲ್ಲೆಯ 1,10,078 ಹೆ., ಗುಲ್ಬರ್ಗ ಜಿಲ್ಲೆಯ 1,12,506 ಹೆ. ಭೂಮಿಗೆ ನೀರೊದಗಿಸುವ ಸಾಮರ್ಥ್ಯ ಪಡೆದಿದೆ.

ಯೋಜನೆಯ ಎರಡನೆಯ ಹಂತದಲ್ಲಿ ಸೇರಿದಂತೆ ಗುಲ್ಬರ್ಗ ಜಿಲ್ಲೆಯ ನಾರಾಯಣಪುರದ ಬಳಿ ಕೃಷ್ಣನದಿಗೆ ಅಡ್ಡ ಒಂದು ಅಣೆಕಟ್ಟು ಇದೆ. ಇಲ್ಲಿನ ಜಲಾಶಯದ ಜಲ ಶೇಖರಣಾ ಸಾಮರ್ಥ್ಯ 13,951 ಘಮೀ. ಅಣೆಕಟ್ಟಿನ ಎಡದಂಡೆ ಕಾಲುವೆಯ ಉದ್ದ 150 ಕಿಮೀ ಇದು ಗುಲ್ಬರ್ಗ ಜಿಲ್ಲೆಯ 1,13,316 ಹೆ. ಭೂಮಿಗೆ ನೀರು ಒದಗಿಸಬಲ್ಲದು. ಬಲದಂಡೆ ಕಾಲುವೆ ರಾಯಚೂರು ಜಿಲ್ಲೆಯ 1,49,739 ಹೆ. ಭೂಮಿಗೆ ನೀರು ಒದಗಿಸಬಲ್ಲದು. ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳೆರಡರ ಸಾಮರ್ಥ್ಯ ಒಟ್ಟು 7,68,330 ಹೆ. ಭೂಮಿಗೆ ನೀರೊದಗಿಸುವುದು.

ಇವಲ್ಲದೆ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ಜಂಟಿ ಪ್ರಯತ್ನದ ಬೀಯಾಸ್ ಯೋಜನೆ; ಭಾರತ ಮತ್ತು ನೇಪಾಲಗಳ ಸಂಯುಕ್ತ ಪ್ರಯತ್ನದ ಗಂಡಕ್ ಯೋಜನೆ; ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳಿಗೆ ಸಂಬಂಧಿಸಿದ ಚಂಬಲ್ ಯೋಜನೆ; ಮಾಹಿನದೀ ಯೋಜನೆ; ಬಿಹಾರಿನ ಕೋಸಿ ನದಿ ಯೋಜನೆ; ರಾಜಸ್ಥಾನ ಕಾಲುವೆ ಯೋಜನೆ; ಉತ್ತರ ಪ್ರದೇಶದ ರಾಮಗಂಗಾಯೋಜನೆ ಮುಂತಾದ ಯೋಜನೆಗಳಿಂದಾಗಿ ಭಾರತದ ನೀರಾವರಿ ವ್ಯವಸ್ಥೆ ಬಲು ಸಮರ್ಥವೂ ಪರಿಣಾಮಕಾರಿಯೂ ಆಗಿದೆ. (ಎಚ್.ಸಿ.ಕೆ.)

**ಭಾರತದಲ್ಲಿ ಪರಮಾಣು ಶಕ್ತಿ:** 20ನೆಯ ಶತಮಾನದಲ್ಲಿ ಮಾನವ ಆವಿಷ್ಕರಿಸಿದ ಅಣು ವಿದ್ಯುತ್ ವಿದ್ಯುತ್ತಿನ ಮೂಲವಾಗಿದೆ. ಭಾರತ ಅಪಾರ ವಿದ್ಯುತ್ತಿನ ಕೊರತೆ ಹೊಂದಿದ್ದು, ಅಣು ವಿದ್ಯುತ್ ಸ್ಥಾವರಗಳ ಅಗತ್ಯವನ್ನು ಮನಗಂಡಿದೆ. ರೇಡಿಯೋ ಆಕ್ಟೀವ್ ಖನಿಜ ಅಣುಗಳ ಧಾತುಗಳಿಂದ ಅಪಾರಶಾಖ ಬಿಡುಗಡೆಯಾಗುವುದು. ಇದರಿಂದ ಉತ್ಪತ್ತಿಮಾಡುವಶಕ್ತಿಯನ್ನೇ ಅಣು ವಿದ್ಯುತ್ ಎಂದು ಕರೆಯುವರು.

ಭಾರತದಲ್ಲಿ ಯುರೇನಿಯಂ, ಥೋರಿಯಂ ಮತ್ತು ಬೆರಿಲಿಯಂ ಖನಿಜಗಳನ್ನು ಅಣು ವಿದ್ಯುತ್ ಉತ್ಪಾದನೆಗಾಗಿ ಬಳಸಲಾಗುತ್ತಿದೆ. ಭಾರತವು ಒಟ್ಟು ವಿದ್ಯುತ್ತಿನ ಶೇ. 2.9 ರಷ್ಟನ್ನು ಅಣು ಮೂಲದಿಂದ ಉತ್ಪಾದಿಸುತ್ತಿದೆ.

ಭಾರತವು ಅನುಕೂಲಕರ ಅಂಶಗಳಾದ ಸಾಕಷ್ಟು ಪ್ರಮಾಣದಲ್ಲಿ ರೇಡಿಯೋ ಆಕ್ಟೀವ್ ಖನಿಜಗಳನ್ನು ಹೊಂದಿದ್ದು, ಅಣು ತಾಂತ್ರಿಕತೆಯನ್ನು ಅಭಿವೃದ್ಧಿಪಡಿಸಿದ್ದು. ಅಣು ವಿದ್ಯುತ್ ಅನ್ನು ಬಳಸಲು ವಿಸ್ತಾರ ಮಾರುಕಟ್ಟೆ ಹೊಂದಿದ್ದು ಹಾಗೂ ಅಣು ಸ್ಥಾವರಗಳನ್ನು ನಿರ್ಮಿಸಲು ಅಧಿಕ ಬಂಡವಾಳವನ್ನು ಸಹ ಹೊಂದಿರುತ್ತದೆ.

ಪ್ರಪಂಚದ ಆಧುನಿಕ ವಿಜ್ಞಾನ ಮತ್ತು ತಂತ್ರವಿದ್ಯೆಯ ಪಟದಲ್ಲಿ ಭಾರತವನ್ನು ನೆಲೆಗೊಳಿಸುವ ಸಲುವಾಗಿ ಭಾರತ ಸರ್ಕಾರ ಪರಮಾಣುಶಕ್ತಿ ಇಲಾಖೆಯನ್ನು (ಡಿಪಾರ್ಟ್‌ಮೆಂಟ್ ಆಫ್ ಅಟಾಮಿಕ್ ಎನರ್ಜಿ) ಮತ್ತು ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನ ಸಂಸ್ಥೆಯನ್ನು (ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರೀಸರ್ಚ್) ಸ್ಥಾಪಿಸಿತು. ಆಧುನಿಕ ಪ್ರಗತಿಶೀಲ ಭಾರತದ ಬಗ್ಗೆ ನೆಹರು ಕಂಡ ಭವ್ಯ ಮುನ್ನೋಟದ ಅಂಗವಾಗಿ ಈ ಸಂಸ್ಥೆಗಳನ್ನು ರೂಪಿಸಲು ಕಾರಣರಾದವರು, ಹೋಮಿ ಜಹಾಂಗೀರ್ ಬಾಬ ಮತ್ತು ಶಾಂತಿ ಸ್ವರೂಪ್‌ಭಟ್ನಾಗರ್.

ಭಾರತದಲ್ಲಿ 1948ರಲ್ಲಿ ಪರಮಾಣು ಆಯೋಗ ಸ್ಥಾಪಿತವಾಯಿತು. ಸಂಶೋಧನೆ ಮತ್ತು ಅಭಿವರ್ಧನೆ. ಈ ಆಯೋಗದ ಪ್ರಧಾನ ಧ್ಯೇಯ್ಯ ಭಾಭಾ ಅಟಾಮಿಕ್ ರಿಸರ್ಚ ಸೆಂಟರ್ (ಬಿ.ಎ.ಆರ್.ಸಿ.): ಪರಮಾಣು ಶಕ್ತಿ ಇಲಾಖೆಯ ಪ್ರಧಾನ ಸಂಶೋಧನಾಗಾರವಿದು. ಮುಂಬೈ ಹತ್ತಿರದ ಟ್ರಾಂಬೆಯಲ್ಲಿದೆ. 1957ರಲ್ಲಿ ಇದನ್ನು ಸ್ಥಾಪಿಸಿದಾಗ ಇದರ ಹೆಸರು ಅಟಾಮಿಕ್ ಎನರ್ಜಿ ಎಸ್ಟಾಬ್ಲಿಷ್‌ಮೆಂಟ್ ಎಂದಿತ್ತು. 1967ರಲ್ಲಿ ಇದನ್ನು ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್ ಎಂದು ಪುನರ್ನಾಮಕರಣ ಮಾಡಲಾಯಿತು.

ಕೇರಳದ ಪಾಲಘಾಟ್ ಮತ್ತು ಕ್ವಿಲಾನ್ ಜಿಲ್ಲೆಗಳಲ್ಲಿ ಆಕ್ಟೀವ್ ಮೋನೋ ಜೈಟ್ ಅದಿರು ದೊರೆಯುವುದು. ಇದರಿಂದ ಅಣು ವಿದ್ಯುತ್ ಕೇಂದ್ರಗಳಲ್ಲಿ ಬಳಸುವ ಥೋರಿಯಂ ಅನ್ನು ಉತ್ಪಾದಿಸಲಾಗುತ್ತಿದೆ.

ಬಿಹಾರದ ಸಿಂಘಭೂಮ್ ಜಿಲ್ಲೆಯ ಜಾದುಗಡ ಗಣಿಗಳಿಂದ ಯುರೇನಿಯಂ ಉತ್ಪಾದಿಸಲಾಗುತ್ತಿದೆ. ಬೆರಿಲಿಯಂ ಖನಿಜವನ್ನು ರಾಜಸ್ಥಾನದಲ್ಲಿ ಉತ್ಪಾದಿಸಲಾಗುವುದು.

ಅಣುವಿದ್ಯುತ್ ಕೇಂದ್ರಗಳು: ಭಾರತದಲ್ಲಿ ಇಂದು ಆರು ಅಣು ವಿದ್ಯುತ್ ಉತ್ಪಾದನೆಯ ಕೇಂದ್ರಗಳಿವೆ.

1. ತಾರಾಪುರ ಅಣುವಿದ್ಯುತ್ ಕೇಂದ್ರ: ಇದು ಭಾರತದ ಮೊದಲ ಅಣು ವಿದ್ಯುತ್ ಉತ್ಪಾದನೆಯ ಕೇಂದ್ರ, ಇದನ್ನು 1969ರಲ್ಲಿ ಮುಂಬಯಿ ಬಳಿಯ ತಾರಾಪುರದಲ್ಲಿ ಸ್ಥಾಪಿಸಲಾಯಿತು.

2. ರಾಣಾಪ್ರತಾಪಸಾಗರ ಅಣುವಿದ್ಯುತ್ ಕೇಂದ್ರ ಇದನ್ನು ರಾಜಸ್ಥಾನದ ಕೋಟಾ ಜಿಲ್ಲೆಯ ರಾಣಾ ಪ್ರತಾಪ ಸಾಗರ ಎಂಬಲ್ಲಿ ಸ್ಥಾಪಿಸಲಾಗಿದೆ. ಇದು 1971ರಲ್ಲಿ ಕಾರ್ಯಾರಂಭ ಮಾಡಿತು.

3. ಕಲ್ಪಾಕಂ ಅಣು ವಿದ್ಯುತ್ ಕೇಂದ್ರ: ಇದನ್ನು ತಮಿಳುನಾಡಿನ ಚೆನ್ನೈ ಸಮೀಪದ ಕಲ್ಪಾಕಂ ಎಂಬಲ್ಲಿ ನಿರ್ಮಿಸಲಾಗಿದೆ.

4. ನರೋರ ಅಣು ವಿದ್ಯುತ್ ಕೇಂದ್ರ: ಇದನ್ನು ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಗಂಗನದಿದಡದಲ್ಲಿ ಸ್ಥಾಪಿಸಲಾಗಿದೆ.

5. ಕಕ್ರಪಾರ (ಸೂರತ್) ಅಣು ವಿದ್ಯುತ್‌ಕೇಂದ್ರ: ಇದು 1993ರಲ್ಲಿ ಸ್ಥಾಪನೆಗೊಂಡ ವಿದ್ಯುತ್ ಕೇಂದ್ರ. ಇದು ಗುಜರಾತಿನ ಸೂರತ್‌ನಿಂದ 80 ಕಿಮೀ ದೂರದಲ್ಲಿದೆ.

6. ಕೈಗಾ ಅಣು ವಿದ್ಯುತ್ ಕೇಂದ್ರ: ಇದನ್ನು ಕರ್ನಾಟಕ ರಾಜ್ಯದ ಉತ್ತರಕನ್ನಡ ಜಿಲ್ಲೆಯಲ್ಲಿ ನಿರ್ಮಿಸಲಾಗಿದೆ. ಇದು ಇತ್ತೀಚೆಗೆ 2000ರಲ್ಲಿ ಎರಡನೆಯ ಘಟಕ ಉತ್ಪಾದನೆಯನ್ನು ಆರಂಭಿಸಿತು. ಮೊದಲ ಘಟಕ ಉತ್ಪಾದನೆ ಹಂತದಲ್ಲಿದೆ. ಜೊತೆಗೆ ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯ ಕುಂಡಕುಲಂನಲ್ಲಿ ಹೊಸ ಅಣು ವಿದ್ಯುತ್ ಕೇಂದ್ರ ಸ್ಥಾಪನೆಗೆ ಯೋಚಿಸಲಾಗಿದೆ.

ಉತ್ಪಾದನೆ: ಭಾರತದಲ್ಲಿ ಅಣು ವಿದ್ಯುತ್ತಿನ ಉತ್ಪಾದನೆ 1971ರಲ್ಲಿ 2.4 ಬಿ.ಕಿವಾ ಗಳಿಂದ 1999 ರಲ್ಲಿ 12 ಬಿ.ಕಿವಾ.ಗಳಿಗೆ ಹೆಚ್ಚಿದೆ.

ಅನಾನುಕೂಲತೆಗಳು: 1) ಅಣು ವಿದ್ಯುತ್ ಕೇಂದ್ರಗಳಲ್ಲಿ ಬಳಸುವ ರೇಡಿಯೋ ಆಕ್ಟೀವ್ ಖನಿಜಗಳು ಆರೋಗ್ಯಕ್ಕೆ ಅತ್ಯಂತ ಹಾನಿಕರ. ಇವು ಅಪಾರಜೀವಹಾನಿ ಹಾಗೂ ಪರಿಸರ ನಾಶಕ್ಕೆ ಕಾರಣವಾಗುವುವು. ರಷ್ಯದ ಚೆರ್ನೊಬಿಲ್‌ನಲ್ಲಿ ಉಂಟಾದ ಸಾವು–ನೋವುಗಳು ಇದಕ್ಕೆ ಉತ್ತಮ ಉದಾಹರಣೆ. 2) ಅಣು ವಿದ್ಯುತ್ ಕೇಂದ್ರಗಳಲ್ಲಿ ಅಂತ್ಯದಲ್ಲಿ ಉಳಿಯುವ ತ್ಯಾಜ್ಯ ವಸ್ತುಗಳನ್ನು ಸರಿಯಾಗಿ, ಪರಿಸರ ಹಾಗೂ ಆರೋಗ್ಯಕ್ಕೆ ಹಾನಿಯುಂಟಾಗದಂತೆ ವಿಸರ್ಜಿಸುವುದು ಒಂದು ಸಮಸ್ಯೆಯಾಗಿದೆ. (ಡಿ.ವೈ.)

**ಭಾರತದಲ್ಲಿ ಪ್ರಾದೇಶಿಕ ಯೋಜನೆ:** ಭಾರತದಲ್ಲಿ ಯೋಜನೆಯ ಅನುಷ್ಠಾನ 1951ರಲ್ಲಿ ಪ್ರಾರಂಭವಾಯಿತು. ದೇಶದಲ್ಲಿ ಬಡತನ ನಿರ್ಮೂಲನೆ ಮಾಡುವ ಉದ್ದೇಶದಿಂದ ಆರ್ಥಿಕ ಹಾಗೂ ಸಾಮಾಜಿಕ ರಂಗಗಳಿಗೆ ಹೆಚ್ಚು ಒತ್ತು ಕೊಡುತ್ತ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದರೂ ಕೂಡ ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಪ್ರಾದೇಶಿಕ ಅಸಮಾನತೆ ನಿರ್ಮಾಣವಾಯಿತು. ಈ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು 70ರ ದಶಕದಲ್ಲಿ ಪ್ರಾದೇಶಿಕ ಯೋಜನೆಯ ತತ್ವವನ್ನು ಅನುಸರಿಸಲು ತಜ್ಞರು ಸಲಹೆ ನೀಡಿದ್ದರಿಂದ ಪ್ರಾದೇಶಿಕ ಯೋಜನೆಯ ಅನುಷ್ಠಾನ ಪ್ರಾರಂಭವಾಗಿ ಭಾರತದ ಸಮಗ್ರ ಅಭಿವೃದ್ಧಿಗಾಗಿ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಪರಿಸರದ ಗುಣಮಟ್ಟ ಕಾಯ್ದುಕೊಳ್ಳುವ ಮೂಲ ಉದ್ದೇಶಗಳಿಂದ ಪ್ರಾದೇಶಿಕ ವಿಂಗಡನೆ ಪ್ರಾರಂಭವಾಯಿತು. 1956ರಲ್ಲಿ ಯೋಜನಾ ಆಯೋಗ ಭಾರತದಲ್ಲಿ ಪ್ರಾದೇಶಿಕ ಯೋಜನೆ ಅನಿವಾರ್ಯತೆ ವ್ಯಕ್ತಪಡಿಸಿತು. 1962ರಲ್ಲಿ ಪ್ರೋ. ಲೇರ್‌ಮಂತ, ಪ್ರಕಾಶರಾವ್ ಮತ್ತು ಭಟ್ ಅವರ ಅಧ್ಯಯನಗಳು ಪ್ರಾದೇಶಿಕ ಯೋಜನೆಗಳಿಗೆ ಅಸ್ತಿಭಾರವಾದವು. ಈ ನಿಟ್ಟಿನಲ್ಲಿ 1962ರಲ್ಲಿ ಪ್ರಾದೇಶಿಕ ಸಮೀಕ್ಷ ಘಟಕ ದೇಶದಲ್ಲಿ ಕಂಡುಬರುವ ವಿವಿಧ ಸಂಪತ್ತಿನ ಹಂಚಿಕೆಯನ್ನು ಆಧರಿಸಿ ತಾತ್ಕಾಲಿಕ ಯೋಜನಾ ಪ್ರದೇಶಗಳನ್ನು ಗುರುತಿಸಿತು. 1964ರಲ್ಲಿ ಭಾರತದ ಸಂಖ್ಯಾಶಾಸ್ತ್ರ ಮತ್ತು ಜನಗಣತಿ ಸಂಸ್ಥೆಯ ವರದಿಯನ್ನು ಆಧರಿಸಿ. ಭಾರತದಲ್ಲಿ ಸಂಪತ್ತು ಅಭಿವೃದ್ಧಿ ಪ್ರದೇಶಗಳನ್ನು ಗುರುತಿಸಲಾಯಿತು. ಈ ವಿಂಗಡಣೆಯನ್ನು ಭಾರತದ ಯೋಜನಾ ಆಯೋಗ ಒಪ್ಪಿಕೊಂಡು 15 ಪ್ರದೇಶಗಳು ಹಾಗೂ 61 ಉಪ ಪ್ರದೇಶಗಳನ್ನು ಗುರುತಿಸಿತು.

ಅನಂತರ ಪಿ. ಸೆನ್ ಗುಪ್ತರವರು ಭಾರತದ ವಿವಿಧ ಹಂತದಲ್ಲಿ ಮ್ಯಾಕ್ರೊ, ಮೆಸೊ ಮತ್ತು ಮೈಕ್ರೊ ಪ್ರದೇಶಗಳನ್ನು ಗುರುತಿಸಿ ಪ್ರಮುಖವಾಗಿ 6 ಮ್ಯಾಕ್ರೋ ಪ್ರದೇಶಗಳು. 42 ಮೆಸೊ ಪ್ರದೇಶಗಳನ್ನು ಗುರುತಿಸಿತು. ಅನಂತರ ನಗರ ಮತ್ತು ಗ್ರಾಮೀಣ ಯೋಜನಾ ಸಂಸ್ಥೆ ಟಿ.ಸಿ.ಪಿ.ವೊ. ದೇಶದಲ್ಲಿ ಕಂಡುಬಂದ ಪ್ರಾದೇಶಿಕ ಅಸಮಾನತೆಯ ಆಧಾರದ ಮೇಲೆ ಭಾರತವನ್ನು 13 ಮ್ಯಾಕ್ರೊ ಪ್ರದೇಶಗಳು ಮತ್ತು 35 ಮೇಸ್ಕೊ ಪ್ರದೇಶಗಳಾಗಿ ಗುರುತಿಸಿ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಅನುವು ಮಾಡಿಕೊಟ್ಟಿದೆ. ಹೀಗೆ ಭಾರತದಲ್ಲಿ ಶೀಘ್ರಗತಿಯಲ್ಲಿ ಬದಲಾಗುತ್ತಿರುವ ಅಭಿವೃದ್ಧಿಯ ದೃಷ್ಟಿಯಿಂದ ಮಾಕ್ರೊ, ಮೆಸೊ ಪ್ರದೇಶಗಳ ಜೊತೆಗೆ ಮೈಕ್ರೋ ಪ್ರದೇಶಗಳ ಅಭಿವೃದ್ಧಿಯ ಅವಶ್ಯಕತೆ ಹೆಚ್ಚುತ್ತಿದೆ. (ಟಿ.ಎಂ.ಎಂ.)

**ಭಾರತದಲ್ಲಿ ಪ್ರಾದೇಶಿಕಾಭಿವೃದ್ಧಿ ಯೋಜನೆಗಳು:** ಭಾರತದಲ್ಲಿ ಹಲವಾರು ಪ್ರದೇಶಾಭಿವೃದ್ಧಿ ಕಾರ್ಯಗಳು ಅಥವಾ ಯೋಜನೆಗಳು ಆಯಾ ಪ್ರದೇಶಗಳ ಅಭಿವೃದ್ಧಿ ದೃಷ್ಟಿಯಿಂದ ಕಾರ್ಯಪ್ರವೃತ್ತವಾಗಿವೆ. ಭಾರತದಲ್ಲಿ ಪಂಚವಾರ್ಷಿಕ ಯೋಜನೆಯ ವೇಳೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಲವಾರು ಪ್ರದೇಶಾಧಾರಿತ ವಿಶೇಷ ಯೋಜನೆ (ಏರಿಯ ಸ್ಪೆಸಿಫಿಕ್ ಸೆಕ್ಟ್ರಲ್ ಪ್ರೋಗ್ರಾಮ್ಸ್)ಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು:

1) ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ (ಡ್ರಾಟ್ ಪ್ರೋನ್ ಏರಿಯ ಡೆವಲಪ್‌ಮೆಂಟ್ ಪ್ರೋಗ್ರಾಂ): ಭಾರತದಲ್ಲಿ ಮಳೆಯ ಹಂಚಿಕೆ ಅಸಮಾನತೆಯಿಂದ ಕೂಡಿದೆ ಕೆಲವು ಪ್ರದೇಶಗಳು ಅತಿ ಹೆಚ್ಚು ಮಳೆಯನ್ನು ಪಡೆದರೆ ಕೆಲವು ಪ್ರದೇಶಗಳು ಅತಿ ಕಡಿಮೆ ಪ್ರಮಾಣದ ಮಳೆಯನ್ನು ಪಡೆಯುತ್ತವೆ. ಕಡಿಮೆ ಪ್ರಮಾಣದ ಮಳೆಯನ್ನು ಒಳಗೊಂಡಿರುವ ಪ್ರದೇಶಗಳು ಹಿಂದುಳಿದಿರುವ ಪ್ರದೇಶಗಳಾಗಿವೆ. ಈ ಪ್ರದೇಶಗಳ ಅಭಿವೃದ್ಧಿಗೋಸ್ಕರ ಭಾರತ ಸರ್ಕಾರ 1970 ರಲ್ಲಿ ಗ್ರಾಮೀಣ ಉದ್ಯೋಗ ಯೋಜನೆಯನ್ನು (ಆರ್‌ಡಬ್ಲ್ಯೂಪಿ) ಆರಂಭಿಸಿತು ಈ ಯೋಜನೆಯು ಆರಂಭದಲ್ಲಿ ಉದ್ಯೋಗಾಧಾರಿತ ಯೋಜನೆಯಾಗಿತ್ತು. ಅನಂತರ 1972–73ರ ವೇಳೆಯಲ್ಲಿ ಗ್ರಾಮೀಣ ಉದ್ಯೋಗ ಯೋಜನೆಯನ್ನು ಆಧುನೀಕರಿಸಿ ಬರಪೀಡಿತ ಪ್ರದೇಶಗಳ ಯೋಜನೆಯೆಂದು ನಾಮಕರಣ ಮಾಡಲಾಯಿತು. ಅನಂತರ ಈ ಯೋಜನೆಯು ಅಭಿವೃದ್ಧಿ ಕಾರ್ಯಗಳ ಕಡೆ ಗಮನಹರಿಸಿ ಬರ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಹುಡುಕಲು ಪ್ರಯತ್ನಿಸಿತು. ಬರಪೀಡಿತ ಕಾರ್ಯಗಳು ಪ್ರಸ್ತುತ ಜಿಲ್ಲಾ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದೊಂದಿಗೆ (ಡಿಆರ್‌ಡಿಎ) ನಿರ್ವಹಿಸಲ್ಪಡುತ್ತಿವೆ. ಈ ಯೋಜನೆಯ ಮೂಲ ಉದ್ದೇಶ ಅಥವಾ ಗುರಿ ಬರ ಪೀಡಿತ ಪ್ರದೇಶಗಳ ನೆಲ, ಜಲ, ಪ್ರಾಣಿ ಮತ್ತು ಮಾನವನ ಸಂಪನ್ಮೂಲಗಳನ್ನು ಸಂರಕ್ಷಿಸಿ, ಅಭಿವೃದ್ಧಿ ಪಡಿಸುವುದಾಗಿರುತ್ತದೆ.

2) ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಯೋಜನೆ (ಕಮಾಂಡ್ ಏರಿಯ ಡೆವಲಪ್‌ಮೆಂಟ್ ಪ್ರೋಗ್ರಾಂ): ನೀರಾವರಿ ಕೃಷಿಯ ಬೆನ್ನೆಲುಬು ಆದಕಾರಣ ಭಾರತ ಸರ್ಕಾರವು ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಲು ತೆಗೆದುಕೊಂಡು ಮೊದಲಹಂತದ ಯೋಜನೆ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆ. 5ನೆಯ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ಆಯ್ದ 52 ಜಲಾನಯನ ಪ್ರದೇಶಗಳಲ್ಲಿ 13.1 ಮಿ. ಎಕರೆಗಳ ಯೋಜನಾ ಪ್ರದೇಶವನ್ನು ಒಳಗೊಂಡಿತ್ತು. ಪ್ರಸ್ತುತ 30 ಜಲಾನಯನ ಅಭಿವೃದ್ಧಿ ಪ್ರಾಧಿಕಾರಗಳು 41 ನೀರಾವರಿ ಪ್ರದೇಶಗಳು 10 ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. 1975–76ರಲ್ಲಿ ಕೇಂದ್ರೀಯ ವಲಯಕ್ಕೆ 16 ಕೋಟಿ ರೂ ಗಳನ್ನು ಖರ್ಚು ಮಾಡಲು (5ನೆಯ ಯೋಜನೆ) ಸಂಬಂಧಪಟ್ಟ ರಾಜ್ಯಗಳಿಗೆ ಅವಕಾಶವನ್ನು ನೀಡಲಾಯಿತು. ಕೆಲವೊಂದು ಆಯ್ದ ನೀರಾವರಿ ಪ್ರದೇಶಗಳಲ್ಲಿ ಐಬಿಆರ್‌ಡಿ/ಐಡಿಎ ಗಳು ಈ ಯೋಜನೆಯಡಿಯಲ್ಲಿ ಸಹಾಯವನ್ನು ನೀಡುತ್ತಿದ್ದವು. ಪ್ರಸ್ತುತ ಎಲ್ಲಾ ನಿರ್ಧಾರಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ತೆಗೆದುಕೊಳ್ಳಲಾಗುತ್ತಿದೆ.

3) ಗಿರಿಜನ ಪ್ರದೇಶಾಭಿವೃದ್ಧಿ ಯೋಜನೆ (ಟ್ರೈಬಲ್ ಏರಿಯ ಡೆವಲಪ್‌ಮೆಂಟ್): ಸಮಾಜದಲ್ಲಿ ಸಾಂಪ್ರದಾಯಿಕ, ಕೌಶಲ್ಯ ಸಂಪನ್ಮೂಲಗಳಲ್ಲಿ ಹಿಂದುಳಿದಿರುವ ವೃದ್ಧರು ಅಥವಾ ಅವಲಂಬಿತರಿಂದ ತುಂಬಿರುವ ಮತ್ತು ಅಲ್ಪ ಸಂಸ್ಕೃತಿಯ, ಪರಿಸರವನ್ನು ಹೆಚ್ಚಾಗಿ ಅವಲಂಬಿಸಿರುವ ಮತ್ತು ಒಂದು ರಾಷ್ಟ್ರದ ಸಾಮಾಜಿಕ, ಆರ್ಥಿಕಾಭಿವೃದ್ಧಿಯಲ್ಲಿ ತುಂಬಾ ಹಿಂದುಳಿದಿರುವ ಭಾಗವೇ ಗಿರಿಜನ ಪ್ರದೇಶ. ಭಾರತ ಸರ್ಕಾರವು ಮೊಟ್ಟ ಮೊದಲ ಬಾರಿಗೆ 1930 ರಲ್ಲಿ ಗಿರಿಜನರನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಸುಧಾರಿಸಲು ಪ್ರಾರಂಭಿಸಿತು. ಆ ವೇಳೆಯಲ್ಲಿ ಇದಕ್ಕೋಸ್ಕರ ಕೆಲವು ಗಿರಿಜನ ಕಲ್ಯಾಣ ಕೇಂದ್ರಗಳನ್ನು ತೆರೆಯಲಾಯಿತು. 1951–54 ರ ವೇಳೆಯಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಾರಿಗೊಳಿಸಿ 1956–57 ರಲ್ಲಿ ತೀವ್ರಗೊಳಿಸಲಾಯಿತು. ಪ್ರಸ್ತುತ ಈ ಯೋಜನೆಯು ಒಂದು ಪ್ರಮುಖ ಪ್ರದೇಶ ಅಭಿವೃದ್ಧಿ ಯೋಜನೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

4) ಘಟ್ಟ ಪ್ರದೇಶಾಭಿವೃದ್ಧಿ ಯೋಜನೆ (ಹಿಲ್ ಏರಿಯ ಡೆವಲಪ್‌ಮೆಂಟ್ ಪ್ರೋಗ್ರಾಂ) ಭೂಮೇಲ್ಮೈ ಮಟ್ಟಸವಾಗಿಲ್ಲದೆ ಏರುತಗ್ಗಿನಿಂದ ಕೂಡಿದ ಮತ್ತು ಬೆಟ್ಟಗುಡ್ಡಗಳಿಂದ ಆವರಿಸಿದ, ಭೂ ಭಾಗವೇ ಘಟ್ಟ ಪ್ರದೇಶ. ಭಾರತದಲ್ಲಿ ಘಟ್ಟ ಪ್ರದೇಶಗಳು ಅತಿ ಹೆಚ್ಚಾಗಿ ಹಿಮಾಲಯ ಮತ್ತು ಪಶ್ಚಿಮ ಭಾಗದಲ್ಲಿ ಆವರಿಸಿದೆ. ಘಟ್ಟ ಪ್ರದೇಶಗಳು ಭಾರತದ ಒಟ್ಟು ಭೂ ಪ್ರದೇಶದ ಶೇ. 21 ರಷ್ಟು ಭೂ ಭಾಗವನ್ನು ಆಕ್ರಮಿಸಿದೆ ಮತ್ತು ಭಾರತದ ಒಟ್ಟು ಜನಸಂಖ್ಯೆಯ ಶೇ. 9 ರಷ್ಟನ್ನು ಹೊಂದಿವೆ. ಈ ಜನರಿಗೆ ನೈಸರ್ಗಿಕ ಸಂಪನ್ಮೂಲಗಳು ಮತ್ತು ಸ್ವಚ್ಛ ಪರಿಸರ ವ್ಯವಸ್ಥೆಯು ಉತ್ತೇಜನ ನೀಡುತ್ತಿವೆ. ಆದ್ದರಿಂದ ನೈಸರ್ಗಿಕ ಸಂಪನ್ಮೂಲ ಮತ್ತು ಪರಿಸರ ಅದರಲ್ಲೂ ಸ್ವಚ್ಛ ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಬೇಕಾಗಿದೆ. ಇವುಗಳನ್ನು ಸಂರಕ್ಷಿಸಲು ಕೆಲವು ವೇಳೆ ರಾಷ್ಟ್ರೀಯ ನೀತಿ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗುತ್ತದೆ. ಘಟ್ಟ ಪ್ರದೇಶ ಅಭಿವೃದ್ಧಿ ಯೋಜನೆಯನ್ನು 1972–73ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯಲ್ಲಿ ಘಟ್ಟ ಪ್ರದೇಶಗಳಲ್ಲಿ ತೋಟಗಾರಿಕಾ ಅಭಿವೃದ್ಧಿ, ಮರಗಳ ತೋಪಿನ ನಿರ್ಮಾಣ, ವ್ಯವಸಾಯ, ಪಶುಸಂಗೋಪನೆ, ಅರಣ್ಯೀಕರಣ, ಮಣ್ಣಿನ ಸಂರಕ್ಷಣೆ ಮತ್ತು ಸೂಕ್ತವಾದ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಒಲವು ನೀಡಲಾಗಿದೆ.

5) ದಾಮೋದರ ನದಿ ಕಣಿವೆ ಯೋಜನೆ (ದಾಮೋದರ ರಿವರ್ ವ್ಯಾಲಿ ಪ್ರಾಜೆಕ್ಟ್)

ಭಾರತದಲ್ಲಿ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ದಾಮೋದರ ಕಣಿವೆ ಯೋಜನೆಯೊಡನೆ ಪ್ರಾರಂಭಗೊಂಡವು. ಅಮೆರಿಕ ಸಂಯುಕ್ತ ಸಂಸ್ಥಾನದ ಟೆನೆಸಿ (ಟಿ.ವಿ.ಸಿ) ಕಣಿವೆ ಯೋಜನೆಯ ಮಾದರಿಯಲ್ಲಿ ಈ ಯೋಜನೆಯನ್ನು ನಿರ್ಮಿಸಲು 1943 ರಲ್ಲಿಯೆ ಉದ್ದೇಶಿಸಲಾಯಿತಾದರೂ 1948 ರಲ್ಲಿ ಭಾರತ ಸರ್ಕಾರ ದಾಮೋದರ ಕಣಿವೆ ಸಂಸ್ಥೆ (ಡಿವಿಸಿ) ಯನ್ನು ಸ್ಥಾಪಿಸುವ ಮೂಲಕ, ಇದರ ನಿರ್ಮಾಣ ಮತ್ತು ನಿರ್ವಹಣೆಯನ್ನು ಈ ಸಂಸ್ಥೆಗೆ ಒಪ್ಪಿಸಲಾಯಿತು. ದಾಮೋದರ ನದಿ ಕಣಿವೆ ಯೋಜನೆಯಡಿ ದಾಮೋದರ ಮತ್ತು ಅದರ ಉಪನದಿಗಳಿಗೆ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಲದಲ್ಲಿ ಕಟ್ಟೆಗಳನ್ನು ನಿರ್ಮಿಸಲಾಗಿದೆ. ದಾಮೋದರ ನದಿಯು ಜಾರ್ಖಂಡ್ ರಾಜ್ಯದ ಛೋಟನಾಗಪುರ ಬೆಟ್ಟಗಳಲ್ಲಿ ಉಗಮ ಹೊಂದಿ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಲದ ಮೂಲಕ 541 ಕಿಮೀ ದೂರ ಹರಿದು ಹೂಗ್ಲಿ ನದಿಯನ್ನು ಸೇರುತ್ತದೆ. ಈ ನದಿ ಮೇಲ್ಕಣಿವೆಯಲ್ಲಿ ಅಧಿಕ ಮಳೆಯನ್ನು ಪಡೆಯುವ ಹಜಾರಿಬಾಗ್, ಪಾಲಮೋ, ರಾಂಚಿ ಮತ್ತು ಸಂತಾಲ ಪರಗಣ ಪ್ರದೇಶಗಳನ್ನು ಒಳಗೊಂಡಿದ್ದು ಮಳೆಗಾಲದಲ್ಲಿ ಪ್ರವಾಹದಿಂದ ಅಧಿಕ ಹಾನಿಯನ್ನುಂಟುಮಾಡುತ್ತಿತ್ತು. ಇದರಿಂದಾಗಿ ಪ್ರವಾಹ ನಿಯಂತ್ರಣ ಮತ್ತು ನದಿ ನೀರಿನ ಬಳಕೆಗೆ ಈ ಯೋಜನೆಯನ್ನು ರೂಪಿಸಲಾಯಿತು. ಪ್ರಸ್ತುತ ಈ ಯೋಜನೆಯಲ್ಲಿ ಪ್ರವಾಹ ನಿಯಂತ್ರಣ, ವಿದ್ಯುತ್ ಉತ್ಪಾದನೆ, ನೀರಾವರಿ ಸೌಲಭ್ಯ, ಮಣ್ಣಿನ ಸಂರಕ್ಷಣೆ, ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆಗೆ ಹೆಚ್ಚಿನ ಒಲವನ್ನು ನೀಡಲಾಗಿದೆ.

6) ದಂಡಕಾರಣ್ಯ ಅಭಿವೃದ್ಧಿಯೋಜನೆ (ದಂಡಕಾರಣ್ಯ ಡೆವಲೆಪ್‌ಮೆಂಟ್ ಪ್ರೋಗ್ರಾಂ–1 ಡಿಡಿಎ) ಯನ್ನು ಸೆಪ್ಟೆಂಬರ್ 1958 ರಲ್ಲಿ ಭಾರತ ಸರ್ಕಾರ ನಿರ್ಣಯ ತೆಗೆದುಕೊಳ್ಳುವ ಮೂಲಕ ಪ್ರಾರಂಭವಾಯಿತು. ದಂಡಾಕಾರಣ್ಯ ಅಭಿವೃದ್ಧಿ ಆಥಾರಿಟಿ, ಆರಂಭದ ಉದ್ದೇಶವೆಂದರೆ ಪೂರ್ವ ಪಾಕಿಸ್ತಾನದಿಂದ ಸ್ಥಳಾಂತರಗೊಂಡ ಜನರಿಗೆ ತ್ವರಿತವಾಗಿ ಪುನರ್ವಸತಿ ಮತ್ತು ದಂಡಾಕಾರಣ್ಯ ಪ್ರದೇಶದ ಸಮಗ್ರ ಅಭಿವೃದ್ಧಿ ಅಲ್ಲದೆ, ಈ ಪ್ರದೇಶದಲ್ಲಿರುವ ಗಿರಿಜನರಿಗೆ ವಿಶೇಷ ಆದ್ಯತೆ ನೀಡುವುದಾಗಿತ್ತು ಅನಂತರ ಈ ಯೋಜನೆಯನ್ನು ಸಂಪೂರ್ಣ ದಂಡಾಕಾರಣ್ಯ ಪ್ರದೇಶಕ್ಕೆ ವಿಸ್ತರಿಸಲಾಯಿತು. ಯೋಜನಾ ಕೆಲಸಗಳನ್ನು ಎರಡು ಜಿಲ್ಲೆಗಳಾದ ಒರಿಸ್ಸದ ಕೋರಪಟ್ ಮತ್ತು ಛತ್ತೀಸ್‌ಗಡ್‌ನ ಜಗದಲ್‌ಪುರ (ಬಸ್ತಾರ್) ಜಿಲ್ಲೆಗಳಲ್ಲಿ ಆರಂಭಿಸಲಾಗಿತ್ತು, ಭೂಮಿಯನ್ನು ಎರಡು ರಾಜ್ಯಗಳು ಪುನರ್ವಸತಿಗೋಸ್ಕರ ನೀಡಿದವು. ಅನಂತರ ದಂಡಕಾರಣ್ಯ ಅಭಿವೃದ್ಧಿ ಪ್ರಾಧಿಕಾರ (ಡಿಡಿಎ) ಶೇ. 25 ರಷ್ಟು ಭೂಮಿಯನ್ನು ಭೂರಹಿತ ಗಿರಿಜನರಿಗೋಸ್ಕರ ರಾಜ್ಯ ಸರ್ಕಾರಗಳಿಗೆ ಹಂಚಲು ಹಿಂತಿರುಗಿಸಿತು. ಅನಂತರ ದಂಡಕಾರಣ್ಯ ಅಭಿವೃದ್ಧಿ ಪ್ರಾಧಿಕಾರ (ಡಿಡಿಎ) ಸ್ಥಳಾಂತರಗೊಂಡ ಜನರಿಗೆ ಪುನರ್ವಸತಿಯನ್ನು ನೀಡಿತು. ರಾಜ್ಯ ಸರ್ಕಾರಗಳಿಗೆ ದಂಡಕಾರಣ್ಯ ಅಭಿವೃದ್ಧಿ ಅಥಾರಿಟಿಯ ನಿಧಿಯನ್ನು ಒದಗಿಸಿತು. ದಂಡಕಾರಣ್ಯ ಯೋಜನೆಯ ಪ್ರಮುಖವಾಗಿ ಸ್ಥಳಾಂತರಗೊಂಡ ಜನರ ಮತ್ತು ಗಿರಿಜನರ ನಡುವಿನ ಸಂಬಂಧವನ್ನು ಬೆಳೆಸುವುದಾಗಿದೆ. ಹೀಗೆ ದಂಡಕಾರಣ್ಯ ಅಭಿವೃದ್ಧಿ ಪ್ರಾಧಿಕಾರವು ಪ್ರದೇಶದ ಗಿರಿಜನರಿಗೆ ಮತ್ತು ಸ್ಥಳಾಂತರಗೊಂಡ ಜನರಿಗೆ ಪುನರ್ವಸತಿ ಮತ್ತು ಸಮಗ್ರ ಅಭಿವೃದ್ಧಿಯ ಉದ್ದೇಶವನ್ನು ಒಳಗೊಂಡಿದೆ.

7) ಮರುಭೂಮಿ ಅಭಿವೃದ್ಧಿ ಯೋಜನೆ (ಡೆಸರ್ಟ್ ಡೆವಲೆಪ್‌ಮೆಂಟ್ ಪ್ರೋಗ್ರಾಂ) ಭಾರತದಲ್ಲಿ ಮರುಭೂಮಿ ಅಭಿವೃದ್ಧಿ ಯೋಜನೆ 1977–78 ರಲ್ಲಿ ಆರಂಭವಾಯಿತು. ಈ ಯೋಜನೆ ಹಲವು ಉದ್ದೇಶಗಳನ್ನಿಟ್ಟುಕೊಂಡು ಪ್ರಾರಂಭವಾಯಿತೆನ್ನಬಹುದು. ಆ ಉದ್ದೇಶಗಳೆಂದರೆ, ಗ್ರಾಮ ಸಮುದಾಯದ ಆರ್ಥಿಕ ಮಟ್ಟವನ್ನು ಅಭಿವೃದ್ಧಿಪಡಿಸುವುದು, ಪರಿಸರ ಸಮತೋಲನ ಪುನಃ ಸ್ಥಾಪನೆ ಮತ್ತು ಸಮಾಜದ ಅಪ್ರಯೋಜಕ ಮತ್ತು ಅಲ್ಪ ಸಂಪನ್ಮೂಲಗಳಿಂದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು. ಈ ಉದ್ದೇಶಗಳು ಉಷ್ಣ ಮರುಭೂಮಿ ಪ್ರದೇಶ, ಮರಳುಗಾಡು ಪ್ರದೇಶ, ರಕ್ಷಣಾಪಟ್ಟಿತೋಟ (ಶೆಲ್ಟರ್ ಬೆಲ್ಟ್ ಪ್ಲಾಂಟೇಷನ್) ಗಳಿಗೆ ಹೆಚ್ಚು ಅನ್ವಯಿಸುವಂತೆ ಯೋಜನೆಯನ್ನು ರೂಪಿಸಲಾಗಿತ್ತು. ಹಾಗೆಯೆ ಶೀತ ಮರುಭೂಮಿ ಪ್ರದೇಶಗಳ ಮುಖ್ಯ ಚಟುವಟಿಕೆಗಳೆಂದರೆ ಜಲ ಸಂಪನ್ಮೂಲಗಳ ಅಭಿವೃದ್ಧಿ. ಕಾಲುವೆ ನಿರ್ಮಾಣ, ಹಿಮ ಮತ್ತು ಮಳೆಯ ನೀರಿನ ಹರಿವಿನ ಬದಲಾವಣೆ ಮತ್ತು ನೀರಾವರಿ ಕೆಲಸಗಳನ್ನು ಕೈಗೆತ್ತಿಕೊಳ್ಳುವುದು. ಹನುಮಂತರಾವ್ ಸಮಿತಿಯನ್ನು (1993–94) ಡಿಪಿಎಪಿ ಮತ್ತು ಡಿಡಿಪಿ ಪರಿಣಾಮಗಳನ್ನು ಪರೀಕ್ಷಿಸಲು ರಚಿಸಲಾಯಿತು. ಈ ಸಮಿತಿಯ ಯೋಜನೆಯ ಪರಿಣಾಮಗಳನ್ನು ಪರೀಕ್ಷಿಸಿ ಯೋಜನೆಯಲ್ಲಿ ಸ್ಥಳೀಯ ಜನರು ಭಾಗಿಯಾಗಿಲ್ಲದಿರುವುದು ಮತ್ತು ನೀರಾವರಿಯನ್ನು ಪರಿಗಣಿಸದಿರುವುದು ಬೆಳಕಿಗೆ ಬಂದು ಅನಂತರ ಹೊಸ ಬ್ಲಾಕ್ ಮತ್ತು ಜಿಲ್ಲೆಗಳಲ್ಲಿ ಡಿಡಿಪಿ ಮಾರ್ಗದರ್ಶನದಲ್ಲಿ 1995–96 ರಲ್ಲಿ ಭಾರತ ಸರ್ಕಾರ ಹೊಸ ನಿಯಮಗಳನ್ನು ಜಾರಿಗೊಳಿಸಿತು. (ಎಚ್.ಆರ್.ವಿ.)

**ಭಾರತದಲ್ಲಿ ಯೋಜನೆಯ ಹಂತಗಳು:** ಯೋಜನೆಯುನ್ನು ಸಿದ್ಧಪಡಿಸುವಿಕೆಯು ಮಹತ್ವಪೂರ್ಣವಾದ ಹಾಗೂ ಜವಾಬ್ದಾರಿಯುತವಾದ ಒಂದು ಕಾರ್ಯವಾಗಿರುತ್ತದೆ. ವಿವಿಧ ಮೂಲಗಳಿಂದ ಸಂಪನ್ಮೂಲಗಳ ಕ್ರೋಢೀಕರಣ, ಅರ್ಥವ್ಯವಸ್ಥೆಯ ವಿಭಿನ್ನ ವಲಯಗಳಲ್ಲಿ ಪ್ರಗತಿ ಸಾಧನೆಯ ಸಾಧ್ಯತೆ, ಸಾಧಿಸಬೇಕಾದ ಬೆಳವಣಿಗೆಯ ದರ, ಅರ್ಥವ್ಯವಸ್ಥೆ ಎದುರಿಸುತ್ತಿರುವ ಅಡಚಣೆಗಳು, ಹಿಂದಿನ ಅವಧಿಗಳ ಯೋಜನೆಯ ಮತ್ತು ಅಭಿವೃದ್ಧಿಯ ಪಾಠಗಳು ಮೊದಲಾದವುಗಳೆಲ್ಲವನ್ನು ಗಮನದಲ್ಲಿರಿಸಿಕೊಂಡು ಮತ್ತು ಅವುಗಳ ಬಗ್ಗೆ ಅಧ್ಯಯನವನ್ನು ನಡೆಸಿ ಯೋಜನೆಯನ್ನು ತಯಾರಿಸುವ ಅವಶ್ಯಕತೆ ಇರುತ್ತದೆ.

ಯೋಜನೆಯ ಸೂತ್ರೀಕರಣ ಅನೇಕ ವರ್ಷಗಳ ಅವಧಿಯನ್ನು ಮತ್ತು ಹಲವು ಹಂತಗಳನ್ನು ಒಳಗೊಂಡಿರುತ್ತದೆ. ಮೊದಲನೆಯ ಹಂತವು ಯೋಜನೆಯ ಉಪಕ್ರಮಕ್ಕೆ ಮೂರು ವರ್ಷಗಳ ಮೊದಲೇ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ಯೋಜನೆಗೆ ಸಂಬಂಧಿಸಿರುವ ವಿವಿಧ ಸಾಮಾಜಿಕ, ಆರ್ಥಿಕ, ಹಣಕಾಸಿನ, ಆಡಳಿತ ಮತ್ತಿತರ ವಿಷಯಗಳನ್ನು ಯೋಜನಾ ಆಯೋಗವು ಪರಿಶೀಲಿಸುತ್ತದೆ. ದೀರ್ಘಕಾಲೀಕ ಅಭಿವೃದ್ಧಿ ಕುರಿತಂತೆ ಪ್ರಗತಿಯ ದರ ಮತ್ತು ವಿಧಾನದ ತಾತ್ಕಾಲಿಕ ಅಧ್ಯಯನ ಮಾಡಲಾಗುತ್ತದೆ. ಈ ವಿಷಯಗಳಿಗೆ ಸಂಬಂಧಿಸಿದ ಪೂರ್ವಭಾವಿ ನಿರ್ಣಯಗಳನ್ನು ಕೇಂದ್ರ ಸಚಿವ ಸಂಪುಟಕ್ಕೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಒಪ್ಪಿಸಲಾಗುತ್ತದೆ.

ಎರಡನೆಯ ಹಂತದಲ್ಲಿ ಯೋಜನೆಯ ಭೌತಿಕ ವಿಷಯಗಳ ಜ್ಞಾಪನಾಪಟ್ಟಿಯ ಒಂದು ಕರಡನ್ನು ಸಿದ್ಧಪಡಿಸಲಾಗುತ್ತದೆ. ವಿವಿಧ ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ವಿವರವಾಗಿ ಅಧ್ಯಯನ ಮಾಡಲು ಸರ್ಕಾರಿ ಅಧಿಕಾರಿಗಳು ಮತ್ತು ಇತರ ಪರಿಣಿತರಿಂದ ಕೂಡಿದ ಸಮಿತಿಗಳನ್ನು ರಚಿಸಲಾಗುತ್ತದೆ.

ಮೂರನೆಯ ಹಂತದಲ್ಲಿ ವಿಷಯಗಳ ಅಧ್ಯಯನ ಸಮಿತಿಗಳ ಸಲಹೆಗಳು ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯೊಡನೆಯ ಚರ್ಚೆಯ ಫಲದ ಅಂಶಗಳ ಆಧಾರದ ಮೇಲೆ ಯೋಜನೆಯ ಪ್ರಾಮುಖ್ಯತೆಗಳನ್ನು ಕರಡುಪಟ್ಟಿಯಲ್ಲಿ ನಮೂದಿಸಲಾಗುತ್ತದೆ. ಆನಂತರ ಈ ಕರಡು ಜ್ಞಾಪನಪಟ್ಟಿಯನ್ನು ಕೇಂದ್ರ ಮಂತ್ರಿ ಮಂಡಳಕ್ಕೂ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೂ ಒಪ್ಪಿಸಲಾಗುತ್ತದೆ.

ನಾಲ್ಕನೆಯ ಹಂತದಲ್ಲಿ ಮೇಲಿನ ಅಂಗಗಳ ಸಲಹೆಗಳ ಮೇರೆಗೆ ಯೋಜನಾ ಆಯೋಗ ಕರಡು ಪ್ರತಿಯನ್ನು ರೂಪಿಸಿ ಅದನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಸಲ್ಲಿಸುತ್ತದೆ. ಮಂಡಳಿಯ ಸಮ್ಮತಿಯ ಬಳಿಕ ಅದನ್ನು ದೇಶದಾದ್ಯಂತ ವ್ಯಾಪಕವಾಗಿ ಬಹಿರಂಗಗೊಳಿಸುತ್ತದೆ. ಈ ಪ್ರತಿಯು ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು, ಜಿಲ್ಲಾ ಪರಿಷತ್ತುಗಳು ಮತ್ತು ಹಿತಾಸಕ್ತ ಗುಂಪುಗಳ ಮಟ್ಟದಲ್ಲಿ ಚರ್ಚೆಗೆ ಬರುತ್ತದೆ.

ಐದನೆಯ ಮತ್ತು ಕೊನೆಯ ಹಂತದಲ್ಲಿ ಯೋಜನೆಯ ಅಂತಿಮ ವರದಿಯನ್ನು ತಯಾರಿಸಲಾಗುತ್ತದೆ. ಈ ಹಂತದಲ್ಲಿ ಯೋಜನಾ ಆಯೋಗ ರಾಜ್ಯದ ಯೋಜನೆಗಳು ಮತ್ತು ಕೇಂದ್ರ ಹೊಣೆಗಾರಿತ ಪರಿಯೋಜನೆಗಳ ಮೇಲಿನ ವೆಚ್ಚದ ಕುರಿತು ರಾಜ್ಯ ಸರ್ಕಾರಗಳು ಮತ್ತು ಸಚಿವ ಸಂಪುಟಗಳೊಡನೆ ಕೂಲಂಕಷವಾದ ಚರ್ಚೆ ನಡೆಸುತ್ತದೆ. ಈ ಚರ್ಚೆಯನ್ನು ಆಧರಿಸಿ ಒಂದು ಹೊಸ ಜ್ಞಾಪನಾ ಪಟ್ಟಿಯನ್ನು ಸಿದ್ಧಪಡಿಸಿ ಕೇಂದ್ರ ಸಚಿವ ಸಂಪುಟ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಸಲ್ಲಿಸಲಾಗುವುದು. ಇದರ ಮೇಲೆ ಪಡೆದ ಸಲಹೆಗಳ ಮೇರೆಗೆ ಯೋಜನೆಯ ಅಂತಿಮ ವರದಿಯ ಕರಡೊಂದನ್ನು ರೂಪಿಸಿ ಮತ್ತೊಮ್ಮೆ ಕೇಂದ್ರ ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರಗಳಿಗೆ ನೀಡಿ ಅವುಗಳಿಂದ ಗುಣದೋಷ ವಿಮರ್ಶೆಯನ್ನು ನಿರೀಕ್ಷಿಸಲಾಗುತ್ತದೆ. ಈ ವಿಮರ್ಶೆಯ ತಳಹದಿಯ ಮೇಲೆ ಕೆಲವು ಆವಶ್ಯಕ ತಿದ್ದುಪಡಿಗಳನ್ನು ಮಾಡಿ ಅಂತಿಮ ಕರಡನ್ನು ಕೇಂದ್ರ ಸಂಪುಟ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಕೊಡಲಾಗುವುದು. ಅವುಗಳ ಸಮ್ಮತಿಯ ಅನಂತರ ಯೋಜನೆ ವರದಿಯನ್ನು ಪ್ರಕಟಿಸಿ ಸಂಸತ್ತಿನ ಒಪ್ಪಿಗೆಗೆ ನೀಡಲಾಗುತ್ತದೆ. ಯೋಜನೆಗೆ ಸಂಬಂಧಿಸಿದಂತೆ ಸಂಸತ್ತು ಯಾವ ಶಾಸನವನ್ನು ಹೊರಡಿಸುವುದಿಲ್ಲ. ಬದಲಾಗಿ ಅದು ಯೋಜನೆಯ ತತ್ತ್ವಗಳು ಮತ್ತು ಧ್ಯೇಯಗಳಿಗೆ ಮಾತ್ರ ಸಮ್ಮತಿ ನೀಡುತ್ತದೆ. ಈ ಸಮ್ಮತಿಯೊಡನೆ ಯೋಜನೆ ಅನುಷ್ಠಾನದ ಹಂತವನ್ನು ತಲುಪುತ್ತದೆ.

ಯೋಜನೆಯನ್ನು ರೂಪಿಸುವ ಕಾರ್ಯವನ್ನು ನಿರ್ವಹಿಸಲು ಒಂದು ಮಂಡಳಿಯ ಅವಶ್ಯಕತೆಯಿರುತ್ತದೆ. ಈ ಮಂಡಳಿಯು ಯೋಜನೆಯನ್ನು ಸಿದ್ಧಪಡಿಸುವ ಹೊಣೆ ಹೊತ್ತಿರುವುದರಿಂದ ಇದನ್ನು ಒಂದು ಯಂತ್ರವೆಂದು ಪರಿಗಣಿಸಬಹುದು. ಭಾರತದಲ್ಲಿ ಯೋಜನಾ ಯಂತ್ರವನ್ನು ಯೋಜನಾ ಆಯೋಗ ಎಂದು ಕರೆಯಲಾಗುತ್ತದೆ. ಯೋಜನೆಗಳನ್ನು ಸಿದ್ಧಪಡಿಸುವ ವ್ಯವಸ್ಥೆ ಮಾಡುವುದು, ಸಾಧನೆಗಳ ಗುಣ ವಿಮರ್ಶೆ ಮಾಡುವುದು ಮತ್ತು ಗುರಿಗಳು ಹಾಗೂ ನೀತಿಗಳನ್ನು ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಯೋಜನಾ ಆಯೋಗದ ಕಾರ್ಯಗಳಾಗಿವೆ. ಇದು ಕೇವಲ ಯೋಜನೆಗಳನ್ನು ರೂಪಿಸುವ ಮತ್ತು ಸಲಹೆಗಳನ್ನು ನೀಡುವ ಅಂಗವೇ ಹೊರತು ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಇದರ ಜವಾಬ್ದಾರಿಯೂ ಅಲ್ಲ, ಕಾರ್ಯವೂ ಅಲ್ಲ.

ಯೋಜನಾ ಆಯೋಗದಿಂದ ರೂಪಿಸಲ್ಪಟ್ಟ ಯೋಜನೆಯು ಅನೇಕ ಸಂಸ್ಥೆಗಳು ಮತ್ತು ವೇದಿಕೆಗಳಲ್ಲಿ ಚರ್ಚಿಸಲ್ಪಟ್ಟು, ವಿವಿಧ ಹಂತಗಳನ್ನು ದಾಟಿ, ಸಂಸತ್ತಿನ ಸಮ್ಮತಿ ಪಡೆದು ಕಾರ್ಯಾಚರಣೆಗೊಳ್ಳುತ್ತದೆ. ಯೋಜನಾ ಆಯೋಗ, ಅದರ ರಚನೆ ಮತ್ತು ಕಾರ್ಯಗಳು, ಯೋಜನೆಯನ್ನು ಕುರಿತ ಚರ್ಚೆ ಮತ್ತು ಶಿಫಾರಸ್ಸುಗಳಿಗೆ ಸಂಬಂಧಿಸಿದ ಮುಖ್ಯ ಸಂಸ್ಥೆಯಾಗಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಕಾರ್ಯನಿರ್ವಹಿಸುತ್ತದೆ.

ಪ್ರಧಾನ ಮಂತ್ರಿಯವರು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಕೇಂದ್ರದ ಎಲ್ಲಾ ಸಚಿವರು ಮತ್ತು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು ಇದರ ಸದಸ್ಯರಾಗಿರುತ್ತಾರೆ. ಈ ಮಂಡಳಿಯ ಕಾರ್ಯಗಳು ಈ ಮುಂದಿನಂತಿವೆ. ರಾಷ್ಟ್ರೀಯ ಯೋಜನೆಯ ರೂಪಣೆಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡುವುದು. ಯೋಜನಾ ಆಯೋಗ ರೂಪಿಸಿದ ಯೋಜನೆಯನ್ನು ಪರಿಶೀಲಿಸುವುದು. ಯೋಜನೆಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಅಂದಾಜು ಮಾಡುವುದು.

ರಾಷ್ಟ್ರಾಭಿವೃದ್ಧಿಗೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ನೀತಿಗಳನ್ನು ಬಾಧಿಸುವ ಪ್ರಮುಖ ಸಮಸ್ಯೆಗಳನ್ನು ಪರಿಶೀಲಿಸುವುದು ಮತ್ತು ಯೋಜನೆಯ ಕಾರ್ಯ ವಿಧಾನವನ್ನು ಆಗಿಂದಾಗ್ಗೆ ವಿಮರ್ಶಿಸಿ, ಯೋಜನೆಯಲ್ಲಿ ನಮೂದಿಸಿರುವ ಗುರಿಗಳು ಮತ್ತು ಧ್ಯೇಯಗಳ ಸಾಧನೆಗೆ ಅವಶ್ಯಕವಾದ ಕಾರ್ಯಕ್ರಮಗಳನ್ನು ಶಿಫಾರಸ್ಸು ಮಾಡುವುದು. (ಎಚ್.ಆರ್.ಕೆ.)

**ಭಾರತದಲ್ಲಿ ರಾಷ್ಟ್ರೀಯ ಉದ್ಯಾನವನಗಳು:** ರಾಷ್ಟ್ರೀಯ ಉದ್ಯಾನಗಳು ವನ್ಯಜೀವಿಗಳ ಮೂಲ. ಇಲ್ಲಿನ ಸ್ವಾಭಾವಿಕ ನೆಲೆಗಳನ್ನು ಹುಲಿ, ಸಿಂಹ, ರೈನೊ, ಆನೆ, ಮೊದಲಾದ ವನ್ಯಜೀವಿ ಪ್ರಭೇದಗಳ ರಕ್ಷಣೆಗಾಗಿ ಸ್ಥಾಪಿಸಲಾಗಿದೆ. ಭಾರತದಲ್ಲಿ ಸು. 90 ರಾಷ್ಟ್ರೀಯ ಉದ್ಯಾನವನಗಳಿವೆ. ಇವುಗಳು 0.04–3162 ಚ.ಕಿಮೀ ವಿಸ್ತಾರವಾಗಿವೆ.

ರಾಷ್ಟ್ರೀಯ ಉದ್ಯಾನವನಗಳಲ್ಲಿ ಶೇ. 40 ರಷ್ಟು ಉದ್ಯಾನವನಗಳು 100–5000 ಚ.ಕಿಮೀ ವಿಸ್ತಾರವನ್ನು ಹೊಂದಿರುತ್ತವೆ. ಇವುಗಳ ಗಡಿಯನ್ನು ಶಾಸನಬದ್ಧವಾಗಿ ಗುರುತಿಸಲಾಗಿರುತ್ತದೆ. ಇವುಗಳಲ್ಲಿ ಪ್ರವಾಸೋದ್ಯಮಗಳಿಗೆ ಅನುಮತಿಯಿದ್ದು, ಅವುಗಳ ನಡುವೆ ಸಂಚಾರ ವ್ಯವಸ್ಥೆಯಿದ್ದು ಇವುಗಳನ್ನು ತಟಸ್ಥ ವಲಯವೆಂದು ಕರೆಯುತ್ತೇವೆ. ಈ ವಲಯಗಳನ್ನು ಹೊರತುಪಡಿಸಿ ಉಳಿದೆಡೆ ಜೈವಿಕ ವ್ಯವಸ್ಥೆಯಲ್ಲಿ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಕೆಲವು ಪ್ರಮುಖ ರಾಷ್ಟ್ರೀಯ ಉದ್ಯಾನವನಗಳು:

| **ಹೆಸರು** | **ರಾಜ್ಯ** |
|---|---|
| ಮನಾಸ್ ಸಂರಕ್ಷಣಾ ವಲಯ | ಅಸ್ಸಾಂ |
| ಪಾಲಮೋ ರಾಷ್ಟ್ರೀಯ ಉದ್ಯಾನವನ | ಜಾರ್ಖಂಡ್ |
| ಸಿಮಿಲ್‌ಪಾಲ್ ರಾಷ್ಟ್ರೀಯ ಉದ್ಯಾನವನ | ಒರಿಸ್ಸ |
| ಕನ್ಹಾ ರಾಷ್ಟ್ರೀಯ ಉದ್ಯಾನವನ | ಮಧ್ಯಪ್ರದೇಶ |
| ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ | ಉತ್ತರಾಂಚಲ |
| ದೂದ್ವ ರಾಷ್ಟ್ರೀಯ ಉದ್ಯಾನವನ | ಉತ್ತರ ಪ್ರದೇಶ |
| ಮೆಚ್ ಘಾಟ್ ರಾಷ್ಟ್ರೀಯ ಉದ್ಯಾನವನ | ಮಹಾರಾಷ್ಟ್ರ |
| ರಣ ತಂಬೂರ್ ರಾಷ್ಟ್ರೀಯ ಉದ್ಯಾನವನ | ರಾಜಸ್ಥಾನ |
| ಸಾರಿಸ್ಕ ಸಂರಕ್ಷಣಾ ವಲಯ | ರಾಜಸ್ಥಾನ |
| ಬಂಡೀಪುರ ರಾಷ್ಟ್ರೀಯ ಉದ್ಯಾನವನ | ಕರ್ನಾಟಕ |
| ಸುಂದರಬನ್ ರಾಷ್ಟ್ರೀಯ ಉದ್ಯಾನವನ | ಪಶ್ಚಿಮ ಬಂಗಾಲ |
| ಪೆರಿಯಾರ್ ಸಂರಕ್ಷಣಾವಲಯ | ಕೇರಳ |

(ಕೆ.ಎಸ್.)

**ಭಾರತೀಯ ಬುಡಕಟ್ಟುಗಳು:** ಭಾರತದಲ್ಲಿಯ ಅನೇಕ ಬುಡಕಟ್ಟುಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಇತರ ಸಾಮಾಜಿಕ ವರ್ಗಗಳೊಂದಿಗೆ ಸಮಾನವಾಗಿ ಬೆಳೆಯಲು ಅವಕಾಶ ಇಲ್ಲದ್ದನ್ನು ಅನುಲಕ್ಷಿಸಿ, ಅಂಥ ವಿವಿಧ ವರ್ಗಗಳನ್ನು ಗುರುತಿಸಿ ಅವಕ್ಕೆ ವಿಶಿಷ್ಟ ಸೌಲಭ್ಯಗಳನ್ನು ಒದಗಿಸುವ ಕ್ರಮ ಕೈಗೊಳ್ಳಲು ಭಾರತ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸಂವಿಧಾನದ 341, 342ನೆಯ ಅನುಚ್ಛೇದಗಳ ಪ್ರಕಾರ ಅನೇಕ ಬುಡಕಟ್ಟುಗಳನ್ನು ಗುರುತಿಸಿ, ಸಂವಿಧಾನದ ಪರಿಶಿಷ್ಟ ಭಾಗವಾಗಿ ಅವುಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸಂವಿಧಾನದ ಪರಿಶಿಷ್ಟ ಭಾಗವಾಗಿ ಇದು ಸೇರಿದೆ. ಭಾರತದ ವಿವಿಧ ಬುಡಕಟ್ಟುಗಳಿಗೆ ಸೇರಿದ ಜನಸಂಖ್ಯೆ 8,50,000,00 (2001).

ಬುಡಕಟ್ಟುಗಳು ಬಹುಮಟ್ಟಿಗೆ ಆದಿವಾಸಿಗಳು. ಆದರೆ ಸಂವಿಧಾನದ ಉದ್ದಿಶ್ಯದಿಂದ ತಯಾರಿಸಲಾದ ಪಟ್ಟಿ ಮತ್ತು ಮಾನವವಿಜ್ಞಾನಿಗಳು ತಮ್ಮ ಸಂಶೋಧನೆಗಳಿಗೆ ಅನುಗುಣವಾಗಿ ಬುಡಕಟ್ಟುಗಳೆಂದು ನಿರ್ಧರಿಸಿ ಸಿದ್ಧಪಡಿಸಿರುವ ವರ್ಗಗಳ ಯಾದಿಯಲ್ಲಿ ಏಕತೆಯಿಲ್ಲ. ಭಾರತದ ಬುಡಕಟ್ಟುಗಳ ಬಗ್ಗೆ ಬಿ.ಎಸ್. ಗುಹಾ, ಥರ್ಸ್ಟನ್, ಲೂಯಿಸ್, ಎಲ್ವಿನ್, ಎಂಥೋವೆನ್, ಅನಂತಕೃಷ್ಣ ಅಯ್ಯರ್, ನಂಜುಂಡಯ್ಯ – ಮೊದಲಾದವರು ಕೆಲಸ ಮಾಡಿದ್ದಾರೆ. ಇವರ ಬರೆಹಗಳ ಆಧಾರದ ಮೇಲೆ ಕೆಲವು ಮುಖ್ಯ ಬುಡಕಟ್ಟುಗಳ ಸ್ಥೂಲ ಪರಿಚಯವನ್ನು ಪಡೆಯಬಹುದು.

ಗೊಂಡರು: ಇವರು ಮಧ್ಯಪ್ರದೇಶ ರಾಜ್ಯದಲ್ಲಿ ಹೆಚ್ಚಾಗಿ ವಾಸಿಸುವರು. ಇವರಲ್ಲಿ ಮಾಡಿಯಾ ಮತ್ತು ಮುರಿಯಾ ಎಂಬ ಮುಖ್ಯ ಪ್ರಭೇದಗಳಿವೆ. ಗೊಂಡ ಭಾಷೆಯನ್ನು ಆಡುತ್ತಾರೆ. ಇವರು ಕಪ್ಪು ಮಿಶ್ರಿತ ಕಂದು ಬಣ್ಣದವರು. ದಪ್ಪ ತುಟಿ, ಸಾಧಾರಣ ಎತ್ತರ, ಅಲೆದಾಡುವ ತಲೆಗೂದಲು ಇತ್ಯಾದಿ ಇವರ ದೈಹಿಕ ವೈಶಿಷ್ಟ್ಯಗಳು. ವಿದ್ವಾಂಸರಾದ ಹ್ಯಾಡೋನ್ ಇವರನ್ನು ಪೂರ್ವ ದ್ರಾವಿಡ ವರ್ಗಕ್ಕೆ ಸೇರಿಸಿದರೆ ಗುಹಾ ಅವರು ಪ್ರೊಟೊ–ಆಸ್ಟ್ರಲಾಯಡ್ ಜನಾಂಗಕ್ಕೆ ಸೇರಿಸಿದ್ದಾರೆ. ಗೊಂಡರು ತಮ್ಮನ್ನು ಕೊಯ್ತುರ್ ಎಂದು ಕರೆದುಕೊಳ್ಳುವರು.

ಇವರು ಮೊದಲು ಆಹಾರ ಶೇಖರಣೆಯಿಂದ ಜೀವನ ನಡೆಸಿದರು. ಕಾಲಾಂತರದಲ್ಲಿ ಕೃಷಿ, ಕೂಲಿ ಕೆಲಸ, ಮರ ಕಡಿಯುವುದು, ಹಾಲು ಮಾರುವುದು ಮುಂತಾದ ಉದ್ಯೋಗಗಳಲ್ಲಿ ತೊಡಗಿಕೊಂಡರು. ಇವರು ಬೇಟೆಗಾರರಾಗಿಯೂ ಪ್ರಸಿದ್ಧರಾಗಿದ್ದರೆಂದು ತಿಳಿದುಬರುತ್ತದೆ. ಇವರ ಮುಖ್ಯ ಆಹಾರ ಹಿಟ್ಟಿನ ಗಂಜಿ ಮತ್ತು ಅನ್ನ. ಮಹುವಾ ಎಂಬ ಗಿಡದ ಹೂಗಳಿಂದ ತಯಾರಿಸಿದ ಮದ್ಯ ಇವರಿಗೆ ಬಲು ಪ್ರಿಯ. ಗೊಂಡರ ಹಳ್ಳಿಗಳಲ್ಲಿ ಸಾಮಾನ್ಯವಾಗಿ 50 ಗುಡಿಸಲುಗಳು ಇರುತ್ತವೆ. ಇವಕ್ಕೆ ತೋಲಾ ಎನ್ನುತ್ತಾರೆ. ಹಳ್ಳಿಗಳ ಮಧ್ಯದಲ್ಲಿ ಗುಡಿಸಲುಗಳು ಇರುತ್ತವೆ. ಅಲ್ಲದೆ ಇವುಗಳ ಪೂರ್ವ ಭಾಗದಲ್ಲಿ, ಅಸಹಜ ರೀತಿಯಲ್ಲಿ ಸಾವನ್ನಪ್ಪಿದ ಹಿರಿಯರ ಸ್ಮಾರಕಗಳಿರುತ್ತವೆ. ಗೊಂಡರಲ್ಲಿ ಎರಡು ಪ್ರಮುಖ ಗುಂಪುಗಳಿವೆ. ಒಂದು ಪಂಗಡದವರು ಇನ್ನೊಂದರ ಜೊತೆಗೆ ವಿವಾಹವಾಗಲಾರರು. ಏಕೆಂದರೆ ಅವರಲ್ಲಿ ದಾಯಾದಿ ಸಂಬಂಧವಿದೆ ಎಂದು ತಿಳಿಯುತ್ತಾರೆ. ಮಧ್ಯಪ್ರದೇಶದ ಬಸ್ತಾರಿನ ಒಂದು ಗುಂಪಿನಲ್ಲಿ 96 ಕುಲಗಳು ಇನ್ನೊಂದರಲ್ಲಿ 69 ಕುಲಗಳಿರುವುದು ಕಂಡುಬರುತ್ತದೆ. ಅಲ್ಲದೆ ಒಂದು ಗುಂಪಿನಲ್ಲಿ ಆರು ದೇವತೆಗಳನ್ನು ಪೂಜಿಸಿದರೆ, ಮತ್ತೊಂದು ಗುಂಪಿನಲ್ಲಿ ಏಳು ದೇವತೆಗಳನ್ನು ಪೂಜಿಸುವರು. ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ಗೊಂಡರಲ್ಲಿ ಭಿನ್ನತೆಯಿದೆ. ಉದಾಹರಣೆಗೆ: ಮಹಾರಾಷ್ಟ್ರದ ಚಾಂದಾ ಜಿಲ್ಲೆಯ ಗೊಂಡರಲ್ಲಿ ನಾಲ್ಕು ಭಾಗಗಳು ಇವೆ. ಇವುಗಳಿಗೆ ಬಿರಾದಾರಿ ಎನ್ನುವರು. ಮಧ್ಯಪ್ರದೇಶದ ಮುಡಿಯಾ ಗೊಂಡರಲ್ಲಿ ಐದು ಭಾಗಗಳಿವೆ. ಸಹೋದರ ಸಂಬಂಧವಿರುವುದೆಂದು ತಿಳಿದ ಕಾರಣ ಇವರ ನಡುವೆ ವೈವಾಹಿಕ ಸಂಬಂಧವಿಲ್ಲ. ಗೊಂಡರಲ್ಲಿ ಕುರ ಎಂದು ಕರೆಯುವ ಕುಲಗಳು ಇವೆ.

ಗೊಂಡರು ಏಕಪತ್ನಿವ್ರತಸ್ಥರು. ಬಹುಪತಿತ್ವ ಇವರಲ್ಲಿ ಬಲು ಅಪರೂಪ. ತಂದೆಯ–ತಂಗಿಯ ಮತ್ತು ತಾಯಿಯ ಅಣ್ಣನ ಮಕ್ಕಳ ಮದುವೆ ರೂಢಿಯಲ್ಲಿದೆ. ಗಂಡ ಸತ್ತರೆ ಗಂಡನ ತಮ್ಮನನ್ನು ಮದುವೆಯಾಗುವುದು ಸಂಪ್ರದಾಯ. ಮುಡಿಯಾ ಗೊಂಡರಲ್ಲಿ ಘೋಟುಲ್ ಎಂಬ ಸ್ವಾರಸ್ಯಕರವಾದ ಸಂಸ್ಥೆಯಿದೆ. ಮದುವೆಯಾಗದ ಹುಡುಗ ಹುಡುಗಿಯರು ರಾತ್ರಿಯಲ್ಲಿ ನಿಗದಿಪಡಿಸಿದ ಒಂದು ಮನೆಯಲ್ಲಿ ಒಟ್ಟಿಗೆ ಮಲಗುವರು. ಹುಡುಗರಿಗೆ ಚೆಲಿಕೆ ಎಂದು ಹುಡುಗಿಯರಿಗೆ ಮೋಟಿಯಾರಿ ಎಂದು ಕರೆಯುವರು. ಇವರಿಗೆ ಒಬ್ಬ ಯಜಮಾನ ಇರುತ್ತಾನೆ. ಮಧ್ಯರಾತ್ರಿಯವರೆಗೆ ಹಾಡು ಕುಣಿತಗಳಲ್ಲಿ ಮಗ್ನರಾಗುವರು. ಮದುವೆಯಾಗುವತನಕ ಈ ಸಂಸ್ಥೆಯ ಸದಸ್ಯರಾಗುವುದು ಕಡ್ಡಾಯ.

ಭಿಲ್ಲರು: ಇವರು ಉತ್ತಮ ಬಿಲ್ಲುಗಾರರು. ಈ ಬುಡಕಟ್ಟುಗಳ ಜನರು ಹೆಚ್ಚಾಗಿ ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ ರಾಜ್ಯಗಳಲ್ಲಿ ವಾಸವಾಗಿ ಇದ್ದಾರೆ. ಭಿಲ್ಲ ಎಂಬುದು ಇವರ ಆಡು ಭಾಷೆ. ಇವರು ಪೂರ್ವ ದ್ರಾವಿಡರೆಂದು ವಿದ್ವಾಂಸರಾದ ಹ್ಯಾಡೋನ್, ದ್ರಾವಿಡರೆಂದು ರಿಸ್ಲೆ ಮತ್ತು ಕ್ರೂಕ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ಇವರು ಪ್ರೋಟೊ ಆಸ್ಟ್ರಲಾಯಿಡರೆಂದು ಗುಹಾ ಅಭಿಪ್ರಾಯ ಪಟ್ಟಿದ್ದಾರೆ. ಸಂಸ್ಕೃತ ಸಾಹಿತ್ಯದಲ್ಲಿ ಬರುವ ನಿಷಾದರು ಇಂದಿನ ಭಿಲ್ಲರೆಂದು ಊಹಿಸಲಾಗಿದೆ.

ಭಿಲ್ಲರು ನೇಗಿಲ ಕೃಷಿ ಮಾಡಿ ಜೋಳ, ಗೋದಿ, ಸಜ್ಜೆ, ಬಾರ್ಲಿ ಮುಸುಕಿನ ಜೋಳ, ಬತ್ತ ಇತ್ಯಾದಿ ಬೆಳೆಗಳನ್ನು ಬೆಳೆಸುವರು. ಎತ್ತು, ಎಮ್ಮೆ, ಹಸು, ಕೋಳಿ ಮುಂತಾದವನ್ನು ಸಾಕುವರು. ಕೆರೆಕಟ್ಟೆಗಳಲ್ಲಿ ಮೀನು ಹಿಡಿಯುವುದು, ಬೇಟೆಯಾಡುವುದು ಇವರ ಹವ್ಯಾಸಗಳು. ಭಿಲ್ಲರ ಹಳ್ಳಿಗಳು ಬೆಟ್ಟದ ಇಳಿಜಾರು ಇಲ್ಲವೆ ಹೊಳೆಯ ಬದಿಯಲ್ಲಿರುತ್ತವೆ. ಹಳ್ಳಿಗಳ ಹೊರ ವಲಯದಲ್ಲಿ ಗ್ರಾಮದೇವತೆಗಳ ಗುಡಿಗಳನ್ನೂ ಹಿರಿಯರ ಸ್ಮಾರಕಗಳನ್ನೂ ಕಾಣಬಹುದು. ಅರಣ್ಯ ವಸ್ತುಗಳಿಂದ ಮನೆ ಕಟ್ಟುವರು. ಗಂಡಸರು ಸೊಂಟಕ್ಕೆ ಪಟ್ಟಿ ಕಟ್ಟಿ ಅದನ್ನು ಮೊಳಕಾಲಿನವರೆಗೆ ಇಳಿ ಬಿಡುವರು. ಅಂಗಿ ಹಾಕಿಕೊಳ್ಳುವರು, ತಲೆಗೊಂದು ಪೇಟ ಸುತ್ತುವರು. ಹೆಂಗಸರು ಸೀರೆ ಉಟ್ಟು ರವಿಕೆ ಧರಿಸುವರು. ಗಂಡಸರು ಮತ್ತು ಹೆಂಗಸರು ಬಳ್ಳಿಗಳಿಂದ ಮಾಡಿದ ಕಿವಿಯುಂಗುರಗಳನ್ನು ಧರಿಸುವರು. ಭಿಲ್ಲರ ಯಜಮಾನನಿಗೆ ವಾಸವ ಎನ್ನುವರು. ಅವನು ಜನರ ಸಮಸ್ಯೆಗಳನ್ನು ಪರಿಹರಿಸುವವನಲ್ಲದೆ, ಹಬ್ಬ ಹರಿದಿನಗಳಲ್ಲೂ ಪ್ರಧಾನ ಪಾತ್ರ ವಹಿಸುವನು ವಾರ್ತಾನಿಯ ಎಂಬಾತನಿಗೆ ಸುದ್ದಿ ಸಾರುವ ಕೆಲಸ. ಹತ್ತು ಹನ್ನೆರಡು ಹಳ್ಳಿಗಳಿಗೊಬ್ಬ ದೇಶಮುಖ ಇದ್ದು ಈತ ಜನಾಂಗದವರ ಯೋಗಕ್ಷೇಮ ನೋಡಿಕೊಳ್ಳುವನು.

ನಾಗಾ: ನಾಗಾಲ್ಯಾಂಡಿನ ಮೂಲವಾಸಿಗಳಾದ ಇವರಲ್ಲಿ ಹದಿನಾಲ್ಕು ಪ್ರಮುಖ ಬುಡಕಟ್ಟುಗಳಿವೆ. ಮಹಾಭಾರತದಲ್ಲಿ ಕಿರಾತರೆಂದು ಉಲ್ಲೇಖಿಸಲ್ಪಟ್ಟ ಜನರು ಇವರೇ ಎಂದು ತಿಳಿದುಬಂದಿದೆ. ಮಂಗೋಲಾಯಡ್ ಜನಾಂಗಕ್ಕೆ ಸೇರಿದ ಇವರ ಭಾಷೆ ಟಿಬೆಟೊ ಬರ್ಮನ್ ಭಾಷಾವರ್ಗಕ್ಕೆ ಸೇರಿದೆ. ನಾಗಾ ಜನರ ಗ್ರಾಮಗಳನ್ನು ಎರಡು ಇಲ್ಲವೆ ಮೂರು ಖೇಲಗಳಲ್ಲಿ (ಭಾಗ) ವಿಭಾಗಿಸಲಾಗಿದೆ. ಗ್ರಾಮದ ಹಿರಿಯರು ಆಂತರಿಕ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಮೆಟ್ಟಿಲು ಕೃಷಿಯಿಂದ ನಾಗಾ ಜನಜೀವನ ಸಾಗಿದೆ. ಅಕ್ಕಿಯೇ ಮುಖ್ಯ ಆಹಾರ. ಅಕ್ಕಿಯಿಂದ ತಯಾರಿಸಿದ ಮಾದಕ ಪಾನೀಯ ವಿಶೇಷವಾಗಿ ಬಳಕೆಯಲ್ಲಿದೆ.

ಈ ಜನರ ಉಡುಪು ಗಿಡ್ಡ ಲಂಗ ಮತ್ತು ಶಾಲು. ಸ್ತ್ರೀಯರು ಚಿಕ್ಕ ಕೈಮಗ್ಗಗಳಲ್ಲಿ ಕಲಾತ್ಮಕವಾಗಿ ಬಟ್ಟೆಗಳನ್ನು ನೇಯುತ್ತಾರೆ. ನಾಗಾ ಜನರ ಸಾಂಸ್ಕೃತಿಕ ಜೀವನದಲ್ಲಿ ವೊರಂಗ ಎಂಬ ನಿದ್ರಾಶಾಲೆ, ಉದ್ದನೆಯ ದಾರುವಾದ್ಯ ಮತ್ತು ಅರ್ಹತೆಯ ಹಬ್ಬ ಮುಖ್ಯವಾದವುಗಳು. ಅವಿವಾಹಿತ ನಾಗಾ ಯುವಕರು ಗ್ರಾಮದಲ್ಲಿರುವ ವೊರಂಗ ಮನೆಯಲ್ಲಿ ಒಟ್ಟಾಗಿ ಮಲಗುವರು. ಎಲ್ಲ ಸಂದರ್ಭಗಳಲ್ಲಿ ದಾರುವಾದ್ಯವನ್ನು ಸಾಮೂಹಿಕವಾಗಿ ಬಾರಿಸುವರು. ಅರ್ಹತೆಯ ಹಬ್ಬವನ್ನು ನಾಗಾ ದಂಪತಿಗಳು ವಿಧಿ ಪೂರ್ವಕವಾಗಿ ಆಚರಿಸುವಾಗ ಯುವಕರು ದೂರದಿಂದ ಕಲ್ಲುಬಂಡೆಯೊಂದನ್ನು ದೂಡಿಕೊಂಡು ತರುತ್ತಾರೆ. ಅನಂತರ ಎಲ್ಲರಿಗೂ ಧಾರಾಳವಾಗಿ ಮಿಥುನ (ದನ) ಮತ್ತು ಹಂದಿ ಮಾಂಸದ ಜೊತೆಗೆ ಅಕ್ಕಿ ಮದ್ಯದ ವಿತರಣೆಯಾಗುತ್ತದೆ.

ಹಿಂದೆ ನಾಗಾ ಜನರು ತಲೆಬೇಟೆಯಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ತಲೆಬೇಟೆಯಾಡದ ಯುವಕನಿಗೆ ವಧು ಸಿಕ್ಕುವುದು ದುಸ್ತರವಾಗುತ್ತಿತ್ತಂತೆ. ಈ ಪದ್ಧತಿ ನಿಲ್ಲುತ್ತ ಬಂದಿದೆ. ಟುಯನ್ಸಾಂಗ ಜಿಲ್ಲೆಯಲ್ಲಿ ಇನ್ನೂ ಇದರ ಹುಮ್ಮಸ್ಸು ಮಾಯವಾದಂತಿಲ್ಲ;

ಈ ಭಾಗದಲ್ಲಿ 1969ರಲ್ಲಿ ತಲೆಬೇಟೆಯಾಡಿದ ವರದಿಗಳಿವೆ. ನಾಗಾ ಜನರಲ್ಲಿ ಬಹುಪತ್ನಿತ್ವ ಬಳಕೆಯಲ್ಲಿದೆ. ಭಿನ್ನಕುಲ ವಿವಾಹಪದ್ಧತಿಯಿದ್ದರೂ ಕೊನ್ಯಾಕ್ ನಾಗಾಜನರ ಮುಖ್ಯಸ್ಥ ಮಾತ್ರ ತನ್ನ ಪ್ರಧಾನ ಹೆಂಡತಿಯನ್ನು ತನ್ನ ಕುಲದಲ್ಲಿಯೇ ಆರಿಸಿಕೊಳ್ಳುತ್ತಾನೆ. ನಾಗಾ ಜನರ ಧಾರ್ಮಿಕ ನಂಬುಗೆಗಳಲ್ಲಿ ಸೃಷ್ಟಿಕರ್ತನ ಕಲ್ಪನೆಯಿದೆ. ದುಷ್ಟ ಮತ್ತು ಶಿಷ್ಟ ಆತ್ಮಗಳಿಗೆ ತಮ್ಮವೇ ಸ್ಥಾನಗಳಿವೆ. ನಾಗರಿಕ ಪ್ರಭಾವದಿಂದಾಗಿ ನಶಿಸುತ್ತಿರುವ ತಮ್ಮ ಸಂಸ್ಕೃತಿ ಸ್ವರೂಪವನ್ನು ಕಾಯ್ದುಕೊಳ್ಳಲು ನಾಗಾಮಂದಿ ಶ್ರಮಿಸುತ್ತಿದ್ದಾರೆ.

ತೋಡರು: ತಮಿಳುನಾಡಿನ ನೀಲಗಿರಿ ಬೆಟ್ಟದ ತಪ್ಪಲಿನಲ್ಲಿ ವಾಸಿಸುವ ತೋಡರು ಬಹುಪತಿತ್ವ ಪದ್ಧತಿಯಿಂದಾಗಿ ಸಮಾಜವಿಜ್ಞಾನಿಗಳ ಕುತೂಹಲಕ್ಕೆ ಕಾರಣರಾಗಿದ್ದಾರೆ. ತೋಡರು ತಮ್ಮ ವಾಸದ ನೆಲೆಗಳನ್ನು ಮಂಡ್ ಎಂಬುದಾಗಿ ಕರೆಯುತ್ತಾರೆ. ಇವರ ಗುಡಿಸಲು ಅರೆಕೊಳವಿಯಾಕಾರದ ಚಾವಣಿಯುಳ್ಳ ನಾಲ್ಕು ಚಕ್ರದ ಬಂಡಿಯ ಹೊದಿಕೆಯ ರೂಪದಲ್ಲಿರುತ್ತದೆ. ಬಾಗಿಲುಗಳು ಬಲು ಚಿಕ್ಕವು. ದೈಹಿಕ ರಚನೆಯಲ್ಲಿ ಗೌರವರ್ಣದ ಚಪ್ಪಟೆ ಮೂಗಿನ ಎತ್ತರದ ನಿಲುವಿನ ಇವರು ಇತರ ಬುಡಕಟ್ಟು ಜನರಿಗಿಂತ ಭಿನ್ನರಾಗಿದ್ದಾರೆ. ಎಮ್ಮೆಗಳ ಹೈನಿನ ಮೇಲೆಯೇ ಇವರ ಜೀವನ. ಮುಖ್ಯ ಆಹಾರ ಅಕ್ಕಿ ಮತ್ತು ಹೈನಿನ ಪದಾರ್ಥಗಳು. ಮೃತರಿಗೆ ಬಲಿಕೊಟ್ಟ ಎಮ್ಮೆಗಳ ಮಾಂಸವನ್ನು ಪ್ರಸಾದ ರೂಪವಾಗಿ ಸ್ವೀಕರಿಸುವ ಪದ್ಧತಿಯಿದೆ.

ಇವರು ಸೊಂಟಕ್ಕೆ ತುಂಡು ಬಟ್ಟೆ ಮತ್ತು ಮೇಲೆ ಹೊದಿಕೆಯನ್ನು ಧರಿಸುತ್ತಾರೆ. ಇದನ್ನು ಅವರ ಭಾಷೆಯಲ್ಲಿ ಪೂತೊಲಿ ಎಂದು ಕರೆಯುತ್ತಾರೆ. ಎಮ್ಮೆಗಳನ್ನು ಸಾಮಾನ್ಯ ಮತ್ತು ಪವಿತ್ರ ಎಂದು ವಿಂಗಡಿಸಿ ಅವುಗಳಿಗಾಗಿ ಹೈನಿನ ಮನೆ ಮತ್ತು ಅವುಗಳ ಪೂಜಾ ವಿಧಿಗಾಗಿ ಹೈನಿಗರನ್ನು ನೇಮಿಸಿರುತ್ತಾರೆ. ಹೈನಿನ ಮನೆಗಳಲ್ಲಿ ವಿಶೇಷವಾಗಿ ಟಿ ಎಂಬವು ಪವಿತ್ರವಾದವು. ಅವುಗಳ ಹೈನಿಗರನ್ನು ಪಾಲೊಲ ಎಂದು ಕರೆಯುತ್ತಾರೆ. ಅವರು ಅತ್ಯಂತ ಕಠಿಣ ನಿಯಮಗಳನ್ನು ಹದಿನೆಂಟು ವರ್ಷದ ತನಕ ಅನುಸರಿಸಬೇಕಾಗುತ್ತದೆ. ತೋಡರಿಗೆ ಈ ಪವಿತ್ರ ಹೈನಿನ ಮನೆಗಳೇ ಗುಡಿಗಳು. ಇವರಲ್ಲಿ ತಾರ್ದರ್ ಮತ್ತು ತೇವಲಿ ಎಂಬ ಎರಡು ಪಂಗಡಗಳಿವೆ. ತಾರ್ದರ್ ಪಂಗಡದಲ್ಲಿ ಹನ್ನೆರಡು ಕುಲಗಳೂ ತೇವಲಿ ಪಂಗಡದಲ್ಲಿ ಆರು ಕುಲಗಳೂ ಇವೆ. ಅಣ್ಣತಮ್ಮಂದಿರಿಗೆ ಒಬ್ಬಳೇ ಹೆಂಡತಿ. ಮೊದಲು ಇವರಲ್ಲಿ ಹೆಣ್ಣು ಮಗುವಿನ ಹತ್ಯೆ ಬಳಕೆಯಲ್ಲಿತ್ತಂತೆ. ವಿವಾಹಿತ ಸ್ತ್ರೀ ಗರ್ಭಿಣಿಯಾದಾಗ ಪಿತೃತ್ವವನ್ನು ನಿರ್ಧರಿಸಲು ಗಂಡಂದಿರಲ್ಲಿ ಯಾರಾದರೊಬ್ಬರು ಅವಳಿಗೆ ಬಿಲ್ಲುಬಾಣಗಳನ್ನು ಸಮರ್ಪಿಸಬೇಕು. ಈ ವಿಧಿಯನ್ನು ಸ್ತ್ರೀ ಏಳನೆಯ ತಿಂಗಳು ಗರ್ಭಿಣಿಯಾಗಿದ್ದಾಗ ಮಾಡಬೇಕಾಗುತ್ತದೆ. ಮೃತರ ಅಂತ್ಯಸಂಸ್ಕಾರ ವೈಚಿತ್ರ್ಯಪೂರ್ಣವಾಗಿ, ಕ್ರಮವಾಗಿ ಹಸಕೇಡು ಮತ್ತು ಬರಕೇಡು ಎಂದು ಎರಡು ಹಂತಗಳಲ್ಲಿ ನಡೆಯುತ್ತದೆ. ಆಗ ಎಮ್ಮೆಗಳ ಬಲಿ ಕೊಡುವರು.

ಸೋಲಿಗರು: ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ ಮತ್ತು ಇತರ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇವರ ಹೆಸರು ತಮಿಳು ಪದ ಸೋಲೈ (ಪೊದರು) ಎಂಬುದರಿಂದ ಬಂದಿದೆ. ವ್ಯವಸಾಯ ಮಾಡಿ ಜೀವನ ನಡೆಸುತ್ತಾರೆ. ಇವರ ಹಳ್ಳಿಗಳಿಗೆ ಪೋಡುಗಳೆಂದುಹೆಸರು. ಅರಣ್ಯದಲ್ಲಿ ಸಿಗುವ ಪದಾರ್ಥಗಳಿಂದ ಗುಡಿಸಲು ಕಟ್ಟುತ್ತಾರೆ. ಜೇನುತುಪ್ಪವನ್ನು ಬಿದಿರಿನ ಕೊಳವೆಗಳಲ್ಲಿ ಸಂಗ್ರಹಿಸುವರು. ಸೋಲಿಗರಲ್ಲಿ ಮುಖ್ಯವಾಗಿ ಐದು ಕುಲದವರು ಮತ್ತು ಏಳು ಕುಲದವರು ಎಂಬ ಎರಡು ಪಂಗಡಗಳಿವೆ. ಕೊಳ್ಳೇಗಾಲದ ಮಹದೇಶ್ವರ ಬೆಟ್ಟದಲ್ಲಿ ಪೂಜಾರಿ ಸೋಲಿಗರು ವಾಸಿಸುತ್ತಾರೆ. ಐದು ಕುಲದವರ ಆಡುನುಡಿ ಕನ್ನಡ. ಏಳು ಕುಲದವರದು ತಮಿಳುಮಿಶ್ರಿತ ಕನ್ನಡ.

ಸೋಲಿಗರಲ್ಲಿ ಕುಲಗಳು ಮುಖ್ಯ. ಉದಾಹರಣೆಗೆ ಐದು ಕುಲದವರಲ್ಲಿ ಶಫಕಿರಿ, ಸೂರ, ಬೆಳ್ಳಿ, ತೆನೆ, ಹಾಲು ಎಂಬುದಾಗಿ ಇದ್ದು ಅದೇ ಕುಲದಲ್ಲಿ ಮದುವೆಯಾಗುವಂತಿಲ್ಲ. ಬಿಳಿಗಿರಿರಂಗನ ಬೆಟ್ಟದ ಸೋಲಿಗರಲ್ಲಿ ಏಳು ಕುಲದವರ ಸ್ಥಾನಮಾನ ಕಡಿಮೆ. ಹುಡುಗ ತಾನು ಇಚ್ಛಿಸಿದ ಹುಡುಗಿಯೊಂದಿಗೆ ಕಾಡಿನಲ್ಲಿ ಮೂರು ನಾಲ್ಕು ದಿನಗಳವರೆಗೆ ಇದ್ದು ಅನಂತರ ತಿರುಗಿ ತಮ್ಮ ಪೋಡಿಗೆ ಬಂದು ಪಂಗಡದ ಜನರಿಗೆ ಊಟವೋ ಉಪಾಹಾರವೋ ಕೊಟ್ಟಾಗ ಮದುವೆಯಾದಂತೆ. ತಂದೆಯ ಅಕ್ಕ, ತಂಗಿ ಮತ್ತು ತಾಯಿಯ ಅಣ್ಣನ ಮಗಳೊಡನೆ ಮದುವೆ ಸಾಧ್ಯ. ವಿವಾಹ ವಿಚ್ಛೇದನ ಬಳಕೆಯಲ್ಲಿದೆ. ಗುಡಿಯಲ್ಲಿ ಅಥವಾ ಚಪ್ಪರ ಹಾಕಿ ಮದುವೆ ಮಾಡುವ ರೂಢಿ ಹಲವು ವರ್ಷಗಳಿಂದ ಬಳಕೆಯಲ್ಲಿ ಬಂದಿದೆ.

ಅಂಡಮಾನಿ: ಬಂಗಾಲಕೊಲ್ಲಿಯ ಪೂರ್ವಭಾಗದಲ್ಲಿರುವ ಅಂಡಮಾನ್ ದ್ವೀಪ ಸಮೂಹದಲ್ಲಿ ವಾಸವಾಗಿರುವ ಅಂಡಮಾನಿಯರು ನೀಗ್ರೋಯಿಡ್ ಜನಾಂಗಕ್ಕೆ ಸೇರಿದವರು. ಇವರಾಡುವ ಭಾಷೆ ಅಂಡಮಾನಿ.

ಅಂಡಮಾನಿಯರು ಅರಣ್ಯದಲ್ಲಿ ಮತ್ತು ಸಮುದ್ರದಲ್ಲಿ ಸಿಗುವ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಜೀವನ ನಡೆಸುವರು. ಬೇಟೆಗಾಗಿ ಬಿಲ್ಲುಬಾಣಗಳನ್ನೂ ಸಮುದ್ರದಲ್ಲಿ ಮೀನನ್ನು ಹಿಡಿಯಲು ಭರ್ಜಿಯನ್ನೂ ಉಪಯೋಗಿಸುವರು. ಗೆಡ್ಡೆಗೆಣಸು ಇವರ ದೈನಂದಿನ ಆಹಾರದ ಮುಖ್ಯಭಾಗ, ದೈನಂದಿನ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ತಾವೇ ತಯಾರಿಸಿಕೊಳ್ಳುವರು. ಸಮುದ್ರ ದಂಡೆಗೆ ಹತ್ತಿರವಾಗಿ ಅವರ ವಾಸಸ್ಥಳವಿರುತ್ತದೆ. ಆಗಾಗ್ಗೆ ಅವನ್ನು ಬದಲಿಸುವರು. ತಾವೇ ತಯಾರಿಸಿದ ದೋಣಿಗಳಲ್ಲಿ ಪ್ರಯಾಣಮಾಡುವರು. ಇವರು ಇರುವ ಜಾಗದಲ್ಲಿ ಒಂದೇ ಗುಡಿಸಲು ಕಟ್ಟಿ ಒಟ್ಟಿಗೆ ಗುಂಪಿನಲ್ಲಿ ವಾಸಮಾಡುವರು. ಬಟ್ಟೆ ಧರಿಸಿದ್ದರೂ ಮೂಳೆ, ಶಂಕು, ಬಿದಿರು, ಬಳ್ಳಿ ಮುಂತಾದವುಗಳಿಂದ ಮಾಡಿದ ಸೊಂಟಪಟ್ಟಿ, ಹಾರ, ತೋಳುಬಂದಿ ಇತ್ಯಾದಿ ಧರಿಸುವರು. ಚಿಕ್ಕಮಕ್ಕಳಿಂದ ದೊಡ್ಡವರವರೆಗೆ ಎಲ್ಲರೂ ತಲೆ ಬೋಳಿಸಿಕೊಳ್ಳುವರು. ಗಂಡಸರು ಗಡ್ಡವನ್ನು ಬೋಳಿಸಿಕೊಳ್ಳುವುದಿಲ್ಲ. ಗಂಡು ಹೆಣ್ಣೆನ್ನದೆ ಭುಜ, ಹೊಟ್ಟೆ, ಬೆನ್ನು ಮತ್ತು ಕಾಲುಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುವರು. ಅಲಂಕಾರದ ಅಂಗವಾಗಿ ಇಡೀ ದೇಹದಲ್ಲಿ ಮೂರು ತರಹದ ಬಣ್ಣಗಳನ್ನು ಹಚ್ಚಿಕೊಂಡು ಆನಂದಪಡುವರು. ಅಂಡಮಾನಿಯರಲ್ಲಿ ಏಕಪತ್ನಿತ್ವ ಜಾರಿಯಲ್ಲಿದೆ. ಮದುವೆಯ ಮೊದಲು ಗಂಡು ಹೆಣ್ಣುಗಳು ಕೂಡಿದರೂ ಮದುವೆಯಾದ ಅನಂತರ ಇದು ನಿಷೇಧ. ಗಂಡ ಸತ್ತಬಳಿಕ ವಿಧವೆ ಗಂಡನ ತಮ್ಮನನ್ನು ಮದುವೆಯಾಗಬಹುದು. ಸತ್ತಾಗ ಯುಕ್ತ ವಿಧಿಗಳನ್ನು ಆಚರಿಸಿ ಹೆಣವನ್ನು ಹೂಳಲಾಗುವುದು. ಇವರಲ್ಲಿ ಹಿರಿಯರು ಇದ್ದು ಅವರು ತಮ್ಮ ಜನರ ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳುವರು.

ಅಭಿವೃದ್ಧಿ ಕಾರ್ಯಕ್ರಮಗಳು: ಬುಡಕಟ್ಟು ಜನರು ಇತರ ಜನರೊಡನೆ ಬೆರೆತಾಗ, ಅವರ ಸಂಸ್ಕೃತಿಗೆ ಧಕ್ಕೆಬರುವುದೆಂಬ ಕಾರಣ ಅವರನ್ನು ಬೇರೆ ಬೇರೆಯಾಗಿ ಸುರಕ್ಷಿತವಾಗಿ ಇಟ್ಟರೆ, ಅವರ ಸಂಸ್ಕೃತಿ ಉಳಿಯುವುದೆಂದು ವೆರಿಯರ್ ಎಲ್ವಿನ್ ಅಭಿಪ್ರಾಯ ಪಟ್ಟಿದ್ದಾರೆ. ಅವರ ಸರ್ವಾಂಗೀಣ ಉನ್ನತಿ ಅಗತ್ಯ. ಅಲ್ಲದೆ ಅವರೂ ರಾಷ್ಟ್ರಾಭಿವೃದ್ಧಿಯ ಕಾರ್ಯದಲ್ಲಿ ಭಾಗವಹಿಸಬೇಕೆಂದು ನೆಹರೂ ಅಭಿಪ್ರಾಯಪಟ್ಟಿದರು. ಈ ವಾದವನ್ನು ಅನೇಕ ಸಾಮಾಜಿಕ ಕಾರ್ಯಕರ್ತರು ಒಪ್ಪಿದ್ದರು. ಭಾರತ ಈ ದಿಸೆಯಲ್ಲಿ ಕಾರ್ಯ ಪ್ರವೃತ್ತವಾಗಿ ಬುಡಕಟ್ಟು ಜನರ ಸಾಮಾಜಿಕ ಆರ್ಥಿಕ ಪ್ರಗತಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಅದರಂತೆ ರಾಜ್ಯಾಂಗದಲ್ಲಿ ಬುಟಕಟ್ಟು ಜನರಿಗಾಗಿ ಶೇಕಡಾ ಏಳೂವರೆ ಹುದ್ದೆಗಳನ್ನು ಮತ್ತು ವಿದ್ಯಾ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಮೀಸಲಾಗಿಡಲಾಗಿದೆ. ಇನ್ನೂ ಇತರ ಅನೇಕ ಸವಲತ್ತುಗಳನ್ನು ಬುಡಕಟ್ಟು ಜನರಿಗೆ ಕೊಡಲಾಗಿದೆ.

ಬುಡಕಟ್ಟು ಜನರ ಪ್ರಗತಿಗಾಗಿ ಸರ್ಕಾರ ಮೊದಲ ಪಂಚವಾರ್ಷಿಕ ಯೋಜನೆಗಳಲ್ಲಿ ವಿದ್ಯೆ, ಆರ್ಥಿಕ ಅಭಿವೃದ್ಧಿ, ಆರೋಗ್ಯ, ಮನೆಗಳು ಮತ್ತು ಸಂಪರ್ಕ ಸಾಧನಗಳಿಗಾಗಿ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿದೆ. ರಾಜ್ಯ ಸರ್ಕಾರಗಳು ಕೂಡ ತಮ್ಮ ಪಾಲಿನ ಹಣವನ್ನು ಬುಡಕಟ್ಟು ಜನರ ಕ್ಷೇಮಕ್ಕಾಗಿ ಖರ್ಚುಮಾಡುತ್ತಿವೆ. ಮಾನವ ವಿಜ್ಞಾನಿಗಳ ಅಭಿಪ್ರಾಯದಂತೆ ಬುಡಕಟ್ಟುಜನರ ಪರಿಸರ, ಸಮಸ್ಯೆ ಮತ್ತು ಆಶಯ ಮುಂತಾದವನ್ನು ಅಭ್ಯಸಿಸಿ ಯುಕ್ತವಾದ ಯೋಜನೆಗಳನ್ನು ರೂಪಿಸಿ ಸಫಲವಾಗಿ ಕಾರ್ಯಗತಗೊಳಿಸಿದರೆ, ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುವುದು. *

**ಭಾರತೀಯ ಭಾಷೆಗಳು:** ಭಾರತ ಬಹು ಭಾಷೆಗಳ ದೇಶ. ಇಲ್ಲಿ ಬಳಕೆಯಲ್ಲಿರುವ ಭಾಷೆಗಳ ಸಂಖ್ಯೆ ಖಚಿತವಾಗಿ ತಿಳಿದುಬಂದಿಲ್ಲ. ಭಾರತೀಯ ಭಾಷೆ ಮತ್ತು ಉಪಭಾಷೆಗಳ ಸರ್ವೇಕ್ಷಣಾ ಕಾರ್ಯವನ್ನು ಮೊತ್ತಮೊದಲು ಆರಂಭಿಸಿದ ಜಾರ್ಜ್ ಗ್ರಿಯರ್‌ಸನ್ ಅವರು ತಮ್ಮ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯ ಎಂಬ ಕೃತಿಯಲ್ಲಿ 1891ರ ಜನಗಣತಿ ಆಧಾರದ ಮೇಲೆ 179 ಭಾಷೆಗಳನ್ನೂ 544 ಉಪಭಾಷೆಗಳನ್ನೂ ಪಟ್ಟಿಮಾಡಿದ್ದಾರೆ. 1921ರ ಜನಗಣತಿ ವರದಿಯಲ್ಲಿ 188 ಭಾಷೆಗಳೂ 49 ಉಪಭಾಷೆಗಳೂ ಉಕ್ತವಾಗಿವೆ. 1951ರ ಗಣತಿ ಒಟ್ಟು 782 ಭಾಷೆ ಮತ್ತು ಉಪಭಾಷೆಗಳನ್ನು ಹೇಳುತ್ತದೆ. 1971ರ ಜನಗಣತಿಯ ಪ್ರಕಾರ ಭಾರತದಲ್ಲಿ ಒಂದು ಸಾವಿರದ ಐನೂರಕ್ಕೂ ಹೆಚ್ಚು ಭಾಷೆ ಮತ್ತು ಉಪಭಾಷೆಗಳು ಬಳಕೆಯಲ್ಲಿವೆ ಎಂಬುದಾಗಿ ತಿಳಿದುಬಂದಿದೆ. ಭಾಷೆಗಳ ಈ ಸಂಖ್ಯೆ ಕರಾರುವಾಕ್ಕಾಗಿಲ್ಲ. ಏಕೆಂದರೆ ಸಮೀಕ್ಷೆ ನಡೆಸಿದ ತಜ್ಞರು ಉಪಭಾಷೆಗಳನ್ನೂ ಭಾಷೆಗಳೆಂದೇ ತಿಳಿದು ಅವನ್ನೂ ಭಾಷಾ ಗುಂಪಿನಲ್ಲಿ ಸೇರಿಸಿದ್ದಾರೆ. ಅಲ್ಲದೆ ಒಂದೇ ಭಾಷೆಗೆ ಇರುವ ಬೇರೆ ಬೇರೆ ಹೆಸರುಗಳನ್ನು ತಿಳಿಯದೆ ಅವನ್ನೆಲ್ಲ ಬೇರೆ ಬೇರೆ ಭಾಷೆಗಳೆಂದೇ ವರ್ಗೀಕರಿಸಿದ್ದಾರೆ. ಎಷ್ಟೋ ಭಾಷೆ ಮತ್ತು ಉಪಭಾಷೆಗಳನ್ನು ಆಡುವವರ ಸಂಖ್ಯೆ ಕೇವಲ ಒಂದು ಅಥವಾ ಎರಡು ಎಂಬುದಾಗಿ ತಿಳಿಸಿರುವುದುಂಟು. ಅನೇಕ ಗುಡ್ಡಗಾಡಿನ ಜನರ ಭಾಷೆಗಳನ್ನು ಇನ್ನೂ ಗುರುತಿಸಬೇಕಾಗಿದೆ.

ಆಧುನಿಕ ಭಾಷಾವಿಜ್ಞಾನಿಗಳು ಭಾರತೀಯ ಭಾಷೆಗಳನ್ನು ಇಂಡೋಆರ್ಯನ್, ದ್ರಾವಿಡ, ಆಸ್ಟ್ರಿಕ್, ಟಿಬೆಟೊ – ಬರ್ಮನ್ ಎಂಬ ಭಾಷಾಪರಿವಾರಗಳಲ್ಲಿ ವರ್ಗೀಕರಿಸುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಈ ಯಾವ ಭಾಷಾಪರಿವಾರಕ್ಕೂ ಸೇರಿಸಲಾಗದ ಭಾಷೆಗಳನ್ನು ಅವರ್ಗೀಕೃತ ಭಾಷಾಪರಿವಾರವೆಂದು ಪ್ರತ್ಯೇಕವಾಗಿ ವಿಂಗಡಿಸಿದ್ದಾರೆ.

ಇಂಡೋ ಆರ್ಯನ್ ಭಾಷಾಪರಿವಾರ: ಈ ಪರಿವಾರಕ್ಕೆ ಸೇರಿದ ಭಾಷೆಗಳನ್ನು ಐತಿಹಾಸಿಕವಾಗಿ ಪ್ರಾಚೀನ ಇಂಡೋ ಆರ್ಯನ್, ಮಧ್ಯಕಾಲೀನ ಇಂಡೋ ಆರ್ಯನ್ ಮತ್ತು ಆಧುನಿಕ ಇಂಡೋ ಆರ್ಯನ್ ಎಂಬುದಾಗಿ ವರ್ಗೀಕರಿಸಲಾಗಿದೆ. ಪ್ರಾಚೀನ

ಇಂಡೋಆರ್ಯನ್ ಭಾಷೆಗಳಲ್ಲಿ ವೇದಗಳ ಸಂಸ್ಕೃತವೇ (ಪ್ರ.ಶ.ಪೂ. ಸು. 2000) ಬಲುಮುಖ್ಯ ಭಾಷೆ. ಈ ಭಾಷೆಯನ್ನೇ ಪ್ರಾಚೀನ ಭಾರತದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಚಟುವಟಿಕೆಗಳಿಗೆ ಬಳಸಲಾಗುತ್ತಿತ್ತು. ಪ್ರಾಚೀನ ಭಾರತದ ಸಕಲಶಾಸ್ತ್ರ ಹಾಗೂ ಜ್ಞಾನಭಂಡಾರವನ್ನು ಇದು ಪ್ರತಿಬಿಂಬಿಸುತ್ತದೆ. ವೇದಗಳ ಸಂಸ್ಕೃತದಿಂದ ಕಾಲಕ್ರಮೇಣ ಲೌಕಿಕ ಸಂಸ್ಕೃತ ವಿಕಾಸಗೊಂಡಿತು. ಮಧ್ಯಕಾಲೀನ ಆರ್ಯನ್ ಭಾಷೆಗಳಲ್ಲಿ ಪಾಲಿ, ಪ್ರಾಕೃತ ಮತ್ತು ಅಪಭ್ರಂಶ ಭಾಷೆಗಳು ಮುಖ್ಯವಾಗಿವೆ. ಪಾಲಿ ಭಾಷೆಯನ್ನು ಬೌದ್ಧಧರ್ಮ ಸ್ಥಾಪಕರು ತಮ್ಮ ಮತ ಪ್ರಚಾರಕ್ಕೆ ಬಳಸಿಕೊಂಡರೆ. ಪ್ರಾಕೃತ ಭಾಷೆಯನ್ನು ಜೈನರು ತಮ್ಮ ಮತ ಪ್ರಚಾರಕ್ಕೆ ಬಳಸಿಕೊಂಡರು ಅಪಭ್ರಂಶ ಮುಖ್ಯವಾಗಿ ಆಡುಭಾಷೆಯಾಗಿದ್ದಿತು. ಆಧುನಿಕ ಇಂಡೋಆರ್ಯನ್ ಭಾಷೆಗಳೇ ಈಗ ಬಳಕೆಯಲ್ಲಿರುವ ಭಾಷೆಗಳು. ಇವೆಲ್ಲವೂ ಬೇರೆ ಬೇರೆ ಪ್ರಾಕೃತ ಅಪಭ್ರಂಶ ಭಾಷೆಗಳಿಂದ ವಿಕಾಸಗೊಂಡು ತಮ್ಮವೇ ಆದ ರೀತಿಯಲ್ಲಿ ಬೆಳೆದು ಬಂದ ಭಾಷೆಗಳು. ಇವುಗಳ ಇತಿಹಾಸ 10ನೆಯ ಶತಮಾನದಿಂದ ಆರಂಭವಾಗುತ್ತದೆ. ಸಿಂಧಿ, ಪಂಜಾಬಿ, ಗುಜರಾತಿ ಹಿಂದಿ, ರಾಜಸ್ಥಾನಿ, ಬಿಹಾರಿ, ಬಂಗಾಲಿ, ಒರಿಯ, ಮರಾಠಿ, ಪಹಾಡಿ ಮುಂತಾದವು ಈ ವರ್ಗಕ್ಕೆ ಸೇರಿವೆ.

ದ್ರಾವಿಡ ಭಾಷಾಪರಿವಾರ: ಭೌಗೋಳಿಕವಾಗಿ ಎಲ್ಲ ದ್ರಾವಿಡ ಭಾಷೆಗಳನ್ನೂ ದಕ್ಷಿಣ, ಮಧ್ಯ ಹಾಗೂ ಉತ್ತರ ದ್ರಾವಿಡ ಭಾಷಾವರ್ಗಗಳೆಂದು ವರ್ಗೀಕರಿಸಲಾಗಿದೆ. ತಮಿಳು, ಮಲಯಾಳಮ್, ಕೋತ, ತೋಡ, ಇರುಳ, ಎರವ, ಕನ್ನಡ, ಕೊಡಗು, ಬಡಗ, ಹವ್ಯಕ, ಸೋಲಿಗ, ಕುರುಬ, ತುಳು, ಕೊರವ, ಬೆಲ್ದರಿ, ತೆಲುಗು, ಸವಾರ ಮುಂತಾದ ಭಾಷೆ ಮತ್ತು ಉಪಭಾಷೆಗಳು ದಕ್ಷಿಣ ದ್ರಾವಿಡ ಭಾಷಾವರ್ಗಕ್ಕೆ ಸೇರಿವೆ. ಮಧ್ಯ ದ್ರಾವಿಡ ಭಾಷಾ ವರ್ಗದಲ್ಲಿ ಕೊಲಾಮಿ, ನಾಯ್ಕಿ, ಪರ್ಜಿ, ಗದಬ, ಗೋಂಡಿ, ಕೊಂಡ, ಕೋಯ, ಪೆಂಗು, ಕುಯಿ, ಕುವಿ ಮುಂತಾದ ಭಾಷೆಗಳು ಸೇರಿವೆ. ಉತ್ತರ ದ್ರಾವಿಡ ಭಾಷಾವರ್ಗಕ್ಕೆ ಕುರುಬ್, ಮಲ್ತೊ, ಬ್ರಾಹೂಹಿ ಧಾಂಗರ್ ಎಂಬ ಭಾಷೆಗಳು ಸೇರ್ಪಡೆಯಾಗಿವೆ. ಭಾರತದಲ್ಲಿ ಸುಮಾರು ಹದಿನಾಲ್ಕು ಕೋಟಿಗೂ ಹೆಚ್ಚು ಜನ ದ್ರಾವಿಡ ಭಾಷಾಪರಿವಾರಕ್ಕೆ ಸೇರಿದ ಬೇರೆ ಬೇರೆ ಭಾಷೆಗಳನ್ನಾಡುತ್ತಿದ್ದಾರೆ.

ಆಸ್ಟ್ರಿಕ್ ಭಾಷಾ ಪರಿವಾರ: ಈ ಪರಿವಾರಕ್ಕೆ ಸೇರಿದ ಭಾಷೆಗಳನ್ನು ಮುಂಡಾ, ಖಾಸಿ, ಹೋ ಮತ್ತು ನಿಕೋಬಾರಿ ಎಂಬ ಭಾಷಾವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಮುಂಡಾವರ್ಗದಲ್ಲಿ ಕರ್ಮಾಲಿ, ಮಹಿಲಿ, ಖರಿಯ, ಸಂತಾಲಿ, ಖೇರ್ವಾರಿ, ವಾಖಡಿಯ ಮುಖ್ಯ ಭಾಷೆಗಳು. ಖಾಸಿ, ನನ್‌ತುಂಗ್ ಮುಂತಾದವು ಖಾಸಿ ಭಾಷಾವರ್ಗಕ್ಕೂ ಹೋ, ಧಾರ್, ಕೊಡ ಎಂಬವು ಹೋ ಭಾಷಾವರ್ಗಕ್ಕೆ ಸೇರಿವೆ. ನಿಕೋಬಾರಿ ಭಾಷಾವರ್ಗದ ಮುಖ್ಯಭಾಷೆ ನಿಕೋಬಾರಿ, ಬಿಹಾರ, ಒರಿಸ್ಸ, ಪಶ್ಚಿಮ ಬಂಗಾಲ, ಅಸ್ಸಾಮ್, ಮಧ್ಯಪ್ರದೇಶ, ತ್ರಿಪುರ, ನಾಗಾಲ್ಯಾಂಡ್, ಅಂಡಮಾನ್ ಮತ್ತು ನಿಕೋಬಾರ್ ಮುಂತಾದೆಡೆಗಳಲ್ಲಿ ಈ ಪರಿವಾರದ ಭಾಷೆಗಳನ್ನಾಡುವವರುಂಟು.

ಟಿಬೆಟೊ–ಬರ್ಮನ್ ಭಾಷಾಪರಿವಾರ: ಇದನ್ನು ಏಕಾಕ್ಷರ ಪರಿವಾರವೆಂದೂ ಕರೆಯವರು. ಈ ಪರಿವಾರಕ್ಕೆ ಸೇರಿದ ಭಾಷೆಗಳನ್ನು ಹಿಮಾಲಯನ್ ಭಾಷಾವರ್ಗ (ಉದಾ: ಲೆಪ್ಚ, ಲಹುಲಿ); ಅಸ್ಸಾಮಿ–ಬರ್ಮಿ ಭಾಷಾವರ್ಗ (ಅಕ, ದಫ್ಲ, ಮಿರಿ); ಕುಕಿಚಿನ್ ಭಾಷಾವರ್ಗ (ಖೊಂಗ್‌ಜೈ, ಲುಶಾಯಿ, ಮಣಿಪುರಿ ಇ); ನಾಗಾ ಭಾಷಾವರ್ಗ (ಅಂಗಾಮಿ. ಆಪೊ, ಕೊನ್ಯಕ್) ಭಾಟಿಯ ಭಾಷಾವರ್ಗ ಭಾಟಿಯಾ, ಭೂತಾನಿ, ಲಡಾಕಿ); ನಿಫಾ ಭಾಷಾ ವರ್ಗ (ಮಿನ್ಸೊಂಗ್, ಸಿಮೊಂಗ್) ಮತ್ತು ಬೋಡೋ ಭಾಷಾವರ್ಗ (ಬೋಡೊ, ತ್ರಿಪುರಿ, ಕೊಂಚ್) ಎಂಬ ಭಾಷಾವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಹಿಮಾಚಲಪ್ರದೇಶ, ಸಿಕ್ಕಿಮ್, ಮಣಿಪುರ, ಜಮ್ಮುಕಾಶ್ಮೀರ, ಅಸ್ಸಾಮ್, ತ್ರಿಪುರ, ನಾಗಾಲ್ಯಾಂಡ್ ಮತ್ತಿತರ ಕಡೆಗಳಲ್ಲಿ ಈ ಪರಿವಾರಕ್ಕೆ ಸೇರಿದ ಭಾಷೆಗಳನ್ನಾಡುವ ಜನರಿದ್ದಾರೆ.

ಅವರ್ಗೀಕೃತ ಭಾಷಾಪರಿವಾರ: ಸುಮಾರು ಆರು ನೂರಕ್ಕೂ ಹೆಚ್ಚು ಭಾಷೆ ಮತ್ತು ಉಪಭಾಷೆಗಳು ಈ ಪರಿವಾರಕ್ಕೆ ಸೇರಿವೆಯೆಂದು ಊಹಿಸಲಾಗಿದೆ. ಆದಿಭಾಷೆ, ಆಹಿರಿ, ಕಲ್‌ಬೋಲಿ, ಮಿಜುಯಿ, ಬಕೆರ್ವಾಲಿ, ದೇಸ್ವಾಲಿ, ಬಂಗ್ರೆ, ಸುಲುಂಗ್, ಸರೋದಿ, ಲಾಡ, ತಿರುಗುಲಿ, ಲಂಬಾಣಿ, ಬಂಜಾರಿ, ಊಜ್ಜೈ, ಬೈಸಿಯ, ಗಟ್ರೋ, ಗುಲ್ಗುಲಿಯ, ಝುರ, ಸುದಿಯ, ತೇವಾರಿ, ಕಚ್‌ಬಂದಿ, ಗ್ವೋಲಿ, ಚಂದರಿ, ಬಸೌಲಿ, ಮಸ್ತಿನ್, ಪೊಂದರ, ವಡ್ಡ, ಬಂದಾಲ, ಎತಿ, ಗೊದಲಿ, ಬುರುಷಾಸ್ಕಿ, ಕರೇಣಿ, ಎನ್, ಅಂಡಮಾನಿ, ಮಾನ್ ಮುಂತಾದ ಭಾಷೆಗಳನ್ನು ಅವರ್ಗೀಕೃತ ಭಾಷೆಗಳನ್ನಾಗಿ ಪರಿಗಣಿಸಲಾಗಿದೆ.

ಭಾರತದ ವಿವಿಧ ಭಾಷಾಪರಿವಾರಗಳಿಗೆ ಸೇರಿದ ಅನೇಕ ಭಾಷೆ ಮತ್ತು ಉಪಭಾಷೆಗಳ ಜೊತೆಗೆ ಹಲವಾರು ವಿದೇಶಿ ಭಾಷೆಗಳೂ ಭಾರತದಲ್ಲಿ ಬಳಕೆಯಲ್ಲಿವೆ. ಪಶ್ತೊ, ಅರಾಬಿಕ್, ಬಲೂಚಿ, ಚೀನಿ, ಡೇನಿಷ್, ಡಚ್, ಫ್ರೆಂಚ್, ಜರ್ಮನ್, ರಷ್ಯನ್, ಗ್ರೀಕ್, ಇರಾನಿ, ಇಂಗ್ಲಿಷ್, ಥಾಯ್, ಜಪಾನಿ, ಪೋರ್ಚುಗೀಸ್ ಮುಂತಾದ ಭಾಷೆಗಳನ್ನಾಡುವ ಜನರು ಭಾರತದ ಮುಖ್ಯ ನಗರಗಳಲ್ಲಿ ನೆಲಸಿದ್ದಾರೆ. ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಅಧ್ಯಯನ ಮುಂತಾದ ಕಾರಣಗಳಿಗೇ ಅಲ್ಲದೇ ಭಾರತೀಯ ಸಂಸ್ಕೃತಿಗೆ ಮಾರು ಹೋಗಿ ಇಲ್ಲಿ ನೆಲೆಸಿರುವ ಅನೇಕ ವಿದೇಶಿಯರಿದ್ದಾರೆ.

ಭಾರತದ ಸಾವಿರಾರು ಭಾಷೆ ಉಪಭಾಷೆಗಳ ಪೈಕಿ ಲಿಪಿಯನ್ನ ಹೊಂದಿರುವ ಭಾಷೆಗಳ ಸಂಖ್ಯೆ ಬಲು ಕಡಿಮೆ. ಲಿಪಿಸೌಲಭ್ಯ ಪಡೆಯದಿರುವ ಭಾಷೆಗಳು ಕೇವಲ ಆಡುನುಡಿಗಳಾಗಿವೆ. ಆದ್ದರಿಂದ ಭಾರತದ ಸಂವಿಧಾನ ಮಾನ್ಯ ಮಾಡಿರುವ ಭಾಷೆಗಳು ಇವು: ಅಸ್ಸಾಮಿ, ಉರ್ದು, ಒರಿಯ, ಕನ್ನಡ, ಕಾಶ್ಮೀರಿ, ಗುಜರಾತಿ, ತಮಿಳು, ತೆಲುಗು, ಪಂಜಾಬಿ, ಬಂಗಾಲಿ, ಮರಾಠಿ, ಮಲಯಾಳಮ್, ಸಂಸ್ಕೃತ, ಸಿಂಧಿ ಮತ್ತು ಹಿಂದಿ. ಸೃಜನಶೀಲ ಪ್ರಕ್ರಿಯೆಗೆ ಅವಕಾಶ ಮಾಡಿಕೊಡುವ ದೃಷ್ಟಿಯಿಂದ ಕೇಂದ್ರಸಾಹಿತ್ಯ ಅಕಾಡೆಮಿ ಮೇಲೆ ಹೇಳಿರುವ ಹದಿನೈದು ಭಾಷೆಗಳ ಜೊತೆಗೆ ಇಂಗ್ಲಿಷ್, ಕೊಂಕಣಿ, ಡೋಗ್ರಿ, ನೇಪಾಲಿ, ಮಣಿಪುರಿ, ಮೈಥಿಲಿ ಮತ್ತು ರಾಜಸ್ಥಾನಿ ಭಾಷೆಗಳನ್ನೂ ಮಾನ್ಯ ಮಾಡಿದೆ. ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ, ರಾಜಕೀಯ ಮುಂತಾದ ಎಲ್ಲ ಚಟುವಟಿಕೆಗಳಿಗೂ ಭಾರತದ ರಾಜ್ಯಾಂಗದಲ್ಲಿ ಉಲ್ಲೇಖಿತವಾಗಿರುವ ಭಾಷೆಗಳನ್ನೇ ಹೆಚ್ಚು ಬಳಸಲಾಗುತ್ತಿದೆ. (ಎಂ.ಸಿ.;ಕೆ.ಕೆ.;ಕೆ.ಕೆ.ಜಿ.)

**ಭಾಲ್ಕಿ:** ಬೀದರ್ ಜಿಲ್ಲೆಯ ಒಂದು ತಾಲ್ಲೂಕು; ಮತ್ತು ಅದರ ಆಡಳಿತ ಕೇಂದ್ರ ಪಟ್ಟಣ, ತಾಲ್ಲೂಕಿನಲ್ಲಿರುವ ಗ್ರಾಮಗಳ ಸಂಖ್ಯೆ 122. ಭಾಲ್ಕಿ, ಗುಲ್ಬರ್ಗ, ಖಟಕ್ ಚಿಂಚೋಳಿ, ಲಖನಗಾಂವ್, ನಿಟ್ಟೂರ್, ಸೈಗಾಂವ್ ಇವು ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 11,138 ಚ.ಕಿಮೀ. ಜನಸಂಖ್ಯೆ 257020 (2001).

ಮಾಂಜರಾ ಮತ್ತು ಕಾರಂಜಾ ಇವು ತಾಲ್ಲೂಕಿನ ಮುಖ್ಯ ನದಿಗಳು. ಮಾಂಜರಾ ನದಿ ತಾಲ್ಲೂಕಿನ ಪಶ್ಚಿಮ ಗಡಿಯಲ್ಲಿ ಸ್ವಲ್ಪ ದೂರ ಹರಿದು ಆಮೇಲೆ ತಾಲ್ಲೂಕಿನೊಳಗೆ ಈಶಾನ್ಯ ದಿಕ್ಕಿಗೆ ಹರಿದು ತಾಲ್ಲೂಕಿನ ಉತ್ತರ ಗಡಿಯಾಗಿ ಹರಿಯುತ್ತದೆ. ಮಾಂಜರಾ ನದಿಯ ಉಪನದಿ ಕಾರಂಜಾ. ಇದು ತಾಲ್ಲೂಕಿನ ಆಗ್ನೇಯದಿಂದ ವಾಯವ್ಯದ ಕಡೆಗೆ ಹರಿದು ಮಾಂಜರಾ ನದಿಯನ್ನು ಕೂಡಿಕೊಳ್ಳುತ್ತದೆ. ಕಾರಂಜಾದ ಉಪನದಿ ಚುಳಕಿ. ಇದು ಬಸವಕಲ್ಯಾಣದಿಂದ ಹರಿದು ಬಂದು ಕಾರಂಜಾವನ್ನು ಸೇರುತ್ತದೆ. ತಾಲ್ಲೂಕಿನಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ 92 ಸೆಂಮೀ.

ತಾಲ್ಲೂಕಿನಲ್ಲಿ ಹೆಚ್ಚಾಗಿ ಕೆಂಪು ಮತ್ತು ಕಪ್ಪು ಮಣ್ಣಿನ ನೆಲವಿದೆ. ಅರಣ್ಯಾವೃತ ಪ್ರದೇಶದ ವಿಸ್ತೀರ್ಣ 817 ಹೆ. ಹೆಚ್ಚಿನ ನೀರಾವರಿ ಸೌಲಭ್ಯವಿಲ್ಲ. ಬಾವಿಯಿಂದ ಸ್ವಲ್ಪಮಟ್ಟಿಗೆ ಈ ಸೌಲಭ್ಯ ಒದಗಿದೆ. ಕಾರಂಜಾ ನದಿ ಯೋಜನೆಯಿಂದ ಇಲ್ಲಿಯ ಭೂಮಿ ವ್ಯಾಪಕವಾಗಿ ನೀರಾವರಿಗೆ ಒಳಪಡುವ ನಿರೀಕ್ಷೆಯಿದೆ. ತಾಲ್ಲೂಕಿನ ಬೆಳೆಗಳು ಜೋಳ, ನೆಲಗಡಲೆ, ಕಡಲೆ, ತೊಗರಿ, ಬತ್ತ ಮತ್ತು ಹತ್ತಿ.

ಇಲ್ಲಿಯ ರಸ್ತೆಗಳ ಉದ್ದ 282 ಕಿಮೀ ಬೀದರ್–ಪರ್ಲಿ ರಸ್ತೆ ಮುಖ್ಯವಾದ್ದು. ಹೈದರಾಬಾದ್–ಬೀದರ್–ಪರ್ಲಿ ರೈಲುಮಾರ್ಗ ಈ ತಾಲ್ಲೂಕಿನ ಮೂಲಕ ಹಾದು ಹೋಗುತ್ತದೆ.

ಆಡಳಿತ ಕೇಂದ್ರ ಪಟ್ಟಣ ಭಾಲ್ಕಿ. ಇದು ಬೀದರ್‌ನ ವಾಯವ್ಯದಲ್ಲಿ 45 ಕಿಮೀ ದೂರದಲ್ಲಿದೆ. ಜನಸಂಖ್ಯೆ 35102 (2001). (ವಿ.ಕೆ.ಯು.ಎಸ್.)

**ಭಾವನಗರ:** ಭಾರತದ ಗುಜರಾತ್ ರಾಜ್ಯದ ಒಂದು ಜಿಲ್ಲೆ ಮತ್ತು ಜಿಲ್ಲಾ ಆಡಳಿತ ಕೇಂದ್ರ ನಗರ. ಜಿಲ್ಲೆಯ ಪೂರ್ವ ಮತ್ತು ದಕ್ಷಿಣಕ್ಕೆ ಅರಬ್ಬೀ ಸಮುದ್ರ (ಕ್ಯಾಂಬೇ ಖಾರಿ), ಪಶ್ಚಿಮಕ್ಕೆ ಅಮ್ರೇಲಿ, ವಾಯವ್ಯಕ್ಕೆ ರಾಜಕೋಟೆ ಮತ್ತು ಉತ್ತರಕ್ಕೆ ಅಹಮದಾಬಾದ್ ಹಾಗೂ ಸುರೇಂದ್ರನಗರ ಜಿಲ್ಲೆಗಳಿವೆ. ಈ ಜಿಲ್ಲೆ ಉ.ಅ. $20^{0}23'$–$22^{0}18''$ ಪೂ. ರೇ. $71^{0}15'$–$73^{0}18'$ರಲ್ಲಿದೆ. ಜಿಲ್ಲಾ ವಿಸ್ತೀರ್ಣ 11,155 ಚ.ಕಿಮೀ. ಜನಸಂಖ್ಯೆ 21,67,360 (2001).

ಈ ಜಿಲ್ಲೆಯ ಹವಾಮಾನ ಮಿಶ್ರರೂಪದ್ದು, ಕರಾವಳಿ ತೀರದಲ್ಲಿ ಹಿತವಾದ ಹವಾಮಾನ ಇದ್ದರೆ, ಒಳನಾಡಿನಲ್ಲಿ ಶುಷ್ಕ ಮತ್ತು ಉಷ್ಣಹವಾಗುಣವಿರುತ್ತದೆ. ವಾರ್ಷಿಕ ಸು. 61 ಸೆಂಮೀ ಮಳೆ ಬೀಳುತ್ತದೆ. ಕೆಲವೆಡೆ ಉಪ್ಪು ಮಿಶ್ರಿತ ಭೂಮಿ, ಮತ್ತೆ ಕೆಲವೆಡೆ ಫಲವತ್ತಾದ ಕಪ್ಪು ಮಣ್ಣಿನ ಬಯಲು. ಸಿಹೋರ್, ಖೊಕ್ರಾ, ಉಂದ್ ಮುಂತಾದ ಬೆಟ್ಟಸಾಲುಗಳು ಈ ಜಿಲ್ಲೆಯಲ್ಲಿ ಸಾಗಿವೆ. ಶತ್ರುಂಜೀ, ಬಗದಾ ಹಾಗೂ ಮಾಲನ ಇಲ್ಲಿಯ ಪ್ರಮುಖ ನದಿಗಳು. ಗಡೇಚಿ ನದಿಗೆ ಕಟ್ಟಿದ ಒಡ್ಡಿನಿಂದಾಗಿ ಸು. 8 ಕಿಮೀ ಸುತ್ತಳತೆಯ ಸೊಗಸಾದ ಸರೋವರವೊಂದು ರೂಪುಗೊಂಡಿದೆ. ಇಲ್ಲಿಯ ಪ್ರಮುಖ ಬೆಳೆ ಹತ್ತಿ; ಧಾನ್ಯಗಳು, ಕಾಡುಹಣ್ಣುಗಳು, ಬೆಳೆಯುತ್ತವೆ. ಉಪ್ಪು, ಎಣ್ಣೆ, ಹಿತ್ತಾಳೆಯ ಪಾತ್ರೆಗಳು, ಬಟ್ಟೆ ಮುಂತಾದವಕ್ಕೆ ಸಂಬಂಧಿಸಿದ ಉದ್ಯೋಗಗಳು ಅಧಿಕ. ಉತ್ತಮ ತೆರನ ಬಟ್ಟೆ ತಯಾರಾಗುತ್ತದೆ. ಈ ಜಿಲ್ಲೆಯಲ್ಲಿ ಬೆಲೆಬಾಳುವ ಕಲ್ಲುಗಳು ಸಿಗುತ್ತವೆ. ಇವನ್ನು ಸ್ಥಳೀಯ ಶಿಲ್ಪಿಗಳು ವಿವಿಧ ಆಕಾರ ಕೊಟ್ಟು ವಿದೇಶಗಳಿಗೆ ಕಳುಹಿಸುವರು. ಜಿಲ್ಲೆಯಲ್ಲಿ ಜವಳಿ ಕೈಗಾರಿಕೆ ಪ್ರಮುಖವಾದದ್ದು. ಜಿಲ್ಲೆಯಲ್ಲಿ ಉತ್ತಮ ರಸ್ತೆ ಸಂಪರ್ಕವಿದೆ. ರೈಲು, ವಿಮಾನ ಸಂಪರ್ಕವಿದೆ. ವಿದ್ಯುತ್, ಅಂಚೆ, ತಂತಿ ಮುಂತಾದ ಆಧುನಿಕ ಸೌಕರ್ಯಗಳೂ ಶಾಲಾ ಕಾಲೇಜುಗಳೂ ಆಸ್ಪತ್ರೆ, ಗ್ರಂಥಭಂಡಾರ ಮುಂತಾದವೂ ಇವೆ.

ಭಾವನಗರ ಜಿಲ್ಲೆಯ ಆಡಳಿತಕೇಂದ್ರ. ಕೈಗಾರಿಕೆ ಮತ್ತು ಬಂದರು ನಗರ. ಉ. ಅ. $21^0 45'$. ಪೂ.ರೇ. $72^0 12'$ರಲ್ಲಿರುವ ನಗರವನ್ನು 1723ರಲ್ಲಿ ಭಾವುಸಿಂಘ್‌ಜೀ ಸ್ಥಾಪಿಸಿದ್ದರಿಂದ ಇದಕ್ಕೆ ಭಾವನಗರವೆಂಬ ಹೆಸರು ಬಂತೆನ್ನುವರು. ಹತ್ತಿವ್ಯಾಪಾರಕ್ಕೆ ಮತ್ತು ಕೈಮಗ್ಗದ ಬಟ್ಟೆಗಳಿಗೆ ಈ ನಗರ ಪ್ರಸಿದ್ಧ. ಲೋಹದ ವಸ್ತುಗಳು, ಹಿತ್ತಾಳೆ ಹಾಗೂ ಕಬ್ಬಿಣದ ಪೆಟ್ಟಿಗೆಗಳು, ಬಂಡಿಗಳು, ಹಂಚು, ಇಟ್ಟಿಗೆಗಳು ಇಲ್ಲಿ ತಯಾರಾಗುತ್ತವೆ. ಇಲ್ಲಿಯ ಕಲ್ಲುಸಕ್ಕರೆ ಹಾಗೂ ರುಮಾಲು (ಪೇಟಾ) ಹೆಸರುಗಳಿಸಿವೆ. ಗೌರಿಶಂಖರ ಸರೋವರ ಅಥವಾ ಗಂಗಾ ತಲಾಬ್ ಇಡೀ ನಗರಕ್ಕೆ ನೀರುಸರಬರಾಜು ಮಾಡುತ್ತದೆ. ಇದೊಂದು ಸೊಗಸಾದ ವಿಹಾರ ಕೇಂದ್ರ. (ಎಚ್.ಎಂ.ಎನ್.ಆರ್)

**ಭಾಷಾ ಭೂಗೋಳವಿಜ್ಞಾನ:** ಸಾಂಸ್ಕೃತಿಕ ಭೂಗೋಳವಿಜ್ಞಾನದ ಒಂದು ಶಾಖೆ ಲಿಂಗ್ವಿಸ್ಟಿಕ್ ಜಿಯಾಗ್ರಫಿ. ಇದು ಪ್ರಪಂಚ ಅಥವಾ ಯಾವುದೊಂದು ದೇಶ ಅಥವಾ ರಾಜ್ಯದ ಭಾಷೆಗಳ ಉಗಮ, ಬೆಳೆವಣಿಗೆ ಮತ್ತು ಹಂಚಿಕೆಗಳನ್ನು ವಿವರಿಸುತ್ತದೆ.

ಭಾಷಾ ವಿಜ್ಞಾನಿಗಳ ಪ್ರಕಾರ ಭಾಷೆ ಅಂದರೆ ಜನರು ಆಡುವ ಮಾತು, ಸಮಾಜದ ಅಥವಾ ಸಮುದಾಯದ ವ್ಯಕ್ತಿಗಳು ತಮ್ಮ ವಿಚಾರಗಳನ್ನು ಬೇರೆಯವರಿಗೆ ವ್ಯಕ್ತಪಡಿಸಲು ಉಪಯೋಗಿಸುವ ಶಬ್ದಗಳ ವ್ಯವಸ್ಥೆ ಭಾಷೆ ಎಂದೆನಿಸುವುದು.

ಭಾಷೆ ಸಂಸ್ಕೃತಿಯ ಮೂಲ ಅಭಿವ್ಯಕ್ತಿಯಾಗಿದೆ. ಅದು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಸಂಸ್ಕೃತಿಯು ಭಾಷೆಯ ಮಾಧ್ಯಮದ ಮೂಲಕ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹಸ್ತಾಂತರಗೊಳ್ಳುವುದು. ಭಾಷಾ ಭೂಗೋಳವಿಜ್ಞಾನ ಭಾಷೆಗಳ ಉಗಮ, ಬೆಳೆವಣಿಗೆ, ಭಾಷಾ ಪರಿವಾರಗಳು ಮತ್ತು ಅವು ಒಳಗೊಂಡ ಭಾಷೆಗಳು ಹಾಗೂ ಅವುಗಳ ಹಂಚಿಕೆಗಳನ್ನು ವಿವರಿಸುತ್ತದೆ.

ಪ್ರಪಂಚದಲ್ಲಿ ಸಾವಿರಾರು ಭಾಷೆಗಳು ಮತ್ತು ಉಪಭಾಷೆಗಳಿವೆ. ಅವುಗಳನ್ನು ಉತ್ಪತ್ತಿಯ ಆಧಾರದ ಮೇಲೆ ಭಾಷಾ ಪರಿವಾರಗಳಾಗಿ (ಲ್ಯಾಂಗ್ವೇಜ್ ಫ್ಯಾಮಿಲೀಸ್) ವಿಂಗಡಿಸಲಾಗಿದೆ. ಅನೇಕ ಭಾಷೆಗಳ ದೊಡ್ಡ ಸಮೂಹವೇ ಭಾಷಾ ಪರಿವಾರವಾಗಿದೆ. ಉದಾಹರಣೆಗೆ ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಭಾಷೆಗಳ ಸಮೂಹವೇ ದ್ರಾವಿಡ ಭಾಷಾ ಪರಿವಾರವಾಗಿದೆ. ಹೀಗೆ ಪ್ರಪಂಚದ ಪ್ರಮುಖ ಭಾಷೆಗಳನ್ನು ಹತ್ತು ಭಾಷಾ ಪರಿವಾರಗಳಾಗಿ ಅಥವಾ ಗುಂಪುಗಳಾಗಿ ವಿಂಗಡಿಸಲಾಗಿದೆ. 1) ಇಂಡೊ ಯುರೋಪಿಯನ್ 2) ಹೆಮಿಟೊ ಸೆಮಿಟಿಕ್ 3) ಸಿನೊ ಟಿಬೇಟಿಯನ್ 4) ದ್ರಾವಿಡಿಯನ್ 5) ಯೂರಲ್ ಅಲ್ಟಾಯಿಕ್ 6) ಮಲಯೊ ಪಾಲಿನೇಷಿಯನ್ 7) ಆಫ್ರಿಕನ್ ನೀಗ್ರೋ 8) ಅಮೆರಿಕನ್ ಇಂಡಿಯನ್ 9) ಕಕೇಷಿಯನ್ ಮತ್ತು 10) ಆಸ್ಟ್ರೊ ಏಷ್ಯಾಟಿಕ್.

1) ಇಂಡೊ ಯುರೋಪಿಯನ್ ಭಾಷಾ ಪರಿವಾರ ಪ್ರಪಂಚದಲ್ಲೇ ಅತಿ ದೊಡ್ಡದಾದ ಮತ್ತು ವ್ಯಾಪಕವಾಗಿ ಹರಡಿದ ಭಾಷಾ ಪರಿವಾರ. ಇದು ಯುರೋಪ್, ರಷ್ಯ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಭಾರತ ಮತ್ತು ನೈರುತ್ಯ ಏಷ್ಯದ ಭಾಗದಲ್ಲಿ ಪ್ರಮುಖವಾಗಿದೆ. ಇಂಡೊ ಯುರೋಪಿಯನ್ ಭಾಷಾ ಪರಿವಾರವನ್ನು ಮತ್ತೆ ಐದು ಭಾಷಾ ಉಪ ಪರಿವಾರಗಳನ್ನಾಗಿ ವಿಂಗಡಿಸಲಾಗಿದೆ. ಅವು ಜರ್ಮನಿಕ್, ರೋಮನ್, ಬಾಲ್ಟೊ ಸ್ಲಾವಿಕ್, ಇಂಡೊ ಇರಾನಿಯನ್ ಮತ್ತು ಸೆಲ್ಟಿಕ್. ಜರ್ಮನಿಕ್ ಉಪ ಪರಿವಾರ ಇಂಗ್ಲಿಷ್, ಜರ್ಮನ್, ಸ್ವೀಡಿಷ್, ಡೇನಿಷ್, ನಾರ್ವೇಜಿಯನ್ ಮತ್ತು ಐಸ್‌ಲೆಂಡಿಕ್ ಭಾಷೆಗಳನ್ನೂ ರೋಮನ್ ಉಪ ಪರಿವಾರವು ಫ್ರೆಂಚ್, ಸ್ಪ್ಯಾನಿಷ್, ಪೋರ್ಚುಗೀಸ್, ಇಟಾಲಿಯನ್ ಮತ್ತು ರೊಮೇನಿಯನ್ ಭಾಷೆಗಳನ್ನೂ, ಬಾಲ್ಟೊ ಸ್ಲಾವಿಕ್ ಉಪ ಪರಿವಾರವು ರಷ್ಯನ್, ಪೋಲಿಷ್, ಚೆಕ್, ಸ್ಲೊವಾಕ್, ಸರ್ಬೊಕ್ರೊಷಿಯನ್, ಬಲ್ಗೇರಿಯನ್ ಮತ್ತು ಉಕ್ರೇನಿಯನ್ ಭಾಷೆಗಳನ್ನೂ ಇಂಡೊ ಇರಾನಿಯನ್ ಉಪ ಪರಿವಾರವು ಇರಾನಿಯನ್ (ಪರ್ಷಿಯನ್) ಮತ್ತು ಇಂಡಿಕ್ (ಹಿಂದಿ, ಉರ್ದು, ಬಂಗಾಲಿ, ಬಿಹಾರಿ, ಅಸ್ಸಾಮಿ, ಒರಿಯ, ಮರಾಠಿ, ಪಂಜಾಬಿ, ಕಾಶ್ಮೀರಿ, ಗುಜರಾತಿ ಮತ್ತು ರಾಜಸ್ತಾನಿ) ಭಾಷೆಗಳನ್ನು ಹಾಗೂ ಸೆಲ್ಟಿಕ್ ಉಪಪರಿವಾರವು ಗೇಲಿಕ್, ವೇಲ್ಸ್ ಮೊದಲಾದ ಭಾಷೆಗಳನ್ನು ಒಳಗೊಂಡಿದೆ.

2) ಹೆಮಿಟೊ–ಸೆಮಿಟಿಕ್ ಭಾಷಾ ಪರಿವಾರ ಎರಡನೆಯ ಮಹತ್ವದ ಭಾಷಾ ಪರಿವಾರವಾಗಿದೆ. ಹೆಮಿಟಿಕ್ ಭಾಷೆಗಳು ಪೂರ್ವ ಮತ್ತು ಉತ್ತರ ಆಫ್ರಿಕಾದ ಅನೇಕ ದೇಶಗಳಲ್ಲಿ ಹರಡಿವೆ. ಸೆಮಿಟಿಕ್ ಭಾಷೆಗಳು ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಅನುಯಾಯಿಗಳ ಭಾಷೆಗಳಾಗಿವೆ. ಅವುಗಳಲ್ಲಿ ಅರಿಬಿಲಿಕ್, ಲಿಬ್ಯನ್, ಸೋಮಾಲಿ ಅಹ್ಮರಿಕ್ (ಇಥಿಯೋಪಿಯ) ಮತ್ತು ಹೀಬ್ರು (ಇಸ್ರೇಲ್) ಭಾಷೆಗಳು ಪ್ರಮುಖವಾಗಿವೆ. ಅವು ಆಫ್ರಿಕ ಮತ್ತು ಪಶ್ಚಿಮ ಏಷ್ಯದ ಅನೇಕ ದೇಶಗಳಲ್ಲಿ ಪ್ರಚಲಿತವಿರುತ್ತವೆ.

3) ಸಿನೊ ಟಿಬೇಟಿಯನ್ ಭಾಷಾ ಪರಿವಾರ ಚೀನಿ, ಟಿಬೇಟಿಯನ್, ಬರ್ಮೀಸ್, ಥಾಯಿ, ಜಪಾನೀಸ್, ಕೊರಿಯನ್ ಮೊದಲಾದ ಭಾಷೆಗಳನ್ನು ಒಳಗೊಂಡಿರುತ್ತದೆ. ಅದು ಪೂರ್ವ ಮತ್ತು ಆಗ್ನೇಯ ಏಷ್ಯದ ಅನೇಕ ದೇಶಗಳಲ್ಲಿ ಪ್ರಚಲಿತವಿರುತ್ತದೆ.

4) ದ್ರಾವಿಡಿಯನ್ ಭಾಷಾ ಪರಿವಾರ ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ತಮಿಳು, ತೆಲುಗು, ಕನ್ನಡ ಮತ್ತು ಮಲೆಯಾಳಂ ಮೊದಲಾದ ಭಾಷೆಗಳನ್ನು ಒಳಗೊಂಡಿರುತ್ತದೆ.

5) ಯೂರಲ್ ಅಲ್ಟಾಯಿಕ್ ಭಾಷಾ ಪರಿವಾರ ಫಿನಿಷ್, ಟರ್ಕಿಷ್, ಹಂಗೇರಿಯನ್, ಮಂಗೋಲ್ ಮತ್ತು ಮಂಚು ಭಾಷೆಗಳನ್ನು ಒಳಗೊಂಡಿರುತ್ತದೆ. ಯುರೇಷ್ಯದ ಮರುಭೂಮಿ ತಂಡ್ರ ಮತ್ತು ತೈಗ ಪ್ರದೇಶಗಳಲ್ಲಿ ಪ್ರಚಲಿತವಿರುತ್ತದೆ.

6) ಮಲಯೊ ಪಾಲಿನೇಷ್ಯನ್ ಭಾಷಾ ಪರಿವಾರದಲ್ಲಿ ಮಾವೋರಿ, ಮಲಗಾಸಿ, ಮಲಯ, ಇಂಡೋನೇಷ್ಯನ್ ಮತ್ತು ಟಗಲಾಗ್ ಭಾಷೆಗಳು ಸಮಾವೇಶವಾಗುತ್ತವೆ. ಈ ಭಾಷೆಗಳು ಪಶ್ಚಿಮದಿಂದ ಪೂರ್ವಕ್ಕೆ ಮಡಗಾಸ್ಕರ್ ಹಾಗೂ ಇಂಡೋನೇಷ್ಯದೊಳಗಿಂದ ಪೆಸಿಫಿಕ್ ಮಹಾಸಾಗರದಲ್ಲಿನ ಹವಾಯಿ ದ್ವೀಪಗಳವರೆಗೂ ಹಾಗೂ ದಕ್ಷಿಣೋತ್ತರವಾಗಿ ನ್ಯೂಜಿಲೆಂಡಿನಿಂದ ತೈವಾನ್‌ದವರೆಗೂ ಹರಡಿರುತ್ತದೆ.

7) ಆಫ್ರಿಕನ್ – ನೀಗ್ರೊ ಭಾಷಾ ಪರಿವಾರ ಸುಡಾನಿಕ್, ನೈಜರ್, ಬಂಟು, ಹೌಸಾ ಮೊದಲಾದ ಆಫ್ರಿಕದ ಮೂಲ ಭಾಷೆಗಳನ್ನು ಒಳಗೊಂಡಿರುತ್ತದೆ. ಈ ಭಾಷೆಗಳು ಉತ್ತರದಲ್ಲಿ ಸಹರಾದಿಂದ ದಕ್ಷಿಣದಲ್ಲಿ ಕಲಹರಿ ಮರುಭೂಮಿವರೆಗೂ ಹರಡಿರುತ್ತದೆ.

8) ಅಮೆರಿಕನ್ ಇಂಡಿಯನ್ ಭಾಷಾ ಪರಿವಾರದಲ್ಲಿ ರೆಡ್ ಇಂಡಿಯನ್, ಎಸ್ಕಿಮೊ ಮತ್ತು ಅಲ್ಯೂಟ್ಸ್ ಜನರ ಭಾಷೆಗಳು ಸೇರುತ್ತವೆ. ಇವು ಮುಖ್ಯವಾಗಿ ಉತ್ತರ ಅಮೆರಿಕದ ಧ್ರುವ ಪ್ರದೇಶ (ಅಲಾಸ್ಕ, ಉತ್ತರ ಕೆನಡ ಮತ್ತು ಗ್ರೀನ್‌ಲೆಂಡ್) ಗಳಲ್ಲಿ ಹರಡಿವೆ.

9) ಕಕೇಷಿಯನ್ ಭಾಷಾ ಪರಿವಾರ ಜಾರ್ಜಿಯನ್ ಮತ್ತು ಸರ್ಕ್ಯೂವೋಷಿಯನ್‌ಗಳಂತಹ ಅನೇಕ ಚಿಕ್ಕಪುಟ್ಟ ಭಾಷೆಗಳನ್ನು ಒಳಗೊಂಡಿದೆ.

10) ಆಸ್ಟ್ರೋ–ಏಷ್ಯಾಟಿಕ್ ಭಾಷಾ ಪರಿವಾರ ದಕ್ಷಿಣ ಮತ್ತು ಆಗ್ನೇಯ ಏಷ್ಯದಲ್ಲಿ ಸು. 150 ಭಾಷೆಗಳನ್ನೊಳಗೊಂಡ ಒಂದು ಭಾಷಾ ಪರಿವಾರವಾಗಿದೆ. ಕೆಲವು ವಿದ್ವಾಂಸರು ಇದನ್ನು ಮುಂಡ ಮತ್ತು ಖ್ಮೇರ್ ಎಂಬ ಎರಡು ಉಪಪರಿವಾರಗಳನ್ನಾಗಿ ವಿಂಗಡಿಸಿದ್ದಾರೆ. ಭಾರತ, ಆಸ್ಟ್ರೇಲಿಯ, ಟಾಸ್ಮೇನಿಯ ಮತ್ತು ನ್ಯೂಗಿನಿಯಗಳ ಆದಿವಾಸಿ ಭಾಷೆಗಳು ಈ ಭಾಷಾ ಪರಿವಾರದಲ್ಲಿ ಸಮಾವೇಶವಾಗುತ್ತವೆ. ಜಪಾನಿನ ಐದು ಭಾಷೆ (ಹೊಕ್ಕಾಯಿಡೊ), ಸೈಬೀರಿಯ ಮತ್ತು ಕಾಮಚಟ್ಕಾಗಳ ಹೈಪರ್ಬೋರಿಯನ್ ಭಾಷೆಗಳು ಈ ಭಾಷಾ ಪರಿವಾರಕ್ಕೆ ಸೇರಿದ ಇತರ ಚಿಕ್ಕ ಪುಟ್ಟ ಭಾಷೆಗಳಾಗಿವೆ.

ಪ್ರಪಂಚದಲ್ಲಿ ವ್ಯಾಪಕವಾಗಿ ಮಾತನಾಡಲಾಗುವ ಭಾಷೆಗಳು

| | | | |
|---|---|---|---|
| ಇಂಗ್ಲಿಷ್ | 1,000 | 16 | ಇಂಡೊ–ಯುರೋಪಿಯನ್ (ಜರ್ಮನಿಕ್) |
| ಮಂದಾರಿನ್ (ಚೀನಿ) | 1,000 | 16 | ಸಿನೊ–ಟಿಬೆಟಿಯನ್ (ಚೀನಿ) |
| ಹಿಂದಿ/ಉರ್ದು | 900 | 15 | ಇಂಡೊ–ಯುರೋಪಿಯನ್ (ಇಂಡೊ–ಆರ್ಯನ್) |
| ಸ್ಪಾನಿಷ್ | 450 | 7 | ಇಂಡೊ–ಯುರೋಪಿಯನ್ (ರೋಮನ್ಸ್) |
| ರಷ್ಯನ್/ಬೈಲೊರಷ್ಯನ್ | 320 | 5 | ಇಂಡೊ–ಯುರೋಪಿಯನ್ (ಸ್ಲಾವಿಕ್) |
| ಅರೇಬಿಕ್ | 250 | 4 | ಆಫ್ರೊ–ಏಷ್ಯಾಟಿಕ್ (ಸೆಮಿಟಿಕ್) |
| ಬಂಗಾಲಿ (ಸಿಲ್ಹೆಟಿ) | 250 | 4 | ಇಂಡೊ ಯುರೋಪಿಯನ್ (ಇಂಡೊ–ಆರ್ಯನ್) |
| ಮಲಯ/ಇಂಡೊನೇಷ್ಯನ್ | 200 | 3 | ಆಸ್ಟ್ರೋನೇಷ್ಯನ್ (ಮಲಯೊ ಪಾಲಿನೇಷ್ಯನ್) |
| ಪೋರ್ಚುಗೀಸ್ | 200 | 3 | ಇಂಡೊ–ಯುರೋಪಿಯನ್ (ರೋಮನ್ಸ್) |
| ಜಪಾನೀಸ್ | 130 | 2 | ಸಿನೊ–ಟಿಬೆಟನ್ |
| ಫ್ರೆಂಚ್ | 125 | 2 | ಇಂಡೊ–ಯುರೋಪಿಯನ್ (ರೋಮನ್ಸ್) |
| ಜರ್ಮನ್ | 125 | 2 | ಇಂಡೊ–ಯುರೋಪಿಯನ್ (ಜರ್ಮನಿಕ್) |
| ಥಾಯಿ/ಲಾವೊ | 90 | 1 | ಸಿನೊ–ಟಿಬೆಟನ್ |
| ಪಂಜಾಬಿ | 85 | 1 | ಇಂಡೊ–ಯುರೋಪಿಯನ್ (ಇಂಡೊ–ಆರ್ಯನ್) |
| ವು(ಚೀನಿ) | 85 | 1 | ಸಿನೊ–ಟಿಬೆಟನ್ (ಚೀನಿ) |
| ಜಪಾನೀಸ್ | 80 | 1 | ಆಸ್ಟ್ರೋನೇಷ್ಯನ್ (ಮಲಯೊ–ಪಾಲಿನೇಷ್ಯನ್) |

| | | | |
|---|---|---|---|
| ಮರಾಠಿ | 80 | 1 | ಇಂಡೊ–ಯುರೋಪಿಯನ್ (ಇಂಡೊ–ಆರ್ಯನ್) |
| ಟರ್ಕಿಷ್/ಅಜೇರಿ/ತುರ್ಕ್ಮೆನ್ | 80 | 1 | ಯೂರಲ್ – ಅಲ್ಟಾಯಿಕ್ (ಟರ್ಕಿಸ್) |
| ಕೊರಿಯನ್ | 75 | 1 | ಸಿನೊ–ಟಿಬೇಟಿಯನ್ (ಕೊರಿಯನ್) |
| ವಿಯಟ್ನಾಮಿಸ್ | 75 | 1 | ಮೊನ್–ಖ್ಮೇರ್ (ವಿಯಟಿಕ್) |
| ಕ್ಯಾಂಟೊನೀಸ್ | 70 | 1 | ಸಿನೊ–ಟಿಬೆಟನ್ (ಚೀನಿ) |
| ಇಟಾಲಿಯನ್ | 70 | 1 | ಇಂಡೊ–ಯುರೋಪಿಯನ್ (ರೋಮನ್ಸ್) |
| ತಮಿಳು | 70 | 1 | ದ್ರವಿಡಿಯನ್ |
| ತೆಲುಗು | 70 | 1 | ದ್ರವಿಡಿಯನ್ |
| ಉಕ್ರೇನಿಯನ್ | 65 | 1 | ಇಂಡೊ–ಯುರೋಪಿಯನ್ (ಸ್ಲಾವಿಕ್) |
| ಭೋಜಪುರಿ/ಮೈಥಿಲಿ | 60 | 1 | ಇಂಡೊ–ಯುರೋಪಿಯನ್ (ಇಂಡೊ–ಆರ್ಯನ್) |
| ಪರ್ಷಿಯನ್/ತಜಿಕ್ | 60 | 1 | ಇಂಡೊ ಯುರೋಪಿಯನ್ (ಇರಾನಿಯನ್) |
| ಸ್ವಾಹಿಲಿ | 60 | 1 | ಆಫ್ರೋ–ಏಷ್ಯಾಟಿಕ್ (ನೈಜರ್–ಕಾಂಗೊ) |
| ತಗಲಾಗ್ | 60 | 1 | ಆಸ್ಟ್ರೋನೇಷ್ಯನ್ (ಮಲಯೊ–ಪಾಲಿನೇಷ್ಯನ್) |

ಭಾರತೀಯ ಭಾಷೆಗಳನ್ನು ನಾಲ್ಕು ಭಾಷಾ ಪರಿವಾರಗಳಲ್ಲಿ ವಿಂಗಡಿಸಲಾಗಿದೆ. ಅವು:1) ಇಂಡೊ ಯುರೋಪಿನ್ (ಇಂಡೊ–ಆರ್ಯನ್ ಅಥವಾ ಇಂಡಿಕ್) 2) ದ್ರವಿಡಿಯನ್, 3) ಸಿನೊ–ಟಿಬೆಟನ್ ಮತ್ತು 4) ಆಸ್ಟ್ರೋ ಏಷ್ಯಾಟಿಕ್, ಸಂಸ್ಕೃತ, ಪಾಲಿ, ಹಿಂದಿ, ಉರ್ದು, ಭೋಜಪುರಿ, ಮೈಥಿಲಿ, ಮಗಧಿ, ಹರ್ಯಾನ್ವಿ, ಮಾರ್ವಾರಿ, ಮಾಳ್ವಿ, ಪಹಾರಿ, ಅಸ್ಸಾಮಿ, ಬಂಗಾಲಿ, ಒರಿಯ, ಮರಾಠಿ, ಗುಜರಾತಿ, ಕೊಂಕಣಿ, ಸಿಂಧಿ, ಪಂಜಾಬಿ, ಡೋಗ್ರಿ, ರಾಜಸ್ತಾನಿ, ಬ್ರಜ, ಅವಧಿ, ಕಾಶ್ಮೀರಿ ಮೊದಲಾದ ಭಾಷೆಗಳು ಇಂಡೊ ಆರ್ಯನ್ ಪರಿವಾರದಲ್ಲಿ ಸಮಾವೇಶವಾಗುತ್ತವೆ. ಇವು ಉತ್ತರ ಭಾರತದಲ್ಲಿ ಜಮ್ಮು ಮತ್ತು ಕಾಶ್ಮೀರದಿಂದ ಮಧ್ಯ ಪ್ರದೇಶದವರೆಗೆ ಹರಡಿದ್ದು ಸು. 80 ಕೋಟಿಗಳಿಗಿಂತಲೂ ಹೆಚ್ಚು ಜನರು ಈ ಭಾಷೆಗಳನ್ನು ಮಾತನಾಡುತ್ತಾರೆ. ಇವುಗಳಲ್ಲಿ ವಿಶೇಷವಾಗಿ ಹಿಂದಿ ಭಾಷೆಯನ್ನು ಸು. 23 ಕೋಟಿಗಳಿಗಿಂತಲೂ ಹೆಚ್ಚು ಜನರು ಮಾತಾಡುವರು. ದ್ರಾವಿಡಿಯನ್ ಭಾಷೆಗಳು ಇಂಡೊ ಆರ್ಯನ್ ಭಾಷೆಗಳ ಪ್ರದೇಶಕ್ಕಿಂತ ಮೊದಲು ಭಾರತದ ಮೂಲ ಭಾಷೆಗಳಾಗಿದ್ದವೆಂದು ಹೇಳಲಾಗುತ್ತದೆ. ಸಿನೊ ಟಿಬೆಟಿಯನ್ ಭಾಷಾ ಪರಿವಾರ ಬೋಡೊ, ಗಾರೊ, ನಾಗಾ, ಕುಕಿ, ಚಿನ್, ಲೆಪ್ಚಾ, ಮಣಿಪುರಿ, ನೇಪಾಲಿ ಮೊದಲಾದ ಭಾಷೆಗಳನ್ನು ಒಳಗೊಂಡಿದೆ. ಈ ಭಾಷೆಗಳು ವಿಶೇಷವಾಗಿ ಈಶಾನ್ಯ ಭಾರತದಲ್ಲಿ ಪ್ರಚಲಿತವಿರುತ್ತವೆ. ಆಸ್ಟ್ರೋ–ಏಷ್ಯಾಟಿಕ್ ಭಾಷಾ ಪರಿವಾರ ಮುಂಡಾ ಮತ್ತು ಮಾನ್ ಖ್ಮೇರ್ ಉಪಪರಿವಾರಗಳನ್ನೊಳಗೊಂಡಿದೆ. ಖಾಸಿ, ನಿಕೋಬಾರಿ ಮುಂಡಾ, ಸಂತಾಲಿ, ಮುಂಡಾರಿ, ಕೊರ್ಕು ಮೊದಲಾದ ಭಾಷೆಗಳು ಆಸ್ಟ್ರೋ–ಏಷ್ಯಟಿಕ್ ಭಾಷಾ ಪರಿವಾರದಲ್ಲಿ ಸಮಾವೇಶವಾಗುತ್ತವೆ.

1991ರ ಭಾಷಾ ಸರ್ವೇಕ್ಷಣದ ಪ್ರಕಾರ ಭಾರತದಲ್ಲಿ 179 ಭಾಷೆಗಳು ಮತ್ತು 544 ಉಪಭಾಷೆಗಳಿವೆ. ಮತ್ತೆ ಕೆಲವು ದಾಖಲೆಗಳ ಪ್ರಕಾರ ಭಾರತದಲ್ಲಿ 1652 ವಿವಿಧ ಭಾಷೆಗಳು ಮತ್ತು ಉಪಭಾಷೆಗಳಿವೆ. ಆದರೆ ಭಾರತದ ಸಂವಿಧಾನದಲ್ಲಿ 22 ಭಾಷೆಗಳನ್ನು ಆಡಳಿತ ಭಾಷೆಗಳನ್ನಾಗಿ ಗುರುತಿಸಲಾಗಿದೆ. ಎಂಟನೆಯ ಪರಿಚ್ಛೇದ ಮೂಲತಃ 14 ಪ್ರಾದೇಶಿಕ ಭಾಷೆಗಳನ್ನು ಒಳಗೊಂಡಿತ್ತು. ಅವು: 1) ಅಸ್ಸಾಮಿ 2) ಬಂಗಾಲಿ 3) ಗುಜರಾತಿ 4) ಹಿಂದಿ 5) ಕನ್ನಡ 6) ಕಾಶ್ಮೀರಿ 7) ಮಲಯಾಳಂ 8) ಮರಾಠಿ 9) ಒರಿಯಾ 10) ಪಂಜಾಬಿ 11) ಸಂಸ್ಕೃತ 12) ತಮಿಳು 13) ತೆಲುಗು ಮತ್ತು 14) ಉರ್ದು. 1962 ರಲ್ಲಿ ಸಿಂಧಿ ಭಾಷೆಯನ್ನು ಸೇರಿಸಲಾಯಿತು. 1992 ರಲ್ಲಿ 72ನೆಯ ತಿದ್ದುಪಡಿ ಮಾಡಿ ಕೊಂಕಣಿ, ಮಣಿಪುರಿ ಮತ್ತು ನೇಪಾಲಿ ಭಾಷೆಗಳನ್ನು ಸೇರಿಸಲಾಯಿತು. 2003ರಲ್ಲಿ 100ನೆಯ ತಿದ್ದುಪಡಿ ಮಾಡಿ ಬೋಡೊ, ಡೋಗ್ರಿ, ಮೈಥಿಲಿ ಮತ್ತು ಸಂತಾಲಿ ಭಾಷೆಗಳನ್ನು ಅಧಿಕೃತ ಭಾಷಾ ಪಟ್ಟಿಗೆ ಸೇರಿಸಲಾಯಿತು.

ಪ್ರಚಂಚದ ಪ್ರಮುಖ ಭಾಷೆಗಳು, ಅವುಗಳನ್ನು ಮಾತನಾಡುವ ಜನರ ಸಂಖ್ಯೆ ಮತ್ತು ದೇಶಗಳು.

| ಭಾಷೆ | ಮಾತನ್ನಾಡುವ ಜನ ಸಂಖ್ಯೆ (ಮಿಲಿಯನ್‌ಗಳಲ್ಲಿ) | ದೇಶಗಳು |
|---|---|---|
| ಚೀನಿ ಭಾಷೆ | 874 | ಚೀನ, ಟೈವಾನ್, ಮ್ಯಾಂಡರೀನ್ |
| ಹಿಂದಿ | 366 | ಉತ್ತರಭಾರತ |
| ಇಂಗ್ಲೀಷ್ | 341 | ಅ.ಸಂ.ಸಂಸ್ಥಾನ, ಕೆನಡ, ಐರ್ಲೆಂಡ್, ನ್ಯೂಜಿಲೆಂಡ್ |
| ಸ್ಪ್ಯಾನಿಷ್ | 322 | ಸ್ಪೇನ್, ಲ್ಯಾಟಿನ್, ಅಮೆರಿಕ |
| ಬಂಗಾಲಿ | 207 | ಭಾರತ–ಬಾಂಗ್ಲ ದೇಶ |
| ಪೋರ್ಚುಗೀಸ್ | 176 | ಪ್ರೋರ್ಚುಗಲ್ ಮತ್ತು ಬ್ರೆಜಿಲ್ |
| ರಶಿಯ | 167 | ರಷ್ಯ, ಪರ್ಷಿಯ ಇತರೆ ದೇಶಗಳು |
| ಅರೇಬಿಕ್ | | |
| ಜಪಾನಿ | 125 | ಜಪಾನ್ |
| ಜರ್ಮನ್ | 100 | ಜರ್ಮನಿ, ಆಸ್ಟ್ರಿಯ, ಸ್ವಿಟ್ಜರ್ಲೆಂಡ್ |
| ಕೊರಿಯ | 78 | ಉತ್ತರ ಮತ್ತು ದಕ್ಷಿಣ ಕೊರಿಯ |
| ಫ್ರೆಂಚ್ | 77 | ಫ್ರಾನ್ಸ್, ಬೆಲ್ಜಿಯಂ, ಕೆನಡ, ಸ್ವಿಟ್ಜರ್ಲೆಂಡ್ |
| ಚೀನೀಸ್ (ವೂ) | 77 | ಚೀನ |
| ಜಾವನೀಸ್ | 75 | ಜಾವ (ಇಂಡೊನೇಷ್ಯ) |
| ಚೀನೀಸ್ (ಯು) | 71 | ಚೀನ |
| ತೆಲುಗು | 69 | ಆಂಧ್ರಪ್ರದೇಶ |
| ಮರಾಠಿ | 68 | ಮಹಾರಾಷ್ಟ್ರ (ಭಾರತ) |
| ವಿಯೆಟ್ನಾಮಿಸ್ | 68 | ಎರಡು ವಿಯೆಟ್ನಾಂ ದೇಶಗಳು |
| ತಮಿಳು | 66 | ತಮಿಳುನಾಡು (ಭಾರತ) |
| ಇಟಲಿ | 62 | ಇಟಲಿದೇಶ |
| ಟರ್ಕಿ | 60 | ಭಾರತ – ಬಾಕಿಸ್ಥಳ |
| ಉಕ್ರೇನ್ | 47 | ಉಕ್ರೇನ್, ರಷ್ಯ, ಪೋಲೆಂಡ್ |

(ಎಸ್.ಎಸ್.ಎನ್.)

**ಭಿನ್ನ ಅಳತೆಯ ಮಾಪಕಗಳು:** ಭೂಪಟಗಳಲ್ಲಿ ನೀಡಿರುವ ಪ್ರಾತಿನಿಧಿಕ ಭಿನ್ನಾಂಶವನ್ನು (ಆರ್. ಎಫ್.) ಯಾವುದೇ ಅಳತೆಯ ಮೂಲ ಮಾನದಲ್ಲಿ ಪರಿಗಣಿಸಬಹುದು. ಉದಾ: ಪ್ರಾತಿನಿಧಿಕ ಭಿನ್ನಾಂಶ 1 : 50,000. ಇದನ್ನು 1 ಅಂಗುಲ = 50,000 ಅಂಗುಲ ಅಥವಾ 1 ಸೆಂಮೀ = 50,000 ಸೆಂಮೀ ಎಂದು ತಿಳಿಯಬಹುದಾಗಿದೆ. ಇದರಿಂದ ಹೆಚ್ಚು ರೂಢಿಯಲ್ಲಿರುವ ಮೆಟ್ರಿಕ್ ಮತ್ತು ಬ್ರಿಟಿಷ್ ಮೂಲಮಾನಗಳೆರಡರಲ್ಲಿಯೂ ಮಾಪಕಗಳನ್ನು ಪರಸ್ಪರ ಹೋಲಿಸುವಂತೆ ರಚಿಸಬಹುದು. ಇವುಗಳನ್ನು ಭಿನ್ನ ಅಳತೆಯ ಮಾಪಕಗಳೆಂದು ಕರೆಯುವರು.

ಉದಾ–I: ಒಂದು ಭೂಪಟದ ಅಳತೆ ಪ್ರಾತಿನಿಧಿಕ ಭಿನ್ನಾಂಶ 1 : 25,000. ಇದರ ಪ್ರಕಾರ ಗಜ ಮತ್ತು ಮೀಟರ್‌ಗಳನ್ನು ನಿರೂಪಿಸುವ ಹೋಲಿಕೆಯ ಮಾಪಕವನ್ನು ರಚಿಸಬೇಕಾದಲ್ಲಿ ಕೆಳಗಿನ ವಿಧಾನವನ್ನು ಅನುಸರಿಸಲಾಗುತ್ತದೆ.

ಅ.ಗಜಗಳಲ್ಲಿ : ಕೊಟ್ಟಿರುವ ಪ್ರಾತಿನಿಧಿಕ ಭಿನ್ನಾಂಶ 1 :25,000

ಅಂದರೆ $1'' = 25{,}000''$

$$\text{ಅಥವಾ } 1'' = \frac{25000}{36} = 69.44 \text{ ಗಜ}$$

$$6'' = 694.44 \times 6 = 4166.66$$

6″ ಮಾಪಕ 4166.66 ಗಜ ದೂರವನ್ನು ಪ್ರತಿನಿಧಿಸುವುದು. ಇದು ಪೂರ್ಣ ಸಂಖ್ಯೆ ಅಲ್ಲ. ಸಮೀಪದ ಪೂರ್ಣ ಸಂಖ್ಯೆ 4000 ಗಜಗಳು ಈಗ.

4166.66 ಗಜಗಳನ್ನು 6″ ಪ್ರತಿನಿಧಿಸುವುದು.

ಹಾಗಾದರೆ 4000 ಗಜಗಳು $= \frac{6 \times 4000}{4166.66} = 5.76$ ಅಂಗುಲ

ಇದರಂತೆ, 5.76 ಅಂಗುಲ ಉದ್ದವಿರುವ ರೇಖಾ ಮಾಪನವನ್ನು ಎಳೆದು ಅದನ್ನು 8 ಪ್ರಾಥಮಿಕ ಭಾಗಗಳಾಗಿ ವಿಂಗಡಿಸಲಾಗಿದೆ. ಈ ಪ್ರತಿ ವಿಭಾಗವೂ 500 ಗಜಗಳನ್ನು ಪ್ರತಿನಿಧಿಸುತ್ತವೆ. ಮೊದಲ ಭಾಗವನ್ನು ಐದು ಸಮ ಭಾಗಗಳಾಗಿ ವಿಂಗಡಿಸಿದ್ದು ಈ ಪ್ರತಿಯೊಂದು ದ್ವಿತೀಯ ವಿಭಾಗಗಳು 100 ಗಜಗಳನ್ನು ನಿರೂಪಿಸುತ್ತವೆ.

ಆ. ಮೀಟರುಗಳಲ್ಲಿ: ಕೊಟ್ಟಿರುವ ಪ್ರಾತಿನಿಧಿಕ ಭಿನ್ನಾಂಶ =

1 : 25,000 ಅಂದರೆ

1 ಸೆಂಮೀ = 25,000 ಸೆಂಮೀ

ಅಥವಾ $\frac{25,000}{100} = 250$ಮೀ

16 ಸೆಂಮೀ = 250 X 16 = 4,000 ಮೀ




ಈಗ ಮೊದಲು ಎಳೆದಿರುವ ಗಜವನ್ನು ನಿರೂಪಿಸುವ ಮಾಪಕದ ಕೆಳಗೆ ಚಿತ್ರದಲ್ಲಿ ತೋರಿಸಿರುವಂತೆ 16 ಸೆಂಮೀ ಉದ್ದದ ರೇಖಾಮಾಪಕವನ್ನು ಎಳೆದು ಅದನ್ನು ಎಂಟು ಪ್ರಾಥಮಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಈ ಪ್ರತಿಯೊಂದು ವಿಭಾಗಗಳು 500 ಮೀಗಳನ್ನು ಪ್ರತಿನಿಧಿಸುತ್ತವೆ. ಅನಂತರ ಮೊದಲ ಪ್ರಾಥಮಿಕ ವಿಭಾಗವನ್ನು ಐದು ದ್ವಿತೀಯ ವಿಭಾಗಗಳಾಗಿ ವಿಂಗಡಿಸಿದ್ದು, ಇವು ತಲಾ 100 ಮೀಗಳನ್ನು ಪ್ರತಿನಿಧಿಸುವುವು. ಈ ಎರಡೂ ಮಾಪಕಗಳಲ್ಲಿ 0 ಯನ್ನು ಪ್ರತಿನಿಧಿಸುವ ರೇಖೆಗಳು ಒಂದೇ ನೇರದಲ್ಲಿರುವಂತೆ ರಚಿಸಬೇಕಾದುದು ಅಗತ್ಯ. (ಆರ್.ಎನ್.)

**ಭಿಲಾಯ್:** ಛತ್ತೀಸಗಡ್ ರಾಜ್ಯದ ದುರ್ಗ ಜಿಲ್ಲೆಯ ಒಂದು ಕೈಗಾರಿಕಾ ನಗರ. ಹಿಂದೆ ಮಧ್ಯಪ್ರದೇಶಕ್ಕೆ ಸೇರಿತ್ತು. ಭಿಲಾಯ್ ನಗರ್ ಎಂದು ಕರೆಯುವ ಈ ನಗರ ಉ.ಅ. $21^{0}15'$ ಮತ್ತು ಪೂ.ರೇ. $81^{0}27'$ ಗಳಲ್ಲಿದೆ. ಜನಸಂಖ್ಯೆ 923,559. ಎರಡನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರಾರಂಭಿಸಿದ ಮೂರು ಬೃಹದಾಕಾರದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಭಿಲಾಯ್ ಒಂದು. ಕೋಲ್ಕತದ ಪಶ್ಚಿಮಕ್ಕೆ 720 ಕಿಮೀ ಮತ್ತು ನಾಗಪುರದಿಂದ ಪೂರ್ವಕ್ಕೆ 260 ಕಿಮೀ ಅಂತರದಲ್ಲಿದೆ. 1959 ಫೆಬ್ರುವರಿ 4 ರಂದು ಕಬ್ಬಿಣ ಕಾರ್ಖಾನೆಯನ್ನೂ ಅದೇ ವರ್ಷ ಅಕ್ಟೋಬರ್ 12ರಂದು ಉಕ್ಕಿನ ಕಾರ್ಖಾನೆಯನ್ನೂ ಇಲ್ಲಿ ಪ್ರಾರಂಭಿಸಲಾಯಿತು. ಸೋವಿಯತ್ ರಷ್ಯ ಸರ್ಕಾರದ ಸಹಯೋಗದೊಂದಿಗೆ ಆರಂಭವಾದ ಈ ಕಾರ್ಖಾನೆಗಳ ಉತ್ಪಾದನ ಸಾಮರ್ಥ್ಯ ಪ್ರಾರಂಭದಲ್ಲಿ ಹತ್ತು ಲಕ್ಷ ಟನ್‌ಗಳಷ್ಟಿತ್ತು. ಈ ಸಾಮರ್ಥ್ಯವನ್ನು ಮುಂದೆ ಇಪ್ಪತ್ತು ಲಕ್ಷಕ್ಕೇರಿಸಲಾಯಿತು. ಭಿಲಾಯ್ ಸುತ್ತಮುತ್ತ ಸುಣ್ಣದ ಕಲ್ಲು ಹೇರಳವಾಗಿ ದೊರೆಯುತ್ತದೆ. ಈ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ. ಝರಿಯಾದಿಂದ ಇಲ್ಲಿಯ ಕಾರ್ಖಾನೆಗಳಿಗೆ ಕಲ್ಲಿದ್ದಲು ಪೂರೈಕೆ ಆಗುತ್ತದೆ. ಮಹಾನದಿಗೆ ಹತ್ತು ಚ.ಕಿಮೀ ಜಲಾಶಯ ನಿರ್ಮಿಸಿ ಅದರ ನೀರನ್ನು ಕಾಲುವೆಯ ಮೂಲಕ ಭಿಲಾಯ್ ಕಾರ್ಖಾನೆಗೆ ಒದಗಿಸಲಾಗಿದೆ. ಇಂದು ಕಬ್ಬಿಣ ಮತ್ತು ಉಕ್ಕು ತಯಾರಿಕೆಯಲ್ಲಿ ಭಿಲಾಯ್ ಪ್ರಸಿದ್ಧವಾಗಿದೆ. ಇಲ್ಲಿಯ ಕಾರ್ಖಾನೆಗಳಿಂದ ಉಂಟಾಗುವ ವಿಪರೀತ ಉಷ್ಣತೆಯಿಂದಾಗಿ ಭಿಲಾಯ್ ನಗರವಾಸಿಗಳಿಗೆ ತೊಂದರೆಯಾಗಬಾರದೆಂದು ಕಾರ್ಖಾನೆ ಪ್ರದೇಶ ಮತ್ತು ನಗರದ ನಡುವೆ 1.6 ಕಿಮೀ ವಿಸ್ತಾರದ ಅರಣ್ಯ ಬೆಳೆಸಲಾಗಿದೆ. (ಬಿ.ಎ.ಎಸ್.)

**ಭೀಮಾ:** ಕರ್ನಾಟಕದ ದೊಡ್ಡ ನದಿಗಳ ಪೈಕಿ ಒಂದು; ಕೃಷ್ಣ ನದಿಯ ಒಂದು ಉಪನದಿ. ಮಹಾರಾಷ್ಟ್ರದ ಪಶ್ಚಿಮಘಟ್ಟಗಳ ಭೀಮಾಶಂಕರದಲ್ಲಿ ಉಗಮ. ಮಹಾರಾಷ್ಟ್ರದ ಪುಣೆ, ಸೊಲ್ಲಾಪುರ ಜಿಲ್ಲೆಗಳಲ್ಲಿ ಹರಿದು ಬರುವ ಈ ನದಿ ಬಿಜಾಪುರ ಜಿಲ್ಲೆಯ ಉತ್ತರ ತುದಿಯಲ್ಲಿರುವ ದಸೂರಿನ ಬಳಿ ಕರ್ನಾಟಕದ ಎಲ್ಲೆಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಬಿಜಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳ ಗಡಿರೇಖೆಯಾಗಿ ಹರಿಯುತ್ತದೆ. ಅನಂತರ ಗುಲ್ಬರ್ಗ ಜಿಲ್ಲೆಯ ಶಹಪುರ ತಾಲ್ಲೂಕಿನ ಬಳಿ ಕೃಷ್ಣ ನದಿಯನ್ನು ಕೂಡುತ್ತದೆ. ಭೀಮಾ ನದಿ ತನ್ನ ಒಟ್ಟು ಹರಿವಿನ 856 ಕಿಮೀ ನಲ್ಲಿ 520 ಕಿಮೀ ಮಹಾರಾಷ್ಟ್ರದಲ್ಲೂ 48 ಕಿಮೀ ಕರ್ನಾಟಕ–ಮಹಾರಾಷ್ಟ್ರ ಗಡಿಯಾಗಿಯೂ ಇದ್ದು ಉಳಿದ 240 ಕಿಮೀ ಪೂರ್ತಿ ಗುಲ್ಬರ್ಗ ಜಿಲ್ಲೆಯಲ್ಲಿ ಹರಿಯುತ್ತದೆ.

ಕರ್ನಾಟಕದಲ್ಲಿ ಈ ನದಿಯ ಹರಿವಿನ ಉದ್ದಕ್ಕೂ ಅನೇಕ ನದಿ ಹಳ್ಳಗಳು ಬಂದು ಸೇರುತ್ತವೆ. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಉತ್ತರದಲ್ಲಿ ಬೋರಿ ಹಳ್ಳ ಪೂರ್ವದಲ್ಲಿ ರೊಡಗಿಯ ಸಮೀಪ ಸತ್ನಾಳ ಹೊಳೆ ಈ ನದಿಯನ್ನು ಬಲದಂಡೆಯ ಮೂಲಕ ಸೇರಿದರೆ, ಗುಲ್ಬರ್ಗ ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ ಎರಡು ನದಿಗಳು ಎಡದಂಡೆಯಲ್ಲಿ ಸೇರುತ್ತವೆ.

ಈ ನದಿ ಹರಿಯುವ ಪ್ರದೇಶ ಬಲುಪಾಲು ದಖನ್ ಪ್ರಸ್ಥಭೂಮಿಯಲ್ಲಿದೆ. ಇಲ್ಲೆಲ್ಲ ಅಡಿಯಲ್ಲಿ ಕರಿಕಲ್ಲು ಹೆಚ್ಚಾಗಿದ್ದು ಅದರ ಮೇಲೆ ದಪ್ಪನೆಯ ಫಲವತ್ತಾದ ಕಪ್ಪುಮಣ್ಣಿನ ಪದರ ಇದೆ. ಪ್ರತಿವರ್ಷ ಪ್ರವಾಹ ಕಾಲದಲ್ಲಿ ನದಿ ಹೊತ್ತು ತಂದ ಫಲವತ್ತಾದ ಮಣ್ಣು ಕೆಲವು ಕಡೆ ನದಿಯ ಇಕ್ಕೆಲಗಳಲ್ಲಿ ಹರಡುತ್ತಿರುತ್ತದೆ.

ಈ ಪ್ರದೇಶದ ಮಣ್ಣು ಫಲವತ್ತಾಗಿರುವಂತೆಯೇ ನೀರಿನ ಅಂಶವನ್ನು ಹಿಡಿದಿಟ್ಟುಕೊಳ್ಳಬಲ್ಲದರಿಂದ ಸಕಾಲದಲ್ಲಿ ಸ್ವಲ್ಪ ಮಳೆಯಾದರೂ ಇಲ್ಲಿ ಬೆಳೆ ಚನ್ನಾಗಿ ಆಗುತ್ತದೆ. ಈ ನದಿಯ ಇಕ್ಕೆಲಗಳಲ್ಲಿ ಜೋಳ, ಗೋದಿ, ಸಜ್ಜೆ, ಹತ್ತಿ ಮತ್ತು ತಂಬಾಕು ಬೆಳೆಸುತ್ತಾರೆ. ನೀರಾವರಿಗಾಗಿ ಭೀಮಾನದಿಯನ್ನು ಬಳಸಿಕೊಂಡಿರುವುದು ಬಲು ಕಡಿಮೆ. ಅಫಜಲಪುರದ ಸಮೀಪ ಒಂದು ಅಡ್ಡಕಟ್ಟೆ ಕಟ್ಟಿ ಕೊಳಾಯಿಗಳ ಮೂಲಕ ನೀರನ್ನು ಬಳಸುವ ಯೋಜನೆ ಈಗಾಗಲೇ ಬಳಕೆಯಲ್ಲಿದೆ. ಶಾಹಪುರ ತಾಲ್ಲೂಕಿನಲ್ಲಿ ತಂಗಡಿಯ ಬಳಿ ಈ ನದಿಗೆ ಅಣೆಕಟ್ಟನ್ನು ನಿರ್ಮಿಸುವ ಯೋಜನೆ ಇದೆ. ಇದರಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕಬಹುದೆಂದು ಅಂದಾಜು. ಬಿಜಾಪುರ ಜಿಲ್ಲೆಯ ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಈ ನದಿಯ ನೀರನ್ನು ತೋಟಗಾರಿಕೆಗೆ ಹೆಚ್ಚಾಗಿ ಬಳಸುತ್ತಿದ್ದಾರೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಕಬ್ಬು ಬೆಳೆಯುತ್ತಾರೆ.

ಈ ನದಿ ಪ್ರದೇಶದಲ್ಲಿ ಉತ್ತಮವಾದ ಕರಿಕಲ್ಲು, ಕಾರ್ನಿಲಿಯನ್, ಅಗೇಟ್ ಮೊದಲಾದ ಶಿಲೆಗಳು ದೊರಕುತ್ತವೆ. ಪ್ರಾಗಿತಿಹಾಸ ಕಾಲದ ಶಿಲಾ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳು ಈ ಪ್ರದೇಶದಲ್ಲಿ ಅನೇಕ ಕಡೆ ಕಂಡುಬಂದಿವೆ. (ಎಂ.ಎಸ್.ಎಸ್.)

**ಭೀಮಾ ಶಿಲಾಶ್ರೇಣಿ:** ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ, ಕೃಷ್ಣನದಿಯ ಉಪನದಿಯಾದ ಭೀಮಾನದಿಯ ಪಾತ್ರದಲ್ಲಿ ಸು. 3218.66 ಚ.ಕಿಮೀ ಪ್ರದೇಶದಲ್ಲಿ ವ್ಯಾಪಿಸಿರುವ ಶಿಲಾಶ್ರೇಣಿ. ಇಲ್ಲಿಯ ಶಿಲೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಮರಳು ಮತ್ತು ಜೇಡುಶಿಲೆಗಳಿಂದ ಕೂಡಿರುವ ಕೆಳಗಿನ ಸ್ತರ, ಸುಣ್ಣ ಶಿಲೆಗಳಿಂದ ಕೂಡಿರುವ ಮಧ್ಯ ಮತ್ತು ಮೇಲು ಭಾಗದ ಸ್ತರ. ಭೀಮಾ ಶಿಲೆಗಳು ಸಮತಲವಾಗಿ ಹಬ್ಬಿವೆ. ಭೀಮಾ ಮತ್ತು ಕರ್ನೂಲ್ ಶಿಲೆಗಳು ಸಮಕಾಲೀನವೆನ್ನಲಾಗಿದೆ.

ಭೀಮಾವರ್ಗಕ್ಕೆ ಸೇರಿರುವ ಸುಣ್ಣ ಶಿಲೆಗಳು ಪದರ ಪದರಗಳಾಗಿ ಬಿಟ್ಟುಕೊಳ್ಳುತ್ತವೆ. ಗುಲ್ಬರ್ಗ ಜಿಲ್ಲೆಯ ವಾಡಿ, ಚಿತ್ತಾಪುರ, ಚಿಂಚೋಳಿ, ಸೇಡಂ ಈ ಸ್ಥಳಗಳಲ್ಲಿ ವಿಶೇಷವಾಗಿ ಈ ಕಲ್ಲುಗಳನ್ನು ಚದುರಾಕಾರದ ಬಿಲ್ಲೆಗಳ ರೂಪದಲ್ಲಿ ಕತ್ತರಿಸಿ ಮಾರಾಟ ಮಾಡುತ್ತಾರೆ. ತಿಳಿ ನೀಲಿ ಬಣ್ಣದ ಈ ಕಲ್ಲುಗಳು ಶಾಹಬಾದ್ ಕಲ್ಲುಗಳೆಂದೇ ಪ್ರಸಿದ್ಧವಾಗಿವೆ.

ಭೀಮಾ ಶಿಲಾ ಸಮುದಾಯಕ್ಕೆ ಸೇರಿರುವ ಸುಣ್ಣ ಕಲ್ಲುಗಳು ಸಿಮೆಂಟ್ ತಯಾರಿಕೆಗೆ ಅತ್ಯಂತ ಉಪಯುಕ್ತವೆನಿಸಿವೆ. ಕಾರಣದಿಂದ ಪ್ರಮುಖ ಸಿಮೆಂಟ್ ಕಾರ್ಖಾನೆಗಳು ಗುಲ್ಬರ್ಗ ಜಿಲ್ಲೆಯ ಷಹಬಾದ್, ವಾಡಿ, ಸೇಡಂಗಳ ಬಳಿ ಸ್ಥಾಪನೆಯಾಗಿವೆ. ಬಿಜಾಪುರ ಜಿಲ್ಲೆಯ ತಾಳಿಕೋಟೆ ಬಳಿಯೂ ಈ ಶಿಲೆಗಳು ಕಂಡುಬರುತ್ತವೆ. (ಎಂ.ಎಸ್.ಎಸ್.)

**ಭುವನೇಶ್ವರ:** ಒರಿಸ್ಸ ರಾಜ್ಯದ ರಾಜಧಾನಿ. ಪುರಿ ಜಿಲ್ಲೆಯ ಒಂದು ತಾಲ್ಲೂಕು. ತಾಲ್ಲೂಕಿನ ಆಡಳಿತ ಕೇಂದ್ರ ನಗರ. ಪುರಿಯ ಉತ್ತರದಲ್ಲಿ ಸು. 48 ಕಿಮೀ ದೂರದಲ್ಲಿ ಕೋಲ್ಕತ–ಚೆನ್ನೈ ರೈಲುಮಾರ್ಗದಲ್ಲಿ ಸು. 438 ಕಿಮೀ ದೂರದಲ್ಲಿದೆ. ಪ್ರಸಿದ್ಧ ಯಾತ್ರಾಸ್ಥಳ ಹಾಗೂ ಪ್ರೇಕ್ಷಣೀಯ ನಗರ. ಚಂಡೀಗಡ ಬಿಟ್ಟರೆ ಇದು ಎರಡನೆಯ ಯೋಜನಾಬದ್ಧ ನಿರ್ಮಾಣ ನಗರ. ಜನಸಂಖ್ಯೆ 6,57,477. ದೇವಾಲಯಗಳ ನಗರವೆಂದು ಪ್ರಸಿದ್ಧವಾದ ಭುವನೇಶ್ವರ ಕಳಿಂಗನಾಡಿನ ವಾಸ್ತುಶಿಲ್ಪದ ಹುಟ್ಟು ಮತ್ತು ಅದರ ಪರಿಪೂರ್ಣ ಬೆಳವಣಿಗೆಯ ಗುರುತಾಗಿದೆ. ಏಕಾಮ್ರತೀರ್ಥವೆಂದು ಮೊದಲು ಇದರ ಹೆಸರು. ಒರಿಸ್ಸದ ಐದು ಧಾರ್ಮಿಕ ಕ್ಷೇತ್ರಗಳಲ್ಲಿ ಇದೂ ಒಂದೆಂದು ಪರಿಗಣಿಸಲಾಗಿದೆ. ಹೀಗಾಗಿ ವರ್ಷದುದ್ದಕ್ಕೂ ಸಹಸ್ರಾರು ಭಕ್ತಾದಿಗಳನ್ನು ಆಕರ್ಷಿಸುತ್ತದೆ. ವೀಕ್ಷಕರನ್ನು ಮುಗ್ಧರನ್ನಾಗಿ ಮಾಡುವ ಇಲ್ಲಿರುವ ದೇವಾಲಯಗಳು ತಮ್ಮ ವಾಸ್ತುಶಿಲ್ಪ, ಶಿಲ್ಪಕಲೆ ಹಾಗೂ ಅವುಗಳ ನಿರ್ಮಾಣದಲ್ಲಿನ ಕಲಾನೈಪುಣ್ಯಕ್ಕೆ ಪ್ರಸಿದ್ಧ. ಕಲೆಯ ಆರಾಧಕರಿಗೆ ಮತ್ತು ಪಂಡಿತರಿಗೆ ಭುವನೇಶ್ವರ ಒಂದು ಮಹತ್ತ್ವದ ತಾಣ. (ಸಿ.ಕೆ.ಎಂ.)

**ಭೂ ಬಳಕೆ ಮಾದರಿ:** ಒಂದು ಪ್ರದೇಶದ ಒಟ್ಟು ಭೌಗೋಳಿಕ ಕ್ಷೇತ್ರ ವಿವಿಧ ಉದ್ದೇಶಗಳಿಗೆ ಎಷ್ಟು ಪ್ರಮಾಣದಲ್ಲಿ ಬಳಕೆಯಾಗಿದೆ ಎಂಬ ಅಂಕಿಅಂಶಗಳನ್ನು ಕ್ರೋಢೀಕರಿಸುವುದೇ ಭೂಬಳಕೆ ಮಾದರಿ. ಈ ಅಂಕಿಅಂಶಗಳನ್ನು ಭಾರತದ ಸರ್ವೇಕ್ಷಣಾ ವಿಭಾಗ ಕ್ರೋಢೀಕರಿಸಿ, ಭಾರತದ ವ್ಯವಸಾಯ ಅಂಕಿ ಅಂಶಗಳು ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸುತ್ತದೆ.

ದೇಶದ ಒಟ್ಟು ಭೂಪ್ರದೇಶವನ್ನು ಅನೇಕ ವರ್ಗಗಳಾಗಿ ವಿಂಗಡಿಸುತ್ತಾರೆ. 1890–91 ರಲ್ಲಿ ಭೂಮಿಯ ವಿವಿಧ ಬಳಕೆಯ ಆಧಾರದ ಮೇಲೆ ಪ್ರಮುಖವಾಗಿ 5 ವರ್ಗಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ, ಅರಣ್ಯ ಪ್ರದೇಶ, ವ್ಯವಸಾಯೇತರ ಭೂಮಿ, ವ್ಯವಸಾಯಕ್ಕೆ ದೊರೆಯದ ಭೂಮಿ, ಬಂಜರು ಭೂಮಿ, ವ್ಯವಸಾಯ ಪ್ರದೇಶ. ಒಂದು ನಿರ್ದಿಷ್ಟ ಭೂ ಪ್ರದೇಶ ಸಂಪೂರ್ಣವಾಗಿ ಸಸ್ಯವರ್ಗಗಳಿಂದ ಆವೃತವಾಗಿದ್ದು ಅದು ರಾಜ್ಯ ಅಥವಾ ವೈಯಕ್ತಿಕ ಒಡೆತನಕ್ಕೆ ಒಳಪಟ್ಟಿದ್ದು ಅದು ವ್ಯವಸಾಯಕ್ಕೆ ಒಳಪಡದಿದ್ದರೆ, ಅದನ್ನು ಅರಣ್ಯ ಪ್ರದೇಶ ಎಂದು ಪರಿಗಣಿಸಬಹುದು. ವ್ಯವಸಾಯೇತರ ಪ್ರದೇಶಗಳೆಂದರೆ ಕಟ್ಟಡಗಳು, ಕೈಗಾರಿಕೆಗಳು, ರಸ್ತೆ, ರೈಲು, ನೀರಿನಿಂದ ಆವೃತವಾಗಿರುವುದು, ನದಿ, ಕಾಲುವೆಗಳು, ಜೊತೆಗೆ ವ್ಯವಸಾಯ ಕೈಗೊಳ್ಳಲಾಗದ ಪ್ರದೇಶ ಉದಾ: ಪರ್ವತ ಪ್ರದೇಶ, ಮರುಭೂಮಿಗಳು ಮುಂತಾದವುಗಳನ್ನು ಒಳಗೊಂಡಿರುತ್ತದೆ. ವ್ಯವಸಾಯಕ್ಕೆ ದೊರೆಯದ ಭೂಮಿ ಹುಲ್ಲುಗಾವಲು, ಗೋಮಾಳ, ಸಂಕೀರ್ಣ ಮರದ ಬೆಳೆಗಳು ಮತ್ತು ಇತರ ಸಾಂಸ್ಕೃತಿಕ ಮತ್ತು ಸಾಮಾಜಿಕ ಉದ್ದೇಶಕ್ಕಾಗಿ ಬಳಸಿದ ಭೂಮಿಯನ್ನು ಒಳಗೊಂಡಿರುತ್ತದೆ. ವ್ಯವಸಾಯಕ್ಕೆ ಯಾವುದೇ ವಿಧದಲ್ಲಿಯೂ ಯೋಗ್ಯವಲ್ಲದ ಭೂಮಿ ಬಂಜರು ಪ್ರದೇಶವಾಗಿರುತ್ತದೆ. ಎಲ್ಲಾ ಬಗೆಯ ಕೃಷಿ ಚಟುವಟಿಕೆಯನ್ನು ಒಳಗೊಂಡಿರುವ ಪ್ರದೇಶ ಒಟ್ಟು ವ್ಯವಸಾಯ ಪ್ರದೇಶವಾಗಿರುತ್ತದೆ. ಹೀಗೆ ಒಟ್ಟು ಭೂಪ್ರದೇಶವನ್ನು ವಿವಿಧ ಬಗೆಯ ಭೂಬಳಕೆಯ ಆಧಾರದ ಮೇಲೆ ವಿಂಗಡಿಸಲಾಗಿದೆ. (ಎಸ್.ಎಚ್.)

**ಭೂ ಸಮತೋಲನ ಸಿದ್ಧಾಂತ:** ಭೂಖಂಡಗಳ ಹುಟ್ಟು ಮತ್ತು ಅವುಗಳ ಹಂಚಿಕೆಯನ್ನು ಕುರಿತು ವಿಶ್ಲೇಷಿಸುವ ಸಿದ್ಧಾಂತ (ಐಸಾಸ್ಟಸಿ). ಭೂ ಮೇಲ್ಮೈಯ ವೈವಿಧ್ಯಮಯವಾದ ಭೂಸ್ವರೂಪಗಳು ಯಾವುದೋ ಒಂದು ನಿರ್ದಿಷ್ಟ ಸ್ಥಿತಿಯನ್ನಾಧರಿಸಿ ನಿಂತಿವೆ ಎಂದು ಕಲ್ಪಿಸಲಾಗಿದೆ. ಅವು ಭೂಮಿಯ ಮೇಲ್ಮೈಯ ಭಾಗಗಳು ಮತ್ತು ಅವುಗಳ ಆಧಾರ ಪಾತ್ರಗಳು ಸಮತೋಲನ ಸ್ಥಿತಿಯನ್ನು ಹೊಂದಿವೆ ಎಂಬುದು ಈ ಸಿದ್ಧಾಂತದ ತಿರುಳಾಗಿದೆ.

ಐಸಾಸ್ಟಸಿ ಎಂಬ ಶಬ್ದ ಜರ್ಮನ್ ಭಾಷೆಯ ಸಮತೋಲನ ಅಥವಾ ಸಮಸ್ಥಿತಿ ಎಂದಾಗುತ್ತದೆ. ಇದನ್ನು ಮೊಟ್ಟಮೊದಲಿಗೆ ಅಮೆರಿಕದ ಭೂಗರ್ಭವಿಜ್ಞಾನಿ ಸಿ.ಎ.ಡಟ್ಟನ್ನನು 1889ರಲ್ಲಿ ಪ್ರಯೋಗಕ್ಕೆ ತಂದ.

1735ರಲ್ಲಿ ಪಿಯರ್ರೆ ಬೌಗರ್ ಎಂಬುವನು ಆಂಡೀಸ್ ಪರ್ವತಗಳನ್ನು ಸರ್ವೆ ಮಾಡಿದ ಸಂದರ್ಭದಲ್ಲಿ ಚಿಂಬೋರೋಸೊ ಶಿಖರ ತೂಗು ಗುಂಡನ್ನು ನಿರೀಕ್ಷೆಯಷ್ಟು ತನ್ನೆಡೆಗೆ ಆಕರ್ಷಿಸಲಿಲ್ಲ. ಬದಲಾಗಿ ಊಹಿಸಿದುದಕ್ಕಿಂತ ಬಹು ಕಡಿಮೆ ಪ್ರಮಾಣದಲ್ಲಿ ಆಕರ್ಷಣೆ ಹೊಂದಿದ್ದು ಖಚಿತವಾಯಿತು.

ಇಂತಹದೇ ಪರಿಸ್ಥಿತಿ ಭಾರತದ ಸಿಂಧೂಗಂಗ ಬಯಲಿನಲ್ಲಿ ಜಾರ್ಜ್ ಎವರೆಸ್ಟ್ ಎಂಬುವವರ ನೇತೃತ್ವದಲ್ಲಿ 1859 ರಂದು ನಡೆಸಿದ ಭೂಗಣಿತ ಭೂಮಾಪನ ಮತ್ತು ತ್ರಿಕೋನ ಮಿತಿ ಭೂ ಮಾಪನಗಳಿಂದಲೂ ತಿಳಿದುಬಂದಿದೆ. ಇಲ್ಲಿ ನಡೆಸಿದ ಭೂಮಾಪನಗಳಿಂದ ಕಲ್ಯಾಣ ಮತ್ತು ಕಲ್ಯಾಣಪುರಗಳ ನಡುವಣ ಅಕ್ಷಾಂಶೀಯ ಮಧ್ಯಂತರವನ್ನು ತಿಳಿಯಲಾಯಿತು. ಭೂಮಾಪನದಲ್ಲಿ ಬಳಸಿದ ತೂಗು ಗುಂಡು ಹಿಮಾಲಯದ ಅಗಾಧ ವಸ್ತು ರಾಶಿಯಿಂದ ಆಕರ್ಷಿಸಲ್ಪಡುವುದೆಂದು ಆರ್ಕಿಡೀಕನ್ ಪ್ರಾಟ್ ಲೆಕ್ಕಾಚಾರ ಮಾಡಿದ್ದ. ಆದರೆ ನಿರೀಕ್ಷಿಸಿದುದಕ್ಕಿಂತಲೂ ಅತಿ ಕಡಿಮೆ ಆಕರ್ಷಣೆಗೆ ಹಿಮಾಲಯಗಳ ಕಡಿಮೆ ತೂಕ ಮತ್ತು ಸಾಂದ್ರತೆಗಳು ಮುಖ್ಯಕಾರಣವಾಗಿವೆ.

ಸರ್‌ಜಾರ್ಜ್‌ಐರಿಯ ಪರಿಕಲ್ಪನೆ: ಸರ್‌ಜಾರ್ಜ್‌ಐರಿ ಖಗೋಳವಿಜ್ಞಾನಿ. ಈತನ ಪ್ರಕಾರ ಭೂಕವಚದ ಸಿಯಾಲ್ ಸ್ತರ ಹಗುರವಾಗಿದ್ದು, ಸಾಂದ್ರವಾದ ಉಪಸ್ತರ ಸಿಮಾ ಸ್ತರದಲ್ಲಿ ತೇಲುತ್ತದೆ. ಈತನ ಪರಿಕಲ್ಪನೆ 'ತೇಲುವ ನಿಯಮ'ವನ್ನಾಧರಿಸಿದೆ. ದ್ರವ ವಸ್ತುವಿನಲ್ಲಿ ತೇಲುವ ಒಂದು ವಸ್ತುವಿನ ಎಷ್ಟು ಭಾಗ ದ್ರವಮಟ್ಟದಿಂದ ಮೇಲಿರುತ್ತದೋ ಅದಕ್ಕೆ ಸಮತೋಲನವಾದಷ್ಟು ಭಾಗವು ತಳದಲ್ಲಿ ಮುಳುಗಿರುತ್ತದೆ. ಉದಾ: ವಿವಿಧ ಗಾತ್ರದ ನೀರ್ಗಲ್ಲು ಬಂಡೆಗಳು ಸಮುದ್ರದಲ್ಲಿ ತೇಲುವಾಗ, ದೊಡ್ಡಗಾತ್ರದವು ಸಾಕಷ್ಟು ಆಳದವರೆಗೆ ಮುಳುಗಿದ್ದರೆ, ಚಿಕ್ಕಗಾತ್ರದವು ಕಡಿಮೆ ಪ್ರಮಾಣದಲ್ಲಿ ಕಡಿಮೆ ಆಳಕ್ಕೆ ಮತ್ತು ಮೇಲಕ್ಕೆ ವಿಸ್ತರಿಸಿರುತ್ತವೆ. ಇದೇ ರೀತಿ ಅಗಾಧವಾದ ಹಿಮಾಲಯ ಪರ್ವತಗಳು ಸಾಂದ್ರವಾದ ಮಾಗ್ಮದಲ್ಲಿ ತನ್ನ ಭಾಗದೊಂದಿಗೆ ಆಳದವರೆಗೂ ಚಾಚಿಕೊಂಡು ತೇಲುವುದು ಎಂಬುದು ಐರಿಯ ಅಭಿಪ್ರಾಯವಾಗಿದೆ.

ಪ್ರಯೋಗವೊಂದರ ಮೂಲಕ ಐರಿ ತನ್ನ ಪರಿಕಲ್ಪನೆಯನ್ನು ನಿರೂಪಿಸಲು ಪ್ರಯತ್ನಿಸಿರುವನು. ಈ ಪ್ರಯೋಗವನ್ನಾಧರಿಸಿ, ಎತ್ತರವಾದ ಹಿಮಾಲಯ ಪರ್ವತಗಳು ಹಗುರವಾದ ವಸ್ತುರಾಶಿಗಳಿಂದ ಕೂಡಿವೆ. ಅವುಗಳ ತಳ ಉದ್ದವಾದ ಬೇರಿನಂತೆ ಹೆಚ್ಚು ಆಳದವರೆಗೆ ಮಿಶ್ರ ಉಪಸ್ತರದಲ್ಲಿ ಚಾಚಿಕೊಂಡಿವೆ. ಅದಕ್ಕೆ ಸಮತೋಲನವಾಗಿ ಎತ್ತರವಾದ ಮೇಲ್ಭಾಗ ನಿಂತಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಐರಿಯ ವಿವಿಧ ಎತ್ತರವುಳ್ಳ ಭೂಸ್ವರೂಪಗಳ (ಪರ್ವತಗಳು, ಪ್ರಸ್ಥಭೂಮಿ, ಮೈದಾನ ಇತ್ಯಾದಿ) ಸಾಂದ್ರತೆಯು ಒಂದೇ ರೀತಿಯಾಗಿರುತ್ತದೆ. ಆಳಕ್ಕೆ ಹೋದಂತೆ ಅವುಗಳ ಸಾಂದ್ರತೆಯು ಬದಲಾಗುವುದಿಲ್ಲ. ಬದಲಾಗುವ ಗಾತ್ರದಲ್ಲಿ ಸಮಾನದ ಸಾಂದ್ರತೆ ಎಂಬುದು ಈ ಪ್ರತಿಪಾದನೆಯ ತಿರುಳು. ಇದರರ್ಥ, ಶಿಲೆಗಳಿಂದ ರಚನೆಗೊಂಡಿರುವ ಸಾಂದ್ರತೆ ಒಂದೇ ಆದರೂ ಅವುಗಳ ಗಾತ್ರ ಮತ್ತು ಆಕಾರಗಳು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಳ್ಳುವವು.

ಹೀಗೆ ಸಮತೋಲನ ಸ್ಥಿತಿಯನ್ನು ಕುರಿತು ನೀಡಿರುವ ಜಾರ್ಜ್ ಐರಿಯ ಪರಿಕಲ್ಪನೆ ಇಂದು ಹೆಚ್ಚು ಪ್ರಚಲಿತವಾಗಿದೆ. ಇದನ್ನು ಹಲವು ಭೂವಿಜ್ಞಾನಿಗಳು ಅನುಮೋದಿಸಿರುವರು. ಫಿನ್‌ಲೆಂಡಿನ ಭೂವಿಜ್ಞಾನಿ ಹೀಸ್ಕನೆನ್ ಈ ವಾದವನ್ನು ಅನುಮೋದಿಸಿದ್ದಾನೆ.

ಆರ್ಚ್‌ಡೀಕನ್ ಪ್ರಾಟ್ ತನ್ನ ಸಮತೋಲನ ಸ್ಥಿತಿ ಕುರಿತ ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದಾನೆ. ಈತನ ಪ್ರಕಾರ ಎತ್ತರವಾದ ಭೂಭಾಗಗಳ ಸಾಂದ್ರತೆ ತಗ್ಗು ಪ್ರದೇಶಗಳಿಗಿಂತ ಕಡಿಮೆ. ಅಂದರೆ ಪರ್ವತಗಳ ಸಾಂದ್ರತೆ ಮೈದಾನ ಹಾಗೂ ಸಾಗರ ತಳಗಳಿಗಿಂತ ಕಡಿಮೆ. ಇದರಿಂದ ಭೂಸ್ವರೂಪಗಳ ಎತ್ತರ ಮತ್ತು ಸಾಂದ್ರತೆಗಳ ನಡುವೆ ವಿಪರ್ಯಸಂಬಂಧ ವ್ಯಕ್ತವಾಗುವುದು.

ಪ್ರಾಟ್, ಸಮತೋಲನ ಮಟ್ಟ ಅಥವಾ ಸರಿದೂಗಿಸುವ ಮಟ್ಟವೊಂದಿದೆ ಎಂದು ಭಾವಿಸಿದ. ಆ ಮಟ್ಟದಿಂದ ಮೇಲ್ಭಾಗದ ವಿವಿಧ ಭೂಭಾಗಗಳ ಸಾಂದ್ರತೆಯಲ್ಲಿ ವ್ಯತ್ಯಾಸಗೊಂಡರೂ ತಳದಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ. ಇದನ್ನು ನಿರೂಪಿಸಲು ಒಂದು ಪ್ರಯೋಗವನ್ನು ರೂಪಿಸಿದ್ದಾನೆ. ವಿವಿಧ ಸಾಂದ್ರತೆಯುಳ್ಳ ಒಂದೇ ತೂಕವುಳ್ಳ ವಿವಿಧ ಲೋಹಗಳ ತುಂಡುಗಳನ್ನು ತೆಗೆದುಕೊಂಡು ಪಾದರಸದಲ್ಲಿ ತೇಲಿ ಬಿಟ್ಟಾಗ ಅವುಗಳ ತಲಗಳೆಲ್ಲವೂ ಒಂದೇ ಆಳದವರೆಗೆ ಮುಳುಗಿದವು. ಉದಾ: ಬೆಳ್ಳಿ, ತಾಮ್ರ, ಕಬ್ಬಿಣ, ಸೀಸ ಮತ್ತು ತವರ. ಮುಳುಗದ ಅವುಗಳ ಮೇಲ್ಭಾಗ ವಿವಿಧ ಎತ್ತರದಲ್ಲಿರುವುದನ್ನು ಗಮನಿಸಿದ. ತವರದ ಸಾಪೇಕ್ಷ ಸಾಂದ್ರತೆ (4.3) ಸೀಸದ ಸಾಪೇಕ್ಷ ಸಾಂದ್ರತೆ (11.0) ಗಿಂತ ಮೂರು ಪಟ್ಟು ಕಡಿಮೆ. ಆದರೆ ಪಾದರಸದ ಮಟ್ಟದಿಂದ ಮೇಲೆ ತೇಲುವ ತವರದ ಭಾಗವು ಸೀಸದ ಮೂರು ಪಟ್ಟು ಹೆಚ್ಚಾಗಿರುತ್ತದೆ. ಇದರಿಂದ ಸರಿದೂಗಿಸುವ ಮಟ್ಟದಿಂದ ಮೇಲಿನ ಒಂದೇ ಭೂಸ್ವರೂಪದ ಸಾಂದ್ರತೆ ಬದಲಾಗುವುದಿಲ್ಲ. ಬದಲಾಗಿ ಅದು ಒಂದರಿಂದ ಮತ್ತೊಂದಕ್ಕೆ ಬದಲಾಗುವುದು. ವಿಷಮ ಸಾಂದ್ರತೆಯಲ್ಲೂ ಸಮ ಆಳದ ತಳ ಎಂಬ ನಿಯಮ ಪ್ರಾಟ್‌ನ ಸಮತೋಲನ ಸ್ಥಿತಿ ಕುರಿತ ಪ್ರತಿಪಾದನೆಯ ಮೂಲಾರ್ಥವಾಗಿದೆ. ಇದು ಐರಿಯ ನಿಯಮದಿಂದ ಭಿನ್ನವಾಗಿದೆ. ಈತನ ಪ್ರಕಾರ ಶಿಲಾಗೋಳದಲ್ಲಿ ಮಾತ್ರ ಸಾಂದ್ರತೆ ಬದಲಾಗುವುದೇ ವಿನಾ ಮಿಶ್ರ ಉಪಸ್ತರದಲ್ಲಲ್ಲ. ಹಾಗಾಗಿ ಪ್ರಾಟ್‌ನ ಪರಿಕಲ್ಪನೆ ಸರಿದೂಗಿಸುವ ನಿಯಮಕ್ಕನುಗುಣವಾಗಿದೆ ಹೊರತು ತೇಲುವ ನಿಯಮಕ್ಕಲ್ಲ. ಪ್ರಾಟ್ ಪರ್ವತಗಳು, ಪ್ರಸ್ಥಭೂಮಿ, ಮೈದಾನಗಳು ಮುಂತಾದವು ಪ್ರಯೋಗದಿಂದ ನಿರೂಪಿಸಲ್ಪಟ್ಟ ತುಂಡುಗಳಂತೆ ತೇಲುತ್ತವೆಂದು ಪ್ರತಿಪಾದಿಸಿರುವನು.




1. ಸಮುದ್ರ 2. ಕರಾವಳಿ ಮೈದಾನ
3. ಮೈದಾನಗಳು 4. ಪ್ರಸ್ಥಭೂಮಿ 5. ಪರ್ವತಗಳು
(ಸ್ತಂಭಗಳಲ್ಲಿರುವ ಸಂಖ್ಯೆಗಳು ವಿವಿಧ ಶಿಲೆಗಳ ಸಾಂದ್ರತೆಯನ್ನು ನಿರೂಪಿಸುತ್ತವೆ)

ಬೋವಿ ಮತ್ತು ಹೇ ಫೋರ್ಡ್‌ರ ಪರಿಕಲ್ಪನೆ: ಅಮೆರಿಕದ ಮೋಜಣಿಕಾರರಾದ ಡಬ್ಲ್ಯೂ. ಬೋವಿ ಮತ್ತು ಜೆ. ಎಫ್. ಹೇ ಫೋರ್ಡ್‌ರವರ ಸಮತೋಲನ ಸ್ಥಿತಿ ಕುರಿತ ಪರಿಕಲ್ಪನೆ ಹೆಚ್ಚು ಕಡಿಮೆ ಪ್ರಾಟ್‌ನ ಪರಿಕಲ್ಪನೆಗೆ ಸಾಮ್ಯತೆವುಳ್ಳದ್ದಾಗಿದೆ. ಸಮುದ್ರ ತಳದ

ಭಾಗಗಳಿಗಿಂತ ಎತ್ತರವಾದ ಪರ್ವತ ಭಾಗಗಳು ಕಡಿಮೆ ಸಾಂದ್ರತೆವುಳ್ಳವು ಎಂಬ ಪ್ರಾಟ್‌ನ ಪ್ರತಿಪಾದನೆಯನ್ನು ಪುರಸ್ಕರಿಸಿ ಇವರು "ಸರಿದೂಗಿಸುವ ಸಮತಲ"ವನ್ನು ಪರಿಭಾವಿಸಿರುವರು ಇದು ಸು. 100 ಕಿಮೀ ಆಳದವರೆಗಿದೆ ಎಂಬುದು ಇವರುಗಳ ಕಲ್ಪನೆಯಾಗಿದೆ. ಈ ಮಟ್ಟದಿಂದ ಮೇಲ್ಭಾಗದಲ್ಲಿರುವ ಭೂಕವಚದಲ್ಲಿನ ವಸ್ತುಗಳು ಹಗುರವಾಗಿಯೂ ಮತ್ತು ತಳದಲ್ಲಿರುವವು ಭಾರವಾಗಿರುತ್ತವೆಂದು ಕಲ್ಪಿಸಿರುವರು. ಬೋವಿ ತನ್ನ ಪರಿಕಲ್ಪನೆಯನ್ನು ಪ್ರಯೋಗವೊಂದರ ಮೂಲಕ ನಿರೂಪಿಸಿರುವನು. ಒಂದೇ ತೂಕವುಳ್ಳ ವಿವಿಧ ಲೋಹದ ತುಂಡುಗಳನ್ನು ಪಾದರಸವನ್ನು ತುಂಬಿದ ಪಾತ್ರೆಯೊಂದರಲ್ಲಿ ಇಟ್ಟಾಗ, ವಿವಿಧ ಸಾಂದ್ರತೆಯುಳ್ಳ ಆ ತುಂಡುಗಳು ತೇಲಿದವು. ಆದರೆ ಅವೆಲ್ಲವುಗಳ ತಳ ಒಂದೇ ಮಟ್ಟದವರೆಗೆ ಮುಳುಗಿರುವುದು ಕಂಡುಬಂದಿತು. ಇದರಿಂದ ಸಮತೂಕವುಳ್ಳ ವಸ್ತುಗಳು ಸರಿದೂಗಿಸುವ ಸಮಮಟ್ಟದಲ್ಲಿರುವುದು ಸ್ಪಷ್ಟವಾಗುತ್ತದೆ. ಬೋವಿಯು ಐರಿ ಮತ್ತು ಪ್ರಾಟ್‌ರವರ ಸಮತೋಲನ ಸ್ಥಿತಿ ಕುರಿತ ಪರಿಭಾವನೆಗಳನ್ನು ಅಭ್ಯಸಿಸಿ, ಅವರಿಬ್ಬರ ಅಭಿಮತಗಳಲ್ಲಿ ಸ್ವಲ್ಪವೇ ವ್ಯತ್ಯಾಸವಿರುವುದನ್ನು. ತಿಳಿಸಿರುವನು.

ಜಾಲಿಯವರ ಪರಿಕಲ್ಪನೆ: ಸಮತೋಲನ ಸ್ಥಿತಿಯನ್ನು ಕುರಿತು ಜಾಲಿ 1925ರಲ್ಲಿ ತನ್ನ ಅಭಿಮತವನ್ನು ಪ್ರತಿಪಾದಿಸಿರುವನು. ಈತನು ಹೇಫೋರ್ಡ್ ಮತ್ತು ಬೋವಿಯವರ 'ಸರಿದೂಗಿಸುವ ಮಟ್ಟ'ದ ಪರಿಭಾವನೆಯ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸಿರುವನು. ಅದೇ ರೀತಿ ಸರಿದೂಗಿಸುವ ಮಟ್ಟ 100 ಕಿಮೀ ಆಳದವರೆಗೆ ವ್ಯಾಪಿಸಿದೆ ಎಂಬ ಬೋವಿಯ ಸೂಚನೆಯನ್ನೂ ತಳ್ಳಿಹಾಕಿರುವನು. ಈ ಆಳದಲ್ಲಿ ಉಷ್ಣಾಂಶ ಸಾಕಷ್ಟು ಹೆಚ್ಚಾಗಿದ್ದು ಅದು ಸಂಪೂರ್ಣ ದ್ರವೀಕರಣಕ್ಕೆ ಕಾರಣವಾಗುವುದು. ಇದರಿಂದ ಸರಿದೂಗಿಸುವ ಮಟ್ಟದ ಅಸ್ತಿತ್ವ ಸಾಧ್ಯವಿಲ್ಲವೆಂಬುದು ಜಾಲಿಯವಾದವಾಗಿದೆ. ಮುಂದುವರಿದು ಸರಿದೂಗಿಸುವ ಮಟ್ಟದಿಂದ ಮೇಲಕ್ಕಿರುವ ಭೂಭಾಗಗಳ ಸಾಂದ್ರತೆ ವ್ಯತ್ಯಾಸಗೊಳ್ಳುವುದೇ ವಿನಃ ತಳದಲ್ಲಿ ಅದು ಸಮನಾಗಿರುತ್ತದೆ ಎಂಬ ಮಾತೂ ಸಹ ತಾತ್ವಿಕವಾಗಿ ಒಪ್ಪುವಂತಿಲ್ಲವೆಂಬುದು ಜಾಲಿಯ ಮತ್ತೊಂದು ವಾದವಾಗಿದೆ. ಭೂರಚನಾ ಕ್ರಮದಲ್ಲಿ ಇದು ಸಾಧ್ಯವಿಲ್ಲ. ಜಾಲಿಯ ಪ್ರಕಾರ ಸಮಸಾಂದ್ರತಾಮಟ್ಟದಿಂದ ಕೆಳಕ್ಕೆ 16 ಕಿಮೀ ದಪ್ಪನಾದ ಸ್ತರವಿದ್ದು ಅದರಲ್ಲಿ ಸಾಂದ್ರತೆ ವ್ಯತ್ಯಾಸಗೊಳ್ಳುವುದು. ಹಾಗಾಗಿ ಅದು ಸರಿದೂಗಿಸುವ ಮಟ್ಟವಾಗಿರುತ್ತದೆ ಸರಿದೂಗಿಸುವ ವಲಯವಾಗಿದೆ ಎಂದು ಭಾವಿಸುವನು. ಈ ಪರಿಕಲ್ಪನೆ ಐರಿಯ "ತೇಲುವ ತತ್ವ"ಕ್ಕೆ ಹತ್ತಿರವಾಗಿದೆ.

ಸಮತೋಲನದ ನಿದರ್ಶನಗಳು: 1. ಭೂಮಿಯ ಸಮತೋಲನ ಕ್ರಿಯೆಯನ್ನು ಭೂಸವೆತ ಕಾರ್ಯದಲ್ಲಿ ಸ್ಪಷ್ಟವಾಗಿ ಕಾಣಬಹುದು ಪರ್ವತಗಳು ಉಗಮ ಹೊಂದಿದಂತೆ ವಿವಿಧ ಭೂಸವೆತದ ಕರ್ತೃಗಳು ಎತ್ತರವಾದ ಈ ಭೂಭಾಗಗಳನ್ನು ಸವೆಸಿ, ಆ ವಸ್ತುಗಳನ್ನು ತಗ್ಗು ಪ್ರದೇಶಗಳಿಗೆ ಸ್ಥಳಾಂತರಿಸುವ ಕಾರ್ಯದಲ್ಲಿ ತೊಡಗುತ್ತವೆ. ಭೂಮಿ ಹಾಗೂ ಸಮುದ್ರ ತೀರಗಳಲ್ಲಿಈ ವಸ್ತುಗಳು ನಿರಂತರವಾಗಿ ಅತ್ಯಧಿಕ ಪ್ರಮಾಣದಲ್ಲಿ ಪದರಗಳ ರೂಪದಲ್ಲಿ ಸಂಚಯನಗೊಳ್ಳುವವು. ಈ ಕ್ರಿಯೆಯಿಂದ ಪದರಗಳು ಸಂಚಯನಗೊಂಡ ಪ್ರದೇಶದಲ್ಲಿ ಒತ್ತಡ ಅತ್ಯಧಿಕಗೊಂಡು ಆ ಭಾಗ ನಿಧಾನವಾಗಿ ಕುಸಿತಕ್ಕೀಡಾಗುವುದು. ಇದರಿಂದ ಮಿಶ್ರ ಉಪಸ್ತರದ ಶಿಲಾಪಾಕ ಸ್ಥಳಾಂತರಗೊಂಡು ಸಾಂದ್ರತೆ ಕಡಿಮೆಯಾಗಿರುವ ಪರ್ವತಗಳ ಕಡೆಗೆ ನಿಧಾನವಾಗಿ ಹರಿದು ಮೇಲೇರುವುದು. ಇದರಿಂದ ಪರ್ವತಗಳು ನಿಧಾನವಾಗಿ ಮೇಲೇರುತ್ತವೆ. ಶಿಲಾಪಾಕ ಸ್ಥಳಾಂತರಗೊಂಡು ಭೂ ಮೇಲ್ಮೈನ ಸ್ವರೂಪಗಳನ್ನು ಸರಿದೂಗಿಸುವ ಮಟ್ಟವನ್ನು ಸರಿದೂಗಿಸುವ ಆಳ ಎಂದು ಕರೆಯುವರು. ಇದು ಸರಾಸರಿ 65 ಕಿಮೀ ಆಳದಲ್ಲಿರುವುದೆಂದು ಅಂದಾಜು ಮಾಡಲಾಗಿದೆ. ಹೀಗೆ ಭೂ ಪ್ರದೇಶಗಳು ನಿರಂತರವಾಗಿ ಸವೆಸಲ್ಪಟ್ಟು ಸಾಗರ ಭಾಗಗಳಿಗೆ ಸ್ಥಳಾಂತರಿಸಲ್ಪಟ್ಟಿರುವುದು. ಈ ಕ್ರಿಯೆಯಿಂದಾಗಿಯೇ ಭೂ ಪ್ರದೇಶಗಳು ಅಸ್ತಿತ್ವದಲ್ಲಿವೆ.

2. ಭೂಮಿಯ ಕೆಲವು ಭಾಗಗಳಲ್ಲಿ ಅಗಾಧ ಪ್ರಮಾಣದಲ್ಲಿ ಸಂಚಯವಾಗಿರುವ ಪದರು ಶಿಲೆಗಳ ಗುಣಲಕ್ಷಣಗಳನ್ನು ಭಾಗಶಃ ತಿಳಿದುಕೊಳ್ಳಲು ಸಮತೋಲನ ಸಿದ್ಧಾಂತ ಸಹಾಯಕವಾಗಿದೆ. ಈ ಪದರ ಶಿಲೆಗಳು ಒಳಗೊಂಡಿರುವ ಅವಶೇಷಗಳು ಸು. 25ರಿಂದ 60 ಮಿಲಿಯನ್ ವರ್ಷಗಳಿಂದೀಚೆಗೆ ಅಂದರೆ ಒಂದೇ ಭೂ ಇತಿಹಾಸ ಯುಗಕ್ಕೆ ಸೇರಿದವುಗಳಾಗಿವೆ. ಉದಾ: ನ್ಯೂಜಿಲೆಂಡಿನಲ್ಲಿ ಸು. 8 ಕಿಮೀ ದಪ್ಪನಾದ ಕಣಶಿಲೆಯ ಪದರು ಸು. 50 ಮಿಲಿಯನ್ ವರ್ಷಗಳ ಅವಧಿಯಲ್ಲಿ ಸಂಚಯನಗೊಂಡ ಪದರಗಳು ಒಂದರ ಮೇಲೊಂದರಂತೆ ಪೇರಿಸಲ್ಪಟ್ಟಿವೆ. ಈ ರೀತಿಯ ಪದರುಶಿಲೆಗಳು, ಸಂಚಯವಾಗಿರುವ ಭಾಗಗಳು ಬಹು ಹಿಂದೆ ಅತಿ ತಗ್ಗಾದ ಭಾಗಗಳಾಗಿದ್ದು, ಇವುಗಳಲ್ಲಿ ಕಣಶಿಲೆಗಳು ಅಧಿಕವಾಗಿ ಸಂಚಯನವಾಗಲು ಕಾರಣವಾಗಿದೆ.

3. ಪ್ಲಿಸ್ಟೋಸಿನ್ ಯುಗದಲ್ಲಿ ಅಂದರೆ, ಸು. 2,500 ರಿಂದ 5,000 ವರ್ಷಗಳ ಹಿಂದೆ ಇದ್ದಿತೆಂದು ನಂಬಲಾಗಿರುವ ಖಂಡಾಂತರ ಹಿಮನದಿಗಳು ಉತ್ತರ ಅಮೆರಿಕ ಹಾಗೂ ಯುರೋಪ್ ಖಂಡಗಳ ಉತ್ತರದ ಭಾಗವನ್ನು ಆವರಿಸಿದ್ದವು. ಈ ಪ್ರದೇಶಗಳಲ್ಲಿ ಹಿಮ ಪದರ ಸಾವಿರಾರು ಮೀಟರ್ ಎತ್ತರದವರೆಗೆ ಸಂಚಯನಗೊಂಡಿದ್ದವು. ಇದರಿಂದ ಈ ಪ್ರದೇಶಗಳು ಕುಸಿತಕ್ಕೀಡಾದವು. ವಾಯುಗುಣದ ಬದಲಾವಣೆಯಿಂದ ಈ ಪ್ರದೇಶದಲ್ಲಿನ ಹಿಮಪದರಗಳು ಸಂಪೂರ್ಣವಾಗಿ ಕಾಣದಾದವು. ಇದರಿಂದ ಹಿಮಪದರುಗಳ ಒತ್ತಡದಿಂದ ಈ ಪ್ರದೇಶಗಳು ಸ್ವತಂತ್ರಗೊಂಡವು. ಈ ಪ್ರದೇಶಗಳ ಭಾರ ಅಥವಾ ಸಾಂದ್ರತೆ ಕಡಿಮೆಯಾದುದರಿಂದ ಈ ಪ್ರದೇಶಗಳು ಮೇಲೆತ್ತಲ್ಪಡುತ್ತವೆ. ಇದಕ್ಕೆ ಪುರಾವೆಯಾಗಿ ಹಿಂದೆ ತೀರ ಪ್ರದೇಶಗಳಾಗಿದ್ದ ಅನೇಕ ಭಾಗಗಳು ಇಂದು ಸಮುದ್ರಮಟ್ಟದಿಂದ ಬಹು ಎತ್ತರದಲ್ಲಿವೆ. ಬಾಲ್ಟಿಕ್ ಸಮುದ್ರ ಹಿಮಯುಗದ ಅವಧಿಯಲ್ಲಿ ಕುಸಿತಕ್ಕೀಡಾಗಿ ಆರ್ಕ್‌ಟಿಕ್ ಸಾಗರದೊಂದಿಗೆ ಸಂಪರ್ಕವನ್ನು ಹೊಂದಿತು. ಆದರೆ ಹಿಮಯುಗದ ಅನಂತರ ಈ ಪ್ರದೇಶ ನಿಧಾನವಾಗಿ ಮೇಲೆತ್ತಲ್ಪಡುತ್ತಿರುವುದರಿಂದ ಇಂದು ಬಾಲ್ಟಿಕ್ ಮತ್ತು ಆರ್ಕ್‌ಟಿಕ್ ಸಾಗರಗಳು ಪ್ರತ್ಯೇಕಗೊಂಡಿವೆ. ಇವುಗಳು ಪುರಾತನ ಕಾಲದಲ್ಲಿ ಸಂಪರ್ಕಗೊಂಡಿದ್ದವೆಂಬುದನ್ನು ಈ ಪ್ರದೇಶದಲ್ಲಿ ಕಂಡುಬರುವ ಅನೇಕ ಪುರಾವೆಗಳು ನಿರೂಪಿಸುತ್ತವೆ. ಈ ಪ್ರದೇಶ ಇತ್ತೀಚೆಗೆ ಮೇಲೆತ್ತಲ್ಪಟ್ಟಿರುವುದರಿಂದ ಬಾಲ್ಟಿಕ್ ಸಮುದ್ರದ ವಿಸ್ತಾರವು ಕಡಿಮೆಯಾಗುತ್ತಾ ಬಂದಿದೆ. ಮೇಲೆತ್ತುವ ಪ್ರಕ್ರಿಯೆಯ ಪ್ರಮಾಣ ಪ್ರತಿಸಾವಿರ ವರ್ಷಗಳಿಗೆ ಸು. 5 ರಿಂದ 10 ಮೀ ಗಳಷ್ಟಿರುವುದು. ಇದರ ಏರಿಕೆಯ ಪ್ರಮಾಣ ಹೆಚ್ಚಾಗಿರುವ ಕೇಂದ್ರ ಭಾಗವೇ ಪ್ಲಿಸ್ಟೋಸಿನ್ ಯುಗದಲ್ಲಿ ಹಿಮರಾಶಿಯ ಕೇಂದ್ರವಾಗಿದ್ದಿತು.

4. ಇತ್ತೀಚಿನ ಯುಗದಲ್ಲಿ ನಿರ್ಮಾಣಗೊಂಡಿರುವ ಮಡಿಕೆ ಪರ್ವತಗಳು, ಸಾಗರಗಳ ಅಂತರ್ಗತ ಶ್ರೇಣಿಗಳು ಹಾಗೂ ಅವುಗಳಿಂದ ರೂಪಿತವಾಗಿರುವ ದ್ವೀಪಸ್ತೋಮಗಳು ಅಗ್ನಿಪರ್ವತ ಮತ್ತು ಭೂಕಂಪಗಳು ಸಂಭವಿಸುವ ಭೂಭಾಗಗಳಲ್ಲಿ ಕಂಡುಬರುತ್ತವೆ. ಜ್ವಾಲಾಮುಖಿಗಳು, ಪರ್ವತಗಳು ಮತ್ತು ದ್ವೀಪಗಳ ಸೃಷ್ಟಕರ್ತೃವಾಗಿದ್ದು, ಸಮತೋಲನ ನಿರ್ವಹಣೆಯ ರೂಪವಾಗಿರುತ್ತದೆ.

ಸಾಮಾನ್ಯವಾಗಿ ನೀಳವಾದ ಪರ್ವತ ಸರಣಿಗಳಿಗೆ ಹೊಂದಿಕೊಂಡಂತೆ ನೀಳವೂ ಮತ್ತು ಆಳವೂ ಆಗಿರುವ ಕಂದರಗಳು ಕಂಡುಬರುತ್ತವೆ. ಇದೊಂದು ಭೂಸಮತೋಲನಕ್ಕೆ ನಿದರ್ಶನವಾಗಿದೆ. ಪೆಸಿಫಿಕ್ ಸಾಗರ ವಲಯಕ್ಕೆ ಹೊಂದಿಕೊಂಡಂತೆ ಸಾಗರತಳದಲ್ಲಿ ಆಳವಾದ ಕಂದರಗಳಿವೆ. ಉದಾ: ಅಲಾಸ್ಕ ಮತ್ತು ಆಂಡಿಸ್ ಪರ್ವತಗಳ ಕರಾವಳಿ. ಇದೇ ರೀತಿ ಹಿಮಾಲಯ ಪರ್ವತಗಳಿಗೆ ಹೊಂದಿಕೊಂಡಂತೆ ಗಂಗಾ ಬಯಲಿದೆ. ಇದನ್ನೂ ಕಂದರವೆಂದೇ ಪರಿಗಣಿಸಲಾಗಿದೆ.

5. ಪುರಾತನ ಭೂಫಲಕಗಳು ಸಮತೋಲನದ ಲಕ್ಷಣಗಳನ್ನು ಹೊಂದಿವೆ. ಪುರಾತನ ಕಾಲದಿಂದಲೂ ನೈಸರ್ಗಿಕ ಕರ್ತೃಗಳ ನಿರಂತರವಾದ ಕಾರ್ಯಾಚರಣೆಯಿಂದ ಸವೆತಕ್ಕೊಳಪಟ್ಟು ಭೂಫಲಕಗಳ ಸಡಿಲವಾದ ಮೇಲ್ಭಾಗ ಕೃಶೀಕರಣಗೊಳ್ಳುವುದು. ಹಿಂದೆ ಭೂಮಟ್ಟದಿಂದ ತಳದಲ್ಲಿ ಹುದಗಿದ ಶಿಲೆಗಳು ಮೇಲೆದ್ದು ನಿಂತಿವೆ. ಅವು ಸವೆತಕ್ಕೊಳಗಾದರೂ ಇಂದಿಗೂ ಸಮುದ್ರಮಟ್ಟದಿಂದ ಎತ್ತರದಲ್ಲಿವೆ. ಇದಕ್ಕೆ ಅವುಗಳ ತಳಭಾಗದಲ್ಲಿನ ಶಿಲಾಪಾಕ ಹೊರಹೊಮ್ಮಿ ಅವುಗಳ ಸಾಂದ್ರತೆ ಹೆಚ್ಚಿರುವುದು ಪ್ರಮುಖ ಕಾರಣವಾಗಿದೆ.

ಮೇಲ್ಕಂಡವುಗಳಲ್ಲದೆ, ಪ್ರಪಂಚದ ವಿವಿಧ ಭಾಗಗಳಲ್ಲಿ ಏರ್ಪಡುವ ಊರ್ಧ್ವಮುಖ ಮತ್ತು ಅಧೋಮುಖ ಭೂಸ್ಥಾನಪಲ್ಲಟಗಳಿಗೆ ಸಮತೋಲನ ಸಿದ್ಧಾಂತವನ್ನು ಪರಿಹಾರವನ್ನಾಗಿ ಬಳಸಲಾಗುತ್ತಿದೆ. ಹೀಗಾಗಿ ಭೂ ಸಮತೋಲನ ಕ್ರಿಯೆ ಕೇವಲ ಸೈದ್ಧಾಂತಿಕವಾಗಿ ಉಳಿದಿರದೆ ವಸ್ತುಶಃ ನೈಜವಾಗಿರುವುದನ್ನು ಮನಗಾಣಬಹುದಾಗಿದೆ. (ಪಿ.ಎಂ.)

**ಭೂಆಕೃತಿವಿಜ್ಞಾನ (ಭೂ ಸ್ವರೂಪ ವಿಜ್ಞಾನ):** ಭೂಮಿಯ ಆನುಷಂಗಿಕ ಮೇಲ್ಮೈಲಕ್ಷಣಗಳ ಉಗಮ ಕುರಿತ ವೈಜ್ಞಾನಿಕ ಅಧ್ಯಯನ (ಜಿಯೊ ಮಾರ್ಫಾಲಜಿ). ಪ್ರಾಥಮಿಕ ಧಾತುಗಳಲ್ಲಿ ಕಂಡುಬರುವ ಸವೆತದಿಂದ (ಸವಕಳಿ) ಮತ್ತು ಕ್ಷಯಾವಶೇಷಗಳ ರಾಶಿರೂಪಣೆಗಳಿಂದ ಉಂಟಾಗುವ ಭೂಲಕ್ಷಣಗಳ ಅಧ್ಯಯನವಿದು. ಈ ಅಧ್ಯಯನ ಮಾಡುವ ಸಲುವಾಗಿ ಸು. 19ನೆಯ ಶತಮಾನದ ಪ್ರಾರಂಭದಲ್ಲಿ ಎರಡು ಬಗೆಯ ಸಂಶೋಧನ ವಿಧಾನಗಳನ್ನು ಅನುಸರಿಸಲಾಯಿತು. ಮೊದಲ ವಿಧಾನ ಭೂಮಿಯ ಮೇಲ್ಮೈಲಕ್ಷಣಗಳ ವರ್ಣನೆಗಳನ್ನು ಕುರಿತದ್ದು. ಎರಡನೆಯದು ಭೂಆಕೃತಿ ವಿಜ್ಞಾನದ ಪ್ರಾಯೋಗಿಕ ಅಧ್ಯಯನ ಕುರಿತದ್ದು. ಮೊದಲನೆಯ ವಿಧಾನವನ್ನು ಪ್ರಧಾನವಾಗಿ ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಅಲ್ಲಿಯ ಭೂಗೋಳ ವಿಜ್ಞಾನಜ್ಞರು ಅನುಸರಿಸುತ್ತಿದ್ದರು. ಎರಡನೆಯ ವಿಧಾನದ ಅಧ್ಯಯನವನ್ನು ಫ್ರಾನ್ಸಿನಲ್ಲಿ ಜಿಯೊಲಾಜಿಕ್ ಡೈನಮಿಕ್ ಎಂಬ ಹೆಸರಿನಡಿಯಲ್ಲಿ ನಡೆಸಲಾಗುತ್ತಿತ್ತು.

ಭೂಮಿಯ ಮೇಲ್ಮೈಲಕ್ಷಣಗಳು ಕೇವಲ ಕೆಲವೇ ಪ್ರಮುಖ ಶಕ್ತಿಗಳ ಕಾರ್ಯಗಳಿಂದ ರೂಪುಗೊಂಡಂಥವು ಎಂಬ ವಾದವನ್ನು ಡಬ್ಲ್ಯು.ಎಮ್. ಡೇವಿಸ್ ಎಂಬವ ಪ್ರತಿಪಾದಿಸಿದ. ಈತನ ಸವೆತ ಚಕ್ರ (ಎರೋಶನ್ ಸೈಕಲ್) ಪರಿಕಲ್ಪನೆ ಬಲು ಜನಪ್ರಿಯತೆ ಗಳಿಸಿತು. ಇದರ ಹಿನ್ನೆಲೆಯ ತತ್ತ್ವ ಮೂಲತಃ ವರ್ಣನಾತ್ಮಕವಾಗಿ ಉಳಿಯಿತೇ ವಿನಃ ಭೂಇತಿಹಾಸದ ಉಗಮವನ್ನು ವಿವರಿಸುವಲ್ಲಿ ಯಶಸ್ವಿ ಆಗಲಿಲ್ಲ.

ಭೂಮಿಯ ಮೇಲ್ಮೈಲಕ್ಷಣಗಳನ್ನು ಕುರಿತಾದ ಅಧ್ಯಯನದಲ್ಲಿ ಭೂಕಾರ್ಯ ಕರ್ತೃಗಳೆನಿಸಿರುವ ನದಿ, ನೀರ್ಗಲ್ಲುಪ್ರವಾಹ ಮೊದಲಾದವು ಪ್ರಕೃತಿಯಲ್ಲಿ ನಡೆಸುವ ಕಾರ್ಯವಿಧಾನಗಳು ಸೇರಿವೆ. ಭೂಮಿಯ ಮೇಲಿನ ವಿವಿಧ ವಸ್ತುಗಳ ಮೇಲೆ ನಡೆಸುವ ಪ್ರಕ್ರಿಯೆಗಳು, ಆ ವಸ್ತುಗಳ ಭೌತಗುಣಗಳು, ಅವುಗಳ ಉಪಯೋಗಗಳು ಹಾಗೂ ಅವುಗಳ ನಡುವಿನ ಪರಸ್ಪರ ಸಂಬಂಧಗಳು ಮೊದಲಾದವನ್ನು ಕುರಿತಂತೆ ಅಧ್ಯಯನ ನಡೆದಿದೆ. ಇವಲ್ಲದೆ ಸಾಗರ ತಳಗಳಲ್ಲಿಯ ಮೇಲ್ಮೈ ಲಕ್ಷಣಗಳು, ಅಲ್ಲಿಯ ಕ್ರಿಯೆಗಳು, ಸವೆತದ ಗತಿ, ಸಂಚಯನಗಳು ಹಾಗೂ ಅವುಗಳ ಕರ್ತೃಗಳ ಚಟುವಟಿಕೆಗಳು ಇವನ್ನು ಕುರಿತಂತೆಯೂ ಭೂಆಕೃತಿವಿಜ್ಞಾನದಲ್ಲಿ ಅಧ್ಯಯನ ನಡೆಸುವುದಿದೆ. ಮೊದಲ ಬಾರಿಗೆ ಈ ವಿಜ್ಞಾನವಿಭಾಗ ಕೇವಲ ಒಂದು ವರ್ಗೀಕರಣ ವಿಜ್ಞಾನ ಅಥವಾ ಪ್ರಕೃತಿಯ ಇತಿಹಾಸವನ್ನು ಕುರಿತ ವಿಜ್ಞಾನವಾಗಿ ಪ್ರಾರಂಭವಾದದ್ದು ಕ್ರಮೇಣ ಭೂಮಿಯ ಎಲ್ಲ ಬಗೆಯ ಭೂಸ್ವರೂಪಗಳಿಗೂ (ಲ್ಯಾಂಡ್ ಫಾರಮ್ಸ್) ಅನ್ವಯಿಸುವ ಮತ್ತು ತತ್ತ್ವರೂಪದಲ್ಲಿ ನಿರೂಪಿತವಾಗುವ ವಿಜ್ಞಾನರಾಶಿಯಾಗಿ ಬೆಳೆದಿದೆ.

ಪೂರ್ವೇತಿಹಾಸ : ಗ್ರೀಕರು, ರೋಮನ್ನರು ಮತ್ತು ಅರಬ್ಬರು ಭೂಆಕೃತಿಗಳ ರಚನೆಗೆ ಪೂರಕವಾದ ಪ್ರಕ್ರಿಯೆಗಳನ್ನು ಬಲು ಹಿಂದೆಯೇ ಗುರುತಿಸಿದ್ದರು. ಅವರ ಅಭಿಪ್ರಾಯಗಳು ಅನಂತರ ನಡೆದ ಭೂಆಕೃತಿವಿಜ್ಞಾನದ ಅಧ್ಯಯನಗಳ ಮೇಲೆ ಅಂಥ ಪರಿಣಾಮವನ್ನೇನೂ ಬೀರಲಿಲ್ಲ. ಬದಲಿಗೆ ಭೂಆಕೃತಿಗಳನ್ನು ಕುರಿತಂತೆ ಅಧ್ಯಯನಕ್ಕೆ ಉತ್ತೇಜನ ನೀಡಿದುವು. ಆಗಿನ ಕಾಲಕ್ಕೆ ಭೂಆಕೃತಿ ವಿಜ್ಞಾನವನ್ನು ಕುರಿತಂತೆ ಭೂಪ್ರಕ್ರಿಯೆಗಳ ಬಗೆಗೆ ಇತರರೂ ಪ್ರಸ್ತಾವಿಸಿದ್ದರು. ಉದಾಹರಣೆಗೆ ಇಟಲಿಯ ಲಿಯನಾರ್ಡೊ ಡ ವಿಂಚಿ (1452–1519), ಜರ್ಮನಿಯ ಅಗ್ರಿಕೋಲ (1494–1555) ಮತ್ತು ಫ್ರಾನ್ಸಿನ ಬರ್ನಾರ್ಡ್ ಪಾಲಿಸ್ಸಿ (1510–90) ಮೊದಲಾದವರು ನದಿಗಳ ಭೂಕೊರೆತ ಸಾಮರ್ಥ್ಯ ಅಥವಾ ಭೂಕ್ಷಯದ ವಿಚಾರವಾಗಿ ನಂಬಿಕೆ ತಳೆದಿದ್ದರು.

18ನೆಯ ಶತಮಾನದಲ್ಲಿ ಗಿಯೋವನ್ನಿ (1712–84) ಮತ್ತು ಗುಡಾರ್ಡ್ (1715–86) ಮೊದಲಾದ ಕೆಲವು ಪ್ರಗತಿಪರ ಲೇಖಕರು ನದಿಗಳ ಭೂಕೊರೆತ ಸಾಮರ್ಥ್ಯದಲ್ಲಿ ನಂಬಿಕೆ ವ್ಯಕ್ತಪಡಿಸಿದರು. ಜರ್ಮನಿಯ ಖನಿಜವಿಜ್ಞಾನಿ ಅಬ್ರಹಾಮ್ ಗೊತ್ಲಾಬ್ ವರ್ನರ್ (1749–1817) ನಿರೂಪಿಸಿದ ಪ್ರಾದೇಶಿಕ ಭೂವಿಜ್ಞಾನ (ಜಿಯಾಗ್ನೊಸಿ) ಭೂಆಕೃತಿವಿಜ್ಞಾನದ ಅಸ್ತಿತ್ವವನ್ನೇ ಮರೆಸಿತು. ಭೂಮಿಯನ್ನು ವ್ಯಾಪಿಸಿರುವ ಆದಿಮಹಾಸಾಗರದ ಅಸ್ತಿತ್ವವನ್ನು ವರ್ನರ್ ಊಹಿಸಿಕೊಂಡಿದ್ದ. ಅದರಲ್ಲಿ ಮಡ್ಡಿ ಅಥವಾ ಚರಟಗಳು ಸಂಗ್ರಹವಾಗಿ ಕಾಲಾನುಕ್ರಮದಲ್ಲಿ ಯುಕ್ತ ಬದಲಾವಣೆಯಾದ ಸಲುವಾಗಿ ಒಂದರ ಮೇಲೊಂದು ಸ್ತರಗಳು ಪೇರಿಕೊಂಡು ಆದಿಶಿಲೆಗಳ ರಚನೆಯಾಯಿತೆಂದೂ ಮುಂದೆ ದ್ವಿತೀಯವರ್ಗದ ಶಿಲೆಗಳು, ತೃತಿಯ ವರ್ಗದ ಶಿಲೆಗಳು, ಅಗ್ನಿಶಿಲೆಗಳು ಉತ್ಪತ್ತಿಯಾದವೆಂದೂ ವಾದಿಸಿದ. ಆದರೆ ವರ್ನರ್‌ವಾದಿಗಳು ಅಥವಾ ಜಲಜನಿತವಾದಿಗಳು ವಿವರಿಸಿದ್ದ ಪ್ರಪಂಚವ್ಯಾಪಿ ಆದಿಸಾಗರ ಮುಂದೆ ಹೇಗೆ ಕಣ್ಮರೆಯಾಯಿತು ಎಂಬುದನ್ನು ವಿವರಿಸಲು ಅಸಮರ್ಥರಾದರು. ಅದು ಹಠಾತ್ತನೆ ಕಣ್ಮರೆಯಾಗಿರಬೇಕೆಂದು ಮಾತ್ರ ಭಾವಿಸಲಾಯಿತು. ಸಾಗರದಲ್ಲಾದ ಸಂಚಯನ, ಸವೆತಗಳಿಂದ ಮತ್ತು ಇದಕ್ಕೆ ಮಿಗಿಲಾಗಿ ಸಾಗರದ ಹಠಾತ್ ಹಿಂಜರಿಕೆಯಿಂದ ಮೇಲ್ಮೈ ಉತ್ಪತ್ತಿಯಾಯಿತೆಂದು ವಿವರಣೆ ನೀಡಿದರು.

ಹುಟ್ಟು : ಜಲಜನಿತವಾದಿಗಳು (ವರ್ನರಿಯನ್ಸ್) ಮೇಲುಗೈ ಪಡೆದಿದ್ದಾಗ ಪ್ರಕೃತಿತತ್ತ್ವವಾದಿಗಳು ನಡೆಸಿದ ಕ್ಷೇತ್ರವೀಕ್ಷಣೆ ಭೂಆಕೃತಿವಿಜ್ಞಾನದ ಹುಟ್ಟಿಗೆ ನಾಂದಿಯಾಯಿತು. ಹರಿಯುವ ನೀರು ಮತ್ತು ನದಿಗಳ ಕಾರ್ಯ ಕುರಿತು ವಿವರವಾಗಿ ಅಭ್ಯಸಿಸಿದ ಎಲ್. ಜಿ.ಡ್ಯೂಬಾಟ್ ಅವರೂ ಸೇರಿದಂತೆ ಇಟಲಿ ಮತ್ತು ಫ್ರೆಂಚ್ ಜಲವಿಭಾಗದ ಎಂಜಿನಿಯರುಗಳಿಗೆ ಇದರ ಕೀರ್ತಿ ಸಲ್ಲುತ್ತದೆ. ಫ್ರಾನ್ಸಿನ ಪ್ರಮುಖ ಭೂವಿಜ್ಞಾನಿಗಳ ಪೈಕಿ ಜೀನ್ ಬ್ಯಾಪ್ಟಿಸ್ಟ್ ಡಿ ಲಮಾರ್ಕ್ (1744–1829) ನದಿಗಳ ಸವೆತದ ಕಾರ್ಯದಲ್ಲಿ ನಂಬಿಕೆ ತಳೆದಿದ್ದ. ಈತ ತನ್ನ ಹೈಡ್ರೊಜಿಯಾಲಜಿ ಎಂಬ ಪುಸ್ತಕದಲ್ಲಿ (1802) ಹರಿಯುವ ನೀರು ಸಮತಟ್ಟಾದ ಪ್ರದೇಶಗಳನ್ನು ಕೃಶಗೊಳಿಸುವುದರಿಂದ ಪರ್ವತಗಳು ರೂಪುತಳೆಯುತ್ತವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ.

ಸ್ವಿಟ್ಜರ್ಲೆಂಡಿನ ಹೊರಾಸ್ ಬಿನಿಡಿಕ್ಟ್ ಡಿ ಸಾಸೂರ್ (1740–99) ಎಲ್ಲರಿಗಿಂತ ಸ್ವಲ್ಪ ಭಿನ್ನವಾದ ಅಭಿಪ್ರಾಯ ತಳೆದಿದ್ದ. ಸಣ್ಣಪುಟ್ಟ ಕೊಳ್ಳಗಳು ಅತಿರಭಸದಿಂದ ಬೀಳುವ ಮಳೆಯಿಂದಾಗುವುವೆಂದೂ ವಿಶಾಲಕೊಳ್ಳಗಳು ಅತಿ ರಭಸದಿಂದ ಹರಿಯುವ ನದಿಗಳ ಕೊರೆತಗಳಿಂದ ಆಗುವುವೆಂದೂ ತಿಳಿಸಿದ. ಹೀಗಾಗಿ ಪ್ರಪಂಚವ್ಯಾಪಿಯಾದ ಸಾಗರ ಭೂಮಿಯೊಳಕ್ಕೆ ಸಂದುಗಳ ಮೂಲಕ ಕಣ್ಮರೆಯಾಯಿತೆಂದೂ ಅಭಿಪ್ರಾಯಪಟ್ಟ.. ಹಿಮನದಿಗಳ ಕಾರ್ಯವನ್ನೂ ಈತ ಅಭ್ಯಸಿಸಿದ. ಈತ ಸ್ಕಾಟ್ಲೆಂಡಿನ ಭೂವಿಜ್ಞಾನಿ ಜೇಮ್ಸ್ ಹಟ್ಟನ್ (1726–97) ಮತ್ತು ಪ್ಲೆ ಫೇರ್ ಹೊರೇಸ್ ಎಂಬವರ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದ. ನದಿಗಳ ಕಾರ್ಯಾಚರಣೆಯಲ್ಲಿ ನಂಬಿಕೆಯಿಟ್ಟವರ ಪೈಕಿ ಜೇಮ್ಸ್ ಹಟ್ಟನ್ ಮೊದಲಿಗ. ಈತ ಆಧುನಿಕ ಭೂಆಕೃತಿವಿಜ್ಞಾನದ ನಿಜ ಪ್ರವರ್ತಕ ಎಂಬ ಖ್ಯಾತಿಗೆ ಭಾಜನನಾಗಿದ್ದಾನೆ. ಸ್ಕಾಟ್ಲೆಂಡಿನಲ್ಲಿ ಈತ ಅಗ್ನಿ ಜನಿತವಾದಿಗಳ (ಪ್ಲೂಟೋನಿಸ್ಟ್) ನಾಯಕತ್ವ ವಹಿಸಿದ್ದ. ಭೂಮಿಯ ಮೇಲಿದ್ದ ಶಿಲೆಗಳೆಲ್ಲ ಮೂಲ ಶಿಲೆಗಳಲ್ಲಿ ಶಿಥಿಲಗೊಂಡು ಛಿದ್ರಗೊಂಡ ಶಿಲಾಸಾಮಗ್ರಿಗಳೆಲ್ಲವೂ ನೀರಿನ ಮೂಲಕ ಸಾಗಿ ಸಾಗರಗಳಲ್ಲಿ ಸಂಚಯನವಾಗುವುದರ ಮೂಲಕ ರಚಿತವಾಗಿವೆ ಎಂಬುದಾಗಿ ಹಟ್ಟನ್ ವಾದಿಸಿದ. ಸಂಚಯನಗೊಂಡ ನಿಕ್ಷೇಪಗಳು ಕಾಲಕ್ರಮದಲ್ಲಿ ಭೂಮಿಯ ಅಂತರಾಳದಲ್ಲಿಯ ಅತ್ಯಧಿಕ ಉಷ್ಣತೆಯಿಂದ ಕರಗಿ ಲಾವಾ ಅಥವಾ ಮ್ಯಾಗ್ಮಾ ಎಂಬ ವಸ್ತುವಿಗೆ ಪರಿವರ್ತನೆ ಹೊಂದಿದಂಥವು; ಅಂತರಾಳದಲ್ಲಿಯ ಒತ್ತಡದಿಂದ ಕ್ರಮೇಣ ಹೊರದೂಡಲ್ಪಟ್ಟು ವಿರೂಪಗೊಂಡು ಈ ಶಿಲೆಗಳು ಈಗ ಮೇಲೆ ಕಾಣಿಸಿವೆ ಎಂಬುದು ಹಟ್ಟನನ ಅಭಿಪ್ರಾಯವಾಗಿತ್ತು.

ಹಟ್ಟನ್ ಕಾಲವಾದ ಬಳಿಕ ಅವನ ಸಹೋದ್ಯೋಗಿ ಜಾನ್ ಪ್ಲೆ ಫೇರ್ ಎಂಬವ ಭೂಮಿಯ ಬಗ್ಗೆ ಹಟ್ಟನ್ ಪ್ರತಿಪಾದಿಸಿದ್ದ ಸಿದ್ಧಾಂತವನ್ನು ಮತ್ತಷ್ಟು ಪುಷ್ಟೀಕರಿಸಿದ. ಭೂಮಿಯ ಮೇಲೆ ಹರಿಯುವ ನದಿಗಳು ಭೂಮಿಯ ಮೇಲ್ಮೈ ರಚನೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುವ ಕರ್ತೃಗಳು ಎಂಬುದನ್ನು ಈತ ಒತ್ತಿ ಹೇಳಿದ. ನದಿಗಳು ಕಣಿವೆಗಳನ್ನು ನಿರ್ಮಿಸುವುವೆಂದೂ ನದಿಯ ಬೆಳವಣಿಗೆಯಲ್ಲಿ ಇದರ ಪ್ರಧಾನ ಭಾಗಕ್ಕೂ (ಟ್ರಂಕ್) ಶಾಖೆಗಳಿಗೂ (ಟ್ರಿಬ್ಯುಟರೀಸ್) ಅತ್ಯಂತ ಸಮರ್ಪಕ ಹೊಂದಾಣಿಕೆ ಇದೆಯೆಂದೂ ನಿರೂಪಿಸಿದ.

ಐತಿಹಾಸಿಕ ಸಮೀಕ್ಷೆ : ಭೂಆಕೃತಿವಿಜ್ಞಾನ ಭೂವಿಜ್ಞಾನಕ್ಕಿಂತಲೂ ಒಂದು ಕಿರಿಯ ವೈಜ್ಞಾನಿಕ ವಿಷಯವಾಗಿ ಅಭಿವೃದ್ಧಿಗೊಂಡಿತು. ಭೂಮಿಯ ಮೇಲ್ಮೈ ಏರಿಳಿತಗಳನ್ನು (ರಿಲೀಫ್) ಕುರಿತಾದ ವಾದವಿವಾದಗಳು ಬಹಳ ಕಾಲದವರೆಗೆ ಮುಂದುವರಿದುವು. ಭೂವಿಜ್ಞಾನಿಗಳು ಗುರುತಿಸಿದ ಮಡಿಕೆಗಳಂಥ ರಚನೆಗಳು ಪರ್ವತಶ್ರೇಣಿಗಳ ಮತ್ತು ಕಣಿವೆಗಳ ನಿರ್ಮಾಣಕ್ಕೆ ಕಾರಣವಾದವೆಂದು ಭಾವಿಸಲಾಯಿತು. 19ನೆಯ ಶತಮಾನದ ಪ್ರಾರಂಭದಲ್ಲಿ ಭೂವಿಜ್ಞಾನಿ ಪ್ಲೇ ಫೇರ್ ನದಿಗಳ ಕೊರೆತದಿಂದ ನಿರ್ಮಿತವಾದ ಕಣಿವೆಗಳನ್ನು ಗುರುತಿಸಿದರು.

ಪಾವೆಲ್ (1875), ರಿಚ್‌ತೋಫೆನ್(1886) ಮತ್ತು ಮಾರ್ಟೋನ್ (1909) ಇವರೆಲ್ಲ ನದಿಗಳ ಕೊರೆತ ಮತ್ತು ಕಣಿವೆಗಳ ರಚನೆಯ ಬಗೆಗೆ ಆಧುನಿಕ ಅಭಿಪ್ರಾಯಗಳನ್ನು ರೂಪಿಸಿದರು. ಎ. ಪೆಂಕ್ (1909) ನೀರ್ಗಲ್ಲುನದಿಗಳ ಕೆಳಗಿನ ಭೂವಿನ್ಯಾಸ ರಚನೆ ಮತ್ತು ಅದರ ಪ್ರಮುಖ ಲಕ್ಷಣಗಳನ್ನು ಗುರುತಿಸಿದರು. ಇವರು ಪ್ರಮುಖ ಭೂಮೇಲ್ಮೈ ಲಕ್ಷಣ ರೂಪಣೆಗೆ (ರಿಲೀಫ್ ಫಾರ್ಮೇಷನ್) ಪೂರಕವಾಗಿ ಭೂಮಿಯನ್ನು ವಾಯುಗುಣದಿಂದ ನಿಯಂತ್ರಿಸಲ್ಪಟ್ಟ ಮೂರು ವಲಯಗಳಾಗಿ ವಿಭಾಗಿಸಿದರು. ಇದರಿಂದ ಪ್ರಭಾವಿತರಾದ ಡಬ್ಲ್ಯು. ಎಮ್. ಡೇವಿಸ್ (1899–1912) ಭೂಆಕೃತಿವಿಜ್ಞಾನದಲ್ಲಿ ಉತ್ಪತ್ತಿಯ ತತ್ತ್ವವನ್ನು (ಜೆನೆಟಿಕ್‌ತಿಯರಿ) ನಿರೂಪಿಸಲು ಸಾಧ್ಯವಾಯಿತು. ಭೂವಿಜ್ಞಾನ ಅಥವಾ ಪವನವಿಜ್ಞಾನದ ಜೊತೆಗೆ ಇವರ ತತ್ತ್ವ ಇನ್ನೂ ನೇರ ಸಂಬಂಧ ಪಡೆದಿಲ್ಲ. ಪಾಸರ್ಜ್ (1912) ಎಂಬವರು ಬಲು ಹಿಂದೆಯೇ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದರೂ ಈ ಮೇಲೆ ತಿಳಿಸಿದ ವಿವರಣೆಗಳನ್ನು ಕೇವಲ ಕಳೆದ 50 ವರ್ಷಗಳಿಂದೀಚೆಗೆ ಭೂಆಕೃತಿ ವಿಜ್ಞಾನದ ಅಧ್ಯಯನದಲ್ಲಿ ಸಮರ್ಪಕವಾಗಿ ಅಳವಡಿಸಲಾಗಿದೆ. ಎಂದೇ ಆಧುನಿಕ ಜೀವಿಕಲ್ಪದಲ್ಲಿ ನಡೆದ ಭೂವೈಜ್ಞಾನಿಕ ಪ್ರಕ್ರಿಯೆಗಳು ಮುಖ್ಯವಾಗಿ ಗತ್ಯಾತ್ಮಕ ಭೂ ಆಕೃತಿವಿಜ್ಞಾನಕ್ಕೆ (ಡೈನಮಿಕಲ್ ಮಾರ್ಫಾಲಜಿ) ಸಂಬಂಧಿಸಿವೆ ಎಂದು ಹೇಳಬಹುದು. ಈ ಪ್ರಕ್ರಿಯೆಗಳಿಗೂ ಇವುಗಳ ಕಾರ್ಯಗಳಿಂದ ರೂಪುಗೊಂಡ ಭೂಮಿಯ ಮೇಲ್ಮೈಲಕ್ಷಣಗಳಿಗೂ ನಡುವೆ ಇರುವ ವ್ಯತ್ಯಾಸಗಳು ಹಲವು. ಭೂಮಿಯ ಮೇಲಿನ ಹವೆಯಲ್ಲಾಗುವ ಬದಲಾವಣೆಯ ಕಾರಣವಾಗಿ ಅನೇಕ ವಿಧವಾದ ವ್ಯಾಪಕ ಪರಿಣಾಮಗಳಾಗುತ್ತವೆ. ವಾಯು ಗುಣವಲಯಗಳಲ್ಲಿ ಕೆಲವು ವಿಶಿಷ್ಟ ಮೇಲ್ಮೈಲಕ್ಷಣಗಳನ್ನೂ ಗುರುತಿಸಬಹುದಾಗಿದೆ. ಈ ತೆರನಾದ ಅಧ್ಯಯನಕ್ಕೆ ವಾಯುಗುಣ ಭೂಆಕೃತಿವಿಜ್ಞಾನ (ಕ್ಲೈಮ್ಯಾಟಿಕ್ ಜಿಯೊಮಾರ್ಫಾಲಜಿ) ಎಂದು ಹೆಸರು. ಭೂಕಾರ್ಯ ಕರ್ತೃಗಳ ಸವೆತವನ್ನು ವಿರೋಧಿಸುವ ಸಾಮರ್ಥ್ಯವಿರುವ ಅನೇಕ ರಚನೆಗಳು ಭೂತೊಗಟೆಯಲ್ಲಿ ಕಂಡುಬರುತ್ತವೆ. ಇದರ ಅಧ್ಯಯನಕ್ಕೆ ರಚನಾತ್ಮಕ ಭೂಆಕೃತಿವಿಜ್ಞಾನ (ಸ್ಟ್ರಕ್ಚರಲ್ ಜಿಯೊಮಾರ್ಫಾಲಜಿ) ಎಂದು ಹೆಸರು. ಈ ನಿಟ್ಟಿನಲ್ಲಿ ಇತ್ತೀಚಿನ ಬೆಳವಣಿಗೆಯೆಂದರೆ ಇಂದಿನ ಭೂಆಕೃತಿಗಳು ಎಲ್ಲ ಭಾಗಗಳಲ್ಲೂ ಏಕ ರೀತಿಯ ವಾಯುಗುಣವಿರುವ ಪರಿಸ್ಥಿತಿಗಳಲ್ಲಿ ರಚಿತವಾಗಿಲ್ಲದಿರುವುದು ಮತ್ತು ಅವುಗಳ ಆಕಾರದಲ್ಲಿ ಏಕರೀತಿಯ ರಚನಾಕ್ರಮವೂ ಕಂಡುಬರದಿರುವುದು. ಅವು ಹಿಂದಿನ ಯುಗಗಳ ಹವೆಯ ಪ್ರಭಾವದಿಂದ ರಚನೆಗಳನ್ನು ಹೊಂದಿರುವುದು ಮಾತ್ರವಲ್ಲದೆ ಪ್ರಾಚೀನ ರಚನಾಪರಂಪರೆಯನ್ನು ಹೊಂದಿರುವುದೂ ಕಂಡುಬರುತ್ತದೆ. ಈ ವೈವಿಧ್ಯಮಯ ಪರಂಪರೆಗಳು ಮತ್ತು ಅವುಗಳ ಬೆಳವಣಿಗೆಯನ್ನು ಕುರಿತಾದ ಅಧ್ಯಯನಕ್ಕೆ ವಾಯುಗುಣ ಸಂಬಂಧಿತ ಭೂಆಕೃತಿವಿಜ್ಞಾನ (ಕ್ಲೈಮೆಟೊ–ಜೆನೆಟಿಕ್ ಜಿಯೊಮಾರ್ಫಾಲಜಿ) ಎಂದು ಹೆಸರು.

| ಕಲ್ಪ | ಕಲ್ಪ ಭಾಗಗಳು | ರೇಡಿಯೊ ಮಾಪನೆಯಿಂದ ಗಣಿಸಿದ ಕಾಲಾವಧಿ (ಮಿಲಿಯನ್ ವರ್ಷಗಳಲ್ಲಿ) | ಚರಿತ್ರೆಯ ಮುಖ್ಯಾಂಶಗಳು | ಜೀವಿಗಳ ವಿಕಾಸ |
|---|---|---|---|---|
| ನವೀನ ಜೀವಿಕಲ್ಪ | ಈಚೆಗಿನ<br>ಪ್ಲೀಸ್ಟೊಸೀನ್<br>ಪ್ಲಿಯೊಸೀನ್<br><br>ಮಯೊಸೀನ್<br>ಅಲಿಗೋಸೀನ್<br>ಇಯೊಸೀನ್<br>ಪೇಲಿಯೊಸೀನ್ | 27 | | ಮೊದಲ ಮಾನವ<br>ಕಪಿಗಳು, ಗೊರಿಲ್ಲಾ,<br>ಹುಲ್ಲಿನ ಉಗಮ |
| ಮಧ್ಯಜೀವಿ ಕಲ್ಪ | ಕ್ರಿಟೇಷಸ್<br>ಜುರಾಸಿಕ್<br>ಟ್ರಯಾಸಿಕ್ | 63<br><br><br><br>265 | ಹಿಮಾಲಯ<br>ಪರ್ವತದ<br>ರೂಪಣಾರಂಭ.<br>ದಖನ್ನಿನಲ್ಲಿ ಅಗಾಧ<br>ಶಿಲಾ ಪ್ರವಾಹ | ಮೊದಲ ಕುದುರೆ,<br>ಮೊದಲ ಸ್ತನಿಗಳು,<br>ಹೂಬಿಡುವ ಸಸ್ಯಗಳ<br>ಉಗಮ |
| ಪ್ರಾಚೀನಜೀವಿ ಕಲ್ಪ | ಕಾರ್ಬಾನಿಫೆರಸ್<br>ಪರ್ಮಿಯನ್<br>ಡಿವೊನಿಯನ್<br>ಸೆಲ್ಯೂರಿಯನ್<br>ಆರ್ಡೊವೀಸಿಯನ್<br>ಕೇಂಬ್ರಿಯನ್ | 580 | ಉತ್ತರದ ಟೆಥಿಸ್<br>ಸಾಗರದಲ್ಲಿ<br>ರೂಪುಗೊಂಡ<br>ಅಗಾಧ ಶಿಲಾಸ್ತೋಮ | ಕಲ್ಲಿದ್ದಲು, ಕಾಡುಗಳು,<br>ರೆಕ್ಕೆಹುಳುಗಳು,<br>ಸರೀಸೃಪಗಳು<br>ನೆಲದಲ್ಲಿ ನೀರಿನ<br>ಮೇಲೆ ಓಡಾಡುವ<br>ದ್ವಿಚರ ಪ್ರಾಣಿಗಳು,<br>ನೆಲದ ಮೇಲೆ<br>ಮೊದಲ ಸಸ್ಯಗಳು,<br>ಮೊದಲ<br>ಮೀನುಗಳು<br>ಅನೇಕಬಗೆಯ<br>ಸಾಗರ<br>ಜೀವಿಗಳು |
| ಆದಿಜೀವಿ ಕಲ್ಪ<br><br><br><br>ಆರ್ಷೇಯ<br>ಭೂಮಿಯ ಹುಟ್ಟು | | 2600<br><br><br><br>3800<br>4650 | ಕಲಾದಗಿ, ಕಡಪ<br>ಭೀಮ ವರ್ಗಗಳು,<br>ಧಾರವಾಡ<br>ಶಿಲಾಸ್ತೋಮ<br>ಅತಿ ಪ್ರಾಚೀನ ಶಿಲೆಗಳು | ಸೂಕ್ಷ್ಮ ಜೀವಿಗಳ<br>ಅವಶೇಷಗಳು<br><br><br>. . .<br>. . . |

ಭೂ ಕಾಲಗಣನೆಯಲ್ಲಿ ಮುಖ್ಯವಾಗಿ ಉಪಯೋಗಿಸುವ ಐಸೋಟೋಪುಗಳು.

| ಜನಕ | ಜನ್ಯ | ಕಾಲ ಗುರುತಿಸಬಹುದಾದ ಖನಿಜಗಳು |
|---|---|---|
| ಯುರೇನಿಯಮ್–238 | ಸೀಸ–206 | ಝಿರ್ಕಾನ್, ಯುರ್ಯಾನಿನೈಟ್, ಪಿಚ್‌ಬ್ಲೆಂಡ್, |
| ಪೊಟಾಸಿಯಮ್–40 | ಆರ್ಗಾನ್–40 | ಮಸ್ಕೊವೈಟ್, ಬಯೊಟೈಟ್, ಮೈಕ್ರೊಕ್ಲಿನ್, ವಿವಿಧ ಖನಿಜಗಳನ್ನೊಳಗೊಂಡ ಒಟ್ಟು ಶಿಲೆ |
| ರುಬಿಡಿಯಮ್–87 | ಸ್ಟ್ರಾನ್ಷಿಯಮ್–87 | ಮಸ್ಕೊವೈಟ್, ಬಯೊಟೈಟ್, ಮೈಕ್ರೊಕ್ಲಿನ್, ವಿವಿಧ ಖನಿಜಗಳನ್ನೊಳಗೊಂಡ ಒಟ್ಟು ಶಿಲೆ |
| ಕಾರ್ಬನ್–14 | ನೈಟ್ರೊಜನ್–14 | ಹಳೆಯ ಮರ, ಇದ್ದಿಲು, ಹಳೆಯ ಎಲುಬು, ಬಟ್ಟೆ, ಚಿಪ್ಪು, ಮಡಕೆಚೂರು |

ಆಧುನಿಕ ವಿಭಾಗಗಳು ಮತ್ತು ವಿಧಾನಗಳು : ನದಿಗಳ ಕಾರ್ಯಗಳಿಂದಾದ ಭೂವಿನ್ಯಾಸಗಳು ಪ್ರಕೃತಿಯಲ್ಲಿ ನಡೆಯುವ ಭೂಕಾರ್ಯಗಳಸಂಯೋಜನೆಯಿಂದ ರೂಪುಗೊಳ್ಳುತ್ತವೆ. ಇವನ್ನು ಕುರಿತ ವಿಭಾಗ ಗತ್ಯಾತ್ಮಕ ಭೂ ಆಕೃತಿವಿಜ್ಞಾನ (ಡೈನಮಿಕ್ ಜಿಯೊಮಾರ್ಫಾಲಜಿ). (ಎಂ.ಎಸ್.ಪಿ.)

**ಭೂಉದ್ಧರಣೆ:** ಜೌಗು ನೆಲವನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಸುಧಾರಿಸುವ ಕ್ರಮ (ಲ್ಯಾಂಡ್ ರಿಕ್ಲಮೇಶನ್). ಪ್ರಪಂಚದ ಎಷ್ಟೊ ಭಾಗಗಳಲ್ಲಿ ಫಲವತ್ತಾದ ಬಯಲುಗಳಲ್ಲಿ ತೇವ ಬಹಳ ಹೆಚ್ಚಾಗಿ ಅವು ಜೌಗು ಮತ್ತು ಚೌಳು ಮಣ್ಣುಗಳಾಗಿ ಅಥವಾ ನೀರಿಲ್ಲದೆ ಒಣಗಿ ಬೆಳೆ ತೆಗೆಯುವುದು ಅಸಾಧ್ಯ. ನೀರಾವರಿ, ಬಸಿಕಾಲುವೆ, ಪ್ರವಾಹ ನಿಯಂತ್ರಣ ಮುಂತಾದ ಸೌಲಭ್ಯ ಒದಗಿಸಿ ಈ ಜಮೀನುಗಳನ್ನು ವ್ಯವಸಾಯಕ್ಕೆ ಯೋಗ್ಯವಾಗಿಸಬಹುದು.

ಜೌಗುನೆಲದಲ್ಲಿ ಚರಂಡಿಗಳನ್ನು ತೋಡಿ ಅಧಿಕ ನೀರು ಹತ್ತಿರದ ಹಳ್ಳಕ್ಕೆ ಬಸಿದು ಹೋಗುವಂತೆ ಮಾಡಬಹುದು. ನೆಲ ಬಹಳ ತಗ್ಗಾಗಿದ್ದು ಇದು ಸಾಧ್ಯವಾಗದೇ ಹೋದರೆ ಸುತ್ತಲೂ ಒಳ್ಳೆಯ ಮಣ್ಣಿನ ಏರಿಳಿತಗಳನ್ನು ಹಾಕಿ ಹೊಳೆಯಿಂದಲೋ ಸಮುದ್ರದಿಂದಲೋ ಅಲ್ಲಿಗೆ ನೀರು ನುಗ್ಗುವುದನ್ನು ತಡೆಯಬೇಕು. ಒಳಗಿನ ನೀರನ್ನು ತೆಗೆಯದ ಹೊರತು ಅಲ್ಲಿ ಪೈರು ಬೆಳೆಯದು ಇದಕ್ಕಾಗಿ ಭೂಮಿಯ ಮಟ್ಟ ಅನುಸರಿಸಿ ಕಾಲುವೆಗಳನ್ನು ಸರಿಯಾದ ಅಂತರಗಳಲ್ಲಿ ತೋಡಿ ಆ ನೀರನ್ನು ಪಂಪುಗಳಮೂಲಕ ಹೊಳೆಗೆ ಅಥವಾ ಸಮುದ್ರಕ್ಕೆ ಹಾಯಿಸಬೇಕು, ಒಳಗಿನ ಪಾತಿಗಳ ನೀರಿನ ಮಟ್ಟ ಎತ್ತರವಾಗಿದ್ದರೆ ಅದನ್ನು ಕೆಳಕಾಲುವೆಗಳಿಂದ ತಗ್ಗಿಸಬಹುದು. ಈ ಪಾತಿಗಳಲ್ಲಿ ನೀರಿನ ಮಟ್ಟ ಬೇಸಗೆ ಮತ್ತು ಚಳಿಗಾಲಗಳಲ್ಲಿ ಬೇರೆ, ಬೇರೆಯಾಗಿರುತ್ತವೆ. ಎತ್ತರದ ಪ್ರದೇಶಗಳಿಂದ ಬರುವ ನೀರನ್ನು ನಾಲೆಗಳಲ್ಲಿ ಪಾತಿಗಳ ಏರಿಗಳ ಮೂಲಕ ಹೊಳೆಗೋ ಸಮುದ್ರಕ್ಕೋ ಒಯ್ಯಬಹುದು. ನೆಲದಿಂದ ಪಾತಿಯೊಳಕ್ಕೆ ಜಿನುಗುವ ನೀರೇ ವಿಶೇಷವಾಗಿರುತ್ತದೆ. ಏರಿಗಳು ಸಾಮಾನ್ಯವಾಗಿ ಉಂಗುರದ ಆಕಾರದಲ್ಲಿರುತ್ತವೆ. ಬೇಸಗೆಯಲ್ಲಿ ಸಮುದ್ರ ತೀರದಲ್ಲಿ ಸಿಹಿನೀರನ್ನು ಪಾತಿಯೊಳಕ್ಕೆ ಬಿಟ್ಟು ಅದರಲ್ಲಿ ಜಿನುಗುವ ನೀರಿಗೆ ಉಪ್ಪು ಸೇರಿದಾಗ ಮತ್ತೆ ಆಗಾಗ ಸಿಹಿನೀರನ್ನು ಬಿಡಬೇಕಾಗುತ್ತದೆ. ಇಂಥ ಭೂಮಿಯಲ್ಲಿ ಪೈರನ್ನು ಬೆಳೆಸಲು ಇರುವ ದೊಡ್ಡತೊಂದರೆ ಎಂದರೆ ಸಮುದ್ರದಿಂದ ನೆಲದಲ್ಲಿ ಜಿನುಗಿ ಬರುವ ನೀರಿನಲ್ಲಿರುವ ಉಪ್ಪು ಅಥವಾ ಹೊಳೆಯನೀರೇ ಆವಿಯಾಗಿ ಹೋಗಿ ಉಪ್ಪಿನ ಮೊತ್ತ ಹೆಚ್ಚಬಹುದು. ನೀರಿನಲ್ಲಿ ಕ್ಲೋರಿನ್ನಿನ ಅಂಶ ಅಧಿಕವಾದರೆ ಹಣ್ಣು, ತರಕಾರಿಗಳು ಚೆನ್ನಾಗಿ ಬೆಳೆಯುವುದಿಲ್ಲ.

ಸಮುದ್ರತೀರದಲ್ಲಿ ಲವಣವಲ್ಲದೇ ನೆಲದ ಗುಣಕ್ಕೆ ಅನುಸಾರವಾಗಿ ಕರಿಯ ಕ್ಷಾರ ಇಲ್ಲವೆ ಬಿಳಿಯ ಕ್ಷಾರ ಮೇಲುಗಡೆ ಹರಡಿರುತ್ತದೆ. ಕರಿಯಕ್ಷಾರದಲ್ಲಿನ ಸೋಡಿಯಮ್ ಕಾರ್ಬೊನೇಟ್ ಮತ್ತು ಇತರೆ ಉಪ್ಪುಗಳು, ಜೈವಿಕ ಪದಾರ್ಥವನ್ನು ದಹಿಸುತ್ತವೆ. ಗಿಡಗಳ ಬೇರುಗಳನ್ನು ಕೊರೆಯುತ್ತವೆ. ಬಿಳಿಯ ಕ್ಷಾರದಲ್ಲಿ ಉಪ್ಪು ಸೋಡಿಯಮ್ ಸಲ್ಫೇಟ್, ಸೋಡಿಯಮ್ ನೈಟ್ರೇಟ್, ಮ್ಯಾಗ್ನೀಸಿಯಮ್ ಮತ್ತು ಕ್ಯಾಲ್ಸಿಯಮ್ ಸಲ್ಫೇಟುಗಳಿರುತ್ತವೆ. ಇವು ಕರಿಯ ಕ್ಷಾರದ ಹಾಗೆ ಗಿಡಗಳಿಗೆ ತೊಂದರೆ ಮಾಡುವುದಿಲ್ಲ. ಇವು ಹೆಚ್ಚಾಗಿದ್ದರೆ ಮಣ್ಣು ಕೊಂಚ ಉಬ್ಬಬಹುದು. ಇಂಥ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಬೇಕಾದರೆ ಈ ಕ್ಷಾರಗಳು ತೊಳೆದುಹೋಗಬೇಕು. ಶುದ್ಧವಾದ ನೀರು ನೆಲದ ಮೇಲೆ ಬಹುಕಾಲ ನಿಂತಿದ್ದರೆ ನೆಲದೊಳಗಿರುವ ಕ್ಷಾರಗಳು ಅದರಲ್ಲಿ ಕರಗಿ ನೀರು ಆವಿಯಾದ ಮೇಲೆ ಕ್ಷಾರಗಳು ನೆಲದಮೇಲೆ ನಿಲ್ಲುತ್ತವೆ. ಆಗ ನಾಲೆಯಿಂದ ನೀರನ್ನು ನೆಲದ ಮೇಲೆ ಹರಿಸಿ ಕ್ಷಾರಗಳು ಅದರೊಂದಿಗೆ ಕಾಲುವೆಗಳಲ್ಲಿ ಹರಿದುಹೋಗುವ ಹಾಗೆ ಮಾಡಬೇಕು. ಕೆಲವು ವರ್ಷಗಳ ಕಾಲ ಹೀಗೆ ನೀರಿನಿಂದ ತೊಳೆದ ಮೇಲೆ ಭೂಮಿ ಕೃಷಿ ಯೋಗ್ಯವಾಗುತ್ತದೆ.

ಚೀನಿಯರು ಪ್ರಶ.ಪೂ. 2300ರಲ್ಲಿಯೇ ಜಾಣತನದಿಂದ ಏರಿಗಳನ್ನು ಕಟ್ಟಿ ಭೂಮಿಯ ಮೇಲಿನ ನೀರನ್ನು ತಪ್ಪಿಸಿದ್ದರೂ ಜಿನುಗುವ ನೀರನ್ನು ಅಷ್ಟಾಗಿ ಗಮನಿಸಿರಲಿಲ್ಲ. ಭಾರತದಲ್ಲಿ ಅಡಿಕೆ, ತೆಂಗು ತೋಟಗಳಿಗೆ ಜಿನುಗುವ ನೀರಿನ ಉಪ್ಪಿನಿಂದ ಹೆಚ್ಚಿನ ತೊಂದರೆ ಇರಲಿಲ್ಲ. ತರಿ ಮತ್ತು ಖುಷ್ಕಿ ಭೂಮಿಗಳಲ್ಲಿ ಈ ಸಮಸ್ಯೆ ಉಲ್ಬಣಿಸಿರಲಿಲ್ಲ. ಬಿಳಿಯ ಕ್ಷಾರ ಮೇಲಕ್ಕೆ ಬಂದಿದ್ದ ಜಮೀನುಗಳನ್ನು ಬೀಳು ಬಿಡುತ್ತಿದ್ದರು. ಆದರೆ ಹೆಚ್ಚಿದ ಜನಸಂಖ್ಯೆಗೆ ಆಹಾರ ಒದಗಿಸಬೇಕಾಗಿರುವ ಈ ಕಾಲದಲ್ಲಿ ಭೂಪರಿಷ್ಕರಣ ಅವಶ್ಯವಾಗುತ್ತಿದೆ.

ಯಂತ್ರಶಿಲ್ಪ : ಭೂಪರಿಷ್ಕರಣ ಯೋಜನೆಯ ಸಫಲತೆ ಆಯಾ ದೇಶದ ವಾಯುಗುಣವನ್ನು ಅವಲಂಬಿಸಿದೆ. ನೀರನ್ನು ಬಸಿದ ಬಳಿಕ ಫಲವತ್ತಾದ ಮಣ್ಣಿನ ಭೂಮಿ ದೊರಕುವುದಾದರೆ ಮಾತ್ರ ವ್ಯವಸಾಯಿಕ ಯಾಂತ್ರಿಕ ಮತ್ತು ಆರ್ಥಿಕ ಪರಿಶೀಲನೆಗಳನ್ನು ನಡೆಸಬಹುದು. ಜೌಗುನೆಲದಿಂದ ನೀರನ್ನು ಎಷ್ಟೊ ವರ್ಷಗಳ ಹಿಂದೆ ತೆಗೆದ ಪ್ರದೇಶಗಳಲ್ಲಿಯೂ ಭೂಗುಣವನ್ನು ಅಭಿವೃದ್ಧಿ ಪಡಿಸಿ ಬೆಳೆಯನ್ನು ಈಗಲೂ ಹೆಚ್ಚಿಸಲಾಗುತ್ತಿದೆ. ಜೌಗುನೆಲದಿಂದ ಕಡಿಮೆ ಖರ್ಚಿನಲ್ಲಿ ನೀರನ್ನು ತೆಗೆಯಬೇಕಾದರೆ ತಗ್ಗಾದ ಹಳ್ಳದ ಎರಡು ದಡಗಳಲ್ಲಿಯೂ ಏರಿಗಳನ್ನು ಕಟ್ಟಬೇಕು. ಮರಳು ಮಿಶ್ರವಾದ ಮಣ್ಣಿನಿಂದ ಇವನ್ನು ಕಟ್ಟಿದರೆ ಏರಿಯ ಮೇಲು ಭಾಗದಲ್ಲಿ ಜಿಗುಟಾದ ಮಣ್ಣನ್ನು ಹಾಕಿ ಅದು ಕೊರೆಯದ ಹಾಗೆ ನೋಡಿಕೊಳ್ಳಬೇಕು. ಈ ಯೋಜನೆಯಲ್ಲಿ ಅಲ್ಲಲ್ಲಿ ಪಂಪುಗಳನ್ನಿರಿಸಿ ಹೆಚ್ಚಾದ ನೀರನ್ನು ಎತ್ತಿ ಹಳ್ಳಕ್ಕೆ ಬಿಡಬೇಕಾಗುತ್ತದೆ. ಕೆಲವು ವೇಳೆ ಸರೋವರಗಳ ನೀರಿನ ಮಟ್ಟವನ್ನು ತಗ್ಗಿಸುವುದರಿಂದಲೂ ಉತ್ಕೃಷ್ಟವಾದ ಭೂಮಿಯನ್ನು ಉದ್ಧಾರಮಾಡಬಹುದು. ಉಷ್ಣದೇಶಗಳಲ್ಲಿ ಮಲೇರಿಯದ ಹಾವಳಿಯಿಂದ ಒಳ್ಳೆಯ ಭೂಮಿಯಲ್ಲಿ ಯಾರೂ ಬಾಳುವುದು ಸಾಧ್ಯವಾಗದೆ ಇರಬಹುದು. ಸರೋವರದ ನೀರನ್ನು ಕಾಲುವೆಯ ಮೂಲಕ ಸಾಗಿಸುವುದರಿಂದ ಈ ತೊಂದರೆಯ ನಿವಾರಣೆ ಸಾಧ್ಯ.

ಸರೋವರದಿಂದ ನೀರನ್ನು ಎತ್ತುವುದಕ್ಕೆ ಮುಂಚೆ ಅದರ ಸುತ್ತ ಉಂಗುರಾಕಾರದ ಏರಿಯನ್ನು ಕಟ್ಟಿ ಮತ್ತೆ ಅದರ ಆಚೆಗೆ ಉಂಗುರಾಕಾರದ ಕಾಲುವೆಯನ್ನು ತೋಡಬೇಕು. ಸರೋವರದಿಂದ ಪಂಪುಮಾಡಿದ ನೀರು ಈ ಕಾಲುವೆಯೊಳಕ್ಕೆ ಬೀಳುತ್ತದೆ. ಈ ಘಟ್ಟದಲ್ಲಿ ಸರೋವರದ ಮಧ್ಯದಲ್ಲಿ ಹೂಳು ಮಣ್ಣನ್ನು ಯಂತ್ರಗಳಿಂದ ಕೆರೆದು ತೆಗೆದು ಆಳವಾದ ಕಾಲುವೆಯಿಂದ ಪಂಪುಗಳ ಮೂಲಕ ನೀರನ್ನೆತ್ತಬೇಕು.

ಮರಗಳನ್ನು ನೆಡುವುದು: ದಡ ಕೊರೆದು ಹೋಗದ ಹಾಗೆ ಬೇರುಗಳಿಂದ ಭೂಮಿಯನ್ನು ಕಚ್ಚಿ ಹಿಡಿಯುವ ವಿಶಿಷ್ಟ ರೀತಿಯ ಮರಗಳನ್ನು ನೆಡಲಾಗುತ್ತದೆ. ಆದರೆ ಅಲೆಗಳೂ ಪ್ರವಾಹಗಳೂ ಬಲವಾಗಿರುವ ಕಡೆ ಮರಗಳು ಬೆಳೆಯುವುದಿಲ್ಲ. ಅಂಥಹ ಕಡೆಗಳಲ್ಲಿ ಸಣ್ಣ ಮರದ ಕೊಂಬೆಗಳ ಬೇಲಿಯನ್ನೊ ಮಣ್ಣಿನಿಂದ ಅಥವಾ ಕಲ್ಲಿನಿಂದ ತುಂಬಿದ ಮರದ ಅಥವಾ ಬಿದಿರಿನ ಚಾಪೆಯನ್ನೋ ಹೊಳೆಗೆ ಅಡ್ಡವಾಗಿ ಇಡಬಹುದು. ಎತ್ತರವಾದ ಮರಳು ದಿಬ್ಬಗಳ ಮೇಲೆ ಗಿಡಗಳನ್ನು ನೆಡಬಹುದು. ಈ ಕೆಲಸಕ್ಕೆ ಉದ್ದವಾದ ಅಡ್ಡ ಕಟ್ಟೆಗಳನ್ನು ಹಾಕಬಹುದು.

ಮೆಕ್ಕಲುಮಣ್ಣಿನ ಅಗಳುಗಳು : ಗಿಡಗಳನ್ನು ನೆಡಲಾರದಷ್ಟು ಉಗ್ರವಾದ ಅಲೆಗಳ ಹೊಡೆತವಿರುವ ಚಪ್ಪಟೆಯಾದ ಸಮುದ್ರ ತೀರಗಳಲ್ಲಿ ಕುರುಚಲು ಗಿಡಗಳೂ ಪೊದೆಗಳೂ ಇಲ್ಲದೆ ಹೋದಾಗ ನಡುವೆ ಸ್ಥಳವನ್ನು ಬಿಟ್ಟು ಜೋಡಿಸಿದ ಚೌಕಟ್ಟಿನ ಆಕಾರದಲ್ಲಿ 6 ಮೀ ಅಂತರದಲ್ಲಿ 30 ಸೆಂಮೀ ಆಳದ ಸಣ್ಣ ಅಗಳುಗಳನ್ನು ಅಗೆಯುತ್ತಾರೆ. ಕ್ರಮೇಣ ಈ ಗುಂಡಿಗಳಲ್ಲಿ ಮೆಕ್ಕಲುಮಣ್ಣು ತುಂಬಿಕೊಳ್ಳುತ್ತದೆ. ಆಗ ಮತ್ತೆ ಅಗಳುಗಳನ್ನು ತೋಡಬೇಕಾಗುತ್ತದೆ. ಅಗೆದ ಮಣ್ಣನ್ನು ಎರಡು ಅಗಳುಗಳ ನಡುವೆ ಹಾಕಿದಾಗ ಏರಿಗಳು ಎತ್ತರವಾಗುತ್ತ ಹೋಗುತ್ತವೆ. ಇವುಗಳ ಮೇಲೆ ಗಿಡಗಳನ್ನು ನೆಡಬಹುದು.

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗಳಿಂದ ಭೂಮಿಯನ್ನು ಹೆಚ್ಚು ಫಲವತ್ತಾಗಿ ಮತ್ತು ಜನಜೀವನಕ್ಕೆ ಯೋಗ್ಯವಾಗಿ ಮಾಡುವ ಕೆಲಸ ಎಲ್ಲ ಕಡೆಯಲ್ಲಿ ಮುಂದುವರಿದಿದೆ. ಎಲ್ಲ ಜಮೀನಿಗೂ ನಾಲೆಯಿಂದ ನೀರು ತರಲು ಸಾಧ್ಯವಾಗದು. ಅಂಥ ಕಡೆಗಳಲ್ಲಿ ವಿದ್ಯುತ್ ಪಂಪ್ ಬಳಸಿ ತಗ್ಗಾದ ಹೊಳೆಗಳಿಂದ ನೀರನ್ನು ಎತ್ತಿ ಸೀಳುನಾಲೆಗಳ ಮೂಲಕ ಗದ್ದೆಗಳಿಗೂ ಹೊಲಗಳಿಗೂ ಬಿಡಬೇಕಾಗುತ್ತದೆ. ಮೆಕ್ಕಲುಮಣ್ಣನ್ನು ನೆಲದಲ್ಲಿ ತುಂಬುವ ಗಿಡಗಳನ್ನು ಸಾಧ್ಯವಾದ ಕಡೆಗಳಲ್ಲಿ ಬೆಳೆಸಬೇಕು. ಆದರೆ ಈ ಕೆಲಸ ನಿಧಾನವಾಗುತ್ತಿದೆ. ಹಾಲೆಂಡಿನಲ್ಲಿ ಝ್ಯುಡರ್ ಝೀ ಯೋಜನೆ 1975ರ ಸುಮಾರಿಗೆ ಮುಗಿದ ಮೇಲೂ ಹೊಸದಾಗಿ ಕೃಷಿಯೋಗ್ಯವಾಗಿಸ ಬೇಕಿರುವ ಜಮೀನು ಯಥೇಚ್ಛವಾಗಿದೆ. ನೆಲದ ಮೇಲೆ ಮೆಕ್ಕಲು ಮಣ್ಣು ನಿಂತು ಫಲವತ್ತಾಗುವ ಹಾಗೆ ಮಾಡಿ ಪಂಪುಗಳಿಂದ ಬೇಸಾಯಕ್ಕೆ ನೀರನ್ನು ಒದಗಿಸಬೇಕಾಗುತ್ತದೆ. ಕೆಲವು ಕಡೆ ನೆಲದ ಕೆಳಗೆ ಆಳದಲ್ಲಿರುವ ಜೇಡಿಮಣ್ಣನ್ನು ತೋಡಿ ತೆಗೆದು ಮೇಲಿನ ಮರಳಿನ ಮೇಲೆ ಹರಡಿ ಪೈರು ಬೆಳೆಯುವ ಹಾಗೆ ಮಾಡಬೇಕಾಗಬಹುದು. ಇನ್ನೊಂದು ಕ್ರಮದಲ್ಲಿ ಮರಳು ದಿಣ್ಣೆಗಳ ಕೆಳಗಡೆ ಏರಿ ಹಾಕಿ ಅದರಲ್ಲಿ ಒಂದು ಕಂಡಿಯನ್ನು ಬಿಟ್ಟು ಉಬ್ಬರದ ಕಾಲದಲ್ಲಿ ಬರುವ ಮೆಕ್ಕಲುಮಣ್ಣು ಕಂಡಿಯಿಂದ ಒಳಕ್ಕೆ ಬಂದು ಸಾಕಷ್ಟು ದಪ್ಪವಾಗಿ ನಿಂತ ಮೇಲೆ ಕಂಡಿಯನ್ನು ಮುಚ್ಚುತ್ತಾರೆ. (ಕೆ.ಎನ್.ಯು.)

**ಭೂಕಂಪಗಳು:** ಭೂಮಿಯ ಆಂತರಿಕ ಶಕ್ತಿಗಳ ಕಾರ್ಯಾಚರಣೆಗಳಿಂದ ಭೂಮಿಯ ಮೇಲ್ಪದರದ ಕಂಪಿಸುವಿಕೆ ಅಥವಾ ನಡುಗುವಿಕೆಯೇ ಭೂಕಂಪ (ಅರ್ಥ್ ಕ್ವೇಕ್) ಭೂಮಿಯ ಆಂತರಿಕ ಶಕ್ತಿಗಳು ತಮ್ಮ ಕಾರ್ಯಾಚರಣೆಗಳಿಂದ ಕ್ಷಿಪ್ರಗತಿಯಲ್ಲಿ ಅನೇಕ ದುರಂತಗಳನ್ನು ಉಂಟುಮಾಡುತ್ತವೆ. ಅಂತಹ ನೈಸರ್ಗಿಕ ವಿಪತ್ತುಗಳಲ್ಲಿ ಭೂಕಂಪಗಳೂ ಸಹ ಸೇರಿವೆ. ಅದರಲ್ಲೂ ಭೂಮಿಯ ಮೇಲ್ಪದರದಲ್ಲಾಗುವಂತಹ ವಿಪತ್ತುಗಳಲ್ಲಿ ಜ್ವಾಲಾಮುಖಿಗಳ ಅನಂತರ ಭೂಕಂಪಗಳು ಬಹಳ ವಿನಾಶಕಾರಿ ಹಾಗೂ ಭಯಂಕರವಾದವು. ಯಾವುದೇ ಮುನ್ಸೂಚನೆಯಿಲ್ಲದೆ ಭೂಕಂಪಗಳು ಸಂಭವಿಸಿದರಂತೂ ಅಪಾರವಾದ ಹಾನಿ ಖಂಡಿತ.

ಕಂಪನ ಭೂಮಿಯ ಅಂತರಾಳದಿಂದ ಅಲೆಗಳ ರೂಪದಲ್ಲಿ ಭೂ ಮೇಲ್ಮೈಗೆ ತಲುಪಿದಾಗ ತಿಳಿಯುತ್ತದೆ. ಭೂಕಂಪ ಪ್ರಾರಂಭವಾಗುವ ಸ್ಥಳಕ್ಕೆ ಭೂಕಂಪ ನಾಭಿ (ಫೋಕಸ್) ಅಥವಾ ಭೂಕಂಪ ಒಳಕೇಂದ್ರ(ಹೈಪೋಸೆಂಟರ್)ಎಂದು ಹೆಸರು. ಭೂಕಂಪನಾಭಿಗೆ ಲಂಬಕೋನದಲ್ಲಿರುವ ಭೂ ಮೇಲ್ಭಾಗದ ಬಿಂದುವಿಗೆ ಭೂಕಂಪ ಹೊರ ಕೇಂದ್ರ ಅಥವಾ ಬಾಹ್ಯಕೇಂದ್ರ (ಎಪಿಸೆಂಟರ್) ಎಂದು ಹೆಸರು. ಭೂಕಂಪ

ನಾಭಿಯಿಂದ ಹೊರಟ ಭೂಕಂಪದ ಅಲೆಗಳು ಮೊದಲಿಗೆ ಭೂ ಮೇಲ್ಮೈಯನ್ನು ತಲುಪುವ ಕೇಂದ್ರವೇ ಭೂಕಂಪ ಹೊರಕೇಂದ್ರ. ಈ ಕೇಂದ್ರದಲ್ಲಿ ಭೂಕಂಪದ ತೀವ್ರತೆ ಹೆಚ್ಚಾಗಿರುತ್ತದೆ. ಭೂಕಂಪದಿಂದ ಉಂಟಾದ ತರಂಗಗಳಿಗೆ ಭೂಕಂಪದ ಅಲೆಗಳು (ಸಿಸ್ಮಿಕ್ ವೇವ್ಸ್) ಎಂದು ಕರೆಯುವರು. ಇವು ಉತ್ಪತ್ತಿಯಾಗುವ ಸ್ಥಳ, ವೇಳೆ, ವೇಗ, ದಿಕ್ಕು ಮತ್ತು ಅವುಗಳ ತೀವ್ರತೆಯನ್ನು ತಿಳಿಯಲು ಬಳಸುವ ಸ್ವಯಂಚಾಲಿತ ಉಪಕರಣಕ್ಕೆ ಭೂಕಂಪ ಮಾಪಕ (ಸಿಸ್ಮೋಗ್ರಾಫ್) ಎಂದು ಹೆಸರು. ಈ ಉಪಕರಣದ ಸಹಾಯದಿಂದ ಕಂಪನದ ಅಲೆಗಳನ್ನು ಯಥಾರ್ಥವಾಗಿ ನಕ್ಷೆಯ ರೂಪಕ್ಕೆ ನಿರೂಪಿಸುವುದಕ್ಕೆ ಭೂಕಂಪ ಲೇಖನ (ಸಿಸ್ಮೊಗ್ರಾಫ್) ಎಂದು ಹೆಸರು. ಇದರಿಂದ ಭೂಕಂಪದ ಅಲೆಗಳ ಪರಿಣಾಮ ಮತ್ತು ಸ್ವಭಾವವನ್ನು ತಿಳಿದುಕೊಳ್ಳಬಹುದು. ಭೂಕಂಪಗಳನ್ನು ಕುರಿತು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದಕ್ಕೆ ಭೂಕಂಪವಿಜ್ಞಾನ (ಸಿಸ್ಮೊಲಜಿ)ಎಂದು ಹೆಸರು. ಭೂಕಂಪಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಪರಿಣತರಿಗೆ ಭೂಕಂಪಶಾಸ್ತ್ರಜ್ಞ (ಸಿಸ್ಮೊಲಾಜಿಸ್ಟ್) ಎಂದು ಕರೆಯುವರು.

ಭೂಕಂಪಗಳು ಉಂಟಾಗುವ ಬಗೆ: ಭೂಕಂಪಗಳು ಹೊರಕವಚದ ಅಸಮತೋಲನಕ್ಕೆ ಕಾರಣವಾದ ಕ್ರಿಯಾತ್ಮಕ ಶಕ್ತಿಗಳ ಚಟುವಟಿಕೆಗಳಿಂದ ಸಂಭವಿಸುತ್ತವೆ. ಜ್ವಾಲಾಮುಖಿಗಳು, ಶಿಲಾಸ್ತರಭಂಗ, ಶಿಲಾಮಡಿಕೆ, ಭೂಸ್ಥಿತಿಸ್ಥಾಪಕತ್ವ, ಭೂಕುಸಿತ, ಭೂಪಾತ ಇತ್ಯಾದಿಗಳಿಂದ ಭೂಕಂಪಗಳು ಉಂಟಾಗುವವು. ಅವು ಉಂಟಾಗುವ ಆಧಾರದ ಮೇಲೆ ಭೂಕಂಪಗಳನ್ನು 3 ಪ್ರಮುಖ ವಿಧವಾಗಿ ವಿಂಗಡಿಸಬಹುದು: 1. ಜ್ವಾಲಾಮುಖಿ ಭೂಕಂಪಗಳು; 2. ಭೂರಚನಾ ಭೂಕಂಪಗಳು; 3. ಭೂಕುಸಿತ ಭೂಕಂಪಗಳು

1. ಜ್ವಾಲಾಮುಖಿ ಭೂಕಂಪಗಳು: ಭೂಕಂಪಗಳು ಸಂಭವಿಸುವುದಕ್ಕೆ ಜ್ವಾಲಾಮುಖಿಗಳೂ ಸಹ ಕಾರಣವಾಗಿವೆ. ಜ್ವಾಲಾಮುಖಿಗಳು ಸ್ಫೋಟಗೊಂಡಾಗ ಭೂ ಗರ್ಭದಿಂದ ಶಿಲಾಪಾಕ, ಅನಿಲಗಳು ಹಾಗೂ ಘನವಸ್ತುಗಳು ಹೊರಬರುವಾಗ ಭೂಮಿಯ ಮೇಲ್ಪದರವು ಕಂಪನಕ್ಕೊಳಗಾಗುವುದು. ಈ ರೀತಿ ಸಂಭವಿಸುವ ಭೂ ಕಂಪಗಳಿಗೆ ಜ್ವಾಲಾಮುಖಿ ಭೂಕಂಪ (ವಾಲ್ಕೆನಿಕ್ ಅರ್ಥ್‌ಕ್ವೇಕ್)ಗಳೆಂದು ಕರೆಯುವರು. ಇವು ಸಾಮಾನ್ಯವಾಗಿ ಜ್ವಾಲಾಮುಖಿಗಳ ವಲಯದಲ್ಲಿ ಕಂಡುಬರುತ್ತವೆ. ಇವು ಅಷ್ಟೊಂದು ಅಪಾಯಕಾರಿಯಲ್ಲ. ಪ್ರಪಂಚದಲ್ಲಿ ಸಂಭವಿಸುವ ಎಲ್ಲ ಜ್ವಾಲಾಮುಖಿಗಳೂ ಭೂಕಂಪನಗಳನ್ನುಂಟುಮಾಡುವುದಿಲ್ಲ. ಉದಾ: ಕ್ರಕಟೋವ (1882) ಮತ್ತು ಕಟ್ಮಾಯಿ (1912).

2. ಭೂ ರಚನಾ ಭೂಕಂಪಗಳು: ಭೂ ಕವಚದ ಶಿಲಾಸ್ತರಗಳು ಭಂಗವಾಗುವುದರಿಂದ, ಮುದುಡಿಕೊಂಡಾಗ ಅಥವಾ ಸ್ಥಾನಪಲ್ಲಟಗೊಂಡಾಗ ಕಂಪನವೇರ್ಪಟ್ಟು ಭೂಕಂಪಗಳು ಸಂಭವಿಸುವವು. ಕೆಲವೊಮ್ಮೆ ವಸ್ತುಗಳ ರಾಶಿಯಿಂದ ಭಾರ ಹೆಚ್ಚಾಗಿ ಭೂಸ್ತರಗಳು ಕೆಳಕ್ಕೊ ಅಥವಾ ಮೇಲಕ್ಕೊ ಸರಿಯುವದರಿಂದಲೂ ಕಂಪನವುಂಟಾಗುವುದು. ಈ ರೀತಿ ಉಂಟಾಗುವ ಭೂಕಂಪಗಳಿಗೆ ಭೂರಚನಾ ಭೂಕಂಪ (ಟೆಕ್ಟಾನಿಕ್ ಅರ್ಥ್‌ಕ್ವೇಕ್)ಗಳೆಂದು ಕರೆಯುವರು. ಇವು ಭಯಾನಕ ಹಾಗೂ ರೌದ್ರಮಯವಾಗಿದ್ದು, ಹೆಚ್ಚು ಹಾನಿಯನ್ನುಂಟುಮಾಡುತ್ತವೆ. ಉದಾ: ಕೊಯ್ನ ಭೂಕಂಪ (1907), ಕ್ವೆಟ್ಟಾ ಭೂಕಂಪ (1935), ಲಾತೂರ್ ಮತ್ತು ಉಸ್ಮಾನಾಬಾದ್ ಭೂಕಂಪ (1993).




ಭೂಕಂಪದ ಅಲೆಗಳು

3. ಭೂಕುಸಿತ ಭೂಕಂಪಗಳು: ಭೂ ಭಾಗವೊಂದು ಕುಸಿದು ಬಿದ್ದಾಗ ಉಂಟಾಗುವ ಕಂಪನಕ್ಕೆ ಭೂಕುಸಿತ ಭೂಕಂಪ(ಕೊಲ್ಯಾಪ್ಸ್ ಅರ್ಥ್‌ಕ್ವೇಕ್)ಗಳೆಂದು ಹೆಸರು. ಅಂತರ್ಜಲದ ಕಾರ್ಯ ಪ್ರಧಾನವಾಗಿರುವ ಸುಣ್ಣಕಲ್ಲಿನ ಪ್ರದೇಶದಲ್ಲಿ ಅಂತರ್ಗುಹೆಯ ಮೇಲ್ಚಾವಣಿ ಕುಸಿದ ರಭಸಕ್ಕೆ ಕಂಪನವೇರ್ಪಡುವುದು. ಅದೇ ರೀತಿ ಪರ್ವತದೆತ್ತರದಿಂದ ಕಣಿವೆಯ ತಳಕ್ಕೆ ಭೂಭಾಗ ಬೀಳುವುದರಿಂದಲೋ, ಸಮುದ್ರದಂಚಿನ ಶಿಲಾಪಾತದಿಂದಲೋ ಹಾಗೂ ಹಿಮಪಾತದಿಂದಲೋ ಭೂಕಂಪಗಳು ಸಂಭವಿಸುವವು.

ಈವರೆಗೆ ವಿವರಿಸಿದಂತೆ ಭೂಕಂಪಗಳು ನೈಸರ್ಗಿಕ ಶಕ್ತಿಗಳಿಂದ ಉಂಟಾಗುವುದರ ಜೊತೆಗೆ ಮಾನವನ ಚಟುವಟಿಕೆಗಳಿಂದಲೂ ಸಂಭವಿಸುವ ಸಾಧ್ಯತೆಯಿದೆ. ನೀರು ಅಥವಾ ತೈಲವನ್ನು ಭೂಗರ್ಭದಿಂದ ಹೊರತೆಗೆಯಲು ಬಾವಿಗಳನ್ನು ತೋಡುವುದು, ಗಣಿಗಳು ಮತ್ತು ಕಲ್ಲುಕೋರೆಗಳಲ್ಲಿ ಸಿಡಿಸುವ ಸಿಡಿಮದ್ದು, ಅಣುಸ್ಫೋಟನೆ, ಬಹು ಅಂತಸ್ತಿನ ಮಹಡಿಗಳು ಹಾಗೂ ಅಣೆಕಟ್ಟೆಗಳು ಕುಸಿದು ಉರುಳಿದಾಗಲೂ ಕಂಪನವುಂಟಾಗಿ ಲಘು ಭೂಕಂಪಗಳು ಸಂಭವಿಸುತ್ತವೆ.

ಭೂಕಂಪದ ಅಲೆಗಳು: ಕೊಳವೊಂದರ ನೀರಿನ ಮಧ್ಯದಲ್ಲಿ ಕಲ್ಲೊಂದನ್ನು ಇಟ್ಟರೆ, ಕಲ್ಲುಬಿದ್ದ ಸ್ಥಳದಿಂದ ವೃತ್ತಾಕಾರದಲ್ಲಿ ತರಂಗಗಳು ಸುತ್ತಲೂ ಪ್ರಸರಿಸುವುದನ್ನು ಗಮನಿಸಬಹುದು. ಇದೇ ರೀತಿ ಭೂಮಿಯೊಳಗೆ ಯಾವುದಾದರೊಂದು ಸ್ಥಳದಲ್ಲಿ ಧಕ್ಕೆಯಾದರೆ, ಕಂಪನವು ತರಂಗಗಳಂತೆ ಸುತ್ತಲೂ ಹರಡುತ್ತಾ ಭೂ ಮೇಲ್ಮೈಯನ್ನು ತಲುಪುವವು. ಇವುಗಳಿಗೆ ಭೂಕಂಪದ ಅಲೆಗಳು ಎನ್ನುವರು. ಇವು ಭೂಕಂಪನಾಭಿಯಿಂದ ಪ್ರಾರಂಭಗೊಂಡು ವಿವಿಧ ದಿಕ್ಕಿಗೆ ಪ್ರಸರಿಸುವುವು. ಇವುಗಳ ಸಹಾಯದಿಂದ ಭೂಕಂಪಗಳ ತೀವ್ರತೆಯನ್ನು ತಿಳಿಯಬಹುದು. ಇವುಗಳ ಚಲನಗತಿ ಮತ್ತು ದಿಕ್ಕುಗಳನ್ನಾಧರಿಸಿ ಅವುಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು: 1. ಪ್ರಥಮ ಅಲೆಗಳು 2. ದ್ವಿತೀಯ ಅಲೆಗಳು ಮತ್ತು 3. ಮೇಲ್ಮೈ ಅಲೆಗಳು.

1. ಪ್ರಥಮ ಅಲೆಗಳು: ಭೂಕಂಪನಾಭಿಯಿಂದ ಹೊರಟು ಮೊದಲಿಗೆ ಭೂಮೇಲ್ಮೈಯನ್ನು ತಲುಪುವ ಅಲೆಗಳಿಗೆ ಪ್ರಥಮ ಅಲೆಗಳೆಂದು ಕರೆಯುವರು. ಇವುಗಳ ಚಲನಾವೇಗವು ಹೆಚ್ಚು. ಅವು ಪ್ರತಿ ಸೆಕೆಂಡಿಗೆ 4 ರಿಂದ 13.8 ಕಿಮೀ ದೂರ ಚಲಿಸುವುವು. ಪರಿಣಾಮವಾಗಿ ಇತರ ಅಲೆಗಳಿಗಿಂತ ಮೊದಲು ಭೂಮೇಲ್ಮೈಯನ್ನು ತಲುಪುವುವು. ತಾವು ಚಲಿಸುವ ದಿಕ್ಕಿಗೆ ಅನುಗುಣವಾಗಿ ಕಣಗಳು ಚಲಿಸುವಂತೆ ಮಾಡುವುದರಿಂದ ಇವುಗಳನ್ನು ನೀಳ ಅಲೆಗಳು (ಲಾಂಗಿಟುಡಿನಲ್) ಎಂದೂ ಕರೆಯುತ್ತಾರೆ. ಇವು ಅಷ್ಟೊಂದು ಕಂಪನಗಳನ್ನುಂಟು ಮಾಡುವುದಿಲ್ಲ.

2. ದ್ವಿತೀಯ ಅಲೆಗಳು: ಪ್ರಥಮ ಅಲೆಗಳ ಅನಂತರ ಭೂಮೇಲ್ಮೈಯನ್ನು ತಲುಪುವ ಅಲೆಗಳಿಗೆ ದ್ವಿತೀಯ ಅಲೆಗಳೆನ್ನುತ್ತಾರೆ. ಇವುಗಳ ಚಲನವೇಗ ಪ್ರಥಮ ಅಲೆಗಳಿಗಿಂತ ಕಡಿಮೆಯಿದ್ದು, ಪ್ರತಿ ಸೆಕೆಂಡಿಗೆ 3.2 ರಿಂದ 7.2 ಕಿಮೀ ದೂರ ಚಲಿಸುವುವು. ಅವು ಚಲಿಸುವ ದಿಕ್ಕಿಗೆ ಅಡ್ಡಲಾಗಿ ಕಣಗಳು ಚಲಿಸುವಂತೆ ಮಾಡುವುದರಿಂದ ಇವುಗಳನ್ನು ಅಡ್ಡ ಅಲೆಗಳು (ಟ್ರಾನ್ಸ್‌ವರ್ಸ್‌ವೇವ್ಸ್) ಎಂತಲೂ ಕರೆಯುವರು. ಇವು ಮಾರ್ಗವನ್ನು ಬದಲಾಯಿಸುವುದರಿಂದ ಭೂಕೇಂದ್ರ ವಲಯವನ್ನು ಅಲುಗಾಡಿಸುವುದರಿಂದ ಇವುಗಳನ್ನು ಕುಲುಕು ಅಲೆಗಳು (ಶೇಕ್‌ವೇವ್ಸ್) ಎಂತಲೂ ಕರೆಯುವರು. ಇವು ಹೆಚ್ಚು ಕಂಪನವನ್ನುಂಟು ಮಾಡುತ್ತವೆ.

3. ಮೇಲ್ಮೈ ಅಲೆಗಳು: ಮೊದಲೆರಡು ವಿಧದ ಅಲೆಗಳು ತಲುಪಿದ ಅನಂತರ ನಿಧಾನವಾಗಿ ಚಲಿಸಿ ಭುಮೇಲ್ಮೈಯನ್ನು ತಲುಪುವ ಅಲೆಗಳೆ ಮೇಲ್ಮೈ ಅಲೆಗಳು (ಸರ್ಫೇಸ್‌ವೇವ್ಸ್) ಇವು ಪ್ರತಿ ಸೆಕೆಂಡಿಗೆ 4 ರಿಂದ 4.3 ಕಿಮೀ ದೂರ ಸಾಗುವುವು. ಮಾರ್ಗದ ಮಧ್ಯೆ ಸಂಭವಿಸುವ ಅಡಚಣೆಗಳಿಂದಾಗಿ ನಿಧಾನವಾಗಿ ಚಲಿಸುತ್ತವೆ. ಭೂಮಿಯ ಅಂತರಾಳವನ್ನು ತಲುಪದೇ ಹೊರವಲಯದಲ್ಲಿ ವ್ಯಾಪಕವಾಗಿ ಸಂಚರಿಸುವುದರಿಂದ ಇವುಗಳಿಗೆ ವ್ಯಾಪಕ ಅಲೆಗಳು ಎಂತಲೂ ಕರೆಯುವರು. ಇವು ಹೆಚ್ಚು ಧಕ್ಕೆಯನ್ನುಂಟುಮಾಡುವ ಅಲೆಗಳಾಗಿವೆ.

ಭೂಕಂಪದ ಪರಿಣಾಮಗಳು: ಭೂ ಕಂಪಗಳು ಸಂಭವಿಸಿದಾಗ ಅನೇಕ ವಿನಾಶಕಾರಿ ಪರಿಣಾಮಗಳು ಉಂಟಾಗುತ್ತವೆ. ದುಷ್ಪರಿಣಾಮಗಳು ಭೂಕಂಪಗಳ ತೀವ್ರತೆಯ ಪ್ರಮಾಣದಿಂದಲೇ ನಿರ್ಧಾರವಾಗುವುದಿಲ್ಲ. ಬದಲಾಗಿ ನಿರ್ದಿಷ್ಟ ಭೂಕಂಪದಿಂದಾಗುವ ಜನರ ಸಾವು–ನೋವು ಹಾಗೂ ಆಸ್ತಿ–ಪಾಸ್ತಿಗಳ ನಷ್ಟದ ಪ್ರಮಾಣದ ಮೇಲೆ ನಿರ್ಧಾರವಾಗುವುದು. ಹೆಚ್ಚು ಜನರು ವಾಸಿಸುವ ಭಾಗಗಳಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ ಭೂಕಂಪಗಳು ಸಂಭವಿಸಿದರೆ ಅನಾಹುತಗಳು ಹೆಚ್ಚು. ಬಾಹ್ಯಕೇಂದ್ರದಲ್ಲಿ ಭೂಕಂಪದ ತೀವ್ರತೆ ಹೆಚ್ಚು. ಆದರೆ ಭೂಕಂಪದ ಪರಿಣಾಮಗಳು ಈ ಕೆಳಕಂಡಂತಿವೆ:

1. ಮಾನವ ನಿರ್ಮಿತ ಕಟ್ಟಡಗಳು, ಗೋಪುರ, ಸೇತುವೆ, ಅಣೆಕಟ್ಟೆಗಳು, ಕಾರ್ಖಾನೆಗಳು, ವಿಮಾನ ನಿಲ್ದಾಣ ಮೊದಲಾದವು ಧಕ್ಕೆಗೊಳಗಾಗುತ್ತವೆ.

2. ಸಾರಿಗೆ–ಸಂಪರ್ಕ ಮಾಧ್ಯಮಗಳು ಅಸ್ತವ್ಯಸ್ತಗೊಳ್ಳುತ್ತವೆ. ಉದಾ: ರಸ್ತೆ, ರೈಲು ಮಾರ್ಗ, ಟೆಲಿಫೋನ್ ಕೇಬಲ್, ವಿದ್ಯುತ್ ಪ್ರಸರಣ ಇತ್ಯಾದಿಗಳು ಹಾನಿಗೊಳಗಾಗುತ್ತವೆ.

3. ಹೆಚ್ಚು ಜನರು ವಾಸಮಾಡುವಂತಹ ನಗರ ಮತ್ತು ಪಟ್ಟಣಗಳಲ್ಲಿ ಭೂಕಂಪನಗಳಾದರೆ ಹೆಚ್ಚು ಜೀವ ಹಾನಿ ಹಾಗೂ ಆಸ್ತಿ ನಷ್ಟವಾಗುತ್ತವೆ. ಹಂಚಿಕೆ: 1. ಪೆಸಿಫಿಕ್ ಸಾಗರ ತೀರಪ್ರದೇಶ ಮತ್ತು ದ್ವೀಪಗಳ ವಲಯ:

ಪ್ರಪಂಚದ ಒಟ್ಟು ಭೂಕಂಪಗಳಲ್ಲಿ ಶೇ. 68ರಷ್ಟು ಕಂಪನಗಳು ಫೆಸಿಫಿಕ್ ದ್ವೀಪಗಳು, ಮೆಕ್ಸಿಕೊ, ಕ್ಯಾಲಿಫೋರ್ನಿಯ, ವಾಂಕೋವರ್, ಕ್ವೀನ್ ಚಾರ್ಲೆಟ್ ದ್ವೀಪಗಳು ಅಲ್ಯೂಷಿಯನ್ ದ್ವೀಪಗಳು, ಕಾಮಚಟ್ಕ, ಜಪಾನ್, ಫಿಲಿಫೈನ್ಸ್, ಇಂಡೊನೇಷ್ಯ ಹಾಗೂ ನ್ಯೂಜಿಲೆಂಡ್ ವಲಯಗಳಲ್ಲಿ ಸಂಭವಿಸುವುವು.

2. ಭೂಖಂಡ ವಲಯ: ಇದು ಜಿಬ್ರಾಲ್ಟರ್‌ನಿಂದ ಪ್ರಾರಂಭಗೊಂಡು ಅಟ್ಲಾಸ್, ಅಪನೈನ್, ಬಾಲ್ಕನ್, ಪಿರನೀಸ್, ಕಾರ್ಪೇಥಿಯನ್, ಕಕೇಸಸ್, ಹಿಂದೂಕುಷ್, ಹಿಮಾಲಯ ಹಾಗೂ ಮಯನ್ಮಾರಿನ ಪರ್ವತ ಸರಣಿಗಳನ್ನೊಳಗೊಂಡು ಇಟಲಿ, ಟರ್ಕಿ, ಗ್ರೀಸ್, ಸ್ಪೇನ್, ಉತ್ತರ ಆಫ್ರಿಕ, ಇರಾನ್, ಉತ್ತರ ಭಾರತ ಮೊದಲಾದ ಭಾಗಗಳನ್ನೊಳಗೊಂಡಿದೆ. ಇದು ಪ್ರಪಂಚದ ಎರಡನೆ ಪ್ರಮುಖ ಭೂಕಂಪ ವಲಯವಾಗಿದ್ದು, ಒಟ್ಟು ಭೂಕಂಪಗಳಲ್ಲಿ ಶೇ. 21 ರಷ್ಟನ್ನು ಹೊಂದಿದೆ. ಇದನ್ನು ಭೂ ಬಿರಿತ ವಲಯ ಎನ್ನುವರು.

ಇತರೆ: ಉಳಿದ ಶೇ. 11ರಷ್ಟು ಭೂಕಂಪಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಹಂಚಿಕೆಯಾಗಿವೆ. ಉದಾ: ಆರ್ಕಟಿಕ್, ಅಂಟ್ಲಾಂಟಿಕ್ ಹಾಗೂ ಹಿಂದೂಮಹಾಸಾಗರ ವಲಯ, ಆಫ್ರಿಕದ ಪೂರ್ವಭಾಗ, ಸೈಬೀರಿಯ, ಬ್ರೆಜಿಲ್, ಸ್ಕಾಂಡಿನೇವಿಯ, ದಕ್ಷಿಣ ಭಾರತ, ಪಶ್ಚಿಮ ಆಸ್ಟ್ರೇಲಿಯ, ಮಂಗೋಲಿಯ ಮತ್ತು ಚೀನ. (ಪಿ.ಎಂ.)

**ಭೂಕಾಂತತ್ವ:** ಸೂಜಿಗಲ್ಲಿನ ಅಯಸ್ಕಾಂತ ಗುಣವನ್ನು ಚೀನಿಯರು ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಗುರುತಿಸಿದ್ದರು. ಚೀನಿ ಜಾದುಗಾರರು ಸೂಜಿಗಲ್ಲಿನ ತುಂಡು ಬಳಸಿ ಅನೇಕ ಅದ್ಭುತಗಳನ್ನು ಮಾಡಿ ಪ್ರೇಕ್ಷಕರನ್ನು ಬೆರಗುಗೊಳಿಸುತ್ತಿದ್ದರು. ಪ್ರ.ಶ.ಪೂ. ಸು. 2700ರ ವೇಳೆಗೆ ಚೀನಿಯರಿಗೆ ಸೂಜಿಗಲ್ಲಿನ ದಿಕ್ಸೂಚಕ ಗುಣಧರ್ಮದ ಅರಿವಿತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಆದರೆ ಇದನ್ನು ಅವರು ದಿಕ್ಕು ತಿಳಿಯಲು ಉಪಯೋಗಿಸುತ್ತಿದ್ದರೋ ಇಲ್ಲವೊ ಎಂಬುದು ತಿಳಿದುಬಂದಿಲ್ಲ.

ಪ್ರ.ಶ.ಪೂ. ಹತ್ತನೆಯ ಶತಮಾನದ ವೇಳೆಗೆ ಫೀನಿಶಿಯನ್ ನಾವಿಕರು ಕಾಂತೀಯ ದಿಕ್ಸೂಚಿಯ ಮಾದರಿಯೊಂದನ್ನು ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ಬಹುಶಃ ಗ್ರೀಕರು ಅವರಿಂದಲೇ ಸೂಜಿಗಲ್ಲಿನ ಗುಣಧರ್ಮಗಳನ್ನು ಅರಿತಿರಲು ಸಾಕು. ನಿಶ್ಚಿತವಾಗಿ ದಿಕ್ಸೂಚಿ ಯಂತ್ರದ ಪೂರ್ಣ ಉಪಯೋಗವನ್ನು ಮೊಟ್ಟಮೊದಲಿಗೆ ಪ್ರಾರಂಭಿಸಿದವರು ನಾರ್ವೆ ದೇಶದ ವೈಕಿಂಗ್ ನಾವಿಕರು. ಕೊಲಂಬಸ್ ತನ್ನ ಸಮುದ್ರಯಾನದಲ್ಲಿ ದಿಕ್ಸೂಚಿಯಂತ್ರದ ಪೂರ್ಣ ಪ್ರಯೋಜನ ಪಡೆದ.

ಆದರೆ ಕ್ರಮೇಣ ನಾವಿಕರಿಗೆ ವಿಚಿತ್ರ ಅನುಭವಗಳು ಬರತೊಡಗಿದುವು. ದಿಕ್ಸೂಚಿಯಂತ್ರ ಅಷ್ಟೊಂದು ನಂಬಲರ್ಹವಾದ ಮಾರ್ಗದರ್ಶಕವಲ್ಲವೆಂಬ ಸಂಶಯ ಕಾಡಲಾರಂಭಿಸಿತು. ಒಮ್ಮೊಮ್ಮೆ ನಿರ್ದಿಷ್ಟ ದಿಕ್ಕು ಮತ್ತು ಯಂತ್ರ ತೋರಿದ ದಿಕ್ಕು ಇವುಗಳ ನಡುವೆ ಹತ್ತು ಅಂಶಗಳ ವ್ಯತ್ಯಾಸ ಕಂಡುಬರುತ್ತಿತ್ತು. ಅದರಲ್ಲಿಯೂ ಉತ್ತರ ದಿಶೆಗೆ ಸಾಗಿದಂತೆ ವ್ಯತ್ಯಾಸ ಕೂಡ ಹೆಚ್ಚಾಗುತ್ತಿತ್ತು. ಭೂಮಿಯೇ ಒಂದು ಅಯಸ್ಕಾಂತದಂತೆ ವರ್ತಿಸುತ್ತಿದ್ದು ಅದರ ಧ್ರುವಗಳು ಭೌಗೋಳಿಕ ಧ್ರುವಗಳ ಸಮೀಪ ಇರುವುವೆಂಬ ಮಹತ್ತ್ವದ ಅಂಶವನ್ನು ಮೊದಲು (1600) ಗ್ರಹಿಸಿದಾತ ಇಂಗ್ಲೆಂಡಿನ ರಾಜವೈದ್ಯ ವಿಲಿಯಮ್ ಗಿಲ್ಬರ್ಟ್ (1544–1603).

ಭೂಮಿಯ ಮೇಲಿನ ಬೇರೆ ಬೇರೆ ಸ್ಥಾನಗಳಲ್ಲಿ ಕಾಂತಬಲದ ದಿಕ್ಕು ಹಾಗೂ ಸಾಂದ್ರತೆ ಬೇರೆ ಬೇರೆಯಾಗಿರುತ್ತವೆ. ಒಂದೇ ಸ್ಥಾನದಲ್ಲಿ ಕೂಡ ಬೇರೆ ಬೇರೆ ಕಾಲದಲ್ಲಿ ದಿಶೆ, ಸಾಂದ್ರತೆ ಎರಡೂ ಬದಲಾಗುವ ಸಂಭವ ಉಂಟು. ಭೂಕಾಂತಬಲದ ಪೂರ್ಣ ಅರಿವುಂಟಾಗಲು ಬೇರೆ ಬೇರೆ ಸ್ಥಾನಗಳಲ್ಲಿಯ ಕಾಂತಕ್ಷೇತ್ರದ ಸಾಂದ್ರತೆ ಹಾಗೂ ದಿಶೆಗಳ ಜ್ಞಾನ ಅವಶ್ಯಕ. ಕಾಂತಬಲದ ಪೂರ್ಣ ಜ್ಞಾನಕ್ಕೆ ಕನಿಷ್ಠ ಮೂರು ಘಟಕಗಳ ಅಧ್ಯಯನ ಅಗತ್ಯ.

ಸಮತಲದಲ್ಲಿ ಎಲ್ಲ ಕಡೆಗೂ ತಿರುಗಲು ಸಾಧ್ಯವಾಗುವಂತೆ ಮುಕ್ತವಾಗಿ ನೇತುಹಾಕಿದ ಕಾಂತಸೂಜಿ ಸದಾ ಭೂಗೋಲದ ಉತ್ತರ ದಕ್ಷಿಣ ದಿಕ್ಕುಗಳನ್ನು ತೋರಿಸುತ್ತದೆ. ಈ ರೀತಿಯ ಭೂಮಿಯ ಅಯಸ್ಕಾಂತೀಯ ಗುಣದಿಂದ ಅದರ ಧ್ರುವಗಳು ಸರಾಸರಿ ಭೌಗೋಳಿಕ ಧ್ರುವಗಳ ಸಮೀಪ ಇರುತ್ತವೆಂದು ನಿರ್ಣಯಿಸಬಹುದು. ಆದರೆ ಕಾಂತಸೂಜಿ ಸರಿಯಾಗಿ ಈ ದಿಕ್ಕುಗಳನ್ನೇ ಸೂಚಿಸುವುದಿಲ್ಲ. ಅದು ತೋರುವ ದಿಕ್ಕುಗಳಿಗೆ ಕಾಂತೀಯ ಉತ್ತರ ಮತ್ತು ದಕ್ಷಿಣ ದಿಕ್ಕುಗಳೆಂದೂ ಭೌಗೋಲಿಕ ಹಾಗೂ ಕಾಂತೀಯ ಉತ್ತರ ದಿಕ್ಕುಗಳ ನಡುವಿನ ಕೋನಕ್ಕೆ ಕಾಂತೀಯ ವಿಚಲನೆ (ಮ್ಯಾಗ್ನೆಟಿಕ್ ಡೆಕ್ಲಿನೇಶನ್) ಎಂದೂ ಹೆಸರು.

ಭೂಮಿ ಚಪ್ಪಟೆಯಾಗಿರದೆ ಗೋಲಾಕಾರವಾಗಿರುವುದರಿಂದ ಕಾಂತಕ್ಷೇತ್ರದ ದಿಶೆ ಸಾಮಾನ್ಯವಾಗಿ ಸಮತಲವಾಗಿರುತ್ತದೆ. ಈ ದಿಶೆ ಸಮತಲಕ್ಕೆ ತುಸು ಬಾಗಿರುತ್ತದೆ. ಆದ್ದರಿಂದ ಕಾಂತಸೂಜಿಯೊಂದನ್ನು ಊರ್ಧ್ವತಲದಲ್ಲಿ ತಿರುಗಲು ಸಾಧ್ಯವಾಗುವಂತೆ ನೇತು ಹಾಕಿದಲ್ಲಿ ಉತ್ತರ ಗೋಲಾರ್ಧದಲ್ಲಿ ಅದರ ಉತ್ತರ ಧ್ರುವ ಹಾರಿಜದಿಂದ ಕೆಳಕ್ಕೆ ಬಾಗುತ್ತದೆ. ಕಾಂತಸೂಜಿ ತಿರುಗುವ ತಲ ಕಾಂತೀಯ ಉತ್ತರ ದಕ್ಷಿಣಗಳಿಗೆ ಸಮಾನಾಂತರವಾದಾಗ ಕಾಂತಸೂಜಿಯ ಅಕ್ಷ ಮತ್ತು ಹಾರಿಜಗಳ ನಡುವಿನ ಕೋನಕ್ಕೆ ಕಾಂತನಮನ (ಮ್ಯಾಗ್ನೆಟಿಕ್ ಡಿಪ್) ಎಂದು ಹೆಸರು.

ಭೂಕಾಂತಕ್ಷೇತ್ರ ಸಾಂದ್ರತೆಯನ್ನು ಎರಡು ಅಂಗಗಳಾಗಿ ವಿಭಾಗಿಸಬಹುದು: ಹಾರಿಜವಾಗಿ ಒಂದು, ಊರ್ಧ್ವವಾಗಿ ಇನ್ನೊಂದು. ಇವನ್ನು ಅನುಕ್ರಮವಾಗಿ $H$ ಮತ್ತು $V$ ಪ್ರತೀಕಗಳಿಂದ ಸೂಚಿಸುತ್ತೇವೆ. ಭೂಕಾಂತೀಯ ನಮನ, ಭೂಕಾಂತೀಯ ವಿಚಲನೆ ಮತ್ತು ಭೂಕಾಂತಕ್ಷೇತ್ರದ ಹಾರಿಜ ಭಾಗ ಈ ಮೂರು ಘಟಕಗಳು ಭೂಕಾಂತತೆಯ ಸಂಪೂರ್ಣಜ್ಞಾನಕ್ಕೆ ಬೇಕಾದ ಎಲ್ಲ ಮಾಹಿತಿಗಳನ್ನೂ ಪೂರೈಸುತ್ತವೆ. ಇವುಗಳಿಗೆ ಕಾಂತೀಯ ಧಾತುಗಳೆಂದು ಹೆಸರು. ನಮನವನ್ನು $\theta$ ಸೂಚಿಸಿದರೆ ಕಾಂತಕ್ಷೇತ್ರದ ಪೂರ್ಣ ಸಾಂದ್ರತೆ ಈ ಆಗಿದ್ದರೆ ಆಗ

$$F^2 = V^2 + H^2$$

ಭೂಮಿಯ ವಿವಿಧ ಸ್ಥಾನಗಳಲ್ಲಿ ಶೋಧಿಸಿದ ಮೂರು ಕಾಂತೀಯ ಧಾತುಗಳನ್ನು ನಕಾಶೆಗಳ ಮೇಲೆ ತ್ರಿವಿಧ ರೇಖೆಗಳಾಗಿ ಚಿತ್ರಿಸುತ್ತಾರೆ. ಸಮಭೂಕಾಂತೀಯ ವಿಚಲನೆ ಇರುವ ಬಿಂದುಗಳನ್ನು ಸೇರಿಸುವ ರೇಖೆಗಳಿಗೆ ಸಮವಿಚಲನ ರೇಖೆಗಳೆಂದು (ಐಸೊಗೊನಿಕ್ ಲೈನ್ಸ್) ಹೆಸರು. ಇದೇ ರೀತಿ ಸಮನತಿ ರೇಖೆಗಳು (ಐಸೊಕ್ಲಿನಿಕ್ ಲೈನ್ಸ್) ಮತ್ತು ಸಮಹಾರಿಜಾಂಶ ರೇಖೆಗಳು ಇವೆ. ಈ ರೀತಿ ಭೂಮಿಯ ತ್ರಿವಿಧನಕ್ಷೆಗಳನ್ನು ತಯಾರಿಸುವುದುಂಟು. ಸಮ ವಿಚಲನ ರೇಖೆಗಳು ಬಲು ಅನಿಯಮಿತವಿದ್ದರೂ ಅವು ಭೂಮಿಯ ಎರಡು ಭೌಗೋಲಿಕ ಧ್ರುವಗಳಲ್ಲಿಯೂ ಎರಡು ಕಾಂತ ಧ್ರುವಗಳಲ್ಲಿಯೂ ಸಂಧಿಸುತ್ತವೆ. ಶೂನ್ಯ ವಿಚಲನೆ ಇರುವ ಎರಡು ರೇಖೆಗಳಿವೆ: ಒಂದು, ಕಾಂತೀಯ ಉತ್ತರ ಧ್ರುವದಿಂದ ಹೊರಟು ಅಮೆರಿಕ ಖಂಡದ ಮೇಲೆ ಹಾಯ್ದು ಅಟ್ಲಾಂಟಿಕ್ ಮಹಾಸಾಗರದ ಮುಖಾಂತರ ಭೌಗೋಲಿಕ ದಕ್ಷಿಣ ಸೇರುತ್ತದೆ; ಇನ್ನೊಂದು ಭೌಗೋಲಿಕ ಉತ್ತರ ಧ್ರುವದಿಂದ ಹೊರಟು ಯುರೋಪ್‌ಖಂಡ, ಅರೇಬಿಯ, ಹಿಂದೂಮಹಾಸಾಗರ, ಆಸ್ಟ್ರೇಲಿಯ ಮೂಲಕ ಕಾಂತೀಯ ದಕ್ಷಿಣ ಧ್ರುವ ಸೇರುತ್ತದೆ. ಸಮವಿಚಲನರೇಖೆಯ ನಕ್ಷೆಗಳು ಸಮುದ್ರಯಾನದಲ್ಲಿ ಅತ್ಯಂತ ಉಪಯುಕ್ತ.

ಸಮನತಿ ರೇಖೆಗಳು ಹೆಚ್ಚು ನಿಯಮಿತವಾಗಿರುತ್ತವೆ. ಇವು ಭೂಗೋಳದ ಮೇಲೆ ಸರ್ವಸಾಧಾರಣವಾಗಿ ವರ್ತುಳೀಯವಾಗಿದ್ದು ಇವುಗಳ ಧ್ರುವಬಿಂದುಗಳು ಕಾಂತೀಯ ಧ್ರುವಗಳ ಜೊತೆ ಐಕ್ಯವಾಗಿರುತ್ತವೆ. ಶೂನ್ಯನತಿರೇಖೆಗೆ ಕಾಂತೀಯ ವಿಷುವದ್ವೃತ್ತವೆಂದು ಹೆಸರು. ಇದು ಸಮಭಾಜಕವೃತ್ತವನ್ನು (ಟೆರೆಸ್ಟ್ರಿಯಲ್ ಇಕ್ವೇಟರ್) ಪೆಸಿಫಿಕ್ ಸಾಗರದಲ್ಲಿ ಮತ್ತು ಅಟ್ಲಾಂಟಿಕ್ ಮಹಾಸಾಗರದಲ್ಲಿ ಎರಡು ಸಲ ಛೇದಿಸುತ್ತದೆ. ಸಮನತಿ ರೇಖೆಗಳು ಸಾಧಾರಣವಾಗಿ ಅಕ್ಷಾಂಶ ರೇಖೆಗಳನ್ನು ಹೋಲುತ್ತವೆಂದು ಹೇಳಬಹುದು. ಸ್ಥಳೀಯ ಪ್ರಬಲ ಕಾಂತಕ್ಷೇತ್ರಗಳಿಂದಾಗಿ ಸ್ಥಳೀಯ ಗೌಣಧ್ರುವಬಿಂದುಗಳು (ಲೋಕಲ್ ಮೈನರ್ ಪೋಲ್ಸ್) ಉಗಮಿಸುವುದುಂಟು.

ಭೂಮಿಯಲ್ಲಿಯ ಅನೇಕ ಅಗ್ನಿಜನ್ಯ ಪಾಷಾಣಗಳಲ್ಲಿ ಸ್ವಾಭಾವಿಕ ಕಾಂತ ಸೂಚಿಗಳಿರುವುವು. ಇವು ಜ್ವಾಲಾಮುಖಿಗಳಿಂದ ಹೊರಸೂಸಿದ ಲಾವಾರಸ ಘನೀಭವಿಸಿ ನಿರ್ಮಿತವಾದವು. ಲಾವಾರಸದಲ್ಲಿ ಕಾಂತಗುಣವುಳ್ಳ ಕಬ್ಬಿಣದ ಅನೇಕ ಸಣ್ಣ ಕಣಗಳು ಇರುತ್ತವೆ. ಲಾವಾರಸ ಪ್ರವಾಹೀರೂಪದಲ್ಲಿದ್ದಾಗ ಈ ಕಬ್ಬಿಣದ ಕಣಗಳು ಸುಲಭವಾಗಿ ಭೂಕಾಂತದ ದಿಕ್ಕಿನಲ್ಲಿ ಒಲಿದು ನಿಲ್ಲುತ್ತವೆ. ಅದು ಘನೀ ಭವಿಸಿದಾಗ ಕಣಗಳು ಆ ಕಾಲದ ಭೂಕಾಂತತ್ವದ ದಿಕ್ಕಿನಲ್ಲಿ ಸ್ಥಿರವಾಗಿ ಬಂಧಿಸಲ್ಪಡುತ್ತವೆ. ಆದ್ದರಿಂದ ಈ ದಿಕ್ಸೂಚಿಗಳು ಲಾವಾರಸ ಘನೀಭವಿಸಿದ ಕಾಲದಲ್ಲಿಯ ಭೂಕಾಂತದಿಶೆಯನ್ನು ಸೂಚಿಸುತ್ತವೆಂದಾಯಿತು. ಈ ತೆರನಾಗಿ ಭೂಕಾಂತತ್ವ ದಿಶೆಯ 60 ಕೋಟಿ ವರ್ಷಗಳ ಇತಿಹಾಸ ಓದುವುದು ಸಾಧ್ಯವಾಗಿದೆ. ಈ ಇತಿಹಾಸಾವಲೋಕನದಿಂದ ಭೂಕಾಂತ ಉತ್ತರಧ್ರುವ ಗತಕಾಲದಲ್ಲಿ ಅನೇಕ ದಿಕ್ಕುಗಳತ್ತ ಅಲೆದಾಡಿದೆಯೆಂಬುದು ಕಂಡುಬಂದಿದೆ. ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ್ ಪ್ರಾಂತದಲ್ಲಿಯ ಅನೇಕ ಭೂಸ್ತರಗಳಲ್ಲಿ ಭೂಕಾಂತ ಧ್ರುವಗಳ ದಿಶೆಗಳು, ಈಗಿರುವ ದಿಶೆಗೆ ಪೂರ್ಣ ವಿರುದ್ಧವಾಗಿದ್ದುವು ಎಂದು ಶೋಧವಾಗಿದೆ.

ಪ್ರಾಯೋಗಿಕ ಸಂಶೋಧನೆಗಳಿಂದ ಲಭಿಸಿರುವ ಮಾಹಿತಿ ಭೂಮಿಯೊಳಗೆ ಒಂದು ಸರಳ ಅಯಸ್ಕಾಂತವಿರುವುದೆಂಬ (ಲೀನಿಯರ್ ಮ್ಯಾಗ್ನೆಟ್) ವಾದವನ್ನು ಸಮರ್ಥಿಸುದಿಲ್ಲ. ಭೂಮಿ ಒಂದು ಏಕಸಮ ಕಾಂತೀಕೃತ ಗೋಲವೆಂದು ಸೂಚಿಸಿದಾತನೇ ಹಿಂದೆ ಹೇಳಿದ ಗಿಲ್ಬರ್ಟ್ ಗೋಲ ಉಂಟುಮಾಡುವ ಈ ರೀತಿಯ ಪರಿಣಾಮಗಳನ್ನು ಗೋಲ ಮಧ್ಯದಲ್ಲಿರುವ ಒಂದು ಕಾಂತದ್ವಿಧ್ರುವ ಕೂಡ ಉಂಟುಮಾಡಬಲ್ಲದೆಂದು ತಾತ್ತ್ವಿಕವಾಗಿ ಸಿದ್ಧಪಡಿಸಬಹುದಾಗಿದೆ.

ಭೂಕಾಂತತ್ವವನ್ನು ವಿವರಿಸುವಲ್ಲಿ ಸ್ವಲ್ಪ ಮಟ್ಟಿಗಾದರೂ ಸಿದ್ಧಿಪಡೆದ ಒಂದು ಆಶಾದಾಯಕ ತತ್ತ್ವವೆಂದರೆ ಭೂಗರ್ಭದಲ್ಲಿಯ ವಿದ್ಯುತ್ಪ್ರವಾಹಗಳ ಸಿದ್ಧಾಂತ. ಇದನ್ನು ಒಪ್ಪುವ ಮೊದಲು ಎರಡು ವಿಷಯಗಳನ್ನು ಸಿದ್ಧಾಂತ ವಿವೇಚಿಸಬೇಕು: ಒಂದು, ಭೂಗರ್ಭದ ಇತಿಹಾಸದಲ್ಲಿ ಪ್ರವಾಹಗಳು ಹೇಗೆ ಉತ್ಪನ್ನವಾದುವು ಎಂಬ ಸಮಸ್ಯೆ; ಎರಡು, ಉತ್ಪನ್ನಾನಂತರ ಇವು ನಿರಂತರವಾಗಿ ಹೇಗೆ ಪೋಷಿತವಾಗುತ್ತವೆ ಎಂಬ ಸಮಸ್ಯೆ. ಇವು ಪೋಷಿತವಾಗದ ಪಕ್ಷದಲ್ಲಿ ಘಾತೀಯವಾಗಿ (ಎಕ್ಸ್‌ಪೊನೆನ್ಶಿಯಲಿ) ಕ್ಷೀಣಿಸುತ್ತ ಹೋಗುತ್ತವೆ. ಆಗ ಈ ಪ್ರವಾಹಗಳಿಂದ ಪ್ರೇರಿತವಾದ ಕಾಂತಕ್ಷೇತ್ರಗಳೂ ಕ್ಷೀಣಿಸುತ್ತ ಹೋಗುತ್ತವೆ. ಪ್ರಯೋಗಗಳು ಕಾಂತಕ್ಷೇತ್ರದ ಕ್ಷೀಣತೆಯನ್ನು ಸೂಚಿಸುತ್ತಿದ್ದರೂ ಕ್ಷೀಣತೆ ಪೂರ್ಣವಾಗಿ ಘಾತೀಯವಾಗಿದೆಯೋ ಇಲ್ಲವೋ ಈಗಲೇ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಇಲ್ಲಿ ಕಾಂತಕ್ಷೇತ್ರದ ದೀರ್ಘಕಾಲೀನ ವ್ಯತ್ಯಾಸಗಳನ್ನು ಸ್ಮರಿಸಬಹುದು. (ಬಿ.ಪಿ.ಆರ್.)

**ಭೂಕಾಲಗಣನೆ:** ಭೂಜನನ ಕಾಲದಿಂದ ವರ್ತಮಾನ ಕಾಲದವರೆಗೆ ಸಂದಿರುವ ಸುದೀರ್ಘಾವಧಿಯಲ್ಲಿ ಭೂಚರಿತ್ರೆ ವಿಕಾಸಗೊಂಡ ಪರಿಯನ್ನು ಹಂತ ಹಂತವಾಗಿ ವಿವರಿಸುವ ಭೂವಿಜ್ಞಾನವಿಭಾಗ (ಜಿಯೊಕ್ರೊನಾಲಜಿ). ಭೂಮಿಯ ಉಗಮ ಹಾಗೂ ಅದರ ಮೇಲಿನ ಜೀವಿಗಳ ವಿಕಾಸ, ಮಾರ್ಪಾಟು ಹಾಗೂ ಭೂಗರ್ಭದ ವೃತ್ತಾಂತವನ್ನು ವಿವರಿಸುವ ವಿದ್ಯೆಯೇ ಭೂವಿಜ್ಞಾನ. ಭೂಮಿಯ ಮೇಲೆ ಮಾನವನ ವಿಕಾಸ ಕೇವಲ ಹತ್ತು ಸಾವಿರ ವರ್ಷಗಳಿಂದೀಚೆಗಾದರೆ, ಭೂಮಿಯ ವಯಸ್ಸನ್ನು ಕೋಟ್ಯಂತರ ವರ್ಷಗಳಲ್ಲಿ ಅಳತೆ ಮಾಡಬೇಕಾಗುತ್ತದೆ. ಭೂಮಿಯ ಮೇಲಿನ ಪ್ರಾಚೀನ ಶಿಲೆಗಳ ವಯಸ್ಸು 2,800 ಮಿಲಿಯನ್ ವರ್ಷಗಳೆಂದು ಗುರುತಿಸಲಾಗಿದೆ. ನಮಗೆ ಗೋಚರಿಸದೆ ಇರುವ ಕಡಲ ತಳದ ಮತ್ತು ಅವುಗಳ ಕೆಳಗಿನ ಶಿಲೆಗಳು 4,500 ಮಿಲಿಯನ್ ವರ್ಷಗಳಿಗೂ ಹಳೆಯವು. ಭೂಮಿಯ ಜನನವಾದದ್ದು 5,000 ಮಿಲಿಯನ್ ವರ್ಷಗಳಿಗೂ ಹಿಂದೆ.

ಭೂಚರಿತ್ರೆಯ ಮುಖ್ಯ ಕಲ್ಪಗಳು: ಭೂಮಿಯ ಮೇಲೆ ಬೇರೆ ಬೇರೆ ಕಾಲಗಳಲ್ಲಿ ಜೀವಿಸಿ ಗತಿಸಿದ ಜೀವಿಗಳ ಅವಶೇಷಗಳನ್ನು ಅವಲಂಬಿಸಿ ಭೂಚರಿತ್ರೆಯ ಕಾಲಗಣನೆ ಮಾಡುತ್ತೇವೆ. ಭೂಮಿಯ ನಾನಾ ಭಾಗಗಳಲ್ಲಿಯ ಶಿಲಾಪದರಗಳನ್ನು ಕ್ರಮವಾಗಿ ಜೋಡಿಸಿ, ಅಭ್ಯಸಿಸಿ ಆ ಮೂಲಕ ಭೂಚರಿತ್ರೆಯನ್ನು ಕೆಲವು ಮುಖ್ಯ ಕಲ್ಪಗಳಾಗಿ ವಿಂಗಡಿಸಿದ್ದಾರೆ. ಭೂಮಿಯ ಮೇಲೆ ಜೀವಿಗಳು ಉದ್ಭವಿಸಿ ವಿಕಾಸಗೊಂಡದ್ದನ್ನು ಅನುಸರಿಸಿ ಈ ಕಲ್ಪಗಳಿಗೆ ಆರ್ಷೇಯ ಕಲ್ಪ, ಆದಿಜೀವಿಕಲ್ಪ, ಪ್ರಾಚೀನ ಜೀವಿಕಲ್ಪ, ಮಧ್ಯಜೀವಿಕಲ್ಪ ಮತ್ತು ನವೀನಜೀವಿಕಲ್ಪ ಎಂದು ಹೆಸರು ಕೊಟ್ಟಿದ್ದಾರೆ. ಇವುಗಳಲ್ಲಿ ಮೊದಲ ಎರಡು ಕಲ್ಪಗಳ ಕಾಲಾವಧಿ ಅಲ್ಲಿಂದೀಚಿನ ಎಲ್ಲ ಕಲ್ಪಗಳ ಕಾಲಾವಧಿಗಿಂತ ಬಹಳ ಹೆಚ್ಚಿನದು. ಈಚೆಗೆ ಆರ್ಷೇಯ ಕಲ್ಪದ ಅತಿ ಪ್ರಾಚೀನ ಶಿಲೆಗಳ ಕಾಲವನ್ನೂ ನಿರ್ಧರಿಸಲು ಪ್ರಯತ್ನ ನಡೆಯುತ್ತಿದೆ. ಕರ್ನಾಟಕದ ಬಹುಭಾಗದ ಶಿಲೆಗಳೆಲ್ಲವೂ ಅತ್ಯಂತ ಪುರಾತನವಾದ ಆರ್ಷೇಯ ಕಲ್ಪಕ್ಕೆ ಸೇರಿದವು.

ಪ್ರಾಚೀನಜೀವಿ ಕಲ್ಪಕ್ಕೆ ಸೇರಿದ ಮತ್ತು ಅಲ್ಲಿಂದೀಚೆಗೆ ನೀರಿನಲ್ಲಿ ರೂಪಗೊಂಡ ಶಿಲೆಗಳಲ್ಲಿ ಜೀವ್ಯವಶೇಷಗಳು ಹೇರಳವಾಗಿ ದೊರೆಯುತ್ತವೆ. ಈ ಕಲ್ಪದಲ್ಲಿ ನಾನಾ ತರಹ ಜೀವಿಗಳು ಬೆಳಕಿಗೆ ಬಂದು ಸಮೃದ್ಧವಾಗಿ ವಿಕಾಸಗೊಂಡಿರುವುದು ಕಾಣುತ್ತದೆ. ಭೂಮಿಯ ಮೇಲಿನ ಶಿಲಾಪದರಗಳ ಮತ್ತು ಅವುಗಳ ಅಧ್ಯಯನದ ಫಲವಾಗಿ ಗುರುತಿಸಿರುವ ಭೂಚರಿತ್ರೆಯ ಮುಖ್ಯ ಹಂತಗಳನ್ನು ಕೆಳಗಿನ ಪಟ್ಟಿಯಲ್ಲಿ ಕಾಣಿಸಿದೆ. ಒಂದೊಂದು ಕಲ್ಪದ ಕಾಲಾವಧಿಯನ್ನೂ (ಮಿಲಿಯನ್ ವರ್ಷಗಳಲ್ಲಿ) ಆಯಾ ಕಲ್ಪಗಳಲ್ಲಿ ವಿಕಾಸಗೊಂಡು ವೃದ್ಧಿಯಾದ ಪ್ರಾಣಿ ಮತ್ತು ಸಸ್ಯ ವರ್ಗಗಳನ್ನೂ ಕೆಳಗಿನ ಪಟ್ಟಿಯಲ್ಲಿ ಬೇರೆಯಾಗಿ ತೋರಿಸಿದೆ. ಈ ರೀತಿಯ ವಿಂಗಡಣೆ ಜೀವ್ಯವಶೇಷಗಳನ್ನೊಳಗೊಂಡಿರುವ ಪ್ರಾಚೀನ, ಮಧ್ಯ ಮತ್ತು ನವೀನ ಜೀವಕಲ್ಪದ ಶಿಲೆಗಳಿಗೆ ಮಾತ್ರ ಸಾಧ್ಯ. ಆರ್ಷೇಯ ಮತ್ತು ಆದಿಜೀವ ಕಲ್ಪಗಳ ಶಿಲೆಗಳಲ್ಲಿ ಜೀವಿಗಳ ಚಿಹ್ನೆ ಗೋಚರವಾಗುವುದಿಲ್ಲವಾದ್ದರಿಂದ ಅವುಗಳ ವಿಂಗಡಣೆ ಹೆಚ್ಚು ಕಷ್ಟತರವಾದುದು.

ರೇಡಿಯೊಮಾಪನ ಕಾಲಗಣನೆ: ಭೂಮಿಯಲ್ಲಿ ಕಂಡುಬರುವ ಧಾತುಗಳು ಸಾಮಾನ್ಯವಾಗಿ ವ್ಯತ್ಯಾಸಗೊಳ್ಳುವುದಿಲ್ಲ. ಆದರೆ ಕೆಲವು ಧಾತುಗಳು ವಿಕಿರಣ ಪಟುತ್ವ ಪಡೆದುಕೊಂಡಿರುತ್ತವೆ. ಇಂಥವುಗಳು ವಿಕಿರಣ ಬೀರಿ ಕ್ಷಯಿಸುತ್ತ ಹೋಗಿ ಬೇರೊಂದು ಧಾತುವಾಗಿ ಪರಿಣಮಿಸುತ್ತವೆ. ಹೀಗೆ ಯುರೇನಿಯಮ್ ಧಾತು ಕ್ಷಯಿಸಿ ಸೀಸ ಧಾತುವಾಗಿ ಉಳಿಯುತ್ತದೆ: ಈ ರೀತಿ ಧಾತು ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಪರಿಣಾಮಗೊಳ್ಳುವುದಕ್ಕೆ ನಿರ್ದಿಷ್ಟಕಾಲ ಬೇಕಾಗುತ್ತದೆ. ಕೊನೆಯಲ್ಲಿ ಉಳಿದಿರುವ ಸೀಸದ ಪ್ರಮಾಣ ಎಷ್ಟೆನ್ನುವುದನ್ನು ನಿಖರವಾಗಿ ಗುರುತಿಸಿ ಹೇಳಿದರೆ ಖನಿಜ ಭೂಮಿಯ ಮೇಲೆ ರೂಪುಗೊಂಡು ಎಷ್ಟು ಕಾಲ ಆಯಿತೆನ್ನುವುದನ್ನು ಗಣಿಸಿ ಹೇಳಲು ಸಾಧ್ಯವಾಗುತ್ತದೆ. ಖನಿಜದಲ್ಲಿ ಮೊದಲಿಗಿರುವ ಯುರೇನಿಯಮ್ ಪ್ರಮಾಣವನ್ನೂ ಕೊನೆಯಲ್ಲಿರುವ ಸೀಸದ ಪ್ರಮಾಣವನ್ನೂ ಅತಿ ಸೂಕ್ಷ್ಮ ಯಂತ್ರಗಳ ಸಹಾಯದಿಂದ ನಿರ್ಧರಿಸಲು ಈಚಿನ ವರ್ಷಗಳಲ್ಲಿ ಸಾಧ್ಯವಾಗಿದೆ.

ಇದೇ ರೀತಿ ಪೊಟ್ಯಾಸಿಯಮ್ ಧಾತು ಕ್ಷಯಿಸುತ್ತ ಹೋಗಿ ಕೊನೆಯಲ್ಲಿ ಆರ್ಗಾನ್ ಉಳಿಯುತ್ತದೆ. ಪೊಟ್ಯಾಸಿಯಮ್ ಸಂಬಂಧದ ಖನಿಜಗಳು ಪ್ರಕೃತಿಯಲ್ಲಿ ಹೇರಳವಾಗಿ ಸಿಗುವುದರಿಂದ ಅವು ರೂಪುಗೊಂಡ ಕಾಲವನ್ನು ಪೊಟ್ಯಾಸಿಯಮ್–ಆರ್ಗಾನ್ ವಿಧಾನ ಅವಲಂಬಿಸಿ ಗಣಿಸುವುದು ಸಾಧ್ಯವಾಗಿದೆ.

ಭೂಮಿಯ ನಾನಾ ಭಾಗಗಳಲ್ಲಿ ಅತಿ ಪ್ರಾಚೀನ ಶಿಲೆಗಳನ್ನು ಈಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಪರಿಶೀಲಿಸಲಾಗುತ್ತಿದೆ. ಟಾಟಾ ವಿಜ್ಞಾನ ಮಂದಿರದಲ್ಲಿ ಭಾರತದ ಪ್ರಾಚೀನ ಶಿಲೆಗಳ ಕಾಲ ಗಣನೆಯ ಕಾರ್ಯ ನಡೆಯುತ್ತಿದೆ. ಈ ಶೋಧನೆಗಳ ಫಲವಾಗಿ ಅತ್ಯಲ್ಪ ಸಿಲಿಕಾಂಶವಿರುವ ಕೆಲವು ಶಿಲೆಗಳು ಸು. 2,800 ಮಿಲಿಯನ್ ವರ್ಷಗಳಿಗೂ ಹಳೆಯವೆಂದು ನಿರ್ಧರಿಸಲಾಗಿದೆ. ಅಲ್ಲಿಂದೀಚೆಗೆ ರೂಪುಗೊಂಡ ನೈಸುಗಳು (ಕರ್ನಾಟಕದ ಬಹುಭಾಗ ಹರಡಿರುವ ಸುಟ್ಟಕಲ್ಲು ರೂಪಾಂತರಗೊಂಡ ಗ್ರಾನೈಟ್ ರೂಪದ ಶಿಲೆ) ಇವು ಅತ್ಯಂತ ಹಳೆಯ ಶಿಲಾ ವರ್ಗಕ್ಕೆ ಸೇರಿದವು. ಅವುಗಳಿಂದೀಚೆಗೆ ಧಾರವಾಡ ಶಿಲಾಸ್ತೋಮ (2600–1600 ಮಿಲಿಯನ್ ವರ್ಷಗಳು). ಆಮೇಲೆ ಕ್ರಮೇಣ ಕಲಾದಗಿ, ಕಡಪ ಮತ್ತು ಕರ್ನೂಲು ಶಿಲಾಸ್ತೋಮಗಳ ಕಾಲ (1600–510 ಮಿಲಿಯನ್ ವರ್ಷಗಳು) ಎಂದು ನಿರ್ಧರಿಸಲಾಗಿದೆ. 510 ಮಿಲಿಯನ್ ವರ್ಷಗಳಿಗೂ ಈಚಿನ ಚರಿತ್ರೆಯನ್ನು ಶಿಲಾಪದರಗಳಲ್ಲಿ ಹುದುಗಿರುವ ಜೀವ್ಯವಶೇಷಗಳ ಸಹಾಯದಿಂದ ನಿರ್ಧರಿಸಬಹುದು.

ಪ್ರಾಚೀನ ಜೀವಕಲ್ಪದಿಂದ ಈ ತನಕ ರೂಪುಗೊಂಡ ಶಿಲೆಗಳ ಕಾಲ ಮಿತಿಯನ್ನು ಅವುಗಳಲ್ಲಿ ಹುದುಗಿರುವ ಜೀವ್ಯವಶೇಷಗಳ ಸಹಾಯದಿಂದಲೂ ಅದಕ್ಕೂ ಹಿಂದಿನ ಶಿಲೆಗಳನ್ನು ವಿಕಿರಣಪಟು ಖನಿಜಗಳ ಅನ್ವೇಷಣೆಯಿಂದಲೂ ಕರಾರುವಾಕ್ಕಾಗಿ ಗುರುತಿಸುವುದು ಸಾಧ್ಯವಾಗಿದೆ. *

**ಭೂಖಂಡ ಮತ್ತು ಸಾಗರಗಳ ಉಗಮ:** ಭೂಭಾಗ ಮತ್ತು ಜಲಭಾಗಗಳ ಹಂಚಿಕೆಯ ಗುಣಲಕ್ಷಣಗಳು ಭೂಖಂಡಗಳು ಮತ್ತು ಸಾಗರಗಳ ಉಗಮ ಕುರಿತ ಯಾವುದೇ ಅಭಿಪ್ರಾಯ ಅಥವಾ ಸಿದ್ಧಾಂತಗಳಿಗೆ ಸಮಂಜಸತೆ ಹಾಗೂ ಅಧಿಕೃತತೆಯ ಏಕಾಭಿಪ್ರಾಯಗಳಿಲ್ಲ. ಅವುಗಳ ನಿರ್ಮಾಣದ ಬಗ್ಗೆ ಹಲವು ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾದವುಗಳ ಸಂಕ್ಷಿಪ್ತ ವಿಶ್ಲೇಷಣೆ ಈ ಕೆಳಗಿನಂತಿದೆ.

ಚತುರ್ಮುಖಿ ಸಿದ್ಧಾಂತ: ಭೂ ಮತ್ತು ಜಲಭಾಗಗಳು ಬಹು ಹಿಂದಿನಿಂದಲೂ ವಿಜ್ಞಾನಿಗಳಿಗೆ ಕುತೂಹಲಕರವಾಗಿದೆ. ಇವುಗಳನ್ನು ವಿವರಿಸಲು 1875ರಲ್ಲಿ ಲೋಥಿಯನ್ ಗ್ರೀನ್ ಎಂಬಾತ ತನ್ನ ಚತುರ್ಮುಖಿ ಸಿದ್ಧಾಂತವನ್ನು ಪ್ರಕಟಿಸಿದ. ಲೋಥಿಯನ್ ಗ್ರೀನ್ ಅನೇಕ ಪ್ರಯೋಗಗಳ ಆಧಾರದ ಮೇಲೆ ಗೋಳಾಕಾರ ಸರ್ವತೋಮುಖವಾದ ಒತ್ತಡದಿಂದ ಚತುರ್ಭುಜಾಕೃತಿಯನ್ನು ಹೊಂದುವುದೆಂದು ಪ್ರತಿಪಾದಿಸಿದ. ಈ ಸಿದ್ಧಾಂತವನ್ನು ಭೂಮಿಗೆ ಅನ್ವಯಿಸಿ, ಭೂಮಿ ಮತ್ತು ಜಲ ಭಾಗಗಳ ತದ್ವಿರುದ್ಧ ಹಂಚಿಕೆಯನ್ನು ವಿವರಿಸಲು ಪ್ರಯತ್ನಿಸಿದ. ಭೂಮಿ ಘನೀಕರಣ ಹೊಂದುವ ಪ್ರಕ್ರಿಯೆಯಲ್ಲಿ ಸುತ್ತಲಿನ ಒತ್ತಡ ಮತ್ತು ಆಂತರಿಕ ಪ್ರಕ್ರಿಯೆಗಳಿಂದ ಚತುರ್ಮುಖಿಯ ಆಕಾರವನ್ನು ಹೊಂದಿತು. ಈ ಚತುರ್ಮುಖಿಯಲ್ಲಿ ಸಮತಲವು ಏಣಿಗೆ ತದ್ವಿರುದ್ಧವಾಗಿರುವುದು. ಇದರಂತೆ ಚತುರ್ಮುಖಿಯ ಮಟ್ಟಸವಾದ ಭಾಗಗಳು ಜಲಭಾಗಗಳಿಂದಲೂ ಹಾಗೂ ಎತ್ತರವಾದ ಏಣುಗಳು ಭೂಭಾಗಗಳಾಗಿಯೂ ಪರಿಣಮಿಸಿವೆ ಎಂದು ಗ್ರೀನ್ ಪ್ರತಿಪಾದಿಸಿದ. ಇದರಂತೆ ಮೂರು ಏಣುಗಳು ಮೂರು ಪುರಾತನ ಭೂಫಲಕಗಳಾದ ಬಾಲ್ಟಿಕ್, ಲಾರೇಷಿಯನ್ ಹಾಗೂ ಸೈಬೀರಿಯ ಫಲಕಗಳನ್ನು ಪ್ರತಿನಿಧಿಸುತ್ತವೆ.

ನಾಲ್ಕನೆಯ ಏಣು ಹಾಗೂ ಚತುರ್ಮುಖಿಯ ತುದಿಯನ್ನು ಅಂಟಾರ್ಕ್‌ಟಿಕ ಖಂಡ ಪ್ರತಿನಿಧಿಸುವುದು. ಹೀಗೆ ಭೂ ಚತುರ್ಮುಖಿಯು ತನ್ನ ಒಂದು ಏಣಿನ ಮೇಲೆ ಮಾತ್ರ ನಿಂತಿರುವುದು. ಮೂರು ನೀಳವಾದ ಏಣುಗಳನ್ನು ಮೂರು ಭೂರಾಶಿಗಳು ಪ್ರತಿನಿಧಿಸುತ್ತವೆ. ಇದನ್ನು ಅಮೆರಿಕ ಖಂಡಗಳ ಹಂಚಿಕೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಅಲ್ಲದೆ ಪುರಾತನವಾದ ಮೂರು ಭೂಫಲಕಗಳೂ ಸಹ ಪರಸ್ಪರ $120^0$ ಅಂತರದಲ್ಲಿ ನೆಲೆಗೊಂಡಿರುವುದು ಈ ಸಿದ್ಧಾಂತಕ್ಕೆ ಪೂರಕವಾಗಿವೆ.

ಈ ಸಿದ್ಧಾಂತ ಇಂದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿದೆ. ಇದರ ಬಗ್ಗೆ ಮೂಡಿರುವ ಪ್ರಮುಖ ಟೀಕೆಗಳಿವು: 1) ಭೂಮಿ ತನ್ನ ದೈನಂದಿನ ಚಲನಗತಿಯಿಂದಾಗಿ ಚತುರ್ಮುಖಿ ಆಕಾರವನ್ನು ತಳೆಯುವುದು ಸಾಧ್ಯವಿಲ್ಲ. 2) ಬಹು ಜಟಿಲವಾದ ಶಿಲಾಸ್ತರಗಳ ರಚನೆಯನ್ನು ಹೊಂದಿರುವ ಭೂಮಿ ಕರಾರುವಾಕ್ಕಾಗಿ ಚತುರ್ಮುಖಿಯ ರೂಪವನ್ನು ತಳೆಯುವುದಿಲ್ಲ. 3) ಚತುರ್ಮುಖಿಯ ಏಣುಗಳು ಸ್ಥಿರವಾದವುಗಳು. ಇದರಿಂದ ಇವುಗಳನ್ನು ಪ್ರತಿನಿಧಿಸುವ ಭೂಭಾಗಗಳೂ ಸಹ ಸ್ಥಿರವಾಗಿರಬೇಕಾಗುವುದು. ಆದರೆ ಭೂಭಾಗಗಳು ತಮ್ಮ ಸ್ಥಾನವನ್ನು ಸಾಕಷ್ಟು ಬದಲಾಯಿಸಿರುವುದನ್ನು ಅನೇಕ ಸಿದ್ಧಾಂತಗಳು ಪ್ರತಿಪಾದಿಸಿವೆ. ಸ್ಥಿರವಾಗಿರಬೇಕಾಗಿದ್ದ ಸಾಗರಗಳು ಭೂಭಾಗಗಳಾಗಿ ಪರಿವರ್ತನೆ ಹೊಂದಿವೆ. ಇದರಿಂದ ಆಳ ಸಾಗರಗಳಲ್ಲಿ ಸಂಚಯನದಿಂದ ನಿರ್ಮಿತವಾಗಿರುವ ಕಣಶಿಲಾ ಪದರುಗಳನ್ನು ಭೂಭಾಗಗಳಲ್ಲಿ ಕಾಣಬಹುದು. 4) ಇತ್ತೀಚಿನ ಸಂಶೋಧನೆಗಳಿಂದ ರೂಪಗೊಂಡಿರುವ ಭೂಖಂಡಗಳ ಚಲನೆಯನ್ನು ಕುರಿತ ಸಿದ್ಧಾಂತಗಳು ವೈಜ್ಞಾನಿಕವಾಗಿ ಆಧಾರಗಳ ಸಹಿತ ಭೂಖಂಡಗಳ ಅಸ್ಥಿರತೆ ಹಾಗೂ ಅವುಗಳ ಚಲನೆಯನ್ನು ನಿರೂಪಿಸಿದೆ. ಚತುರ್ಮುಖ ಸಿದ್ಧಾಂತದ ಪ್ರಕಾರ ಭೂಖಂಡಗಳು ಸ್ಥಿರವಾಗಿದ್ದಲ್ಲಿ ಅವುಗಳ ಚಲನೆಯಿರುತ್ತಿರಲಿಲ್ಲ.

ಭೂಖಂಡ ಮತ್ತು ಸಾಗರಗಳ ಉಗಮ, ಅವುಗಳ ಹಂಚಿಕೆಗೆ ಪೂರಕವಾದಂಥ, ಭೂಖಂಡಗಳ ಅಲೆತ ಸಿದ್ಧಾಂತಗಳಲ್ಲಿ ಚರ್ಚಿಸಲಾಗಿದೆ.

ಭೂಖಂಡಗಳ ಅಲೆತ: ಈ ಬಗ್ಗೆ ಕೆಲವು ವಿಜ್ಞಾನಿಗಳು ಸಿದ್ಧಾಂತಗಳ ಮುಖಾಂತರ ನಿರೂಪಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳು: ಅ. ವೆಗೆನರನ ಭೂಖಂಡ ಅಲೆತ ಸಿದ್ಧಾಂತ. ಆ. ಆರ್ಥರ್ ಹೋಮ್ಸ್‌ರವರ ಪ್ರಬಲ ಪ್ರವಾಹ ಸಿದ್ಧಾಂತ. ಇ. ಭೂಫಲಕ ಸ್ಥಾನಪಲ್ಲಟ ಸಿದ್ಧಾಂತ (ಪ್ಲೇಟ್ ಟೆಕ್ಟಾನಿಕ್‌ಥಿಯರಿ)

ಅ. ವೆಗೆನರನ ಭೂಖಂಡಗಳ ಚಲನೆಯ ಸಿದ್ಧಾಂತ: ಭೂಖಂಡಗಳು ಮೂಲಸ್ಥಳದಿಂದ ವಿವಿಧ ದಿಕ್ಕಿನೆಡೆಗೆ ಚಲಿಸಲ್ಪಟ್ಟು ಪ್ರಸ್ತುತ ಸ್ಥಾನದಲ್ಲಿ ನೆಲೆಸಿವೆ ಎಂಬುದನ್ನು ಪ್ರತಿಪಾದಿಸಿರುವ ಸಿದ್ಧಾಂತ. ಭೂ ಸ್ವರೂಪಗಳ ವೈಜ್ಞಾನಿಕ ಅಧ್ಯಯನವು ಮಾನವರಿಗೆ ವಿಪುಲವಾದ ಮಾಹಿತಿಗಳನ್ನು ನೀಡಿದೆ. ಭೂಖಂಡಗಳ ಆಕಾರ, ಅಸ್ಥಿರತೆ, ಪರ್ವತ ಶಿಖರಾಗ್ರಗಳಲ್ಲಿನ ಜೈವಿಕ ಅವಶೇಷಗಳು, ಶೀತ ವಲಯಗಳಲ್ಲಿ ದೊರೆತಿರುವ ಕಲ್ಲಿದ್ದಲು ನಿಕ್ಷೇಪ, ಉಷ್ಣವಲಯದ ಭೂಪ್ರದೇಶಗಳಲ್ಲಿನ ಖಂಡಾಂತರ ಹಿಮನದಿಯ ಭೂಸ್ವರೂಪಗಳು, ಭೂಖಂಡಗಳ




ಪ್ರಸ್ತುತ ಸ್ಥಾನವನ್ನು ಪ್ರಶ್ನಿಸುವ ಪುರಾವೆಗಳಲ್ಲಿ ಮುಖ್ಯವಾದವು. ಭೂಮಿಯ ಹೊರಾವರಣದ ಪ್ರಾಥಮಿಕ ಸ್ವರೂಪಗಳೆಂದರೆ ಭೂಭಾಗಗಳು ಮತ್ತು ಸಾಗರಗಳು. ಇವುಗಳನ್ನು ಸ್ಥಿರವಾದ ಸ್ವರೂಪಗಳೆಂದು ಭಾವಿಸಲಾಗಿತ್ತು. ಆದರೆ ಅನೇಕ ವಿಜ್ಞಾನಿಗಳು ಇವುಗಳು ಸ್ಥಿರವಾಗಿರದೆ ಅಸ್ಥಿರವಾಗಿದ್ದು ಚಲನೆ ಹೊಂದುತ್ತವೆ ಎಂಬ ಭೂಖಂಡಗಳ ಚಲನೆಯನ್ನು ಕುರಿತ ಸಿದ್ಧಾಂತಗಳನ್ನು ಮಂಡಿಸಿರುವರು. ಈ ಸಿದ್ಧಾಂತ 17ನೆಯ ಶತಮಾನದ ಪ್ರಾರಂಭದಲ್ಲೇ ಮೊಳಕೆಗೊಂಡಿತ್ತು. 1620ರಲ್ಲಿ ಫ್ರಾನ್ಸಿಸ್ ಬೇಕನ್, 1668ರಲ್ಲಿ ಫ್ರೆಂಚ್‌ನ ಪಿ. ಪ್ಲೇಸೆಟ್, 1858ರಲ್ಲಿ ಆಂಟೋನಿಯೋ ಸ್ನೈಡರ್ ಮತ್ತು 1910ರಲ್ಲಿ ಅಮೆರಿಕದ ಎಫ್.ಬಿ. ಟೇಲರ್ ಇವರು ಈ ಸಿದ್ಧಾಂತವನ್ನು ಮಂಡಿಸಿದರವರಲ್ಲಿ ಮೊದಲಿಗರು. ವೈಜ್ಞಾನಿಕ ಪುರಾವೆಗಳೊಂದಿಗೆ ಮಾಹಿತಿಗಳನ್ನು ಕಲೆಹಾಕಿ ಈ ಸಿದ್ಧಾಂತವನ್ನು ಆಲ್ಫ್ರೆಡ್‌ವೆಗೆನರ್ 1912ರಲ್ಲಿ ಮಂಡಿಸಿದನಾದರೂ ಅದು ಅಧಿಕೃತವಾಗಿ, ಈತನ ಪುಸ್ತಕವೊಂದು ಇಂಗ್ಲಿಷ್ ಭಾಷೆಗೆ ಅನುವಾದಗೊಂಡ ಮೇಲೆ 1924ರಲ್ಲಿ ಪ್ರಕಟಗೊಂಡಿತು.




**ಐದು ಹಂತಗಳಲ್ಲಿ ಪ್ಯಾಂಜಿಯ ಒಡೆತ ಮತ್ತು ಸಂಚಲನೆ**

**ಎ. ಪರ್ಮಿಯನ್ ಯುಗ 225 ಮಿಲಿಯನ್ ವರ್ಷಗಳ ಹಿಂದೆ**

**ಬಿ. ಟ್ರೈಯಾಸಿಕ್ ಯುಗದ ಅಂತಿಮ, 180 ಮಿಲಿಯನ್ ವರ್ಷಗಳ ಹಿಂದೆ**

**ಸಿ. ಜುರಾಸಿಕ್ ಯುಗ ಅಂತಿಮ, 135 ಮಿಲಿಯನ್ ವರ್ಷಗಳ ಹಿಂದೆ**

**ಡಿ. ಕ್ರಿಟೇಷಿಯಸ್ ಯುಗದ ಅಂತಿಮ, 65 ಮಿಲಿಯನ್ ವರ್ಷಗಳ ಹಿಂದೆ**

**ಇ. ಇಂದಿನ ಖಂಡಗಳ ಹಂಚಿಕೆ**

ವೆಗೆನರ್‌ನು ಸೂಯೆಸ್ ಪ್ರತಿಪಾದಿಸಿದ ಭೂಪದರುಗಳನ್ನು ಆಧರಿಸಿ ತನ್ನ ಸಿದ್ಧಾಂತವನ್ನು ಹೆಣೆದಿರುವನು. ಈತನು ಸಿಯಾಲ್ ಪದರ ಕಡಿಮೆ ಸಾಂದ್ರತೆಯಿಂದ ಕೂಡಿದ್ದು ಭೂಖಂಡಗಳಿಗೆ ಸಂಬಂಧಿಸಿದೆಯೆಂದು ಪರಿಗಣಿಸಿದ. ಇದು ಹೆಚ್ಚು ಸಾಂದ್ರತೆಯುಳ್ಳ ಸಿಮಾ ಸ್ತರದ ಮೇಲ್ಪದರದಲ್ಲಿ ತೇಲುವುದೆಂದು ಭಾವಿಸಿದ. ಹೀಗಾಗಿ ಭೂಖಂಡಗಳು ತಮ್ಮ ಮೂಲಸ್ಥಾನದಿಂದ ಸಮಾನಾಂತರವಾಗಿ ವಿವಿಧ ದಿಕ್ಕಿನೆಡೆಗೆ ಚಲಿಸಿ ಇಂದಿನ ಸ್ಥಾನದಲ್ಲಿವೆಯೆಂದು ಕಲ್ಪಿಸಿದ್ದಾನೆ. ಅವು ಇಂದಿಗೂ ಅನಿಶ್ಚಿತ ಸ್ಥಿತಿಯಲ್ಲಿವೆ ಎಂದು ತಿಳಿಸಿರುವನು. ಈತನ ಪ್ರಕಾರ ಕಾರ್ಬಾನಿಫೆರಸ್ ಯುಗದ ಆರಂಭದಲ್ಲಿ ಇಂದಿನ ಎಲ್ಲಾ ಭೂರಾಶಿಗಳು ಒಟ್ಟುಗೂಡಿ ಒಂದೇ ಅಖಂಡ ಭೂರಾಶಿಯಾಗಿದ್ದಿತೆಂದೂ ಅದನ್ನು ವೆಗೆನರ್‌ನು ಪ್ಯಾಂಜಿಯಾ ಎಂದು ಕರೆದಿರುವನು. ಈ ಸಮಗ್ರ ಭೂ ಖಂಡದ ಸುತ್ತಲೂ ಜಲರಾಶಿ ಆವರಿಸಲ್ಪಟ್ಟಿತು. ಆ ಜಲರಾಶಿಯನ್ನು ವೆಗೆನರ್‌ನು ಪಾಂತಾಲಸ ಎಂದು ಕರೆದಿರುವನು. ಇದು ಪುರಾತನ ಪೆಸಿಫಿಕ್ ಸಾಗರವನ್ನು ಪ್ರತಿನಿಧಿಸುತ್ತದೆ. ಪ್ಯಾಂಜಿಯಾ ಒಡೆದು ಅದರ ಭಾಗಗಳು ವಿವಿಧ ದಿಕ್ಕುಗಳಿಗೆ ಚಲಿಸಲ್ಪಟ್ಟವು. ಪ್ರಸಕ್ತ ಅಮೆರಿಕ ಭಾಗಗಳು ಪಶ್ಚಿಮದ ಕಡೆಗೆ ಸ್ಥಳಾಂತರಗೊಂಡುದರಿಂದ ಅಟ್ಲಾಂಟಿಕ್ ಸಾಗರ ನಿರ್ಮಾಣಗೊಂಡಿತು. ಆಸ್ಟ್ರೇಲಿಯ ಮತ್ತು ಅಂಟಾರ್ಟಿಕ ಖಂಡಗಳು ಪ್ರಾರಂಭದಲ್ಲಿ ದಕ್ಷಿಣದ ಕಡೆಗೂ ಅನಂತರ ಆಸ್ಟ್ರೇಲಿಯ ಖಂಡ ಪ್ರತ್ಯೇಕಗೊಂಡು ಚಲಿಸಿರಬಹುದೆಂದು ವೆಗೆನರ್ ಕಲ್ಪಿಸಿರುವನು.

ಪ್ಯಾಂಜಿಯ ಅಖಂಡ ಭೂರಾಶಿ ಪೂರ್ವ–ಪಶ್ಚಿಮವಾಗಿ ಉಂಟಾದ ಸೀಳಿನಿಂದ ಎರಡು ಭೂರಾಶಿಗಳಾಗಿ ಪ್ರತ್ಯೇಕಗೊಂಡಿರಬಹುದೆಂಬುದು ಭೂಗರ್ಭ ವಿಜ್ಞಾನಿಗಳ ಅಭಿಪ್ರಾಯ. ಹೀಗೆ ಪ್ರತ್ಯೇಕಗೊಂಡ ಉತ್ತರ ಭಾಗವನ್ನು ಲಾರೇಷಿಯಾ ಅಥವಾ ಅಂಗಾರವೆಂದು ಮತ್ತು ದಕ್ಷಿಣ ಭಾಗವನ್ನು ಗೊಂಡ್ವಾನವೆಂದು ಕರೆಯಲಾಗಿದೆ. ಲಾರೇಷಿಯ ಭೂಭಾಗ ಪ್ರಸಕ್ತ ಉತ್ತರ ಅಮೆರಿಕ, ಯುರೋಪ್ ಮತ್ತು ಏಷ್ಯ ಖಂಡಗಳನ್ನೊಳಗೊಂಡಿದೆ. ಪ್ಯಾಂಜಿಯದ ದಕ್ಷಿಣ ಭಾಗವಾದ ಗೊಂಡ್ವಾನದಲ್ಲಿ ದಕ್ಷಿಣ ಅಮೆರಿಕ, ಆಫ್ರಿಕ, ಮಲಗಾಸಿ, ಭಾರತ ಪರ್ಯಾಯ ದ್ವೀಪ, ಆಸ್ಟ್ರೇಲಿಯ ಮತ್ತು ಅಂಟಾರ್ಕಟಿಕ ಖಂಡಗಳು ಸೇರುತ್ತವೆ. ಆಸ್ಟ್ರೇಲಿಯ ಖಂಡ ಮೂಲದಲ್ಲಿ ಇಂದಿನ ಬಂಗಾಳಕೊಲ್ಲಿಯಲ್ಲಿದ್ದು, ಅನಂತರ ಬೇರ್ಪಟ್ಟು ನಿಧಾನವಾಗಿ ದಕ್ಷಿಣಕ್ಕೆ ಚಲಿಸಿರಬಹುದೆಂದು ಕಲ್ಪಿಸಲಾಗಿದೆ.

ವೆಗೆನರ್ ಮೂಲತಃ ಹವಾಮಾನ ವಿಜ್ಞಾನಿ. ಈತನು ವಿವಿಧ ಭೂಪ್ರದೇಶಗಳಲ್ಲಿ ಹವಾಮಾನದ ಬದಲಾವಣೆಯನ್ನು ಅಭ್ಯಸಿಸುವಾಗ ಭೂಖಂಡಗಳ ಆಕಾರಗಳು ಪರಸ್ಪರ ಅನುರೂಪತೆಯನ್ನು ಹೊಂದಿರುವುದನ್ನು ಗಮನಿಸಿದ. ಅಟ್ಲಾಂಟಿಕ್ ಸಾಗರದ ಪೂರ್ವದಲ್ಲಿರುವ ಯುರೋಪ್ ಮತ್ತು ಆಫ್ರಿಕ ಖಂಡಗಳ ಪಶ್ಚಿಮ ತೀರ ಪ್ರದೇಶಗಳು ಉತ್ತರ ಮತ್ತು ದಕ್ಷಿಣ ಅಮೇರಿಕದ ಪೂರ್ವ ತೀರಗಳೊಂದಿಗೆ ಸರಿಯಾಗಿ ಹೊಂದಾಣಿಕೆಯಾಗಿರುವುದನ್ನು ಮನಗಂಡ. ಉದಾ: ಬ್ರೆಜಿಲ್‌ನ ಪೂರ್ವ ಭಾಗ ಮುಂಚಾಚಿಕೊಂಡಿದ್ದು ಅದು ಆಫ್ರಿಕದ ಗಿನಿ ಖಾರಿಗೆ ಹೊಂದಾಣಿಕೆಯಾಗುವುದು. ಇದೇ ರೀತಿಯಲ್ಲಿ ಆಫ್ರಿಕದ ಪೂರ್ವ ತೀರ ಭಾರತದ ಪಶ್ಚಿಮ ಕರಾವಳಿಯೊಂದಿಗೆ ಹೊಂದಿಕೊಳ್ಳುವುದು. ಆಸ್ಟ್ರೇಲಿಯದ ಉತ್ತರ ತೀರ ಬಂಗಾಳಕೊಲ್ಲಿಗೆ ಹೊಂದಿಕೊಳ್ಳುವುದು. ಈ ರೀತಿಯ ಭೂಪ್ರದೇಶಗಳ ಆಕಾರಗಳು ಪರಸ್ಪರ ಹೊಂದಾಣಿಕೆಯಾಗುವುದನ್ನು ಪರಿಗಣಿಸಿ ವೆಗೆನರ್ ಎಲ್ಲಾ ಭೂಖಂಡಗಳೂ ಸು. 200 ಮಿಲಿಯನ್ ವರ್ಷಗಳ ಹಿಂದೆ ಒಂದೇ ಅಖಂಡ ಭೂರಾಶಿಯ ಭಾಗಗಳಾಗಿದ್ದವೆಂದು ಪರಿಗಣಿಸಿದ. ಭೂಖಂಡಗಳು ಕ್ರಮೇಣ ಬೇರ್ಪಟ್ಟು ವಿವಿಧ ದಿಕ್ಕುಗಳಿಗೆ ಚಲಿಸಿದವು. ಇದರಿಂದ ಉಂಟಾದ ಘರ್ಷಣೆಯಿಂದಾಗಿ ಅವುಗಳು ಚಲಿಸಿದ ದಿಕ್ಕಿನಲ್ಲಿ ಮಡಿಕೆ ಪರ್ವತಗಳು ನಿರ್ಮಿತವಾದವು. ಹೀಗಾಗಿ ದಕ್ಷಿಣ ಅಮೆರಿಕದ ಆಂಡಿಸ್, ಉತ್ತರ ಅಮೆರಿಕದ ರಾಕೀ ಪರ್ವತಗಳು ನಿರ್ಮಾಣಗೊಂಡಿವೆಯೆಂದು ಇವನು ವಿವರಿಸಿದ್ದಾನೆ.

ಭೂಖಂಡಗಳ ಆಕಾರದಿಂದ ಅವುಗಳ ಚಲನೆಗಳನ್ನು ಊಹಿಸಿದ ಅನಂತರ ಇವನು ತನ್ನ ಸಿದ್ಧಾಂತವನ್ನು ಪ್ರತಿಪಾದಿಸಲು ಅನೇಕ ಆಕರಗಳನ್ನು ಕಲೆ ಹಾಕಿದ. ಆಫ್ರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳ ಭೂ ರಚನೆ ಏಕರೀತಿಯಲ್ಲಿರುವುದನ್ನು ಪರಿಗಣಿಸಿದ. ಈ ಎರಡೂ ಭೂಖಂಡಗಳಲ್ಲಿನ ಪಳೆಯುಳಿಕೆಗಳು ಏಕರೀತಿಯ ಸಸ್ಯ ಮತ್ತು ಪ್ರಾಣಿಯ ಅವಶೇಷ ಮೊದಲಾದವುಗಳಿಂದ ಪೇಲಿಯೋ ಜೋಯಿಕ್ ಯುಗದಲ್ಲಿ ಎರಡೂ ಭೂಖಂಡಗಳು ಒಟ್ಟಾಗಿದ್ದವೆಂದು ಪ್ರತಿಪಾದಿಸಿದ. ಅನಂತರ ಪರ್ಮೋ–ಕಾರ್ಬಾನಿಫೆರಸ್ ಯುಗದಲ್ಲಿ ಈ ಪ್ಯಾಂಜಿಯ ಭೂಭಾಗ ಎರಡು ಭಾಗಗಳಾಗಿ ಒಡೆದು ಟೆಥಿಸ್ ಸಮುದ್ರ ನಿರ್ಮಿತಗೊಂಡಿತು. ಇಂದಿನ ಮೆಡಿಟರೇನಿಯನ್ ಸಮುದ್ರ ಈ ಪುರಾತನ ಸಮುದ್ರದ ಅವಶೇಷವಾಗಿರುವುದು. ಮೀಸೋಜೋಯಿಕ್ ಯುಗದಲ್ಲಿ ಅಮೆರಿಕ ಖಂಡಗಳು, ಅಂಟಾರ್ಕಟಿಕ, ಆಸ್ಟ್ರೇಲಿಯ ಮತ್ತು ಆಫ್ರಿಕ ಖಂಡಗಳು ಪ್ರತ್ಯೇಕಗೊಂಡು ಚಲಿಸಿದವು. ಭೂಖಂಡಗಳ ನಡುವೆ ಅನೇಕ ಸಾಗರ ಮತ್ತು ಸಮುದ್ರಗಳು ನಿರ್ಮಿತವಾದವು.

ನಿದರ್ಶನಗಳು: ವೆಗೆನರ್ ತನ್ನ ಸಿದ್ಧಾಂತವನ್ನು ನಿರೂಪಿಸಲು ಕೆಲವು ನಿದರ್ಶನಗಳನ್ನು ನೀಡಿದ್ದಾನೆ.

ದಕ್ಷಿಣ ಅಮೆರಿಕ ಮತ್ತು ಆಫ್ರಿಕ ಖಂಡಗಳೆರಡೂ ಒಂದೇ ರೀತಿಯ ಭೂರಚನೆ, ಸಸ್ಯ ಮತ್ತು ಪ್ರಾಣಿವರ್ಗಗಳ ಪಳೆಯುಳಿಕೆಗಳನ್ನು ಹೊಂದಿವೆ. ದಕ್ಷಿಣ ಅಮೆರಿಕದ ದಕ್ಷಿಣ ತೀರದಲ್ಲಿರುವ ಫಾಕ್‌ಲೆಂಡ್ ದ್ವೀಪಗಳು ದಕ್ಷಿಣ ಅಮೆರಿಕ ಖಂಡಕ್ಕಿಂತಲೂ ಆಫ್ರಿಕ ಖಂಡವನ್ನೇ ಹೆಚ್ಚಾಗಿ ಹೋಲುತ್ತವೆ.

ಭೂ ರಚನೆಯಲ್ಲಿ ಯುರೋಪ್ ಮತ್ತು ಉತ್ತರ ಅಮೆರಿಕ ಖಂಡಗಳೂ ಸಹ ಒಂದೇ ರೀತಿಯಾಗಿವೆ. ಉತ್ತರ ಅಮೆರಿಕದ ಈಶಾನ್ಯ ಭಾಗದಲ್ಲಿರುವ ಅಪಲೇಷಿಯನ್ ಪರ್ವತಗಳು ಯುರೋಪಿನ ವಾಯವ್ಯ ವಲಯ, ಐರ್ಲೆಂಡ್ ಮತ್ತು ವೇಲ್ಸ್ ಪರ್ವತಗಳನ್ನು ಹೋಲುವುವು.

ಪರ್ಮೋ–ಕಾರ್ಬಾನೀಫೆರಸ್ ಯುಗದಲ್ಲಿ ಉಂಟಾದ ಖಂಡಾಂತರ ಹಿಮನದಿಯ ಲಕ್ಷಣಗಳು ಇಂದಿಗೂ ದಕ್ಷಿಣ ಅಮೆರಿಕ, ದಕ್ಷಿಣ ಆಫ್ರಿಕ, ದಕ್ಷಿಣ ಭಾರತ ಮತ್ತು ಆಸ್ಟ್ರೇಲಿಯ ಖಂಡಗಳಲ್ಲಿ ಕಂಡು ಬಂದಿವೆ. ಇದು ಹಿಂದೆ ಈ ಭೂರಾಶಿಗಳೆಲ್ಲವೂ ಒಟ್ಟಾಗಿದ್ದವೆಂಬುದನ್ನು ನಿರೂಪಿಸುತ್ತದೆ.

ಸ್ಕಾಂಡಿನೇವಿಯ ತೀರದ ಕೆಲವು ಲೆಮಿಂಗ್ಸ್ ಜಾತಿಯ ಪ್ರಾಣಿಗಳು ಇಂದು ಬಹು ದೂರದ ಕೆನಡ ತೀರದವರೆಗೂ ವಲಸೆ ಹೋಗಿರುವುದನ್ನು ಪತ್ತೆ ಹಚ್ಚಲಾಗಿದೆ. ಇವುಗಳು ಆ ಪ್ರದೇಶದ ತೀರವು ದೂರ ಹೋಗಿದ್ದರೂ ಇಂದಿಗೂ ಈ ಕಾರ್ಯವನ್ನು ಮುಂದುವರಿಸಿವೆ.

ಉತ್ತರ ಅಮೆರಿಕ ಖಂಡದ ಕಡೆಗೆ ಗ್ರೀನ್‌ಲೆಂಡ್ ನಿಧಾನವಾಗಿ ಚಲಿಸುತ್ತಿದೆ ಎಂಬುದು ಭೂಗಣಿತಿಯ ಸರ್ವೇಕ್ಷಣೆಯಿಂದ ತಿಳಿದುಬಂದಿದೆ. ಇದನ್ನು 1823, 1870 ಮತ್ತು 1971ರಲ್ಲಿ ನಡೆಸಿದ ಸರ್ವೇಕ್ಷಣೆಯಿಂದ ನಿರೂಪಿಸಲಾಗಿದೆ. ಇದರಂತೆಯೇ ವಾಂಕೋವರ್ ನಗರ ಒಟ್ಟಾವ ನಗರದ ಕಡೆಗೆ ಸರಿಯುತ್ತಿದೆ. ಅಲ್ಲದೆ ವಾಷಿಂಗ್ಟನ್ ನಗರ ಕ್ಯಾಲಿಫೋರ್ನಿಯದ ಸಾನ್‌ಡಿಯಾಗೋದಿಂದ ದೂರ ಸರಿಯುತ್ತಿದೆ. ಇವುಗಳೆಲ್ಲವೂ ಭೂಖಂಡಗಳ ಚಲನೆಯ ಸಾಧ್ಯತೆಯನ್ನು ನಿರೂಪಿಸುತ್ತವೆ.

ಟೀಕೆಗಳು: ವೆಗೆನರ್‌ನ ಭೂ ಖಂಡಗಳ ಚಲನ ಸಿದ್ಧಾಂತ ವಿಜ್ಞಾನಿಗಳಿಗೆ ಮಹತ್ತ್ವದ ಸಮಸ್ಯೆಯಾಗಿ ಪರಿಣಮಿಸಿತು. ಭೂಖಂಡಗಳ ಚಲನೆಯ ಪ್ರತಿಪಾದನೆಯ ನಿರೂಪಣೆಯಲ್ಲಿ ಕಾರಣಗಳನ್ನು ನೀಡುವುದರಲ್ಲಿ ವೆಗೆನರ್ ವಿಫಲಗೊಂಡ. ಇವನ ಸಿದ್ಧಾಂತವನ್ನು ಕುರಿತ ಪ್ರಮುಖ ಟೀಕೆಗಳು ಈ ಕೆಳಗಿನಂತಿವೆ.

ವೆಗೆನರನ ಸಿದ್ಧಾಂತ ಭೂಖಂಡಗಳ ಚಲನೆಯನ್ನು ಮಾತ್ರ ವಿವರಿಸುವುದೇ ಹೊರತು, ಅದಕ್ಕೆ ಕಾರಣಗಳನ್ನು ನೀಡಿಲ್ಲ. ಯಾವ ಕಾರಣಗಳಿಂದ ಭೂಖಂಡಗಳು ಅನಿಶ್ಚಿತ ದಿಕ್ಕಿನಲ್ಲಿಯೇ ಚಲಿಸುತ್ತವೆ ಎಂಬುದನ್ನು ವಿವರಿಸಿಲ್ಲ.

ಈ ಸಿದ್ಧಾಂತ ಘನರೂಪದಲ್ಲಿರುವ ಸಿಯಾಲ್ ಪದರ ಅರೆ ದ್ರವರೂಪದಲ್ಲಿರುವ ಸೀಮಾ ಪದರಿನ ಮೇಲೆ ತೇಲುವುದೆಂದು ನಿರೂಪಿಸುವುದು. ಆದರೆ ಸೀಮಾ ಪದರ ಸಿಯಾಲ್ ಪದರದ ಅಂಚುಗಳನ್ನು ಮಡಿಸಿರುವುದರಿಂದ ಪರ್ವತಗಳು ನಿರ್ಮಾಣಗೊಂಡವೆಂದು ವಿವರಿಸಲಾಗಿದೆ. ಅಂದರೆ ಸೀಮಾ ಪದರ ಘನರೂಪದಲ್ಲಿದ್ದರೆ ಮಾತ್ರ ಈ ರೀತಿ ಮಡಿಚಲ್ಪಡುವಿಕೆ ಸಾಧ್ಯ. ಅಲ್ಲದೆ ಎಲ್ಲಾ ಪರ್ವತಗಳು ಈ ಶಿಲಾ ಪದರುಗಳಿಂದ ಮಡಿಚಲ್ಪಟ್ಟಿದ್ದು, ಈ ಸಿದ್ಧಾಂತಕ್ಕೆ ತದ್ವಿರುದ್ಧವಾಗಿದೆ.

ಭೂ ಖಂಡಗಳ ಅಂಚುಗಳು ಪರಸ್ಪರ ಹೊಂದಿಕೊಳ್ಳುವ ವಿಧಾನವನ್ನೂ ಸಹ ವಿಜ್ಞಾನಿಗಳು ಟೀಕಿಸಿದ್ದಾರೆ. ವೆಗೆನರ್ ಹೇಳಿದ ರೀತಿಯಲ್ಲಿ ಮಾತ್ರವಲ್ಲದೆ, ಇನ್ನುಳಿದ ರೀತಿಯಲ್ಲಿಯೂ ಇವುಗಳು ಸರಿಹೊಂದುವುದನ್ನು ತೋರಿಸಿರುವರು.

ವೆಗೆನರ್ ಪೇಲಿಯೋಜೋಯಿಕ್ ಯುಗದಲ್ಲಿ ಭೂಖಂಡಗಳೆಲ್ಲವೂ ಒಂದೇ ರೀತಿಯಲ್ಲಿದ್ದವೆಂಬುದನ್ನು ಭಾವಿಸಿ ಅಂದಿನಿಂದ ಭೂಖಂಡಗಳ ಸ್ಥಾನವನ್ನು ವಿಶ್ಲೇಷಿಸಿದ್ದಾನೆ. ಅದಕ್ಕಿಂತ ಮೊದಲಿನ ಭೂ ಇತಿಹಾಸವನ್ನು ಪರಿಗಣಿಸಿಲ್ಲವಾದುದರಿಂದ ಭೂಖಂಡಗಳ ಇತಿಹಾಸ ಅಪೂರ್ಣವಾಗಿದೆ.

ವೆಗೆನರ್ ಸಿದ್ಧಾಂತ ಹಲವು ಟೀಕೆಗೊಳಗಾಗಿದ್ದರೂ ಭೂಖಂಡಗಳು ನಿಶ್ಚಲವಾದವುಗಳಲ್ಲವೆಂಬುದನ್ನು ಸಾಬೀತುಗೊಳಿಸಿದೆ. ಇತ್ತೀಚಿನ ವರ್ಷಗಳ ಭೂಗರ್ಭ ವಿಜ್ಞಾನಿಗಳ ಸಂಶೋಧನೆಗಳು ಇದಕ್ಕೆ ಪೂರಕವಾಗಿದೆ. ಅಲ್ಲದೆ ಭೂಖಂಡಗಳ ಚಲನೆ ಮತ್ತು ದಿಕ್ಕನ್ನು ನಿರೂಪಿಸಲು ಸಿದ್ಧಾಂತಗಳನ್ನು ರೂಪಿಸಲಾಗಿದೆ. ಆದರೆ ಈ ಸಿದ್ಧಾಂತಗಳೆಲ್ಲವೂ ವೆಗೆನರ್‌ನ ಚಲನೆಯನ್ನು ಆಧರಿಸಿ ಚಲನೆಗೆ ಕಾರಣಗಳು ಹಾಗೂ ಚಲನೆಯ ಇತ್ತೀಚಿನ ನಿದರ್ಶನಗಳು ಮತ್ತು ಪರಿಣಾಮಗಳನ್ನು ವಿವರಿಸಲು ಪ್ರಯತ್ನಿಸಿವೆ.

ಭೂಖಂಡಗಳ ಅಲೆತ ಕುರಿತ ಇತ್ತೀಚಿನ ನಿದರ್ಶನಗಳು:

1. ಪುರಾತನ ಶಿಲೆಗಳ ಕಾಂತತ್ವ: ಬಸಾಲ್ಟ್ ಶಿಲಾದ್ರವ ಅಥವಾ ಲಾವಾರಸ ಸಿಲಿಕೇಟ್ ಖನಿಜಾಂಶದ ಜೊತೆಗೆ ಕಬ್ಬಿಣದ ಆಕ್ಸೈಡ್ ಮತ್ತು ಮ್ಯಾಗ್ನಟೈಟ್ ಮೊದಲಾದ ಕಾಂತತ್ವ ಗುಣ ಹೊಂದುವ ಖನಿಜಾಂಶಗಳನ್ನು ಒಳಗೊಂಡಿರುವುದು. ಅತಿ ಹೆಚ್ಚು ಉಷ್ಣಾಂಶದಲ್ಲಿ ಇವುಗಳು ಕಾಂತತ್ವ ಗುಣವನ್ನು ಹೊಂದಿರುವುದಿಲ್ಲ. ಉಷ್ಣಾಂಶ ಕಡಿಮೆಯಾದಂತೆ ಭೂಕಾಂತತ್ವ ಘನೀಕರಣಗೊಂಡು ಕಬ್ಬಿಣದ ಖನಿಜಾಂಶಗಳಿಗೂ ವಿಸ್ತರಿಸುವುದು. ಈ ಶಿಲೆಗಳ ಸಹಾಯದಿಂದ ಭೌಗೋಳಿಕ ಉತ್ತರ ಧ್ರುವವನ್ನು ಅಥವಾ ಭೂಮಿಯ ಕಾಂತಧ್ರುವವನ್ನು ಗುರುತಿಸಬಹುದು. ಭೂಮಿಯ ಕಾಂತ ಧ್ರುವ ಸೂರ್ಯನ ಸುತ್ತಲೂ ಭೂಮಿ ಸುತ್ತುವಾಗ ಇರುವ ಓರೆಯಾಗಿರುವಿಕೆಗೆ ಸಮನಾಗಿರುವುದು. ಭೂಮಿಯ ಈ ಓರೆಯಾಗಿರುವಿಕೆಯು ಭೂ ಇತಿಹಾಸದ ಎಲ್ಲಾ ಕಾಲಗಳಲ್ಲಿಯೂ ಒಂದೇ ರೀತಿಯಾಗಿದೆ. ಆದರೆ ವಿವಿಧ ಭೂಖಂಡಗಳ ಶಿಲೆಗಳಲ್ಲಿನ ಕಾಂತತ್ವ ಅವುಗಳ ನಿರ್ಮಾಣದ ಅವಧಿಯಲ್ಲಿ ಧ್ರುವಗಳನ್ನು ವಿವಿಧ ರೀತಿಯಲ್ಲಿ ತೋರಿಸುತ್ತವೆ. ಇದರಿಂದ ಮೊದಲನೆಯದಾಗಿ ಈ ಶಿಲೆಗಳನ್ನು ಒಳಗೊಂಡ ಭೂ ಪ್ರದೇಶಗಳು ಚಲಿಸಿರಬೇಕು ಎರಡನೆ ಸಾಧ್ಯತೆಯೆಂದರೆ ಧ್ರುವಗಳೇ ಸ್ಥಳಾಂತರವಾಗಿರಬೇಕು. ಧ್ರುವಗಳ ವಲಸೆಯ ಸಾಧ್ಯತೆ ಪ್ರಮಾಣ ಬಹಳ ಕಡಿಮೆ. ಆದುದರಿಂದ ಭೂರಾಶಿಗಳೇ ಚಲಿಸಿರಬೇಕೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಇದರ ಪ್ರಕಾರ ಯುರೋಪ್, ಅಮೇರಿಕ ಮತ್ತು ಭಾರತಗಳು 20 ಮಿಲಿಯನ್ ವರ್ಷಗಳ ಹಿಂದೆ ಉತ್ತರದ ಕಡೆಗೆ ಚಲಿಸಿವೆ. ಯುರೋಪ್ ಮತ್ತು ಉತ್ತರ ಅಮೆರಿಕ ಖಂಡಗಳು ಸು. 300 ಮಿಲಿಯನ್ ವರ್ಷಗಳ ಹಿಂದೆ ಚಲಿಸಿವೆ. ಸಮಭಾಜಕ ವೃತ್ತದ ಬಳಿಯಿದ್ದ ಆಸ್ಟ್ರೇಲಿಯ ದಕ್ಷಿಣದ ಕಡೆಗೆ ಚಲಿಸಿ ಅನಂತರ ತನ್ನ ದಿಕ್ಕನ್ನು ಪೂರ್ಣವಾಗಿ ಬದಲಾಯಿಸಿ ಸು. 200 ಮಿಲಿಯನ್ ವರ್ಷಗಳ ಹಿಂದೆ ಉತ್ತರಕ್ಕೆ ಚಲಿಸಿ, ತನ್ನ ಇಂದಿನ

ಸ್ಥಾನದಲ್ಲಿದೆ. ಹೀಗಾಗಿ ಭೂಖಂಡಗಳಲ್ಲಿ ಅತಿ ಹೆಚ್ಚು ಚಲನೆಗೀಡಾಗಿರುವುದು ಆಸ್ಟ್ರೇಲಿಯ. ಭಾರತ ಸು. 70 ಮಿಲಿಯನ್ ವರ್ಷಗಳ ಹಿಂದೆ ಸು. $50^0$ ದಕ್ಷಿಣ ಅಕ್ಷಾಂಶದಲ್ಲಿದ್ದಿತೆಂದೂ, ಅನಂತರ ಉತ್ತರದ ಕಡೆಗೆ ಚಲಿಸಿರುವುದೆಂದೂ ತಿಳಿದು ಬಂದಿದೆ. ಕಾರ್ಬೋನಿಫರಸ್ ಯುಗದಲ್ಲಿ ಅಂಟಾರ್ಟಿಕ ಖಂಡ ಉಷ್ಣವಲಯದಲ್ಲಿದ್ದಿತೆಂದೂ ಅಲ್ಲಿ ದೊರೆತಿರುವ ಕಲ್ಲಿದ್ದಲಿನ ನಿಕ್ಷೇಪಗಳು ಸ್ಪಷ್ಟಪಡಿಸಿವೆ. ಇಂದಿನ ಗೊಂಡ್ವಾನ ಭೂರಾಶಿಯ ಭಾಗಗಳೆಂದು ಭಾವಿಸಲಾಗಿರುವ ದಕ್ಷಿಣ ಅಮೆರಿಕ, ಆಸ್ಟ್ರೇಲಿಯ, ಭಾರತ, ಆಫ್ರಿಕ ಖಂಡಗಳು ಸು. 150 ಮಿಲಿಯನ್ ವರ್ಷಗಳ ಹಿಂದೆ ಶೀತವಲಯದಲ್ಲಿದ್ದು, ಇವುಗಳು ಖಂಡಾಂತರ ಹಿಮರಾಶಿಯಿಂದ ಆವೃತವಾಗಿದ್ದವೆಂಬುದಕ್ಕೆ ಪುರಾವೆಗಳಿವೆ.

2. ಸಾಗರಗಳು ವಿಸ್ತಾರಗೊಳ್ಳುತ್ತಿರುವುದು: ಭೂಖಂಡ ಅಲೆತದಿಂದ ಸಾಗರಗಳ ಕ್ಷೇತ್ರ ವಿಸ್ತಾರಗೊಂಡಿದೆ. ಇದರಿಂದಾಗಿ ಆಳ ಸಾಗರ ಮೈದಾನಗಳಲ್ಲಿ ಭೂ ಇತಿಹಾಸದ ಇತ್ತೀಚಿನ ಅವಧಿಯಲ್ಲಿ ಸಂಚಯಿತವಾಗಿರುವ ಶಿಲೆಗಳು ಹಾಗೂ ಕೆಸರನ್ನು ಕಾಣಬಹುದು. ಸಾಗರಗಳ ಮಧ್ಯದಲ್ಲಿರುವ ಅಂತರ್ಗತ ಶ್ರೇಣಿಗಳಿಂದ ಭೂಖಂಡಗಳು ದೂರವಾಗುತ್ತಿರುವುದನ್ನು ಅಳೆಯಲಾಗಿದೆ. ಹೋಮ್ಸ್‌ರವರ ಪ್ರಚಲನ ಪ್ರವಾಹಗಳ ಸಿದ್ಧಾಂತದ ಪ್ರಕಾರ ಭೂಮಿಯ ಅಂತರಾಳದ ಶಿಲಾಪಾಕದಲ್ಲಿ ಉಂಟಾಗುವ ಪ್ರಚಲನ ಪ್ರವಾಹಗಳು ಈ ಅಂತರ್ಗತ ಶ್ರೇಣಿಗಳಲ್ಲಿ ಹಾಗೂ ಭೂಖಂಡಗಳಲ್ಲಿ ಮೇಲೇಳುವುದರಿಂದ ಇವುಗಳು ಬಹು ಎತ್ತರವಾಗಿವೆ. ಈ ಎರಡೂ ಪ್ರವಾಹಗಳೂ ಪರಸ್ಪರ ವಿರುದ್ಧವಾಗಿ ಭೂ ಅಂತರಾಳದಲ್ಲಿ ಚಲಿಸಿ ಆಳ ಸಾಗರದಲ್ಲಿ ಪುನಃ ಕೆಳಮುಖವಾಗಿ ಚಲಿಸುವುದರಿಂದ, ಅಂತಹ ಸ್ಥಾನಗಳಲ್ಲಿ ಸಾಗರ ತಗ್ಗುಗಳು ಕಂಡುಬರುತ್ತವೆ.

3. ಪ್ರಾಣಿಗಳ ಅವಶೇಷಗಳು: ಇಂದು ಬಹು ದೂರದಲ್ಲಿರುವ ಹಾಗೂ ವಿವಿಧ ವಾಯುಗುಣ ಪ್ರದೇಶಗಳಲ್ಲಿರುವ ಭೂಖಂಡಗಳಲ್ಲಿ ಸು. 300–270 ಮಿಲಿಯನ್ ವರ್ಷಗಳ ನಡುವೆ ಇದ್ದಿರಬಹುದಾದ ಒಂದೇ ಬಗೆಯ ಪ್ರಾಣಿಗಳ ಅವಶೇಷಗಳು ದೊರೆತಿವೆ. ಇವುಗಳು ಚೀನ, ಅರ್ಜೆಂಟೈನ ಮತ್ತು ಅಂಟಾರ್ಕಟಿಕ ಖಂಡಗಳಲ್ಲಿ ದೊರಕಿದೆ. ಈ ಪ್ರಾಣಿಗಳು ಭೂವಲಯದ ಪ್ರಾಣಿಗಳಾಗಿದ್ದು ಸಹಸ್ರಾರು ಕಿಮೀಗಳ ದೂರ ಈಜುವ ಸಾಧ್ಯತೆ ಕಡಿಮೆ. ಇದರಿಂದಾಗಿ ಈ ಅವಧಿಯಲ್ಲಿ ಭೂಪ್ರದೇಶಗಳೆಲ್ಲವೂ ಒಟ್ಟಾಗಿದ್ದು, ಪ್ರಾಣಿಗಳು ಎಲ್ಲಾ ಭಾಗಗಳಲ್ಲಿಯೂ ಹರಡಿದ್ದವೆಂದು ನಂಬಲಾಗಿದೆ. (ಪಿ.ಎಂ.)

ಆರ್ಥರ್ ಹೋಮ್ಸ್‌ರವರ ಪ್ರಚಲನ ಪ್ರವಾಹಗಳ ಸಿದ್ಧಾಂತ: ಆರ್ಥರ್ ಹೋಮ್ಸ್‌ರವರು ವೆಗೆನರ್‌ನ ಖಂಡಗಳ ಅಲೆತವನ್ನು ಸಮೀಕ್ಷಿಸಿ ಭೂಖಂಡಗಳ ಚಲನೆಗೆ ಭೂಮಿಯ ಮಿಶ್ರ ಉಪಸ್ತರದಲ್ಲಿ ಉಂಟಾಗುವ ಪ್ರಚಲನ ಪ್ರವಾಹಗಳು ಕಾರಣವೆಂದು ವಿಶ್ಲೇಷಿಸಿದ್ದಾರೆ. ಭೂಮಿಯ ಶಿಲಾಗೋಳವನ್ನು ಆರ್ಥರ್ ಹೋಮ್ಸ್ ಎರಡು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ಘನರೂಪದಲ್ಲಿರುವ ಭೂ ಹೊರಕವಚ, ಅದರ ತಳಭಾಗದಲ್ಲಿರುವ ಮಿಶ್ರ ಉಪಸ್ತರ, ಭೂಹೊರ ಕವಚ ಸಿಲಿಕೇಟ್ ಮತ್ತು ಅಲ್ಯೂಮಿನಿಯಂಗಳಿಂದ ಕೂಡಿವೆ. ಎಲ್ಲ ಭೂಖಂಡಗಳು ಈ ವಿಭಾಗಕ್ಕೆ ಸೇರಿದವುಗಳಾಗಿವೆ. ಮಿಶ್ರ ಉಪಸ್ತರವು ಸಾಕಷ್ಟು ಆಳದಲ್ಲಿರುವುದರಿಂದ ಉಷ್ಣಾಂಶ ಅಧಿಕವಾಗಿದೆ. ಇದಲ್ಲದೆ ಥೋರಿಯಂ, ಯುರೇನಿಯಂ ಈ ಖನಿಜಗಳ ಅಣುಗಳ ಘರ್ಷಣೆ ಹಾಗೂ ವಿಕಿರಣದಿಂದ ಅಪಾರವಾದ ಉಷ್ಣಾಂಶ ಬಿಡುಗಡೆಯಾಗುವುದರಿಂದ ಮಿಶ್ರ ಉಪಸ್ತರದ ಉಷ್ಣಾಂಶ ಅತ್ಯಧಿಕವಾಗಿದೆ. ಇದು ಪ್ರತಿ ಚ.ಸೆಂಮೀಗೆ 60 ಕ್ಯಾಲೋರಿಗಳಷ್ಟಿರುವುದು ಎಂದು ಅಂದಾಜು ಮಾಡಲಾಗಿದೆ. ಭೂ ಹೊರ ಕವಚದಲ್ಲಿಯೂ ಈ ಬಗೆಯ ಅಣು ವಿಕಿರಣದ ಕ್ರಿಯೆಯಿಂದ ಅಪಾರ ಪ್ರಮಾಣದ ಉಷ್ಣಾಂಶ ಬಿಡುಗಡೆಯಾದರೂ ಅದು ಬಾಹ್ಯ ವಾಯುಮಂಡಲದ ಸಂಪರ್ಕದಿಂದ ಈ ಉಷ್ಣಾಂಶವನ್ನು ಕಳೆದುಕೊಳ್ಳುವುದು. ಆದರೆ ಮಿಶ್ರ ಉಪಸ್ತರ ಭೂಹೊರಕವಚದಿಂದ ಮುಚ್ಚಲ್ಪಟ್ಟಿರುವುದರಿಂದ ಈ ವಲಯ ಮೇಣದ ರೂಪದಲ್ಲಿರುವ ಶಿಲಾಪಾಕದಿಂದ ಕೂಡಿರುವುದೆಂದು ಹೋಮ್ಸ್‌ರ ಪ್ರತಿಪಾದನೆ. ಮಿಶ್ರ ಉಪಸ್ತರದಲ್ಲಿ ಅತ್ಯಧಿಕ ಉಷ್ಣಾಂಶದಿಂದ ಪ್ರಚಲನ ಪ್ರವಾಹಗಳು ನಿರ್ಮಾಣಗೊಂಡು ಅವು ಭೂಖಂಡಗಳ ಚಲನೆಗೆ ಕಾರಣವಾಗಿವೆಯೆಂದು 1928ರಲ್ಲಿ ತಿಳಿಸಿದರು. ಭೂಖಂಡಗಳ ಮಿಶ್ರ ಉಪಸ್ತರ ಪ್ರಚಲನ ಪ್ರವಾಹಗಳ ಮೇಲ್ಮುಖ ಚಲನೆಯನ್ನು, ಸಾಗರಗಳು ಕೆಳಮುಖ ಚಲನೆಯನ್ನು ಹೊಂದಿರುತ್ತವೆ.

ಟೀಕೆಗಳು: ಮಿಶ್ರ ಉಪಸ್ತರ ಮೇಣದ ರೂಪದಲ್ಲಿರುವುದೇ ಹೊರತು, ಅದು ಪ್ರಚಲನ ಪ್ರವಾಹಗಳನ್ನು ಹೊಂದುವುದೆ ಅಸಾಧ್ಯವೆನ್ನುವುದು ಈ ಸಿದ್ಧಾಂತದ ವಿರುದ್ಧವಾಗಿರುವ ಮುಖ್ಯ ಟೀಕೆ. ಈ ವಲಯದಲ್ಲಿ ಉಂಟಾಗುವ ಪ್ರವಾಹಗಳು ಭೂಖಂಡಗಳು ಚಲನೆಯುಂಟುಮಾಡುವಷ್ಟು ಪ್ರಬಲವಾಗಿರುವುದಿಲ್ಲ.

ಭೂಫಲಕ ಸಂಚಲನಾ ಸಿದ್ಧಾಂತ: ಈ ಸಿದ್ಧಾಂತ ಭೂಭಾಗಗಳ ಸಂಚಲನೆ (ಅಲೆತ) ಮತ್ತು ಭೂಮೇಲ್ಮೈಯಲ್ಲಿ ನಿರ್ಮಾಣಗೊಂಡಿರುವ ಪ್ರಮುಖ ಸ್ವರೂಪಗಳ ನಿರ್ಮಾಣದ ಬಗ್ಗೆ ವೈಜ್ಞಾನಿಕವಾಗಿ ವಿವರಿಸುತ್ತದೆ. ಶಿಲಾಗೋಳದ ವಿಭಾಗಗಳು ಮತ್ತು ಅವುಗಳ ಚಲನೆಯನ್ನು ಕುರಿತ ಪ್ರಕ್ರಿಯೆಯ ವಿವರಣೆಯೇ ಭೂಫಲಕ ಸಂಚಲನಾ ಸಿದ್ಧಾಂತವಾಗಿದೆ. ಭೂಮಿಯ ಹೊರಕವಚದ ವಿಶಾಲ ಮತ್ತು ಮಂದವಾದ ಘನರೂಪದ ಭಾಗವನ್ನು ಭೂಫಲಕ ಎನ್ನಲಾಗಿದೆ.

ತುಜ಼ೋವಿಲ್ಸನ್ ಎಂಬುವನು ಮೊಟ್ಟಮೊದಲಿಗೆ ರೂಪಾಂತರ ಸ್ತರಭಂಗ ಕುರಿತು ವ್ಯಾಖ್ಯಾನಿಸುವಾಗ ಪ್ಲೇಟ್ ಎಂಬ ಪದವನ್ನು ಬಳಸಿದ. ಭೂಫಲಕಗಳು ಸಾಮಾನ್ಯವಾಗಿ 100 ಕಿಮೀ ಮಂದವಾಗಿರುತ್ತದೆ. ಇದು ಎಲ್ಲ ಕಡೆಯಲ್ಲೂ ಒಂದೇ ರೀತಿಯಾಗಿರುವುದಿಲ್ಲ, ಕೆಲವು ಸಾಗರಗಳ ತಳದಲ್ಲಿ 8 ಕಿಮೀ ಗಳಾದರೆ ಭೂಖಂಡಗಳ ತಳದಲ್ಲಿ 200 ಕಿಮೀ ಗಳಿಗಿಂತಲೂ ದಪ್ಪವಾಗಿರುತ್ತದೆ. ಇದು ಎರಡು ರೀತಿಯ ವಸ್ತುಗಳಾದ ಸಿಮಾ ಮತ್ತು ಸಿಯಾಲ್‌ಗಳಿಂದ ರಚನೆಗೊಂಡಿದೆ. ಸಿಮಾವು ಸಿಯಾಲ್‌ಗಿಂತ ಹೆಚ್ಚು ಸಾಂದ್ರತೆಯನ್ನು ಹೊಂದಿದೆ. ಇವುಗಳ ತಳದಲ್ಲಿ ಮೇಣದ ರೂಪದಲ್ಲಿರುವ ಶಿಲಾಪಾಕದ ಪದರವಿದೆ. ಇದನ್ನು ಅಸ್ಥನೋಸ್ಫಿಯರ್ ಎಂದು ಕರೆಯಲಾಗಿದೆ. ಇದು ಸು. $1300^0$ಯಿಂದ $2000^0$ ಸೆ. ಉಷ್ಣಾಂಶವುಳ್ಳದ್ದಾಗಿದೆ. ಇದರ ಮೇಲೆ ಭೂಫಲಕಗಳು ತೇಲುತ್ತಿವೆ. ಪರಿಣಾಮವಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಭೂ ವಿಭಾಗಗಳು ಸಂಚಲನೆಗೊಳ್ಳುವುದು ವ್ಯಕ್ತವಾಗುತ್ತದೆ. ಇದಕ್ಕೆ ತಳಭಾಗದ ಪ್ರಚಲನ ಪ್ರವಾಹ ಹಾಗೂ ಸಮತೋಲನ ಕ್ರಿಯೆಗಳು ಕಾರಣವಾಗುವುವು.

ಸಿದ್ಧಾಂತದ ಬೆಳವಣಿಗೆ: ಭೂಫಲಕ ಸಂಚಲನಾ ಸಿದ್ಧಾಂತ ವೆಗೆನರ್ ತನ್ನ ಭೂಖಂಡಗಳ ಅಲೆತ ಸಿದ್ಧಾಂತದಲ್ಲಿ ನೀಡಿರುವ ವಿವರಣೆಯನ್ನು ಕುರಿತ ಸಂಶೋಧನೆಗಳನ್ನಾಧರಿಸಿ ನಿರೂಪಿಸಲ್ಪಟ್ಟಿವೆ. ಇದನ್ನು ಗಮನದಲ್ಲಿಟ್ಟುಕೊಂಡು 1939ರ ವೇಳೆಯಲ್ಲಿ ಅಮೆರಿಕದ ಭೂವಿಜ್ಞಾನಿ ಡೇವಿಡ್ ಗ್ರಿನ್ ಕೆಲವು ಪ್ರಯೋಗಗಳ ಮೂಲಕ ಅತ್ಯಧಿಕ ತಾಪಮಾನ ಮತ್ತು ಒತ್ತಡವುಳ್ಳ ದ್ರವ ವಸ್ತುವಿನ ಮೇಲೆ ಗಟ್ಟಿಶಿಲೆಯು ನಿಧಾನವಾಗಿ ತೇಲಬಲ್ಲದೆಂದು ತನ್ನ ಸಮುದ್ರದ ತಳದ ಹರವು ಸಿದ್ಧಾಂತದಲ್ಲಿ ಪ್ರತಿಪಾದಿಸಿದ. 1967ರಲ್ಲಿ ಭೌತ ವಿಜ್ಞಾನಿಗಳಾದ ಜೇಸನ್ ಮಾರ್ಗನ್, ಆರ್. ಎನ್. ಪಾರ್ಕರ್ ಮತ್ತು ಡಿ. ಪಿ. ಮೆಕೆಂಜಿ ತಮ್ಮ ನೆಲೆಗಟ್ಟು ಕಲ್ಲು ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ಭೂಮೇಲ್ಮೈಯು ಹಲವಾರು ಚಲನೆಯುಳ್ಳ ಭೂಫಲಕಗಳನ್ನೊಳಗೊಂಡಿದೆ ಎಂಬುದನ್ನು ನಿರೂಪಿಸಿದರು. ಅನಂತರ ಬ್ರೆಯಾನ್ ಐಸಾಕ್, ಚಾಕ್ ಆಲಿವರ್ ಮತ್ತು ಲಿನ್‌ಸೈಕ್ಸ್ ಎಂಬ ಭೂ ಭೌತ ವಿಜ್ಞಾನಿಗಳು ಒಟ್ಟುಗೂಡಿ ಸಮುದ್ರ ತಳದ ಹರವು ಸಿದ್ಧಾಂತ ಮತ್ತು ಭೂಕಂಪನ ಫಲಿತಾಂಶಗಳನ್ನಾಧರಿಸಿ ಶಿಲಾಗೋಳದ ಭೂಫಲಕಗಳು ಅಸ್ಥನೋಸ್ಫಿಯರ್ ಸ್ತರದ ಮೇಲೆ ತೇಲುವುವು ಎಂಬುದನ್ನು ಪುಷ್ಟೀಕರಿಸಿದರು.

ಈ ಸಿದ್ಧಾಂತದ ಪ್ರಕಾರ ಭೂ ಚಿಪ್ಪು 20 ಗಡುಸಾದ ಭೂಫಲಕಗಳನ್ನು ಹೊಂದಿದೆ ಅವುಗಳಲ್ಲಿ ಕೆಲವು ಬೃಹದಾಕಾರವಾಗಿದ್ದು ಕೆಲವು ಚಿಕ್ಕದಾಗಿವೆ. ಇವು ಪರಸ್ಪರ ಮಂದಗತಿಯಲ್ಲಿ ಚಲನೆ ಹೊಂದುತ್ತಿವೆ, ಆದರೂ ಬಹುದೂರ ಸ್ಥಳಾಂತರಗೊಳ್ಳುವುವು.

ಭೂಫಲಕ ಸಂಚಲನೆಯಲ್ಲಿ ಮೂರು ಪ್ರಮುಖ ವಿಧಗಳಿವೆ: ಪ್ರತ್ಯೇಕವಾಗುವ ಅಂಚುಗಳು ಒಗ್ಗೂಡುವ ಅಂಚುಗಳು ಮತ್ತು ಸ್ಥಳಾಂತರಗೊಳ್ಳುವ ಅಂಚುಗಳು

ಪ್ರತ್ಯೇಕವಾಗುವ ಅಂಚುಗಳು: ಎರಡು ಭೂ ವಿಭಾಗಗಳು ಪರಸ್ಪರ ದೂರ ಸರಿಯುವುದನ್ನು ಪ್ರತ್ಯೇಕವಾಗುವ ಅಂಚುಗಳೆಂದು ಕರೆಯುವರು. ಪ್ರತ್ಯೇಕತಾ ಪ್ರಕ್ರಿಯೆ ಭೂರಾಶಿ ಮತ್ತು ಜಲರಾಶಿಗಳೆರಡರಲ್ಲೂ ಏರ್ಪಡುವುದು. ಆದರೂ ಇದು ಸಾಗರ ತಳದಲ್ಲಿ ಹೆಚ್ಚು. ಇದರಿಂದ ಸೀಳುಗಳೇರ್ಪಡುವುವು. ಭೂರಾಶಿಗಳಲ್ಲಿ ಚಲನೆ ಉಂಟಾಗುವುದು. ಸೀಳುಗಳಲ್ಲಿ ಜಲಾವೃತವಾಗುವುದು. ಭೂಫಲಕಗಳ ಪ್ರತ್ಯೇಕತೆ ಮತ್ತು ಹೊಸ ಸ್ವರೂಪಗಳ ಸೃಷ್ಟಿಯ ಪ್ರಕ್ರಿಯೆಗೆ ಸಾಗರ ತಳದ ಹರವು ಎಂದು ಕರೆಯಲಾಗಿದೆ. ಫಲಕಗಳ ಅಂಚುಗಳುದ್ದಕ್ಕೂ ನಿರ್ಮಾಣಗೊಂಡ ಸಾಗರ ತಳದ ಬೆಟ್ಟಗಳ ಸಾಲಿಗೆ ಜಲಾಂತರ್ಗತ ಶ್ರೇಣಿ ಎನ್ನುವರು. ಇದಕ್ಕೆ ಪ್ರತಿಯಾಗಿ ಭೂರಾಶಿಗಳ ಮೇಲೆ ಪ್ರತ್ಯೇಕತೆ ಏರ್ಪಟ್ಟಾಗ ನಿರ್ಮಾಣವಾಗುವ ತಗ್ಗುಗಳಲ್ಲಿ ನೀರು ತುಂಬಿಕೊಂಡು ಹೊಸದಾಗಿ ಸಮುದ್ರ ಅಥವಾ ಸಾಗರಗಳು ನಿರ್ಮಾಣವಾಗುವುವು. ಉದಾ: ಕೆಂಪು ಸಮುದ್ರ.

2. ಒಗ್ಗೂಡುವ ಅಂಚುಗಳು: ಎರಡು ಭೂಭಾಗಗಳು ಪರಸ್ಪರ ಹತ್ತಿರಕ್ಕೆ ಚಲಿಸುತ್ತಿದ್ದರೆ ಅದನ್ನು ಒಗ್ಗೂಡುವ ಅಂಚುಗಳೆಂದು ಕರೆಯುವರು. ಒಗ್ಗೂಡುವಲ್ಲಿ ಫಲಕದ ಒಂದು ಅಂಚು ಮತ್ತೊಂದರ ತಳದಿಂದ ನೂಕಲ್ಪಡುವುದು ಈ ಕ್ರಿಯೆಯನ್ನು ಒಳಚಾಚಲ್ಪಡುವಿಕೆ ಎನ್ನುವರು. ಒಳಚಾಚುವಿಕೆಗೆ ಒಳಗಾದ ಫಲಕ ಆಳವಾದ ತಗ್ಗು ನಿರ್ಮಾಣಕ್ಕೆ ಎಡೆಮಾಡಿಕೊಡುತ್ತದೆ. ಒಳಚಾಚಲ್ಪಟ್ಟ ಫಲಕದ ಭಾಗ ಅಸ್ತನೂಸ್ಫಿಯರ್‌ನಲ್ಲಿ ದೂಡಲ್ಪಡುವುದು. ಇಂತಹ ಸಂದರ್ಭದಲ್ಲಿ ಭಯಂಕರವಾದ ಭೂಕಂಪ ಉಂಟಾಗುವುದು. ಒಗ್ಗೂಡುವಿಕೆಯ ಅಂಚಿನುದ್ದಕ್ಕೂ ಆಗಾಗ್ಗೆ ಜ್ವಾಲಾಮುಖಿಗಳು ಸಂಭವಿಸುವುವು ಪೆಸಿಫಿಕ್ ಸಾಗರದ ಅಂಚಿನಲ್ಲಿ ಆಗಾಗ್ಗೆ ಸಂಭವಿಸುವ ಜ್ವಾಲಾಮುಖಿಗಳು ಈ ಮಾದರಿಗೆ ಸೂಕ್ತ ಉದಾಹರಣೆಯಾಗಿದೆ.

3. ಸ್ಥಳಾಂತರ ಅಂಚುಗಳು: ಎರಡು ಭೂಭಾಗಗಳು ಪರಸ್ಪರ ವಿರುದ್ಧ ದಿಕ್ಕಿನಿಂದ ಸಮತಲವಾಗಿ ಜರುಗುವಿಕೆಗೆ ಸ್ಥಳಾಂತರ ಅಂಚುಗಳೆಂದು ಕರೆಯುವರು. ಈ ವಿಧದಲ್ಲಿ ಭೂಫಲಕಗಳ ಅಂಚುಗಳು ಸಮೀಪಿಸುವುದು ಮತ್ತು ದೂರ ಸರಿಯುವುದು ಇರುವುದಿಲ್ಲ. ಒಂದಕ್ಕಿಂತ ಮತ್ತೊಂದು ಅಂಚು ತೀವ್ರವಾಗಿ ಕೆಳಮುಖವಾಗಿ ಜರಗುವುದರಿಂದ ಸ್ಥಳಾಂತರ ಸ್ತರಭಂಗಗಳೇರ್ಪಡುವುವು. ಈ ಸಂದರ್ಭದಲ್ಲಿ ಭೂಕಂಪ ಉಂಟಾಗುವುದು.

ಭೂ ಫಲಕಗಳ ಸಂಚಲನೆಗೆ ಕಾರಣಗಳು: ಉಷ್ಣಾಂಶದ ಬದಲಾವಣೆ ಮತ್ತು ಗುರುತ್ವಾಕರ್ಷಣೆಗಳು ಭೂಭಾಗಗಳ ಚಲನೆಗೆ ಬಹುವಾಗಿ ಕಾರಣವಾಗುತ್ತವೆ.

ಭೂಫಲಕಗಳನ್ನು ವಿಜ್ಞಾನಿಗಳು ವಿವಿಧ ರೀತಿಯಲ್ಲಿ ವಿಂಗಡಿಸಿರುವರು ರಿಟ್ಜ್ ಮತ್ತು ಹೋಲ್ಡರ್ ಶಿಲಾಗೋಳವನ್ನು 6 ಪ್ರಮುಖ ಹಾಗೂ 6 ಸಣ್ಣ ಫಲಕಗಳಾಗಿ, 10 ಭಾಗಗಳಾಗಿಯೂ ಡಬ್ಲ್ಯೂ. ಜೆ. ಮಾರ್ಗನ್ 20 ವಿಭಾಗಗಳಾಗಿಯೂ ಹಾಗೂ ಲಿ ಪಿಚಾನ್‌ರವರು 6 ಪ್ರಮುಖ ಫಲಕಗಳಾಗಿಯೂ ವಿಂಗಡಿಸಿರುವರು. ಇವುಗಳಲ್ಲಿ ಲೀ ಪಿಚಾನ್‌ರವರ ವಿಂಗಡನೆ ಪ್ರಚಲಿತವಾದುದು. ಅವುಗಳೆಂದರೆ 1–ಪೆಸಿಫಿಕ್ ಫಲಕ 2. ಅಮೆರಿಕ ಫಲಕ 3. ಯುರೇಷಿಯ ಫಲಕ 4. ಆಫ್ರಿಕ ಫಲಕ 5. ಇಂಡೊ–ಆಸ್ಟ್ರೇಲಿಯ ಫಲಕ ಮತ್ತು ಅಂಟಾರ್ಕ್ಟಿಕ ಫಲಕ. ಸಣ್ಣ ಫಲಕಗಳು, ನಾಜ್ಕ್, ಕೋಕೋಸ್, ಫಿಲಿಪೈನ್, ಕೆರಿಬಿಯನ್, ಅರೇಬಿಯನ್ ಮತ್ತು ಜುನ್ ಡಿ ಫಲಕ ಅಥವಾ ಸ್ಕಾಟಿಯ ಫಲಕ. (ಕೆ.ಎನ್.ಯು.)

**ಭೂಗೋಳ ವಿಜ್ಞಾನ:** ಭೂಗೋಳ ವಿಜ್ಞಾನ ಇತರ ಎಲ್ಲಾ ಶಾಸ್ತ್ರೀಯ ವಿಷಯಗಳಂತೆಯೇ ನಿರ್ದಿಷ್ಟವಾದ ಅಧ್ಯಯನ ವಸ್ತು, ಅಧ್ಯಯನ ವಿಧಾನ ಹಾಗೂ ಅಧ್ಯಯನದ ಸಲಕರಣೆಗಳನ್ನು ಹೊಂದಿದೆ. ಇವು ಇದರ ಇತಿಹಾಸದುದ್ದಕ್ಕೂ ಕ್ರಮೇಣ ವಿಕಾಸವನ್ನು ಹೊಂದಿವೆ. ಇದರಿಂದಾಗಿ ಭೂಗೋಳ ವಿಜ್ಞಾನ ಇತರ ವಿಜ್ಞಾನಗಳಿಗಿಂತ ವಿಶಿಷ್ಟವಾಗಿ ಉಳಿದಿರಲು, ಪ್ರತ್ಯೇಕವಾದ ಅಸ್ತಿತ್ವವನ್ನು ಹೊಂದಿರಲು ಸಾಧ್ಯವಾಗಿದೆ. ಭೂಗೋಳ ವಿಜ್ಞಾನ ಎಂಬುದು ಜಿಯೋಗ್ರಫಿ ಎಂಬ ಇಂಗ್ಲಿಷ್ ಪದದ ಭಾಷಾಂತರ. ಇದು ಮೂಲತಃ ಗ್ರೀಕ್ ಭಾಷೆಯಿಂದ ಉಗಮಗೊಂಡಿದೆ. ಗ್ರೀಕ್ ಭಾಷೆಯ ಜಿಯೊ ಎಂದರೆ ಭೂಮಿ ಹಾಗೂ ಗ್ರಫಿಯ ಎಂದರೆ ವಿವರಣೆ ಎಂದು ಅರ್ಥಕೊಡುವ ಎರಡು ಪದಗಳ ಸಂಯೋಜನೆಯನ್ನು ಜಿಯೋಗ್ರಫಿ ಎಂಬುದು ಒಳಗೊಂಡಿದೆ. ಕ್ರಿ.ಪೂ ಮೂರನೆಯ ಶತಮಾನದಲ್ಲಿ (ಪ್ರ.ಶ.ಪೂ 276–194) ಅಲೆಗ್ಸಾಂಡ್ರಿಯ ನಗರದಲ್ಲಿದ್ದ ಬೃಹತ್‌ಗ್ರಂಥಾಲಯದ ಮೊದಲ ಗ್ರಂಥಪಾಲಕನಾಗಿದ್ದ ಎರಟಾಸ್ತನೀಸ್ ಜಿಯೋಗ್ರಾಫಿಕಾ ಎಂಬ ಗ್ರಂಥವನ್ನು ಬರೆದಿದ್ದನೆಂದೂ ಅದು ಜಿಯೋಗ್ರಫಿ ಎಂಬ ಪದವನ್ನು ಒಳಗೊಂಡಿದ್ದಿತೆಂದೂ ತಿಳಿದುಬಂದಿದೆ. ಎರಟಾಸ್ತನಿಸನ ಮೂಲಗ್ರಂಥ ಉಪಲಭ್ಯವಿಲ್ಲ. ಅದರ ಅನಂತರದ ಇತರ ಭೂಗೋಳ ವಿಜ್ಞಾನಿಗಳು ಎರಟಾಸ್ತನೀಸನ ಗ್ರಂಥವನ್ನು ಸ್ಪಷ್ಟವಾಗಿ ಉಲ್ಲೇಖಿಸಿರುವರು. ಇದರ ಜೊತೆಗೆ ಎರಟಾಸ್ತನೀಸನು ಅಂದಿನ ಕಾಲದಲ್ಲಿಯೇ ಭೂಮಿಯ ಸುತ್ತಳತೆಯನ್ನು ತ್ರಿಕೋನಮಿತಿಯ ವಿಧಾನವನ್ನು ಬಳಸಿ ಅಳತೆ ಮಾಡಿದ್ದು ಇದು ಇತ್ತೀಚಿನ ವೈಜ್ಞಾನಿಕ ಲೆಕ್ಕಾಚಾರಗಳಿಗೆ ಅತಿ ಸನಿಹವಾಗಿರುವುದು. ಇವುಗಳಿಂದಾಗಿ ಎರಟಾಸ್ತನೀಸನನ್ನು ಭೂಗೋಳ ವಿಜ್ಞಾನದ ಪಿತಾಮಹನೆಂದು ಕರೆದಿರುವುದು ಅನ್ವರ್ಥವಾಗಿದೆ.

ಭೂಗೋಳವಿಜ್ಞಾನ ಕುರಿತು ಸರಳವಾಗಿ ಹೇಳುವುದಾದರೆ ಭೂ ಮೇಲ್ಮೈಯಲ್ಲಿ ಕಂಡು ಬರುವ ಎಲ್ಲಾ ಬಗೆಯ ಲಕ್ಷಣಗಳನ್ನು ವಿವರಿಸುತ್ತದೆ. ಇದಲ್ಲದೆ ಈ ಲಕ್ಷಣಗಳಿಂದಾಗಿ ಭೂಮೇಲ್ಮೈ ಪ್ರದೇಶದಿಂದ ಪ್ರದೇಶಕ್ಕೆ ಏಕೆ ವ್ಯತ್ಯಾಸವಾಗಿದೆ. ಈ ರೀತಿಯ ಭಿನ್ನತೆಗಳಿಗೆ ಕಾರಣವಾಗಿರುವ ಅಂಶಗಳಾವುವು, ಈ ಅಂಶಗಳ ಯಾವ ಪ್ರಕ್ರಿಯೆಗಳು ಭೂಮೇಲ್ಮೈಯಲ್ಲಿ ಭಿನ್ನತೆಗಳನ್ನುಂಟುಮಾಡಿವೆ, ಭೂಮೇಲ್ಮೈಯಲ್ಲಿ ಯಾವುದು ಎಲ್ಲಿದೆ, ಏಕಿದೆ, ಹೇಗಿದೆ, ಯಾವ ಪ್ರಕ್ರಿಯೆಗಳಿಂದ ಅದು ನಿರ್ಮಿತವಾಗಿದೆ, ಈ ಮೊದಲಾದ ಭೂಮೇಲ್ಮೈಯಲ್ಲಿನ ಪ್ರಾದೇಶಿಕ ಭಿನ್ನತೆ ವಿವಿಧ ಬಗೆಯ ಲಕ್ಷಣಗಳ ಹಂಚಿಕೆ ಮೊದಲಾದವುಗಳನ್ನು ಕುರಿತ ಶಾಸ್ತ್ರೀಯವಾದ ಅಧ್ಯಯನವೇ ಭೂಗೋಳವಿಜ್ಞಾನ ಎಂದು ಕರೆಯಲ್ಪಟ್ಟಿದೆ. ಹೀಗೆ ಭೂಮೇಲ್ಮೈ ಭೂಗೋಳ ವಿಜ್ಞಾನದ ಅಧ್ಯಯನದ ಕ್ಷೇತ್ರ, ಅದರ ಪ್ರಾದೇಶಿಕ ಭಿನ್ನತೆಯ (ಏರಿಯಲ್ ಡಿಫರೆನ್ಸಿಯೇಷನ್) ಅಧ್ಯಯನ ಭೂಗೋಳ ವಿಜ್ಞಾನದ ತತ್ವಶಾಸ್ತ್ರ (ಫಿಲಾಸಫಿ) ಅದರ ಗುರಿ, ಉದ್ದೇಶವಾಗಿದೆ. ಇದರಿಂದ ಭೂ ಮೇಲ್ಮೈ ಭೂಗೋಳ ವಿಜ್ಞಾನದ ಅಧ್ಯಯನ ವಸ್ತು ಹಾಗೂ ಭೂಗೋಳ ವಿಜ್ಞಾನಿ ಪ್ರಯೋಗಾಲಯ. ಇದು ಇತರೆ ಎಲ್ಲಾ ಅಧ್ಯಯನ ವಿಷಯಗಳಿಗಿಂತ ಅತಿ ವಿಶಿಷ್ಟ.

ಭೂಮೇಲ್ಮೈ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಭೂಮೇಲ್ಮೈ ಒಳಗೊಂಡಿರುವ ಲಕ್ಷಣಗಳು ಅಸಂಖ್ಯಾತ ಮತ್ತು ವೈವಿಧ್ಯಮಯ. ಇವುಗಳನ್ನು ಅವುಗಳ ಉಗಮದ ಆಧಾರದ ಮೇಲೆ ಸ್ಥೂಲವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು. 1. ಪ್ರಾಕೃತಿಕ ಲಕ್ಷಣಗಳು–ಉದಾಹರಣೆಗೆ ಭೂಪ್ರದೇಶ, ಜಲರಾಶಿ, ಭೂಸ್ವರೂಪ, ವಾಯುಗುಣ, ನದಿಗಳು, ಮಣ್ಣು, ಸ್ವಾಭಾವಿಕ ಸಸ್ಯವರ್ಗ ಮೊದಲಾದವು. ಇವು ಒಂದು ಭೂ ಭಾಗದ ಪ್ರಾಕೃತಿಕ ಪರಿಸರ ಹಾಗೂ ಹಿನ್ನಲೆಯನ್ನು ರೂಪಿಸುತ್ತವೆ. 2. ಮಾನವನಿರ್ಮಿತ ಲಕ್ಷಣಗಳು. ಪ್ರಾಕೃತಿಕ ಲಕ್ಷಣಗಳ ಜೊತೆಗೆ ಮಾನವನಿಂದ ನಿರ್ಮಿತವಾದ ಹಲವಾರು ಬಗೆಯ ಲಕ್ಷಣಗಳನ್ನೂ ಸಹ ಒಳಗೊಂಡಿರುವುದು. ವಸತಿ, ಕಟ್ಟಡ, ವ್ಯವಸಾಯಕ್ಷೇತ್ರಗಳು, ಕೈಗಾರಿಕೆ, ರಸ್ತೆ, ಜಲಾಶಯ, ಕಾಲುವೆ, ಕೆರೆ, ಬಾವಿ, ಸರ್ಕಾರ, ಧರ್ಮ, ಜನಸಂಖ್ಯೆ– ಮೊದಲಾದವುಗಳೆಲ್ಲವೂ ಮಾನವ ನಿರ್ಮಿತವಾದವು.

ಪ್ರಾಕೃತಿಕ ಪರಿಸರದ ಲಕ್ಷಣಗಳು ಪರಸ್ಪರ ಪೂರಕವಾದವು. ಉದಾ: ಒಂದು ಭೂಭಾಗದ ಭೌಗೋಳಿಕ ಸ್ಥಾನ, ಅದರ ಭೂಸ್ವರೂಪ, ವಾಯುಗುಣ, ಸಸ್ಯವರ್ಗ, ಪ್ರಾಣಿ ವರ್ಗ, ಮಣ್ಣು, ಜಲರಾಶಿ ಮೊದಲಾದವುಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಭೂಗೋಳವಿಜ್ಞಾನದ ಆರಂಭದ ಹಂತದಲ್ಲಿಯೇ ಈ ಹೊಂದಾಣಿಕೆಯನ್ನು ಗಮನಿಸಲಾಗಿದ್ದಿತು. ಈ ಲಕ್ಷಣಗಳು ಆಯಾ ಭೂ ಭಾಗದೊಡನೆ ಹೊಂದಿರುವ ಸ್ಥಾನೀಯ (ಸ್ಪೇಷಿಯಲ್) ಸಂಬಂಧ ಅಂದರೆ ಭೂಮೇಲ್ಮೈಯೊಂದಿಗೆ ಹೊಂದಿರುವ ಸಂಬಂಧವನ್ನು ವಿಶ್ಲೇಷಿಸಲು ಭೌಗೋಳಿಕ ಅಧ್ಯಯನಗಳಲ್ಲಿ ಪ್ರಯತ್ನಿಸಲಾಗುತ್ತಿದ್ದಿತು. ಇದೇ ಭೌಗೋಳಿಕ ಅಧ್ಯಯನ ಕ್ರಮ. ಈ ಅಂಶಗಳೆಲ್ಲವೂ ಪರಸ್ಪರ ಪೂರಕವಾಗಿದ್ದುದರಿಂದ ಈ ಸಂಬಂಧವನ್ನು ಕುರಿತು ಜುಸಮ್ಮನ್ ಹ್ಯಾಂಗ್ ಅಂದರೆ ಪರಸ್ಪರ ತೂಗಾಡುವ ಸಂಬಂಧವೆಂದು ಇವುಗಳನ್ನು ವಿವರಿಸಲಾಗುತ್ತಿತ್ತು.

ಭೂ ಮೇಲ್ಮೈಯಲ್ಲಿ ಕಂಡು ಬರುವ ಮಾನವನಿರ್ಮಿತ ಲಕ್ಷಣಗಳು ಆಯಾಪ್ರದೇಶದ ಪರಿಸರದ ಲಕ್ಷಣಗಳಿಗೆ ಅನುಗುಣವಾಗಿರುತ್ತದೆ. ಇವುಗಳು ಪ್ರಾಕೃತಿಕ ಅವಕಾಶಗಳ ಬಳಕೆಯಿಂದ ಮಾನವನ ಹೊಂದಾಣಿಕೆ ಹಾಗೂ ಆತನ ಕರ್ತೃತ್ವ ಶಕ್ತಿಯಿಂದ ನಿರ್ಮಿತಗೊಂಡಿರುತ್ತವೆ. ಅಂದರೆ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳು ಆಯಾ ಭೂ ಭಾಗಗಳಲ್ಲಿ ಪರಸ್ಪರ ಪೂರಕವಾಗಿರುತ್ತವೆ. ಈ ಎರಡೂ ಬಗೆಯ ಲಕ್ಷಣಗಳು ಒಟ್ಟುಗೂಡಿ ಆಯಾ ಭೂಭಾಗದಲ್ಲಿ ಒಂದೊಂದು ರೀತಿಯ ಹೊಂದಾಣಿಕೆ–ಹಂಚಿಕೆಗಳು ಏರ್ಪಟ್ಟಿರುತ್ತವೆ. ಇದರ ಪರಿಣಾಮದಿಂದ ಪ್ರತಿಯೊಂದು ಭೂಭಾಗವೂ ವಿಶಿಷ್ಟವಾದ ವ್ಯಕ್ತಿತ್ವವನ್ನು ಹೊಂದಿರುತ್ತದೆ. ಅದು ಸುತ್ತಲಿನ ಇದರ ಭೂಭಾಗಗಳಿಗಿಂತ ಭಿನ್ನವಾಗಿರುತ್ತದೆ. ಇದರಿಂದಾಗಿಯೇ ಭೂ ಮೇಲ್ಮೈ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವನ್ನು ಅಂದರೆ ಪ್ರಾದೇಶಿಕ ಭಿನ್ನತೆಯನ್ನು ಹೊಂದಿರಲು ಸಾಧ್ಯವಾಗಿದೆ.

ಭೂಗೋಳ ವಿಜ್ಞಾನ ಭೂಮೇಲ್ಮೈ ಹೊಂದಿರುವ ಪ್ರಾದೇಶಿಕ ಭಿನ್ನತೆಗಳು, ಅವುಗಳ ಕಾರಣಗಳು, ಪ್ರಕ್ರಿಯೆಗಳು ಮೊದಲಾದವುಗಳನ್ನು ಪ್ರಾಕೃತಿಕ–ಮಾನವಿಕ ಅಂಶಗಳ ಸ್ಥಾನ, ಹೊಂದಾಣಿಕೆ, ಹಂಚಿಕೆ ಮೊದಲಾದವುಗಳ ವಿಶ್ಲೇಷಣೆಗಳಿಂದ ವಿವರಿಸುತ್ತದೆ. ಇದಲ್ಲದೆ ಪ್ರಾಕೃತಿಕ–ಮಾನವಿಕ ಲಕ್ಷಣಗಳನ್ನು ಒಟ್ಟಾಗಿ ಸಮೀಕ್ಷಿಸಿ ಪರಿಶೀಲಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ಇದು ಭೌಗೋಳಿಕ ಅಧ್ಯಯನಕ್ರಮವಾಗಿದ್ದು ಇತರ ಯಾವುದೇ ವಿಷಯ ಹಾಗೂ ಅಧ್ಯಯನ ವಿಧಾನಗಳಿಗಿಂತ ಭೂಗೋಳ ವಿಜ್ಞಾನ ಭಿನ್ನವಾಗಿರಲು ಹಾಗೂ ಇದರ ಅಧ್ಯಯನ ವಸ್ತು ಇತರ ವಿಷಯಗಳಿಂದ ಭಿನ್ನವಾಗಿರಲು ಕಾರಣವಾಗಿದೆ. ಯಾವುದೇ ಪ್ರಾಕೃತಿಕ ಹಾಗೂ ಮಾನವಿಕ ಲಕ್ಷಣಗಳ ಸ್ಥಾನೀಯ ಹಂಚಿಕೆಯ ವಿಶ್ಲೇಷಣೆಯಿಂದ ಅವುಗಳಿಗೆ ಭೌಗೋಳಿಕ ಆಯಾಮವನ್ನು ಇದು ನೀಡುತ್ತದೆ. ಹೀಗೆ ಭೂಮೇಲ್ಮೈ–ಮಾನವ ಇವುಗಳೆರಡೂ ಭೂಗೋಳ ವಿಜ್ಞಾನದ ಕ್ಷೇತ್ರದಲ್ಲಿ ಅಡಕಗೊಂಡಿವೆ.

ವಿಭಾಗಗಳು: ಭೂಗೋಳ ವಿಜ್ಞಾನದ ಅಧ್ಯಯನ ವಸ್ತು ಭೂಮೇಲ್ಮೈ ಹಾಗೂ ಅದರ ಪ್ರಾಕೃತಿಕ ಹಾಗೂ ಮಾನವಿಕ ಲಕ್ಷಣಗಳು, ಅವುಗಳ ಪರಸ್ಪರ ಪೂರಕತ್ವ, ಹೊಂದಾಣಿಕೆ. ಇವುಗಳು ವಿಸ್ತಾರವಾದ ಭೂಮೇಲ್ಮೈಯಲ್ಲಿ ಹೊಂದಿರುವ ಸಂಬಂಧಗಳು ಅತ್ಯಂತ ಸಂಕೀರ್ಣ. ಭೂಗೋಳಿಕ ಅಧ್ಯಯನದಲ್ಲಿ ಪ್ರಾಕೃತಿಕ ಹಿನ್ನಲೆಯ ಅವಲೋಕನದೊಡನೆ ಮಾನವಿಕ ಲಕ್ಷಣಗಳನ್ನು ಸಮೀಕ್ಷಿಸಬೇಕಾಗುತ್ತದೆ. ಇದರ ವಿಷಯ ವ್ಯಾಪ್ತಿ ಅಗಾಧವಾಗಿರುವುದರಿಂದ ಮತ್ತು ಅಧ್ಯಯನವನ್ನು ಸರಳೀಕರಣಗೊಳಿಸುವ ಉದ್ದೇಶದಿಂದ ಭೂಗೋಳ ವಿಜ್ಞಾನವನ್ನು ಮಾನವ ಮತ್ತು ಪ್ರಾಕೃತಿಕ ಭೂಗೋಳ ವಿಜ್ಞಾನಗಳೆಂದು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸುವುದು ರೂಢಿಗತ ಕ್ರಮವಾಗಿದೆ.

ಭೂಮೇಲ್ಮೈನಲ್ಲಿ ಕಂಡುಬರುವ ಪ್ರಾಕೃತಿಕಾಂಶಗಳ ಶಾಸ್ತ್ರೀಯ ಅಥವಾ ವ್ಯವಸ್ಥಿತ ಅಧ್ಯಯನವೇ ಪ್ರಾಕೃತಿಕ ಭೂಗೋಳ ವಿಜ್ಞಾನ. ಇದರ ಅಧ್ಯಯನ ಕ್ಷೇತ್ರ ಭೂಮೇಲ್ಮೈ ಅಂದರೆ ಶಿಲಾಗೋಳ, ಇದರ ಹೆಚ್ಚು ಭಾಗವನ್ನು ಆವರಿಸಿರುವ ಜಲರಾಶಿ ಅಂದರೆ ಜಲಗೋಳ, ಭೂಮಿಯನ್ನು ಸುತ್ತುವರಿದಿರುವ ಅನಿಲ ಗಾಳಿ ಅಂದರೆ ವಾಯುಗೋಳ ಮತ್ತು ಭೂಮೇಲ್ಮೈನ ಅವಿಭಾಜ್ಯ ಅಂಗಗಳಾಗಿ ರೂಪಿತವಾಗಿರುವ ಸಸ್ಯ ಮತ್ತು ಪ್ರಾಣಿ ಸಮುದಾಯ ಅಂದರೆ ಜೀವಗೋಳಗಳನ್ನು ಒಳಗೊಂಡಿದೆ. ಈ ನಾಲ್ಕು ಮಂಡಲಗಳು ಪ್ರತ್ಯೇಕ ಘಟಕಗಳಲ್ಲ; ಬದಲಾಗಿ ಪರಸ್ಪರ ಪೂರಕವಾದವು. ಇವುಗಳಿಂದಾಗಿಯೇ ಭೂಮೇಲ್ಮೈಯಲ್ಲಿ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುವ ಪ್ರಾಕೃತಿಕ ಪರಿಸರ ನಿರ್ಮಿತವಾಗಿದೆ. ಭೌಗೋಳಿಕ ಅಧ್ಯಯನಕ್ಕೆ ಪ್ರಾಕೃತಿಕ ಪರಿಸರ ಬುನಾದಿ. ಇದರಿಂದಾಗಿಯೇ ಯಾವುದೇ ಭೌಗೋಳಿಕ ಅಧ್ಯಯನ, ಸಂಶೋಧನೆಗಳಲ್ಲಿ ಪ್ರಾಕೃತಿಕ ಪರಿಸರದ ಪರಿಶೀಲನೆಯನ್ನು ಆರಂಭದಲ್ಲಿಯೇ ಕಾಣಬಹುದು. ಪ್ರಾಕೃತಿಕ ಭೂಗೋಳ ವಿಜ್ಞಾನ ಭೂಮಿಯ ಪ್ರಾಕೃತಿಕ ಲಕ್ಷಣಗಳೊಡನೆ ನಿಕಟ ಸಂಬಂಧವನ್ನು ಹೊಂದಿದೆ. ಭೂ ವಿಜ್ಞಾನ, ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ, ವಾಯುಗುಣ ವಿಜ್ಞಾನ, ಸಾಗರವಿಜ್ಞಾನ, ಮೊದಲಾದವುಗಳನ್ನು ಇಲ್ಲಿ ಹೆಸರಿಸಬಹುದು. ಇವುಗಳಿಂದ ಅಧ್ಯಯನ ವಸ್ತುವನ್ನು ಪ್ರಾಕೃತಿಕ ಭೂಗೋಳವಿಜ್ಞಾನವು ಪಡೆದು ಅದನ್ನು ಭೌಗೋಳಿಕ ಆಯಾಮದಲ್ಲಿ ಸಮೀಕ್ಷಿಸಿ ವಿಶ್ಲೇಷಿಸುವುದು. ಭೂಗೋಳ ವಿಜ್ಞಾನದ ಆರಂಭದ ಹಂತದಿಂದಲೂ ಪ್ರಾಕೃತಿಕ ಭೂಗೋಳ ವಿಜ್ಞಾನದ ಅಧ್ಯಯನವನ್ನು ಕಾಣಬಹುದು.

ಮಾನವ ಭೂಗೋಳ ವಿಜ್ಞಾನ ಭೂಗೋಳ ವಿಜ್ಞಾನದ ಎರಡನೆಯ ಮುಖ್ಯವಿಭಾಗ. ಇದು ಪರಿಸರದೊಡನೆ ಮಾನವ ಸಂಬಂಧವನ್ನು ವಿಶ್ಲೇಷಿಸುವುದು. ಮಾನವ–ಪರಿಸರ ಸಂಬಂಧದ ಪರಿಣಾಮವಾಗಿ ಭೂಮೇಲ್ಮೈಯಲ್ಲಿ ಹಲವಾರು ಬಗೆಯ ಸಾಂಸ್ಕೃತಿಕ ಲಕ್ಷಣಗಳು

ನಿರ್ಮಿತವಾಗಿವೆ. ಇದೇ ಸಾಂಸ್ಕೃತಿಕ ಪರಿಸರ. ಮಾನವ–ಪರಿಸರದ ಸಂಬಂಧ ಸಂಕೀರ್ಣ ಹಾಗೂ ನಿರಂತರ ಬದಲಾವಣೆಗಳಿಂದ ಕೂಡಿರುವುದು. ಇದರ ಪರಿಣಾಮವಾಗಿಯೇ ಮಾನವ ಜೀವನದ ವಿಧಾನಗಳು ಆಹಾರ, ಉಡುಪು, ವಸತಿ, ಆರ್ಥಿಕ ಉದ್ಯೋಗ ಉತ್ಪಾದನಾ ವಸ್ತುಗಳು, ಜೀವನ ಮಟ್ಟ, ಜೀವನದ ರೀತಿ–ರಿವಾಜು, ಶೈಲಿ, ನೀತಿ–ನಿಯಮ, ಧರ್ಮ, ಭಾಷೆ ಮೊದಲಾದವುಗಳೆಲ್ಲವೂ ಸ್ಥಳವ್ಯತ್ಯಾಸದಿಂದ ಕೂಡಿವೆ. ಈ ಎಲ್ಲ ಮಾನವಿಕ ಲಕ್ಷಣಗಳ ಹಂಚಿಕೆ, ನಿರ್ಮಿತವಾಗಿರುವ ಪ್ರಕ್ರಿಯೆ, ಪರಿಸರದೊಡನೆ ಇವುಗಳ ಸಂಬಂಧ ಮಾನವ ಭೂಗೋಳ ವಿಜ್ಞಾನದ ಅಧ್ಯಯನದ ವ್ಯಾಪ್ತಿಗೊಳಪಡುತ್ತವೆ. ಇದು ಅತ್ಯಂತ ವಿಸ್ತಾರ ಬೆಳವಣಿಗೆಯನ್ನು ಹೊಂದಿದೆ. ಇಂದಿನ ಬಹುತೇಕ ಭೌಗೋಳಿಕ ಸಂಶೋಧನೆಗಳು ಮಾನವ ಭೂಗೋಳವಿಜ್ಞಾನದ ವ್ಯಾಪ್ತಿಗೊಳಪಟ್ಟಿವೆ.

ಮಾನವ–ಪರಿಸರ ಸಂಬಂಧಗಳು ಹೆಚ್ಚು ಸಂಕೀರ್ಣ. ಇದರಿಂದ ನಿರ್ಮಿತವಾಗಿರುವ ಲಕ್ಷಣಗಳು, ರೂಪಿತವಾಗಿರುವ ಜೀವನದ ವಿಧಾನಗಳು ಭೂಮೇಲ್ಮೈನಷ್ಟೇ ವೈವಿಧ್ಯಮಯ. ಇವುಗಳನ್ನು ಅಭ್ಯಸಿಸುವ ಹಲವಾರು ಶಾಖೆಗಳು ಅಸ್ತಿತ್ವಕ್ಕೆ ಬಂದಿವೆ. ಆರ್ಥಿಕ ಭೂಗೋಳ ವಿಜ್ಞಾನ ಮಾನವ ಆರ್ಥಿಕ ವೃತ್ತಿಗಳು, ಅವುಗಳಿಂದ ಉತ್ಪಾದಿತವಾಗುವ ವಸ್ತುಗಳು, ಸೇವೆಗಳು ಮತ್ತು ಅವುಗಳ ಹಂಚಿಕೆ ಹಾಗೂ ಅನುಭೋಗವನ್ನು ವಿವರಿಸುತ್ತದೆ. ಸಾಂಸ್ಕೃತಿಕ ಭೂಗೋಳ ವಿಜ್ಞಾನ ಮಾನವನ ಸಾಂಸ್ಕೃತಿಕ ಲಕ್ಷಣಗಳ ಭೌಗೋಳಿಕ ವಿಶ್ಲೇಷಣೆಯಾಗಿದೆ. ರಾಜಕೀಯ ಭೂಗೋಳವಿಜ್ಞಾನ ರಾಜಕೀಯ ಪರಿಭಾವನೆ, ಸಂಘಟನೆಗಳಿಗೆ ಭೌಗೋಳಿಕ ಆಯಾಮದ ಸಮೀಕ್ಷೆಯನ್ನು ನೀಡುತ್ತದೆ. ಮಾನವನ ವಸತಿಗಳನ್ನು ವಸತಿ ಭೂಗೋಳ ವಿಜ್ಞಾನ ಹಾಗೂ ನಗರಗಳನ್ನು ಕುರಿತು ನಗರ ಭೂಗೋಳವಿಜ್ಞಾನಗಳು ಅಭ್ಯಸಿಸುತ್ತವೆ. ಜೊತೆಗೆ ಜನಸಂಖ್ಯಾ ಭೂಗೋಳ ವಿಜ್ಞಾನ ಇಂದು ಮಾನವ ಭೂಗೋಳವಿಜ್ಞಾನದ ಪ್ರತ್ಯೇಕ ಶಾಖೆಯಾಗಿ ಅಭಿವೃದ್ಧಿಯನ್ನು ಹೊಂದಿದೆ.

ಪ್ರಾಕೃತಿಕ ಮತ್ತು ಮಾನವ ಭೂಗೋಳ ವಿಜ್ಞಾನಗಳು ಪರಸ್ಪರ ಪ್ರತ್ಯೇಕವಾದವುಗಳಲ್ಲ. ಅವುಗಳು ಪರಸ್ಪರ ಪೂರಕವಾದವು. ಪ್ರಾಕೃತಿಕ ಪರಿಸರದ ಅಧ್ಯಯನ ಭೂಮೇಲ್ಮೈನ ವೈವಿಧ್ಯತೆ ಹಾಗೂ ಮಾನವನ ಮೇಲೆ ಅದು ಬೀರುವ ಪ್ರಭಾವದ ದಿಗಂತ, ಪರಿಣಾಮಗಳನ್ನು ತಿಳಿಯುವ ಉದ್ದೇಶವಾಗಿದೆ. ಮಾನವಿಕ ಪರಿಸರ ಪ್ರಾಕೃತಿಕ ಪರಿಸರದ ಪ್ರತಿಬಿಂಬ. ಇದು ಮನುಷ್ಯ–ಪರಿಸರದ ಪ್ರತೀಕ. ಜೊತೆಗೆ ಮಾನವನ ಕರ್ತೃತ್ವ, ಸಾಮರ್ಥ್ಯ, ಅಗತ್ಯ ಹಾಗೂ ಪರಿಸರದೊಡನೆ ಆತನ ಹೊಂದಾಣಿಕೆಯ ಪರಿಣಾಮ. ಪ್ರಾಕೃತಿಕ ಭೂಗೋಳವು ಇತರ ಪ್ರಾಕೃತಿಕ ವಿಜ್ಞಾನಗಳಿಗೆ ಅತಿಸನಿಹದಲ್ಲಿದೆ. ಆದರೆ ಮಾನವ ಭೂಗೋಳವಿಜ್ಞಾನವು ಇತಿಹಾಸ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮನಶ್ಶಾಸ್ತ್ರ, ರಾಜ್ಯಶಾಸ್ತ್ರ ಮಾನವ ಶಾಸ್ತ್ರ ಮೊದಲಾದ ಸಾಮಾಜಿಕ ವಿಜ್ಞಾನಗಳೊಡನೆ ತೀರಾ ನಿಕಟವಾಗಿದೆ. ಹೀಗೆ ಪ್ರಾಕೃತಿಕ ಮತ್ತು ಮಾನವ ಭೂಗೋಳವಿಜ್ಞಾನಗಳೆರಡೂ ಭಿನ್ನಮಾರ್ಗದಲ್ಲಿವೆ. ಆದರೆ ಇವುಗಳೆರಡೂ ಭೂ ಮೇಲ್ಮೈನ ಅಧ್ಯಯನ ಉದ್ದೇಶವನ್ನು ಹೊಂದಿದ್ದು ಪರಸ್ಪರ ಪೂರಕವಾಗಿವೆ. ಇದರಿಂದಾಗಿ ಭೂಗೋಳ ವಿಜ್ಞಾನ ಪ್ರಾಕೃತಿಕ ಹಾಗೂ ಸಾಮಾಜಿಕ ವಿಜ್ಞಾನಗಳ ನಡುವೆ ಸಂಬಂಧ ಸೇತುವೆಯಂತಿದೆ. ಅಂದರೆ ಇದು ಈ ಎರಡೂ ಬಗೆಯ ವಿಜ್ಞಾನಗಳ ಸಂಗಮ ಸೇತುವೆ. ಭೂಗೋಳ ವಿಜ್ಞಾನದ ಈ ನೆಲೆ ಅಂದರೆ ಅಧ್ಯಯನ ವಿಷಯ ಉಳಿದೆಲ್ಲ ಅಧ್ಯಯನ ವಿಷಯಗಳಿಗಿಂತ ವಿಶಿಷ್ಟಸ್ಥಾನ ಪಡೆದಿದೆ. ಇದರಿಂದಾಗಿಯೇ ಭೂಗೋಳವಿಜ್ಞಾನ ಅಂತರ್ ಅಧ್ಯಯನ ವಸ್ತುವಾಗಿದ್ದು ಪ್ರಾಕೃತಿಕ ಮತ್ತು ಮಾನವಿಕ ವಿಜ್ಞಾನಗಳೆರಡರ ಅಧ್ಯಯನಕ್ಕೂ ಅವಶ್ಯಕ. ಭೂಗೋಳ ವಿಜ್ಞಾನ ಒಳಗೊಂಡಿರುವ ಈ ಅಪಾರ ವಸ್ತುರಾಶಿಯಿಂದಾಗಿಯೇ ಹಲವಾರು ಪ್ರತ್ಯೇಕ ವಿಜ್ಞಾನಗಳು ಬೆಳವಣಿಗೆಯನ್ನು ಹೊಂದಿವೆ. ಸಸ್ಯವಿಜ್ಞಾನ ಪ್ರಾಣಿವಿಜ್ಞಾನ. ಮಾನವ ಶಾಸ್ತ್ರ, ಭೂವಿಜ್ಞಾನ, ವಾಯುಗುಣ ವಿಜ್ಞಾನ ಮೊದಲಾದವು ಭೂಗೋಳ ವಿಜ್ಞಾನದಿಂದ ಆವಿರ್ಭವಿಸಿವೆ. ಹೀಗಾಗಿ ಭೂಗೋಳ ವಿಜ್ಞಾನ ಮಾತೃ ವಿಜ್ಞಾನವೆನಿಸಿದೆ.

ಭೌಗೋಳಿಕ ಅಧ್ಯಯನದ ಸಂಪ್ರದಾಯಗಳು: ಭೂ ಮೇಲ್ಮೈ ಒಳಗೊಂಡಿರುವ ಲಕ್ಷಣಗಳು ವೈವಿಧ್ಯಮಯ. ಅಲ್ಲದೆ ಇವುಗಳು ನಿರ್ಮಿತಗೊಂಡಿರುವ ರೀತಿ ಹಾಗೂ ಪ್ರಕ್ರಿಯೆಗಳು ಭಿನ್ನವಾಗಿವೆ. ಇದರಿಂದ ಇವುಗಳನ್ನು ಅಭ್ಯಸಿಸುವ ವಿಧಾನಗಳೂ ಸಹ ಭಿನ್ನವಾಗಿವೆ. ಇವುಗಳನ್ನೇ ಸಂಪ್ರದಾಯಗಳೆಂದು ಕರೆಯಲಾಗಿದೆ. ಈ ಅಧ್ಯಯನ ವಿಧಾನಗಳು ಭೂಗೋಳವಿಜ್ಞಾನದ ಇತಿಹಾಸದೊಡನೆ ಸಮ್ಮಿಳಿತಗೊಂಡಿವೆ. ಪ್ಯಾಟ್ಟಿಸನ್, ಭೂಗೋಳ ವಿಜ್ಞಾನ ಅಧ್ಯಯನದ ನಾಲ್ಕು ಸಂಪ್ರದಾಯಗಳನ್ನು ಕೆಳಕಂಡಂತೆ ಗುರುತಿಸಿದ್ದಾರೆ.

ಪ್ರಾದೇಶಿಕ ಸಂಪ್ರದಾಯ: ಪ್ರಪಂಚದ ಯಾವುದೇ ಒಂದು ಜನವಸತಿಯನ್ನು ಒಳಗೊಂಡಿರುವ ಭೂಭಾಗ ಹಲವಾರು ಪ್ರಾಕೃತಿಕ ಹಾಗೂ ಮಾನವಿಕ ಅಂಶಗಳನ್ನು ಒಳಗೊಂಡಿದ್ದು, ಈ ಅಂಶಗಳು ಪರಸ್ಪರ ಪೂರಕವಾಗಿರುತ್ತವೆ. ಈ ಸಂಬಂಧವನ್ನು ಜರ್ಮನ್ನರು ಜುಸಮನ್ ಹ್ಯಾಂಗ್ ಅಂದರೆ ಪರಸ್ಪರ ತೂಗಾಡುತ್ತವೆ ಎಂದು ಕರೆದಿದ್ದು. ಈ ರೀತಿಯ ಏಕತೆಯ ವಿವರಣೆಗಾಗಿಯೇ ಗೆಸ್ಟಾಲ್ಟ್ ಮತ್ತು ಗ್ಯಾಂಜಿಟ್ ಪದಗಳನ್ನೂ ಸಹ ಬಳಸಲಾಗಿದೆ. ಇವುಗಳು ಆ ಭೂಭಾಗದಲ್ಲಿ ವಿವಿಧ ಪ್ರಾಕೃತಿಕ–ಮಾನವಿಕ, ಅಂಶಗಳ ಏಕತೆ ಹಾಗೂ ಒಕ್ಕೂಟವನ್ನು ವಿವರಿಸಲು ಬಳಸಲಾಗಿರುವ ಜರ್ಮನ್ ಪದಗಳು. ಭೂಮೇಲ್ಮೈನ ವಿವಿಧ ಭೂಭಾಗಗಳು ವಿಭಿನ್ನವಾದ ಪ್ರಾಕೃತಿಕ ಲಕ್ಷಣಗಳನ್ನು ಹೊಂದಿರುತ್ತವೆ. ಈ ಭೂಭಾಗಗಳು ಕ್ರಮೇಣ ವಿಶಿಷ್ಟ ಚಾರಿತ್ರಿಕ ಘಟನಾವಳಿಗಳಿಂದ ಇತರ ಪ್ರದೇಶಗಳಿಗಿಂತ ಭಿನ್ನವಾದ ಸಾಂಸ್ಕೃತಿಕ ಲಕ್ಷಣಗಳನ್ನು ಪಡೆದುಕೊಳ್ಳುತ್ತವೆ. ಕ್ರಮೇಣ ಆ ಲಕ್ಷಣಗಳು ಆ ಭೂಭಾಗಕ್ಕೆ ವಿಶಿಷ್ಟ ದೃಶ್ಯಾವಳಿ ಹಾಗೂ ವ್ಯಕ್ತಿತ್ವವನ್ನು ನೀಡುತ್ತವೆ. ಇದರಿಂದ ಆ ಭೂಭಾಗ ಇತರ ಭೂಭಾಗಗಳಿಗಿಂತ ಭಿನ್ನವಾಗಿ ಪರಿಣಮಿಸುವುದು. ಹೀಗೆ ಭೂಮೇಲ್ಮೈನ ವಿವಿಧ ಭೂಭಾಗಗಳ ವೈಶಿಷ್ಟ್ಯತೆ ಅವುಗಳು ಹೊಂದಿರುವ ಲಕ್ಷಣಗಳು, ಅವುಗಳ ವ್ಯಕ್ತಿತ್ವ, ಈ ಲಕ್ಷಣಗಳು ರೂಪಿತಗೊಳ್ಳಲು ಕಾರಣಗಳು, ರೂಪಗೊಂಡಿರುವ ಪ್ರಕ್ರಿಯೆ ಇವುಗಳಿಂದಾಗಿ ಇತರ ಭೂಭಾಗಗಳೊಡನೆ ಅದರ ಸಾಮ್ಯತೆ ಹಾಗೂ ಭಿನ್ನತೆ ಇವುಗಳನ್ನು ವಿವರಿಸುವ ವಿಧಾನ ಭೂಗೋಳವಿಜ್ಞಾನದಲ್ಲಿ ಒಂದು ಅಧ್ಯಯನ ವಿಧಾನವಾಗಿ ರೂಢಿಗೆ ಬಂದಿದೆ. ಇದನ್ನೇ ಪ್ರಾದೇಶಿಕ ಹಾಗೂ ಪ್ರಾದೇಶಿಕ ಸಂಪ್ರದಾಯ ವಿಧಾನವೆಂದು ಕರೆಯಲಾಗಿದೆ.

ಭೂಗೋಳವಿಜ್ಞಾನದ ಅಧ್ಯಯನದಲ್ಲಿ ಪ್ರಾದೇಶಿಕ ವಿಧಾನ ಅತಿ ಹಳೆಯದು. ಆದರೆ ಪ್ರದೇಶ (ರೀಜನ್) ಎಂಬ ಪದದ ಅರ್ಥ ಒಂದೇ ರೀತಿಯಾಗಿಲ್ಲ. ಇದನ್ನು ಅಗತ್ಯ, ಉದ್ದೇಶ ಹಾಗೂ ಸಂದರ್ಭಗಳಿಗೆ ಅನುಗುಣವಾಗಿ ವಿವಿಧ ರೀತಿ ಹಾಗೂ ಪ್ರಮಾಣಕ್ಕೆ ಅನ್ವಯಿಸುವಂತೆ ಬಳಸಲಾಗಿದೆ. ಇದಕ್ಕೆ ಒಂದೇ ಅರ್ಥವಿಲ್ಲದಿರುವುದರಿಂದಲೇ ಇದಕ್ಕೆ ಸಮಾನಾಂತರವಾದ, ಇದೇ ಅರ್ಥವನ್ನು ನೀಡುವ ಹಲವಾರು ಪದಗಳನ್ನು ಭೂಗೋಳವಿಜ್ಞಾನದಲ್ಲಿ ಬಳಸಿರುವುದನ್ನು ಕಾಣಬಹುದು. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಕೋರೋಲಜಿ, ಕ್ಯಾಂಪೇಜ್, ಪೇಸ್, ಲ್ಯಾಂಡ್‌ಸ್ಕೇಪ್, ಐಡಿಯೋಗ್ರಾಫಿಕ್ ಮೊದಲಾದವು.

ಪ್ರಾದೇಶಿಕ ವಿಧಾನ ಭೂಮೇಲ್ಮೈನ ಅರ್ಥಪೂರ್ಣ ಹಾಗೂ ಪರಿಣಾಮಕಾರಿ ಅಧ್ಯಯನಕ್ಕೆ ಭೂಗೋಳವಿಜ್ಞಾನಿಗಳು ರೂಢಿಸಿಕೊಂಡಿರುವ ವಿಶಿಷ್ಟವಾದ ವಿಧಾನವಾಗಿದೆ. ಸಮಾಜಶಾಸ್ತ್ರದಲ್ಲಿ ವಿವಿಧ ರೀತಿಯ ವ್ಯಕ್ತಿಗಳನ್ನು ಸಮೂಹ ಅಥವಾ ಗುಂಪುಗಳಾಗಿ ವಿಂಗಡಿಸಿ ಸಾಮಾಜಿಕ ವ್ಯವಸ್ಥೆಯನ್ನು ಅಭ್ಯಸಿಸಲಾಗುವುದು. ಭೂಗರ್ಭವಿಜ್ಞಾನಿ ಒಂದೇ ಬಗೆಯ ರಚನೆಯ ಶಿಲೆಗಳನ್ನು ಒಂದು ಪ್ರತ್ಯೇಕ ವಿಧವಾಗಿ ಪರಿಗಣಿಸಿ ಅಭ್ಯಸಿಸುತ್ತಾನೆ. ಇದೇ ರೀತಿಯಲ್ಲಿ ಭೂಗೋಳಶಾಸ್ತ್ರಜ್ಞನು ಯಾವುದಾದರೊಂದು ಬಗೆಯಲ್ಲಿ ಅರ್ಥಪೂರ್ಣವಾದ ಏಕರೂಪತೆಯುಳ್ಳ ಭೂಭಾಗಗಳನ್ನು ಪರಿಗಣಿಸಿ ಅಭ್ಯಸಿಸುತ್ತಿದ್ದು ಇವುಗಳನ್ನು ಪ್ರದೇಶಗಳೆಂದು ಕರೆಯಲಾಗುತ್ತದೆ.

ಪ್ರಾದೇಶಿಕ ವಿಧಾನ ಭೂಮಿಯ ಯಾವುದಾದರೊಂದು ಭಾಗದ ವಿಶೇಷ ಅಧ್ಯಯನವಾಗಿದೆ. ಅಂದರೆ ಭೂಮಿಯ ಯಾವುದಾದರೊಂದು ಭಾಗದ ಪ್ರಾಕೃತಿಕ ಹಾಗೂ ಮಾನವಿಕ ಅಂಶಗಳು ಹಾಗೂ ಅವುಗಳ ಪರಸ್ಪರ ಸಂಬಂಧ, ಅವುಗಳ ಪರಸ್ಪರ ಹೊಂದಾಣಿಕೆ, ಪೂರಕತೆ, ಪರಸ್ಪರ ಪ್ರಭಾವ ಮೊದಲಾದವುಗಳನ್ನು ಕುರಿತ ಅಧ್ಯಯನವೇ ಪ್ರಾದೇಶಿಕ ವಿಧಾನವಾಗಿದೆ. ಈ ವಿಧಾನದಿಂದ ಸಾಮಾನ್ಯ ನಿಯಮ ಹಾಗೂ ಸಿದ್ಧಾಂತಗಳನ್ನು ರೂಪಿಸುವುದು ಸಾಧ್ಯವಿಲ್ಲ. ಇದಕ್ಕೆ ಕಾರಣ ಪ್ರತಿಯೊಂದು ಭೂಪ್ರದೇಶ ಹಾಗೂ ಅಲ್ಲಿಯ ಮಾನವಿಕ ಲಕ್ಷಣಗಳು ಭಿನ್ನವಾಗಿರುತ್ತವೆ. ಆದರೆ ಪ್ರಾದೇಶಿಕ ವಿಧಾನದಿಂದ ಆಯಾ ಪ್ರದೇಶದ ಪ್ರಾಕೃತಿಕ ಹಾಗೂ ಮಾನವಿಕ ಲಕ್ಷಣಗಳ ಪರಸ್ಪರ ಹೊಂದಾಣಿಕೆಯಿಂದ ಆ ಪ್ರದೇಶ ಅಂತಿಮವಾಗಿ ಪಡೆದಿರುವ ವಿಶಿಷ್ಟ ವ್ಯಕ್ತಿತ್ವವನ್ನು ಇದರಲ್ಲಿ ನಿರೂಪಿಸಲಾಗುವುದು. ಅದು ಇತರ ಪ್ರದೇಶಗಳಿಗಿಂತ ಹೇಗೆ ಭಿನ್ನ ಅಥವಾ ಸಾಮ್ಯತೆಯನ್ನು ಹೊಂದಿದೆ ಎಂಬುದನ್ನು ವಿಶ್ಲೇಷಿಸಲಾಗುವುದು.

ಭೂಮೇಲ್ಮೈ ಅತಿ ಹೆಚ್ಚು ವೈವಿಧ್ಯಮಯವಾಗಿದ್ದು, ಇದರ ಯಾವುದೇ ಒಂದು ಭಾಗ ಇತರ ಭಾಗಗಳಿಗಿಂತ ಭಿನ್ನವಾಗಿರುವುದು ಪ್ರಾದೇಶಿಕ ಅಧ್ಯಯನಕ್ಕೆ ಅವಕಾಶವನ್ನು ನೀಡಿದೆ. ಇದರಿಂದಾಗಿಯೇ ಭೂಗೋಳವಿಜ್ಞಾನದಲ್ಲಿ ಪ್ರಾದೇಶಿಕ ಅಧ್ಯಯನ ರೂಢಿಗೆ ಬರಲು ಸಾಧ್ಯವಾಯಿತು. ಪ್ರಾದೇಶಿಕ ವಿಧಾನ ಭೂಗೋಳವಿಜ್ಞಾನದ ಪಾರಂಪರಿಕ, ಸಾಂಪ್ರದಾಯಿಕ, ವಿಶಿಷ್ಟ ಹಾಗೂ ಪರಿಣಾಮಕಾರಿಯಾದ ವಿಧಾನವಾಗಿದ್ದು ಭೌಗೋಳಿಕ ಸಂಶೋಧನೆಯಲ್ಲಿ ಈ ವಿಧಾನ ಇತರ ಎಲ್ಲಾ ವಿಧಾನಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಬಳಕೆಯಾಗುವುದು. ಇದರಿಂದ ಭೂಮೇಲ್ಮೈನ ಪ್ರತಿಯೊಂದು ಭಾಗವನ್ನು ವಿಶೇಷವಾಗಿ ಅಭ್ಯಸಿಸಲು, ಅಲ್ಲಿಯ ಮಾನವ–ಪರಿಸರದ ಸಂಬಂಧವನ್ನು ವ್ಯವಸ್ಥಿತವಾಗಿ ವಿವರಿಸಲು ಸಾಧ್ಯವಾಗಿದೆ. ಈ ಬಗೆಯ ಅಧ್ಯಯನ ವಿಧಾನ ಉಳಿದ ಯಾವುದೇ ಪ್ರಾಕೃತಿಕ ಅಥವಾ ಮಾನವಿಕ ವಿಜ್ಞಾನಗಳಲ್ಲಿ ಕಂಡುಬರುವುದಿಲ್ಲ. ಇದನ್ನೇ ಜರ್ಮನ್ನರು ರೀನ್ ಜಿಯೋಗ್ರಫಿ ಅಂದರೆ ನೈಜ ಭೂಗೋಳ ವಿಜ್ಞಾನವೆಂದು ಕರೆದಿದ್ದಾರೆ. ಇಂದು ಭೂಗೋಳ ವಿಜ್ಞಾನದ ಬಹುತೇಕ ಸಂಶೋಧನೆಗಳು ಪ್ರಾದೇಶಿಕ ವಿಧಾನದಲ್ಲಿ ಮುಂದುವರಿಯುತ್ತಿವೆ.

ಆ. ಮಾನವ–ಪರಿಸರ ಸಂಪ್ರದಾಯ: ಭೂ ಮೇಲ್ಮೈನ ವಿವಿಧ ಬಗೆಯ ಪರಿಸರಗಳು–ಅಲ್ಲಿಯ ಮಾನವನ ಹೊಂದಾಣಿಕೆಯ ವಿಧಾನ ಹಾಗೂ ಪ್ರಾಕೃತಿಕ ಪ್ರಭಾವಗಳಿಗೆ ಮಾನವನ ಪ್ರತಿಕ್ರಿಯೆ ಮೊದಲಾದವುಗಳ ಅಧ್ಯಯನವನ್ನೇ ಮಾನವ–ಪರಿಸರ

ಸಂಪ್ರದಾಯವೆಂದು ಕರೆಯಲಾಗಿದೆ. ಭೂಗೋಳವಿಜ್ಞಾನದ ಆರಂಭದ ಹಂತದಿಂದಲೂ ಈ ಬಗೆಯ ವಿವರಣೆಗಳು ರೂಢಿಗತವಾಗಿವೆ. ಮಾನವ ಸಮುದಾಯಗಳ ಜೀವನ ಭಿನ್ನವಾಗಿರಲು ಪರಿಸರದ ವೈವಿಧ್ಯತೆಗಳೇ ಮೂಲ ಕಾರಣವೆಂದು ಪರಿಗಣಿಸಲಾಯಿತು. ಮಾನವ-ಪರಿಸರ ಸಂಬಂಧದ ನಿರೂಪಣೆಯಲ್ಲಿ ಹಲವಾರು ವಿಧಗಳಿವೆ. ಇವುಗಳಲ್ಲಿ ಮೊದಲನೆಯದು ಪರಿಸರ ಪ್ರಭುತ್ವವಾದ. ಇದರ ನಿರೂಪಣೆಯಂತೆ ಪರಿಸರವು ಅತ್ಯಂತ ಪರಿಣಾಮಕಾರಿಯಾಗಿ ಮಾನವನ ಜೀವನದ ಮೇಲೆ ಪ್ರಭಾವ ಬೀರುವುದು.

ಮಾನವನನ್ನೂ ಸಸ್ಯವರ್ಗ ಮತ್ತು ಪ್ರಾಣಿ ಸಮೂಹಗಳಂತೆಯೇ ಪರಿಸರದ ಒಂದು ಭಾಗವೆಂದು ಈ ಸಂಪ್ರದಾಯದಲ್ಲಿ ಪರಿಗಣಿಸಲ್ಪಟ್ಟಿದೆ. ಇದನ್ನು ಪರಿಸರ ಪ್ರಭುತ್ವವಾದವೆಂದು ಕರೆಯಲಾಗಿದೆ.

ಡಾರ್ವಿನ್ನನ ಜೀವವಿಕಾಸವಾದ ಪರಿಸರ ಪ್ರಭುತ್ವವಾದಕ್ಕೆ ಹೊಸ ರೂಪವನ್ನು ನೀಡಿತು. ರ‍್ಯಾಟ್ಜೆಲ್, ಸೆಂಪಲ್, ಹಂಟಿಂಗ್‌ಟನ್ ಈ ವಾದದ ಅತಿಮುಖ್ಯ ಪ್ರತಿಪಾದಕರು. ಇದರಂತೆ ಬಲಶಾಲಿಯಾಗಿದ್ದ ಯುರೋಪಿನ ಸಮುದಾಯ ಬಲಹೀನವಾಗಿದ್ದ ಏಷ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಗಳ ಮೇಲೆ ಪ್ರಭುತ್ವ ಸಾಧಿಸಿದುದನ್ನು ವಿವರಿಸಲು ಸಾಮಾಜಿಕ ಪರಿಸರ ಪ್ರಭುತ್ವವಾದ ಎಂಬ ಹೆಸರಿನಲ್ಲಿ ಬಳಸಲ್ಪಟ್ಟಿತು. ಯುರೋಪಿನ ಸಾಮ್ರಾಜ್ಯಶಾಹಿ ನೀತಿ ಇದರಿಂದ ವೈಜ್ಞಾನಿಕವಾಗಿ ಪುರಸ್ಕೃತಗೊಂಡಿತು. ಡಾರ್ವಿನ್ನನ ಸಿದ್ಧಾಂತವನ್ನು ಹರ್ಬರ್ಟ್ ಸ್ಪೆನ್ಸರ್ ಮಾನವ ಸಮಾಜದ ಅಧ್ಯಯನಕ್ಕೆ ಬಳಸಿದ. ಇದನ್ನೇ ಸಾಮಾಜಿಕ ಡಾರ್ವಿನ್‌ವಾದವೆಂದು ಕರೆಯುತ್ತಾರೆ. ರ‍್ಯಾಟ್ಜೆಲ್ ಇದೇ ವಾದವನ್ನು ಮುಂದುವರಿಸಿ ಪರಿಸರ ಪ್ರಭುತ್ವವಾದವನ್ನು ಪ್ರತಿಪಾದಿಸಿದ, ಪರಿಸರವಾದಕ್ಕೆ ವಿರುದ್ಧವಾದ ಮಾನವ ಕರ್ತೃತ್ವ ಹಾಗೂ ಹಿರಿಮೆಯನ್ನು ಸಾರುವ ಸಂಭವವಾದವು ಲೂಸಿಯನ್ ಫೀಬ್ರ್ವೆಯಿಂದ ಆರಂಭಿಸಲ್ಪಟ್ಟು ಫ್ರಾನ್ಸಿನಲ್ಲಿ ವೈಡಾಲ್‌ರವರಿಂದ ಪ್ರಸಿದ್ಧಿ ಪಡೆಯಿತು. ಈ ಎರಡು ಭಿನ್ನವಾದಗಳನ್ನು ಸಮನ್ವಯಗೊಳಿಸಿ ಗ್ರಿಫಿತ್ ಟೈಲ್ಲರ್ ತನ್ನ ನಿಂತು ಹೊರಡುವ ಪರಿಸರವಾದವನ್ನು 1951ರಲ್ಲಿ ಪ್ರಕಟಿಸಿದ. ಇವುಗಳಲ್ಲದೆ ಸ್ಪೇಟ್‌ರವರ ಸಂಭವನೀಯತಾ ಪರಿಭಾವನೆಯೂ ಸಹ ಮಾನವ-ಪರಿಸರ ಸಂಬಂಧವನ್ನು ವಿವರಿಸುವುದು.

ಪರಿಸರವಾದ ಇಂದು ಜೀವಿ ಪರಿಸ್ಥಿತಿ ವಿಜ್ಞಾನವಾಗಿ (ಎಕಾಲಜಿ) ಅಭಿವೃದ್ಧಿ ಹೊಂದಿದೆ. ಸ್ಕಾಂಡಿನೇವಿಯ, ಆಸ್ಟ್ರೇಲಿಯಗಳಲ್ಲಿ ಆರಂಭಗೊಂಡ ಈ ವಾದ ಇಂದು ಪ್ರಪಂಚದಾದ್ಯಂತ ವ್ಯಾಪಿಸಿದೆ. ಹಸುರು ಚಳವಳಿ ಜೀವಿಸುವ ಹಕ್ಕು ಮೊದಲಾದವು ಇದರ ಮುಂದುವರಿದ ಭಾಗಗಳು. ಭಾರತೀಯ ಸಮುದಾಯದಲ್ಲಿ ಪ್ರಾಣಿ-ಮಾನವ ಸಹಕಾರ ಸಂಬಂಧವನ್ನು ಪುರಾಣದುದ್ದಕ್ಕೂ ಕಾಣಬಹುದು. ಚಿಪ್ಕೊ (ಅಪ್ಪಿಕೊ) ಚಳವಳಿ, ನರ್ಮದ ಚಳವಳಿ, ಪಶ್ಚಿಮಘಟ್ಟ ಉಳಿಸಿ ಮೊದಲಾದವು ಭಾರತದ ಪರಿಸರ ಕಾಳಜಿಯ ಕೆಲವು ಜನಾಂದೋಲನಗಳಾಗಿವೆ. ಇದನ್ನೇ ಅನುಸರಿಸಿ ಪರಿಸರ ಮತ್ತು ಅಭಿವೃದ್ಧಿಯ ವಿಶ್ವ ಆಯೋಗ ಸುಸ್ಥಿರ ಅಭಿವೃದ್ಧಿ (ಸಸ್ಟೈನಬಲ್ ಡೆವಲಪ್‌ಮೆಂಟ್) ಎಂಬ ಪರಿಭಾವನೆಯನ್ನು ರೂಪಿಸಿದೆ. ಇಂದಿನ ಮಾನವ-ಪರಿಸರ ಸಂಬಂಧಿತ ಭೌಗೋಳಿಕ ಅಧ್ಯಯನಗಳು ಈ ಮಾರ್ಗದಲ್ಲಿ ಮುಂದುವರಿದಿವೆ.

ಸ್ಥಾನೀಯ ಸಂಪ್ರದಾಯ: ಪ್ರಾದೇಶಿಕ ಸಂಪ್ರದಾಯ ಕ್ರಮದಲ್ಲಿ ಭೌಗೋಳಿಕ ಪ್ರದೇಶಗಳ ವಿಂಗಡಣೆ, (ಸ್ಪೇಷಿಯಲ್) ಹಾಗೂ ವಿವರಣೆಗಳಲ್ಲಿ ಉಂಟಾದ ವಾದ-ವಿವಾದಗಳು ಹಾಗೂ ಏಕತಾನತೆಗಳಿಂದ ಸ್ಥಾನೀಯ ಸಂಪ್ರದಾಯ ಇಂದು ಭೌಗೋಳಿಕ ವಿವರಣೆಗಳಲ್ಲಿ ಅತಿಮುಖ್ಯವಿಧಾನವಾಗಿ ಪರಿಗಣಿಸಲ್ಪಟ್ಟಿದೆ. ಭೂಮೇಲ್ಮೈನ ಯಾವುದೇ ಭಾಗವನ್ನು ಸ್ಥಾನೀಯ ಘಟಕವಾಗಿ ಪರಿಗಣಿಸಬಹುದು. ಅದು ಭೂಖಂಡಗಳಂತೆ ವಿಸ್ತಾರವಾಗಿರಬಹುದು ಅಥವಾ ಗ್ರಾಮೀಣ ವಸತಿಗಳಂತೆ ಚಿಕ್ಕದಾಗಿರಬಹುದು. ಇಂತಹ ಸ್ಥಾನೀಯ ಘಟಕಗಳ ಮೇಲ್ಮೈಯಲ್ಲಿ ಕಂಡುಬರುವ ಮಾನವ-ಪರಿಸರದ ಸಂಬಂಧ, ಕ್ರಿಯೆ-ಪ್ರತಿಕ್ರಿಯೆಗಳ ವಿಶ್ಲೇಷಣೆ ಹಾಗೂ ಆ ವಲಯದಲ್ಲಿ ಕಂಡುಬರುವ ಸ್ಥಾನೀಯ ಸಂಘಟನೆಯ ಮಾದರಿಯನ್ನು ವಿವರಿಸುವುದನ್ನು ಸ್ಥಾನೀಯ ವಿಶ್ಲೇಷಣೆ ಎಂದು ಕರೆಯಲಾಗಿದೆ. ಇಮ್ಯಾನ್ಯುಯೆಲ್‌ಕಾಂಟ್‌ರವರಿಂದ ಆರಂಭಿತವಾದ ಈ ವಾದ ಹೆಟ್ನರ್ ಹಾಗೂ ಹಾರ್ಟ್‌ಶೋರ್ನ್‌ರವರಿಂದ ಮುಂದುವರಿಸಲ್ಪಟ್ಟಿತು. ಸ್ಕಾಫರ್, ಪೀಟರ್ ಹ್ಯಾಗೆಟ್, ಬುಂಜ್ ಉಲ್ಮನ್, ಬೆರ್ರಿ, ಮತ್ತು ಸ್ವೀಡನ್ನಿನ ಹ್ಯಾಗರ್‌ಸ್ಟ್ರಾಂಡ್ ಈ ಸಂಪ್ರದಾಯವನ್ನು ತಮ್ಮ ಅಧ್ಯಯನ ವಿಶ್ಲೇಷಣೆಯಲ್ಲಿ ಬಳಸಿಕೊಂಡಿದ್ದಾರೆ. ಈ ಕ್ರಮದಲ್ಲಿ ಪರಿಮಾಣಾತ್ಮಕ ವಿಧಾನಗಳ ಬಳಕೆ ಅತಿ ಹೆಚ್ಚು.

ಭೂವಿಜ್ಞಾನ ಸಂಪ್ರದಾಯ: ಭೂಗೋಳವಿಜ್ಞಾನದಲ್ಲಿ ಭೂವಿಜ್ಞಾನದ ಅಧ್ಯಯನ ಹಾಸುಹೊಕ್ಕಾಗಿದೆ. ಭೂಸ್ವರೂಪ ರಚನಾವಿಜ್ಞಾನ ಭೂಗೋಳವಿಜ್ಞಾನ-ಭೂವಿಜ್ಞಾನಗಳ ಸಂಗಮ ಕ್ಷೇತ್ರವಾಗಿದೆ. ಬ್ರಿಟಿಷ್, ಅಮೆರಿಕನ್ ಮತ್ತು ಜರ್ಮನ್ ಭೂಗೋಳವಿಜ್ಞಾನಿಗಳು ಈ ಸಂಪ್ರದಾಯಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಡೇವಿಸ್ ಮತ್ತು ವಾಲ್ಟರ್ ಪೆಂಕ್‌ರವರ ಭೂಸವೆತ ಚಕ್ರ, ಅಗಸ್ಸಿಜ್‌ರವರ ಹಿಮನದಿಗಳ ಅಧ್ಯಯನ ಈ ಸಂಪ್ರದಾಯದ ಅಭಿವೃದ್ಧಿಯನ್ನು ತ್ವರಿತಗೊಳಿಸಿದವು. ಭೂಮೇಲ್ಮೈನ ಸ್ವರೂಪಗಳು ಭೂ ಅಂತರಾಳದ ಪ್ರಕ್ರಿಯೆಯ ಪ್ರತಿಬಿಂಬಗಳಾಗಿರುವುದು ಭೂವಿಜ್ಞಾನ ಮತ್ತು ಭೂಗೋಳವಿಜ್ಞಾನಗಳು ಪರಸ್ಪರ ಪೂರಕವಾಗಿರಲು ಕಾರಣವಾಗಿದೆ. ಈ ಸಂಪ್ರದಾಯ ಇಂದಿಗೂ ಹೆಚ್ಚು ಜನಪ್ರಿಯವಾಗಿದೆ.

ಇತ್ತೀಚಿನ ಅಧ್ಯಯನ ವಿಧಾನಗಳು: ಮೇಲೆ ವಿವರಿಸಿದ ನಾಲ್ಕು ಮುಖ್ಯ ಸಂಪ್ರದಾಯಗಳ ಜೊತೆಗೆ ಇಂದು ಭೂಗೋಳವಿಜ್ಞಾನದಲ್ಲಿ ಹಲವಾರು ಬಗೆಯ ವಿಶ್ಲೇಷಣಾ ವಿಧಾನಗಳು ರೂಢಿಯಲ್ಲಿವೆ. ಕ್ಷೇಮಾಭ್ಯುದಯ ಸಂಪ್ರದಾಯ, ವರ್ತನಾ ವಿಧಾನ, ವಸ್ತುನಿಷ್ಠ ವಿಧಾನ, ಪ್ರಾಗ್ಮಟಿಸಂ, ಮಾರ್ಕ್ಸ್‌ವಾದ, ಮಹಿಳಾವಾದ, ವಿಚಾರವಾದ, ಮಾನವೀಯತಾವಾದ ಮೊದಲಾದವು ಇವುಗಳಲ್ಲಿ ಅತಿ ಮುಖ್ಯ. ಪ್ರಪಂಚದಾದ್ಯಂತ ಕಂಡುಬರುವ ಆರ್ಥಿಕಾಭಿವೃದ್ಧಿಯ ತಾರತಮ್ಯತೆ ಅಭಿವೃದ್ಧಿಯ ಅವಕಾಶಗಳ ಹಂಚಿಕೆ ಹಾಗೂ ಸಂಪನ್ಮೂಲಗಳ ಹಂಚಿಕೆಯಲ್ಲಿ ಕಂಡುಬರುವ ವ್ಯತ್ಯಾಸ ಮೊದಲಾದ ಸಾಮಾಜಿಕ-ಆರ್ಥಿಕ ಅಸಮಾನತೆಗಳ ಪ್ರಾದೇಶಿಕ ವಿಶ್ಲೇಷಣ ಕ್ರಮವನ್ನು ಇಂದು ಭೂಗೋಳವಿಜ್ಞಾನದಲ್ಲಿ ಕ್ಷೇಮಾಭ್ಯುದಯ ಸಂಪ್ರದಾಯ ಹಾಗೂ ಮಾನವತಾ ಅಧ್ಯಯನ ವಿಧಾನ ಎಂದು ಕರೆಯಲಾಗಿದೆ. ಸಾಮಾಜಿಕ ಸಮಸ್ಯೆಗಳಾದ ಬಡತನ, ಹಸಿವು, ನಿರುದ್ಯೋಗ, ಆಹಾರ-ಪೌಷ್ಟಿಕಾಂಶದ ಕೊರತೆ, ಜನಾಂಗೀಯ-ಧಾರ್ಮಿಕ ಘರ್ಷಣೆ, ಲಿಂಗ, ವರ್ಣ ಮತ್ತು ವರ್ಗ ಭೇಧ, ನಿರಾಶ್ರಿತರು ಮೊದಲಾದ ಸಮಸ್ಯೆಗಳನ್ನು ಮಾನವೀಯತೆಯ ದೃಷ್ಟಿಯಿಂದ ಪರಿಶೀಲಿಸಿ, ಭೂಮೇಲ್ಮೈಯಲ್ಲಿ ಅವುಗಳ ಹಂಚಿಕೆಯನ್ನು ವಿಶ್ಲೇಷಣೆ ಮಾಡಲಾಗುವುದು. ಈ ಅಧ್ಯಯನ ಭೂಗೋಳವಿಜ್ಞಾನದಲ್ಲಿ ಒಂದು ಪ್ರಮುಖ ಪಂಥವಾಗಿ ಅಭಿವೃದ್ಧಿ ಹೊಂದಿದೆ.

ವರ್ತನಾ ವಿಧಾನ: ಮಾನವನ ನಡವಳಿಕೆ, ವಿವಿಧ ಬಗೆಯ ಪರಿಸರ ಪರಿಸ್ಥಿತಿಗಳಲ್ಲಿ ಭಿನ್ನವಾಗಿರುವುದು. ಆತನು ಪರಿಸರವನ್ನು ಮನಗಂಡಿರುವ ರೀತಿಗೆ ಅನುಗುಣವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವನು. ಅವುಗಳಿಂದ ಆತನ ವರ್ತನೆ ರೂಪಿತವಾಗುವುದು. ಇದರಿಂದಾಗಿಯೇ ಒಂದೇ ಪರಿಸರ, ಸ್ಥಳ ಹಾಗೂ ಪರಿಸ್ಥಿತಿಗಳಲ್ಲಿ ವಿವಿಧ ವ್ಯಕ್ತಿಗಳು ಪರಿಸರವನ್ನು ಮನಗಂಡಿರುವ ರೀತಿಗಳು ಭಿನ್ನವಾಗಿರುತ್ತವೆ. ಇದರಿಂದ ಅವರ ತೀರ್ಮಾನ ಮತ್ತು ನಡವಳಿಕೆಗಳು ಭಿನ್ನವಾಗಿರುತ್ತವೆ. ಇವುಗಳನ್ನು ನಕ್ಷೆಯ ಮಾದರಿಯಲ್ಲಿ ಪ್ರತಿನಿಧಿಸುವುದನ್ನೇ ಮಾನಸಿಕ ನಕ್ಷೆ (ಮೆಂಟಲ್ ಮ್ಯಾಪ್) ಎಂದು ಕರೆದಿರುವರು. ಸಂಶೋಧನೆಗಳ ಸ್ಥಾನೀಯ ಪ್ರಸರಣ (ಸ್ಪೇಷಿಯಲ್ ಡಿಫ್ಯೂಷನ್) ಕ್ರೀಡಾ ಸಿದ್ಧಾಂತ (ಗೇಮ್ ಥಿಯರಿ) ಈ ಪ್ರಕಾರದ ಅಧ್ಯಯನಗಳಿಗೆ ಮುಖ್ಯ ಪೀಟರ್‌ಗೋಲ್ಡ್, ಕಿರ್ಕ್, ಹ್ಯಾಗರ್‌ಸ್ಟ್ರಾಂಡ್, ಮೊದಲಾದವರು ಈ ಪ್ರಕಾರದ ಅಧ್ಯಯನಕಾರರಲ್ಲಿ ಪ್ರಮುಖವಾದವರು. ಇಂದಿಗೂ ಈ ವಿಧಾನ ಭೂಗೋಳ ವಿಜ್ಞಾನದಲ್ಲಿ ಅತಿಹೆಚ್ಚು ಪ್ರಚಲಿತದಲ್ಲಿದೆ.

ಮಹಿಳಾವಾದದ ಭೂಗೋಳವಿಜ್ಞಾನ: ಇತ್ತೀಚಿನ ಅವಧಿಯಲ್ಲಿ ಎಲ್ಲಾ ಸಾಮಾಜಿಕ ವಿಜ್ಞಾನಗಳಲ್ಲಿ ಮಹಿಳಾವಾದವು ಹೆಚ್ಚು ಪ್ರಚಲಿತವಾಗಿದೆ. ಮಹಿಳಾವಾದ ಭೂಗೋಳವಿಜ್ಞಾನವು ಸಮಾಜದಲ್ಲಿ ಮಹಿಳೆಯರು ಅಧೀನರಾಗಿರಲು ಕಾರಣಗಳ ವಿಶ್ಲೇಷಣೆ ಮತ್ತು ಮಹಿಳೆಯರ ಸಮಸ್ಯೆಗಳ ಅಧ್ಯಯನ ಈ ಪಂಥದ ಮುಖ್ಯ ಉದ್ದೇಶವಾಗಿರುವುದು. ಸಮಾಜದಲ್ಲಿ ಪುರುಷ-ಮಹಿಳೆಯರ ಅಭಿವೃದ್ಧಿಗೆ ಇರುವ ಅವಕಾಶಗಳ ತಾರತಮ್ಯತೆಯನ್ನು ಹೋಗಲಾಡಿಸುವುದು ಈ ಚಳವಳಿಯ ಮುಖ್ಯ ಉದ್ದೇಶ. (ಎಚ್.ಎಸ್.ಕೆ.)

**ಭೂಗೋಳ ವಿಜ್ಞಾನದ ಮಾದರಿಗಳು:** ಮೂಲಭೂತವಾಗಿ ಎಲ್ಲ ರೀತಿಯ ಮಾದರಿಗಳ ಉದ್ದೇಶವೇನೆಂದರೆ ಸಂಕೀರ್ಣವಾದ ಮತ್ತು ಬಹಳ ಕ್ಲಿಷ್ಟಕರವಾದ ಸ್ಥಿತಿಗಳನ್ನು ಅಥವಾ ವಿಷಯಗಳನ್ನು ಸರಳೀಕರಿಸಿ ಆ ಮೂಲಕ, ಶೋಧನೆ ಮಾಡುವ ಕ್ರಿಯೆಗಳಿಗೆ ಅನುಕೂಲಮಾಡಿಕೊಡುವುದಾಗಿದೆ. ಎರಡನೆಯ ಮಹಾಯುದ್ಧದ ಅನಂತರದ ಅವಧಿಯಲ್ಲಿ ಭೂಗೋಳ ವಿಜ್ಞಾನದ ವ್ಯಾಖ್ಯೆ, ಚಿಂತನೆ ಹಾಗೂ ಅಧ್ಯಯನ ಕ್ರಮಗಳಲ್ಲೂ ಮಹತ್ತರವಾದ ಬದಲಾವಣೆಗಳನ್ನು ಹೊಂದಿವೆ. ಕಳೆದ ಕೆಲವು ದಶಕಗಳಿಂದ ಭೂಗೋಳ ವಿದ್ವಾಂಸರು ಸರ್ವಸಾಧಾರಣೀಕರಿಸುವ ಭೌಗೋಳಿಕ ಮಾದರಿಗಳನ್ನು ರಚಿಸಿ, ಸಿದ್ಧಾಂತಗಳನ್ನು ಹಾಗೂ ಸಾರ್ವತ್ರಿಕ ನಿಯಮಗಳನ್ನು ರೂಪಿಸಿ ಭೌಗೋಳಿಕ ಅಧ್ಯಯನದಲ್ಲಿ ತೊಡಗಿದ್ದಾರೆ.

ಸ್ಕಿಲ್ಲಿಂಗ್ (1964) ರವರ ಅಭಿಪ್ರಾಯದಂತೆ ಮಾದರಿಯು ಕಲ್ಪನೆ, ನಿಯಮ, ಊಹೆ ಅಥವಾ ವಿನ್ಯಾಸಗೊಳಿಸಲ್ಪಟ್ಟ ರಚನಾತ್ಮಕ ಯೋಜನೆ. ಭೂಗೋಳ ವಿಜ್ಞಾನದ ದೃಷ್ಟಿಕೋನದಿಂದ ಯೋಚಿಸಿದಾಗ ವಾಸ್ತವ ಜಗತ್ತಿನ (ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಭೂ ದೃಶ್ಯಾವಳಿ) ಬಗ್ಗೆ ತಾರ್ಕಿಕ ಅಥವಾ ವಿವೇಚನಾ ಪೂರ್ಣವಾದ ಸ್ಥಾನೀಯ ಹಾಗೂ ಕಾಲಮಾನಿಕ ವಿಶ್ಲೇಷಣೆಗಳನ್ನು ಮಾದರಿಗಳು ಒಳಗೊಂಡಿರುತ್ತವೆ. ಮಾದರಿ ತಾರ್ಕಿಕವಾಗಿ ನಿಶ್ಚಯಿಸಲ್ಪಟ್ಟ ವಿಚಾರಗಳ ಮೂಲಕ ಒಂದು ನಿಯಮದ ಅಥವಾ ವಿಚಾರ ಸರಣಿಯ ಕ್ರಮಬದ್ಧ ಮಂಡನೆಯಾಗಿದೆ.

ಭೂಗೋಳ ವಿಜ್ಞಾನ ಮಾನವ ಮತ್ತು ಪರಿಸರಗಳ ಸಂಬಂಧಗಳ ಅಧ್ಯಯನವನ್ನು ಒಳಗೊಂಡಿದ್ದು ಈ ಅಧ್ಯಯನ ಬಹಳ ಸಂಕೀರ್ಣತೆಯಿಂದ ಕೂಡಿದ್ದು ಇದನ್ನು ಗ್ರಹಿಸುವುದು ಸರಳವಾಗಿರುವುದಿಲ್ಲ. ಈ ವಿಷಯವನ್ನು ವೈಜ್ಞಾನಿಕವಾಗಿ ಅಭ್ಯಸಿಸಲು ಹಾಗೂ ಪರಿಶೀಲಿಸಲು ಪೂರ್ವ ಸಿದ್ಧಾಂತ, ಮಾದರಿಗಳು ಮತ್ತು ವಿಚಾರ ಸರಣಿಗಳ ಸಹಾಯ ಅಗತ್ಯ.

ಮಾದರಿಗಳ ಮೂಲಕ ಸಿದ್ಧಾಂತಗಳನ್ನು ಪರೀಕ್ಷೆಗೊಳಪಡಿಸಬಹುದಾಗಿದೆ. ಭೌಗೋಳಿಕ ಸ್ಥಾನಗಳು ಹಾಗೂ ಭೌಗೋಳಿಕ ಭೂ ಸಾದೃಶ್ಯಗಳ ಸಂಕೀರ್ಣತೆಯಿಂದಾಗಿ ಮಾದರಿಗಳ ಬಳಕೆಯು ಭೌಗೋಳಿಕ ಅಧ್ಯಯನದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಭೂಗೋಳವಿಜ್ಞಾನಿಗಳು ತಮ್ಮ ಅಧ್ಯಯನಗಳಲ್ಲಿ ಹಲವಾರು ರೀತಿಯ ಮಾದರಿಗಳನ್ನು ಅಭಿವೃದ್ಧಿ ಪಡಿಸಿಕೊಂಡು ಅಥವಾ ಇತರ ವಿಷಯಗಳಿಂದ ಎರವಲು ಪಡೆದು, ಅನ್ವಯಿಸಿಕೊಂಡಿರುತ್ತಾರೆ. ಈ ಮಾದರಿಗಳನ್ನು ಹೀಗೆ ವರ್ಗೀಕರಿಸಬಹುದಾಗಿದೆ. 1. ಅಳತೆ ಮಾದರಿ. 2. ಅನುಕರಣೆಯ ಮತ್ತು ಸಂಭವನೀಯ ಮಾದರಿ. 3. ಗಣಿತಾತ್ಮಕ ಮಾದರಿ. 4. ಸಾದೃಶ್ಯ ಮಾದರಿ. 5. ಸೈದ್ಧಾಂತಿಕ ಮಾದರಿ.

1. ಅಳತೆ ಮಾದರಿಗಳನ್ನು ಹಾರ್ಡ್‌ವೇರ್ ಮಾದರಿಗಳು ಎಂದೂ ಸಹ ಕರೆಯಲಾಗುತ್ತದೆ. ಈ ಮಾದರಿಗಳು ನಿಜ ಸ್ವರೂಪಗಳ ಯಥಾರೂಪವನ್ನು ಹೊಂದಿದ್ದು ಕಡಿಮೆ ಅಳತೆಯಲ್ಲಿ (ಪ್ರಮಾಣ) ಪ್ರತಿನಿಧಿಸಲ್ಪಟ್ಟಿರುತ್ತವೆ. ಈ ಮಾದರಿಗಳು ಭೂ ಮೇಲ್ಮೈಯನ್ನು ಪ್ರತಿನಿಧಿಸುವಂತಹ ಸ್ಥಿರ ಮಾದರಿಗಳಾಗಿರಬಹುದು ಅಥವಾ ಅಲೆಗಳು, ನದಿ ಹರಿವನ್ನು ತೋರಿಸುವಂತಹ ಕ್ರಿಯಾಶೀಲ ಅಥವಾ ಚಲನಾತ್ಮಕ ಮಾದರಿಗಳನ್ನು ಒಳಗೊಂಡಿರಬಹುದು. ಚಲನಾತ್ಮಕ ಮಾದರಿಗಳು ಹೆಚ್ಚು ಆಸಕ್ತಿದಾಯಕವಾಗಿದ್ದು ಭೌಗೋಳಿಕ ಅಧ್ಯಯನಗಳಲ್ಲಿ ಹೆಚ್ಚು ಉಪಯುಕ್ತವೆನಿಸಿದೆ. ಈ ಮಾದರಿಗಳ ಅತಿಮುಖ್ಯ ಅನುಕೂಲವೇನೆಂದರೆ ನಿಜಸ್ಥಿತಿಯಲ್ಲಿ ಕಾಣಬಹುದಾದಂತಹ ಕಾರ್ಯನಡೆಸುವ ಗತಿಯನ್ನು ನಿಯಂತ್ರಿಸಬಹುದಾಗಿದೆ. ಈ ಕಾರಣದಿಂದ ಪ್ರತಿಯೊಂದು ಅಂಶಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಆದರೆ ಸ್ವಾಭಾವಿಕ ಪರಿಸ್ಥಿತಿಗಳಿಗೆ ಈ ಮಾದರಿಗಳ ಫಲಿತಾಂಶಗಳನ್ನು ಅನ್ವಯಿಸುವುದು ಬಹಳ ಕಷ್ಟದಾಯಕವಾಗಿರುತ್ತದೆ. ಆದರೂ, ಈ ಎಲ್ಲಾ ನಿಬಂಧನೆಗಳ ನಡುವೆಯೂ ಅಳತೆ ಮಾದರಿ ಹಲವಾರು ವಿಷಯಗಳ ಸಂಶೋಧನೆಗಳಲ್ಲಿ ಉಪಯುಕ್ತ ಫಲಿತಾಂಶಗಳನ್ನು ನೀಡಿರುತ್ತದೆ. ಭೂಗೋಳ ವಿಜ್ಞಾನದಲ್ಲಿ ಪ್ರಾಕೃತಿಕ ಭೂಗೋಳ ವಿಜ್ಞಾನಿಗಳು, ಮುಖ್ಯವಾಗಿ ಭೂಸ್ವರೂಪ ವಿಜ್ಞಾನವನ್ನು ಅಧ್ಯಯನ ಮಾಡುವವರು ನದಿಯ ಕಾರ್ಯ, ಹಿಮನದಿಯ ಚಲನೆ, ಗಾಳಿಯ ಸವೆತ ಕಾರ್ಯ, ಸಾಗರದ ಚಟುವಟಿಕೆಗಳು ಹಾಗೂ ಅಂತರ್ಜಲದ ಕಾರ್ಯಗಳ ನಿರೂಪಣೆಯಲ್ಲಿ ಈ ಮಾದರಿಗಳನ್ನು ಹೆಚ್ಚಾಗಿ ಬಳಸುವರು. ನಕ್ಷೆಗಳು ಅಥವಾ ಭೂಪಟಗಳು ಭೂಗೋಳ ವಿಜ್ಞಾನದ ಅಧ್ಯಯನ ಮಾಡುವವರಿಗೆ ಅತೀ ಅಗತ್ಯವಾದ ಪರಿಚಿತವಾದ ಅಳತೆ ಮಾದರಿಗಳು.

2. ಅನುಕರಣೀಯ ಮತ್ತು ಸಂಭವನೀಯ ಮಾದರಿ ಕೆಲವು ಸಂದರ್ಭಗಳನ್ನು ಹಾಗೂ ಕಾರ್ಯವಿಧಾನಗಳನ್ನು ಅಥವಾ ಸಲಕರಣೆಗಳ ಮೂಲಕ, ಅದರಲ್ಲೂ, ವಿಶೇಷವಾಗಿ, ವೈಯಕ್ತಿಕ ತರಬೇತಿ ಹಾಗೂ ಅಧ್ಯಯನ ಸಂದರ್ಭಗಳಿಗಿಂತಲೂ ಹೆಚ್ಚಾಗಿ ಬಳಸುವುದನ್ನು ಗಮನಿಸಬಹುದು. ಅನುಕರಣೀಯ ಮಾದರಿಗಳಲ್ಲಿ ಅತಿ ಹೆಚ್ಚು ಅಂಶಗಳನ್ನು ವಿಶ್ಲೇಷಿಸಬಹುದಾಗಿದೆ. ಮಾನವ ಭೂಗೋಳವಿಜ್ಞಾನದ ಅಧ್ಯಯನದಲ್ಲಿ ಸಂಭವನೀಯ ಮಾದರಿಗಳನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಅವುಗಳನ್ನು ಮುಖ್ಯವಾಗಿ ವಿವಿಧ ಪ್ರಕಾರದ ಸ್ಥಾನೀಯ ಪ್ರಸರಣದ ಅಧ್ಯಯನಗಳಲ್ಲಿ ಕಾಣಬಹುದಾಗಿದೆ.

3. ಗಣಿತಾತ್ಮಕ ಮಾದರಿ: ಗಣಿತಾತ್ಮಕ ಮಾದರಿಗಳು ವಿಶ್ವಾಸಾರ್ಹ ಮಾದರಿಗಳಾಗಿದ್ದು, ಅವುಗಳ ರಚನೆ ಬಹಳ ಕ್ಲಿಷ್ಟಕರವಾದುದಾಗಿದೆ. ಇವುಗಳು ಮಾನವನ ಹಲವಾರು ಮೌಲ್ಯಗಳು, ಕ್ರಮಬದ್ಧವಾದ ಪ್ರಶ್ನೆಗಳು ಮತ್ತು ಮನೋಭಾವನೆಗಳನ್ನು ಮರೆಮಾಚಿಬಿಟ್ಟರೂ ಕೆಲವು ನಿರ್ದಿಷ್ಟ ಚಿಹ್ನೆ ಅಥವಾ ಗಣಿತದ ಸಹಾಯದಿಂದ, ಕ್ರಮಬದ್ಧವಾಗಿ, ತಾರ್ಕಿಕ ಶಬ್ದಗಳ ಸಹಾಯದಿಂದ, ವಿಷಯವನ್ನು ನಿರೂಪಿಸುತ್ತವೆ. ಉದಾಹರಣೆ ಈ ಕೆಳಗಿನ ವಾದಗಳನ್ನು ಉಲ್ಲೇಖಿಸಬಹುದಾಗಿದೆ.

ಎ ಯು ಬಿ ಗಿಂತ ದೊಡ್ಡದಾಗಿದೆ.

ಬಿ ಯು ಸಿ ಗಿಂತ ದೊಡ್ಡದಾಗಿದೆ.

ಆದ್ದರಿಂದ 'ಎ' ಯು 'ಸಿ' ಗಿಂತ ದೊಡ್ಡದಾಗಿದೆ. ಈ ಸಿದ್ಧಾಂತದ ತಾರ್ಕಿಕ ಮೌಲ್ಯ ಕಾಲದ ಬದಲಾವಣೆಯ ಜೊತೆಯಲ್ಲಿ ಬದಲಾಗುವುದಿಲ್ಲ. ಇದು ಎಲ್ಲ ಕಾಲಗಳಲ್ಲೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ ಈ ಸಿದ್ಧಾಂತದ ಮೌಲ್ಯ ನಿರ್ದಿಷ್ಟ ಪಡಿಸಿದ ಇತಿಹಾಸದ ಕಾಲವನ್ನು ಅವಲಂಬಿಸಿರಲಾರದೆ ಎಲ್ಲಾ ಕಾಲ ಘಟ್ಟಗಳಿಗೂ ಅನ್ವಯಿಸುವ ಕ್ರಮವಾಗಿರುತ್ತದೆ. ಈ ತಾರ್ಕಿಕ ಮೌಲ್ಯ ಸ್ಥಾನೀಯವಾಗಿದ್ದು ಎಲ್ಲಾ ಪ್ರದೇಶಗಳಿಗೂ, ದೇಶಗಳಿಗೂ ಅನ್ವಯಿಸುವಂತಾಗಿರುತ್ತದೆ. ಗಣಿತಾತ್ಮಕ ಮಾದರಿಗಳನ್ನು ಅವುಗಳ ಸಂಭವನೀಯತೆ ಊಹೆಯ ಆಧಾರದ ಮೇಲೆ ಎರಡು ರೀತಿಯಾಗಿ ಗುರುತಿಸಲಾಗಿದೆ. ಅವುಗಳೆಂದರೆ ಡೆಟರ್ ನಿರ್ಧರಿತ ಮಾದರಿ ಹಾಗೂ ಸಂಭವನೀಯ ಮಾದರಿ.

4. ಸಾದೃಶ್ಯ ಮಾದರಿ: ಸಾದೃಶ್ಯ ಮಾದರಿಗಳು ಉಳಿದೆಲ್ಲಾ ಮಾದರಿಗಳಿಗಿಂತ ಭಿನ್ನವಾಗಿದ್ದು, ಈಗಾಗಲೇ ಒಂದು ವಿಷಯದ ಬಗೆಗೆ ಸರಿಯಾಗಿ ಅರ್ಥಮಾಡಿಕೊಂಡಿರುವಂತಹ ಸಿದ್ಧಾಂತಗಳನ್ನು ಅಥವಾ ಕ್ರಿಯಾ ಮಾಲೆಗಳನ್ನು ಬಳಸಿಕೊಂಡು ಹೊಸ ವಿಷಯಗಳ ಬಗ್ಗೆ ಅಥವಾ ಸ್ವಲ್ಪ ಅರಿತಿರುವ ವಿಷಯಗಳಿಗೆ ಆ ಸಿದ್ಧಾಂತಗಳನ್ನು ಅನ್ವಯಿಸಿ ಅಭ್ಯಸಿಸುವ ಕ್ರಮವಾಗಿದೆ. ಇದರ ಪ್ರಾಮುಖ್ಯತೆ ಹಾಗೂ ಮೌಲ್ಯ ಸಂಶೋಧಕ ಎರಡೂ ಸಂದರ್ಭಗಳಲ್ಲಿ ಸಮಾನ ಅಂಶಗಳನ್ನು ಗುರುತಿಸುವ ಸಾಮರ್ಥ್ಯದ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ ಜೇಮ್ಸ್ ಹಟ್ಟನ್ (1795) ರವರು ಮಾನವನ ದೇಹದ ರಕ್ತ ಪರಿಚಲನೆಗೂ ಭೂ ಸ್ವರೂಪಗಳ ಬೆಳವಣಿಗೆಗೆ ಹಾಗೂ ನಾಶವಾಗುವಿಕೆ ಕ್ರಿಯೆಯಲ್ಲಿ ಭೌತ ದ್ರವ್ಯದ ಚಲನೆಗೂ ಇರುವ ಸಾಮ್ಯತೆಯನ್ನು ಗುರುತಿಸಿದರು. ಹಾಗೆಯೇ ಜಲಚಕ್ರದಲ್ಲಿಯೂ ಈ ರೀತಿಯ ಸಾಮ್ಯತೆಯನ್ನು ಗುರುತಿಸಬಹುದಾಗಿದೆ. ಉದಾ: ಡೇವಿಸ್ ಅವರ ಸಾಮಾನ್ಯ ಭೂ ಸವೆತ ಚಕ್ರ.

5. ಸೈದ್ಧಾಂತಿಕ ಮಾದರಿ: ಈ ಮಾದರಿಗಳನ್ನು ಎರಡು ಮಾದರಿಗಳಾಗಿ ವಿಭಾಗಿಸಬಹುದಾಗಿದೆ

ಪರಿಭಾವನಾತ್ಮಕ ಮಾದರಿ: ಸೈದ್ಧಾಂತಿಕ ಮಾದರಿ: ಪರಿಭಾವನಾತ್ಮಕ ಮಾದರಿ ಒಂದು ನಿರ್ದಿಷ್ಟ ಸಮಸ್ಯೆಯ ಬಗ್ಗೆ ತನ್ನ ಸೈದ್ಧಾಂತಿಕ ಅಭಿಪ್ರಾಯಗಳನ್ನು ನಿಜಸ್ಥಿತಿಗೆ ಹೋಲಿಸಿ ಅಧ್ಯಯನ ಮಾಡುವುದಾಗಿದೆ. (ಬಿ.ಸಿ.)

**ಭೂಗೋಳ ವಿಜ್ಞಾನದ ಬೋಧನ ವಿಧಾನಗಳು:** ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪಾತ್ರವಹಿಸುವ ವಿವಿಧ ಮೂಲಭೂತ ಅಂಶಗಳ ಬೆಳಕಿನಲ್ಲಿ ವಿದ್ಯಾರ್ಥಿಗಳ ಸ್ವಭಾವ, ಬೋಧನೆ, ವಿಷಯದ ಸ್ವರೂಪ, ಕಲಿಕೆಗೆ ಸಂಬಂಧಿಸಿದ ಸಮಗ್ರ ಪರಿಸ್ಥಿತಿ ಇವುಗಳನ್ನು ಬಳಸಿಕೊಳ್ಳುವಾಗ ಅನುಸರಿಸುವ ವಿವೇಚನೆಯ ಕ್ರಮಾನುಸರಣೆಯನ್ನು ಬೋಧನ ವಿಧಾನಗಳು ಎನ್ನುವರು. ಭೂಗೋಳ ವಿಜ್ಞಾನದಲ್ಲಿರುವ ವಿಷಯ ಜ್ಞಾನವನ್ನು ವಿವಿಧ ರೀತಿಯ ಕಾರ್ಯವಿಧಾನಗಳಿಂದ, ರೂಢಿಯಲ್ಲಿರುವ ಬೋಧನ ವಿಧಾನಗಳನ್ನು ಬಳಸಿ ವಿದ್ಯಾರ್ಥಿಗಳ ಮುಂದೆ ನಿರೂಪಿಸುವ ತಂತ್ರವಾಗಿರುತ್ತದೆ. ಈ ತಂತ್ರಗಳು ಭೂಗೋಳ ವಿಜ್ಞಾನ ಬೋಧನೆ ಮತ್ತು ಕಲಿಕೆಯ ಸನ್ನಿವೇಶದಲ್ಲಿ ಅಧ್ಯಾಪಕರು ಹಂತಹಂತವಾಗಿ ಕೈಗೊಳ್ಳುವ ಕಾರ್ಯಕ್ರಮವಾಗಿದೆ. ಭೂಗೋಳ ವಿಜ್ಞಾನ ಬೋಧನೆ ಒಂದು ಕಲೆ. ಈ ಕಲೆ ಎಲ್ಲ ಭೂಗೋಳ ವಿಜ್ಞಾನವನ್ನು ಬೋಧಿಸುವ ಶಿಕ್ಷಕರಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಕೆಲವರು ದೈವದತ್ತವಾಗಿ ಹುಟ್ಟಿನಿಂದಲೇ ಪಡೆದಿದ್ದರೆ, ಕೆಲವರು ತರಬೇತಿಯ ಅವಧಿಯಲ್ಲಿ ಪಡೆದಿರುತ್ತಾರೆ. ಆದುದರಿಂದ ಭೂಗೋಳ ವಿಜ್ಞಾನವನ್ನು ಮಕ್ಕಳಿಗೆ ಬೋಧಿಸುವಾಗ ಬೋಧನ ವಿಧಾನ, ವಿಷಯ ಮತ್ತು ವಿದ್ಯಾರ್ಥಿಗಳ ತಿಳುವಳಿಕೆಯ ಮಟ್ಟ ಈ ಮೂರು ಅಂಶಗಳನ್ನು ಪರಿಗಣಿಸಿರಬೇಕು. ಇಂದು ಭೂಗೋಳ ವಿಜ್ಞಾನದ ಪರಿಣಾಮಕಾರಿ ಬೋಧನೆ ಒಂದು ಸವಾಲಾಗಿ ಪರಿಣಮಿಸಿದೆ. ಇಲ್ಲಿ ಬೋಧನೆಯು ನಿಯಮಗಳಿಗನುಗುಣವಾಗಿ ಬೋಧನ ವಿಧಾನಗಳನ್ನು ಅನುಸರಿಸಬೇಕು. ಪರಿಣಾಮಕಾರಿ ಭೂಗೋಳ ವಿಜ್ಞಾನ ಬೋಧನೆಗೆ ವಿಧಾನಗಳು ಸಹಾಯಕವಾಗಿದ್ದು ಕಠಿಣ ವಿಷಯಗಳನ್ನು ಸುಲಭವಾಗಿ ಬೋಧನೆ ಮಾಡಲು ಅಗತ್ಯವಾಗಿದೆ. ಇದಕ್ಕಾಗಿ ಹಲವು ರೀತಿಯ ಬೋಧನ ವಿಧಾನಗಳನ್ನು ಭೂಗೋಳ ವಿಜ್ಞಾನದ ಬೋಧನೆಯಲ್ಲಿ ಬಳಸಬೇಕಾಗಿದೆ.

ಭೂಗೋಳ ವಿಜ್ಞಾನದ ಬೋಧನೆಯಲ್ಲಿ ಎಲ್ಲ ವಿಷಯಗಳಿಗೂ ಒಂದೇ ರೀತಿಯ ವಿಧಾನಗಳನ್ನು ಅಳವಡಿಸಲು ಸಾಧ್ಯವಾಗುವುದಿಲ್ಲ. ಭೂಗೋಳ ವಿಜ್ಞಾನ ಬೋಧನ ವಿಧಾನಗಳು ವಿಷಯಕ್ಕೆ, ಘಟಕದಿಂದ ಘಟಕಕ್ಕೆ, ಶಿಕ್ಷಕನಿಂದ ಶಿಕ್ಷಕನಿಗೆ, ಪರಿಸರದಿಂದ ಪರಿಸರಕ್ಕೆ ಬೇರೆ ಬೇರೆಯಾಗಿರುತ್ತದೆ. ಭೂಗೋಳ ವಿಜ್ಞಾನ ಬೋಧನೆಯಲ್ಲಿ ಹಲವಾರು ವಿಧಾನಗಳಿವೆ.

ಯೋಜನಾ ವಿಧಾನ: ಯಾವುದಾದರೊಂದು ಭೌಗೋಳಿಕ ವಿಷಯವನ್ನು ಸ್ವಾಭಾವಿಕವಾದ ಸನ್ನಿವೇಶಕ್ಕನುಗುಣವಾಗಿ ಯೋಜನಾಬದ್ಧವಾಗಿ ಅಧ್ಯಯನ ಮಾಡುವ ವಿಧಾನವಾಗಿದೆ. ಇದು ಜಾನ್ ಡ್ಯೂಯಿಯ ಮಾಡಿ ಕಲಿ ತತ್ತ್ವಕ್ಕನುಗುಣವಾಗಿದೆ.

ಪ್ರಯೋಗ ಶಾಲಾ ವಿಧಾನ: ಜೇಮ್ಸ್‌ಫೇರ್ ಗ್ರೀವ್ ಪ್ರಕಾರ ಭೂಗೋಳ ವಿಜ್ಞಾನದ ವಿಷಯಗಳು ತಲೆಯಿಂದ ಕಲಿಯುವುದಕ್ಕಿಂತ ಹೆಚ್ಚಾಗಿ ಪಾದಗಳಿಂದ ಕಲಿಯಲ್ಪಡುತ್ತದೆ. ಇದರ ಅರ್ಥವಿಷ್ಟೆ ನೈಜವಾದ ಪರಿಸರದಲ್ಲಿಯೇ ಭೌಗೋಳಿಕ ಪರಿಸ್ಥಿತಿಗಳನ್ನು ನೋಡಿ ತಿಳಿಯುವ ವಿಧಾನವಾಗಿದೆ.

ಪ್ರಯೋಗಶಾಲಾ ವಿಧಾನ: 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಭೂಗೋಳ ವಿಜ್ಞಾನವನ್ನು ಇತರ ವಿಜ್ಞಾನಗಳಂತೆ ಪ್ರಯೋಗಗಳನ್ನು ಕೈಗೊಳ್ಳುವುದರ ಮೂಲಕ ಕಲಿಯಬೇಕಾಗಿದೆ. ಕೆಲವು ಭೌಗೋಳಿಕ ವಿಷಯಗಳಲ್ಲಿ ಮಾತ್ರ ಈ ವಿಧಾನವನ್ನು ಅನುಸರಿಸಬಹುದಾಗಿದೆ.

ವಿವರಣಾತ್ಮಕವಾದ ವಿಧಾನ: ಇದು ಪ್ರತಿಯೊಂದು ಭೌಗೋಳಿಕ ವಿಷಯಗಳನ್ನು ವರ್ಣನೆ ಮಾಡುವುದರ ಮೂಲಕ ಬೋಧಿಸುವ ವಿಧಾನವಾಗಿದೆ. ಅಲ್ಲದೆ ಇದು ಪ್ರಸ್ತುತ ಪ್ರೌಢಶಾಲೆಗಳಲ್ಲಿ ಪ್ರತಿಯೊಬ್ಬ ಶಿಕ್ಷಕನು ಅನುಸರಿಸುತ್ತಿರುವ ಸಾಮಾನ್ಯವಾದ ಭೂಗೋಳ

ವಿಜ್ಞಾನದ ಬೋಧನಾ ವಿಧಾನವಾಗಿದೆ. ಈ ವಿಧಾನಕ್ಕೆ ಹಲವಾರು ರೀತಿಯ ಆಧಾರಾಂಶಗಳು ಅಗತ್ಯವಾಗಿವೆ.

ಪ್ರಾದೇಶಿಕ ವಿಧಾನ: ಇದು ಇಡೀ ಭೂಗೋಳವನ್ನು ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಿಕೊಂಡು ಪ್ರತಿಯೊಂದು ನೈಸರ್ಗಿಕ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಕೂಲಂಕಷವಾಗಿ ಹೋಲಿಸುತ್ತಾ ಬೋಧಿಸುವ ವಿಧಾನ.

ಈ ವಿಧಾನಗಳಲ್ಲದೆ ಪರಿಸರಾತ್ಮಕ ವಿಧಾನ, ಸಮೀಕ್ಷಾ ವಿಧಾನ, ಉಪನ್ಯಾಸ ವಿಧಾನ, ವೀಕ್ಷಣಾ ವಿಧಾನ, ಹೋಲಿಕಾ ವಿಧಾನ, ಚರ್ಚಾ ವಿಧಾನ, ಪ್ರಶ್ನೋತ್ತರ ವಿಧಾನ, ಅನುಗಮನ ಮತ್ತು ನಿರ್ಗಮನ ವಿಧಾನ, ಚಟುವಟಿಕಾ ವಿಧಾನಗಳ ಮೂಲಕವೂ ಸಹ ಭೂಗೋಳ ವಿಜ್ಞಾನವನ್ನು ಬೋಧನೆ ಮಾಡಬಹುದಾಗಿದೆ. ಈ ವಿಧಾನಗಳೆಲ್ಲವೂ ಪರಿಸ್ಥಿತಿ, ವಿಷಯ ಮತ್ತು ಶಿಕ್ಷಕನ ಬೋಧನಾ ಕೌಶಲ್ಯವನ್ನು ಅವಲಂಬಿಸಿದೆ. (ಪಿ.ಎಸ್.ಎಸ್.)

**ಭೂಗೋಳ ವಿಜ್ಞಾನದ ವಿಭಾಗಗಳು:** ಭೂಗೋಳವಿಜ್ಞಾನವನ್ನು ಅಧ್ಯಯನ ದೃಷ್ಟಿಯಿಂದ ಅನೇಕ ಭಾಗಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಪ್ರಾಕೃತಿಕ ಭೂಗೋಳ ವಿಜ್ಞಾನ ಮತ್ತು ಮಾನವ ಭೂಗೋಳವಿಜ್ಞಾನ ಪ್ರಮುಖ ವಿಭಾಗಗಳಾಗಿ ಬೆಳೆದುಬಂದಿವೆ. ಅನೇಕ ಆಧುನಿಕ ಭೂಗೋಳವಿಜ್ಞಾನಿಗಳ ಪ್ರಕಾರ ಈ ರೀತಿಯ ವಿಭಜನೆ ಅಷ್ಟು ಸಮಂಜಸವಲ್ಲ. ಏಕೆಂದರೆ ಇವೆರಡು ವಿಭಾಗಗಳು ಒಂದಕ್ಕೊಂದು ಪೂರಕವಾದವುಗಳಾಗಿವೆ.

ಪ್ರಾಕೃತಿಕ ಭೂಗೋಳವಿಜ್ಞಾನವನ್ನು ಅನೇಕ ಉಪ ವಿಭಾಗಗಳಾಗಿ ವಿಭಜಿಸಿ ಅಧ್ಯಯನ ಮಾಡಲಾಗುತ್ತಿದೆ.

1. ವಾಯುಗುಣವಿಜ್ಞಾನ 2. ಪರಿಸರ ಭೂಗೋಳವಿಜ್ಞಾನ 3. ಭೂಗಣಿತ ವಿಜ್ಞಾನ 4. ಭೂಸಾದೃಶ್ಯ ಅಧ್ಯಯನವಿಜ್ಞಾನ 5. ಸಾಗರವಿಜ್ಞಾನ 6. ಸರೋವರ ವಿಜ್ಞಾನ 7. ಪ್ರಾಚೀನ ಭೂಗೋಳವಿಜ್ಞಾನ 8. ಮಣ್ಣು ವಿಜ್ಞಾನ 9. ಜೀವ ಭೂಗೋಳ ವಿಜ್ಞಾನ.

ಮಾನವ ಭೂಗೋಳವಿಜ್ಞಾನವನ್ನು ಅನೇಕ ಉಪವಿಭಾಗಗಳಾಗಿ ವಿಭಜಿಸಿ ಅಧ್ಯಯನ ಮಾಡಲಾಗುತ್ತಿದೆ.

1. ಆರ್ಥಿಕ ಭೂಗೋಳವಿಜ್ಞಾನ 2. ರಾಜಕೀಯ ಭೂಗೋಳವಿಜ್ಞಾನ 3. ಸಾಮಾಜಿಕ ಭೂಗೋಳವಿಜ್ಞಾನ 4. ನಗರ ಭೂಗೋಳವಿಜ್ಞಾನ 5. ವಸತಿ ಭೂಗೋಳವಿಜ್ಞಾನ 6. ಆನ್ವಯಿಕ ಭೂಗೋಳವಿಜ್ಞಾನ 7. ವರ್ತನಾ ಭೂಗೋಳವಿಜ್ಞಾನ 8. ಜನಸಂಖ್ಯಾ ಭೂಗೋಳವಿಜ್ಞಾನ 9. ಲಿಂಗ ಭೂಗೋಳವಿಜ್ಞಾನ 10. ಐತಿಹಾಸಿಕ ಭೂಗೋಳವಿಜ್ಞಾನ 11. ಪ್ರಾದೇಶಿಕ ಭೂಗೋಳವಿಜ್ಞಾನ 12. ಅಭಿವೃದ್ಧಿ ಭೂಗೋಳವಿಜ್ಞಾನ 13. ಸಾರಿಗೆ ಭೂಗೋಳವಿಜ್ಞಾನ 14. ಸಮರ ತಂತ್ರ ಭೂಗೋಳವಿಜ್ಞಾನ 15. ಪ್ರವಾಸ ಭೂಗೋಳವಿಜ್ಞಾನ 16. ಕೃಷಿ ಭೂಗೋಳವಿಜ್ಞಾನ 17. ವೈದ್ಯಕೀಯ ಭೂಗೋಳವಿಜ್ಞಾನ 18. ಭಾಷಾ ಭೂಗೋಳವಿಜ್ಞಾನ 19. ವಾಣಿಜ್ಯ ಭೂಗೋಳವಿಜ್ಞಾನ 20. ಸಾಂಸ್ಕೃತಿಕ ಭೂಗೋಳವಿಜ್ಞಾನ ಇತ್ಯಾದಿ.

ನಕ್ಷಾವಿಜ್ಞಾನ, ಪ್ರಾಯೋಗಿಕ ಭೂಗೋಳ, ಅಂಕಿಅಂಶಗಳ ನಿರೂಪಣಾ ವಿಧಾನಗಳು, ಪರಿಮಾಣಾತ್ಮಕ ಭೂಗೋಳ, ದೂರಸಂವೇದಿ ವಿಜ್ಞಾನ, ಭೌಗೋಳಿಕ ಮಾಹಿತಿ ವ್ಯವಸ್ಥೆ, ಮೋಜಣಿಕಾರ್ಯ ಇತ್ಯಾದಿಗಳು ಭೂಗೋಳ ವಿಜ್ಞಾನದ ಅಧ್ಯಯನಕ್ಕೆ ಪೂರಕವಾದ ಸೌಲಭ್ಯಗಳನ್ನು ಒದಗಿಸುವ ಸಲಕರಣೆಗಳಾಗಿ ಬೆಳೆದಿವೆ. (ಕೆ.ಎನ್.ಯು.)

**ಭೂಗೋಳ ವಿಜ್ಞಾನದಲ್ಲಿ ಸಿದ್ಧಾಂತಗಳು:** ಸಿದ್ಧಾಂತಗಳು ವಿಷಯಗಳನ್ನು ಸರಳೀಕರಿಸಿ ವ್ಯವಸ್ಥಿತವಾಗಿ ವಿವರಿಸಲು ಸಹಾಯಕವಾಗುತ್ತವೆ. ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳು ಸಿದ್ಧಾಂತದಲ್ಲಿ ಅಡಕವಾಗಿದ್ದು, ಇವುಗಳು ಮಾನವನ ಕಲ್ಪನೆಗಳಾಗಿದ್ದು ಇದರ ಮೂಲಕ ನೈಜ ಪರಿಸ್ಥಿತಿಗಳನ್ನು ವಿವರಿಸಲು ಸಹಾಯವಾಗುವುದು. ಎಲ್ಲ ಸಿದ್ಧಾಂತಗಳು ಮೂರು ಅಂಶಗಳನ್ನು ಒಳಗೊಂಡಿರುತ್ತವೆ. ಇವುಗಳೆಂದರೆ ಊಹೆಗಳು, ನೈಜ ಪರಿಸ್ಥಿತಿಯನ್ನು ವ್ಯಾಖ್ಯಾನಿಸುವ ಸೈದ್ಧಾಂತಿಕ ಪದಗಳು ಮತ್ತು ತಾರ್ಕಿಕವಾಗಿ ನಿರೂಪಿಸಬೇಕಾದ ಪ್ರಮೇಯಗಳು. ಸಿದ್ಧಾಂತಗಳು ಯಾವ ಸನ್ನಿವೇಶ ಹಾಗೂ ಹಿನ್ನೆಲೆಗಳಲ್ಲಿ ಅನ್ವಯಿಸುತ್ತವೆ ಎಂಬುದರ ಪೂರ್ಣ ಮಾಹಿತಿಗಳನ್ನು ಒಳಗೊಂಡಿರಬೇಕಾದ ಅಗತ್ಯವಿದೆ. ಸಿದ್ಧಾಂತಗಳನ್ನು ಆಧರಿಸಿ ಮುಂದಿನ ಪರಿಸ್ಥಿತಿಯನ್ನು ಊಹಿಸಲು ಸಾಧ್ಯವಾಗುವುದು. ಅವುಗಳು ಹಲವಾರು ನಿಯಮ ಅಥವಾ ಸೂತ್ರಗಳನ್ನು ಹೊಂದಿರುತ್ತವೆ. ಪರಸ್ಪರ ಪೂರಕವಾದ ಹಲವಾರು ಹೇಳಿಕೆಗಳಿಂದ ನೈಜ ಪರಿಸ್ಥಿತಿಯ ಪ್ರಕ್ರಿಯೆಗಳನ್ನು ವಿವರಿಸಲಾಗುವುದು.

ಭೂಗೋಳ ವಿಜ್ಞಾನದಲ್ಲಿ ಸಿದ್ಧಾಂತಗಳ ಪ್ರತಿಪಾದನೆ ಇತ್ತೀಚಿನ ಪ್ರಕ್ರಿಯೆಯಾಗಿದೆ. ಸೈದ್ಧಾಂತಿಕ ವಿಧಾನಗಳಿಗಿಂತ ವಿವರಣಾತ್ಮಕ ವಿಧಾನಕ್ಕೆ ಭೂಗೋಳ ವಿಜ್ಞಾನದಲ್ಲಿ ಪ್ರಾಧಾನ್ಯತೆ ನೀಡಲಾಗಿದೆ. ಇದಕ್ಕೆ ಕಾರಣ ಭೂಗೋಳ ವಿಜ್ಞಾನದ ಅಧ್ಯಯನವಸ್ತುವಾದ ಭೂಮೇಲ್ಮೈ ಅತಿ ಹೆಚ್ಚು ವೈವಿಧ್ಯತೆಯಿಂದ ಕೂಡಿರುವುದು. ಇದರಿಂದ ಯಾವುದಾದರೂ ಒಂದು ಪ್ರದೇಶಕ್ಕೆ ಅನ್ವಯಿಸುವಂತೆ ಪ್ರತಿಪಾದಿಸಿದ ಸಿದ್ಧಾಂತಗಳು ಮತ್ತೊಂದು ಪ್ರದೇಶದಲ್ಲಿ ಅನ್ವಯವಾಗದೆ ಹೋಗಬಹುದು.

ಎಲ್ಲ ವಿಜ್ಞಾನಗಳ ಗುರಿ ಸಿದ್ಧಾಂತಗಳನ್ನು ಪ್ರತಿಪಾದಿಸಿ ನೈಜ ಪರಿಸ್ಥಿತಿಗಳನ್ನು ಸರಳವಾಗಿ ವಿವರಿಸಿ, ಮುಂದಿನ ಅಭಿವೃದ್ಧಿಗಳ ಬಗ್ಗೆ ಮುನ್ಸೂಚನೆ ನೀಡುವುದಾಗಿದೆ. ಇದಕ್ಕೆ ಭೂಗೋಳ ವಿಜ್ಞಾನವೂ ಸಹ ಹೊರತಾಗಿಲ್ಲ. ಭೂಗೋಳವಿಜ್ಞಾನದಲ್ಲಿ ಕೆಲವು ಮಿತಿಗಳಿದ್ದರೂ ಹಲವಾರು ಸಿದ್ಧಾಂತಗಳು ಪ್ರತಿಪಾದನೆಗೊಂಡಿವೆ. ಕ್ರಿಸ್ಟಾಲರನ ಕೇಂದ್ರಸ್ಥಳ ಸಿದ್ಧಾಂತ ಇವುಗಳಲ್ಲಿ ಅತಿಮುಖ್ಯವಾದುದು. ಹ್ಯಾಗರ್‌ಸ್ಟ್ರಾಂಡ್‌ರವರ ಪ್ರಸರಣ ಸಿದ್ಧಾಂತ ಸಹ ಇತ್ತೀಚಿನ ಅತಿ ಮುಖ್ಯ ಸಿದ್ಧಾಂತವಾಗಿದೆ. (ಆರ್.ಎನ್.)

**ಭೂಗೋಳವಿಜ್ಞಾನದ ಕ್ರಿಯಾಮಾಲೆಗಳು:** ಅಮೆರಿಕದ ಪ್ರಸಿದ್ಧ ಭೌತವಿಜ್ಞಾನಿ ಥಾಮಸ್ ಎಸ್. ಕೂನ್ಸ್ 1962ರಲ್ಲಿ ವಿಜ್ಞಾನಿಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕುರಿತಂತೆ ಪ್ರಕಟಿಸಿದ ಅಭಿಪ್ರಾಯವನ್ನು ಕ್ರಿಯಾಮಾಲೆ ಪರಿಭಾವನೆ (ಪ್ಯಾರಡೈಮ್) ಎಂದು ಕರೆಯಲಾಗಿದೆ. ಕೂನ್ಸ್ ಇದನ್ನು ವಿಜ್ಞಾನದ ಕ್ರಿಯಾಮಾಲೆಯೆಂದು ಕರೆದಿದ್ದಾನೆ. ಇವನ ಹೇಳಿಕೆಯಂತೆ ಯಾವುದೇ ವಿಜ್ಞಾನದ ಬೆಳವಣಿಗೆ ನಿರಂತರ ನಿಯಂತ್ರಿತ ಕ್ರಿಯೆಯಲ್ಲ; ಬದಲಾಗಿ ಪ್ರತಿಯೊಂದು ತಲೆಮಾರಿನ ವಿಜ್ಞಾನಿಗಳು ಹಿಂದಿನ ತಲೆಮಾರಿನ ವಿಜ್ಞಾನಿಗಳ ಶೋಧನೆಯ ಫಲಿತಾಂಶವನ್ನು ಆಧರಿಸಿ ಮುಂದುವರಿಸಿದ ಸಂಶೋಧನ ಕ್ರಿಯೆಯಾಗಿದೆ. ಇದರಿಂದ ಯಾವುದೇ ವಿಜ್ಞಾನದ ಬೆಳವಣಿಗೆಯ ಇತಿಹಾಸದಲ್ಲಿ ಏರಿಳಿತಗಳನ್ನು ಕಾಣಬಹುದು. ಅವುಗಳ ಬೆಳವಣಿಗೆ ಕೆಲವು ಹಂತಗಳಲ್ಲಿ ಶೀಘ್ರವಾಗಿದ್ದರೆ, ಕೆಲವು ಹಂತಗಳಲ್ಲಿ ಕುಂಠಿತವಾಗಿರುತ್ತದೆ.

ಎಲ್ಲ ವಿಜ್ಞಾನಿಗಳು ಆಯಾ ಅವಧಿಯಲ್ಲಿನ ಅದರ ಕ್ಷೇತ್ರದ ವ್ಯಾಪ್ತಿಯ ಕೆಲವು ಸಮಸ್ಯೆಗಳನ್ನು ಬಿಡಿಸುವುದರಲ್ಲಿ, ಅವುಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಸಂಶೋಧನೆಯಲ್ಲಿ ತೊಡಗಿರುತ್ತಾರೆ. ಈ ಸಂಶೋಧನೆಗಳು ನಿರ್ದಿಷ್ಟ ಮಾರ್ಗದಲ್ಲಿ ಮುಂದುವರೆದಿರುತ್ತವೆ. ನಿರ್ದಿಷ್ಟ ನಮೂನೆ ಅಥವಾ ಮಾದರಿಗಳನ್ನು ಒಳಗೊಂಡಿರುತ್ತವೆ. ಇವುಗಳು ಸಂಶೋಧನೆಯ ಮಾರ್ಗ ಮತ್ತು ವಿಧಾನಗಳನ್ನು ನಿರ್ಧರಿಸುತ್ತವೆ. ಆಯಾ ಅವಧಿಯಲ್ಲಿ ಸಂಶೋಧನೆಗಳಲ್ಲಿ ಅನುಸರಿಸುವ ಈ ಮಾರ್ಗದರ್ಶಿ ರೂಪಕಗಳನ್ನೇ ಕೂನ್ಸ್ ಕ್ರಿಯಾ ಮಾಲೆಗಳೆಂದು ಕರೆದಿರುವನು. ಕೂನ್ಸ್ ವಿವರಿಸಿರುವಂತೆ ಕ್ರಿಯಾ ಮಾಲೆಗಳು ವಿಶ್ವವ್ಯಾಪಿಯಾಗಿ ಪರಿಗಣಿತವಾದ ಸಮಸ್ಯೆಗಳು ಹಾಗೂ ಆಚರಣಾ ಸಮೂಹಗಳಿಗೆ ಪರಿಹಾರಗಳಾಗಿವೆ. ಹ್ಯಾಗೆಟ್ ವಿವರಿಸಿರುವಂತೆ ಕ್ರಿಯಾಮಾಲೆಗಳು ಒಂದು ರೀತಿಯ ಉತ್ಕೃಷ್ಟ ನಮೂನೆಗಳು. ಇವುಗಳು ಆಯಾ ವಿಜ್ಞಾನ ವಿಷಯಗಳ ಸಂಶೋಧನಕಾರರಿಗೆ ಯಾವ ಸಮಸ್ಯೆಗಳನ್ನು ಕುರಿತು ಶೋಧಿಸಬೇಕು, ಇದಕ್ಕಾಗಿ ಯಾವ ಮಾರ್ಗವನ್ನು ಅನುಸರಿಸಬೇಕು ಎಂಬುದನ್ನು ತಿಳಿಸುವ ಮಾರ್ಗಸೂಚಿಯಾಗಿರುವುವು. ಹೀಗೆ ಕ್ರಿಯಾಮಾಲೆ ಸಂಶೋಧನೆಗಳನ್ನು ನಿರ್ದಿಷ್ಟ ಮಾರ್ಗ ಹಾಗೂ ವಿಧಾನದಲ್ಲಿ ಮುಂದುವರಿಸುವುದು. ಉದಾ: ಯಾವುದಾದರೊಂದು ಭೌಗೋಳಿಕ ಸಂಶೋಧನೆಯನ್ನು ಕುರಿತಂತೆ ಜಿಜ್ಞಾಸೆ ಉಂಟಾದಲ್ಲಿ, ಕೆಲವು ಭೂಗೋಳಶಾಸ್ತ್ರಜ್ಞರು ಚರ್ಚಿಸಿ, ಸಂಶೋಧನ ವಿಷಯಗಳಲ್ಲಿ ಯಾವುದು ಭೌಗೋಳಿಕ ಸಂಶೋಧನೆ? ಅದನ್ನು ಸಂಶೋಧಿಸುವ ವಿಧಾನ ಯಾವುದು? ಎಂಬ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಲು ಹಿಂದಿನ ಸಂಶೋಧನೆಗಳು, ಅವುಗಳ ಕ್ರಿಯಾಮಾಲೆಯ ನೆರವನ್ನು ಪಡೆಯುವುದು ಅಗತ್ಯವಾಗುವುದು. ಹೀಗೆ ಇತರ ವಿಜ್ಞಾನಗಳಂತೆಯೇ ಕ್ರಿಯಾ ಮಾಲೆಯು ಆಯಾ ಕಾಲದ ಭೂಗೋಳವಿಜ್ಞಾನದ ಸಂಶೋಧನೆಯ ವಸ್ತು, ಮಾರ್ಗ ಹಾಗೂ ಅಧ್ಯಯನ ವಿಧಾನಗಳನ್ನು ನಿರ್ದೇಶಿಸುವುದು.

ಕ್ರಿಯಾ ಮಾಲೆಯ ಹಂತಗಳು: ಕೂನ್ಸ್ ಪ್ರತಿಪಾದಿಸಿರುವಂತೆ ವಿಜ್ಞಾನದ ಬೆಳವಣಿಗೆ ಹಲವಾರು ಹಂತಗಳಲ್ಲಿ ಮುಂದುವರಿಯುವುದು. ಕೂನ್ಸ್‌ರವರ ಕ್ರಿಯಾಮಾಲೆಯ ಹಂತಗಳನ್ನು ಹೆನ್ರಿಕ್‌ಸೆನ್ 1973ರಲ್ಲಿ ನೀಡಿರುವ ಆಲೇಖದ ಮೂಲಕ ವಿವರಿಸಿದ. ಇದರ ಹಂತಗಳನ್ನು ಈ ಕೆಳಕಂಡಂತೆ ವಿವರಿಸಬಹುದು.

1. ಕ್ರಿಯಾಮಾಲೆ ಪೂರ್ವ ಹಂತ: ಎಲ್ಲ ವಿಜ್ಞಾನಗಳು ಜ್ಞಾನದ ಒಂದು ಭಾಗವಾಗಿವೆ. ಯಾವುದೇ ವಿಜ್ಞಾನ ಆರಂಭದಲ್ಲಿ ನಿಖರವಾದ ಅಧ್ಯಯನ ವಸ್ತು ಹಾಗೂ ಅಧ್ಯಯನ ವಿಧಾನವನ್ನು ಒಳಗೊಂಡಿರುವುದಿಲ್ಲ. ಇದರಿಂದ ಆರಂಭದಲ್ಲಿ ಅದರ ವ್ಯವಸ್ಥಿತವಾದ ಅಧ್ಯಯನ ಕಂಡುಬರುವುದಿಲ್ಲ. ಇದನ್ನೇ ಕೂನ್ಸ್ ಕ್ರಿಯಾಮಾಲೆ ಪೂರ್ವ ಹಂತ ಎಂದು ಕರೆದಿರುವನು. ಈ ಹಂತದಲ್ಲಿ ಕೆಲವು ಪ್ರಮುಖ ವಿಜ್ಞಾನಿಗಳನ್ನು ಆಧರಿಸಿ ಕೆಲವು ಪಂಥಗಳು ಅಭಿವೃದ್ಧಿ ಹೊಂದುತ್ತವೆ. ಈ ಹಂತದಲ್ಲಿ ವಿಶಿಷ್ಟತೆಗಳು ಕಂಡುಬರುವುದಿಲ್ಲ. ಬದಲಾಗಿ ಪ್ರತಿಯೊಂದು ಪಂಥವೂ ತಾನೇ ಹೆಚ್ಚು ವೈಜ್ಞಾನಿಕವೆಂದು ವಾದಿಸುವುದು ಕಂಡುಬರುತ್ತದೆ.

2. ವೃತ್ತಿ ಪರತೆಯ ಹಂತ: ಒಂದು ವಿಜ್ಞಾನ ಇತರ ವಿಜ್ಞಾನಗಳಿಂದ ಬೇರ್ಪಟ್ಟು ಪ್ರತ್ಯೇಕಗೊಂಡು, ವಿಜ್ಞಾನಿಗಳು ತಮ್ಮ ಕ್ಷೇತ್ರವನ್ನು ಅಭ್ಯಸಿಸಲು ತೊಡಗುವ ಹಂತವನ್ನು ವೃತ್ತಿ ಪರತೆಯ ಹಂತವೆಂದು ಕರೆಯುವರು. ಈ ವಿಜ್ಞಾನದ ಅಧ್ಯಯನ ವಸ್ತು ಹಾಗೂ ಅಧ್ಯಯನ ವಿಧಾನಗಳು ಸ್ಪಷ್ಟಗೊಳಿಸಲ್ಪಡುವುದರಿಂದ ಇದು ಇತರ ವಿಷಯಗಳಿಂದ

ಪ್ರತ್ಯೇಕವಾಗಲು ಕಾರಣವಾಗುವುದು. ಕ್ರಿಯಾಮಾಲೆ ಪೂರ್ವ ಹಂತದಲ್ಲಿನ ಅನೇಕ ಪಂಥಗಳಲ್ಲಿ ಯಾವುದಾದರೊಂದು ಪಂಥ ಹೆಚ್ಚು ಮನ್ನಣೆಯನ್ನು ಪಡೆಯುತ್ತದೆ. ಆ ಪಂಥ ಅಂದಿನ ಅಧ್ಯಯನದ ಸಮಸ್ಯೆಗಳಿಗೆ ಉತ್ತರವನ್ನು ನೀಡಲು ಸಾಧ್ಯವಾಗುತ್ತದೆ. ಆ ಪಂಥ ಆಯಾ ವಿಜ್ಞಾನದ ಅಧ್ಯಯನ ಮತ್ತು ವಿಶ್ಲೇಷಣಾ ವಿಧಾನಗಳನ್ನು ರೂಪಿಸುವುದು. ಇದರಿಂದ ಸಂಶೋಧಕರು ಆ ಮಾರ್ಗವನ್ನು ಅನುಸರಿಸಿ ಅಧ್ಯಯನವನ್ನು ಮುಂದುವರಿಸುವರು. ಹಿಂದಿನ ಅಧ್ಯಯನಗಳನ್ನು ಹೊಸ ಕ್ರಿಯಾಮಾಲೆಗೆ ಅನ್ವಯಿಸಿ, ವಿಶ್ಲೇಷಿಸಿ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಕೂನ್ಹ್ ತಿಳಿಸಿರುವಂತೆ ಗಣಿತವಿಜ್ಞಾನ ಮತ್ತು ಖಗೋಳವಿಜ್ಞಾನಗಳು ಈ ವೃತ್ತಿ ಪರತೆಯನ್ನು ಇತಿಹಾಸ ಪೂರ್ವದ ಅವಧಿಯಲ್ಲಿಯೇ ತಲುಪಿವೆ; ಆದರೆ ಅನೇಕ ಸಾಮಾಜಿಕ ವಿಜ್ಞಾನಗಳು ಇಂದು ವೃತ್ತಿ ಪರತೆಯ ಹಂತವನ್ನು ತಲುಪಿವೆ.

3. ಮೊದಲ ಕ್ರಿಯಾಮಾಲೆಯ ಹಂತ: ವೃತ್ತಿ ಪರತೆಯ ಹಂತದಲ್ಲಿ ಯಾವುದಾದರೊಂದು ಪಂಥ ಹೆಚ್ಚು ಪ್ರಾಧಾನ್ಯತೆ ಹಾಗೂ ಹೆಚ್ಚು ಅಂಗೀಕಾರವನ್ನು ಪಡೆದುಕೊಳ್ಳುವುದು. ಇದರಿಂದ ಇತರ ವಾದಗಳು ಕ್ಷೀಣವಾಗುತ್ತವೆ. ಪ್ರಾಧಾನ್ಯತೆ ಪಡೆದ ಪಂಥದವಾದ ಸರಣಿ ಕ್ರಿಯಾಮಾಲೆಯೆನಿಸುವುದು. ಈ ಹಂತದಲ್ಲಿ ಎಲ್ಲಾ ಸಂಶೋಧನೆಗಳೂ ಪ್ರಚಲಿತವಿರುವ ಈ ಕ್ರಿಯಾಮಾಲೆಗೆ ಅನುಗುಣವಾಗಿರುತ್ತವೆ. ಇದನ್ನೇ ಸಾಮಾನ್ಯ ವಿಜ್ಞಾನ ಎಂದು ಕರೆಯಲಾಗುವುದು. ಈ ಹಂತವನ್ನೇ ಗೊಂದಲ ನಿವಾರಣಾ ಹಂತವೆಂದೂ ಕೂನ್ಹ್ ಕರೆದಿದ್ದಾನೆ. ಇದನ್ನು ಪದಬಂಧಕ್ಕೆ ಹೋಲಿಸಬಹುದು. ಪ್ರತಿಯೊಂದು ಸಂಶೋಧನೆಯ ಫಲಿತಾಂಶವನ್ನು ಕ್ರಿಯಾಮಾಲೆಯೊಡನೆ ಹೋಲಿಸಲಾಗುವುದು. ಇದರಿಂದ ಸಂಶೊಧಕ ಸ್ವತಂತ್ರವಾಗಿ ಆಲೋಚಿಸದೆ, ಕ್ರಿಯಾಮಾಲೆಗೆ ಅನುಗುಣವಾಗಿ ಅಂಕಿ–ಅಂಶ ಅಥವಾ ವಿಷಯಗಳನ್ನು ಸಂಗ್ರಹಿಸಿ, ನಿರೀಕ್ಷಿತ ಫಲಿತಾಂಶವನ್ನು ಪಡೆದುಕೊಳ್ಳುತ್ತಾನೆ. ಕ್ರಿಯಾಮಾಲೆಗೆ ವಿರುದ್ಧವಾದ ಫಲಿತಾಂಶಕ್ಕೆ ಶೈಕ್ಷಣಿಕವಾಗಿ ಅಪಾರ ವಿರೋಧವಿರುವುದು ಇದಕ್ಕೆ ಕಾರಣ. ಒಬ್ಬ ವ್ಯಕ್ತಿ ಸ್ವತಂತ್ರ ವೈಚಾರಿಕ ಮನೋಭಾವನೆಯಿಂದ ಕ್ರಿಯಾಮಾಲೆಗೆ ವಿರುದ್ಧವಾದ ಫಲಿತಾಂಶ ಅಥವಾ ವಾದವನ್ನು ಮಂಡಿಸಿದರೆ ಅದನ್ನು ಅವೈಜ್ಞಾನಿಕವೆಂದು ತಿರಸ್ಕರಿಸಲಾಗುವುದು. ಇದರಿಂದಾಗಿ ವಿಜ್ಞಾನದ ಬೆಳವಣಿಗೆ ಯಾವುದೇ ಏರಿಳಿತಗಳಿಲ್ಲದೆ, ಒಂದೇ ರೀತಿಯಲ್ಲಿ ಮುಂದುವರಿಯುವುದು. ಈ ಏಕತಾನತೆಯು ರೇಖಾಚಿತ್ರದಲ್ಲಿ ಪ್ರಸ್ಥಭೂಮಿಯಂತೆ ಮಟ್ಟಸವಾಗಿರುತ್ತದೆ.

4. ಬಿಕ್ಕಟ್ಟಿನ ಹಂತ: ವೈಜ್ಞಾನಿಕ ಅಭಿವೃದ್ಧಿ ಸಾಮಾನ್ಯ ವಿಜ್ಞಾನದ ಹಂತದ ಅನಂತರ ಬಿಕ್ಕಟ್ಟಿನ ಹಂತವನ್ನು ತಲುಪುತ್ತದೆ. ಮೊದಲ ಕ್ರಿಯಾಮಾಲೆ ಅಥವಾ ಸಾಮಾನ್ಯ ವೈಜ್ಞಾನಿಕ ಹಂತದಲ್ಲಿ ಹಲವಾರು ಸಂಶೋಧನೆಗಳಿಂದ ಹಲವಾರು ಬಗೆಯ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಇವುಗಳೆಲ್ಲವನ್ನು ಅಂದಿನ ಕ್ರಿಯಾಮಾಲೆಗೆ ಅನುಗುಣವಾದ ವಿವರಣೆಗಳಿಂದ ಸಮಸ್ಯೆಗಳನ್ನು ಪೂರ್ಣವಾಗಿ ಬಗೆಹರಿಸಲು ಸಾಧ್ಯವಾಗದು. ಹಲವಾರು ಸಂಶೋಧನೆಗಳಿಂದ ಅಸ್ತಿತ್ವದಲ್ಲಿರುವ ಸಿದ್ಧಾಂತ ಹಾಗೂ ಕ್ರಿಯಾಮಾಲೆಗೆ ವಿರುದ್ಧವಾದ ಫಲಿತಾಂಶ ಬರಬಹುದು ಅಥವಾ ಹೊಸ ಸಿದ್ಧಾಂತವೇ ಪ್ರತಿಪಾದಿತವಾಗಬಹುದು. ಆ ಸಿದ್ಧಾಂತ ಪ್ರಸ್ತುತವಿರುವ ಕ್ರಿಯಾಮಾಲೆಗೆ ವಿರುದ್ಧವಾಗಿರಬಹುದು. ಈ ಜಿಜ್ಞಾಸೆಯ ಅವಧಿಯನ್ನೇ ಬಿಕ್ಕಟ್ಟಿನ ಹಂತವೆಂದು ಕೂನ್ಹ್ ಪರಿಗಣಿಸಿರುವನು.

ಬಿಕ್ಕಟ್ಟಿನ ಹಂತದಲ್ಲಿ ಈ ಹಿಂದೆ ವಿಶ್ಲೇಷಿಸಿದ ವಿಷಯ ಅಂಕಿ–ಅಂಶಗಳನ್ನು ಪುನರಾವಲೋಕನ ಮಾಡಲಾಗುವುದು. ಹಿಂದಿನ ಕ್ರಿಯಾಮಾಲೆಯ ನೆರಳನ್ನು ಬಿಟ್ಟು ಸ್ವತಂತ್ರವಾಗಿ ವಿಶ್ಲೇಷಿಸಲಾಗುವುದು. ಇದರಿಂದ ಆ ವಿಜ್ಞಾನದ ತಾತ್ವಿಕತೆ ಹಾಗೂ ಅಧ್ಯಯನ ವಿಧಾನಗಳನ್ನು ಕುರಿತಂತೆ ಚರ್ಚೆಗಳು ನಡೆಯುತ್ತವೆ. ಹಿಂದಿನ ಕ್ರಿಯಾಮಾಲೆಯಿಂದಲೇ ನಿರ್ಮಿತವಾದ ಹೊಸ ಸಮಸ್ಯೆಗೆ ಉತ್ತರವನ್ನು ಹುಡುಕುವುದಾದರೆ ಅದು ಅಸ್ತಿತ್ವದಲ್ಲಿ ಉಳಿಯುತ್ತದೆ. ಇಲ್ಲದಿದ್ದಲ್ಲಿ ಹಿಂದಿನ ಕ್ರಿಯಾಮಾಲೆಗೆ ಬದಲಾಗಿ ಹೊಸ ಕ್ರಿಯಾ ಮಾಲೆ ಅಸ್ತಿತ್ವಕ್ಕೆ ಬರುತ್ತದೆ. ಅದು ಸಂಶೋಧನೆಗಳನ್ನು ಆಕರ್ಷಿಸುವುದು. ಈ ರೀತಿಯ ಚರ್ಚೆಗಳಿಂದ ಯಾವುದಾದರೊಂದು ಹೊಸ ಕ್ರಿಯಾಮಾಲೆ ರೂಪುಗೊಳ್ಳುವುದು.

5. ಕ್ರಾಂತಿಕಾರಿ ಹಂತ: ಹೊಸ ಕ್ರಿಯಾಮಾಲೆ ಹಿಂದಿನ ಕ್ರಿಯಾಮಾಲೆಯಲ್ಲಿ ಬಗೆಹರಿಸಲಾಗದ ಹಲವು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿರುವುದರಿಂದ, ಅದು ಹೆಚ್ಚು ಮನ್ನಣೆಗಳಿಸುತ್ತದೆ. ಅನಂತರದ ಸಂಶೋಧನೆಗಳು ಹೊಸ ಕ್ರಿಯಾಮಾಲೆಗೆ ಅನುಗುಣವಾಗಿ ಮುಂದುವರಿಯುತ್ತವೆ. ಇದರಿಂದ ಈ ವಿಜ್ಞಾನ ಹೊಸ ಕ್ರಿಯಾಮಾಲೆಯ ಮಾರ್ಗದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಲು ಸಾಧ್ಯವಾಗುವುದು. ವಿಜ್ಞಾನಿಯ ಅನ್ವೇಷಣೆಗೆ ಹೊಸದಿಗಂತ ಗೋಚರಿಸುತ್ತದೆ. ಹೊಸ ಕ್ರಿಯಾಮಾಲೆ ತರುಣ ಪೀಳಿಗೆಯ ಸಂಶೋಧಕರನ್ನು ಹೆಚ್ಚು ಆಕರ್ಷಿಸುವುದರಿಂದ ಅದು ಕ್ರಾಂತಿಕಾರಕವಾಗಿರುತ್ತದೆ. ಇದರಿಂದ ಹಿಂದಿನ ಕ್ರಿಯಾಮಾಲೆಗೆ ಅನುಗುಣವಾಗಿರುವ ಹಿರಿಯ ತಲೆಮಾರಿನ ವಿಜ್ಞಾನಿಗಳು ಹಾಗೂ ಅನಂತರದ ಕ್ರಿಯಾಮಾಲೆಯ ತರುಣ ವಿಜ್ಞಾನಿಗಳ ನಡುವೆ ಸಂಘರ್ಷವಿರುವುದು. ಆದರೆ ಅಂತಿಮವಾಗಿ ಹೊಸ ಕ್ರಿಯಾಮಾಲೆ ಹಾಗೂ ಅದನ್ನು ಅನುಸರಿಸಿದ ಯುವ ಪೀಳಿಗೆಯ ಸಂಶೋಧಕರ ವಾದ ಹೆಚ್ಚು ಮನ್ನಣೆ ಗಳಿಸುವುದು ಸಾಮಾನ್ಯ.

ಹೊಸ ಕ್ರಿಯಾ ಮಾಲೆ ಹಳೆಯ ಕ್ರಿಯಾಮಾಲೆಯಡಿಯಲ್ಲಿ ಬಗೆಹರಿಸಲಾಗದ ಸಮಸ್ಯೆಗೆ ಉತ್ತರ ನೀಡಬಹುದು. ಆದರೆ ಕೆಲವು ಸಮಸ್ಯೆಗಳು ಮೊದಲು ಸುಲಭವಾಗಿ ಪರಿಹಾರ ಕಂಡುಕೊಳ್ಳುವಂತಹವುಗಳಿಗೆ ಹೊಸ ಕ್ರಿಯಾಮಾಲೆಯಲ್ಲಿ ಉತ್ತರಿಸಲು ಕಠಿಣವಾಗಬಹುದು. ಇದರಿಂದಾಗಿ ಹೊಸ ಕ್ರಿಯಾಮಾಲೆ, ಹಳೆಯ ಕ್ರಿಯಾಮಾಲೆಯ ಜೊತೆ ಜೊತೆಯಲ್ಲಿಯೇ ಮುನ್ನಡೆಯಬಹುದು. ಆದರೆ ಸಾಮಾನ್ಯವಾಗಿ ಹೊಸ ಕ್ರಿಯಾ ಮಾಲೆ ಸರಳತೆ ಹಾಗೂ ಕ್ರಾಂತಿಕಾರಕವಾಗಿದ್ದು ಹಿಂದಿನ ಸಮಸ್ಯೆಗಳಿಗೆ ಹೊಸ ಬೆಳಕು ಚೆಲ್ಲಬಹುದು. ಇದರಿಂದ ಅದು ಹೆಚ್ಚಿನ ಮನ್ನಣೆಯನ್ನು ಪಡೆಯುವುದು. ಇದು ಎರಡನೆಯ ಕ್ರಿಯಾಮಾಲೆಯಾಗಿ ಸಂಶೋಧನೆಗಳನ್ನು ನಿರ್ದಿಷ್ಟ ಮಾರ್ಗದಲ್ಲಿ ಮುನ್ನಡೆಸುತ್ತದೆ.

ಮೇಲೆ ವಿವರಿಸಿದಂತೆ ಕೂನ್ಹ್ ವೈಜ್ಞಾನಿಕ ತತ್ವಶಾಸ್ತ್ರದ ಅಭಿವೃದ್ಧಿಗೆ ಸಂಬಂಧಿಸಿದ ಕ್ರಿಯಾಮಾಲೆಯ ವಿವರಣೆಯನ್ನು ನೀಡಿದ. ಇದು ನಿರಂತರ ಬದಲಾವಣೆಯನ್ನು ಕಾಣುವ ವಿಜ್ಞಾನದ ಅಭಿವೃದ್ಧಿಯನ್ನು ತಿಳಿಯಲು ಸಹಾಯಕವಾಗಿ ಪರಿಣಮಿಸಿತು. ಈ ವಾದವನ್ನು ಕೂನ್ಹ್ ಭೌತವಿಜ್ಞಾನದ ಇತಿಹಾಸವನ್ನು ವಿವರಿಸಲು ಪ್ರತಿಪಾದಿಸಿದ. ಯಾವುದೇ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗೆ ನೋಂದಾಯಿತರಾಗುವ ವಿದ್ಯಾರ್ಥಿಗಳ ಸಂಖ್ಯೆ ಆ ವಿಷಯದ ಸೈದ್ಧಾಂತಿಕ ಅಭಿವೃದ್ಧಿಯ ಮಟ್ಟಕ್ಕೆ ಅನುಗುಣವಾಗಿರುತ್ತದೆ. ಯಾವ ವಿಷಯಗಳು ಸರಳೀಕೃತ ಹಾಗೂ ಜನಪ್ರಿಯ ಸಿದ್ಧಾಂತಗಳನ್ನು ನೀಡುತ್ತವೆಯೋ ಅವುಗಳು ಹೆಚ್ಚು ಸಂಶೋಧಕರನ್ನು ಆಕರ್ಷಿಸುವುವೆಂದು ಕೂನ್ಹ್ ವಿವರಿಸಿದ. ಈ ಕ್ರಿಯಾಮಾಲೆಯ ಪರಿಭಾವನೆಯನ್ನು ಮಾನವ ಭೂಗೋಳವಿಜ್ಞಾನದ ವಿಕಾಸಕ್ಕೆ ಅನ್ವಯಿಸಿ, ವಿಶ್ಲೇಷಿಸಬಹುದಾಗಿದೆ.

ಭೂಗೋಳವಿಜ್ಞಾನದಲ್ಲಿ ನಿರಂತರ ಬದಲಾಗುತ್ತಿರುವ ಕ್ರಿಯಾಮಾಲೆಗಳು: ಮೇಲಿನ ಕೂನ್ಹ್‌ರವರ ಕ್ರಿಯಾಮಾಲೆಯ ಹಂತಗಳಿಗೆ ಭೂಗೋಳವಿಜ್ಞಾನವನ್ನು ವಿಶೇಷವಾಗಿ ಮಾನವ ಭೂಗೋಳವಿಜ್ಞಾನವನ್ನು ಅಳವಡಿಸಿದಾಗ ಇದರ ಬೆಳವಣಿಗೆಯ ಸ್ಪಷ್ಟ ಚಿತ್ರವನ್ನು ಪಡೆಯಬಹುದು. ಇದರಂತೆ ಡಾರ್ವಿನ್ನನ ಜೀವ ವಿಕಾಸವಾದದ ಪ್ರಕಟಣೆಯವರೆಗೂ ಭೂಗೋಳವಿಜ್ಞಾನ ಕ್ರಿಯಾ ಮಾಲೆಯ ಪೂರ್ವ ಹಂತದಲ್ಲಿದ್ದಿತು. ಇದಕ್ಕಿಂತ ಮೊದಲು ಇಮ್ಯಾನ್ಯುಯಲ್ ಕಾಂಟ್ ಭೂಗೋಳವಿಜ್ಞಾನದ ಅಧ್ಯಯನ ವಸ್ತುವನ್ನು ಇತರ ವಿಜ್ಞಾನಗಳಿಂದ ಬೇರ್ಪಡಿಸಿ, ಇದನ್ನು ಸ್ಥಳೀಯ ವಿಜ್ಞಾನ ಎಂದು ವ್ಯಾಖ್ಯಾನಿಸಿದ. ಆದರೆ ಯಾವುದೇ ನಿರ್ದಿಷ್ಟ ಪಂಥವನ್ನು ಸ್ಥಾಪಿಸಲಿಲ್ಲ. ಕಾರ್ಲ್‌ರಿಟ್ಟರ್ ಇತಿಹಾಸ ಮತ್ತು ಭೂಗೋಳವಿಜ್ಞಾನಗಳೆರಡನ್ನೂ ಒಟ್ಟಾಗಿ ಅಭ್ಯಸಿಸುವ ಕ್ರಮವನ್ನೇ ಮುಂದುವರೆಸಿದ. ಈತನ ಟೆಲಿಯಾ ಲಾಜಿಕಲ್ ಕ್ರಮ ವೈಜ್ಞಾನಿಕವಾಗಿರಲಿಲ್ಲ. ಇದರಿಂದಾಗಿ ಭೂಗೋಳವಿಜ್ಞಾನದಲ್ಲಿ ವೃತ್ತಿಪರತೆ ಅಭಿವೃದ್ಧಿಹೊಂದಲು ಸಾಧ್ಯವಾಗಲಿಲ್ಲ. ಹಂಬೋಲ್ಟ್ ವೈಜ್ಞಾನಿಕ ವಿವರಣೆ ನೀಡಿದ್ದರೂ ಈತನ ಬರವಣಿಗೆ ಭೂಗೋಳವಿಜ್ಞಾನ ಮಾತ್ರವಲ್ಲದೆ ಇತರ ಹಲವಾರು ವಿಜ್ಞಾನಗಳ ವಿವರಣೆಗಳನ್ನು ಒಳಗೊಂಡಿದ್ದು, ಸ್ಪಷ್ಟತೆಯಿರಲಿಲ್ಲ. ಅಪಾರ ಪ್ರಮಾಣದ ವಿಷಯಗಳ, ಅಂಕಿ–ಅಂಶಗಳ ಸಂಗ್ರಹಣೆಯನ್ನು ಮಾತ್ರ ಈ ಅವಧಿಯ ಅಧ್ಯಯನಗಳು ಒಳಗೊಂಡಿದ್ದವು. ಡಾರ್ವಿನ್ನನ ಸಿದ್ಧಾಂತದ ಅನಂತರ ಸಾಮಾನ್ಯ ನಿಯಮ ಹಾಗೂ ಸಿದ್ಧಾಂತಗಳನ್ನು ನಿರೂಪಿಸಲು ಸಾಧ್ಯವಾಗುವಂತಹ ನೋಮೋಥೆಟಿಕ್ ಅಂದರೆ ಪೂರ್ಣ ಪ್ರಪಂಚಕ್ಕೆ ಅನ್ವಯವಾಗುವಂತಹ, ನಿಯಮಗಳನ್ನು ರೂಪಿಸಬಹುದಾದ ವ್ಯವಸ್ಥಿತ ಅಥವಾ ಸಾಮಾನ್ಯ ಅಧ್ಯಯನ ಬೆಳವಣಿಗೆ ಹೊಂದಿತು. ಇದರಿಂದಾಗಿ ಪರಿಸರವಾದ ಹಾಗೂ ಭೂಸ್ವರೂಪ ವಿಜ್ಞಾನಗಳು ಭೂಗೋಳವಿಜ್ಞಾನದ ಮೊದಲ ಕ್ರಿಯಾಮಾಲೆಗಳಾಗಿ ಅಭಿವೃದ್ಧಿಯನ್ನು ಹೊಂದಿದವು. ಇದು ಅಲ್ಪಕಾಲದವರೆಗೆ ಸಂಶೋಧನ ಮಾರ್ಗ ಸೂಚಿಯಾಗಿ ಪರಿಣಮಿಸಿತು. ರ್‍ಯಾಟ್ಜೆಲ್, ಸೆಂಪಲ್, ಹಂಟಿಂಗ್‌ಟನ್, ಡಬ್ಲ್ಯು. ಎಂ. ಡೇವಿಸ್ ಅವರುಗಳು ಈ ಮಾರ್ಗದಲ್ಲಿ ಮುನ್ನಡೆದರು. ಆದರೆ ಪರಿಸರವಾದವನ್ನು ಸಂಭವವಾದದ ಪ್ರತಿಪಾದಕರು ವಿರೋಧಿಸಿದರು. ಇವುಗಳೇ ಕ್ರಮವಾಗಿ ಜರ್ಮನ್ ಮತ್ತು ಫ್ರೆಂಚ್ ಪಂಥಗಳಾಗಿ ಅಭಿವೃದ್ಧಿಹೊಂದಿದವು. ಆದರೆ ಪರಿಸರ ಮಾನವ ಸಂಬಂಧವನ್ನು ಪ್ರಾದೇಶಿಕ ಅಥವಾ ಐಡಿಯೋಗ್ರಾಫಿಕ್ ಕ್ರಮದಲ್ಲಿ ಅಧ್ಯಯನ ಮಾಡಿದುದರಿಂದ ಪ್ರಪಂಚಕ್ಕೆ ಅನ್ವಯಿಸುವ ಸಾಮಾನ್ಯ ನಿಯಮ ಹಾಗೂ ಸಿದ್ಧಾಂತಗಳನ್ನು ಈ ಹಂತದಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಾಗಿಲ್ಲ. ಅನಂತರ ಸಂಭವವಾದ ಮತ್ತು ಪ್ರಾದೇಶಿಕ ಕ್ರಮಗಳು ಎರಡನೆಯ ಕ್ರಿಯಾಮಾಲೆಯಾಗಿ ಪರಿಸರವಾದದ ಕ್ರಿಯಾಮಾಲೆಗೆ ಸಮಾನಾಂತರವಾಗಿ ಮುಂದುವರಿದವು. ಇವುಗಳ ಗೊಂದಲ ನಿವಾರಣೆಯ ಹಂತ ಅಲ್ಪಾವಧಿಯವರೆಗೆ ಮಾತ್ರವಿದ್ದಿತು. 1950ರ ವರೆಗೂ ಪ್ರಾದೇಶಿಕ ಕ್ರಮ ಹೆಚ್ಚು ಮನ್ನಣೆಯನ್ನು ಪಡೆಯಿತು. ಅನಂತರ ಹಂತದಲ್ಲಿ ಅದರ ಪ್ರಾಮುಖ್ಯತೆ ಇಳಿಮುಖವಾಯಿತು. ಇದೇ ಅವಧಿಯಲ್ಲಿ ಭೂಗೋಳವಿಜ್ಞಾನದಲ್ಲಿ ಭೂದೃಶ್ಯಾವಳಿ ಪಂಥ ಅನಂತರದ ಕ್ರಿಯಾಮಾಲೆಯಾಗಿ 1930ರ ಅವಧಿಯಲ್ಲಿ ಪ್ರಾಮುಖ್ಯತೆ ಗಳಿಸಿತು. ಈ ಅವಧಿಯಲ್ಲಿ ಮಾನವ ಭೂಗೋಳದಲ್ಲಿ ಹಲವಾರು ವ್ಯವಸ್ಥಿತ ಶಾಖೆಗಳು ಅಭಿವೃದ್ಧಿ ಹೊಂದಿದವು. ಉದಾ: ಆರ್ಥಿಕ ಭೂಗೋಳವಿಜ್ಞಾನ, ವಸತಿ

ಭೂಗೋಳವಿಜ್ಞಾನ, ನಗರ ಭೂಗೋಳವಿಜ್ಞಾನ, ಜನಸಂಖ್ಯಾ ಭೂಗೋಳವಿಜ್ಞಾನ ಇತ್ಯಾದಿ. ಪರಿಮಾಣಾತ್ಮಕ ವಿಶ್ಲೇಷಣೆ ಹೊಸ ಕ್ರಿಯಾಮಾಲೆಯಾಗಿ ರೂಪುಗೊಂಡಿತು. ಹೀಗೆ ಭೂಗೋಳವಿಜ್ಞಾನದ ಅಧ್ಯಯನದ ಇತಿಹಾಸದಲ್ಲಿ ಹಲವಾರು ಕ್ರಿಯಾ ಮಾಲೆಗಳು ನಿರಂತರವಾಗಿ ಅಭಿವೃದ್ಧಿ ಹೊಂದಿರುವುದನ್ನು ಕಾಣಬಹುದು. (ಆರ್.ಎನ್.)

**ಭೂಗೋಳವಿಜ್ಞಾನದ ವಿಕಾಸ:** ಭೂಗೋಳವಿಜ್ಞಾನ ಇತರ ಎಲ್ಲ ಪ್ರಾಕೃತಿಕ-ಸಾಮಾಜಿಕ ವಿಜ್ಞಾನಗಳಿಗಿಂತಲೂ ಅತಿ ಪುರಾತನವಾದುದು. ಇದರ ಇತಿಹಾಸ ಸು. 2000 ವರ್ಷಗಳಿಗಿಂತಲೂ ಹೆಚ್ಚು ಸುದೀರ್ಘವಾದುದು. ಮಾನವ ನಾಗರಿಕತೆಯ ಮೆಟ್ಟಲುಗಳನ್ನು ಏರಲು ಉಪಕ್ರಮಿಸಿ, ಆತನು ಜೀವಿಸಿದ್ದ ನೆರೆಹೊರೆಯ ಭೂಲಕ್ಷಣಗಳನ್ನು ಅವಲೋಕಿಸಿದಂತೆ ತಾನಿರುವ ಸ್ಥಳವನ್ನು ಗುರುತಿಸಲು ತೊಡಗಿದಂತೆ ಆತನಲ್ಲಿ ಭೌಗೋಳಿಕ ಜ್ಞಾನ ಅಂಕುರಾರ್ಪಣೆಯನ್ನು ಹೊಂದಿದೆ. ಇದರಿಂದ ಭೂಗೋಳ ವಿಜ್ಞಾನದ ಇತಿಹಾಸ ಮಾನವನ ನಾಗರಿಕತೆಯ ಇತಿಹಾಸದಲ್ಲಿಯೇ ಸಮ್ಮಿಳಿತಗೊಂಡಿದೆ. ಅಂದಿನಿಂದ ಇಂದಿನವರೆಗಿನ ಮಾನವನ ಭೂಮೇಲ್ಮೈನ ಅವಲೋಕನ, ಅನ್ವೇಷಣೆ, ಹೊಂದಾಣಿಕೆ ಹಾಗೂ ಸಂಶೋಧನೆಯ ಫಲವೇ ಇಂದಿನ ಭೂಗೋಳವಿಜ್ಞಾನ. ಇದರ ಸುದೀರ್ಘ ಇತಿಹಾಸದುದ್ದಕ್ಕೂ ಇದು ನಿರಂತರವಾಗಿ ಬದಲಾವಣೆಗಳನ್ನು ಹೊಂದಿದ್ದು ಇದು ಇಂದಿಗೂ ಮುಂದುವರಿದಿದೆ.

ಭೂಗೋಳವಿಜ್ಞಾನ ಮಾನವನ ನಾಗರಿಕತೆಯ ಆರಂಭದ ಹಂತಗಳಲ್ಲಿ ಇಡೀ ಭೂಮೇಲ್ಮೈನ ಎಲ್ಲಾ ಬಗೆಯ, ಎಲ್ಲಾ ವಿಷಯಗಳ ಅಧ್ಯಯನವನ್ನು ತನ್ನ ಕ್ಷೇತ್ರವನ್ನಾಗಿ ಒಳಗೊಂಡಿದ್ದಿತು. ಇಂದು ಪ್ರತ್ಯೇಕ ವಿಜ್ಞಾನಗಳಾಗಿ ಅಭಿವೃದ್ಧಿ ಹೊಂದಿರುವ ಭೂಗರ್ಭವಿಜ್ಞಾನ ಭೂಸ್ವರೂಪ ರಚನಾವಿಜ್ಞಾನ, ವಾಯುಗುಣವಿಜ್ಞಾನ, ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಮಾನವಶಾಸ್ತ್ರ, ಜನಾಂಗಶಾಸ್ತ್ರ ಮೊದಲಾದವುಗಳ ವಸ್ತುಗಳನ್ನು ಭೂಗೋಳವಿಜ್ಞಾನ ಒಳಗೊಂಡಿದ್ದಿತು. ಇವುಗಳ ಅಧ್ಯಯನದಲ್ಲಿ ಭೂಗೋಳವಿಜ್ಞಾನಿಗಳ ಕೊಡುಗೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಸುದೀರ್ಘ ಅವಧಿಯಲ್ಲಿ ವಿಕಾಸಹೊಂದಿರುವ ಭೂಗೋಳವಿಜ್ಞಾನ ಅದರ ವ್ಯಾಖ್ಯೆ, ಅಧ್ಯಯನ ವಸ್ತು, ಕ್ಷೇತ್ರ ಮತ್ತು ಅಧ್ಯಯನ ವಿಧಾನಗಳಲ್ಲಿ ಆಯಾಕಾಲದ ಪರಿಸ್ಥಿತಿ ಹಾಗೂ ವೈಜ್ಞಾನಿಕ ಅಭಿವೃದ್ಧಿಯನ್ನು ಅವಲಂಬಿಸಿ ವಿವಿಧ ರೀತಿಯ ಬದಲಾವಣೆಗಳನ್ನು ಹೊಂದಿದೆ. ಇವುಗಳನ್ನು ತಿಳಿಯಲು ಭೂಗೋಳವಿಜ್ಞಾನದ ವಿಕಾಸದ ಇತಿಹಾಸವನ್ನು ಪುರಾತನ ಕಾಲ, ಮಧ್ಯಯುಗ ಹಾಗೂ ಆಧುನಿಕ ಯುಗವೆಂದು ಮೂರು ಹಂತಗಳನ್ನಾಗಿ ವಿಂಗಡಿಸಬಹುದು.

1. ಪುರಾತನ ಕಾಲ: ಇದು ಆದಿಯಿಂದ ಗ್ರೀಕೋ-ರೋಮನ್ ಸಾಮ್ರಾಜ್ಯಗಳ ಪತನದವರೆಗಿನ ಭೌಗೋಳಿಕ ಇತಿಹಾಸವನ್ನೊಳಗೊಂಡಿದೆ. ಈ ಹಂತದಲ್ಲಿ ಭೂಗೋಳ ವಿಜ್ಞಾನ ಗ್ರೀಕೋ-ರೋಮನ್ನರ ಕೊಡುಗೆಗಳ ಪರಿಣಾಮವಾಗಿ ಭದ್ರ ವೈಜ್ಞಾನಿಕ ಬುನಾದಿಯನ್ನು ಪಡೆದುಕೊಂಡಿತು. ಈ ಅವಧಿಯಲ್ಲಿ ಭೂಮಿಯನ್ನು ಕುರಿತು ಮಾನವನ ಜ್ಞಾನ ಸೀಮಿತವಾಗಿದ್ದಿತು. ಇದರಿಂದ ಸ್ಥಳೀಯ ಭೂ ವಿವರಣೆಗಳು ಈ ಕಾಲದ ಬರವಣಿಗೆಗಳಲ್ಲಿ ಪ್ರಧಾನವಾಗಿವೆ. ಗ್ರೀಸಿನ ಅರಿಸ್ಟಾರ್ಕಸ್ ಸೂರ್ಯ ಕೇಂದ್ರವಾದವನ್ನು ಪ್ರತಿಪಾದಿಸಿದರೂ ಅದು ಮನ್ನಣೆಗಳಿಸಲಿಲ್ಲ. ಸೂರ್ಯಕೇಂದ್ರವಾದವನ್ನು ಪ್ರತಿಪಾದಿಸಿದವರಲ್ಲಿ ಈತನೇ ಮೊದಲಿಗ. ಗ್ರೀಸಿನ ಹೆರೋಡಾಟಸ್ (ಪ್ರ.ಶ.ಪೂ. 485-425) ಹಾಗೂ ಎರಟಾಸ್ತನೀಸ್ (ಪ್ರ.ಶ.ಪೂ. 276-194) ರೋಮ್‍ನ ಟಾಲಮಿ (ಪ್ರ.ಶ. 90-108) ಮತ್ತು ಸ್ಟ್ರಾಬೊ (ಪ್ರ.ಶ್ರ.ಪೂ. 64 ರಿಂದ ಪ್ರ.ಶ. 20) ಮೊದಲಾದವರು ಈ ಅವಧಿಯ ಪ್ರಮುಖ ಭೂಗೋಳವಿಜ್ಞಾನಿಗಳಲ್ಲಿ ಅತಿ ಮುಖ್ಯರು. ಟಾಲಮಿ ಪ್ರತಿಪಾದಿಸಿದ ಭೂಕೇಂದ್ರವಾದ 16ನೆಯ ಶತಮಾನದ ಮಧ್ಯಂತರದವರೆಗೂ ಮುಂದುವರಿಯಿತು.

ಭೂಗೋಳವಿಜ್ಞಾನ ಎಂದು ಅರ್ಥ ಕೊಡುವ ಜಿಯೋಗ್ರಫಿ ಎಂಬ ಪದವನ್ನು ಮೊದಲು ಬಳಸಿದವನು ಗ್ರೀಸಿನ ಎರಟಾಸ್ತನೀಸ್. ಗ್ರೀಕ್ ಭಾಷೆಯ ಜಿಯೊ ಎಂದರೆ ಭೂಮಿ, ಗ್ರಫಿನ್ ಎಂದರೆ ವಿವರಣೆ ಎಂದು ಅರ್ಥ ಕೊಡುವ ಪದಗಳನ್ನು ಒಟ್ಟುಗೂಡಿಸಿ ಈ ಪದವನ್ನು ಹುಟ್ಟು ಹಾಕಿದ. ಇದರಿಂದಾಗಿ ಎರಟಾಸ್ತನೀಸ್‍ನನ್ನು ಭೂಗೋಳ ವಿಜ್ಞಾನದ ಪಿತಾಮಹನೆಂದು ಕರೆಯವುದು ರೂಢಿಯಲ್ಲಿದೆ. ಈತನು ಅಲೆಗ್ಸಾಂಡ್ರಿಯ ಪಟ್ಟಣದಲ್ಲಿ ಗ್ರಂಥಪಾಲಕನಾಗಿದ್ದು ಜಿಯೋಗ್ರಾಫಿಕಾ ಎಂಬ ಗ್ರಂಥವನ್ನು ಬರೆದಿದ್ದನೆಂದು ತಿಳಿದು ಬಂದಿದೆ. ಇದಲ್ಲದೆ ಈತ ಸೂರ್ಯನ ಕಿರಣಗಳ ಕೋನವನ್ನು ಆಧರಿಸಿ ರೇಖಾಗಣಿತದ ಆಧಾರದಿಂದ ಭೂಮಿಯ ಸುತ್ತಳತೆಯನ್ನು ಕರಾರುವಾಕ್ಕಾಗಿ ಅಳೆಯಲು ಪ್ರಯತ್ನಿಸಿದ. ಅನಂತರ ಟಾಲಮಿ ಅಂದು ತಿಳಿದಿದ್ದ ಪ್ರಪಂಚದ ನಕ್ಷೆಯನ್ನು ಅಕ್ಷಾಂಶ ಮತ್ತು ರೇಖಾಂಶಗಳೊಡನೆ ರಚಿಸಿ, ನಕ್ಷಾಶಾಸ್ತ್ರದ ಆರಂಭಕ್ಕೆ ಕಾರಣವಾದ. ಸ್ಟ್ರಾಬೋ ಅಂದಿನ ಪ್ರಪಂಚವನ್ನು ಕುರಿತು 17 ಸಂಪುಟಗಳ ಜಿಯೋಗ್ರಫಿಯ ಗ್ರಂಥವನ್ನು ರಚಿಸಿ ಪ್ರಾದೇಶಿಕ ಭೂಗೋಳವಿಜ್ಞಾನದ ವಿಕಾಸಕ್ಕೆ ಕೊಡುಗೆಯನ್ನು ನೀಡಿದ.

ಗ್ರೀಕೋ-ರೋಮನ್ನರ ಅವಧಿಯಲ್ಲಿ ಮಾನವನ ಭೌಗೋಳಿಕ ಜ್ಞಾನ ಮೆಡಿಟರೇನಿಯನ್ ಸಮುದ್ರದ ತೀರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದಿತು. ಆಯಾ ಸ್ಥಳಗಳ ವಿವರಣೆಗಳಿಗೆ ಪ್ರಾಮುಖ್ಯತೆ ನೀಡಲಾಗಿತ್ತು. ಅಂದು ಅವರಿಗೆ ತಿಳಿದಿದ್ದ ಭೂವಲಯದ ಪರ್ವತಗಳು, ಬೆಟ್ಟಗಳು, ನದಿಗಳು, ನಗರಗಳು ಮೊದಲಾದವುಗಳನ್ನು ಪಟ್ಟಿಮಾಡುವುದನ್ನ ಅವರು ಭೂಗೋಳವಿಜ್ಞಾನವೆಂದು ಕರೆದರು. ಭೂಗೋಳ ಚಿಂತನೆಯ ಇತಿಸಹಾಸದಲ್ಲಿ ಅಂದಿನ ಬರೆವಣಿಗೆಗಳನ್ನು ಗೆಝೆಟಿಯರ್ ಭೂಗೋಳವಿಜ್ಞಾನವೆಂದು ಕರೆಯಲಾಗಿದೆ.

ಮಧ್ಯಯುಗ: ಗ್ರೀಕೋ-ರೋಮನ್ನರ ಸಾಮ್ರಾಜ್ಯಗಳು ಪತನಗೊಂಡ ಅನಂತರ, ಅಂದರೆ ಪ್ರ.ಶ. 5ನೆಯ ಶತಮಾನದಿಂದ 15ನೆಯ ಶತಮಾನದವರೆಗಿನ ಅವಧಿಯನ್ನು ಭೌಗೋಳಿಕ ಚಿಂತನೆಯ ಇತಿಹಾಸದಲ್ಲಿ ಮಧ್ಯಯುಗವೆಂದು ಕರೆಯಲಾಗಿದೆ. ಯುರೋಪಿನ ಇತಿಹಾಸಕಾರರು ಈ ಅವಧಿಯನ್ನು ಅಂಧಕಾರ ಯುಗ ಎಂದು ಕರೆದಿರುವರಾದರೂ, ಈ ಕಾಲದಲ್ಲಿ ಭೌಗೋಳಿಕ ಜ್ಞಾನದ ಅಭಿವೃದ್ಧಿ ಅರಬ್ಬರಿಂದ ಮುಂದುವರಿದಿರುವುದನ್ನು ಕಾಣಬಹುದು. ಅರಬ್ಬರಿಗೆ ಗ್ರೀಕೋ-ರೋಮನ್ನರ ವೈಜ್ಞಾನಿಕ ಪ್ರಗತಿಯ ಪರಿಚಯವಿದ್ದಿತು. ಯುರೋಪ್, ಉತ್ತರ ಆಫ್ರಿಕ, ಪಶ್ಚಿಮ ಮತ್ತು ದಕ್ಷಿಣ ಏಷ್ಯ ಪ್ರದೇಶಗಳು ತಿಳಿದಿದ್ದವು. ಆಲ್‍ಮಸೂದಿ, ಆಲ್‍ಬರೂನಿ, ಆಲ್‍ಇದ್ರಿಸಿ, ಇಬ್ನಬತೂತ, ಇಬ್ನಖಾಲ್ದೂನ್ ಮೊದಲಾದವರು ಅರಬ್ ಭೂಗೋಳವಿಜ್ಞಾನಲ್ಲಿ ಪ್ರಸಿದ್ಧರು. ಈ ಅವಧಿಯಲ್ಲಿಯೇ ಮಾರ್ಕೋಪೋಲೊ ಚೀನದೇಶದಲ್ಲಿ ಸಂಚರಿಸಿ, ತನ್ನ ಅನುಭವಗಳು, ಸಂದರ್ಶಿಸಿದ ಪ್ರದೇಶಗಳ ವಿವರಣೆಗಳನ್ನು ಯುರೋಪಿನಲ್ಲಿ ಪ್ರಚಾರಗೊಳಿಸಿದ. ಮಧ್ಯಯುಗದ ಅಂತ್ಯದ ವೇಳೆಗೆ ಅಂದರೆ 12-13 ನೆಯ ಶತಮಾನದಲ್ಲಿ ಕ್ರಿಶ್ಚಿಯನ್ನರ ಪವಿತ್ರ ಕ್ಷೇತ್ರಗಳಾದ ಬೆತ್ಲೆಹೆಮ್ ಮತ್ತು ಜೆರುಸಲೆಮ್ ನಗರಗಳನ್ನು ಅರಬ್ಬರಿಂದ ವಿಮೋಚನೆಗೊಳಿಸುವ ಧರ್ಮಯುದ್ಧಗಳು ನಡೆದವು. ಇವು ಯುರೋಪಿಯರು ಅರಬ್ಬರ ಸಂಪರ್ಕ ಬೆಳೆಸಿಕೊಳ್ಳಲು ಕಾರಣವಾದವು. ಇದರಿಂದ ಗ್ರೀಕೋ-ರೋಮನ್ನರಿಂದ ಅರಬ್ಬರಿಗೆ ತಿಳಿದಿದ್ದ ವೈಜ್ಞಾನಿಕ ಜ್ಞಾನ ಸಂಪತ್ತು ಯುರೋಪಿಯನ್ನರಿಗೆ ಹಸ್ತಾಂತರಗೊಂಡವು.

ಆಧುನಿಕ ಯುಗ-ಭೌಗೋಳಿಕ ಅನ್ವೇಷಣೆಗಳು: ಗ್ರೀಕೋ-ರೋಮನ್ನರ ಬರೆವಣಿಗೆಗಳು, ಮಾರ್ಕೋಪೋಲೋನ ಏಷ್ಯ ಮತ್ತು ಹಿಂದೂ ಮಹಾಸಾಗರದಲ್ಲಿ ಸಂಚರಿಸಿದ ಅನುಭವಗಳು ಯುರೋಪಿಯನ್ನರ ಜ್ಞಾನ ವಿಕಾಸಕ್ಕೆ ಕಾರಣವಾದವು. ಇದೇ ಅವಧಿಯಲ್ಲಿ ಟರ್ಕರು ಕಾನ್‍ಸ್ಟಾಂಟಿನೋಪಲ್ ಪಟ್ಟಣವನ್ನು ಆಕ್ರಮಿಸಿದರು. ಇದರಿಂದ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಜಲಮಾರ್ಗವನ್ನು ಶೋಧಿಸುವುದು ಅಗತ್ಯವಾಯಿತು. ಈ ಪ್ರಯತ್ನಗಳಿಂದ ಪ್ರಪಂಚದ ಭೂರಾಶಿಗಳು ಅನ್ವೇಷಿಸಲ್ಪಟ್ಟವು.

ಕ್ರಿಸ್ಟೊಫರ್ ಕೊಲಂಬಸ್ 1492ರಲ್ಲಿ ಅಮೆರಿಕಖಂಡಗಳನ್ನು ತಲುಪಿದ. ವಾಸ್ಕೋಡಗಾಮ ಗುಡ್‍ಹೋಪ್‍ಭೂಶಿರವನ್ನು ಬಳಸಿ 1498ರಲ್ಲಿ ಭಾರತದ ಕಲ್ಲಿಕೋಟೆಯನ್ನು ತಲುಪಿದ. ಮೆಗಲಾನ್ ದಕ್ಷಿಣ ಅಮೆರಿಕ ಖಂಡವನ್ನು ಬಳಸಿ 1519-21ರ ಅವಧಿಯಲ್ಲಿ ಪ್ರಪಂಚವನ್ನು ಸುತ್ತುಹಾಕಿ ಭೂಮಿ ಗುಂಡಾಗಿರುವುದನ್ನು ಸಂದೇಹಾತೀತವಾಗಿ ಪ್ರಪಂಚಕ್ಕೆ ತಿಳಿಯಪಡಿಸಿದ. ಕ್ಯಾಪ್ಟನ್‍ಕುಕ್ 1768-79ರ ಅವಧಿಯಲ್ಲಿ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‍ಗಳನ್ನು ಶೋಧಿಸಿದ. ಇವುಗಳಿಂದ ಪ್ರಪಂಚದ ಬಹುತೇಕ ಭೂಭಾಗಗಳು ಮಾನವನಿಗೆ ಪರಿಚಯಗೊಂಡವು. ಉಳಿದ ದಕ್ಷಿಣ ಧ್ರುವ ಮತ್ತು ಉತ್ತರ ಧ್ರುವವನ್ನು 20ನೆಯ ಶತಮಾನದ ಆದಿಭಾಗದಲ್ಲಿ ಶೋಧಿಸಲಾಯಿತು. ರಾಬರ್ಟ್ ಎಡ್ವರ್ಡ್‍ಪಿಯರಿ 1909ರಲ್ಲಿ ಉತ್ತರ ಧ್ರುವವನ್ನು, ಅಮುಂಡ್‍ಸೆನ್ ರೊನಾಲ್ಡ್ 1911ರಲ್ಲಿ ದಕ್ಷಿಣ ಧ್ರುವವನ್ನು ಅನ್ವೇಷಿಸಿದರು.

ಭೌಗೋಳಿಕ ಅನ್ವೇಷಣೆಗಳ ಜೊತೆಗೆ ಈ ಅವಧಿ ಹಲವಾರು ವೈಜ್ಞಾನಿಕ ಸಂಶೋಧನೆಗಳಿಗೂ ಹೆಸರಾಗಿದೆ. ನಿಕೋಲಾಸ್ ಕೋಪರ್ನಿಕಸ್ 1543ರಲ್ಲಿ ಸೂರ್ಯ ಕೇಂದ್ರವಾದವನ್ನು ಪ್ರತಿಪಾದಿಸಿ, ಅಂದಿನವರೆಗೆ ಪ್ರಚಲಿತವಾಗಿದ್ದ ಅಂಧ ಧಾರ್ಮಿಕವಾದಗಳ ಅಂತ್ಯಕ್ಕೆ ಕಾರಣನಾದ. ಈ ವಾದ ಕೆಪ್ಲರ್ (1571-1630), ಗೆಲಿಲಿಯೋ (1564-1642) ರವರಿಂದ ಪುರಸ್ಕೃತಗೊಂಡಿತು. ನ್ಯೂಟನ್ ಪ್ರಸಿದ್ಧ ಗುರುತ್ವಾಕರ್ಷಣ ಸಿದ್ಧಾಂತವನ್ನು 1686ರಲ್ಲಿ ಪ್ರಕಟಿಸಿದ.

ಪರಿಣಾಮಗಳು: ಭೌಗೋಳಿಕ ಮತ್ತು ವೈಜ್ಞಾನಿಕ ಸಂಶೋಧನೆಗಳು ಭೂಗೋಳವಿಜ್ಞಾನದ ಅಭಿವೃದ್ಧಿ ಮತ್ತು ಅಧ್ಯಯನದ ಮೇಲೆ ಅಪಾರ ಪರಿಣಾಮವನ್ನು ಬೀರಿದವು. ಮರ್ಕೆಟರ್ ತನ್ನ ಪ್ರಸಿದ್ಧ ನಕ್ಷಾ ಪ್ರಕ್ಷೇಪವನ್ನು 1569ರಲ್ಲಿ ರಚಿಸಿದ. ಈ ಅವಧಿಯಲ್ಲಿ ಭೂಗೋಳವಿಜ್ಞಾನ ಭೂಮೇಲ್ಮೈನ ಎಲ್ಲ ಬಗೆಯ ವಿವರಣೆಗಳನ್ನು ಒಳಗೊಂಡಿದ್ದಿತು. ಇದನ್ನು ಕಾಸ್ಮೋಗ್ರಾಫಿಯಾ ಎಂದು ಕರೆಯಲಾಗುತ್ತಿತ್ತು. ಭೂಗೋಳವಿಜ್ಞಾನದ ಇತಿಹಾಸದಲ್ಲಿ ಈ ಬಗೆಯ ವಿವರಣೆಗಳನ್ನು ವಿವರಣಾತ್ಮಕ ಭೂಗೋಳವಿಜ್ಞಾನ ಎಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಭೌಗೋಳಿಕ ಸಂಶೋಧನೆಗಳಿಂದ ಕಂಡು ಹಿಡಿದ ಹೊಸ ಭೂಪ್ರದೇಶಗಳ ಸರ್ವೇಕ್ಷಣೆ, ಅವುಗಳ ನಕ್ಷೆಗಳ ರಚನೆ ಹಾಗೂ ಅವುಗಳ ವಿವರಣೆ ನೀಡುವುದು ಇತ್ಯಾದಿ ಭೂಗೋಳವಿಜ್ಞಾನದ ಮುಖ್ಯ ಕರ್ತವ್ಯಗಳಾಗಿದ್ದವು. ಇದರಿಂದ ನಕ್ಷಾವಿಜ್ಞಾನ ಭೂಗೋಳವಿಜ್ಞಾನದೊಡನೆ ಅಭಿವೃದ್ಧಿ ಹೊಂದಿತು.

ವರೇನಿಯಸ್: ಆಮ್‍ಸ್ಟರ್ ಡ್ಯಾಮ್‍ನಲ್ಲಿದ್ದ ಬರ್ನ್‍ಹರ್ಡ್ ವರೇನಿಯಸ್ (1622-50) ಜಿಯೋಗ್ರಾಫಿಯಾ ಜನರಲಿಸ್ ಗ್ರಂಥವನ್ನು 1650ರಲ್ಲಿ ಪ್ರಕಟಿಸಿದ್ದು, ಭೂಗೋಳವಿಜ್ಞಾನದ ಅಭಿವೃದ್ಧಿಯ ಮುಖ್ಯ ಹಂತಗಳಲ್ಲಿ ಒಂದು. ಈ ಗ್ರಂಥದ ಮೂಲಕ ವರೇನಿಯಸ್ ಭೂಗೋಳವಿಜ್ಞಾನಕ್ಕೆ ಎರಡು ಮಹತ್ತರ ಕೊಡುಗೆಗಳನ್ನು ನೀಡಿರುವನು. ಅವು ಹೀಗಿವೆ:

1. ಅಂದಿನವರೆಗೆ ತಿಳಿದಿದ್ದ ಖಗೋಳವಿಜ್ಞಾನ, ನಕ್ಷಾವಿಜ್ಞಾನ ಮೊದಲಾದವುಗಳನ್ನು ಒಟ್ಟುಗೂಡಿಸಿದ್ದು ಹಾಗೂ ವಿವಿಧ ಸಿದ್ಧಾಂತಗಳನ್ನು ವಿಮಾರ್ಶಾತ್ಮಕವಾಗಿ ಪರಿಶೀಲಿಸಿದ್ದು.

2. ಭೂಗೋಳವಿಜ್ಞಾನವನ್ನು ಸಾಮಾನ್ಯ ಭೂಗೋಳವಿಜ್ಞಾನ ಹಾಗೂ ವಿಶೇಷ ಭೂಗೋಳವಿಜ್ಞಾನವೆಂದು ಎರಡು ಭಾಗಗಳಾಗಿ ಮೊದಲಬಾರಿಗೆ ವಿಂಗಡಿಸಿದ. ಸಾಮಾನ್ಯ ಭೂಗೋಳವಿಜ್ಞಾನ ಪ್ರಪಂಚವನ್ನು ಅಧ್ಯಯನ ಕ್ಷೇತ್ರವಾಗಿ ಪರಿಗಣಿಸಿ ಅಭ್ಯಸಿಸುತ್ತದೆ. ಉದಾಹರಣೆಗೆ ಪ್ರಪಂಚದಲ್ಲಿ ಪರ್ವತಗಳ ಹಂಚಿಕೆ, ವಾಯುಗುಣದ ವಿಧಗಳು, ಬೆಳೆಗಳ ಹಂಚಿಕೆ ಇತ್ಯಾದಿ. ಇದಕ್ಕೆ ಬದಲಾಗಿ ಪ್ರಪಂಚದ ಯಾವುದಾದರೂ ಒಂದು ಭಾಗವನ್ನು ಕ್ಷೇತ್ರವಾಗಿ ಪರಿಗಣಿಸಿ ಅದರ ವಿಸ್ತೃತ ಅಧ್ಯಯನವನ್ನು ವರೇನಿಯನ್ ವಿಶೇಷ ಭೂಗೋಳವಿಜ್ಞಾನ ಅಥವಾ ಪ್ರಾದೇಶಿಕ ಭೂಗೋಳವಿಜ್ಞಾನವೆಂದು ಕರೆದ.

ಕಾಂಟ್: 18ನೆಯ ಶತಮಾನದಲ್ಲಿ ಜರ್ಮನಿಯ ಇಮ್ಯಾನ್ಯುಯೆಲ್ ಕಾಂಟ್ (1724–1804) ವೈಜ್ಞಾನಿಕವಾಗಿ ಭೂಗೋಳವಿಜ್ಞಾನ ಬೆಳವಣಿಗೆ ಹೊಂದಲು ಕಾರಣನಾದ. ಈತ ಭೌಗೋಳಿಕ ವಿವರಣೆಗಳಿಗೆ ತಾತ್ವಿಕ ರೂಪವನ್ನು ನೀಡಿದ. ಅಂದಿನವರೆಗೆ ವಿಶ್ವಕೋಶ ಮಾದರಿಯಲ್ಲಿ ಭೂಗೋಳವಿಜ್ಞಾನದ ಹೆಸರಿನಲ್ಲಿ ಅಧ್ಯಯನ ಮಾಡುತ್ತಿದ್ದ ಜ್ಞಾನ ಸಂಪತ್ತನ್ನು ತಾರ್ಕಿಕ ಹಾಗೂ ಭೌತಿಕ ವಿಜ್ಞಾನಗಳಾಗಿ ವಿಂಗಡಿಸಿದ. ತಾರ್ಕಿಕ ವಿಂಗಡನಾ ಕ್ರಮದಿಂದ ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ರಸಾಯನವಿಜ್ಞಾನ, ಭೂಗರ್ಭವಿಜ್ಞಾನ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಸಮಾಜ ಶಾಸ್ತ್ರಗಳು ವಿಶಿಷ್ಟ ಪ್ರತ್ಯೇಕ ವಿಜ್ಞಾನಗಳಾಗಿ ಆರಂಭಗೊಂಡವು. ವಿಜ್ಞಾನಗಳ ಭೌತಿಕ ವಿಂಗಡಣೆಯಿಂದ ಐತಿಹಾಸಿಕ ಹಾಗೂ ಸ್ಥಾನೀಯ ವಿಜ್ಞಾನಗಳೆಂದು ಎರಡು ವಿಧಗಳಾಗಿ ವಿಂಗಡಿಸಲ್ಪಟ್ಟವು. ಐತಿಹಾಸಿಕ ವಿಜ್ಞಾನದಲ್ಲಿ ಕಾಲದ ಆಧಾರದ ಮೇಲೆ ವಿವಿಧ ಘಟನಾವಳಿಗಳು ಜೋಡಿಸಲ್ಪಟ್ಟವು. ಇದನ್ನೇ ಇತಿಹಾಸವೆಂದು ಕರೆದ. ಇದಕ್ಕೆ ಬದಲಾಗಿ ಭೂಮೇಲ್ಮೈನ ಅಂಶಗಳನ್ನು ಅವುಗಳ ಸ್ಥಾನೀಯ ಹಂಚಿಕೆಯ ಆಧಾರದ ಮೇಲೆ ಜೋಡಿಸಲ್ಪಟ್ಟು ಇದರ ಅಧ್ಯಯನವನ್ನು ಭೂಗೋಳವಿಜ್ಞಾನವೆಂದು ಕರೆದ. ಭೂಮೇಲ್ಮೈಯಲ್ಲಿ ಕಂಡುಬರುವ ವಿವಿಧ ಬಗೆಯ ಹಾಗೂ ವಿವಿಧ ರೀತಿಯಲ್ಲಿ ನಿರ್ಮಾಣ ಹೊಂದಿರುವ ಅಂಶಗಳ ಸ್ಥಾನೀಯ ಹಂಚಿಕೆಯ ವ್ಯವಸ್ಥೆ ಭೂಗೋಳದ ವ್ಯವಸ್ಥಿತ ಅಧ್ಯಯನ ಆರಂಭವಾಗಲು ಕಾರಣವಾಯಿತು. ವಿವಿಧ ಭೂಪ್ರದೇಶಗಳ ವಿವರಣೆಗಳನ್ನು ಒಳಗೊಂಡಿದ್ದ ಭೂಗೋಳವಿಜ್ಞಾನವನ್ನು ಸ್ಥಳೀಯವಿಜ್ಞಾನವೆಂದು ಕರೆಯಲಾಯಿತು. ಇದು ಭೂಗೋಳವಿಜ್ಞಾನ ಸ್ಥಾನೀಯ ವಿಜ್ಞಾನವಾಗಿ ರೂಪುಗೊಳ್ಳಲು ಕಾರಣವಾಯಿತು.

19ನೆಯ ಶತಮಾನ–ಭೂಗೋಳವಿಜ್ಞಾನದ ಸ್ವರ್ಣಯುಗ. ಭೂಗೋಳವಿಜ್ಞಾನ ಚಿಂತನೆಯ ವಿಕಾಸದ ಇತಿಹಾಸದಲ್ಲಿ 19ನೆಯ ಶತಮಾನ ಒಂದು ಪರ್ವಕಾಲ. ಇದರಿಂದಾಗಿಯೇ ಇದನ್ನು ಸ್ವರ್ಣಯುಗವೆಂದು ಕರೆಯಲಾಗಿದೆ. ಈ ಶತಮಾನದ ಪೂರ್ವಾರ್ಧದಲ್ಲಿ ಹಂಬೋಲ್ಟ್ ಮತ್ತು ರಿಟ್ಟರ್ ಮುಖ್ಯ ಅಧ್ವರ್ಯರು. ಹಂಬೋಲ್ಟ್ ಮತ್ತು ರಿಟ್ಟರ್‌ರ ಕಾಲವನ್ನು ಹಾರ್ಟ್‌ಶೋರ್ನ್ ಭೂಗೋಳವಿಜ್ಞಾನದ ಕ್ಲಾಸಿಕಲ್ ಪಂಥವೆಂದು ಕರೆಯಲಾಗಿದೆ. ಇದರ ಉತ್ತರಾರ್ಧ ರ್‍ಯಾಟ್ಜೆಲ್, ವೈಡಾಲ್–ಡಿ–ಲಾ ಬ್ಲಾಷ್ ಹಾಗೂ ಡೇವಿಸ್‌ರವರುಗಳಿಂದ ಶ್ರೀಮಂತಗೊಂಡಿತು.

ಇಮ್ಯಾನ್ಯುಯೆಲ್‌ಕಾಂಟ್ ಭೂಗೋಳವಿಜ್ಞಾನಕ್ಕೆ ತಾತ್ವಿಕ ಬುನಾದಿ ಹಾಕಿದ; ಆದರೆ ಹಂಬೋಲ್ಟ್ ಮತ್ತು ರಿಟ್ಟರ್ ಇದನ್ನು ವಿಜ್ಞಾನದ ಪ್ರತ್ಯೇಕ ವಿಭಾಗವಾಗಿ ಅಭಿವೃದ್ಧಿಪಡಿಸಿದರು. ಹಂಬೋಲ್ಟ್ ಮತ್ತು ರಿಟ್ಟರ್ ಸಮಕಾಲೀನರು. ಹಂಬೋಲ್ಟ್ ಪ್ರಸಿದ್ಧ ಅನ್ವೇಷಣಾಕಾರ, ವೈಜ್ಞಾನಿಕ ಮನೋಭಾವವನ್ನು ಹೊಂದಿದ್ದು ಮಹಾಲೇಖಕನಾಗಿದ್ದ. ಇದರಿಂದಾಗಿಯೇ ರಿಟ್ಟರ್ ತಾನು ಹಂಬೋಲ್ಟನ ವಿದ್ಯಾರ್ಥಿಯೆಂದು ಕರೆದುಕೊಂಡಿದ್ದಾನೆ.

ಹಂಬೋಲ್ಟ್ ಹಲವಾರು ವಿಷಯಗಳಲ್ಲಿ ಪ್ರಬುದ್ಧ ಜ್ಞಾನವನ್ನು ಹೊಂದಿದ್ದ. ವಿಸ್ತಾರವಾದ ಭೂಪ್ರದೇಶದಲ್ಲಿ ಸಂಚರಿಸಿ. ಕಾಸ್ಮೋಸ್: ಸ್ಕೆಚ್ ಆಫ್ ಎ ಫಿಸಿಕಲ್ ಡಿಸ್‌ಕ್ರಿಪ್ಷನ್ ಆಫ್ ದಿ ವರ್ಲ್ಡ್ ಎಂಬ ಗ್ರಂಥವನ್ನು ಐದು ಸಂಪುಟಗಳಲ್ಲಿ ರಚಿಸಿದ್ದು, ಇವು 1845–62 ರ ಅವಧಿಯಲ್ಲಿ ಪ್ರಕಟಗೊಂಡವು. ಅಲ್ಲದೆ ತನ್ನ ದಕ್ಷಿಣ ಅಮೆರಿಕದ ಪ್ರವಾಸಗಳನ್ನು ಕುರಿತು 30 ಸಂಪುಟಗಳನ್ನು ರಚಿಸಿದ. ತನ್ನ ವಿವರಣೆಗಳಲ್ಲಿ ಭೂಮೇಲ್ಮೈನ ಪ್ರದೇಶಗಳನ್ನು ಪರಸ್ಪರ ಹೋಲಿಸಿ ವಿವರಣೆಯನ್ನು ನೀಡಿದ. ಇದು ತುಲನಾತ್ಮಕ ಭೌಗೋಳಿಕ ಅಧ್ಯಯನದ ಆರಂಭಕ್ಕೆ ಕಾರಣವಾಯಿತು. ಹಂಬೋಲ್ಟ್ ಪ್ರಾಕೃತಿಕ ಭೂಗೋಳ ಮತ್ತು ಪ್ರಾದೇಶಿಕ ಅಧ್ಯಯನ ಕ್ರಮಗಳಿಗೆ ಕೊಡುಗೆಗಳನ್ನು ನೀಡಿದ.

ಕಾರ್ಲ್‌ರಿಟ್ಟರ್ ಭೂಗೋಳವಿಜ್ಞಾನದ ಮೊದಲ ಪ್ರಾಧ್ಯಾಪಕನಾಗಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ. ಇದಕ್ಕಿಂತ ಮೊದಲೇ 1817ರಲ್ಲಿ ಈತನ ಎರ್ಡ್‌ಕುಂಡೆ ಗ್ರಂಥ ಎರಡು ಸಂಪುಟಗಳಲ್ಲಿ ಪ್ರಕಟಗೊಂಡಿದ್ದಿತು. ಎರ್ಡ್‌ಕುಂಡೆ ಎಂದರೆ ಭೂವಿಜ್ಞಾನ ವೆಂದು ಅರ್ಥ. ಹಂಬೋಲ್ಟ ಪ್ರಾಕೃತಿಕ ಭೂಗೋಳವಿಜ್ಞಾನದ ಬೆಳವಣಿಗೆಗೆ ಒತ್ತು ನೀಡಿದರೆ ರಿಟ್ಟರ್ ಪ್ರಾದೇಶಿಕ ಅಧ್ಯಯನಗಳಿಗೆ ಪ್ರಾಮುಖ್ಯತೆಯನ್ನು ನೀಡಿದ. ಪ್ರಾದೇಶಿಕ ಅಧ್ಯಯನದಲ್ಲಿ ಮಾನವನ ಅಧ್ಯಯನವನ್ನು ಸಹ ಅಳವಡಿಸಿಕೊಳ್ಳಲಾಗಿದ್ದಿತು. ಇವರಿಬ್ಬರೂ ಭೂಮೇಲ್ಮೈಯಲ್ಲಿ ಪ್ರಾಕೃತಿಕ ಮತ್ತು ಜೈವಿಕ ಅಂಶಗಳು ಪರಸ್ಪರ ಪೂರಕವಾಗಿರುವುದನ್ನು ತಿಳಿಯಪಡಿಸಿದರು. ಮಾನವಿಕ ಅಂಶಗಳು ಪ್ರಾಕೃತಿಕ ಪರಿಸ್ಥಿತಿಗಳಿಗೆ ಅನುಗುಣವಾಗಿದ್ದು, ಪ್ರಕೃತಿಯ ಪೂರ್ಣ ಚಿತ್ರಣದ ಅವಿಭಾಜ್ಯ ಅಂಗವೆಂದು ಪರಿಗಣಿಸಿದ್ದರು. ಈ ಹೊಂದಾಣಿಕೆಯನ್ನು ವಿವರಿಸಲು ಜುಸಮೆನ್ ಹ್ಯಾಂಗ್ ಪರಿಭಾವನೆಯನ್ನು ಬಳಸಿದರು. ರಿಟ್ಟರನ ಬರವಣಿಗೆಯಲ್ಲಿ ಟೆಲಿಯಾಲಾಜಿಕಲ್ ಪದದ ಬಳಕೆಯನ್ನು ಕಾಣಬಹುದು. ಗ್ರೀಕ್ ಭಾಷೆಯಲ್ಲಿ ಟೆಲಿಯೋ ಎಂದರೆ ಉದ್ದೇಶ ಎಂದು ಅರ್ಥ. ಪ್ರಕೃತಿಯಲ್ಲಿರುವ ಎಲ್ಲ ಲಕ್ಷಣಗಳು ಉದ್ದೇಶಪೂರ್ವಕವಾಗಿ ರೂಪಿತಗೊಂಡಿವೆ. ಇದೇ ಪ್ರಕೃತಿಯ ನಿಯಮ. ಈ ವ್ಯವಸ್ಥೆಯನ್ನು ತಿಳಿಯುವುದು ಭೂಗೋಳ ಅಧ್ಯಯನದ ಉದ್ದೇಶವೆಂದು ರಿಟ್ಟರ್ ತಿಳಿಯಪಡಿಸಿದ. ಪ್ರಕೃತಿಯ ಎಲ್ಲಾ ಲಕ್ಷಣಗಳೂ ಪರಸ್ಪರ ಪೂರಕವಾಗಿದ್ದು ಅವು ಒಂದು ಒಕ್ಕೂಟವಾಗಿವೆ. ಇದು ದೈವ ನಿರ್ಮಿತ. ಈ ಲಕ್ಷಣಗಳು ಉದ್ದೇಶಪೂರ್ವಕವಾಗಿ ದೈವಿಕ ಶಕ್ತಿಯಿಂದ ನಿರ್ಮಿತಗೊಂಡಿವೆ ಎಂದು ವಿವರಿಸಿದ. ಈ ಅವಧಿಯಲ್ಲಿ ಭೂಗೋಳ ಪರಸ್ಪರ ಇತಿಹಾಸ ಮತ್ತು ಭೂವಿಜ್ಞಾನಗಳೊಡನೆ ಅತಿ ಹೆಚ್ಚು ನಿಕಟತೆಯನ್ನು ಹೊಂದಿದ್ದಿತು. ಇದರಿಂದಾಗಿ ಪ್ರಾಕೃತಿಕ ಭೂಗೋಳವಿಜ್ಞಾನದ ಅಧ್ಯಯನ ಪ್ರಧಾನವಾಗಿದ್ದಿತು.

ಡಾರ್ವಿನ್ನನ ಪ್ರಭಾವ: ಈ ಮೇಲಿನ ವಿವರಣೆಗಳಲ್ಲಿ ನಿರೂಪಿತವಾಗಿರುವಂತೆ ಭೂಗೋಳವಿಜ್ಞಾನದಲ್ಲಿ ಇದರ ಆರಂಭದಿಂದಲೂ ಭೂಮೇಲ್ಮೈನ ಪ್ರಾಕೃತಿಕ ಲಕ್ಷಣಗಳ ವಿವರಣೆಗೆ ಪ್ರಾಧಾನ್ಯತೆಯನ್ನು ನೀಡಿರುವುದು ಸ್ಪಷ್ಟವಾಗಿದೆ. ಅರಬ್ಬರು ಹಾಗೂ ಅನಂತರದಲ್ಲಿ ರಿಟ್ಟರನ ವಿವರಣೆಗಳಲ್ಲಿ ಮಾತ್ರ ಪ್ರಾಸಂಗಿಕವಾಗಿ ಮಾನವನನ್ನು ಕುರಿತಂತೆ ವಿವರಣೆಗಳನ್ನು ಅಲ್ಲಲ್ಲಿ ಕಾಣಬಹುದು. ಹಂಬೋಲ್ಟ್ ಮತ್ತು ರಿಟ್ಟರ್ ಇಬ್ಬರೂ 1859 ರಲ್ಲಿ ನಿಧನ ಹೊಂದಿದ. ಇದು ಭೂಗೋಳವಿಜ್ಞಾನದ ಕ್ಲಾಸಿಕಲ್ ಪಂಥದ ಕೊನೆಯೂ ಆಗಿದೆ. ಇದೆ ಕಾಲದಲ್ಲಿ ಡಾರ್ವಿನ್ನನ ಜೀವ ವಿಕಾಸವಾದ ಪ್ರಕಟಗೊಂಡಿತು. ಇದು ಎಲ್ಲ ಜೀವ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನಗಳಲ್ಲಿ ಮಹತ್ತರ ಮಾರ್ಪಾಡುಗಳನ್ನುಂಟುಮಾಡಿತು. ಭೂಗೋಳವಿಜ್ಞಾನ ಸಹ ಇದರಿಂದ ಪ್ರಭಾವಿತಗೊಂಡಿತು. ಭೂಗೋಳವಿಜ್ಞಾನ ಸಹ ಅಧ್ಯಯನ ಕ್ಷೇತ್ರ ಹಾಗೂ ವಿಧಾನಗಳಲ್ಲಿ ಮಾರ್ಪಾಡನ್ನು ಹೊಂದಿತು. ಇದರ ಪರಿಣಾಮವಾಗಿ ಮಾನವ ಭೂಗೋಳವಿಜ್ಞಾನ ಪ್ರತ್ಯೇಕ ವಿಭಾಗವಾಗಿ ಅಭಿವೃದ್ಧಿ ಹೊಂದಿತು.

ಡಾರ್ವಿನ್ನನ ವಿಕಾಸವಾದದ ಪ್ರಕಟಣೆಗಳಿಗೆ ಮೊದಲೇ ಪ್ರಕೃತಿಯ ಎಲ್ಲ ಲಕ್ಷಣಗಳೂ ಪರಸ್ಪರ ಪೂರಕವಾಗಿ ಉದ್ದೇಶಿತವಾಗಿ ನಿರ್ಮಾಣಗೊಂಡಿರುವುದನ್ನು ರಿಟ್ಟರ್ ಪ್ರತಿಪಾದಿಸಿದ. ಹಂಬೋಲ್ಟ್ ಪ್ರಾಕೃತಿಕ ಹಾಗೂ ಜೈವಿಕ ಪರಿಸರಗಳ ನಡುವೆ ನೇರ ಸಂಬಂಧವಿರುವುದನ್ನು ಗುರುತಿಸಿದ.

ಡಾರ್ವಿನ್ನನ ಸಿದ್ಧಾಂತಕ್ಕೆ ಮೊದಲೇ ಇದಕ್ಕೆ ಬೌದ್ಧಿಕ ಬುನಾದಿಯನ್ನು ಒದಗಿಸುವ ಹಲವಾರು ಪ್ರಕಟಣೆಗಳಿದ್ದವು. ಇವುಗಳಲ್ಲಿ ಟಿ. ಆರ್. ಮಾಲ್ತಸ್‌ನ ಎಸ್ಸೆ ಆನ್ ದಿ ಪ್ರಿನ್ಸಿಪಲ್ಸ್ ಆಫ್ ಪಾಪುಲೇಷನ್ (1798) ಗ್ರಂಥ ಜನಸಂಖ್ಯೆಯ ಬೆಳವಣಿಗೆ ಪ್ರಕೃತಿಯೊಡನೆ ಸಂಬಂಧವನ್ನು ಹೊಂದಿರುವ ರೀತಿ ಮತ್ತು ಆಹಾರ ಪೂರೈಕೆಯೊಡನೆ ಹೊಂದಿರುವ ಸಂಬಂಧದ ವಿವರಣೆಗಳನ್ನು ಒಳಗೊಂಡಿದ್ದಿತು. ಇದು ಡಾರ್ವಿನ್ನನ ಪ್ರಾಕೃತಿಕ ಆಯ್ಕೆ ವಾದದ ಮುಂದುವರಿಕೆಗೆ ಕಾರಣವಾಗಿದೆ. ಇದೇ ಅವಧಿಯಲ್ಲಿ ಮಾನವವಿಜ್ಞಾನ ಜನಾಂಗಗಳ ಅಧ್ಯಯನದೊಡನೆ ಪ್ರಬುದ್ಧಮಾನಕ್ಕೆ ಬಂದಿತು. ಚಾರ್ಲ್ಸ್‌ಲೈಲ್‌ರವರ ಪ್ರಿನ್ಸಿಪಲ್ಸ್ ಆಫ್ ಜಿಯಾಲಜಿ (1833) ಗ್ರಂಥ ಭೂಸ್ವರೂಪಗಳ ಹಿಂದಿನ ಬದಲಾವಣೆಗಳನ್ನು, ಇಂದು ಬದಲಾವಣೆಯನ್ನು ನಿರ್ವಹಿಸುತ್ತಿರುವ ಕಾರ್ಯಗಳೊಡನೆ ವೈಜ್ಞಾನಿಕವಾಗಿ ವಿವರಿಸಿತು. ಇವುಗಳೊಡನೆ ಚಾರ್ಲ್ಸ್ ಡಾರ್ವಿನ್ ವೈಜ್ಞಾನಿಕವಾಗಿ ಮಾನವನ ಉಗಮ ಹಾಗೂ ಜನಾಂಗಗಳ ವಿಕಾಸವನ್ನು ಕುರಿತು ಸಿದ್ಧಾಂತವನ್ನು ಪ್ರಕಟಿಸಿದ.

ಚಾರ್ಲ್ಸ್ ರಾಬರ್ಟ್ ಡಾರ್ವಿನ್ 1809 ರಲ್ಲಿ ಇಂಗ್ಲೆಂಡಿನ ಶ್ರೂಸ್‌ಬರಿಯಲ್ಲಿ ಜನಿಸಿ, ಕೇಂಬ್ರಿಜ್‌ನ ಕ್ರೈಸ್ಟ್ ಕಾಲೇಜಿನಲ್ಲಿ ಅಧ್ಯಯನ ಮಾಡುವಾಗ, ಈತ ಸಸ್ಯವಿಜ್ಞಾನದ ಪ್ರಾಧ್ಯಾಪಕನಾಗಿದ್ದ ಜಾನ್ ಹೆನ್‌ಸ್ಲೋವಿನಿಂದ ಪ್ರಾಕೃತಿಕ ಇತಿಹಾಸವನ್ನು ಕುರಿತಂತೆ ಕುತೂಹಲವನ್ನು ಬೆಳೆಸಿಕೊಂಡ. 1831 ರಲ್ಲಿ ಅನ್ವೇಷಣೆಯನ್ನು ಕೈಗೊಂಡ ಎಚ್.ಎಂ. ಎಸ್. ಬೀಗಲ್ ನೌಕೆಯಲ್ಲಿ ಪ್ರಾಕೃತಿಕ ವಿಜ್ಞಾನಿಯಾಗಿ ಸೇರ್ಪಡೆಗೊಂಡ ಡಾರ್ವಿನ್, 1836 ರಲ್ಲಿ ಪ್ರವಾಸದಿಂದ ಹಿಂತಿರುಗಿದ. ಪ್ರಸಿದ್ಧ ಭೂವಿಜ್ಞಾನಿ ಚಾರ್ಲ್ಸ್ ಲೈಲ್ ನ ಪ್ರೋತ್ಸಾಹದೊಡನೆ 1859 ರಲ್ಲಿ ಆನ್ ದಿ ಆರಿಜಿನ್ ಆಫ್ ಸ್ಪೀಶೀಸ್ ಬೈ ಮೀನ್ಸ್ ಆಫ್ ನ್ಯಾಚುರಲ್ ಸೆಲೆಕ್ಷನ್ ಆರ್ ದಿ ಪ್ರಿಸರ್ವೇಷನ್ ಆಫ್ ಫೇವರ್ಡ್‌ರೇಸಸ್ ಇನ್ ದಿ ಸ್ಟ್ರಗಲ್ ಆಫ್ ಲೈಫ್ ಗ್ರಂಥದಲ್ಲಿ ಜೀವ ವಿಕಾಸವಾದದೊಡನೆ ಮಾನವ ಜನಾಂಗಗಳ ವಿಕಾಸವನ್ನು ಕುರಿತು ವಿವರಿಸಿದ. ಈಕ್ವೆಡಾರ್‌ನ ಪಶ್ಚಿಮ ತೀರದಿಂದ ಪೆಸಿಫಿಕ್ ಸಾಗರದಲ್ಲಿರುವ ಗಲಾಪಗಸ್ ದ್ವೀಪದಲ್ಲಿನ ಜೀವಿಗಳ ಅಧ್ಯಯನ ಈತನ ಸಿದ್ಧಾಂತ ಪ್ರತಿಪಾದನೆಗೆ ಮೂಲ ಆಕರಗಳನ್ನು ನೀಡಿತು. ಅನಂತರ 1871 ರಲ್ಲಿ ಮಾನವನ ವಿಕಾಸವನ್ನು ವಿವರಿಸಲು ದಿ ಡಿಸೆಂಟ್ ಆಫ್ ಮ್ಯಾನ್ ಗ್ರಂಥವನ್ನು ಪ್ರಕಟಿಸಿದ. ಈತನ ಸಿದ್ಧಾಂತದ ಪ್ರಾಕೃತಿಕ ಆಯ್ಕೆಯಂತೆ ಪ್ರಕೃತಿಯಲ್ಲಿ ಜೀವಿಗಳ ನಡುವೆ ಅಸ್ತಿತ್ವಕ್ಕಾಗಿ ಹೋರಾಟವಿರುವುದು. ಈ ಹೋರಾಟದಲ್ಲಿ ಬಲಹೀನವಾದವು ನಶಿಸಿ ಹೋಗುತ್ತವೆ. ಬಲಶಾಲಿಯಾದ ಜೀವಿಗಳು ಉಳಿಯುತ್ತವೆ.

ಅಲ್ಲದೆ ಜೀವಿಗಳ ಉಳಿವು ಪ್ರಕೃತಿಯ ಪ್ರಭಾವಕ್ಕೆ ಅನುಗುಣವಾಗಿ ಕಾಲಾಂತರದಲ್ಲಿ ರೂಪಿತಗೊಳ್ಳುತ್ತವೆ. ಹೀಗೆ ರೂಪಿತಗೊಳ್ಳುವ, ಮಾರ್ಪಾಡುಗೊಳ್ಳುವ ಸಂತತಿಗಳು ಉಳಿದುಕೊಳ್ಳುತ್ತವೆ. ಮಾರ್ಪಾಡು ಹೊಂದದ ಜೀವಿಗಳು ನಿರ್ನಾಮಗೊಳ್ಳುತ್ತವೆ. ಎಲ್ಲ ಜೀವಿಗಳೂ ಪರಿಸರದೊಡನೆ ನೇರ ಸಂಬಂಧವನ್ನು ಹೊಂದಿರುತ್ತವೆ ಎಂಬುದನ್ನು ವಿವರಿಸಿ ಮಾನವನನ್ನು ಜೀವ ಪ್ರಪಂಚದ ಒಂದು ಅವಿಭಾಜ್ಯ ಭಾಗವೆಂದು ಸ್ಪಷ್ಟಪಡಿಸಿದ.

ಡಾರ್ವಿನ್ನನ ವಿಕಾಸವಾದ ಜೈವಿಕ ಮತ್ತು ಸಾಮಾಜಿಕ ವಿಜ್ಞಾನಗಳ ಅಧ್ಯಯನದಲ್ಲಿ ಮಹತ್ತರ ಬದಲಾವಣೆಯನ್ನುಂಟುಮಾಡಿತು. ಇದನ್ನು ಐನ್‌ಸ್ಟೀನನ ಸಿದ್ಧಾಂತ ಭೌತವಿಜ್ಞಾನಗಳಲ್ಲಿ ಉಂಟು ಮಾಡಿದ ಪರಿಣಾಮಗಳಿಗೆ ಹೋಲಿಸಬಹುದು. ಡಾರ್ವಿನ್ನನ ವಾದ 1859 ರಲ್ಲಿ ಆರಂಭಗೊಂಡು ಕಾರ್ಲ್‌ಮಾರ್ಕ್ಸ್‌ನ ಕಮ್ಯೂನಿಸ್ಟ್ ಸಿದ್ಧಾಂತದ ಮೂಲಕ ಮುಂದುವರೆದಿದ್ದು, ಇಂದಿಗೂ ವಿವಿಧ ಪ್ರಕಾರಗಳಲ್ಲಿ ಮಾನವ ಸಮಾಜದ ಅಧ್ಯಯನಗಳಲ್ಲಿ ಬಳಕೆಯಲ್ಲಿದೆ. ಇದರಿಂದಾಗಿ ಪ್ರಕೃತಿ ಮತ್ತು ಜೈವಿಕ ವಿಜ್ಞಾನಗಳು ತ್ವರಿತವಾಗಿ ಅಭಿವೃದ್ಧಿ ಹೊಂದಿದವು. ಸಾಮಾಜಿಕ ವಿಜ್ಞಾನಗಳಲ್ಲಿ ಡಾರ್ವಿನ್ನನ ಪ್ರಾಕೃತಿಕ ಆಯ್ಕೆ ಸಿದ್ಧಾಂತವನ್ನು ಮಾನವ ಸಮುದಾಯಗಳ ಅಧ್ಯಯನಗಳಲ್ಲಿ ಬಳಕೆ ಮಾಡಲಾಯಿತು. ಇದನ್ನೇ ಸಾಮಾಜಿಕ ಡಾರ್ವಿನ್ ಸಿದ್ಧಾಂತ ಎಂದು ಕರೆಯಲಾಯಿತು.

ಭೂಗೋಳವಿಜ್ಞಾನದಲ್ಲಿ ಡಾರ್ವಿನ್ನನ ಸಿದ್ಧಾಂತದ ಪರಿಣಾಮಗಳನ್ನು ಸ್ಟೊಡ್ಡಾರ್ಟ್ 4 ಪ್ರಕಾರಗಳಾಗಿ ಈ ಕೆಳಕಂಡಂತೆ ಸಂಕ್ಷೇಪಿಸಿದ್ದಾನೆ:

1. ಕಾಲಾಂತರದಲ್ಲಿ ವಿಕಾಸ ಹೊಂದುವ ಪರಿಭಾವನೆ ಭೂಸ್ವರೂಪವಿಜ್ಞಾನ, ಮಣ್ಣಿನ ವಿಜ್ಞಾನ, ಜೀವಿ ಪರಿಸ್ಥಿತಿ ವಿಜ್ಞಾನ ಹಾಗೂ ಕೆಲಮಟ್ಟಿಗೆ ಸಾಮಾಜಿಕ ವಿಜ್ಞಾನಗಳ ಬೆಳೆವಣಿಗೆಯ ಮೇಲೆ ಮಹತ್ತರ ಪ್ರಭಾವವನ್ನು ಬೀರಿತು. ಈ ವಿಜ್ಞಾನಗಳ ಅಧ್ಯಯನದಲ್ಲಿ ವಿಕಾಸ ಪ್ರಕಾರದ ಅಧ್ಯಯನ ಆರಂಭಗೊಂಡಿತು. ಡೇವಿಸ್‌ನ ಭೂಸವೆತ ಚಕ್ರವನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು.

2. ಡಾರ್ವಿನ್ ಹೇಳಿದ ಜೀವಿಗಳು – ಪರಿಸರದೊಡನೆ ನಿಕಟವಾದ ಸಂಬಂಧವನ್ನು ಹೊಂದಿರುತ್ತವೆಯೆಂಬ ಜೈವಿಕವಾದವನ್ನು ಅನುಸರಿಸಿ ಮಾನವ ಸಮೂಹಗಳ ಪ್ರದೇಶಗಳು ಮತ್ತು ರಾಜ್ಯಗಳನ್ನು ವಿವರಿಸುವ ಕ್ರಮ ಬೆಳೆವಣಿಗೆಯನ್ನು ಹೊಂದಿತು.

3. ಪ್ರಾಕೃತಿಕ ಆಯ್ಕೆ ಮತ್ತು ಅಸ್ತಿತ್ವಕ್ಕಾಗಿ ಹೋರಾಟವಾದಗಳನ್ನು ಪರಿಸರವಾದ ರೂಪದಲ್ಲಿ ಮಾನವ ಭೂಗೋಳವಿಜ್ಞಾನ ಹಾಗೂ ರಾಜಕೀಯ ಭೂಗೋಳವಿಜ್ಞಾನಗಳಲ್ಲಿ ಅಳವಡಿಸಿಕೊಳ್ಳಲಾಯಿತು.

4. ಕಡೆಯದಾಗಿ 19ನೆಯ ಶತಮಾನದಲ್ಲಿ ಭೂಗೋಳವಿಜ್ಞಾನ ವಿಜ್ಞಾನವಾಗಿ ಬೆಳೆವಣಿಗೆಯನ್ನು ಹೊಂದಲು ಸಾಧ್ಯವಾಯಿತು.

ಡಾರ್ವಿನ್ನನ ವಾದವನ್ನು ಸಾಮಾಜಿಕ ವಿಜ್ಞಾನಗಳ ಅಧ್ಯಯನಗಳಲ್ಲಿ ಬಳಸಿಕೊಳ್ಳಲಾಯಿತು. ಭೂಗೋಳವಿಜ್ಞಾನದಲ್ಲಿ ಇಂದಿನವರೆಗೆ ಕೇವಲ ಪ್ರಾಕೃತಿಕ ಲಕ್ಷಣಗಳಿಗೆ ಬಹುತೇಕ ಮೀಸಲಾಗಿದ್ದ ವಿವರಣೆಗಳಲ್ಲಿ ಮಾನವನನ್ನು ಅಳವಡಿಸಿಕೊಳ್ಳಲಾಯಿತು. ವಿಶೇಷವಾಗಿ ಮಾನವ ಜನಾಂಗಗಳನ್ನು ಕುರಿತು ಅಧ್ಯಯನಗಳು ಆರಂಭಗೊಂಡವು. ಇವುಗಳಲ್ಲಿ ಆಸ್ಕರ್ ಪೆಶ್ಚೆಲ್ಲನ ಫೋಲ್ಕರ್ ಕುಂಡೆ ಅತಿ ಮುಖ್ಯವಾದುದು. ಭೂ ವಿವರಣೆಯ ಜೊತೆಗೆ ಮಾನವನ ಭೌತಿಕ ಲಕ್ಷಣಗಳು, ಭಾಷೆ, ಕೈಗಾರಿಕೆ, ಸಾಮಾಜಿಕ ಹಾಗೂ ಧರ್ಮಗಳ ಅಭಿವೃದ್ಧಿ ಮತ್ತು ಮಾನವ ಜನಾಂಗಗಳ ಅಧ್ಯಯನವನ್ನು ಇದು ಒಳಗೊಂಡಿದ್ದಿತು. ಬ್ರಿಟನ್ನಿನ ಮಾನವಶಾಸ್ತ್ರಜ್ಞರುಗಳಾದ ಎ.ಎಚ್. ಕೀನ್ಸ್‌ರವರ ಮ್ಯಾನ್: ಪಾಸ್ಟ್ ಅಂಡ್ ಪ್ರಸೆಂಟ್, (1899), ಎ.ಸಿ. ಹಡ್ಡಾನ್ ರವರ ದಿ ಸ್ಟಡಿ ಆಫ್ ಮ್ಯಾನ್ (1898) ಹಾಗೂ ಜರ್ಮನಿಯ ಅಡೋಲ್ಫ್ ಬ್ಯಾಸ್ಟಿಯನ್‌ರವರ ಪುರಾತನ ಬುಡಕಟ್ಟುಗಳ ಅಧ್ಯಯನ (1888) ಇವುಗಳಲ್ಲಿ ಮುಖ್ಯವಾದವು. ಮಾನವನನ್ನು ಕುರಿತ ಈ ಅಧ್ಯಯನಗಳು ರ್‍ಯಾಟ್ಜೆಲ್‌ನ ಮಾನವ ಭೂಗೋಳ ವಿಜ್ಞಾನದ ಪ್ರತಿಪಾದನೆಗೆ ಹಿನ್ನಲೆ ನೀಡಿದವು. ಮಾನವ ಭೂಗೋಳವಿಜ್ಞಾನ ಮಾನವವಿಜ್ಞಾನದೊಡನೆ ಉಗಮ ಹೊಂದಿತು. 1890–1920 ಅವಧಿಯಲ್ಲಿ ರ್‍ಯಾಟ್ಜೆಲ್, ರಿಚ್‌ಥೋಫೆನ್, ವೈಡಾಲ್, ಜೀನ್ ಬ್ರೂನ್ಸ್ ಮತ್ತು ಶ್ಲೂಚರ್‌ರವರಿಂದ ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿ ಬೆಳೆವಣಿಗೆಯನ್ನು ಹೊಂದಿದ ಮಾನವ ಭೂಗೋಳವಿಜ್ಞಾನ ಅನಂತರ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯ ಹಾಗೂ ಇತರ ರಾಷ್ಟ್ರಗಳಲ್ಲಿ ಅಭಿವೃದ್ಧಿಯನ್ನು ಹೊಂದಿತು.

ಫ್ರೀಡ್ರಿಚ್ ರ್‍ಯಾಟ್ಜೆಲ್: ಜರ್ಮನಿಯ ಈತ (1844–1904) ಭೂಗೋಳವಿಜ್ಞಾನದಲ್ಲಿ ಮಾನವ ಭೌಗೋಳಿಕ ಅಧ್ಯಯನವನ್ನು ಆರಂಭಿಸಿ ಅದನ್ನು ಆಂಥ್ರಪೋಜಿಯೋಗ್ರಫಿ ಎಂದು ಕರೆದ. ಇದು ಇಂಗ್ಲಿಷಿನ ಹ್ಯೂಮನ್ ಜಿಯೋಗ್ರಫಿ ಪದಕ್ಕೆ ಸಮಾನಾಂತರವಾಗಿದ್ದು, ಆಂಥ್ರಪೋ ಎಂದರೆ ಮಾನವ ಎಂದರ್ಥ. ಹೀಗೆ ಮಾನವ ಭೂಗೋಳವಿಜ್ಞಾನ ಎಂಬ ಪದವನ್ನು ಮೊದಲು ಫ್ರೀಡ್ರಿಚ್ ಬಳಸಿದ. ಇದು ಭೂಗೋಳವಿಜ್ಞಾನದ ಪ್ರತ್ಯೇಕ ವಿಭಾಗವಾಗಿ ಅಭಿವೃದ್ಧಿ ಹೊಂದಲು ಹಾಗೂ ಭೂಗೋಳವಿಜ್ಞಾನ ವೈಜ್ಞಾನಿಕವಾಗಿ ಸ್ಪಷ್ಟ ಸ್ವರೂಪವನ್ನು ಪಡೆದುಕೊಳ್ಳಲು ಇವನು ಕಾರಣನಾದ. ಇದರಿಂದಾಗಿಯೇ ರ್‍ಯಾಟ್ಜೆಲನನ್ನು ಮಾನವ ಭೂಗೋಳವಿಜ್ಞಾನದ ಸ್ಥಾಪಕನೆಂದು ಕರೆಯಲಾಗಿದೆ. ರ್‍ಯಾಟ್ಜೆಲ್ ರಾಜಕೀಯ ಭೂಗೋಳವಿಜ್ಞಾನದ ಆರಂಭಿಕನೂ ಆಗಿರುವುದಲ್ಲದೆ ಪರಿಸರ ಪ್ರಭುತ್ವವಾದ ಪರಿಭಾವನೆಯನ್ನು ಮಾನವ ಭೂಗೋಳವಿಜ್ಞಾನದ ಅಧ್ಯಯನ ಕ್ರಮವಾಗಿ ಆರಂಭಿಸಿದ. ಅಲ್ಲದೆ ಈತನನ್ನು ಮಾನವಶಾಸ್ತ್ರದ ಆರಂಭದ ಹಂತದಲ್ಲಿ ಅತಿ ಮುಖ್ಯ ಕೊಡುಗೆ ನೀಡಿದವನೆಂದು ಪರಿಗಣಿಸಲಾಗಿದೆ.

ರ್‍ಯಾಟ್ಜೆಲ್ ಆ ವೇಳೆಗಾಗಲೇ ಪ್ರಚಲಿತವಾಗಿದ್ದ ಹರ್ಬರ್ಟ್ ಸ್ಪೆನ್ಸರನ (1820–1903) ಸಾಮಾಜಿಕ ಡಾರ್ವಿನ್ ವಾದದಿಂದ ಪ್ರಭಾವಿತಗೊಂಡರೂ ಇತರ ಜೀವಿ ಸಮುದಾಯಗಳಂತೆಯೇ ಮಾನವ ಸಮುದಾಯಗಳೂ ಅಸ್ತಿತ್ವಕ್ಕಾಗಿ ನಿರಂತರವಾಗಿ ಹೋರಾಟವನ್ನು ಮುಂದುವರಿಸಿವೆ ಎಂದು ಚರ್ಚಿಸಿದ. ಇದನ್ನು ಅನುಸರಿಸಿದ ರ್‍ಯಾಟ್ಜೆಲ್ 1882 ರಲ್ಲಿ ಆಂಥ್ರಪೋ ಜಿಯೋಗ್ರಾಫಿ ಆರ್ ಔಟ್ ಲೈನ್ ಆಫ್ ದಿ ಇನ್‌ಫ್ಲೂಯೆನ್ಸಸ್ ಆಫ್ ದಿ ಜಿಯೋಗ್ರಾಫಿಕಲ್ ಎನ್‌ವಿರಾನ್‌ಮೆಂಟ್ ಆಫ್ ಎನ್ ಹಿಸ್ಟರಿ ಗ್ರಂಥದ ಮೊದಲ ಸಂಪುಟವನ್ನು ಪ್ರಕಟಿಸಿದ. ಇದರಲ್ಲಿ ಮಾನವ ಜೀವನ ಪ್ರಾಕೃತಿಕ ನಿಯಮಗಳಿಗೆ ಅನುಗುಣವಾಗಿ ಹೇಗಿದೆ, ಸಾಂಸ್ಕೃತಿಕ ಲಕ್ಷಣಗಳು ಪರಿಸರದ ಹೊಂದಾಣಿಕೆಗೆ ಹೇಗೆ ಅನುಗುಣವಾಗಿವೆ ಎಂಬುದನ್ನು ವಿವರಿಸಿದ. ಆಂಥ್ರಪೋ ಜಿಯೋಗ್ರಫಿ ಗ್ರಂಥದ ಎರಡನೆಯ ಸಂಪುಟ ಆಂಥ್ರಪೋ ಜಿಯೋಗ್ರಫಿ: ದಿ ಜಿಯೋಗ್ರಾಫಿಕಲ್ ಡಿಸ್ಟ್ರಿಬ್ಯೂಷನ್ ಆಫ್ ಮ್ಯಾನ್‌ಕೈಂಡ್ 1891 ರಲ್ಲಿ ಪ್ರಕಟಗೊಂಡಿತು. ಇದರಲ್ಲಿ ಜನಸಂಖ್ಯೆಯ ಹಂಚಿಕೆ, ಕೇಂದ್ರೀಕರಣ, ವಸತಿಗಳಲಕ್ಷಣಗಳು, ವಲಸೆ, ಸಾಂಸ್ಕೃತಿಕ ಲಕ್ಷಣಗಳ ಪ್ರಸರಣ ಮೊದಲಾದವುಗಳನ್ನು ಕುರಿತು ಚರ್ಚಿಸಲಾಗಿದೆ. ಅಲ್ಲದೆ ಡಾರ್ವಿನ್ನನ ಜೈವಿಕವಾದವನ್ನು ಅನುಸರಿಸಿ ಪೊಲಿಟಿಕಲ್ ಜಿಯೋಗ್ರಫಿ ಆರ್ ದಿ ಜಿಯೋಗ್ರಫಿ ಆಫ್ ಸ್ಟೇಟ್ಸ್, ಆಫ್ ಟ್ರೇಡ್ ಅಂಡ್ ಆಫ್ ವಾರ್ ಗ್ರಂಥವನ್ನು 1897ರಲ್ಲಿ ಪ್ರಕಟಿಸಿದ. ಹೀಗೆ ರ್‍ಯಾಟ್ಜೆಲ್ ಮಾನವ ಭೂಗೋಳ ವಿಜ್ಞಾನವನ್ನು ಆರಂಭಿಸಿದುದು ಮಾತ್ರವಲ್ಲದೆ, ಪರಿಸರವಾದವನ್ನೂ ಆರಂಭಿಸಿದ. ಮುಂದುವರಿದು ತನ್ನ ಜೀವನದ ಅಂತ್ಯಕಾಲದಲ್ಲಿ ಈಚೀನ ದಿನಗಳಲ್ಲಿ ಮಾನವಭೂಗೋಳವಿಜ್ಞಾನದ ಮುಖ್ಯ ಶಾಖೆಯಾಗಿರುವ ರಾಜಕೀಯ ಭೂಗೋಳವಿಜ್ಞಾನವನ್ನು ಸಹ ಹುಟ್ಟು ಹಾಕಿದ. ಹೀಗೆ ಡಾರ್ವಿನ್ನನ ವಿಕಾಸವಾದ ಮಾನವ ಭೂಗೋಳವಿಜ್ಞಾನ ಹಾಗೂ ರಾಜಕೀಯ ಭೂಗೋಳವಿಜ್ಞಾನಗಳ ಉಗಮಕ್ಕೆ ಹಿನ್ನೆಲೆಯಾಗಿ ಪರಿಣಮಿಸಿತು.

ಫ್ರಾನ್ಸ್: ಮೇಲೆ ವಿವರಿಸಿದಂತೆ ಡಾರ್ವಿನ್ನನ ಪ್ರಭಾವದಿಂದ ರ್‍ಯಾಟ್ಜೆಲ್‌ನಿಂದ ಜರ್ಮನಿಯಲ್ಲಿ ಆರಂಭಗೊಂಡ ಮಾನವ ಭೂಗೋಳವಿಜ್ಞಾನ ಕ್ರಮೇಣ ಅಭಿವೃದ್ಧಿ ಹೊಂದಿತು. ಇದೇ ಅವಧಿಯಲ್ಲಿ ಫ್ರಾನ್ಸಿನಲ್ಲಿ ಇದು ಸೈದ್ಧಾಂತಿಕ ಅಡಿಪಾಯದೊಡನೆ ಬೆಳೆವಣಿಗೆಯನ್ನು ಹೊಂದಿತು. ವೈಡಾಲ್ ಡಿ ಲ ಬ್ಲಾಷ್ ಇದರ ಬೆಳೆವಣಿಗೆಗೆ ಸೈದ್ಧಾಂತಿಕ ನಿರೂಪಣೆಯನ್ನು ನೀಡಿದ. ಫೆಡರಿಕ್ ಲಿ ಪೆ ವೈಡಾಲನ ಬರೆವಣಿಗೆಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದ. ಪರಿಸರ ಪ್ರಭುತ್ವವಾದಕ್ಕೆ ಬದಲಾಗಿ ಮಾನವ ಕ್ರಿಯಾಶೀಲ ಶಕ್ತಿಯನ್ನು ಪ್ರತಿಪಾದಿಸುವ ಸಂಭವವಾದವನ್ನು ಇವನು ಪ್ರಚುರಗೊಳಿಸಿದ. ಇವನ ಮರಣಾನಂತರ ಪ್ರಕಟಗೊಂಡ ಪ್ರಿನ್ಸಿಪಲ್ಸ್ ಆಫ್ ಹ್ಯೂಮನ್ ಜಿಯೋಗ್ರಫಿ ಗ್ರಂಥದಲ್ಲಿ ಈತನ ವಾದವನ್ನು ಕಾಣಬಹುದು. ಪ್ರಾದೇಶಿಕ ಅಧ್ಯಯನ ಕ್ರಮವನ್ನು ಅನುಸರಿಸಿ ಅದರ ಉಪಯುಕ್ತತೆಯನ್ನು ವಿವರಿಸಿದ. ಭೌಗೋಳಿಕ ಪ್ರದೇಶಗಳನ್ನು ಪೇಸ್ ಎಂದು ಕರೆದ. ಫ್ರಾನ್ಸಿನ ಅನಂತರದ ಭೂಗೋಳವಿಜ್ಞಾನದ ಮೇಲೆ ವೈಡಾಲನ ಪ್ರಭಾವವನ್ನು ಕಾಣಬಹುದು. ಇವರುಗಳಲ್ಲಿ ಜೀನ್ಸ್ ಬ್ರೂನ್ಹ್ಸ್, ಇಮ್ಯಾನ್ಯುಯೆಲ್ ಡಿ ಮಾರ್ಟೋನ್, ಅಲ್ಬರ್ಟ್‌ಡಿ ಮಾಂಜಿಯನ್, ಮ್ಯಾಕ್ಸಿಮಿಲಿಯನ್ ಸಾರ್, ಆಂಡ್ರೇಸೀಗ್‌ಫ್ರೀಡ್ ಪ್ರಮುಖ.

ಜರ್ಮನಿ: ರ್‍ಯಾಟ್ಜೆಲ್‌ನ ಪ್ರಭಾವದಿಂದ ಜರ್ಮನಿಯಲ್ಲಿ ಮಾನವ ಭೂಗೋಳವಿಜ್ಞಾನ ಹೆಚ್ಚು ಅಭಿವೃದ್ಧಿಯನ್ನು ಹೊಂದಿತು. ರ್‍ಯಾಟ್ಜೆಲ್‌ನ ಅನಂತರ ರಿಚ್‌ಥೋಫೆನ್, ಹೆಟ್ನರ್ ಮತ್ತು ಶ್ಲೂಚರ್ ಇದರ ಅಧ್ಯಯನವನ್ನು ಮುಂದುವರಿಸಿದರು. ಹೆಟ್ನರನು ಇಮ್ಯಾನ್ಯುಯೆಲ್ ಕಾಂಟ್‌ನ ಭೂಗೋಳವಿಜ್ಞಾನ ಪ್ರಾದೇಶಿಕ ವಿಜ್ಞಾನ ಎಂಬ ವ್ಯಾಖ್ಯಾನವನ್ನು ಮುಂದುವರಿಸಿದ. ಗೋಟ್ಜ್ 1882ರಲ್ಲಿ ಆರ್ಥಿಕ ಭೂಗೋಳವಿಜ್ಞಾನ ಎಂಬ ಪ್ರತ್ಯೇಕ ಶಾಖೆಯನ್ನು ಆರಂಭಿಸಿದ. ರ್‍ಯಾಟ್ಜೆಲ್‌ನಿಂದ ವಿವರಿಸಲ್ಪಟ್ಟ ಭೂದೃಶ್ಯಾವಳಿಯನ್ನು ಶ್ಲೂಚರ್ ಪ್ರಾಕೃತಿಕ ಭೂದೃಶ್ಯಾವಳಿ ಮತ್ತು ಸಾಂಸ್ಕೃತಿಕ ಭೂದೃಶ್ಯಾವಳಿಗಳೆಂದು ಎರಡು ವಿಭಾಗಗಳಾಗಿ ವಿಂಗಡಿಸಿದ. ಇದರಿಂದ ಸಾಂಸ್ಕೃತಿಕ ಭೂಗೋಳವಿಜ್ಞಾನ ಆರಂಭಗೊಂಡಿತೆಂದು ಲಾಟಿನ್ ಸಾಚ್ ವಿವರಿಸಿದ್ದಾನೆ. ಇದೇ ಅವಧಿಯಲ್ಲಿ ಅರ್ಥಶಾಸ್ತ್ರದ ಪ್ರಭಾವಕ್ಕೆ ಒಳಪಟ್ಟ ಮಾನವ ಭೂಗೋಳವಿಜ್ಞಾನದಲ್ಲಿ ಸೈದ್ಧಾಂತಿಕ ನಿರೂಪಣಾ ವಿಧಾನ ಬೆಳೆವಣಿಗೆಯನ್ನು ಹೊಂದಿತು. ಅರ್ಥಶಾಸ್ತ್ರಜ್ಞ ವಾಂಥೂನನ್ನನ ದಿ ಐಸೋಲೇಟೆಡ್ ಸ್ಟೇಟ್ ಗ್ರಂಥದಲ್ಲಿ ವ್ಯವಸಾಯ ಸ್ಥಾನ ಸಿದ್ಧಾಂತ ಪ್ರಕಟಗೊಂಡಿತು. ಇದನ್ನು ಭೌಗೋಳಿಕ ಅಧ್ಯಯನಗಳಲ್ಲಿ ಬಳಸಿಕೊಳ್ಳಲಾಯಿತು. ಕ್ರಿಸ್ಟಲರ ನಿಂದ ಭೂಗೋಳವಿಜ್ಞಾನದ ಮೊದಲ ಸಿದ್ಧಾಂತ ಕೇಂದ್ರ ಸ್ಥಳ ಸಿದ್ಧಾಂತ 1933 ರಲ್ಲಿ ಪ್ರಕಟಗೊಂಡಿತು. ಶ್ಲೂಚರ್‌ನಿಂದ ಮುಂದುವರಿದ ಸಾಂಸ್ಕೃತಿಕ ಭೂಗೋಳವಿಜ್ಞಾನವನ್ನು ಹ್ಯಾನ್ಸ್‌ಬೊಬೆಕ್ ಮತ್ತಷ್ಟು ಅಭಿವೃದ್ಧಿಪಡಿಸಿದ. ಈತ ಗ್ರಂಥಗಳಲ್ಲಿ ಸೋಷಿಯಲ್ ಜಿಯೋಗ್ರಫಿ ಅತಿ ಮುಖ್ಯವಾದುದು.

ಅಮೇರಿಕ : ಮಾನವ ಭೂಗೋಳ ವಿಜ್ಞಾನ ಅಮೇರಿಕದಲ್ಲಿ ಜರ್ಮನಿಯ ಪಡಿಯಚ್ಚಿನಂತೆ ಆರಂಭಗೊಂಡಿತು. ರ್‍ಯಾಟ್ಜೆಲ್‌ನ ವಿದ್ಯಾರ್ಥಿಯಾಗಿದ್ದ ಎಲೆನ್ ಚರ್ಚಿಲ್ ಸೆಂಪಲ್ಲಳು (1863–1932) ಮಾನವ ಭೂಗೋಳವಿಜ್ಞಾನ ಹಾಗೂ ಅದರ ಪರಿಸರವಾದದ ಅಧ್ಯಯನವನ್ನು ಪ್ರಚುರಗೊಳಿಸಿದಳು. ಈಕೆಯ ಗ್ರಂಥಗಳಲ್ಲಿ ಇನ್‌ಫ್ಲೂಯೆನ್ಸ್ ಆಫ್ ದಿ ಜಿಯೋಗ್ರಾಫಿಕಲ್ ಎನ್‌ವಿರಾನ್‌ಮೆಂಟ್ (1911) ಅತಿಮುಖ್ಯವಾದುದು. ಇದರಲ್ಲಿ ಪರಿಸರ ಪ್ರಭುತ್ವವಾದವನ್ನು ಈಕೆ ವಿಶೇಷವಾಗಿ ಪ್ರತಿಪಾದಿಸಿದ್ದಾಳೆ. ವಿಕಾಸದ ತತ್ವವನ್ನೇ ಅನುಸರಿಸಿ ವಿಲಿಯಂ ಮೋರಿಸ್ ಡೇವಿಸ್ ತನ್ನ ಪ್ರಸಿದ್ಧ ಭೂಸವೆತ ಚಕ್ರ ಸಿದ್ಧಾಂತವನ್ನು ಪ್ರತಿಪಾದಿಸಿದ. ಇದರಿಂದ ಭೂಸ್ವರೂಪವಿಜ್ಞಾನ ಹೆಚ್ಚು ಅಭಿವೃದ್ಧಿಯನ್ನು ಹೊಂದಿದರೂ ಸೆಂಪಲ್ಲಳ ಪ್ರಭಾವದಿಂದ ಮಾನವ ಭೂಗೋಳವಿಜ್ಞಾನ ಸಹ ಸಮಾನಾಂತರವಾಗಿ ಮುಂದುವರಿಯಿತು. ಮಾರ್ಕ್ ಜೆಫರ್‌ಸನ್ ಕೇಂದ್ರಸ್ಥಳ, ಪ್ರೈಮೇಟ್ ಸಿಟಿ, ಸಿವಿಲೈಸಿಂಗ್‌ರೈಲ್ಸ್ ಮೊದಲಾದ ಪರಿಭಾವನೆಗಳನ್ನು ನೀಡಿದ. ಪ್ರೈಮೇಟ್ ಸಿಟಿ (ಪ್ರಧಾನ ನಗರ) ಪರಿಭಾವನೆ ನಗರ ಭೂಗೋಳವಿಜ್ಞಾನದ ಅಧ್ಯಯನದಲ್ಲಿ ಇಂದಿಗೂ ಪ್ರಾಮುಖ್ಯತೆ ಪಡೆದಿದೆ.

ಅನಂತರದ ಅವಧಿಯಲ್ಲಿ ಐಸಾಯ ಬಾಮ್ಯಾನ್ ಮತ್ತು ಹಂಟಿಂಗ್‌ಟನ್‌ರವರುಗಳಿಂದ ಅಮೇರಿಕದಲ್ಲಿ ಮಾನವ ಭೂಗೋಳ ಹೆಚ್ಚು ಅಭಿವೃದ್ಧಿಯನ್ನು ಹೊಂದಿತು. ಎಲ್ಸ್‌ವರ್ತ್ ಹಂಟಿಂಗ್‌ಟನ್ ಅಮೇರಿಕದಲ್ಲಿ ಮಾನವ ಭೂಗೋಳದ ಅಭಿವೃದ್ಧಿಗೆ ಭದ್ರ ಬುನಾದಿಯನ್ನು ನೀಡಿದ. ಡೇವಿಸ್ಸನ ವಿದ್ಯಾರ್ಥಿಯಾಗಿದ್ದ, ವೈಜ್ಞಾನಿಕ ಮನೋಭಾವದ ಹಂಟಿಂಗ್‌ಟನ್ ಪ್ರಸಿದ್ಧ ಬರೆಹಗಾರ. ಈತನನ್ನು ಪ್ರಸಿದ್ಧ ಇತಿಹಾಸಕಾರ ಟಾಯನ್‌ಬಿ ಯವರಿಗೆ ಹೋಲಿಸಲಾಗಿದೆ. ಈತನ ಪ್ರಸಿದ್ಧ ಗ್ರಂಥಗಳೆಂದರೆ ಸಿವಿಲೈಜೇಷನ್ ಅಂಡ್ ಕ್ಲೈಮೆಂಟ್, ಮೈನ್ ಸ್ಪ್ರಿಂಗ್ಸ್ ಆಫ್ ಸಿವಿಲೈಜೇಷನ್ ಹಾಗೂ ಪ್ರಿನ್ಸಿಪಲ್ಸ್ ಆಫ್ ಹ್ಯೂಮನ್ ಜಿಯೋಗ್ರಫಿ. ಅನಂತರದ ಅವಧಿಯಲ್ಲಿ ಕಾರ್ಲ್‌ಸಾರ್ ರವರಿಂದ ಜರ್ಮನಿಯಲ್ಲಿ ಆರಂಭಗೊಂಡಿದ್ದ ಸಾಂಸ್ಕೃತಿಕ ದೃಶ್ಯಾವಳಿಯ ಅಧ್ಯಯನ ಪ್ರಾಮುಖ್ಯತೆಯನ್ನು ಪಡೆಯಿತು. ಬರ್ಕಲಿ ವಿಶ್ವವಿದ್ಯಾಲಯದಲ್ಲಿ ಆರಂಭಗೊಂಡ ಈ ವಾದ ಬರ್ಕ್‌ಲೀ ಪಂಥವೆಂದೇ ಪ್ರಸಿದ್ಧವಾಗಿದೆ. ಇದೇ ಅವಧಿಯಲ್ಲಿ ಡರ್ವೆಂಟ್ ವೈಟಲ್‌ಸೇ ರವರಿಂದ ಸೀಕ್ವೆಂಟ್ ಆಕ್ಯೂಪೆನ್ಸ್ ಎಂಬ ಹೊಸ ಪರಿಭಾವನೆ ಬಳಕೆಗೆ ಬಂದಿತು. ಅಲ್ಲದೆ ಈತ ಪ್ರಪಂಚವನ್ನು ಮೊದಲಬಾರಿಗೆ ವ್ಯವಸಾಯ ಪ್ರದೇಶಗಳಾಗಿ ವಿಂಗಡಿಸಿದ. ಅನಂತರದ ಅವಧಿಯಲ್ಲಿ ಮಾನವ ಭೂಗೋಳ ವಿಜ್ಞಾನ ಅಮೇರಿಕದಲ್ಲಿ ಮಹತ್ತರವಾದ ಬೆಳವಣಿಗೆಯನ್ನು ಹೊಂದಿತು. ಇದರ ಎಲ್ಲಾ ಬದಲಾವಣೆಗಳೂ ಇಲ್ಲಿಂದಲೇ ಆರಂಭಿಸಲ್ಪಟ್ಟವು. ರಿಚರ್ಡ್ ಹಾರ್ಟ್‌ಶೋರ್ನ್‌ರವರ ಪರ್‌ಸ್ಪೆಕ್ಟೀವ್ಸ್ ಆನ್ ದಿ ನೇಚರ್ ಆಫ್ ಜಿಯೋಗ್ರಫಿ (1939) ಭೂಗೋಳವಿಜ್ಞಾನದ ತಾತ್ವಿಕ ನಿರೂಪಣೆಯ ಪ್ರಮುಖ ಗ್ರಂಥವಾಗಿ ಪರಿಣಮಿಸಿತು. ಮಾನವ ಭೂಗೋಳವಿಜ್ಞಾನದಲ್ಲಿ ನಗರ ಭೂಗೋಳವಿಜ್ಞಾನ, ಸಾಂಸ್ಕೃತಿಕ ಮತ್ತು ಸಾಮಾಜಿಕ ಭೂಗೋಳವಿಜ್ಞಾನ, ಆರ್ಥಿಕ ಭೂಗೋಳವಿಜ್ಞಾನ ಮೊದಲಾದವುಗಳು ಬೆಳವಣಿಗೆಯನ್ನು ಹೊಂದಿದವು. ಪರಿಮಾಣಾತ್ಮಕ ವಿಶ್ಲೇಷಣೆ ಇಲ್ಲಿ ಆರಂಭಿಸಲ್ಪಟ್ಟು ಕ್ರಾಂತಿಯಾಗಿ ಮುಂದುವರಿಯಿತು. ಕ್ಷೇಮಾಭಿವೃದ್ಧಿ ಹಾಗೂ ಇತ್ತೀಚೆಗೆ ವೈಚಾರಿಕ ಹಾಗೂ ಮಾನವೀಯ ಭೂಗೋಳವಿಜ್ಞಾನ ಪಂಥಗಳು ಇಂದೂ ಮುಂದುವರಿದಿವೆ. ಇವುಗಳಿಂದ ಇಂದಿನ ಸಾಮಾಜಿಕ ಸಮಸ್ಯೆಗಳ ಭೌಗೋಳಿಕ ಅಧ್ಯಯನಕ್ಕೆ ಪ್ರಾಧ್ಯಾನತೆಯನ್ನು ನೀಡಲಾಗುತ್ತಿದೆ. ಅಮೇರಿಕದಲ್ಲಿನ ಭೌಗೋಳಿಕ ಅಧ್ಯಯನ ವಿಧಾನಗಳು ಪ್ರಪಂಚದ ಇತರ ಭೌಗೋಳಿಕ ಅಧ್ಯಯನಗಳಿಗೆ ಮಾದರಿಯಾಗಿ ಪರಣಮಿಸಿವೆ.

ಬ್ರಿಟನ್: ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿ ಮಾನವ ಭೂಗೋಳವಿಜ್ಞಾನ ಅಭಿವೃದ್ಧಿಯನ್ನು ಹೊಂದಿದರೂ ಬ್ರಿಟನ್ನಿನಲ್ಲಿ ಇದು ಅತಿ ನಿಧಾನವಾಗಿ ಆರಂಭಗೊಂಡಿತು. ಅದರ ಅಂಕುರಾರ್ಪಣೆಯನ್ನು 19ನೆಯ ಶತಮಾನದ ಅಂತ್ಯದಿಂದ ಮಾತ್ರ ಕಾಣಬಹುದು. ಡಾರ್ವಿನ್ನನ ಸಿದ್ಧಾಂತದ ಪರಿಣಾಮವನ್ನು ಬ್ರಿಟನ್ನಿನಲ್ಲಿ ಸ್ಪಷ್ಟವಾಗಿ ಕಾಣಬಹುದು. ಇದರಿಂದಾಗಿ ಬ್ರಿಟನ್ನಿನ ವಿಶ್ವವಿದ್ಯಾಲಯಗಳಲ್ಲಿ ಭೂಗೋಳವಿಜ್ಞಾನವನ್ನು ಆರಂಭಿಸಲಾಯಿತು. ಹೆರಾಲ್ಡ್. ಜೆ. ಮಕಿಂದರ್‌ರವರ ಹಾರ್ಟ್ ಲ್ಯಾಂಡ್ ಥಿಯರಿ ಭೌಗೋಳಿಕವಾಗಿ ರಾಜಕೀಯ ವಿಶ್ಲೇಷಣೆಯ ವಿಧಾನವನ್ನು ಬಳಕೆಗೆ ತಂದಿತು. ಇದಲ್ಲದೆ ಈತ ರಚಿಸಿದ ಬ್ರಿಟನ್ ಅಂಡ್ ದಿ ಬ್ರಿಟಿಷ್ ಸೀಸ್ ಗ್ರಂಥ ಬ್ರಿಟನಿನಲ್ಲಿ ಪ್ರಾದೇಶಿಕ ಅಧ್ಯಯನವಾಗಿದೆ. ಫ್ರಾನ್ಸಿನ ವೈಡಾಲ್ ಹಾಗೂ ಸಮಾಜಶಾಸ್ತ್ರದಲ್ಲಿ ಲಿಪ್ಲೇಯವರ ಪ್ರಭಾವ ಈ ಪ್ರಾದೇಶಿಕ ಅಧ್ಯಯನಗಳಿಗೆ ಸ್ಫೂರ್ತಿಯನ್ನು ನೀಡಿದೆ. ಲಿಪ್ಲೇಯವರ ಸ್ಥಳ – ಕಾರ್ಯ – ಕುಟುಂಬಗಳ ಪರಸ್ಪರ ಪೂರಕವಾಗಿರುವ ವಿವರಣೆಯನ್ನು ಸರ್ ಪಾಟ್ರಿಕ್ ಗೆಡ್ಡೀಸ್ ಸ್ಥಳ – ಕಾರ್ಯ – ಸಮುದಾಯ ಸಂಬಂಧವೆಂದು ಮಾರ್ಪಡಿಸಿದರು. ಇದರಂತೆ ಅವು ಯಾವುದೇ ಒಂದು ಸ್ಥಳದ ಜನರು, ಅವರ ಉದ್ಯೋಗ, ಆಯಾ ಸ್ಥಳ ಅಥವಾ ಪ್ರದೇಶದೊಡನೆ ನಿಕಟವಾದ ಸಂಬಂಧವನ್ನು ಹೊಂದಿರುತ್ತಾರೆ. ಈ ಪರಿಭಾವನೆಯೇ ಪ್ರದೇಶಗಳು ಹಾಗೂ ಪ್ರಾದೇಶಿಕ ಯೋಜನೆಗಳ ಆಧಾರವಾಗಿದೆ. ಈತನಿಂದ ಪ್ರಭಾವಿತಗೊಂಡ ಎ. ಜೆ. ಹರ್ಬರ್ಟ್‌ಸನ್ ಪ್ರಪಂಚವನ್ನು ಸ್ವಾಭಾವಿಕ ಪ್ರದೇಶಗಳಾಗಿ ವಿಂಗಡಿಸಿದ. ಚಿಸ್ಲೋಮ ವಾಣಿಜ್ಯ ಭೂಗೋಳವಿಜ್ಞಾನ ಎಂಬ ಪ್ರತ್ಯೇಕ ಶಾಖೆಯನ್ನು ಆರಂಭಿಸಿದ. ಎಲ್.ಡಿ.ಸ್ಟಾಂಪ್ 1920 ರಲ್ಲಿ ಬ್ರಿಟನ್ನಿನ ಭೂಬಳಕೆಯ ನಕ್ಷೆಗಳನ್ನು ರಚಿಸಿದ. ಇವುಗಳು ಮುಂದೆ ಬ್ರಿಟನ್ನಿ ಯೋಜನೆಗಳಿಗೆ ಆಧಾರಗಳಾಗಿ ಪರಿಣಮಿಸಿದವು. ಅನಂತರದ ಅವಧಿಯಲ್ಲಿ ಪರಿಮಾಣಾತ್ಮಕ ಅಧ್ಯಯನಗಳು ರಿಚರ್ಡ್ ಚಾರ್ಲಿ, ಪೀಟರ್ ಹ್ಯಾಗೆಟ್ ಮೊದಲಾದವರಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಮಾನವ ಭೂಗೋಳವಿಜ್ಞಾನದಲ್ಲಿ ಪರಿಮಾಣಾತ್ಮಕ ಕೌಶಲ್ಯಗಳು, ಸಿದ್ಧಾಂತಗಳು ಹಾಗೂ ನಮೂನೆಗಳ ಬಳಕೆಯನ್ನು ಕುರಿತು ಹಲವಾರು ಗ್ರಂಥಗಳನ್ನು ರಚಿಸಿದರು. ಪೀಟರ್ ಹ್ಯಾಗೆಟ್ ಮತ್ತು ಚಾರ್ಲಿಯವರ ಮಾಡೆಲ್ಸ್ ಇನ್ ಹ್ಯೂಮನ್ ಜಿಯೋಗ್ರಫಿ ಹಾಗೂ ಲೊಕೇಶನಲ್ ಅನಲಿಸಿಸ್ ಇನ್ ಹ್ಯೂಮನ್ ಜಿಯೋಗ್ರಫಿ ಮೊದಲಾದವುಗಳು ಭೂಗೋಳವಿಜ್ಞಾನದ ಅಧ್ಯಯನದಲ್ಲಿ ಮುಖ್ಯ ಪರಾಮರ್ಶನ ಗ್ರಂಥಗಳಾಗಿ ಇಂದಿಗೂ ಬಳಕೆಯಲ್ಲಿವೆ. ಇದರ ಜೊತೆಗೆ ಇತ್ತೀಚಿನ ಅವಧಿಯಲ್ಲಿ ಬ್ರಿಟನ್ ಪಾಸಿಟಿವಿಸಂ, ಪ್ರಾಗ್ಮಾಟಿಸಂ ಮೊದಲಾದ ಪಂಥಗಳ ವಿಕಾಸಕ್ಕೂ ಹೆಸರಾಗಿದೆ.

ಮೇಲೆ ವಿವರಿಸಿದಂತೆ ಭೂಗೋಳವಿಜ್ಞಾನ ಜರ್ಮನಿಯಲ್ಲಿ ಅಂಕುರಾರ್ಪಣೆಯನ್ನು ಹೊಂದಿ, ಫ್ರಾನ್ಸಿನಲ್ಲಿ ಸೈದ್ಧಾಂತಿಕವಾಗಿ ರೂಪುಗೊಂಡಿತು. ಅನಂತರ ಅಮೇರಿಕ ಹಾಗೂ ಬ್ರಿಟನ್‌ಗಳಲ್ಲಿ ಭದ್ರವಾಗಿ ನೆಲೆಯನ್ನು ಕಂಡುಕೊಂಡಿತು. ಇದು ಹಲವು ಶಾಖೆಗಳಾಗಿ ಬೆಳೆಯಿತು. ಈ ಅವಧಿಯಲ್ಲಿ ರಷ್ಯ, ಆಸ್ಟ್ರೇಲಿಯ, ಕೆನಡ ಹಾಗೂ ಸ್ವೀಡನ್‌ಗಳಲ್ಲಿ ವಿಸ್ತರಣೆಯನ್ನು ಹೊಂದಿತು. ರಷ್ಯ ದೇಶದಲ್ಲಿ ಸಂಚರಿಸಿದ್ದ ಹಂಬೋಲ್ಟ್ ಅಪಾರ ಮಾಹಿತಿಗಳನ್ನು ಸಂಗ್ರಹಿಸಿದ್ದ. 1845ರಲ್ಲಿ ದಿ ಇಂಪೀರಿಯಲ್ ಜಿಯೋಗ್ರಾಫಿಕಲ್ ಸೊಸೈಟಿ ಆಫ್ ರಷ್ಯ ಸಂಸ್ಥೆ ಆರಂಭಗೊಂಡಿತು. ಆರಂಭದಲ್ಲಿ ಭೂಪ್ರದೇಶಗಳ ಅನ್ವೇಷಣೆ ಹಾಗೂ ವಿವರಣೆಗಳು ರಷ್ಯದಲ್ಲಿ ಪ್ರಧಾನವಾಗಿದ್ದವು. ಸೆಮೆನೋವ್ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಾದೇಶಿಕ ವಿವರಣೆಗಳನ್ನು ನೀಡಿದ. ಎ.ಐ.ವೊಯಿಕೋವ್‌ಗ ಸಲಹೆಯಂತೆ ಜಾರ್ಜಿಯಾದಲ್ಲಿ ಚಹ, ತುರ್ಕ್‌ಮೇನಿಯಾದಲ್ಲಿ ಹತ್ತಿ, ಉಕ್ರೇನ್‌ನಲ್ಲಿ ಗೋದಿ ಬೆಳೆಗಳ ಬೇಸಾಯವನ್ನು ಅಭಿವೃದ್ಧಿಪಡಿಸಲಾಯಿತು. ಅನಂತರ ವಿ. ವಿ. ಡುಕುಚೇವ್ 1885ರಲ್ಲಿ ಸೇಂಟ ಪೀಟರ್ಸ್‌ಬರ್ಗ್‌ನಲ್ಲಿ ಮೊದಲ ಭೂಗೋಳವಿಜ್ಞಾನದ ಪ್ರಾಧ್ಯಾಪಕನಾಗಿ ನೇಮಕಗೊಂಡ. ಈತ ಮಣ್ಣು ವಿಜ್ಞಾನಕ್ಕೆ ನೀಡಿದ ಕೊಡುಗೆ ಮಹತ್ತರವಾದುದು. ರಷ್ಯದ ಮಹಾಕ್ರಾಂತಿಯ ಅನಂತರ ಸಂಪನ್ಮೂಲಗಳ ಅಧ್ಯಯನ, ಆರ್ಥಿಕ ಯೋಜನೆಗಳ ಅಧ್ಯಯನಗಳಿಗೆ ಭೂಗೋಳವಿಜ್ಞಾನಜ್ಞರು ಕೊಡುಗೆಯನ್ನು ನೀಡಿದರು. 1921ರಲ್ಲಿ ದಿ ಸ್ಟೇಟ್ ಪ್ಲಾನಿಂಗ್ ಕಮಿಷನ್ ನೇಮಕಗೊಂಡು, ಇದರಲ್ಲಿ ಭೂಗೋಳವಿಜ್ಞಾನಿಗಳೇ ಅತಿ ಮುಖ್ಯ ಸ್ಥಾನವನ್ನು ಪಡೆದರು. ಸೋವಿಯತ್ ದೇಶವನ್ನು 21 ಭಾಗಗಳಾಗಿ ವಿಂಗಡಿಸಿ ಅವುಗಳಿಗೆ ಪ್ರಾದೇಶಿಕ ಯೋಜನೆಗಳನ್ನು ರೂಪಿಸಿದರು. ಕೈಗಾರಿಕೆಗಳ ಸ್ಥಾನ, ಸಂಪನ್ಮೂಲಗಳ ಬಳಕೆ, ಯೂರಲ್ – ಕುಜ್‌ನೆಟ್‌ಸ್ಕ್ ಕೈಗಾರಿಕಾ ಪ್ರದೇಶ, ನಿಪರ ಕೈಗಾರಿಕಾ ವಲಯಗಳ ಯೋಜನೆಗಳನ್ನು ರೂಪಿಸಿದರು. ಭೂಗೋಳಶಾಸ್ತ್ರಜ್ಞರು ಪ್ರಾದೇಶಿಕ ಯೋಜನಾಕಾರರಾಗಿ ಕಾರ್ಯನಿರ್ವಹಿಸಿದರು. ಆರ್ಥಿಕ ಹಾಗೂ ಕೃಷಿ ಭೂಗೋಳವಿಜ್ಞಾನಗಳು ರಷ್ಯನ್ನರಿಂದ ಅಭಿವೃದ್ಧಿ ಹೊಂದಿದವು.

ಮಾನವ ಭೂಗೋಳವಿಜ್ಞಾನ ಆಸ್ಟ್ರೇಲಿಯದಲ್ಲಿ ಅಭಿವೃದ್ಧಿ ಹೊಂದಿತು. ಗ್ರಿಫಿಕ್ ಟೈಲರ್ ಆಸ್ಟ್ರೇಲಿಯದಲ್ಲಿ ಭೂಗೋಳವಿಜ್ಞಾನವನ್ನು ಅಭಿವೃದ್ಧಿ ಪಡಿಸಿದರು. ಪರಿಸರ ಪ್ರಭುತ್ವವಾದವನ್ನು ಮಾರ್ಪಡಿಸಿ, ನಿಂತು ಹೊರಡುವ ನವೀಕರಿಸಿದ ಪರಿಸರವಾದವನ್ನು ಪ್ರಚುರಗೊಳಿಸಿದರು. ಆಸ್ಟ್ರೇಲಿಯದಲ್ಲಿ ನಗರ ಭೂಗೋಳವಿಜ್ಞಾನ ಹೆಚ್ಚು ಅಭಿವೃದ್ಧಿ ಹೊಂದಿತು. ಅನಂತರ ಟೈಲರ್ ಕೆನಡದಲ್ಲಿ ನೆಲೆಸಿ ಮಾನವ ಭೂಗೋಳವಿಜ್ಞಾನವನ್ನು ಅಭಿವೃದ್ಧಿಪಡಿಸಿದರು..

ಬ್ರಿಟನ್ನಿನ ಪ್ರಭಾವದಿಂದಾಗಿ ಸ್ವೀಡನ್ನಿನ ಲುಂಡ್ ವಿಶ್ವವಿದ್ಯಾಲಯದಲ್ಲಿ ಮಾನವ ಭೂಗೋಳವಿಜ್ಞಾನ ಆರಂಭಿಸಲ್ಪಟ್ಟಿತು. ಹ್ಯಾಗರ್ ಸ್ಟ್ರಾಂಡ್ ಈ ಅಭಿವೃದ್ಧಿಯನ್ನು ಮುಂದುವರಿಸಿದ. ಸಮಾಜಶಾಸ್ತ್ರದ ಅಧ್ಯಯನದಲ್ಲಿ ಎಡ್ಗರ್. ಎಂ. ರೋಜರ್ಸ್ ನಿಂದ ಆರಂಭಗೊಂಡ ಪ್ರಸರಣವನ್ನು ಕುರಿತ ಅಧ್ಯಯನವನ್ನು ಸ್ಥಾನೀಯ ಪ್ರಸರಣದ ಅಧ್ಯಯನಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಲ್ಲದೆ, ಪರಿಮಾಣಾತ್ಮಕವಾಗಿ ನಿರೂಪಿಸಿದರು. ಇಂದು ಈ ಪ್ರಕಾರದ ಅಧ್ಯಯನಗಳನ್ನು ಪ್ರಪಂಚದಾದ್ಯಂತ ಕಾಣಬಹುದು.

ಇಂದು ಪ್ರಪಂಚದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಭೂಗೋಳವಿಜ್ಞಾನದ ಪ್ರಧಾನ ವಿಭಾಗವಾಗಿ ಮಾನವ ಭೂಗೋಳವಿಜ್ಞಾನವನ್ನು ಕಾಣಬಹುದು. ಇದರ ವಿಭಾಗಗಳಾದ ನಗರ ಭೂಗೋಳವಿಜ್ಞಾನ, ವಸತಿ ಭೂಗೋಳವಿಜ್ಞಾನ, ಸಾಂಸ್ಕೃತಿಕ ಭೂಗೋಳವಿಜ್ಞಾನ, ಸಾಮಾಜಿಕ ಭೂಗೋಳವಿಜ್ಞಾನ, ಐತಿಹಾಸಿಕ ಭೂಗೋಳವಿಜ್ಞಾನ, ಆರ್ಥಿಕ ಭೂಗೋಳವಿಜ್ಞಾನ ಮೊದಲಾದವುಗಳು ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಹಾಗೂ ಸಂಶೋಧನೆಯಲ್ಲಿ ಬಳಕೆಯಾಗುತ್ತಿವೆ. ಆರಂಭದಲ್ಲಿ ಪ್ರಾಕೃತಿಕ ಭೂಗೋಳವಿಜ್ಞಾನಕ್ಕೆ ಸಂಬಂಧಿಸಿದ ಅನ್ವೇಷಣೆ ಮತ್ತು ಸಂಶೋಧನೆಗಳು ಅಧಿಕವಾಗಿದ್ದವು. ಇಂದು ಪ್ರಾಕೃತಿಕ ಭೂಗೋಳವಿಜ್ಞಾನ ಇತರ ಪ್ರಾಕೃತಿಕ ವಿಜ್ಞಾನಗಳಲ್ಲಿನ ಸಂಶೋಧನೆಗಳ ಫಲಿತಾಂಶವನ್ನು

ಮಾತ್ರ ಪ್ರಾದೇಶಿಕವಾಗಿ ವಿಶ್ಲೇಷಿಸುವುದು. ಭೂಗೋಳವಿಜ್ಞಾನಿಗಳ ಸಂಶೋಧನೆಗಳು ಈ ವಿಭಾಗದಲ್ಲಿ ಇಂದು ಕಡಿಮೆ. ಇದಕ್ಕೆ ಬದಲಾಗಿ ಮಾನವ ಭೂಗೋಳವಿಜ್ಞಾನ ಭೂಗೋಳವಿಜ್ಞಾನಿಗಳ ಸಂಶೋಧನೆಯ ಮುಖ್ಯ ಕ್ಷೇತ್ರ. ಇದರ ಶಾಖೆಗಳಲ್ಲಿ ಭೂಗೋಳವಿಜ್ಞಾನಿಗಳ ಸಂಶೋಧನೆಗಳು ಮುಂದುವರಿದಿವೆ. (ಎ.ಕೆ.ಡಬ್ಲ್ಯೂ.)

**ಭೂತನಗರ:** ಒಂದು ನಿರ್ದಿಷ್ಟ ಪ್ರದೇಶದಲ್ಲಿ ಹಂಚಿಕೆಯಾಗಿರುವ ಸಂಪನ್ಮೂಲವನ್ನು ಸಂಪೂರ್ಣವಾಗಿ ಹೊರತೆಗೆದ ಮೇಲೆ ಆ ಪ್ರದೇಶ ಬೇರೆಯಾಗುವುದೇ ಉಪಯೋಗಕ್ಕೆ ಯೋಗ್ಯವಾಗಿರುವುದಿಲ್ಲ. ಅಂತಹ ಪ್ರದೇಶಗಳನ್ನು ಹಾಗೂ ನಗರಗಳನ್ನು ಭೂತನಗರವೆನ್ನುವರು. ಪ್ರಪಂಚದಾದ್ಯಂತ ನೈಸರ್ಗಿಕ ಸಂಪನ್ಮೂಲಗಳು ಒಂದೇ ರೀತಿಯಲ್ಲಿ ಹಂಚಿಕೆಯಾಗಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಇವುಗಳ ಹಂಚಿಕೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಖನಿಜ ನಿಕ್ಷೇಪ ಮುಗಿದ ಅನಂತರ ಗಣಿ ಪ್ರದೇಶದಲ್ಲಿ ಯಾವುದೇ ರೀತಿಯ ಮಾನವ ಚಟುವಟಿಕೆಗಳು ಕಂಡುಬರುವುದಿಲ್ಲ. ಗಣಿವೃತ್ತಿಯನ್ನಾಧರಿಸಿ ಬದುಕುತ್ತಿದ್ದ ಜನರು ಆ ಪ್ರದೇಶದಿಂದ ಮತ್ತೊಂದು ಕಡೆ ಜೀವನ ನಿರ್ವಹಣೆಗೆ ಸ್ಥಳಾಂತರ ಅಥವಾ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ. (ಎಚ್.ಎಸ್.ಡಿ.)

**ಭೂತಾನ್:** ಪೂರ್ವ ಹಿಮಾಲಯ ಪರ್ವತಶ್ರೇಣಿಯ ತಪ್ಪಲಿನಲ್ಲಿರುವ ಸ್ವತಂತ್ರ ರಾಜ್ಯ. ಉ.ಅ. $26^0 30'$ – $28^0 30'$ ಪೂ.ರೇ. $85^0 45'$–$92^0 25'$ ನಡುವೆ ಹಬ್ಬಿದೆ. ಉತ್ತರದಲ್ಲಿ ಟಿಬೆಟ್, ದಕ್ಷಿಣದಲ್ಲಿ ಭಾರತದ ಪಶ್ಚಿಮಬಂಗಾಲ ರಾಜ್ಯದ ಜಲ್ಪೈಗುರಿ ಜಿಲ್ಲೆ ಹಾಗೂ ಅಸ್ಸಾಮಿನ ಗೋಲ್ಪಾರಾ, ಕಾಮರೂಪ ಮತ್ತು ದರಾಂಗ್ ಜಿಲ್ಲೆಗಳು, ಪಶ್ಚಿಮದಲ್ಲಿ ಟಿಬೆಟ್, ಸಿಕ್ಕಿಮ್, ನೈರುತ್ಯದಲ್ಲಿ ಬಂಗಾಲದ ಡಾರ್ಜಿಲಿಂಗ್ ಜಿಲ್ಲೆ ಮತ್ತು ಪೂರ್ವದಲ್ಲಿ ಅರುಣಾಚಲ ಪ್ರದೇಶದ ಪಶ್ಚಿಮ ಕಾಮೆಂಗ್ ಜಿಲ್ಲೆ ಸುತ್ತುವರಿದಿದೆ. ವಿಸ್ತೀರ್ಣ 47,000 ಚ.ಕಿಮೀ. ಜನಸಂಖ್ಯೆ ಸು. 7,21,000 (2002). ರಾಜಧಾನಿ ಥಿಂಪೂ. ಜನಸಂಖ್ಯೆ 30,340.




ಭೂವಿಜ್ಞಾನ : ಭೂತಾನ ಬಿರುಸಾದ ಎತ್ತರ ಪರ್ವತ ಶ್ರೇಣಿಗಳಿಂದಲೂ ಆಳವಾದ ಕಣಿವೆಗಳಿಂದಲೂ ಸುಂದರವಾದ ಗುಡ್ಡಗಾಡು ಪ್ರದೇಶಗಳಿಂದಲೂ ಕೂಡಿದೆ. ಈ ಪ್ರದೇಶ ಲಕ್ಷಾಂತರ ವರ್ಷಗಳ ಹಿಂದೆ ಹೆಚ್ಚು ಆಳವಿಲ್ಲದ ಟೆಥಿಸ್ ಸಮುದ್ರ ಇದ್ದ ಪ್ರದೇಶವಾಗಿತ್ತೆಂದೂ ಮೂರನೆಯ ಭೂಯುಗದ ಕಾಲದಲ್ಲಿ ಭೂಮಿ, ನೀರು ಮತ್ತು ಮಂಜುಗಡ್ಡೆಯ ಪರಸ್ಪರ ಒತ್ತಡದ ಕಾರಣ ಈ ಪ್ರದೇಶ ಪರ್ವತರಾಶಿಯಾಗಿ ಮಾರ್ಪಟ್ಟಿತ್ತೆಂದೂ ಮುಂದೆ ಸಾವಿರಾರು ವರ್ಷಗಳ ಕಾಲದಲ್ಲಿ ಏಕಾಭಿಮುಖವಾಗಿ ಮೇಲೆತ್ತುವಿಕೆ ಮತ್ತು ಭೂಸವೆತದಿಂದಾಗಿ ಈಗಿರುವ ಕಣಿವೆಗಳೂ ಪರ್ವತಶ್ರೇಣಿಗಳೂ ರೂಪುಗೊಂಡಿವೆಯೆಂದೂ ಊಹಿಸಲಾಗಿದೆ.

ಮೇಲ್ಮೈ ಲಕ್ಷಣ : ಭೂತಾನವನ್ನು ಉನ್ನತ ಹಿಮಾಲಯ ಪರ್ವತ ಶ್ರೇಣಿಗಳು, ಒಳ ಹಿಮಾಲಯ ಪ್ರದೇಶ ಮತ್ತು ಡ್ಯೂಯರ್ಸ್ ಬಯಲು ಸೀಮೆ ಎಂಬುದಾಗಿ ಮೂರು ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಇದರ ಉತ್ತರ ಭಾಗ ಉನ್ನತ ಹಿಮಾಲಯ ಪರ್ವತ ಶ್ರೇಣಿಗಳಿಂದ ಕೂಡಿದೆ. ಇಲ್ಲಿಯ ಹಿಮಾಚ್ಛಾದಿತ ಶಿಖರಗಳು 7,300 ಮೀಗಳಿಗಿಂತಲೂ ಎತ್ತರವಾಗಿವೆ. ಕಣಿವೆಗಳು 3,650 ಮೀ ಗಳಿಂದ 5,475 ಮೀಗಳಷ್ಟು ಎತ್ತರದಲ್ಲಿವೆ. ಟಿಬೆಟ್ ಪ್ರಸ್ಥಭೂಮಿ ಅಂಚಿನ ಕುಲ್ಹಾಗಾಂಗ್ರಿ ಮತ್ತು ಜೋಮೋಲ್ಹಾರಿ ಪರ್ವತಗಳು ಭೂತಾನವನ್ನು ಟಿಬೆಟ್ಟಿನಿಂದ ಪ್ರತ್ಯೇಕಿಸಿವೆ. ಈ ಪರ್ವತಗಳ ಇಳಿಜಾರಿನಲ್ಲಿ ಹುಲ್ಲುಗಾವಲುಗಳಿವೆ. ಇವು ಬೇಸಗೆಯಲ್ಲಿ ಯಾಕ್, ದನಕರುಗಳು ಮತ್ತು ಕುರಿಗಳ ಮೇವಿನ ಪ್ರದೇಶಗಳಾಗಿದ್ದು, ಈ ಭಾಗದಲ್ಲಿ ಜನವಸತಿ ಕಡಿಮೆ. ಒಳ ಹಿಮಾಲಯ ಪ್ರದೇಶವೇ ಭೂತಾನದ ಮಧ್ಯಭಾಗ. ಇಲ್ಲಿಯ ಪರ್ವತಗಳು ಭೂತಾನದ ಪ್ರಮುಖ ನದಿ ಹಾಗೂ ಕಣಿವೆಗಳನ್ನು ಪ್ರತ್ಯೇಕಿಸುವ ಜಲವಿಭಾಜಕಗಳು. ಬ್ಲಾಕ್ ಮೌಂಟೆನ್‌ಶ್ರೇಣಿ ಸಂಕೋಷ್ ಮತ್ತು ಮಾನಸ್ ನದಿಗಳನ್ನು ಪ್ರತ್ಯೇಕಿಸುತ್ತದೆ. ಒಳ ಹಿಮಾಲಯ ಪ್ರದೇಶದಲ್ಲಿ ಅನೇಕ ಫಲವತ್ತಾದ ಕಣಿವೆಗಳಿದ್ದು ಅವುಗಳಲ್ಲಿ ಪ್ರಮುಖವಾದವು ಥಿಂಪು, ಪಾರೋ, ಪುನಾಖಾ ಮತ್ತು ವಾಂಗ್‌ಡಿಫೋಡ್ರಾಂಗ್. ಇಲ್ಲಿ ವರ್ಷಕ್ಕೆ ಸರಾಸರಿ 106 ರಿಂದ 121 ಸೆಂಮೀ ಮಳೆ ಆಗುತ್ತದೆ. ಬತ್ತ ಮುಖ್ಯ ಬೆಳೆ. ಒಳ ಹಿಮಾಲಯ ಪ್ರದೇಶದ ದಕ್ಷಿಣಕ್ಕೆ ಇಕ್ಕಟ್ಟಾದ ಡ್ಯುಯರ್ಸ್ ಬಯಲಿದೆ. ಇದು 12.9–16 ಕಿಮೀ ಅಗಲವಿದ್ದು ಭೂತಾನಿನ ದಕ್ಷಿಣಗಡಿಯುದ್ದಕ್ಕೂ ಹಬ್ಬಿದೆ. ಇಲ್ಲಿ ಉಷ್ಣವಲಯದ ಮಾನ್‌ಸೂನ್ ಹವೆಯಿದೆ. ಅಲ್ಲದೆ ದಟ್ಟವಾದ ಕಾಡುಗಳಿದ್ದು ಆನೆ, ಹುಲಿ, ಜಿಂಕೆ ಮೊದಲಾದ ಕಾಡುಪ್ರಾಣಿಗಳಿವೆ. ಇಲ್ಲಿಯ ವಾತಾವರಣದಿಂದಾಗಿ ಜನವಸತಿ ಹೆಚ್ಚಿಲ್ಲ. ಡ್ಯೂಯರ್ಸ್‌ನ ಉತ್ತರಭಾಗದಲ್ಲಿ ಕಡಿದಾದ ಇಳಿಜಾರು ಪ್ರದೇಶವಿದೆ. ಪರ್ವತಗಳ ತಪ್ಪಲುಗಳಲ್ಲಿ ಕೆಲವು ಸಣ್ಣ ಹಳ್ಳಿಗಳಿವೆ. ಇದರ ದಕ್ಷಿಣಭಾಗ ಸವನ್ನಾ ಹುಲ್ಲುಗಾವಲು ಮತ್ತು ಬಿದಿರು ಕಾಡುಗಳಿಂದ ಕೂಡಿದ್ದು ಕೆಲವು ಭಾಗಗಳಲ್ಲಿ ಕಾಡುಕಡಿದು ಬತ್ತದ ವ್ಯವಸಾಯ ಮಾಡಲಾಗುತ್ತಿದೆ. ಈ ಭಾಗದಲ್ಲಿ ಕೆಲವು ಪಟ್ಟಣ ಮತ್ತು ವ್ಯಾಪಾರ ಕೇಂದ್ರಗಳಿದ್ದು ಜನಸಾಂದ್ರತೆ ಹೆಚ್ಚಿದೆ. ಮಧ್ಯ ಭೂತಾನದಿಂದ ಭಾರತಕ್ಕೆ ಹೋಗುವ ನದಿ, ಕಣಿವೆಗಳ ಮಾರ್ಗಗಳು ಈ ಕೇಂದ್ರಗಳ ಮೂಲಕ ಹಾದು ಹೋಗುತ್ತವೆ.

ವಾಯುಗುಣ : ಉನ್ನತ ಹಿಮಾಲಯ ಪ್ರದೇಶಗಳಲ್ಲಿ ಸಾಧಾರಣವಾಗಿ ಒಣಹವೆ ಇರುತ್ತದೆ. ಮಳೆ ಕಡಿಮೆ. ಮಧ್ಯ ಭೂತಾನಿನಲ್ಲಿ ಪುನಾಖಾ, ವಾಂಗ್‌ಡಿಫೋಡ್ರಾಂಗ್ ಮೊದಲಾದ ಕೆಳಗಿನ ಭಾಗಗಳಲ್ಲಿ ಸಾಧಾರಣ ಉಷ್ಣತೆಯಿದ್ದು ಎತ್ತರಕ್ಕೆ ಹೋದಂತೆಲ್ಲಾ ಚಳಿ ಹೆಚ್ಚಿರುತ್ತದೆ. ಡ್ಯೂಯರ್ಸ್ ಬಯಲಿನಲ್ಲಿ ಬಿಸಿ ಹೆಚ್ಚಾಗಿದ್ದು ತೇವಾಂಶವೂ ಹೆಚ್ಚಿರುತ್ತದೆ. ದೇಶದ ಸರಾಸರಿ ಉಷ್ಣತೆ ಜನವರಿಯಲ್ಲಿ $44^0$ಸೆ ಜುಲೈನಲ್ಲಿ ಮತ್ತು $17^0$ಸೆ ದೇಶದ ಒಟ್ಟು ಸರಾಸರಿ ವಾರ್ಷಿಕ ಮಳೆಯ ಪ್ರಮಾಣ 150–300 ಸೆಂಮೀ ಉನ್ನತ ಹಿಮಾಲಯ ಪ್ರದೇಶ ಹಿಮಾಚ್ಛಾದಿತವಾಗಿರುತ್ತದೆ.

ನದಿಗಳು : ಭೂತಾನದ ಅತ್ಯಂತ ದೊಡ್ಡನದಿ ಡಾಂಗ್ಮೆಚು. ಇದು ಭಾರತದ ಗಡಿಯಿಂದ ಭೂತಾನ ಪ್ರವೇಶಿಸಿ ನೈರುತ್ಯದಿಕ್ಕಿಗೆ ಹರಿದು ಬ್ರಹ್ಮಪುತ್ರ ನದಿ ಸೇರುತ್ತದೆ. ಇದರ ಪ್ರಮುಖ ಉಪನದಿಗಳು ಮಾಂಗ್ದೆಚು ಮತ್ತು ಕುರಿಚು. ಆಮ್ ಮಾಚು ಅಥವಾ ಟೋರ್ಸಾ ನದಿ ಟಿಬೆಟ್ಟಿನ ಉನ್ನತ ಶಿಖರವಾದ ಟಂಗ್ಲಾನಲ್ಲಿ ಹುಟ್ಟಿ ಪಾಷಾದಲ್ಲಿ ಪಶ್ಚಿಮ ಭೂತಾನ ಪ್ರವೇಶಿಸಿ ಬ್ರಹ್ಮಪುತ್ರ ನದಿಯನ್ನು ಸೇರುತ್ತದೆ. ಇದು ಬಂಡೆಗಳಿಂದ ಕೂಡಿದ ಇಕ್ಕಟ್ಟಾದ ಪ್ರದೇಶದಲ್ಲಿ ವೇಗವಾಗಿ ಹರಿಯುವುದರಿಂದ ನೌಕಾಸಂಚಾರಕ್ಕೆ ಯೋಗ್ಯವಾಗಿಲ್ಲ. ಇದರ ಎಡದಂಡೆಯ ಮೇಲೆ ಭೂತಾನಿನ ಪ್ರಮುಖ ವ್ಯಾಪಾರ ಕೇಂದ್ರವಾದ ಪುಂಟ್‌ಷೋಲಿಂಗ್ ಇದೆ. ವಾಂಗ್‌ಚು ಅಥವಾ ರೈಡಕ್ ನದಿ ಟಿಬೆಟ್ಟಿನಲ್ಲಿ ಹುಟ್ಟಿ 370 ಕಿಮೀ ದೂರ ಭೂತಾನಿನಲ್ಲಿ ಹರಿದು ಮುಂದೆ ಪಶ್ಚಿಮ ಬಂಗಾಲವನ್ನು ಪ್ರವೇಶಿಸುತ್ತದೆ. ಇದರ ಉಪನದಿಗಳು ಪಾರೊಚು, ಹಚು, ದೋಚು. ಇಲ್ಲಿಯ ಮತ್ತೊಂದು ಮುಖ್ಯ ನದಿ ಸಂಕೋಷ್. ಇದು ಲಾಸಾದ ಮೇಲ್ಭಾಗದ ಉನ್ನತ ಹಿಮಾಲಯ ಶ್ರೇಣಿಗಳಲ್ಲಿ ಹುಟ್ಟಿ 322 ಕಿಮೀ ದೂರ ಭೂತಾನಿನಲ್ಲಿ ಹರಿಯುತ್ತದೆ. ಇದರ ಪ್ರಮುಖ ಉಪನದಿಗಳಾದ ಪೊಚು ಮತ್ತು ಮೋಚು ಸೇರುವ ಜಾಗದಲ್ಲಿ ಪ್ರಸಿದ್ಧ ಪುನಾಖಾ ಕೋಟೆಯಿದೆ. ಈ ನದಿ ಪೂರ್ವಾಭಿಮುಖವಾಗಿ ಹರಿದು ದಕ್ಷಿಣಕ್ಕೆ ತಿರುಗಿ ಡ್ಯೂಯರ್ಸ್‌ನಲ್ಲಿ ದೊಡ್ಡ ಮತ್ತು ಆಳವಾದ ನದಿಯಾಗಿ ಕೊನೆಗೆ ಬ್ರಹ್ಮಪುತ್ರ ನದಿಯನ್ನು ಸೇರುತ್ತದೆ. ಇಲ್ಲಿಯ ನದಿಗಳು ಎತ್ತರದಲ್ಲಿ ಹುಟ್ಟಿ ಬಯಲಿಗೆ ಹರಿಯುವುದರಿಂದ ಜಲವಿದ್ಯುತ್ ಉತ್ಪಾದನೆಗೆ ಅನುಕೂಲಕರವಾಗಿವೆ.

ಜನಜೀವನ : ಹಿಮಾಲಯದ ಅತ್ಯಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ ದೇಶಗಳಲ್ಲಿ ನೇಪಾಲ ಮೊದಲನೆಯದು, ಭೂತಾನ ಎರಡನೆಯದು. ಆದರೆ ಇದರ ಜನಸಾಂದ್ರತೆ ಕಿಮೀಗೆ ಕೇವಲ 18. ಹೆಚ್ಚಿನ ಜನಸಂಖ್ಯೆ ಮಧ್ಯ ಭೂತಾನದ ಫಲವತ್ತಾದ ಕಣಿವೆಗಳಲ್ಲಿ ಕೇಂದ್ರೀಕೃತವಾಗಿದೆ. ಉತ್ತರ ಮತ್ತು ಮಧ್ಯ ಭೂತಾನಿನಲ್ಲಿ ವಾಸಿಸುವ ಜನ ಟಿಬೆಟಿಯನ್ ಮೂಲದವರಾಗಿದ್ದು ಅವರನ್ನು ಭೋಟೆ ಅಥವಾ ಭುಟಿಯಾ ಎಂದು ಕರೆಯುತ್ತಾರೆ. ಬೌದ್ಧ ಧರ್ಮ ಮತ್ತು ಹಿಂದು ಧರ್ಮವನ್ನು ಇಲ್ಲಿನವರು ಅನುಸರಿಸುತ್ತಾರೆ.

ಆರ್ಥಿಕತೆ: ಭೂತಾನ ಕೃಷಿ ಪ್ರಧಾನದೇಶ. ಇಲ್ಲಿಯ ಕಾರ್ಯಶೀಲ ಜನರಲ್ಲಿ ಹೆಚ್ಚಿನವರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಆದರೆ ದೇಶದ ಶೇ. 9 ರಷ್ಟು ಭೂಮಿಯಲ್ಲಿ ಮಾತ್ರ ಕೃಷಿಮಾಡಲಾಗುತ್ತಿದೆ. ದೇಶದ ಶೇ. 70 ರಷ್ಟು ಭೂಭಾಗ ಕಾಡುಗಳಿಂದ ಕೂಡಿದ್ದು ವ್ಯವಸಾಯ ಯೋಗ್ಯವಾಗಿಲ್ಲ. ಸರಾಸರಿ ಆದಾಯದಲ್ಲಿ ಭೂತಾನ ಪ್ರಪಂಚದ ಅತ್ಯಂತ ಬಡರಾಷ್ಟ್ರಗಳಲ್ಲಿ ಒಂದಾಗಿದೆ. ಇಲ್ಲಿಯ ಮುಖ್ಯ ಬೆಳೆಗಳು ಬತ್ತ, ಗೋದಿ, ಬಾರ್ಲಿ, ಕಾಳುಗಳು, ಮಿಲ್ಲೆಟ್, ಆಲೂಗಡ್ಡೆ, ಕಿತ್ತಳೆ, ಹವೆ ಹಿತವಾಗಿರುವ ಕಡೆ ಸೇಬು, ಪೇರು ಹಣ್ಣು, ಪೀಚ್‌ಪ್ಲಮ್, ಎಪ್ರಿಕಾಟ್ ಮತ್ತು ವಾಲ್ನಟ್ ಬೆಳೆಸಲಾಗುತ್ತದೆ. ಇಲ್ಲಿ ಪ್ರಾಣಿಸಂಪತ್ತು ಹೇರಳವಾಗಿದೆ. ಸಾಕುಪ್ರಾಣಿಗಳು ಯಾಕ್, ಕುರಿ, ಹಂದಿ, ಕುದುರೆ,

ಕೋಳಿ ಇತ್ಯಾದಿ. ವನ್ಯಮೃಗಗಳು ಆನೆ, ಖಡ್ಗಮೃಗ, ಹುಲಿ, ಚಿರತೆ, ಸಾಂಬಾರ್ ಕರಡಿ, ಕಸ್ತೂರಿ ಮೃಗ ಇತ್ಯಾದಿ. ದಕ್ಷಿಣ ಭೂತಾನದ ಮಾನಸ್‌ನಲ್ಲಿ 160.57 ಚ.ಕಿಮೀ ವಿಸ್ತೀರ್ಣದ ವನ್ಯಮೃಗಗಳ ಅಭಯಧಾಮವಿದೆ.

ಭೂತಾನಿನಲ್ಲಿ ಖನಿಜ ನಿಕ್ಷೇಪಗಳು ಸಾಕಷ್ಟಿದ್ದರೂ ಇವುಗಳ ಪರಿಶೋಧನೆ ಇತ್ತೀಚಿನವರೆಗೆ ದೊಡ್ಡ ಪ್ರಮಾಣದಲ್ಲಿ ನಡೆದಿರಲಿಲ್ಲ. ಇಲ್ಲಿ ಜಿಪ್ಸಮ್, ಸುಣ್ಣಕಲ್ಲು, ಗ್ರಾಫೈಟ್, ತಾಮ್ರ, ಡಾಲೊಮೈಟ್ ಮತ್ತು ಕಲ್ಲಿದ್ದಲುಗಳ ನಿಕ್ಷೇಪಗಳಿವೆ. ಭೂತಾನದಲ್ಲಿ ಕೆಲವು ಗೃಹ ಕೈಗಾರಿಕೆಗಳನ್ನು ಬಿಟ್ಟರೆ ಹೆಚ್ಚಿನ ಕೈಗಾರಿಕೆ ಅಭಿವೃದ್ಧಿಯಾಗಿಲ್ಲ.

ಸಾರಿಗೆ ಮತ್ತು ಸಂಪರ್ಕ: ಹಿಂದೆ ಭೂತಾನಿನಲ್ಲಿ ಸಾಕಷ್ಟು ಸಾರಿಗೆ ಸೌಲಭ್ಯಗಳಿರಲಿಲ್ಲ. ಭಾರತ ಸರ್ಕಾರ 1959ರಲ್ಲಿ ಇಲ್ಲಿ ರಸ್ತೆಗಳ ನಿರ್ಮಾಣ ಪ್ರಾರಂಭಿಸಿತು. ಅನಂತರ ಪಂಚವಾರ್ಷಿಕ ಯೋಜನೆಗಳಲ್ಲಿ ರಸ್ತೆ ನಿರ್ಮಾಣ ಹಾಗೂ ಸಮಾಚಾರ ಸಂಪರ್ಕಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಯಿತು. ಪಾರೋ ಮತ್ತು ಕೋಲ್ಕತ ನಡುವೆ ವಿಮಾನ ಸಂಪರ್ಕವಿದೆ. ಇತರ ಅನೇಕ ಕಡೆ ಹೆಲಿಪ್ಯಾಡ್‌ಗಳಿದ್ದು ಸಂಚಾರಕ್ಕೆ ಹೆಲಿಕ್ಯಾಪ್ಟರನ್ನು ಉಪಯೋಗಿಸಲಾಗುತ್ತಿದೆ. ಭೂತಾನ ಮತ್ತು ಇತರ ದೇಶಗಳ ನಡುವೆ ಅಂಚೆ ಸೇವೆಯನ್ನು 1963ರಲ್ಲಿ ಪ್ರಾರಂಭಿಸಲಾಯಿತು. (ಜಿ.ಎಸ್.ಎಸ್.)

**ಭೂಪಟಗಳ ವಿಸ್ತರಣೆ ಮತ್ತು ಸಂಕೋಚನ:** ಮೂಲ ಭೂಪಟವನ್ನು ವಿಸ್ತಾರಗೊಳಿಸುವುದನ್ನು ವಿಸ್ತರಣೆ ಎಂದೂ ಇದಕ್ಕೆ ಬದಲಾಗಿ ಮೂಲ ಭೂಪಟದ ವಿಸ್ತಾರವನ್ನು ಕಡಿಮೆಗೊಳಿಸುವುದನ್ನು ಸಂಕೋಚನ ಎಂದೂ ಕರೆಯಲಾಗುವುದು. ಭೂಪಟಗಳ ವಿಸ್ತರಣೆ ಅಥವಾ ಸಂಕೋಚನ ಪ್ರಮಾಣಕ್ಕೆ ಅನುಗುಣವಾಗಿ ಅವುಗಳ ಅಳತೆಯೂ ಬದಲಾವಣೆ ಹೊಂದುವುದು.

ವಿಸ್ತರಣೆ ಮತ್ತು ಸಂಕೋಚನ ವಿಧಗಳು: ಭೂಪಟಗಳನ್ನು ವಿಸ್ತರಿಸಲು ಹಾಗೂ ಸಂಕೋಚನಗೊಳಿಸಲು ಹಲವಾರು ವಿಧಾನಗಳಿವೆ. ಅವು ಹೀಗಿವೆ:

ಫೋಟೋಗ್ರಾಫಿಕ್ ವಿಧಾನ; ಯಾಂತ್ರಿಕ ವಿಧಾನ; ಫೋಟೋಸ್ಟಾಟ್ ವಿಧಾನ.

ಫೋಟೋಗ್ರಾಫಿಕ್ ವಿಧಾನ : ಭೂಪಟಗಳ ವಿಸ್ತರಣೆ ಮತ್ತು ಸಂಕೋಚನ ವಿಧಾನದಲ್ಲಿ ಅತಿ ಸರಳ, ನಿಖರ ಹಾಗೂ ಕಡಿಮೆ ಅವಧಿಯಲ್ಲಿ ನಿರ್ವಹಿಸಬಹುದಾಗಿದೆ. ಇದರಲ್ಲಿ ಫೋಟೋ ಸ್ಟಾಟ್ ಅಥವಾ ಕ್ಯಾಮೆರಾಗಳನ್ನು ಬಳಸಲಾಗುವುದು. ಫೋಟೋ ಸ್ಟಾಟ್ ವಿಧಾನದಲ್ಲಿ ತಕ್ಷಣವೇ ಮೂಲ ಭೂಪಟವನ್ನಿರಿಸಿ ಬೇಕಾದ ವಿಸ್ತಾರದ ಭೂಪಟವನ್ನು ಪಡೆಯಬಹುದು. ಇದಕ್ಕೆ ಬದಲಾಗಿ ಕ್ಯಾಮೆರಾದಿಂದ ಮೂಲ ಭೂಪಟದ ನೆಗೆಟೀವ್ ಚಿತ್ರ ಪಡೆದು ಅದರಿಂದ ಬೇಕಾದ ಅಳತೆಯ ಭೂಪಟವನ್ನು ಅದಕ್ಕಾಗಿಯೇ ಇರುವ ವಿಸ್ತರೀಕರಣ ಉಪಕರಣದ ಸಹಾಯದಿಂದ ಪಡೆಯಬಹುದು.

ಇತ್ತೀಚಿನ ದಿನಗಳಲ್ಲಿ ಫೋಟೋ ಸ್ಟಾಟ್ ವಿಧಾನ ಹೆಚ್ಚು ಜನಪ್ರಿಯವಾಗಿದೆ. ಇದರಿಂದ ತಕ್ಷಣ ಬೇಕಾದ ವಿಸ್ತಾರದ ಭೂಪಟದ ಅಗತ್ಯದಷ್ಟು ಪ್ರತಿಗಳನ್ನು ಪಡೆಯಬಹುದಾಗಿದೆ. ಈ ಕಾರಣದಿಂದ ಇದು ಹೆಚ್ಚು ಜನಪ್ರಿಯವಾಗಿದೆ. ಭೂಗೋಳವಿಜ್ಞಾನಿಗಳ ಮೂಲಭೂಪಟದ ಉತ್ತಮ ಪ್ರತಿಯನ್ನು ನೀಡಿ, ಅದರ ವಿಸ್ತರಣೆ ಅಥವಾ ಸಂಕೋಚನದ ಪ್ರಮಾಣವನ್ನು ಶೇಕಡ ರೂಪದಲ್ಲಿ ಯಂತ್ರದಿಂದ ಪ್ರತಿ ತೆಗೆಯಬಹುದು. ಅಲ್ಲದೆ ಬಣ್ಣದ ಫೋಟೋ ಸ್ಟಾಟ್ ಪ್ರತಿಯನ್ನು ಪಡೆಯುವ ಸಾಧ್ಯತೆಯಿದೆ. ಮೂಲ ಭೂಪಟದಲ್ಲಿರುವ ವಿವಿಧ ಬಣ್ಣಗಳು ಯಥಾವತ್ತಾಗಿ ಪಡೆಯುವ ಪ್ರತಿಯಲ್ಲಿ ಮೂಡುತ್ತವೆ. ಭೂಗೋಳವಿಜ್ಞಾನದ ಸಂಶೋಧಕನಿಗೆ ಫೋಟೋಸ್ಟಾಟ್ ವಿಧಾನದ ಆವಿಷ್ಕರಣೆ ಒಂದು ವರವಾಗಿ ಪರಿಣಮಿಸಿದೆ. ಜೊತೆಗೆ ನಕ್ಷೆಗಳನ್ನು ಡಿಜಿಟೈಸ್ ಮಾಡಿ ಅಂತರ್ಜಾಲದಲ್ಲಿ ಹಾಕಿ ಎಲ್ಲರಿಗೂ ದೊರೆಯುವಂತೆ ಮಾಡಬಹುದು.

ಭೂಪಟಗಳ ವಿಸ್ತರಣೆ ಅಥವಾ ಸಂಕೋಚನದ ನಿಖರತೆ ಫೋಟೋ ಸ್ಟಾಟ್ ವಿಧಾನದಲ್ಲಿ ಯಂತ್ರಗಳಿಗೆ ವಿಷಯವನ್ನು ಅಳವಡಿಸುವುದರಲ್ಲಿ ಹಾಗೂ ಕ್ಯಾಮೆರಾ ವಿಧಾನದಲ್ಲಿ ಫೋಕಸ್ ಮಾಡುವುದು, ಫೋಟೋ ತೆಗೆದು ಅಭಿವೃದ್ಧಿಪಡಿಸುವ ನಿಖರತೆಯನ್ನು ಅವಲಂಬಿಸಿರುವುದು. ಇದರಿಂದ ಈ ಉಪಕರಣಗಳ ಬಳಕೆಯಲ್ಲಿ ಎಚ್ಚರಿಕೆ ಹಾಗೂ ಪಡೆದ ಭೂಪಟಗಳನ್ನು ಮೂಲ ಭೂಪಟಗಳೊಡನೆ ಹೋಲಿಸಿ ನೋಡಬೇಕಾದ ಅಗತ್ಯವಿದೆ. (ಆರ್.ಎಸ್.)

**ಭೂಪರಿಮಿತಿ:** ಭೂಹಿಡುವಳಿಗೆ ಗರಿಷ್ಠಮಿತಿಯ ನಿರ್ಧಾರ. ಇದು ಭಾರತದ ಭೂಪರಿಮಿತಿಯ ಶಾಸನದ ಉದ್ದೇಶ. ಇದರ ಪ್ರಕಾರ ಯಾರೂ ಭೂಪರಿಮಿತಿಯನ್ನು ಮೀರಿ ಹಿಡುವಳಿಯನ್ನು ಇಟ್ಟುಕೊಳ್ಳುವಂತಿಲ್ಲ. ಭೂಪರಿಮಿತಿಗಿಂತ ಹೆಚ್ಚು ಭೂಮಿ ಹೊಂದಿದ ಅವರಿಂದ ಹೆಚ್ಚುವರಿ ಭೂಮಿಯನ್ನು ತೆಗೆದುಕೊಂಡು ಅದನ್ನು ಚಿಕ್ಕಹಿಡುವಳಿಯ ಸಾಗುವಳಿದಾರರಲ್ಲಿ ಮತ್ತು ಭೂರಹಿತ ಕೃಷಿ ಕಾರ್ಮಿಕರಲ್ಲಿ ಹಂಚುವುದೂ ಸ್ವತಃಭೂಮಿಯನ್ನು ಸಾಗುವಳಿ ಮಾಡುವವರಿಗೆ ಮಾತ್ರವೇ ಭೂಮಿ ಸಿಗುವಂತೆ ಮಾಡುವುದೂ ಈ ಶಾಸನದ ಕಾರ್ಯಕ್ರಮ.

ಹಿಂದೆ ಭೂಪರಿಮಿತಿಯನ್ನು ನಿರ್ಧರಿಸುವಾಗ ವ್ಯಕ್ತಿಯನ್ನು ಗಮನಕ್ಕೆ ತೆಗೆದುಕೊಳ್ಳುತ್ತಿದ್ದರು. ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೆ ಒಂದು ಮಿತಿಯಲ್ಲಿ ಭೂಮಿಯನ್ನು ಪಡೆದುಕೊಳ್ಳುವ ಅಧಿಕಾರ ಇತ್ತು. ಇದರಿಂದ ಕುಟುಂಬದ ಭೂಮಿಯ ಗಾತ್ರ ಹೆಚ್ಚುತ್ತಿತ್ತು. ಅಲ್ಲದೆ ಹಿಂದಿನ ಭೂಪರಿಮಿತಿ ಶಾಸನಗಳಲ್ಲಿ ಕೆಲವು ಪ್ರಕಾರದ ಭೂಮಿಗಳಿಗೆ, ಉದಾಹರಣೆಗೆ: ಉದ್ಯಾನಗಳು, ಗೋಮಾಳ, ಸಕ್ಕರೆ ಕಾರ್ಖಾನೆಗಳ ಕಬ್ಬು ಬೆಳೆಯುವ ಪ್ರದೇಶಗಳು, ಯಾಂತ್ರೀಕೃತ ಹೊಲಗಳು, ಸಹಕಾರಿ ಹೊಲಗಳು ಮತ್ತು ಖಾಸಗಿ ವಿಶ್ವಸ್ಥ ಮಂಡಳಿಗಳ ಜಮೀನುಗಳೇ ಮುಂತಾದವಕ್ಕೆ ಭೂಪರಿಮಿತಿ ಶಾಸನ ಅನ್ವಯಿಸುತ್ತಿರಲಿಲ್ಲ.

ಭಾರತದ ಮುಖ್ಯಮಂತ್ರಿಗಳ ಸಮ್ಮೇಳನ (1972 ಜುಲೈ 23) ಭೂಪರಿಮಿತಿ ಕುರಿತು ಈ ಕೆಳಗಿನ ಶಿಫಾರಸುಗಳನ್ನು ಮಾಡಿತು. ಯಾವುದೇ ರಾಜ್ಯದಲ್ಲಿ ಭೂಪರಿಮಿತಿಯನ್ನು ನಿರ್ಧರಿಸುವಾಗ, ಭೂಮಿಯ ಫಲವಂತಿಕೆ ಮತ್ತು ಇತರ ಸಂಗತಿಗಳನ್ನು ಗಮನಿಸಬೇಕು. ನೀರಾವರಿ ಸೌಲಭ್ಯಗಳಿದ್ದು ಎರಡು ಬೆಳೆಗಳನ್ನು ಪಡೆಯಬಹುದಾದ ಅತ್ಯುತ್ತಮ ಭೂಮಿಗೆ ಭೂಪರಿಮಿತಿ 4 ರಿಂದ 7 ಹೆಕ್ಟೇರುಗಳು. ಒಂದೇ ಒಂದು ಬೆಳೆಯನ್ನು ಪಡೆಯುವ ಭೂಮಿಗೆ ಅದು ಸು. 11 ಹೆಕ್ಟೇರುಗಳು. ಉಳಿದ ಪ್ರಕಾರದ ಎಲ್ಲ ಭೂಮಿಗೆ ಸು. 22 ಹೆಕ್ಟೇರುಗಳು. ಮರುಭೂಮಿ ಮತ್ತು ಗುಡ್ಡಗಾಡು ಪ್ರದೇಶಗಳ ಭೂಪರಿಮಿತಿಯನ್ನು ನಿರ್ಧರಿಸುವ ಅಧಿಕಾರ ರಾಜ್ಯಸರ್ಕಾರಗಳಿಗೆ ಸೇರಿದ್ದು. ಭೂಪರಿಮಿತಿ ಕುಟುಂಬದ ಭೂಮಿಗೆ ಅನ್ವಯಿಸಬೇಕು. ಕುಟುಂಬ ಎಂದರೆ ಗಂಡ ಹೆಂಡತಿ ಮತ್ತು ಅಪ್ರಾಯಸ್ಥ ಮಕ್ಕಳು. ಕುಟುಂಬದ ಸದಸ್ಯರ ಸಂಖ್ಯೆ ಐದನ್ನು ಮೀರಿದರೆ ಹೆಚ್ಚುವರಿ ಭೂಮಿಯನ್ನು ಪ್ರತಿಯೊಬ್ಬ ಹೆಚ್ಚುವರಿ ಸದಸ್ಯನಿಗೆ ನೀಡಬೇಕು. ಆದರೆ ಇಲ್ಲಿ ಈ ರೀತಿ ನೀಡಿದ ಭೂಮಿ ಕುಟುಂಬಕ್ಕೆ ಸಂಬಂಧಿಸಿದ ಭೂಪರಿಮಿತಿಯ ಎರಡರಷ್ಟು ಭೂಮಿಯನ್ನು ಮೀರಕೂಡದು. ಕುಟುಂಬ ಹೊಂದಿದ ಒಟ್ಟು ಭೂಮಿಯ ಮೊತ್ತಕ್ಕೆ ಭೂಪರಿಮಿತಿ ಅನ್ವಯಿಸುವುದು. ಭೂಪರಿಮಿತಿಯನ್ನು ನಿರ್ಧರಿಸುವಾಗ ಕುಟುಂಬದ ಪ್ರಾಯಸ್ಥ ಮಕ್ಕಳನ್ನು ಪ್ರತ್ಯೇಕ ಘಟಕ ಎಂದು ಪರಿಗಣಿಸಲಾಗುತ್ತದೆ.

ಭೂಪರಿಮಿತಿಗೆ ರಿಯಾಯಿತಿಗಳು: ಚಹ, ಕಾಫಿ, ರಬ್ಬರ್, ಏಲಕ್ಕಿ ಮತ್ತು ಕೋಕೋ ತೋಟಗಳಿಗೆ, ಭೂದಾನ ಯಜ್ಞಸಮಿತಿ, ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು, ಕೇಂದ್ರ ಇಲ್ಲವೆ ರಾಜ್ಯ ಸರ್ಕಾರಗಳು ಮತ್ತು ಸ್ಥಾನಿಕ ಸಂಸ್ಥೆಗಳು ಇವುಗಳ ಭೂಮಿಗಳಿಗೆ, ಔದ್ಯಮಿಕ ಮತ್ತು ವಾಣಿಜ್ಯ ಸಂಸ್ಥೆಗಳ ಭೂಮಿಗೆ ಸಹಕಾರ ಬೇಸಾಯ ಸಂಘಗಳಿಗೆ ಸೇರಿದ ಭೂಮಿ, ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಕಾಲೇಜುಗಳು, ಕೃಷಿ ಶಾಲೆಗಳು ಮತ್ತು ಸಂಶೋಧನ ಸಂಸ್ಥೆಗಳು ಇವುಗಳಿಗೆ ಸೇರಿದ ಭೂಮಿ, ಧಾರ್ಮಿಕ ಧರ್ಮಾರ್ಥ ಮತ್ತು ಸಾರ್ವಜನಿಕ ವಿಶ್ವಸ್ಥ ಮಂಡಳಿಗಳಿಗೆ ಸೇರಿದ ಜಮೀನುಗಳಿಗೆ ಭೂಪರಿಮಿತಿ ಶಾಸನದಿಂದ ರಿಯಾಯಿತಿಯನ್ನು ನಿರ್ಧರಿಸುವ ಮತ್ತು ನೀಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಸೇರಿದ್ದು. ಕಬ್ಬಿನ ಗದ್ದೆಗಳಿಗೆ ರಿಯಾಯಿತಿ ಸಲ್ಲದು. ಆದರೆ ಸಕ್ಕರೆ ಕಾರ್ಖಾನೆಗಳು ಸಂಶೋಧನೆ ಮತ್ತು ಅಭಿವೃದ್ಧಿ ದೃಷ್ಟಿಯಿಂದ 40 ಹೆಕ್ಟೇರುಗಳಿಗೆ ಮೀರದಷ್ಟು ಭೂಮಿಯನ್ನು ಇಟ್ಟುಕೊಳ್ಳಬಹುದು. ಭೂ ಪರಿಮಿತಿಯ ನಿರ್ಧಾರಕ್ಕಾಗಿ ಅಸ್ತಿತ್ವದಲ್ಲಿರುವ ಉದ್ಯಾನಗಳನ್ನು ಒಣಭೂಮಿ ಎಂದು ಪರಿಗಣಿಸಬಹುದು. ತೆಂಗು ಮತ್ತು ಅಡಿಕೆ ತೋಟಗಳನ್ನು, ಬಾಳೆ ಬೆಳೆಯುವ ಭೂಮಿಯನ್ನು ಮತ್ತು ದ್ರಾಕ್ಷಿ ತೋಟಗಳನ್ನು ಉದ್ಯಾನಗಳೆಂದು ಪರಿಗಣಿಸಲಾಗದು. ರಾಷ್ಟ್ರೀಯ ಮಟ್ಟದಲ್ಲಿ ಪರಾಕ್ರಮ ತೋರಿಸಿದವರಿಗೆ ಭೂಮಿಯನ್ನು ಬಹುಮಾನವಾಗಿ ಕೊಡುವುದನ್ನು ಸಹ ನಿಲ್ಲಿಸಬೇಕು. ಈ ತಿದ್ದುಪಡಿ ಮಾಡಿದ ಭೂಪರಿಮಿತಿ ಶಾಸನ 1971 ಜನವರಿ 24ರ ಪೂರ್ವಾನ್ವಯ ಜಾರಿಗೆ ಬರುವಂತೆ ಮಾಡಬೇಕು. ಹೆಚ್ಚುವರಿ ಭೂಮಿಯನ್ನು ವಿತರಣೆ ಮಾಡುವಾಗ ಭೂಮಿ ಇಲ್ಲದ ಕೃಷಿ ಕಾರ್ಮಿಕರಿಗೆ ಮತ್ತು ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಭೂಮಿ ಇಲ್ಲದ ಕೃಷಿಕಾರ್ಮಿಕರಿಗೆ ಆದ್ಯತೆ ನೀಡಬೇಕು. ತಿದ್ದುಪಡಿ ಮಾಡಿದ ಭೂಪರಿಮಿತಿ ಶಾಸನಗಳನ್ನು ಜಾರಿಗೆ ತರುವ ಜವಾಬ್ದಾರಿ ಆಯಾ ರಾಜ್ಯಸರ್ಕಾರಗಳದ್ದು ಇತ್ಯಾದಿ.

ಭಾರತದ ಭೂವ್ಯವಸ್ಥೆಯ ದೋಷಗಳನ್ನು ಕುರಿತು ಹೇಳುವಲ್ಲಿ ಆಸ್ತಿಯ ಅತಿಕೇಂದ್ರೀಕರಣ, ಕಡಿಮೆ ಭೂಉತ್ಪನ್ನತೆ. ಅಧಿಕ ಆರ್ಥಿಕ, ಸಾಮಾಜಿಕ ಅಸಮಾನತೆ ಇತ್ಯಾದಿಗಳಿದ್ದು ಇವನ್ನು ಹೋಗಲಾಡಿಸಲು ಭೂಸುಧಾರಣೆಯನ್ನು ಸಮಾನತೆಯ ಸಿದ್ಧಾಂತದ ಮೇಲೆ ರೂಪಿಸಬೇಕು ಎನ್ನುವವರಿದ್ದಾರೆ. ಸಮಾನತೆಯ ಸಿದ್ಧಾಂತದ ಮೇಲೆಯೇ ಭೂಪರಿಮಿತಿ ಶಾಸನ ಆಧಾರಿತವಾದರೆ ಇದರಿಂದ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಪ್ರಗತಿ ಸಾಧಿಸಬಹುದು. ಭಾರತದಲ್ಲಿ ಭೂವಿತರಣೆ ಸಮರ್ಪಕವಾಗಿಲ್ಲ. ಒಟ್ಟು ಸಾಗುವಳಿದಾರರ ಶೇ. 5ರಷ್ಟು ಮಾತ್ರ ಇರುವ ಅತಿದೊಡ್ಡ ಸಾಗುವಳಿದಾರರು ಒಟ್ಟು ಭೂಮಿಯ ಶೇ. 30 ರಷ್ಟು ಅಧಿಕ ಭಾಗದ ಒಡೆಯರು. ಶೇ. 40ರಷ್ಟು ಅಧಿಕ ಸಂಖ್ಯೆಯಲ್ಲಿ ಇರುವ ಸಣ್ಣ ಹಿಡುವಳಿದಾರರಾದರೋ ಕೇವಲ ಶೇ. 10ರಷ್ಟು ಭಾಗದ ಒಡೆಯರು. ಇನ್ನು ಶೇ. 20ರಷ್ಟು ಗ್ರಾಮೀಣ ಕುಟುಂಬಗಳಿಗೆ ಭೂಮಿಯೇ ಇಲ್ಲ.

ಇದರಿಂದಾಗಿ ಕೃಷಿ ಆದಾಯದಲ್ಲಿ ಮತ್ತು ಉತ್ಪಾದನೆಯಲ್ಲಿ ಅಸಮತೆ ಹೆಚ್ಚು. ಶ್ರೀಮಂತಿಕೆ ಮತ್ತು ಬಡತನ ಭೂಮಿಯ ಅಸಮ ವಿತರಣೆಯಿಂದ ನಿರ್ಧಾರವಾಗಿದೆ ಎನ್ನಬಹುದು. ಗ್ರಾಮೀಣಭಾರತದಲ್ಲಿ ಸಂಪತ್ತು ಮತ್ತು ಆದಾಯಗಳಲ್ಲಿ ಅಸಮತೆ ಉಂಟಾದದ್ದು ಭೂಮಿಯ ಅಸಮ ವಿತರಣೆಯಿಂದಾಗಿ. ಹೀಗಾಗಿ ಸಮಾಜವಾದಿ ಪದ್ಧತಿಯ ಸಮಾಜವನ್ನು ಸ್ಥಾಪಿಸುವುದು ಸಾಧ್ಯವಾಗಲಿಲ್ಲ. ಭೂಪರಿಮಿತಿ ಶಾಸನವನ್ನು ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿ ಜಾರಿಗೆ ತಂದರೆ ಸಮಾಜವಾದಿ ಪದ್ಧತಿ ಸಮಾಜವನ್ನು ನಿರ್ಮಿಸುವುದು ಸಾಧ್ಯ.

ಭೂಪರಿಮಿತಿ ಪುಟ್ಟ ಕೃಷಿಕ ಸಮಾಜಕ್ಕೆ ಅನುವು ಮಾಡಿಕೊಡುತ್ತದೆ. ಸಾಗುವಳಿದಾರ ತಾನು ಸಾಗುವಳಿ ಮಾಡುವ ಭೂಮಿಯ ಒಡೆಯನಾದರೆ ಭೂಮಿಯನ್ನು ಬಹಳ ಉತ್ಸಾಹದಿಂದ ಸಾಗುವಳಿ ಮಾಡುತ್ತಾನೆ. ಅವನಲ್ಲಿರುವ ಶಕ್ತಿಯನ್ನೆಲ್ಲ ಸಾಗುವಳಿಗೆ ಸಮರ್ಪಿಸುತ್ತಾನೆ. ಭೂಸಾಗುವಳಿಯಲ್ಲಿ ಗರಿಷ್ಠ ಪ್ರತಿಫಲ ಪಡೆಯುತ್ತಾನೆ. ಪುಟ್ಟ ಬೇಸಾಯ ವ್ಯವಸ್ಥೆ ಭಾರತದಂಥ ದೈಹಿಕ ಶ್ರಮಾವಲಂಬಿತ ಅರ್ಥವ್ಯವಸ್ಥೆಗೆ ಹೊಂದುತ್ತದೆ. ಈ ಬೇಸಾಯಗಾರರು ಹೊಲಗಳಲ್ಲಿ ತಮ್ಮ ಕುಟುಂಬದ ಶ್ರಮವನ್ನೇ ಬಳಸಿಕೊಳ್ಳುತ್ತಾರೆ. ಇಲ್ಲಿ ಗರಿಷ್ಠ ಉದ್ಯೋಗ ಮತ್ತು ಉತ್ಪಾದನೆ ಸಾಧ್ಯ. ಭೂ ಪರಿಮಿತಿ ನೀತಿಧೋರಣೆ ಸಹಕಾರಿ ಬೇಸಾಯವನ್ನು ಪ್ರೋತ್ಸಾಹಿಸುತ್ತದೆ. (ಬಿ.ಸಿ.)

**ಭೂಪಾತ ಮತ್ತು ಶಿಲಾಪಾತ:** ಸಾಪೇಕ್ಷವಾಗಿ ಶುಷ್ಕವಾಗಿರುವ ಮಣ್ಣು, ಶಿಲೆ ಇಲ್ಲವೆ ಇವೆರಡರಿಂದಲೂ ಒಡಗೂಡಿದ ರಾಶಿ ಗುರುತ್ವ ಬಲದ ಕಾರಣ ಕೆಳಮುಖವಾಗಿ ಜಾರುವ ಇಲ್ಲವೆ ಬೀಳುವ ವಿದ್ಯಮಾನ (ಲ್ಯಾಂಡ್ ಸ್ಲೈಡ್; ಲ್ಯಾಂಡ್ ಫಾಲ್; ಲ್ಯಾಂಡ್ ಸ್ಲಿಪ್; ಸ್ಲಂಪ್). ಇದನ್ನು ಭೂ ಕುಸಿತ ಎಂದೂ ಕರೆಯುತ್ತಾರೆ. ಎತ್ತರ ಪರ್ವತ ಪ್ರದೇಶಗಳಲ್ಲಿಯ ಕಡಿದಾದ ಇಳಿಜಾರುಗಳಲ್ಲಿ ಹಾಗೂ ನದಿ ಮತ್ತು ಸಮುದ್ರ ತೀರಗಳಲ್ಲಿ ಭೂಪಾತಗಳು ಸಾಮಾನ್ಯ. ಆಧುನಿಕ ಜೀವಕಲ್ಪದಲ್ಲಿ ಆಲ್ಪ್ಸ್, ಹಿಮಾಲಯ, ರಾಕೀಸ್ ಮತ್ತು ಆಂಡೀಸ್ ಮೊದಲಾದ ಪರ್ವತ ಪ್ರದೇಶಗಳಲ್ಲಿ ಹಿಮನದಿಗಳ ಪ್ರಾಬಲ್ಯ ಹೆಚ್ಚು. ಬಿಸಿಲಿನ ತಾಪಕ್ಕೆ ಕರಗಿ, ನೀರು ಇಲ್ಲದ ಅಂಥ ಪ್ರದೇಶಗಳ ಮೇಲೆ ಬೀಳುವ ಮಳೆಯ ನೀರು ಅಲ್ಲಿಯ ಶಿಲೆಗಳಲ್ಲಿಯ ಬಿರುಕುಗಳ ಹಾಗೂ ಪದರಗಳ ಮೂಲಕ ಇಳಿದುಬರುತ್ತದೆ. ಹೀಗಾದಾಗ ಕೆಳಗಿರುವ ಗಟ್ಟಿಕಲ್ಲಿನ ಮೇಲೆ ಶೇಖರವಾಗಿರುವ ಚೂರುಗಲ್ಲು ಮತ್ತು ಮಣ್ಣಿನರಾಶಿ ನೀರಿನಿಂದ ನೆನೆದು ರಾಶಿಯ ತೂಕ ಹೆಚ್ಚುತ್ತದೆ. ಇದರಿಂದ ಮೇಲಿನ ರಾಶಿ ನಿಧಾನವಾಗಿ ಕೆಳಕ್ಕೆ ಜಾರುತ್ತ ಹೋಗುತ್ತದೆ. ಈ ಕ್ರಿಯೆಗೆ ನೆಲಕುಸಿತ ಎಂದು ಹೆಸರು. ಭೂಕಂಪನ ಸಂಭವಿಸಿದಾಗ ಭೂಮಿಯ ಮೇಲೆ ಇರುವ ಕಲ್ಲುಮಣ್ಣಿನ ರಾಶಿಯೊಡನೆ ಅಡಿಗಲ್ಲೂ ಕೂಡಿಕೊಂಡು ರಭಸದಿಂದ ಕೆಳಕ್ಕೆ ಜಾರಿ ಬರುತ್ತದೆ. ಈ ಕ್ರಿಯೆಯೇ ಭೂಪಾತ. ಇಂಥ ಭೂಪಾತಗಳ ಮಾರ್ಗಮಧ್ಯದಲ್ಲಿಯ ಜನವಸತಿ ಪ್ರದೇಶಗಳಿಗೆ ಆಗುವ ಹಾನಿ ಬಲು ಅಪಾರ.

ಗಟ್ಟಿಯಾದ ಆಧಾರ ಇಲ್ಲದಿರುವ ಹಾಗೂ ಜಾರುವಂಥ ಮೇಲ್ಭಾಗ ನೆಲಕುಸಿತ ಮತ್ತು ಭೂಪಾತಗಳಿಗೆ ಅವಕಾಶಮಾಡಿಕೊಡುತ್ತದೆ. ಛಿದ್ರಗಳು ಇಲ್ಲವೆ ಬಿರುಕುಗಳಿರುವ ಶಿಲೆಗಳ ಕೆಳಗೆ ಮೆದುಮಣ್ಣಿನ ರಾಶಿ ಇಲ್ಲವೆ ಪದರಗಳು ಅಡಿಗಲ್ಲಿನ ಮೇಲೆ ನಿಂತಿರುವ ಸಂದರ್ಭಗಳು ಇಂಥಲ್ಲೆಲ್ಲ ಭೂಪಾತಗಳಾಗುವ ಸಾಧ್ಯತೆ ಹೆಚ್ಚು. ಕೊಲರಾಡೊ, ಕೊಲಂಬಿಯ ಪ್ರಸ್ಥಭೂಮಿಗಳಲ್ಲಿಯ ಸ್ತರ ಶಿಲೆಗಳಾಗಲೀ, ಲಾವಾಶಿಲೆಗಳಾಗಲೀ ಶೇಖರಣೆಗೊಂಡಿರುವ ಪ್ರದೇಶಗಳಲ್ಲಿ ಸು. 330 ಮೀ ಎತ್ತರ ಹಾಗೂ ಸು. 15 ಕಿಮೀ ಉದ್ದ ಇರುವ ಕಲ್ಲಿನ ರಾಶಿ ವೇಗದಿಂದ ಮೇಲಿಂದ ಕೆಳಕ್ಕೆ ಬೀಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ನೀರಿನ ಅಡಿಯ ನೆಲವೂ ಕುಸಿದು ಬೀಳುವುದುಂಟು. ಆ ಸಂದರ್ಭದಲ್ಲಿ ಕಲ್ಲಿನ ಚೂರುಗಳೂ ಮಣ್ಣು ನೀರಿನೊಡನೆ ಬೆರೆತು ಕೆಸರು ನೀರಿನ ಪ್ರವಾಹ (ಟರ್ಬಿಡಿಟಿ ಕರೆಂಟ್) ಉಂಟಾಗುತ್ತದೆ. ಇಂಥ ನೀರಿನ ಸಾಂದ್ರತೆ ತಿಳಿನೀರಿಗಿಂತಲೂ ಅಧಿಕವಾಗಿರುವುದರಿಂದ ಇದು ಸಾಗರ ತಳದಲ್ಲಿರುವ ಇಳಿಜಾರುಗಳ ಕೆಳಗೆ ಬಹಳ ಬಿರುಸಿನಿಂದ ಜಾರುತ್ತದೆ.

ಭೂಪಾತಗಳಿಂದ ಆಗುವ ಹಾವಳಿಯನ್ನು ತಡೆಗಟ್ಟಲು ಭೂವಿಜ್ಞಾನಿಗಳು ಹಾಗೂ ತಂತ್ರಜ್ಞರು ಸತತ ಪ್ರಯತ್ನಗಳನ್ನು ನಡೆಸುತ್ತಲೇ ಇದ್ದಾರೆ. ಭೂಪಾತಗಳು ಸಂಭವಿಸುವ ಎಡೆಗಳಲ್ಲಿ ಕಾಂಕ್ರೀಟಿನ ದಪ್ಪಗೋಡೆಗಳನ್ನು ನಿರ್ಮಿಸುವುದು, ಆ ಪ್ರದೇಶದ ನೀರಾವರಿ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸುವುದು ಮೊದಲಾದ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. (ಎ.ಎನ್.ಎಸ್.ಐ.)

**ಭೂಪಾಲ್:** ಮಧ್ಯಪ್ರದೇಶ ರಾಜ್ಯದ ರಾಜಧಾನಿ, ಕೈಗಾರಿಕಾ ನಗರ ಹಾಗೂ ಜಿಲ್ಲೆಯ ಆಡಳಿತ ಕೇಂದ್ರ. ಹಿಂದೆ ರಾಜರ ಆಡಳಿತಕ್ಕೆ ಒಳಪಟ್ಟ ಪ್ರಾಂತ್ಯವಾಗಿತ್ತು. ಈ ಜಿಲ್ಲೆಯನ್ನು ಪೂರ್ವದಲ್ಲಿ ವಿದಿಶಾ, ರಾಯ್‌ಸೇನ್ ಜಿಲ್ಲೆಗಳೂ ಪಶ್ಚಿಮದಲ್ಲಿ ರಾಜಗೀರ್ ಮತ್ತು ಸೆಹೊರೆ ಜಿಲ್ಲೆಗಳೂ ಉತ್ತರದಲ್ಲಿ ವಿದಿಶಾ, ಗುನ ಜಿಲ್ಲೆಗಳೂ ದಕ್ಷಿಣದಲ್ಲಿ ರಾಯ್‌ಸೇನ್ ಮತ್ತು ಸೆಹೊರೆ ಜಿಲ್ಲೆಗಳೂ ಸುತ್ತುವರಿದಿವೆ. ಜಿಲ್ಲೆಯ ವಿಸ್ತೀರ್ಣ 2,772 ಚ.ಕಿಮೀ, ಜನಸಂಖ್ಯೆ 18,36,784 (2001).

ಭೂಪಾಲ್ ನಗರ ಸಮುದ್ರಮಟ್ಟದಿಂದ ಸು. 540 ಮೀ ಎತ್ತರದಲ್ಲಿದೆ. ಉ.ಅ.23°16′ ಪೂ.ರೇ. 77°36′ನಲ್ಲಿದೆ. ರಾಜ್ಯದ ಆಡಳಿತ ಕೇಂದ್ರದ ಜನಸಂಖ್ಯೆ 14,54,830. ಸ್ವಾತಂತ್ರ್ಯ ಪೂರ್ವದಲ್ಲಿ ಮುಸ್ಲಿಂ ರಾಜ್ಯವೊಂದರ (ರಿಯಾಸತ್) ಕೇಂದ್ರವಾಗಿತ್ತು. ಧಾರಾನಗರದ ಪರಮಾರದೊರೆ ಭೋಜಪಾಲ ಈ ನಗರವನ್ನು ಕಟ್ಟಿದುದರಿಂದ ಇದಕ್ಕೆ ಭೂಪಾಲವೆಂದು ಹೆಸರು ಬಂದಿತೆಂದು ಪ್ರತೀತಿ.

ಭೂಪಾಲ ಸರೋವರಗಳ ನಗರ. ಶ್ಯಾಮಲ ಮತ್ತು ಈದ್‌ಗಾ ಬೆಟ್ಟಗಳ ನಡುವೆ ಇರುವ ಇಲ್ಲಿಯ ಭೂಪಾಲ ಸರೋವರದ ಸುತ್ತಳತೆ 11 ಕಿಮೀಗೂ ಹೆಚ್ಚು. ನಗರಕ್ಕೆ ನೀರು ಸರಬರಾಜು ಆಗುವುದು ಈ ಸರೋವರದಿಂದಲೇ. ಇದಲ್ಲದೆ 1794ರಲ್ಲಿ ಛೋಟೆಖಾನ್ ಎಂಬ ಮಂತ್ರಿಯೊಬ್ಬ ಕಟ್ಟಿಸಿದ ಅಣೆಕಟ್ಟಿನಿಂದ ರೂಪುಗೊಂಡ ಎರಡು ಸರೋವರಗಳು ಪ್ರೇಕ್ಷಣೀಯವಾದವು. ಕುದ್‌ಸಿಯಾ ಬೇಗಮ್ ಎಂಬ ನವಾಬಳು ಕಟ್ಟಿಸಿದ ಜಾಮಾಮಸೀದಿ ವಿಶಾಲವಾದ, ಕೆಂಪು ಕಣಶಿಲೆಯ ಸೊಗಸಾದ ಕಟ್ಟಡ. ನಗರದ ಯಾವುದೇ ಮೂಲೆಯಿಂದ ನೋಡಿದರೂ ಈ ಮಸೀದಿ ಗೋಚರಿಸುತ್ತದೆ.

ಭೂಪಾಲದ ಅರಮನೆಗಳು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ನವಾಬರಿಂದ ಸೇರ್ಪಡೆಯಾದ ಸಂಕೀರ್ಣ ಕಟ್ಟಡಗಳು. ಇವಕ್ಕೆ ನಿರ್ದಿಷ್ಟ ವಿನ್ಯಾಸವಿಲ್ಲ. ಬೇನಜೀರ್ ಅರಮನೆ, ತಾಜ್–ಉಲ್–ಮಸೀದಿ, ಮೋತಿ ಮಸೀದಿ ಹಾಗೂ ಸದರ್ ಮಂಜಿಲ್ ಇನ್ನಿತರ ಕೆಲವು ಪ್ರಮುಖ ಕಟ್ಟಡಗಳು. ಇಲ್ಲಿಯ ಫತೇಗಢ ಕೋಟೆಯನ್ನು 1728ರಲ್ಲಿ ದೋಸ್ತ್ ಮಹಮದ್ ಖಾನ್ ಕಟ್ಟಿಸಿದ. ಇಲ್ಲಿರುವ ಇತರ ಕಟ್ಟಡಗಳಲ್ಲಿ ಪರಮಾರ ಉದಯಾದಿತ್ಯನ (1059–80) ಪತ್ನಿ ಕಟ್ಟಿಸಿದ್ದೆನ್ನಲಾದ ಸಭಾಮಂಡಲ ಎನ್ನುವ ದೇಗುಲ ಬಹುಶಃ ಭೂಪಾಲದ ಪ್ರಾಚೀನ ಕಟ್ಟಡ. ಈಚೆಗೆ ಬಿರ್ಲಾ ಕುಟುಂಬ ಕಟ್ಟಿಸಿದ ಲಕ್ಷ್ಮೀನಾರಾಯಣ ಮಂದಿರವೂ ಮನೋಹರವಾಗಿದೆ.

ಹತ್ತಿ, ಗೋದಿ, ಬೇಳೆ ಕಾಳುಗಳು, ಜೋಳ, ಕಬ್ಬು, ಎಳ್ಳು ಮೊದಲಾದವು ಇಲ್ಲಿಯ ಮುಖ್ಯ ವ್ಯಾಪಾರಿ ಬೆಳೆಗಳು. ಮಗ್ಗದ ಬಟ್ಟೆಗಳು, ಯಂತ್ರಸಾಮಗ್ರಿ, ಪಾತ್ರೆ, ಕೈಚೀಲಗಳು, ಅಲಂಕರಣ ವಸ್ತುಗಳು ಇಲ್ಲಿ ತಯಾರಾಗುತ್ತವೆ. ಭೂಪಾಲ ಕೈಗಾರಿಕಾರಂಗದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಇಲ್ಲಿಯ ಹೆವಿ ಎಲೆಕ್ಟ್ರಿಕಲ್ಸ್ (ಇಂಡಿಯಾ) ಲಿಮಿಟೆಡ್‌ನಲ್ಲಿ ಟರ್ಬೈನ್, ಸ್ವಿಚ್‌ಗಿಯರುಗಳನ್ನು ತಯಾರಿಸುತ್ತಾರೆ. ಈಚೆಗೆ (1984) ಇಲ್ಲಿಯ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಲ್ಲಿ ಉಂಟಾದ ಅನಿಲ ಸೋರುವಿಕೆಯ ಪರಿಣಾಮವಾಗಿ ಸು. 3,800 ಜನ ಮೃತರಾದರು ಮತ್ತು ಇತರ ಸಾವಿರಾರು ಜನ ರೋಗರುಜಿನಗಳಿಗೆ ತುತ್ತಾದರು. ಭೂಪಾಲ ನಗರ ರೈಲ್ವೆ ನಿಲ್ದಾಣ ಕೇಂದ್ರ. ವಿಮಾನ ನಿಲ್ದಾಣವೂ ಇದೆ. ರಾಷ್ಟ್ರೀಯ ಹೆದ್ದಾರಿ ಈ ನಗರದ ಮೂಲಕವೇ ಹಾಯ್ದು ಹೋಗಿದೆ. ಇಲ್ಲಿ ಭೂಪಾಲ ವಿಶ್ವವಿದ್ಯಾಲಯವಿದೆ. ಜೊತೆಗೆ ಆಧುನಿಕ ನಗರ ಸೌಕರ್ಯಗಳೆಲ್ಲ ಇವೆ. ಇದರ ಸುತ್ತಲ ಪ್ರೇಕ್ಷಣೀಯ ಸ್ಥಳಗಳಲ್ಲಿ ಸು. 45 ಕಿಮೀ ದೂರದಲ್ಲಿ ಪ್ರಸಿದ್ಧ ಬೌದ್ಧ ಕೇಂದ್ರವಾಗಿದ್ದ ಸಾಂಚಿ ಇದೆ. ಶೈವಕ್ಷೇತ್ರ ಉಜ್ಜಯಿನಿಯೂ ಹತ್ತಿರದಲ್ಲಿದೆ. ಭೂಪಾಲದಿಂದ 6.4 ಕಿಮೀ ದೂರದ ನಿಯೋರಿ ಎಂಬಲ್ಲಿ 11ನೆಯ ಶತಮಾನದ ಶಿವದೇವಾಲಯವಿದೆ. 11 ಕಿಮೀ ದೂರದಲ್ಲಿರುವ ಇಸ್ಲಾಮ್‌ಪುರದಲ್ಲಿ ಹಳೆಯ ಅರಮನೆ, ತೋಟ ನೋಡಬಹುದಾದವು. ಸು. 28 ಕಿಮೀ ದೂರದಲ್ಲಿರುವ ಭೋಜಪುರ ಬೇಟ್ವಾನದಿ ದಡದ ಮೇಲಿದೆ. ಇದನ್ನು ಭೋಜ ಮಹಾರಾಜ 11ನೆಯ ಶತಮಾನದಲ್ಲಿ ಕಟ್ಟಿದನೆಂದು ಹೇಳುವರು. ಇಲ್ಲಿಯ ಶಿಲ್ಪಗಳು ಹೆಸರಾದವು ಮತ್ತು ಇದನ್ನು ಉತ್ತರ ಭಾರತದ ಸೋಮನಾಥಪುರವೆಂದು ಕರೆಯುತ್ತಾರೆ. (ಎಚ್.ಎಂ.ಎನ್.ಆರ್.)

**ಭೂಭಾಗಗಳಿಂದ ಸುತ್ತುವರಿದ ರಾಷ್ಟ್ರ:** ರಾಷ್ಟ್ರಗಳ ಮೇರೆಗಳು ಭೂಖಂಡಗಳಿಂದ ಸುತ್ತುವರಿದಿದ್ದರೆ ಅಂತಹ ರಾಷ್ಟ್ರಗಳನ್ನು ಭೂಖಂಡಗಳಿಂದ ಸುತ್ತುವರಿದ ರಾಷ್ಟ್ರಗಳೆನ್ನುತ್ತಾರೆ. ಈ ತರಹದ ರಾಷ್ಟ್ರಗಳಲ್ಲಿ ರಕ್ಷಣಾತ್ಮಕ ವೆಚ್ಚ ಹೆಚ್ಚಾಗಿರುತ್ತದೆ. ಅಲ್ಲದೆ ರಾಷ್ಟ್ರ ರಾಷ್ಟ್ರಗಳ ಅತಿ ಸರಳವಾದ ಸಂಪರ್ಕದಿಂದಾಗಿ ಜನಸಂಖ್ಯೆ, ಭಾಷೆ, ಸಂಸ್ಕೃತಿ ಮೊದಲಾದವುಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಅಲ್ಲದೆ ಗಡಿಭಾಗ ಕುರಿತಾದ ಸಮಸ್ಯೆಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತದೆ. ಭೂಖಂಡಗಳಿಂದ ಸುತ್ತುವರಿದ ರಾಷ್ಟ್ರಗಳಲ್ಲಿ ರಾಷ್ಟ್ರದ ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆಯಲ್ಲಿ ವಿಶೇಷವಾಗಿ ನದಿ ನೀರಿನ ಹಂಚಿಕೆಯಲ್ಲಿ ಸಮಸ್ಯೆಗಳು ಕಂಡುಬರುತ್ತವೆ. ಈ ತರಹದ ರಾಷ್ಟ್ರಗಳಲ್ಲಿ ಸಾರಿಗೆ ಸಂಪರ್ಕ ಮಾಧ್ಯಮ ರಾಷ್ಟ್ರದಿಂದ ರಾಷ್ಟ್ರಕ್ಕೆ ಅಭಿವೃದ್ಧಿಯಾಗಿರುವುದರಿಂದ ಜನರ, ವಸ್ತುಗಳ ಮತ್ತು ಜ್ಞಾನದ ಅರಿವು ಅತಿ ವೇಗವಾಗಿ ಪರಸ್ಪರ ಎಲ್ಲ ರಾಷ್ಟ್ರಗಳಲ್ಲಿ ಹರಡುತ್ತದೆ. (ಎಸ್.ಎಸ್.ಎಸ್.)

**ಭೂಭೌತ ಸರ್ವೇಕ್ಷಣೆ:** ಭೂಮಿಯ ಭೌತಲಕ್ಷಣಗಳನ್ನು ಗುರುತಿಸಿ ಖನಿಜ ಸಂಪನ್ಮೂಲಗಳ ಬಗೆಗಿನ ನಿರ್ದಿಷ್ಟ ಚಿತ್ರರೂಪಿಸುವ ಕ್ರಿಯೆ (ಜಿಯೊಫಿಸಿಕಲ್ ಸರ್ವೆ). ಅತ್ಯಗತ್ಯವಾಗಿ ಬೇಕಾದ ಖನಿಜಗಳು, ಪೆಟ್ರೋಲ್ ಮತ್ತು ಇಂಧನಾನಿಲಗಳನ್ನು ಅನ್ವೇಷಿಸುವುದರಲ್ಲಿ ಭೂಭೌತ ವಿಧಾನಗಳನ್ನು ವಿಶೇಷವಾಗಿ ಬಳಸಲಾಗುತ್ತಿದೆ. ಇವೇ

ಅಲ್ಲದೆ ಭಾರಿ ಪ್ರಮಾಣದ ಜಲಾಶಯಗಳ ಕಟ್ಟಡ ಅಂತೆಯೇ ಇತರ ಬೃಹತ್ ಸೌಧಗಳ ನಿರ್ಮಾಣ ಕೈಗೊಳ್ಳುವಾಗ ಅಸ್ತಿಭಾರದ ಶೋಧನೆಗೂ ಭೂಭೌತ ವಿಧಾನಗಳು ಬಳಕೆ ಆಗುತ್ತಿವೆ. ಭೂಮಿಯಲ್ಲಿ ಅಧಿಕ ಶಾಖ ಪ್ರಮಾಣ ತೋರಿಸುವ ಪ್ರದೇಶಗಳನ್ನು ಗುರುತಿಸುವುದರಲ್ಲಿ, ಭೂಮಿಯೊಳಗೆ ಹುದುಗಿರುವ ಅಂತರ್ಜಲವನ್ನು ಪತ್ತೆ ಹಚ್ಚುವುದರಲ್ಲಿ ಮತ್ತು ಭೂಗತವಾಗಿರುವ ಪ್ರಾಚೀನ ಭಗ್ನಾವಶೇಷಗಳನ್ನು ಗುರುತಿಸುವುದರಲ್ಲಿ ಭೂಭೌತ ಸರ್ವೇಕ್ಷಣೆ ಉಪಯೋಗಕ್ಕೆ ಬರುತ್ತದೆ.

ಈ ಕ್ರಿಯೆಯಲ್ಲಿ ಶಿಲೆ ಅಥವಾ ಖನಿಜಗಳ ಸಾಂದ್ರತೆ, ವಿದ್ಯುದ್ವಾಹಕತೆ, ಕಾಂತತೆ, ವಿಕಿರಣಪಟುತ್ವ ಮೊದಲಾದ ಲಕ್ಷಣಗಳನ್ನು ಗಮನಿಸಲಾಗುತ್ತದೆ. ಉದಾಹರಣೆಗೆ ಭೂಮಿಯಲ್ಲಿ ಮರೆಯಾಗಿರುವ ಕಬ್ಬಿಣಯುತ ಖನಿಜಗಳನ್ನು ಅವುಗಳ ಕಾಂತತೆಯಿಂದ ಪತ್ತೆಹಚ್ಚಬಹುದು. ಒಂದು ಪ್ರದೇಶದ ಶಿಲೆಗಳನ್ನು ಪರೀಕ್ಷಿಸುವಾಗ ಅವುಗಳ ಮಾಮೂಲಿ ಲಕ್ಷಣಗಳ ನಡುವೆ ಕೆಲವು ವೈಪರೀತ್ಯಗಳು ಅಲ್ಲಿ ಇಲ್ಲಿ ಮೇಲೆದ್ದು ತೋರುವುದುಂಟು. ಭೂಭೌತ ಸರ್ವೇಕ್ಷಣೆಯಲ್ಲಿ ಈ ಬಗೆಯ ವೈಪರೀತ್ಯಗಳಿಗೆ ವಿಶೇಷ ಮಹತ್ತ್ವ ಉಂಟು. ವಾಸ್ತವವಾಗಿ ಇವನ್ನು ಪತ್ತೆ ಹಚ್ಚುವುದೇ ಈ ಸರ್ವೇಕ್ಷಣೆಯ ಗುರಿ. ಇವು ಕ್ಷೀಣವಾಗಿರಬಹುದು ಅಥವಾ ಪ್ರಬಲವಾಗಿರಬಹುದು. ಕ್ಷೀಣವಾಗಿದ್ದರೆ ವೈಪರೀತ್ಯಕ್ಕೆ ಕಾರಣವಾದ ಖನಿಜ ನಿಕ್ಷೇಪ ಆಳದಲ್ಲಿ ಹುದುಗಿ ಹೋಗಿರಬಹುದು ಅಥವಾ ಅಷ್ಟೇನೂ ದೊಡ್ಡ ಪರಿಮಾಣದಲ್ಲಿ ಇಲ್ಲದಿರಬಹುದು; ಪ್ರಬಲವಾಗಿದ್ದರೆ ಅಲ್ಲಿಯೇ ಹತ್ತಿರದಲ್ಲಿ ದೊಡ್ಡದೊಂದು ನಿಕ್ಷೇಪ ಇರಬಹುದು. ಬಗೆಬಗೆಯ ವೈಪರೀತ್ಯಗಳನ್ನು ಗುರುತಿಸುವ ಸಲುವಾಗಿ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಬಲ್ಲ ಅತ್ಯುತ್ತಮ ವಿಧಾನಗಳನ್ನೂ ಯಂತ್ರಸಾಧನಗಳನ್ನೂ ಬಳಸಬೇಕಾಗುತ್ತದೆ. ಅಸ್ತಿಭಾರ ಶೋಧನೆ, ಅಂತರ್ ಜಲ ಶೋಧನೆ ಮೊದಲಾದ ಕೆಲಸಗಳಿಗೆ ಸಾಮಾನ್ಯ ಯಂತ್ರೋಪಕರಣಗಳೇ ಸಾಕಾಗುತ್ತವೆ. ಅತ್ಯಂತ ಆಳದಲ್ಲಿ, ಅಂದರೆ 1 ರಿಂದ 8 ಕಿಮೀ ಆಳಗಳಲ್ಲಿ, ಹುದುಗಿರುವ ಪೆಟ್ರೋಲ್ ಎಣ್ಣೆ ಪತ್ತೆ ಹಚ್ಚುವುದರಲ್ಲಿ ಹೆಚ್ಚಿನ ಯಂತ್ರ ಸಂಧಾನ ಕೌಶಲದ ಅವಶ್ಯಕತೆ ಇರುತ್ತದೆ.

ವಿದ್ಯುತ್ ಮತ್ತು ವಿದ್ಯುತ್ಕಾಂತತೆ ಅವಲಂಬಿಸಿದ ಅನ್ವೇಷಣೆ: ಕೆಲವು ಬಗೆಯ ಶಿಲೆಗಳು ಮತ್ತು ಲೋಹ ಖನಿಜಗಳು ವಿದ್ಯುತ್ತನ್ನು ಸುಲಭವಾಗಿ ಹಾಯಗೊಡುತ್ತವೆ. ಇನ್ನು ಕೆಲವು ಹಾಯಗೊಡದೆ ಜಡವಾಗಿರುತ್ತವೆ. ಈ ಲಕ್ಷಣಗಳನ್ನು ಅವಲಂಬಿಸಿ ಲೋಹಮಯ ಶಿಲೆಗಳನ್ನೂ ಖನಿಜ ನಿಕ್ಷೇಪಗಳನ್ನೂ ಪತ್ತೆ ಹಚ್ಚಲು ಸಾಧ್ಯವಾಗಿದೆ. ಕೆಲವು ಖನಿಜಗಳು ತಾವಾಗಿ ವಿದ್ಯುತ್ ತರಂಗಗಳನ್ನು ಹೊಮ್ಮಿಸುತ್ತವೆ. ಇವನ್ನು ಗುರುತಿಸುವುದರಿಂದ ಅಲ್ಲಿಯೇ ಆಳದಲ್ಲಿ ಹುದುಗಿರುವ ಖನಿಜ ತೀರ ಹೆಚ್ಚಿನ ಆಳಗಳಲ್ಲಿ ಹುದುಗಿದ್ದರೆ ಈ ವಿದ್ಯುದನ್ವೇಷಣೆ ಪ್ರಯೋಜನಕಾರಿಯಾಗದು. ಸು. 100 ಮೀ ಗಳ ಒಳಗೆ ಅಡಗಿರುವ ಖನಿಜ ನಿಕ್ಷೇಪಗಳನ್ನು ಪತ್ತೆ ಹಚ್ಚುವುದರಲ್ಲಿ ಮಾತ್ರ ಈ ವಿಧಾನ ವಿಶೇಷವಾಗಿ ಬಳಕೆಯಲ್ಲಿದೆ.

ವಿಕಿರಣಪಟುತ್ವ ಆಧರಿಸಿದ ಸರ್ವೇಕ್ಷಣೆ : ಯುರೇನಿಯಮ್, ತೋರಿಯಮ್, ಪೊಟಾಸಿಯಮ್ ಮೊದಲಾದವು ವಿಕಿರಣಪಟು ಧಾತುಗಳು. ಈ ಗುಣ ಆಧರಿಸಿ ಇವುಗಳ ನೆಲೆ ಶೋಧಿಸಿ ಇವುಗಳನ್ನೊಳಗೊಂಡಿರುವ ಖನಿಜ ನಿಕ್ಷೇಪಗಳನ್ನು ಗುರುತಿಸಬಹುದು.

ಕಾಂತತೆ ಅವಲಂಬಿಸಿದ ಸರ್ವೇಕ್ಷಣೆ: ಕಾಂತತ್ವಯುಕ್ತ ಶಿಲೆಗಳನ್ನು ಕಾಂತತ್ವ ಮಾಪಕ ಉಪಕರಣಗಳ ಸಹಾಯದಿಂದ ಪತ್ತೆ ಹಚ್ಚಬಹುದು. ಜಲದಲ್ಲಿ ನಿಕ್ಷೇಪಗೊಂಡ ಶಿಲೆಗಳ ಕಾಂತತೆ ಕಡಿಮೆ. ಆದರೆ ಜಲದಲ್ಲಿ ಶೇಖರಗೊಂಡ ಸ್ತರಗಳ ಬುಡದಲ್ಲಿರುವ ಅಗ್ನಿಶಿಲೆಗಳ ಕಾಂತತೆ ಹೆಚ್ಚು. ಈ ಕಾರಣದಿಂದ ಜಲಸ್ತರಗಳ ಮಂದ ಮತ್ತು ತಳದಲ್ಲಿಯ ಅಗ್ನಿಶಿಲೆ ಎಷ್ಟು ಆಳದಲ್ಲಿದೆ ಎನ್ನುವ ವಿವರಗಳನ್ನು ರಂಧ್ರ ಕೊರೆಯದೆ ಮೇಲೆ ಕುಳಿತೇ ಹೇಳಬಹುದು. ಕಾಂತತ್ವ ಮಾಪಕ ಸೂಕ್ಷ್ಮೋಪಕರಣಗಳನ್ನು ವಿಮಾನಕ್ಕೆ ಜೋಡಿಸಿ ವಿಸ್ತಾರ ಪ್ರದೇಶದ ವೈಮಾನಿಕ ಸರ್ವೇಕ್ಷಣೆ ಮಾಡಲಾಗುವುದು. ಕಾಂತತೆ ಹೆಚ್ಚಿರುವ ಪ್ರದೇಶಗಳಲ್ಲಿ ಕಾಂತೀಯ ರೇಖೆಗಳು ದಟ್ಟವಾಗಿ ಕವಿದಿರುತ್ತವೆ. ಇವು ನಿಕ್ಷೇಪಗಳಿರುವ ಸ್ಥಳವನ್ನು ಸೂಚಿಸುತ್ತವೆ.

ಗುರುತ್ವಾವಲಂಬಿತ ಸರ್ವೇಕ್ಷಣೆ: ಭೂಮಿಯಲ್ಲಿ ದೊರೆಯುವ ಶಿಲೆಗಳ ಸಾಂದ್ರತೆ ಒಂದೇ ಸಮನಾಗಿರುವುದಿಲ್ಲ. ಕೆಲವು ಹಗುರ, ಕೆಲವು ಗಡಸು, ಕೆಲವು ಹೆಚ್ಚು ತೂಕದವು. ಇವುಗಳ ಸಾಂದ್ರತೆಯಲ್ಲಿ ವ್ಯತ್ಯಾಸವಿರುವುದು. ಸಾಂದ್ರತೆ ಹೆಚ್ಚಿದಂತೆ ಗುರುತ್ವ ಬಲ ಹೆಚ್ಚುತ್ತದೆ. ಭೂಭಾಗದ ಮೇಲೆ ಗುರುತ್ವ ಬಲ ಯಾವ ರೀತಿ ಹರಡಿದೆ ಎನ್ನುವುದನ್ನು ಉಪಕರಣಗಳಿಂದ ಗುರುತಿಸಿ ನಕ್ಷೆಗಳನ್ನು ತಯಾರಿಸಬಹುದು. ಅತಿ ಹೆಚ್ಚಿನ ಸಾಂದ್ರತೆ ಇರುವ ಲೋಹಮಯ ಖನಿಜಗಳ ನೆಲೆಯನ್ನು ಹೀಗೆ ಪತ್ತೆ ಹಚ್ಚಬಹುದು. ಪೆಟ್ರೋಲ್ ಅನ್ವೇಷಣೆಯಲ್ಲಿ ಈ ವಿಧಾನ ಬಹುವಾಗಿ ಬಳಕೆಗೆ ಬರುತ್ತಿದೆ.

ಭೂಕಂಪನಾಧಾರಿತ ಸರ್ವೇಕ್ಷಣೆ: ನೆಲದೊಳಗಿನ ಶಿಲಾಪದರಗಳ ವಿನ್ಯಾಸ ತಿಳಿಯಲು ಭೂಕಂಪನ ಮಾಪಕ ಸಹಾಯ ಮಾಡುತ್ತದೆ. ನೆಲದಡಿಯಲ್ಲಿ ಸಿಡಿಮದ್ದನ್ನು ಸಿಡಿಸಿ ಅದರಿಂದ ಉಂಟಾದ ಅಲೆಗಳು ಭೂಮಿಯೊಳಗೆ ಹಾಯುವ ಪಥ ಗಮನಿಸಿ ಅಲ್ಲಿಯ ಲಕ್ಷಣಗಳನ್ನು ತಿಳಿಯುವುದು ಇಲ್ಲಿಯ ವಿಧಾನ. ಉದಾಹರಣೆಗೆ, ಭೂಮಿಯೊಳಗಿನ ಶಿಲಾಪದರಗಳು ಗಡಸಾಗಿರಬಹುದು ಸಾಂದ್ರ ಅಗ್ನಿಶಿಲೆಗಳಿಂದ ಕೂಡಿರಬಹುದು ಇಲ್ಲವೆ, ಹಸಿಮಣ್ಣಿನಿಂದ ತುಂಬಿರಬಹುದು. ಭೂಕಂಪನ ದೀರ್ಘತರಂಗ ವಿವಿಧ ಸಾಂದ್ರತೆಗಳ ಶಿಲಾಪದರಗಳನ್ನು ಮುಟ್ಟಿದ ಕೂಡಲೆ ಮುಂದುವರಿಯದೆ ಹಿಂದಕ್ಕೆ ವಾಪಸಾಗುತ್ತದೆ. ಹೀಗೆ ಕೃತಕವಾಗಿ ಹೊರಡಿಸಿದ ಅಲೆಗಳು ಶಿಲಾಪದರಗಳನ್ನು ಮುಟ್ಟಿ ಹಿಂತಿರುಗುವ ಕಾಲ ಗುರುತಿಸಿದರೆ ಅಲ್ಲಲ್ಲಿ ಹುದುಗಿರುವ ಶಿಲಾಪದರಗಳ ರಚನೆ ತಿಳಿಯಲು ಸಾಧ್ಯವಾಗುತ್ತದೆ. ಭೂಮಿಯೊಳಗೆ ಶಿಲಾಪದರಗಳು ಮಡಿಕೆ ಬಿದ್ದು ಗೂಡುಗಳು ಮತ್ತು ಬಿಲಗಳು ಉಂಟಾಗಿರುತ್ತವೆ. ಇವುಗಳಲ್ಲಿ ಪೆಟ್ರೋಲ್ ಶೇಖರವಾಗಿರುವುದುಂಟು. ಇಂಥ ಬಿಲಗಳನ್ನು ಪತ್ತೆ ಹಚ್ಚಿ ಪೆಟ್ರೋಲ್ ಶೇಖರವಾಗಿರುವ ಸ್ಥಳಗಳನ್ನು ಗುರುತಿಸಲು ಭೂಕಂಪನ ಮಾಪಕ ವಿಶೇಷವಾಗಿ ಬಳಕೆಯಾಗುತ್ತದೆ.

ಹೀಗೆ ಭೂಮಿಯೊಳಗೆ ಆಳವಾಗಿ ಹುದುಗಿರಬಹುದಾದ ನಿಕ್ಷೇಪಗಳನ್ನು ಗುರುತಿಸುವುದು ಸಾಧ್ಯ. ಭೂಭೌತ ಸರ್ವೇಕ್ಷಣಗಳ ವ್ಯತ್ಯಾಸಕ್ಕೆ ಕಾರಣವಾಗಬಹುದಾದ ನಿಕ್ಷೇಪದ ಸೂಚನೆ ದೊರೆಯುತ್ತದೆ. ಈ ಸೂಚನೆಯ ಆಧಾರದ ಮೇಲೆ ಭೂಮಿಯೊಳಗೆ ರಂಧ್ರಗಳನ್ನು ಕೊರೆದು ಅಥವಾ ಗಣಿಗಳನ್ನು ತೋಡಿ ಭೂಭೌತ ವೈಪರೀತ್ಯಗಳು ಯಾವ ಕಾರಣದಿಂದ ಉಂಟಾಗಿರಬಹುದು ಎನ್ನುವುದನ್ನು ತಿಳಿಯಬಹುದಾಗಿದೆ. (ಬಿ.ಪಿ.ಆರ್.)

**ಭೂಮಧ್ಯ ಪ್ರದೇಶ ಮಾದರಿ**: ಬಹುವರ್ಷಗಳವರೆಗೆ ವಕ್ಷದ್ವೀಪ ಪರಿಕಲ್ಪನೆ ಜಾಗತೀಕ ಸ್ವಾಭಾವಿಕ–ರಕ್ಷಿತ ಪ್ರದೇಶವೆಂದು ಪ್ರಚಲಿತವಿತ್ತು. ಆದರೆ ರಾಜಕೀಯ ಪರಿಸ್ಥಿತಿಯು ಆ ರಾಜಕೀಯ ದ್ವೀಪದಲ್ಲಿಯೇ ಹಲವಾರು ಪ್ರಚಲಿತ ಶಕ್ತಿಗಳ ಬೆಳವಣಿಗೆಯಿಂದ ಬಿರುಕುಗೊಂಡಿತು. ಅದಕ್ಕೆ ತಕ್ಕ ಉದಾಹರಣೆಯೆಂದರೆ–ಸೋವಿಯತ್ ಪ್ರದೇಶದಲ್ಲಿಯ ಕಮ್ಯುನಿಸಂ ಉದಯ. ಇಂತಹ ಪರಿಸ್ಥಿತಿಯಲ್ಲಿ ಮೆಕ್ಕಿಂಡರವರು 1943ರಲ್ಲಿ ವಕ್ಷದ್ವೀಪದ ಪರಿಕಲ್ಪನೆಯನ್ನು ಮೊಟಕುಗೊಳಿಸಿ ಮಿಡ್ ಲ್ಯಾಂಡ್ ಎನ್ನುವ ಪರಿಕಲ್ಪನೆಯನ್ನು ಹುಟ್ಟುಹಾಕಿದರು. ಇದಕ್ಕೆ ಮೂಲ ಅಧಾರಗಳು–ಕಡಿದಾದ ಪರ್ವತ ಪ್ರದೇಶ, ತಪ್ಪಲು ಹಾಗೂ ಮೈದಾನ ಪ್ರದೇಶ ಮತ್ತು ಅಲ್ಲಿ ಹರಡಿಕೊಂಡಿರುವ ಸೂಚಿಪರ್ಣ ವೃಕ್ಷಗಳ ಅರಣ್ಯ. ಆ ಮಿಡ್‌ಲೆಂಡ್ ಪ್ರದೇಶ ಉತ್ತರ ಅಟ್ಲಾಂಟಿಕ್ ಸಮುದ್ರ, ಪೂರ್ವ ಅಮೆರಿಕ ಸಂಸ್ಥಾನ ಮತ್ತು ಪಶ್ಚಿಮ ಯುರೋಪ್ ಭೂ ಪ್ರದೇಶವನ್ನು ಕೂಡಿಕೊಂಡಿದೆ. ಈ ಎಲ್ಲ ಭೂ–ಪ್ರದೇಶಗಳು ಒಂದೇ ತರಹದ ಹವಾಮಾನ, ಕಲ್ಲಿದ್ದಲಿನೊಂದಿಗೆ ಇತರ ಸಂಪನ್ಮೂಲ ಹಾಗೂ ಒಂದೇ ತರಹದ ಜನಾಂಗವನ್ನು ಹೊಂದಿವೆ.

ಈ ಎಲ್ಲ ಪರಿಕಲ್ಪನೆಗಳು ಅಂದರೆ ಭೂ–ಏಕಾಗ್ರತೆ ಮಾದರಿ, ವಕ್ಷದ್ವೀಪ ಮಾದರಿ ಮತ್ತು ಮಿಡ್–ಲೆಂಡ್ ಮಾದರಿಗಳು ಬೇರೆ ಬೇರೆ ಮಾದರಿಗಳು ಹುಟ್ಟಲು ಕಾರಣಗಳಾಗಿವೆ. (ಎ.ಕೆ.ಡಬ್ಲ್ಯೂ.)

**ಭೂಮಿ:** ಸೌರವ್ಯೂಹದಲ್ಲಿ ಸೂರ್ಯನಿಂದ ಆರೋಹಿ ದೂರಾನುಸಾರ ಮೂರನೆಯ ಗ್ರಹ; ಮಾನವ, ಸಸ್ಯ ಮತ್ತು ಪ್ರಾಣಿ ಎಂಬ ಜೀವಿಗಳ ನೆಲೆ; ವಾಯು ಮತ್ತು ಜಲಮಂಡಲಗಳಿಂದ ಪರಿವೇಷ್ಟಿತವಾಗಿರುವ ಗಟ್ಟಿ ನೆಲ (ದಿ ಅರ್ತ್).

ಉಗಮ : ಸು. 4.6 ಬಿಲಿಯನ್ ವರ್ಷಗಳ ಹಿಂದೆ ಅತಿ ವಿಸ್ತಾರವಾಗಿ, ಆದರೆ ತೀರ ವಿರಳವಾಗಿ ಹರಡಿಹೋಗಿದ್ದ ದೂಳು ಮತ್ತು ಅನಿಲ ಕಣಗಳ ಮಹಾರಾಶಿ ತೀವ್ರ ಮಂಥನ ಕ್ರಿಯೆಗೆ ಒಳಗಾಗಿತ್ತು; ಕಣಗಳು ಹೀಗೆ ಈ ಕ್ರಿಯೆ ಮುಂದುವರಿದಂತೆ ದೂಳಿನ ಕಣಗಳ ಮುದ್ದೆ ಮೈದಳೆದವು. ಇವೆ ಗ್ರಹಗಳು.

ಸೌರವ್ಯೂಹ ಎಂದರೆ ಸೂರ್ಯ ಮತ್ತು ಇದನ್ನು ಪರಿವೇಷ್ಟಿಸಿರುವ ಸಮಸ್ತ ಕಾಯಗಳು. ಕಣಗಳ ಸಂಚಯನದಿಂದ ಏಕಕಾಲದಲ್ಲಿ ಮೈದಳೆದಿರಬೇಕೆಂದು ಸಂಚಯನವಾದ ವಿವರಿಸುತ್ತದೆ. ಆದ್ದರಿಂದ ಸೂರ್ಯನ ಒಂದು ಗ್ರಹವಾಗಿ ಭೂಮಿಯ ಉಗಮ ಸು. 4.6 ಬಿಲಿಯನ್ ವರ್ಷಗಳ ಹಿಂದೆ ಸಂಭವಿಸಿರಬೇಕು.

ಸ್ವಂತ ರಾಶಿಯ ಕಾರಣವಾಗಿ ಉಂಟಾದ ಸಮ್ಮರ್ದ ಭೂಮಿಯ ಗರ್ಭದಲ್ಲಿ ಅಗಾಧ ಉಷ್ಣವನ್ನು ಉತ್ಪಾದಿಸಿತು. ಅದೇ ವೇಳೆ, ವಿಕಿರಣಪಟು ವಸ್ತುಗಳ ಕ್ಷಯದಿಂದ ಕೂಡ ಸಾಕಷ್ಟು ಉದ್ಭವಿಸಿತು. ಇವೆರಡರ ಫಲವಾಗಿ ಆದಿಮ ಭೂಮಿ ಸು. $2,000^0$ಸೆ ಉಷ್ಣತೆಯಲ್ಲಿ ತಹತಹಿಸುವ ದ್ರವ–ಅನಿಲ ರಾಶಿಯಾಯಿತು. ಕಬ್ಬಿಣದಂಥ ಭಾರವಾದ ಪದಾರ್ಥಗಳು ಈ ರಾಶಿಯ ಕೇಂದ್ರದೆಡೆಗೆ ಕುಸಿದುವು. ಅಲ್ಯೂಮಿನಿಯಮಿನಂಥ ಲಘುತರ ಪದಾರ್ಥಗಳು ಮೇಲ್ಮೈಯೆಡೆಗೆ ತೇಲಿದುವು.

ಭೂಮಿಯ ಮೇಲ್ಮೈಯಿಂದ ಉಷ್ಣವಿಕಿರಣವಾಗಿ (ರೇಡಿಯೇಷನ್) ಸೋರಿ ಹೋಯಿತು. ಭೂಮಿಯ ಮೇಲ್ಮೈ ಕ್ರಮೇಣ ತಣಿದು ದೃವೀಭವಿಸಿ ಹೆಪ್ಪುಗಟ್ಟಿತು. ಈ ಘನ ಪದರದಲ್ಲಿ ಮಡಿಕೆ ತಿರುಚುಗಳು, ಉಬ್ಬು ತಗ್ಗುಗಳು, ಕಣಿವೆ ಕೊರಕಲುಗಳು ಕಾಣಿಸಿಕೊಂಡವು. ಒಳಗೆ ಸೆರೆ ಸಿಕ್ಕಿಹಾಕಿಕೊಂಡಿದ್ದ ಲಾವಾರಸ, ಅನಿಲರಾಶಿ, ರಜಃಕಣಗಳು ಮೊದಲಾದವುಗಳು ಅಳ್ಳಕ ಮೇಲ್ಮೈಯನ್ನು ಭೇದಿಸಿ ಹೊರಚಿಮ್ಮಿದವು. ಲಾವಾರಸ

ಭೂಮಿಯ ಮೇಲೂ ಒಳಗೂ ಹರಿದು ಭೂಕಂಪನಗಳಿಗೆ ಕಾರಣವಾಯಿತು. ಮೇಲ್ಮೈಯಿಂದ ಹೊರನೆಗೆದು ಅನಿಲ ಮತ್ತು ದೂಳು ಆದಿಮ ವಾಯುಮಂಡಲವನ್ನು ರೂಪಿಸಿದವು.

ಅಂದಿನ ವಾಯುಮಂಡಲ ನೈಟ್ರೋಜನ್, ಕಾರ್ಬನ್ ಡೈಆಕ್ಸೈಡ್, ಕಾರ್ಬನ್ ಮಾನಾಕ್ಸೈಡ್ ಮತ್ತು ನೀರಿನ ತೇವ ಇವುಗಳಿಂದ ಕೂಡಿದ್ದಿರಬೇಕು. ಒಂದಿಷ್ಟು ಮಿಥೇನ್ ಮತ್ತು ಅಮೋನಿಯ ಕೂಡ ಇದ್ದಿರಬಹುದು. ತೇವ ವಾಯುಮಂಡಲದಲ್ಲಿ ಮೇಲೇರಿ ತಣಿದು ದ್ರವಿಸಿ ಮಳೆಯಾಗಿ ಮತ್ತೆ ಭೂಮಿಗೆ ಮರಳಿತು. ಆದರೆ ನೆಲ ತಲುಪುವ ಮೊದಲೇ ಇಲ್ಲಿಯ ಕುಲುಮೆ ಉಷ್ಣತೆಯಿಂದ ಮತ್ತೆ ಆವಿಯಾಗಿ ಮೇಲೇರಿತು. ಈ ಚಕ್ರ ಉರುಳಿದಂತೆ ಕಲ್ಲು ಬಂಡೆಗಳೂ ಗಾರು ನೆಲಗಳೂ ಮಳೆನೀರನ್ನು ಸ್ಪಂಜಿನಂತೆ ಹೀರಿಕೊಂಡು ಜಲಭರಿತವಾದವು. ಮತ್ತಷ್ಟು ನೀರನ್ನು ಹೀರಲಾಗದಂಥ ಪರ್ಯಾಪ್ತ ಸ್ಥಿತಿ ಐದಿದಾಗ ಭೂಮಿಯ ಮೇಲೆ ಝರಿಗಳು ದುಮುಕಿದವು. ತೊರೆಗಳು, ನದಿಗಳು ಹರಿದವು. ತಗ್ಗು ಪ್ರದೇಶಗಳಲ್ಲಿ ನೀರು ಸಂಗ್ರಹಗೊಂಡು ಕೆರೆ–ಸರೋವರಗಳಾದವು. ವಿಶಾಲ ಬೋಗುಣಿ ಪ್ರದೇಶಗಳು ವಿಸ್ತಾರ ಜಲಾಶಯಗಳಾಗಿ ಮೊದಲ ಕಡಲುಗಳು ಮೈದಳೆದವು.

ಆ ವೇಳೆಗೆ ಮೋಡಗಳು ತೆಳುವಾದವು ಮತ್ತು ವಾಯುಮಂಡಲ ಭೂಮಿಯನ್ನು ಆವರಿಸಿದ ಅನಿಲಕವಚವಾಯಿತು. ನೀರಿನ ಮಹಾರಾಶಿಯಲ್ಲಿ ಅಲ್ಲಿ ಇಲ್ಲಿ ತಲೆಯೆತ್ತಿ ಇಣುಕುತ್ತಿದ್ದ ಶಿಲಾರಾಶಿಯಾಗಿದ್ದ ಭೂಮಿಯ ಮೇಲೆ ಸೂರ್ಯಪ್ರಕಾಶ ಸಮೃದ್ಧವಾಗಿ ಪ್ರವಹಿಸಿತು.

ಭೂಖಂಡಗಳು: ಇಂದು ನಾವು ತಿಳಿದಿರುವ ಏಷ್ಯ, ಆಫ್ರಿಕ ಮೊದಲಾದ ಭೂಖಂಡಗಳು ಅಂದು ಇರಲಿಲ್ಲ. ಇವೆಲ್ಲವೂ ಪ್ಯಾಂಜಿಯ (ಪ್ರಾಗ್ಭೂಮಿ) ಎಂಬ ಹೆಸರಿನ ಅಖಂಡ ಶಿಲಾರಾಶಿಯಾಗಿ ಬೆಸೆದುಕೊಂಡಿದ್ದವು. ಇದು 220 ಮಿಲಿಯನ್ ವರ್ಷಗಳ ಹಿಂದಿನ ಪರಿಸ್ಥಿತಿ.

ಸು. 135 ಮಿಲಿಯನ್ ವರ್ಷಗಳ ಹಿಂದೆ ಪ್ಯಾಂಜಿಯ ಖಂಡ ಒಡೆದು ಎರಡಾಯಿತು: ಉತ್ತರ ಭಾಗದ ಖಂಡ ಲಾರೇಷಿಯ, ದಕ್ಷಿಣ ಭಾಗದ ಖಂಡ ಗೊಂಡ್ವಾನ ಸು. 65 ಮಿಲಿಯನ್ ವರ್ಷಗಳ ಹಿಂದೆ ಈ ಖಂಡಗಳು ಮತ್ತಷ್ಟು ವಿಭಜನೆಗೊಂಡು ಅಲೆದು ಇಂದು ಕಾಣುವ ಭೂಖಂಡಗಳು ಅಸ್ತಿತ್ವಕ್ಕೆ ಬಂದವು. ಈ ವಿದ್ಯಮಾನಕ್ಕೆ ಭೂ ಖಂಡಗಳ ಅಲೆತ ಎಂದು ಹೆಸರು.

ಖಂಡಗಳ ಅಲೆತ ಸತತವಾದ ಒಂದು ಪ್ರಕ್ರಿಯೆ. ಭೂಮಿಯ ಮೇಲ್ಭಾಗದ ಶಿಲಾಗೋಳದ ಕೆಳಗೆ ಭಾಗಶಃ ದ್ರವಸ್ಥಿತಿಯಲ್ಲಿರುವ ಶಿಲಾಪಾಕ ವಲಯದ ಮೇಲೆ ಭೂಖಂಡಗಳೂ ನೆಲಸಿವೆ. ಭೂಗರ್ಭದಿಂದ ಹೊರಹೊಮ್ಮುತ್ತಿರುವ ತೀವ್ರ ಉಷ್ಣಶಕ್ತಿಯ ಕಾರಣವಾಗಿ ಕವಚ ಮಂಥನಕ್ರಿಯೆಗೆ ಒಳಗಾಗುತ್ತದೆ. ಆಗ ಭೂಭಾಗಗಳು ಕಾರ್ಖಾನೆಯಲ್ಲಿ ಸಾಗುಪಟ್ಟಿಯ ಮೇಲೆ ಸರಿಯುವ ಸಾಮಾನು ಸರಂಜಾಮುಗಳ ತೆರದಲ್ಲಿ ಚಲಿಸತೊಡಗುತ್ತವೆ. ಇದರ ಫಲವೇ ಖಂಡಗಳ ಅಲೆತ. ತತ್ಪರಿಣಾಮವಾಗಿ ಫಲಕಗಳು ಒಂದು ಇನ್ನೊಂದನ್ನು ಸಂಘಟಿಸುತ್ತವೆ. ಒಂದು ಇನ್ನೊಂದರ ಮೇಲೆ ಅಧಿವ್ಯಾಪಿಸುತ್ತವೆ. ಎರಡೂ ಏಕಕಾಲದಲ್ಲಿ ಮೇಲೇರುತ್ತವೆ; ಎರಡರ ನಡುವಿನ ಅಂತರ ವಿಸ್ತರಿಸುತ್ತದೆ. ಆಗ ಭೂಕಂಪನಗಳು ಸಂಭವಿಸುತ್ತವೆ. ಜ್ವಾಲಾಮುಖಿಗಳು ಉಂಟಾಗುತ್ತವೆ, ಪರ್ವತ ಶ್ರೇಣಿಗಳು ರೂಪುಗೊಳ್ಳುತ್ತವೆ. ಸಾಗರ ತಲಗಳು ವಿಶಾಲವಾಗುತ್ತವೆ, ಹೊಸ ಕೊರಕಲು ಬಿರುಕುಗಳು ಮೈದೋರುತ್ತವೆ. ಉದಾಹರಣೆಗೆ ಹಿಮಾಲಯ ಪರ್ವತ ಶ್ರೇಣಿ ಇಂದಿಗೂ ಬೆಳೆಯುತ್ತಿದೆ. ಅಟ್ಲಾಂಟಿಕ್ ಸಾಗರ ತಲ ವಾರ್ಷಿಕವಾಗಿ ಸು. 4 ಸೆಂಮೀ ಹಿಗ್ಗುತ್ತಿದ್ದರೆ, ಪೆಸಿಫಿಕ್ ಸಾಗರ ತಲದ ಅಗಲ ಸು. ಅಷ್ಟೇ ಪ್ರಮಾಣದಲ್ಲಿ ಕುಗ್ಗುತ್ತಿದೆ.

ಭೂಮುಖವನ್ನು ಸತತವಾಗಿ ಬದಲಾಯಿಸುತ್ತಿರುವ ಇನ್ನೊಂದು ಬಲವೆಂದರೆ ವಾಯುಗುಣ (ಕ್ಲೈಮೆಟ್). ಧ್ರುವೀಯ ವಲಯಗಳಲ್ಲಿ ದಟ್ಟವಾಗಿ ಕವಿದಿರುವ ಹಿಮ ಸಮುಚ್ಚಯ ವಾಯುಗುಣವನ್ನು ಬಹಳವಾಗಿ ಪ್ರಭಾವಿಸುತ್ತದೆ. ಶೀತಯುಗ–ಬೆಚ್ಚಗಿನ ಯುಗ ಇವುಗಳ ನಡುವೆ ವಾಯುಗುಣ ಆಂದೋಲಿಸುತ್ತದೆ. ಕಳೆದ 200 ಮಿಲಿಯನ್ ವರ್ಷಗಳಲ್ಲಿ ಸು. 18 ಹಿಮಯುಗಗಳು ಸಂದುಹೋಗಿವೆಯೆಂದು ಅಂದಾಜು. ಈಗ್ಗೆ ಸು. 18 ಸಾವಿರ ವರ್ಷಗಳ ಹಿಂದೆ ಶೀತಯುಗ ತನ್ನ ಪರಾಕಾಷ್ಠೆ ಐದಿದ್ದಾಗ ಇಂದಿನ ನೆಲದ ಶೇಕಡ ಸು. 30ರಷ್ಟು ಭಾಗ ನೀರಿನಡಿಯಲ್ಲಿ ಮುಳುಗಿತ್ತು.

ಧ್ರುವ ವಲಯಗಳಲ್ಲಿ ಹಿಮಾವೃತ ಶಾಶ್ವತವೆಂದು ಭಾವಿಸುವುದಿದೆ. ಇದು ನಿಜವಲ್ಲ. ಇಂದು ಭೂಮಿಯ ಸರಾಸರಿ ಉಷ್ಣತೆ $14^0$ಸೆ ಆಗಿದ್ದು ಒಮ್ಮೆ ಅರಣ್ಯಾವೃತವಾಗಿದ್ದ ಗ್ರೀನ್‌ಲೆಂಡ್ ಈಗ ಹಿಮಾಚ್ಛಾದಿತವಾಗಿದೆ. ಅಂಟಾರ್ಕ್ಟಿಕವಂತೂ ಪೂರ್ಣವಾಗಿ ಹಿಮ ಖಂಡವೇ ಆಗಿದೆ. ಆದರೆ ಗತಯುಗಗಳಲ್ಲಿ ಸರಾಸರಿ ಉಷ್ಣತೆ $22^0$ಸೆ ಇದ್ದ ಅವಧಿಗಳಿದ್ದವು. ಆಗ ಧ್ರುವವಲಯಗಳು ಕೂಡ ಹಿಮಮುಕ್ತವಾಗಿದ್ದವು. ಇಂಥ ಬೆಚ್ಚಗಿನ ಯುಗ ಇನ್ನೊಮ್ಮೆ ಬಂದಾಗ ಇದೇನೂ ಅಸಂಭವನೀಯ ಘಟನೆ ಆಗಬೇಕಾಗಿಲ್ಲ–ಸಾಗರಗಳು ಉಕ್ಕಿ ಕರಾವಳಿಯ ಹಲವಾರು ಪ್ರದೇಶಗಳು ಮುಳುಗಿ ಹೋಗದಿರವು.

ಭೂಮಿಯ ಚಲನೆಯ ಆಕರ ಸೂರ್ಯ. ಸೌರಶಕ್ತಿಯ ಕಾರಣವಾಗಿ ವಾಯುಮಂಡಲ ಕಾದು ಮಾರುತಗಳು ಸತತ ಕ್ರಿಯಾಶೀಲವಾಗಿರುತ್ತವೆ. ಕಡಲುಗಳಿಂದ ಕಾದು ಮೇಲೇರಿದ ನೀರಿನ ಹಬೆ (ನೀರಾವಿ) ಮೋಡವಾಗಿ ವಾಯುಮಂಡಲದಲ್ಲಿ ಪಸರಿಸುತ್ತದೆ. ತಣಿದ ಮೋಡ ಮಳೆಯಾಗಿ ಭೂಮಿಗೆ ಸುರಿಯುತ್ತದೆ. ಈ ನೀರು ಝರಿ ತೊರೆ ಹೊಳೆ ನದಿಗಳ ಮೂಲಕ ನೆಲ ತೊಳೆಯುತ್ತ ಹರಿದು ಕಡಲು ಸೇರಬಹುದು, ನೆಲದಡಿಗೆ ಹಿಂಗಿ ಹೋಗಿ ಅಂತರ್ಜಲವಾಗಬಹುದು, ಶೀತ ಪ್ರದೇಶಗಳಲ್ಲಿ ಹಿಮ ಕವಚವಾಗಿ ಕೆನೆಗಟ್ಟಬಹುದು.

ಹೀಗೆ ನೀರಿನ ಚಕ್ರ ಮತ್ತು ವಾಯುಮಂಡಲದ ಗತಿಶೀಲತೆ ಭೂಮಿಯ ಮುಖವನ್ನು ಸದಾ ಬದಲು ಮಾಡುತ್ತಿರುವ ಬಾಹ್ಯ ಶಕ್ತಿಗಳು. ಇತ್ತ ಆಂತರಿಕ ಶಕ್ತಿಗಳಾದ ಸಂಚಿತ ಶಾಖ, ಜ್ವಾಲಾಮುಖಿಗಳು, ಅಂತರ್ಜಲ ಪ್ರವಾಹ, ಜೀವಿ ವಿಕಾಸ ಕ್ರಿಯೆ ಮುಂತಾದವು ತಮ್ಮ ಕೊಡುಗೆಯನ್ನು ಸದಾ ಸಲ್ಲಿಸುತ್ತಲೇ ಇರುವುವು. ಸೂರ್ಯ–ವಾಯುಮಂಡಲ, ಜಲಮಂಡಲ ಈ ಹೊಂದಾಣಿಕೆಯೇ ಭೂಯಂತ್ರದ ನಿರಂತರ ಗತಿಶೀಲತೆಯ ಮರ್ಮ, ಉದಾಹರಣೆಗೆ ಚಂದ್ರನಲ್ಲಿ ವಾಯು ಅಥವಾ ಜಲಮಂಡಲಗಳಿಲ್ಲವಾಗಿ ಸೂರ್ಯಶಾಖವೊಂದರಿಂದಲೇ ವಿಶೇಷವಾಗಿ ಏನೂ ಬದಲಾವಣೆ ಕಂಡುಬರುವುದಿಲ್ಲ ಎಂದೇ ಚಂದ್ರನ ಮೇಲೆ ಇಳಿದ ಮಾನವನಿಗೆ ಎದುರಾದದ್ದು ಘನೀಭವಿತ ಪ್ರಾಗಿತಿಹಾಸ.

ರಚನೆ : ಭೂಮಿಯಲ್ಲಿ ಮೂರು ವಿಭಿನ್ನ ಸ್ಥಿತಿಗಳಲ್ಲಿರುವ ಭಾಗಗಳನ್ನು ಗುರುತಿಸಲಾಗಿದೆ. ತಿರುಳು (ಕೋರ್), ಕವಚ (ಮ್ಯಾಂಟಲ್) ಮತ್ತು ತೊಗಟೆ (ಕ್ರಸ್ಟ್).

ತಿರುಳು: ಉತ್ತರ ಮತ್ತು ದಕ್ಷಿಣ ಧ್ರುವ ಪ್ರದೇಶಗಳ ಬಾನಿನಲ್ಲಿ ಆಗ ಈಗ ಬೆಳಗುವ ಜ್ವಾಲಾಜಿಹ್ವೆಗಳು (ಆರೋರ–ಧ್ರುವಜ್ಯೋತಿ) ಭೂಮಿಯ ಅಂತರಾಳದ ಬಗೆಗೆ ಮಾಹಿತಿ ನೀಡುವ ವಿದ್ಯಮಾನಗಳೆಂದರೆ ತುಸು ಅಚ್ಚರಿ ಎನ್ನಿಸಬಹುದು. ಸೂರ್ಯನಿಂದ ನಿರಂತರವಾಗಿ ಪ್ರವಹಿಸುವ ವಿದ್ಯುದಾವಿಷ್ಟ ಕಣಗಳಿಗೂ–ಈ ಪ್ರವಾಹಕ್ಕೆ ಸೌರಮಾರುತವೆಂದು (ಸೋಲಾರ್ ವಿಂಡ್) ಹೆಸರು–ಭೂಕಾಂತ ಕ್ಷೇತ್ರಕ್ಕೂ ನಡುವೆ ಸಂಘರ್ಷವಾದಾಗ ಧ್ರುವ ಪ್ರಭೆಗಳು ಸಂಜನಿಸುವುದೆಂದು ತಿಳಿದಿದೆ. ಭೂಮಿಗೆ ಈ ಕಾಂತಕ್ಷೇತ್ರ ಒದಗುವುದರ ಕಾರಣವೇನು?

ಇದಕ್ಕೆ ಭೂವಿಜ್ಞಾನಿಗಳು ನೀಡುವ ವಿವರಣೆ ಹೀಗಿದೆ: ತಿರುಳು ಸು. 2,900 ಕಿಮೀ ಆಳದಿಂದ ಭೂಕೇಂದ್ರದ (6,370 ಕಿಮೀ ಆಳ–ಇದು ಭೂಮಿಯ ಸರಾಸರಿ ತ್ರಿಜ್ಯ) ದವರೆಗೆ ವ್ಯಾಪಿಸಿದೆ. ಇದರಲ್ಲಿ ಎರಡು ಭಾಗಗಳಿವೆ. ದ್ರವಸ್ಥಿತಿಯಲ್ಲಿರುವ ಹೊರಭಾಗ, ಘನಸ್ಥಿತಿಯಲ್ಲಿರುವ ಒಳಭಾಗ. ಒಳಭಾಗದ (ಅಂದರೆ ಘನ ಒಳ ತಿರುಳಿನ) ತ್ರಿಜ್ಯ ಸು. 1,200 ಕಿಮೀ, ದ್ರವಪಾಕದ ನಡುವೆ ಗಟ್ಟಿಕಾಳು ತೇಲುತ್ತಿರುವಂತೆ ಇದೆ. ಭೂಮಿಯ ತಿರುಳು ಅಲ್ಲಿಯ ಸಂಮರ್ದ 1.3–3.5 ಮಿಲಿಯನ್ ವಾಯುಮಂಡಲಗಳಷ್ಟು ಇದೆ (ನೆಲದ ಮೇಲಿನ ಸರಾಸರಿ ಸಂಮರ್ದದ ಅಷ್ಟುಪಾಲು ಅಧಿಕವಾಗಿದೆ ಎಂದರ್ಥ). ಉಷ್ಣತೆ 4–5 ಸಾವಿರ ಡಿಗ್ರಿ ಸೆಲ್ಸಿಯಸ್.

ತಿರುಳಿನ ಸ್ವರೂಪವನ್ನು ಅಭ್ಯಸಿಸಲು ಒದಗುವ ಬಾಹ್ಯ ಲಕ್ಷಣವೆಂದರೆ ಭೂ ಕಾಂತ ಕ್ಷೇತ್ರ. ಭೂಮಿ ಒಂದು ಬೃಹತ್ಕಾಂತದಂತೆ ವರ್ತಿಸುತ್ತದೆ. ಇದನ್ನು ಆವರಿಸಿ ಕಾಂತಕ್ಷೇತ್ರವಿದೆ. ಈ ಕ್ಷೇತ್ರದ ಧ್ರುವಗಳು ಹಲವಾರು ಬಾರಿ ತಿರುಗವು ಮುರುಗವು ಆಗಿರುವುವೆಂಬುದಕ್ಕೆ ಶಾಶ್ವತ ದಾಖಲೆಗಳು ದೊರೆತಿವೆ. ಭೂಮಿಯ ತಿರುಳಿನಲ್ಲಿ ಕಬ್ಬಿಣ ಸಂಯುಕ್ತ ವಿಶೇಷವಾಗಿ ಸಂಗ್ರಹವಾಗಿದ್ದು ಇದು ಅತಿ ತೀವ್ರ ಮಂಥನ ಕ್ರಿಯೆಗೆ ಪಕ್ಕಾಗಿರುವುದೇ ಇದರ ಕಾರಣವೆಂದು ವಿಜ್ಞಾನಿಗಳು ಸಾಕ್ಷ್ಯಾಧಾರ ಸಹಿತ ತರ್ಕಿಸಿದ್ದಾರೆ. ತಿರುಳು ವಿದ್ಯುಜ್ಜನಕದಂತೆ (ಡೈನಮೋ) ವರ್ತಿಸಿ ವಿದ್ಯುದುತ್ಪಾದನೆ ಮಾಡುತ್ತದೆ. ಇದಕ್ಕೆ ಭೂವಿದ್ಯುಜ್ಜನಕ ಕ್ರಿಯೆ ಎಂದು ಹೆಸರು. ತತ್ಪರಿಣಾಮವಾಗಿ ಭೂಮಿಗೆ ಕಾಂತತ್ವ ಪ್ರಾಪ್ತವಾಗಿದೆ. ತಿರುಳಿನಲ್ಲಿಯ ಕಬ್ಬಿಣ ಸಂಯುಕ್ತದ ಘಟಕ ಧಾತುಗಳು ಪ್ರಾಯಶಃ ಸಲ್ಫರ್ ಅಥವಾ ಆಕ್ಸಿಜನ್. ಆದ್ದರಿಂದ ತಿರುಳಿನ ವಸ್ತು ಕಬ್ಬಿಣ ಸಲ್ಫೈಡ್ ಇಲ್ಲವೇ ಕಬ್ಬಿಣ ಆಕ್ಸೈಡ್ ಆಗಿದ್ದು ಅದು ಸತತ ಮಂಥನ ಸ್ಥಿತಿಯಲ್ಲಿದೆ ಎಂಬುದು ಇಂದಿನ ಊಹೆ.

ಕವಚ: ಭೂಮಿಯ ಲೋಹೀಯ ತಿರುಳನ್ನು ಆವರಿಸಿಕೊಂಡು ಸು. 2900 ಕಿಮೀ ದಪ್ಪದ ಕವಚವಿದೆ. ಧ್ರುವಗಳ ಸತತ ಚಲನೆಯ ಜಾಡು ಮತ್ತು ಧ್ರುವ ಜ್ಯೋತಿಗಳ ಚಿತ್ತಾಕರ್ಷಕ ದೃಶ್ಯ ಭೂತಿರುಳಿನ ಗತಿ ವೃತ್ತಾಂತದ ಪ್ರಕಟಿತ ಲಕ್ಷಣಗಳು ಹೇಗೋ ಹಾಗೆ ಭೂಖಂಡಗಳ ಹಾಗೂ ಸಾಗರಗಳ ವಿವಿಧ ವಿನ್ಯಾಸ ಭೂಕವಚದಲ್ಲಿಯ ಬದಲಾವಣೆಯ ಪರಿಣಾಮಗಳು. ಬಹುಪಾಲು ಸಿಲಿಕೇಟಿನಿಂದ ರಚಿತವಾಗಿರುವ ಕವಚ, ಅದರಲ್ಲಿರುವ ವಿಕಿರಣಪಟು ಸಮಸ್ಥಾನಿಗಳ (ರೇಡಿಯೊ ಆ್ಯಕ್ಟಿವ್ ಐಸೊಟೋಪ್ಸ್) ಕ್ಷಯದ ಕಾರಣವಾಗಿ ಶಾಖ ಗಳಿಸುತ್ತದೆ. ಇದು ಕಲ್ಲಿದ್ದಲ ಡಾಮರಿನಂತೆ ತನ್ಯತಾಗುಣವಿರುವ (ಡಕ್ಟಿಲಿಟಿ) ಸು. 700 ಕಿಮೀ ದಪ್ಪದ ಮೇಲು ಪದರಕ್ಕೆ ಶಕ್ತಿ ಊಡಿ ಅದರಲ್ಲಿ ಪ್ರಚಲಿತ ಪ್ರವಾಹಗಳನ್ನು (ಕನ್ವೆಕ್ಷನಲ್ ಕರೆಂಟ್) ಉತ್ಪಾದಿಸುತ್ತದೆ. ಇವು ಭೂಮಿಯ ಘನ ಮೇಲ್ಮೈಯನ್ನು ರಚಿಸಿರುವ ಫಲಕಗಳಲ್ಲಿ ಮಂದಚಲನೆಗೆ ಕಾರಣವಾಗುತ್ತವೆ. ಈ ಘನ ಮೇಲ್ಮೈಯಲ್ಲಿ ಹೆಚ್ಚಿನ ಖಂಡಗಳೂ ಸಾಗರಗಳೂ ಅಡಕವಾಗಿವೆ ಎಂಬುದನ್ನು ಗಮನಿಸಬೇಕು.

**ಭೂಖಂಡಗಳು**

| | ವಿಸ್ತೀರ್ಣ (ಚ.ಕಿಮೀಗಳಲ್ಲಿ) | ಮಾಧ್ಯ ಔನ್ನತ್ಯ (ಮೀಗಳಲ್ಲಿ) | ಔನ್ನತ್ಯತಮ ಬಿಂದು (ಮೀಗಳಲ್ಲಿ, ಸಮುದ್ರಮಟ್ಟದಿಂದ) | ನಿಮ್ನತಮ ಬಿಂದು (ಮೀಗಳಲ್ಲಿ, ಸಮುದ್ರಮಟ್ಟದಿಂದ) | ದಾಖಲಿತ ಅತ್ಯಧಿಕ ಉಷ್ಣತೆ (ಸೆಲ್ಸಿಯಸ್‌ಗಳಲ್ಲಿ) | ದಾಖಲಿತ ಕನಿಷ್ಠತಮ ಉಷ್ಣತೆ (ಸೆ) |
|---|---|---|---|---|---|---|
| ಆಫ್ರಿಕ | 3,03,00,410 | 519.2 | ಕಿಲಿಮಾಂಜಾರೋ ಶಿಖರ, ಟಾಂಗನೀಕ 5894.83 | ಕ್ವಟ್ಟಾರ ಇಳಿತ 133 ಮೀ ಆಳಕ್ಕೆ | ಎಲ್. ಅಜೀಜಿಯ, ಲಿಬ್ಯ, 58$^0$ | ಸೆಮ್‌ರೀರ್ ಮೊರಕೊ 011.4$^0$ |
| ಅಂಟಾರ್ಕ್‌ಟಿಕ | 1,37,27,000 | 1828.8 | ಮಾರ್ಖಾಮ್ ಶಿಖರ 4602.48 | ಸಮುದ್ರ ಮಟ್ಟ | ಹೋಪ್‌ಚೆ ಬೇ, ಗ್ರಹ್ಯಾಮ್ ಲ್ಯಾಂಡ್ 10$^0$ | ವೊಸ್ಟಾಕ್ –52$^0$ |
| ಏಷ್ಯ | 4,83,94,150 | 914.4 | ಎವರೆಸ್ಟ್ ಶಿಖರ, ನೇಪಾಲ – ಟಿಬೆಟ್ 8848 | ಮೃತ ಸಮುದ್ರ ಪ್ಯಾಲಸ್ಟೀನ್ ಸಮುದ್ರಮಟ್ಟಕ್ಕೆ 392 ಮೀ ಆಳಕ್ಕೆ | ಜಕೋಬಾಬಾದ್, ಪಾಕಿಸ್ತಾನ 52$^0$ | ವರ್ಖೋಯಾನ್‌ಸ್ಕ್ ಸೈಬೀರಿಯ –32$^0$ |
| ಆಸ್ಟ್ರೇಲಿಯ | 76,95,099 | 304.8 | ಕೋಸಿಯುಸ್ಕೋ, ನ್ಯೂ ಸೌತ್‌ವೇಲ್ಸ್ 2230 | ಐರ್ ಸರೋವರ ದಕ್ಷಿಣ ಆಸ್ಟ್ರೇಲಿಯ ಸಮುದ್ರಮಟ್ಟಕ್ಕೆ 1188 ಮೀ ಆಳಕ್ಕೆ | ಕ್ಲೋನ್‌ಕರಿ, ಕ್ವೀನ್ಸ್‌ಲೆಂಡ್ 53$^0$ | ಕಿಯಾಂಡ್ರ, ನ್ಯೂ ಸೌತ್‌ವೇಲ್ಸ್ 5$^0$ |
| ಯುರೋಪ್ | 54,00,150 | 298.7 | ಎಲ್‌ಬ್ರುಸ್ ಶಿಖರ 5833.31 | ಕ್ಯಾಸ್ಪಿಯನ್ ಸಮುದ್ರ, ರಷ್ಯ ಸಮುದ್ರಮಟ್ಟಕ್ಕೆ 28 ಮೀ ಆಳಕ್ಕೆ | ಸೆವಿಲ್ಕೆ, ಸ್ಪೇನ್ 51$^0$ | ಊಸ್ಟ್– ಷ್ಕೂಗೊರ್, ರಷ್ಯ –19$^0$ |
| ಉತ್ತರ ಅಮೆರಿಕ | 2,44,36,650 | 609.6 | ಮ್ಯಾಕೆನ್ಲಿ ಶಿಖರ ಅಲಾಸ್ಕ 6193.53 | ಡೆತ್ ವ್ಯಾಲಿ ಕ್ಯಾಲಿಫೋರ್ನಿಯ ಸಮುದ್ರಮಟ್ಟಕ್ಕೆ 85.34 ಮೀ ಆಳಕ್ಕೆ | ಡೆತ್‌ವ್ಯಾಲಿ, ಕ್ಯಾಲಿಫೋರ್ನಿಯ 56$^0$ | ಸ್ನ್ಯಾಗ್, ಯೂಕಾನ್ –27$^0$ |
| ದಕ್ಷಿಣ ಅಮೆರಿಕ | 1,77,67,400 | 548.64 | ಅಕನ್‌ಕಾಗುವ ಶಿಖರ ಅರ್ಜೆಂಟೈನ 7021.98 | ರೀಯೋನೆಗ್ರೋ ಅರ್ಜೆಂಟೈನ ಸಮುದ್ರಮಟ್ಟಕ್ಕೆ 29.97ಮೀ ಆಳಕ್ಕೆ | ರಿವಾಡಾವೀಯ ಅರ್ಜೆಂಟೈನ 49$^0$ | ಕೊಲೋನಿಯ ಸಾರ್ಮಿಂಟೋ ಅರ್ಜೆಂಟೈನ – 30$^0$ |

ಭೂಖಂಡಗಳಿಗೂ ಸಾಗರಗಳಿಗೂ ನಡುವೆ ಮುಖ್ಯ ವ್ಯತ್ಯಾಸವಿರುವುದು ಅವುಗಳ ತೊಗಟೆಯ (ಕ್ರಸ್ಟ್) ದಪ್ಪದಲ್ಲಿ. ಖಂಡೀಯ ತೊಗಟೆಯ ದಪ್ಪ 20–70 ಕಿಮೀ ಇದ್ದರೆ ಸಾಗರೀಯ ತೊಗಟೆಯ ಸರಾಸರಿ ದಪ್ಪ 6 ಕಿಮೀ ಮಾತ್ರ. ಆದ್ದರಿಂದ ಭೂಖಂಡಗಳನ್ನೂ ಸಾಗರಗಳನ್ನೂ ಧರಿಸಿರುವ ಭೂ ಕವಚಫಲಕದ ಕನಿಷ್ಠ ದಪ್ಪ 70 ಕಿಮೀ ಆದರೂ ಇರಬೇಕೆಂದು ತರ್ಕಿಸಬಹುದು. ಆದರೆ ವಾಸ್ತವಿಕವಾಗಿ ಭೂಭಾಗದ ದಪ್ಪಕ್ಕೂ ತೊಗಟೆಯ ದಪ್ಪಕ್ಕೂ ಯಾವ ಸಂಬಂಧವೂ ಇಲ್ಲವೆಂದು ಈಗ ತಿಳಿದಿದೆ. ಎಲ್ಲ ಫಲಕಗಳೂ ಅವು ಖಂಡೀಯ ಇಲ್ಲವೇ ಸಾಗರೀಯ ತೊಗಟೆಯಿಂದ ಆವೃತವಾಗಿರಲೀ ಆಗದಿರಲಿ ಸು. 100 ಕಿಮೀ ದಪ್ಪದವೆಂದು ಈಗ ರುಜುವಾತಾಗಿದೆ. ಈ ಫಲಕಗಳನ್ನು ರಚಿಸುವ ಪದರಕ್ಕೆ ಶಿಲಾಗೋಳವೆಂದು (ಲಿಥೋಸ್ಫಿಯರ್) ಹೆಸರು.

ಪ್ರಚಲಿತ ಪ್ರವಾಹಗಳು ಫಲಕಗಳ ಚಲನೆಗೆ ಕಾರಣ. ಚಲನೆಯ ಪರಿಣಾಮವಾಗಿ ಸಾಗರಮಧ್ಯದ ಏಣಿನಲ್ಲಿ ಹೊಸ ಫಲಕ ರೂಪುಗೊಳ್ಳುತ್ತದೆ. ಇದು ಮುಂದೆ ಕಡಲ ಕಂದಕದತ್ತ ಚಲಿಸಿದಂತೆ ತಣಿಯುತ್ತದೆ. ಅಲ್ಲಿ ಇದನ್ನು ಕಂದಕ ತನ್ನಲ್ಲಿ ಅಡಗಿಸಿಕೊಳ್ಳುವುದು. ಫಲಕ ಅದರ ಆವರಣ ವಸ್ತುವಿಗಿಂತ ಸಣ್ಣಗೂ ಸಾಂದ್ರವಾಗೂ ಇರುವುದರಿಂದ ಕ್ರಮೇಣ ಕವಚದತ್ತ ಕಂತುತ್ತದೆ. ಸಾಂದ್ರಫಲಕ ಹೀಗೆ ಕಂತಿದಾಗ ಬಿಡುಗಡೆಯಾಗುವ ಗುರುತ್ವಾತ್ಮಕಶಕ್ತಿ ತಣ್ಣು ಪದಾರ್ಥವನ್ನು ಕೆಳಕ್ಕೆ ಒಯ್ಯುತ್ತದೆ. ಇದರಿಂದ ನಯನಕೋಶವೊಂದರ (ಕನ್ವೆಕ್ಷನ್ ಸೆಲ್) ಕಂತುವ ತಣ್ಣು ಕುಳಿ ಸೃಷ್ಟಿಯಾಗುತ್ತದೆ. ನಯನ ಪರಿಚಲನೆಯ ಈ ಎರಡೂ ಅಂಶಗಳನ್ನು–ಸ್ವಾಹಾಕರಣ ಮತ್ತು ಮೇಲ್ಮೈಯಲ್ಲಿ ಫಲಕಗಳ ಚಲನೆ– ಪ್ರತ್ಯಕ್ಷವೀಕ್ಷಣೆಯಿಂದ ಅರಿಯಬಹುದು. ಕವಚವನ್ನು ರಚಿಸಿರುವ ವಸ್ತು ಬಹುತೇಕ ಸಿಲಿಕಾನ್ ಡೈಆಕ್ಸೈಡ್, ಮೆಗ್ನೀಷಿಯಂ, ಆಕ್ಸೈಡ್, ಫೆರ್‌ರಸ್ ಆಕ್ಸೈಡ್, ಅಲ್ಯೂಮಿನಿಯಮ್ ಆಕ್ಸೈಡ್, ಕ್ಯಾಲ್ಸಿಯಮ್ ಆಕ್ಸೈಡ್ ಮತ್ತು ಇತರ ಪದಾರ್ಥಗಳು.

ಭೂಮಿಯ ತೊಗಟೆಯಲ್ಲಿ ಇದರಲ್ಲಿ ಸಾಗರೀಯ ತೊಗಟೆ ಮತ್ತು ಖಂಡೀಯ ತೊಗಟೆ ಎಂದು ಎರಡು ಬಗೆಗಳುಂಟು. ಸಾಗರಮಧ್ಯ ಏಣುಗಳಿಂದ ಸ್ವಾಹಾಕರಣ ವಲಯಗಳಿಗೆ (ಸಬ್ಡಕ್ಷನ್ ಝೋನ್ಸ್) ಸತತವಾಗಿ ಹರಿಯುತ್ತಿರುವ ಪ್ರವಾಹದಲ್ಲಿ ಸಾಗರೀಯ ತೊಗಟೆಯ ಸೃಷ್ಟಿಯೂ ನಾಶವೂ ಆಗುತ್ತಿವೆ. ಸ್ವಾಹಾಕರಣ ವಲಯಗಳಲ್ಲಿ ಇದು ಕವಚದಲ್ಲಿ ಐಕ್ಯವಾಗುತ್ತದೆ. ಸು. 59,000 ಕಿಮೀ ಉದ್ದದ ಫ್ಯಾರಡೇ ಪೀಠಭೂಮಿ (ಫ್ಯಾರಡೇ ಪ್ಲ್ಯಾಟೂ) ಸಾಗರೀಯ ಏಣುಗಳಲ್ಲಿ ಮುಖ್ಯವಾದದ್ದು. ಇದು ಸಾಗರ ತಳದಲ್ಲಿ ಭೂಮಿಯನ್ನು ಮೇಖಲೆಯಂತೆ ಸುತ್ತುವರಿದಿದೆ. ತಳದಲ್ಲಿಯ ಕವಚ ಎತ್ತಿ ಹಿಡಿದಿರುವ ಎರಡು ದೃಢ ಫಲಕಗಳ ನಡುವಿನ ಗಡಿಯೇ ಏಣು. ಇಲ್ಲಿ ಫಲಕಗಳು ನಿಧಾನವಾಗಿ ಬೇರ್ಪಡುತ್ತವೆ. ಆಗ ತಳದಲ್ಲಿಯ ಶಿಲಾದ್ರವ ಈ ಖಾಲಿ ಜಾಗವನ್ನು ಭರ್ತಿ ಮಾಡಲು ಮೇಲಕ್ಕೆ ಹರಿಯುತ್ತದೆ. ಹೀಗೆ ಸಾಗರ ಮಧ್ಯ ಏಣುಗಳ ಕೊಡಿಯಲ್ಲಿ ವರ್ಷದಿಂದ ವರ್ಷಕ್ಕೆ ಒಂದಷ್ಟು ತೊಗಟೆ ಮೈದಳೆಯುತ್ತದೆ. ಇದು ಖಂಡೀಯ ತೊಗಟೆಗಿಂತ ರಚನೆಯಲ್ಲಿ ಭಿನ್ನ, ವಯಸ್ಸಿನಲ್ಲಿ ತೀರ ತರುಣ.

ಭೂಮಿಯ ತೊಗಟೆ ಮತ್ತು ಮೇಲು ಕವಚಗಳನ್ನು ಒಟ್ಟಾರೆ ಎರಡು ವಿಭಾಗಗಳಾಗಿ ವಿಂಗಡಿಸಿದೆ. ಮೇಲಿನದು ಶಿಲಾಗೋಳ ಅಥವಾ ಬಲಿಷ್ಠ ಪದರ. ಕೆಳಗಿನದು ಅಸ್ಥೆನೊಸ್ಫಿಯರ್ ಅಥವಾ ದುರ್ಬಲ ಪದರ. ಶಿಲಾಗೋಳದಲ್ಲಿ ತೊಗಟೆಯ ಮೇಲು ಕವಚದ ಒಂದು ಭಾಗ ಸೇರಿಕೊಂಡಿದೆ. ಸಾಗರದಲ್ಲಿ ತೊಗಟೆಯ ಸರಾಸರಿ ದಪ್ಪ 5–7 ಕಿಮೀ ಏಣಿನ ಕೊಡಿಯಿಂದಾಚೆಗೆ ಶಿಲಾಗೋಳದ ದಪ್ಪ ಸು. 100 ಕಿಮೀ. ಇದು ಅಸಂಖ್ಯ ದೃಢ ಫಲಕಗಳಾಗಿ ಒಡೆದು ಹೋಗಿದೆ. ಇವು ಅಷ್ಟೊಂದು ದೃಢವಲ್ಲದ ದುರ್ಬಲ ಪದರದ ಮೇಲೆ ತೇಲುತ್ತಿರುವ ಫಲಕಗಳಂತಿವೆ.

ಈ ಫಲಕಗಳು ವಾರ್ಷಿಕವಾಗಿ ಒಂದನ್ನು ಕುರಿತಂತೆ ಇನ್ನೊಂದು ಕೆಲವು ಸೆಂಮೀ ಗಳಷ್ಟು ಸರಿಯುತ್ತವೆ. ಹೀಗಾಗಿ ಮೂರು ಬಗೆಯ ಗಡಿಗಳು ಮೈದಳೆಯುವುವು:

ಅಭಿಸರಣ ಗಡಿಗಳು, ಅಪಸರಣಗಡಿಗಳು, ಪರಿವರ್ತಕ ಗಡಿಗಳು. ಮೊದಲ ಬಗೆಯ ಫಲಕಗಳು ದೂರದೂರಹೋಗುವುವು. ಉದಾಹರಣೆಗೆ ಸಾಗರಮಧ್ಯದ ಏಣನ್ನು ವಿಸ್ತರಿಸುತ್ತಿರುವ ನಡುಭಾಗ. ಇಲ್ಲಿ ದ್ರವಶಿಲೆ ಕವಚದಿಂದ ತೊಗಟೆಗೆ ಪ್ರವಹಿಸುತ್ತಿರುವುದು. ಎರಡನೆಯ ಬಗೆಯ ಫಲಕಗಳು ಹತ್ತಿರ ಹತ್ತಿರ ಸರಿದು ಒಂದು ಇನ್ನೊಂದರ ತಳದಲ್ಲಿ ಒಳನುಗ್ಗಿ ದುರ್ಬಲ ಪದರವನ್ನು ಪ್ರವೇಶಿಸುತ್ತವೆ. ಈ ಪ್ರಕ್ರಿಯೆಯನ್ನು ಸ್ವಾಹಾಕರಣವೆನ್ನುವರು. ಪರಿವರ್ತಕ ಗಡಿಗಳಲ್ಲಿ (ಟ್ರಾನ್ಸ್‌ಫಾರ್ಮ್ ಬೌಂಡರೀಸ್) ಫಲಕಗಳು ಒಂದರ ಮೇಲೊಂದು ಸಲೀಸಾಗಿ ಜಾರುತ್ತವೆ.

ಖಂಡೀಯ ತೊಗಟೆ ಸಾಗರೀಯ ತೊಗಟೆಗಿಂತ ಪ್ರಾಚೀನವಾದದ್ದು. ಕೆಲವೆಡೆಗಳಲ್ಲಿ ಇದರ ಆಯಸ್ಸು ಹತ್ತಿರ ಹತ್ತಿರ 4 ಬಿಲಿಯನ್ ವರ್ಷಗಳೇ ಇರಬಹುದು (ಭೂಮಿಯ ಆಯಸ್ಸು 4.6 ಬಿಲಿಯನ್ ವರ್ಷಗಳು). ಹಾಗಿದ್ದರೂ ಇದು ಭೂವ್ಯಾಪಾರಗಳ ಕಾರಣವಾಗಿ ಸತತ ವ್ಯತ್ಯಾಸ ಹೊಂದುತ್ತದೆ: ಫಲಕ ಚಲನೆ, ಜ್ವಾಲಾಮುಖಿ ಪ್ರಹಾರ, ಸವಕಳಿ ಮತ್ತು ಅವಸಾದನ. ಇತ್ತೀಚೆಗೆ ಸು. 200 ವರ್ಷಗಳಿಂದ ಭೂವಿಜ್ಞಾನಿಗಳು ಖಂಡಗಳ ಭೂವೈಜ್ಞಾನಿಕ ವೃತ್ತಾಂತವನ್ನು ಅಧ್ಯಯನ ಮಾಡುತ್ತ ಬಂದಿದ್ದಾರೆ. ಭೂಚರಿತ್ರೆಯ ಪುನಾರಚನೆ ಇವರ ಉದ್ದೇಶ. ಆದರೆ ಇದೊಂದು ಅಪರಿಹಾರ್ಯ ಸಮಸ್ಯೆ ಎನಿಸುವಷ್ಟು ಅಗಾಧವಾದದ್ದು. ಏಕೆಂದರೆ ಸಾಗರೀಯ ತೊಗಟೆಯ ಸೃಷ್ಟಿ ಅತಿ ಶೀಘ್ರವಾಗಿ ಆಗುತ್ತದೆ. ಅದರ ಹ್ರಸ್ವ ಜೀವಿತಾವಧಿಯಲ್ಲಿ ಅದರ ಹೆಚ್ಚು ಭಾಗ ವಿರೂಪಗೊಳ್ಳದೆ ಉಳಿದಿದ್ದು ಮುಂದೆ ಅತಿ ಶೀಘ್ರವಾಗಿ ನಾಶವಾಗಿ ಹೋಗುತ್ತದೆ. ಕಡಲ ದೋಣಿಗಳಲ್ಲಿಯ ಅತ್ಯಂತ ಪ್ರಾಚೀನ ತೊಗಟೆಯ ವಯಸ್ಸು 200 ಮಿಲಿಯನ್ ವರ್ಷಗಳಿಗಿಂತ ಕಡಿಮೆ. ಇದಕ್ಕೆ ವೈದೃಶ್ಯವಾಗಿ ಖಂಡೀಯ ತೊಗಟೆ ಅತಿದೀರ್ಘಕಾಲ ಸ್ಥಿರವಾಗಿರುತ್ತದೆ. ಸಾಗರದಲ್ಲಿ ತೊಗಟೆಯ ಸೃಷ್ಟಿ ಆಗುವ ರೀತಿಯೇ ಬೇರೆ. ಖಂಡಗಳಲ್ಲಿ ಆಗುವ ರೀತಿಯೇ ಬೇರೆ. ಇಲ್ಲಿ ಹಲವು ಬಗೆಯ ಭೌತ ಹಾಗೂ ರಾಸಾಯನಿಕ ಕರ್ತೃಗಳು ವರ್ತಿಸಿ ಸಂಕೀರ್ಣ ತೊಗಟೆಯ ನಿರ್ಮಾಣ ಆಗುವುದು. ಇದರಲ್ಲಿ ಭೂವ್ಯಾಪಾರಗಳ ಕಾರಣವಾಗಿ ಆಗುವ ಬದಲಾವಣೆಗಳು ಅಸಂಖ್ಯ. ಉದಾ: ಸಾವಿರಾರು ಕಿಲೋಮೀಟರ್ ಉದ್ದ ಹರಡಿಹೋಗಿರುವ ನೂರಾರು ಕಿಲೋಮೀಟರ್ ಅಗಲದ ಶಿಲಾ ಮೇಖಲೆಗಳನ್ನು ಅಗ್ನಿಶಿಲೆಗಳು ಆಕ್ರಮಿಸಿ ತಿರುಚಿ ಅಲ್ಲಿ ಸ್ಥಳೀಯ ಅವಸಾದನ ಶಿಲೆಗಳನ್ನು ನಿರ್ಮಿಸುವುದು ವಿರಳವಲ್ಲ. ಹೀಗೆ ಖಂಡೀಯ ತೊಗಟೆ ಭೂಚರಿತ್ರೆಯ ವಿವರಗಳನ್ನು ಆಂಶಿಕವಾಗಿಯಾದರೂ ಒದಗಿಸುವ ಒಂದು ಸಂಕೀರ್ಣ ದಾಖಲೆ.

ಖಂಡೀಯ ತೊಗಟೆ ಖಂಡಗಳ ಮೇಲ್ಮೈಯನ್ನು ವ್ಯಾಪಿಸಿ ಸಾಗರದ ಅಂಚಿನವರೆಗೂ ಚಾಚಿರುವುದು. ಒಟ್ಟಾರೆ ಇದು ಭೂಮಿಯ ಮೇಲ್ಮೈಯ ಶೇ.ಸು.45 ಭಾಗದಷ್ಟು ವ್ಯಾಪಿಸಿದೆ. ಆದರೆ ಇದರ ರಾಶಿ ಭೂರಾಶಿಯ ಶೇ.0.3 ಮಾತ್ರ. ಸಾಗರೀಯ ತೊಗಟೆ ಬಹುತೇಕ ಅಗ್ನಿಶಿಲಾ ಬಸಾಲ್ಟಿನಿಂದ ಕೂಡಿದ್ದರೆ ಖಂಡೀಯ ತೊಗಟೆ ಅಗ್ನಿಜನ್ಯ ರೂಪಾಂತರಿತ ಮತ್ತು ಅವಸಾದನ ಶಿಲೆಗಳ ಸಂಚಯ. ಇದರಲ್ಲಿ ಪೊಟಾಸಿಯಮ್, ಯುರೇನಿಯಮ್, ತೋರಿಯಮ್ ಮತ್ತು ಸಿಲಿಕಾನ್ ಧಾತುಗಳು ಸಮೃದ್ಧವಾಗಿವೆ.

ಆಕಾರ: ಭೂಮಿ ವಾಯುಮಂಡಲದಲ್ಲಿ ಮುಕ್ತವಾಗಿ ತೇಲುತ್ತಿದೆ. ನೇಸರುಮೂಡುವ ಮುನ್ನ ನಸುಕು ಹರಿಯುತ್ತದೆ ಎಂದು ಮುಂತಾಗಿ ಋಗ್ವೇದದಲ್ಲಿ (ಪ್ರ.ಶ.ಪೂ.1500) ಬರುವ ಪ್ರಾಸಂಗಿಕ ವರ್ಣನೆಗಳಿಂದ ಅಂದಿನ ಭಾರತೀಯರಿಗೆ ಭೂಮಿಯ ಗೋಳಾಕಾರತ್ವದ ಹೊಳಹು ಮಿನುಗಿತ್ತೆಂದು ಊಹಿಸಬಹುದು. ಈ ಊಹೆಗೆ ಆಧಾರವಾಗಿ ಏನಾದರೂ ಪ್ರಾಯೋಗಿಕ ಸಮರ್ಥನೆ ಇತ್ತೇ ಇರಲಿಲ್ಲವೇ ತಿಳಿದಿಲ್ಲ.

ಗ್ರೀಕ್ ತತ್ತ್ವಜ್ಞಾನಿ ಮೈಲೇಟಸಿನ ತೇಲ್ಸ್ (ಪ್ರ.ಶ.ಪೂ.624–546) ಭೂಮಿಯನ್ನು ಉಬ್ಬು ತಗ್ಗುಗಳಿಂದ ಕೂಡಿರುವ ಅತಿ ವಿಸ್ತಾರ ಫಲಕವಾಗಿ ಕಂಡಿದ್ದಾನೆ. ಇದು ನಕ್ಷತ್ರಖಚಿತ ಗೋಳಾರ್ಧದಿಂದ ಆವೃತವಾಗಿ ಈ ಒಟ್ಟುರಚನೆ ಅಸೀಮ ಜಲಸಾಗರದಲ್ಲಿ ತೇಲುತ್ತಿದೆ. ತೇಲ್ಸನ ಶಿಷ್ಯ ಅನಾಕ್ಸಿಮ್ಯಾಂಡರನ (ಪ್ರ.ಶ.ಪೂ.ಸು.610–546) ಪ್ರಕಾರ ಭೂಮಿಯನ್ನು ಸುತ್ತುವರಿದಿರುವ ಆಕಾಶ ಕಣ್ಣಿಗೆ ಕಾಣುವ ಗೋಳಾರ್ಧ ಮಾತ್ರವೇ ಅಲ್ಲ; ಕಾಣದ ಅರ್ಧವೂ ಸೇರಿ ಪೂರ್ಣಗೋಳ. ಇದು ಧ್ರುವನಕ್ಷತ್ರದ ಸುತ್ತ ಆವರ್ತಿಸುತ್ತಿದೆ. ನೆಲದ ಮೇಲೆ ಉತ್ತರಕ್ಕೆ ಅಥವಾ ದಕ್ಷಿಣಕ್ಕೆ ಪಯಣಿಸಿದಂತೆ ನಕ್ಷತ್ರಚಿತ್ರಗಳ ನೆಲೆಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಈತ ಗಮನಿಸಿದ್ದ. ಉದಾ: ಉತ್ತರಾಭಿಮುಖವಾಗಿ ಸಾಗಿದಂತೆ ಧ್ರುವನಕ್ಷತ್ರ ವೀಕ್ಷಕನ ಖಮಧ್ಯದ ಸನಿಹಕ್ಕೆ ಸರಿಯುತ್ತದೆ. ಭೂಮಿ ದಕ್ಷಿಣದಿಂದ ಉತ್ತರಕ್ಕೆ ವಕ್ರವಾಗಿರುವುದರಿಂದ ಹೀಗಾಗುತ್ತದೆಂದು ಈತ ವಿವರಿಸಿದ. ಪಶ್ಚಿಮದಿಂದ ಪೂರ್ವಕ್ಕೂ ಅದು ವಕ್ರವಾಗಿರಬಹುದೆಂಬ ಭಾವನೆ ಈತನಿಗೆ ಸುಳಿದಂತಿಲ್ಲ.

ಭೂಮಿಯ ಆಕಾರ ಉರುಳೆಯಿಂದ (ಸಿಲಿಂಡರ್) ಗೋಳಕ್ಕೆ (ಸ್ಪಿಯರ್) ಬಡ್ತಿಪಡೆಯಲು ಪ್ರ.ಶ.ಪೂ.ಸು.582–497 ಅವಧಿಯಲ್ಲಿ ಬಾಳಿದ ಗ್ರೀಕ್ ತತ್ತ್ವಜ್ಞಾನಿ ಪೈತಾಗೊರಸ್ ರಂಗಪ್ರವೇಶಿಸುವ ತನಕವೂ ಕಾಯಬೇಕಾಯಿತು. ಇವನು ತೇಲ್ಸ್ ಮತ್ತು ಅನಾಕ್ಸಿಮ್ಯಾಂಡರ್ ಇಬ್ಬರ ಜೊತೆಯೂ ಅಧ್ಯಯನ ನಡೆಸಿ ಅವರಿಂದ ಸ್ಫೂರ್ತಿ ಪಡೆದಿರಬಹುದು. ರೂಢಿಯ ಮಾತಿನಲ್ಲಿ ಸಾಯಂಕಾಲದ ತಾರೆ (ಈವ್ನಿಂಗ್ ಸ್ಟಾರ್) ಮತ್ತು ಮುಂಜಾನೆಯ ತಾರೆ (ಮಾರ್ನಿಂಗ್ ಸ್ಟಾರ್) ಎಂಬುವು ಬೇರೆ ಬೇರೆ ಕಾಯಗಳಲ್ಲ, ಒಂದೇಕಾಯದ (ಇಂದು ತಿಳಿದಿದೆ_ಶುಕ್ರಗ್ರಹದ) ಪುನರವತಾರಗಳು ಎಂದು ಈತ ವಿವರಿಸಿ ಭೂಮಿ ಗೋಳಾಕಾರವಾಗಿರುವುದೇ ಇದಕ್ಕೆ ಕಾರಣ ಎಂದು ವಿವರಿಸಿದ. ಹೀಗೆ ಭೂಮಿಯ ಗೋಳಾಕಾರತ್ವವನ್ನು ಮೊದಲು ಪ್ರತಿಪಾದಿಸಿದವ ಪೈತಾಗೊರಸ್. ಆದರೂ ಇದಕ್ಕೆ ಪ್ರಾಯೋಗಿಕ ಸಮರ್ಥನೆ ಕೊಡುವಲ್ಲಿ ಆತ ವಿಫಲನಾಗಿದ್ದ.

ಮೊಟ್ಟಮೊದಲ ಪ್ರಾಯೋಗಿಕ ಸಮರ್ಥನೆ ನೀಡಿದವ ಪ್ರಯೋಗ ಪರಿಣತಮತಿ ಆರ್ಕಿಮಿಡೀಸನ (ಪ್ರ.ಶ.ಪೂ.ಸು.287–ಸು.212) ಮಿತ್ರ ಎರಟಾಸ್ತನೀಸ್ (ಪ್ರ.ಶ.ಪೂ.ಸು.276–ಸು.196). ಈತ ಪ್ರಾಯೋಗಿಕ ಖಗೋಳವಿಜ್ಞಾನಿ. ಗಣಿತ ಪಾರಂಗತ, ಕಾರ್ಯಕ್ಷೇತ್ರ ಅಲೆಗ್ಸಾಂಡ್ರಿಯ. ಇಲ್ಲಿಂದ ಸು. 800 ಕಿಮೀ ಸಾಧಾರಣ ನೇರ ದಕ್ಷಿಣಕ್ಕೆ ಇರುವ ನಗರ ಸೀಯೇನ್ (ಆಧುನಿಕ ಆಸ್ವಾನ್). ಇವೆರಡು ನಗರಗಳಿಗೆ ಸಂಬಂಧಿಸಿದಂತೆ ಒಂದು ವಿಶೇಷ ವಿದ್ಯಮಾನ ಇವನ ಗಮನಕ್ಕೆ ಬಂದಿತು. ಸೀಯೇನಿನಲ್ಲಿ ನೆಲಕ್ಕೆ ಲಂಬವಾಗಿ ನೆಟ್ಟ ಸರಳಿಗೆ ಕರ್ಕ ಸಂಕ್ರಾಂತಿಯ (ಜೂನ್.22) ಮಧ್ಯಾಹ್ನ ನೆರಳೇ ಇಲ್ಲವಾದರೆ ಅಲೆಗ್ಸಾಂಡ್ರಿಯಾದಲ್ಲಿಯ ಸದೃಶ ಸರಳಿಗೆ ನೆರಳಿತ್ತು. ಸೂರ್ಯ ಆ ಗಳಿಗೆ ಸೀಯೇನಿನ ಖಮಧ್ಯದಲ್ಲಿದ್ದರೆ ಮತ್ತು ಅಲೆಗ್ಸಾಂಡ್ರಿಯದ ಖಮಧ್ಯದಲ್ಲಿಲ್ಲದಿದ್ದರೆ ಮಾತ್ರ ಇದು ಸಾಧ್ಯ. ಸೂರ್ಯನಿಂದ ಬರುವ ಕಿರಣಗಳೆಲ್ಲವೂ ಸಮಾನಾಂತರವೆಂದು ತಿಳಿದಿತ್ತು. ಅಂದ ಮೇಲೆ ಭೂಮಿ ಮಟ್ಟಸ ಅಥವಾ ಚಪ್ಪಟೆ ಆಗಿರುವುದಾದ ಪಕ್ಷ ನೆಲಕ್ಕೆ ಲಂಬವಾಗಿ ಬೇರೆ ಬೇರೆ ಎಡೆಗಳಲ್ಲಿ ನೆಟ್ಟ ಸಮಉದ್ದದ ಸರಳುಗಳು ನಿರ್ದಿಷ್ಟ ಕ್ಷಣದಲ್ಲಿ ಸಮ ಉದ್ದದ ನೆರಳುಗಳನ್ನೇ ಕಡೆಯಬೇಕೆಂಬುದು ಸ್ಪಷ್ಟ ವಾಸ್ತವ ಪರಿಸ್ಥಿತಿ ತದ್ವಿರುದ್ಧ! ಸೀಯೇನಿನಲ್ಲಿ ನೆರಳಿಲ್ಲ, ಅಲೆಗ್ಸಾಂಡ್ರಿಯದಲ್ಲಿ ನೆರಳುಂಟು. ಭೂಮಿಯ ವಕ್ರತೆಯೇ ಇದರ ಕಾರಣವೆಂದು ಎರಟೋಸ್ಥನೀಸ್ ತರ್ಕಿಸಿದ. ಅವನೆಸಗಿದ ಪ್ರಯೋಗ ಅತಿ ಸರಳ. ಕರ್ಕ ಸಂಕ್ರಾಂತಿಯ ಮಧ್ಯಾಹ್ನ ಅಲೆಗ್ಸಾಂಡ್ರಿಯದಲ್ಲಿ ಸೂರ್ಯನ ಖಮಧ್ಯದೂರ ಅಳೆದ. ಅದು 7° ಸೀಯೇನ್–ಅಲೆಗ್ಸಾಂಡ್ರಿಯ ಅಂತರ ತಿಳಿದಿದ್ದುದರಿಂದ ಭೂಮಿಯನ್ನು ಗೋಳವೆಂದು ಪರಿಭಾವಿಸಿ ಈ ಗೋಳದ ಪರಿಧಿ ಗಣಿಸಿದ. ಅವನಿಗೆ ದೊರೆತ ಬೆಲೆ ಸು. 41,140 ಕಿಮೀ. ಇಂದಿನ ಖಚಿತ ಬೆಲೆಗೆ (ಸು. 40,000 ಕಿಮೀ) ಇದು ಸನ್ನಿಹಿತವಾಗಿದೆ ಎಂಬುದು ಗಮನಾರ್ಹ. ಈ ಪ್ರಯೋಗ ಯಶಸ್ವಿ ಆಗಬೇಕಾದರೆ ಎರಡೂ ಸ್ಥಳಗಳು ಒಂದೇ ರೇಖಾಂಶದ (ಮೆರಿಡಿಯನ್) ಮೇಲಿರಬೇಕು. ಸೀಯೇನ್ ಮತ್ತು ಅಲೆಗ್ಸಾಂಡ್ರಿಯ ಹೀಗಿರುವುದೊಂದು ಯೋಗಾಯೋಗ.

ಎರಟಾಸ್ತನೀಸನ ಸರಳಪ್ರಯೋಗ (ಸರಳು ಪ್ರಯೋಗ ಕೂಡ) ಅನಾವರಣಗೊಳಿಸಿದ ಜಟಿಲ ದೃಶ್ಯ ಅಂದಿನವರ ಸಾಮಾನ್ಯ ಪ್ರಜ್ಞೆಗೆ (= ಪೂರ್ವಾಗ್ರಹಗಳ ಸಮುಚ್ಚಯ ?) ಸವಾಲಾಗಿತ್ತು. ಅವರ ಜ್ಞಾತ ಜಗತ್ತಿನ ಗಾತ್ರದೊಂದಿಗೆ ಹೋಲಿಸಿದಾಗ ಭೂಮಿ ಒಂದು ಮಹಾದೈತ್ಯಕಾಯವಾಗಿ ಎದುರುನಿಂತಿತ್ತು. ವಿದ್ವಜ್ಜನ ಈತನ ಪ್ರಯೋಗದಲ್ಲೇ ಏನೋ ದೋಷ ನುಸುಳಿದೆ ಎಂದು ತೀರ್ಮಾನಿಸಿ ಈ ಪ್ರೌಢ ಬೆಲೆಯನ್ನು ತಿರಸ್ಕರಿಸಿದರು.

ವಿದ್ವನ್ಮಣಿಗಳ ಅಸಾಮಾನ್ಯ ಪ್ರಜ್ಞೆಗೆ ( = ಆತ್ಮ ಪ್ರತಿಷ್ಠೆ ?) ಪಥ್ಯವಾಗುವ ಬೆಲೆ ನೀಡಿದವ ಗ್ರೀಕ್ ತತ್ತ್ವಜ್ಞಾನಿ ಪಾಸಿಡೋನೀಯಸ್ (ಪ್ರ.ಶ.ಪೂ. ಸು.135–ಸು.50). ಇವನು ಎರಟಾಸ್ತನೀಸನ ಪ್ರಯೋಗವನ್ನು ಪುನರಾವರ್ತಿಸಿದ. ಆದರೆ ಸೂರ್ಯನ ಬದಲು ಅಗಸ್ತ್ಯ ನಕ್ಷತ್ರ (ಕೆನೋಪಸ್) ಇವನ ಲಕ್ಷ್ಯ. ಸಮೀಪದ ಸೂರ್ಯನಿಗಿಂತ ಸುದೂರದ ನಕ್ಷತ್ರದ ಆಯ್ಕೆ ತಾತ್ತ್ವಿಕವಾಗಿ ಒಂದು ಸುಧಾರಣೆ ನಿಜ. ಆದರೆ ಗಣನೆಯಲ್ಲಿ ತಪ್ಪು ಹಣಿಕಿತ್ತು. ಹೀಗಾಗಿ ಭೂಪರಿಧಿಗೆ ದೊರೆತ ಬೆಲೆ ಕೇವಲ 28,800 ಕಿಮೀ ಮುಂದಿನ ಹಲವು ಶತಮಾನ ಪರ್ಯಂತ ಈ ತಪ್ಪು ಬೆಲೆ ವೈಜ್ಞಾನಿಕ ಚಿಂತನೆಯನ್ನು ಪ್ರಭಾವಿಸಿತು. ಉದಾಹರಣೆಗೆ ಕ್ರಿಸ್ಟೋಫರ್ ಕೊಲಂಬಸ್ (1451–1506) ಕೈಗೊಂಡ ಮಹಾ ಸಾಗರೋತ್ತರಣ. ಸ್ಪೇನಿನಿಂದ ಹೊರಟು ಕಡಲಿನಲ್ಲಿ ತೇಲಿ ಏಶ್ಯಖಂಡ ತಲುಪುವುದು ಹೇಗೆ? ಪೂರ್ವಾಭಿಮುಖವಾಗಿ ಹೋಗುವುದಾದರೆ ಆಫ್ರಿಕಾಖಂಡ ಬಳಸಿ ಸಾಗಬೇಕು. ಹೀಗಲ್ಲದೇ ಪಶ್ಚಿಮಾಭಿಮುಖವಾಗಿ ಯಾನಿಸಿದುದಾದರೆ, ಭೂಮಿ ಹೇಗೂ ಗೋಳವಾಗಿರುವುದರಿಂದ, ಕೇವಲ ಕೆಲವೇ ಸಾವಿರ ಕಿಲೋಮೀಟರ್ ಗಮಿಸುವಾಗ ಏಷ್ಯ ಖಂಡದ ಪೂರ್ವ ಕರಾವಳಿ ತಲುಪಬಹುದೆಂಬುದು ಅವನ ಎಣಿಕೆ. ಕೊಲಂಬಸ್ ಏನಾದರೂ ಭೂಪರಿಧಿಗೆ ಪಾಸಿಡೊನೀಯಸನ ಕಿರಿಯ (ಮತ್ತು ತಪ್ಪು) ಬೆಲೆ ಆಯದೇ ಎರಟಾಸ್ತನೀಸನ ಹಿರಿಯ (ಮತ್ತು ಒಪ್ಪು) ಬೆಲೆ ಆಯ್ದಿದ್ದರೆ ನಾಗರಿಕತೆಯ ಗಾಲಿ ಎತ್ತ ಹೇಗೆ ಉರುಳಿರುತ್ತಿತ್ತೋ?

ಮುಂದೆ ಬಂದವ ಫ್ರೆಂಚ್ ಖಗೋಳವಿಜ್ಞಾನಿ ಜೀನ್ ರೀಶೇ (1630–96). ದೂರದ ಫ್ರೆಂಚ್ ಗಯಾನಕ್ಕೆ (ದಕ್ಷಿಣ ಅಮೆರಿಕ ಖಂಡ) ಈತ ಅನ್ವೇಷಕನಾಗಿ ಹೋದ. ಅಲ್ಲಿಯ ಕೈಯೀನ್‌ನಗರ ಇವನ ನೆಲೆ. ಇದು ಸಮಭಾಜಕದ (ಇಕ್ವೇಟರ್) ಸನಿಹದಲ್ಲಿದೆ. ಪ್ಯಾರಿಸ್ ಗಡಿಯಾರದ ಕಾಲಕ್ಕೆ ಹೋಲಿಸಿದಾಗ ಕೈಯೀನ್ ಗಡಿಯಾರದ ಕಾಲ ದಿವಸವೊಂದರ 2.5 ಮಿನಿಟುಗಳನ್ನು ಕಳೆದುಕೊಳ್ಳುತ್ತಿದ್ದುದು ಇವನ ಗಮನಕ್ಕೆ ಬಂದಿತು. ಅಂದರೆ ಕೈಯೀನಿನಲ್ಲಿ ಲೋಲಕದ ಆಂದೋಳನ ಗತಿ ಪ್ಯಾರಿಸಿನಲ್ಲಿಯದಕ್ಕಿಂತ ನಿಧಾನವೆಂದಾಯಿತು.

ಈ ವಿಪರ್ಯಾಸಕ್ಕೆ ಸಮರ್ಪಕ ವ್ಯಾಖ್ಯಾನವಿತ್ತವ ಇಂಗ್ಲೆಂಡಿನ ಐಸಾಕ್ ನ್ಯೂಟನ್ (1642–1727). ಲೋಲಕದ ಆಂದೋಳನಗತಿ ಭೂಗುರುತ್ವಕ್ಕೆ ಪ್ರತಿಲೋಮ ವರ್ಗಮೂಲಾನುಪಾತದಲ್ಲಿದೆ (t $(t = 2\pi\sqrt{\frac{l}{g}}$, = ಇಲ್ಲಿ t = ಕಾಲ, l =ಲೋಲಕದ ಉದ್ದ, $g$ = ಭೂಗುರುತ್ವ). ಹೀಗಾಗಿ ಆ ಎರಡು ಸ್ಥಳಗಳ ಪೈಕಿ ಕೈಯೀನಿನಲ್ಲಿಯ ಭೂಗುರುತ್ವ ಪ್ಯಾರಿಸಿನಲ್ಲಿಯದಕ್ಕಿಂತ ಅಧಿಕ, ಎಂದೇ ಕೈಯೀನ್ ಕಾಲ ಪ್ಯಾರಿಸ್ ಕಾಲಕ್ಕಿಂತ ನಿಧಾನ ಎಂದು ಆತ ತರ್ಕಿಸಿದ. ರಾಶಿಯೂ (ಮಾಸ್) ಗುರುತ್ವವೂ (ಗ್ರ್ಯಾವಿಟಿ) ಅನುಲೋಮ ಸಂಬಂಧಿಗಳಾಗಿರುವುದರಿಂದ ($g = GM/r^2$. ಇಲ್ಲಿ g = ಗುರುತ್ವ, G = ವಿಶ್ವ ಗುರುತ್ವಾಕರ್ಷಣ ನಿಯತಾಂಕ, M = ಭೂರಾಶಿ, r = ಭೂತ್ರಿಜ್ಯ) ಕೈಯೀನ್ ಪ್ರದೇಶದಲ್ಲಿ ಜಾಸ್ತಿ ಭೂರಾಶಿ ಮತ್ತು ಪ್ಯಾರಿಸ್ ಪ್ರದೇಶದಲ್ಲಿ ಕಡಿಮೆ ಭೂರಾಶಿ ಪೇರಿಕೊಂಡಿವೆ ಎಂಬುದು ಅನುಗತವಾಯಿತು. ಅಂದರೆ ಕೈಯೀನ್ ಪ್ರದೇಶದಲ್ಲಿಯ ಭೂತ್ರಿಜ್ಯ ಪ್ಯಾರಿಸ್ ಪ್ರದೇಶದಲ್ಲಿಯದಕ್ಕಿಂತ ಜಾಸ್ತಿ ಎಂದಾಯಿತು. ಈಗ, ಕೈಯೀನ್ ಸಮಭಾಜಕ ವಲಯದಲ್ಲಿಯೂ ಪ್ಯಾರಿಸ್ ಉತ್ತರ ಅಕ್ಷಾಂಶ ವಲಯದಲ್ಲಿಯೂ ಇವೆ ಎಂಬುದನ್ನು ಪರಿಗಣಿಸಿದರೆ ಭೂಮಿ ಪರಿಪೂರ್ಣಗೋಳವಾಗಿಲ್ಲ. ಸಮಭಾಜಕ ವಲಯದಲ್ಲಿ ಜಾಸ್ತಿ ಉಬ್ಬಿಕೊಂಡಿದ್ದು ಧ್ರುವವಲಯಗಳಿಗೆ ಹೋದಂತೆ ಚಪ್ಪಟೆ ಆಗುವುದೆಂದು ತರ್ಕಿಸುವುದು ಸುಲಭ. ಭೂಮಿಯ ಆವರ್ತನ ಚಲನೆಯ ಪರಿಣಾಮವಾಗಿ ಆವರ್ತನಾಕ್ಷದ ಕೊನೆತಗಳಾದ ಧ್ರುವ ಪ್ರದೇಶಗಳಲ್ಲಿ ಅದು ಚಪ್ಪಟೆ ಆಗಿದ್ದು ಸಮಭಾಜಕ ಪ್ರದೇಶದಲ್ಲಿ ಉಬ್ಬಿಕೊಂಡಿರುವುದು ನಿರೀಕ್ಷಿತವೇ. ಇಂಥ ಆಕಾರಕ್ಕೆ ಗಣಿತಪರಿಭಾಷೆಯಲ್ಲಿ ಹ್ರಸ್ವಾಕ್ಷ ದೀರ್ಘವೃತ್ತಕಲ್ಪವೆಂದು (ಆಬ್ಲೇಟ್ ಸ್ಫೆರಾಯ್ಡ್) ಹೆಸರು.

ಆಕಾಶಯುಗ ಆರಂಭವಾದ (1957) ಬಳಿಕ ಭೂವಲಯದ ಆಕಾರ ವಿಶೇಷ ಸೂಕ್ಷ್ಮ ತಪಾಸಣೆಗೆ ಒಳಗಾಯಿತು. ಭೂಮಿಯಿಂದ ವಿವಿಧ ಔನ್ನತ್ಯಗಳಲ್ಲಿ ಮತ್ತು ವಿವಿಧ ಕಕ್ಷೆಗಳಲ್ಲಿ ಪರಿಭ್ರಮಿಸಲು ನಿಯೋಜಿಸಿದ ಉಪಗ್ರಹಗಳು ಭೂಗುರುತ್ವವಿತರಣೆಯ ಸೂಕ್ಷ್ಮ ಮತ್ತು ವ್ಯಾಪಕ ಚಿತ್ರ ಒದಗಿಸಿವೆ. ಇದನ್ನು ಆಧರಿಸಿ ಭೂಮಿಯ ಖಚಿತ ಆಕಾರವನ್ನು ನಿರ್ಧರಿಸಲಾಗಿದೆ. ಇದರ ಪ್ರಕಾರ ಭೂಮಿಗೆ ಪರಿಪೂರ್ಣ ಹ್ರಸ್ವಾಕ್ಷ ದೀರ್ಘವೃತ್ತಕಲ್ಪಾಕಾರ ಕೂಡ ಇಲ್ಲ. ತುಸುವೇ ಎಡ್ಡ ತಿಡ್ಡ ಉಬ್ಬಿಕೊಂಡು ಮರಸೇಬಿನ (ಪೇರ್ ಹಣ್ಣು) ಆಕಾರ ಪಡೆದಿದೆ. ಸಮಭಾಜಕೀಯ ತ್ರಿಜ್ಯದ ಉದ್ದ 6378 ಕಿಮೀ. ಧ್ರುವೀಯ ತ್ರಿಜ್ಯದ ಉದ್ದ 6359 ಕಿಮೀ. ಸಮಭಾಜಕದ ಉದ್ದ 40,077 ಕಿಮೀ. ರೇಖಾಂಶ ವೃತ್ತದ ಉದ್ದ 40,009 ಕಿಮೀ.

ಸಾಗರ: ನಮ್ಮ ಗ್ರಹದ ನಿಜವಾದ ಹೆಸರು ಸಾಗರ ಎಂದಾಗಬೇಕು. ಭೂಮಿ ಎಂದಲ್ಲ. ಏಕೆಂದರೆ ಇದು ಶೇ. 70 ಭಾಗ ನೀರಿನಿಂದ ಆವೃತವಾಗಿದೆ. ಇಷ್ಟೇ ಅಲ್ಲ. ಈ ಗ್ರಹದ ಘನ ಮೇಲ್ಮೈಯ ಶೇ. 60 ಭಾಗವನ್ನು ಆವರಿಸಿರುವ ತೆಳು ತೊಗಟೆ ಸಾಗರ ಮಧ್ಯದ ಒಂದು ವಿಶಿಷ್ಟ ಭೂವೈಜ್ಞಾನಿಕ ಗಿರಣಿಯ ಉತ್ಪನ್ನ.

ನೀರು ಮತ್ತು ಗಾಳಿ ಶಿಲಾಗೋಳದ ಜೊತೆ ಅಂತರಕ್ರಿಯೆ ಎಸಗಿ ಜೀವಿಗಳ ಉಳಿವಿಗೆ ಅವಶ್ಯವಾಗುವ ರಾಸಾಯನಿಕ ನೆಲೆಯನ್ನು ಒದಗಿಸುತ್ತವೆ. ವಾಸ್ತವವಾಗಿ ಸಾಗರ ಮತ್ತು ವಾಯುಮಂಡಲ ಏಕ ವ್ಯವಸ್ಥೆಯೊಂದರ ದ್ವಿಘಟಕಗಳು. ಈ ವ್ಯವಸ್ಥೆ ಸಮಕಲಿತ ರಾಸಾಯನಿಕ ಸ್ಥಾವರದಂತೆ (ಇಂಟೆಗ್ರೇಟೆಡ್ ಕೆಮಿಕಲ್ ಪ್ಲಾಂಟ್) ವರ್ತಿಸುತ್ತದೆ.

ಸಾಗರದ ರಸಾಯನ ವೃತ್ತಾಂತದಲ್ಲಿಯ ಬದಲಾವಣೆಗಳು ಭೂಮಿಯ ಗತಪರಿಸರದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ನೀಡಬಲ್ಲವು. ಉದಾ: ವಾಯುಮಂಡಲದ ಪ್ರಮುಖ ಘಟಕವಾದ ಕಾರ್ಬನ್ ಡೈ ಆಕ್ಸೈಡ್ ವಾಯುಗುಣದ ಮೇಲೆ ವಿಶೇಷ ಪ್ರಭಾವ ಬೀರುತ್ತದೆ. ಜೀವಿಯ ಉಳಿವು ಅಳಿವು ಇದರ ಮೊತ್ತವನ್ನು ಅವಲಂಬಿಸಿದೆ. ಸೂರ್ಯನಿಂದ ಭೂಮಿಗೆ ಪಾತವಾಗುವ ಆತಪನ (ಇನ್ಸೊಲೇಶನ್) ಭೂಮಿಯಿಂದ ಅತಿರಕ್ತ ವಿಕಿರಣ ವಲಯದಲ್ಲಿ ಪ್ರತಿಫಲಿಸಲ್ಪಟ್ಟು ಆಕಾಶಕ್ಕೆ ಪ್ರವಹಿಸುತ್ತದೆ. ಆದರೆ ವಾಯುಮಂಡಲದ ಕಾರ್ಬನ್ ಡೈ ಆಕ್ಸೈಡ್ ಭೂಮಿಯ ಸುತ್ತ ತೊಡಿಸಿರುವ ಕವಚದಂತೆ ವರ್ತಿಸಿ ಈ ವಿಕಿರಣಪ್ರವಾಹವನ್ನು ಹೀರಿಕೊಂಡು ಹೊರಹರಿಯದಂತೆ ತಡೆ ಹಿಡಿಯುತ್ತವೆ. ಇದರಿಂದ ವಾಯುಮಂಡಲದ ಉಷ್ಣತೆ ಏರುತ್ತದೆ. ಮಾನವ ತನ್ನ ಚಟುವಟಿಕೆಗಳಿಂದ ವಾಯುಮಂಡಲಕ್ಕೆ ಸಾಕಷ್ಟು ಕಾರ್ಬನ್ ಡೈಆಕ್ಸೈಡನ್ನು ಊಡುತ್ತಲೇ ಬಂದಿದ್ದಾನೆ. ಆದರೆ ಈ ದಿಶೆಯಲ್ಲಿ ಸ್ವತಂತ್ರವಾಗಿ ಸಾಗರದ ಪಾತ್ರ ಇನ್ನೂ ಅಧಿಕ ಮಟ್ಟದಲ್ಲಿದೆ ಎಂಬುದು ಈಚಿನ ಅಧ್ಯಯನಗಳಿಂದ ತಿಳಿದು ಬಂದಿದೆ. ಗತಯುಗಗಳಲ್ಲಿ ಅಂದರೆ ನಾಗರಿಕತೆ ವಿಶೇಷವಾಗಿ ವಿಕಸಿಸಿರದ ಪ್ರಾಚೀನಕಾಲಗಳಲ್ಲಿ ಸಾಗರಜನಿತ ಕಾರ್ಬನ್ ಡೈ ಆಕ್ಸೈಡಿನ ಮೊತ್ತ ವಾಯುಮಂಡಲದಲ್ಲಿ ಅಧಿಕವಾದುದೇ ಆಗ ಸಂಭವಿಸಿದ ಹಿಮಪ್ರವಾಹಗಳಿಗೆ (ಗ್ಲೇಸಿಯೇಶನ್) ಕಾರಣವೆಂದು ವಿಜ್ಞಾನಿಗಳು ತರ್ಕಿಸಿದ್ದಾರೆ.

ಸದ್ಯದಲ್ಲಿ ಸಾಗರಜಲದಲ್ಲಿ ವಿಲೀನವಾಗಿರುವ ಕಾರ್ಬನ್‌ಡೈಆಕ್ಸೈಡಿನ ಮೊತ್ತ ವಾಯುಮಂಡಲದಲ್ಲಿರುವ ಅದರ ಮೊತ್ತದ 60 ಪಾಲು ಇದೆ. ಕೆಲವೊಂದು ಸಾಗರ ಜೀವಿಗಳ ಆಹಾರದ ಉಗ್ರಾಣ ಈ ವಿಲೀನಿತ ಅನಿಲ. ಅವು ನಿಶ್ವಸಿಸುವ ಅನಿಲವೇ ನೆಲಪ್ರಾಣಿಗಳ ಉಸಿರಾದ ಆಕ್ಸಿಜನ್. ಹೀಗೆ ನೆಲ–ಜಲ ಎಂಬ ಭೇದವಿಲ್ಲದೆ ಜೀವಿಗಳ ನಿಯಂತ್ರಣದಲ್ಲಿ ಸಾಗರ ನಿರ್ವಹಿಸುವ ಪಾತ್ರ ಅತಿ ಮುಖ್ಯವಾದದ್ದು. ಈ ಸಮತೋಲವನ್ನು ಅದು ಹೇಗೆ ಸಾಧಿಸುತ್ತದೆ ಎಂದು ತಿಳಿಯಬೇಕಾದರೆ ಸಾಗರವನ್ನು ದ್ವಿಜಲಾಶಯವಿರುವ ಒಂದು ಬೃಹತ್ ಜಲವಾಸ (ಅಕ್ವೇರಿಯಮ್) ಎಂದು ಪರಿಗಣಿಸುವುದು ಅಗತ್ಯ.

ಈ ಎರಡು ಜಲಾಶಯಗಳ ಪೈಕಿ ಮೇಲಿನದು ನೆಲ ಮತ್ತು ವಾಯುವಿನೊಡನೆ ಅಂತರಕ್ರಿಯೆಗೆ ಒಳಗಾಗುತ್ತದೆ. ಅಂದರೆ ಸೌರವಿಕಿರಣದ ದೆಸೆಯಿಂದ ನೀರು ಕಾದು ಆವಿಯಾಗಿ ಮೇಲೇರಿ ಮೋಡವಾಗಿ ದೂರ ಸಂಚರಿಸಿ ಮಳೆಯಾಗಿ ಸುರಿದು ಆ ನೀರು ನೆಲದ ಲವಣಾಂಶ ಮೊದಲಾದವನ್ನು ತೊಳೆದುಕೊಂಡು ಬಂದು ಸಾಗರಕ್ಕೆ ಸುರಿಯುತ್ತದೆ. ಇತ್ತ ಅದೇ ವಿಕಿರಣದ ಇರವಿನಲ್ಲಿ ಫೈಟೊಪ್ಲ್ಯಾಂಕ್ಟನ್ನುಗಳೆಂಬ ಅತಿ ಸೂಕ್ಷ್ಮ ಕಡಲ ಸಸ್ಯಗಳು ಜಲವಿಲೀನಿತ ಕಾರ್ಬನ್ ಡೈಆಕ್ಸೈಡನ್ನು ದ್ಯುತಿಸಂಶ್ಲೇಷಣಾ ಪ್ರಕ್ರಿಯೆಯ ಮೂಲಕ ತಮ್ಮ ಆಹಾರವಾಗಿ ಮಾರ್ಪಡಿಸಿಕೊಂಡು ಮುಕ್ತ ಆಕ್ಸಿಜನ್ನನ್ನು ವಾಯುಮಂಡಲಕ್ಕೆ ಬಿಟ್ಟುಕೊಡುತ್ತವೆ.

ಕಡಲಿಗೆ ನದಿಗಳ ಮೂಲಕ ಹರಿದು ಬಂದ ಪದಾರ್ಥಗಳು, ಸಮುದ್ರಾಂತರ್ಗತ ಜ್ವಾಲಾಮುಖಿಗಳು ಕಾರುವ ಭಸ್ಮಗಳು, ಜೀವ್ಯವಶೇಷಗಳು ಮೊದಲಾದವು ಮೇಲಿನ ಜಲಾಶಯದಿಂದ ಕೆಳಗಿನ ಜಲಾಶಯಕ್ಕೆ ಕ್ರಮೇಣ ಕಂತಿ ಅಲ್ಲಿಯ ಏಕಾಣುಜೀವಿಗಳಿಗೆ ಊಣಿಸಾಗಬಹುದು. ಅಲ್ಲಿ ಪದರ ಪದರ ಮಡ್ಡಿಯಾಗಿ ಶೇಖರವಾಗಬಹುದು. ಭಾರ ಜಾಸ್ತಿ ಆದಾಗ ತೊಗಟೆಯನ್ನು ಭೇದಿಸಿ ಕವಚದತ್ತ ಕೂಡ ಒಸರಬಹುದು.

ಕೆಳ ಮತ್ತು ಮೇಲಿನ ಜಲಾಶಯಗಳನ್ನು ಪ್ರತ್ಯೇಕಿಸುವುದು ಅವುಗಳ ನಡುವಿನ ಉಷ್ಣತಾಂತರ ಹಾಗೂ ಸಾಂದ್ರತಾಂತರ. ಮೇಲಿನದರ ಉಷ್ಣತೆ ಜಾಸ್ತಿ, ಸಾಂದ್ರತೆ ಕಡಿಮೆ; ಕೆಳಗಿನದರ ಉಷ್ಣತೆ ಕಡಿಮೆ, ಸಾಂದ್ರತೆ ಜಾಸ್ತಿ. ಸಾಗರವೇನಾದರೂ ನಿಂತನೀರಿನ ಮಡುವಾಗಿದ್ದರೆ ಈ ಮೇಲಿನದೊಂದು ಸ್ಥಗಿತ ಪರಿಸ್ಥಿತಿ ಆಗಿರುತ್ತಿತ್ತು. ಏಕೆಂದರೆ ತಣ್ಣನೆಯ ಹಾಗೂ ಅಧಿಕ ಸಾಂದ್ರತೆಯ ನೀರು ಮೇಲಕ್ಕೆ ಏರುವ ಸಂಭಾವ್ಯತೆಯೇ ಇಲ್ಲ. ಆದರೆ ಸಾಗರಾಂತರ್ಗತ ಜ್ವಾಲಾಮುಖಿಗಳ ಕಾರ್ಯ, ತೊಗಟೆ ಫಲಕಗಳ ನಿರಂತರ ಚಲನೆ, ಭೂಮ್ಯಾ ವರ್ತನೆ, ಸಾಗರದ ಮೇಲೆ ಸೂರ್ಯ ಚಂದ್ರರ ಗುರುತ್ವಾಕರ್ಷಣೆ ಮುಂತಾದವು ಕಡಲನ್ನು ನಿಂತ ನೀರಿನ ಮಡುವಾಗಿ ಹಳಸಲು ಬಿಡದೆ ಅದನ್ನು ಸತತಮಂಥನ ಸ್ಥಿತಿಯಲ್ಲಿಡುವ ಬಾಹ್ಯ ಬಲಗಳಾಗಿ ವರ್ತಿಸುತ್ತವೆ. ಹೀಗಾಗಿ ಸಾಗರದ ರಸಾಯನ ವೃತ್ತಾಂತ ನಿರಂತರ ಕ್ಷೋಭೆಯಲ್ಲಿರುವುದು.

ವಾಯುಮಂಡಲ : ಭೂಮಿಯ ಉಷ್ಣ ಎಂಜಿನ್ನಿನ ಕಾರ್ಯನಿರ್ವಾಹಕ (ರೀತಿಯಲ್ಲಿಯೇ) (ವರ್ಕಿಂಗ್ ಫ್ಲೂಯ್ಡ್) ವಾಯುಮಂಡಲ. ಇದರ ತೀವ್ರ ಗತಿಶೀಲತೆ ಭೂಮಿಗೆ ಪಾತವಾಗುವ ಸೌರವಿಕಿರಣದ ವಿತರಣೆಗೆ ಕಾರಣವಾಗಿದೆ.

ಸೂರ್ಯನಿಂದ ಬರುವ ಆತಪನದ ಅಧಿಕಭಾಗವನ್ನು ವಾಯುಮಂಡಲ ಉಷ್ಣವಾಗಿ ಪರಿವರ್ತಿಸಿ ಮತ್ತೆ ಆಕಾಶಕ್ಕೆ ಮರುವಿಕಿರಣಗೊಳಿಸುತ್ತದೆ. ಮಾರುತಗಳು ಈ ಶಕ್ತಿಯನ್ನು ಪುನರ್ವಿತರಿಸುತ್ತವೆ. ಆ ವೇಳೆ ಸಾಕಷ್ಟು ಉಷ್ಣ ಸೋರಿಹೋಗುತ್ತದೆ. ಸಾಗರ ಪ್ರವಾಹಗಳು ಈ ರೀತಿಯ ಸೋರಿಕೆಗೆ ಕಾರಣವಾಗುವುದಿಲ್ಲ. ವಾಯುಮಂಡಲ ವ್ಯವಸ್ಥೆಯ ಹ್ರಸ್ವಕಾಲೀನ ಏರಿಳಿತಗಳೂ (ಹವೆ) ಸರಾಸರಿ ಹವೆಯ ದೀರ್ಘಕಾಲೀನ ಏರಿಳಿತಗಳೂ (ವಾಯುಗುಣ) ಭೂಚರಿತ್ರೆಯ ಬಲು ಮುಖ್ಯ ಅಂಶಗಳು.

ಭೂಮಿಯ ಉಗಮಕ್ಕೆ ಕಾರಣವಾದ ನೀಹಾರಿಕೆಯ ಘಟಕಗಳಿಗೂ ಪ್ರಕೃತ ವಾಯುಮಂಡಲದ ಘಟಕಗಳಿಗೂ ಇರುವ ಸಂಬಂಧ ಎರಡೂ ಅನಿಲಗಳೆಂಬುದರ ಹೊರತು ಬಹುತೇಕ ಶೂನ್ಯ. ವಾಸ್ತವವಾಗಿ ವಾಯುಮಂಡಲದ ಇಂದಿನ ಸಂಯೋಜನೆ ಬಾಷ್ಪಶೀಲ ಧಾತುಗಳಿಗೂ (ವೋಲಟೈಲ್ ಎಲಿಮೆಂಟ್ಸ್) ಸೌರನೀಹಾರಿಕೆಗೂ ನಡುವೆ ಸಂಭವಿಸಿದ ಸಂಕೀರ್ಣ ಹಾಗೂ ಸುದೀರ್ಘ ರಾಸಾಯನಿಕ ಕ್ರಿಯೆಗಳ ಫಲ. ಆರಂಭದಲ್ಲಿ ಈ ಕ್ರಿಯೆಗಳಲ್ಲಿ ಭಾಗವಹಿಸಿದ ಘಟಕಗಳೆಂದರೆ ಭೂಕವಚದಿಂದ ಹೊರಚಿಮ್ಮಿದ ಮ್ಯಾಗ್ಮ, ತೊಗಟೆಯ ಮೇಲಿನ ಶಿಲೆಗಳು, ಸಾಗರದ ಮೇಲ್ಮೈ, ಜೈವಿಕಗೋಳ ಮತ್ತು ಸೌರ ನೀಹಾರಿಕೆಯ ದೂಳು.

ನೈಟ್ರೊಜನ್, ಆಕ್ಸಿಜನ್ ಮತ್ತು ಆರ್ಗಾನ್ – ಇವು ಶುಷ್ಕ ವಾಯುವಿನ ಪ್ರಧಾನ ಘಟಕಗಳು (ಸ್ಥೂಲವಾಗಿ 79:20:1 ಅನುಪಾತದಲ್ಲಿ). ಇಡೀ ಭೂಮಿಯನ್ನು ಕುರಿತಂತೆ ಈ ಅನುಪಾತ ಸುದೀರ್ಘ ಕಾಲದಲ್ಲಿ ಸ್ಥಿರವಾಗಿಯೇ ಇರುವುದು. ತೇವಾಂಶದ ಮೊತ್ತ ಹೆಚ್ಚು ಕಡಿಮೆ ಆಗುತ್ತಿರುವುದು: ಘನಗಾತ್ರ ರೀತ್ಯಾ ಶೇ. 4 ರಿಂದ ಅತ್ಯಲ್ಪ ಪ್ರಮಾಣದವರೆಗೂ ವಾಯುಮಂಡಲ ನೀರಿನ ಸಾಧಾರಣ ಸಂಗ್ರಹಾಶಯ ಕೂಡ ಅಲ್ಲ. ಏಕೆಂದರೆ ಸಾಗರದಲ್ಲಿಯ ನೀರಿನ ರಾಶಿ ವಾಯುಮಂಡಲದ ರಾಶಿಯ 300 ಮಡಿಗಿಂತಲೂ ಜಾಸ್ತಿ ಇದೆ. ವಾಯುಮಂಡಲದ ಘಟಕಗಳಾಗಿ ಇತರ ಕೆಲವು ಅನಿಲಗಳೂ ಇವೆ: ಕಾರ್ಬನ್ ಡೈಆಕ್ಸೈಡ್ (ಶುಷ್ಕವಾಯುವಿನಲ್ಲಿ 340: 1,000,000 ಅನುಪಾತದಲ್ಲಿ); ನಿಯಾನ್ (18: 1,000,000) ಮತ್ತು ಹೀಲಿಯಮ್ (5: 1,000,000); ಓಝೋನ್ (2: 1,000,000) ಇತ್ಯಾದಿ.

ನಿಯಾನ್, ಕ್ರಿಪ್ಟಾನ್, ಕ್ಸೀನಾನ್ ಮೊದಲಾದ ಅನಿಲಗಳು ಭೂರಾಸಾಯನಿಕವಾಗಿ ಜಡವಾಗಿರುವುದರಿಂದ – ಇವು ಭೂಮಿಯ ಆರಂಭದ ದಿನಗಳ ಶಾಶ್ವತ ದಾಖಲೆಗಳಾಗಿಯೇ ಇಂದಿಗೂ ಉಳಿದಿವೆ. ಓಝೋನಿನ ಬಾಹುಳ್ಯ ವಾಯುಮಂಡಲದಲ್ಲಿ ಔನ್ನತ್ಯದೊಡನೆ

ಬದಲಾಗುತ್ತಿದ್ದು 30 ಕಿಮೀ ಎತ್ತರದಲ್ಲಿ ಗರಿಷ್ಠ ಪ್ರಮಾಣದಲ್ಲಿರುವುದು (12: 1,000,000). ಸೂರ್ಯನಿಂದ ಹೊರಟು ಭೂತಳಕ್ಕೆ ಬರುವ ತೀವ್ರ ವಿಕಿರಣದ ಎದುರು ಓಝೋನ್‌ವಲಯ ಕವಚದಂತೆ ವರ್ತಿಸಿ ಅದರ ಹಾನಿ ಜೀವಿಗಳಿಗೆ ತಟ್ಟದಂತೆ ತಡೆಯುತ್ತದೆ.

ಭೂಮಿಗೆ ಪಾತವಾಗುವ ಎಲ್ಲ ವಿಕಿರಣವೂ ಇಲ್ಲಿ ಹೀರಲ್ಪಡುವುದಿಲ್ಲ. ಇದರ ಸು. 30% ಭಾಗವನ್ನು ವಾಯುಮಂಡಲವೂ ಭೂತಳವೂ ಆಕಾಶಕ್ಕೆ ಪ್ರತಿಫಲಿಸುತ್ತವೆ. ಮೋಡಗಳು, ವಾಯುಮಂಡಲದಲ್ಲಿರುವ ದೂಳು, ಅನಿಲಾಣುಗಳು, ಹಿಮರಾಶಿ ಮತ್ತು ಸಸ್ಯರಹಿತ ನೆಲ – ಈ ಪ್ರತಿಫಲಕಗಳ ಪೈಕಿ ಮುಖ್ಯವಾದವು. ಅಂದಮೇಲೆ ಜ್ವಾಲಾಮುಖಿಗಳ ಅಥವಾ ಇತರ ಮಾನವಕೃತ ಚಟುವಟಿಕೆಗಳ ಕಾರಣವಾಗಿ ವಾಯುಮಂಡಲಕ್ಕೆ ಅಧಿಕ ಮೊತ್ತದ ದೂಳು ಸೇರಿದುದಾದರೆ ಪ್ರತಿಫಲನಾಂಶ ಹೆಚ್ಚಾಗಿ ಒಟ್ಟಾರೆ ಭೂಮಿಯ ಉಷ್ಣತೆ ಕುಸಿಯುವ ಸಂಭಾವ್ಯತೆ ಇದೆ.

ಪರಮಾಣು ಇಲ್ಲವೇ ಹೈಡ್ರೊಜನ್ ಬಾಂಬುಗಳ (ನ್ಯೂಕ್ಲಿಯರ್ ಬಾಂಬುಗಳು) ಸ್ಫೋಟನೆಯಿಂದ ವಾಯುಮಂಡಲದಲ್ಲಿ ಈ ತರಹದ ಪರಿವರ್ತನೆಯಾಗಿ ಆ ಕಾಲದಲ್ಲಿ ಅತಿ ಚಳಿಗಾಲ ಬರಬಹುದೆಂದು ಸಕಾರಣವಾಗಿಯೇ ವಾದಿಸುವ ವಿಜ್ಞಾನಿಗಳಿದ್ದಾರೆ. ನ್ಯೂಕ್ಲಿಯರ್ ವಿಂಟರ್ (ನ್ಯೂಕ್ಲಿಯರ್ ಚಳಿಗಾಲ) ಎಂದು ಅವರಿದನ್ನು ಹೆಸರಿಸಿದ್ದಾರೆ.

ಜೀವಿಗೋಳ: ನಮ್ಮ ಗ್ರಹದ ವರ್ತಮಾನ ಅಸ್ತಿತ್ವಕ್ಕೆ ಕಾರಣವಾಗಿರುವ ಎಲ್ಲ ಗತ್ಯಾತ್ಮಕ ವ್ಯವಸ್ಥೆಗಳ ಪೈಕಿ ಕೊನೆಯಲ್ಲಿ ರೂಪುಗೊಂಡದ್ದೇ ಜೀವಗೋಳ. ಇದು ಇತರ ಎಲ್ಲಕ್ಕಿಂತ ವಿಶಿಷ್ಟವಾದದ್ದು ಮತ್ತು ಅತ್ಯಧಿಕ ಅಂತರಕ್ರಿಯೆಯುಳ್ಳದ್ದು. ಸೌರವ್ಯೂಹದ ಇತರ ಗ್ರಹ ಉಪಗ್ರಹಗಳಿಗೂ ತಿರುಳು, ಕವಚ ಮಾತ್ರವೇ ಅಲ್ಲ ಕೆಲವಕ್ಕೆ ತೊಗಟೆ ಮತ್ತು ವಾಯುಮಂಡಲ ಕೂಡ ಇವೆ. ಶನಿಯ ಅತಿ ದೊಡ್ಡ ಉಪಗ್ರಹವಾದ ಟೈಟಾನಿನಲ್ಲಿ ದ್ರವ ಮೀಥೇನಿನ ಸಮುದ್ರಗಳೇ ಇರಬಹುದು. ಮಂಗಳದಿಂದ ಆಚೆಗಿನ ಸದಸ್ಯ ಕಾಯಗಳಲ್ಲಿ ಬರ್ಫಾಚ್ಛಾದಿತ ಜಲಗೋಳಗಳಿವೆ. ಆದರೆ ಸ್ವಯಂಪುನರುತ್ಥಾನಶೀಲ (ಮ್ಯುಟೇಷನ್) ಮತ್ತು ತಳಿಪುನಸ್ಸಂಯೋಜನೆಯಿಂದ ವಿವಿಧ ರೂಪಗಳಾಗಿ ಮೈದಳೆದು ಈ ಬದಲಾವಣೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ಆನುವಂಶಿಕವಾಗಿ ವರ್ಗಾಯಿಸುವ ಸಾಮರ್ಥ್ಯ ಪಡೆದಿವೆ. ಈ ಕ್ರಿಯೆಗಳನ್ನು ಎಸಗಬಲ್ಲ ರಚನೆಗಳನ್ನು ಜೀವಿಗಳು ಅಥವಾ ಜೀವಂತ ರಚನೆಗಳು ಎಂದು ಕರೆಯುತ್ತೇವೆ. ಶಿಲಾ, ಜಲ ಹಾಗೂ ವಾಯು ಎಂಬ ಗೋಳತ್ರಯಗಳ ಜೊತೆ ಭೂಮಿಯ ಮೇಲ್ಮೈಯಲ್ಲಿ ಮತ್ತು ಅದರ ಸಮೀಪದಲ್ಲಿ ಈ ಜೀವಿಗಳ ಸಮಾಕಲಿತವೇ ಜೀವಿಗೋಳ.

ಜೀವಿಗೋಳದ ವ್ಯಾಪಕ ವೈವಿಧ್ಯ ಹಾಗೂ ಅಂತರಕ್ರಿಯಾಶೀಲತೆ ಊಹಾತೀತವೆನ್ನಿಸುವಷ್ಟು ಸಮೃದ್ಧವಾಗಿವೆ. ಇದರ ಜೀನ್ ಸಂಚಯದಲ್ಲಿಯ (ಜೀನ್‌ಪೂಲ್) ಭವಿಷ್ಯ ಸಾಧ್ಯತೆಗಳು ದಂಗುಬಡಿಯುವಂತಿವೆ. ಜೀವವಿಜ್ಞಾನಿಗಳು ಈತನಕ ಸು. 1.5 ಮಿಲಿಯನ್ ಪ್ರಾಣಿ ಪ್ರಭೇದಗಳನ್ನೂ 0.5 ಮಿಲಿಯನ್ ಸಸ್ಯ ಪ್ರಭೇದಗಳನ್ನೂ ವರ್ಗೀಕರಿಸಿರುವರು. ವಾರ್ಷಿಕವಾಗಿ ಸು. 10,000 ನೂತನ ಪ್ರಭೇದಗಳ ಆವಿಷ್ಕಾರ ಹಾಗೂ ನಾಮಕರಣ ನಡೆಯುತ್ತಿದೆ. ಜೀವಿಗಳ ವಿಕಾಸ ಇಲ್ಲಿ ನಿರಂತರ ಪ್ರಕ್ರಿಯೆ. ಜೀವಿಗೋಳದ ಸುದೀರ್ಘ ಇತಿಹಾಸದಲ್ಲಿ ಜೀವದ ಉಗಮ ಹಾಗೂ ಆರಂಭದಲ್ಲೇ ಅದರ ವಿಭೇದೀಕರಣ (ಡೈವರ್ಸಿಫಿಕೇಷನ್) ತಲೆದೋರಿದ್ದು ಅತ್ಯಂತ ಮುಖ್ಯಘಟನೆ: ಭೂಮಿಯ ಮೇಲ್ಮೈ ಜೊತೆ ಜೀವಿಗೋಳೀಯ ಮೊದಲ ಚಟುವಟಿಕೆಗಳವು. ಇತ್ತ ಜೀವಿಯ ಉಗಮ ವಿಕಾಸಗಳಿಗೆ ಜೀವಗೋಳ ಕಾರಣವಾದಂತೆಯೇ ಜೀವಿಗೋಳದ ಸತತ ಪರಿವರ್ತನೆಗೆ ಜೀವಿಯೂ ಕಾರಣ ಎಂಬುದು ಸ್ಪಷ್ಟ. ಫಲಿತಾಂಶವಾಗಿ ಇಂದು ಭೂಮಿಯ ಮೇಲ್ಮೈಯಿಂದ ಸು. 10 ಮೀ ಕೆಳಗಿನ ಮತ್ತು 10 ಕಿಮೀ ಮೇಲಿನ ಪ್ರದೇಶಗಳು ಜೀವವಾಸಕ್ಕೆ ಯೋಗ್ಯವಾಗಿವೆ.

ವಸ್ತುಗಳ ಚಕ್ರೀಕರಣ ಇಲ್ಲಿಯ ನಿರಂತರ ಕಾರ್ಯಕಲಾಪ. ಹುಳು, ಇರುವೆ ಮೊದಲಾದವು ನೆಲವನ್ನು ಸತತವಾಗಿ ಉತ್ತು ಹಸನುಗೊಳಿಸುತ್ತವೆ. ಈ ನೆಲದ ಮೇಲೆ ಗಿಡಮರ ಬೆಳೆದು ಮತ್ತೆ ಮಣ್ಣು ಆಗುತ್ತವೆ. ಇದು ತೊಳೆದು ಹೋಗಿ ಕಡಲು ಸೇರುತ್ತದೆ. ಕಡಲಿನ ಯಾವುದೋ ಭಾಗದಲ್ಲಿ ಭಾರ ಹೆಚ್ಚಾದಾಗ ಇನ್ನೆಲ್ಲೋ ಭೂಕಂಪನದ ಕಾರಣವಾಗಿ ನೆಲ ಮಟ್ಟವಾಗುತ್ತದೆ. ಪರ್ವತ ಏಳುತ್ತದೆ. ಇವೆಲ್ಲ ಚಟುವಟಿಕೆಗಳಲ್ಲಿ ಹಲವಾರು ಚಕ್ರಗಳನ್ನು ಗುರುತಿಸಬಹುದು. ಪ್ರತಿವರ್ಷವೂ ಜೈವಿಕಕ್ರಿಯೆಗಳ ಕಾರಣವಾಗಿ ವಾಯುಮಂಡಲಕ್ಕೆ ಸು. 400,000 ಟನ್ನುಗಳಷ್ಟು ಸಾವಯವ ಬಾಷ್ಪಶೀಲಗಳು ಜಮೆಯಾಗುತ್ತವೆ.

ಶಿಲಾಶಿಥಿಲೀಕರಣ, ಮಣ್ಣಿನ ಸವೆತ, ನೆಲ ಜಲ ವಾಯುಗಳಲ್ಲಿಯ ರಾಸಾಯನಿಕಗಳ ಪ್ರಮಾಣಗಳಲ್ಲಿ ಏರುಪೇರು ಮುಂತಾದ ನೈಸರ್ಗಿಕವಲ್ಲದ ಕ್ರಿಯೆಗಳಲ್ಲಿ ಜೀವಿಗಳ ಪಾತ್ರ ಗಮನಾರ್ಹವಾಗಿದೆ. ಹೀಗೆ ಜೀವಿಗೋಳ ಭೂಮಿಯ ಉಳಿದ ಮೇಲ್ಮೈಯನ್ನು ಗಾಢವಾಗಿ ಪ್ರಭಾವಿಸುತ್ತದೆ.

ಜೀವಿಗೋಳಕ್ಕೆ ಕೊನೆ ಇದೆಯೇ? ಪ್ರಾಯಶಃ ಸೂರ್ಯ ಇನ್ನು 4–5 ಬಿಲಿಯನ್ ವರ್ಷಗಳಲ್ಲಿ ರಕ್ತದೈತ್ಯ ನಕ್ಷತ್ರವಾಗಿ ವ್ಯಾಕೋಚಿಸಿದಾಗ ಕೊನೆ ಬಂದೀತು ಅಥವಾ ಆ ಮೊದಲೇ ಮಾನವನ ಭಸ್ಮಾಸುರ ಪ್ರವೃತ್ತಿಯಿಂದ ಹಠಾತ್‌ನಾಶವೂ ಸಂಭವಿಸಬಹುದು.

ಭೌತ ವಿವರಗಳು

(ಎ) ಭೂಮಿಯಿಂದ ಸೌರವ್ಯೂಹದ ಇತರ ಕಾಯಗಳ ದೂರ (ಮಿಲಿಯನ್ ಕಿಮೀ)

| | | ಗರಿಷ್ಠ | ಕನಿಷ್ಠ |
|---|---|---|---|
| ಚಂದ್ರ | .......... | 0.4048 | 0.3552 |
| ಶುಕ್ರ | .......... | 257.44 | 41.12 |
| ಬುಧ | .......... | 219.04 | 78.56 |
| ಮಂಗಳ | .......... | 395.2 | 54.4 |
| ಗುರು | .......... | 955.2 | 579.2 |
| ಶನಿ | .......... | 1636.8 | 1236.8 |
| ಯುರೇನಸ್ | .......... | 3113.6 | 2550.4 |
| ನೆಪ್ಚೂನ್ | .......... | 4625.6 | 4246.4 |
| ಪ್ಲೂಟೋ | .......... | 7209.6 | 4168 |

(ಇತ್ತೀಚೆಗೆ ಪ್ಲೂಟೋ ಗ್ರಹವಲ್ಲವೆಂದು ಇದನ್ನು ಪರಿಗಣಿಸಲಾಗಿದೆ.)

(ಬಿ) ಭೂಮಿಯನ್ನು ಕುರಿತ ಸಂಗತಿಗಳು

| | | |
|---|---|---|
| ಅಂದಾಜು ಪ್ರಾಯ | .......... | ಕನಿಷ್ಠ (4.5 ಬಿಲಿಯನ್ ವರ್ಷಗಳು) |
| ಮೇಲ್ಮೈ ವಿಸ್ತೀರ್ಣ | .......... | 510,100,500 ಚ.ಕಿಮೀ |
| ನೆಲ ವಿಸ್ತೀರ್ಣ | .......... | 148,950,900 ಚ.ಕಿಮೀ |
| ಜಲವಿಸ್ತೀರ್ಣ (ಒಟ್ಟು ವಿಸ್ತೀರ್ಣದ ಶೇ.71) | .......... | 361,149,600 ಚ.ಕಿಮೀ |
| ಸಮಭಾಜಕೀಯ ಪರಿಧಿ | .......... | 39,843.2 ಕಿಮೀ |
| ಧ್ರುವೀಯ ಪರಿಧಿ | .......... | 39,776 ಕಿಮೀ |
| ಗಾತ್ರ | .......... | 673,400,000,000 ಘನಕಿಮೀ |
| ರಾಶಿ | .......... | 5.976 X 10 ಕೆಜಿ 24 |

ಭೂಮಿ ವಾರ್ಷಿಕವಾಗಿ 15.14 ಮೆಟ್ರಿಕ್ ಟನ್ನುಗಳಷ್ಟು ವಿಶ್ವದೂಳನ್ನು ಆಕರ್ಷಿಸುತ್ತಿದೆ ಎಂದು ಅಂದಾಜು. ಭೂಮಿಯ ಮೇಲ್ಮೈಯ ಔನ್ನತ್ಯತಮ ಬಿಂದು ಮೌಂಟ್ ಎವರೆಸ್ಟ್ 8,847.7 ಮೀ. ಭೂಮಿಯ ಮೇಲ್ಮೈಯ ನಿಮ್ನತಮ ಬಿಂದು ಮೃತ ಸಮುದ್ರತೀರ, ಪ್ಯಾಲಸ್ತೀನ್ ಸಮುದ್ರಮಟ್ಟಕ್ಕಿಂತ 392 ಮೀ ಆಳಕ್ಕಿದೆ. ಸಾಗರದ ಅತ್ಯಂತ ಹೆಚ್ಚಿನ ಆಳ ಮೇರಿಯಾನ ಟ್ರೆಂಚ್, ಫಿಲಿಫೈನ್ಸ್ ಆಚೆಗೆ ಸಮುದ್ರಮಟ್ಟಕ್ಕಿಂತ 11,033 ಮೀ ಆಳಕ್ಕಿದೆ.

ಸೂರ್ಯನ ಸುತ್ತಲಿನ ಭೂಮಿಯ ಪರಿಭ್ರಮಣಾವಧಿ 365ದಿ, 5ಗಂ, 48ಮಿ, 46ಸೆ. ಭೂಮಿಯ ಆವರ್ತನಾವಧಿ 23 ಗಂ 56 ಮಿ

ಕಕ್ಷಾವೇಗ 1,06,560 ಕಿಮೀ/ಗಂ ಸಮಭಾಜಕ ಪ್ರದೇಶದಲ್ಲಿ ಭೂಮಿಯ ಆವರ್ತನ ವೇಗ 1600 ಕಿಮೀ ಗಿಂತಲೂ ಅಧಿಕ.

ಭೂಮಿಯ ಮೇಲಿನ ಉನ್ನತ ಪರ್ವತಶಿಖರಗಳು (ಮೀಟರುಗಳಲ್ಲಿ)

| | | |
|---|---|---|
| ಮೌಂಟ್ ಎವರೆಸ್ಟ್, ನೇಪಾಲ–ಟಿಬೆಟ್ | ......... | 8848 |
| ಮೌಂಟ್ ಗಾಡ್ವಿನ್ ಆಸ್ಟೆನ್ (2), ಭಾರತ | ......... | 8610.6 |
| ಕಾಂಚನಗಂಗಾ, ನೇಪಾಲ–ಭಾರತ | ......... | 8578.9 |
| ಮೌಂಟ್ ಮಕಾಲೂ, ಟಿಬೆಟ್–ನೇಪಾಲ | ......... | 8481.66 |
| ಧವಳಗಿರಿ, ನೇಪಾಲ | ......... | 8221.98 |
| ನಂಗ ಪರ್ವತ, ಭಾರತ | ......... | 8125.96 |
| ಅನ್ನಪೂರ್ಣ, ನೇಪಾಲ | ......... | 8078.41 |
| ಗ್ಯಾಷೆರ್‌ಬ್ರಮ್, ಭಾರತ | ......... | 8072.01 |
| ಗೋಸೈನ್‌ಥಾನ್, ನೇಪಾಲ | ......... | 8013.49 |
| ನಂದಾದೇವಿ, ಭಾರತ | ......... | 7816.59 |
| ರಾಕಾಪೋಶಿ, ಭಾರತ | ......... | 7787.64 |
| ಮೌಂಟ್ ಕಾಮೆಟ್, ಭಾರತ–ಟಿಬೆಟ್ | ......... | 7756.24 |
| ನಂಚಾ ಬಾರ್ವ, ಟಿಬೆಟ್ | ......... | 7756.24 |
| ಗುರ್ಲ ಮಾಂಧಾತ, ಟಿಬೆಟ್ | ......... | 7728.2 |
| ಉಲ್ಗ್ ಮುಸ್ತಾಗ್, ಟಿಬೆಟ್ | ......... | 7720.88 |
| ಆಮ್ನೆ ಮಂಚಿನ್, ಚೀನ | ......... | 7620 |

| | | |
|---|---|---|
| ಮಿನ್ಯ ಕೊಂಕ, ಚೀನ | ......... | 7590.43 |
| ಸ್ಟಾಲಿನ್ ಪೀಕ್, ರಷ್ಯ | ......... | 7494.72 |
| ಪೊಬಿಡೀ ಪೀಕ್, ರಷ್ಯ | ......... | 7439.25 |
| ಮುಜ್‌ಟಾಗ್, ಸಿಂಕಿಯಾಂಗ್ | ......... | 7432.85 |
| ತಿರೀಷ್ ಮಿರ್, ಪಾಕಿಸ್ತಾನ | ......... | 7416.36 |
| ಮೌಂಟ್ ಚುಮಲ್ ಹಾರಿ, ಭೂತಾನ–ಟಿಬೆಟ್ | ......... | 7193.89 |
| ಖಾನ್ ತೆಂಗ್ರಿ, ರಷ್ಯ | ......... | 7193.28 |
| ಲೆನಿನ್ ಪೀಕ್, ರಷ್ಯ | ......... | 7134.14 |
| ಅಕನ್‌ಕಾಗ್ವ, ಅರ್ಜೆಂಟೈನ | ......... | 7021.98 |
| ಅಂಕೊಹ್ಯೂಮ, ಬೊಲಿವಿಯ | ......... | 7014.05 |
| ಓಯೋಸ್ ಡೆಲ್ ಸಾಲಾಡೋ, ಅರ್ಜೆಂಟೈನ | ......... | 6869.88 |
| ಪಿಸೀಸ್, ಅರ್ಜೆಂಟೈನ | ......... | 6778.14 |
| ಹ್ಯೂಯಾಸ್‌ಕಾರನ್, ಪೆರು | ......... | 6768.08 |
| ಲ್ಯೂಲೈಲಾಕೋ, ಅರ್ಜೆಂಟೈನ–ಚಿಲಿ | ......... | 6722.97 |
| ಮರ್ಸಿಡಾರಿಯೊ, ಅರ್ಜೆಂಟೈನ | ......... | 6668.41 |
| ಯೇರುಪಾಜೌ, ಪೆರು | ......... | 6632.14 |
| ಇನ್‌ಕಾಹ್ಯುಯಾಸಿ, ಅರ್ಜೆಂಟೈನ–ಚಿಲಿ | ......... | 6620.25 |
| ಟುಪುನ್‌ಗಾಟೋ, ಚಿಲಿ | ......... | 6548.32 |
| ಸಜಾಮಾ ಜ್ವಾಲಾಮುಖಿ, ಬೊಲಿವಿಯ | ......... | 6519.67 |
| ಮೌಂಟ್ ಇಲ್ಲಾಂಪು, ಬೊಲಿವಿಯ | ......... | 6483.09 |
| ಮೌಂಟ್ ಇಲ್ಲಿಮಾನಿ, ಬೊಲಿವಿಯ | ......... | 6456.88 |
| ಜಿಂಬರಾಸೋ, ಈಕ್ವೆಡಾರ್ | ......... | 6266.99 |
| ಮ್ಯಾಕ್‌ಕೆನ್ಲೀ, ಅಲಾಸ್ಕ | ......... | 6193.53 |
| ಕೈಲಾಸ್, ಟಿಬೆಟ್ | ......... | 6187.44 |

(*f*) ಪ್ರಮುಖ ಸಾಗರ ಮತ್ತು ಸಮುದ್ರಗಳು

| | ವಿಸ್ತೀರ್ಣ ಚ.ಕಿಮೀ | ಸರಾಸರಿ ಆಳ ಮೀ | ಅತ್ಯಧಿಕ ಆಳ ಮೀ |
|---|---|---|---|
| ಪೆಸಿಫಿಕ್ ಸಾಗರ | 165,723,740 | 4279.39 | 11,033.15 |
| ಅಟ್ಲಾಂಟಿಕ್ ಸಾಗರ | 81,662,700 | 3925.82 | 9187.58 |
| ಹಿಂದೂ ಸಾಗರ | 73,426,500 | 3962.4 | 7000.64 |
| ಆರ್ಕ್‌ಟಿಕ್ ಸಾಗರ | 14,352,744 | 1280.16 | 5440.68 |
| ಮೆಡಿಟರೇನಿಯನ್ ಸಮುದ್ರ | 2,965,550 | 1371.6 | 4399.78 |
| ದಕ್ಷಿಣ ಚೀನ ಸಮುದ್ರ | 2,318,050 | 1645.92 | 5015.78 |
| ಬೇರಿಂಗ್ ಸಮುದ್ರ | 2,274,020 | 507.49 | 4091.02 |
| ಕೆರೆಬಿಯನ್ ಸಮುದ್ರ | 1,942,500 | 2560.32 | 7241.74 |
| ಮೆಕ್ಸಿಕೊ ಖಾರಿ | 1,813,000 | 1432.56 | 3787.44 |
| ಓಕ್ಹಾಟ್ಸ್ಕ ಸಮುದ್ರ | 1,507,380 | 914.4 | 3846.88 |
| ಪೂರ್ವ ಚೀನ ಸಮುದ್ರ | 1,243,200 | 185.92 | 3200.4 |
| ಹಳದಿ ಸಮುದ್ರ | 1,243,200 | 48.76 | 106.07 |
| ಹಡ್ಸನ್ ಕೊಲ್ಲಿ | 1,222,480 | 134.11 | 457.2 |
| ಜಪಾನ್ ಸಮುದ್ರ | 1,048,950 | 1473.7 | 3108.96 |
| ನಾರ್ತ್ ಸೀ | 572,390 | 54.86 | 695.3 |
| ರೆಡ್ ಸೀ | 461,020 | 454.12 | 2211.09 |
| ಬ್ಲ್ಯಾಕ್ ಸೀ | 436,415 | 1310.64 | 2561.97 |
| ಬಾಲ್ಟಿಕ್ ಸಮುದ್ರ | 435,120 | 6767.36 | 396.24 |

(**g**) ಅತಿ ಉದ್ದನೆಯ ನದಿಗಳು

| ನದಿಗಳು | | ಉದ್ದ ಕಿಮೀ |
|---|---|---|
| ನೈಲ್, ಆಫ್ರಿಕ | ......... | 6632 |
| ಅಮೆಝಾನ್, ದಕ್ಷಿಣ ಅಮೆರಿಕ | ........ | 6240 |
| ಮಿಸಿಸಿಪಿ–ಮಿಸೌರಿ, ಅಮೆರಿಕ | ......... | 6016 |
| ಇರ್ಟಿಷ್, ರಷ್ಯ | ......... | 5120 |
| ಯಾಂಗ್‌ಟ್ಸಿ, ಚೀನ | ......... | 4960 |
| ಆಮೂರ್, ಏಷ್ಯ | ......... | 4640 |
| ಕಾಂಗೋ, ಆಫ್ರಿಕ | ......... | 4348 |
| ಹ್ವಾಂಗ್ ಹೋ (ಯಲ್ಲೊ), ಚೀನ | ......... | 4320 |
| ಲೀಸ್, ರಷ್ಯ | ........ | 4232 |
| ಮೆಕೆನ್ಜಿ, ಕೆನಡ | ......... | 4216 |
| ಮೆಕಾಂಗ್, ಏಷ್ಯ | ......... | 4160 |
| ನೈಜರ್, ಆಫ್ರಿಕ | ......... | 4160 |
| ಯೆನಿಸ್ಸಿ, ರಷ್ಯ | ......... | 3776 |
| ಮರ್‍ರೇ–ಡಾರ್ಲಿಂಗ್, ಆಸ್ಟ್ರೇಲಿಯ | ......... | 3696 |
| ವೋಲ್ಗ, ರಷ್ಯ | ......... | 3664 |
| ಮಡೀರ, ದಕ್ಷಿಣ ಅಮೆರಿಕ | ......... | 3360 |
| ಪರನ, ದಕ್ಷಿಣ ಅಮೆರಿಕ | ......... | 2050 |
| ಸಿಂಧೂ, ಏಷ್ಯ | ......... | 3168 |
| ಯುಕಾನ್, ಅಲಾಸ್ಕ | ......... | 3166 |
| ಸೇಂಟ್ ಲಾರೆನ್ಸ್, ಕೆನಡ | ......... | 3112 |
| ರೀಯೋ ಗ್ರಾಂಡೆ, ಅಮೆರಿಕ | ......... | 3016 |
| ಪರನಾ, ದಕ್ಷಿಣ ಅಮೆರಿಕ | ......... | 2960 |
| ಬ್ರಹ್ಮಪುತ್ರ, ಏಷ್ಯ | ......... | 2880 |
| ಓರಿನೊಕೋ, ದಕ್ಷಿಣ ಅಮೆರಿಕ | ......... | 2880 |
| ಸಾವೋ ಫ್ರಾನ್ಸಿಸ್ಕೊ, ದಕ್ಷಿಣ ಅಮೆರಿಕ | ....... | 2880 |
| ಡ್ಯಾನ್ಯೂಬ್, ಯುರೋಪ್ | ......... | 2832 |
| ಸಾಲ್ವೀನ್, ಮಯನ್ಮಾರ್ | ......... | 2800 |
| ಯೂಫ್ರಿಟೀಸ್, ಏಷ್ಯ | ......... | 2720 |

(**h**) ಪ್ರಮುಖ ಸರೋವರಗಳು (ವಿಸ್ತೀರ್ಣ ಚ.ಕಿಮೀ.ಗಳಲ್ಲಿ)

| ಸರೋವರ | | ವಿಸ್ತೀರ್ಣ |
|---|---|---|
| ಕ್ಯಾಸ್ಪಿಯನ್ ಸಮುದ್ರ, ರಷ್ಯ | ......... | 4,40,300 |
| ಸುಪೀರಿಯರ್, ಅಮೆರಿಕ–ಕೆನಡ | ......... | 82,413.8 |
| ವಿಕ್ಟೋರಿಯ, ಪೂರ್ವಮಧ್ಯ ಆಫ್ರಿಕ | ......... | 67,858 |
| ಆರಲ್, ಕಜಖ್‌ಸ್ತಾನ್ | ......... | 63,196 |
| ಹ್ಯೂರನ್, ಅಮೆರಿಕ–ಕೆನಡ | ......... | 59,595.9 |
| ಮಿಷಿಗನ್, ಅಮೆರಿಕ | ......... | 58,016 |
| ನ್ಯಾಸಾ, ಪೂರ್ವ ಮಧ್ಯ ಆಫ್ರಿಕ | ......... | 36,778 |
| ಟಾಂಗನೀಕ, ಪೂರ್ವಮಧ್ಯ ಆಫ್ರಿಕ | ......... | 32,893 |
| ಗ್ರೇಟ್ ಬೇರ್, ಕೆನಡ | ......... | 30,199.4 |
| ಬೇಕಾಲ್, ರಷ್ಯ | ......... | 29,992.2 |
| ಗ್ರೇಟ್ ಸ್ಲೇವ್, ಕೆನಡ | ......... | 28,930.3 |
| ಈರಿ, ಅಮೆರಿಕ–ಕೆನಡ | ......... | 25,744.6 |
| ವಿನ್ನಿಪೆಗ್, ಕೆನಡ | ......... | 24,340.9 |
| ಚಾಡ್, ಉತ್ತರ ಮಧ್ಯ ಆಫ್ರಿಕ | ......... | 20,720 |
| ಆಂಟೇರಿಯೊ, ಅಮೆರಿಕ–ಕೆನಡ | ......... | 19,528.6 |
| ಬಾಲ್ಕಾಷ್, ರಷ್ಯ | ......... | 18,259.9 |
| ಲಾಡೋಗ್, ರಷ್ಯ | ......... | 18,130 |
| ಓನೇಗ, ರಷ್ಯ | ......... | 9,842 |
| ಐರ್, ಆಸ್ಟ್ರೇಲಿಯ | ......... | 9,583 |
| ರಡಾಲ್ಫ್, ಕೀನ್ಯ | ......... | 9,065 |
| ಟಿಟಿಕಾಕ, ಪೆರು–ಬೊಲಿವಿಯ | ......... | 8,288 |

| | | |
|---|---|---|
| ಆಥಬಾಸ್ಕ, ಕೆನಡ | ......... | 7,920.2 |
| ನಿಕರಾಗುವ, ನಿಕರಾಗುವ | ......... | 7,770 |
| ರೇನ್‍ಡೀರ್, ಕೆನಡ | ......... | 6,319.6 |
| ಟಾರೆನ್ಸ್, ಆಸ್ಟ್ರೇಲಿಯ | ......... | 6,216 |
| ಕೋಕೋ ನಾರ್, ಚೀನ | ......... | 5,957 |
| ಇಸಿಕ್ ಕುಲ್, ರಷ್ಯ | ......... | 5,894.8 |
| ಪಾರ್ನೆರ್ನ್, ಸ್ವೀಡನ್ | ......... | 5,568.5 |

(ಸಿ.ಎನ್.)

**ಭೂಮಿಯ ಆಂತರಿಕ ರಚನೆ:** ಭೂಮಿಯ ಒಡಲಿನ ರಚನೆ ಮತ್ತು ಸಂಯೋಜನೆ ಕುರಿತ ಅಧ್ಯಯನ ಭೂಗೋಳವಿಜ್ಞಾನಿಗಳಿಗೆ ಆವಶ್ಯಕ. ಭೂಮಿಯ ಬಾಹ್ಯವಲಯವನ್ನು ಕುರಿತು ಅಭ್ಯಸಿಸುವಾಗ ಭೂಸ್ವರೂಪಗಳು ಹಾಗೂ ಭೂ ಮೇಲ್ಮೈಯ ಮಣ್ಣು, ಖನಿಜಗಳು ಮುಂತಾದ ಭೌತದ್ರವ್ಯಗಳನ್ನು ಅಧ್ಯಯನ ಮಾಡಲು ಭೂಮಿಯ ರಚನೆಯ ಬಗೆಗೆ ಮಾಹಿತಿ ಅಗತ್ಯ. ಭೂಮಿಯ ಒಡಲಿನಲ್ಲಿ ಏನು ಅಡಗಿದೆ ಎಂಬುದು ಇನ್ನೂ ನಿಗೂಢವಾಗಿ ಉಳಿದಿದೆ. ಆ ಬಗೆಗೆ ಮಾನವನಿಗಿರುವ ಪ್ರತ್ಯಕ್ಷ ಅನುಭವ ಹಾಗೂ ಜ್ಞಾನ ಬಹು ಕಡಿಮೆ. ಇದುವರೆಗೆ ಆತನು ತೋಡಿರುವ ಗಣಿಗಳು, ಬಾವಿಗಳು ಹಾಗೂ ಸುರಂಗಗಳು ಇತ್ಯಾದಿ ಹಾಗೂ ನೈಸರ್ಗಿಕವಾದ ಕಣಿವೆ, ಕಂದರ, ಸರೋವರ, ನದಿ ದಂಡೆಗಳ ಮತ್ತು ಸಮುದ್ರ ತೀರಗಳ ಇಳಿಜಾರು–ಬದಿಗಳಲ್ಲಿ ಗೋಚರಿಸುವ ದೃಶ್ಯಗಳಿಂದ ತಿಳಿದಿರುವ ಮಾಹಿತಿ ಬಹು ಕಡಿಮೆ. ಇವು ಭೂಮಿಯ ಗಾತ್ರಕ್ಕೆ ಹೋಲಿಸಿದರೆ ಅತ್ಯಲ್ಪ. ಇತ್ತೀಚೆಗೆ ಪೆಟ್ರೋಲಿಯಂ ವಸ್ತುಗಳನ್ನು ಹಾಗೂ ಅಂತರ್ಜಲವನ್ನು ಹೊರತೆಗೆಯಲು ಕೊರೆಯುವ ಬಾವಿಗಳ ಆಳ 600 ಮೀ ಗಳನ್ನೂ ಮೀರಿರಬಹುದು. ಆದರೂ ಅದು ಭೂಕೇಂದ್ರದ ಆಳ 6,370 ಕಿಮೀಗಳಿಗೆ ಹೋಲಿಸಿದರೆ ಗೌಣವಾದುದಾಗಿದೆ. ಇವುಗಳಲ್ಲದೆ ಭೂಮಿಯ ಮೇಲ್ಪದರವನ್ನು ರೂಪಿಸುವ ಬಾಹ್ಯ ಕರ್ತೃಗಳಿಂದಲೂ ಕೆಲಮಟ್ಟಿಗೆ ಪ್ರತ್ಯಕ್ಷವಾದ ಮಾಹಿತಿಗಳು ದೊರೆಯುತ್ತವೆ. ಭೂಸ್ತರಗಳು ಮುದುಡಿಕೊಳ್ಳುವುದರಿಂದಲೋ ಭೂಸ್ತರ ಭಂಗವಾಗುವುದರಿಂದಲೋ ಆಳದಲ್ಲಿದ್ದ ಭೂಸ್ತರಗಳು ಮೇಲೆತ್ತಲ್ಪಟ್ಟು ಭೂಮಿಯ ಮೇಲೆ ನಗ್ನೀಕರಣದ ಕರ್ತೃಗಳ ಭೂ ಸವೆತದಿಂದಾಗಿ ಆಳದ ಭೂ ಸ್ತರಗಳು ಗೋಚರಿಸುತ್ತವೆ. ಹೀಗೆ ಈ ಎಲ್ಲ ಮೂಲಗಳಿಂದ ದೊರೆಯಬಲ್ಲ ಕೇವಲ ಭೂ ಹೊರ ಕವಚದ ರಚನೆಯ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿಯಬಹುದೇ ವಿನಾ ಭೂಮಿಯ ಒಡಲಿನ ಬಗೆಗೆ ಪೂರ್ಣ ಮಾಹಿತಿ ತಿಳಿಯುವುದು ಸಾಧ್ಯವಿಲ್ಲ. ಆದ್ದರಿಂದ ಈ ವಿಷಯದಲ್ಲಿ ಪ್ರತ್ಯಕ್ಷ ವಿಧಾನಗಳಿಗಿಂತ ಪರೋಕ್ಷ ವಿಧಾನಗಳೇ ಹೆಚ್ಚು ಸೂಕ್ತ. ಭೂಮಿಯ ಅಂತರಾಳದ ರಚನೆಯನ್ನು ತಿಳಿಯಲು ಮಾನವ ಇತ್ತೀಚೆಗೆ ಅನೇಕ ಆಧುನಿಕ ವಿಧಾನಗಳನ್ನು ಅನುಸರಿಸಿದ್ದಾನೆ. ಉದಾ: ಭೂಕಂಪ, ಜ್ವಾಲಾಮುಖಿ, ಉಲ್ಕಾಶಿಲೆ, ಆಂತರಿಕ ಒತ್ತಡ ಮತ್ತು ಶಾಖ, ದ್ರವ್ಯರಾಶಿ ಮತ್ತು ಸಾಂದ್ರತೆ ಇತ್ಯಾದಿ. ಇವುಗಳಲ್ಲಿ ಭೂಕಂಪನ ಅಲೆಗಳು ವಿಶ್ವಾಸಾರ್ಹ ಮೂಲಗಳಾಗಿವೆ.

ಭೂಕಂಪ ಅಲೆಗಳು ಭೂ ಅಂತರಾಳದ ಒಳ ಕೇಂದ್ರದಿಂದ ಪ್ರಾರಂಭಗೊಂಡು ಅಲ್ಲಿಂದ ಲಂಬಕೋನದಲ್ಲಿರುವ ಭೂ ಹೊರವಲಯದ ಭೂಕಂಪನ ಹೊರಕೇಂದ್ರಕ್ಕೆ ಒಂದಾದ ಮೇಲೆ ಮತ್ತೊಂದರಂತೆ ತಲುಪುತ್ತವೆ. ಇವುಗಳಲ್ಲಿ ಮೂರು ವಿಧಗಳಿವೆ. 1. ನೀಳ ಅಲೆಗಳು2. ಅಡ್ಡ ಅಲೆಗಳು ಮತ್ತು 3. ಮೇಲ್ಮೈ ಅಲೆಗಳು. ಇವುಗಳ ಚಲನೆಯ ದಿಕ್ಕು ಮತ್ತು ವೇಗ ಬೇರೆ ಬೇರೆಯಾಗಿರುತ್ತವೆ. ಹಾಗಾಗಿ ಅವು ಭೂಮೇಲ್ಮೈ ತಲುಪಿದ ಅನಂತರ ಹೊರಕೇಂದ್ರದ ಸುತ್ತಲೂ ಧಕ್ಕೆಯನ್ನುಂಟುಮಾಡುತ್ತವೆ. ಭೂಮಿಯ ಅಂತರಾಳದ ವಿವಿಧ ಪದರಗಳಲ್ಲಿ ಅನೇಕ ಭಾಗಗಳಾಗಿ ಭೇದಿಸಲ್ಪಡುತ್ತವೆ. ಇದಕ್ಕೆ ವಿವಿಧ ಪದರುಗಳು ಹೊಂದಿರುವ ವಿಭಿನ್ನ ರೀತಿಯ ಸಾಂದ್ರತೆ ಕಾರಣವಿರಬಹುದು. ಅಧಿಕ ಸಾಂದ್ರತೆಯುಳ್ಳ ಭೂ ಪದರದಲ್ಲಿ ಭೂಕಂಪನ ಅಲೆಗಳ ಚಲನವೇಗವೇ ಹೆಚ್ಚು. ಇದರಿಂದ ಭೂ ಅಂತರಾಳದ ವಿವಿಧ ಸಾಂದ್ರತೆಯುಳ್ಳ ಪದರಗಳನ್ನು ತಿಳಿದುಕೊಳ್ಳಬಹುದು.

ಭೂಮಿಯ ಅಂತರಾಳಕ್ಕೆ ಹೋದಂತೆಲ್ಲಾ ಒತ್ತಡ ಮತ್ತು ಶಾಖ ಹೆಚ್ಚಾಗುತ್ತದೆ. ಭೂ ಮೇಲ್ಪದರ ಕೆಳ ಪದರದ ಮೇಲೆ ಉಂಟುಮಾಡುವ ಭಾರದಿಂದಾಗಿ ಒತ್ತಡ ಹಾಗೂ ಉಷ್ಣಾಂಶ ಹೆಚ್ಚಾಗುತ್ತದೆ. ಇದೇ ಪ್ರಮಾಣದಲ್ಲಿ ಉಷ್ಣಾಂಶವು ಹೆಚ್ಚಾಗುತ್ತಾ 50 ಕಿಮೀ ಆಳದಲ್ಲಿ ಉಷ್ಣಾಂಶ $1500^0$ ಸೆಲ್ಸಿಯಸ್‍ಗಿಂತಲೂ ಹೆಚ್ಚಾಗುವುದು. ಈ ಪ್ರಮಾಣದ ಉಷ್ಣಾಂಶವಿರುವ ಭೂಗರ್ಭದ ವಸ್ತುಗಳು ಘನರೂಪದಲ್ಲಿರುವುದಿಲ್ಲ. ಬದಲಾಗಿ ಅವು ದ್ರವರೂಪವನ್ನು ತಾಳುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ನಾವು ಭೂಮಿಯ ಒಡಲಿನ ಅತ್ಯಂತ ಆಳದ ರಚನೆ ದ್ರವ ರೂಪದ್ದೆಂದು ತಿಳಿಯಬಹುದು. ಇದಕ್ಕೆ ಜ್ವಾಲಾಮುಖಿ ಹೊರಕ್ಕೆ ಕಾರುವ ಶಿಲಾಪಾಕವನ್ನೂ ಉದಾಹರಿಸಬಹುದು. ಈ ಶಿಲಾಪಾಕ ಭೂಮಿಯ ಮೇಲ್ಮೈಯನ್ನು ತಲುಪಿದಾಗ ಅದನ್ನು ಪರೀಕ್ಷಿಸಿ ಭೂ ಒಡಲಿನ ಸ್ಥಿತಿ ಮತ್ತು ರಚನೆಯನ್ನು ತಿಳಿಯಬಹುದು.

ಭೂಮಿಯ ರಚನೆಯನ್ನು ಭೂಮಿಯ ಸಾಂದ್ರತೆ ಹಾಗೂ ದ್ರವ್ಯರಾಶಿಯ ಸಹಾಯದಿಂದಲೂ ತಿಳಿಯಬಹುದು. ಭೂಮಿಯ ಸಾಪೇಕ್ಷ ಸಾಂದ್ರತೆ 5.5 ಗ್ರಾಂ/ಸಿ.ಸಿ. ಇದು ಎಲ್ಲ ಕಡೆಯಲ್ಲೂ ಒಂದೇ ರೀತಿಯಾಗಿಲ್ಲ. ಭೂಮೇಲ್ಪದರದ ಗ್ರಾನೈಟ್ ಶಿಲೆಗಳ ಸಾಪೇಕ್ಷ ಸಾಂದ್ರತೆ 2.7 ಗ್ರಾಂ/ಸಿ.ಸಿ. ಇದರ ತಳದಲ್ಲಿರುವ ಬಸಾಲ್ಟ್ ಶಿಲಾಸ್ತರದ ಸಾಪೇಕ್ಷ ಸಾಂದ್ರತೆ 3.0 ಗ್ರಾಂ/ಸಿ.ಸಿ.ಯಾಗಿರುತ್ತದೆ. ಅದೇ ಕೇಂದ್ರಗೋಳದಲ್ಲಿ ಅದು 11.0 ಗ್ರಾಂ./ಸಿ.ಸಿಗಳಾಗಿರುತ್ತದೆಂದು ಅಂದಾಜು ಮಾಡಲಾಗಿದೆ. ಕೇಂದ್ರಗೋಳದಲ್ಲಿ ಕಬ್ಬಿಣ ಮತ್ತು ನಿಕ್ಕಲ್‍ಗಳಿದ್ದು ಸಾಂದ್ರತೆ ಹೆಚ್ಚಾಗಿರುತ್ತದೆಂದು ಊಹಿಸಲಾಗಿದೆ. ಇದರಿಂದ ನಮಗೆ ಭೂ ಒಡಲಿನ ವಸ್ತುಗಳ ಪರಿಚಯವಾದಂತಾಗುವುದು.

ಉಲ್ಕಾಶಿಲೆಗಳ ಅಧ್ಯಯನ ಸಹ ಭೂಮಿಯ ಒಳರಚನೆ ಹಾಗೂ ಸ್ಥಿತಿಗಳನ್ನು ತಿಳಿಯಲು ಅನುಸರಿಸುವ ಪರೋಕ್ಷ ವಿಧಾನಗಳಲ್ಲಿ ಒಂದಾಗಿದೆ. ಅವು ಧೂಮಕೇತು ಮತ್ತು ಕ್ಷುದ್ರಗ್ರಹಗಳ ಭಗ್ನಾವಶೇಷಗಳೆಂದು ಊಹಿಸಲಾಗಿದೆ. ನಿತ್ಯವೂ ಉಲ್ಕೆಗಳು ಬೀಳುತ್ತಿರುತ್ತವೆ. ಇವುಗಳ ಮೂಲವಸ್ತುಗಳು ಭೂಮಿಯ ಶಿಲಾವಸ್ತುಗಳನ್ನು ಹೋಲುತ್ತವೆ. ಹಾಗಾಗಿ ಉಲ್ಕೆಗಳು ಮತ್ತು ಭೂಮಿಯ ಉತ್ಪತ್ತಿಗಳೆರಡೂ ಸೌರವ್ಯೂಹದ ಉತ್ಪತ್ತಿಯೊಡನೆ ಸಂಬಂಧವಿರುವುದರಿಂದ ಉಲ್ಕೆಗಳ ರಚನೆ ಭೂರಚನೆಯನ್ನು ತಿಳಿಯಲು ಸಹಾಯಕವಾಗುವುದು.

ಭೂಪದರಗಳ ವಿಂಗಡಣೆ: ಭೂವಿಜ್ಞಾನಿಗಳು ವಿವಿಧ ಮಾಹಿತಿಗಳನ್ನಾಧರಿಸಿ ಭೂಪದರಗಳನ್ನು ವಿಂಗಡಿಸಿದ್ದಾರೆ. ಆಸ್ಟ್ರಿಯಾದ ಭೂವಿಜ್ಞಾನಿ ಸೂಯೆಸ್ ರಾಸಾಯನಿಕ ಸಂಯೋಜನೆಯನ್ನು ಆಧಾರವಾಗಿಟ್ಟುಕೊಂಡು ಸಿಆಲ್, ಸಿಮಾ ಮತ್ತು ನಿಫೇ ಎಂದು ಮೂರು ಪದರುಗಳನ್ನು ಸಂಕೇತಾಕ್ಷರದ ಮೂಲಕ ವಿಂಗಡಿಸಿದ್ದಾನೆ. ಸಾಂದ್ರತೆಯನ್ನಾಧರಿಸಿ ಡ್ಯಾಲಿ ಎಂಬ ವಿಜ್ಞಾನಿ ಹೊರವಲಯ, ಮಧ್ಯವಲಯ ಮತ್ತು ಕೇಂದ್ರ ವಲಯಗಳನ್ನು ವಿಂಗಡಿಸಿರುವನು. ಹೆರಾಲ್ಡ್ ಜೆಫರಿ ಭೂಕಂಪನ ಅಲೆಗಳನ್ನಾಧರಿಸಿ ಭೂಮಿಯ 4 ಪದರಗಳನ್ನು ಗುರುತಿಸಿರುವನು: 1. ಕಣಶಿಲೆ ಹೊರಪದರ, 2. ಗ್ರಾನೈಟ್ ಪದರ, 3. ಡೈಯೋರೈಟ್ ಪದರ ಹಾಗೂ 4. ಡ್ಯೂನೈಟ್, ಪೆರಿಡೊಟೈಟ್‍ಪದರ. ಆರ್ಥರ್ ಹೋಮ್ಸ್ ಭೂಕವಚ ಮಿಶ್ರ ಉಪಸ್ತರ ಮತ್ತು ಕೇಂದ್ರ ಭಾಗವೆಂದು ಮೂರು ಭಾಗಗಳಾಗಿ ವಿಂಗಡಿಸಿರುವನು. ವಾನ್‍ಡರ್ ಗ್ರಾಚ್ಟ್ ಭೂ ಸಂಯೋಜನೆಯನ್ನಾಧರಿಸಿ 4 ಪದರಗಳನ್ನು ಗುರುತಿಸಿರುವನು. ಈಗ ಭೂಮಿಯನ್ನು ಶಿಲಾಗೋಳ, ಮಿಶ್ರಗೋಳ ಮತ್ತು ಕೇಂದ್ರಗೋಳಗಳೆಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. 1. ಭೂಮಿಯನ್ನು ಸುತ್ತುವರಿದಿರುವ ಸು. 16 ರಿಂದ 40 ಕಿಮೀಗಳವರೆಗಿನ ಮೇಲ್ಪದರವನ್ನು ಶಿಲಾಗೋಳವೆಂದು ಹೆಸರಿಸಲಾಗಿದೆ. 2. ಭೂಕಂಪನದ ಅಡ್ಡ ಅಲೆಗಳು ವಕ್ರಗೊಂಡು ಹೆಚ್ಚು ವೇಗದಿಂದ 2900 ಕಿಮೀ ಗಳವರೆಗೂ ಚಲಿಸುತ್ತವೆ. ಈ ವಿಭಾಗವನ್ನು ಮಿಶ್ರಗೋಳ ಎಂದು ಕರೆಯಲಾಗಿದೆ. 3. ಭೂಮಿಯ 2900 ಕಿಮೀಗಳಿಗಿಂತ ಹೆಚ್ಚು ಆಳವಾಗಿರುವ ಕೇಂದ್ರ ಭಾಗವನ್ನು ಅಡ್ಡ ಅಲೆಗಳು ಪ್ರವೇಶಿಸುವುದಿಲ್ಲ. ಅಲ್ಲದೆ ನೀಳ ಅಲೆಗಳ ಮಾರ್ಗವೂ ವಕ್ರವಾಗುವುದರ ಜೊತೆಗೆ ಅವುಗಳ ವೇಗ ಗರಿಷ್ಠ ಪ್ರಮಾಣದಲ್ಲಿರುವುದು. ಆದುದರಿಂದ ಈ ಭಾಗವನ್ನು ಕೇಂದ್ರಗೋಳವೆಂದು ಕರೆಯಲಾಗಿದೆ.

1. ಶಿಲಾಗೋಳ: ಭೂಮಿಯ ಹೊರಪದರ ಕಡಿಮೆ ಸಾಂದ್ರತೆಯ ಹಗುರವಾದ ಶಿಲೆಗಳಿಂದ ಕೂಡಿರುವುದು. ಇದು 16 – ಸು. 40 ಕಿಮೀಗಳಷ್ಟು ದಪ್ಪವಾಗಿದೆ. ಈ ವಲಯದಲ್ಲಿ ಭೂಕಂಪನದ ಅಲೆಗಳು ಪ್ರತಿ ಸೆಕೆಂಡಿಗೆ 5.6 ಕಿಮೀ ವೇಗದಲ್ಲಿ ಚಲಿಸುತ್ತವೆ. ಈ ವಲಯದ ಮೇಲ್ಭಾಗ ಸಿಲಿಕೇಟ್ ಮತ್ತು ಅಲ್ಯೂಮಿನಿಯಂ ಖನಿಜಗಳನ್ನು ಒಳಗೊಂಡ ಶಿಲೆಗಳಿಂದ ನಿರ್ಮಿಸಲ್ಪಟ್ಟಿರುವುದು. ಆದ್ದರಿಂದ ಇದನ್ನು ಸಿಯಾಲ್ ಎಂದೂ ಕರೆಯಲಾಗಿದೆ. ಶಿಲಾಗೋಳದ ಕೆಳ ಪದರ ಹೆಚ್ಚು ಸಾಂದ್ರವಾದ ಶಿಲೆಗಳಿಂದ ನಿರ್ಮಿತವಾಗಿದೆ. ಈ ವಿಭಾಗದ ಶಿಲೆಗಳು ಸಿಲಿಕೇಟ್ ಮತ್ತು ಮ್ಯಾಗ್ನೀಸಿಯಂ ಶಿಲೆಗಳಿಂದ ಕೂಡಿದ್ದು ಇದನ್ನು ಸಾಂಕೇತಿಕವಾಗಿ ಸೀಮಾ ಎಂದು ಕರೆಯುವರು. ಸೀಮಾ ವಲಯದ ಕೆಳಭಾಗದಲ್ಲಿ ಮಿಶ್ರ ಪದರವಿರುವುದು. ಶಿಲಾಗೋಳ ಮತ್ತು ಮಿಶ್ರಗೋಳಗಳನ್ನು ಬೇರ್ಪಡಿಸಿರುವ ಮಧ್ಯಾಂತರ ವಲಯವನ್ನು ಮೊ ಹೋರೋ ವಿಸಿಕ್ ಸೀಮಾ ವಲಯ ಎಂದೂ ಸಂಕ್ಷಿಪ್ತವಾಗಿ ಮೋಹೋ ಎಂದು ಕರೆಯುವರು. ಮೊಹೋರೋ ವಿಸಿಕ್ ಸೀಮಾವಲಯದ ಆಳ ಭೂಮಿಯ ಎಲ್ಲ ಭಾಗಗಳಲ್ಲಿಯೂ ಒಂದೇ ರೀತಿಯಾಗಿಲ್ಲ. ಇದು ಭೂಖಂಡಗಳ ತಳದಲ್ಲಿ ಹೆಚ್ಚು ಆಳದಲ್ಲಿಯೂ ಸಾಗರಗಳ ತಳದಲ್ಲಿ ಭೂಮೇಲ್ಮೈನಿಂದ ಬಹು ಹತ್ತಿರದಲ್ಲಿಯೂ ಕಂಡುಬರುವುದು. ಭೂ ಖಂಡಗಳ ಮೇಲಿನ ಭೂ ಸ್ವರೂಪಗಳು ಹೆಚ್ಚು ಎತ್ತರವಾಗಿದ್ದಲ್ಲಿ ಅವುಗಳು ನಿರ್ಮಿತವಾಗಿರುವ ಹಗುರವಾದ ಶಿಲೆಗಳು ಭೂಮಿಯಲ್ಲಿ ಆಳದವರೆಗೂ ಹರಡಿಕೊಂಡಿರುತ್ತವೆ. ಹಿಮಾಲಯ, ಆಂಡಿಸ್, ರಾಕೀ ಮುಂತಾದ ಮಡಿಕೆ ಪರ್ವತಗಳು ಅತಿ ಹೆಚ್ಚು ಎತ್ತರವಾದ ಶಿಖರಗಳನ್ನು ಹೊಂದಿದೆ. ಅವುಗಳಿಗೆ ಅನುಗುಣವಾಗಿ ಭೂಮಿಯಲ್ಲಿ ಬಹು ಆಳದವರೆಗೆ ಬೇರುಗಳಂತೆ ಹಗುರವಾದ ಸಿಯಾಲ್ ಪದರುಗಳು ಚಾಚಿಕೊಂಡಿರುತ್ತವೆ. ಇದರಿಂದ ಇವುಗಳ ತಳದಲ್ಲಿ ಮೋಹೋ ರೇಖೆ

ಸು. 60 – 80 ಕಿಮೀ ಆಳದಲ್ಲಿರುವುದು. ಆದರೆ ಸಾಗರ ತಳವು ಹೆಚ್ಚು ಸಾಂದ್ರತೆಯನ್ನು ಹೊಂದಿದ ಶಿಲಾಸ್ತರಗಳಿಂದ ನಿರ್ಮಿತವಾಗಿರುವುದು. ಇದರಿಂದ ಮೋಹೋ ವಲಯ ಮೇಲ್ಪದರಕ್ಕೆ ಬಹು ಸಮೀಪದಲ್ಲಿ ಅಂದರೆ 5 ಕಿಮೀ ಆಳದಲ್ಲಿರುವುದು. ಹೀಗೆ ಶಿಲಾಗೋಳ ಅಥವಾ ಭೂ ಕವಚದ ಗಾತ್ರ ಒಂದೇ ರೀತಿಯಲ್ಲಿರದೆ ಭೂಖಂಡಗಳ ತಳದಲ್ಲಿ ಹೆಚ್ಚು ದಪ್ಪವಾಗಿಯೂ ಸಾಗರಗಳ ತಳದಲ್ಲಿ ಬಹು ತೆಳುವಾಗಿಯೂ ಇರುವುದು. ಶಿಲಾಗೋಳದ ಸಾಪೇಕ್ಷ ಸಾಂದ್ರತೆ 60 ಕಿಮೀ ಆಳದವರೆಗೆ 2.7 ರಿಂದ 2.9 ಗ್ರಾಂ/ಸಿ.ಸಿ. ಮತ್ತು 60–1200 ಕಿಮೀ ಆಳದವರೆಗೆ 3.1 ರಿಂದ 4.75 ಗ್ರಾಂ/ಸಿ.ಸಿ ಗಳಾಗಿರುತ್ತದೆ.

2. ಮಿಶ್ರಗೋಳ: ಭೂಮಿಯ ಹೊರಪದರವನ್ನು ರೂಪಿಸಿರುವ ಶಿಲಾಗೋಳದಿಂದ ಸು. 2900 ಕಿಮೀ ವರೆಗೆ ಕಂಡುಬರುವ ದಪ್ಪ ಪದರವನ್ನು ಮಿಶ್ರಗೋಳವೆಂದು ಕರೆಯುವರು. ಬಸಾಲ್ಟ್ ಶಿಲೆಗಳಿಂದ ಕೂಡಿದ ಈ ವಲಯದ ಸಾಪೇಕ್ಷ ಸಾಂದ್ರತೆ 3.5




ಭೂ ಆಂತರಿಕ ರಚನೆ

ಗ್ರಾಂ/ಸಿ.ಸಿ. ಗಳಷ್ಟಿರುವುದು. ಈ ವಲಯದಲ್ಲಿರುವ ಮುಖ್ಯ ಖನಿಜಗಳೆಂದರೆ ಎಕ್ಲೋಗೈಟ್, ಪೈರೋಕ್ಸಿನ್ ಮುಂತಾದವು. ಸಿಲಿಕಾನ್ ಮತ್ತು ಮೆಗ್ನೀಸಿಯಂ ಈ ವಲಯದಲ್ಲಿ ಕಂಡುಬರುವ ಮುಖ್ಯ ಮೂಲವಸ್ತುಗಳು. ಮೋಹೋ ಸೀಮಾವಲಯದ ಶಿಲಾವಸ್ತುಗಳು ಅತ್ಯುಷ್ಣತೆಯಿಂದ ಕರಗಿ ಮೇಣದ ಸ್ಥಿತಿಯಲ್ಲಿರುವುವು. ಇದರಿಂದ ಈ ವಲಯವನ್ನು ಭೂಪ್ರಾವಾರ ವಲಯ (ಮ್ಯಾಂಟಲ್) ವೆಂದೂ ಕರೆಯುವರು.ಇದು ಭೂತಿರುಳಿಗೂ ಮತ್ತು ಭೂಚಿಪ್ಪಿಗೂ ನಡುವಣ ವಲಯ. ಮೋಹೋ ವಲಯದ ತಳದಲ್ಲಿ ಡ್ಯೂನೈಟ್ ಹಾಗೂ ಪಿರಿಯೋಟೈಟ್‌ಗಳಿಂದ ಕೂಡಿದ ಸ್ಥಿತ್ಯಂತರ ವಲಯವಿರುವುದು. ಇವುಗಳ ಮಿಶ್ರಣ ಒಂದು ಪಾಲು ಗ್ಯಾಬ್ರೊ ಹಾಗೂ ಮೂರು ಪಾಲು ಡ್ಯೂನೈಟ್ (ಅಲಿವೈನ್) ಗಳನ್ನು ಹೋಲುವುದು. ಇವುಗಳ ಮಿಶ್ರಣವನ್ನೇ ಪೈರೋಲಯಟ್ ಎಂದು ಕರೆಯುವರು. ಇದರಿಂದಾಗಿಯೇ ಈ ಮಿಶ್ರ ಸ್ತರವನ್ನು ಪೈರೋ ಸ್ಪಿಯಲ್ ಎಂದು ಹೆಸರಿಸಲಾಗಿದೆ. ಮಿಶ್ರಗೋಳದ ತಳದಲ್ಲಿ ಗುಟೆನ್‌ಬರ್ಗ್ ಸೀಮಾವಲಯವಿದೆ. ಇದು ಮಿಶ್ರಗೋಳ ಮತ್ತು ಕೇಂದ್ರಗೋಳವನ್ನು ಪ್ರತ್ಯೇಕಿಸುವುದು. ಇದನ್ನು ಮೊದಲಿಗೆ 1906ರಲ್ಲಿ ಬ್ರಿಟಿಷ್ ಭೂವಿಜ್ಞಾನಿಯಾದ ಓಲ್ಡ್‌ಮ್‌ನು ಗುರುತಿಸಿದನು. ಅನಂತರ 1954ರಲ್ಲಿ ಸ್ವೀಡನ್ನಿನ ಗುಟೆನ್ ಬರ್ಗ್ ಎಂಬುವವನು ವೈಜ್ಞಾನಿಕ ನಿದರ್ಶನಗಳೊಂದಿಗೆ ಸ್ಪಷ್ಟಪಡಿಸಿದ. ಹಾಗಾಗಿ ಈತನ ಹೆಸರಿನಿಂದಲೇ ಕರೆಯಲಾಗಿದೆ.

ಮಿಶ್ರಗೋಳದಲ್ಲಿ ಶಿಲೆಗಳ ಸಾಂದ್ರತೆ ಆಳಕ್ಕೆ ಹೋದಂತೆ ಹೆಚ್ಚಾಗುವುದು. ಸು. 965 ಕಿಮೀ ಆಳದಲ್ಲಿ ಶಿಲೆಗಳ ಸಾಂದ್ರತೆ ಸು.3.9 ಗ್ರಾಂ/ಸಿ.ಸಿ. ಯಷ್ಟಿರುವುದೆಂದು ಅಂದಾಜು ಮಾಡಲಾಗಿದೆ. ಹೀಗೆ ಮಿಶ್ರಗೋಳದ ವಸ್ತುಗಳ ಸಾಂದ್ರತೆ ಭೂಕೇಂದ್ರದ ಕಡೆಗೆ ಹೋದಂತೆಲ್ಲಾ ಹೆಚ್ಚಾಗುವುದರಿಂದ ಇದರ ಮೂಲಕ ಹಾದು ಹೋಗುವ ಭೂಕಂಪನದ ನೀಳ ಅಲೆಗಳ ವೇಗವೂ ಹೆಚ್ಚಾಗಿದ್ದು, ಪ್ರತಿ ಸೆಕೆಂಡಿಗೆ 6 – 7.9 ಕಿಮೀ ಗಳಷ್ಟಿರುವುದು. ಅಡ್ಡ ಅಲೆಗಳು ಈ ವಲಯದಲ್ಲಿ ಪ್ರತಿ ಸೆಕೆಂಡಿಗೆ 3.2 – 4.25 ಗ್ರಾಂ/ಸಿ.ಸಿ. ಗಳಾಗಿರುತ್ತದೆ.

3. ಕೇಂದ್ರಗೋಳ: ಮಿಶ್ರಗೋಳ ಸು. 2900 ಕಿಮೀ ಆಳದಲ್ಲಿ ಕೊನೆಗೊಳ್ಳುವುದು. ಈ ಆಳದಿಂದ ಭೂ ಕೇಂದ್ರದವರೆಗಿನ ವಲಯವನ್ನು ಕೇಂದ್ರಗೋಳವೆಂದು ಕರೆಯುವರು. ಇದು ಸು. 6750 ಕಿಮೀ ವ್ಯಾಸವನ್ನು ಹೊಂದಿದೆ. ಈ ವಲಯ ಅತಿ ಹೆಚ್ಚು ಸಾಂದ್ರತೆಯನ್ನು ಹೊಂದಿದ ನಿಕ್ಕಲ್ ಮತ್ತು ಕಬ್ಬಿಣ ಖನಿಜಗಳಿಂದ ಕೂಡಿರುವುದರಿಂದಲೇ ಇದನ್ನು ಸಾಂಕೇತಿಕವಾಗಿ ನೀಫೆ ಎಂದು ಕರೆಯುವರು. ಇದು ಬಹು ಆಳದಲ್ಲಿರುವುದರಿಂದ ಹೆಚ್ಚು ಉಷ್ಣಾಂಶ ಮತ್ತು ಒತ್ತಡದ ಪರಿಣಾಮವಾಗಿ ಪೂರ್ಣ ಘನ ಅಥವಾ ಪೂರ್ಣ ದ್ರವ ರೂಪದಲ್ಲಿಲ್ಲ ಅಥವಾ ಹಿಂದೆ ಭಾವಿಸಿದಂತೆ ನಿಸ್ಸಂದೇಹವಾಗಿಯೂ ಇದು ಅನಿಲ ರೂಪದಲ್ಲಿಲ್ಲ. ಇದರ ವಸ್ತುಗಳು ಸ್ಥಿತಿಸ್ಥಾಪಕತ್ವವನ್ನು ಹೊಂದಿವೆ. ಇದರ ಸಾಪೇಕ್ಷ ಸಾಂದ್ರತೆ ಅತ್ಯಧಿಕವಾಗಿರುವುದರಿಂದ ಇದನ್ನು ಪ್ರವೇಶಿಸುವಾಗ ಭೂ ಕಂಪನದ ನೀಳ ಅಲೆಗಳು ಬಾಗುತ್ತವೆ. ಅಡ್ಡ ಅಲೆಗಳು ಸ್ಥಿತಿಸ್ಥಾಪಕತ್ವ ಗುಣವನ್ನು ಹೊಂದಿರುವುದರಿಂದ ಈ ವಲಯವನ್ನು ಪ್ರವೇಶಿಸದೆ ಹಿಂದಿರುಗುತ್ತವೆ. ಈ ವಲಯದ ಶಿಲೆಗಳ ಸಾಂದ್ರತೆಯು 11 ಗ್ರಾಂ./ಸಿ.ಸಿ. ಗಿಂತಲೂ ಹೆಚ್ಚಾಗಿರುವುದು. (ಕೆ.ಎನ್.ಯು.)

**ಭೂಮಿಯ ಉಗಮ:** ಪ್ರಾಚೀನ ಕಾಲದಿಂದಲೂ ಮಾನವ ಭೂಮಿಯ ಉಗಮದ ಬಗ್ಗೆ ತನ್ನ ವಿಚಾರ, ವಿಮರ್ಶೆಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾನೆ. ಭೂಮಿಯ ಜನ್ಮದ ವಿಚಾರ ಬಹುವಾಗಿ ಸೌರವ್ಯೂಹದ ಉಗಮದ ವಿಚಾರದಲ್ಲಿಯೇ ಸೇರಿಕೊಂಡಿದೆ. ಭೂಮಿಯ ಉಗಮದ ಬಗೆಗೆ ವಾಸ್ತವ ಸಂಗತಿಯನ್ನು ತಿಳಿದುಕೊಳ್ಳುವಲ್ಲಿ ಅನೇಕ ಭೂಗೋಳ ವಿಜ್ಞಾನಿಗಳು, ತತ್ತ್ವಜ್ಞಾನಿಗಳು, ಗಣಿತ ವಿಜ್ಞಾನಿಗಳು, ಖಗೋಳವಿಜ್ಞಾನಿಗಳು ಆಗಾಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಾಗೂ ಸಿದ್ಧಾಂತಗಳನ್ನು ಮಂಡಿಸುತ್ತಾ ಬಂದಿದ್ದಾರೆ. ಭೂಮಿಯ ಉಗಮಕ್ಕೆ ಸಂಬಂಧಿಸಿದಂತೆ ಈವರೆಗೆ ಮಂಡಿತವಾಗಿರುವ ಪ್ರಮುಖ ಸಿದ್ಧಾಂತಗಳು ಈ ಕೆಳಗಿನಂತಿವೆ.

1. ಜ್ಯೋತಿರ್ಮೇಘ ಸಿದ್ಧಾಂತ: ಭೂಮಿಯ ಉಗಮವನ್ನು ಕುರಿತು ಪ್ರತಿಪಾದಿಸಿದ ಸಿದ್ಧಾಂತಗಳಲ್ಲಿ ಇದು ಮೊದಲನೆಯದಾಗಿದೆ. ಇಮ್ಯಾನುಯಲ್ ಕಾಂಟ್ ಮತ್ತು ಲಾಪ್ಲೇಸ್ ಎಂಬುವರಿಂದ ಪ್ರತಿಪಾದಿಸಲ್ಪಟ್ಟಿದೆ.

ಜರ್ಮನಿಯ ತತ್ತ್ವಶಾಸ್ತ್ರಜ್ಞ ಇಮ್ಯಾನುಯಲ್ ಕಾಂಟ್ 1755ರಲ್ಲಿ ಈ ಸಿದ್ಧಾಂತವನ್ನು ನ್ಯೂಟನ್ನನ ಗುರುತ್ವಾಕರ್ಷಣೆ ಹಾಗೂ ಚಲನೆಯ ನಿಯಮಗಳ ಆಧಾರದ ಮೇಲೆ ಮಂಡಿಸಿದನು. ಈತನ ಪ್ರಕಾರ ನಭೋಮಂಡಲ ಪೂರ್ಣವಾಗಿ, ನಿಶ್ಚಲವಾದ ಭೌತ ದ್ರವ್ಯದ ಮೋಡದಿಂದಾವೃತವಾಗಿದ್ದಿತು. ಇದರ ಕಣಗಳು ಪರಸ್ಪರ ಆಕರ್ಷಣೆಯಿಂದಾಗಿ ಘರ್ಷಣೆ ಮತ್ತು ಸಂಯೋಜನೆ ಹೊಂದಿದವು. ಇದರಿಂದ ಶಾಖ ಉತ್ಪನ್ನವಾಗಿ ಕ್ರಮೇಣ ಅನಿಲರಾಶಿಯಲ್ಲಿ ಚಲನೆ ಉಂಟಾಯಿತು. ಕೌನಿಕ ವೇಗ ಹೆಚ್ಚಿದಂತೆಲ್ಲಾ ಶಾಖವೂ ಹೆಚ್ಚಾಯಿತು. ಅದರ ಪರಿಣಾಮವಾಗಿ ಕಣಗಳ ಸಮೂಹ ಕ್ರಮೇಣ ಅನಿಲರೂಪವನ್ನು ತಾಳಿತು. ಕೌನಿಕ ವೇಗ ಹಾಗೂ ಕೇಂದ್ರಾಪಗಮನದ ಶಕ್ತಿಗಳು ಹೆಚ್ಚಿದಂತೆಲ್ಲಾ ಜೋತಿರ್ಮೇಘದ ಭೌತ ದ್ರವ್ಯವಲಯದಿಂದ ಬಳೆಗಳು ಹೊರದೂಡಲ್ಪಟ್ಟವು. ಕಳಚಲ್ಪಟ್ಟ ಬಳೆಗಳು ಘನೀಕರಣ ಹೊಂದಿ ಗ್ರಹಗಳಾಗಿ ಪರಿವರ್ತನೆಗೊಂಡವು. ಇದೇ ರೀತಿಯಾಗಿ ಗ್ರಹಗಳಿಂದ ಹೊರದೂಡಲ್ಪಟ್ಟ ಅನಿಲ ಸಮೂಹದಿಂದ ಉಪಗ್ರಹಗಳು ಉಂಟಾದವು. ಉಳಿದ ಅನಿಲ ಸಮೂಹ ಸೂರ್ಯನಾಗಿ ಉಳಿಯಿತು. ಹೀಗೆ ಸೌರವ್ಯೂಹ ರೂಪ ತಳೆಯುವ ಮೂಲಕ ಭೂಮಿ ಉಗಮವಾಗಿದೆಯೆಂದು, ಕಾಂಟ್ ಅಭಿಪ್ರಾಯಪಟ್ಟಿರುವನು. ಕಾಂಟ್‌ನ ಸಿದ್ಧಾಂತವನ್ನು ಕುರಿತು ಕೆಲವು ಟೀಕೆಗಳಿವೆ. ಪ್ರಾಕೃತಿಕವಾದ ಭೌತ ದ್ರವ್ಯ ಕಣಗಳ ಆಕರ್ಷಣೆ, ಘರ್ಷಣೆ ಹಾಗೂ ಚಲನೆ – ಇವು ಕೌನಿಕವೇಗ ಸಂರಕ್ಷಣೆ ನಿಯಮಕ್ಕೆ ವಿರುದ್ಧವಾಗಿವೆ. ಕಣಗಳು ಘರ್ಷಣೆ ಹೊಂದಿದ ಮೇಲೆ ಅವು ಸ್ವಯಂ ಕೌನಿಕ ಚಲನೆಯನ್ನು ತಾಳಲಾರವು. ಇದಕ್ಕೆ ಯಾವುದಾದರೂ ಬಾಹ್ಯ ಶಕ್ತಿಯಿರಬಹುದು. ಆ ಬಗ್ಗೆ ಕಾಂಟ್ ಏನನ್ನೂ ತಿಳಿಸಿಲ್ಲ. ಹೀಗಾಗಿ ಕಾಂಟ್‌ನ ಸಿದ್ಧಾಂತ ತರ್ಕಬದ್ಧವಾಗಿಲ್ಲ.

ಲಾ ಪ್ಲೇಸನ ಜೋತಿರ್ಮೇಘ ಸಿದ್ಧಾಂತ: ಮಾರ್ಕ್ವಿಸ್–ಡಿ–ಲಾಪ್ಲೇಸ್ ಎಂಬ ಫ್ರೆಂಚ್ ವಿಜ್ಞಾನಿ ಕಾಂಟ್‌ನ ಸಿದ್ಧಾಂತವನ್ನು ಮಾರ್ಪಡಿಸಿ 1796ರಲ್ಲಿ ಸೌರವ್ಯೂಹ ಮತ್ತು ಭೂಮಿಯ ಉತ್ಪತ್ತಿಯ ಬಗ್ಗೆ ತನ್ನ ಸಿದ್ಧಾಂತವನ್ನು ಪ್ರತಿಪಾದಿಸಿದ. ಈತನ ಪ್ರಕಾರ ಪ್ರಾರಂಭದಲ್ಲೇ ನೈಸರ್ಗಿಕವಾಗಿ ನಿರ್ಮಾಣವಾದ ಅತ್ಯುಷ್ಣ ಹಾಗೂ ಸ್ವಯಂಭ್ರಮಣವುಳ್ಳ ಅನಿಲ ಸಮೂಹವಿದ್ದಿತು. ಇದನ್ನೇ ನಿಹಾರಿಕೆ ಅಥವಾ ಜೋತಿರ್ಮೇಘ ಎಂದು ಕರೆದನು. ಅಪರಿಮಿತ ಜಲಜನಕ, ಸ್ವಲ್ಪ ಮಾತ್ರ ಹೀಲಿಯಂ ಹಾಗೂ ದೂಳು ಮಿಶ್ರಣವೇ ನಿಹಾರಿಕ. ಸ್ವಯಂಭ್ರಮಿಸುತ್ತಿದ್ದ ನಿಹಾರಿಕೆ ತಂಪಾಗುತ್ತಾ ಬಂದಂತೆ ಕ್ರಮೇಣ ಸಂಕುಚಿತಗೊಂಡು, ಇನ್ನಷ್ಟು ತ್ವರಿತ ವೇಗದಲ್ಲಿ ಚಲಿಸತೊಡಗಿತು. ಸ್ವಯಂ ಭ್ರಮಣದ ವೇಗ ಹೆಚ್ಚಾದಂತೆಲ್ಲಾ ಕೇಂದ್ರಾಪಗಮನ ಶಕ್ತಿಯೂ ಅತ್ಯಧಿಕಗೊಂಡಿತು. ನಿಹಾರಿಕೆಯ ಗುರುತ್ವಾಕರ್ಷಣ ಶಕ್ತಿಯಿಂದಾಗಿ ವಸ್ತುಗಳು ತನ್ನ ಕೇಂದ್ರದ ಕಡೆಗೆ ಆಕರ್ಷಿಸಲ್ಪಟ್ಟವು. ಕೇಂದ್ರಾಪಗಮನ ಶಕ್ತಿ ಮತ್ತು ಗುರುತ್ವಾಕರ್ಷಣ ಶಕ್ತಿಗಳೆರಡೂ ಪರಸ್ಪರ ವಿರುದ್ಧವಾದವು. ನಿಹಾರಿಕೆಯ ಒಳಭಾಗ ಹೊರಭಾಗದ ವೇಗಕ್ಕೆ ಸಮತೋಲನವಾಗಿ ಚಲಿಸುವುದು ಸಾಧ್ಯವಾಗದಿದ್ದಾಗ ಸಂಕುಚಿತ ಹೊಂದಿದ ಹೊರಭಾಗ ಬಳೆಗಳ ರೂಪದಲ್ಲಿ ಸಮಭಾಜಕ ವೃತ್ತದ ಬಳಿ ಒಂದಾದ ಮೇಲೊಂದರಂತೆ ಕಳಚಿಕೊಳ್ಳಲ್ಪಟ್ಟವು. ಈ ಬಳೆಗಳು ಘನೀಕರಣಹೊಂದಿ ಗ್ರಹಗಳಾದವು. ಉಳಿದ ನಿಹಾರಿಕೆಯ ಕೇಂದ್ರ ಸಾಂದ್ರೀಕರಣ ಹೊಂದಿ ಅತ್ಯುಷ್ಣತೆಯುಳ್ಳ ಬೆಳಕಿನ ಕಿರಣಗಳನ್ನು ಹೊರಹೊಮ್ಮುವ ಆಕಾಶಕಾಯವಾಗಿ ಉಳಿಯಿತು. ಇದನ್ನೇ

ಸೂರ್ಯನೆಂದು ಕರೆಯಲಾಗಿದೆ. ಅಂತರಿಕ್ಷ ವಲಯದಲ್ಲಿ ಗ್ರಹಗಳು ತಂಪಾಗುತ್ತಾ ಹೋಗುವಾಗ ಅವುಗಳಿಂದ ಬಳೆಗಳ ರೂಪದಲ್ಲಿ ಹೊರದೂಡಲ್ಪಟ್ಟ ವಸ್ತುಗಳು ಸಾಂದ್ರೀಕರಿಸಿ ಉಪಗ್ರಹಗಳಾದವು. ಸೂರ್ಯನಾಗಿ ಉಳಿದ ನಿಹಾರಿಕೆಯ ಆಕರ್ಷಣೆಯಿಂದಾಗಿ ಗ್ರಹಗಳು ಸೂರ್ಯನ ಸುತ್ತಲೂ ಗ್ರಹಗಳ ಆಕರ್ಷಣೆಗೊಳಪಟ್ಟು ಉಪಗ್ರಹಗಳು ಗ್ರಹಗಳ ಸುತ್ತ ಸುತ್ತಲು ಪ್ರಾರಂಭಿಸಿದವೆಂದು, ಹೀಗೆ ಸೌರವ್ಯೂಹ ಮತ್ತು ಭೂಮಿ ಉಗಮವಾಯಿತು.

ಈ ಮುಂದಿನ ಅಂಶಗಳು ಜ್ಯೋತಿರ್ಮೇಘ ಸಿದ್ಧಾಂತವನ್ನು ಬೆಂಬಲಿಸುತ್ತವೆ. ಸೌರವ್ಯೂಹದ ಗ್ರಹಗಳ ದೈನಿಕ ಮತ್ತು ವಾರ್ಷಿಕ ಚಲನೆ ಹಾಗೂ ಉಪಗ್ರಹಗಳ ಚಲನೆ, ನಿಹಾರಿಕೆ ಪ್ರಾರಂಭದಲ್ಲೇ ಅತ್ಯುಷ್ಣತೆ ಹಾಗೂ ಚಲನೆಯನ್ನೂ ಹೊಂದಿತ್ತೆಂದೂ ಸಿದ್ಧಾಂತದಲ್ಲಿ ಹೇಳಿರುವುದನ್ನು ಸ್ಮರಿಸಬಹುದು. ನಿಹಾರಿಕೆಯ ಅಕ್ಷಭ್ರಮಣದಿಂದ ಕಳಚಿಕೊಂಡ ಬಳೆಗಳು ನಿಹಾರಿಕೆಯ ಆಕರ್ಷಣೆಗಳಿಗೊಳಪಟ್ಟು ಗ್ರಹಗಳಾಗಿ ಪರಿವರ್ತನೆಗೊಂಡು ಅದರ ಸುತ್ತ ಪರಿಭ್ರಮಿಸುತ್ತಿವೆ. ಸೂರ್ಯನ ಸುತ್ತ ಪರಿಭ್ರಮಿಸುವ ಎಲ್ಲ ಗ್ರಹಗಳೂ ಒಂದೇ ಕ್ರಾಂತಿ ಪಥದ ಸಮತಲದಲ್ಲಿ ಚಲಿಸುತ್ತಿವೆ.

ಪ್ರಸ್ತುತ ಭೂಮಿಯ ಅಂತರಾಳದ ದ್ರವವಸ್ತು ಹಾಗೂ ಬಾಹ್ಯವಲಯದ ಘನ ವಸ್ತುಗಳು ಸಿದ್ಧಾಂತವನ್ನು ಪುಷ್ಟೀಕರಿಸುವುವು. ಲಾಪ್ಲೇಸನ ಪ್ರಕಾರ ನಿಹಾರಿಕೆಯ ಅನಿಲ ಸಮೂಹದಿಂದ ಕಳಚಿದ ಬಳೆಗಳು ತಂಪಾಗಿ, ಘನೀಕರಿಸಿ, ಭೂಮಿ ಉಂಟಾಯಿತು. ಈ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಹೊರವಲಯವು ಘನೀಕರಣ ಹೊಂದಿತು. ಆದರೆ ಒಳಭಾಗ ಹಾಗೆ ದ್ರವರೂಪದಲ್ಲಿ ಉಳಿಯಿತು. ಈ ಅಭಿಪ್ರಾಯವನ್ನು ವಿಮರ್ಶಿಸಿದಾಗ ಭೂಮಿಯ ಅಂತರಾಳಕ್ಕೆ ಹೋದಂತೆಲ್ಲಾ ಉಷ್ಣಾಂಶ ಹೆಚ್ಚಾಗುತ್ತದೆ. ಭೂಕೇಂದ್ರ ಕಡೆಗೆ ಹೋದಂತೆ ಘನವಸ್ತುವೂ ಕರಗಿ ಮೇಣದ ರೂಪದಲ್ಲಿರುವುದು. ಜ್ವಾಲಾಮುಖಿಯ ಮೂಲಕ ಲಾವಾರಸ ಹೊರವಲಯಕ್ಕೆ ಸ್ರವಿಸುವುದರಿಂದ ಇದು ಖಚಿತವಾಗುತ್ತದೆ. ನಿಹಾರಿಕೆಯಿಂದಲೇ ಕಳಚಲ್ಪಟ್ಟ ವಸ್ತುಗಳಿಂದ ರೂಪಿತವಾಗಿರುವ ಎಲ್ಲಾ ಗ್ರಹಗಳು ಏಕ ರೂಪದ ಭೌತದ್ರವ್ಯಗಳಿಂದ ರಚನೆಯಾಗಿವೆ.

ಈ ಕೆಳಕಂಡ ನ್ಯೂನತೆಗಳಿಂದ ಲಾಪ್ಲೇಸನ ಜ್ಯೋತಿರ್ಮೇಘ ಸಿದ್ಧಾಂತ ಕೆಲವು ಟೀಕೆಗಳಿಗೆ ಒಳಗಾಗಿದೆ.

ಜ್ಯೋತಿರ್ಮೇಘ ಸಿದ್ಧಾಂತದಲ್ಲಿ ಕೌನಿಕ ವೇಗದ ಬಗ್ಗೆ ನಿಖರವಾಗಿ ಮಾಹಿತಿ ನೀಡಿಲ್ಲ. ಮೂಲ ನಿಹಾರಿಕೆಯ ಕೌನಿಕ ವೇಗ ಕಡಿಮೆಯಿತ್ತು. ಆದ್ದರಿಂದ ಬಳೆಗಳು ಕಳಚಿಕೊಳ್ಳಲಾರವು ಎಂಬುದು ಪ್ರಸ್ತುತ ಸೌರವ್ಯೂಹದಲ್ಲಿರುವ ಸದಸ್ಯ ಗ್ರಹಗಳ ದ್ರವ್ಯರಾಶಿ, ಅಂತರ ಮತ್ತು ಚಲನೆಯ ವೇಗದಿಂದ ಸ್ಪಷ್ಟವಾಗುತ್ತದೆ. ನಿಹಾರಿಕೆಯು ಒಂದು ವೇಳೆ ಪ್ರಸ್ತುತ ಬುಧಗ್ರಹದಷ್ಟು ಗಾತ್ರದಲ್ಲಿ ಚಿಕ್ಕದಾಗಿ ತಂಪಾಗಿ, ಸಂಕುಚನ ಹೊಂದಿದ್ದರೆ ಬಳೆಗಳು ಕಳಚಲ್ಪಡುತ್ತಿದ್ದವು ಎಂದು ಗಣಿತಾತ್ಮಕ ಲೆಕ್ಕಾಚಾರದಿಂದ ದೃಢಪಡಿಸಲಾಗಿದೆ. ಪ್ರಸ್ತುತ ಕೌನಿಕ ವೇಗವನ್ನು ವಿಮರ್ಶಿಸಿದಾಗ ಅದು ಸೂರ್ಯನಲ್ಲಿ ಶೇ.2 ಮತ್ತು ಸೌರವ್ಯೂಹದ ಸದಸ್ಯ ಗ್ರಹಗಳಲ್ಲಿ ಶೇ.98ರಷ್ಟು ಕಂಡುಬರುವುದು. ಈ ದಿಶೆಯಲ್ಲಿ ಲಾಪ್ಲೇಸನ ಸಿದ್ಧಾಂತ ವಿಫಲವಾದುದಾಗಿದೆ.

ಅನಿಲ ರೂಪದಲ್ಲಿದ್ದ ಮೂಲ ನಿಹಾರಿಕೆಯ ವಸ್ತುಗಳು ಬಿಡಿ ಬಿಡಿಯಾಗಿದ್ದು ಕೆಲವು ಮಾತ್ರ ಪರಸ್ಪರ ಅಂಟಿಕೊಂಡಿದ್ದವು. ಪರಿಣಾಮವಾಗಿ ಅವು ವಿಚ್ಛಿನ್ನವಾಗಿ ಜ್ಯೋತಿರ್ಮೇಘದಿಂದ ಕಳಚಿಕೊಳ್ಳುವುದಕ್ಕೆ ಬದಲಾಗಿ ಪ್ರಾಯಶಃ ಒಂದೇರಾಶಿಯಾಗಿ ಒಟ್ಟುಗೂಡಿದ ಅನಂತರ ಪ್ರತ್ಯೇಕಗೊಂಡಿರಬಹುದು. ತಂಪಾದ ಹಾಗೂ ಸಂಕುಚಿತಗೊಂಡ ಮೂಲ ನಿಹಾರಿಕೆ ಪ್ರಸಕ್ತ ಸೌರವ್ಯೂಹದ ಬದಲಾಗಿ ಎರಡು ನಕ್ಷತ್ರಗಳಾಗಿ ಪರಿಣಮಿಸಬಹುದು.

ಈ ಸಿದ್ಧಾಂತದಲ್ಲಿ ನಿಹಾರಿಕೆಯಿಂದ ಪ್ರತ್ಯೇಕಗೊಂಡ ಬಳೆಗಳು ಹೇಗೆ ಪ್ರಸಕ್ತ ಗ್ರಹಗಳಂತೆ ಗೋಳಾಕಾರವಾಗಿ ಸಾಂದ್ರೀಕರಣಗೊಂಡವು ಎಂಬುದರ ಬಗ್ಗೆ ತಿಳಿಸಿಲ್ಲ.

ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳ ಸುತ್ತ ಸುತ್ತುವ ಉಪಗ್ರಹಗಳು ಸೌರವ್ಯೂಹದ ಇತರ ಸದಸ್ಯ ಗ್ರಹಗಳ ಸುತ್ತು ಸುತ್ತುವ ಉಪಗ್ರಹಗಳ ದಿಕ್ಕಿಗೆ ವಿರುದ್ಧವಾಗಿ ಸುತ್ತುತ್ತವೆ. ಇದಕ್ಕೆ ಕಾರಣಗಳನ್ನು ಈ ಸಿದ್ಧಾಂತದಲ್ಲಿ ತಿಳಿಸಿಲ್ಲ.

ಲಾಪ್ಲೇಸನು ನಿಹಾರಿಕೆಯಿಂದ ಒಂದೇ ಬಳೆ ಕಳಚಿಕೊಂಡಿತೆಂದು ತಿಳಿಸಿರುವನು. ಆದರೆ ರೋಷ್ ಎಂಬುವನು, ತಂಪಾಗುವಿಕೆ, ಘನೀಕರಣ, ಪ್ರಕ್ರಿಯೆಗಳು ಅವಿರತವಾಗಿರುವಾಗ ಅನೇಕ ಬಳೆಗಳು ಕಳಚಲ್ಪಡುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾನೆ.

ಸೌರವ್ಯೂಹದ ಗ್ರಹಗಳು ಭ್ರಮಿಸುವಂತೆ ಸೂರ್ಯನೂ ತನ್ನ ಅಕ್ಷದಲ್ಲಿ ಸುತ್ತಬೇಕು. ಆದರೆ ಚಲನೆಯ ವೇಗ ಗ್ರಹಗಳಿಗಿಂತ ಸೂರ್ಯನ ವೇಗ ಮಂದಗತಿಯಲ್ಲಿದೆ. ಆದರೆ ಈ ಸಿದ್ಧಾಂತದ ಪ್ರಕಾರ ಅದು ತೀವ್ರವಾಗಿರಬೇಕಾಗಿದ್ದಿತು.

ಲಾಪ್ಲೇಸನು ಪ್ರಾಯಶಃ ಶನಿಗ್ರಹದ ಸುತ್ತಲಿನ ಬಳೆಯಾಕಾರದ ವಸ್ತುಗಳಿಂದ ಪ್ರೇರಣೆ ಹೊಂದಿ ಈ ಸಿದ್ಧಾಂತವನ್ನು ಪ್ರತಿಪಾದಿಸಿರಬಹುದು. ಆದರೆ ಅದು ಆ ಗ್ರಹದ ವಸ್ತುಗಳಿಂದ ಉಂಟಾದುದಲ್ಲವೆಂದೂ ಬದಲಾಗಿ ಅವು ಅಂತರಿಕ್ಷದಲ್ಲಿರುವ ಅನಿಲಗಳು ಆಕರ್ಷಣೆ ಹೊಂದಿ ಬಳೆಗಳಂತೆ ಕ್ರೋಢೀಕರಣವಾಗಿವೆಯೆಂದು ವೈಜ್ಞಾನಿಕ ಸಂಶೋಧನೆಗಳಿಂದ ತಿಳಿದುಬರುತ್ತದೆ.

ಗ್ರಹಕಣ ಸಿದ್ಧಾಂತ: ಈ ಸಿದ್ಧಾಂತವನ್ನು ಅಮೆರಿಕದ ಶಿಕಾಗೊ ವಿಶ್ವವಿದ್ಯಾನಿಲಯದ ಭೂಗರ್ಭವಿಜ್ಞಾನಿಯಾದ ಟಿ.ಸಿ. ಚೇಂಬರ್ಲಿನ್ ಮತ್ತು ಖಗೋಳ ವಿಜ್ಞಾನಿಯಾದ ಫಾರೆಸ್ಟ್ ರಾಯ್ ಮೌಲ್ಟನ್ ಎಂಬುವವರು 1909ರಲ್ಲಿ ಮಂಡಿಸಿದರು. ಈ ಸಿದ್ಧಾಂತ ಭೂಮಿಯ ಉಗಮವನ್ನು ಮಾತ್ರವಲ್ಲದೇ, ಭೂಮಿಯ ರಚನೆ, ವಾಯುಮಂಡಲ, ಖಂಡಗಳು ಹಾಗೂ ಸಾಗರ ತಳಗಳ ಉಗಮವನ್ನೂ ಕುರಿತು ವಿವರಣೆ ನೀಡುವುದು. ಈ ಸಿದ್ಧಾಂತದ ಪ್ರಕಾರ ಬ್ರಹ್ಮಾಂಡ ಪ್ರಾರಂಭದಲ್ಲಿ ಸೂರ್ಯ ಹಾಗೂ ಮತ್ತೊಂದು ಆಕಾಶ ಕಾಯಗಳಿಂದ ಕೂಡಿತ್ತು. ಮೂಲ ಸೂರ್ಯನ ಸ್ವಭಾವ ಮತ್ತು ಗುಣಲಕ್ಷಣಗಳು ಇತರ ನಕ್ಷತ್ರಗಳ ರೀತಿಯಂತಿರಲಿಲ್ಲ. ಇದು ಅತಿಸೂಕ್ಷ್ಮ ಕಣಗಳಿಂದ ರಚಿತವಾಗಿತ್ತು. ಈ ಸಂದರ್ಭದಲ್ಲಿ ಮತ್ತೊಂದು ಆಕ್ರಮಣ ನಕ್ಷತ್ರ ಸೂರ್ಯನ ಸಮೀಪಕ್ಕೆ ಬಂದಾಗ ಸೂರ್ಯನಿಂದ ಎರಚಲ್ಪಡುತ್ತಿದ್ದ ಅಪಾರವಾದ ಸೂಕ್ಷ್ಮ ಕಣಗಳು ಆಕ್ರಮಣ ನಕ್ಷತ್ರದಿಂದ ಆಕರ್ಷಿಸಲ್ಪಟ್ಟು ಅವು ಪ್ರತ್ಯೇಕಗೊಳ್ಳುವವು. ಹೀಗೆ ಪ್ರತ್ಯೇಕಗೊಂಡ ಸಣ್ಣ ಸಣ್ಣ ಕಣಗಳನ್ನು ಚೇಂಬರ್ಲಿನ್‌ನು ಗ್ರಹಕಣ, ಪ್ಲಾನೆಟಸಿಮಲ್‌ಗಳೆಂದು ಕರೆದಿರುವನು. ಪ್ರತ್ಯೇಕಗೊಂಡ ಗ್ರಹಕಣಗಳು ಪ್ರಾರಂಭದಲ್ಲಿ ದೂಳಿನ ಕಣಗಳಂತಿದ್ದವು. ಅವು ಗಾತ್ರದಲ್ಲಿ ಸಮರೂಪದಲ್ಲಿರಲಿಲ್ಲ. ಕ್ರಮೇಣ ದೊಡ್ಡ ಕಣಗಳು ಚಿಕ್ಕ ಕಣಗಳನ್ನು ಆಕರ್ಷಿಸಿದವು. ಇದರಿಂದಾಗಿ ಅಸಂಖ್ಯಾತ ಸೂಕ್ಷ್ಮಕಣಗಳು ಒಟ್ಟುಗೂಡಿ ಗಾತ್ರದಲ್ಲಿ ದೊಡ್ಡದಾಗುತ್ತಾ ಬೆಳೆಯತೊಡಗಿದವು. ಹೀಗೆ ಅಪಾರವಾದ ಕಣಗಳು ನಿರಂತರವಾಗಿ ಒಟ್ಟುಗೂಡುವ ಮೂಲಕ ಗ್ರಹಗಳು ರಚನೆಗೊಂಡವು. ಮೂಲ ಸೂರ್ಯನ ಉಳಿದ ಭಾಗ ಸೂರ್ಯನಾಗಿ ಪರಿಣಮಿಸಿತು. ಮೇಲೆ ವಿವರಿಸಿದ ಪ್ರಕ್ರಿಯೆ ಮತ್ತು ಯಾಂತ್ರಿಕತೆಯ ಮುಂದುವರಿಕೆಯ ಪರಿಣಾಮವಾಗಿ ಉಪಗ್ರಹಗಳು ನಿರ್ಮಾಣಗೊಂಡವು ಎಂಬುದು ಸಿದ್ಧಾಂತದ ಅಭಿಪ್ರಾಯವಾಗಿದೆ.

ಚೇಂಬರ್ಲಿನ್ ಮತ್ತು ಮೌಲ್ಟನ್‌ರವರು ವಾಯುಮಂಡಲ ರಚನೆ, ಜ್ವಾಲಾಮುಖಿ ಕಾರ್ಯಾಚರಣೆ ಹಾಗೂ ಸಾಗರಗಳ ನಿರ್ಮಾಣವೆಂಬ ಮೂರು ಹಂತಗಳನ್ನು ವಿವರಿಸುವ ಮೂಲಕ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿರುವರು. ಈ ಸಿದ್ಧಾಂತ ಕೆಲವು ಟೀಕೆಗಳಿಗೆ ಒಳಗಾಗಿದೆ. ಈ ಸಿದ್ಧಾಂತದ ಪ್ರಕಾರ ಅಪಾರವಾದ ಗ್ರಹಕಣಗಳು ಒಟ್ಟುಗೂಡಿ ದೊಡ್ಡ ಗ್ರಹವಾಗಿ ಪರಿಣಮಿಸುವುದು ಆಧಾರ ರಹಿತವಾದುದದೆಂದು ಜೆಫ್ರೀ ಎಂಬ ವಿದ್ವಾಂಸರು ಸಂದೇಹ ವ್ಯಕ್ತಪಡಿಸಿರುವರು.

ಮೂಲ ನಕ್ಷತ್ರದಿಂದ ಹೊರಹೊಮ್ಮಿದ ಕಣಗಳ ಘರ್ಷಣೆ ಮತ್ತು ಆಕರ್ಷಣೆಯಿಂದ ಅನಿಲ ರೂಪತಾಳಬೇಕೆ ವಿನಃ ದೊಡ್ಡ ಗ್ರಹಗಳಾಗಿ ಪರಿಣಮಿಸುವುದು ಅಸಂಭವ. ಈ ಸಿದ್ಧಾಂತ ವಾಯುಮಂಡಲದ ರಚನೆಯ ಬಗ್ಗೆ ಸಮರ್ಪಕವಾಗಿ ವಿವರಿಸಿಲ್ಲ. ಪ್ರಸ್ತುತ ಸೌರಮಂಡಲದಲ್ಲಿ ಗ್ರಹಗಳು ಹೆಚ್ಚು ಕಡಿಮೆ ವೃತ್ತಾಕಾರದ ಪಥದಲ್ಲಿ ಸೂರ್ಯನ ಸುತ್ತ ಪ್ರದಕ್ಷಿಣೆ ಹಾಕುವವು. ಈ ಸಿದ್ಧಾಂತದ ಪ್ರಕಾರ ಗ್ರಹಕಣಗಳು ಒಟ್ಟುಗೂಡಿ ಗ್ರಹಗಳು ರಚನೆಯಾಗಿದ್ದ ಪಕ್ಷದಲ್ಲಿ ಗ್ರಹಗಳ ಪಥ ವೃತ್ತಾಕಾರದಲ್ಲಿರಲು ಸಾಧ್ಯವಿಲ್ಲ. ಈ ಸಿದ್ಧಾಂತದಲ್ಲಿ ಗ್ರಹಗಳ ಕೌನಿಕ ವೇಗದ ಬಗ್ಗೆ ಯಾವುದೇ ವಿವರಣೆಯನ್ನು ನೀಡಿಲ್ಲ. ಗ್ರಹಗಳು ಮತ್ತು ಉಪಗ್ರಹಗಳ ವ್ಯವಸ್ಥೆಯ ಬಗ್ಗೆ ಏನನ್ನೂ ನಿಕರವಾಗಿ ತಿಳಿಸಿಲ್ಲ.

ಉಬ್ಬರವಿಳಿತ ಸಿದ್ಧಾಂತ: ಈ ಸಿದ್ಧಾಂತವನ್ನು ಬ್ರಿಟಿಷ್ ವಿಜ್ಞಾನಿಗಳಾದ ಸರ್ ಜೇಮ್ಸ್ ಜೀನ್ಸ್ ಮತ್ತು ಹೆರಾಲ್ಡ್ ಜೆಫ್ರೀಸ್‌ರವರು ಅನುಕ್ರಮವಾಗಿ 1919 ಮತ್ತು 1926ರಲ್ಲಿ ಪ್ರತಿಪಾದಿಸಿರುವರು. ಈ ಸಿದ್ಧಾಂತ ಲಾಪ್ಲೇಸನ ಜ್ಯೋತಿರ್ಮೇಘ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಸ್ವಲ್ಪಮಟ್ಟಿಗೆ ಗ್ರಹಕಣ ಸಿದ್ಧಾಂತಕ್ಕೆ ಹೋಲಿಕೆಯಾದರೂ ಅದರಿಂದಲೂ ಇದು ಭಿನ್ನವಾಗಿದೆ.

ಸರ್ ಜೇಮ್ಸ್‌ಜೀನ್ಸ್‌ನ ಪ್ರಕಾರ ಸೂರ್ಯ ಪ್ರಾರಂಭದಲ್ಲಿ ವಿಸ್ತೃತ ಅನಿಲಗೋಳದಿಂದ ಕೂಡಿತ್ತು. ಗಾತ್ರ ಮತ್ತು ದ್ರವ್ಯರಾಶಿಗಳೆರಡರಲ್ಲೂ ಸೂರ್ಯನಿಗಿಂತಲೂ ಬಹು ದೊಡ್ಡದಾದ ಬೇರೆ ನಕ್ಷತ್ರವೊಂದು ಆಕಸ್ಮಿಕವಾಗಿ ಸೂರ್ಯನ ಸಮೀಪದಲ್ಲಿ ಸಂಚರಿಸಿತು. ನಕ್ಷತ್ರದ ಆಕರ್ಷಣಾ ಶಕ್ತಿಗೊಳಪಟ್ಟು ಸೂರ್ಯನ ಮೇಲ್ಮೈಯ ಸೌರದ್ರವ್ಯದಲ್ಲಿ ಉಬ್ಬರಗಳು ಉಂಟಾದವು. ಅನಂತರ ಅವು ಸೂರ್ಯನಿಂದ ಕಳಚಿಕೊಂಡು ಪರ ನಕ್ಷತ್ರದೆಡೆಗೆ ಆಕರ್ಷಿಸಲ್ಪಟ್ಟವು. ನಕ್ಷತ್ರ ಸೂರ್ಯನಿಂದ ದೂರ ಸರಿದಾಗ ಕಳಚಿಕೊಂಡಿದ್ದ ಉಬ್ಬರಗಳು ಸೂರ್ಯನ ಗುರುತ್ವಾಕರ್ಷಣೆಗೆ ಒಳಪಟ್ಟು ಅದರ ಸುತ್ತಲೂ ಸುತ್ತಲು ಪ್ರಾರಂಭಿಸಿದವು.

ಹೆರಾಲ್ಡ್ ಜೆಫ್ರೀ ಜೀನ್ಸನ ಸಿದ್ಧಾಂತವನ್ನು ಪುನರ್ವಿಮರ್ಶಿಸಿದನು. ಈತನು ಸೂರ್ಯ ಹಾಗೂ ಅದಕ್ಕೆ ಸಮೀಪದಲ್ಲಿ ಬಂದ ಬೇರೊಂದು ದೊಡ್ಡ ನಕ್ಷತ್ರ, ಇವು ಪರಸ್ಪರ ತಾಕಲಾಡಿ ಸೂರ್ಯ ನಕ್ಷತ್ರಗಳ ಕೆಲವು ಭಾಗಗಳು ಪ್ರತ್ಯೇಕಿಸಲ್ಪಟ್ಟು ಗ್ರಹಗಳಾಗಿ ಪರಿಣಮಿಸಿದವು ಎಂದು ಅಭಿಪ್ರಾಯ ಪಡುವುದರ ಮೂಲಕ ತನ್ನ ಸಂಘರ್ಷಣ ಸಿದ್ಧಾಂತವನ್ನು ಪ್ರತಿಪಾದಿಸಿದನು.

ಪ್ರಸ್ತುತ ಸೌರವ್ಯೂಹದಲ್ಲಿ ಗ್ರಹಗಳ ವ್ಯವಸ್ಥೆ ಚುಟ್ಟದ ಆಕಾರವಾಗಿದೆ. ಮಧ್ಯದಲ್ಲಿ ಗ್ರಹಗಳು ದೊಡ್ಡದಾಗಿಯೂ ಎರಡೂ ತುದಿಗಳ ಕಡೆಗೆ ಹೋದಂತೆ ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ಉಬ್ಬರಗಳಿಂದ ಗ್ರಹಗಳು ಉತ್ಪತ್ತಿಯಾದುದರಿಂದ ಈ ರೀತಿಯಲ್ಲಿ ವ್ಯವಸ್ಥೆಗೊಂಡಿದ್ದು, ಈ ಸಿದ್ಧಾಂತವನ್ನು ಬೆಂಬಲಿಸುತ್ತವೆ.

ತನ್ನ ಮಾರ್ಗದಲ್ಲಿ ಹಾಯ್ದು ಹೋಗುವಾಗ ಬೇರೆ ದೊಡ್ಡ ನಕ್ಷತ್ರವೊಂದು ಸೂರ್ಯನಿಗೆ ಅತಿ ಸಮೀಪದಲ್ಲಿ ಬಂದಾಗ ಅದರ ಆಕರ್ಷಣೆಗೊಳಪಟ್ಟು ಮಧ್ಯಭಾಗ ಎರಡು ತುದಿಗಳಿಗಿಂತ ಹೆಚ್ಚು ಉಬ್ಬಿದುದರ ಪರಿಣಾಮವಾಗಿ ಎರಡೂ ಕೊನೆಗಳಿಗಿಂತ ಮಧ್ಯದಲ್ಲಿ ಗ್ರಹಗಳ ಗಾತ್ರ ಹೆಚ್ಚಾಗಿದೆ ಎಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿರುವರು.

ಗ್ರಹಗಳ ಗಾತ್ರಕ್ಕನುಗುಣವಾಗಿ ಉಪಗ್ರಹಗಳೂ ಚುಟ್ಟದಾಕಾರವಾಗಿ ವ್ಯವಸ್ಥೆಗೊಂಡಿವೆ. ಸೌರವ್ಯೂಹದ ಮಧ್ಯದಲ್ಲಿರುವ ಹೆಚ್ಚು ಗಾತ್ರದ ಗ್ರಹಗಳು ಹೆಚ್ಚು ಸಂಖ್ಯೆಯ ಉಪಗ್ರಹಗಳನ್ನು ಹೊಂದಿವೆ. ಉದಾ: ಗುರು–16, ಶನಿ–21 ಇತ್ಯಾದಿ. ಆದರೆ ಎರಡು ತುದಿಗೆ ಹೋದಂತೆ ಉಪಗ್ರಹಗಳ ಸಂಖ್ಯೆ ಕಡಿಮೆ ಹಾಗೂ ಕೆಲವು ಗ್ರಹಗಳಿಗೆ ಉಪಗ್ರಹಗಳೇ ಇರುವುದಿಲ್ಲ. ಉದಾ: ಬುಧ ಮತ್ತು ಶುಕ್ರ.

ಚಿಕ್ಕ ಗಾತ್ರದ ಗ್ರಹಗಳು ಬೇಗ ತಂಪಾಗಿ ಘನೀಕರಣಗೊಂಡುದುದರಿಂದ ಉಪಗ್ರಹಗಳಾಗಲು ಸಾಧ್ಯವಾಗಲಿಲ್ಲ. ಬದಲಾಗಿ ದೊಡ್ಡ ಗಾತ್ರದ ಗ್ರಹಗಳು ತಂಪಾಗಿ, ಘನೀಕರಣ ಹೊಂದಲು ಹೆಚ್ಚು ಕಾಲವನ್ನು ತೆಗೆದುಕೊಂಡುದುದರಿಂದ ಹೆಚ್ಚು ಉಪಗ್ರಹಗಳು ಉಂಟಾಗಲು ಅವಕಾಶವಾಗಿರುವುದೆಂದು ಈ ಸಿದ್ಧಾಂತ ತಿಳಿಸುತ್ತದೆ. ಈ ಸಿದ್ಧಾಂತ ಕೂಡ ಟೀಕೆಗಳಿಂದ ಹೊರತಾಗಿಲ್ಲ.

ಲೆವಿನ್ ಎಂಬುವನು ಅಭಿಪ್ರಾಯಪಟ್ಟಿರುವಂತೆ ನಕ್ಷತ್ರಗಳ ನಡುವಣ ಅಂತರ ಅಪರಿಮಿತವಾದುದು. ಆದ್ದರಿಂದ ಎರಡು ನಕ್ಷತ್ರಗಳ ಸಮಾಗಮ ಅಥವಾ ಸಮೀಪಿಸುವುದು ಬಹಳ ಅಪರೂಪದ ಸಂಗತಿ. ಹೀಗಿರುವಾಗ ಉಬ್ಬರವಿಳಿತಗಳಾಗುವುದು ಅಸಂಭವವಾಗಿದೆ.

ಈ ಸಿದ್ಧಾಂತದ ಕೌನಿಕ ವೇಗ ಚಲನೆ ಪ್ರಶ್ನಾರ್ಥಕವಾದುದು. ಗ್ರಹಗಳು ಪರಸ್ಪರ ಬಹುದೂರದಲ್ಲಿವೆ. ಹಾಗೂ ಕೆಲವು ಹೊರವಲಯದ ಗ್ರಹಗಳು ಸೂರ್ಯನಿಂದ ಬಹುದೂರದಲ್ಲಿರುವುದರಿಂದ ಈ ಸಿದ್ಧಾಂತವನ್ನು ಈ ವ್ಯವಸ್ಥೆ ಸಮರ್ಥಿಸುವುದಿಲ್ಲ.

ಅತ್ಯುಷ್ಣತೆ ಗ್ರಹಗಳಾಗಿ ರಚನೆಯಾಗಲು ಪೂರಕವಾಗಿರುವುದಿಲ್ಲ. ಅತಿ ಶಾಖವುಳ್ಳ ಸೂರ್ಯನ ಅಂತರಾಳದಿಂದ ಪ್ರಾಯಶಃ ಉಬ್ಬರಗಳಾಗಿ ಕಳಚಲ್ಪಟ್ಟಿದ್ದರೆ ಅವು ಅತಿ ಶಾಖದಿಂದ ಸಾಂದ್ರೀಕರಣಗೊಳ್ಳುವುದಕ್ಕೆ ಬದಲಾಗಿ ಚೂರು ಚೂರುಗಳಾಗಿ ಸೂರ್ಯನ ಸುತ್ತ ಹಂಚಿಕೆಯಾಗಬೇಕಾಗಿತ್ತು.

ಪ್ರಸ್ತುತ ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಗ್ರಹಗಳ ದ್ರವ್ಯರಾಶಿಗೂ ಸೂರ್ಯನಿಂದ ನಕ್ಷತ್ರ ಆಕರ್ಷಿಸಲ್ಪಟ್ಟು ದ್ರವ್ಯರಾಶಿಗೂ ಹೋಲಿಕೆಯಿಲ್ಲ ಹಾಗೂ ಅದು ನಂಬಲರ್ಹವಾಗಿಲ್ಲ.

ದ್ವಿನಕ್ಷತ್ರ ಸಿದ್ಧಾಂತ: ಈ ಸಿದ್ಧಾಂತ ಎಚ್.ಎನ್. ರಸೆಲ್ ಮತ್ತು ಆರ್.ಎ. ಲಿಟ್ಲಟನ್ ಎಂಬುವರಿಂದ 1936ರಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಇದರ ಪ್ರಕಾರ ಸೂರ್ಯನು ಹಿಂದೊಂದು ಕಾಲದಲ್ಲಿ ದ್ವಂದ್ವ ನಕ್ಷತ್ರಗಳ ಅಂಗವಾಗಿದ್ದಿರಬೇಕು. ಸೂರ್ಯನಿಗೆ ಸಂಗಾತಿ ನಕ್ಷತ್ರವೊಂದಿತ್ತು. ಅದನ್ನು ಯುಗ್ಮ ತಾರೆ ಎಂದಿರುವರು. ಸೂರ್ಯ ಸಂಗಾತಿ ನಕ್ಷತ್ರದ ಸಮೀಪಕ್ಕೆ ಆಕಸ್ಮಿಕವಾಗಿ ಬೇರೊಂದು ಆಗುಂತಕ ನಕ್ಷತ್ರ ಬಂದಿರಬೇಕು. ಈ ನಕ್ಷತ್ರದ ಆಕರ್ಷಣೆಗೆ ಒಳಪಟ್ಟು ಸಂಗಾತಿ ನಕ್ಷತ್ರದ ಮೇಲ್ಮೈಯಲ್ಲಿ ಉಬ್ಬರ ಉಂಟಾಗಿರಬೇಕು. ಸೂರ್ಯ ಇನ್ನೂ ಬಹುದೂರದಲ್ಲಿದ್ದುದರಿಂದ ಬೇರೆ ನಕ್ಷತ್ರದ ಆಕರ್ಷಣೆಗೆ ಒಳಗಾಗದಿರಬಹುದು. ಅನಂತರ ಉಬ್ಬರ ಸಂಗಾತಿ ನಕ್ಷತ್ರದಿಂದ ಕಳಚಲ್ಪಟ್ಟು ಅದರ ಸುತ್ತ ಸುತ್ತಲು ಪ್ರಾರಂಭಿಸಿ ಗ್ರಹಗಳಾಗಿರಬೇಕು. ಆ ಎರಡು ನಕ್ಷತ್ರಗಳೂ ದೂರ ಸರಿದ ಮೇಲೆ ಗ್ರಹಗಳು ಸೂರ್ಯನ ಆಕರ್ಷಣೆಗೆ ಒಳಪಟ್ಟು ಸೂರ್ಯನ ಸುತ್ತ ಸುತ್ತಲು ಪ್ರಾರಂಭಿಸಿದವು. ಸಂಗಾತಿ ನಕ್ಷತ್ರದಿಂದ ಕಳಚಿಕೊಂಡಾಗ ಉಬ್ಬರಗಳು ದ್ರವರೂಪದಲ್ಲಿದ್ದವೆಂದೂ ಅನಂತರ ಅವು ಸಾಂದ್ರೀಕರಣವಾದವೆಂದು ಹೇಳಲಾಗಿದೆ.

ಈ ಸಿದ್ಧಾಂತವನ್ನು ಸಮರ್ಥಿಸುವ ಕೆಲವು ಅಂಶಗಳು ಈ ಕೆಳಕಂಡಂತಿವೆ:

ನಕ್ಷತ್ರಪುಂಜದಲ್ಲಿ ದ್ವಿನಕ್ಷತ್ರಗಳಿರುವುದು ಸರ್ವೇಸಾಮಾನ್ಯ. ಬ್ರಹ್ಮಾಂಡದ ನಕ್ಷತ್ರಗಳಲ್ಲಿ ಸಾಕಷ್ಟು ಯುಗ್ಮ ತಾರೆಗಳಿವೆ (ದ್ವಿ ನಕ್ಷತ್ರ).

ಈ ಸಿದ್ಧಾಂತ ಗ್ರಹಗಳ ನಡುವಿನ ಅಪರಿಮಿತ ಅಂತರವನ್ನು ವಿವರಿಸುತ್ತದೆ.

ಈ ಸಿದ್ಧಾಂತದಲ್ಲಿ ಸಂಗಾತಿ ನಕ್ಷತ್ರಕ್ಕೆ ಹೆಚ್ಚಿನ ಕೌನಿಕ ವೇಗವುಳ್ಳ ಚಲನೆ ಇತ್ತೆಂದು ಆದ್ದರಿಂದ ಪ್ರಸ್ತುತ ಗ್ರಹಗಳಿಗೂ ಸಾಕಷ್ಟು ಕೌನಿಕ ವೇಗವಿರುವುದೆಂದು ವಿವರಿಸಲಾಗಿದೆ.

ಈ ಸಿದ್ಧಾಂತದ ಪ್ರಮುಖ ಸಮಸ್ಯೆಗಳಿವು: ಸೂರ್ಯನ ಸಂಗಾತಿ ಸೂರ್ಯನ ಗುರುತ್ವಾಕರ್ಷಣ ಶಕ್ತಿಯಿಂದ ಹೇಗೆ ದೂರ ಸರಿಯಲ್ಪಟ್ಟಿತು? ಹೇಗೆ ದ್ರವ್ಯರಾಶಿಗಳು ಹೊರಹೊಮ್ಮಿ ಉಬ್ಬರಗಳಾದವು ಮತ್ತು ಅವು ಸೂರ್ಯನ ಆಕರ್ಷಣೆಗೆ ಹೇಗೆ ಒಳಪಟ್ಟವು? ಇದಕ್ಕಾಗಿ ಲಿಟ್ಲಟನ್‌ನು 1938ರಲ್ಲಿ ತನ್ನ ಕಲ್ಪನೆಯನ್ನು ಈ ರೀತಿ ವ್ಯಕ್ತಪಡಿಸಿರುವನು. ಸಂಗಾತಿ ನಕ್ಷತ್ರದ ಪಥ 2700 ಮಿಲಿಯನ್ ಕಿಮೀ ಗಳಾಗಿರಬಹುದು. ಅದರ ಗಾತ್ರ ಸಹ ಸೂರ್ಯನ ಗಾತ್ರದಷ್ಟೆ ಇರಬಹುದು. ಅದು ಸೂರ್ಯನ ಸುತ್ತಲೂ ಸು.50 ವರ್ಷಗಳಿಗೊಮ್ಮೆ ಪ್ರದಕ್ಷಿಣೆ ಹಾಕುತ್ತಿತ್ತು. ಅದರ ಚಲನೆಯ ವೇಗ ಪ್ರತಿ ಸೆಕೆಂಡಿಗೆ 10ಕಿಮೀ ಗಳಾಗಿರಬಹುದು. ಇದರ ಸಮೀಪಕ್ಕೆ ಬಂದ ಬೇರೊಂದು ನಕ್ಷತ್ರ ಸಹ ಪ್ರತಿ ಸೆಕೆಂಡಿಗೆ 32 ಕಿಮೀ ವೇಗದಲ್ಲಿ ಚಲಿಸುತ್ತಿರಬಹುದೆಂದು ಊಹಿಸಿರುವನು. ಅದು ಸಂಗಾತಿ ನಕ್ಷತ್ರದೆಡೆಗೆ ಬಂದಾಗ ನಡುವೆ 5–6 ಕಿಮೀ ಅಂತರವಿದ್ದಿರಬಹುದು. ಆದರೆ ಬಹುದೂರದಲ್ಲಿದ್ದ ಸೂರ್ಯನ ಮೇಲ್ಮೈ ಈ ನಕ್ಷತ್ರದ ಆಕರ್ಷಣೆಗೆ ಒಳಪಡದಿರಬಹುದೆಂದು ಅಭಿಪ್ರಾಯಪಟ್ಟನು.

ಆದಾಗ್ಯೂ ಸೂರ್ಯನ ಸಂಗಾತಿ ಆಕರ್ಷಣೆಯಿಂದ ಸಮೀಪಕ್ಕೆ ಬಂದ ನಕ್ಷತ್ರದ ಮೇಲ್ಮೈಯಲ್ಲಿ ಏಕೆ ಉಬ್ಬರಗಳಾಗಲಿಲ್ಲವೆಂಬುದು ಮುಖ್ಯ ಪ್ರಶ್ನೆಯಾಗಿದೆ. ಪರಸ್ಪರ ಹತ್ತಿರವಿದ್ದ ದ್ರವ್ಯರಾಶಿ ವಲಯದಲ್ಲಿ ಗ್ರಹಗಳು ಉಗಮವಾದವು ಹಾಗೂ ಸೂರ್ಯನಿಂದ ಬಹುದೂರದಲ್ಲಿದ್ದವು. ಆದರೆ ಪ್ರಸ್ತುತ ಗ್ರಹಗಳ ನಡುವಣ ಅಂತರಕ್ಕೆ ಕಾರಣವೇನು? ಇದೊಂದು ದ್ವಿನಕ್ಷತ್ರ ಸಿದ್ಧಾಂತದ ಮುಖ್ಯ ನ್ಯೂನತೆಯಾಗಿದ್ದು ನೈಜತೆಯಲ್ಲಿ ಇತರೆ ಸಿದ್ಧಾಂತಗಳಿಗಿಂತಲೂ ಕಡೆಗಣಿಸಲ್ಪಟ್ಟಿದೆ.

ನಕ್ಷತ್ರ ವಿಭಜಿತ ಸಿದ್ಧಾಂತ: ಈ ಸಿದ್ಧಾಂತವನ್ನು ರಾಸ್‌ಗನ್ ಎಂಬುವವನು ಪ್ರತಿಪಾದಿಸಿದ. ಈತನೂ ದ್ವಿನಕ್ಷತ್ರ ವ್ಯವಸ್ಥೆಯನ್ನೇ ಅನುಸರಿಸಿ ತನ್ನ ಅಭಿಪ್ರಾಯವನ್ನು ಮಂಡಿಸಿರುವನು. ಇವನ ಪ್ರಕಾರ ಸೂರ್ಯನ ಸಂಗಾತಿ ನಕ್ಷತ್ರವೊಂದು ತನ್ನ ಮೈಸುತ್ತ ಸುತ್ತುವಾಗ ಕ್ರಮೇಣ ಸಂಕೋಚನದಿಂದಾಗಿ ಅದರ ಭ್ರಮಣ ವೇಗವೂ ತೀವ್ರಗೊಂಡಂತೆಲ್ಲಾ ನಕ್ಷತ್ರದ ಸಮತೋಲನ ತಪ್ಪಿ ಅದು ಸ್ಫೋಟನೆಗೊಳ್ಳುವ ಸ್ಥಿತಿಗೆ ಬರುವುದು. ಆ ಸಂದರ್ಭದಲ್ಲಿ ಮತ್ತೊಂದು ಬೇರೆ ನಕ್ಷತ್ರವೊಂದು ಸಂಗಾತಿ ನಕ್ಷತ್ರದ ಕಡೆಗೆ ಸಮೀಪಿಸುವುದು. ಇದರಿಂದ ಉಂಟಾದಂತಹ ಉಬ್ಬರಗಳಿಂದ ಎರಡೂ ನಕ್ಷತ್ರಗಳು ವಿಕಾಸಗೊಂಡವು. ಕಾಲಾನಂತರ ಇವುಗಳೆರಡೂ ಉಬ್ಬರಭಾಗವನ್ನು ಬಿಟ್ಟು ದೂರ ಸರಿಯುತ್ತವೆ. ಉಬ್ಬರ ಭಾಗವೂ ಕ್ರಮೇಣ ಸಾಂದ್ರೀಕರಣ ಹೊಂದಿ ವಿವಿಧ ಪಥದಲ್ಲಿ ಸೂರ್ಯನ ಸುತ್ತ ಪರಿಭ್ರಮಿಸಲು ಪ್ರಾರಂಭಿಸುವವು. ಅವೇ ಗ್ರಹಗಳಾಗಿ ಪರಿಣಮಿಸಿದವು.

ಈ ಸಿದ್ಧಾಂತ ದ್ವಿನಕ್ಷತ್ರ ಸಿದ್ಧಾಂತಕ್ಕಿಂತ ಸುಧಾರಿಸಲ್ಪಟ್ಟಿದೆ. ಆದರೂ ನಕ್ಷತ್ರಗಳು ಪರಸ್ಪರ ಬಹುದೂರದಲ್ಲಿ ಹಂಚಿಕೆಯಾಗದಿರುವಾಗ ಹೇಗೆ ಬೇರೊಂದು ಸಮೀಪಕ್ಕೆ ಬಂದಿತ್ತೆಂಬುದನ್ನು ಈ ಸಿದ್ಧಾಂತದಲ್ಲಿ ತಿಳಿಸಿಲ್ಲ.

ಸೀಪೀಡ್ ಸಿದ್ಧಾಂತ: ಈ ಸಿದ್ಧಾಂತವನ್ನು ಎ.ಸಿ. ಬ್ಯಾನರ್ಜಿಯವರು 1942ರಲ್ಲಿ ಪ್ರತಿಪಾದಿಸಿದರು. ಒಂದು ಪರಿಮಿತಿ ಪ್ರದೇಶದ ನಕ್ಷತ್ರಪುಂಜದಲ್ಲೊಂದು ಸಿಪೀಡ್ ನಕ್ಷತ್ರವಿತ್ತು. ಅದು ನಿರಂತರವಾಗಿ ತನ್ನ ಪ್ರಕಾಶವನ್ನು ಬದಲಾಯಿಸುತ್ತಿತ್ತು. ಈ ಬದಲಾವಣೆಗೆ ನಕ್ಷತ್ರದ ಅವಿರತ ಸಂಕೋಚನ ಮತ್ತು ಪ್ರಸರಣಗಳು ಕಾರಣವಾಗಿರಬಹುದು. ಪರಿಣಾಮವಾಗಿ ನಕ್ಷತ್ರ ತನ್ನ ಸಮತೋಲನವನ್ನು ಕಳೆದುಕೊಂಡು ಹೊಯ್ದಾಡಲು ಪ್ರಾರಂಭಿಸಿತು. ಆ ಸಂದರ್ಭದಲ್ಲಿ ಬೇರೊಂದು ನಕ್ಷತ್ರ ಸೀಪೀಡ್ ನಕ್ಷತ್ರದ ಸಮೀಪಕ್ಕೆ ಬಂದಿರಬಹುದು. ಆದರೆ ಆಕರ್ಷಣೆಯಿಂದ ಸೀಪೀಡ್ ನಕ್ಷತ್ರದ ಮೇಲ್ಮೈಯಲ್ಲಿ ದೊಡ್ಡಭಾಗವು ಹೊರಹೊಮ್ಮಿ ಆಕಾಶದಲ್ಲಿ ಸಿಡಿದು ನಕ್ಷತ್ರದಿಂದ ದೂರ ಸರಿಯಿತು. ಅದರ ಭಾಗಗಳು ಸಾಂದ್ರೀಕರಣಗೊಂಡು ಗ್ರಹಗಳಾಗಿವೆ. ಉಳಿದ ಶೇಷ ಭಾಗ ಸೂರ್ಯನಾಗಿ ಉಳಿದಿದೆ. ಈ ಸ್ಥಿತಿಯಲ್ಲಿ ಸೂರ್ಯನಿಗೆ ಹೆಚ್ಚು ಶಾಖ ಮತ್ತು ಶಕ್ತಿ ಸೇರಿಕೊಂಡಿವೆ. ಅದು ಪ್ರಸ್ತುತ ಗ್ರಹಗಳ ಶಾಖ–ಶಕ್ತಿಗಿಂತಲೂ 20 ಪಟ್ಟು ಹೆಚ್ಚಾಗಿದೆ ಎಂದು ಲೆಕ್ಕಾಚಾರದಿಂದ ಖಚಿತವಾಗಿದೆ. ಸೀಪೀಡ್‌ನಿಂದ ಸಿಡಿಯಲ್ಪಟ್ಟ ಭಾಗಗಳು ಗ್ರಹಗಳಾಗಿ ಪರಿಣಮಿಸಿದವು. ಅನಂತರ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಸರಿದಿವೆ. ಪ್ರಾರಂಭದಲ್ಲಿ ಪರ ನಕ್ಷತ್ರದ ಕಡೆಗೆ ಆಕರ್ಷಿಸಿದ್ದರೂ ಕಾಲ ಗತಿಸಿದಂತೆ ಪರನಕ್ಷತ್ರ ದೂರ ಸರಿದ ಅನಂತರ ಗ್ರಹಗಳು ಸೂರ್ಯನ ಸುತ್ತ ಪರಿಭ್ರಮಿಸಲು ಪ್ರಾರಂಭಿಸಿದವು.

ನೋವಾ ಸಿದ್ಧಾಂತ: ನೋವಾ ಎಂದರೆ ನವತಾರೆ. ಈ ಪದ ಲ್ಯಾಟಿನ್ ಭಾಷೆಯ ನೊವ ಸ್ಟೆಲ ಪದದಿಂದ ಬಂದದ್ದು. ಪ್ರಚಲಿತ ಪರಿಸರದಲ್ಲಿ ಆಕಸ್ಮಾತ್ತಾಗಿ ಎದ್ದು ಪ್ರಕಾಶಿಸುವ ಬೆಳಕಿನ ನೂತನಾಕಾರವೇ ನೋವಾ. ನೋವಾ ಎಂಬುದು ನಕ್ಷತ್ರದ ಜೀವನ ಚಕ್ರದಲ್ಲಿ ಬಂದ ನಿರ್ದಿಷ್ಟ ಘಟ್ಟ. ಇದನ್ನು ತಲುಪಿದಾಗ ನಕ್ಷತ್ರ ಹಲವು ಪಟ್ಟು ಉಜ್ವಲಿಸಿ ಅಗಾಧ ಶಕ್ತಿಯನ್ನು ಬಿಡುಗಡೆ ಮಾಡುವುದು. ನೋವಾ ತಾರೆ ಪ್ರಧಾನವಾಗಿ ಜಲಜನಕ ಮತ್ತು ಹೀಲಿಯಂ ಅನಿಲ ರಾಶಿಯಿಂದ ಕೂಡಿರುವುದು.

ನೋವಾ ತಾರೆ ಸಿದ್ಧಾಂತವನ್ನು ಬ್ರಿಟನ್ನಿನ ಗಣಿತವಿಜ್ಞಾನಿ ಹೋಯಲ್ ಎಂಬುವನು 1945ರಲ್ಲಿ ಪ್ರತಿಪಾದಿಸಿರುವನು. ಬ್ರಹ್ಮಾಂಡದ ನಕ್ಷತ್ರಗಳು ನಿಗೂಢ ಕಾರಣಗಳಿಂದ ಒಮ್ಮೆಲೆ ಅವುಗಳ ಪ್ರಕಾಶತೆ 1000 ಪಟ್ಟು ಹೆಚ್ಚಾಗಿರುವುದು. ಅಂತಹವುಗಳನ್ನೇ ನೋವಾ ಎಂತಲೂ ಇನ್ನೂ ಕೆಲವು ನಕ್ಷತ್ರಗಳು ಸೂರ್ಯನಿಗಿಂತ ಬಿಲಿಯನ್ ಪಟ್ಟು ಪ್ರಜ್ವಲಿಸುತ್ತವೆ. ಅವುಗಳನ್ನು ಮಹಾನೋವಾ ಎಂದು ಕರೆಯುವರು. ನಕ್ಷತ್ರಗಳು ಒಳಗೊಂಡ ಶಾಖ, ಜಲಜನಕ, ಹಗುರ ವಸ್ತುಗಳು ಹೀಲಿಯಂ ಆಗಿ ಪರಿವರ್ತನೆಗೊಳ್ಳುತ್ತವೆ. ಸೂಪರ್‌ನೋವಾದಿಂದ ಪರಿವರ್ತನೆಗೊಂಡ ನಕ್ಷತ್ರಗಳು ಬೇಗ ಸಂಕೋಚನಗೊಂಡಂತೆ ಅವುಗಳ ಭ್ರಮಣ ವೇಗವೂ ಹೆಚ್ಚಿತು. ಇದರಿಂದ ಕೇಂದ್ರಾಪಗಮನ ಶಕ್ತಿಯೂ ಹೆಚ್ಚಿತು. ಪರಿಣಾಮವಾಗಿ ತಾರೆ ವಸ್ತುಗಳನ್ನು ತನ್ನಿಂದ ಹೊರಚಿಮ್ಮಿತು. ಮೊದಲು ಹಗುರ ವಸ್ತುಗಳು ಅನಂತರ ಭಾರವಸ್ತುಗಳು ಹೊರದೂಡಲ್ಪಟ್ಟವು. ಅವು ಸೂರ್ಯನಿಂದ

ಆಕರ್ಷಿಸಲ್ಪಟ್ಟವು. ನೋವಾ ತಾರೆ ದೂರ ಸರಿದ ಮೇಲೆ ಹೊರಚಿಮ್ಮಿದ ವಸ್ತುಗಳು ತಟ್ಟೆಯಾಕಾರದಲ್ಲಿ ಸಾಂದ್ರೀಕರಣಗೊಂಡು ಗ್ರಹಗಳಾದವು. ಚಿಕ್ಕ ಪ್ರಮಾಣದ ವಸ್ತುಗಳು ಕೂಡಿ ಉಪಗ್ರಹಗಳಾದವು.

ವಿದ್ಯುತ್ಕಾಂತ ಸಿದ್ಧಾಂತ: ಈ ಸಿದ್ಧಾಂತವು 1942ರಲ್ಲಿ ಆಲ್‌ಫೈನ್‌ನಿಂದ ಪ್ರತಿಪಾದಿಸಲ್ಪಟ್ಟಿತು. ಈತನ ಪ್ರಕಾರ ಸೂರ್ಯನ ಸುತ್ತಲೂ ಪ್ರಬಲ ವಿದ್ಯುತ್ಕಾಂತ ವಲಯವಿತ್ತು. ಇದು ಮೊದಲು ಗುರುತ್ವಾಕರ್ಷಣ ಶಕ್ತಿಗಿಂತಲೂ ಪ್ರಬಲವಾಗಿತ್ತು. ಸೂರ್ಯ ತನ್ನ ಪಥದಲ್ಲಿ ಮುಂದುವರಿಯುವಾಗ ಸೂಕ್ಷ್ಮಾಣು ರಾಶಿವಲಯದಲ್ಲಿ ಪ್ರವೇಶಿಸಿತು. ಈ ಸೂಕ್ಷ್ಮಾಣುಗಳು ಸಾಂದ್ರೀಕರಣಗೊಂಡು ಗ್ರಹಗಳಾದವು. ಇದಕ್ಕೆ ಪ್ರಸ್ತುತ ಶನಿಗ್ರಹದ ಸುತ್ತವಿರುವ ಸಾಸರ್ ಆಕಾರದ, ಸೂಕ್ಷ್ಮಾಣುಗಳನ್ನು ಕಲ್ಪಿಸಿಕೊಳ್ಳಬಹುದು. ಈ ಸಿದ್ಧಾಂತ ವಿಶ್ವಾಸಾರ್ಹ ಹಾಗೂ ಸರಳವಾಗಿದ್ದರೂ ಅನೇಕ ನ್ಯೂನತೆಗಳಿಂದ ಕೂಡಿದೆ. ಈ ಸಿದ್ಧಾಂತದಲ್ಲಿ ಎಲ್ಲ ಗ್ರಹಗಳಿಗೂ ಅಯಸ್ಕಾಂತ ವಲಯವಿದೆಯೆಂಬುದರ ಬಗ್ಗೆ ಪುರಾವೆ ನೀಡಿ ಪುಷ್ಟೀಕರಿಸುವುದಿಲ್ಲ. ಕೌನಿಕ ವೇಗದ ಬಗ್ಗೆ ಹಾಗೂ ಇಂದಿನ ಚಿಕ್ಕ ಅಥವಾ ದೊಡ್ಡ ಗ್ರಹಗಳ ಬಗ್ಗೆ ಪ್ರತ್ಯೇಕವಾಗಿ ಏನನ್ನೂ ವಿವರಿಸಿಲ್ಲ.

ಘನೀಕರಣ ಸಿದ್ಧಾಂತ: ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳ ಪರಿಣಾಮವಾಗಿ ಭೂ ಭೌತ ಹಾಗೂ ಖಗೋಳವಿಜ್ಞಾನಿಗಳು ಸೌರವ್ಯೂಹದ ಉಗಮವನ್ನು ಕುರಿತು ಮೂಲ ಸಿದ್ಧಾಂತವಾದ ಕೆಂಟ್ ಮತ್ತು ಲಾಪ್ಲೇಸನ ಹೇಳಿಕೆಗಳನ್ನೇ ಪುನರುಚ್ಚರಿಸುತ್ತಿರುವರು. ಆಧುನಿಕ ವಿಜ್ಞಾನಿಗಳೂ ನಭೋಮಂಡಲದ ದೂಳು ಹಾಗೂ ಅನಿಲ ರಾಶಿಯಿಂದ ಕೂಡಿದ ನಿಹಾರಿಕೆ ತಟ್ಟೆಯಂತೆ ಸೂರ್ಯನ ಸುತ್ತಲೂ ಹರಡಿದ್ದು ಅನಂತರ ಕಾಲಾಂತರದಲ್ಲಿ ಘನೀಕರಿಸಿರುವುದೆಂದು ತಿಳಿಸಿರುವರು. ಆದರೆ ಒಂದು ವ್ಯತ್ಯಾಸವೆಂದರೆ, ಲಾಪ್ಲೇಸನು ಯೋಚಿಸಿದಂತೆ ಈ ನಿಹಾರಿಕೆ ಅತ್ಯುಷ್ಣತೆಗೆ ಬದಲಾಗಿ ಅತಿ ಕಡಿಮೆ ಉಷ್ಣತೆಯನ್ನು ಹೊಂದಿದೆಯೆಂದು ಆಧುನಿಕ ವಿಜ್ಞಾನಿಗಳು ಭಾವಿಸಿರುವರು. ಈ ಸಿದ್ಧಾಂತದ ಬೆಳೆವಣಿಗೆಗೆ ಆಧಾರವಾಗಿರುವ ಸಂಗತಿಯೆಂದರೆ ಎಲ್ಲ ನಕ್ಷತ್ರಗಳ ಬೆಳೆವಣಿಗೆಯೂ ಇಂತಹ ನಿಹಾರಿಕೆಗಳಿಂದಲೇ ಪ್ರಾರಂಭವಾಗುವುದಾಗಿದೆ. ಈ ಸಿದ್ಧಾಂತವನ್ನು 1944ರಲ್ಲಿ ಜರ್ಮನಿಯ ಖಗೋಳವಿಜ್ಞಾನಿ ವೀಜ್‌ಸ್ಯಾಕರ್ ಪ್ರತಿಪಾದಿಸಿದ. ಈತನ ಹೇಳಿಕೆಯಂತೆ ಸೂರ್ಯನು ಅಸ್ತಿತ್ವಕ್ಕೆ ಬಂದಾಗ ಅದರ ಸುತ್ತಲೂ ದೂಳು ಮತ್ತು ಅನಿಲದ ರಾಶಿಯು ಸುತ್ತುವರಿದಿದ್ದವು. ಇದರ ದ್ರವ್ಯರಾಶಿ ಸೂರ್ಯನ ದ್ರವ್ಯರಾಶಿಯ ಶೇ.10 ರಷ್ಟಿದ್ದಿತು. ಇದು ಕ್ರಮೇಣ ಸಾಂದ್ರೀಕರಣ ಹೊಂದಿ ಮಟ್ಟಸವಾದ ತಟ್ಟೆಯಾಕಾರದಲ್ಲಿ ಹರಡಿತು. ಈ ಅನಿಲ ರಾಶಿಯಲ್ಲಿ ಅಲ್ಲಲ್ಲಿ ಗಂಟುಗಳಂತೆ ಅನೇಕ ಸುರುಳಿಗಳಿದ್ದು, ಇವುಗಳ ಚಲನೆ ವಿವಿಧ ರೀತಿಯಲ್ಲಿದ್ದಿತು. ಈ ಸುರುಳಿಗಳ ಗಾತ್ರ ಕೇಂದ್ರಭಾಗದಲ್ಲಿ ಚಿಕ್ಕವಾಗಿದ್ದು, ದೂರ ಹೋದಂತೆ ದೊಡ್ಡದಾಗಿದ್ದವು. ಇದರಿಂದಾಗಿಯೇ ಕೌನಿಕ ವೇಗ ಸೂರ್ಯನಿಂದ ಹೊರ ಗ್ರಹಗಳಿಗೆ ಹಸ್ತಾಂತರವಾಗಿದೆಯೆಂದು ಸ್ಯಾಕರ್ ಊಹಿಸಿರುವನು. ಈ ಸುರಳಿಗಳು ಒಳಗೊಂಡಿದ್ದ ಗ್ರಹಣಗಳ ಚೂರುಗಳು (ಚೇಂಬರಲಿನ್ ಊಹಿಸಿದಂತೆ) ಕ್ರಮೇಣ ಪರಸ್ಪರ ಆಕರ್ಷಿತಗೊಂಡು ದೊಡ್ಡದಾಗಿ ಬೆಳೆದು ಗ್ರಹಗಳಾಗಿವೆಯೆಂದು ಊಹಿಸಲಾಗಿದೆ.

ಸೂರ್ಯನಿಗೆ ಸಮೀಪದಲ್ಲಿದ್ದ ಅನಿಲರಾಶಿಯಲ್ಲಿ ಉಷ್ಣಾಂಶ ಸಹ ಹೆಚ್ಚಾಗಿದ್ದು ದೂರ ಹೋದಂತೆ ಕಡಿಮೆಯಾಗಿದ್ದಿತು. ಇದರಿಂದ ಸೂರ್ಯನಿಗೆ ಬಹು ಸಮೀಪದಲ್ಲಿದ್ದ ಅನಿಲರಾಶಿ ಬಹು ನಿಧಾನವಾಗಿ ಘನೀಕೃತಗೊಂಡಿರುವುದರಿಂದ ಹೀಲಿಯಂ ಮತ್ತು ಜಲಜನಕ ಅನಿಲ ಈ ಪ್ರಕ್ರಿಯೆಯಲ್ಲಿ ಹೊರಗುಳಿದು ಬಾಹ್ಯಾಕಾಶವನ್ನು ಸೇರಿತು. ಅಲ್ಲದೆ ಗ್ರಹಗಳ ಗಾತ್ರ ಸಹ ಇದರಿಂದಾಗಿ ಚಿಕ್ಕದಾಗಿವೆ. ಈ ಗ್ರಹಗಳ ಸಿಲಿಕೇಟ್ ಮತ್ತು ಕಬ್ಬಿಣದಂತಹ ಭಾರವಾದ ವಸ್ತುಗಳ ಉಷ್ಣಾಂಶ ಬಹು ಕಡಿಮೆ ಇದ್ದಿತು. ಇದರಿಂದ ಇವುಗಳು ನಿಧಾನವಾಗಿ ಘನೀಕರಿಸಿದುದರಿಂದ ಅವುಗಳ ವಾತಾವರಣದಲ್ಲಿ ಇಂದಿಗೂ ಬಹು ಹಗುರವಾದ ಹೀಲಿಯಂ ಮತ್ತು ಜಲಜನಕ ಮುಂತಾದ ಹಗುರವಾದ ಅನಿಲಗಳು ಕಂಡುಬರುತ್ತವೆ.

ಗ್ರಹಗಳು ಹೀಗೆ ತಟ್ಟೆಯಾಕಾರದ ಅನಿಲರಾಶಿಯ ಘನೀಕರಣದಿಂದ ನಿರ್ಮಾಣವಾಗಿರುವುದನ್ನೇ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ರೂಪರ್, ಯೂರೆ, ಕಾಮರಾನ್ ಇವರುಗಳು ಸಹ ಪ್ರತಿಪಾದಿಸಿರುವರು. ಇದರಿಂದ ಇಂದು ಸೌರವ್ಯೂಹ ಹಾಗೂ ಭೂಮಿಯ ಉಗಮವನ್ನು ಕುರಿತ ಸಿದ್ಧಾಂತಗಳಲ್ಲಿ ಇದು ಹೆಚ್ಚು ಪ್ರಾಮುಖ್ಯತೆ ಪಡೆದಿದೆ.

ಮಹಾಸ್ಫೋಟ ಸಿದ್ಧಾಂತ: ಈವರೆಗೆ ಭೂಮಿಯ ಉಗಮಕ್ಕೆ ಸಂಬಂಧಿಸಿದಂತೆ ಅನೇಕ ಸಿದ್ಧಾಂತಗಳನ್ನು ಚರ್ಚಿಸಲಾಗಿದೆ. ಆದರೆ ಮಹಾಸ್ಫೋಟ ಸಿದ್ಧಾಂತ ಉಳಿದೆಲ್ಲಾ ಸಿದ್ಧಾಂತಗಳಿಗಿಂತ ಭಿನ್ನವಾದ ಇತ್ತೀಚಿನ ಸಿದ್ಧಾಂತವಾಗಿದೆ. ಪ್ರಸ್ತುತ ಶತಮಾನದ ಪ್ರಾರಂಭದಿಂದಲೂ ನಿರಂತರವಾಗಿ ಬಾಹ್ಯಾಕಾಶವನ್ನು ಕುರಿತ ವೈಜ್ಞಾನಿಕ ಸಂಶೋಧನೆಗಳು ಸಾಗಿದ್ದು ಅದರಿಂದ ಹಲವು ಮಾಹಿತಿಗಳನ್ನು ಪಡೆಯಲು ಸಾಧ್ಯವಾಗಿದೆ. ಇದರೊಂದಿಗೆ ವಿಶ್ವದ ಹುಟ್ಟು ಮತ್ತು ರಚನೆಯನ್ನು ಕುರಿತ ಹೊಸ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿವೆ. ಅವು ಕಾಲಕಾಲಕ್ಕೆ ವೈಜ್ಞಾನಿಕ ಮಾಹಿತಿಗಳಿಗನುಗುಣವಾಗಿ ಆವಿಷ್ಕಾರಗೊಂಡು ನವೀಕರಣಗೊಂಡಿವೆ. ಅತ್ಯಾಧುನಿಕ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಪರಿಶೀಲನೆಗೆ ಒಳಪಟ್ಟು ಪ್ರತಿಪಾದಿಸಲ್ಪಟ್ಟ ಸಿದ್ಧಾಂತವೇ ಮಹಾಸ್ಫೋಟಸಿದ್ಧಾಂತ (ಬಿಗ್ ಬ್ಯಾಂಗ್ ಥಿಯರಿ). ಇದು ಕೇವಲ ಸೌರವ್ಯೂಹದ ಹಾಗೂ ಭೂಮಿಯ ಉಗಮಕ್ಕೆ ಸೀಮಿತವಾಗಿರದೆ ಇಡೀ ಬ್ರಹ್ಮಾಂಡದ ಸೃಷ್ಟಿಗೆ ಸಂಬಂಧಿಸಿದ ವಿವರಣೆಯನ್ನು ಹೊಂದಿದೆ ಹಾಗೂ ವಿಜ್ಞಾನಿಗಳ ಸಹಮತವನ್ನು ಪಡೆದಿದೆ.

ಈ ಸಿದ್ಧಾಂತವನ್ನು ಮೊದಲಿಗೆ ಬೆಲ್ಜಿಯಂ ದೇಶದ ಖಗೋಳ ವಿಜ್ಞಾನಿಯಾದ ಅಬ್ಬೆ ಜಾರ್ಜಸ್ ಲಿಮೈತ್ರೆ 1927ರಲ್ಲಿ ಪ್ರಕಟಿಸಿದ. ಆದರೂ ಹಲವು ವಿಮರ್ಶೆಗಳಿಗೊಳಪಟ್ಟು 1950, 1960ರಲ್ಲಿ ಮತ್ತೆ ಪ್ರತಿಪಾದಿಸಲ್ಪಟ್ಟರೂ ವಿಶ್ವಹಿನ್ನೆಲೆ ಪರಿಶೋಧಕರಿಂದ ದೃಢೀಕೃತ ನಿದರ್ಶನಗಳನ್ನು ಸ್ಥಿರೀಕರಿಸಲ್ಪಟ್ಟ ಮೇಲೆ ಮೇ 1972ರಲ್ಲಿ ಪ್ರತಿಪಾದಿಸಲ್ಪಟ್ಟಿತು. ವಿಶ್ವ ಹಿನ್ನೆಲೆ ಪರಿಶೋಧಕ ವಿಶ್ವದ ಉಗಮವನ್ನು ವಿವರಿಸುತ್ತಾ ಭೂಮಿಯೂ ಸೇರಿದಂತೆ ಅದರಲ್ಲಿ ಎಲ್ಲವೂ ಸೇರಿದೆ ಎಂಬುದನ್ನು ತಿಳಿಸುತ್ತದೆ. ಮುಂದುವರಿದು ವಿಶ್ವ ಅನೇಕ ದಶಲಕ್ಷಗಳಷ್ಟು ನಕ್ಷತ್ರ ಪುಂಜಗಳನ್ನು, ಪ್ರತಿ ನಕ್ಷತ್ರ ಪುಂಜ ಸಾವಿರಾರು ನಕ್ಷತ್ರಗಳನ್ನೂ ಹಾಗೂ ಪ್ರತಿ ನಕ್ಷತ್ರ ತನ್ನ ಸುತ್ತ ಅನೇಕ ಗ್ರಹ ಉಪಗ್ರಹಗಳನ್ನೊಳಗೊಂಡಿದೆ ಎಂದು ತಿಳಿಸುತ್ತದೆ.

ಈ ಸಿದ್ಧಾಂತದ ಪ್ರಕಾರ, 15 ಬಿಲಿಯನ್ ವರ್ಷಗಳ ಹಿಂದೆ ಬ್ರಹ್ಮಾಂಡದ ಪ್ರತಿಯೊಂದು ವಸ್ತು ಅಸಾಧಾರಣತೆಯುಳ್ಳ ಒಂದೇ ಬಿಂದುವಿನಿಂದ ಉದ್ಭವಿಸಲ್ಪಟ್ಟಿದ್ದು, ಸು. 15,000 ಮಿಲಿಯನ್ ವರ್ಷಗಳ ಹಿಂದೆ ವಿಶ್ವ ಬಹು ಚಿಕ್ಕದು ಮತ್ತು ಅತ್ಯುಷ್ಣತೆಯುಳ್ಳದ್ದಾಗಿತ್ತು. ಸಕಲವೂ ಸೂಕ್ಷ್ಮ ವಸ್ತುವೊಂದರಲ್ಲೇ ಕೇಂದ್ರೀಕೃತವಾಗಿತ್ತು. ಅಣುಬಾಂಬ್ ಸಿಡಿದಂತೆ ಅದು ಸ್ಫೋಟನೆಗೊಂಡು ಎಲ್ಲಾ ಕಡೆಗೂ ವಿಸ್ತರಿಸಲ್ಪಟ್ಟು ಪ್ರಸ್ತುತ ವಿಶ್ವ ಸೃಷ್ಟಿಯಾಯಿತು. ಗಮನಿಸಬೇಕಾದ ಮುಖ್ಯಾಂಶವೆಂದರೆ ಮರಳಿನ ಕಣಗಳು ತಮ್ಮ ಮೂಲ ಸ್ಥಾನದಿಂದ ಬಹುದೂರಕ್ಕೆ ವೇಗವಾಗಿ ಸ್ಫೋಟಿಸಿರುವುದು. ಅಂದರೆ ಅವು ಹೇಗೆ ಪರಸ್ಪರ ದೂರಗೊಂಡವೆಂಬುದು. ಹೀಗೆ ವಿಶ್ವ ವಿಸ್ತರಿಲ್ಪಡುವುದಕ್ಕೆ ಮುಂಚೆ ಆಕಾಶ ಕಾಯಗಳೆಲ್ಲಾ ಒಂದೇ ಬ್ರಹ್ಮಾಂಡಕಾಯವಾಗಿದ್ದವೆಂದು ತರ್ಕಿಸಲಾಗಿದೆ. ಮಿಲಿಯಾಂತರ ವರ್ಷಗಳ ಹಿಂದೆ ಎಲ್ಲ ಕ್ಷೀರ ಪಥ, ಗ್ರಹ ಮುಂತಾದವು ಇದರಲ್ಲಿ ಅಡಕವಾಗಿದ್ದವು. ಅತಿಯಾಗಿ ಸಾಂದ್ರೀಕರಿಸಲ್ಪಟ್ಟಿದ್ದ ಬ್ರಹ್ಮಾಂಡ ಕಾಯ ಇಂದಿನ ಸೂರ್ಯನಿಗಿಂತ 30 ಪಟ್ಟು ದೊಡ್ಡದಾಗಿದ್ದು, ಅದರ ಪ್ರತಿ ಚ.ಸೆಂಮೀ ಕ್ಷೇತ್ರ 100 ದಶಲಕ್ಷ ಟನ್ನುಗಳಷ್ಟು ಸಾಂದ್ರೀಕರಿಸಲ್ಪಟ್ಟ ವಸ್ತುವಿನಿಂದ ಕೂಡಿದ್ದಿತೆಂದು ಅಂದಾಜು ಮಾಡಲಾಗಿದೆ. ಈ ಅತಿಸಾಂದ್ರೀಕೃತತೆಯ ಪರಿಣಾಮವಾಗಿ ಬ್ರಹ್ಮಾಂಡ ಕಾಯ 15 ಬಿಲಿಯನ್ ವರ್ಷಗಳ ಹಿಂದೆ ಅಣು ಬಾಂಬಿನಂತೆ ಸ್ಫೋಟಗೊಂಡಿತು. ಅದರಿಂದ ಹೊರ ಚಿಮ್ಮಿದ ವಸ್ತುಗಳು ಸಾಂದ್ರೀಕರಿಸಲ್ಪಟ್ಟು ಎಲ್ಲ ಕ್ಷೀರಪಥ, ನಕ್ಷತ್ರ ಹಾಗೂ ಸೌರವ್ಯೂಹಗಳು ನಿರ್ಮಿತಗೊಂಡಿರುವುದು ಲಿ ಮೈತ್ರೆಯ ಪ್ರತಿಪಾದನೆಯಾಗಿರುತ್ತದೆ. ಈ ಸಿದ್ಧಾಂತಕ್ಕೆ ಪೂರಕವಾದ ಸಂಶೋಧನೆಗಳು ಹಾಗೂ ನಿದರ್ಶನಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಹಬ್ಬಲ್‌ನ ಸಂಶೋಧನೆ: ಬ್ರಹ್ಮಾಂಡ ಅನಂತವಾದುದು ಹಾಗೂ ವಿಸ್ತಾರವಾದುದು. ಅದನ್ನು ತಿಳಿಯುವುದು ಮಾನವನ ಕಲ್ಪನೆಗೂ ಮೀರಿದುದು. ಈ ಬ್ರಹ್ಮಾಂಡದಲ್ಲಿ ಕೋಟ್ಯನುಕೋಟಿ ಕ್ಷೀರ ಪಥಗಳಿದ್ದು ಅವುಗಳಲ್ಲಿ ಸೂರ್ಯನೊಬ್ಬ ಸದಸ್ಯ. ಸೂರ್ಯನ ಪರಿವಾರದಲ್ಲಿ ಭೂಮಿಯೂ ಒಂದಾಗಿದೆ. ಈ ವ್ಯವಸ್ಥೆಯೇ ಸೌರವ್ಯೂಹ. ಅಮೆರಿಕದ ಖಗೋಳವಿಜ್ಞಾನಿಯಾದ ಎಡ್ವಿನ್ ಪಿ. ಹಬ್ಬಲ್ 1929 ರಲ್ಲಿ ವಿಸ್ತರಿಸುವ ವಿಶ್ವದ ಬಗ್ಗೆ ತನ್ನ ಅಭಿಪ್ರಾಯವನ್ನು ಮಂಡಿಸಿದ. ಈತನು ಬ್ರಹ್ಮಾಂಡದಲ್ಲಿ ಅಸಂಖ್ಯಾತ ಕ್ಷೀರಪಥಗಳಿರುವುದನ್ನು ಕಂಡುಹಿಡಿದು, ಅವು ಪರಸ್ಪರ ದೂರ-ದೂರ ಚಲಿಸುತ್ತಿರುವುದನ್ನು ಸೂಚಿಸಿದ. ಅತಿದೂರದಲ್ಲಿರುವ ಕ್ಷೀರಪಥಗಳು ಅತ್ಯಂತ ವೇಗದಿಂದ ಮುಂದೆ ಚಲಿಸುತ್ತಿರುವುದು ಇದರಿಂದ ತಿಳಿಯಿತು. ಇದನ್ನೇ ವಿಸ್ತರಿಸುತ್ತಿರುವ ವಿಶ್ವ ಎಂದು ಕರೆಯಲಾಯಿತು.

ಡಾಪ್ಲರ್ ಪರಿಣಾಮ: ಅತ್ಯಂತ ವೇಗವಾಗಿ ಕ್ಷೀರಪಥಗಳು ಮುಂದೆ ಚಲಿಸುತ್ತಿರುವುದನ್ನು ಯಾವುದೇ ಸೂಕ್ಷ್ಮದರ್ಶಕದ ಮೂಲಕ ನಿರೂಪಿಸಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ಅವುಗಳಿಂದ ಬರುವ ಬೆಳಕಿನ ಸೂಕ್ಷ್ಮ ತರಂಗಗಳ ನೆರವಿನಿಂದ ಅಭ್ಯಸಿಸಲಾಯಿತು. ದೂರದಿಂದ ವೀಕ್ಷಕನ ಕಡೆಗೆ ಚಲಿಸುತ್ತಿರುವ ನಕ್ಷತ್ರಗಳಿಂದ ಪಡೆಯುವ ಬೆಳಕಿನ ಕಿರಣಗಳ ಬಣ್ಣವು ನೀಲಿಯ ಅಂಚಿನ ಕಡೆಗೆ ಬದಲಾಯಿಸುವುದು. ಅದಕ್ಕೆ ಬದಲಾಗಿ ದೂರ ಚಲಿಸುತ್ತಿದ್ದಲ್ಲಿ ಅದರ ಬಣ್ಣವು ಕೆಂಪು ವರ್ಣದ ಕಡೆಗೆ ಬದಲಾಯಿಸುವುದು. ಚಲಿಸುತ್ತಿರುವ ನಕ್ಷತ್ರಗಳಿಂದ ಪಡೆಯುವ ಇದನ್ನು ಡಾಪ್ಲರ್ ಪರಿಣಾಮ ಅಥವಾ ಡಾಪ್ಲರ್ ವರ್ಗಾವಣೆ ಎಂದು ಕರೆಯುವರು. ಇದರ ಅಧ್ಯಯನದಿಂದ ನಕ್ಷತ್ರಗಳು ದೂರ ಸರಿಯುತ್ತಿರುವುದನ್ನು ಹಾಗೂ ವಿಶ್ವ ವಿಸ್ತರಿಸಲ್ಪಡುವುದನ್ನು ಸ್ಥಿರಪಡಿಸಿದೆ.

ನಿರಂತರ ನಿರ್ಮಾಣ ಸಿದ್ಧಾಂತ: ಮೂಲತಃ ಈ ಸಿದ್ಧಾಂತ ಥಾಮಸ್ ಗೋಲ್ಡ್ ಮತ್ತು ಹರ್ಮನ್ ಬೊಂಡಿ ಎಂಬ ಇಬ್ಬರು ಖಗೋಳವಿಜ್ಞಾನಿಗಳಿಂದ (1965) ಪ್ರತಿಪಾದಿಸಲ್ಪಟ್ಟಿದೆ. ಈ ಸಿದ್ಧಾಂತದ ಪ್ರಕಾರ ನಕ್ಷತ್ರ ಪುಂಜಗಳು ಪರಸ್ಪರ ಹೆಚ್ಚು ಹೆಚ್ಚು ದೂರ ಸರಿಯುತ್ತವೆಯಾದರೂ ಅವುಗಳ ಪ್ರಾದೇಶಿಕ ಸಾಂದ್ರತೆ ಮಾತ್ರ ಸ್ಥಿರವಾಗಿ

ಉಳಿಯುತ್ತದೆ. ಅಂದರೆ ಮೊದಲು ನಿರ್ಮಾಣಗೊಂಡ ನಕ್ಷತ್ರ ಪುಂಜಗಳು ಪರಸ್ಪರ ದೂರಸರಿಯುತ್ತಿದ್ದು, ಅವುಗಳ ನಡುವಣ ಖಾಲಿ ಭಾಗದಲ್ಲಿ ಹೊಸ ನಕ್ಷತ್ರ ಪುಂಜಗಳು ನಿರ್ಮಾಣವಾಗುವವು. ಅವು ಸದಾ ಉತ್ಪತ್ತಿಯಾಗುವ ಹೊಸ ವಸ್ತು ರಾಶಿಗಳ ಘನೀಭವನದಿಂದ ನಿರಂತರವೂ ನಿರ್ಮಾಣವಾಗುವವು. ನಿರಂತರವಾದ ನಕ್ಷತ್ರ ಪುಂಜಗಳ ಸೃಷ್ಟಿ ವಿಶ್ವದ ವಿಸ್ತರಣೆಯನ್ನು ಸ್ಪಷ್ಟಪಡಿಸುವುದು.

ನಿಯಮಿತ ವಿಶ್ವ ಸಿದ್ಧಾಂತ: ಇದನ್ನು 1965ರಲ್ಲಿ ಅಲೆನ್ ಸಾಂಡೇಜ್ ಪ್ರತಿಪಾದಿಸಿದ. ಈತನ ಪ್ರಕಾರ ಬಿಲಿಯಾಂತರ ವರ್ಷಗಳವರೆಗೆ ವಿಶ್ವವು ನಿಯಮಿತ ಅವಧಿಗೊಮ್ಮೆ ಒಂದಾದ ಮೇಲೆ ಮತ್ತೊಂದರಂತೆ ವಿಸ್ತರಣೆ ಮತ್ತು ಸಂಕುಚನಗೊಳ್ಳುವುದು. ಸಾಂಡೇಜ್‌ನ ಚಿಂತನೆಯ ಪ್ರಕಾರ ಸು.12 ಬಿಲಿಯನ್ ವರ್ಷಗಳ ಹಿಂದೆ ಬ್ರಹ್ಮಾಂಡದಲ್ಲಿ ಮಹಾಸ್ಫೋಟವೊಂದು ಉಂಟಾಗಿ, ಅಂದಿನಿಂದಲೂ ವಿಶ್ವ ನಿರಂತರವಾಗಿ ವಿಸ್ತಾರಗೊಳ್ಳುತ್ತಿದೆ. ಈ ಪ್ರಕ್ರಿಯೆ 29 ಬಿಲಿಯನ್ ವರ್ಷಗಳವರೆಗೂ ಅಂದರೆ ಗುರುತ್ವಾಕರ್ಷಣೆ ಮುಂದಿನ ವಿಸ್ತರಣೆಗೆ ತಡೆಯುನ್ನುಂಟು ಮಾಡುವವರೆಗೂ ಮುಂದುವರೆಯಬಹುದು. ಅನಂತರ ಎಲ್ಲ ವಸ್ತುಗಳೂ ಅಂತಃಸ್ಫೋಟ ಅಥವಾ ಒಳಸಿಡಿತ ಪ್ರಕ್ರಿಯೆಯ ರೂಪದಲ್ಲಿ ಸಂಕೋಚನಗೊಳ್ಳಲು ಪ್ರಾರಂಭವಾಗುವುದು. ಹೀಗೆ ಸು. 41 ಬಿಲಿಯನ್ ವರ್ಷಗಳವರೆಗೆ ವಸ್ತುಗಳು ಸಂಕೋಚನಗೊಳ್ಳುವುವು. ಇದರಿಂದ ಅತೀವವಾದ ಸಾಂದ್ರೀಕರಣವೇರ್ಪಟ್ಟು ಪುನಃ ಸ್ಫೋಟವೇರ್ಪಡುವುದು ಎಂಬುದು ಈ ಸಿದ್ಧಾಂತದ ಅಭಿಪ್ರಾಯವಾಗಿದ್ದು, ಮಹಾಸ್ಫೋಟ ಸಿದ್ಧಾಂತಕ್ಕೆ ಪೂರಕವಾಗಿರುತ್ತದೆ.

ಇತ್ತೀಚಿನ ದಶಕಗಳಲ್ಲಿ ನಿರೂಪಿತವಾಗಿರುವ ಕಪ್ಪುರಂಧ್ರ (ಬ್ಲಾಕ್‌ಹೋಲ್) ಆಕಾಶಕಾಯಗಳ ಸಿದ್ಧಾಂತಗಳು ಮಹಾಸ್ಫೋಟದಿಂದ ಆಕಾಶಕಾಯಗಳು ನಿರ್ಮಾಣಹೊಂದಿರುವುದನ್ನು ಪುಷ್ಟೀಕರಿಸಿವೆ. 1965ರಲ್ಲಿ ರೋಜರ್ ಪೆನ್ ರೋಜ್ ನಕ್ಷತ್ರಗಳು ವಿಕಿರಣತೆಯಿಂದ ಕ್ಷೀಣಿಸಿ, ಗುರುತ್ವ ಬಲದಿಂದ ತಮ್ಮೊಳಗೆ ಕುಸಿದು ಬಿಂದು ರೂಪವುಳ್ಳದ್ದೂ ಭಾರಿ ಗುರುತ್ವವುಳ್ಳ ಅತಿ ಸೂಕ್ಷ್ಮ ಗಾತ್ರದ ಕಪ್ಪುರಂಧ್ರಗಳಾಗಿ ಪರಿಣಮಿಸುತ್ತವೆಯೆಂದು ವಾದಿಸಿರುವರು. ಈ ಶತಮಾನದ ಅತಿ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರಾದ ಹಾಕಿನ್ಸ್‌ರವರು ಬ್ರಹ್ಮಾಂಡದಲ್ಲಿ ಇಂತಹ ಅಸಂಖ್ಯಾತ ಕಪ್ಪುರಂಧ್ರಗಳಿವೆಯೆಂದೂ ಇವುಗಳು ತಮ್ಮ ಅಗಾಧ ಗುರುತ್ವ ಬಲದಿಂದ ಭೂಮಿಗಿಂತ ಹತ್ತಾರು ಕೋಟಿ ಪಟ್ಟು ದೊಡ್ಡದಾದ ನಕ್ಷತ್ರಗಳನ್ನೇ ನುಂಗುವವೆಂದೂ ತಿಳಿಸಿರುವರು. ಈ ಕಪ್ಪುರಂಧ್ರಗಳು ವಿಕಿರಣವನ್ನು ಸೂಸುತ್ತಿದ್ದು, ಅಂತಿಮವಾಗಿ ಸ್ಫೋಟಗೊಳ್ಳುವವೆಂದು ವಿವರಿಸಿರುವರು. (ಪಿ.ಎಂ.)

**ಭೂಮಿಯ ಚಲನೆಗಳು:** ಭೂಮಿಗೆ ಚಲನೆಯಿದೆಯೆಂಬ ವಿಷಯವನ್ನು ಮೊಟ್ಟಮೊದಲಿಗೆ (ಪ್ರ.ಶ.ಪೂ. 280) ಅರಿಸ್ಟಾರ್ಕಸ್ ಪ್ರತಿಪಾದಿಸಿದ. ಈತ ಭೂಮಿ ಸೂರ್ಯನ ಸುತ್ತ ಸುತ್ತುತ್ತದೆಂದು ತಿಳಿಸಿದ. ಅದನ್ನು ಅಂದು ಯಾರೂ ಒಪ್ಪಲಿಲ್ಲ. ಏಕೆಂದರೆ ಗ್ರೀಕರಲ್ಲಿ ಭೂಮಿಯು ಬ್ರಹ್ಮಾಂಡದ ಕೇಂದ್ರವಾಗಿದ್ದು, ಅದರ ಸುತ್ತ ಇತರ ಆಕಾಶಕಾಯಗಳು ಸುತ್ತುತ್ತಿವೆ ಎಂಬ ಬಲವಾದ ನಂಬಿಕೆಯಿತ್ತು. ಈ ವಾದವನ್ನು ಕ್ಲಾಡಿಯಸ್ ಟಾಲಮಿಯೂ ಬೆಂಬಲಿಸಿದ್ದ (120–180). ಆದರೆ ಕೋಪರ್ನಿಕಸ್ ಕೂಡ ಸೂರ್ಯಕೇಂದ್ರವಾದವನ್ನು ಪ್ರತಿಪಾದಿಸಿದ. ಆತ ಭೂಮಿ ಸೂರ್ಯನ ಸುತ್ತ ಸುತ್ತುತ್ತದೆಂದು ತಿಳಿಸಿದ. ಇದನ್ನು ಕೆಪ್ಲರ್ ಮತ್ತು ನ್ಯೂಟನ್ ಬೆಂಬಲಿಸಿದರು. ಗೆಲಿಲಿಯೋ ಇದನ್ನೆ ವೈಜ್ಞಾನಿಕ ಆಧಾರಗಳ ಮೇಲೆ ಅಂಗೀಕರಿಸಿದ. ಸೂರ್ಯ ಕೇಂದ್ರವಾದ ದೃಢಪಟ್ಟಿತು.

ಭೂಮಿಗೆ ಎರಡು ಚಲನೆಗಳಿವೆ 1. ದೈನಂದಿನ ಚಲನೆ 2. ವಾರ್ಷಿಕ ಚಲನೆ.

ದೈನಂದಿನ ಚಲನೆ: ಭೂಮಿ ತನ್ನ ಅಕ್ಷದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ನಿತ್ಯವೂ ಸುತ್ತುವುದಕ್ಕೆ ದೈನಂದಿನ ಚಲನೆ ಎನ್ನುವರು. ಇದನ್ನು ಭೂ ಅಕ್ಷ ಪರಿಭ್ರಮಣ ಎಂದೂ ಕರೆಯುವರು. ತನ್ನ ಅಕ್ಷದಲ್ಲಿ ಭೂಮಿ ಒಂದು ಸುತ್ತು ಸುತ್ತಲು ವಾಸ್ತವವಾಗಿ ತೆಗೆದುಕೊಳ್ಳುವ ಕಾಲ 23 ಗಂಟೆ, 56 ನಿಮಿಷ ಮತ್ತು 4.09 ಸೆಕೆಂಡುಗಳು. ಈ ಅವಧಿಯನ್ನು ನಾಕ್ಷತ್ರಿಕ ದಿನ ಎನ್ನುವರು. ವ್ಯಾವಹಾರಿಕವಾಗಿ ಸೂರ್ಯೋದಯದಿಂದ ಮತ್ತೊಂದು ಸೂರ್ಯೋದಯದವರೆಗಿನ ವೇಳೆಯನ್ನು 24 ಗಂಟೆಗಳೆಂದು ಪರಿಗಣಿಸಲಾಗಿದೆ. ಈ ಅವಧಿಗೆ ಸೌರ ದಿನ ಎಂದು ಕರೆಯುವರು. ನಾಕ್ಷತ್ರಿಕ ಮತ್ತು ಸೌರದಿನಗಳೆರಡಕ್ಕೂ 3 ನಿಮಿಷ 56 ಸೆಕೆಂಡುಗಳಷ್ಟು ವೇಳೆಯ ವ್ಯತ್ಯಾಸವಿದೆ. ಭೂಮಿಯ ದೈನಂದಿನ ಚಲನಾವೇಗ ಸಮಭಾಜಕ ವೃತ್ತದಿಂದ ಧ್ರುವಗಳ ಕಡೆಗೆ ಹೋದಂತೆ ಕಡಿಮೆಯಾಗುವುದು. ಸಮಭಾಜಕ ವೃತ್ತದ ಬಳಿ ಭೂ ಚಲನೆಯ ವೇಗ ಪ್ರತಿ ಗಂಟೆಗೆ 1700 ಕಿಮೀ. $60^0$ ಅಕ್ಷಾಂಶದಲ್ಲಿ ಇದರ ಅರ್ಧ (850 ಕಿಮೀ) ಮತ್ತು ಧ್ರುವ ಬಿಂದುಗಳಲ್ಲಿ ವೇಗ ಶೂನ್ಯವಾಗಿರುತ್ತದೆ.

ಪರಿಣಾಮಗಳು: ಭೂಮಿಯ ದೈನಂದಿನ ಚಲನೆಯಿಂದ ಹಗಲು ಮತ್ತು ರಾತ್ರಿಗಳು ಉಂಟಾಗುತ್ತವೆ. ಭೂಮಿಯು ತನ್ನ ಅಕ್ಷದಲ್ಲಿ ಸುತ್ತುವಾಗ ಸೂರ್ಯನಿಗೆ ಎದುರಾದ ಭಾಗ ಬೆಳಕನ್ನು ಪಡೆಯುವುದರಿಂದ ಆ ಭಾಗದಲ್ಲಿ ಹಗಲು ಉಂಟಾಗುವುದು. ಮರೆಯಾದ ಭಾಗವು ಕತ್ತಲಾಗಿರುವುದರಿಂದ ಅಲ್ಲಿ ರಾತ್ರಿಯಾಗುವುದು.

ಹಗಲು ಮತ್ತು ರಾತ್ರಿಗಳ ಅವಧಿಯಲ್ಲಿ ವ್ಯತ್ಯಾಸ: ಭೂಮಧ್ಯರೇಖೆಯಿಂದ ಧ್ರುವಗಳ ಕಡೆಗೆ ಹೋದಂತೆ ಹಗಲು–ರಾತ್ರಿಗಳ ಅವಧಿ ವ್ಯತ್ಯಾಸವಾಗುವುದು. ಸಂಕ್ರಾಂತಿವಲಯಗಳಿಂದ ಧ್ರುವಗಳ ಕಡೆಗೆ ಹೋದಂತೆ ಬೇಸಗೆಯ ಹಗಲಿನ ಅವಧಿ ಹೆಚ್ಚಾಗುತ್ತದೆ. ಈ ವ್ಯತ್ಯಾಸ ಭೂಮಧ್ಯ ರೇಖೆಯ ಸಮೀಪ ಕಡಿಮೆ.

ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ಸುತ್ತುವುದರಿಂದ ಸೂರ್ಯ ಚಂದ್ರಾದಿಗಳು ಪೂರ್ವದಲ್ಲಿ ಉದಯವಾಗಿ ಪಶ್ಚಿಮದ ಕಡೆಗೆ ಚಲಿಸಿ ಅಸ್ತಂಗತವಾದಂತೆ ಭಾಸವಾಗುವುದು.

ದೈನಂದಿನ ಚಲನೆಯಿಂದ ಸೂರ್ಯೋದಯವಾದಾಗ ಪ್ರಾತಃಕಾಲ, ಸೂರ್ಯಾಸ್ತವಾದಾಗ ಸಾಯಂಕಾಲ ಹಾಗೂ ಸೂರ್ಯ ನೆತ್ತಿಯ ಮೇಲೆ ಬಂದಾಗ ಮಧ್ಯಾಹ್ನವೆಂಬ ವೇಳೆಯ ಅರಿವು ಉಂಟಾಗುವುದು.

ದೈನಂದಿನ ಚಲನೆಯಿಂದ ನಮಗೆ ದಿಕ್ಕುಗಳ ಕಲ್ಪನೆಯಾಗುವುದು. ಸೂರ್ಯ ಉದಯವಾಗುವ ದಿಕ್ಕನ್ನು ಪೂರ್ವವೆಂತಲೂ ಅಸ್ತಂಗತವಾಗುವುದನ್ನು ಪಶ್ಚಿಮವೆಂತಲೂ ಇವೆರಡರ ಸಮಕೋನದ ದಿಕ್ಕುಗಳನ್ನು ಉತ್ತರ ಮತ್ತು ದಕ್ಷಿಣಗಳೆಂದು ಗುರುತಿಸಲಾಗುವುದು.

ದೈನಂದಿನ ಚಲನೆಯಿಂದಾಗಿ ಭೂಮಿಯು ಧ್ರುವ ಭಾಗಗಳಲ್ಲಿ ಸ್ವಲ್ಪ ಚಪ್ಪಟೆಯಾಗಿಯೂ ಸಮಭಾಜಕ ವೃತ್ತದ ಬಳಿ ಉಬ್ಬಿದಂತೆಯೂ ಇರುವುದು. ಇದರಿಂದಾಗಿ ಭೂಮಿ ಜಿಯಾಯಿಡ್ ಅಥವಾ ಅಂಡ ಗೋಳಾಕಾರವಾಗಿದೆ.

ಭೂಮಿಯ ದೈನಂದಿನ ಚಲನೆಯಿಂದ ರೇಖಾಂಶಗಳನ್ನು ನಿರ್ಧರಿಸಬಹುದು. ಭೂಮಿಯು ಜಿಯಾಯಿಡ್ ಆಕಾರದಲ್ಲಿದ್ದು $360^0$ ಗಳಿಗೆ ಸಮನಾಗಿದೆ. ಎಲ್ಲ $360^0$ ಕೋನಗಳನ್ನು ಕ್ರಮಿಸುತ್ತ ಭೂಮಿ ತನ್ನ ಅಕ್ಷದಲ್ಲಿ ಒಂದು ಪ್ರದಕ್ಷಿಣೆ ಹಾಕುವುದು. ಅಂದರೆ ಪ್ರತಿ ಕೋನವನ್ನು ಕ್ರಮಿಸಲು 4 ನಿಮಿಷದಂತೆ 24 ಗಂಟೆಗಳಲ್ಲಿ $360^0$ಗಳನ್ನು ಕ್ರಮಿಸುವುದು. ಈ ಆಧಾರದ ಮೇಲೆ ಸಮಭಾಜಕ ವೃತ್ತವನ್ನು 360 ವಿಭಾಗಗಳನ್ನಾಗಿ ವಿಂಗಡಿಸಿ, ಆ ಬಿಂದುಗಳ ಮೂಲಕ ಹಾಯ್ದು ಹೋಗಿ ಎರಡೂ ಧ್ರುವ ಬಿಂದುಗಳನ್ನು ಸೇರಿಸುವಂತೆ ರೇಖೆಗಳನ್ನು ಎಳೆದರೆ ರೇಖಾಂಶಗಳು ದೊರೆಯುತ್ತವೆ.

ದೈನಂದಿನ ಚಲನೆಯಿಂದ ಭೂಮಿ ಒಂದು ಅಯಸ್ಕಾಂತದಂತೆ ವರ್ತಿಸುವುದು. ಪರಿಣಾಮವಾಗಿ ದಿಕ್ಸೂಚಿಯ ಮುಳ್ಳು ಯಾವಾಗಲೂ ಉತ್ತರದ ದಿಕ್ಕಿಗೆ ನಿರ್ದೇಶಿಸುವುದು.

ದೈನಂದಿನ ಚಲನೆಯಿಂದ ಕೌನಿಕ ವೇಗ ಮತ್ತು ಕೇಂದ್ರ ವಿಮುಖ ಶಕ್ತಿಗಳ ವ್ಯತ್ಯಾಸದಿಂದಾಗಿ ವಸ್ತುಗಳ ತೂಕ ಧ್ರುವ ಭಾಗಗಳಿಗಿಂತ ಭೂಮಧ್ಯ ರೇಖೆಯ ಬಳಿ ಕಡಿಮೆ.

ವಾರ್ಷಿಕ ಚಲನೆ: ಭೂಮಿಯು ತನ್ನ ಅಕ್ಷದಲ್ಲಿ ಸುತ್ತುತ್ತ ಸೂರ್ಯನ ಸುತ್ತ ತನ್ನ ಪಥದಲ್ಲಿ ಸುತ್ತಿಬರುವುದನ್ನು ವಾರ್ಷಿಕ ಚಲನೆ ಎನ್ನುವರು. ಭೂಮಿ ಸೂರ್ಯನ ಸುತ್ತ ಒಂದು ಪ್ರದಕ್ಷಿಣೆ ಹಾಕಲು ವಾಸ್ತವವಾಗಿ 365 ದಿನಗಳು, 6 ಗಂಟೆ, 9 ನಿಮಿಷ ಮತ್ತು 9.545 ಸೆಕೆಂಡು ಕಾಲ ಬೇಕಾಗುವುದು. ಈ ಅವಧಿಯನ್ನು ನಾಕ್ಷತ್ರಿಕ ವರ್ಷ ಎಂದು ಕರೆಯುವರು. ಆದರೆ ವ್ಯಾವಹಾರಿಕವಾಗಿ ವರ್ಷಾವಧಿಯನ್ನು ಒಂದು ಸಂಕ್ರಾಂತಿಯಿಂದ ಮತ್ತೊಂದು ಸಂಕ್ರಾಂತಿಯವರೆಗೆ ಗಣನೆಗೆ ತೆಗೆದುಕೊಳ್ಳಲಾಗುವುದು. ಈ ಅವಧಿಯು 365 ದಿನ, 5 ಗಂಟೆ, 48 ನಿಮಿಷ ಮತ್ತು 45.68 ಸೆಕೆಂಡ್ ಅಥವಾ 365 $^1/_4$ ದಿನಗಳಾಗಿರುತ್ತದೆ. ಈ ಅವಧಿಗೆ ಸೌರವರ್ಷ ಎಂದು ಕರೆಯುವರು. ವರ್ಷವು 365 ದಿನಗಳನ್ನೊಳಗೊಂಡಿದ್ದು, ಉಳಿದ $^1/_4$ ದಿನವನ್ನು ಸರಿದೂಗಿಸಲು 4 ವರ್ಷಗಳಿಗೊಮ್ಮೆ ಅದನ್ನು ಕೂಡಿಸಿದಾಗ ಫೆಬ್ರವರಿ ತಿಂಗಳು 28 ದಿನಗಳಿಗೆ ಬದಲಾಗಿ 29 ದಿನಗಳಾಗುವುದು. ಆ ವರ್ಷದಲ್ಲಿ 366 ದಿನಗಳಾಗುವುವು. ಅದನ್ನು ಅಧಿಕ ವರ್ಷ ಎಂದು ಕರೆಯುವರು.

ಭೂಮಿಯು ಸೂರ್ಯನನ್ನು ಪ್ರದಕ್ಷಿಣೆ ಹಾಕುವ ವಿಶಿಷ್ಟ ಮಾರ್ಗಕ್ಕೆ ಭೂಪಥ ಎಂದು ಕರೆಯುವರು. ಇದು ದೀರ್ಘವೃತ್ತಾಕಾರ ಅಥವಾ ಅಂಡಾಕಾರವಾಗಿರುತ್ತದೆ. ಇದರ ಉದ್ದ 927,700,000 ಕಿಮೀ. ಈ ಅಂಡಾಕಾರದ ಪಥದಲ್ಲಿ ಭೂಮಿ ಚಲಿಸುವಾಗ ಒಮ್ಮೆ ಸೂರ್ಯನಿಗೆ ಸಮೀಪವಾಗಿಯೂ ಮತ್ತೊಮ್ಮೆ ದೂರದಲ್ಲಿ ಬರುವುದು. ಜನವರಿ 3 ರಂದು ಭೂಮಿಯು ಸೂರ್ಯನಿಗೆ ಹತ್ತಿರದಲ್ಲಿ, ಅಂದರೆ 147 ಮಿಲಿಯನ್ ಕಿಮೀ ಅಂತರದಲ್ಲಿ ಸಂಚರಿಸುವುದು. ಭೂಮಿಯ ಈ ಸ್ಥಾನಕ್ಕೆ ನೀಚಸ್ಥಾನ (ಪೆರಿಹೆಲಿಯನ್) ಎನ್ನುವರು. ಜುಲೈ 4 ರಂದು ಭೂಮಿಯು ಸೂರ್ಯನಿಂದ ದೂರದಲ್ಲಿ ಅಂದರೆ 152 ಮಿಲಿಯನ್ ಕಿಮೀ ದೂರದಲ್ಲಿ ಸಂಚರಿಸುವುದು. ಈ ಸ್ಥಾನಕ್ಕೆ ಉಚ್ಚಸ್ಥಾನ (ಅಫಿಲಿಯನ್) ಎನ್ನುವರು.

ಭೂಮಿ ತನ್ನ ಪಥದಲ್ಲಿ ಪ್ರತಿ ಗಂಟೆಗೆ 105,824 ಕಿಮೀ ವೇಗದಲ್ಲಿ ಚಲಿಸುವುದು. ಭೂಮಿ ಮತ್ತು ಸೂರ್ಯರ ನಡುವಣ ಅಂತರ ಕಡಿಮೆಯಿದ್ದಾಗ ಭೂಮಿಯ ಚಲನಾ ವೇಗ ಹೆಚ್ಚಾಗಿರುತ್ತದೆ. ಅಂತರ ಹೆಚ್ಚಾಗಿದ್ದಾಗ ವೇಗ ಕಡಿಮೆ. ಭೂಮಿ ಸೂರ್ಯನನ್ನು ಅಪ್ರದಕ್ಷಿಣೆ ದಿಕ್ಕಿನಲ್ಲಿ ಸುತ್ತುವುದು. ತನ್ನ ಪಥದಲ್ಲಿ ಸಂಚರಿಸುವಾಗ ಭೂಮಿಯ ಉತ್ತರ ಧ್ರುವ ಯಾವಾಗಲೂ ಧ್ರುವ ನಕ್ಷತ್ರದ ಕಡೆಗೆ ಓರೆಯಾಗಿರುತ್ತದೆ. ಭೂ ಅಕ್ಷವೂ ಭೂ ಪಥಕ್ಕೆ 66 $^1/_2{}^0$ ಕೋನದಲ್ಲಿರುತ್ತದೆ. ಇದನ್ನು ಭೂಮಿಯ ಓಲುವಿಕೆ ಎನ್ನುವರು. ಇದರಿಂದ ಹಗಲು–ರಾತ್ರಿಗಳ ಅವಧಿಯಲ್ಲಿ ವ್ಯತ್ಯಾಸ ಹಾಗೂ ಋತುಭೇದಗಳುಂಟಾಗುತ್ತವೆ. (ಪಿ.ಎಂ.)

**ಭೂಮಿಯ ನಿಮ್ನೋನ್ನತಗಳು:** ಭೂಮಿಯ ಮೇಲ್ಪದರದಲ್ಲಿ ಕಾಣಬರುವ, ಹೆಚ್ಚು ವಿಕೃತಿಗೊಂಡಿಲ್ಲದ, ಸಾಧಾರಣ ರೀತಿಯ ಬಗ್ಗಿರುವಿಕೆ (ಕ್ರಸ್ಟಲ್ ವಾರ್ಪಿಂಗ್). ಇವು ಬೇರೆ ಬೇರೆ ಕಾರಣಗಳಿಂದ ಮತ್ತು ವಿವಿಧಗತಿಗಳಲ್ಲಿ ಉಂಟಾಗುತ್ತವೆ. ಇವನ್ನು ಉಬ್ಬರವಿಳಿತ ಮಾಪಕಗಳಿಂದಲೂ (ಟೈಡ್‌ಗೇಜಸ್) ಪ್ರವಣಮಾಪಕಗಳಿಂದಲೂ (ಟಿಲ್ಟ್‌ಮೀಟರ್ಸ್) ಭೂಗಣಿತ (ಜಿಯೋಡೆಟಿಕ್) ಸರ್ವೇಕ್ಷಣೆಗಳಿಂದಲೂ ಭೂವೈಜ್ಞಾನಿಕ ಸಮೀಕ್ಷೆಯಿಂದಲೂ ಅಳೆಯಬಹುದು.

ಕಳೆದ 9950 ವರ್ಷಗಳಿಂದೀಚೆಗೆ ಉತ್ತರ ಫಿನ್ಲೆಂಡ್ ಭೂಪ್ರದೇಶ ಸು. 476 ಮೀ ಎತ್ತರಕ್ಕೆ ತಳ್ಳಲ್ಪಟ್ಟಿದೆ ಎಂದು ಭೂವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಇದಕ್ಕೆ ಅಲ್ಲಿಯ ಮಂಜುಗೆಡ್ಡೆ ಕರಗುವುದೇ ಕಾರಣ. ಇಂದಿಗೂ ಆ ಪ್ರದೇಶದಲ್ಲಿ ಭೂಮಿಯ ಮೇಲ್ಮುಖಚಲನೆ ವರ್ಷವೊಂದಕ್ಕೆ 1.3 ಸೆಂಮೀ ನಷ್ಟು ನಡೆಯುತ್ತಿದೆ. ಉತ್ತರ ಫಿನ್ಲೆಂಡಿನಲ್ಲಿ ಹೀಗಿದ್ದರೂ ಡೆನ್ಮಾರ್ಕಿನಲ್ಲಿಯ ಸಮುದ್ರ ಮಟ್ಟ ಮಾತ್ರ ಸ್ಥಿರವಾಗಿಯೇ ಇದೆ. ಹಡ್ಸನ್ ಕೊಲ್ಲಿಯ ಮಟ್ಟ ಕೂಡ ಏರುತ್ತಿದೆ ಮತ್ತು ಪಂಚಮಹಾ ಸರೋವರಗಳೂ ವರ್ಷವೊಂದಕ್ಕೆ 0.1 ಸೆಂಮೀ ನಂತೆ ದಕ್ಷಿಣಕ್ಕೆ ಓರೆಯಾಗುತ್ತಿವೆ ಎಂದು ತಿಳಿದುಬಂದಿದೆ.

ನದಿ ಮುಖಜಭೂಮಿಯಲ್ಲಿ ಶೇಖರಣೆಯಾಗುವ ವಸ್ತುಗಳ ಭಾರದಿಂದ ಅನೇಕ ಸಮುದ್ರತೀರಗಳು ಕುಸಿಯುತ್ತಿವೆ. ಉದಾ: ನೆದರ್ಲೆಂಡಿನ ತೀರಪ್ರದೇಶ ಮತ್ತು ಉತ್ತರ ಅಮೆರಿಕದ ಅಟ್ಲಾಂಟಿಕ್ ಹಾಗೂ ಗಲ್ಫ್ ತೀರಗಳು ವರ್ಷವೊಂದಕ್ಕೆ 0.5 ಸೆಂಮೀ ನಂತೆ ಕುಸಿಯುತ್ತಿವೆ. ಇದರಿಂದಾಗಿ, ಆ ತೀರಗಳ ಸಮುದ್ರಮಟ್ಟ ವರ್ಷವೊಂದಕ್ಕೆ 0.1 ಸೆಂಮೀ ನಂತೆ ಏರುತ್ತಿದೆ. ಜಪಾನ್ ಮತ್ತು ಉತ್ತರ ಅಮೆರಿಕದ ಪೆಸಿಫಿಕ್ ತೀರಗಳಂಥ ಕೆಲವು ಭೂಭಾಗಗಳಲ್ಲಿ ಪರ್ವತ ಬೆಳೆವಣಿಗೆ ಹಾಗೂ ಸ್ತರಭಂಗಗಳ ಕಾರಣದಿಂದಾಗಿ ಆಗಾಗ್ಗೆ ಭೂಕಂಪನಗಳಾಗುತ್ತಿರುತ್ತವೆ. ಇಂಥ ಸಂದರ್ಭಗಳಲ್ಲಿ ಭೂಮಿಯ ಮೇಲ್ಪದರ ಕೆಲವಾರು ಮೀಟರುಗಳಷ್ಟು ಎತ್ತರಕ್ಕೆ ದೂಡಲ್ಪಡುತ್ತದೆ. ಹಾಗೆಯೇ ಕ್ಯಾಲಿಫೋರ್ನಿಯ ಮತ್ತು ನ್ಯೂಜಿಲೆಂಡ್ ಪ್ರದೇಶಗಳಲ್ಲಿ ವರ್ಷವೊಂದಕ್ಕೆ 5 ಸೆಂಮೀ ನಂತೆ ಭೂಮಿಯ ಮೇಲ್ಪದರದ ಅಡ್ಡಚಲನೆಯನ್ನು ಗಮನಿಸಬಹುದು.

ಎತ್ತರದ ಪರ್ವತಗಳು ಹಾಗೂ ಆಳದ ತೈಲ ಬಾವಿಗಳಲ್ಲಿ ದೊರಕಿರುವ, ವಕ್ರಗೊಂಡಿರುವ ಜಲಜ ಶಿಲೆಗಳು ಬಹಳಷ್ಟು ಹಿಂದೆಯೇ ವಿಶಾಲವಾದ ಭೂನಿಮ್ನೋನ್ನತಗಳು ಉಂಟಾಗಿದ್ದುದರ ಬಗ್ಗೆ ಕುರುಹು ನೀಡುತ್ತವೆ. ಹವಾಯಿಯ ಜ್ವಾಲಾಮುಖಿಗಳ ಸುತ್ತಲೂ ಮುಳುಗಡೆಯಾಗಿರುವ ತೀರಗಳು ಮತ್ತು ಕಂದಕಗಳು ಭಾರದಿಂದ ಆಗಿರುವ ವಕ್ರತೆಯನ್ನು ತೋರಿಸುತ್ತಿವೆ.

ವಿಶಾಲ ಭೂನಿಮ್ನೋನ್ನತಗಳಾಗುವಿಕೆಗೆ ಇನ್ನೂ ಹಲವಾರು ಕಾರಣಗಳಿವೆ. ಅವುಗಳ ಪೈಕಿ ಮುಖ್ಯವಾದವು: ಧ್ರುವ ಪ್ರದೇಶಗಳ ಅಲೆತ, ಭೂಖಂಡಗಳ ಅಲೆತ, ಭೂಮಿಯ ಒಳಭಾಗದಲ್ಲಿ ನಡೆಯುತ್ತಿರುವ ಉಷ್ಣನಯನ ಪ್ರವಾಹಗಳು ಇತ್ಯಾದಿ. (ಸಿ.ಎನ್.)

**ಭೂರಾಜಕೀಯತೆ:** ಭೂಗೋಳ ವಿಜ್ಞಾನ ಪಿತಾಮಹ ಫ್ರೆಡರಿಕ್ ರ್‍ಯಾಟ್ಜೆಲ್ ಪ್ರತಿಪಾದಿಸಿದ ಒಂದು ತತ್ತ್ವ. ಈತ 1897ರಲ್ಲಿ, ಕನ್ಸರ್ನಿಂಗ್ ಲಿವಿಂಗ್ ಸ್ಪೇಸ್ ಮತ್ತು 1901ರಲ್ಲಿ ಲಿವಿಂಗ್ ಸ್ಪೇಸ್ ಪ್ರಬಂಧಗಳಲ್ಲಿ ಈ ತತ್ತ್ವದ ವಿಚಾರಗಳಿವೆ. ಇದು ಎರಡನೆಯ ಮಹಾಯುದ್ಧದ ಮೇಲೂ ಪ್ರಭಾವ ಬೀರಿರುವುದು ಕಂಡುಬರುತ್ತದೆ. ರ್‍ಯಾಟ್ಜಲ್ ಹೇಳಿರುವಂತೆ ರಾಷ್ಟ್ರಗಳು ಯಾವಾಗಲೂ ಜಾಗ (ರಾಷ್ಟ್ರ) ವಿಸ್ತರಣೆಗಾಗಿ ಕಾದಾಡುತ್ತಿರುತ್ತವೆ. ಇದು ಒಂದು ರೀತಿಯಲ್ಲಿ ಸಹಜ ಕ್ರಿಯೆ. ಏಕೆಂದರೆ ಜನಸಂಖ್ಯೆ ಹೆಚ್ಚಿದಂತೆ ವಾಸಿಸುವ ಜಾಗ ಸಂಪನ್ಮೂಲಗಳು ಬೇಕಾಗುತ್ತವೆ. ಆದುದರಿಂದ ಬಲಿಷ್ಠರಾಜ್ಯ, ರಾಜ್ಯವಿಸ್ತರಣೆ ಮಾಡಬೇಕು. ಈ ದಿಶೆಯಲ್ಲಿ ಚಿಕ್ಕ ಪುಟ್ಟ ರಾಷ್ಟ್ರಗಳನ್ನು ಅವು ಆಕ್ರಮಿಸಬೇಕಾಗುತ್ತದೆ. ಅದರಲ್ಲೂ ಅಗಾಧ ಪ್ರಮಾಣದಲ್ಲಿ ಖಾಲಿ ಭೂಪ್ರದೇಶಗಳನ್ನು ಹೊಂದಿರುವ ದೇಶಗಳನ್ನು ಆಕ್ರಮಿಸಬೇಕಾಗುತ್ತದೆ.

ಜರ್ಮನಿಯಲ್ಲಿ 1935ರ ವೇಳೆಗೆ ಅನೇಕ ವಿದ್ವಾಂಸರು, ರಾಜಕೀಯ ಮುಖಂಡರೂ ಈ ತತ್ತ್ವವನ್ನು ಒಪ್ಪಿ ತಮ್ಮ ಬರೆವಣಿಗೆಗಳಲ್ಲಿ ಪ್ರಚುರಪಡಿಸಿದರು. ಈ ಹೊತ್ತಿಗೆ ಜೆಲನ್ ಎನ್ನುವ ಸ್ವೀಡಿಶ್ ರಾಜಕೀಯ ವಿದ್ವಾಂಸ ಇದಕ್ಕೆ ಪೂರಕವಾಗಿ ತನ್ನ ಪುಸ್ತಕದಲ್ಲಿ ಸ್ವಾಭಾವಿಕವಾಗಿ ವ್ಯಕ್ತಿಗಳು ಮತ್ತು ದೇಶಗಳು ತಮ್ಮ ಆವಶ್ಯಕತೆ ಹಾಗೂ ಜಾಗಕ್ಕಾಗಿ ಅವರ ವ್ಯಾಪ್ತಿ ಪ್ರದೇಶವನ್ನು ವಸಾಹತು ಮಾರ್ಗದಿಂದ ಇತರೆ ದೇಶಗಳೊಂದಿಗೆ ಸಂಯೋಜನೆಯಾಗಿ ಹಾಗೂ ಅನೇಕ ಬಗೆಯ ಆಕ್ರಮಣದಿಂದ ಹೆಚ್ಚಿಸಿಕೊಳ್ಳುತ್ತಾರೆ ಎಂದು ಪ್ರತಿಪಾದಿಸಿದ. ಅನಂತರ ಜರ್ಮನಿಯ ಕಾರ್ಲ್ ಹಾಸ್‌ಹೋಪರ್‌ರವರು ಇದನ್ನು ತೀವ್ರವಾಗಿ ಪ್ರತಿಪಾದಿಸುತ್ತಾರೆ. ಅವರು 1924ರ ಸುಮಾರಿನಲ್ಲಿ ಹೊರತಂದ ಜ್ಸೈಟ್–ಶ್ರಿಷ್ಟ–ಪುರ್–ಜಿಯೋ ಪಾಲಿಕ್ ಎನ್ನುವ ನಿಯತಕಾಲಿಕ ಪತ್ರಿಕೆಯಲ್ಲಿ ಜಿಯೋ ಪೊಲಿಟ್ / ಭೂರಾಜಕೀಯತೆಯನ್ನು ಸವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಜರ್ಮನಿಯ ಸಂಧಿಗ್ಧ ಪರಿಸ್ಥಿತಿ ಹಿಟ್ಲರ್‌ನ ನಾಝೀ ತತ್ತ್ವ ಹಾಗೂ ಕಾರ್ಲ್ ಹೋಪ್‌ರು ಜಪಾನ್‌ನಂತಹ ರಾಷ್ಟ್ರಗಳ ಭೇಟಿಯಲ್ಲಿ ಕಂಡ ರಾಜಕೀಯ ಪರಿಸ್ಥಿತಿ ಇತ್ಯಾದಿ, ಜರ್ಮನಿಯಲ್ಲಿ ಭೂರಾಜಕೀಯತೆ ಪಕ್ವವಾಗಿ ಬೆಳೆಯಲು ಸಹಾಯವಾಯಿತು. ಈ ಆಕ್ರಮಣಕಾರಿ ರಾಜಕೀಯ ತತ್ತ್ವ ಪ್ರಚಾರ ಎರಡನೆಯ ಮಹಾಯುದ್ಧಕ್ಕೆ ಮುಂಚೆ ಜರ್ಮನಿಯಲ್ಲಿ ಎಷ್ಟು ಪ್ರಚಾರದಲ್ಲಿತ್ತೆಂದರೆ ಒಂದೆಡೆ ನಿಯತಕಾಲಿಕೆಗಳು, ಸಂಘ ಸಂಸ್ಥೆಗಳು – ಇವು ಸರ್ಕಾರದಿಂದ ಅನುದಾನ ಪಡೆದು ಪ್ರಚಾರ ಸಂಸ್ಥೆಗಳಾದುವು. ಆಗ ಯುದ್ಧ ಭೂಗೋಳ ಶಾಸ್ತ್ರದಂತಹ ಉಪಭಾಗಗಳು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ರಚಿತವಾದುವು. ಭೂ ರಾಜಕೀಯ ತತ್ತ್ವವನ್ನು ಶಾಲಾ–ವಿಶ್ವವಿದ್ಯಾನಿಲಯ ಮಟ್ಟದ ಸೆಮಿನಾರ್‌ಗಳಿಂದ ಹಿಡಿದು, ಗ್ರಂಥಾಲಯ, ಪುಸ್ತಕದ ಅಂಗಡಿಯಲ್ಲಿ ಮತ್ತು ರಾತ್ರಿ ಭೋಜನ ಕೂಟ–ಬೀರ್ ಪಾರ್ಟಿಗಳಲ್ಲಿ ಚರ್ಚಿಸಿದರಂತೆ. ಈ ಕಾಲದಲ್ಲೇ ಮ್ಯೂನಿಚ್‌ನಗರದ ರಾಜಕೀಯ ಭೂಗೋಳ ವಿಜ್ಞಾನಿಗಳು ಈ ಭೂರಾಜಕೀಯ ತತ್ತ್ವವನ್ನು ಜಾಗತಿಕ ಮಟ್ಟದಲ್ಲೂ ಇರಬೇಕೆಂದು ಅದನ್ನು ಮನಃಶಾಸ್ತ್ರ, ಔಷಧಶಾಸ್ತ್ರ ಮತ್ತು ನ್ಯಾಯ ಶಾಸ್ತ್ರ ಮುಂತಾದ ವಿಜ್ಞಾನಗಳಲ್ಲಿಯೂ ತರಬೇಕಾಗಿದೆಯೆಂದು ಪ್ರತಿಪಾದಿಸಿದರು. ಈ ಪದದ ಬಳಕೆಯನ್ನು ಜೆಲೆನ್ ತಂದಾಗ ಅದರ ತೀವ್ರ ಚಿಂತನೆ, ಅನುಷ್ಠಾನವೆಲ್ಲ ಜರ್ಮನಿಯಲ್ಲಿ ಹಾಸ್‌ಹೋಪರರ ಸಮಕಾಲೀನರಿಂದಾಗಿರುವುದು ಕಂಡುಬರುತ್ತದೆ. ಭೂ ರಾಜಕೀಯ ತತ್ತ್ವಪ್ರತಿಪಾದನೆಯ ಚಿಂತಕರನ್ನು ಈ ಸಮೀಕ್ಷೆಯಲ್ಲಿ ಇಡಬಹುದು. ರ್‍ಯಾಟ್ಜಲ್, ಜೆಲನ್, ಹಾಸ್‌ಹೋಪರ್, ಒಟ್ಟೋಪಾಲ್, ರುಡಾಲ್ಫ್ ಹೆಡ್, ಕೊನೆಯ ವ್ಯಕ್ತಿಗಳು ಈ ತತ್ತ್ವ ಪ್ರೇರಣೆಯಲ್ಲಿ ಎರಡನೆಯ ಮಹಾಯುದ್ಧದಲ್ಲಿ ತೊಡಗಿದ್ದರು ಹಾಗೂ ಅದರಲ್ಲಿ ಅವರು ಸೋಲನ್ನೊಪ್ಪಿದರು. (ಬಿ.ಇ.)

**ಭೂವಿಜ್ಞಾನ:** ಭೂಮಿಯನ್ನು ಕುರಿತ ವೈಜ್ಞಾನಿಕ ಅಧ್ಯಯನ (ಜಿಯಾಲಜಿ). ಶಿಲೆಗಳಲ್ಲಿ ದಾಖಲಾಗಿರುವಂತೆ ಇರುವ ಭೂಮಿಯ ಜೀವನ ವೃತ್ತಾಂತ, ಇತಿಹಾಸಗಳ ಸಮಗ್ರ ಅಧ್ಯಯನ ಇದರಲ್ಲಿ ಮಾಡಲಾಗುತ್ತದೆ. ಪ್ರದೇಶವೊಂದರ ಶಿಲಾರಚನೆಗಳನ್ನು ಕುರಿತ ರೇಖಾಗಣಿತೀಯ ವೃತ್ತಾಂತ ಹಾಗೂ ವಿಶ್ಲೇಷಣೆ, ಹವೆಯ ಬದಲಾವಣೆಗಳಿಂದ ಅವುಗಳ ಮೇಲೆ ಉಂಟಾಗುವ ಪರಿಣಾಮ, ಕ್ಷಯ, ಅವಸಾದನ ಮುಂತಾದ ಭೂವೈಜ್ಞಾನಿಕ ಲಕ್ಷಣಗಳ ಅಧ್ಯಯನವೂ ಇಲ್ಲಿ ಸೇರುತ್ತದೆ. ಗ್ರೀಕ್ ಭಾಷೆಯಲ್ಲಿ ಜಿ ಎಂದರೆ ಭೂದೇವತೆಯೆಂದೂ ಜಿಯೋ ಎಂದರೆ ಭೂಮಿ ಎಂದೂ ಲಾಜಿ ಎಂದರೆ ಜ್ಞಾನ ಎಂದೂ ಅರ್ಥ. ಭೂಗೋಳ ವಿಜ್ಞಾನದೊಡನೆ ನಿಕಟ ಸಂಬಂಧವಿದೆ.

ಇದು ವಿಜ್ಞಾನದ ಇತರ ವಿಭಾಗಗಳಾದ ಭೌತ, ರಸಾಯನ, ಖಗೋಳ, ಜೀವ ಮುಂತಾದವುಗಳ ಜೊತೆ ನಿಕಟಸಂಪರ್ಕ ಹೊಂದಿದೆ. ಪುರಾತನ ಹಿಂದುಗಳು, ಬ್ಯಾಬಿಲೋನಿಯನ್ನರು, ಸುಮೇರಿಯನ್ನರು ಹಾಗೂ ಗ್ರೀಕರು ಭೂಮಿಯ ಮೇಲೆ ಕಂಡುಬರುವ ಜ್ವಾಲಾಮುಖಿ, ಭೂಕಂಪನಗಳು, ಸಮುದ್ರಾಕ್ರಮಣ ಮುಂತಾದ ಕ್ರಿಯೆಗಳಿಗೆಲ್ಲ ಅತಿಮಾನುಷ ಅಥವಾ ಅಮಾನುಷ ವ್ಯಕ್ತಿಗಳ ಕೋಪ ಪ್ರಕೋಪಗಳೇ ಕಾರಣ ಎನ್ನುತಿದ್ದುದೂ ಉಂಟು.

ಈ ಮೂಢನಂಬಿಕೆಗಳನ್ನು ಮೊದಲಿಗೆ ತೊಡೆದುಹಾಕಿದವ ಗ್ರೀಕ್ ತತ್ತ್ವಜ್ಞಾನಿ ತೇಲ್ಸ್ (ಪ್ರ.ಶ.ಪೂ. ಸು.640–546). ಪ್ರ.ಶ.ಪೂ. 5 ನೆಯ ಶತಮಾನದ ರೋಮನ್ ತತ್ತ್ವಜ್ಞಾನಿ ಕ್ಸೀನೊಫ್ಯಾನಸ್ ಇಟಲಿಯ ಭೂಪ್ರದೇಶಗಳಲ್ಲಿಯ ಶಿಲೆಗಳಲ್ಲಿ ಅಡಕವಾಗಿದ್ದ ಮೀನಿನ ಪಳೆಯುಳಿಕೆಗಳು ಹಾಗೂ ಸಮುದ್ರಜೀವಿಗಳ ಚಿಪ್ಪುಗಳನ್ನು ಆಧರಿಸಿ ಆ ನೆಲಭಾಗವನ್ನು ಒಮ್ಮೆ ಸಮುದ್ರ ಆಕ್ರಮಿಸಿತ್ತೆಂದು ಸಾರಿದ್ದ. ಪ್ರ.ಶ.ಪೂ. 4ನೆಯ ಶತಮಾನದ ಗ್ರೀಕ್ ವಿದ್ವಾಂಸ ಅರಿಸ್ಟಾಟಲ್ ಭೂಭಾಗಗಳ ಸ್ವರೂಪ ನಿರ್ಮಾಣದಲ್ಲಿ ನೀರು ಬಲು ಮುಖ್ಯ ಪಾತ್ರ ವಹಿಸುತ್ತದೆಂದು ಹೇಳಿದ. ಇದನ್ನು ಸಮರ್ಥಿಸಲು ಆತ ಈಜಿಪ್ಟಿನ ನೈಲ್ ನದಿ ಹೊತ್ತು ತಂದ ಮೆಕ್ಕಲಿನ ಶೇಖರಣೆಯಿಂದ ಅದರ ಮುಖಜಭೂಮಿ ರೂಪುಗೊಂಡಿತೆಂದೂ ಅಲ್ಲಿದ್ದ ನೀರು ಸಮುದ್ರವನ್ನು ಸೇರಿ ಅದರ ಮಟ್ಟ ಏರಿತೆಂದೂ ನಿರೂಪಿಸಿದ. ಪ್ರ.ಶ.ಪೂ. 1ನೆಯ ಶತಮಾನದ ಮತ್ತೊಬ್ಬ ಗ್ರೀಕ್ ತತ್ತ್ವಜ್ಞಾನಿ ಸ್ಟ್ರಾಬೋ ತಾನು ವಾಸಿಸುತ್ತಿದ್ದ ಏಷ್ಯ ಮೈನರ್ (ಟರ್ಕಿ) ಪ್ರದೇಶದಲ್ಲಿ ಭೂಕಂಪನಗಳು ಆದಾಗ ಅನೇಕ ವೇಳೆ ಅಲ್ಲಿಯ ನೆಲಭಾಗ ಉಬ್ಬಿ ಮೇಲಕ್ಕೆ ಬಂದಿತೆಂದೂ ಈ ಕ್ರಿಯೆ ಭೂಸ್ವರೂಪನಿರ್ಮಾಣದಲ್ಲಿ ಸಾಕಷ್ಟು ಪಾತ್ರವಹಿಸುವುದೆಂದೂ ತಿಳಿಸಿದ. ಕ್ರೈಸ್ತಧರ್ಮ ಪ್ರಚಾರಕ್ಕೆ ಬಂದ ಅನಂತರ ಜನ ಮತಸಂಬಂಧೀ ವಿಚಾರಗಳಲ್ಲಿ ಅಂಧಶ್ರದ್ಧೆ ತಳೆದಕಾರಣ ವಿಜ್ಞಾನ ಅಷ್ಟಾಗಿ ಮುಂದುವರಿಯಲಿಲ್ಲ.

ಇದಾದ ಹಲವಾರು ದಶಕಗಳ ಅನಂತರ ಅಂದರೆ, ಕ್ರಿ.ಶ. ಎರಡನೆಯ ಶತಮಾನದಲ್ಲಿ, ಅವಿಸೆನ್ನ ಎಂಬ ತತ್ತ್ವಶಾಸ್ತ್ರಜ್ಞ ಮೃದುವಾದ ಕೆಸರು ಕಾಲಕ್ರಮೇಣ ಗಟ್ಟಿಯಾಗಿ ಶಿಲೆಯಾಗಿ ಮಾರ್ಪಡುವುದೆಂದೂ ಗುಹೆಯ ಚಾವಣಿಯಿಂದ ತೊಟ್ಟಿಕ್ಕುವ ನೀರು ಸಹ ಕ್ರಮವಾಗಿ ಸುಣ್ಣಶಿಲೆಯಾಗಿ ಪರಿವರ್ತನೆಗೊಳ್ಳುವುದೆಂದೂ ತಿಳಿಸಿದ. ಗಾಳಿ ಹಾಗೂ ನೀರಿನ ಪರಿಣಾಮಗಳಿಂದ ಆಗುವ ಭೂಚಟುವಟಿಕೆಗಳನ್ನು ವಿವರಿಸಿದ. ಮುಂದೆ 400 ವರ್ಷಗಳ ಅನಂತರ ಇಟಲಿಯ ಕಲಾವಿದ ಹಾಗೂ ವಿಜ್ಞಾನಿ ಲಿಯೊನಾರ್ಡೊ ಡ ವಿಂಚಿ (1452–1519) ಹಲವಾರು ಭೂವೈಜ್ಞಾನಿಕ ಲಕ್ಷಣಗಳು ಉಂಟಾದ ರೀತಿಯನ್ನೂ ಸಂಚಿತಶಿಲೆಗಳಲ್ಲಿ ಹುದುಗಿದ್ದ ಅವಶೇಷಗಳ ಜೈವಿಕ ಮೂಲವನ್ನೂ ನೆಲಜಲಮಟ್ಟಗಳ ಏರುಪೇರುಗಳನ್ನೂ ವಿವೇಚಿಸಿದ.

ಖನಿಜವಿಜ್ಞಾನದ ಆದ್ಯಪ್ರವರ್ತಕನೆಂದು ಹೆಸರು ಪಡೆದಿರುವ ಜಾರ್ಜ್ ಅಗ್ರಿಕೋಲ 1545ರಲ್ಲಿ ಪ್ರಕಟವಾದ ದೆ ನೇಚುರ ಫಾಸಿಲಿಯಮ್ ಎಂಬ ಗ್ರಂಥದಲ್ಲಿ ಭೂಮಿಯಲ್ಲಿ ದೊರೆಯುವ ವಿವಿಧ ಶಿಲೆ, ಖನಿಜ ಹಾಗೂ ರತ್ನಗಳನ್ನು ಉಲ್ಲೇಖಿಸಿ ವರ್ಣಿಸಿದ್ದಾನೆ. ಬಹುಶಃ ಇದೇ ಸರಿಸುಮಾರಿನ ಭಾರತದ ಖಗೋಳವಿಜ್ಞಾನಿ ವರಾಹಮಿಹಿರ ತನ್ನ ಬೃಹತ್ ಸಂಹಿತೆಯಲ್ಲಿ ಭೂಕಂಪನಗಳ ಲಕ್ಷಣಗಳನ್ನು ವಿವರಿಸುವ ಅಧ್ಯಾಯವೊಂದನ್ನು ಬರೆದಿದ್ದಾನೆ. ಅಲ್ಲದೆ ಇವನ ಬರೆವಣಿಗೆಗಳಲ್ಲಿ ಅಂತರ್ಜಲಕ್ಕೆ ಸಂಬಂಧಿಸಿದ ಹಲವಾರು ವಿವರಗಳೂ ಇವೆ.

ನಿಕೊಲಾಸ್ ಸ್ಟೆನೋ ಇಟಲಿಯ ಟಸ್ಕನಿ ಪ್ರಾಂತ್ಯದ ಪರ್ವತ ಪ್ರದೇಶದ ಲಕ್ಷಣಗಳನ್ನು ವಿವರಿಸುವಾಗ (1669) ಭೂವಿಜ್ಞಾನದ ಅನೇಕ ಮೂಲಭೂತ ತತ್ತ್ವಗಳನ್ನು ಪ್ರತಿಪಾದಿಸಿದ್ದಾನೆ. ಇವುಗಳ ಪೈಕಿ ಅತಿ ಮುಖ್ಯವಾದುದು ಎಂದರೆ ಸಂಚಿತ ಶಿಲಾಸ್ತರಗಳು ಒಂದರಮೇಲೊಂದು ನಿಕ್ಷೇಪಗೊಳ್ಳುವಿಕೆಯನ್ನು ಕುರಿತದ್ದು. ಈ ಕ್ರಿಯೆಯಲ್ಲಿ ಕಿರಿಯ ಹೊಸ ಸ್ತರಗಳು ಹಿರಿಯ ಹಳೆ ಸ್ತರಗಳ ಮೇಲೆ ಅನುಕ್ರಮವಾಗಿ ನಿಕ್ಷೇಪಗೊಳ್ಳುತ್ತ ಸಹಸ್ರಾರು ಮೀಟರ್ ಮಂದದ ಶಿಲಾಸ್ತೋಮಗಳು ಮೈದೋರುತ್ತವೆ ಹಾಗೂ ಸಂಚಯನಕ್ರಿಯೆಯ ಆರಂಭದಲ್ಲೇ ಸ್ತರಗಳು ಮಟ್ಟಸ ನೆಲದ ಮೇಲೆ ಸಂಚಯನಗೊಳ್ಳುತ್ತವೆ. ಇದೇ ಭೂವಿಜ್ಞಾನದಲ್ಲಿ ಪ್ರಸ್ತಾಪಿಸಿರುವ ಅಧಿವ್ಯಾಪನ ನಿಯಮ (ಆರ್ಡರ್ ಆಫ್ ಸೂಪರ್‌ಪೊಸಿಷನ್). ಸ್ತರವಿಜ್ಞಾನದ ಅಧ್ಯಯನದಲ್ಲಿ ಇದು ಬಲು ಉಪಯುಕ್ತ. ವಿವಿಧ ಪ್ರದೇಶಗಳಲ್ಲಿರುವ ಶಿಲಾಸ್ತರಗಳ ವಯೋನಿರ್ಣಯ ವಿವಿಧ ಪ್ರದೇಶಗಳಲ್ಲಿಯ ಶಿಲಾಶ್ರೇಣಿಗಳನ್ನು ಪರಸ್ಪರ ಸರಿಗಟ್ಟುವಿಕೆ ಇವನ್ನು ಕುರಿತ ಅಧ್ಯಯನಗಳಲ್ಲಿ ಸ್ತರವಿಜ್ಞಾನ ಅತ್ಯಾವಶ್ಯಕವೆನಿಸಿದೆ. ನಿರ್ದಿಷ್ಟ ಪ್ರದೇಶದ ವಿವಿಧ ಭೂಯುಗಗಳ ಪುನರ್‌ನಿರ್ಮಾಣ ಹಾಗೂ ಅದರ ಇಡೀ ಭೂಇತಿಹಾಸದ ಅಧ್ಯಯನದಲ್ಲಿ ಈ ನಿಯಮದ ಪಾತ್ರ ಬಲು ಹಿರಿದು.

ಹತ್ತೊಂಬತ್ತನೆಯ ಶತಮಾನದ ವಿಜ್ಞಾನಗಳ ಮೇಲೆ ಕ್ರೈಸ್ತಗುರುಪೀಠದ ಪ್ರಭಾವ ಬಹಳವಾಗಿತ್ತು. ಆ ಪೀಠಾಧಿಪತಿಗಳು ಭೂಮಿ ಕೇವಲ ಕೆಲವು ಸಹಸ್ರ ವರ್ಷಗಳ ಹಿಂದೆ ಜನ್ಮತಾಳಿದರೂ ಆಗಾಗ ಅದರ ಮೇಲೆ ತೋರಿಬಂದ ಪ್ರಳಯಗಳು ಇಂದು ತೋರುವ ಭೂಲಕ್ಷಣಗಳ ಹಾಗೂ ಪ್ರಾಣಿವರ್ಗಗಳ ನಿರ್ಮಿತಿಯಲ್ಲಿ ಬಲು ಮುಖ್ಯಪಾತ್ರವಹಿಸಿವೆ ಎಂದೂ ಸಾರಿದರು. ಇದೇ ಪ್ರಳಯವಾದ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಭೂವಿಜ್ಞಾನ ಶಾಖೆಯ ಪ್ರಾಧ್ಯಾಪಕನಾಗಿದ್ದ ವಿಲಿಯಮ್ ಬಕ್ಲೆಂಡ್ ಈ ತೆರನಾದ ಹಲವಾರು ಜಲಪ್ರಳಯಗಳು ನಡೆದಿವೆ ಎಂದು ಜನರಿಗೆ ಮನದಟ್ಟಾಗುವಂತೆ ವಾದಿಸಿದ. ಫ್ರಾನ್ಸಿನ ಪ್ರಾಚೀನ ಜೀವವಿಜ್ಞಾನಿ ಕುವೆಯರ್ (1769–1832) ಇದನ್ನು ಸಮರ್ಥಿಸಿದ.

1817ರ ವೇಳೆಗೆ ಜರ್ಮನಿಯ ಫ್ರೈಬರ್ಗ್ ಗಣಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಏಬ್ರಹ್ಯಾಮ್ ಗಾಟ್‌ಲಬ್ ವರ್ನರ್ ಎಂಬವ ಹಿಂದೆ ಯೋಹಾನ್ ಲೆಹ್‌ಮನ್ ಎಂಬವನಿಂದ ಸೂಚಿತವಾಗಿದ್ದ ವಾದವನ್ನು ವಿವರಿಸಿ ಪ್ರತಿಪಾದಿಸಿದ. ಆ ಊರಿನ ಸುತ್ತಮುತ್ತಲಿನ ಶಿಲಾಸ್ತರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿ ಅವೆಲ್ಲವೂ ಸಮುದ್ರ ತಳದಲ್ಲಿ ರೂಪು ತಳೆದವೆಂದೂ ಈ ಆಧಾರದ ಮೇಲೆ ಭೂಮಿಯ ಮೇಲಿನ ಶಿಲೆಗಳು ಹಾಗೂ ಅವುಗಳಲ್ಲಿರುವ ಖನಿಜಗಳು ಪ್ರಪಂಚವ್ಯಾಪಿ ಸಾಗರತಳವೊಂದರಲ್ಲಿ ರಾಸಾಯನಿಕ ಪ್ರಕ್ಷೇಪಣ ಕ್ರಿಯೆಯಿಂದ ಜನ್ಮ ತಳೆದಿವೆ ಎಂದೂ ಸೂಚಿಸಿದ. ಈತನ ವಾಗ್ವೈಖರಿಗೆ ಮಾರುಹೋದ ಜನ ಹಾಗೂ ಶಿಷ್ಯವೃಂದ ಯುರೋಪಿನಲ್ಲೆಲ್ಲ ಈ ವಾದವನ್ನು (ವರ್ನರಿಯನ್ ಸಿದ್ಧಾಂತ) ಪ್ರಚುರಪಡಿಸಿದರು. ಈ ಭೂವಿಜ್ಞಾನಿಗಳಿಗೆ ನೆಪ್ಚೂನಿಸ್ಟ್ಸ್ (ವರುಣಾರಾಧಕರು) ಎಂದು ಹೆಸರು.

ಇದೇ ಸಮಯದಲ್ಲಿ ಗ್ರೇಟ್ ಬ್ರಿಟನ್ನಿನ ಸ್ಕಾಟ್ಲೆಂಡಿನಲ್ಲಿ ಮತ್ತೊಂದು ಅಭಿಪ್ರಾಯವನ್ನು ಸಮರ್ಥಿಸುವ ಭೂವಿಜ್ಞಾನಿಗಳ ತಂಡವೊಂದು ರೂಪುಗೊಳ್ಳುತ್ತಿತ್ತು. ಭೂಲಕ್ಷಣಗಳನ್ನು ರೂಪಿಸುವಲ್ಲಿ ಇವರಿಗೆ ಪ್ರಳಯವಾದದಲ್ಲಾಗಲೀ ವರುಣವಾದದಲ್ಲಾಗಲೀ ನಂಬಿಕೆ ಇರಲಿಲ್ಲ. ಈ ತಂಡದ ಪ್ರಮುಖ ಎಂದೆನಿಸಿದವ ಜೇಮ್ಸ್ ಹಟ್ಟನ್. ಇತಿಹಾಸಪ್ರಸಿದ್ಧ ಎನಿಸಿರುವ ತಿಯರಿ ಆಫ್ ದಿ ಅರ್ತ್ ಎಂಬ ಲೇಖನವೊಂದನ್ನು ಪ್ರಚುರಪಡಿಸಿದ (1788). ಇದು ಇಂದಿನ ಭೂವಿಜ್ಞಾನದ ಪ್ರಗತಿಗೆ ನಾಂದಿಯಾಯಿತು ಎನ್ನಬಹುದು. ಅಂದು ಪ್ರಚಾರದ ಶಿಖರವನ್ನು ಮುಟ್ಟಿದ್ದ ವರುಣವಾದ ಹಾಗೂ ಪ್ರಳಯವಾದಗಳನ್ನು ಇದು ಕ್ರಮೇಣ ತೊಡೆದುಹಾಕಿತು. ಭೂಮಿಯ ಮೇಲೆ ಈಗ ನಾವು ಕಾಣುವ ಲಕ್ಷಣಗಳನ್ನು ಕ್ರಮವರಿತು ಅಧ್ಯಯನ ಮಾಡಿದಲ್ಲಿ ಗತಕಾಲದ ಭೂಚಟುವಟಿಕೆಗಳನ್ನು ತೃಪ್ತಿಕರವಾಗಿ ವಿವರಿಸಲು ಸಾಧ್ಯವಾದೀತು ಎಂಬುದು ಹಟ್ಟನನ ಅಭಿಪ್ರಾಯ. ಇದಕ್ಕಾಗಿ ಪ್ರಳಯಗಳ ಅಥವಾ ಇತರ ಪ್ರಚಂಡಕ್ರಿಯೆಗಳ ಸೂಚನೆ ಸಲ್ಲ. ಈ ಭೂ ಕ್ರಿಯೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಇದು ವರ್ನರನ ವಾದಕ್ಕೆ ಪ್ರತಿವಾದವೆನಿಸಿತು. ಅಲ್ಲಲ್ಲೇ ಈ ಎರಡು ತತ್ತ್ವಾರಾಧಕರ ಗುಂಪುಗಳ ನಡುವೆ ವಾಗ್ಯುದ್ಧಗಳೂ ತಲೆದೋರಿದುವು. ಕ್ರಮೇಣ ಈ ತತ್ತ್ವ ಬೇರೂರಿತು. ಹಟ್ಟನನ ಸಹೋದ್ಯೋಗಿ ಜಾನ್ ಪ್ಲೇಫೇರ್ ಎಂಬವ ಹಟ್ಟನ್ ತತ್ತ್ವಗಳನ್ನು ವಿವರಿಸುವ ಮತ್ತು ವಿಜ್ಞಾನದ ಶ್ರೇಷ್ಠ ಕೃತಿಗಳ ಪೈಕಿ ಒಂದು ಎನಿಸಿರುವ ಇಲ್ಲಸ್ಟ್ರೇಷನ್ ಆಫ್ ಹಟ್ಟೋನಿಯನ್ ತಿಯರಿ ಎಂಬ ಗ್ರಂಥ ಪ್ರಕಟಿಸಿದ (1802). ಭೂಚಟುವಟಿಕೆಗಳಿಗೆ ಮೂಲ ಕಾರಣ ಭೂಗರ್ಭದಲ್ಲಿ ಹುದುಗಿರುವ ಅಪಾರ ಉಷ್ಣ ಸಮುದ್ರತಳದಲ್ಲಿ ನಿಕ್ಷೇಪಗೊಂಡಿರುವ ಜಲಜ ಶಿಲೆಗಳನ್ನು ಮೇಲೆತ್ತುವುದು ಈ ಉಷ್ಣಶಕ್ತಿಯೇ. ಗ್ರಾನೈಟ್ ಮೊದಲಾದ ಶಿಲೆಗಳು ವರುಣಶಿಲೆಗಳಲ್ಲ, ಅಗ್ನಿಶಿಲೆಗಳು. ಈ ಶಕ್ತಿ ಭೂಗರ್ಭದಿಂದ (ಪಾತಾಳ) ಆವಿರ್ಭವಿಸುತ್ತದೆ ಎಂಬ ವಾದದ ಬೆಂಬಲಿಗರನ್ನು ಪ್ಲೂಟೋನಿಸ್ಟ್ಸ್ ಎಂದೇ ಹೆಸರಿಸಲಾಗಿದೆ.

ಇಂಗ್ಲೆಂಡಿನ ಭೂವಿಜ್ಞಾನಿ ಚಾರ್ಲ್ಸ್ ಲಯಲ್ ರಚಿಸಿದ ಪ್ರಿನ್ಸಿಪಲ್ಸ್ ಆಫ್ ಜಿಯೋಲಜಿ ಎಂಬ ಗ್ರಂಥದಲ್ಲಿ (1830) ಹಟ್ಟನನ ನಿರೂಪಣೆಗೆ ಒಂದು ಖಚಿತ ರೂಪ ದೊರೆಯಿತು. ಲಯಲ್ ಕೂಡ ಪ್ರಳಯವಾದವನ್ನು ಅಲ್ಲಗಳೆದು ಭೂಮಿ ಮೈದೋರಿದ ದಿವಸದಿಂದಲೂ ಒಂದೇ ಸಮನೆ ನಿರಂತರವಾಗಿ ಭೂಚಟುವಟಿಕೆಗಳು ನಡೆಯುತ್ತಿವೆ ಎಂದು ಸೂಚಿಸಿದ. ಇದೇ ಪ್ರಸಿದ್ಧವಾದ ಏಕಪ್ರಕಾರವಾದ (ಯೂನಿಫಾರ್ಮಿಟೇರಿಯನಿಸಮ್) ಗತಕಾಲದ ಭೂಚಟುವಟಿಕೆಗಳನ್ನು ಅರಿಯಲು ಪ್ರಸಕ್ತದ ಚಟುವಟಿಕೆಗಳು ಕೀಲಿಕೈ ಇದ್ದಂತೆ. ಇದೇ ಸರಿಸುಮಾರಿಗೆ ಮತ್ತೊಬ್ಬ ಹೆಸರಾಂತ ಇಂಗ್ಲಿಷ್ ಭೂವಿಜ್ಞಾನಿ ವಿಲಿಯಮ್ ಸ್ಮಿತ್ (1815) ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡಿನ ವಿವಿಧ ಶಿಲಾವರ್ಗಗಳನ್ನು ಸೂಚಿಸುವ ವರ್ಣರಂಜಿತ ಭೂನಕ್ಷೆಯನ್ನು ಪ್ರಕಟಿಸಿದ.

ನಾವು ನೆಲೆಗೊಂಡಿರುವ ಭೂಮಿಯ ಹೊರಚಿಪ್ಪು ವಿವಿಧ ರೀತಿಯ ಶಿಲೆಗಳಿಂದಾದುದು. ಇದನ್ನು ವಿವರಿಸುವ ವಿಭಾಗವೇ ಶಿಲಾವಿಜ್ಞಾನ. ಇದು ಶಿಲೆಗಳ ಸ್ವರೂಪ, ಸಂಯೋಜನೆ, ವಿನ್ಯಾಸ, ಜನನ – ಈ ವಿವರಗಳನ್ನು ಕುರಿತು ವಿವೇಚನೆ ನಡೆಸುತ್ತದೆ. ಶಿಲೆಗಳಲ್ಲಿ ಶೇ.95 ಮೂಲ ಇಲ್ಲವೆ ಅಗ್ನಿಶಿಲೆಗಳಾಗಿರುತ್ತವೆ. ಅಂದರೆ ಮಾತೃಶಿಲಾದ್ರವದ ಪ್ರತ್ಯೇಕ ಆರುವಿಕೆಯಿಂದ ರೂಪುಗೊಂಡಂಥವು. ಇವುಗಳ ಅಧ್ಯಯನ ಭೂವಿಜ್ಞಾನದಲ್ಲಿ ಬಲು ಮುಖ್ಯ. ಶಿಲೆಯ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಲು ಅದರ ಪೊರೆಯೊಂದನ್ನು ತೆಗೆದು ಸೂಕ್ಷ್ಮದರ್ಶಕದ ಸಹಾಯದಿಂದ ಅಧ್ಯಯನ ಮಾಡುವುದಿದೆ.

ಪುನರ್ಜನ್ಮ ತಳೆದ ಶಿಲೆಗಳೇ ಆನುಷಂಗಿಕ ಶಿಲೆಗಳು. ಇವುಗಳಲ್ಲಿ ಎರಡು ಬಗೆ: ಶಿಲೆಗಳು ಛಿದ್ರಗೊಂಡು ಉಂಟಾದ ಕಣಗಳ ಸಂಚಲನದಿಂದ ಜಲಾಶಯಗಳಲ್ಲಿ ರೂಪು ತಳೆದವು. ಇವು ಜಲಜ ಅಥವಾ ಸಂಚಿತಶಿಲೆಗಳು. ಇವುಗಳ ಸ್ವರೂಪ ಅಗ್ನಿಶಿಲೆಗಳಿಂದ ಭಿನ್ನ, ಇವನ್ನು ಹೆಚ್ಚಿನ ಕಷ್ಟವಿಲ್ಲದೆ ಗುರುತಿಸುವುದು ಸಾಧ್ಯ. ಇದೇ ರೀತಿ ಇವುಗಳ ಸ್ವರೂಪ, ವಿನ್ಯಾಸ ಹಾಗೂ ಸಂಯೋಜನೆಯಲ್ಲಿ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಈ ಅಧ್ಯಯನಕ್ಕೆ ಮೀಸಲಾದ ವಿಭಾಗ ಸಂಚಯನ ಶಿಲಾವಿಜ್ಞಾನ. ಈ ವಿಭಾಗಕ್ಕೆ ಇತ್ತೀಚೆಗೆ ಹೆಚ್ಚಿನ ಪ್ರಾಮುಖ್ಯ ಬರುತ್ತಿದೆ. ಮೊದಲು ರೂಪುತಳೆದ ಶಿಲೆಗಳು ಅಧಿಕ ಉಷ್ಣ ಮತ್ತು ಒತ್ತಡಗಳ ಪ್ರಭಾವಕ್ಕೆ ಸಿಲುಕಿ ರೂಪಾಂತರಗೊಂಡು ಹೊಸ ಶಿಲೆಗಳ ರೂಪಣೆಗೆ ಕಾರಣವಾಗುತ್ತವೆ. ಇವೇ ರೂಪಾಂತರಶಿಲೆಗಳು. ಇವು ತಮ್ಮ ಸ್ವರೂಪ, ವಿನ್ಯಾಸ ಹಾಗೂ ಖನಿಜ ಸಂಯೋಜನೆಯಲ್ಲಿ ವಿಶಿಷ್ಟ ಲಕ್ಷಣಗಳನ್ನು ಹೊಂದಿರುತ್ತವೆ. ಈ ಲಕ್ಷಣಗಳ ಪೈಕಿ ಸುಕ್ಕುಗಟ್ಟಿದ ಇಲ್ಲವೆ ಮಡಿಕೆ ಬಿದ್ದಿರುವ ಸ್ಥಿತಿ, ಪದರು ಹಾಗೂ ಗೀರು ವಿನ್ಯಾಸ ಇವು ಗಮನಾರ್ಹ. ಸಾಮಾನ್ಯವಾಗಿ ಖನಿಜ ನಿಕ್ಷೇಪಗಳು ಇವುಗಳಲ್ಲಿ ಅಡಗಿರುತ್ತವೆ. ಈ ಶಿಲೆಗಳನ್ನು ಕುರಿತ ವಿಜ್ಞಾನಭಾಗ ರೂಪಾಂತರ ಶಿಲಾವಿಜ್ಞಾನ.

ಶಿಲೆಗಳ ಸ್ವರೂಪ ಹಾಗೂ ಬಾಹ್ಯರಚನೆಗಳಿಂದ ಅವು ಉಂಟಾದ ಬಗೆಯನ್ನು ಅಂದರೆ, ಅವಿರುವ ಭೂಭಾಗದ ಜನನರೀತಿಯನ್ನು ಅರಿತುಕೊಳ್ಳುವುದು ಸಾಧ್ಯವಾಗಿದೆ. ಪರ್ವತ ಪ್ರದೇಶಗಳಲ್ಲಂತೂ ಇವುಗಳ ಪ್ರಾಮುಖ್ಯ ಹೆಚ್ಚು. ಭೂವಿಜ್ಞಾನದ ಈ ವಿಜ್ಞಾನ ಭಾಗ ಭೂರಚನಾವಿಜ್ಞಾನ. ಶಿಲೆಗಳು ತೋರುವ ಬಗೆ ಬಗೆಯ ಬೃಹತ್ ಮಡಿಕೆಗಳು, ಸ್ತರಭಂಗಗಳು, ಸ್ವರೂಪ ಹಾಗೂ ವಿನ್ಯಾಸಗಳು, ಬಿರಿತಗಳು, ಸೀಳುಗಳು – ಹೀಗೆ ಈ ಎಲ್ಲ ರಚನಾ ಲಕ್ಷಣಗಳನ್ನೂ ಈ ವಿಭಾಗದಲ್ಲಿ ವಿವರವಾಗಿ ಅಧ್ಯಯನ ಮಾಡಲಾಗುತ್ತದೆ.

ಈ ತನಕ ಅಧ್ಯಯನ ಕೇವಲ ನೆಲಭಾಗಗಳಿಗೆ ಮಾತ್ರ ಸೀಮಿತವಾಗಿದ್ದು ಈಚಿನ ಸಾಗರಗಳ ಅದರಲ್ಲೂ ಅವುಗಳ ತಳಭಾಗಗಳ ಅಧ್ಯಯನ ಕೂಡ ಪ್ರಾರಂಭವಾಗಿದೆ. ಈ ವಿಭಾಗಕ್ಕೆ ಸಾಗರ ವಿಜ್ಞಾನ (ಓಷಿಯಾನೊಗ್ರಫಿ) ಎಂದು ಹೆಸರು. ಇದರಲ್ಲಿ ಮುಂದುವರಿದ ಪಾಶ್ಚಾತ್ಯ ರಾಷ್ಟ್ರಗಳು ನಡೆಸಿರುವ ಪ್ರಯತ್ನದಿಂದ ಪ್ರಗತಿ ಉಂಟಾಗಿದೆ. ನೆಲದ ಮೇಲೆ ಹೇಗೊ ಸಾಗರತಳದಲ್ಲೂ ಹಾಗೆ ಶಿಲಾ ರಚನೆಗಳು ಕಂಡುಬಂದಿವೆ. ಅಗ್ನಿಪರ್ವತಗಳು, ಸ್ತರಭಂಗಗಳು, ಶಿಲಾಮಡಿಕೆಗಳು ಮತ್ತು ಖನಿಜನಿಕ್ಷೇಪಗಳು ಅಲ್ಲಿ ಇವೆ. ಭೂಭಾಗಗಳಲ್ಲಿ ಖನಿಜನಿಕ್ಷೇಪಗಳ ಲಭ್ಯತೆ ಕಡಿಮೆಯಾಗುತ್ತಿದ್ದು ಭೂವಿಜ್ಞಾನಿಗಳ ದೃಷ್ಟಿ ಸಹಜವಾಗಿ ಸಾಗರಗಳ ಕಡೆ ಹರಿದಿದೆ. ಸಾಗರಗಳ ತಳದಲ್ಲಿ ಕಂಡುಬರುವ ಮಧ್ಯ ಸಾಗರೀಯ ಏಣುಗಳಲ್ಲಿ (ಮಿಡ್ ಓಷಿಯಾನಿಕ್ ರಿಡ್ಜ್) ಲಾವಾ ಹೊರಹೊಮ್ಮುವಿಕೆ ಭೂಕವಚವನ್ನು ನಿರಂತರವಾಗಿ ನಿರ್ಮಿಸುವ ಕಾರ್ಯದಲ್ಲಿ ತೊಡಗಿರುವುದು ವ್ಯಕ್ತವಾಗಿದೆ. ಇದನ್ನು ಆಧರಿಸಿ ಇತ್ತೀಚಿನ ದಿವಸಗಳಲ್ಲಿ ಭೂಫಲಕರಚನಾವಾದವನ್ನು (ಪ್ಲೇಟ್ ಟೆಕ್ಟಾನಿಕ್ಸ್) ಮುಂದಿಡಲಾಗಿದೆ. 1915ರಲ್ಲಿ ಆಸ್ಟ್ರಿಯದ ಪವನವಿಜ್ಞಾನಿ ಆಲ್‌ಫ್ರೆಡ್ ವೆಗೆನರ್ ಹಿಂದೆ ಅಲೆಕ್ಸಾಂಡರ್ ಫಾನ್ ಹಂಬೋಲ್ಟ್ (1810) ಹಾಗೂ ಅಂಟೋನಿಯೋ ಸ್ನೈಡರ್ (1858) ಎಂಬವರಿಂದ ಸೂಚಿತವಾಗಿದ್ದ ಭೂಖಂಡಗಳ ಅಲೆತವನ್ನು (ಕಾಂಟಿನೆಂಟಲ್

ಡ್ರಿಫ್ಟ್) ಪುಷ್ಟೀಕರಿಸಿ ನೂತನ ವಾದಸರಣಿ ಮಂಡಿಸಿದ. ಇದರಿಂದ ಭೂವಿಜ್ಞಾನದ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿದಂತಾಗಿದೆ. ಭೂವಿಜ್ಞಾನದಲ್ಲಿ ಇದನ್ನು ವೆಗೆನೇರಿಯನ್ ಕ್ರಾಂತಿ ಎಂದು ಕರೆಯಲಾಗಿದೆ. (ಬಿ.ವಿ.ಜಿ.)

**ಭೂವೈಜ್ಞಾನಿಕ ಕಾಲ ಕಲ್ಪಗಳು ಮತ್ತು ಶಿಲಾಸ್ತರಗಳ ಉಗಮ:** ಭೂಮಿ ಪ್ರತ್ಯೇಕ ಗ್ರಹವಾಗಿ ರೂಪುಗೊಂಡಂದನಿಂದ ಲಿಖಿತೇತಿಹಾಸದ ಪ್ರಾರಂಭದ ತನಕ ಭೂವಿಜ್ಞಾನದ ವಿಶದಪಡಿಸುವ ಕಾಲಾವಧಿ (ಜಿಯೊಲಾಜಿಕಲ್ ಟೈಮ್). ಇದರ ಪರಿಕಲ್ಪನೆ ಸಂಚಿತ ಶಿಲೆಗಳ ಸ್ತರಗಳನ್ನು ಆಧರಿಸಿ ಬಂದಿರುವಂಥದು. ಬೇರೆ ಬೇರೆ ಪ್ರದೇಶಗಳಲ್ಲಿ ಸಮಾನಾಂತರವಾಗಿ ಶೇಖರವಾಗಿರುವ ಶಿಲಾಸ್ತರಗಳನ್ನು ಒಂದರೊಡನೊಂದನ್ನು ತುಲನೆ ಮಾಡುವುದರ ಮೂಲಕ ಭೂವೈಜ್ಞಾನಿಕ ಕಾಲವನ್ನು ನಿಗದಿ ಮಾಡಿದೆ. ಶಿಲಾಸ್ತರಗಳು ವಕ್ರಗೊಂಡಿದ್ದಲ್ಲಿ ಇಲ್ಲವೆ ಬೇರಾವುದೇ ರೀತಿಯಲ್ಲಿ ಭಂಗಗೊಂಡಿದ್ದಲ್ಲಿ ಅವನ್ನು ಮೊದಲಿನ ಸಮಾನಾಂತರ ಸ್ಥಿತಿಗೆ ಮಾರ್ಪಡಿಸಿಕೊಂಡು ಕಾಲವನ್ನು ಗೊತ್ತುಮಾಡುವುದಿದೆ. ನಿರ್ದಿಷ್ಟ ಶಿಲಾಸಮುದಾಯದ ಸ್ತರಗಳು ಶಿಲಾರಚನೆಯಲ್ಲಿ ಪರಸ್ಪರ ಹೋಲುತ್ತಿದ್ದಲ್ಲಿ ಅವನ್ನು ಒಂದು ಗುಂಪಾಗಿಸಿ ಅಂಥವನ್ನು ಸ್ತೋಮ (ಫಾರ್ಮೇಷನ್) ಎಂದು ಕರೆಯುತ್ತಾರೆ. ಉದಾ: ಸುಣ್ಣಕಲ್ಲು ಮತ್ತು ಶೇಲ್‌ಸ್ತರಗಳು ಅನುಕ್ರಮವಾಗಿ ಜೋಡಣೆಗೊಂಡಿರುವ ಇಲ್ಲವೆ ದಪ್ಪನೆಯ ಡಾಲೊಮೈಟ್ ಸ್ತರಗಳಿಂದ ಕೂಡಿದ ಸ್ತೋಮ. ಯಾವುದೇ ಪ್ರದೇಶ ಭೂಚರಿತ್ರೆಯನ್ನು ಅಲ್ಲಿಯ ಶಿಲಾಸ್ತೋಮಗಳನ್ನು ಗುರುತಿಸಿಯೇ ವಿವರಿಸಬೇಕಾಗುತ್ತದೆ. ಇಂಥ ಶಿಲಾಸ್ತೋಮಗಳ ಹೆಸರನ್ನು ಅವು ಸಮೃದ್ಧವಾಗಿ ಕಂಡುಬರುವ ಪ್ರದೇಶದ ಹೆಸರಿನೊಂದಿಗೆ ಸೇರಿಸಿ ಕರೆಯುವುದಿದೆ.

ಶಿಲಾಸ್ತೋಮಗಳ ಹಾಗೂ ಭೂವೈಜ್ಞಾನಿಕ ವಿದ್ಯಮಾನಗಳ ಪರಸ್ಪರ ಕಾಲ ಅಳೆಯುವ ವಿಧಾನಕ್ಕೆ ಅವಸಾದನ ಸಹಸಂಬಂಧ (ಸ್ಟ್ರಾಟಿಗ್ರಫಿಕ್ ಕಾರಿಲೇಷನ್) ಎಂದು ಹೆಸರು. ಇದನ್ನು ನಿಗದಿಪಡಿಸಲು ಮೂರು ಕ್ಲಿಷ್ಟ ನಿರ್ಣಯಾತ್ಮಕ ವಿಧಾನಗಳನ್ನು ಅನುಸರಿಸುವುದಿದೆ: 1 ಶಿಲಾಸ್ತರಗಳಲ್ಲಿಯ ಪಳೆಯುಳಿಕೆಗಳನ್ನು ಗುರುತಿಸುವುದು; 2 ಜಲಜಶಿಲೆಗಳ ಬಗ್ಗೆ ಅಭ್ಯಾಸ ಹಾಗೂ ಅವು ಸೂಚಿಸುವ ಪ್ರಾಚೀನ ಭೌಗೋಳಿಕ ವಾತಾವರಣದ ಸ್ಥಿತಿಗತಿಗಳನ್ನು ಗುರುತಿಸುವುದು; 3. ಅಂಥ ಶಿಲೆಗಳ ರಚನಾವಿನ್ಯಾಸ ಹಾಗೂ ಸ್ತರಭಂಗಗಳಂಥ ಮುಖ್ಯ ಘಟನೆಗಳನ್ನು ಗುರುತಿಸುವುದು. ಭೂವೈಜ್ಞಾನಿಕ ಕಾಲದ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಇವೆಲ್ಲ ಮುಖ್ಯ ಪಾತ್ರವಹಿಸುತ್ತವೆ. ಭೂ ಚರಿತ್ರೆಯನ್ನು ಸಂಗ್ರಹಿಸುವಲ್ಲಿ ಭೂ ಚರಿತ್ರೆಯನ್ನು ವಿವಿಧ ಕಲ್ಪ ಮತ್ತು ಯುಗಗಳಾಗಿ ವಿಂಗಡಿಸಲಾಗಿದೆ. ಮುಖ್ಯವಾಗಿ ಜೀವ್ಯವಶೇಷಗಳ ಇರುವಿಕೆ ಮತ್ತು ಗುಣಲಕ್ಷಣಗಳನ್ನು ಅನುಸರಿಸಿ ಭೂ ಚರಿತ್ರೆಯ ರಚನೆ ಆಗಿದೆ. ಯುರೋಪ್ ಖಂಡದ ಶಿಲಾಸ್ತೋಮಗಳನ್ನು ಆಧರಿಸಿ ರಚಿಸಲಾಗಿರುವ ಭೂ ಚರಿತ್ರೆಯನ್ನೇ ಪ್ರಮಾಣವೆಂದು ಈಗ ಪರಿಗಣಿಸಿದೆ. ಬೇರೆ ಬೇರೆ ಭೂವೈಜ್ಞಾನಿಕ ಅವಧಿಗಳು ಮತ್ತು ನಿರಪೇಕ್ಷ ಕಾಲ ಅವಧಿಗಳ ಸಾಪೇಕ್ಷಪ್ರಾಯಗಳ ಬಗ್ಗೆ ತಿಳಿಯ ಹೇಳುವ ಭೂ ವೈಜ್ಞಾನಿಕ ಕಾಲಮಾಪಕವನ್ನು (ಜಿಯೊಲಾಜಿಕ್ ಟೈಮ್ ಸ್ಕೇಲ್) ರಚಿಸಲಾಗಿದೆ.

ಭೂಮಿ ಸು. 4500 ದಶಲಕ್ಷ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿದ್ದರೂ ಜೀವಿಗಳು ಬಹಳಷ್ಟು ಕಾಲದತನಕ ಅದರ ಮೇಲೆ ವಾಸಿಸಲಾಗಲಿಲ್ಲ. ಹವೆ ಹಾಗೂ ಪರಿಸರದ ವಾತಾವರಣ ಗುಣವಿಶೇಷಗಳಿಂದಾಗಿ ಭೂಮಿ ಜೀವಯೋಗ್ಯವಾಗುವುದಕ್ಕೆ ಬಹಳಷ್ಟು ಕಾಲವೇ ಹಿಡಿಯಿತು. ಆದಿಜೀವಿಗಳ ಅಸ್ಪಷ್ಟ ಕುರುಹುಗಳು ಸು. 1000–1200 ದಶಲಕ್ಷ ವರ್ಷಗಳಷ್ಟು ಪ್ರಾಚೀನದ ಶಿಲೆಗಳಲ್ಲಿ ಕಂಡುಬಂದಿವೆ. ಇದರಿಂದ ಭೂಚರಿತ್ರೆಯ ಮುಕ್ಕಾಲು ಭಾಗದಷ್ಟು ಕಾಲದುದ್ದಕ್ಕೂ ಜೀವಿಗಳು ಇರಲಿಲ್ಲವೆಂಬುದು ಸ್ಪಷ್ಟ..

ಆರ್ಷೇಯ ಕಲ್ಪ: ಈ ಕಾಲದಲ್ಲಿ ಶೇಖರಣೆಗೊಂಡ ಶಿಲೆಗಳು ಭೂಮಿಯ ಪ್ರತಿಯೊಂದು ಖಂಡದಲ್ಲೂ ಇವೆ. ಭಾರತದ ಪರ್ಯಾಯದ್ವೀಪ ಪ್ರದೇಶವೆಲ್ಲ ಇಂಥ ಶಿಲೆಗಳಿಂದ ಕೂಡಿದೆ. ಈ ಯುಗದ ಶಿಲಾಸ್ತೋಮ ಅಗ್ನಿಶಿಲೆಗಳು, ಜಲಜಶಿಲೆಗಳು ಮತ್ತು ರೂಪಾಂತರಿತ ಶಿಲಾವರ್ಗಗಳಿಗೆ ಸೇರಿದ ಮೂರು ಬಗೆಯ ಶಿಲೆಗಳಿಂದಲೂ ಕೂಡಿದೆ. ಮುಖ್ಯವಾಗಿ ಈ ಸ್ತೋಮದಲ್ಲಿ ಗ್ರಾನೈಟ್, ನೈಸ್, ಷಿಸ್ಟ್ ಮತ್ತು ಕ್ಷಾರಯುಕ್ತ ಲಾವಾಶಿಲೆಗಳೂ ಜೇಡಿಕಲ್ಲು, ಸ್ಫಟಿಕಶಿಲೆ, ಸುಣ್ಣಕಲ್ಲು ಇತ್ಯಾದಿ ಶಿಲೆಗಳೂ ಕಂಡುಬರುತ್ತವೆ. ಇವು ಬಲು ಪುರಾತನ ಕಾಲದಲ್ಲಿ ರೂಪುಗೊಂಡದ್ದರಿಂದ ಇವುಗಳಲ್ಲಿ ಅನೇಕ ಏರುಪೇರುಗಳು ಆಗಿವೆ. ಅಂತೆಯೇ ಇವುಗಳ ರಚನೆ ಸಹ ಬಲು ತೊಡಕಿನದೇ. ಈ ಶಿಲೆಗಳಲ್ಲಿ ಜೀವ್ಯವಶೇಷಗಳಿರುವುದಿಲ್ಲ. ಈ ಕಾರಣದಿಂದಲೇ ಆರ್ಷೇಯ ಕಲ್ಪವನ್ನು ನಿರ್ಜೀವ ಕಲ್ಪವೆಂದೂ ಕರೆದಿದೆ. ಭಾರತದ ಬಹುಪಾಲು ಖನಿಜಸಂಪತ್ತು ಈ ಸ್ತೋಮಗಳಲ್ಲೇ ಅಡಕವಾಗಿದೆ.

ಆದಿಜೀವಿ ಕಲ್ಪ: ಈ ಕಲ್ಪದ ಶಿಲೆಗಳು ಆರ್ಷೇಯ ಶಿಲೆಗಳ ಮೇಲೆ ಶೇಖರವಾಗಿವೆ. ಇವೆರಡರ ನಡುವೆ ಸ್ಪಷ್ಟ ಅನನುರೂಪತೆ ಕಾಣಬರುವುದು. ಇವುಗಳಲ್ಲಿ ಜೇಡಿಕಲ್ಲು, ಉರುಟುಕಲ್ಲು, ಸುಣ್ಣಕಲ್ಲು ಮುಂತಾದ ಜಲಜಶಿಲೆಗಳು ಯಥೇಚ್ಛವಾಗಿ ಕಂಡುಬರುತ್ತವೆ. ದಕ್ಷಿಣ ಭಾರತದಲ್ಲಿಯ ಕಡಪ, ಕರ್ನೂಲು ಮತ್ತು ಉತ್ತರ ಕರ್ನಾಟಕದಲ್ಲಿಯ ಕಲಾದಗಿ ಶಿಲಾಸ್ತರಗಳು ಈ ಕಲ್ಪದವು. ಇವುಗಳಲ್ಲಿ ಕೆಲವು ಕಡೆ ಅಲ್ಲೇ ಸಸ್ಯಜೀವಿಯ ಅವಶೇಷಗಳು ಕಂಡುಬಂದಿವೆ.

ಪ್ರಾಚೀನ ಜೀವಿಯುಗ: ಈ ಯುಗದ ಶಿಲಾಸ್ತೋಮಗಳಲ್ಲಿ ಪ್ರಾಚೀನ ಜೀವಿಗಳ ಉಳಿಕೆಗಳು ಯಥೇಚ್ಛವಾಗಿವೆ. ಯುರೋಪ್ ಖಂಡದಲ್ಲಿ ಇವನ್ನು ಆರು ವಿಭಾಗಗಳಾಗಿ ವಿಂಗಡಿಸಿದೆ. ಇವುಗಳಲ್ಲಿಯ ಕೇಂಬ್ರಿಯನ್ ಪದರಗಳು ಅತ್ಯಂತ ಹಳೆಯವು. ಪರ್ಮಿಯನ್ ಪದರಗಳು ಅತ್ಯಂತ ನೂತನವಾದವು. ಈ ಕಲ್ಪದ ಆದಿಯಲ್ಲಿ ಅಂದರೆ ಕೇಂಬ್ರಿಯನ್ ಕಲ್ಪದಲ್ಲಿ ಎಲ್ಲ ಬಗೆಯ ಅಕಶೇರುಕಗಳೂ ಇದ್ದುವೆಂದು ಅವುಗಳ ಅವಶೇಷಗಳಿಂದ ಗೊತ್ತಾಗಿದೆ. ಇವುಗಳಲ್ಲಿ ಪ್ರಮುಖವಾಗಿ ಟ್ರೈಲೊಬೈಟ್ ಪ್ರಾಣಿಗಳೇ ಅಧಿಕವಾಗಿದ್ದುವೆಂದು ತಿಳಿದುಬಂದಿದೆ. ಯುಗದ ಮಧ್ಯ ಭಾಗದಲ್ಲಿ ಅಕಶೇರುಕಗಳ ಉಗಮ ಆಯಿತೆಂದೂ ತಿಳಿಯುತ್ತದೆ. ಯುಗಾಂತ್ಯದಲ್ಲಿ ನೆಲದ ಮೇಲೆ ಓಡಾಡುವ ಪ್ರಾಣಿಗಳು ಕಂಡು ಬಂದುವು. ಯುಗದ ಭೂ ಮತ್ತು ಜಲವಿನ್ಯಾಸಗಳು ಈಗಿರುವಂತೆ ಇರಲಿಲ್ಲ. ಈಗ ನೆಲವಾಗಿರುವ ಮತ್ತು ಅನೇಕ ಕಡೆಗಳಲ್ಲಿ ಪರ್ವತ ಪ್ರದೇಶಗಳಾಗಿರುವ ಸ್ಥಳಗಳು ಒಂದು ಕಾಲದಲ್ಲಿ ಸಮುದ್ರದ ತಳವಾಗಿದ್ದಿರಬಹುದೆಂದು ಜೀವ್ಯವಶೇಷಗಳ ಅಧ್ಯಯನದಿಂದ ಗೊತ್ತಾಗಿದೆ. ಉದಾಹರಣೆಗೆ ಎವೆರೆಸ್ಟ್ ಶಿಖರ ಆಗ ಸಮುದ್ರದ ತಳದಲ್ಲಿತ್ತೆಂಬ ಸಂಗತಿ ಅದರಲ್ಲಿಯ ಪ್ರೊಡಕ್ಟಸ್ ಸುಣ್ಣಕಲ್ಲಿನ ಅಧ್ಯಯನದಿಂದ ತಿಳಿದುಬಂದಿದೆ.

ಮಧ್ಯಜೀವಿಯುಗ: ಈ ಯುಗದಲ್ಲಿ ರೂಪುಗೊಂಡ ಶಿಲೆಗಳು ಅನೇಕ ಕಡೆ ಆದಿಜೀವಿಕಲ್ಪದ ಶಿಲೆಗಳ ಮೇಲೆ ಅನನುರೂಪವಾಗಿ ಪ್ರೇರಣೆಗೊಂಡಂಥವು. ಆದ್ದರಿಂದ ಈ ಎರಡು ಅವಧಿಗಳ ನಡುವೆ ಎಷ್ಟೋ ಕಾಲ ಕಳೆದು ಹೋಗಿರಬಹುದು. ಈ ಯುಗದ ಶಿಲೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಿದೆ: ಟ್ರಯಾಸಿಕ್, ಜುರಾಸಿಕ್, ಕ್ರಿಟೇಷಿಯಸ್. ಈ ಶಿಲೆಗಳು ಹೇಳುವ ಕಾಲದಲ್ಲಿ ಜೀವಿಗಳು ಹೆಚ್ಚು ವಿಕಾಸಗೊಂಡಿದ್ದು ನೆಲ ಮತ್ತು ಜಲವನ್ನು ಸಮಾನವಾಗಿ ಆಕ್ರಮಿಸಿಕೊಂಡಿದ್ದುವು. ಇಲ್ಲಿಯ ಪ್ರಾಣಿಗಳ ಪೈಕಿ ಡೈನೊಸಾರ್ ಎಂಬ ಹೆಗ್ಗೌಳಿ ಪ್ರಮುಖ. ಸಸ್ಯಗಳ ಪೈಕಿ ತಾಳೆ ಜಾತಿಯ ಮರಗಳು ಹೆಚ್ಚಾಗಿದ್ದುವು. ನೆಲಭಾಗ ಎರಡು ಖಂಡಗಳಾಗಿ ಪ್ರತ್ಯೇಕಗೊಂಡಿತ್ತು. ಉತ್ತರದಲ್ಲಿ ಅಂಗಾರ ಮತ್ತು ದಕ್ಷಿಣದಲ್ಲಿ ಗೊಂಡ್ವಾನ (ಪ್ಯಾಂಜಿಯ) ಎಂಬ ಭೂಪ್ರದೇಶಗಳಿದ್ದುವು. ಇವೆರಡರ ಮಧ್ಯೆ ಆಳದ ಟೆಥಿಸ್ ಸಾಗರ (ಪ್ಯಾಂತಾಲಸಾ) ಇತ್ತು. ಅದರ ಅವಶೇಷವೇ ಈಗ ಮೆಡಿಟರೇನಿಯನ್ ಸಮುದ್ರ (ಭೂಮಧ್ಯಸಮುದ್ರ) ಎಂದಾಗಿರುವುದು. ಈ ಯುಗಾಂತ್ಯದಲ್ಲಿ ಭೂಮಿ ಮತ್ತು ಸಮುದ್ರಗಳ ವಿನ್ಯಾಸದಲ್ಲಿ ಅಧಿಕ ಬದಲಾವಣೆಗಳು ಉಂಟಾಗಿ ಪ್ರಕೃತದ ವಿನ್ಯಾಸಕ್ಕೆ ಕಾರಣವಾಯಿತೆಂದು ಹೇಳಲಾಗಿದೆ. ಇದಲ್ಲದೆ ಪ್ರಾಣಿಗಳೂ ಸಸ್ಯಗಳೂ ಕ್ರಮೇಣ ವಿಕಾಸಗೊಂಡು ಆಧುನಿಕ ರೂಪಗಳನ್ನು ಹೊಂದಿದುವು.

ನವಜೀವಿಯುಗ: ಈ ಯುಗದ ಶಿಲೆಗಳು ಪುನಃ ಅನನುರೂಪವಾಗಿ ಮಧ್ಯಜೀವಿಕಲ್ಪದ ಶಿಲೆಗಳ ಮೇಲೆ ಪ್ರೇರಣೆಗೊಂಡಿವೆ. ಉಳಿದ ಎಲ್ಲ ಯುಗಗಳಿಗಿಂತಲೂ ಹ್ರಸ್ವವಾಗಿರುವ ಇದರ ಅವಧಿ ಸು. 65 ದಶಲಕ್ಷವರ್ಷಗಳು. ಈ ಶಿಲೆಗಳಲ್ಲಿಯ ಜೀವಿಗಳು ಆಧುನಿಕ ಪ್ರಾಣಿಗಳ ಗುಣದವವಾಗಿದ್ದು ಈಗಿರುವ ಅನೇಕ ಪ್ರಾಣಿಗಳನ್ನೂ ಸಸ್ಯಗಳನ್ನೂ ಹೋಲುತ್ತಿದ್ದುವು. ಈ ಅವಧಿಯಲ್ಲಿ ಅನೇಕ ಸಸ್ತನಿಗಳೂ ಹೂಬಿಡುವ ಸಸ್ಯಗಳೂ ಪ್ರಾಮುಖ್ಯ ಪಡೆದುವು. ಅಲ್ಲದೆ ಈಗ ಕಾಣುವ ಎಲ್ಲ ಖಂಡಗಳೂ ಮಹಾಸಾಗರಗಳೂ ಭೂಮಿಯ ಮೇಲ್ಮೈಯಲ್ಲಿ ರೂಪುತಳೆದುವು. ಭೂಮಿಯ ಮೇಲಿನ ಅತಿ ಎತ್ತರದ ಹಿಮಾಲಯ ಪರ್ವತಗಳೂ ಈ ಯುಗದಲ್ಲಿಯೇ ರೂಪುಗೊಂಡಂಥವು. ಈ ಯುಗಕ್ಕಿಂತ ಒಂದು ದಶಲಕ್ಷವರ್ಷ ಪ್ರಾಚೀನದಲ್ಲೇ ಉತ್ತರ ಧ್ರುವದಲ್ಲಿಯ ಮಂಜು ಮತ್ತಷ್ಟು ವ್ಯಾಪಿಸಿಕೊಂಡು ಉತ್ತರ ರಷ್ಯ ಮತ್ತು ಭೂಮಿಯ ಉತ್ತರ ಭಾಗದ ಉತ್ತರ ಅಮೆರಿಕದ ಭಾಗಗಳು ಮಂಜುಗಡ್ಡೆಯಿಂದ ಆವೃತವಾದುದೆಂದು ತಿಳಿಯುತ್ತದೆ. ಆದುದರಿಂದ ಈ ಯುಗವನ್ನು ಮಹಾಮಂಜುಗೆಡ್ಡೆ ಯುಗ (ದಿ ಗ್ರೇಟ್ ಐಸ್‌ಏಜ್) ಎಂದು ಕರೆದಿದ್ದಾರೆ. ಹವೆಯ ವೈಪರೀತ್ಯದ ಅವಧಿಯಲ್ಲೇ ಮಾನವನ ವಿಕಾಸ ಆಯಿತೆಂದು ತಿಳಿದುಬಂದಿದೆ. ಹೀಗೆ ಜಲಜಶಿಲೆಗಳು ಮತ್ತು ಅವುಗಳಲ್ಲಿ ಶೇಖರಗೊಂಡಿರುವ ಜೀವ್ಯವಶೇಷಗಳ ಅಧ್ಯಯನದಿಂದ ಭೂವಿಜ್ಞಾನಿಗಳು ಭೂಇತಿಹಾಸವನ್ನು ರಚಿಸಲು ಸಾಧ್ಯವಾಗಿದೆ.

ಪಳೆಯುಳಿಕೆಗಳಿಂದ ಭೂವೈಜ್ಞಾನಿಕ ಕಾಲದ ನಿರ್ಧಾರಣೆ: ಪ್ರಾಗ್ಜೀವಿ ವಿಜ್ಞಾನ (ಪೇಲಿಯಂಟಾಲಜಿ) ಪಿತನೆಂದು ಖ್ಯಾತನಾಗಿರುವ ಕುವಿಯರ್ ಎಂಬ ವಿಜ್ಞಾನಿ ನಿರೂಪಿಸಿದ ಪಳೆಯುಳಿಕೆಗಳ ವಿಕಾಸ ಬದಲಾವಣೆ ಕಾಲಾವಲಂಬಿ ಎಂಬ ಹೇಳಿಕೆಯಿಂದ ಇಲ್ಲವೇ ಪಳೆಯುಳಿಕೆಗಳು ಪುರಾತನವಾದಂತೆ ಅವು ಇಂದಿನ ಜೀವಿಗಳಿಗಿಂತ ತೀರ ಭಿನ್ನವಾಗಿರುತ್ತವೆ ಎಂಬ ಸಿದ್ಧಾಂತದಿಂದ ಭೂವಿಜ್ಞಾನದ ಪ್ರಗತಿಗೆ ಒಂದು ಆಯಾಮ ಲಭಿಸಿತು. ಈ ಕ್ರಮವನ್ನು ಅನುಸರಿಸಿ ಜೀವರಾಶಿಯನ್ನು ವಂಶಜಾತಿ ಇತ್ಯಾದಿ ವರ್ಗಗಳಾಗಿ ವಿಂಗಡಿಸಲಾಗಿದೆ. ಕುವಿಯರ್, ಬ್ರಾಂಗ್ನಿಯರ್ಟ್, ಸ್ಮಿತ್ ಮೊದಲಾದ ವಿಜ್ಞಾನಿಗಳು ಹೆಚ್ಚು ವ್ಯತ್ಯಾಸವಿಲ್ಲದ ಮತ್ತು ಒಂದೇ ವಂಶಕ್ಕೆ ಸೇರಿದ ಹೆಚ್ಚಿನ ಜೀವ್ಯವಶೇಷಗಳು ನಿರ್ದಿಷ್ಟ ಹಾಗೂ ಕಿರಿದಾದ ಸ್ತರಗಳ ಮಧ್ಯದಲ್ಲೇ ಅಡಗಿರುತ್ತವೆ ಎಂಬ ವಿಚಾರವನ್ನು ಹೊರಗೆಡವಿದರು. ಇಂಥ ಸ್ತರಸ್ತೋಮಗಳು ಭೌಗೋಳಿಕವಾಗಿ ವ್ಯಾಪಿಸಿದ್ದು ಪರಸ್ಪರ ಸಹಸಂಬಂಧಕ್ಕೆ ಸಿಲುಕುವಂತಾಗಿವೆ. ಅಂತೆಯೇ ನಿರ್ದಿಷ್ಟ ಜೀವ್ಯವಶೇಷಗಳು ಇರುವ ಶಿಲಾಸ್ತರಗಳು ನಿರ್ದಿಷ್ಟ ಕಾಲವನ್ನೂ ಸೂಚಿಸುತ್ತವೆ ಎಂಬ ತೀರ್ಮಾನಕ್ಕೂ ಬರಬಹುದಾಗಿದೆ. ಈ ತೀರ್ಮಾನವನ್ನು ಆಧರಿಸಿಯೇ ಭೂವೈಜ್ಞಾನಿಕ ಕಾಲವನ್ನು ನಿರ್ಧರಿಸಲಾಗಿದೆ.

ಸಾಗರಜಲದಲ್ಲಿ ನಿಕ್ಷೇಪಗೊಂಡಿರುವ ಲವಣ ಪ್ರಮಾಣದಲ್ಲಿ ಭೂವೈಜ್ಞಾನಿಕ ಕಾಲದ ಗಣನೆ: ಸಾಗರಜಲದಲ್ಲಿ ವಿಲೀನವಾಗಿರುವ ಸೋಡಿಯಮ್ ಕ್ಯಾಲ್ಸೈಟ್ ಲವಣಗಳನ್ನು ನಿರ್ಧರಿಸಿ, ಭೂಮಿಯ ಆಯಸ್ಸು 120 ದಶಲಕ್ಷ ವರ್ಷಗಳು ಎಂದು ಅಂದಾಜು ಮಾಡಲಾಗಿದೆ. ಸಮುದ್ರದ ನೀರು ಆದಿಯಲ್ಲಿ ಲವಣರಹಿತವಾಗಿತ್ತೆಂದು ಊಹಿಸಿ ಅನಂತರದಲ್ಲಿ ನದಿ ಕಾಲುವೆಗಳ ಭೂಕೊರೆತದಿಂದಾಗಿ ಅದರಲ್ಲಿಯ ಲವಣಗಳು ಲೀನಗೊಂಡು ಅಂತ್ಯದಲ್ಲಿ ಸಾಗರ ಸೇರಿ ಲವಣಾಂಶವನ್ನು ಹೆಚ್ಚಿಸುತ್ತ ಹೋದುವು ಎಂದು ತಿಳಿಯಬಹುದು. ಸಾಗರದಲ್ಲಿಯ ಲವಣ ಪ್ರಮಾಣ ಆದಿಯಲ್ಲಿ ಎಷ್ಟಿತ್ತು, ಈಗ ಎಷ್ಟಿದೆ ಎಂಬುದನ್ನು ನಿರ್ಧರಿಸುವುದಕ್ಕಿಂತಲೂ ಭೂ ಮೇಲ್ಮೈಯಿಂದ ಹರಿದು ಬರುವ ನೀರಿನಿಂದ ವಾರ್ಷಿಕವಾಗಿ ಸಾಗರ ಜಲಕ್ಕೆ ಸೇರುವ ಲವಣ ಪ್ರಮಾಣವನ್ನು ನಿರ್ಧರಿಸುವುದು ಒಂದು ವಿಧಾನ. ಸಾಗರ ಜಲದ ಪ್ರಮಾಣವನ್ನು ಮತ್ತು ಜಲಪ್ರಮಾಣದ ನಿಷ್ಕೃಷ್ಟ ಅಂಶದಲ್ಲಿರುವ ಲವಣಗಳ ಪ್ರಮಾಣವನ್ನು ಅಳೆಯುವುದರ ಮೂಲಕ ಇಂದಿನ ಸಾಗರಜಲದಲ್ಲಿರುವ ಲವಣಪ್ರಮಾಣ ಏನು ಎಂಬುದು ತಿಳಿಯುತ್ತದೆ. ವಾರ್ಷಿಕವಾಗಿ ನದಿಗಳಿಂದ ಸಾಗರ ಜಲವನ್ನು ಸೇರುವ ಲವಣ ಪ್ರಮಾಣವನ್ನು ಪ್ರಾಯೋಗಿಕ ಅವಲೋಕನದಿಂದಲೂ ತಿಳಿಯಬಹುದು.

ಮೂಲಭೂತವಾಗಿ ಈ ರೀತಿಯ ಲವಣ ಪ್ರಮಾಣ ಗಣನೆಯೇ ದೋಷಯುಕ್ತವಾದ್ದು. ಭೂಮೇಲ್ಮೈಯಲ್ಲಿಯ ಸಾಗರಗಳು ರೂಪುಗೊಳ್ಳುವುದಕ್ಕೆ ಮೊದಲೇ ಭೂಮಿ ರೂಪಿತವಾಗಿದ್ದು ಅದರ ಲವಣ ಪ್ರಮಾಣಗಣನೆಯಿಂದ ಭೂಮಿಯ ವಯೋಮಾನ ಗಣನೆ ಆಗುವುದಿದೆ. ಜೊತೆಗೆ ವರ್ಷಂಪ್ರತಿ ಸಾಗರಜಲದಲ್ಲಿ ಲೀನಗೊಳ್ಳುವ ಲವಣಪ್ರಮಾಣ ಏಕರೀತಿಯದಾಗಿರುವುದಿಲ್ಲ. ಅಲ್ಲದೆ, ಸಾಗರಜಲದಲ್ಲಿ ನಿಕ್ಷೇಪಗೊಳ್ಳುವ ಲವಣ ಪ್ರಮಾಣ ಗಣನೆಯೊಂದಿಗೆ ಬಾಷ್ಪೀಭವನವಾಗುವಾಗ ನಶಿಸಿಹೋಗುವ ಲವಣಗಳ ಪ್ರಮಾಣವನ್ನೂ ಗಣನೆಗೆ ತೆಗೆದುಕೊಂಡಿರುವುದಿಲ್ಲವಾದ್ದರಿಂದ ಭೂಮಿಯ ವಯೋಮಾನದ ಗಣನೆ ಕರಾರುವಾಕ್ಕಾಗಿ ಆಗುವುದಿಲ್ಲ.

ವಿಶಿಷ್ಟ ಖನಿಜಗಳ ವಿಕಿರಣಪಟುತ್ವ ಕ್ಷಯಗೊಳ್ಳುವುದನ್ನು (ರೇಡಿಯೋ ಕಾರ್ಬನ್ ಡೇಟಿಂಗ್) ಅಳೆಯುವ ವಿಧಾನದಿಂದ ಭೂವೈಜ್ಞಾನಿಕ ಕಾಲದ ಗಣನೆ: ಶಿಲೆಗಳ ಮತ್ತು ಖನಿಜಗಳ ವಯೋಮಾನವನ್ನು ಅವುಗಳಲ್ಲಿಯ ವಿಕಿರಣಪಟುತ್ವ ಕ್ಷಯಿಸುವ ದರ ಮತ್ತು ಇದರ ಪರಿಣಾಮವಾಗಿ ಉಂಟಾಗುವ ನೂತನ ಧಾತುಗಳ ಪರಿಮಾಣಗಳನ್ನು ಅಳೆಯುವ ಮೂಲಕವೂ ತಿಳಿಯಬಹುದು. ಪರಮಾಣು ವಿಕಿರಣಪಟುತ್ವ ಕ್ಷಯ ಎಂಬುದು ಕೆಲವು ಖನಿಜಗಳಲ್ಲಿ ಜರಗುವ ನೈಸರ್ಗಿಕ ಕ್ರಿಯೆ. ಅಸ್ಥಿರವೆನಿಸುವ ಕೆಲವೊಂದು ಧಾತುಗಳು ಒಡೆದು ನಿರ್ದಿಷ್ಟ ದರದಲ್ಲಿ ವಿದಳನಗೊಂಡು ಬೇರೆ ಧಾತುಗಳು ಉಂಟಾಗುವುದು ಈ ಕ್ರಿಯೆಯ ಪರಿಣಾಮ. ಅಸ್ಥಿರವು ವಿದಳನಕ್ಕೆ ಒಳಪಡುವಂಥದೂ ಆದ ಧಾತುಗಳ ಪೈಕಿ ಯುರೇನಿಯಮ್ ಪೊಟ್ಯಾಸಿಯಮ್ ಮತ್ತು ರುಬಿಡಿಯಮ್ ಮುಖ್ಯ. ವಿಕಿರಣಪಟುತ್ವ ಕ್ಷಯದಿಂದ ಅಂತಿಮವಾಗಿ ಜಡವಸ್ತುಗಳು ಎನಿಸುವ ಸೀಸ, ಆರ್ಗಾನ್ ಮತ್ತು ಸ್ಟ್ರಾಂಷಿಯಮ್ ಉಂಟಾಗುತ್ತವೆ. ಈ ಧಾತುಗಳು ಉಂಟಾಗಲು ತೆಗೆದುಕೊಳ್ಳುವ ಕಾಲವನ್ನು ಮೂಲಧಾತುವಿನ ವಿದಳನದರವನ್ನು ಆಧರಿಸಿ ಅಳೆಯಬಹುದು. ಹೆಚ್ಚಿನ ಶಿಲೆಗಳಲ್ಲಿ ಕ್ಯಾಲ್ಸಿಯಮ್ ಧಾತು ಅಧಿಕವಾಗಿರುವುದರಿಂದ ಪೊಟ್ಯಾಸಿಯಮ್‌ನಿಂದ ವಿದಳನಗೊಂಡ ಅಲ್ಪ ಮೊತ್ತದ ಕ್ಯಾಲ್ಸಿಯಮ್ ಮೊತ್ತವನ್ನು ಅಳೆಯುವುದು ಕಷ್ಟಸಾಧ್ಯ. ಆದ್ದರಿಂದ ಪೊಟ್ಯಾಸಿಯಮ್ ಆರ್ಗಾನ್ ವಿಧಾನವನ್ನು ಬಳಸಿ ಶಿಲಾಖನಿಜಗಳ ವಯಸ್ಸನ್ನು ನಿರ್ಧರಿಸಲಾಗುತ್ತದೆ. ಆರ್ಷೇಯ ಕಲ್ಪದ ಶಿಲೆಗಳಲ್ಲಿ ಸಂಚಯನಗೊಂಡಿರುವ ಯುರಾನಿ ನೈಟುಗಳಲ್ಲಿ ಶೇ. 10–15 ಸೀಸ ಸಂಚಯನವಾಗುವುದು ಗೊತ್ತಾಗಿದೆ. ಶಿಲೆಗಳಲ್ಲಿರುವ ಯುರಾನಿ ನೈಟನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ, ಅವುಗಳ ಸಮಗ್ರ ವಯೋಮಾನ ನಿರ್ಧರಿಸಬಹುದು. ಹಲವಾರು ಖಂಡಗಳ ಪೀಠ (ಷೀಲ್ಡ್) ಪ್ರದೇಶಗಳಲ್ಲಿಯ ಆರ್ಷೇಯ ಕಲ್ಪದ ಶಿಲೆಗಳನ್ನು ಅವುಗಳಲ್ಲಿಯ ಖನಿಜಗಳ ವಿಕಿರಣಪಟುತ್ವದ ಕ್ಷಯಿಕೆಯಿಂದ ಉಂಟಾದ ಅಂತ್ಯಧಾತುಗಳನ್ನು ನಿಖರವಾಗಿ ಅಳೆದು ಅವು ಸು. 3400 ದಶಲಕ್ಷ ವರ್ಷಗಳ ಪ್ರಾಚೀನವದ್ದೆಂದು ನಿರ್ಧರಿಸಲಾಗಿದೆ. (ಸಿ.ಎನ್.)

**ಭೂವೈಜ್ಞಾನಿಕ ನಕ್ಷೆ:** ಭೂಮಿಯ ಮೇಲ್ಭಾಗದಲ್ಲಿಯ ಶಿಲೆಗಳ ಹರವು ಮತ್ತು ಅವುಗಳ ರಚನಾ ವೈವಿಧ್ಯ ಚಿತ್ರಿಸಿರುವ ನಕ್ಷೆ (ಟೋಪೋಗ್ರಫಿಕಲ್ ಮ್ಯಾಪ್) . ಈ ನಕ್ಷೆಗಳು ಅವುಗಳ ಮೇಲೆ ನಮೂದಾಗಿರುವ ವಿವಿಧ ಶಿಲೆಗಳ ಪರಸ್ಪರ ಪ್ರಾಯವನ್ನೂ ಭೂಮಿಯ ಒಳಗೆ ಅವು ಪ್ರದರ್ಶಿಸುವ ರಚನೆಯನ್ನೂ ಸೂಚಿಸುತ್ತವೆ. ಸಾಮಾನ್ಯವಾಗಿ ಪ್ರದೇಶವೊಂದರ ಮೇಲ್ಮೈಲಕ್ಷಣವನ್ನು ಸೂಚಿಸುವ ನಕ್ಷೆಯ ಮೇಲೆ ಆ ಭಾಗದಲ್ಲಿ ಕಾಣಬರುವ ಶಿಲಾವರ್ಗ, ಅವುಗಳ ರಚನೆ ಮುಂತಾದವನ್ನು ಗುರುತಿಸಲಾಗುವುದು.

ನಕ್ಷೆಯ ಮೇಲೆ ಗುರುತಿಸಿರುವ ಶಿಲಾವರ್ಗಗಳಿಗೆ ಶಿಲಾಸಮೂಹಗಳೆಂದು ಹೆಸರು. ಈ ಬಗೆಯ ನಿರ್ದಿಷ್ಟ ವರ್ಗವೊಂದರ ಮೇಲು ಮತ್ತು ಕೆಳಭಾಗದ ಮೇರೆಗಳನ್ನು ಗುರುತಿಸುವುದು ಸುಲಭ. ಸಾಮಾನ್ಯವಾಗಿ ಇಂಥವನ್ನು ಅವು ಎಲ್ಲಿ ಸಮೃದ್ಧ ಕಂಡುಬರುತ್ತವೋ ಅಂಥ ಸ್ಥಳ ಮತ್ತು ಅವುಗಳಲ್ಲಿರುವ ಮುಖ್ಯ ಶಿಲಾವರ್ಗಗಳನ್ನು ಅನುಸರಿಸಿ ಹೆಸರಿಸಲಾಗುವುದು. ಉದಾ: ಕ್ಲೋಸ್‌ಪೇಟೆ ಗ್ರಾನೈಟ್. ಐಮಂಗಲ ಕಂಗ್ಲಾಮರೇಟ್, ಧಾರವಾಡ ಪದರುಶಿಲೆ ಇಂಥ ಹೆಸರುಗಳನ್ನು ಕರ್ನಾಟಕ ರಾಜ್ಯದ ಭೂಚರಿತ್ರೆಯಲ್ಲಿ ಕಾಣಬಹುದು. ಕರ್ನಾಟಕದ ಉತ್ತರ–ದಕ್ಷಿಣ ಬೆಟ್ಟಗಳ ಸಾಲಿನೋಪಾದಿಯಲ್ಲಿ ಗ್ರಾನೈಟ್ ಕಣಶಿಲೆ ಹಬ್ಬಿದ್ದರೂ ಅದು ಕ್ಲೋಸ್‌ಪೇಟೆಯ (ಈಗಿನ ರಾಮನಗರ) ಸುತ್ತಮುತ್ತಲಿರುವುದರಿಂದ ಅದಕ್ಕೆ ಕ್ಲೋಸ್‌ಪೇಟ್‌ಗ್ರಾನೈಟ್ ಎಂದು ಹೆಸರಾಗಿದೆ. ತುಮಕೂರು, ಪಾವಗಡ ಮುಂತಾದ ಕಡೆಗಳಲ್ಲಿಯ ಈ ಶಿಲೆಯ ಬೆಟ್ಟಗಳನ್ನು ತುಮಕೂರು ಗ್ರಾನೈಟ್, ಪಾವಗಡ ಗ್ರಾನೈಟ್ ಎಂದು ಕರೆಯದೆ ಕ್ಲೋಸ್‌ಪೇಟೆ ಗ್ರಾನೈಟ್ ಎಂದೇ ಕರೆದಿದೆ. ಚಿತ್ರದುರ್ಗ ಜಿಲ್ಲೆಯ ಐಮಂಗಲದ ಬಳಿ ಕದಂಬ ಶಿಲೆಯ ಶಿಲಾಜಾಡು ಪ್ರಮುಖವಾಗಿ ಕಂಡುಬರುತ್ತದೆ. ಜಿಲ್ಲೆಯ ಇತರ ಕಡೆಗಳಲ್ಲೂ ಇದು ಕಂಡುಬರುತ್ತಾದರೂ ಐಮಂಗಲ ಕಂಗ್ಲಾಮರೇಟ್ ಎಂದೇ ಇದನ್ನು ಗುರುತಿಸಲಾಗುತ್ತದೆ. ಈ ಜಾಡನ್ನು ಕರ್ನಾಟಕದ ಆರ್ಷೇಯಶಿಲಾಸಮುದಾಯದ ವರ್ಗೀಕರಣದಲ್ಲಿ ಬಳಸಿದೆ.

ರೂಪಾಂತರಶಿಲೆಗಳಿಗೂ ಇದೇ ತತ್ತ್ವವನ್ನು ಅನುಸರಿಸಲಾಗಿದೆ. ಪದರುಶಿಲೆ ಕೂಡ ಇದೇ ವರ್ಗಕ್ಕೆ ಸೇರುತ್ತದೆ. ಇದು ಕರ್ನಾಟಕದ ಉದ್ದಕ್ಕೂ ಕ್ಲೋಸ್‌ಪೇಟೆ ಗ್ರಾನೈಟ್ ಜಾಡಿಗೆ ಸಮಾಂತರವಾಗಿ ಹಬ್ಬಿಕೊಂಡಿದೆ. ಮೊತ್ತಮೊದಲಿಗೆ ಇದನ್ನು ಧಾರವಾಡದ ಬಳಿ ಗುರುತಿಸಿದ್ದರಿಂದ ಧಾರವಾಡ ಪದರುಶಿಲೆ ಎಂದೇ ಕರೆಯಲಾಯಿತು.

ಶಿಲಾವರ್ಗಗಳು ಅಥವಾ ಪ್ರಸ್ತರಗಳು ಯಾವುದಾದರೂ ನಿರ್ದಿಷ್ಟ ದಿಕ್ಕಿನಲ್ಲಿ ಹರಡಿರುತ್ತವೆ. ಇದೇ ಆ ಶಿಲೆಯ ಹರವು. ಪ್ರಸ್ತರಗಳು ಮಟ್ಟವಾಗಿರಬಹುದು. ಇಲ್ಲವೆ ಭೂಮಟ್ಟಕ್ಕೆ ಓರೆಯಾಗಿಯೊ ವಾಲಿಕೊಂಡೊ ಇರಬಹುದು. ಈ ಕೋನಕ್ಕೆ ಇಳಿವೋರೆ (ಡಿಪ್) ಎಂದು ಹೆಸರು. ಹರವಿಗೆ ಲಂಬ ದಿಶೆಯಲ್ಲಿ ಇಳಿವೋರೆ ಸ್ಪಷ್ಟವಾಗಿ ಕಂಡುಬರುತ್ತದೆ. ಇಳಿವೋರೆಯನ್ನು ಪ್ರವಣಮಾಪಕ (ಕ್ಲೈನೊಮೀಟರ್) ಎಂಬ ಉಪಕರಣದಿಂದ ಅಳೆಯುತ್ತಾರೆ. ಪ್ರವಣಮಾಪಕ ದಿಕ್ಸೂಚಿಯ (ಕ್ಲೈನೊಮೀಟರ್ ಕಂಪಾಸ್) ಸಹಾಯದಿಂದ ಇಳಿವೋರೆಯ ದಿಶೆಯನ್ನೂ ತಿಳಿಯಬಹುದು. ಇಳಿವೋರೆಯ ಇತಿಮಿತಿ, ನಿರೂಪಣೆ ಮುಂತಾದವನ್ನು ಭೂವೈಜ್ಞಾನಿಕ ನಕ್ಷೆಯ ಮೇಲೆ ನಮೂದಿಸಿರಲಾಗುತ್ತದೆ.

ಒಂದು ಶಿಲಾವರ್ಗವನ್ನು ಮತ್ತೊಂದು ಶಿಲಾವರ್ಗದಿಂದ ಬೇರ್ಪಡಿಸುವ ರೇಖೆಗೆ ಮೇರೆ ಅಥವಾ ಸೀಮಾರೇಖೆ ಎಂದು ಹೆಸರು. ಇದು ನಿರ್ದಿಷ್ಟವಾಗಿ ಕಂಡುಬಂದಲ್ಲಿ ಒಂದೇ ರೇಖೆಯಿಂದಲೂ ಅಸ್ಪಷ್ಟವಾಗಿ ತೋರಿಬಂದಲ್ಲಿ ಖಂಡರೇಖೆಯಿಂದಲೂ ಗುರುತಿಸಲಾಗುತ್ತದೆ.

ಶಿಲೆಗಳು ಸಾಮಾನ್ಯವಾಗಿ ನೆಲದ ಒಳಗೆ ಹುದುಗಿರುತ್ತವೆ. ಕ್ರಮೇಣ ಉಂಟಾಗುವ ಭೂಸವೆತದಿಂದ ಮೇಲಿರುವ ಭೂಭಾಗ ಕೊಚ್ಚಿಹೋಗಿ ಆ ಶಿಲಾಕೃತಿಯ ಸ್ವಲ್ಪ ಭಾಗ ಮಾತ್ರ ಗೋಚರಿಸುತ್ತದೆ. ಈ ಭಾಗಕ್ಕೆ ಹೊರಚಾಚು (ಔಟ್‌ಕ್ರಾಪ್) ಎಂದು ಹೆಸರು. ಮೇಲುಭಾಗದಲ್ಲಿ ಆಕೃತಿ ಕಿರಿದಾಗಿದ್ದರೂ ಒಳಭಾಗದಲ್ಲಿ ಬೃಹದಾಕಾರ ತಳೆದಿರಬಹುದು. ಹೆಚ್ಚು ಮಳೆಯಾಗುವ ಭೂ ಪ್ರದೇಶಗಳಲ್ಲಿ ಬಲುಭಾಗ ದಟ್ಟೈಸಿ ಬೆಳೆದ ಗಿಡಗಳ ಸಲುವಾಗೂ ಮಣ್ಣಿನಿಂದ ಮುಚ್ಚಿಹೋಗಿರುವುದರ ಸಲುವಾಗೂ ಶಿಲೆಗಳ ಕಿರಿದಾದ ಹೊರಚಾಚುಗಳು ಮಾತ್ರ ಗೋಚರವಾಗುತ್ತವೆ. ಆಂಧ್ರಪ್ರದೇಶದ ಭೂವೈಜ್ಞಾನಿಕ ನಕ್ಷೆಯ ಒಟ್ಟು ವಿಸ್ತೀರ್ಣದಲ್ಲಿ ನೂರಕ್ಕೆ ಒಂದು ಭಾಗದಷ್ಟು ಮಾತ್ರ ಹೊರಚಾಚುಗಳು ಕಂಡುಬರಬಹುದು. ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ಹೀಗಿರದೆ ಅಧಿಕ ಪ್ರಮಾಣದಲ್ಲಿ ಶಿಲಾಕೃತಿಗಳ ಹೊರಚಾಚುಗಳು ಕಂಡುಬರುತ್ತವೆ.

ಸಾಮಾನ್ಯವಾಗಿ ನಕ್ಷೆಯೊಂದಿಗೆ ಆ ಪ್ರದೇಶದ ಶಿಲೆಗಳ ಪ್ರತೀಕಗಳ ಪಟ್ಟಿಯೊಂದನ್ನು ಒದಗಿಸಿರುವುದೂ ಉಂಟು. ನಕ್ಷೆಯ ಅಂಚಿನಲ್ಲಿ ಇದನ್ನು ಬರೆಯುವುದು ವಾಡಿಕೆ. ಇದಕ್ಕೆ ನಕ್ಷೆಯ ವೃತ್ತಾಂತ (ಲೆಜೆಂಡ್) ಎಂದು ಹೆಸರು. ಒಂದೊಂದು ಶಿಲೆಗೂ ಒಂದೊಂದು ನಿರ್ದಿಷ್ಟ ಪ್ರತೀಕ ಉಂಟು.

| | |
|---|---|
| ಸೀಮಾರೇಖೆ | |
| | ಹರವು ಮತ್ತು ಇಳಿವೋರೆ |
| ⊕ | ಮಟ್ಟ ಶಿಲಾಸ್ತರಗಳು |
| | ನೀಳ ಸ್ತರಗಳು |
| | ಕೆಳಮಡಿಕೆ |
| ↔ | ಮೇಲ್ಮಡಿಕೆ |
| Δ | ಸ್ತರಭಂಗದ D = ಕೆಳಎಸೆತ U=ಮೇಲೆಸೆತ |
| Y | ಸ್ತರಭಂಗದ ಇಳಿವೋರೆ |

ಇದೇ ರೀತಿ ಪ್ರಸ್ತರಶಿಲೆಗಳ ವಿವಿಧ ಕಲ್ಪಗಳನ್ನು ಗುರುತಿಸಲು ಕೆಲವು ಪ್ರತೀಕಗಳನ್ನು ಬಳಸುವುದು ರೂಢಿ. ಅವು ಹೀಗಿವೆ:

| | | |
|---|---|---|
| ಪ್ಲೀಸ್ಟೋಸೀನ್ | . . . | Θ |
| ಪ್ಲಿಯೊಸೀನ್ | . . . | Tπλ |
| ಮಯೊಸೀನ್ | . . . | Tμ |
| ಆಲಿಗೊಸೀನ್ | . . . | To |
| ಇಯೊಸೀನ್ | . . . | Tε |
| ಪೇಲಿಯೊಸೀನ್ | . . . | T π |
| ಕ್ರಿಟೇಷಸ್ | . . . | K |
| ಜುರಾಸಿಕ್ | . . . | ϑ |
| ಟ್ರಯಾಸಿಕ್ | . . . | Tρ |
| ಪರ್ಮಿಯನ್ | . . . | Xπμ |
| ಪೆನ್ಸಿಲ್ವೇನಿಯನ್ | . . . | Xπ |
| ಮಿಸಿಸಿಪಿಯನ್ | . . . | Xμ |
| ಡಿವೋನಿಯನ್ | . . . | Δ |
| ಸೈಲೂರಿಯನ್ | . . . | Σ |
| ಆರ್ಡೊವೀಸಿಯನ್ | . . . | O |
| ಕೇಂಬ್ರಿಯನ್ | . . . | ∈ |
| ಪ್ರೀಕೇಂಬ್ರಿಯನ್ | . . . | Π∈ |

ಕೆಲವು ವೇಳೆ ಪ್ರತೀಕಾಕ್ಷರಗಳ ಬದಲು ವಿವಿಧ ಕಲ್ಪಗಳ ಶಿಲೆಗಳನ್ನು ಬೇರೆ ಬೇರೆ ಬಣ್ಣಗಳಿಂದಲೂ ನಕ್ಷೆಯ ಮೇಲೆ ಸೂಚಿಸುವುದಿದೆ. ಅಗ್ನಿಶಿಲೆಗಳನ್ನು ನಮೂದಿಸಲು ಯಾವ ಬಗೆಯ ನಿರ್ದಿಷ್ಟ ಬಣ್ಣವೂ ಇಲ್ಲ. ಆದರೆ ಅವನ್ನು ಸೂಚಿಸುವ ಬಣ್ಣಗಳು ಉಳಿದವಕ್ಕಿಂತ ಹೆಚ್ಚು ಶುದ್ಧವಾಗಿಯೂ ಅಧಿಕ ಹೊಳಪಿನಿಂದಲೂ ಕೂಡಿರುತ್ತವೆ.

ಒಂದು ಪ್ರದೇಶದ ಭೂವೈಜ್ಞಾನಿಕ ನಕ್ಷೆಯನ್ನು ಸಮರ್ಪಕವಾಗಿ ತಯಾರಿಸುವುದು ಕಷ್ಟಸಾಧ್ಯ ಕೆಲಸ. ಇದರ ತಯಾರಕನಿಗೆ ಭೂವಿಜ್ಞಾನದಲ್ಲಿ ಉತ್ತಮ ಪರಿಶ್ರಮವಿರಬೇಕು. ಕಾಡುಮೇಡುಗಳು, ಬೆಟ್ಟಗುಡ್ಡಗಳು ಇವುಗಳ ಸ್ಥಳಪರಿಚಯ ಇದ್ದು ಅಂಥಲ್ಲಿ ಸಂಚಾರ ಮಾಡಬೇಕಾಗುತ್ತದೆ. ಆತ ಜನಸಂಪರ್ಕವಿಲ್ಲದ ನಿಬಿಡಾರಣ್ಯಗಳಲ್ಲಿ ಡೇರೆಯಲ್ಲೇ ಹಲವು ಬಾರಿ ಉಳಿಯುವ ಸಂದರ್ಭಗಳೂ ಬರಬಹುದು.

ಭೂನಕ್ಷೆ ತಯಾರಿಕೆಗೆ ಅಗತ್ಯವಾಗಿ ಬೇಕಾದ ಸಲಕರಣೆಗಳು: ಪ್ರವಣಮಾಪಕ ಮತ್ತು ದಿಕ್ಸೂಚಿ ಅಥವಾ ಪ್ರವಣಸೂಚಕ ದಿಕ್ಸೂಚಿ, ಭೂಭಾಗದ ಮೇಲ್ಮೈನಕ್ಷೆಯ ಹಾಳೆ (ಟೋಪೊಷೀಟ್), ಶಿಲೆಗಳ ಭೌತಪರಿಶೀಲನೆಗೆ ಸುತ್ತಿಗೆ, ಉಬ್ಬುಮಸೂರ, ಚಾಕು, ದ್ರಾವಕ, ಬಣ್ಣದ ಪೆನ್ಸಿಲುಗಳು, ಟಿಪ್ಪಣಿಪುಸ್ತಕ, ಅಳತೆಪಟ್ಟಿ ಮತ್ತು ಕೋನಮಾಪಕ. ಇವಲ್ಲದೆ ಬಿಡಾರ ಹೂಡಲು ಡೇರೆ ಮತ್ತು ಸಹಾಯಕರು.

ಭೂನಕ್ಷೆ ತಯಾರಿಸುವ ಮೊದಲು ಮೇಲ್ಮೈನಕ್ಷೆ ಹಾಳೆಯ ಮೇಲೆ ನಿರ್ದಿಷ್ಟ ವಿಸ್ತೀರ್ಣವನ್ನು ಗುರುತಿಸಿಕೊಳ್ಳಬೇಕು. ನಾಲ್ಕಾರು ಬಾರಿ ಆ ಪ್ರದೇಶದಲ್ಲಿ ಸಂಚರಿಸಿ ಅಲ್ಲಿ ಕಂಡುಬರುವ ವಿವಿಧ ಶಿಲೆಗಳನ್ನೂ ಅವುಗಳ ರಚನೆಯನ್ನೂ ವಿವರವಾಗಿ ಪರಿಶೀಲಿಸಿ ಅವುಗಳ ಪೂರ್ವಪರಿಚಯ ಮಾಡಿಕೊಳ್ಳಬೇಕು. ಇದಾದ ಅನಂತರ ಶಿಲಾಭ್ಯಾಸವನ್ನು ಯಾವುದಾದರೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಪ್ರಾರಂಭಿಸಿ ನಿರ್ದಿಷ್ಟ ದಿಕ್ಕುಗಳಲ್ಲಿ ಮುಂದುವರಿಯುತ್ತ ಮಾರ್ಗಮಧ್ಯದಲ್ಲಿ ಗೋಚರಿಸುವ ಶಿಲೆಗಳನ್ನು ನಿರ್ದಿಷ್ಟ ಮಾನಕಕ್ಕೆ (ಸ್ಕೇಲ್) ಅನುಸಾರವಾಗಿ ಟೋಪೊಷೀಟಿನ ಮೇಲ್ಭಾಗದಲ್ಲಿ ಅದರ ಪ್ರತಿಯ ಮೇಲಾಗಲಿ ಗುರುತು ಮಾಡಬೇಕು. ಪ್ರತಿಯೊಂದು ಶಿಲಾವರ್ಗದ ಮೇರೆಗಳು, ಅವುಗಳ ಪರಸ್ಪರ ಸಂಬಂಧ, ರಚನಾವೈವಿಧ್ಯ, ಹರವು, ಇಳಿವೋರೆ ಮುಂತಾದವನ್ನೆಲ್ಲ ವಿವರವಾಗಿ ಪರಿಶೀಲಿಸಿ ಆಯಾ ಸ್ಥಳಗಳಲ್ಲಿ ಪರಿಗಣಿತ ಪ್ರತೀಕಗಳ ಸಹಾಯದಿಂದ ನಿಖರವಾಗಿ ಗುರುತಿಸಬೇಕು. ಹೀಗೆ ಹಲವಾರು ದಿಕ್ಕುಗಳಲ್ಲಿ ಶಿಲೆಗಳನ್ನು ಗುರುತಿಸಿದ ಮೇಲೆ ಒಂದೇ ವರ್ಗಕ್ಕೆ ಸೇರುವ ಶಿಲೆಗಳ ಜಾಡನ್ನು ನಕ್ಷೆಯ ಮೇಲೆ ಚಿತ್ರಿಸಬೇಕು. ಈ ಕ್ರಮದಲ್ಲಿ ಆಯ್ಕೆಮಾಡಿಕೊಂಡಿರುವ ಇಡೀ ಪ್ರದೇಶವನ್ನು ಗುರುತಿಸಿಕೊಂಡಲ್ಲಿ ಅಲ್ಲಿಯ ಉತ್ತಮ ಭೂವೈಜ್ಞಾನಿಕ ನಕ್ಷೆಯ ಸಹಾಯದಿಂದ ತಿಳಿದುಕೊಳ್ಳಬಹುದು. ಇಂಥ ನಕ್ಷೆಗಳು ಗಣಿಗಾರಿಕೆ, ಸುರಂಗಕೊರೆತ, ಜಲಾಶಯ ನಿರ್ಮಾಣ, ಸೇತುವೆ ನಿರ್ಮಾಣ– ಇವೇ ಮುಂತಾದವುಗಳಲ್ಲಿ ಬಲು ಉಪಯುಕ್ತವಾಗುತ್ತವೆ. ಈಚಿನ ವರ್ಷಗಳಲ್ಲಿ ಟೋಪೊಷೀಟುಗಳ ಬದಲಿಗೆ ವಿಮಾನ ಹಾರಾಟಗಳಿಂದ ತೆಗೆದ ಆಕಾಶ ಛಾಯಾಚಿತ್ರಗಳನ್ನೂ ಭೂಮಿಯನ್ನು ಪರಿಭ್ರಮಿಸುವ ಕೃತಕ ಭೂಉಪಗ್ರಹಗಳಿಂದ ತೆಗೆದ ಛಾಯಾಚಿತ್ರಗಳನ್ನೂ ಬಳಸಿ ಭೂವೈಜ್ಞಾನಿಕ ನಕ್ಷೆಗಳನ್ನು ರಚಿಸಲಾಗುತ್ತದೆ. (ಬಿ.ವಿ.ಜಿ.)

**ಭೂಶಿಲ್ಪ:** ಭೂಮಿಯ ಮೇಲೆ ಕಂಡುಬರುವ ಚಿತ್ರವಿಚಿತ್ರ ರೂಪಣೆ (ಅರ್ತ್‌ಸ್ಕಲ್ಪ್ಚರ್). ಬೆಟ್ಟಸಾಲು, ಕಣಿವೆ, ಕಂದರ, ನದಿ, ಸರೋವರ, ವಿಶಾಲ ಬಯಲು ಮೊದಲಾದವು ರೂಪುಗೊಂಡ ಬಗೆ, ಅವುಗಳ ಭವಿಷ್ಯಸ್ಥಿತಿ ಮುಂತಾದವನ್ನು ಕುರಿತ ವೈಜ್ಞಾನಿಕ ವಿವೇಚನೆ. ಭೂಮಿಯ ಮೇಲಿನ ಇಂಥ ರೂಪಣೆಗಳಿಗೂ ಅವುಗಳ ವ್ಯತ್ಯಾಸಗಳಿಗೂ ಕಾರಣ ಭೂಮಿಯಲ್ಲಿಯ ಶಕ್ತಿಗಳು. ಬೀಸುವ ಗಾಳಿ, ಸುರಿವ ಮಳೆ, ಹರಿವ ನೀರು, ಅಪ್ಪಳಿಸುವ ಸಮುದ್ರದ ಅಲೆ, ಗೆಡ್ಡೆಕಟ್ಟಿರುವ ಹಿಮ ಇವೆಲ್ಲ ಭೂಮಿಯ ಮೇಲೆ ಗೋಚರಿಸುವ ಬಹಿರ್ಜನಿತ ಶಕ್ತಿಗಳು. ಇವುಗಳ ಪರಿಣಾಮವಾಗಿ ಭೂಭಾಗ ಕ್ಷೀಣಿಸುತ್ತ ನಿರಂತರ ತಿದ್ದುಪಡಿಗೆ ಒಳಗಾಗುತ್ತಲೇ ಇರುತ್ತದೆ. ಅಂದರೆ ಶಿಲ್ಪಕಾರ್ಯ ಮುಂದುವರಿಯುತ್ತಲೇ ಇರುತ್ತದೆ. ಇದರ ಪ್ರಕಟಿತರೂಪವೇ ಭೂಮಿಯ ಮೇಲಿನ ವಿವಿಧ ರೂಪಗಳು.

ಬಹಿರ್ಜನಿತ ಶಕ್ತಿಗಳು ಮಾತ್ರವಲ್ಲದೆ ಭೂಮಿಯ ಒಳಭಾಗದ ಅಂತರಾಳದಲ್ಲಿ ಜನಿಸುವ ಬೇರೆ ಬಗೆಯ ಅಂತರ್ಜನಿತ ಶಕ್ತಿಗಳೂ ಇರುತ್ತವೆ. ಇದಕ್ಕೆ ಭೂಗರ್ಭದಲ್ಲಿಯ ಉಷ್ಣ ಕಾರಣ. ನೆಲ ಆಳಕ್ಕೆ ಇಳಿದಂತೆಲ್ಲ ಉಷ್ಣತೆ ಹೆಚ್ಚುತ್ತ ಹೋಗುತ್ತದೆ. ಕೆಲವೇ ಮೀಟರುಗಳ ಕೆಳಗೆ ಹೋದರೆ ಸಾಕು, ಅಲ್ಲಿಯ ಶಿಲೆಗಳೆಲ್ಲ ಕಾದು ಕೆಂಪಗಾಗಿರುವುದು ಕಂಡುಬರುತ್ತದೆ. ಮತ್ತಷ್ಟು ಕೆಳಕ್ಕೆ ಇಳಿದರೆ ಅವು ಕರಗಿಹೋಗಿ ಶಿಲಾಪಾಕವಾಗಿರುವ ಸ್ಥಿತಿ ಇರುತ್ತದೆ. ಭೂಭಾಗಗಳ ಕೆಲವೆಡೆ ಇರಬಹುದಾದ ಬಿರುಕುಗಳ ಮೂಲಕ ಶಿಲಾಪಾಕ ಮೇಲೆ ಉಕ್ಕಿ ಹರಿದು ಬರುವುದುಂಟು. ಈ ವಿದ್ಯಮಾನಕ್ಕೆ ಜ್ವಾಲಾಮುಖಿ ಎಂದು ಹೆಸರು. ಶಿಲಾಪಾಕ ಹೊರಗೆ ಬರುವಾಗ, ಭೂಮಿಯೊಳಗಿನ ಶಿಲಾಸ್ತರಗಳ ಜೋಡಣೆಯಲ್ಲಿ ಏರುಪೇರು ಉಂಟಾಗಿ ಭೂಮಿ ಕಂಪಿಸುತ್ತದೆ. ಕಂಪನದ ಸಲುವಾಗಿ ಭೂಮಿ ಬಿರುಕುಬಿಟ್ಟು ಗುಡ್ಡಗಳು ಜರಿಯುವುದು, ನದಿಗಳು ಬತ್ತಿಹೋಗುವುದು, ಕಟ್ಟಡಗಳು ಕುಸಿಯುವುದು ಮುಂತಾದ ಹಾನಿಕಾರಕ ಪರಿಣಾಮಗಳು ಉಂಟಾಗುತ್ತವೆ. ಭೂಮಿಯ ಮೇಲಿನ ಎಲ್ಲ ಪ್ರಕೃತಿರೂಪಗಳೂ ಬಹಿರ್ಜನಿತ ಮತ್ತು ಅಂತರ್ಜನಿತ ಶಕ್ತಿಗಳ ಪ್ರಭಾವಕ್ಕೆ ಒಳಪಟ್ಟೇ ವ್ಯತ್ಯಾಸಗೊಳ್ಳುತ್ತ ಹೋಗುತ್ತವೆ.

ಎದ್ದು ನಿಂತಿರುವ ಯಾವ ಶಿಲಾವಸ್ತುವೇ ಆಗಲಿ, ಅದು ಎಷ್ಟೇ ಗಡಸು ಆದದ್ದಾಗಲಿ ಭೂಶಕ್ತಿಗಳಿಗೆ ಒಳಪಟ್ಟು ಕಾಲಕ್ರಮೇಣ ನೆಲಸಮವಾಗಲೇಬೇಕು ಎನ್ನುವುದು ಪ್ರಕೃತಿ ನಿಯಮ. ಉದಾಹರಣೆಗೆ ಒಂದು ಸ್ಥಳದಲ್ಲಿಯ ನೆಲ ಕ್ಷಯಿಸುತ್ತದೆ ಎನ್ನೋಣ. ಹೀಗೆ ಕ್ಷಯಿಸಿದ ವಸ್ತುವೆಲ್ಲ ಬಲುದೂರ ಸಾಗಿ ಸಮುದ್ರದ ತಳದಲ್ಲಿ ಶೇಖರಗೊಂಡು ಅಲ್ಲಿ ಬೆಳೆಯಲು ಪ್ರಾರಂಭಿಸುತ್ತದೆ. ಈ ಪ್ರಕೃತಿ ಕಾರ್ಯ ನಿರಂತರವಾಗಿ ಸಾಗುವಂಥದು. ಒಬ್ಬ ಮನುಷ್ಯನ ಜೀವನದಲ್ಲಿ ಹೇಗೊ ಹಾಗೆ ಭೂಮಿಯ ಬಾಹ್ಯ ಪ್ರಕೃತಿಯಲ್ಲಿಯ ವಿವಿಧ ರೂಪಗಳಲ್ಲೂ ಬೇರೆ ಬೇರೆ ಅವಸ್ಥೆಗಳನ್ನು ಗುರುತಿಸಬಹುದು. ಪಂಕ್ತಿ ಪಂಕ್ತಿಯಾಗಿ ಹಬ್ಬಿರುವ ಪರ್ವತಗಳು ಕಾಲಕ್ರಮೇಣ ತಮ್ಮ ಸ್ಥಿರತೆಯನ್ನೂ ಗಡಸುತನವನ್ನೂ ಕಳೆದುಕೊಳ್ಳುತ್ತವೆ. ಪರ್ವತ ಶಿಖರಗಳೆಲ್ಲ ಕೆಳಗುರುಳಿ ಅವುಗಳ ಕೊಂಕುಗಳೆಲ್ಲ ಸವೆದು, ಎದ್ದುನಿಂತ ಭೂಭಾಗವೆಲ್ಲ ಕುಗ್ಗಿ, ನಡುವಯಸ್ಸು ತಲುಪಿರುವುದು ಕಾಣಬರುತ್ತದೆ. ಈ ಸ್ಥಿತಿಯಿಂದ ಮತ್ತೆ ಮುಂದೆ ಅವಲೋಕಿಸಿದಲ್ಲಿ ಭೂಮಿಯಲ್ಲಿಯ ಏರುತಗ್ಗುಗಳೆಲ್ಲವೂ ಮಾಯವಾಗಿ, ಯಾವುದೇ ನಿರ್ದಿಷ್ಟ ರೂಪವೂ ಇರದ ಬಟ್ಟನೆಯ ಬಯಲುಗಳು ಕಾಣುತ್ತವೆ. ಈ ಸ್ಥಿತಿಯನ್ನು ಪ್ರಕೃತಿಯ ಮುಪ್ಪಿನ ಅವಸ್ಥೆ ಎನ್ನಬಹುದು.

ನದಿಗಳ ವಿಚಾರವಾಗೂ ಇದೇ ರೀತಿಯ ಹಂತಗಳನ್ನು ಗುರುತಿಸಬಹುದು. ಬೆಟ್ಟದ ಯಾವುದೋ ಸ್ಥಳದಲ್ಲಿ ಹುಟ್ಟುವ ನದಿ, ತನ್ನ ಬಾಲ್ಯ ಮತ್ತು ಯೌವನಾವಸ್ಥೆಯಲ್ಲಿ, ಬಂಡೆಯಿಂದ ಬಂಡೆಗೆ ನೆಗೆಯುತ್ತ, ಹಾರುತ್ತ, ದುಮ್ಮಿಕ್ಕುತ್ತ, ನಾನಾ ಬಗೆಯಲ್ಲಿ ವರ್ತಿಸುತ್ತ ವೇಗದಿಂದ ಕೆಳಗೆ ಹರಿದು ಬರುತ್ತದೆ. ಈ ಅವಸ್ಥೆಯಲ್ಲಿ ಅದರ ದಾರಿಯ ಅಡ್ಡ ಬಂದ ಎಲ್ಲವನ್ನು ತಳ್ಳಿ, ಇಲ್ಲವೆ ಸೀಳಿಕೊಂಡು ಹೋಗುವುದೇ ಅದರ ಲಕ್ಷಣ. ಮುಂದೆ ಸಾಗಿದಂತೆ ನದಿಗೂ ವಯಸ್ಸಾಗುತ್ತದೆ. ಮೊದಲಿನ ಸಾಮರ್ಥ್ಯ ಇರದು. ನದಿಗೂ ಒಂದು ಬಗೆಯ ಗಾಂಭೀರ್ಯ ಬಂದಿರುತ್ತದೆ. ಮುಂದೆ ಸಾಗುತ್ತ ವೇಗ ಕಡಿಮೆಯಾಗಿ ಅದು ಮುಪ್ಪಿನ ಅವಸ್ಥೆಗೆ ಬರುತ್ತದೆ. ಹಿಂದೆ ಹೊತ್ತು ತಂದ ಮಣ್ಣನ್ನು ದಡದಲ್ಲಿ ಹರಡುವುದೊಂದೇ ಆಗಿನ ಅದರ ಕೆಲಸ. ಹೀಗೆ ಪಾತ್ರವನ್ನು ಅಗಲಮಾಡಿಕೊಂಡು ಮಂದಗತಿಯಿಂದ ಸಾಗುತ್ತ ಅಂತಿಮವಾಗಿ ಸಮುದ್ರ ಸೇರುತ್ತದೆ.

ಸಮುದ್ರತಳದಲ್ಲಿ ನಿಕ್ಷೇಪಗೊಂಡ ಶಿಲೆಗಳು ಪದರ ಪದರವಾಗಿ, ಹಾಳೆಹಾಳೆಯಾಗಿ ಒಟ್ಟುಗೂಡುತ್ತವೆ. ಭೂಮಿಯಲ್ಲಿಯ ಅಂತರ್ಜನಿತಶಕ್ತಿಗಳ ದೆಸೆಯಿಂದ ಈ ಪದರಗಳು ಮಡಿಕೆಬಿದ್ದು ನೀರಿನ ಒಳಗಿನಿಂದ ಮೇಲೆ ಬಂದು ಪರ್ವತ ಪಂಕ್ತಿಯಾಗಿ ನಿಲ್ಲುವುದುಂಟು. ಮಡಿಕೆಬಿದ್ದ ಪದರಗಳಲ್ಲಿ ಬೇರೆ ಬೇರೆ ಜಾತಿಯ ಶಿಲೆಗಳಿರುತ್ತವೆ. ಕೆಲವು ಪದರಗಳು ಜೇಡಿಯಂಥ ಮಣ್ಣಿನಿಂದ ಕೂಡಿರಬಹುದು, ಮತ್ತೆ ಕೆಲವು ಮರಳುಗಲ್ಲಿನಂತೆ ಗಡುಸಾದ ಪದರಗಳಾಗಿರಬಹುದು. ಕಬ್ಬಿಣ ಅಂಶವೇ ಹೆಚ್ಚಾಗಿ ಸೇರಿಕೊಳ್ಳುವ ಕಾರಣ ಕಠಿಣಶಿಲೆಯಾಗಿರಬಹುದು. ಮಡಿಕೆಬಿದ್ದು ಎದ್ದುನಿಂತ ಪದರಗಳು ಭೂಮಿಯ ಮೇಲಿನ ಶಕ್ತಿಗಳಿಗೆ ಸಿಕ್ಕಿ ಕ್ಷಯಿಸುತ್ತವೆ. ಜೇಡಿಮಣ್ಣಿನಿಂದ ಕೂಡಿದ ಮೆತು ಕಲ್ಲು ಮೊದಲು ಶಿಥಿಲಗೊಳ್ಳುತ್ತದೆ ಮತ್ತು ಕೊಚ್ಚಿಹೋಗುತ್ತದೆ. ಗಡುಸಾದ ಶಿಲಾಪದರಗಳು ಎಮ್ಮೆಯ ಬೆನ್ನೇಣಿನಂತೆ ಎದ್ದು ನಿಂತಿರುತ್ತವೆ. ಕುದುರೆಮುಖ, ಬಾಬಾಬುಡನ್, ಕೊಡಚಾದ್ರಿ ಪರ್ವತದ ಸಾಲುಗಳಲ್ಲಿ ಈ ರೀತಿಯ ಗುಡ್ಡ ಸಾಲುಗಳನ್ನು ಕಾಣಬಹುದು.

ಬಟ್ಟಬಯಲು ಆಗಿರುವ ಪ್ರದೇಶದಲ್ಲಿ ಥಟ್ಟನೆ, ಗೋಳಗುಮ್ಮಟದಂತೆ ಎದ್ದು ನಿಂತಿರುವ ಬೃಹದಾಕಾರದ ಬಂಡೆಗಳನ್ನು ಕೋಲಾರ, ಬೆಂಗಳೂರು, ತುಮಕೂರು, ಬಳ್ಳಾರಿ, ರಾಯಚೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಾಣಬಹುದು. ಕಡಿದಾದ ಪಕ್ಕಗಳು ಪೇರಿಸಿಟ್ಟಂತೆ ಇರುವ ಕಲ್ಲುಗುಂಡಿನ ರಾಶಿಗಳು ಇವುಗಳ ಮುಖ್ಯ ಲಕ್ಷಣ. ಯಾವ ಬಗೆಯ ಕಲ್ಲಾದರೂ ಈ ರೀತಿ ಗೋಳಗುಮ್ಮಟದಂತೆ ನಿಲ್ಲಬಲ್ಲದು. ವಿಶಾಲವಾಗಿ ಹರಡಿರುವ ಕರಿಯ ಮಣ್ಣಿನ, ಬೋಳುಬಯಲಿನ ನಡುವೆ ನರಗುಂದ, ನವಿಲುಗುಂದದ ಬೆಟ್ಟಗಳು ಕಾಣಿಸುತ್ತವೆ. ಇವು ಮರಳುಗಲ್ಲಿನಿಂದಾದವು. ಸಾಮಾನ್ಯವಾಗಿ ಇಂಥ ಗುಡ್ಡಗಳೆಲ್ಲ ಗ್ರಾನೈಟ್ (ಸುಟ್ಟಕಲ್ಲು) ಶಿಲೆಗಳಿಂದ ಉಂಟಾದವು. ಶಿವಗಂಗೆ, ಸಾವನದುರ್ಗ, ಮಧುಗಿರಿ, ಪಾವಗಡ, ಮಿಡಿಗೇಶಿ, ಚಾಮುಂಡಿಬೆಟ್ಟ, ರಾಮನಗರ ಇವು ಉದಾಹರಣೆಗಳು. ಇಲ್ಲಿಯ ಬಂಡೆಗಳು ರಾಶಿರಾಶಿಯಾಗಿ ಪೇರಿಸಿಟ್ಟಂತೆ ಇರುತ್ತವೆ. ಇನ್ನು ಕೆಲವೆಡೆಯ ಬಂಡೆಗಳು ಕೆಳಗುರುಳದೇ ಮೇಲೆಯೇ ಒಂದರ ಪಕ್ಕದಲ್ಲೊಂದು ಕುಳಿತು ಕೋಟೆ ಆಕಾರದಲ್ಲಿರುತ್ತವೆ. ಈ ಆಕಾರ ಬರಲು ಗ್ರಾನೈಟ್ ಕಲ್ಲಿನಲ್ಲಿಯ ಚಚ್ಚೌಕ ಸೀಳುಗಳೇ ಕಾರಣ. ಇವುಗಳ ದೆಸೆಯಿಂದ ವಿಶಾಲವಾದ ಬಂಡೆ ಸೀಳುಬಿಟ್ಟು ಕಲ್ಲುಗುಂಡುಗಳಾಗಿ ಒಡೆದುಹೋಗುತ್ತದೆ. ಒಡೆದು ಬೇರೆಯಾದ ಗುಂಡುಗಳು ಕೆಳಗುರುಳಿ ಮತ್ತೂ ದುಂಡನೆಯ ಆಕಾರಹೊಂದಿ ಬೆಟ್ಟದ ತಪ್ಪಲಿನಲ್ಲಿ ರಾಶಿಗೂಡುತ್ತವೆ.

ಎದ್ದು ನಿಂತಿರುವ ಪೀಠಭೂಮಿ ನದಿಯ ಶಿಲ್ಪಕಾರ್ಯಕ್ಕೆ ಈಡಾದಾಗ ಹರಿಯುವ ನೀರು ಕಲ್ಲನ್ನು ಕೊರೆದು ತನ್ನ ಪಾತ್ರವನ್ನು ಕೆಳಗಿಳಿಸಿಕೊಳ್ಳುತ್ತದೆ. ಕೊರೆದುಹೋದ ಪ್ರದೇಶ ಕಣಿವೆಯಂತೆಯೂ ಕೊರೆದು ಹೋಗದೆ ಎದ್ದು ನಿಂತ ಪ್ರದೇಶ ಗುಡ್ಡದಂತೆಯೂ ಕಾಣಿಸುತ್ತವೆ. ಕೊರೆದ ಕಲ್ಲು ಬಲು ಗಡುಸಾಗಿರುತ್ತದೆ. ಕೊರೆದು ಹಾಕಿದ ಕಣಿವೆಯ ಪಕ್ಕಗಳು ಬಲು ಕಡಿದಾಗಿದ್ದು ಗೋಡೆಯಂತೆ ನಿಂತಿರುತ್ತವೆ. ಇಂಥ ಕಡಿದಾದ ಕಣಿವೆಗಳಿಗೆ ಕಂದರಗಳು ಎಂದು ಹೆಸರು. ಉದಾ: ಕರ್ನಾಟಕದ ಜೋಗದ ಬಳಿ ಶರಾವತಿ ತನ್ನ ಶಕ್ತಿಯಿಂದ ಗಡಸು ಶಿಲೆಯಲ್ಲಿ ಸು. 30 ಕಿಮೀ ದೂರದವರೆಗೂ ಕಂದರ ಕೊರೆದಿದೆ.

ಸಾಮಾನ್ಯವಾಗಿ ಕಣಿವೆಗಳು ಇಂಗ್ಲಿಷಿನ V ಅಕ್ಷರದ ಆಕಾರದಲ್ಲಿರುತ್ತವೆ. ನದಿ, ಬೆಟ್ಟಗಳ ವಿವಿಧ ಪ್ರಾವಸ್ಥೆಗಳನ್ನು ಹೇಗೆ ಗುರುತಿಸಬಹುದೋ ಹಾಗೆಯೆ ಕಣಿವೆಗಳ ಆಕಾರ ಗಮನಿಸಿ ಅವು ಯಾವ ಅವಸ್ಥೆಯಲ್ಲಿವೆ ಎಂಬುದನ್ನು ತಿಳಿಯಬಹುದು. ಇದೇ ರೀತಿ ಗುಡ್ಡ ಪ್ರದೇಶದ ವಿವಿಧ ಪ್ರಾವಸ್ಥೆಗಳನ್ನು ಗುರುತಿಸಿ ಅದರ ಪ್ರಸಕ್ತ ಸ್ಥಿತಿಯನ್ನು ಅರಿಯುವುದು ಸಾಧ್ಯವಾಗಿದೆ. (ಬಿ.ಪಿ.ಆರ್.)

**ಭೂಸಂಪನ್ಮೂಲ ಉಪಗ್ರಹಗಳು:** ಭೂಮೇಲ್ಮೈ ಸಂಪನ್ಮೂಲಗಳ ಮಾಹಿತಿ ನೀಡುವ ಉಪಗ್ರಹಗಳು. ಮೋಜಣಿ ಕಾರ್ಯ, ನಕ್ಷಾಲೇಖನ ಮತ್ತು ಭೂಸಂಪನ್ಮೂಲಗಳ ಬಗ್ಗೆ ತಿಳಿಯಲು ನಾಸಾದಿಂದ ಉಡಾಯಿಸಲಾದ ಮೊದಲ ದೂರಸಂವೇದನೆ ಉಪಗ್ರಹವಾಗಿದ್ದು ಈ ಉಪಗ್ರಹಕ್ಕೆ ಲ್ಯಾಂಡ್ ಸ್ಯಾಟ್–I ಎಂದು ಹೆಸರಿಸಲಾಯಿತು. ಈ ಸಾಲಿಗೆ ಫ್ರಾನ್ಸ್ [ಎಸ್.ಪಿ.ಓ.ಟಿ.], ಭಾರತ [ಐ.ಅರ್.ಎಸ್.], ಜಪಾನ್ [ಜೆ.ಇ.ಆರ್.ಎಸ್.] ಸೇರಿದವು.

ದೂರಸಂವೇದಿಯಲ್ಲಿ ಉಪಗ್ರಹಚಿತ್ರಗಳು ಇತ್ತೀಚೆಗೆ ಮಹತ್ತ್ವದ ಸ್ಥಾನವನ್ನು ಪಡೆದುಕೊಂಡಿವೆ. ಈ ಉಪಗ್ರಹ ಚಿತ್ರಗಳು ಭೂಬಳಕೆ, ಜಲರಾಶಿ, ಅರಣ್ಯ ಪ್ರದೇಶ, ವಸತಿ ಪ್ರದೇಶ, ಬೆಳೆಗಳ ಹಂಚಿಕೆ, ಭೂಸವೆತ, ಕರಾವಳಿ ಭೂಸ್ವರೂಪ – ಹೀಗೆ ವಿವಿಧ ಬಗೆಯ ಪ್ರಾಕೃತಿಕ ಸಂಪನ್ಮೂಲಗಳ ವಿಶ್ಲೇಷಣೆಯಲ್ಲಿ ಅತ್ಯಂತ ಪ್ರಮುಖವಾದುದು.

ಈ ಭೂಸಂಪನ್ಮೂಲ ಉಪಗ್ರಹಗಳಲ್ಲಿ ಪ್ರಮುಖವಾದವುಗಳು:

1. ಲ್ಯಾಂಡ್ ಸ್ಯಾಟ್; 2. ಸ್ಪಾಟ್ ಸ್ಯಾಟ್; 3. ಭಾರತೀಯ ದೂರಸಂವೇದಿ ಉಪಗ್ರಹಗಳು (ಐ.ಆರ್.ಎಸ್.); 4. ಹ್ಯಾಮ್ ಸ್ಯಾಟ್.

1. ಲ್ಯಾಂಡ್‌ಸ್ಯಾಟ್: ಭೂಉಪಗ್ರಹವನ್ನು ಡೆಲ್ಟಾರಾಕೆಟ್ ಮೂಲಕ ಲಾಸ್‌ಏಂಜಲೀಸ್ ಮತು ಸ್ಯಾನ್‌ಫ್ರಾನ್ಸಿಸ್ಕೋದ ನಡುವಿನ ಕ್ಯಾಲಿಫೋರ್ನಿಯ ತೀರದಲ್ಲಿ ವಂದೇನಬರ್ಗ್ ಏರ್‌ಫೋರ್ಸ್‌ನಿಂದ ಉಡಾಯಿಸಲಾದ ಪ್ರಮುಖ ಉಪಗ್ರಹವಾಗಿದೆ. ಈ ಉಪಗ್ರಹ ಭೂಸಂಪನ್ಮೂಲಗಳನ್ನು ಪತ್ತೆಹಚ್ಚುವಲ್ಲಿ ಸಹಕಾರಿಯಾಗಿದೆ. ವಿಶೇಷವಾಗಿ ಈ ಉಪಗ್ರಹ ಎಲ್ಲ ವಾತಾವರಣದಲ್ಲೂ ಅದರಲ್ಲೂ ಮೋಡದ ಪರಿಸ್ಥಿತಿಯಲ್ಲೂ ಮಾಹಿತಿಯನ್ನು ಒದಗಿಸುತ್ತಿದೆ.

ಲ್ಯಾಂಡ್‌ಸ್ಯಾಟ್ 1, 2 ಮತ್ತು 3ನ್ನು ಕ್ರಮವಾಗಿ 1972, 1975 ಮತ್ತು 1978ರಂದು ಉಡಾಯಿಸಲಾಯಿತು. ಇವುಗಳು ಸರಿ ಸು. 918 ಕಿಮೀ ಎತ್ತರದಲ್ಲಿರುತ್ತವೆ, ಅನಂತರ ಲ್ಯಾಂಡ್‌ಸ್ಯಾಟ್ – 4 ಮತ್ತು ಲ್ಯಾಂಡ್‌ಸ್ಯಾಟ್ – 5 ನ್ನು ಉಡಾಯಿಸಲಾಯಿತು. ಇವು ಕೇವಲ 705 ಕಿಮೀ ಎತ್ತರದಲ್ಲಿರುತ್ತವೆ. ಈ ಉಪಗ್ರಹಗಳಿಂದಲೂ ಮೋಡದ ಪರಿಸ್ಥಿತಿಯಲ್ಲೂ ಮಾಹಿತಿಯನ್ನು, ಅದರಲ್ಲೂ ಕರಾವಳಿ ಭಾಗಗಳ ಮಾಹಿತಿಯನ್ನು ತಿಳಿಯಬಹುದಾಗಿದೆ.

2. ಸ್ಪಾಟ್ ಸ್ಯಾಟ್: ಇದು ಮತ್ತೊಂದು ಪ್ರಮುಖವಾದ ಭೂಮೇಲ್ಮೈ ಸಂಪನ್ಮೂಲಗಳನ್ನು ಪತ್ತೆಹಚ್ಚುವ ಉಪಗ್ರಹವಾಗಿದ್ದು, 1986ರಲ್ಲಿ ಫ್ರಾನ್ಸ್ ಪ್ರಥಮಬಾರಿಗೆ ಸ್ಪಾಟ್ -Iನ್ನು, ಏರಿಯನ್ ರಾಕೆಟ್ ಮೂಲಕ ಫ್ರೆಂಚ್‌ಗಯಾನದಿಂದ ಉಡಾಯಿಸಲಾಯಿತು. ಇದರಿಂದ ವಿಶೇಷವಾಗಿ ಕರಾವಳಿ ಪ್ರದೇಶದ ಮಾಹಿತಿಯನ್ನು ಎಲ್ಲ ವಾತಾವರಣದಲ್ಲೂ ಪಡೆಯಲು ಸಾಧ್ಯವಾಯಿತು. ಈ ಉಪಗ್ರಹಗಳು ಭೂಮಿಯಿಂದ ಕೇವಲ 832 ಕಿಮೀ ಎತ್ತರದಲ್ಲಿರುತ್ತವೆ.

3. ಭಾರತದ ದೂರಸಂವೇದಿ ಉಪಗ್ರಹಗಳು (ಐ.ಆರ್.ಎಸ್.) : ಭೂಮೇಲ್ಮೈ ನಿಗದಿಪಡಿಸಿದ ಕಕ್ಷೆಯಲ್ಲಿನ ಈ ಉಪಗ್ರಹಗಳು ಎಲೆಕ್ಟ್ರೋಮ್ಯಾಗ್ನೇಟಿಕ್ ಅಲೆಗಳನ್ನು ಬಳಸಿಕೊಂಡು ತನ್ನ ಕ್ಯಾಮರಾದಿಂದ ಚಿತ್ರಗಳನ್ನು ಸೆರೆಹಿಡಿಯುವ, ಸಾಮರ್ಥ್ಯವನ್ನು ಪಡೆದಿವೆ. ಅರಣ್ಯ, ಕೃಷಿ, ಬಂಜರುಭೂಮಿ, ಸಾಗರ ಸಂಪನ್ಮೂಲ, ಪ್ರಕೃತಿ ವಿಕೋಪಗಳ ಬಗ್ಗೆ ಮಾಹಿತಿ ನೀಡುವ ಹಲವಾರು ಚಿತ್ರಗಳನ್ನು ಭೂಮಿಗೆ ರವಾನಿಸುತ್ತದೆ.

ದೂರಸಂವೇದಿ ಉಪಗ್ರಹಗಳ ಉಡಾವಣೆ 1979ರಲ್ಲಿ ಭಾಸ್ಕರ – 1 ಎಂಬ ಪ್ರಾಯೋಗಿಕ ಉಪಗ್ರಹ ಉಡಾವಣೆಯ ಮೂಲಕ ಪ್ರಾರಂಭವಾಯಿತು. ಅನಂತರ ಐ.ಆರ್.ಎಸ್.–1ಎ ಭಾರತದ ದೂರಸಂವೇದಿ ಕಾರ್ಯಕ್ರಮದ ಆರಂಭಿಕ ಉಪಗ್ರಹ. ಅಂದಿನಿಂದ ಇಲ್ಲಿಯವರೆಗೆ 2 ದೂರಸಂವೇದಿ ಉಪಗ್ರಹಗಳನ್ನು ಹಾರಿಬಿಡಲಾಗಿದೆ. ಅವುಗಳಲ್ಲಿ ಐ.ಆರ್.ಎಸ್.–1, ಐ.ಆರ್.ಎಸ್.–ಪಿ.3., ಐ.ಆರ್.ಎಸ್.–1ಡಿ., ಓಷನ್ ಸ್ಯಾಟ್–1, ಟಿ.ಇ.ಎಸ್. ಹಾಗೂ ರಿಸೋರ್ಸ್ ಸ್ಯಾಟ್–1 ಕಾರ್ಯನಿರ್ವಹಿಸಿದ್ದು, ಉಳಿದವುಗಳು ನಿಷ್ಕ್ರಿಯಗೊಂಡಿವೆ.

ಭಾರತದ ದೂರಸಂವೇದಿ ಉಪಗ್ರಹಗಳ ಬಗ್ಗೆ ವಿವರವಾದ ಮಾಹಿತಿಯನ್ನು ಈ ಕೆಳಕಂಡಂತೆ ಕಾಣಬಹುದಾಗಿದೆ.

1) ಭಾಸ್ಕರ 1 ಮತ್ತು 2 : ಇದು ಒಂದು ಪ್ರಾಯೋಗಿಕ ದೂರಸಂವೇದಿ ಉಪಗ್ರಹ. ಇದನ್ನು 1979 ಜೂನ್ 7ರಂದು ಮತ್ತು 1981 ನವೆಂಬರ್ 20ರಂದು ಕ್ರಮವಾಗಿ ಕಕ್ಷೆಗೆ ಇಂಟರ್‌ಕಾಸ್ಮಾಸ್ (ಯು.ಎಸ್.ಎಸ್.ಆರ್.) ಉಡಾವಣಾ ವಾಹನದ ಮೂಲಕ ಹಾರಿಸಲಾಯಿತು. ಅದು ಟಿ.ವಿ. ಕ್ಯಾಮರಾ ಮತ್ತು ರೇಡಿಯೋ ಮೀಟರ್‌ಗಳನ್ನು ಹೊಂದಿತ್ತು.

2) ಎ.ಆರ್.ಎಸ್. –1ಎ / 1 ಬಿ.: ಇದು ಎರಡು ರೇಖಾಕೃತಿಯ ಪ್ರತಿಬಿಂಬವುಳ್ಳ, ಸ್ವತಃ ಪರಿಶೀಲಿಸಿಕೊಳ್ಳುವ ಪ್ರಥಮ ಪೀಳಿಗೆಯ ದೂರಸಂವೇದಿ ಉಪಗ್ರಹವಾಗಿದೆ. ಇದನ್ನು 17 ಮಾರ್ಚ್, 1988 ಮತ್ತು 29 ಆಗಸ್ಟ್, 1991 ರಂದು ವೋಸ್ಟಾಕ್ (ಯು.ಎಸ್.ಎಸ್.ಆರ್.) ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಸಲಾಯಿತು. ಆದರೆ ಇವು ಈಗ ನಿಷ್ಕ್ರಿಯಗೊಂಡಿವೆ.

3) ಐ.ಆರ್.ಎಸ್. – 1ಇ.: ಈ ಉಪಗ್ರಹವನ್ನು 20 ಸೆಪ್ಟೆಂಬರ್, 1993 ರಂದು ಪಿ.ಎಸ್.ಎಲ್.ವಿ–ಡಿ1 ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಸಲಾಯಿತು. ಆದರೆ ಇದನ್ನು ಕಕ್ಷೆಯಲ್ಲಿ ಕೂರಿಸಲು ಸಾಧ್ಯವಾಗಲಿಲ್ಲ.

4) ಐ.ಆರ್.ಎಸ್. – ಪಿ2: ಈ ಉಪಗ್ರಹವನ್ನು 15 ಅಕ್ಟೋಬರ್, 1994 ರಂದು ಪಿ.ಎಸ್.ಎಲ್.ವಿ.–ಡಿ2 ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಬಿಡಲಾಯಿತು. ಇದು ಒಂದು ಧ್ರುವೀಯ ಉಪಗ್ರಹವಾಗಿದ್ದು ಅತ್ಯುತ್ತಮವಾದ ಎಲ್.ಐ.ಎಸ್.ಎಸ್. ಕ್ಯಾಮರಾವನ್ನು ಹೊಂದಿದೆ. ಆದರೆ ಈಗ, ಇದು ನಿಷ್ಕ್ರಿಯಗೊಂಡಿದೆ.

5) ಐ.ಆರ್.ಎಸ್. – 1ಸಿ.: ಇದು ದ್ವಿತೀಯ ಪೀಳಿಗೆಯ ಉತ್ತಮ ಕಾರ್ಯನಿರ್ವಹಿಸುವ ಬಹುಸ್ಪರ್ಶಕವುಳ್ಳ ಉಪಗ್ರಹ. ಇದರಲ್ಲಿ ಉತ್ತಮಪಡಿಸಿದ ಸ್ಪರ್ಶಕ ವಿಶಾಲಪ್ರದೇಶವನ್ನು ಆವರಿಸುವ ಕ್ಯಾಮರಾ ಹಾಗೂ ಒ.ಬಿ.ಟಿ.ಆರ್. [ಆನ್ ಬೋರ್ಡ್ ಟೇಪ್ ರೆಕಾರ್ಡರ್] ಇದೆ. ಇದನ್ನು 28 ಡಿಸೆಂಬರ್, 1995 ರಲ್ಲಿ ಮೊಲ್ನಿಯ (ರಷ್ಯ) ಉಡಾವಣಾ ವಾಹನದ ಮೂಲಕ ಉಡಾಯಿಸಲಾಯಿತು.

6) ಐ.ಆರ್.ಎಸ್. – ಪಿ3: ಇದನ್ನು 21 ಮಾರ್ಚ್, 1996 ರಲ್ಲಿ ಪಿ.ಎಸ್.ಎಲ್.ವಿ–ಡಿ3 ಯ ಮೂಲಕ ಹಾರಿಸಲಾಯಿತು. ಇದು ಎರಡು, ಪ್ರತಿಬಿಂಬದ ಸ್ಪರ್ಶಕವನ್ನು ಮತ್ತು ಒಂದು ಪ್ರತಿಬಿಂಬ ಉಂಟುಮಾಡದ ಸ್ಪರ್ಶಕವಾದ ಎಂ.ಓ.ಎಸ್. (ಮಾಡ್ಯುಲರ್ ಆಪ್ಟೊ–ಎಲೆಕ್ಟ್ರಾನಿಕ್ ಸ್ಕ್ಯಾನರ್) ಹೊಂದಿದೆ. ಇದು ಮುಖ್ಯವಾಗಿ, ಸಾಗರದ ಮಾಹಿತಿ, ಎಕ್ಸ್‌ರೇ, ಖಗೋಳವಿಜ್ಞಾನದ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಇದು ಈಗಲೂ ಕಾರ್ಯನಿರತವಾಗಿದೆ.

7) ಐ.ಆರ್.ಎಸ್. – 1ಡಿ: ಇದನ್ನು 29 ಸೆಪ್ಟೆಂಬರ್, 1997 ರಂದು, ಪಿ.ಎಸ್.ಎಲ್.ವಿ–ಸಿ1 ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಬಿಡಲಾಗಿದೆ. ಇದು ಈಗಲೂ ಕಾರ್ಯನಿರತವಾಗಿದೆ.

8) ಓಷನ್‌ಸ್ಯಾಟ್ – 1: ಈ ಉಪಗ್ರಹವನ್ನು 26 ಮೇ, 1999 ರಂದು ಪಿ.ಎಸ್.ಎಲ್.ವಿ.–ಸಿ2 ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಸಲಾಯಿತು. ಕಾರ್ಯನಿರತವಾದ ಉಪಗ್ರಹವಾಗಿದೆ.

9) ಟೆಸ್: ಈ ಉಪಗ್ರಹವನ್ನು 22 ಅಕ್ಟೋಬರ್, 2001 ರಂದು ಪಿ.ಎಸ್.ಎಲ್.ವಿ–ಸಿ3 ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಬಿಡಲಾಯಿತು. ಇದು ಈಗಲೂ ಕಾರ್ಯನಿರತವಾಗಿದೆ.

10) ರಿಸೋರ್ಸ್ಯ ಸ್ಯಾಟ್: ಈ ಉಪಗ್ರಹವನ್ನು ಭೂಮೇಲ್ಮೈ ಸಂಪನ್ಮೂಲಗಳನ್ನು ಪತ್ತೆಹಚ್ಚಲು 17 ಅಕ್ಟೋಬರ್, 2003 ರಂದು ಪಿ.ಎಸ್.ಎಲ್.ವಿ–ಸಿ5 ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಬಿಡಲಾಯಿತು. ಇದು ಈಗಲೂ ಕಾರ್ಯನಿರತವಾಗಿದೆ.

11) ಕಾರ್ಟೋಸ್ಯಾಟ್ –1: ಈ ಉಪಗ್ರಹವನ್ನು ಭೂನಕ್ಷೆ ಹಾಗೂ ಹಲವಾರು ಯೋಜನೆಗಳನ್ನು ರೂಪಿಸಲು 5 ಮೇ, 2005 ಪಿ.ಎಸ್.ಎಲ್.ವಿ–ಸಿ6 ಉಡಾವಣಾ ವಾಹನದ ಮೂಲಕ ಕಕ್ಷೆಗೆ ಹಾರಿಸಲಾಯಿತು. ಇದರ ತೂಕ 1560 ಕೆಜಿ ಯಾಗಿದ್ದು, 618 ಕಿಮೀ ಧ್ರುವೀಯ ಕಕ್ಷೆಯಲ್ಲಿ ಕಾರ್ಯನಿರ್ವಹಿಸುತ್ತದೆ. ಅಷ್ಟು ಎತ್ತರದಿಂದ ಭೂ ಹಾಗೂ ಜಲಮೇಲ್ಮೈನ 2.5 ಮೀ ನಷ್ಟು ಚಿಕ್ಕದಾದ ವಸ್ತುವಿನ ಚಿತ್ರಣವನ್ನು ತೆಗೆಯುವ ಸಾಮರ್ಥ್ಯವನ್ನು ಹೊಂದಿದೆ.

4) ಹ್ಯಾಮಸ್ಯಾಟ್: ಹವಾಮಾನದ ವೈಪರೀತ್ಯತೆಗಳ ಬಗ್ಗೆ ಸಕಾಲದಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಉಡಾಯಿಸಲಾದ ಇತ್ತೀಚಿನ ಉಪಗ್ರಹವಾಗಿದೆ. ಪಿ.ಎಸ್.ಎಲ್.ವಿ–ಸಿ6 ಹೊತ್ತೊಯ್ದ ಈ ಹ್ಯಾಮ್‌ಸ್ಯಾಟ್ 42.5 ಕೆಜಿ. ತೂಕದ ಅಮೆಚೂರ್ ರೇಡಿಯೋ ಸೇವೆಯನ್ನು ಒದಗಿಸುವ ಉಪಗ್ರಹ. ಇದರಲ್ಲಿ 2 ಟ್ರಾನ್ಸ್ ಪಾಂಡರ್‌ಗಳಿದ್ದು, ಒಂದನ್ನು ಸ್ವದೇಶೀಯವಾಗಿ ಇಸ್ರೋ ಸಹಾಯದ ಮೂಲಕ ಇಂಡಿಯನ್ ಹ್ಯಾಮ್ಸ್ ಅಭಿವೃದ್ಧಿ ಪಡಿಸಿದೆ. ಎರಡನೆಯ ಟ್ರಾನ್ಸ್ ಪಾಂಡರನ್ನು ಡಚ್ ಅಮೆಚೂರ್ ರೇಡಿಯೋ ಅಪರೇಟರ್ ಅಭಿವೃದ್ಧಿ ಪಡಿಸಿದ್ದು, ಇದು ಅಂತಾರಾಷ್ಟ್ರೀಯ ಸಮುದಾಯಕ್ಕೆ ಭಾರತದ ಕೊಡುಗೆಯೆಂದರೆ ತಪ್ಪಾಗಲಾರದು. ರೇಡಿಯೋಸೇವೆಯನ್ನು ಹೊರತುಪಡಿಸಿದಂತೆ ತುರ್ತುಸಂದರ್ಭದಲ್ಲಿ ಪ್ರಕೃತಿ ವಿಕೋಪಗಳಾದ ಭೂಕಂಪ, ನೆರೆಹಾವಳಿ, ಹವಾಮಾನವೈಪರೀತ್ಯಗಳ ಬಗ್ಗೆ ಮಾಹಿತಿಯನ್ನು ಸಕಾಲದಲ್ಲಿ ಪ್ರಸಾರಮಾಡಲು ಬಳಸಬಹುದು. ಇದು ಭಾರತ ಮತ್ತು ದಕ್ಷಿಣ ಏಷ್ಯದ ಇತರ ದೇಶಗಳಿಗೂ ರೇಡಿಯೋ ಸೇವೆಯನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ. (ಎಂ.ಜಿ.)

**ಭೂಸ್ವರೂಪ ನಿರೂಪಣಾ ವಿಧಾನಗಳು:** ಒಂದು ನಿರ್ದಿಷ್ಟವಾದ ಮಟ್ಟದಿಂದ ಅಂದರೆ ಸಾಮಾನ್ಯವಾಗಿ ಸಮುದ್ರ ಮಟ್ಟದಿಂದ –ಭೂಮೇಲ್ಮೈ ಹೊಂದಿರುವ ಸ್ವರೂಪಗಳ ಎತ್ತರದ ವ್ಯತ್ಯಾಸವನ್ನು ನಿರೂಪಿಸುವ ಕ್ರಮ. ಭಾರತದಲ್ಲಿ ಈ ಸ್ವರೂಪಗಳನ್ನು ವಿವರಿಸಲು ಚೆನ್ನೈ ಬಂದರಿನ ಬಳಿ ಅಧಿಕ ಭರತದ ವೇಳೆಯಲ್ಲಿ ಕಂಡುಬರುವ ಸಮುದ್ರದ ಮಟ್ಟವನ್ನು ಆಧಾರವಾಗಿ ಪರಿಗಣಿಸಲಾಗಿದೆ. ಭೂಸ್ವರೂಪಗಳು ಪ್ರಾಕೃತಿಕ ಪರಿಸರ ಒಳಗೊಂಡಿರುವ ಮೂಲಾಂಶಗಳಲ್ಲಿ ಅತಿ ಪ್ರಮುಖವಾದವು. ಇದರಿಂದಾಗಿ ಇವುಗಳನ್ನು ಭೂಪಟದ ಮೇಲೆ ನಿರ್ದಿಷ್ಟವಾಗಿ ಪ್ರತಿನಿಧಿಸುವುದು ಹಾಗೂ ಅವುಗಳನ್ನು ಕುರಿತ ವಿವರಣೆಯನ್ನು ನೀಡುವುದನ್ನು ಭೂಗೋಳವಿಜ್ಞಾನದ ಅಧ್ಯಯನ ವಸ್ತು ಒಳಗೊಂಡಿದೆ.

ಭೂಮಿಯ ಮೇಲ್ಮೈ ಒಳಗೊಂಡಿರುವ ಸ್ವರೂಪಗಳು ವೈವಿಧ್ಯಮಯವಾಗಿದೆ. ಇದರಿಂದ ಇವುಗಳನ್ನು ನಿರ್ದಿಷ್ಟವಾಗಿ ಹಾಗೂ ಅರ್ಥಪೂರ್ಣವಾಗಿ ಪ್ರತಿನಿಧಿಸುವುದು ಸುಲಭ ಸಾಧ್ಯವಲ್ಲ. ಇವುಗಳ ಪ್ರತಿನಿಧಿಸುವಿಕೆಯಲ್ಲಿ ನಾಲ್ಕು ಅಂಶಗಳನ್ನು ಗಮನಿಸಬೇಕಾದುದು ಅಗತ್ಯ. ಅವುಗಳೆಂದರೆ. 1. ಪ್ರತಿನಿಧಿಸಬೇಕಾದ ಪ್ರದೇಶದ ವಿಸ್ತಾರ, 2. ಸ್ಥಾನ 3. ಇಳಿಜಾರು ಹಾಗೂ 4. ಎತ್ತರ ಭೂಗೋಳವಿಜ್ಞಾನಿಗಳು ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಭೂಸ್ವರೂಪಗಳನ್ನು ಪ್ರತಿನಿಧಿಸಲು ಹಲವು ವಿಧಾನಗಳನ್ನು ಅನುಸರಿಸುವರು. ಆದರೆ ಈ ಯಾವುದೇ ವಿಧಾನಗಳೂ ಸಂಪೂರ್ಣವಾಗಿ ದೋಷ ಮುಕ್ತವಲ್ಲ. ಪ್ರತಿಯೊಂದು ವಿಧಾನವೂ ಕೆಲವು ಉತ್ತಮ ಗುಣಲಕ್ಷಣಗಳನ್ನು ಹಾಗೂ ಕೆಲವು ನ್ಯೂನತೆಗಳನ್ನು ಒಳಗೊಂಡಿವೆ. ಇದರಿಂದಾಗಿ ಪ್ರತ್ಯೇಕ ವಿಧಾನಗಳ ಬಳಕೆಯಿಂದಾಗುವ ತಪ್ಪುಗಳನ್ನು ಸರಿಪಡಿಸಲು ಕೆಲವು ವೇಳೆ ವಿವಿಧ ವಿಧಾನಗಳನ್ನು ಒಟ್ಟಾಗಿ ಬಳಸಲಾಗುವುದು. ಇವುಗಳೆಂದರೆ; ಚಿತ್ರ ವಿಧಾನಗಳು, ಗಣಿತ ವಿಧಾನಗಳು, ಸಮ್ಮಿಶ್ರ ವಿಧಾನಗಳು. (ಪಿ.ಎಂ.)

**ಭೂಸ್ವರೂಪ ವಿಜ್ಞಾನ:** ಭೂಸ್ವರೂಪಗಳು ನಿರ್ಮಾಣವಾಗಿರುವ ರೀತಿ, ಅವುಗಳ ರಚನೆ, ಮಾರ್ಪಾಡು ಮುಂತಾದವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಶಾಸ್ತ್ರ (ಜಿಯೋ ಮಾರ್ಫಾಲಜಿ). ಜಿಯೋ ಮಾರ್ಫಾಲಜಿ ಎಂಬ ಪದವನ್ನು ಮೊದಲು ಬಳಸಿದವರು ಜರ್ಮನಿಯ ಆಲ್ಬರ್ಟ್‌ಪೆಂಕ್. ಇಂದು ಭೂ ಮೇಲ್ಮೈಯಲ್ಲಿ ಕಂಡುಬರುವ ಭೂಸ್ವರೂಪಗಳನ್ನು ಅವುಗಳು ಮಾರ್ಪಾಡು ಹೊಂದಿರುವ ರೀತಿಯ ಆಧಾರದ ಮೇಲೆ ವರ್ಗೀಕರಿಸಿ ಅಧ್ಯಯನ ಮಾಡುವುದು ಹೆಚ್ಚು ರೂಢಿಯಲ್ಲಿದೆ. ಇದರ ಆಧಾರದ ಮೇಲೆ ಭೂಸ್ವರೂಪಗಳ ಮಾರ್ಪಾಡನ್ನು ಬಾಲ್ಯ, ಯೌವನ ಮತ್ತು ವೃದ್ಧಾಪ್ಯ ಹಂತಗಳೆಂದು ಡಬ್ಲ್ಯು. ಎಂ. ಡೇವಿಸ್ 1902ರಲ್ಲಿ ಪರಿಗಣಿಸಿದ. ಇದನ್ನೇ ಭೂಸವೆತ ಚಕ್ರವೆಂದು ಕರೆಯಲಾಗಿದೆ. ಈ ಸಿದ್ಧಾಂತವು ಭೂರಚನಾಶಾಸ್ತ್ರದ ಅಧ್ಯಯನವನ್ನು ಹೆಚ್ಚು ಪ್ರಚುರಗೊಳಿಸಿತು. ಇದು ಭೂ ಸ್ವರೂಪಗಳ ಮಾರ್ಪಾಡನ್ನು ಕುರಿತು ಪ್ರತಿಪಾದಿತಗೊಂಡಿದೆ. ಅನಂತರ ಪೆಂಕ್‌ರವರ ಸಿದ್ಧಾಂತ, ಬಹು ಆವರ್ತನ ಸಿದ್ಧಾಂತಗಳು ಪ್ರತಿಪಾದಿತವಾಗಿವೆ. ಇಂದು ನದಿ, ಕಣಿವೆ ಹಿಮನದಿ ಹಾಗೂ ಸಾಗರದಲ್ಲಿನ ಮಣ್ಣಿನ ಸ್ಥಳಾಂತರ, ನದಿ ಪಾತ್ರದ ಬದಲಾವಣೆ, ತೀರ ಪ್ರದೇಶದ ಭೂಸ್ವರೂಪಗಳ ಬದಲಾವಣೆ ಮುಂತಾದವುಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಇದು ಪರಿಶೀಲಿಸುವುದು. (ಆರ್.ಎನ್.)

**ಭೂಹಿಡುವಳಿ:** ಒಬ್ಬ ರೈತನ ಸ್ವಾಮ್ಯದಲ್ಲಿರುವ ಕೃಷಿಯೋಗ್ಯ ಜಮೀನಿನಲ್ಲಿ ಕೃಷಿಯಾಗಿರುವ ಜಮೀನು ಸಾಗುವಳಿಗೆ–ಹಿಡುವಳಿ ಎಂದು ಹೆಸರು. ಒಬ್ಬನ ಇಲ್ಲವೆ ಹಲವರ ಒಡೆತನಕ್ಕೆ ಸೇರಿದ ಕೃಷಿ ಭೂಮಿಗೆ ಒಡೆತನ ಭೂಹಿಡುವಳಿ ಎಂದೂ ಬೇಸಾಯಗಾರನಿಗೆ ಬೇಸಾಯದಲ್ಲೇ ಪೂರ್ಣ ಉದ್ಯೋಗ ನೀಡುವ ಭೂಹಿಡುವಳಿಗೆ ಆರ್ಥಿಕ ಭೂಹಿಡುವಳಿ ಎಂದೂ ಹೆಸರು. ಭೂಹಿಡುವಳಿ ಅತಿ ಚಿಕ್ಕದಾಗಿದ್ದರೆ ಸಾಗುವಳಿ ಮಾಡುವುದೇ ಕಷ್ಟವಾಗುತ್ತದೆ. ಕೃಷಿಕನ ನಿರ್ವಹಣಾ ಸಾಮರ್ಥ್ಯ ಮತ್ತು ಆರ್ಥಿಕ ಸಂಪನ್ಮೂಲಗಳ ಪೂರ್ಣ ಉಪಯೋಗವನ್ನು ಮಾದರಿ ಹಿಡುವಳಿಯಲ್ಲಿ ಕಾಣಬಹುದು. ಮಾದರಿಹಿಡುವಳಿಯ ಗಾತ್ರ ಆರ್ಥಿಕ ಹಿಡುವಳಿಯ ಮೂರು ಪಟ್ಟಿಗಿಂತ ಹೆಚ್ಚಿರಬಾರದು. ಒಂದು ಕುಟುಂಬ ಬೇಸಾಯವನ್ನೇ ಅವಲಂಬಿಸಿದ್ದು ಕೃಷಿ ಆದಾಯವೇ ಅದರ ಮುಖ್ಯ ಆದಾಯವಾದಾಗ ಅದನ್ನು ಕುಟುಂಬ ಹಿಡುವಳಿ ಎನ್ನುತ್ತಾರೆ. ಸೂಕ್ತ ಕೃಷಿಯೋಗ್ಯ ಹಿಡುವಳಿಯ ಗಾತ್ರದ ನಿರ್ಧಾರ ಕಷ್ಟ.

ಭಾರತದಲ್ಲಿ ಬೇಸಾಯಗಾರರ ಸಂಖ್ಯೆ ಹೆಚ್ಚಿದೆ. ದುಡಿಯಬಲ್ಲವರಲ್ಲಿ ಶೇ.58 (2001) ರಷ್ಟು ಜನ ಬೇಸಾಯದಲ್ಲಿ ತೊಡಗಿದ್ದಾರೆ. ದೇಶದ ವಾರಸುದಾರ ಮತ್ತು ಉತ್ತರಾಧಿಕಾರ ಕಾಯಿದೆಯಂತೆ ಹಿಂದು ಮತ್ತು ಮುಸ್ಲಿಮರ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಸಮಪಾಲು. ಈ ಹಂಚಿಕೆಯಿಂದಾಗಿ ಭೂಹಿಡುವಳಿ ಕಿರಿದಾಗುತ್ತ ಹೋಗುತ್ತದೆ. ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಕುಟುಂಬದ ಸದಸ್ಯರೆಲ್ಲ ಒಟ್ಟಿಗೆ ಇದ್ದು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದುದರಿಂದ ಭೂ ವಿಭಜನೆ ಇರಲಿಲ್ಲ. ಈಗ ಪಾಶ್ಚಾತ್ಯ ಶಿಕ್ಷಣ, ವ್ಯಕ್ತಿ ಪ್ರತ್ಯೇಕತಾವಾದ, ಔದ್ಯಮಿಕ ಅಭಿವೃದ್ಧಿ ಇತ್ಯಾದಿಗಳಿಂದ ಅವಿಭಕ್ತ ಕುಟುಂಬ ವ್ಯವಸ್ಥೆ ಕಡಿಮೆ. ಗ್ರಾಮೀಣ ಕೈಗಾರಿಕೆಗಳ ಅವನತಿಯಿಂದಾಗಿ ನಿರುದ್ಯೋಗಿಗಳಾದವರು ಭೂಸಾಗುವಳಿಯಲ್ಲಿ ತೊಡಗುವುದು ಅನಿವಾರ್ಯವಾಯಿತು. ಇವರೂ ಇದ್ದ ಭೂಮಿಯನ್ನೇ ಹಂಚಿಕೊಳ್ಳಬೇಕಾಯಿತು. ಆದ್ದರಿಂದ ಸರಾಸರಿ ಹಿಡುವಳಿಯ ಗಾತ್ರ ಕಡಿಮೆ ಆಗುತ್ತಾ ಹೋಗಿ ಕರ್ನಾಟಕದಲ್ಲಿ ಅದು ಕೇವಲ 1.74 ಹೆ. ಮಾತ್ರ.

ಭೂವಿಭಜನೆಯಿಂದಾಗಿ ಸಾಗುವಳಿ ಭೂಮಿ ನಷ್ಟವಾಗುತ್ತದೆ. ಒಂದು ಹಿಡುವಳಿಯಿಂದ ಇನ್ನೊಂದು ಹಿಡುವಳಿಗೆ ಹೋಗಲು ಕಾಲುದಾರಿ ಬೇಕು. ಹಿಡುವಳಿಗಳಿಗೆ ಬೇಲಿ ಹಾಕಬೇಕು. ಒಡ್ಡುಗಳನ್ನು ಕಟ್ಟಬೇಕು. ಇವುಗಳಿಗೆ ಶೇ. 30ರಷ್ಟು ಭೂಮಿ ಪೋಲಾಗುತ್ತದೆ. ಚಿಕ್ಕ ಮತ್ತು ತುಂಡು ತುಂಡು ಹಿಡುವಳಿಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ಕಷ್ಟ ಮತ್ತು ಕೃಷಿಯಂತ್ರೋಪಕರಣ ಮತ್ತು ದನಕರುಗಳ ಸಂಪೂರ್ಣ ಉಪಯೋಗ ಅಸಾಧ್ಯ. ಕೃಷಿಕ ತನ್ನ ಒಂದು ಹಿಡುವಳಿಯಿಂದ ಇನ್ನೊಂದು ಹಿಡುವಳಿಗೆ ಸಾಗುವಳಿಗಾಗಿ ತನ್ನ ಕೃಷಿ ಯಂತ್ರೋಪಕರಣ ಮತ್ತು ದನಕರುಗಳೊಂದಿಗೆ ಆಗಾಗ ಹೋಗಿಬರಬೇಕಾಗುತ್ತದೆ. ಇದಕ್ಕಾಗಿ ಅವನ ಶ್ರಮ ಹಾಗೂ ಸಮಯ ವ್ಯಯವಾಗುತ್ತದೆ. ಚಿಕ್ಕ ಹಿಡುವಳಿಯ ವಿವಿಧ ಬೇಸಾಯಗಾರರ ಹಿಡುವಳಿ ಮೇರೆಗಳನ್ನು ನಿರ್ಧರಿಸುವಾಗ, ಒಂದು ಹಿಡುವಳಿಯಿಂದ ಇನ್ನೊಂದು ಹಿಡುವಳಿಗೆ ಹಾದುಹೋಗುವಾಗ ನೀರಾವರಿ ಸೌಲಭ್ಯಗಳನ್ನು ಹಿಡುವಳಿಗಳಿಗೆ ಪೂರೈಸುವಾಗ ಬೇಸಾಯಗಾರರಲ್ಲಿ ಜಗಳಗಳುಂಟಾಗಿ ಕಷ್ಟನಷ್ಟಗಳಿಗೀಡಾಗುತ್ತಾರೆ. ನ್ಯಾಯಾಲಯದ ಮೊರೆ ಹೋಗಿ ಇದ್ದಬದ್ದದ್ದನ್ನೂ ಕಳೆದುಕೊಳ್ಳುತ್ತಾರೆ. ಬೇರೆ ಬೇರೆ ಕಡೆ ಹರಡಿರುವ ಚಿಕ್ಕ ಹಿಡುವಳಿಗಳನ್ನು ಸರಿಯಾಗಿ ನೋಡಿಕೊಳ್ಳಲು ಆಗುವುದಿಲ್ಲ; ಮತ್ತು ಬೆಳೆಗಳ ರಕ್ಷಣೆ ಅಸಾಧ್ಯ. ಚಿಕ್ಕ ಹಿಡುವಳಿಗಳಲ್ಲಿ ಕೃಷಿ ಯಾಂತ್ರೀಕರಣ, ರಾಸಾಯನಿಕ ಕೃಷಿ, ನೀರಾವರಿ ಸೌಕರ್ಯ, ಅಧಿಕ ಉತ್ಪಾದನೆ ಅಸಾಧ್ಯ. ಚಿಕ್ಕ ಹಿಡುವಳಿಗಳಿಂದ ಕೆಲವು ಪ್ರಯೋಜನಗಳಿವೆ. ಪ್ರತಿಯೊಬ್ಬನಿಗೂ ತನ್ನ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು, ಪ್ರತಿಯೊಬ್ಬನೂ ನಿಷ್ಠೆಯಿಂದ ಬೇಸಾಯಮಾಡುತ್ತಾನೆ. ತುಂಡು ತುಂಡಾಗಿ ಹರಡಿದ್ದ ಹಿಡುವಳಿಗಳ ಮಣ್ಣಿನ ಫಲವತ್ತತೆ ವಿಭಿನ್ನ. ಇದರಿಂದ ವಿವಿಧ ಬೆಳೆಗಳನ್ನು ಬೆಳೆಸಬಹುದು. ಒಂದು ಭಾಗದ ಹೊಲ ಅತಿವೃಷ್ಟಿ ಇಲ್ಲವೆ ಅನಾವೃಷ್ಟಿಗೆ ಬಲಿಯಾಗಿ ಹಾಳಾದರೂ ಇನ್ನೊಂದು ಕಡೆಯ ಹೊಲದಲ್ಲಿ ಒಳ್ಳೆಯ ಫಸಲು ಬಂದರೆ ಕೃಷಿಕ ಬದುಕುತ್ತಾನೆ. ಪುಟ್ಟ ಹಿಡುವಳಿಗಳಲ್ಲಿ ವೈಜ್ಞಾನಿಕ ಬೇಸಾಯ ಅಳವಡಿಸಿ ಕೃಷಿ ಉತ್ಪಾದನೆ ಹೆಚ್ಚಿಸುವುದು ಸುಲಭ.

ಚಿಕ್ಕ ಹಿಡುವಳಿಗಳ ಮತ್ತು ಭೂವಿಭಜನೆಯ ದುಷ್ಪರಿಣಾಮಗಳನ್ನು ತಡೆಗಟ್ಟಲು ಸಹಕಾರಿ ಬೇಸಾಯ ನೆರವಾಗಬಹುದು. ಒಂದು ಪ್ರದೇಶಕ್ಕೆ ಸೇರಿದ ಕೃಷಿಕರಿಗೆಲ್ಲ ಈ ಸಹಕಾರಿ ಬೇಸಾಯ ಸಂಘದ ಸದಸ್ಯತ್ವ ಕಡ್ಡಾಯವಾಗಬೇಕು. ಇವರು ತಮ್ಮ ಭೂಮಿಯನ್ನು ಒಟ್ಟುಗೂಡಿಸಿ ಸಾಗುವಳಿ ಮಾಡಿ ಬಂದ ಕೃಷಿ ಉತ್ಪನ್ನವನ್ನು ಸಂಘಕ್ಕೆ ತಾವು ನೀಡಿದ ಭೂಮಿ ಮತ್ತು ದುಡಿಮೆಗಳ ಆಧಾರದ ಮೇಲೆ ಹಂಚಿಕೊಳ್ಳುವಂತಾಗಬೇಕು. ಕೃಷಿಕ ವೈಯಕ್ತಿಕವಾಗಿ ಸಾಧಿಸಲು ಆಗದೆ ಇದ್ದುದ್ದನ್ನು ಸಹಕಾರಿ ಬೇಸಾಯ ಸಂಘದ ಮೂಲಕ ಸಾಧಿಸಲು ಸಾಧ್ಯ. (ಡಿ.ಎನ್.ಆರ್.)

**ಭೌಗೋಳಿಕ ಅನ್ವೇಷಣೆಗಳು:** ಭೂಗೋಳವಿಜ್ಞಾನದ ಬೆಳೆವಣಿಗೆ ಮುಖ್ಯವಾಗಿ ಭೌಗೋಳಿಕ ಅನ್ವೇಷಣೆಯನ್ನೇ ಅವಲಂಬಿಸಿದೆ. ಪ್ರಾರಂಭದಲ್ಲಿ ಸಾಗರ ಮಾರ್ಗಗಳಿಂದ ಭೂಗೋಳಿಕ ಜ್ಞಾನ ದೊರೆಯಲಿಲ್ಲ. ಅದನ್ನು ಭೂ ಮಾರ್ಗಗಳ ಮೂಲಕವೇ ಪಡೆಯಲಾಯಿತು. ಭೂ ಮಾರ್ಗದ ಮೂಲಕ ಮೊದಲು ಅನ್ವೇಷಣೆಯನ್ನು ಜಾನ್ ಡಿಪ್ಲಾನೋ ಕಾರ್ಡಿನಿ ಎಂಬುವವನು ಕೈಗೊಂಡ. ಇವನು 1245 ರಲ್ಲಿ ಮಂಗೋಲಿಯವನ್ನು ಸಂದರ್ಶಿಸಿದ. ಆದರೆ ಭೂ ಮಾರ್ಗಗಳ ಮೂಲಕ ಹೆಚ್ಚು ಅನ್ವೇಷಣೆ ಕೈಕೊಂಡವರಲ್ಲಿ ಮಾರ್ಕೋಪೋಲೋ ಪ್ರಸಿದ್ಧನಾಗಿದ್ದಾನೆ. ಇವನು 1271 ರಲ್ಲಿ ತನ್ನ ತಂದೆಯೊಡನೆ (ನಿಕೋಲೋಪೋಲೋ) ವೆನಿಸನ್ನು ಬಿಟ್ಟು ಕಾರವಾನ್ ಮಾರ್ಗವನ್ನು ಅನುಸರಿಸಿ ಅಕ್ರಂಬಾಗ್‌ದಾದ್, ಬಾಸ್ರ, ಓರ್ಮುಜ, ಕಾಕ್‌ಗರ್ ಮತ್ತು ಯಾರ್ ಖಂಡಗಳ ಮೂಲಕ ಚೀನವನ್ನು ತಲುಪಿದನು. ಅನಂತರ ಜಲಮಾರ್ಗದ ಮೂಲಕ ಮಲಕ್ಕಾ ಜಲಸಂಧಿಯಿಂದ ಭಾರತದ ತೀರ ಪ್ರದೇಶವನ್ನು ತಲುಪಿದನು. ಮಾರ್ಕೋಪೋಲೋನ ಅನ್ವೇಷಣೆಯಿಂದಾಗಿ ಯುರೋಪಿಯನ್ನರಿಗೆ ಹೊಸ ಸಾಗರ ಮಾರ್ಗಗಳನ್ನು ಶೋಧಿಸಲು ಪ್ರೇರಣೆ ದೊರಕಿದಂತಾಯಿತು.

ಭೂಭಾಗಗಳ ಹೊಸ ಪ್ರದೇಶಗಳ ಸಂಶೋಧನೆಯ ಮಾಹಿತಿ ಈ ಕೆಳಗಿನಂತಿದೆ.

1) ಫೋನಿಷಿಯನ್ನರು: ಪ್ರಶ.ಪೂ.700 ರಲ್ಲಿ ಅಟ್ಲಾಂಟಿಕ್ ಸಾಗರವನ್ನು ಅನ್ವೇಷಿಸಿದರು.

2) ಪ್ರ.ಶ.ಪೂ.900 ರಲ್ಲಿ ಅಟ್ಲಾಂಟಿಕ್ ಸಾಗರವನ್ನು ದಾಟಿ ಅಮೆರಿಕ ಖಂಡದವರೆಗೆ ಪ್ರಯಾಣ ಮಾಡಿದವರೆಂದರೆ ವೈಕಿಂಗರು (ಅಟ್ಲಾಂಟಿಕ್ ಸಾಗರವೇ ಮಾನವ ಮೊದಲು ದಾಟಿದ ಸಾಗರ).

3) 1400 ರಲ್ಲಿ ಚೀನದ ನಾವಿಕ ಜಂಗ್ ಹೋ, ಹಿಂದೂ ಮಹಾಸಾಗರದ ಅನ್ವೇಷಣೆಯಲ್ಲಿ ತೊಡಗಿದ್ದ. ಇವನು ಶ್ರೀಲಂಕ, ಭಾರತ, ಪರ್ಷಿಯ, ಅರೇಬಿಯ ಮತ್ತು ಆಫ್ರಿಕದ ತೀರವನ್ನು ಸಂದರ್ಶಿಸಿದ್ದ .

4) ಕ್ರಿಸ್ಟೊಫರ್ ಕೊಲಂಬಸ್ ಕೆರೆಬಿಯನ್ ಸಮುದ್ರದವರೆಗೆ ನೌಕಾಯಾನ ಮಾಡಿ 1492 ರಲ್ಲಿ ಅಮೆರಿಕಖಂಡವನ್ನು ಕಂಡುಹಿಡಿದ.

5) 1520 ರಲ್ಲಿ ಪರ್ಡಿನಾಂಡ್ ಮೆಗಲನ್ ಪ್ರಪಂಚದ ಪರ್ಯಟನೆ ಕೈಗೊಂಡು ಶಾಂತ ಮಹಾಸಾಗರದ ಮಾರ್ಗವಾಗಿ ಪ್ರಯಾಣಿಸಿದವರಲ್ಲಿ ಮೊದಲಿಗನಾಗಿದ್ದಾನೆ. ಇವನು ಶಾಂತವಾಗಿರುವ ಈ ಸಾಗರವನ್ನು ಗಮನಿಸಿ ಶಾಂತ ಮಹಾಸಾಗರ ಎಂದು ಹೆಸರಿಟ್ಟ.

6) 15ನೆಯ ಶತಮಾನದಲ್ಲಿ ಯುರೋಪಿಯನ್ನರು ಆಫ್ರಿಕ, ಆಸ್ಟ್ರೇಲಿಯ ಮುಂತಾದ ಖಂಡಗಳನ್ನು ಅನ್ವೇಷಿಸಿದರು.

7) 1567 ರಲ್ಲಿ ಆಲ್ವರೋ–ಡಿ–ಮಂಡೋನ ಎಂಬ ಯುರೋಪಿನ ತಂಡ ಶಾಂತ ಮಹಾಸಾಗರದಲ್ಲಿರುವ ಸಾಲಮನ್ ದ್ವೀಪಗಳನ್ನು ಪತ್ತೆ ಮಾಡಿದರು.

8) 1647 ರಲ್ಲಿ ಮೊಟ್ಟ ಮೊದಲಿಗೆ ವಾಸ್ಕೋಡಗಾಮಾ ಯುರೋಪಿನಿಂದ ಹೊರಟು ದಕ್ಷಿಣ ಆಫ್ರಿಕ ಖಂಡವನ್ನು ಬಳಸಿ ಭಾರತವನ್ನು ತಲುಪಿದ.

9) 1773 ರಲ್ಲಿ ಇಂಗ್ಲಿಷ್ ನಾವಿಕ ಜೇಮ್ಸ್‌ಕುಕ್ ಅಂಟಾರ್ಕ್ಟಿಕ ಖಂಡವನ್ನು ಸಂದರ್ಶಿಸಿದ್ದ. ಹಾಗೂ 18ನೆಯ ಶತಮಾನದಲ್ಲಿ ಶಾಂತಮಹಾಸಾಗರದಲ್ಲಿ 2500ಕ್ಕಿಂತಲೂ ಹೆಚ್ಚು ದ್ವೀಪಗಳನ್ನು ಗುರುತಿಸಿದನು.

10) 1909 ರಲ್ಲಿ ಅಮೆರಿಕದ ನೌಕಾದಳದ ಕಮಾಂಡರ ರಾಬರ್ಟ್ ಪ್ರೆಯರಿ ಉತ್ತರ ಧ್ರುವವನ್ನು ಮೊದಲು ತಲುಪಿದ.

11) 1911 ರಲ್ಲಿ ನಾರ್ವೆಯ ರೊನಾಲ್ಡ್ – ಅಮುಂಡ್‌ಸನ್ ಎಂಬುವವನು ಮೊದಲು ದಕ್ಷಿಣ ಧ್ರುವವನ್ನು ಮುಟ್ಟಿದ.

12) 20ನೆಯ ಶತಮಾನದಲ್ಲಿ ಸಾಗರಗಳ ತಳಭಾಗಗಳ ಸಂಶೋಧನೆಯನ್ನು ಹಲವಾರು ವೈಜ್ಞಾನಿಕ ಸಲಕರಣೆಗಳಿಂದ ಹಾಗೂ ಕೃತಕ ಉಪಗ್ರಹಗಳಿಂದ ಕೈಗೊಳ್ಳಲಾಗುತ್ತಿದೆ. (ಎಂ.ಆರ್.ಎಚ್.)

**ಭೌಗೋಳಿಕ ಕೇಂದ್ರ ಮಾದರಿ:** ಈ ಪರಿಕಲ್ಪನೆ ಸರ್ ಹಾಲ್‌ಫೋರ್ಡ್ ಮೆಕ್ಯಾಂಡರವರಿಂದ ದ ಜಿಯೋಗ್ರಾಫಿಕಲ್ ಪೈರೋಟ್ ಮಾಡೆಲ್ ಎಂಬ ಮುದ್ರಣದ ಮುಖಾಂತರ 1904ರಲ್ಲಿ ಮಂಡಿಸಲ್ಪಟ್ಟಿತು. ಈ ಪರಿಕಲ್ಪನೆ ಮಹಾನ್ ಸಮುದ್ರ ಶಕ್ತಿಯ ನಮೂನೆಯ ಮುಂದಿನ ಭಾಗವಾಗಿದೆ ಮತ್ತು ಈ ಪರಿಕಲ್ಪನೆ ಮಹಾನ್‌ರವರ ಪರಿಕಲ್ಪನೆಯನ್ನು ಸ್ವಲ್ಪಮಟ್ಟಿಗೆ ಅಲ್ಲಗಳೆಯುತ್ತದೆ. ಕೇವಲ ಸಮುದ್ರ ಶಕ್ತಿಯ ಪ್ರಭಾವದಿಂದ ಯಾವುದೇ ಒಂದು ಪ್ರದೇಶದ ರಕ್ಷಣೆ, ನೌಕಾಬಲದ ವ್ಯಾಪಾರೀಕರಣ ನಡೆಯಲು ಸಾಧ್ಯವಿಲ್ಲ. ಹಲವು ಬಾರಿ ದಾರಿಗಳು, ಪರ್ವತಗಳು, ಕಂದಕ, ಕಂದರಗಳೂ ಒಂದು ದೇಶದ ರಕ್ಷಣೆ, ವ್ಯಾಪಾರ ಮತ್ತು ಬೆಳೆವಣಿಗೆಗೆ ಮಾರಕವಾಗಿರುತ್ತವೆ. ಇದಕ್ಕೆ ತುರಾನಿಯನ್ ಜನಾಂಗದ ಉದಾಹರಣೆ ಉಂಟು. ಈ ಪರಿಕಲ್ಪನೆ 1854ರಲ್ಲಿ ನಡೆದ ಕ್ರಿಮಿಯನ್ ಯುದ್ಧದ ಉದಾಹರಣೆಯೊಂದಿಗೆ ಹೆಣೆಯಲ್ಪಟ್ಟಿದೆ. ಅಂದರೆ ಉಗಿಬಂಡಿ, ವಾಯು ಸಂಚಾರಗಳು ಪ್ರಚಲಿತವಾಗುವುದಕ್ಕಿಂತ–ಮುಂಚೆ ಹೇಳಲ್ಪಟ್ಟಿದೆ. ಒಂದು ಪ್ರದೇಶದ ಏಕಾಗ್ರತೆ ಕೇವಲ ಸಮುದ್ರ ಶಕ್ತಿಯ ಮೇಲೆ ನಿಂತಿಲ್ಲ. ಕುದುರೆ, ಒಂಟೆ ಇತರೆ ಪ್ರಾಣಿಗಳಿಂದ ಭಾಗ–ಪ್ರದೇಶದ ಅನೂಕೂಲ–ಅನಾನುಕೂಲಗಳಿಂದ ರಕ್ಷಣೆ, ವ್ಯಾಪಾರ ಸ್ಥಿರತೆ ನಿಂತಿದೆ ಎಂದು ಹೇಳಬಹುದು. (ಎ.ಕೆ.ಡಬ್ಲ್ಯೂ.)

**ಭೌಗೋಳಿಕ ನಕ್ಷೆ :** ಇದು ಭೂಗೋಳವಿಜ್ಞಾನದ ಅಧ್ಯಯನಕ್ಕೆ ಆಧಾರವಾದ ಭೂಪಟ. ಭೂಮಿಯನ್ನು ಅನುಗುಣವಾಗಿ ನಿರೂಪಿಸುವ ಆಕೃತಿಗೆ ನಕ್ಷೆ ಅಥವಾ ಭೂಪಟವೆಂದೂ ಆಂಗ್ಲ ಭಾಷೆಯಲ್ಲಿ ಮ್ಯಾಪ್ ಎಂದೂ ಕರೆಯುತ್ತಾರೆ. ಈ ಪದ ಲ್ಯಾಟಿನ್ ಭಾಷೆಯ ಮ್ಯಾಪಾ ಎಂಬ ಪದದಿಂದ ಬಂದಿದೆ.

ಪ್ರಪಂಚದ ಪೂರ್ಣಭಾಗ ಅಥವಾ ಅದರ ಯಾವುದೇ ಭಾಗದ ನೂರಾರು ಚದರ ಕಿಲೋಮೀಟರ್‌ಗಳಲ್ಲಿ ಹರಡಿರುವ ಸ್ವರೂಪವನ್ನು ಕೆಲವೇ ಚದರ ಸೆಂಟಿಮೀಟರ್ ನಕಾಶದಲ್ಲಿ ನಿರೂಪಿಸಬಹುದು. ಆದರೆ ಭೂಮಿಯ ಮೇಲಿನ ಸ್ವಾಭಾವಿಕ ಹಾಗೂ ಸಾಂಸ್ಕೃತಿಕ ಸ್ವರೂಪಗಳನ್ನು ಭೂಪಟದ ಮೇಲೆ ಅದೇ ಆಕಾರ ಮತ್ತು ಗಾತ್ರಗಳಲ್ಲಿ ತೋರಿಸುವುದು ಅಸಾಧ್ಯ. ಬದಲಾಗಿ ಅವುಗಳ ಸಮಪಾತವಾದ ರೂಢ ಚಿಹ್ನೆ ಮತ್ತು ಸಂಕೇತಗಳ ಮೂಲಕ ತೋರಿಸಲಾಗುವುದು ಉದಾ: ಪಿ.ಟಿ.ಓ. (ಅಂಚೆ ಮತ್ತು ತಂತಿ ಕಛೇರಿ), ಆರ್.ಎಸ್. (ರೈಲು ನಿಲ್ದಾಣ), ಬಿ.ಎಂ. (ಬೆಂಚು ಗುರುತು) ಇತ್ಯಾದಿ. ಕೆಲವು ವೇಳೆ ಬಣ್ಣಗಳ ಸಹಾಯದಿಂದಲೂ ಕೆಲವು ಸ್ವರೂಪಗಳನ್ನು ತೋರಿಸಲಾಗುವುದು. ಉದಾ : ಸಸ್ಯವರ್ಗವನ್ನು ಹಸುರು ಬಣ್ಣದಿಂದಲೂ ಜಲಭಾಗವನ್ನು ನೀಲಿ ಬಣ್ಣದಿಂದಲೂ ಪರ್ವತಗಳನ್ನು ಕಂದು ಬಣ್ಣದಿಂದಲೂ ಇತ್ಯಾದಿ.

ನಕ್ಷೆಗಳ ರಚನೆ ಮಾಪಕ, ಅಕ್ಷಾಂಶ, ರೇಖಾಂಶ, ದಿಕ್ಕು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ನಕ್ಷೆಗಳನ್ನು ವಿವಿಧ ಉದ್ದೇಶಗಳಿಗಾಗಿ ರಚಿಸಲಾಗುವುದು. ಅವು ಅನೇಕ ವಿಷಯಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ ಅವುಗಳನ್ನು ವಿವಿಧ ವಿಷಯಗಳ ಖಜಾನೆ ಎನ್ನುವರು. ನಕ್ಷೆಗಳು ಭೂ ಮೇಲ್ಮೈಯ ನೈಸರ್ಗಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನೊಳಗೊಂಡಿರುತ್ತದೆ. ಭೂ ಸ್ವರೂಪಗಳು, ನದಿ, ಸರೋವರ, ಅರಣ್ಯ ಮಣ್ಣು, ಮಳೆ, ಉಷ್ಣಾಂಶ ಮುಂತಾದವು ಸ್ವಾಭಾವಿಕ ಅಂಶವಾಗಿವೆ. ಕೃಷಿ ನೀರಾವರಿ, ಸಾರಿಗೆ, ವಸತಿ, ಧರ್ಮ ಮುಂತಾದವು ಸಾಂಸ್ಕೃತಿಕ ಅಂಶಗಳು. ಇವುಗಳಲ್ಲಿ ಕೆಲವು ಅಥವಾ ಯಾವುದಾದರೊಂದನ್ನು ವಿವರವಾಗಿ ತೋರಿಸುವುದಕ್ಕಾಗಿ ನಕ್ಷೆಗಳನ್ನು ತಯಾರಿಸಲಾಗುವುದು.

ನಕ್ಷೆಗಳ ಪ್ರಕಾರಗಳು: ನಕ್ಷೆಗಳಲ್ಲಿ ಅನೇಕ ವಿಧಗಳುಂಟು. ಅವುಗಳನ್ನು ಮಾಪಕ ಮತ್ತು ಉದ್ದೇಶಗಳ ಆಧಾರದ ಮೇಲೆ ಅನೇಕ ವಿಧಗಳಾಗಿ ವಿಂಗಡಿಸಬಹುದು. ಮಾಪಕದ ಆಧಾರದ ಮೇಲೆ ಭೂಪಟಗಳನ್ನು ದೊಡ್ಡ, ಮಧ್ಯಮ, ಮತ್ತು ಚಿಕ್ಕ ಪ್ರಮಾಣದ ಭೂಪಟಗಳೆಂದು ವಿಂಗಡಿಸಬಹುದು. ಉದಾ 1 ಸೆಂಮಿ = 1 ಕಿಮೀ ಅಥವಾ 1:100000 ಮಾಪಕವುಳ್ಳವು ದೊಡ್ಡ ಪ್ರಮಾಣದ ಭೂಪಟಗಳು. 1: 100000 ರಿಂದ 1: 10,00,000 ಮಾಪಕವುಳ್ಳವು ಮಧ್ಯಮ ಹಾಗೂ 1: 10,00,000 ಗಿಂತ ಕಡಿಮೆ ಮಾಪಕವುಳ್ಳವುಗಳಿಗೆ ಚಿಕ್ಕ ಪ್ರಮಾಣದ ನಕ್ಷೆಗಳೆಂದು ಪರಿಗಣಿಸಲಾಗಿದೆ.

ನಕ್ಷೆಗಳನ್ನು ಮಾಪಕದ ಆಧಾರದ ಮೇಲೆ ಹಾಗೂ ಉಪಯುಕ್ತತೆಗಾಗಿ ಈ ಮುಂದಿನಂತೆ ವಿಂಗಡಿಸಬಹುದು: ಅ. ಭೂ ಕಂದಾಯ ನಕ್ಷೆಗಳು; ಆ. ಸ್ಥಳ ಸ್ವರೂಪ ನಕ್ಷೆಗಳು; ಇ. ಭೂಪಟಗಳು ಮತ್ತು ನಕ್ಷಾ ಪುಸ್ತಕಗಳು

ಅ) ಭೂ ಕಂದಾಯ ನಕ್ಷೆಗಳು: ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೊಂದಾಯಿಸಿಕೊಂಡ ಭೂ ಆಸ್ತಿಗಳ ವಿವರಣೆಯನ್ನು ನಿರೂಪಿಸಲು ರಚಿಸುವ ನಕ್ಷೆಗಳಿಗೆ ಭೂ ಕಂದಾಯ ನಕ್ಷೆಗಳೆಂದು ಕರೆಯುವರು, ಅಂದರೆ ವ್ಯಾಪ್ತಿಯ ಸ್ವಾಧೀನದಲ್ಲಿರುವ ಹೊಲ, ಗದ್ದೆ, ತೋಟ, ಮನೆ, ನಿವೇಶನ ಇತ್ಯಾದಿಗಳು ಎಲ್ಲೆ ಹಾಗೂ ವಿಸ್ತೀರ್ಣವನ್ನು ನಿರೂಪಿಸುತ್ತವೆ. ಇಂತಹ ಭೂಪಟಗಳನ್ನು ಸರ್ಕಾರವು ಕಂದಾಯದ ವಸೂಲಿ ಹಾಗೂ ತೆರಿಗೆಗಳನ್ನು ಹಾಕಲು ರಚಿಸುತ್ತವೆ. ಇವು ದೊಡ್ಡ ಪ್ರಮಾಣದ ನಕ್ಷೆಗಳು ಉದಾ 16″–1 ಮೈಲಿ, 5 ಸೆಂಮೀ = 1 ಮೀ ಮಾಪಕದಲ್ಲಿ ರಚಿಸಲಾಗುವುದು. ನಗರ ಯೋಜನಾ ನಕ್ಷೆ ಈ ಗುಂಪಿಗೆ ಸೇರುತ್ತದೆ.

ಆ) ಸ್ಥಳ ಸ್ವರೂಪ ನಕ್ಷೆಗಳು: ಇಂತಹ ನಕ್ಷೆಗಳನ್ನು ಕ್ಷೇತ್ರ ಮೋಜಣಿ ಮಾಡಿದ ಮೇಲೆ ರಚಿಸಲಾಗುವುದು ಇವು ಭೂಮೇಲ್ಮೈಯ ಭೌತಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳೆರಡನ್ನು ನಿರೂಪಿಸುತ್ತವೆ. ಉದಾ: ಭೂ ಮೇಲ್ಮೈ ಲಕ್ಷಣ, ಜಲವ್ಯವಸ್ಥೆ, ಸಸ್ಯವರ್ಗ, ಮಾನವ ವಸತಿಗಳು, ಸಾರಿಗೆ ಮೊದಲಾದ ವಿವರಣೆಯನ್ನು ತೋರಿಸುತ್ತದೆ. ಇಂತಹ ನಕ್ಷೆಗಳನ್ನು ಭಾರತದ ಸರ್ವೆ ಆಫ್ ಇಂಡಿಯ ಇಲಾಖೆಯು ತಯಾರಿಸುತ್ತದೆ. ಅವುಗಳನ್ನು ಭಾರತದ ಸ್ಥಳ ಸ್ವರೂಪ ನಕ್ಷೆಗಳೆನ್ನುವರು. ಇವುಗಳ ಮಾಪಕ ಸಾಮಾನ್ಯವಾಗಿ

1: 25000, 1: 50000, ಮತ್ತು 1: 250000 ಇರುತ್ತದೆ. ಆದ್ದರಿಂದ ಇವುಗಳು ಮಧ್ಯಮ ಪ್ರಮಾಣದ ನಕ್ಷೆಗಳ ಗುಂಪಿಗೆ ಸೇರುತ್ತವೆ.

ಇ) ಭೂಪಟಗಳು ಮತ್ತು ನಕ್ಷಾ ಪುಸ್ತಕಗಳು: ಕಲಿಕೆಯ ಸಾಧನವಾಗಿ ತರಗತಿಗಳಲ್ಲಿ, ಗೋಡೆಗೆ ತೂಗು ಹಾಕಿ ಬಳಕೆ ಮಾಡುವ ನಕಾಶೆಗಳಿಗೆ ಭೂಪಟ ಅಥವಾ ನಕ್ಷೆಗಳೆನ್ನುವರು. ಇವುಗಳನ್ನು ಪ್ರಪಂಚದ ಯಾವುದಾದರೂ ಭಾಗ, ಖಂಡ, ದೇಶ, ರಾಜ್ಯ ಗೋಳಾರ್ಧ ಇತ್ಯಾದಿಗಳನ್ನು ತೋರಿಸಲು ಸೂಕ್ತ ಸ್ಥಳ ಸ್ವರೂಪ ನಕ್ಷೆಗಳಿಗಿಂತ ಚಿಕ್ಕದು ಹಾಗು ನಕ್ಷಾ ಪುಸ್ತಕಗಳಿಂತ ಇವು ದೊಡ್ಡದಾದ ಮಾಪಕದಲ್ಲಿ ರಚಿಸಲಾಗುವುದು.

ನಕ್ಷಾ ಪುಸ್ತಕಗಳು ಚಿಕ್ಕ ಪ್ರಮಾಣದಲ್ಲಿ ರಚಿತವಾಗಿದ್ದರೂ ಅವು ಸಾಕಷ್ಟು ವಿಷಯಗಳನ್ನು ಒಳಗೊಂಡಿರುತ್ತವೆ. ದೇಶ, ಖಂಡ, ರಾಜ್ಯ, ಇತ್ಯಾದಿ ಭೂ ಭಾಗಗಳ ಪ್ರಾಕೃತಿಕ ಲಕ್ಷಣ, ವಾಯುಗುಣ ಪರಿಸ್ಥಿತಿ, ವಿವಿಧ ವರ್ಷಗಳ ಮೂಲಕ ತೋರಿಸಲಾಗಿರುತ್ತದೆ. ಪ್ರಮುಖವಾದ ಪರ್ವತ, ಶಿಖರ, ನದಿ, ಸರೋವರ, ಸಸ್ಯವರ್ಗ, ನಗರ, ಜನಸಂಖ್ಯೆ, ಬಂದರು ಇತ್ಯಾದಿಗಳನ್ನು ನಕ್ಷಾ ಪುಸ್ತಕಗಳಲ್ಲಿ ತೋರಿಸಲಾಗುವುದು.

ಉದ್ದೇಶಗಳ ಆಧಾರದ ಮೇಲೆ: ಮಾಪಕದ ಆಧಾರದ ಮೇಲೆ ರಚಿಸಿದ ನಕ್ಷೆಗಳಲ್ಲಿ ಭೂಗೋಳ ವಿಜ್ಞಾನದ ಅಧ್ಯಯನಕ್ಕೆ ಬೇಕಾದ ಎಲ್ಲ ವಿವರಗಳು ದೊರೆಯದ ಕಾರಣ, ಒಂದೇ ನಕ್ಷೆಯಲ್ಲಿ ತೋರಿಸುವ ವಿವಿಧ ವಿಷಯಗಳ ಗೊಂದಲ ಹಾಗೂ ಸಂದಿಗ್ಧತೆಯನ್ನು ನಿವಾರಿಸಲು, ಉದ್ದೇಶಗಳ ಆಧಾರದ ಮೇಲೆ ಭೂಪಟಗಳನ್ನು ರಚಿಸಲಾಗುವುದು. ಇವುಗಳನ್ನು ವಿಶಿಷ್ಟ ನಕಾಶಗಳೆಂತಲೂ ಕರೆಯುವರು, ಉದಾ: ಭೂ ಮೇಲ್ಮೈ ಲಕ್ಷಣ ನಕ್ಷೆ, ಹವಾಮಾನ ನಕ್ಷೆ, ವಾಯುಗುಣ ನಕ್ಷೆ, ಸಸ್ಯವರ್ಗ ನಕ್ಷೆ, ಸ್ಥಳ ಸ್ವರೂಪ ನಕ್ಷೆ, ಮಣ್ಣು ನಕ್ಷೆ, ಖನಿಜ ನಕ್ಷೆ, ಭೂಬಳಕೆ ನಕ್ಷೆ, ಸೈನಿಕ ನಕ್ಷೆ, ರಾಜಕೀಯ ನಕ್ಷೆ, ವಿತರಣಾ ನಕ್ಷೆ ಇತ್ಯಾದಿ.

ಇತ್ತೀಚಿನ ದಿನಗಳಲ್ಲಿ ಭೂಪಟ ತಯಾರಿಕೆಯಲ್ಲಿ ಆಧುನಿಕ ವಿಧಾನಗಳನ್ನು ಬಳಸಲಾಗುತ್ತಿದೆ. ವೈಮಾನಿಕ ಛಾಯಾಚಿತ್ರಗಳು ದೂರ ಸಂವೇದಿ (ರಿಮೋಟ್ ಸೆನ್ಸಿಂಗ್) ಮತ್ತು ಭೌಗೋಳಿಕ ಮಾಹಿತಿ ತಂತ್ರಜ್ಞಾನ (ಜಿ.ಐ.ಎಸ್) ವಿಧಾನಗಳಿಂದ ಭೂಪಟ ತಯಾರಿಸಲಾಗುತ್ತಿದೆ. (ಬಿ.ಜಿ.ಎನ್.)

**ಭೌಗೋಳಿಕ ಮತ್ತು ಅಯಸ್ಕಾಂತಿಯ ಧ್ರುವಗಳು:** ಭೂಮಿ ಎರಡು ಸ್ವಾಭಾವಿಕ ಬಿಂದುಗಳನ್ನು ಹೊಂದಿದೆ. ಇವುಗಳೆಂದರೆ ಸೂರ್ಯನನ್ನು ಸುತ್ತುವ ಭೂಮಿ ಎರಡು ಮಾರ್ಗದುದ್ದಕ್ಕೂ ಅದರ ಉತ್ತರ ಭಾಗ ಧ್ರುವ ನಕ್ಷತ್ರಕ್ಕೆ ಲಂಬವಾಗಿರುವುದು. ಇದು ಭೂಮಿಯ ಉತ್ತರ ಧ್ರುವ. ಇದಕ್ಕೆ ವಿರುದ್ಧ ದಿಕ್ಕಿನ ಬಿಂದುವೇ ದಕ್ಷಿಣ ಧ್ರುವ. ಈ ಎರಡೂ ಬಿಂದುಗಳನ್ನು ಸೇರಿಸುವಂತೆ ಎಳೆಯಬಹುದಾದ ರೇಖೆಯೇ ಭೂಮಿಯ ಅಕ್ಷ. ಇದರ ಆಧಾರದ ಮೇಲೆಯೇ ಉಳಿದ ಎಲ್ಲ ಅಕ್ಷಾಂಶ ಮತ್ತು ರೇಖಾಂಶಗಳನ್ನು ಎಳೆಯಲಾಗುವುದು. ಭೂಮಿಯ ಈ ಎರಡು ಸ್ವಾಭಾವಿಕ ಬಿಂದುಗಳು ಭೌಗೋಳಿಕ ಉತ್ತರ ಧ್ರುವ ಮತ್ತು ಭೌಗೋಳಿಕ ದಕ್ಷಿಣ ಧ್ರುವ.

ಅಯಸ್ಕಾಂತೀಯ ಧ್ರುವಗಳು ಭೌಗೋಳಿಕ ಧ್ರುವಗಳಿಂದ ದೂರದಲ್ಲಿವೆ. ಅಲ್ಲದೆ ಇವು ನಿರಂತರವಾಗಿ ಬದಲಾವಣೆಯನ್ನು ಹೊಂದುತ್ತಿರುತ್ತವೆ. ಭೂಮಿ ಒಂದು ಬೃಹತ್ ಅಯಸ್ಕಾಂತ. ಉತ್ತರ ಭಾಗ ಮತ್ತು ದಕ್ಷಿಣ ಭಾಗಗಳು ಭೂ ಹೊರಮೈಗೆ ಸಮೀಪದವರೆಗೂ ಚಾಚಿವೆ. ಇವುಗಳನ್ನು ಕ್ರಮವಾಗಿ ಅಯಸ್ಕಾಂತೀಯ ಉತ್ತರ ಧ್ರುವ ಹಾಗೂ ದಕ್ಷಿಣ ಧ್ರುವಗಳೆಂದು ಕರೆಯುವರು. ಅಯಸ್ಕಾಂತಗಳು ತೋರುವ ದಿಕ್ಕು ಅಯಸ್ಕಾಂತೀಯ ಧ್ರುವಗಳೇ ಹೊರತು ನಿಜವಾದ ಭೌಗೋಳಿಕ ಧ್ರುವಗಳಲ್ಲ. ಅಯಸ್ಕಾಂತೀಯ ಧ್ರುವಗಳಲ್ಲಿ ಅಯಸ್ಕಾಂತಗಳು ಲಂಬವಾಗಿ ಕೆಳಗೆ ಬಾಗಿಕೊಳ್ಳುತ್ತವೆ. ಭೌಗೋಳಿಕ ಉತ್ತರ ಧ್ರುವ ಮತ್ತು ಅಯಸ್ಕಾಂತೀಯ ಉತ್ತರ ಧ್ರುವಗಳ ನಡುವೆ ಸು. 1300 ಕಿಮೀ ಅಂತರವಿರುವುದು. ಪ್ರಸ್ತುತ ಅಯಸ್ಕಾಂತೀಯ ಉತ್ತರ ಧ್ರುವ ಕೆನಡದ ಕ್ವೀನ್ ಎಲಿಜಬೆತ್ ದ್ವೀಪಗಳಲ್ಲಿ ಹಾಗೂ ಅಯಸ್ಕಾಂತೀಯ ದಕ್ಷಿಣ ಧ್ರುವ ಅಂಟಾರ್ಕ್ಟಿಕಾದ ಅಡಿಲೀ ತೀರದ ಬಳಿಯಲ್ಲಿದೆ.

ಈ ಎರಡೂ ಧ್ರುವಗಳ ಅಂತರ ಸಮಭಾಜಕ ವೃತ್ತದ ಬಳಿಯಲ್ಲಿ ಕಡಿಮೆ, ಉತ್ತರ ಹಾಗೂ ದಕ್ಷಿಣದ ಕಡೆಗೆ ಹೋದಂತೆ ಇದು ನಿರಂತರವಾಗಿ ಹೆಚ್ಚುವುದು. ಇವುಗಳೆರಡರ ಕೋನಾಂತರದ ವ್ಯತ್ಯಾಸವನ್ನು ಡಿಕ್ಲೆನೇಷನ್ ಎಂದು ಕರೆಯುವರು. ಒಂದೇ ಪ್ರಮಾಣದ ಡಿಕ್ಲೆನೇಷನ್ ಹೊಂದಿರುವ ಸ್ಥಳಗಳನ್ನು ಎಳೆಯಬಹುದಾದ ರೇಖೆಯನ್ನು ಐಸೋಗೋನಿಕ್ ರೇಖೆಗಳೆಂದು ಕರೆಯುವರು. ಭೂಮಿಯನ್ನು ಸರ್ವೇಕ್ಷಣೆ ಮಾಡುವಾಗ ಅಥವಾ ನೌಕಾಯಾನದ ವೇಳೆ ಈ ಎರಡೂ ಧ್ರುವಗಳ ಅಂತರವನ್ನು ಲೆಕ್ಕಾಚಾರ ಮಾಡಿ ಭೌಗೋಳಿಕ ಧ್ರುವವನ್ನು ಕಂಡು ಹಿಡಿದುಕೊಳ್ಳುವುದು ಆವಶ್ಯಕ.

ಭೂಮಿಯ ಅಯಸ್ಕಾಂತೀಯ ಧ್ರುವಗಳು ನಿರಂತರವಾಗಿ ಚಲಿಸುತ್ತಿವೆ. ಇದರಿಂದ ಈ ಧ್ರುವಗಳು ಆಗಿಂದಾಗ್ಗೆ ಸ್ಥಳಾಂತರತೆಯನ್ನು ಹೊಂದಿವೆ. ಈ ಬದಲಾವಣೆಗಳನ್ನು ಪೋಲಾರ್ ವಾಂಡರಿಂಗ್ ಅಂದರೆ ಧ್ರುವಗಳ ಅಲೆಮಾರಿತನವೆಂದೇ ಕರೆಯಲಾಗಿದೆ. ಇದಕ್ಕೆ ಕಾರಣ ಭೂಮಿಯ ಒಳಪದರ ಅಂದರೆ ಕೇಂದ್ರ ಘನಗೋಳ (ತಿರುಳು) ನಿಧಾನವಾಗಿ ಸುತ್ತುತ್ತಿದೆ. ಆದರೆ ಹೊರಭಾಗ ಶಿಲಾಗೋಳ ಹೆಚ್ಚು ವೇಗವಾಗಿ ಸುತ್ತುತ್ತಿರುವುದು. ಒಳಗೋಳದಲ್ಲಿಯೇ ಭೂಮಿಯ ಅಯಸ್ಕಾಂತೀಯ ಶಕ್ತಿ ಹುದುಗಿರುವುದು. ಇದರಿಂದಾಗಿ ಅಯಸ್ಕಾಂತೀಯ ಧ್ರುವ ಬಿಂದುಗಳು ಭೂಮೇಲ್ಮೈಯಲ್ಲಿ ನಿರಂತರವಾಗಿ ಚಲಿಸುತ್ತಿರುತ್ತವೆ. ಭೂ ಇತಿಹಾಸದಲ್ಲಿ ಭೌಗೋಳಿಕ ಉತ್ತರ ಧ್ರುವ ಅಯಸ್ಕಾಂತೀಯ ದಕ್ಷಿಣ ಧ್ರುವವಾಗಿರುವುದನ್ನೂ ಲೆಕ್ಕಾಚಾರ ಮಾಡಲಾಗಿದೆ. (ಆರ್.ಎನ್.)

**ಭೌಗೋಳಿಕ ಮಾಹಿತಿ ವ್ಯವಸ್ಥೆ:** ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿ.ಐ.ಎಸ್.) ಒಂದು ಪ್ರಮುಖವಾದ ವಿಜ್ಞಾನದ ವಿಭಾಗ. ಇದು 1962 ರಲ್ಲಿ ಬೆಳಕಿಗೆ ಬಂದಿತು. 2000 ದಿಂದೀಚೆಗೆ ಒಂದು ಪ್ರಮುಖ ತಾಂತ್ರಿಕವ್ಯವಸ್ಥೆಯಾಗಿದೆ. ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ವಿಷಯಗಳ ಅಧ್ಯಯನದಲ್ಲಿ ಬಳಸಲಾಗುತ್ತದೆ. ಪ್ರಪಂಚದಾದ್ಯಂತ ಹಂಚಿಕೆಯಾಗಿರುವ ಸ್ವಾಭಾವಿಕ ಸಂಪನ್ಮೂಲ ವಿಶ್ಲೇಷಣೆ ಮತ್ತು ಸಂರಕ್ಷಣೆ, ಸಾರಿಗೆ, ನಗರ ಅಧ್ಯಯನ, ನಗರಯೋಜನೆ ತಯಾರಿಸಲು, ಭೂ ಬಳಕೆ, ಕೈಗಾರಿಕೆ, ವ್ಯವಸಾಯ, ಮೀನುಗಾರಿಕೆ, ನಕ್ಷೆಗಳ ತಯಾರಿಕೆ, ರಕ್ಷಣಾ ವ್ಯವಸ್ಥೆ, ಭೂ ಮಾಹಿತಿ ವ್ಯವಸ್ಥೆ, ವಾಣಿಜ್ಯ ವ್ಯವಹಾರ, ಜನ ಸಾಗಣೆ ಮೊದಲಾದ ವಿಷಯಗಳ ಅಧ್ಯಯನದಲ್ಲಿ ಇದು ತುಂಬ ಬಳಕೆಯಾಗುತ್ತಿರುವ ವ್ಯವಸ್ಥೆಯಾಗಿದೆ. ಪ್ರಮುಖವಾಗಿ ಈ ಮಾಹಿತಿ ವ್ಯವಸ್ಥೆಯಲ್ಲಿ ಭೌಗೋಳಿಕ ನಕ್ಷೆಗಳನ್ನು ತಯಾರಿಸಲು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಮೊದಲು ನಕ್ಷೆಗಳನ್ನು ತಯಾರಿಸಲು ತುಂಬ ಶ್ರಮ ಹಾಗೂ ವೆಚ್ಚದಾಯಕವಾಗುತ್ತಿತ್ತು ಅಲ್ಲದೆ ಕಾಲದ ವಿಳಂಬತೆ ಸಹ ಉಂಟಾಗುತ್ತಿತ್ತು. ಆದರೆ ಇಂದು ನಿಖರವಾದ ಅಳತೆಯಲ್ಲಿ, ಶೀಘ್ರವಾಗಿ, ಗುಣಾತ್ಮಕವಾಗಿ ನಕ್ಷೆಗಳನ್ನು ತಯಾರಿಸುವುದರಲ್ಲಿ ಈ ವ್ಯವಸ್ಥೆ ಹೆಚ್ಚಿನ ಆದ್ಯತೆಯನ್ನು ಪಡೆದುಕೊಂಡಿದೆ.

ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಆಂಗ್ಲಭಾಷೆಯಲ್ಲಿ ಜಿಯಾಗ್ರಫಿಕ್ ಇನ್ಫರ್ಮೇಷನ್ ಸಿಸ್ಟಮ್ ಎಂದು ಕರೆಯಲಾಗುತ್ತದೆ. ಜಿಯಾಗ್ರಫಿಕಲ್ ಎಂದರೆ ಭೌಗೋಳಿಕವಾಗಿ ಕಂಡುಬರುವ ಭೂ ಮೇಲ್ಮೈ ಲಕ್ಷಣಗಳು, ಅಂದರೆ ನದಿ, ಸರೋವರ, ಪರ್ವತ, ಮೈದಾನ, ಸಸ್ಯವರ್ಗ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿರುತ್ತದೆ. ಇನ್ಫರ್ಮೇಷನ್ ಎಂದರೆ ಮಾಹಿತಿಯನ್ನು ನೀಡುವುದು. ಅಂದರೆ ಮೇಲ್ಕಂಡ ಭೌಗೋಳಿಕ ಲಕ್ಷಣಗಳ ಆಕಾರ, ಕ್ಷೇತ್ರ, ಎತ್ತರ, ಉದ್ದ, ಮುಂತಾದ ಮಾಹಿತಿಯನ್ನು ಹಾಗೂ ಸಿಸ್ಟಮ್ ಎಂದರೆ ಒಂದು ವ್ಯವಸ್ಥೆ ಅಥವಾ ಸಮೂಹ ಎನ್ನುವ ಅರ್ಥವನ್ನು ಕೊಡುತ್ತದೆ. ಅಂದರೆ ಎಲ್ಲ ಮಾಹಿತಿಗಳ, ಅಂಕಿ–ಅಂಶಗಳನ್ನು ಸಂಗ್ರಹಿಸಿ ಪೂರೈಸುವುದಾಗಿರುತ್ತದೆ.

ಇದರ ಇತಿಹಾಸವನ್ನು ಅವಲೋಕಿಸಿದಾಗ ಮೊದಲಿಗೆ ಕೆನಡ ದೇಶದ ಭೂಗೋಳ ಶಾಸ್ತ್ರಜ್ಞರಿಗೆ ಇದರ ಕೀರ್ತಿ ಸಲ್ಲುತ್ತದೆ. ಅಲ್ಲಿ ಕೆನಡಿಯನ್ ಭೌಗೋಳಿಕ ಮಾಹಿತಿ ವ್ಯವಸ್ಥೆ ಎಂದು ಅಲ್ಲಿನ ಸರ್ಕಾರ ಕಾರ್ಯರೂಪಕ್ಕೆ ತಂದಿತು. ಅನಂತರ ಪ್ರಪಂಚದ ಇತರ ರಾಷ್ಟ್ರಗಳು ಈ ತಂತ್ರಜ್ಞಾನವನ್ನು ಬಳಸಲು ಪ್ರಾರಂಭಿಸಿದವು. ಕೆನಡದ ಭೂ ಬಳಕೆ, ಅರಣ್ಯ ಸಂರಕ್ಷಣೆ, ಯೋಜನೆಗಳನ್ನು ರೂಪಿಸಲು ಈ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಟಾಮ್ ಲಿನ್‌ಸನ್ ಎಂಬುವನು ಜಿ.ಐ.ಎಸ್. ಬಗ್ಗೆ ಅಧ್ಯಯನ ನಡೆಸಿ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಲಹೆಯಿತ್ತ. ಆದ್ದರಿಂದ ಈತನನ್ನು ಜಿ.ಐ.ಎಸ್. ಪಿತಾಮಹ ಎಂದು ಕರೆಯುವರು. ಈತ ಜಿ.ಐ.ಎಸ್. ವ್ಯವಸ್ಥೆಯಿಂದ ನಕ್ಷೆಗಳ ರಚನೆ ಮತ್ತು ಅವುಗಳ ಬಳಕೆಯನ್ನು ಜಾರಿಗೆ ತಂದ. ಇದಾದನಂತರ ಪ್ರಪಂಚದಾದ್ಯಂತ ಇದು ಬಳಕೆಗೆ ಬಂದಿತು. 1980ರಲ್ಲಿ ಈ ವ್ಯವಸ್ಥೆಯು ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿತು. ಈ ಮೊದಲು ಒಬ್ಬ ವ್ಯಕ್ತಿ ಗಣಕಯಂತ್ರದಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಬಹುದಿತ್ತು. ಆದರೆ ಇದು ಹಲವು ವ್ಯಕ್ತಿಗಳು ಒಂದೇ ಗಣಕ ಯಂತ್ರವನ್ನು ಏಕಕಾಲದಲ್ಲಿ ಬಳಸಬಹುದಾದ ಹಾಗೂ ನಿಖರವಾದ ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತಿದೆ. ಭೌಗೋಳಿಕ ಮಾಹಿತಿ ವ್ಯವಸ್ಥೆಯ ಪ್ರಾಮುಖ್ಯತೆ ಬೇರೆ ಬೇರೆ ತಂತ್ರಾಂಶಗಳ ಅಳವಡಿಕೆ ಹಾಗೂ ಉಪಯೋಗಿಸುವ ವಿಧಾನದ ಮೇಲೆ ಇದರ ನಿಷ್ಪಕ್ಷತೆ ಅವಲಂಬಿಸಿರುತ್ತದೆ.

ಬರ್ರೋ (1986) ಅವರ ಪ್ರಕಾರ ಭೌಗೋಳಿಕ ಮಾಹಿತಿ ವ್ಯವಸ್ಥೆಯ ಕಾರ್ಯ ವಿಧಾನವು ತುಂಬಾ ಅವಶ್ಯಕವೂ, ನಿಖರವೂ ಆಗಿರಬೇಕಾದರೆ ಅದು ಈ ಕೆಳಕಂಡ ಪ್ರಮುಖವಾದ ಅಂಶಗಳನ್ನು ಒಳಗೊಂಡಿರಲೇಬೇಕು.

ಅ) ಗಣಕಯಂತ್ರದಲ್ಲಿ ಅಳವಡಿಸಿರುವ ಪ್ರೊಸೆಸರ್ ತುಂಬಾ ಉತ್ಕೃಷ್ಟವಾಗಿ, ವೇಗವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯಹೊಂದಿರಬೇಕು, ಅದಕ್ಕೆ ಅಗತ್ಯವಿರುವ ಶಕ್ತಿಯ ಪೂರೈಕೆಯಾಗಬೇಕು ತಂತ್ರಾಂಶವು ಯಾವುದೇ ರೀತಿಯ ಅಡಚಣೆ ಇಲ್ಲದೆ ಕಾರ್ಯನಿರ್ವಹಿಸಬೇಕು.

ಆ) ಗಣಕಯಂತ್ರದ ಮೆದುಳು ಎಂದು ಪರಿಗಣಿಸಿರುವ ಕೇಂದ್ರಕಾರ್ಯ ಘಟಕ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರಬೇಕು.

ಇ) ಉತ್ತಮ ಗುಣಮಟ್ಟದ ಗಣಕಯಂತ್ರ ಹೆಚ್ಚು ತೀಕ್ಷ್ಣತೆಯುಳ್ಳ ಬಣ್ಣದ ಗ್ರಾಫಿಕ್ಸ್ ಹೊಂದಿರುವ ಪರದೆ ಇರಬೇಕು.

ಈ) ದತ್ತಾಂಶ ಅಥವಾ ಅಂಕಿ ಅಂಶ, ಮಾಹಿತಿಯನ್ನು ಸಿ.ಪಿ.ಯು ಪೂರೈಸಲು ಮತ್ತು ವಿಶ್ಲೇಷಿಸಲು ಅಥವಾ ಸಿದ್ಧಪಡಿಸಿದ ಮಾಹಿತಿ ಹಾಗೂ ಅಂಕಿ–ಅಂಶಗಳನ್ನು ಕಾಗದ ರೂಪದಲ್ಲಿ ಪಡೆಯಲು ಉತ್ತಮ ದರ್ಜೆಯ ಡಿಜಿಟೈಸರ್, ಸ್ಕ್ಯಾನರ್, ಕೀ ಬೋರ್ಡ್, ಮೌಸ್, ಪ್ರಿಂಟರ್ ಮತ್ತು ಪ್ಲಾಟರ್‌ಗಳು ಬೇಕಾಗುತ್ತದೆ. ಇದರೊಂದಿಗೆ ಪೂರಕವಾಗಿ ಬಳಸುವ ತಂತ್ರಾಂಶ ಸಹ ಉತ್ತಮವಾಗಿ ಕಾರ್ಯ ನಿರ್ವಹಿಸುವಂತಿರಬೇಕು. ಉದಾ: ಆರ್ಕ್/ಇನ್ಫೊ, ಆರ್ಕ್‌ವ್ಯೂ, ಮ್ಯಾಪ್‌ಇನ್ಫೊ, ಸರ್ಫರ್, ಇರ್‌ಡಾಸ್, ಇಡ್ರಿಸಿ, ಗ್ರಾಮ್ ++, ಜಿಯೋ ಮೀಡಿಯ ಮುಂತಾದವು. ಇವುಗಳ ಜೊತೆಗೆ ಕಾರ್ಯನಿರ್ವಹಿಸುವ ವ್ಯಕ್ತಿ ಸರಿಯಾದ ಮಾಹಿತಿತಂತ್ರಜ್ಞಾನವನ್ನು ಹೊಂದಿರಬೇಕು. ಆಗ ಮಾತ್ರ ಉತ್ತಮ ಗುಣಮಟ್ಟದ ನಕ್ಷೆಗಳನ್ನು ತಯಾರಿಸಲು ಹಾಗೂ ಅಂಕಿ–ಅಂಶಗಳ ಜೊತೆ ನೈಜ ಮಾಹಿತಿಯನ್ನು ಪಡೆಯಲು ಸಾಧ್ಯವಾಗಬಹುದು.

ಭೌಗೋಳಿಕ ಮಾಹಿತಿ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಈ ಕೆಳಕಂಡ ವ್ಯಾಖ್ಯಾನಗಳಿಂದ ತಿಳಿಯಬಹುದು.

ಅ. ಮಾರ್ಬಲ್ (1983) ಪ್ರಾದೇಶಿಕ ಸ್ಥಾನೀಯ ಅಂಕಿ–ಅಂಶಗಳನ್ನು ಶೇಖರಿಸಿರುವ ಹಾಗು ಕಾರ್ಯನಿರ್ವಹಿಸುವ ವ್ಯವಸ್ಥೆಯೇ ಭೌಗೋಳಿಕ ಮಾಹಿತಿ ವ್ಯವಸ್ಥೆ.

ಆ. ಭೂಮಿಯ ಮೇಲ್ಭಾಗದಲ್ಲಿನ ಸ್ಥಳಗಳ ಮಾಹಿತಿಯನ್ನು ಸಂಗ್ರಹಿಸುವ ಮತ್ತು ಪೂರೈಸುವ ಒಂದು ಗಣಕಯಂತ್ರದ ವ್ಯವಸ್ಥೆಗೆ ಭೌಗೋಳಿಕ ಮಾಹಿತಿ ವ್ಯವಸ್ಥೆ ಎನ್ನಲಾಗಿದೆ. (ರಿಂಗ್ಸ್ 1989).

ಇ. ಒಂದು ನಿರ್ದಿಷ್ಟ ವ್ಯವಸ್ಥೆಯಲ್ಲಿ ಸಂಗ್ರಹಿಸಿರುವ, ಶೇಖರಿಸಿರುವ, ಮರುಗಳಿಸುವ, ವರ್ಗಾಯಿಸುವ ಮತ್ತು ಪ್ರದರ್ಶಿಸುವ ವಾಸ್ತವ ಪ್ರಪಂಚದಿಂದ ಸ್ಥಾನೀಯ ಅಂಕಿ–ಅಂಶಗಳನ್ನು ಪಡೆಯುವ ವಿಧಾನವೇ ಭೌಗೋಳಿಕ ಮಾಹಿತಿ ವ್ಯವಸ್ಥೆ (ಬರ್‍ರೊ 1987).

ಈ. ಆಂತರಿಕವಾಗಿ ವಿಶ್ಲೇಷಿಸುವ, ಸ್ವಯಂ ಚಾಲಿತ, ಸ್ಥಾನೀಯ ಮಾಹಿತಿ ವ್ಯವಸ್ಥೆಯೇ ಭೌಗೋಳಿಕ ಮಾಹಿತಿ ವ್ಯವಸ್ಥೆ (ಬೆರ್ರಿ 1986).

ಉ. ಇದು ಗಣಕಯಂತ್ರದಿಂದ ನಿರ್ಧರಿಸಲ್ಪಟ್ಟಿರುವ ವ್ಯವಸ್ಥೆಯಾಗಿದ್ದು, ಸೆರೆಹಿಡಿದಿರುವ, ಸಂಗ್ರಹಿಸುವ, ಮರುಗಳಿಸುವ, ವಿಶ್ಲೇಷಣೆ ಹಾಗೂ ಪ್ರದರ್ಶಿಸುವ ಸ್ಥಾನೀಯ ದತ್ತಾಂಶಗಳನ್ನು ಒಂದು ಸಂಘಟನೆಯೊಳಗೆ ತೀರ್ಮಾನಿಸುವ ವ್ಯವಸ್ಥೆಯೇ ಭೌಗೋಳಿಕ ಮಾಹಿತಿ ವ್ಯವಸ್ಥೆ.

ಊ. ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ಸ್ಥಾನೀಯ ದತ್ತಾಂಶಗಳ ಕೊಂಡಿಯ ಸಹಾಯದಿಂದ ಕಾರ್ಯನಿರ್ವಹಿಸುವ ವ್ಯವಸ್ಥೆಯೇ ಭೌಗೋಳಿಕ ಮಾಹಿತಿ ವ್ಯವಸ್ಥೆ (ಗುಡ್ ಚೈಲ್ಡ್–1986)

ಋ. ಭೂಮಿಯ ಸ್ಥಾನೀಯ ಅಂಶಗಳಿಗೆ ಸಂಬಂಧಿಸಿದಂತೆ ಎಲ್ಲ ವಿಧದ ಮಾಹಿತಿಯನ್ನು ಸೆರೆಹಿಡಿಯುವ, ಸಂಗ್ರಹಿಸುವ, ಉನ್ನತೀಕರಿಸುವ, ತಪಾಸಿಸುವ, ವಿಶ್ಲೇಷಿಸುವ ಹಾಗೂ ಪ್ರದರ್ಶಿಸುವ ಗಣಕಯಂತ್ರೋಪಕರಣ ತಂತ್ರಾಂಶವೇ, ಭೌಗೋಳಿಕ ಮಾಹಿತಿ ಹಾಗೂ ವೈಯುಕ್ತಿಕ ವಿನ್ಯಾಸವೂ ಒಳಗೊಂಡು ಒಟ್ಟಾಗಿ ಭೌಗೋಳಿಕ ಮಾಹಿತಿ ವ್ಯವಸ್ಥೆ ಎನ್ನಬಹುದಾಗಿದೆ.

ಈ ಮೇಲ್ಕಂಡ ವ್ಯಾಖ್ಯಾನಗಳನ್ನು ಗಮನಿಸಿದಾಗ ಭೌಗೋಳಿಕ ಮಾಹಿತಿ ವ್ಯವಸ್ಥೆ ಎಂಬುದು ಭೌಗೋಳಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪೂರೈಸುವ, ಸಂಗ್ರಹಿಸುವ, ಮರುಕಳಿಸುವ, ನಿರ್ವಹಣಾ ಕೌಶಲ, ವಿಶ್ಲೇಷಣೆ ಮತ್ತು ಮೂಡಿಸುವ ವ್ಯವಸ್ಥೆಯೇ ಭೌಗೋಳಿಕ ಮಾಹಿತಿ ವ್ಯವಸ್ಥೆ.

ಭೌಗೋಳಿಕ ಮಾಹಿತಿ ವ್ಯವಸ್ಥೆಯಲ್ಲಿ ಎರಡು ಪ್ರಕಾರಗಳಲ್ಲಿ ಅಂಕಿ–ಅಂಶಗಳ ಅಧ್ಯಯನ ಮಾಡಲಾಗುತ್ತದೆ. ಸ್ಥಾನಿಯ ದತ್ತಾಂಶಗಳು ಮತ್ತು ಸ್ಥಾನಿಯವಲ್ಲದ ದತ್ತಾಂಶಗಳು ಇವುಗಳನ್ನು ನಕ್ಷೆಗಳಲ್ಲಿ ಅಳವಡಿಸಲಾಗುತ್ತದೆ. ಹಾಗೂ ಇವುಗಳನ್ನು ಬಿಂದು, ರೇಖೆ, ಕ್ಷೇತ್ರದ ಅಂಶಗಳ ಮೂಲಕ ಕೇಂದ್ರೀಕರಿಸಿ ನಕ್ಷೆಗಳನ್ನು ರೂಪಿಸಿ ಅವುಗಳಿಗೆ ಕ್ವೆರ್ರಿ ಮಾಡಲಾಗುತ್ತದೆ. ಅಲ್ಲದೆ, ಸಹಜ ಭೂಮೇಲ್ಮೈ ದತ್ತಾಂಶಗಳಾದ ಅಂದರೆ ವಾಹಕ ಹಾಗೂ ದತ್ತಾಂಶಗಳನ್ನು ಅವಾಹಕ ಅಥವಾ ಚಾರಸ ವಿನ್ಯಾಸಕ್ಕೆ ಅಳವಡಿಸಿ ನಕ್ಷೆಗಳನ್ನು ಹಾಗು ಭೂ ಮೇಲ್ಮೈ ಸ್ವರೂಪಗಳನ್ನು ಗಣಕಯಂತ್ರದಲ್ಲಿ ಸಂಸ್ಕರಿಸಿ ಚೌರಸ ಮಾದರಿಯಲ್ಲಿ (ಅಂಕಿ ಅಂಶಗಳನ್ನು) ಅಧ್ಯಯನ ಮಾಡಲಾಗುತ್ತದೆ. ಸ್ಥಾನೀಯ ಅಂಕಿ–ಅಂಶಗಳಾದ ಸಸ್ಯವರ್ಗ, ಸರೋವರ, ನದಿ, ಮುಂತಾದವು, ಸ್ಥಾನೀಯವಲ್ಲದ ದತ್ತಾಂಶಗಳಾದ (ನಾನ್–ಸ್ಪೇಷಿಯಲ್ ಡೇಟಾ) ಉದ್ದ, ಅಗಲ, ಎತ್ತರ, ಹೆಸರು ಮುಂತಾದವುಗಳನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆಯಲ್ಲಿ ಅಳವಡಿಸಿ ಕ್ಷಣಾರ್ಧದಲ್ಲಿ ಸಂಪೂರ್ಣ ಮಾಹಿತಿಯನ್ನು, ಪಡೆಯಬಹುದಾಗಿದೆ.

ಈ ಮಾಹಿತಿ ವ್ಯವಸ್ಥೆಯನ್ನು ಪ್ರಪಂಚದಾದ್ಯಂತ– ನೈಸರ್ಗಿಕ ಸಂಪನ್ಮೂಲಗಳನ್ನು ಗುರುತಿಸಲು, ಪರಿಸರ ಸಂರಕ್ಷಣೆ, ಅರಣ್ಯ ಸಂಪತ್ತು, ಖನಿಜ ಸಂಪನ್ಮೂಲಗಳು, ಕೈಗಾರಿಕೆ, ಸಾರಿಗೆ, ವ್ಯವಸ್ಥೆ ನಗರಾಭಿವೃದ್ಧಿ, ಆಡಳಿತ, ಯೋಜನಾ ಘಟಕ ಮುಂತಾದ ವಲಯಗಳಲ್ಲಿ ಕಾರ್ಯ ಯೋಜನೆಗಳನ್ನು ರೂಪಿಸಲು ಸಹಾಯಕವಾಗಿದೆ ಹಾಗೂ ಪರಿಣಾಮಕಾರಿಯಾದ ಮಾಹಿತಿ ವ್ಯವಸ್ಥೆಯಾಗಿದೆ. ವಿಶ್ವದಾದ್ಯಂತ ಮುಂದುವರೆದ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜಿ.ಐ.ಎಸ್.ನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಇದರ ಅಭಿವೃದ್ಧಿಯು ತ್ವರಿತಗತಿಯಲ್ಲಿ ನಡೆಯುತ್ತಿದೆ. ಗ್ರಾಮಗಳು–ಪಟ್ಟಣಗಳು ಹಾಗೂ ದೊಡ್ಡ ನಗರಗಳ ಪರಿಸ್ಥಿತಿಗಳನ್ನು ತಿಳಿಯಲು ಹಾಗೂ ಅಂಕಿ–ಅಂಶಗಳನ್ನು ಪಡೆಯಲು, ಪರಿಹಾರಗಳನ್ನು ಸೂಚಿಸಲು ಇದು ಉಪಯುಕ್ತ ತಂತ್ರಜ್ಞಾನ ಎಂದು ಪರಿಗಣಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ವ್ಯವಸ್ಥೆಗೆ ಆದ್ಯತೆಯನ್ನು ನೀಡಿವೆ. ಕರ್ನಾಟಕದ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪ್ರತಿರಾಜ್ಯದ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಎನ್.ಆರ್.ಡಿ.ಎಮ್.ಎಸ್. ಕೇಂದ್ರಗಳನ್ನು ಸ್ಥಾಪಿಸಿದೆ. (ನೇಚುರಲ್ ರಿಸೋರ್ಸ್ ಡೇಟಾ ಮ್ಯಾನೇಜ್‌ಮೆಂಟ್ ಸಿಸ್ಟಮ್)ಇದರ ಮೂಲಕ ಸಾಮಾನ್ಯ ಮಾಹಿತಿಗಳನ್ನು ಜಿ.ಐ.ಎಸ್.ಗೆ ಅಳವಡಿಸಿ ಪರಿಹಾರಗಳನ್ನು ಕಂಡುಹಿಡಿಯಲಾಗುತ್ತಿದೆ.

ಭೌಗೋಳಿಕ ಮಾಹಿತಿ ವ್ಯವಸ್ಥೆಯ ಅನುಕೂಲತೆಗಳು: ಅ. ಪ್ರಾದೇಶಿಕ ತಾರತಮ್ಯತೆಯನ್ನು ಪತ್ತೆ ಹಚ್ಚಲು ಹಾಗೂ ಪರಿಹಾರ ಸೂಚಿಸಲು ಸಹಕಾರಿ; ಆ. ಶೀಘ್ರ ಹಾಗೂ ಉತ್ತಮ ಮಾಹಿತಿಯ ಪೂರೈಕೆ; ಇ. ಸಮರ್ಪಕವಾದ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೆ ಸಹಾಯಕ. ಈ. ಉತ್ತಮ ಗುಣಮಟ್ಟದ ಭೂ ಮಾಹಿತಿಯನ್ನು ಆಧರಿಸಿ ನಕ್ಷೆಗಳ ತಯಾರಿಕೆ, ವಿತರಣೆ ಮತ್ತು ನಿರ್ವಹಣೆಯಲ್ಲಿ ಇದರ ಪಾತ್ರ ಪ್ರಮುಖವಾದುದು; ಉ. ದೀರ್ಘ ಸಮಯ ಹಾಗೂ ವೆಚ್ಚದಲ್ಲಿ ಉಳಿತಾಯ; ಊ. ಆಧುನಿಕ ತಾಂತ್ರಿಕತೆಯಿಂದಾಗಿ ಹಳೆಯ ಅಂಕಿ–ಅಂಶಗಳ ಪುನರ್ ಪರಿಶೀಲಿಸುವಿಕೆ ಮುಂತಾದವುಗಳಿಗೆ ಈ ವ್ಯವಸ್ಥೆಯು ಕಾಯಕಲ್ಪ ಒದಗಿಸಿದೆ. (ಸಿ.ಎಂ.)

**ಭೌಗೋಳಿಕ ವಿಸ್ತಾರದ ಅಳತೆ:** ಕೆಲವು ವೇಳೆ ನಕ್ಷೆಗಳ ಕ್ಷೇತ್ರವನ್ನು ಲೆಕ್ಕಾಚಾರ ಮಾಡುವುದು ಅವಶ್ಯಕವಾಗಬಹುದು. ಇಂತಹ ಸಂದರ್ಭಗಳಲ್ಲಿ ನಕ್ಷೆಯನ್ನು ಗ್ರಾಫ್ ಹಾಳೆಯ ಮೇಲೆ ಇರಿಸಿ ಎಷ್ಟು ಚೌರಸಗಳಲ್ಲಿ ನಕ್ಷೆ ವಿಸ್ತರಿಸಿದೆ ಎಂಬುದನ್ನು ಅಳತೆ ಮಾಡಿ ಅದರ ಕ್ಷೇತ್ರವನ್ನು ಲೆಕ್ಕಾಚಾರ ಮಾಡಬಹುದು. ಉದಾಹರಣೆಗೆ ನಕ್ಷೆಯ ಅಳತೆ 1 ಸೆಂ.ಮೀ = 1 ಕಿಮೀ ಇದ್ದರೆ, ಒಂದು ಪೂರ್ಣ ಚೌರಸ ಒಂದು ಚದರ ಕಿಮೀ ಕ್ಷೇತ್ರವನ್ನು ಹೊಂದಿರುವುದು. ಇದರಂತೆ ಎಲ್ಲ ಪೂರ್ಣ ಹಾಗೂ ಅರ್ಧದ, ಕಾಲು ಭಾಗದ ಚೌರಸಗಳನ್ನು ಸೇರಿಸಿದರೆ ನಕ್ಷೆಯ ಕ್ಷೇತ್ರ ದೊರೆಯುವುದು. ಇದೇ ರೀತಿಯಲ್ಲಿ ನಕ್ಷೆಯ ಮೇಲೂ ಚೌರಸಗಳನ್ನು ಅಳತೆಗೆ ಅನುಗುಣವಾಗಿ ಎಳೆದು ಕ್ಷೇತ್ರವನ್ನು ಲೆಕ್ಕಾಚಾರ ಮಾಡಬಹುದು. (ಆರ್.ಎನ್.)

# ಮ

**ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಮುಖ್ಯ ಆಡಳಿತ ನಗರ ಕೇಂದ್ರ. ಪೂರ್ವದಲ್ಲಿ ಕಾರ್ಕಳ ಮತ್ತು ಬಂಟ್ವಾಳ ಉತ್ತರದಲ್ಲಿ ಉಡುಪಿ ತಾಲ್ಲೂಕುಗಳು, ದಕ್ಷಿಣದಲ್ಲಿ ಕೇರಳ ರಾಜ್ಯ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಈ ತಾಲ್ಲೂಕನ್ನು ಸುತ್ತುವರಿದಿವೆ. ಗುರುಪುರ, ಮಂಗಳೂರು–ಎ, ಮಂಗಳೂರು–ಬಿ, ಸುರತ್ಕಲ್ಲು ಮತ್ತು ಮುಲ್ಕಿ ಹೋಬಳಿಗಳು, 7 ಪಟ್ಟಣಗಳು ಹಾಗೂ 102 ಗ್ರಾಮಗಳು ಇವೆ. ಒಟ್ಟು ವಿಸ್ತೀರ್ಣ 560 ಚ.ಕಿಮೀ. ಜನಸಂಖ್ಯೆ 539387.

ಮೇಲ್ಮೈ ಲಕ್ಷಣ: ಈ ತಾಲ್ಲೂಕು ಅರಬ್ಬಿ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಪಶ್ಚಿಮ ಕರಾವಳಿಗೆ ಹೊಂದಿಕೊಂಡ ಪ್ರದೇಶದಲ್ಲಿದೆ. ಕರಾವಳಿ ಪ್ರದೇಶದ ಭಾಗ. ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ತಾಲ್ಲೂಕುಗಳಲ್ಲಿ ಮಂಗಳೂರು ಮಾತ್ರ ಸಮುದ್ರ ತೀರ (ಸು. 41 ಕಿಮೀ) ಹೊಂದಿರುವುದು. ಸಮುದ್ರಕ್ಕೆ ಹೊಂದಿಕೊಂಡ ಭಾಗ ತಗ್ಗಾಗಿದ್ದು ಮರಳುದಿಣ್ಣೆ, ಅಳಿವೆಗಳ ಮಣ್ಣಿನ ಮಟ್ಟಸ ಭೂಮಿಯಾಗಿದೆ. ಪೂರ್ವಕ್ಕೆ ಹೋದಂತೆ ಎತ್ತರ ಹೆಚ್ಚಾಗುವುದು. ತಾಲ್ಲೂಕಿನ ಎತ್ತರ ಸಮುದ್ರ ಮಟ್ಟಕ್ಕೆ 30 ರಿಂದ 60 ಮೀ ಗಳಿದ್ದು, ಅದು ಸಾಧಾರಣ

ಇಳಿಜಾರಿನಿಂದ ಕೂಡಿದೆ. ಅಲ್ಲಲ್ಲಿ ಗುಡ್ಡಗಳು ಕಂಡುಬರುತ್ತವೆ. ನದಿಯ ದಡಗಳನ್ನು ಹೊರತುಪಡಿಸಿ ಇತರ ಕಡೆಗಳಲ್ಲಿ ಜಂಬಿಟ್ಟಿಗೆ ಮಣ್ಣು ವ್ಯಾಪಕವಾಗಿದೆ. ಇದು ಈ ಭಾಗದ ಲ್ಯಾಟರೈಟ್ ಶಿಲೆಗಳಿಂದ ರಚನೆಯಾದುದು.

ನದಿಗಳು: ಗುರುಪುರ ಹೊಳೆ ಮತ್ತು ನೇತ್ರಾವತಿ ಇಲ್ಲಿಯ ಮುಖ್ಯ ನದಿಗಳು. ಗುರುಪುರ ಹೊಳೆ ಪ್ರಾರಂಭದಲ್ಲಿ ತಾಲ್ಲೂಕಿನ ಮಧ್ಯೆ ಅಡ್ಡವಾಗಿ ಹಾಯ್ದು ಅನಂತರ ದಕ್ಷಿಣಾಭಿಮುಖವಾಗಿ ಕರಾವಳಿಗೆ ಸಮಾಂತರವಾಗಿ ಮಂಗಳೂರಿನ ದಕ್ಷಿಣ ತುದಿಯವರೆಗೂ ಹರಿದು ಅರಬ್ಬಿಸಮುದ್ರ ಸೇರುತ್ತದೆ. ನೇತ್ರಾವತಿ ನದಿ ಬಂಟ್ವಾಳ ತಾಲ್ಲೂಕಿನಿಂದ ಹರಿದುಬಂದು ಮಂಗಳೂರು ತಾಲ್ಲೂಕಿನ ದಕ್ಷಿಣಭಾಗದಲ್ಲಿ ಅಡ್ಡ ಹಾದು ದಕ್ಷಿಣ ಭಾಗದಲ್ಲಿ ಗುರುಪುರ ಹೊಳೆಯನ್ನು ಸೇರುತ್ತದೆ. ಮುಲ್ಕಿ ನದಿ ಈ ತಾಲ್ಲೂಕನ್ನು ಉಡುಪಿ ಮತ್ತು ಕಾರ್ಕಳ ತಾಲ್ಲೂಕುಗಳಿಂದ ಬೇರ್ಪಡಿಸುವ ಉತ್ತರದ ಗಡಿ. ಕೆಲವು ಸಣ್ಣ ಪುಟ್ಟ ತೊರೆಗಳು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬಿಸಮುದ್ರ ಸೇರುತ್ತವೆ. ಅಲ್ಲಿ ಈ ನದಿ ಮತ್ತು ತೊರೆಗಳ ಹರವು ವಿಶಾಲವಾಗಿದೆ. ನದಿಗಳ ಮಧ್ಯೆ ಅಲ್ಲಲ್ಲೇ ನೀರಿನ ಮಟ್ಟದಿಂದ ಕೆಲವೇ ಅಡಿಗಳ ಎತ್ತರವಿರುವ ಫಲವತ್ತಾದ ಕುದುರುಗಳು ಇವೆ.

ವಾಯುಗುಣ: ತಾಲ್ಲೂಕು ಅರಬ್ಬಿ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಇದ್ದು ಅತಿ ಆರ್ದ್ರತೆಯುಳ್ಳ ಮಾನ್ಸೂನ್ ವಾಯುಗುಣ ಹೊಂದಿದೆ. ವಾರ್ಷಿಕ ಸರಾಸರಿ ಉಷ್ಣಾಂಶ 27⁰ಸೆ. ಬೇಸಗೆಯಲ್ಲಿ ಉಷ್ಣಾಂಶ ಗರಿಷ್ಠ ಮಟ್ಟವನ್ನು ತಲುಪಿ ಸೆಕೆ ಹೆಚ್ಚು. ಮಳೆಗಾಲದಲ್ಲಿ ಶಾಖ ಸ್ವಲ್ಪ ಶಮನ. ನೈಋತ್ಯ ಮಾನ್ಸೂನ್ ಮಾರುತಗಳಿಂದ ಅಧಿಕ ಮಳೆಯಾಗುತ್ತದೆ. ವಾರ್ಷಿಕ ಸರಾಸರಿ ಮಳೆ 40 ಸೆಂಮೀ. ಇದಕ್ಕೆ ಪ್ರತಿಯಾಗಿ ಬೇಸಗೆಯಲ್ಲಿ ಕೆಲಭಾಗಗಳು ನೀರಿನ ಅಭಾವವನ್ನು ಎದುರಿಸುವುದುಂಟು. ಒಟ್ಟಾರೆ ಸಾಗರಿಕ ಹವಾಮಾನವಿರುತ್ತದೆ.

ಸಸ್ಯವರ್ಗ: ಈ ತಾಲ್ಲೂಕಿನ ತೀರದ ಬೆಟ್ಟ-ಗುಡ್ಡಗಳಲ್ಲಿ ಹಿಂದೆ ಎಲೆ ಉದುರುವ ಸಸ್ಯವರ್ಗವಿತ್ತು. ಭೂಬಳಕೆಯ ಒತ್ತಡದಿಂದಾಗಿ ಹಾಗೂ ವಿವೇಚನಾ ರಹಿತ ಕಾಡಿನ ನಾಶದಿಂದಾಗಿ ಇಂದು ವನಸ್ಪತಿ ವಿರಳ. ಅಲ್ಲಲ್ಲಿ ಚದುರಿದಂತೆ ಕೆಲವು ಮರಗಿಡಗಳು ಕಂಡುಬರುತ್ತವೆ. ಅರಣ್ಯ ಪ್ರದೇಶವಿಲ್ಲ. ಕಡಲತೀರದ ಕೆಂಬಣ್ಣದ ಬೆಟ್ಟಗಳಲ್ಲಿ ತೇವಭರಿತ ಉದುರೆಲೆ ಮರಗಿಡಗಳಿವೆ. ನದಿ ಅಳಿವೆ ಮತ್ತು ಕಡಲದಂಡೆವರೆಗೂ ಮ್ಯಾಂಗ್ರೋವ್ ಸಸ್ಯವರ್ಗವಿದೆ. ಕಂದಾಳೆ ಇಲ್ಲಿನ ಪ್ರಮುಖ ಮರ. ಇತರ ಭಾಗಗಳಲ್ಲಿ ಕೆಂಪು ಸಿಪ್ಪೆ ಹಾಗೂ ಬಿಳಿತಿರುಳು ಹಣ್ಣು ಬಿಡುವ ಮರ, ಹಿರೆಬೋವಿ, ಸಪ್ತಪರ್ಣಿಮರ ಹಾಗೂ ಪೊದೆ ಸಸ್ಯಗಳು ಇವೆ. ಹೆಚ್ಚು ಬೆಲೆಬಾಳುವ ಮರಗಳ ಹಂಚಿಕೆ ವಿರಳ.

ಕೃಷಿ: ತಾಲ್ಲೂಕಿನ ಒಟ್ಟು 55,380 ಹೆಕ್ಟೇರು ಪ್ರದೇಶದಲ್ಲಿ 9,835 ಹೆ. ಬಂಜರು ಭೂಮಿ, 1,076 ಹೆ. ಹುಲ್ಲುಗಾವಲು ಇದ್ದು 28,743 ಹೆ. ಬೇಸಾಯ ಭೂಮಿ ಇದೆ. (2002), ಅರಣ್ಯ ಪ್ರದೇಶವಿಲ್ಲ. ಬತ್ತ ಇಲ್ಲಿಯ ಮುಖ್ಯ ಆಹಾರ ಬೆಳೆ. ಕುದುರುಗಳ ಹಾಗೂ ನದಿ ಝರಿಗಳ ದಂಡೆಗಳಲ್ಲಿ ಮಳೆಯನೀರಿನ ಆಸರೆಯಿಂದ ಬತ್ತವನ್ನು ಬೆಳೆಯುವ ರೂಢಿ ಇದೆ. ತೆಂಗು ಈ ತಾಲ್ಲೂಕಿನ ಇನ್ನೊಂದು ಮುಖ್ಯ ಬೆಳೆ. ಅಡಕೆ, ಗೋಡಂಬಿ, ಮೆಣಸು, ತರಕಾರಿಗಳು, ಮೆಣಸಿನಕಾಯಿ, ಶುಂಠಿ, ಮಾವು, ಬಾಳೆ, ಹಲಸು ಮುಂತಾದವನ್ನೂ ಬೆಳೆಸುತ್ತಾರೆ. ಮತ್ಸ್ಯೋದ್ಯಮ ಇಲ್ಲಿಯ ಒಂದು ಪ್ರಮುಖ ಕಸುಬು.

ಕೈಗಾರಿಕೆ: ಈ ತಾಲ್ಲೂಕಿನ ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿಯ ಸಂಪರ್ಕವಿದ್ದು ಇಡೀ ಜಿಲ್ಲೆಯಲ್ಲೇ ಇದು ಕೈಗಾರಿಕೆಯಲ್ಲಿ ಮುಂದುವರಿದಿದೆ. ಗೋಡಂಬಿ ಸಂಸ್ಕರಣ ಕಾರ್ಖಾನೆಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಈಚೆಗೆ ನವಮಂಗಳೂರು ಬಂದರಿನಲ್ಲಿ ಬೃಹತ್ಪ್ರಮಾಣದ ರಾಸಾಯನಿಕ ಗೊಬ್ಬರ ತಯಾರಿಕಾ ಕಾರ್ಖಾನೆಯೊಂದು ಸ್ಥಾಪಿತವಾಗಿದೆ. ಕೈಮಗ್ಗದ ಬಟ್ಟೆ, ಮರದ ವಸ್ತುಗಳು, ತೆಂಗುನಾರಿನ ವಸ್ತುಗಳು, ಚಾಪೆ ಮತ್ತು ಚರ್ಮ ವಸ್ತುಗಳು ಮೊದಲಾದವನ್ನು ತಯಾರಿಸುವ ಉದ್ಯಮಗಳು ಇವೆ. ಹಲವು ಕಾಫಿ ಸಂಸ್ಕರಣ ಕೇಂದ್ರಗಳಿವೆ. ತಾಲ್ಲೂಕಿನಲ್ಲಿ ಒಟ್ಟು 367 ದೊಡ್ಡ ಕಾರ್ಖಾನೆಗಳು ಮತ್ತು 6025 ಸಣ್ಣ ಪ್ರಮಾಣದ ಘಟಕಗಳು ಕಾರ್ಯನಿರತವಾಗಿವೆ. ತಾಲ್ಲೂಕಿನ ವ್ಯವಸಾಯ ಮತ್ತು ಕೈಗಾರಿಕೋದ್ಯಮಗಳ ಅಭಿವೃದ್ಧಿಗೆ ಇಲ್ಲಿರುವ ಅನೇಕ ವಾಣಿಜ್ಯ ಬ್ಯಾಂಕುಗಳು ಸಹಕಾರಿಯಾಗಿವೆ.

ಸಾರಿಗೆ-ಸಂಪರ್ಕ: ಮಂಗಳೂರಿನಿಂದ ದಕ್ಷಿಣಕ್ಕೆ ಶೋರನೂರು ಕಡೆಗೆ ಹೋಗುವ ರೈಲುಮಾರ್ಗ ಈ ತಾಲ್ಲೂಕಿನಲ್ಲಿ ಕೆಲವೇ ಕಿಮೀ ದೂರ ಮಾತ್ರ ಸಾಗುತ್ತದೆ. ತಾಲ್ಲೂಕಿನ ರೈಲು ಮಾರ್ಗದ ಉದ್ದ 138 ಕಿಮೀ ಮಂಗಳೂರು-ಹಾಸನ ರೈಲುಮಾರ್ಗವಾಗಿದ್ದು ಮಂಗಳೂರು ಒಂದು ದೊಡ್ಡ ರೈಲ್ವೆ ಕೇಂದ್ರ. ತಾಲ್ಲೂಕಿನ ಎಲ್ಲ ಸ್ಥಳಗಳಿಗೂ ಉತ್ತಮ ರಸ್ತೆ ಜಾಲವಿದೆ. ಒಟ್ಟು 770 ಕಿಮೀ ಉದ್ದ ರಸ್ತೆ ಮಾರ್ಗವಿದೆ. ಅವುಗಳಲ್ಲಿ 110 ಕಿಮೀ ಸುಧಾರಿತ ರಸ್ತೆಗಳಾಗಿವೆ. ಮಂಗಳೂರಿನಿಂದ ಕಾಸರಗೋಡು, ಬಂಟ್ವಾಳ, ಕಾರ್ಕಳ, ಉಡುಪಿ ಈ ಸ್ಥಳಗಳಿಗೆ ಹೋಗುವ ಮಾರ್ಗಗಳೇ ಈ ತಾಲ್ಲೂಕಿನ ಮುಖ್ಯ ರಸ್ತೆಗಳು. ಮಂಗಳೂರಿನ ಬಂದರು, ನೌಕಾಸಂಪರ್ಕಕ್ಕೂ ವಿದೇಶ ವಾಣಿಜ್ಯಕ್ಕೂ ಉಪಯುಕ್ತವಾಗಿದೆ. ಮಂಗಳೂರು ವಿಶ್ವವಿದ್ಯಾಲಯವಿದೆ. ಮಂಗಳೂರಿಗೆ 25 ಕಿಮೀ ದೂರದಲ್ಲಿರುವ ಬಜ್ಪೆಯಲ್ಲಿ ವಿಮಾನ ನಿಲ್ದಾಣವಿದೆ.

ದೇರೆಬೈಲು, ಪದವು, ಕಂಕನಾಡಿ, ಮಂಗಳೂರು, ಉಳ್ಳಾಲ, ಮುಲ್ಕಿ ಮತ್ತು ಸೋಮೇಶ್ವರ ಇವು ಈ ತಾಲ್ಲೂಕಿನ ಪಟ್ಟಣಗಳು. ಅತ್ತೂರಿನಲ್ಲಿ ಪ್ರಸಿದ್ಧ ಸುರಗಿರಿ ಮಹಾಲಿಂಗೇಶ್ವರ ದೇವಾಲಯವಿದೆ. ಇಲ್ಲಿಯ ಬಜ್ಪೆ ಜಲಪಾತ ಬಲು ರಮ್ಯ ಸ್ಥಳ. ಗುರುಪುರ ನದಿಯ ದಡದಲ್ಲಿರುವ ಗುರುಪುರ ಒಂದು ಮುಖ್ಯಸ್ಥಳ. ಮಂಗಳೂರಿನ ದಕ್ಷಿಣಕ್ಕೆ 19 ಕಿಮೀ ದೂರದಲ್ಲಿರುವ ಪರೆಕಲ ಗ್ರಾಮದ ಬಳಿಯ ನರಹರಿಪರ್ವತದ ಮೇಲೆ ನರಸಿಂಹ ಮತ್ತು ಶಾರದಾಂಬೆ ದೇವಾಲಯಗಳಿವೆ. ಸಮುದ್ರ ದಂಡೆಯಲ್ಲಿರುವ ಈ ಪ್ರದೇಶ ಒಂದು ಆರೋಗ್ಯಧಾಮದಂತಿದೆ. ಮಂಗಳೂರಿನಿಂದ 27 ಕಿಮೀ ಪೂರ್ವದಲ್ಲಿ ನಂದಿನಿ ನದಿ ತೀರದಲ್ಲಿರುವ ಕಟೀಲು ಗ್ರಾಮದಲ್ಲಿ ಪ್ರಸಿದ್ಧ ದುರ್ಗಾ ಪರಮೇಶ್ವರಿ ದೇವಾಲಯವಿದೆ. ಮಂಗಳೂರಿನ ಈಶಾನ್ಯಕ್ಕೆ 19 ಕಿಮೀ ದೂರದಲ್ಲಿರುವ ಕಿನ್ನಿಗೋಳಿ ಗ್ರಾಮದ ಶ್ರೀರಾಮ ದೇವಾಲಯ ಹೆಸರಾದದ್ದು. ಮಂಗಳೂರಿನಿಂದ 22 ಕಿಮೀ ದೂರದಲ್ಲಿರುವ ಪೊಳಲಿ ಗ್ರಾಮದ ಬಳಿ ಪ್ರಸಿದ್ಧವಾದ ಪೊಳಲಿ ರಾಜರಾಜೇಶ್ವರಿ ದೇವಾಲಯವಿದೆ. ಮಂಗಳೂರಿನಿಂದ 5 ಕಿಮೀ ದೂರದಲ್ಲಿರುವ ಪದವು ಗ್ರಾಮದಲ್ಲಿ ಕಾಫಿ ಸಂಸ್ಕರಣ ಕೇಂದ್ರ, ಗೇರು ಬೀಜದ ಕಾರ್ಖಾನೆ ಇವೆ. ಇಲ್ಲಿಯ ಶಕ್ತಿ ನಗರದಲ್ಲಿರುವ ರಮಾಶಕ್ತಿ ಮಿಷನ್ ಅನೇಕರನ್ನು ಆಕರ್ಷಿಸುತ್ತಿದೆ. ಮಂಗಳೂರಿನ ಉತ್ತರಕ್ಕೆ 9 ಕಿಮೀ ದೂರದಲ್ಲಿರುವ ಪಣಂಬೂರು ಫಲ್ಗುಣಿ ನದಿಯ ದಡದಲ್ಲಿರುವ ಒಂದು ವ್ಯಾಪಾರ ಕೇಂದ್ರ. ಪಣಂಬೂರಿನಲ್ಲಿ ದೊಡ್ಡ ಸರ್ವಋತು ಬಂದರು ಮತ್ತು ಗೊಬ್ಬರ ಕಾರ್ಖಾನೆ ನಿರ್ಮಾಣವಾಗಿವೆ. ಕೇಂದ್ರ ಸರ್ಕಾರ ಇಲ್ಲೊಂದು ಪ್ರೌಢಶಾಲೆಯನ್ನು ನಡೆಸುತ್ತಿದೆ. ಸುರತ್ಕಲ್ಲು ಒಂದು ವ್ಯಾಪಾರ ಮತ್ತು ವಿದ್ಯಾಭ್ಯಾಸ ಕೇಂದ್ರ. ಉಳ್ಳಾಲ ಇತಿಹಾಸ ಪ್ರಸಿದ್ಧ ಸ್ಥಳ ಹಾಗೂ ವ್ಯಾಪಾರ ಕೇಂದ್ರ.

ಮಂಗಳೂರು ನಗರ: ದಕ್ಷಿಣ ಕನ್ನಡಜಿಲ್ಲೆಯ ಆಡಳಿತ ಕೇಂದ್ರ. ಪಶ್ಚಿಮ ಕರಾವಳಿಯ ಒಂದು ಮುಖ್ಯ ರೇವುಪಟ್ಟಣ. ಇದು ಬೆಂಗಳೂರಿಗೆ ಪಶ್ಚಿಮದಲ್ಲಿ 363 ಕಿಮೀ ದೂರದಲ್ಲೂ ಮುಂಬಯಿಯ ದಕ್ಷಿಣಕ್ಕೆ 673 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 399565.

ಇದು ಕರ್ನಾಟಕದ ಪಶ್ಚಿಮಕರಾವಳಿಯ ಸುಂದರ ನಗರವೆಂದು ಪ್ರಸಿದ್ಧ. ಈ ಪಟ್ಟಣ ಗುರುಪುರ ಮತ್ತು ನೇತ್ರಾವತಿ ನದಿಗಳು ಕೂಡಿ ಏಕಮುಖವಾಗಿ ಸೇರುವೆಡೆ ಇದ್ದು ಪಶ್ಚಿಮ ಮತ್ತು ದಕ್ಷಿಣದಲ್ಲಿ ಹರಡಿರುವ ಈ ನದಿಗಳ ಹಿನ್ನೀರ ಹರವಿನಿಂದಲೂ ಆಗ್ನೇಯ ದಿಕ್ಕಿನಲ್ಲಿ ಫಲವತ್ತಾದ ಕೃಷಿಪ್ರದೇಶಗಳಿಂದಲೂ ಉತ್ತರ ಮತ್ತು ಈಶಾನ್ಯಗಳ ನಡುವೆ ಹಬ್ಬಿರುವ ಸಾಧಾರಣ ಬೆಟ್ಟಗಳು ಮತ್ತು ಅವುಗಳ ಮಧ್ಯದ ಹಸುರು ತುಂಬಿದ ಸುಂದರ ಕಣಿವೆಗಳಿಂದಲೂ ಕೂಡಿದ್ದು ಎಲ್ಲೆಡೆ ತೆಂಗು, ಅಡಕೆ ಮತ್ತು ಇತರ ಮರಗಳಿಂದ ಆವೃತವಾಗಿ ಕಂಗೊಳಿಸುತ್ತದೆ. ಇಲ್ಲಿ ಸಾಮಾನ್ಯವಾಗಿ ಸಾಗರಿಕ ಹವಾಗುಣವಿದೆಯಾದರೂ ಬೇಸಗೆಯಲ್ಲಿ ಸೆಖೆ ಹೆಚ್ಚು.

ಮಂಗಳೂರಿನಲ್ಲಿ ನಗರ ಸಭಾಡಳಿತವಿದೆ. ಇದೊಂದು ವಾಣಿಜ್ಯ ಹಾಗೂ ಕೈಗಾರಿಕಾ ನಗರ. ಇಲ್ಲಿ ಹೆಂಚನ್ನು ತಯಾರಿಸುವ 45 ಕ್ಕೂ ಹೆಚ್ಚು ಕಾರ್ಖಾನೆಗಳಿವೆ. ಶ್ರೀಲಂಕ, ಮಯನ್ಮಾರ್, ಪೂರ್ವ ಆಫ್ರಿಕ, ಆಸ್ಟ್ರೇಲಿಯಗಳಿಗೆ ಇಲ್ಲಿಂದ ಹೆಂಚು ರಫ್ತಾಗುತ್ತವೆ. ಗೋಡಂಬಿ ಕಾರ್ಖಾನೆಗಳೂ ಇಲ್ಲಿವೆ. ಬೀಡಿ ತಯಾರಿಕೆಗೂ ಮಂಗಳೂರು ಪ್ರಸಿದ್ಧ. ಮೋಟಾರ್ ಬಿಡಿ ಭಾಗಗಳ ತಯಾರಿಕೆ, ಚಿಕ್ಕ ಹಾಗೂ ನಾಡ ದೋಣಿಗಳನ್ನೂ ಕಟ್ಟುವುದು, ಕೈಮಗ್ಗದ ಲುಂಗಿ, ಗುಂಡಿ, ಬೆತ್ತದ ಕುರ್ಚಿ, ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ, ತೆಂಗುನಾರಿನ, ಉತ್ಪನ್ನಗಳು, ಸಾಬೂನು ಮತ್ತು ಕೊಬ್ಬರಿ ಎಣ್ಣೆ ಉದ್ಯಮಗಳು, ಬ್ಯಾಂಕ್ ಉದ್ಯಮಕ್ಕೆ ಮಂಗಳೂರು ಹೆಸರಾದದ್ದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಗೊಂಡ ಕರ್ಣಾಟಕ, ಕೆನರಾ, ವಿಜಯಾ, ಸಿಂಡಿಕೇಟ್ ಮುಂತಾದ ಬ್ಯಾಂಕುಗಳು ನಗರದಲ್ಲಿ ಸಾಕಷ್ಟು ಶಾಖೆಗಳನ್ನು ಹೊಂದಿವೆ. ಮಂಗಳೂರು ಇಂದು ವಿಶೇಷವಾಗಿ ಬೆಳೆಯುತ್ತಿರುವ ನಗರವಾಗಿದ್ದು ನಾಡಿನ ವಿವಿಧಕಡೆಗಳಿಗೂ ಜಿಲ್ಲೆಯ ಅನೇಕ ಸ್ಥಳಗಳಿಗೂ ಉತ್ತಮ ಸಾರಿಗೆ ಸಂಪರ್ಕ ಹೊಂದಿದೆ. ಮುಂಬಯಿ, ಬೆಂಗಳೂರು, ಪಣಜಿಗಳಿಂದ ಇಲ್ಲಿಗೆ ವಿಮಾನ ಸೌಕರ್ಯವಿದೆ. ಮಂಗಳೂರಿನಿಂದ ಮುಂಬಯಿ, ಕೊಚ್ಚಿ ಮೊದಲಾದೆಡೆಗಳಿಗೆ ನೌಕಾ ಸಂಪರ್ಕವಿದೆ. ಈ ತನಕ ಇಲ್ಲಿದ್ದ ಬಂದರು ಮಧ್ಯಮವರ್ಗದ್ದು. ಇಡೀ ಜಿಲ್ಲೆಯಲ್ಲಿ ಬೆಳೆಯುವ ಅಡಕೆ, ತೆಂಗು ಮತ್ತು ಅದರ ಉತ್ಪಾದನೆಗಳು, ಹಾಸನ ಮತ್ತು ಕೊಡಗು ಜಿಲ್ಲೆಗಳಿಂದ ಬರುವ ಕಾಫಿ, ಏಲಕ್ಕಿ, ಮೆಣಸು ಇಲ್ಲಿಂದ ರಫ್ತಾಗುತ್ತಿದ್ದುವು. ಈ ಬಂದರನ್ನು ಮಳೆಗಾಲದಲ್ಲಿ ಉಪಯೋಗಿಸಲು ಆಗುತ್ತಿರಲಿಲ್ಲವಾದ್ದರಿಂದ ಮಂಗಳೂರಿನಿಂದ 9 ಕಿಮೀ ದೂರದಲ್ಲಿ ಗುರುಪುರ ನದಿಯ ಉತ್ತರದಲ್ಲಿ ಪಣಂಬೂರು ಗ್ರಾಮದ ಹತ್ತಿರ ಸರ್ವಋತು ಬಂದರು ನಿರ್ಮಾಣವಾಗಿದೆ. ಇಲ್ಲಿ ಸಾಮಾನ್ಯ ನೌಕಾಸಂಪರ್ಕಗಳಿಗಲ್ಲದೆ, ಕುದುರೆಮುಖದ ಕಬ್ಬಿಣದ ಅದಿರನ್ನು ವಿದೇಶಗಳಿಗೆ ರಫ್ತು ಮಾಡಲೂ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಈ ಹೊಸ ಬಂದರು ಪಟ್ಟಣದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಚೆನ್ನೈನಿಂದ ಕೊಯಮತ್ತೂರು, ಶೋರನೂರುಗಳ ಮುಖಾಂತರ ಈ ಊರಿಗೆ ಬ್ರಾಡ್‌ಗೇಜ್ ರೈಲು ಸಂಪರ್ಕವಿದೆ. ಆ ಮಾರ್ಗದಲ್ಲಿ ಇದೇ ಅಂತಿಮ ನಿಲ್ದಾಣ. ಈಗ ಮಂಗಳೂರು-ಹಾಸನ ರೈಲ್ವೆ ಮಾರ್ಗದ ಸಂಪರ್ಕವಿದೆ. ಪಶ್ಚಿಮ ಕರಾವಳಿಯ ಹೆದ್ದಾರಿ ಈ ಊರಿನ ಮೂಲಕ ಹಾದು

ಹೋಗುವುದಲ್ಲದೆ ಇಲ್ಲಿಂದ ಬೆಂಗಳೂರು, ಮೈಸೂರು, ಶಿವಮೊಗ್ಗ ಮೊದಲಾದೆಡೆಗಳಿಗೂ ಜಿಲ್ಲೆಯ ಅನೇಕ ಸ್ಥಳಗಳಿಗೂ ಉತ್ತಮ ರಸ್ತೆಗಳಿವೆ. ಮಂಗಳೂರು–ಪಾಣೆ ಮಂಗಳೂರು, ಮಂಗಳೂರು–ಗುರುಪುರ ಜಲಮಾರ್ಗ ಸಹ ಉಪಯುಕ್ತವಾಗಿದೆ.

ಮಂಗಳೂರಿನಲ್ಲಿ ಅತ್ಯಂತ ಹಳೆಯ ಕಾಲೇಜುಗಳೆಂದರೆ ಸೇಂಟ್ ಅಲೋಸಿಯಸ್, ಸೇಂಟ್ ಆಗ್ನೆಸ್ ಮತ್ತು ಸರ್ಕಾರಿ ಕಾಲೇಜುಗಳು. ಹೊಸ ಕಾಲೇಜುಗಳೂ ಸಾಕಷ್ಟು ಇವೆ. ಅಲ್ಲದೇ ಒಂದು ಉಪಾಧ್ಯಾಯ ತರಬೇತಿ ಕಾಲೇಜು ಕೈಗಾರಿಕಾ ತರಬೇತಿ ಕೇಂದ್ರ ಮತ್ತು ಸಮಾಜ ಕಾರ್ಯಕರ್ತರ ತರಬೇತಿ ಸಂಸ್ಥೆ ಕೂಡ ಇವೆ. 1986ರಿಂದ ಮಂಗಳೂರು ಬಳಿಯ ಕೋಣಾಜೆಯಲ್ಲಿ ಮಂಗಳ ಗಂಗೋತ್ರಿ ಎಂಬ ಸ್ನಾತ್ತಕೋತ್ತರ ಕೇಂದ್ರವನ್ನು ತೆರೆದಿದ್ದು ಈಗ ಸ್ವತಂತ್ರ ಮಂಗಳೂರು ವಿಶ್ವವಿದ್ಯಾಲಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಕಾರ್ನಾಡ್ ಸದಾಶಿವರಾಯ ಕೇಂದ್ರ ಗ್ರಂಥಾಲಯ, ಸರ್ಕಾರಿ ವಸ್ತುಸಂಗ್ರಹಾಲಯ ಮೊದಲಾದ ಸಂಸ್ಥೆಗಳಿವೆ. ಇಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಕಚೇರಿಗಳೂ ಮುನ್ಸಿಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳೂ ಒಂದು ಪೋಲೀಸ್ ತರಬೇತಿ ಕೇಂದ್ರವೂ ಇದೆ. ಗೃಹರಕ್ಷಕದಳ, ಅಗ್ನಿಶಾಮಕಗಳ ವೈದ್ಯಕೀಯ ಮತ್ತು ಇತರ ನಾಗರಿಕ ಸೌಕರ್ಯಗಳು ವ್ಯವಸ್ಥಿತವಾಗಿವೆ.

ಮಂಗಳೂರಿನ ವಿಹಾರ ಕೇಂದ್ರಗಳಲ್ಲಿ ಕೋರ್ಟ್‍ಹಿಲ್ ಬಹು ಸುಂದರ ಪ್ರದೇಶ. ಈ ಬೆಟ್ಟದ ಮೇಲೆ ನಿಂತು ಇಡೀ ಮಂಗಳೂರು ನಗರವನ್ನೂ ಸಮುದ್ರದ ಹಿನ್ನೀರನ್ನೂ ನೋಡಬಹುದು. ಇದರಂತೆ ಕೇಂದ್ರ ಮೈದಾನ ಮತ್ತು ಪೂರ್ವ ಮೈದಾನ ಪ್ರದೇಶಗಳು ವಿಹಾರಕ್ಕೆ ಮೀಸಲಾಗಿವೆ. ನಗರ ಮಧ್ಯದಲ್ಲಿರುವ ಬಾವುಟ ಗುಡ್ಡದ ಮೇಲೆ ಹಳೆಯ ಲೈಟ್‍ಹೌಸ್ ಇದ್ದು ಅದರ ಸುತ್ತಲೂ ಸುಂದರ ಉದ್ಯಾನವಿದೆ. ಹೊಸ ಲೈಟ್‍ಹೌಸನ್ನು 1900ರಲ್ಲಿ ಕಟ್ಟಲಾಯಿತು. ಇದರ ಗೋಪುರ 14.63 ಮೀ ಎತ್ತರವಿದ್ದು 17 ಕಿಮೀ ವರೆಗೂ ಬೆಳಕು ಬೀರಬಲ್ಲದಾಗಿದೆ.

ಈ ಊರಿಗೆ ಮಂಗಳೂರು ಎಂದು ಹೆಸರು ಇಲ್ಲಿರುವ ಪ್ರಸಿದ್ಧ ಮಂಗಳಾದೇವಿ ದೇವಾಲಯದಿಂದ ಬಂದಿತೆಂದು ಹೇಳಲಾಗಿದೆ. ಈ ಊರಿಗೆ ಕೊಡಿಯಾಲ ಬಯಲು ಎಂದು ಹೆಸರು ಸ್ಥಳೀಯವಾಗಿ ಪ್ರಚಲಿತವಾಗಿದೆ. ಮಂಗಳೂರು ನಗರವು ನದಿಗಳ ಸಂಗಮ ಸ್ಥಳದಲ್ಲಿರುವುದರಿಂದ ತುಳುಭಾಷೆಯಲ್ಲಿ ಈ ನಗರವನ್ನು ಕುಡಾಲ ಎಂದು ಕರೆಯುತ್ತಿದ್ದರು. ಕುಡಾಲವೆಂದರೆ ಕೂಡಲವೆಂದು ಅರ್ಥ. ರೋಮನ್ ಇತಿಹಾಸಕಾರ ಪ್ಲಿನಿ (1ನೆಯ ಶತಮಾನ) ಹೆಸರಿಸುವ ನಿಟ್ರಿಯಾಸ್, ಗ್ರೀಕ್ ಭೂಗೋಳಶಾಸ್ತ್ರಜ್ಞ ಟಾಲಮಿ ಹೆಸರಿಸಿರುವ ನಿತ್ರೆ ಇವು ನೇತ್ರಾವತಿ ನದಿ ದಡದ ಮಂಗಳೂರಿಗೆ ಅನ್ವಯವಾಗುವುದು ಎನ್ನಲಾಗಿದೆ. ರೋಮನ್ ಗ್ರಂಥ ಕರ್ತೃ ಅರಿಯನ್ ಮಂಗಳೂರನ್ನು ಮುಂಡೆಗೋರ ಎಂದು ಕರೆದಿದ್ದಾನೆ. ಪ್ರಾಚೀನ ಕ್ರಿಶ್ಚಿಯನ್ ಭೂಗೋಳದಲ್ಲಿ ಮಂಗಳೂರನ್ನು ಮಂಗರೌತ್ ಎಂದು ಕರೆಯಲಾಗಿದೆ. 7 ನೆಯ ಶತಮಾನದ ಒಂದು ತಾಮ್ರ ಶಾಸನದಲ್ಲಿ ಮಂಗಳೂರನ್ನು ಮಂಗಳಾಪುರ ಎಂದು ಹೆಸರಿಸಲಾಗಿದೆ. ಅರಬ್ಬರು ಈ ಊರನ್ನು ಮಂಜದೂರ್ ಎಂದು ಕರೆಯುತ್ತಿದ್ದರು. *

**ಮಂಗೋಲಿಯ:** ಮಧ್ಯ ಏಷ್ಯದ ಒಂದು ಗಣರಾಜ್ಯ. ಉತ್ತರ ಅಕ್ಷಾಂಶ $42^0$–$52^0$ ಮತ್ತು ಪೂರ್ವರೇಖಾಂಶ $88^0$–$120^0$ ವರೆಗೆ ವ್ಯಾಪಿಸಿರುವ ಪ್ರಸ್ಥಭೂಮಿ, ಮಂಗೋಲರ ಜನ್ಮಭೂಮಿ. ಒಳ ಮಂಗೋಲಿಯ ಚೀನ ದೇಶದಲ್ಲಿ ಸೇರಿಹೋಗಿದೆ. ಇದರ ಉತ್ತರದಲ್ಲಿ ರಷ್ಯದೇಶ ಮತ್ತು ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಚೀನ ದೇಶ ಸುತ್ತುವರಿದಿದೆ. ವಿಸ್ತೀರ್ಣ 1,565,000 ಚ.ಕಿಮೀ. ಜನಸಂಖ್ಯೆ 2646000 (2005). ಉಲಾನ್ ಬತೂರ್ ಇದರ ರಾಜಧಾನಿ. ಜನಸಂಖ್ಯೆ 619000 (2005).

ಮೇಲ್ಮೈ ಲಕ್ಷಣ : ಪ್ರಾಕೃತಿಕವಾಗಿ ಮಂಗೋಲಿಯವನ್ನು ಮೂರು ಭಾಗಗಳಾಗಿ ವಿಭಾಗಿಸಬಹುದು: 1 ಮಧ್ಯ ಅಥವಾ ಗೋಬಿ ಪ್ರದೇಶ, 2 ವಾಯವ್ಯದ ಪರ್ವತಗಳು, 3 ಆಗ್ನೇಯ ಮಂಗೋಲಿಯ.

1 ಮಧ್ಯ ಅಥವಾ ಗೋಬಿ ಪ್ರದೇಶ : ಒಟ್ಟು ಪ್ರಸ್ಥಭೂಮಿಯ ಅತೀವ ತಗ್ಗು ಪ್ರದೇಶ, ನೆಲಮಟ್ಟಸವಾಗಿವೆ. ಇಲ್ಲಿ ಹೆಚ್ಚು ಎತ್ತರವಿಲ್ಲದ ಬೆಟ್ಟಗಳಿವೆ. ಉತ್ತರದ ತುದಿಯಲ್ಲಿ ಮಾತ್ರ ಕೆರೊಲಿನ್ ನದಿ ಹರಿಯುತ್ತದೆ. ಮಂಗೋಲಿಯನ್ ಭಾಷೆಯಲ್ಲಿ ಗೋಬಿ ಎಂದರೆ ಮರಳುಕಾಡು ಎಂದರ್ಥ. ವಾಯವ್ಯದ ಪರ್ವತ ಪ್ರದೇಶದಲ್ಲಿ ಅಲ್ಟಾಯ್, ಖಾಂಗಾಯ್, ಸಯಾನ್ ಪರ್ವತಶ್ರೇಣಿಗಳಿವೆ. ಇಲ್ಲಿಯ ಕಣಿವೆಗಳು ಸಮುದ್ರಮಟ್ಟದಿಂದ 915–1370 ಮೀ ಎತ್ತರದಲ್ಲಿವೆ. ಇಲ್ಲಿ ಅನೇಕ ನದಿಗಳಿವೆ. ಆಗ್ನೇಯ ಮಂಗೋಲಿಯದಲ್ಲಿ ಹೊರ ಹಾಗೂ ಒಳಪರ್ವತ ಶ್ರೇಣಿಗಳಿವೆ. ಈ ಎರಡು ಶ್ರೇಣಿಗಳ ನಡುವೆ ಇರುವ ಭಾಗ ತಗ್ಗಾಗಿದೆ. ಇದು ಚೀನಭಾಗದಲ್ಲಿದ್ದು ಮಧ್ಯೆ ಗೋಬಿ ಪ್ರದೇಶಕ್ಕಿಂತ ವೈವಿಧ್ಯಮಯವಾಗಿದೆ.

ವಾಯುಗುಣ : ಖಂಡಾಂತರ ವಾಯುಗುಣವಿದ್ದು, ಚಳಿಗಾಲ ದೀರ್ಘ ಮತ್ತು ಅತಿ ಶೀತ ಹಾಗೂ ಬೇಸಗೆ ಅಲ್ಪ ಮತ್ತು ಆರ್ದ್ರತೆಯಿಂದ ಕೂಡಿರುತ್ತದೆ. ದೇಶಾದ್ಯಂತ ಒಂದೇ ರೀತಿಯ ವಾಯುಗುಣವಿಲ್ಲ. ಚಳಿಗಾಲದಲ್ಲಿ ಅತಿ ಶೀತ ಹಾಗೂ ಬೇಸಗೆಯಲ್ಲಿ ಅತಿ ಬಿಸಿ ಹವಾಗುಣವಿರುತ್ತದೆ. ಚಳಿಗಾಲ ಮತ್ತು ಬೇಸಗೆ ಕಾಲಗಳ ಉಷ್ಣತೆಯಲ್ಲಿ $11^0$ಸೆ. ವ್ಯತ್ಯಾಸ ಕಂಡುಬರುತ್ತದೆ. ವಾರ್ಷಿಕ ಸರಾಸರಿ ಮಳೆ 20–25 ಸೆಂಮೀ. ಮಳೆ ಮಾರುತ ಬಹಳ ದೂರ ಸಾಗಿ ಬರುವಾಗ ತಮ್ಮಲ್ಲಿಯ ತೇವಾಂಶವನ್ನು ಕಳೆದುಕೊಳ್ಳುವುದೇ ಇದಕ್ಕೆ ಕಾರಣ. ಗೋಬಿ ಪ್ರದೇಶದಲ್ಲಿ ಮಳೆಯ ಸರಾಸರಿ 22–25 ಸೆಂಮೀ. ವರ್ಷಾದ್ಯಂತ ಇಲ್ಲಿ ಮಾರುತ ಬೀಸುತ್ತಲೇ ಇರುತ್ತದೆ. ಒಳಮಂಗೋಲಿಯದಲ್ಲಿ ಚಳಿಗಾಲದಲ್ಲಿ ವಾಯವ್ಯದಿಂದ ಬೀಸುವ ಗಾಳಿ ಅತೀವ ಚಳಿ ಉಂಟುಮಾಡುತ್ತದೆ. ಗೋಬಿಯಲ್ಲಿ ದೂಳು ಮಿಶ್ರಿತ ಬಿರುಗಾಳಿ ಹಾವಳಿಯೂ ಉಂಟು. ಆಗ್ನೇಯದಿಂದ ಬೀಸುವ ಬೇಸಗೆ ಮಾನ್ಸೂನ್‍ನಿಂದ ಮಳೆ ಬೀಳುತ್ತದೆ. ಸರಾಸರಿ 25–37 ಸೆಂಮೀ. ಗೋಬಿ ಮರುಭೂಮಿಯಲ್ಲಿ ಮಳೆ ಅತ್ಯಲ್ಪ.




ಸಸ್ಯವರ್ಗ: ಹವಾಗುಣದ ವ್ಯತ್ಯಾಸದಂತೆಯೇ ಸ್ವಾಭಾವಿಕ ಸಸ್ಯವರ್ಗದಲ್ಲೂ ವ್ಯತ್ಯಾಸ ಕಾಣಬರುತ್ತದೆ. ಸಯಾನ್ ಪರ್ವತದ ಇಕ್ಕೆಡೆಗಳಲ್ಲೂ ಸಿಡಾರ್, ಪೈನ್, ಲಾರ್ಚ್ ಮೊದಲಾದ ಮರಗಳಿರುವ ಒಟ್ಟು 156,700 ಚ.ಕಿಮೀ ಅರಣ್ಯ ಪ್ರದೇಶವಿದೆ. ಕೆರೊಲಿನ್ ನದಿಯ ಸುತ್ತಮುತ್ತ ಪರ್ವತಗಳೂ ಕಣಿವೆಗಳೂ ಇವೆ. ಪರ್ವತ ಹಾಗೂ ಕಣಿವೆಗಳ ಅರಣ್ಯಗಳಲ್ಲಿ ಹುಲ್ಲು ಬೆಳೆಯುತ್ತವೆ. ಗೋಬಿ ಪ್ರದೇಶ ಶುಷ್ಕ. ಒಳ ಮಂಗೋಲಿಯ ಉನ್ನತ ಹುಲ್ಲುಗಾವಲು ಪ್ರದೇಶವಾಗಿದೆ. ಸ್ಟೆಪ್ಪಿ ಹುಲ್ಲುಗಾವಲು ಜಾನುವಾರು ಸಾಕಣಿಗೆ ಯೋಗ್ಯ.

ಬೃಹತ್ ಮರಳು ದಿಣ್ಣೆಗಳು

ಪಶುಪಾಲನೆ ಮತ್ತು ಕೃಷಿ: ಮಂಗೋಲಿಯ ಸಮೃದ್ಧ ಹುಲ್ಲು ಮೈದಾನಗಳ ನಾಡು. ಹೀಗಾಗಿ ಜನರಿಗೆ ಪಶುಪಾಲನೆಯೇ ಮುಖ್ಯ ವೃತ್ತಿ. ದನ, ಕುರಿ, ಆಡು, ಒಂಟೆ ಕುದುರೆಗಳನ್ನು ಸಾಕಿಕೊಂಡು, ಒಂದು ಕಡೆಯಿಂದ ಮತ್ತೊಂದು ಕಡೆಗೆ – ಮೇವಿಗಾಗಿ – ವಲಸೆ ಹೋಗುವ ಅಲೆಮಾರಿಗಳಿರುವರು. ಇಲ್ಲಿ ನೀರಾವರಿ ಸೌಕರ್ಯವಿಲ್ಲ, ಮಳೆಯೂ ಸರಿಯಾಗಿ ಬೀಳುವುದಿಲ್ಲವಾಗಿ ಧಾನ್ಯ ಬೆಳೆಸುವುದು ಕಷ್ಟವಾಗಿದೆ. ಗೋದಿ ಹಾಗೂ ಜವೆಗೋದಿಗಳನ್ನು ಒಳಮಂಗೋಲಿಯದ ಅಂಚು ಪ್ರದೇಶದಲ್ಲಿ ಬೆಳೆಸುತ್ತಾರೆ. ಇತ್ತೀಚಿನ

ಪಂಚವಾರ್ಷಿಕ ಯೋಜನೆಯಂತೆ ಕೃಷಿ, ಪಶುಪಾಲನೆ, ಕೈಗಾರಿಕೆ, ವ್ಯಾಪಾರ ಮುಂತಾದವುಗಳು ಗುರಿಯಂತೆ ಅಭಿವೃದ್ಧಿಯಾಗುತ್ತಿವೆ. ಕೃಷಿ ಉತ್ಪನ್ನದಲ್ಲಿ ಶೇ. 70 ಭಾಗ ಪಶುಪಾಲನೆಯಿಂದಲೇ ಬರುತ್ತಿದೆ.

ಖನಿಜ ಮತ್ತು ಕೈಗಾರಿಕೆ: ಕೈಗಾರಿಕೆಯಲ್ಲೂ ಈ ದೇಶ ಇತ್ತೀಚಿಗೆ ಪ್ರಗತಿ ಸಾಧಿಸುತ್ತಿದೆ. ಜವಳಿ ಉದ್ದಿಮೆ, ಸಿಮೆಂಟ್, ಮದ್ಯ ತಯಾರಿಕೆ ಮತ್ತು ಮಾಂಸ ಹಾಗೂ ಚರ್ಮ ಹದಮಾಡುವುದು ಮಂಗೋಲಿಯದ ಪ್ರಮುಖ ಕೈಗಾರಿಕೆಗಳಾಗಿವೆ. ಕಲ್ಲಿದ್ದಲು, ತಾಮ್ರ, ಫ್ಲೋರೈಟ್, ಮಾಲಿಬ್ಡಿನಂ ಮುಖ್ಯ ಖನಿಜಗಳು. ಜೊತೆಗೆ ಕಬ್ಬಿಣದ ಅದಿರು, ತವರ, ಸತು ಹಾಗೂ ಲಿಗ್ನೈಟ್ ಕೂಡ ದೊರೆಯುತ್ತವೆ. ಉಲಾನ್ ಬಟೂರ್ ಪ್ರಮುಖ ಕೈಗಾರಿಕಾಕೇಂದ್ರ.

ಆಡಳಿತದ ಅನುಕೂಲಕ್ಕಾಗಿ ಮಂಗೋಲಿಯವನ್ನು 18 ಪ್ರಾಂತ್ಯಗಳನ್ನಾಗಿ ಮತ್ತು ಪ್ರಾಂತ್ಯಗಳನ್ನು ಜಿಲ್ಲೆಗಳಾಗಿ ವಿಂಗಡಿಸಿದ್ದಾರೆ. ಸ್ಥಳೀಯ ಆಡಳಿತವನ್ನು ಪ್ರಜಾಪ್ರತಿನಿಧಿಗಳು (ಖುರಲ್ಸ್) ನೋಡಿಕೊಳ್ಳುವರು. ಉಲಾನ್ ಬಟೂರ್ ನಗರ ಈ ದೇಶದ ಮುಖ್ಯ ಆಡಳಿತ ಕೇಂದ್ರ. ಡರ್ ಖಾನ್ ಮತ್ತು ಅರ್ಡೆನೆಟ್ ಮುಖ್ಯನಗರಗಳು. ಟ್ರಾನ್ಸ್ ಮಂಗೋಲಿಯನ್ ರೈಲ್ವೆ 1423 ಕಿಮೀ ಚೀನ ಮತ್ತು ರಷ್ಯದೇಶದೊಡನೆ ಸಂಪರ್ಕಕಲ್ಪಿಸಿದೆ. ವಿಮಾನ ಸಂಪರ್ಕವಿದೆ. ಅಂಚೆ, ತಂತಿ, ದೂರದರ್ಶನ ಕೇಂದ್ರಗಳು ಇತ್ಯಾದಿ ಸಂಪರ್ಕ ಸಾಧನಗಳಿವೆ. ರಾಜ್ಯ ವಿಶ್ವವಿದ್ಯಾನಿಲಯ (1942), ವಿಜ್ಞಾನ ಅಕಾಡೆಮಿ (1953) ವಿವಿಧ ಶಾಲಾ ಕಾಲೇಜುಗಳು, ಆಸ್ಪತ್ರೆಗಳೂ ಇವೆ. (ಎಂ.ಎ.)

**ಮಂಚೂರಿಯ:** ಚೀನದೇಶದ ಈಶಾನ್ಯ ಪ್ರದೇಶ. ಉ. ಅ. $38^0$–$53^0$ ಮತ್ತು ಪೂ.ರೇ. $116^0$–$132^0$ ನಡುವೆಯಿದೆ. ಹೇಲುಂಗ್ ಜಿಯಾಂಗ್, ಕಿರಿನ್ ಮತ್ತು ಲಿಯಾನಿಂಗ್ ಎಂದು ಈ ಪ್ರದೇಶವನ್ನು ಮೂರು ಪ್ರಾಂತ್ಯಗಳಾಗಿ ವಿಂಗಡಿಸಿದೆ. ಇದನ್ನು ಉತ್ತರ ಮತ್ತು ಪೂರ್ವದಲ್ಲಿ ಸೋವಿಯತ್ ಒಕ್ಕೂಟ ಪ್ರದೇಶ, ದಕ್ಷಿಣದಲ್ಲಿ ಉತ್ತರ ಕೊರಿಯ, ಹಳದಿ ಸಮುದ್ರ ಮತ್ತು ಚೀನದ ಪ್ರದೇಶ, ಪಶ್ಚಿಮದಲ್ಲಿ ಮಂಗೋಲಿಯ ಮತ್ತು ಸೋವಿಯತ್ ಪ್ರದೇಶ ಸುತ್ತುವರಿದಿವೆ. ವಿಸ್ತೀರ್ಣ 1,230,000 ಚ.ಕಿಮೀ. ಜನಸಂಖ್ಯೆ 29,000,000 (2004).

ಮೇಲ್ಮೈಲಕ್ಷಣಗಳು: ಮಂಚೂರಿಯವನ್ನು ಅದರ ಮೇಲ್ಮೈ ಲಕ್ಷಣಗಳಿಗನುಸಾರವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. 1. ಪೂರ್ವ ಪರ್ವತ ಪ್ರದೇಶ : ಸಿಖೋಟೆ ಆಲಿನ್ ಪರ್ವತ ಶ್ರೇಣಿ ಈ ಪ್ರದೇಶದ ಪಶ್ಚಿಮಕ್ಕೆ ಇದೆ. ಇದರ ಉದ್ದ ಸು. 1610 ಕಿಮೀ ಎತ್ತರ ಸಮುದ್ರ ಮಟ್ಟದಿಂದ ಸು. 1523 ಮೀ. ಇಲ್ಲಿಯ ಶಿಖರಗಳು ವರ್ಷದ ಬಹುಭಾಗ ಹಿಮದಿಂದಾವರಿಸಿರುತ್ತವೆ. ಇದರ ಪಶ್ಚಿಮಕ್ಕೆ ಆಮೂರ್ ನದಿ ಬಯಲು ಇದೆ. 2. ಮಧ್ಯ ಬಯಲು ಪ್ರದೇಶ: ಏರಿಳಿತಗಳಿಂದ ಕೂಡಿದ ಈ ಪ್ರದೇಶದಲ್ಲಿ ಅಮೂರ್ ನದಿ ಮತ್ತು ಅದರ ಉಪನದಿಯಾದ ಸುಂಗಾರಿ ನದಿ ಹರಿಯುತ್ತವೆ. ಈ ಬಯಲಿನ ಉದ್ದ ಸು. 966 ಕಿಮೀ ಮತ್ತು ಅಗಲ 644 ಕಿಮೀ ಮೆಕ್ಕಲು ಮಣ್ಣಿನಿಂದ ಕೂಡಿದೆ. ಇದು ವ್ಯವಸಾಯಕ್ಕೆ ಬಲು ಉತ್ತಮ. 3. ಪಶ್ಚಿಮ ಪರ್ವತ ಪ್ರದೇಶ: ಇಲ್ಲಿಯ ಖಿಂಗಾನ್‌ಷಾ ಪರ್ವತ ಉತ್ತರ ದಕ್ಷಿಣವಾಗಿ ಹಬ್ಬಿದೆ. ದಕ್ಷಿಣಭಾಗ ಚೀನದ ಗೋಡೆಗೆ ತಾಕಿದೆ. ಪರ್ವತದ ತಪ್ಪಲಿನಲ್ಲಿಯೇ ಆಮೂರ್ ನದಿ ಹುಟ್ಟಿ ಪೂರ್ವದ ಕಡೆಗೆ ಹರಿಯುತ್ತದೆ. ಖಿಂಗಾನ್ ಪರ್ವತ ಮಂಚೂರಿಯ ಮತ್ತು ಮಂಗೋಲಿಯಗಳನ್ನು ಬೇರ್ಪಡಿಸುತ್ತದೆ.

ವಾಯುಗುಣ: ಈ ಪ್ರದೇಶದ ಉಷ್ಣತೆ ಬೇಸಗೆಯಲ್ಲಿ $20^0$ಸೆ. ಮತ್ತು ಚಳಿಗಾಲದಲ್ಲಿ $12.5^0$ಸೆ. ಇದ್ದು ಅತ್ಯಂತ ಶೀತಲವಾಗಿರುತ್ತದೆ. ಜುಲೈ ಮತ್ತು ಆಗಸ್ಟ್ ಅವಧಿಯಲ್ಲಿ ಆಗ್ನೇಯ ಮಾನ್ಸೂನ್ ಮಾರುತಗಳಿಂದ ಈ ದೇಶದ ಪೂರ್ವದ ಪ್ರದೇಶಗಳಲ್ಲಿ 101 ಸೆಂಮೀ ಮತ್ತು ಮಧ್ಯದ ಬಯಲು ಸೀಮೆಗೆ 63 ಸೆಂಮೀ ಮಳೆಯೂ ಬೀಳುತ್ತದೆ. ಆದರೆ ಪಶ್ಚಿಮ ತಪ್ಪಲು ಪ್ರದೇಶಕ್ಕೆ 38 ಸೆಂಮೀ ಮಳೆಯಾಗುತ್ತದೆ. ಪಶ್ಚಿಮದ ತಪ್ಪಲಿಗೆ ಆಗ್ನೇಯ ಮಾರುತಗಳು ಬರುವ ವೇಳೆಗೆ ತಮ್ಮ ಆರ್ದ್ರತೆ ಕಳೆದುಕೊಂಡಿರುತ್ತವೆ. ಚಳಿಗಾಲದಲ್ಲಿ ಶೀತ ಮಾರುತಗಳು ಸೈಬೀರಿಯದ ಮೇಲೆ ಬೀಸಿ ಬರುವುದರಿಂದ ಮಳೆ ಬೀಳುವುದಿಲ್ಲ. ಅದಕ್ಕೆ ಬದಲು ಹಿಮವೃಷ್ಟಿಯಾಗುತ್ತದೆ. ಒಟ್ಟಿನಲ್ಲಿ ಇಲ್ಲಿಯ ಹವಾಮಾನ ವರ್ಷದ ಹೆಚ್ಚು ಕಾಲ ಶೀತವಾಗಿದ್ದು ಪರ್ವತ ಶಿಖರಗಳು ವರ್ಷದ ಬಹುಕಾಲ ಹಿಮಾವೃತವಾಗಿರುತ್ತವೆ.

ಸ್ವಾಭಾವಿಕ ಸಸ್ಯವರ್ಗ : ಪೂರ್ವ ಮತ್ತು ಪಶ್ಚಿಮ ಪರ್ವತ ಪ್ರದೇಶಗಳಲ್ಲಿ ಸೂಚೀಪರ್ಣ ಮಾದರಿಯ ಕಾಡುಗಳಿವೆ. ಇಲ್ಲಿ ಪೈನ್, ಫರ್, ಓಕ್ ಮುಂತಾದ ಬೆಲೆ ಬಾಳುವ ಮರಗಳು ಬೆಳೆಯುತ್ತವೆ. ಇಲ್ಲಿಯ ಮರಗಳನ್ನು ಕಡಿದು ಹಾರ್ಬಿನ್‌ನಲ್ಲಿರುವ (ಪಿಂಕಿಯಾಂಗ್) ಗಿರಣಿಗೆ ಸುಂಗಾರಿ ನದಿಯ ಮೂಲಕ ರವಾನಿಸುತ್ತಾರೆ. ಬಯಲು ಪ್ರದೇಶದ ಕೆಲವೆಡೆ ವಿಶಾಲವಾದ ಹುಲ್ಲುಗಾವಲುಗಳಿವೆ.

ವ್ಯವಸಾಯ : ಇಲ್ಲಿಯ ಜನರ ಮುಖ್ಯ ವೃತ್ತಿ ವ್ಯವಸಾಯ, ಮಧ್ಯಮ ಬಯಲು ಫಲವತ್ತಾದ ಪ್ರದೇಶ. ಇಲ್ಲಿ ಗೋದಿ, ಬಾರ್ಲಿ, ಓಟ್ಸ್, ಮುಸುಕಿನ ಜೋಳ, ಸಕ್ಕರೆ ಗೆಡ್ಡೆ, ಬತ್ತ, ಹೊಗೆಸೊಪ್ಪು, ಶೇಂಗ ಸೆಣಬು ಮತ್ತು ಸೋಯಾಬೀನ್ ಹಾಗೂ ವಿವಿಧ ದ್ವಿದಳ ಧಾನ್ಯಗಳನ್ನು ಬೆಳೆಸುತ್ತಾರೆ. ಯಾಂತ್ರಿಕ ಸಲಕರಣೆಗಳನ್ನು ಬೇಸಾಯಕ್ಕಾಗಿ ಉಪಯೋಗಿಸುತ್ತಾರೆ. ಆದ್ದರಿಂದ ಗೋದಿ, ಸೋಯಾಬೀನಿನ ಇಳುವರಿ ಇಮ್ಮಡಿಯಾಗಿದೆ. ಸೋಯಾಬೀನನ್ನು ಆಹಾರವಾಗಲ್ಲದೆ ಸಾಬೂನು ಮುಂತಾದ ವಸ್ತುಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಎಣ್ಣೆ ತೆಗೆದ ಬಳಿಕ ಉಳಿಯುವ ಹೊಟ್ಟು ಮತ್ತು ಸಿಪ್ಪೆ ದನಕರುಗಳಿಗೆ ಆಹಾರವಾಗಿ ಬಳಕೆ ಆಗುತ್ತದೆ. ಇಲ್ಲಿ ನೆಲಸಿರುವ ಚೀನದ ಕೃಷಿಕರಿಗೆ ಸರ್ಕಾರ ಪ್ರೋತ್ಸಾಹ ಕೊಡುತ್ತಿದೆ. ಈಚೆಗೆ ಅರಣ್ಯ ಪ್ರದೇಶವನ್ನು ನಿರ್ಮೂಲ ಮಾಡಿರುವ ಭೂಮಿಯಿಂದ ವ್ಯವಸಾಯದ ಉತ್ಪಾದನೆ ಇಮ್ಮಡಿಯಾಗಿದೆ. ಒಟ್ಟಿನಲ್ಲಿ ಸು. 10,117,000 ಹೆ. ಭೂಮಿಯಲ್ಲಿ ವ್ಯವಸಾಯ ನಡೆಯುತ್ತದೆ. ಮಂಚೂರಿಯದಿಂದ ಸೋಯಾಬೀನ್ ಎಣ್ಣೆಯನ್ನು ಜಪಾನಿಗೆ ರಫ್ತು ಮಾಡಲಾಗುತ್ತಿದೆ.

ಖನಿಜ ಮತ್ತು ಕೈಗಾರಿಕೆ : ಕಲ್ಲಿದ್ದಲು ಇಲ್ಲಿನ ಪ್ರಮುಖ ಖನಿಜ. ಕಬ್ಬಿಣದ ಅದಿರು, ಸಿಲಿಕ, ಸುಣ್ಣಕಲ್ಲು ನಿಕ್ಷೇಪಗಳೂ ಇವೆ. ಮಾಲಿಬ್ಡಿನಮ್, ಮ್ಯಾಂಗನೀಸ್, ಪೈರೈಟ್, ತಾಮ್ರ, ಸತು ಮತ್ತು ಸೀಸಗಳನ್ನು ತೆಗೆಯುತ್ತಾರೆ. ಇವುಗಳಲ್ಲಿ ಮಾಲಿಬ್ಡಿನಮ್ ಮತ್ತು ಸೀಸ ಮುಖ್ಯ ರಫ್ತುಗಳು.

1932ಕ್ಕೆ ಮೊದಲು ಸಣ್ಣ ಕೈಗಾರಿಕೆಗಳನ್ನು ಮಾತ್ರ ಹೊಂದಿದ್ದ ಮಂಚೂರಿಯ ಇಂದು ಚೀನದ ಬೃಹತ್ ಕೈಗಾರಿಕಾ ಪ್ರದೇಶವಾಗಿದೆ. ಕಲ್ಲಿದ್ದಲು ಗಣಿಗಳು, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ಕಲ್ಲೆಣ್ಣೆಯ ಗಣಿಗಳು, ಯಂತ್ರಾಯುಧಗಳ ತಯಾರಿಕೆ ನೌಕಾಂಗಣ, ಬಟ್ಟೆಗಿರಣಿಗಳೇ ಮೊದಲಾದ ಕೈಗಾರಿಕೆಗಳು ಇಲ್ಲಿವೆ. ರಾಸಾಯನಿಕ ಕೈಗಾರಿಕೆಗಳು ಲೋಹಆಧರಿತ ಕೈಗಾರಿಕೆ, ವಿದ್ಯುಚ್ಛಕ್ತಿ ಸ್ಥಾವರಗಳು, ರಾಸಾಯನಿಕ ಗೊಬ್ಬರ ಕಾರ್ಖಾನೆಗಳು ಆರಂಭವಾಗಿವೆ. ಇಲ್ಲಿ ಪ್ರವರ್ಧಿಸುತ್ತಿದ್ದ ಕೈಗಾರಿಕೆಗಳಿಗೆ ಎರಡನೆಯ ಮಹಾಯುದ್ಧ ಭಾರಿ ಹೊಡೆತ ಕೊಟ್ಟರೂ ಕ್ರಮೇಣ ಹಳೆಯ ಕೈಗಾರಿಕೆಗಳು ಚೇತರಿಸಿಕೊಳ್ಳತೊಡಗಿದವು. ಹೊಸ ಕೈಗಾರಿಕೆಗಳೂ ಪ್ರಾರಂಭವಾದವು. ಇಂದು ಇಲ್ಲಿಯ ಕಾರ್ಖಾನೆಗಳಲ್ಲಿ ವಿವಿಧ ಯಂತ್ರಗಳು, ರೈಲ್ವೆಸಾರಿಗೆ ಉಪಕರಣಗಳು, ಟ್ರಕ್ಕುಗಳು, ಸಿಮೆಂಟ್, ವಿದ್ಯುತ್ ಉಪಕರಣಗಳು, ರಾಸಾಯನಿಕಗಳು, ಕಾಗದ ಮುಂತಾದವು ತಯಾರಾಗುತ್ತಿವೆ.

ಹಾರ್ಬಿನ್, ಚಾಂಗ್ ಚುನ್, ಷೆನ್‌ಯಾಂಗ್ ಮತ್ತು ಮುಕ್‌ಡೆನ್ ಇಲ್ಲಿಯ ದೊಡ್ಡ ನಗರಗಳು. ಜೊಹೋಲದಿಂದ ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲನ್ನು ಜಪಾನಿಗೆ ರಫ್ತುಮಾಡಲಾಗುತ್ತಿದೆ. ಡೈರೆನ್ ಮುಖ್ಯ ನಗರ, ಪೂರ್ವ ಏಷ್ಯದ ಮುಖ್ಯ ಬಂದರು ಹಾಗೂ ರೈಲು ಮತ್ತು ವಿಮಾನಗಳ ಕೇಂದ್ರ. ಪೋರ್ಟ್ ಆರ್ಥರ್ ಮಂಚೂರಿಯದ ಇನ್ನೊಂದು ಮುಖ್ಯ ಬಂದರು ಮತ್ತು ಹಡಗು ಪಡೆಯ ಕೇಂದ್ರಸ್ಥಳ. ಮುಕ್ ಡೆನ್ (ಷೆನ್ ಯಾಂಗ್) ಮಂಚೂರಿಯ ಪ್ರಾಂತ್ಯದ ಆಡಳಿತ ಕೇಂದ್ರ ನಗರ. ಇಲ್ಲಿ ಅನೇಕ ಕಾರ್ಖಾನೆಗಳಿವೆ. ಇದೊಂದು ವ್ಯಾಪಾರಕೇಂದ್ರ ಮಂಚೂರಿಯದಲ್ಲಿ 12,880 ಕಿಮೀ ಗಳಿಗೂ ಹೆಚ್ಚು ರೈಲು ಮಾರ್ಗ ಮತ್ತು ಹೆದ್ದಾರಿಗಳಿದ್ದು ವಿಮಾನ ಸಂಪರ್ಕವಿದೆ. ದೊಡ್ಡನಗರಗಳನ್ನು ಕೂಡಿಸುವ ಹೆದ್ದಾರಿಯಿದೆ. *

**ಮಂಡ್ಯ:** ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿ ಇರುವ ಒಂದು ಜಿಲ್ಲೆ. ಇದೇ ಹೆಸರಿನ ತಾಲ್ಲೂಕು ಮತ್ತು ಆಡಳಿತ ಕೇಂದ್ರ ಪಟ್ಟಣ.




ಜಿಲ್ಲೆ : ಮೈಸೂರು ವಿಭಾಗಕ್ಕೆ ಸೇರಿರುವ ಈ ಜಿಲ್ಲೆ ಉತ್ತರ ಅಕ್ಷಾಂಶ $12^015'$ ರಿಂದ $13^015'$ ವರೆಗೂ ಪೂರ್ವ ರೇಖಾಂಶ $76^015'$ ರಿಂದ $77^020'$ ವರೆಗೂ ಹಬ್ಬಿದೆ. ಇದನ್ನು ದಕ್ಷಿಣ ಮತ್ತು ನೈಋತ್ಯದಲ್ಲಿ ಮೈಸೂರು, ಉತ್ತರದಲ್ಲಿ ತುಮಕೂರು, ಪೂರ್ವದಲ್ಲಿ

ಬೆಂಗಳೂರು, ವಾಯವ್ಯದಲ್ಲಿ ಹಾಸನ ಜಿಲ್ಲೆಗಳು ಸುತ್ತುವರಿದಿವೆ. ಕೃಷ್ಣರಾಜಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ಈ ಜಿಲ್ಲೆಯ ತಾಲ್ಲೂಕುಗಳು. 31 ಹೋಬಳಿಗಳೂ 10 ಪಟ್ಟಣಗಳೂ 1,483 ಗ್ರಾಮಗಳೂ ಇವೆ. ಜಿಲ್ಲೆಯ ವಿಸ್ತೀರ್ಣ 4,958 ಚ.ಕಿಮೀ ಜನಸಂಖ್ಯೆ 17,63,705.

ಮೇಲ್ಮೈಲಕ್ಷಣ: ಜಿಲ್ಲೆಯ ಅಧಿಕಭಾಗ ಮಟ್ಟಸಬಯಲುಗಳಿಂದ ಕೂಡಿದೆ. ಸಣ್ಣ ಬೆಟ್ಟಗಳೂ ಹೆಚ್ಚು ಎತ್ತರವಲ್ಲದ ಶ್ರೇಣಿಗಳೂ ಅಲ್ಲಲ್ಲಿ ಇವೆ. ಈ ಪ್ರದೇಶ ಸಮುದ್ರಮಟ್ಟದಿಂದ ಸು. 762ರಿಂದ 914 ಮೀ ಎತ್ತರದಲ್ಲಿದೆ. ಮಳವಳ್ಳಿ ತಾಲ್ಲೂಕಿನ ಪೂರ್ವದ ಅಂಚಿನಲ್ಲಿ ಬಿಳಿಗಿರಿರಂಗನಬೆಟ್ಟದ ಸಾಲಿನಿಂದ ಮುಂದುವರಿದ ಕೆಲವು ಬೆಟ್ಟಗಳೂ ಜಿಲ್ಲೆಯ ದಕ್ಷಿಣದ ಅಂಚಿನಲ್ಲಿ ಹುಲಿಕೆರೆ ಮತ್ತು ಕರಿಘಟ್ಟ ಬೆಟ್ಟಗಳೂ ಇವೆ. ಕೃಷ್ಣರಾಜಪೇಟೆ, ನಾಗಮಂಗಲ ಇವುಗಳ ಸುತ್ತಲೂ ಕೆಲವು ಬೆಟ್ಟಗಳುಂಟು. ಇವುಗಳಲ್ಲಿ ಮುಖ್ಯವಾದದ್ದು ಆದಿಚುಂಚನಗಿರಿ. ಮಳವಳ್ಳಿ ತಾಲ್ಲೂಕಿನ ಕಬ್ಬಾಳದುರ್ಗ (1069 ಮೀ), ಶ್ರೀರಂಗಪಟ್ಟಣದ ಬಳಿಯ ಕರಿಘಟ್ಟ (974.44ಮೀ) ಮೇಲುಕೋಟೆ (1,246.32ಮೀ) ನಾರಾಯಣ ದುರ್ಗ (1,246.32ಮೀ) ಇವು ಇತರ ಮುಖ್ಯ ಬೆಟ್ಟಗಳು.

ನದಿವ್ಯವಸ್ಥೆ: ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ, ವೀರವೈಷ್ಣವಿ ಇವು ಜಿಲ್ಲೆಯ ನದಿಗಳು. ಕಾವೇರಿ ನದಿ ಈ ಜಿಲ್ಲೆಯನ್ನು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಕೃಷ್ಣರಾಜಸಾಗರದ ಮೇಲುಗಡೆ ಪ್ರವೇಶಿಸಿ, ಮುಂದೆ ರಂಗನತಿಟ್ಟು ಮತ್ತು ಶ್ರೀರಂಗಪಟ್ಟಣ ದ್ವೀಪಗಳನ್ನು ಬಳಸಿ ಮೈಸೂರು ಜಿಲ್ಲೆಯತ್ತ ಸಾಗುತ್ತದೆ. ಪುನಃ ಅದು ಜಿಲ್ಲೆಯ ಆಗ್ನೇಯ ಅಂಚಿನಲ್ಲಿ ಮಳವಳ್ಳಿ ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಗಡಿಯಾಗಿ ಹರಿಯುತ್ತದೆ. ಈ ಭಾಗದಲ್ಲಿ ಶಿವಸಮುದ್ರ ದ್ವೀಪವನ್ನು ಬಳಸಿದ್ದು ಅದರ ಸಮೀಪದಲ್ಲಿ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳಾಗಿ ಧುಮುಕುತ್ತದೆ. ಹೇಮಾವತಿ ಈ ಜಿಲ್ಲೆಯ ಪಶ್ಚಿಮದ ಅಂಚಿನಲ್ಲಿ ಸ್ವಲ್ಪ ದೂರ ಹಾಸನ, ಮಂಡ್ಯ ಜಿಲ್ಲೆಗಳ ಗಡಿಯಾಗಿ ದಕ್ಷಿಣಾಭಿಮುಖವಾಗಿ ಹರಿದು ಜಿಲ್ಲೆಯನ್ನು ಕೃಷ್ಣರಾಜಪೇಟೆ ತಾಲ್ಲೂಕಿನ ಗುಡ್ಡೆ ಹೊಸಹಳ್ಳಿಯ ಬಳಿ ಪ್ರವೇಶಿಸಿ ಮುಂದೆ ಕೃಷ್ಣರಾಜಸಾಗರದ ಉತ್ತರದಲ್ಲಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಲೋಕಪಾವನಿ ನಾಗಮಂಗಲ ತಾಲ್ಲೂಕಿನ ಹೊಣಕೆರೆ ಹೋಬಳಿಯಲ್ಲಿ ಹುಟ್ಟಿ, ಪಾಂಡವಪುರಕ್ಕೆ ಪೂರ್ವದಲ್ಲಿ ದಕ್ಷಿಣಾಭಿಮುಖವಾಗಿ ಹರಿದು ಮೋತಿ ತಲಾಬ್ ಹಳ್ಳವನ್ನು ಕೂಡಿಕೊಂಡು, ಶ್ರೀರಂಗಪಟ್ಟಣ ತಾಲ್ಲೂಕಿನ ಕರಿಘಟ್ಟದ ತಪ್ಪಲ ಬಳಿ ಕಾವೇರಿ ನದಿಯನ್ನು ಸೇರುತ್ತದೆ. ಶಿಂಷಾನದಿ ಜಿಲ್ಲೆಯ ಉತ್ತರ ಅಂಚಿನಲ್ಲಿ ಸ್ವಲ್ಪ ದೂರ ತುಮಕೂರು ಮಂಡ್ಯ ಜಿಲ್ಲೆಗಳ ಗಡಿಯಾಗಿ ಆಗ್ನೇಯಾಭಿಮುಖವಾಗಿ ಹರಿದು ಮದ್ದೂರು ತಾಲ್ಲೂಕಿನ ವಾಯವ್ಯದಲ್ಲಿ ಕಿರಂಗೂರು ಬಳಿ ಈ ಜಿಲ್ಲೆಯನ್ನು ಪ್ರವೇಶಿಸುವುದು. ಮುಂದೆ ದಕ್ಷಿಣಾಭಿಮುಖವಾಗಿ ಮದ್ದೂರು ತಾಲ್ಲೂಕಿನಲ್ಲಿ ಹರಿದು, ಅಲ್ಲಿಂದ ಪೂರ್ವಕ್ಕೆ ತಿರುಗಿ ಮಳವಳ್ಳಿ ತಾಲ್ಲೂಕಿನಲ್ಲಿ ಸಾಗಿ ಶಿವಸಮುದ್ರ ಜಲಪಾತಗಳಿಗೆ ಸ್ವಲ್ಪ ಮುಂದೆ ಕಾವೇರಿಯೊಡನೆ ಸಂಗಮವಾಗುವುದು. ಜಿಲ್ಲೆಯ ಉತ್ತರದಲ್ಲಿ ವೀರವೈಷ್ಣವಿನದಿ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯಲ್ಲಿ ಜಿಲ್ಲೆಯನ್ನು ಪ್ರವೇಶಿಸಿ, ಪೂರ್ವಾಭಿಮುಖವಾಗಿ ಹರಿದು, ಮುಂದೆ ಶಿಂಷಾ ನದಿಯನ್ನು ಸೇರುವುದು. ಇವಲ್ಲದೆ ಬಿಂಡೇನಹಳ್ಳಿ ತೊರೆ, ಹಂದಿಹಳ್ಳ, ಹೆಬ್ಬಳ್ಳ ಮತ್ತು ಭೀಮಾ ಮೊದಲಾದ ತೊರೆಗಳೂ ಈ ಜಿಲ್ಲೆಯಲ್ಲಿ ಹರಿಯುತ್ತವೆ.

ಭೂರಚನೆ: ಜಿಲ್ಲೆಯ ಅಧಿಕಭಾಗ ನೈಸ್ ಶಿಲಾಪ್ರದೇಶ. ಸಾಮಾನ್ಯವಾಗಿ ಈ ಶಿಲೆ ಬೂದುಬಣ್ಣದ್ದಾಗಿದ್ದು ಪದರಯುತವಾಗಿರುತ್ತದೆ. ಚಿನಕುರುಳಿ ಬಳಿ ಇಂಥ ಶಿಲೆಯ ಸ್ವರೂಪ ಸ್ಪಷ್ಟವಾಗಿ ಕಾಣುತ್ತದೆ. ಕೃಷ್ಣರಾಜಪೇಟೆ, ಮೇಲುಕೋಟೆ, ಸಿಂದಘಟ್ಟ ಮುಂತಾದೆಡೆಗಳಲ್ಲಿ ಸ್ವಲ್ಪ ಭಿನ್ನರೀತಿಯ ನೈಸ್ ಶಿಲೆಗಳಿವೆ. ಧಾರವಾಡ ಶಿಲಾವರ್ಗದ ಶಿಸ್ಟ್ ಕಲ್ಲುಗಳು ಹೆಚ್ಚು ಅಗಲವಿಲ್ಲದ ಪಟ್ಟೆಗಳು ಉದ್ದುದ್ದವಾಗಿ ಜಿಲ್ಲೆಯ ಹಲವೆಡೆ ಸಾಗಿವೆ. ಪಾರ್ಫಿರಿ ಜಾತಿಯ ಉತ್ತಮ ಕಲ್ಲುಗಳ ಹರವುಗಳು ಜಿಲ್ಲೆಯ ತಳಗವಾಡಿ, ಸಿದ್ಧಲಿಂಗಪುರ, ಕನಗಟ್ಟ, ನಾರಣಕೆರೆ, ತುರಗನೂರು ಮೊದಲಾದೆಡೆಗಳಲ್ಲಿ ಇವೆ.

ಉಪಯುಕ್ತ ಖನಿಜಗಳು ಹೆಚ್ಚಿಲ್ಲ. ಹದನೂರು ಮತ್ತು ಬೆಳ್ಳಿ ಬೆಟ್ಟ ಶ್ರೇಣಿಗಳಲ್ಲಿ ಕಲ್ನಾರು, ಕೃಷ್ಣರಾಜಸಾಗರಕ್ಕೆ ಉತ್ತರದಲ್ಲಿ ನೀಲ-ಹಸುರಿನ ಬೆರಿಲ್ ಶಿಲೆಗಳೂ ಶೀಲನೆರೆ ಸರಹದ್ದಿನಲ್ಲಿ ಸಾಮಾನ್ಯ ದರ್ಜೆಯ ಕ್ರೋಮೈಟ್ ಖನಿಜ, ಮದ್ದೂರು, ಮಳವಳ್ಳಿ ಹಾಗೂ ಹಲಗೂರು ಬಳಿ ಕಬ್ಬಿಣದ ಅದಿರು, ಮೇಲುಕೋಟೆ ಬಳಿ ಬಿಳಿ ಜೇಡಿ, ಹೆಬ್ಬಳ್ಳದ ದಂಡೆಗಳಲ್ಲಿ ಸುಣ್ಣ ಕಂಕರು, ವೇದ ಸಮುದ್ರದ ಬಳಿ ಕಾಗೆಬಂಗಾರ ಸ್ವಲ್ಪಮಟ್ಟಿಗೆ ದೊರೆಯುವುವು.

ವಾಯುಗುಣ: ಮಾರ್ಚ್‌ನಿಂದ ಮೇ ತಿಂಗಳ ತನಕ ಬೇಸಗೆ. ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಮುಂಗಾರು ಮಳೆಗಾಲ. ನವೆಂಬರ್-ಜನವರಿ ಚಳಿಗಾಲ. ಜಿಲ್ಲೆಯ ಉಷ್ಣತೆಯಲ್ಲಿ ಅತ್ಯಧಿಕ ವ್ಯತ್ಯಾಸಗಳಿಲ್ಲದೆ ವರ್ಷಪೂರ್ತ ಹವಾಮಾನ ಹಿತಕರವಾಗಿರುವುದು. ಸರಾಸರಿ ವಾರ್ಷಿಕ ಮಳೆ ದಿನಗಳು 45. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 70 ಸೆಂಮೀ.

ಸಸ್ಯ ಮತ್ತು ಪ್ರಾಣಿವರ್ಗ: ದಕ್ಷಿಣ ಭಾಗದಲ್ಲಿ ಕಾವೇರಿ ನದಿ ಹರಿವಿನುದ್ದಕ್ಕೂ ಗಿಡ್ಡ ಮರಗಳ ಕಾಡು ಹಾಗೂ ಪೊದೆಗಳಿವೆ. ಜಿಲ್ಲೆಯಲ್ಲಿ ಒಟ್ಟು 24,765 ಹೆ. ಅರಣ್ಯ ಪ್ರದೇಶವಿದ್ದು ಅದರಲ್ಲಿ ಜಾಲರಿ, ಅಳಲೆ, ದಿಂಡಿಗೆ, ಹೊಂಗೆ, ದೇವದಾರು, ಚುಜ್ಜಲು, ಚುನ್ನಂಗಿ, ಬಿಲ್ಪತ್ರಿ, ಹುಣಿಸೆ ಮೊದಲಾದ ಮರಗಳು ಬೆಳೆಯುತ್ತವೆ. ಕಾವೇರಿ ನದಿಯ ಅಂಚಿನ ಬೆಟ್ಟ ಮತ್ತು ಕಾಡುಗಳಲ್ಲಿ ಚಿರತೆ, ನರಿ, ಕಾಡುನಾಯಿ, ಕಾಡುಹಂದಿ, ನವಿಲು, ಜಿಂಕೆ, ಮೊಲ, ಮುಳ್ಳುಹಂದಿ, ನಾಗರಹಾವು ಮತ್ತು ಹೆಬ್ಬಾವುಗಳೂ ಮೈನ, ಕವುಜುಗ, ಕಾಡುಪಾರಿವಾಳ, ಕಾಡುಕೋಳಿ, ಗಿಳಿ, ಕೋಗಿಲೆ ಹಾಗೂ ನೀರುಹಕ್ಕಿಗಳೂ ಕಂಡುಬರುವುವು. ನೀರಾವರಿ ಸೌಲಭ್ಯ ಮತ್ತು ಕೃಷಿಗಾಗಿ ಬಳಕೆಯಿಂದಾಗಿ ಅರಣ್ಯಕ್ಷೇತ್ರ ಕಡಿಮೆ.

ನೀರಾವರಿ: ಕೃಷ್ಣರಾಜಸಾಗರದ ವಿಶ್ವೇಶ್ವರಯ್ಯ ನಾಲೆ ಜಿಲ್ಲೆ ಜೀವನಾಡಿ. ಈ ನಾಲೆ ತನ್ನ ಅನೇಕ ಶಾಖೆಗಳೊಡನೆ ಮಂಡ್ಯ ಜಿಲ್ಲೆಯ ವಿಸ್ತಾರ ಪ್ರದೇಶಕ್ಕೆ ನೀರೊದಗಿಸುತ್ತದೆ. ಇದಲ್ಲದೆ ಸೀತಾಪುರದ ಬಳಿ ಮಾಡದಕಟ್ಟೆಯಿಂದ ಹೊರಡುವ ದೇವರಾಯನಾಲೆ, ಇದರ ಸಮೀಪದಲ್ಲಿ ಇರುವ ದೇವರಾಯಕಟ್ಟೆಯಿಂದ ಹೊರಡುವ ನಾಲೆ, ಮಂಡ್ಯ ತಾಲ್ಲೂಕಿನ ಹುಲಿಕೆರೆ ಬಳಿಯ ಸುರಂಗ ನಾಲೆ, ಬೆಳಗೊಳದ ಸಮೀಪದಲ್ಲಿರುವ ವಿರಜಾನದಿ ನಾಲೆ, ಪಶ್ಚಿಮವಾಹಿನಿಯ ಹತ್ತಿರ ಇರುವ ಬಂಗಾರದೊಡ್ಡಿ ನಾಲೆ ಇವು ಇತರ ಮುಖ್ಯ ನಾಲೆಗಳು. ಇವಲ್ಲದೆ ಕೆಮ್ಮಣ್ಣುನಾಲೆ, ವೈದ್ಯನಾಥಪುರ ನಾಲೆ, ಬೈರನನಾಲೆ, ಚಾಮನಹಳ್ಳಿ, ಮಂದಗೆರೆ, ಹೇಮಗಿರಿ, ಅಕ್ಕಿಹೆಬ್ಬಾಳು ಹೆಸರಿಸಬಹುದಾದ ಇತರ ನಾಲೆಗಳು. ಕೃಷ್ಣರಾಜಸಾಗರ ನಿರ್ಮಿಸುವುದಕ್ಕಿಂತ ಮೊದಲಿನಿಂದಲೂ ಜಿಲ್ಲೆಯಲ್ಲಿ ಕಾವೇರಿ ಮತ್ತು ಅದರ ಉಪನದಿಗಳ ನೀರನ್ನು ಚಿಕ್ಕ ಅಣೆಕಟ್ಟುಗಳ ಮೂಲಕ ಕೃಷಿಗೆ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಇವುಗಳಲ್ಲಿ ಹೇಮಾವತಿ ನದಿಗೆ ಮಂದಗೆರೆ ಬಳಿ ಕಟ್ಟಿರುವ ಮಂದಗೆರೆ ಅಣೆಕಟ್ಟು, ಶಿಂಷಾನದಿಗೆ ಕಟ್ಟಿರುವ ತಗ್ಗಳ್ಳಿ ಅಣೆಕಟ್ಟು ಹಳೆಯವು. ತಗ್ಗಳ್ಳಿಯ ಹತ್ತಿರ ಬಂಡಿಹೊಳೆ ಬಳಿ ಕಟ್ಟಿರುವ ಹೇಮಗಿರಿ ಅಣೆಕಟ್ಟು ಮತ್ತು ಲೋಕಪಾವನಿ ನದಿಗೆ ಕಟ್ಟಿರುವ ಬೋಳೇನಹಳ್ಳಿ ಅಣೆಕಟ್ಟು, ಉಯ್ಯನಹಳ್ಳಿ ಬಳಿ ಲೋಕಪಾವನಿಗೆ ಕಟ್ಟಿರುವ ಉಯ್ಯನ ಹಳ್ಳಿ ಅಣೆಕಟ್ಟು, ದುಮ್ಮಸಂದ್ರದ ಬಳಿ ವೀರವೈಷ್ಣವಿನದಿಗೆ ಕಟ್ಟಿರುವ ದುಮ್ಮಸಂದ್ರ ಅಣೆಕಟ್ಟು, ಭೀಮಾತೊರೆಗೆ ದಳವಾಯಿ ಕೋಡಿಹಳ್ಳಿ ಬಳಿ ಕಟ್ಟಿರುವ ಅಣೆಕಟ್ಟು ಇವು ಈಚಿನ ನಿರ್ಮಾಣಗಳು. ಮೋತಿತಲಾಬ್. ಹೆರಗೋನಹಳ್ಳಿ ಕೆರೆ, ಸಿಂದಘಟ್ಟದ ಕೆರೆ ಇವು ಹೆಸರಿಸಹುದಾದ ಕೆರೆಗಳು. ಜಿಲ್ಲೆಯಲ್ಲಿ ನಾಲೆಗಳಿಂದ 86,349 ಹೆ. ಕೆರೆಗಳಿಂದ 8158 ಹೆ. ಬಾವಿಗಳಿಂದ 10,290 ಹೆ. ಕೊಳವೆಬಾವಿಗಳಿಂದ 2275 ಹೆ. ಏತನೀರಾವರಿ 575 ಹೆ. ಜಇತರ ಮೂಲಗಳಿಂದ 375 ಹೆ.ಗಳು ನೀರಾವರಿಗೆ ಒಳಪಟ್ಟಿದೆ (2000-2001)

ಕೃಷಿ: ಜಿಲ್ಲೆಯ ವ್ಯವಸಾಯಯೋಗ್ಯ ಭೂಮಿ ಜೇಡಿಮಣ್ಣು ಮತ್ತು ಮರಳುಮಿಶ್ರಿತ ಕೆಂಪು ಜೇಡಿಮಣ್ಣಿನಿಂದ ಕೂಡಿದೆ. ಜಿಲ್ಲೆಯ ಮುಖ್ಯ ಬೆಳೆಗಳು ಬತ್ತ ಮತ್ತು ಕಬ್ಬು. ಹಿಪ್ಪನೇರಳೆ, ರಾಗಿ, ದ್ವಿದಳಧಾನ್ಯಗಳು, ಜೋಳ, ತೆಂಗು ಕಡಲೆಕಾಯಿ ಇವನ್ನೂ ಬೆಳೆಸುತ್ತಾರೆ. ಜಿಲ್ಲೆಯ ಪೂರ್ವ ಮತ್ತು ದಕ್ಷಿಣದ ಭಾಗದಲ್ಲಿ ನೀರಾವರಿ ಬೇಸಾಯ ವಿಶೇಷ. ಪಶ್ಚಿಮ ಮತ್ತು ಉತ್ತರದ ತಾಲ್ಲೂಕುಗಳಲ್ಲಿ ಬಹಳಷ್ಟು ಮಟ್ಟಿಗೆ ಒಣ ಬೇಸಾಯ. 2002-03ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಬಿತ್ತನೆಯಾದ ನಿವ್ವಳ ಕ್ಷೇತ್ರ 1,81,405 ಹೆ.ಗಳು. ನೀರಾವರಿ ಕ್ಷೇತ್ರ 86,691 ಹೆ.ಗಳು. 1998-99ರಲ್ಲಿ 43.5 ಲಕ್ಷಟನ್ ಆಹಾರಧಾನ್ಯಗಳು ಉತ್ಪಾದನೆಯಾಗಿತ್ತು. ದನಕರು, ಎಮ್ಮೆ, ಕುರಿ, ಮೇಕೆ ಮತ್ತು ಕೋಳಿಗಳ ಸಾಕಣೆಯು ಕೃಷಿ ವಲಯದಲ್ಲಿ ರೂಢಿಯಲ್ಲಿದೆ.

ಕೈಗಾರಿಕೆ: ಮೊದಲಿನಿಂದಲೂ ಹತ್ತಿಬಟ್ಟೆ, ಕಂಬಳಿ, ಹಿತ್ತಾಳೆ ಪಾತ್ರೆಗಳು, ಬೆಲ್ಲ ಇವುಗಳಿಗೆ ಈ ಜಿಲ್ಲೆ ಹೆಸರಾದದ್ದು. ಪಾಲಹಳ್ಳಿಯಲ್ಲಿ 1847ರಲ್ಲಿ ಅಷ್ಟಗ್ರಾಮ ಷುಗರ್ ವರ್ಕ್ಸ್ ಸ್ಥಾಪಿತವಾಗಿತ್ತು. ಇಲ್ಲಿಯ ಹರಳು ಸಕ್ಕರೆ ಉತ್ತಮ ಗುಣಮಟ್ಟದ್ದೆಂದು 1851 ಮತ್ತು 1861ರ ಲಂಡನ್ ವಸ್ತು ಪ್ರದರ್ಶನದಲ್ಲಿ ಬಹುಮಾನ ಮತ್ತು ಪದಕಗಳನ್ನು ಗಳಿಸಿತ್ತು. ಈ ಕಾರ್ಖಾನೆ 1894ರಲ್ಲಿ ನಿಂತುಹೋಯಿತು. ಈ ಉದ್ಯಮದ ಉಪಾಂಗವಾಗಿ ಮದ್ಯಸಾರ ತಯಾರಿಸಲಾಗುತ್ತಿತ್ತು. ನಾಗಮಂಗಲದ ಹಿತ್ತಾಳೆಯ ವಿಗ್ರಹ, ಪಾತ್ರೆ, ದೀಪಸ್ತಂಭ ಮುಂತಾದವು ಬಲು ಪ್ರಸಿದ್ಧ. ಹಿಂದಿನಿಂದಲೂ ಗಂಜಾಮ್, ಸಿಂದಘಟ್ಟ ರೇಷ್ಮೆ ನೇಯ್ಗೆ ಬಟ್ಟೆಗಳಿಗೆ ಹೆಸರಾದವು.

ಮಂಡ್ಯಜಿಲ್ಲೆಯ ಬೃಹತ್ ಕೈಗಾರಿಕೆ ಮೈಸೂರು ಶುಗರ್ ಕಂಪನಿಯ ಪ್ರಾರಂಭದೊಡನೆ ಆಯಿತೆನ್ನಬಹುದು (1933). ಇದು ಕರ್ನಾಟಕದ ಹಳೆಯ ಮತ್ತು ದೊಡ್ಡ ಸಕ್ಕರೆ ಕಾರ್ಖಾನೆಗಳಲ್ಲೊಂದು. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ 1959 ಸೆಪ್ಟಂಬರ್ 14ರಿಂದ ಕೆಲಸ ಆರಂಭಿಸಿತು. ಮದ್ದೂರು ತಾಲ್ಲೂಕಿನ ಭಾರತೀನಗರದಲ್ಲಿ (ಕಾಳಮುದ್ದನದೊಡ್ಡಿ) ಚಾಮುಂಡೇಶ್ವರಿ ಶುಗರ್ ಮಿಲ್ಸ್ ಸ್ಥಾಪನೆಗೊಂಡಿದೆ (1974). ಈ ನಾಲ್ಕು ಸಕ್ಕರೆ ಕಾರ್ಖಾನೆಗಳಿಗೂ ಜಿಲ್ಲೆಯಲ್ಲಿ ಬೆಳೆಯುವ ಕಬ್ಬು ಸರಬರಾಜಾಗುವುದು. ಇವುಗಳಲ್ಲಿ ನಾನಾಬಗೆಯ ಬ್ರಾಂದಿ, ಬೀರ್, ವಿಸ್ಕಿ, ರಮ್, ಜಿನ್ ಮುಂತಾದ ಮಾದಕ ಪಾನೀಯಗಳೂ ತಯಾರಾಗುತ್ತಿವೆ. ಮಂಡ್ಯ ಮತ್ತು ನಗುವನಹಳ್ಳಿಯಲ್ಲಿ ಖಂಡಸಾರಿ

ಉತ್ಪಾದನೆಯುಂಟು. ಕಬ್ಬಿನ ಸಿಪ್ಪೆಯ ಉಪಯೋಗದಿಂದ ಕಾಗದವನ್ನು ಈ ಜಿಲ್ಲೆಯ ಬೆಳಗೊಳದಲ್ಲಿರುವ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ತಯಾರಿಸುತ್ತಿತ್ತು. ಈ ಕಾರ್ಖಾನೆ 1962ರಲ್ಲಿಯೂ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆ 1940ರಲ್ಲಿಯೂ ಕಾರ್ಯಾರಂಭ ಮಾಡಿದುವು. ಕಾಪರ್ ಸಲ್ಫೇಟನ್ನು ಭಾರತದಲ್ಲೇ ಮೊದಲು ತಯಾರಿಸಿದ ಕೀರ್ತಿ ಈ ಕಾರ್ಖಾನೆಯದು. ಇಲ್ಲಿ ರಾಸಾಯನಿಕ ಗೊಬ್ಬರ ತಯಾರಿಕೆಯೂ ಉಂಟು. ಅಲೈಡ್ ರೆಸಿನ್ಸ್ ಅಂಡ್ ಕೆಮಿಕಲ್ಸ್ ಎಂಬ ಕಾರ್ಖಾನೆ ಬೆಳಗೊಳದಲ್ಲಿ ಪ್ರಾರಂಭವಾಯಿತು (1965). ಛಾಯಾಚಿತ್ರ ಉದ್ಯಮಕ್ಕೆ ಬೇಕಾದ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ಮಂಡ್ಯದಲ್ಲಿದೆ. 1966 ಜುಲೈನಿಂದ ಮಂಡ್ಯದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಕಾರ್ಯೋನ್ಮುಖವಾಗಿದೆ. ಮದ್ದೂರಿನಲ್ಲಿ ಬಿ.ಪಿ.ಎಲ್. ಘಟಕವಿದೆ.

ಬತ್ತ ಹೆಚ್ಚು ಬೆಳೆಯುವ ಈ ಜಿಲ್ಲೆಯಲ್ಲಿ ಅಕ್ಕಿಗಿರಣಿಗಳೂ ಹೆಚ್ಚಾಗಿವೆ. ಮಂಡ್ಯ, ಮದ್ದೂರು, ಮಳವಳ್ಳಿ ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ರೇಷ್ಮೆ ಉತ್ಪಾದನೆ ಉಂಟು. ಮಳವಳ್ಳಿ ಮತ್ತು ಮದ್ದೂರುಗಳಲ್ಲಿ ರೇಷ್ಮೆ ಕೋಠಿಗಳಿವೆ. ಸರ್ಕಾರಿ ಹಿಪ್ಪುನೇರಿಳೆ ಸಸಿಪೋಷಣೆ ಮತ್ತು ತರಬೇತಿಕೇಂದ್ರ ಮದ್ದೂರಿನಲ್ಲಿದೆ. ಈ ಜಿಲ್ಲೆ ಕೈಮಗ್ಗದ ಬಟ್ಟೆಗೂ ಪ್ರಸಿದ್ಧ. ಮೇಲುಕೋಟೆ, ತಳಗವಾಡಿ, ಕೊಡೆಯಾಲ, ಹೊಸಹೊಳಲು, ಕಿಕ್ಕೇರಿ ಇವುಗಳಲ್ಲಿ ತಯಾರಾಗುವ ಕೈಮಗ್ಗದ ಹತ್ತಿ ಮತ್ತು ರೇಷ್ಮೆ ಉತ್ಪನ್ನಗಳು ಉತ್ತಮವಾದವೆಂದು ಪರಿಗಣಿತವಾಗಿವೆ. ನಿಡಘಟ್ಟದ ಬಳಿ ತೆಂಗಿನನಾರಿನ ಕೈಗಾರಿಕಾ ಕೇಂದ್ರವಿದೆ. ಮಂಡ್ಯ ಮತ್ತು ಶ್ರೀರಂಗಪಟ್ಟಣಗಳಲ್ಲಿ ಜೇನುಸಾಕಣೆ ಕೇಂದ್ರಗಳಿವೆ. ಪಾದರಕ್ಷೆ, ಮಣ್ಣಿನ ವಸ್ತುಗಳು, ಹಿತ್ತಾಳೆಪಾತ್ರೆ, ವಿಗ್ರಹ ಮುಂತಾದವುಗಳ ತಯಾರಿಕೆ, ಚಾಪೆ, ನೇಯ್ಗೆ, ಮರಗೆಲಸ, ಕಬ್ಬಿಣಕೆಲಸ ಮುಂತಾದವು ಈ ಜಿಲ್ಲೆಯ ಮುಖ್ಯ ಗೃಹಕೈಗಾರಿಕೆಗಳು.

ಜಿಲ್ಲೆಯ ಕೈಗಾರಿಕೆಗಳಿಗೆ ಮತ್ತು ಇತರ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ವಿದ್ಯುತ್ ಸರಬರಾಜಿದೆ. ಇಡೀ ಭಾರತ ಮತ್ತು ಏಷ್ಯದಲ್ಲೇ ಪ್ರಪ್ರಥಮವಾಗಿ (1902) ಜಲವಿದ್ಯುತ್ ಉತ್ಪಾದಿಸಿದ್ದು ಈ ಜಿಲ್ಲೆಗೇ ಸೇರಿರುವ ಶಿವಸಮುದ್ರದಲ್ಲಿ. ಪ್ರಾರಂಭದಲ್ಲಿ 4,500 ಕಿವಾ ವಿದ್ಯುತ್ ಉತ್ಪಾದನೆ ಇದ್ದದ್ದು 1939ರಲ್ಲಿ 42,000 ಕಿವಾಗೆ ಏರಿತು. ಶಿಂಷಾ ವಿದ್ಯುದಾಗಾರ 17,200 ಕಿವಾ ವಿದ್ಯುತ್ ಉತ್ಪಾದನೆಯೊಂದಿಗೆ ಪ್ರಾರಂಭವಾಯಿತು. (1940)

ಜಿಲ್ಲೆಯ ಕೃಷಿ ಮತ್ತು ಕೈಗಾರಿಕೋದ್ಯಮಿಗಳಿಗೆ ಆರ್ಥಿಕ ನೆರವು ನೀಡಲು ವಾಣಿಜ್ಯ ಬ್ಯಾಂಕುಗಳು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, ಕೇಂದ್ರ ಸಹಕಾರ ಬ್ಯಾಂಕಿನ ಶಾಖೆಗಳು ಇವೆ. ಒಂದು ಕೈಗಾರಿಕಾ ಸಹಕಾರ ಬ್ಯಾಂಕೂ ಇದೆ. ಇವಲ್ಲದೆ ಜಿಲ್ಲೆಯಲ್ಲಿ ಕೃಷಿ ಸಾಲ ಸಹಕಾರ ಸಂಘಗಳೂ ಕೃಷಿಯೇತರ ಸಾಲ ಸಂಘಗಳೂ ಇವೆ. ಜೊತೆಗೆ ಸಣ್ಣ ಪ್ರಮಾಣದ ಕೈಗಾರಿಕಾಯೋಜನೆಗಳಿಗೆ ಮತ್ತು ಕೈಗಾರಿಕಾ ಘಟಕಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಕಾರ್ಪೊರೇಷನ್ ಹಣಕಾಸಿನ ನೆರವು ನೀಡಿದೆ. ಮಂಡ್ಯ ಮತ್ತು ನಾಗಮಂಗಲಗಳಲ್ಲಿ ಸರ್ಕಾರ ಕೈಗಾರಿಕಾ ನಿವೇಶನಗಳನ್ನು ನಿರ್ಮಿಸಿದೆ.

ಸಾರಿಗೆ: ಜಿಲ್ಲೆಗಳಲ್ಲಿ ಉತ್ತಮ ಮಾರ್ಗ ಸಂಪರ್ಕಗಳುಂಟು. ಮೈಸೂರು–ಬೆಂಗಳೂರು ರೈಲುಮಾರ್ಗ ಜಿಲ್ಲೆಯ ಮೂಲಕ ಹಾದು ಹೋಗಿದೆ. ಶ್ರೀರಂಗಪಟ್ಟಣ, ಪಾಂಡವಪುರ ಮಂಡ್ಯ ಮತ್ತು ಮದ್ದೂರು ಮುಖ್ಯ ನಿಲ್ದಾಣಗಳು. ಮೈಸೂರು–ಬೆಂಗಳೂರು ರಾಜ್ಯ ಹೆದ್ದಾರಿ ಸಹ ಈ ಜಿಲ್ಲೆಯ ಮೂಲಕ ಹೋಗುತ್ತದೆ. ಅಲ್ಲದೆ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಿಗೂ ಎಲ್ಲ ಗ್ರಾಮಗಳಿಗೂ ರಸ್ತೆ ಸಂಪರ್ಕವಿದೆ. 2004ರ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿದ್ದ ರಸ್ತೆಗಳ ಒಟ್ಟು ಉದ್ದ 9562 ಕಿಮೀ ಇದರಲ್ಲಿ 73 ಕಿಮೀ ರಾಷ್ಟ್ರೀಯ ಮತ್ತು 244 ಕಿಮೀ ರಾಜ್ಯ ಹೆದ್ದಾರಿ ರಸ್ತೆಗಳಿವೆ. 140 ಕಿಮೀ ಉದ್ದದ ರೈಲು ಮಾರ್ಗವಿದೆ. ಜಿಲ್ಲೆಯಲ್ಲಿ 365 ಅಂಚೆ ಕಛೇರಿಗಳು, 65 ದೂರವಾಣಿ ವಿನಿಮಯ ಕೇಂದ್ರಗಳಿವೆ.

ಶಿಕ್ಷಣ: ಶಿಕ್ಷಣ ಕ್ಷೇತ್ರದಲ್ಲೂ ಈ ಜಿಲ್ಲೆ ತ್ವರಿತವಾಗಿ ಮುನ್ನಡೆದಿದೆ. ಇಲ್ಲಿ ಸರ್ಕಾರವಲ್ಲದೆ ಖಾಸಗೀ ಸಂಸ್ಥೆಗಳೂ ಹಲವಾರು ವಿದ್ಯಾಸಂಸ್ಥೆಗಳನ್ನೂ ಕಟ್ಟಿವೆ. ಶಿಶುವಿಹಾರ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಪ್ರೌಢಶಾಲೆಗಳು, ಪದವಿಪೂರ್ವ ಹಾಗೂ ಪದವಿ ಕಲಾ ಮತ್ತು ವಿಜ್ಞಾನ ಕಾಲೇಜುಗಳು, ಎಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಇವೆ. ನ್ಯಾಯ ಶಿಕ್ಷಣ ಕಾಲೇಜ್ ಮತ್ತು ವಾಣಿಜ್ಯ ಶಿಕ್ಷಣಸೌಕರ್ಯವೂ ಉಂಟು. ಮಂಡ್ಯ, ಮದ್ದೂರು ಮತ್ತು ನಾಗಮಂಗಲದಲ್ಲಿ ಮೂಲ ಶಿಕ್ಷಣ ಕೇಂದ್ರಗಳಿವೆ. ಮಂಡ್ಯ ಜಿಲ್ಲೆಯಲ್ಲಿ ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಶಿಕ್ಷಣಾವಕಾಶ ಕಲ್ಪಿಸಲಾಗಿದೆ. ಇತ್ತೀಚೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಮಂಡ್ಯದಲ್ಲಿ ಆರಂಭಗೊಂಡಿದೆ. ಶಿವಾರಗುಡ್ಡದಲ್ಲಿರುವ ವಿದ್ಯಾಪೀಠದಲ್ಲಿ ವಯಸ್ಕರ ಶಿಕ್ಷಣ ವ್ಯವಸ್ಥೆ ಇದೆ. ಡೆನ್ಮಾರ್ಕಿನ ಯೋಜನೆಯಂತೆ ಇಲ್ಲಿ ತಾಂತ್ರಿಕ ಮತ್ತು ಸುಧಾರಿತ ಬೇಸಾಯ ಪದ್ಧತಿಯಲ್ಲಿ ಮತ್ತು ಕೋಳಿ ಸಾಕಣೆಯಲ್ಲಿ ತರಬೇತಿ ನೀಡಲಾಗುತ್ತದೆ. ಆದಿಚುಂಚನಗಿರಿ ಒಂದು ದೊಡ್ಡ ವಿದ್ಯಾಕೇಂದ್ರ. ನಾಗಮಂಗಲ ಮತ್ತು ಮಳವಳ್ಳಿಗಳಲ್ಲಿ ಗೃಹ ಕೈಗಾರಿಕಾ ತರಬೇತಿ ಕೇಂದ್ರಗಳಿವೆ.

ಸಾಂಸ್ಕೃತಿಕ ರಂಗದಲ್ಲಿ ಈ ಜಿಲ್ಲೆಯ ಸಾಧನೆ ಸಾಕಷ್ಟಿದೆ. ಇಲ್ಲಿಯ ಜನ ಅನೂಚಾನವಾಗಿ ಬಂದ ಜನಪದ ಸಾಹಿತ್ಯ ಮತ್ತು ಕಲೆಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ದೊಡ್ಡಾಟ ಪೂಜಾಕುಣಿತ ಸೋಮನಕುಣಿತ ಮೊದಲಾದವು ಇಲ್ಲಿಯ ಅನೇಕ ಸ್ಥಳಗಳಲ್ಲಿ ಇನ್ನೂ ಪ್ರಚಲಿತವಾಗಿವೆ.

ಪ್ರೇಕ್ಷಣೀಯ ಸ್ಥಳಗಳು: ಜಿಲ್ಲೆಯ ಮುಖ್ಯಸ್ಥಳಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲದೆ, ಬೆಳಕವಾಡಿ, ಬೆಳ್ಳೂರು ಮತ್ತು ಮೇಲುಕೋಟೆ ಇವು ಪಟ್ಟಣಗಳೆಂದು ಪರಿಗಣಿತವಾಗಿವೆ. ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಮತ್ತು ಇತಿಹಾಸ ಪ್ರಸಿದ್ಧ ಸ್ಥಳಗಳಿವೆ, 1610ರಿಂದ 1799ರ ತನಕ ಮೈಸೂರು ಸಂಸ್ಥಾನದ ರಾಜಧಾನಿಯಾಗಿ ಮೆರೆದು ಹೈದರ್ ಮತ್ತು ಟಿಪ್ಪುಸುಲ್ತಾನರ ಭದ್ರನೆಲೆಯಾಗಿದ್ದ ಶ್ರೀರಂಗಪಟ್ಟಣ, ಕಾವೇರಿಯ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳಿರುವ ಶಿವಸಮುದ್ರ, ಸುಂದರ ಉದ್ಯಾನದಿಂದ ಕಂಗೊಳಿಸುವ ಕೃಷ್ಣರಾಜಸಾಗರ ಇವು ಪ್ರಸಿದ್ದವಾಗಿವೆ. ಶ್ರೀರಂಗಪಟ್ಟಣದ ಬಳಿ ಇರುವ ರಂಗನತಿಟ್ಟು ಪ್ರಸಿದ್ಧ ಪಕ್ಷಿಧಾಮ. ರಾಮಾನುಜಾಚಾರ್ಯರು ನೆಲಸಿದ್ದರೆನ್ನಲಾದ ಮೇಲುಕೋಟೆ ಮತ್ತು ತೊಣ್ಣೂರು ಹಾಗೂ ಶ್ರೀರಂಗಪಟ್ಟಣ ಯಾತ್ರಾಸ್ಥಳಗಳು. ಗಂಗರ ಕಾಲದ ಸುಂದರ ಬಸದಿಗಳಿರುವ ಕಂಬದ ಹಳ್ಳಿ ಜೈನರಿಗೆ ಪವಿತ್ರಸ್ಥಳ. ಅಗ್ರಹಾರ ಬಾಚಹಳ್ಳಿ, ಅಘಲಯ, ಹೊಸ ಹೊಳಲು, ಕಿಕ್ಕೇರಿ, ಮಾದಪುರ ಮತ್ತು ತೆಂಗಿನಘಟ್ಟ, ಬೆಳ್ಳೂರು, ದೊಡ್ಡ ಜಟಕ ಮತ್ತು ನಾಗಮಂಗಲ, ಬಸರಾಳು–ಈ ಸ್ಥಳಗಳಲ್ಲಿ ಹೊಯ್ಸಳ ಕಾಲದ ಸುಂದರ ದೇವಾಲಯಗಳಿವೆ. ಮದ್ದೂರು ಮತ್ತು ಮಾರೇಹಳ್ಳಿಗಳಲ್ಲಿ ಚೋಳರ ಕಾಲದ ದೇವಾಲಯಗಳಿವೆ. ನಾಗಮಂಗಲ ಮತ್ತು ಪಾಲಗ್ರಹಾರಗಳಲ್ಲಿ ಚೋಳರ ಕಾಲದ ದೇವಾಲಯಗಳಿವೆ.

ತಾಲ್ಲೂಕು: ಈ ತಾಲ್ಲೂಕನ್ನು ದಕ್ಷಿಣದಲ್ಲಿ ಶ್ರೀರಂಗಪಟ್ಟಣ, ತಿರುಮಕೂಡಲು ನರಸೀಪುರ ಮತ್ತು ಮಳವಳ್ಳಿ ತಾಲ್ಲೂಕುಗಳೂ ಪೂರ್ವದಲ್ಲಿ ಮದ್ದೂರು, ಉತ್ತರದಲ್ಲಿ ನಾಗಮಂಗಲ ಮತ್ತು ಪಶ್ಚಿಮದಲ್ಲಿ ಪಾಂಡವಪುರ ತಾಲ್ಲೂಕುಗಳೂ ಸುತ್ತುವರಿದಿವೆ. ಕೆರಗೋಡು, ಮಂಡ್ಯ, ಬಸರಾಳು, ದುದ್ದ ಮತ್ತು ಕೊತ್ತತ್ತಿ ಹೋಬಳಿಗಳು. ಒಂದು ಪಟ್ಟಣ ಮತ್ತು 183 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 715.1 ಚ.ಕಿಮೀ ಜನಸಂಖ್ಯೆ 4,05,898.

ತಾಲ್ಲೂಕು ಸಾಮಾನ್ಯವಾಗಿ ಮೈದಾನ ಪ್ರದೇಶ. ಹೆಸರಿಸುವಂಥ ಬೆಟ್ಟಗುಡ್ಡಗಳಿಲ್ಲ. ಲೋಕಪಾವನಿ ನದಿ ತಾಲ್ಲೂಕಿನ ಪಶ್ಚಿಮಭಾಗದಲ್ಲಿ ಸ್ವಲ್ಪದೂರ ಹರಿದು ಅನಂತರ ತಾಲ್ಲೂಕಿನ ಅಂಚಿನಲ್ಲಿ ಪಾಂಡವಪುರ ತಾಲ್ಲೂಕನ್ನು ಬೇರ್ಪಡಿಸುವ ಗಡಿಯಾಗಿ ದಕ್ಷಿಣಾಭಿಮುಖವಾಗಿ ಹರಿಯುವುದು. ಈ ತಾಲ್ಲೂಕಿನಲ್ಲಿ ಹೆಚ್ಚಾಗಿ ಮರಳು ಮಿಶ್ರಿತ ಕೆಂಪು ಜೇಡಿಮಣ್ಣಿನ ಭೂಮಿ ಇದೆ. ವಾರ್ಷಿಕ ಮಳೆ 86 ಸೆಂಮೀ. ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವಿಲ್ಲ.

ವಿಶ್ವೇಶ್ವರಯ್ಯ ನಾಲೆಯಿಂದ ಈ ತಾಲ್ಲೂಕಿಗೆ ನೀರೊದಗಿ ಕೃಷಿ ಪ್ರಗತಿದಾಯಕವಾಗಿದೆ. ಹುಲಿಕೆರೆ ಬಳಿ ಕರಿಘಟ್ಟ ಶ್ರೇಣಿಯ ಬೆಟ್ಟಕ್ಕೆ 2805 ಮೀ ಉದ್ದದ ಸುರಂಗ ಕೊರೆದು ವಿಶ್ವೇಶ್ವರಯ್ಯ ನಾಲೆಯ ನೀರು ಹರಿಯಬಿಟ್ಟಿದೆ. ಈ ಸುರಂಗದ ಆಳ ನೆಲಮಟ್ಟದಿಂದ ಕೆಳಗೆ 20.5–46 ಮೀ ವರೆಗೆ ಇದೆ. ಪ್ರಪಂಚದ ಅತ್ಯಂತ ಉದ್ದವಾದ ನೀರಾವರಿ ಸುರಂಗಗಳಲ್ಲಿ ಇದೊಂದು. ಬತ್ತ, ರಾಗಿ, ಜೋಳ, ಕಬ್ಬು ಇಲ್ಲಿಯ ಪ್ರಮುಖ ಬೆಳೆಗಳು. ಕೃಷಿಗೆ ಸಂಬಂಧಿಸಿದಂತೆ ಹೊಸ ಪ್ರಯೋಗಗಳನ್ನು ಇಲ್ಲಿ ನಡೆಸಲಾಗಿದೆ. 1965ರಿಂದ ಇಲ್ಲಿ ಇಂಡೊಜಪಾನೀಸ್ ಕೃಷಿ ಪ್ರದರ್ಶನಾ ಕ್ಷೇತ್ರವಿದ್ದು ತರುಣ ಕೃಷಿಗಾರರಿಗೆ ಮಾರ್ಗದರ್ಶನ ನೀಡುತ್ತಿದೆ. ಇದಲ್ಲದೆ ಕೆಲವು ಸರ್ಕಾರಿ ವ್ಯವಸಾಯಾಭಿವೃದ್ಧಿ ಕಾರ್ಯಕ್ರಮಗಳಿಗೂ ಈ ತಾಲ್ಲೂಕು ಸೇರಿದೆ.

ಈ ತಾಲ್ಲೂಕು ಕೈಗಾರಿಕೆಯಲ್ಲಿ ಜಿಲ್ಲೆಯಲ್ಲೇ ಪ್ರಥಮಸ್ಥಾನ ಪಡೆದಿದೆ. ಹೆಚ್ಚು ಕೈಗಾರಿಕೆಗಳಿರುವುದು ಮಂಡ್ಯಪಟ್ಟಣ ಮತ್ತು ಅದರ ಪರಿಸರದಲ್ಲಿ. ಬೆಲ್ಲದ ತಯಾರಿಕೆ ಉಂಟು. ರಾಸಾಯನಿಕ ಮತ್ತು ಉಪಯುಕ್ತ ವಸ್ತುಗಳ ತಯಾರಿಕೆಯೂ ಇದೆ. ಅಕ್ಕಿಗಿರಣಿಗಳಿವೆ. ರೇಷ್ಮೆ ಸಾಕಣೆ ಈ ತಾಲ್ಲೂಕಿನಲ್ಲೂ ಪ್ರಚಲಿತ. ಇಲ್ಲಿಂದ ಅಕ್ಕಿ, ಸಕ್ಕರೆ, ಮದ್ಯ ಇವು ಹೆಚ್ಚಾಗಿ ರಫ್ತಾಗುತ್ತವೆ. ಸಿಮೆಂಟ್, ಬಟ್ಟೆ, ಯಂತ್ರೋಪಕರಣಗಳು ಹೆಚ್ಚಾಗಿ ಆಮದಾಗುವ ಪದಾರ್ಥಗಳು. ವ್ಯಾಪಾರ ವಾಣಿಜ್ಯಕ್ಕೆ ಆರ್ಥಿಕಸಹಕಾರ ನೀಡಲು ತಾಲ್ಲೂಕಿನಲ್ಲಿ ನಾನಾಬಗೆಯ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ.

ಮೈಸೂರು – ಬೆಂಗಳೂರುಗಳ ನಡುವೆ ಇರುವ ಮಂಡ್ಯ ತಾಲ್ಲೂಕು ವ್ಯಾಪಾರ ವಾಣಿಜ್ಯದಲ್ಲಿ ಮುಂದುವರಿಯಲು ಅದರ ಭೌಗೋಳಿಕ ಪರಿಸರವೂ ಮುಖ್ಯ ಕಾರಣ. ತಾಲ್ಲೂಕಿನ ದಕ್ಷಿಣದಲ್ಲಿ ನೈರುತ್ಯ ಈಶಾನ್ಯವಾಗಿ ಮೈಸೂರು – ಬೆಂಗಳೂರು ರೈಲುದಾರಿ ಮತ್ತು ರಾಜ್ಯ ಹೆದ್ದಾರಿ ಹಾದುಹೋಗಿವೆ. ಮಂಡ್ಯದಿಂದ ಬನ್ನೂರು, ನಾಗಮಂಗಲ, ಶಿವಳ್ಳಿ ಮತ್ತು ಕೆರಗೋಡುಗಳಿಗೆ ಹೋಗುವ ರಸ್ತೆಗಳೂ ತಾಲ್ಲೂಕಿನ ಇತರ ಮುಖ್ಯ ಸಾರಿಗೆ ಮಾರ್ಗಗಳು.

ತಾಲ್ಲೂಕಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಿವೆ. ತಾಲ್ಲೂಕು ಕೇಂದ್ರದಲ್ಲಿ ಎಂಜಿನಿಯರಿಂಗ್, ಕಲೆ, ವಿಜ್ಞಾನ. ಕಾಲೇಜುಗಳಿವೆ. ವಿದ್ಯುತ್, ಅಂಚೆ ತಂತಿ, ದೂರವಾಣಿ ಮುಂತಾದವೂ ಮತ್ತು ಆಸ್ಪತ್ರೆ ಔಷಧಾಲಯ ಮುಂತಾದ ವೈದ್ಯಕೀಯ ಸೌಲಭ್ಯಗಳೂ ಇವೆ. ಮಂಡ್ಯಕ್ಕೆ ಈಶಾನ್ಯದಲ್ಲಿ 8 ಕಿಮೀ ದೂರದಲ್ಲಿರುವ ಬೆಳ್ಳಂಗೆರೆಯ ಬಳಿ ಪ್ರತಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಕಾಡುಬಸವೇಶ್ವರಸ್ವಾಮಿ ಜಾತ್ರೆ ಬಲು ಪ್ರಸಿದ್ಧ. ಮಂಡ್ಯದ ನೈಋತ್ಯದಲ್ಲಿ 7 ಕಿಮೀ ದೂರದಲ್ಲಿರುವ ಸುಂಡಹಳ್ಳಿಯಲ್ಲಿ ಪ್ರತಿವರ್ಷ ದೀಪಾವಳಿಯ ಕಾಲದಲ್ಲಿ ಮಹದೇಶ್ವರಸ್ವಾಮಿ ರಥೋತ್ಸವ ನಡೆಯುತ್ತದೆ. ಬಸರಾಳು ಈ ತಾಲ್ಲೂಕಿನ ಒಂದು ಮುಖ್ಯ ಗ್ರಾಮ. ಮಂಡ್ಯದಿಂದ 14 ಕಿಮೀ ದೂರದಲ್ಲಿರುವ ಕೆರೆಗೋಡಿನಲ್ಲಿ ಪ್ರತಿ ಫೆಬ್ರುವರಿ ತಿಂಗಳಿನಲ್ಲಿ ನಡೆಯುವ ಪಂಚಲಿಂಗೇಶ್ವರ ಜಾತ್ರೆ ತಾಲ್ಲೂಕಿನ ಮುಖ್ಯ ಜಾತ್ರೆಗಳಲ್ಲೊಂದು. ಮಂಡ್ಯದ ಈಶಾನ್ಯಕ್ಕೆ 16 ಕಿಮೀ ದೂರದಲ್ಲಿರುವ ಶಿವಾರಗ್ರಾಮದ ಬಳಿ ಇರುವ ವಿದ್ಯಾಪೀಠದಲ್ಲಿ ಕ್ಷೀರೋದ್ಯಮ ಶಿಕ್ಷಣ ತರಬೇತಿ ನೀಡಲಾಗುತ್ತದೆ.

ಪಟ್ಟಣ: ಮಂಡ್ಯ ಜಿಲ್ಲೆಯ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯಪಟ್ಟಣ. ಮೈಸೂರು–ಬೆಂಗಳೂರು ರೈಲು ಮತ್ತು ರಾಜ್ಯ ಹೆದ್ದಾರಿಯಲ್ಲಿ ಮೈಸೂರು ನಗರದ ಈಶಾನ್ಯಕ್ಕೆ 42 ಕಿಮೀ ದೂರದಲ್ಲೂ ಬೆಂಗಳೂರಿನ ನೈಋತ್ಯಕ್ಕೆ 100 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 1,31,179. ಪಟ್ಟಣ ಸಮುದ್ರಮಟ್ಟದಿಂದ 671 ಮೀ ಎತ್ತರದಲ್ಲಿದ್ದು ವಾಯುಗುಣ ಹಿತಕರವಾಗಿದೆ.

ಇದು ಜಿಲ್ಲೆಯ ಪ್ರಮುಖ ಔದ್ಯಮಿಕ ಮತ್ತು ವ್ಯಾಪಾರ ಕೇಂದ್ರ. ಇಲ್ಲಿ ಮಂಡ್ಯ ಸಕ್ಕರೆ ಕಾರ್ಖಾನೆ (ಮೈಸೂರು ಷುಗರ್ ಕಂಪನಿ) ಅದಕ್ಕೆ ಹೊಂದಿಕೊಂಡಂತೆಯೇ ಇರುವ ಮದ್ಯಸಾರದ ಮತ್ತು ಮದ್ಯ ತಯಾರಿಕಾ ಕಾರ್ಖಾನೆ ಇವೆ. ಇವೆರಡೂ ಭಾರತದಲ್ಲಿ ಆ ಬಗೆಯ ಪ್ರಥಮ ಆಧುನಿಕ ಕಾರ್ಖಾನೆಗಳು. ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಫ್ಯಾಕ್ಟರಿ, ಆಧುನಿಕ ಅಕ್ಕಿಗಿರಣಿ, ಉಪಕರಣ ಕಾರ್ಖಾನೆ, ಸಣ್ಣ ಪ್ರಮಾಣದ ಮೈಸೂರು ಮೆಟಲ್ ಇಂಡಸ್ಟ್ರೀಸ್, ಮಂಡ್ಯ ಎಂಜಿನಿಯರಿಂಗ್ ವರ್ಕ್ಸ್, ಮೈಸೂರು ಮಿನರಲ್ಸ್ ಅಂಡ್ ಗ್ಯಾಸ್ ಕಂಪನಿ ಮುಂತಾದವುಗಳಿವೆ. ಮಂಡ್ಯದಿಂದ ಜಿಲ್ಲೆಯ ಎಲ್ಲ ಪಟ್ಟಣ ಗ್ರಾಮಗಳಿಗೂ ಮತ್ತು ರಾಜ್ಯದ ಇತರ ಜಿಲ್ಲಾ ಕೇಂದ್ರಗಳಿಗೂ ಉತ್ತಮ ಮಾರ್ಗ ಸಂಪರ್ಕವಿದೆ ಇಲ್ಲಿ ರೈಲು ನಿಲ್ದಾಣವಿದ್ದು ವ್ಯಾಪಾರ ವಾಣಿಜ್ಯದ ಪ್ರಗತಿಗೆ ನೆರವಾಗಿದೆ.

ಜಿಲ್ಲೆಯ ಮುಖ್ಯ ಪಟ್ಟಣವಾಗಿರುವುದರಿಂದ ಇಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಡಳಿತಾಂಗವಾಗಿ ಕೆಲವು ಕಚೇರಿಗಳಿವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ಸಹಕಾರ ಸಂಘಗಳೂ ನಿಯಂತ್ರಿತ ಮಾರುಕಟ್ಟೆ, ಸರ್ಕಾರಿ ಆಸ್ಪತ್ರೆ ಮತ್ತು ಔಷಧಾಲಯ, ಅಂಚೆ ತಂತಿ, ದೂರವಾಣಿ ಮತ್ತು ವಿದ್ಯುತ್ತಿನ ಸೌಲಭ್ಯಗಳೂ ಇವೆ. ವ್ಯಾಪಕ ಶಿಕ್ಷಣ ಸೌಲಭ್ಯವಿದೆ. ತಲಾ ಒಂದು ಎಂಜಿನಿಯರಿಂಗ್, ಕಲೆ ಮತ್ತು ವಿಜ್ಞಾನ ಕಾಲೇಜು ಇವೆ.

ಈ ಪಟ್ಟಣ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಅಭಿವೃದ್ಧಿ ಮಂಡಳಿಯ ಯೋಜನೆಯಂತೆ ಪಟ್ಟಣದ ಸುತ್ತಲೂ ಹೊಸ ವಿಸ್ತರಣೆಗಳಾಗುತ್ತಿವೆ. ಕೃಷ್ಣರಾಜಸಾಗರದ ನಿರ್ಮಾಣವಾದ ಅನಂತರ ಮಂಡ್ಯ ಪಟ್ಟಣ ಹೆಚ್ಚು ಪ್ರಾಮುಖ್ಯ ಪಡೆಯಿತು. ಮಂಡ್ಯಜಿಲ್ಲೆಯ ನಿರ್ಮಾಣದೊಂದಿಗೆ (1939 ಜುಲೈ 1) ಇದು ಜಿಲ್ಲಾ ಆಡಳಿತ ಕೇಂದ್ರವಾಯಿತು. ಇಲ್ಲಿ ನಗರಸಭಾ ಆಡಳಿತವಿದೆ. *

**ಮಕಾವೊ:** ವಿಶೇಷ ಆಡಳಿತ ವಲಯ ದಕ್ಷಿಣ ಚೀನ ಕರಾವಳಿ ಪ್ರದೇಶದಲ್ಲಿರುವ ಪೋರ್ಚುಗಲ್ಲಿನ ಸಾಗರೋತ್ತರ ಪ್ರಾಂತ್ಯ. ಇದು ಕ್ಯಾಂಟನ್ ನದೀಮುಖದಲ್ಲಿರುವ ಪರ್ಯಾಯ ದ್ವೀಪ ಮತ್ತು ಅದರ ಸಮೀಪದಲ್ಲಿರುವ ಟೈಪಾ ಮತ್ತು ಕೊಲೋನ್ ಎಂಬ ಎರಡು ಸಣ್ಣ ದ್ವೀಪಗಳನ್ನೊಳಗೊಂಡಿದೆ. ಚುಚಿಯಾಂಗ್ ನದಿ ಅಳಿವೆಯ ಪಶ್ಚಿಮ ಭಾಗದಲ್ಲಿದ್ದು ಹಾಂಗ್‌ಕಾಂಗ್‌ಗೆ ಸು. 64 ಕಿಮೀ ದೂರದಲ್ಲಿದೆ. ಮುಖ್ಯ ಭೂಭಾಗದಿಂದ ಜಈ ಪರ್ಯಾಯದ್ವೀಪವನ್ನು ಬ್ಯಾರಿಯರ್ ಗೇಟ್ ಪ್ರತ್ಯೇಕಿಸುತ್ತದೆ. ಚೀನಿ ಭಾಷೆಯಲ್ಲಿ ನಾವಿಕರ ರಕ್ಷಕ ದೇವತೆಯಾದ ಆ–ಮಂಗಾವೊ ಎಂಬ ಹೆಸರಿನ ಮೇಲೆ ಈ ಪ್ರಾಂತ್ಯಕ್ಕೆ ಮಕಾವೋ ಎಂಬ ಹೆಸರು ಬಂದಿದೆ. ಪ್ರಾಂತ್ಯದ ರಾಜಧಾನಿ ಮಕಾವೊ ನಗರ ಪರ್ಯಾಯ ದ್ವೀಪವನ್ನು ಪೂರ್ತಿ ಆಕ್ರಮಿಸಿಕೊಂಡಿದೆ. ಪ್ರಾಂತ್ಯದ ವಿಸ್ತೀರ್ಣ 28 ಚ.ಕಿಮೀ. ಜನಸಂಖ್ಯೆ 5,13,400 (2006).

ಮಕಾವೊ ನಾಲ್ಕು ಶತಮಾನಗಳಿಗೂ ಮೀರಿ ಪೋರ್ಚುಗೀಸರ ಅಧೀನದಲ್ಲಿದೆ. ಪೋರ್ಚುಗೀಸರು ಇಲ್ಲಿಗೆ ಮೊದಲು ಬಂದದ್ದು 1557ರಲ್ಲಿ. 18ನೆಯ ಶತಮಾನದ ಕೊನೆಯ ಭಾಗದ ವೇಳೆಗೆ ಹೊರದೇಶಗಳೊಡನೆ ಚೀನದ ವ್ಯಾಪಾರ ಕ್ರಮೇಣ ಕ್ಯಾಂಟನ್ನಿನಲ್ಲಿಯೇ ಕೇಂದ್ರೀಕೃತವಾಗಿ ವಿದೇಶೀ ವರ್ತಕರಿಗೆ ವ್ಯಾಪಾರಕೇಂದ್ರಗಳನ್ನು ಅಲ್ಲಿ ತೆರೆಯಲಾಯಿತು.

ಮಕಾವೊ ಪರ್ಯಾಯದ್ವೀಪದ ವಿಸ್ತೀರ್ಣ ಸು. 5.17 ಚ.ಕಿಮೀ. ಟೈಪಾ ದ್ವೀಪದ್ದು 3.88 ಚ.ಕಿಮೀ ಮತ್ತು ಕೊಲೋನ್ ದ್ವೀಪದ್ದು 6.47 ಚ.ಕಿಮೀ. ಇಲ್ಲಿಯ ಯಾವ ಭಾಗವೂ ಹೆಚ್ಚು ಎತ್ತರವಾಗಿಲ್ಲ. ಪ್ರಾಂತದ ಅತಿ ಹೆಚ್ಚು ಎತ್ತರದ ಪ್ರದೇಶ (174 ಮೀ) ಕೊಲೋನ್ ದ್ವೀಪದಲ್ಲಿದೆ. ಇಲ್ಲಿ ನದಿಗಳಿಲ್ಲ. ನೀರನ್ನು ಮಳೆಗಾಲದಲ್ಲಿ ಸಂಗ್ರಹಿಸಿಟ್ಟುಕೊಳ್ಳಲಾಗುತ್ತದೆ. ಅಲ್ಲದೇ ಚೀನದಿಂದಲೂ ತರಿಸಿಕೊಳ್ಳುತ್ತಾರೆ. ಈ ಪ್ರದೇಶದಲ್ಲಿ ಗ್ರಾನೈಟ್ ಕಲ್ಲುಗಳಿಂದಾದ ಸಣ್ಣ ಸಣ್ಣ ಗುಡ್ಡಗಳಿದ್ದು ಮಧ್ಯೆ ಅಲ್ಲಲ್ಲಿ ಮೆಕ್ಕಲುಮಣ್ಣಿನ ಸಮತಲ ಪ್ರದೇಶವಿದೆ. ಪೂರ್ವಭಾಗದಲ್ಲಿ ಭೂಮಿಯನ್ನು ಸಮತಲವಾಗಿಸಿ ವ್ಯವಸಾಯ ಯೋಗ್ಯವಾಗಿ ಮಾಡಿಕೊಂಡಿದ್ದಾರೆ. ಡಕ್ ಕಾಲುವೆ ಮುಖದಲ್ಲಿ ಪರ್ಯಾಯ ದ್ವೀಪದ ಪಶ್ಚಿಮಭಾಗ ಮತ್ತು ಚೀನಿ ಭೂಭಾಗದ ನಡುವೆ ಇಕ್ಕಟ್ಟಾದ ಸುರಕ್ಷಿತ ಜಲಪ್ರದೇಶವಿದೆ. ಇದಕ್ಕೆ ಪೋರ್ಟೊ ಇಂಟೀರಿಯರ್ (ಒಳಭಾಗದ ಬಂದರು) ಎಂದು ಹೆಸರು. ಬಲು ಹಿಂದಿನಿಂದಲೂ ಇದು ಹಡಗುಗಳಿಗೆ ಸುರಕ್ಷಿತ ಲಂಗರು ನೆಲೆಯಾಗಿದ್ದು ಇತ್ತೀಚೆಗೆ ಇದನ್ನು ಅಭಿವೃದ್ಧಿಪಡಿಸಲಾಗಿದೆ. ಮತ್ತೊಂದು ಬಂದರಾದ ಪೋರ್ಟೊ ಎಕ್ಸ್‌ಟೀರಿಯರ್ (ಹೊರಭಾಗದ ಬಂದರು) ಪರ್ಯಾಯದ್ವೀಪದ ಪೂರ್ವಭಾಗದಲ್ಲಿದ್ದು ಇಲ್ಲಿ ಅಲೆಗಳ ಹೊಡೆತ ತಡೆಗಟ್ಟಲು ಒಡ್ಡುಗಳನ್ನು ಕಟ್ಟಲಾಗಿದೆ. ಇವೆರಡು ಬಂದರುಗಳ ಮೂಲಕ ಹಾಂಗ್‌ಕಾಂಗಿಗೆ ಪ್ರಯಾಣ ಸೌಕರ್ಯವಿದೆ.

ಮಕಾವೊ ಉಷ್ಣವಲಯದಲ್ಲಿದೆ. ಬೇಸಗೆಯಲ್ಲಿ ಬಹಳ ಬಿಸಿಯಿದ್ದು ತೇವದಿಂದ ಕೂಡಿದ ಅಹಿತಕರ ಹವಾಗುಣವಿರುತ್ತದೆ. ಏಪ್ರಿಲ್‌ನಿಂದ ಸೆಪ್ಟೆಂಬರ್ ನಡುವೆ ಬೀಸುವ ನೈಋತ್ಯ ಮಾನ್‌ಸೂನ್ ಮಾರುತಗಳಿಂದ ಇಲ್ಲಿ ಮಳೆಯಾಗುತ್ತದೆ. ಜುಲೈ ತಿಂಗಳಿನಲ್ಲಿ ಅತಿ ಹೆಚ್ಚು ಸೆಖೆಯಿದ್ದು ಉಷ್ಣತೆ ಸರಾಸರಿ $28^0$ಸೆ. ಇರುತ್ತದೆ. ಚಳಿಗಾಲ ಆಹ್ಲಾದಕರವಾಗಿದ್ದು ತೇವಾಂಶ ಕಡಿಮೆಯಿರುತ್ತದೆ. ಅತಿ ಹೆಚ್ಚು ಚಳಿ ಜನವರಿಯಲ್ಲಿದ್ದು ಸರಾಸರಿ ಉಷ್ಣತೆ $15^0$ಸೆ. ಇರುತ್ತದೆ. ನವೆಂಬರ್ ತಿಂಗಳಿನ ಹವಾಗುಣ ಅತ್ಯಂತ ಹಿತಕರವಾದ್ದು. ಮಕಾವೊ ಜನರಲ್ಲಿಲ ಬಲುಪಾಲು ಮಂಗೋಲಿಯನ್ ಬುಡಕಟ್ಟಿಗೆ ಸೇರಿದವರು. ಇಲ್ಲಿರುವ ಪೋರ್ಚುಗೀಸರ ಸಂಖ್ಯೆ ಬಲು ಕಡಿಮೆ. ಇವರಲ್ಲೂ ಹೆಚ್ಚು ಜನ ಇತರ ಪೋರ್ಚುಗೀಸ್ ಸಾಗರೋತ್ತರ ಪ್ರಾಂತಗಳಿಂದ ಬಂದವರು. ಸ್ಥಳೀಯವರಲ್ಲಿ ಚೀನಿಯರೇ ಹೆಚ್ಚು.

ಮಕಾವೊದ ಆರ್ಥಿಕ ಪರಿಸ್ಥಿತಿ ವ್ಯಾಪಾರ ವ್ಯವಹಾರಗಳ ಮೇಲೆ ಅವಲಂಬಿತವಾದದ್ದು. ಇದು ಮುಕ್ತಬಂದರಾಗಿದ್ದು ಇಲ್ಲಿನ ವ್ಯಾಪಾರ ಚೀನ ಸರ್ಕಾರದ ಅಧಿಕಾರಕ್ಕೊಳಪಟ್ಟಿದೆ. ಮೀನುಗಾರಿಕೆ ಇಲ್ಲಿಯ ಪ್ರಮುಖ ಉದ್ಯಮ. ಇತ್ತೀಚೆಗೆ ಚೀನದ ಒತ್ತಾಯದಿಂದ ಇಲ್ಲಿಯ ಜನ ತಾವು ಹಿಡಿದ ಮೀನಿನ ಒಂದು ಭಾಗವನ್ನು ಚೀನಿ ಕಮ್ಯೂನ್‌ಗಳಿಗೆ ಕೊಡಬೇಕಾಗಿದೆ. ಅಲ್ಲದೆ ಚೀನ ಮಕಾವೊ ಮೂಲಕ ಬರುವ ವಸ್ತುಗಳಿಗೆ ಪ್ರವೇಶ ಪ್ರತಿಬಂಧಿಸಿರುವುದರಿಂದ ಇಲ್ಲಿಯ ವ್ಯಾಪಾರದ ಮಾದರಿಯೂ ಬದಲಾಗಿದೆ. ಇಷ್ಟಾದರೂ ಚೀನ ಮಕಾವೊಗೆ ಆಹಾರಪದಾರ್ಥಗಳು, ಬಟ್ಟೆ, ಆಟದ ಸಾಮಾನುಗಳು, ಅಗ್ಗದ ವಿದ್ಯುತ್ ಉಪಕರಣ ಮುಂತಾದವನ್ನು ಒದಗಿಸುವುದರಿಂದ ಮಕಾವೊಗೆ ಚೀನದ ಸ್ನೇಹ ಬೇಕಾಗಿದೆ. ಹಾಂಗ್‌ಕಾಂಗ್ ಬಿಟ್ಟರೆ ಮಕಾವೊ ಪ್ರಾಂತವೇ ಚೀನಾದಿಂದ ಅತಿ ಹೆಚ್ಚು ಆಮದು ಮಾಡಿಕೊಳ್ಳುವ ದೇಶ. ಪಾದರಕ್ಷೆ, ಎನಾಮಲ್ ಸಾಮಾನುಗಳು, ಚೀನಿ ದ್ರಾಕ್ಷಾರಸ, ಪಟಾಕಿಗಳು, ಅಗರಬತ್ತಿ, ಕರ್ಪೂರ ಮರದ ಪೆಠಾರಿ ಇತ್ಯಾದಿ ಇಲ್ಲಿ ತಯಾರಾಗುವ ವಸ್ತುಗಳು. ಇಲ್ಲಿ ಚಲಾವಣೆಯಲ್ಲಿರುವ ಹಣ ಪಟಾಕ.

ಹಾಂಗ್‌ಕಾಂಗ್‌ನಿಂದ ಇಲ್ಲಿಗೆ ಅರ್ಧಗಂಟೆಗೊಂದು ಬಾರಿ ದೋಣಿ ಸಂಚಾರವಿದ್ದು ಪ್ರಯಾಣದ ಕಾಲ ಕೇವಲ ಒಂದು ಗಂಟೆ ಮಾತ್ರ. ಪರ್ಯಾಯದ್ವೀಪದಿಂದ ಟೈಪಾ ಮತ್ತು ಕೊಲೋನ್ ದ್ವೀಪಗಳಿಗೆ ನಾಲೆಗಳ ಸಂಚಾರವಿದೆ. ಆಂತರಿಕ ಸಾರಿಗೆ ವ್ಯವಸ್ಥೆ ಚೆನ್ನಾಗಿದ್ದು ಟೈಪಾ ಮತ್ತು ಕೊಲೋನ್‌ಗಳ ನಡುವೆ ಮೋಟಾರುಗಳು ಸಂಚರಿಸಲು ಸಾಧ್ಯವಾಗುವಂಥ ಒಡ್ಡು ದಾರಿಯಿದೆ. (ಜಿ.ಎಸ್.ಎಸ್)

**ಮಚಲೀಪಟ್ಟಣ:** ಆಂಧ್ರಪ್ರದೇಶದ ಕೃಷ್ಣಾಜಿಲ್ಲೆಯ ಮತ್ತು ಮಚಲೀಪಟ್ಟಣ ತಾಲ್ಲೂಕಿನ ಆಡಳಿತ ಕೇಂದ್ರನಗರ. ಕೃಷ್ಣಾನದಿ ಮುಖಜಭೂಮಿಗೆ ಸೇರಿದ ಭಾರತದ ಪಶ್ಚಿಮತೀರದ ಒಂದು ಬಂದರು. ಒಂದು ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿದೆ. ವಿಸ್ತೀರ್ಣ ಸು. 25 ಚ.ಕಿಮೀ. ಜನಸಂಖ್ಯೆ 1,83,370. $16^0.30'$ ಉತ್ತರ ಅಕ್ಷಾಂಶ ಮತ್ತು $81^0.10'$ ಪೂರ್ವರೇಖಾಂಶದಲ್ಲಿದೆ.

ಬಂದರು ನಗರವಾಗಿ ಸಮುದ್ರ ವ್ಯಾಪಾರಕ್ಕೆ ಅನುಕೂಲವಾಗಿರುವಂತೆ ಈ ನಗರ ಭೂವ್ಯಾಪಾರ ಕೇಂದ್ರವೂ ಆಗಿದೆ. ಇದೊಂದು ಮುಖ್ಯ ರೈಲು ನಿಲ್ದಾಣ. ಅಕ್ಕಿ ಮತ್ತು ಎಣ್ಣೆ ಗಿರಣಿಗಳಿವೆ. ಹಾಸುಗಂಬಳಿಗಳ ಮತ್ತು ವೈಜ್ಞಾನಿಕ ಉಪಕರಣಗಳ ತಯಾರಿಕೆ ಇಲ್ಲಿಯ ಮುಖ್ಯ ಕೈಗಾರಿಕೆಗಳು. ಅಖಿಲ ಭಾರತ ನೇಕಾರರ ಸಂಘದ ಕೇಂದ್ರ ಕಚೇರಿ ಇಲ್ಲಿದೆ. ಒಂದು ಎಂಜಿನಿಯರಿಂಗ್ ಕಾಲೇಜಿನ ಜೊತೆಗೆ ಇತರ ಮೂರು ಕಾಲೇಜುಗಳಿವೆ. ಇಲ್ಲಿಂದ ರಫ್ತಾಗುವ ವಸ್ತುಗಳಲ್ಲಿ ಮುಖ್ಯವಾದವು ಕಬ್ಬಿಣ ಹಾಗೂ ಬಟ್ಟೆ.

ಹಿಂದೆ ಬೆಸ್ತನೊಬ್ಬ ಸೆರೆಹಿಡಿದ ದೈತ್ಯ ಮೀನಿನ ಎಲುಬುಗಳಿಂದ ರೇವಿಗೆ ಪ್ರವೇಶದ್ವಾರ ನಿರ್ಮಿಸಿದ್ದುದರಿಂದ ಈ ನಗರಕ್ಕೆ ಮತ್ತಲಿ ಎಂಬ ಹೆಸರು ಬಂದಿತೆಂದೂ ಮುಂದೆ ಮಚಲಿ ಎಂಬ ರೂಪ ಪಡೆಯಿತೆಂದೂ ಪ್ರತೀತಿ. ಪ್ರಶ.ಪೂ.ದಲ್ಲಿ ಗ್ರೀಕ್ ಭೂಗೋಳವಿಜ್ಞಾನಿಗಳು ಉಲ್ಲೇಖಿಸಿರುವ ಮಸೋಲಿಯ ಇದೇ ಸ್ಥಳವಿರಬೇಕೆಂಬುದು ಕೆಲವರ ಅಭಿಪ್ರಾಯ. ಪ್ರಶ.ಪೂ.

3ನೆಯ ಶತಮಾನದಲ್ಲಿ ಧರಣಿಕೋಟದಲ್ಲಿ ರಾಜ್ಯವಾಳಿದ ಮುಕ್ಕಂಟಿ ಅಥವಾ ತ್ರಿಲೋಚನ ಪಲ್ಲವ ಈ ಸ್ಥಳಕ್ಕೆ ಸಮೀಪದ ಇನುಕುದುರುವನ್ನು ತನ್ನ ವಾಸಸ್ಥಳವಾಗಿ ಮಾಡಿಕೊಂಡದ್ದರಿಂದ ಆ ಪ್ರದೇಶಕ್ಕೆ ರಾಜುಪೇಟೆ ಎಂಬ ಹೆಸರು ಬಂದಿರಬಹುದು. ಆಗಾಗ್ಗೆ ಉಷ್ಣವಲಯದ ಆವರ್ತಮಾರುತಗಳ ಪ್ರಭಾವಕ್ಕೊಳಗಾಗುತ್ತದೆ. (ಎಚ್.ಎಂ.ಎನ್.ಆರ್.)

**ಮಡಗಾಸ್ಕರ್:** ಹಿಂದೂ ಮಹಾಸಾಗರದಲ್ಲಿ ಆಫ್ರಿಕದ ಆಗ್ನೇಯ ತೀರದಲ್ಲಿರುವ ಒಂದು ಸ್ವತಂತ್ರ ರಾಷ್ಟ್ರ ಹಿಂದೆ ಫ್ರಾನ್ಸ್ ದೇಶದ ವಸಾಹತುವಾಗಿದ್ದು 1960ರಲ್ಲಿ ಸ್ವಾತಂತ್ರ್ಯವನ್ನು ಗಳಿಸಿಕೊಂಡಿತು. ಆಫ್ರಿಕ ಖಂಡದ ಆಗ್ನೇಯ ತೀರದಲ್ಲಿ ಸು. 38 ಕಿಮೀ ದೂರದಲ್ಲಿರುವ ಒಂದು ವಿಶಾಲವಾದ ದ್ವೀಪ ರಾಷ್ಟ್ರ. ಪ್ರಪಂಚದ ದೊಡ್ಡ ದ್ವೀಪಗಳಲ್ಲಿ ಇದಕ್ಕೆ ನಾಲ್ಕನೆಯ ಸ್ಥಾನ. ಮೊಜ಼ಾಂಬಿಕ್ ಕಾಲುವೆ ಇದನ್ನು ಪ್ರತ್ಯೇಕಿಸಿದೆ. ಈ ರಾಷ್ಟ್ರ $20^0$ದ.ಅ. ಮತ್ತು $47^0$ ಪೂ.ರೇ.ದಲ್ಲಿ ಸನ್ನಿವೇಶಗೊಂಡಿದೆ. ಇದರ ವಿಸ್ತೀರ್ಣ 5,87,040 ಚ.ಕಿಮೀ. ಜನಸಂಖ್ಯೆ: 19,448,000 (2006). ರಾಜಧಾನಿ ಅಂಟನಾನಾರಿವೊ. ಇದರ ಜನಸಂಖ್ಯೆ 1,000,000 (2004). 4,828 ಕಿಮೀ ಕರಾವಳಿಯನ್ನು ಹೊಂದಿದೆ. ಕರಾವಳಿಯಿಂದ ಒಳನಾಡಿನ ಕಡೆಗೆ ಎತ್ತರವಾದ ಪ್ರಸ್ಥಭೂಮಿ. ದಕ್ಷಿಣೋತ್ತರವಾಗಿ ಬೆಟ್ಟಗುಡ್ಡಗಳ ಸಾಲು. ಇಲ್ಲಿನ ಅತ್ಯಂತ ಉನ್ನತ ಶಿಖರ ಮರಮೋಕೂಟ್ರ. 2900 ಮೀ ಎತ್ತರವಾಗಿದೆ. ಮಾರ್ಪಾಡು ಹೊಂದಿದ ಉಷ್ಣವಲಯ ವಾಯುಗುಣವಿದೆ. ದಕ್ಷಿಣದ ಸ್ವಲ್ಪ ಭಾಗದಲ್ಲಿ ಶುಷ್ಕ ವಾತಾವರಣವಿರುತ್ತದೆ. ಉನ್ನತ ಪ್ರದೇಶಗಳಲ್ಲಿ ಎಲೆ ಉದುರು ಕಾಡುಗಳಿವೆ. ಬೆಟ್ಸಿಬೋಕ ಮತ್ತು ಮಾಂಗೋಕ ಪ್ರಮುಖ ನದಿಗಳು. ಇಲ್ಲಿ ಅತ್ಯಂತ ವೈವಿಧ್ಯಮಯ ಪ್ರಾಣಿ ಹಾಗೂ ಪಕ್ಷಿ ಸಂಕುಲಗಳಿವೆ. ಅಳಿವಿನ ಅಂಚಿನಲ್ಲಿರುವ ಕೆಲವು ಪ್ರಭೇದಗಳನ್ನು ರಕ್ಷಿಸಲು ವ್ಯವಸ್ಥೆಮಾಡಲಾಗಿದೆ. ಭೂಮಿಯು ಕೃಷಿಗೆ ಸಾಕಷ್ಟು ಯೋಗ್ಯವಾಗಿಲ್ಲ. ಹವಾಮಾನ ವೈಪರೀತ್ಯಗಳು ತೊಂದರೆಯನ್ನುಂಟುಮಾಡುತ್ತವೆ.




ಕಾಫಿ. ವೆನಿಲ, ಸಂಭಾರ ಪದಾರ್ಥಗಳು, ಕಬ್ಬು, ತಂಬಾಕು, ಬತ್ತ, ಮರಗೆಣಸು, ಆಲೂಗಡ್ಡೆ, ಮೆಕ್ಕೆಜೋಳ ಇಲ್ಲಿನ ಪ್ರಮುಖ ಬೆಳೆಗಳು. ಇಲ್ಲಿ ದೊರೆಯುವ ಖನಿಜಗಳೆಂದರೆ ಗ್ರಾಫೈಟ್, ಕ್ರೋಮೈಟ್, ಕಲ್ಲಿದ್ದಲು, ಬಾಕ್ಸೈಟ್, ಉಪ್ಪು ಮತ್ತು ಅಭ್ರಕ. ಮಾಂಸ ಸಂಸ್ಕರಣೆ, ರಾಸಾಯನಿಕಗಳು, ಮಾದಕ ದ್ರವ್ಯಗಳು, ಸಕ್ಕರೆ, ಸಿಮೆಂಟ್ ಕೈಗಾರಿಕೆಗಳು ಪ್ರಮುಖ. ಚರ್ಮ ಹದಮಾಡುವಿಕೆ, ಲಘು ತಾಂತ್ರಿಕ ಕೈಗಾರಿಕೆಗಳು ಹಾಗೂ ಉಪ್ಪು ತಯಾರಿಕಾ ಉದ್ಯಮಗಳಿವೆ. ಮೀನುಗಾರಿಕೆ, ಜಲವಿದ್ಯುತ್ ಉತ್ಪಾದನೆಗಳಿವೆ. ಅಂಟ್ಸಿರಬೆ, ಟೂವೋಮಾಸಿನ್ ಇಲ್ಲಿನ ಪ್ರಮುಖ ನಗರಗಳು. ಇಲ್ಲಿನ ಭಾಷೆ ಮಲಗಸೆ ಮತ್ತು ಫ್ರೆಂಚ್. ಇಲ್ಲಿನ ಹಣ ಮಲಗಸೆ ಫ್ರಾಂಕ್. ಶೇ 41ರಷ್ಟು ಕ್ರಿಶ್ಚಿಯನ್ನರು, ಶೇ. 52 ಸ್ಥಳೀಯರು ಶೇ. 7 ರಷ್ಟು ಮುಸ್ಲಿಮರಿದ್ದಾರೆ. (ಕೆ.ಎನ್.ಯು.)

**ಮಡಿಕೆಗಳು:** ಭೂಮಿಯಲ್ಲಿ ಕಂಡುಬರುವ ಶಿಲಾಸ್ತರಗಳ ಅಂಕುಡೊಂಕಾದ ಅಥವಾ ಅಲೆಗಳೋಪಾದಿಯ ರಚನೆಗಳು (ಫೋಲ್ಡ್ಸ್). ಪ್ರಸ್ತುಬದ್ಧತೆಗೆ ಒಳಪಟ್ಟ ಎಳೆಗಳಿರುವ ಜಲಜಶಿಲೆಗಳಲ್ಲಿ ಇವು ಬಲು ಚೆನ್ನಾಗಿ ರೂಪುಗೊಂಡಿರುತ್ತವೆ. ಭೂಮಿಯಲ್ಲಿ ಶಿಲಾಸ್ತರಗಳು ಲಂಬವಾಗಿ ಅಥವಾ ಪಕ್ಕಗಳಿಂದ ಒತ್ತರಿಸಲ್ಪಟ್ಟ ಭೂಚಲನವಲನ ಶಕ್ತಿಗಳಿಗೆ ಮಣಿದು ಮಡಿಕೆಗಳಾಗುತ್ತವೆ. ಗಾತ್ರದಲ್ಲಿ ಮಡಿಕೆಗಳು ಹಲವಾರು ಮೀ ದೊಡ್ಡವಾಗಿಯೂ ಮತ್ತೆ ಹಲವು ಕೆಲವಾರು ಕಿಮೀ ಅಗಲವಾಗಿಯೂ ಹತ್ತಾರು ಕಿಮೀ ಉದ್ದವಾಗಿಯೂ ಇರುತ್ತವೆ. ಮಡಿಕೆಗಳಲ್ಲೆಲ್ಲ ಅತಿ ಸರಳವಾಗಿ ಒಂದು ಮಗ್ಗುಲಲ್ಲಿ ಮಾತ್ರ ಬಗ್ಗಿರುವ ಶಿಲಾಸ್ತರಕ್ಕೆ ಏಕ ಇಳಿಮುಖ (ಮೋನೋಕ್ಲೈನ್) ಮಡಿಕೆ ಎಂದು ಹೆಸರು.

ಮಡಿಕೆಯ ಭಾಗಗಳು : ಮಡಿಕೆಯ ಎರಡು ಕಡೆಯ ಪಕ್ಕಗಳಿಗೆ ಬಾಹುಗಳೆಂದು (ಲಿಂಬ್ಸ್) ಹೆಸರು. ಎರಡು ಬಾಹುಗಳ ಮಧ್ಯೆ ಛೇದನಾ ಕೋನಕ್ಕೆ ಮಡಿಕೆಯ ಅಕ್ಷ (ಆ್ಯಕ್ಷಿಯಲ್ ಪ್ಲೇನ್) ಅಥವಾ ಅಕ್ಷ ಸಮಮೇಲ್ಮೈ (ಆ್ಯಕ್ಷಿಯಲ್ ಸರ್ಫೇಸ್) ಮಡಿಕೆಯನ್ನು ಎರಡು ಸಮಭಾಗಗಳಾಗಿ ವಿಂಗಡಿಸುತ್ತದೆ. ಅಕ್ಷ ಸಮಮೇಲ್ಮೈ ಮಡಿಕೆಯ ಮೇಲ್ಭಾಗದ ಸ್ತರವನ್ನು ಅಕ್ಷರೇಖೆಯಲ್ಲಿ ಛೇದಿಸುತ್ತದೆ. ಸಾಮಾನ್ಯವಾಗಿ ಅಕ್ಷರೇಖೆ ಏರು ಮತ್ತು ತಗ್ಗುಗಳಿಂದ ಕೂಡಿ ಮಡಿಕೆಯ ಉದ್ದಕೂ ಬದಲಾವಣೆಗೊಳ್ಳುತ್ತಿರುತ್ತದೆ. ಇದರ ಜಾಡಿನಲ್ಲಿ ಸಿಕ್ಕುವ ಉನ್ನತ ಭಾಗಗಳಿಗೆ ಏಣಿಗೆಗಳೆಂದೂ (ಕಲ್ಮಿನೇಶನ್ಸ್) ನಿಮ್ನ ಭಾಗಗಳಿಗೆ ತಗ್ಗುಗಳೆಂದೂ (ಡಿಪ್ರೆಶನ್ಸ್) ಹೆಸರು. ಮಡಿಕೆಗಳ ಅಕ್ಷರೇಖೆಯ ಮೇಲಿನಿಂದ ಸಮತಲ ಮಟ್ಟಕ್ಕೆ ಇರುವ ಕೋನ ಇಳಿಜಾರು (ಪ್ಲಂಜ್). ಮಡಿಕೆಯ ಪಕ್ಕ ಭಾಗ ಅಥವಾ ಪಾರ್ಶ್ವ ಆ ಮಡಿಕೆಯ ಅಕ್ಷಸಪಾಟದಿಂದ ಮಗ್ಗುಲಿನ ಮಡಿಕೆಯ ಅಕ್ಷ ಸಮಕ್ಷೇತ್ರದವರೆಗೆ ಹಬ್ಬಿರುತ್ತವೆ. ಸಾಮಾನ್ಯವಾಗಿ ಮಡಿಕೆಯ ಬಗ್ಗಿರುವಿಕೆಯ ತ್ರಿಜ್ಯ ಅದರ ಅಲೆಯ ಉದ್ದ ಮತ್ತು ಅರೆಪಾರಗಳಿಗೆ (ಆ್ಯಂಪ್ಲಿಟ್ಯೂಡ್ಸ್) ಹೋಲಿಸಿದರೆ ಕಿರಿದಾಗಿರುತ್ತದೆ. ಅತಿಯಾಗಿ ಬಗ್ಗಿರುವ ಮಡಿಕೆಯ ಭಾಗಕ್ಕೆ ಕೀಲು ಎಂದು ಹೆಸರು. ಗೋಲಾಕಾರದ ಮಡಿಕೆಯ ಉನ್ನತ ಭಾಗ ಶಿಖರ. ಇದು ಮಡಿಕೆಯನ್ನು ಲಂಬವಾಗಿ ಛೇದಿಸಿದಲ್ಲಿ ಶಿಖರದ ಸಮಭಾಜಕತಲ ದೊರೆಯುತ್ತದೆ. ಮಡಿಕೆಯ ಅತ್ಯಂತ ತಗ್ಗು ಭಾಗಗಳನ್ನು ಕೂಡಿಸುವ ಭಾಗಕ್ಕೆ ದೋಣಿ ಅಥವಾ ಬಾನೆ ಎಂದೂ ಇದು ಮಡಿಕೆಯನ್ನು ಛೇದಿಸುವಲ್ಲಿಗೆ ದೋಣಿ ಸಮಭಾಜಕತಲ ಎಂದೂ ಹೆಸರು.



ಬೀಸಣಿಗೆ ಮಡಿಕೆ

ನಾಮಾಂಕಿತಗಳು : ಮಡಿಕೆಗಳನ್ನು ಅಡ್ಡವಾಗಿ ಕತ್ತರಿಸಿದಾಗ ತೋರುವ ರಚನಾ ವಿನ್ಯಾಸದ ಮೇರೆಗೆ ಅವನ್ನು ಹೆಸರಿಸಿದೆ. ಮಡಿಕೆಯೊಂದರ ಗೋಲಾಕಾರ ಮೇಲ್ಮುಖವಾಗಿದ್ದು ಅದರ ಪಾರ್ಶ್ವಗಳು ಅಕ್ಷಸಮತಲ ರೇಖೆಯಿಂದ ಕೆಳಮುಖವಾಗಿ ಬಾಗಿ, ಮೊದಲು ರೂಪುಗೊಂಡು ಹಳೆಯ ಶಿಲಾಸ್ತರಗಳು ಮಧ್ಯಭಾಗವನ್ನು ಆಕ್ರಮಿಸಿಕೊಂಡಿರುವಂಥವನ್ನು ಭೂಹೊರಬಾಗಿದ (ಆ್ಯಂಟಿಕ್ಲೈನ್) ಮಡಿಕೆಯೆನ್ನುವರು. ಬಟ್ಟಲಿನಾಕಾರವಾಗಿರುವ ಮಡಿಕೆಯೊಂದರ ಪಾರ್ಶ್ವಗಳು ಒಳಮುಖವಾಗಿ ಅಕ್ಷರೇಖೆಯೆಡೆಗೆ ಬಾಗಿ ನವೀನವಾಗಿ ರೂಪುಗೊಂಡ ಶಿಲಾಸ್ತರಗಳು ಮಧ್ಯಭಾಗದಲ್ಲಿರುವಂಥವನ್ನು ಭೂ ಒಳಮಡಿಕೆ ಅಥವಾ ಏಕಮುಖಾವನತ (ಸಿಂಕ್ಲೈನ್) ಮಡಿಕೆ ಎಂದು ಕರೆಯುವರು. ಅರ್ಧಚಂದ್ರಾಕಾರವಾಗಿ ಬಗ್ಗಿರುವ ವಿಮುಖಾವನತ ಮಡಿಕೆಗಳ ತುತ್ತ ತುದಿಯ ಭಾಗಕ್ಕೆ ಮಡಿಕೆಯ ಏಣು ಎಂದೂ ಏಕಮುಖಾವನತ ಮಡಿಕೆಯ ಅತ್ಯಂತ ಕೆಳಗಿನ ಭಾಗಕ್ಕೆ ಮಡಿಕೆಯ ತಗ್ಗು ಎಂದೂ ಹೆಸರು.

ಭೂಸ್ಥಾನಪಲ್ಲಟದಿಂದ ಉಂಟಾದ ದೊಡ್ಡ ದೊಡ್ಡ ಮಡಿಕೆಗಳಲ್ಲಿ ಅನಂತರದ ಭೂಚಲನಾ ಒತ್ತಡದಿಂದ ಉಗಮಿಸಿದ ಸಣ್ಣ ಪ್ರಮಾಣದ ಅಥವಾ ಗಾತ್ರದಲ್ಲಿ ಚಿಕ್ಕದಾಗಿರುವ ಮಡಿಕೆಗಳನ್ನು ಸಣ್ಣ ಮಡಿಕೆಗಳೆಂದು ಕರೆಯುತ್ತಾರೆ. ಇವುಗಳ ಜೊತೆಯಲ್ಲಿ ಶಿಲಾಸ್ತರಗಳಲ್ಲಿ ಉದ್ಭವಿಸಿದ ಒಡಕು ಮತ್ತು ಬಿರುಕುಗಳಿಗೆ ಸೀಳು ರೇಖೆಗಳೆಂದು ಹೆಸರು. ಭೂಚಲನೆಯಿಂದ

ಉಂಟಾಗುವ ಸೀಳು ರೇಖೆಗಳು ಆಯಾ ಆವರ್ತದ ಮಡಿಕೆಗಳ ಅಕ್ಷರೇಖೆಗಳಿಗೆ ಸಮಾಂತರವಾಗಿ ಸಂಕೀರ್ಣಗೊಂಡಿರುತ್ತವೆ. ಸಣ್ಣ ಮಡಿಕೆಗಳೂ ಸಮರೂಪತೆ ಮತ್ತು ಸಮಪ್ರಮಾಣದವುಗಳಾಗಿದ್ದರೂ ಮೊದಲಿನ ಆವರ್ತದ ಮಡಿಕೆಗಳಿಗಿಂತ ಸ್ಥಾನ ಮತ್ತು ರೂಪಗಳಲ್ಲಿ ಭಿನ್ನವಾಗಿರುತ್ತವೆ. ಮಡಿಕೆಗಳ ಮೇಲೆ ಉಂಟಾದ ಭೂಚಲನಾ ಒತ್ತಡದ ಪರಿಣಾಮವನ್ನು ಜಲಜಶಿಲೆಗಳ ಅಕ್ಷಪ್ರದೇಶದ ಮೇಲೆ ರೂಪುಗೊಂಡ ಸಣ್ಣ ಮಡಿಕೆಗಳ ಅಧ್ಯಯನದಿಂದ ನಿರೂಪಿಸಬಹುದು. ಸಣ್ಣ ಮಡಿಕೆಗಳ ಮಾದರಿಗಳನ್ನು ರೂಪಿಸಿ ಅವನ್ನು ಪ್ರಯೋಗಶಾಲೆಯಲ್ಲಿ ಒತ್ತಡಕ್ಕೆ ಮಣಿಸುವುದರ ಮೂಲಕ ಉಂಟಾಗುವ ಮಡಿಕೆಗಳ ಅಧ್ಯಯನದಿಂದ ಹಲವಾರು ಮಡಿಕಾ ಸೂಕ್ತಿಗಳು ಮತ್ತು ಪ್ರಮೇಯಗಳು ರೂಪಿಸಲ್ಪಟ್ಟಿವೆ. ಇಷ್ಟೇ ಅಲ್ಲದೆ ಗಣಕದ ಸಹಾಯದಿಂದ ನಿಷ್ಕೃಷ್ಟ ಯೋಜನೆಗಳಿಗೆ ಸರಿಹೊಂದುವ ಗಣಿತ ಸೂತ್ರಗಳನ್ನು ಅಳವಡಿಸಿ, ಮಡಿಕೆಗಳು ರೂಪುಗೊಳ್ಳಲು ಅವಶ್ಯವಾಗುವ ಭೌತಗುಣಗಳು ಮತ್ತು ಸೀಮಿತ ಪರಿಸರ ಇವನ್ನು ನಿರ್ಮಿಸಿ ವಿವಿಧ ರೀತಿಯ ಮಡಿಕೆಗಳು ಉಂಟಾಗುವ ವಿವರಣೆಯನ್ನು ಪಡೆದಿದ್ದಾರೆ.

ವಿಭಿನ್ನ ಮಡಿಕೆಗಳು : ಜಲಜ ಶಿಲಾಸ್ತರಗಳು ಪ್ರಸರಿಸಿರುವ ಪ್ರದೇಶಗಳಲ್ಲಿ ಭೂಚಲನ ವಲನಗಳು ಅತಿ ಹೆಚ್ಚಿನ ಕಾಲದವರೆಗೆ ಚಟುವಟಿಕೆಯಿಂದಿದ್ದು ಹಲವಾರು ಮಡಿಕೆಜನ್ಯ ಆವರ್ತನಗಳು ಶಿಲಾಸ್ತರಗಳಮೇಲೆ ಪರಿಣಾಮಕಾರಿಯಾಗಿ ಒತ್ತರಿಸಿದಾಗ ಅನೇಕ ತರಹದ ವಿಭಿನ್ನ ರೀತಿಯ ಮಡಿಕೆಗಳು ಮೈದಳೆಯುತ್ತವೆ. ಈ ರೀತಿ ಉದ್ಭವಿಸಿದ ಮಡಿಕೆಗಳ ಆವರ್ತನಗಳನ್ನು ವಿವಿಧ ರೀತಿಯ ಮಡಿಕೆಗಳ ಸಂಬಂಧದ ಹೊಂದಾಣಿಕೆಯ ಮೇರೆಗೆ ಕಂಡುಹಿಡಿಯಬಹುದು. ಮೊದಲನೆಯ ಆವರ್ತನದಲ್ಲುಂಟಾದ ಮಡಿಕೆಗಳ ಅಕ್ಷಪ್ರದೇಶ ಮತ್ತು ಅಕ್ಷಸಪಾಟಗಳು ಅನಂತರದ ಭೂಚಲನ ಆವರ್ತನದ ಒತ್ತಡಗಳಿಂದ ಪುನಃ ಮಡಿಕೆಗೊಂಡು ಮತ್ತು ಭೂಚಲನ ಆವರ್ತನಗಳು ಚಟುವಟಿಕೆಗೊಂಡು ಒತ್ತರಿಸಿದಾಗ ಪುನಃ ಮಡಿಚಿ, ತಿರುಚಿ ಅಥವಾ ಮುದುಡಿಕೊಂಡಿರುತ್ತವೆ. ಆದರೆ ಕೊನೆಯ ಹಂತದ ಆವರ್ತನದ ಮಡಿಕೆಗಳು ಯಾವ ರೀತಿಯ ವಿಕಾರ ಮತ್ತು ತಿರುಚುಗಳನ್ನೂ ಹೊಂದಿರುವುದಿಲ್ಲ. ಭೂಮಿಯಲ್ಲಿ ಬೇರೆ ಬೇರೆ ಭೂಕಾಲಮಾನದಲ್ಲಾದ ಮಡಿಕೆಗಳು ಒಂದರ ಮೇಲೊಂದೆರಗಿ ಪುನಃ ಪುನಃ ಅವುಗಳ ರೂಪ ಮತ್ತು ವಿನ್ಯಾಸಗಳಲ್ಲಿ ಪರಿವರ್ತನೆಗೊಂಡಿರುತ್ತವೆ. ವಿವಿಧ ಆವರ್ತನ ಮಡಿಕೆಗಳ ಭೂಕಾಲಮಾನ ಅಥವಾ ವಯಸ್ಸನ್ನು ಶೋಧಿಸಬೇಕಾದ ಸಂದರ್ಭಗಳಲ್ಲಿ, ಮೇಲೊತ್ತರಿಸುವಿಕೆಯಿಂದ ಉಂಟಾದ ಮಡಿಕೆಗಳ ಸಂಬಂಧವನ್ನು ಮೊದಲೇ ಉಂಟಾಗಿದ್ದ ಮಡಿಕೆಗಳೊಡನೆ ವಿಶ್ಲೇಷಿಸಿ ನಿಗದಿಪಡಿಸಬಹುದು. ಹೀಗೆ ಒಂದು ಪ್ರಾಂತ್ಯದ ಮಡಿಕೆಗಳ ವಯಸ್ಸನ್ನು ದೃಢೀಕರಿಸಿದ ಬಳಿಕ ಅವುಗಳ ವಿನ್ಯಾಸವನ್ನು ಇತರ ಪ್ರದೇಶಗಳಲ್ಲಿ ಕಂಡುಬರುವ ಮಡಿಕೆಗಳ ಜೊತೆ ತುಲನಾತ್ಮಕವಾಗಿ ಪರಿಶೀಲಿಸಿ ಅವುಗಳ ವಯಸ್ಸನ್ನು ನಿರ್ಧರಿಸಬಹುದು. ಮೇಲೊತ್ತರಿಸುವಿಕೆಗೆ ಒಳಗಾದ ಮಡಿಕೆಗಳ ಸಂಕೀರ್ಣ ಮುಖ್ಯವಾಗಿ ಭೂಚಲನವಲನಗಳಿಂದುಂಟಾದ ಒತ್ತಡದ ಪರಿಸ್ಥಿತಿಯನ್ನು ಅನುಸರಿಸಿರುತ್ತದೆ ಹಾಗೂ ಮಡಿಕೆಗೊಂಡ ಶಿಲಾಸ್ತರಗಳ ಗುಣ ವಿಶೇಷಗಳನ್ನೂ ಅವಲಂಬಿಸಿರುತ್ತದೆ.

ಮಡಿಕೆಯ ಸಮೂಹಗಳು : ಮಹಾಬೋಗುಣಿಯಲ್ಲಿ ಸಂಚಯನಗೊಂಡ ಜಲಜ ಶಿಲಾಸ್ತರಗಳು ಭೂಚಲನವಲನದಿಂದ ಒತ್ತಡ ಉಂಟಾಗಿ ಮೇಲೆತ್ತಲ್ಪಟ್ಟಾಗ ಮಡಿಕೆಗಳು ಸಾಮಾನ್ಯವಾಗಿ ಉಂಟಾಗುವುವು. ಇವು ಒಂಟಿಯಾಗಿರುವುದಿಲ್ಲ. ಭೂಕವಚಕ್ಕೆ ತೊಡಿಸಿದ ಮಾಲೆಗಳಂತೆ ಹಲವಾರು ಚ.ಕಿಮೀ ಕೆಲವು ವೇಳೆ ನೂರಾರು ಕಿಮೀ ಉದ್ದಕ್ಕೂ ಅಗಲಕ್ಕೂ ಪ್ರಚಂಡವಾಗಿ ಗುಂಪು ಗುಂಪಾಗಿ ಹರಡಿರುತ್ತವೆ. ಮಡಿಕೆಯ ಸಮೂಹಗಳು ಸಾಧಾರಣವಾಗಿ ಅನೇಕ ಬಗೆಯ ರಚನಾ ವಿನ್ಯಾಸಗಳಿಂದ ಕೂಡಿ ವಿವಿಧ ರೀತಿಯ ಸಣ್ಣ ಮಟ್ಟ ಮಡಿಕೆಗಳು ಅಗಾಧ ಪ್ರಮಾಣದಲ್ಲಿ ದೊಡ್ಡ ದೊಡ್ಡ ಮಡಿಕೆಗಳ ಪಾರ್ಶ್ವಗಳಲ್ಲಿ ರೂಪುಗೊಂಡಿರುತ್ತವೆ. ಇಂಥ ಒಂದು ಬೃಹತ್ ರಚನೆಯನ್ನು ವಿಮುಖಾವನತ (ಆ್ಯಂಟಿಕ್ಲೈನೋರಿಯಮ್) ಎಂದು ಕರೆಯುತ್ತಾರೆ. ಇದೇ ರೀತಿ ಅನೇಕ ಸಣ್ಣ ಮಡಿಕೆಗಳನ್ನು ಒಳಗೊಂಡಿರುವ ಅಗಾಧವಾದ ಏಕಮುಖಾವನತ ಮಡಿಕೆಯನ್ನು ಏಕಮುಖಾವನತ ಮಡಿಕಾಸರಣಿ (ಸಿಂಕ್ಲೈನೋರಿಯಮ್) ಎನ್ನುವರು. ಮಡಿಕೆಯ ಸಮೂಹಗಳಲ್ಲಿಯ ಸಣ್ಣ ಮಡಿಕೆಗಳ ಉತ್ಪತ್ತಿ ಸಂಬಂಧ ಎಷ್ಟೇ ಜಟಿಲವಾಗಿದ್ದರೂ ಅವುಗಳ ಅಕ್ಷರೇಖೆಗಳ ಜಾಡು ಮಾತ್ರ ಪರಸ್ಪರ ಸಮಾಂತರವಾಗಿರುವುವು. ಕೆಲವು ಪ್ರದೇಶಗಳಲ್ಲಿ ಹಲವಾರು ಆವರ್ತನದ ಮಡಿಕೆಗಳಿದ್ದರೆ ಅಂಥ ಕಡೆಗಳಲ್ಲಿ ಸಣ್ಣ ಮಡಿಕೆಗಳ ಅಕ್ಷರೇಖೆಗಳ ಜಾಡು ಅಸ್ತವ್ಯಸ್ತಗೊಂಡು ಭೂಚಲನವಲನವನ್ನನುಸರಿಸಿ ವಿವಿಧ ರೀತಿಯ ತಿರುವುಗಳನ್ನು ಹೊಂದಿರುತ್ತವೆ.

(ಪಿ.ಎಂ.)

**ಮಡಿಕೇರಿ :** ಕೊಡುಗು ಜಿಲ್ಲೆಯ ಒಂದು ತಾಲ್ಲೂಕು ಹಾಗೂ ತಾಲ್ಲೂಕಿನ ಮತ್ತು ಜಿಲ್ಲೆಯ ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕನ್ನು ಪೂರ್ವದಲ್ಲಿ ಸೋಮವಾರಪೇಟೆ ಮತ್ತು ವಿರಾಜಪೇಟೆ ತಾಲ್ಲೂಕುಗಳೂ ಉತ್ತರ, ವಾಯವ್ಯ ಮತ್ತು ಪಶ್ಚಿಮದಲ್ಲಿ ದಕ್ಷಿಣಕನ್ನಡ ಜಿಲ್ಲೆಯೂ ನೈರುತ್ಯ ಮತ್ತು ದಕ್ಷಿಣದಲ್ಲಿ ಕೇರಳ ರಾಜ್ಯವೂ ಸುತ್ತುವರಿದಿವೆ. ಮಡಿಕೇರಿ, ಭಾಗಮಂಡಲ ಮತ್ತು ನಾಪೋಕ್ಲು ಹೋಬಳಿಗಳು (ನಾಡುಗಳು). 74 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,526 ಚ.ಕಿಮೀ. ಜನಸಂಖ್ಯೆ 1,41,547. ಕೊಡಗುಜಿಲ್ಲೆ ಮೈಸೂರಿಗೆ ಸೇರಿದಾಗ ಈಗಿನ ಮಡಿಕೇರಿ ತಾಲ್ಲೂಕಿನ ರಚನೆಯಾಯಿತು (1953 ಡಿಸೆಂಬರ್ 15).

ಮೇಲ್ಮೈ ಲಕ್ಷಣ: ಇದರ ಪಶ್ಚಿಮ ಭಾಗದಲ್ಲಿ ಎತ್ತರವಾದ ಪಶ್ಚಿಮ ಘಟ್ಟಗಳಿವೆ. ಬ್ರಹ್ಮಗಿರಿ ಶ್ರೇಣಿ ಕೊಡಗು ಜಿಲ್ಲೆಯನ್ನು ವೈನಾಡಿನಿಂದ ಬೇರ್ಪಡಿಸಿದೆ. ಈ ಶ್ರೇಣಿಯಲ್ಲಿ ಹನುಮಾನ ಬೆಟ್ಟ, ಕಡಂಗ ಮಾಲೆ ಮತ್ತು ಪೆರುಮಾಳ ಮಲೆ ಬೆಟ್ಟಗಳಿವೆ. ತಾಲ್ಲೂಕಿನ ದಕ್ಷಿಣದಲ್ಲಿ ಜಿಲ್ಲೆಯಲ್ಲೇ ಅತ್ಯುನ್ನತವಾದ 1,745 ಮೀ ಎತ್ತರದ ತಡಿಯಂಡಮೋಳು ಬೆಟ್ಟವಿದೆ. ಇದೇ ಬೆಟ್ಟಸಾಲು ಪೂರ್ವಕ್ಕೆ ಮುಂದುವರಿದು ಮಡಿಕೇರಿ ಬಳಿ ವಾಯವ್ಯಕ್ಕೆ ತಿರುಗುತ್ತದೆ. ಇಲ್ಲೆ ಸಂಪಾಜೆ ಕಣಿವೆಯಿದೆ. ತಡಿಯಂಡಮೋಳುವಿನ ಈಶಾನ್ಯದಲ್ಲಿ ಪಡಿತೋರದ ಬಳಿ ಇಗ್ಗುತಪ್ಪಕುಂಡ ಇದೆ. 5 ಕಿಮೀ ಮುಂದಕ್ಕೆ ಪೆರೂರ್ ಬೆಟ್ಟವಿದೆ. 7 ಕಿಮೀ ದೂರದಲ್ಲಿ ಶ್ರೀಮಂಗಲ ಶಿಖರವಿದೆ. ಶ್ರೀಮಂಗಲ ಬೆಟ್ಟದ ಸಾಲಿನಲ್ಲೇ ಕಾವೇರಿಯ ಜನ್ಮಸ್ಥಳ ಬ್ರಹ್ಮಗಿರಿ ಇದೆ. ಮಡಿಕೇರಿಯ ಉತ್ತರಕ್ಕೆ 14 ಕಿಮೀ ದೂರದಲ್ಲಿ ಸುಬ್ರಹ್ಮಣ್ಯ ಪರ್ವತಶ್ರೇಣಿಗೆ ಸೇರಿದ ಕೋಟೆಬೆಟ್ಟವಿದೆ. ಇಡೀ ತಾಲ್ಲೂಕು ಬೆಟ್ಟ-ಗುಡ್ಡ ಪರ್ವತಮಯವಾಗಿದ್ದು ಹಸುರು ಕಾಡುಗಳಿಂದ ಮತ್ತು ಹುಲ್ಲುಗಾವಲುಗಳಿಂದ ಆವರಿಸಿದೆ.

ನದಿಗಳು: ಕೊಡಗಿನ ಮುಖ್ಯನದಿ ಕಾವೇರಿ. ಈ ತಾಲ್ಲೂಕಿನ ಬ್ರಹ್ಮಗಿರಿಯ ತಲಕಾವೇರಿಯಲ್ಲಿ ಇದರ ಉಗಮ. ಕನ್ನಿಕೆ ಭಾಗಮಂಡಲದ ಬಳಿ ಕಾವೇರಿಯನ್ನು ಸೇರುತ್ತದೆ. ಸುಜ್ಯೋತಿ ಎಂಬ ಗುಪ್ತಗಾಮಿ ನದಿಯೂ ಇಲ್ಲಿ ಸೇರುವುದರಿಂದ ಈ ಸ್ಥಳವನ್ನು ದಕ್ಷಿಣದ ಪ್ರಯಾಗವೆನ್ನುವರು. ಇದರ ಜೊತೆಗೆ ಕಕ್ಕಬ್ಬೆ, ಮುತ್ತರೆ ಮುಟ್ಟ ಈ ನದಿಗಳೂ ಕಾವೇರಿಯನ್ನು ಸೇರುತ್ತವೆ. ಪಶ್ಚಿಮದ ಕಡೆ ಹರಿಯುವ ಈ ತಾಲ್ಲೂಕಿನ ನದಿಗಳಲ್ಲಿ ನಿಜಕಲ್ ಮುಖ್ಯವಾದುದು. ಇದು ಸಂಪಾಜೆ ಕಣಿವೆಯ ಮುಖಾಂತರ ಹರಿದು ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತಲಕಾವೇರಿ ಬಳಿಯ ಸುಳ್ಯದ ಬಳಿ ಹುಟ್ಟುವ ಬಸವಾಳಿ ಹೊಳೆ ವಾಯವ್ಯದ ಕಡೆ ಹರಿಯುತ್ತದೆ. ಪಶ್ಚಿಮದ ಕಡೆ ಹರಿಯುವ ಮುಂಡ್ರೋತು ಮತ್ತು ಪೆರಿಯಮಲೆ ಹೊಳೆಗಳು ತಾಲ್ಲೂಕಿನ ಎಲ್ಲೆಯ ಬಳಿ ಒಂದಾಗಿ ಕೇರಳವನ್ನು ಪ್ರವೇಶಿಸುತ್ತವೆ.

ವಾಯುಗುಣ: ಈ ತಾಲ್ಲೂಕಿನ ವಾಯುಗುಣ ಉಲ್ಲಾಸದಾಯಕವಾದದ್ದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 323 ಸೆಂಮೀ. ಪಶ್ಚಿಮದಿಂದ ಪೂರ್ವದ ಕಡೆಗೆ ಮಳೆ ಕಡಿಮೆಯಾಗುತ್ತ ಹೋಗುತ್ತದೆ. ಭಾಗಮಂಡಲದಲ್ಲಿ ವರ್ಷದಲ್ಲಿ 603 ಸೆಂಮೀ ಮಳೆ ಬೀಳುತ್ತದೆ. ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಅತ್ಯಂತ ಹೆಚ್ಚು ಮಳೆಯಾಗುತ್ತದೆ. ಇದು ನೈರುತ್ಯ ಮಾನ್ಸೂನ್ ಮಾರುತಗಳಿಂದ ಸು. 130 ದಿನಗಳವರೆಗೆ ಬೀಳುತ್ತದೆ. ಮಾರ್ಚ್, ಏಪ್ರಿಲ್ ಅತ್ಯುಷ್ಣದ ತಿಂಗಳುಗಳು. ಗರಿಷ್ಠ ಉಷ್ಣತೆ $28.6^{0}$ಸೆ ಮತ್ತು ಕನಿಷ್ಠ ಉಷ್ಣತೆ $17.8^{0}$ಸೆ.

ಸಸ್ಯವರ್ಗ: ತಾಲ್ಲೂಕಿನ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಸಮೃದ್ಧವಾದ ಅರಣ್ಯ ಸಂಪತ್ತಿನ ನಿತ್ಯ ಹರಿದ್ವರ್ಣದ ಕಾಡುಗಳಿವೆ. ಕೆಲವು ಕಡೆ ಅರಣ್ಯ ಇಲಾಖೆಯವರು ಮರಗಳನ್ನು ಬೆಳೆಸಿದ ನೆಡುತೋಪುಗಳಿವೆ. ಬೀಟೆ ಮರಗಳನ್ನು ಬೆಳೆಸಲಾಗುತ್ತದೆ. ಇಲ್ಲಿಂದ ಸಾಗುವಾನಿ ಮೋಪುಗಳನ್ನು ಹುಣಸೂರಿಗೆ ಕಳುಹಿಸುತ್ತಾರೆ. ರಕ್ಷಿತ ಅರಣ್ಯ ಪ್ರದೇಶಗಳುಂಟು.

ಕೃಷಿ: ಬತ್ತ ಮುಖ್ಯ ಬೆಳೆ. ಇದನ್ನು ಹೆಚ್ಚು ಮಳೆ ಬೀಳುವ ತಗ್ಗು ಬಯಲು ಕಣಿವೆಗಳಲ್ಲಿ ಬೆಳೆಸುತ್ತಾರೆ. ಕೆಲವು ಕಡೆ ವರ್ಷಕ್ಕೆ ಎರಡು ಬೆಳೆ ತೆಗೆಯುವುದೂ ಉಂಟು. ನೂರಾರು ವರ್ಷಗಳಿಂದಲೂ ಈ ತಾಲ್ಲೂಕಿನಲ್ಲಿ ಕಾಫಿ ಬೆಳೆಯಲಾಗುತ್ತಿದೆ. ಟೀ ತೋಟಗಳೂ ಸ್ವಲ್ಪ ಇವೆ. ದಕ್ಷಿಣ ಭಾರತದಲ್ಲೆಲ್ಲ ಖ್ಯಾತಗೊಂಡಿರುವ ಕೊಡಗಿನ ಕಿತ್ತಳೆಯನ್ನು ಹೇರಳವಾಗಿ ಬೆಳೆಯುತ್ತಾರೆ. ಏಲಕ್ಕಿ ಮತ್ತೊಂದು ಮುಖ್ಯ ಆರ್ಥಿಕ ಬೆಳೆ. ಕರಿಮೆಣಸನ್ನೂ ಹೇರಳವಾಗಿ ಬೆಳೆಯುತ್ತಾರೆ. ಜೊತೆಗೆ ರಾಗಿ, ಅಡಕೆ ಮತ್ತು ತೆಂಗುಗಳನ್ನು ಅಲ್ಲಲ್ಲಿ ಬೆಳೆಯುತ್ತಾರೆ. ಸಂಪಾಜೆಯಲ್ಲಿ ರಬ್ಬರ್ ತೋಟಗಳು ಮತ್ತು ಗೇರುಮರಗಳು ಇವೆ. ಮಡಿಕೇರಿ ಬಳಿ ಸರ್ಕಾರಿ ವ್ಯವಸಾಯ ಫಾರಮ್ ಇದೆ.

ಜೇನುಸಾಕಣೆ ಒಂದು ಮುಖ್ಯ ಉಪ ಕಸುಬು. ಚಾಪೆ ಹೆಣೆಯುವ, ಮಡಕೆಮಾಡುವ ಗೃಹಕೈಗಾರಿಕೆಗಳುಂಟು. ಭಾಗಮಂಡಲದಲ್ಲಿ ಮಧುವನ ಎಂಬ ಜೇನು ಕೃಷಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ನಾಪೋಕ್ಲುವಿನಲ್ಲಿ ಮಣ್ಣಿನ ಪಾತ್ರೆಗಳು, ಸಂಪಾಜೆಯಲ್ಲಿ ರಬ್ಬರ್, ಮಡಿಕೇರಿಯಲ್ಲಿ ತೆಳು ಪ್ಲಾಸ್ಟಿಕ್ ಚೀಲಗಳನ್ನು ಮಾಡುವ ಮತ್ತು ಪಾತ್ರೆಗಳನ್ನು ತಯಾರಿಸುವ ಹಾಗೂ ಬತ್ತದ ಗಿರಣಿಗಳು, ಮರಕೊಯ್ಯುವ ಕಾರ್ಖಾನೆಗಳು ಇವೆ. ಈ ತಾಲ್ಲೂಕಿನಿಂದ ಕಾಫಿ, ಬತ್ತ, ಕಿತ್ತಳೆ, ಏಲಕ್ಕಿ, ಜೇನುತುಪ್ಪ, ಮರದದಿಮ್ಮಿಗಳು ಮತ್ತು ರಬ್ಬರನ್ನು ರಫ್ತು ಮಾಡಲಾಗುತ್ತದೆ. ಎಣ್ಣೆ, ಮಸಾಲೆ ವಸ್ತುಗಳು, ನೇಯ್ದೆ ಬಟ್ಟೆಗಳು, ಉಪ್ಪು, ಇತ್ಯಾದಿ ನಿತ್ಯೋಪಯೋಗಿ ವಸ್ತುಗಳನ್ನು ಆಮದುಮಾಡಿಕೊಳ್ಳಲಾಗುತ್ತದೆ.

ಇಲ್ಲಿಯ ಕೊಡವರು ಕೊಡವ ಭಾಷೆಯನ್ನು ಆಡುವರು. ಕೈಲ್‌ಪೊಳದ್, ಕಾವೇರಿ ಸಂಕ್ರಮಣ, ಹುತ್ತರಿ ಇವರ ಮುಖ್ಯ ಹಬ್ಬಗಳು. ನೃತ್ಯಗಳಲ್ಲಿ ಪರಿಯಕಳಿ ಮತ್ತು ಬೋಳುಕಾಟ ಮುಖ್ಯವಾದವು.




ಸಾರಿಗೆ: ಕೊಡಗಿನ ಹೆದ್ದಾರಿಗಳು ಈ ತಾಲ್ಲೂಕಿನಲ್ಲಿವೆ ಮೈಸೂರು-ಮಂಗಳೂರು ಇತ್ಯಾದಿ ಮಡಿಕೇರಿ ಸಂಪಾಜೆಗಳ ಮುಖಾಂತರ ದಕ್ಷಿಣ ಕನ್ನಡವನ್ನು ಪ್ರವೇಶಿಸುವುದು. ಮಡಿಕೇರಿಯಿಂದ ದಕ್ಷಿಣದ ಕಡೆಗೆ ವಿರಾಜಪೇಟೆಯ ಮುಖಾಂತರ ಕೇರಳದ ತಲಚೇರಿಯನ್ನೂ ಈಶಾನ್ಯದ ಕಡೆ ಸೋಮವಾರಪೇಟೆಯ ಮುಖಾಂತರ ಹಾಸನ ಜಿಲ್ಲೆಯನ್ನೂ ಮೂರ್ನಾಡಿನ ಮುಖಾಂತರ ವಿರಾಜಪೇಟೆಯನ್ನು ತಲಪುವ ಹೆದ್ದಾರಿಗಳಿವೆ. ಮಡಿಕೇರಿ-ಭಾಗಮಂಡಲ-ತಲಕಾವೇರಿ, ನಾಪೋಕ್ಲು-ವಿರಾಜಪೇಟೆ ರಸ್ತೆಗಳ ಜೊತೆಗೆ ಇನ್ನು ಕೆಲವು ಉತ್ತಮ ರಸ್ತೆಗಳಿವೆ. ರೈಲುಸಾರಿಗೆ ಇಲ್ಲ. ತಾಲ್ಲೂಕಿನಲ್ಲಿ ವಿದ್ಯುತ್, ಅಂಚೆ, ತಂತಿ, ದೂರವಾಣಿ ಸೌಲಭ್ಯಗಳೂ ಬ್ಯಾಂಕುಗಳೂ ಸಹಕಾರಿಸಂಘಗಳೂ ಶಾಲಾಕಾಲೇಜುಗಳೂ ಸರ್ಕಾರಿ ಆಸ್ಪತ್ರೆ, ವೈದ್ಯಾಲಯಗಳೂ ಇವೆ.

ಭಾಗಮಂಡಲ ಮಡಿಕೇರಿಯ ಪಶ್ಚಿಮಕ್ಕೆ ಇದೆ. ಇಲ್ಲಿಯ ಸಂಗಮ ಕ್ಷೇತ್ರದಲ್ಲಿ ತುಲಾ ಸಂಕ್ರಮಣದಂದು ಪವಿತ್ರ ಸ್ನಾನಕ್ಕಾಗಿ ಯಾತ್ರಿಕರು ಬರುತ್ತಾರೆ.

ಪಡಿತೋರ ಕಣಿವೆ ಬಳಿಯ ಕಾಡಿನಲ್ಲಿ ಕೊಡವರ ಆರಾಧ್ಯದೇವತೆ ಇಗ್ಗುತಪ್ಪ (ಸುಬ್ರಹ್ಮಣ್ಯ) ದೇವರ ಬೆಟ್ಟವಿದೆ. ವಿಷ್ಣು ಸಂಕ್ರಮಣದಂದು ಇಲ್ಲಿ ಪ್ರಸಿದ್ಧ ಜಾತ್ರೆ ನಡೆಯುತ್ತದೆ. ಮಡಿಕೇರಿಗೆ 5 ಕಿಮೀ ದೂರದಲ್ಲಿ ಅಬ್ಬಿ ಜಲಪಾತವಿದೆ. ಮಡಿಕೇರಿಯ ದಕ್ಷಿಣದಲ್ಲಿ 21 ಕಿಮೀ ದೂರದಲ್ಲಿ ಬಲಮುರಿಯಿದೆ. ಇದೊಂದು ಯಾತ್ರಾಸ್ಥಳ. ಮಡಿಕೇರಿಗೆ 10 ಕಿಮೀ ದೂರವಿರುವ ಹಾಲೇರಿ ಐತಿಹಾಸಿಕ ಸ್ಥಳ. ದೊಡ್ಡವೀರರಾಜೇಂದ್ರ 1792ರಲ್ಲಿ ಯುವಕಪಾಡಿ ಗ್ರಾಮದ ಬಳಿ ಕಟ್ಟಿಸಿದ ನಾಲ್ಕುನಾಡು ಅರಮನೆ ಇದೆ.

ಮಡಿಕೇರಿ ಕೊಡಗು ಜಿಲ್ಲೆಯ ಮತ್ತು ಅದೇ ತಾಲ್ಲೂಕು ಹಾಗೂ ಹೋಬಳಿಯ ಆಡಳಿತ ಕೇಂದ್ರ ಪಟ್ಟಣ. ಉತ್ತರ ಅಕ್ಷಾಂಶ $12^{0}25'$, ಪೂರ್ವ ರೇಖಾಂಶ $75^{0}45'$ ಮೈಸೂರಿನ ಪಶ್ಚಿಮಕ್ಕೆ 121 ಕಿಮೀ ದೂರದಲ್ಲೂ ಮಂಗಳೂರಿನ ಆಗ್ನೇಯಕ್ಕೆ 135 ಕಿಮೀ ದೂರದಲ್ಲೂ ಈ ಪಟ್ಟಣವಿದೆ. ಜನಸಂಖ್ಯೆ 32,496. ರೈಲುಮಾರ್ಗ ಇಲ್ಲದಿದ್ದರೂ ಮೈಸೂರು-ಮಂಗಳೂರು ಸಂಚಾರ ಮಾರ್ಗದ ಹೆದ್ದಾರಿಯ ಮಧ್ಯದಲ್ಲಿದ್ದು ಉತ್ತಮ ಸಂಪರ್ಕ ಸೌಲಭ್ಯ ಪಡೆದಿದೆ. ನಗರಜೀವನದ ಇತರ ಎಲ್ಲ ಸೌಕರ್ಯಗಳೂ ಇಲ್ಲಿವೆ. ಶಾಲೆ, ಕಾಲೇಜು, ಸರ್ಕಾರಿ ಕಚೇರಿ, ಸಾರ್ವಜನಿಕ ಸಂಸ್ಥೆ, ಬ್ಯಾಂಕು, ಸರ್ಕಾರಿ ಆಸ್ಪತ್ರೆ, ಪಶುವೈದ್ಯಾಲಯ, ಸರ್ಕಾರಿ ಮುದ್ರಣಾಲಯ, ಕೈಗಾರಿಕಾ ತರಬೇತಿ ಕೇಂದ್ರ ಮುಂತಾದವುಗಳಿವೆ. ವ್ಯಾಪಾರಕೇಂದ್ರ, ಪುರಸಭಾಡಳಿತವಿದೆ. ಪಟ್ಟಣ ಸಮುದ್ರಮಟ್ಟದಿಂದ ಸು. 1189 ಮೀ ಎತ್ತರವಿದ್ದು ವರ್ಷಪೂರ್ತಿ ತಂಪಾದ ಹವೆ ಇರುತ್ತದೆ. ಕೊಡಗಿನ ಹಾಲೇರಿ ಮನೆತನದ ಮುದ್ದುರಾಜ ಈಗಿನ ಮಡಿಕೇರಿಯನ್ನು 1681ರಲ್ಲಿ ನಿರ್ಮಿಸಿ ಹಾಲೇರಿಯಿಂದ ಇಲ್ಲಿಗೆ ತನ್ನ ರಾಜಧಾನಿ ಬದಲಾಯಿಸಿದ. ಇವನ ಹೆಸರಿನಲ್ಲಿ ಮುದ್ದುಕೇರಿಯೆಂದು ಹೆಸರಾಗಿ ಮುಂದೆ ಮಡಿಕೇರಿಯಾಯಿತು. (ಪಿ.ಬಿ.)

**ಮಣಿಪುರ:** ಈಶಾನ್ಯ ಭಾರತದ ಒಂದು ರಾಜ್ಯ. ಈ ರಾಜ್ಯವನ್ನು ಪೂರ್ವ ಮತ್ತು ದಕ್ಷಿಣದಲ್ಲಿ ಮಯನ್ಮಾರ್, ನೈರುತ್ಯದಲ್ಲಿ ಮಿಜೋರಾಮ್, ಪಶ್ಚಿಮದಲ್ಲಿ ಅಸ್ಸಾಮ್, ಉತ್ತರದಲ್ಲಿ ನಾಗಾಲ್ಯಾಂಡ್ ರಾಜ್ಯಗಳು ಸುತ್ತುವರಿದಿವೆ. ಮಣಿಪುರ ರಾಜ್ಯವನ್ನು ಇತ್ತೀಚೆಗೆ (1983 ಮೇ 25) ಎಂಟು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ ಜನಸಂಖ್ಯೆ 2,45,947 (2001). ರಾಜ್ಯದ ಒಟ್ಟು ವಿಸ್ತೀರ್ಣ 22,356 ಚ.ಕಿಮೀ ರಾಜಧಾನಿ: ಇಂಫಾಲ್.

ಪ್ರಾಕೃತಿಕ ಲಕ್ಷಣ: ಮಣಿಪುರದ ಒಟ್ಟು ಮೇಲ್ಮೈ ವಿಸ್ತೀರ್ಣದಲ್ಲಿ ಶೇಕಡಾ 90ಕ್ಕೂ ಹೆಚ್ಚು ಭಾಗ ಬೆಟ್ಟ ಗುಡ್ಡಗಳಿಂದ ತುಂಬಿದೆ. ಉಳಿದ ಅತ್ಯಲ್ಪ ಬಯಲು ಪ್ರದೇಶದಲ್ಲಿ ಮಣಿಪುರ ಕೊಳ್ಳವೇ ದೊಡ್ಡದು. ಇದು ರಾಜ್ಯದ ಮಧ್ಯದಲ್ಲಿದೆ. ಎತ್ತರ ಸಮುದ್ರಮಟ್ಟದಿಂದ 750 ಮೀ ಸುತ್ತಲೂ ಪರ್ವತಗಳು ಆವರಿಸಿವೆ. ರಾಜಧಾನಿ ಇಂಫಾಲ್ ಈ ಕೊಳ್ಳದಲ್ಲೇ ಇದೆ. ಪರ್ವತಗಳು ಉತ್ತರದಕ್ಷಿಣವಾಗಿದ್ದು ಕೆಲವು 2,700 ಮೀ ಗಿಂತ ಎತ್ತರವಾಗಿವೆ. ಉತ್ತರದಲ್ಲಿ ನಾಗಾಪರ್ವತ, ಪೂರ್ವದಲ್ಲಿ ಮಯನ್ಮಾರ್‌ನ ಗಡಿಯಾಗಿ ಮಣಿಪುರ ಪರ್ವತ, ದಕ್ಷಿಣದಲ್ಲಿ ಲುಶಾಯಿ ಮತ್ತು ಪಶ್ಚಿಮದಲ್ಲಿ ಚಿನ್ ಪರ್ವತಗಳಿವೆ.

ನದಿಗಳು: ಇಲ್ಲಿಯ ನದಿಗಳಲ್ಲಿ ಇಂಫಾಲ್ ಅಥವಾ ಮಣಿಪುರ, ಇರಿಲ್, ಥೌಬಾಲ್ ಮತ್ತು ಬರಕ್ ಪ್ರಧಾನವಾದವು. ಮುಖ್ಯವಾದ ಇಂಫಾಲ್ ನದಿ ರಾಜಧಾನಿಯ ಬದಿಯಲ್ಲೇ ಹರಿದು ದಕ್ಷಿಣದಲ್ಲಿ ಇರಿಲ್, ಥೌಬಾಲ್ ನದಿಗಳನ್ನು ಸೇರಿಸಿಕೊಂಡು ದಕ್ಷಿಣದ ಆಳವಾದ ಕಣಿವೆ ಮೂಲಕ ಹರಿದು ಮಯನ್ಮಾರಿನಲ್ಲಿ ಚಿಂದ್ವಿನ್ ನದಿಯನ್ನು ಸೇರುತ್ತದೆ. ಬರಕ್ ನದಿ ನೈರುತ್ಯದಲ್ಲಿ ಅಸ್ಸಾಮ್ ರಾಜ್ಯವನ್ನು ಅಡ್ಡಹಾಯ್ದು ಬಾಂಗ್ಲಾ ದೇಶದಲ್ಲಿ ಸರಮಾ ಎಂಬ ಹೆಸರಿನಿಂದ ಪ್ರವಹಿಸುವುದು. ಈ ರಾಜ್ಯದ ಒಂದು ಪ್ರಾಕೃತಿಕ ವಿಶೇಷವೆಂದರೆ ಇಲ್ಲಿ ಅನೇಕ ಗಿರಿಸರೋವರಗಳಿರುವುದು. ಇವುಗಳಲ್ಲಿ ಅತಿ ದೊಡ್ಡದಾದ ಲಾಕ್‌ಟಾಕ್ ಸರೋವರ ಮಳೆಗಾಲದಲ್ಲಿ 100 ಚ.ಕಿಮೀ ವಿಸ್ತಾರವಿದ್ದರೆ ಬೇಸಗೆಯಲ್ಲಿ 64 ಚ.ಕಿಮೀ ವಿಸ್ತಾರವುಳ್ಳದ್ದಾಗಿರುತ್ತದೆ. ಇದರ ನಡುವೆ ಎದ್ದಿರುವ ಗಿರಿಕೋಡುಗಳು ಕೆಲವು ದ್ವೀಪಗಳನ್ನು ನಿರ್ಮಿಸಿವೆ. ಇವುಗಳಲ್ಲಿ ಬೆಸ್ತರ ವಸತಿಗಳಿವೆ. ಇಲ್ಲಿಯ ಎಲ್ಲ ಸರೋವರಗಳೂ ಖಾದ್ಯ ಮತ್ಸ್ಯಗಳಿಗೆ ಆಶ್ರಯವಾಗಿವೆ.

ವಾಯುಗುಣ: ಈ ರಾಜ್ಯದ ಹವಾಗುಣ ತಗ್ಗುಪ್ರದೇಶಗಳಲ್ಲಿ ಹಿತಕರ ಮತ್ತು ಸಮಶೀತೋಷ್ಣವಾಗಿದ್ದರೆ ಪರ್ವತಪ್ರದೇಶಗಳಲ್ಲಿ ಶೀತವಾಗಿದೆ. ವಾರ್ಷಿಕ ಸರಾಸರಿ ಮಳೆ 170 ಸೆಂಮೀ.

ಸಸ್ಯ-ಪ್ರಾಣಿ ಸಂಪತ್ತು: ರಾಜ್ಯದಲ್ಲಿ ಒಟ್ಟು 16,926 ಚ.ಕಿಮೀ ಕಾಡುಪ್ರದೇಶವಿದೆ. ಇದರಲ್ಲಿ 5,710 ಚ.ಕಿಮೀ ದಟ್ಟವಾದ ಅರಣ್ಯವಿದೆ. ಉಳಿದದ್ದು ತೆರೆದ ಕಾಡುಗಳು. ರಾಜ್ಯದ ಭೌಗೋಳಿಕ ಕ್ಷೇತ್ರದಲ್ಲಿ ಶೇ. 76 ಭಾಗ ಅರಣ್ಯಗಳಿಂದಾವೃತ. ಮ್ಯಗ್ನೋಲಿಯ ಬೆಂಕುವಾಪಿನ್, ಸೂಚಿಪರ್ಣಿ ಮೊದಲಾದ ವೃಕ್ಷಗಳಿದ್ದರೂ ತೇಗ ಮತ್ತು ಬಿದಿರು ಆರ್ಥಿಕ ದೃಷ್ಟಿಯಿಂದ ಮಹತ್ತ್ವ ಹೊಂದಿವೆ. ಜಿರಿ ಮತ್ತು ಬರಕ್ ನದಿಗಳ ಜಲಾನಯನ ಪ್ರದೇಶದ 2,585 ಚ.ಕಿಮೀ ವಿಸ್ತೀರ್ಣದಲ್ಲೇ ವರ್ಷಕ್ಕೆ ಮೂರು ಲಕ್ಷ ಟನ್ ಬಿದಿರು ಕಡಿಯಲಾಗುತ್ತದೆ. ಆನೆ, ಹುಲಿ, ಚಿರತೆ, ಕಾಡುಕೋಣ, ಪ್ರಪಂಚದಲ್ಲೇ ದೊಡ್ಡಗಾತ್ರದ್ದಾದ ಕಾಡುಹೋರಿ ಗೌರ್, ಅಲ್ಲದೆ, ಏಕಶೃಂಗ ಖಡ್ಗ ಮೃಗಗಳೂ ಹುಬ್ಬುಗೋಡಿನ ಜಿಂಕೆಗಳೂ ಇಲ್ಲಿಯ ಉಲ್ಲೇಖಾರ್ಹ ವನ್ಯಮೃಗಗಳು. ಆದರೆ ಅತಿಬೇಟೆಯ ಕಾರಣವಾಗಿ ಖಡ್ಗಮೃಗ ಮತ್ತು ಜಿಂಕೆಗಳ ಸಂಖ್ಯೆ ಇಳಿಮುಖವಾಗಿದೆ.

ರಾಜ್ಯದ ಮುಖ್ಯಬೆಳೆ ಬತ್ತ, ಗೋದಿ, ಮುಸುಕಿನ ಜೋಳ ಹಾಗೂ ಇತರ ದ್ವಿದಳ ಧಾನ್ಯಗಳನ್ನು ಕೂಡ ಬೆಳೆಸುವುದುಂಟು. ತೋಟಗಾರಿಕೆಯಲ್ಲಿ ಕಿತ್ತಳೆ, ಅನಾನಸ್, ಬಾಳೆ, ಪೀಚ್ ಮುಂತಾದ ಫಲಗಳನ್ನು ಬೆಳೆಯುತ್ತಾರೆ. ಮತ್ಸ್ಯೋದ್ಯಮವುಂಟು. ಮಣಿಪುರ

ರಾಜ್ಯದಲ್ಲಿ ಲಾಕ್‌ಟಾಕ್, ಸಿಂಗ್ಡ, ಇಂಫಾಲ್ ಬ್ಯಾರೇಜ್, ಕೊಪಮ್, ಸಕಮೈಬ್ಯಾರೇಜ್, ಥೌಬಾಲ್ ಮತ್ತು ಕೂಗ ಎಂಬ 7 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. 1930ರಿಂದಲೇ ಈ ರಾಜ್ಯದಲ್ಲಿ ವಿದ್ಯುದುತ್ಪಾದನೆಯನ್ನು ಆರಂಭಿಸಲಾಯಿತಾದರೂ ಇನ್ನೂ ರಾಜ್ಯದಲ್ಲಿ ಸಾಕಷ್ಟು ವಿದ್ಯುತ್ತಿನ ಪೂರೈಕೆ ಆಗುತ್ತಿಲ್ಲ. 1983ರಲ್ಲಿ ಡೀಸೆಲ್ ಜನರೇಟರ್‌ಗಳಿಂದ 22 ಮೆವಾ. ವಿದ್ಯುತ್ ಉತ್ಪಾದಿಸಲಾಗುತ್ತಿತ್ತು.

ಕೈಗಾರಿಕೆ: ಇಲ್ಲಿಯ ಪ್ರಮುಖ ಕೈಗಾರಿಕೆಯೆಂದರೆ ಕೈಮಗ್ಗದ ಬಟ್ಟೆ ತಯಾರಿಕೆ. ಮಣಿಪುರಿಯ ಚಿತ್ತಾಕರ್ಷಕ ಕೈಮಗ್ಗದ ಬಟ್ಟೆಗಳಿಗೆ ಹೆಚ್ಚು ಬೇಡಿಕೆ ಇದೆ. ರೇಷ್ಮೆ ಉದ್ಯಮಕ್ಕೆ ಬೇರೆ ಯೋಜನೆ ಕಲ್ಪಿಸಲಾಗಿದೆ. ಚಿಕ್ಕ ಸಿಮೆಂಟ್ ಕಾರ್ಖಾನೆಗಳು, ಕಾಗದ, ಸಕ್ಕರೆ ತಯಾರಿಕಾ ಕಾರ್ಖಾನೆಗಳು ಇವೆ.

ಸಾರಿಗೆ: ರಾಜ್ಯದಲ್ಲಿ ಒಟ್ಟು 11,434 ಕಿಮೀ ರಸ್ತೆಮಾರ್ಗಗಳಿದ್ದು, ಅದರಲ್ಲಿ 3,816 ಕಿಮೀ ಸುಧಾರಿತ ರಸ್ತೆಗಳು. ಸಂಖ್ಯೆ 39, 53 ಮತ್ತು 150 ರಾಷ್ಟ್ರೀಯ ಹೆದ್ದಾರಿಗಳು ರಾಜ್ಯದಲ್ಲಿ ಹಾಯ್ದು ಹೋಗುತ್ತವೆ. 1990 ರಲ್ಲಿ ಜಿರಿಬಾಮ್‌ನಲ್ಲಿ ರೈಲ್ವೆ ಕೇಂದ್ರವೊಂದನ್ನು ಸ್ಥಾಪಿಸುವುದರೊಂದಿಗೆ ರಾಜ್ಯದ ನಕ್ಷೆಯಲ್ಲಿ ರೈಲು ಸಾರಿಗೆ ಸೇರಿದೆ. ಇಂಪಾಲ ವಿಮಾನ ಸಂಪರ್ಕ ಕೇಂದ್ರ. ಇದು ಇತರ ವಿಮಾನ ನಿಲ್ದಾಣಗಳಿಗೆ ವಾಯು ಸಂಚಾರ ಕಲ್ಪಿಸುತ್ತದೆ.

ಈ ರಾಜ್ಯದ ಶೇ. 65 ಮಂದಿ ಆಡುವ ಭಾಷೆ ಮಣಿಪುರಿ. ರಾಜಧಾನಿ ಇಂಫಾಲಕ್ಕೆ ರಾಷ್ಟ್ರೀಯ ಹೆದ್ದಾರಿಯ ಮತ್ತು ವಿಮಾನದ ಸಂಪರ್ಕವಿದೆ. ಅಂಚೆ, ತಂತಿ, ಆಸ್ಪತ್ರೆ ಮುಂತಾದವುಗಳ ಸೌಲಭ್ಯವಿದೆ. ಶಿಕ್ಷಣ ಕುರಿತಾಗಿ ಮಣಿಪುರದಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳೂ ಹಾಗೂ ವಿಜ್ಞಾನ ಕಾಲೇಜುಗಳಿವೆ. 1981ರಲ್ಲಿ ಜವಹರ್‌ಲಾಲ್ ವಿಶ್ವವಿದ್ಯಾಲಯವನ್ನು ಮಣಿಪುರ ವಿಶ್ವವಿದ್ಯಾಲಯದಲ್ಲಿ ವಿಲೀನಗೊಳಿಸಲಾಯಿತು. (ಪಿ.ಎ.ಎ.)

**ಮಣ್ಣು :** ಭೂಮಿಯ ಮೇಲ್ಭಾಗದಲ್ಲಿ ತೆಳುವಾದ ಪದರಗಳಲ್ಲಿ ಆವರಿಸಿರುವ ವಸ್ತು ಮಣ್ಣು. ಮಣ್ಣಿನಲ್ಲಿ ಅನೇಕ ಸಾವಯವ ಮತ್ತು ಜೈವಿಕಾಂಶಗಳಿವೆ. ಮಣ್ಣಿನಲ್ಲಿ ನಡೆಯುವ ನಿರಂತರ ಜೈವಿಕ, ಸಾವಯವ ಮತ್ತು ಮಾನವನ ಕೃಷಿ ಚಟುವಟಿಕೆ ಕಾರ್ಯದಿಂದ ಅದರ ರಾಸಾಯನಿಕ ಸಂಯೋಜನೆಯಲ್ಲಿ ಬದಲಾವಣೆ ಕಂಡುಬರುತ್ತದೆ. ವೈಜ್ಞಾನಿಕವಾಗಿ ಮಣ್ಣಿನ ಬಗ್ಗೆ ಅಧ್ಯಯನ ಮಾಡುವುದನ್ನು ಮಣ್ಣಿನಶಾಸ್ತ್ರ ಎಂದು ಕರೆಯುತ್ತಾರೆ.

ಮಣ್ಣಿನ ಉತ್ಪತ್ತಿ : ಮಣ್ಣು ಹಲವು ಅಂಶಗಳ ಪ್ರಭಾವದಿಂದ ನಿರ್ಮಾಣವಾಗುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಶಿಥಿಲೀಕರಣ, ವಾಯುಗುಣ, ಸಾವಯವ ವಸ್ತುಗಳ ಸಂಯೋಜನೆ, ಭೂಸ್ವರೂಪ ಮತ್ತು ಕಾಲ. ಮಣ್ಣಿನ ಪ್ರಮುಖ ಮೂಲವಸ್ತು ಶಿಲೆ. ಶಿಲೆ ಶಿಥಿಲೀಕರಣದಿಂದ ಸೂಕ್ಷ್ಮಕಣಗಳಾಗಿ ಪರಿವರ್ತನೆ ಹೊಂದುತ್ತದೆ. ಈ ಸೂಕ್ಷ್ಮಕಣಗಳೇ ಮಣ್ಣಾಗಿದೆ. ಮಣ್ಣಿನ ಖನಿಜಾಂಶವನ್ನು ಮೂಲ ಶಿಲೆಯು ನಿರ್ಧರಿಸುತ್ತದೆ. ವಾಯುಗುಣದ ಅಂಶಗಳಾದ ಉಷ್ಣಾಂಶ ಮತ್ತು ಮಳೆ ಶಿಲೆಗಳು ಶಿಥಿಲೀಕರಣಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಶಿಥಿಲೀಕರಣ ವಾಯುಗುಣದ ಪ್ರಭಾವವಿಲ್ಲದೆ ನಡೆಯುವುದಿಲ್ಲ. ಪ್ರಾಣಿಗಳ ಮತ್ತು ಸಸ್ಯವರ್ಗಗಳ ಕೊಳೆತ ಜೈವಿಕಾಂಶವು ಮಣ್ಣಿನ ಬಣ್ಣ ಮತ್ತು ವಿಧಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಭೂಮಿಯ ಇಳಿಜಾರು ಮತ್ತು ಅದರ ಸಾಮಾನ್ಯಲಕ್ಷಣಗಳು ಮಣ್ಣಿನ ಗಾತ್ರದ ಮೇಲೆ ಪ್ರಭಾವ ಬೀರುತ್ತದೆ. ಮಣ್ಣಿನ ನಿರ್ಮಾಣದಲ್ಲಿ ಕಾಲವು ಅತ್ಯಂತ ಅವಶ್ಯಕವಾದ ಮತ್ತು ಕೊನೆಯ ಅಂಶವಾಗಿದೆ. ಮಣ್ಣಿನ ನಿರ್ಮಾಣದಲ್ಲಿ ಭೌತಿಕ, ರಾಸಾಯನಿಕ, ಜೈವಿಕ ಕ್ರಿಯೆಗಳು ದೀರ್ಘಕಾಲವನ್ನು ತೆಗೆದುಕೊಳ್ಳುತ್ತವೆ.

ಮಣ್ಣಿನ ಲಕ್ಷಣಗಳು: ಮಣ್ಣು ಹಲವು ವಸ್ತುಗಳ ಸಂಯೋಜನೆಯುಳ್ಳದ್ದು. ಅವು ಪ್ರಮುಖವಾಗಿ ಘನ, ದ್ರವ, ಮತ್ತು ಅನಿಲರೂಪದಲ್ಲಿರುತ್ತವೆ. ಘನವಸ್ತುಗಳಲ್ಲಿ ಖನಿಜಗಳು, ಸಸ್ಯ ಮತ್ತು ಪ್ರಾಣಿಗಳ ಕೊಳೆತ ಜೈವಿಕಾಂಶ ಪ್ರಮುಖವಾಗಿವೆ. ದ್ರವವಸ್ತುಗಳಲ್ಲಿ ನೀರು ಮುಖ್ಯವಾಗಿದ್ದು ರಾಸಾಯನಿಕ ಕ್ರಿಯೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅನಿಲಗಳಲ್ಲಿ ಇಂಗಾಲದ ಡೈ ಆಕ್ಸೈಡ್ ಮತ್ತು ಮೀಥೇನ್ ಹೆಚ್ಚಿನ ಪ್ರಮಾಣದಲ್ಲೂ ಆಮ್ಲಜನಕ ಕಡಿಮೆ ಪ್ರಮಾಣದಲ್ಲಿರುತ್ತದೆ.

ಮಣ್ಣು ಒಳಗೊಂಡಿರುವ ಶಿಲಾ ವಸ್ತುಗಳ ಗಾತ್ರವನ್ನು ಮಣ್ಣಿನ ಕಣರಚನೆಯೆಂದು ಕರೆಯುವರು. ಮಣ್ಣಿನ ಕಣಗಳಲ್ಲಿ ಮರಳು ಅತಿದೊಡ್ಡದಾಗಿದ್ದು 2 ಮಿಮೀ ನಿಂದ –0.06 ಮಿಮೀ ಗಾತ್ರವನ್ನು ಹೊಂದಿದೆ. ರೇವೆಮಣ್ಣಿನಲ್ಲಿ 0.06 ಮಿಮೀ.ನಿಂದ –0.004 ಮಿಮಿ ಮತ್ತು ಜೇಡಿಮಣ್ಣು 0.002 ಮಿಮೀ ಗಿಂತ ಕಡಿಮೆ ಗಾತ್ರವನ್ನು ಹೊಂದಿದ್ದು, ಅತಿ ಸೂಕ್ಷ್ಮಕಣಗಳಾಗಿವೆ.

ಮಣ್ಣಿನ ಲಕ್ಷಣಗಳಲ್ಲಿ ಮಣ್ಣಿನ ಬಣ್ಣ ಪ್ರಮುಖ ಅಂಶವಾಗಿದೆ. ಮಣ್ಣು ಬಿಳಿಯ ಬಣ್ಣದಿಂದ ಕಂದು ಅಥವಾ ಕಪ್ಪುಬಣ್ಣದವರೆಗೆ ವಿವಿಧ ರೀತಿಯಲ್ಲಿ ಕಂಡುಬರುವುದು. ಮಣ್ಣಿನ ಬಣ್ಣದ ಮೇಲೆ ಕೊಳೆತ ಜೈವಿಕಾಂಶ ಹೆಚ್ಚು ಪ್ರಭಾವ ಬೀರುವುದನ್ನು ಕಾಣಬಹುದು. ಉದಾ: ಅಮೆರಿಕದ ಪ್ರೈರಿ ಹುಲ್ಲುಗಾವಲು ಪ್ರದೇಶದಲ್ಲಿ ಕೊಳೆತ ಜೈವಿಕಾಂಶದ ಪ್ರಮಾಣ ಹೆಚ್ಚಾಗಿರುವುದರಿಂದ ಮಣ್ಣು ಕಪ್ಪು ಬಣ್ಣದಿಂದ ಕೂಡಿದೆ. ಆದರೆ ಮರುಭೂಮಿಯ ಪ್ರದೇಶಗಳಲ್ಲಿ ಕೊಳೆತ ಜೈವಿಕಾಂಶದ ಪ್ರಮಾಣ ಕಡಿಮೆಯಿರುವುದರಿಂದ ತೆಳುಹಳದಿ ಅಥವಾ ಕೆಂಪು ಬಣ್ಣವನ್ನು ಹೊಂದಿರುತ್ತದೆ. ಕೆಲವು ಪ್ರದೇಶಗಳಲ್ಲಿ ಕಬ್ಬಿಣದ ಆಕ್ಸೈಡ್‌ಅನ್ನು ಹೊಂದಿರುವ ಮಣ್ಣು ಕೆಂಪು ಬಣ್ಣದಿಂದ ಕೂಡಿದೆ. ಕಬ್ಬಿಣದ ಆಕ್ಸೈಡನ್ನು ಕಡಿಮೆ ಹೊಂದಿರುವ ಮಣ್ಣು ನೀಲಿ ಅಥವಾ ಬೂದು ಬಣ್ಣವನ್ನು ಹೊಂದಿರುತ್ತದೆ.

ಮಣ್ಣಿನ ಕಣಗಳ ಜೊತೆಯಲ್ಲಿ ಅತಿ ಸೂಕ್ಷ್ಮವಾದ ರಾಸಾಯನಿಕ ಗುಣವನ್ನು ಹೊಂದಿರುವ ಕಣಗಳಿವೆ. ಇವುಗಳನ್ನು ಕೊಲಾಯಿಡ್‌ಗಳೆಂದು ಕರೆಯುವರು. ಕೊಲಾಯಿಡ್‌ಗಳು ಕೊಳೆತ ಜೈವಿಕಾಂಶ ಅಥವಾ ಸೂಕ್ಷ್ಮಕಣಗಳಾಗಿವೆ. ಈ ಸೂಕ್ಷ್ಮಕಣಗಳು ವಿದ್ಯುದ್ವಾಹಕ ಗುಣವನ್ನು ಹೊಂದಿದ್ದು ಅಯಾನುಗಳನ್ನು ತನ್ನಲ್ಲಿ ಹಿಡಿದಿಟ್ಟುಕೊಳ್ಳುತ್ತವೆ. ಕೊಲಾಯಿಡ್‌ಗಳ ಈ ಗುಣದಿಂದ ಕ್ಯಾಲ್ಸಿಯಂ, ಮೆಗ್ನೀಷಿಯಂ, ಪೊಟ್ಯಾಷಿಯಂ, ಸೋಡಿಯಂ ಮಣ್ಣಿನಲ್ಲಿ ಸೇರ್ಪಡೆಯಾಗಿ ಕ್ಷಾರೀಯ ಅಯಾನುಗಳಾಗುತ್ತವೆ. ಜಲಜನಕ ಮತ್ತು ಅಲ್ಯುಮಿನಿಯಂ ಆಮ್ಲೀಯ ಅಯಾನುಗಳು ಮಣ್ಣಿನಲ್ಲಿ ಸೇರ್ಪಡೆಯಾಗಿ ಮಣ್ಣು ಆಮ್ಲೀಯವಾಗುವುದು.

ಮಣ್ಣು ಹೊಂದಿರುವ ಆಮ್ಲೀಯ ಪ್ರಮಾಣವನ್ನು ಪಿಎಚ್ ಮಾಪನದಲ್ಲಿ ಅಳೆಯುವರು. ಮಣ್ಣು 0 ಯಿಂದ 14ರವರೆಗೆ ಪಿಎಚ್ ಮೌಲ್ಯವನ್ನು ಹೊಂದಿರುವುದು. ಮಣ್ಣಿನ ಪಿಎಚ್ ಸಾಮಾನ್ಯವಾಗಿ ಮಣ್ಣು ಹೊಂದಿರುವ ಜಲಜನಕ ಅಯಾನುಗಳ ಮೇಲೆ ಅವಲಂಬಿತವಾಗಿರುತ್ತದೆ. ಪಿಎಚ್ ಮೌಲ್ಯ 6.5ರಿಂದ 7.5ರಷ್ಟಿರುವ ಮಣ್ಣು ಬೇಸಾಯಕ್ಕೆ ಹೆಚ್ಚು ಉಪಯುಕ್ತವಾಗಿದೆ. ಆದರೆ ಪಿಎಚ್ ಮೌಲ್ಯ 7.5ಕ್ಕಿಂತ ಹೆಚ್ಚಾಗಿರುವ ಮಣ್ಣು ಕ್ಷಾರೀಯತೆಯನ್ನು ಹೊಂದಿ ಅನುಪಯುಕ್ತವಾಗುತ್ತದೆ.

ಮಣ್ಣಿನ ಸೀಳು ನೋಟ ಅಥವಾ ಪಾರ್ಶ್ವಚಿತ್ರ: ಭೂಮಿಯ ಮೇಲ್ಮೈ ಮಣ್ಣಿನಿಂದ ಕೆಳಗಿನ ಮೂಲ ಶಿಲೆಯವರೆಗಿನ ಊರ್ಧ್ವಮುಖ ವಿಭಾಗವನ್ನು ಮಣ್ಣಿನ ಪಾರ್ಶ್ವ ಚಿತ್ರ ಅಥವಾ ಸೀಳು ನೋಟವೆಂದು ಕರೆಯುವರು. ಮಣ್ಣಿನ ಸೀಳು ನೋಟದ ಆಳ ಮಣ್ಣಿನಿಂದ ಮಣ್ಣಿಗೆ ಬೇರೆ ಬೇರೆಯಾಗಿರುತ್ತದೆ. ಪ್ರತಿಯೊಂದು ಸೀಳುನೋಟ ವಿವಿಧ ಪದರುಗಳಿಂದ ಕೂಡಿರುತ್ತದೆ. ಈ ಪದರುಗಳನ್ನು ಕ್ರಮವಾಗಿ ಎ.ಬಿ.ಸಿ.ಡಿ ಎಂದು ಕರೆಯಲಾಗಿದೆ. ಪ್ರತಿಯೊಂದು ಪದರಗಳು ವಿಶಿಷ್ಟ ಗುಣಲಕ್ಷಣಗಳನ್ನೊಳಗೊಂಡಿವೆ.

ಎ. ಪದರ (ಎ–ಹೊರೈಸನ್): ಇದು ಭೂಮೇಲ್ಮೆಯಲ್ಲಿ ಕಂಡುಬರುವುದರಿಂದ ಮೇಲ್ಮೈಮಣ್ಣು ಎಂದು ಸಹ ಕರೆಯುವರು. ಮಣ್ಣಿನ ಪದರಗಳಲ್ಲಿ ಇದು ಮೊದಲನೆಯದಾಗಿದೆ. ಇದು ಸಾಮಾನ್ಯವಾಗಿ ಒಂದು ಅಥವಾ ಎರಡು ಅಡಿ ಆಳವನ್ನು ಹೊಂದಿರುವುದು. ಇದರ ಮೇಲ್ಭಾಗ ಕೊಳೆತ ಜೈವಿಕಾಂಶವನ್ನು ಮತ್ತು ಕೆಳಭಾಗ ಹೆಚ್ಚು ಸಾವಯವ ವಸ್ತುಗಳನ್ನು ಹೊಂದಿರುವುದು.

ಬಿ. ಪದರ (ಬಿ–ಹೊರೈಸನ್) : ಎ. ಪದರಿನ ಕೆಳಭಾದಲ್ಲಿದ್ದು ಎರಡನೆಯ ಪದರಾಗಿದೆ. ಇದನ್ನು ಉಪಮಣ್ಣಿನ ವಲಯ ಎಂದು ಸಹಕರೆಯುವರು. ಈ ಪದರಿನಲ್ಲಿ ಪ್ರಮುಖವಾಗಿ ಶಿಥಿಲೀಕರಣಗೊಂಡ ಶಿಲೆಗಳ ವಸ್ತುಗಳು, ಮರಳು, ಜೇಡಿ ಸಾಂದ್ರೀಕೃತವಾಗಿರುವುದು.

ಸಿ. ಪದರ (ಸಿ–ಹೊರೈಸನ್) : ಇದರಲ್ಲಿ ಮಾತೃ ಶಿಲೆಯಿಂದ ಶಿಥಿಲೀಕರಣಗೊಂಡ ಶಿಲಾವಸ್ತುಗಳು ಸಾಂದ್ರೀಕೃತವಾಗಿರುತ್ತವೆ.

ಡಿ. ಪದರ (ಡಿ–ಹೊರೈಸನ್) : ಈ ಪದರದಲ್ಲಿ ಮಣ್ಣು ಕಂಡುಬರುವುದಿಲ್ಲ. ಶಿಥಿಲೀಕರಣಕ್ಕೊಳಪಡದ ಮೂಲ ಶಿಲೆಯು ಮಾತ್ರ ಕಂಡುಬರುವುದು.

ಮಣ್ಣಿನ ವಿಧಗಳು: ಪ್ರಪಂಚಾದ್ಯಂತ ಮಣ್ಣು ಒಂದೇ ರೀತಿಯಾಗಿರದೆ ವೈವಿಧ್ಯತೆಯಿಂದ ಕೂಡಿದೆ. ಇದಕ್ಕೆ ಕಾರಣ ಮಣ್ಣು ವಿವಿಧ ಪ್ರದೇಶಗಳಲ್ಲಿ ವಿವಿಧ ಕರ್ತೃಗಳ ಪ್ರಭಾವದಿಂದ ಉತ್ಪತ್ತಿಯಾಗಿರುತ್ತದೆ. ಆದ್ದರಿಂದ ಮಣ್ಣು ಸ್ಥಳದಿಂದ ಸ್ಥಳಕ್ಕೆ ಬದಲಾವಣೆಗೊಳ್ಳುತ್ತವೆ.

ಮಣ್ಣಿನ ವೈವಿಧ್ಯತೆಯ ಗುಣದಿಂದ ಮಣ್ಣಿನ ವಿಂಗಡನೆಯು ಜಾಗತಿಕ ಮಟ್ಟದಲ್ಲಿ ಕಷ್ಟಕರ ಕಾರ್ಯವಾಗಿದೆ. 1882 ರಿಂದ 1900 ಅವಧಿಯಲ್ಲಿ ಡುಕ್‌ಟೇವ್ ಎಂಬ ಮಣ್ಣಿನ ಶಾಸ್ತ್ರಜ್ಞ, ರಷ್ಯದ ಮಣ್ಣುಗಳನ್ನು ಅಭ್ಯಸಿಸಿದ. ಈತನು ತನ್ನ ಅಧ್ಯಯನದಿಂದ ಮಣ್ಣುಗಳ ವೈವಿಧ್ಯತೆಯಲ್ಲಿ ವಾಯುಗುಣ ಅಥವಾ ಸ್ವಾಭಾವಿಕ ಸಸ್ಯವರ್ಗದ ಪ್ರಭಾವವನ್ನು ಮನಗಂಡ. ಅನಂತರ ಡುಕ್‌ಟೇವ್ ಅಮೆರಿಕದ ಗ್ಲಿಂಕಾ ಮಣ್ಣಿನ ಸೀಳುನೋಟದ ಬಗ್ಗೆ ವಿವರಣೆ ನೀಡಿದ.

ಅಮೆರಿಕದ ಸಿ. ಎಸ್ ಮಾರ್ಬಟ್‌ರವರು ಗ್ಲಿಂಕಾ ಮಣ್ಣಿನ ಸೀಳುನೋಟದ ಆಧಾರದ ಮೇಲೆ ಅಮೆರಿಕದ ಮಣ್ಣುಗಳ ವಿಧಗಳನ್ನು ಗುರುತಿಸಿದರು. ಇವರ ಪ್ರಕಾರ ಮಣ್ಣುಗಳನ್ನು ಮೂರು ಮುಖ್ಯವಿಧಗಳಾಗಿ ಮತ್ತು ಹಲವು ಉಪವಿಭಾಗಗಳನ್ನಾಗಿ ವಿಂಗಡಿಸಬಹುದು:

ವಲಯ ಮಣ್ಣು: ಇದು ನೇರವಾಗಿ ಶಿಲೆಗಳಿಂದ ಉತ್ಪತ್ತಿಯಾದುದು. ಈ ಮಣ್ಣು ಉತ್ತಮ ಜಲವ್ಯವಸ್ಥೆ ಮತ್ತು ಪದರು ರಚನೆಯನ್ನು ಹೊಂದಿರುತ್ತದೆ. ಈ ಮಣ್ಣಿನಲ್ಲಿ ನಿರ್ಮಾಣ ಪ್ರಕ್ರಿಯೆ ಸಂಪೂರ್ಣವಾಗಿ ಮುಗಿದಿರುತ್ತದೆ. ಆದ್ದರಿಂದ ಸ್ಪಷ್ಟವಾದ ಪದರು ರಚನೆಯನ್ನು ಹೊಂದಿರುತ್ತದೆ.

ಸಾಮಾನ್ಯವಾಗಿ ವಲಯ ಮಣ್ಣಿನ ಗುಣಲಕ್ಷಣಗಳ ಮೇಲೆ ಸ್ಥಳೀಯ ವಾಯುಗುಣ ಮತ್ತು ಸಸ್ಯವರ್ಗಗಳ ಪ್ರಭಾವ ಕಂಡುಬರುತ್ತದೆ. ವಲಯ ಮಣ್ಣನ್ನು ಅನೇಕ ಉಪಭಾಗಗಳಾಗಿ

ವಿಭಾಗಿಸಲಾಗಿದೆ. ಅವುಗಳೆಂದರೆ ಪಾಡ್ಜೂಲ್ ಮಣ್ಣು, ಕಂದು ಪಾಡ್ಜೂಲ್ ಮಣ್ಣು, ಕೆಂಪು-ಹಳದಿ ಪಾಡ್ಜೂಲ್ ಮಣ್ಣು, ಜಂಬಿಟ್ಟಿಗೆ ಮಣ್ಣು, ತಂಡ್ರಾಮಣ್ಣು. ಚೆರ್ನೋಜೆಮ್ ಮಣ್ಣು, ಪ್ರೈರಿ ಮಣ್ಣು, ಬಾದಾಮಿ ಮತ್ತು ಕಂದು ಮಣ್ಣು ಹಾಗು ಮರುಭೂಮಿ ಮಣ್ಣು.




ಮಣ್ಣಿನ ಪಾರ್ಶ್ವನೋಟ

ಅಂತರ್ವಲಯ ಮಣ್ಣು: ಯಾವ ಪ್ರದೇಶಗಳಲ್ಲಿ ಮಣ್ಣು ಉತ್ತಮ ಜಲವ್ಯವಸ್ಥೆಯನ್ನು ಹೊಂದಿಲ್ಲವೋ ಅಥವಾ ಯಾವ ಪ್ರದೇಶದಲ್ಲಿ ಮಣ್ಣಿನ ನಿರ್ಮಾಣ ಪ್ರಕ್ರಿಯೆ ದೀರ್ಘಕಾಲದಿಂದ ವಾತಾವರಣ ಅಥವಾ ಪರಿಸರದ ನಿರ್ಬಂಧದಿಂದ ಸರಿಯಾಗಿ ನಡೆದಿಲ್ಲವೋ ಅಂತಹ ಪ್ರದೇಶಗಳಲ್ಲಿ ಕಂಡುಬರುತ್ತದೆ. ಮಣ್ಣಿನ ಜಲವ್ಯವಸ್ಥೆ ಭೂಮಿಯ ಇಳಿಜಾರು, ತೇವಾಂಶದ ಕೊರತೆ ಮೊದಲಾದವುಗಳು ಪರಿಸರದ ಅಡೆತಡೆಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ನಿರ್ಮಾಣವಾಗಿರುವ ಮಣ್ಣು ಪೂರ್ಣ ಪ್ರಮಾಣದಲ್ಲಿ ಪದರ ರಚನೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಈ ಮಣ್ಣನ್ನು ಅರೆ ಅಭಿವೃದ್ಧಿ ಮಣ್ಣು ಎಂದು ಕರೆಯುತ್ತಾರೆ. ಅಂತರ್ವಲಯ ಮಣ್ಣು ಸಾಮಾನ್ಯವಾಗಿ ಜೌಗು ಪ್ರದೇಶ, ತೇವಾಂಶರಹಿತ ಮತ್ತು ಮರುಭೂಮಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಮಣ್ಣಿನಲ್ಲಿ ಪಿಎಚ್ ಪ್ರಮಾಣ 7ಕ್ಕಿಂತ ಕಡಿಮೆಯಿದ್ದು, ಲವಣಾಂಶ ಹೆಚ್ಚಾಗಿರುತ್ತದೆ. ಚೂರ್ಣಾಧಿತ್ಯ ಮಣ್ಣು ಹಾಗೂ ಲವಣಾಯುಕ್ತ ಮಣ್ಣು ಈ ಗುಂಪಿಗೆ ಸೇರುತ್ತವೆ.

ವಲಯ ರಹಿತ ಮಣ್ಣು: ಹೊಸದಾಗಿ ನಿರ್ಮಾಣವಾಗಿರುವ ಮಣ್ಣು ವಲಯ ರಹಿತ ಮಣ್ಣಿನ ಗುಂಪಿಗೆ ಸೇರುತ್ತದೆ. ಇಲ್ಲಿ ಮಣ್ಣು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಯಾಗದೆ ನಿರ್ಮಾಣ ಹಂತದಲ್ಲಿದ್ದು ಪೂರ್ಣಪ್ರಮಾಣದಲ್ಲಿ ರಚನೆಯಾಗಿರುವುದಿಲ್ಲ. ಈ ಮಣ್ಣು ಇತ್ತೀಚೆಗೆ ಮೂಲಶಿಲೆಗಳು ನಿರ್ಮಾಣವಾಗಿರುವ ವಲಯಗಳಲ್ಲಿ ಕಂಡುಬರುತ್ತವೆ. ಈ ಮಣ್ಣುಗಳ ನಿರ್ಮಾಣದಲ್ಲಿ ಕಡಿಮೆ ಉಷ್ಣಾಂಶ, ಕಡಿದಾದ ಇಳಿಜಾರು ಮಣ್ಣು ಬೆಳವಣಿಗೆಯಲ್ಲಿ ತೊಡಕಾಗಿರುವುದು. ಉದಾ: ನದಿ ಮುಖಜ ಭೂಮಿಯಲ್ಲಿ ಸಂಚಯಿಸಿರುವ ಮಣ್ಣು. ಲೋಯೆಸ್ ಮೈದಾನ, ಪ್ರವಾಹ ಮೈದಾನ ಮಣ್ಣು, ಹಳೆಯ ಮಣ್ಣಿನ ಪದರಿನ ಮೇಲೆ ಸಂಚಯನವಾಗುವುದರಿಂದ ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಪ್ರಕ್ರಿಯೆ ಪೂರ್ಣವಾಗಿರುವುದಿಲ್ಲ. ಕಾಲಾನಂತರದಲ್ಲಿ ಈ ಮಣ್ಣುಗಳ ನಿರ್ಮಾಣ ಪ್ರಕ್ರಿಯೆ ಪೂರ್ಣಗೊಂಡು ವಲಯ ಮಣ್ಣುಗಳಾಗಿ ಪರಿವರ್ತಿತವಾಗುತ್ತವೆ. ಇವು ಮೆಕ್ಕಲುಮಣ್ಣು, ಮರಳು ಮಣ್ಣು, ಸಾಗರತೀರದ ಮಣ್ಣು, ವಲಯ ರಹಿತ ಮಣ್ಣುಗಳಾಗಿವೆ.

ಮಣ್ಣಿನ ಲವಣೀಕರಣ: ಮಣ್ಣಿನ ಮೇಲ್ಪದರದಲ್ಲಿ ಲವಣಾಂಶಗಳು ಸೇರಿಕೊಳ್ಳುವುದನ್ನೇ ಮಣ್ಣಿನ ಲವಣೀಕರಣ ಎನ್ನುವರು. ಮಣ್ಣಿನಲ್ಲಿ ಕಂಡುಬರುವ ಪ್ರಮುಖ ಲವಣಾಂಶಗಳೆಂದರೆ ಸೋಡಿಯಂ, ಮೆಗ್ನೀಷಿಯಂ ಮತ್ತು ಪೊಟಾಷಿಯಂ.

ಮಣ್ಣಿನಲ್ಲಿ ಪ್ರಮುಖವಾಗಿ ಲವಣಾಂಶಗಳು ಹೀಗೆ ಸೇರುತ್ತವೆ: ಅಧಿಕ ಉಷ್ಣಾಂಶದ ಪರಿಣಾಮವಾಗಿ ಭೂಮೇಲ್ಮೈನ ನೀರು ಆವಿಯಾಗುವುದರಿಂದ ನೀರು ಹೊಂದಿರುವ ಲವಣಾಂಶಗಳು ಮಣ್ಣಿನಲ್ಲಿ ಸೇರಿಕೊಳ್ಳುತ್ತವೆ. ಕೃಷಿ ಪ್ರದೇಶಗಳಿಗೆ ನೀರಾವರಿಯಿಂದ ಲವಣಾಯುಕ್ತ ನೀರನ್ನು ಒದಗಿಸುವುದರಿಂದ ಮಣ್ಣಿನಲ್ಲಿ ಲವಣತೆ ಉಂಟಾಗುತ್ತದೆ. ಸ್ವಾಭಾವಿಕ ಜಲವ್ಯವಸ್ಥೆಗೆ ಅಭಿವೃದ್ಧಿದೃಷ್ಟಿಯಿಂದ (ಉದಾ: ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ) ಅಡೆತಡೆಯುಂಟಾದಲ್ಲಿ ಮತ್ತು ಹೂಳುತುಂಬುವುದರಿಂದಲೂ ಲವಣತೆ ಉಂಟಾಗುತ್ತದೆ. ತೀರಪ್ರದೇಶದ ಮಣ್ಣು ಸಾಗರದ ನೀರಿನಿಂದ ಲವಣತೆಯನ್ನು ಪಡೆಯುತ್ತದೆ.

ಮಣ್ಣಿನ ಲವಣತೆಯ ಪ್ರಮಾಣ ಸಾಮಾನ್ಯವಾಗಿ ಆವಿಯಾಗುವಿಕೆಯನ್ನು ಆಧರಿಸಿದೆ. ಆದ್ದರಿಂದ ಮಣ್ಣಿನ ಲವಣಾಂಶ ಹೆಚ್ಚು ಉಷ್ಣಾಂಶ ಮತ್ತು ಕಡಿಮೆ ಮಳೆಯನ್ನು ಪಡೆಯುವ ಶುಷ್ಕ ಮತ್ತು ಅರೆಶುಷ್ಕ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರತಿಯಾಗಿ ಹೆಚ್ಚು ಆರ್ದ್ರತೆಯನ್ನು ಹೊಂದಿರುವ ಪ್ರದೇಶಗಳಲ್ಲಿ ಕಡಿಮೆ ಲವಣತೆ ಕಂಡುಬರುತ್ತದೆ.

ಲವಣತೆಯನ್ನು ಹೊಂದಿರುವ ಮಣ್ಣನ್ನು ಪ್ರಮುಖವಾಗಿ ಮೂರು ರೀತಿಯಾಗಿ ವಿಂಗಡಿಸಬಹುದು. ಅವು ಈ ಕೆಳಕಂಡಂತಿವೆ:

ಲವಣಯುಕ್ತ ಮಣ್ಣು (ಸೆಲೈನ್ ಸಾಯಿಲ್) : ಮಣ್ಣಿನಲ್ಲಿ ಪ್ರಮುಖವಾಗಿ ಕರಗುವ ಲವಣಗಳಾದ ಕ್ಲೋರೈಡ್, ಸಲ್ಫೇಟ್, ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಕಂಡುಬರುತ್ತದೆ.

ಕ್ಷಾರಯುಕ್ತ ಮಣ್ಣು (ಆಲ್‌ಕಲೈನ್ ಸಾಯಿಲ್) : ಈ ಮಣ್ಣು ಹೆಚ್ಚಿನ ಪ್ರಮಾಣದಲ್ಲಿ ಕರಗುವ ಲವಣಾಂಶವನ್ನು ಹೊಂದಿರುವುದಿಲ್ಲ. ಆದರೆ ಈ ಮಣ್ಣಿನಲ್ಲಿ ಪಿಎಚ್ ಪ್ರಮಾಣ ಮತ್ತು ಸೋಡಿಯಂ ಹೆಚ್ಚಾಗಿರುತ್ತವೆ. ಆದ್ದರಿಂದ ಇದರ ಭೌತಿಕ ಪರಿಸ್ಥಿತಿ ಮತ್ತು ಸೋಸುವಿಕೆ ಸರಿಯಾಗಿರುವುದಿಲ್ಲ. ಇದು ಹೆಚ್ಚು ಕ್ಷಾರಯುಕ್ತವಾಗಿರುವುದರಿಂದ ಸೋಡಿಯಂ-ಸೋಡಿಯಂ ಬೈಕಾರ್ಬೋನೇಟ್ ಆಗಿ ಪರಿವರ್ತನೆ ಹೊಂದುತ್ತದೆ. ಇದರಿಂದ ಮಣ್ಣಿನ ಮೇಲ್ಮೈ ಕಪ್ಪುಬಣ್ಣದಿಂದ ಕೂಡಿರುತ್ತದೆ.

ಲವಣ ಮತ್ತು ಕ್ಷಾರಯುಕ್ತ ಮಣ್ಣು: ಈ ಗುಂಪಿನ ಮಣ್ಣು ಲವಣ ಮತ್ತು ಕ್ಷಾರಗಳೆರಡನ್ನು ಹೊಂದಿರುತ್ತದೆ. ಈ ಮಣ್ಣುಗಳಲ್ಲಿ ಪಿಎಚ್ ಪ್ರಮಾಣ 8.5 ಕ್ಕಿಂತ ಕಡಿಮೆಯಿರುತ್ತದೆ.

ಮಣ್ಣಿನ ಲವಣತೆಯಿಂದುಟಾಗುವ ಪರಿಣಾಮಗಳು: ಬೆಳೆಗಳಿಂದ ಉತ್ತಮ ಇಳುವರಿ ಪಡೆಯಲು ಸಾಧ್ಯವಿಲ್ಲ. ಮಣ್ಣಿನ ಲವಣತೆಯ ಪ್ರಮಾಣ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕೆಲವೇ ಬೆಳೆಗಳನ್ನು ಬೆಳೆಯಬಹುದು. ಏಕೆಂದರೆ ಕೆಲವು ಬೆಳೆಗಳು ಲವಣಯುಕ್ತ ಮಣ್ಣಿನಲ್ಲಿ ಬೆಳೆಯಲು ಶಕ್ತವಾಗಿರುವುದಿಲ್ಲ. ಕಟ್ಟಡಗಳು, ರಸ್ತೆಗಳ ನಿರ್ವಹಣೆ ಕಷ್ಟವಾಗುತ್ತದೆ. ಲವಣಯುಕ್ತ ಮಣ್ಣಿನಲ್ಲಿ ನೀರಿನ ಬಸಿಯುವಿಕೆಯ ಪ್ರಮಾಣ ಕಡಿಮೆಯಿರುತ್ತದೆ. ಆದ್ದರಿಂದ ಈ ಮಣ್ಣಿನಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆಯಾಗುತ್ತದೆ.

ಮಣ್ಣಿನ ಸವೆತ : ಮಣ್ಣಿನ ಮೇಲ್ಭಾಗದ ಪದರು ನೈಸರ್ಗಿಕ ಮತ್ತು ಮಾನವ ಕೃತ್ಯಗಳಿಂದ ಕೊಚ್ಚಿ ಹೋಗುವುದೇ ಮಣ್ಣಿನ ಸವೆತ. ಇದರಿಂದ ಮಣ್ಣಿನಲ್ಲಿರುವ ಸಾರಜನಕ ಪ್ರಮಾಣ ಕಡಿಮೆಯಾಗುತ್ತದೆ. ಇಂದು ಜಾಗತಿಕ ಮಟ್ಟದಲ್ಲಿ ಮಣ್ಣಿನ ಸವೆತ ಗಂಭೀರ ಸಮಸ್ಯೆಯಾಗಿದ್ದು ಕೃಷಿ ಉತ್ಪಾದನೆಯಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. ಉದಾಹರಣೆಗೆ: ಭಾರತದಂತಹ ಕೃಷಿ ಪ್ರಧಾನ ರಾಷ್ಟ್ರಗಳಲ್ಲಿ 144 ದಶಲಕ್ಷ ಹೆಕ್ಟೇರ್ ಪ್ರದೇಶ ಮಣ್ಣಿನ ಸವೆತಕ್ಕೀಡಾಗುತ್ತಿದೆ. ಮಣ್ಣಿನ ಸವೆತದಿಂದ ಉಂಟಾಗುತ್ತಿರುವ ನಷ್ಟ ಮಾರುಕಟ್ಟೆ ಬೆಲೆಯಲ್ಲಿ 60,000 ಕೋಟಿ.

ಮಣ್ಣು ಎರಡು ರೀತಿಯಲ್ಲಿ ಸವೆತಕ್ಕೊಳಪಡುತ್ತದೆ. ಅವುಗಳೆಂದರೆ ಸ್ತರ ಸವೆತ: ಅತ್ಯಧಿಕ ಮಳೆಬೀಳುವ ಪ್ರದೇಶ ಮತ್ತು ಮಾರುತಗಳ ಕಾರ್ಯ ವಿಸ್ತಾರವಾದ ಭಾಗದಲ್ಲಿ ಕಂಡುಬರುವ ಪ್ರದೇಶದಲ್ಲಿ ಮಣ್ಣಿನ ಮೇಲ್ಭಾಗ ಸವೆತಕ್ಕೊಳಗಾಗುತ್ತದೆ. ಆದರೆ ಗಟ್ಟಿಯಾದ ಮಣ್ಣು ಮಾತ್ರ ಉಳಿಯುವುದು. ಇದನ್ನು ಸ್ತರ ಸವೆತ ಎನ್ನುವರು. ಕೊರಕಲುಸವೆತ: ನದಿಗಳು ಇಳಿಜಾರನ್ನು ಅನುಸರಿಸಿ ವೇಗವಾಗಿ ಹರಿಯುವಾಗ ತಮ್ಮ ಪಾತ್ರವನ್ನು ಸವೆಸಿ ಕಣಿವೆಗಳನ್ನು ನಿರ್ಮಾಣಮಾಡುತ್ತದೆ. ಇದೇ ಕೊರಕಲು ಸವೆತ.

ಮಣ್ಣಿನ ಸವೆತದ ಮೇಲೆ ಹಲವು ಅಂಶಗಳು ಪ್ರಭಾವವನ್ನು ಬೀರುತ್ತವೆ. ಅವುಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ಅವುಗಳೆಂದರೆ:

ಸ್ವಾಭಾವಿಕ ಅಂಶಗಳಲ್ಲಿ ಮಳೆ ಮತ್ತು ಮಾರುತ ಪ್ರಮುಖವಾಗಿವೆ. ಅತ್ಯಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಮಳೆಯ ನೀರು ಅಧಿಕ ಪ್ರಮಾಣದಲ್ಲಿ ಮಣ್ಣನ್ನು ಸವೆತಕ್ಕೀಡು ಮಾಡುತ್ತದೆ. ಸಾಮಾನ್ಯವಾಗಿ ಮಳೆಯ ನೀರು ಪ್ರತಿ ಸೆಕೆಂಡಿಗೆ 10 ಮೀ ವೇಗವಾಗಿ ಬೀಳುತ್ತದೆ. ಇದರಿಂದ ಮಣ್ಣಿನ ಮೇಲ್ಪದರು ತೊಳೆಸಲ್ಪಡುತ್ತದೆ. ಮರುಭೂಮಿ ಮತ್ತು ಅರೆ ಮರುಭೂಮಿ ಪ್ರದೇಶಗಳಲ್ಲಿ ಮಾರುತಗಳ ಕಾರ್ಯ ಪ್ರಧಾನವಾಗಿದೆ. ಮಾರುತಗಳು ಈ ಪ್ರದೇಶಗಳಲ್ಲಿ ಯಾವುದೇ ಅಡೆ ತಡೆಗಳಿಲ್ಲದೆ ವೇಗವಾಗಿ ಬೀಸುತ್ತವೆ. ಇದರಿಂದ ಮಾರುತಗಳು ಮಣ್ಣನ್ನು ರಾಶಿ ರಾಶಿ ಪ್ರಮಾಣದಲ್ಲಿ ತನ್ನ ಜೊತೆಯಲ್ಲಿ ಕೊಂಡೊಯ್ಯುತ್ತದೆ. ಇದರಿಂದ ಮಣ್ಣು ಸವೆತಕ್ಕೀಡಾಗಿ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಸಮುದ್ರ ಅಲೆ, ಪ್ರವಾಹಗಳು, ಇನ್ನು ಮುಂತಾದವು ಮಣ್ಣಿನ ಸವೆತವನ್ನುಂಟುಮಾಡುವ ಸ್ವಾಭಾವಿಕ ಅಂಶಗಳಾಗಿವೆ. ಇತ್ತೀಚಿನ ವರ್ಷಗಳಲ್ಲಿ ಮಾನವ ಮಣ್ಣಿನ ಸವೆತಕ್ಕೆ ಪ್ರಮುಖ ಕಾರಣ ಕರ್ತೃಮಾನವನಾಗಿರುವುದು ಕಂಡುಬರುತ್ತದೆ. ಅರಣ್ಯನಾಶ, ಹೈನುಗಾರಿಕೆ, ಅವೈಜ್ಞಾನಿಕ ಕೃಷಿ ಪದ್ಧತಿ, ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ, ಅಸಮರ್ಪಕವಾದ ನೀರಾವರಿ ಪದ್ಧತಿ ಮುಂತಾದ ಮಾನವನ ಕಾರ್ಯಗಳು ಮಣ್ಣಿನ ಸವೆತಕ್ಕೆ ಮೂಲವಾಗಿದೆ. ಮಣ್ಣಿನ

ಸವೆತದಿಂದ ಹಲವಾರು ದುಷ್ಪರಿಣಾಮಗಳುಂಟಾಗುತ್ತವೆ. ಮಣ್ಣಿನ ಸವೆತದಿಂದ ಫಲವತ್ತತೆ ಹೊಂದಿರುವ ಮಣ್ಣಿನ ಮೇಲ್ಪದರ ಸ್ಥಳಾಂತರಿಸಲ್ಪಡುತ್ತದೆ. ಇದರಿಂದ ಮಣ್ಣು ಫಲವತ್ತನ್ನು ಕಳೆದುಕೊಂಡು ಅನುಪಯುಕ್ತವಾಗುತ್ತದೆ. ಮಣ್ಣಿನ ಸವೆತದಿಂದ ನದಿಗಳಲ್ಲಿ ಹೂಳು ತುಂಬಿ ಪ್ರವಾಹಗಳುಂಟಾಗುವುದರ ಜೊತೆಗೆ ಅವು ಹರಿಯುವ ಪಾತ್ರ ಬದಲಾಗುತ್ತದೆ. ನದಿಗಳಿಗೆ ಅಡ್ಡಲಾಗಿ ನಿರ್ಮಿಸಿರುವ ಅಣೆಕಟ್ಟುಗಳು ಮಣ್ಣಿನ ಸವೆತದಿಂದ ಹೂಳು ತುಂಬಿಕೊಂಡು ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆಯಾಗುತ್ತದೆ. ಮಣ್ಣಿನ ಸವೆತದಿಂದ ಮಣ್ಣಿನ ಮೇಲ್ಪದರ ಸವೆತಕ್ಕೊಳಪಡುತ್ತದೆ. ಇದರಿಂದ ಮಳೆಯ ನೀರು ಸಂಗ್ರಹಿಸಿಕೊಳ್ಳುವ ಸಾಮರ್ಥ್ಯ ಕಡಿಮೆಯಾಗಿ ಅಂತರ್ಜಲವು ಕ್ಷೀಣಿಸುತ್ತದೆ.

ಮಣ್ಣಿನ ಸಂರಕ್ಷಣೆ: ಮಣ್ಣು ಅಮೂಲ್ಯವಾದ ಸ್ವಾಭಾವಿಕ ಸಂಪನ್ಮೂಲ. ಪ್ರಸ್ತುತ ಮಣ್ಣು ಹಲವು ಕಾರಣಗಳಿಂದ (ಮಣ್ಣಿನ ಸವೆತ, ಲವಣತೆ ಮುಂತಾದವುಗಳು) ತನ್ನ ಫಲವತ್ತತೆಯನ್ನು ಕಳೆದುಕೊಂಡು ಅನುಪಯುಕ್ತವಾಗುತ್ತಿದೆ. ಮಣ್ಣಿನ ಸವೆತ, ಲವಣೀಕರಣ ಮತ್ತು ಅನುಪಯುಕ್ತ ಮಣ್ಣಾಗಿ ಪರಿವರ್ತನೆಯಾಗುವುದನ್ನು ನಿಯಂತ್ರಿಸುವುದು ಮತ್ತು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದೇ ಮಣ್ಣಿನ ಸಂರಕ್ಷಣೆ.

ಮಣ್ಣನ್ನು ಹಲವು ವಿಧಾನಗಳಿಂದ ಬಳಸಿ ಸಂರಕ್ಷಿಸಬಹುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

ಅರಣ್ಯೀಕರಣ: ಮಣ್ಣಿನ ಸಂರಕ್ಷಣೆಗೆ ಮುಖ್ಯ ಸಾಧನವೆಂದರೆ ಹೆಚ್ಚು ಹೆಚ್ಚು ಅರಣ್ಯಗಳನ್ನು ಬೆಳೆಸುವುದು. ಅರಣ್ಯಗಳನ್ನು ಅನಾವಶ್ಯಕವಾಗಿ ನಾಶಮಾಡುವುದನ್ನು ತಡೆಗಟ್ಟಬೇಕು ಮತ್ತು ಹೊಸದಾಗಿ ಅರಣ್ಯಗಳನ್ನು ಅಭಿವೃದ್ಧಿಪಡಿಸಬೇಕು. ಇದರಿಂದ ಮಣ್ಣಿನ ಸಂರಕ್ಷಣೆ ಮಾಡುವುದರ ಜೊತೆಗೆ ಫಲವತ್ತತೆಯನ್ನು ಹೆಚ್ಚಿಸಬಹುದು.

ಪ್ರಾಣಿಗಳನ್ನು ಮೇಯಿಸುವುದನ್ನು ತಡೆಯುವುದು: ಸಾಕು ಪ್ರಾಣಿಗಳಾದ, ಹಸು, ಮೇಕೆ ಮೊದಲಾದವುಗಳನ್ನು ಅರಣ್ಯ ಮತ್ತು ಹುಲ್ಲುಗಾವಲು ಪ್ರದೇಶಗಳಲ್ಲಿ ಮೇಯಿಸುವುದನ್ನು ನಿರ್ಬಂಧಿಸಬೇಕು. ಸಾಕುಪ್ರಾಣಿಗಳ ಮೇಯುವಿಕೆಗೆ ಪ್ರತ್ಯೇಕ ಸ್ಥಳಗಳನ್ನು ನೀಡಬೇಕು.

ಅಣೆಕಟ್ಟುಗಳನ್ನು ನಿರ್ಮಾಣ ಮಾಡುವುದು: ನದಿಗಳು ವೇಗವಾಗಿ ಹರಿಯುವ ಮಾರ್ಗದಲ್ಲಿ ಅಣೆಕಟ್ಟುಗಳನ್ನು ನಿರ್ಮಾಣಮಾಡಬೇಕು. ಇದರಿಂದ ನದಿಗಳು ಹರಿಯುವ ವೇಗ ಕಡಿಮೆಯಾಗಿ ಮಣ್ಣಿನ ಸವೆತವನ್ನು ತಡೆಯಬಹುದು.

ಕೃಷಿ ಪದ್ಧತಿಯ ಬದಲಾವಣೆ: ಕೃಷಿ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದರಿಂದ ಮೌಲ್ಯಯುತವಾದ ಮಣ್ಣನ್ನು ಸಂರಕ್ಷಿಸಬಹುದಾಗಿದೆ. ಬೆಳೆಗಳ ಬದಲಾವಣೆ ಮತ್ತು ಬೆಳೆಯುವ ಪದ್ಧತಿ. ಬೇಗ ಬೆಳೆಯುವ ಬೆಳೆಗಳನ್ನು ಬೆಳೆಯುವುದು. ಸ್ಥಳಾಂತರ ಬೇಸಾಯವನ್ನು ನಿರ್ಬಂಧಿಸಿ ಸ್ಥಾಯಿಕೃಷಿ ಪದ್ಧತಿಯನ್ನು ರೂಢಿಸುವುದು. ಇಳಿಜಾರಿಗೆ ಅಡ್ಡಲಾಗಿ ಒಡ್ಡು ನಿರ್ಮಿಸುವುದು. ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು. (ಕೆ.ಕೆ.)

**ಮಥುರ:** ಉತ್ತರ ಪ್ರದೇಶದ ಆಗ್ರಾ ವಿಭಾಗಕ್ಕೆ ಸೇರಿದ ಒಂದು ಜಿಲ್ಲೆ ಹಾಗೂ ಜಿಲ್ಲಾ ಕೇಂದ್ರ. ಆಗ್ರದಿಂದ 50 ಕಿಮೀ ದೂರದಲ್ಲಿ ಯಮುನಾ ನದಿ ಬಲದಂಡೆಯ ಮೇಲಿದೆ. ಶ್ರೀಕೃಷ್ಣನ ಜನ್ಮಸ್ಥಾನವೆಂದು ಪ್ರಸಿದ್ಧವಾಗಿರುವ ಇದು ಹಿಂದುಗಳ ಯಾತ್ರಾಸ್ಥಳ. ನಗರದ ಜನಸಂಖ್ಯೆ 3,19,235.

ಮಥುರ ಮಾತ್, ಛತ್ ಸದಾಬಾದ್ ತಾಲ್ಲೂಕುಗಳಿಂದ ಕೂಡಿದ ಈ ಜಿಲ್ಲೆಯ ವಿಸ್ತೀರ್ಣ 3,317.2 ಚ.ಕಿಮೀ. ಜನಸಂಖ್ಯೆ 20,69,578. ಜಿಲ್ಲೆಯಲ್ಲಿ ಮಳೆ ಕಡಿಮೆಯಾದರೂ ನೀರಾವರಿ ಸೌಕರ್ಯ ಚೆನ್ನಾಗಿದೆ. ಗೋದಿ, ಜೋಳ, ಕಡಲೆ ಮುಖ್ಯ ಬೆಳೆಗಳು. ಗ್ರಾಮಕೈಗಾರಿಕೆ ಹಾಗೂ ಸಣ್ಣ ಉದ್ಯಮಗಳು ಹಲವಿವೆ. ಕೋಳಿಸಾಕಣೆಗೆ ಹೆಸರಾಗಿದೆ. ರತ್ನಗಂಬಳಿ ಮತ್ತು ಜಮಖಾನ ತಯಾರಿಕೆ ಇಲ್ಲಿಯ ಜನರ ಪ್ರಧಾನ ಕಸಬುಗಳಲ್ಲೊಂದು.

ಮಥುರದ ಮೂಲರೂಪ ಮಥುರೆ. ವೈದಿಕಸಾಹಿತ್ಯದಲ್ಲಿ ಮಥುರೆಯ ಉಲ್ಲೇಖವಿಲ್ಲ. ವಾಲ್ಮೀಕಿ ರಾಮಾಯಣದಲ್ಲಿ ಇದನ್ನು ಮಧುಪುರ ಅಥವಾ ಮಧುದಾನವ ನಗರವೆಂದು ಕರೆದಿದೆ. ಮಹಾಭಾರತದಲ್ಲಿಯ ಉಲ್ಲೇಖದಂತೆ ಇದು ಶೂರಸೇನ ದೇಶದ ರಾಜಧಾನಿ. ಸೆರೆಯಲ್ಲಿದ್ದ ಕಂಸನ ಸೋದರಿ ದೇವಕಿ ಮತ್ತು ವಾಸುದೇವರಿಗೆ ಕೃಷ್ಣ ಇಲ್ಲಿಯೇ ಜನಿಸಿದ ಎಂಬ ಪ್ರತೀತಿ ಇದೆ. (ಎಚ್.ಎಂ.ಎನ್.ಆರ್.)

**ಮದುರೈ:** ತಮಿಳುನಾಡು ರಾಜ್ಯದ ಒಂದು ಜಿಲ್ಲೆ ಮತ್ತು ಜಿಲ್ಲಾ ಆಡಳಿತ ಕೇಂದ್ರ, ಕೈಗಾರಿಕಾ ನಗರ. ಜಿಲ್ಲೆಯನ್ನು ಪೂರ್ವದಲ್ಲಿ ರಾಮನಾಥಪುರಮ್, ಪುದುಕ್ಕೋಟ್ಟೈ ಜಿಲ್ಲೆಗಳೂ ಉತ್ತರದಲ್ಲಿ ತಿರುಚ್ಚಿರಾಪಳ್ಳಿ, ಕೊಯಮತ್ತೂರು ಜಿಲ್ಲೆಗಳೂ ದಕ್ಷಿಣದಲ್ಲಿ ತಿರುನೆಲ್ವೇಲಿ ಜಿಲ್ಲೆಯೂ ಪಶ್ಚಿಮದಲ್ಲಿ ಕೇರಳ ರಾಜ್ಯವೂ ಸುತ್ತುವರಿದಿವೆ. ದಕ್ಷಿಣಭಾರತದ ಮೈದಾನ ಪ್ರದೇಶ ಈ ಜಿಲ್ಲೆಯಲ್ಲಿ ವ್ಯಾಪಿಸಿದೆ. ಉತ್ತರದಲ್ಲಿ ಪಳನಿ ಮತ್ತು ಸಿರುಮಲೈ ಬೆಟ್ಟಗಳೂ ದಕ್ಷಿಣದಲ್ಲಿ ವರುಸನಾದ ಮತ್ತು ಅಂಡಿಪತ್ತಿ ಬೆಟ್ಟಗಳೂ ಇವೆ. ಪಶ್ಚಿಮದಲ್ಲಿ ಜಿಲ್ಲೆಯ ಎಲ್ಲೆಯಾಗಿ ಪಶ್ಚಿಮ ಘಟ್ಟ ಮತ್ತು ಕಂಬಮ್ ಕಣಿವೆ ಇವೆ. ಪೂರ್ವಕ್ಕೆ ಹೋದ ಹಾಗೆ ಸಮುದ್ರಮಟ್ಟದಿಂದ 90 ಮೀ ಎತ್ತರದ ಮೈದಾನ ಪ್ರದೇಶವಿದೆ. ಇಲ್ಲಿ ದೂರದೂರಕ್ಕೆ ಒಂದೊಂದು ಬೆಟ್ಟಗಳಿರುವುದನ್ನು ಕಾಣಬಹುದು. ಜಿಲ್ಲಾ ವಿಸ್ತೀರ್ಣ 3676 ಚ.ಕಿಮೀ. ಜನಸಂಖ್ಯೆ 25,62,279.

ಇಲ್ಲಿಯ ಮುಖ್ಯನದಿ ವೈಗೈ. ಇದು ಕಂಬಮ್ ಕಣಿವೆ ಮೂಲಕ ಈಶಾನ್ಯಾಭಿಮುಖವಾಗಿ ಹರಿದು ಮುಂದೆ ಜಿಲ್ಲೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಹರಿದು ರಾಮನಾಥಪುರಮ್ ಜಿಲ್ಲೆಯ ರಾಮನಾಥಪುರಮ್ ಬಳಿ ಪಾಕ್ ಜಲಸಂಧಿ (ಬಂಗಾಲಕೊಲ್ಲಿ) ಸೇರುವುದು. ಮದುರೈ ಕೃಷಿ ಪ್ರಧಾನ ಜಿಲ್ಲೆ. ಪೆರಿಯಾರ್ (1895) ಮತ್ತು ವೈಗೈ (1960) ನೀರಾವರಿ ಯೋಜನೆಯಿಂದ ಈ ಜಿಲ್ಲೆ ಕೃಷಿಯಲ್ಲಿ ಸಾಕಷ್ಟು ಮುನ್ನಡೆದಿದೆ. ನೆಲಗಡಲೆ, ಹತ್ತಿ, ಕಬ್ಬು, ಕಾಫಿ, ಏಲಕ್ಕಿ, ಆಲೂಗೆಡ್ಡೆ ಇಲ್ಲಿಯ ಆರ್ಥಿಕ ಬೆಳೆಗಳು ಬತ್ತ ಮತ್ತು ದ್ವಿದಳ ಧಾನ್ಯಗಳನ್ನೂ ಬೆಳೆಸುವರು. ಜಿಲ್ಲೆಯ ಮುಖ್ಯ ಕೈಗಾರಿಕೆಗಳೆಂದರೆ ಹತ್ತಿ ನೂಲುವುದು, ನೇಯುವುದು, ಹೊಗೆಸೊಪ್ಪು ಮತ್ತು ಸಕ್ಕರೆ ಉತ್ಪಾದನೆ, ಯಂತ್ರಗಳ ಬಿಡಿಭಾಗಗಳ ತಯಾರಿಕೆ ಇತ್ಯಾದಿ. ರೇಷ್ಮೆ ಮತ್ತು ಹತ್ತಿ ಕೈಮಗ್ಗದ ಬಟ್ಟೆ ತಯಾರಿಕೆಗೆ ಈ ಭಾಗ ಮೊದಲಿನಿಂದಲೂ ಪ್ರಸಿದ್ಧ. ಮದುರೈಗೆ ರೈಲು ಸಂಪರ್ಕವಿದೆ. ಇದು ದಕ್ಷಿಣ ರೈಲ್ವೆಯ ಒಂದು ಮುಖ್ಯ ನಿಲ್ದಾಣ. ಕೊಡೈಕಾನಲ್ ಮತ್ತು ದಿಂಡಿಗಲ್ ಈ ಜಿಲ್ಲೆಗೆ ಸೇರಿದ ಮುಖ್ಯ ಪಟ್ಟಣಗಳು.

ಮದುರೈ ನಗರ ವೈಗೈ ನದಿಯ ಬಲದಂಡೆಯ ಮೇಲಿದೆ. ಭಾರತದ ಒಂದು ಪುರಾತನ ಹಾಗೂ ಪವಿತ್ರ ಯಾತ್ರಾಸ್ಥಳವೆಂದೂ ಇದು ಪ್ರಸಿದ್ಧ. ಉತ್ತರ ಅಕ್ಷಾಂಶ $9^{0}55'$, ಪೂರ್ವ ರೇಖಾಂಶ $78^{0}9'$. ಜನಸಂಖ್ಯೆ 11,94,665. ಇಲ್ಲಿ ಪ್ರಸಿದ್ಧ ಮೀನಾಕ್ಷಿ ದೇವಾಲಯವಿದೆ. ಈ ದೇವಾಲಯದಲ್ಲಿ ಹತ್ತು ಎತ್ತರವಾದ ಗೋಪುರಗಳಿವೆ. ಇವುಗಳ ಪೈಕಿ ಅತ್ಯಂತ ಉನ್ನತವಾದ ಗೋಪುರ ಸು. 46 ಮೀ ಎತ್ತರವಾಗಿದೆ. ದೇವಾಲಯದಲ್ಲಿ ನಾಯಕ ಸಂತತಿಯ ಮೊದಲನೆಯ ದೊರೆ ವಿಶ್ವನಾಥ ಕಟ್ಟಿಸಿದ 100 ಕಂಬಗಳಿಂದ ಕೂಡಿರುವ ವಿಶಾಲ ಸಭಾಂಗಣ ಇದೆ. ಈ ದೇವಾಲಯ ದ್ರಾವಿಡ ಕಲೆ ಮತ್ತು ಕೆತ್ತನೆ ಕೆಲಸಕ್ಕೆ ಪ್ರಸಿದ್ಧ. 1623ರಲ್ಲಿ ತಿರುಮಲನಾಯಕ ಕಟ್ಟಿಸಿದ ಅರಮನೆ ಇದೆ. ಮೀನಾಕ್ಷಿ ಸುಂದರೇಶ್ವರ ದೇವಾಲಯ, ತೆಪ್ಪಕೊಳಮ್ ಇವೆಲ್ಲ ಆಕರ್ಷಕವಾದವು. ಈ ನಗರ ಹಿತ್ತಾಳೆ ಮತ್ತು ಮರದ ಕೆತ್ತನೆ ಕೆಲಸಕ್ಕೆ ಪ್ರಸಿದ್ಧ. ಬಟ್ಟೆ ನೂಲುವ ಮತ್ತು ನೇಯುವ ದೊಡ್ಡ ಕಾರ್ಖಾನೆಗಳಿವೆ. ವಾಹನಗಳ ಬಿಡಿಭಾಗಗಳ ತಯಾರಿಕಾ ಕಾರ್ಖಾನೆ, ಹೊಗೆಸೊಪ್ಪು, ಸಕ್ಕರೆ ತಯಾರಿಕಾ ಕಾರ್ಖಾನೆಗಳ ಜೊತೆಗೆ ಹತ್ತಿ ಮತ್ತು ರೇಷ್ಮೆ ನೂಲುವುದಕ್ಕೆ ಈ ನಗರ ಪ್ರಸಿದ್ಧ. ಚೆನ್ನೈ ನೈರುತ್ಯಕ್ಕೆ ಸು. 435 ಕಿಮೀ ದೂರದಲ್ಲಿರುವ ಈ ನಗರ ಇಂದು ತಮಿಳುನಾಡಿನ ದೊಡ್ಡ ನಗರಗಳ ಪೈಕಿ ಎರಡನೆಯದು. ಮದುರೈ ವಿಶ್ವವಿದ್ಯಾಲಯ (1966) ಮತ್ತು ಅನೇಕ ಶಾಲಾ ಕಾಲೇಜುಗಳು ಇಲ್ಲಿವೆ. ಆಧುನಿಕ ನಗರದ ಸಮಸ್ತ ಸೌಕರ್ಯಗಳನ್ನೂ ಈ ಕೈಗಾರಿಕಾ ನಗರ ಪಡೆದಿದೆ.

ಮೀನಾಕ್ಷಿ ದೇವಾಲಯ

ಮದುರೈ ನಗರದಲ್ಲಿ ಅನೇಕ ಪುರಾತನ ದೇವಾಲಯಗಳಿವೆ. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಊರಿನ ಮಧ್ಯದಲ್ಲಿರುವ ಮೀನಾಕ್ಷಿ–ಸುಂದರೇಶ್ವರ ದೇವಾಲಯ. ಪ್ರಾಚೀನ ನಗರ ಈ ದೇವಾಲಯದ ಸುತ್ತಲೂ ಹಬ್ಬಿಕೊಂಡಿತ್ತು. ಹಲವು ದೇವಾಲಯಗಳ ಪ್ರಾಕಾರಗಳ ಮೂಲಕ ಇದೊಂದು ವಿಶಾಲವಾದ ದೇವಾಲಯಗಳ ಸಂಕೀರ್ಣ ಎನಿಸಿಕೊಂಡಿದೆ.(ಎ.ಎಸ್.ವೈ.)

**ಮದ್ದೂರು:** ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಮುಖ್ಯ ಪಟ್ಟಣ. ತಾಲ್ಲೂಕನ್ನು ಪೂರ್ವದಲ್ಲಿ ಚನ್ನಪಟ್ಟಣ, ಪಶ್ಚಿಮದಲ್ಲಿ ಮಂಡ್ಯ, ದಕ್ಷಿಣದಲ್ಲಿ ಮಳವಳ್ಳಿ, ಉತ್ತರದಲ್ಲಿ ಕುಣಿಗಲು ಹಾಗೂ ವಾಯವ್ಯದಲ್ಲಿ ನಾಗಮಂಗಲ ತಾಲ್ಲೂಕುಗಳು ಸುತ್ತುವರಿದಿವೆ. ಇಲ್ಲಿ 161 ಗ್ರಾಮಗಳಿವೆ. ಮದ್ದೂರು, ಕೊಪ್ಪ, ಆತಕೂರು, ಚಿಕ್ಕರಸಿನಕೆರೆ ಹೋಬಳಿಗಳು. ವಿಸ್ತೀರ್ಣ 618 ಚ.ಕಿಮೀ. ಜನಸಂಖ್ಯೆ 2,89,704. ಪಟ್ಟಣದ ಜನಸಂಖ್ಯೆ 26,459.

ಇಲ್ಲಿಯ ಹೆಚ್ಚು ಭೂಮಿ ಕೆಂಪು ಮಣ್ಣಿನಿಂದ ಕೂಡಿದೆ. ಮದ್ದೂರಿನ ಸಮೀಪದಿಂದ ಮಳವಳ್ಳಿ ಮತ್ತು ಹಲಗೂರಿನವರೆಗೆ ಹಬ್ಬಿರುವ ಒಂದು ಕಿರುವಿಸ್ತಾರ ಮ್ಯಾಗ್ನಟೈಟ್ ಶಿಲಾಪಟ್ಟಿಯಲ್ಲಿ ಕಬ್ಬಿಣದ ಅಂಶ ಹೆಚ್ಚಾಗಿರುವುದು ಕಂಡುಬಂದಿದೆ. ನಾಗಮಂಗಲ ತಾಲ್ಲೂಕಿನ ಪೂರ್ವಭಾಗದಿಂದ ಹರಿದು ಬರುವ ಶಿಂಷಾನದಿ ಮದ್ದೂರು ತಾಲ್ಲೂಕನ್ನು ಉತ್ತರದಲ್ಲಿ ಕಿರಂಗೂರಿನ ಹತ್ತಿರ ಪ್ರವೇಶಿಸುತ್ತದೆ. ಇದು ತಾಲ್ಲೂಕಿನ ಮಧ್ಯಭಾಗದಲ್ಲಿ ಉತ್ತರ–ದಕ್ಷಿಣಕ್ಕೆ ಹರಿದು ಮಳವಳ್ಳಿ ತಾಲ್ಲೂಕು ಪ್ರವೇಶಿಸಿ ಮುಂದೆ ಕಾವೇರಿನದಿಯನ್ನು ಸೇರುತ್ತದೆ.

ತಾಲ್ಲೂಕಿನ ಸರಾಸರಿ ಮಳೆ 67 ಸೆಂಮೀ. ಬಹುಭಾಗದಲ್ಲಿ ಕೆರೆ ಹಾಗೂ ನಾಲೆಯ ನೀರಾವರಿ ಸೌಕರ್ಯವಿದೆ. ಕೊಪ್ಪದ ಹತ್ತಿರ ನಿರ್ಮಿತವಾಗಿರುವ ಕೊಪ್ಪಕೆರೆಯ ದಕ್ಷಿಣ ಪಾರ್ಶ್ವದ ನಾಲೆ 8 ಕಿಮೀ ಉದ್ದವಿದ್ದು ಚಿಕ್ಕನಹಳ್ಳಿ ಹತ್ತಿರದ ಸು. 1618.8 ಹೆಕ್ಟೇರುಗಳಿಗೆ ನೀರುಣಿಸುತ್ತದೆ. ತಗ್ಗಳ್ಳಿಯ ಹತ್ತಿರ ಶಿಂಷಾನದಿಗೆ ಕಟ್ಟಿರುವ ಅಣೆಕಟ್ಟು 251.46 ಮೀ ಉದ್ದವಿದ್ದು ಇದರಿಂದ ಹೊರಡುವ ಎರಡು ನಾಲೆಗಳು–ಶಿಂಷಾನದಿ ಬಲದಂಡೆನಾಲೆ (36 ಕಿಮೀ) ಮತ್ತು ಶಿಂಷಾನದಿ ಎಡದಂಡೆನಾಲೆ (19 ಕಿಮೀ) ಆ ಸುತ್ತಮುತ್ತಣ ಪ್ರದೇಶಕ್ಕೆ ನೀರೊದಗಿಸುತ್ತವೆ. ಮದ್ದೂರಿಗೆ ಸಮೀಪದಲ್ಲಿ ಮದ್ದೂರು ಕೆರೆ ಎಂಬ ದೊಡ್ಡ ಕೆರೆಯಿದೆ. ಮದ್ದೂರು ಅಣೆಕಟ್ಟಿನ ಅಭಿವೃದ್ಧಿಯಿಂದ 364 ಹೆಕ್ಟೇರ್ ಪ್ರದೇಶಕ್ಕೆ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಮದ್ದೂರು ವಿಭಾಗದ ವಿಶ್ವೇಶ್ವರಯ್ಯ ನಾಲೆಯಿಂದ ಸು. 9631 ಹೆಕ್ಟೇರ್ ಪ್ರದೇಶಕ್ಕೆ ನೀರು ಸರಬರಾಜಾಗುತ್ತದೆ.

ತಾಲ್ಲೂಕಿನ ಮುಖ್ಯ ಬೆಳೆಗಳು ಬತ್ತ, ಕಬ್ಬು, ರಾಗಿ, ಜೋಳ, ಶೇಂಗ, ಹುರಳಿ, ತೊಗರಿ, ಕಡಲೆ, ಮೆಣಸಿನಕಾಯಿ ಇತ್ಯಾದಿ. ರೇಷ್ಮೆ ಬೆಳೆ ಇಲ್ಲಿಯ ಜನರ ಮುಖ್ಯ ಉಪಕಸಬು. ತಾಲ್ಲೂಕಿನಲ್ಲಿ ಒಂದು ಸರ್ಕಾರಿ ರೇಷ್ಮೆ ಕೋಠಿ ಹಾಗೂ ಹಿಪ್ಪುನೇರಳೆ ಸಸಿ ಪೋಷಣೆ ಮತ್ತು ತರಬೇತಿ ಕೇಂದ್ರ ಇವೆ. ಉತ್ತಮ ದರ್ಜೆಯ ರೇಷ್ಮೆ ಮೊಟ್ಟೆ ಹಾಗೂ ಹಿಪ್ಪುನೇರಳೆ ಸಸಿ ಸರಬರಾಜು ಮಾಡುವ ಕೇಂದ್ರವಿದೆ. ತಾಲ್ಲೂಕಿನಲ್ಲಿ ಮೀನು ಸಾಕಣೆಯ 9 ದೊಡ್ಡ ಕೆರೆಗಳೂ 100 ಚಿಕ್ಕ ಕೆರೆಗಳೂ ಇವೆ. 7 ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆಗಳಿವೆ. ಪ್ರಾಥಮಿಕ, ಉನ್ನತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳೂ ಮೂಲ ಶಿಕ್ಷಣ ಶಾಲೆ, ಶಿಕ್ಷಕರ ಮೂಲ ಶಿಕ್ಷಣ ತರಬೇತಿ ಕೇಂದ್ರ, ಮೂರು ಕಿರಿಯ ಕಾಲೇಜು, ಒಂದು ಪ್ರಥಮ ದರ್ಜೆ ಕಾಲೇಜುಗಳಿವೆ.

ಶಿವಾರಗುಡ್ಡ, ಸೋಮನಹಳ್ಳಿ, ಶಿವಪುರ, ನಿಡಘಟ್ಟ, ಕಾಳಮುದ್ದನದೊಡ್ಡಿ ತಾಲ್ಲೂಕಿನ ಮುಖ್ಯ ಸ್ಥಳಗಳು. ಮದ್ದೂರಿಗೆ 12 ಕಿಮೀ ದೂರದಲ್ಲಿರುವ ಶಿವಾರಗುಡ್ಡ ಒಂದು ಪ್ರೇಕ್ಷಣೀಯ ಸ್ಥಳವಾಗಿದ್ದು ಇದನ್ನು ಶಿವಾರಗುಡ್ಡ ವಿದ್ಯಾಪೀಠ ಎಂದು ಕರೆಯುತ್ತಾರೆ. ಇಲ್ಲಿ ಒಂದು ವಯಸ್ಕರ ಶಿಕ್ಷಣ ಕೇಂದ್ರವಿದೆ. ಇಲ್ಲಿ ಡೆನ್ಮಾರ್ಕಿನ ಯೋಜನೆಯಂತೆ ಶಿಕ್ಷಣಾರ್ಥಿಗಳಿಗೆ ತಾಂತ್ರಿಕ ಬೇಸಾಯ ಕ್ರಮ ಮತ್ತು ಸುಧಾರಿತ ಬೇಸಾಯ ಪದ್ಧತಿ ಕುರಿತಂತೆ ಶಿಕ್ಷಣ ನೀಡಲಾಗುತ್ತಿದೆ. ವಿ.ಸಿ. ಫಾರಮ್ ಇಲ್ಲಿಯ ಮತ್ತೊಂದು ಬೇಸಾಯ ಕ್ಷೇತ್ರ. ಇಲ್ಲಿ ಜಪಾನ್ ದೇಶದ ಬೇಸಾಯ ತಜ್ಞರು ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡುವರು. ಡೆನ್ಮಾರ್ಕ್–ಮೈಸೂರು ಯೋಜನೆಯಂತೆ ಇಲ್ಲಿ ಒಂದು ಕೋಳಿಸಾಕಣೆ ಕೇಂದ್ರ ಸ್ಥಾಪಿತವಾಗಿದ್ದು ವೈಜ್ಞಾನಿಕವಾಗಿ ಪುಷ್ಟಿಕರ ಆಹಾರ ನೀಡಿ ಉತ್ತಮ ತಳಿಯ ಕೋಳಿಗಳನ್ನು ಸಾಕುವ ವಿಧಾನವನ್ನು ಹೇಳಿಕೊಡಲಾಗುತ್ತದೆ. ಇಲ್ಲಿ ಗ್ರಾಮ ಸೇವಕ ಶಿಕ್ಷಣ ತರಬೇತಿ ಕೇಂದ್ರವೂ ಇದೆ. ಪ್ರಶಾಂತವಾಗಿರುವ ಬೆಟ್ಟದ ಮೇಲೆ ಒಂದು ಆಶ್ರಮವಿದೆ. ಮದ್ದೂರಿಗೆ ಸಮೀಪ ದೂರದಲ್ಲಿ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಸೋಮನಹಳ್ಳಿಯಲ್ಲಿ ಭೂಸವಕಲು ರಕ್ಷಣಾ ತರಬೇತಿ ಕೇಂದ್ರವಿದೆ. ಈ ಗ್ರಾಮದ ಸಮೀಪದಲ್ಲಿ ಸ್ಕೂಟರ್ ತಯಾರಿಸುವ ಒಂದು ಕಾರ್ಖಾನೆ ಸ್ಥಾಪಿತವಾಗಿತ್ತು. ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ನಿಡಘಟ್ಟದಲ್ಲಿ ಮದ್ದೂರಿಗೆ ಸು. 11 ಕಿಮೀ ದೂರದಲ್ಲಿರುವ ಕಾಳಮುದ್ದನದೊಡ್ಡಿಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿದೆ (1974). ಈ ಕಾರ್ಖಾನೆ ಮದ್ದೂರು ಹಾಗೂ ಮಳವಳ್ಳಿ ತಾಲ್ಲೂಕುಗಳಲ್ಲಿ ಬೆಳೆಯುವ ಕಬ್ಬನ್ನು ಅರೆಯುತ್ತದೆ. ಈ ಊರಿನಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಸಹ ಇದೆ. ಬೆಂಗಳೂರು–ಮೈಸೂರು ರೈಲುಮಾರ್ಗ ಮದ್ದೂರಿನ ಸಮೀಪದಲ್ಲಿ ಹಾದು ಹೋಗುತ್ತದೆ. ಮದ್ದೂರಿಗೆ 2ಕಿಮೀ ದೂರದಲ್ಲಿರುವ ಶಿವಪುರದಲ್ಲಿ ರೈಲು ನಿಲ್ದಾಣವಿದೆ. ಮದ್ದೂರು ಮತ್ತು ಚಿಕ್ಕನಹಳ್ಳಿಗಳಲ್ಲಿ ವರ್ಷಕ್ಕೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ.

ಮದ್ದೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯ ಪಟ್ಟಣ. ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಮೈಸೂರಿನ ಈಶಾನ್ಯಕ್ಕೆ 57 ಕಿಮೀ ದೂರದಲ್ಲಿ ಶಿಂಷಾ ನದಿಯ (ಮದ್ದೂರು ಹೊಳೆ) ಬಲದಂಡೆಯ ಮೇಲಿದೆ. ಮಂಡ್ಯ ಜಿಲ್ಲೆಯ ದೊಡ್ಡ ಪಟ್ಟಣಗಳಲ್ಲಿ ಇದು ಐದನೆಯ ಸ್ಥಾನ ಪಡೆದಿದೆ. ಜನಸಂಖ್ಯೆ 17,402.

ಈ ಪಟ್ಟಣ ಪುರಸಭೆಯನ್ನು ಹೊಂದಿದೆ. ವಿದ್ಯುಚ್ಛಕ್ತಿ ಹಾಗೂ ನೀರಿನ ಸೌಲಭ್ಯವಿದೆ. ಇಲ್ಲಿ ತೋಟಗಾರಿಕೆ ಇಲಾಖೆ, ರೇಷ್ಮೆಕೋಠಿ ಹಾಗೂ ಹಿಪ್ಪುನೇರಳೆ ಸಸಿ ಪೋಷಣೆ ಮತ್ತು ತರಬೇತಿ ಕೇಂದ್ರ, ಮೀನುಸಾಕಣೆ ಕೇಂದ್ರ ಇವೆ. ಪ್ರವಾಸಿ ಮಂದಿರವಿದೆ. ಒಂದು ಸರ್ಕಾರಿ ಮತ್ತು ಖಾಸಗಿ ಕಾಲೇಜು (ಅರ್ಜುನಪುರಿ ಕಲೆ ಮತ್ತು ವಿಜ್ಞಾನಗಳ ಕಾಲೇಜು). ಎರಡು ಪ್ರೌಢಶಾಲೆಗಳು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್, ತಾಲ್ಲೂಕು ಕಚೇರಿ, ಆಸ್ಪತ್ರೆ ಮುಂತಾದವು ಇವೆ. ಮದ್ದೂರಿನಿಂದ ಮಳವಳ್ಳಿ, ಶಿವಸಮುದ್ರ ಕೊಳ್ಳೇಗಾಲ, ಕುಣಿಗಲ್ಲು, ಹುಲಿಯೂರುದುರ್ಗ ಮುಂತಾದ ಕಡೆಗಳಿಗೆ ಅನುಕೂಲಕರ ರಸ್ತೆಗಳಿವೆ. (ಪಿ.ಬಿ.)

**ಮಧುಗಿರಿ:** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಶಿರಾ, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳನ್ನೊಳಗೊಂಡ ಜಿಲ್ಲಾ ಉಪವಿಭಾಗ ಕೇಂದ್ರ. ಈ ತಾಲ್ಲೂಕಿನ ದಕ್ಷಿಣಕ್ಕೆ ಕೊರಟಗೆರೆ, ಪಶ್ಚಿಮಕ್ಕೆ ಶಿರಾ ತಾಲ್ಲೂಕುಗಳಿದ್ದು ಪೂರ್ವ, ಉತ್ತರ ಮತ್ತು ವಾಯವ್ಯದ ಮೂರು ಕಡೆಯೂ ಆಂಧ್ರಪ್ರದೇಶ ಸುತ್ತುವರಿದಿದೆ. ದೊಡ್ಡೇರಿ, ಮಧುಗಿರಿ, ಮಿಡಿಗೇಶಿ, ಇಟ್ಟಿಗದಿಬ್ಬನಹಳ್ಳಿ, ಕೊಡಿಗೇನಹಳ್ಳಿ ಮತ್ತು ಪುರವಾರ ಹೋಬಳಿಗಳು. ಒಂದು ಪಟ್ಟಣವಿದ್ದು 320 ಗ್ರಾಮಗಳಿವೆ. ವಿಸ್ತೀರ್ಣ 11.184.4 ಚ.ಕಿಮೀ. ಜನಸಂಖ್ಯೆ 2,64,447.

ಜಿಲ್ಲೆಯ ಪೂರ್ವಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಕಣಶಿಲೆಯ ಬೆಟ್ಟಗಳು ಹಬ್ಬಿವೆ. ಈ ತಾಲ್ಲೂಕಿನಲ್ಲಿರುವ ಎತ್ತರದ ಬೆಟ್ಟಗಳೆಂದರೆ ಬ್ಯಾಲ್ಯ (888 ಮೀ), ದೊಡ್ಡನರಮಂಗಲ (945 ಮೀ), ಮಿಡಿಗೇಶಿದುರ್ಗ (1,039 ಮೀ) ಮತ್ತು ಮಧುಗಿರಿದುರ್ಗ (1.192 ಮೀ). ತಾಲ್ಲೂಕಿನ ಪೂರ್ವಭಾಗದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಜಯಮಂಗಲಿ ನದಿ ಹರಿಯುತ್ತದೆ. ಹೊಳವನಹಳ್ಳಿಯ ಹತ್ತಿರ ಪೂರ್ವದಿಂದ ಗರುಡಾಚಲ ನದಿಯೂ ರಾಮಪುರದ ಬಳಿ ಪಶ್ಚಿಮದ ಕಡೆಯಿಂದ ಸುವರ್ಣಮುಖಿ ನದಿಯೂ ಇದಕ್ಕೆ ಸೇರುತ್ತದೆ. ಮುಂದೆ ಇದು ತಾಲ್ಲೂಕಿನ ಈಶಾನ್ಯದಿಕ್ಕಿನಲ್ಲಿ ಹರಿದು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯನ್ನು ಪ್ರವೇಶಿಸುವುದು. ಕುಮುದ್ವತಿ ನದಿ ಈ ತಾಲ್ಲೂಕಿನ ಅತ್ಯಂತ ಈಶಾನ್ಯದಲ್ಲಿ ದಕ್ಷಿಣೋತ್ತರವಾಗಿ ಹರಿಯುವುದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ ಸು. 63.5 ಸೆಂಮೀ. ಇಲ್ಲಿಯ ಕೆಲವು ಭಾಗಗಳಲ್ಲಿ ಕುರಂದ ಶಿಲೆಗಳಿರುವುದು ಕಂಡುಬಂದಿದೆ. ರಾಗಿ, ಬತ್ತ, ಜೋಳ, ಶೇಂಗಾ, ಹಾರಕ, ನವಣೆ, ಹುರಳಿ, ಕಬ್ಬು ಮುಂತಾದವು ಮುಖ್ಯ ಬೆಳೆಗಳು. ತೆಂಗಿನ ಬೆಳೆಯೂ ಸ್ವಲ್ಪ ಉಂಟು. ಇದು ದಾಳಿಂಬೆ ಹಣ್ಣಿಗೆ ಹೆಚ್ಚು ಪ್ರಸಿದ್ಧ.

ಬೀಡಿ, ಕೈಮಗ್ಗದ ಹತ್ತಿ ಹೆಚ್ಚು ಉಣ್ಣೆಬಟ್ಟೆ ತಯಾರಿಕೆ ಮತ್ತು ಕೆಲವು ಖಾದಿ ಗ್ರಾಮೋದ್ಯೋಗಗಳಿವೆ. 1960ರಲ್ಲಿ ಪ್ರಾರಂಭಿಸಿದ ನಿಯಂತ್ರಿತ ಮಾರುಕಟ್ಟೆ ಮತ್ತು ಕೆಲವು ವಾಣಿಜ್ಯ ಬ್ಯಾಂಕುಗಳಿವೆ, ತುಮಕೂರು–ಪಾವಗಡ ರಸ್ತೆ ಈ ತಾಲ್ಲೂಕಿನ ಮೇಲೆ ಹಾದು ಹೋಗುತ್ತದೆ. ಇದರ ಸುತ್ತಲ ಸ್ಥಳಗಳಿಗೆ ಉತ್ತಮ ರಸ್ತೆ ಮಾರ್ಗಗಳಿವೆ. ಅಂಚೆ, ತಂತಿ, ವಿದ್ಯುತ್ ಸೌಲಭ್ಯವಿದ್ದು ಶಾಲೆಗಳೂ ಆರೋಗ್ಯಕೇಂದ್ರಗಳೂ ಇವೆ.

ಮಧುಗಿರಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ತುಮಕೂರು–ಪಾವಗಡ ಮಾರ್ಗಮಧ್ಯದಲ್ಲಿ, ಮಧುಗಿರಿ ಬೆಟ್ಟದ ಉತ್ತರಭಾಗದಲ್ಲಿ ಹಾಗೂ ತುಮಕೂರಿಗೆ ಉತ್ತರದಲ್ಲಿ ಸು. 42 ಕಿಮೀ ದೂರದಲ್ಲಿದೆ. ಊರನ್ನು ಸುತ್ತಲೂ ಬೆಟ್ಟಗಳು ಆವರಿಸಿವೆ. ಜನಸಂಖ್ಯೆ 26,351.

ಈ ಪಟ್ಟಣ ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳು ಹಾಗೂ ಕಂಬಳಿ ತಯಾರಿಕೆಗೆ ಪ್ರಸಿದ್ಧ. ಈ ಉತ್ಪನ್ನಗಳನ್ನು ಸುತ್ತಲ ಊರುಗಳಿಗೂ ತುಮಕೂರು, ತಿಪಟೂರು, ಬೆಂಗಳೂರು, ಬಳ್ಳಾರಿ ಮತ್ತು ಆಂಧ್ರಪ್ರದೇಶದ ಹಿಂದೂಪುರಗಳಿಗೂ ಕಳುಹಿಸುವುದುಂಟು. ಚಿನ್ನದಸಲಕಿ ಎಂಬ ಅಕ್ಕಿ ಇಲ್ಲಿ ಮತ್ತು ಸುತ್ತಲ ಊರಿನಲ್ಲಿ ಪ್ರಸಿದ್ಧ.

ಮಧುಗಿರಿಯಲ್ಲಿ ತಾಲ್ಲೂಕು ಮಟ್ಟದ ಕೆಲವು ಸರ್ಕಾರಿ ಕಚೇರಿಗಳು. ಪಶುವೈದ್ಯಾಲಯ, ಆರೋಗ್ಯಕೇಂದ್ರ, ಶಾಲಾ ಕಾಲೇಜುಗಳು ಇವೆ. ಸುತ್ತಲ ಊರುಗಳಿಗೆ ಮಾರ್ಗಗಳಿದ್ದು ವ್ಯಾಪಾರ ಕೇಂದ್ರವಾಗಿದೆ. ಸುರಕ್ಷಿತ ಕುಡಿಯುವ ನೀರಿನ ಸರಬರಾಜು ಇದ್ದು ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ. (ಪಿ.ಬಿ.)

**ಮಧ್ಯಂತರ ಅವಕಾಶಗಳು:** ಜನಸಂಖ್ಯೆಯ ಗಾತ್ರ ಮತ್ತು ಆ ಜನಸಂಖ್ಯೆ ಚಲಿಸುವ ಅಂತರಕ್ಕೂ ಇರುವ ಸಂಬಂಧಗಳನ್ನು ಜಿ.ಕೆ.ಜಿಪ್ ತನ್ನ ಪ್ರಿನ್ಸಿಪಲ್ ಆಫ್ ಲೀಸ್ಟ್ ಎಫರ್ಟ್‌ನಲ್ಲಿ ವಿವರಿಸಿದ್ದಾರೆ. ಇವರ ಪ್ರಕಾರ ಎರಡು ನಗರಗಳ ಕಡೆಗೆ ವಲಸೆ ಹೋಗುವವರಿಗೆ ಅವರು ಚಲಿಸುವ ಸ್ಥಾನದಿಂದ ಆ ನಗರಗಳಿಗಿರುವ ಅಂತರ ಪ್ರಮುಖ ಪಾತ್ರವಹಿಸುತ್ತದೆ. ಇವರ ತತ್ವವನ್ನು ಎಸ್.ಎ.ಸ್ಟುಫರ್ ಎನ್ನುವವರು ಮಧ್ಯಂತರ ಅವಕಾಶಗಳು

ಎನ್ನುವ ಹೊಸ ತತ್ವದೊಂದಿಗೆ ಸುಧಾರಿಸಿದರು. ಇವರ ಪ್ರಕಾರ ರೇಖಿಯ (ಲೀನಿಯರ್) ಅಂತರ ವಲಸೆಗೆ ಕಾರಣವಾಗಿರದೇ ಎರಡು ಸ್ಥಳಗಳ ಮಧ್ಯದಲ್ಲಿ ದೊರೆಯುವ ಅವಕಾಶಗಳು ಮಹತ್ವದ್ದಾಗಿರುತ್ತವೆ. ಜನರು ಒಂದು ನಿರ್ದಿಷ್ಟ ಅಂತರದಲ್ಲಿ ಚಲಿಸಲು ಅವರಿಗೆ ಅಲ್ಲಿ ದೊರಕುವ ಅವಕಾಶಗಳು ಕಾರಣವೆಂದು ವಿವರಿಸಿದರು. ಮಧ್ಯಂತರ ಅವಕಾಶಗಳನ್ನು ಅವರು ಈ ಕೆಳಗಿನ ಸೂತ್ರದಲ್ಲಿ ವಿವರಿಸಿದ್ದಾರೆ.

$$Y = K = \frac{X^{1}}{X^{2}}$$

Y =ಎಂದರೆ ಒಂದು ಕೇಂದ್ರ ಸ್ಥಳದ ಸುತ್ತಲಿನ ಪ್ರಭಾವಿ ವಲಯದಿಂದ ವಲಸೆ ಬಂದವರು.

X= ಅವರಿಗೆ ಸಿಗುವ ಅವಕಾಶಗಳು

X= ಮಧ್ಯಂತರ ಅವಕಾಶಗಳು (ವ್ಯಕ್ತಿ ಹೊರಟಲ್ಲಿಂದ ಮಧ್ಯದ ಅಂತರದಲ್ಲಿ)

K= ಬದಲಾಗದ ಪ್ರದೇಶ (ಪ್ರೊಪೋರ್‌ಷನೇಟ್ಲಿ ಕಾನ್‌ಸ್ಟೆಂಟ್)

ನಿಜವಾದ ಅವಕಾಶಗಳು ವಲಸೆಗಾರರನ್ನು ಆಕರ್ಷಿಸುತ್ತವೆ. ಅಂತಹ ಅವಕಾಶಗಳಲ್ಲಿ ಉದ್ಯೋಗ, ಪರಿಸರ ವಾಸಿಸಲು ಯೋಗ್ಯವಾದ ಪ್ರದೇಶ ಮುಂತಾದವುಗಳು ಮಹತ್ವದವು. ಇಂತಹ ಮಧ್ಯಂತರ ಅವಕಾಶಗಳಿಂದಾಗಿ ಔದ್ಯೋಗಿಕ ಕ್ಷೇತ್ರ ವಿಸ್ತಾರಗೊಳ್ಳುವುದು. (ಕೆ.ಬಿ.)

**ಮಧ್ಯಜೀವಯುಗ:** ಭೂವಿಜ್ಞಾನದಲ್ಲಿ ಸು. 70–220 ದಶಲಕ್ಷ ವರ್ಷಗಳ ತನಕ ಪ್ರಾಚೀನಕಾಲ (ಮೀಸೊಜೋಯಿಕ್ ಈರಾ). ಇದು ಪ್ರಾಗ್ಜೀವ ಯುಗ (ಪೇಲಿಯೊಜ಼ೋಯಿಕ್ ಈರಾ) ಮತ್ತು ಆಧುನಿಕ ಜೀವಯುಗಗಳ (ಸೀನೊಜ಼ೋಯಿಕ್ ಈರಾ) ನಡುವಿನ ಅವಧಿ. ಮಧ್ಯಜೀವಕಲ್ಪ ಪ್ರಾಗ್ಜೀವ ಯುಗದ ಅಂತ್ಯದಲ್ಲಿ ನಡೆದ ಮಹಾಪ್ರಳಯದ ಅನಂತರ ಪ್ರಾರಂಭವಾಗಿ ಆಧುನಿಕ ಜೀವಯುಗದ ಪ್ರಾರಂಭಕ್ಕೆ ಮುಂಚೆ ನಡೆದ ಮತ್ತೊಂದು ಮಹಾಪ್ರಳಯದ ಪ್ರಾರಂಭಕಾಲಕ್ಕೆ ಕೊನೆಗೊಳ್ಳುತ್ತದೆ. ಈ ಎರಡು ಮಹಾಪ್ರಳಯಗಳ ಮಧ್ಯದ ಕಾಲವನ್ನು ಟ್ರಯಾಸಿಕ್, ಜುರಾಸಿಕ್ ಮತ್ತು ಕ್ರಿಟೇಷಸ್ ಎಂದು ಮೂರು ಭಾಗಗಳಾಗಿ ವಿಭಜಿಸಿದೆ. ಆಯಾ ಕಾಲಗಳಲ್ಲಿ ಸಂಚಯನಗೊಂಡ ಶಿಲಾಸ್ತೋಮಗಳಿಗೆ ಅನುಕ್ರಮವಾಗಿ ಟ್ರಯಾಸಿಕ್, ಜುರಾಸಿಕ್ ಮತ್ತು ಕ್ರಿಟೇಷಸ್ ಶಿಲಾಸ್ತೋಮಗಳೆಂದು ಹೆಸರು.

ಪ್ರಾಗ್ಜೀವಯುಗದ ಕೊನೆಯ ಕಲ್ಪ ಪರ್ಮಿಯನ್ ಮತ್ತು ಮಧ್ಯ ಜೀವಯುಗದ ಮೊದಲನೆಯ ಕಲ್ಪ ಟ್ರಯಾಸಿಕ್ ಶಿಲಾಸ್ತೋಮಗಳ ಮಧ್ಯೆ ಇರುವ ಅನನುರೂಪತೆ ಆ ಸ್ತೋಮಗಳ ಎಲ್ಲೆಡೆಯೂ ಕಾಣಸಿಗುವುದಿಲ್ಲ. ಭಾರತದ ಸ್ಪಿಟಿ ಪ್ರದೇಶದಲ್ಲಿ ಪರ್ಮಿಯನ್ ಸ್ತೋಮದ ಅತ್ಯಂತ ಮೇಲ್ಪದರದ ಮೇಲೆ, ಟ್ರಯಾಸಿಕ್ ಸ್ತೋಮದ ಅತ್ಯಂತ ಕೆಳಪದರ ಒಟೊಸೆರಾಸ್ ಪದರ ಅನುರೂಪತೆಯಿಂದ ಸಂಚಯನಗೊಂಡಿದೆ. ಪಾಕಿಸ್ತಾನದ ಸಾಲ್ಟ್‌ರೇಂಜ್ ಪ್ರದೇಶದಲ್ಲಿ ಪರ್ಮಿಯನ್ ಶಿಲಾಸ್ತೋಮದ ಅತ್ಯಂತ ಮೇಲಿರುವ ಛಿದ್ರ ಶಿಲಾಪಾದದ ಮೇಲೆ ಟ್ರಯಾಸಿಕ್ ಶಿಲಾಸ್ತೋಮದ ಸೆರಟೈಟಿಸ್ ಪದರಗಳು ಅನುರೂಪತೆಯಿಂದ ನಿಕ್ಷೇಪಗೊಂಡಿವೆ. ಹೀಗಿದ್ದರೂ ಪ್ರಾಗ್ಜೀವಯುಗ ಮತ್ತು ಮಧ್ಯ ಜೀವಯುಗದ ಶಿಲಾಸ್ತೋಮಗಳನ್ನು ಒಟ್ಟಾರೆ ಅವಲೋಕಿಸಿದರೆ ಕೆಲವೊಂದು ಭಿನ್ನತೆಗಳನ್ನು ಕಾಣಬಹುದು.

ಮೊದಲನೆಯ ಶಿಲಾಸ್ತೋಮಗಳಲ್ಲಿ ಸಾಮಾನ್ಯವಾಗಿ ಸುಣ್ಣಶಿಲೆ ಕಡಿಮೆ ಮೊತ್ತದಲ್ಲಿ ಇರುತ್ತದೆ : ಒಂದೇ ರೀತಿಯ ಶಿಲಾಸಂಚಯ ಅನೇಕ ಮೀಟರುಗಳಷ್ಟು ಮಂದವಾಗಿರುತ್ತದೆ. ಆದರೆ ಮಧ್ಯ ಜೀವಯುಗದ ಶಿಲಾಸ್ತೋಮಗಳಲ್ಲಿ ಸುಣ್ಣಶಿಲೆ ಅಧಿಕ ಪ್ರಮಾಣದಲ್ಲಿರುವುದು ಮಾತ್ರವಲ್ಲದೆ ಶಿಲಾಸಂಚಯ ಆಗಾಗ್ಗೆ ಬದಲಾವಣೆಗೊಂಡಿರುವುದನ್ನೂ ಕಾಣಬಹುದು. ಎರಡನೆಯದಾಗಿ ಪ್ರಾಗ್ಜೀವ ಯುಗದ ಶಿಲಾಸ್ತೋಮಗಳು, ಸಾಮಾನ್ಯವಾಗಿ ಅಲ್ಲಲ್ಲೇ ಕಲಕಲ್ಪಟ್ಟು ನಾನಾ ರೀತಿಯ ಮಡಿಕೆಗಳಾಗಿವೆ. ಮಾತ್ರವಲ್ಲ ರೂಪಾಂತರಗೊಂಡಿವೆ ಕೂಡ. ಮಧ್ಯ ಜೀವಯುಗದ ಶಿಲಾಸ್ತೋಮಗಳು ಅಷ್ಟಾಗಿ ಕಲಕಲ್ಪಟ್ಟಿರುವುದೂ ಇಲ್ಲ, ರೂಪಾಂತರಗೊಂಡಿರುವುದೂ ಇಲ್ಲ.

ಈ ಎಲ್ಲ ಭಿನ್ನತೆಗಳಿಗಿಂತಲೂ ಆ ಶಿಲೆಗಳಲ್ಲಿರುವ ಜೀವ್ಯವಶೇಷಗಳು ತೋರುವ ಭಿನ್ನತೆ ಎದ್ದು ಕಾಣುವಂಥದು. ಪರ್ಮಿಯನ್ ಕಲ್ಪದ ಅಂತ್ಯದಲ್ಲಿ ಜೀವಿವರ್ಗಗಳಲ್ಲಿ ತೀವ್ರ ಬದಲಾವಣೆಯಾಗಿರುವುದು ಗಮನಾರ್ಹ. ಪ್ರಾಗ್ಜೀವಯುಗದಲ್ಲಿ ಹೇರಳವಾಗಿ ಪ್ರಭಾವಸ್ಥಾನಗಳಿಸಿಕೊಂಡಿದ್ದ ಕೆಲವು ಪ್ರಾಣಿವರ್ಗಗಳು ಇಂದು ನಾಮಾವಶೇಷವಾಗಿವೆ. ಮತ್ತೆ ಕೆಲವು ಪ್ರಭಾವಸ್ಥಾನವನ್ನು ಕಳೆದುಕೊಂಡಿದ್ದರೂ ಉಳಿದುಕೊಂಡಿವೆ. ಆದರೆ ಆ ಕಾಲದಲ್ಲಿ ವಿರಳವಾಗಿಯೂ ಪ್ರಭಾವರಹಿತವಾಗಿಯೂ ಜೀವನ ನಡೆಸುತ್ತಿದ್ದ ಕೆಲವು ಜೀವಿವರ್ಗಗಳು ಪ್ರಭಾವಸ್ಥಾನವನ್ನು ಆಕ್ರಮಿಸಿಕೊಂಡು, ಬಲು ಬೇಗ ವೃದ್ಧಿಹೊಂದಿರುವುದು ಕಂಡುಬರುತ್ತದೆ.

ಈ ಯುಗದಲ್ಲಿ ಟ್ರೈಲೊಬೈಟ್, ಸಿಸ್ಟಿಡ್, ಬ್ಲಾಸ್ಟಾಯ್ಡ್ ಮತ್ತು ಪೇಲಕನಾಯ್ಡ್ ಪ್ರಾಣಿವರ್ಗಗಳು ಸಂಪೂರ್ಣವಾಗಿ ವಂಶನಷ್ಟ ಹೊಂದಿದುವು. ಕ್ರೈನಾಯ್ಡ್ ಮತ್ತು ಸ್ಪಿರಿಫೆರಿಡ್‌ಗಳು ಬಲು ವಿರಳವಾಗಿ ಉಳಿದುಕೊಂಡವು. ಸ್ಪಿರಿಫೆರಿಡ್‌ಗಳು ಜುರಾಸಿಕ್ ಕಲ್ಪದ ಆದಿಕಾಲದಲ್ಲಿ ವಂಶನಷ್ಟ ಹೊಂದಿದುವು. ಪ್ರಾಗ್ಜೀವಯುಗದ ಅನೇಕ ವಿಧಗಳ ಬ್ರೇಕಿಯೊಪೋಡ ಪ್ರಾಣಿಗಳು ವಂಶನಷ್ಟ ಗೊಂಡವು. ಉಳಿದವು ತೀವ್ರ ಬದಲಾವಣೆಗೆ ಒಳಗಾದವು. ಪ್ರಾಗ್ಜೀವಯುಗದ ರೂಗೋಸ ಜಾತಿಯ ಹವಳಗಳು ನಿರ್ನಾಮಗೊಂಡು ಅವುಗಳ ಜಾಗದಲ್ಲಿ ಆಧುನಿಕ ಜಾತಿಯ ಹವಳಗಳು ಉದಯಿಸಿದುವು. ಕೆಫೆಲೊಪೋಡ ಪ್ರಾಣಿಗಳಲ್ಲಿ ಪ್ರಾಗ್ಜೀವ ಯುಗದಲ್ಲಿ ಪ್ರತಿನಿಧಿಸಲ್ಪಟ್ಟಿದ್ದ ಆರ್ಥೊಸೆರಟಡ್ ಮತ್ತು ಗೋನಿಯೊಟೈಟಿಸ್ ಎಂಬ ಜಾತಿಗಳು ವಂಶನಷ್ಟಗೊಂಡು ಅವುಗಳ ಸ್ಥಾನವನ್ನು ಹೊಸದಾಗಿ ಉದಯಿಸಿದ ಸೆರಟೈಟಿಸ್ ಎಂಬ ಕೆಫೆಲೊಪೋಡಗಳು ಆಕ್ರಮಿಸಿದುವು. ಇವು ಸಹ ಟ್ರಯಾಸಿಕ್ ಕಲ್ಪದ ಅಂತ್ಯದಲ್ಲಿ ವಂಶನಷ್ಟ ಹೊಂದಿದಂಥವೇ. ಇವುಗಳ ಸ್ಥಾನವನ್ನು ಜುರಾಸಿಕ್ ಕ್ರಿಟೇಷಸ್ ಕಲ್ಪದ ಅಮ್ಮೊನೈಟ್ ಪ್ರಾಣಿಗಳು ಆಕ್ರಮಿಸಿಕೊಂಡವು. ಇವು ಗಾತ್ರದಲ್ಲಿ ಅತಿ ಚಿಕ್ಕವುಗಳಿಂದ ಬಂಡಿಗಾಲಿಗಳಷ್ಟವರೆಗೆ ದೊಡ್ಡದಾಗಿದ್ದುವು. ಅಧಿಕ ಸಂಖ್ಯೆಯಲ್ಲಿ ಮಾತ್ರವಲ್ಲದೆ, ಪ್ರಪಂಚವ್ಯಾಪಕವಾಗಿಯೂ ಇದ್ದುವು. ಇವಿಲ್ಲದ ಸಾಗರ ಭಾಗ ಮಧ್ಯಜೀವಯುಗದಲ್ಲಿ ಇರಲಿಲ್ಲವೆಂದೇ ಹೇಳಲಾಗಿದೆ; ಆದ್ದರಿಂದ ಮಧ್ಯಜೀವನಯುಗವನ್ನು ಅಮ್ಮೊನೈಟ್‌ಗಳ ಯುಗವೆಂದೇ ಕರೆಯಲಾಗಿದೆ.

ಕಶೇರುಕ ಪ್ರಾಣಿಗಳಲ್ಲಿ ಸರೀಸೃಪಗಳು ಅತಿಯಾಗಿ ವೃದ್ಧಿಗೊಂಡು ಭೂಭಾಗವನ್ನೆಲ್ಲ ಆಕ್ರಮಿಸಿದುವು. ಇವು ಯಾವುದೇ ವಾತಾವರಣಕ್ಕಾದರೂ ಹೊಂದಿಕೊಂಡು ಎಲ್ಲ ಬಗೆಯ ಆಹಾರವನ್ನೂ ಒಗ್ಗಿಸಿಕೊಂಡಿದ್ದುವು. ಇವುಗಳಲ್ಲಿ ಸಸ್ಯಾಹಾರಿಗಳು, ಮಾಂಸಾಹಾರಿಗಳು ಮಾತ್ರವಲ್ಲದೆ ಕ್ರಿಮಿಕೀಟ ಭಕ್ಷಿಗಳೂ ಇದ್ದುವು. ಇವುಗಳ ಪೈಕಿ ಕೆಲವು ಮರದ ಮೇಲೆ ವಾಸಿಸುತ್ತ ಕ್ರಮೇಣ ಹಾರುವುದನ್ನು ಕಲಿತು ವಾಯುಮಂಡಲವನ್ನೂ ಸೇರಿದುವು. ಮತ್ತೆ ಕೆಲವು ಪುನಃ ಜಲವಾಸಿಗಳಾದವು. ಇವುಗಳ ಗಾತ್ರ ಬಲು ದೊಡ್ಡದಾಗಿತ್ತು. ಡೈನೊಸಾರಸ್ ಎಂಬ ಒಂದು ಜಾತಿಯ ಸರೀಸೃಪ ಸು. 30 ಮೀ ಉದ್ದ ಮತ್ತು 3 ಮೀ ಎತ್ತರ ಇತ್ತು. ಇಂಥ ಪ್ರಾಣಿಗಳನ್ನು ಮಧ್ಯಜೀವಯುಗದ ಪೆಡಂಭೂತಗಳೆಂದು ಕರೆದಿದ್ದಾರೆ.

ಈ ಯುಗದ ಸಸ್ಯವರ್ಗದಲ್ಲಿಯೂ ಅಷ್ಟೇ ಮಹತ್ತರ ಬದಲಾವಣೆ ಆಯಿತು. ಪ್ರಾಗ್ಜೀವಯುಗದಲ್ಲಿ ನಿಬಿಡವಾಗಿದ್ದ ಕೆಲಮೈಟಿಸ್, ಲೆಪಿಡೊಡೆಂಡ್ರಾನ್ ಮತ್ತು ಸಿಜಿಲೇರಿಯ ಮುಂತಾದ ಟೆರಿಡೋಫೈಟ್ ವರ್ಗದ ಸಸ್ಯಗಳು ಹಾಗೂ ಟೆರಿಡೊಸ್ಪರ್ಮ್ ಜಾತಿಯ ಸಸ್ಯಗಳು ವಂಶನಷ್ಟಗೊಂಡವು. ಇಲ್ಲವೇ ತಮ್ಮ ಪ್ರಭಾವಸ್ಥಾನದಿಂದ ಸರಿದು ಸೈಕಾಡ್ ಮತ್ತು ಕೋನಿಫೆರಸ್‌ಗಳಿಂದ ಕೂಡಿದ ಜಿಮ್ನೊಸ್ಪರ್ಮ್ ವರ್ಗದ ಸಸ್ಯಗಳಿಗೆ ಸ್ಥಾನ ಮಾಡಿಕೊಟ್ಟವು. ಈ ಹೊಸ ಸಸ್ಯವರ್ಗ ವಿಪರೀತ ವೃದ್ಧಿಗೊಂಡು ಭೂಮಿಯ ಎಲ್ಲ ಭಾಗಗಳನ್ನೂ ಆಕ್ರಮಿಸಿಕೊಂಡಿತು. ಈ ಕಾರಣದಿಂದ ಮಧ್ಯಜೀವಯುಗವನ್ನು ಜಿಮ್ನೊಸ್ಪರ್ಮ್‌ಗಳ ಕಾಲ ಎಂದು ಕರೆಯಲಾಗಿದೆ.

ಈ ಯುಗದ ಸಸ್ತನಿಗಳು ಬಲು ಚಿಕ್ಕವಾಗಿದ್ದು, ತಮ್ಮ ದೀರ್ಘ ಜೀವಿತಕಾಲವನ್ನು ಅಜ್ಞಾತವಾಸದಲ್ಲಿ ಬಿಲವಾಸಿಗಳಾಗಿ ಕಳೆದುವು. ಪ್ರಾಯಶಃ ಪೆಡಂಭೂತಗಳ ಭಯದಿಂದ ಹೀಗಾಗಿರಬೇಕು. ಈ ಪ್ರಾಣಿಗಳು ಆನೆ, ಕುದುರೆ, ಒಂಟೆ, ಸಿಂಹ, ಕೊನೆಗೆ ಮಾನವನ ಪೂರ್ವಜ ಎಂಬ ಅಭಿಪ್ರಾಯವೂ ಇದೆ. ಈ ಯುಗದ ಮತ್ತೊಂದು ವಿಶೇಷ ಹಲ್ಲುಳ್ಳ, ಪುಚ್ಛಯುಕ್ತವಾದ, ರೆಕ್ಕೆ ಕೊಕ್ಕುಗಳಿಂದ ಕೂಡಿ, ಹಾರುವ ಸಾಮರ್ಥ್ಯವಿದ್ದ ಆರ್ಕಿಯಾಪ್ಟೆರಿಕ್ ಎಂಬ ಜಾತಿಯ ವಿಚಿತ್ರ ಪಕ್ಷಿ. ಇದು ಪೆಡಂಭೂತಗಳ ಕೆಲವು ಲಕ್ಷಣಗಳನ್ನು ಹೊಂದಿದ್ದುದರಿಂದ, ಪಕ್ಷಿಗಳು ಪೆಡಂಭೂತಗಳಿಂದ ಉದ್ಭವಿಸಿದ್ದು ಎಂಬ ಅಭಿಪ್ರಾಯಕ್ಕೆ ಆಸ್ಪದವಾಗಿದೆ. ಮಧ್ಯಜೀವಯುಗದ ಕ್ರಿಟೇಷಸ್ ಕಲ್ಪದಲ್ಲಿ ಸಾಗರದಲ್ಲಿ ನೀರು ಬಲು ಸ್ವಚ್ಛವಾಗಿದ್ದ ಕಾರಣ ಪೊರಮೊನಿಫೆರ ಮುಂತಾದ ಅತಿಸೂಕ್ಷ್ಮ ಪ್ರಾಣಿಗಳ ಅವಶೇಷಗಳಿಂದ ಒಂದು ಬಗೆಯ ಸುಣ್ಣ ಅಧಿಕ ಪ್ರಮಾಣದಲ್ಲಿ ಉತ್ಪನ್ನವಾಯಿತು. ಮಧ್ಯ ಜೀವಯುಗದಲ್ಲಿ ಬೀಜಬಿಡುವ ಆದರೆ ಹೂ ಬಿಡದ (ಹೂಬಿಡುವ ಸಸ್ಯಗಳು ಈ ಯುಗದ ಕೊನೆಯಲ್ಲಿ ಉದಯಿಸಿದುವು) ಗಿಡಮರಗಳೂ ಇದ್ದುವು.

ಈ ಯುಗದಲ್ಲಿ ಭೂಇತಿಹಾಸದ ಅತಿ ಪ್ರಾಚೀನ ಕಾಲದಿಂದಲೂ ಇದ್ದ ಗೊಂಡ್ವಾನ ಎಂಬ ಭೂರಾಶಿ ಆಫ್ರಿಕ, ಆಸ್ಟ್ರೇಲಿಯ, ದಕ್ಷಿಣ ಇಂಡಿಯ, ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್‌ಟಿಕ ಎಂಬ ಐದು ಭಾಗಗಳಾಗಿ ಒಡೆದು ಬೇರ್ಪಟ್ಟಿತು. ಹೀಗೆ ಬೇರ್ಪಟ್ಟ ಜಾಗಗಳಲ್ಲಿ ಅಗಾಧ ಪ್ರಮಾಣದ, ಅದರಲ್ಲೂ ಇಂಡಿಯಾದಲ್ಲಿ ಅತ್ಯಗಾಧ ಪ್ರಮಾಣದ ಶಿಲಾರಸ ಹೊರಹೊಮ್ಮಿತು, ಬೇರ್ಪಟ್ಟ ಖಂಡ ಭಾಗಗಳು ಅನುಕ್ರಮವಾಗಿ ಪೂರ್ವ, ಉತ್ತರ, ಪಶ್ಚಿಮ ಮತ್ತು ದಕ್ಷಿಣಾಭಿಮುಖವಾಗಿ ಸರಿಯತೊಡಗಿದುವು. ಇದಕ್ಕೆ ಖಂಡಗಳ ಅಲೆತ ಎಂದು ಹೆಸರು. ಈ ಚಲನೆಯ ಪರಿಣಾಮವಾಗಿ ಆಲ್ಪ್ಸ್, ಹಿಮಾಲಯ, ರಾಕೀಸ್ ಮತ್ತು ಆಂಡೀಸ್ ಪರ್ವತಸ್ತೋಮಗಳ ಉದಯವಾಯಿತು. (ಡಿ.ಆರ್.)

**ಮಧ್ಯಪ್ರದೇಶ :** 2000ದ ನವೆಂಬರ್ ವರೆಗೆ ಭಾರತದ ಬಹು ವಿಸ್ತಾರವಾದ, ಅಪರಿಮಿತ ಸಂಪನ್ಮೂಲಗಳ ವೈವಿಧ್ಯ ರಮಣೀಯ ಪ್ರಕೃತಿಸಾದೃಶ್ಯಗಳಿಂದ ಕೂಡಿದ ರಾಜ್ಯವಾಗಿತ್ತು. ಅಖಂಡ ರಾಜ್ಯದ ಒಟ್ಟು ವಿಸ್ತೀರ್ಣ 4,44,178 ಚ.ಕಿಮೀ ಗಳಷ್ಟಿತ್ತು.

2000ನೆಯ ನವೆಂಬರ್‌ನಲ್ಲಿ ಛತ್ತೀಸ್‌ಗಡ್ ಪ್ರತ್ಯೇಕ ರಾಜ್ಯಕ್ಕೆ 1,36,034 ಚ.ಕಿಮೀ ಪ್ರದೇಶ ಹೋಯಿತು. ಈ ರಾಜ್ಯದ ಇಂದಿನ ಭೌಗೋಳಿಕ ವಿಸ್ತೀರ್ಣ 3,08,393 ಚ.ಕಿಮೀ. ರಾಜ್ಯದಲ್ಲಿ ಒಟ್ಟು 55,393 ಗ್ರಾಮಗಳು, 376 ಪಟ್ಟಣಗಳು ಹಾಗು 15 ಪ್ರಮುಖ ನಗರಗಳು ಇವೆ. ಆಡಳಿತ ದೃಷ್ಟಿಯಿಂದ 45 ಜಿಲ್ಲೆಗಳಿವೆ.

ಸನ್ನಿವೇಶ ಮತ್ತು ವಿಸ್ತೀರ್ಣ: ಅಖಂಡ ಭಾರತದ ಮಧ್ಯದಲ್ಲಿರುವ ಮಧ್ಯಪ್ರದೇಶವನ್ನು ಭಾರತ ಭೂಮಿಯ ಕೇಂದ್ರ ಅಥವಾ ಹೃದಯನಾಡು ಎನ್ನುವರು.

ಈ ರಾಜ್ಯದ ಪಶ್ಚಿಮಕ್ಕೆ ಗುಜರಾತ್ ಹಾಗೂ ರಾಜಸ್ತಾನ ಸರಹದ್ದು, ದಕ್ಷಿಣಕ್ಕೆ ಮಹಾರಾಷ್ಟ್ರ, ಉತ್ತರಕ್ಕೆ ಉತ್ತರ ಪ್ರದೇಶವಿದೆ. ರಾಜ್ಯದ ಸುತ್ತಲೂ ಭೂಭಾಗ ಇದ್ದು ಖಂಡಾಂತರ ಸನ್ನಿವೇಶಗಳನ್ನೊಳಗೊಂಡಿದೆ. ಯಾವ ಜಲ ಸಂಪರ್ಕ ಇಲ್ಲ. ಈ ರಾಜ್ಯ ಉ.ಅ. ಸು. $21^0$ ಇಂದ $27^0$ ಪೂ. ರೇ. $74^0$ ಯಿಂದ $83^0$ ಇದರ ನಿರ್ದಿಷ್ಟ ಸ್ಥಾನವಿದೆ.

ಈ ರಾಜ್ಯದ ಮಧ್ಯ ಭಾಗದಲ್ಲಿ $23½^0$ ಕರ್ಕಾಟಕ ಸಂಕ್ರಾಂತಿ ವೃತ್ತ ಹಾಗೂ ಭಾರತೀಯ ನಿರ್ದಿಷ್ಟ ಕಾಲ ರೇಖೆ ರಾಜ್ಯದ ಪೂರ್ವ ಸರಹದ್ದಿನಲ್ಲಿ ಹಾದು ಹೋಗುತ್ತದೆ.

ಮೇಲ್ಮೈ ಲಕ್ಷಣಗಳು: ರಾಜ್ಯದ ನೈರುತ್ಯದಲ್ಲಿ ತಗ್ಗು ದಿಣ್ಣೆಗಳಿಂದ ಕೂಡಿದ ಸಮಾನಾಂತರ ಬೆಟ್ಟ ಶ್ರೇಣಿಗಳಾದ ವಿಂದ್ಯಾ ಹಾಗೂ ಸಾತ್ಪುರಾ ಬೆಟ್ಟಗಳು ಹಾಗೂ ಮಧ್ಯ ಭಾಗದಲ್ಲಿ ನರ್ಮದಾ ಕಣಿವೆ ಇದೆ. ಇದನ್ನು ಸ್ಥಳೀಯರು ನರಬದಾ ಎನ್ನುತ್ತಾರೆ. ನರ್ಮದಾ ನದಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬಿ ಸಮುದ್ರವನ್ನು ಸೇರುವುದು. ಇದರ ಉತ್ತರದಲ್ಲಿ ವಿಂದ್ಯಾ ಬೆಟ್ಟ ಅತೀ ಕಡಿದಾದ ಇಳಿಜಾರಿನೊಂದಿಗೆ ಇದರ ಅಂಚಿನಲ್ಲಿರುವ ಪ್ರಸ್ಥಭೂಮಿ ಗಂಗಾ ಬಯಲಿನ ಕಡೆ ಇಳಿಜಾರಾಗುತ್ತಾ ಹೋಗುವ ಕರಾವಳಿ ಬೆಟ್ಟ ಶ್ರೇಣಿಗಳಿವೆ. ರಾಜ್ಯದ ಪೂರ್ವಕ್ಕೆ ಬೋಗುಣಿಯಾಕಾರದ ಚತ್ತೀಸ್‌ಗಡ್ ಪ್ರದೇಶವಿದೆ. ರಾಜ್ಯದ ದಕ್ಷಿಣ ತುದಿ ಬಸ್ತಾರ್ ಬೆಟ್ಟಗಳನ್ನು ಹೊಂದಿದ್ದು ಗೋದಾವರಿ ನದಿಯ ಕೈಮೂರ್ ಮತ್ತು ಮೈಕಲ್ ಬೆಟ್ಟಗಳೂ ಇವೆ. ಕುಖ್ಯಾತ ಢಕಾಯಿತಿ ಅಡಗು ತಾಣಗಳಾದ ಚಂಬಲ್ ಕಣಿವೆಗಳು ರಾಜ್ಯದ ಪಶ್ಚಿಮ ಸರಹದ್ದಿನಿಂದ ಮಹಾರಾಷ್ಟ್ರ ಗಡಿಯಿಂದ ರಾಜಸ್ತಾನ ಗಡಿವರೆಗೂ ವ್ಯಾಪಿಸಿವೆ.

ಮೇಲ್ಮೈ ಸ್ವರೂಪ, ಎತ್ತರ ಇಳಿಜಾರು ಹಾಗೂ ಭೂ ರಚನೆಯ ಆಧಾರದ ಮೇಲೆ ಈ ರಾಜ್ಯವನ್ನು 5 ಪ್ರಾಕೃತಿಕ ವಿಭಾಗಗಳನ್ನಾಗಿ ವಿಭಜಿಸಬಹುದು: ಉತ್ತರ ಭಾಗದ ಸರಹದ್ದು ಪ್ರದೇಶಗಳು, ಪಶ್ಚಿಮದಲ್ಲಿರುವ ಮಾಳ್ವ ಪ್ರಸ್ಥಭೂಮಿ ಪ್ರದೇಶ. ನರ್ಮದಾ ಕಣಿವೆ ಮತ್ತು ಮೈದಾನ, ಸಾತ್ಪುರ ಬೆಟ್ಟ ಶ್ರೇಣಿ ಹಾಗೂ ಇತರೇ ಬೆಟ್ಟಪ್ರದೇಶಗಳು. ಬಸ್ತಾರ್ ಪೀಠಭೂಮಿ ಹಾಗೂ ಪೂರ್ವವಲಯ.

ಜಲ ವ್ಯವಸ್ಥೆ: ಈ ರಾಜ್ಯದ ಭೂಗರ್ಭದಲ್ಲಿ ಸಾಕಷ್ಟು ಅಂತರ್ಜಲವಿದೆ. ಬಾವಿ ನೀರಾವರಿ ದೇಶದ ಶೇ. 52 ಇದೆ. ಇಲ್ಲಿಯ ಶಿಲೆಗಳು ಸಚ್ಛಿದ್ರವಾಗಿರುವುದರಿಂದ ಜಲ ಶಿಲೆಗಳಾಗಿವೆ. ಉತ್ತರಾಭಿಮುಖವಾಗಿ ಹರಿದು ಗಂಗಾನದಿ ಜಾಲವನ್ನು ಸೇರುವ ಮುಖ್ಯ ನದಿಗಳು ಚಂಬಲ್, ಸಿಂಧ್, ಬೇಟ್ವಾ, ಕೆನ್, ಮತ್ತು ಸನ್ ನದಿಗಳು. ನರ್ಮದಾ (ಗುಜರಾತ್‌ನಲ್ಲಿ) ಕಣಿವೆ ಯೋಜನೆ ಬೃಹತ್ ತಿರುವು ಗೊಂದಲ ಪಡೆದುಕೊಂಡಿದೆ. ತಪತಿ ನದಿ ಕೇವಲ ದಕ್ಷಿಣ ತುದಿಯಲ್ಲಿ ಹರಿದು ಮಹಾರಾಷ್ಟ್ರಕ್ಕೆ ಪ್ರವಹಿಸುತ್ತದೆ.

ಮಣ್ಣು ಮತ್ತು ಪ್ರಕಾರಗಳು: ಈ ರಾಜ್ಯದಲ್ಲಿ ಕಪ್ಪು ಮಣ್ಣು, ಕೆಂಪು ಮಣ್ಣು, ಜಂಬಿಟ್ಟಿಗೆ ಮಣ್ಣು, ಬೆಟ್ಟ ಮಣ್ಣು ಹಾಗೂ ಮೆಕ್ಕಲು ಮಣ್ಣು (ನರ್ಮದಾ ಬಯಲು) ಬೆಟ್ವಾ, ಕೆನ್ ಹಾಗೂ ಸನ್ ನದಿಗಳ ಇಕ್ಕೆಲಗಳಲ್ಲಿ ಹರಡಿಕೊಂಡಿದೆ.

ವಾಯುಗುಣ: ಮಧ್ಯಪ್ರದೇಶದ ಮಧ್ಯದ ಉತ್ತರ ಸರಹದ್ದಿನಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತ ಹಾದು ಹೋಗಿರುವುದರಿಂದ ಉಷ್ಣವಲಯದ ವಾಯುಗುಣವೆಂದೇ ಹೇಳಬಹುದು. ಪೂರ್ಣ ರಾಜ್ಯದ ಹವೆ ಸಮಶೀತೋಷ್ಣವಾಗಿ ವಾರ್ಷಿಕ ಸರಾಸರಿ 60–70 ಸೆಂಮೀ ಮಳೆಯಾಗುತ್ತದೆ. ಬೇಸಗೆಯಲ್ಲಿ ಶುಷ್ಕ ಹಾಗೂ ಒಣಹವೆ, ಚಳಿಗಾಲದಲ್ಲಿ ಸಾಧಾರಣ ಚಳಿ ಇರುತ್ತದೆ.

ಸಸ್ಯ ಮತ್ತು ಪ್ರಾಣಿ ಸಂಪತ್ತು: ರಾಜ್ಯದ 1/3 ಭಾಗ ಅಂದರೆ ಶೇ. 30 ಭಾಗ ವೈವಿಧ್ಯ ಸಸ್ಯವರ್ಗಗಳಿಂದ ಕೂಡಿದೆ. ಸಾಲ್ ಮರಗಳ ತವರೂರೆಂದೇ ಹೇಳಲಾಗುವುದು. ಅಧಿಕವಾಗಿ ತೇಗ, ಬಿದಿರು, ಹಾರ್, ಬಹೇರಾ ಮತ್ತು ಟರ್ಮು ಜಾತಿಯ ಸ್ವಾಭಾವಿಕ ಸಸ್ಯರಾಶಿ ಇಲ್ಲಿದೆ. ಅರಾವಳಿ, ವಿಂದ್ಯಾ, ಸಾತ್ಪುರಾ, ಮಹಾದೇವ್ ಮತ್ತು ಪ್ರಸ್ಥಭೂಮಿ ಇಳುಕಲುಗಳು ಸವನ್ನಾ ಮಾದರಿಯ ಹುಲ್ಲುಗಾವಲುಗಳನ್ನೊಳಗೊಂಡಿದೆ. ಇಲ್ಲಿ 9 ರಾಷ್ಟ್ರೀಯ ಉದ್ಯಾನಗಳಿದ್ದು ಅವುಗಳ ಒಟ್ಟು ವಿಸ್ತಾರ 3,656.36 ಚ.ಕಿಮೀ. ಸು. 25 ವನ್ಯ ಪ್ರಾಣಿಧಾಮಗಳಿವೆ. ಇವೆಲ್ಲವುಗಳ ಒಟ್ಟು ವಿಸ್ತೀರ್ಣ 71,56,40 ಚ.ಕಿಮೀ ಗಳು.

ಕೃಷಿ ಮತ್ತು ಪಶುಪಾಲನೆ: ವ್ಯವಸಾಯ ಪ್ರಮುಖ ಆರ್ಥಿಕ ವಲಯಗಳನ್ನೊಳಗೊಂಡು, ಪ್ರಸ್ಥಭೂಮಿ, ಕಪ್ಪುಮಣ್ಣು ಹೊಂದಿರುವುದರಿಂದ ಹತ್ತಿ, ಹೊಗೆಸೊಪ್ಪು, ಎಣ್ಣೆಕಾಳುಗಳನ್ನು ಬೆಳೆಯುವರು. ನರ್ಮದಾ ಮೈದಾನದಲ್ಲಿ ಬತ್ತ, ಪೂರ್ವದಲ್ಲಿ ಬಾರ್ಲಿ ಮತ್ತು ಕಬ್ಬು ಇಲ್ಲಿಯ ಮುಖ್ಯ ಬೆಳೆಗಳಾಗಿವೆ. ಪಶುಪಾಲನೆ ಎಂದರೆ ಪಶುಗಳ ಸಾಕಣೆ ಮತ್ತು ಅವುಗಳಲ್ಲಿ ಕುರಿಗಳಿಂದ ಮಾಂಸ, ಉಣ್ಣೆ, ದನಕರುಗಳಿಂದ ಹಾಲು, ಹಾಲಿನ ವಸ್ತುಗಳು, ಮುಖ್ಯವಾಗಿವೆ. ಇತ್ತೀಚೆಗೆ ಮಳೆ ಹಾಗೂ ವಾಯುಗುಣದ ವೈಪರೀತ್ಯದಿಂದ ಸಾಕು ಪ್ರಾಣಿ ಸಂತತಿ ನಶಿಸಿದೆ.




ನೈಸರ್ಗಿಕ ಸಂಪನ್ಮೂಲಗಳು: ಭೂಗರ್ಭ ಮತ್ತು ಭೂಮೇಲ್ಮೈನಲ್ಲಿ ವಿವಿಧ ನೈಸರ್ಗಿಕ ಸಂಪತ್ತುಗಳ ಲಭ್ಯವಿದೆ. ಅವುಗಳಲ್ಲಿ ಮುಖ್ಯವಾಗಿ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳ ಉತ್ಪಾದನೆ ಮುಖ್ಯವಾದದ್ದು. ವಿವಿಧ ಖನಿಜ ಅದಿರು, ಕಲ್ಲಿದ್ದಲು ಸ್ಥರಗಳು ಮುಖ್ಯವಾದದ್ದು.

ಖನಿಜ ಸಂಪತ್ತು: ಈ ರಾಜ್ಯ ಅಪರಿಮಿತ ಖನಿಜ ಸಂಪತ್ತನ್ನು ಹೊಂದಿದೆ. ಕಬ್ಬಿಣದ ಅದಿರು: ದೇಶದ ಶೇ. 18.2 ನಿಕ್ಷೇಪಗಳಿದ್ದು, ಒಟ್ಟು ಉತ್ಪಾದನೆಯಲ್ಲಿ ಶೇ. 25.7 ಉತ್ಪಾದಿಸುವ ರಾಜ್ಯವಾಗಿದೆ. ಬಸ್ತಾರ್, ದುರ್ಗ್, ಡೊಂಗ್ರಿ, ರಾಜಹಾರ್ ಹಾಗೂ ಬೈಲುದಿಲ್ಲಾ ಸ್ಥಳಗಳು ಪ್ರಮುಖವಾಗಿವೆ.

ಮ್ಯಾಂಗನೀಸ್ ಉತ್ಪಾದನೆಯಲ್ಲಿ ದೇಶದಲ್ಲಿ ಮೂರನೆಯ ಸ್ಥಾನದಲ್ಲಿದ್ದು ಶೇ. 12.8 ನಿಕ್ಷೇಪಗಳಿದ್ದು ದೇಶದ ಶೇ. 19.4 ಉತ್ಪಾದಿಸುತ್ತದೆ. ಬಾಲ್ವಾಟ್ ಹಾಗೂ ಚಿಂದ್ವಾರಾ ಪ್ರದೇಶಗಳು ಮುಖ್ಯವಾಗಿವೆ. ಪನ್ನಾ ಎಂಬ ಪ್ರದೇಶ ದೇಶದ ಏಕೈಕ ವಜ್ರದ ಗಣಿ ಪ್ರದೇಶವಾಗಿದೆ.

ಬಾಕ್ಸೈಟ್: ಉತ್ಪಾದನೆಯಲ್ಲಿ ದೇಶದ 3ನೆಯ ಸ್ಥಾನಗಳಿಸಿದೆ. ಶೇ. 5.4 ಉತ್ಪಾದನೆ. ಅಮರಕಂಟಕ, ಬಿಲಾಸ್ಪುರ, ಮೈಕಲ್ ಬೆಟ್ಟಗಳಲ್ಲಿ ದೊರೆಯುತ್ತದೆ. ಹಾಗೆ ಬಂಗಾರ, ತಾಮ್ರ, ಸುಣ್ಣದ ಕಲ್ಲು, ಸೀಸ, ತವರ, ಫಾಸ್ಪೇಟ್, ಜೇಡಿಮಣ್ಣುಗಳು ಸಹ ದೊರೆಯುತ್ತವೆ.

ಕಲ್ಲಿದ್ದಲು ಇಲ್ಲಿನ ಅತಿ ಮುಖ್ಯ ಇಂಧನ ಸಂಪತ್ತು, ದೇಶದ ಶೇ. 29.6 ಉತ್ಪಾದಿಸುತ್ತದೆ. ಗೊಂಡ್ವಾನ ಭೂ ಪ್ರದೇಶಕ್ಕೆ ಸೇರಿದ ಗಣಿಗಳು, ಸಿಂಗ್ರೌಲಿ, ಪಂಚ್ ಕಣಿವೆ, ಶಹಾಬಾದ್, ಉಮೇರಿಯಗಳಲ್ಲಿ ಕೊರಬ ಮತ್ತು ಅಮರಕಂಟಕಗಳಲ್ಲಿ ಜಾಷೀಯ ವಿದ್ಯುತ್ ಯೋಜನೆಗಳಿಂದ ಸ್ವಲ್ಪ ವಿದ್ಯುತ್ ದೊರೆಯುತ್ತದೆ. ಇಲ್ಲಿ ಬೃಹತ್ ನೀರಾವರಿ ಮತ್ತು ವಿದ್ಯುತ್ ಯೋಜನೆಗಳು ಕಡಿಮೆ.

ಕೈಗಾರಿಕೆಗಳು: ವಿದ್ಯುತ್ ಉಪಕರಣಗಳು, ಕಾಗದ, ಸಕ್ಕರೆ ನೇಯ್ಗೆ ಯಂತ್ರಗಳು, ಕಬ್ಬಿಣ ಮತು ಉಕ್ಕು, ಯಂತ್ರೋಪಕರಣಗಳು, ಸಿಮೆಂಟ್, ಔಷಧಿ, ರಾಸಾಯನಿಕ ವಸ್ತುಗಳು, ತಾಂತ್ರಿಕ ಸಲಕರಣೆಗಳು, ಕೈಗಾರಿಕಾನಿಲ ಘಟಕಗಳು, ಕಡ್ಡಿ ಪೆಟ್ಟಿಗೆ, ರೆಯಾನ್ ಮತ್ತು ಹತ್ತಿ ಬಟ್ಟೆ ಕಾರ್ಖಾನೆಗಳು ಮುಖ್ಯವಾಗಿವೆ.

ಸಾರಿಗೆ ಸಂಪರ್ಕ: ಸಾರಿಗೆಯಲ್ಲಿ ಭೂ ಸಾರಿಗೆ ಪ್ರಮುಖವಾಗಿದ್ದು, ಇದರಲ್ಲಿ 2 ವಿಧ. 1 ರಸ್ತೆ ಸಾರಿಗೆ 2, ರೈಲ್ವೆ ಸಾರಿಗೆ. ಪ್ರಸ್ತುತ ಒಟ್ಟು ರಸ್ತೆಗಳ ಉದ್ದ 67,600 ಕಿಮೀ ಗಳು ರಾಷ್ಟ್ರೀಯ ಹೆದ್ದಾರಿಗಳ ಉದ್ದ 3,700 ಕಿಮೀ. ರಾಜ್ಯದ ಹೆದ್ದಾರಿಗಳ ಉದ್ದ 3700 ಕಿಮೀ. ವಾಯು ಸಾರಿಗೆಯಲ್ಲಿ ಭೂಪಾಲ್, ಗ್ವಾಲಿಯರ್, ಇಂದೋರ್ ಹಾಗೂ ಖಜರಾಹೊ ಮುಖ್ಯ ವಿಮಾನ ನಿಲ್ದಾಣಗಳಾಗಿವೆ. ಸಂಪರ್ಕ ವ್ಯವಸ್ಥೆಯಲ್ಲಿ ಆಧುನಿಕ ಸಂಪರ್ಕ ಜಾಲಗಳು ಹರಡಿವೆ. ಶೇರುಮಾರುಕಟ್ಟೆಗಳು, ಬ್ಯಾಂಕ್ ವ್ಯವಸ್ಥೆ, ವಾಣಿಜ್ಯ ತೆರಿಗೆ ವಹಿವಾಟುಗಳು ಪ್ರಮುಖ ವಾಣಿಜ್ಯ ವ್ಯವಸ್ಥೆಗಳು. ಈ ರಾಜ್ಯ ರಫ್ತು ವಹಿವಾಟಿನಲ್ಲಿ ಹೆಚ್ಚು ಆದಾಯಗಳಿಸುತ್ತದೆ.

ಜನಸಂಖ್ಯೆ: ಈ ರಾಜ್ಯದ ಜನಸಂಖ್ಯೆ ಬೆಳವಣಿಗೆ, ಸಾಂದ್ರತೆ ಮತ್ತು ಹಂಚಿಕೆಗಳಲ್ಲಿ ಸಾಮಾನ್ಯವಾಗಿದೆ, ಒಟ್ಟು ಜನಸಂಖ್ಯೆ 6.5 ಕೋಟಿ, 3,00,85,118 ಗಂಡಸರು, 31454873 ಹೆಂಗಸರು. ನಗರ ಮತ್ತು ಪಟ್ಟಣಗಳ ಜನಸಂಖ್ಯೆ ರಾಜ್ಯದ ಶೇ. 26.67 ಮತ್ತು ಶೇ. 80 ರಷ್ಟು ಜನ 70 ಸಾವಿರ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಬಹಳಷ್ಟು ಗ್ರಾಮಗಳಿಗೆ ವಿದ್ಯುತ್ ಸೌಕರ್ಯವಿದೆ. ಜನಸಾಂದ್ರತೆ ಒಂದು ಚ.ಕಿಮೀಗೆ 190 ಜನ. ಸಾಕ್ಷರತೆ ಶೇ. 64.11 ಇದ್ದು, ಪುರುಷರಲ್ಲಿ ಶೇ. 76.80, ಮಹಿಳಾ ಸಾಕ್ಷರತೆ ಶೇ. 50.28. ಉದ್ಯೋಗಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದ್ದು ನಿರುದ್ಯೋಗಿಗಳ ಸಂಖ್ಯೆ ಶೇ. 44.50 ರಷ್ಟಿದೆ.

ಶೈಕ್ಷಣಿಕ ಸಂಸ್ಥೆಗಳು: ಈ ರಾಜ್ಯದಲ್ಲಿ ಒಟ್ಟು ಶಾಲೆಗಳ ಸಂಖ್ಯೆ 89,963. ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ 592. ಒಟ್ಟು 17 ವಿಶ್ವವಿದ್ಯಾಲಯಗಳಿವೆ. ಜಬ್ಬಲ್ಪುರ, ಗ್ವಾಲಿಯರ್ ಮತ್ತು ಇಂದೋರ್‌ಗಳಲ್ಲಿ ಹೈಕೋರ್ಟ್ ವಿಭಾಗೀಯ ಪೀಠಗಳಿವೆ.

ಸಾಂಸ್ಕೃತಿಕ ಚಟುವಟಿಕೆಗಳು: ಭಗೂರಿಯ – ಜಬುವಾ ಗಿರಿಜನರ ಮುಖ್ಯ ಹಬ್ಬಗಳಾಗಿವೆ. ಗರ್ ಎಂಬ ಬೇಟೆ ನೃತ್ಯ, ಗ್ವಾಲಿಯರ್‌ನ ತಾನ್‌ಸೇನ್ ಸಂಗೀತೋತ್ಸವ, ಉಜ್ಜಯಿನಿಯಲ್ಲಿ ನಡೆಯುವ ಮೈಹಾರ್, ಕಾಳಿದಾಸ ಸಮರೋಗಳು, ಖಜುರಾಹೋದಲ್ಲಿ ಬೃಹತ್ ಜಾತ್ರೆ, ಅಲ್ಲದೇ ದೀಪಾವಳಿ, ದಸರ, ಶಿವರಾತ್ರಿ, ರಾಮನವಮಿ ಇತ್ಯಾದಿ ಹಬ್ಬಗಳು, ಚಿತ್ರಕೂಟ, ಓರ್ವ, ವಾಳ್ವ ಪಂಚಮರ್ಪ್‌ಗಳ ಐತಿಹಾಸಿಕ ಮೆರವಣಿಗೆಗಳಾಗುತ್ತವೆ. ಹಿಂದು, ಇಸ್ಲಾಂ ಮತ್ತು ಬೌದ್ಧ ಧರ್ಮಾವಲಂಬಿಗಳು ಹೆಚ್ಚಿದ್ದಾರೆ.

ಪ್ರಮುಖ ನಗರ ಮತ್ತು ಪಟ್ಟಣಗಳು: ಭೂಪಾಲ್: ರಾಜ್ಯದ ರಾಜಧಾನಿ, ಇದರ ವಿಸ್ತೀರ್ಣ 2772 ಚ.ಕಿಮೀ. ಜನಸಂಖ್ಯೆ 18,30,784. ಇದು ಪ್ರಮುಖ ರೈಲ್ವೆ ನಿಲ್ದಾಣ. ವಿದ್ಯುತ್ ಉಪಕರಣಗಳು, ರಾಸಾಯನಿಕ ಕೈಗಾರಿಕೆಗಳಿವೆ. ಜಬ್ಬಲ್ಪುರ: ನರ್ಮದಾ ನದಿ ದಡದ ಮೇಲಿದೆ. ಹಾಸು ಜಮಖಾನಗಳು, ಹತ್ತಿ ಬಟ್ಟೆ ಹಾಗೂ ಗಾಜಿನ ವಸ್ತುಗಳು ತಯಾರಾಗುತ್ತವೆ. ಇದರ ವಿಸ್ತೀರ್ಣ 5,210 ಚ.ಕಿಮೀ. ಜನಸಂಖ್ಯೆ 25,85,312. ಸಮುದ್ರಮಟ್ಟದಿಂದ 550 ಮೀ ಎತ್ತರದಲ್ಲಿದೆ. ಇಂಡೋರ್: ಜನಸಂಖ್ಯೆ 18,35,915. ಗತಕಾಲದ ರಾಜ ಮಹಾರಾಜರ ಆಡಳಿತ ಕೇಂದ್ರವಾಗಿತ್ತು. ಹಲವಾರು ಪೂಜಾ ಮಂದಿರಗಳು, ಖಗೋಲ ವೀಕ್ಷಣಾಲಯ, ಹತ್ತಿ ಮತ್ತು ಗೃಹ ವಸ್ತುಗಳ ಕಾರ್ಖಾನೆಗಳಿವೆ. ಇಲ್ಲಿ ಭಾರತ್ ಭವನವಿದೆ. ಪನ್ನಾ: ಭಾರತದ ಏಕೈಕ ವಜ್ರದ ಗಣಿ ಇದೆ. ವಿಸ್ತೀರ್ಣ 7,135 ಚ.ಕಿಮೀ. ಜನಸಂಖ್ಯೆ 8,54,235.

ಗ್ವಾಲಿಯರ್: ಗ್ವಾಲಿಯರ್ ಸೂಟಿಂಗ್ ಬಟ್ಟೆಗಳಿಗೆ ಪ್ರಪಂಚ ವಿಖ್ಯಾತವಾಗಿದೆ. ಐತಿಹಾಸಿಕ ನಗರ, ಗಾಯಕವಾಡ ಮನೆತನದ ರಾಜವಂಶ ಇಲ್ಲಿತ್ತು. ಇಲ್ಲಿ ಹತ್ತಿ ರೆಯಾನ್ ಹಾಗೂ ರೇಷ್ಮೆ ಕೈಗಾರಿಕೆಗಳಿವೆ. ಒಟ್ಟು ವಿಸ್ತೀರ್ಣ 5,214 ಚ.ಕಿಮೀ. ಜನಸಂಖ್ಯೆ 16,29,881 ತಾನ್‌ಸೇನ್ ಸ್ಮಾರಕ ಇಲ್ಲಿದೆ.

ಅಲ್ಲದೆ ಚಂದ್ವಾರ, ದಹಾರ್, ಪೂರ್ವ ನಿಮಾರ್, ರೇವಾ, ಸಗರ್, ಪಟ್ನ್, ಸಿರಿ ಇತರೆ ಪ್ರಮುಖ ಪಟ್ಟಣಗಳಾಗಿವೆ. ಮಹೇಶ್ವರ, ಓಂಕಾರೇಶ್ವರ, ಚಿತ್ರಕೂಟ ಮೊದಲಾದ ಐತಿಹಾಸಿಕ ಸ್ಥಳಗಳಿವೆ. ಮಂಡಸೂರ್, ಸಾಂಚಿ, ಪಟ್ನ್, ವಿದಿಶಾ ಇವು ಪುರಾತತ್ವ ಇಲಾಖೆಗಳೊಂದಿಗೆ ಖನ್ನ ಮತ್ತು ಬಂದಾದ್ ಘರ್ ರಾಷ್ಟ್ರೀಯ ಉದ್ಯಾನವನಗಳನ್ನೊಳಗೊಂಡಿದೆ. ಕರೆರಾ ಪಕ್ಷಿಧಾಮಕ್ಕೆ ಹೆಸರುವಾಸಿಯಾಗಿದೆ. ಇಂದ್ರಾವತಿ ಹುಲಿಗಳ ತಾಣವಾಗಿದ್ದು, ದುಹಾನ್ ದಾರ್ ಜಲಪಾತ ರಾಜ್ಯದಲ್ಲಿ ದೊಡ್ಡದು. ಅಬ್ದಲ್ ಪುರದಲ್ಲಿ ಅಮೃತಶಿಲೆಗಳಿಂದ ಕೂಡಿದ ಬಂಡೆಗಳಿವೆ. (ಡಿ.ಆರ್.ಜಿ.)

**ಮಧ್ಯಪ್ರಾಚ್ಯ:** ಪ್ರಪಂಚದ ಮೂರು ಖಂಡಗಳಾದ ಏಷ್ಯ, ಯುರೋಪ್ ಹಾಗೂ ಆಫ್ರಿಕಗಳು ಸಂಧಿಸುವ ಪ್ರದೇಶ. ಈ ಪ್ರದೇಶ ಭೌಗೋಳಿಕವಾಗಿ ಮತ್ತು ರಕ್ಷಣಾತ್ಮಕವಾಗಿ ಪ್ರಮುಖವಾಗಿದೆ. ಏಕೆಂದರೆ ಪ್ರಪಂಚದ ಪ್ರಮುಖ ಜಲಮಾರ್ಗಗಳಾದ ಕಪ್ಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ, ಕೆಂಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರಗಳನ್ನು ಸೇರಿಸುವ ಕಾಲುವೆಗಳಿವೆ. ಈ ಮಧ್ಯಪ್ರಾಚ್ಯದ ವಿಶೇಷ ಲಕ್ಷಣವೆಂದರೆ ಇದು ಇಸ್ಲಾಮಿಕ್ ಸಂಸ್ಕೃತಿಯ ಕೇಂದ್ರ. ಅಲ್ಲದೆ ಪ್ಯಾಲಸ್ತೀನ್ ರಾಷ್ಟದಲ್ಲಿ ಮುಸ್ಲಿಂ, ಯಹೂದಿ ಮತ್ತು ಕ್ರಿಶ್ಚಿಯನ್‌ರ ಪ್ರಮುಖ ಪವಿತ್ರ ಸ್ಥಳಗಳನ್ನು ಒಳಗೊಂಡಿವೆ. ಮಧ್ಯಪ್ರಾಚ್ಯ ಪ್ರದೇಶವನ್ನು ವಿಶಾಲವಾಗಿ ಎರಡು ಭಾಗಗಳನ್ನಾಗಿ ವಿಂಗಡಿಸಬಹುದು.

ಮೊದಲನೆಯದಾಗಿ ಉತ್ತರದ ಪ್ರದೇಶ–ಇದು ಟರ್ಕಿ ಆಫ್ಘಾನಿಸ್ತಾನ್ ಮತ್ತು ಅರಬ್ ರಾಷ್ಟ್ರಗಳನ್ನು ಒಳಗೊಂಡಿವೆ. ಎರಡನೆಯದಾಗಿ ಅರಬ್ ಕೇಂದ್ರ ಪ್ರದೇಶ, ಈ ಪ್ರದೇಶ ವಿವಿಧ ಜನಾಂಗಕ್ಕೆ ಹಾಗೂ ಧರ್ಮಕ್ಕೆ ಸೇರಿದ ಜನತೆಯನ್ನು ಒಳಗೊಂಡಿವೆ. ಇವುಗಳಲ್ಲದೆ ಈ ಪ್ರದೇಶದ ಇನ್ನೊಂದು ಪ್ರಮುಖ ಲಕ್ಷಣವೆಂದರೆ, ಪ್ರಪಂಚದ ಶೇ. 55 ಕ್ಕಿಂತ ಹೆಚ್ಚು ಪೆಟ್ರೋಲಿಯಂ ನಿಕ್ಷೇಪವನ್ನು ಒಳಗೊಂಡಿದೆ. ಪೆಟ್ರೋಲಿಯಂ ಒಂದು ಅತ್ಯಂತ ಉಪಯುಕ್ತವಾದ ಇಂಧನವಾಗಿದ್ದರಿಂದ ಪ್ರಪಂಚದ ಪ್ರಮುಖ ಶಕ್ತಿಯುತ ರಾಷ್ಟ್ರಗಳ ಪ್ರದೇಶವಾದ ಯುರೋಪ್ ಖಂಡ ಹಾಗೂ ಅಮೇರಿಕ ಈ ಮಧ್ಯಪ್ರಾಚ್ಯ ಪ್ರದೇಶದ ಮೇಲೆ ಬಹಳಷ್ಟು ಹಿಡಿತವನ್ನು ಇಟ್ಟುಕೊಳ್ಳಲು ಪ್ರಯತ್ನಿಸುತ್ತಿವೆ. ಅಲ್ಲದೆ, ಪ್ರಪಂಚದ ರಾಜಕೀಯದಲ್ಲಿ ಪೆಟ್ರೋಲಿಯಂ ಪ್ರಮುಖ ಸ್ಥಾನ ಪಡೆದಿದೆ. ಈ ಕಾರಣದಿಂದ ದೇಶ ದೇಶಗಳ ನಡುವೆ ಯುದ್ಧಗಳು ಸಹ ನಡೆದಿವೆ. (ಎಸ್.ಎಸ್.ಎಸ್.)

**ಮಧ್ಯಾಂತರ ಶಿಲೆಗಳು:** ಭೂಮಿಯಲ್ಲಿ ಕಂಡುಬರುವ ಶಿಲಾಪ್ರಕಾರಗಳ ಪೈಕಿ ಒಂದು (ಹೈಪೊಬೈಸಾಲ್ ರಾಕ್ಸ್). ಜ್ವಾಲಾಮುಖಿ (ವಾಲ್ಕೇನಿಕ್) ಶಿಲೆಗಳು ಮತ್ತು ಅಂತರಾಗ್ನಿ (ಪ್ಲೂಟೋನಿಕ್) ಶಿಲೆಗಳು ಇತರ ಪ್ರಕಾರದವು. ಇವು ಭೂಮಿಯಲ್ಲಿ ದೊರೆಯುವ ರೀತಿಯನ್ನು ಅನುಸರಿಸಿ ಈ ವರ್ಗೀಕರಣ ಮಾಡಿದೆ. ಕೆಲವೊಮ್ಮೆ ಶಿಲಾವಿಜ್ಞಾನಿಗಳು ಶಿಲೆಗಳನ್ನು ಎರಡನೆಯ ಮತ್ತು ಮೂರನೆಯ ವಿಧಗಳಲ್ಲಿ ಮಾತ್ರ ವಿಂಗಡಿಸುವುದಿದೆ. ಆದರೆ ಬಹುತೇಕವಾಗಿ ಮಧ್ಯಾಂತರ ಶಿಲಾಪ್ರಕಾರವನ್ನೂ ಗುರುತಿಸುತ್ತಾರೆ. ಇವು ಭೂಮಿಯ ಮೇಲ್ಪದರದ ಭಾಗಗಳಲ್ಲಿ ವಿವಿಧ ರೂಪಗಳಲ್ಲಿ ಕಂಡುಬರುತ್ತವೆ. ಇವುಗಳ ವೈವಿಧ್ಯ ಆ ಪ್ರದೇಶದಲ್ಲಿಯ ಭೌತಗುಣ ಮತ್ತು ಶಿಲಾರಸ ಒಳನುಗ್ಗುವ ಕ್ರಿಯೆಯ ತೀವ್ರತೆಯನ್ನು ಅವಲಂಬಿಸಿದೆ. ಇಂಥ ಸನ್ನಿವೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ರೂಪಗಳಿವು: 1 ಬ್ಯಾತೊಲಿತ್ ಬಾಸ್, ಸ್ಟಾಕ್; 2 ಡೈಕ್; 3 ಸಿಲ್; 4 ಲ್ಯಾಕೊಲಿತ್.

ಬ್ಯಾತೊಲಿತ್ ಬಾಸ್ ಮತ್ತು ಸ್ಟಾಕ್: ಅತ್ಯಧಿಕ ಮೊತ್ತದ ಶಿಲಾರಸ ಭೂಪದರದೊಳಕ್ಕೆ ನುಗ್ಗಿ ಅಲ್ಲಿಯ ಶಿಲೆಗಳನ್ನು ಭೇದಿಸಿ ಸಾಗುತ್ತ ಹಾಗೂ ಕರಗಿಸುತ್ತ ಸಾಕಷ್ಟು ಮೊತ್ತವನ್ನು ಕಬಳಿಸುತ್ತ ವಿಶಾಲಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ. ಈ ಕ್ರಿಯೆಯಲ್ಲಿ ಬೇರು ಅತಿ ಆಳದವರೆಗೂ ಇಳಿದು ಘನೀಭವಿಸಿ ಶಿಲೆಯಾಗಿ ಮಾರ್ಪಡುತ್ತದೆ. ಇದಕ್ಕೆ ಬ್ಯಾತೊಲಿತ್ ಎಂದು ಹೆಸರು. ಇದರ ರಚನೆಗೆ ಕಾರಣವಾದ ಶಿಲಾರಸ ಭೂಮಿಯ ಮೇಲ್ಮೈವರೆಗೇನೂ ನುಗ್ಗುವುದಿಲ್ಲ. ಬೇರೆಬೇರೆ ಕಾರಣಗಳಿಂದ ಭೂಮಿಯ ಮೇಲ್ಮೈ ಸವೆತಕ್ಕೆ ಈಡಾಗಿ ಅದರ ಆಳದಲ್ಲಿ ರೂಪುಗೊಂಡ ಬ್ಯಾತೊಲಿತ್‌ಗಳ ಮೇಲ್ಭಾಗ ಮೇಲೆ ಕಾಣಿಸಿಕೊಳ್ಳುತ್ತದೆ. ಇದು ಗೋಳಾಕಾರದಲ್ಲಿದ್ದು ಕೆಳಕ್ಕೆ ಹೋದಂತೆಲ್ಲ ಪಾರ್ಶ್ವಗಳು ವಿಸ್ತರಿಸುತ್ತವೆ. ಬ್ಯಾತೊಲಿತ್‌ನ ಮೇಲ್ಮೈ ಅನೇಕ ವೇಳೆ ನಯವಾಗಿರುವುದಿಲ್ಲ. ಗುಪ್ಪೆಗುಪ್ಪೆಯಂಥ ಕವಲುಗಳು ಮೇಲೇಳುವುದೂ ಉಂಟು. ಪ್ರಧಾನ ಬ್ಯಾತೊಲಿತ್‌ನ ಮೇಲ್ಮೈಯಿಂದ ಮೇಲೆ ಹೊರಟ ಅಂಥ ಕೆಲವು ಕವಲುಗಳು ಮಾತ್ರ ಭೂಮಿಯ ಮೇಲೆ ಮೊದಲೇ ಕಾಣಿಸಿಕೊಳ್ಳುತ್ತವೆ. ಹೀಗೆ ಕಾಣಿಸಿಕೊಳ್ಳುವ, ಸು. 100 ಚ.ಕಿಮೀ ವಿಸ್ತೀರ್ಣದ ಒಳಗೇ ಇರುವ ವರ್ತುಳೀಯ ಶಿಲಾರೂಪಕ್ಕೆ ಬಾಸ್ ಎಂದು ಹೆಸರು. ಅನಿರ್ದಿಷ್ಟ ಆಕಾರದ ಬಾಸ್‌ಗಳಿಗೆ ಸ್ಟಾಕ್ ಎಂಬ ಹೆಸರುಂಟು. ಸಾಮಾನ್ಯವಾಗಿ ದೊರೆಯುವ ಶಿಲೆಗಳು ಬ್ಯಾತೊಲಿತ್, ಬಾಸ್, ಸ್ಟಾಕ್‌ಗಳ ರೂಪದಲ್ಲಿ ಇರುವ ಗ್ರಾನೈಟ್ ಶಿಲೆಯಾಗಿಯೋ ಅದಕ್ಕೆ ಸಮೀಪ ಸಂಬಂಧದ ಶಿಲೆಯಾಗಿಯೋ ಇರುತ್ತವೆ.

ಡೈಕ್: ಶಿಲಾರಸ ಹೆಚ್ಚುಕಡಿಮೆ ನೇರವಾಗಿ ಭೂಮಿಯ ಒಳನುಗ್ಗಿ, ಅಡ್ಡ ಬರುವ ಶಿಲೆಗಳ ಪದರವನ್ನಾಗಲೀ ರಚನೆಯನ್ನಾಗಲೀ ಭೇದಿಸಿ ಶಿಲಾರೂಪ ಹೊಂದಿದಾಗ ಅಂಥ ಸ್ಥಿತಿಯಲ್ಲಿಯ ಶಿಲೆಗೆ ಡೈಕ್ ಎಂದು ಹೆಸರು. ಇದು ಉದ್ದವಾಗಿ ವ್ಯಾಪಿಸಿರುತ್ತದೆ. ಪಾರ್ಶ್ವಗಳು ಸಮಾನಾಂತರವಾಗಿರುತ್ತವೆ. ದಪ್ಪವು ಕೆಲವೇ ಸೆಂಮೀ ನಿಂದ ನೂರಾರು

ಮೀ ವರೆಗೂ ಉದ್ದವು ಕೆಲವು ಮೀಗಳಿಂದ ಅನೇಕ ಕಿಮೀವರೆಗೂ ಇರುವುವು. ಡಾಲರೈಟ್ ಎಂಬ ಕರಿಶಿಲೆ ವಿಶೇಷವಾಗಿ ಡೈಕ್ ರೂಪದಲ್ಲೇ ದೊರೆಯುವುದು. ಕೆಲವು ಪ್ರದೇಶಗಳಲ್ಲಿ ಇಂಥ ಡೈಕ್‌ಗಳ ಸಮೂಹವನ್ನೇ ಕಾಣಬಹುದು. ಒಂದೇ ಕೇಂದ್ರ ಸ್ಥಾನದಿಂದ ಪ್ರಾರಂಭವಾಗಿ ಅನೇಕ ದಿಶೆಗಳಲ್ಲಿ ವ್ಯಾಪಿಸುವ ಡೈಕ್‌ಗಳಿಗೆ ಅರೀಯ(ರೇಡಿಯಲ್) ಡೈಕ್‌ಗಳೆಂದೂ ವರ್ತುಳಾಕಾರದವುಗಳಿಗೆ ವರ್ತುಳೀಯ ಡೈಕ್‌ಗಳೆಂದೂ ಹೆಸರು.

ಸಿಲ್: ಭೂ ಮೇಲುಪದರದ ಶಿಲೆಗಳು ಪದರ ರೂಪದಲ್ಲಿದ್ದಾಗ, ಅವುಗಳೊಳಕ್ಕೆ ಶಿಲಾರಸ ನುಗ್ಗಿ ಘನೀಭವಿಸಿದಾಗ ಮೂಡುವ ರೂಪ. ಸಿಲ್‌ಗಳ ದಪ್ಪ ಸಾಮಾನ್ಯವಾಗಿ ಒಂದೆರೆಡು ಸೆಂಮೀನಿಂದ ನೂರಾರು ಮೀ ವರೆಗೂ ವಿಸ್ತೀರ್ಣ 1 ಚ.ಮೀ ನಿಂದ ಅನೇಕ ಚ.ಕಿಮೀ ವರೆಗೂ ಇರುತ್ತವೆ.

ಲ್ಯಾಕೊಲಿತ್: ಒಳಪದರಕ್ಕೆ ನುಗ್ಗಿದ ಶಿಲಾರಸ ಆರಿದಂತೆಲ್ಲ, ಜಿಗುಟುತನ ಹೆಚ್ಚಾಗಿ ಮುಂದೆ ಹರಿಯಲಾರದೆ, ಪ್ರವೇಶದ್ವಾರದ ಸುತ್ತ ಶೇಖರವಾಗಿ ಮೇಲಿನ ಶಿಲಾ ಪದರಗಳನ್ನು ಮೇಲಕ್ಕೆ ಒತ್ತಿ ಉಬ್ಬಿದ ಆಕಾರದ ಶಿಲಾರೂಪ ತಾಳುತ್ತದೆ. (ಆರ್.ಎನ್.ಐ.)

**ಮನ್ನಾರ್:** ಭಾರತ ಮತ್ತು ಶ್ರೀಲಂಕ ನಡುವೆ ಹಿಂದೂಸಾಗರಕ್ಕೆ ಸೇರಿದಂತಿರುವ ಒಂದು ಖಾರಿ. ಭಾರತದ ದಕ್ಷಿಣದಲ್ಲಿರುವ ತಮಿಳುನಾಡಿನ ಆಗ್ನೇಯ ಹಾಗೂ ದಕ್ಷಿಣ ದಿಕ್ಕಿನಲ್ಲೂ ಮತ್ತು ಶ್ರೀಲಂಕದ ವಾಯವ್ಯ ದಿಕ್ಕಿನಲ್ಲೂ ಉ.ಅ. $9^{0}03'$ ಪೂ $79^{0}50'$ ನಲ್ಲಿದೆ. ಇದರ ಅಗಲ 130 ಕಿ.ಮೀ ನಿಂದ 275 ಕಿ.ಮೀ. ಉದ್ದ 161 ಕಿಮೀ. ಖಾರಿಯ ಈಶಾನ್ಯಕ್ಕೆ ರಾಮೇಶ್ವರಮ್ ಪರ್ಯಾಯ ದ್ವೀಪವೂ ಆಡಮ್ಸ್ ಬ್ರಿಡ್ಜ್ ಎಂದು ಕರೆಯುವ ಮರಳು ದಿಬ್ಬಗಳೂ ಇವೆ (ಶ್ರೀ ರಾಮಚಂದ್ರ ಕಟ್ಟಿದ ಸೇತುವೆಯ ಅವಶೇಷವೆಂದು ಇದನ್ನು ರಾಮಸೇತು ಎಂದೂ ಕರೆಯಲಾಗುತ್ತದೆ.). ಇವು ಶ್ರೀಲಂಕ ಕಡೆಗಿರುವ ಮನ್ನಾರ್ ದ್ವೀಪವನ್ನು ಸೇರಿಸುತ್ತವೆ. ಆಡಮ್ಸ್ ಬ್ರಿಡ್ಜ್ ಸಾಲಿನಲ್ಲಿ ಅತಿಮುಖ್ಯವಾದುದು ಪಾಂಬನ್ ಬ್ರಿಡ್ಜ್. ಇದು ಹೆಚ್ಚು ಬಳಕೆಯಾಗುತ್ತಿದೆ. ಈ ದ್ವೀಪಗಳ ಸಾಲಿನಲ್ಲಿಯ ಧನುಷ್ಕೋಟಿಯಲ್ಲಿ ಭಾರತದ ದಕ್ಷಿಣ ರೈಲ್ವೆಯ ನಿಲ್ದಾಣವಿದೆ. ಇಲ್ಲಿಂದ ಶ್ರೀಲಂಕದ ತಲೈಮನ್ನಾರ್‌ಗೆ ಕೇವಲ 35 ಕಿಮೀ ಹಿಂದೆ ಪ್ರವಾಸಿಗಳಿಗೆ ಮತ್ತು ಅಂಚೆ ರವಾನೆಗೆ ಭಾರತ ಹಾಗೂ ಶ್ರೀಲಂಕಕ್ಕೆ ಧನುಷ್ಕೋಟಿ ಮತ್ತು ತಲೈಮನ್ನಾರ್ ಮುಖ್ಯ ಸಂಪರ್ಕ ಕೇಂದ್ರಗಳಾಗಿದ್ದವು. ಈಗ ವಾಯುಯಾನದ ಸೌಕರ್ಯದಿಂದಾಗಿ ಇವು ಹಿಂದಿನ ಪ್ರಾಮುಖ್ಯ ಕಳೆದುಕೊಂಡಿವೆ. ಈ ಕೊಲ್ಲಿಗೆ ಹಲವಾರು ಸಣ್ಣನದಿಗಳೂ ತೊರೆಗಳು ಸೇರುತ್ತವೆ. ಅವುಗಳಲ್ಲಿ ಭಾರತದ ತಾಮ್ರಪರ್ಣಿ ಮತ್ತು ಶ್ರೀಲಂಕದ ಅರುವಿನ ನದಿಗಳು ಮುಖ್ಯವಾದವು. ಶ್ರೀಲಂಕದ ಈ ಕೊಲ್ಲಿಯ ಭಾಗ ಬೆಲೆಬಾಳುವ ಮುತ್ತುಗಳಿಗೆ ಪ್ರಸಿದ್ಧ.

ಮನ್ನಾರ್ ದ್ವೀಪ : ಶ್ರೀಲಂಕದ ಉತ್ತರ ಪ್ರದೇಶದ ಆಡಳಿತಕ್ಕೆ ಸೇರಿವೆ. ಈ ದ್ವೀಪದ ವಿಸ್ತೀರ್ಣ ಸು. 17 ಚ.ಕಿಮೀ. ಆಡಮ್ಸ್ ಬ್ರಿಡ್ಜ್‌ನ ಪೂರ್ವಭಾಗದ ಕೊನೆಯಲ್ಲಿದೆ. ಈ ಸ್ಥಳ ತೆಂಗಿಗೆ ಪ್ರಸಿದ್ಧ. ಪ್ರಕೃತಿ ಸೌಂದರ್ಯದ ನೆಲೆವೀಡು. ದ್ವೀಪದ ಆಗ್ನೇಯ ದಿಕ್ಕಿನಲ್ಲಿ ಮನ್ನಾರ್ ಬಂದರಿದೆ. (ಜಿ.ಪಿ.ಎಸ್.)

**ಮಯನ್ಮಾರ್:** ಆಗ್ನೇಯ ಏಷ್ಯದಲ್ಲಿರುವ ಒಂದು ಸ್ವತಂತ್ರ ಗಣರಾಜ್ಯ. ಹಿಂದೆ ಇದನ್ನು ಬರ್ಮ ಎಂದು ಕರೆಯಲಾಗುತ್ತಿತ್ತು. ಇದರ ಉತ್ತರಕ್ಕೆ ಭಾರತ ಮತ್ತು ಚೀನ, ಪೂರ್ವದಲ್ಲಿ ಥೈಲೆಂಡ್, ಲಾವೋಸ್ ಮತ್ತು ಚೀನ, ನೈರುತ್ಯದಲ್ಲಿ ಬಂಗಾಲಕೊಲ್ಲಿ ಮತ್ತು ಪಶ್ಚಿಮಕ್ಕೆ ಭಾರತ ಮತ್ತು ಬಾಂಗ್ಲದೇಶಗಳಿವೆ. ದಕ್ಷಿಣದಲ್ಲಿ ಅಂಡಮಾನ್ ಸಮುದ್ರ ಮತ್ತು ಮಲೇಷ್ಯ ಇದೆ. ಉ.ಅ. $10^{0}$–$28^{0}30'$ ವರೆಗೂ ಪೂ.ರೇ. $92^{0}$–$101^{0}$ ವರೆಗೂ ಹಬ್ಬಿದೆ. ಜನಸಂಖ್ಯೆ 4,22,38,224 (2002). ವಿಸ್ತೀರ್ಣ, 678,500 ಚಕಿಮೀ. ರಾಜಧಾನಿ ಯಾಂಗಾನ್. ಹಿಂದೆ ಇದಕ್ಕೆ ರಂಗೂನ್ ಎಂಬ ಹೆಸರಿತ್ತು. ಜನಸಂಖ್ಯೆ 44,58,000 (2002).

ಮೇಲ್ಮೈಲಕ್ಷಣ: ಮಯನ್ಮಾರ್‌ನ ಪಶ್ಚಿಮಕ್ಕೆ ಅರಕಾನ್‌ಯೋಮ ಮತ್ತು ದಕ್ಷಿಣಕ್ಕೆ ಟೆನಸ್ಸೆರಿಮ್ ಯೋಮಗಳಿವೆ. ಇರವಾಡೀ ಕಣಿವೆಯು ಮಯನ್ಮಾರಿನ ಮುಖ್ಯ ಸ್ವರೂಪವಾಗಿದೆ. ದಕ್ಷಿಣೋತ್ತರವಾಗಿ ಹರಿಯುವ ಸಿತಾಂಗ್ ನದಿ ನೌಕಾಯಾನಕ್ಕೆ ಉಪಯುಕ್ತವಾಗಿವೆ. ಮಯನ್ಮಾರಿನ ಇತರ ಪ್ರಮುಖ ಸ್ವರೂಪಗಳೆಂದರೆ ಪರ್ವತ ಮತ್ತು ಪೀಠಭೂಮಿಗಳು, ಉತ್ತರಕ್ಕೆ ಚೀನದ ಅಂಚಿನಲ್ಲಿರುವ ಹಿಕಾಕ ಪರ್ವತ ಮಯನ್ಮಾರಿನ ಅತ್ಯಂತ ಉನ್ನತ ಭಾಗವಾಗಿದೆ. ಕೇಂದ್ರಭಾಗದ ಪಶ್ಚಿಮಕ್ಕೆ ಪಟಕಾಯ್, ನಾಗ–ಚಿನ್ ಬೆಟ್ಟಗಳು ಮತ್ತು ಅರಕಾನ್ ಯೋಮಗಳಿವೆ. ಸಾಲ್ವಿನ್ ನದಿ ಈ ಮಾರ್ಗದಲ್ಲೇ ಹರಿಯುತ್ತದೆ. ಶಾನ್ ಉನ್ನತ ಪ್ರದೇಶ ಸಂಪತ್ಭರಿತವಾದ ಖನಿಜಗಳನ್ನು ಹೊಂದಿವೆ.

ವಾಯುಗುಣ: ಉಷ್ಣವಲಯದ ವಾಯುಗುಣ. ಯಂಗಾನ್ ವಾರ್ಷಿಕ ಸರಾಸರಿ ಉಷ್ಣಾಂಶ $27^{0}$ಸೆ ಮತ್ತು ಶಾನ್ ಪ್ರಸ್ಥಭೂಮಿಯಲ್ಲಿರುವ ಲಾಶಿಯೋವಿನ ವಾರ್ಷಿಕ ಸರಾಸರಿ ಉಷ್ಣಾಂಶ $22^{0}$ಸೆ, ಪರ್ವತ ಪ್ರದೇಶದಲ್ಲಿ ವಾರ್ಷಿಕ 500 ಸೆಂಮೀ ಮತ್ತು ಮುಖಜ ಭೂಮಿಯಲ್ಲಿ ವಾರ್ಷಿಕ 250 ಸೆಂಮೀ ಮಳೆಯಾಗುತ್ತದೆ. ಮಯನ್ಮಾರಿನ ಉತ್ತರ ಭಾಗದಲ್ಲಿ ಶುಷ್ಕವಾಗಿದೆ. ಇಲ್ಲಿ ವಾರ್ಷಿಕ 50–100 ಸೆಂಮೀ ಮಳೆಯಾಗುತ್ತದೆ.

ಸಸ್ಯ ಮತ್ತು ಪ್ರಾಣಿವರ್ಗ: ಮಯನ್ಮಾರಿನ ಶೇ. 57 ರಷ್ಟು ಪ್ರದೇಶದಲ್ಲಿ ಎತ್ತರ ಮತ್ತು ಮಳೆಯ ಪ್ರಮಾಣವನ್ನು ಅನುಸರಿಸಿ ವಿವಿಧ ಬಗೆಯ ಗಿಡಮರಗಳಿವೆ. ಪರ್ವತ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ ಮರವೆಂದರೆ ತೇಗ. ನದಿ ಮುಖಜ ಭೂಮಿಯ ಸಿಹಿ ನೀರಿನ ಜವುಳು ಮತ್ತು ತೀರ ಪ್ರದೇಶದಲ್ಲಿ ನಿತ್ಯ ಹಸುರು ಮರಗಳು, ಬಿದಿರು ಮತ್ತು ತಾಳೆ ವಿಶೇಷವಾಗಿದೆ. ಷಾನ ಪ್ರಸ್ಥಭೂಮಿಯಲ್ಲಿ ಮಿಶ್ರ ಸಮಶೀತೋಷ್ಣವಲಯದ ಮರಗಳ ಕಾಡುಗಳು ಮತ್ತು ಹುಲ್ಲುಗಾವಲಿವೆ.




ಖಡ್ಗಮೃಗ, ಕಾಡುಕೋಣ, ಕಾಡೆಮ್ಮೆ, ಆನೆ, ಹುಲಿ, ಚಿರತೆ ಮತ್ತು ಕಾಡುಬೆಕ್ಕು ಇಲ್ಲಿನ ಪ್ರಮುಖ ಪ್ರಾಣಿಗಳು, ನದಿಗಳ ಮುಖಜ ಭೂಮಿಯಲ್ಲಿ ಮೊಸಳೆಗಳೂ ಹೆಚ್ಚು.

ಆರ್ಥಿಕತೆ: ವ್ಯವಸಾಯ, ಅರಣ್ಯಗಾರಿಕೆ, ಮೀನುಗಾರಿಕೆ ಮತ್ತು ಗಣಿಗಾರಿಕೆ ಇಲ್ಲಿನ ಮುಖ್ಯ ಆರ್ಥಿಕ ಚಟುವಟಿಕೆಗಳು. ಮಯನ್ಮಾರಿನ ಮುಖ್ಯ ಬೆಳೆ ಬತ್ತ, ಓಪಿಯಮ್. ಪಾವೆಸ್ ಬೆಳೆಯೂ ಕಂಡುಬರುತ್ತದೆ.

ಸ್ವಾಭಾವಿಕ ಅನಿಲ, ತವರ, ಟಂಗ್‌ಸ್ಟನ್, ಸತು, ಜಿಪ್ಸಂ, ಸುಣ್ಣಕಲ್ಲು, ಅಮೂಲ್ಯವಾದ ಹರಳುಗಳು ಮತ್ತು ಪೆಟ್ರೋಲಿಯಂ ಇಲ್ಲಿನ ಮುಖ್ಯ ಖನಿಜಗಳು. ಬತ್ತ ಇಲ್ಲಿನ ಪ್ರಮುಖ ರಫ್ತು ಸರಕಾಗಿದ್ದು, ಇತ್ತೀಚೆಗೆ ತೇಗ ಅದನ್ನು ಹಿಂದಕ್ಕೆ ಹಾಕಿದೆ. ಕೈಗಾರಿಕಾ ಸಿದ್ಧ ವಸ್ತುಗಳು ಪ್ರಮುಖ ಆಮದು ಸರಕುಗಳಾಗಿವೆ.

ಮಯನ್ಮಾರ್ ಹೆಚ್ಚು ಸಮುದ್ರ ಮತ್ತು ನದಿ ಸಾರಿಗೆಯನ್ನು ಅವಲಂಬಿಸಿದೆ. ಒಳನಾಡಿನ ಸಾರಿಗೆಗೆ ಮಿತವಾಗಿರುವ ರೈಲು ಮತ್ತು ರಸ್ತೆ ಇತರ ಮಾರ್ಗಗಳಿಗೆ ಜಲಮಾರ್ಗಗಳು ಪೂರಕವಾಗಿವೆ. (ಪಿ.ಕೆ.ಎಂ.)

**ಮಯೋಸೀನ್ ಸ್ತೋಮಗಳು:** ಮಯೋಸೀನ್ ಯುಗದಲ್ಲಿ ರೂಪುಗೊಂಡ ಶಿಲಾಸ್ತೋಮಗಳು. ಈ ಯುಗದ ಆದಿಯಲ್ಲಿ ಯುರೋಪಿನಲ್ಲಿ ವಿಶಿಷ್ಟ ಭೌಗೋಳಿಕ ಬದಲಾವಣೆಗಳುಂಟಾದುವು. ಆಂಗ್ಲೋ ಫ್ರಾಂಕ್ ಬೆಲ್ಜಿಯಮ್ ನಿಕ್ಷೇಪಪ್ರದೇಶ ಭೂಭಾಗವಾಯಿತು. ಅಷ್ಟೇ ಅಲ್ಲ ಬ್ರಿಟಿಷ್ ದ್ವೀಪಗಳೂ ಸೇರಿ ಯುರೋಪ್ ಖಂಡದ ಉತ್ತರ ಭಾಗವೆಲ್ಲ ಭೂಪ್ರದೇಶವಾಯಿತು. ಆದರೆ ಕೆಳಗಿನ ಮತ್ತು ಬೆಲ್ಜಿಯಮಿನ ತಗ್ಗುಪ್ರದೇಶಗಳಲ್ಲಿ ಸಮುದ್ರ ಇತ್ತು. ಯುರೋಪಿನ ಮಧ್ಯಭಾಗ ಸಾಗರಾಕ್ರಮಣಕ್ಕೆ ಒಳಗಾಯಿತು. ಇದರ ಒಂದು ಶಾಖೆ ರೈನ್ ಕಣಿವೆಯ ಮೂಲಕ ಮೈನ್ಸ್‌ವರೆಗೆ ಹೋಗಿತ್ತು. ಮತ್ತೊಂದು ಶಾಖೆ ವಿಶಾಲವಾದ ವಿಯನ್ನ ಪ್ರದೇಶವನ್ನು ಆವರಿಸಿತ್ತು. ಸುಯಸ್ ಎಂಬಾತ ಈ ಸಮುದ್ರಾಕ್ರಮಣ ಎರಡು ಹಂತಗಳಲ್ಲಿ ನಡೆದಿದೆ ಎಂದಿದ್ದಾನೆ. ಮೊದಲನೆಯ ಹಂತ ಮಯೋಸೀನ್ ಆದಿಕಾಲದಲ್ಲಿಯೂ ಎರಡನೆಯದು ಮಧ್ಯಕಾಲದಲ್ಲಿಯೂ ನಡೆದವು.

ಈ ಯುಗದಲ್ಲಿ ಇಡೀ ಭೂಮಿಯೇ ಭೂಚಲನೆ ಹಿಡಿತಕ್ಕೆ ಸಿಕ್ಕಿತ್ತೆಂದು ಹೇಳಬಹುದು. ಇದರ ಪ್ರಭಾವದಿಂದ ಮೈನ್ಸ್ ಮತ್ತು ವಿಯನ್ನ ಪ್ರದೇಶಗಳು ಸಾಗರದಿಂದ ಬೇರ್ಪಟ್ಟು ಉಪ್ಪುನೀರಿನ ಸರೋವರಗಳಾಗಿ ಕ್ರಮೇಣ ಸಿಹಿನೀರಿನ ಸರೋವರಗಳಾಗಿ ಮಾರ್ಪಟ್ಟವು. ಸಮಭಾಜಕದ ಉದ್ದಕ್ಕೂ ಪರ್ವತಶ್ರೇಣಿಗಳು ಉದಯಿಸಿದುವು. ಈ ಭೂಚಲನೆಯೊಂದಿಗೆ ಅಗಾಧ ಪ್ರಮಾಣದಲ್ಲಿ ಶಿಲಾರಸ ಅಂತಸ್ಸರಣಗೊಂಡಿದೆ. ಪರ್ವತಪ್ರದೇಶಗಳಲ್ಲಿ ಅಂತಸ್ಸರಣಗೊಂಡು ಆದ ಶಿಲೆಗಳನ್ನು ಕ್ಷಾರ ಅಥವಾ ಪೆಸಿಫಿಕ್ ಗುಂಪು ಶಿಲೆಗಳೆಂದೂ ಪ್ರದೇಶಗಳ ಹೊರಗೆ ಹೀಗೆ ಆದ ಶಿಲೆಗಳನ್ನು ಆಮ್ಲಿತ ಅಥವಾ ಅಟ್ಲಾಂಟಿಕ್ ಶಿಲೆಗಳೆಂದೂ ಹೆಸರಿಸಲಾಗಿದೆ.



ಬಗನ್ ಪಗೋಡ

ಭಾರತದ ಪರ್ಯಾಯದ್ವೀಪದಲ್ಲಿ ಮಯೊಸೀನ್‌ಸ್ತೋಮ ಅನೇಕ ಕಡೆಗಳಲ್ಲಿ ರೂಪುಗೊಂಡಿದೆ. ಇದರ ಕೆಳಭಾಗಕ್ಕೂ ಮೇಲುಭಾಗಕ್ಕೂ ತೀವ್ರ ವ್ಯತ್ಯಾಸ ಕಂಡುಬರುವುದರಿಂದ ಅವನ್ನು ಬೇರೆ ಬೇರೆಯಾಗಿ ಅವಲೋಕಿಸುವುದು ಉತ್ತಮ. ಕೆಳಭಾಗ ಅನೇಕ ಕಡೆ ರೂಪುಗೊಂಡು ಬೇರೆ ಬೇರೆ ಹೆಸರುಗಳಿಂದ ಉಲ್ಲೇಖಿತವಾಗಿದೆ. ಸಿಂಧ್‌ನಲ್ಲಿಯ ನಾರಿಶಿಲೆಯ ಮೇಲುಭಾಗ ಮತ್ತು ಗಾಜ್ ಶಿಲಾವರ್ಗ ಈ ಕಾಲಕ್ಕೆ ಸೇರಿದವು. ಈ ಕಾಲದ ಶಿಲೆಗಳನ್ನು ಕಾಶ್ಮೀರದಲ್ಲಿ ಮುರ್ರಿ ಶಿಲಾಶ್ರೇಣಿ ಎಂದೂ ಸಿಮ್ಲಾಪ್ರದೇಶದಲ್ಲಿ ದಾಗ್‌ಷಾಯ್ ಮತ್ತು ಕಸಾಲಿ ಶ್ರೇಣಿಗಳೆಂದೂ ಅಸ್ಸಾಮಿನಲ್ಲಿ ಬರೈಲ್ ಶಿಲಾಶ್ರೇಣಿ ಎಂದೂ ಕರೆಯಲಾಗಿದೆ. ಬರ್ಮಾದಲ್ಲಿ ಪೆಗು ಶಿಲಾವರ್ಗದ ಮೇಲುಭಾಗ ಈ ಕಾಲಕ್ಕೆ ಸೇರಿದೆ. ಮಯೊಸೀನ್ ಕಾಲದಲ್ಲಿ ಎಲ್ಲೆಲ್ಲಿಯೂ ಸಮುದ್ರ ನಿರ್ಗಮನವಾಯಿತು. ಸಿಂಧ್‌ನಲ್ಲಿ ಸಮುದ್ರ ಅಳಿವೆಯಾಗಿ ಕ್ರಮೇಣ ನೆಲಪ್ರದೇಶವಾಗಿರುವುದನ್ನು ಸೂಚಿಸುತ್ತದೆ.

ಬಲೂಚಿಸ್ತಾನದಲ್ಲಿ ನಮ್ಮುಲೈಟಿಸ್‌ಗಳಿಂದ ಕೂಡಿದ ಮರಳು ಮಿಶ್ರಿತ ಸುಣ್ಣಶಿಲೆಯ ಮೇಲೆ ನದೀನಿಕ್ಷೇಪಗಳಾದ ಮರಳು ಶಿಲೆಗಳು ಸಂಚಯನಗೊಂಡಿವೆ. ಇವುಗಳಲ್ಲಿ ನದಿಗಳಲ್ಲಿರುವ ಲೆಮಲಿಬ್ರ್ಯಾಂಕ್ ಚಿಪ್ಪುಗಳೂ ಬೆನ್ನೆಲುಬುಳ್ಳ ಪ್ರಾಣಿಗಳ ಅವಶೇಷಗಳೂ ಇರುತ್ತವೆ. ಭಾರತಪರ್ಯಾಯ ದ್ವೀಪದಲ್ಲಿ ಸ್ತನಿಗಳ ಅವಶೇಷಗಳನ್ನು ಹೊಂದಿರುವ ಶಿಲೆಗಳಲ್ಲಿ ಇವೇ ಅತ್ಯಂತ ಪ್ರಾಚೀನವಾದವು. ಆಂತ್ರಕೊತೀರಿಯುವ್, ಕಾರ್ಡಕೊತೀರಿಯಮ್, ಬಲೂಚಿತೀರಿಯಮ್, ಡಿಸೆರತೀರಿಯಮ್, ಬ್ರಾಕಿಯೊಡಸ್, ಟೆಲಿಯೊನೆರಾಸ್, ಟೆಲ್ಮಟೊಡಾ–ಈ ಶಿಲೆಗಳಲ್ಲಿರುವ ಮುಖ್ಯ ಸ್ತನಿ ಅವಶೇಷಗಳು.

ಈ ಕಾಲದಶಿಲೆಗಳಿಗೆ ತಿರುವಾಂಕೂರಿನಲ್ಲಿ ವರ್ಕಲಾ ಪದರಗಳೆಂದೂ ಮದರಾಸು ತೀರಪ್ರದೇಶದಲ್ಲಿ ಕಡಲೂರು ಮರಳುಶಿಲೆಗಳೆಂದೂ ಹೆಸರು. ಇನ್ನೂ ಅನೇಕ ಕಡೆ ಬೇರೆ ಬೇರೆ ಹೆಸರುಗಳಿವೆ.

ಮಯೊಸೀನ್ ಆದಿಕಾಲದ ಬಳಿಕ ಹಿಮಾಲಯದ ಮೇಲ್ಲೊಗೆಯುವಿಕೆಯ ಮತ್ತೊಂದು ಹಂತ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡಿದ್ದ ಮಹಾಶಿಲಾನಿಕ್ಷೇಪ ಅನೇಕ ಕಡೆ ಬೆಟ್ಟಪರ್ವತಗಳಾಗಿ ಮೇಲೊಗೆಯಲ್ಪಟ್ಟಿತು. ಜೊತೆಗೆ ಬಹಳ ಉದ್ದವಾದ, ಆದರೆ ಕಡಿಮೆ ಅಗಲದಿಂದ ಕೂಡಿದ ತಗ್ಗು ಪ್ರದೇಶ ಹಿಮಾಲಯ ಪರ್ವತ ಶ್ರೇಣಿಗೂ ಪರ್ಯಾಯದ್ವೀಪಕ್ಕೂ ನಡುವೆ ಉಂಟಾಯಿತು. ಹಿಮಾಲಯ ಪರ್ವತಗಳಲ್ಲಿ ಹುಟ್ಟಿದ ನದಿಗಳು ಮತ್ತು ಅನೇಕ ಉಪನದಿಗಳು ಮೆಕ್ಕಲನ್ನು ತಂದು ಈ ತಗ್ಗು ಪ್ರದೇಶದಲ್ಲಿ ಹರಡಿದುವು. ಈ ಕಾರ್ಯ ಮಯೊಸೀನ್ ಯುಗದ ಮಧ್ಯದಲ್ಲಿ ಪ್ರಾರಂಭವಾಗಿ ಪ್ಲೀಸ್ಟೊಸೀನ್ ಯುಗದ ಆದಿಯ ತನಕವೂ ಅಂದರೆ ಹಿಮಾಲಯದ ಮೇಲೇರಿಕೆಯ ಮತ್ತೊಂದು ಹಂತದ ಪ್ರಾರಂಭದ ತನಕವೂ ನಡೆಯಿತು. ಈ ಶಿಲಾಸಮುದಾಯ ಪರ್ಯಾಯ ದ್ವೀಪದ ಹೊರಗಡೆ ಮತ್ತು ಹಿಮಾಲಯ ಪರ್ವತಗಳ ಬುಡದಲ್ಲಿ ವಿಶೇಷವಾಗಿ ಹೊರಕಾಣುತ್ತದೆ. ಇವು ಸಿಂಧೂ ನದಿಯಿಂದ ಬ್ರಹ್ಮಪುತ್ರ ನದಿಯವರೆಗೆ ಹಿಮಾಲಯದ ತಪ್ಪಲಿನಲ್ಲೆಲ್ಲ ನಿಕ್ಷೇಪಗೊಂಡಿರುವುವು. ಆದರೆ ಹರಿದ್ವಾರದ ಹತ್ತಿರವಿರುವ ಶಿವಾಲಿಕ್ ಬೆಟ್ಟಗಳಲ್ಲಿ, ಇವು ಅತಿ ಶ್ರೇಷ್ಠ ರೀತಿಯಲ್ಲಿ ಹೊರಹೊಮ್ಮಿವೆ. ಆದ್ದರಿಂದ ಇವನ್ನು ಶಿವಾಲಿಕ್ ಶಿಲಾಸಮುದಾಯ ಎಂದು ಕರೆಯಲಾಗಿದೆ. ಅಲ್ಲದೆ ಇದರ ಮೊದಲ ಪರಿಚಯ ವಿಜ್ಞಾನಿಗಳಿಗೆ ಆದುದೂ ಈ ಪ್ರದೇಶದಲ್ಲೇ. ಇದರಲ್ಲಿರುವ ಜೀವ್ಯವಶೇಷಗಳ ಭಂಡಾರ ಪ್ರಪಂಚಕ್ಕೆ ಗೊತ್ತಾದುದು ಇಲ್ಲಿಂದಲೇ. ಶಿಲಾಸಂಯೋಜನೆ ಮತ್ತು ಅವುಗಳಲ್ಲಿರುವ ಜೀವ್ಯವಶೇಷಗಳು ಒಂದೇ ರೀತಿ ಇರುವ ಈ ಶಿಲೆಗಳಿಗೆ ಒಂದೊಂದು ಸ್ಥಳದಲ್ಲಿ ಒಂದೊಂದು ಹೆಸರಿದೆ; ಸಿಂಧ್‌ನಲ್ಲಿ ಮಂಚಾರ್ ಶಿಲಾ ಸಮುದಾಯ, ಬಲೂಚಿಸ್ತಾನದಲ್ಲಿ ಮೆಕ್ರಾನ್, ಅಸ್ಸಾಮ್‌ನಲ್ಲಿ ತಿಪಮ್, ಜೂಪಿತಿಲ ಮತ್ತು ದಿಹಿಂಗ್. ಮಯನ್ಮಾರಿನಲ್ಲಿ ಇರವಾಡಿ ಶಿವಾಲಿಕ್ ಸಮುದಾಯವನ್ನು ಸ್ತನಿಗಳ ಆಧಾರದ ಮೇಲೆ ಮೂರು ಭಾಗಗಳಾಗಿ ವಿಭಾಗಿಸಿದೆ. ಕೆಳ ಮತ್ತು ಮಧ್ಯಭಾಗಗಳು ಸ್ವಲ್ಪ ಹೆಚ್ಚುಕಡಿಮೆ ಈ ಕಾಲದವೆಂದು ಹೇಳಬಹುದು.

ಮಯೊಸೀನ್ ಯುಗದ ಜೀವರಾಶಿ: ಈ ಯುಗ ಸ್ತನಿಗಳ ವಿಕಾಸ ಮತ್ತು ವಿಸ್ತರಣೆಯಲ್ಲಿ ಅತಿ ಮುಖ್ಯವಾದ ಮೈಲಿಗಲ್ಲು ಎಂದೇ ಇದನ್ನು ಸ್ತನಿಗಳ ಸುವರ್ಣಯುಗ ಎಂದು ಹೇಳಬಹುದು. ಪ್ರಾಚೀನ ಸ್ತನಿಗಳೆಲ್ಲ ವಂಶನಷ್ಟ ಹೊಂದಿದುವು. ಪ್ರಗತಿಪರ ಸ್ತನಿಗಳು ಉನ್ನತಿಯ ಶಿಖರ ಮುಟ್ಟಿದುವು. ಈ ಯುಗ ಡೈನೊತೀರಿಯಮ್ ಮತ್ತು ಮ್ಯಾಸ್ಟಡಾನ್‌ಗಳ ಉದಯ ಮತ್ತು ಪೂರ್ಣ ಬೆಳೆವಣಿಗೆಯನ್ನು ಕಂಡಿತ್ತು. ಮರ್ಕಿಹಿಪ್ಪಸ್ ಎಂಬುದು ಈ ಯುಗದ ವಿಶಿಷ್ಟ ಕುದುರೆ. ಇದಕ್ಕೆ ಮೂರು ಗೊರಸುಗಳಿವೆ. ಮಧ್ಯಗೊರಸು ಮಾತ್ರ ದೊಡ್ಡದು. ಪಕ್ಕದ ಗೊರಸುಗಳು ನೆಲತಾಗುತ್ತಿರಲಿಲ್ಲ. ಮಯೊಸೀನ್ ಅಂತ್ಯಕಾಲದಲ್ಲಿ ಮರ್ಕಿಹಿಪ್ಪಸ್ ಕುದುರೆಗಳಿಂದ ಹಿಪ್ಪೇರಿಯನ್ ಮತ್ತು ಪ್ಲಿಯೊಹಿಪ್ಪಸ್ ಎಂಬ ಎರಡು ಹೊಸಕುದುರೆಗಳು ಉದಯಿಸಿದುವು. ಒಂಟೆಗಳು, ಖಡ್ಗಮೃಗಗಳು ಮತ್ತು ಓರಿಯಾಡಾನ್‌ಗಳು ಹೇರಳವಾಗಿದ್ದುವು. ದೈತ್ಯಾಕಾರದ ಹಂದಿಗಳು ಉನ್ನತಿಯ ಗರಿಷ್ಠ ಮಿತಿ ಮುಟ್ಟಿದವು. ಈ ಕಾಲದ ಸಸ್ಯವರ್ಗವೂ ಯುರೋಪಿನಲ್ಲಿ ಉಷ್ಣವಲಯ ಮತ್ತು ಶೀತವಲಯಗಳ ಸಸ್ಯಗಳ ಮಿಶ್ರಣದಿಂದ ಕೂಡಿತ್ತು. (ಡಿ.ಆರ್.)

**ಮರಣ ಪ್ರಮಾಣದರ:** ಒಂದು ವರ್ಷದ ಅವಧಿಯಲ್ಲಿ ನಿರ್ದಿಷ್ಟ ಪ್ರದೇಶದಲ್ಲಿ ಅಥವಾ ಜನಸಮುದಾಯದಲ್ಲಿ ಪ್ರತಿ ಸಾವಿರ ಜನರಿಗೆ ವಾಸ್ತವ ಮರಣ ಸಂಖ್ಯೆ(x) ಮತ್ತು ಜನಸಂಖ್ಯೆ(y) ಇವುಗಳ ನಡುವಣ ದಾಮೊಶೆ (ಮಾರ್ಟಾಲಿಟಿ ರೇಟ್). ಪ್ರತೀಕಗಳಲ್ಲಿ $x/y \times 1000$. ಯಾವುದೇ ಒಂದು ಪ್ರದೇಶದ ಜನಸಂಖ್ಯೆಯ ಅಧ್ಯಯನವನ್ನು ಎರಡು

| ಕಾಲ್ಪನಿಕ ಸಮುದಾಯ | | ಅ ಪ್ರದೇಶಕ್ಕೆ ಅಳವಡಿಕೆ | | ಇ ಪ್ರದೇಶಕ್ಕೆ ಅಳವಡಿಕೆ | |
|---|---|---|---|---|---|
| ವಯೋಪರಿಮಿತಿ | ಜನಸಂಖ್ಯೆ | ಮರಣ ಪ್ರಮಾಣದರ | ಒಟ್ಟು ಮರಣಗಳು | ಮರಣ ಪ್ರಮಾಣದರ | ಒಟ್ಟು ಮರಣಗಳು |
| 0–10 | 1000 | 9 | 9 | 10 | 10 |
| 10–30 | 4000 | 4 | 16 | 5 | 20 |
| 30–60 | 3000 | 11 | 33 | 12 | 36 |
| 60–ಮತ್ತು ಹೆಚ್ಚಿಗೆ | 2000 | 19.75 | 39.5 | 20 | 40 |
| ಮೊತ್ತ | 10000 | – | 97.5 | – | 106 |

ಭಾಗಗಳಾಗಿ ವಿಂಗಡಿಸಬಹುದು. ನಿರ್ದಿಷ್ಟಕಾಲದಲ್ಲಿಯ ಜನಸಂಖ್ಯೆಯ ಅಧ್ಯಯನ, ನಿರ್ದಿಷ್ಟ ಅವಧಿಗೆ ಸಂಬಂಧಿಸಿದಂತೆ ಜನಸಂಖ್ಯೆಯಲ್ಲಿಯ ಪರಿವರ್ತನೆಗಳ ಅಧ್ಯಯನ. ಮೊದಲನೆಯದನ್ನು ಜನಗಣತಿಯ ಅಥವಾ ಪ್ರತಿಚಯದ (ಸ್ಯಾಂಪಲ್) ಅಂಕಿ ಅಂಶಗಳಿಂದ ಮಾಡಬಹುದು. ಜನಸಂಖ್ಯೆಯ ಪರಿವರ್ತನೆಗಳಿಗೆ ಮುಖ್ಯ ಕಾರಣ ಆ ಪ್ರದೇಶದಲ್ಲಿ ಸಂಭವಿಸುವ ಜನನ ಮತ್ತು ಮರಣಗಳು. ಅಲ್ಲಿಂದ ವಲಸೆ ಹೋಗುವವರ ಸಂಖ್ಯೆ ಮತ್ತು ಅಲ್ಲಿಗೆ ವಲಸೆ ಬರುವವರ ಸಂಖ್ಯೆ, ಈ ಜನಗಳ ವಯಸ್ಸು, ಲಿಂಗ ಇತ್ಯಾದಿ. ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಂಭವಿಸುವ ಜನನ ಮತ್ತು ಮರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಅಲ್ಲಿಯ ಕಾರ್ಪೋರೇಷನ್ ಅಥವಾ ನಗರಪಾಲಿಕೆಗಳಲ್ಲಿ ನೋಂದಾಯಿಸಲಾಗುವುದು. ಹಳ್ಳಿಗಳಲ್ಲಿ ಈ ದಾಖಲೆಗಳನ್ನು ಅಲ್ಲಿಯ ಮುಖ್ಯಸ್ಥರ ಕಛೇರಿಗಳಲ್ಲಿ ನೋಂದಾಯಿಸಲಾಗುತ್ತದೆ. ಆದರೆ ವಲಸೆ ಹೋಗುವವರ ಅಥವಾ ಬರುವವರ ದಾಖಲು ಪಟ್ಟಿ ದೇಶಗಳ ಮಟ್ಟದಲ್ಲಿ ಮಾತ್ರ ದೊರೆಯುತ್ತದೆ. ಹೀಗೆ ವಾಸ್ತವ ಮರಣಸಂಖ್ಯೆಯನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿದ ಬಳಿಕ ಈ ಅಂಕಿ ಅಂಶಗಳ ಮೂಲಕ ಮರಣ ದರವನ್ನು ಗಣಿಸುವ ಕ್ರಮ ಹೀಗಿದೆ:

$$\text{ಅಪರಿಷ್ಕೃತ ಮರಣಪ್ರಮಾಣದರ} = \frac{\text{ಒಂದುವರ್ಷದಲ್ಲಿ ಸಂಭವಿಸಿದ ಒಟ್ಟು ಮರಣಗಳು}}{\text{ಅದೇ ವರ್ಷದ ಮಧ್ಯದಲ್ಲಿ ಜನಸಂಖ್ಯೆ}} \times 1000$$

ಇದು ಬಲು ಸರಳವೂ ಹೆಚ್ಚು ಪ್ರಚಲಿತವೂ ಆದ ಮರಣ ಪ್ರಮಾಣದರ. ಇದನ್ನು ಶೋಧಿಸುವಲ್ಲಿ ಮೃತರ ವಯಸ್ಸಿನ ಸಂಯೋಜನೆಯನ್ನು (ಏಜ್ ಕಾಂಪೊಸಿಷನ್) ಗಣನೆಗೆ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಬೇರೆ ಬೇರೆ ವಯಸ್ಸಿನ ಸಂಯೋಜನೆ ಹೊಂದಿರುವ ಜನಸಂಖ್ಯೆಗಳ ಮರಣದರಗಳನ್ನು ತುಲನೆಮಾಡಲು ಈ ಮೇಲಿನ ಸೂತ್ರ ಸಮರ್ಪಕವಾಗುವುದಿಲ್ಲ. ಇದನ್ನು ಈ ಕೆಳಗಿನ ಉದಾಹರಣೆಯಿಂದ ಸ್ಪಷ್ಟವಾಗಿ ಗ್ರಹಿಸಬಹುದು.

**ಆ ಪ್ರದೇಶ**

| ವಯೋ ಪರಿಮಿತಿ | ವರ್ಷಮಧ್ಯ ಜನಸಂಖ್ಯೆ | ಆ ವರ್ಷದ ಒಟ್ಟು ಮರಣಗಳು | ಮರಣ ಪ್ರಮಾಣ ದರ (1000ಕ್ಕೆ) |
|---|---|---|---|
| 0–10 | 8000 | 72 | 9.00 |
| 10–30 | 24000 | 96 | 4.00 |
| 30–60 | 12000 | 132 | 11.00 |
| 60–ಮತ್ತು ಹೆಚ್ಚಿಗೆ | 16000 | 316 | 19.75 |
| ಮೊತ್ತ | 60000 | 616 | 10.267 |

**ಇ ಪ್ರದೇಶ**

| ವಯೋ ಪರಿಮಿತಿ | ವರ್ಷಮಧ್ಯ ಜನಸಂಖ್ಯೆ | ಆ ವರ್ಷದ ಒಟ್ಟು ಮರಣಗಳು | ಮರಣ ಪ್ರಮಾಣ ದರ (1000ಕ್ಕೆ) |
|---|---|---|---|
| 0–10 | 3000 | 30 | 10.00 |
| 10–30 | 20000 | 100 | 5.00 |
| 30–60 | 4000 | 48 | 12.00 |
| 60–ಮತ್ತು ಹೆಚ್ಚಿಗೆ | 3000 | 60 | 20.00 |
| ಮೊತ್ತ | 30000 | 238 | 7.93 |

ಮೇಲಿನ ಉದಾರಣೆಗಳಲ್ಲಿ ಪ್ರತಿಯೊಂದು ವಯಸ್ಸಿನ ಪರಿಮಿತಿಯ ಗುಂಪಿನಲ್ಲಿಯೂ **ಆ** ಪ್ರದೇಶದ ಮರಣ ಪ್ರಮಾಣದರ ಇ ಪ್ರದೇಶದ ಮರಣಕ್ಕಿಂತ ಕಡಿಮೆ ಇದ್ದರೂ **ಆ** ಪ್ರದೇಶದ ಅಪರಿಷ್ಕೃತ ಮರಣ ಪ್ರಮಾಣದರ (10.267) **ಇ** ಪ್ರದೇಶದ ದರಕ್ಕಿಂತ (7.93) ಅಧಿಕವಾಗಿದೆ. ಅಪರಿಷ್ಕೃತ ಮರಣ ದರದಲ್ಲಿ ವಯಸ್ಸಿನ ಸಂಯೋಜನೆಯನ್ನು ಗಣನೆಗೆ ತೆಗೆದುಕೊಳ್ಳದಿರುವುದೇ ಈ ವಿಪರ್ಯಾಸಕ್ಕೆ ಕಾರಣ. ಇವನ್ನು ನಿವಾರಿಸಲೋಸ್ಕರ ಅಪರಿಷ್ಕೃತ ಮರಣಪ್ರಮಾಣದರದ ಬದಲಾಗಿ ಮಾದರಿ ಮರಣ ಪ್ರಮಾಣದರ ಎಂಬ ಇನ್ನೊಂದು ಸೂಚ್ಯಂಕವನ್ನು ಸೂಚಿಸಲಾಯಿತು. ಇದರ ಪ್ರಕಾರ ಕಾಲ್ಪನಿಕ ಮಾದರಿಯಾಗಿ ಆಯ್ದ ಒಂದು ಜನಸಮುದಾಯಕ್ಕೆ ಆಯಾ ಪ್ರದೇಶದಲ್ಲಿ ಬೇರೆ ಬೇರೆ ವಯೋಮಿತಿಗೆ ಸಂಬಂಧಪಟ್ಟ ಮರಣ ಪ್ರಮಾಣದರಗಳನ್ನು ಅಳವಡಿಸಬೇಕು. ಇದರಿಂದ ಉದ್ಭವಿಸಿದ ಆಯಾ ವಯಸ್ಸಿನ ಪರಿಮಿತಿಯಲ್ಲಿ ಒಟ್ಟು ಮರಣಹೊಂದುವವರ ಅಂಕಿ ಅಂಶಗಳಿಂದ ಈ ಕಾಲ್ಪನಿಕ ಜನಸಮೂಹದ ಮರಣ ಪ್ರಮಾಣದರವನ್ನು ಗಣಿಸಬೇಕು. ಇದನ್ನು ಆಯಾ ಪ್ರದೇಶದ ಮಾದರಿ ಪ್ರಮಾಣದರವೆಂದು ಕರೆಯುತ್ತಾರೆ. ಮೇಲಿನ ಉಲ್ಲೇಖದಿಂದ ಮಾದರಿ ಮರಣ ಪ್ರಮಾಣದರದಲ್ಲಿ ವಯಸ್ಸಿನ ಸಂಯೋಜನೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದೆಂಬ ಅಂಶವನ್ನು ಗ್ರಹಿಸಬಹುದು. ಉದಾಹರಣೆ:

ನಮ್ಮ ಕಾಲ್ಪನಿಕ ಮಾದರಿ ಜನಸಮುದಾಯದಲ್ಲಿ 10.000 ಜನರಿದ್ದಾರೆಂದು ಭಾವಿಸೋಣ. ವಯೋಪರಿಮಿತಿಗನುಗುಣವಾಗಿ 1.000, 4.000, 3.000 ಮತ್ತು 2.000 ಜನರು 0 ಯಿಂದ 10, 10 ರಿಂದ 30, 30 ರಿಂದ 60 ಮತ್ತು 60 ಮತ್ತು ಹೆಚ್ಚಿನ ವಯಸ್ಸಿನ ಗುಂಪುಗಳಿಗೆ ಸೇರಿರಲಿ. ಆ ಮತ್ತು ಇ ಪ್ರದೇಶಗಳ ಆಯಾ ವಯೋಪರಿಮಿತಿಯ ಮರಣ ಪ್ರಮಾಣದರಗಳನ್ನು ಕಾಲ್ಪನಿಕ ಜನಸಮುದಾಯಕ್ಕೆ ಅಳವಡಿಸಿದಾಗ ಈ ಕೆಳಗಿನ ಅಂಕಿ ಅಂಶಗಳು ಉದ್ಭವಿಸುತ್ತವೆ:

$$\textbf{ಆ}\text{ ಪ್ರದೇಶದ ಮಾದರಿ ಮರಣ ಪ್ರಮಾಣದರ} = \frac{97.5}{10{,}000} \times 1000 = 9.75$$

$$\text{ಇ ಪ್ರದೇಶದ ಮಾದರಿ ಮರಣ ಪ್ರಮಾಣದರ} = \frac{106}{10{,}000} \times 1000 = 10.6$$

**ಆ** ಪ್ರದೇಶದ ಮಾದರಿ ಮರಣ ಪ್ರಮಾಣದರ **ಇ** ಪ್ರದೇಶದ ಮಾದರಿ ಮರಣ ಪ್ರಮಾಣದರಕ್ಕಿಂತ ಕಡಿಮೆ ಇರುವುದನ್ನು ಮೇಲೆ ಕಾಣಬಹುದು. ಮಾದರಿ ಮರಣ ಪ್ರಮಾಣದರವನ್ನು ಎರಡು ಅಥವಾ ಹೆಚ್ಚು ಪ್ರದೇಶಗಳ ಮರಣ ಪ್ರಮಾಣದರಗಳನ್ನು ತುಲನೆ ಮಾಡಲು ಮಾತ್ರ ಉಪಯೋಗಿಸಬಹುದು. ಮಿಕ್ಕೆಲ್ಲ ವಿಷಯಗಳಲ್ಲಿಯೂ ಇದು ಕಾಲ್ಪನಿಕವಾಗಿಯೇ ಉಳಿಯುವುದು. ಸಾಮಾನ್ಯವಾಗಿ ಒಂದೇ ಪ್ರದೇಶದಲ್ಲಿ ಅನುಕ್ರಮವಾಗಿ ಬೇರೆ ಬೇರೆ ವರ್ಷಗಳ ಮರಣ ಪ್ರಮಾಣದರಗಳನ್ನು ತುಲನೆಮಾಡಲು ಅಪರಿಷ್ಕೃತ ಮರಣ ಪ್ರಮಾಣದರವನ್ನೇ ಉಪಯೋಗಿಸುತ್ತಾರೆ. ಒಂದೇ ಪ್ರದೇಶದ ವಯಸ್ಸಿನ ಸಂಯೋಜನೆ ಗಣನೀಯವಾಗಿ ಬದಲಾಗಲು ಬಹಳ ವರ್ಷಗಳೇ ಬೇಕಾಗುವುವೆಂಬ ವಾಸ್ತವಾಂಶವೇ ಇದಕ್ಕೆ ಮುಖ್ಯ ಕಾರಣ.

ಮೇಲೆ ಸೂಚಿಸಿರುವ ಮರಣಪ್ರಮಾಣದರಗಳು ಒಟ್ಟು ಜನಸಂಖ್ಯೆಗೆ ಸಂಬಂಧಪಟ್ಟದ್ದಾಗಿವೆ. ಇವುಗಳ ಹೊರತು ಕೆಲವು ಮರಣ ಪ್ರಮಾಣದರಗಳು ಒಂದು ಜನಸಂಖ್ಯೆಯ ನಿಶ್ಚಿತ ಗುಂಪುಗಳಿಗೆ ಅನ್ವಯವಾಗಿರುತ್ತವೆ. ಇಂಥ ಮುಖ್ಯವಾದ ಮರಣ ಪ್ರಮಾಣದರಗಳನ್ನು ಮುಂದೆ ಕೊಡಲಾಗಿದೆ.

$$\text{ಶಿಶುಮರಣ ಪ್ರಮಾಣದರ} = \frac{\text{ಒಂದು ವರ್ಷದ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಶಿಶುಗಳ ಒಟ್ಟುಮರಣ}}{\text{ಆ ವರ್ಷದಲ್ಲಿಯ ಒಟ್ಟು ಜನನ}} \times 1000$$

$$\text{ತಾಯಂದಿರ ಮರಣ ಪ್ರಮಾಣದರ} = \frac{\text{ಮಕ್ಕಳ ಜನನದ ಸಮಯದಲ್ಲಿ ಸಂಭವಿಸುವ ತಾಯಂದಿರ ಮರಣಸಂಖ್ಯೆ}}{\text{ಆ ವರ್ಷದಲ್ಲಿ ಆದ ಒಟ್ಟು ಜನನಗಳು}} \times 1000$$

ಈ ಮರಣಪ್ರಮಾಣದರಗಳು ಒಂದು ಪ್ರದೇಶದ ಬೆಳೆವಣಿಗೆಯ ಸೂಚಿಗಳಲ್ಲೊಂದಾಗಿರುತ್ತವೆ. ಇವು ಆ ಪ್ರದೇಶದ ಸಾಮಾಜಿಕ, ಆರ್ಥಿಕ ತಾಂತ್ರಿಕ ಮಟ್ಟಗಳನ್ನು ಅವಲಂಬಿಸಿರುತ್ತವೆ. ಇದೇ ರೀತಿ ವಿಮಾ ಸಂಸ್ಥೆಗಳ ಅಧಿಕಾರಿಗಳು ಒಂದು ಪ್ರದೇಶದಲ್ಲಿ 15ರಿಂದ 45 ವರ್ಷ ಪರಿಮಿತಿಯಲ್ಲಿರುವ ಜನಸಂಖ್ಯೆಯ ಮರಣ ಪ್ರಮಾಣದರಗಳಲ್ಲಿ ಬಹಳ ಆಸಕ್ತರಾಗಿರುತ್ತಾರೆ. ಈ ಮರಣ ಪ್ರಮಾಣದರಗಳಿಗೆ ಅನುಗುಣವಾಗಿಯೇ ಅವರು ವಿಮೆಯ ಕಂತುಗಳನ್ನು ನಿಗದಿಮಾಡುತ್ತಾರೆ. (ಆರ್.ವಿ.ಎ.)

**ಮರಳು ದಿಬ್ಬ:** ಗಾಳಿಯ ವೇಗ, ಅದು ಹೊತ್ತು ಬರುವ ಮರಳುಕಣಗಳ ಗಾತ್ರ ಮತ್ತು ತಡೆಯೊಡ್ಡುವ ಪ್ರದೇಶಗಳ ಸ್ಥಿತಿಗತಿಗಳ ಸಲುವಾಗಿ ಶೇಖರಗೊಳ್ಳುವ ಮರಳಿನ ರಾಶಿ (ಸ್ಯಾಂಡ್ ಡ್ಯೂನ್). ಭೂಸವೆತದ ಕಾರ್ಯದಲ್ಲಿ ತೊಡಗಿರುವ ಗಾಳಿ ಸಾಮಾನ್ಯವಾಗಿ ಸಾಗಣೆ ಮತ್ತು ಸಂಚಯನಗಳನ್ನು ಏಕಕಾಲದಲ್ಲಿ ಮಾಡುತ್ತದೆ. ಗಿಡಮರಗಳಿಲ್ಲದ ವಿಶಾಲ

ಮರುಭೂಮಿಗಳಲ್ಲೂ ಕೆಲವೊಮ್ಮೆ ಕಡಲತೀರಗಳಲ್ಲೂ ಅದರ ಸಾಮರ್ಥ್ಯ ಅಧಿಕ. ಬೀಸುವ ಗಾಳಿಯ ದಿಕ್ಕನ್ನು ಅನುಸರಿಸಿ ಅದರಲ್ಲಿ ಸೇರಿರುವ ಮರಳಿನ ಕಣಗಳು ಮತ್ತು ಚೂರುಗಲ್ಲಿನ ಮಡಿಗಳು ಯಾವುದಾದರೊಂದು ಗಿಡ ಅಥವಾ ದೊಡ್ಡಕಲ್ಲಿನಿಂದ ತಡೆಯಲ್ಪಟ್ಟು ರಾಶಿಗೂಡುತ್ತವೆ. ಕೆಲವು ದಿಬ್ಬಗಳು ಗಾಳಿಬೀಸುವ ದಿಕ್ಕಿಗೆ ಸಮಾನಾಂತರವಾಗಿಯೂ ಉದ್ದುದ್ದವಾಗಿಯೂ ಮತ್ತೆ ಕೆಲವು ದಿಬ್ಬಗಳು ಗಾಳಿಬೀಸುವ ದಿಕ್ಕಿಗೆ ಅಡ್ಡವಾಗಿಯೂ ರಚನೆಗೊಂಡಿರುತ್ತವೆ. ಉತ್ತರ ಆಫ್ರಿಕ ಮತ್ತು ನೈರುತ್ಯ ಏಷ್ಯದ ಮರುಭೂಮಿಗಳಲ್ಲಿ ಉದ್ದುದ್ದವಾಗಿ ಚಾಚಿರುವಂಥ ದಿಬ್ಬಗಳನ್ನು ಕಾಣಬಹುದು. ಅವುಗಳಿಗೆ ಸೀಫ್ ಎಂದು ಹೆಸರು. ಅವುಗಳ ಎತ್ತರ ಸು. 100–200 ಮೀ ವರೆಗೆ; ಅಗಲ ಎತ್ತರದ ಆರು ಪಟ್ಟು. ಇವುಗಳಿಗೆ ಗಾಳಿ ಸಮಾನಾಂತರವಾಗಿ ಬೀಸುವಾಗ ಅವು ಉದ್ದವಾಗುತ್ತಲೂ ಅಡ್ಡವಾಗಿ ಬೀಸುವಾಗ ಎತ್ತರ ಮತ್ತು ಅಗಲವಾಗುತ್ತಲೂ ಹೋಗುತ್ತವೆ. ಇದು ಮರಳಿನ ಸಾಗರಗಳ ದೊಡ್ಡ ದೊಡ್ಡ ಅಲೆಗಳಂತೆ ತೋರುತ್ತವೆ. ಚಿಕ್ಕ ಚಿಕ್ಕ ಅಲೆಗಳಂತೆ ತೋರುವ ದಿಬ್ಬಗಳೂ ಉಂಟು. ಇವು ಮೊದಲು ಕಿರಿದಾದ ಬದಿಗಳಿರುವ ಚಿಕ್ಕ ಚಿಕ್ಕ ದಿಣ್ಣೆಗಳಾಗಿದ್ದು ಇವುಗಳ ಹಿಂಭಾಗದಿಂದ ಏರಿಬರುವ ಮರಳಿನ ಕಣಗಳು ಕಡಿದಾದ ಮುಂಭಾಗದಲ್ಲಿ ದೀರ್ಘ ಬಾಹುಗಳಾಗಿ ಬೀಳುತ್ತವೆ. ಅಲ್ಲಿ ಬೀಸುವ ಗಾಳಿ ಇವನ್ನು ಮುಂದೂಡುತ್ತ ಸಾಗಿದಂತೆ, ಮಧ್ಯಭಾಗ ಹೆಚ್ಚಿನ ಹೊರೆಯ ದೆಸೆಯಿಂದ ನಿಧಾನವಾಗಿಯೂ ಕಡಿಮೆ ಮರಳು ಇರುವ ಬಾಹುಗಳು ಶೀಘ್ರವಾಗಿಯೂ ಚಲಿಸುತ್ತವೆ. ಚಲನೆಯಲ್ಲಿಯ ಈ ವ್ಯತ್ಯಾಸದಿಂದ ಅಡ್ಡ ಬೆಳೆದಿರುವ ದಿಬ್ಬಗಳು ಅರ್ಧಚಂದ್ರಾಕೃತಿಯವಾಗುತ್ತವೆ. ಅವುಗಳಿಗೆ ನಿಮ್ನಮಧ್ಯವುಳ್ಳ (ಒಳಬಾವು), ಕಡಿದಾದ ಮುಂಭಾಗವೂ ಪೀನಮಧ್ಯ (ಹೊರಉಬ್ಬು) ಇರುವ ಹಿಂಭಾಗವೂ ಇವೆ. ಇಂಥ ಮರಳುದಿಬ್ಬಗಳಿಗೆ ಬರ್ಕಾನ್ ಎಂದು ಹೆಸರು. ಮುಂಭಾಗದ ವ್ಯಾಸ ಸು. 402 ಮೀ ಇರುವ ಅರ್ಧಚಂದ್ರಾಕೃತಿಯ ದಿಬ್ಬಗಳು ಸು. 30–60 ಮೀ ಎತ್ತರಕ್ಕೆ ಬೆಳೆದಿರುತ್ತವೆ. ಈ ಬಗೆಯ ದಿಬ್ಬಗಳು ವರ್ಷಕ್ಕೆ ಸು. 7–10 ಮೀ ವರೆಗೆ ಚಲಿಸುತ್ತವೆಂದು ಅಂದಾಜು. ಆಫ್ರಿಕ ಮತ್ತು ಅರೇಬಿಯಗಳ ಮರುಭೂಮಿಗಳಲ್ಲಿಯೂ ಸಿಂಧ್, ರಾಜಸ್ಥಾನಗಳ ಮರುಭೂಮಿ ಬೀಸುವ ಗಾಳಿಗೆ ಸಮಾಂತರವಾಗಿ ಹರಡಿರುವ ಸು. 30 ಮೀ ಉದ್ದ,

ಟಿಬೆಟ್ಟಿನಲ್ಲಿರುವ ಮರಳು ದಿಬ್ಬಗಳು

ಸು. 4.2 ಮೀ ಅಗಲ ಹಾಗೂ ಸು. 50 ಮೀ ಎತ್ತರವಿರುವ, ತಿಮಿಂಗಿಲದ ಬೆನ್ನಿನ ಆಕೃತಿಯ ಏರುದಿಬ್ಬಗಳಿವೆ. ಇವಕ್ಕೆ ಚಲನೆ ಇಲ್ಲ. ಇವು ಮರುಭೂಮಿಯ ಸಂಚಾರಕ್ಕೆ ಸಹಾಯವೆಸಗುವ ಮಾರ್ಗದರ್ಶಕ ದಿಬ್ಬಗಳು. ಕರಾವಳಿ ತೀರದ ಮರಳುದಿಬ್ಬಗಳು ಇನ್ನೊಂದು ಬಗೆಯವು. ವರ್ಷಕ್ಕೆ ಸು. 7 ಮೀ ನಂತೆ ಮುನ್ನುಗುವ ಇಂಥ ಕೆಲವು ದಿಬ್ಬಗಳು ಹೊಲಮನೆಗಳಿಗೆ ತಂದೊಡ್ಡುವ ಹಾನಿಕಾರಕ ಪರಿಣಾಮಗಳನ್ನು ಇಂಗ್ಲೆಂಡಿನ ಕಾರ್ನ್‌ವಾಲ್ ಮತ್ತು ಸ್ಕಾಟ್ಲೆಂಡಿನ ಮೊರೆ ನದೀಮುಖದ ದಕ್ಷಿಣ ಭಾಗಗಳಲ್ಲಿ ಕಾಣಬಹುದು. ಚಲಿಸುವ ಮರಳುದಿಬ್ಬಗಳ ಹಾನಿಯನ್ನು ತಡೆಗಟ್ಟಲು ಸಾಧ್ಯವಾಗುವ ಅನುಕೂಲ ಸಸ್ಯಗಳನ್ನು ಬೆಳೆಸುವ ಯೋಜನೆಗಳು ಇತರೆಡೆಗಳಂತೆ ಭಾರತದ ರಾಜಸ್ಥಾನದಲ್ಲೂ ನಡೆದಿವೆ. ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ತಲಕಾಡು ಎಂಬ ಸ್ಥಳದಲ್ಲಿ ಚಲಿಸುವ ಮರಳು ದಿಬ್ಬಗಳು ಇವೆ. (ಎಂ.ವಿ.)

**ಮರಳು ಶಿಲೆ:** ಭೂಮಿಯಲ್ಲಿಯ ಕಣಶಿಲೆಗಳ (ಸೆಡಿಮೆಂಟರಿ ರಾಕ್ಸ್) ಒಂದು ಮುಖ್ಯಭಾಗ (ಸ್ಯಾಂಡ್ ಸ್ಟೋನ್). ಇದು ಕಣಶಿಲೆಗಳ ಶೇ. 25 ಭಾಗವನ್ನು ಆಕ್ರಮಿಸಿದೆ. ಮರಳುಶಿಲೆಗಳು ಸಾಮಾನ್ಯವಾಗಿ 0.0625 ಮಿಮೀ ನಿಂದ 2.0 ಮಿಮೀ ವರೆಗೆ ವ್ಯಾಸವಿರುವ ಖನಿಜಕಣಗಳನ್ನು ಹೊಂದಿವೆ. ಕೆಲವೊಮ್ಮೆ ಸೂಕ್ಷ್ಮ ಶಿಲಾ ಚೂರುಗಳು ಇರುವುದುಂಟು. ಪ್ರಕೃತಿಯಲ್ಲಿ ನಾನಾ ಬಗೆಯ ಶಿಲಾ ಸಮೂಹಗಳು ಮಳೆ, ಗಾಳಿ ಹಾಗೂ ಬಿಸಿಲಿನ ಶಾಖದಿಂದ ಸವೆತ ಮತ್ತು ಕೊರೆತಕ್ಕೆ ಈಡಾಗಿ ಬೇರ್ಪಟ್ಟು ಖನಿಜಕಣ ಮತ್ತು ಸಣ್ಣ ಶಿಲಾಚೂರುಗಳು ಬೋಗುಣಿಗಳಲ್ಲಿ ಸಂಚಯನಗೊಂಡ ಅನಂತರ ಗಟ್ಟಿಗೊಂಡು ಮರಳುಶಿಲೆಗಳಾಗುತ್ತವೆ. ಹೀಗಾಗಿ ಮರಳುಶಿಲೆಗಳು ಭೂಮೇಲ್ಮೈ ಶಿಲೆಗಳ ರಾಸಾಯನಿಕ ಹಾಗೂ ಭೌತ ಶಿಥಿಲೀಕರಣ ಕಾರ್ಯಾಚರಣೆಯ ಅನಂತರ ಉಳಿದುಬಂದ ಭಾಗವನ್ನು ಪ್ರತಿನಿಧಿಸುವಂಥವಾಗಿದೆ. ವಿವಿಧ ಬಗೆಯ ಮರಳುಶಿಲೆಗಳಲ್ಲಿ ದೊರೆಯಬಹುದಾದಂಥ ವಿವಿಧ ಖನಿಜಗಳ ಸಂಖ್ಯೆಗೆ ಸಮ ಎಂದು ಪರಿಗಣಿಸುವುದುಂಟು.

ರಚನಾವಿನ್ಯಾಸ : ಮರಳುಶಿಲೆಗಳು ಹಲವಾರು ಕಣಶಿಲಾರಚನಾ ವಿನ್ಯಾಸಗಳನ್ನು ಪ್ರದರ್ಶಿಸುತ್ತವೆ. ಇವುಗಳಲ್ಲಿ ಮುಖ್ಯವಾದವು ಎಂದರೆ ಅಡ್ಡಹಾಯ್ದ ಶಿಲಾಸ್ತರಗಳು (ಕ್ರಾಸ್ ಬೆಡ್ಡಿಂಗ್ಸ್), ಅಲೆಗಳ ಗುರುತುಗಳು (ರಿಪ್ಪಲ್ಸ್) ಮತ್ತು ವರ್ಗೀಕೃತ ಶಿಲಾಪದರುಗಳು (ಗ್ರೇಡೆಡ್ ಬೆಡ್ಡಿಂಗ್ಸ್). ಇವುಗಳ ಪೈಕಿ ಮೊದಲೆರಡು ರಚನೆಗಳು ಆಳವಿಲ್ಲದ ಜಲಪ್ರದೇಶಗಳಲ್ಲಿ ಉಂಟಾಗುವುವು. ಮೂರನೆಯ ರಚನೆ ಆಳವಿರುವ ಜಲಪ್ರದೇಶದಲ್ಲಿ ಮಾತ್ರ ರೂಪುಗೊಳ್ಳುವಂಥದ್ದು.

ವರ್ಗೀಕರಣ : ಮರಳುಶಿಲೆಗಳನ್ನು ರಚನೆ ಮತ್ತು ಖನಿಜಸಂಯೋಜನೆಯ ಆಧಾರದ ಮೇರೆಗೆ ಅಂತೆಯೇ ಮೊದಲಿಗೆ ಸಂಚಯನಗೊಂಡ ಕಣಗಳು ಮತ್ತು ಅವನ್ನು ಬಂಧಿಸಿರುವ ಸಿಮೆಂಟಿನ ಆಧಾರದ ಮೇರೆಗೆ (1) ಸಂಚಯನ ಮರಳುಶಿಲೆ (ಟೆರ್ರಿಜಿನಸ್ ಸ್ಯಾಂಡ್ ಸ್ಟೋನ್), (2) ಸುಣ್ಣಮರಳು ಶಿಲೆ (ಕ್ಯಾಲ್ಕೇರಿಯಸ್ ಸ್ಯಾಂಡ್ ಸ್ಟೋನ್) ಮತ್ತು (3) ಜ್ವಾಲಾಮುಖಿಜನ್ಯ ಮರಳುಶಿಲೆ (ಪೈರೊಕ್ಲಾಸ್ಟಿಕ್ ಸ್ಯಾಂಡ್ ಸ್ಟೋನ್) ಎಂದು ವರ್ಗೀಕರಿಸಲಾಗಿದೆ.

1) ಕಣಶಿಲಾಸಮೂಹಗಳಲ್ಲಿ ಸಂಚಯನಗೊಂಡ ಮರಳುಶಿಲೆಗಳೇ ಅತ್ಯಂತ ಹೆಚ್ಚು. ಈ ಶಿಲೆಗಳು ಬೋಗುಣಿಗಳ ಹೊರ ಪ್ರದೇಶದಲ್ಲಿಯ ಶಿಲೆಗಳು ಸವೆತಕ್ಕೆ ಈಡಾಗಿ, ಖನಿಜಗಳಾಗಿ ಮಾರ್ಪಟ್ಟು, ಸ್ಥಳಾಂತರಗೊಂಡು, ಬೋಗುಣಿಗಳಲ್ಲಿ ಸಂಚಯನಗೊಂಡುದರ ಫಲವಾಗಿ ಉಂಟಾದಂಥವು.

2) ಸುಣ್ಣ ಮರಳುಶಿಲೆಗಳು ತಮ್ಮಲ್ಲಿಯ ಕಣಗಳ ಜೊತೆಯಲ್ಲಿ ಸಣ್ಣ ಸಣ್ಣ ಸುಣ್ಣ ಶಿಲಾಚೂರುಗಳನ್ನು, ಸುಣ್ಣ ಚಿಪ್ಪು ಚೂರುಗಳನ್ನು, ಪಳೆಯುಳಿಕೆಗಳಂತಿರುವ, ಗುಂಡುಕಣಗಳನ್ನು, ಸುಣ್ಣದ ಉಂಡೆಗಳು ಮತ್ತು ಸ್ಥಳೀಯವಾಗಿ ಉತ್ಪತ್ತಿಯಾದ ಸುಣ್ಣದಕಲ್ಲು ಚೂರುಗಳನ್ನು ಹೊಂದಿರುತ್ತವೆ. ಈ ಕಾರಣಕ್ಕಾಗಿ ಇವನ್ನು ಜೀವ್ಯವಶೇಷವುಳ್ಳ ಚೂರುಗಲ್ಲಿನ ಮರಳು ಶಿಲೆ (ಬಯೋಕ್ಲಾಸ್ಟಿಕ್), ಸುಣ್ಣದ ದುಂಡುಕಣಗಳುಳ್ಳ ಮರಳು ಶಿಲೆ (ಊಲಿಟಿಕ್), ಸುಣ್ಣದ ಉಂಡೆಗಳುಳ್ಳ ಮರಳುಶಿಲೆ(ಪೆಲೇಟಲ್) ಮತ್ತು ಅಂತರಮಿಶ್ರಿತ ಸುಣ್ಣ ಶಿಲಾಚೂರುಗಳುಳ್ಳ ಮರಳು ಶಿಲೆ(ಇಂಟ್ರಕ್ಲಾಸ್ಟಿಕ್) ಎಂದು ವಿಭಾಗಿಸಲಾಗಿದೆ. ಇವು ಸಾಮಾನ್ಯವಾಗಿ ಸಮುದ್ರತಳದ ಪರಿಸರದಲ್ಲಿ ಉಂಟಾಗತಕ್ಕವು.

3) ಜ್ವಾಲಾಮುಖಿಜನ್ಯ ಮರಳುಶಿಲೆಗಳು ಜ್ವಾಲಾಮುಖಿಯ ಚಟುವಟಿಕೆಯಿಂದ ಉಂಟಾದ ಕಲ್ಲುಚೂರುಗಳನ್ನು ಹೆಚ್ಚಾಗಿ ಹೊಂದಿರುತ್ತವೆ. ಇಂಥ ಶಿಲೆಗಳು ಭೂಮಿಯಲ್ಲಿ ಹೆಚ್ಚಾಗಿ ಲಭ್ಯವಿಲ್ಲ. ಇವನ್ನು ಜ್ವಾಲಾಮುಖಿಯ ಗಾಜುಗಳುಳ್ಳ ಮರಳುಶಿಲೆ, ಜ್ವಾಲಾಮುಖಿಯ ಖನಿಜಗಳುಳ್ಳ ಮರಳುಶಿಲೆ ಮತ್ತು ಜ್ವಾಲಾಮುಖಿಯ ಶಿಲಾಚೂರುಗಳುಳ್ಳ ಮರಳುಶಿಲೆ ಎಂದೂ ವಿಭಾಗಿಸಲಾಗಿದೆ.

ರಚನೆ : ಸಂಚಯನ ಪ್ರದೇಶದ ಭೌತಕಾರ್ಯಾಚರಣೆಗಳು ಮರಳು ಶಿಲೆಗಳ ರಚನೆಯ ಮೇಲೆ ತಮ್ಮ ಗುರುತರ ಮುದ್ರೆಯನ್ನು ಮೂಡಿಸುತ್ತವೆ. ಮರಳುಶಿಲಾರಚನೆಯ ಸಂಬಂಧದಲ್ಲಿ ಅಲ್ಲಿ ಸಂಚಯನಗೊಂಡ ಖನಿಜಗಳ ಆಕಾರ, ದುಂಡಾಗಿರುವಿಕೆ, ಮೇಲ್ಮೈ ಲಕ್ಷಣ, ಗಾತ್ರ ಮತ್ತು ವ್ಯಾಸ ಹಾಗೂ ಅವುಗಳ ರಚನಾಸ್ವರೂಪ (ಫ್ಯಾಬ್ರಿಕ್) ಮುಖ್ಯಪಾತ್ರ ವಹಿಸುತ್ತವೆ. ಸಾಮಾನ್ಯವಾಗಿ ಮರಳುಶಿಲೆಗಳಲ್ಲಿ ಕಣಗಳ ಅಂತರ್ಭಾಗ ಸಿಲಿಕ ಅಥವಾ ಸುಣ್ಣದ ಕಾರ್ಬೊನೇಟ್ ಇಲ್ಲವೆ ಸೂಕ್ಷ್ಮರೂಪದ ಎರಕವಸ್ತುಗಳಿಂದ ತುಂಬಿರುತ್ತದೆ. ಇವುಗಳ ಆಧಾರದ ಮೇಲೆ ಮರಳುಶಿಲೆಗಳನ್ನು (1) ಮರಳುಶಿಲೆ(ಆರಿನೈಟ್) ಮತ್ತು (2) ಮಡ್ಡಿ ಬೆರೆತ ಶಿಲೆ (ವ್ಯಾಕೀಸ್) ಎಂದು ವಿಂಗಡಿಸಲಾಗಿದೆ. ಶೇ. 15 ಕ್ಕಿಂತಲೂ ಕಡಿಮೆಯ ಎರಕವಸ್ತು ಇದ್ದು, ಮರಳುಕಣಗಳು ಒಂದಕ್ಕೊಂದು ಒಟ್ಟುಗೂಡಿ ಶಿಥಿಲೀಕರಣಗೊಂಡಿರುವ ಮೊದಲ ವರ್ಗದ ಶಿಲೆಗೆ ಚೊಕ್ಕಟ ಮರಳುಶಿಲೆ (ಕ್ಲೀನ್ ಸ್ಯಾಂಡ್ ಸ್ಟೋನ್) ಎಂದು ಹೆಸರು. ಶೇ. 15 ಕ್ಕಿಂತಲೂ ಹೆಚ್ಚಿನ ಭಾಗ ಜೇಡು ಮತ್ತು ಮಡ್ಡಿಗಳನ್ನು ಒಳಗೊಂಡು, ಬಗ್ಗಡ ಪ್ರವಾಹಗಳು ತಂದೊಡ್ಡಿದ, ಸಂಚಯನದಿಂದ ಉಂಟಾದ ಎರಡನೆಯ ವರ್ಗದ ಶಿಲೆಗಳಿಗೆ ಕಲ್ಮಷಭರಿತ ಮರಳುಶಿಲೆ (ಡರ್ಟಿಸ್ಯಾಂಡ್ ಸ್ಟೋನ್) ಎಂದು ಹೆಸರು.

ಖನಿಜ ಸಂಯೋಜನೆ : ಮರಳುಶಿಲೆಯಲ್ಲಿ ಬಹುತೇಕ ಖನಿಜಗಳಿವೆ. ಉದಾ: ಬೆಣಚುಕಣಗಳು, ಫೆಲ್‌ಸ್ಪಾರ್‌ಗಳು ಮತ್ತು ಕಲ್ಲು ಚೂರುಗಳು. ಇವುಗಳ ಸಮೃದ್ಧಿಗೆ ಅನುಗುಣವಾಗಿ ಮರಳು ಶಿಲೆಗಳನ್ನು 4 ವರ್ಗಗಳಾಗಿ ಪುನರ್ವಿಂಗಡಿಸಲಾಗಿದೆ; (1) ಬೆಣಚುಮರಳು ಶಿಲೆ (ಕ್ವಾರ್ಟ್ಸ್ ಆರಿನೈಟ್), (2) ಆರ್ಕೋಸ್ ಅಥವಾ ಫೆಲ್‌ಸ್ಪಾರ್

ಮರಳು ಶಿಲೆ (ಫೆಲ್ಸ್‌ಸ್ಪಾಟಿಕ್–ಆರಿನೈಟ್), (3) ಬೂದುಬಣ್ಣದ ಮಡ್ಡಿಶಿಲೆ (ಗ್ರೇವ್ಯಾಕ್) ಮತ್ತು (4) ಕಲ್ಲು ಚೂರುಗಳ ಮರಳುಶಿಲೆ (ಲಿತಿಕ್ ಆರಿ ನೈಟ್). ಬೆಣಚು ಮರಳುಶಿಲೆಯಲ್ಲಿ ಶೇ. 90 ಭಾಗ ಹೆಚ್ಚಿನ ಬೆಣಚುಕಣಗಳಿವೆ. ಫೆಲ್ಸ್‌ಪಾರ್ ಮತ್ತು ಕಲ್ಲುಚೂರುಗಳು ಸೇರಿ ಶೇ. 10 ಭಾಗಕ್ಕಿಂತಲೂ ಕಡಿಮೆ ಭಾಗವನ್ನು ಆಕ್ರಮಿಸಿರುವ ಅತ್ಯಲ್ಪ ಪ್ರಮಾಣದ ಎರಕವಸ್ತು ಇರುತ್ತದೆ.

ಸಂಚಯನ ಪರಿಸರ : ಮರಳುಶಿಲೆಗಳ ಪ್ರತಿಯೊಂದು ವರ್ಗಗಳೂ ಭೂ ಕಾಲಮಾನ ಮತ್ತು ಪರಿಸರದಲ್ಲಿ ಸಂಚಯನಗೊಂಡು ಕೆಲವೇ ನಿಗದಿತ ಕಣಜ ಶಿಲೆಗಳೊಡನೆ ಸಂಪರ್ಕಹೊಂದಿರುತ್ತವೆ. ಬೆಣಚು ಮರಳುಶಿಲೆಗಳು ಸಾಮಾನ್ಯವಾಗಿ ಆಳವಿಲ್ಲದ ಸಮುದ್ರ ಭಾಗಗಳಲ್ಲಿ ಅದರಲ್ಲೂ ಶಿಲೆಗಳು ಹೆಚ್ಚಾಗಿರುವಲ್ಲಿ ಸಂಚಯನ ಗೊಂಡಿರುತ್ತವೆ. ಇದರಿಂದ ಸುಣ್ಣಶಿಲೆಗಳು ಕೆಲವೊಮ್ಮೆ ಜೇಡುಶಿಲೆಗಳೊಡನೆ ಸಹವರ್ತಿಯಾಗಿ ಇರುವುದೂ ಉಂಟು. ಇಂಥ ಮರಳುಶಿಲೆಗಳು ಭೂಕಾಲಮಾನದ ಪ್ರೀಕೇಂಬ್ರಿಯನ್ ಮತ್ತು ಆದಿಜೀವಿಕಲ್ಪದ ಪೂರ್ವಭಾಗದಲ್ಲಿ ಹೆಚ್ಚಾಗಿ ರೂಪುಗೊಂಡಿರುವುದು ಕಂಡುಬಂದಿದೆ. ಕರ್ನಾಟಕ ರಾಜ್ಯದ ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿಯ ಗುಹಾಂತರ ದೇವಾಲಯಗಳನ್ನು ಪ್ರೀಕೇಂಬ್ರಿಯನ್ ಕಲ್ಪದ ಬೆಣಚುಶಿಲಾಯುಕ್ತವಾದ ಬೆಟ್ಟಗಳಲ್ಲಿ ನಿರ್ಮಿಸಲಾಗಿದೆ. ದೆಹಲಿ ಮತ್ತು ಆಗ್ರಾದಲ್ಲಿರುವ ಕೆಂಪುಕೋಟೆಗಳು ಕೂಡ ಇದೇ ಕಾಲಮಾನದ ಮರಳುಶಿಲೆಗಳಿಂದ ನಿರ್ಮಾಣವಾದಂಥವು. ಬೂದುಬಣ್ಣದ ಮಡ್ಡಿ ಶಿಲೆಗಳು ಸಮುದ್ರದ ಆಳವಾದ ಭಾಗಗಳಲ್ಲಿ ಸಂಚಯನಗೊಂಡು ಸಮುದ್ರತಳದಲ್ಲಿ ಶೇಖರಣೆಗೊಳ್ಳುವ ಜೇಡಶಿಲೆಗಳೊಡನೆ ಸಂಪರ್ಕಹೊಂದಿರುತ್ತವೆ. ಭೂಚಲನವಲನದಿಂದ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಉತ್ಪತ್ತಿಗೊಂಡ ಬೂದುಮಡ್ಡಿ ಶಿಲೆ–ಮರಳುಶಿಲೆ–ಜೇಡುಶಿಲೆ–ಬಿಳೀಬೆಣಚುಶಿಲೆಗಳ ಶಿಲಾಸರಣಿ ನಿಕ್ಷೇಪಗಳಿಗೆ ಫ್ಲಿಷ್ ಸಂಚಯನಗಳು (ಫ್ಲಿಷ್ ಡಿಪಾಸಿಟ್ಸ್) ಎಂದು ಹೆಸರು. ಕಲ್ಲುಚೂರು ಮರಳುಶಿಲೆಗಳಲ್ಲಿ ಚೂಪಾದ ಕಲ್ಲುಚೂರುಗಳು ಹೆಚ್ಚಾಗಿರುತ್ತವೆ. ಇವು ಭೂಮಿಯ ಮೇಲೆ ಪರ್ವತಶ್ರೇಣಿಗಳು ಮೇಲೆತ್ತಲ್ಪಟ್ಟಾಗ ಅವುಗಳ ಪಕ್ಕದಲ್ಲೇ ಉತ್ಪತ್ತಿಗೊಂಡ ಕಲ್ಲುಚೂರುಗಳ ಸಂಚಯನದಿಂದ ಉಂಟಾದಂಥವು. ಇಂಥ ಶಿಲೆಗಳು ಮಧ್ಯಜೀವಿಕಲ್ಪ ಮತ್ತು ಆಧುನಿಕ ಜೀವಿಕಲ್ಪದ ಶಿಲಾಸ್ತೋಮಗಳಲ್ಲಿ ಬಹಳ ಇವೆ. ಕೆಲವು ವೇಳೆ ಆ ಶಿಲಾಸ್ತೋಮಗಳು ನದಿಗಳು ಮತ್ತು ಸಮುದ್ರತೀರ ಪ್ರದೇಶಗಳಲ್ಲಿ ಸಂಚಯನಗೊಂಡ ಮರಳು ನಿಕ್ಷೇಪದಂತೆ ತೋರಿಬರುತ್ತವೆ. ಆರ್ಕೋಸ್ ಅಥವಾ ಫೆಲ್ಸ್‌ಪಾರ್ ಮರಳುಶಿಲೆಗಳು ಭೂಚಲನವಲನದಿಂದ ಭೂಖಂಡಗಳಲ್ಲಿ ಸ್ತರಭಂಗಗಳು ಉಂಟಾಗಿ ದೋಣಿಯಾಕಾರದ ಬೃಹತ್ ಬಿರುಕು ಕಣಿವೆಗಳು ಉದ್ಭವಿಸಿದಾಗ ಸಂಚಯನಗೊಂಡು ಉಂಟಾದಂಥವು. ಇಂಥ ಶಿಲೆಗಳು ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆ ಜಮಖಂಡಿ ಬಳಿಯ ಸಾಲು ಬೆಟ್ಟಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. *

**ಮರುಭೂಮಿ:** ಸಾಮಾನ್ಯವಾಗಿ ವಾರ್ಷಿಕ ಸರಾಸರಿ 25 ಸೆಂಮೀ ಗಳಿಗಿಂತ ಕಡಿಮೆ ಮಳೆ ಪಡೆಯುವ ಪ್ರದೇಶಗಳನ್ನು ಮರುಭೂಮಿಗಳೆಂದು ಕರೆಯಲಾಗುತ್ತದೆ. ಜಲಾಂಶದ ಕೊರತೆಯಿಂದ ಇವು ಬಹುತೇಕ ಸಸ್ಯವರ್ಗ ರಹಿತ ಅಥವಾ ವಿರಳ ಸಸ್ಯವರ್ಗವನ್ನು ಹೊಂದಿರುತ್ತವೆ. ಇದರ ಪರಿಣಾಮವಾಗಿ ಜೀವಸಂಕುಲ ಪೋಷಣೆಯ ಸಾಮರ್ಥ್ಯ ಅತಿ ಕಡಿಮೆಯಿರುತ್ತದೆ. ಮರುಭೂಮಿಗಳು ಉಷ್ಣವಲಯ, ಸಮಶೀತೋಷ್ಣ ವಲಯ ಹಾಗೂ ಶೀತವಲಯ – ಹೀಗೆ ಮೂರು ವಲಯಗಳಲ್ಲಿ ನಿರ್ಮಿತಗೊಂಡಿವೆ. ಶೀತವಲಯದ ಮರುಭೂಮಿಗಳ ಭೂಸ್ವರೂಪ ನಿರ್ಮಾಣದಲ್ಲಿ ಹಿಮನದಿಗಳು ಹಾಗೂ ಹಿಮರಾಶಿ ಪ್ರಧಾನವಾದುವು. ಇದಕ್ಕೆ ಬದಲಾಗಿ ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯದ ಮರುಭೂಮಿಗಳಲ್ಲಿ ಭೂಸ್ವರೂಪಗಳು ಪವನ ಕಾರ್ಯದಿಂದ ನಿರ್ಮಿತವಾಗುವುವು.

**ಮುಖ್ಯ ಮರುಭೂಮಿಗಳು:** ಉಷ್ಣವಲಯದ ಮರುಭೂಮಿಗಳು ಎರಡೂ ಗೋಳಾರ್ಧಗಳಲ್ಲಿ ಸು.200–300 ಅಕ್ಷಾಂಶಗಳ ನಡುವೆ, ಅಂದರೆ ಉಪ ಉಷ್ಣವಲಯದ ಅಧಿಕ ಒತ್ತಡ ಪಟ್ಟಿಗಳ ಭೂರಾಶಿಗಳ ಪಶ್ಚಿಮದ ಅಂಚುಗಳಲ್ಲಿ ನಿರ್ಮಿತವಾಗಿವೆ. ಈ ವಲಯಗಳಲ್ಲಿ ಮಳೆಯ ಹಂಚಿಕೆಯು ಪಶ್ಚಿಮದ ಕಡೆಗೆ ಬಂದಂತೆ ಕಡಿಮೆಯಾಗುವುದು. ಇದರಿಂದ ಪಶ್ಚಿಮದ ಭಾಗಗಳು ಮಳೆರಹಿತವಾಗಿ ಮರುಭೂಮಿಗಳಾಗಿ ಪರಿಣಮಿಸಿವೆ. ಇದೇ ರೀತಿಯಲ್ಲಿ ಶೀತೋದಕ ಸಾಗರ ಪ್ರವಾಹಗಳು ಹರಿಯುವ ಪಶ್ಚಿಮದ ತೀರದ ಅಂಚುಗಳು, ಈ ಪ್ರವಾಹದ ಮೇಲೆ ಬೀಸಿಬಂದ ಮಾರುತಗಳು ಉಷ್ಣಾಂಶವನ್ನು ಕಡಿಮೆಗೊಳಿಸುತ್ತವೆ. ಇದರಿಂದ ಘನೀಕರಣ ಮತ್ತು ವೃಷ್ಟಿಯ ಪ್ರಕ್ರಿಯೆಗಳು ಅಸಾಧ್ಯವಾಗಿದ್ದು, ಇವುಗಳು ಅತಿ ಶುಷ್ಕ ಮರುಭೂಮಿಗಳಾಗಿವೆ. ಪ್ರಪಂಚದ ಮುಖ್ಯ ಉಷ್ಣವಲಯದ ಮರುಭೂಮಿಗಳಿವು: ಉತ್ತರ ಆಫ್ರಿಕದ ಸಹರ, ಲಿಬಿಯನ್, ಈಸ್ಟರ್ನ್ ಮತ್ತು ನುಬಿಯನ್, ಇಥಿಯೋಪಿಯದ ಡೆಂಕನಿಲ್, ದಕ್ಷಿಣ ಆಫ್ರಿಕದ ಕಲಹರಿ ಮತ್ತು ನಮಿಬ್, ಏಷ್ಯ ಖಂಡದಲ್ಲಿ ಸೌದಿ ಅರೇಬಿಯದ ರುಬ್–ಆಲ್–ಖಲಿ–ಆದ್ ದಹ್ನಾ ಮತ್ತು ಅನ್‌ನಫುಡ್, ಸಿರಿಯದ ಸಿರಿಯನ್, ಇಸ್ರೇಲಿನ ಸಿಗೆವ್, ಇರಾನಿನ ದಸ್ತ್–ಎ–ಲೂಟ್ ಮತ್ತು ದಸ್ತ್–ಎ–ಕವಿರ್, ಭಾರತದ ಥಾರ್, ಆಸ್ಟ್ರೇಲಿಯದ ದಿ ಗ್ರೇಟ್ ಸ್ಯಾಂಡಿ ಡೆಸರ್ಟ್, ಸಿಂಪ್ಸನ್, ಗ್ರೇಟ್ ವಿಕ್ಟೋರಿಯ ಮತ್ತು ಗಿಬ್ಸನ್, ದಕ್ಷಿಣ ಅಮೆರಿಕದ ಚಿಲಿಯ ಅಟಕಾಮ, ಪೆರುವಿನ ಸೆಚೂರ, ಉತ್ತರ ಅಮೆರಿಕದ ಮೊಜಾವೆ (ಮೊಹಾವೆ) ಮತ್ತು ಸೋನೋರನ್.

ಸಮಶೀತೋಷ್ಣ ವಲಯದ ಮರುಭೂಮಿಗಳು ಉಷ್ಣವಲಯದ ಮರುಭೂಮಿಗಳಿಗಿಂತ ಭಿನ್ನವಾಗಿವೆ, ಇವು ಭೂಖಂಡಗಳ ನಡುವೆ ಇದ್ದು, ಸಾಗರಿಕ ಪ್ರಭಾವದಿಂದ ಬಹುದೂರದಲ್ಲಿವೆ. ಹೀಗೆ ಖಂಡಾಂತರ ಸ್ಥಾನದಿಂದಾಗಿ ಇವು ಮರುಭೂಮಿಗಳಾಗಿ ಪರಿಣಮಿಸಿವೆ. ಮಂಗೋಲಿಯದ ಗೋಬಿ ಮತ್ತು ಮಧ್ಯ ಏಷ್ಯದ ಗಾರಾಗುಮ್ ಮತ್ತು ಕೈಜಿಲ್‌ಕುಮ್, ಚೀನದ ತಕ್ಲಾಮಕಾನ್ ಈ ಪ್ರಕಾರದ ಮರುಭೂಮಿಗಳಿಗೆ ಉತ್ತಮ ಉದಾಹರಣೆಗಳು. ಇವುಗಳಲ್ಲದೆ ದಕ್ಷಿಣ ಅಮೆರಿಕದ ಪಟಗೋನಿಯ, ದಕ್ಷಿಣ ಆಫ್ರಿಕದ ದಿ ಗ್ರೇಟ್ ಕಾರ್‍ರೂ ಅರೆ ಮರುಭೂಮಿ ವಾಯುಗುಣವನ್ನು ಹೊಂದಿವೆ.

**ಮರುಭೂಮಿಯ ಭೂಸ್ವರೂಪ ನಿರ್ಮಾತೃಗಳು:** ಮರುಭೂಮಿ ಹಾಗೂ ಶುಷ್ಕ ವಲಯಗಳಲ್ಲಿ ಕಂಡುಬರುವ ಭೂ ದೃಶ್ಯಾವಳಿ ವಿಶಿಷ್ಟವಾದುದು. ಯಾವುದೇ ಅಡೆ ತಡೆಯಿಲ್ಲದೆ ಬೀಸುವ ಮಾರುತಗಳ ಜೊತೆಗೆ ಶುಷ್ಕ ವಾಯುಗುಣ, ಶಿಥಿಲೀಕರಣ ಹಾಗೂ ಅಪರೂಪವಾಗಿ ಬೀಳುವ ಧಾರಾಕಾರದ ಮಳೆ ಇದಕ್ಕೆ ಮುಖ್ಯ ಕಾರಣಗಳು. ಮರುಭೂಮಿಗಳು ಪಡೆಯುವ ವಾರ್ಷಿಕ ಸರಾಸರಿ ಮಳೆ 25 ಸೆಂಮೀ ಗಳಿಗಿಂತ ಕಡಿಮೆಯಿರುವುದರ ಜೊತೆಗೆ, ಮಳೆ ಅನಿರ್ದಿಷ್ಟವಾಗಿರುತ್ತದೆ. ವಾರ್ಷಿಕ ಉಷ್ಣಾಂಶ ಸರಾಸರಿ 310 ಸೆ ಗಿಂತಲೂ ಅಧಿಕ. ಈ ಕಾರಣದಿಂದಾಗಿ ಬೀಳುವ ಮಳೆ ಆವಿಯಾಗುವುದೇ ಹೆಚ್ಚು. ಇದರಿಂದ ಭೌತಿಕ ಶಿಥಿಲೀಕರಣ ತೀವ್ರಗತಿಯಲ್ಲಿ ನಡೆಯುತ್ತದೆ. ಗಾಳಿ ಇದಕ್ಕೆ ಸಹಾಯಕವಾಗುತ್ತದೆ. ಶುಷ್ಕತೆಯಿಂದಾಗಿ ಶಿಲೆಗಳು ಅತ್ಯಂತ ಸಡಿಲವಾಗಿರುತ್ತವೆ. ಮರುಭೂಮಿಗಳಲ್ಲಿ ಅಪರೂಪವಾಗಿ ಬೀಳುವ ಧಾರಾಕಾರ ಮಳೆಯಿಂದ ಅನಿರೀಕ್ಷಿತವಾಗಿ ಕ್ಷಿಪ್ರ ಪ್ರವಾಹಗಳುಂಟಾಗುತ್ತದೆ. ಇದರಿಂದ ಸಡಿಲವಾದ ಮಣ್ಣು ತೀವ್ರವಾಗಿ ಕೊರೆದು, ಸಾಗಿಸಲ್ಪಟ್ಟು ವಿಶಿಷ್ಟ ಭೂಸ್ವರೂಪಗಳುಂಟಾಗುತ್ತವೆ. (ಪಿ.ಎಂ.)

**ಮರುಭೂಮೀಕರಣ:** ವಾಯುಗುಣದ ಬದಲಾವಣೆ ಅಥವಾ ಮಾನವನ ಚಟುವಟಿಕೆಗಳಿಂದ ಶುಷ್ಕ ಅಥವಾ ಅತಿ ಶುಷ್ಕ ಪ್ರದೇಶಗಳ ಮರುಭೂಮಿಯಲ್ಲಾಗುವ ವಿಸ್ತರಣಾ ಕ್ರಿಯೆ (ಡೆಸರ್ಟಿಫಿಕೇಷನ್). ವಾಯುಗುಣದ ಬದಲಾವಣೆಯು ದೀರ್ಘಾವಧಿ ಶುಷ್ಕತೆ (ಮಳೆಯ ಅನುಪಸ್ಥಿತಿ) ಮತ್ತು ಅಧಿಕ ಉಷ್ಣಾಂಶಗಳಿಂದಲೂ ಮಾನವನ ಚಟುವಟಿಕೆಗಳಾದ, ಸಾಂದ್ರ ಸಾಗುವಳಿ, ಮಿತಿಮೀರಿದ ಮೇಯಿಸುವಿಕೆ, ಅರಣ್ಯ ನಾಶ, ಅವ್ಯವಸ್ಥಿತ ಭೂ ಬಳಕೆ, ಅವೈಜ್ಞಾನಿಕ ನೀರಾವರಿ ಇತ್ಯಾದಿ ಅಂಶಗಳನ್ನೂ ಮರುಭೂಮೀಕರಣ ಒಳಗೊಂಡಿದೆ. ಹೀಗೆ ನೈಸರ್ಗಿಕ ಘಟಕಾಂಶಗಳಿಂದ ಮತ್ತು ಮಾನವನ ಚಟುವಟಿಕೆಗಳಿಂದುಂಟಾದ ಮಣ್ಣಿನ ಸವೆತ, ಮಣ್ಣಿನಲ್ಲಿ ತೇವಾಂಶದ ನಷ್ಟ ಮತ್ತು ಕ್ಷಾರದ ಹೆಚ್ಚಳ, ಅಂತರ್ಜಲ ಮಟ್ಟದ ಕುಸಿತ, ಮಣ್ಣಿನ ಫಲವತ್ತತೆ ಕಡಿಮೆಯಾಗುವಿಕೆ, ಮರಳಿನ ಅತಿಕ್ರಮಣ ಮೊದಲಾದ ಅಂಶಗಳು ಮರುಭೂಮೀಕರಣಕ್ಕೆ ಕಾರಣಗಳಾಗಿವೆ. ಭೂಮಿಯ ಉತ್ಪಾದಕತೆಯ ನಷ್ಟ ಸಾಧಾರಣ (ಶೇ. 25) ಅಧಿಕ (ಶೇ.25 – 50) ಮತ್ತು ಅತ್ಯಧಿಕ (ಶೇ. 50 ಕ್ಕಿಂತ ಹೆಚ್ಚು) ವಾಗಿರಬಹುದು. ಉತ್ಪಾದಕತೆಯ ನಷ್ಟದ ಅಂತಿಮ ಪರಿಣಾಮವೇ ಮರುಭೂಮಿಯಾಗಿದೆ.

ವಿಶ್ವಸಂಸ್ಥೆಯ ಪರಿಸರ ಕಾರ್ಯಸೂಚಿಯ ಪ್ರಕಾರ ಪ್ರಪಂಚದಲ್ಲಿ ಸು. 130 ದಶಲಕ್ಷ ಚ.ಕಿಮೀ ಭೂ ಪ್ರದೇಶ (ಶೇ. 35) ಮರುಭೂಮೀಕರಣದ ಅಪಾಯದಲ್ಲಿದೆ. ಈಗ ಯುರೋಪಿನಲ್ಲಿ ಶೇ. 9.1, ಏಷ್ಯದಲ್ಲಿ ಶೇ. 32, ಉತ್ತರ ಮತ್ತು ಮಧ್ಯ ಅಮೆರಿಕದಲ್ಲಿ ಶೇ. 18.4, ದಕ್ಷಿಣ ಅಮೆರಿಕದಲ್ಲಿ ಶೇ. 19, ಆಫ್ರಿಕದಲ್ಲಿ ಶೇ. 36.3 ಹಾಗೂ ಆಸ್ಟ್ರೇಲಿಯದಲ್ಲಿ ಶೇ. 82.5 ರಷ್ಟು ಭೂ ಪ್ರದೇಶಗಳು ಸಾಧಾರಣದಿಂದ ಅತ್ಯಧಿಕ ಮರುಭೂಮೀಕರಣದ ಅಪಾಯದಲ್ಲಿದೆ. ಪ್ರಪಂಚದಲ್ಲಿ ಪ್ರತಿವರ್ಷ ಸು. 70,000 ಚ.ಕಿಮೀ ಭೂ ಪ್ರದೇಶ ಮರುಭೂಮಿಯಾಗಿ ಪರಿವರ್ತನೆ ಹೊಂದುತ್ತಲಿದೆ. ದಕ್ಷಿಣ ಅಮೆರಿಕದಲ್ಲಿ ವಾಯವ್ಯ ಅರ್ಜೆಂಟೈನ, ಆಫ್ರಿಕದಲ್ಲಿ, ಉತ್ತರ ಆಫ್ರಿಕ (ಪಶ್ಚಿಮ ಸಹರ, ಮೌರಿಟಾನಿಹಯ ಸೋಮಾಲಿಯ) ನೈರುತ್ಯ ಆಫ್ರಿಕ (ದಕ್ಷಿಣ ಆಫ್ರಿಕ, ನಮೀಬಿಯ, ಅಂಗೋಲ), ಏಷ್ಯದಲ್ಲಿ ಮಂಗೋಲಿಯ, ಪಶ್ಚಿಮ ಮತ್ತು ಮಧ್ಯ ಚೀನ, ನೈರುತ್ಯ ಪಾಕಿಸ್ತಾನ, ವಾಯವ್ಯ ಭಾರತ, ಪಶ್ಚಿಮ ಏಷ್ಯ, ಟರ್ಕಿ, ಇರಾನ್, ಇರಾಕ್, ತುರ್ಕ್ಮೆನಿಸ್ತಾನ, ಕಜಕಿಸ್ತಾನ, ಉಜ್ಬೆಕಿಸ್ತಾನ, ಜೋರ್ಡಾನ್, ಸಿರಿಯ, ಸೌದಿ ಅರೇಬಿಯ, ಕುವೈತ್, ಬಹ್ರೇನ್, ಕತಾರ್, ಸಂಯುಕ್ತ ಅರಬ್ ಎಮಿರೇಟ್ಸ್, ಓಮನ್ ಮತ್ತು ಯೆಮನ್ ಹಾಗೂ ಆಸ್ಟ್ರೇಲಿಯದಲ್ಲಿ ಮಧ್ಯ ಮತ್ತು ಪಶ್ಚಿಮ ಆಸ್ಟ್ರೇಲಿಯ ಅತ್ಯಧಿಕ ಮರುಭೂಮೀಕರಣದ ಅಪಾಯದ ಪ್ರದೇಶಗಳಾಗಿವೆ.

ಪ್ರಪಂಚದಲ್ಲಿ ಸು. 140 ದಶಲಕ್ಷ ಜನರು ಮರುಭೂಮೀಕರಣದ ಅಪಾಯಕ್ಕೀಡಾಗಿದ್ದಾರೆ. ಸು. 850 ದಶಲಕ್ಷ ಜನರು ಶುಷ್ಕ ಪ್ರದೇಶಗಳಲ್ಲಿ ಜೀವಿಸುತ್ತಿದ್ದಾರೆ. ವಿಶ್ವಸಂಸ್ಥೆ ಪರಿಸರ ಕಾರ್ಯಸೂಚಿ (1987) ಪ್ರಕಾರ ಹುಲ್ಲುಗಾವಲು ಪ್ರದೇಶಗಳ ಶೇ. 80, ಮಳೆಯಾಧಾರಿತ ಬೆಳೆ ಭೂಮಿಯ ಶೇ. 60 ಮತ್ತು ನೀರಾವರಿಯಾಧಾರಿತ ಬೆಳೆ ಭೂಮಿಯ ಶೇ. 30 ಭಾಗಗಳು ಮರುಭೂಮೀಕರಣದ ಅಪಾಯದಲ್ಲಿವೆ.



ಪ್ರಪಂಚದ ಪ್ರಮುಖ ಮರುಭೂಮಿ ಪ್ರದೇಶ

ಮರುಭೂಮೀಕರಣದ ಪರಿಣಾಮದಿಂದ ಬೆಳೆಗಳು ವಿಫಲವಾಗುತ್ತವೆ ಮತ್ತು ನೀರಿನ ಮೂಲಗಳು ಬತ್ತುತ್ತವೆ. ಕುಡಿಯುವ ನೀರು ಮತ್ತು ಆಹಾರದ ಅಭಾವದಿಂದ ಪ್ರಾಣಿಗಳು ಸಾವೀಗೀಡಾಗುತ್ತವೆ ಹಾಗೂ ಜನರ ಜೀವನ ಪರಿಸ್ಥಿತಿ ಹದಗೆಡುತ್ತದೆ. ಈ ಎಲ್ಲ ಕಾರಣಗಳಿಂದ ಜನರು ತಮ್ಮ ಅಳಿದುಳಿದ ಸಾಕುಪ್ರಾಣಿಗಳೊಡನೆ ಬೇರೆ ಕಡೆಗೆ ವಲಸೆ ಹೋಗುವರು. 1970ರ ದಶಕದಲ್ಲಿ ಸಂಭವಿಸಿದ ಭೀಕರ ಸಹೇಲ್ (ದಕ್ಷಿಣ ಸಹರದ ಅಂಚಿನಲ್ಲಿರುವ ಅರೆ ಮರುಭೂಮಿ) ಬರಗಾಲದಿಂದ ಸಹಸ್ರಾರು ಜನರು ಸಾವೀಗೀಡಾದರು. ಬುರ್ಕಿನಾ ಫಾಸೊದಿಂದ ಸುಮಾರು ಒಂದು ದಶಲಕ್ಷ ಮತ್ತು ಮಾಲಿಯಿಂದ ಅರ್ಧ ದಶಲಕ್ಷ ಜನರು ವಲಸೆ ಹೋದರು. ಇಂತಹ ಪರಿಸ್ಥಿತಿ ಪ್ರಪಂಚದ ಹಲವಾರು ದೇಶಗಳಲ್ಲಿ ವಿಶೇಷವಾಗಿ ಮರುಭೂಮಿಗಳ ಅಂಚಿನಲ್ಲಿರುವ ದೇಶಗಳಲ್ಲಿ ಸಾಮಾನ್ಯವಾಗಿ ತಲೆದೋರಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಮರುಭೂಮೀಕರಣದ ಬಗ್ಗೆ ಚರ್ಚೆಗಳು ಪ್ರಾರಂಭವಾದವು. 1977 ರಲ್ಲಿ ವಿಶ್ವಸಂಸ್ಥೆಯು ಅಂತಾರಾಷ್ಟ್ರೀಯ ಮರುಭೂಮೀಕರಣ ಇಡೀ ವಿಶ್ವದ ಸಮಸ್ಯೆಯಾಗಿ ಪರಿಣಮಿಸಿತು. ಅದೇ ವರ್ಷ ವಿಶ್ವ ಸಂಸ್ಥೆಯು ಅಂತಾರಾಷ್ಟ್ರೀಯ ಮರುಭೂಮೀಕರಣ ಸಮ್ಮೇಳನವನ್ನು ಸಂಘಟಿಸಿತು. ಈ ಸಮ್ಮೇಳನದಲ್ಲಿ ಮರುಭೂಮೀಕರಣದ ಕಾರಣ, ಪರಿಣಾಮ ಮತ್ತು ಪರಿಹಾರೋಪಾಯಗಳನ್ನು ಕುರಿತು ಚರ್ಚಿಸಲಾಯಿತು. ಅದರಂತೆ 1992 ರಲ್ಲಿ ಜರುಗಿದ ರಿಯೋಡಿ ಜನೈರೊ ಭೂಶೃಂಗ ಸಮ್ಮೇಳನ ಮರುಭೂಮೀಕರಣದ ಸಮಸ್ಯೆಗಳಿಗೆ ಸೂಚಿಸಿದ ಪರಿಹಾರಗಳು ಕೆಳಗಿನಂತಿವೆ.

1) ಮರುಭೂಮೀಕರಣದ ಸಮಸ್ಯೆಗಳನ್ನು ಕುರಿತು ವಿವರವಾದ ಅಧ್ಯಯನ ಮಾಡುವುದು. 2) ಮರುಭೂಮೀಕರಣದ ಅಪಾಯವನ್ನು ಗುರುತಿಸುವುದು. 3) ಇಂತಹ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸುವುದು. 4) ಜನರಲ್ಲಿ ಪರಿಸರ ಜಾಗೃತಿಯನ್ನುಂಟುಮಾಡುವುದು. 5) ಬರಗಾಲಕ್ಕೀಡಾಗುವ ಜನರನ್ನು ರಕ್ಷಿಸಲು ಯೋಜನೆಗಳನ್ನು ರೂಪಿಸುವುದು ಹಾಗೂ 6) ಈ ಪ್ರದೇಶಗಳ ಜನರ ಸಂರಕ್ಷಣೆಗಾಗಿ ಕಾನೂನುಗಳ ಮೂಲಕ ಕ್ರಮಕೈಗೊಳ್ಳುವುದು. ಅನಂತರ 1996 ರಲ್ಲಿ ಮರುಭೂಮೀಕರಣವನ್ನು ತಡೆಗಟ್ಟುವ ಶಾಸನವನ್ನು ಸು.50 ದೇಶಗಳಲ್ಲಿ ಜಾರಿಗೊಳಿಸಲಾಯಿತು.

ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆ, ಮಳೆ ನೀರಿನ ಸಂಗ್ರಹಣೆ, ಸಾಮಾಜಿಕ ಅರಣ್ಯಗಾರಿಕೆ, ಒಣ ಪ್ರದೇಶಾಭಿವೃದ್ಧಿ ಕಾರ್ಯಕ್ರಮ ಮೊದಲಾದ ಮರುಭೂಮೀಕರಣ ನಿಯಂತ್ರಿಸುವ ಕ್ರಮಗಳನ್ನು ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಕೈಗೊಳ್ಳಲಾಯಿತು. ಮರುಭೂಮಿಗಳ ವಿಸ್ತರಣೆಯನ್ನು ತಡೆಯಲು ಮತ್ತು ಮರಳು ದಿಣ್ಣೆಗಳನ್ನು ಸ್ಥಿರೀಕರಿಸಲು ಮರುಭೂಮಿಗಳ ಅಂಚಿನಲ್ಲಿ ಅರಣ್ಯಗಳನ್ನು ಬೆಳೆಸುವ ಕಾರ್ಯಕ್ರಮಗಳು ಇಂದು ಹೆಚ್ಚು ಪ್ರಚಲಿತವಾಗಿವೆ. ಭಾರತದಲ್ಲಿ ಶುಷ್ಕ ಮತ್ತು ಅರೆ ಶುಷ್ಕ ಪ್ರದೇಶಗಳಾದ ರಾಜಸ್ತಾನ, ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಲ್ಲಿ ಇಂತಹ ಮರುಭೂಮೀಕರಣ ನಿರೋಧಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇಂದು ಮರುಭೂಮೀಕರಣದ ಅಪಾಯಕ್ಕೀಡಾಗಿರುವ ದೇಶಗಳನ್ನು ರಕ್ಷಿಸುವುದು ಒಂದು ಜಾಗತಿಕ ಸವಾಲಾಗಿದೆ. ಅದಕ್ಕಾಗಿ ವಿಶ್ವಸಂಸ್ಥೆಯ ಪರಿಸರ ಕಾರ್ಯಸೂಚಿಯಂತೆ ಪರಿಹಾರ ಕ್ರಮಗಳನ್ನು ಮರುಭೂಮೀಕರಣದ ಅಪಾಯಕ್ಕೀಡಾಗಿರುವ ದೇಶಗಳಲ್ಲಿ ಸಮರೋಪಾದಿಯಲ್ಲಿ ಜಾರಿಗೊಳಿಸುವುದು ಅತ್ಯಾವಶ್ಯಕವಾಗಿದೆ. (ಎಸ್.ಎಸ್.ಎಸ್.)

**ಮರ್ಕೇಟರ ಗೆರಹಾರ್ಡ್ ಕ್ರೇಮರ್ :** (1512–94) ಫ್ಲೇಮಿಶ್ ನಕ್ಷಾಶಾಸ್ತ್ರಜ್ಞ. ಮಾರ್ಚ್ 1512 ರಲ್ಲಿ ಫ್ಲಾಂಡರ್ಸ್‌ನಲ್ಲಿ ಜನಿಸಿದ; 1532 ರಲ್ಲಿ ಬೆಲ್ಜಿಯಂನಲ್ಲಿ ಸ್ನಾತಕೊತ್ತರ ಪದವಿಗಳಿಸಿದ. ಸು. 24 ವರ್ಷಗಳ ಕಾಲ, ನಕ್ಷಾಕಾರನಾಗಿ, ಲಿಪಿಕಾರನಾಗಿ ವೈಜ್ಞಾನಿಕ ಉಪಕರಣಗಳ ರಚನಾಕಾರನಾಗಿ ಕಾರ್ಯನಿರ್ವಹಿಸಿದ. ಅನೇಕ ಭೂಪಟಗಳು ಮತ್ತು ಗೋಳಗಳನ್ನು ರಚಿಸಿದ. 1564 ರಲ್ಲಿ ಡ್ಯೂಕ್ ವಿವಹೆಲ್ಮ್‌ನ್ ಆಸ್ಥಾನದಲ್ಲಿ, ಖಗೋಳವಿಜ್ಞಾನ ಹಾಗೂ ನಕ್ಷಾಶಾಸ್ತ್ರಗಳ ಪಂಡಿತನಾಗಿದ್ದ. ಅಕ್ಷಾಂಶ ರೇಖಾಂಶಗಳನ್ನು ನೇರ ರೇಖೆಗಳನ್ನು ಉಪಯೋಗಿಸಿ ನಕ್ಷಾಪ್ರಕ್ಷೇಪ (ಮ್ಯಾಪ್ ಪ್ರೋಜೆಕ್ಷನ್)ಗಳನ್ನು ರಚಿಸಿದ. ಇವನು ಡಚ್ ನಕ್ಷೆಗಾರನಾಗಿದ್ದು 1569ರಲ್ಲಿ ಪ್ರಪಂಚದ ನಕ್ಷೆಯನ್ನು ರಚಿಸಲು ಚೌರಸಗಳ ಜಾಲಗಳುಳ್ಳ ಪ್ರಕ್ಷೇಪವನ್ನು ರಚಿಸಿದ. ಇದು ವೃತ್ತಸ್ಥಂಭಾಕೃತಿಯ ಯಥಾಕೃತಿ ಪ್ರಕ್ಷೇಪವೆಂದು ಪ್ರಸಿದ್ಧಿ ಪಡೆದಿದೆ.

ಈ ಪ್ರಕ್ಷೇಪವನ್ನು 1599 ರಲ್ಲಿ ಬ್ರಿಟಿಷ್ ನಕ್ಷೆಗಾರನಾದ ಎಡ್ವರ್ಡ್ ರೈಟ್ ಎಂಬುವವನು ಕೆಲವು ಮಾರ್ಪಾಡು ಮಾಡಿ ಪ್ರಕಟಿಸಿದ. ಅಂದಿನಿಂದ ಮರ್ಕೇಟರ್ ಪ್ರಕ್ಷೇಪಕ್ಕೆ ಹೆಚ್ಚು ಮಹತ್ವ ಬಂದಿತು. ಗ್ರೇಟ್‌ಬ್ರಿಟನ್‌ನಲ್ಲಿ ತಯಾರಿಸಲಾಗುವ ಎಲ್ಲಾ ನಕ್ಷೆಗಳಲ್ಲಿ ಅತ್ಯಂತ ಜನಪ್ರಿಯವಾಯಿತು. ಈ ಪ್ರಕ್ಷೇಪವನ್ನು ಬಳಸಿ ತೆಗೆದ ಜಗತ್ತಿನ ನಕ್ಷೆಗಳನ್ನು ಹೆಚ್ಚಾಗಿ ಸಮುದ್ರ ಪ್ರಯಾಣ ಮತ್ತು ವಿಮಾನಯಾನಗಳಲ್ಲಿ ಬಳಸಲಾಗುತ್ತಿದೆ. 1594 ಡಿಸೆಂಬರ್ 2ರಲ್ಲಿ ಡ್ಯೂಈಸ್ ನಗರದಲ್ಲಿ ನಿಧನಾದನು. (ಎಂ.ಆರ್.ಎಚ್.)

**ಮರ್ಸೇಲ್:** ಫ್ರಾನ್ಸಿನ ಬೂಸ್ ಡೂ ರೋಸ್ ವಿಭಾಗದ ರಾಜಧಾನಿ ಹಾಗೂ ಅತಿ ದೊಡ್ಡ ಬಂದರು. ಫ್ರಾನ್ಸಿನ ಎರಡನೆಯ ಈ ಮಹಾನಗರ ಪ್ಯಾರಿಸ್ ನಗರಕ್ಕೆ ಆಗ್ನೇಯದಲ್ಲಿ 856 ಕಿಮೀ ದೂರದಲ್ಲಿದೆ. ಸುಣ್ಣಕಲ್ಲಿನ ಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿರುವ ಈ ನಗರ ಅರ್ಧವೃತ್ತಾಕಾರದಲ್ಲಿದ್ದು ಮೆಡಿಟರೇನಿಯನ್ ಸಮುದ್ರದ ಲಯನ್ ಖಾರಿಯ ಈಶಾನ್ಯಭಾಗದಲ್ಲಿದೆ. ಜನಸಂಖ್ಯೆ 7,99,486, (1999).

ಇಂದಿನ ಮರ್ಸೇಲ್ ನಗರ ವಿಶಾಲವಾದ ಹೆದ್ದಾರಿಗಳಿಂದ ದೊಡ್ಡ ದೊಡ್ಡ ಕಟ್ಟಡಗಳಿಂದ ಕೂಡಿದೆ. ಗ್ರೀಕರಿಂದ ಸ್ಥಾಪಿತವಾದ ಹಳೆಯ ಬಂದರು ವೆಯಿಕ್ಸ್ 1840ರ ತನಕ ಇಲ್ಲಿಯ ಏಕಮಾತ್ರ ಬಂದರಾಗಿತ್ತು. ಇದು ಚಿಕ್ಕದಾದ್ದರಿಂದ ಆಧುನಿಕ ಹಡಗುಗಳಿಗೆ ಅನುಕೂಲವಾದದ್ದಲ್ಲ. ಆದ್ದರಿಂದ ಇಲ್ಲಿ ವಿಹಾರನೌಕೆಗಳು ಮತ್ತು ಇತರ ಚಿಕ್ಕ ನೌಕೆಗಳು ತಂಗುತ್ತವೆ. ಸುತ್ತಮುತ್ತ ಇರುವ ಇಲ್ಲಿಯ ಹೊಟೆಲುಗಳು ಪ್ರವಾಸಿಗಳಿಗೆ ಆಕರ್ಷಕವಾದುವು. ಇಲ್ಲಿಂದ 8 ಕಿಮೀ ಪಶ್ಚಿಮಕ್ಕೆ ಹೊಸ ಬಂದರನ್ನು ಕಟ್ಟಲಾಗಿದ್ದು ಫ್ರಾನ್ಸಿನ ಒಟ್ಟು ವಿದೇಶೀ ವ್ಯಾಪಾರದಲ್ಲಿ 1/3 ಭಾಗದಷ್ಟು ಇದರ ಮೂಲಕವೇ ನಡೆಯುತ್ತದೆ. ಮರ್ಸೇಲ್‌ನ ಆರ್ಥಿಕತೆ ಇಲ್ಲಿಯ ವ್ಯಾಪಾರ ಮತ್ತು ಕೈಗಾರಿಕೆಗಳನ್ನು ಅವಲಂಬಿಸಿದೆ. 15ನೆಯ ಶತಮಾನದಿಂದಲೂ ಇಲ್ಲಿ ತಯಾರಿಸುತ್ತಿರುವ ಸಾವನ್ ಡಿ ಮರ್ಸೇಲ್ ಸಾಬೂನು ಪ್ರಪಂಚ ಪ್ರಸಿದ್ಧ. ಎರಡನೆಯ ಮಹಾಯುದ್ಧದ ಬಳಿಕ ಇಲ್ಲಿಯ ಬಂದರಿನ ವಿಸ್ತರಣೆಯಾಗಿ ಅನೇಕ ಕೈಗಾರಿಕೆಗಳು ಸ್ಥಾಪಿತವಾದವು. ಇಲ್ಲಿ ಸೋವಿಯತ್ ಮತ್ತು ಫ್ರೆಂಚ್ ಸರ್ಕಾರಗಳ ನೆರವಿನಿಂದ ಒಂದು ಬೃಹತ್ ಪ್ರಮಾಣದ ಉಕ್ಕಿನ ಕೈಗಾರಿಕೆಯನ್ನು ಪ್ರಾರಂಭಿಸಲಾಗಿದೆ. ಬ್ರಿಟಿಷ್ ನೆರವಿನಿಂದ ಪ್ಲಾಸ್ಟಿಕ್ ಕೈಗಾರಿಕೆಯನ್ನೂ ಸ್ಥಾಪಿಸಲಾಗಿದೆ. ಇದಲ್ಲದೆ ಫ್ರೆಂಚ್ ಕಂಪನಿಗಳು ಅನೇಕ ಕೈಗಾರಿಕೆಗಳನ್ನು ಪ್ರಾರಂಭಿಸಿವೆ. ಇಲ್ಲಿಯ ಪ್ರಮುಖ ಉತ್ಪನ್ನಗಳು ಸಾಬೂನು, ರಾಸಾಯನಿಕ ಪದಾರ್ಥಗಳು, ಯಂತ್ರಗಳು, ಸಕ್ಕರೆ, ಆಲಿವ್ ಎಣ್ಣೆ, ಕಬ್ಬಿಣ ಹಿತ್ತಾಳೆಯ ಸಾಮಾನುಗಳು, ಗಾಜು, ಬಟ್ಟೆ ಮತ್ತು ಹಡಗು ನಿರ್ಮಾಣ.

ಮರ್ಸೇಲ್ ನಗರ 2,500 ವರ್ಷಗಳಷ್ಟು ಹಳೆಯದಾಗಿ ಫ್ರಾನ್ಸಿನ ಅತ್ಯಂತ ಪ್ರಾಚೀನ ನಗರವಾದರೂ ಇಲ್ಲಿರುವ ಐತಿಹಾಸಿಕ ಸ್ಮಾರಕಗಳ ಸಂಖ್ಯೆ ಕಡಿಮೆಯೆಂದೇ ಹೇಳಬಹುದು. ಬಂದರಿನ ಪ್ರವೇಶ ದ್ವಾರದಲ್ಲಿ 13ನೆಯ ಶತಮಾನದ ಸೇಂಟ್‌ಜೀನ್ ಕೋಟೆಯೂ ಮತ್ತೊಂದು ಪ್ರವೇಶದ್ವಾರದ ಕಡೆ ಸೇಂಟ್ ನಿಕೊಲಾಸ್ ಕೋಟೆಯೂ ಇವೆ. ಒಳಭಾಗದಲ್ಲಿ ಫ್ರಿಯೊಲ್ ದ್ವೀಪಗಳಿದ್ದು ಇವುಗಳಲ್ಲಿ ಜಲಕ್ರೀಡಾ ಕೇಂದ್ರಗಳಿವೆ. ಈ ದ್ವೀಪಗಳ ಹಾಗೂ

ಮುಖ್ಯ ಭೂ ಭಾಗದ ನಡುವೆ ಇರುವ ಷಾಟೋ ಡಿ ಇಫ್ ಕೋಟೆಯಲ್ಲಿ ನೂರಾರು ಖೈದಿಗಳನ್ನು ಬಂಧನದಲ್ಲಿಡಲಾಗಿತ್ತು. ಅಲೆಕ್ಸಾಂಡರ್ ಡ್ಯೂಮಸ್‌ನ ಕಥೆಗಳಲ್ಲಿ ಬರುವ ಕಾಲ್ಪನಿಕ ನಾಯಕ ಮಾಂಟೆಕ್ರಿಸ್ಟೊ ಸಹ ಇಲ್ಲಿಯೇ ಬಂಧನದಲ್ಲಿದ್ದನೆಂಬ ಕಥೆಯಿದೆ.

ಹಳೆಯ ಬಂದರಿನ ದಕ್ಷಿಣ ಭಾಗದಲ್ಲಿ 8ನೆಯ ಶತಮಾನದಿಂದ ಪ್ರಸಿದ್ಧವಾಗಿರುವ ನಾಟ್ರ್ ಡೇಮ್ ಡಿಲಾ ಗಾರ್ಡೆ ಆರಾಧನಾ ಮಂದಿರವಿದೆ. ಇದರ ಈಗಿನ ಕಟ್ಟಡವನ್ನು 1853ರಲ್ಲಿ ಕಟ್ಟಲಾಯಿತು. ಇದರ ಗೋಪುರದಲ್ಲಿ ಸು. 9.15 ಮೀ ಎತ್ತರದ ಗಿಲೀಟುಮಾಡಿದ ಮೇರಿ ಕನ್ನಿಕೆಯ ವಿಗ್ರಹವಿದೆ. ಗುಡ್ಡವೂ ಸೇರಿದಂತೆ ಇದರ ಒಟ್ಟು ಎತ್ತರ ಸು. 46 ಮೀ. ಈ ವಿಗ್ರಹ ಸಮುದ್ರ ಪ್ರಯಾಣಿಕರಿಗೆ ಬಲು ದೂರದಿಂದಲೇ ಕಾಣಿಸುತ್ತದೆ. ನಗರವಾಸಿಗಳಿಗೆ ಹಾಗೂ ನಾವಿಕರಿಗೆ ಇದು ಪವಿತ್ರ ಸ್ಥಳವಾಗಿದೆ. ಬಂದರಿನ ಎದುರು ಭಾಗದಲ್ಲಿ 13ನೆಯ ಶತಮಾನದ ಸೇಂಟ್ ವಿಕ್ಟರನ ಚರ್ಚು ಇದೆ. ಇಲ್ಲಿಯ ಮತ್ತೊಂದು ಚಾರಿತ್ರಿಕ ಕಟ್ಟಡ ಡಯಾನಾ ದೇಗುಲದ ಭಗ್ನಾವಶೇಷಗಳ ಮೇಲೆ ನಿರ್ಮಿತವಾದ 12ನೆಯ ಶತಮಾನದ ಸೇಂಟ್ ಮೇರಿ ಮೇಜರ್ ಚರ್ಚ್. ನಗರದಲ್ಲಿ ಒಟ್ಟು 11 ವಸ್ತು ಸಂಗ್ರಹಾಲಯಗಳಿವೆ.

ಮರ್ಸೇಲ್ ನಗರವನ್ನು ಏಷ್ಯ ಮೈನರ್ ಪ್ರದೇಶದಿಂದ ಬಂದ ಗ್ರೀಕ್ ನಾವಿಕರು ಪ್ರ.ಶ.ಪೂ. ಸು. 600ರಲ್ಲಿ ಮಸ್ಸಾಲಿಯ ಎಂದು ಕರೆದರು. ಆ ಹೆಸರಿನ ಆಧಾರದ ಮೇಲೆ ಈ ನಗರದ ಹೆಸರು ಮರ್ಸೇಲ್ ಎಂದಾಯಿತು. ಇಲ್ಲಿ 300ರ ತನಕ ಗ್ರೀಕ್ ಭಾಷೆ ಬಳಕೆಯಲ್ಲಿತ್ತು. ಆಗಿನ ಮಸ್ಸಾಲಿಯ ಸಂಪದ್ಭರಿತವಾಗಿದ್ದು ಇಲ್ಲಿಯ ವ್ಯಾಪಾರಿಗಳು ತಮ್ಮ ಕೋಠಿಗಳನ್ನು ಪಶ್ಚಿಮದಲ್ಲಿ ಸ್ಪೇನ್‌ವರೆಗೆ, ಪೂರ್ವದಲ್ಲಿ ಮೊನಾಕೋವರೆಗೆ ವಿಸ್ತರಿಸಿದ್ದರು. 3ನೆಯ ಶತಮಾನದ ಕೊನೆಯ ಭಾಗದಲ್ಲಿ ಕ್ರೈಸ್ತಧರ್ಮ ಪ್ರವೇಶಿಸಿತು. ಕಾರ್ಥೇಜಿಯನ್ನರ ಮತ್ತು ರೋಮನ್ನರ ನಡುವಿನ ಪ್ಯೂನಿಕ್ ಯುದ್ಧಗಳಲ್ಲಿ ಮರ್ಸೇಲ್ ರೋಮನ್ನರನ್ನು ಬೆಂಬಲಿಸಿತು. ಇದಕ್ಕೆ ಪ್ರತಿಫಲವಾಗಿ ಲಿಗೂರಿಯದ ಮೂಲನಿವಾಸಿಗಳನ್ನು ಅಡಗಿಸಲು ಮರ್ಸೇಲ್ ರೋಮನ್ನರ ಬೆಂಬಲ ಪಡೆಯಿತು. ಅನಂತರ ಪಾಂಪೆ ಮತ್ತು ಸೀಜರ್ ಪರಸ್ಪರ ಕಾದಾಡಿದಾಗ ಮರ್ಸೇಲ್ ಪಾಂಪೆಯ ಕಡೆ ಸೇರಿತು. ಇದರಿಂದ ಪ್ರ.ಶ.ಪೂ. 49ರಲ್ಲಿ ಸೀಜರಿನ ಸೇನಾಧಿಕಾರಿ ಟ್ರೆಬೋನಿಯಸ್ ಈ ನಗರವನ್ನು ಗೆದ್ದುಕೊಂಡ.

10ನೆಯ ಶತಮಾನದಲ್ಲಿ ವೈಕೌಂಟರ ಆಡಳಿತದಲ್ಲಿ ಮರ್ಸೇನ ಜನಸಂಖ್ಯೆ ಹೆಚ್ಚಿ ಬಂದರು ಅಭಿವೃದ್ಧಿ ಹೊಂದಿತು. 13ನೆಯ ಶತಮಾನದ ಆದಿಯಲ್ಲಿ ಇದು ಗಣ ರಾಜ್ಯವಾಯಿತು. 1423ರಲ್ಲಿ ಪ್ರಾವೆನ್ಸ್ ದೊರೆಯಾದ ರೆನೆ ಈ ನಗರವನ್ನು ತನ್ನ ಚಳಿಗಾಲದ ವಾಸಸ್ಥಾನವನ್ನಾಗಿ ಮಾಡಿಕೊಂಡು ಮತ್ತಷ್ಟು ಅಭಿವೃದ್ಧಿಪಡಿಸಿದ.

ಫ್ರೆಂಚ್ ಕ್ರಾಂತಿಯಲ್ಲಿ ಮರ್ಸೇಲ್ ಉತ್ಸಾಹದಿಂದ ಪಾಲ್ಗೊಂಡಿತ್ತು. 1792ರಲ್ಲಿ ಸು. 50 ಜನ ಸ್ವಯಂ ಸೇವಕರು ಪ್ಯಾರಿಸಿಗೆ (ವಾರ್‌ಸಾಂಗ್ ಆಫ್ ದಿ ರೈನ್ ಆರ್ಮಿ) ರೈನ್ ಸೈನ್ಯದ ಕಾಳಗದ ಹಾಡನ್ನು ಹಾಡುತ್ತ ನಡೆದರು. ದಾರಿಯುದ್ದಕ್ಕೂ ಈ ಹಾಡು ಅತ್ಯಂತ ಜನಪ್ರಿಯವಾಗಿ ಜನರಲ್ಲಿ ಉತ್ಸಾಹ ತುಂಬಿತು. ಲಾ ಮರ್ಸೇಲ್ ಎಂದು ಹೆಸರಾದ ಈ ಗೀತೆ ಅನಂತರ ಫ್ರಾನ್ಸಿನ ರಾಷ್ಟ್ರಗೀತೆಯಾಯಿತು.

19ನೆಯ ಶತಮಾನದಲ್ಲಿ ಫ್ರೆಂಚ್ ಸಾಮ್ರಾಜ್ಯ ಮೆಡಿಟರೇನಿಯನ್ ದಾಟಿ ಉತ್ತರ ಆಫ್ರಿಕದಲ್ಲಿ ವಿಸ್ತರಿಸಿದ್ದರಿಂದ ಹಾಗೂ ಸೂಯೆಜ್ ಕಾಲುವೆಯ ನಿರ್ಮಾಣದಿಂದ ಮರ್ಸೇಲ್ ಫ್ರೆಂಚ್ ಸಾಮ್ರಾಜ್ಯದ ಪ್ರಮುಖ ಬಂದರಾಗಿ ಅಭಿವೃದ್ಧಿ ಹೊಂದಿತು. ಈ ಕಾಲದಲ್ಲಿಯೇ ನಗರದಲ್ಲಿ ವಿಶಾಲವಾದ ಹೆದ್ದಾರಿಗಳೂ ಕಟ್ಟಡಗಳೂ ಸ್ಮಾರಕಗಳೂ ನಿರ್ಮಾಣವಾದುವು. ನಗರದಲ್ಲಿ ನೀರಿನ ತೀವ್ರ ಕೊರತೆಯನ್ನು ಪರಿಹರಿಸಲು 1837–48ರಲ್ಲಿ ಡ್ಯೂರಾನ್ಸ್ ನದಿಯಿಂದ ನಗರಕ್ಕೆ ನೀರು ಪೂರೈಕೆ ಯೋಜನೆಯನ್ನು ಪೂರ್ಣಗೊಳಿಸಲಾಯಿತು.

1942ರ ನವೆಂಬರ್‌ನಲ್ಲಿ ಮರ್ಸೇಲನ್ನು ಜರ್ಮನರು ಆಕ್ರಮಿಸಿಕೊಂಡರು. 1943ರ ನವೆಂಬರ್‌ನಲ್ಲಿ ವಿರೋಧಿ ಚಳವಳಿಯನ್ನು ತಡೆಗಟ್ಟಲು ಜರ್ಮನ್ನರು ಬಂದರಿನ ಸಮೀಪದ ಕೊಳಚೆ ಪ್ರದೇಶಗಳ 40,000 ನಿವಾಸಿಗಳನ್ನು ಹೊರಹಾಕಿ ಅವುಗಳನ್ನು ಡೈನಮೈಟ್ ಇಟ್ಟು ನಾಶಪಡಿಸಿದರು. 1944ರಲ್ಲಿ ಜರ್ಮನ್ನರು ಸಿಡಿಮದ್ದಿನಿಂದ ಬಂದರಿನ ಹೆಚ್ಚು ಭಾಗವನ್ನು ನಾಶಪಡಿಸಿದರು. ಯುದ್ಧದ ಬಳಿಕ ಬಂದರನ್ನು ಪುನಃ ಕಟ್ಟಿ ಉತ್ತರ ಮತ್ತು ಪಶ್ಚಿಮಕ್ಕೆ ವಿಸ್ತರಿಸಲಾಯಿತು. 1944 ಆಗಸ್ಟ್ 23 ರಂದು ಅಮೆರಿಕನ್ ಸೈನ್ಯ ಈ ನಗರವನ್ನು ವಶಪಡಿಸಿಕೊಂಡಿತು. (ಜಿ.ಎಸ್.ಎಸ್.)

**ಮಲಕ್ಕ ಜಲಸಂಧಿ:** ಮಲಯ ಪರ್ಯಾಯ ದ್ವೀಪದ ಪಶ್ಚಿಮಕ್ಕೂ ಸುಮಾತ್ರದ್ವೀಪದ ಪೂರ್ವಕ್ಕೂ ಇರುವ ಜಲಸಂಧಿ. ಇದರ ಅಗಲ ಉತ್ತರದಲ್ಲಿ ಸು. 249 ಕಿಮೀ ದಕ್ಷಿಣದಲ್ಲಿ 64 ಕಿಮೀ ಉದ್ದ 800 ಕಿಮೀ ವ್ಯಾಪ್ತಿ 65.000 ಚ.ಕಿಮೀ. ಇಲ್ಲಿ ಕೆಲವು ಚಿಕ್ಕಪುಟ್ಟ ದ್ವೀಪಗಳಿವೆ. ಅಂಡಮಾನ್ ಸಮುದ್ರವನ್ನೂ (ಹಿಂದೂಮಹಾಸಾಗರ) ದಕ್ಷಿಣ ಚೀನ ಸಮುದ್ರವನ್ನೂ (ಪೆಸಿಫಿಕ್ ಸಾಗರ) ಇದು ಕೂಡಿಸುತ್ತದೆ. ಇದು ಭಾರತ ಚೀನ ದೇಶಗಳ ನಡುವಿನ ಅತ್ಯಂತ ಹತ್ತಿರದ ಸಾಗರಮಾರ್ಗ. ಪ್ರಪಂಚದಲ್ಲಿ ಹೆಚ್ಚು ಬಳಕೆಯಾಗುತ್ತಿರುವ ಜಲಸಂಧಿಗಳ ಪೈಕಿ ಇದೂ ಒಂದು. ಮಲಯ ಪರ್ಯಾಯ ದ್ವೀಪದಲ್ಲಿ ಈ ಜಲಸಂಧಿಯ ತೀರಕ್ಕೆ ಸೇರಿದಂತೆ ಸ್ಥಾಪಿತವಾಗಿದ್ದ ಪಟನಿ ಎಂಬ ಸ್ಥಳ 2ನೆಯ ಶತಮಾನದಲ್ಲಿ ಭಾರತದ ವ್ಯಾಪಾರ ಕೇಂದ್ರವಾಗಿತ್ತು. ಮುಂದೆ ಅರಬರೂ ತರುವಾಯ ಪೋರ್ಚುಗೀಸರೂ ಈ ಜಲಸಂಧಿಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಮಲಯ ಪರ್ಯಾಯದ್ವೀಪದ ನೈಋತ್ಯದಲ್ಲಿ ಪೋರ್ಚುಗೀಸರು ಸ್ಥಾಪಿಸಿದ್ದ ಇದೇ ಹೆಸರಿನ ಬಂದರು ನಗರದಿಂದ ಇದಕ್ಕೆ ಮಲಕ್ಕ ಜಲಸಂಧಿಯೆಂದು ಹೆಸರಾಯಿತು. 1641ರಲ್ಲಿ ಡಚ್ಚರು ಅನಂತರ ಇಂಗ್ಲಿಷರು ಇದನ್ನು ವಶಪಡಿಸಿಕೊಂಡರು. 1957ರಲ್ಲಿ ಮಲಯದ ಸ್ವಾತಂತ್ರ್ಯದೊಂದಿಗೆ ಈ ಜಲಸಂಧಿಯೂ ಬ್ರಿಟಿಷರ ಮುಷ್ಟಿಯಿಂದ ಮುಕ್ತವಾಯಿತು. *

**ಮಲಪ್ರಭಾ:** ಬೆಳಗಾಂವಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪೂರ್ವ ಮತ್ತು ಈಶಾನ್ಯಾಭಿಮುಖವಾಗಿ ಹರಿಯುವ ಒಂದು ನದಿ; ಕೃಷ್ಣಾನದಿಯ ಉಪನದಿ. ಮಲಾಪಹಾರಿಣಿ, ಮಲಾಪಹಾರಿ, ಮಾಲಿನಿ ಎಂಬ ಹೆಸರುಗಳೂ ಇದಕ್ಕೆ ಇವೆ. ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಜಂಬೋಟಿಯಿಂದ ಪಶ್ಚಿಮಕ್ಕೆ ಸು. 13 ಕಿಮೀ ದೂರದ ಕಣಕುಂಬಿಯ ಬಳಿ ಸಹ್ಯಾದ್ರಿಯ ಶಿಖರಗಳಲ್ಲಿ ಉಗಮ. ಅಲ್ಲಿಂದ ಸು. 21 ಕಿಮೀ ಪೂರ್ವಕ್ಕೆ ಹರಿದು ಮುಂದೆ ಆಗ್ನೇಯಕ್ಕೆ ತಿರುಗಿ ಸು. 13 ಕಿಮೀ ದೂರ ಪ್ರವಹಿಸಿ ಖಾನಾಪುರಕ್ಕೆ ಸ್ವಲ್ಪ ಮೊದಲು ಈಶಾನ್ಯಕ್ಕೆ ತಿರುಗಿ ಅನೇಕ ಬಳಸುಗಳೊಡನೆ ಬಲುದೂರ ಅದೇ ದಿಕ್ಕಿನಲ್ಲಿ ಮುಂದುವರಿಯುತ್ತದೆ. ಸವದತ್ತಿ ತಾಲ್ಲೂಕಿನ ಮೆಲ್ಲೂರಿನ ಬಳಿ ಪೂರ್ವಕ್ಕೆ ಹರಿಯುವ ಈ ನದಿ ಯಕ್ಕುಂಡಿಯ ಬಳಿ ದಕ್ಷಿಣಕ್ಕೆ ತಿರುಗಿ ಮುಗಳಿಯ ಬಳಿ ಮತ್ತೆ ಉತ್ತರಕ್ಕೆ ತಿರುಗಿ ಸ್ವಲ್ಪ ದೂರ ಹರಿದ ಬಳಿಕ ಪೂರ್ವಾಭಿಮುಖವಾಗಿ ಹರಿದು ಹಡಗಲಿಯಿಂದ ಸ್ವಲ್ಪ ಮುಂದೆ ಮತ್ತೆ ಉತ್ತರಕ್ಕೆ ತಿರುಗಿ ನವಿಲುತೀರ್ಥದ ಮೂಲಕ ಹರಿಯುತ್ತದೆ. ಮುಂದೆ ಮನೋಳಿಯಿಂದ ತೋರಗಲ್ಲು ದಾಭಾವರೆಗೂ ಇದರದು ಈಶಾನ್ಯಗಮನ. ತೋರಗಲ್ಲಿನಿಂದ ಸ್ವಲ್ಪ ಮುಂದೆ ನದಿ ಕ್ರಮೇಣ ದಿಕ್ಕು ಬದಲಾಯಿಸಿ ಆಗ್ನೇಯಕ್ಕೆ ತಿರುಗಿ ರಾಮದುರ್ಗದ ಸಮೀಪದಿಂದ ಹರಿದು ಅದೇ ತಾಲ್ಲೂಕಿನ ಆಗ್ನೇಯ ಅಂಚಿನಲ್ಲಿ ಮತ್ತು ಬಾದಾಮಿ ತಾಲ್ಲೂಕಿನ ಅಂಚಿನಲ್ಲಿ ಹರಿದು ಬಿಜಾಪುರ ಜಿಲ್ಲೆಯ ಎಲ್ಲೆಯನ್ನು ಸೇರುತ್ತದೆ. ಅಲ್ಲಿಂದ ಮುಂದೆ ಸು. 32 ಕಿಮೀ ದೂರ ಅಂದಿನ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿ ಪೂರ್ವಾಭಿಮುಖವಾಗಿ ಹರಿದು, ಆಲೂರಿನಿಂದ ಸ್ವಲ್ಪ ಮುಂದೆ ಉತ್ತರಕ್ಕೆ ತಿರುಗಿ ಬಾದಾಮಿ ತಾಲ್ಲೂಕನ್ನು ಪ್ರವೇಶಿಸಿ ಕೃಷ್ಣಾನದಿಯನ್ನು ಸೇರುವವರೆಗೂ ಬಾಗಲಕೋಟೆ ಜಿಲ್ಲೆಯಲ್ಲಿಯೇ ಪ್ರವಹಿಸುತ್ತದೆ. ಈ ಜಿಲ್ಲೆಯಲ್ಲಿ ಮೊದಲು ಅನೇಕ ಬಳಸುಗಳೊಡನೆ ಉತ್ತರಾಭಿಮುಖವಾಗಿ ಹರಿದು, ಬಾದಾಮಿ ತಾಲ್ಲೂಕಿನ ನಾಗರಾಳದ ಬಳಿ ಪೂರ್ವಕ್ಕೆ ತಿರುಗಿ ಮತ್ತೆ ಉತ್ತರಾಭಿಮುಖವಾಗಿ ನೆಲಗಿಯವರೆಗೂ ಮುಂದುವರೆಯುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಹರಿದು, ಪಟ್ಟದಕಲ್ಲಿನ ಬಳಿ ವಾಯವ್ಯಕ್ಕೆ ತಿರುಗಿ, ಜಾಲಿಹಾಳದ ಬಳಿ ಈಶಾನ್ಯ ಗಮನ ಪಡೆಯುತ್ತದೆ. ಮುಂದೆ ಐಹೊಳೆಯ ಬಳಿ ಮತ್ತೆ ವಾಯವ್ಯಕ್ಕೆ ತಿರುಗಿ ಕಮತಗಿಯವರೆಗೂ ಹೆಚ್ಚು ಕಡಿಮೆ ಉತ್ತರಾಭಿಮುಖವಾಗಿ ಹರಿದು ಅಲ್ಲಿಂದ ಮತ್ತೆ ಅನೇಕ ಬಳಸುಗಳೊಡನೆ ಈಶಾನ್ಯಾಭಿಮುಖವಾಗಿ ಸಾಗುತ್ತದೆ. ಇಲ್ಲಿಂದ ಮುಂದೆ ಕೂಡಲಸಂಗಮದ ಬಳಿ ಕೃಷ್ಣಾನದಿಯನ್ನು ಸೇರುವವರೆಗೂ ಇದರದು ಈಶಾನ್ಯಗಮನ. ಬೂದಿಹಾಳ, ಗಂಜಿಹಾಳ, ಕೆಂಗಲ್ಲ ಮುಂತಾದ ಕಡೆ ಆಗ್ನೇಯಕ್ಕೆ ದಿಕ್ಕು ಬದಲಿಸಿದರೂ ಮುಂದೆ ಬಲು ಬೇಗ ತನ್ನ ಈಶಾನ್ಯಗಮನ ಪಡೆಯುತ್ತದೆ.

ಮಲಪ್ರಭಾ ನದಿಯ ಒಟ್ಟು ಉದ್ದ ಸು. 330 ಕಿಮೀ. ಇದರಲ್ಲಿ ಸು. 193 ಕಿಮೀ ದೂರ ಬೆಳಗಾವಿ ಜಿಲ್ಲೆಯ ಖಾನಾಪುರ, ಸಂಪಗಾಂವ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳಲ್ಲೂ ಸು. 32 ಕಿಮೀ. ಅಂದಿನ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿಯೂ ಅನಂತರದ ಸು. 105 ಕಿಮೀ ದೂರ ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಹುನಗುಂದ ತಾಲ್ಲೂಕುಗಳಲ್ಲೂ ಹರಿಯುತ್ತದೆ.

ನದಿ ಹರಿಯುವ ಪ್ರದೇಶದಲ್ಲಿ ಭಿನ್ನರೀತಿಯ ಎರಡು ಭೌಗೋಳಿಕ ಸನ್ನಿವೇಶಗಳನ್ನು ಕಾಣಬಹುದು. ಒಟ್ಟು ಹರಿವಿನ ಮೊದಲ ಭಾಗದಲ್ಲಿ ನದಿ ಕಪ್ಪುಮಣ್ಣಿನ ಭೂಮಿಯಲ್ಲಿ ಅಷ್ಟೇನೂ ಆಳವಿಲ್ಲದೆ ಹರಿದು ಭೂಮಿಯನ್ನು ಕ್ರಮೇಣ ಕೊರೆಯುತ್ತ ಆಳವಾದ ಕಮರಿಗಳನ್ನು ನಿರ್ಮಿಸುತ್ತ ಸಾಗುತ್ತದೆ.

ಸವದತ್ತಿ ತಾಲ್ಲೂಕಿನ ನವಿಲುತೀರ್ಥ, ಮುನವಳ್ಳಿ, ರಾಮದುರ್ಗ ತಾಲ್ಲೂಕಿನ ತೋರಗಲ್ಲುಗಳಲ್ಲಿ ಇದು ವಿಶಾಲವೂ ಆಳವೂ ಆದ ಕಮರಿಗಳನ್ನು ನಿರ್ಮಿಸಿದೆ. ಮನೋಳಿಯ ಬಳಿಯ ಕಮರಿ ಸು. 92 ಮೀ ಆಳವಾಗಿದೆ. ಈ ಪ್ರದೇಶದಲ್ಲಿ ನದಿ ದಂಡೆಗಳು ತೀರ ಕಡಿದಾಗಿದ್ದು ಬೆಣಚುಕಲ್ಲಿನಿಂದ ಕೂಡಿವೆ. ನದಿಯ ಉದ್ದಕ್ಕೂ ತಿರುವುಗಳೂ ಅಲ್ಲಲ್ಲೇ ಮಧ್ಯದಲ್ಲಿ ಚಿಕ್ಕ ಚಿಕ್ಕ ದ್ವೀಪಗಳೂ ಇವೆ. ಮಳೆಗಾಲದಲ್ಲಿ ನದಿಯಲ್ಲಿ ಭಾರಿ ಪ್ರವಾಹ ಇರುತ್ತದೆ. ಮಣ್ಣಿನಿಂದ ಕೂಡಿದ ಬಗ್ಗಡದ ನೀರು ಆಗ ಸಾಮಾನ್ಯ. ಉಳಿದ

ದಿನಗಳಲ್ಲೂ ನದಿ ಸಣ್ಣದಾದರೂ ನಿರಂತರವಾಗಿ ಹರಿಯುತ್ತಲೇ ಇರುತ್ತದೆ. ಭೂವೈಜ್ಞಾನಿಕವಾಗಿ ನೋಡಿದರೆ ಮಲಪ್ರಭಾ ನದಿ ಉತ್ತರದ ಕಲಾದಗಿ ಮತ್ತು ದಖನ್ ಪ್ರಸ್ಥಭೂಮಿಯ ಎಲ್ಲೆಯಾಗಿ ಹರಿಯುತ್ತದೆ. ಐಹೂಳೆಯಿಂದ ಮುಂದೆ ನದಿ ಕಲಾದಗಿ ಶ್ರೇಣಿಯ ಮೂಲಕವೇ ಗಮಿಸುತ್ತದೆ.

ಮಲಪ್ರಭಾ ನದಿಗೆ ಹೇಳಿಕೊಳ್ಳುವಂಥ ದೊಡ್ಡ ಉಪನದಿಗಳಿಲ್ಲ. ಅಲ್ಲಲ್ಲೇ ಕೆಲವು ಹಳ್ಳಗಳು ಬಂದು ಸೇರುತ್ತವೆ. ಮುನವಳ್ಳಿಯ ಬಳಿ ಬೆನಕಟ್ಟೆ ಹಳ್ಳ ಎಡದಂಡೆಯಿಂದಲೂ ಧಾರವಾಡ ಜಿಲ್ಲೆಯ ಆಲೂರಿನ ಬಳಿ ಬೆಣ್ಣೆಹಳ್ಳ ಬಲ ದಂಡೆಯಿಂದಲೂ ಈ ನದಿಯನ್ನು ಕೂಡುತ್ತವೆ. ಕೃಷಿಗಾಗಿ ಈ ನದಿಯನ್ನು ಹೆಚ್ಚಾಗಿ ಬಳಸಿಕೊಂಡಿಲ್ಲ. ಇತ್ತೀಚೆಗೆ ಬೆಳಗಾವಿ ಜಿಲ್ಲೆಯ ನವಿಲುತೀರ್ಥದ ಬಳಿ ಇದಕ್ಕೊಂದು ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ಸು. 1,20,000 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ದೂರೆಯುವುದು.

ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಈ ನದಿಯನ್ನು ಅನೇಕ ಕಡೆ ದಾಟುತ್ತವೆ. ಖಾನಾಪುರ, ಮುಗಟಖಾನ ಹುಬ್ಬಳ್ಳಿ , ಗುರ್ಲಹೊಸೂರು, ರಾಮದುರ್ಗ, ಪಟ್ಟದಕಲ್ಲು ಮತ್ತು ಕಮಟಗಿಯ ಸಮೀಪದಲ್ಲಿ ಸೇತುವೆಗಳನ್ನು ಕಟ್ಟಿದ್ದಾರೆ. ಖಾನಾಪುರದ ಬಳಿ ಲೋಂಡ–ಬೆಳಗಾವಿ ಮತ್ತು ಆಲೂರಿನ ಬಳಿ ಗದಗ–ಬಿಜಾಪುರ ರೈಲುಮಾರ್ಗಗಳು ಮಲಪ್ರಭಾ ನದಿಯನ್ನು ದಾಟುತ್ತವೆ.

ನದಿಯ ದಂಡೆಯಲ್ಲಿ ಮತ್ತು ಅದರ ಸಮೀಪ ಅನೇಕ ದೊಡ್ಡ ಊರುಗಳಿವೆ. ಖಾನಾಪುರ, ಮುಗಟಖಾನ ಹುಬ್ಬಳ್ಳಿ, ಎಕ್ಕುಂಡಿ, ಗುರ್ಲಹೊಸೂರು, ಮುನವಳ್ಳಿ, ತೋರಗಲ್ಲು, ರಾಮದುರ್ಗ, ಆಲೂರು, ಕಮತಗಿ, ಗಂಜಿಹಾಳ– ಇವು ನದಿದಂಡೆಯಲ್ಲಿರುವ ಹೆಸರಿಸಬಹುದಾದ ಊರುಗಳು. ಈ ನದಿಯ ದಂಡೆಯವರೆಗೆ ಅನೇಕ ಕಡೆ ಪ್ರಾಗೈತಿಹಾಸಿಕ ನೆಲೆಗಳೂ ದೊರಕಿವೆ. ಪ್ರಸಿದ್ಧ ಐತಿಹಾಸಿಕ ನೆಲೆಯಾದ ಬಾದಾಮಿ ಈ ನದಿಗೆ ಸು. 5 ಕಿಮೀ ದೂರದಲ್ಲಿದೆ. ನದೀ ದಂಡೆಯ ಮೇಲೆ ಇರುವ ನಂದಿಕೇಶ್ವರ, ಪಟ್ಟದಕಲ್ಲು, ಐಹೊಳೆಗಳು ಚಾಳುಕ್ಯ ವಾಸ್ತುಶಿಲ್ಪಗಳಿಗಾಗಿ ಪ್ರಸಿದ್ಧವಾಗಿದೆ. ಈ ನದಿ ಕೃಷ್ಣಾನದಿಯನ್ನು ಸೇರುವ ಸ್ಥಳವಾದ ಕೂಡಲಸಂಗಮ ಒಂದು ಪ್ರಸಿದ್ಧ ಕ್ಷೇತ್ರ. ಹಾಗೆಯೇ ಬೆಳಗಾಂವಿ ಜಿಲ್ಲೆಯ ಮುನವಳ್ಳಿಯ ನವಿಲುತೀರ್ಥ ಕೂಡ ಒಂದು ಸುಂದರ ತಾಣ. (ಎಸ್.ಎನ್.ಎ.ಆರ್.ಇ.)

**ಮಲಾವಿ:** ಆಗ್ನೇಯ ಆಫ್ರಿಕದಲ್ಲಿರುವ ಒಂದು ಗಣರಾಜ್ಯ. ಮಹಾಸೀಳು (ಗ್ರೇಟರಿಫ್ಟ್) ಕಣಿವೆಯ ಉದ್ದಕ್ಕೂ ಇಕ್ಕಟ್ಟಾದ ಭೂಭಾಗವನ್ನು ಆವರಿಸಿಕೊಂಡಿದೆ. ಇದರ ಉತ್ತರಕ್ಕೆ ಟ್ಯಾನ್‌ಜಿನೀಯ ಸಂಯುಕ್ತ ಗಣರಾಜ್ಯ. ದಕ್ಷಿಣ ಮತ್ತು ಪೂರ್ವಕ್ಕೆ ಮೊಜಾಂಬಿಕ್, ಪಶ್ಚಿಮಕ್ಕೆ ಜಾಂಬಿಯ ಗಣರಾಜ್ಯಗಳಿವೆ. ದ.ಅ. $9^0$–$17^0$ ಹಾಗೂ ಪೂ.ರೇ. $32^0$–$36^0$ಗಳ ನಡುವೆ ಇದೆ. ನ್ಯಾಸಾ ಸರೋವರ ಅಥವಾ ಮಲಾವಿ ಸರೋವರ ಮಲಾವಿ ದೇಶದ ಪೂರ್ವ ಗಡಿಯುದ್ದಕ್ಕೂ ಹಬ್ಬಿದೆ. ಮಲಾವಿ ಉತ್ತರದಿಂದ ದಕ್ಷಿಣಕ್ಕೆ 837 ಕಿಮೀ ಉದ್ದವಿದ್ದು 80ರಿಂದ 160 ಕಿಮೀ ಅಗಲವಿದೆ. ಒಟ್ಟು ವಿಸ್ತೀರ್ಣ 1,18,485 ಚ.ಕಿಮೀ. ಇದರಲ್ಲಿ 24.208 ಚ.ಕಿಮೀ ವಿಸ್ತೀರ್ಣದ ಸರೋವರಗಳಿವೆ. ಇವುಗಳಲ್ಲಿ ಅತಿದೊಡ್ಡದು 23,050 ಚಕಿಮೀ ವಿಸ್ತೀರ್ಣದ ಮಲಾವಿ ಸರೋವರ. ಜನಸಂಖ್ಯೆ ಅಂದಾಜು 1,21,58,924 (2002). ರಾಜಧಾನಿ ಲಿಲಾಂಗ್ವೆ, ಜನಸಂಖ್ಯೆ 2,60,000 (2002).




ಮೇಲ್ಮೈಲಕ್ಷಣ : ಮಲಾವಿಯಲ್ಲಿ ಮುಖ್ಯವಾಗಿ ನಾಲ್ಕು ಸ್ವಾಭಾವಿಕ ವಿಭಾಗಗಳಿವೆ. ಮಹಾಸೀಳು ಕಣಿವೆ. ಮಧ್ಯಭಾಗದ ಪ್ರಸ್ಥಭೂಮಿಗಳು. ಮಲೆನಾಡು ಪ್ರದೇಶ ಮತ್ತು ಪ್ರತ್ಯೇಕವಾಗಿರುವಂತೆ ತೋರುವ ಪರ್ವತ ಪ್ರದೇಶ. ಗ್ರೇಟರಿಫ್ಟ್ ಕಣಿವೆ ಮಲಾವೀಯ ಪ್ರಧಾನ ಮೇಲ್ಮೈ ಲಕ್ಷಣವಾಗಿದ್ದು ದೇಶದುದ್ದಕ್ಕೂ ಉತ್ತರದಿಂದ ದಕ್ಷಿಣಕ್ಕೆ ಹಬ್ಬಿರುವ ಬೃಹದಾಕಾರದ ತಗ್ಗುಪ್ರದೇಶ ಇದರಲ್ಲಿ ನ್ಯಾಸಾ ಸರೋವರ ಮತ್ತು ಷೈರ್ ನದೀ ಕಣಿವೆ ಇವೆ. ಸರೋವರದ ತೀರಪ್ರದೇಶದಲ್ಲಿ ಜೌಗು ಬದಿಗಳೂ ಲಗೂನುಗಳೂ ಇವೆ. ಷೈರ್ ನದೀ ಕಣಿವೆ ನ್ಯಾಸಾ ಸರೋವರದ ದಕ್ಷಿಣದ ತುದಿ ಮಾಂಗೋಚಿಯಿಂದ ನ್ಸಾಂಜೆವರೆಗೆ 402 ಕಿಮೀ ಉದ್ದ ಹಬ್ಬಿದ್ದು ಅದರ ಉತ್ತರದ ತುದಿಯಲ್ಲಿ ಮಾಲೊಂಬೆ ಸರೋವರವಿದೆ. ಮಧ್ಯಭಾಗದ ಪ್ರಸ್ಥಭೂಮಿಗಳು ಸು. 162ರಿಂದ 292 ಮೀ ಎತ್ತರವಿದ್ದು ದೇಶದ ಒಟ್ಟು ಭೂಪ್ರದೇಶದ ಮುಕ್ಕಾಲು ಭಾಗವನ್ನು ಆಕ್ರಮಿಸಿವೆ. ಮಲೆನಾಡು ಪ್ರದೇಶಗಳು ಪ್ರತ್ಯೇಕವಾಗಿದ್ದು ಸಮುದ್ರಮಟ್ಟಕ್ಕೆ ಸು. 518 ಮೀ ಎತ್ತರವಾಗಿವೆ. ಇವುಗಳಲ್ಲಿ ಮುಖ್ಯವಾದವು ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿರುವ ನೈಕ, ವಿಪ್ಯ ಮತ್ತು ಡೋವಾ ಹಾಗೂ ಡೆಡ್ಜ–ಕಿರ್ಕ್ ಪರ್ವತಸ್ತೋಮ ಪ್ರದೇಶ ಮತ್ತು ದಕ್ಷಿಣ ಭಾಗದಲ್ಲಿಯ ಷೈರ್ ಹೈಲ್ಯಾಂಡ್. ಪ್ರತ್ಯೇಕವಾಗಿರುವ ಪರ್ವತಗಳು ಮಲಾವೀಯ ನಾಲ್ಕನೆಯ ವಿಭಾಗ. ಇವುಗಳಲ್ಲಿ ಪ್ರಮುಖವಾದವು ಮುಲಂಜೆ (3,048 ಮೀ) ಮತ್ತು ಜಾಂಬ ಪರ್ವತ (1,980 ಮೀ).

ಮಲಾವಿಯ ಪ್ರಮುಖ ಜಲಸಂಪತ್ತಾದ ನ್ಯಾಸಾ ಸರೋವರ 1,57,983 ಚ.ಕಿಮೀ ಪ್ರದೇಶಕ್ಕೆ ನೀರು ಒದಗಿಸುತ್ತದೆ. ಈ ಸರೋವರಕ್ಕೆ ಉತ್ತರ ಮತ್ತು ದಕ್ಷಿಣದಲ್ಲಿ ರುಕುರು, ದ್ವಾಂಗ್ವ, ಲಿಲಾಂಗ್ವೆ ಮತ್ತು ಬೂಪ ನದಿಗಳು ಬಂದು ಸೇರುತ್ತವೆ. ಇದರಿಂದ ಹರಿಯುವ ಷೈರ್ ನದಿ ಪಕ್ಕದ ಮಾಲೊಂಬೆ ಸರೋವರದ ಮೂಲಕ ಹರಿದು ಮೊಜಾಂಬಿಕ್‌ನಲ್ಲಿ ಜಾಂಬಿಜೀ ನದಿಯನ್ನು ಸೇರುತ್ತದೆ. ದಾರಿಯಲ್ಲಿ ಇದಕ್ಕೆ ಅನೇಕ ಉಪನದಿಗಳು ಸೇರುತ್ತವೆ. ಮಲಾವೀಯ ಎರಡನೆಯ ಜಲಸಂಪತ್ತಾದ ಚಿಲ್ವಾ ಸರೋವರಕ್ಕೆ ಫಲಾಂಬೆ ಬಯಲುಗಳು ಮತ್ತು ಪಕ್ಕದ ಹೈಲ್ಯಾಂಡ್‌ಗಳಿಂದ ನದಿಗಳು ಬಂದು ಸೇರುತ್ತವೆ. ಈ ಸರೋವರ ಸುತ್ತಲೂ ಭೂಮಿಯಿಂದ ಸುತ್ತುವರಿದಿದೆ. ಬೇಸಗೆಯಲ್ಲಿ ಇದರ ನೀರು ಹೆಚ್ಚು ಲವಣಯುಕ್ತವಾಗಿರುತ್ತದೆ.

ವಾಯುಗುಣ: ಇಲ್ಲಿಯ ಹವಾಗುಣ ಆಯಾಪ್ರದೇಶದ ಎತ್ತರ ತಗ್ಗುಗಳನ್ನು ಅವಲಂಬಿಸಿದ್ದು ಮೇ ಯಿಂದ ಅಕ್ಟೋಬರ್ ವರೆಗೆ ಒಣಹವೆ ಮತ್ತು ನವೆಂಬರ್‌ನಿಂದ ಏಪ್ರಿಲ್ ವರೆಗೆ ತೇವ ಹವೆಯಿಂದ ಕೂಡಿರುತ್ತದೆ. ಷೈರ್ ಕಣಿವೆ ಮತ್ತು ಸುತ್ತಮುತ್ತಲಿನ ಹೆಚ್ಚು ಎತ್ತರವಿಲ್ಲದ ಸೆಕೆ ಹೆಚ್ಚು ಮತ್ತು ತೇವಾಂಶದಿಂದ ಕೂಡಿದ ಉಷ್ಣವಲಯದ ವಾಯುಗುಣ. ಇಲ್ಲಿಯ ಉಷ್ಣತೆ ಸರಾಸರಿ ಸರಾಸರಿ $24^0$ಸೆ ಪ್ರಸ್ಥಭೂಮಿಗಳಲ್ಲಿ ಮತ್ತು ಎತ್ತರದ ಪ್ರದೇಶಗಳಲ್ಲಿ ಹವಾಗುಣ ತಂಪಾಗಿದ್ದು ಸರಾಸರಿ ಉಷ್ಣತೆ $14^0$ಸೆ ಮತ್ತು ಕೆಳಪ್ರದೇಶಗಳಲ್ಲಿ $18^0$ಸೆ ಉತ್ತರಭಾಗದಲ್ಲಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ 180 ಸೆಂಮೀ. ನೈರುತ್ಯ ಭಾಗದಲ್ಲಿ ಅತಿ ಕಡಿಮೆ ವಾರ್ಷಿಕ ಸರಾಸರಿ 70 ಸೆಂಮೀ.

ಮಣ್ಣು: ಇಲ್ಲಿಯ ಶಿಲೆಗಳು 4600 ರಿಂದ 570 ದಶಲಕ್ಷ ವರ್ಷಗಳಷ್ಟು ಹಳೆಯವಾಗಿದ್ದು ಪ್ರೀಕೇಂಬ್ರಿಯನ್ ಕಾಲಕ್ಕೆ ಸೇರಿವೆ. ನೈಸ್ ಶಿಲೆ, ಶಿಸ್ಟ್ ಅಥವಾ ಭಿನ್ನಸ್ತರಶಿಲೆ ಮತ್ತು ಗ್ರಾನೈಟ್ ಶಿಲೆಗಳಿವೆ. ಆಫ್ರಿಕದ ಬಹುಭಾಗದಲ್ಲಿ ಆವರಿಸಿರುವ 345ರಿಂದ 190 ದಶಲಕ್ಷ ವರ್ಷಗಳಷ್ಟು ಹಳೆಯದಾದ ಕಾರೂ ಎಂದು ಕರೆಯಲಾಗುವ ಅವಸಾದನ ಶಿಲೆಗಳು ಮಲಾವಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಸರೋವರ ಪ್ರದೇಶ ಮತ್ತು ಷೈರ್ ಕಣಿವೆಗಳಲ್ಲಿ ದೊರೆಯುತ್ತವೆ. ಮಹಾಸೀಳು ಕಣಿವೆಯಲ್ಲಿ ಸಿಗುವ ಶಿಲೆಗಳಲ್ಲಿ ಸರೀಸೃಪ ಪಳೆಯುಳಿಕೆಗಳನ್ನು ಮತ್ತು ಕ್ಷಾರಸಂಬಂಧಿ ಶಿಲೆಗಳನ್ನು ಕಾಣಬಹುದು. ಇಲ್ಲಿಯ ಮಣ್ಣು ಮುಖ್ಯವಾಗಿ ಕೆಂಪುವರ್ಣದ್ದು. ಪ್ರಸ್ಥಭೂಮಿಗಳಲ್ಲಿ ಕಂದುಬಣ್ಣದ ಮತ್ತು ಹಳದಿಬಣ್ಣದ ಮರಳುಗಳಲ್ಲಿನ ಜೇಡಿಮಣ್ಣನ್ನು ಕಾಣಬಹುದು. ಸರೋವರಗಳ ತೀರ ಪ್ರದೇಶದಲ್ಲಿ ಮತ್ತು ಷೈರ್ ಕಣಿವೆಯಲ್ಲಿ ಮೆಕ್ಕಲು ಮಣ್ಣಿದೆ. ಇದಲ್ಲದೆ ತೀರಪ್ರದೇಶದಲ್ಲಿ ಅತ್ಯಂತ ತೇವವಾದ ಮಣ್ಣು ಕರಿಮಣ್ಣು ಮತ್ತು ಮರಳು ದಿಬ್ಬಗಳನ್ನು ಕಾಣಬಹುದು

ಸಸ್ಯ ಮತ್ತು ಪ್ರಾಣಿ ಸಂಪತ್ತು : ಇಲ್ಲಿಯ ಸಸ್ಯವರ್ಗ ಆಯಾ ಪ್ರದೇಶದ ಎತ್ತರ, ಮತ್ತು ಹವಾಗುಣವನ್ನಲಂಬಿಸಿದೆ. ಒಣಹವೆಯ ಕೆಳಪ್ರದೇಶಗಳಲ್ಲಿ ಸವನ್ನಾ ಹುಲ್ಲುಗಾವಲುಗಳಿವೆ. ಪ್ರಸ್ಥಭೂಮಿ ಫಲವತ್ತಾಗಿಲ್ಲದ ಭಾಗಗಳಲ್ಲಿ ಮತ್ತು ಇಳಿಜಾರು ಪ್ರದೇಶಗಳಲ್ಲಿ ಮಿಯಾಂಬೊ ಮತ್ತು ಬಾಕ್ ಮರಗಳಿವೆ. ಪ್ರಸ್ಥಭೂಮಿಯ ಫಲವತ್ತಾದ ಪ್ರದೇಶಗಳಲ್ಲಿ ಹಾಗೂ ನದೀ ತೀರ ಪ್ರದೇಶಗಳಲ್ಲಿ ಅಕೇಷಿಯ ಮರಗಳ ಕಾಡು ಪ್ರದೇಶಗಳಿವೆ. ಪ್ರಸ್ಥಭೂಮಿಗಳಲ್ಲಿ ಮಡಾಂಬೊ ಎಂಬ ಹುಲ್ಲಿನಿಂದ ಮುಚ್ಚಿರುವ ತಗ್ಗು ಪ್ರದೇಶಗಳನ್ನು ಕಾಣಬಹುದು. ಚಿಲ್ವಾ ಸರೋವರ ಮತ್ತು ಷೈರ್ ಕಣಿವೆಯ ಕೆಳಭಾಗದಲ್ಲಿ ಜೌಗು ಪ್ರದೇಶವಿದ್ದು ಅವುಗಳಲ್ಲಿ ಜೊಂಡು ಮತ್ತು ಚಾಪೆ ಹೆಣೆಯುವ ಹುಲ್ಲು ಇವೆ. ಹೈಲ್ಯಾಂಡ್‌ಗಳು ಮತ್ತು ಪರ್ವತ ಶ್ರೇಣಿಗಳಲ್ಲಿ ನಿತ್ಯ ಹರಿದ್ವರ್ಣದ ಕಾಡುಗಳಿವೆ. ಜನಸಂಖ್ಯೆಯ ಹೆಚ್ಚಳದಿಂದ ಹಾಗೂ ಬೇಸಾಯ ಮತ್ತು ವಾಸದ ಭೂಮಿಗಳ ವಿಸ್ತರಣೆಗಾಗಿ ಈಗ ಕಾಡು ಪ್ರದೇಶಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅರಣ್ಯ ಪ್ರದೇಶಗಳು ಕಡಿಮೆಯಾದ್ದರಿಂದ ಈಗ ಅಭಯಧಾಮಗಳಲ್ಲಿ ಮಾತ್ರ ಜಿಂಕೆ, ಕಾಡೆಮ್ಮೆ, ಆನೆ, ಚಿರತೆ, ಸಿಂಹ, ಖಡ್ಗಮೃಗ, ಜೀಬ್ರಾ ಮುಂತಾದ

ಪ್ರಾಣಿಗಳನ್ನು ನೋಡಬಹುದು. ನ್ಯಾಸ ಸರೋವರದಲ್ಲಿ ನೀರುಕುದುರೆಗಳಿವೆ. ಸರೋವರಗಳು ಮತ್ತು ನದಿಗಳಲ್ಲಿ 200ಕ್ಕೂ ಹೆಚ್ಚು ಬಗೆಯ ಮೀನುಗಳನ್ನು ಕಾಣಬಹುದು. ಇವುಗಳಲ್ಲದೆ ಪಕ್ಷಿಗಳು, ಸರೀಸೃಪಗಳು ಮತ್ತು ವಿವಿಧ ಕ್ರಿಮಿಕೀಟಗಳೂ ಇವೆ.

ಜನಜೀವನ : ಮಲಾವೀಯಲ್ಲಿ ಕಪ್ಪು ಆಫ್ರಿಕನ್ನರು ಹೆಚ್ಚು. ಶೇ. 66 ಮಂದಿ ಗ್ರಾಮವಾಸಿಗಳು. ಇವರಲ್ಲಿ ಹೆಚ್ಚು ಮಂದಿ ಬಾಂಟು ಪಂಗಡಕ್ಕೆ ಸೇರಿದವರು. ಇತರ ಪ್ರಮುಖ ಪಂಗಡಗಳೆಂದರೆ ಚೆವ, ನ್ಗುರ, ನ್ಯಾಂಜಯವೊ, ಮತ್ತು ಅಂಗೋನಿ. ಯುರೋಪಿಯನ್ನರೂ ಏಷ್ಯನ್ನರೂ ಮಿಶ್ರಜನಾಂಗದವರೂ ಇದ್ದಾರೆ. ಇಲ್ಲಿಯ ಜನರಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿದ್ದು, ತಾಯಿಯ ಮೂಲಕ ತಮ್ಮ ವಂಶಾನುಕ್ರಮವನ್ನು ನಿರ್ಧರಿಸುತ್ತಾರೆ. ಸಾವಿರಾರು ಮಂದಿ ಮಲಾವಿಯರು ಪಕ್ಕದ ದೇಶಗಳಿಗೆ ಕೆಲಸಕ್ಕಾಗಿ 9 ತಿಂಗಳಿನಿಂದ 2 ವರ್ಷಗಳ ತನಕ ಹೋದಾಗ ಹೆಂಗಸರೇ ದುಡಿದು ಕುಟುಂಬವನ್ನು ಪೋಷಿಸುತ್ತಾರೆ. ಭೂಮಿ ಸಂಪೂರ್ಣ ಕುಟುಂಬದ ಸ್ವತ್ತು. ಜನರ ಮುಖ್ಯ ಆಹಾರ ಮುಸುಕಿನ ಜೋಳ ಸಾರ್ಗಮ್ ಮತ್ತು ಮಿಲ್ಲೆಟ್, ಇತರ ಬೆಳೆಗಳೂ ಉಂಟು.

ಇಲ್ಲಿಯ ಅಧಿಕೃತ ಭಾಷೆಗಳು ಚಿಚೆವಾ ಮತ್ತು ಇಂಗ್ಲಿಷ್ ಆಗಿದ್ದರೂ ಇಂಗ್ಲಿಷನ್ನು ಅರ್ಥ ಮಾಡಿಕೊಳ್ಳಬಲ್ಲವರ ಸಂಖ್ಯೆ ಶೇ. 10ಕ್ಕೂ ಕಡಿಮೆ. ಚಿಚೆವಾ ಭಾಷೆಯನ್ನು ಶೇ. 50ಕ್ಕೂ ಹೆಚ್ಚು ಜನ ಮಾತನಾಡುತ್ತಾರೆ ಮತ್ತು ಶೇ. 77 ರಷ್ಟು ಜನ ಅರ್ಥ ಮಾಡಿಕೊಳ್ಳಬಲ್ಲರು. ಇಲ್ಲಿಯ ಇತರ ಭಾಷೆಗಳೆಂದರೆ ಚಿಲೋಮ್ವೆ, ಚಿಯಾವೊ, ಮತ್ತು ಚಿಟುಂಬುಕ. ಹೆಚ್ಚು ಮಂದಿ ಕ್ರೈಸ್ತ ಮತ್ತು ಮುಸ್ಲಿಮ್ ಧರ್ಮಾವಲಂಬಿಗಳು.

ಈ ದೇಶ ತನ್ನ ವಿದ್ಯಾಸಂಸ್ಥೆಗಳನ್ನು ನಡೆಸಲು ಹಣ ಮತ್ತು ಭೋಧನೆಗಾಗಿ ಗ್ರೇಟ್ ಬ್ರಿಟನ್ ಮತ್ತು ಅಮೆರಿಕವನ್ನು ಅವಲಂಬಿಸಿದೆ. ಸು. 4,500 ಮಕ್ಕಳು ಸೆಕಂಡರಿ ಶಾಲೆಗಳಿಗೆ ಹೋಗುವರು. ಮಲಾವಿಯಲ್ಲಿ ಒಂದೇ ಒಂದು ವಿಶ್ವವಿದ್ಯಾಲಯವಿದ್ದು ಅದು ಜೋಂಬಾದಲ್ಲಿ ಸ್ಥಾಪಿತವಾಗಿದೆ(1965).

ಆರ್ಥಿಕತೆ : ಇಲ್ಲಿಯ ಶೇ. 85 ರಷ್ಟು ಜನ ಬೇಸಾಯವನ್ನೇ ಅವಲಂಬಿಸಿದ್ದಾರೆ. ಒಟ್ಟು ಭೂಮಿಯಲ್ಲಿ $^1/_3$ ಭಾಗ ಮಾತ್ರ ವ್ಯವಸಾಯ ಯೋಗ್ಯ. ದೇಶದ ಒಟ್ಟು ವರಮಾನದಲ್ಲಿ ಶೇ. 100ರಷ್ಟು ಭಾಗ ವ್ಯವಸಾಯೋತ್ಪನ್ನಗಳ ರಫ್ತೇ ಆಗಿತ್ತು. ಇಲ್ಲಿಯ ಪ್ರಮುಖ ಉತ್ಪನ್ನಗಳು ಟೀ, ಹೊಗೆಸೊಪ್ಪು, ಸಕ್ಕರೆ, ಹತ್ತಿ, ಕಡಲೆಕಾಯಿ, ಮುಸುಕಿನ ಜೋಳ, ಬತ್ತ, ಮತ್ತು ಮರಗೆಣಸು. ನ್ಯಾಸಾ ಸರೋವರದಲ್ಲಿ ಮೀನುಗಾರಿಕೆ ಒಂದು ಪ್ರಮುಖ ಉದ್ಯಮ. ಇಲ್ಲಿನ ಹಣ ಕ್ವಾಚ

ಮಲಾವಿಯಲ್ಲಿ ಖನಿಜಸಂಪತ್ತು ಬಲು ಕಡಿಮೆ. ಇರುವ ಖನಿಜ ನಿಕ್ಷೇಪಗಳಲ್ಲಿ ಬಹುಪಾಲು ಸುಲಭವಾಗಿ ಹೊರತೆಗೆಯುವಂತಿಲ್ಲ. ಇಲ್ಲಿಯ ನಿಕ್ಷೇಪಗಳಲ್ಲಿ ಅಪಟೈಟ್ ಒಂದು. ಇದು ರಸಗೊಬ್ಬರಕ್ಕೆ ಉಪಯೋಗಿಸುವ ಕ್ಯಾಲ್ಸಿಯಮ್ ಫಾಸ್ಫೇಟಿನ ಖನಿಜ. ಅಪಟೈಟಿನ ಬಂಡೆಗಳು ಚಿಲ್ವಾ ಸರೋವರದ ಸಮೀಪದಲ್ಲಿ ಸಿಗುತ್ತವೆ. ಮುಲಾಂಜಿ ಪರ್ವತ ಶಿಖರಗಳಲ್ಲಿ 65 ದಶಲಕ್ಷ ಟನ್ನುಗಳಷ್ಟು ಬಾಕ್ಸೈಟ್ ನಿಕ್ಷೇಪವಿದೆ. ಡೆಡ್ಜ– ಕಿರ್ಕ್ ರೇಂಜ್‌ನಲ್ಲಿ ಅಲ್ಯೂಮಿನಿಯಮ್ ಸಿಲಿಕೇಟಿನ ಖನಿಜ ಸಯನೈಟ್ ಸಿಗುತ್ತದೆ.

ಈ ದೇಶದ ಕೈಗಾರಿಕೆಗಳಲ್ಲಿ ಸಾಬೂನು, ಹತ್ತಿಬಟ್ಟೆಗಳು, ಸಕ್ಕರೆ, ರೇಡಿಯೊ ಪಾದರಕ್ಷೆಗಳ ಉತ್ಪಾದನೆ ಮುಖ್ಯವಾದ್ದದ್ದು. ಇಲ್ಲಿಂದ ರಫ್ತಾಗುವ ಪದಾರ್ಥಗಳಿಗೆ ಪ್ರಮುಖ ಗಿರಾಕಿ ಜಾಂಬಿಯ, ಜಿಂಬಾಬ್ವೆ, ಅಮೆರಿಕ, ಪಶ್ಚಿಮ ಜರ್ಮನಿ ಮತ್ತು ನೆದರ‍್ಲೆಂಡ್.

ಈ ದೇಶದಲ್ಲಿ ಒಟ್ಟು 9700 ಕಿಮೀ ರಸ್ತೆಗಳಿದ್ದು ಮಲಾವಿಯಿಂದ ಟಾಂಜೇನಿಯ ಜಾಂಬಿಯ ಮತ್ತು ಜಿಂಬಾಬ್ವೆಗಳಿಗೆ ರಸ್ತೆ ಸೌಕರ್ಯವಿದೆ. ಇಲ್ಲಿಂದ ಮೊಜಾಂಬಿಕ್‌ನ ಬೈರಾ ಬಂದರಿಗೆ ರೈಲು ಸೌಕರ್ಯವಿದೆ. ಮಲಾವಿ ಆರ್ಥಿಕ ಹಾಗೂ ಸೈನಿಕ ದೃಷ್ಟಿಯಿಂದ ದಕ್ಷಿಣ ಆಫ್ರಿಕದ ಪ್ರಭಾವದ ಪರಿಧಿಯೊಳಗೆ ಬರುತ್ತದೆ. ಇದು ದಕ್ಷಿಣ ಆಫ್ರಿಕ ಅಭಿವೃದ್ಧಿ ಸಂಯೋಜನಾ ಸಮ್ಮೇಳನದ ಸದಸ್ಯ ರಾಷ್ಟ್ರ.

ಮಲಾವಿ ಗಣರಾಜ್ಯದ 1966ರ ರಾಜ್ಯಾಂಗದ ಪ್ರಕಾರ ದೇಶದ ವರಿಷ್ಠ ಅಧ್ಯಕ್ಷ. ಪ್ರತಿ ಐದು ವರ್ಷಗಳಿಗೊಮ್ಮೆ ಅಧ್ಯಕ್ಷನನ್ನು ಚುನಾಯಿಸುತ್ತಾರೆ. ಅಧ್ಯಕ್ಷ ದೇಶದ ಆಡಳಿತ ನಡೆಸಲು ಮಂತ್ರಿಮಂಡಲವನ್ನು ನೇಮಿಸುತ್ತಾನೆ. (ಜಿ.ಎಸ್.ಎಸ್.)

**ಮಲೇಷ್ಯ:** ಆಗ್ನೇಯ ಏಷ್ಯದಲ್ಲಿರುವ ಒಂದು ಒಕ್ಕೂಟ ಗಣರಾಜ್ಯ. ಮಲಯಪರ್ಯಾಯ ದ್ವೀಪದಲ್ಲಿರುವ ಪಶ್ಚಿಮ ಮಲೇಷ್ಯ, ಬೋರ್ನಿಯೋ ದ್ವೀಪದ ಉತ್ತರ ಮತ್ತು ಈಶಾನ್ಯದಲ್ಲಿರುವ ಸಾರಾವಾಕ್ ಮತ್ತು ಸಬಾಗಳಿಂದ ಕೂಡಿದ ಪೂರ್ವ ಮಲೇಷ್ಯ ಈ ಪ್ರದೇಶಗಳನ್ನೊಳಗೊಂಡ ಒಂದು ಒಕ್ಕೂಟ. ಪಶ್ಚಿಮ ಮಲೇಷ್ಯ ಉ. ಅ. $6^0 40'$. ದಕ್ಷಿಣಕ್ಕಿರುವ ಮಲಯಪರ್ಯಾಯ ದ್ವೀಪ ಭಾಗ. ಇದರ ಉತ್ತರಕ್ಕೆ ಥೈಲೆಂಡ್. ದಕ್ಷಿಣಕ್ಕೆ ಸಿಂಗಪುರ ದ್ವೀಪ ಗಣರಾಜ್ಯ, ಆಗ್ನೇಯಕ್ಕೆ ಮಲಕ್ಕ ಜಲಸಂಧಿಯಿಂದಾಚೆಗೆ ಇಂಡೊನೇಷ್ಯದ ಸುಮಾತ್ರ ದ್ವೀಪ, ಪೂರ್ವಕ್ಕೆ ದಕ್ಷಿಣ ಚೀನ ಸಮುದ್ರ ಇವೆ. ಥೈಲೆಂಡಿನೊಂದಿಗೆ ಈ ಭಾಗ ಹೊಂದಿರುವ ಗಡಿಯ ಉದ್ದ ಸು. 480 ಕಿಮೀ ಸಾರವಾಕ್ ಮತ್ತು ಸಬಾಗಳನ್ನೊಳಗೊಂಡ ಪೂರ್ವ ಮಲೇಷ್ಯಕ್ಕೂ ಪಶ್ಚಿಮ ಮಲೇಷ್ಯಕ್ಕೂ ನಡುವೆ ದಕ್ಷಿಣ ಚೀನ ಸಮುದ್ರವಿದೆ. ಬೋರ್ನಿಯೋ ದ್ವೀಪದ ವಾಯವ್ಯ ಕರಾವಳಿ ಪ್ರದೇಶದ ಬಹುಭಾಗವನ್ನು ಪಶ್ಚಿಮ ಮಲೇಷ್ಯದ ಸಾರವಾಕ್ ಮತ್ತು ಸಭಾಗಳು ಒಳಗೊಂಡಿವೆ. ಅಕ್ಕಪಕ್ಕಗಳಲ್ಲಿರುವ ಸಾರವಾಕ್ ಮತ್ತು ಸಬಾಗಳ ನೆಲದ ಗಡಿಯಾಚೆ ಬೋರ್ನಿಯೋದ ಉಳಿದ ಭಾಗವಾದ, ಇಂಡೋನೇಷ್ಯಕ್ಕೆ ಸೇರಿದ ಕಾಲಿಮಾಂಟನ್ ಇದೆ. ಸಾರವಾಕಿನ ನಡುವೆ, ದಕ್ಷಿಣ ಚೀನ ಸಮುದ್ರಕ್ಕೆ ಹೊಂದಿಕೊಂಡಂತೆ ಇರುವ ಬ್ರೂನೈ ಒಂದು ಸ್ವತಂತ್ರ ಸುಲ್ತಾನ್ ಪ್ರಭುತ್ವ. ಮಲೇಷ್ಯ ಒಕ್ಕೂಟದ ವಿಸ್ತೀರ್ಣ 3,29,758 ಚ.ಕಿಮೀ. ಜನಸಂಖ್ಯೆ 2,39,53,136 (2005) ರಾಜಧಾನಿ ಕೌಲಾಲಂಪುರ್ (12,97,526).




ಪ್ರಾಕೃತಿಕ ಲಕ್ಷಣ : ಮಯನ್ಮಾರ್, ಥೈಲೆಂಡ್‌ಗಳ ದಕ್ಷಿಣಕ್ಕೆ ಕಿರಿದಾಗಿ ಚಾಚಿರುವ ಪರ್ವತಮಯ ಪ್ರದೇಶ ಪಶ್ಚಿಮ ಮಲೇಷ್ಯ. ಇದರ ಅರ್ಧಕ್ಕಿಂತ ಹೆಚ್ಚು ಭಾಗದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಪರ್ವತ ಶ್ರೇಣಿಗಳು ಕಡಿದಾಗಿವೆ. ಇವುಗಳಲ್ಲಿ ಮುಖ್ಯವಾದ್ದು ಬಾರಿಸನ್ ಟಿಟಿವಾಂಗ್ಸ್, ಇದರಲ್ಲಿ ಉನ್ನತ ಶಿಖರಗಳು ಸು. 2133 ಮೀ ಗಳಿಗೂ ಎತ್ತರವಾಗಿವೆ. ಈ ಶ್ರೇಣಿಯ ಉದ್ದ ಸು. 480 ಕಿಮೀ ನಡುವೆ ಹಬ್ಬಿರುವ ಪರ್ವತ ಶ್ರೇಣಿಗಳ ಅಚೀಚೆಯ ಪೂರ್ವ ಪಶ್ಚಿಮಗಳ ಕರಾವಳಿಗಳ ಪ್ರದೇಶ ತಗ್ಗು ನೆಲ. ಪಶ್ಚಿಮ ಕರಾವಳಿ ಹೆಚ್ಚು ಅಭಿವೃದ್ಧಿ ಹೊಂದಿದೆ. ಇಲ್ಲಿಯದು ಉಷ್ಣ ಹಾಗೂ ತೇವದ ವಾಯುಗುಣ.

ಪಶ್ಚಿಮ ಮಲೇಷ್ಯದಲ್ಲಿ ಅನೇಕ ನದಿಗಳು ಹರಿಯುತ್ತವೆ. ಅತ್ಯಂತ ಉದ್ದವಾದದ್ದು (332 ಕಿಮೀ) ಸುಂಗೈ ಪಹಾಂಗ್. ನದಿಗಳಲ್ಲಿ ಸದಾಕಾಲ ನೀರಿರುತ್ತದೆ. ಮಳೆಗಾಲದಲ್ಲಿ ಪ್ರವಾಹದಿಂದ ಅನಾಹುತ ಸಂಭವಿಸುವುದೂ ಉಂಟು.

ಪಶ್ಚಿಮ ಮಲಯದ್ದು ಸಮಭಾಜಕವೃತ್ತ ಪ್ರದೇಶದ ವಾಯುಗುಣ. ಆದರೆ ಈ ಪ್ರದೇಶ ಕಿರಿದಾಗಿರುವುದರಿಂದ ಸಾಗರಿಕ ಪ್ರಭಾವಕ್ಕೆ ಒಳಗಾಗಿದೆ. ಮಾನ್ಸೂನ್ ಕೂಡ ಇದರ ಮೇಲೆ ಪ್ರಭಾವ ಬೀರುತ್ತದೆ. ಪ್ರದೇಶ ಹಾಗೂ ಎತ್ತರಕ್ಕೆ ಅನುಗುಣವಾಗಿ ಮಳೆ ವ್ಯತ್ಯಾಸವಾಗುತ್ತದೆ. ಉಷ್ಣತೆ ಸಾಮಾನ್ಯವಾಗಿ ಅಧಿಕವಾಗಿಯೇ ($25^0$ಸೆ –$28^0$ಸೆ) ಇರುತ್ತದೆ. ಒಟ್ಟಿನಲ್ಲಿ ಇಲ್ಲಿಯದು ಉಷ್ಣ ಹಾಗೂ ತೇವದ ವಾಯುಗುಣ.

ಪೂರ್ವ ಮಲೇಷ್ಯ ಸು. 1,075 ಕಿಮೀ ಉದ್ದ ಹಾಗೂ 260 ಕಿಮೀ ಅಗಲವಾಗಿ ಬೋರ್ನಿಯೋ ದ್ವೀಪದ ಉತ್ತರ ಭಾಗದಲ್ಲಿ ಹಬ್ಬಿದೆ. ಇದರ ಕರಾವಳಿಯ ಉದ್ದ ಸು. 2,250 ಕಿಮೀ ಕಾಲಿಮಾಂಟನ್‌ಗೂ ಪೂರ್ವ ಮಲೇಷ್ಯಕ್ಕೂ ನಡುವಣ ಗಡಿಯ ಉದ್ದ ಸು. 1,450 ಕಿಮೀ ಪೂರ್ವ ಮಲೇಷ್ಯವನ್ನು ಮೂರು ಪ್ರಾಕೃತಿಕ ವಿಭಾಗಗಳಾಗಿ ಮಾಡಬಹುದು. ಉತ್ತರದ ಕರಾವಳಿಯ ಮೈದಾನ ಪ್ರದೇಶ 16 ಕಿಮೀ ಗಳಿಂದ 65 ಕಿಮೀ ವರೆಗೆ ಅಗಲವಾಗಿದೆ. ಕರಾವಳಿಯ ಮಗ್ಗುಲಿಗೆ ಪರ್ವತ ಹಾಗೂ ಕಣಿವೆಗಳು ಹಬ್ಬಿವೆ. ಇಲ್ಲಿಯ ನೆಲದ ಎತ್ತರ ಸಾಮಾನ್ಯವಾಗಿ 304 ಮೀ, ಕೆಲವೆಡೆ ಇದು 608 ಮೀ ವರೆಗೂ ಎತ್ತರವಾಗಿದೆ. ಕಾಲಿಮಾಂಟನನ್ನು ಪ್ರತ್ಯೇಕಿಸುವ ಉನ್ನತ ಪರ್ವತಶ್ರೇಣಿ ಇದರ ಮಗ್ಗುಲಿನಲ್ಲಿದೆ. ಇದು ಒಂದು ರೀತಿಯಲ್ಲಿ ಪೂರ್ವ ಮಲೇಷ್ಯದ ಬೆನ್ನೆಲುಬಿನಂತಿದೆ, ಇದರಲ್ಲಿ ಸು. 1,216 ಮೀ ಗಳಿಂದ 2,133 ಮೀ ವರೆಗೆ ಎತ್ತರವಾಗಿರುವ ಅನೇಕ ಶಿಖರಗಳುಂಟು. ಅತ್ಯುನ್ನತ ಶಿಖರ ಕಿನಬಾಲು ಸು. 4,101 ಮೀ ಎತ್ತರವಿದೆ.

ಪೂರ್ವ ಮಲೇಷ್ಯದ ನದಿಗಳು ಸದಾ ತುಂಬಿ ಹರಿಯುತ್ತವೆ. ಸಾರವಾಕ್‌ನ ಅತ್ಯಂತ ಉದ್ದವಾದ (ಸು. 560 ಕಿಮೀ) ನದಿ ರಾಜಾಂಗ್. ಇದರಲ್ಲಿ ಸು. 260 ಕಿಮೀ ದೂರದ ಸಣ್ಣ ದೋಣಿ ಸಂಚಾರವಿದೆ. ಸಬಾದ ಅತ್ಯಂತ ಉದ್ದವಾದ ನದಿ ಕಿನಾಬಾಟಾಂಗ್‌ನಲ್ಲಿ

ಸು. 195 ಕಿಮೀ ದೂರ ದೋಣಿ ಸಂಚಾರ ಮಾಡಬಹುದು. ನದಿಗಳು ಒಳನಾಡಿನೊಂದಿಗೆ ಸಂಪರ್ಕ ಕಲ್ಪಿಸುವುದರಿಂದ ಹೆಚ್ಚು ಪ್ರಾಮುಖ್ಯ ಪಡೆದಿದೆ.

ಪೂರ್ವ ಮಲೇಷ್ಯದಲ್ಲಿ ಉಷ್ಣ ಹಾಗೂ ತೇವದ ವಾಯುಗುಣವಿದೆ. ಇಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಮಳೆ ವ್ಯತ್ಯಾಸವಾಗುತ್ತದೆ. ಕನಿಷ್ಠ ಉಷ್ಣತೆ $20^0$ಸೆ –$25^0$ಸೆ ಆದರೆ ಗರಿಷ್ಠ $31^0$ಸೆ–$33^0$ಸೆ ಇದು ಕೂಡ ಮಾನ್ಸೂನ್ ಪ್ರಭಾವಕ್ಕೆ ಒಳಗಾಗುತ್ತದೆ. ಅತಿವೃಷ್ಟಿ ಮತ್ತು ಅತಿ ಪ್ರವಾಹ ಆಗಾಗ ಸಂಭವಿಸುವುದುಂಟು.

ಸಸ್ಯ ಪ್ರಾಣಿ ಸಂಪತ್ತು : ಪಶ್ಚಿಮ ಮಲೇಷ್ಯದಲ್ಲಿ ನಿತ್ಯಹರಿದ್ವರ್ಣದ ಕಾಡುಗಳಿವೆ. ಇವು ಶೇ. 60ರಷ್ಟು ಪ್ರದೇಶ ಆವರಿಸಿವೆ. ಶೇ. 9ರಷ್ಟು ನೆಲ ಜವುಗು ಕಾಡಿನಿಂದ ಕೂಡಿದೆ. ಇಲ್ಲಿಯ ಅರಣ್ಯಸಂಪತ್ತು ಸಮೃದ್ಧವಾದದ್ದು. ಇಲ್ಲಿ ಸು. 8000 ಜಾತಿಯ ಹೂಬಿಡುವ ಸಸ್ಯಗಳಿವೆ. ಪ್ರತಿ ಎಕರೆಯಲ್ಲೂ ಸು. 100 ಬಗೆಯ ಸಸ್ಯಗಳಿವೆ. ಎಷ್ಟೋ ಕಾಡನ್ನು ನಾಶಮಾಡಲಾಗಿದೆ. ಕಾಡು ಸವರಿದಲ್ಲಿ ಹುಲ್ಲು, ಪೊದೆ ಬೆಳೆದಿರುವ ಪ್ರದೇಶ ಶೇ. 7 ರಷ್ಟಿದೆ. ದಟ್ಟಕಾಡು ಹಾಗೂ ಕುರುಚಲು ಗಿಡಗಳ ಅರಣ್ಯಪ್ರದೇಶಗಳಲ್ಲಿ ಆನೆ, ಹುಲಿ, ಗೌರ್, ಖಡ್ಗಮೃಗ, ಟ್ಯಾಪಿರ್, ಕಾಡುಹಂದಿ, ಜಿಂಕೆಗಳು, ಹುಲಿ, ನಾಗರಹಾವು, ಆಮೆ, ಮೊಸಳೆ ಮುಂತಾದ ವೈವಿಧ್ಯಮಯ ಪ್ರಾಣಿ ಲೋಕವಿದೆ.

ಪೂರ್ವ ಮಲೇಷ್ಯದ ಸಾರವಾಕ್‌ನಲ್ಲಿ ಶೇ. 77 ರಷ್ಟು, ಸಬಾನಲ್ಲಿ ಶೇ. 78 ರಷ್ಟು ದಟ್ಟವಾದ ನಿತ್ಯಹರಿದ್ವರ್ಣದ ಅರಣ್ಯಪ್ರದೇಶವಿದೆ. ಕರಾವಳಿಯಲ್ಲಿ ಜವುಗು ಕಾಡು ಇದೆ.

ಪೂರ್ವ ಮಲೇಷ್ಯದ ಪ್ರಾಣಿ ಜೀವನ ಹೆಚ್ಚು ವೈವಿಧ್ಯಮಯವಾದದ್ದು. ಪಶ್ಚಿಮ ಮಲೇಷ್ಯದ ಪ್ರಾಣಿಗಳ ಜೊತೆಗೆ ಇಲ್ಲಿ ಒರಾಂಗುಟಾನ್, ಜೇನುಕರಡಿ, ಉದ್ದ ಮುಸುಡಿಯ ಕೋತಿ ಇವೆ.

ಜನಜೀವನ : ವಲಯದ ಜನ ಮುಖ್ಯವಾಗಿ ಗ್ರಾಮೀಣರು. ಆಗ್ನೇಯ ಏಷ್ಯದ ಇತರೆಡೆಗಳಲ್ಲಿರುವಂತೆಯೇ ಇಲ್ಲಿಯ ಜನವಸತಿಗಳಿವೆ. ಗಣೆಗಳನ್ನು ನೆಟ್ಟು ಅವುಗಳ ಮೇಲೆ ಮರದ ಗೋಡೆ ನಿಲ್ಲಿಸಿ ತೆಂಗು ಗರಿಗಳ ಮಟ್ಟಿ ಹೊದಿಸಿದ ಮನೆಗಳಲ್ಲಿ ಜೀವಿಸುವರು. ಪ್ರತಿಯೊಂದು ಮನೆಯ ಸುತ್ತಲೂ ತೆಂಗು ಬಾಳೆ ಪರಂಗಿ ಮುಂತಾದ ಗಿಡಗಳಿರುತ್ತವೆ. ಹಳ್ಳಿಗಳಲ್ಲಿ ಮೀನುಗಾರರ, ಬತ್ತ ಬೆಳೆಯುವವರ, ವಾಣಿಜ್ಯ ಬೆಳೆಗಳನ್ನು ಬೆಳೆಯುವ ಹಾಗೂ ಮಿಶ್ರ ಬೆಳೆ ಬೆಳೆಯುವವರ ನಾಲ್ಕು ಬಗೆಯ ಗ್ರಾಮಗಳನ್ನು ಇಲ್ಲಿ ಗುರುತಿಸಬಹುದು.

ಬ್ರಿಟಿಷರು ಇಲ್ಲಿಗೆ ಬಂದಮೇಲೆ ನಗರಗಳು, ದೊಡ್ಡ ಪಟ್ಟಣಗಳು ಇಲ್ಲಿ ನಿರ್ಮಾಣವಾದವು. ಇವು ತವರದ ಗಣಿ ಮತ್ತು ರಬ್ಬರ್ ತೋಟಗಳೆಡೆಯಲ್ಲಿವೆ. 5000ಕ್ಕಿಂತ ಹೆಚ್ಚು ಜನಸಂಖ್ಯೆಯ ಪಟ್ಟಣಗಳು 80ಕ್ಕೂ ಹೆಚ್ಚಾಗಿವೆ. ಪಟ್ಟಣಿಗರಲ್ಲಿ ಮೂರನೆಯ ಎರಡರಷ್ಟು ಮಂದಿ ಚೀನಿಯರು. ಭಾರತೀಯರು ಹಾಗೂ ಪಾಕಿಸ್ತಾನೀಯರು ಶೇ. 10ರಷ್ಟು ಇದ್ದಾರೆ. ಮಲಯದವರು ಶೇ. 22 ಮಾತ್ರ. ಪಟ್ಟಣಗಳು ಸಾಮಾನ್ಯವಾಗಿ ಆಯೋಜಿತ. ಕೌಲಾಲಂಪುರ್, ಇಪೋ, ಪಿನಾಂಗ್ ದೊಡ್ಡ ನಗರಗಳು.

ಪೂರ್ವ ಮಲೇಷ್ಯದ ಶೇ. 85ರಷ್ಟು ಜನ ಗ್ರಾಮಸ್ಥರು. ಪ್ರದೇಶದ ಜನಾಂಗೀಯ ವೈವಿಧ್ಯ ಇಲ್ಲಿಯ ವಸತಿಗಳಲ್ಲೂ ಕಾಣಬರುತ್ತದೆ. ಪೂರ್ವ ಮಲೇಷ್ಯದ ಜನರ ಕಸುಬು ಮುಖ್ಯವಾಗಿ ಕೃಷಿ ಮತ್ತು ಮೀನುಗಾರಿಕೆ. ಸಾರವಾಕಿನ ಗ್ರಾಮಸ್ಥ ಚೀನಿಯರು ರಬ್ಬರು, ಮೆಣಸು, ಹಣ್ಣು, ತರಕಾರಿ ಮುಂತಾದ ವಾಣಿಜ್ಯ ಬೆಳೆ ಬೆಳೆಯುತ್ತಾರೆ. ಪೂರ್ವ ಮಲೇಷ್ಯದಲ್ಲಿ ಹೆಚ್ಚಿನ ಜನಸಂಖ್ಯೆಯ ಪಟ್ಟಣಗಳು ಕೇವಲ 6. ಅವು ಕೊಚೆನ್, ಸೀಬೂ, ಮಿರೀ, ಸಂಡಾಕನ್, ಕೋಟ ಕಿನಬಾಲು ಮತ್ತು ಟವೌ. ಇಲ್ಲಿಯೂ ಪಟ್ಟಣಿಗರು ಬಹುತೇಕ ಚೀನೀಯರು.

ಆರ್ಥಿಕ ಪ್ರಗತಿ: ಮಲೇಷ್ಯ ಸಂಪದ್ಯುಕ್ತ ದೇಶ. ಪ್ರಪಂಚದಲ್ಲಿ ರಬ್ಬರ್ ಮತ್ತು ತವರವನ್ನು ಅತ್ಯಧಿಕವಾಗಿ ಉತ್ಪಾದಿಸುವ ದೇಶ. ತಾಳೆ ಎಣ್ಣೆ ಉತ್ಪಾದನೆಯಲ್ಲಿ ಇದು ನೈಜೀರಿಯಕ್ಕೆ ಅನಂತರ ಬರುತ್ತದೆ. ಇತರ ಅಭಿವೃದ್ಧಿಶೀಲ ದೇಶಗಳೊಂದಿಗೆ ಹೋಲಿಸಿದರೆ ಇದು ರಸ್ತೆ, ನೀರಿನ ಸರಬರಾಜು, ವಿದ್ಯುತ್ ಸಾಂಸ್ಥಿಕ ವ್ಯವಸ್ಥೆ, ವಾಣಿಜ್ಯ ಹಾಗೂ ಹಣಕಾಸು ವ್ಯವಸ್ಥೆಗಳಲ್ಲಿ ಹೆಚ್ಚು ಮುಂದುವರಿದಿದೆ.

ಮಲೇಷ್ಯದ ಖನಿಜ ಸಂಪತ್ತು ಸಮೃದ್ಧ ಹಾಗೂ ವೈವಿಧ್ಯಮಯ. ತವರ, ಕಬ್ಬಿಣದ ಅದಿರು, ಬಾಕ್ಸೈಟ್, ಕಲ್ಲಿದ್ದಲು, ಚಿನ್ನ, ಪಿಂಗಾಣಿ ಮಣ್ಣು, ಮೊನಾಜೈಟ್, ಇಲ್ಮನೈಟ್, ಕೊಲಂಬೈಟ್, ಮ್ಯಾಂಗನೀಸ್, ಟಾಂಟಲೈಟ್, ವೂಲ್ಫ್ರಮೈಟ್, ಜಿರ್ಕಾನ್ ಮೊದಲಾದವು ಪಶ್ಚಿಮ ಮಲೇಷ್ಯದ ಮುಖ್ಯ ಖನಿಜಗಳು, ಆಂಟಿಮನಿ, ಪಾದರಸ, ಚಿನ್ನ, ಕಲ್ಲಿದ್ದಲು, ಪೆಟ್ರೋಲಿಯಮ್, ಬಾಕ್ಸೈಟ್, ಫಾಸ್ಫೇಟ್, ಗಾಜಿನಮರಳು ಇವು ಸಾರವಾಕಿನಲ್ಲೂ, ಚಿನ್ನ, ಕಲ್ಲಿದ್ದಲು, ಮ್ಯಾಂಗನೀಸ್, ತಾಮ್ರ ಇವು ಸಬಾದಲ್ಲೂ ದೊರಕುತ್ತವೆ. ಮುಖ್ಯವಾದ ಖನಿಜಗಳು ತವರ, ಕಬ್ಬಿಣ ಅದಿರು, ಬಾಕ್ಸೈಟ್, ಪೆಟ್ರೋಲಿಯಮ್ ಮತ್ತು ತಾಮ್ರ. ಅತ್ಯಂತ ಮುಖ್ಯವಾದದ್ದು ತವರ. ಇದು ಪಶ್ಚಿಮ ಮಲೇಷ್ಯದ 11 ರಾಜ್ಯಗಳ ಪೈಕಿ 9 ರಲ್ಲಿ ಸಿಗುತ್ತದೆ. ಪೂರ್ವ ಹಾಗೂ ಪಶ್ಚಿಮ ಘಟ್ಟಗಳಲ್ಲಿ ಇದರ ನಿಕ್ಷೇಪಗಳಿವೆ. ಪೆಟ್ರೋಲಿಯಮ್ ನಿಕ್ಷೇಪವಿರುವುದು ಸಾರವಾಕಿನಲ್ಲಿ ಮಾತ್ರ. ತೈಲ ಗಣಿ ಮಿರೀಯಲ್ಲಿದೆ.

ಖನಿಜ ಸಂಪತ್ತಲ್ಲದೆ ಅರಣ್ಯ ಸಂಪತ್ತೂ, ಮತ್ಸ್ಯ ಸಂಪತ್ತೂ ಮುಖ್ಯವಾದವು. ದಿಮ್ಮಿ, ಇದ್ದಿಲು, ಸೌದೆ, ಅರಗು, ಗೋಂದು, ಬೆತ್ತ ಮುಖ್ಯ ಅರಣ್ಯೋತ್ಪನ್ನಗಳು. ಇವು ಸ್ಥಳೀಯವಾಗಿ ಬಳಕೆಯಾಗುವುವಲ್ಲದೆ ರಫ್ತಿಗೂ ಒದಗಿ ಬರುತ್ತವೆ. ಸಾಗುವಾನಿ ಮಲೇಷ್ಯದ ವಿದೇಶಿ ವಿನಿಮಯ ಸಂಪಾದನೆಯ ಮೂರನೆಯ ಮುಖ್ಯ ಮೂಲ. ಮಲೇಷ್ಯದ ಕರಾವಳಿಯಲ್ಲಿ ವಿವಿಧ ಬಗೆಯ ಮೀನು ದೊರಕುತ್ತವೆ.

ಕಲ್ಲಿದ್ದಲು, ಸಸ್ಯಾಂಗಾರ, ಮರ, ಪೆಟ್ರೋಲಿಯಮ್, ಜಲವಿದ್ಯುತ್ ಇವು ಮುಖ್ಯ ಶಕ್ತಿ ಮೂಲಗಳು. ಪೂರ್ವ ಮಲೇಷ್ಯದಲ್ಲಿ ಜಲವಿದ್ಯುತ್ತಿನ ಉತ್ಪಾದನೆಯಿಲ್ಲ. ಪಶ್ಚಿಮ ಮಲೇಷ್ಯದಲ್ಲಿ ಅನೇಕ ಜಲಪಾತಗಳು ವಿದ್ಯುತ್ ಸಾಮರ್ಥ್ಯ ಉಳ್ಳವಾಗಿವೆ. ಕಾವುಮರಾನ್, ಬಟಾಂಗ್ ಪಡಾನ್, ಬೆಂಡೆರೊ ಇವು ಪಶ್ಚಿಮ ಮಲೇಷ್ಯದ ಮುಖ್ಯ ಜಲವಿದ್ಯುತ್ ಕೇಂದ್ರಗಳು.

ಕೃಷಿ, ಅರಣ್ಯಗಾರಿಕೆ, ಮೀನುಗಾರಿಕೆ, ಗಣಿಗಾರಿಕೆ ಮಲೇಷ್ಯದ ಮುಖ್ಯ ಕಸುಬುಗಳು. ಇಲ್ಲಿಯ ರಫ್ತುಗಳಲ್ಲಿ ಶೇ. 90 ರಷ್ಟು ಈ ವಲಯಗಳದ್ದು. ಕೃಷಿಯೇ ಬಹುಮುಖ್ಯ ಜೀವನೋಪಾಯ. ದೇಶದ ಸ್ಥೂಲ ರಾಷ್ಟ್ರೀಯ ಉತ್ಪನ್ನದ ಶೇ. 30ರಷ್ಟು ಕೃಷಿಯಿಂದ ಬರುತ್ತದೆ. ಪಶ್ಚಿಮ ಮಲೇಷ್ಯದ ನೆಲದ ಶೇ. 21, ಸಾರವಾಕಿನ ನೆಲದ ಶೇ. 6 ಮತ್ತು ಸಾಬಾದಲ್ಲಿಯ ನೆಲದ ಶೇ. 3 ಭಾಗ ಕೃಷಿಗೆ ಮೀಸಲು. ಮಲೇಷ್ಯದ ಮುಖ್ಯ ಆರ್ಥಿಕ ಬೆಳೆ ರಬ್ಬರ್, ಇದು ವಿದೇಶೀ ವಿನಿಮಯ ಸಂಪಾದಿಸುವ ಬಹುಮುಖ್ಯ ಉತ್ಪನ್ನ. ಇತರ ವಾಣಿಜ್ಯ ಬೆಳೆಗಳು ತಾಳೆ (ಎಣ್ಣೆ), ತೆಂಗು. ಆಹಾರ ಬೆಳೆ ಬತ್ತ.

ಮಲೇಷ್ಯದ ಬಹುಭಾಗ ಅರಣ್ಯಾವೃತ. ಅರಣ್ಯಗಾರಿಕೆಗೆ ಈಚಿನ ವರ್ಷಗಳಲ್ಲಿ ವಿಶೇಷ ಪ್ರಾಮುಖ್ಯ ಪಡೆದಿದೆ. ಇಲ್ಲಿಯ ಚೌಬೀನೆಮರಕ್ಕೆ ವಿಶೇಷ ಬೇಡಿಕೆ ಇರುವುದೇ ಇದಕ್ಕೆ ಕಾರಣ. ಇದು ಈ ದೇಶದ ಮೂರನೆಯ ಮುಖ್ಯ ಉತ್ಪನ್ನ. ಮೀನುಗಾರಿಕೆಯೂ ಪ್ರಗತಿ ಹೊಂದುತ್ತಿದೆ. ಮಲೇಷ್ಯಕ್ಕೆ ಉದ್ದನೆಯ ಕರಾವಳಿ ಇದೆ. ಈಗೀಗ ಮತ್ಸೋದ್ಯಮ ಯಾಂತ್ರೀಕರಣವಾಗುತ್ತಿದೆ. ರಫ್ತುಗಳಲ್ಲಿ ಕಾಲು ಭಾಗ ಗಣಿ ಉತ್ಪನ್ನಗಳು. ತವರ, ಕಬ್ಬಿಣ ಅದಿರು, ಬಾಕ್ಸೈಟ್, ಪೆಟ್ರೋಲಿಯಮ್ ಮುಖ್ಯ ಖನಿಜಗಳು. ತವರದಲ್ಲಿ ಮಲೇಷ್ಯಕ್ಕೆ ಪ್ರಪಂಚದಲ್ಲಿ ಮೊದಲನೆಯ ಸ್ಥಾನ.

ದೇಶದಲ್ಲಿ ಕೈಗಾರಿಕೆಗಳು ಅಷ್ಟಾಗಿ ಬೆಳೆದಿಲ್ಲ. ಅನುಭೋಗ ವಸ್ತುಗಳ ತಯಾರಿಕೆಗೆ ಆದ್ಯಸ್ಥಾನ ನೀಡಲಾಗಿದೆ. ದೇಶದಲ್ಲಿ 17 ಕೈಗಾರಿಕಾ ಕ್ಷೇತ್ರಗಳಿವೆ. ಪಶ್ಚಿಮ ಮಲೇಷ್ಯದಲ್ಲಿ ಹೆಚ್ಚಿನ ಕೈಗಾರಿಕೆಗಳಿವೆ. ಮಲೇಷ್ಯ ಮುಖ್ಯವಾಗಿ ಕಚ್ಚಾ ಸಾಮಗ್ರಿ ರಫ್ತು ಮಾಡುವ ದೇಶ. ಸಿದ್ಧ ಸರಕುಗಳನ್ನು ಅದು ಹೆಚ್ಚಾಗಿ ಆಮದು ಮಾಡಿಕೊಳ್ಳುತ್ತಿದೆ.

ಸಾರಿಗೆ : ಸಾರಿಗೆ ವ್ಯವಸ್ಥೆ ತಕ್ಕಮಟ್ಟಿಗೆ ಅಭಿವೃದ್ಧಿ ಹೊಂದಿದೆ. ತವರ ಮತ್ತು ರಬ್ಬರ್ ಉತ್ಪಾದಿಸುವ ದೇಶಗಳೊಂದಿಗೆ ಸಂಪರ್ಕ ಸಮರ್ಪಕವಾಗಿದೆ. ಸಾರವಾಕ್ ಮತ್ತು ಸಬಾಗಳಲ್ಲಿ ಮಾತ್ರ ಇದು ಅಷ್ಟು ಅಭಿವೃದ್ಧಿಯಾಗಿಲ್ಲ. ನದೀ ಸಾರಿಗೆಯೇ ಇಲ್ಲಿ ಈಗಲೂ ಮುಖ್ಯ. ಪಶ್ಚಿಮ ಮಲೇಷ್ಯದ ರಸ್ತೆಜಾಲ ಇಡೀ ಆಗ್ನೇಯ ಏಷ್ಯದಲ್ಲೇ ಅತ್ಯುತ್ತಮವಾದದ್ದೆನಿಸಿದೆ. ಹಿಂದೆ ಅಲ್ಲಿ ಎಲ್ಲ ಬಗೆಯ ರಸ್ತೆಗಳು ಸೇರಿ ಸು. 16,100 ಕಿಮೀ ಉದ್ದದ ರಸ್ತೆಗಳಿದ್ದವು. ಇದರ ಪೂರ್ವ ಕರಾವಳಿಯ ಕೋಟ ಬಹಾರುವನ್ನು ಮಧ್ಯದಲ್ಲಿ ಬರುವ ಗೆರಿಕ್ ಮೂಲಕ ಪಶ್ಚಿಮ ಕರಾವಳಿಯ ಬಟರ್‌ವರ್ತ್‌ನೊಂದಿಗೆ ಕೂಡಿಸುವ ಹೆದ್ದಾರಿ ಈಚೆಗೆ ನಿರ್ಮಿತವಾಗಿದೆ. ಪಹಾಂಗ್–ಟೆಂಗಾರಾ ಪ್ರದೇಶಕ್ಕೆ ಹೆಬ್ಬಾಗಿಲಿನಂತಿರುವ ದಕ್ಷಿಣ ಪಹಾಂಗ್ ಹೆದ್ದಾರಿ ಇನ್ನೊಂದು ಹೊಸ ಮಾರ್ಗ; ಸಾರಾವಾಕ್‌ನಲ್ಲಿ 1,600 ಕಿಮೀ ಮತ್ತು ಸಬಾದಲ್ಲಿ 2300 ಕಿಮೀ ಉದ್ದದ ರಸ್ತೆಗಳಿದ್ದವು. ರೈಲ್ವೆ ಪಶ್ಚಿಮ ಮಲೇಷ್ಯ ಮತ್ತು ಸಬಾದಲ್ಲಿ ಅಭಿವೃದ್ಧಿ ಹೊಂದಿದೆ. ಸಬಾದಲ್ಲಿರುವ ರೈಲುಮಾರ್ಗ ಕೋಟ ಕಿನಬಾಲುವಿಗೂ ಬ್ಯೂಫೋರ್ಟ್, ಟೇನಾಮ್, ಮೆಲಲಾಪಗಳಿಗೂ ಸಂಪರ್ಕ ಕಲ್ಪಿಸುತ್ತದೆ. ಮಲೇಷ್ಯದಲ್ಲಿ ಪರಂಪರೆಯಿಂದ ಬಂದಿರುವಂಥದು ಜಲ ಸಾರಿಗೆ. ಪಶ್ಚಿಮ ಮಲೇಷ್ಯದಲ್ಲಿ ನದೀ ಸಾರಿಗೆಯ ಪ್ರಾಮುಖ್ಯ ಈಗ ತಗ್ಗಿದೆ. ಪೂರ್ವ ತೀರದಲ್ಲಿ ಮಾತ್ರ ಅದು ಇನ್ನೂ ಮುಖ್ಯವಾಗಿದೆ. ಪೂರ್ವ ಮಲೇಷ್ಯದಲ್ಲಿ ಇಂದಿಗೂ ನದೀ ಸಾರಿಗೆಯೇ ಮುಖ್ಯ. ಅಲ್ಲಿಯ ನದಿಗಳು ಕಡಲ ತೀರದ ಸ್ಥಳಗಳೊಂದಿಗೆ ಒಳನಾಡಿನ ಸಂಪರ್ಕ ಕಲ್ಪಿಸುತ್ತವೆ. ಮಲೇಷ್ಯದ ಕರಾವಳಿಗಳು ಸಾಕಷ್ಟು ಉದ್ದವಾಗಿರುವುದರಿಂದ ಕರಾವಳಿಯ ಹಾಗೂ ಆಳ ಕಡಲಿನ ಸಾರಿಗೆ ಮುಖ್ಯವಾದದ್ದು. ಅನೇಕ ಸಾಗರಿಕ ಹಾಗೂ ನದೀ ರೇವು ಪಟ್ಟಣಗಳಿವೆ. ಪಿನಾಂಗ ಮತ್ತು ಪೋರ್ಟ ಸ್ವೆಟೆನ್ ದ್ವಾಮ ಪಶ್ಚಿಮ ಮಲೇಷ್ಯದ ಮುಖ್ಯ ರೇವು ಪಟ್ಟಣಗಳು. ಪೂರ್ವ ಮಲೇಷ್ಯದಲ್ಲಿ ಮುಖ್ಯವಾದವು ಕೊಚೆನ್, ಸಿಬೂ, ಲಬುವಾನ್, ಕೋಟ, ಕಿನಬಾಲು, ಸಂಡಾಕನ್ ಟವೌ.

ವಾಯು ಸಾರಿಗೆ ಈಚೆಗೆ ಬಹಳ ಶೀಘ್ರವಾಗಿ ಬೆಳೆಯುತ್ತಿದೆ. ಪೂರ್ವ ಮಲೇಷ್ಯದಲ್ಲಿ ಒಳ ಹಾಗೂ ಹೊರ ವಾಯುಸಾರಿಗೆ ಹೆಚ್ಚು ವೇಗವಾಗಿ ಬೆಳೆದಿವೆ. ಪಶ್ಚಿಮ ಮಲೇಷ್ಯದಲ್ಲಿ ಇತರ ಸಾರಿಗೆ ಸಂಪರ್ಕ ವ್ಯವಸ್ಥೆಗಳಿರುವುದರಿಂದ ಅಲ್ಲಿ ಇದರ ಬೆಳವಣಿಗೆಯ ವೇಗ ಅಷ್ಟು ಹೆಚ್ಚಿಲ್ಲ. ಕ್ವಾಲಲಂಪೂರ್, ಕೊಚೆನ್, ಕೋಟ, ಕಿನಬಾಲುಗಳ ನಡುವೆ ಹಾಗೂ ಮಲೇಷ್ಯದ ವಿವಿಧ ರಾಜ್ಯಗಳ ನಡುವೆ ನಿಯತವಾಗಿ ಆಂತರಿಕ ವಾಯುಯಾನ ವ್ಯವಸ್ಥೆಯಿದೆ. ಇದು ಪೆಸಿಫಿಕ್ ಪ್ರದೇಶದ ಅಂತಾರಾಷ್ಟ್ರೀಯ ಹಾಗೂ ಆಂತರಿಕ ವಾಯುಮಾನ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ.

ಮಲೇಷ್ಯದ ಇತ್ತೀಚಿನ ಸಾರಿಗೆ ಸಂಪರ್ಕ ಹೆಚ್ಚಿನ ಪ್ರಗತಿ ಸಾಧಿಸಿದೆ. 1998ರಲ್ಲಿ ಕೌಲಾಲಂಪುರ್ ವಿಮಾನ ನಿಲ್ದಾಣ ಕಾರ್ಯಾರಂಭಿಸಿತು. ಸರ್ಕಾರ ಮಲೇಷ್ಯ ವಿಮಾನ ಸಾರಿಗೆ ನಡೆಸುತ್ತಿದೆ. 1994ರಲ್ಲಿಯೇ ಏರ್ ಏಷ್ಯ ವಿಮಾನಸಾರಿಗೆ ಆರಂಭಗೊಂಡಿತ್ತು. ಮಲೇಷ್ಯದಲ್ಲಿ 94,000 ಕಿಮೀ ಉತ್ತಮ ಮಾರ್ಗಸಂಪರ್ಕವಿದೆ. (ಎಚ್.ಎಸ್.ಕೆ.)

**ಮಲ್ಪೆ:** ಉಡುಪಿ ತಾಲ್ಲೂಕಿನ ಒಂದು ಪಟ್ಟಣ ಮತ್ತು ಬಂದರು. ಮಂಗಳೂರಿನ ಉತ್ತರಕ್ಕೆ 65 ಕಿಮೀ ದೂರದಲ್ಲೂ ಉಡುಪಿಯ ಪಶ್ಚಿಮಕ್ಕೆ 5 ಕಿಮೀ ದೂರದಲ್ಲೂ ಇದೆ. ಮಲ್ಪೆಯ ಭೌಗೋಳಿಕ ಪರಿಸರ ರಮಣೀಯ. ಉದ್ಯಾವರ ನದಿಯು ಪಾಂಗಾಳ ಹೊಳೆಯೊಂದಿಗೆ ಜೊತೆಗೂಡಿದ ತರುವಾಯ ಕಡಲ ಸೇರಗಿನಲ್ಲೇ ಸು. 8 ಕಿಮೀ ದೂರ ಉತ್ತರಕ್ಕೆ ಹರಿದು ಕಲ್ಮಾಡಿ ಹೊಳೆಯೆಂಬ ಕಿರುತೊರೆಯನ್ನು ಕೂಡಿಕೊಂಡ ಮೇಲೆ ಸಮುದ್ರದಲ್ಲಿ ಸಂಗಮವಾಗುತ್ತದೆ. ಈ ನದಿಯ ಅಳಿವೆಗೆ ತಾಗಿದಂತೆ ಉತ್ತರಕ್ಕೆ ಮಲ್ಪೆ ಇದೆ. ಇಲ್ಲಿಯ ಕಡಲ ಕೆರೆಗೆ ಸಮಾನಾಂತರವಾಗಿ ಸು. 2 ಕಿಮೀ ದೂರದಲ್ಲಿ ಸಮುದ್ರ ಮಧ್ಯದಲ್ಲಿರುವ ಸು. 2–5 ಕಿಮೀ ಉದ್ದ ದರಿಯಾ ಬಹದ್ದರ್‌ಗಡ ಶಿಲಾದ್ವೀಪಸ್ತೋಮ ಮಲ್ಪೆಗೆ ನಿಸರ್ಗನಿರ್ಮಿತ ರಕ್ಷಾಬಾಹುವಿನಂತೆ ಪಸರಿಸಿದೆ. ನಡುಗಡ್ಡೆಗಳ ಉತ್ತರಕ್ಕೆ ತೆಂಗಿನ ದ್ವೀಪ, ಅಜಕಲ್ ಬಂಡೆ, ನಡುಬಂಡೆ–ಇವುಗಳಿಂದ ಕೂಡಿದ ಸೇಂಟ್ ಮೇರಿಸ್ ದ್ವೀಪಗಳ ಗುಂಪು ಪ್ರಾಕೃತಿಕ ಲಕ್ಷಣದ ನೆಲೆ, ತೆಂಗಿನ ದ್ವೀಪದ ದಕ್ಷಿಣ ಭಾಗದಲ್ಲಿ ಕಾಣಸಿಗುವ ಬೆಸಾಲ್ಟ್ ಶಿಲಾಸ್ತಂಭ ರಚನೆಯಲ್ಲಿಯ ಷಟ್ಕೋಣ ವಿನ್ಯಾಸದ ಆಕರ್ಷಕ ರಮಣೀಯತೆ ಭಾರತದ ಬೇರಾವ ಭಾಗದಲ್ಲೂ ಇಲ್ಲವೆಂದು ಹೇಳಲಾಗಿದೆ. ದರಿಯಾ ಬಹದ್ದರ್‌ಗಡಕ್ಕೂ ಮಲ್ಪೆ ಬಂದರಿಗೂ ನಡುವಣ ಸಮುದ್ರಭಾಗ, ಬಿರುಗಾಳಿಯಲ್ಲಿ ಹಡಗುಗಳಿಗೂ ದೊಡ್ಡ ಮಚವೆಗಳಿಗೂ (ಸ್ಥಳೀಯ ನೌಕೆ) ಆಶ್ರಯವನ್ನೀಯುವ ಒಳ್ಳೆಯ ರೇವು. ಆ ದ್ವೀಪಸ್ತೋಮದ ನಡುಬಂಡೆಯ ಮೇಲೆ ಒಂದು ದ್ವೀಪಸ್ತಂಭವಿದೆ. ಸೇಂಟ್ ಮೇರಿಸ್ ದ್ವೀಪಗಳ ಮಧ್ಯಕ್ಕೆ ಎದುರಾದ ಕರಾವಳಿ ತೀರದಲ್ಲಿಯ ವಡಭಾಂಡೇಶ್ವರ ಸಮುದ್ರ ಸ್ನಾನ ಸ್ಥಳ ಜನಪ್ರಿಯವೂ ಸುರಕ್ಷಿತವೂ ಆಗಿದೆ.

ಮೀನುಗಾರಿಕೆ ಇಲ್ಲಿಯ ಮುಖ್ಯ ಉದ್ಯೋಗ. ಇದಕ್ಕೆ ಸಂಬಂಧಿಸಿದಂತೆ ನಾಡ ಬಲೆಗಳ ಜೊತೆಗೆ ಯಾಂತ್ರೀಕೃತ ದೋಣಿಗಳು ಉಪಯೋಗದಲ್ಲಿವೆ. ಶೀತಲೀಕರಣ ಸ್ಥಾವರಗಳೂ ಮತ್ಸ್ಯಸಂಶೋಧನ ಸಂಸ್ಕರಣ ಕೇಂದ್ರಗಳೂ ಸ್ಥಾಪನೆಯಾಗಿವೆ. ಸಂಸ್ಕರಿಸಿದ ಮೀನುಗಳನ್ನು ಡಬ್ಬಗಳಲ್ಲಿ ತುಂಬಿ ವಿದೇಶಗಳಿಗೆ ಕಳುಹಿಸಲಾಗುತ್ತದೆ. ತೆಂಗಿನ ನಾರಿನ ಕೈಗಾರಿಕೆ, ಹೆಂಚಿನ ಕಾರ್ಖಾನೆ ಇತರ ಕೈಗಾರಿಕೆಗಳನ್ನು ನೈಸರ್ಗಿಕ ಅನುಕೂಲತೆಗಳಲ್ಲಿರುವ ಮಲ್ಪೆ ಬಂದರನ್ನು ಆಧುನಿಕ ಮತ್ಸ್ಯೋದ್ಯಮ ಬಂದರನ್ನಾಗಿ ಮಾರ್ಪಡಿಸುವ ಯೋಜನೆಯಿಂದ ಸಿದ್ಧವಾಗಿದೆ. ಕರ್ನಾಟಕ ರಾಜ್ಯದ ಮತ್ಸ್ಯೋದ್ಯಮ ಅಭಿವೃದ್ಧಿಗೆ ಕಾರಣವಾಗುವುದಲ್ಲದೇ ಸಮುದ್ರ ಸಾರಿಗೆ ಸಂಚಾರಕ್ಕೆ ಅನುಕೂಲವಾಗಲಿದೆ. ಮಲ್ಪೆ ಪಟ್ಟಣ ಪಂಚಾಯಿತಿ ಆಡಳಿತಕ್ಕೆ ಸೇರಿದೆ. *

**ಮಸ್ಕಟ್:** ಓಮಾನ್ ರಾಜ್ಯದ ರಾಜಧಾನಿ ಮತ್ತು ಬಂದರು ನಗರ. ಅರೇಬಿಯದ ಆಗ್ನೇಯ ಭಾಗದಲ್ಲಿರುವ ಓಮಾನ್ (ಸುಲ್ತನೇಟ್) ರಾಜ್ಯದ ಆಡಳಿತ ಕೇಂದ್ರ. ಈ ನಗರ ಉತ್ತರ ಅಕ್ಷಾಂಶ 23°37′ ಪೂರ್ವರೇಖಾಂಶ 58°35′ನಲ್ಲಿ ಅರಬ್ಬೀಸಮುದ್ರದ ಓಮಾನ್ ಕೊಲ್ಲಿಯ ತೀರದಲ್ಲಿದೆ. ಜನಸಂಖ್ಯೆ ಉಪನಗರ ಮಟ್ರಾ ಸೇರಿ 6,89,000 (2003). ಓಮಾನ್ ರಾಜ್ಯವನ್ನು 1970ರ ತನಕ ಮಸ್ಕಟ್ ಎಂದು ಅನಂತರ ಓಮಾನ್ ಎಂದು ಕರೆಯಲಾಗುತ್ತಿದೆ. ಮಸ್ಕಟ್ ಓಮಾನ್ ಸುಲ್ತನೇಟ್ ಪ್ರಮುಖನಗರ ಹಾಗೂ ವ್ಯಾಪಾರಕೇಂದ್ರ. ಇದರ ಪಶ್ಚಿಮಭಾಗದಲ್ಲಿರುವ ಬೆಟ್ಟಗಳು ಇಲ್ಲಿರುವ ಬೆಟ್ಟಶ್ರೇಣಿಯ ಅತ್ಯಂತ ಎತ್ತರ ಶಿಖರ (4107 ಮೀ). ಇಲ್ಲಿ ವಂಶಪಾರಂಪರ್ಯ ರಾಜಪ್ರಭುತ್ವವಿದೆ. ಸುಲ್ತಾನ ವಾಸಿಸುವುದೂ ಇಲ್ಲಿಯೇ.

ಮಸ್ಕಟ್‌ನೊಂದಿಗೆ ಸಂಪರ್ಕ ಬೆಳೆಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರೆ ಮೊದಲಿಗರು (1508). ಇವರು ಈ ನಗರದಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿ ತಮ್ಮ ಹಡಗು ನಿಲ್ದಾಣವಾಗಿ ಮಾಡಿಕೊಂಡರು. 1650ರ ತನಕವೂ ಇಲ್ಲಿ ಪೋರ್ಚುಗೀಸರ ಪ್ರಭಾವ ಹೆಚ್ಚಾಗಿತ್ತು. ಇವರ ಅನಂತರ 1741ರಿಂದ ಈ ನಗರ ಸುಲ್ತಾನರ ಅಧಿಕಾರಕ್ಕೆ ಸೇರಿತು. ಮಸ್ಕಟ್‌ನ ವಾಯವ್ಯದ ಉಪನಗರ ಮಟ್ರಾ ಬಹಳ ಪ್ರಾಮುಖ್ಯ ಪಡೆದಿದೆ. ಮಸ್ಕಟ್‌ನಿಂದ ಕೆಲವೇ ಕಿಮೀ ಗಳ ದೂರದಲ್ಲಿರುವ ಮೀನಾ ಅಲ್‌ಫ ಹಾಲ್ ತೈಲೋದ್ಯಮದ ಪ್ರಮುಖ ಕೇಂದ್ರ. ಇಲ್ಲಿಂದ ಕೊಳಾಯಿಗಳ ಮೂಲಕ ಓಮಾನಿನ ಇತರ ಭಾಗಗಳಿಗೆ ಎಣ್ಣೆಯನ್ನು ಸರಬರಾಜು ಮಾಡಲಾಗುತ್ತದೆ. ಮಸ್ಕಟ್ ಸಮೀಪದ ಆಸಿಬ್ ಎಂಬಲ್ಲಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣವಿದೆ. ನಗರದಲ್ಲಿ ಆಧುನಿಕ ಸೌಕರ್ಯಗಳೆಲ್ಲವೂ ಇದೆ. ಪರ್ಷಿಯ ಕೊಲ್ಲಿಗೆ ಹೋಗುವ ಮಾರ್ಗದಲ್ಲಿರುವ ಈ ನಗರ ವ್ಯಾಪಾರ ಮತ್ತು ರಕ್ಷಣೆ ದೃಷ್ಟಿಯಿಂದ ಮಹತ್ತ್ವ ಪಡೆದಿದೆ. (ಜಿ.ಪಿ.ಎಸ್.)

**ಮಹಬೂಬ್ ನಗರ:** ಆಂಧ್ರಪ್ರದೇಶ ರಾಜ್ಯದ ಒಂದು ಜಿಲ್ಲೆ; ಹಾಗೂ ಜಿಲ್ಲಾ ಆಡಳಿತ ಕೇಂದ್ರ ನಗರ. ಈ ಜಿಲ್ಲೆಯನ್ನು ಉತ್ತರದಲ್ಲಿ ರಂಗಾರೆಡ್ಡಿ ಮತ್ತು ಹೈದರಾಬಾದ್ ಜಿಲ್ಲೆಗಳೂ ಪೂರ್ವದಲ್ಲಿ ನಲ್ಗೊಂಡ, ಗುಂಟೂರು, ಆಗ್ನೇಯದಲ್ಲಿ ಪ್ರಕಾಶಮ್ ಜಿಲ್ಲೆಗಳೂ ದಕ್ಷಿಣದಲ್ಲಿ ಕರ್ನೂಲು, ಪಶ್ಚಿಮದಲ್ಲಿ ಕರ್ನಾಟಕ ರಾಜ್ಯದ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳು ಸುತ್ತುವರೆದಿವೆ. ಕೊಡಂಗಲ, ಮಕ್ತಲ್, ಮಹಬೂಬ್‌ನಗರ, ಜಡಚೇರ್ಲ, ಶಾದ್‌ನಗರ್, ಕಲ್ವಕೂರ್ತಿ, ನಾಗರಕರ್ನೂಲ, ವನಪಾರ್ತಿ, ಆತ್ಮಕೂರು, ಗದ್ವಾಲ್. ಆಲಮಪುರ್, ಕೊಲ್ಲಾಪುರ್ ಆಚಮ್‌ಪೇಟೆ ಇವು ತಾಲ್ಲೂಕುಗಳು. ಜಿಲ್ಲೆಯ ಒಟ್ಟು ವಿಸ್ತೀರ್ಣ 18,432 ಚ.ಕಿಮೀ. ಜನಸಂಖ್ಯೆ 35,13,934.

ಜಿಲ್ಲೆಯ ಪಶ್ಚಿಮ ಗಡಿಯಲ್ಲಿ ಕೃಷ್ಣ ಮತ್ತು ಭೀಮಾ ನದಿಗಳು ಕೂಡಿ ಸ್ವಲ್ಪ ದೂರ ಜಿಲ್ಲೆಯ ದಕ್ಷಿಣದ ಗಡಿಯಾಗಿ ಹರಿದು ಕರ್ನೂಲು ಜಿಲ್ಲೆಯಿಂದ ಇದನ್ನು ಬೇರ್ಪಡಿಸಿದೆ. ಜಿಲ್ಲೆಯ ದಕ್ಷಿಣದ ಉದ್ದಕ್ಕೂ ಪೂರ್ವಾಭಿಮುಖವಾಗಿ ಹರಿಯುವ ಈ ನದಿಯ ಉತ್ತರ ದಂಡೆಯುದ್ದಕ್ಕೂ ನೀರಾವರಿಗೆ ಹೆಚ್ಚು ಅನುಕೂಲವಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಜಿಲ್ಲೆಯಲ್ಲಿ ಕೆರೆಗಳ ಸಂಖ್ಯೆ ಹೆಚ್ಚು. ರಾಜೋಲಿಬಂಡಾ ಯೋಜನೆ, ಕೋಮಲ ಸಾಗರ ಮತ್ತು ಸರಲಾ ಸಾಗರ ಎಂಬ ಎರಡು ಮಧ್ಯಮ ತರಗತಿಯ ನೀರಾವರಿ ಯೋಜನೆಗಳಿಂದ ಜಿಲ್ಲೆಯಲ್ಲಿ ನೀರಾವರಿಗೆ ಹೆಚ್ಚು ಅನುಕೂಲವಿದೆ. ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ 86.23 ಸೆಂಮೀ ಮಳೆ ಬೀಳುವುದು. ಈ ಜಿಲ್ಲೆಯ ಅನೇಕ ಭಾಗಗಳಲ್ಲಿ ಅರಣ್ಯ ಪ್ರದೇಶವಿದೆ. ಜೋಳ, ಕಡಲೆ, ಬತ್ತ, ಅಗಸೆ, ಎಳ್ಳು, ಔಡಲ ಇಲ್ಲಿಯ ಮುಖ್ಯ ಬೆಳೆಗಳು. ಗದ್ವಾಲದಲ್ಲಿ ಕೈ ಮಗ್ಗದ ಬಟ್ಟೆ ತಯಾರಿಕೆ ಹೆಚ್ಚು ಪ್ರಸಿದ್ಧ. ಕೊತ್ತಕೋಟಾ ಎಂಬಲ್ಲಿಯ ಜನ ನೂಲು, ರೇಷ್ಮೆ ಮತ್ತು ಜರಿಯನ್ನು ಒಟ್ಟಿಗೆ ಸೇರಿಸಿ ನೇಯುವಲ್ಲಿ ಪ್ರವೀಣರೆಂದು ಹೆಸರಾಗಿರುವರು. ಜಿಲ್ಲೆಯಲ್ಲಿ ಹೆಚ್ಚು ಬೆಳೆಯುವ ತುಂಗಾ ಎಂಬ ಹುಲ್ಲಿನಿಂದ ಚಾಪೆಯನ್ನು ತಯಾರಿಸುವರು. ಮಹಬೂಬ್‌ನಗರ ಹೈದರಾಬಾದಿನ ನೈರುತ್ಯಕ್ಕೆ ಸು. 88 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,30,849. ಶಾಲಾಕಾಲೇಜುಗಳಿವೆ. ನಗರ ಆಧುನಿಕ ಸೌಲಭ್ಯಗಳಿಂದ ಕೂಡಿದೆ. ಹತ್ತಿ ಸಂಸ್ಕರಣ ಇಲ್ಲಿಯ ಮುಖ್ಯ ಕೈಗಾರಿಕೆಯಾಗಿದೆ. ಮುಖ್ಯ ರೈಲು ನಿಲ್ದಾಣವಿದ್ದು ಉತ್ತಮ ಸಾರಿಗೆ ಸಂಪರ್ಕಗಳಿಂದ ಕೂಡಿದೆ. (ಬಿ.)

**ಮಹಾನ್ ಅವರ ಸಮುದ್ರ ಶಕ್ತಿಯ ಮಾದರಿ:** ಪ್ರಪಂಚದಲ್ಲಿ ಪ್ರಥಮ ಬಾರಿಗೆ ಆಲ್‌ಫ್ರೆಡ್ ಥಾಯರ್ ಮಹಾನ್ ಅವರು (1840–1914) ಅಮೆರಿಕದ ನೌಕಾಧಿಕಾರಿಯಾಗಿ ರಾಜಕೀಯ ಭೂಗೋಳ ಶಾಸ್ತ್ರದ ಪ್ರಾಮುಖ್ಯತೆಯ ಆಧಾರವಾಗಿ ಸಮುದ್ರ ಶಕ್ತಿ ಪ್ರಾಮುಖ್ಯತೆ/ಪ್ರಭಾವವನ್ನು ವಿವರಿಸಿದರು. ಈ ಪರಿಕಲ್ಪನೆಯಲ್ಲಿ ಭೂ–ಹಂಚಿಕೆಯ ಆಧಾರದ ಮೇಲೆ ಸಮುದ್ರ ಶಕ್ತಿಯನ್ನು ಆರು ಪ್ರಮುಖ ಅಂಶಗಳಿಂದ ಯಾವುದೇ ಒಂದು ಪ್ರದೇಶವು ಬೆಳವಣಿಗೆ ಹಾಗೂ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆಂದು ವಿವರಿಸಿದ್ದಾರೆ. ಈ ಅಂಶಗಳೆಂದರೆ:



ಆಲ್ಫ್ರೆಡ್ ಮಹಾನ್, 1840-1914

1) ಆ ಪ್ರದೇಶದ ಭೌಗೋಳಿಕ ಸ್ಥಾನೀಕರಣ–ಯಾವುದೇ ಪ್ರದೇಶವು ಸಮುದ್ರದಿಂದ ಸುತ್ತುವರಿದ ಬಗೆ, ನದಿಗಳಿಂದ ಮತ್ತು ಸಮುದ್ರದ ಮೂಲಕ ನಡೆಯುವ ವ್ಯಾಪಾರ ಸಂಪರ್ಕ ಹಾಗೂ ವೈರಿಗಳಿಂದ ರಕ್ಷಣೆಗೆ ಬೇಕಾಗಿರುವ ಸಮುದ್ರ ಸ್ವರೂಪ.

2) ಆ ಪ್ರದೇಶದ ಸಮುದ್ರ ತೀರದ ರಚನೆ–ಆ ಪ್ರದೇಶದ ಸಮುದ್ರ ತೀರದಲ್ಲಿರುವ ಬಂದರುಗಳು, ಸಮುದ್ರ ತೀರದಲ್ಲಿರುವ ನದಿಯ V ಆಕಾರದ ನಾಲೆಗಳು, ಸಮುದ್ರದ ಒಳ ಮತ್ತು ಬಾಹ್ಯ ಖಾರಿಗಳು. ಇವೆಲ್ಲವುಗಳು ನಾವಿಕ ವ್ಯಾಪಾರಕ್ಕೆ ಪ್ರಭಾವ ಬೀರುವ ಅಂಶಗಳು.

3) ಆ ಪ್ರದೇಶದ ವಿಸ್ತರಣೆ–ಅಂದರೆ ಆದೇಶ ಹೊಂದಿದ ತೀರ ಪ್ರದೇಶದ ವಿಸ್ತಾರ.

4) ಆ ಪ್ರದೇಶ ಹೊಂದಿದ ಜನಸಂಖ್ಯಾ ಗಾತ್ರ – ಇದು ಬಹಳ ಪ್ರಮುಖ ಅಂಶ ಅತೀ ದೊಡ್ಡ ಜನಸಂಖ್ಯಾ ಗಾತ್ರದಿಂದ ಹಲವಾರು ಅನೂಕಲಗಳುಂಟು. ಅವುಗಳೆಂದರೆ ದೇಶ ಶಕ್ತಿ, ವ್ಯಾಪಾರ, ನೌಕಾಬಲದ ಹೆಚ್ಚಳ ಆ ದೇಶಕ್ಕೆ ಭದ್ರತೆ ಒದಗಿಸುತ್ತದೆ.

5) ಆ ಪ್ರದೇಶದ ಜನಾಂಗದ – ಜನರ ಸ್ವಭಾವ ನೌಕಾಬಲದ ವ್ಯಾಪಾರವೂ, ಜನಾಂಗದ ಸ್ವಭಾವ, ಸಂಸ್ಕೃತಿಯ ಮೇಲೆ ಅವಲಂಬಿತವಿರುತ್ತವೆ.

6) ಆ ದೇಶದ ಸರಕಾರ ಹಾಗೂ ಅದರ ನೀತಿ–ನಿಯಮಗಳು–ಇವು ಆರ್ಥಿಕತೆಯನ್ನು ನಿರ್ಧರಿಸುವ ಅಂಶಗಳು. ಈ ಮಾದರಿಯು ಒಂದು ದೇಶದ ಭೂ ಮತ್ತು ಸಮುದ್ರಗಳ ಆಧಾರದ ಮೇಲೆ ಆ ದೇಶದ ರಕ್ಷಣೆ, ಸೈನ್ಯ, ಜನಸಂಖ್ಯೆ, ಆರ್ಥಿಕ ವ್ಯಾಪಾರ ಇತ್ಯಾದಿಗಳ ಬೆಳವಣಿಗೆಯನ್ನು ಸೂಚಿಸುತ್ತದೆ. (ಎ.ಕೆ.ಡಬ್ಲ್ಯೂ.)

**ಮಹಾಬಲಿಪುರ:** ತಮಿಳುನಾಡಿನ ಚೆಂಗಲ್ಪಟ್ಟು ಜಿಲ್ಲೆಯಲ್ಲಿ, ಬಂಗಾಲಕೊಲ್ಲಿಯ ತೀರದಲ್ಲಿರುವ ಐತಿಹಾಸಿಕ ಸ್ಥಳ. ಚೆನ್ನೈನ ದಕ್ಷಿಣಕ್ಕೆ 58 ಕಿಮೀ ದೂರದಲ್ಲಿದೆ. ಪಲ್ಲವ ಶೈಲಿಯ ವಾಸ್ತುಶಿಲ್ಪ ಸಂಪತ್ತು ಸೌಂದರ್ಯಗಳಿಗೆ ಈ ಸ್ಥಳ ಪ್ರಸಿದ್ಧವಾಗಿದೆ. ಇದಕ್ಕೆ ಮಲ್ಲಪುರಮ್, ಮಾಮಲ್ಲಪುರಮ್, ತಿರಕ್ಕಡಮಲ್ಲೈ ಇತ್ಯಾದಿ ಹೆಸರುಗಳಿವೆ. ಪ್ರಾಚೀನ ಕಾಲದಲ್ಲಿ ಇದನ್ನು ಬಾಣಪುರವೆಂದು ಕರೆಯುತ್ತಿದ್ದರಂತೆ.

ಆಗ್ನೇಯ ಏಷ್ಯ ಹಾಗೂ ಮೆಡಿಟರೇನಿಯನ್ ದೇಶಗಳೊಡನೆ ಕಡಲ ವ್ಯಾಪಾರ ಸಂಬಂಧ ಹೊಂದಿದ್ದ ಈ ಊರು ಪ್ರಾಚೀನದಲ್ಲಿ ಪ್ರಧಾನ ರೇವು ಪಟ್ಟಣಗಳಲ್ಲೊಂದೆನಿಸಿತ್ತು. ಸಂಗಮ್ ಕಾಲದ ತಮಿಳು ಸಾಹಿತ್ಯದಲ್ಲಿಯ ಉಲ್ಲೇಖಗಳಿಂದ ಮತ್ತು ಈ ಪ್ರದೇಶದಲ್ಲಿ ಅನ್ವೇಷಿತವಾದ ರೋಮನ್ ನಾಣ್ಯಗಳಿಂದ ಇದಕ್ಕೆ ಪುಷ್ಟಿ ದೊರೆತಿದೆ. ಬೃಹದ್ಭಾರತದ ಪ್ರದೇಶಗಳಲ್ಲಿ ಭಾರತೀಯ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಬಿತ್ತಿದ ದಕ್ಷಿಣ ಭಾರತದ ವಲಸೆಗಾರರು ಹೊರಟ ರೇವುಪಟ್ಟಣಗಳಲ್ಲಿ ಮಹಾಬಲಿಪುರವೂ ಸೇರಿದೆ. ಜಾವ ಹಾಗೂ ಕಾಂಬೋಡಿಯಗಳಲ್ಲಿಯ ವಾಸ್ತುರಚನೆಗಳಲ್ಲಿ ಇಲ್ಲಿಯ ವಾಸ್ತುಶೈಲಿಯ ಗಣನೀಯ ಪ್ರಭಾವ ಪ್ರೇರಣೆ ಕಂಡುಬರುತ್ತದೆ.

ದೇಗುಲ ನಿರ್ಮಾಣದ ಇತಿಹಾಸದಲ್ಲಿ ಮಹಾಬಲಿಪುರದ ಏಕಶಿಲಾದೇವಾಲಯಗಳಿಗೆ ಪ್ರಮುಖ ಸ್ಥಾನವಿದೆ. ಈ ರಚನೆಗಳನ್ನು ಪಗೋಡ ರಥಗಳೆಂದು ಕರೆಯಲಾಗಿದೆ. ಬಹುಶಃ ಈ ರಥಗಳ ನಿರ್ಮಾಣಕ್ಕೆ ಪಶ್ಚಿಮ ಭಾರತದ ಗುಹಾವಿಹಾರಗಳು ಪ್ರೇರಕ. ಇಲ್ಲಿ ಇಂಥ ಒಂಬತ್ತು ಏಕಶಿಲಾ ರಚನೆಗಳಿವೆ– ದಕ್ಷಿಣದ ಸಮುದ್ರತೀರದಲ್ಲಿ ಐದು, ಊರಿನ ಮಧ್ಯದ ಗುಡ್ಡದಲ್ಲಿ ಒಂದು ಹಾಗೂ ಗುಡ್ಡದ ಪಶ್ಚಿಮ ಭಾಗದಲ್ಲಿ ಮೂರು. ಇದೊಂದು ಪ್ರಮುಖ ಪ್ರವಾಸಿ ಕೇಂದ್ರ. (ಎಚ್.ಎಂ.ಎನ್.ಆರ್.)

**ಮಹಾಬಲೇಶ್ವರ:** ಮಹಾರಾಷ್ಟ್ರದಲ್ಲಿರುವ ಒಂದು ಪ್ರಸಿದ್ಧ ಪುಣ್ಯಕ್ಷೇತ್ರ ಹಾಗೂ ಗಿರಿಧಾಮ. ಇದು ಸತಾರ ಜಿಲ್ಲೆಯ ವಾಯಿ ತಾಲ್ಲೂಕಿನಲ್ಲಿ ಪಶ್ಚಿದಲ್ಲಿರುವ ಸಹ್ಯಾದ್ರಿ ಪರ್ವತಶ್ರೇಣಿಯ ಒಂದು ಗಿರಿಶಿಖರ. ಪುಣೆಯಿಂದ ಸು. 120 ಕಿಮೀ ದೂರದಲ್ಲಿದೆ. ಸಮುದ್ರಮಟ್ಟದಿಂದ ಸು. 1370 ಮೀ ಎತ್ತರದಲ್ಲಿದೆ. ಇಲ್ಲಿ ಕೃಷ್ಣಾನದಿಯ ಅಧಿದೇವತೆ ಕೃಷ್ಣಾದೇವಿಗೆಂದೇ ಒಂದು ಮಂದಿರವನ್ನು ಕಟ್ಟಲಾಗಿದೆ. ಇಲ್ಲಿ ಕೃಷ್ಣಾದೇವಿಯ ಸುಂದರಮೂರ್ತಿಯಿದೆ. ದೇವಾಲಯದ ಪಶ್ಚಿಮಭಿತ್ತಿ ಬೆಟ್ಟವೇ ಆಗಿದ್ದು ಇದರಲ್ಲಿಯ ಐದು ರಂಧ್ರಗಳಲ್ಲಿ ನೀರು ಬರುತ್ತದೆ. ಈ ನೀರು ಮೊದಲು ಗೋಮುಖದಲ್ಲಿ ಹಾಯ್ದು ಮುಂದಕ್ಕೆ ನದಿಯಾಗಿ ಹರಿದಿದೆ. ಇದನ್ನು ಬ್ರಹ್ಮಕುಂಡ ಎಂದೂ ಹೇಳುತ್ತಾರೆ. ಇವಲ್ಲದೆ ರುದ್ರ, ಚಕ್ರ, ಹಂಸ ಪಿತೃ ಮುಕ್ತಿ, ಅರಣ್ಯ ಮತ್ತು ಮಲಾಪಕರ್ಷ ಎಂಬ ತೀರ್ಥಗಳೂ ಇಲ್ಲಿವೆ. (ಎಸ್.ಎಸ್.ಜಿ.ಎ.)

**ಮಹಾರಾಷ್ಟ್ರ:** ಭಾರತದ ಒಂದು ರಾಜ್ಯ. ದೇಶದ ಪಶ್ಚಿಮಕ್ಕಿರುವ ಈ ರಾಜ್ಯ ದಕ್ಷಿಣ ಮತ್ತು ಮಧ್ಯಭಾರತ ಪ್ರದೇಶಗಳಲ್ಲಿ ಚಾಚಿಕೊಂಡಿದ್ದು ಉತ್ತರದಲ್ಲಿ ಮಧ್ಯಪ್ರದೇಶ ಈಶಾನ್ಯ ಮತ್ತು ಪೂರ್ವಕ್ಕೆ ಚತ್ತೀಸ್‌ಗಡ್, ವಾಯವ್ಯದಲ್ಲಿ ಗುಜರಾತ್, ಪೂರ್ವಕ್ಕೆ ಆಂಧ್ರಪ್ರದೇಶ ದಕ್ಷಿಣದಲ್ಲಿ ಕರ್ನಾಟಕ ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಿಂದ ಸುತ್ತುವರೆದಿದೆ. 35 ಜಿಲ್ಲೆಗಳು 43,711 ಗ್ರಾಮಗಳು ಮತ್ತು 378 ಪಟ್ಟಣ ನಗರಗಳಿಂದ ಕೂಡಿರುವ ಈ ರಾಜ್ಯದ ವಿಸ್ತೀರ್ಣ 3,07,713 ಚ.ಕಿಮೀ. 5,03,34,270 ಮಂದಿ ಪುರುಷರು 46,417,977 ಮಂದಿ ಮಹಿಳೆಯರೂ ಇರುವ ಈ ರಾಜ್ಯದ ಒಟ್ಟು ಜನಸಂಖ್ಯೆ 9,67,52,247.




ರಾಜಧಾನಿ ಮುಂಬಯಿ. ಉತ್ತರ ಅಕ್ಷಾಂಶ 15°4′ ನಿಂದ 22°1′ – ಪೂರ್ವರೇಖಾಂಶ 72°6′ – 80°9′ ವರೆಗೆ ಹರಡಿದೆ.

ಮೇಲ್ಮೈಲಕ್ಷಣ : ಮಹಾರಾಷ್ಟ್ರ ವೈವಿಧ್ಯಮಯ ಭೂಪ್ರದೇಶದಿಂದ ಕೂಡಿದೆ. ಇಲ್ಲಿ ಮೈದಾನ, ಮಲೆನಾಡು, ಅರೆಮಲೆನಾಡು, ಸಮುದ್ರತೀರ ಪ್ರದೇಶ ಮತ್ತು ಪಶ್ಚಿಮ ಘಟ್ಟಗಳಿಂದ ಕೂಡಿದ ಬೆಟ್ಟಗುಡ್ಡ ಪ್ರದೇಶಗಳನ್ನು ಕಾಣಬಹುದು. ಮುಂಬಯಿ ಬಳಿ ವಿಶಾಲವಾಗಿ ಉಳಿದ ತೀರದಲ್ಲಿ ಅಷ್ಟೇನೂ ವಿಶಾಲವಲ್ಲದ ಸಮುದ್ರತೀರದ ಕೊಂಕಣ ಪ್ರದೇಶವಿದೆ, ಉದ್ದಕ್ಕೂ ಇರುವ ಅನೇಕ ಬೆಟ್ಟಗುಡ್ಡಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ಬಹಳಷ್ಟು ನದಿಗಳು ಉಗಮಿಸುವುವು. ಅವುಗಳಲ್ಲಿ ಹೆಚ್ಚಿನ ಸು. 80 ಕಿಮೀ ಗಿಂತಲೂ ಕಡಿಮೆ ಉದ್ದದ ಹರಿವುಳ್ಳವು. ಇವುಗಳಲ್ಲಿ ಭೋರಘಾಟದಲ್ಲಿ ಉಗಮಿಸುವ ಉಲ್ಲಾಸ್ ನದಿಯೊಂದೇ ಸು. 129 ಕಿಮೀ ಹರಿದು ಸಮುದ್ರ ಸೇರುತ್ತದೆ. ದಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿ ಸಹ್ಯಾದ್ರಿ ಪರ್ವತಶ್ರೇಣಿ ಮತ್ತು ಉತ್ತರದಲ್ಲಿ ಸಾತ್ಪುರ ಬೆಟ್ಟ ಶ್ರೇಣಿ ಇವೆ. ರಾಜ್ಯದ ದಕ್ಷಿಣ ಹಾಗೂ ಆಗ್ನೇಯ ಮತ್ತು ವಾಯವ್ಯದಲ್ಲಿ ಸಣ್ಣ ಬೆಟ್ಟ ಸಾಲುಗಳಿವೆ. ಮಹಾರಾಷ್ಟ್ರದ ಹೆಚ್ಚುಭಾಗ ಅಗ್ನಿಪರ್ವತದ ಲಾವಾರಸ ಎಂದು ಗುರುತಿಸಲಾಗಿದೆ. ರಾಜ್ಯದ ನೈರುತ್ಯ ಭಾಗದ ರತ್ನಗಿರಿ ಜಿಲ್ಲೆ ವಿವಿಧ ರೂಪಾಂತರಿತ ಅಗ್ನಿಶಿಲೆಯಿಂದ ಕೂಡಿದೆ. ಸಹ್ಯಾದ್ರಿ ಪರ್ವತಶ್ರೇಣಿ ಮಹಾರಾಷ್ಟ್ರದ ಜಲವಿಭಾಜಕ. ಇದು ಪಶ್ಚಿಮದ ಕೊಂಕಣ ಪ್ರದೇಶದ ನದಿಗಳನ್ನು ಪೂರ್ವಕ್ಕೆ ಹರಿಯುವ ಕೃಷ್ಣ, ಗೋದಾವರಿ ನದಿಗಳನ್ನು ಬೇರ್ಪಡಿಸಿದೆ. ರಾಜ್ಯದ ಹೆಚ್ಚು ಭಾಗ ಆವರಿಸಿರುವ ಪ್ರಸ್ಥಭೂಮಿ ಪೂರ್ವ ಮತ್ತು ಪಶ್ಚಿಮಕ್ಕೆ ಇಳಿಮುಖವಾಗಿದೆ. ಮಹಾಬಲೇಶ್ವರ (1,438 ಮೀ), ಸಪ್ತಶೃಂಗ ಮತ್ತು ಕಾಲ್‌ಸುಭಾಯ್ (1,646 ಮೀ) ಗಿರಿಶಿಖರಗಳನ್ನೊಳಗೊಂಡ ಪಶ್ಚಿಮ ಪ್ರಸ್ಥಭೂಮಿಯ ಸರಾಸರಿ ಎತ್ತರ ಸು. 900 ಮೀ. ಮಧ್ಯಪ್ರಸ್ಥ ಭೂಮಿಯ ಎತ್ತರ 300 ಮೀ ಗಿಂತಲೂ ಕಡಿಮೆಯಿದೆ. ಸಾತ್ಪರ ಬೆಟ್ಟಶ್ರೇಣಿ ನರ್ಮದಾ ಮತ್ತು ತಪತಿ ನದೀ ಕಣಿವೆಗಳ ಮಧ್ಯೆ ಸಮಾನಾಂತರವಾಗಿ ಹಬ್ಬಿದೆ. ಪಶ್ಚಿಮದ ತುರನ್ ಮಾಲ್ ಪ್ರಸ್ಥಭೂಮಿಯ ಎತ್ತರ ಸು. 1,000 ಮೀ ಸಾತ್‌ಮಲಾಸ್, ಬಲಘಾಟ್ ಮತ್ತು ಮಹಾದೇವ ಗಿರಿಶ್ರೇಣಿಗಳಿವೆ. ಇವೆಲ್ಲವೂ ಮೂಲ ಸಹ್ಯಾದ್ರಿ ಗಿರಿ ಶ್ರೇಣಿಗೆ ಸೇರಿದ್ದು 200–300 ಮೀ ಎತ್ತರವಾಗಿವೆ. ಇವು ಮಹಾರಾಷ್ಟ್ರದ ಪಶ್ಚಿಮ ತೀರದ ಉತ್ತರದಲ್ಲಿ ದಾಮನ್‌ಗಂಗ ನದಿ, ದಕ್ಷಿಣದಲ್ಲಿ ತೆರೆಕೋಲ್ ನದಿ ಅರಬ್ಬೀಸಮುದ್ರ ಸೇರುವವರೆಗೆ ಇವೆ. ಇತ್ತ ಸಹ್ಯಾದ್ರಿ ಸು. 45 ಕಿಮೀ ನಿಂದ 75 ಕಿಮೀ ವರೆಗೆ ಹರಡಿದೆ. ಈ ಪ್ರದೇಶ ಸಹ್ಯಾದ್ರಿಯಿಂದ ರಭಸವಾಗಿ ಹರಿಯುವ ನದಿ ತೊರೆಗಳಿಂದ ಕೂಡಿದೆ. ಭೀಮ, ಕೃಷ್ಣ, ಗೋದಾವರಿ, ತಪತಿ, ವಾರ್ಧ ಮತ್ತು ವೈನಗಂಗ ಇಲ್ಲಿಯ ಮುಖ್ಯ ನದಿಗಳು. ಮಹಾರಾಷ್ಟ್ರದ ಉತ್ತರ ಗಡಿಯ ಧೂಳೆ ಜಿಲ್ಲೆಯಲ್ಲಿ ಸು. 54 ಕಿಮೀ ದೂರ ನರ್ಮದ ನದಿ ಹರಿಯುವುದು. ತಪತಿನದಿ ಸು. 208 ಕಿಮೀ ದೂರ ಹರಿಯುವುದು,

ಪೂರ್ಣ ಇದರ ಉಪನದಿ. ಗೋದಾವರಿ ನದಿ ಈ ರಾಜ್ಯದಲ್ಲಿ ಎಲ್ಲೆಯಾಗಿ ಸಾಗಿ ಬಂಗಾಲಕೊಲ್ಲಿ ಸೇರುವುದು. ಮಧ್ಯಪ್ರದೇಶದ ಬೆಟ್ಟಗಳಲ್ಲಿ ಹುಟ್ಟಿ ಮಹಾರಾಷ್ಟ್ರದಲ್ಲಿ ಹರಿಯುವ ವಾರ್ದಾನದಿ ಮುಂದೆ ವೈನಗಂಗನದಿಯನ್ನು ಕೂಡಿಕೊಳ್ಳುವುದು. ವೈನಗಂಗನದಿ ಮಧ್ಯಪ್ರದೇಶದ ಬೆಟ್ಟಗಳಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಸು. 205ಕಿಮೀ ಹರಿದು ಅನಂತರ ವಾರ್ಧನದಿಯನ್ನು ಸೇರಿಸಿಕೊಂಡು ಮುಂದುವರಿದು ಗೋದಾವರಿಯನ್ನು ಕೂಡಿಕೊಳ್ಳುವುದು. ಪೆನಗಂಗ ಇದರ ಉಪನದಿ. ಭೀಮಾನದಿ ಸಹ್ಯಾದ್ರಿಯಲ್ಲಿ ಜನಿಸಿ ಮಹಾರಾಷ್ಟ್ರದಲ್ಲಿ 451 ಕಿಮೀ ದೂರ ಹರಿದು ಮುಂದೆ ಕರ್ನಾಟಕದಲ್ಲಿ ಕೃಷ್ಣನದಿಯನ್ನು ಕೂಡಿಕೊಳ್ಳುವುದು. ಸಿನ ಮತ್ತು ನಿರ ಈ ನದಿಯ ಉಪನದಿಗಳು, ಗೋದಾವರಿಯಷ್ಟೇ ಪ್ರಾಮುಖ್ಯ ಪಡೆದಿರುವ ಕೃಷ್ಣನದಿ ಸಹ್ಯಾದ್ರಿಯಲ್ಲಿ ಜನಿಸಿ ಮಹಾರಾಷ್ಟ್ರದಲ್ಲಿ 282 ಕಿಮೀ ಮಾತ್ರ. ಈ ನದಿಗಳು ಮಳೆಗಾಲದಲ್ಲಿ ತುಂಬಿ ರಭಸದಿಂದ ಹರಿಯುವುವು. ಇವುಗಳಲ್ಲಿ ವೈತರಣಿ, ಉಲ್ಲಾಸ, ಸಾವಿತ್ರಿ ಮತ್ತು ವಾಸಿಷ್ಠಿ ನದಿಗಳು ಮುಖ್ಯವಾದವು.

ವಾಯುಗುಣ : ಇಲ್ಲಿಯ ವಾಯುಗುಣ ಈಶಾನ್ಯ ಮತ್ತು ನೈಋತ್ಯ ಕ್ಲುಪ್ತಮಾರುತಗಳ ನಿಯಂತ್ರಣದಲ್ಲಿದೆ. ಮಾರ್ಚಿಯಿಂದ ಮೇ ತನಕ ಬೇಸಗೆ ಕಾಲವೆಂದೂ ಜೂನ್‌ನಿಂದ ಅಕ್ಟೋಬರ್ ತನಕ ಮಳೆಗಾಲವೆಂದೂ ನವೆಂಬರ್‌ನಿಂದ ಫೆಬ್ರವರಿ ತನಕ ಚಳಿಗಾಲವೆಂದೂ ವಿಂಗಡಿಸಬಹುದು. ಬಂಗಾಲಕೊಲ್ಲಿಯಿಂದ ಬೀಸುವ ಈಶಾನ್ಯ ಮಾರುತಗಳಿಂದ ಮಹಾರಾಷ್ಟ್ರದ ಪೂರ್ವ ಮತ್ತು ಉತ್ತರ ಭಾಗ ಹೆಚ್ಚು ಮಳೆ ಪಡೆಯುತ್ತದೆ. ಹಾಗೆಯೇ ನೈರುತ್ಯ ಮಾರುತಗಳು ಮಹಾರಾಷ್ಟ್ರದ ಪಶ್ಚಿಮ ಭಾಗವಾದ ಸಹ್ಯಾದ್ರಿಯ ಪಶ್ಚಿಮ ತಪ್ಪಲು ಮತ್ತು ತೀರ ಪ್ರದೇಶಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಈ ಪ್ರದೇಶದಲ್ಲಿ ಸು. 2.50 ರಿಂದ 3.50 ಸೆಂಮೀ ವರೆಗೆ ಮಳೆ ಬಿದ್ದಿರುವುದುಂಟು. ಆದರೆ ಇಲ್ಲಿಂದ ಪೂರ್ವಕ್ಕೆ ಹೋದಂತೆ ಮಳೆ ತೀರ ವಿರಳವಾಗುತ್ತದೆ. ಉದಾಹರಣೆಗೆ ಮಹಾಬಲೇಶ್ವರದಿಂದ ಕೇವಲ 15 ಕಿಮೀ ದೂರದಲ್ಲಿರುವ ಪಾಂಚಗನಿ ಎಂಬಲ್ಲಿ 1.86 ಸೆಂಮೀ. ಆದರೆ ಅದಕ್ಕೆ ಸ್ವಲ್ಪದೂರದಲ್ಲಿರುವ ಫಾಲ್ಟನ್ ಎಂಬಲ್ಲಿ 50 ಸೆಂಮೀ ಮಳೆ ಬೀಳುತ್ತದೆ. ಕೊಂಕಣ ತೀರಪ್ರದೇಶದಲ್ಲಿ ಬೇಸಗೆಯಲ್ಲಿ ಉಷ್ಣತೆ $30^0$ಸೆ ಚಳಿಗಾಲದಲ್ಲಿ $24^0$ಸೆ ಇರುವುದು ಸಾಮಾನ್ಯ. ಎರಡು ಕಾಲಗಳಲ್ಲಿ ತೇವಾಂಶ ಸಾಮಾನ್ಯವಾಗಿ ಒಂದೇ ಬಗೆಯಲ್ಲಿ ಇರುತ್ತದೆ. ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಒಮ್ಮೊಮ್ಮೆ ಅರಬ್ಬಿ ಸಮುದ್ರದ ಕಡೆಯಿಂದ ಬೀಸುವ ಚಂಡಮಾರುತಕ್ಕೆ ಈ ಪ್ರದೇಶ ಸಿಕ್ಕಿ ಆ ಕಾಲದಲ್ಲಿ ಹೆಚ್ಚು ಮಳೆಯ ಹೊಡೆತಕ್ಕೆ ಈಡಾಗುವುದುಂಟು. ಸಹ್ಯಾದ್ರಿಯ ಗಿರಿಶ್ರೇಣಿ ಮತ್ತು ಅದರ ಆಸುಪಾಸಿನಲ್ಲಿರುವ ಪ್ರದೇಶಗಳಲ್ಲಿ ಮತ್ತು ಮಹಾಬಲೇಶ್ವರದಂಥ (1,682 ಮೀ) ಎತ್ತರ ಪ್ರದೇಶಗಳಲ್ಲಿ ಹೆಚ್ಚು ಮಳೆ ಹಾಗೂ ಹೆಚ್ಚು ತಂಪಿನ ಹವಾಗುಣವಿದೆ. ಇಲ್ಲಿ ಉಷ್ಣತೆ ಏಪ್ರಿಲ್‌ನಲ್ಲಿ $24^0$ಸೆ ಇದ್ದರೆ ಜನವರಿಯಲ್ಲಿ $18.7^0$ಸೆ ಇರುತ್ತದೆ. ಮಹಾರಾಷ್ಟ್ರ ರಾಜ್ಯದ ವಿಸ್ತಾರಕ್ಕೆ ಅನುಗುಣವಾಗಿ ಮಳೆ ಮತ್ತು ವಾಯುಗುಣಗಳಲ್ಲಿ ಬದಲಾವಣೆಯನ್ನು ಗಮನಿಸಬಹುದು. ಈ ಬಗೆಯ ವ್ಯತ್ಯಾಸ ಅಲ್ಲಿಯ ಸಸ್ಯ ಸಮೃದ್ಧಿಯ ಮೇಲೂ ಜನಜೀವನದ ಮೇಲೂ ಪ್ರಭಾವ ಬೀರಿದ್ದು ಅವುಗಳಲ್ಲಿಯ ವೈವಿಧ್ಯವನ್ನು ಗುರುತಿಸಬಹುದು.

ಸಸ್ಯ ಮತ್ತು ಪ್ರಾಣಿ ಸಂಪತ್ತು: ಮಹಾರಾಷ್ಟ್ರದ ಅರಣ್ಯ ಸಂಪತ್ತು ಹೆಚ್ಚು ಆದಾಯ ತರುತ್ತಿದೆ, ಇದರಲ್ಲಿ ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳನ್ನು ಸಹ್ಯಾದ್ರಿಯ ಪಶ್ಚಿಮಕ್ಕಾದ ಹಾಗೆ ಸಾವಂತವಾಡಿ ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಕಾಣಬಹುದು. ಇವುಗಳಲ್ಲಿ 45 ಮೀ ಗಿಂತಲೂ ಎತ್ತರವಾದ ಮರಗಳು ಬೆಳೆಯುತ್ತವೆ. ಸು. 3.30 ಸೆಂಮೀ ಮಳೆ ಬೀಳುವುದರಿಂದ ಹೆಚ್ಚು ತೇವಾಂಶದಿಂದ ಕೂಡಿರುವ ಈ ಪ್ರದೇಶದ ದಟ್ಟ ಕಾಡುಗಳಲ್ಲಿ ನಾಗಸಂಪಿಗೆ, ಬಿಳಿದೇವದಾರು, ಹಲಸು, ತೇಗ, ನೆಲ್ಲಿ, ಕದಂಬ, ಬೂರುಗ, ಜಾಂಬುಲ್, ಪೂನ್ ಮೊದಲಾದ ಮರಗಳ ಜೊತೆಗೆ ಬಿದಿರು, ವಿವಿಧ ಬಗೆಯ ಬಳ್ಳಿಗಳು ಬೆಳೆಯುತ್ತವೆ. ಇದಲ್ಲದೆ ಮಳೆ ಮತ್ತು ವಾಯುಗುಣವನ್ನು ಅನುಸರಿಸಿ ಬೆಳೆಯುವ ಎಲೆ ಉದುರುವ ಕಾಡುಗಳು ಮುಳ್ಳುಗಿಡ, ಪೊದೆ ಮತ್ತು ಮುತ್ತುಗ, ಎಲಚಿ, ಕಾಚು ಮುಂತಾದ ಗಿಡಗಳ ಕಾಡುಗಳೂ ಇವೆ. ತೀರ ಪ್ರದೇಶದಲ್ಲಿ ಮ್ಯಾಂಗ್ರೋವ್ ಜಾತಿಯ ಗುಲ್ಮವೃಕ್ಷಗಳು, ತೆಂಗು, ಹಲಸು, ಮಾವು ಈ ಬಗೆಯ ಸಸ್ಯ ಸಮೃದ್ಧಿಯನ್ನೂ ಕಾಣಬಹುದು. ಸು. 63,065 ಚ.ಕಿಮೀ ಅರಣ್ಯ ಪ್ರದೇಶವಿದ್ದು ರಾಜ್ಯದ ಒಟ್ಟು ವಿಸ್ತಾರದಲ್ಲಿ ಶೇ. 21ರಷ್ಟು ಭಾಗ ಆವರಿಸಿದೆ. ಅರಣ್ಯ ಉತ್ಪನ್ನಗಳಲ್ಲಿ ತೇಗದಮರ, ಅಂಟು, ಬೊಂಬು, ನಾರು, ಮೇಣ, ಜೇನುತುಪ್ಪ ಮುಖ್ಯವಾದವು. ಹುಲಿ, ಚಿರತೆ, ಕಾಡುಕೋಣ, ವಿವಿಧ ಬಗೆಯ ಜಿಂಕೆ ಸಾರಂಗಗಳು, ಕತ್ತೆಕಿರುಬ, ಕಾಡುನಾಯಿ, ಕರಡಿ ಮೊದಲಾದವು. ನವಿಲು, ಬಾತುಕೋಳಿ ಮೊದಲಾದ ವಿವಿಧ ಜಾತಿಯ ಪಕ್ಷಿಗಳು, ಮಂಗಗಳು, ಹಾವುಗಳು ಈ ಅರಣ್ಯಗಳಲ್ಲಿವೆ.

ಜನ : ಮಹಾರಾಷ್ಟ್ರ ರಾಜ್ಯದಲ್ಲಿ ವಿವಿಧ ಬುಡಕಟ್ಟುಗಳ ಮಿಶ್ರ ಜನಾಂಗದವರು ಹೆಚ್ಚಾಗಿದ್ದಾರೆ. ವಲಸೆ ಬಂದ ಹೆಚ್ಚು ಜನ ಸ್ಥಳೀಯರೊಂದಿಗೆ ಬೆರೆತು ಹೋಗಿದ್ದಾರೆ. ಸಹ್ಯಾದ್ರಿ ಮತ್ತು ಸಾತ್ಪುರ ಗಿರಿಶ್ರೇಣಿಗಳ ಮೇಲೆ ಸು. 24 ಲಕ್ಷಕ್ಕೂ ಹೆಚ್ಚುಮಂದಿ ಆಸ್ಟ್ರಲಾಯಿಡ್ ಸಂತತಿಯ ಮೂಲನಿವಾಸಿಗಳಾದ ಭಿಲ್ಲವರು. ವಾರ್ಲಿಸ್, ಗೊಂಡಾ, ಕಾರ್ಕುಸ್, ಮತ್ತು ಗೋವಾರಿಸ್ ಜನರಿದ್ದಾರೆ. ಇವರು ಕಪ್ಪು ಬಣ್ಣದವರು ಮತ್ತು ಕುಳ್ಳರು. ಇವರ ತಲೆ ಉದ್ದ, ಮೂಗು ಚಪ್ಪಟೆ. ಮಹಾರಾಷ್ಟ್ರದ ಎಲ್ಲೆಡೆ ಇರುವವರೆಂದರೆ ಕಂದುಬಣ್ಣದ ಮಧ್ಯಮ ಮೈಕಟ್ಟಿನ ಕುಂಬೀ ಮರಾಠರು. ಮೂಲನಿವಾಸಿಗಳ ಮತ್ತು ವಲಸೆ ಬಂದವರು. ಚಿತ್ರ, ಮಹಾಲಕ್ಷ್ಮೀ ದೇವಾಲಯ ಕೊಲ್ಲಾಪುರ ಮಿಲನದಿಂದ ಅನೇಕ ಜಾತಿ, ಪಂಗಡಗಳು ಹುಟ್ಟಿಕೊಂಡಿವೆ. ಈ ಬಗೆಯ ಜನರನ್ನು ಹೆಚ್ಚಾಗಿ ರಾಜ್ಯದ ಪೂರ್ವ ಪ್ರದೇಶಗಳಲ್ಲಿ ಕಾಣಬಹುದು. 11ನೆಯ ಶತಮಾನದಲ್ಲಿ ತಮ್ಮ ಧರ್ಮರಕ್ಷಣೆಗಾಗಿ ಇರಾನ್‌ಬಿಟ್ಟು ಓಡಿಬಂದ ಎತ್ತರದ ನಿಲುವಿನ ಸುಂದರ ಮೈಕಟ್ಟಿನ ಪಾರ್ಸಿಜನರೂ ಇಲ್ಲಿದ್ದಾರೆ. ಇವರಲ್ಲದೆ ಭಾರತದ ವಿವಿಧ ಭಾಗಗಳಿಂದ ನಾನಾ ಕಾರಣಗಳಿಂದಾಗಿ ಬಂದು ನೆಲೆಸಿದ ವಿವಿಧ ಜನರಿದ್ದಾರೆ.

ಭಾಷೆ ಮತ್ತು ಧರ್ಮ : ಮರಾಠಿ ಇಲ್ಲಿನ ಪ್ರಧಾನ ಭಾಷೆ. ಇದರ ಜೊತೆಗೆ, ಬಳಕೆ ಬಾಷೆಗಳಲ್ಲಿ ಗುಜರಾತಿ, ಕನ್ನಡ, ಹಿಂದಿ, ಉರ್ದು, ತೆಲುಗು, ಸಿಂಧಿ, ಇಂಗ್ಲಿಷ್‌ಗಳು ಮುಖ್ಯವಾಗಿವೆ. ಇವಲ್ಲದೆ ಕೊಂಕಣಿ, ಗೊಂಡಿ ಮತ್ತು ಮುಂಡಾರಿ ಭಾಷೆಗಳನ್ನೂ ಬಳಸುವ ಜನರಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 80 ಭಾಗ ಹಿಂದುಧರ್ಮೀಯರು ಶೇ. 8 ಭಾಗ ಮುಸ್ಲಿಮರೂ ಶೇ. 7 ಭಾಗ ಬೌದ್ಧರೂ ಸಾಕಷ್ಟು ಮಂದಿ ಕ್ರಿಶ್ಚಿಯನ್ನರೂ ಸಿಖ್ಖರೂ ಜೈನಧರ್ಮೀಯರೂ ಇದ್ದಾರೆ.

ನೀರಾವರಿ ಮತ್ತು ವಿದ್ಯುತ್ತು : ಪಂಚವಾರ್ಷಿಕ ಯೋಜನೆಗಳಿಂದಾಗಿ ಈ ರಾಜ್ಯ ವಿದ್ಯುತ್ ಮತ್ತು ನೀರಾವರಿ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ. ಭೀಮಾ ನದೀಯೋಜನೆ ಮತ್ತು ವಿದರ್ಭಪ್ರಾಂತ್ಯದಲ್ಲಿ ವೈನಗಂಗಾ ನದಿಯ ಉಪನದಿ ಇತಿಯಾದೂ ನದೀಯೋಜನೆ ಈ ರಾಜ್ಯದ ಮುಖ್ಯ ಯೋಜನೆಗಳು. ಇವಲ್ಲದೆ ನೀರಾನದಿ ಎಡ ಮತ್ತು ಬಲ ದಂಡೆ ಕಾಲುವೆಯೋಜನೆ, ಪ್ರವರನದಿ, ಗಂಗಾಪುರ, ಫಾಡ್, ವಿರ್, ಖಡಕ್‌ವಾಸ್ಲಾ ಮತ್ತು ಪೂರ್ಣ ಈ ನದಿಯೋಜನೆಗಳಿಂದ ಸಾಕಷ್ಟು ನೀರಾವರಿಯಾಗುತ್ತದೆ. ಒಟ್ಟಿನಲ್ಲಿ 2000–2001ರಲ್ಲಿ 29.7 ಲಕ್ಷ ಹೆಕ್ಟೇರ್ ಭೂ ಪ್ರದೇಶ ನೀರಾವರಿಗೆ ಒಳಪಟ್ಟಿದ್ದು 223.8 ಲಕ್ಷ ಹೆಕ್ಟೇರುಗಳಲ್ಲಿ ಬಿತ್ತನೆ ಮಾಡಲಾಗಿತ್ತು. 2003ರ ಜೂನ್ ತಿಂಗಳ ಕೊನೆಯಲ್ಲಿ 32 ದೊಡ್ಡದಾದ, 178 ಮಧ್ಯಮವಾದ, ರಾಜ್ಯದ ಸು. 2,182 ಸಣ್ಣ ನೀರಾವರಿ ಯೋಜನೆಗಳು ಪೂರ್ಣಗೊಂಡಿದ್ದವು. 21 ದೊಡ್ಡದಾದ 34 ಮಧ್ಯಮ ಗಾತ್ರದ ಯೋಜನೆಗಳು ಜಾರಿಯಲ್ಲಿದ್ದು ಕಾರ್ಯಾರಂಭವಾಗಿದ್ದವು. 2002–03ರಲ್ಲಿ ಒಟ್ಟು 36.68 ಲಕ್ಷ ಹೆಕ್ಟೇರುಗಳು ನೀರಾವರಿಗೆ ಒಳಪಟ್ಟಿತ್ತು.

ಕೊಯ್ನ ಜಲವಿದ್ಯುತ್ ಮೂರು ಹಂತಗಳ ಯೋಜನೆಯಾಗಿದ್ದು ಇದರ ಕಾರ್ಯಮುಗಿದು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಈಗ ಮಹಾರಾಷ್ಟ್ರ ರಾಜ್ಯ ವಿದ್ಯುತ್ ಮಂಡಳಿ ಅದರ ಕಾರ್ಯನಿರ್ವಹಿಸುತ್ತಿದೆ. ಉಳಿದ ಹಂತಗಳ ಕಾರ್ಯ ಪ್ರಗತಿಯಲ್ಲಿದೆ. ತಾರಾಪುರ ಪರಮಾಣು ವಿದ್ಯುತ್ ಕೇಂದ್ರದಲ್ಲಿ 420 ಮೆವಾ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಮಹಾರಾಷ್ಟ್ರ ಮೊದಲು ದಕ್ಷಿಣ ಆಫ್ರಿಕದಿಂದ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲನ್ನು ಆಮದುಕೊಳ್ಳುತ್ತಿತ್ತು. ಅನಂತರ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತಿದೆ. ಡೀಸೆಲ್ ತೈಲೋತ್ಪಾದಿತ ವಿದ್ಯುತ್ ಮೊದಲ ಬಳಕೆಯಾಗಿತ್ತು. ಇದರ ಜೊತೆಗೆ ಉಷ್ಣೋತ್ಪಾದಿತ ವಿದ್ಯುತ್ ಬಳಕೆಗೆ ಬಂದಿತು. ಒಟ್ಟಿನಲ್ಲಿ 2003–04ರಲ್ಲಿ ಎಲ್ಲ ಬಗೆಯ ವಿದ್ಯುತ್ ಉತ್ಪಾದನೆ ಒಟ್ಟು 13,188 ಮೆವಾ ಆಗಿತ್ತು. 1983ರ ತನಕ ಮಹಾರಾಷ್ಟ್ರದ 31,310 ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿತ್ತು.

ಖನಿಜಸಂಪತ್ತು : ವಿದರ್ಭಜಿಲ್ಲೆಯ ಪೂರ್ವಭಾಗದಲ್ಲಿ ಮತ್ತು ರತ್ನಗಿರಿ ಜಿಲ್ಲೆಯ ದಕ್ಷಿಣ ಪ್ರದೇಶದಲ್ಲಿ ಹೆಚ್ಚು ಉಪಯುಕ್ತವಾದ ಕಲ್ಲಿದ್ದಲ ದೊರೆಯುತ್ತದೆ. ಇಲ್ಲಿ ಸು. 5,000 ಮಿ ಟನ್ನುಗಳಷ್ಟು ಕಲ್ಲಿದ್ದಲು ಸಂಗ್ರಹವಿದೆ ಎಂದು ಅಂದಾಜುಮಾಡಲಾಗಿದೆ. ಇವಲ್ಲದೆ ಕಬ್ಬಿಣದ ಅದಿರು, ಚೀನಿಮಣ್ಣು, ಕಾಗೆಬಂಗಾರ, ಕ್ರೋಮೈಟ್, ಸುಣ್ಣಕಲ್ಲು, ಇಲ್ಮನೈಟ್, ಮ್ಯಾಂಗನೀಸ್, ಕೆಯೋಲಿನ್, ಬಾಕ್ಸೈಟ್, ಡಾಲೊಮೈಟ್, ಸಿಲಿಕ, ಓಕರ್, ಕುರಂದ, ಕಯೋನೈಟ್ ಮತ್ತು ಸಮುದ್ರ ಉಪ್ಪು ಇಲ್ಲಿ ದೊರೆಯುತ್ತವೆ. ನಾಗಪುರ, ಚಂದಾ, ಇಯೋತ್ಮಲ್ ಜಿಲ್ಲೆಗಳಲ್ಲಿ ಇದ್ದಲು ಹೆಚ್ಚಾಗಿದೆ. ಉತ್ತಮ ಕಬ್ಬಿಣ ಅದಿರು ರತ್ನಗಿರಿ ಚಂದಾ, ಮತ್ತು ಬಾಂದರ ಜಿಲ್ಲೆಗಳಲ್ಲಿದೆ. ಬಾಂದರ ಮತ್ತು ನಾಗಪುರ, ಜಿಲ್ಲೆಗಳಲ್ಲಿ ಮ್ಯಾಂಗನೀಸ್ ಅದಿರು ನಿಕ್ಷೇಪವಿದೆ. ಚಂದಾ ಮತ್ತು ಇಯೋತ್ಮಲ್, ನಾಗಪುರ, ಸಾಂಗ್ಲಿ, ನಾಂದೇಡ್, ರತ್ನಗಿರಿ ಮತ್ತು ಥಾನ ಜಿಲ್ಲೆಗಳಲ್ಲಿ ಬಾಕ್ಸೈಟ್ ದೊರೆಯುತ್ತದೆ. ಇವಲ್ಲದೆ ಈ ರಾಜ್ಯದ ಕೆಲವೆಡೆ ತಾಮ್ರ, ಟಂಗ್‌ಸ್ಟನ್, ಫೆಲ್ಸ್‌ಪಾರ್, ಬಸಾಲ್ಟ್, ಬೆಣಚುಕಲ್ಲು ಮೊದಲಾದವೂ ದೊರೆಯುತ್ತವೆ.

2002ರಲ್ಲಿ 329 ಲಕ್ಷ ಟನ್ನು ಕಲ್ಲಿದ್ದಲ್ಲು, 35ಸಾವಿರ ಟನ್ನು ಕಬ್ಬಿಣದ ಅದಿರು, 102.1 ಲಕ್ಷ ಟನ್ನು ಸುಣ್ಣಕಲ್ಲು, 454,000 ಟನ್ನು ಮ್ಯಾಂಗನೀಸ್ ಅದಿರು, 348,000 ಟನ್ನು ಬಾಕ್ಸೈಟ್. 437,000 ಟನ್ನು ಉಪ್ಪು, 59,000ಟನ್ ಡಾಲೊಮೈಟ್, 102,000 ಟನ್ ಸಿಲಿಕ, 1807 ಟನ್ ಕಯೋನೈಟ್ ಉತ್ಪಾದಿಸಲಾಗಿತ್ತು.

ಕೃಷಿ : ಮಹಾರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಶೇ. 70 ಮಂದಿ ಗ್ರಾಮಾಂತರ ಪ್ರದೇಶಗಳಲ್ಲಿದ್ದು ಬೇಸಾಯವೇ ಇವರ ಜೀವನಾಧಾರ. ರಾಜ್ಯದ ಒಟ್ಟು 308 ಲಕ್ಷ ಹೆಕ್ಟೇರ್ ಭೂಮಿಯಲ್ಲಿ 201 ಲಕ್ಷ ಹೆಕ್ಟೇರ್ ಜಮೀನು ಬೇಸಾಯಯೋಗ್ಯ. ರಾಜ್ಯದ $^1/_3$ ಭಾಗ ಆಗಾಗ ಬರಗಾಲಕ್ಕೆ ಸಿಕ್ಕುವುದುಂಟು. ಬೇಸಾಯದ ಒಟ್ಟು ಭೂಮಿಯಲ್ಲಿ 29.4 ಲ. ಹೆಕ್ಟೇರು ಮಾತ್ರ ನೀರಾವರಿ ಸೌಲಭ್ಯ ಪಡೆದಿದೆ. ಇಷ್ಟಿದ್ದರೂ ಬೇಸಾಯದಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಬತ್ತ, ಹತ್ತಿ, ಗೋದಿ, ಜೋಳ, ಸಜ್ಜೆ, ಕಡಲೆ, ತೈಲಧಾನ್ಯಗಳನ್ನು ಬೆಳೆಸುತ್ತಾರೆ. ಕಬ್ಬು ಮತ್ತು ಸಕ್ಕರೆ ಉತ್ಪಾದನ ದೃಷ್ಟಿಯಿಂದ ಇಡೀ ಭಾರತದಲ್ಲಿ ಉತ್ತರ ಪ್ರದೇಶ ಮೊದಲಸ್ಥಾನ ಪಡೆದಿದ್ದರೆ ಮಹಾರಾಷ್ಟ್ರ ಎರಡನೆಯದು. ರಾಜ್ಯದಲ್ಲಿ 3,24,000 ಹೆ. ಭೂಮಿಯನ್ನು ಕಬ್ಬಿನ ಬೆಳೆಗೆ ಅಳವಡಿಸಲಾಗಿದ್ದು 62.12 ಲಕ್ಷ ಟನ್ ಸಕ್ಕರೆ ಮತ್ತು 3,157 ಟನ್‌ಗಳಷ್ಟು ಬೆಲ್ಲದ ಉತ್ಪಾದನೆ ಆಗಿದೆ. ಮಿಶ್ರ ತಳಿಬಿತ್ತನೆ ಬೀಜಗಳ ಉತ್ಪಾದನೆಯಲ್ಲಿ ಮಹಾರಾಷ್ಟ್ರ ಅಗ್ರಪಂಕ್ತಿಯಲ್ಲಿದೆ. ದೇಶದಲ್ಲಿ ಉತ್ಪಾದನೆಯಾಗುವ ಹೈಬ್ರಿಡ್ ಬೀಜಗಳ ಅರ್ಧದಷ್ಟು ಮಹಾರಾಷ್ಟ್ರರಾಜ್ಯ ಒಂದರಲ್ಲಿಯೇ ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ 150 ಹೈಬ್ರಿಡ್ ಬೀಜ ಸಂಸ್ಕರಣ ಕೇಂದ್ರಗಳಿದ್ದು 2,61,350 ಕ್ವಿಂಟಾಲ್ ಬೀಜಗಳು ಸಂಸ್ಕರಣಗೊಂಡು ವಿತರಣೆಗೊಳ್ಳುತ್ತವೆ. 12.00 ಹೆ ಜಮೀನಿನಲ್ಲಿ 7.3 ದಶಲಕ್ಷ ಕೆಜಿ ಹೊಗೆಸೊಪ್ಪು ಬೆಳೆಯುತ್ತದೆ. ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹೆಚ್ಚಾಗಿ ಹತ್ತಿ ಮತ್ತು ಶೇಂಗಾ ಬೆಳೆಸುತ್ತಾರೆ. ಚಳಿಗಾಲದ ಬೆಳೆಯಲ್ಲಿ ಗೋದಿ ಮುಖ್ಯವಾದದ್ದು. 100 ಸೆಂಮೀ ಗಿಂತ ಹೆಚ್ಚಾಗಿ ಮಳೆ ಬೀಳುವಲ್ಲಿ ಬತ್ತ ಹೆಚ್ಚಾಗಿ ಬೆಳೆಯುತ್ತಾರೆ. ಮಾವು, ಬಾಳೆ, ತೆಂಗು, ಗೇರುಹಣ್ಣು ಮತ್ತು ಬೀಜ, ಕಿತ್ತಲೆಹಣ್ಣು, ಸಪೋಟ, ಸೀಬೆ ಮುಂತಾದ ವಿವಿಧ ಫಲಗಳನ್ನೂ ಸಾಕಷ್ಟು ಬೆಳೆಸುತ್ತಾರೆ.

ಮತ್ಸ್ಯೋದ್ಯಮ : 720 ಕಿಮೀ ಉದ್ದದ ಕಡಲ ತೀರವಿರುವ ಈ ರಾಜ್ಯದಲ್ಲಿ ಮೀನುಗಾರಿಕೆ ಒಂದು ಮುಖ್ಯ ಕಸಬು, ಸು. 70,000 ಮಂದಿ ಈ ಉದ್ಯೋಗವನ್ನು ಅವಲಂಬಿಸಿದ್ದಾರೆ. ಅರಬ್ಬಿ ಸಮುದ್ರ ಮತ್ತು ಒಳನಾಡಿನ ನದಿಗಳಿಂದ ಮೀನು ಹಿಡಿಯುತ್ತಾರೆ. 2000–01ರಲ್ಲಿ ಸು. 4,02,800 ಟನ್ ಸಮುದ್ರ ಮೀನನ್ನೂ 1,23,300 ಟನ್ ಒಳನಾಡಿನ ನದಿ ಮೀನನ್ನೂ ಹಿಡಿಯಲಾಗಿತ್ತು.

ಪಶುಪಾಲನೆ : ಈ ರಾಜ್ಯದಲ್ಲಿ ಹೈನುಗಾರಿಕೆ ಮನೆ ಮನೆಯಲ್ಲಿ ನಡೆಯುವುದರ ಜೊತೆಗೆ ಸಂಘಟಿತ ಸ್ವರೂಪದಲ್ಲಿಯೂ ನಡೆಯುತ್ತದೆ. ಮುಂಬಯಿ, ಪುಣೆ, ಧುಳೆ, ನಾಸಿಕ, ವಾಡಿ, ಮಹಾಡ, ರತ್ನಗಿರಿ, ಖಾಲಾಪುರ, ಚಿಪಳೂಣ, ಚಾಳೀಸ್‌ಗಾಂವ, ಅಹಮದ್‌ನಗರ, ಸತಾರ, ಮಹಾಬಲೇಶ್ವರ, ಮೀರಜ್, ಸೊಲ್ಲಾಪುರ, ಕೊಲ್ಲಾಪುರ, ಗಾಗಪುರ, ಭೀಡ, ಔರಂಗಾಬಾದ್, ಚಂದ್ರಪುರ, ವಾರ್ಧಾ, ಅಮರಾವತಿ ಮುಂತಾದ 31 ಪಟ್ಟಣಗಳು ಹೈನುಗಾರಿಕೆಗೆ ಹೆಸರಾದುವು. ಇವುಗಳ ಹಾಲಿನ ಕೇಂದ್ರಗಳಿಂದ ಸರಾಸರಿ 23 ಲಕ್ಷ ಲೀಟರ್ ಹಾಲು ನಿತ್ಯ ಸಂಸ್ಕರಣಗೊಂಡು ರಾಜ್ಯದ ವಿವಿಧ ಭಾಗಗಳಿಗೆ ವಿತರಣೆಯಾಗುತ್ತದೆ.

ಕೈಗಾರಿಕೆ : ಬಟ್ಟೆ, ಸಕ್ಕರೆ, ಆಹಾರ ಪದಾರ್ಥಗಳ, ತಯಾರಿಕೆ, ವಿದ್ಯುತ್ ಉಪಕರಣ, ಪೆಟ್ರೋಲಿಯಮ್, ವಾಹನ ಮತ್ತು ಅವುಗಳ ಉಪಕರಣ, ರಬ್ಬರ್, ಕೈಗಾರಿಕೆಗಳಲ್ಲಿ ಬಳಕೆಗೆ ಬರುವ ರಾಸಾಯನಿಕಗಳು, ಬಣ್ಣ, ವಾರ್ನಿಷ್, ಮೇಣ ಮತ್ತು ರಾಸಾಯನಿಕ ಪದಾರ್ಥ ಉತ್ಪಾದನೆ ಇಲ್ಲಿಯ ಪ್ರಮುಖ ಕೈಗಾರಿಕೆಗಳು. ಇಲ್ಲಿ 2,247 ಬಟ್ಟೆಯ ಗಿರಣಿಗಳೂ 784 ಉಣ್ಣೆ ಮತ್ತು ರೇಷ್ಮೆ ಗಿರಣಿಗಳೂ ಇವೆ. 1981ರಲ್ಲಿ ವಿವಿಧ ಪ್ರಕಾರದ ಒಟ್ಟು 19,409 ಗಿರಣಿ ಹಾಗೂ ಕಾರ್ಖಾನೆಗಳು ಇದ್ದುವು. ಇವುಗಳಲ್ಲಿ ದಿನವೊಂದಕ್ಕೆ 11,81,732 ಕಾರ್ಮಿಕರಿಗೆ ಉದ್ಯೋಗಾವಕಾಶ ನೀಡುವ ಸಾಮರ್ಥ್ಯವಿದೆ. ಬೆರಳಚ್ಚು ಯಂತ್ರ ತಯಾರಿಕೆ, ರೇಡಿಯೊ, ಲೇತ್‌ಯಂತ್ರಗಳು, ಶೀತಕಗಳು ಮುಂತಾದ ಕೆಲವು ಆಧುನಿಕ ಯಂತ್ರೋಪಕರಣಗಳು ಇಲ್ಲಿ ತಯಾರಾಗುತ್ತವೆ. ವಿವಿಧ ಬಗೆಯ ಔಷಧ, ಗೊಬ್ಬರ ತಯಾರಿಕಾ ಕಾರ್ಖಾನೆಗಳಿವೆ. ಇರುವ ಒಟ್ಟು ಗಿರಣಿ ಕಾರ್ಖಾನೆಗಳಲ್ಲಿ ಅರ್ಧದಷ್ಟು ಮುಂಬಯಿ ಮಹಾನಗರ ಹಾಗೂ ಅದರ ಪಕ್ಕದಲ್ಲಿರುವ ಥಾನ ಜಿಲ್ಲೆಯಲ್ಲಿವೆ. ಆಯಾ ಪ್ರಕಾರದ ಕೈಗಾರಿಕೆಯ ಅಭಿವೃದ್ಧಿಗೆ ನೆರವಾಗಲು ವಿವಿಧ ಸಂಘಟಿತ ಸಂಸ್ಥೆಗಳುಂಟು. ಉದಾಹರಣೆಗೆ ಮಹಾರಾಷ್ಟ್ರ ರಾಜ್ಯ ಕೈಮಗ್ಗ ಕೈಗಾರಿಕಾ ನಿಗಮ. ಮಹಾರಾಷ್ಟ್ರ ರಾಜ್ಯಕೈಗಾರಿಕಾಭಿವೃದ್ಧಿ ನಿಗಮ, ಮಹಾರಾಷ್ಟ್ರ ರಾಜ್ಯ ಹೈನುಗಾರಿಕೆ ನಿಗಮ ಇತ್ಯಾದಿ. ರಾಜ್ಯದಲ್ಲಿ ಒಟ್ಟು 77 ಕೈಗಾರಿಕಾ ವಸಾಹತುಗಳಿವೆ.

ಈ ಕೈಗಾರಿಕೆಗಳ ಆರ್ಥಿಕ ಬಲಕ್ಕೆ ನೆರವಾಗುವಂಥ ದೊಡ್ಡ ದೊಡ್ಡ ಬ್ಯಾಂಕುಗಳೂ ವಿವಿಧ ಆರ್ಥಿಕ ಸಂಸ್ಥೆಗಳೂ ಇಲ್ಲಿವೆ. ಕೈಗಾರಿಕೆಗಳ ಅಭಿವೃದ್ಧಿಗೇ ಮೀಸಲಾದ ಹಣಕಾಸಿನ ನೆರವು ನೀಡಲು ಪ್ರತ್ಯೇಕ ನಿಗಮಗಳೂ ಸಂಸ್ಥೆಗಳೂ ಇವೆ. ಸರ್ಕಾರಿ, ಅರೆಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳಲ್ಲಿ ತಮ್ಮ ಅವಶ್ಯಕತೆಗೆ ತಕ್ಕಂತೆ ಹಣ ಒದಗಿಸಿಕೊಳ್ಳಲು ಇಲ್ಲಿ ಅವಕಾಶವಿದ್ದು ಕೈಗಾರಿಕೆಗಳ ಬೆಳವಣಿಗೆ ತೀವ್ರವಾಗಿ ನಡೆದಿದೆ. ಈ ರಾಜ್ಯ ಚಲನಚಿತ್ರ ತಯಾರಿಕೆಯಲ್ಲೂ ಪ್ರಸಿದ್ಧ. ಮುಂಬಯಿ ನಗರವನ್ನು ಭಾರತದ ಹಾಲಿವುಡ್ (ಬಾಲಿವುಡ್) ಎಂದು ಕರೆಯುತ್ತಾರೆ.

ಸಾರಿಗೆ ಸಂಪರ್ಕ : ರಾಜ್ಯದಲ್ಲಿ ರೈಲು, ರಸ್ತೆ, ವಾಯು ಮತ್ತು ಜಲಮಾರ್ಗ ಸಂಪರ್ಕಗಳಿವೆ. ಮುಂಬಯಿಯನ್ನು ಕೇಂದ್ರವಾಗಿಟ್ಟುಕೊಂಡು ರಾಜ್ಯದಲ್ಲಿ ಬ್ರಾಡ್‌ಗೇಜ್ ಮತ್ತು ನ್ಯಾರೋಗೇಜ್ ಮಾರ್ಗಗಳು ಸೇರಿದಂತೆ ಒಟ್ಟು 5,527 ಕಿ.ಮೀ ರೈಲು ಮಾರ್ಗವಿದೆ. ಭಾರತದ ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣ ರೈಲುಮಾರ್ಗಗಳು ವಾರ್ಧಾ ಮತ್ತು ನಾಗಪುರಗಳ ಮಧ್ಯೆ ಹಾದುಹೋಗಿವೆ. ವಿದ್ಯುತ್ ಮತ್ತು ಡೀಸೆಲ್ ಎಂಜಿನ್ನುಗಳ ಬಳಕೆಯಿದೆ. ಹವಾನಿಯಂತ್ರಿತ ರೈಲುಗಾಡಿಗಳೂ ಇವೆ. ಕೇಂದ್ರ ರೈಲು ವಿಭಾಗದ ಮುಖ್ಯ ಆಡಳಿತ ಕಚೇರಿ ಮುಂಬಯಿಯಲ್ಲಿದೆ. ಹಾಗೆಯೇ ಪಶ್ಚಿಮ ರೈಲ್ವೇಕೇಂದ್ರವೂ ಮುಂಬಯಿಯೇ ಆಗಿದೆ. ಮುಂಬಯಿ, ಪುಣೆ, ಔರಂಗಾಬಾದ್, ನಾಗಪುರ, ವಾರ್ಧಾ, ಕೊಲ್ಲಾಪುರ, ಅಹಮದ್‌ನಗರ, ಜಲಗಾಂವ, ಧೂಲಿಯ ಮೊದಲಾದ ರೈಲುಕೇಂದ್ರಗಳಿವೆ. ಇಲ್ಲಿಂದ ರಾಷ್ಟ್ರದ ಪೂರ್ವ, ದಕ್ಷಿಣ, ಉತ್ತರ, ಪಶ್ಚಿಮಕ್ಕೆಲ್ಲ ರೈಲುಸಂಪರ್ಕವಿದ್ದು ಪ್ರಮುಖ ನಗರಗಳಾದ ಬೆಂಗಳೂರು, ಚೆನ್ನೈ, ಕೋಲ್ಕತ, ದೆಹಲಿ, ಹೈದರಾಬಾದ್‌ಗಳಿಗೆ ನಿಯತ ರೈಲು ಸಂಚಾರವಿದೆ.

ರಾಜ್ಯದ ಒಟ್ಟು ರಸ್ತೆಗಳ ಉದ್ದ 2.29 ಲಕ್ಷ ಕಿಮೀ 86 ರಾಜ್ಯ ಹೆದ್ದಾರಿಗಳಿದ್ದು 33,406 ಕಿಮೀ ರಾಜ್ಯ ಹೆದ್ದಾರಿ; 4,88,248 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳು ; 97,913 ಕಿಮೀ ಗ್ರಾಮರಸ್ತೆಗಳು ಇವೆ. ರಾಷ್ಟ್ರದ 5 ಹೆದ್ದಾರಿಗಳು ಈ ರಾಜ್ಯದಲ್ಲಿ 2,400 ಕಿಮೀ ದೂರ ಹಾದುಹೋಗಿವೆ. ಇವು ದೆಹಲಿ, ಕೋಲ್ಕತ್ತ, ಅಲಹಾಬಾದ್ ಮತ್ತು ಬೆಂಗಳೂರು ನಗರಗಳನ್ನು ಸಂಪರ್ಕಿಸುತ್ತವೆ. ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ರಾಜ್ಯದ ನಾನಾ ಕಡೆಗಳಿಗೆ ಮತ್ತು ಸುತ್ತಲಿನ ರಾಜ್ಯಗಳಿಗೆ ಬಸ್ಸುಗಳ ಸಂಪರ್ಕ ಕಲ್ಪಿಸಿದೆ.

ಇಲ್ಲಿ ಉತ್ತಮ ಬಂದರುಗಳಿಲ್ಲ. ಮುಂಬಯಿ ಬಂದರನ್ನು ಬಿಟ್ಟರೆ ಮಿಕ್ಕವೆಲ್ಲ ಒಳನಾಡಿಗೆ ಸಂಪರ್ಕ ಕಲ್ಪಿಸಬಲ್ಲ ಸಮುದ್ರ ತೀರದ ಪುಟ್ಟ ರೇವುಗಳೇ ಹೊರತು ವ್ಯಾಪಾರಕ್ಕೆ, ದೊಡ್ಡ ಹಡಗುಗಳ ನಿಲ್ದಾಣಕ್ಕೆ ಅನುಕೂಲವಾಗಿಲ್ಲ. ಆದರೂ ಗುಜರಾತಿನಿಂದ ಹಿಡಿದು ಕರ್ನಾಟಕ–ಕೇರಳ ರಾಜ್ಯಗಳಿಗೆ ತೀರದಲ್ಲೇ ಸಂಚರಿಸುವ ಚಿಕ್ಕ ಹಡಗುಗಳ ಮೂಲಕ ವ್ಯಾಪಾರ ಮತ್ತು ಜನಸಾಗಣೆ ಕಾರ್ಯ ನಡೆಯುತ್ತಿದೆ. ಮುಂಬಯಿ ಹಡಗು ಕಟ್ಟೆ ಇಡೀ ಮಹಾರಾಷ್ಟ್ರ ರಾಜ್ಯದ ಪ್ರಮುಖ ಬಂದರು. ರೇವಾಸ್, ಮೊರದಾಂಬೋಲ್, ರತ್ನಗಿರಿ, ವಿಜಯದುರ್ಗ, ಮಲ್ವನ್ ಮತ್ತು ವೆಂಗುರ್ಲ ಇವು ಇತರೇ ಬಂದರುಗಳು. ಮಹಾರಾಷ್ಟ್ರ ರಾಜ್ಯದ ಸಮುದ್ರ ವ್ಯಾಪಾರ, ಜನ ಸಂಚಾರವೆಲ್ಲ ಹೆಚ್ಚಾಗಿ ಮುಂಬಯಿ ಬಂದರಿನಿಂದಲೇ ನಡೆಯುತ್ತದೆ. ಉಳಿದವು ಸ್ಥಳೀಯ ಅಗತ್ಯಗಳನ್ನು ಪೂರೈಸುತ್ತವೆ. ಒಟ್ಟು ಸಣ್ಣಪುಟ್ಟ 50 ಬಂದರುಗಳಿವೆ.

ವಾಯುಮಾರ್ಗದಲ್ಲೂ ಮಹಾರಾಷ್ಟ್ರ ರಾಜ್ಯ ಪ್ರಗತಿ ಸಾಧಿಸುತ್ತಿದೆ. ಮುಂಬಯಿ ಬಳಿಯ ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. ಇದಲ್ಲದೆ ಔರಂಗಾಬಾದ್, ಪುಣೆ ನಾಗಪುರಗಳಲ್ಲಿ ಮುಖ್ಯ ವಿಮಾನ ನಿಲ್ದಾಣಗಳು ಇದ್ದು ದೇಶದ ಇತರ ಮುಖ್ಯ ನಗರಗಳಿಗೆ ಇಲ್ಲಿಂದ ವಿಮಾನ ಸಂಪರ್ಕವಿದೆ. ಜನಸಂಚಾರ ಮತ್ತು ವ್ಯಾಪಾರದ ದೃಷ್ಟಿಯಿಂದ ಮಹಾರಾಷ್ಟ್ರದ ವಾಯುಯಾನ ಬಹಳಷ್ಟು ಮುಂದುವರಿದಿದೆ. ಕೋಲ್ಕತ್ತ, ಚೆನ್ನೈ, ಬೆಂಗಳೂರು, ಮಂಗಳೂರು, ದೆಹಲಿ, ಲಖನೌ, ಭೂಪಾಲ್, ಅಹಮದಾಬಾದ್, ಹೈದರಾಬಾದ್, ಉದಯಪುರ, ಜೋಧಪುರ ಮುಂತಾದೆಡೆಗೆ ಇಲ್ಲಿಂದ ನೇರ ವಾಯುಮಾರ್ಗ ಸಂಪರ್ಕವಿದೆ. ಅಲ್ಲದೆ ಹೊರ ದೇಶಗಳಿಗೂ ಇಲ್ಲಿಂದ ವಿಮಾನ ಸೌಕರ್ಯವಿದೆ. ಮಹಾರಾಷ್ಟ್ರದ ವ್ಯಾಪಾರ ವಾಣಿಜ್ಯ ಮತ್ತು ಸಂಪರ್ಕ ಕ್ಷೇತ್ರಗಳ ಅಭಿವೃದ್ಧಿಗೆ ಈ ವಿಮಾನ ಸಂಚಾರ ಸೌಲಭ್ಯದ ಕೊಡುಗೆಯೂ ಮುಖ್ಯವಾದದ್ದು. ಎಲ್ಲ ದರ್ಜೆಯ 24 ವಿಮಾನ ನಿಲ್ದಾಣಗಳಿವೆ.

ಶಿಕ್ಷಣ : ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 60.83 (2001) ಮಂದಿ ಅಕ್ಷರಸ್ಥರು. ಓದು ಬರೆಹ ತಿಳಿದ ಹೆಚ್ಚಿನ ಜನ ನಗರವಾಸಿಗಳು. ಸ್ಥಾನಿಕ ಸಂಸ್ಥೆಗಳ ಮೂಲಕ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣಕ್ಕಾಗಿ ವಿಶೇಷ ಗಮನಹರಿಸಲಾಗಿದೆ. 1982–83ರಲ್ಲಿ ಒಟ್ಟು 52,209 ಪ್ರಾಥಮಿಕ ಶಾಲೆಗಳಿದ್ದು ಅವುಗಳಲ್ಲಿ 88,24,000 ವಿದ್ಯಾರ್ಥಿಸೇರಿದ್ದರು. ಸು. 2,35,000ಜನ ಶಿಕ್ಷಕರು ಪ್ರಾಥಮಿಕ ಶಾಲೆಗಳಲ್ಲಿದ್ದಾರೆ. 360 ಶಿಕ್ಷಕ ತರಬೇತಿ ಕೇಂದ್ರಗಳು ರಾಜ್ಯದಲ್ಲಿವೆ. ಬೇಕಾಗುವ ಪಠ್ಯಪುಸ್ತಕಗಳ ಉತ್ಪಾದನೆ ಹಾಗೂ ವಿತರಣೆ ಮಾಡುತ್ತದೆ. ರಾಜ್ಯದಲ್ಲಿ ಮರಾಠಿ, ಗುಜರಾತಿ, ಉರ್ದು, ಸಿಂಧಿ, ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳುಂಟು. ರಾಜ್ಯದಲ್ಲಿ 6,989 ಮಾಧ್ಯಮಿಕಶಾಲೆಗಳಿವೆ. ಈ ಶಾಲೆಗಳಲ್ಲಿ ಸು. 1,30,000 ಶಿಕ್ಷಕರಿದ್ದಾರೆ. ರಾಜ್ಯದಲ್ಲಿ ಒಟ್ಟು 57 ಮಾಧ್ಯಮಿಕ ಶಿಕ್ಷಕರ ತರಬೇತಿ ಕಾಲೇಜುಗಳಿದ್ದು ಅವುಗಳಲ್ಲಿ ಪ್ರತಿವರ್ಷ 8000 ಶಿಕ್ಷಕರಿಗೆ ತರಬೇತಿ ದೊರೆಯುತ್ತದೆ. ಈ ರಾಜ್ಯದಲ್ಲಿ ಹೆಣ್ಣು ಮಕ್ಕಳಿಗೆ ಮಾಧ್ಯಮಿಕ ಶಾಲೆಯವರೆಗೂ ಉಚಿತಶಿಕ್ಷಣವಿದೆ. ಆದಿವಾಸಿ ಮಕ್ಕಳಿಗಾಗಿ ಆಶ್ರಮಶಾಲೆಗಳ ವ್ಯವಸ್ಥೆಯಿದ್ದು ಅವರು ಶಿಕ್ಷಣ ಮುಂದುವರಿಸಲು ನೆರವನ್ನು ನೀಡಲಾಗುತ್ತದೆ.

ರಾಜ್ಯದಲ್ಲಿ ಒಟ್ಟು 705 ಕಾಲೇಜುಗಳಿದ್ದು ಪ್ರತಿವರ್ಷ 6,14,097 ವಿದ್ಯಾರ್ಥಿಗಳು ಉಚ್ಚಶಿಕ್ಷಣ ಪಡೆಯುತ್ತಾರೆ, ಔದ್ಯೋಗಿಕ ಹಾಗೂ ವಿಶೇಷ ಶಿಕ್ಷಣ ವ್ಯವಸ್ಥೆಯುಳ್ಳ 1,271 ಕೇಂದ್ರಗಳಿದ್ದು 1,27,392 ಯುವಕ–ಯುವತಿಯರು ಅಲ್ಲಿ ತರಬೇತಿ ಪಡೆಯುವರು.

ರಾಜ್ಯದಲ್ಲಿ ಒಟ್ಟು 15 ಎಂಜಿನಿಯರಿಂಗ್ ಕಾಲೇಜುಗಳೂ 37 ಪಾಲಿಟೆಕ್ನಿಕ್‍ಗಳೂ 41 ಇತರ ಡಿಪ್ಲೊಮ ಸಂಸ್ಥೆಗಳೂ 182 ತಾಂತ್ರಿಕ ಶಿಕ್ಷಣ ಶಾಲೆಗಳೂ 80 ಔದ್ಯೋಗಿಕ ತರಬೇತಿ ಕೇಂದ್ರಗಳೂ ಉಂಟು. ರಾಜ್ಯದಲ್ಲಿ ಒಟ್ಟು 20 ವೈದ್ಯಕೀಯ ಕಾಲೇಜುಗಳಿದ್ದು ಅವುಗಳ ಪೈಕಿ 11 ಕಾಲೇಜುಗಳನ್ನು ಸರ್ಕಾರದ ವತಿಯಿಂದ ನಡೆಸಲಾಗುತ್ತಿದೆ. ಈ ಕಾಲೇಜುಗಳಲ್ಲಿ ಪ್ರತಿವರ್ಷ ಸು. 1,600 ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಾರೆ. ಈ ವೈದ್ಯಕೀಯ ಕಾಲೇಜುಗಳಲ್ಲಿ ನಾಲ್ಕು ದಂತವೈದ್ಯ ಕಾಲೇಜುಗಳು ಸೇರಿವೆ. ಮುಂಬಯಿ, ನಾಂದೇಡ್, ನಾಗಪುರಗಳಲ್ಲಿ ಸರ್ಕಾರೀ ಆಯುರ್ವೇದ ಕಾಲೇಜುಗಳೂ ಇನ್ನಿತರ 15 ಪಟ್ಟಣಗಳಲ್ಲಿ ಖಾಸಗೀ ಆಯುರ್ವೇದ ಕಾಲೇಜುಗಳೂ ಇದ್ದು ಈ ಎಲ್ಲ ಕಾಲೇಜುಗಳಲ್ಲಿ ಪ್ರತಿವರ್ಷ 920 ವಿದ್ಯಾರ್ಥಿಗಳು ಪ್ರವೇಶ ಪಡೆಯಬಲ್ಲರು. ಇವಲ್ಲದೆ ಪ್ರತಿವರ್ಷ 1,500 ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ 28 ಖಾಸಗಿ ಹೋಮಿಯೋಪತಿ ಕಾಲೇಜುಗಳೂ 140 ವಿದ್ಯಾರ್ಥಿಗಳಿಗೆ ಶಿಕ್ಷಣನೀಡುವ 3 ಯುನಾನಿ ಕಾಲೇಜುಗಳೂ ಇವೆ.

ರಾಜ್ಯದಲ್ಲಿ ಹತ್ತು ವಿಶ್ವವಿದ್ಯಾಲಯಗಳಿವೆ. ಮುಂಬಯಿ ವಿಶ್ವವಿದ್ಯಾಲಯ ಅತ್ಯಂತ ಹಳೆಯ ಹಾಗೂ ಪ್ರಸಿದ್ಧ ವಿಶ್ವವಿದ್ಯಾಲಯ. ಇದರ ಸ್ಥಾಪನೆ 1857ರಲ್ಲಿ. ನಾಗಪುರ ವಿಶ್ವವಿದ್ಯಾಲಯ (1925)ವಿಶ್ವವಿದ್ಯಾಲಯ, ಪುಣೆ ವಿಶ್ವವಿದ್ಯಾಲಯ, ಔರಂಗಾಬಾದ್ (1948); ಶ್ರೀಮತಿ ನಾಥಿಬಾಯಿ ದಾಮೋದರ ಥಾಕರ್ಸ್ಥೆ ಮಹಿಳೆಯರ ವಿಶ್ವವಿದ್ಯಾಲಯ, ಮುಂಬಯಿ (1949); ಶಿವಾಜಿ ವಿಶ್ವವಿದ್ಯಾಲಯ, ಕೊಲ್ಹಾಪುರ (1963); ಮಹಾತ್ಮಾಫುಲೆ ಕೃಷಿ ವಿಶ್ವ ವಿದ್ಯಾಲಯ, ರಾಹುರಿ, ಅಹಮ್ಮದ್‍ನಗರ (1968); ಪಂಜಾಬರಾವ್‍ದೇಶಮುಖ್ ಕೃಷಿ ವಿಶ್ವವಿದ್ಯಾಲಯ (ಕೃಷಿ ವಿದ್ಯಾಪೀಠ) ದಾಮೀಲಿ, ರತ್ನಗಿರಿ (1972), ಮರಾಠ ವಾಡ ಕೃಷಿ ವಿದ್ಯಾಲಯ, ಪರಭಣಿ (1972) ಇವು ಇತರ ವಿಶ್ವವಿದ್ಯಾಲಯಗಳು.

ಆರೋಗ್ಯ : ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಆಸ್ಪತ್ರೆಗಳಿರುವುದಲ್ಲದೆ. ಗ್ರಾಮಾಂತರ ಪ್ರದೇಶಗಳಲ್ಲಿ 1983–84ರಲ್ಲಿ 1,539 ಪ್ರಾಥಮಿಕ ಆರೋಗ್ಯಕೇಂದ್ರಗಳೂ 6,391 ಉಪಕೇಂದ್ರಗಳೂ 931 ಆಸ್ಪತ್ರೆಗಳೂ 318 ಕುಟುಂಬ ಕಲ್ಯಾಣಕೇಂದ್ರಗಳೂ 147 ಗ್ರಾಮಾಂತರ ಕುಟೀರ ಆಸ್ಪತ್ರೆಗಳೂ ಕಾರ್ಯನಿರತವಾಗಿದ್ದವು. 10,000 ಜನಸಂಖ್ಯೆಗೆ ಒಬ್ಬರಂತೆ ಗ್ರಾಮಗಳಲ್ಲಿ ಆರೋಗ್ಯ ಸೇವಕರನ್ನು ನಿಯಮಿಸಲಾಗಿದೆ. ಜನರ ಸರಾಸರಿ ಆಯುಷ್ಯ 59ವರ್ಷ. ಮಕ್ಕಳ ಅಕಾಲ ಮೃತ್ಯುವಿನ ಪ್ರಮಾಣ 1000ಕ್ಕೆ 177ರಿಂದ 61ಕ್ಕೆ ಇಳಿದಿದೆ. ಕುಟುಂಬಕಲ್ಯಾಣ ಯೋಜನೆಯ ಪ್ರಚಾರದಿಂದ ಜನನ ಪ್ರಮಾಣ ಪ್ರತಿ ಸಾವಿರಕ್ಕೆ 41ರಿಂದ 28ಕ್ಕೆ ಇಳಿದಿದೆ. ಮರಣ ಪ್ರಮಾಣ 18ರಿಂದ 8.7ಕ್ಕೆ ಇಳಿದಿದೆ. ರಾಜ್ಯದಲ್ಲಿ 46 ಮಲೇರಿಯ ನಿಯಂತ್ರಣ ಕೇಂದ್ರಗಳೂ 42 ಕುಷ್ಠ ರೋಗನಿಯಂತ್ರಣ ಕೇಂದ್ರಗಳೂ 36 ಕ್ಷಯ ರೋಗ ಕೇಂದ್ರಗಳೂ ಇವೆ.

ಸಹಕಾರ ಚಳವಳಿ : ಬೇಸಾಯದ ಅಭಿವೃದ್ಧಿಗೂ ಸಹಕಾರಿ ಚಳವಳಿಗೂ ಪರಸ್ಪರ ಸಂಬಂಧವಿದೆ. ಅಂತೆಯೇ ಈ ರಾಜ್ಯದಲ್ಲಿ ಭರದಿಂದ ನಡೆದ ಬೇಸಾಯ ಪ್ರಗತಿಗೆ ಸರಿಸಾಟಿಯಾಗಿ ಸಹಕಾರಿ ಕ್ಷೇತ್ರದ ಪ್ರಗತಿಯೂ ಆಗಿದೆ. ರಾಜ್ಯದಲ್ಲಿ 18,521 ಬೇಸಾಯ ಸಹಕಾರಿ ಸಂಘಗಳೂ 6,359 ಬೇಸಾಯೇತರ ಸಹಕಾರಿ ಸಂಘಗಳೂ 501 ಸಹಕಾರಿ ಮಾರುಕಟ್ಟೆಗಳೂ 17,767 ಸಕ್ಕರೆ ಕಾರ್ಖಾನೆ ಮತ್ತು ಬಟ್ಟೆ ಗಿರಣಿಗಳ ಸಹಕಾರಿ ಉತ್ಪಾದಕ ಘಟಕಗಳೂ 27,949 ಗ್ರಾಹಕ, ಗೃಹ ನಿರ್ಮಾಣಗಳಂಥ ಸಾರ್ವಜನಿಕ ಸೇವಾ ಸಹಕಾರಿ ಸಂಘಗಳೂ ಕಾರ್ಯನಿರತವಾಗಿವೆ. ಇಡೀ ರಾಷ್ಟ್ರದ ಸಹಕಾರ ಸಂಘಗಳ ಶೇ. 19ರಷ್ಟು ಅಂದರೆ 71,130 ಸಂಘಗಳು ಈ ರಾಜ್ಯದಲ್ಲಿವೆ ಸದಸ್ಯರ ಸಂಖ್ಯೆ 180 ಲಕ್ಷ.

ಪ್ರೇಕ್ಷಣೀಯ ಸ್ಥಳಗಳು : ಮಹಾರಾಷ್ಟ್ರದ ಐತಿಹಾಸಿಕ ಕೋಟೆ ಕೊತ್ತಳಗಳಲ್ಲಿ ಕೊಂಕಣ ತೀರದಲ್ಲಿರುವ ಜಂಜೀರ ದ್ವೀಪ ಕೋಟೆಗಳು, ಅಹಮ್ಮದ್‍ನಗರ, ಸೊಲ್ಲಾಪುರ, ಚಾಕರಣ, ಓಸಾ ಇಲ್ಲಿರುವ ಸಮನೆಲದ ಮೇಲಿರುವ ಕೋಟೆಗಳು ರಾಯಗಡ, ಸಿಂಹಗಡ, ಪುರಂದರಗಡ, ಪ್ರತಾಪಗಡ, ಪನ್ವೆಲ, ಸುಜ್ಞಾದುರ್ಗ, ವಿಜಯದುರ್ಗ ಮೊದಲಾದ ಜಲದುರ್ಗಗಳು ಪ್ರೇಕ್ಷಣೀಯವಾದವು. ಅಹಮ್ಮದ್‍ನಗರ ಕೋಟೆಯನ್ನು ಭಾರತದ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಸೆರೆಮನೆಯಾಗಿ ಉಪಯೋಗಿಸಲಾಗುತ್ತಿತ್ತು. ದಿವಂಗತ ಜವಹರಲಾಲ್ ನೆಹರು ಅವರು ಈ ಅಹಮ್ಮದ್‍ನಗರದ ಕೋಟೆ ಜೈಲಿನಲ್ಲಿರುವಾಗಲೇ ಅವರ ಪ್ರಸಿದ್ಧ ಗ್ರಂಥ ಡಿಸ್ಕವರಿ ಆಫ್ ಇಂಡಿಯ (1946) ಬರೆದದ್ದು. ಎಲ್ಲೋರ, ಅಜಂತ ಗುಹೆಗಳು ಪ್ರಪಂಚ ಪ್ರಸಿದ್ಧವಾದುವು. ಅಜಂತ ಗುಹೆಗಳಲ್ಲಿ ಬುದ್ಧನ ಜೀವನ ಹಾಗೂ ಬೌದ್ಧಧರ್ಮಕ್ಕೆ ಸಂಬಂಧಿಸಿದ ಚಿತ್ರಕಲೆಯ ಅಮರವೈಖರಿಯನ್ನು ಕಾಣಬಹುದು. ಎಲ್ಲೋರದಲ್ಲಿರುವ ಕೈಲಾಸ ದೇವಾಲಯ ಏಕ ಶಿಲೆಯಲ್ಲಿ ರಚಿಸಿರುವ ಭವ್ಯಮಂದಿರವಾಗಿದ್ದು ಪ್ರೇಕ್ಷಕರನ್ನು ಮುಗ್ಧರನ್ನಾಗಿಸುತ್ತದೆ. ಮಹಾಡಪಾಲಿ, ಲೇನ್ಯಾದ್ರಿ, ಓಝರ್, ಥೇಯುರ್, ರಂಜನಗಾಂವ್, ಮೋರೆಗಾಂವ್, ಸಿದ್ದಟೇಕ್ ಮೊದಲಾದ ಸ್ಥಳಗಳಲ್ಲಿಯ ಅಷ್ಟ ವಿನಾಯಕ ಮಂದಿರಗಳು ನೋಡತಕ್ಕವು. ರತ್ನಗಿರಿ ಜಿಲ್ಲೆಯಲ್ಲಿ ಪ್ರತಿ ಗಣಪತಿ ಮಂದಿರವನ್ನೂ ಸಮುದ್ರತೀರದ ಒಂದು ಬಂಡೆಗಲ್ಲಿನ ಮೇಲೆ ಕಟ್ಟಲಾಗಿದೆ. ಪಂಡರಾಪುರ ಕ್ಷೇತ್ರ ಬಲು ಪವಿತ್ರವೆನಿಸಿದೆ. ಸಂತ ಜ್ಞಾನೇಶ್ವರರ ಕಾರ್ಯಕ್ಷೇತ್ರ ಅಳಂದಿ ಇಂದಿಗೂ ಜನರನ್ನು ಆಕರ್ಷಿಸುತ್ತದೆ. ಅಂಬೆಜೋಗಾಯಿ, ಔದುಂಬರ, ದೇಹು, ಮಾಹುಲೆ ಜೇಹುನಿ, ನೇವಾನ್, ಪೈಠಣ, ಶೇಗಾಂವ್, ಶಿರಡಿ ಮೊದಲಾದವು ಮಹಾರಾಷ್ಟ್ರದಲ್ಲಿರುವ ತೀರ್ಥಕ್ಷೇತ್ರಗಳು. ಇವಲ್ಲದೆ ನಾಂದೇಡದಲ್ಲಿರುವ ಗುರುದ್ವಾರ, ಉಲ್ಲಾಸನಗರದ ಹಾಜಿಮಂಲಂಗ್ ದರ್ಗಾ, ಮುಂಬಯಿಯ ಸೇಂಟ್ ಮೇರಿ ಚರ್ಚ್ ಇತ್ಯಾದಿ ಸ್ಥಳಗಳು ವಿವಿಧ ಮತೀಯರನ್ನು ಆಕರ್ಷಿಸುತ್ತವೆ.

ಭಂಡಾರಾ ಜಿಲ್ಲೆಯಲ್ಲಿರುವ ನಾಗಝಿಣ ವನ್ಯಪ್ರಾಣಿ ಹಾಗೂ ನೀರ್ವಕ್ಕಿಗಳಿಗೆ ಹೆಸರಾಗಿದೆ. ಧೂಳೆ ಜಿಲ್ಲೆಯ ತೋರಣ ಮಲ್ಲ ಹಾಗೂ ಅಕೋಲಾ ಜಿಲ್ಲೆಯಲ್ಲಿರುವ ನರಹಾಲಾ ಇವು ಕಾಡು ಪ್ರಾಣಿಗಳಿಗಾಗಿ ಕಾದಿರಿಸಿದ ಪ್ರದೇಶಗಳು. ಮಾಥೇರಾನ್ ಮತ್ತು ಮಹಾಬಲೇಶ್ವರ ಜನಪ್ರಿಯ ಗಿರಿಧಾಮಗಳು. ಇವಲ್ಲದೆ ಮುಂಬಯಿ, ಪುಣೆ, ನಾಸಿಕ್, ಔರಂಗಾಬಾದ್ ಇತ್ಯಾದಿ ನಗರಗಳಲ್ಲಿ ಅನೇಕ ಐತಿಹಾಸಿಕ ಹಾಗೂ ಧಾರ್ಮಿಕ ಸ್ಥಳಗಳೂ ಸ್ಮಾರಕ ಕಟ್ಟಡಗಳೂ ಇವೆ.

ಆಡಳಿತ : 1960ಮೇ 1ರಂದು ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ್ದ ಮರಾಠವಾಡ ಹಾಗೂ ಮಧ್ಯಪ್ರದೇಶದಲ್ಲಿದ್ದ ವಿದರ್ಭ ವಿಭಾಗಗಳನ್ನೊಳಗೊಂಡು ಮಹಾರಾಷ್ಟ್ರ ರಾಜ್ಯ ಅಸ್ತಿತ್ವಕ್ಕೆ ಬಂತು. ಆಗ ಈ ರಾಜ್ಯದಲ್ಲಿ ಒಟ್ಟು 26 ಜಿಲ್ಲೆಗಳಿದ್ದುವು ಮುಂದೆ ಆಡಳಿತದ ಅನುಕೂಲತೆಯ ದೃಷ್ಟಿಯಿಂದ 1981 ಮೇ ತಿಂಗಳಿನಲ್ಲಿ ಸಿಂಧುದುರ್ಗ ಮತ್ತು ಜಾಲ್ನಾ ಜಿಲ್ಲೆಗಳನ್ನೂ 1982 ಆಗಸ್ಟ್ ತಿಂಗಳಿನಲ್ಲಿ ಲಾತೂರ್ ಮತ್ತು ಗಡಚಿರೋಲಿ ಜಿಲ್ಲೆಗಳನ್ನೂ ರಚಿಸಲಾಯಿತು. ಈಗ ಈ ರಾಜ್ಯದಲ್ಲಿ ಒಟ್ಟು 35 ಜಿಲ್ಲೆಗಳು ಇವೆ. ಈ ಜಿಲ್ಲೆಗಳ ಆಡಳಿತದ ಹೊಣೆ ಜಿಲ್ಲಾಧಿಕಾರಿಗಳದು. ಆಯಾ ಜಿಲ್ಲೆಯ ಅಭಿವೃದ್ಧಿ ಕಾರ್ಯ ಮತ್ತು ಯೋಜನೆಗಳನ್ನು ಹಾಗೂ ಗ್ರಾಮ ವಿಕಾಸದ ಹೊಣೆಯನ್ನು ಜಿಲ್ಲಾ ಪರಿಷತ್ತುಗಳು ನೋಡಿಕೊಳ್ಳುವುವು. ಮುಂಬಯಿ, ಥಾಣ, ಪುಣೆ, ಸೊಲ್ಲಾಪುರ, ನಾಗಪುರ, ಕೊಲ್ಹಾಪುರ, ನಾಸಿಕ್ ಮತ್ತು ಪಿಂಪರಿ–ಚಿಂಚವಾಡಗಳಲ್ಲಿ ಮಹಾನಗರಪಾಲಿಕೆಗಳೂ ಉಳಿದ ಪಟ್ಟಣಗಳಲ್ಲಿ ನಗರಪಾಲಿಕೆಗಳೂ ನಗರಾಡಳಿತ ನಿರ್ವಹಿಸುತ್ತಿವೆ. ಭಾರತದ ಒಂದು ರಾಜ್ಯವಾಗಿ ಮಹಾರಾಷ್ಟ್ರ ರಾಜ್ಯ ಸಂವಿಧಾನಾತ್ಮಕವಾಗಿ ಚುನಾಯಿತ ಸದಸ್ಯರಿಂದ ಕೂಡಿದ ವಿಧಾನಸಭಾ ಮತ್ತು ವಿಧಾನ ಪರಿಷತ್ತುಗಳನ್ನೊಳಗೊಂಡಿದೆ. ಮಂತ್ರಿ ಮಂಡಲ ಮತ್ತು ರಾಜ್ಯಪಾಲರು ಕಾರ್ಯಾಂಗ, ನ್ಯಾಯಾಂಗ ಮತ್ತು ಆಡಳಿತಾಂಗಗಳ ವರಿಷ್ಠರಾಗಿರುವರು. ಆಡಳಿತಾನುಕೂಲಕ್ಕೆ ರಾಜ್ಯವನ್ನು ಜಿಲ್ಲೆ ಮತ್ತು ಅದರ ಘಟಕಗಳಾಗಿ ವಿಂಗಡಿಸಲಾಗಿದೆ.

ಈ ರಾಜ್ಯದ ಕೆಲವು ಪ್ರಮುಖ ನಗರಗಳು ಮತ್ತು ಅವುಗಳ ಜನಸಂಖ್ಯೆ (2001). ಬೃಹನ್ ಮುಂಬಯಿ 16,368,094, ಜಲ್ನಾ : 2,35,529, ಪುಣೆ 37,55,525, ನಾಗಪುರ 21,22,965, ಸೊಲ್ಲಾಪುರ 5,73,038, ನಾಸಿಕ್ 10,76,967, ಕೊಲ್ಹಾಪುರ 4,97,554, ಔರಂಗಾಬಾದ್ 4,91,841, ಸಾಂಗಲಿ 4,47,632, ಭಿವಂಡಿ 5,98,703, ಅಮರಾವತಿ 5,49,370, ಮಾಲೇಗಾಂವ 4,09,190, ಅಕೋಲಾ 16,29,305, ಧೂಳೆ 34,11,423, ನಾಂದೇಡ 4,30,598. ಅಹಮ್ಮದ್ ನಗರ 7,14,941, ಜಲಗಾಲ 36,82,690, ಚಂದ್ರಪುರ 2,92,612, ಪರ್ಭಣಿ 2,59,170. ಗೋಂಧಿಯ 1,20,878. (ಬಿ.ಎ.ಎಸ್.)

**ಮಹಾವೃತ್ತ ದೂರ:** ಯಾವುದೇ ಒಂದು ಮಹಾವೃತ್ತ (ರೇಖಾಂಶ) ಮತ್ತೊಂದು ಮಹಾ ವೃತ್ತವನ್ನು (ಸಮಭಾಜಕ ವೃತ್ತ) ಛೇದಿಸುವುದಾದರೆ ಜ್ಯಾಮಿತಿಯ ಪ್ರಕಾರ ವರ್ತುಲಾಕಾರವಾಗಿದ್ದರೆ ಮಾತ್ರ ಸಾಧ್ಯ. ಇದು ನಕ್ಷಾಶಾಸ್ತ್ರಜ್ಞರಿಗೆ ಪ್ರಮುಖವಾದ ವಿಷಯವಾಗಿದೆ. ಸಮತಲ ಮೇಲ್ಮೈ ಮೇಲೆ ಅತಿ ಸಮೀಪದ ಎರಡು ಸ್ಥಾನಗಳ ಅಂತರವನ್ನು ಎರಡು ಮಹಾವೃತ್ತಗಳು ಸಂಧಿಸುವ ಸ್ಥಳ ವರ್ತುಲಗೋಳದ ಕೇಂದ್ರಭಾಗದಲ್ಲಿ ಮಾತ್ರ. ಹೀಗಾಗಿ ಸಮತಲದ ಮೇಲೆ ಎರಡು ಸ್ಥಳಗಳ ನಡುವಿನ ಅತಿ ಸಮೀಪದ ಅಂತರವನ್ನು ತಿಳಿಯುವುದು ಅಗತ್ಯವಾಗಿರುತ್ತದೆ.

ಮಹಾವೃತ್ತದ ಮೂಲಕ ವಾಯುಮಾರ್ಗ ಹಾಗೂ ಜಲಸಾರಿಗೆಯ ಅಂತರವನ್ನು ಕಡಿಮೆಗೊಳಿಸಿ ಪ್ರಯಾಣಿಸಲು ಸೂಕ್ತವಾದ ಮಾರ್ಗಸೂಚಿಯಾಗಿದೆ. ಈ ಮಾರ್ಗ ಕಾಲವನ್ನು ಮತ್ತು ಖರ್ಚನ್ನು ಉಳಿಸುವಂತದು. ರೇಡಿಯೋ ಅಲೆಗಳು ಹಾಗೂ ಎಲೆಕ್ಟ್ರಾನಿಕ್ ಅಲೆಗಳು ಮಹಾವೃತ್ತಗಳನ್ನು ಅನುಸರಿಸುತ್ತವೆ. ಮಹಾವೃತ್ತ ಮಾರ್ಗ ಸಮೀಪದ ಸಾರಿಗೆ ಮಾರ್ಗ ಹಾಗೂ ಆರ್ಥಿಕವಾಗಿ ಲಾಭದಾಯಕವೂ ಆಗಿದೆ. ವರ್ತುಲಾಕಾರದ ಸಮತಲ ಸಾರಿಗೆಯನ್ನು ಕೈಗೊಳ್ಳುವಾಗ ಮಹಾವೃತ್ತ ಮಾರ್ಗವನ್ನು ಅನುಸರಿಸಬಹುದು. ಪ್ರಾಯೋಗಿಕವಾಗಿ ಮಹಾವೃತ್ತದ ದೂರವನ್ನು ಪಾಲಿಸಲು ಹಲವಾರು ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಸಾರಿಗೆ ಪ್ರಾರಂಭವಾಗುವ ಹಾಗೂ ಮುಕ್ತಾಯಗೊಳ್ಳುವ ಸ್ಥಳಗಳು ಒಂದೇ ವೃತ್ತದಲ್ಲಿದ್ದಾಗ ಅನುಕೂಲವಾಗಿರುತ್ತದೆ.

ರೇಖಾಂಶಗಳು ಮತ್ತು ಸಮಭಾಜಕ (ಮಹಾವೃತ್ತ) ವೃತ್ತವನ್ನು ಮಹಾವೃತ್ತಗಳು ಎಂದು ಸರಳರೇಖಾವಿಧಾನ ಜಾಲದಲ್ಲಿ (ಮರ್ಕೆಟರ್) ವಿವರಿಸಲಾಗಿದೆ. ಸಮಭಾಜಕ ವೃತ್ತವನ್ನು ಹೊರತು ಪಡಿಸಿ ಗೋಳದ ಇತರೆ ಮಾರ್ಗಗಳಲ್ಲಿ ಸಮುದ್ರಯಾನ ಮಾಡುವಾಗ ದಿಕ್ಕನ್ನು ಬದಲಾಯಿಸಬೇಕಾಗುತ್ತದೆ. (ವಿ.ಎಸ್.ಎ.)

**ಮಳವಳ್ಳಿ:** ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು. ಜಿಲ್ಲೆಯ ಆಗ್ನೇಯ ಭಾಗದಲ್ಲಿದೆ. ಪಶ್ಚಿಮ ಮತ್ತು ದಕ್ಷಿಣದಲ್ಲಿ ತಿರುಮಕೂಡಲು ನರಸೀಪುರ, ಆಗ್ನೇಯದಲ್ಲಿ ಕೊಳ್ಳೇಗಾಲ, ಪೂರ್ವದಲ್ಲಿ ಕನಕಪುರ, ವಾಯವ್ಯದಲ್ಲಿ ಮಂಡ್ಯ, ಉತ್ತರದಲ್ಲಿ ಮದ್ದೂರು ಮತ್ತು ಚನ್ನಪಟ್ಟಣ ತಾಲ್ಲೂಕುಗಳು ಸುತ್ತುವರಿದಿವೆ. ಕಿರುಗಾವಲು, ಬೊಪ್ಪೇಗೌಡನಪುರ, ಮಳವಳ್ಳಿ ಮತ್ತು ಹಲಗೂರು ಹೋಬಳಿಗಳು. ಒಟ್ಟು 186 ಗ್ರಾಮಗಳಿವೆ. ವಿಸ್ತೀರ್ಣ 804 ಚ.ಕಿಮೀ. ಜನಸಂಖ್ಯೆ 2,81,345.

ಕಾವೇರಿ ನದಿಯ ಕಣಿವೆಯಲ್ಲಿ ಸಮುದ್ರ ಮಟ್ಟದಿಂದ ಸು. 762 – 914 ಮೀ ಎತ್ತರದಲ್ಲಿ ಇದೆ. ಇದರ ದಕ್ಷಿಣ ಭಾಗದಲ್ಲಿ ಬಿಳಿಗಿರಿರಂಗನ ಬೆಟ್ಟದಿಂದ ಮುಂದುವರಿದ ಕಣಶಿಲೆಯ ಬೆಟ್ಟಗಳು ಕಂಡುಬರುತ್ತವೆ. ಪೂರ್ವ ಭಾಗದಲ್ಲಿ ಸಣ್ಣ ಬೆಟ್ಟಗಳ ಶ್ರೇಣಿ ಹಾದು ಹೋಗಿದೆ. ಕಬ್ಬಾಳದುರ್ಗ ಈ ಭಾಗದ ಅತ್ಯುನ್ನತ ಶಿಖರ (1,069 ಮೀ). ತಾಲ್ಲೂಕಿನ ಹೆಚ್ಚು ಭಾಗ ಸಾಮಾನ್ಯ ಏರಿಳಿತಗಳಿಂದ ಕೂಡಿ, ಉತ್ತರದಿಂದ ದಕ್ಷಿಣದ ಕಡೆಗೆ ಇಳಿಜಾರಾಗಿದೆ. ಕಾವೇರಿ ನದಿ, ತಾಲ್ಲೂಕಿನ ದಕ್ಷಿಣ ಮೇರೆಯಾಗಿ ತಿರುಮಕೂಡಲು ನರಸೀಪುರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳನ್ನು ಬೇರ್ಪಡಿಸುತ್ತದೆ. ಇದು ತಾಲ್ಲೂಕಿನ ಆಗ್ನೇಯದ ಅಂಚಿನಲ್ಲಿ, ಬೆಳಕವಾಡಿಯ ಹತ್ತಿರ ಇಬ್ಭಾಗವಾಗಿ ಶಿವಸಮುದ್ರ ಎಂಬ ದ್ವೀಪ ರೂಪಿಸಿ ಮುಂದೆ ಈ ಸೀಳುಗಳು ಕಂದರದ ಮೂಲಕ ಹರಿದು ಸು. 92 ಮೀ ಎತ್ತರದಿಂದ ಗಗನಚುಕ್ಕಿ ಮತ್ತು ಭರಚುಕ್ಕಿಗಳೆಂಬ ಎರಡು ಪ್ರತ್ಯೇಕ ಜಲಪಾತಗಳಾಗಿ ಧುಮುಕುತ್ತವೆ. ಮಳವಳ್ಳಿ ತಾಲ್ಲೂಕಿನ ಹೆಚ್ಚು ಭಾಗ ಕಾವೇರಿ ಮತ್ತು ಶಿಂಷಾ ನದಿಗಳ ಬಯಲು ಪ್ರದೇಶ.

ಈ ತಾಲ್ಲೂಕಿನ ನೆಲಮಾಕನಹಳ್ಳಿ, ಗುರುದೇವರಹಳ್ಳಿ ಮತ್ತು ಅರಸಿನಕೆರೆಯ ಬಳಿ ಕೊರಂಡಮ್ ದೊರೆಯುತ್ತದೆ. ಕನ್ನಳ್ಳಿ ಹತ್ತಿರದ ಸೂಳೆಕೆರೆ ಪ್ರದೇಶದಲ್ಲಿ ಚೌಳುಪ್ಪು ಸಿಗುವುದು. ಮಳವಳ್ಳಿ, ಹಲಗೂರು ಮತ್ತು ಶಿವಸಮುದ್ರಗಳ ಸುತ್ತಮುತ್ತ ಕಬ್ಬಿಣಾಂಶವುಳ್ಳ ಮ್ಯಾಗ್ನಟೈಟ್ ಶಿಲೆಗಳಿವೆ.

ತಾಲ್ಲೂಕಿನಲ್ಲಿ ವರ್ಷಪೂರ್ತಿ ಹಿತಕರ ಹವೆ ಇರುತ್ತದೆ. ತಾಲ್ಲೂಕಿನ ಹೆಚ್ಚು ಭಾಗದಲ್ಲಿ ಒರಟಾದ ಮರಳುಮಿಶ್ರಿತ ಮತ್ತು ಜೇಡುಮಿಶ್ರಿತ ಕೆಂಪುಮಣ್ಣು ಕಂಡು ಬರುವುದು. ಭೂಮಿ ಅಷ್ಟಾಗಿ ಫಲವತ್ತಾಗಿಲ್ಲ. ಆದರೆ ಹಳೆ ಕಾಲುವೆ ಪ್ರದೇಶಗಳಲ್ಲಿಯ ಜೇಡುಮಣ್ಣು ಹೆಚ್ಚು ಫಲವತ್ತಾಗಿದೆ. ಮಳವಳ್ಳಿಗೆ 19 ಕಿಮೀ ದೂರದಲ್ಲಿರುವ ಹರಡಿಹಳ್ಳದ ಕೆರೆ, ಕಾವೇರಿ ಮತ್ತು ಶಿಂಷಾ ನದಿಗಳ ಕಟ್ಟೆಗಳಿಂದ ಬರುವ ಕಾಲುವೆಯ ಶಾಖೆಗಳು ಮತ್ತು ಭೀಮಾ ತೊರೆಗೆ ದಳವಾಯಿ ಕೋಡಿಹಳ್ಳಿ ಹತ್ತಿರ ನಿರ್ಮಿಸಿರುವ ಜಲಾಶಯ–ಇವು ಈ ತಾಲ್ಲೂಕಿನ ಮುಖ್ಯ ನೀರಾವರಿ ಸೌಲಭ್ಯಗಳು. ಬತ್ತ, ರಾಗಿ, ಜೋಳ ಈ ತಾಲ್ಲೂಕಿನ ಮುಖ್ಯ ಬೆಳೆಗಳು. ಇದು ಮಂಡ್ಯ ಜಿಲ್ಲೆಯಲ್ಲೇ ಜೋಳ ಬೆಳೆಯುವ ಪ್ರಮುಖ ಪ್ರದೇಶ. ನೆಲಗಡಲೆ, ಕಬ್ಬು, ದ್ವಿದಳ ಧಾನ್ಯಗಳು, ಹಿಪ್ಪುನೇರಿಳೆ ಇತರ ಹೆಸರಿಸಬಹುದಾದ ಬೆಳೆಗಳು.

ಗೃಹ ಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಮಾತ್ರ ಈ ತಾಲ್ಲೂಕಿನಲ್ಲಿವೆ. ಇಲ್ಲಿ ರೇಷ್ಮೆ ಹುಳು ಸಾಕಣೆ ಮತ್ತು ಮೊಟ್ಟೆ ತಯಾರುಮಾಡುವ ಬಿತ್ತನೆ ಕೋಠಿಗಳು ವಿಶೇಷವಾಗಿ ಕಂಡುಬರುತ್ತವೆ. ಸಾವಿರಾರು ಕುಟುಂಬಗಳಿಗೆ ಇದೊಂದು ಉಪಕಸಬು. ಮಳವಳ್ಳಿ ಮತ್ತು ಹಲಗೂರುಗಳಲ್ಲಿ ಚರ್ಮ ಹದ ಮಾಡುವ ಮತ್ತು ಪಾದರಕ್ಷೆಗಳ ತಯಾರಿಕೆಯ ಕೈಗಾರಿಕೆ ಇದೆ. ಹಲವೆಡೆ ಅಕ್ಕಿ ಗಿರಣಿಗಳು, ಕಬ್ಬು ಅರೆಯುವ ಗಾಣಗಳು ಮತ್ತು ಕೈಮಗ್ಗದ ಬಟ್ಟೆ ತಯಾರಿಕೆ ಕೇಂದ್ರಗಳಿವೆ. ಶಿವಸಮುದ್ರದಲ್ಲಿ ವಿದ್ಯುದುತ್ಪಾದನೆಯ ಆಗಾರವಿದೆ.

ಈ ತಾಲ್ಲೂಕಿಗೆ ರೈಲುಸಂಪರ್ಕವಿಲ್ಲ. ಸಮೀಪದ ರೈಲುನಿಲ್ದಾಣ ಮಂಡ್ಯ. ಎಲ್ಲ ಗ್ರಾಮಗಳಿಗೂ ರಸ್ತೆ ಸೌಲಭ್ಯ ಉಂಟು. ತಾಲ್ಲೂಕಿನಲ್ಲಿ ಶಿಶುವಿಹಾರಗಳು, ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ವಯಸ್ಕರ ಶಿಕ್ಷಣ ತರಬೇತಿಕೇಂದ್ರ ಮತ್ತು ಒಂದು ಕಾಲೇಜು ಇವೆ. ವಿದ್ಯುತ್, ಅಂಚೆ ತಂತಿ ಮತ್ತು ದೂರವಾಣಿ ಸೌಲಭ್ಯಗಳ ಜೊತೆಗೆ ಆಸ್ಪತ್ರೆ ಮತ್ತು ಔಷಧಾಲಯಗಳೂ ಇವೆ. ಒಂದು ಕುಟುಂಬ ಯೋಜನಾ ಕೇಂದ್ರ ಮತ್ತು ಐದು ಪ್ರಾಥಮಿಕ ಆರೋಗ್ಯ ಘಟಕಗಳುಂಟು. ಈ ತಾಲ್ಲೂಕಿಗೆ ಸಂಬಂಧಿಸಿದ ಮುಖ್ಯ ಸ್ಥಳಗಳಲ್ಲಿ ತಾಲ್ಲೂಕಿನ ದಕ್ಷಿಣದ ಎಲ್ಲೆಯ ಬಳಿ ಇರುವ ಶಿವಸಮುದ್ರ ಗಗನಚುಕ್ಕಿ ಭರಚುಕ್ಕಿ ಜಲಪಾತಗಳಿಂದ ಮತ್ತು ವಿದ್ಯುದುತ್ಪಾನೆಯ ಆಗಾರದಿಂದ ಬಲು ಪ್ರಸಿದ್ಧವಾಗಿದೆ. ಅಲ್ಲದೆ ಶಿಂಷಾಪುರದಲ್ಲಿ ಸಹ ಒಂದು ಚಿಕ್ಕ ವಿದ್ಯುದುತ್ಪಾದನಾಗಾರವಿದೆ. ಮಳವಳ್ಳಿಯ ದಕ್ಷಿಣಕ್ಕೆ ಸು. 2 ಕಿಮೀ ದೂರದಲ್ಲಿರುವ ಮಾರೇಹಳ್ಳಿಯಲ್ಲಿ ನರಸಿಂಹ ದೇವಾಲಯವಿದೆ. ಇಲ್ಲಿರುವ 1104ರ ಒಂದು ಕನ್ನಡ ಶಾಸನದಲ್ಲಿ ದೇವಾಲಯವನ್ನು ರಾಜಾಶ್ರಯ ವಿನ್ನಗರಮ್ ಎಂದು ಕರೆಯಲಾಗಿದೆ. ರಾಜಾಶ್ರಯ ಎಂಬುದು ಚೋಳದೊರೆ ಒಂದನೆಯ ರಾಜರಾಜನ ಒಂದು ಬಿರುದಾಗಿತ್ತಾದ್ದರಿಂದ ಈ ದೇವಾಲಯ ಮೂಲತಃ ಅವನ ಕಾಲದ್ದು. ಆದರೆ ಮುಂದೆ ಹೊಯ್ಸಳ ಮತ್ತು ವಿಜಯನಗರ ಆಳ್ವಿಕೆಯ ಕಾಲದಲ್ಲಿ ಅನೇಕ ಸೇರ್ಪಡೆಗಳಾಗಿವೆ. ದೇವಾಲಯದ ಮೂಲ ಲಕ್ಷ್ಮೀನರಸಿಂಹ ಬಲುಸುಂದರ ವಿಗ್ರಹ. ಮೇ ಅಥವಾ ಜೂನ್ ತಿಂಗಳಿನಲ್ಲಿ ನಡೆಯುವ ಈ ದೇವರ ರಥೋತ್ಸವ ಬಹುಜನರನ್ನು ಆಕರ್ಷಿಸುತ್ತದೆ.

ಮಳವಳ್ಳಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಪಟ್ಟಣ. ಮಂಡ್ಯದ ಆಗ್ನೇಯಕ್ಕೆ 28 ಕಿಮೀ ದೂರದಲ್ಲಿದೆ. ಮೈಸೂರಿನಿಂದ ಇಲ್ಲಿಗೆ 42 ಕಿಮೀ, ಬೆಂಗಳೂರಿನಿಂದ 120 ಕಿಮೀ. ಜನಸಂಖ್ಯೆ 35,800.

ಮಳವಳ್ಳಿಯಲ್ಲಿ ರೇಷ್ಮೆ ಸಾಕಣೆ ಮತ್ತು ಬಿತ್ತನೆ, ಚರ್ಮದ ಕೈಗಾರಿಕೆ ಮತ್ತು ಪಾದರಕ್ಷೆಗಳ ತಯಾರಿಕೆ ಮುಂತಾದ ಗೃಹಕೈಗಾರಿಕೆಗಳಿವೆ. ಈ ಪಟ್ಟಣ ಈ ಪ್ರದೇಶದಲ್ಲಿ ಮುಖ್ಯ ವ್ಯಾಪಾರ ಕೇಂದ್ರ. ಕೃಷಿ ಸಹಕಾರ ವಾಣಿಜ್ಯ ಬ್ಯಾಂಕುಗಳಿವೆ. ಒಂದು ಸರ್ಕಾರಿ ರೇಷ್ಮೆ ಕೋಠಿ ಇದೆ. ಬತ್ತ, ಬೆಲ್ಲ, ಚರ್ಮದ ವಸ್ತುಗಳು ಇಲ್ಲಿಂದ ನಿರ್ಯಾತವಾಗುತ್ತವೆ. ಇಲ್ಲಿ ಹದಿನೈದು ದಿವಸಗಳಿಗೊಮ್ಮೆ ಸಂತೆ ನಡೆಯುತ್ತದೆ. ಪಟ್ಟಣದಲ್ಲಿ ಸುರಕ್ಷಿತನೀರು ಸರಬರಾಜು. ವಿದ್ಯುತ್, ಅಂಚೆ ತಂತಿ, ದೂರವಾಣಿ, ಪ್ರಾಥಮಿಕ ಆರೋಗ್ಯಕೇಂದ್ರ ಮೊದಲಾದ ಸೌಲಭ್ಯಗಳಿವೆ. ಶಾಲೆಗಳು ಹಾಗೂ ಒಂದು ಕಲೆ ಮತ್ತು ವಿಜ್ಞಾನ ಕಾಲೇಜು ಇದೆ. ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ.
*

**ಮಳೆ:** ವಾಯುಮಂಡಲದಲ್ಲಿರುವ ನೀರಾವಿ ಘನೀಕರಿಸಿ (ಕಂಡೆನ್ಸ್) ಭೂಮಿಗೆ ಬೀಳುವ ನೀರಹನಿ (ರೇನ್). ವಾಯುವಿನಲ್ಲಿ ಸದಾಕಾಲ ನೀರಾವಿ ಇದ್ದೇ ಇರುತ್ತದೆ. ಇದರ ಮೊತ್ತ ಕಾಲದಿಂದ ಕಾಲಕ್ಕೆ ಮತ್ತು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿರುತ್ತದೆ. ವಾಯುವಿನ ಈ ತೇವಧಾರಣ ಸಾಮರ್ಥ್ಯ ಉಷ್ಣತೆಯನ್ನು ಅವಲಂಬಿಸಿದೆ. ಅಂದರೆ ಉಷ್ಣತೆ ಏರಿದಂತೆ ಇದೂ ಏರುತ್ತದೆ. ನಿರ್ದಿಷ್ಟ ಉಷ್ಣತೆಯಲ್ಲಿರುವ ವಾಯು ತನ್ನ ತೇವಧಾರಣ ಸಾಮರ್ಥ್ಯದ ಮಿತಿ ತಲುಪಿದಾಗ ಜಲ ಸಂತೃಪ್ತವಾಗಿದೆ (ಸ್ಯಾಚುರೇಟೆಡ್) ಎನ್ನುತ್ತೇವೆ. ಹೆಚ್ಚಿನ ಸಂದರ್ಭಗಳಲ್ಲಿ ವಾಯು ಸಂತೃಪ್ತವಾಗಿರುವುದಿಲ್ಲ. ಪ್ರಾರಂಭದಲ್ಲಿ ಅಸಂತೃಪ್ತವಾಗಿರುವ ಒಂದಿಷ್ಟು ಮೊತ್ತದ ವಾಯು ತಣಿದಾಗ ಅದರ ಸಾಪೇಕ್ಷ್ಯ ಆರ್ದ್ರತೆ (ರಿಲೆಟಿವ್ ಹ್ಯುಮಿಡಿಟಿ) ಹೆಚ್ಚಾಗುತ್ತದೆ. ಶೀತಲನವನ್ನು (ತಣಿಸಿಕೆ) ಕ್ರಮಶಃ ಮುಂದುವರಿಸಿ ಸಾಪೇಕ್ಷ್ಯಾರ್ದ್ರತೆಯನ್ನು ಶೇ. 100ಕ್ಕೆ ಏರಿಸಬಹುದು. ಆಗ ವಾಯು ಸಂತೃಪ್ತವಾಗುತ್ತದೆ. ಇನ್ನೂ ಕಡಿಮೆ ಉಷ್ಣತೆಯಲ್ಲಿ ಅದು ಸಂತೃಪ್ತವಾಗಿರಲು ಕಡಿಮೆ ತೇವ ಸಾಕು. ಹೀಗಾಗಿ ಈ ಮೊತ್ತಕ್ಕಿಂತ ಹೆಚ್ಚಿನದು ಉಳಿತಾಯವಾಗುತ್ತದೆ (ಸರ್ಪ್ಲಸ್). ಶೀತಲೀಕರಣಗೊಂಡ ವಾಯು ಇದನ್ನು ಧರಿಸಲಾರದು. ಆಗ ಈ ಹೆಚ್ಚುವರಿ ನೀರಾವಿ ಅತ್ಯಂತ ಸೂಕ್ಷ್ಮ ನೀರ ಹನಿಗಳಾಗಿ ಘನೀಕೃತವಾಗುತ್ತದೆ. ಒಂದು ವೇಳೆ ವಾಯು ಏನಾದರೂ ಅತಿ ನಿರ್ಮಲವೂ ಪರಿಶುದ್ಧವೂ ಆಗಿದ್ದಿದ್ದರೆ ಶೀತಲೀಕರಣಗೊಂಡ ನೀರಾವಿ ಸುಲಭವಾಗಿ ಕಣ್ಣಿಗೆ ಕಾಣುವ ಮತ್ತು ಗಾತ್ರವಿರುವ ನೀರ ಹನಿಗಳಾಗಿ ಘನೀಕೃತವಾಗುತ್ತಿರಲಿಲ್ಲ. ವಸ್ತುತಃ ವಾಯು ಅಸಂಖ್ಯ ಧೂಳಕಗಳಿಂದಲೂ ಹೊಗೆ ಮತ್ತು ಕಡಲಿನಿಂದ ಎರಚಲ್ಪಟ್ಟ ಉಪ್ಪಿನ ಕಣಗಳಿಂದಲೂ ಕೂಡಿರುತ್ತದೆ: 1 ಘನ ಸೆಂಮೀ ನಲ್ಲಿ ಸಾವಿರಾರು ಇಂಥ ಕಣಗಳು ಇರುವುದುಂಟು. ಇವು ತಮ್ಮ ಸುತ್ತಲೂ ನೀರಹನಿಗಳು ರೂಪುಗೊಳ್ಳುವ ಕ್ರಿಯೆಯನ್ನು ಪ್ರೇರೇಪಿಸುತ್ತವೆ. ಇವುಗಳಿಗೆ ಘನೀಕೃತ ಬೀಜಕೇಂದ್ರಗಳು (ಕಂಡೆನ್ಸೇಷನ್ ನ್ಯೂಕ್ಲಿಯೈ) ಎಂದು ಹೆಸರು. ಸೂಕ್ಷ್ಮಗಾತ್ರದ ಈ ನೀರಹನಿಗಳು ವಾಯುವಿನ ಉನ್ನತಸ್ತರಗಳಲ್ಲಿ ಮೋಡವಾಗಿ ತೇಲುತ್ತಿರುತ್ತವೆ. ಮೋಡದಲ್ಲಿಯ ನೀರಹನಿಗಳು ಸಾಧಾರಣವಾಗಿ ಅತ್ಯಂತ ಕಿರಿಯಗಾತ್ರದವು. ಹೀಗಾಗಿ ಅವು ಮೋಡದ ತಳದಲ್ಲಿಯ ಊರ್ಧ್ವವಾಯುಪ್ರವಾಹಗಳಿಂದ ಮೇಲಕ್ಕೆ ಒಯ್ಯಲ್ಪಟ್ಟು ಅಂತರಿಕ್ಷದಲ್ಲಿ ತೇಲುತ್ತಿರುತ್ತವೆ. ಮೋಡಗಳ ರಚನೆಗೂ ಅಸ್ತಿತ್ವಕ್ಕೂ ಇವು ಅಗತ್ಯ. ನೀರಹನಿಗಳು ಇವನ್ನು ಎದುರಿಸಿ ಗುರುತ್ವದ ಸೆಳೆತದಿಂದ ಕೆಳಬೀಳಬೇಕಾದರೆ ಒಂದೊಂದು ಹನಿಯ ವ್ಯಾಸವೂ 1 ಮಿಮೀ ಅಥವಾ ಹೆಚ್ಚು ಪ್ರಮಾಣದಲ್ಲಿರಬೇಕು.

ಮೋಡದಲ್ಲಿಯ ನೀರ ಹನಿಗಳು ಎರಡು ಮುಖ್ಯಪ್ರಕ್ರಿಯೆಗಳ ಮೂಲಕ ಮಳೆಹನಿಯ ರೂಪ ತಳೆಯುತ್ತವೆ.

ಮೊದಲನೆಯದು ನೀರು–ಹಿಮ ವರ್ಗಾವಣೆ ಪ್ರಕ್ರಿಯೆ. ಹೆಪ್ಪುಗಟ್ಟುವ ಬಿಂದುವಿಗಿಂತ (ಫ್ರೀಝಿಂಗ್ ಪಾಯಿಂಟ್) ಕೆಳಗಿನ ಉಷ್ಣತೆಯಲ್ಲಿರುವ ವಾಯುವಿನಲ್ಲಿ ಮೋಡ ರೂಪುಗೊಂಡುದಾದರೆ ಹೆಚ್ಚಿನ ಹನಿಗಳೂ ಘನೀಭವಿಸದೆ ದ್ರವವಾಗಿಯೇ ಉಳಿದಿರುತ್ತವೆ. ಇದಕ್ಕೆ ಅತಿಶೀತಲಿತಸ್ಥಿತಿ (ಸೂಪರ್‌ಕೂಲ್ಡ್ ಸ್ಟೇಟ್) ಎಂದು ಹೆಸರು. $-40^{0}$ ಯಷ್ಟು ನಿಮ್ನ ಉಷ್ಣತೆಯಲ್ಲಿ ಕೂಡ ಇದು ಸಂಭವಿಸಬಹುದು. ಅಲ್ಲಿ ಎಲ್ಲ ಹನಿಗಳೂ ಘನೀಭವಿಸುತ್ತವೆ. ಹೀಗೆ ಹೆಪ್ಪುಗಟ್ಟುವಬಿಂದುವಿಗಿಂತ ಕನಿಷ್ಠ ಉಷ್ಣತೆಗಳಲ್ಲಿರುವ ಮೋಡ ಬರ್ಫಕಣಗಳ ಹಾಗೂ ನೀರಹನಿಗಳ ಮಿಶ್ರಣವಾಗಿರುತ್ತದೆ. (ಹೆಪ್ಪುಗಟ್ಟುವ ಬಿಂದುವಿಗಿಂತ ಕೆಳಗಿನ ಉಷ್ಣತೆಗಳಲ್ಲಿ ಕೇವಲ ಕೆಲವೇ ಹನಿಗಳು ಘನೀಕೃತವಾಗುತ್ತವೆ). ಆದರೆ ನೀರಿನ ಜೊತೆ ಮತ್ತು ಹಿಮದ ಜೊತೆ ಏಕಕಾಲದಲ್ಲಿ ಸಂಸ್ಪರ್ಶದಲ್ಲಿರುವ ವಾಯುವಿನ ಸಾಪೇಕ್ಷ್ಯಆರ್ದ್ರತೆಗಳು ವಿಭಿನ್ನವಾಗಿರುತ್ತವೆ. ನೀರಿಗೆ ಅದು ಸಚಿತೃಪ್ತಬಿಂದುವಿಗಿಂತ ಸ್ವಲ್ಪ ಕೆಳಗಿರಬಹುದು. ಹೆಪ್ಪುಗಟ್ಟುವಬಿಂದುವಿಗೆ ಕೊಂಚ ಮೇಲಿರಬಹುದು. ನೀರಹನಿಗಳು ಆವಿಯಾಗಿ ಹೋಗುತ್ತವೆ; ಆದರೆ ತೇವ ಮಾತ್ರ ಹಿಮ ಕಣಗಳ ಮೇಲೆ ಘನೀಕೃತವಾಗುತ್ತದೆ. ಹೀಗೆ ನೀರಹನಿಗಳ ಲೆಕ್ಕದಲ್ಲಿ ಹಿಮಕಣಗಳು ಬೆಳೆಯತೊಡಗಿ ಕೆಳಬೀಳುತ್ತ ಬೆಚ್ಚಗಿನ ವಾಯುಸ್ತರ ಪ್ರವೇಶಿಸಿದಾಗ ಮಳೆಹನಿಗಳಾಗಿ ಕರಗುತ್ತವೆ.

ಮಳೆ ರೂಪುಗೊಳ್ಳುವ ಎರಡನೆಯ ಪ್ರಕ್ರಿಯೆಗೆ ಸಂಯೋಜನ (ಕೊಎಲೆಸೆನ್ಸ್) ಎಂದು ಹೆಸರು. ಇಲ್ಲಿ ನಿಧಾನವಾಗಿ ಕೆಳಬೀಳುತ್ತಿರುವ ಚಿಕ್ಕಹನಿಗಳಿಗೆ ದೊಡ್ಡ ಹನಿಗಳೂ ಡಿಕ್ಕಿ ಹೊಡೆದು ಅವುಗಳ ಜೊತೆ ಬೆಸೆದುಕೊಂಡು ಇನ್ನೂ ದೊಡ್ಡ ಹನಿಗಳಾಗುತ್ತವೆ. ಉಷ್ಣವಲಯಗಳಲ್ಲಿ $0^0$ ಮಟ್ಟಕ್ಕಿಂತ ಹೆಚ್ಚೇನೂ ಎತ್ತರಕ್ಕೆ ವ್ಯಾಪಿಸಿರದ, ಕೆಲವು ವೇಳೆ ಈ ಮಟ್ಟವನ್ನೂ ತಲುಪಿರದ–ಮೋಡಗಳಿಂದ ಮಳೆ ಸುರಿಯುತ್ತದೆ. ಊರ್ಧ್ವಒತ್ತಡ ಕಡಿಮೆ ಇರುವ ಮೋಡಗಳು ಒಳನಾಡುಗಳಿಗಿಂತಲೂ ಕರಾವಳಿ ಸ್ಥಳಗಳಲ್ಲಿ ಚೆನ್ನಾಗಿ ಮಳೆ ಸುರಿಸಬಲ್ಲವು ಎಂಬುದು ತಿಳಿದಿದೆ. ಕಣಗಳ ರೂಪದಲ್ಲಿ ಸಾಗರಗಳಿಂದ ಮೇಲಕ್ಕೆ ತುಂತುರಿಸಲ್ಪಡುವ ದೈತ್ಯಬೀಜಕೇಂದ್ರಗಳು (ಜಯಂಟ್ ನ್ಯೂಕ್ಲೀಯೈ) ಊರ್ಧ್ವಪ್ರವಾಹಗಳಿಂದ ಮೋಡಗಳವರೆಗೂ ಒಯ್ಯಲ್ಪಟ್ಟು ಅಲ್ಲಿ ಸಂಯೋಜನ ಶೃಂಖಲಾ ಕ್ರಿಯೆಯನ್ನು ಪ್ರವರ್ತಿಸುತ್ತವೆ ಎಂಬ ವಾದವನ್ನು ಈ ಸಂಗತಿ ಪುಷ್ಟೀಕರಿಸುತ್ತದೆ.

ಮಳೆ ಉಂಟಾಗಬೇಕಾದರೆ ನಾಲ್ಕು ಕ್ರಿಯಾತಂತ್ರಗಳು ಏಕಕಾಲದಲ್ಲಿ ಸಂಭವಿಸುವುದು ಅವಶ್ಯ: ವಾಯುಶೀತಲೀಕರಣ, ಘನೀಭವನ, ಮೇಘ ಸಮುಚ್ಚಯಗಳ ಬೆಳವಣಿಗೆ ಮತ್ತು ಮಳೆಗೆ ಕಾರಣವಾಗಲು ಸಾಕಾಗುವಷ್ಟು ಪ್ರಮಾಣದ ತೇವದ ಸಂಚಯನ.

ವಾಯುರಾಶಿಯ ಊರ್ಧ್ವಗಮನ ಹಲವು ರೀತಿಗಳಲ್ಲಿ ಉಂಟಾಗುತ್ತದೆ. ಇದನ್ನಾಧರಿಸಿ ಮಳೆಯನ್ನು ಪರಿಸರಣಮಳೆ, ಪರ್ವತ ಅಥವಾ ಆರೋಹಣ ಮಳೆ ಮತ್ತು ಆವರ್ತಮಳೆ (ಸೈಕ್ಲೋನಿಕ್ ರೇನ್) ಎಂದು ವಿಂಗಡಿಸಬಹುದು.

ಮೊದಲನೆಯದಾಗಿ, ಹಗಲಿನಲ್ಲಿ ನೆಲಭಾಗದ ಮೇಲ್ಮೈ ಪ್ರಬಲ ಆತಪನದ (ಇನ್ಸೊಲೇಶನ್–ಭೂತಲ ತಲಪುವ ಸೌರವಿಕಿರಣ) ಕಾರಣವಾಗಿ ಬೇಸಗೆಯಲ್ಲಿಯಂತೆ ಬಿಸಿ ಆಗುತ್ತದೆ. ಬಿಸಿ ಮೇಲ್ಮೈ ಜೊತೆ ಸಂಸ್ಪರ್ಶದಲ್ಲಿರುವ ವಾಯು ಕೂಡ ತಾಪಗೊಂಡು ವ್ಯಾಕೋಚಿಸಿ ಮೇಲೇರುತ್ತದೆ. ಬೇಸಗೆಯ ಅಪರಾಹ್ನಗಳಲ್ಲಿ ಮೋಡಗಳು ಸಂಚಯನಗೊಳ್ಳುವುದೂ ಮೇಲೇರುವ ವಾಯು ಸಾಕಷ್ಟು ಆರ್ದ್ರವಾಗಿರುವ ಸ್ಥಳಗಳಲ್ಲಿ ಸಂಜೆವೇಳೆ ಗುಡುಗು ಸಹಿತವಾದ ಬೇಸಗೆಮಳೆ ಸುರಿಯುವುದೂ ಇದಕ್ಕೆ ನಿದರ್ಶನ.

ಎರಡನೆಯದಾಗಿ ಮಾರುತಪ್ರವಾಹದ ಎದುರಿಗೆ ಪರ್ವತಸ್ತೋಮ ಅಡ್ಡಬಂದಾಗ ವಾಯುರಾಶಿ ಮೇಲೇರುವುದು ಅನಿವಾರ್ಯವಾಗುತ್ತದೆ. ಬೆಟ್ಟ ಗುಡ್ಡಗಳ ಇಳಿಜಾರುಗಳ ಮೂಲಕ ಗಾಳಿ ಮೇಲಕ್ಕೆ ಹರಿಯುವಾಗ ಇದರಲ್ಲಿಯ ತೇವದ ಪ್ರಮಾಣ ಸಾಕಷ್ಟು ತಣ್ಣಗಾಗಿ ಮೋಡಗಳು ಮೈದಳೆಯುತ್ತವೆ. ಇದರಲ್ಲಿಯ ತೇವದ ಪ್ರಮಾಣ ಸಾಕಷ್ಟಿದ್ದು ಊರ್ಧ್ವಗಾಮಿ ಚಲನೆ ಮುಂದುವರಿದರೆ ಮಳೆ ಬೀಳುವುದು ಖಂಡಿತ. ಹಿಮಾಲಯ ಪರ್ವತಸಾಲುಗಳಲ್ಲಿ ಮತ್ತು ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಪರ್ವತಜನ್ಯ ಮಳೆಯಬಿರುಸು ಹೊಡೆತವೂ ಗಿರಿಶಿಖರಗಳನ್ನು ವಾಯುದಾಟಿ ಮುಂದಕ್ಕೆ ಹೋದಂತೆ ಮಳೆ ಗಮನಾರ್ಹವಾಗಿ ಕಡಿಮೆಯಾಗುವುದೂ ಇದಕ್ಕೆ ನಿದರ್ಶನಗಳು. ಮುಂದೆ ವಾಯು ಕೆಳಗಿಳಿಯುವುದು. ಪ್ರಪಂಚದ ಅತಿಮಳೆ ಬೀಳುವ ಕೆಲವು ಪ್ರದೇಶಗಳು ಬೆಟ್ಟದ ಇಳಿಜಾರುಗಳ ಪಕ್ಕಗಳಲ್ಲಿವೆ.

ಮೂರನೆಯದಾಗಿ, ಗತ್ಯಾತ್ಮಕ ಕಾರಣಗಳಿಂದಾಗಿ ವಾಯು ರಾಶಿ ಬೃಹತ್ಪ್ರಮಾಣದಲ್ಲಿ ಮೇಲೇರಬಹುದು. ಉದಾಹರಣೆಗೆ ಚಕ್ರವಾತವೊಂದರ (ಸುಂಟರಗಾಳಿ) ಕ್ಷೇತ್ರದ ಒಳಗೆ ಅಥವಾ ಅದರ ಕೇಂದ್ರದ ಹತ್ತಿರ ಇದು ಸಂಭವಿಸುತ್ತದೆ. ಚಕ್ರವಾತದಲ್ಲಿ ವಾಯು ಎಲ್ಲೆಡೆಗಳಿಂದಲೂ ನಿಮ್ನ ಸಂಮರ್ದದಲ್ಲಿರುವ ಅದರ ಕೇಂದ್ರಾಭಿಮುಖವಾಗಿ ಪ್ರವಹಿಸುತ್ತವೆ ಎಂಬುದು ತಿಳಿದಿರುವ ಸಂಗತಿ. ಹೀಗೆ ಸುಂಟರಗಾಳಿಯ ಪ್ರದೇಶದಲ್ಲಿ ಸಂಗ್ರಹಗೊಂಡು ಕ್ಷಿತಿಜೀಯವಾಗಿ ತಪ್ಪಿಸಿಕೊಂಡು ಹೋಗದಂತೆ ಪ್ರತಿಬಂಧಿಸಲ್ಪಟ್ಟ ವಾಯು ಅತಿರಭಸವಾದ ಊರ್ಧ್ವಚಲನೆಗೆ ಈಡಾಗುತ್ತದೆ. ಈ ವಾಯುವಿನಲ್ಲಿ ಸಾಧಾರಣವಾಗಿ ಸಾಕಷ್ಟು ತೇವವಿರುವುದರಿಂದ ಚಕ್ರವಾತದ ಒಳಪ್ರದೇಶದಲ್ಲಿ ಮಳೆ ಬಿರುಸಾಗಿ ಸುರಿಯುತ್ತದೆ. ಹೀಗಾಗಿ ಚಕ್ರವಾತದ ಅವಸಂಮರ್ದಗಳ ಹಾದಿಯ ನೇರ ಮತ್ತು ಸಮೀಪ ಇರುವ ಪ್ರದೇಶಗಳಲ್ಲಿ ಮಳೆ ತೀವ್ರವಾಗಿರುತ್ತದೆ.

ಸಿಡಿಲು ಮಳೆ: ಮಿಂಚು ಮತ್ತು ಗುಡುಗುಸಹಿತವಾದ ಮಳೆಗೆ ಸಿಡಿಲುಮಳೆ ಎಂದು ಹೆಸರು. ಇದು ಸಂಭವಿಸಬೇಕಾದರೆ ವಾಯುಮಂಡಲದಲ್ಲಿ ತೀವ್ರ ಅಸ್ಥಿರತೆಯಿದ್ದು ತೇವಪೂರಿತ ವಾಯುವಿನ ಹಿರಿರಾಶಿ ಅಗಾಧ ಎತ್ತರಗಳಿಗೆ ಪ್ರಚಲನ ಪ್ರವಾಹಗಳಿಂದ (ಕನ್ವೆಕ್ಷನ್ ಕರೆಂಟ್) ತೂರಲ್ಪಡಬೇಕು. ಎದ್ದು ಕಾಣುವ ಸ್ಥೂಣಾಕಾರದ (ಕಮ್ಮಾರನ ಬಡಿಗಲ್ಲು) ಕ್ಯುಮ್ಯುಲೊನಿಂಬಸ್ ಮೋಡದಲ್ಲಿ ಇದನ್ನು ಗುರುತಿಸಬಹುದು. ಇದರ ತಳ ದಟ್ಟ ಕಪ್ಪಗಿದ್ದು ಕ್ಷೋಭೆಯಿಂದ ಕೂಡಿರುತ್ತದೆ. ಈ ಮೋಡ 9ರಿಂದ 15ಕಿಮೀ ಎತ್ತರದವರೆಗೂ ವ್ಯಾಪಿಸಿರುತ್ತದೆ. ಇದರಲ್ಲಿಯ ವಿದ್ಯುದಾವೇಶಗಳ ಕಾರಣವಾಗಿ ಮಿಂಚುಗುಡುಗು ಉದ್ಭವಿಸುತ್ತವೆ. ಮೋಡದೊಳಗಿನ ಕ್ಷೋಭೆಯ ಸ್ಥಿತಿಯಲ್ಲಿ ಮಳೆಹನಿಗಳು ಬಿರಿದು ಚಿಕ್ಕ ಗಾತ್ರದವು ಮೋಡದ ಕೋಡಿಗೆ ಒಯ್ಯಲ್ಪಡುತ್ತವೆ. ದೊಡ್ಡಗಾತ್ರ ಕೆಳಮಟ್ಟದಲ್ಲಿ ಉಳಿದಿರಬಹುದು ಅಥವಾ ಪುಟ್ಟ ಬರ್ಫ ಕಣಗಳನ್ನು ಎರಚುತ್ತ ಘನೀಕೃತವಾಗಬಹುದು. ಈ ಕಣಗಳು ಮತ್ತೆ ಮೊಡದ ಕೋಡಿಗೆ ಒಯ್ಯಲ್ಪಡುತ್ತವೆ. ಈ ಪ್ರಕ್ರಿಯೆಗಳ ಕಾರಣವಾಗಿ ವಿದ್ಯುದಾವೇಶಗಳು ಪ್ರತ್ಯೇಕಿಸಲ್ಪಡುತ್ತವೆ. ಇವುಗಳಿಗೆ ವಾಯು ಒದಗಿಸುವ ರೋಧನ (ಇನ್ಸುಲೇಶನ್) ಬಿರಿದು ಹೋದಾಗ ಮಿಂಚಿನ ಥಳುಕು ಕಾಣಿಸಿಕೊಳ್ಳುತ್ತದೆ–ಕೆಲವು ವೇಳೆ ಪೂರ್ತಿ ಮೋಡದ ಒಳಗೆ, ಇತರ ವೇಳೆ ಮೋಡದಿಂದ ಭೂಮಿಯವರೆಗೆ ಮಿಂಚು ಸಾಧಾರಣವಾಗಿ ಕವಲು ಕವಲಾಗಿರುವ ತೆಳು ರೇಖೆಗಳ ನೇರ ಹಬ್ಬುತ್ತದೆ ಎಂದೇ ಕವಲು ಅಥವಾ ಸೀಳು ಮಿಂಚು ಎಂಬ ಹೆಸರಿದೆ. ದೂರ ಪ್ರದೇಶಗಳಲ್ಲಿ ಇದು ಮೋಡದಿಂದ ಮರೆಮಾಚಲ್ಪಟ್ಟು ವಿಸರಿತ ಪ್ರಕಾಶವಾಗಿ ಪ್ರಕಟವಾಗುತ್ತದೆ. ಇದಕ್ಕೆ ಮಸುಕು ಮಿಂಚು ಎಂದು ಹೆಸರು. ಮಿಂಚು ವಾಯುವಿನ ಮೂಲಕ ಹರಿಯುವಾಗ ತತ್ಕ್ಷಣಿಕವಾಗಿ ಅಗಾಧ ಮೊತ್ತದ ಶಾಖವನ್ನು ಉತ್ಪಾದಿಸುತ್ತದೆ. ತತ್ಪರಿಣಾಮವಾಗಿ ವಾಯುವಿನಲ್ಲಿ ಹಠಾತ್ತನೆ ವ್ಯಾಕೋಚನೆ ಹಾಗೂ ಸಂಕೋಚನೆ ಸಂಭವಿಸಿ ಶಬ್ದ ತರಂಗಗಳು ಉತ್ಪಾದನೆಗೊಳ್ಳುತ್ತವೆ. ಆಗ ಗುಡುಗುತ್ತದೆ. ಭೂಮಾನಕಗಳ ಪ್ರಕಾರ ಮಿಂಚು ತತ್‌ಕ್ಷಣವೇ ಗೋಚರವಾದರೆ, ಗುಡುಗಿನ ಸದ್ದು 1 ಸೆಕೆಂಡಿಗೆ 320 ಮೀ ಚಲಿಸುತ್ತದೆ. ಈ ಅಳತೆಯನ್ನು ಉಪಯೋಗಿಸಿ ಮಿಂಚಿನ ದೂರವನ್ನು ಗಣಿಸುವುದು ಸಾಧ್ಯ.

ಆಲಿಕಲ್ಲು : ಮೇಲೇರುತ್ತಿರುವ ವಾಯುಪ್ರವಾಹದಲ್ಲಿ ನೀರಹನಿಗಳು ರೂಪುಗೊಂಡು ಮತ್ತು ಮೇಲಕ್ಕೆ ಒಯ್ಯಲ್ಪಟ್ಟು ಹೆಪ್ಪುಗಟ್ಟುವ ಬಿಂದುವಿನ ಉಷ್ಣತೆಯಲ್ಲಿರುವ ಮಟ್ಟ ತಲುಪಿದ ಕೂಡಲೇ ಘನೀಕೃತವಾಗುವುದಿಲ್ಲ. ಆರಂಭದಲ್ಲಿ $0^0$ ಬಿಂದುವಿಗಿಂತ ಕೆಳಗಿನ ಉಷ್ಣತೆಯಲ್ಲಿಯೂ ದ್ರವಜಲವಾಗಿಯೇ ಉಳಿದಿರುತ್ತದೆ. ಪ್ರಾಯಶಃ ಅವುಗಳ ಉಷ್ಣತೆ $-10^0$ ಸೆ. ಗಿಂತ ಕೆಳಕ್ಕೆ ಇಳಿಯುವಾಗ ಅವು ಘನೀಕೃತವಾಗುತ್ತವೆ. ಇಂಥ ಒಂದು ತಿರುಳು ಕೆಳಬೀಳುತ್ತಿದ್ದರೆ ಅದು ಮೊದಲು ಸಂಪರ್ಕಕ್ಕೆ ಬರುವುದು $0^0$ ಬಿಂದುವಿಗಿಂತ ಕೆಳಮಟ್ಟದಲ್ಲಿರುವ ನೀರಹನಿಗಳ ಜೊತೆ. ಈ ತಿರುಳಿನ ಮೇಲೆ ಹನಿಗಳು ಸುಲಭವಾಗಿ ಘನೀಕೃತವಾಗುತ್ತವೆ. ಆ ವೇಳೆ ಇವು ಹಿಮದ ಒಳಗೆ ಒಂದಿಷ್ಟು ವಾಯುವನ್ನು ಬಂಧಿಸಿಡುತ್ತವೆ. ಹೀಗಾಗಿ ತಿರುಳಿನ ಸುತ್ತ ಬಿಳಿ ಹಿಮದ ಲೇಪ ಹೆಪ್ಪುಗಟ್ಟಿರುತ್ತದೆ. ಬಿಳಿಹಿಮಕವಚದಿಂದೊಡಗೂಡಿದ ಈ ತಿರುಳು ಮತ್ತೂ ಕೆಳಗೆ ಬಿದ್ದಂತೆ $0^0$ ಉಷ್ಣತೆಯ ಮಟ್ಟ ತಲಪುತ್ತದೆ; ಇದರ ನೀರಾವಿ ನೀರಿನ ರೂಪದಲ್ಲಿ ಘನೀಕೃತವಾಗುತ್ತದೆ. ಇದು ಕೂಡಲೆ ಸ್ವಚ್ಛ ಹಿಮವಾಗಿ ಪರಿವರ್ತಿತವಾಗುತ್ತದೆ. ಈ ಪ್ರಯಾಣದ ಫಲವಾಗಿ ಆಲಿಕಲ್ಲಿಗೆ ಮೃದುಹಿಮದ ಒಳತಿರುಳಿದ್ದು ಅದರ ಮೇಲೆ ಬಿಳಿ ಹಿಮದ ಲೇಪನ ಮತ್ತು ಹೊರಗೆ ಸ್ವಚ್ಛ ಹಿಮದ ಕವಚ ಇರುತ್ತದೆ. ತೇವಪೂರಿತ ವಾಯುವನ್ನು ಮೊದಲು ಒಯ್ದು ತನ್ನ ಒಳ ಬಿಳಿಹಿಮಲೇಪನವನ್ನು ಈ ಮೊದಲು ಪಡೆದ ಎಡೆಗೆ ಅದನ್ನು ಮಗುದೊಮ್ಮೆ ಒಯ್ಯಬಹುದು. ಅಲ್ಲಿ ಇವಕ್ಕೆ ಬಿಳಿಹಿಮದ ಇನ್ನೊಂದು ಲೇಪನ ಒದಗುತ್ತದೆ. ಮೇಲೇರುತ್ತಿರುವ ಪ್ರವಾಹದಲ್ಲಿ ನಿಲುಗಡೆ ಕಂಡುಬಂದಾಗ ಆಲಿಕಲ್ಲು ಕೆಳಬೀಳತೊಡಗುತ್ತದೆ. ಆಗ ಅದಕ್ಕೆ ಮತ್ತೆ ಸ್ವಚ್ಛಹಿಮದ ಇನ್ನೊಂದು ಲೇಪನ ಒದಗುತ್ತದೆ. ಮೇಲೇರುತ್ತಿರುವ ಪ್ರವಾಹದಲ್ಲಿ ನಿಲುಗಡೆ ಕಂಡುಬಂದಾಗ ಆಲಿಕಲ್ಲು ಗಾತ್ರದಲ್ಲೂ ತೂಕದಲ್ಲೂ ಬೆಳೆಯುತ್ತಿರುತ್ತದೆ. ಅಂದ ಮಾತ್ರಕ್ಕೆ ಈ ಪ್ರಕ್ರಿಯೆ ಅನಿರ್ದಿಷ್ಟ ಕಾಲ ಮುಂದುವರಿಯಲಾರದು. ಏಕೆಂದರೆ ಆಲಿಕಲ್ಲಿನ ಗಾತ್ರ ಒಂದು ಮಿತಿ ದಾಟಿದ ಬಳಿಕ ಅದರ ಭಾರವನ್ನು ಊರ್ಧ್ವಪ್ರವಾಹ ಭರಿಸಲಾರದು, ಆಲಿಕಲ್ಲನ್ನು ಕತ್ತರಿಸಿ ಅದರ ಅಡ್ಡಕೊಯ್ತವನ್ನು ಪರೀಕ್ಷಿಸಿದಾಗ ಅದು ಯಾವ ವಲಯದಲ್ಲಿ ಎಂಥ ಮಾರುತಗಳಿಂದ ಹೇಗೆ ರೂಪುಗೊಂಡಿತು ಎಂಬ ವಿವರಗಳನ್ನು ಅರಿಯುವುದು ಸಾಧ್ಯ. ವಾಯುಮಂಡಲದಲ್ಲಿ ತೀವ್ರವಾದ ಊರ್ಧ್ವಗಾಮಿ ಪ್ರವಾಹಗಳಿರುವಾಗ ಮಾತ್ರ ದೊಡ್ಡ ಆಲಿಕಲ್ಲುಗಳು ಮೈದಳೆಯುತ್ತವೆ. ಹೆಚ್ಚಿನ ಆಲಿಕಲ್ಲುಗಳು ಸು. 0.6 ಸೆಂಮೀ ಅಡ್ಡ ಗಾತ್ರದವು. ಏಕೆಂದರೆ ಇಂಥ ಸಂದರ್ಭದಲ್ಲಿ ಮಾತ್ರ ಅವು ಅತಿ ಕ್ಷಿಪ್ರವಾಗಿ ಕೆಳಗೆ ಬಿದ್ದು ಹೋಗುವುದಿಲ್ಲ. ಅಲ್ಲದೆ ಮೋಡ ಬಲು ಎತ್ತರಕ್ಕೆ, ಕನಿಷ್ಠ ಪಕ್ಷ $-20^0$ ಸೆ. ಉಷ್ಣತೆ ಆಗುವಲ್ಲಿಯವರೆಗಾದರೂ ವ್ಯಾಪಿಸಿರಬೇಕು ಮತ್ತು ಅದರ ತಳ $0^0$ ಬಿಂದು ಉಷ್ಣತೆಯ ಮಟ್ಟಕ್ಕಿಂತಲೂ ಕೆಳಗಿರಬೇಕು. (ಡಿ.ಕೆ.ಆರ್.ಐ.)

**ಮಳೆಯ ನೀರಿನ ಕೊಯ್ಲು:** ನೀರನ್ನು ಉತ್ತಮ ಮತ್ತು ಯೋಜಿತ ರೀತಿಯಲ್ಲಿ ಬಳಸುವ ವಿಧಾನ (ರೇನ್ ವಾಟರ್ ಹಾರ್ವೆಸ್ಟ್). ಈ ಕ್ರಮದಿಂದ ನೀರಿನ ಕೊರತೆಯನ್ನು ನೀಗಿಸಲು ಸಾಧ್ಯವಾಗುವುದು. ಮಳೆ ಬಂದಾಗ ಅದನ್ನು ಭೂಮಿಯ ಮೇಲೆ ಅಥವಾ ಭೂಮಿಯ ಒಳಗೆ ಸಂಗ್ರಹಿಸಿ, ಮಳೆ ಇಲ್ಲದಾಗ ಬಳಸಿಕೊಳ್ಳಬಹುದು. ಸಮಶೀತೋಷ್ಣ ವಲಯದಲ್ಲಿ ನೀರಿನ ಸೆಲೆ ಕಡಿಮೆಯಾಗುತ್ತಿದೆ. ಇದಕ್ಕಾಗಿ ಎಷ್ಟೇ ಆಳ ತೋಡಿದರೂ ನೀರು ದೊರೆಯುತ್ತಿಲ್ಲ. ಪ್ರಪಂಚದಲ್ಲಿ ಜನಸಂಖ್ಯೆ ವೃದ್ಧಿಯಾಗುತ್ತಿದ್ದು ನೀರು ಮಾನವನ ಮೂಲ ಅಗತ್ಯವಾಗಿರುವುದರಿಂದ ಮಳೆ ನೀರಿನ ಕೊಯ್ಲಿನ ಅವಶ್ಯಕತೆ ಬಹಳವಿದೆ.

ಮಳೆ ನೀರಿನ ಕೊಯ್ಲಿನ ವಿಧಾನಗಳು:

1) ಭೂಮಿಯ ಮೇಲಿನ ಸಂಗ್ರಹಣೆ ಮಳೆ ನೀರು ಛಾವಣಿಯ ಮೇಲೆ ಸುರಿದಾಗ ಅದನ್ನು ಕೊಳವೆಗಳ ಮೂಲಕ ಸೋಸಿ ತೊಟ್ಟಿಗೆ ಹಾಯಿಸಿ ಅದನ್ನು ಅವಶ್ಯಕತೆ ಇದ್ದಾಗ ಬಳಸಿಕೊಳ್ಳಬಹುದು.

2) ಭೂಮಿಯ ಒಳಗೆ ಸಂಗ್ರಹಣೆ: ಒಣಗಿಹೋಗಿರುವ ಬಾವಿ ಅಥವಾ ಕೊಳವೆ ಬಾವಿ, ಕೆರೆಗಳಿಗೆ ನೀರನ್ನು ಹಾಯಿಸುವುದು.

3) ಪ್ರಾಚೀನ ಕಾಲದಿಂದಲೂ ಮಳೆ ನೀರಿನ ಸಂಗ್ರಹಣೆ ಕಾರ್ಯ ಬೆಳೆದು ಬಂದಿದೆ. ಸಂಗ್ರಹಣೆಯಲ್ಲಿ ಎರಡು ವಿಧಗಳಿವೆ:

ಕುಲು ಪದ್ಧತಿ: ಇದು ಹಿಮಾಚಲ ಪ್ರದೇಶದಲ್ಲಿ ಆಚರಣೆಯಲ್ಲಿದೆ. ಇಲ್ಲಿ ಹಿಮ ಕರಗಿದಾಗ ಅದನ್ನು ಸಂಗ್ರಹಿಸಿ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಥಾರ್ ಮರುಭೂಮಿಯಲ್ಲಿ ಕುಂಡ ಅಥವಾ ಗುಂಡಿಗಳನ್ನು ನಿರ್ಮಿಸಿ ಅದರಲ್ಲಿ ನೀರು ಸಂಗ್ರಹಿಸುವುದು ಪ್ರಾಚೀನ ಕಾಲದಿಂದಲೂ ಬಂದ ಪದ್ಧತಿ. ಎಲ್ಲಿ ಹೆಚ್ಚು ಬಿದಿರು ಬೆಳೆಯುತ್ತಾರೆ. ಅಲ್ಲಿ ಮಳೆ ನೀರನ್ನು ಬಿದಿರಿನ ಮೂಲಕ ಭೂಮಿಗೆ ಹಾಯಿಸಿ ಅದನ್ನು ಬಳಸಿಕೊಳ್ಳುವ ಪದ್ಧತಿಯನ್ನು ಈಗಲೂ ಅಸ್ಸಾಮ್ ರಾಜ್ಯದಲ್ಲಿ ಅನುಸರಿಸುತ್ತಿದ್ದಾರೆ. ಪ್ರಾಚೀನ ಕಾಲದಿಂದಲೂ ದೇವಸ್ಥಾನದಲ್ಲಿ ಮಳೆ ನೀರನ್ನು ಸಂಗ್ರಹಿಸುತ್ತಿದ್ದಾರೆ. ಇದು ಹರಪ್ಪ, ಮೊಹೆಂಜೋದಾರೋ ನಾಗರಿಕತೆ ಕಾಲದಲ್ಲಿಯೂ ರೂಢಿಯಲ್ಲಿತ್ತು.

3) ನವೀನ ಪದ್ಧತಿಯಲ್ಲಿ ಎರಡು ವಿಧ: ಒಂಟಿ ಮನೆಗಳಲ್ಲಿ ನೀರಿನ ಸಂಗ್ರಹಣೆ; ಸಮುದಾಯ ವಸತಿಗಳಲ್ಲಿ ಸಂಗ್ರಹಣೆ.

ಒಂಟಿ ಮನೆಗಳಲ್ಲಿ ಮಳೆ ನೀರಿನ ಸಂಗ್ರಹಣೆ: ಚಾವಣಿಯ ಮೇಲಿನಿಂದ ಬರುವ ನೀರನ್ನು ಕೊಳವೆಗಳ ಮೂಲಕ ಸಂಗ್ರಹಿಸಿ ಅದನ್ನು ಕಲ್ಲಿದ್ದಲು ಮರಳು ಇವುಗಳ ಮೂಲಕ ಹಾಯಿಸಿದಾಗ ನೀರು ಪರಿಶುದ್ಧಗೊಳ್ಳುತ್ತದೆ. ಇದನ್ನು ನಾವು ಬಳಸಿಕೊಳ್ಳಬಹುದು. ತೆರೆದ ಬಾವಿಗೆ ನೀರು ಹಾಯಿಸುವುದು. ತೊಟ್ಟಿಯಿಂದ ಕೊಳವೆ ಬಾವಿಗೆ ಹಾಯಿಸುವುದು ಮಣ್ಣಿನ ಮೂಲಕ ಭೂಮಿಗೆ ನೀರನ್ನು ಇಂಗಿಸುವುದು ಇತ್ಯಾದಿ.



ಚಿತ್ರ : ಮಳೆಕೊಯ್ಲು

ಸಮುದಾಯ ವಸತಿಗಳಲ್ಲಿ ದೊಡ್ಡದಾಗಿ ತೊಟ್ಟಿಯನ್ನು ಕಟ್ಟಿ ಅದಕ್ಕೆ ಮಳೆ ನೀರನ್ನು ಹಾಯಿಸಿ ಸೋಸಿ ಅನಂತರ ಬಳಸಿಕೊಳ್ಳುತ್ತಾರೆ. ಈ ನೀರಿನಲ್ಲಿ ಲವಣಾಂಶಗಳು ಹೆಚ್ಚಿಗೆ ಇರುವುದಿಲ್ಲ. ಇದು ಬಳಕೆಗೆ ಯೋಗ್ಯವಾಗಿರುತ್ತದೆ.

ಮಳೆಯ ನೀರಿನ ಸಂಗ್ರಹಣಕಾರ್ಯ ಈಗ ತ್ವರಿತ ಗತಿಯಲ್ಲಿ ನಡೆಯುತ್ತಿದೆ. ಉದಾಹರಣೆಗೆ ಭಾರತ, ಚೀನ, ಜಪಾನ್ ಮೊದಲಾದ ದೇಶಗಳಲ್ಲಿ ಮಳೆ ನೀರಿನ ಸಂಗ್ರಹಣೆ ಕಾರ್ಯ ನಡೆಯುತ್ತಿದೆ. ಭಾರತದಲ್ಲಿ ಕರ್ನಾಟಕ, ತಮಿಳುನಾಡು, ರಾಜಸ್ಥಾನ, ಮೇಘಾಲಯ, ಮುಂತಾದ ರಾಜ್ಯಗಳಲ್ಲಿ ಮಳೆ ನೀರಿನ ಕೊಯ್ಲು ಮಾಡಲಾಗುತ್ತಿದೆ. ಇದರಿಂದ ಅನೇಕ ಲಾಭಗಳಿವೆ. ಅಂತರ್ಜಲ ಮಟ್ಟ ಹೆಚ್ಚುತ್ತದೆ, ಬರಪರಿಹಾರವಾಗುತ್ತದೆ, ವ್ಯರ್ಥಾ ನೀರಿನ ಹರಿವು ನಿಯಂತ್ರಿತವಾಗುತ್ತದೆ, ಭೂಸವೆತ ತಗ್ಗುತ್ತದೆ. ಹನಿಹನಿಕೂಡಿದರೆ ಹಳ್ಳ ಎನ್ನುವಂತೆ ನಾವು ನೀರನ್ನು ಸಂಗ್ರಹಿಸಿಡುವುದರಿಂದ ಪ್ರಾಣಿಗಳಿಗೆ, ಸಸ್ಯಗಳಿಗೆ ನೀರುಣಿಸಲು ಮತ್ತು ಪರಿಸರವನ್ನು ಕಾಪಾಡಲು ಸಾಧ್ಯವಾಗುತ್ತದೆ. (ಎನ್.)

**ಮಾಂಟಾನ:** ಅಮೆರಿಕದ ಒಂದು ರಾಜ್ಯ. ಉತ್ತರದಲ್ಲಿ ಕೆನಡ, ದಕ್ಷಿಣದಲ್ಲಿ ವೈಯಾಮಿಂಗ್ ಮತ್ತು ಪಶ್ಚಿಮದಲ್ಲಿ ಇಡಾಹೊ, ಪೂರ್ವದಲ್ಲಿ ಉತ್ತರ ಮತ್ತು ದಕ್ಷಿಣ ಡಕೋಟ ರಾಜ್ಯಗಳು ಇದರ ಮೇರೆಗಳಾಗಿವೆ. 4,017 ಚ.ಕಿಮೀ ಒಳಜಲಪ್ರದೇಶ ಸೇರಿದಂತೆ ಇದರ ವಿಸ್ತೀರ್ಣ 3,81,088 ಚ.ಕಿಮೀ, ಜನಸಂಖ್ಯೆ 9,02,195 (2000). ರಾಜಧಾನಿ ಹೆಲೆನ.

ಭೌತಲಕ್ಷಣ : ಮಾಂಟಾನ ಎಂಬ ಹೆಸರು ಪರ್ವತಗಳು ಎಂದು ಅರ್ಥವಿರುವ ಸ್ಪ್ಯಾನಿಷ್ ಪದದಿಂದ ಬಂದಿದೆ. ಇಲ್ಲಿಯ ಹಿಮಾಚ್ಛಾದಿತ ಪರ್ವತಗಳಡಿ ಹುದುಗಿರುವ ಚಿನ್ನ, ಬೆಳ್ಳಿ, ಮುಂತಾದ ಅಮೂಲ್ಯ ಖನಿಜಗಳಿಂದಾಗಿ ಇದಕ್ಕೆ ಟ್ರೆಷರ್ ಸ್ಟೇಟ್ (ಸಿರಿನಾಡು) ಎಂಬ ಹೆಸರೂ ಇದೆ. ರಾಕಿಪರ್ವತಗಳು ರಾಜ್ಯದ ಪಶ್ಚಿಮ ಪ್ರದೇಶದ ಬಹುಭಾಗವನ್ನು ಆಕ್ರಮಿಸಿವೆ. ಇಲ್ಲಿಯ ಉನ್ನತ ಪರ್ವತ ಶ್ರೇಣಿಗಳು ಅಸಾಮಾನ್ಯ ಪ್ರಕೃತಿದೃಶ್ಯಗಳನ್ನು ನಿರ್ಮಿಸಿವೆ. ನಡುವೆ ಇರುವ ಮಟ್ಟಸ ಬಯಲುಗಳಲ್ಲಿ ದಟ್ಟವಾಗಿ ಹುಲ್ಲು ಬೆಳೆಯುತ್ತದೆ. ಪರ್ವತವಲಯದ ಕಾಡುಗಳು ಕಣಿವೆಗಳು 50ರಿಂದ 60 ಕಿಮೀಗಳಷ್ಟು ವಿಸ್ತಾರವಾಗಿವೆ. ಈಶಾನ್ಯಭಾಗದಲ್ಲಿ ಅತ್ಯಂತ ಕಿರಿದಾದ ಕಣಿವೆಗಳೂ ಇವೆ.

ರಾಜ್ಯದಲ್ಲಿ ಸು. 50 ಪರ್ವತಶ್ರೇಣಿಗಳಿದ್ದು ಪರ್ವತಗಳ ಮೇಲೆ ವರ್ಷದಲ್ಲಿ ನಾಲ್ಕರಿಂದ ಆರು ತಿಂಗಳ ತನಕ ಹಿಮ ಮುಚ್ಚಿರುತ್ತದೆ. ಕೆಲವು ಶಾಶ್ವತ ಹಿಮ ಪ್ರದೇಶಗಳಿದ್ದು ಕೆಲವಡೆ ಹಿಮಪ್ರವಾಹಗಳಿವೆ. ಪಾರ್ಕ್‌ಕೌಂಟಿಯ ಗ್ರಾನೆಟ್ ಶಿಖರ (3,912ಮೀ) ಅತ್ಯಂತ ಎತ್ತರವಾದದ್ದು. ಈ ವಲಯದಲ್ಲಿ ಆಗಾಗ್ಗೆ ಭೂಕಂಪಗಳಾಗುವುದುಂಟು. ಮಾಂಟಾನದ ಪೂರ್ವಭಾಗ ವಿಶಾಲವಾದ ಹುಲ್ಲುಗಾವಲುಗಳ ಬಯಲುಗಳಿಂದ ಕೂಡಿದೆ. ಇದು ವ್ಯವಸಾಯಕ್ಕೂ ಯೋಗ್ಯವಾಗಿದೆ.

ಜಲಸಂಪತ್ತು: ಈ ರಾಜ್ಯದ ಪರ್ವತ ವಲಯದಲ್ಲಿ ಹಿಮಗಡ್ಡೆಗಳಿಂದಾಗಿ ಸಾವಿರಾರು ಸಣ್ಣಪುಟ್ಟ ಶೀತ ಸರೋವರಗಳು ಉಂಟಾಗಿವೆ. ಈ ಘಟ್ಟಶ್ರೇಣಿಗಳಿಂದ ಹಲವಾರು ನದಿಗಳು ಹರಿಯುತ್ತವೆ. ಅವುಗಳಲ್ಲಿ ಮಿಸೂರಿ ನದಿ (3,726 ಕಿಮೀ) ಮುಖ್ಯವಾದುದು. ಯೆಲ್ಲೊಸ್ಟೋನ್ ಇದರ ಉಪನದಿ. ಇದಲ್ಲದೆ ಜಫರ್‌ಸನ್, ಮ್ಯಾಡಿಸನ್, ಗ್ಯಾಲಟನ್, ಮಿಲ್ಕಸನ್, ಮಾರಿಯಸ್ ಮತ್ತು ಟೆಟನ್ ಮೊದಲಾದವು ಮಾಂಟಾನದಲ್ಲಿ ಹುಟ್ಟಿ ಮಿಸೂರಿ ನದಿ ಸೇರುತ್ತದೆ. ಮಾಂಟಾನದಲ್ಲಿ ಪರ್ವತಶ್ರೇಣಿಗಳು ಪಶ್ಚಿಮದತ್ತಲೂ ನೀರಿನ ಹರಿವನ್ನು ಉಂಟು ಮಾಡಿವೆ. ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ಕೂಟ್‌ನೆ ಮತ್ತು ಕ್ಲಾರ್ಕ್‌ಫೋರ್ಕ್ ನದಿಗಳು ಮುಖ್ಯವಾದವು. ಫ್ಲಾಟ್ ಹೆಡ್ ಲೇಕ್ ಮಾಂಟಾನದ ಅತಿ ದೊಡ್ಡ ಸರೋವರ ಇಲ್ಲಿಯ ಫೋರ್ಕ್‌ಫೆಕ್ ಲೇಕ್ ಮಾನವ ನಿರ್ಮಿತ ಅತಿದೊಡ್ಡ ಸರೋವರ.

ಮಣ್ಣು: ರಾಜ್ಯದ ಉತ್ತರ ಭಾಗ ಹಿಮ ಪ್ರವಾಹ ತಂದು ಹಾಕಿದ ಮಣ್ಣಿನಿಂದ ಕೂಡಿದೆ. ದಕ್ಷಿಣಭಾಗದ ಹೆಚ್ಚಿನ ನೆಲ ಬಹಳ ವರ್ಷಗಳ ಹಿಂದೆ ಆವರಿಸಿದ್ದ ಕಣಿವೆಗಳಲ್ಲಿ ಮೆಕ್ಕಲುಮಣ್ಣು ಶೇಖರವಾಗಿದೆ. ಮಾಂಟಾನದ ನೈಋತ್ಯ ಭಾಗದಲ್ಲಿ ಪ್ರಾಚೀನ ಜ್ವಾಲಾಮುಖಿಗಳ ಸ್ಫೋಟಗಳಿಂದ ಕೂಡಿದ ಫಲವತ್ತಾದ ಮಣ್ಣು ಇದೆ.

ವಾಯುಗುಣ: ಇಲ್ಲಿಯದು ವಿಭಿನ್ನ ವಾಯುಗುಣ. ಪಶ್ಚಿಮ ಭಾಗದಲ್ಲಿ ಪೂರ್ವಭಾಗಕ್ಕಿಂತ ಬೇಸಗೆ ತಂಪಾಗಿಯೂ ಚಳಿಗಾಲ ಬೆಚ್ಚಗೂ ಇರುತ್ತದೆ. ಜನವರಿಯಲ್ಲಿ $7.8^0$ಸೆ ಉಷ್ಣತೆ ಇದ್ದರೆ ಜುಲೈಯಲ್ಲಿ $20.6^0$ಸೆ ಇರುತ್ತದೆ. ಪಶ್ಚಿಮದ ಸೆರಗನ್ನು ಬಿಟ್ಟರೆ ರಾಜ್ಯದ ಬಹುಭಾಗದಲ್ಲಿ ವಾರ್ಷಿಕವಾಗಿ 33ರಿಂದ 36 ಸೆಂಮೀ ಮಳೆಯಾಗುತ್ತದೆ.

ಖನಿಜ: ಕಲ್ಲಿದ್ದಲು, ತಾಮ್ರ ಮತ್ತು ಪೆಟ್ರೋಲಿಯಮ್ ಅಪಾರ ಪ್ರಮಾಣದಲ್ಲಿ ದೊರೆಯುತ್ತದೆ. ಸು. 1.8 ಬಿಲಿಯನ್ ಮೆಟ್ರಿಕ್‌ಟನ್‌ಗಳಷ್ಟು ಉತ್ತಮ ಕಲ್ಲಿದ್ದಲ ನಿಕ್ಷೇಪವಿದೆ. ಬ್ಯೂಟ ಬಳಿ ಭಾರಿ ತಾಮ್ರನಿಕ್ಷೇಪವಿದೆ. ಪೆಟ್ರೋಲಿಯಮ್ ನಿಕ್ಷೇಪ 200ಮಿಲಿಯನ್ ಬ್ಯಾರೆಲ್‌ಗಳಿಗೂ ಅಧಿಕವಿದೆ. ಅನೇಕ ಕಡೆಗಳಲ್ಲಿ ಸ್ವಾಭಾವಿಕ ಅನಿಲದೊರೆತಿದೆ. ಚಿನ್ನ ಮತ್ತು ಬೆಳ್ಳಿಗಳ ಗಣಿಗಳಿಗೆ ಮಾಂಟಾನ ಪ್ರಸಿದ್ಧ. 1862ರಲ್ಲಿ ಇಲ್ಲಿ ಚಿನ್ನವನ್ನು ಪತ್ತೆ ಹಚ್ಚಲಾಯಿತು. ರಾಜಧಾನಿ ಹೆಲೆನ ಇರುವ ಪ್ರದೇಶದಲ್ಲೇ ಚಿನ್ನದ ಗಣಿಯಿತ್ತು. ಸೀಸ, ಕ್ರೋಮೈಟ್, ಸುಣ್ಣಕಲ್ಲು, ಮಾಂಗ್ಯನೀಸ್, ಫಾಸ್ಫೇಟ್, ಟಂಗ್‌ಸ್ಟನ್, ಯುರೇನಿಯಮ್ ಮೊದಲಾದ ಖನಿಜಗಳೂ ಇವೆ.

ಸಸ್ಯಸಂಪತ್ತು: ರಾಜ್ಯದ $^2/_3$ ಭಾಗ ಪ್ರದೇಶದಲ್ಲಿ ಸ್ವಾಭಾವಿಕ ಹುಲ್ಲುಗಾವಲಿದೆ. ಈಗಲೂ ರಾಜ್ಯದ ಸು. ಅರ್ಧಭಾಗವನ್ನು ಹುಲ್ಲುಗಾವಲುಗಳಾಗಿ ಬಳಸಲಾಗುತ್ತಿದೆ. ರಾಜ್ಯದ $^1/_4$ ಭಾಗದಲ್ಲಿ (9.3 ಮಿಲಿಯನ್ ಹೆಕ್ಟೇರ್) ಅರಣ್ಯಗಳಿವೆ. ಸು. 2.8 ಮಿಲಿಯನ್ ಹೆಕ್ಟೇರ್ ಮೀಸಲು ಪ್ರದೇಶವಿದೆ.

ಪ್ರಾಣಿಸಂಪತ್ತು: ಅಪಾರ ಪ್ರಾಣಿ ಸಂಕುಲಕ್ಕೆ ಇಲ್ಲಿಯ ಅರಣ್ಯಗಳು ಆಶ್ರಯ ಒದಗಿಸಿವೆ. ಪರ್ವತ ಪ್ರದೇಶ ಮತ್ತು ಬಯಲುಗಳೆರಡರಲ್ಲೂ ಜಿಂಕೆಗಳು ಕಂಡುಬರುತ್ತವೆ. ಕವಲುಗೊಂಬಿನ ಸಾರಂಗ ಮತ್ತು ಚಿಗರಿಗಳು ಬಯಲುಗಳಲ್ಲಿವೆ. ಕರಡಿ, ಕಡವೆ, ಮೇಕೆ, ಬೆಟ್ಟದಕುರಿ, ಎಲ್ಕ್ ಇವು ಇತರ ಮುಖ್ಯ ಕಾಡುಪ್ರಾಣಿಗಳು. ನೂರಾರು ದೊಡ್ಡ ಮತ್ತು ಸಣ್ಣ ಜಾತಿಯ ಪಕ್ಷಿಗಳಿವೆ. ಅಪಾರ ಮತ್ಸ್ಯಸಂಪತ್ತಿದೆ.

ವ್ಯವಸಾಯ: ಮಾಂಟಾನದ ಒಟ್ಟು ಉತ್ಪನ್ನಗಳ ಅರ್ಧದಷ್ಟು ಮೌಲ್ಯ ವ್ಯವಸಾಯೋತ್ಪನ್ನವಾಗಿದೆ. 1,000 ಹೆಕ್ಟೇರು ವಿಸ್ತೀರ್ಣವುಳ್ಳ ಸು. 25,000 ಫಾರಮ್‌ಗಳಿವೆ. ಕೆಲವು 2,800 ಹೆಕ್ಟೇರುಗಳಷ್ಟು ವಿಸ್ತಾರವಾಗಿವೆ. ವ್ಯವಸಾಯೋತ್ಪನ್ನದಲ್ಲಿ $\frac{2}{3}$ಭಾಗ ಜಾನುವಾರು ಉತ್ಪನ್ನವಾಗಿದೆ. ಸು. 3 ಮಿಲಿಯನ್ ಜಾನುವಾರುಗಳಿದ್ದು ಫಾರಮ್‌ಗಳ ಬಹುಭಾಗ ಇವುಗಳ ಸಾಕಣೆಗೆ ಬಳಕೆಯಾಗುತ್ತಿದೆ. ಮೊಟ್ಟೆ, ಕೋಳಿಗಳು, ಹಾಲು ಮತ್ತು ಉಣ್ಣೆ ಉತ್ಪನ್ನವೂ ಗಣನೀಯವಾಗಿದೆ. ಮಾಂಟಾನ ಅಮೆರಿಕದ ಪ್ರಮುಖ ಗೋದಿ ಉತ್ಪಾದನಾ ರಾಜ್ಯ ಜೊತೆಗೆ ಬಾರ್ಲಿ, ಆಲೂಗೆಡ್ಡೆ ಮತ್ತು ಸಿಹಿಗೆಣಸು ಇತರ ಬೆಳೆಗಳು. ತರಕಾರಿಗಳನ್ನೂ ಹಣ್ಣುಗಳನ್ನೂ ಹೇರಳವಾಗಿ ಬೆಳೆಸುತ್ತಾರೆ.

ಕೈಗಾರಿಕೆ: ಮರದ ನಾಟಾ ಉತ್ಪನ್ನ ಮಾಂಟಾನದ ಮುಖ್ಯ ಕೈಗಾರಿಕೆ. ಸು. 200 ಮರಕೊಯ್ಯುವ ಕಾರ್ಖಾನೆಗಳಿವೆ. ಕಾಗದ ತಯಾರಿಕಾ ಕಾರ್ಖಾನೆಗಳಿವೆ. ಬಿಲ್ಲಿಂಗ್ಸ್ ಮತ್ತು ಸಿಡ್ನಿಯಲ್ಲಿ ಸಕ್ಕರೆ ಶುದ್ಧೀಕರಣ ಘಟಕಗಳಿಗೆ ಗೋದಿಯಿಂದ ಹಿಟ್ಟನ್ನು ತಯಾರಿಸುವ ಹಾಗೂ ಮಾಂಸೋತ್ಪನ್ನಗಳನ್ನು ಡಬ್ಬಗಳಿಗೆ ತುಂಬುವ ಉದ್ಯಮಗಳಿವೆ. ಲೋಹ ಹದಮಾಡುವ ಮತ್ತು ಯಂತ್ರ ತಯಾರಿಕಾ ಕೇಂದ್ರಗಳಿವೆ. ತೈಲಶುದ್ಧೀಕರಣ ಹಾಗೂ ಸಿಮೆಂಟ್ ಕಾರ್ಖಾನೆಗಳಿವೆ. ಮುದ್ರಣ ಮತ್ತು ಪ್ರಕಾಶ ಉದ್ಯಮ ಕ್ರಿಯಾಶೀಲವಾಗಿದೆ.

ಗಣಿ ಕೈಗಾರಿಕೆ ಈ ರಾಜ್ಯದ ಬೃಹತ್ ಉದ್ಯಮ. ರಾಕಿ ಪರ್ವತ ಶ್ರೇಣಿಯಲ್ಲಿ ಪೆಟ್ರೋಲ್ ಬಾವಿಗಳು ಹೇರಳವಾಗಿವೆ. ಒಟ್ಟು ಲೋಹೋತ್ಪನ್ನದ ಮೌಲ್ಯದಲ್ಲಿ ತಾಮ್ರದ ಉತ್ಪಾದನೆ ಶೇ. 90ರಷ್ಟಾಗುತ್ತದೆ. ಬ್ಯೂಟಿ ಪ್ರದೇಶದಲ್ಲಿ ತಾಮ್ರ, ಚಿನ್ನ ಮತ್ತು ಬೆಳ್ಳಿ ವಿಶೇಷವಾಗಿ ದೊರೆಯುತ್ತದೆ. ಅನೇಕ ಕಡೆಗಳಲ್ಲಿ ಸುಣ್ಣ ಮತ್ತು ಕಲ್ಲಿದ್ದಲು ಗಣಿಗಳಿವೆ. ಅನಕೊಂಡದಲ್ಲಿ ಅತ್ಯಂತ ದೊಡ್ಡ ತಾಮ್ರದ ಕಾರ್ಖಾನೆಯಿದೆ. ಜಲ ಮತ್ತು ಪೆಟ್ರೋಲಿಯಮ್ ಚಿರಟ ಮತ್ತು ಕಲ್ಲಿದ್ದಲಿಂದ ವಿದ್ಯುತ್ ಉತ್ಪಾದನೆಯಲ್ಲಿ ಮಾಂಟಾನ ಮುಖ್ಯಸ್ಥಾನ ಪಡೆದಿದೆ. ಬಿಲ್ಲಿಂಗ್ಸ್, ಗ್ರೇಟ್ ಫಾಲ್ಸ್ ಮತ್ತು ಹೆಲೆನಗಳು ರಾಜ್ಯದ ದೊಡ್ಡ ಪಟ್ಟಣಗಳಾಗಿವೆ.

ಸಾರಿಗೆ ಸಂಪರ್ಕ: ಮಾಂಟಾನದಲ್ಲಿ 1,30,000 ಕಿಮೀ ಗಳಿಗೂ ಹೆಚ್ಚು ಉದ್ದದ ರಸ್ತೆಗಳಿವೆ. ಬಿಲ್ಲಿಂಗ್ಸ್ ಮತ್ತು ಗ್ರೇಟ್ ಫಾಲ್ಸ್‌ಗಳು ವಾಣಿಜ್ಯ ವಿಮಾನ ಕೇಂದ್ರಗಳು. 8,000 ಕಿಮೀ ರೈಲುಮಾರ್ಗವಿದೆ. ಆರು ರೈಲು ಮಾರ್ಗಗಳು ಸರಕು ರವಾನೆ ಮಾಡುತ್ತವೆ. 126 ವಿಮಾನ ನಿಲ್ದಾಣಗಳಿವೆ.

ಮಾಂಟಾನದಲ್ಲಿ 15 ದೈನಿಕಗಳು ಸೇರಿದಂತೆ 85 ಸುದ್ದಿ ಪತ್ರಿಕೆಗಳು ಪ್ರಸಾರದಲ್ಲಿವೆ. ಬಿಲ್ಲಿಂಗ್ಸ್ ಗೆಜೆಟ್, ಗ್ರೇಟ್ ಫಾಲ್ಸ್ ಟ್ರಿಬ್ಯೂನ್ ಇವು ಅತ್ಯಧಿಕ ಪ್ರಸಾರದ ಪತ್ರಿಕೆಗಳು. ಮೊದಲ ಆಕಾಶವಾಣಿ ಕೇಂದ್ರ ಬ್ಯೂಟಿನಲ್ಲಿ 1953ರಲ್ಲಿ ಪ್ರಾರಂಭವಾಯಿತು. ಮೊದಲ ದೂರದರ್ಶನ ಕೇಂದ್ರ ಬ್ಯೂಟಿನಲ್ಲಿ 1953ರಲ್ಲಿ ಪ್ರಾರಂಭವಾಯಿತು. ಇಂದು ರಾಜ್ಯದಲ್ಲಿ ಸು. 60 ಆಕಾಶವಾಣಿ ಕೇಂದ್ರಗಳು 12 ದೂರದರ್ಶನ ಕೇಂದ್ರಗಳೂ ಇವೆ.

ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾಂಟಾನದಲ್ಲಿ 9 ವಿಶ್ವವಿದ್ಯಾಲಯಗಳಿವೆ. ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳು ಆಸ್ಪತ್ರೆಗಳು ಮತ್ತು ಮಾನಸಿಕ ಚಿಕಿತ್ಸಾ ಕೇಂದ್ರಗಳಿವೆ.

ಮಾಂಟಾನದಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳಿವೆ. ಗ್ರೇಟ್‌ಫಾಲ್ಸ್ ಹತ್ತಿರ ಜಯಂಟ್ ಸ್ಪ್ರಿಂಗ್ಸ್ ಎಂಬ ನಿಮಿಷಕ್ಕೆ 27,000 ಗ್ಯಾಲನ್ ನೀರನ್ನು ಚಿಮ್ಮಿಸುವ ಊಟೆ ಇದೆ. ಮಾಂಟಾನ ಪ್ರಕೃತಿ ದೃಶ್ಯಗಳಿಗೆ ಹೆಸರಾದುದು. ಗ್ಲೇಸಿಯರ್ ನ್ಯಾಷನಲ್ ಪಾರ್ಕ್ ಬಳಿ ಹಿಮ ಪ್ರವಾಹಗಳ ಅಪೂರ್ವನೋಟ ಸಿಗುತ್ತದೆ. ಗ್ರೇಟ್‌ಫಾಲ್ಸ್ ಆಫ್ ಮಿಸ್ಸೋರಿಯಲ್ಲಿ 14ಕಿಮೀ ಅಂತರದಲ್ಲಿ 120 ಮೀ ಆಳಕ್ಕೆ ನದಿ ದುಮುಕುತ್ತದೆ. ಯೆಲ್ಲೊಸ್ಟೋನ್ ನ್ಯಾಷನಲ್ ಪಾರ್ಕ್ ಪ್ರಾಣಿಧಾಮವಾಗಿದೆ. (ಡಿ.ಎಸ್.ಜೆ.)

**ಮಾಂಟೆವಿಡೀಯೊ:** ದಕ್ಷಿಣ ಅಮೆರಿಕದ ಉರುಗ್ವೆ ದೇಶದ ಒಂದು ವಿಭಾಗ, ಬಂದರು ನಗರ, ದೇಶದ ರಾಜಧಾನಿ. ಉರುಗ್ವೆಯ ದಕ್ಷಿಣ ತೀರದ ಅಟ್ಲಾಂಟಿಕ್ ಸಾಗರದ ಈ ನಗರ ದೇಶದ ಹಾಗೂ ವಿಭಾಗದ ಆಡಳಿತ ಕೇಂದ್ರ. ವಿಸ್ತೀರ್ಣ 664 ಚ.ಕಿಮೀ. ಜನಸಂಖ್ಯೆ 1,38,707 (2001). ನಗರದ ಕೇಂದ್ರ ಭಾಗದಲ್ಲಿ ಪ್ಲಾಜಾ ಉದ್ಯಾನವನವಿದೆ. ಸುತ್ತಲೂ ಇರುವ ಸುಂದರ ಬೃಹತ್ ಕಟ್ಟಡಗಳಲ್ಲಿ ಸರ್ಕಾರಿ ಕಚೇರಿಗಳು, ವಸ್ತುಸಂಗ್ರಹಾಲಯಗಳು. ಕಲಾಪ್ರದರ್ಶನ ಮಂದಿರಗಳು, ವಿಕ್ಟೋರಿಯ ಪ್ಲಾಜಾ ಹೋಟೆಲ್ ಮುಂತಾದವೂ ಹಿಂದಿನ ಅರಮನೆಗಳೂ ಇವೆ. ಪ್ರಾಚೀನ ಭಾಗವನ್ನು ಒಳಗೊಂಡ ಹಳೆಯ ನಗರದಲ್ಲಿ ಸು. 1700 ಮತ್ತು 1800ರ ಕಾಲದ ಕಟ್ಟಡಗಳಿವೆ. ಹಳೆಯ ನಗರದ ದಕ್ಷಿಣ ಮತ್ತು ಪೂರ್ವ ಭಾಗಕ್ಕೆ ಬೆಳೆದಿರುವ ಹೊಸನಗರದ ತೀರದುದ್ದಕ್ಕೂ ಮರಳಿನ ಸುಂದರ ತೀರಗಳೂ ವಿಶ್ವವಿದ್ಯಾಲಯಗಳೂ ಇವೆ. ಉರುಗ್ವೆ ಸರ್ಕಾರದ ಶೇ. 60 ಭಾಗದಷ್ಟು ನೌಕರರು ಈ ನಗರದಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿಂದ ಉಣ್ಣೆ, ಮಾಂಸ, ಚರ್ಮ ಮತ್ತು ಕೃಷಿ ಉತ್ಪನ್ನಗಳನ್ನು ಹೊರದೇಶಕ್ಕೆ ಕಳುಹಿಸುತ್ತಾರೆ. ಮಾಂಸಸಂಸ್ಕರಣೆ ಮತ್ತು ಡಬ್ಬಗಳಲ್ಲಿ ತುಂಬುವುದು, ಗಿರಣಿಗಳು, ಎಣ್ಣೆ ಶುದ್ಧೀಕರಣ, ಪ್ರವಾಸೋದ್ಯಮ ಮೊದಲಾದವು ನಗರದಲ್ಲಿರುವ ಮುಖ್ಯ ಆರ್ಥಿಕ ಚಟುವಟಿಕೆಗಳಾಗಿವೆ. ಸ್ಪಾನಿಷ್ ಜನರು 1700ರಲ್ಲಿ ಈ ನಗರವನ್ನು ಸ್ಥಾಪಿಸಿದರು. ಅಂದಿನಿಂದ ಇಂದಿನ ತನಕ ಸುತ್ತಮುತ್ತಲಿನ ದೇಶಗಳ ಸರಕು ಸಾಮಾನುಗಳ ಮಾರಾಟ ಕೇಂದ್ರವಾಗಿ ಬೆಳೆದು 1800ರ ಕೊನೆಯ ಭಾಗದಲ್ಲಿ ಫ್ರಾನ್ಸ್, ಜರ್ಮನಿ, ಬ್ರಿಟನ್, ಇಟಲಿ, ಹಂಗೇರಿ ಮೊದಲಾದ ಯುರೋಪಿಯನ್ ರಾಷ್ಟ್ರಗಳಿಂದ ಬಂದ ವಲಸೆಗಾರರು ಈ ನಗರದ ಅಭಿವೃದ್ಧಿಗೆ ಕಾರಣರಾದರು. ಹೀಗೆ ಬಂದ ವಲಸೆಗಾರರು ಕುಶಲಕರ್ಮಿಗಳಾಗಿದ್ದು ಈ ನಗರದ ಕೈಗಾರಿಕೆ ಮತ್ತು ವಾಣಿಜ್ಯ ವ್ಯಾಪಾರ ಬೆಳೆಯಲು ಕಾರಣರಾದರು. (ಕೆ.ಆರ್.)

**ಮಾಂಟ್ರಿಯಲ್:** ಕೆನಡ ದೇಶದ ಎರಡನೆಯ ದೊಡ್ಡ ನಗರ ಮತ್ತು ಸೆಂಟ್ ಲಾರೆನ್ಸ್ ನದೀಮುಖಜ ಭೂಮಿಯ ಪ್ರಮುಖ ಬಂದರು. ತ್ರಿಕೋನಾಕಾರವಾದ ಮಾಂಟ್ರಿಯಲ್ ದ್ವೀಪದ ಮೂರನೆಯ ಒಂದು ಭಾಗ ಆವರಿಸಿರುವ ಈ ನಗರ 233 ಮೀ ಎತ್ತರವಿರುವ ಮೌಂಟ್ ರಾಯಲ್ ಪರ್ವತದ ಸುತ್ತಲೂ ಹಬ್ಬಿದೆ. ಈ ಪರ್ವತದಿಂದಲೇ ಈ ನಗರಕ್ಕೆ ಮಾಂಟ್ರಿಯಲ್ ಎಂಬ ಹೆಸರು ಬಂದಿದೆಯೆನ್ನುವರು. ಮಾಂಟ್ರಿಯಲ್ ಮಹಾನಗರ ಪ್ರದೇಶ ಮಾಂಟ್ರಿಯಲ್ ದ್ವೀಪ, ಜೀಸಸ್ ದ್ವೀಪ ಹಾಗೂ ಇತರ ಸಣ್ಣ ದ್ವೀಪಗಳು, ಸೆಂಟ್ ಲಾರೆನ್ಸ್ ನದಿಯ ಎರಡು ದಡಗಳು ಮತ್ತು ಕ್ಯೂಬೆಕ್‌ನ ಮುಖ್ಯ ಭೂಭಾಗವನ್ನೂ ಆವರಿಸಿಕೊಂಡಿದೆ, ಮಾಂಟ್ರಿಯಲ್ ಮಹಾನಗರ ಪ್ರದೇಶದ ವಿಸ್ತೀರ್ಣ 2673 ಚ.ಕಿಮೀ. ಜನಸಂಖ್ಯೆ 34,26,350 (2001).

ಕೆನಡದಲ್ಲೇ ಅತ್ಯಂತ ಎತ್ತರದ ಅನೇಕ ಕಟ್ಟಡಗಳು ಮಾಂಟ್ರಿಯಲ್ ನಗರದಲ್ಲಿವೆ. ಪ್ಲೇಸ್ ವಿಲ್ಲೆ–ಮೇರಿ ಕಟ್ಟಡ 45 ಅಂತಸ್ತುಗಳನ್ನು ಹೊಂದಿದೆ. ಇದನ್ನು ನ್ಯೂಯಾರ್ಕ್ ನಗರದ ಸುಪ್ರಸಿದ್ಧ ರಾಕ್‌ಫೆಲರ್ ಸೆಂಟರ್‌ಗೆ ಹೋಲಿಸಬಹುದು. ಇಲ್ಲಿಯ ಭೂ ಅಂತರ್ಗತ ನಗರ ವ್ಯಾಪಾರಸಂಕೀರ್ಣ ಪ್ರಪಂಚದಲ್ಲಿಯೇ ದೊಡ್ಡದು. 1967ರಲ್ಲಿ ಎಕ್ಸ್‌ಪೋ–67 ಅಂತಾರಾಷ್ಟ್ರೀಯ ಪ್ರದರ್ಶನ ನಡೆದ ಕಾಲದಲ್ಲಿ ಈ ನಗರದ ಅಭಿವೃದ್ಧಿಗೆ ಆದ್ಯತೆ ನೀಡಲಾಯಿತು. ಅನಂತರ ಪ್ರತೀವರ್ಷವೂ ಬೇಸಗೆಯಲ್ಲಿ ಎಕ್ಸ್‌ಪೋ ರೀತಿಯ ಪ್ರದರ್ಶನವನ್ನು ಮಾನವ ಮತ್ತು ಅವನ ಪ್ರಪಂಚ ಎಂಬ ಹೆಸರಿನಲ್ಲಿ ಮುಂದುವರಿಸಲಾಗಿದೆ.

ಇಲ್ಲಿಯ ಸು. ಶೇ. 75 ರಷ್ಟು ಜನ ಫ್ರೆಂಚ್ ಭಾಷೆ ಮಾತನಾಡುವವರು. ಮಾಂಟ್ರಿಯಲ್ ಪ್ರಪಂಚದಲ್ಲಿಯೇ ಫ್ರೆಂಚ್ ಮಾತನಾಡುವ ಅತ್ಯಂತ ಹೆಚ್ಚು ಜನರಿರುವ ನಗರಗಳಲ್ಲಿ ಎರಡನೆಯದು (ಮೊದಲನೆಯದು ಪ್ಯಾರಿಸ್). ಫ್ರೆಂಚ್ ಮತ್ತು ಇಂಗ್ಲಿಷ್ ಎರಡೂ ಆಡಳಿತ ಭಾಷೆಗಳಾಗಿವೆ. ಆದರೆ ಇಲ್ಲಿಯ ವ್ಯಾಪಾರ ಮತ್ತು ಕೈಗಾರಿಕೆಗಳು ಇಂಗ್ಲಿಷ್ ಮಾತನಾಡುವ ಅಲ್ಪಸಂಖ್ಯಾತರ ಹಿಡಿತದಲ್ಲಿವೆ.

ನಗರದ ಜನಸಂಖ್ಯೆಯಲ್ಲಿ ಮುಕ್ಕಾಲು ಭಾಗ ರೋಮನ್ ಕೆಥೊಲಿಕರು. ಇವರೆಲ್ಲ ಫ್ರೆಂಚ್ ಮೂಲದವರು. ಇಂಗ್ಲಿಷ್ ಮೂಲದವರಲ್ಲಿ ಬಹುಭಾಗ ಪ್ರಾಟೆಸ್ಟಂಟರು ಯಹೂದ್ಯರು ಇಲ್ಲಿರುವ ಮತ್ತೊಂದು ಪ್ರಮುಖ ಧಾರ್ಮಿಕ ಪಂಗಡ.

ಹಳೆಯ ಮಾಂಟ್ರಿಯಲ್ ನಗರ ಸಮುದ್ರಕ್ಕೆ ಅಭಿಮುಖವಾಗಿದ್ದು ಪುರಾತನ ಕಟ್ಟಡಗಳಿಂದಲೂ ಕಿರಿದಾದ ಓಣಿಗಳಿಂದಲೂ ಕೂಡಿದೆ. ಇಲ್ಲಿ 300ಕ್ಕೂ ಹೆಚ್ಚು ಚರ್ಚುಗಳಿವೆ. ಇವುಗಳಲ್ಲಿ ಅತ್ಯಂತ ಪುರಾತನವಾದದ್ದು 1771ರಲ್ಲಿ ಕಟ್ಟಲಾದ ನೋಟ್ರೆಡೇಮ್ ಡಿ ಬಾನ್–ನಿಕೊಸ್ಸ್ ಎಂಬ ರೋಮನ್ ಕ್ಯಾಥೊಲಿಕ್ ಚರ್ಚ್. ನಾವಿಕರ ಚರ್ಚು ಎಂದೂ ಹೆಸರಾದ ಈ ಚರ್ಚಿನ ಮೇಲೆ ಮೇರಿ ಕನ್ನಿಕೆಯ ವಿಗ್ರಹವಿದ್ದು ಈಕೆ ನಾವಿಕರನ್ನು ರಕ್ಷಿಸುವಳೆಂಬ ನಂಬಿಕೆಯಿದೆ. ಮೇರಿಯ ಕತೀಡ್ರಲ್–ಬೆಸಲಿಕಾಚರ್ಚನ್ನು ವ್ಯಾಟಿಕನ್ ನಗರದ ಸೆಂಟ್ ಪೀಟರ್ ಚರ್ಚಿನ ಮಾದರಿಯಲ್ಲಿ ಕಟ್ಟಲಾಗಿದೆ. ನಗರದ ದಕ್ಷಿಣ ಭಾಗದಲ್ಲಿ 1685ರಲ್ಲಿ ತೆರೆಯಲಾದ ಸೆಂಟ್ ಸುಲ್ಪೆಸ್ ಸೆಮಿನರಿ ಇದೆ. ಇವಲ್ಲದೆ ಸೆಂಟ್ ಪ್ಯಾಟ್ರಿಕ್ ಚರ್ಚ್ ನೋಟ್ರೆಡೇಮ್ ಪ್ಯಾರಿಸ್ ಚರ್ಚ್ ಮುಂತಾದವು ಇವೆ.

ಆರ್ಥಿಕತೆ: ಮಾಂಟ್ರಿಯಲ್ ನಗರ ಸೆಂಟ್ ಲಾರೆನ್ಸ್ ನದಿ ಸಮುದ್ರ ಸೇರುವ ಸ್ಥಳದಲ್ಲಿರುವುದರಿಂದ ಇದು ಪ್ರಪಂಚದ ಒಳನಾಡಿನ ಉತ್ತಮ ಬಂದರುಗಳಲ್ಲೊಂದು. ಸುಲಭವಾಗಿ ಕಡಿಮೆ ವೆಚ್ಚದಲ್ಲಿ ವಿದ್ಯುತ್ ದೊರಕುವುದರಿಂದ ಅನೇಕ ಕೈಗಾರಿಕೆಗಳು ಸ್ಥಾಪಿತವಾಗಿವೆ. ಶುದ್ಧೀಕರಣ ಮತ್ತು ಆಹಾರ ಸಂಸ್ಕರಣ, ಬೀರ್, ಡಬ್ಬಿ ಆಹಾರ, ಸಕ್ಕರೆ, ಬಟ್ಟೆ, ಹೊಗೆಸೊಪ್ಪಿನ ತಯಾರಿಕೆಗಳು ಸಾರಿಗೆ ಉಪಕರಣಗಳು ತಯಾರಿಕೆಗೂ ಇದು ಪ್ರಸಿದ್ಧವಾಗಿದೆ. ಒಟ್ಟಿನಲ್ಲಿ ಇಲ್ಲಿ 7000ಕ್ಕೂ ಹೆಚ್ಚು ಕೈಗಾರಿಕೆಗಳಿದ್ದು ಕ್ಯೂಬೆಕ್ ಪ್ರದೇಶದ ಒಟ್ಟು ಕೈಗಾರಿಕಾ ಉತ್ಪಾದನೆಯ $^{2}/_{3}$ ಭಾಗದಷ್ಟು ಉತ್ಪಾದನೆಯಾಗುತ್ತದೆ.

ಕೆನಡದ ವಿದೇಶಿ ವ್ಯಾಪಾರದ ಶೇ. 20ರಷ್ಟು ಆಮದು ಮತ್ತು ಶೇ. 10ರಷ್ಟು ರಫ್ತು ಮಾಂಟ್ರಿಯಲ್‌ನ ಮೂಲಕ ನಡೆಯುತ್ತದೆ. ಇಲ್ಲಿಯ ಭೂ ಅಂತರ್ಗತ ವ್ಯಾಪಾರ ಸಂಕೀರ್ಣಗಳೂ ರಸ್ತೆಗಳೂ ಚಳಿಗಾಲದಲ್ಲಿ ನಡೆಯಲು ನೆರವಾಗಿವೆ. ವ್ಯಾಪಾರ ಎಂದಿನಂತೆ ಪ್ರತಿವರ್ಷ ನವೆಂಬರ್‌ನಿಂದ ಏಪ್ರಿಲ್ ವರೆಗೆ. ಈ ನಗರದಲ್ಲಿ ಅಗಾಧ ಹಿಮ ಬೀಳುವುದರಿಂದ ಅದನ್ನು ರಸ್ತೆಗಳಿಂದ ತೆಗೆಯಲು 5 ರಿಂದ 8 ದಶಲಕ್ಷ ಡಾಲರು ವೆಚ್ಚವಾಗುತ್ತದೆ.



ಮಾಂಟ್ರಿಯಲ್ ನಗರದ ವಿಹಂಗಮ ನೋಟ

ಸಾರಿಗೆ: ಸೇಂಟ್ ಲಾರೆನ್ಸ್ ನದಿ ಮಾಂಟ್ರಿಯಲ್ ನಗರವನ್ನು ಅಟ್ಲಾಂಟಿಕ್ ಸಾಗರದೊಂದಿಗೆ ಸಂಪರ್ಕಿಸುತ್ತದೆ. ಒಳನಾಡಿನಲ್ಲಿಯೂ ಸೇಂಟ್ ಲಾರೆನ್ಸ್ ಜಲಮಾರ್ಗ 2090 ಕಿಮೀ ದೂರ ಪ್ರಯಾಣ ಮಾಡಲು ಅನುಕೂಲವಾಗಿದೆ. ಮಾಂಟ್ರಿಯಲ್ ಬಂದರಿನಲ್ಲಿ 4000ಕ್ಕೂ ಹೆಚ್ಚು ಹಡಗುಗಳು ಪ್ರತಿವರ್ಷ ತಂಗುತ್ತವೆ ಹಾಗೂ ಪ್ರತಿವರ್ಷ 17 ದಶಲಕ್ಷ ಮೆಟ್ರಿಕ್ ಟನ್‌ಗಳಿಗೂ ಹೆಚ್ಚು ಸರಕು ಸಾಗಾಣಿಕೆಯಾಗುತ್ತದೆ. ಮಾಂಟ್ರಿಯಲ್ ಕೆನಡದ ರೈಲು, ವಿಮಾನ ಹಾಗೂ ರಸ್ತೆ ಪ್ರಯಾಣದ ಪ್ರಮುಖ ಕೇಂದ್ರ..

ಶಿಕ್ಷಣ: ಮಾಂಟ್ರಿಯಲ್‌ನ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಧರ್ಮ ಮತ್ತು ಭಾಷೆಯ ಆಧಾರದ ಮೇಲೆ ನಿರ್ಮಿತವಾಗಿದೆ. 1876ರಲ್ಲಿ ಪ್ರಾರಂಭವಾದ ಮಾಂಟ್ರಿಯಲ್ ವಿಶ್ವವಿದ್ಯಾಲಯ ಮತ್ತು 1968ರಲ್ಲಿ ಪ್ರಾರಂಭವಾದ ಕ್ಯುಬೆಕ್ ವಿಶ್ವವಿದ್ಯಾಲಯ ಫ್ರೆಂಚ್ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತವೆ. 1821ರ ಸರ್‌ಜಾರ್ಜ್ ವಿಲಿಯಮ್ಸ್ ವಿಶ್ವವಿದ್ಯಾಲಯ ಇಂಗ್ಲಿಷಿನಲ್ಲಿ ಶಿಕ್ಷಣ ನೀಡುತ್ತದೆ.

ಮಾಂಟ್ರಿಯಲ್ ಉತ್ತರ ಅಮೆರಿಕದ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಲ್ಲೊಂದು. ಇಲ್ಲಿ ಅನೇಕ ಚಿತ್ರ ಶಾಲೆಗಳೂ ವಸ್ತುಸಂಗ್ರಹಾಲಯಗಳೂ ಕಲಾಮಂದಿರಗಳೂ ಇವೆ. ಈ ನಗರದಲ್ಲಿರುವ ಮಾಂಟ್ರಿಯಲ್ ಸಿಂಫೋನಿ ಆರ್ಕೆಸ್ಟ್ರಾ ಪ್ರಪಂಚ ಪ್ರಸಿದ್ಧವಾಗಿದೆ. ನಗರ ಪ್ರಸಿದ್ಧ ಪ್ರವಾಸಿ ಕೇಂದ್ರವಾಗಿದ್ದು ಪ್ರತಿವರ್ಷ ಸು. 4 ದಶಲಕ್ಷ ಪ್ರವಾಸಿಗರು ಭೇಟಿ ನೀಡುತ್ತಾರೆ.

1844ರಿಂದ 1849ರವರೆಗೆ ಮಾಂಟ್ರಿಯಲ್ ಸಂಯುಕ್ತ ಕೆನಡದ ರಾಜಧಾನಿಯಾಗಿತ್ತು. ಇಪ್ಪತ್ತನೆಯ ಶತಮಾನದ ವೇಳೆಗೆ ನಗರದ ಜನಸಂಖ್ಯೆ 2,70,000ಕ್ಕೆ ಏರಿ ನಗರದ ಹೊರವಲಯದ ಹಳ್ಳಿಗಳು, ಪಟ್ಟಣಗಳು ಮತ್ತು ನಗರಗಳನ್ನು ಮಾಂಟ್ರಿಯಲ್‌ನಲ್ಲಿ ವಿಲೀನಗೊಳಿಸಲಾಯಿತು. 1908ರಲ್ಲಿ ಈ ನಗರ ಸೇಂಟ್ ಹೆಲೆನ್ ದ್ವೀಪವನ್ನು ಖರೀದಿಮಾಡಿತು. ಎರಡು ಮಹಾಯುದ್ಧಗಳು ಉತ್ತರ ಅಮೆರಿಕದ ಇತರ ಕೈಗಾರಿಕಾ ಕೇಂದ್ರಗಳ ಆರ್ಥಿಕ ಬೆಳೆವಣಿಗೆಗೆ ಪ್ರಚೋದನೆ ನೀಡಿದಂತೆ ಮಾಂಟ್ರಿಯಲ್‌ಗೂ ನೀಡಿತು. 1959ರಲ್ಲಿ ಮಾಂಟ್ರಿಯಲ್‌ನಲ್ಲಿ ಮೆಟ್ರೊಪಾಲಿಟನ್ ಕಾರ್ಪೊರೇಷನ್ ಸ್ಥಾಪಿತವಾಯಿತು.

1950ರ ಪ್ರಾರಂಭದ ವೇಳೆಗೆ ನಗರದ ಜನಸಂಖ್ಯೆ ಒಂದು ದಶಲಕ್ಷಕ್ಕೂ ಮೀರಿತು. 1960ರ ವರೆಗೆ ನಗರದ ಆರ್ಥಿಕ ಅಭಿವೃದ್ಧಿಯೂ ತೀವ್ರವಾಯಿತು. ನಗರದ ಹಳೆಯ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡಗಳನ್ನು ಕಟ್ಟಲಾಯಿತು. 1975ರಲ್ಲಿ ತೆರೆಯಲಾದ ಮಾಂಟ್ರಿಯಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಪಂಚದಲ್ಲೇ ಅತಿದೊಡ್ಡದಾದ (375ಚ.ಕಿಮೀ) ವಿಸ್ತೀರ್ಣ ಹೊಂದಿದೆ. (ಜಿ.ಎಸ್.ಎಸ್.)

**ಮಾಂಡಲೆ:** ಮಯನ್ಮಾರ್ ದೇಶದ ಒಂದು ವಿಭಾಗ, ಜಿಲ್ಲೆ ಹಾಗೂ ಒಂದು ಮಹಾನಗರ.

ಜಿಲ್ಲೆ: ಮಯನ್ಮಾರ್ ಕೇಂದ್ರಸ್ಥಾನದಲ್ಲಿ ಇರವಾಡಿ ನದಿಯ ಪೂರ್ವ ಭಾಗಕ್ಕಿದ್ದು ಸು. 5473 ಚ.ಕಿಮೀ ವಿಸ್ತೀರ್ಣ ಹೊಂದಿದೆ. ಇಲ್ಲಿಯ ಇರವಾಡಿ ಮಧ್ಯಕಣಿವೆಯ ಪ್ರದೇಶದಲ್ಲಿ ಬತ್ತ, ಹುರುಳಿ ಮತ್ತು ಹಣ್ಣುಗಳನ್ನು ಬೆಳೆಯುತ್ತಾರೆ. ಜಿಲ್ಲೆಯ ಆಗ್ನೇಯ ದಿಕ್ಕಿನಲ್ಲಿ ಬೆಟ್ಟಗಳು. ಪೀಠಭೂಮಿ ಹಾಗೂ ಪ್ರಸಿದ್ಧವಾದ ಶಾನ್ ಪ್ರಸ್ಥಭೂಮಿಯಿದೆ. ಇದು ಬೆಟ್ಟ ಕಾಡುಗಳಿಂದ ಕೂಡಿದ್ದು ಮಾಂಟಗಿ ಮತ್ತು ಮಾಂಗ್ವಿ ನದಿಗಳ ಜಲ ಸಂಪರ್ಕ ಹೊಂದಿದೆ. ಶಾಗಿನಿ ಬೆಟ್ಟ ಪ್ರದೇಶದಲ್ಲಿ ಬುದ್ಧನ ಸುಂದರ ಶಿಲಾ ವಿಗ್ರಹಗಳ ಕೆತ್ತನೆಯ ಉದ್ಯಮವಿದೆ. ಜಿಲ್ಲೆಯ ಮೈದಾನ ಭಾಗ ಪ್ರಮುಖ ಕೈಗಾರಿಕಾ ಪ್ರದೇಶ. ಮಿನ್‌ಜಾನ್‌ನಲ್ಲಿ ಸು. 70 ಟನ್‌ಗಳಷ್ಟು ತೂಕವುಳ್ಳ ದೊಡ್ಡದಾದ ಗಂಟೆಯಿದೆ. ಮಾಂಡಲೆ ವಿಭಾಗ 34,553 ಚ.ಕಿಮೀ ವಿಸ್ತೀರ್ಣ ಹೊಂದಿದೆ. ಈ ವಿಭಾಗ ಮಾಂಡಲೆ, ಕ್ಯಾಕಶಿ, ಮಿಕಿಟಿಲಾ, ಮಾನ್‌ಗಿನ್ ಮತ್ತು ಎಮೆಟಲಿ ಜಿಲ್ಲೆಗಳನ್ನು ಒಳಗೊಂಡಿದೆ. ಜನಸಂಖ್ಯೆ: 64,42,000 (2005).

ನಗರ: ಇರವಾಡಿ ನದಿ ದಂಡೆಯ ಮೇಲೆ ಯಾಂಗೂನಿನ ಉತ್ತರಕ್ಕೆ 563 ಕಿಮೀ ದೂರದಲ್ಲಿದೆ. ಉತ್ತರ ಅಕ್ಷಾಂಶ $21^0 58'$ ಮತ್ತು ಪೂರ್ವ ರೇಖಾಂಶ $96^0 8'$ ದಲ್ಲಿದೆ. ಜನಸಂಖ್ಯೆ 9,27,000 (2005). ನಗರ ಸಮುದ್ರಮಟ್ಟದಿಂದ ಸು. 95ಮೀಟರ್ ಎತ್ತರದಲ್ಲಿದೆ. ಮಾಂಡಲೆ ಮಧ್ಯ ಮಯನ್ಮಾರ್ ಶುಷ್ಕ ಪ್ರದೇಶದಲ್ಲಿದ್ದು ಯಾಂಗೂನಿನೊಡನೆ ರಸ್ತೆ, ರೈಲು ಹಾಗೂ ಜಲ ಸಂಪರ್ಕಗಳನ್ನು ಹೊಂದಿದೆ. ಈ ನಗರ ಹಿಂದಿನ ಬರ್ಮಾದೇಶದ ರಾಜಧಾನಿಯಾಗಿದ್ದು 1885ರಲ್ಲಿ ಬ್ರಿಟಿಷರ ಕೈವಶವಾಯಿತು. ಇಲ್ಲಿ ಬೌದ್ಧರು ಅಧಿಕಸಂಖ್ಯೆಯಲ್ಲಿ ನೆಲೆಸಿದ್ದಾರೆ. ಈ ನಗರ ಬೌದ್ಧಧರ್ಮದ ಮುಖ್ಯ ಕೇಂದ್ರವಾಗಿದ್ದು ಬೌದ್ಧ ಭಿಕ್ಷುಗಳ ತವರು ಮನೆಯಾಗಿದೆ. ನಗರದ ಈಶಾನ್ಯಭಾಗದ ಬೆಟ್ಟ ಪ್ರದೇಶ ನದಿಯ ಹತ್ತಿರದಲ್ಲಿದ್ದು ಇತ್ತೀಚೆಗೆ ನಿರ್ಮಿಸಿದ ಪಗೋಡ ಹಾಗೂ ಸ್ಮಾರಕ ಕಟ್ಟಡಗಳಿಂದ ಕೂಡಿದೆ. ಬೆಟ್ಟದ ತಳಭಾಗದಲ್ಲಿ ಸು. 730 ಪಗೋಡಗಳಿವೆ. ಇಲ್ಲಿಯ ಸುಪ್ರಸಿದ್ಧ ಪಗೋಡವೆಂದರೆ ದಕ್ಷಿಣ ಭಾಗದಲ್ಲಿರುವ ಮಹಮ್ಮಿಯ ಮನಿ ಅಥವಾ ಅರೇಖಾನ್ ಪಗೋಡ. ಇದರಲ್ಲಿ 3.65 ಮೀ ಎತ್ತರದ ತಾಮ್ರದ ಬುದ್ಧನ ಪ್ರತಿಮೆ ಅತ್ಯಂತ ಪ್ರಾಚೀನವಾದುದು. ನಗರದ ಅರಮನೆಯ ಪಶ್ಚಿಮಕ್ಕಿರುವ ಮಾರುಕಟ್ಟೆ ಜೈಗ್ಗಿಯ ಬಜಾರ್ ಎಂದು ಪ್ರಸಿದ್ಧ. ಇಲ್ಲಿಗೆ ದೇಶದ ಎಲ್ಲ ಭಾಗದ ಜನರು ಬರುತ್ತಿರುತ್ತಾರೆ. ಈ ನಗರ ಮಯನ್ಮಾರ್‌ನ ಕೈಗಾರಿಕಾ ಕೇಂದ್ರ. ಇಲ್ಲಿಯ ಮುಖ್ಯ ಕೈಗಾರಿಕೆಗಳೆಂದರೆ ರೇಷ್ಮೆನೂಲುವುದು, ಬೆಲೆಬಾಳುವ ಹರಳುಕಲ್ಲುಗಳ ತಯಾರಿಕೆ, ಬೆಂಕಿಪೊಟ್ಟಣ, ಮರಗೆಲಸ, ಚಿನ್ನ, ಬೆಳ್ಳಿ, ಒಡವೆವಸ್ತುಗಳ ತಯಾರಿಕೆ. ಈ ನಗರ ದಕ್ಷಿಣದ ಯಾಂಗೂನ್, ಉತ್ತರದ ಮಿಟಿಕಿನ ಮತ್ತು ಲಾಶಿಯ ಹಾಗೂ ಚೀನದ ಗಡಿಯವರೆಗೆ ರೈಲು ಮತ್ತು ವಿಮಾನ ಸಂಚಾರ–ಸಂಪರ್ಕ ಹೊಂದಿದೆ. ಇದರ ಸುತ್ತಲೂ ಹಾವಾ, ಅಮರಪುರ (ಹಿಂದಿನ ರಾಜಧಾನಿ), ನಯಾಗಾರಿ ಮೊದಲಾದ ಉಪನಗರಗಳು ಬೆಳೆದಿವೆ. ಇಲ್ಲಿರುವ ವಿಶ್ವವಿದ್ಯಾಲಯಗಳು 1958ರಲ್ಲಿ ತಮ್ಮದೇ ಅಧಿಕಾರವನ್ನು ಪಡೆದುವು. ಇಲ್ಲಿ ಅನೇಕ ವಿದ್ಯಾಸಂಸ್ಥೆಗಳಿದ್ದು ಶಿಕ್ಷಣ, ತರಬೇತಿ, ಕೃಷಿ ಕೈಗಾರಿಕಾ ಸಂಸ್ಥೆಗಳು, ಕರಕುಶಲ, ಸಂಗೀತ, ನೃತ್ಯಶಾಲೆಗಳನ್ನು ಹೊಂದಿವೆ. ಇಲ್ಲಿಯ ಸುಭಿಕ್ಷತೆ, ಪ್ರಶಾಂತತೆ ಮತ್ತು ನೈರ್ಮಲ್ಯಗಳಿಂದಾಗಿ ಇದನ್ನು ಚಿನ್ನದ ನಗರವೆಂದು ಕರೆಯಲಾಗುತ್ತಿತ್ತು. ಇದರ ನಿರ್ಮಾಣ 1857ರಲ್ಲಿ ಪ್ರಾರಂಭಿಸಲ್ಪಟ್ಟು 1860ರಲ್ಲಿ ಮುಕ್ತಾಯವಾಯಿತು. ಮಹಮ್ಮದೀಯರು, ಹಿಂದುಗಳು, ಯಹೂದಿ, ಶಾನರು, ಚೀನೀಯರು, ಮಾನೇಪುರಿಭಗರು ಕಂಡುಬರುವರು. ಈ ನಗರ ಮಯನ್ಮಾರಿನ ಸಂಸ್ಕೃತಿಯನ್ನು ಇಂದಿಗೂ ಪ್ರತಿಬಿಂಬಿಸುವುದು. ಮಾಂಡೆಯಾನ್ ನದಿ ಮಾಂಡಲೆಯಿಂದ 40 ಕಿಮೀ ದೂರದಲ್ಲಿ ಹರಿಯುವುದು. ನೌಕಾಯಾನದ ಸೌಲಭ್ಯವಿದ್ದು ಈ ನಗರ ಹೆಚ್ಚು ಅಭಿವೃದ್ಧಿ ಹೊಂದಲು ಕಾರಣವಾಗಿದೆ. ಬ್ರಿಟಿಷರ ಆಕ್ರಮಣದ ಬಳಿಕ ರಾಜಧಾನಿಯನ್ನು ಮಾಂಡಲೆಯಿಂದ ರಂಗೂನಿಗೆ ವರ್ಗಾಯಿಸಲಾಯಿತು. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಜಪಾನೀಯರ ಆಕ್ರಮಣಕ್ಕೆ ತುತ್ತಾಗಿ ಈ ನಗರ ಬಹುಪಾಲು ನಾಶಗೊಂಡು ಈಗ ಪುನರ್‌ನಿರ್ಮಾಣಗೊಂಡಿದೆ. (ಕೆ.ಆರ್.)

**ಮಾಗಡಿ:** ಬೆಂಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ದಕ್ಷಿಣದಲ್ಲಿ ರಾಮನಗರ, ಪೂರ್ವದಲ್ಲಿ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಮತ್ತು ನೆಲಮಂಗಲ ತಾಲ್ಲೂಕುಗಳೂ ಉತ್ತರದಲ್ಲಿ ತುಮಕೂರು, ಪಶ್ಚಿಮದಲ್ಲಿ ಕುಣಿಗಲು ತಾಲ್ಲೂಕುಗಳೂ ಸುತ್ತುವರಿದಿವೆ. ಹೋಬಳಿಗಳು 6, ಗ್ರಾಮಗಳು 335. ವಿಸ್ತೀರ್ಣ 913.3 ಚ.ಕಿಮೀ. ಜನಸಂಖ್ಯೆ 2,00,962.

ನೆಲಮಂಗಲದ ಪಶ್ಚಿಮ ದಿಕ್ಕಿನಿಂದ ಹಬ್ಬಿರುವ ಬೆಟ್ಟಗಳು ಈ ತಾಲ್ಲೂಕನ್ನು ಹಾಯ್ದು, ರಾಮನಗರದ ಕಡೆ ಮುಂದುವರಿದಿವೆ. ಉತ್ತರದಲ್ಲಿ ಶಿವಗಂಗೆ ಮತ್ತು ದಕ್ಷಿಣದಲ್ಲಿ ಸಾವನದುರ್ಗ ಬೆಟ್ಟ ಸಾಲುಗಳ ನಡುವೆ ಹರಡಿರುವ ಈ ಪ್ರದೇಶ ಹೆಚ್ಚು ಏರುತಗ್ಗುಗಳಿಂದ ಕೂಡಿದೆ. ಉತ್ತರ ಭಾಗದಲ್ಲಿ ವಿರಳ ಬೆಟ್ಟಗಳಿದ್ದರೆ, ದಕ್ಷಿಣಕ್ಕೆ ಸಾವನದುರ್ಗದ ಹತ್ತಿರ ಪ್ರದೇಶ ಹೆಚ್ಚು ಪರ್ವತಮಯವಾಗಿದೆ. ಸಿದ್ದೇಶ್ವರ ಬೆಟ್ಟ ಮತ್ತು ಸಾವನದುರ್ಗ ಪ್ರದೇಶಗಳಲ್ಲಿ ಬಿದಿರು ಮೆಳೆಗಳ ಅರಣ್ಯವಿದೆ. ಉಳಿದೆಡೆ ಕುರುಚಲು ಕಾಡುಗಳಿವೆ. ಕಣ್ವ ಮತ್ತು ಅರ್ಕಾವತಿ ಇಲ್ಲಿಯ ನದಿಗಳು. ಕಣ್ವ ನದಿ ತಾಲ್ಲೂಕಿನ ಪಶ್ಚಿಮದಲ್ಲಿ ಶ್ರೀಪತಿಹಳ್ಳಿಯ ಬಳಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿಯುವುದು. ತಾಲ್ಲೂಕಿನ ಪೂರ್ವಭಾಗ ಅರ್ಕಾವತಿ ನದಿಯ ಕಣಿವೆ ಪ್ರದೇಶ. ಪಶ್ಚಿಮ ಮತ್ತು ವಾಯವ್ಯ ಭಾಗದಲ್ಲಿ ಸಣ್ಣ ಪುಟ್ಟ ತೊರೆಗಳಿದ್ದು ಅವೆಲ್ಲ ಕುಣಿಗಲು ತಾಲ್ಲೂಕಿನೆಡೆಗೆ ಹರಿಯುತ್ತವೆ. ವಾರ್ಷಿಕ ಸರಾಸರಿ ಮಳೆ 78 ಸೆಂಮೀ.

ರಾಗಿ ಇಲ್ಲಿಯ ಮುಖ್ಯ ಬೆಳೆ. ಅವರೆ, ತೊಗರಿ ಮತ್ತು ಕೆಲವು ಎಣ್ಣೆ ಬೀಜಗಳನ್ನೂ ಸ್ವಲ್ಪಮಟ್ಟಿಗೆ ಬತ್ತ ಮತ್ತು ಕಬ್ಬನ್ನೂ ಬೆಳೆಸುತ್ತಾರೆ. ಮಾಗಡಿ ತಾಲ್ಲೂಕಿನಲ್ಲಿ ರೇಷ್ಮೆ ನೂಲಿನ ತಯಾರಿಕೆ ಇದ್ದು ಇದು ಇಲ್ಲಿಯ ಮುಖ್ಯ ರಫ್ತು ವಸ್ತು. ಮಾಗಡಿಯಿಂದ ನೆಲಮಂಗಲ, ಕುಣಿಗಲು ಮತ್ತು ರಾಮನಗರಕ್ಕೆ ಹೋಗುವ ರಸ್ತೆಗಳು ತಾಲ್ಲೂಕಿನ ಮುಖ್ಯ ಹಾದಿಗಳು. ಬೆಂಗಳೂರು–ಮಂಗಳೂರು ಹೆದ್ದಾರಿ ತಾಲ್ಲೂಕಿನ ಉತ್ತರ ಭಾಗದಲ್ಲಿ ಹಾದು ಹೋಗುತ್ತದೆ. ತಾಲ್ಲೂಕಿನಲ್ಲಿ ಕೃಷಿ ಮತ್ತು ಕೃಷಿಯೇತರ ಸಹಕಾರಿ ಬ್ಯಾಂಕುಗಳು, ವಿದ್ಯುತ್, ಅಂಚೆ ತಂತಿ ಮತ್ತು ದೂರವಾಣಿ ಸೌಲಭ್ಯಗಳು, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು, ಆಸ್ಪತ್ರೆ, ಆರೋಗ್ಯ ಕೇಂದ್ರ ಮತ್ತು ಔಷಧಾಲಯಗಳು ಇವೆ.

ಮಾಗಡಿ ತಾಲ್ಲೂಕಿನ ಮುಖ್ಯ ಗ್ರಾಮಗಳಲ್ಲಿ ಕಲ್ಯ ಮತ್ತು ಸಾವನದುರ್ಗ ಐತಿಹಾಸಿಕ ಪ್ರಾಮುಖ್ಯವುಳ್ಳ ಸ್ಥಳಗಳು. ಮಾಗಡಿ–ಕುಣಿಗಲು ಮಾರ್ಗದಲ್ಲಿ ಮಾಗಡಿಯ ನೈರುತ್ಯಕ್ಕೆ 5 ಕಿಮೀ ದೂರದಲ್ಲಿರುವ ಕೆಂಪಸಾಗರ ಗ್ರಾಮದಲ್ಲಿ ಒಂದು ವೀರಶೈವ ಮಠವಿದೆ. ಇದರ ನವರಂಗದ ಒಂದು ಕಂಬದ ಮೇಲೆ ಒಂದು ಲಿಂಗ ಮಡಕೆಯಿಂದ ಹೊರಬರುತ್ತಿರುವಂತೆ ಕೆತ್ತಿದ್ದು ಅದನ್ನು ಸುರಭಾಂಡೇಶ್ವರ ಎಂದು ಕರೆಯುತ್ತಾರೆ. ಮುಂದುಗಡೆಯ ಒಂದು ಕಂಬದಲ್ಲಿ ಸು. 45 ಸೆಂಮೀ ಎತ್ತರವಿರುವ ಕೆಂಪೇಗೌಡ ವಿಗ್ರಹವನ್ನು ಕೆತ್ತಲಾಗಿದೆ. ಈ ಮಠವನ್ನು ಕೆಂಪೇಗೌಡನೇ ಕಟ್ಟಿಸಿದನೆಂದು ಪ್ರತೀತಿ. ತಾಲ್ಲೂಕಿನ ಉತ್ತರದಲ್ಲಿ ಮಾಗಡಿಗೆ ವಾಯವ್ಯದಲ್ಲಿರುವ ಹುಲಿಕಲ್ಲಿನಲ್ಲಿ ಅನೇಕ ಶಿಥಿಲ ದೇವಾಲಯಗಳೂ ಮಂಟಪಗಳೂ ಶಾಸನಗಳೂ ಕೆಲವು ವೀರಗಲ್ಲುಗಳೂ ಇವೆ.

ಮಾಗಡಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಬೆಂಗಳೂರಿನ ಪಶ್ಚಿಮಕ್ಕೆ 51 ಕಿಮೀ ದೂರದಲ್ಲೂ ರಾಮನಗರದ ಉತ್ತರಕ್ಕೆ 33 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 25,000.

ಇದು ಸುತ್ತಲ ಗ್ರಾಮಗಳಿಗೆ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಕೈಗಾರಿಕಾ ಬ್ಯಾಂಕ್, ಪಶುವೈದ್ಯಾಲಯ, ಪ್ರೌಢಶಾಲೆಗಳು, ಆಸ್ಪತ್ರೆ, ಅಂಚೆ, ವಿದ್ಯುತ್ ಮತ್ತು ದೂರವಾಣಿಯ ಸೌಲಭ್ಯಗಳಿವೆ. ಇಲ್ಲಿಂದ ಬೆಂಗಳೂರು. ರಾಮನಗರ, ನೆಲಮಂಗಲ ಮತ್ತು ಕುಣಿಗಲುಗಳಿಗೆ ಉತ್ತಮ ಮಾರ್ಗಗಳಿವೆ. ಈ ಪಟ್ಟಣದಲ್ಲಿ ಪುರಸಭಾಡಳಿತವಿದೆ. (ಕೆ.ಆರ್.)

**ಮಾಗೋಡು ಜಲಪಾತ:** ಉತ್ತರ ಕನ್ನಡ ಜಿಲ್ಲೆಯಲ್ಲಿ ಯಲ್ಲಾಪುರಕ್ಕೆ ನೈರುತ್ಯದಲ್ಲಿ ಸು. 19 ಕಿಮೀ ದೂರದಲ್ಲಿರುವ ಬೇಡ್ತಿ ನದಿಯ (ಗಂಗಾವಳಿ) ಒಂದು ಜಲಪಾತ. ಕಾರವಾರ–ಹುಬ್ಬಳ್ಳಿ ಮಾರ್ಗದಲ್ಲಿ ಯಲ್ಲಾಪುರಕ್ಕೆ ಪಶ್ಚಿಮದಲ್ಲಿ ಸು. 3 ಕಿಮೀ ದೂರದಲ್ಲಿ ಕವಲೊಡೆಯುವುದು. ಈ ಕವಲಿನ ಎಡಮಾರ್ಗದಲ್ಲಿ ಸು. 13ಕಿಮೀ ದೂರದಲ್ಲಿ ಮಾಗೋಡು ಗ್ರಾಮವಿದೆ. ಇದರ ಬಳಿಯೇ ಜಲಪಾತವಿದೆ. ಹಚ್ಚ ಹಸುರಿನ ಕಾಡಿನ ಮಧ್ಯೆ ಸುಮಾರು ಒಂದೂವರೆ ಕಿಮೀ ನಡೆದು ದಟ್ಟವಾಗಿ ಬಿದಿರು ಬೆಳೆದಿರುವ ಬೆಟ್ಟವನ್ನು ಹತ್ತಿ ಮೇಲೆ ಪೂರ್ವಾಭಿಮುಖವಾಗಿ ನಿಂತರೆ ಬೇಡ್ತಿ ನದಿಯ ಮೇಲಿನ ಕಣಿವೆಯ ದೃಶ್ಯ ಕಾಣಬಹುದು. ಇಲ್ಲಿಂದ ನದಿ ಬೆಟ್ಟದ ಇಳಿಜಾರಿನಲ್ಲಿ ಮುಂದುವರಿದು ಸು. 60 ಮೀ ಕೆಳಕ್ಕೆ ಹಂತ ಹಂತವಾಗಿ ಧುಮುಕಿ ಕೊಳದಂತೆ ಸೇರಿ ಮತ್ತೆ ಅಲ್ಲಿಂದ ಮುಂದೆ 184 ಮೀ ಧುಮುಕುವುದು. ಇತ್ತೀಚೆಗೆ ಜಲಪಾತದ ವೀಕ್ಷಣೆಗೆ ಅನುಕೂಲಿಸಲು ದುರ್ಗಮ ದಾರಿ ಸರಿಪಡಿಸಿ, ಪ್ರವಾಸಿಮಂದಿರ ಕಟ್ಟಿಸಿದ್ದಾರೆ. ಹಾಲಿನ ನೊರೆಯಂತೆ ನಯವಾಗಿ ಹರಿದಿಳಿವ ಈ ಜಲಪಾತದ ಸೌಂದರ್ಯ ಬೆರಗುಗೊಳಿಸುವಂಥದು. ಶಿರಸಿ–ಯಲ್ಲಾಪುರ ಮಾರ್ಗದಲ್ಲಿರುವ ಮಂಚಿಕೇರಿ ಗ್ರಾಮದಿಂದ 8 ಕಿಮೀ ದೂರ ಕಾಲುನಡಿಗೆಯಿಂದ ಸಾಗಿ ಮಾಗೋಡು ಜಲಪಾತದ ತಳಕ್ಕೆ ಹೋಗಬಹುದು. ಈ ಜಲಪಾತದ ಸಮೀಪದಲ್ಲಿರುವ ಗುಡ್ಡದಲ್ಲಿ ಚಕ್ರವ್ಯೂಹಾಕಾರದ ಒಂದು ಪುರಾತನ ಕೋಟೆ ಇದೆ. ಕೋಟೆಗೆ ಒಂದೇ ಪ್ರವೇಶದ್ವಾರವಿದ್ದು ಬೇಡ್ತಿ ಮತ್ತು ಶಾಲ್ಮಲಾ ಹೊಳೆಗಳು ಈ ಕೋಟೆಯನ್ನು ಮೂರು ಕಡೆಗಳಿಂದ ಸುತ್ತುವರಿದಿವೆ. *

**ಮಾದರಿ ಸಮೀಕ್ಷೆ ಹಾಗೂ ಮಾದರಿ ಸಮೀಕ್ಷೆಯ ವಿಧಗಳು:** ಮಾದರಿ ಆಯ್ಕೆ ವಿಧಾನದಲ್ಲಿ ವಿಶಾಲವಾದ ಪ್ರದೇಶದ ಗಣತಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಎಲ್ಲಾ ಮೂಲಾಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ, ಕೆಲವೇ ಅಂಶಗಳನ್ನೂ ಅಧ್ಯಯನ ಮಾಡಿ, ಪ್ರಾತಿನಿಧಿಕ ಸಂಖ್ಯೆಯ ಲಕ್ಷಣಗಳೇ ಎಲ್ಲದಕ್ಕೂ ಅನ್ವಯಿಸುತ್ತವೆಂದು ಭಾವಿಸಲಾಗುತ್ತದೆ. ವಿಸ್ತಾರವಾದ ಕ್ಷೇತ್ರದಲ್ಲಿ ಅಂಕಿ–ಅಂಶಗಳನ್ನು ಸಂಗ್ರಹಿಸಬೇಕಾದಾಗ ಉಂಟಾಗಬಹುದಾದ ಕಾಲ, ಹಣದ ವ್ಯಯ ಮುಂತಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಮಾದರಿ ಆಯ್ಕೆಯ ತಂತ್ರವನ್ನು ಬಳಸಲಾಗುತ್ತದೆ. ಪ್ರಾತಿನಿಧಿಕ ಸಂಖ್ಯೆಯನ್ನು ಅಥವಾ ವ್ಯಕ್ತಿಯನ್ನು ಆಯ್ಕೆಮಾಡಿಕೊಳ್ಳುವಾಗ ಅದು ತಾಂತ್ರಿಕತೆಯಿಂದ ಕೂಡಿದ್ದರೆ ಅದನ್ನು ಮಾದರಿ ಆಯ್ಕೆಯ ತಂತ್ರವೆಂದು ಕರೆಯಲಾಗುತ್ತದೆ. ಒಂದು ಪ್ರದೇಶದಲ್ಲಿನ ಜನಸಂಖ್ಯೆಯ ಗಾತ್ರ ಬಹಳ ದೊಡ್ಡದಾಗಿದ್ದರೆ ಸಂಶೋಧಕ ಸರಿಯಾದ ರೀತಿಯಲ್ಲಿ ಆಯ್ಕೆ ಮಾಡಬೇಕು. ಸಮಗ್ರ ಆಯ್ಕೆಯ ಪ್ರತಿನಿಧಿಯಾಗುವಂತೆ ಮಾದರಿಗಳನ್ನು ತೆಗೆದುಕೊಳ್ಳಬೇಕಾದ್ದರಿಂದ ಅವುಗಳನ್ನು ಅಲ್ಲೊಂದು ಇಲ್ಲೊಂದರಂತೆ ಆಯ್ಕೆಮಾಡಿಕೊಳ್ಳಬೇಕು. ಈ ವಿಧಾನದಲ್ಲಿ ಪ್ರತಿಯೊಂದು ಮೂಲಾಂಶಕ್ಕೆ ಮಾದರಿಯಾಗಿ ಆಯ್ಕೆಗೊಳ್ಳಲು ಸಮಾನ ಅವಕಾಶವಿರಬೇಕು. ಕೆಲವೊಂದು ಆಯ್ಕೆ ಮಾಡಿದ ಪ್ರಾತಿನಿಧಿಕ ಘಟಕಗಳ ಅಧ್ಯಯನದ ಮೂಲಕ ಎಲ್ಲ ಘಟಕಗಳ ಸಂಕಲನ ಮಾಡಲಾಗುತ್ತದೆ. ಈ ಪ್ರಾತಿನಿಧಿಕ ಘಟಕಗಳೇ ನಿದರ್ಶಕ ಘಟಕಗಳೆನಿಸುತ್ತವೆ.

ಉದಾ : ಒಂದು ಪ್ರದೇಶದಲ್ಲಿನ ಜನರ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಕಂಡುಹಿಡಿಯಲು ಈ ರೀತಿ ಆಯ್ಕೆ ಮಾಡಿಕೊಳ್ಳಬೇಕು. ಒಟ್ಟು ಕುಟುಂಬಗಳಲ್ಲಿ 10 ಕುಟುಂಬಗಳನ್ನು ಆಯ್ಕೆ ಮಾಡಿ ಅಧ್ಯಯನ ಮಾಡಿದರೆ ಅದಕ್ಕೆ ಮಾದರಿ ಅಧ್ಯಯನ ಎನ್ನಲಾಗುತ್ತದೆ. ಹೀಗೆ ಆಯ್ಕೆ ಮಾಡಿದ ಕುಟುಂಬಗಳಿಂದ ಎಲ್ಲರ ಜೀವನ ಮಟ್ಟವನ್ನು ನಿರ್ಧರಿಸಬಹುದಾಗಿದೆ. ಇದು ಪ್ರಸ್ತುತವಾಗಿ ಬಹಳ ಬಳಕೆಯಲ್ಲಿದೆ ಮತ್ತು ಇತರ ವಿಧಾನಗಳಿಗಿಂತ ಬಹಳ ಸರಳವಾಗಿದೆ.

ಇದು ಜನಗಣತಿಗಿಂತ ಕಡಿಮೆ ವೆಚ್ಚದಾಯಕ ಹಾಗೂ ಉತ್ತಮವಾದುದು. ಕಡಿಮೆ ವೇಳೆಯಲ್ಲಿ ಅವಶ್ಯಕವೆನಿಸಿದ ಅಂಕಿ–ಅಂಶಗಳನ್ನು ಪಡೆಯಬಹುದು. ಇದು ಹೊಸ ಹಾಗೂ ಇತ್ತೀಚಿನ ಅಂಕಿ–ಅಂಶಗಳನ್ನು ನಿಷ್ಪಕ್ಷವಾಗಿ ಒದಗಿಸುತ್ತದೆ. ಅಲ್ಲದೆ ಇದು ಹೆಚ್ಚು ವಿವರವಾದ ಮಾಹಿತಿಯನ್ನು ಸಂಗ್ರಹಿಸಬಹುದು.

ಮಾದರಿ ಆಯ್ಕೆಯ ವಿಧಾನಗಳು: ಮಾದರಿ ಆಯ್ಕೆಯ ವಿಧಾನಗಳನ್ನು ಪ್ರಮುಖವಾಗಿ ಅವುಗಳು ನಿರೂಪಿಸುವ ವಿಷಯಕ್ಕೆ ಅನುಗುಣವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದಾಗಿದೆ. 1. ಸಂಭವನೀಯವಲ್ಲದ ಮಾದರಿ 2. ಸಂಭವನೀಯ ಅಥವಾ ಆಕಸ್ಮಿಕ ಮಾದರಿ.

1) ಸಂಭವನೀಯವಲ್ಲದ ಮಾದರಿ: ಈ ಮಾದರಿ ಆಯ್ಕೆ ಪ್ರಮುಖವಾದುದೆಂದು ಪರಿಗಣಿಸಲಾಗಿದೆ. ಈ ವಿಧಾನದಲ್ಲಿ ಯಾವುದೇ ಮೂಲ ಕಲ್ಪನೆಯನ್ನು ಹಾಗೂ ಕಾರ್ಯವಿಧಾನವನ್ನೂ ಅನುಸರಿಸದೆ, ಕಾಲವನ್ನು ವ್ಯಯಮಾಡದೆ ಒಂದು ಪ್ರದೇಶದಲ್ಲಿನ ಜನಸಂಖ್ಯೆಯನ್ನು ಆಯ್ಕೆ ಮಾಡಲಾಗುತ್ತದೆ. ಇದನ್ನೇ ಸಂಭವನೀಯವಲ್ಲದ ಮಾದರಿ ಎಂದು ಕರೆಯಲಾಗಿದೆ. ಇದನ್ನು ಬೇರೆ ಬೇರೆ ಹೆಸರುಗಳಿಂದಲೂ ಸಹ ಕರೆಯುವ ಪದ್ಧತಿ ರೂಢಿಯಲ್ಲಿದೆ. ಅವುಗಳೆಂದರೆ: ಉದ್ದೇಶಿತ ಮಾದರಿ, ವಿಮೋಚನಾ ಮಾದರಿ, ಆಲೋಚಿಸದ ಮಾದರಿ. ಈ ಮಾದರಿ ಆಯ್ಕೆಯನ್ನು ಸಂಶೋಧಕನು ಆಯ್ಕೆ ಮಾಡುವಾಗ ತಮ್ಮ ವಿಷಯದ ಕಲ್ಪನೆ ಹಾಗೂ ಉದ್ದೇಶಕ್ಕೆ ಅನುಕೂಲವಾಗುವ ರೀತಿಯಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ಈ ಮಾದರಿಗಳನ್ನು ಪಾಲು ಮಾದರಿ ಎಂದು ಕರೆಯಲಾಗುತ್ತದೆ.

2) ಸಂಭವನೀಯ ಮಾದರಿ : ಸಂಭವನೀಯ ಮಾದರಿಗಳನ್ನು ಗೊತ್ತು ಗುರಿ ಇಲ್ಲದ ಅಥವಾ ಆಕಸ್ಮಿಕ ಮಾದರಿಗಳೆಂದು ಕರೆಯುವರು. ಈ ಮಾದರಿ ವಿಧಾನವನ್ನು ಈ ಕೆಳಕಂಡ ರೀತಿಯಲ್ಲಿ ಪುನರ್ ವಿಂಗಡಿಸಲಾಗಿದೆ:

1) ಆಕಸ್ಮಿಕ ಮಾದರಿ ಅಥವಾ ನಮೂನೆ (ರ‍್ಯಾಂಡಂ ಸ್ಯಾಂಪಲಿಂಗ್) : ಇದು ಸಾಮಾಜಿಕ ಸಂಶೋಧನ ಕಾರ್ಯವಿಧಾನದಲ್ಲಿ ಹೆಚ್ಚು ಬಳಕೆಯಲ್ಲಿರುವ ಮಾದರಿಯಾಗಿದೆ. ಇದರಲ್ಲಿ ಯಾವುದಾದರೂ ಒಂದು ಘಟಕವನ್ನು ಆಯ್ಕೆ ಮಾಡಬಹುದು. ಒಂದೇ ವರ್ಗಕ್ಕೆ ಸೇರಿದ ಘಟಕಗಳಿದ್ದಲ್ಲಿ ಈ ವಿಧಾನ ಬಹಳ ಉಪಯುಕ್ತವಾದುದು. ಒಂದು ಪ್ರದೇಶದಲ್ಲಿ ವಾಸಿಸುವ ಜನರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಆಯ್ಕೆಮಾಡಬೇಕಾದಾಗ ಆ ಪ್ರದೇಶ ಅಧಿಕ ಜನಸಂಖ್ಯೆ ಒಳಗೊಂಡಿರುವಾಗ ಅಧಿಕ ಹಾಗೂ ಅಲ್ಲಿನ ವಸತಿಗಳು ಗುಂಪುಗುಂಪಾಗಿ ಬಹು ಒತ್ತೊತ್ತಾಗಿದ್ದರೆ ಪ್ರತಿಯೊಂದು ಸಂಖ್ಯೆಯನ್ನು ಒಂದು ಗುಂಪೆಂದು ತೀರ್ಮಾನಿಸಿ ಸಮಾನ ಅಂತರದಲ್ಲಿ ಆಯ್ಕೆ ಮಾಡಬಹುದಾಗಿದೆ. ಉದಾ: ಒಂದು ಪ್ರದೇಶದ ಜನರ ಆರ್ಥಿಕ ಮಟ್ಟದ ಸಮೀಕ್ಷೆ ಮಾಡುವಾಗ ಒಟ್ಟು ಸಾವಿರ ಕುಟುಂಬಗಳ ಪೈಕಿ 50 ಕುಟುಂಬಗಳನ್ನು ಆಯ್ಕೆ ಮಾಡಬೇಕಾದಾಗ ಆಕಸ್ಮಿಕ ಮಾದರಿಯನ್ನು ಅನುಸರಿಸುವುದು ಹೆಚ್ಚು ಅನುಕೂಲಕರ ಹಾಗೂ ಉತ್ತಮವಾದುದಾಗಿರುತ್ತದೆ. ಇದು ಒಂದು ರೀತಿಯಲ್ಲಿ ಲಾಟರಿ ವಿಧಾನದಂತೆ ಕಂಡುಬರುತ್ತದೆ.

2) ಕ್ರಮಬದ್ಧ ಮಾದರಿಗಳ ನಮೂನೆ: ಇದು ಸಂಭವನೀಯ ಮಾದರಿಯಲ್ಲಿನ ಮತ್ತೊಂದು ವಿಧಾನವಾಗಿದೆ. ಈ ವಿಧಾನದಲ್ಲಿ ಒಟ್ಟು ಆಯ್ಕೆ ಮಾಡಿದ ಪ್ರದೇಶದ ಘಟಕಗಳ ಸಂಖ್ಯೆಗಳನ್ನು ಅವಲೋಕಿಸಿ, ಅವುಗಳನ್ನು ಆರೋಹಿ ಅಥವಾ ಅವರೋಹಿ ಕ್ರಮದಲ್ಲಿ ಬರೆಯಲಾಗುತ್ತದೆ. ನಂತರ ಒಟ್ಟು ಸಂಖ್ಯೆಯಲ್ಲಿ ಯಾವುದಾದರೂ ಆಯ್ಕೆ ಮಾಡಿದ ಸಂಖ್ಯೆಯಿಂದ ಭಾಗಿಸಿದಾಗ ದೊರೆಯುವ ಸಂಖ್ಯೆಯ ಅಂತರದಲ್ಲಿ ಸಂಖ್ಯೆಗಳನ್ನು ಆಯ್ದುಕೊಳ್ಳಲಾಗುತ್ತದೆ. ಉದಾ: ಒಂದು ಕ್ಷೇತ್ರದಲ್ಲಿ ವಾಸಿಸುವ ಒಟ್ಟು ಕುಟುಂಬಗಳು 150 ಎಂದು ಪರಿಗಣಿಸಿದಾಗ, ಅವುಗಳಲ್ಲಿ ಕೇವಲ 10 ಕುಟುಂಬಗಳನ್ನು ಆಯ್ಕೆ ಮಾಡಬೇಕಾದಾಗ ಆರೋಹಿ ಕ್ರಮದಲ್ಲಿ ಅಂದರೆ 150/10 = 15 ರ ಅಂತರದಲ್ಲಿ 15, 30, 45, 60, ........ 150, ನೆಯ ಕುಟುಂಬಗಳನ್ನು ಆಯ್ಕೆಮಾಡಬಹುದು. ಇದರಿಂದ ಎಲ್ಲಾ ಕುಟುಂಬಗಳ ಆಯ್ಕೆಯು ಸಮನಾಗಿದ್ದು ಅವುಗಳ ನಡುವಿನ ಅಂತರ ಕ್ರಮಬದ್ಧವಾಗಿ ಕಂಡುಬರುತ್ತದೆ. ಆದ್ದರಿಂದ ಇದನ್ನು ಕ್ರಮಬದ್ಧ ಮಾದರಿ ಆಯ್ಕೆ ಎಂದು ಕರೆಯಲಾಗುತ್ತದೆ.

3) ಸ್ತರ ಮಾದರಿ (ಸ್ಟ್ರಾಟಿಫೈಡ್ ಸ್ಯಾಂಪಲಿಂಗ್) : ಒಂದು ಪ್ರದೇಶದಲ್ಲಿನ ಕ್ಷೇತ್ರಕಾರ್ಯದಲ್ಲಿನ ಘಟಕಗಳಲ್ಲಿ ಸಮರೂಪವಿಲ್ಲದಿದ್ದರೆ, ಅವುಗಳಲ್ಲಿ ಪ್ರಾದೇಶಿಕ ಅಥವಾ ಇತರೆ ಭಿನ್ನತೆಗಳಿದ್ದರೆ ಆಗ ಪ್ರತಿಯೊಂದು ಘಟಕದಿಂದಲೂ ಯಾವುದಾದರೊಂದು ವಿಷಯದ ಆಧಾರದ ಮೇಲೆ ವಿಭಾಗಗಳಾಗಿ ವಿಭಜಿಸಿ ಪ್ರತಿಯೊಂದು ವಿಭಾಗದಲ್ಲಿಯೂ ಸಮರೂಪವಿರುವಂತೆ ಆಯ್ಕೆ ಮಾಡಬಹುದು. ಇಂತಹ ಘಟಕಗಳ ವಿಭಜನೆಗೆ ಸ್ತರೀಕರಣ ಎನ್ನುವರು. ಈ ಹಂತಗಳು ಅಥವಾ ಸ್ತರಗಳು ಸಮ ಅಥವಾ ಅಸಮವಾದ ಸಂಖ್ಯೆಗಳಿಂದ ಕೂಡಿರಬಹುದು. ಪ್ರತಿಯೊಂದು ಸ್ತರದಿಂದಲೂ ಆಕಸ್ಮಿಕ ಮಾದರಿಯ ಮೂಲಕ (ರ‍್ಯಾಂಡಮ್) ಆಯ್ಕೆ ಮಾಡಲಾಗುತ್ತದೆ. ಹೀಗೆ ಆಯ್ಕೆ ಮಾಡಿದ ಸ್ತರಕ್ಕೆ ಸ್ತರ ಮಾದರಿ ಎಂದು ಕರೆಯುವರು. ಉದಾ: ಯಾವುದಾದರೂ ಒಂದು ಗ್ರಾಮದಲ್ಲಿ ವಾಸವಾಗಿರುವ ಸು. 200 ಕುಟುಂಬಗಳ ಆದಾಯದ ಅಧ್ಯಯನಕ್ಕಾಗಿ ಶೇ.10 ಕುಟುಂಬಗಳನ್ನೇ ಮಾದರಿ ಅಧ್ಯಯನಕ್ಕೆ ಆಯ್ಕೆ ಮಾಡುವ ಮೊದಲು ಈ ಕುಟುಂಬಗಳನ್ನು ಆದಾಯ ವರ್ಗಗಳನ್ನಾಗಿ ವಿಭಾಗಿಸಲಾಗುತ್ತದೆ. ಬೇರೆ ಬೇರೆ ಆದಾಯ ವರ್ಗಗಳಲ್ಲಿ ಕಂಡುಬರುವ ಕುಟುಂಬಗಳ ಸಂಖ್ಯೆ 100, 50, 40, 10 ಇದ್ದರೆ ಮಾದರಿಗಾಗಿ ಈ ಸಮೂಹಗಳಿಂದ ಕ್ರಮವಾಗಿ 10, 5, 4 ಮತ್ತು 1 ಕುಟುಂಬವನ್ನು ಆಯ್ಕೆ ಮಾಡಲಾಗುತ್ತದೆ. ಏಕತೆ ಇಲ್ಲದಿರುವಾಗ ಸ್ತರ ಮಾದರಿ ಏಕತೆಯನ್ನು ಪ್ರತಿನಿಧಿಸುವುದು.

4) ಗುಂಪು ಅಥವಾ ಸಮುದಾಯ ಮಾದರಿ ಆಯ್ಕೆ (ಕ್ಲಸ್ಟರ್ ಸ್ಯಾಂಪಲಿಂಗ್) : ಸಂಶೋಧಕ ಆಯ್ಕೆ ಮಾಡಿಕೊಂಡಿರುವ ಪ್ರದೇಶದಲ್ಲಿನ ಕುಟುಂಬಗಳು ಗುಂಪುಗುಂಪಾಗಿ

ವಾಸಿಸುತ್ತಿದ್ದರೆ ಅದರ ನಿಖರ ಅಧ್ಯಯನ ಕಷ್ಟಸಾಧ್ಯ. ಅಂತಹ ವೇಳೆಯಲ್ಲಿ ಗುಂಪುಗಳನ್ನು ಸಣ್ಣಸಣ್ಣ ವಿಭಾಗಗಳಾಗಿ ವಿಂಗಡಿಸಿ, ನಮಗೆ ಬೇಕಾದ ಯಾವುದಾದರು ಗುಂಪಿನಿಂದ ಬೇಕಾದಷ್ಟು ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳುವ ಕ್ರಮವನ್ನು ಗುಂಪು ಅಥವಾ ಸಮುದಾಯ ಮಾದರಿ ಎಂಬುದಾಗಿ ಕರೆಯಲಾಗಿದೆ. ಉದಾ : ಒಂದು ಕಾರ್ಖಾನೆಯಲ್ಲಿ 20,000 ಯಂತ್ರಗಳಿದ್ದರೆ ಅವುಗಳನ್ನು ಮೊದಲು 400 ಭಾಗಗಳಾಗಿ ವಿಭಾಗಿಸಿ, ಅನಂತರ ಒಂದು ಭಾಗದಲ್ಲಿನ 50 ಯಂತ್ರಗಳನ್ನಿಟ್ಟುಬೇಕಾದ ಯಾವುದಾದರೂ ಒಂದು ಭಾಗವನ್ನು ಆಯ್ಕೆ ಮಾಡುವುದೇ ಗುಂಪು ಮಾದರಿ.

5) ಕ್ಷೇತ್ರ ಮಾದರಿ ಆಯ್ಕೆ (ಏರಿಯ ಸ್ಯಾಂಪಲಿಂಗ್) : ಭೌಗೋಳಿಕ ವಿಶ್ಲೇಷಣೆಯಲ್ಲಿ ನಾವು ಅನೇಕ ಬಾರಿ ಪ್ರಾದೇಶಿಕ ವ್ಯತ್ಯಯಗಳನ್ನು ಅಭ್ಯಾಸಮಾಡಬೇಕಾಗುತ್ತದೆ. ಕೆಲವೊಮ್ಮೆ ಇದನ್ನೇ ಕ್ಷೇತ್ರ ಮಾದರಿ ಎಂದು ಕರೆಯಲಾಗುತ್ತದೆ. ಇದು ಸಮ ಸಂಭಾವಿಕ ಸ್ತರ ಮಾದರಿಯ ಒಂದು ಬಗೆ.

6) ಬಹುಹಂತದ ಮಾದರಿಗಳು (ಮಲ್ಟಿಸ್ಟೇಜ್‌ಸ್ಯಾಂಪಲಿಂಗ್) : ಇದರ ಹೆಸರೇ ಸೂಚಿಸುವಂತೆ ಬಹುಹಂತದ ಮಾದರಿ ಆಯ್ಕೆಯಾಗಿದೆ. ಈ ವಿಧಾನದಲ್ಲಿ ಮಾದರಿಯನ್ನು ಆಯ್ಕೆ ಮಾಡುವಾಗ ಅನೇಕ ಹಂತಗಳಲ್ಲಿ ಮಾಡಬೇಕಾಗುತ್ತದೆ. ಮೊದಲು ಘಟಕವನ್ನು ಕೆಲವು ಗುಂಪುಗಳಲ್ಲಿ ವಿಂಗಡಿಸಲಾಗುತ್ತದೆ. ಮತ್ತೆ ಪ್ರತಿಯೊಂದು ಗುಂಪು ಕೆಲವು ವಿಭಾಗಗಳಾಗಿ ವಿಭಾಗಿಸಿ ಅನಂತರ ಸಂಭವನಿಯ ಮಾದರಿಯ ಮೂಲಕ ಆಯ್ಕೆ ಮಾಡಬೇಕಾಗುತ್ತದೆ. ಉದಾ: ಬೆಳೆಗಳಿಗೆ ಸಂಬಂಧಿಸಿದ ಸಮೀಕ್ಷೆಯಲ್ಲಿ ಮೊದಲು ರಾಜ್ಯವಾರು ಆಯ್ಕೆಮಾಡಿ, ಅನಂತರ ಜಿಲ್ಲೆಗಳಲ್ಲಿ ಅನಂತರ ಜಿಲ್ಲೆಗಳಿಂದ ಹಳ್ಳಿಯನ್ನು ಸಂಭವನಿಯ ಮಾದರಿಯಲ್ಲಿ ಆಯ್ಕೆ ಮಾಡಿ ಹಳ್ಳಿಯಿಂದ ಯಾವುದಾದರೊಂದು ಜಮೀನಿನ ಬೆಳೆಯನ್ನು ಸಮೀಕ್ಷೆ ಮಾಡಿದರೆ ಅದನ್ನು ಬಹುಹಂತದ ಮಾದರಿ ಎನ್ನಬಹುದು.

7) ಕ್ರಮಾನುಗತಿ ಅಥವಾ ಅನುಕ್ರಮ ಮಾದರಿ (ಸೀಕ್ವೆನ್ಷಿಯಲ್ ಸ್ಯಾಂಪಲಿಂಗ್): ಒಂದು ಸಂಕೀರ್ಣ ಮಾದರಿಯಾಗಿದೆ. ಇದು ಯಾವುದೇ ಒಂದು ಅಂಶದಿಂದ ನಿರ್ಧರಿತವಾದುದಲ್ಲ. ಸಂದರ್ಭಕ್ಕೆ ತಕ್ಕಂತೆ ಗಣಿತಾತ್ಮಕ ಹಾಗೂ ಸಂಖ್ಯಾತ್ಮಕವಾಗಿ ನಿರ್ಧರಿಸುವಂತದ್ದು. ಈ ಮಾದರಿಯಲ್ಲಿ ಯಾವುದಾದರೂ ಒಂದು ಅಂಶದ ಮೇಲೆ ಒಪ್ಪಿಕೊಳ್ಳುವ ಅಥವಾ ವಾಪಸ್ಸಾತಿಯ ನಿರ್ಧಾರವಾಗುತ್ತದೆ. ಎರಡಕ್ಕಿಂತ ಹೆಚ್ಚು ಮಾದರಿಗಳಿದ್ದಾಗ ನಿಶ್ಚಿತವಾಗಿ, ಇದು ಅಥವಾ ಅದು, ಯಾವುದಾದರೂ ಒಂದನ್ನು ಅನುಸರಿಸಬೇಕಾಗುತ್ತದೆ. ಇದನ್ನೇ ಕ್ರಮಾನುಗತಿ ಅಥವಾ ಅನುಕ್ರಮ ಮಾದರಿ ಎಂದು ಕರೆಯಲಾಗಿದೆ.

8) ಗಾತ್ರ, ಪ್ರಮಾಣ ಸಂಭವನೀಯ ಮಾದರಿ : ಗುಂಪು ಗುಂಪಾದ ಮಾದರಿಯ ಘಟಕದ ಒಂದೇ ಪ್ರಮಾಣದ ಸಂಖ್ಯೆಯನ್ನು ಹೊಂದಿರದಿದ್ದಲ್ಲಿ ಅಥವಾ ಸಂಭವನೀಯವಾದ ಸಂಖ್ಯೆಯನ್ನು ಹೊಂದಿದ್ದರೆ ಅವುಗಳಲ್ಲಿ ಸಂಭವನೀಯ ಗಾತ್ರವನ್ನು ಅನುಸರಿಸಿ ಮಾದರಿಯನ್ನು ಆಯ್ಕೆ ಮಾಡುವುದೇ ಗಾತ್ರ ಪ್ರಮಾಣ ಸಂಭವನೀಯ ಮಾದರಿಯಾಗಿದೆ. ಉದಾ : 15 ನಗರಗಳಲ್ಲಿ ವಿವಿಧ ರೀತಿಯ ದಿನಸಿ ಅಂಗಡಿಗಳಿದ್ದರೆ, ಆಯ್ಕೆ ಮಾದರಿ ಗುರುತಿಸಬೇಕಾದರೆ, ಮೊದಲು ಅವುಗಳನ್ನು ಏರುಮುಖ ಅಂದರೆ ಆರೋಹಿ ಕ್ರಮದಲ್ಲಿ ಬರೆದುಕೊಂಡು ಅನಂತರ ಎರಡು ಸಂಖ್ಯೆಗಳ ಅಂತರದಲ್ಲಿ ಮಾದರಿಯನ್ನು ಆಯ್ಕೆ ಮಾಡಬೇಕಾಗುತ್ತದೆ. (ಜಿ.ಡಿ.)

**ಮಾನ್ ಮಾದರಿ:** ವಲಯ ಸಿದ್ಧಾಂತದಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸಲು ಮಾನ್‌ರವರು 2 ನಮೂನೆಗಳನ್ನು ಅಭಿವೃದ್ಧಿಪಡಿಸಿದರು. ಇದನ್ನು ಮಾನ್‌ರವರ ಮಾರ್ಪಾಡುಗಳು ಎಂದು ಕರೆಯಲಾಗಿದೆ. ಇವರ ಅಭಿಪ್ರಾಯದಂತೆ ನಗರಗಳಲ್ಲಿ ವಿವಿಧ ವರ್ಗದ ಗೃಹ ಬಳಕೆಯ ಭೂಮಿಯು ನಗರದ ಪ್ರತ್ಯೇಕ ವಿಭಾಗಗಳಲ್ಲಿ ಕಂಡು ಬರುತ್ತದೆ. ಇವು ವೃತ್ತಾಕಾರವಾಗಿರದೆ ವಲಯಾಕಾರವಾಗಿರುತ್ತದೆ. ಗೃಹ ಬಳಕೆಯ ವಿಧಾನದ ಮೇಲೆ ಗಾಳಿ ಬೀಸುವ ದಿಕ್ಕನ್ನು ಸಹ ಪರಿಗಣಿಸಲಾಗಿದೆ. ನಗರದ ಪಶ್ಚಿಮ ಭಾಗದಲ್ಲಿ ಗಾಳಿಯು ಶುದ್ಧವಾಗಿದ್ದು ಈ ವಲಯ ವಾಸದ ಮನೆಗಳನ್ನು ನಿರ್ಮಿಸಲು ಸೂಕ್ತವಾಗಿದೆ. ಆದರೆ, ಪೂರ್ವ ಭಾಗವು ಕೈಗಾರಿಕೆಗಳಿಂದ ಆವೃತ್ತವಾಗಿದ್ದು ವಾಯುಮಾಲಿನ್ಯ ಅಧಿಕವಾಗಿರುತ್ತದೆ. ಅಲ್ಲದೆ ಈ ವಲಯದಲ್ಲಿ ಕೇವಲ ಕಾರ್ಮಿಕ ವರ್ಗ ನೆಲೆಸಿರುವುದು ಕಂಡುಬರುತ್ತದೆ. ಇವರ ಅಭಿಪ್ರಾಯದಂತೆ ನಗರವು ಒಂದೇ ಕೇಂದ್ರವನ್ನು ಹೊಂದಿದ್ದು ಪ್ರತೀ ದಿನ ಈ ಕೇಂದ್ರಕ್ಕೆ ಸುತ್ತಲಿನ ಗ್ರಾಮೀಣ ಪ್ರದೇಶಗಳಿಂದ ಜನರು ಬಂದು ಹೋಗುತ್ತಾರೆ. ಇದರ ಸುತ್ತಲೂ ಸ್ಥಿತ್ಯಂತರ ವಲಯದಲ್ಲಿ ಮಧ್ಯಮ ವರ್ಗದ ಮನೆಗಳು ಕಂಡುಬರುತ್ತವೆ. ಕೇಂದ್ರವಾಣಿಜ್ಯ ಪ್ರದೇಶದಿಂದ ವಿವಿಧ ಸಾಮಾಜಿಕ ವರ್ಗದ ಕೆಳವರ್ಗದ ಮನೆಗಳು ವಲಯಾಕಾರದಲ್ಲಿ ಕಂಡುಬರುತ್ತವೆ. ಜೊತೆಗೆ ಕಾರ್ಮಿಕ ವರ್ಗದ ವಸತಿಯು ಬೇರೆ ವಸತಿಗಳಿಗಿಂತ ವಿಶಾಲವಾದ ಪ್ರದೇಶಗಳನ್ನು ಆವರಿಸಿಕೊಂಡಿದೆ ಎಂದಿದ್ದಾರೆ. (ಎಂ.ಡಿ.)

**ಮಾನವ ಅಭಿವೃದ್ಧಿ ಸೂಚಿ ಅಳೆಯುವ ವಿಧಾನ:** ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಯೋಜನೆಯ (ಯು.ಎನ್.ಡಿ.ಪಿ.) ಮೊದಲ ವರದಿಯನ್ನು 1990 ರಲ್ಲಿ ಪ್ರಕಟಿಸಲಾಯಿತು. ಇದರಲ್ಲಿ ಮೊಟ್ಟ ಮೊದಲ ಬಾರಿಗೆ ಮಾನವ ಅಭಿವೃದ್ಧಿ ಸೂಚಿಯ ಪರಿಕಲ್ಪನೆಯನ್ನು ಪರಿಚಯಿಸಲಾಯಿತು. ಇದು ಮಾನವನ ಒಟ್ಟಾರೆ ಅಭಿವೃದ್ಧಿಯ ಸೂಚಕವಾಗಿದ್ದು ಜೀವಿತಾವಧಿ, ಜ್ಞಾನ ಮತ್ತು ಯೋಗ್ಯ ಜೀವನಮಟ್ಟಗಳ ಒಟ್ಟಾರೆ ಅಳತೆಯಾಗಿದೆ. ಈ ಮೂರು ಅಂಶಗಳನ್ನು ಬಳಸಿ ಒಂದು ರಾಷ್ಟ್ರ ಯಾವ ಮಟ್ಟದಲ್ಲಿದೆ ಎಂಬುದನ್ನು ತಿಳಿಯಬಹುದಾಗಿದೆ. ಇದರಿಂದ ವಿವಿಧ ರಾಷ್ಟ್ರಗಳಲ್ಲಿನ ಜನರ ಮಟ್ಟ ಹೇಗಿರುತ್ತದೆ ಎಂಬುದನ್ನು ವಿವರಿಸಲು ಅನುಕೂಲಕರವಾಗಿದೆ. ಮಾನವ ಅಭಿವೃದ್ಧಿ ಸೂಚಿಯನ್ನು ಕಂಡು ಹಿಡಿಯುವ ವಿಧಾನ: ಮಾನವ ಅಭಿವೃದ್ಧಿ ಸೂಚಿಯನ್ನು ಕಂಡು ಹಿಡಿಯುವ ಮೊದಲು, ನಾವು, ಮೇಲೆ ತಿಳಿಸಿದ ಮೂರು ಸೂಚಕಗಳಿಗೆ ಒಂದು ನಿರ್ದಿಷ್ಟ ಮೌಲ್ಯವನ್ನು ನೀಡಬೇಕಾಗುತ್ತದೆ. ಹುಟ್ಟಿದಾಗಿನಿಂದ ಮಾನವನ ಜೀವಿತಾವಧಿ; ಸಾಕ್ಷರತಾ ಮಟ್ಟ; ರಾಷ್ಟ್ರೀಯ ತಲಾ ಆದಾಯ ಇವುಗಳ ಮೌಲ್ಯವನ್ನು ಮೊದಲು ಕಂಡುಕೊಳ್ಳಬೇಕು. ಇದು ಶೂನ್ಯದಿಂದ ಒಂದರವರೆಗೆ (0 ಇಂದ 1) ಇರುತ್ತದೆ. ಇದನ್ನು ಈ ಕೆಳಗಿನ ಸೂತ್ರದ ಮೂಲಕ ಕಂಡು ಹಿಡಿಯಬಹುದು.

$$\text{ಸೂಚಕ ಮೌಲ್ಯ} = \frac{\text{ವಸ್ತುಸ್ಥಿತಿ ಮೌಲ್ಯ (ಆಕ್ಚುಯಲ್ ವ್ಯಾಲು)} - \text{ಕನಿಷ್ಠ ಮೌಲ್ಯ (ಮಿನಿಮಮ್ ವ್ಯಾಲು)}}{\text{ಗರಿಷ್ಠ ಮೌಲ್ಯ (ಮೆಕ್ಸಿಮಮ್ ವ್ಯಾಲು)} - \text{ಕನಿಷ್ಠ ಮೌಲ್ಯ (ಮಿನಿಮಮ್ ವ್ಯಾಲು)}}$$

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಈ ಮೇಲಿನ ಮೂರು ಸೂಚಕಗಳಿಗೆ ಪ್ರತ್ಯೇಕವಾಗಿ ಮೇಲ್ಕಂಡ ಸೂತ್ರವನ್ನು ಬಳಸಿಕೊಂಡು ಕಂಡುಹಿಡಿದುಕೊಳ್ಳಬೇಕು. ಅನಂತರ ಈ ಮೂರು ಸೂಚಕಗಳ ಮೌಲ್ಯವನ್ನು ಕೂಡಿ ಮೂರರಿಂದ ಭಾಗಿಸಿದರೆ ನಮಗೆ ಮಾನವ ಅಭಿವೃದ್ಧಿ ಸೂಚಿ ಸಿಗುತ್ತದೆ. ಉದಾಹರಣೆಗೆ,

$$\text{ಮಾನವ ಅಭಿವೃದ್ಧಿ ಸೂಚಿ (ಎಚ್‌ಡಿಐ)} = \frac{+\ \text{(ನಿರೀಕ್ಷಿತ ಜೀವಿತಾವಧಿ)} + \text{(ಶೈಕ್ಷಣಿಕ)} + \text{(ರಾಷ್ಟ್ರೀಯ ತಲಾ ಆದಾಯದ ಮೌಲ್ಯ)}}{\text{ಸೂಚಿತದ ಮೊತ್ತ} \qquad \text{ಮೌಲ್ಯ}}$$

ಮಾನವ ಅಭಿವೃದ್ಧಿ ಸೂಚಿಯ ಮೌಲ್ಯ 1.0 ಕ್ಕೆ ಹತ್ತಿರವಿದ್ದರೆ ಅಲ್ಲಿ ಜನರು ಉತ್ತಮ ಆರೋಗ್ಯದಿಂದಿದ್ದು, ಸುಶಿಕ್ಷಿತರಾಗಿದ್ದು ಮತ್ತು ಉತ್ತಮ ವರಮಾನವನ್ನು ಹೊಂದಿದ್ದು, ಉತ್ತಮ ಜೀವನವನ್ನು ನಿರ್ವಹಿಸುತ್ತಿದ್ದಾರೆ ಎಂದರ್ಥ. ಆದರೆ ಸೊನ್ನೆ ಅಥವಾ ಶೂನ್ಯಕ್ಕೆ ಸಮೀಪದಲ್ಲಿದ್ದರೆ, ಅಲ್ಲಿನ ಜನರು ಅನಾರೋಗ್ಯದಿಂದ ಕೂಡಿದ್ದು ಅಲ್ಲಿ ಸರಾಸರಿ ಜೀವಿತಾವಧಿ ಕಡಿಮೆಯಿದ್ದು, ಹೆಚ್ಚು ಅವಿದ್ಯಾವಂತರು ಮತ್ತು ಬಡವರೆಂದು ತಿಳಿಸುತ್ತದೆ.

ಈ ಮೇಲ್ಕಂಡ ಸೂತ್ರವನ್ನು ಬಳಸಿ ವಿಶ್ವಸಂಸ್ಥೆ 1990 ರಿಂದ ಸು. 177 ರಾಷ್ಟ್ರಗಳಲ್ಲಿನ ಜನರ ಸ್ಥಿತಿಗತಿಗಳನ್ನು ಈ ಮೇಲ್ಕಂಡ ಸೂತ್ರದ ಅನ್ವಯ ಅಳೆಯಲಾಗುತ್ತಿದೆ. ಈ ರಾಷ್ಟ್ರಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಲಾಗಿದೆ.

ಎ) ಹೆಚ್ಚು ಮಾನವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು (ರ‍್ಯಾಂಕ್ 1 ರಿಂದ 57 ರವರೆಗೆ)

ಬಿ) ಮಧ್ಯಮ ಅಥವಾ ಸಾಧಾರಣ ಮಾನವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು (ರ‍್ಯಾಂಕ್ 58 ರಿಂದ 145 ರವರೆಗೆ)

(ಸಿ) ಕೆಳ ಮಾನವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು (ರ‍್ಯಾಂಕ್ 146 ರಿಂದ 177 ರವರೆಗೆ)

**ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚಿಯ ಸ್ಥಿತಿಗತಿ**

| ವರ್ಷ | ಮಾನವ ಅಭಿವೃದ್ಧಿಯ ಸೂಚಿ (ಎಚ್‌ಡಿಐ) |
|---|---|
| 1975 | 0.412 |
| 1980 | 0.438 |
| 1985 | 0.476 |
| 1990 | 0.513 |
| 1995 | 0.546 |
| 2000 | 0.577 |
| 2003 | 0.602 |

(ಎಸ್.ಕೆ.ಪಿ.)

**ಮಾನವ ಅಭಿವೃದ್ಧಿ ಸೂಚ್ಯಂಕ:** ಒಂದು ಪ್ರದೇಶದ ಜನರ ಉತ್ತಮ ಆರ್ಥಿಕ ವರಮಾನ ಪಡೆದು ಸ್ವಾಸ್ಥ್ಯ ಜೀವನ ನಡೆಸುವುದು ಅವಶ್ಯಕ. ಈ ನಿಟ್ಟಿನಲ್ಲಿ ಅವರಿಗೆ ಸರಿಯಾದ ಉದ್ಯೋಗ–ಆರ್ಥಿಕ ವರಮಾನ, ಉತ್ತಮ ಆರೋಗ್ಯ–ವಿದ್ಯಾಭ್ಯಾಸ ಮತ್ತು ಉತ್ತಮ ಜೀವನ ನಡೆಸಲು ಆ ದೇಶದ ಸಂಪನ್ಮೂಲಗಳಲ್ಲಿ ಅವರಿಗೆ ಸರಿಯಾದ ಅವಕಾಶಗಳು ಮತ್ತು ಪಾಲುಗಾರಿಕೆ ಇದ್ದರೆ ಮಾತ್ರ ಅಭಿವೃದ್ಧಿ ಕೇವಲ ಆರ್ಥಿಕ

ಅಭಿವೃದ್ಧಿಯಾಗಿರದೆ ಅದು ಜನರ ಸಮಗ್ರ ಬೆಳವಣಿಗೆಯಾಗುತ್ತದೆ. ಇಂದು ವಿಶ್ವಸಂಸ್ಥೆಯಿಂದ ಅನೇಕ ದೇಶಗಳಲ್ಲಿ ಮತ್ತು ಭಾರತದ ಕೆಲವು ರಾಜ್ಯಗಳಲ್ಲಿ ಅಭಿವೃದ್ಧಿಯ ಮಟ್ಟವನ್ನು ಅಳೆಯಲು ಹಾಗೂ ನಿಜವಾದ ಆರ್ಥಿಕ ಬೆಳವಣಿಗೆಯನ್ನು ಅರಿಯಲು ಪ್ರಯತ್ನಗಳಾಗುತ್ತಿವೆ. ಈ ನಿಟ್ಟಿನಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ನಿರ್ಧರಿಸುವ ಮಾರ್ಗೋಪಾಯ, ಯತ್ನಗಳು ಸಾಗುತ್ತಿವೆ. ಆ ಸೂಚ್ಯಂಕದ ಪರಿಷ್ಕರಣವೂ ಆಗುತ್ತಿದೆ. ಅದರ ಆಧಾರದ ಮೇಲೆ ರಾಷ್ಟ್ರಗಳಿಗೆ/ರಾಜ್ಯಗಳಿಗೆ ಅಭಿವೃದ್ಧಿಯ ನೆರವುಗಳನ್ನು ಕೊಡಲಾಗುತ್ತಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ಆ ದೇಶದ ಜನರ ಸಾಮರ್ಥ್ಯವನ್ನು, ಅದರ ಬೆಳವಣಿಗೆಯನ್ನು ಸಾಧಿಸಿರುವ ಮಟ್ಟವನ್ನು ಸೂಚಿಸುತ್ತದೆ. ಇದು ಒಂದು ಸಂಯೋಜಿತ ಸೂಚ್ಯಂಕವಾಗಿದ್ದು ಅದು ಆ ದೇಶದ ಜನರ ಸರಾಸರಿ ಆಯಸ್ಸಿನ ಪ್ರಮಾಣ, ಸಾಕ್ಷರತೆಯ ಪ್ರಮಾಣ ಮತ್ತು ಪ್ರಾಥಮಿಕ, ಹೈಸ್ಕೂಲು ಹಾಗೂ ತೃತೀಯ ಬಗೆಯ ವಿದ್ಯಾಭ್ಯಾಸಕ್ಕೆ ಸೇರಿದವರ ಪ್ರಮಾಣ ಮತ್ತು ಜನರ ತಲಾದಾಯ, ಎಂಬ ಈ ಅಂಶಗಳನ್ನೊಳಗೊಂಡಿರುತ್ತದೆ. ಒಟ್ಟಿನಲ್ಲಿ ಹೇಳವುದಾದರೆ ಮಾನವ ಅಭಿವೃದ್ಧಿ ಸೂಚ್ಯಂಕ ಆ ದೇಶದ ಜನರು ಅಭಿವೃದ್ಧಿ ಪಥದಲ್ಲಿ ಬೇರೆ ದೇಶಕ್ಕೆ ಹೋಲಿಸಿದಾಗ ಯಾವ ಮಟ್ಟದಲ್ಲಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ.

ಮಾನವ ಅಭಿವೃದ್ಧಿ ಸೂಚ್ಯಂಕ ಪರಿಷ್ಕರಣೆಯಾಗಿ ಮತ್ತೂ ಶ್ರೇಷ್ಠವಾದ ಅಭಿವೃದ್ಧಿಯ ಸೂಚ್ಯಂಕದ ರಚನೆಯಾಗಿದೆ. ಹಾಗೂ ಅದರಲ್ಲಿ ಉಪ ಸೂಚ್ಯಂಕಗಳ ನಿರ್ಮಾಣವೂ ಆಗಿದೆ. ಅವುಗಳೆಂದರೆ 1) ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ 2) ಲಿಂಗ ಸ್ವಶಕ್ತೀಕರಣ ಮಾಪನ. ಇಲ್ಲಿ ಮೊದಲನೆಯದು ಆ ದೇಶದ ಗಂಡಸರು ಮತ್ತು ಹೆಂಗಸರನ್ನು ಒಟ್ಟಾರೆಯಾಗಿ ಗಣನೆಗೆ ತೆಗೆದುಕೊಂಡು ಅವರಲ್ಲಿರುವ ಆಯಸ್ಸಿನ ಪ್ರಮಾಣ, ವಿದ್ಯಾಭ್ಯಾಸದಲ್ಲಿನ ಅಭಿವೃದ್ಧಿ ಮತ್ತು ಆರ್ಥಿಕ ವರಮಾನದ ಮಟ್ಟವನ್ನು ನಿರ್ಧರಿಸುವುದು. ದೇಶದ ಗಂಡಸರು, ಹೆಂಗಸರು ಅಭಿವೃದ್ಧಿಯನ್ನು ಹೊಂದಿದಾಗ ವ್ಯತ್ಯಾಸ ಅಂತರ ಕಡಿಮೆಯಾಗಿ ಜಿಡಿಐ ಮಟ್ಟ ಇಳಿಯುವುದನ್ನು ನೋಡಬಹುದು. ಅದೇ ಎರಡನೆಯದು ಬರೀ ಹೆಂಗಸರನ್ನು ಗಣನೆಗೆ ತೆಗೆದುಕೊಂಡು ಗಂಡಸರಿಗೆ ಹೋಲಿಸಿದಾಗ ಅವರು ಎಷ್ಟರ ಮಟ್ಟಿಗೆ ಅಭಿವೃದ್ಧಿಯಲ್ಲಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ. ಇಲ್ಲಿ ಮಹಿಳೆಯರ 4 ಸೂಚ್ಯಂಕಗಳನ್ನು ತೆಗೆದುಕೊಳ್ಳಲಾಗಿದೆ. ಅ) ದೇಶದ ಲೋಕಸಭೆಯಲ್ಲಿ ಮಹಿಳೆಯರು ಎಷ್ಟು ಸ್ಥಾನ ಹೊಂದಿದ್ದಾರೆ. ಆ) ಆಡಳಿತ ಹಾಗೂ ನಿರ್ವಹಣಾ ಕಾರ್ಯಕ್ಷೇತ್ರದಲ್ಲಿ ಅವರ ಶೇಕಡ ಪ್ರಮಾಣ; ಇ) ಉನ್ನತ ಅಧಿಕಾರದಲ್ಲಿ ಮತ್ತು ತಾಂತ್ರಿಕ ವಿಜ್ಞಾನ ಕ್ಷೇತ್ರದ ಕಸಬುಗಳಲ್ಲಿ ಅವರ ಶೇಕಡ ಪ್ರಮಾಣ ಈ) ರಾಷ್ಟ್ರೀಯ ವರಮಾನದಲ್ಲಿ ಮಹಿಳೆಯರ ಪಾಲುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

(ಬಿ.ಇ.)

**ಮಾನವ ಜನಾಂಗಗಳು ಮತ್ತು ಜನಾಂಗೀಯ ಪ್ರದೇಶಗಳು:** ಪ್ರಪಂಚದಲ್ಲಿ ಜೀವಿಸುವ ಜನ ಸಮೂಹವೆಲ್ಲಾ ಒಂದೇ ರೀತಿಯಾಗಿರುವುದಿಲ್ಲ. ಆದರೆ ವಿವಿಧತೆಯಲ್ಲಿ ಏಕತೆಯೆಂಬಂತೆ ದೇಹ ಮತ್ತು ಮನಸ್ಸುಗಳಲ್ಲಿ ವಿಭಿನ್ನತೆ ಸಹಜವಾಗಿದ್ದರೂ ಎಲ್ಲರೂ ಮಾನವರಾಗಿಯೇ ಪ್ರತಿಬಿಂಬಿಸುತ್ತಾರೆ. ಮೇಲ್ನೋಟಕ್ಕೆ ಮಾನಸಿಕ ಸ್ಥಿತಿಯ ಭಿನ್ನತೆಗಳು ಗೋಚರಿಸದಿದ್ದರೂ ಅದು ದೈಹಿಕ ಲಕ್ಷಣಗಳಲ್ಲಿ ಸ್ಪಷ್ಟವಾಗುತ್ತದೆ. ಮೈಬಣ್ಣ, ಆಕಾರ, ಕೂದಲು, ಎತ್ತರ, ಪಂಚೇಂದ್ರಿಯಗಳಲ್ಲಿ ಸಹಜವಾಗಿಯೂ ವೈವಿಧ್ಯತೆ ಕಂಡುಬರುತ್ತದೆ. ಕೆಲವರು ಎತ್ತರವಾಗಿದ್ದರೆ ಮತ್ತೆ ಕೆಲವರು ಕುಬ್ಜರಾಗಿರುತ್ತಾರೆ. ಯುರೋಪಿಯನ್ನರು ಬಿಳಿಯರಾಗಿದ್ದರೆ, ಆಫ್ರಿಕನ್ನರು ಕಪ್ಪಾಗಿರುತ್ತಾರೆ. ಕೆಲವರು ದೈಹಿಕವಾಗಿ ದೃಢಕಾಯರಾಗಿದ್ದರೆ ಮತ್ತೆ ಕೆಲವರು ದುರ್ಬಲರಾಗಿರುತ್ತಾರೆ. ಹೀಗೆ ಮಾನವ ಜೀವಿ ಒಂದೇ ಆಗಿದ್ದರೂ ಅವರ ಶಾರೀರಿಕ ಲಕ್ಷಣಗಳು ಭಿನ್ನವಾಗಿರುತ್ತವೆ. ಯಾವ ಲಕ್ಷಣಗಳೇ ಇರಲಿ ಅವುಗಳು ಅವರಿಗೆ ವಂಶಪಾರಂಪರ್ಯವಾಗಿ ಬಂದವುಗಳಾಗಿರುತ್ತವೆ.

ಜನಾಂಗ ಎಂಬುದಕ್ಕೆ ಸ್ಪಷ್ಟ ವಿವರಣೆ ನೀಡುವುದು ಕಷ್ಟ. ವಿವಿಧ ಕ್ಷೇತ್ರಗಳ ಪರಿಣತಿಯುಳ್ಳ ವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸುವ ಮೂಲಕ ಅರ್ಥ ಕೊಡಲು ಪ್ರಯತ್ನಿಸಿದ್ದಾರೆ. ಭಾಷೆ, ಧರ್ಮ, ದೇಶ, ಸಂಸ್ಕೃತಿಗಳನ್ನಾಧರಿಸಿ ಜನಾಂಗದ ಅರ್ಥವನ್ನು ಬಿಡಿಸಿದ್ದಾರೆ. ಇದರಿಂದ ಕೆಲವು ಅಪಾರ್ಥಗಳೂ ಸಂಭವಿಸಿದ್ದುಂಟು. ಉದಾ: ಚೀನಿಯರಿಗೆ ಚೀನಿ ಜನಾಂಗ, ಆಂಗ್ಲಭಾಷೆಯನ್ನಾಡುವವರನ್ನು ಆಂಗ್ಲ ಜನಾಂಗ, ಹಿಂದೂ ಧರ್ಮೀಯರಿಗೆ ಹಿಂದು ಜನಾಂಗ ಇತ್ಯಾದಿಯಾಗಿ ಗ್ರಹಿಸಲಾಗಿದೆ. ಇದರಿಂದಾಗಿಯೇ ಜನಸಮುದಾಯಗಳ ನಡುವೆ ಗೊಂದಲಗಳು ಹಾಗೂ ಅನರ್ಥಗಳು ಸಂಭವಿಸಿವೆ.

ಜನಾಂಗವೆಂಬುದು ಅನುವಂಶೀಯತೆಯ ಫಲವಾಗಿ ದೈಹಿಕ ಲಕ್ಷಣಗಳನ್ನು ಪಡೆದಿರುವಂತಹ ಜನ ಸಮೂಹವಾಗಿರುತ್ತದೆ. ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಾನವರ ದೈಹಿಕ ಲಕ್ಷಣಗಳಲ್ಲಿ ಬದಲಾವಣೆ ಕಂಡುಬರುತ್ತದೆ. ಈ ದೈಹಿಕ ಲಕ್ಷಣಗಳೆಲ್ಲವೂ ಆಕಸ್ಮಿಕವಲ್ಲ; ಇವು ಆತನಿಗೆ ಅನುವಂಶೀಯವಾಗಿ ರಕ್ತಗತವಾಗಿ ಬಂದಿರುತ್ತವೆ. ಇವುಗಳನ್ನು ಬದಲಾಯಿಸುವುದು ಸಾಧ್ಯವಿಲ್ಲ. ಇವುಗಳನ್ನು ಆಧರಿಸಿ ಅನುವಂಶೀಯ ಬಳುವಳಿಯಾಗಿ ಒಂದೇ ರೀತಿಯ ದೈಹಿಕ ಲಕ್ಷಣಗಳನ್ನು ಹೊಂದಿರುವ ಮಾನವ ಸಮೂಹವನ್ನು ಒಂದು ಜನಾಂಗ ಎಂದು ಕರೆಯಲಾಗಿದೆ.

ಮಾನವಶಾಸ್ತ್ರಜ್ಞ ಹರ್ಕೊವಿಟ್ಸ್ ಹೇಳಿರುವಂತೆ ಜನಾಂಗ ಅನುವಂಶೀಯವಾಗಿ ಹುಟ್ಟಿನಿಂದ ಪಡೆದಿರುವ ವಿಶಿಷ್ಟ ಭೌತಿಕ ಲಕ್ಷಣಗಳನ್ನು ಹೊಂದಿರುವ ಮಾನವ ಸಮೂಹದ

| ರ್‍ಯಾಂಕ್ | ರಾಷ್ಟ್ರಗಳು | ಮಾನವನ ಅಭಿವೃದ್ಧಿ ಸೂಚ್ಯಂಕ ಮೌಲ್ಯ (2003) | ನಿರೀಕ್ಷಿತ ಜೀವಿತಾವಧಿ (ಹುಟ್ಟಿನಿಂದ) (2003) | ವಯಸ್ಕರ ಸಾಕ್ಷರತೆ (15 ವಯಸ್ಸಿಗಿಂತ ಹೆಚ್ಚು % (2003) | ಜಿ.ಡಿ.ಪಿ (ಪಿಪಿಪಿ) (2003) | ನಿರೀಕ್ಷಿತ ಜೀವಿತಾವಧಿ ಸೂಚ್ಯಂಕ | ಶಿಕ್ಷಣ ಸೂಚ್ಯಂಕ | ಜಿ.ಡಿ.ಪಿ ಸೂಚ್ಯಂಕ |
|---|---|---|---|---|---|---|---|---|
| **ಹೆಚ್ಚು ಮಾನವ ಅಭಿವೃದ್ಧಿ ಹೊಂದಿದ ಕೆಲವು ರಾಷ್ಟ್ರಗಳು (ರ್‍ಯಾಂಕ್ 1 ರಿಂದ 57ರವರೆಗೆ)** | | | | | | | | |
| 01 | ನಾರ್ವೆ | 0.963 | 79.4 | 99.0 | 36,670 | 0.91 | 0.99 | 0.99 |
| 02 | ಐಸ್ಲೆಂಡ್ | 0.956 | 80.7 | 99.0 | 31,243 | 0.93 | 0.98 | 0.96 |
| 03 | ಆಸ್ಟ್ರೇಲಿಯ | 0.955 | 80.3 | 99.0 | 29,632 | 0.92 | 0.99 | 0.95 |
| 04 | ಲಕ್ಸೆಂಬರ್ಗ್ | 0.949 | 78.5 | 99.0 | 62,298 | 0.89 | 0.95 | 1.00 |
| 05 | ಕೆನಡ | 0.949 | 80.0 | 99.0 | 30,677 | 0.92 | 0.97 | 0.96 |
| 57 | ಟ್ರಿನಿದಾದ್ ಮತ್ತು ಟೊಬ್ಯಾಗೋ | 0.801 | 69.9 | 98.5 | 10,766 | 0.75 | 0.88 | 0.78 |
| **ಸಾಧಾರಣ ಮಾನವ ಅಭಿವೃದ್ಧಿ ಸೂಚ್ಯಂಕ ಹೊಂದಿದ ಕೆಲವು ರಾಷ್ಟ್ರಗಳು (ರ್‍ಯಾಂಕ್ 58 ರಿಂದ 145ರವರೆಗೆ)** | | | | | | | | |
| 85 | ಚೀನ | 0.755 | 71.6 | 90.9 | 5,003 | 0.78 | 0.84 | 0.65 |
| 127 | ಭಾರತ | 0.602 | 63.3 | 61.0 | 2,892 | 0.64 | 0.61 | 0.56 |
| 135 | ಪಾಕಿಸ್ತಾನ | 0.527 | 63.0 | 48.7 | 2,097 | 0.63 | 0.44 | 0.51 |
| 139 | ಬಾಂಗ್ಲಾದೇಶ | 0.520 | 62.8 | 41.1 | 1,770 | 0.63 | 0.45 | 0.48 |
| 145 | ಜಿಂಬಾಬ್ವೆ | 0.505 | 36.9 | 90.0 | 2443 | 0.20 | 0.78 | 0.53 |
| **ಕಡಿಮೆ ಮಾನವ ಅಭಿವೃದ್ಧಿ ಸೂಚ್ಯಂಕ ಹೊಂದಿದ ಕೆಲವು ರಾಷ್ಟ್ರಗಳು (ರ್‍ಯಾಂಕ್ 146 ರಿಂದ 177)** | | | | | | | | |
| 177 | ನೈಜರ್ | 0.281 | 44.4 | 14.4 | 835 | 0.32 | 0.17 | 0.35 |
| | ಪ್ರಪಂಚ | 0.741 | 67.1 | – | 8,229 | 0.70 | 0.77 | 0.75 |

ಒಂದು ಮುಖ್ಯ ವಿಭಾಗವಾಗಿದೆ. ಜನಾಂಗ ಎಂಬ ಪದ ಜೈವಿಕ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ. ಇದು ಮಾನವನ ದೈಹಿಕ ಲಕ್ಷಣಗಳನ್ನು ಅವಲಂಬಿಸಿದ್ದು ಮಾನವನ ಒಂದು ಗುಂಪನ್ನು ಇನ್ನೊಂದು ಗುಂಪಿನಿಂದ ಬೇರ್ಪಡಿಸುತ್ತದೆ.

ಮಾನವನ ವಿಕಾಸ ಮತ್ತು ಪ್ರಸರಣ: ಪ್ರಪಂಚದ ಎಲ್ಲಾ ಮಾನವರೂ ಹೋಮೋ ಸೈಪಿಯನ್ ವರ್ಗಕ್ಕೆ ಸೇರಿದವರಾಗಿದ್ದಾರೆ. ಪ್ರಾರಂಭದಲ್ಲಿ ಈ ವರ್ಗಕ್ಕೆ ಸೇರಿದ ವಿವಿಧ ಗುಂಪಿನ ಜನರು ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಈ ಎಲ್ಲಾ ವರ್ಗದ ಜನರು ಏಪ್ (ವಾನರ) ಪ್ರಕಾರದ ಅನುವಂಶೀಯತೆಯಿಂದ ರೂಪು ತಳೆದಂತಹವರು. ಇವರಲ್ಲಿ ಹೋಮೋಸೆಪಿಯನ್ ವರ್ಗವನ್ನು ಹೊರತುಪಡಿಸಿ ಉಳಿದೆಲ್ಲಾ ಗುಂಪುಗಳು ಸಹ ಕ್ರಮೇಣ ವಿನಾಶ ಹೊಂದಿದವೆಂದು ಡಾರ್ವಿನ್ನರ ನೈಸರ್ಗಿಕ ಆಯ್ಕೆ ಸಿದ್ಧಾಂತ ಪ್ರತಿಪಾದಿಸಿದೆ. ಈಗಿನ ಜನ ಸಮೂಹ ನಿಸರ್ಗದೊಂದಿಗೆ ಹೊಂದಾಣಿಕೆ ಹಾಗೂ ಹೋರಾಟದ ಶಕ್ತಿಯನ್ನು ರೂಢಿಸಿಕೊಂಡಿರುವುದರಿಂದ ಪ್ರಪಂಚದಲ್ಲಿ ನೆಲೆಸಲು ಸಾಧ್ಯವಾಯಿತು. ಹೀಗಾಗಿ ಮಂಗನಿಂದ ಮಾನವ ಎಂಬ ಪರಿಕಲ್ಪನೆ ತಪ್ಪು. ಬದಲಾಗಿ ಮಾನವ ಮತ್ತು ಮಂಗಗಳೆರಡೂ ಒಂದೇ ಮೂಲದಿಂದ ಸೃಷ್ಟಿಯಾಗಿವೆ ಎಂಬ ಕಲ್ಪನೆ ಹೆಚ್ಚು ಪ್ರಚಲಿತವಾಗಿದೆ. ಹೀಗೆ ಉಗಮ ಹೊಂದಿದ ಮೂಲ ಮಾನವನಿಂದ ಅವನ ಲಕ್ಷಣಗಳು ಆತನ ಸಂತತಿಗೆ ಜೀನ್‌ಗಳ ಮೂಲಕ ಬಂದಂತಹವುಗಳಾಗಿವೆ. ತಂದೆ ತಾಯಂದಿರ ಜೀನ್‌ಗಳಿಂದ ಮಕ್ಕಳು ಚರ್ಮದ ಬಣ್ಣ, ರಕ್ತದ ಗುಂಪು, ಮೂಗಿನ ಆಕಾರ, ತಲೆಗೂದಲಬಣ್ಣ ಇತ್ಯಾದಿ ಲಕ್ಷಣಗಳನ್ನು ಪಡೆಯುತ್ತವೆ. ಹೀಗಾಗಿಯೇ ಮಕ್ಕಳು ತಂದೆ, ತಾಯಿಗಳ ಹೋಲಿಕೆಯನ್ನು ಹೊಂದಿರುವರು. ಕೆಲವು ವೇಳೆ ಜೀನ್‌ಗಳಲ್ಲಿ ರಚನಾತ್ಮಕ ಬದಲಾವಣೆಗಳಿರುತ್ತದೆ. ಈ ಕಾರಣದಿಂದ ತಳಿಗಳಲ್ಲಿ ಮಾರ್ಪಾಟಾಗುತ್ತದೆ. ಇದಕ್ಕೆ ಮುಟೇಶನ್ ಎಂದು ಕರೆಯುವರು.

ಹಲವಾರು ವರ್ಷಗಳ ಪ್ರಭಾವದಿಂದಾಗಿ ನೈಸರ್ಗಿಕ ಪರಿಸರದ ಉಷ್ಣಾಂಶ, ಮಳೆ, ತೇವಾಂಶ ಇತ್ಯಾದಿಗಳಿಗೆ ಮಾನವನು ಹೊಂದಿಕೊಳ್ಳಲು ಅನುಕೂಲವಾಗುವಂತೆ ಅವನ ದೇಹದಲ್ಲಿಯೂ ಹಲವಾರು ಮಾರ್ಪಾಡುಗಳಾದವು. ಈ ಮಾರ್ಪಾಡುಗಳನ್ನು ಎರಡು ರೀತಿಯಲ್ಲಿ ಹೇಳಬಹುದು.

ನೈಸರ್ಗಿಕ ಪರಿಸರಕ್ಕೆ ಸಂಬಂಧಿಸಿದಂತೆ ಉಂಟಾದ ಮಾನವನ ಬಾಹ್ಯ ರಚನೆ. ಉದಾ: ತಲೆಗೂದಲು, ಚರ್ಮದ ಬಣ್ಣ, ದೇಹದಾರ್ಢ್ಯತೆ ಇತ್ಯಾದಿ ಹಾಗೂ ಮಾನವನ ಆಂತರಿಕ ರಚನೆ, ಮಾಂಸಖಂಡಗಳ ಉಬ್ಬುವಿಕೆ ಇತ್ಯಾದಿಗಳು.

ಮಾನವನ ರಚನೆಯಲ್ಲಿ ಹೆಚ್ಚು ಪ್ರಭಾವ ದೇಹದ ಬಣ್ಣ, ಆಕಾರ ಮತ್ತು ತಲೆಗೂದಲು. ಬಣ್ಣಗಳಲ್ಲಿ ವಾಯುಗುಣವು ಹೆಚ್ಚು ಪ್ರಭಾವ ಬೀರಿರುವುದನ್ನು ನೋಡಬಹುದು. ಆಯಾ ಪ್ರದೇಶಕ್ಕೆ ಅನುಗುಣವಾಗಿ ಆಯಾ ವಾಯುಗುಣಕ್ಕೆ ಅನುಗುಣವಾಗಿ ಮಾನವನು ಹೊಂದಿಕೊಂಡಿರುವುದನ್ನು ಕಾಣಬಹುದು. ಶೀತ ಪ್ರದೇಶಗಳಲ್ಲಿ ವಾಸಿಸುವ ಜನರು (ಉದಾ:ಎಸ್ಕಿಮೋ) ದೈಹಿಕ ರಚನೆಯಲ್ಲಿ ವ್ಯತ್ಯಾಸವಿರಲು ಅಲ್ಲಿನ ವಾಯುಗುಣವೇ ಮೂಲ ಕಾರಣವಾಗಿದೆ. ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ಅಲ್ಲಿನ ಪರಿಸರಕ್ಕೆ ಅನುಗುಣವಾಗಿ ಮಾನವನ ಅಂಗಾಂಗಗಳು, ಬಣ್ಣ, ತಲೆಗೂದಲು ಇತ್ಯಾದಿಗಳು ರೂಪುಗೊಂಡಿವೆ.

ಜನಾಂಗಗಳ ವರ್ಗೀಕರಣದ ಆಧಾರಗಳು: ಮೂಲತಃ ಮಾನವನ ವಿವಿಧ ವರ್ಗಗಳ ನಡುವೆ ಕಂಡುಬರುವ ಬದಲಾವಣೆ ಅಲ್ಪವಿದ್ದು. ಇತರ ಜೀವಿಗಳಿಗಿಂತ ವೈವಿಧ್ಯತೆಯಿಂದ ಕೂಡಿದೆ. ಆದರೆ ಮಾನವ ಸಮುದಾಯದ ಗುಂಪುಗಳಲ್ಲಿಯೇ ವಿವಿಧ ರೀತಿಯ ವ್ಯತ್ಯಾಸಗಳಿದ್ದು, ಇವುಗಳನ್ನು ಆಧಾರವಾಗಿರಿಸಿಕೊಂಡು ಮಾನವ ಸಮೂಹವನ್ನು ಹಲವರು ಜನಾಂಗಗಳಾಗಿ ವರ್ಗೀಕರಿಸಲಾಗಿದೆ. ಮಾನವ ಶಾಸ್ತ್ರಜ್ಞರು ಜನಾಂಗದ ವಿಭಜನೆಯಲ್ಲಿ ಎರಡು ಬಗೆಯ ಲಕ್ಷಣಗಳನ್ನು ಆಧರಿಸುತ್ತಾರೆ.

ಮಾನವನ ಬಾಹ್ಯ ಲಕ್ಷಣಗಳು: ಚರ್ಮದ ಬಣ್ಣ, ತಲೆಗೂದಲ ವಿನ್ಯಾಸ ಮತ್ತು ಬಣ್ಣ, ಕಣ್ಣುಗಳ ಆಕಾರ ಮತ್ತು ಬಣ್ಣ, ಮುಖ ಲಕ್ಷಣಗಳು ಇತ್ಯಾದಿಗಳು, ಮಾನವ ದೇಹದ ರಚನೆಯ ಆಂತರಿಕ ಲಕ್ಷಣಗಳು: ಮೂಗಿನ ಆಕಾರ, ಶಿರೋಭಾಗದ ಉದ್ದ, ಪೃಷ್ಠದ ಆಕಾರ, ತಲೆಬುರುಡೆಯ ಸ್ವರೂಪ, ದೇಹದ ಎತ್ತರ ಹಾಗೂ ರಕ್ತದ ಗುಂಪು ಇತ್ಯಾದಿಗಳು.

ಜನಾಂಗಗಳ ವಿಂಗಡನೆ: ವಿವಿಧ ದೈಹಿಕ ಲಕ್ಷಣಗಳನ್ನು ಆಧರಿಸಿ ಮಾನವ ಸಮೂಹವನ್ನು ವಿವಿಧ ಜನಾಂಗಗಳಾಗಿ ವಿಂಗಡಿಸಲಾಗಿದೆ. ಪ್ರಪಂಚದ ಬಹುತೇಕ ಜನರ ಲಕ್ಷಣಗಳನ್ನು ಸುಲಭವಾಗಿ ಅರಿತುಕೊಳ್ಳಲು ಅವರನ್ನು ಪ್ರಮುಖ ಮೂರು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಈ ವರ್ಗೀಕರಣವನ್ನು ಪ್ರಸಿದ್ಧ ಮಾನವಶಾಸ್ತ್ರಜ್ಞ ಕ್ರೋಬರ್ ಸಹ ಒಪ್ಪಿದ್ದಾರೆ. 1) ಕಕಾಸಾಯ್ಡ್ ಯುರೋಪಿಯನ್ 2) ಮಂಗೋಲಾಯ್ಡ್ 3) ನೀಗ್ರಾಯಿಡ್.

ಈ ಮೂರು ವಿಧದ ಜನಾಂಗಗಳು ಪ್ರಪಂಚದ ಪ್ರಮುಖ ಮಾನವ ಸಮೂಹದ ಶೇ.90 ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಪ್ರಪಂಚದ ಒಟ್ಟು ಜನರಲ್ಲಿ ಶೇ.43 ರಷ್ಟು ಮಂಗೋಲಾಯ್ಡ್, ಶೇ.24 ರಷ್ಟು ನೀಗ್ರಾಯಿಡ್ ಮತ್ತು ಶೇ.33 ರಷ್ಟು ಕಕಾಸಾಯ್ಡ್ ಜನರಿರುವರೆಂದು ಅಂದಾಜಿಸಲಾಗಿದೆ. ಇವು ಮೂರು ಭೂ ಭಾಗಗಳಲ್ಲಿ ಕಂಡುಬರುತ್ತದೆ. ಪಶ್ಚಿಮ ಯುರೋಪ್ – ಕಕಾಸಾಯ್ಡ್, ಮಧ್ಯ ಆಫ್ರಿಕ – ನಿಗ್ರಾಯ್ಡ್ ಹಾಗೂ ಪೂರ್ವ ಏಷ್ಯ ಮಂಗೋಲಾಯ್ಡ್ ಇವುಗಳ ನಡುವಿನ ಭೂ ಭಾಗಗಳು ಇವುಗಳ ಮಿಶ್ರಣದಿಂದ ಕೂಡಿವೆ. ಇವುಗಳಲ್ಲದೆ ಇತರೆ ಚಿಕ್ಕ ಪ್ರಮುಖ ಜನಾಂಗಗಳೆಂದರೆ ಕಫಾಯ್ಡ್ ಮತ್ತು ಆಸ್ಟ್ರಾಲಾಯ್ಡ್ ಈ ವಿಭಾಗಗಳು ಆಂತರಿಕವಾಗಿ ವಿವಿಧ ಪ್ರದೇಶಗಳ ವಿವಿಧ ರೀತಿಯ ಜನರನ್ನು ಒಳಗೊಂಡಿವೆ. ಹೀಗಾಗಿ ಇವುಗಳನ್ನು ಅನೇಕ ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ.



ಕಕಾಸಾಯ್ಡ್

1. ಕಕಾಸಾಯ್ಡ್ ಜನಾಂಗ: 1873 ರಲ್ಲಿ ಜನಾಂಗೀಯ ವಿಂಗಡಣೆಯಲ್ಲಿ ಕಕಾಸಾಯ್ಡ್ ಎಂಬ ಪದವನ್ನು ಬ್ಲೂಮೆನ್ ಬಾಚ್ ಎಂಬುವರು ಮೊದಲು ಬಳಸಿದರು. ಇಂದಿನ ಈ ಜನರ ಮೂಲ ಪ್ರದೇಶ ಕಾಕಸಸ್ ಪರ್ವತದ ಸುತ್ತಲಿನ ಭೂಭಾಗವಾಗಿದ್ದು, ಈ ಜನಾಂಗವನ್ನು ನಾಲ್ಕು ಪ್ರಮುಖ ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಭಾರತದ ಒಂದು ಪಂಗಡವನ್ನು ಹೊರತುಪಡಿಸಿ ಉಳಿದ ಮೂರು ಪಂಗಡಗಳು ಯುರೋಪ್‌ನಲ್ಲಿಯೇ ಕಂಡುಬರುತ್ತವೆ. ಅವುಗಳೆಂದರೆ, ಉತ್ತರ ಯುರೋಪಿನ ನಾರ್ಡಿಕ್; ಮಧ್ಯ ಯುರೋಪಿನ ಆಲ್ಪೈನ್; ದಕ್ಷಿಣ ಯುರೋಪಿನ ಮೆಡಿಟರೇನಿಯನ್; ಉತ್ತರ ಆಫ್ರಿಕದ ಯಹೂದಿ ಮತ್ತು ಅರಬ್ ಜನರನ್ನು ಕಕಾಸಾಯ್ಡ್ ಜನಾಂಗಕ್ಕೆ ಸೇರಿಸಲಾಗಿದೆ. ಇಲ್ಲಿ ಪಶ್ಚಿಮ ಏಷ್ಯದ ಇಂಡೊ–ಆರ್ಯನ್ನರ ಮಿಶ್ರಣದಿಂದ ಅರಬ್ ಮತ್ತು ಯಹೂದಿ ಪಂಗಡಗಳು ರೂಪಗೊಂಡಿವೆ.

ಉತ್ತರ ಯುರೋಪಿನ ನಾರ್ಡಿಕ್: ಈ ಜನರು ಉತ್ತರ ಸಮುದ್ರದಂಚಿಗೆ ಹೊಂದಿಕೊಂಡಂತಿರುವ ಸ್ಕ್ಯಾಂಡಿನೇವಿಯ, ಬ್ರಿಟನ್, ಜರ್ಮನಿ ಇತ್ಯಾದಿಗಳಲ್ಲಿ ಹಂಚಿಕೆಯಾಗಿದ್ದಾರೆ. ನೀಳವಾದ ತಲೆಬುರುಡೆ, ಚೂಪಾದ ಮತ್ತು ಉದ್ದವಾದ ಮೂಗು, ತೆಳುವಾದ ತುಟಿಗಳು ಎತ್ತರವಾದ ನಿಲುವು ನಸುಹೊಂಬಣ್ಣದ ತಲೆಗೂದಲು, ನೀಲಿಕಣ್ಣು, ಕೋನಾಕೃತಿಯ ಮುಖ, ಚಪ್ಪಟೆ ಎದೆ ಮತ್ತು ದೇಹದ ಮೇಲೆ ಮಿತವಾದ ರೋಮಗಳು ಇವರ ಲಕ್ಷಣಗಳು.

ಮಧ್ಯ ಯುರೋಪಿನ ಆಲ್ಪೈನ್: ಇವರು ಫ್ರಾನ್ಸ್‌ನಿಂದ ಹಿಡಿದು ಪಶ್ಚಿಮ ಏಷ್ಯದ ಹೃದಯ ಭಾಗದವರೆಗೂ ಹಂಚಿಕೆಯಾಗಿರುವರು. ಅಲ್ಲದೆ ಹಂಗೆರಿ, ಆಸ್ಟ್ರಿಯ, ಉತ್ತರ ಆಫ್ರಿಕ, ಉತ್ತರ ಅಮೆರಿಕ ಹಾಗೂ ಸ್ವಿಟ್ಜರ್ಲೆಂಡ್‌ನಲ್ಲಿಯೂ ಇವರು ಕಂಡು ಬರುತ್ತಾರೆ. ಇವರ ಪ್ರಮುಖ ದೈಹಿಕ ಲಕ್ಷಣಗಳೆಂದರೆ ಕಪ್ಪು ಮತ್ತು ಕಂದು ಬಣ್ಣದ ಕೂದಲು, ಅಗಲವಾದ ತಲೆ ಮತ್ತು ಮುಖಗಳು, ಸಾಧಾರಣವಾದ ನಿಲುವು ಮತ್ತು ದೃಢಕಾಯ.

ದಕ್ಷಿಣ ಯುರೋಪಿನ ಮೆಡಿಟರೇನಿಯನ್: ಈ ಜನಾಂಗ ಯುರೋಪ್, ಆಫ್ರಿಕ ಮತ್ತು ಏಷ್ಯದ ದೇಶಗಳಲ್ಲಿ ಸಮುದ್ರದುದ್ದಕ್ಕೂ ಹಂಚಿಕೆಯಾಗಿದೆ. ಉದಾ: ಗ್ರೀಸ್, ಇಟಲಿ, ಈಜಿಪ್ಟ್, ಅರೇಬಿಯ, ಇಸ್ರೇಲ್ ಇತ್ಯಾದಿ. ಈ ಜನರು ಯುರೋಪಿನ ಉಳಿದ ಜನಾಂಗಗಳಿಗಿಂತ ಹೆಚ್ಚು ಕಪ್ಪುವರ್ಣದ ಚರ್ಮ, ಕಪ್ಪಾದ ಕಣ್ಣು, ಕಪ್ಪು ತಲೆಗೂದಲು ಹಾಗೂ ಗಿಡ್ಡ ದೇಹ ರಚನೆಯನ್ನು ಹೊಂದಿರುವರು.

ಕಕಾಸಾಯ್ಡ್ ಜನರ ಪ್ರಮುಖ ದೈಹಿಕ ಲಕ್ಷಣಗಳಿವು: ಇವರ ಮೈಬಣ್ಣ ನಸು ಕೆಂಪಾದ ಬಿಳಿ ಬಣ್ಣದಿಂದ ಕಡು ಕಂದು ಬಣ್ಣವಾಗಿದ್ದು ಶರೀರದ ಎತ್ತರ ಮಧ್ಯಮ ಎತ್ತರದಿಂದ ಅತೀ ಎತ್ತರವಾಗಿದೆ. ತಲೆ ಬುರುಡೆ ನೀಳವಾಗಿದ್ದು ಕೆಲವೊಮ್ಮೆ ಅಗಲವಾಗಿ ಹಾಗೂ ಚಿಕ್ಕದಾಗಿಯೂ ಇರುತ್ತದೆ. ಶರೀರದ ಮೇಲ್ಮೈ ದಟ್ಟವಾದ ರೋಮಗಳಿಂದ ಕೂಡಿದ್ದು, ನಾಸಿಕದ ಸೇತುವೆ ಎತ್ತರವಾಗಿರುತ್ತದೆ. ಹಾಗೂ ಆಕಾರವು ಇಕ್ಕಟ್ಟಿನಿಂದ ಮಧ್ಯಮ ಅಗಲವಾಗಿರುವುದು. ತಲೆಗೂದಲು ಕೆಂಪು ಅಥವಾ ಕಪ್ಪು ಬಣ್ಣದ್ದಾಗಿದೆ.

ಭಾರತದಲ್ಲಿನ ಹಿಂದುಗಳು ಕಕಾಸಾಯ್ಡ್ ಗುಂಪಿಗೆ ಸೇರಿದವರಾಗಿದ್ದು ಅವರ ದೈಹಿಕ ಲಕ್ಷಣಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಇವರು ಉದ್ದವಾದ ತಲೆ ಬುರುಡೆಯನ್ನು ಹೊಂದಿದ್ದು, ಕಪ್ಪು ಕೂದಲು, ಕಪ್ಪು ಬಣ್ಣದ ತ್ವಚೆಯನ್ನು ಹೊಂದಿದ್ದಾರೆ. ಹೀಗಾಗಿ ಈ ಜನರು ಮಧ್ಯ ಏಷ್ಯದಿಂದ ಭಾರತಕ್ಕೆ ವಲಸೆ ಬಂದವರೆಂದು ಊಹಿಸಲಾಗಿದೆ. ಇವರ ಪ್ರವೇಶಕ್ಕೆ ಮೊದಲು ಭಾರತದಲ್ಲಿದ್ದ ಮೂಲ ನಿವಾಸಿಗಳನ್ನು ನಿಗ್ರಿಟೋ ಅಥವಾ ಇಂಡೋ ಆಸ್ಟ್ರಲಾಯ್ಡ್ ಗುಂಪಿಗೆ ಸೇರಿದವರೆಂದು ಭಾವಿಸಲಾಗಿದೆ. ವಲಸೆ ಬಂದ

ಕಕಾಸಾಯ್ಡ್ ಜನಾಂಗದ (ದ್ರಾವಿಡ ಮತ್ತು ಆರ್ಯನ್ನರು) ಹಿಂದೂ ಪಂಗಡದ ಜನರು ಸಹಸ್ರಾರು ವರ್ಷಗಳ ಅವಧಿಯಲ್ಲಿ ಮೂಲ ನಿವಾಸಿಗಳೊಂದಿಗೆ ಮಿಶ್ರಣ ಹೊಂದಿದರು. ಹೀಗಾಗಿ ಮೂಲ ಕಕಾಸಾಯ್ಡ್ (ಹಿಂದು ಪಂಗಡ) ಜನರು ಇಂದು ಹೆಚ್ಚು ಮಾರ್ಪಾಡುಗಳನ್ನು ಹೊಂದಿದ್ದಾರೆ. ಅಲ್ಲದೆ ಮೂಲ ನಿವಾಸಿಗಳು ಸಹ ಮಿಶ್ರಣ ಹೊಂದಿ ಮಾರ್ಪಾಡು ಹೊಂದಿದ್ದಾರೆ.

2. ಮಂಗೋಲಾಯ್ಡ್ ಜನಾಂಗ: ಪೂರ್ವ ಏಷ್ಯದ ಚೀನಿಯರು, ಮಲೇಷಿಯನ್ನರು, ಕೊರಿಯನ್ನರು, ಮಂಗೋಲರು, ದಕ್ಷಿಣ ಜಪಾನೀಯರು, ಅಮೆರಿಕದ ಇಂಡಿಯನ್ನರು ಮತ್ತು ಉತ್ತರ ಏಷ್ಯದ ಎಸ್ಕಿಮೋ ಜನರು ಈ ಗುಂಪಿಗೆ ಸೇರಿದ್ದಾರೆ. ಇದನ್ನು ಏಷ್ಯನ್ ಜನಾಂಗವೆಂದೂ ಸಹ ಕರೆಯಲಾಗಿದೆ. ಈ ಗುಂಪುಗಳ ನಡುವೆ ಆಂತರಿಕವಾಗಿ ಹೆಚ್ಚು ವ್ಯತ್ಯಾಸಗಳು ಕಂಡುಬರುವುದಿಲ್ಲ. ಮಂಗೋಲಿಯನ್ನರು ಈ ಜನಾಂಗದ ಮೂಲ ಲಕ್ಷಣಗಳನ್ನು ಹೊಂದಿದ್ದಾರೆ. ವಕ್ರವಾದ ಹೆಚ್ಚು ಹೊರಬಾಗಿದ ಮಂಗೋಲಿಯನ್ ಕಣ್ಣು ಈ ಗುಂಪಿನ ವಿಶಿಷ್ಟ ಲಕ್ಷಣ. ಮೂಲತಃ ಮಂಗೋಲಿಯನ್ನರು ಇಂದಿನ ಮಲೇಷಿಯನ್ನರು ಅಥವಾ ಅಮೆರಿಕದ ಇಂಡಿಯನ್ನರನ್ನು ಹೋಲುತ್ತಿದ್ದಿರಬೇಕೆಂದು ಊಹಿಸಲಾಗಿದೆ. ಈ ಜನರು ಕ್ರಮೇಣ ಮಾರ್ಪಾಡು ಹೊಂದಿ ಹೆಚ್ಚು ಹೊರಬಾಗಿದ ವಕ್ರವಾದ ಕಣ್ಣಿನ ಹುಬ್ಬುಗಳನ್ನು ಪಡೆದು ಇತರರಿಂದ ವಿಭಾಗಿಸಲ್ಪಟ್ಟರು.

ಮಂಗೋಲಾಯ್ಡ್

ಚೀನಿ ಮತ್ತು ಮಂಗೋಲಿಯರನ್ನು ಏಷ್ಯದ ಮಂಗೋಲಾಯ್ಡ್ ಜನರೆಂದು ಕರೆಯುತ್ತಾರೆ. ಅಲ್ಲದೆ ಉತ್ತರ ಅಮೆರಿಕದ ಎಸ್ಕಿಮೋ, ಅಮೆರಿಕದ ಎಸ್ಕಿಮೋ, ಅಮೆರಿಕ ಖಂಡಗಳ ರೆಡ್ ಇಂಡಿಯನ್ನರು ಹಾಗೂ ಸೈಬೀರಿಯದ ಬುಡಕಟ್ಟಿನವರು ಮಂಗೋಲಾಯ್ಡ್ ಜನಾಂಗಕ್ಕೆ ಸೇರಿದ್ದಾರೆ. ಫಿಲಿಫೈನ್ಸ್, ಇಂಡೋನೇಷ್ಯ, ಆಗ್ನೇಯ ಏಷ್ಯದ ಮಲೇಷ್ಯ ದ್ವೀಪಗಳಲ್ಲಿರುವ ಜನರು ಮೂಲತಃ ಮಂಗೋಲಾಯ್ಡ್ ಲಕ್ಷಣಗಳನ್ನೇ ಹೊಂದಿದ್ದಾರೆ. ಇವರ ಪ್ರೋಟೋ ಮಲೇಷ್ಯನ್ ಹಾಗೂ ಡ್ಯೂಟೆರೋ ಮಲೇಷ್ಯನ್ ಎಂದು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರೋಟೋ ಮಲೇಷ್ಯನ್ ಜನರು ಗಿಡ್ಡನೆಯ ದೇಹ ಹಾಗೂ ಅಗಲವಾದ ಮೂಗನ್ನು ಹೊಂದಿದ್ದು, ಇಂಡೋ ಆಸ್ಟ್ರಲಾಯ್ಡ್ ಲಕ್ಷಣಗಳನ್ನೇ ಹೋಲುವರು. ಎಸ್ಕಿಮೋ ಜನರು ಅಮೆರಿಕನ್ ಮಂಗೋಲಾಯ್ಡ್ ಗುಂಪಿನ ಒಂದು ವಿಭಾಗವಿರಬಹುದೆಂದು ಊಹಿಸಲಾಗಿದೆ. ಒಟ್ಟಾರೆಯಾಗಿ ಮಂಗೋಲಾಯ್ಡ್ ಜನಾಂಗದ ಲಕ್ಷಣಗಳೇನೆಂದರೆ: ಓರೆಯಾದ ಹಾಗೂ ಒರಟಾದ ಹುಬ್ಬು, ನೇರವಾದ ಮತ್ತು ಒರಟಾದ ತಲೆಗೂದಲು, ಹಳದಿ ಮತ್ತು ಕಪ್ಪು ವರ್ಣದ ಚರ್ಮ ಮತ್ತು ಕಣ್ಣುಗಳು, ದೇಹದ ಮೇಲೆ ಅತ್ಯಲ್ಪ ರೋಮಗಳ ಪ್ರಮಾಣ ವಿಶಾಲವಾದ ಭುಜಕಟ್ಟನ್ನು ಹೊಂದಿರುವ ದೇಹ ಹಾಗೂ ಉದ್ದವಾದ ಕತ್ತಿನ ಭಾಗಗಳನ್ನು ಹೊಂದಿದ್ದಾರೆ.


ಮಂಗೋಲಾಯ್ಡ್

3) ನೀಗ್ರಾಯಿಡ್ ಜನಾಂಗ: ಆಫ್ರಿಕ ಇದರ ಮೂಲ ಪ್ರದೇಶವಾಗಿದೆ. ಹಲವಾರು ನಿದರ್ಶನಗಳ ಪ್ರಕಾರ ಇವರು ಐತಿಹಾಸಿಕ ಅವಧಿಯಲ್ಲಿ ಭೌಗೋಳಿಕವಾಗಿ ವಿಸ್ತಾರವಾದ ಪ್ರದೇಶದಲ್ಲಿ ಹಂಚಿಕೆಯಾಗಿದ್ದರು. ಭಾರತ, ಪಶ್ಚಿಮ ಏಷ್ಯ, ಆಫ್ರಿಕ, ಆಗ್ನೇಯ ಏಷ್ಯ, ಪೆಸಿಫಿಕ್ ಸಾಗರ ಹಾಗೂ ಆಸ್ಟ್ರೇಲಿಯದ ಕೆಲವು ದ್ವೀಪಗಳಲ್ಲಿಯೂ ಈ ಜನರು ಚದುರಿದ್ದಾರೆ. ಆದರೆ ಇಂದು ಆಫ್ರಿಕದಲ್ಲಿ ಹೆಚ್ಚು ಜನ ಕೇಂದ್ರೀಕೃತವಾಗಿರುವುದು ತಿಳಿಯುತ್ತದೆ. ಇತರ ಕಡೆಗಳಲ್ಲಿ ಬಹುತೇಕ ಅಲ್ಪ ಸಂಖ್ಯಾತರಾಗಿದ್ದಾರೆ. ಈ ಜನಾಂಗಕ್ಕೆ ಸೇರಿದ ಮುಖ್ಯ ಪಂಗಡಗಳೆಂದರೆ – ಗಿನಿಯಾ ತೀರದ ಮೂಲ ನೀಗ್ರೋ, ಕಾಂಗೋ ಮತ್ತು ಪೂರ್ವ ಆಫ್ರಿಕದ ಬಂಟು ಜನರು, ದಕ್ಷಿಣ ಆಫ್ರಿಕದ ಬೊಯಿಸನ್ ಜನರು (ಬುಷ್‌ಮನ್ ಮತ್ತು ಹೊಟೈನ್‌ಟಾಸ್ ಜನರನ್ನು ಒಟ್ಟಾಗಿ ಈ ಹೆಸರಿನಿಂದ ಕರೆಯುವರು) ಪೂರ್ವ ಆಫ್ರಿಕದ ಸೀಳು ಕಣಿವೆ, ಸರೋವರ ವಲಯದ ನಿಲೋಟಿಕ್ ಜನರು, ಇಥಿಯೋಪಿಯದ ಹ್ಯಾಮೈಟ್ ಜನರು, ಕಾಂಗೋ ಪ್ರದೇಶದ ಪಿಗ್ಮಿ ಜನರು ಇತ್ಯಾದಿಗಳು.

ಈ ಜನಾಂಗವನ್ನು ಪ್ರಮುಖವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು.

1) ಮೂಲ ನೀಗ್ರೋಗಳು: ಇವರು ಸಹರ ಮರುಭೂಮಿಯ ದಕ್ಷಿಣ ಭಾಗದಿಂದ ದಕ್ಷಿಣ ಆಫ್ರಿಕದವರೆಗೂ ಹರಡಿದ್ದಾರೆ.

2) ಮಲೇಷ್ಯನ್ನರು: ಆಗ್ನೇಯ ಏಷ್ಯ ಹಾಗೂ ಪೆಸಿಫಿಕ್ ಸಾಗರದ ದ್ವೀಪಗಳಲ್ಲಿರುವ ಜನರು.

3) ನೀಗ್ರಿಟೋ ಜನರು: ಈ ಮೇಲಿನ ಎರಡೂ ಭೌಗೋಳಿಕ ಪ್ರದೇಶದ ನಡುವೆ ಹಿಂದೂ ಮಹಾಸಾಗರದ ಉತ್ತರ ಹಾಗೂ ಅಂಚಿನಲ್ಲಿರುವ ಜನರು.

ಮಲನೇಷ್ಯನ್ನರು ಹಾಗೂ ನೀಗ್ರೋಗಳು ಹಿಂದೂ ಮಹಾಸಾಗರದ ಎರಡು ಅಂಚುಗಳ ಪ್ರದೇಶಗಳಿಂದ ದೂರ ಭಾಗದಲ್ಲಿ ಜೀವಿಸುತ್ತಿದ್ದರೂ ಇವರನ್ನು ಒಂದೇ ಜನಾಂಗದವರೆಂದು ಸ್ಪಷ್ಟವಾಗಿ ಪತ್ತೆ ಹಚ್ಚಬಹುದಾಗಿದೆ. ಈ ಪಂಗಡಗಳ ಪ್ರಮುಖ ವ್ಯತ್ಯಾಸವೆಂದರೆ ಆಫ್ರಿಕದ ನೀಗ್ರೋ ಜನರು ಚಪ್ಪಟೆಯಾದ ಮೂಗನ್ನು, ಮೆಲನೇಷ್ಯನ್ನರು ಅಗಲವಾದ ನೀಳಮೂಗನ್ನು ಹೊಂದಿದ್ದಾರೆ. ಎತ್ತರವಾದ ಸೋಲೋಮನ್, ನ್ಯೂಹೆಬ್ರಿಡ್ಜ್, ನ್ಯೂ ಕ್ಯಾಲಿಡೋನಿಯ ಹಾಗೂ ಪಪುವ ನ್ಯೂಗಿನಿಯ ದ್ವೀಪಗಳಲ್ಲಿ ಈ ಜನಾಂಗದ ಎಲ್ಲಾ ಲಕ್ಷಣಗಳನ್ನು ಕಾಣಬಹುದು. ಕಣ್ಣಿನ ಹುಬ್ಬು, ತುಟಿಗಳು ಸಾಕಷ್ಟು ತೆಳುವಾಗಿರುವುವು ಹಾಗೂ ನೀಗ್ರೋಗಳಷ್ಟು ಹೊರಭಾಗಿರುವುದು. ಪೊದೆಯಂತಹ ತಲೆಗೂದಲು ಮತ್ತು ಮೂಗು ಮೊನಚಾಗಿದ್ದು ಕೊಕ್ಕಿನಂತಿರುವುದು.

ನೀಗ್ರೋ: ಆಫ್ರಿಕದ ಸಹರ ಮರುಭೂಮಿಯ ದಕ್ಷಿಣದಲ್ಲಿ ನೀಗ್ರಾಯಿಡ್ ಜನಾಂಗದ ಜನರು ಅಧಿಕ ಜನಸಂಖ್ಯೆಯಲ್ಲಿ ವಾಸಿಸುತ್ತಿರುವುದು ಕಂಡುಬರುತ್ತದೆ. ಇವರು ಪೂರ್ವ ಆಫ್ರಿಕದ ನಿಲೋಟಿಕ್ ಮತ್ತು ಹೆಮಟಿಕ್, ಕೇಂದ್ರ ಮತ್ತು ದಕ್ಷಿಣ ಆಫ್ರಿಕದ ಬಂಟು, ಪಶ್ಚಿಮ ಆಫ್ರಿಕದ ಅನೇಕ ಗುಂಪುಗಳನ್ನು ಹೊಂದಿವೆ. ನೀಗ್ರಾಯಿಡ್ ಜನಾಂಗ ಬೇಟೆಗಾರಿಕೆಯನ್ನೇ ತಮ್ಮ ಪ್ರಮುಖ ವೃತ್ತಿಯಾಗಿಸಿಕೊಂಡಿದ್ದು, ಯಾವ ಪ್ರದೇಶಗಳಲ್ಲಿಯೂ ಸಹ ಇವರು ಸ್ಥಿರವಾಗಿ ನೆಲೆಸಿರುವುದಿಲ್ಲ. ಇವರ ಗಿಡ್ಡ ದೇಹ ಹಾಗೂ ಕಿರಿದಾದ ತಲೆಬುರುಡೆಗಳು ಆಯಾ ನೈಸರ್ಗಿಕ ಪರಿಸರದ ಪ್ರಭಾವದಿಂದ ರೂಪಿಸಲಾಗಿವೆಯೆಂದು ತಿಳಿದುಬಂದಿದೆ.

ಆಫ್ರಿಕದ ನೀಗ್ರೋ ಜನಾಂಗದ ಸಂಖ್ಯೆ ಸು. 100 ದಶಲಕ್ಷ. ನೀಗ್ರಾಯಿಡ್ ಜನಾಂಗದ ಬಣ್ಣ, ಕಪ್ಪು ತಲೆಗೂದಲು ಉಣ್ಣೆಯಂತೆ ಗುಂಗುರಾಗಿರುವುದು, ಅಗಲವಾದ ಮೂಗು, ದಪ್ಪ ತುಟಿ, ಚಾಚು ದವಡೆ, ಸಣ್ಣ ಕಿವಿ, ಶರೀರದ ಮೇಲೆ ಅತಿ ಕಡಿಮೆ ರೋಮಗಳು, ನೀಳವಾದ ತಲೆ ಬುರುಡೆ, ಇತ್ಯಾದಿಗಳು, ನೀಗ್ರಾಯಿಡ್ ಜನಾಂಗದ ಪ್ರಮುಖ ದೈಹಿಕ ಚಹರೆಗಳಾಗಿವೆ.

ನೀಗ್ರಿಟೋ: ಇವರು ಹೆಚ್ಚಾಗಿ ಕಂಡುಬರುವ ಪ್ರದೇಶಗಳೆಂದರೆ ಫಿಲಿಫೈನ್ಸ್, ಮಲಯ ಪರ್ಯಾಯ ದ್ವೀಪ, ಅಂಡಮಾನ್ ದ್ವೀಪಗಳು ಮತ್ತು ನ್ಯೂಗಿನಿ. ಇವರ ದೈಹಿಕ ಚಹರೆ ನೀಗ್ರಾಯಿಡ್ ಜನಾಂಗಕ್ಕಿಂತ ಭಿನ್ನವಾಗಿದ್ದು ಸರಾಸರಿ ಎತ್ತರ 148 ಸೆಂಮೀ ಮತ್ತು ಅಗಲವಾದ ತಲೆಬರುಡೆಯನ್ನು ಹೊಂದಿರುವರು. ಆದರೆ ಚರ್ಮದ ಬಣ್ಣ, ತಲೆಗೂದಲು ರಚನೆ, ಮೂಗಿನ ಆಕಾರ ಇತ್ಯಾದಿ ದೈಹಿಕ ಲಕ್ಷಣಗಳು ಇತರ ನೀಗ್ರಾಯಿಡ್ ಗುಂಪಿನ ಜನರ ಲಕ್ಷಣಗಳನ್ನೇ ಹೋಲುತ್ತವೆ. ನೀಗ್ರಿಟೋ ಜನರ ದೈಹಿಕ ಲಕ್ಷಣಗಳು ನೀಗ್ರೋಗಳಿಗಿಂತ ಭಿನ್ನವಾಗಿದ್ದು 130 ಸೆಂಮೀ ಸರಾಸರಿ ಎತ್ತರ. ಸಾಧಾರಣ ತಲೆಬುರುಡೆ, ಬಾಗಿದ ಹಣೆ, ಕಪ್ಪು ಕಂದು ಕೆಂಪು ಕಂದು ಚರ್ಮದ ಬಣ್ಣ, ಕಪ್ಪು ಕೂದಲು, ಅಗಲವಾದ ಮೂಗು, ಸಣ್ಣದಾದ ದೇಹ ಇತ್ಯಾದಿಗಳು.

ಕಫಾಯ್ಡ್ ಜನಾಂಗ: ದಕ್ಷಿಣ ಆಫ್ರಿಕದ ಹೊಟೈನ್‌ಟೊಸ್ ಮತ್ತು ಕಲಹರಿ ಮರುಭೂಮಿಯ ಬುಷ್‌ಮನ್ ಜನಾಂಗವನ್ನು ಕಫಾಯ್ಡ್ ಜನಾಂಗವೆಂದು ಕರೆಯುವರು. ಈ ಜನರ ದೈಹಿಕ ಲಕ್ಷಣಗಳೆಂದರೆ ಹಳದಿ ಕಂದುಬಣ್ಣ, ಸುಕ್ಕುಗಳಿಂದ ಕೂಡಿದ ಮುಖ, ಕಿರಿದಾದ ಚಪ್ಪಟೆಯಾದ ಮೂಗು, ಉದ್ದವಾದ ತಲೆಬುರುಡೆ, ಗಿಡ್ಡವಾದ ತೋಳು ಮತ್ತು ಕಾಲುಗಳು ಇತ್ಯಾದಿಗಳು. ಒಟ್ಟಾರೆ ಇವರು ನೀಗ್ರಾಯಿಡ್ ಜನಾಂಗದ ದೈಹಿಕ ಲಕ್ಷಣಗಳನ್ನು ಹೊಂದಿರುವರು. ಕೆಲವು ವಿದ್ವಾಂಸರು ಇವರಲ್ಲಿ ಕಕಾಸಾಯ್ಡ್ ಮತ್ತು ಮಂಗೋಲಿಯನ್ನರ ದೈಹಿಕ ಲಕ್ಷಣಗಳನ್ನು ಸಹ ಗುರುತಿಸಿದ್ದಾರೆ. ದವಡೆ ಹೆಚ್ಚು ಮುಂಚಾಚಿಲ್ಲದಿರುವುದು ತೆಳುವಾದ ತುಟಿಗಳು, ಎತ್ತರವಾದ ಕಣ್ಣಿನ ಹುಬ್ಬು ಇವರನ್ನು ವಿಶಿಷ್ಟವಾದ ಪ್ರತ್ಯೇಕ ಜನಾಂಗವೆಂದು ಪರಿಗಣಿಸಲು ಕಾರಣಗಳಾಗಿವೆ. ಅಲ್ಲದೆ, ಈ ಜನರ ಪೃಷ್ಠ ಭಾಗ ಹೆಚ್ಚು ಕೊಬ್ಬಿನ ಶೇಖರಣೆಯಿಂದ ಉಬ್ಬಿದಂತಿದ್ದು, ಇವರನ್ನು ನೀಗ್ರೋ ಜನಾಂಗದಿಂದ ಬೇರ್ಪಡಿಸಲು ನೆರವಾಗಿದೆ.

ಆಸ್ಟ್ರಲಾಯ್ಡ್ ಜನಾಂಗ: ಮೂಲತಃ ಆಸ್ಟ್ರೇಲಿಯದ ಮೂಲ ನಿವಾಸಿಗಳು ನೀಗ್ರಾಯಿಡ್ ಗುಂಪಿಗೇ ಸೇರಿದವರಾಗಿದ್ದಾರೆ. ಆದರೆ ಮಂಗೋಲಾಯ್ಡ್ ಮತ್ತು ಪಾಲಿನೇಷ್ಯನ್ ಜನರ ಗುಣ ಲಕ್ಷಣಗಳನ್ನು ಹೊಂದಿರುವರು. ಇವರ ದೈಹಿಕ ಲಕ್ಷಣಗಳೆಂದರೆ: ಕಪ್ಪು ಬಣ್ಣ, ಅಗಲವಾದ ಮೂಗು, ಉದ್ದವಾದ ಕಾಲುಗಳು, ಚಾಚಿದ ದವಡೆ ಹಾಗೂ ಕಿರಿದಾದ ತಲೆ, ಕೂದಲುಗಳಿಂದ ತುಂಬಿದ ಗಡ್ಡ ಹಾಗೂ ಅಲೆ ಅಲೆಯಾದ ತಲೆಗೂದಲು. ಅಲ್ಲದೆ ಈ ಜನರು ಹೆಚ್ಚು ಎತ್ತರವಾದ ಕಣ್ಣಿನ ಹುಬ್ಬುಗಳಿಂದ ಇತರ ಜನಾಂಗಗಳಿಗಿಂತ ಸಂಪೂರ್ಣವಾಗಿ ಭಿನ್ನರೀತಿಯಲ್ಲಿರುವರು. ಹೀಗಾಗಿ ಈ ಗುಂಪನ್ನು ಇಂದು ಅಸ್ತಿತ್ವದಲ್ಲಿರುವ ಮಾನವ ಜನಾಂಗಗಳಲ್ಲಿ ಅತ್ಯಂತ ಪುರಾತನವಾದುದೆಂದು ಊಹಿಸಲಾಗಿದೆ. ಇವರು ಸಂಖ್ಯೆಯಲ್ಲಿ ಅತ್ಯಂತ ಕಡಿಮೆಯಿದ್ದು ಆಸ್ಟ್ರೇಲಿಯದ ಮರುಭೂಮಿಯಲ್ಲಿ ನೆಲೆಗೊಂಡಿದ್ದಾರೆ. ಈ ಜನರಿಗೆ ಇಂದು ಹೆಚ್ಚು ಸುರಕ್ಷತೆಯನ್ನು ಒದಗಿಸಲಾಗಿದೆ.

ವೆಡ್ಡಾಯ್ಡ್ ಜನಾಂಗ : ಈ ಜನರು ಒಂದು ರೀತಿಯಲ್ಲಿ ಕಕೇಸಿಯನ್ ಜನರನ್ನು ಮತ್ತೊಂದು ರೀತಿಯಲ್ಲಿ ಅಸ್ಟ್ರಲಾಯ್ಡ್ ಜನಾಂಗವನ್ನು ಹೋಲುವರು. ಶ್ರೀಲಂಕ, ಇಂಡೋನೇಷ್ಯ ಹಾಗೂ ಈ ಪ್ರದೇಶದ ಅನೇಕ ದ್ವೀಪಗಳಲ್ಲಿ ಮತ್ತು ಭಾರತದಲ್ಲಿ ವಾಸಿಸುವ ಕಪ್ಪು ಬಣ್ಣದ ಜನರನ್ನು ವೆಡ್ಡಾಯ್ಡ್ ಜನಾಂಗವೆಂದು ಕರೆಯುತ್ತಾರೆ. ಈ ಜನರು ಕುಬ್ಜರಾಗಿದ್ದು, ತೆಳು ದೇಹವನ್ನು ಹೊಂದಿದ್ದು ತಲೆಗೂದಲು ಪದರುಪದರಾಗಿದ್ದು, ತಲೆ ಬುರುಡೆ ನೀಳ ಹಾಗೂ ಮೂಗು ಅಗಲವಾಗಿರುತ್ತದೆ. ಭೌಗೋಳಿಕವಾಗಿಯೂ ಇವರು ಕಕಾಸಾಯ್ಡ್ ಜನರಿರುವ ಭಾರತ ಮತ್ತು ಆಸ್ಟ್ರಾಯ್ಡ್ ಜನರಿರುವ ಆಸ್ಟ್ರೇಲಿಯದ ನಡುವೆ ಇರುವರು. ಈ ಜನರ ಗುಂಪನ್ನು ಇಂಡೋ ಅಸ್ಟ್ರಾಯ್ಡ್ ಜನಾಂಗವೆಂದು ಕರೆಯುತ್ತಾರೆ. ಶ್ರೀಲಂಕದ ಗುಡ್ಡಗಾಡಿನ ವೆಡ್ಡರು, ಭಾರತದ ಮುಂಡ, ನಿಕೋಬಾರ್ ದ್ವೀಪದ ಜನರು, ಸಕಾಯ್ ಸಿಲಬಸ್ ದ್ವೀಪದ ಟೊಮಾಲ ಇತ್ಯಾದಿ ಪಂಗಡಗಳು ಈ ವರ್ಗಕ್ಕೆ ಸೇರಿದವರಾಗಿದ್ದಾರೆ.

ಐನು ಜನಾಂಗ : ಅಮೆರಿಕದಲ್ಲಿ ಇಂಡಿಯನ್ನರಂತೆ ಜಪಾನಿನ ಉತ್ತರದಲ್ಲಿರುವ ಹೊಕೈಡೋ ದ್ವೀಪದ ಹಾಗೂ ಸಾಖಲಿನ್ ದ್ವೀಪದ ಜನರನ್ನು ಐನು ಜನಾಂಗವೆಂದು ಕರೆಯಲಾಗಿದೆ. ಆದರೆ ಇವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದು, ಇವರ ದೈಹಿಕ ಲಕ್ಷಣಗಳಿವು: ಕೂದಲು ಅಲೆ ಅಲೆಯಾಗಿದ್ದು ಪೊದೆಯಾಕಾರದ ಗಡ್ಡವನ್ನು ಹೊಂದಿರುವರು. ಇವರು ಪ್ರಾರಂಭಿಕ ಕಕಾಸಾಯ್ಡ್ ಜನಾಂಗದ ಒಂದು ಗುಂಪಾಗಿರಬೇಕೆಂದು ನಂಬಲಾಗಿದೆ. ಈ ಪ್ರದೇಶದ ಉತ್ತರದಲ್ಲಿ ಅಂದರೆ ರಷ್ಯದ ಪೂರ್ವ ತೀರದುದ್ದಕ್ಕೂ ಅನೇಕ ಗುಡ್ಡಗಾಡು ಜನಾಂಗದವರು ವಾಸಿಸುತ್ತಿದ್ದು ಇವರನ್ನು ಪುರಾತನ ಏಷ್ಯನ್ನರೆಂದು ಕರೆಯುತ್ತಾರೆ.

ಪಾಲಿನೇಷ್ಯನ್ ಜನಾಂಗ: ಈ ಜನರ ಉಗಮ ಹಾಗೂ ಸಂಬಂಧಗಳ ಬಗ್ಗೆ ಹಲವು ವಾದ–ವಿವಾದಗಳಿವೆ. ಇವರುಗಳಲ್ಲಿ ಕಕಾಸಾಯ್ಡ್ ಲಕ್ಷಣಗಳನ್ನು ಕಾಣಬಹುದಾದರೂ, ಬಹುತೇಕ ಲಕ್ಷಣಗಳಲ್ಲಿ ಇವರು ಮಂಗೋಲಾಯ್ಡ್ ಜನರನ್ನು ಹೋಲುವರು. ಅಲ್ಲದೆ ಕೆಲವು ಕಡೆ ಸ್ಥಳೀಯವಾಗಿ ನೀಗ್ರೋ ಜನರೊಂದಿಗೆ ಮಿಶ್ರಣವನ್ನು ಹೊಂದಿರುವರು. ಪೆಸಿಫಿಕ್ ಸಾಗರದ ಹಲವಾರು ದ್ವೀಪದಿಂದ ದಕ್ಷಿಣದಲ್ಲಿ ನ್ಯೂಜಿಲೆಂಡ್‌ವರೆಗೆ ಕಂಡು ಬರುವ ದ್ವೀಪಗಳಲ್ಲಿನ ಜನರನ್ನು ಪಾಲಿನೇಷ್ಯನ್ನರೆಂದು ಕರೆಯಲಾಗಿದೆ.

ವೈಜ್ಞಾನಿಕತೆ ಮತ್ತು ತಾಂತ್ರಿಕತೆಯ ಬೆಳವಣಿಗೆಯ ಫಲವಾಗಿ ಇಂದು ಮಾನವನು ಯಾವುದೇ ಭೌಗೋಳಿಕ ಪರಿಸರದಲ್ಲಾದರೂ ಬದುಕಬಲ್ಲ ಹಾಗೂ ಪರಸ್ಪರ ಸಂಬಂಧ ಹೊಂದಬಲ್ಲ. ಸಾರಿಗೆ ಸಂಪರ್ಕಗಳ ಅದ್ವಿತೀಯ ಪ್ರಗತಿಯಿಂದ ಪ್ರಪಂಚ ಸಂಕುಚಿತಗೊಂಡಿದೆ. ಪರಿಣಾಮವಾಗಿ ವಿವಿಧ ಜನಾಂಗಗಳು ಮಿಶ್ರಣಗೊಂಡು ಪ್ರಪಂಚದ ಯಾವುದೇ ಜನಾಂಗವೂ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡಿಲ್ಲ. ಇತಿಹಾಸ ಪೂರ್ವದಲ್ಲೂ ಇಂತಹ ಜನಾಂಗಗಳ ಸಮ್ಮಿಳನವಿದ್ದಿತೆಂದು ತಿಳಿದುಬಂದಿದೆ. ಆದ್ದರಿಂದ ಇಂದು ಶುದ್ಧ ಜನಾಂಗದ ಅಸ್ತಿತ್ವ ಪ್ರಶ್ನಾರ್ಹವಾಗಿದೆ. (ಎಚ್.ಎನ್.)

**ಮಾನವ ಜೀವಪರಿಸ್ಥಿತಿ ವಿಜ್ಞಾನ:** ಜೀವ ಪರಿಸ್ಥಿತಿ ಪರಿಭಾವನೆಗಳನ್ನು ಮಾನವ ಮತ್ತು ಅವನ ಭೌತಿಕ ಹಾಗೂ ಸಾಮಾಜಿಕ ಪರಿಸರಗಳ ನಡುವಿನ ಸಂಬಂಧದ ಅಧ್ಯಯನದಲ್ಲಿ ಅನ್ವಯಿಸುವಿಕೆಯ ಕ್ರಮ. ಈ ಅಧ್ಯಯನ ಕ್ರಮ ಭೂಗೋಳ ವಿಜ್ಞಾನದಲ್ಲಿ 1910 ರ ಸುಮಾರಿಗೆ ಮಾನವ ಮತ್ತು ಪರಿಸರದ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹೆರಾಲ್ಡ್ ಬರ್ರೋಸ್ ಈ ಕ್ರಮದ ಅಧ್ಯಯನವನ್ನು ಒಳಗೊಂಡಿರುವ ಮಾನವ ಭೂಗೋಳ ವಿಜ್ಞಾನವನ್ನು ಮಾನವ ಜೀವ ಪರಿಸ್ಥಿತಿ ವಿಜ್ಞಾನ ಎಂದು ವಿವರಿಸಿದ್ದಾರೆ. ಈ ಅಧ್ಯಯನ ಕ್ರಮ ಅಂತರ ವಿಷಯ ಸ್ವರೂಪವನ್ನು ಹೊಂದಿದ್ದು ಮಾನವನ ಸಮುದಾಯಗಳು ಮತ್ತು ಅವುಗಳ ಪರಿಸರದ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುತ್ತದೆ. (ಬಿ.ಸಿ.)

**ಮಾನವ ಭೂಗೋಳ ವಿಜ್ಞಾನ:** ಭೂಗೋಳವಿಜ್ಞಾನದ ಒಂದು ಪ್ರಮುಖ ಶಾಖೆ. ಭೂಗೋಳವಿಜ್ಞಾನ ಮಾನವನ ನಿವಾಸವಾದ ಪೃಥ್ವಿಯ ಅಧ್ಯಯನವಾಗಿದೆ. ಇದು ಪೃಥ್ವಿಯ ಮೇಲ್ಮೈ ಲಕ್ಷಣಗಳು ಮತ್ತು ಅವುಗಳೊಂದಿಗೆ ಮಾನವನ ಪ್ರತಿಕ್ರಿಯೆಗಳನ್ನು ವಿವರಿಸುತ್ತದೆ. ರಿಚರ್ಡ್ ಹಾರ್ಟ್‌ಶೋರ್ನ್ ಅನುಸಾರ ಭೂಗೋಳವಿಜ್ಞಾನವು ಪೃಥ್ವಿಯ ಮೇಲ್ಮೈಯ ವಿಭಿನ್ನ ಸ್ವರೂಪದ ಖಚಿತವಾದ ವ್ಯವಸ್ಥಿತ ಮತ್ತು ವಿವೇಚನಾತ್ಮಕ ವರ್ಣನೆ ಮತ್ತು ಅರ್ಥನಿರೂಪಣೆಯಾಗಿದೆ. ಭೂಗೋಳವಿಜ್ಞಾನವನ್ನು ಅದರ ಘಟಕಾಂಶದ ಆಧಾರದ ಮೇಲಿನಿಂದ ಪ್ರಾಕೃತಿಕ ಭೂಗೋಳವಿಜ್ಞಾನ ಮತ್ತು ಮಾನವ ಭೂಗೋಳವಿಜ್ಞಾನ ಎಂದು ಎರಡುಪ್ರಧಾನ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪೃಥ್ವಿಯ ಮೇಲ್ಮೈ ಒಳಗೊಂಡಿರುವ ಶಿಲಾಮಂಡಲ, ವಾಯುಮಂಡಲ, ಜಲಮಂಡಲ ಮತ್ತು ಜೀವಮಂಡಲಗಳ ಅಧ್ಯಯನವನ್ನು ಪ್ರಾಕೃತಿಕ ಭೂಗೋಳವಿಜ್ಞಾನವೆಂದು ಕರೆಯುವರು. ಅದರಂತೆ ಮಾನವನ ಮತ್ತು ಅವನ ಪರಿಸರದ ನಡುವಣ ಸಂಬಂಧದ ಅಧ್ಯಯನವೇ ಮಾನವ ಭೂಗೋಳವಿಜ್ಞಾನವಾಗಿದೆ. ಪರಿಸರ ಮಾನವ ಸಂಬಂಧದ ವಿಶ್ಲೇಷಣೆ ಮತ್ತು ಅದರಿಂದ ನಿರ್ಮಿತವಾಗಿರುವ ಸಾಂಸ್ಕೃತಿಕ ಪರಿಸರದ ಲಕ್ಷಣಗಳ ವಿವರಣೆ ಮತ್ತು ಅವನ ಪರಿಸರದ ನಡುವೆ ಸದಾಕಾಲ ಯಾವುದಾದರೊಂದು ಬಗೆಯ ವಿನಿಮಯ ನಡೆದೇ ಇರುತ್ತದೆ. ಪ್ರಾಕೃತಿಕ ಪರಿಸರವು ಮಾನವನ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತವೆ. ಅದರಂತೆ ಮಾನವನ ತಾಂತ್ರಿಕ ಮತ್ತು ವೈಜ್ಞಾನಿಕ ಜ್ಞಾನ ನಿರಂತರವಾಗಿ ಬದಲಾವಣೆ ಹೊಂದುವುದರಿಂದ ಅದಕ್ಕನುಗುಣವಾಗಿ ಮಾನವ ಪರಿಸರ ಸಂಬಂಧ ನಿರಂತರವಾಗಿ ಬದಲಾವಣೆ ಹೊಂದುತ್ತಿರುತ್ತದೆ. ಹೀಗೆ ಮಾನವನ ಭೂಗೋಳವಿಜ್ಞಾನವು ಮಾನವನ ಪರಿಸರ ಸಂಬಂಧವನ್ನು ವಿಶ್ಲೇಷಿಸುವುದು.

ಮೊಟ್ಟಮೊದಲು ಜರ್ಮನಿಯ ಕಾರ್ಲ್‌ರಿಟ್ಟರ್ (1779–1859) ಭೂಗೋಳವಿಜ್ಞಾನದ ಅಧ್ಯಯನವನ್ನು ಮಾನವನ ಮೇಲೆ ಕೇಂದ್ರೀಕರಿಸಿದ. ಮಾನವನನ್ನು ಕೇಂದ್ರ ವಸ್ತುವನ್ನಾಗಿ ಮಾಡಿ ಪೃಥ್ವಿಯ ಅಧ್ಯಯನ ಮಾಡುವುದೇ ಭೂಗೋಳವಿಜ್ಞಾನದ ಉದ್ದೇಶವೆಂದು ಪ್ರತಿಪಾದಿಸಿದ. ಹೀಗೆ ಮಾನವ ಭೂಗೋಳವಿಜ್ಞಾನ ಜನ್ಮ ತಳೆಯಿತು. ರಿಟ್ಟರ್‌ನ ವಿಚಾರಧಾರೆಯಿಂದ ಪ್ರಭಾವಿತನಾದ ಜರ್ಮನ್ ಭೂಗೋಳವಿಜ್ಞಾನಿ ಫ್ರೆಡಿಕ್ ರ್‍ಯಾಟ್ಜೆಲ್ (1844–1904) ಭೂಗೋಳವಿಜ್ಞಾನ ಅಧ್ಯಯನದಲ್ಲಿ ಮಾನವನ ಸ್ಥಾನವನ್ನು ಕೇಂದ್ರೀಕರಿಸಿದ. ಮಾನವನ ಸಮಾಜ ಮತ್ತು ಪೃಥ್ವಿಯ ಮೇಲ್ಮೈ ನಡುವಣ ಸಂಬಂಧದ ಸಂಯೋಜಿತ ಅಧ್ಯಯನವೇ ಮಾನವ ಭೂಗೋಳವಿಜ್ಞಾನ ಎಂದು ವ್ಯಾಖ್ಯಾನಿಸಿದ. ಈತನ ಪ್ರಸಿದ್ಧ ಕೃತಿ ಆಂಥ್ರಪೊಜಿಯಾಗ್ರಫಿಯ ಎರಡು ಸಂಪುಟಗಳು 1882 ಮತ್ತು 1891ರಲ್ಲಿ ಪ್ರಕಟವಾದವು. ಆಂಥ್ರಪೊಜಿಯಾಗ್ರಫಿಯ ಅರ್ಥ ಮಾನವ ಭೂಗೋಳವಿಜ್ಞಾನ. ಆದ್ದರಿಂದ ಇವನನ್ನು ಮಾನವ ಭೂಗೋಳವಿಜ್ಞಾನದ ಜನಕನೆಂದು ಕರೆಯಲಾಗುತ್ತದೆ. ಇವನ ಶಿಷ್ಯಳಾದ ಕುಮಾರಿ ಎಲೆನ್ ಸೆಂಪಲ್ (1863–1932) ಮತಾನುಸಾರ ಅವಿರತ ಮಾನವ ಮತ್ತು ಅಸ್ಥಿರ ಪೃಥ್ವಿಯ ನಡುವೆ ನಿರಂತರ ಬದಲಾಗುವ ಸಂಬಂಧಗಳ ಅಧ್ಯಯನವೇ ಮಾನವ ಭೂಗೋಳವಿಜ್ಞಾನವಾಗಿದೆ. ಮಾನವನ ಪೃಥ್ವಿಯ ಉತ್ಪತ್ತಿ ಹಾಗೂ ಅದರ ದೂಳಿನ ದೂಳು, ಪೃಥ್ವಿಯು ಅವನನ್ನು ತಾಯಿಯಾಗಿ ಕಾಪಾಡಿದೆ, ಪೋಷಿಸಿದೆ ಮತ್ತು ಕಾರ್ಯಪ್ರವೃತ್ತನನ್ನಾಗಿ ಮಾಡಿದೆ. ಹೀಗೆ ಪರಿವರ್ತನ ಶೀಲ ಪೃಥ್ವಿ ಮತ್ತು ಮಾನವನ ನಡುವೆ ನಿಕಟ ಸಂಬಂಧವಿದೆ. ಫ್ರೆಂಚ್ ಭೂಗೋಳವಿಜ್ಞಾನಿ ವೈಡಲ್ ಡಿ ಲಾ ಬ್ಲಾಷ್ (1848–1918) ಮಾನವ ಭೂಗೋಳವಿಜ್ಞಾನದ ಮೂಲ ತತ್ವಗಳು ಎಂಬ ತನ್ನ ಪುಸ್ತಕದಲ್ಲಿ ಮಾನವನ ಭೂಗೋಳವಿಜ್ಞಾನವನ್ನು ಮಾನವ ಮತ್ತು ಪರಿಸರದ ನಡುವಣ ಸಂಬಂಧಗಳ ಅಧ್ಯಯನವೆಂದು ಹೇಳಿದನು. ಫ್ರೆಡ್ರಿಕ್ ರ್‍ಯಾಟ್ಜೆಲ್‌ನ ಶಿಷ್ಯನಾದ ಫ್ರಾನ್ಸಿನ ಜೀನ್ ಬ್ರೂನ್ಸ್ (1869–1930) ಅನುಸಾರ ಪೃಥ್ವಿಯ ಮೇಲ್ಮೈ ಮೇಲೆ ಕಂಡು ಬರುವ ವಿಶಿಷ್ಟ ಪ್ರಕಾರದ ಮಾನವ ಚಟುವಟಿಕೆಗಳು ಮಾನವ ಭೂಗೋಳವಿಜ್ಞಾನದ ವಸ್ತುವಿಷಯಗಳಾಗಿವೆ. ಪೃಥ್ವಿಯ ಮೇಲ್ಮೈ ಲಕ್ಷಣಗಳಾದ ಭೂಸ್ವರೂಪ, ಜಲಾನಯನ, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ. ಮಣ್ಣು ಮೊದಲಾದವು ಮಾನವನ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತವೆ. ಹೀಗೆ ಜೀನ್ ಬ್ರೂನ್ಸ್ ನೈಸರ್ಗಿಕ ಘಟಕಾಂಶಗಳ ಮತ್ತು ಮಾನವನ ಚಟುವಟಿಕೆಗಳ ನಡುವಣ ಸಂಬಂಧಗಳ ಅಧ್ಯಯನವೇ ಮಾನವ ಭೂಗೋಳ ವಿಜ್ಞಾನ ಎಂದು ವ್ಯಾಖ್ಯಾನಿಸಿದ.

ಮಾನವ ಭೂಗೋಳವಿಜ್ಞಾನದ ಈ ಎಲ್ಲ ವ್ಯಾಖ್ಯೆಗಳು ಮಾನವನು ಮಾನವ ಭೂಗೋಳವಿಜ್ಞಾನ ಅಧ್ಯಯನದ ಕೇಂದ್ರ ಬಿಂದುವಾಗಿದ್ದಾನೆಂಬುದನ್ನು ಸ್ಪಷ್ಟೀಕರಿಸುತ್ತವೆ. ಮಾನವನು ಪರಿಸರದ ಒಂದು ಅಂಗವಾಗಿದ್ದು ಆ ಪರಿಸರವನ್ನು ಪರಿವರ್ತನಗೊಳಿಸುವ ಪ್ರಮುಖ ಘಟಕವಾಗಿದ್ದಾನೆ. ಮಾನವ ತನ್ನ ಅಸ್ತಿತ್ವಕ್ಕಾಗಿ ಪರಿಸರದೊಡನೆ ನಿರಂತರ ಹೋರಾಡುತ್ತಾನೆ ಹಾಗೂ ಹೊಂದಿಕೊಂಡು ಜೀವಿಸುತ್ತಾನೆ. ಎಲ್ಸ್‌ವರ್ಥ್ ಹಂಟಿಂಗ್ಟನ್ (1876–1947) ಮಾನವ ಭೂಗೋಳವಿಜ್ಞಾನಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾನೆ. ಅವನು ಮಾನವ ಭೂಗೋಳ ವಿಜ್ಞಾನದ ಅಧ್ಯಯನದಲ್ಲಿ ಮಾನವನಿಗೆ ಒಂದು ಮಹತ್ತ್ವಪೂರ್ಣ ಸ್ಥಾನ ನೀಡಿದ್ದಾನೆ. ಇವನ ಅಭಿಪ್ರಾಯದ ಪ್ರಕಾರ ಪ್ರಾಕೃತಿಕ ಪರಿಸ್ಥಿತಿಗಳ ಮೇಲೆ ಮಾನವನ ಪ್ರಭಾವದ ಪರಿಣಾಮವಾಗಿ ಮಾನವ ಸಂಸ್ಕೃತಿ ವಿಕಾಸವಾಗುತ್ತದೆ. ಹೀಗೆ ಮಾನವ ಮತ್ತು ಪ್ರಾಕೃತಿಕ ಪರಿಸ್ಥಿತಿಗಳ ಪರಸ್ಪರ ಪ್ರಭಾವದಿಂದ ಉತ್ಪನ್ನವಾಗುವ ಸಾಂಸ್ಕೃತಿಕ ಪರಿಸ್ಥಿತಿಗಳ ಅಧ್ಯಯನವು ಮಾನವ ಭೂಗೋಳ ವಿಜ್ಞಾನದ ಪ್ರಮುಖ

ಉದ್ದೇಶವಾಗಿದೆ. ಇತ್ತೀಚೆಗೆ ಮಾನವ ಭೂಗೋಳ ವಿಜ್ಞಾನದ ದೃಷ್ಟಿಕೋನ ಮಾನವ ಕಲ್ಯಾಣದ ಕಡೆಗೆ ಉನ್ಮುಖವಾಗಿದೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯ ಇಂದು ಮಾನವ ಭೂಗೋಳವಿಜ್ಞಾನದ ಪ್ರಮುಖ ವಸ್ತು ವಿಷಯಗಳಾಗಿವೆ. ಡೇವಿಡ್ ಸ್ಮಿತ್ ಎಂಬಾತ ಹ್ಯೂಮನ್ ಜಿಯಾಗ್ರಫಿ: ಎ ವೆಲ್‌ಫೇರ್ ಅಪ್ರೋಚ್ ಎಂಬ ತನ್ನ ಪುಸ್ತಕದಲ್ಲಿ ಈ ದೃಷ್ಟಿಕೋನದ ಬಗ್ಗೆ ವಿಶೇಷ ಚರ್ಚೆ ಮಾಡಿದ್ದಾನೆ.

ಮಾನವ ಭೂಗೋಳವಿಜ್ಞಾನದ ಕ್ಷೇತ್ರವನ್ನು ಪ್ರಮುಖವಾಗಿ ಸಾಂಸ್ಕೃತಿಕ, ಆರ್ಥಿಕ, ಐತಿಹಾಸಿಕ, ರಾಜಕೀಯ, ಜನಸಂಖ್ಯಾ, ಸಾಮಾಜಿಕ ಹಾಗೂ ವಾಸಸ್ಥಳ (ಗ್ರಾಮೀಣ ಮತ್ತು ನಗರ) ಭೂಗೋಳವಿಜ್ಞಾನಗಳೆಂದು ಹಲವಾರು ಶಾಖೆಗಳನ್ನಾಗಿ ವಿಂಗಡಿಸಲಾಗಿದೆ.

ಮಾನವ ಭೂಗೋಳವಿಜ್ಞಾನ ಪ್ರಾಕೃತಿಕ (ಭೌತಿಕ) ವಿಜ್ಞಾನಗಳ ಮತ್ತು ಸಾಮಾಜಿಕ ವಿಜ್ಞಾನಗಳ ಸಂಗಮದಂತಿದೆ. ಇದು ಈ ಎರಡೂ ಬೋಧನಾಂಗ (ಫ್ಯಾಕಲ್ಟಿ) ಗಳ ಅಧ್ಯಯನ ವಸ್ತುವಿಷಯ ಮತ್ತು ವಿಧಾನಗಳನ್ನು ಒಳಗೊಂಡಿದೆ. ಇಂದು ಸಾಮಾಜಿಕ ವಿಜ್ಞಾನಗಳ ಅಧ್ಯಯನ ವಿಧಾನಗಳನ್ನು ಮಾತ್ರವಲ್ಲದೆ ಅವುಗಳಲ್ಲಿ ಪ್ರತಿಪಾದಿತವಾಗಿರುವ ನಿಯಮಗಳು ಮತ್ತು ಸಿದ್ಧಾಂತಗಳನ್ನು ಸಹ ಮಾನವ ಭೂಗೋಳವಿಜ್ಞಾನದಲ್ಲಿ ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ. ಮಾನವ ಪರಿಸರ ಸಂಬಂಧದ ಪರಿಣಾಮದಿಂದ ಉತ್ಪನ್ನವಾದ ಲಕ್ಷಣಗಳ ಸ್ಥಾನ ಮತ್ತು ಹಂಚಿಕೆಗಳ ವಿಶ್ಲೇಷಣೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇದಕ್ಕಾಗಿ ಸಂಖ್ಯಾಶಾಸ್ತ್ರ ಮತ್ತು ಗಣಿತ ಶಾಸ್ತ್ರಗಳ ಸಿದ್ಧಾಂತ ಮತ್ತು ಸೂತ್ರಗಳನ್ನು ಬಳಸಲಾಗುತ್ತಿದೆ. ಈ ದಿಸೆಯಲ್ಲಿ ಪೀಟರ್ ಹ್ಯಾಗೆಟ್ ಬರೆದ ಲೊಕೇಷನಲ್ ಅನಾಲಿಸಿಸ್ ಇನ್ ಹ್ಯೂಮನ್ ಜಿಯಾಗ್ರಫಿ ಎಂಬ ಗ್ರಂಥ ಪ್ರಮುಖವಾಗಿದೆ. ಇವನು ಮಾನವ ಭೂಗೋಳವಿಜ್ಞಾನದಲ್ಲಿ ಸ್ಥಾನ ನಿರ್ಧಾರದ ವಿಶ್ಲೇಷಣೆ ಮತ್ತು ಜಾಲ ಮಾದರಿಗಳನ್ನು ಕುರಿತು ಚರ್ಚಿಸಿದ್ದಾನೆ. ಸಾಮಾಜಿಕ ವಿಜ್ಞಾನದಲ್ಲಿ ಕಂಡು ಬರುವ ಅಂಕಿ ಅಂಶಗಳು ಮತ್ತು ವಿಷಯಗಳನ್ನು ಮಾನವ ಭೂಗೋಳವಿಜ್ಞಾನವು ವಿಶಿಷ್ಟವಾದ ತಾರ್ಕಿಕತೆಯಿಂದ ವಿಶ್ಲೇಷಿಸುತ್ತದೆ. ರಿಚರ್ಡ್ ಜೆ. ಚಾರ್ಲೆ ಮತ್ತು ಪೀಟರ್ ಹ್ಯಾಗೆಟ್ ಭೌಗೋಳಿಕ ಅಧ್ಯಯನದಲ್ಲಿ ಸಂಖ್ಯಾತ್ಮಕ ವಿಧಾನಗಳನ್ನು ಬಳಸಲು ಪ್ರಾರಂಭಿಸಿದರು. ಅವರೀರ್ವರು ಮಾನವ ಭೂಗೋಳ ವಿಜ್ಞಾನದಲ್ಲಿ ಸಂಖ್ಯಾತ್ಮಕ ತಂತ್ರಗಳು ಎಂಬ ಗ್ರಂಥವನ್ನು ಪ್ರಕಟಿಸಿದರು. 1950ರ ಅನಂತರ ಪರಿಮಾಣಾತ್ಮಕ ತಂತ್ರಗಳು ಮತ್ತು ಮಾದರಿಗಳನ್ನು ಬಳಸುವ ಪ್ರವೃತ್ತಿ ಹೆಚ್ಚಿದ್ದರಿಂದ ಮಾನವ ಭೂಗೋಳ ವಿಜ್ಞಾನದಲ್ಲಿ ಪರಿಮಾಣಾತ್ಮಕ ಕ್ರಾಂತಿಯುಂಟಾಯಿತು. ಇತ್ತೀಚೆಗೆ ವೈಚಾರಿಕ ಭೂಗೋಳವಿಜ್ಞಾನ (ರ‍್ಯಾಡಿಕಲ್ ಜಿಯಾಗ್ರಫಿ) ಮತ್ತು ವರ್ತನಾ ಭೂಗೋಳ ವಿಜ್ಞಾನ (ಬಿಹೇವಿಯರ್ ಜಿಯಾಗ್ರಫಿ) ಮಾನವ ಭೂಗೋಳವಿಜ್ಞಾನದ ಪ್ರಮುಖ ಉಪ ಶಾಖೆಗಳಾಗಿ ಹೊರಹೊಮ್ಮಿದೆ. ಜ್ವಲಂತ ಮಾನವ ಸಮಸ್ಯೆಗಳನ್ನು ಕುರಿತು ವಿಶೇಷವಾಗಿ ವ್ಯಾಸಂಗ ಮಾಡುವ ಭೂಗೋಳವಿಜ್ಞಾನಜ್ಞರ ಇತ್ತೀಚಿನ ಪ್ರವೃತ್ತಿಗೆ ಡಿ.ಎಂ ಸ್ಮಿತ್‌ನು ಮಾನವ ಭೂಗೋಳ ವಿಜ್ಞಾನದಲ್ಲಿ ವೈಚಾರಿಕ ಅಥವಾ ಸಾಧಾರಣವಾಗಿ ಕ್ರಾಂತಿ (ರ‍್ಯಾಡಿಕಲ್ ರೆವಲ್ಯೂಷನ್) ಎಂದು ಕರೆದ. ಹೀಗೆ ಮಾನವ ಸಮಸ್ಯೆಗಳ ಅರಿವು ಮತ್ತು ಅವುಗಳ ವಿಶ್ಲೇಷಣೆ ಮಾನವ ಭೂಗೋಳವಿಜ್ಞಾನದಲ್ಲಿ ಬಹಳ ಮಹತ್ತ್ವ ಪಡೆದಿವೆ. (ಎಸ್.ಎಸ್.ಎನ್.)

**ಮಾನವ ಭೂಗೋಳ ವಿಜ್ಞಾನ ಬೋಧನ ಪರಿಕರಗಳು/ಕಲಿಕಾ ಸಹಾಯಕಗಳು:** ಕೇಳಿದ್ದಕ್ಕಿಂತ ಹೆಚ್ಚು ನೋಡಿದ್ದನ್ನು ನಂಬುತ್ತೇವೆ. ಆದರೆ ಒಂದು ವೇಳೆ ನೋಡುವುದು ಮತ್ತು ಕೇಳುವುದು ಏಕಕಾಲಕ್ಕೆ ನಡೆದರೆ ಆಗ ನಮಗೆ ವಿಷಯ ಸರಳವಾಗಿ ಅರಿವಿಗೆ ಬರುತ್ತದೆ ಮತ್ತು ದೀರ್ಘ ಕಾಲದವರೆಗೆ ಸ್ಮೃತಿಯಲ್ಲಿ ಉಳಿಯಬಹುದು ಎಂಬುದು ಆಲ್‌ಬ್ರಿಜ್ ಡುರೆರ್ ಅವರ ಅಭಿಪ್ರಾಯ.

ಭೂಗೋಳವಿಜ್ಞಾನದ ಶಿಕ್ಷಕರಾದವರು ವಿಷಯವನ್ನು ಸ್ಪಷ್ಟವಾಗಿ, ಶೀಘ್ರವಾಗಿ ಅರ್ಥ ಮಾಡಿಸಬೇಕಾದರೆ ಹಾಗೂ ವಿಷಯವನ್ನು ಸ್ಪಷ್ಟಪಡಿಸಿ ಪರಿಣಾಮಕಾರಿಯಾಗಿ ಬೋಧಿಸಿ ಯಶಸ್ವಿಯಾಗಲು ಹತ್ತು ಹಲವು ಸಾಧನ ತಂತ್ರಗಳನ್ನು ಉಪಯೋಗಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದದ್ದು ದೃಕ್–ಶ್ರವಣ ಉಪಕರಣಗಳು. ನಮ್ಮ ಎರಡು ಜ್ಞಾನೇಂದ್ರಿಯಗಳನ್ನು ಅಂದರೆ ಕಿವಿ, ಕಣ್ಣುಗಳನ್ನು ಬೋಧನಾ ಸಾಧನವಾಗಿಸುತ್ತವೆ. ದೃಕ್–ಶ್ರವಣ ಉಪಕರಣಗಳು ಶಿಕ್ಷಣಕ್ಕೆ ಪ್ರತ್ಯೇಕವಾದ, ವಿಶಿಷ್ಟವಾದ, ನಿರ್ದಿಷ್ಟವಾದ ಮತ್ತು ಬದಲಿ ಇಲ್ಲದ ಮಾಧ್ಯಮವನ್ನು ಒದಗಿಸಿ ಈ ಉಪಕರಣಗಳು ಬೌದ್ಧಿಕ ಮತ್ತು ಭಾವನಾತ್ಮಕ ಅಂಶಗಳನ್ನು ಪ್ರಚೋದಿಸಿ, ನಮ್ಮ ಕಲಿಕೆಯನ್ನು ಸು. ಶೇ. 85 ರಷ್ಟು ಸಾಧ್ಯವಾಗಿಸುತ್ತದೆ. ದೃಕ್–ಶ್ರವಣೋಪಕರಣಗಳು ಬೋಧನೆಯಲ್ಲಿ ಕಡೆಗಣಿಸಲಾಗದ ಸಾಧನಗಳಾಗಿವೆ. ಇವು ಪರಿಕಲ್ಪನಾ ಯೋಜನೆಗೆ ಪ್ರಥಮ ಅನುಭವಗಳನ್ನು, ಆಧಾರಗಳನ್ನು ಒದಗಿಸುತ್ತವೆ; ಕಲಿಕೆಯನ್ನು ಆಸಕ್ತಿದಾಯಕವಾಗಿ, ಉಪಯುಕ್ತವಾಗಿ, ದೀರ್ಘಕಾಲ ಉಳಿಯುವಂತೆ ಮಾಡುತ್ತವೆ. ಒಂದು ಚಿತ್ರವು ಸಾವಿರ ಪದಗಳಿಗೆ ಸಮ ಎಂಬ ಚೀನ ದೇಶದ ನಾಣ್ಣುಡಿಯನ್ನು ಇಲ್ಲಿ ಸ್ಮರಿಸಬಹುದು. ರುಸೋ, ಪೆಸ್ಟಾಲಜಿ, ಫ್ರೋಬೆಲ್, ಕಾಮಂಟಸ್ ಇತ್ಯಾದಿ ಅನೇಕ ದಾರ್ಶನಿಕರು ಮತ್ತು ಶಿಕ್ಷಣ ತಜ್ಞರು ಈ ಮಾತನ್ನು ಪುಷ್ಟೀಕರಿಸಿದ್ದಾರೆ.

ಎಡ್ಗರ್ ಡೋಲ್ ಇದನ್ನು ಶಿಕ್ಷಣದಲ್ಲಿ ಲಾಭದಾಯಕವಾಗಿ ಪ್ರತಿಪಾದಿಸಿರುವುದರಿಂದ ದೃಕ್–ಶ್ರವಣ ಶಿಕ್ಷಣದ ಪಿತಾಮಹ ಎಂದು ಇವರನ್ನು ಪರಿಗಣಿಸಲಾಗಿದೆ.

ಕೆಲವು ಸಾಮಾನ್ಯ ದೃಕ್–ಶ್ರವಣ ಉಪಕರಣಗಳಿವು: ಶಾಬ್ದಿಕ ಸಂಕೇತಗಳು, ದೃಕ್ ಸಂಕೇತಗಳು, ದಾಖಲೆ, ರೇಡಿಯೋ, ಸ್ಥಿರ ಚಿತ್ರಗಳು, ಚಲನ ಚಿತ್ರಗಳು, ದೂರದರ್ಶನ (ಟಿ.ವಿ) ಪ್ರದರ್ಶನಗಳು, ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಪ್ರವಾಸಗಳು, ನಾಟಕೀಕರಿಸಿದ ಅನುಭವಗಳು, ಕಲ್ಪಿತ ಅನುಭವಗಳು, ನೇರ ಮತ್ತು ಉದ್ದೇಶಿತ ಅನುಭವಗಳು.

ಸ್ವಾಭಾವಿಕ/ನೈಜ ವಸ್ತುಗಳು: ಖನಿಜ ಸಂಪನ್ಮೂಲಗಳು, ಕಲ್ಲಿದ್ದಲು, ಪೆಟ್ರೋಲಿಯಂ, ಮಣ್ಣು, ಶಿಲೆಗಳು, ಆಹಾರ ಮತ್ತು ವಾಣಿಜ್ಯ ಬೆಳೆಗಳು, ಧಾನ್ಯಗಳು ಮುಂತಾದವು.

ಮಾದರಿಗಳು: ಘನ ಮಾದರಿ–ಬಾಹ್ಯ ಲಕ್ಷಣಗಳನ್ನು ವಿವರಿಸಲು.

ಕ್ಷ–ಕಿರಣ ಮಾದರಿ:– ಆಂತರಿಕ ಲಕ್ಷಣ, ಅಡ್ಡ ಸೀಳಿಕೆ, ಲಂಬ ಸೀಳಿಕೆ ವಿವರಿಸಲು.

ಕಾರ್ಯ ಮಾಡುವ ಮಾದರಿ:– ಪ್ರಕ್ರಿಯೆಗಳ ಪ್ರಾತ್ಯಕ್ಷಿಕೆ.

ಗೋಳ: ಭೌಗೋಳಿಕ, ರಾಜಕೀಯ, ಅಂತಾರಾಷ್ಟ್ರೀಯ ಸಮಯ, ಅಕ್ಷಾಂಶ ಮತ್ತು ರೇಖಾಂಶಗಳು.

ಅಟ್ಲಾಸ್: ದಿ ಆಕ್ಸ್‌ಫರ್ಡ್ ಅಡ್ವಾನ್ಸ್‌ಡ್ ಅಟ್ಲಾಸ್, ಯೂನಿವರ್ಸಿಟಿ ಅಟ್ಲಾಸ್, ಪಿಕ್ಚರ್ ಅಟ್ಲಾಸ್ ಆಫ್ ದಿ ಸರ್ಫೇಸ್ ಆಫ್ ದಿ ವರ್ಲ್ಡ್, ಆಕ್ಸ್‌ಫರ್ಡ್ ಟ್ರಾವೆಲ್ ಅಟ್ಲಾಸ್ ಮನೋರಮ ಅಟ್ಲಾಸ್, ಟಿ.ಟಿ.ಕೆ. ಅಟ್ಲಾಸ್, ಶಾರದ ಅಟ್ಲಾಸ್ ಮುಂತಾದವು.

ಭೂಪಟಗಳು: ಲೋಕೋಪಯೋಗಿ ಭೂಪಟಗಳು, ಭೂಸಾದೃಶ್ಯ ಭೂಪಟಗಳು, ಗೋಡೆ ಭೂಪಟಗಳು, ಮೇಲ್ಮೈ ಲಕ್ಷಣದ ಭೂಪಟಗಳು, ವಾಯುಗುಣದ ಭೂಪಟಗಳು, ಭೂಗರ್ಭ ಭೂಪಟಗಳು, ರಾಜಕೀಯ ಭೂಪಟಗಳು, ಪ್ರಾಕೃತಿಕ ಭೂಪಟಗಳು, ಜನಸಂಖ್ಯೆ, ಸಾರಿಗೆ ಸಂಪರ್ಕ, ಕೈಗಾರಿಕೆ, ಕೃಷಿ, ನೀರಾವರಿ, ಖನಿಜ, ಐತಿಹಾಸಿಕ ವಿಷಯಕ್ಕೆ ಸಂಬಂಧಿಸಿದ ಭೂಪಟಗಳು ಮುಂತಾದವು.

ಆಲೇಖಗಳು : ಸ್ತಂಭ ಆಲೇಖಗಳು, ರೇಖಾ ಆಲೇಖಗಳು ಬಹುರೇಖಾ ಅಲೇಖಗಳು, ಸಮತಲ ಅಲೇಖಗಳು, ಜೋಡಿ ಸ್ತಂಭ ಆಲೇಖಗಳು, ಚಿತ್ರಾಕೃತಿ ಅಲೇಖಗಳು.

ಚಿತ್ರಗಳು ಮತ್ತು ರೇಖಾ ಚಿತ್ರಗಳು: ಗ್ಲೈಡ್‌ಗಳು, ಚಿತ್ರ ಸುರುಳಿ ಪ್ರಕ್ಷೇಪ, ಖಮಧ್ಯ ಪ್ರಕ್ಷೇಪ, ಬಾನುಲಿ ಅಥವಾ ರೇಡಿಯೋ ಧ್ವನಿ ಮುದ್ರಕ, ದೂರದರ್ಶನ, ಚಲನ ಚಿತ್ರಗಳು, ಕಂಪ್ಯೂಟರ್ / ಗಣಕಯಂತ್ರ, ಸಿ.ಡಿ.ರಾಮ್. (ಕೆ.ವಿ.ಕೆ.)

**ಮಾನವ ವಲಸೆಗಳು:** ಭೂಮಿಯ ಮೇಲೆ ಮಾನವನ ವಲಸೆಯ ಮಾರ್ಗ, ಕಾರಣಗಳು, ಪರಿಣಾಮಗಳು ಹಾಗೂ ಇವುಗಳ ಮೇಲೆ ಪ್ರಾಕೃತಿಕ ಪ್ರಭಾವಗಳು ಮತ್ತು ವಲಸೆಯಿಂದಾಗುವ ಮಾರ್ಪಾಡುಗಳನ್ನು ವಿಶ್ಲೇಷಿಸುವುದು ಜನಸಂಖ್ಯಾ ಭೂಗೋಳ ವಿಜ್ಞಾನದ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ವಲಸೆ ಒಂದು ಪ್ರದೇಶದ ಜನಸಂಖೀಯ ಅಂಶಗಳ ಮೇಲೆ ಮಾತ್ರವಲ್ಲದೆ ಸಾಂಸ್ಕೃತಿಕ ಅಂಶಗಳ ಮೇಲೂ ಪ್ರಭಾವ ಬೀರುತ್ತದೆ.

ಆಕ್ಸ್‌ಫರ್ಡ್ ನಿಘಂಟಿನ ಪ್ರಕಾರ ವಲಸೆ ಎಂದರೆ ಒಂದು ಪ್ರದೇಶ ಅಥವಾ ಒಂದು ದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಥವಾ ದೇಶಕ್ಕೆ ವಾಸಸ್ಥಳವನ್ನು ಬದಲಾಯಿಸುವ ಮೂಲಕ ಚಲಿಸುವುದಾಗಿದೆ. ವಾಸಸ್ಥಳದ ಬದಲಾವಣೆಯು ಆರ್ಥಿಕ, ಸಾಮಾಜಿಕ, ರಾಜಕೀಯ ಹೀಗೆ ಯಾವುದೇ ಉದ್ದೇಶಗಳಾಗಿ ಉಂಟಾಗಿರಬಹುದು.

ಮೂಲ ಸ್ಥಳದಿಂದ ನೂತನ ಸ್ಥಳಕ್ಕೆ ವಾಸಸ್ಥಾನವನ್ನು ಬದಲಾಯಿಸಿ ನೆಲೆಸುವುದಕ್ಕೆ ವಲಸೆ ಎಂದು ಹೆಸರು. ಒಂದು ವಿಭಾಗದಿಂದ ಅಥವಾ ಅದರ ಗಡಿಯಿಂದ ಮತ್ತೊಂದಕ್ಕೆ ವಾಸಸ್ಥಾನವನ್ನು ಬದಲಾಯಿಸುವುದಕ್ಕೆ ವಲಸೆ ಎಂದು ತಿಳಿಸಲಾಗಿದೆ.

ಪರಿಭಾವನೆಗಳು: ವಲಸೆಯ ಬಗ್ಗೆ ತಿಳಿಯಬೇಕಾದರೆ ಅದಕ್ಕೆ ಸಂಬಂಧಿಸಿದ ಕೆಲವೊಂದು ಪರಿಭಾವನೆಗಳನ್ನು ತಿಳಿಯುವುದು ಅಗತ್ಯ. ವಲಸೆಯಿಂದುಂಟಾದ ಜನರ ಗುಂಪಿನ ಚಲನೆಯನ್ನು ವಲಸೆಯ ಚಲನೆ ಎನ್ನಲಾಗಿದೆ. ವಲಸೆಯು ಪ್ರಾರಂಭವಾದ ಮೂಲ ಸ್ಥಳ, ವಲಸೆಯ ಚಲನೆಯು ಅಂತ್ಯಗೊಳ್ಳುವ ಸ್ಥಳವನ್ನು ತಲುಪುವ ಸ್ಥಳವೆಂದು ಕರೆಯಲಾಗುವುದು.

ವಲಸೆಗಾರರ ಗುಂಪು ಸಮಾನ ಮೂಲ ಸ್ಥಳ ಮತ್ತು ಸಮಾನ ತಲುಪುವ ಸ್ಥಳ ಹೊಂದಿದ್ದರೆ ಅದನ್ನು ವಲಸೆಯ ಪ್ರವಾಹ ಎನ್ನುವರು. ಒಂದು ನಿರ್ದಿಷ್ಟ ಕಾಲದಲ್ಲಿ ವಲಸೆ ನಿರಂತರವಾಗಿ ನಡೆದರೂ ಹಲವು ವಲಸೆಗಳ ನಡುವೆ ನಿರ್ದಿಷ್ಟ ಅಥವಾ ಅನಿರ್ದಿಷ್ಟ ಅವಧಿಯ ಮಧ್ಯಂತರವಿರುತ್ತದೆ. ಈ ಅವಧಿಯನ್ನೇ ವಲಸೆಯ ಮಧ್ಯಂತರ ಎನ್ನುವರು.

ಒಂದು ಪ್ರದೇಶದಿಂದ ಮತ್ತೊಂದಕ್ಕೆ ಜನರು ತಮ್ಮ ವಾಸಸ್ಥಾನವನ್ನು ಬದಲಿಸಿ ನೆಲೆಸುವುದಕ್ಕೆ ವಲಸೆಯೆಂತಲೂ, ಈ ರೀತಿಯ ವಾಸಸ್ಥಾನವನ್ನು ಬದಲಾಯಿಸುವವನನ್ನು ವಲಸೆಗಾರನೆಂದು ಕರೆಯಲಾಗುವುದು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ದಾಖಲೆಗಳಿಲ್ಲದೆ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗಿ ನೆಲೆಸುವುದು ಕಾನೂನು ಬಾಹಿರ ವಲಸೆಯಾಗಿದೆ.

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಒಂದು ನಗರದಿಂದ ಮತ್ತೊಂದು ನಗರಕ್ಕೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಗ್ರಾಮೀಣ ಪ್ರಾಂತ್ಯಗಳಿಂದ ಚಿಕ್ಕ ಪಟ್ಟಣಗಳಿಗೆ ಅನಂತರ ಅಲ್ಲಿಂದ ದೊಡ್ಡ ನಗರಗಳಿಗೆ ಕ್ರಮೇಣ ವಲಸೆ ಹೋಗುವುದಕ್ಕೆ ಶ್ರೇಣಿ ವಲಸೆ ಎನ್ನುವರು.



ಪುರಾತನ ಮಾನವನ ವಲಸೆಗಳು

ಒಂದು ಪ್ರದೇಶದಿಂದ ಮತ್ತೊಂದಕ್ಕೆ ಅಲ್ಲಿಂದ ಮತ್ತೊಂದು ಪ್ರದೇಶಕ್ಕೆ ವಲಸೆಯನ್ನು ನಿರಂತರವಾಗಿ ಕೈಗೊಳ್ಳುವುದನ್ನು ಸರಪಳಿ ವಲಸೆ ಎನ್ನುವರು.

ಮಾನವರ ವಲಸೆಯನ್ನು ಅನೇಕ ಅಂಶಗಳ ಆಧಾರದ ಮೇಲೆ ಹಲವಾರು ವಿಧಗಳಾಗಿ ವಿಂಗಡಿಸಲಾಗಿದೆ. ದೂರ, ಕಾಲ, ಉದ್ದೇಶಗಳ ಆಧಾರದ ಮೇಲಿನ ವಿಂಗಡಣೆ ಈ ಮುಂದಿನಂತಿದೆ: ಹತ್ತಿರದ ವಲಸೆ ಹಾಗೂ ದೂರದ ವಲಸೆ; ಅಲ್ಪಾವಧಿ ಹಾಗೂ ಶಾಶ್ವತ ವಲಸೆ.

ಆರ್ಥಿಕ ಉದ್ದೇಶದಿಂದ ಹೋಗುವ ವಲಸೆಯನ್ನು ಆರ್ಥಿಕ ವಲಸೆಯೆಂದೂ ವೈವಾಹಿಕ ಉದ್ದೇಶದಿಂದ ಹೋಗುವ ವಲಸೆಯನ್ನು ವೈವಾಹಿಕ ವಲಸೆಯೆಂದು ಕರೆಯುವರು. ಇವುಗಳಲ್ಲದೆ ಒಂದು ನಿರ್ದಿಷ್ಟ ಎಲ್ಲೆಯೊಳಕ್ಕೆ ಬಂದು ನೆಲೆಸುವಂತಹದಕ್ಕೆ ಒಳವಲಸೆ ಎಂದೂ ಒಂದು ನಿರ್ದಿಷ್ಟ ಪ್ರದೇಶದ ಎಲ್ಲೆಯಿಂದ ಹೊರಗಡೆ ಹೋಗುವುದಕ್ಕೆ ಹೊರ ವಲಸೆ ಎಂದು ಕರೆಯಲಾಗಿದೆ.

ಒಂದು ರಾಷ್ಟ್ರದಿಂದ ಬೇರೊಂದು ರಾಷ್ಟ್ರಕ್ಕೆ ಹೋಗಿ ನೆಲೆಸುವುದಕ್ಕೆ ದೇಶಾಂತರ ವಲಸೆ ಎಂದೂ ಬೇರೊಂದು ರಾಷ್ಟ್ರದಿಂದ ಬಂದು ಒಂದು ರಾಷ್ಟ್ರದಲ್ಲಿ ನೆಲೆಸುವುದಕ್ಕೆ ದೇಶಾಂತರಿಕ ವಲಸೆ ಎಂದೂ ಕರೆಯಲಾಗಿದೆ. ದೇಶಾಂತರಿಕ ಮತ್ತು ಹೊರವಲಸೆ ಹಾಗೂ ದೇಶಾಂತರ ಮತ್ತು ಒಳವಲಸೆಗಳ ಸಂಖ್ಯೆ ವ್ಯತ್ಯಾಸವು ನಿವ್ವಳ ವಲಸೆ ಯಾದರೆ, ದೇಶಾಂತರ ವಲಸೆಗಾರರು ಮತ್ತು ಒಳವಲಸೆಗಾರರ ಮತ್ತು ದೇಶಾಂತರಿಕ ವಲಸೆಗಾರರು ಮತ್ತು ಹೊರ ವಲಸೆಗಾರರ ಮೊತ್ತವೇ ಒಟ್ಟು ವಲಸೆ ಇದನ್ನು ವಲಸೆಯ ಗಾತ್ರವೆಂತಲೂ ಕರೆಯುವರು.

ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗಿ ನೆಲೆಸುವುದಕ್ಕೆ ಅಂತಾರಾಷ್ಟ್ರೀಯ ವಲಸೆ ಎಂದೂ ಒಂದು ದೇಶದ ರಾಜಕೀಯ ಗಡಿಯೊಳಗೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಜನರು ವಲಸೆ ಹೋಗಿ ನೆಲೆಸುವುದನ್ನು ಆಂತರಿಕ ವಲಸೆ ಎಂದೂ ಕರೆಯುವರು. ಈ ಕೆಳಕಂಡ ವಲಸೆಯನ್ನು ಹೆಚ್ಚಾಗಿ ಅಭ್ಯಸಿಸಲಾಗುವುದು:

ಹಳ್ಳಿಗಳಿಂದ ನಗರಗಳಿಗೆ: ಹಳ್ಳಿಗಳಲ್ಲಿರುವ ವಿಕರ್ಷಕ ಕಾರಣಗಳಾದ ಬಡತನ, ನಿರುದ್ಯೋಗ, ಕಡಿಮೆಕೂಲಿ, ನಿರಂತರ ಭೂವಿಂಗಡಣೆ ಮತ್ತು ಪುನರ್ವಿಂಗಡಣೆಯ ಅನಾನುಕೂಲಗಳು ಹಾಗೂ ನಗರಗಳಲ್ಲಿರುವ ಆಕರ್ಷಕ ಅಂಶಗಳಾದ ಹೆಚ್ಚಿನ ಕೂಲಿ, ಕೂಲಿಯ ಅವಧಿಯ ನಿರ್ದಿಷ್ಟತೆ, ವಿದ್ಯಾಭ್ಯಾಸ ಸೌಲಭ್ಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅನುಕೂಲತೆಗಳು ಹಳ್ಳಿಗಳಿಂದ ನಗರಗಳಿಗೆ ಅಪಾರ ಜನಸಂಖ್ಯೆಯನ್ನು ಆಕರ್ಷಿಸುತ್ತವೆ.

ನಗರಗಳಿಂದ ನಗರಗಳಿಗೆ: ಒಂದು ನಗರದಿಂದ ಮತ್ತೊಂದು ನಗರಕ್ಕೆ ವಲಸೆ ಹೋಗುವ ವಿಧಾನ ಇದಾಗಿದೆ. ಗ್ರಾಮೀಣ ಪ್ರದೇಶಗಳಿಂದ ಚಿಕ್ಕ ಪಟ್ಟಣಗಳಿಗೆ ಅನಂತರ ಅಲ್ಲಿಂದ ದೊಡ್ಡನಗರಗಳಿಗೆ ಕ್ರಮೇಣ ವಲಸೆ ಹೋಗುವುದು ಕಂಡು ಬರುವುದು. ಇದನ್ನು ಹಂತ ವಲಸೆ/ಶ್ರೇಣಿ ವಲಸೆಯೆಂದು ಕರೆಯುವರು.

ಗ್ರಾಮಗಳಿಂದ ಗ್ರಾಮಗಳಿಗೆ: ಗ್ರಾಮೀಣ ಪ್ರದೇಶದಲ್ಲಿಯೇ ಅತ್ಯಧಿಕ ಜನಸಂಖ್ಯೆ ಕೇಂದ್ರೀಕೃತವಾಗಿರುವ ಭಾರತ, ಚೀನ, ಬ್ರೆಜಿಲ್ ಮುಂತಾದ ದೇಶಗಳಲ್ಲಿ ಒಂದು ಗ್ರಾಮೀಣ ಭಾಗದಿಂದ ಮತ್ತೊಂದು ಗ್ರಾಮೀಣ ಪ್ರದೇಶದ ಕಡೆ ಜನರು ವಲಸೆ ಹೋಗುವ ವಿಧಾನ ಇದಾಗಿದೆ.

ನಗರಗಳಿಂದ ಹಳ್ಳಿಗಳಿಗೆ: ನಗರಗಳಲ್ಲಿ ಅತ್ಯಧಿಕ ಜನಸಂಖ್ಯೆಯ ಒತ್ತಡ ಹಾಗೂ ಪರಿಸರ ಮಾಲಿನ್ಯದ ಸಮಸ್ಯೆಯಿಂದಾಗಿ ಜನರು ನಗರದ ಹೊರವಲಯದ ಗ್ರಾಮೀಣ ಪ್ರದೇಶಗಳಲ್ಲಿ ವಿಶಾಲವಾದ ಕೈದೋಟಗಳಿಂದಾವೃತವಾದ ಬಂಗಲೆಯಲ್ಲಿ ವಾಸಿಸುವರು ಇಂದು ನಗರಗಳಿಂದ ಹಳ್ಳಿಗಳಿಗೆ ವಲಸೆ ಹೋಗುವ ವಿಧಾನವಾಗಿದೆ.

ವಲಸೆಗೆ ಕಾರಣಗಳು: ಮಾನವನ ವಲಸೆ ತೀರ್ಮಾನದಲ್ಲಿ ಅಡಕವಾಗಿರುತ್ತವೆ. ಒಂದು ಪ್ರದೇಶದಿಂದ ವಲಸೆ ಹೋಗುವಂತೆ ಪ್ರೇರೇಪಿಸುವ ಕಾರಣಗಳಂತೆಯೇ ವಲಸೆಯನ್ನು ಪಡೆದುಕೊಳ್ಳುವ ಪ್ರದೇಶವು ಸಹ ವಿವಿಧ ಬಗೆಯ ಅವಕಾಶಗಳನ್ನು ಒಳಗೊಂಡಿರುತ್ತದೆ. ವಲಸೆ ಹೋಗುವಿಕೆಗೆ ಹಲವಾರು ಕಾರಣಗಳಿದ್ದಾಗ್ಯೂ ಅವುಗಳನ್ನು ಕೆಳಗಿನಂತೆ ವಿಧಗಳಾಗಿ ವಿಂಗಡಿಸಬಹುದು.

ಭೌಗೋಳಿಕ ಕಾರಣಗಳು: ಹಿತಕರವಾದ ವಾಯುಗುಣ ಹಾಗೂ ಯಥೇಚ್ಛವಾದ ನೈಸರ್ಗಿಕ ಸಂಪನ್ಮೂಲಗಳಿರುವ ಕಡೆಗೆ ಜನರು ವಲಸೆ ಹೋಗಲು ಬಯಸುತ್ತಾರೆ. ಇದಕ್ಕೆ ವಿರುದ್ಧವಾಗಿ ಅಹಿತಕರ ವಾಯುಗುಣ, ನೈಸರ್ಗಿಕ ವಿಕೋಪಗಳಿಂದ ಕೂಡಿರುವ ಪ್ರದೇಶಗಳಿಗೆ ಜನರು ವಲಸೆ ಹೋಗಲು ಇಚ್ಛೆ ಪಡುವುದಿಲ್ಲ.

ಸಾಮಾಜಿಕ ಕಾರಣಗಳು: ಭಾರತದಲ್ಲಿ ವಿವಾಹದ ಅನಂತರ ಹೆಣ್ಣು ಮಕ್ಕಳು ತಮ್ಮ ಗಂಡನ ಮನೆಗೆ ವಲಸೆ ಹೋಗುವುದು ಹಾಗೂ ತಮ್ಮ ಮೊದಲ ಬಾಣಂತನಕ್ಕಾಗಿ ಗಂಡನ ಮನೆಯಿಂದ ತನ್ನ ತವರಿಗೆ ಮರಳುವುದು. ಸಾಮಾಜಿಕವಾಗಿ ವಲಸೆಗೆ ಕಾರಣವಾಗಿರುವ ಅಂಶಗಳಾಗಿವೆ.

ಜನಸಂಖ್ಯಾ ಕಾರಣಗಳು: ಆಯಾ ಪ್ರದೇಶದ ಸ್ವಾಭಾವಿಕ ಸಂಪನ್ಮೂಲಗಳು ಹಾಗೂ ಜನಸಂಖ್ಯೆಯ ಹೆಚ್ಚಳದ ನಡುವೆ ಇರುವ ವ್ಯತ್ಯಾಸಗಳೂ ಸಹ ವಲಸೆಗೆ ಕಾರಣವಾಗುತ್ತದೆ.

ಆರ್ಥಿಕ ಕಾರಣಗಳು: ಆರ್ಥಿಕವಾಗಿ ಬಹಳ ಹಿಂದುಳಿದಿರುವ ಹಾಗೂ ಕಡಿಮೆ ಉದ್ಯೋಗಾವಕಾಶಗಳನ್ನು ಹೊಂದಿರುವ ಜನರು ವಲಸೆ ಹೋಗುವರು.

ರಾಜಕೀಯ ಅಂಶಗಳು: ಅಂತಾರಾಷ್ಟ್ರೀಯ ವಲಸೆಯು ರಾಷ್ಟ್ರ ಪೌರತ್ವ ನೀತಿಯನ್ನು ಅವಲಂಬಿಸಿರುತ್ತದೆ. ಪೌರತ್ವವನ್ನು ಪಡೆಯಲು ನಿರ್ಬಂಧಗಳು ಹೆಚ್ಚಿದಷ್ಟೂ ವಲಸೆಯು ಕಡಿಮೆಯಾಗುತ್ತದೆ.

ವಲಸೆಯ ಪರಿಣಾಮಗಳು: ವಲಸೆಯಿಂದಾಗಿ ಜನರು ಹೊರ ಹೋಗುವ ಪ್ರದೇಶ. ವಲಸೆಯನ್ನು ಪಡೆಯುವ ಪ್ರದೇಶದ ಜನಸಂಖ್ಯಾ ರಚನೆಯಲ್ಲಿ ಮಾತ್ರವಲ್ಲದೆ ವಲಸೆ ಹೋಗುವ ಜನರಲ್ಲಿಯೂ ಆಂತರಿಕವಾಗಿ ಬಹಳಷ್ಟು ಮಾರ್ಪಾಡುಗಳು ಉಂಟಾಗುತ್ತವೆ. ವಲಸೆಯಿಂದ ಸಂಪನ್ಮೂಲ ಹಾಗೂ ಜನಸಾಂದ್ರತೆಯ ಮೇಲೆ ನೇರ ಪರಿಣಾಮಗಳು ಉಂಟಾಗುತ್ತವೆ.

ಜನಸಂಖ್ಯೆಯ ಅಂಶಗಳಲ್ಲಿ ಬದಲಾವಣೆ: ವಲಸೆಯ ಪರಿಣಾಮವಾಗಿ ಆ ಪ್ರದೇಶಗಳ ಜನಸಾಂದ್ರತೆ, ಬೆಳವಣಿಗೆ, ಲಿಂಗ ಮತ್ತು ವಯೋ ಪ್ರಮಾಣ ಹಾಗೂ ಜನಸಂಖ್ಯಾ ಹಂಚಿಕೆ, ಜನನ-ಮರಣ ಪ್ರಮಾಣಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ.

ಆರ್ಥಿಕ ಪ್ರಗತಿಯ ವೇಗವರ್ಧಕ: ಮಾನವ ಶಕ್ತಿಯ ಮತ್ತು ಪರಿಣತ ಜನರ ಕೊರತೆಯನ್ನು ಅನುಭವಿಸುತ್ತಿರುವ ದೇಶಗಳಿಗೆ ಅಂತಾರಾಷ್ಟ್ರೀಯ ವಲಸೆಯು ವರವಾಗಿ ಪರಿಣಮಿಸುತ್ತದೆ.

ಜನಸಂಖ್ಯಾ ಮರು ವಿತರಣೆ: ಜನಸಂಖ್ಯೆಯು ಹೆಚ್ಚಾಗಿರುವ ಪ್ರದೇಶಗಳಿಂದ ಕೊರತೆಯಿರುವ ಪ್ರದೇಶಗಳಿಗೆ ಜನರ ವಲಸೆಯಾದರೆ ಜನಸಂಖ್ಯಾ ವಿತರಣೆಯಲ್ಲಿ ಸಲ್ಪಮಟ್ಟಿಗಾದರೂ ಸಮತೋಲನ ಉಂಟಾಗುತ್ತದೆ.

ನಿರುದ್ಯೋಗ ನಿವಾರಣೆ: ಒಂದು ದೇಶದಲ್ಲಿ ಅಧಿಕವಾಗಿರುವ ಅಥವಾ ಮಿತಿಮೀರಿ ಅಸ್ತಿತ್ವದಲ್ಲಿರುವ ಮಾನವ ಶಕ್ತಿಯು ವಲಸೆ ಹೋಗುವುದರಿಂದ ಆ ದೇಶದಲ್ಲಿ ಜನಸಂಖ್ಯೆಯ ಹೊರೆ ಮತ್ತು ನಿರುದ್ಯೋಗ ಸಮಸ್ಯೆಯ ತೀವ್ರತೆ ಕಡಿಮೆಯಾಗುತ್ತದೆ.

ಮಾನವ ಶಕ್ತಿಯ ಕೊರತೆ: ವಲಸೆಯು ಕೆಲವು ವರ್ಗಗಳಲ್ಲಿ ಮಾನವ ಶಕ್ತಿಯ ಕೊರತೆಯನ್ನು ಸೃಷ್ಟಿಸುತ್ತವೆ. ಇಂತಹ ಕೊರತೆಯ ಪರಿಣಾಮವಾಗಿ ಆ ದೇಶದ ಆರ್ಥಿಕ ಪ್ರಗತಿಯ ಸಾಧನೆಗೆ ಧಕ್ಕೆಯಾಗುತ್ತದೆ. ಉದಾ: ಭಾರತದಲ್ಲಿ ಉನ್ನತ ಶಿಕ್ಷಣ ಪಡೆದವರು ಹಾಗೂ ಪರಿಣತ ಜನರ ಹೊರ ವಲಸೆಯು ಪ್ರತಿಭಾ ಪಲಾಯನಕ್ಕೆ ಕಾರಣವಾಗುತ್ತದೆ.

ವೇತನದ ಹೆಚ್ಚಳ: ಹೊರ ವಲಸೆಯಿಂದ ಶ್ರಮ ಶಕ್ತಿಯ ಕೊರತೆಯುಂಟಾಗುವುದರಿಂದ ಮತ್ತು ಶ್ರಮದ ಪೂರೈಕೆಗಿಂತ ಬೇಡಿಕೆಯು ಹೆಚ್ಚುವುದರಿಂದ ಆ ಪ್ರದೇಶದಲ್ಲಿ ವೇತನಗಳು ಹೆಚ್ಚುವುದು ಸಹಜ.

ಆದಾಯದ ಹೆಚ್ಚಳ: ವಲಸೆ ಹೋದವರು ತಮ್ಮ ಉಳಿತಾಯಗಳನ್ನು ಸ್ವದೇಶಕ್ಕೆ ರವಾನಿಸುವುದರಿಂದ ಮಾನವ ಶಕ್ತಿಯನ್ನು ರಫ್ತು ಮಾಡುವ ದೇಶಗಳಿಗೆ ಆದಾಯದ ಹೆಚ್ಚಳವಾಗುತ್ತದೆ.

ಬೆಲೆ ಏರಿಕೆ: ಕೆಲವು ವಲಸೆಗಾರರು ಸ್ವದೇಶಕ್ಕೆ ಹಣ ರವಾನಿಸುವುದರಿಂದ ಸ್ವದೇಶದಲ್ಲಿ ಹಣದ ಪೂರೈಕೆಯ ಹೆಚ್ಚಳದೊಂದಿಗೆ ಸರಕುಗಳ ಬೆಲೆಗಳು ಏರುತ್ತವೆ ಮತ್ತು ಜೀವನಮಟ್ಟ ದುಬಾರಿಯಾಗುತ್ತದೆ.

ವಲಸೆಯ ಸಿದ್ಧಾಂತ/ಮಾದರಿಗಳು: ಮಾನವನು ಯಾವಾಗ ಆಹಾರವನ್ನು ಹುಡುಕುತ್ತಾ ಹೊರಟನೋ ಅಂದೇ ವಲಸೆ ಪ್ರಾರಂಭವಾಯಿತು ಇದು ವಿವಿಧ ಕಾಲ ಘಟ್ಟಗಳಲ್ಲಿ ವಿವಿಧ ರೀತಿಯ ಸ್ವರೂಪವನ್ನು ಪಡೆದುಕೊಂಡಿದೆ. ವಲಸೆಗೆ ಕಾರಣಗಳು ವೈವಿಧ್ಯಮಯವಾಗಿರುವಂತೆಯೇ ಅವುಗಳ ಪರಿಣಾಮಗಳೂ ಸಹ ವಿವಿಧ ರೀತಿಯಲ್ಲಿರುತ್ತವೆ. ಇವುಗಳನ್ನು ಕುರಿತಂತೆ ಹಲವು ನಿಯಮ ಹಾಗೂ ಸಿದ್ಧಾಂತಗಳನ್ನು ನಿರೂಪಿಸಲಾಗಿದೆ.

ರ್‍ಯಾವೆನ್‌ಸ್ಟಿನ್‌ನ ವಲಸೆ ನಿಯಮ: ಬ್ರಿಟನ್ನಿನ ಅರ್ಥಶಾಸ್ತ್ರಜ್ಞಾದ ಇ. ರ್‍ಯಾವೆನ್‌ಸ್ಟೀನ್‌ರವರು ಬ್ರಿಟನ್ನಿನ ಆಂತರಿಕ ವಲಸೆಯನ್ನು ಕುರಿತಂತೆ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ 1889 ರಲ್ಲಿ ಪ್ರಕಟಗೊಂಡ ದಿ ಲಾ ಆಫ್ ಮೈಗ್ರೇಶನ್ ಲೇಖನ ಅತಿಮುಖ್ಯವಾದುದಾಗಿದೆ. ಇದರಲ್ಲಿ ಅವರು ವಲಸೆಗೆ ಸಂಬಂಧಪಟ್ಟಂತೆ ಕೆಲವು ನಿಯಮಗಳನ್ನು ತಿಳಿಸಿದ್ದಾರೆ ಅವುಗಳು ಈ ಕೆಳಗಿನಂತಿವೆ.

ವಲಸೆ ಮತ್ತು ದೂರ: ಇಂದು ಸಾರಿಗೆಯ ಪ್ರಗತಿಯೊಡನೆ ವಲಸೆಯ ದೂರ ಅಧಿಕವಾಗಿದ್ದರೂ ಸಮೀಪದ ಸ್ಥಳಗಳಿಗೆ ವಲಸೆಯ ಪ್ರಮಾಣ ಸಾಮಾನ್ಯವಾಗಿ ಹೆಚ್ಚಿರುತ್ತದೆ. ಇದನ್ನೇ ದೂರದೊಡನೆ ಕ್ಷೀಣತೆಯ ಕಾರ್ಯ ಎಂದು ಕರೆಯುವರು. ನಗರ ಪ್ರದೇಶದ ಮಾರುಕಟ್ಟೆ ಇತ್ಯಾದಿಗಳಿಗೆ ಸುತ್ತಲಿನ ಪ್ರದೇಶದಿಂದ ಹೆಚ್ಚು ವಲಸೆಯಿರುವುದು. ದೂರವು ಹೆಚ್ಚಾದಂತೆ ವಲಸೆಯ ಪ್ರಮಾಣವು ಕಡಿಮೆಯಾಗುವುದು.

ವಲಸೆಯು ವಿವಿಧ ಹಂತಗಳಲ್ಲಿ ಮುಂದುವರಿಯುವುದು: ವಲಸೆಗಾರರು ಸಾಮಾನ್ಯವಾಗಿ ನೇರವಾಗಿ ನಗರಗಳಿಗೆ ಬರುವುದಿಲ್ಲ. ಒಂದು ಗ್ರಾಮೀಣ ಪ್ರದೇಶದ ಜನರು ಸಮೀಪದ ಪಟ್ಟಣಗಳಿಗೆ ವಲಸೆ ಹೋಗುವರು. ಈ ವಲಸಿಗರಿಂದ ತೆರವಾದ ಸ್ಥಳಗಳಿಗೆ ಆ ಪ್ರದೇಶದ ಸುತ್ತಲಿನ ಹೆಚ್ಚು ದೂರದ ಗ್ರಾಮ ಪ್ರದೇಶಗಳ ಜನರು ಬಂದು ಸೇರುವರು. ದೂರ ವಲಸಿಗರು ಕೈಗಾರಿಕಾ ಅಥವಾ ವಾಣಿಜ್ಯ ಕೇಂದ್ರಗಳಿಗೆ ಹೋಗುವರು.

ವಲಸೆ ಹೋದವರಲ್ಲಿ ಸ್ವಲ್ಪಭಾಗ ಜನರಾದರೂ ಮರಳಿ ಮೂಲ ಪ್ರದೇಶಕ್ಕೆ ಬರುತ್ತಾರೆ. ಇದನ್ನು ವಲಸೆಯ ಪ್ರತಿ ಪ್ರವಾಹ ಎನ್ನುವರು.

ಗ್ರಾಮೀಣ ಜನರು ನಗರವಾಸಿಗಳಿಗಿಂತ ಹೆಚ್ಚಿನ ವಲಸಿಗರು: ನಗರ ಪ್ರದೇಶಗಳಲ್ಲಿರುವ ಆಕರ್ಷಕ ಅಂಶಗಳಿಂದಾಗಿ ಗ್ರಾಮೀಣ ಪ್ರದೇಶಗಳಿಂದ ಹೆಚ್ಚು ಜನರು ನಗರಗಳಿಗೆ ವಲಸೆ ಹೋಗುವರು.

ಸ್ತ್ರೀಯರು ಆಂತರಿಕ ಹಾಗೂ ಸಮೀಪದ ವಲಸೆಯಲ್ಲಿ, ಪುರುಷರು ದೂರದ ವಲಸೆಯಲ್ಲಿ ಪ್ರಧಾನರಾಗಿರುವರು: ವಲಸೆಯ ದೂರ ಮತ್ತು ಲಿಂಗದ ಆಯ್ಕೆಯ ನಡುವೆ ನೇರವಾದ ಸಂಬಂಧವಿದೆ. ಸ್ತ್ರೀಯರು ಸಮೀಪದ ನಗರಗಳಿಗೆ ವಲಸೆ ಹೋದರೆ ಪುರುಷರು ಮಹಿಳೆಯರಿಗಿಂತ ಹೆಚ್ಚು ರಾಷ್ಟ್ರೀಯ ವಲಸೆಯನ್ನು ಕೈಗೊಳ್ಳುವರು.

ವಲಸಿಗರಲ್ಲಿ ವಯಸ್ಕರ ಪ್ರಮಾಣ ಹೆಚ್ಚು: ಉದ್ಯೋಗ ಹಾಗೂ ಇನ್ನಿತರ ಕಾರಣಗಳಿಂದ ಅವಿವಾಹಿತ ಯುವಕ–ಯುವತಿಯರು ಹೆಚ್ಚು ವಲಸೆ ಹೋಗುವರು ಇಲ್ಲಿ ವಯೋ ಆಯ್ಕೆ ವಲಸೆಯನ್ನು ಕಾಣಬಹುದು.

ವಲಸೆ ಮತ್ತು ತಾಂತ್ರಿಕತೆ: ಕೆಳಮಟ್ಟದ ತಾಂತ್ರಿಕತೆಗಿಂತ ಉನ್ನತ ಮಟ್ಟದ ತಾಂತ್ರಿಕತೆ ಮತ್ತು ಆರ್ಥಿಕಾಭಿವೃದ್ಧಿ ಇರುವ ಕಡೆ ವಲಸೆ ಅಧಿಕವಾಗಿರುತ್ತವೆ. ಇದಕ್ಕೆ ವಿರುದ್ಧವಾಗಿರುವ ಕಡೆ ವ್ಯತಿರಿಕ್ತವಾಗಿರುತ್ತದೆ.

ಇ.ಎಸ್. ಲೀ ಅವರ ವಲಸೆಯ ಸಿದ್ಧಾಂತ: ಇವರು ತಮ್ಮ ವಲಸೆಯ ಸಿದ್ಧಾಂತ ಲೇಖನವನ್ನು 1966 ರಲ್ಲಿ ಪ್ರಕಟಿಸಿದ್ದು ಈ ಸಿದ್ಧಾಂತದಲ್ಲಿ ವಲಸೆಯ ಗತಿ, ಕಾರಣಗಳು ಮತ್ತು ಪ್ರತಿಕ್ರಿಯೆಯನ್ನು ವಿವರಿಸಿದ್ದಾರೆ. ಲೀ ಅವರು ವಲಸೆಯ ಕ್ರಿಯೆಗೆ ಕಾರಣವಾದ ನಾಲ್ಕು ಅಂಶಗಳನ್ನು ಗುರುತಿಸಿದ್ದಾರೆ:

- ವಲಸೆಯ ಮೂಲ ಸ್ಥಳಕ್ಕೆ ಸಂಬಂಧಿಸಿದ ಅಂಶಗಳು
- ತಲುಪುವ ಸ್ಥಳಕ್ಕೆ ಸಂಬಂಧಿಸಿದ ಅಂಶಗಳು
- ಮಧ್ಯಂತರ ಅಡಚಣೆಗಳು
- ವೈಯಕ್ತಿಕ ಕಾರಣಗಳು

ಲೀ ಅವರ ಪ್ರಕಾರ ವಲಸೆಗಾರನ ತೀರ್ಮಾನದ ಮೇಲೆ ಮೂಲ ಪ್ರದೇಶ ಹಾಗೂ ವಲಸೆ ಹೋಗಬೇಕಾದ ಪ್ರದೇಶ ಈ ಎರಡರ ಆಕರ್ಷಕ ಮತ್ತು ವಿಕರ್ಷಕ ಅಂಶಗಳು ಪ್ರಭಾವಬೀರುತ್ತವೆ. ವಲಸೆಗಾರನು ಈ ಎರಡೂ ಪ್ರದೇಶಗಳ ಅನುಕೂಲತೆ ಮತ್ತು ಅನಾನುಕೂಲತೆಗಳನ್ನು ಹೋಲಿಸಿ ನೋಡುವನು. ವಲಸೆ ಹೋಗಬೇಕಾದ ದೂರ, ಹೋಗುವ ವೆಚ್ಚ ಅಲ್ಲಿ ನೆಲೆಸುವ ಖರ್ಚು ಮೊದಲಾದವುಗಳಿಗಿಂತ ಅಲ್ಲಿ ಹೆಚ್ಚಿನ ಆದಾಯವು ದೊರೆಯುವಂತಿದ್ದರೆ ಮಾತ್ರ ವಲಸೆ ಹೋಗುವ ತೀರ್ಮಾನಗಳನ್ನು ಕೈಗೊಳ್ಳುವನು. ಇದರ ಜೊತೆಗೆ ಮಕ್ಕಳ ವಿದ್ಯಾಭ್ಯಾಸ, ಹಣಕಾಸಿನ ಸ್ಥಿತಿಗತಿ, ಉನ್ನತ ಸ್ಥಾನಮಾನಗಳು ಮುಂತಾದ ವೈಯಕ್ತಿಕ ಅಂಶಗಳು ವಲಸೆಗಾರನ ತೀರ್ಮಾನದ ಮೇಲೆ ಪ್ರಭಾವ ಬೀರುತ್ತವೆ.

ಜೆಲಿನ್‌ಸ್ಕೀರವರ ಚಲನೆಯ ಸ್ಥಿತ್ಯಂತರ ಪರಿಭಾವನೆ: ಜನಸಂಖ್ಯಾ ಭೂಗೋಳ ವಿಜ್ಞಾನದ ಸಂಶೋಧಕರಾದ ಇವರು 1966 ರಲ್ಲಿ ತಮ್ಮ ವಲಸೆಯ ಸಿದ್ಧಾಂತವನ್ನು ಎ ಪ್ರೊಲೋಗ್ ಟು ಪಾಪುಲೇಷನ್ ಜಿಯೋಗ್ರಫಿ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ ಇವರು ವಲಸೆಯ ವರ್ತನೆ ಜನಸಂಖ್ಯಾ ಸ್ಥಿತ್ಯಂತರ ಸಿದ್ಧಾಂತದ ಹಂತಗಳೊಡನೆ ನೇರವಾಗಿ ಸಂಬಂಧ ಹೊಂದಿದೆ ಎಂದು ತಿಳಿಸಿದ್ದಾರೆ. ಇವರು ಜನಸಂಖ್ಯೆಯ ಸ್ಥಿತ್ಯಂತರ ಐದು ಹಂತಗಳಲ್ಲಿ ಮುಂದುವರಿಯುವುದೆಂದು ಪರಿಗಣಿಸಿದ್ದು ಇದರಂತೆ ಮೊದಲ ಹಂತದಲ್ಲಿ ಜನನ ಮತ್ತು ಮರಣದ ಸಂಖ್ಯೆಗಳೆರಡೂ ಹೆಚ್ಚಾಗಿದ್ದು ವಲಸೆಯ ಪ್ರಮಾಣವು ಅತಿಕಡಿಮೆಯಿರುವುದು ಈ ಹಂತದಲ್ಲಿ ವಲಸೆಯ ದೂರವೂ ಸಹ ಕಡಿಮೆಯಿರುತ್ತದೆ.

ಎರಡನೆಯ ಹಂತದಲ್ಲಿ ಮರಣದ ಪ್ರಮಾಣ ಇಳಿಕೆಗೊಂಡು ಜನಸಂಖ್ಯೆಯು ಅತಿ ಹೆಚ್ಚಾಗುವುದು ಇದು ಭೂಬಳಕೆ, ಸಾರಿಗೆ ಹಾಗೂ ಇತರ ಸಂಪನ್ಮೂಲಗಳ ಮೇಲೆ ಒತ್ತಡ ಹೇರುವುದು ಇದರಿಂದ ಈ ಹಂತದಲ್ಲಿ ವಲಸೆಯ ಪ್ರಮಾಣ ಅಧಿಕ. ಜನರು ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಹಾಗೂ ಪಟ್ಟಣಗಳಿಂದ ನಗರಗಳಿಗೆ ವಲಸೆ ಹೋಗುವರು.

ಮೂರನೆಯ ಹಂತದಲ್ಲಿ ಅಂತಾರಾಷ್ಟ್ರೀಯ ವಲಸೆ ಪ್ರಾರಂಭವಾಗುವುದು ಮತ್ತು ದ್ವಿತೀಯ ಉದ್ಯೋಗದಿಂದ ತೃತೀಯ ಉದ್ಯೋಗಗಳಿಗೆ ಬದಲಾವಣೆ ಹೊಂದುವ ಜನರಿಂದಾಗಿ ನಗರಗಳ ನಡುವೆ ಹಾಗೂ ಗ್ರಾಮೀಣ ಮತ್ತು ನಗರಗಳ ನಡುವೆ ವಲಸೆಯು ಅತ್ಯಧಿಕವಾಗುವುದು.

ನಾಲ್ಕು ಮತ್ತು ಐದನೆಯ ಹಂತಗಳಲ್ಲಿ ಜನಸಂಖ್ಯೆಯ ಹೆಚ್ಚಳ ಅತಿ ಕಡಿಮೆ, ಆರ್ಥಿಕ ಸ್ಥಿತಿ ಹೆಚ್ಚು ಅಭಿವೃದ್ಧಿ ಹೊಂದಿರುವುದು. ಇದರಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ಪರಿಣತ ಹಾಗೂ ಪರಿಣತಿಯ ದಿಕ್ಕಿನಲ್ಲಿರುವ ಜನರು ಅಭಿವೃದ್ಧಿ ಹೊಂದಿದ ಪ್ರದೇಶಗಳಿಗೆ ವಲಸೆ ಹೋಗುವರು.

ಗುರುತ್ವ ನಮೂನೆ ಮಾದರಿ: ಜಿ.ಕೆ.ಜಿಫ್ ಅವರ ಗುರುತ್ವ ನಮೂನೆಯೂ ಸಹ ಒಂದು ವಲಸೆ ಮಾದರಿ. ಇವರು ಕಡಿಮೆಯಿದ್ದಲ್ಲಿ ವಲಸೆಯು ಹೆಚ್ಚಾಗಿದ್ದು ಅಂತರವು ಹೆಚ್ಚಾದಂತೆ ವಲಸೆಯ ಪ್ರಮಾಣ ಕಡಿಮೆಯಾಗುತ್ತದೆಂದು ನಿರೂಪಿಸಿದ್ದಾರೆ. ಇದು ನ್ಯೂಟನ್‌ನ ಗುರುತ್ವಾಕರ್ಷಣೆಯ ನಿಯಮಕ್ಕೆ ಅನುಗುಣವಾಗಿರುವುದರಿಂದ ಈ ನಿರೂಪಣೆಗೆ ಗುರುತ್ವನಮೂನೆ ಹಾಗೂ ವಿಪರ್ಯಯ ದೂರ ನಿಯಮವೆಂದು ಕರೆಯಲಾಗಿದೆ.

ಜಿಫ್‌ರವರು ವಿವರಿಸಿದಂತೆ ವಲಸೆಯ ಪ್ರಮಾಣ ವಲಸೆಯ ದೂರಕ್ಕೆ ವಿಪರ್ಯಯ ರೀತಿಯಲ್ಲಿ ಸಮನಾಗಿರುವುದನ್ನು ಈ ಸೂತ್ರದ ಮೂಲಕ ನಿರೂಪಿಸಬಹುದು.

$$Nij \times \frac{1}{Dij}$$

ಇದರಲ್ಲಿ Nij ಯು i ನಗರದಿಂದ j ನಗರಕ್ಕೆ ವಲಸೆಯ ಜನಸಂಖ್ಯೆಯನ್ನು ಮತ್ತು Dij ಅವುಗಳ ನಡುವಿನ ಅಂತರವನ್ನು ತಿಳಿಸುವುದು.

ಜಿಫ್‌ರವರ ಗುರುತ್ವ ನಮೂನೆಯನ್ನೇ ಸ್ಟಾಫರ್ ತಮ್ಮ ನಿರೂಪಣೆಯಲ್ಲಿ ಬಳಸಿಕೊಂಡಿದ್ದಾರೆ. ಅದರಂತೆ ವಲಸೆ ಹೋಗುವ ಜನರ ಪ್ರಮಾಣ ನಿರ್ದಿಷ್ಟ ದೂರದಲ್ಲಿರುವ ಅವಕಾಶಗಳ ಪ್ರಮಾಣಕ್ಕೆ ಸಮನಾಗಿದ್ದು ಮಧ್ಯಂತರ ಅವಕಾಶಗಳ ಸಂಖ್ಯೆಗೆ ವಿಪರ್ಯಯವಾಗಿ ಸಮನಾಗಿರುವುದು ಇದನ್ನು ಕೆಳಗಿನ ಸೂತ್ರದಿಂದ ನಿರೂಪಿಸಬಹುದು.

$$Nij \times \frac{oj}{Oij}$$

Nij ಯು i ನಗರದಿಂದ j ನಗರಕ್ಕೆ ವಲಸಿಗರ ಸಂಖ್ಯೆಯನ್ನು oj ಯು j ಪಟ್ಟಣಗಳಲ್ಲಿರುವ ಅವಕಾಶಗಳ ಪ್ರಮಾಣ ಮತ್ತು Oij ಯು i ಮತ್ತು j ನಡುವಿನ ಅವಕಾಶಗಳನ್ನು ಪ್ರತಿನಿಧಿಸುತ್ತವೆ.

ಪ್ರತಿಭಾ ಪಲಾಯನ (ಬ್ರೈನ್ ಡ್ರೈನ್): ಪ್ರತಿಭಾ ಪಲಾಯನ ಇಂದು ನೆನ್ನೆಯ ವಿಷಯವಲ್ಲ; ಬಹಳ ಹಿಂದಿನಿಂದಲೂ ರೂಢಿಯಲ್ಲಿದ್ದು ಆರ್ಥಿಕವಾಗಿ ಈಗಿನಷ್ಟು ಪರಿಣಾಮ ಬೀರದೆ ಇದ್ದಂತಹ ವಲಸೆಯಾಗಿತ್ತು. ರಾಜಮಹಾಜರುಗಳ ಕಾಲದಲ್ಲಿ ಪ್ರತಿಭಾವಂತರು ಅವರ ಆಸ್ಥಾನಗಳಿಗೆ ವಲಸೆ ಹೋದರೆ ಗ್ರೀಕ್ ಸಾಮ್ರಾಜ್ಯದ ಪತನದ ಕಾಲದಲ್ಲಿ ರೋಮ್‌ಗೂ ಯುರೋಪಿನ ಕ್ರಾಂತಿಯ ಸಮಯದಲ್ಲಿ ಅಮೆರಿಕ ಪ್ರತಿಭೆಗಳು ವಲಸೆ ಹೋಗುತ್ತಿದ್ದವು. ಆದರೆ ಇಂದಿನ ದಿನಗಳಲ್ಲಿನ ಪ್ರತಿಭಾ ಪಲಾಯನ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಶಾಪವಾಗಿ ಪರಿಣಮಿಸಿದೆ.

ಸುದೀರ್ಘ ಶಿಕ್ಷಣ ಹಾಗೂ ತರಬೇತಿಯನ್ನು ಪಡೆದಿರುವ ವಿಜ್ಞಾನಿಗಳು, ತಂತ್ರಜ್ಞರು, ವೈದ್ಯರು, ಅಧ್ಯಾಪಕರು, ಎಂಜಿನಿಯರುಗಳು ಮಾತ್ರವಲ್ಲದೆ ಅರೆ ಕುಶಲ ಕರ್ಮಿಗಳು ಹಾಗೂ ಕುಶಲರಹಿತ ಶ್ರಮಿಕರು ದೊಡ್ಡ ಸಂಖ್ಯೆಯಲ್ಲಿ ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅರೆ ಕುಶಲಕರ್ಮಿಗಳು ಹಾಗೂ ಕುಶಲರಹಿತ ಶ್ರಮಿಕರು ದೊಡ್ಡ ಸಂಖ್ಯೆಯಲ್ಲಿ ವಿದೇಶಗಳಿಗೆ ಹೋಗುವುದು ಒಂದು ಸಮಸ್ಯೆಯಲ್ಲ.

ಆದರೆ ಭಾರತದ ಖರ್ಚಿನಲ್ಲಿ ಶಿಕ್ಷಣ ಪಡೆದ ಬುದ್ಧಿವಂತ ಜನರ ಸೇವೆಯನ್ನು ಭಾರತವು ಪಡೆಯಲಾಗದೆ ಅನ್ಯದೇಶಗಳ ಪ್ರಗತಿಗಾಗಿ ಅದನ್ನು ಬಳಕೆ ಮಾಡಲು ಆಸ್ಪದ ನೀಡಿರುವುದೆಂದರೆ ಅದು ನಮ್ಮ ರಾಜಕೀಯ, ಆರ್ಥಿಕ ವ್ಯವಸ್ಥೆಯ ಘೋರ ವೈಫಲ್ಯವೇ ಸರಿ. ಎಲ್ಲಿಯವರೆಗೆ ಇಂತಹ ಪ್ರತಿಭಾವಂತರು ಭಾರತವನ್ನು ತೊರೆದು ಪಶ್ಚಿಮದ ದೇಶಗಳತ್ತ ಸಾಗುತ್ತಾ ಇರುತ್ತಾರೆಯೋ ಅಲ್ಲಿಯವರೆಗೂ ಭಾರತಕ್ಕೆ ನಷ್ಟವಾಗುತ್ತಲೇ ಇರುತ್ತದೆ. ಹಾಗೂ ಪಶ್ಚಿಮವು ಲಾಭ ಗಳಿಸುತ್ತಲೇ ಇರುತ್ತವೆ.

ಉನ್ನತ ಶಿಕ್ಷಣ ಹಾಗೂ ತರಬೇತಿ ಹೊಂದಿದ ವಿಜ್ಞಾನಿಗಳು, ಎಂಜಿನಿಯರುಗಳು, ವೈದ್ಯರುಗಳು, ಶಿಕ್ಷಣ ತಜ್ಞರು, ವೃತ್ತಿ ನಿಪುಣರು ಮುಂತಾದ ಪ್ರತಿಭಾವಂತರುಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವಲಸೆ ಹೋಗುವ ಪ್ರತಿಭಾ ಪಲಾಯನಕ್ಕೆ ಹಲವಾರು ಕಾರಣಗಳಿವೆ. ತಮ್ಮ ಪ್ರತಿಭೆಗೆ ಪುರಸ್ಕಾರವಿರುವ ಕಡೆಗೆ, ತಮಗೆ ಹೆಚ್ಚು ಆರ್ಥಿಕ ಲಾಭ ಸಿಗುವ ಕಡೆಗೆ, ತಮ್ಮ ಬಯಕೆಯ ವೈಯಕ್ತಿಕ ಜೀವನದ ಅನುಕೂಲತೆಗಳು ಲಭ್ಯವಿರುವ ಕಡೆಗೆ, ಒಳ್ಳೆಯ ಹೆಸರು ಹಾಗೂ ಕೀರ್ತಿಯನ್ನು ಸಂಪಾದಿಸಲೆಂದು ತಮ್ಮ ದೇಶದ ಭ್ರಷ್ಟ ವ್ಯವಸ್ಥೆಯಿಂದ ಮನನೊಂದು ಪ್ರತಿಭೆಗಳು ತಮ್ಮ ದೇಶ ತೊರೆದು ವಿದೇಶಗಳಿಗೆ ಹಾರುತ್ತಿವೆ. ಪ್ರತಿಭೆಯನ್ನು ರವಾನಿಸುವ ದೇಶವು ಮೂಲಭೂತವಾಗಿ ಹಲವಾರು ಅನಾನುಕೂಲತೆಗಳನ್ನು ಅನುಭವಿಸುತ್ತದೆ. ಇದರಿಂದಾಗಿಯೇ 1967ರ ಬ್ರಿಟನ್ನಿನಲ್ಲಿ ಉಂಟಾದ ಪ್ರತಿಭಾ ಪಲಾಯನದಿಂದ ಬೇಸತ್ತ ಅಲ್ಲಿನ ಸಚಿವರು ಅಮೆರಿಕದ ವೈದ್ಯಕೀಯ ಸಮುದಾಯವನ್ನು ಬಲಗೊಳಿಸಲು ಬ್ರಿಟನ್ನಿನ ವೈದ್ಯರುಗಳಿಗೆ ತರಬೇತಿ ನೀಡುವಲ್ಲಿ ಅರ್ಥವಿಲ್ಲ ಎಂದಿದ್ದಾರೆ.

ಭಾರತದಲ್ಲಿ ನಮ್ಮ ಶೈಕ್ಷಣಿಕ ಉದ್ದಿಮೆಯಿಂದ ಶೇ. 10 ಉತ್ಪಾದನೆಯನ್ನು ವಿದೇಶಗಳಿಗೆ ರಫ್ತು ಮಾಡುತ್ತಿರುವುದರಿಂದ ಪ್ರತಿಭೆಗಳ ಮೇಲೆ ಮಾಡಿದ ನಮ್ಮ ಸರ್ಕಾರದ ವೆಚ್ಚದ ಪ್ರಯೋಜನವನ್ನು ವಿದೇಶಗಳು ಅನುಭವಿಸುತ್ತಿವೆ.

ಕಾಲೇಜು ಮತ್ತು ವಿಶ್ವ ವಿದ್ಯಾನಿಲಯಗಳಲ್ಲಿ ವಿಜ್ಞಾನ ವಿಷಯಗಳ ಬೋಧನೆ ಹಾಗೂ ಸಂಶೋಧನೆಗೆ ಪ್ರತಿಭಾವಂತರು ದೊರಕದೆ ವಿಜ್ಞಾನದ ಮೊತ್ತವೇ ಕುಸಿಯುತ್ತಿದೆ.

ವಲಸೆಯ ಮೂಲ ದೇಶಕ್ಕೆ ಮಾತ್ರವಲ್ಲದೆ ವಲಸೆ ಹೋದವರೂ ಸಹ ತಾವು ನೆಲೆಸಿರುವ ದೇಶದ ಸ್ಥಳೀಯ ನಾಗರಿಕರಿಂದ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಅರೇಬಿಯದ ದೇಶಗಳಲ್ಲಿ ಭಾರತೀಯ ಮೂಲದವರ ಕಗ್ಗೊಲೆಗಳು ನಡೆಯುತ್ತಿದ್ದರೆ, ಮಲೇಷ್ಯದಲ್ಲಿ ರಾತ್ರೋ ರಾತ್ರಿ ದೇಶ ಬಿಡುವಂತೆ ಎಚ್ಚರಿಕೆ ನೀಡಿದರೆ, ಅಮೆರಿಕದಂತಹ ರಾಷ್ಟ್ರಗಳು ವೀಸಾ ನಿರಾಕರಣೆಯ ನೀತಿಯನ್ನು ಅನುಸರಿಸುತ್ತಿವೆ.

ಪ್ರತಿಭಾ ಪಲಾಯನವನ್ನು ತಡೆಗಟ್ಟುವ ಪ್ರಸ್ತಾವನೆಗಳು: ಪ್ರತಿಭೆಯುಳ್ಳವರೆಲ್ಲ ವಿದೇಶಗಳಿಗೆ ವಲಸೆ ಹೋದರೆ ಮುಂದಿನ ಜನಾಂಗಕ್ಕೆ ಸೂಕ್ತ ನಿರ್ದೇಶನ ನೀಡಿ ಪ್ರತಿಭೆಗಳನ್ನಾಗಿ ಮಾಡುವವರು ದೊರೆಯದೆ ಹೋದರೆ ಈಗಾಗಲೇ ಕಚ್ಚಾವಸ್ತುಗಳನ್ನು ಕಳುಹಿಸಿ ಸಿದ್ಧವಸ್ತುಗಳನ್ನು ತರಿಸಿಕೊಳ್ಳುತ್ತಿರುವ ಭಾರತ ಮುಂದೊಂದುದಿನ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನದ ಮೂಲಕ ಪ್ರತಿಭಾವಂತರನ್ನು ತಯಾರಿಸುವ ತರಬೇತುದಾರರನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದಾಗಿ ಪ್ರತಿಭಾ ಪಲಾಯನವನ್ನು ತಡೆಯುವುದು ಸೂಕ್ತ. ಇದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳಿವು:

- ಸಂಪೂರ್ಣ ಸ್ವಾವಲಂಬನೆಯ ಧೋರಣೆ ಅಗತ್ಯ
- ಸ್ವದೇಶದಲ್ಲೇ ನೆಲೆಸಿ ಕೆಲಸಮಾಡಲು ಪ್ರತಿಭೆಗಳಿಗೆ ಸೂಕ್ತ ಅವಕಾಶಗಳನ್ನು ಒದಗಿಸುವುದು.
- ವ್ಯವಸ್ಥೆಯ ಗುಣಮಟ್ಟವನ್ನು ಹೆಚ್ಚಿಸುವ ಯತ್ನ.
- ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.
- ಆರ್ಥಿಕ ನೀತಿಯ ಉದಾರೀಕರಣವನ್ನು ಪುನರ್ ವಿಮರ್ಶಿಸುವುದು.
- ಮೀಸಲಾತಿ ನೀತಿಯಿಂದ ಪ್ರತಿಭೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು.

ವಿದೇಶಗಳಿಗೆ ತೆರಳಿರುವ ಪ್ರತಿಭೆಗಳಿಗೆ ಮರಳಿ ಸ್ವದೇಶಗಳಿಗೆ ಕರೆತರುವ ಯೋಜನೆ. ಈಗಾಗಲೇ ವಿದೇಶದಲ್ಲಿ ನೆಲೆಸಿರುವ ಮತ್ತು ಈಗ ಹೊರಡಲಿರುವ ಪ್ರತಿಭೆಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿ ಅವರ ಪ್ರತಿಭೆಯು ಮೂಲದೇಶದಲ್ಲೇ ಉಳಿಯುವಂತೆ ಮಾಡದಿದ್ದರೆ ಪ್ರತಿಭೆಯನ್ನು ರವಾನಿಸುತ್ತಿರುವ ದೇಶಗಳು ಪ್ರತಿಭೆಗಳ ಭೀಕರ ಬರಗಾಲಗಳನ್ನು ಎದುರಿಸುವ ದಿನಗಳು ದೂರದಲ್ಲಿಲ್ಲ. (ಕೆ.ಎಸ್.)

**ಮಾನವ ಸಂಪನ್ಮೂಲ ಅಭಿವೃದ್ಧಿ:** ವಿವಿಧ ಸಂಪನ್ಮೂಲಗಳಲ್ಲಿ ಮಾನವ ಸಂಪನ್ಮೂಲವು ಒಂದು. ಲಭ್ಯವಿರುವ ಸಂಪನ್ಮೂಲಗಳ ಸರಿಯಾದ ಬಳಕೆಗೆ ಮಾನವನ ಶ್ರಮವು ಅತೀ ಅವಶ್ಯಕ. ಜನರ ಪ್ರಮಾಣ ಮತ್ತು ಅವರ ಗುಣಮಟ್ಟವನ್ನು ಮಾನವ ಸಂಪನ್ಮೂಲ ಎಂದು ಕರೆಯಲಾಗಿದೆ. ಮಾನವನ ನೈಪುಣ್ಯತೆಯು ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದರಲ್ಲಿದೆ. ಮಾನವನಿಲ್ಲದಿದ್ದರೆ, ಅಭಿವೃದ್ಧಿ ಸಾಧ್ಯವಿಲ್ಲ, ಆರ್ಥಿಕಾಭಿವೃದ್ಧಿಯು ಮಾನವನಿಂದಾಗಬೇಕು. ಇದೊಂದು ನಿರಂತರವಾದ ಕ್ರಿಯೆ. ಇದು ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ರಾಷ್ಟ್ರ ರಕ್ಷಣೆ, ಬಂಡವಾಳ ಕ್ರೋಡೀಕರಣ, ಉತ್ಪಾದನೆ, ಅನುಭೋಗ, ಸಾರಿಗೆ ಸಂಪರ್ಕದ ಅಭಿವೃದ್ಧಿ, ನಾಗರಿಕ ಸಮಾಜದ ಸೃಷ್ಟಿ, ದಕ್ಷ ಆಡಳಿತ, ಶ್ರಮದ ಪೂರೈಕೆ ಮೊದಲಾದವುಗಳನ್ನು ಒಳಗೊಂಡಿದೆ. ಸರಕು ಸೇವೆಗಳ ಉತ್ಪಾದನೆಗೆ ಸಂಘಟನಾ ಚಾತುರ್ಯತೆಯನ್ನು ಒದಗಿಸುವುದರ ಜೊತೆಗೆ ಶ್ರಮವನ್ನು ಒದಗಿಸಿ, ಆರ್ಥಿಕ ಬೆಳವಣಿಗೆಯ ವೇಗವನ್ನು ಹೆಚ್ಚಿಸುವಲ್ಲಿ ಮಾನವ ಸಂಪನ್ಮೂಲದ ಪಾತ್ರ ಅತ್ಯಂತ ಹಿರಿದಾದುದು. ಒಂದು ದೇಶದ ಜನರು ಶೈಕ್ಷಣಿಕವಾಗಿ, ತಾಂತ್ರಿಕವಾಗಿ, ದೈಹಿಕವಾಗಿ ಉತ್ತಮವಾಗಿದ್ದಷ್ಟೂ ಸಂಪನ್ಮೂಲಗಳ ಗರಿಷ್ಠ ಬಳಕೆ ಸಾಧ್ಯ.

ಭಾರತದಲ್ಲಿ ಮಾನವನ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ 1985 ರ ಸೆಪ್ಟೆಂಬರ್‌ನಲ್ಲಿ ಸ್ಥಾಪಿತವಾಯಿತು. ಇದರ ಮುಖ್ಯ ಉದ್ದೇಶವು ಸಮಾಜದ ಎಲ್ಲಾ ಜನರ ಸರ್ವೋತೋಮುಖ ಅಭಿವೃದ್ಧಿಯಾಗಿದೆ. ಇದು ಜನಸಂಖ್ಯಾ ಯೋಜನೆ ಮತ್ತು ಜನರ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಇಲ್ಲಿ ಜನರ ಗುಣಮಟ್ಟವೆಂದರೆ ಉತ್ತಮ ಮಾನಸಿಕ ಮತ್ತು ದೈಹಿಕ ಆರೋಗ್ಯ, ಶಿಕ್ಷಣ, ಉತ್ತಮ ಕೆಲಸ ಮತ್ತು ಆದಾಯಗಳನ್ನು ಒಳಗೊಂಡಿದೆ. ಈ ಸಚಿವಾಲಯವು ಐದು ಇಲಾಖೆಗಳನ್ನು ವಹಿಸಿಕೊಂಡಿದೆ. ಅವುಗಳೆಂದರೆ ಶಿಕ್ಷಣ, ಸಂಸ್ಕೃತಿ, ಕಲೆ, ಸಾಮಾಜಿಕ ಕಲ್ಯಾಣ, ಕ್ರೀಡೆ ಹಾಗೂ ಮಹಿಳಾ ಕಲ್ಯಾಣ. ಹೀಗೆ ಇದರ ಒಟ್ಟಾರೆ ಉದ್ದೇಶವು ಜನರ ಸರ್ವೋತೋಮುಖ ಅಭಿವೃದ್ಧಿಯಾಗಿದ್ದು, ಇದು ಒಟ್ಟಾರೆ ದೇಶದ ಬೆಳವಣಿಗೆಗೆ ಅನುಕೂಲಕಾರಿಯಾಗಿರುವುದು. (ಎಸ್.ಕೆ.ಪಿ.)

**ಮಾನವತಾವಾದ:** ಕ್ರೈಸ್ತ ಸಿದ್ಧಾಂತಗಳಿಗೆ ಸಿಡಿದೆದ್ದು ಮಾನವಶಕ್ತಿಗೆ ಮಹತ್ವವನ್ನು ನೀಡಿದ ವಾದ. ಮಧ್ಯಯುಗದಲ್ಲಿ 4ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಕ್ರೈಸ್ತಚರ್ಚ್‌ಗಳೇ ಮನುಷ್ಯ ಬದುಕು ಮತ್ತು ಆಲೋಚನೆಗಳನ್ನು ನಿಯಂತ್ರಿಸುತ್ತಿದ್ದುದು. ಮನುಷ್ಯ ಮತ್ತು ಜಗತ್ತು ದೈವಕ್ಕೆ ಅಧೀನವೆಂಬ ಅವುಗಳ ಸಿದ್ಧಾಂತವನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಆದರೆ ಕ್ರಮೇಣ ಚರ್ಚ್‌ನ ಈ ಸಿದ್ಧಾಂತವನ್ನು ಅನೇಕರು ವಿರೋಧಿಸತೊಡಗಿದರು. ಅವರು ಮಾನವನ ಘನತೆ ಮತ್ತು ಸಾಮರ್ಥ್ಯಗಳಿಗೆ ಮಹತ್ವವನ್ನು ನೀಡಲು ಪ್ರಾರಂಭಿಸಿದರು. ಇಲ್ಲಿ ದೈವಶಕ್ತಿಯ ಸ್ಥಾನವನ್ನು ಮಾನವ ಶಕ್ತಿಯು ಆಕ್ರಮಿಸಿತು. ಹೀಗೆ 14ನೆಯ ಶತಮಾನದಲ್ಲಿ ಮಾನವನಲ್ಲಿದ್ದ ಸುಪ್ತಶಕ್ತಿಯು ಪುನರುಜ್ಜೀವನಗೊಂಡಿತು. ಮಾನವ ಶಕ್ತಿಯು ಮಹತ್ವದ ಸ್ಥಾನವನ್ನು ಪಡೆದುದರಿಂದ ಈ ಸಿದ್ಧಾಂತಕ್ಕೆ ಮಾನವತಾವಾದ ಎಂಬ ಹೆಸರು ಬಂದಿತು.

ಲ್ಯೂಡೋವಿಕೊ ವಿವೆಲ್, ಪೀಟರ್ ರಾಮಸ್, ಪ್ಯಾರಸ್ಲೆಲ್ಯಸ್ ಮತ್ತು ಬರ್ನಾಡಿನೊ ಟೆಲಿರಿಯೊ ಮಾನವತಾವಾದದ ಅಗ್ರಗಣ್ಯರು. ಇವರು ಪೂರ್ವಸಿದ್ಧಾಂತಗಳಿಗೆ ಮೊರೆ ಹೋಗದೇ ಮತ್ತು ಇತರರ ಅಭಿಪ್ರಾಯಗಳನ್ನು ಅವಲಂಬಿಸದೇ ಜಗತ್ತನ್ನು ಅವರ ಅನುಭವಕ್ಕೆತಕ್ಕಂತೆ ಅವಲೋಕನ ಮತ್ತು ಪ್ರಯೋಗಗಳ ಮೂಲಕ ಅಧ್ಯಯನ ಮಾಡಲು ಯತ್ನಿಸಿದರು. ಅನೇಕ ವೇಳೆ ಅವರ ಚಿಂತನೆಗಳಲ್ಲಿ ಅಸ್ಪಷ್ಟತೆ ಮತ್ತು ನಿಗೂಢತೆಗಳು ಕಂಡು ಬಂದರೂ ಅವರಲ್ಲಿ ನಾವು ಮಾನವನನ್ನು ಪೂರ್ವಾಭಿಪ್ರಾಯಗಳಿಂದ ಮುಕ್ತಗೊಳಿಸುವ ಮೊಟ್ಟಮೊದಲು ಪ್ರಯತ್ನವನ್ನು ಕಾಣುತ್ತೇವೆ. ಅನಂತರ ಲಿಯೋನಾರ್ಡೊ ಡ ವಿಂಚಿ (1452–1519), ಕೋಪರ್‌ನಿಕಸ್ (1473–1543), ಗೆಲಿಲಿಯೋ (1564–1642), ಕೆಪ್ಲರ್ (1642–1727) ಮತ್ತು ನ್ಯೂಟನ್ (1452–1519) ಜಗತ್ತಿಗೆ ಶುದ್ಧ ಯಾಂತ್ರಿಕ ನಿರೂಪಣೆ ನೀಡಿದರು. ಪ್ರಪಂಚವನ್ನು ಕುರಿತ ಅತಿಮಾನುಷ ನಿರೂಪಣೆ ಇವರಿಗೆ ಸ್ವಾದರಹಿತವಾಗಿತ್ತು. ವಿಶ್ವವೆಂಬ ಪುಸ್ತಕ ಗಣಿತದ ಭಾಷೆಯಲ್ಲಿ ಬರೆಯಲ್ಪಟ್ಟಿದೆಯೆಂದು ಸಾರಿದ ಇವರಿಗೆ ಗಣಿತವೊಂದೇ ಶ್ರೇಷ್ಠ ವಿಜ್ಞಾನವಾಯಿತು. ಈ ಕಾಲದಲ್ಲಿ ಖಗೋಳವಿಜ್ಞಾನವನ್ನು ಕುರಿತ ಅನೇಕ ಹೊಸ ವಿಚಾರಗಳು ಹೊರ ಬಂದವು. ಒಟ್ಟಾರೆ ಮಾನವತಾವಾದ ಪುನರುಜ್ಜೀವನದಲ್ಲಿ ವಿಜ್ಞಾನದ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನೇ ಎಬ್ಬಿಸಿತು. (ಎಚ್.ಎಲ್.ಸಿ.)

**ಮಾನವಾಂತರ ಚಲನೆ ಅಥವಾ ಋತ್ಯಂತರ ವಲಸೆ:** ಒಂದು ಭೂಪ್ರದೇಶದಿಂದ ಮತ್ತೊಂದು ಭೂಪ್ರದೇಶಕ್ಕೆ ಉಂಟಾಗುವ ಜೀವ ಸಂಗ್ರಹಣೆಯ ವಲಸೆ. ಉದಾಹರಣೆಗೆ ಕೆಲವು ಋತುಗಳಲ್ಲಿ ಕಣಿವೆ ಪ್ರದೇಶಗಳಿಂದ ಪರ್ವತ ಪ್ರದೇಶಗಳಿಗೆ ಹಾಗೂ ಪರ್ವತ ಪ್ರದೇಶಗಳಿಂದ ಕಣಿವೆ ಪ್ರದೇಶಗಳಿಗೆ ಆಹಾರ, ಬೇಟೆ, ಹುಲ್ಲುಗಾವಲು ಇತ್ಯಾದಿಗಾಗಿ ಮಾನವಾಂತರ ಚಲನೆಯಾಗುವುದುಂಟು. ಜನರು ಆಲ್ಪ್ಸ್‌ನಲ್ಲಿ ಉನ್ನತವಾದ ಹುಲ್ಲುಗಾವಲು ಇರುವ ಪ್ರದೇಶಗಳಿಗೆ ವರ್ಷದ ಕೆಲವು ತಿಂಗಳು ವಲಸೆ ಕೈಗೊಂಡು, ಪಶುಗಳ ಪೋಷಣೆ, ಕ್ಷೀರೋದ್ಯಮ ಇತ್ಯಾದಿಗಳಲ್ಲಿ ತೊಡಗಿರುವುದು ತೀರ ಸಾಮಾನ್ಯವಾಗಿರುತ್ತದೆ. ಅಲ್ಲದೆ ನಾರ್ವೆ ದೇಶದ ಮುನ್ನಾಡು ಹಾಗೂ ವೇಲ್ಸ್ ಮತ್ತು

ಸ್ಕಾಟ್‌ಲೆಂಡ್‌ನ ಕೆಲವು ಉನ್ನತ ಭಾಗಗಳಲ್ಲಿ ವಿಶೇಷವಾಗಿ ಚಳಿಗಾಲದಲ್ಲಿ ಹಿಮಪಾತ ಪ್ರಾರಂಭವಾದಾಗ ತಮ್ಮ ದನಕರುಗಳೊಂದಿಗೆ ಕೆಳಪ್ರದೇಶಕ್ಕೆ ಹಿಂದಿರುಗುವುದು ಸರ್ವೆ ಸಾಮಾನ್ಯ. (ಎಸ್.ಎಂ.ಎಚ್.)

**ಮಾನಸ ಸರೋವರ:** ಪ್ರಸಿದ್ಧ ಯಾತ್ರಾಸ್ಥಳ. ಹಿಂದೆ ಈ ಭಾಗ ಭಾರತ ಹಾಗೂ ಟಿಬೆಟ್ ರಾಷ್ಟ್ರಗಳ ಗಡಿ ಮಧ್ಯೆ ಇತ್ತು. ಈಗ ಚೀನೀಯರ ಆಕ್ರಮಣದಿಂದಾಗಿ (1962) ಚೀನದಲ್ಲಿ ಅಂತರ್ಗತವಾಗಿದೆ. ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಗುರ್ಲಾ ಮಾಂಧಾತ್ (2359 ಮೀ) ಹಾಗೂ ಕೈಲಾಸಪರ್ವತ (2046 ಮೀ) ಇವುಗಳ ಮಧ್ಯದಲ್ಲಿ ಈ ಸರೋವರವಿದೆ. ಇದು ದುರ್ಗಮ ಸ್ಥಳ. ಇಲ್ಲಿಗೆ ಹೋಗಲು ಎರಡು ಮುಖ್ಯ ದಾರಿಗಳಿವೆ. ಇವೆರಡೂ ಹಿಮಾಲಯ ಪರ್ವತಾವಳಿಯಲ್ಲಿವೆ. ಹಿಮಾಲಯವನ್ನು ಹತ್ತಿದ ಅನಂತರ ಟಿಬೆಟ್ ಪ್ರಸ್ಥಭೂಮಿಯನ್ನು ದಾಟಿದ ಬಳಿಕ ಎರಡು ಸರೋವರಗಳು ಕಂಡುಬರುತ್ತವೆ. ಇವುಗಳ ಪೈಕಿ ಒಂದು ರಾಕ್ಷಸ ಸರೋವರ, ಇನ್ನೊಂದು ಮಾನಸ ಸರೋವರ. ಒಂದು ಕಾಲದಲ್ಲಿ ಮಾನಸ ಸರೋವರದ ನೀರು ರಾಕ್ಷಸ ಸರೋವರಕ್ಕೆ ಹರಿದುಹೋಗುತ್ತಿತ್ತಂತೆ. ಈಗಲೂ ಆ ಜಲಧಾರೆಯ ಸ್ಥಾನ ಕಾಣುತ್ತದೆ. ಆದರೆ ನೀರು ಹರಿದರೂ ಬೆರೆಯುತ್ತಿರಲಿಲ್ಲ. ರಾಕ್ಷಸ ಸರೋವರ ಉದ್ದುದ್ದ ಹಬ್ಬಿದ್ದರೆ ಮಾನಸ ಸರೋವರ ಅಂಡಾಕೃತಿಯಲ್ಲಿ ಪಸರಿಸಿದೆ. ಈ ಸರೋವರದ ದಡದಲ್ಲಿ ರಾವಣ ಶಿವನನ್ನು ಕುರಿತು ತಪಸ್ಸು ಮಾಡಿದನೆಂದೂ ಈ ಕಾರಣದಿಂದ ಈ ಸರೋವರಕ್ಕೆ ರಾಕ್ಷಸ ಸರೋವರ ಎಂಬ ಹೆಸರು ಬಂದಿತೆಂದೂ ಐತಿಹ್ಯ. ಸದಾಕಾಲ ಹಿಮಾಚ್ಛಾದಿತವಾಗಿರುತ್ತದೆ. ಈ ಸರೋವರಗಳಲ್ಲಿ ಹಿಮಬಂಡೆಗಳು ಸಹ ಆಗಾಗ ತೇಲುತ್ತಿರುವುದುಂಟು. ಮಾನಸ ಸರೋವರದ ಪರಿಧಿ ಸು. 86 ಕಿಮೀ ಉದ್ದ ಸು. 170 ಮೀ ಆಳ. ಈ ಸರೋವರದಲ್ಲಿ ಅನೇಕ ಬಗೆಯ ಹಂಸಪಕ್ಷಿಗಳು ಇವೆ. ಮಾನಸೀ ರಾಜಹಂಸೀ ಎಂಬುದು ಲೋಕರೂಢಿ. ಇದರ ನೀರು ನೀಲವರ್ಣವಾಗಿದ್ದು ಶುಭ್ರವಾಗಿದೆ. ಹತ್ತಿರದಲ್ಲಿ ಬರ್ಫಾಚ್ಛಾದಿತ ಪರ್ವತಶ್ರೇಣಿಯಲ್ಲಿ ಕೆಲವು ತಪ್ತ ಕುಂಡಗಳಿವೆ. ಇವುಗಳಲ್ಲಿ ಸ್ನಾನ ಮಾಡುವುದರಿಂದ ಪಾಪಗಳು ನಾಶವಾಗುತ್ತವೆಯೆಂಬ ಕಲ್ಪನೆ ಆಸ್ತಿಕರಲ್ಲಿದೆ. ಮಾನಸದಲ್ಲಿ ಮಿಂದು ಕೈಲಾಸನಾಥನನ್ನು ಕಂಡರೆ ಮಹಪುಣ್ಯ ಲಭಿಸುವುದೆಂದು ಭಾವಿಸಲಾಗಿದೆ. ಮಾನಸ ಸರೋವರದ ಜೌಗಿನಿಂದ ಸರಯೂ, ಸಟ್ಲೆಜ್ ಮತ್ತು ಬ್ರಹ್ಮಪುತ್ರ ನದಿಗಳು ಉಗಮಗೊಂಡಿವೆ. ಬ್ರಹ್ಮನ ಮಾನಸದಲ್ಲಿ ಈ ಸರೋವರ ಸೃಷ್ಟಿಯಾಯಿತೆಂದು ವಾಲ್ಮೀಕಿ ರಾಮಾಯಣದಲ್ಲಿ ಹೇಳಿದೆ. ಮಹಾಭಾರತ ಕಾಲದಲ್ಲಿ ಇದು ಶ್ರೇಷ್ಠ ತೀರ್ಥವೆಂದು ಪರಿಗಣಿತವಾಗಿತ್ತು. ವಾಮನಪುರಾಣದಲ್ಲಿ ವಿಷ್ಣು ಮತ್ಸ್ಯಾವತಾರವನ್ನು ಮಾನಸದಲ್ಲಿ ಧರಿಸಿದನೆಂದು ಹೇಳಿದೆ.

ಮಾನಸ ಸರೋವರದ ದೃಶ್ಯ

ಈ ಸರೋವರದ ಯಾತ್ರೆ ಬಹಳ ಪ್ರಯಾಸಕರವಾದುದು. ಇಲ್ಲಿಗೆ ಹೋಗಲು ಹಿಮಾಲಯ ಪರ್ವತಶ್ರೇಣಿಗಳಲ್ಲಿ ಅನೇಕ ಕಾಲುದಾರಿಗಳಿವೆ. ಅವುಗಳಲ್ಲಿ ಆಲ್ಮೋರದಿಂದ ಹೋಗುವುದು ಹೆಚ್ಚು ಸುಲಭವಾಗುತ್ತದೆ. ಆಲ್ಮೋರ ಸು. 335 ಕಿಮೀ ದೂರವಿದೆ. ಆಲ್ಮೋರ, ಗರ್ಬಿಅಂಗ್, ಲಿಪುಖಿಂಡ್ ಅನಂತರ ತಕಲ್‌ಕೋಟ್ ಅಲ್ಲಿಂದ 52 ಕಿಮೀ ಅಂತರದಲ್ಲಿ ಮಾನಸ ಸರೋವರ. ಈ ಪ್ರದೇಶ ಸಮುದ್ರಮಟ್ಟದಿಂದ ಬಹಳ ಎತ್ತರದಲ್ಲಿರುವುದರಿಂದ ಗಾಳಿ ವಿರಳವಾಗಿರುತ್ತದೆ. ಕೆಲವೊಮ್ಮೆ ಉಸಿರಾಡಲೂ ಸಾಧ್ಯವಾಗುವುದಿಲ್ಲ. ಈ ಕಾರಣದಿಂದಾಗಿ ಇಲ್ಲಿ ಜನವಸತಿ ವಿರಳ. ಯಾತ್ರಿಕರು ಗರ್ಬಿಅಂಗ್ ಊರಲ್ಲಿಯೇ ಮುಂದಿನ ಪ್ರಯಾಣಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನೂ ಹೊಂದಿಸಿಕೊಂಡು ಹೋಗಬೇಕಾಗುತ್ತದೆ. ಬಾಡಿಗೆಗೆ ಕುದುರೆ, ಹೇಸರಗತ್ತೆ ಹಾಗೂ ಕೂಲಿಗೆ ಆಳುಗಳು ಇಲ್ಲಿ ದೊರೆಯುತ್ತಾರೆ. ಚೀನೀಯರ ಆಕ್ರಮಣಾನಂತರ ಇಲ್ಲಿಗೆ ಹೋಗಲು ಪಾಸ್‌ಪೋರ್ಟ್ ಪಡೆದುಕೊಳ್ಳಬೇಕಾದ ವ್ಯವಸ್ಥೆಯಿದೆ. (ಎಸ್.ಎಸ್.ಜೆ.ಎ.)

**ಮಾನಸಿಕ ನಕ್ಷೆ :** ಒಬ್ಬ ವ್ಯಕ್ತಿ ಒಂದು ಪ್ರದೇಶವನ್ನು ಕುರಿತು ತನ್ನ ಮನಸ್ಸಿನಲ್ಲಿ ಹೊಂದಿರುವ ಮಾಹಿತಿಗಳು ಹಾಗೂ ಕಲ್ಪನೆಗಳ ನಕ್ಷೆ (ಮೆಂಟಲ್ ಮ್ಯಾಪ್). ಈ ನಕ್ಷೆಯು ಆತನ ವರ್ತನೆಗಳನ್ನು ಪ್ರತಿಬಿಂಬಿಸುತ್ತದೆ. ಅಧ್ಯಯನ ಕ್ರಮವನ್ನು ವರ್ತನಾ ವಿಧಾನವೆಂದು ಕರೆಯಲಾಗಿದೆ.

ಮಾನಸಿಕ ನಕ್ಷೆ ಅಂತಿಮವಾಗಿ ಒಬ್ಬವ್ಯಕ್ತಿಯ ಮನಸ್ಸಿನಲ್ಲಿ ಮೂಡುವ ಚಿತ್ರಣ. ಇದಕ್ಕೆ ಮೊದಲು ಆ ಪ್ರದೇಶದ ಬಗ್ಗೆ ವ್ಯಕ್ತಿಯು ಕೆಲವು ಸಂಗತಿಗಳನ್ನು ಕಲೆಹಾಕಿ ಮನಗಂಡಿರುತ್ತಾನೆ. ಈ ಮಾಹಿತಿಯನ್ನು ವಿಂಗಡಿಸಿ, ಮನಸ್ಸಿನಲ್ಲಿಯೇ ಸಂಗ್ರಹಿಸಿ ಅದರ ವಿವಿಧ ಸ್ಥಳಗಳನ್ನು, ಪರಿಸರದ ಬಗ್ಗೆ ಮಾಹಿತಿಗಳನ್ನು ಆರಿಸಿಕೊಂಡಿರುತ್ತಾನೆ. ಇದರ ಪ್ರಭಾವದಿಂದ ಆತನ ವರ್ತನೆ ನಿರ್ಧರಿಸಲ್ಪಡುವುದು. ಒಂದೇ ಪರಿಸರವನ್ನು ಕುರಿತು ವಿವಿಧ ವ್ಯಕ್ತಿಗಳು ಹೊಂದಿರುವ ಅಭಿಪ್ರಾಯಗಳು ಭಿನ್ನವಾಗಿರುತ್ತದೆ. ಇದರಿಂದಾಗಿ ಒಂದೇ ಪರಿಸರ ಹಾಗೂ ಪರಿಸ್ಥಿತಿಗಳ ಬಗೆಗೂ ವ್ಯಕ್ತಿಗಳ ವರ್ತನೆ ಭಿನ್ನವಾಗಿರುತ್ತದೆ. ಈ ಪರಿಭಾವನೆಯನ್ನು ಮಾನವ ಪರಿಸರ ಸಂಬಂಧದ ವಿಶ್ಲೇಷಣೆಯಲ್ಲಿ ಇಂದು ವ್ಯಾಪಕವಾಗಿ ಬಳಸಲಾಗುತ್ತಿದೆ. ಈ ವಿಧಾನವನ್ನು ಭೂಗೋಳವಿಜ್ಞಾನವು ಮನಃಶಾಸ್ತ್ರದಿಂದ ಪಡೆದು ಬಹು ಪರಿಣಾಮಕಾರಿಯಾಗಿ ಬಳಸುತ್ತಿದೆ. (ಆರ್.ಎನ್.)

**ಮಾನೊರೈಲು:** ಒಂದೇ ಕಂಬಿಯ ಮೇಲೆ ಓಡುವ ವಿದ್ಯುಚ್ಚಾಲಿತ ರೈಲು ಮಾರ್ಗ. ಮಾನೋರೈಲು ಗೇಜ್‌ವೇಗಿಂತ ಅಗಲವಾಗಿರುತ್ತದೆ. ಒಂದೇ ಹಳಿಯನ್ನು ಉಪಯೋಗಿಸಿ ಭಾರವನ್ನು ಹೊರುವ ಸಾಧನವಾಗಿದೆ. 1901ರಲ್ಲಿ ಜರ್ಮನಿಯಲ್ಲಿ ಮೊದಲಬಾರಿಗೆ ಬಳಕೆಯಾಯಿತು ಈಗ ಟೋಕಿಯೊ ಹಾಗೂ ಇನ್ನಿತರ ನಗರಗಳಲ್ಲಿವೆ. ಎರಡು ವಿಧವಾದ ಮಾನೋರೈಲುಗಳಿವೆ. ಸ್ಟ್ರಾಡಲ್ ಬೀಮ್ ಮತ್ತು ನೇತಾಡುವುದು. ಮಾನೋರೈಲು ನಾಮಾಂಕಿತ ಅಥವಾ ಕೈಗಾರಿಕ ಮಾನೋರೈಲು ಇದರಲ್ಲಿ ನಿಯಮಿತ ವಸ್ತುಗಳನ್ನು ಅಥವಾ ನಿಯಮಿತ ಜನರನ್ನು ಸಾಗಿಸುವುದಾಗಿದೆ. ಎಲ್ಲಾ ಮಾನೋರೈಲುಗಳಲ್ಲಿ ವಿದ್ಯುಚ್ಛಕ್ತಿಯ ತಂತಿಗಳಿಂದ ಅಥವಾ ವಿದ್ಯುತ್ ಸರಬರಾಜಿತ ಚಾನಲ್‌ಗಳನ್ನೆ ತೊಲೆಗೆ ನೇತು ಹಾಕಿರುತ್ತಾರೆ. ಅಧಿಕ ಆರ್ಥಿಕ ವೆಚ್ಚ ಮತ್ತು ನಿಧಾನಗತಿಯಿಂದಾಗಿ ಈ ರೈಲು ಹೆಚ್ಚು ಬಳಕೆಯಲ್ಲಿಲ್ಲ. ಭಾರತದಲ್ಲಿ ಇದನ್ನು ಬಳಕೆಗೆ ತರಲು ಯೋಚಿಸಲಾಗುತ್ತಿದೆ. (ಎಂ.ಎಚ್.)

**ಮಾನ್ಸ್‌ಸೆರ್ರಾಟ್:** ಕೆರೆಬಿಯನ್ ಸಮುದ್ರದಲ್ಲಿರುವ ಬ್ರಿಟಿಷ್ ಸಾಗರೀಯ ಸಾಮ್ರಾಜ್ಯದ ಭಾಗ. ಇದು ಸು. 16 ಕಿಮೀ ಉದ್ದ ಹಾಗೂ 11 ಕಿಮೀ ಅಗಲವನ್ನು ಹೊಂದಿದ್ದು, ಸು. 102 ಚ.ಕಿಮೀ ವಿಸ್ತೀರ್ಣವಾಗಿದೆ. ಈ ದ್ವೀಪ ಪೋರ್ಟೊರಿಕೊ ಆಗ್ನೇಯಕ್ಕೆ 480 ಕಿಮೀ ಹಾಗೂ ಆಂಟಿಗುವದ ನೈರುತ್ಯಕ್ಕೆ 48 ಕಿಮೀ ದೂರದಲ್ಲಿದೆ. ಇದರ ರಾಜಧಾನಿ ಪ್ಲೇಮೌತ್. ಜನಸಂಖ್ಯೆ 4488 (2005). ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 44. 1493ರಲ್ಲಿ ಈ ದ್ವೀಪಕ್ಕೆ ಕ್ರಿಸ್ಟೋಫರ್ ಕೊಲಂಬಸ್ ತನ್ನ ಎರಡನೆಯ ಹೊಸ ಪ್ರಪಂಚ ಪರ್ಯಟನೆಯ ಸಂದರ್ಭದಲ್ಲಿ ಈ ಹೆಸರನ್ನು ಕೊಟ್ಟ. (ಡಿ.ಎಸ್.ಜೆ.)

**ಮಾನ್ವಿ:** ರಾಯಚೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಪೂರ್ವ ಮತ್ತು ಈಶಾನ್ಯ ದಿಕ್ಕಿನಲ್ಲಿ ರಾಯಚೂರು, ಉತ್ತರದಲ್ಲಿ ದೇವದುರ್ಗ, ಪಶ್ಚಿಮ ಮತ್ತು ವಾಯವ್ಯದಲ್ಲಿ ಲಿಂಗಸುಗೂರು, ನೈರುತ್ಯದಲ್ಲಿ ಸಿಂಧನೂರು ತಾಲ್ಲೂಕುಗಳೂ ದಕ್ಷಿಣದಲ್ಲಿ ಆಂಧ್ರಪ್ರದೇಶವೂ ಸುತ್ತುವರಿದಿವೆ. 171 ಗ್ರಾಮಗಳಿವೆ. ಮಾನ್ವಿ, ಹಿರೇಕೊಟ್ನಿಕಲ್, ಕುರುಡಿ, ಕಲ್ಲೂರು, ಸಿರಿವಾರ, ಮಲಟ್, ಕವಿತಾಳ, ಪಾಮನಕಲ್ಲೂರು ಮತ್ತು ಹಾಲಪುರ ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 1,729.2 ಚ.ಕಿಮೀ. ಜನಸಂಖ್ಯೆ 3,30,540.

ತುಂಗಭದ್ರಾನದಿ ತಾಲ್ಲೂಕಿನ ದಕ್ಷಿಣದಿಂದ ಪೂರ್ವ ಮತ್ತು ಈಶಾನ್ಯ ದಿಕ್ಕಿಗೆ ಹರಿದು ಆಂಧ್ರ ಪ್ರದೇಶದಿಂದ ಮಾನ್ವಿಯನ್ನು ಪ್ರತ್ಯೇಕಿಸಿದೆ. ಮಾನ್ವಿ ಮತ್ತು ಸಿಂಧನೂರು ತಾಲ್ಲೂಕುಗಳ ಮಧ್ಯೆ ತುಂಗಭದ್ರಾನದಿಯನ್ನು ಸೇರುವ ಹಿರೇಹಳ್ಳ ಹರಿಯುತ್ತದೆ. ಇದಲ್ಲದೆ ತಾಲ್ಲೂಕಿನಲ್ಲಿ ಇನ್ನೆರಡು ಹಳ್ಳಗಳು ಹರಿದು ತುಂಗಭದ್ರಾ ನದಿಯನ್ನು ಸೇರುತ್ತವೆ. 54 ಕೆರೆಗಳಿವೆ. ಇಲ್ಲಿಯ 128 ಗ್ರಾಮಗಳಿಗೆ ತುಂಗಭದ್ರಾ ಜಲಾಶಯದ ಎಡದಂಡೆನಾಲೆಯ ನೀರು ದೊರೆತು ವ್ಯವಸಾಯ ಅಭಿವೃದ್ಧಿಯಾಗಿದೆ. ಜೋಳ, ದ್ವಿದಳಧಾನ್ಯಗಳು, ನೆಲಗಡಲೆ, ಹತ್ತಿ, ಎಣ್ಣೆಬೀಜಗಳು, ಸಜ್ಜೆ ಮತ್ತು ಬತ್ತ ಬೆಳೆಯುತ್ತಾರೆ.

ಕೈಮಗ್ಗದ ಬಟ್ಟೆಗಳು, ಚರ್ಮ ಮತ್ತು ಮರಗೆಲಸ ಇಲ್ಲಿಯ ಮುಖ್ಯ ಕೈಗಾರಿಕೆಗಳು. ಈ ಉದ್ಯೋಗಗಳಿಗೆ ಪ್ರೋತ್ಸಾಹ ನೀಡಲು ಸಹಕಾರ ಸಂಘಗಳಿವೆ. ಅಲ್ಲದೆ ಹತ್ತಿ ಶುದ್ಧೀಕರಣ ಕಾರ್ಖಾನೆಗಳು ಮತ್ತು ಮರಕೊಯ್ಯುವ ಕಾರ್ಖಾನೆ ಮುಂತಾದವು ಕೂಡ

ಇವೆ. ಮಾನ್ವಿ ತಾಲ್ಲೂಕಿನಿಂದ ಸುತ್ತಲ ಪಟ್ಟಣಗಳಿಗೆ ಉತ್ತಮಮಾರ್ಗಗಳಿವೆ. ಈ ತಾಲ್ಲೂಕು ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಎಲ್ಲೆಯಲ್ಲಿದ್ದು ಎರಡೂ ಕಡೆಯ ಸುತ್ತಮುತ್ತಲ ಊರುಗಳ ವ್ಯಾಪಾರ ಕೇಂದ್ರವಾಗಿದೆ.

ಮಾನ್ವಿ ಹೋಬಳಿ ಮತ್ತು ತಾಲ್ಲೂಕು ಆಡಳಿತಕೇಂದ್ರ. ರಾಯಚೂರಿನ ನೈರುತ್ಯದಲ್ಲಿ 44 ಕಿಮೀ ದೂರದಲ್ಲಿ ರಾಯಚೂರು-ಸಿಂಧನೂರು ಹೆದ್ದಾರಿ ಮಧ್ಯದಲ್ಲಿದೆ. ಇದು ತುಂಗಭದ್ರಾ ಯೋಜನೆಯ ಕಾರ್ಯಕೇಂದ್ರ ಮತ್ತು ವ್ಯಾಪಾರಾಭಿವೃದ್ಧಿಯೊಂದಿಗೆ ವಿಸ್ತರಿಸುತ್ತಿದೆ. ಜನಸಂಖ್ಯೆ 37,555. ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ. *

**ಮಾನ್‌ಸೂನ್:** ವಿಶೇಷತಃ ಹಿಂದೂ ಮಹಾಸಾಗರ ಮತ್ತು ದಕ್ಷಿಣ ಏಷ್ಯಗಳ ಮೇಲೆ ಶ್ರಾಯಿಕವಾಗಿ (ನಿಯತಕಾಲಿಕ) ಬೀಸುವ ಕ್ಲುಪ್ತ ಮಾರುತ, ಋತು ಎಂದು ಅರ್ಥ ನೀಡುವ ಮೌಸಿಮ್ ಎಂಬ ಅರಬ್ಬಿ ಭಾಷೆಯ ಪದದಿಂದ ಬಂದ ಪದ. ಅರಬ್ಬಿ ಸಮುದ್ರದ ಮೇಲೆ ಬೀಸುವ ವಿಪರ್ಯಾಯ ಮಾರುತಗಳ ವ್ಯವಸ್ಥೆಯನ್ನು ವಿವರಿಸಲು ನಾವಿಕರು ಹಲವು ಶತಮಾನಗಳಿಂದ ಈ ಪದವನ್ನು ಬಳಸುತ್ತಿದ್ದರು. ಈ ಮಾರುತಗಳು ವರ್ಷದಲ್ಲಿ ಆರು ತಿಂಗಳ ಕಾಲ ಈಶಾನ್ಯದಿಂದಲೂ ಉಳಿದ ಆರು ತಿಂಗಳಕಾಲ ನೈರುತ್ಯದಿಂದಲೂ ಬೀಸುತ್ತವೆ. ಮಾನ್‌ಸೂನಿನ ಕರಾರುವಾಕ್ಕಾದ ವ್ಯಾಖ್ಯೆಯ ಬಗ್ಗೆ ಅಭಿಪ್ರಾಯ ಭೇದವಿದೆಯಾದರೂ ವರ್ಷದ ಒಂದು ಭಾಗದಲ್ಲಿ ಕ್ಲುಪ್ತವಾಗಿ ಹಾಗೂ ನಿಯತವಾಗಿ ಬೀಸುವಂಥ ಮಾರುತವನ್ನು ಸೂಚಿಸಲು ಈ ಪದವನ್ನು ಬಳಸಲಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಋತುಗಳೊಡನೆ ವ್ಯತ್ಯಯಗೊಳ್ಳುವ ಬೃಹತ್ ಪ್ರಮಾಣದಲ್ಲಿ ಭೂಮಿ ಹಾಗೂ ಸಾಗರ ಪ್ರದೇಶಗಳು ಭೇದಾತ್ಮಕವಾಗಿ ಬಿಸಿಯಾಗುವುದೇ ಆಗಿದೆ. ಸೌರಶಕ್ತಿಯಲ್ಲಿಯ ಋತು ಸಂಬಂಧಿಸಿದಂತೆ ಖಂಡಗಳು ಹಾಗೂ ಸಾಗರಗಳು ಗಮನಾರ್ಹ ವ್ಯತ್ಯಾಸ ಹೊಂದಿವೆ. ಭೂಮಿಯ ರಾಸಾಯನಿಕ ಸಂಯೋಜನೆ ಹಾಗೂ ಅದರ ಮಣ್ಣಿನ ಗುಣ ಲಕ್ಷಣದ ಪರಿಣಾಮವಾಗಿ ಭೂಮಿಗೆ ಉಷ್ಣ ದಹನ ಗಮನೀಯವಾಗಿ ಮಂದಪ್ರಕ್ರಿಯೆಯಾಗಿದೆ. ಉದಾಹರಣೆಗೆ ಬೇಸಗೆಯಲ್ಲಿ ಖಂಡಗಳು ಪಡೆಯುವ ಸೌರ ಶಕ್ತಿಯಿಂದ ಕೆಲವೇ ಮೀಟರುಗಳಷ್ಟು ಮಂದದ ಭೂಮಿಯ ಪದರ ಕಾಯುವುದು; ಹಾಗಾಗಿ ಖಂಡಗಳ ಮೇಲ್ಮೈಯನ್ನು ತಲುಪುವ ಸೌರಶಕ್ತಿಯ ಹೆಚ್ಚಿನ ಭಾಗ ಭೂಮಿಯ ಮೇಲ್ಮೈಯನ್ನು ಬಿಸಿಮಾಡುವುದಕ್ಕಿಂತ ಅಲ್ಲಿಯ ವಾಯುವನ್ನು ಬಿಸಿಮಾಡುವುದರಲ್ಲಿಯೇ ಉಪಯೋಗವಾಗಿ ಬಿಡುತ್ತದೆ. ಗಾಳಿಯ ಪರಿಣಾಮದಿಂದ ಉಂಟಾಗುವ ನೀರಿನ ಕಲಕುವಿಕೆಯಿಂದ ಸಾಗರದಲ್ಲಿ ಹೆಚ್ಚು ಆಳಕ್ಕೆ ಇದು ಪ್ರವೇಶಿಸಬಲ್ಲದು. ಇದರಿಂದ ಸೌರಶಾಖದ ಸ್ವಲ್ಪ ಭಾಗ ಮಾತ್ರ ವಾಯುವನ್ನು ಬಿಸಿಮಾಡಲು ಲಭ್ಯವಾಗುತ್ತದೆ. ಇದರ ಒಟ್ಟು ಪರಿಣಾಮವೆಂದರೆ, ಬೇಸಗೆಯಲ್ಲಿ ಉಷ್ಣತೆಯ ಹೆಚ್ಚಳ ಖಂಡಗಳಿಗಿಂತ ಸಾಗರಗಳ ಮೇಲೆ ತುಂಬ ಕಡಿಮೆಯಾಗಿರುವುದು. ಒಂದೇ ಅಕ್ಷಾಂಶದಲ್ಲಿರುವ ಪ್ರದೇಶಗಳಲ್ಲಿ ಬೇಸಗೆಯ ಸರಾಸರಿ ಉಷ್ಣತೆ ಅದೇ ಅಕ್ಷಾಂಶದಲ್ಲಿರುವ ಸಾಗರಗಳಲ್ಲಿರುವುದಕ್ಕಿಂತ $5^0$ ರಿಂದ $10^0$ಸೆ ಅಧಿಕವಾಗಿರುತ್ತದೆ. ಚಳಿಗಾಲದಲ್ಲಿ ಈ ಪರಿಸ್ಥಿತಿ ವಿಪರ್ಯಯಗೊಳ್ಳುತ್ತದೆ ಮತ್ತು ಸಾಗರಗಳ ಹೆಚ್ಚುವರಿ ಶಾಖ ಸಂಗ್ರಹಣೆಯಿಂದಾಗಿ ಭೂಭಾಗದ ಮೇಲಿರುವುದಕ್ಕಿಂತ ಸಾಗರದ ಮೇಲೆ ಹೆಚ್ಚು ಉಷ್ಣತೆಗೆ ಕಾರಣವಾಗುತ್ತದೆ. ಭೂಮಿ ಹಾಗೂ ಅಕ್ಕ ಪಕ್ಕದ ಸಮುದ್ರ ಭೇದಾತ್ಮಕ ಉಷ್ಣತೆಯಿಂದಾಗಿ ಕಾಲ ಮತ್ತು ಸ್ಥಳಗಳ ಅಲ್ಪ ಅಂತರದಲ್ಲಿಯೂ ಭೂ ಹಾಗೂ ಸಮುದ್ರ ಮಂದಮಾರುತಗಳುಂಟಾಗುತ್ತವೆ ಎಂಬುದು ಸುಪರಿಚಿತ. ಭೂಮಿಯ ಪರಿಭ್ರಮಣದಿಂದ ಭೂಮಿ ಹಾಗೂ ಸಮುದ್ರ ಮಂದಮಾರುತಗಳು ಪ್ರಭಾವಿತಗೊಳ್ಳುವುದಿಲ್ಲವಾದರೂ ಅವುಗಳಿಗೂ ಮಾನ್‌ಸೂನ್ ಮಾರುತಗಳಿಗೂ ಹೆಚ್ಚಿನ ಸಾಮ್ಯವಿದೆ. ಸೂರ್ಯ ಕರ್ಕಾಟಕ ಸಂಕ್ರಾಂತಿ ವೃತ್ತದ ಮೇಲಿರುವಂಥ ಔತ್ತರೇಯ ಬೇಸಗೆಯಲ್ಲಿ ಮಾನ್‌ಸೂನ್ ಮಾರುತಗಳು ಸಾಗರ ಮಂದ ಮಾರುತಗಳ ದೈನಿಕ ಆವರ್ತದಂತೆ ಸಾಗರದಿಂದ ಭೂ ಪ್ರದೇಶಕ್ಕೆ ಬೀಸುತ್ತವೆ; ಆದರೆ ಔತ್ತರೇಯ ಚಳಿಗಾಲದಲ್ಲಿ, ಸೂರ್ಯ ದಕ್ಷಿಣಾರ್ಧ ಗೋಳಕ್ಕೆ ಚಲಿಸಿ, ಮಕರ ಸಂಕ್ರಾಂತಿ ವೃತ್ತದಲ್ಲಿರುವಾಗ, ಭೂಮಂದಾನಿಲದ ರಾತ್ರಿ ಆವರ್ತದಂತೆ ಮಾರುತಗಳು ಪ್ರದೇಶದಿಂದ ಸಾಗರಕ್ಕೆ ಬೀಸುತ್ತವೆ.

ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಉತ್ತರಾರ್ಧಗೋಳದಲ್ಲಿ ಹಾಗೂ ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ದಕ್ಷಿಣಾರ್ಧ ಗೋಳದಲ್ಲಿ-ಹೀಗೆ ಎರಡು ಗೋಳಗಳಲ್ಲಿಯೂ ಬೇಸಗೆಯಲ್ಲಿ ಮಾನ್‌ಸೂನ್ ಮಾರುತಗಳು ಪ್ರಬಲವಾಗಿರುತ್ತವೆ. ಬಾಂಗ್ಲಾದೇಶ, ಮಯನ್ಮಾರ್, ಥೈಲೆಂಡ್, ಕಾಂಬೋಡಿಯ, ಲಾವೋಸ್, ಮಲಯ, ವಿಯಟ್ನಾಮ್, ಸಿಂಗಪುರ, ಚೀನ ಮತ್ತು ಜಪಾನ್ ಹಾಗೂ ಸ್ವಲ್ಪಮಟ್ಟಿಗೆ ಆಫ್ರಿಕದತ್ತ ಉತ್ತರಾರ್ಧಗೋಳದಲ್ಲಿ ಆಳವಾಗಿ ಭೇದಿಸುತ್ತವೆ.

ಅದೇ ಮತ್ತೊಂದು ಕಡೆ, ಜನವರಿಯಲ್ಲಿ ಈಶಾನ್ಯ ವಾಣಿಜ್ಯ ಮಾರುತಗಳು ದಕ್ಷಿಣಾಭಿಮುಖವಾಗಿ ದಕ್ಷಿಣ-ಅಮೆರಿಕ, ಪೂರ್ವ-ಆಫ್ರಿಕ, ಈಶಾನ್ಯ-ಆಸ್ಟ್ರೇಲಿಯಗಳತ್ತ ಚಲಿಸುತ್ತವೆ. ಈ ಅವಧಿಯಲ್ಲಿ ಈಶಾನ್ಯ ವಾಣಿಜ್ಯಮಾರುತಗಳ ಒಂದು ಭಾಗ ಬಂಗಾಲಕೊಲ್ಲಿಯ ದಕ್ಷಿಣದಲ್ಲಿ ಹಾಯ್ದು ಭಾರತ ಪರ್ಯಾಯ ದ್ವೀಪದ ದಕ್ಷಿಣಾರ್ಧದಲ್ಲಿ ಆಲಿಕಲ್ಲು ಕೂಡಿದ ಮಳೆಯನ್ನುಂಟುಮಾಡುತ್ತದೆ. ಇದು ಭಾರತದ ಈಶಾನ್ಯ ಮಾನ್‌ಸೂನ್ ಎಂದು ಸುಪರಿಚಿತವಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ ತಂಪಿನಿಂದ ಬೆಚ್ಚನೆಯ ಗೋಳಾರ್ಧಗಳಿಗೆ ಬೃಹತ್ ಪ್ರಮಾಣದ ವಾಯುಚಲನೆಯಿಂದ ಪ್ರಭಾವಿತವಾಗುವ ಭೂಮಿಯ ಪ್ರದೇಶಗಳು ಪ್ರಪಂಚದ ಮುಖ್ಯ ಮಾನ್‌ಸೂನ್ ಪ್ರದೇಶಗಳಾಗಿವೆ.

ಉತ್ತರ ಆಸ್ಟ್ರೇಲಿಯ, ಆಫ್ರಿಕ ಮತ್ತು ಅಮೆರಿಕದ ದಕ್ಷಿಣ ಭಾಗಗಳಲ್ಲಿ ಋತು ಸಂಬಂಧ ಮಾರುತ ಬದಲಾವಣೆಗಳುಂಟಾಗುವ ಹಂತ ತಿಳಿದು ಬಂದಿದ್ದರೂ ಇತರ ಖಂಡಾಂತರ ಪ್ರದೇಶಗಳೊಡನೆ ಸಂಬಂಧಿಸಿದ ಮಾನ್‌ಸೂನ್ ಚಲನೆಗಳು ಭಾರತದ ಮಾನ್‌ಸೂನ್ ಮಾರುತಗಳಷ್ಟು ಗಮನಾರ್ಹವಾಗಿಲ್ಲ. ಜೂನ್-ಜುಲೈ ಬೇಸಗೆಯ ತಿಂಗಳುಗಳಲ್ಲಿ ಅಟ್ಲಾಂಟಿಕ್‌ನಿಂದ ಯುರೋಪಿಗೆ ಬೀಸುವ ವಾಯವ್ಯ ಮಾರುತಗಳ ಪ್ರವೃತ್ತಿಯನ್ನು ಯುರೋಪಿಯನ್ ಮಾನ್‌ಸೂನ್ ಎಂದು ಕೆಲವೊಮ್ಮೆ ಕರೆಯಲಾಗುವುದು.

ಮಾನ್‌ಸೂನ್ ಮಾರುತಗಳನ್ನು ಮಾರುತಗಳ ವಿಪರ್ಯಯತೆಯಿಂದ ಗುರುತಿಸಲಾಗುವುದಾದರೂ ಬಹುಮಟ್ಟಿಗೆ ಮಳೆ ಬೀಳುವಿಕೆಯಿಂದಲೇ ಅವುಗಳಿಗೆ ಪ್ರಾಮುಖ್ಯ ಉಂಟಾಗಿದೆ. ಮಾನ್‌ಸೂನ್ ಮಾರುತಗಳ ಪ್ರಮುಖ ಪ್ರದೇಶಗಳು ಇಂತಿವೆ:

(ಅ) ಭಾರತ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ: ಈ ದೇಶಗಳು ಈಶಾನ್ಯ ಮತ್ತು ನೈರುತ್ಯ ಎರಡೂ ಮಾನ್‌ಸೂನ್ ಮಾರುತಗಳಿಂದ ಪ್ರಭಾವಿತವಾಗುತ್ತವೆ. ಇವುಗಳ ಅವಧಿ ಕ್ರಮವಾಗಿ ಜೂನ್‌ನಿಂದ ಸೆಪ್ಟೆಂಬರ್ ಮತ್ತು ಡಿಸೆಂಬರ್‌ನಿಂದ ಮಾರ್ಚ್ ಆಗಿರುತ್ತದೆ.

(ಆ) ಇಂಡೋಚೀನ, ಮಲಯ ಮತ್ತು ಫಿಲಿಪೈನ್ಸ್: ಇಲ್ಲಿಯ ಮಾನ್‌ಸೂನ್ ಲಕ್ಷಣಗಳು ಭಾರತದಲ್ಲಿರುವಂತೆಯೇ ಇವೆ. ಆದಾಗ್ಯೂ ಮಳೆಯ ಪ್ರಮಾಣ ಕಡಿಮೆ ಮತ್ತು ಸ್ಥಳಸ್ವರೂಪ ಗಮನಾರ್ಹ ಪಾತ್ರ ವಹಿಸದಿರುವುದರಿಂದ ಮಳೆ ಹೆಚ್ಚು ಸಮನಾಗಿ ಹಂಚಿಹೋಗಿರುತ್ತದೆ.

(ಇ) ಪೂರ್ವ ಆಫ್ರಿಕ ಮತ್ತು ಅಕ್ಕಪಕ್ಕದ ಪ್ರದೇಶಗಳು: ಪರ್ವತಜನಿತ ಪರಿಣಾಮದಿಂದಾಗಿ ಯೆಮೆನ್ ಮತ್ತು ಇಥಿಯೋಪಿಯಗಳಲ್ಲಿ ಹೆಚ್ಚು ಮಳೆ ಬೀಳುತ್ತದೆ. ಈ ಮಾನ್‌ಸೂನ್ ಸ್ಥಿತಿಗೂ ಭಾರತೀಯ ಮಾನ್‌ಸೂನ್ ಸ್ಥಿತಿಗೂ ಸಂಬಂಧವಿದೆ.

(ಈ) ಪಶ್ಚಿಮ ಆಫ್ರಿಕ: ಗಿನಿ ಕರಾವಳಿ ಮಾನ್‌ಸೂನ್ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಮಾರುತಗಳು ನೈರುತ್ಯ ಮತ್ತು ಈಶಾನ್ಯದವಾಗಿವೆ.

(ಉ) ಉತ್ತರ ಆಸ್ಟ್ರೇಲಿಯ: ಮಾನ್‌ಸೂನ್‌ಗಳು ವರ್ಷವಾತ ಮತ್ತು ಶುಷ್ಕವಾತ ಎಂದು ಎರಡು ಋತುಗಳಲ್ಲಿವೆ. ಭಾರತದಲ್ಲಿರುವಂತೆ ಥಟ್ಟನೆ ಮಳೆ ಬರುವುದಿಲ್ಲ, ಮಳೆಯ ಪರಿಮಾಣ ಕೂಡ ಕಡಿಮೆ.

(ಊ) ಅಮೆರಿಕ ಸಂಯುಕ್ತ ಸಂಸ್ಥಾನಗಳು (ಗಲ್ಫ್ ಸ್ಟೇಟ್ಸ್): ಬೇಸಗೆಯಲ್ಲಿ ಖಂಡಾಂತರ ಬಿಸಿಯಾಗುವಿಕೆಯಿಂದಾಗಿ ಕಡಿಮೆ ಒತ್ತಡ ಪ್ರದೇಶ ರೂಪುಗೊಳ್ಳುವುದು ಹಾಗೂ ಕ್ಲುಪ್ತ ಮಾರುತ ಪರಿಣಾಮವುಂಟಾಗುವುದು. ಒತ್ತಡ ಪ್ರವಣತೆ ಏಷ್ಯದಲ್ಲಿರುವಷ್ಟು ಕಡಿದಾಗಿಲ್ಲ ಹಾಗೂ ಮಾರುತಗಳ ವಿಪರ್ಯ ಪೂರ್ಣವಾಗಿಲ್ಲ.

(ಋ) ಪೂರ್ವ ಏಷ್ಯದ ಸಮಶೀತೋಷ್ಣ ಅಕ್ಷಾಂಶಗಳು: ಚಳಿಗಾಲದಲ್ಲಿ ಮಧ್ಯೆ ಉತ್ತರ ಏಷ್ಯದಿಂದ ಗಾಳಿಯ ಬೀಸುವಿಕೆಯಿಂದಾಗಿ ಶುಷ್ಕ ಹಾಗೂ ಶೀತಹವೆ ಉಂಟಾಗುತ್ತದೆ. ವಾಯು ಪ್ರಕ್ಷುಬ್ಧತೆಯಿಂದಾಗಿ ಕೆಲವೊಮ್ಮೆ ಮಳೆ ಬರುತ್ತದೆ. ಬೇಸಗೆಯಲ್ಲಿ ಉತ್ತರ ಚೀನದಲ್ಲಿ ಉಷ್ಣತೆ ಅಧಿಕವಾಗಿರುತ್ತದೆ. ಏಷಿಯಾಟಿಕ್ ತಗ್ಗು ಸಾಗರಿಕ ವಾಯುವನ್ನು ಸೆಳೆದು ಮಳೆ ಉಂಟುಮಾಡುತ್ತದೆ.

ಮಾನ್‌ಸೂನ್‌ಗಳ ಬಗ್ಗೆ ಇತ್ತೀಚಿನ ಅಧ್ಯಯನಗಳಿಗೆ ಅಂತಾರಾಷ್ಟ್ರೀಯ ಅನ್ವೇಷಣಾಯಾತ್ರೆಗಳಿಂದ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯೂ.ಎಂ.ಒ.) ಮತ್ತು ವೈಜ್ಞಾನಿಕ ಸಂಘಗಳ ಅಂತಾರಾಷ್ಟ್ರೀಯ ಮಂಡಳಿ (ಐ.ಸಿ.ಎಸ್.ಯು) 1967ರಲ್ಲಿ ಎರಡು ಪ್ರಮುಖ ಉದ್ದೇಶಗಳಿಂದ ಗೋಳವಾಯುಮಂಡಲ ಸಂಶೋಧನ ಕಾರ್ಯಕ್ರಮವನ್ನು (ಗ್ಲೋಬಲ್ ಅಟ್ಮಾಸ್ಫಿಯರಿಕ್ ರಿಸರ್ಚ್ ಪ್ರೋಗ್ರಾಮ್-ಜಿ.ಎ.ಆರ್.ಪಿ.) ವ್ಯವಸ್ಥೆಗೊಳಿಸಿತು.

ವಾಯುಗುಣದ ಬದಲಾವಣೆಗಳನ್ನು ನಿಯಂತ್ರಿಸುವ ವಾತಾವರಣದಲ್ಲಿಯ ಬೃಹತ್ ಪ್ರಮಾಣದ ವ್ಯತ್ಯಯಗಳ ಅಧ್ಯಯನ; ವಾಯುಗುಣದ ಭೌತಿಕ ಆಧಾರಗಳ ಪರಿಶೀಲನೆ. ಈ ಕಾರ್ಯಕ್ರಮದ ಅನ್ವಯ 1978ರ ಡಿಸೆಂಬರ್ 1ರಿಂದ ಪ್ರಾರಂಭವಾಗಿ ವರ್ಷಪೂರ್ತಿ ಮಾನ್‌ಸೂನ್ ಅಧ್ಯಯನಕ್ಕಾಗಿ ಮಾನ್‌ಸೂನ್ ಪ್ರಯೋಗ (ಮಾನೆಕ್ಸ್) ಕೈಗೊಳ್ಳಲಾಯಿತು.

ಮಾನೆಕ್ಸ್ ಕಾರ್ಯಕ್ರಮಕ್ಕೆ ಮುಂಚಿತವಾಗಿ ಮೂರು ಪ್ರಯೋಗಗಳು ನಡೆದಿದ್ದವು. ಆ ಪ್ರಯೋಗಗಳು: 1963-66ರ ಅಂತಾರಾಷ್ಟ್ರೀಯ ಹಿಂದೂ ಮಹಾಸಾಗರ ಅನ್ವೇಷಣೆ (ಐ.ಐ.ಓ.ಇ.) ಮತ್ತು 1973ರ ಭಾರತ ಇಂಡೊಸೋವಿಯತ್ ಪ್ರಯೋಗಗಳು (ಐ.ಎಸ್.ಎಂ.ಇ.ಎಕ್ಸ್) ಹಾಗೂ ಮಾನ್‌ಸೂನ್ 1977-79ರ ಮಾನ್‌ಸೂನ್ ಪ್ರಯೋಗಗಳು ದೊಡ್ಡ ಪ್ರಮಾಣದವಾಗಿದ್ದು, ಅದರಲ್ಲಿ (1) ಬೇಸಗೆ ಮಾನ್‌ಸೂನ್ (2) ಚಳಿಗಾಲದ ಮಾನ್‌ಸೂನ್ ಮತ್ತು (3) ಪಶ್ಚಿಮ ಆಫ್ರಿಕದ ಮಾನ್‌ಸೂನ್ (ಡಬ್ಲ್ಯು.ಎ.ಎಂ.ಇ.ಎಕ್ಸ್.) ಎಂಬ ಮೂರು ಪ್ರಾದೇಶಿಕ ಘಟಕಗಳಿದ್ದುವು.

ಪರಂಪರಾಗತವಾದ ಹವಾಮಾನ ಸಂಬಂಧಿ ಮಾಹಿತಿಗಳನ್ನು ಸಂಗ್ರಹಿಸಲು ವೀಕ್ಷಣಾಕಾರ್ಯಕ್ರಮಗಳನ್ನು ತೀವ್ರತರಗೊಳಿಸುವುದರ ಜೊತೆಗೆ ಹೆಚ್ಚುವರಿ ವೇದಿಕೆಗಳನ್ನು–ಭೂ ಅಥವಾ ಸಾಗರಾಧಾರಿತ ಮತ್ತು ಆಕಾಶದಲ್ಲಿ ನೆಲೆಗೊಳಿಸಲಾಗಿರುವುವು–ಬಳಸಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ರಷ್ಯದ ಐದು, ಭಾರತದ ನಾಲ್ಕು ಮತ್ತು ಫ್ರಾನ್ಸಿನ ಒಂದು ಸಂಶೋಧನ ನೌಕೆಗಳು ಪಾಲ್ಗೊಂಡಿದ್ದುವು. ಅಮೆರಿಕದ ಮೂರು ಸಂಶೋಧನ ವಿಮಾನಗಳು ಬೇಸಗೆ ಹಾಗೂ ಚಳಿಗಾಲದ ಮಾನ್‌ಸೂನ್‌ಗಳೆರಡರಲ್ಲೂ ಕಾರ್ಯಪ್ರವೃತ್ತವಾಗಿದ್ದುವು. ಚಳಿಗಾಲದ ಮಾನ್‌ಸೂನ್ ವಲಯದ ಮೇಲೆ ಸಂವಹನದ ಅಧ್ಯಯನಕ್ಕಾಗಿ ವಿಶೇಷ ರೆಡಾರ್ ವೀಕ್ಷಣೆಗಳನ್ನು ಮಾಡಲಾಯಿತು. ವಿಮಾನದಲ್ಲಿ ಡ್ರಾಪ್ ವಿಂಡ್‌ಸೊಂಡ್ ಉಪಕರಣಗಳನ್ನು ಅಳವಡಿಸಲಾಗಿತ್ತು. ಗಗನದಲ್ಲಿ ನೆಲೆಗೊಳಿಸಲಾದ ವೇದಿಕೆಗಳಲ್ಲಿ ಅಮೆರಿಕದ ಭೂಸ್ಥಿರ ಉಪಗ್ರಹದಿಂದ (ಜಿ.ಓ.ಇ.ಎಸ್. ಹಿಂದೂ ಮಹಾಸಾಗರ) ಮೋಡಛಾಯೆಗಳ ಸ್ವೀಕೃತಿಯನ್ನು ನೈಜಕಾಲಕ್ಕೆ ವ್ಯವಸ್ಥೆಗೊಳಿಸಲಾಗಿತ್ತು. ಉಪಗ್ರಹದಿಂದ ಮೋಡಛಾಯೆಗಳನ್ನು ಯುರೋಪಿಯನ್ ಸ್ಪೇಸ್ ಏಜೆನ್ಸಿ ಉಡಾಯಿಸಿದ್ದ ಭೂಸ್ಥಿರ ಉಪಗ್ರಹ ಮೀಟಿಯೊಸ್ಯಾಟ್ ಮೂಲಕ ರವಾನಿಸಲಾಗುತ್ತಿತ್ತು. ಈ ಸ್ವೀಕರಣ ಸೌಲಭ್ಯಗಳ ಜೊತೆಗೆ, ಮೋಡಗಳು ಹಾಗೂ ಮಾರುತಗಳ ಬಗೆಗೆ ಮಾಹಿತಿಗಳನ್ನು ಜಪಾನ್ ಉಡಾಯಿಸಿದ್ದ ಮತ್ತೊಂದು ಭೂಸ್ಥಿರ ಉಪಗ್ರಹ (ಜೆ.ಎಂ.ಎಸ್.) ಒದಗಿಸುತ್ತಿತ್ತು.

ಮಾನೆಕ್ಸ್ ಮಾಹಿತಿಗಳನ್ನು ಈಗ ಸಂಗ್ರಹಿಸಿಡಲಾಗಿದೆ ಮತ್ತು ಮಾನ್‌ಸೂನ್ ಪದ್ಧತಿಯ ಮಾಪನದಲ್ಲಿ ಈವರೆಗೆ ವಿವರಿಸಲಾಗದಿರುವ ಹಲವಾರು ಅಂಶಗಳ ಬಗ್ಗೆ ಬೆಳಕು ಬೀರಲು ತೀವ್ರವಾದ ಅಧ್ಯಯನಕ್ಕೆ ಬಳಸಿಕೊಳ್ಳಲು ವಿವಿಧ ಅಂತಾರಾಷ್ಟ್ರೀಯ ಪತ್ರಾಗಾರ ಕೇಂದ್ರಗಳಲ್ಲಿ ಇವು ಲಭ್ಯವಿವೆ. ಮಾನ್‌ಸೂನ್ ಪ್ರಸರಣಕ್ಕೆ ಗಣಿತೀಯ ಮಾದರಿಯನ್ನು ರೂಪಿಸುವುದು ಈ ತನಕ ಸಾಧ್ಯವಾಗಿಲ್ಲ. (ಡಿ.ಕೆ.ಆರ್.ಐ.)

**ಮಾಪಕ :** ನಕ್ಷೆಗಳ ರಚನೆಯ ಮುಖ್ಯ ಉದ್ದೇಶ ಆಯಾಪ್ರದೇಶಗಳ ಉದ್ದ, ಅಗಲ, ವಿಸ್ತೀರ್ಣ ಮತ್ತು ಆಕಾರಗಳನ್ನು ಸರಿಯಾಗಿ ಪ್ರತಿನಿಧಿಸುವುದಾಗಿದೆ. ಇದಕ್ಕಾಗಿ ನಕ್ಷೆಗಳನ್ನು ಒಂದು ನಿರ್ದಿಷ್ಟವಾದ ಅಳತೆಯಲ್ಲಿ (ಸ್ಕೇಲ್) ರಚಿಸಬೇಕಾಗುವುದು. ಇದರಿಂದ ಮಾತ್ರ ಆ ಪ್ರದೇಶದ ಉದ್ದ, ಅಗಲ ಹಾಗೂ ವಿಸ್ತೀರ್ಣಗಳು ಸರಿಯಾಗಿ ಪ್ರತಿನಿಧಿಸಲ್ಪಡುವುದು ಸಾಧ್ಯ. ಇದಕ್ಕಾಗಿ ಯಾವ ಅಳತೆ ಅಥವಾ ಮಾಪಕದಲ್ಲಿ ನಕ್ಷೆಯನ್ನು ರಚಿಸಬೇಕು ಎಂಬುದನ್ನು ಆರಂಭದಲ್ಲಿಯೇ ನಿರ್ಧರಿಸಿ ಅನಂತರ ನಕ್ಷೆಯನ್ನು ತಯಾರಿಸಬೇಕಾಗುವುದು. ಇದರಿಂದ ಮಾಪಕದ ನಿರ್ಧಾರ, ನಕ್ಷಾರಚನೆಯ ಪೂರ್ವಭಾವಿ ಅಂಶವಾಗಿದೆ.

ನಕ್ಷೆಯ ಮೇಲಿನ ಯಾವುದೇ ಎರಡು ಬಿಂದುಗಳ ನಡುವಿನ ದೂರ ಹಾಗೂ ಭೂಮಿಯ ಮೇಲಿನ ಅದೇ ಎರಡು ಬಿಂದುಗಳ ನಡುವಿನ ದೂರದ ಅನುಪಾತವನ್ನೇ ಮಾಪಕ ಅಥವಾ ಅಳತೆ ಎಂದು ಕರೆಯುವರು. ಉದಾಹರಣೆಗೆ ಒಂದು ನಕ್ಷೆಯಲ್ಲಿ ಎರಡು ಬಿಂದುಗಳ ನಡುವಿನ ಅಂತರ 1 ಸೆಂಮೀ = 10 ಕಿಮೀ ಅಂದರೆ ಆ ಎರಡು ಬಿಂದುಗಳ ನಡುವಿನ ಅಂತರ ಭೂಮಿಯ ಮೇಲೆ 10 ಕಿಮೀ ಇರುವುದು. ಈ ನಕ್ಷೆಯಲ್ಲಿನ ಯಾವುದೇ ಎರಡು ಎ ಮತ್ತು ಬಿ ಬಿಂದುಗಳ ನಡುವಿನ ಅಂತರ 2 ಅಂಗುಲವಾಗಿದ್ದಲ್ಲಿ ಅದು ಅವುಗಳ ನಿಜವಾದ ಅಂತರ 20 ಕಿಮೀ ಇರುವುದನ್ನು ಸೂಚಿಸುತ್ತದೆ.

ನಕ್ಷೆಗಳ ರಚನೆಗೆ ಮಾಪಕದ ಬಳಕೆ ಅತ್ಯಾವಶ್ಯಕ. ಏಕೆಂದರೆ ಒಂದು ಪ್ರದೇಶ ಇರುವಷ್ಟೇ ವಿಸ್ತಾರದಷ್ಟು ಕ್ಷೇತ್ರದ ನಕ್ಷೆಯನ್ನು ತಯಾರಿಸುವುದು ಸಾಧ್ಯವಿಲ್ಲ. ಇದರಿಂದ ಭೂಪ್ರದೇಶದ ಉದ್ದ–ಅಗಲವನ್ನು ಪ್ರತಿನಿಧಿಸುವಂತೆ ನಿರ್ದಿಷ್ಟವಾದ ಅಳತೆಯ ಅನುಪಾತದಿಂದ ನಕ್ಷೆಯನ್ನು ರಚಿಸಲಾಗುವುದು. ಉದಾಹರಣೆಗೆ ಒಬ್ಬ ವ್ಯಕ್ತಿಯ ಫೋಟೋವನ್ನು ತೆಗೆಸುವಾಗ ಸ್ಟಾಂಪ್ ಅಳತೆ, ಪಾಸ್ ಪೋರ್ಟ್ ಅಳತೆ ಅಥವಾ ಕಾರ್ಡ್ ಸೈಜ್ ಅಳತೆ–ಹೀಗೆ ಹಲವಾರು ಬಗೆಯ ಅಳತೆಯಲ್ಲಿ ಫೋಟೋ ತೆಗೆಸಲಾಗುವುದು. ಅಂದರೆ ಆ ವ್ಯಕ್ತಿಯ ಗಾತ್ರವನ್ನು ಆ ಅಳತೆಗೆ ಅನುಗುಣವಾಗಿ ಕುಗ್ಗಿಸಲಾಗುವುದು ಇದೇ ರೀತಿಯಲ್ಲಿ ಒಂದು ಪ್ರದೇಶವನ್ನು ಪ್ರತಿನಿಧಿಸುವ ನಕ್ಷೆಯನ್ನು ರಚಿಸುವಾಗ ಆ ಪ್ರದೇಶದ ವಿಸ್ತಾರವನ್ನು ಯಾವುದಾದರೊಂದು ಪ್ರಮಾಣದಲ್ಲಿ ಕುಗ್ಗಿಸಲಾಗುವುದು. ಈ ರೀತಿ ಕುಗ್ಗಿಸಿರುವ ಅನುಪಾತವನ್ನೇ ಅದರ ಮಾಪಕವೆಂದು ಕರೆಯುವರು. ಇದರಿಂದ ವಿಸ್ತಾರವಾಗಿರುವ ಪ್ರದೇಶವನ್ನು ಅತಿ ಚಿಕ್ಕ ಹಾಳೆಯ ಮೇಲೆ ನಿರೂಪಿಸಬಹುದಾಗಿದೆ. ಅವುಗಳನ್ನು ಸುಲಭವಾಗಿ ಬಳಸುವುದು ಸಾಧ್ಯ. ಈ ನಕ್ಷೆಗಳನ್ನು ವೀಕ್ಷಿಸುವ ವ್ಯಕ್ತಿಯು ಅದರ ಮೇಲಿನ ಯಾವುದಾದರೂ ಎರಡು ಬಿಂದುಗಳ ನಡುವಿನ ದೂರವನ್ನು ಆ ನಕ್ಷೆಯ ಮಾಪಕದಿಂದ ಲೆಕ್ಕಾಚಾರ ಮಾಡಿ ತಿಳಿಯಬಹುದು. ಇದರಿಂದ ಯಾವುದೇ ನಕ್ಷೆಯು ಮಾಪಕದ ಪ್ರಮಾಣವನ್ನು ಹೊಂದಿರದಿದ್ದಲ್ಲಿ ಅದು ಅಪೂರ್ಣವಾಗಿರುವುದು; ಅಂದರೆ ಪ್ರತಿ ನಕ್ಷೆಗೂ ಒಂದು ಅಳತೆಯು ಅತ್ಯಗತ್ಯ.

ಭೂಪ್ರದೇಶ ಅತಿ ವಿಸ್ತಾರವಾಗಿದ್ದು, ಅದರಲ್ಲಿ ಕೆಲವೇ ಮುಖ್ಯ ವಿಷಯಗಳನ್ನು ಮಾತ್ರ ನಿರೂಪಿಸಬೇಕಾಗಿದ್ದರೆ ಚಿಕ್ಕ ಅಳತೆ ಮಾಪಕವನ್ನೂ, ಭೂಪ್ರದೇಶ ಚಿಕ್ಕದಾಗಿದ್ದು, ಹೆಚ್ಚು ವಿಷಯಗಳನ್ನು ನಕ್ಷೆಯಲ್ಲಿ ಪ್ರತಿನಿಧಿಸಬೇಕಾದಲ್ಲಿ ದೊಡ್ಡ ಅಳತೆಯ ಮಾಪಕಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ನಕ್ಷೆಗಳ ಮೇಲೆ ಮಾಪಕವನ್ನು ಮುಖ್ಯವಾಗಿ ಮೂರು ವಿಧಾನಗಳಲ್ಲಿ ಪ್ರತಿನಿಧಿಸುವರು. ಅವು ಹೀಗಿವೆ; ನೇರ ಹೇಳಿಕೆ ವಿಧಾನ, ಪ್ರಾತಿನಿಧಿಕ ಭಿನ್ನಾಂಶದ ವಿಧಾನ, ರೇಖಾಮಾಪಕದ ವಿಧಾನ. (ಆರ್.ಎನ್.)

**ಮಾಯಾ:** ಮಧ್ಯ ಅಮೆರಿಕದಲ್ಲಿ 4–16ನೆಯ ಶತಮಾನದವರೆಗೆ ವ್ಯಾಪಿಸಿದ್ದ ಮಹಾನ್ ನಾಗರಿಕತೆಗೆ ಕಾರಣರಾದ ಜನ. ಇವರು ಕೇವಲ ನವಶಿಲಾಯುಗದ ತಂತ್ರಜ್ಞಾನದಿಂದ, ಲೋಹದ ಉಪಕರಣಗಳ ಹಾಗೂ ಚಕ್ರಗಳ ಪರಿಚಯವಿಲ್ಲದೆಯೇ, ವಾಸ್ತುಶಿಲ್ಪಕ್ಷೇತ್ರದಲ್ಲಿ ಅದ್ಭುತ ಪ್ರಗತಿಸಾಧಿಸಿದರು. ವೈಜ್ಞಾನಿಕ ಉಪಕರಣಗಳಿಲ್ಲದೆಯೂ ಆಕಾಶ ವಿಜ್ಞಾನದಲ್ಲಿ, ಇವರ ಸಾಧನೆಯ ಮಟ್ಟ ಬೆರಗನ್ನುಂಟುಮಾಡುತ್ತದೆ. ಚಿತ್ರಲಿಪಿ ಬರೆಹ, ಸಂಖ್ಯಾಶಾಸ್ತ್ರ ಕ್ಷೇತ್ರಗಳಲ್ಲಿಯೂ ಈ ಜನರ ಸಾಧನೆ ಅಪೂರ್ವವಾದುದು.

ಇಂದಿನ ಬೆಲಿಜ್, ಗ್ವಾಟೆಮಾಲದ ಬಹುಭಾಗ, ಕ್ವಿಂಟಾನರೂ ಹಾಗೂ ಯುಕಟಾನ್, ಕಾಂಪೀಚ್, ಟಬಾಸ್ಕೊ ಮತ್ತು ಪೂರ್ವ ಚಿಯಾಪಾಸ್ ಪ್ರದೇಶಗಳನ್ನೊಳಗೊಂಡ ಮೆಕ್ಸಿಕೊ–ಈ ಪ್ರದೇಶಗಳಲ್ಲಿ ಮಾಯಾ ಜನರು ವಾಸಿಸಿದ್ದರು; ಪಶ್ಚಿಮ ಎಲ್‌ಸಾಲ್ವಡಾರ್ ಹಾಗೂ ಹೊಂಡುರಸ್ ಭಾಗದಲ್ಲೂ ಈ ಜನರು ನೆಲೆಸಿದ್ದರು. ಮಾಯಾ ನಾಗರಿಕತೆ ಹರಡಿದ ಪ್ರದೇಶ ಮೂರು ಬಗೆಯ ಭೂಭಾಗಗಳನ್ನೊಳಗೊಂಡಿದೆ: ದಕ್ಷಿಣದಲ್ಲಿ ಆಂಡೀಸ್ ಪರ್ವತ ಶ್ರೇಣಿಗಳಿಂದ ಕೂಡಿದ ಪ್ರದೇಶ; ಮಧ್ಯದಲ್ಲಿ ಉಷ್ಣವಲಯದ ದಟ್ಟ ಅರಣ್ಯದಿಂದ ಕೂಡಿದ ಬಯಲು ಪ್ರದೇಶ; ಹಾಗೂ ಉತ್ತರದಲ್ಲಿ ಯುಕಟಾನಿನ ಸುಣ್ಣಕಲ್ಲು ಭೂಮಿಯ ಶೀತಲ ಪ್ರಸ್ಥಭೂಮಿ. ಜನವಸತಿ ಹೆಚ್ಚಾಗಿದ್ದುದು ಸಮುದ್ರಮಟ್ಟದಿಂದ ಕೇವಲ 61 ಮೀ ನಿಂದ 180 ಮೀವರೆಗೆ ಎತ್ತರವಿದ್ದ ಬಯಲು ಪ್ರದೇಶದಲ್ಲಿ; ಮಾಯಾ ನಾಗರಿಕತೆಯ ಕ್ಲಾಸಿಕ್ ಯುಗಕ್ಕೆ (4ರಿಂದ 10ನೆಯ ಶತಮಾನ) ಸಂಬಂಧಪಟ್ಟ ಪ್ರದೇಶವಿದು. ತರುವಾಯದ ಪುನರುತ್ಥಾನ ಹಾಗೂ ಅವನತಿಯ ಕಾಲಗಳಿಗೆ ಉತ್ತರ ಯುಕಟಾನ್ ಪ್ರದೇಶ ಕೇಂದ್ರವಾಗಿದ್ದಿತು.

**ಮಾಯಾ ನಾಗರೀಕತೆಯ ಕುರುಹುಗಳು, ಗ್ವಾಟೆಮಾಲ**

ಮಾಯಾ ಸಂಸ್ಕೃತಿಯ ನಗರಗಳು ವಾಸ್ತವವಾಗಿ ನಗರಗಳಲ್ಲ. ಇವು ಧಾರ್ಮಿಕ ಉತ್ಸವಗಳ, ವ್ಯಾಪಾರ ವ್ಯವಹಾರಗಳ ಹಾಗೂ ನ್ಯಾಯಾಡಳಿತದ ಕೇಂದ್ರಗಳಾಗಿದ್ದುವು. ಶಾಶ್ವತ ನಗರ ನಿವಾಸಿಗಳ ಸಂಖ್ಯೆ ಅತ್ಯಲ್ಪವಿರುತ್ತಿತ್ತು. ಬೃಹತ್ ಧಾರ್ಮಿಕ ಸಮಾರಂಭಗಳ ಸಮಯದಲ್ಲಿ ಮಾತ್ರ ಅರ್ಚಕರು ಬಂದು ಅಲ್ಲಿಯೆ ನೆಲಸುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಒಂಟೊಂಟಿ ಗುಡಿಸಲು ಅಥವಾ ಕೆಲವು ಗುಡಿಸಲುಗಳಲ್ಲಿ ಜನ ವಾಸಮಾಡುತ್ತಿದ್ದರು. ಈ ಗುಡಿಸಲುಗಳು ಆಯಾಕಾರ ಅಥವಾ ಅಂಡಾಕಾರದವು. ಮರದ ಕಂಬಗಳ ಗೋಡೆಗೆ ಕೆಲವೊಮ್ಮೆ ಮಣ್ಣು ಮೆತ್ತುತ್ತಿದ್ದುದುಂಟು. ಚಾವಣಿಗೆ ತಾಳೆ ಜಾತಿಯ ಮರದ ಗರಿ ಅಥವಾ ಹುಲ್ಲು ಹೊದಿಸಲಾಗುತ್ತಿತ್ತು. ಮದುವೆಯಾಗುವವರೆಗೆ ಬಾಲಕರು ಹಾಗೂ ತರುಣರು ಈಗಿನ ಡಾರ್ಮಿಟರಿಯಂಥ ಪ್ರತ್ಯೇಕ ವಾಸಗೃಹಗಳಲ್ಲಿರುತ್ತಿದ್ದರು.

ಕಾಳುಕಡ್ಡಿ, ತಿಂಗಳುಹುರುಳಿ (ಬೀನ್ಸ್), ಕುಂಬಳ ಹಾಗೂ ಗೆಣಸು ಮಾಯಾ ಜನರ ಮುಖ್ಯ ಆಹಾರ. ಮುಸುಕಿನ ಜೋಳ ಇವರು ಬೆಳೆಯುವ ಪ್ರಮುಖ ಧಾನ್ಯ. ಬೇಯಿಸಿದ ಅಥವಾ ಹುರಿದುಬಾಡಿಸಿದ ತಿನಿಸು, ಕಾಳುರೊಟ್ಟಿಗಳು ಈ ಜನರಿಗೆ ಪ್ರಿಯವಾಗಿದ್ದವು. ಅಪರೂಪವಾಗಿ ಮಾಂಸ ತಿನ್ನುತ್ತಿದ್ದರು. ನಾಯಿ ಹಾಗೂ ಟರ್ಕಿಕೋಳಿ ಇವರ ಸಾಕು ಪ್ರಾಣಿಗಳು. ಇತರ ಪ್ರಾಣಿಗಳ ಸಾಕಣೆ ಇವರಿಗೆ ತಿಳಿದಿರಲಿಲ್ಲ. ಹಾಗಾಗಿ ಇವರಲ್ಲಿ ಮಾಂಸಭಕ್ಷಣೆ ಸೀಮಿತವಾಗಿದ್ದಿತು. ವೇಷಭೂಷಣಗಳು ಸರಳವಾಗಿದ್ದುವು. ಗಂಡಸರು ಬಟ್ಟೆಯನ್ನು ನಡುವಿನ ಸುತ್ತ, ಹಿಂದೆ ಮುಂದೆ ಬಟ್ಟೆಯ ತುದಿಗಳು ಇಳಿಬಿದ್ದಿರುವ ರೀತಿಯಲ್ಲಿ ಸುತ್ತಿಕೊಳ್ಳುತ್ತಿದ್ದರು. ಚಳಿಗಾಲದಲ್ಲಿ ಕಂಬಳಿ ಹೊದೆಯುತ್ತಿದ್ದರು. ಸ್ತ್ರೀಯರು ಬಿಗಿಲಂಗ ಅಥವಾ ಮೇಲು ಜುಬ್ಬದಂಥ ಉಡುಪು ಧರಿಸುತ್ತಿದ್ದರು. ಹೆಚ್ಚಿನವು ಹತ್ತಿಯ ಉಡುಪುಗಳು. ಕೆಲವೊಮ್ಮೆ ಅವಕ್ಕೆ ಕಸೂತಿ ಹಾಕುತ್ತಿದ್ದರು; ಇಲ್ಲವೆ ವಿವಿಧ ಬಣ್ಣಗಳಲ್ಲಿ ವಿನ್ಯಾಸ ಬಿಡಿಸುತ್ತಿದ್ದರು. ಬಟ್ಟೆಯ ಅಂಚುಗಳನ್ನು ಗರಿಗಳಿಂದ ಅಲಂಕರಿಸುತ್ತಿದ್ದುದೂ ಉಂಟು. ಮರದ ತೊಗಟೆಯಿಂದ ಬಟ್ಟೆ ತಯಾರಿಸುವ ವಿಧಾನ ಈ ಜನರಿಗೆ ತಿಳಿದಿತ್ತು.

ಅರ್ಚಕರು ಬೀಜಗಳಿಂದ ಮಾಡಿದ ಕಂಠಹಾರಗಳನ್ನೂ ಜೇಡಶಿಲೆ, ಚಿಪ್ಪು, ಮರ ಇವುಗಳಿಂದ ತಯಾರಿಸಿದ ಕರ್ಣಾಭರಣಗಳನ್ನೂ ಹಾಕಿಕೊಳ್ಳುತ್ತಿದ್ದರು.

ಮಾಯಾ ಜನರಿಗೆ ನರ್ತನವೆಂದರೆ ಬಲು ಪ್ರೀತಿ. ಪ್ರತಿಯೊಂದು ಧಾರ್ಮಿಕ ಅಥವಾ ಸಾಮಾಜಿಕ ಸಮಾರಂಭದಲ್ಲಿಯೂ ಗಂಡಸರು ನರ್ತಿಸುತ್ತಿದ್ದರು. ಹೆಂಗಸರಿಗೆ ನರ್ತನ ನೋಡಲು ಅವಕಾಶವಿರಲಿಲ್ಲ. ಪ್ರತಿಯೊಂದು ನಗರದಲ್ಲಿಯೂ ನೃತ್ಯಾಂಗಣವಿರುತ್ತಿತ್ತು. ಇಂದಿನ ಬ್ಯಾಸ್ಕೆಟ್‌ಬಾಲ್ ಕ್ರೀಡೆಯನ್ನು ತುಸು ಹೋಲುವ ಆಟವೊಂದು ಇವರಲ್ಲಿ ಪ್ರಚಲಿತವಿತ್ತು.

ಧರ್ಮ ಈ ನಾಗರಿಕತೆಯ ಮೂಲ ಸ್ರೋತಬಿಂದು. ಮಳೆ (ಚಾಕ್), ಭೂಮಿ, ಧಾನ್ಯ, ಮೃತ್ಯು (ಆಹ್‌ಪಚ್) ಮುಂತಾದವಕ್ಕೆ ಸಂಬಂಧಿಸಿದ ದೇವತೆಗಳನ್ನೂ ಪಾತಾಳಲೋಕದ ದೇವತೆಗಳನ್ನೂ ಸೂರ್ಯ (ಕಿನಿಚ್ ಅಹಂ) ಚಂದ್ರರನ್ನೂ ಈ ಜನ ಆರಾಧಿಸುತ್ತಿದ್ದರು. ಅನೇಕ ದೇವತೆಗಳಿಗೆ ಒಂದಕ್ಕಿಂತ ಹೆಚ್ಚು ರೂಪಗಳಿದ್ದುವು. ಉದಾಹರಣೆಗೆ ನಾಲ್ವರು ಮಳೆ ದೇವತೆಗಳಿದ್ದು, ಪ್ರತಿಯೊಬ್ಬರನ್ನೂ ಒಂದೊಂದು ದಿಕ್ಕು ಹಾಗೂ ವರ್ಣಗಳಿಂದ ಗುರುತಿಸಲಾಗುತ್ತಿತ್ತು. ನೆಯ್ಗೆ ಮತ್ತು ಸುಖ ಪ್ರಸವಗಳಿಗೆ ಸಂಬಂಧಿಸಿದ ಸ್ತ್ರೀದೇವತೆ ಚಂದ್ರ. ಎಲ್ಲ ದೇವಮಾನವರೂ ಸೂರ್ಯಚಂದ್ರರಿಂದ ಉದಿಸಿದರೆನ್ನುವುದು ಇವರ ನಂಬುಗೆಯಾಗಿದ್ದಿತು; ಈಗಲೂ ಮಾಯಾ ಜನ ಸೂರ್ಯ-ಚಂದ್ರರನ್ನು ತಮ್ಮ ತಂದೆತಾಯಿಗಳೆಂದು ಕರೆದುಕೊಳ್ಳುತ್ತಾರೆ. ಮೆಕ್ಸಿಕನ್ ಪ್ರಭಾವದಿಂದಾಗಿ ಆ ಸಂಸ್ಕೃತಿಯ ದೇವತೆಗಳನ್ನೂ ಪ್ರಧಾನವಾಗಿ ಕುಕುಲ್ಕಾನ್ ಅಥವಾ ಕ್ವಿಟ್ಜಾಲ್‌ಕೊವಾಲ್ ದೇವತೆಯನ್ನೂ- ಇವರು ಆರಾಧಿಸಿದರು. ನರಮೇಧ ಪದ್ಧತಿ ಇವರಲ್ಲಿದ್ದರೂ ನೆರೆಯ ಅಜ್ಟೆಕ್ ಜನರಲ್ಲಿದ್ದಂತೆ ಬೃಹತ್ ಪ್ರಮಾಣದಲ್ಲಿರಲಿಲ್ಲ.

ಮಾಯಾ ಅರ್ಚಕ ವರ್ಗದವರು ಪ್ರಧಾನವಾಗಿ ಕಾಲಕ್ಕೆ ಸಂಬಂಧಿಸಿದ ಸಮಸ್ಯೆಗಳ ಅಧ್ಯಯನದಲ್ಲಿ ಆಸಕ್ತರಾಗಿದ್ದರು. ಕಾಲದ ಪ್ರತಿಯೊಂದು ಘಳಿಗೆಯೂ ಮಾನವನ ಅದೃಷ್ಟದ ಮೇಲೆ ಪರಿಣಾಮ ಬೀರುವುದೆಂದೂ ಅದನ್ನು ನಿಯಂತ್ರಿಸುವ ಪ್ರತ್ಯೇಕ ದೈವವೊಂದಿದೆಯೆಂದೂ ಇವರು ನಂಬುತ್ತಿದ್ದರು. ಇವರ ಜ್ಯೋತಿಷ್ಯ ವಿಜ್ಞಾನದ ಖಚಿತತೆ ಅಚ್ಚರಿಯನ್ನುಂಟುಮಾಡುತ್ತದೆ. ತೇದಿಗಳ ಕೋಷ್ಟಕಗಳನ್ನು ಇವರು ಸಿದ್ಧಪಡಿಸಿದ್ದರು. ಗ್ರಹಣ ಮುಂತಾದ ಸರ್ವದಿನಗಳನ್ನು ಮೊದಲೇ ತಿಳಿದುಕೊಳ್ಳಬಹುದಾಗಿತ್ತು. 360 ಮತ್ತು 365 ದಿನಗಳ ಸಾಮಾನ್ಯ ವರ್ಷಗಳನ್ನು ಹಾಗೂ 260 ದಿನಗಳ ಪವಿತ್ರ ವರ್ಷವನ್ನೂ (ತ್ಜೊಲ್ಕಿನ್) ಇವರು ಲೆಕ್ಕ ಹಾಕಿ ರೂಪಿಸಿದ್ದರು. ಈ ಮೂರು ಬಗೆಯ ವರ್ಷಗಳಲ್ಲಿ ಪ್ರತಿಯೊಂದರಲ್ಲಿಯೂ ದಿನದಿನಕ್ಕೂ ಇವರು ಒಂದು ನಿರ್ದಿಷ್ಟ ಸಂಖ್ಯೆ ಹಾಗೂ ಸಂಕೇತಗಳನ್ನು ಬಳಸುತ್ತಿದ್ದರು ವರ್ಷ ವರ್ಷಗಳ ನಡುವೆ ಇರುವ ಪರಸ್ಪರ ಸಂಬಂಧ ಮಾಯಾ ಜನಜೀವನದಲ್ಲಿ ಬಹಳ ಮಹತ್ತ್ವ ಪಡೆದಿತ್ತು. ಬೀಜಬಿತ್ತನೆಯಿಂದ ಅಥವಾ ಗುಡಿಸಲು ಕಟ್ಟುವುದರಿಂದ ಹಿಡಿದು ಯುದ್ಧ ಆರಂಭಿಸುವವರೆಗೆ ಪ್ರತಿಯೊಂದು ಕಾರ್ಯಾರಂಭಕ್ಕೂ ಶುಭದಿನವನ್ನು ಅರ್ಚಕರು ಪಂಚಾಂಗ ನೋಡಿ ಲೆಕ್ಕ ಹಾಕಿ ನಿಶ್ಚಯಿಸುತ್ತಿದ್ದರು.

ಮಾಯಾ ಜನರ ಕಾಲಾನುಪೂರ್ವಿಯಲ್ಲಿಯೂ ದೇವದೇವತೆಗಳಿಗೆ ಪ್ರಾಧಾನ್ಯವಿದ್ದಿತು. ಇವರ ವಿಶ್ವದ ಕಲ್ಪನೆಯೂ ವಿಶಿಷ್ಟವಾದುದು. ಇದರ ಪ್ರಕಾರ ಒಂದರ ಮೇಲೊಂದರಂತೆ 13 ಆಂತರಿಕ ಲೋಕಗಳೂ ಒಂದರ ಕೆಳಗೊಂದರಂತೆ 9 ಪಾತಾಳ ಲೋಕಗಳೂ ಇದ್ದುವು. ಪ್ರತಿಯೊಂದು ಲೋಕಕ್ಕೂ ಒಬ್ಬೊಬ್ಬ ದೇವತೆ ಇರುತ್ತಿದ್ದ. ಪ್ರಪಂಚದ ಸೃಷ್ಟಿಕರ್ತ ಹುನಾಬನಾದರೂ ಅವನಿಗಿಂತ ಪ್ರಮುಖನೆನಿಸಿದವನು ಆತನ ಮಗನಾದ ಇಟ್ಜಮ್ನ; ಈತ ಆಕಾಶ ಹಾಗೂ ದಿನರಾತ್ರಿಗಳ ಅಧಿದೈವ. ಇಕ್ಷ್‌ಚೆಲ್ ಎಂಬ ದೇವತೆ ಒಳ್ಳೆಯದರ ಒಡೆಯ. ಈ ಜನರ ದೈನಂದಿನ ಬದುಕಿನಲ್ಲೂ ದೇವತೆಗಳ ಪಾತ್ರ ಗಣನೀಯವಾದುದಾಗಿತ್ತು.

ಗಣಿತ ಅಥವಾ ಸಂಖ್ಯಾಶಾಸ್ತ್ರ ಮಾಯ ಜನರಿಗೆ ಬಹಳ ಪ್ರಿಯವಾದ ವಿಷಯ, ಈಗಿನ ದಶಮಾನ ಪದ್ಧತಿಯಂತೆ ಮಾಯಾ ಜನ ವಿಂಶತಿಮಾನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಚುಕ್ಕಿ ಹಾಗೂ ಗೆರೆಗಳಲ್ಲಿ ಸಂಖ್ಯೆಗಳನ್ನು ನಮೂದಿಸುತ್ತಿದ್ದರು; ಅವುಗಳ ಸ್ಥಾನ ಸಂಖ್ಯೆಯನ್ನು ನಿರ್ಧರಿಸುತ್ತಿತ್ತು. ಉದಾಹರಣೆಗೆ ಚುಕ್ಕಿ (1 ಅಥವಾ 20).= ಎಂಬುದನ್ನು 31ನ್ನು ಸೂಚಿಸಿದರೆ ಎಂಬುದು 61 ನ್ನು ಸೂಚಿಸುತ್ತದೆ. ಇದಲ್ಲದೆ ಸಂಕೇತರೂಪಗಳಲ್ಲಿ ಇವರು 64 ಮಿ ವರ್ಷಗಳಷ್ಟು ಬೃಹತ್ ಸಂಖ್ಯೆಯನ್ನು ಲೆಕ್ಕಹಾಕಿದ್ದಾರೆಂದರೆ ಇವರ ಸಂಖ್ಯಾ ಮೋಹ ಹಾಗೂ ಗಣಿತದಲ್ಲಿಯ ಪರಿಣತಿಯ ಬಗ್ಗೆ ಅರಿವುಂಟಾಗಬಹುದು. ಸೊನ್ನೆಯ ಉಪಯೋಗವೂ ಪ್ರಾಯಶಃ ಮಾಯಾಜನರಿಗೆ ತಿಳಿದಿತ್ತು.

ಪಂಚಾಂಗಗಳನ್ನು ರೂಪಿಸಿದ ಮಾಯಾಜನರು ಕಾಲಗಣನೆಯನ್ನು ಬೃಹತ್ ಶಿಲ್ಪಸ್ಮಾರಕ ಸ್ತಂಭಗಳು, ಯಜ್ಞವೇದಿಗಳು, ಬೃಹತ್ ಸೋಪಾನಮಾರ್ಗಗಳು, ಬಾಗಿಲುವಾಡ ಹಾಗೂ ಗೋಡೆಗಳ ಮೇಲೆ ಕೆತ್ತಿ ಬಿಡಿಸಿದರು. ಆದರೆ ಇವರ ಚಿತ್ರಲಿಪಿ ಬರೆಹ ಬಹಳ ಸಂಕೀರ್ಣವಾದುದು. ಕೇವಲ ಸಂಖ್ಯೆಗೆ ಸಂಬಂಧಿಸಿದ ಕೆಲವು ಸಂಕೇತಗಳನ್ನಷ್ಟೇ ಪತ್ತೆ ಹಚ್ಚಲು ಸಾಧ್ಯವಾಗಿದೆ. ಈ ಬರೆಹದ ವಿಷಯ ಸ್ಥೂಲವಾಗಿ ತಿಳಿಯುತ್ತದಷ್ಟೇ. ಸಂಕೇತಗಳು ಭಾಗಶಃ ಧ್ವನ್ಯಾತ್ಮಕವೂ ಭಾಗಶಃ ಭಾವ ರೂಪಾತ್ಮಕವೂ ಆಗಿದ್ದ ಒಂದು ವಿಧದ ಚಿತ್ರಲಿಪಿಯಾಗಿವೆ, ಸು. 850 ಸಂಕೇತಗಳು ಇದರಲ್ಲಿವೆ.

ಮರದ ತೊಗಟೆಯನ್ನು ಜಜ್ಜಿ, ಅದರ ಮೇಲೆ ತೆಳುವಾಗಿ ಸುಣ್ಣ ಲೇಪಿಸಿ, ಅದರ ಮೇಲ್ಮೈಯಲ್ಲಿ ಚಿತ್ರಲಿಪಿ ಬರೆಹಗಳನ್ನೂ ರೇಖಾಚಿತ್ರಗಳನ್ನೂ ಮಾಯಾಜನರು ರಚಿಸಿದರು. ಇಂಥ ಹಸ್ತಪ್ರತಿಗಳು ಹಲವಾರಿದ್ದುವು. ಆದರೆ ಸ್ಪೇನಿನ ವಿಜಯಾನಂತರ ಬಿಷಪ್ ಡಿಯಾಗೊ ಡಿ ಲಂಡಾ ಎಂಬಾತನ ಆಜ್ಞೆಯ ಮೇರೆಗೆ ಇವೆಲ್ಲವನ್ನೂ ಕ್ಷುದ್ರಧರ್ಮಗ್ರಂಥಗಳೆಂದು ಸುಟ್ಟುಹಾಕಲಾಯಿತು. ಕೇವಲ ಮೂರು ಕೃತಿಗಳು, ಡ್ರೆಸ್‌ಡೆನ್ ಕೋಡೆಕ್ಸ್, ಮ್ಯಾಡ್ರಿಡ್ ಕೋಡೆಕ್ಸ್ ಹಾಗೂ ಪ್ಯಾರಿಸ್ ಕೋಡೆಕ್ಸ್‌ಗಳು (ಈ ಗ್ರಂಥಗಳನ್ನು ಸಂರಕ್ಷಿಸಿಟ್ಟಿರುವ ಸ್ಥಳಗಳ ಮೇಲೆ ಹೆಸರಿಸಲಾಗಿದೆ) ನಮಗೆ ಲಭ್ಯವಾಗಿವೆ. ಇವುಗಳಲ್ಲಿ ಪ್ರಾಚೀನತಮವಾದ ಡ್ರೆಸ್‌ಡೆನ್ ಕೋಡೆಕ್ಸ್ ಅನ್ನು ಫಾಸ್ಟ್‌ಮನ್ ಎಂಬ ಜರ್ಮನ್ ಪುರಾತತ್ತ್ವಶಾಸ್ತ್ರಜ್ಞ ಅರ್ಥೈಸುವಲ್ಲಿ, ವಿಶೇಷವಾಗಿ ಕಾಲಾನುಪೂರ್ವಿಗೆ ಸಂಬಂಧಿಸಿದ ಗಣನೀಯ ಪ್ರಮಾಣದ ವಿವರಗಳನ್ನು ಪಡೆಯುವಲ್ಲಿ ಬಲುಮಟ್ಟಿಗೆ ಸಫಲನಾದ.

ಮಾಯಾ ಜನರ ವಾಸ್ತುಶಿಲ್ಪಕಲೆ ಧರ್ಮಕ್ಕೆ ನಿಕಟವಾಗಿ ಸಂಬಂಧಿಸಿದುದು, ಸ್ತಂಭ, ಪೀಠ ಹಾಗೂ ದೇಗುಲಭಾಗಗಳಲ್ಲಿ ದೇವದೇವತೆಯರ ಧಾರ್ಮಿಕ ಸನ್ನಿವೇಶಗಳ ಉಬ್ಬುಗೆತ್ತನೆಯ ಅಲಂಕರಣವಿರುತ್ತಿತ್ತು. ವಿನ್ಯಾಸಗಳು ಒತ್ತೊತ್ತಾಗಿದ್ದು ಅತಿಯೆಂದು ಈಗ ತೋರಬಹುದು. ಆದರೆ ಮಾಯಾ ಸಂಪ್ರದಾಯಾನುಸಾರ ದೇವ ದೇವತೆಗಳ ಎಲ್ಲ ಲಕ್ಷಣ ಸ್ವರೂಪಗಳನ್ನೂ ಇವರ ಶಿಲ್ಪಕಲೆ ಪ್ರತಿನಿಧಿಸುತ್ತದೆ. ದೈನಂದಿನ ಬದುಕಿನ ಚಿತ್ರಕ್ಕೆ ಶಿಲ್ಪಕಲೆಗಿಂತ ಚಿತ್ರಕಲೆಯಲ್ಲಿ ಹೆಚ್ಚು ಸ್ವಾತಂತ್ರ್ಯ ದೊರೆತಿದೆ. ಮೃಣ್ಪಾತ್ರೆ ಹಾಗೂ ದೇಗುಲದ ಗೋಡೆಗಳ ಮೇಲೆ ಚಿತ್ರಕಲೆಯ ಕೌಶಲ ಗೋಚರಿಸುತ್ತದೆ. ಗಾಢವರ್ಣಗಳ ಬಳಕೆ ಮತ್ತು ನೆಳಲಿನ ವಿನ್ಯಾಸದ ಅನುಪಸ್ಥಿತಿಗಳಿಂದಾಗಿ ಇವರ ಚಿತ್ರಗಳು ಅಲಂಕೃತವಾಗಿ ತೋರುತ್ತವೆ.

ಎತ್ತರದ ಪಿರಮಿಡ್ಡುಗಳ ಮೇಲಿನ ಚಪ್ಪಟ್ಟೆಯ ಭಾಗದಲ್ಲಿ ಪುಟ್ಟ ದೇಗುಲಗಳ ನಿರ್ಮಾಣ ಮಾಯಾ ವಾಸ್ತುಶೈಲಿಯ ವೈಶಿಷ್ಟ್ಯ. ದೇಗುಲಗಳಿಗೆ ಮೆಟ್ಟಿಲೇರಿ ಅರ್ಚಕರು ಹೋಗಿ ಪೂಜೆ ಸಲ್ಲಿಸಿ ಬರುತ್ತಿದ್ದರು. ಕೆಳಗಣ ಅಂಗಣದಲ್ಲಿ ಸಾಮಾನ್ಯ ಜನ ನಿಂತು ಉತ್ಸವಾದಿಗಳನ್ನು ನೋಡಲು ಅವಕಾಶ ಕಲ್ಪಿಸಲಾಗಿದ್ದಿತು. ಎತ್ತರದ, ಆದರೆ ಕಿರಿದಾದ ಕಿಟಕಿಗಳಿಲ್ಲದ ಹಲವು ಕೋಣೆಗಳ ಕಟ್ಟಡಗಳನ್ನೂ ಈ ಜನ ನಿರ್ಮಿಸಿದ್ದರು. ಇವು ಧಾರ್ಮಿಕ ಸಮಾರಂಭದ ಸಮಯದಲ್ಲಿ ಅರ್ಚಕರಿಗೆ ನಿದ್ರಾಕೊಠಡಿಗಳಾಗಿದ್ದುವೆಂದು ತೋರುತ್ತದೆ; ಹಾಗೆಯೇ ಪದಾರ್ಥಸಂಗ್ರಹಣೆಯ ಉಗ್ರಾಣವೂ ನ್ಯಾಯಾಡಳಿತದ ಕೇಂದ್ರವೂ ಆಗಿದ್ದವೆಂದು ತೋರುತ್ತದೆ. ವಾಸ್ತವವಾಗಿ ಮಾಯಾ ವಾಸ್ತುಶೈಲಿಯಲ್ಲೆಲ್ಲೂ ಕಮಾನು ಕಂಡುಬರುವುದಿಲ್ಲ. ಬೋದಿಗೆ ಕಟ್ಟಡಗಳನ್ನಷ್ಟೇ ನಿರ್ಮಿಸಲು ಇವರಿಗೆ ಸಾಧ್ಯವಾಯಿತು. ಈ ಎಲ್ಲ ನಿರ್ಮಾಣಗಳನ್ನು ಇವರು ಕಲ್ಲಿನ ಉಪಕರಣಗಳಿಂದಲೇ ಮಾಡಿದ್ದರೆನ್ನುವುದು ಗಮನಾರ್ಹ.

ಮಾಯಾ ಶಿಲ್ಪಕಲೆ ಪ್ರಪಂಚದ ಶ್ರೇಷ್ಠ ಕಲಾಶೈಲಿಗಳಲ್ಲೊಂದೆಂದು ಪರಿಗಣಿಸಲ್ಪಟ್ಟಿದೆ. ಶಿಲ್ಪಸ್ಮಾರಕ ಸ್ತಂಭಗಳು-ಸ್ಟೀಲಿ-ಈ ಶೈಲಿಯ ವೈಶಿಷ್ಟ್ಯ. ಸರ್ಪ, ಎರಡು ತಲೆಯ ಡ್ರ್ಯಾಗನ್, ಗರುಡ, ಮೂಗಿನ ದೇವತೆ ಮುಂತಾದವು ಹೆಚ್ಚು ಪ್ರತಿನಿಧಿತವಾಗಿರುವ ಶಿಲ್ಪಗಳು. ದಿವಂಗತ ಸಿಲ್ವೇನಸ್ ಮೋರ್ಲಿ ಮತ್ತು ಆತನ ಸಹೋದ್ಯೋಗಿಗಳು ವಾಕ್ಸಕ್‌ಟೂನ್ ಎಂಬಲ್ಲಿ ಅನ್ವೇಷಿಸಿದ ಹಲವಾರು ಸಾಕ್ಷ್ಯಾಧಾರಗಳಲ್ಲಿ ಸ್ಟೆಲಾನೈನ್ ಎಂದು ಪರಿಚಿತವಾಗಿರುವ ಪ್ರಾಚೀನ ಶಿಲ್ಪಸ್ಮಾರಕ ಸ್ತಂಭ ಗಮನಾರ್ಹವಾದುದು. ಇದರ ಮೇಲೆ ಕೆತ್ತಿರುವ ತೇದಿ 328ಕ್ಕೆ ಸರಿಹೊಂದುತ್ತದೆ.

ಮಾಯಾ ಜನರ ಕುಂಭಕಲೆ ನಯನಾಜೂಕುಗಳಲ್ಲಿ ಉನ್ನತಮಟ್ಟ ಸಾಧಿಸಿತ್ತು. ಹೊಳಪುಳ್ಳ ನಯವಾದ ಮೃಣ್ಪಾತ್ರೆಗಳ ಮೇಲೆ ಜ್ಯಾಮಿತಿ ವಿನ್ಯಾಸಗಳಿಂದ ಮತ್ತು ಧಾರ್ಮಿಕ ಜೀವನ ದೃಶ್ಯಗಳಿಂದ ಅಲಂಕರಿಸಿದುದನ್ನು ಕಾಣುತ್ತೇವೆ.

ಮಾಯಾ ಜನ ಪ್ರಧಾನವಾಗಿ ಕೃಷಿಕರು. ಇವರಲ್ಲಿ ಕುಂಬ್ರಿ ಬೇಸಾಯ ಪದ್ಧತಿ ಪ್ರಚಲಿತವಿತ್ತು. ಕಲ್ಲಿನ ಕೊಡಲಿಗಳಿಂದ ಕಾಡನ್ನು ಕಡಿದು ಸುಟ್ಟು ಹೊಲಗಳನ್ನು ನಿರ್ಮಿಸುತ್ತಿದ್ದರು. ಅಗೆಯುವ ಕೋಲಿನಿಂದ ಬೂದಿಯ ನೆಲದಲ್ಲಿ ಉಳುಮೆ ಮಾಡಿ ಬಿತ್ತನೆ ಮಾಡುತ್ತಿದ್ದರು. ಇವರ ಬೆಳೆಗೆ ಮಾರಕ ಕೀಟಗಳ ಕಾಟವಿರಲಿಲ್ಲ. ಆದರೆ ಇವರ ಅಗೆಯುವ ಕೋಲುಗಳು ಬೇಗ ಮೊಂಡಾಗುತ್ತಿದ್ದವಾದ್ದರಿಂದ ಮೇಲಿಂದ ಮೇಲೆ ಅವನ್ನು ತಯಾರಿಸಿಕೊಳ್ಳಬೇಕಾಗುತ್ತಿತ್ತು. ಕಾಳುಕಡ್ಡಿ, ಬೀನ್ಸ್, ಗೆಣಸು, ಕುಂಬಳ, ಹತ್ತಿ, ಹೊಗೆಸೊಪ್ಪು, ಮರಗೆಣಸು ಹಾಗೂ ಕಕೇವೂ ಇವರ ಪ್ರಧಾನ ಬೆಳೆಗಳು. ಕೆಲವು ಕುಟುಂಬಗಳು ಜೇನಿಗಾಗಿ ಜೇನುಸಾಕಣೆ ಮಾಡುತ್ತಿದ್ದವು.

ಚಕ್ರಗಳಿರುವ ವಾಹನಗಳ ಪರಿಚಯ ಮಾಯಾ ಜನರಿಗಿರಲಿಲ್ಲ. ನಗರಗಳನ್ನು ಅಥವಾ ನಗರದ ಇತರ ಭಾಗಗಳನ್ನು ಸಂಪರ್ಕಿಸಲು ಭೂಮಾರ್ಗಗಳಿದ್ದವು. ಕಲ್ಲುಹಾಸಿನ ಈ ರಸ್ತೆಗಳು ಸು. 9 ಮೀ ಅಗಲವಾಗಿದ್ದವು. ಪ್ರಾಯಶಃ ಧಾರ್ಮಿಕ ಮತ್ತು ನಾಗರಿಕ ಉತ್ಸವಾದಿ ಸಮಾರಂಭಗಳಿಗೆ ಇವನ್ನು ಬಳಸುತ್ತಿದ್ದಿರಬಹುದು. ಗಣ್ಯರನ್ನು ಗುಲಾಮರು ಮೇನೆಗಳಲ್ಲಿ ಹೊತ್ತು ಸಾಗಿಸುತ್ತಿದ್ದರು. ವ್ಯಾಪಾರಿಗಳು ಈ ರಸ್ತೆಗಳನ್ನು ಬಳಸುತ್ತಿದ್ದರಾದರೂ ಅನುಕೂಲತೆ ಇದ್ದ ಕಡೆಗಳಲ್ಲೆಲ್ಲ ಅವರು ಜಲಮಾರ್ಗವನ್ನೇ ಆರಿಸಿಕೊಂಡು ದೋಣಿಗಳಲ್ಲಿ

ಸಾಮಾನು ಸರಂಜಾಮುಗಳೊಡನೆ ಪ್ರಯಾಣಿಸುತ್ತಿದ್ದರು. ತಗ್ಗುಗಾಡಿನ ಜನ ಚಿರತೆಚರ್ಮ, ಗರಿ, ರಾಳ, ಸುಣ್ಣ, ಫ್ಲಿಂಟ್ ಶಿಲೆಯ ಚಾಕು, ತಾಳೆಮರದ ಖಾದ್ಯಭಾಗ ಇತ್ಯಾದಿಗಳನ್ನು ಕೊಟ್ಟು ಬದಲಿಗೆ ಪ್ರಸ್ಥಭೂಮಿಯ ಜನರಿಂದ ಜೇಡಶಿಲೆ, ಕ್ವೆಟ್ಸಲ್ ಗರಿ, ಫ್ಲಿಂಟ್ ಶಿಲೆಯ ಚಾಕುಗಳ ತಯಾರಿಕೆಗೆ ಅವಶ್ಯವಾದ ಕಾಚಶಿಲೆ ಮೊದಲಾದವನ್ನು ಪಡೆಯುತ್ತಿದ್ದರು. ಯುಕಟಾನ್ ಪ್ರದೇಶ ಹೊಂಡುಹಿಸ್‌ಗೆ ಉಪ್ಪು ಹಾಗೂ ಕಿನ್‌ಕಾಪು ಹತ್ತಿಯನ್ನು ರವಾನಿಸಿ ಅಲ್ಲಿಂದ ಕಕೇವೊ ಬೀಜ ತರಿಸಿಕೊಳ್ಳುತ್ತಿತ್ತು. ಇದನ್ನು ಹಣದ ರೀತಿಯಲ್ಲಿ ಚಲಾವಣೆಗೆ ಬಳಸಲಾಗುತ್ತಿತ್ತು. (ಎಚ್.ಎಂ.ಎನ್.ಆರ್.)

**ಮಾಯೊಟ್ಟ್:** ಹಿಂದೂ ಮಹಾಸಾಗರದಲ್ಲಿ ಉತ್ತರ ಮಡಗಾಸ್ಕರ್ ಹಾಗೂ ಉತ್ತರ ಮೊಜಾಂಬಿಕ್‌ಗಳ ನಡುವೆ ಇರುವ ದ್ವೀಪ ಸಮೂಹ. ಭೌಗೋಳಿಕವಾಗಿ ಈ ಭಾಗ ಕೊಮೊರೊ ದ್ವೀಪಗಳ ಭಾಗವಾಗಿದ್ದು 1970ರ ದಶಕದಲ್ಲಿ ರಾಜಕೀಯವಾಗಿ ಇದನ್ನು ವಿಭಾಗಿಸಿ ಪ್ರತ್ಯೇಕಿಸಲಾಗಿದೆ. ಒಟ್ಟು ಭೌಗೋಳಿಕ ಕ್ಷೇತ್ರವು 374 ಚ.ಕಿಮೀ. ಜನಸಂಖ್ಯೆ 201234 (2006). ಪ್ರತಿ ಚ.ಕಿಮೀ ಗೆ 429 ಜನಸಾಂದ್ರತೆ ಕಂಡುಬರುತ್ತದೆ. ಇದರ ರಾಜಧಾನಿ ಮಮೌಡ್‌ಝು. ಈ ದ್ವೀಪ ಫ್ರಾನ್ಸ್‌ನ ಅಧೀನಕ್ಕೊಳಪಟ್ಟಿದೆ. (ಎಚ್.ಎಸ್.)

**ಮಾರಕೈಬೊ:** ವೆನಿಝುವೇಲ ದೇಶದ ಜ್ಯೂಲ್ಯಾ ಜಿಲ್ಲೆಯ ಆಡಳಿತಕೇಂದ್ರ ನಗರ. ದೇಶದ ಎರಡನೆಯ ದೊಡ್ಡನಗರವಾದ ಇದನ್ನು ಸು. 1529ರಲ್ಲಿ ಸ್ಥಾಪಿಸಲಾಯಿತು. ಜನಸಂಖ್ಯೆ 22,05,000 (2004). ಉತ್ತರ ಅಕ್ಷಾಂಶ $10^0 40'$ ಪಶ್ಚಿಮ ರೇಖಾಂಶ $71^0 40'$ ರಲ್ಲಿದೆ. ಪೆಟ್ರೋಲಿಯಂ ಕಂಡು ಹಿಡಿಯುವವರೆಗೆ (1912) ಈ ನಗರ ಕಾಫಿ ರಫ್ತು ಮಾಡುವ ಬಂದರಾಗಿತ್ತು. ಅನಂತರ ಆದ ಬದಲಾವಣೆಗಳಿಂದ ವೆನಿಝುವೇಲದ ಮಹಾನಗರವೆನಿಸಿಕೊಂಡಿತು. ಇಲ್ಲಿ ಸ್ಪಾನಿಷ್ ಸಂಸ್ಕೃತಿಯ ಆಧುನಿಕ ಶಿಲ್ಪ ಕಲೆಗಳಿಂದ ಕೂಡಿದ ಭವ್ಯಕಟ್ಟಡಗಳು ಇವೆ. 1950ರಲ್ಲಿ ಮಾರಕೈಬೊ ಕಾಲುವೆ ತೆಗೆದು ಕೆರೆಬಿಯನ್ ಸಮುದ್ರದ ಮಾರ್ಗ ಏರ್ಪಟ್ಟು ನಗರ ಬಹುಮುಖ ಪ್ರಗತಿ ಕಂಡಿತು. ಮಾರಕೈಬೊ ನಗರದ ಬಳಿ 1,700 ಹೆ. ಕೈಗಾರಿಕಾ ವಲಯವಿದ್ದು ಇಲ್ಲಿ ರಾಸಾಯನಿಕ ವಸ್ತುಗಳು, ಕೈಮಗ್ಗದ ಸರಕುಗಳು, ಪಾನೀಯಗಳು, ಹಗ್ಗ ಮತ್ತು ಟೈನ್ ದಾರ ತಯಾರಿಸಲ್ಪಡುತ್ತವೆ. 1946ರಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆಯಾಯಿತು. ಉತ್ತರ ವೆನಿಝುವೇಲದ ಒಳನಾಡಿನ ಪ್ರಮುಖ ನಗರಗಳೊಡನೆ ಈ ನಗರ ಸಂಪರ್ಕ ಹೊಂದಿದೆ. ಇಲ್ಲಿಯ ಹವಾಗುಣ ವಿಪರೀತ ಏರುಪೇರಿನದು. ಹೆಚ್ಚಿನ ಉಷ್ಣತೆಯಿಂದ ಈ ನಗರ ದಕ್ಷಿಣ ಅಮೆರಿಕದ ಅತೀ ಉಷ್ಣತೆಯ ನಗರವೆನಿಸಿದೆ. ಪ್ರಪಂಚದ ಒಂದು ಮುಖ್ಯ ತೈಲ ನಗರವೆನಿಸಿದ್ದು ವ್ಯಾಪಾರ ಹಾಗೂ ಕೈಗಾರಿಕಾ ದೃಷ್ಟಿಯಿಂದಲೂ ಬಲು ಪ್ರಮುಖ ನಗರವಾಗಿ ಆಧುನಿಕವಾದ ಎಲ್ಲ ನಾಗರಿಕ ಸೌಲಭ್ಯಗಳನ್ನೊಳಗೊಂಡು ಬೆಳೆದಿದೆ. ಸರೋವರದ ಮೂಲಕ ಸರಕುಗಳ ಸಾಗಣೆಗೆ ಅನುಕೂಲವಿದೆ. ಕಾಫಿ, ಸಕ್ಕರೆ, ಕೋಕೋ, ಮರದ ತುಂಡುಗಳನ್ನು ಸಾಗಿಸಲಾಗುತ್ತದೆ.

ಮಾರಕೈಬೊ ಸರೋವರ ಕೆರೆಬಿಯನ್ ಸಮುದ್ರದ ದೊಡ್ಡ ಹಿನ್ನೀರಿನ ಸರೋವರವಾಗಿದೆ. ಇದರ ವಿಸ್ತೀರ್ಣ 13,000 ಚ.ಕಿಮೀ. ವೆನಿಝುವೇಲ ಖಾರಿಯಿಂದ ದಕ್ಷಿಣಕ್ಕೆ 210 ಕಿಮೀ ವಿಸ್ತರಿಸಿದ್ದು 75 ಮೀ ಅಗಲವಾಗಿದೆ. ಈ ಸರೋವರ ಪ್ರಪಂಚದ ಸಂಪದ್ಭರಿತ ತೈಲದೊರೆಯುವ ಕೇಂದ್ರಸ್ಥಾನದಲ್ಲಿದೆ. 1912ರಲ್ಲಿ ಪ್ರಥಮಬಾರಿಗೆ ಇಲ್ಲಿ ತೈಲ ಬಾವಿಯನ್ನು ಕೊರೆಯಲಾಯಿತು. ಇದು ಪ್ರಸ್ತುತ ಸು. 105 ಕಿಮೀ ಪ್ರದೇಶವನ್ನು ಒಳಗೊಂಡಿದೆ. ವೆನಿಝುವೇಲದ ಒಟ್ಟು ಪೆಟ್ರೋಲಿಯಂ ಉತ್ಪಾದನೆಯ 2/3 ಭಾಗದಷ್ಟು ಈ ಸರೋವರದ ಸುತ್ತಮುತ್ತಲ ಪ್ರದೇಶದಿಂದಲೇ ತೆಗೆಯಲಾಗುತ್ತದೆ. ಇಲ್ಲಿಯ ಅನೇಕ ತೈಲ ಪ್ರದೇಶಗಳು ವಿದೇಶೀಯರ ಕೈವಶದಲ್ಲಿವೆ. ಈ ಸರೋವರದ ದಕ್ಷಿಣ ಗಡಿಭಾಗದಲ್ಲಿ ಬೇಸಾಯ ಮಾಡಲಾಗುತ್ತಿದೆ. ಅಲ್ಲಲ್ಲಿ ತೆಂಗು, ಕಬ್ಬು ಮತ್ತು ಕಾಫಿ ತೋಟಗಳು ಇವೆ. ಈ ಬಂದರಿನ ಮೂಲಕ ಸರೋವರದ ತೀರದಲ್ಲಿರುವ ಮುಖ್ಯ ನಗರಗಳಿಗೆ ಸಂಪರ್ಕವಿದೆ. (ಕೆ.ಆರ್.)

**ಮಾರಿಕಣಿವೆ:** ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ ಚಿತ್ರದುರ್ಗ ಬೆಟ್ಟಗಳ ಪೂರ್ವದಲ್ಲಿರುವ ಒಂದು ಕಣಿವೆ. ವೇದಾವತಿ ನದಿ ಈ ಕಣಿವೆಯ ಮೂಲಕ ಹರಿಯುತ್ತದೆ. ಇಲ್ಲಿ ವೇದಾವತಿ ನದಿಗೆ ಅಡ್ಡಗಟ್ಟೆಯನ್ನು ಕಟ್ಟಿ ವಾಣಿವಿಲಾಸ ಸಾಗರವೆಂಬ ಜಲಾಶಯ ನಿರ್ಮಿಸಲಾಗಿದೆ. ಈ ಜಲಾಶಯದ ಉದ್ದ 405 ಮೀ ಎತ್ತರ 49.4 ಮೀ, ಜಲಾನಯನ ಪ್ರದೇಶ 80 ಚ.ಕಿಮೀ. ಜಲಾಶಯದ ನೀರು ಶೇಖರಣಾ ಸಾಧ್ಯತೆ ಸು. 880 ಮಿಲಿಯನ್ ಘನ ಲೀಟರ್. ಈ ಜಲಾಶಯ 10,100 ಕ್ಕೂ ಹೆಚ್ಚು ಹೆಕ್ಟೇರ್ ಭೂಮಿಗೆ ನೀರುಣಿಸುತ್ತದೆ. 1898 ರಲ್ಲಿ ಇದರ ನಿರ್ಮಾಣ ಕಾರ್ಯ ಆರಂಭವಾಗಿ 1907 ರಲ್ಲಿ ಪೂರ್ಣಗೊಂಡಿತು. *

**ಮಾರಿಟಾನಿಯ:** ಆಫ್ರಿಕ ಖಂಡದ ವಾಯವ್ಯ ಭಾಗದಲ್ಲಿರುವ ಗಣರಾಜ್ಯ. ಉತ್ತರದಲ್ಲಿ ಮೊರಾಕ್ಕೊ ಮತ್ತು ಆಲ್ಜೀರಿಯ, ಪೂರ್ವದಲ್ಲಿ ಮಾಲಿ, ದಕ್ಷಿಣದಲ್ಲಿ ಸೆನೆಗಲ್‌ನಿಂದ ಸುತ್ತುವರಿದಿದೆ. ಪಶ್ಚಿಮ ಭಾಗದಲ್ಲಿ ಅಟ್ಲಾಂಟಿಕ್ ಸಾಗರವಿದೆ. ಉ.ಅ. $20^0$ ಹಾಗೂ ಪ.ರೇ. $12^0$ ಗಳಲ್ಲಿ ಸನ್ನಿವೇಶಗೊಂಡಿದೆ. 754 ಕಿಮೀ ಕರಾವಳಿಯನ್ನು ಹೊಂದಿದೆ. ಇದರ ವಿಸ್ತೀರ್ಣ 1,030,700 ಚ.ಕಿಮೀ. ಜನಸಂಖ್ಯೆ 3,270,065 (2007). ರಾಜಧಾನಿ ನೌಕ್‌ಚೋಟ್ ಇಲ್ಲಿನ ಜನಸಂಖ್ಯೆ 4,80,000 (2004). ಉತ್ತರದ ಬಹುಭಾಗ ಸಹರ ಮರುಭೂಮಿಯ ಭಾಗವಾಗಿದೆ. ಇಲ್ಲಿನ ಅತ್ಯಂತ ಎತ್ತರದ ಶಿಖರ ರೇಡಿಯಟ ಐ.ಜಿ.ಲ್. 916 ಮೀ ಎತ್ತರವಾಗಿದೆ. ಸುತ್ತಲೂ ಮರಳು ದಿಣ್ಣೆಗಳಿಂದ ಸುತ್ತುವರಿಯಲ್ಪಟ್ಟಿದೆ. ಸೆನಗಲ್ ನದಿಯ ಹರಿವಿನ ಪ್ರದೇಶ ಮಾತ್ರ ವ್ಯವಸಾಯಕ್ಕೆ ಅನುಕೂಲಕರವಾಗಿದೆ. ಉಷ್ಣವಲಯದ




ಶುಷ್ಕವಾಯುಗುಣ ಹಿತಕರವಾಗಿಲ್ಲ. ಸದಾಕಾಲ ಅಧಿಕ ಉಷ್ಣತೆ, ಶುಷ್ಕತೆ ಹಾಗೂ ಧೂಳು ಬರಿತ ಗಾಳಿಯಿಂದ ಕೂಡಿದೆ. ಮಳೆ ಕಡಿಮೆ. 490 ಚ.ಕಿಮೀ ಭೂಮಿಗೆ ಸೆನಗಲ್ ನದಿ ನೀರುಣಿಸುತ್ತದೆ. ಕೃಷಿ ಚಟುವಟಿಕೆಗಳೆಲ್ಲವೂ ಇಲ್ಲಿಯೇ ಕೇಂದ್ರೀಕೃತ. ಬತ್ತ, ಜೋಳ ಮತ್ತು ಕೆಲವು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ ಮರುಭೂಮಿಗಳ ಅಂಚುಗಳಲ್ಲಿ ಖರ್ಜೂರದ ಬೆಳೆ ಇದೆ. ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳಬೇಕು. ಕಬ್ಬಿಣದ ಅದಿರು, ಜಿಪ್ಸಂ, ತಾಮ್ರ, ಫಾಸ್ಫೇಟ್, ವಜ್ರಗಳು, ಚಿನ್ನ, ಪೆಟ್ರೋಲಿಯಂ ಅಲ್ಪ ಪ್ರಮಾಣದಲ್ಲಿ ದೊರೆಯುತ್ತವೆ. ಮೀನುಗಾರಿಕೆ ಇದೆ. ಇಲ್ಲಿನ ಜನಸಂಖ್ಯೆಯ ಬಹುಪಾಲು ಮುಸ್ಲಿಮರು. ನೌದಿಭವು, ಜಿರೇಟ ಮತ್ತು ರೂಸ್ಸೂ ಮುಖ್ಯ ನಗರಗಳು. ಇಲ್ಲಿನ ಹಣ ಔಗೀಯ. ಭಾಷೆ ಅರಾಬಿಕ್ ಮತ್ತ ಫ್ರೆಂಚ್. (ಜಿ.ಎಸ್.ಎಸ್.)

**ಮಾರಿನೋಸ್ ಟೈರ್:** 60–130. ಗ್ರೀಕ್ ಭೂಗೋಳ ಶಾಸ್ತ್ರಜ್ಞ ಹಾಗೂ ನಕ್ಷಾಶಾಸ್ತ್ರಜ್ಞ, ಲೆಬನಾನಿನ ಟೈರ್ ಎಂಬ ಸ್ಥಳದವನು. ಇವನ ಬಗ್ಗೆ ಹೆಚ್ಚು ಮಾಹಿತಿಗಳು ಲಭ್ಯವಿಲ್ಲ. ಕ್ಲಾಡಿಯಸ್ ಟಾಲಮಿಯ ಜಿಯೊಗ್ರಾಫಿಯ ಕೃತಿಯಲ್ಲಿನ ಉಲ್ಲೇಖಗಳು ಹಾಗೂ ಅಲ್–ಮಸೂದಿ ಎಂಬ ಅರಬ್ ಭೂಗೋಳಶಾಸ್ತ್ರಜ್ಞರ ಉಲ್ಲೇಖಗಳಿಂದ ಅಲ್ಪಮಾಹಿತಿಗಳು ಇವನ ಬಗ್ಗೆ ಲಭ್ಯ. ಕ್ಯಾನರಿ ದ್ವೀಪ ಸಮೂಹದ ಬ್ಲೆಸ್ಸಡ್ ದ್ವೀಪಗಳ ಮಧ್ಯಾಹ್ನ ರೇಖೆಯನ್ನು ಶೂನ್ಯವೆಂದು ಈತ ಮೊದಲಿಗೆ ಬಳಸಿದನೆಂದು ತಿಳಿದುಬರುತ್ತದೆ. ಅಂದಿನ ರ್‍ಹೋಡೆಸಿಯದ ಅಕ್ಷಾಂಶಗಳ ಅಳತೆ, ಭೌಗೋಳಿಕ ಪಟ್ಟಿಗಳ ತಿದ್ದುಪಡಿ (114) ಭೂಮಿಯ ಸುತ್ತಳತೆಗೆ ಸಂಬಂಧಿಸಿದ ಎಣಿಕೆ ಮಾಡಿದ ಇವನ ಪ್ರಯತ್ನದ ಬಗ್ಗೆ ಮಾಹಿತಿಗಳು ಟಾಲಮಿಯ ಬರವಣಿಗೆಯಿಂದ ತಿಳಿಯುತ್ತದೆ. ಯುರೋಪ್, ಏಷ್ಯ ಮತ್ತು ಆಫ್ರಿಕ ಖಂಡಗಳಿಂದಾಗಿ ಒಕಿನೋಸ್ ಪ್ರತ್ಯೇಕಗೊಂಡದ್ದು ಹಾಗೂ ಜನವಸತಿ ಪ್ರಪಂಚ ಥುಲೆಯಿಂದ (ಪ್ರಾಯಶಃ ಐಸ್ಲೆಂಡ್ ಅಥವಾ ಶೆಟ್ಲೆಂಡ್) ಅಗಿಸಿಂಬ (ಇಥಿಯೋಪಿಯ) ಹಾಗೂ ಬ್ಲೆಸ್ಸಡ್ ದ್ವೀಪ (ಕ್ಯಾನರಿ ದ್ವೀಪಗಳು), ಶಿರ (ಚೀನ) ಗಳಿಗೆ ವಿಸ್ತರಿಸುವ ಬಗ್ಗೆ ಈತನ ಅಭಿಪ್ರಾಯ ವ್ಯಕ್ತವಾದ ಬಗ್ಗೆಯೂ ಟಾಲಮಿಯ ಬರವಣಿಗೆಯಲ್ಲಿ ದಾಖಲಾಗಿದೆ. ಅಂಟಾರ್ಕ್ಟಿಕ್ ಹೆಸರೂ ಸಹ ಸೂಚಿಸಲಾಗಿದೆಯೆಂದು ತಿಳಿದು ಬರುತ್ತದೆ. (ಪಿ.ಎಂ.)

**ಮಾರಿಷಸ್:** ಹಿಂದೂ ಸಾಗರದಲ್ಲಿರುವ ಒಂದು ಸ್ವತಂತ್ರ ದ್ವೀಪ. ಮಲಗಾಸೀ ದ್ವೀಪಕ್ಕೆ ಪೂರ್ವದಲ್ಲಿ 800 ಕಿಮೀ ದೂರದಲ್ಲೂ ಭಾರತದ ನೈರುತ್ಯಕ್ಕೆ 3,943 ಕಿಮೀ ದೂರದಲ್ಲೂ ಇದೆ. ದ.ಅ. $20^0$ ಹಾಗೂ ಪೂರ್ವ ರೇಖಾಂಶ $57^0$ ಗಳ ನಡುವೆ ಇದೆ. ಪೂರ್ವದಲ್ಲಿ 563 ಕಿಮೀ ದೂರದಲ್ಲಿರುವ ರೋಡ್ರಿಗ್ಸ್ ದ್ವೀಪ, ಈ ದ್ವೀಪಕ್ಕೆ ಉತ್ತರದಲ್ಲಿ 933 ಕಿಮೀ ದೂರದಲ್ಲಿರುವ ಅಗಲೇಗ ದ್ವೀಪ ಮತ್ತು 402 ಕಿಮೀ ದೂರದಲ್ಲಿರುವ ಕಾರ್ಗಡಸ್ ಕರಜೋಸ್ ಸೋಲ್ಸ್ ದ್ವೀಪಗಳು ಇದರ ಆಡಳಿತಕ್ಕೆ ಸೇರಿವೆ. ಮಾರಿಷಸ್‌ನ ಉದ್ದ 61 ಕಿಮೀ, ಅಗಲ 47 ಕಿಮೀ. ಇದರ ಒಟ್ಟು ವಿಸ್ತೀರ್ಣ 1865 ಚ.ಕಿಮೀ. ಸು. 161 ಕಿಮೀ ಉದ್ದದ ಸಮುದ್ರ ತೀರವಿದೆ. ಜನಸಂಖ್ಯೆ 12,30,602 (2002). ರಾಜಧಾನಿ ಪೋರ್ಟ್‌ಲೂಯಿಸ್. ಜನಸಂಖ್ಯೆ 1,34,516 (2002).

ಮಾರಿಷಸ್ ಅಗ್ನಿಪರ್ವತ ಚಿಮ್ಮಿದ ಕಲ್ಲುಮಣ್ಣಿನಿಂದ ಹಾಗೂ ಲಾವಾರಸದಿಂದ ಮುಚ್ಚಿರುವ ದ್ವೀಪ. ಇಲ್ಲಿಯ ಭೂಮಿಯನ್ನು ಸು. 51 ಸೆಂಮೀ ದಪ್ಪ ಪದರದ ಲಾವಾರಸ ಆವರಿಸಿದೆ. ಇಲ್ಲಿಯ ರೈತರು ಭೂಮಿಯನ್ನು ಬೆಳೆಗೆ ಹದ ಮಾಡುವ ಮುನ್ನ ಈ ಕಲ್ಲುಮಣ್ಣು ಮತ್ತು ಲಾವಾರಸ ಪದರವನ್ನು ತೆಗೆದು ಅನಂತರ ಕೃಷಿಕಾರ್ಯ ಕೈಗೊಳ್ಳಬೇಕಾಗಿದೆ. ಈ ದ್ವೀಪದ ಮಧ್ಯಭಾಗ ಸಮುದ್ರಮಟ್ಟದಿಂದ ಸು. 671 ಮೀ ಎತ್ತರವಾಗಿದೆ. ಭೂಭಾಗದಲ್ಲಿ ವಾರ್ಷಿಕ ಸು. 510 ಸೆಂಮೀ ಮಳೆಯಾದರೆ ದ್ವೀಪದ ನೈರುತ್ಯ ಭಾಗದಲ್ಲಿ 89 ಸೆಂಮೀ ಮಳೆಯಾಗುತ್ತದೆ. ದ್ವೀಪದ ಉತ್ತರಭಾಗ ಸಮುದ್ರದ ಕಡೆಗೆ ಇಳಿಜಾರಾಗಿದ್ದು ಪಶ್ಚಿಮ ಮತ್ತು ದಕ್ಷಿಣದಲ್ಲಿ ಕಡಿದಾಗಿದೆ. ದ್ವೀಪದ ದಕ್ಷಿಣ ಭಾಗ ಬಿಟ್ಟು ಉಳಿದ 3 ಕಡೆ ಹವಳ ದಿಬ್ಬಗಳು ಸುತ್ತುವರಿದಿದೆ.

ನವೆಂಬರ್‌ನಿಂದ ಏಪ್ರಿಲ್ ಬೇಸಗೆ ಕಾಲ, ಆಗ $26^0$ ಸೆ ವರೆಗೂ ಉಷ್ಣತೆವರೆಗೆ ಇರುತ್ತದೆ. ಆಗ್ನೇಯ ಮಾರುತಗಳು ದ್ವೀಪಕ್ಕೆ ಹೆಚ್ಚು ಮಳೆ ತರುತ್ತವೆ, ಆಗಾಗ ಬಿರುಗಾಳಿ ಬೀಸುವುದುಂಟು, ಬೇಸಗೆ ಕಾಲದಲ್ಲೇ ಇಲ್ಲಿ ಹೆಚ್ಚು ಮಳೆ ಬೀಳುತ್ತದೆ. ಜೂನ್‌ನಿಂದ ಅಕ್ಟೋಬರ್‌ವರೆಗೆ ಚಳಿಗಾಲವಾಗಿದ್ದು $22^0$ಸೆ ಉಷ್ಣತೆ ಇರುತ್ತದೆ.




ಈ ದ್ವೀಪ ಕಬ್ಬಿನಬೆಳೆಗೆ ಹಾಗೂ ಸಕ್ಕರೆ ಉತ್ಪಾದನೆಗೆ ಪ್ರಸಿದ್ಧ. ಕಬ್ಬು ಇಲ್ಲಿಯ ಮುಖ್ಯ ಬೆಳೆ. ಚಹ ಎರಡನೆಯ ಮುಖ್ಯ ಬೆಳೆ. ದ್ವೀಪದಲ್ಲಿ 21 ಕಬ್ಬು ಅರೆಯುವ ಕಾರ್ಖಾನೆಗಳಿವೆ. ಹೊಗೆಸೊಪ್ಪು, ಆಲೂಗೆಡ್ಡೆ ಮತ್ತು ಈರುಳ್ಳಿ ಉತ್ಪಾದನೆಯಿದೆ. ಸಕ್ಕರೆಯನ್ನೂ ಆಹಾರ ಪದಾರ್ಥಗಳಾದ ಅಕ್ಕಿ, ಗೋದಿಹಿಟ್ಟು, ಮಾಂಸ ಮತ್ತು ವಿವಿಧ ಧಾನ್ಯಗಳನ್ನು ಇಡೀ ದ್ವೀಪಕ್ಕೆ ಸಾಕಾಗುವಷ್ಟು ಹೊರಗಿನಿಂದಲೇ ಆಮದು ಮಾಡಿಕೊಳ್ಳಬೇಕಾಗಿದೆ. ದನ ಕರು, ಮೇಕೆ, ಕೋಳಿ ಇವುಗಳ ಸಾಕಣೆ ಇದೆ. ಒಟ್ಟು 21,005 ಹೆ. ಅರಣ್ಯ ಪ್ರದೇಶವಿದೆ.

ದ್ವೀಪದ ಮುಖ್ಯ ಕೈಗಾರಿಕೆ ಸಕ್ಕರೆ ತಯಾರಿಕೆ, ಚಹ, ವಜ್ರ ಕತ್ತರಿಸುವುದು, ಬಟ್ಟೆ, ಗೊಬ್ಬರ, ಕೈಗಡಿಯಾರಗಳ ಕೈಪಟ್ಟಿ ತಯಾರಿಕೆ ಮುಂತಾದವು. ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿದ್ದು 1983ರಲ್ಲಿ 1,23,820ಕ್ಕೂ ಅಧಿಕ ಪ್ರವಾಸಿಗರು ದ್ವೀಪಕ್ಕೆ ಭೇಟಿ ನೀಡಿದ್ದಾರೆ.

ಮಾರಿಷಸ್‌ನಲ್ಲಿ ಉತ್ತಮ ರಸ್ತೆಗಳು ಹಾಗೂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸೌಲಭ್ಯವಿದೆ. ಇಲ್ಲಿಂದ ಯುರೋಪ್, ಆಫ್ರಿಕ, ಏಷ್ಯ, ಆಸ್ಟ್ರೇಲಿಯ ಮುಂತಾದವುಗಳಿಗೆ ವಿಮಾನ ಸಂಪರ್ಕವಿದೆ. ಪೋರ್ಟ್‌ಲೂಯಿ ಒಂದು ಉತ್ತಮ ಬಂದರು. ಇಲ್ಲಿ ವಿದೇಶೀ ಹಡಗುಗಳು ಬಂದು ನಿಲ್ಲುತ್ತವೆ. ವಿದ್ಯುತ್, ದೂರವಾಣಿ, ದೂರದರ್ಶನ ಹಾಗೂ ಅಂಚೆ ಸೌಕರ್ಯಗಳಿವೆ, ಸುದ್ದಿಪತ್ರಿಕೆಗಳಿವೆ. ದ್ವೀಪದಲ್ಲಿರುವ ಜನರಲ್ಲಿ ಹೆಚ್ಚು ಮಂದಿ ಹಿಂದುಗಳು. ಅನಂತರದವರು ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು. ದ್ವೀಪದಲ್ಲಿ ಉಚಿತ ಪ್ರಾಥಮಿಕ ಶಿಕ್ಷಣವಿದೆ, ಆದರೆ ನಿರ್ಬಂಧವಿಲ್ಲ. ಉಪಾಧ್ಯಾಯರ ತರಬೇತಿ ಕಾಲೇಜು, ತಾಂತ್ರಿಕ ವಿದ್ಯಾಲಯ, ಮಹಾತ್ಮಾಗಾಂಧಿ ವಿದ್ಯಾಸಂಸ್ಥೆ ಮುಂತಾದವು ಇಲ್ಲಿಯ ಶಿಕ್ಷಣಕ್ಕೆ ನೆರವಾಗಿದೆ.

ಮಾರಿಷಸ್ ಪ್ರಜಾಪ್ರಭುತ್ವ ಸರ್ಕಾರದ ಆಡಳಿತಕ್ಕೆ ಸೇರಿದೆ. 18 ಮಂದಿ ಸದಸ್ಯರುಳ್ಳ ಮಂತ್ರಿಮಂಡಲ, ಪ್ರಧಾನಮಂತ್ರಿ ಇದರ ಅಧ್ಯಕ್ಷತೆ ವಹಿಸುತ್ತಾರೆ. ಪ್ರಧಾನ ಮಂತ್ರಿಯ ಸಲಹೆಯ ಮೇಲೆ ಗವರ್ನರ್ ಜನರಲ್ 10 ಮಂದಿ ಸಂಸದೀಯ ಕಾರ್ಯದರ್ಶಿಗಳನ್ನು ನೇಮಿಸುತ್ತಾನೆ. ಐದು ವರ್ಷಗಳಿಗೊಮ್ಮೆ ನಡೆಯುವ ವಯಸ್ಕ ಮತದಾನದ ಮೂಲಕ ಚುನಾಯಿತರಾದ 62 ಮಂದಿ ಸದಸ್ಯರೂ ಧಾರ್ಮಿಕ ಕ್ಷೇತ್ರಗಳಿಂದ ಆಯ್ದ 8 ಮಂದಿ ಸದಸ್ಯರೂ ಸಂಸತ್ತಿನಲ್ಲಿ ಇರುತ್ತಾರೆ. ಇವರೇ ಅಧ್ಯಕ್ಷನನ್ನೂ ಆಯ್ಕೆ ಮಾಡುತ್ತಾರೆ. ಸರ್ಕಾರದಲ್ಲಿ ಕಾರ್ಯಾಂಗ, ನ್ಯಾಯಾಂಗ ಮತ್ತು ಆಡಳಿತಾಂಗಗಳಿರುವುದರ ಜೊತೆಗೆ ಓಂಬುಡ್ಸ್‌ಮನ್ ನೇಮಕವೂ ಇದ್ದು ಪ್ರಜೆಗಳ ಮೂಲಭೂತ ಹಕ್ಕುಗಳ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯ ಬಗೆಗೆ ಯುಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ಮಾರಿಷಸ್ ದ್ವೀಪದ ಅಸ್ತಿತ್ವ ಅರಬ್ ವರ್ತಕರಿಗೆ ಮೊದಲೇ ತಿಳಿದಿತ್ತು. ಆದರೆ ಯುರೋಪಿಯನ್ನರಲ್ಲಿ ದ್ವೀಪಕ್ಕೆ ಮೊದಲು ಕಾಲಿಟ್ಟವರು ಪೋರ್ಚುಗೀಸರು. 1500ರಲ್ಲಿ ಅವರು ತಮ್ಮ ಹಡಗುಗಳಿಗೆ ಆಹಾರ, ನೀರು ತುಂಬಿಕೊಳ್ಳಲು ಇಲ್ಲಿ ತಂಗುತ್ತಿದ್ದರು. ಆದರೆ ಇಲ್ಲಿ ನೆಲೆ ನಿಲ್ಲಲಿಲ್ಲ. 1598ರಲ್ಲಿ ಡಚ್ಚರು ಈ ದ್ವೀಪ ತಮಗೆ ಸೇರಿದ್ದೆಂದು ಘೋಷಿಸಿ ಅವರ ದೊರೆ ನಾಸೋವಿನ ಮಾರಿಸ್ ನೆನಪಲ್ಲಿ ದ್ವೀಪಕ್ಕೆ ಹೆಸರಿಟ್ಟರು. ಅನಂತರ ಇವರು ಮಡಗಾಸ್ಕರ್‌ನಿಂದ ಜೀತದಾಳುಗಳನ್ನು ತಂದು ಕಾಡು ಕಡಿಸಿ ನೆಲೆಸಿದರು. ಆದರೆ 1710ರಲ್ಲಿ ಅಲ್ಲಿಂದ ಕಾಲ್ತೆಗೆದರು. 1715ರಲ್ಲಿ ಫ್ರೆಂಚರು ಈ ದ್ವೀಪಕ್ಕೆ ಬಂದು ನೆಲೆಸಿ ಕೋಟೆ ಕಟ್ಟಿ ಕಾಫಿ, ಹಣ್ಣುಗಳು, ಕಬ್ಬು ಮೊದಲಾದವುಗಳನ್ನು ಬೆಳೆಯಲಾರಂಭಿಸಿದರು. ಮುಂದೆ ಬ್ರಿಟಿಷರಿಗೂ, ಫ್ರೆಂಚರಿಗೂ ಕದನವುಂಟಾಗಿ ಬ್ರಿಟಿಷರು 1810ರಲ್ಲಿ ಈ ದ್ವೀಪವನ್ನು ಆಕ್ರಮಿಸಿಕೊಂಡು ತಮ್ಮ ವಸಾಹತುವನ್ನಾಗಿ ಮಾಡಿಕೊಂಡರು.

1950ರಲ್ಲಿ ಮಾರಿಷಸ್ ಸ್ವಯಮಾಧಿಕಾರದತ್ತ ನಡೆದು 1968 ರ ಮಾರ್ಚ್ 12 ರಂದು ಪೂರ್ಣ ಸ್ವತಂತ್ರವಾಯಿತು. ಬ್ರಿಟಿಷ್ ಕಾಮನ್‌ವೆಲ್ತ್‌ನ ಒಂದು ಸ್ವತಂತ್ರ ರಾಷ್ಟ್ರವಾಗಿ 1968 ಏಪ್ರಿಲ್ 24 ರಂದು ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಿತು. ಇಲ್ಲಿನ ಹಣ ರುಪೀ. (ಡಿ.ವೈ.)

**ಮಾರುಕಟ್ಟೆ:** ಸರಕು ಅಥವಾ ಸೇವೆಗಳನ್ನು ಕೊಳ್ಳುವ, ಮಾರುವ ವ್ಯವಹಾರ ನಡೆಯುವ ಸ್ಥಳ (ಮಾರ್ಕೆಟ್). ಆದರೆ ಅರ್ಥಶಾಸ್ತ್ರದ ಪ್ರಕಾರ ಮಾರುಕಟ್ಟೆಯೆಂದರೆ ವಿಶಿಷ್ಟ ಸರಕು ಸೇವೆಗಳನ್ನು ಮಾರುವ ಕೊಳ್ಳುವ ಸ್ಥಳವಷ್ಟೇ ಅಲ್ಲದೆ ಕೊಳ್ಳುವವರು ಮತ್ತು ಮಾರುವವರು ಬೆಳೆಸಿಕೊಂಡು ಬಂದ ಪರಸ್ಪರ ಸಂಬಂಧದಿಂದ ಅನಿರ್ಬಂಧ ವ್ಯಾಪಾರ ನಡೆದು ಪದಾರ್ಥದ ಧಾರಣೆಯಲ್ಲಿ ಏಕರೂಪತೆ ಸಾಧಿಸುವ ಯಾವುದೇ ಪ್ರದೇಶ, ಅದು ಎಷ್ಟೇ ವಿಸ್ತಾರವಾಗಿರಲಿ ಸಹಜವಾಗಿ ಮಾರುಕಟ್ಟೆ ಅನಿಸಿಕೊಳ್ಳುವುದು ಎಂದು ಫ್ರೆಂಚ್ ಅರ್ಥಶಾಸ್ತ್ರಜ್ಞ ಕುರ್ನೋ ವ್ಯಾಖ್ಯೆ ನೀಡಿದ್ದಾನೆ. ಮಾರುಕಟ್ಟೆಯ ಎಲ್ಲಾ ಭಾಗಗಳಲ್ಲಿ ಏಕಕಾಲದಲ್ಲಿ ಒಂದು ಸರಕು ಅಥವಾ ಸೇವೆಗೆ ಒಂದೇ ಬೆಲೆ ನೀಡುವ ಆಸಕ್ತಿ ಪ್ರಬಲವಾಗಿ ಬೆಳೆದಾಗ ಅದು ಬಲುಮಟ್ಟಿಗೆ ಪರಿಪೂರ್ಣ ಮಾರುಕಟ್ಟೆ ಎನಿಸುವುದೆಂದು ಮಾರ್ಷಲ್ ಹೇಳಿದ್ದಾನೆ.

ಸಂದರ್ಭ ಮತ್ತು ಪರಿಸರದ ಫಲವಾಗಿ ಮಾರುಕಟ್ಟೆ ಏರ್ಪಡುತ್ತದೆ. ಮಾರುವವರ ಮತ್ತು ಕೊಳ್ಳುವವರ ಸಂಪನ್ಮೂಲಗಳು ಮತ್ತು ಚಟುವಟಿಕೆಗಳು ಒಂದು ನಿರ್ದಿಷ್ಟ ಕ್ಷೇತ್ರದ ಉತ್ಪನ್ನಗಳ ಬೇಡಿಕೆ ಮೇಲೆ ಪರಿಣಾಮ ಬೀರುತ್ತದೆ. ಮಾರುಕಟ್ಟೆ ಕೇವಲ ಮಾರುವವರು ಕೊಳ್ಳುವವರು ಸೇರುವ ಸ್ಥಳವಲ್ಲ. ಮಾರುವವರೂ, ಕೊಳ್ಳುವವರೂ, ಅಂಚೆ, ದೂರವಾಣಿ, ತಂತಿ, ಕೇಬಲ್ ಅಥವಾ ಬೇರಾವುದೇ ಸಾಧನದ ಮೂಲಕ ಪ್ರತ್ಯಕ್ಷವಾಗಲಿ ಅಪ್ರತ್ಯಕ್ಷವಾಗಲಿ ಕಲೆಯುವುದಾದರೆ ಅದು ಮಾರುಕಟ್ಟೆ ಎನಿಸುತ್ತದೆ.

ಕ್ಲಾರ್ಕ್ ಅಂಡ್ ಕ್ಲಾರ್ಕ್ ಎಂಬ ತಜ್ಞರ ಶಬ್ದಗಳಲ್ಲಿ ಯಾವುದೇ ಕೇಂದ್ರದ ಹತ್ತಿರವಾಗಲಿ ಯಾವುದೇ ಕ್ಷೇತ್ರದಲ್ಲಾಗಲಿ ಒಂದು ವಿಶಿಷ್ಟ ಉತ್ಪಾದನೆಯ ಒಡೆತನವನ್ನು ಬದಲಾಯಿಸುವತ್ತ ಶಕ್ತಿಗಳು ಪ್ರವೃತ್ತವಾದಾಗ ಮತ್ತು ಆ ಪ್ರದೇಶದತ್ತ ಅಥವಾ ಆ ಪ್ರದೇಶದಿಂದ ಸರಕುಗಳು ಸಾಗಲು ಆರಂಭಿಸಿದಾಗ ಆಯಾ ಕೇಂದ್ರಗಳೇ, ಕ್ಷೇತ್ರಗಳೇ ಮಾರುಕಟ್ಟೆಗಳಾಗಿ ಪರಿಣಮಿಸುವುವು. ಹೀಗಾಗಿ ಮಾರುವವರ ಮತ್ತು ಕೊಳ್ಳುವವರ ಸ್ವತಂತ್ರ ವ್ಯವಹಾರ ಸರಳವಾಗಿ ನಡೆಯುವ ಸ್ಥಳ ಮತ್ತು ಪ್ರದೇಶ ಮಾರುಕಟ್ಟೆಯಲ್ಲಿ ಸೇರಿಕೊಳ್ಳುವುವು, ಬೆಲೆ ನಿರ್ಧರಿಸುವ ಶಕ್ತಿಗಳ ಕ್ರಿಯೆಯಿಂದ ಸರಕುಗಳು ತನ್ನ ಒಡೆತನವನ್ನು ಬದಲಾಯಿಸಿ ಸ್ಥಳಾಂತರ ಪ್ರಕ್ರಿಯೆಗೆ ಬಲವಾಗುವ ಮಂಡಲವೂ ಮಾರುಕಟ್ಟೆಯಾಗುವುದೆಂದು ಬೆಕ್ ಮನ್ ಡೇವಿಡ್ ಸನ್‌ರು ಹೇಳಿದ್ದಾರೆ. ಮಾರುವವರು ಕೊಳ್ಳುವವರು ಒಂದು ವಿಶಿಷ್ಟ ಸರಕು ಅಥವಾ ಸರಕುಗಳಿಗಾಗಿ ಸ್ಪರ್ಧಾತ್ಮಕ ಪೈಪೋಟಿ ನಡೆಸುತ್ತಿರುವ ಪ್ರತ್ಯೇಕ ಸಂಬಂಧಗಳನ್ನು ಮಾರುಕಟ್ಟೆ ಎನ್ನಬಹುದು.

ಬಹಳಷ್ಟು ಮಾರುಕಟ್ಟೆಗಳು ಸರಕನ್ನು ಮಾರುವ ಮೊದಲ ವಿಕ್ರಯದಾರನಿಂದ ಹಿಡಿದು ಅದನ್ನು ಕೊಳ್ಳುವ ಕೊನೆಯ ಖರೀದಿದಾರನ ಹಂತದವರೆಗೆ ಅನೇಕ ಮಧ್ಯವರ್ತಿಗಳ ಗುಂಪಿನಿಂದ ಕೂಡಿರುತ್ತದೆ. ಮಾರುಕಟ್ಟೆಯ ಮುಖ್ಯ ಕಾರ್ಯ ಸಾಮಾನ್ಯವಾಗಿ ಅಲ್ಲಲ್ಲಿ ಹರಡಿದ ಸಂಪನ್ಮೂಲಗಳಿಂದ ಉತ್ಪನ್ನಗಳನ್ನು ಶೇಖರಿಸಿ ಬೇಡಿಕೆಯಿರುವ ಹಲವಾರು ಸ್ಥಳಗಳಿಗೆ ಕಳುಹಿಸುವ ಕಾರ್ಯ ಮಾಡುವುದಾಗಿದೆ.

ಮಾರುಕಟ್ಟೆಯನ್ನು ನಾನಾ ಬಗೆಯಾಗಿ ವಿಂಗಡಿಸಬಹುದು: ಭೌಗೋಳಿಕವಾಗಿ ಮಾರುಕಟ್ಟೆಯ ವ್ಯಾಪ್ತಿಯನ್ನು ಗಮನಿಸಿ ಅವನ್ನು ಸ್ಥಳೀಯ, ಪ್ರಾಂತೀಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳೆಂದು ವಿಂಗಡಿಸಬಹುದು. ಮಾರುವವರ ದೃಷ್ಟಿಯಿಂದ–ಮಾರುಕಟ್ಟೆಗಳನ್ನು ಪ್ರಾಥಮಿಕ, ದ್ವಿತೀಯಕ ಮತ್ತು ಅಂತಿಮ ಎಂದೂ ವಿಂಗಡಿಸಬಹುದು. ಪ್ರಾಥಮಿಕ ಮಾರುಕಟ್ಟೆಯಲ್ಲಿ ಉತ್ಪಾದಕರು ತಾವು ಉತ್ಪಾದಿಸಿದ್ದನ್ನು ಒಟ್ಟಾರೆಯಾಗಿ ವ್ಯಾಪಾರದಾರರಿಗಾಗಲಿ ಅವರ ದಲ್ಲಾಳಿಗಳಿಗಾಗಲಿ ಮಾರುವರು. ಸರಕನ್ನು ಚಿಲ್ಲರೆ ವ್ಯಾಪಾರಸ್ಥರಿಗೆ ಮಾರುವುದಕ್ಕೆ ದ್ವಿತೀಯಕ ಮಾರುಕಟ್ಟೆ ಸೀಮಿತವಾಗಿರುತ್ತದೆ. ಮಾರಾಟಕ್ಕಿಟ್ಟ ಸರಕು ತನ್ನ ಉತ್ಪಾದನೆಯ ಮೂಲಸ್ಥಳದಿಂದ ದೂರ ಸಾಗಿ ಪ್ರವಾಸದ ಕೊನೆಯ ಹಂತವನ್ನು ಮುಟ್ಟಿದಾಗ ನಡೆಯುವ ವಹಿವಾಟಿಗೆ ಸೀಮಿತವಾದದ್ದು ಅಂತಿಮ ಮಾರುಕಟ್ಟೆ. ಗ್ರಾಹಕರು ತಮಗೆ ಬೇಕಾದ ಸರಕುಗಳನ್ನು ಚಿಲ್ಲರೆ ವ್ಯಾಪಾರಿಗಳಿಂದ ಪಡೆಯುತ್ತಾರೆ. ವ್ಯವಹಾರದ ಗಾತ್ರವನ್ನು ಅವಲಂಬಿಸಿ ಮಾರುಕಟ್ಟೆಗಳನ್ನು ಒಟ್ಟಾರೆ ಚಿಲ್ಲರೆ ಮಾರುಕಟ್ಟೆಗಳೆಂದು ವಿಂಗಡಿಸಬಹುದು. ಒಟ್ಟಾರೆ ಮಾರುಕಟ್ಟೆಯಲ್ಲಿ ಸರಕು ಸಗಟಾಗಿ ಬಿಕರಿಯಾಗುತ್ತದೆ. ನೇರವಾಗಿ ಗ್ರಾಹಕರಿಗೆ ಸಣ್ಣ ಪ್ರಮಾಣಗಳಲ್ಲಿ ಬಿಕರಿಯಾಗುವ ಮಾರುಕಟ್ಟೆ ಚಿಲ್ಲರೆ ಮಾರುಕಟ್ಟೆ. ವ್ಯಾಪಾರದ ಸ್ವರೂಪವನ್ನು ಅವಲಂಬಿಸಿ ಮಾರುಕಟ್ಟೆಗಳನ್ನು ಸ್ಥಾನಿಕ ಮತ್ತು ಭವಿಷ್ಯ ಎಂದೂ ವಿಂಗಡಿಸಬಹುದು. ನಿರ್ದಿಷ್ಟ ಸ್ಥಳದಲ್ಲೆ ನೇರವಾಗಿ ಸರಕುಗಳು ವರ್ಗವಾಗುವುದಾದರೆ ಅಂಥವು ಸ್ಥಾನಿಕ ಮಾರುಕಟ್ಟೆ. ಭವಿಷ್ಯದಲ್ಲಿ ಉತ್ಪನ್ನಗಳ ವಿನಿಮಯದ ಸಲುವಾಗಿ ವ್ಯವಸ್ಥಿತಗೊಂಡದ್ದು ಭವಿಷ್ಯ ಮಾರುಕಟ್ಟೆ, ಇಲ್ಲಿ ಉತ್ಪನ್ನ ಸ್ಥಳದಲ್ಲಿಯೇ ಮಾರುವವನಿಂದ ಕೊಳ್ಳುವವನಿಗೆ ವರ್ಗವಾಗುವುದಿಲ್ಲ. ಭವಿಷ್ಯದಲ್ಲಿ ನೀಡುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುವುದು.

ಇವಲ್ಲದೆ ತಾತ್ಕಾಲಿಕ, ಅಲ್ಪಾವಧಿ, ದೀರ್ಘಾವಧಿ ಮಾರುಕಟ್ಟೆಗಳೆಂದು ಧಾನ್ಯ, ಬೆಳ್ಳಿ, ಚಿನ್ನ ಮುಂತಾದ ಮಾರುಕಟ್ಟೆಗಳೆಂದೂ ಇದನ್ನು ವಿಂಗಡಿಸಬಹುದು. ಅರ್ಥಶಾಸ್ತ್ರಜ್ಞರ ಪ್ರಕಾರ ಮಾರುಕಟ್ಟೆಗಳಲ್ಲಿ ಇನ್ನೂ ಎರಡು ಮುಖ್ಯ ಪ್ರಭೇದಗಳಿವೆ. ಪರಿಪೂರ್ಣ ಹಾಗೂ ಅಪರಿಪೂರ್ಣ ಮಾರುಕಟ್ಟೆಗಳು. ಪರಿಪೂರ್ಣ ಮಾರುಕಟ್ಟೆಯಲ್ಲಿ ಉತ್ಪಾದಕ ತನ್ನ ಉತ್ಪನ್ನಗಳನ್ನು ಕೊಳ್ಳುವವರಿಗೆ ನೀಡಿ ಅವರು ಕೊಟ್ಟ ಬೆಲೆಯನ್ನು ಪಡೆಯುತ್ತಾನೆ. ಈ ಬಗೆಯ ವಹಿವಾಟನ್ನು ಪ್ರಾಥಮಿಕ ಉತ್ಪನ್ನಗಳ ಬಿಕರಿಯಲ್ಲಿ ಕಾಣಬಹುದು. ಅಪರಿಪೂರ್ಣ ಮಾರುಕಟ್ಟೆಯಲ್ಲಿ ಉತ್ಪಾದಕ ತನ್ನ ಉತ್ಪನ್ನಕ್ಕೆ ಪಡೆಯಬೇಕಾದ ಬೆಲೆಯನ್ನು ನಿರ್ಧರಿಸಿ ಹೇಳಿ, ಆ ಬೆಲೆಗೆ ಮಾರುಕಟ್ಟೆಯಲ್ಲಿ ಬಿಕರಿಯಾದಷ್ಟನ್ನು ನೀಡುತ್ತಾನೆ. ಕೈಗಾರಿಕಾ ಸರಕುಗಳ ಬಿಕರಿ ಈ ಬಗೆಯದು.

ಪ್ರಾಣಿ, ಸಸ್ಯ ಮತ್ತು ಖನಿಜ ಮೂಲ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದಂಥವು ಪ್ರಾಥಮಿಕ ಉತ್ಪನ್ನಗಳ ಮಾರುಕಟ್ಟೆಗಳು. ಇಲ್ಲಿ ಬಿಕರಿದಾರ ತನ್ನ ಸರಕಿಗೆ ಬಂದ ಬೆಲೆಯನ್ನು ಪಡೆಯುತ್ತಾನೆ. ಬಹಳ ದೊಡ್ಡ ಕ್ಷೇತ್ರದಲ್ಲಿ ಹರಡಿರುವ ಸಣ್ಣ ಬೇಸಾಯಗಾರರು ತಮ್ಮ ಕೃಷಿ ಉತ್ಪನ್ನಗಳನ್ನು ಮಾರುವಾಗ ಸ್ಪರ್ಧಾತ್ಮಕ ಪೈಪೋಟಿಗೆ ಇಳಿದಾಗ ಆರ್ಥಿಕವಾಗಿ ಪ್ರಬಲರಾದ ವ್ಯಾಪಾರಿಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ಧಾರಣೆಯಲ್ಲಿ ಇಳಿಮುಖವಾಗಬಹುದು. ಕೊಳ್ಳುವಿಕೆಯನ್ನೂ ಕಡಿಮೆ ಮಾಡಬಹುದು.

ಕೈಗಾರಿಕಾ ಸರಕಿನ ಮಾರುಕಟ್ಟೆಗಳಲ್ಲಿ ವಸ್ತುಗಳ ಮಾರಾಟಮಾಡುವ ಯಂತ್ರೋತ್ಪಾದಿತ ಅಥವಾ ಕಾರ್ಖಾನೆಯಲ್ಲಿ ಉತ್ಪಾದಿಸಲಾದ ಸರಕುಗಳ ಮಾರಾಟ ನಡೆಯುತ್ತದೆ. ಪ್ರತಿಯೊಂದು ಕಂಪನಿಯೂ ತನ್ನದೇ ಆದ ರೀತಿ, ಖ್ಯಾತಿ ಸ್ಥಳಗಳನ್ನು ಹೊಂದಿರುತ್ತದೆ. ವ್ಯಾಪಾರದ ಚಿಹ್ನೆಗಳಿಗೂ ಹೆಸರುಗಳೂ ಪ್ರಭಾವ ಬೀರುತ್ತವೆ. ವ್ಯಾಪಾರದ ವಿನೂತನ ರೀತಿ–ನೀತಿಗಳ ಬಳಕೆಯಾಗುತ್ತದೆ. ಇದು ಪರಿಪೂರ್ಣ ಮಾರುಕಟ್ಟೆಗಳ ರೀತಿ ನೀತಿಗಳಿಂದ ಭಿನ್ನವಾಗಿರುತ್ತದೆ. ಇವುಗಳನ್ನು ಅಪರಿಪೂರ್ಣ ಮಾರುಕಟ್ಟೆಗಳು ಎನ್ನಲಾಗಿದೆ.

ಹಣದ ಮಾರುಕಟ್ಟೆ: ಇದು ಸಾಮಾನ್ಯವಾಗಿ ವ್ಯವಸ್ಥಿತ ವಿನಿಮಯ ಕೇಂದ್ರವಲ್ಲ, ಹಣದ ಮಾರುಕಟ್ಟೆಯಲ್ಲಿ ಹಣವೇ ವಿನಿಮಯವಾಗಬೇಕೆಂದೂ ಇಲ್ಲ, ಹಣದ ಸಗಟು ವ್ಯಾಪಾರಕ್ಕೆ ಮತ್ತು ದೊಡ್ಡ ದೊಡ್ಡ ವಾಣಿಜ್ಯ ಬ್ಯಾಂಕುಗಳು ಅಲ್ಪಾವಧಿ ಸಾಲಗಳನ್ನು ಕೊಡುವ ಆರ್ಥಿಕ ನೆರವಿಗೆ ಇದು ಅನ್ವಯವಾಗುತ್ತದೆ.

ಮಾರುಕಟ್ಟೆ ಬೆಳವಣಿಗೆ ಮೊದಲು –ಸ್ಥಳೀಯವಾಗಿತ್ತು. ಉದಾಹರಣೆಗೆ ಗ್ರಾಮೀಣ ಸಂತೆ, ಜಾತ್ರೆ, ಇತ್ಯಾದಿಗಳು. ಸಾಮಾಜಿಕ ಬದಲಾವಣೆಗಳೊಡನೆ ಆರ್ಥಿಕ ವ್ಯವಹಾರದ ವಿಕಾಸದೊಡನೆ ಮಾರುಕಟ್ಟೆಯ ಬೆಳವಣಿಗೆಯೂ ವಿಸ್ತಾರಗೊಂಡಿತು. ನಗರ ಪಟ್ಟಣಗಳಲ್ಲಿ ವ್ಯಾಪಾರದ ಮಾರುಕಟ್ಟೆ ಪ್ರಾರಂಭವಾದವು. ಬಹುಕಾಲದ ಹಿಂದಿನಿಂದ ವ್ಯಾಪಾರಸ್ಥರು, ಸಾಹಸಿಗಳು, ಫಿನೀಷಿಯದ ನೆಲಸು ನಾಡಿನವರು. ಅರಬ್ಬೀ ಜನರು ತಮ್ಮ ಪ್ರಾಣ ಹಾಗೂ ಬಂಡವಾಳವನ್ನು ಲೆಕ್ಕಿಸದೆ ಉತ್ಪನ್ನಗಳನ್ನು ಒಂದು ಪ್ರಾಂತದಿಂದ ಇನ್ನೊಂದೆಡೆ ತೆಗೆದುಕೊಂಡು ಹೋಗುತ್ತಿದ್ದರು. ಮುಂದೆ ಇದೇ ಸುಧಾರಣೆಗೊಂಡು ಅಂತಾರಾಷ್ಟ್ರೀಯ ವ್ಯಾಪಾರದ ಸಲುವಾಗಿ ಆ ಮಟ್ಟದ ಮಾರುಕಟ್ಟೆಗಳೂ ಬೆಳೆದುಬಂದವು. ರಾಷ್ಟ್ರದ ಹಣಕಾಸಿನ ಸ್ವರೂಪ ಹಾಗೂ ಕಾರಣಗಳ ವಿಶ್ಲೇಷಣೆ ಮಾಡುತ್ತ ಆ್ಯಡಮ್ ಸ್ಮಿತ್ ಹೇಳಿದ ಒಂದು ಮಾತು ಮಾರುಕಟ್ಟೆಗೆ ಅನ್ವಯವಾಗುತ್ತದೆ. ಉತ್ಪಾದನೆ ಗಾತ್ರ ಅದರ ಉದ್ಯಮ ಸ್ವರೂಪದಲ್ಲಿದೆ. ಮಾರುಕಟ್ಟೆ ಎಷ್ಟು ವಿಸ್ತಾರವೋ ಉತ್ಪಾದನೆಯ ಗಾತ್ರ ಅಷ್ಟಕ್ಕೆ ಸೀಮಿತವಾಗಿರುತ್ತದೆ ಎಂದು ಅವನು ಹೇಳಿದ್ದಾನೆ. ಅಭಿರುಚಿ ಮತ್ತು ವೈಜ್ಞಾನಿಕ ತಾಂತ್ರಿಕ ಬದಲಾವಣೆಗಳಿಂದ ಮಾರುಕಟ್ಟೆಯ ಉತ್ಪಾದನೆಯ ಗಾತ್ರವೂ ಬೆಳೆಯಿತು. ಮಾರುಕಟ್ಟೆಗಳು ಬೆಳೆದಂತೆ ದೇಶಗಳು ಅಭಿವೃದ್ಧಿ ಹೊಂದಿದವು. ಹೆಚ್ಚು ಪೈಪೋಟಿಗಳಿರುವ ಮಾರುಕಟ್ಟೆಗಳಲ್ಲಿ ಭಾಗವಹಿಸುವವರೆಲ್ಲರೂ ಗಳಿಸುವ ಲಾಭಕ್ಕೆ ತಕ್ಕಂತೆ ಆಯಾ ಮಾರುಕಟ್ಟೆಗಳಲ್ಲಿ ಸಂಪನ್ಮೂಲಗಳ ವಿತರಣೆ ನಡೆಯುತ್ತದೆ. ಕಾಣದ ಕೈಯೊಂದು ಪದಾರ್ಥಗಳ ಧಾರಣೆಯನ್ನು ಆಯಾ ಮಾರುಕಟ್ಟೆಗಳಲ್ಲಿ ನಿರ್ಧರಿಸುವುದು.

ಉತ್ಪಾದನೆ ಅಧಿಕವಾಗಿ ಮಾರಬಹುದಾದ ಪದಾರ್ಥಗಳು ಹೆಚ್ಚಿದಷ್ಟೂ ಅವುಗಳಿಗೆ ಮಾರುಕಟ್ಟೆಗಳು ಅಸ್ತಿತ್ವಕ್ಕೆ ಬರಲಿಲ್ಲ. ಒಮ್ಮೊಮ್ಮೆ ಉತ್ಪತ್ತಿ ಕಡಿಮೆಯಾಗಿದ್ದರೂ ಬೇರೆ ಸರಕುಗಳನ್ನು ಪಡೆಯುವುದಕ್ಕಾಗಿ ವ್ಯಾಪಾರ ವಿನಿಮಯ ನಡೆಸುವ ಸಲುವಾಗಿ ಮಾರುಕಟ್ಟೆಗಳು ಅಸ್ತಿತ್ವಕ್ಕೆ ಬಂದವು. ಶ್ರಮವಿಭಜನೆಯೂ ಮಾರುಕಟ್ಟೆಯ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿವೆ. ಆರ್ಥಿಕ ಅಭಿವೃದ್ಧಿಗೆ ಇದು ಕಾರಣವಾಗಿದೆ.

ಮಾರುಕಟ್ಟೆಗಳ ಅಕ್ರಮ ಪ್ರವೃತ್ತಿಗಳನ್ನು ತಡೆಗಟ್ಟಿ ಅದನ್ನು ಸುಧಾರಿಸಲು ಭಾರತ ಸರ್ಕಾರ ನೇಮಿಸಿದ್ದ ಆಯೋಗ 1928ರಲ್ಲಿ ಸಲ್ಲಿಸಿದ ವರದಿಯಲ್ಲಿ ಅಕ್ರಮಗಳ ನಿವಾರಣೆ ಹಾಗೂ ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಗೆ ಶಿಫಾರಸುಗಳನ್ನು ಸಲ್ಲಿಸಿತು. ಅದರ ಪರಿಣಾಮವಾಗಿ ಭಾರತದ ವಿವಿಧ ರಾಜ್ಯಗಳಲ್ಲಿ ಮಾರಾಟ ಕಾನೂನುಗಳು ಜಾರಿಗೆ ಬಂದಿವೆ. ದೇಶಾದ್ಯಂತ ನಿಯಂತ್ರಿತ ಮಾರುಕಟ್ಟೆಗಳು ಸ್ಥಾಪಿತವಾಗಿವೆ. (ಎಂ.ಆರ್.ಎಂ.)

**ಮಾರುಕಟ್ಟೆ ಶಕ್ತಿಗಳು:** ಸರಕು ಸೇವೆಗಳ ಬೇಡಿಕೆ ಮತ್ತು ಪೂರೈಕೆಗಳಿಗೆ ಅನುಗುಣವಾಗಿ ಅನುಭೋಗಿಗಳ ಮೇಲೆ ಪ್ರಭಾವ ಬೀರುವ ಶಕ್ತಿಗಳು. ಇವು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ನಡೆಯುತ್ತಿರುವ ಚಲನವಲನಗಳನ್ನು ನಿಯಂತ್ರಿಸುವ ಶಕ್ತಿಗಳಾಗಿವೆ. ಮಾರುಕಟ್ಟೆ ಶಕ್ತಿಗಳು ನೇರವಾಗಿ ಬೇಡಿಕೆ ಮತ್ತು ಪೂರೈಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಇದಕ್ಕೆ ಅನುಗುಣವಾಗಿ ಬೇಡಿಕೆ ಮತ್ತು ಪೂರೈಕೆಗಳು ಬೆಲೆ ಮತ್ತು ಸಂಪನ್ಮೂಲ ಹಂಚುವಿಕೆಗಳ ಮೇಲೆ ನೇರವಾಗಿ ಅವಲಂಬಿತವಾಗಿರುತ್ತವೆ. ರಾಷ್ಟ್ರವು ತೆರೆದ ಆರ್ಥಿಕತೆಯಾಗಿದ್ದಾಗ ಮಾರುಕಟ್ಟೆ ಶಕ್ತಿಗಳು ಯಾರ ಹಿಡಿತದಲ್ಲಿಯೂ ಇರುವುದಿಲ್ಲ. ಮಾರುಕಟ್ಟೆ ಶಕ್ತಿಗಳು ಸಂದರ್ಭಕ್ಕೆ ಅನುಗುಣವಾಗಿ ಮತ್ತು ಬೇಡಿಕೆ ಮತ್ತು ಪೂರೈಕೆಗಳನ್ನು ಅವಲಂಬಿಸಿರುತ್ತದೆ. ಆದರೆ ರಾಷ್ಟ್ರವು ಮುಚ್ಚಿದ ಆರ್ಥಿಕತೆಯಾಗಿದ್ದಾಗ ಮಾರುಕಟ್ಟೆ ಶಕ್ತಿಗಳು ಸಂಪೂರ್ಣವಾಗಿ ರಾಷ್ಟ್ರದ ಆಡಳಿತಗಾರರ, ಆರ್ಥಿಕ ಸಂಘಟಕರ ಮತ್ತು ರಾಜಕೀಯ ಪಕ್ಷಗಳ ಕೈಯಲ್ಲಿ ನಿಯಂತ್ರಿಸಲ್ಪಡುತ್ತದೆ. ಉದಾಹರಣೆಗೆ 1970–80 ರ ದಶಕಗಳಲ್ಲಿ ರಷ್ಯ ಮತ್ತು ಚೀನದೇಶಗಳಲ್ಲಿ ಮಾರುಕಟ್ಟೆ ಶಕ್ತಿಗಳು ಸಂಪೂರ್ಣವಾಗಿ ಕಮ್ಯುನಿಸ್ಟರ ನಿಯಂತ್ರಣದಲ್ಲಿದ್ದವು. ಹಲವಾರು ರಾಷ್ಟ್ರಗಳು ತಮ್ಮ ಆರ್ಥಿಕ ನೀತಿಯ ಮೂಲಕ ಮಾರುಕಟ್ಟೆ ಶಕ್ತಿಗಳನ್ನು ನಿಯಂತ್ರಿಸಿ ಉತ್ಪಾದಕರ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿವೆ. ಕೈಗಾರಿಕೋದ್ಯಮಿಗಳಿಗೆ ಕೃಷಿಕರಿಗೆ ಮತ್ತು ವ್ಯಾಪಾರಿಗಳಿಗೆ ಸಹಾಯಧನ ನೀಡುವುದರ ಮೂಲಕ ಆಮದು ಮತ್ತು ರಫ್ತು ವಸ್ತುಗಳ ಮೇಲೆ ಸುಂಕ ವಿಧಿಸುವ ಮೂಲಕ ಮಾರುಕಟ್ಟೆ ಶಕ್ತಿಗಳನ್ನು ನಿಯಂತ್ರಿಸಲಾಗುತ್ತದೆ. ಆದರೆ 20–21ನೆಯ ಶತಮಾನದಲ್ಲಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳ (ಎಲ್.ಪಿ.ಜಿ.) ಪರಿಣಾಮವಾಗಿ ಮಾರುಕಟ್ಟೆ ಶಕ್ತಿಗಳಲ್ಲಿ ಮತ್ತು ಅವುಗಳ ಮಹತ್ವದಲ್ಲಿ ಆಮೂಲಾಗ್ರ ಬದಲಾವಣೆಗಳು ಗೋಚರಿಸುತ್ತಿವೆ. ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ಶಕ್ತಿಗಳು ಸ್ವತಂತ್ರವಾಗಿದ್ದು ಇವು ಆಂತರಿಕವಾಗಿಯೂ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಅನುಭೋಗಿಗಳ ಮೇಲೆ ಪರಿಣಾಮ ಬೀರುತ್ತಿವೆ.

ಕಮ್ಯುನಿಸ್ಟ್ ಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಇತ್ತೀಚೆಗೆ ಮಾರುಕಟ್ಟೆ ಕ್ರಾಂತಿ ಉಂಟಾಗುತ್ತಿದ್ದು ಮಾರುಕಟ್ಟೆ ಶಕ್ತಿಗಳು ಅನುಭೋಗಿಗಳ ಅಭಿಲಾಷೆಗೆ ತಕ್ಕಂತೆ ಬದಲಾಗುತ್ತಿರುವುದನ್ನು ಕಾಣಬಹುದಾಗಿದೆ. ಇತ್ತೀಚಿನ ವಿಶ್ವ ವ್ಯಾಪಾರ ಸಂಘಟನೆಯ ಡಬ್ಲ್ಯು. ಟಿ. ಓ. ನೀತಿಗಳು ಕೂಡ ಮಾರುಕಟ್ಟೆ ಶಕ್ತಿಗಳ ಮೇಲೆ ಪರಿಣಾಮ ಬೀರುತ್ತಿವೆ. ಅಂದರೆ ವಿಶ್ವ ವ್ಯಾಪಾರ ಸಂಘಟನೆಯು ತನ್ನ ಸದಸ್ಯ ರಾಷ್ಟ್ರಗಳಿಗೆ ಮಾರುಕಟ್ಟೆ ಶಕ್ತಿಗಳನ್ನು ಸ್ವತಂತ್ರವಾಗಿ ಬಿಡಲು ಮನವೊಲಿಸುತ್ತಿದೆ.

ಮಾರುಕಟ್ಟೆ ಶಕ್ತಿಗಳು ಮಾರುಕಟ್ಟೆಯಿಂದ ಮಾರುಕಟ್ಟೆಗೆ, ಸರಕುಗಳಿಂದ ಸರಕುಗಳಿಗೆ, ಅನುಭೋಗಿಗಳಿಂದ ಅನುಭೋಗಿಗಳಿಗೆ ಮತ್ತು ಆರ್ಥಿಕ ವ್ಯವಸ್ಥೆಯಿಂದ ಆರ್ಥಿಕ ವ್ಯವಸ್ಥೆಗೆ ಬದಲಾಗುತ್ತಿರುತ್ತವೆ. ಮಾರುಕಟ್ಟೆ ಶಕ್ತಿಗಳು ಅವಲಂಬಿತವಾಗಿರುವ ಪ್ರಮುಖ ಅಂಶಗಳೆಂದರೆ ಸಂಪನ್ಮೂಲ, ಅನುಭೋಗಿಗಳ ಅಭಿರುಚಿ ಕಾಯಿದೆ – ಕಾನೂನು ಮತ್ತು ಸರ್ಕಾರದ ತೆರಿಗೆ ನೀತಿಗಳಾಗಿವೆ.

ಸರ್ಕಾರದ ತೆರಿಗೆ ನೀತಿ ಮಾರುಕಟ್ಟೆ ಶಕ್ತಿಗಳ ಮೇಲೆ ಹೇಗೆ ನೇರವಾಗಿ ಪರಿಣಾಮ ಬೀರುತ್ತದೆ ಎಂಬುದಕ್ಕೆ ಒಂದು ಮುಖ್ಯ ಉದಾಹರಣೆ ಎಂದರೆ ಬ್ರಿಟನ್ ದೇಶದಲ್ಲಿ ಮದ್ಯಪಾನೀಯಗಳ ಮೇಲೆ ಹೆಚ್ಚು ತೆರಿಗೆ ವಿಧಿಸಿರುವುದರಿಂದ ಅವುಗಳ ಬೆಲೆ ಮಾರುಕಟ್ಟೆಯಲ್ಲಿ ಹೆಚ್ಚಾಗಿದೆ. ಆದರೆ ನೆರೆಯ ಫ್ರಾನ್ಸ್ ದೇಶದಲ್ಲಿ ಮದ್ಯಪಾನೀಯಗಳ ಮೇಲೆ ಅತ್ಯಂತ ಕಡಿಮೆ ತೆರಿಗೆ ವಿಧಿಸಿರುವುದರಿಂದ ಅಲ್ಲಿ ಅವುಗಳ ಬೆಲೆ ಬ್ರಿಟನ್ನಿಗಿಂತ ಬಹಳ ಕಡಿಮೆ. ಆದುದರಿಂದ ಬ್ರಿಟನ್ನಿನಿಂದ ಸಾವಿರಾರು ಜನರು ವಾರಾಂತ್ಯದಲ್ಲಿ ಫ್ರಾನ್ಸ್‌ಗೆ ಮದ್ಯಪಾನ ಮಾಡಲು ಬರುವ ಪದ್ಧತಿ ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. (ಪಿ.ಎನ್.ಎಂ.)

**ಮಾರುತ:** ನೆಲಕ್ಕೆ ಸಮಾನಾಂತರವಾಗಿ ಚಲಿಸುವ ಗಾಳಿ (ವಿಂಡ್). ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋದಂತೆಲ್ಲ ವಾಯುಮಂಡಲ ಒತ್ತಡಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದ ಭೂಮಿಯ ಸುತ್ತಲೂ ಮಾರುತಗಳು ಏರ್ಪಡುತ್ತವೆ. ಈ ವ್ಯತ್ಯಾಸಗಳಿಗೆ ಒತ್ತಡದಪ್ರವಣತೆ (ಪ್ರೆಷರ್ ಗ್ರೇಡಿಯಂಟ್) ಎಂದು ಹೆಸರು. ಇಡೀ ಭೂಗೋಳಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಮಾರುತಗಳು ಅಧಿಕ ಒತ್ತಡದ ಪ್ರದೇಶದಿಂದ ಕಡಿಮೆ ಒತ್ತಡದ ಪ್ರದೇಶಕ್ಕೆ ಎಂದೂ ನೇರವಾಗಿ ಬೀಸುವುದಿಲ್ಲ. ಮಾರುತಗಳ ದಿಶೆಗಳನ್ನು ಕಾರಿಯೋಲಿಸ್ ಬಲ ವಿಚಲಿಸಬಲ್ಲದು. ಗ್ರಹಾತ್ಮಕ ಮಾರುತಗಳು ತಮ್ಮ ದಿಶೆಯನ್ನು ಬದಲಿಸಿಕೊಳ್ಳುತ್ತವೆ. ಉಪೋಷ್ಣ ವಲಯದ ಔನ್ನತ್ಯಗಳಿಂದ ಧ್ರುವಾಭಿಮುಖವಾಗಿ ಬೀಸುವ ಮಾರುತಗಳಿಗೆ ವೆಸ್ಟರ್ಲಿ ಮಾರುತಗಳೆಂದು ಹೆಸರು. ಸಮಭಾಜಕದತ್ತ ಬೀಸುವಂಥದಕ್ಕೆ ಈಸ್ಟರ್ಲಿ ವಾಣಿಜ್ಯ ಮಾರುತಗಳು (ಟ್ರೇಡ್ ವಿಂಡ್ಸ್) ಎಂದು ಹೆಸರು. ಉತ್ತರ ಅಕ್ಷಾಂಶ $30^0$ ಮತ್ತು ದಕ್ಷಿಣ ಅಕ್ಷಾಂಶ $30^0$ ಗಳ ನಡುವೆ, ಭೂಸಮಭಾಜಕದ ಎಡೆಗೆ ಭೂಮಿಯ ಆವರ್ತನೆಯಿಂದ ಪಶ್ಚಿಮಕ್ಕೆ ತಿರುಗಿ, ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರದ ಮೇಲೆ ಬೀಸುವ ಮಾರುತಗಳಿವು. ವಾಯುಮಂಡಲದ ಹೆಚ್ಚು ಎತ್ತರದಲ್ಲಿಯ ಒತ್ತಡ ಪ್ರವಣತೆ ಮತ್ತು ಕಾರಿಯೋಲಿಸ್ ಬಲಗಳಿಂದ ಮಾತ್ರ ನಿರ್ಧಾರವಾಗುವ ಮಾರುತಗಳನ್ನು ಭೂವಿಕ್ಷೇಪೀ ಮಾರುತಗಳು (ಜಿಯೋ ಸ್ಟ್ರೋಫಿಕ್ ವಿಂಡ್ಸ್) ಎಂದು ಕರೆಯುವುದಿದೆ.



ನಿರಂತರ ಮಾರುತಗಳು

ಭೂತಲದ ಸಮೀಪದಲ್ಲಿ ವಾಯುಪ್ರವಾಹ ಪ್ರರೂಪಗಳು ಸಾಕಷ್ಟು ಕ್ಲಿಷ್ಟ ರೂಪದಲ್ಲಿ ಇರುತ್ತವೆ. ಇವುಗಳ ಮೇಲೆ ಆ ಭೂಭಾಗದ ಸಲುವಾಗಿ ಅಂದರೆ ಸ್ಥಳೀಯವಾಗಿ ಏರ್ಪಡುವ ಉಷ್ಣ ಮತ್ತು ಶೈತ್ಯಗಳು ತಮ್ಮ ಪ್ರಭಾವವನ್ನು ಬೀರುತ್ತವೆ. ಮಾತ್ರವಲ್ಲದೆ ಭೂಭಾಗದ ಹಾಗೂ ಸಮುದ್ರ ಭಾಗದ ವಿತರಣೆ ಮತ್ತು ಭೂ ಮೇಲ್ಮೈಯಲ್ಲಿರುವ ವ್ಯತ್ಯಾಸಗಳು ಕೂಡ ತಮ್ಮ ಪ್ರಭಾವವನ್ನು ಬೀರುತ್ತವೆ. ಇದರ ಪರಿಣಾಮವಾಗಿ ಉಂಟಾಗುವ ದ್ವಿತೀಯಕ ಮಾರುತ ವ್ಯವಸ್ಥೆಗಳಲ್ಲಿ ಮಾನ್‌ಸೂನ್‌ಗಳು ಪ್ರತಿ ಆವರ್ತ ಮಾರುತಗಳೂ ಸೇರಿರುವಂಥ ವಿವಿಧ ಸಾಮರ್ಥ್ಯಗಳಿಂದ ಒಡಗೂಡಿದ ಮಾರುತಗಳೂ, ಅವನಮನಗಳೂ (ಡಿಪ್ರೆಶನ್ಸ್) ಸೇರಿರುತ್ತವೆ. ಇವಲ್ಲದೆ, ಕಡಲು–ನೆಲ–ಮತ್ತು ನೆಲ–ಕಡಲುಗಳ ಮಂದಮಾರುತಗಳೂ, (ಕಡಲುಗಾಳಿ, ನೆಲಗಾಳಿ; ಬ್ರೀಸಸ್) ಕೆಲವೊಂದು ನಿರ್ದಿಷ್ಟ ನೆಲದ ಸ್ವರೂಪದಿಂದಾಗಿಯೇ ಉಂಟಾಗುವಂಥ ಚಿನೂಕ್ ಎಂಬ ಹೆಸರಿನ ಮಾರುತಗಳೂ ಸೇರಿರುತ್ತವೆ. ಪವನ ವಿಜ್ಞಾನದಲ್ಲಿ ಚಿನೂಕ್ ಮಾರುತಗಳನ್ನು ರಾಕೀ ಪರ್ವತಗಳ ಮೇಲೆ ಬೀಸುವ ಬೆಚ್ಚನೆಯ ತೇವಯುಕ್ತ ಗಾಳಿಯೆಂದೂ ಶುಷ್ಕ, ಬೆಚ್ಚನೆಯ ಪ್ರಬಲವಾಗಿರುವ ಮತ್ತು ಬಿರುಸಿನಿಂದ ಕೂಡಿದ ಫೋನ್ ಗಾಳಿಯೆಂದೂ ಪರಿಗಣಿಸುವುದಿದೆ. ಕಡಲು ಇಲ್ಲವೇ ನೆಲದ ಮೇಲೆ ಬೀಸುವ ಸ್ಥಳೀಯ ಗಾಳಿಗಳನ್ನು ಮಂದಮಾರುತಗಳು (ಬ್ರೀಸಸ್), ಬಿರುಗಾಳಿಗಳು (ಗೇಲ್ಸ್), ಚಂಡಮಾರುತಗಳು (ಹರಿಕೇನ್ಸ್) ಎಂಬುದಾಗಿ ವರ್ಗೀಕರಿಸಲಾಗಿದೆ. ಬ್ರಿಟನ್ನಿನ ಜಲಾನ್ವೇಕ್ಷಣ ವಿಜ್ಞಾನಿ ಫ್ರಾನ್ಸಿಸ್ಬೋಫಸ (1774–1857) ಹೊಗೆ, ಮರಗಳು, ಸಮುದ್ರ ಮೇಲ್ಮೈ ಮುಂತಾದ ಕೆಲವೊಂದು ನಿರ್ದಿಷ್ಟ ವಿಷಯಗಳ ವರ್ತನೆಗಳಿಗೆ ಸಾಪೇಕ್ಷವಾಗಿ ಮಾರುತಗಳ ಬೀಸುವ ವೇಗವನ್ನು ನಿಷ್ಕರ್ಷಿಸಲು ರೂಪಿಸಿದ ಮಾನಸಿಕ ವ್ಯವಸ್ಥೆಗೆ ಅನುಗುಣವಾಗಿ ಈ ವರ್ಗೀಕರಣ ನಡೆದಿದೆ. ಹಲವು ಸಂದರ್ಭಗಳಲ್ಲಿ,ಉಷ್ಣವಲಯದ ಆವರ್ತನ ಬಿರುಗಾಳಿಗಳಲ್ಲಿಯಂತೆ ಸ್ಥಳೀಯ ಮಾರುತಗಳೂ ಚಕ್ರಾಕಾರ ಪಥದಲ್ಲಿ ಚಲಿಸುತ್ತವೆ.

ವಾಯುಮಂಡಲದಲ್ಲಿ ಉಷ್ಣತೆ ಹೆಚ್ಚಾಗಿರುವ ಪ್ರದೇಶದಲ್ಲಿ ಕಡಿಮೆ ಒತ್ತಡ ಇರುವ ಪ್ರದೇಶಕ್ಕೆ ಎಲ್ಲ ಕಡೆಗಳಿಂದಲೂ ನುಗ್ಗುವ ಗಾಳಿಗೆ ಆವರ್ತ ಮಾರುತ (ಸೈಕ್ಲೋನ್) ಎಂದು ಹೆಸರು. ಪಶ್ಚಿಮ ಸಮುದ್ರದ ಭಾಗಗಳ ಉತ್ತರ ಗೋಳಾರ್ಧದಲ್ಲಿ ಬೇಸಗೆಯಲ್ಲೂ ದಕ್ಷಿಣ ಗೋಳಾರ್ಧದಲ್ಲಿ ಚಳಿಗಾಲ ಮತ್ತು ವಸಂತದಲ್ಲೂ ಕಾಣಿಸಿಕೊಳ್ಳುವ ಇಂಥ ಮಾರುತಕ್ಕೆ ಚಂಡಮಾರುತ, ತೂಫಾನ್ ಎನ್ನುವರು. (ಪಿ.ಎಂ.)

**ಮಾರ್ಕ್ ಜೆಫರ್‌ಸನ್:** 1863–1949. ಅಮೆರಿಕದ ಮಾನವ ಭೂಗೋಳವಿಜ್ಞಾನಿ, ವಿಲಿಯಂ ಮೋರಿಸ್ ಡೇವಿಸ್‌ರವರ ಪ್ರತಿಭಾನ್ವಿತ ಶಿಷ್ಯ. ವಸತಿ ಮತ್ತು ನಗರ ಭೂಗೋಳವಿಜ್ಞಾನಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ನಗರಗಳ ಗಾತ್ರ, ವಿಸ್ತೀರ್ಣ ಹಾಗೂ ಕಾರ್ಯಗಳನ್ನು ಪರೀಕ್ಷಿಸಿ, ತಮ್ಮದೇ ಆದ ಪರಿಕಲ್ಪನೆಗಳನ್ನು ನೀಡಿದ್ದಾರೆ. ಇವರು ಕೇಂದ್ರ ಸ್ಥಳಗಳು ಎಂಬ ಪರಿಕಲ್ಪನೆಯನ್ನು ನೀಡಿದರು. ಕೇಂದ್ರದಲ್ಲಿರುವ ಸ್ಥಳಗಳು ಸುತ್ತಲಿನ ಸ್ಥಳಗಳನ್ನು ಆಕರ್ಷಿಸಲು ಹೊಂದಿರಬಹುದಾದ ಅಂಶಗಳನ್ನು ಇದರಲ್ಲಿ ವಿವರಿಸಿದರು. ಈ ಪರಿಭಾವನೆ ಮಾರುಕಟ್ಟೆ ನಿಯಮಗಳನ್ನು ಪ್ರಭಾವಿಸಿತು. ಹಾಗೆಯೇ ಪ್ರೈಮೇಟ್ ಸಿಟಿ ನಿಯಮ ಹಾಗೂ ಸಿವಿಲೈಜಿಂಗ್ ರೈಲ್ಸ್ ಎಂಬ ಪರಿಕಲ್ಪನೆಗಳನ್ನು ನೀಡಿದರು. ಆ ಅವಧಿಯಲ್ಲಿ ಅವರ ವಿದ್ಯಾರ್ಥಿಗಳಾದಂತಹ ಎಲ್ಲರಿಗೂ ನಗರ ಭೂಗೋಳ ವಿಜ್ಞಾನದ ಮೂಲಗಳು ಅಧ್ಯಯನಕ್ಕೆ ಲಭಿಸಿದವು. ಇವರು ಅನೇಕ ಭಾರಿ ನನ್ನ ಭೂಗೋಳವಿಜ್ಞಾನದ ಪರಿಕಲ್ಪನೆಗಳು ಮಾನವನ ಜೊತೆಗೆ ಸಂಬಂಧಿಸಿದಂತೆ ಎಂದು

ಹೇಳಿದ್ದಾರೆ. ಅವರು ಎಲ್ಲಿದ್ದಾರೆ ಅವರು ಏನನ್ನು ಇಚ್ಛಿಸುತ್ತಾರೆ ಮತ್ತು ಅವರು ಅಲ್ಲಿ ಯಾಕಿದ್ದಾರೆ ಎಂಬ ಅಧ್ಯಯನಗಳನ್ನು ಪರಿಚಯಿಸಿದರು. ಇವು ಜೀವಿ ಪರಿಸರ ವಿಷಯಕ್ಕೆ ಸಂಬಂಧಪಟ್ಟ ಅಂಶಗಳಾಗಿವೆ.

1939 ರಲ್ಲಿ ಇವರು ಪ್ರಧಾನ ನಗರ ಪರಿಕಲ್ಪನೆಯನ್ನು ನೀಡಿದರು. ದೇಶದ ವಸತಿ ಸರಣಿಯಲ್ಲಿ ಅತ್ಯಂತ ದೊಡ್ಡ ನಗರವು, 2ನೆಯ ಸ್ಥಾನದಲ್ಲಿರುವ ನಗರ ಗಾತ್ರಕ್ಕಿಂತ ಎರಡು ಪಟ್ಟು ದೊಡ್ಡದಾಗಿರುವ ನಗರವೇ ಪ್ರಧಾನನಗರ ಎಂದು ಕರೆದಿದ್ದಾರೆ. ಈ ನಗರವು ಗಾತ್ರದಲ್ಲಿ ಮಾತ್ರವಲ್ಲ, ರಾಷ್ಟ್ರಮಟ್ಟದಲ್ಲಿ ಅತ್ಯುತ್ಕೃಷ್ಟವಾಗಿರುತ್ತದೆ. ಅಂತಹ ನಗರವು ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಇಡೀ ಪ್ರದೇಶ ಅಥವಾ ದೇಶದಲ್ಲೇ ಮಹತ್ತ್ವಪೂರ್ಣದ್ದಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕಾಗಿ ಇವರು 51 ದೇಶಗಳನ್ನು ಆಯ್ಕೆ ಮಾಡಿಕೊಂಡು ಅಭ್ಯಸಿಸಿದರು. (ಎನ್.ಎಲ್.)

**ಮಾರ್ಕ್ಸ್‌ವಾದ:** ಕಾರ್ಲ್‌ಮಾರ್ಕ್ಸ್ (1818–83) ಈ ವಾದದ ಮೂಲ ಪುರುಷ. ಇವನ ದಾಸ್ ಕ್ಯಾಪಿಟಲ್ ಎಂಬ ಉದ್ಗ್ರಂಥ ಹಾಗೂ ಏಂಜೆಲ್ ಜೊತೆಗೆ ಇವನು ರಚಿಸಿದ ಕಮ್ಯುನಿಸ್ಟ್ ಪ್ರಣಾಳಿಕೆ ಮಾರ್ಕ್ಸ್‌ವಾದದ ಬೈಬಲ್ ಎನಿಸಿದೆ. ಮಾರ್ಕ್ಸ್‌ನ ಸಿದ್ಧಾಂತವನ್ನು ಅನಂತರ ಲೆನಿನ್ ವಿಸ್ತರಿಸಿ ರಷ್ಯದ ಸಮತಾವಾದದ ಸ್ಥಾಪಕನೆನಿಸಿಕೊಂಡ. ಹೀಗೆ ಮಾರ್ಕ್ಸ್, ಏಂಜೆಲ್ಸ್ ಮತ್ತು ಲೆನಿನ್ ಸಮತಾವಾದದ ತ್ರಿಮೂರ್ತಿಗಳು.

ಮಾರ್ಕ್ಸ್ ಹೀಗೆ ಹೇಳಿದ್ದಾನೆ: ತಾತ್ವಿಕರು ಜಗತ್ತನ್ನು ವಿವಿಧ ರೀತಿಯಲ್ಲಿ ವಿವರಿಸಿದ್ದಾರೆ. ಆದರೆ ಪ್ರಸ್ತುತ ನಮ್ಮ ಉದ್ದೇಶ ಜಗತ್ತನ್ನು ವಿವರಿಸುವುದಲ್ಲ, ಅದನ್ನು ಬದಲಿಸುವುದು. ಇವನು ಹೆಗೆಲ್‌ನ ಡಯಲೆಕ್ಟಿಕ್ ಪದ್ಧತಿಯನ್ನು ಅಂಗೀಕರಿಸಿದ. ಎಂದರೆ ಇವನ ಪ್ರಕಾರ ಮನುಷ್ಯನ ಪ್ರಗತಿಯು ವಾದ, ಪ್ರತಿವಾದ ಮತ್ತು ಅವುಗಳ ಸಮನ್ವಯದ ಮೂಲಕ ಸಾಗುತ್ತದೆ. ವಿರೋಧಗಳ ಸಮನ್ವಯವೇ ಪ್ರಗತಿಯ ಮೂಲ. ಆದರೆ ಮಾರ್ಕ್ಸ್ ಹೆಗೆಲ್‌ನಂತೆ ಚಿತ್ ಪ್ರಧಾನವಾದಿಯಲ್ಲ. ಇವನೊಬ್ಬ ಭೌತವಾದಿ. ಎಂದರೆ ಇವನ ಪ್ರಕಾರ ಜಗತ್ತಿನ ಮೂಲ ಸ್ವರೂಪವು ಜಡವೇ ಹೊರತು ಚೇತನವಲ್ಲ. ಮನುಷ್ಯನ ಮೂಲವು ಭೌತ ಪ್ರಕೃತಿಯಲ್ಲಿದೆಯೇ ಹೊರತು ಅವನಲ್ಲಿ ಅಭೌತವಾದ ಯಾವ ಅಂಶವೂ ಇಲ್ಲ. ಆದ್ದರಿಂದ, ಅವನ ಪ್ರಗತಿಯನ್ನು ಈ ಭೌತದ ನೆಲೆಯಲ್ಲೇ ಗುರುತಿಸಬೇಕು.



ಮಾರ್ಕ್ಸ್ ಇತಿಹಾಸವನ್ನು ಆರ್ಥಿಕ ದೃಷ್ಟಿಕೋನದಿಂದ ವಿವರಿಸುವನೇ ಹೊರತು ಧಾರ್ಮಿಕ ದೃಷ್ಟಿಕೋನದಿಂದಲ್ಲ. ಮನುಷ್ಯನ ಇತಿಹಾಸದ ಪ್ರಾರಂಭದಿಂದ ಇಲ್ಲಿಯವರೆಗೆ ಎಲ್ಲ ಆಗುಹೋಗುಗಳಿಗೂ ಕಾರಣ ದೇವರು ಅಥವಾ ವಿಧಿಯಲ್ಲ. ಮಾನವನ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ನೀತಿ, ಮತಧರ್ಮ ಮತ್ತು ರಾಷ್ಟ್ರೀಯತೆಗಳಿಗಿಂತಲೂ ಹೆಚ್ಚಾಗಿ ನಿಯಂತ್ರಿಸುವುದು ಆರ್ಥಿಕ ಶಕ್ತಿಗಳು. ಮಾರ್ಕ್ಸ್‌ನ ಈ ವಾದಕ್ಕೆ ಆರ್ಥಿಕ ನಿರ್ಧಾರವಾದ ಎಂದು ಹೆಸರು.

ಆದರೆ ಸಮಾಜದಲ್ಲಿ ಆರ್ಥಿಕ ಉತ್ಪಾದನೆಯ ಕೆಲವೇ ಮಂದಿಯಲ್ಲಿ ಕೇಂದ್ರೀಕೃತವಾಗಿರುವುದರಿಂದ ಬಂಡವಾಳ ಪದ್ಧತಿಯುಂಟಾಗಿ ಜೀತಗಾರರ ಸಂಖ್ಯೆ ಹೆಚ್ಚುತ್ತದೆ. ಯಾವ ವರ್ಗ ತನ್ನೆಲ್ಲ ದುಡಿಮೆಯನ್ನು ಹಿಡಿ ಕೂಳಿಗೆ ಮಾಡಿಕೊಳ್ಳುವುದೋ ಅದೇ ಜೀತವರ್ಗ. ಈ ವರ್ಗದ ಜನರಿಗೆ ಸ್ವಂತ ಆಸ್ತಿಯಾಗಲೀ, ಭೂಮಿಯಾಗಲೀ ಇರುವುದಿಲ್ಲ. ಅವರಿಗೆ ಕೊಳ್ಳುವ ಸಾಮರ್ಥ್ಯವು ಇಲ್ಲ. ಇವರು ಪಡೆಯುವ ಹಿಡಿಗೂಳು ದಿನದ ಶರೀರ ಪೋಷಣೆಗೆ ಮಾತ್ರ ನೆರವಾಗಿ ಪುನಃ ಅವರು ಮಾರನೆಯ ದಿನ ಕೆಲಸಕ್ಕೆ ಹಾಜರಾಗಿರುತ್ತಾರೆ. ಇದನ್ನು ಮಾರ್ಕ್ಸ್ ಕೂಲಿಯ ಕ್ರೂರ ನಿಯಮ ಎಂದು ಕರೆಯುತ್ತಾರೆ.

ಆದರೆ ನಿಸರ್ಗದ ನಿಯಮ ಎಷ್ಟು ಕಠೋರವೆಂದರೆ ಬಂಡವಾಳ ಪದ್ಧತಿಯು ಅದಕ್ಕೇ ತುತ್ತಾಗುತ್ತದೆ. ಬಂಡವಾಳ ಮತ್ತು ಮಧ್ಯಮವರ್ಗಗಳಿಂದ ಕೂಡಿದ ಧನಿಕ ಹಾಗೂ ಜೀತವರ್ಗದವರ ನಡುವೆ ಹೋರಾಟ ಅನಿವಾರ್ಯವಾಗುತ್ತದೆ. ಧನಿಕರಿಂದ ಆಗುವ ಜೀತಗಾರನ ಶೋಷಣೆಯು ಜೀತಗಾರರಲ್ಲಿ ವರ್ಗ ಪ್ರಜ್ಞೆಯನ್ನು ಹೆಚ್ಚಿಸಿ ವರ್ಗಕಲಹವು ಅನಿವಾರ್ಯವಾಗುತ್ತದೆ. ಇಲ್ಲಿ ಬಂಡವಾಳ ಪದ್ಧತಿಯು ವಾದ ಜೀತಗಾರರ ವ್ಯವಸ್ಥಿತ ದುಡಿಮೆಯು ಪ್ರತಿವಾದ. ಇವುಗಳ ಸಂಘರ್ಷದಿಂದ ಉಂಟಾಗುವ ವರ್ಗರಹಿತ ಸಮಾಜವು ಸಮನ್ವಯ. ಇಲ್ಲಿ ಬಂಡವಾಳಗಾರರು ಉಚ್ಚಾಟಿತರಾಗಿ ಅಧಿಕಾರವು ಕಾರ್ಮಿಕರ ಕೈಗೆ ಬರುತ್ತದೆ. ಕಮ್ಯುನಿಸ್ಟರಿಗೆ ಪ್ರಲಿಟೇರಿಯಟ್ (ಜೀತವರ್ಗ) ಸರ್ಕಾರದಲ್ಲಿ ನಂಬಿಕೆಯಿದೆಯೇ ಹೊರತು ಪ್ರಜಾಸತ್ತಾತ್ಮಕ ಸರ್ಕಾರದಲ್ಲಿಲ್ಲ. ಏಕೆಂದರೆ ಅವರ ಪ್ರಕಾರ ಜೀತವರ್ಗ ಮಾತ್ರ ಬಂಡವಾಳಗಾರನ ಕುಟಿಲತೆಯನ್ನು ನಾಶಪಡಿಸುವುದು.

ವಿಮರ್ಶಕರು ಮಾರ್ಕ್ಸ್‌ವಾದದಲ್ಲಿ ಮುಖ್ಯವಾಗಿ ನಾಲ್ಕು ದೋಷಗಳನ್ನು ಕಾಣುತ್ತಾರೆ. (1) ದೇಶದ ಆರ್ಥಿಕ ವ್ಯವಸ್ಥೆಯನ್ನು ಕಾಪಾಡುವಲ್ಲಿ ಬಂಡವಾಳ ಪದ್ಧತಿಯನ್ನು ಕಡೆಗಣಿಸುವುದು (2) ಕಾರ್ಮಿಕರ ಕ್ರಾಂತಿಕಾರಕ ಧೋರಣೆಗಳನ್ನು ಉತ್ಪ್ರೇಕ್ಷಿಸುವುದು (3) ರಾಷ್ಟ್ರೀಯ ಭಾವದ ಬಗ್ಗೆ ಅನಾದರ (4) ಮನುಷ್ಯ ಸ್ವಭಾವದ ಬಗ್ಗೆ ತಪ್ಪುಕಲ್ಪನೆ.

ಬಂಡವಾಳ ಪದ್ಧತಿಯ ದೋಷವನ್ನು ಎತ್ತಿ ತೋರಿಸುವ ಮೂಲಕ ಮಾರ್ಕ್ಸ್ ಸಮಾಜದ ದುರ್ಬಲವರ್ಗವನ್ನು ಸ್ಪಂದಿಸದೆ, ಜೀತಗಾರರನ್ನು ಕುರಿತ ತೀವ್ರಕಾಳಜಿ ಈತನ ಸಿದ್ಧಾಂತದ ಮಾನವೀಯ ಅಂಶ. ಈ ಅಂಶ ಇಡೀ ಪ್ರಪಂಚದಲ್ಲಿ ಕ್ರಾಂತಿಯ ಅಲೆಯನ್ನು ಎಬ್ಬಿಸಿತು. ಎಂಜೆಲ್ಸ್ ಹೇಳುವಂತೆ ಹೋರಾಟ ಇವನ ಸತ್ವವಾಗಿತ್ತು ಆಗಿನ ಕಾಲದಲ್ಲಿ ಎಲ್ಲರಿಗಿಂತಲೂ ಹೆಚ್ಚು ದ್ವೇಷ ಮತ್ತು ನಿಂದನೆಗೆ ಒಳಗಾಗಿದ್ದ ವ್ಯಕ್ತಿ ಮಾರ್ಕ್ಸ್. (ಎಚ್.ಎಲ್.ಎಲ್.)

**ಮಾರ್ಷಲ್ ದ್ವೀಪಗಳು:** ಪೆಸಿಫಿಕ್ ಮಹಾಸಾಗರದ ಪಶ್ಚಿಮಕ್ಕಿರುವ ರತಕ್ ಮತ್ತು ರಲಿಕ್ ದ್ವೀಪ ಸರಣಿಗಳನ್ನು ಸೇರಿಸಿ ಆದ ದ್ವೀಪ ಸ್ತೋಮ ರಚನೆ. ಗುವಾಮ್ ಹವಾಯ್, ಕಿರಿಬಾತಿ, ಮೈಕ್ರೋನೇಷ್ಯ ರಾಜ್ಯಗಳು ಈ ದ್ವೀಪಸ್ತೋಮದ ಗಡಿಗಳು. ಈ ಭಾಗದಲ್ಲಿ ಸು. 1225 ದ್ವೀಪಗಳು ಹಂಚಿಕೆಯಾಗಿದ್ದು ಐದು ಪ್ರಮುಖ ದ್ವೀಪಗಳು ಮಾರ್ಷಲ್ ದ್ವೀಪಗಳು ಸೇರುತ್ತವೆ. ಈ ದ್ವೀಪಗಳ ಸಮೂಹ $4^0$ ಉತ್ತರ ಅಕ್ಷಾಂಶದಿಂದ $14^0$ ಉತ್ತರ ಅಕ್ಷಾಂಶ ಮತ್ತು $160^0$ ಪೂರ್ವ ರೇಖಾಂಶದಿಂದ $173^0$ ಪೂರ್ವ ರೇಖಾಂಶದ ಪರಿಧಿಯಲ್ಲಿ ಹಂಚಿಕೆಯಾಗಿವೆ. ಒಟ್ಟು 180 ಚ.ಕಿಮೀ ಕ್ಷೇತ್ರವನ್ನು ಹೊಂದಿದೆ. ಬಹುತೇಕ ದ್ವೀಪಗಳು ಸಮುದ್ರ ಮಟ್ಟದಿಂದ ಕೇವಲ 2 ಮೀ ಎತ್ತರದಲ್ಲಿವೆ.

ಈ ದ್ವೀಪಗಳು ಉಷ್ಣವಲಯದಲ್ಲಿ ಹಂಚಿಕೆಯಾಗಿರುವುದರಿಂದ ಸಾಗರೀಕ ಪ್ರಭಾವಕ್ಕೆ ಒಳಪಟ್ಟಿವೆ. ಹೆಚ್ಚು ಉಷ್ಣಾಂಶ ಮತ್ತು ಅಧಿಕ ಆರ್ದ್ರತೆ ವಾಯುಗುಣದ ಸಾಮಾನ್ಯ ಲಕ್ಷಣಗಳು. ಮಾರ್ಚ್–ಏಪ್ರಿಲ್ ಮತ್ತು ಅಕ್ಟೋಬರ್–ನವೆಂಬರ್‌ಗಳಲ್ಲಿ ಆವರ್ತ ಮಾರುತಗಳು ಈ ವಲಯದಲ್ಲಿ ಸಾಮಾನ್ಯ.

ಸುಣ್ಣದ ಕಲ್ಲು ಹಾಗೂ ಮರಳು ಮಿಶ್ರಿತ ಭೂಮಿಯನ್ನೊಳಗೊಂಡ ತಗ್ಗು ಪ್ರದೇಶ ಈ ದ್ವೀಪಸ್ತೋಮ. ಶೇ. 33.1 ರಷ್ಟು ಭೂಮಿಯನ್ನು ಕೃಷಿಗಾಗಿ ಅಭಿವೃದ್ಧಿ ಪಡಿಸಲಾಗಿದೆ. ಶೇ. 22.5 ರಷ್ಟು ಅರಣ್ಯ ಹಾಗೂ ಉಳಿದ ಶೇ. 30.9 ರಷ್ಟು ಇತರೆ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ. ತೆಂಗು, ಸಂಸ್ಕರಣೆ, ಮತ್ಸ್ಯೋದ್ಯಮ ಮತ್ತು ಪ್ರವಾಸೋದ್ಯಮಗಳು ಇಲ್ಲಿನ ಪ್ರಮುಖ ಆರ್ಥಿಕ ಚಟುವಟಿಕೆಗಳು. ಈ ದ್ವೀಪಗಳಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ತೆಂಗು, ಕೋಕೋ, ಹಣ್ಣುಗಳು, ಕೆಸವು, ಟೊಮ್ಯಾಟೋ ಮತ್ತು ಇತರೆ. ಫಾಸ್ಪೇಟ್ ಮತ್ತು ಸಾಗರೋತ್ಪನ್ನಗಳು ಇಲ್ಲಿನ ನೈಸರ್ಗಿಕ ಸಂಪತ್ತು. 250 ಕ್ಕೂ ಅಧಿಕ ಬಗೆಯ ಮೀನುಗಳು, 70 ಜಾತಿಯ ಪಕ್ಷಿಗಳು ಈ ದ್ವೀಪಗಳಲ್ಲಿ ಕಂಡುಬರುತ್ತವೆ.




ಮಾರ್ಷಲ್ ದ್ವೀಪಗಳ ಜನಸಂಖ್ಯೆ 52,000 (2000). ಇವರಲ್ಲಿ ಬಹುತೇಕರು ಕ್ರಿಶ್ಚಿಯನ್ನರು. ಜರ್ಮನಿ, ಜಪಾನ್ ಮತ್ತು ಅಮೆರಿಕ ಮೂಲದವರು. ಪ್ರಾಟೆಸ್ಟಂಟ್ ಪಂಗಡದವರು ಅತ್ಯಧಿಕ ಪ್ರಮಾಣ ಹಾಗೂ ಪ್ರಥಮ ಸ್ಥಾನದಲ್ಲಿದ್ದಾರೆ. ದ್ವಿತೀಯ ಸ್ಥಾನದಲ್ಲಿ ಕೆಥೊಲಿಕ್ ಪಂಗಡದವರು. ಈ ದ್ವೀಪಗಳಲ್ಲಿ 880 ವಿವಿಧ ಭಾಷೆಗಳು ಚಾಲ್ತಿಯಲ್ಲಿದೆ.

ರಾಷ್ಟ್ರೀಯ ಆದಾಯದಲ್ಲಿ ಶೇ. 57.7 ರಷ್ಟನ್ನು ಸೇವಾ ವಲಯ ಪೂರೈಸುತ್ತಿದೆ. ಕೈಗಾರಿಕೆಗಳಿಂದ ಶೇ. 20.9 ಮತ್ತು ಕೃಷಿಯಿಂದ ಶೇ. 21.4 ರಷ್ಟು ಬರುತ್ತದೆ. ಒಟ್ಟು ಉತ್ಪಾದನೆಯ ರಫ್ತಿನ ಆದಾಯ ವಾರ್ಷಿಕ 9 ಮಿ. ಡಾಲರ್‌ಗಳು. ರಾಷ್ಟ್ರದ ಜಿ.ಡಿ.ಪಿ. 115 ಮಿ. ಡಾಲರ್‌ಗಳು. ತಲಾವಾರು ಆದಾಯ 1600 ಡಾಲರ್‌ಗಳು. ರಾಜಧಾನಿ: ಮೊಜುರೊ. ಜನಸಂಖ್ಯೆ : 20,000 (2002). (ವಿ.ಎಸ್.ಎ.)

**ಮಾಲಿ:** ಪಶ್ಚಿಮ ಆಫ್ರಿಕದ ಒಂದು ಗಣರಾಜ್ಯ. ಉತ್ತರದಲ್ಲಿ ಆಲ್ಜೀರಿಯ, ಪಶ್ಚಿಮದಲ್ಲಿ ಮಾರಿಟಾನಿಯ ಮತ್ತು ಸೆನೆಗಲ್, ದಕ್ಷಿಣದಲ್ಲಿ ಗಿನಿ ಮತ್ತು ಐವರಿಕೋಸ್ಟ್ ಹಾಗೂ ಪೂರ್ವದಲ್ಲಿ ಬುರ್ಕಿನಫ್ಯಾಸೋ ಮತ್ತು ನೈಜರ್ ರಾಜ್ಯಗಳು ಈ ದೇಶವನ್ನು ಸುತ್ತುವರಿದಿವೆ. ವಿಸ್ತೀರ್ಣ 12,40,192 ಚ.ಕಿಮೀ. ಜನಸಂಖ್ಯೆ 1,22,91,529 (2005). ರಾಜಧಾನಿ ಬಮಕೊ.

ಪ್ರಾಕೃತಿಕಲಕ್ಷಣ : ಮಾಲಿಯ ಬಹುಭಾಗ ಸಮತಲ ಪ್ರದೇಶ. ಇಲ್ಲಿ ಪ್ರಸ್ಥಭೂಮಿ ಮತ್ತು ಬಯಲುಸೀಮೆ ಕೂಡ ಇದ್ದು ಮಧ್ಯೆ ಮಧ್ಯೆ ಕೆಲವು ಸ್ಥಳಗಳಲ್ಲಿ ಉನ್ನತ ಪ್ರದೇಶವೂ ಇದೆ. ರಾಜ್ಯದ ದಕ್ಷಿಣ ಮತ್ತು ನೈರುತ್ಯ ಭಾಗದಲ್ಲಿಯ ಪ್ರಸ್ಥಭೂಮಿಗಳು ಸಮುದ್ರಮಟ್ಟಕ್ಕೆ

ಸು. 305ರಿಂದ 488 ಮೀ ಎತ್ತರದಲ್ಲಿವೆ. ಇವು ಫುಟಜಲನ್ ಹಾಗೂ ಗಿನಿ ಪ್ರಸ್ಥಭೂಮಿಗಳ ವಿಸ್ತರಣಾ ಭಾಗಗಳಾಗಿವೆ. ಈ ಪ್ರಸ್ಥಭೂಮಿಗಳು ಬಮಕೊದ ಸಮೀಪದಲ್ಲಿ ಸು. 61 ಮೀ ಮತ್ತು ಸಟಡೋಗೊದ ಸಮೀಪದಲ್ಲಿ 640 ಮೀ ಎತ್ತರವಾಗಿದ್ದು ಮರಳುಗಲ್ಲಿನಿಂದ ಕೂಡಿವೆ. ಸೆನೆಗಲ್ ಮತ್ತು ನೈಜರ್ ನದಿಗಳು ಮತ್ತು ಇದರ ಉಪನದಿಗಳು ಈ ಪ್ರಸ್ಥಭೂಮಿಯನ್ನು ಆಳವಾಗಿ ಕೊರೆದಿರುವುದರಿಂದ ಅಂಚುಗಳಲ್ಲಿ ಕಡಿದಾದ ಪ್ರಪಾತಗಳು ಮತ್ತು ಜಲಪಾತಗಳು ಉಂಟಾಗಿವೆ. ಪೂರ್ವ ಮತ್ತು ಆಗ್ನೇಯ ಭಾಗಗಳಲ್ಲಿಯ ಪ್ರಸ್ಥಭೂಮಿಗಳೂ ಸಣ್ಣ ಸಣ್ಣ ಗುಡ್ಡಗಳಿಂದ ಕೂಡಿವೆ. ಇವುಗಳ ಎತ್ತರ ಸಿಕಸೋ ಭಾಗದಲ್ಲಿ ಸು. 305 ಮೀ, ಮೆಂಟ್ ಮೀನಾ ಸಮೀಪದಲ್ಲಿ ಸು. 530 ಮೀ. ನೈಜರ್ ನದಿಯ ಪೂರ್ವದಲ್ಲಿ ಇರುವ ಡೋಗನ್ ಪ್ರಸ್ಥಭೂಮಿ ಪಶ್ಚಿಮ ದಿಕ್ಕಿಗೆ ಕ್ರಮೇಣ ಇಳಿಜಾರಾಗಿದ್ದು ಆಗ್ನೇಯದಲ್ಲಿ ಕಡಿದಾದ ಶಿಖರಗಳಿಂದ ಕೂಡಿದೆ. ಬಂಡಿಯಾಗರದ ಸಮೀಪದಲ್ಲಿ ಈ ಶಿಖರಗಳು 1.005 ಮೀ ಎತ್ತರವಾಗಿವೆ. ಉತ್ತರದಲ್ಲಿರುವ ಸಹರ ಮರುಭೂಮಿಯ ಹೊಗ್ಗಾರ್ ಪರ್ವತ ಪ್ರದೇಶದ ವಿಸ್ತರಣಾ ಭಾಗವಾದ ಅಡ್ರಾರ್ ಡೆಸ್ ಇಫೊರಸ್ 395 ರಿಂದ 488 ಮೀ ಎತ್ತರವಿದೆ.

ಮಾಲಿಯ ಉತ್ತರ ಮತ್ತು ಮಧ್ಯಭಾಗದಲ್ಲಿ ನೈಜರ್ ನದಿಯ ಜಲಾನಯನ ಭೂಮಿ ಮತ್ತು ಸಹರ ಮರುಭೂಮಿ ಇವೆ. ಉತ್ತರದಲ್ಲಿರುವ ವಿಶಾಲವಾದ ಮರಳು ದಿಬ್ಬಗಳಲ್ಲಿ ಚಲಿಸುವ ಮರಳು ಪ್ರದೇಶಗಳಿವೆ. ಇವನ್ನು ಅರ್ಗ್ ಎಂದು ಕರೆಯುವರು. ಮಾಲಿಯ ಮಧ್ಯಭಾಗದಲ್ಲಿ ಮೆರಿಯೆ ಮತ್ತು ಅಜಾವೊಕ್ ಎಂಬ ಮೆಕ್ಕಲು ಮಣ್ಣಿನ ಪ್ರದೇಶಗಳಿವೆ.

ನದಿಗಳು : ಸೆನೆಗಲ್ ಮತ್ತು ನೈಜರ್ ಪ್ರಮುಖ ನದಿಗಳು. ಸೆನೆಗಲ್ ನದಿ ಫುಟಜಲನ್ ಪ್ರಸ್ಥಭೂಮಿಯಲ್ಲಿ ಹುಟ್ಟುವ ಬಾಫಿಂಗ್ ಮತ್ತು ಬಕೋಯ ನದಿಗಳ ಸಂಗಮದಿಂದ ಹುಟ್ಟಿದ್ದು. ಇದು ಮಾಲಿಯಲ್ಲಿ ಸು. 900 ಕಿಮೀ ದೂರ ವಾಯವ್ಯ ದಿಕ್ಕಿಗೆ ಹರಿದು ಅಟ್ಲಾಂಟಿಕ್ ಸಾಗರ ಸೇರುತ್ತದೆ. ಗೊಯಿನ ಮತ್ತು ಫೆಲೊ ಎಂಬಲ್ಲಿ ಈ ನದಿಗೆ ಜಲಪಾತಗಳಿವೆ. ಕಾಯಸ್ ಮತ್ತು ಸೆನೆಗಲ್ ಗಡಿಗಳ ನಡುವೆ ಈ ನದಿಗೆ ಬಲಭಾಗದಿಂದ ಕೊಲಿಂಬೈನ್ ಮತ್ತು ಕರಾಕೊರೊ ನದಿಗಳೂ ಎಡಭಾಗದಿಂದ ಫಿಲೇಮಿ ನದಿಯೂ ಬಂದು ಸೇರುತ್ತವೆ. ಸನೆಗಲ್ ನದಿಯಲ್ಲಿ ಜುಲೈ – ಅಕ್ಟೋಬರ್ ತಿಂಗಳ ನಡುವೆ ಪ್ರವಾಹ ಹೆಚ್ಚು.




ನೈಜರ್ ನದಿ ತನ್ನ ಒಟ್ಟು ಉದ್ದದ ಸು. $^{1}/_{3}$ ಭಾಗದಷ್ಟು ಅಂದರೆ 1,626 ಕಿಮೀ ದೂರ ಮಾಲಿ ಪ್ರದೇಶದಲ್ಲೇ ಹರಿಯುತ್ತದೆ. ಈ ನದಿ ಫುಟಜಲನ್‍ನಲ್ಲಿ ಹುಟ್ಟಿ ಬನನ್‍ಕೊರೊ ಬಳಿ ಮಾಲಿಯನ್ನು ಪ್ರವೇಶಿಸಿ ಮಾಂಡಿಂಗ್ ಪ್ರಸ್ಥಭೂಮಿಯ ಮೂಲಕ ಈಶಾನ್ಯಕ್ಕೆ ಹರಿಯುತ್ತದೆ. ಸೊಟುಬಾ ಎಂಬಲ್ಲಿ ಈ ನದಿಗೆ ಜಲಪಾತಗಳಿವೆ. ಕಾಲಿಕೊರೊವನ್ನು ಸೇರಿದಮೇಲೆ ಇದು ವಿಸ್ತಾರವಾದ ಕಣಿವೆಯಲ್ಲಿ ಹರಡಿ ಮಾಪ್ಟಿ ಎಂಬಲ್ಲಿ ಬಾನಿಫಿಂಗ್ ನದಿಯನ್ನು ಸೇರುತ್ತದೆ. ಇಲ್ಲಿ ಭೂಮಿ ಸಮತಲವಾಗಿರುವುದರಿಂದ ನದಿ ಮುಖಜಭೂಮಿ ರೂಪುಗೊಂಡಿದೆ. ಇಲ್ಲಿ ನದಿ ಅನೇಕ ಶಾಖೆಗಳಾಗಿ ವಿಭಾಗವಾಗಿ ಡೆಬೋ ಫಾಟಿ, ಟೆಲೆ ಮತ್ತು ಫಾಗ್ಯುಬೈನ್ ಮೊದಲಾದ ಸರೋವರಗಳುಂಟಾಗಿವೆ. ಈ ಪ್ರದೇಶದಲ್ಲಿ ಮೆಕ್ಕಲುಮಣ್ಣಿನ ಭೂಮಿಯಿರುವುದರಿಂದ ಇದು ಪ್ರಮುಖ ವ್ಯವಸಾಯ ಪ್ರದೇಶವೂ ಆಗಿದೆ.

ಮಾಲಿ ರಾಜ್ಯದ ಅಧಿಕ ಭಾಗ ಫಲವತ್ತಾಗಿಲ್ಲ. ದೇಶದ ಹೆಚ್ಚಿನ ಭಾಗ ಸಹರ ಮರುಭೂಮಿಯನ್ನೊಳಗೊಂಡಿದ್ದು ಅಲೆಮಾರಿಗಳಿಗೆ ಆಶ್ರಯ ನೀಡಿದೆ. ಮಾಲಿಯ ದಕ್ಷಿಣಭಾಗದ ಭೂಪ್ರದೇಶ ಕಬ್ಬಿಣ ಅಂಶದಿಂದ ಕೂಡಿದ್ದು ಬಾಷ್ಪೀಕರಣದ ಕಾರಣದಿಂದ ಗಟ್ಟಿಯಾದ ಕೆಂಪು ಪದರವಾಗಿದೆ. ಸಹರದ ಸಮೀಪದ ಭಾಗದಲ್ಲಿ ನೀರಿನ ಕೊರತೆಯಿಂದ ಭೂಮಿ ಗಟ್ಟಿ ಪದರವಾಗಿ ರೂಪುಗೊಂಡಿಲ್ಲ. ಮರುಭೂಮಿಯ ಪ್ರದೇಶ ಮರಳು, ಬಂಡೆ ಹಾಗೂ ಗ್ರಾವೆಲ್‍ಗಳಿಂದ ಕೂಡಿದೆ.

ವಾಯುಗುಣ : ಇಲ್ಲಿಯದು ಉಷ್ಣವಲಯದ ವಾಯುಗುಣ. ಶುಷ್ಕ ವಾತಾವರಣ ಮತ್ತು ಸೆಕೆಯಿಂದ ಕೂಡಿದೆ. ನವೆಂಬರ್ – ಜೂನ್ ತನಕ ಒಣ ಹವೆಯಿದ್ದು ವಾಯುವಿನಲ್ಲಿ ಅತಿ ಕಡಿಮೆ ತೇವಾಂಶ ಮತ್ತು ಹೆಚ್ಚು ಉಷ್ಣತೆ ಇರುವುದು. ಈ ಕಾಲದಲ್ಲಿ ಅಲೈಟ್ ಮತ್ತು ಹರ್‍ಮಟನ್ ಮಾರುತಗಳು ಬೀಸುತ್ತವೆ. ಜೂನ್ – ಅಕ್ಟೋಬರ್‌ವರೆಗೆ ನೈರುತ್ಯ ಮಾನ್‍ಸೂನ್ ಮಾರುತದಿಂದ ಮಳೆ ಉಂಟಾಗುತ್ತದೆ.

ವಾಯುಗುಣದ ಆಧಾರದ ಮೇಲೆ ಈ ದೇಶವನ್ನು ಸುಡಾನಿಕ್, ಸಹೇಲಿಯನ್ ಮತ್ತು ಮರುಭೂಮಿ ಪ್ರದೇಶವೆಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಸು.$^{1}/_{3}$ ಭಾಗದಲ್ಲಿ ಸುಡಾನಿಕ್ ವಾಯುಗುಣವಿದ್ದು ಉಷ್ಣತೆ $24^{0}$ಸೆ–$30^{0}$ಸೆ ಇರುತ್ತದೆ. ಇಲ್ಲಿಯ ವಾರ್ಷಿಕ ಮಳೆ 50.8 – 129.5 ಸೆಂಮೀ. ಸಹರದ ಅಂಚಿನ ಭಾಗದಲ್ಲಿ ಸಹೇಲಿಯನ್ ವಾಯುಗುಣವಿದ್ದು ಇಲ್ಲಿಯ ಉಷ್ಣತೆ $23^{0}$ಸೆ–$36^{0}$ಸೆ ಮತ್ತು ವಾರ್ಷಿಕ ಮಳೆ 20.3 – 50.8 ಸೆಂಮೀ. ಸಹರ ಪ್ರದೇಶದಲ್ಲಿ ಮರುಭೂಮಿ ವಾಯುಗುಣವಿದ್ದು ಹಗಲಿನಲ್ಲಿ $47^{0}$ಸೆ–$60^{0}$ಸೆ ಮತ್ತು ರಾತ್ರಿಯಲ್ಲಿ $4^{0}$ಸೆ–$5^{0}$ಸೆ ಉಷ್ಣತೆ ಇರುತ್ತದೆ. ವಾರ್ಷಿಕ ಮಳೆ 17.8 ಸೆಂಮೀ ಗಳಿಗೂ ಕಡಿಮೆಯಿದ್ದು ಅನೇಕ ವರ್ಷಗಳಲ್ಲಿ ಮಳೆಯಾಗುವುದೇ ಇಲ್ಲ.

ಸಸ್ಯ ಮತ್ತು ಪ್ರಾಣಿಸಂಪತ್ತು : ಸುಡಾನಿನ ವಾಯುಗುಣವಿರುವ ಪ್ರದೇಶದಲ್ಲಿ ಮಾಲಿ ಮತ್ತು ಗಿನಿ ಮಧ್ಯದ ಗಡಿ ಪ್ರದೇಶದ ಉದ್ದಕ್ಕೂ ಹಾಗೂ ನದಿಗಳ ಕಣಿವೆಯಲ್ಲೂ ಕಾಡುಗಳಿವೆ. ಉಳಿದ ಭಾಗಗಳಲ್ಲಿ ಸವನ್ನಾ ಹುಲ್ಲುಗಾವಲಿದ್ದು ಕೆಲವು ಕಡೆ ಮರಗಳನ್ನು ಕಾಣಬಹುದು. ಸುಡಾನಿಕ್ ಭಾಗದಿಂದ ಉತ್ತರಕ್ಕೆ ಬಂದಂತೆಲ್ಲ ಮರಗಿಡಗಳ ಸಂಖ್ಯೆ ಕಡಿಮೆಯಾಗುತ್ತದೆ. ಸಹೇಲ್ ಭಾಗ ಬೆಂಗಾಡು ಪ್ರದೇಶವಾಗಿದ್ದು ಶುಷ್ಕ ವಾತಾವರಣದಲ್ಲಿ ಬೆಳೆಯುವ ಬಾಒಬಾಬ್ ಹಾಗೂ ತಾಳೆ ಜಾತಿಯ ಮರ ಮುಂತಾದವನ್ನು ಕಾಣಬಹುದು. ಉತ್ತರ ಭಾಗದಲ್ಲಿ ಸಣ್ಣ ಮುಳ್ಳಿನಿಂದ ಕೂಡಿದ ಅಕೇಷಿಯ, ಮಿಮೊಸಾ ಮುಂತಾದ ಸಸ್ಯಗಳಿವೆ. ಸಹರ ಪ್ರದೇಶಕ್ಕೆ ಬಂದಂತೆ ಎಲ್ಲ ಬಗೆಯ ಸಸ್ಯಗಳೂ ವಿರಳವಾಗುತ್ತವೆ.

ಮಾಲಿಯಲ್ಲಿ ಕಾಣಬರುವ ಪ್ರಾಣಿವರ್ಗ ವೈವಿಧ್ಯಪೂರ್ಣವಾಗಿದೆ. ಜಿಂಕೆ ಜಾತಿಗೆ ಸೇರಿದ ಗಸೆಲ್, ಜಿರಾಫೆ, ಆನೆ, ಜಿಂಕೆ ಮೊದಲಾದ ಸಸ್ಯಾಹಾರಿ ಪ್ರಾಣಿಗಳನ್ನೂ ಸಿಂಹ, ಚಿರತೆ, ಕತ್ತೆಕಿರುಬ ಮುಂತಾದ ಮಾಂಸಾಹಾರಿ ಪ್ರಾಣಿಗಳನ್ನೂ ಸೂಡಾನ್ ಮತ್ತು ಸಹೇಲ್ ಪ್ರದೇಶಗಳಲ್ಲಿ ಕಾಣಬಹುದು. ಇಲ್ಲಿಯ ನದಿಗಳಲ್ಲಿ ಮೊಸಳೆ, ನೀರಾನೆ ಮುಂತಾದವು ಇವೆ. ಪಶ್ಚಿಮದಲ್ಲಿ ಬಾಲೆ ನದಿಯ ದಂಡೆಯುದ್ದಕ್ಕೂ ರಾಷ್ಟ್ರೀಯ ಉದ್ಯಾನವಿದೆ. ಇದೇ ರೀತಿ ಪೂರ್ವದಲ್ಲಿ ಅನಸೋಂಗೊ ಮತ್ತು ಮೆನಾಕೊಗಳ ನಡುವೆ ಪ್ರಾಣಿಗಳ ಅಭಯಧಾಮವಿದೆ.

ಜನಜೀವನ : ಮಾಲಿ ಗಣರಾಜ್ಯದ ಸಹೇಲ್ ಮತ್ತು ಸಹರ ಭಾಗಗಳಲ್ಲಿ ಅಲೆಮಾರಿ ಪಂಗಡದವರೂ ಸುಡಾನಿಕ್ ಭಾಗದಲ್ಲಿ ವ್ಯವಸಾಯವನ್ನೇ ಅವಲಂಬಿಸಿರುವ ಜನರೂ ಇದ್ದಾರೆ. ಜನಸಂಖ್ಯೆಯಲ್ಲಿ ಶೇ. 83ರಷ್ಟು ಮಂದಿ ಗ್ರಾಮನಿವಾಸಿಗಳು. ಇವರು ಸು. 150 – 600 ಜನಸಂಖ್ಯೆಯಿರುವ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಈ ಹಳ್ಳಿಗಳ ಸುತ್ತಲೂ ವ್ಯವಸಾಯಯೋಗ್ಯ ಭೂಮಿ ಮತ್ತು ಹುಲ್ಲುಗಾವಲುಗಳಿವೆ. ಹಳೆಯ ಪಟ್ಟಣಗಳಾದ ಜಿನ್ನೆ, ಗಾವೊ, ಸೆಗೂ ಮತ್ತು ಟಿಂಬಕ್ಟುಗಳನ್ನು ಸಾಂಪ್ರದಾಯಿಕ ಸುಡಾನೀ ವಾಸ್ತುಶಿಲ್ಪದ ಪ್ರಕಾರ ಕಟ್ಟಲಾಗಿದೆ. ಬಮಕೊ, ಕಾಯೆಸ್, ಸಾನ್, ಕಾಟಿ ಮೊದಲಾದ ಪಟ್ಟಣಗಳಲ್ಲಿ ಆಧುನಿಕ ಕಟ್ಟಡಗಳನ್ನು ಕಟ್ಟಿದ್ದಾರೆ.

ಇಲ್ಲಿ ಶ್ವೇತವರ್ಣೀಯರೆಂದು ಕರೆಯಲಾಗುವ ಪಂಗಡಗಳಲ್ಲಿ ಬರ್ಬರ್ ಮತ್ತು ಅರಬ್ಬೀ ಮೂಲದ ಮೂರ್‌ಗಳು ಸಹೇಲಿಯನ್ ಪ್ರದೇಶದಲ್ಲಿ ಮತ್ತು ನೈಜರ್ ಬೆಂಡ್‍ನ ಉತ್ತರಭಾಗದಲ್ಲಿ ವಾಸಿಸುತ್ತಾರೆ. ಕಪ್ಪು ಜನರಲ್ಲಿ ಅನೇಕ ವ್ಯವಸಾಯ ಪ್ರಧಾನವಾದ ಪಂಗಡಗಳಿದ್ದು ಅವುಗಳಲ್ಲಿ ಅತಿ ದೊಡ್ಡದು ನೈಜರ್ ನದಿಯ ಮೇಲ್ಭಾಗದಲ್ಲಿ ವಾಸಿಸುವ ಮಾಲಿಂಕೆ, ನೈಜರ್ ಕಣಿವೆಯಲ್ಲಿಯ ಸೊಂಘೈ, ಬಂಡಿಯಾಗರಾದ ಸುತ್ತಮುತ್ತ ವಾಸಿಸುವ

ಡಾಗನಾನ್, ಪೂರ್ವ ಮತ್ತು ಆಗ್ನೇಯ ಭಾಗದಲ್ಲಿಯ ಬೊಬೊ, ಸೆನ್‌ಫೊ ಮತ್ತು ಮಿನಿಯಾನ್‌ಕಾ ಸಹೇಲ್ ಮ್ಯಾಸಿನಾಗಳಲ್ಲಿ ಫುಲಾನಿ ಅಥವಾ ಪಿಯಾಲ್ ಎಂಬ ಅಲೆಮಾರಿ ಪಂಗಡದವರಿದ್ದಾರೆ. ಇತರ ಪಂಗಡಗಳು ಟುಕುಲೋರ್ಸ್, ಕಸೋನ್ಕೈ, ಬೋಜೋ ಮತ್ತು ಸೊಮೊನೋ.

ಮಾಲಿಯಲ್ಲಿ ಮೂರು ಪ್ರಮುಖ ಧರ್ಮಗಳಿವೆ. ಈ ದೇಶವನ್ನು 11ನೆಯ ಶತಮಾನದಲ್ಲಿ ಪ್ರವೇಶಿಸಿದ ಇಸ್ಲಾಮ್ ಧರ್ಮದ ಅನುಯಾಯಿಗಳ ಪೈಕಿ ಶೇ.65ರಷ್ಟು ಮಂದಿ ಸರ್ವಚೇತನವಾದಿಗಳು ಮತ್ತು ಶೇ.30ರಷ್ಟು ಮಂದಿ ಸಾಂಪ್ರದಾಯಿಕ ಆಚರಣೆಯಲ್ಲಿ ನಂಬಿಕೆಯಿಟ್ಟಿರುವವರು. ಉಳಿದವರು ಕ್ರೈಸ್ತ ಧರ್ಮಾನುಯಾಯಿಗಳು.

ಮಾಲಿದೇಶದ ಅರ್ಧಕ್ಕೂ ಹೆಚ್ಚು ಭಾಗ ಜನವಸತಿಯಿಲ್ಲದ ಮರಳುಗಾಡುಪ್ರದೇಶ. ನೈಜರ್ ನದಿ ಕಣಿವೆಯಲ್ಲಿ ಜನಸಾಂದ್ರತೆಯಿರುವ ಅತ್ಯಂತ ದೊಡ್ಡ ಪಟ್ಟಣ ಬಮಕೊ. ಇತರ ಪ್ರಮುಖ ಪಟ್ಟಣಗಳೆಂದರೆ ಸೆಗಾನ್, ಮಾಪ್ತಿ, ಸಿಕಾಸೋ ಮತ್ತು ಕಾಯೆಸ್. ಗ್ರಾಮೀಣ ಪ್ರದೇಶದಿಂದ ನಗರಗಳಿಗೆ ಜನ ಸತತವಾಗಿ ವಲಸೆ ಬರುತ್ತಿದ್ದಾರೆ. ಮಾಲಿಯ ಹೆಚ್ಚು ಕೆಲಸಗಾರರು ಅದರಲ್ಲೂ ಸೋನಿಂಕೆ ಪಂಗಡದವರು ಫ್ರಾನ್ಸ್ ಮತ್ತು ಯುರೋಪಿನ ಇತರ ದೇಶಗಳಿಗೆ ವಲಸೆ ಹೋಗಿದ್ದಾರೆ. ಮಾಲಿದೇಶದ ವ್ಯಾಪಾರಸ್ಥರು ಐವರಿ ಕೋಸ್ಟ್, ಲೈಬೀರಿಯ ಮತ್ತು ಮಧ್ಯ ಆಫ್ರಿಕದಲ್ಲಿ ನೆಲಸಿದ್ದಾರೆ.

ಭಾಷೆ : ಮಾಲಿಯ ಅಧಿಕೃತ ಭಾಷೆ ಫ್ರೆಂಚ್. ಇದಲ್ಲದೆ ಇಲ್ಲಿ ಅನೇಕ ಸ್ಥಳೀಯ ಹಾಗೂ ಆಡುಭಾಷೆಗಳಿವೆ. ಇವುಗಳ ಪೈಕಿ ಮುಖ್ಯವಾದವು ಬಾಂಬಾರ, ಫುಲ್ ಆಲ್ಡೆ, ಮಾಲಿಂಕೆ, ಕಾಸೊನ್ಕೆ ಮತ್ತು ವಾಸುಲುಂಕಾ. ಮೂರ್ ಜನವರ್ಗದ ಭಾಷೆ ಅರೇಬಿಕ್.

ಆರ್ಥಿಕತೆ : ನೈಸರ್ಗಿಕ ಸಂಪತ್ತಿನ ದೃಷ್ಟಿಯಿಂದ ಮಾಲಿ ಬಡದೇಶ. ದೇಶದ ಬಹುಭಾಗ ಸಹರ ಮರುಭೂಮಿಯಾಗಿದ್ದು ಅಲೆಮಾರಿ ಪಂಗಡಗಳು ಅಲ್ಲಿ ವಾಸಿಸುತ್ತವೆ. ಜನಸಂಖ್ಯೆಯಲ್ಲಿ ಶೇ. 90ರಷ್ಟು ಮಂದಿ ವ್ಯವಸಾಯದಲ್ಲಿ ನಿರತರು. ಸುಡಾನಿ ಮತ್ತು ಸಹೇಲಿಯನ್ ವ್ಯವಸಾಯ ಪ್ರದೇಶಗಳು. ಇವುಗಳಲ್ಲಿ ಅತ್ಯಂತ ಪ್ರಮುಖ ಪ್ರದೇಶ ನೈಜರ್ ನದಿ ಮುಖಜಭೂಮಿ. ಇಲ್ಲಿಯ ಪ್ರಮುಖ ಬೆಳೆಗಳು ಮಿಲೆಟ್, ಬತ್ತ, ಗೋದಿ, ಮುಸುಕಿನ ಜೋಳ, ಆಲೂಗೆಡ್ಡೆ ಮತ್ತು ಮರಗೆಣಸು. ಹತ್ತಿ ಮತ್ತು ಕಡಲೆಕಾಯಿ ಆರ್ಥಿಕ ಬೆಳೆಗಳು. ಇವಲ್ಲದೆ ಕಬ್ಬು, ಹೊಗೆಸೊಪ್ಪು ಮತ್ತು ಟೀ ಬೆಳೆಯಲಾಗುತ್ತಿದೆ. ಪಶುಪಾಲನೆ ಇಲ್ಲಿಯ ಪ್ರಮುಖ ಕಸುಬುಗಳಲ್ಲೊಂದು. ಇಲ್ಲಿಯ ನದಿಗಳಲ್ಲಿ ಹೇರಳವಾಗಿ ಮೀನು ಸಿಕ್ಕುತ್ತವೆ. ಇದರಲ್ಲಿ ಶೇ.20 ಭಾಗದಷ್ಟು ಮೀನನ್ನು ಪರಿಷ್ಕರಿಸಿ ವಿದೇಶಗಳಿಗೆ ರಫ್ತು ಮಾಡುತ್ತಾರೆ.

ಕೈಗಾರಿಕೆಗಳಲ್ಲಿ ಮಾಲಿ ಹಿಂದುಳಿದ ದೇಶ. ಇಲ್ಲಿಯ ಮುಖ್ಯ ಕೈಗಾರಿಕೆಗಳೆಂದರೆ ಆಹಾರ ಸಂಸ್ಕರಣೆ, ಹತ್ತಿ, ತೊಗಲು ಮತ್ತು ಉಣ್ಣೆ ಇವುಗಳಿಗೆ ಸಂಬಂಧಿಸಿದುವು. ಇಲ್ಲಿ ಹಳೆಯ ಉಪ್ಪಿನ ಗಣಿಗಳಿವೆ. ಜೊತೆಗೆ ಸಣ್ಣ ಪ್ರಮಾಣದಲ್ಲಿ ಫಾಸ್ಫೇಟ್, ಚಿನ್ನ ಮತ್ತು ಯುರೇನಿಯಮ್ ಸಿಗುವ ಗಣಿಗಳಿವೆ. ಲಿಥಿಯಮ್, ವಜ್ರ, ಪೆಟ್ರೋಲಿಯಮ್, ಬಾಕ್ಸೈಟ್, ಕಬ್ಬಿಣ ಮತ್ತು ಮ್ಯಾಂಗನೀಸ್ ನಿಕ್ಷೇಪಗಳಿವೆ. ಬಟ್ಟೆ, ಕುಂಬಾರಗೆಲಸ, ಪಾದರಕ್ಷೆ, ಬುಟ್ಟಿಗಳು ಮತ್ತು ಮರದ ಕೆತ್ತನೆಯ ಸಾಮಾನುಗಳ ತಯಾರಿಕೆಗಳು ಇಲ್ಲಿಯ ಕೈಕಸಬುಗಳು.

ಮಾಲಿಯಿಂದ ಹತ್ತಿ, ಕಡಲೆಕಾಯಿ, ಜೀವಂತ ಪ್ರಾಣಿಗಳು. ಒಣಮೀನು ಮೊದಲಾದವನ್ನು ಐವರಿಕೋಸ್ಟ್, ಸೆನೆಗಲ್ ಮತ್ತು ಫ್ರಾನ್ಸ್‌ಗೆ ರಫ್ತು ಮಾಡಲಾಗುತ್ತದೆ. ಚೀನ, ರಷ್ಯ ಮತ್ತು ಫ್ರಾನ್ಸ್‌ಗಳಿಂದ ಇದಕ್ಕೆ ಸಹಾಯದೊರಕುತ್ತಿದೆ. ಆದರೂ ಪ್ರಪಂಚದ ಬಡರಾಷ್ಟ್ರಗಳಲ್ಲಿ ಇದೂ ಒಂದೆಂದು ಪರಿಗಣಿತವಾಗಿದೆ. ಮಾಲಿಯ ಮುಖ್ಯ ಸಮಸ್ಯೆಯೆಂದರೆ ರಾಷ್ಟ್ರೀಯ ಸಾಲ. ರಫ್ತಿಗಿಂತ ಆಮದೇ ಹೆಚ್ಚಾಗಿದ್ದು ಕೃಷಿ ಪದಾರ್ಥಗಳ ರಫ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳ ಬೆಲೆಯ ಏರಿಳಿತಗಳನ್ನು ಅವಲಂಬಿಸಿದೆ. ವಿಶ್ವಸಂಸ್ಥೆ ಹಾಗೂ ಅದರ ಅಂಗಸಂಸ್ಥೆಗಳು ಧನಸಹಾಯ ನೀಡುತ್ತಿವೆ. ಮಾಲಿಯ ಆರ್ಥಿಕ ಅಭಿವೃದ್ಧಿಗಾಗಿ ಕೃಷಿ ಉತ್ಪಾದನೆಯ ಹೆಚ್ಚಳ, ಸಣ್ಣ ಕೈಗಾರಿಕೆಗಳ ಸ್ಥಾಪನೆ ಇವುಗಳಿಗೆ ಆದ್ಯತೆ ನೀಡಲಾಗುತ್ತಿದೆ. 1967ರಲ್ಲಿ ಮಾಲಿ ಫ್ರೆಂಚ್ ಫ್ರಾಂಕ್ ವಲಯಕ್ಕೆ ಸೇರಿದಾಗಿನಿಂದ ಫ್ರೆಂಚ್ ಉದ್ಯಮಿಗಳು ಮತ್ತು ವ್ಯಾಪಾರಸ್ಥರು ಈ ದೇಶದಲ್ಲಿ ಆಸಕ್ತಿವಹಿಸಿದ್ದಾರೆ.

ಸಾರಿಗೆ : ಸೆನೆಗಲ್ ಮತ್ತು ನೈಜರ್ ನದಿಗಳು ಮಾಲಿಯಲ್ಲಿ ಒಟ್ಟು 2,526 ಕಿಮೀ ದೂರ ಹರಿಯುತ್ತವೆ. ಇವುಗಳಲ್ಲಿ ನೌಕಾಯಾನಕ್ಕೆ ಅನುಕೂಲವಿದೆ. ಇದು ದೇಶದ ಅತಿಮುಖ್ಯ ಸಾರಿಗೆ ಜಾಲಗಳಲ್ಲೊಂದು. ಕಾಲಿಕೊರೊವಿನಿಂದ ಬಮಕೋ ಮೂಲಕ ಡಕಾರ್‌ಗೆ ಹೋಗುವ 640 ಕಿಮೀ ದೂರದ ಒಂದು ರೈಲು ಮಾರ್ಗವಿದೆ. ದೇಶದಲ್ಲಿ ಒಟ್ಟು 18,000 ಕಿಮೀ ಉದ್ದ ರಸ್ತೆಗಳಿದ್ದು ಅವುಗಳಲ್ಲಿ 7,500 ಕಿಮೀ ರಸ್ತೆಗಳನ್ನು ಎಲ್ಲ ಕಾಲಗಳಲ್ಲೂ ಉಪಯೋಗಿಸಬಹುದಾಗಿದೆ. ದೇಶದ ಅತಿ ಮುಖ್ಯ ವ್ಯಾಪಾರಿ ಮಾರ್ಗವಾದ 556 ಕಿಮೀ ಉದ್ದದ ಸಹರನ್ ರಸ್ತೆ ಮಾಲಿಯ ಗಾವೊದಿಂದ ಆಫ್ರಿಕದ ಉತ್ತರ ಭಾಗಕ್ಕೆ ಸಂಪರ್ಕ ಕಲ್ಪಿಸುತ್ತದೆ. ಏರ್‌ಮಾಲಿ ರಾಷ್ಟ್ರೀಯ ವಾಯುಮಾನ ಸಂಸ್ಥೆ ದೇಶದಲ್ಲಿ ವಾಯುಯಾನ ಸೌಲಭ್ಯ ಕಲ್ಪಿಸಿದೆ. (ಜಿ.ಎಸ್.ಎಸ್.)

**ಮಾಲಿನ್ಯ:** ಪರಿಶುದ್ಧತೆಯನ್ನು ಕಳೆದುಕೊಳ್ಳುವ ಕ್ರಿಯೆ (ಪಲ್ಯೂಷನ್). ಮಾನವನ ವಿವಿಧ ಬಗೆಯ ಕಾರ್ಯಗಳಿಂದ ಪರಿಸರದ ಸಮತೋಲನ ಕೆಟ್ಟು ಜೀವಿಗಳನ್ನೂ ಕೈಗಾರಿಕಾ ಕ್ರಿಯೆಗಳನ್ನೂ ಕಚ್ಚಾ ಸಾಮಗ್ರಿಗಳನ್ನೂ ಮಲಿನ ಮಾಡುವುದೇ ಪರಿಸರ ಮಾಲಿನ್ಯ. ಪರಿಸರದಲ್ಲಿನ ಗಾಳಿ, ನೀರು ಮತ್ತು ನೆಲ ಇವುಗಳು ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಲಕ್ಷಣಗಳಲ್ಲಿ ಅನಪೇಕ್ಷಿತವಾಗಿ ಬದಲಾವಣೆಗೊಳಗಾಗುವುದನ್ನು ಮಾಲಿನ್ಯ ಎಂದು ಕರೆಯುತ್ತೇವೆ. ಈ ಮಾಲಿನ್ಯ ಜೀವಜಾಲದ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರತಿಕೂಲ ಪರಿಣಾಮಗಳನ್ನುಂಟುಮಾಡುವುದು. ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟ್ಸ್ ವಿಜ್ಞಾನ ಸಲಹಾ ಮಂಡಳಿಯು ಮನುಷ್ಯನ ಪ್ರತ್ಯಕ್ಷ ಅಥವಾ ಪರೋಕ್ಷವಾದ ಕೃತ್ಯಗಳಿಂದ ಹೊರದೂಡಲ್ಪಟ್ಟ ವಸ್ತುಗಳಿಂದಾಗಿ ಪೂರ್ಣವಾಗಿ ಅಥವಾ ಭಾಗಶಃ ನಮ್ಮ ನೆರೆ ಹೊರೆ ಅಪವಿತ್ರಗೊಳ್ಳುವುದನ್ನು ಪರಿಸರಮಾಲಿನ್ಯವೆಂದು ತಿಳಿಸಿದೆ. ಮಾನವನ ವಿವೇಚನಾರಹಿತ ಚಟುವಟಿಕೆಗಳಿಂದ ಪರಿಸರದ ಗುಣಮಟ್ಟ ಕುಗ್ಗುವುದೇ ಪರಿಸರಮಾಲಿನ್ಯ. (ಕೆ.ಎಸ್.)

**ಮಾಲಿನ್ಯ ನಿಯಂತ್ರಣ:** ಭೂಮಿಯ ಮೇಲೆ ನಡೆಯುವ ಅಭಿವೃದ್ಧಿ ಕಾರ್ಯಗಳಿಂದಾಗಿ ಪರಿಸರದ ಮೇಲೆ ಒತ್ತಡ ದಿನೇ ದಿನೇ ಹೆಚ್ಚುತ್ತಿದೆ. ಪರಿಸರದ ಸಮಸ್ಯೆ ಸ್ಥಳೀಯ ಸಮಸ್ಯೆಯಾಗಿರಬಹುದು, ಇಲ್ಲವೇ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಸಮಸ್ಯೆಯಾಗಿರಬಹುದು. ಇದನ್ನು ನಿಯಂತ್ರಿಸದಿದ್ದರೆ ನಾಗರಿಕತೆಯ ಓಂಕಾರ ಹಾಡಿದ ಮಾನವ ಚರಮ ಗೀತೆಯನ್ನು ಹಾಡುವ ಕಾಲ ದೂರವಿಲ್ಲ. ಮಾಲಿನ್ಯ ನಿಯಂತ್ರಣವನ್ನು ಕುರಿತ ಹೆಚ್ಚಿನ ಮತ್ತು ನೈಜ ಕಾಳಜಿ ಆರಂಭವಾದದ್ದು 1972 ರಲ್ಲಿ. ವಿಶ್ವಸಂಸ್ಥೆ ಸ್ವೀಡನ್ನಿನ ಸ್ಟಾಕ್ ಹೋಂನಲ್ಲಿ ಆಯೋಜಿಸಿದ ಹ್ಯೂಮನ್ ಎನ್‌ವಿರಾನ್‌ಮೆಂಟ್ ಸಮ್ಮೇಳನದ ಪರಿಸರದ ಆರೋಗ್ಯವನ್ನು ಕುರಿತ ಆಳವಾದ ಚಿಂತನೆಯಿಂದ. ಅಂದಿನಿಂದ ಇಂದಿನವರೆವಿಗೂ ಅನೇಕ ಕಾಯ್ದೆ ಮತ್ತು ಕಾನೂನುಗಳ ಮೂಲಕ ಮಾಲಿನ್ಯವನ್ನು ನಿಯಂತ್ರಿಸಲು ವಿವಿಧ ಮಟ್ಟದಲ್ಲಿ ಸರ್ಕಾರಗಳು ಪ್ರಯತ್ನಿಸುತ್ತಿವೆ. ಇವೆಲ್ಲದರ ಪರಿಣಾಮವಾಗಿ ಅನೇಕ ಕಾಯ್ದೆಗಳು ಜಾರಿಗೆ ಬಂದಿವೆ. ಕೆಲವು ಕಾಯ್ದೆಗಳು ಹೀಗಿವೆ:

ಪರಿಸರ ಸಂರಕ್ಷಣೆಯ ಕಾಯ್ದೆ 1948: ಪರಿಸರ ಸಂರಕ್ಷಣೆ ಮತ್ತು ಸುಧಾರಣೆಗೆ ಸಂಬಂಧಪಟ್ಟಂತೆ ಹಲವಾರು ವಿಷಯಗಳನ್ನು ಒಳಗೊಂಡಿದೆ.

ವಾಯುಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ 1981: ಕಾರ್ಖಾನೆಗಳಿಂದ, ವಾಹನಗಳಿಂದ ಹಾಗೂ ಇತರೆ ಚಟುವಟಿಕೆಗಳಿಂದ ಅವ್ಯಾಹತವಾಗಿ ಹೊರಹೊಮ್ಮುವ ಮಾಲಿನ್ಯಕಾರಿಗಳನ್ನು ನಿಯಂತ್ರಿಸುವ ಉದ್ದೇಶದಿಂದ ಜಾರಿಯಲ್ಲಿದೆ.

ಮೋಟಾರು ವಾಹನ ಕಾಯ್ದೆ 1988: ವಾಹನಗಳಿಂದ ಉಂಟಾಗುವ ವಾಯುಮಾಲಿನ್ಯವನ್ನು ನಿಯಂತ್ರಿಸುವುದು ಇದರ ಉದ್ದೇಶ (ಭಾರತದಲ್ಲಿ).

ಜಲಮಾಲಿನ್ಯ ನಿಯಂತ್ರಣ ಕಾಯ್ದೆ 1974: ಭಾರತದಲ್ಲಿ ಜಲಮಾಲಿನ್ಯವನ್ನು ತಡೆಗಟ್ಟಿ ನೀರಿನ ಗುಣಮಟ್ಟವನ್ನು ಸುಧಾರಿಸಲು ಇರುವ ಕಾಯ್ದೆ.

1992ರ ಭೂ ಶೃಂಗಸಭೆ: ಜೂನ್ 2 – 12ರವರೆಗೆ ರಿಯೋ–ಡಿ ಜನೈರೋದಲ್ಲಿ ನಡೆದ ಜಾಗತಿಕ ಭೂ ಶೃಂಗಸಭೆಯಲ್ಲಿ ಪ್ರಪಂಚದಾದ್ಯಂತ ಪರಿಸರ ಪ್ರಜ್ಞೆಯು ತಲುಪುವಂತೆ ಮಾಡಲು ಪ್ರಯತ್ನಿಸಲಾಯಿತು. ಈ ಶೃಂಗಸಭೆ ಭೂಗ್ರಹದಲ್ಲಿ ಹೆಚ್ಚುತ್ತಿರುವ ಶಾಖದ ನಿಯಂತ್ರಣ, ಓಝೋನ್ ರಕ್ಷಣೆ, ಉಷ್ಣವಲಯದ ಅರಣ್ಯ ನಾಶ ತಡೆ ಮತ್ತು ಶರವೇಗದಲ್ಲಿ ಕಣ್ಮರೆಯಾಗುತ್ತಿರುವ ಜೀವ ವೈವಿಧ್ಯತೆಯ ಉಳಿವು, ಜನಸಂಖ್ಯಾ ಸ್ಫೋಟದ ನಿಯಂತ್ರಣ, ಪರಿಸರ ಮಾಲಿನ್ಯವನ್ನು ಶುದ್ಧೀಕರಿಸುವ ನಿಧಿ ಮತ್ತು ತಂತ್ರಜ್ಞಾನದ ಸಾಕ್ಷಾತ್ಕಾರಗೊಳಿಸುವಿಕೆ ಮುಂತಾದ ವಿಧಿವಿಧಾನಗಳನ್ನು ಪ್ರಮುಖ ಗುರಿಯನ್ನಾಗಿ ಇಟ್ಟುಕೊಂಡು ಆ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 (ಭಾರತ): ವನ್ಯಜೀವಿಗಳ ಸಂರಕ್ಷಣೆ ಮತ್ತು ನಿರ್ವಹಣೆ ಈ ಕಾಯ್ದೆಯ ಮುಖ್ಯ ಗುರಿ. ಈ ಕಾಯ್ದೆ ಅನ್ವಯ ರಾಷ್ಟ್ರೀಯ ಉದ್ಯಾನವನಗಳನ್ನು ಹಾಗೂ ವನ್ಯಜೀವಿ ಸಂರಕ್ಷಣಾ ವಲಯಗಳನ್ನು ತೆರೆಯಲಾಗುತ್ತಿದೆ.

ಅರಣ್ಯ ನೀತಿ 1988 (ಭಾರತ): ಭಾರತ ಅರಣ್ಯಗಳ ಸಂರಕ್ಷಣೆ ಹಾಗೂ ಯೋಜಿತವಾದ ಬಳಕೆಗೆ ಪ್ರತ್ಯೇಕ ಅರಣ್ಯ ನೀತಿ ರೂಪಿಸಿದ ಪ್ರಪಂಚದ ಮೊದಲ ರಾಷ್ಟ್ರವಾಗಿದೆ. ಈ ನೀತಿಯ ಮುಖ್ಯಗುರಿಯೆಂದರೆ ಅರಣ್ಯಗಳ ಸಂರಕ್ಷಣೆ, ನಾಶವಾಗಿರುವ ಪ್ರದೇಶದಲ್ಲಿ ಮತ್ತೆ ಸಸ್ಯರಾಶಿ ಬೆಳೆಸುವುದು. ಮಣ್ಣಿನ ಸವೆತ ತಡೆಯುವುದು, ಅರಣ್ಯೀಕರಣದ ಮೂಲಕ ಮಾಲಿನ್ಯ ಹಾಗೂ ಮರುಭೂಮೀಕರಣದ ನಿಯಂತ್ರಣ.

ಪರಿಸರ ಮಾಲಿನ್ಯ ಇಂದು ಪ್ರಪಂಚವ್ಯಾಪಿ ಸಮಸ್ಯೆಯಾಗಿರುವುದರಿಂದ ಇದರ ನೈರ್ಮಲ್ಯ ಕಾಪಾಡಲು ಪ್ರಪಂಚದಾದ್ಯಂತ ಹಲವಾರು ದಿನಾಚರಣೆಗಳನ್ನು ಜನರಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ ಆಚರಿಸಲಾಗುತ್ತಿದೆ. ಅವು ಹೀಗಿವೆ: ವಿಶ್ವ ಆರೋಗ್ಯ ದಿನ – ಏಪ್ರಿಲ್ 7; ವಿಶ್ವ ಅರಣ್ಯದಿನ – ಮಾರ್ಚ್ 21; ಪೃಥ್ವಿದಿನ – ಏಪ್ರಿಲ್ 22; ವಿಶ್ವಪರಿಸರ ದಿನ – ಜೂನ್ 5; ವಿಶ್ವ ಜನಸಂಖ್ಯಾ ದಿನ – ಜುಲೈ 11; ವಿಶ್ವ ಪ್ರಕೃತಿ ದಿನ – ಅಕ್ಟೋಬರ್ 3; ವನ್ಯಜೀವಿ ಸಪ್ತಾಹ – ಅಕ್ಟೋಬರ್ 1 ರಿಂದ 7; ರಾಷ್ಟ್ರೀಯ ಪರಿಸರ ಜಾಗೃತಿ – ನವೆಂಬರ್ 19 ರಿಂದ ಡಿಸೆಂಬರ್ 18.

ಸರ್ಕಾರ ಏನೇ ಕಾಯ್ದೆ ಕಾನೂನುಗಳನ್ನು ತಂದರೂ ಪರಿಸರ ಮಾಲಿನ್ಯವನ್ನು ನಿಯಂತ್ರಿಸಬೇಕೆಂಬ ಮನೋಭಾವ ವ್ಯಕ್ತಿಗಳಲ್ಲಿ ಎಲ್ಲಿಯವರೆಗೆ ಮೊಳೆಯುವುದಿಲ್ಲವೋ ಅಲ್ಲಿಯವರೆವಿಗೂ ಮಾಲಿನ್ಯ ನಿಯಂತ್ರಣ ಯಶಸ್ಸು ಕಾಣಲಾರದು. ಕಾನೂನು–ಕಾಯ್ದೆಗಳ ಜೊತೆಗೆ ಪರಿಸರ ಮಾಲಿನ್ಯ ತಡೆಗಟ್ಟುವುದರಲ್ಲಿ ವೈಯಕ್ತಿಕ ಅರಿವು ಮಹತ್ತ್ವವುಳ್ಳದ್ದು. ಮಾನವ ಸುಖೀ ಜೀವನಕ್ಕೆ ನೈಸರ್ಗಿಕ ಸಂಪನ್ಮೂಲಗಳನ್ನು ಶೋಷಿಸುತ್ತ ತಂತ್ರಜ್ಞಾನದಲ್ಲಿ ಕ್ರಾಂತಿಕಾರಿಕ ಆವಿಷ್ಕಾರಗಳನ್ನು ಕಂಡುಹಿಡಿದ. ಇದರಿಂದ ಪರಿಸರಮಾಲಿನ್ಯ ಮಿತಿಮೀರಿತು. ಅದು ಮನುಷ್ಯನ ಅವನತಿಗೆ ಕಾರಣ. ಇದನ್ನು ನಿಯಂತ್ರಿಸಲು ಹಲವುಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳಲ್ಲಿ ಮೂರಂಶಗಳು ಮುಖ್ಯ: ನಮ್ಮ ಜೀವನ ಶೈಲಿಯನ್ನು ಪರಿಸರ ಸಂರಕ್ಷಣಾ ದೃಷ್ಟಿಕೋನಕ್ಕೆ ರೂಢಿಸಿಕೊಳ್ಳುವುದು. ಪರಿಸರದ ಅರಿವು ನಮಗೆ ಆರೋಗ್ಯಕರ; ಪರಿಸರ ಮಾಲಿನ್ಯಕ್ಕೆ ಕಡಿವಾಣ ಹಾಕುವಂಥ ನಿಷ್ಪಕ್ಷಪಾತವಾದ ಹಾಗೂ ಸಮರ್ಪಕ ನೀತಿನಿಯಮಗಳನ್ನು ಸರ್ಕಾರ ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು; ಮಾಧ್ಯಮಗಳು ಪರಿಸರದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು, ಪಠ್ಯಕ್ರಮಗಳಲ್ಲಿ ಈ ಬಗ್ಗೆ ಅಧ್ಯಯನಕ್ಕೆ ಒತ್ತು ನೀಡುವುದು. ಮಾಲಿನ್ಯತಡೆಗಟ್ಟುವಲ್ಲಿ ವಿಜ್ಞಾನಿ, ತಂತ್ರಜ್ಞಾನಿ, ಪರಿಸರ ಸ್ನೇಹಿ ರಾಜಕೀಯ ಮತ್ತು ಆಡಳಿತ ಯಂತ್ರಗಳ ಪಾತ್ರ ಅಷ್ಟೇ ಮುಖ್ಯವೆನ್ನಬಹುದು. (ಕೆ.ಎಸ್.)

**ಮಾಲೂರು:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಕೋಲಾರ ಉಪವಿಭಾಗಕ್ಕೆ ಸೇರಿದೆ. ಈ ತಾಲ್ಲೂಕನ್ನು ಪೂರ್ವದಲ್ಲಿ ಬಂಗಾರಪೇಟೆ, ಉತ್ತರದಲ್ಲಿ ಕೋಲಾರ, ಪಶ್ಚಿಮದಲ್ಲಿ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕುಗಳೂ ದಕ್ಷಿಣದಲ್ಲಿ ತಮಿಳುನಾಡೂ ಬಳಸಿವೆ. ಒಟ್ಟು 364 ಗ್ರಾಮಗಳಿವೆ. ಲಕ್ಕೂರು, ಮಾಲೂರು, ಮಾಸ್ತಿ ಮತ್ತು ಟೇಕಲ್ ಹೋಬಳಿಗಳು. ವಿಸ್ತೀರ್ಣ 648 ಚ.ಕಿಮೀ. ಜನಸಂಖ್ಯೆ 2,06,059.

ತಾಲ್ಲೂಕು ಪಾಲಾರ್ ಮತ್ತು ದಕ್ಷಿಣ ಪಿನಾಕಿನಿ ನದಿಗಳ ಜಲವಿಭಾಜಕ ಪ್ರದೇಶದಲ್ಲಿದೆ. ಇಲ್ಲಿಯ ಎತ್ತರ ಪ್ರದೇಶಗಳು ಶುಷ್ಕವಾಗಿವೆ. ಇಲ್ಲವೇ ಕುರುಚಲು ಕಾಡಿನಿಂದ ಕೂಡಿವೆ. ವಕ್ಕಲೇರಿ ಮತ್ತು ಟೇಕಲ್ ಬಳಿ ಕಣಶಿಲೆಯ ಬೆಟ್ಟಗಳಿವೆ. ತಾಲ್ಲೂಕಿನ ಅಧಿಕ ಭಾಗದಲ್ಲಿ ಅದರಲ್ಲೂ ಮಾಲೂರು ಮತ್ತು ಲಕ್ಕೂರು ಹೋಬಳಿಗಳಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿ ಇದೆ. ಟೇಕಲ್ ಬೆಟ್ಟಗಳಿಗೆ ಸೇರಿದ ಭಾಗದಲ್ಲಿ ಈ ಮಣ್ಣಿನ ಆಳ ಕಡಿಮೆ ಆಗುತ್ತದೆ. ಕರಡಿಬಂಡೆ ಮತ್ತು ದೊಡ್ಡ ಕುಂತೂರುಗಳ ಬಳಿ ಪಿಂಗಾಣಿ ಮಣ್ಣು ಇದೆ. ಫಲವತ್ತಾದ ಪ್ರದೇಶ ಮಾಸ್ತಿ ಹೋಬಳಿ. ಇಲ್ಲಿ ದಕ್ಷಿಣ ಪಿನಾಕಿನಿಗೆ ಸೇರುವ ತೊರೆಗಳು ಹರಿಯುತ್ತವೆ. ಮಾರ್ಕಂಡೇಯ ನದಿಯ ಒಂದು ಕವಲು ಟೇಕಲ್ ಬೆಟ್ಟಗಳ ಬಳಿ ಹುಟ್ಟಿ ಆಗ್ನೇಯ ದಿಕ್ಕಿನಲ್ಲಿ ಹರಿದು ಪಕ್ಕದ ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಬಳಿ ಮತ್ತೊಂದು ಕವಲನ್ನು ಸೇರಿಕೊಳ್ಳುವುದು. ವಾರ್ಷಿಕ ಸರಾಸರಿ ಮಳೆ 73 ಸೆಂಮೀ. ಇಲ್ಲಿ ಕೆರೆಗಳು ಮತ್ತು ಬಾವಿಗಳು ಅಧಿಕ ಸಂಖ್ಯೆಯಲ್ಲಿವೆ. ರಾಗಿ, ಬತ್ತ, ಆಲೂಗೆಡ್ಡೆ, ಸೇಂಗಾ, ಹೈಬ್ರಿಡ್ ಜೋಳ, ಮುಸುಕಿನ ಜೋಳ, ವಿವಿಧ ತರಕಾರಿಗಳು ಮುಖ್ಯ ಬೆಳೆಗಳು. ಹಿಪ್ಪುನೇರಳೆ, ಗೋದಿ, ಈರುಳ್ಳಿ, ಮೆಣಸಿನ ಕಾಯಿ, ಮಾವು, ಬಾಳೆ, ದ್ರಾಕ್ಷಿ, ಹೊಗೆಸೊಪ್ಪುಗಳನ್ನೂ ಬೆಳೆಸುತ್ತಾರೆ. ಮಲ್ಲಿಗೆ, ಸೇವಂತಿಗೆ ಹಾಗೂ ಗುಲಾಬಿ ವಿಶೇಷ ಪುಷ್ಪ ಬೆಳೆಗಳು. ವ್ಯವಸಾಯದೊಂದಿಗೆ ಪಶುಪಾಲನೆ ಇದ್ದು ಅದರ ಅಭಿವೃದ್ಧಿಗೆ ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ.

ಮಾಲೂರಿನ ಹತ್ತಿರದಲ್ಲಿ ದೊರೆಯುವ ಕೆಂಪು ಮಣ್ಣು ಹೆಂಚು ಮತ್ತು ಇಟ್ಟಿಗೆ ತಯಾರಿಕೆಗೆ ಉತ್ತಮವಾದದ್ದು. ಇಲ್ಲಿ ಅನೇಕ ಹೆಂಚಿನ ಮತ್ತು ಇಟ್ಟಿಗೆ ಕಾರ್ಖಾನೆಗಳೂ ಇವೆ. ಗೃಹಕೈಗಾರಿಕೆಗಳಾಗಿ ಬೆಂಕಿಪೊಟ್ಟಣ, ಊದುಬತ್ತಿ, ಬೀಡಿ ತಯಾರಿಕೆ, ಜೇನು ಮತ್ತು ಕೋಳಿ ಸಾಕಣೆ, ಹಾಲಿನ ಉತ್ಪಾದನೆ ಮತ್ತು ರೇಷ್ಮೆ ಕೃಷಿ – ಇವು ಇತರ ಪ್ರಚಲಿತವಿರುವ ಉದ್ಯಮಗಳು. ಇಲ್ಲಿ ತಯಾರಾಗುವ ಇಟ್ಟಿಗೆ ಹೆಂಚುಗಳನ್ನು ಹೊರಜಿಲ್ಲೆಗಳಿಗೂ ಕಳುಹಿಸಲಾಗುವುದು. ಶಿವಾರಪಟ್ಟಣದಲ್ಲಿ ತಯಾರಾಗುವ ಲೋಹದ ಮತ್ತು ಕಲ್ಲಿನ ವಿಗ್ರಹಗಳಿಗೆ ವಿದೇಶಗಳಲ್ಲಿ ಬೇಡಿಕೆ ಇದೆ. ಇಲ್ಲಿ ಬೆಳೆಯುವ ವಿವಿಧ ತರಕಾರಿ ಮತ್ತು ಹೂಗಳನ್ನೂ ಹೊರರಾಜ್ಯಗಳಿಗೆ ರವಾನಿಸಲಾಗುತ್ತದೆ. ಇಲ್ಲಿ ವ್ಯಾಪಾರ ವಾಣಿಜ್ಯೋದ್ಯಮಗಳಿಗೆ ಸಹಕಾರಿಯಾಗಿರುವ ಸಹಕಾರಿ ಬ್ಯಾಂಕುಗಳಿವೆ.

ಚೆನ್ನೈ–ಬೆಂಗಳೂರು ಬ್ರಾಡ್‍ಗ್ರೇಜ್ ರೈಲುಮಾರ್ಗ ಈ ತಾಲ್ಲೂಕಿನ ಮಧ್ಯದಲ್ಲಿ ಹಾದುಹೋಗಿದೆ. ಮಾಲೂರು ಮತ್ತು ಟೇಕಲ್ ರೈಲ್ವೆ ನಿಲ್ದಾಣಗಳು. ಮಾಲೂರಿನಿಂದ ಹೊಸಕೋಟೆ, ಕೋಲಾರ, ಮಾಸ್ತಿ, ತಮಿಳುನಾಡಿನ ಹೊಸೂರು, ಸೇಲಂ ಮೊದಲಾದ ಸ್ಥಳಗಳಿಗೆ ಹೋಗುವ ರಸ್ತೆಗಳು ಈ ತಾಲ್ಲೂಕಿನ ಮುಖ್ಯ ರಸ್ತೆಮಾರ್ಗಗಳು. ತಾಲ್ಲೂಕಿನಲ್ಲಿ ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುಚ್ಛಕ್ತಿ ಸೌಲಭ್ಯವೂ ಆರೋಗ್ಯ ಕೇಂದ್ರಗಳೂ ಉಂಟು. ತಾಲ್ಲೂಕಿನಲ್ಲಿ ಶಾಲಾ ಕಾಲೇಜುಗಳಿವೆ.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಚಿಕ್ಕತಿರುಪತಿ ಒಂದು ಪುಣ್ಯಕ್ಷೇತ್ರ. ಮಡಿವಾಳ ಗ್ರಾಮದಲ್ಲಿ ಚೋಳರ ಕಾಲದ ಗಂಗಾಧರೇಶ್ವರ ದೇವಾಲಯವಿದೆ. ಮಾಲೂರಿನ ಉತ್ತರಕ್ಕಿರುವ ತೋರಣಹಳ್ಳಿಯಲ್ಲಿ ದನಗಳಿಗೆ ಬರುವ ಚಪ್ಪೆಜಾಡ್ಯವನ್ನು ವಾಸಿಮಾಡುವ ದೇವರೆಂಬ ನಂಬಿಕೆಯುಳ್ಳ ಸಪ್ಪಲಮ್ಮನ ದೇವಾಲಯವಿದೆ. ಇಲ್ಲಿ ಪ್ರತಿವರ್ಷ ಪುಷ್ಯಮಾಸದಲ್ಲಿ ದನಗಳ ಜಾತ್ರೆ ನಡೆಯುತ್ತದೆ. ಶಿವಾರಪಟ್ಟಣದಲ್ಲಿ ಗಂಗದೊರೆ ಶ್ರೀಪುರುಷನ ಕಾಲದ ಶಿಲಾಶಾಸನಗಳಿವೆ. ಚಿಕ್ಕಕಡತೂರಿನಲ್ಲಿ ಪ್ರಾಚೀನ ಕಾಲದ ವೀರರ ಸ್ಮಾರಕಗಳಿವೆ. ಟೇಕಲ್ ಪವಿತ್ರ ಸ್ಥಳ. ಮಾಸ್ತಿ ಹೋಬಳಿ ಕೇಂದ್ರ ಮತ್ತು ದೊಡ್ಡ ಗ್ರಾಮ. ಈ ತಾಲ್ಲೂಕಿನ ವಿರೂಪಾಕ್ಷಪುರದಲ್ಲಿ ವಿಜಯನಗರದ ದೊರೆ ಎರಡನೆಯ ದೇವರಾಯನ ಕಾಲದ ವಿರೂಪಾಕ್ಷ ದೇವಾಲಯವಿದೆ.

ಮಾಲೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ಕೋಲಾರದಿಂದ ನೈಋತ್ಯಕ್ಕೆ 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 27,791. ಇದು ಬೆಂಗಳೂರು–ಕೋಲಾರ, ಬೆಂಗಳೂರು–ಚೆನ್ನೈ ರೈಲ್ವೆಹಾದಿಯಲ್ಲಿಯ ಒಂದು ನಿಲ್ದಾಣ. ಈ ಊರು ಬೆಂಗಳೂರಿನ ಪೂರ್ವಕ್ಕಿದ್ದು ಕೋಲಾರ, ಬಂಗಾರಪೇಟೆ, ತಮಿಳುನಾಡಿನ ಸೇಲಂ ಜಿಲ್ಲೆ–ಇವುಗಳಿಗೆ ಮಧ್ಯವರ್ತಿಯಾದ ವ್ಯಾಪಾರಕೇಂದ್ರವಾಗಿದೆ. ಪುರಸಭೆಯ ಆಡಳಿತಕ್ಕೆ ಒಳಪಟ್ಟಿದೆ. ಸುರಕ್ಷಿತ ಕುಡಿಯುವ ನೀರಿನ ಸರಬರಾಜಿದೆ.

ವಕ್ಕಲೇರಿ ಬೆಟ್ಟದಲ್ಲಿರುವ ಮಾರ್ಕಂಡೇಶ್ವರ ದೇವಾಲಯಕ್ಕೆ ಮಲ್ಲಿಗೆ ಹೂವನ್ನು ಮಾಲೂರಿನ ತೋಟಗಳಿಂದ ಕಳುಹಿಸುತ್ತಿದ್ದುದರಿಂದ ಈ ಊರಿಗೆ ಹಿಂದೆ ಮಲ್ಲಿಕಾಪುರ ಅಥವಾ ಮಲ್ಲಿಗೆಪಟ್ಟಣವೆಂಬ ಹೆಸರಿತ್ತು ಎನ್ನಲಾಗಿದೆ. ಈ ಊರು 16ನೆಯ ಶತಮಾನದಲ್ಲಿ ಹೊಸಕೋಟೆಯ ನಾಯಕ ತಿಮ್ಮೇಗೌಡನ ಅಧೀನದಲ್ಲಿದ್ದು ಅನಂತರ ಬಿಜಾಪುರದ ಆಡಳಿತಕ್ಕೆ ಸೇರಿದ್ದು ಹಲವು ಮನ್‍ಸಬ್‍ದಾರರಿಗೆ ಜಹಗೀರಿಯಾಗಿ ನೀಡಲಾಗಿತ್ತು. ಮರಾಠರ ಕೈವಶವಾದ ಈ ಊರನ್ನು ರಜಪೂತ ಜಮೀನ್ದಾರ ಫ್ರಿದರಾಮ್‍ಸಿಂಗ್ ವಶಪಡಿಸಿಕೊಂಡು ವಿಸ್ತರಿಸಿ ಮಾಲೂರು ಎಂದು ಹೆಸರಿಸಿದ. ಹೈದರ್‍ಅಲಿ ಆಕ್ರಮಿಸಿಕೊಳ್ಳುವವರೆಗೆ ಈ ಊರನ್ನು ಫ್ರಿದರಾಮ್ ಸಿಂಗನ ವಂಶಜರೇ ಆಳುತ್ತಿದ್ದರು.

ಶಂಕರನಾರಾಯಣಸ್ವಾಮಿ, ಧರ್ಮರಾಯಸ್ವಾಮಿ, ಬೀರೇಶ್ವರಸ್ವಾಮಿ ಮತ್ತು ಕೋದಂಡರಾಮಸ್ವಾಮಿ ದೇವಾಲಯಗಳು ಇಲ್ಲಿಯ ಪ್ರಮುಖ ದೇವಾಲಯಗಳು. ಕೋದಂಡರಾಮಸ್ವಾಮಿ ದೇವಾಲಯದ ಮುಂಭಾಗದಲ್ಲಿ ಒಂದು ದೊಡ್ಡ ಪುಷ್ಕರಣಿ ಇದೆ. ಫಾಲ್ಗುಣಮಾಸದಲ್ಲಿ ಶಂಕರನಾರಾಯಣಸ್ವಾಮಿಗೆ ಏಳು ದಿನಗಳು ವಿಶೇಷ ಪೂಜೆ ಮತ್ತು ರಥೋತ್ಸವ ನಡೆಯುತ್ತದೆ. ಚೈತ್ರಮಾಸದಲ್ಲಿ ನಡೆಯುವ ಧರ್ಮರಾಯಸ್ವಾಮಿ ಕರಗ ಪ್ರಸಿದ್ಧ. *

**ಮಾಲ್ಟ:** ಮೆಡಿಟರೇನಿಯನ್ ಸಮುದ್ರದಲ್ಲಿರುವ ಸ್ವತಂತ್ರ ದ್ವೀಪಸ್ತೋಮ. ಸಿಸಿಲಿಯ ದಕ್ಷಿಣದಲ್ಲಿ ಸು. 97 ಕಿಮೀ ದೂರದಲ್ಲಿದೆ. ಉ.ಅ. $35^0$ ಮತ್ತು ಪೂ.ರೇ.$14^0$ ಗಳಲ್ಲಿ ಸನ್ನಿವೇಶಗೊಂಡಿದೆ. ಮಾಲ್ಟ, ಗಾಟೊ, ಕಮೀನೊ ಮತ್ತು ಜನವಸತಿಯಿಲ್ಲದ ಕಮೀನೊಟೊ ಹಾಗೂ ಫಿಲ್ಫಾ – ಐದು ದ್ವೀಪಗಳ ಒಟ್ಟು ವಿಸ್ತೀರ್ಣ 316 ಚ.ಕಿಮೀ. ಇವುಗಳಲ್ಲಿ ದೊಡ್ಡದಾದ ಮಾಲ್ಟ ದ್ವೀಪ ಒಂದೇ 246 ಚ.ಕಿಮೀ ವಿಸ್ತೀರ್ಣವಿದ್ದು. ಈ ಪೈಕಿ 100

ಕಿಮೀ ತೀರ ಪ್ರದೇಶವಿದೆ. ಗೋಜೋ ದ್ವೀಪ 67 ಚ.ಕಿಮೀ, ಕೊಮಿನೋ 3 ಚ.ಕಿಮೀ ವಿಸ್ತಾರವನ್ನು ಹೊಂದಿವೆ. ಇವುಗಳ ಒಟ್ಟು ಜನಸಂಖ್ಯೆ 3,98,534 (2005). ರಾಜಧಾನಿ ಮತ್ತು ಆಡಳಿತ ಕೇಂದ್ರ ಹಾಗೂ ಬಂದರು ನಗರ ವಲೆಟ. ಜನಸಂಖ್ಯೆ 7,113 (2003).

ಮೇಲ್ಮೈಲಕ್ಷಣ : ಮಾಲ್ಟ ದ್ವೀಪ ಹವಳಗಲ್ಲು ಸ್ತರಗಳಿರುವ ಸುಣ್ಣಕಲ್ಲಿನ ತ್ರಿಕೋಣಾಕಾರದ ಪ್ರಸ್ತಭೂಮಿ. ಇದನ್ನು ನೀಲಿ ಜೇಡಿಮಣ್ಣಿನ ಇಳಕಲುಗಳು ಸುತ್ತುವರಿದಿವೆ. ದ್ವೀಪದ ಉತ್ತರದಲ್ಲಿಯ ಇಳಿಜಾರು ಪ್ರದೇಶ ಕಡಿದಾದ ಪ್ರಪಾತಗಳಿಂದ ಕೂಡಿದೆ. ದಕ್ಷಿಣದಲ್ಲಿಯ

ಪ್ರದೇಶ ಸು. 121.6 ಮೀ ಗಳಿಗೂ ಕಡಿಮೆ ಎತ್ತರಕ್ಕೆ ಇಳಿಜಾರಾಗಿದೆ. ದ್ವೀಪದ ಪಶ್ಚಿಮದಲ್ಲಿ ಆಳವಾದ ಕಣಿವೆಗಳೂ ಕಡಿದಾದ ಪ್ರಪಾತಗಳೂ ಇವೆ. ಪೂರ್ವದಲ್ಲಿಯ ಕಣಿವೆಗಳು ಮಧ್ಯದ ಬಯಲು ಪ್ರದೇಶದವರೆಗೂ ಮುಂದುವರಿದಿವೆ. ಗಾಟ್ಸೊದ ಉತ್ತರದಲ್ಲಿಯ ಹವಳಗಲ್ಲುಗಳಿಂದಾದ ಪ್ರಸ್ಥಭೂಮಿಯ ದಕ್ಷಿಣದಲ್ಲಿ ಸುಣ್ಣಕಲ್ಲುಗಳಿಂದ ಕೂಡಿದ ಬಯಲು ಪ್ರದೇಶಗಳೂ ಗುಡ್ಡಗಳೂ ಇವೆ. ಮಾಲ್ಟದ ಪಶ್ಚಿಮ ತೀರ ಪ್ರದೇಶದಲ್ಲಿ ಬಂದರುಗಳಿಲ್ಲ. ಮರ್ಸಾಮ್ ಸೆಟ್ ಕೊಲ್ಲಿಯನ್ನೂ ತೀರದ ಪೂರ್ವಗ್ರಾಂಡ್ ಹಾರ್ಬರನ್ನೂ ಮೌಂಡ್ ಸೆಬರಸ್ ಪ್ರದೇಶ ಪ್ರತ್ಯೇಕಿಸುತ್ತದೆ. ಉತ್ತರ ತೀರಪ್ರದೇಶ ಕಡಿದಾದ ಬಂಡೆಗಳಿಂದಲೂ ಸಣ್ಣ ಸಣ್ಣ ಕೊಲ್ಲಿಗಳಿಂದಲೂ ಕೂಡಿದ್ದು ಅಲ್ಲಲ್ಲಿ ಫಲವತ್ತಾದ ತಗ್ಗುಪ್ರದೇಶವನ್ನೊಳಗೊಂಡಿದೆ.

ಇಲ್ಲಿ ಮಳೆಗಾಲದಲ್ಲಿ ಮಾತ್ರ ಹರಿಯುವ ಕೆಲವು ಸಣ್ಣ ಪುಟ್ಟ ನದಿ ತೊರೆಗಳಿವೆ. ಇವುಗಳಿಂದ ದ್ವೀಪವಾಸಿಗಳಿಗೆ ಕುಡಿಯಲು ನೀರು ಸಹ ಪೂರೈಕೆ ಆಗದು. ಆದರೆ ಈ ದ್ವೀಪದ ನೆಲದಡಿಯಲ್ಲಿ ನೀರು ಸಂಗ್ರಹವಾಗಲು ಅನುಕೂಲವಾದ ಭೌಗೋಳಿಕ ಸನ್ನಿವೇಶವಿದೆ. ಇಲ್ಲಿ ಆ ಬಗೆಯ ಎರಡು ನೀರಿನ ಸಂಗ್ರಹಗಳಿದ್ದು ನೀರು ಸುತ್ತಲೂ ಹರಡಿ ಹರಿದುಹೋಗದಂತೆ ನೀಲಿಬಣ್ಣದ ಜೇಡಿಮಣ್ಣು ಮತ್ತು ಸುಣ್ಣಕಲ್ಲಿನ ರಚನೆಯಿದೆ. ಸಾರ್ವಜನಿಕ ನೀರು ಸರಬರಾಜಿಗೆ ಈ ಸಂಗ್ರಹವೇ ಆಧಾರ. ಜೊತೆಗೆ ಸಮುದ್ರದ ನೀರನ್ನು ಶುದ್ಧಿಗೊಳಿಸಿ ಬಟ್ಟಿ ಇಳಿಸುವ ಯಂತ್ರಗಳನ್ನು ಸ್ಥಾಪಿಸಲಾಗಿದೆ.

ವಾಯುಗುಣ : ಮೆಡಿಟರೇನಿಯನ್ ಹವಾಗುಣವಿದ್ದು ತೀವ್ರ ಹಾಗೂ ಶುಷ್ಕವಾದ ಬೇಸಗೆಯೂ ಬೆಚ್ಚನೆಯ ಮತ್ತು ಸ್ವಲ್ಪ ತೇವದಿಂದೊಡಗೂಡಿದ ಶರತ್ಕಾಲವೂ ಅಲ್ಪಕಾಲದ ಹಾಗೂ ತಕ್ಕಷ್ಟು ಮಳೆ ಬೀಳುವ ಚಳಿಗಾಲವೂ ಇಲ್ಲಿಯ ಹವಾವೈಶಿಷ್ಟ್ಯ. ಸು. $^3/_4$ ಭಾಗದಷ್ಟು ಹಿಮದ ಮಳೆ ಅಕ್ಟೋಬರ್ ಮತ್ತು ಮಾರ್ಚಿ ತಿಂಗಳುಗಳ ನಡುವೆ ಆಗುತ್ತದೆ. ಜೂನ್, ಜುಲೈ ಹಾಗೂ ಆಗಸ್ಟ್ ತಿಂಗಳುಗಳಲ್ಲಿ ಸಾಮಾನ್ಯವಾಗಿ ಮಳೆ ಬೀಳುವುದಿಲ್ಲ. ತೇವಾಂಶ ಯಾವಾಗಲೂ ಹೆಚ್ಚಾಗಿಯೇ ಇರುತ್ತದೆ. ಇಲ್ಲಿಯ ಉಷ್ಣತೆ ಸಾಧಾರಣವಾಗಿ ಸ್ಥಿರವಾಗಿದ್ದು ವಾರ್ಷಿಕ ಸರಾಸರಿ $18^0$ಸೆ ಇರುತ್ತದೆ. ವಾಯವ್ಯ ದಿಕ್ಕಿನ ತಣ್ಣಗಿನ ಮಜಿಸ್ಟ್ರಾಲ್, ಈಶಾನ್ಯ ದಿಕ್ಕಿನ ಶುಷ್ಕವಾದ ಗ್ರಿಗಾಲ್ ಮತ್ತು ಆಗ್ನೇಯ ದಿಕ್ಕಿನ ಬೆಚ್ಚಗಿನ ಹಾಗೂ ತೇವವಾದ ಎಕ್ಸಲಾಕ್ ಎಂಬ ಮಾರುತಗಳು ಬೀಸುತ್ತವೆ.

ಸಸ್ಯ ಮತ್ತು ಪ್ರಾಣಿಸಂಪತ್ತು : ಮಾಲ್ಟದಲ್ಲಿ ಒತ್ತಾದ ಕಾಡುಗಳಿಲ್ಲ. ಇಲ್ಲಿ ಹೇರಳವಾಗಿ ಆಲೂಗೆಡ್ಡೆ, ಈರುಳ್ಳಿ, ಟೊಮಾಟೋ, ದ್ರಾಕ್ಷಿ, ದ್ವಿದಳಧಾನ್ಯ ಬೆಳೆಸುತ್ತಾರೆ. ಇಲ್ಲಿಯ ವೃಕ್ಷಗಳಲ್ಲಿ ಕ್ಯಾರೋಬ್, ಅಂಜೂರ, ಚೆಸ್ಟ್ ಮುಖ್ಯವಾದವು. ಸಮುದ್ರತೀರದಲ್ಲಿ ಗೋಲ್ಡನ್ ಮತ್ತು ರಾಕ್ ಸಾಂಫೈರ್ಸ್ ಸೀಕ್ಯಾಂಪಿಯಸ್, ಸ್ಪರ್ಜ್ ಎಂಬ ಕಳ್ಳಿ ಜಾತಿಯ ಗಿಡಗಳು, ಸಾಲ್ಟ್‌ವೊರ್ಟ್ ಮತ್ತು ಮುರಮ್ ಹುಲ್ಲು ಬೆಳೆಯುತ್ತವೆ. ಮುಳ್ಳು ಹಂದಿ, ಮುಂಗುಸಿ (ವೀಸೆಲ್‌ಷ್ರೂ) ಎಂಬ ಇಲಿಯ ಜಾತಿಗೆ ಸೇರಿದ ಸಣ್ಣ ಪ್ರಾಣಿಗಳು, ಬಾವಲಿ ಮುಂತಾದವುಗಳಿವೆ. ವಾರ್ಬಲರ್ ಹಾಗೂ ತ್ರಷ್ ಜಾತಿಯ ಮತ್ತು ಲಿನೆಟ ಎಂಬ ಕಂದುಬಣ್ಣದ ಹಾಡುಹಕ್ಕಿಗಳು, ಗೂಬೆಗಳು, ವಲಸೆ ಬಂದು ಹೋಗುವ ಆಸ್ಪ್ರೆ ಎಂಬ ಕಡಲಹದ್ದು, ರಾಕ್ ಮತ್ತು ರೋಲರ್ ಜಾತಿಗೆ ಸೇರಿದ ಪಾರಿವಾಳಗಳು, ಸ್ವಾಲೋಹಕ್ಕಿ, ಕೋಗಿಲೆ ಮುಂತಾದ ವಿವಿಧ ಪಕ್ಷಿಗಳನ್ನು ಕಾಣಬಹುದು.

ಆರ್ಥಿಕ ಪರಿಸ್ಥಿತಿ : ಮಾಲ್ಟದಲ್ಲಿ ಸಿಗುವ ಏಕೈಕ ಖನಿಜ ಸಂಪತ್ತು ಗ್ಲೋಬಿಗರಿನಾ ಎಂಬ ಸುಣ್ಣದಕಲ್ಲು. ಇದನ್ನು ಕಟ್ಟಡಗಳ ನಿರ್ಮಾಣದಲ್ಲಿ ಉಪಯೋಗಿಸುತ್ತಾರೆ. ಇಲ್ಲಿಯ ಆಳವಾದ ಬಂದರುಗಳು ಸೇನೆಯ ಹಾಗೂ ನೌಕಾದಳದ ಆಯಕಟ್ಟಿನ ಪ್ರಮುಖ ನೆಲೆ ಮತ್ತು ಇಂಧನವನ್ನು ತುಂಬುವ ಸ್ಥಳಗಳಾಗಿದ್ದು ದೇಶಕ್ಕೆ ಆದಾಯ ತರುತ್ತವೆ. ಕೈಗಾರಿಕೆ ಮತ್ತು ಪ್ರವಾಸೋದ್ಯಮಗಳಲ್ಲಿ ಖಾಸಗಿ ಬಂಡವಾಳ ತೊಡಗಿಸಲು ಉತ್ತೇಜನ ನೀಡುವುದಕ್ಕಾಗಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಲಾಗಿದೆ. ದೊಡ್ಡ ಕೈಗಾರಿಕೆಗಳನ್ನು ಆಕರ್ಷಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾಗರದಲ್ಲಿ ತೈಲಕ್ಕಾಗಿ ಶೋಧನೆಯ ಕಾರ್ಯಸಾಗಿದೆ.

1960ರ ದಶಕದ ಉತ್ತರಾರ್ಧದಲ್ಲಿ ಪ್ರವಾಸಿಗಳ ಸಂಖ್ಯೆ ಏರಿದುದರಿಂದ ಹೆಚ್ಚು ಹೊಟೇಲುಗಳನ್ನು ಕಟ್ಟಲಾಯಿತು. ಇಂದಿಗೂ ಇಲ್ಲಿ ಪ್ರವಾಸೋದ್ಯಮ ಅತ್ಯಂತ ಲಾಭದಾಯಕವಾಗಿದೆ. ದೇಶದ ಆದಾಯದ ಅತಿ ಮುಖ್ಯ ಮೂಲವಾಗಿದೆ. ಗೃಹಕೈಗಾರಿಕೆಯಾಗಿ ಪರಂಪರಾಗತವಾದ ಬೆಳ್ಳಿಯ ಸೂಕ್ಷ್ಮ ತಂತಿಗಳಿಂದ ಮಾಡುವ ನಾಜೂಕು ಕೆಲಸ ಮತ್ತು ಲೇಸ್‌ನ ತಯಾರಿಕೆ ಮುಂದುವರಿಯುತ್ತಿದೆ.

ವ್ಯವಸಾಯ ಮತ್ತು ಮೀನುಗಾರಿಕೆ : ಇಲ್ಲಿ ಮಣ್ಣು ಫಲವತ್ತಾಗಿಲ್ಲ. ಇರುವ ಕೃಷಿಯೋಗ್ಯ ಜಮೀನು ಇಳಕಲಾದ ಅಂತಸ್ತುಗಳಿಂದ ಕೂಡಿರುವುದರಿಂದ ಯಾಂತ್ರೀಕರಣ ಸಾಧ್ಯವಿಲ್ಲ. ಜೊತೆಗೆ ನೀರಿನ ಸರಬರಾಜು ಸಾಕಷ್ಟಿಲ್ಲ. ಈ ಕಾರಣಗಳಿಂದ ಕೃಷಿ ಪ್ರಗತಿಹೊಂದಲು ಸಾಧ್ಯವಾಗಿಲ್ಲ. ಸಾಲದೆ ದೊಡ್ಡ ಪ್ರಮಾಣದಲ್ಲಿ ಆಹಾರ ಮತ್ತು ಪಾನೀಯಗಳನ್ನು ಆಮದು ಮಾಡಿಕೊಳ್ಳುತ್ತಾರೆ. ಗೋದಿ, ತರಕಾರಿ, ಹಣ್ಣುಗಳನ್ನು ತಕ್ಕಮಟ್ಟಿಗೆ ಬೆಳೆಸುತ್ತಾರೆ. ಮಾಂಸ, ಹಾಲಿನ ಪದಾರ್ಥಗಳು, ತರಕಾರಿ, ಹಣ್ಣು, ಬಟ್ಟೆಗಳು, ಪೆಟ್ರೋಲ್, ಯಂತ್ರಗಳು, ಸಾರಿಗೆ ಉಪಕರಣಗಳು, ರಬ್ಬರ್, ಕಬ್ಬಿಣ, ಉಕ್ಕು ಮುಂತಾದವನ್ನು ಆಮದು ಮಾಡಿಕೊಳ್ಳುತ್ತಾರೆ. ನೂಲು, ವಿದ್ಯುಚ್ಛಕ್ತಿ ಉಪಕರಣಗಳು, ಆಲೂಗಡ್ಡೆ, ಸ್ಯಾನಿಟರಿ ಉಪಕರಣಗಳನ್ನು ರಫ್ತುಮಾಡಲಾಗುತ್ತದೆ. ಸುತ್ತಲ ಸಾಗರದಲ್ಲಿ ಮೀನುಗಳ ಸಂಖ್ಯೆ ಕಡಿಮೆಯಿರುವುದರಿಂದ ಮೀನು ಹಿಡಿಯಲು ಸಣ್ಣದೋಣಿಗಳನ್ನು ಉಪಯೋಗಿಸುತ್ತಾರೆ. ಮೀನುಗಾರಿಕೆ ಅಷ್ಟು ಅಭಿವೃದ್ಧಿ ಹೊಂದಿಲ್ಲ. (ಜಿ.ಎಸ್.ಎಸ್.)

**ಮಾಲ್ಡೀವ್ಸ್:** ಹಿಂದೂ ಮಹಾಸಾಗರದಲ್ಲಿ ಉ.ಅ. $5^0$ ಹಾಗೂ ಪೂ.ರೇ. $73^0$ ಗಳಲ್ಲಿರುವ ಒಂದು ದ್ವೀಪರಾಷ್ಟ್ರ. ಭಾರತದ ಲಕ್ಷದ್ವೀಪ ಸಮೂಹದಿಂದ ದಕ್ಷಿಣಕ್ಕೆ 700 ಕಿಮೀ ದೂರದಲ್ಲಿದೆ. ಸು. 26 ಹವಳ ದ್ವೀಪಗಳು, 1192 ಸಣ್ಣಪುಟ್ಟ ದ್ವೀಪಗಳು ಈ ರಾಷ್ಟ್ರಕ್ಕೆ ಸೇರಿವೆ. ಮಧ್ಯಕಾಲೀನ ಅರಬ್ ಪ್ರವಾಸಿ ಇಬ್ನ ಬತೂತ ಈ ದ್ವೀಪಸ್ತೋಮವನ್ನು ಮಹಲ್ ದಿಬಿಯತ್ ಎಂದು ಗುರುತಿಸಿದ್ದ. ಸಂಸ್ಕೃತ ಸಾಹಿತ್ಯದಲ್ಲಿ ಈ ದ್ವೀಪಗಳ ಉಲ್ಲೇಖವಿದೆ. ದೇಶದ ಒಟ್ಟು ವಿಸ್ತೀರ್ಣ 298 ಚ.ಕಿಮೀ. ಜನಸಂಖ್ಯೆ 3,49,106 (2005). ರಾಜಧಾನಿ ಮಾಲೆ. ಇಲ್ಲಿನ ಜನಸಂಖ್ಯೆ 62,973 (2002). ಜನಸಂಖ್ಯೆಯ ದೃಷ್ಟಿಯಿಂದ ಮಾಲ್ಡೀವ್ಸ್ ಏಷ್ಯದ ಅತಿ ಚಿಕ್ಕದೇಶ.

ಪ್ರಪಂಚದ ಅತ್ಯಂತ ಸಮತಟ್ಟಾದ ಪ್ರದೇಶವೆಂಬ ದಾಖಲೆ ಮಾಲ್ಡೀವ್ಸ್‌ಗೆ ಇದೆ. ಇಲ್ಲಿನ ಗರಿಷ್ಠ ಭೂಮಟ್ಟ ಸಮುದ್ರಮಟ್ಟದಿಂದ 2.3 ಮೀ. ಕಳೆದ ಅನೇಕ ದಶಕಗಳಿಂದ ಸಮುದ್ರಮಟ್ಟದಲ್ಲಿ ಏರಿಕೆ ಕಂಡುಬಂದಿದ್ದು, ಮಾಲ್ಡೀವ್ಸ್‌ನ ಅಸ್ತಿತ್ವಕ್ಕೆ ಭಂಗತರುವ ಸಾಧ್ಯತೆಗಳಿವೆ. 2004 ರಲ್ಲಿ ಉಂಟಾದ ಸುನಾಮಿ ಅಲೆಗಳು ದೇಶದ ಬಹುಭಾಗವನ್ನು ಜಲಾವೃತಗೊಳಿಸಿದ್ದವು. ಆಗ ದೇಶದ ಅನೇಕ ಭೂಭಾಗಗಳು ಕೊಚ್ಚಿಹೋದವು. ದೇಶದ ಭೂಪಟವನ್ನೇ ಪುನರ್ ನಿರ್ಮಿಸಬೇಕಾಯಿತು. ಮಾಲ್ಡೀವ್ಸ್‌ನಲ್ಲಿ ಮಾರ್ಪಾಡು ಹೊಂದಿದ ಮಾನಸೂನ್ ವಾಯುಗುಣವಿದೆ.




ದೇಶದ ಬಹುಪಾಲು ಜನಸಂಖ್ಯೆ ಇಲ್ಲಿನ ಹವಳ ದಿಬ್ಬಗಳು ಮತ್ತು ಅಟಾಲ್‌ಗಳಲ್ಲಿ ಜೀವಿಸುತ್ತಾರೆ. ಮೀನುಗಾರಿಕೆ, ತೆಂಗಿನ ವಸ್ತುಗಳ ಸಂಗ್ರಹಣೆ ಜನರ ಪ್ರಮುಖ ಜೀವನೋಪಾಯ ಕಸುಬುಗಳು. ಬೇಸಾಯಕ್ಕೆ ಯೋಗ್ಯವಾದ ಭೂಮಿ ಅತ್ಯಲ್ಪ. ದೇಶದ ಬಹುಪಾಲು ಆಹಾರ ವಸ್ತುಗಳು ಹೊರಗಿನಿಂದ ಆಮದಾಗುತ್ತವೆ. ಕೆಲವು ದ್ವೀಪಗಳಲ್ಲಿ ರಾಗಿ, ಕೆಲವು ಬಗೆಯ ಕಾಳುಗಳು, ಯಾಮ್ಸ್, ಕಲ್ಲಂಗಡಿ ಹಾಗೂ ಇತರೆ ಹಣ್ಣುಗಳನ್ನು ಬೆಳೆಯುತ್ತಾರೆ. ತೆಂಗಿನ ವಸ್ತುಗಳೇ ಪ್ರಮುಖ ಬೇಸಾಯೋತ್ಪನ್ನ. ಮೀನುಗಾರಿಕೆ ಮತ್ತು ಪ್ರವಾಸೋದ್ಯಮಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ದೇಶದ ಹಡಗು ಕೈಗಾರಿಕೆ, ಬ್ಯಾಂಕಿಂಗ್ ಹಾಗೂ ಕೆಲವು ಕೈಗಾರಿಕಾ ವಲಯಗಳು ಅಭಿವೃದ್ಧಿಯಾಗುತ್ತಿವೆ. ಈ ರಾಷ್ಟ್ರದ ಪ್ರಮುಖ

ವ್ಯಾಪಾರ ಪಾಲುದಾರ ದೇಶಗಳೆಂದರೆ, ಭಾರತ, ಶ್ರೀಲಂಕ, ಥೈಲೆಂಡ್, ಮಲೇಷ್ಯ ಮತ್ತು ಸಿಂಗಪುರ. ಮೀನುಗಾರಿಕೆ ದೇಶದ ಆದಾಯದ ಬಹುಪಾಲನ್ನು ಒದಗಿಸುತ್ತದೆ. ಕರಕುಶಲ ವಸ್ತುಗಳು, ತೆಂಗಿನ ನಾರಿನ ವಸ್ತುಗಳು, ಪ್ಲಾಸ್ಟಿಕ್ ಕೈಗಾರಿಕೆ, ಹಡಗುಗಳ ರಿಪೇರಿ ಕಾರ್ಯ ಹಾಗೂ ಪ್ರವಾಸೋದ್ಯಮದಲ್ಲಿ ಬಹುಪಾಲು ಜನರು ಕೆಲಸಮಾಡುತ್ತಾರೆ. ಟುನ ಮತ್ತು ಬಾನಿಟೂ ಮೀನುಗಳು ಇಲ್ಲಿನ ಪ್ರಮುಖ ರಫ್ತು.

ದೇಶದ ಬಹುಪಾಲು ಜನ ಸುನ್ನಿ ಮುಸ್ಲಿಮರು. ದಿವಿಹಿ ಎಂಬ ಭಾಷೆಯನ್ನಾಡುತ್ತಾರೆ. ಸಾಕ್ಷರತೆ ಶೇ. 97. ದೇಶದ ಹಣ ರುಫಿಯ. (ಕೆ.ಎನ್.ಯು.)

**ಮಾಲ್ಡೋವ:** ಯುರೋಪ್ ಖಂಡದ ಆಗ್ನೇಯದಲ್ಲಿರುವ ಒಂದು ಗಣತಂತ್ರ ರಾಷ್ಟ್ರ. 1991 ಆಗಸ್ಟ್ 27 ರಂದು ಸ್ವತಂತ್ರ ರಾಷ್ಟ್ರವಾಯಿತು. ಚಿಸಿನಾವು ಪ್ರಮುಖ ನಗರ ಹಾಗೂ ಮಾಲ್ಡೋವಾದ ರಾಜಧಾನಿ. ಜನಸಂಖ್ಯೆ 6,76,700 (2002). ಈ ದೇಶ $42^0$ ಉ. ಅ.ದಿಂದ $48^0$ ಉ.ಅ. ಹಾಗೂ $28^0$ ರಿಂದ $0^0$ ಪೂ.ರೇ. ಗಳ ನಡುವೆ ಹಬ್ಬಿದೆ.

ಮಾಲ್ಡೋವ ಎರಡು ಪ್ರಮುಖ ನದಿಗಳ ಮಧ್ಯೆ ಹಂಚಿಕೆಯಾಗಿರುವ (ದೂ ಆಬ್) ಭೂ ಪ್ರದೇಶ. ಈ ದೇಶ ದಕ್ಷಿಣ ಮತ್ತು ಪೂರ್ವಕ್ಕೆ ಉಕ್ರೈನ್ ಮತ್ತು ಪಶ್ಚಿಮದಲ್ಲಿ ರೊಮೇನಿಯವನ್ನು ಹೊಂದಿದೆ ಹಾಗೂ 33,700 ಚ.ಕಿಮೀ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಇದರ ಗಡಿಭಾಗಗಳು ಸ್ಟೆಪ್ಪಿ ಪ್ರದೇಶದ ಅಂಚಿನಿಂದ ಮಧ್ಯ ಏಷ್ಯದವರೆಗೆ ಹರಡಿಕೊಂಡಿದೆ. ಈ ಭಾಗದಲ್ಲಿ ಹರಿಯುವ ಪ್ರೊತ್ ಮತ್ತು ನಿಯಸ್ಟರ್ ನದಿಗಳು ರಾಷ್ಟ್ರದ ಭೂಗಡಿ ಪ್ರದೇಶಗಳಾಗಿವೆ. ಮಾಲ್ಡೋವ ಬೆಟ್ಟಗುಡ್ಡಗಳ ನಾಡು, ನದಿಗಳು ಕಣಿವೆಗಳನ್ನು ಕೊರೆದು ಭೂಮೇಲ್ಮೈ ಸ್ವರೂಪವನ್ನು ಬೇರ್ಪಡಿಸಿವೆ. ಹೇರಳವಾಗಿ ಹಂಚಿಕೆಯಾಗಿರುವ ಸುಣ್ಣದ ಕಲ್ಲಿನ ನಿಕ್ಷೇಪವನ್ನು ಪ್ರೊತ್ ನದಿ ಕೊರೆದು ಸವೆಸಿದೆ. ಕಪ್ಪುಮಣ್ಣಿನ ಭೂಮಿ ದೇಶದ ಉದ್ದಗಲಕ್ಕೂ ವ್ಯಾಪಕವಾಗಿ ಹರಡಿ ಫಲವತ್ತಾದ ಪ್ರದೇಶವನ್ನು ರೂಪಿಸಿದೆ.




ಮೇಲ್ಮೈಲಕ್ಷಣ : ಮಾಲ್ಡೋವದ ಉತ್ತರ ಭಾಗದಲ್ಲಿ ಪರ್ವತಗಳು ಮತ್ತು ಮೈದಾನ ಪ್ರದೇಶಗಳು ಹಂಚಿಕೆಯಾಗಿವೆ. ಈ ವಲಯದಲ್ಲಿ ಅತ್ಯಂತ ಎತ್ತರವಾದ ಪರ್ವತ ಶ್ರೇಣಿಯ ಸರಾಸರಿ ಎತ್ತರ 600 ಮೀ. ಈ ಭಾಗದಲ್ಲಿ ಒತ್ತಾದ ಅರಣ್ಯಗಳು ದೇಶದ ಮಧ್ಯಭಾಗದವರೆಗೂ ವ್ಯಾಪಿಸಿವೆ. ಮಾಲ್ಡೋವದ ಪರ್ವತ ಪ್ರಾಂತ್ಯಗಳಲ್ಲಿ ವಾರ್ಷಿಕ ಸರಾಸರಿ ಮಳೆ ದೇಶದ ಉಳಿದ ಭಾಗಗಳಿಗಿಂತ ಹೆಚ್ಚಾಗಿರುತ್ತದೆ.

ವಾಯುಗುಣ : ಈ ದೇಶ ಸಮಶೀತೋಷ್ಣವಲಯದ ವಾಯುಗುಣವನ್ನು ಹೊಂದಿರುತ್ತದೆ. ಕಡಿಮೆ ಅವಧಿಯ ಬೇಸಗೆ ಹಾಗೂ ದೀರ್ಘವಾದ ಚಳಿಗಾಲವನ್ನು ಹೊಂದಿರುವಂತಹದ್ದಾಗಿರುತ್ತದೆ. ಬೇಸಗೆಯಲ್ಲಿ ಗರಿಷ್ಠ ಉಷ್ಣಾಂಶ $20^0$ಸೆ (ಏಪ್ರಿಲ್) ಮತ್ತು ಕನಿಷ್ಠ $-4^0$ಸೆ (ಜನವರಿ). ವರ್ಷ ಪೂರ್ತಿ ಈ ದೇಶದಲ್ಲಿ ಆಹ್ಲಾದಕರ ಹವಾಮಾನವಿರುತ್ತದೆ.

ಭೂಬಳಕೆ : ದೇಶದ ಒಟ್ಟು ಭೂಪ್ರದೇಶದ ಶೇ.53 ರಷ್ಟು ಭೂಮಿ ಕೃಷಿಗೆ ಯೋಗ್ಯವಾಗಿದೆ. ಶೇ.9 ರಷ್ಟು ಪ್ರದೇಶವು ಹುಲ್ಲುಗಾವಲುಗಳಿಂದ ಆವೃತವಾಗಿದೆ. ಶೇ. 8 ರಷ್ಟು ಅರಣ್ಯಗಳು ಹಾಗೂ ಶೇ.30 ರಷ್ಟು ಭೂಮಿಯನ್ನು ಇತರೆ ಬಳಕೆಗೆ ನೀಡಲಾಗಿದೆ.

ಕೃಷಿ : ದೇಶದ ಉದ್ದಗಲಕ್ಕೂ ಕಪ್ಪುಮಣ್ಣಿನ ಫಲವತ್ತಾದ ಭೂಮಿ ಹಂಚಿಕೆಯಾಗಿರುವುದು ಈ ದೇಶದ ನೈಸರ್ಗಿಕ ಸಂಪತ್ತಾಗಿದೆ. ಇಲ್ಲಿನ ಪ್ರಮುಖ ಬೆಳೆಗಳೆಂದರೆ ಕಾಳುಗಳು, ತರಕಾರಿ, ಸಕ್ಕರೆ, ಬೀಟು, ದ್ರಾಕ್ಷಿ, ತಂಬಾಕು ಮತ್ತು ಹಣ್ಣು ಹಂಪಲು.

ಉದ್ಯಮ : ಆಹಾರ ಸಂಸ್ಕರಣೆ, ಮತ್ಸ್ಯೋತ್ಪಾದನೆ, ತಂಬಾಕು ಉತ್ಪನ್ನಗಳು, ಜವಳಿ ಗಿರಣಿ ಮತ್ತು ರಾಸಾಯನಿಕ ಪದಾರ್ಥಗಳ ತಯಾರಿಕೆ. ದೇಶಕ್ಕೆ ಅಗತ್ಯವಿರುವ ತೈಲವಸ್ತುಗಳು, ಕಚ್ಚಾವಸ್ತುಗಳು ಮತ್ತು ಸಿದ್ಧವಸ್ತುಗಳನ್ನು ಆಮದುಮಾಡಿಕೊಳ್ಳುತ್ತದೆ. ಹತ್ತಿಬಟ್ಟೆ, ಮಧ್ಯ ಮತ್ತು ಆಹಾರ ಉತ್ಪನ್ನಗಳನ್ನು ರಫ್ತುಮಾಡುತ್ತದೆ.

ಜನಸಂಖ್ಯೆ : ದೇಶದ ಒಟ್ಟು ಜನಸಂಖ್ಯೆ 44,58,000 (2002). ವಾರ್ಷಿಕ ಸರಾಸರಿ ಬೆಳೆವಣಿಗೆಯ ಪ್ರಮಾಣ ಶೇ.0.38. ಒಟ್ಟು ಜನಸಂಖ್ಯೆಯ ಶೇ.64.5 ರಷ್ಟು ರೋಮನ್ನರು, ಶೇ.13.8 ರಷ್ಟು ಉಕ್ರೇನಿಯನ್ನರು ಮತ್ತು ಶೇ.13.0 ರಷ್ಟು ರಷ್ಯನ್ನರು. ಪ್ರಮುಖ ಜನಾಂಗ ಕ್ರಿಶ್ಚಿಯನ್ ಧರ್ಮದವರು. ನಿರೀಕ್ಷಿತ ಜೀವಿತಾವಧಿಯು ಗಂಡಸರಲ್ಲಿ 65 ವರ್ಷಗಳು ಮತ್ತು ಸ್ತ್ರೀಯರಲ್ಲಿ 72 ವರ್ಷಗಳು. ಶಿಕ್ಷಣ ಮತ್ತು ಸಾಕ್ಷರತೆಯಲ್ಲಿ ಶೇ.96 ರಷ್ಟು ಸಾಧನೆ ಮಾಡಿದೆ.

ಆರ್ಥಿಕತೆ : ಹಿಂದಿನಿಂದಲೂ ಈ ದೇಶ ಹಿಂದುಳಿದ ಆರ್ಥಿಕ ವ್ಯವಸ್ಥೆಯಲ್ಲಿ ಬೆಳೆದಿರುವ ರಾಷ್ಟ್ರ. ಇತ್ತೀಚಿನ ದಿನಗಳಲ್ಲಿ ಚೇತರಿಕೆಯನ್ನು ಕಂಡಿದೆ. ಇದರ ಆರ್ಥಿಕ ನೆಲೆಗಟ್ಟು ಕೃಷಿ ಉತ್ಪನ್ನಗಳು ಮತ್ತು ಆಹಾರ ಸಂಸ್ಕರಣೆಯನ್ನು ಅವಲಂಬಿಸಿದೆ. ಪ್ರಮುಖ ನಗರಗಳೆಂದರೆ ಚಿಸಿನಾವ್ (ರಾಜಧಾನಿ), ಸ್ಫೋಲ್ ಮತ್ತು ಬೆಲ್ಟ್‌ಸ್ಕಿ. (ವಿ.ಎಸ್.ಎ.)

**ಮಾಲ್ತಸ್, ತಾಮಸ್ ರಾಬರ್ಟ್:** 1766–1834. ಪ್ರಸಿದ್ಧ ಅರ್ಥಶಾಸ್ತ್ರಜ್ಞ, ಕೇಂಬ್ರಿಜ್ ಅರ್ಥಶಾಸ್ತ್ರಜ್ಞರಲ್ಲಿ ಮೊದಲಿಗನೆನಿಸಿದ ಇವನು ಜನಸಂಖ್ಯಾ ಸಿದ್ಧಾಂತದಿಂದ ಹೆಚ್ಚು ಪ್ರಖ್ಯಾತ. ಇವನು ಇಂಗ್ಲೆಂಡಿನ ಸರ್ರೆ ಕೌಂಟಿಗೆ ಸೇರಿದ ಡಾಕೇನ್ ಬಳಿ 1766 ಫೆಬ್ರವರಿ 14ರಂದು ಜನಿಸಿದ. ತಂದೆ ಡೇನಿಯಲ್ ಮಾಲ್ತಸ್. ಇವನು ಫ್ರಾನ್ಸಿನ ಎನ್‌ಸೈಕ್ಲೊಪೀಡಿಸ್ಟರೊಂದಿಗೆ ನಿಕಟ ಸಂಬಂಧ ಹೊಂದಿದ್ದ. ಅವರ ತತ್ತ್ವಗಳಲ್ಲಿ ಈತನಿಗೆ ದೃಢವಾದ ನಂಬಿಕೆಯಿತ್ತು. ಮಾಲ್ತಸ್ ಕೇಂಬ್ರಿಜ್‌ನ ಜೀಸಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪರೀಕ್ಷೆಯಲ್ಲಿ ಉನ್ನತ ಸ್ಥಾನ ಗಳಿಸಿದ. 1793ರಲ್ಲಿ ಪ್ರೌಢವಿದ್ಯಾಶಾಲಾ ಮಂಡಲಿಯ ಸದಸ್ಯಸ್ಥಾನ ಪಡೆದ. 1799ರಲ್ಲಿ ದೀಕ್ಷೆ ಪಡೆದು ಸರ್ರೆಯ ಆಲ್‌ಬರಿ ಎಂಬಲ್ಲಿ ಕೆಲವು ಕಾಲ ಸಹಾಯಕ ಪಾದ್ರಿಯಾಗಿ ಕೆಲಸ ಮಾಡಿದ.

ಮಾಲ್ತಸ್ 1805ರಲ್ಲಿ ವಿವಾಹವಾದ. ಅದೇ ವರ್ಷ ಈಸ್ಟ್ ಇಂಡಿಯ ಕಂಪನಿಯ ಹೇಲ್‌ಬರಿ ಕಾಲೇಜಿನಲ್ಲಿ ಆಧುನಿಕ ಇತಿಹಾಸ, ಅರ್ಥಶಾಸ್ತ್ರಗಳ ಪ್ರಾಧ್ಯಾಪಕನಾಗಿ ನೇಮಕಗೊಂಡ.

19ನೆಯ ಶತಮಾನದ ಆದಿಭಾಗದಲ್ಲಿ ವೈಜ್ಞಾನಿಕ ಯಾಂತ್ರಿಕ ಅಭಿವೃದ್ಧಿಗಳ ಪ್ರಭಾವಕ್ಕೊಳಗಾಗಿ ಸಮಾಜದ ಅಭಿವೃದ್ಧಿ ಸುಖಸಾಧನೆಗಳ ವಿಚಾರದಲ್ಲಿ ಆಶಾವಾದಿಗಳಾಗಿದ್ದವರಲ್ಲಿ ಇವನ ತಂದೆಯೂ ಒಬ್ಬ. ಆದರೆ ಮಾಲ್ತಸ್ ತಂದೆಯ ಅಭಿಪ್ರಾಯವನ್ನು ಒಪ್ಪಲಿಲ್ಲ. ತಂದೆ ಮಕ್ಕಳಿಗೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ತಂದೆ ಮಗನ ಅಭಿಪ್ರಾಯಗಳನ್ನು ಗೌರವಿಸಿ, ಆ ಅಭಿಪ್ರಾಯಗಳ ಪ್ರಕಟಣೆಗೆ ಅನುಮತಿ ಇತ್ತ. ಜನಸಂಖ್ಯೆಯನ್ನು ಕುರಿತು ಮಾಲ್ತಸ್ ರಚಿಸಿದ ಪ್ರಬಂಧ ಪ್ರಕಟವಾಯಿತು. ಈ ಪ್ರಬಂಧವನ್ನು

ಮಾಲ್ತಸ್ 1798ರಲ್ಲಿ ಬೇರೆ ಹೆಸರಿನಲ್ಲಿ ಪ್ರಕಟಿಸಿದ. ಮಾಲ್ತಸ್‌ನ ಅಭಿಪ್ರಾಯದಲ್ಲಿ ಜನಸಂಖ್ಯಾ ಬೆಳವಣಿಗೆ ಮನುಷ್ಯನ ಸುಖಕ್ಕಿರುವ ಮುಖ್ಯ ಅಡಚಣೆ. ಪ್ರಕೃತಿಯ ಔದಾರ್ಯಕ್ಕೆ ಮಿತಿ ಇರುತ್ತದೆ. ವಿಜ್ಞಾನ ಮತ್ತು ತಾಂತ್ರಿಕ ಬೆಳವಣಿಗೆಗಳ ನೆರವಿನಿಂದ ಭೂಮಿಯಿಂದ ಮಿತಿಮೀರಿದ ಫಲ ಪಡೆಯಲು ಸಾಧ್ಯವಾಗುವುದಿಲ್ಲ. ಯಾವಾಗಲೂ ಆಹಾರೋತ್ಪನ್ನದ ಅಭಿವೃದ್ಧಿ ಜನಸಂಖ್ಯಾಭಿವೃದ್ಧಿಗಿಂತ ಕಡಿಮೆಯಾಗಿರುತ್ತದೆ. ಆಹಾರೋತ್ಪನ್ನದ ಅಭಿವೃದ್ಧಿ ಗಣಿತ ಶ್ರೇಣಿಯಲ್ಲಾಗುತ್ತದೆ. ಉದಾ: 5, 10, 15, 20, 25... ಆದರೆ ಜನಸಂಖ್ಯಾ ಬೆಳವಣಿಗೆ ಜ್ಯಾಮಿತಿಯ ಸಂಖ್ಯಾಶ್ರೇಣಿಯಲ್ಲಾಗುತ್ತದೆ. ಉದಾ: 5, 10, 20, 40. ಆದುದರಿಂದ ಸಮಾಜದಲ್ಲಿ ಯಾವಾಗಲೂ ಜನಸಂಖ್ಯೆ ಆಹಾರೋತ್ಪನ್ನದ ಮಿತಿಗಿಂತಲೂ ಹೆಚ್ಚಾಗಿರುತ್ತದೆ. ಆಹಾರದ ಪೂರೈಕೆಯಿಂದ ಜನಸಂಖ್ಯೆಯ ಅಭಿವೃದ್ಧಿ ವೇಗ ಹೆಚ್ಚುವುದೆಂದು ಇವನ ಅಭಿಪ್ರಾಯ. ಆದ್ದರಿಂದ ಇವನ ಪ್ರಬಂಧ ತೀವ್ರ ಚರ್ಚೆಗೊಳಗಾಯಿತು. ಈತ ಅಪಾರ ಟೀಕೆಗೊಳಗಾದ. ಮೇಲೆ ಬೈಗುಳಗಳ ಸುರಿಮಳೆಯಾಯಿತು. ಮಾಲ್ತಸ್ ಯಾವುದಕ್ಕೂ ಅಂಜದೆ ಜನಸಂಖ್ಯೆ ಆಹಾರೋತ್ಪತ್ತಿಗಳ ವಿಷಯಗಳಲ್ಲಿ ಅನೇಕ ದೇಶಗಳ ಅಂಕಿಅಂಶಗಳನ್ನು ಶೇಖರಿಸಿದ. ಐದು ವರ್ಷಗಳ ಸತತ ಕಾರ್ಯದ ಫಲವಾಗಿ ಇವನ ಪ್ರಬಂಧದ ಎರಡನೆಯ ಪರಿಷ್ಕೃತ ಮುದ್ರಣ 1803ರಲ್ಲಿ ಪ್ರಕಟವಾಯಿತು.

ಮಾಲ್ತಸನ ಪ್ರಭಾವವನ್ನು ಅರ್ಥಶಾಸ್ತ್ರದ ಬೆಳವಣಿಗೆಯಲ್ಲಿ ನಾವು ಕಾಣಬಹುದು. ಆತ ವಿವರಿಸಿದ ಗೇಣಿ ಮೌಲ್ಯದ ವಿಷಯ ಮುಖ್ಯವಾದುದು. ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ರಿಕಾರ್ಡೊ ಎಂಬಾತ ಮಾಲ್ತಸನ ಮಿತ್ರನಾಗಿದ್ದ. ರಿಕಾರ್ಡೊ ಪ್ರತಿಪಾದಿಸಿದ ದುಡಿಮೆಯ ಕ್ರಯದ ಆಧಾರದ ಮೇಲೆ ನಿರೂಪಿಸಲ್ಪಟ್ಟ ಮೌಲ್ಯತತ್ತ್ವವನ್ನು ಮಾಲ್ತಸ್ ವಿರೋಧಿಸಿದ.

ಡಾರ್ವಿನ್ 1838ರಲ್ಲಿ ಮಾಲ್ತಸನ ಜನಸಂಖ್ಯೆ ಕುರಿತ ಸಿದ್ಧಾಂತವನ್ನು ಓದುತ್ತಿದ್ದಾಗ ಜೀವನಕ್ಕಾಗಿ ಹೋರಾಟ ಎಂಬ ಅಡಕನುಡಿ ಆತನಮೇಲೆ ಮುಖ್ಯವಾದ ಪರಿಣಾಮವನ್ನುಂಟುಮಾಡಿತು. ಮುಂದೆ ಡಾರ್ವಿನ್ ನಿರೂಪಿಸಿದ ಸಸ್ಯಪ್ರಾಣಿ ವರ್ಗಗಳಲ್ಲಿ ಜೀವನಕ್ಕಾಗಿ ನಡೆಯುವ ಹೋರಾಟ ಸಿದ್ಧಾಂತಕ್ಕೆ ಇದು ಸಹಾಯಕವಾಯಿತು. ಹೀಗೆ ಮಾಲ್ತಸನ ಪ್ರಭಾವ ಬಹುಮುಖವಾಗಿತ್ತು. ಜನಸಂಖ್ಯೆಯ ಸಿದ್ಧಾಂತವೊಂದೇ ಅರ್ಥಶಾಸ್ತ್ರಕ್ಕೆ ಮಾಲ್ತಸನ ಕೊಡುಗೆಯಲ್ಲ. ಮಾಲ್ತಸ್ ಆರ್ಥಿಕ ಬೆಳವಣಿಗೆಯ ಸಿದ್ಧಾಂತಗಳನ್ನು ಕುರಿತು ಬರೆದಿರುವ ಅಸಾಮಾನ್ಯ ಬರೆಹಗಾರರಲ್ಲೊಬ್ಬ. ಕೃಷಿಯ ಇಳಿಮುಖ ಪ್ರತಿಫಲ ನಿಯಮವನ್ನು ಪ್ರಪ್ರಥಮವಾಗಿ ರೂಪಿಸಿದವನೇ ಮಾಲ್ತಸ್. ಆರ್ಥಿಕ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಸೂತ್ರಗಳನ್ನೂ ಮಾಲ್ತಸ್ ರೂಪಿಸಿದ್ದಾನೆ.

ಧಾನ್ಯ ಕುರಿತ ಕಾನೂನುಗಳು, ಗೇಣಿಯ ಸ್ವರೂಪ ಹಾಗೂ ಪ್ರಗತಿ ಅರ್ಥಶಾಸ್ತ್ರದ ತತ್ತ್ವಗಳು ಇವನ್ನು ಕುರಿತು ಮಾಲ್ತಸ್ ಬರೆದಿದ್ದಾನೆ. ಈತ 1834 ಡಿಸೆಂಬರ್ 23ರಂದು ನಿಧನನಾದ.

(ಎಚ್.ಎಂ.ಎಸ್.)

**ಮಾಲ್ತಸ್‌ನ ಜನಸಂಖ್ಯಾ ಸಿದ್ಧಾಂತ:** ಮಾಲ್ತಸ್ 1798ರಲ್ಲಿ ಜನಸಂಖ್ಯೆಯನ್ನು ಕುರಿತು ದಿ ಎಸ್ಸೆ ಆನ್ ಪಾಪ್ಯುಲೇಷನ್ ಎನ್ನುವ ಸುದೀರ್ಘ ಪ್ರಬಂಧವನ್ನು ಪ್ರಕಟಿಸಿದ. ಈ ಪ್ರಬಂಧ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಮುಂದೆ ಇದರಿಂದ ಉದ್ಭವಿಸಬಹುದಾದ ಸಮಸ್ಯೆಗಳ ಬಗೆಗೆ ಚರ್ಚಿಸುತ್ತದೆ. ಆಗಿನ ಕಾಲದಲ್ಲಿ ಇಂಗ್ಲೆಂಡಿನಲ್ಲಿ ನಿರುದ್ಯೋಗ, ಬಡತನ, ಕೃಷಿ ಉತ್ಪಾದನೆಯ ಕುಂಠಿತ, ಗೃಹಕೈಗಾರಿಕೆಗಳ ಅವನತಿ, ಜನಸಂಖ್ಯೆಯ ಬೆಳವಣಿಗೆ ಇತ್ಯಾದಿ ಸಮಸ್ಯೆಗಳು ಉದ್ಭವವಾಗಿದ್ದವು. ಮಾಲ್ತಸ್ ಈ ಸಮಸ್ಯೆಗಳತ್ತ ಗಮನ ಹರಿಸಿ ಅಧ್ಯಯನ ಕೈಗೊಂಡ. ಇವನ ವಾದಗಳು ರಿಕಾರ್ಡೊ ಎಂಬ ಅರ್ಥಶಾಸ್ತ್ರಜ್ಞನ ಗೇಣಿ ಸಿದ್ಧಾಂತ ಮತ್ತು ಇಳಿಮುಖ ಸೀಮಂತ ಪ್ರತಿಫಲನ ನಿಯಮಗಳ ಆಧಾರದ ಮೇಲೆ ಮಂಡಿಸಲ್ಪಟ್ಟವು. ತಮ್ಮ ಅಧ್ಯಯನದ ಅನಂತರ ಅವರಿಗೆ ಹೊಳೆದಿದ್ದು, ಜನಸಂಖ್ಯೆಯ ಬೆಳವಣಿಗೆ ಆಹಾರ ಸಾಮಗ್ರಿಗಳ ಪೂರೈಕೆಯ ಬೆಳವಣಿಗೆಗಿಂತಲೂ ವೇಗವಾದದ್ದು ಎಂದು. ಇವರ ಜನಸಂಖ್ಯಾ ತತ್ತ್ವ ಎರಡು ಆನ್ವಯಿಕ ಊಹೆಗಳ ಆಧಾರದ ಮೇಲೆ ಪ್ರಾರಂಭವಾಗುತ್ತದೆ:

ಮಾನವನು ಜೀವಿಸಲು ಅಥವಾ ಬದುಕಲು ಆಹಾರದ ಆವಶ್ಯಕತೆ ಇದೆ;

ಲಿಂಗಭೇದಗಳ (ಸ್ತ್ರೀ ಮತ್ತು ಪುರುಷ) ಮಧ್ಯೆ ಪರಸ್ಪರ ಆಕರ್ಷಣೆ ಇದ್ದು, ಅನಿವಾರ್ಯವಾಗಿ ಜನಸಂಖ್ಯೆ ಹೆಚ್ಚಿದೆ.

ಈ ಊಹೆಗಳ ಆಧಾರದ ಮೇಲೆ ಮಾಲ್ತಸ್ ಇನ್ನೊಂದು ತೀರ್ಮಾನಕ್ಕೆ ಬಂದ. ಜನಸಂಖ್ಯೆಯ ಸಾಮರ್ಥ್ಯ ಭೂಮಿಯಲ್ಲಿ ಆಹಾರ ಉತ್ಪಾದನೆಯನ್ನು ಮಾಡಲಿರುವ ಸಾಮರ್ಥ್ಯಕ್ಕಿಂತ ಪ್ರಬಲವಾದುದು. ಜನಸಂಖ್ಯಾ ಬೆಳವಣಿಗೆ ಮತ್ತು ಆಹಾರ ಉತ್ಪಾದನೆಗಳ ನಡುವೆ ಅಂತರವಿದೆ ಎಂದು ಮಾಲ್ತಸ್ ಪ್ರತಿಪಾದಿಸುತ್ತ ತನ್ನ ಜನಸಂಖ್ಯೆ ಸಿದ್ಧಾಂತವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಿದ್ದಾನೆ.

ಯಾವುದೇ ರೀತಿಯ ನಿಯಂತ್ರಣಗಳಿಗೆ ಜನಸಂಖ್ಯೆ ಒಳಪಡದಿದ್ದಲ್ಲಿ ಅದು ರೇಖಾಗಣಿತದ ಪ್ರಮಾಣದಲ್ಲಿ ಬೆಳೆಯುತ್ತಾ ಹೋಗುತ್ತದೆ. ಅಂದರೆ ಜನಸಂಖ್ಯೆ 1,2,4,8,16,32,64 ರ ಪ್ರಮಾಣದಲ್ಲಿ ಬೆಳೆಯುತ್ತಾ ಹೋಗುತ್ತದೆ. ಆದರೆ ಆಹಾರ ಉತ್ಪಾದನೆ ಮಾತ್ರ ಅಂಕಗಣಿತದ ಪ್ರಮಾಣದಲ್ಲಿ ಅಂದರೆ, 1,2,3,4,5,6,7,8 ರಂತೆ ಬೆಳೆಯುತ್ತಾ ಹೋಗುತ್ತದೆ.

ಜನಸಂಖ್ಯೆ ಪ್ರತಿ 25 ವರ್ಷಗಳಿಗೊಮ್ಮೆ ದ್ವಿಗುಣಗೊಳ್ಳುತ್ತದೆಯಲ್ಲದೆ ಕೊನೆಗೆ ಆಹಾರ ಉತ್ಪಾದನೆಗಿಂತಲೂ ಹೆಚ್ಚಾಗುತ್ತದೆ ಎಂದು ಅಭಿಪ್ರಾಯಪಟ್ಟ. ಈ ರೀತಿಯ ಅಸಮತೋಲನದಿಂದ ಆಹಾರದ ಕೊರತೆಯುಂಟಾಗುತ್ತದೆ. ಆದ್ದರಿಂದ ಜನಸಂಖ್ಯೆಯನ್ನು ನಿಯಂತ್ರಿಸುವುದು ಅನಿವಾರ್ಯವಾಗುತ್ತದೆ. ಇದಕ್ಕೆ ನೈಸರ್ಗಿಕ ನಿಯಂತ್ರಣಗಳಾದ ಭೂಕಂಪ, ನೆರೆಹಾವಳಿ, ಯುದ್ಧ, ರೋಗರುಜಿನ ಪರಿಹಾರ ಕ್ರಮಗಳಾಗಿವೆಯಾದರೂ ಮನುಷ್ಯ ತನ್ನದೇ ಆದ ಪ್ರತಿಬಂಧಕ ನಿಯಂತ್ರಣಗಳನ್ನು ಅನುಸರಿಸಬೇಕಾಗುತ್ತದೆ. ಇದರಲ್ಲಿ ಮುಖ್ಯವಾದವುಗಳೆಂದರೆ ತಡವಾಗಿ ವಿವಾಹವಾಗುವುದು. ಬ್ರಹ್ಮಚರ್ಯೆ ಪಾಲಿಸುವುದು ಮತ್ತು ಇತರ ಕುಟುಂಬ ಕಲ್ಯಾಣ ಯೋಜನೆಗಳು ಜನನ ನಿಯಂತ್ರಣ ಸೇರಿವೆ.

ಆದರೆ ಮಾಲ್ತಸ್‌ನ ಸಿದ್ಧಾಂತಕ್ಕೆ ಅನೇಕ ಟೀಕೆಗಳೂ ಇವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ಜನಸಂಖ್ಯೆ ಪ್ರತಿ 25 ವರ್ಷಗಳಿಗೊಮ್ಮೆ ದ್ವಿಗುಣಗೊಳ್ಳುವುದಕ್ಕೆ ಯಾವುದೇ ನಿರ್ದಿಷ್ಟವಾದ ಪುರಾವೆಗಳಿಲ್ಲ ಹಾಗೂ ಇದು ಸತ್ಯಕ್ಕೆ ದೂರವಾದುದಾಗಿದೆ. ಆಧುನಿಕ ಯುಗದಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆಗಳು ಪ್ರತಿಫಲನ ನಿಯಮದ ಕಾರ್ಯಾಚರಣೆಯನ್ನು ಪುಷ್ಟೀಕರಿಸುವುದಿಲ್ಲ. ಮಾಲ್ತಸ್‌ನದು ನಿರಾಶಾವಾದ ಎಂಬ ಅಭಿಪ್ರಾಯ ಕೂಡ ವ್ಯಕ್ತವಾಗಿದೆ. *

**ಮಾಸ್ಕೊ:** ರಷ್ಯ ಗಣರಾಜ್ಯದ ದೊಡ್ಡ ನಗರ ಹಾಗೂ ರಾಜಧಾನಿ. ಐರೋಪ್ಯ ನಗರಗಳಲ್ಲಿ ಲಂಡನ್ನನ್ನು ಹೊರತು ಪಡಿಸಿದರೆ ಇದೇ ದೊಡ್ಡದಾದ ಮತ್ತು ಪ್ರಪಂಚದ ಆರನೆಯ ಅತಿ ದೊಡ್ಡ ನಗರ. ಓಕಾ ಮತ್ತು ವೋಲ್ಗಾ ನದಿಗಳ ಸಂಗಮದ ಬಳಿ ಉ. ಅ. $55^0 45'$ ಮತ್ತು ಪೂ. ರೇ. $37^0 35'$ ಮೇಲೆ ಇದೆ. ಐರೋಪ್ಯ ರಷ್ಯದ ಉತ್ತರ ಮಧ್ಯಭಾಗದಲ್ಲಿರುವ ಮಾಸ್ಕೊ ಲೆನಿನ್‌ಗ್ರಾಡಿನ ಆಗ್ನೇಯಕ್ಕೆ ಸು. 640 ಕಿಮೀ ದೂರದಲ್ಲಿದೆ. ವಿಸ್ತೀರ್ಣ 879 ಚ.ಕಿಮೀ. ಮಾಸ್ಕೊ ಕೇಂದ್ರ ನಗರ, ಜನಸಂಖ್ಯೆ 88,01,000. ಮಹಾನಗರದ ಜನಸಂಖ್ಯೆ 8,96,700. ಹೆಚ್ಚು ಅಭಿವೃದ್ಧಿಗೊಂಡಿರುವ ಮಧ್ಯ ಕೈಗಾರಿಕಾ ವಲಯದಲ್ಲಿರುವ ಈ ನಗರ ರಷ್ಯದ ಸಮತಟ್ಟಿನ ಮೈದಾನ ಪ್ರದೇಶದಲ್ಲಿದೆ. ಸಮುದ್ರ ಪಾತಳಿಯಿಂದ ಸು. 120 ಮೀ ಎತ್ತರದಲ್ಲಿದೆ. ಸ್ಟೇಪ್ ವಿಶ್ವವಿದ್ಯಾಲಯದ ಹೊಸ ಕಟ್ಟಡಗಳಿರುವ ಇಲ್ಲಿಯ ಲೆನಿನ್ ಹಿಲ್ಸ್ ಪ್ರದೇಶವೇ ಅತಿ ಉನ್ನತವಾದದು (202.6 ಮೀ). ಈ ನಗರವನ್ನು 1,725 ಚ.ಕಿಮೀ ವಿಸ್ತೀರ್ಣದ ಅರಣ್ಯ ಮತ್ತು ಉದ್ಯಾನಗಳು ಸುತ್ತುವರಿದಿವೆ.

ಪಾರ್ಲಿಮೆಂಟ್ ಹೌಸ್

ಮಾಸ್ಕೊ ನಗರವನ್ನು ಒಂದು ದೊಡ್ಡ ಗಾಲಿಯ ಆಕಾರದಲ್ಲಿ ರಚಿಸಲಾಗಿದೆ. ಅನೇಕ ವಿಶಾಲ ಬೀದಿಗಳಿವೆ. ಮಾಸ್ಕೊ ನದಿ ನಗರದ ಒಳಗೆ ಹರಿಯುತ್ತದೆ. ಇಲ್ಲಿಯದು ಅಟ್ಲಾಂಟಿಕ ಮೂಲದ ಪಶ್ಚಿಮ ಖಂಡಾಂತರ ಹವಾಗುಣ ವರ್ಷದಲ್ಲಿ ಸು. 60 ಸೆಂಮೀ ಮಳೆ ಬೀಳುತ್ತದೆ. ಹೆಚ್ಚು ಬಿಸಿಲುಕಾಯದ ಜುಲೈ ಮತ್ತು ಆಗಸ್ಟ್ ಹೆಚ್ಚುಮಳೆ ಬೀಳುವ ತಿಂಗಳುಗಳು. ಅಕ್ಟೋಬರ್ ತಿಂಗಳ ಅಂತ್ಯದಿಂದ ಏಪ್ರಿಲ್ ತಿಂಗಳ ಆದಿಯವರೆಗೆ ನೆಲ ಹಿಮಾಚ್ಛಾದಿತವಾಗಿರುತ್ತದೆ. ಆಗ ಯಾಂತ್ರಿಕ ಸಾಧನಗಳ ಹಾಗೂ ಕೈ ದುಡಿಮೆಗಾರರ ದೊಡ್ಡ ತಂಡ ಹಿಮಗುಡಿಸಿ ರಸ್ತೆಗಳನ್ನು ಸಂಚಾರಯೋಗ್ಯವಾಗಿ ಮಾಡುವುದು. ಚಳಿಗಾಲ ದೀರ್ಘ. ಡಿಸೆಂಬರ್ ಜನವರಿ ತಿಂಗಳುಗಳಲ್ಲಿ 9 ಗಂಟೆಗೆ ಸೂರ್ಯೋದಯವಾಗಿ 2–

30ಕ್ಕೆ ಸೂರ್ಯಾಸ್ತವಾಗುವುದುಂಟು. ಪ್ರಕಾಶ ಹೆಚ್ಚು ಕಾಲ ಇರುವ ಬೇಸಗೆಯ ದಿನಗಳು ಹಿತವಾಗಿರುವುವು. ವಾರ್ಷಿಕ ಮಧ್ಯ ಉಷ್ಣತೆ 4.4$^0$ಸೆ. ಅತ್ಯಧಿಕ ಚಳಿ ಇರುವ ಜನವರಿ ತಿಂಗಳ ಮಧ್ಯ ಉಷ್ಣತೆ 9.7$^0$ಸೆ. ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಸೌಮ್ಯ ಹವೆಯಿರುತ್ತದೆ. ಬೇಸಗೆಯ ದಿನಗಳಲ್ಲಿ ಲೆನಿನ್ ಹಿಲ್ಸ್‌ನ ಪ್ರದೇಶ ಉಳಿದೆಡೆಗಿಂತ ಹೆಚ್ಚು ತಂಪಾಗಿರುತ್ತದೆ. ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಹಿಮಬೀಳುವುದಾದರೂ ಒಣ ಹವೆಯಿರುತ್ತದೆ.

ಮಾಸ್ಕೊ ರಷ್ಯದ ರಾಜಕೀಯ ಮತ್ತು ಆಡಳಿತದ ಮುಖ್ಯ ಕೇಂದ್ರ. ರಷ್ಯದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಮತ್ತು ಸೋವಿಯತ್‌ನ ಉಚ್ಚ ರಾಜಕೀಯ ಅಧಿಕಾರಿಗಳ, ಮಂತ್ರಿಗಳ ಸಮ್ಮೇಳನದ ಮತ್ತು ಕಮ್ಯುನಿಸ್ಟ್ ಪಕ್ಷದ ಸರ್ವಸದಸ್ಯರ ಸಭೆಗಳು ಇಲ್ಲಿ ಸೇರುತ್ತವೆ. ರಷ್ಯ ಸರ್ಕಾರದ ದೈನಂದಿನ ವ್ಯವಹಾರ ಸಹ ಇಲ್ಲಿಯೇ ತೀರ್ಮಾನವಾಗಿ ಜಾರಿಗೆ ಬರುತ್ತದೆ. ಲೆನಿನ್ ಯಂಗ್ ಕಮ್ಯೂನಿಸ್ಟ್ ಲೀಗ್ ಮತ್ತು ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ ಕಾರ್ಯಾಲಯಗಳೂ ಇಲ್ಲಿವೆ.

ಇಲ್ಲಿ ದೊಡ್ಡ ಪ್ರಮಾಣದ ಎಂಜಿನಿಯರಿಂಗ್, ಬಟ್ಟೆ, ವಿದ್ಯುತ್, ರಸಾಯನ ಮತ್ತು ಆಹಾರ ಪದಾರ್ಥಗಳ ಕೈಗಾರಿಕೆಗಳಿವೆ. ಸ್ವಯಂಚಾಲಿತ ಯಂತ್ರ ಕಾರ್ಖಾನೆಗಳ ಉತ್ಪತ್ತಿ ಪ್ರಮಾಣ ಮತ್ತು ತಾಂತ್ರಿಕ ಪ್ರಗತಿ ರಾಷ್ಟ್ರದಲ್ಲಿ ಪ್ರಥಮಸ್ಥಾನದಲ್ಲಿವೆ. 170 ಪೂರ್ಣ ಸ್ವಯಂಚಾಲಿತ ಮತ್ತು 270 ಯಾಂತ್ರೀಕೃತ ಉತ್ಪಾದನಾ ಶಾಖೆಗಳಿಂದ ಕೂಡಿರುವ ನಗರದ ಅತಿ ದೊಡ್ಡದಾದ ಲಿಖಾಚ್ಯೋವ ಕಾರ್ಖಾನೆಗಳ ಸಂಕೀರ್ಣವನ್ನು 1966–70ರ ಪಂಚವಾರ್ಷಿಕ ಯೋಜನೆಯಲ್ಲೇ ಆಧುನೀಕರಿಸಲಾಯಿತು. ಲೆನಿನಿಸ್ಟ್ ಯಂಗ್ ಕಮ್ಯುನಿಸ್ಟ್‌ಲೀಗ್ ಆಟೊ ಮೊಬೈಲ್ ಕಾರ್ಖಾನೆ ಪ್ರಸಿದ್ಧವಾದದ್ದು. ಅತಿ ಚಿಕ್ಕದಾದ ಬೇರಿಂಗ್‌ಗಳನ್ನೂ ಮೊದಲುಗೊಂಡು 6 ಟನ್ ಗಾತ್ರದವರೆಗಿನ 3,000ಕ್ಕೂ ಹೆಚ್ಚು ಮಾದರಿಗಳ ಬೇರಿಂಗ್‌ಗಳನ್ನು ತಯಾರಿಸುವ ಕಾರ್ಖಾನೆಗಳೂ ಇಲ್ಲಿವೆ. ಇಲ್ಲಿಯ ಯಂತ್ರಸಾಧನೋಪಕರಣಗಳ ಕೈಗಾರಿಕೆ ಉನ್ನತ ಸ್ಥಾನದ್ದು. ವಿದ್ಯುತ್ ತಾಂತ್ರಿಕ ಕೈಗಾರಿಕೆ, ಎಲೆಕ್ಟ್ರಾನಿಕ್ ಗಣಕ ಮತ್ತು ಅತಿಸೂಕ್ಷ್ಮ ಅಳತೆಯ ಸಾಧನಗಳ ತಯಾರಿಕಾ ಕೇಂದ್ರ ಮತ್ತು ಅಂತಾರಾಷ್ಟ್ರೀಯ ಖ್ಯಾತಿಪಡೆದ ಕೈಗಡಿಯಾರಗಳ ಕಾರ್ಖಾನೆಗಳು ಮಾಸ್ಕೋದಲ್ಲಿವೆ. ರಾಷ್ಟ್ರದ ರಾಸಾಯನಿಕ ಉದ್ದಿಮೆಗೆ ಇದು ಮುಖ್ಯ ಕೇಂದ್ರ. ಲಿನನ್, ಹತ್ತಿ, ರೇಷ್ಮೆ ಮತ್ತು ಕೃತಕ ನಾರು ಬಟ್ಟೆ ತಯಾರಿಕೆ ಹಾಗೂ ಮಾಂಸ, ಹೈನು ಪದಾರ್ಥಗಳೂ ಸೇರಿದಂತೆ ಆಹಾರ ಪದಾರ್ಥಗಳ ತಯಾರಿಕೆ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತವೆ.

ಮಾಸ್ಕೊ ನಗರಕ್ಕೆ ದೇಶದ ಎಲ್ಲ ಭಾಗಗಳಿಂದಲೂ ವಿದೇಶಗಳಿಂದಲೂ ಸಂಪರ್ಕ ಸಾಧನಗಳುಂಟು. 1935ರಲ್ಲಿ ಓಡಾಟ ಪ್ರಾರಂಭಿಸಿದ ಭೂಗರ್ಭ (ಮೆಟ್ರೊ) ರೈಲು ಸಾರಿಗೆ ವ್ಯವಸ್ಥೆಯಲ್ಲಿ ಪ್ರಶಂಸನೀಯವಾದುದ್ದು. ಇಲ್ಲಿ ಪ್ರಯಾಣಿಕರಿಗಾಗಿ 9 ಮಾಲುಗಾಡಿಗಳಿಗಾಗಿ 1937ರಲ್ಲಿ ಮಾಸ್ಕೊ ನದಿಯಲ್ಲಿ ಜಲಯಾನ ಪ್ರಾರಂಭವಾಯಿತು. ಮೋಟರು ಬೋಟುಗಳ ಮೂಲಕ ಸಂಚಾರವ್ಯವಸ್ಥೆಯಿದೆ. ಹೊಸತಾಗಿ ನಿರ್ಮಿಸಲಾದ ದೊಡ್ಡ ವಿಮಾನನಿಲ್ದಾಣ ಡೊಮೊಡೇಡೊವೋ ಎಂಬಲ್ಲಿದೆ. ಇದು ಪ್ರಪಂಚದ 60ಕ್ಕೂ ಮಿಕ್ಕಿ ದೊಡ್ಡನಗರಗಳೊಂದಿಗೆ ಸಂಪರ್ಕ ಒದಗಿಸುತ್ತದೆ. ಮಾಸ್ಕೊ ನಗರದ ನೈರುತ್ಯಕ್ಕೆ ಸು. 24 ಕಿಮೀ ದೂರದಲ್ಲಿ ವ್ನುಕೋವೋದಲ್ಲಿ ಮುಖ್ಯವಿಮಾನ ನಿಲ್ದಾಣವಿದೆ. ಇನ್ನೊಂದು ದೊಡ್ಡ ವಿಮಾನನಿಲ್ದಾಣ ಆಗ್ನೇಯಕ್ಕೆ ಸು. 32 ಕಿಮೀ ದೂರದಲ್ಲಿರುವ ಬೈಕೋವೋದಲ್ಲಿದೆ. ಉತ್ತರಕ್ಕೆ ಸು. 26 ಕಿಮೀ ದೂರದಲ್ಲಿರುವ ಮತ್ತೊಂದು ದೊಡ್ಡ ವಿಮಾನ ನಿಲ್ದಾಣ ಶೆರಮೆ ಟ್ಯೋವೋ ಹೆಚ್ಚಾಗಿ ಅಂತಾರಾಷ್ಟ್ರೀಯ ಸಾರಿಗೆಗಳನ್ನು ನಿರ್ವಹಿಸುತ್ತದೆ.

ಮಾಸ್ಕೊ ಸೋವಿಯತ್ ಒಕ್ಕೂಟದ ಮುಖ್ಯ ಸಾಂಸ್ಕೃತಿಕ ಕೇಂದ್ರವಾಗಿತ್ತು. ಇಲ್ಲಿಯ 30 ರಂಗಮಂದಿರಗಳಲ್ಲಿ ಪ್ರಪಂಚಪ್ರಸಿದ್ಧ ಬೋಲ್ಷೋಯ್ ರಂಗಮಂದಿರ ಒಂದು. ರಷ್ಯದ ವಿಶಿಷ್ಟ ನೃತ್ಯಕಲೆಯಾದ ಬ್ಯಾಲೆ ರೂಪಕಗಳು ಸಂಗೀತ ಪ್ರಧಾನ ನಾಟಕಗಳು ಇಲ್ಲಿ ಪ್ರದರ್ಶಿಸಲ್ಪಡುತ್ತವೆ. ಇಲ್ಲಿರುವ ಸೂತ್ರದಬೊಂಬೆಯಾಟದ ರಂಗಮಂದಿರ ಬಲು ದೊಡ್ಡದು. ಮಾಸ್ಕೊ ರಾಜ್ಯದ ಸರ್ಕಸ್ ಬಲು ಜನಪ್ರಿಯ. ಮಾಸ್ಕೊದಲ್ಲಿರುವ ಮಾಸ್ಫಿಲ್ಮ್, ಗಾರ್ಕಿ ಮತ್ತು ಸೋಯಾಜ್ ಮಲ್ಟಿಫಿಲ್ಮ್ ಸ್ಟುಡಿಯೋಗಳು ಸೋವಿಯತ್ ಚಲನಚಿತ್ರ ಉದ್ಯಮದಲ್ಲಿ ಮಹತ್ತ್ವದ ಪಾತ್ರವಹಿಸಿವೆ. ಇಲ್ಲಿ ಕಲೆ, ವಿಜ್ಞಾನ ಮತ್ತು ಯಂತ್ರಕಲಾಶಾಸ್ತ್ರ, ವಿವಿಧ ಕ್ಷೇತ್ರಗಳಿಗೆ ಮೀಸಲಾದ 60ಕ್ಕೂ ಹೆಚ್ಚು ವಸ್ತುಸಂಗ್ರಹಾಲಯಗಳಿವೆ. ಇವುಗಳಲ್ಲಿ ಲೆನಿನ್ ಸೆಂಟ್ರಲ್ ಮ್ಯೂಸಿಯಮ್, ಕಾರ್ಲ್ ಮಾರ್ಕ್ ಮತ್ತು ಫ್ರೆಡೆರಿಕ್, ಏಂಜಲ್ಸ್ ಮ್ಯೂಸಿಯಮ್, ಟ್ರೆಚಿಕೋವ್‌ಸ್ಕಿ ಗ್ಯಾಲರಿ, ಲಲಿತಕಲೆಗಳ ಮ್ಯೂಸಿಯಮ್ ಸೇರಿವೆ. ಪ್ರಪಂಚದ ಅತಿ ದೊಡ್ಡ ಗ್ರಂಥಾಲಯದಲ್ಲಿ ಒಂದಾದ ಲೆನಿನ್ ರಾಜ್ಯ ಗ್ರಂಥಾಲಯ ಸೇರಿದಂತೆ 4000ಕ್ಕೂ ಹೆಚ್ಚು ಗ್ರಂಥಾಲಯಗಳು ಇಲ್ಲಿವೆ. ಮಾಸ್ಕೊ ರಷ್ಯದ ಪ್ರಧಾನ ವೃತ್ತಪತ್ರ ಮತ್ತು ಗ್ರಂಥ ಪ್ರಕಟಣಾಕೇಂದ್ರ. ಇಲ್ಲಿಯ ದೂರದರ್ಶನದ ಪ್ರಸಾರಗೋಪುರ 535.83 ಮೀ ಎತ್ತರವಿದೆ. ಈ ಬೃಹತ್ ಗೋಪುರವನ್ನು 1967ರಲ್ಲಿ ಉದ್ಘಾಟಿಸಲಾಯಿತು. ಮಾಸ್ಕೊ ರೇಡಿಯೋ ಸು.70 ಸೋವಿಯತ್ ಭಾಷೆಗಳಲ್ಲಿ ಬಿತ್ತರಿಸುತ್ತದೆ. ವಿಶ್ವವಿದ್ಯಾಲಯಗಳ ನಗರವೆಂದನ್ನಬಹುದಾದ ಮಾಸ್ಕೊದಲ್ಲಿ ಸು. 80 ಸಂಸ್ಥೆಗಳಲ್ಲಿ ಉಚ್ಚ ಶಿಕ್ಷಣವೀಯುವ ಅನುಕೂಲವಿದ್ದು 620,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶವುಂಟು. ಎಲ್ಲ ಶಿಕ್ಷಣ ಉಚಿತ. ರಷ್ಯದಲ್ಲಿ ಅತಿ ಹಳೆಯದೂ ಮತ್ತು ದೊಡ್ಡದೂ ಆದ ಮಾಸ್ಕೊ ಸ್ಟೇಟ್ ವಿಶ್ವವಿದ್ಯಾಲಯವಿದೆ. ಇಂಟರ್ ನ್ಯಾಷನಲ್ ಫ್ರೆಂಡ್‌ಶಿಪ್ ವಿಶ್ವವಿದ್ಯಾಲಯ ಮತ್ತು ವಿಜ್ಞಾನಗಳ ಸೋವಿಯತ್ ಅಕಾಡೆಮಿಯ ಪ್ರಧಾನಕಾರ್ಯಾಲಯ ಮಾಸ್ಕೊದಲ್ಲಿವೆ. 1970ರ ದಶಕದ ಪ್ರಾರಂಭಕ್ಕೆ ಇಲ್ಲಿ ಸು. 300 ಆಸ್ಪತ್ರೆಗಳು ಮತ್ತು 1000ಕ್ಕೂ ಹೆಚ್ಚು ಪಾಲಿಕ್ಲಿನಿಕ್ಕುಗಳು ಇದ್ದುವು. ಹಾಗೆಯೇ ಅನೇಕ ವೈದ್ಯಕೀಯ ಸಂಸ್ಥೆಗಳು ಮತ್ತು ವೈದ್ಯಕೀಯ ಸಂಶೋಧನ ಕೇಂದ್ರಗಳು ಇಲ್ಲಿವೆ. ಮಾಸ್ಕೊದ ಸುತ್ತಮುತ್ತಲಿನ ಗ್ರಾಮಪ್ರದೇಶಗಳಲ್ಲಿ ಹಲವಾರು ಆರೋಗ್ಯ ಮತ್ತು ವಿಹಾರ ಸ್ಥಳಗಳಿವೆ.

ಸ್ಟೇಟ್ ಯೂನಿವರ್ಸಿಟಿ

ಮಾಸ್ಕೊ ಕ್ರೀಡಾ ಕೇಂದ್ರವೂ ಆಗಿದೆ. ಲೆನಿನ್ ಕ್ರೀಡಾರಂಗ ಸೇರಿದಂತೆ ಸು. 70 ಕ್ರೀಡಾಂಗಣಗಳು, 26 ಈಜುಕೊಳಗಳು, ಸು. 30 ಸಾಕರ್, ಫುಟ್‌ಬಾಲ್ ಮೈದಾನಗಳು ಮತ್ತು 1200 ವ್ಯಾಯಾಮ ಶಾಲೆಗಳು ಇಲ್ಲಿವೆ. ರಷ್ಯ ಹಾಗೂ ಮಾಸ್ಕೊ ಚದುರಂಗ ಆಟಕ್ಕೆ ಪ್ರಸಿದ್ಧ. ಸ್ಕೇಟಿಂಗ್ ಕ್ರೀಡೆಯೂ ಪ್ರಸಿದ್ಧ. ಮಾಸ್ಕೊದಲ್ಲಿ 100ಕ್ಕೂ ಹೆಚ್ಚು ಉದ್ಯಾನಗಳಿವೆ. ಅವುಗಳಲ್ಲಿ ಇಸ್ಮೆಲೊವೆಸ್ಕಿ ಉದ್ಯಾನ ಬಹಳ ದೊಡ್ಡದು. ಉಳಿದ ಉದ್ಯಾನಗಳಲ್ಲಿ ಲುಚ್ನಿಕಿ ಮತ್ತು ಸಖೋಲ್ ನಿಕಿ, ಪಾರ್ಕ್ ಕಲೂರಿ, ಉದ್ಯಾನ ವಿಜ್ಞಾನಗಳ ಅಕಾಡೆಮಿಯ ಸಸ್ಯವಿಜ್ಞಾನದ ತೋಟ, ಗಾರ್ಕಿ ಕೇಂದ್ರ ಉದ್ಯಾನ ಮುಂತಾದವು ಇವೆ.

ಮಾಸ್ಕೊ ಸೋವಿಯತ್ ಸಂಯುಕ್ತ ಸಮಾಜವಾದಿ ಗಣರಾಜ್ಯದ ರಾಜಧಾನಿಯಾಗಿದ್ದು 1991ರಲ್ಲಿ ಸೋವಿಯತ್ ಸಂಯುಕ್ತ ಗಣರಾಜ್ಯದ ಅವನತಿಯ ಅನಂತರ ರಷ್ಯದ ರಾಜಧಾನಿಯಾಗಿರುವ ಈ ನಗರ ಹಳತು ಹೊಸತುಗಳ ಮಿಶ್ರಣ. ನಗರದ ಮಧ್ಯದಲ್ಲಿ ಸುಪ್ರಸಿದ್ಧ ಕೆಂಪುಚೌಕವಿದೆ. ಇದು ಪುರಾತನ ಕಾಲದಿಂದಲೂ ನಾಗರಿಕರು ಸೇರುವ ಸ್ಥಳ. ನಗರದ ಐತಿಹಾಸಿಕ ಕಟ್ಟಡಗಳಲ್ಲಿ 1475–79ರಲ್ಲಿ ನಿರ್ಮಿತವಾದ ಉಸ್ಪೆನ್ಸ್ಕಿ ಚರ್ಚ್ ಒಂದು. ಇಲ್ಲಿ ಇವಾನ್ ದಿ ಟೆರಿಬಲ್ 1547ರಲ್ಲಿ ರಷ್ಯ ಚಕ್ರವರ್ತಿಯಾಗಿ ಕಿರೀಟಧಾರಣೆ ಮಾಡಿದ ಅಂದಿನಿಂದ ರಷ್ಯದ ದೊರೆಗಳ ರಾಜ್ಯಾಭಿಷೇಕ ಇಲ್ಲಿ ನಡೆಯುತ್ತಿತ್ತು. ಈ ಚರ್ಚ್‌ನ ಎದುರಿಗೆ 65 ಟನ್ನುಗಳ ಭಾರದ ಗಂಟೆಯೊಂದು ಸೇರಿದಂತೆ 33 ಗಂಟೆಗಳ ಪುರಾತನ ಗೋಪುರವಿದೆ. ಅರ್ಕಾಂಜಾಲ್ಸ್ಕ್ ಇಗರ್ಜಿಯಲ್ಲಿ (1505–09)ಮಾಸ್ಕೊದ ರಾಜಕುಮಾರರ ಗೋರಿಗಳಿವೆ. ಗ್ರಾನೋವಿತಾಯ (1473–90) ಹಳೆಯ ಅರಮನೆಗಳಲ್ಲೊಂದು. ಒರುಜೆನಾಯಾ ಅರಮನೆಯಲ್ಲಿ (1840–51) ಹಳೆಯ ಕಲಾ ನಿಕ್ಷೇಪಗಳಿವೆ. 1484–80 ನಡುವೆ ನಿರ್ಮಿತವಾದ ಕತೀಡ್ರಲ್ ಆಫ್ ದಿ ಅನನ್ಸಿಯೇಶನ್ ಇನ್ನೊಂದು ಆಕರ್ಷಕ ಹಳೆಯ ಕಟ್ಟಡ. (ಜಿ.ಕೆಯು.)

**ಮಾಹಿತಿ ತಂತ್ರಜ್ಞಾನ ಮತ್ತು ನಗರ ಯೋಜನೆ:** ಭಾರತದಂತಹ ದೇಶದಲ್ಲಿ ಗಣಕಯಂತ್ರಗಳ ಉಪಯೋಗ ಈಗ ತಾನೇ ನೆಲೆ ಕಂಡುಕೊಳ್ಳುತ್ತಿದೆ. ಮಾರ್ಷಲ್ ಮೆಕ್ಲುಹಾನನ ಪ್ರಕಾರ ತಂತ್ರಜ್ಞಾನ ಮಾನವನ ಕೆಲಸ ಕಾರ್ಯಗಳಲ್ಲಿ ಪ್ರವೇಶಿಸಿ ಉಂಟುಮಾಡುವ ಗುರುತರ ಬದಲಾವಣೆಯ ಪ್ರಮಾಣವನ್ನೇ ಮಾಹಿತಿ ತಂತ್ರಜ್ಞಾನವೆಂದು ಕರೆಯಬಹುದು. ಇದನ್ನು ಹಲವು ರೂಪದಲ್ಲಿ ನಗರ ಯೋಜನೆ ತಯಾರಿಸಲು ಉಪಯೋಗಿಸಬಹುದು. ಕೆ.ಎಸ್.ರಾಮೇಗೌಡರ ಪ್ರಕಾರ ನಗರ ಯೋಜನೆ ಒಂದು ಕಲೆ ಹಾಗೂ ವಿಜ್ಞಾನ ಎರಡೂ ಆಗಿದೆ. ನಗರ ಯೋಜನೆ ಜನರ ಅನುಕೂಲತೆ, ಸುರಕ್ಷತೆ ಹಾಗೂ ಸಂತೋಷದಾಯಕ ಪರಿಸರವನ್ನು ನಿರ್ಮಿಸುವ ತಂತ್ರಗಾರಿಕೆಯಾಗಿದೆ.

ನಗರ ಯೋಜನೆ ತಯಾರಿಸಲು ಅಗತ್ಯವಿರುವ ಮಾಹಿತಿ ವಿವಿಧ ರೂಪದಲ್ಲಿರುತ್ತದೆ. ಅಂದರೆ ಭೂಪಟ, ಛಾಯಾಚಿತ್ರಗಳು ಹಾಗೂ ರೇಖಾಚಿತ್ರ ಟ್ಯಾಬುಲರ್ ರೂಪದಲ್ಲಿರುತ್ತವೆ. ಅವುಗಳನ್ನು ಸಂಗ್ರಹಿಸಿ, ವರ್ಗೀಕರಿಸಿ, ಸಂಸ್ಕರಿಸಿ, ವಿಶ್ಲೇಷಿಸಲು ಬೇಕಾದ ಅಗತ್ಯ ತಂತ್ರಾಂಶಗಳು, ಜಿ.ಐ.ಎಸ್ (ಜಿಯಾಗ್ರಫಿಕಲ್ ಇನ್ಫರ್ಮೇಶನ್ ಸಿಸ್ಟಮ್), ರಿಮೋಟ್ ಸೆನ್ಸಿಂಗ್ ತಂತ್ರಾಂಶಗಳನ್ನು (ಮ್ಯಾಪ್‌ಇನ್ಫೋ, ಆರ್ಕಿನ್ಫೋ) ಉಪಯೋಗಿಸಿ ವಿವಿಧ ರೂಪದ ಮಾಹಿತಿಯನ್ನು ರೂಪಾಂತರಿಸಿ ನಗರ ಯೋಜನೆಗಳನ್ನು ತಯಾರಿಸಲು ಅಳವಡಿಸಿಕೊಳ್ಳಬಹುದು.

ನಗರಗಳ ಜನಸಂಖ್ಯೆಯ ತೀವ್ರ ಹೆಚ್ಚಳ, ಕೈಗಾರಿಕೀರಣ ಹಾಗೂ ನಗರೀಕರಣಗಳಿಂದಾಗಿ ನಗರಗಳು ಅಯೋಜಿತ ರೀತಿಯಲ್ಲಿ ಬೆಳೆದು ಹಲವಾರು ಅವ್ಯವಸ್ಥೆಗಳಿಂದ ಹಲವಾರು ಸಮಸ್ಯೆಗಳ ಕೇಂದ್ರಗಳಾಗಿವೆ. ಅವುಗಳೆಂದರೆ ಬಡತನ, ನಿರುದ್ಯೋಗ, ಅತಿಯಾದ ಆರ್ಥಿಕ ಅಸಮಾನತೆ, ಜನಸಂಖ್ಯಾ ಒತ್ತಡ, ಮಾದಕವಸ್ತು ವ್ಯಸನ, ವಸತಿ ಸಮಸ್ಯೆ, ಕೊಳಚೆ ಪ್ರದೇಶ, ಪರಿಸರ ಮಾಲಿನ್ಯ, ಸಂಚಾರ ದಟ್ಟಣೆ ಮೊದಲಾದವುಗಳು. ಇವು ನಗರ ಪ್ರದೇಶಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಭೂಗೋಳಿಕ ಪರಿಸರದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತವೆ. ಆದ್ದರಿಂದ ಪರಿಸರದ ಮೇಲಿನ ಪ್ರತಿಕೂಲ ಪರಿಣಾಮವನ್ನು ಕಡಿಮೆ ಮಾಡಲು ಹಾಗೂ ನಗರಗಳ ನಿರ್ವಹಣಾ ಸಾಮರ್ಥ್ಯವನ್ನು ವೃದ್ಧಿಸಲು ಮತ್ತು ನಗರಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವ ಮೂಲಕ ಪರಿಸರವನ್ನು ಸ್ನೇಹಮಯವಾಗಿಡಲು ಲಭ್ಯವಿರುವ ಮಾಹಿತಿ ತಂತ್ರಜ್ಞಾನವನ್ನು ಸಮರ್ಪಕವಾಗಿ ನಗರಯೋಜನೆಯಲ್ಲಿ ಅಳವಡಿಸಿಕೊಳ್ಳುವುದು ತೀರಾ ಅಗತ್ಯವಾಗಿದೆ.

ತಂತ್ರಜ್ಞಾನ ಮತ್ತು ನಗರ ಯೋಜನೆಯ ರೂಪರೇಷೆಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ತಂತ್ರಜ್ಞಾನ ನಗರ ಯೋಜನೆಗಳನ್ನು ರೂಪಿಸಲು ಹಾಗೂ ಕಾರ್ಯಗತಗೊಳಿಸಲು ಪೂರಕವಾಗಿರುತ್ತವೆಂಬುದಂತೂ ಸ್ಪಷ್ಟ. ಆಯಾಯ ಕಾಲದ ತಂತ್ರಜ್ಞಾನಕ್ಕನುಗುಣವಾಗಿ ನಗರಗಳ ರಚನೆ ಮತ್ತು ಸ್ವರೂಪಗಳು ರೂಪುಗೊಳ್ಳುತ್ತವೆ. ಇಂತಹ ಕೆಲವನ್ನು ಈ ಕೆಳಗೆ ವಿವರಿಸಲಾಗಿದೆ.

ಪಾದಚಾರಿ ನಗರಗಳು: ಕೈಗಾರಿಕೀಕರಣದ ಪೂರ್ವದಲ್ಲಿ ನಗರ ಪ್ರದೇಶಗಳ ಆರ್ಥಿಕ ಚಟುವಟಿಕೆಗಳು ಸಾಮಾನ್ಯವಾಗಿ ಕಾಲ ನಡಿಗೆಯಲ್ಲಿಯೇ ಸಾಗುತ್ತಿದ್ದವು. ಏಕೆಂದರೆ, ತಂತ್ರಜ್ಞಾನ ಮಾನವನ ಹಾಗೂ ಪ್ರಾಣಿಗಳ ಶಕ್ತಿಯನ್ನವಲಂಬಿಸಿದ್ದು, ನಗರಗಳು ಕಾಲ್ನಡಿಗೆಯಲ್ಲಿ ಕ್ರಮಿಸುವ ತ್ರಿಜ್ಯಂತರದವರೆಗೆ ವಿಸ್ತಾರಗೊಂಡು ಬೆಳವಣಿಗೆಯು ಮಿತಿಯಲ್ಲಿರುತ್ತಿತ್ತು. ಆದ್ದರಿಂದ ಈ ರೀತಿಯ ನಗರಗಳು ಪಾದಚಾರಿ ನಗರಗಳೆಂದು ಕರೆಯಲ್ಪಡುತ್ತಿದ್ದವು.

ಉಗಿ ಎಂಜಿನ್ ಮತ್ತು ಚಕ್ರಪಥ ನಗರಗಳು: ಕೈಗಾರಿಕಾ ಕ್ರಾಂತಿಯ ಇಂಧನ ಆಧಾರಿತ ತಂತ್ರಜ್ಞಾನ 1788–1804ರಲ್ಲಿ ಪ್ರಚಲಿತಗೊಂಡು ಉಗಿ ಇಂಜಿನ್ ಮತ್ತು ಚಕ್ರಪಥ ನಗರದ ಉದಯಕ್ಕೆ ನಾಂದಿಯಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಹಾಗೂ ನಗರ ಯೋಜನೆಯ ಪರಿಕಲ್ಪನೆಯಲ್ಲಿ ಗುರುತರ ಬದಲಾವಣೆಯಾದ್ದರಿಂದ ನಗರ ಪ್ರದೇಶಗಳಿಗೆ ಜನರು ಹೆಚ್ಚು ವಲಸೆ ಬರಲು ಪ್ರಾರಂಭಿಸಿದರು. ಆದಕಾರಣ ಕೈಗಾರಿಕಾ ಚಟುವಟಿಕೆಗಳು ನಗರದ ಕೆಲವೇ ಪ್ರದೇಶಗಳಲ್ಲಿ ಕೇಂದ್ರೀಕೃತಗೊಂಡು ನಗರಗಳ ಗಾತ್ರವು ಜಾಸ್ತಿಯಾಗಿ ನಗರ ಪ್ರದೇಶಗಳ ಭೂ ಉಪಯೋಗದಲ್ಲಿ ಮಹತ್ತರ ಬದಲಾವಣೆ ಕಂಡುಬಂದಿತು. ನಗರದ ಆರ್ಥಿಕ ಚಟುವಟಿಕೆಗಳು ರಸ್ತೆಗಳ ಬದಿಯಲ್ಲಿ ಸಾಲು ಸಾಲಾಗಿ ಸ್ಥಾನೀಕರಣಗೊಂಡು ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಸಾಲು ಬೆಳವಣಿಗೆಯಾಗಿ, ಅವು ರಿಬ್ಬನ್ ಅಭಿವೃದ್ಧಿ ರೂಪದಲ್ಲಿರುತ್ತವೆ. ಹೀಗೆ ಉಗಿ ಎಂಜಿನ್ ಮತ್ತು ಚಕ್ರಪಥ ನಗರಗಳು (ದ ಸ್ಟೀಮ್ ಎಂಜಿನ್ ಅಂಡ್ ವ್ಹೀಲ್ ಟ್ರ್ಯಾಕ್ ಸಿಟಿ) ಬೃಹದಾಕಾರವಾಗಿ ಬೆಳೆಯತೊಡಗಿವೆ.

ಸಾಮಾನ್ಯವಾಗಿ ಶಕ್ತಿ ಅವಲಂಬಿತ ತಂತ್ರಜ್ಞಾನವು ಆರ್ಥಿಕ ಚಟುವಟಿಕೆಗಳ ಸಾಂದ್ರತೆ, ಭೂ ಉಪಯೋಗದ ಸಾಂದ್ರತೆ, ವಿವಿಧ ಕೈಗಾರಿಕೆಗಳ ಸ್ಥಾನೀಕರಣ, ಉದ್ಯೋಗಗಳ ಸೃಷ್ಟಿ, ನಗರಗಳ ಸ್ವರೂಪ, ನಗರಗಳ ಆಂತರಿಕ ಹಾಗೂ ಅಂತರ ಸಂಪರ್ಕ ಮಾಧ್ಯಮಗಳ ಜಾಲದ ಮೇಲೆ ತನ್ನದೇ ಆದ ನಿಯಂತ್ರಣ ಹೊಂದಿದ್ದು, ಶಕ್ತಿ ಅವಲಂಬಿತ ತಂತ್ರಜ್ಞಾನ, ಭೂ ಉಪಯೋಗ ಮಾದರಿ ಹಾಗೂ ಆರ್ಥಿಕ ಚಟುವಟಿಕೆಗಳ ಸಾಂದ್ರತೆ ಮೊದಲಾದವುಗಳೊಡನೆ ನೇರ ಸಂಬಂಧ ಹೊಂದಿದ್ದು ನಗರಗಳ ಪರಿಸರ ಮಾಲಿನ್ಯದಂತಹ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿದೆ.

ನಮ್ಮ ನಗರಗಳು: ಮಾಹಿತಿ ತಂತ್ರಜ್ಞಾನ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಅವಲಂಬಿಸಿದ್ದು, ನಗರಗಳ ಆಂತರಿಕ ಕ್ರಿಯೆ ಮತ್ತು ಅಂತರ ಕ್ರಿಯೆಗಳು ಹೆಚ್ಚಾಗಿ ನಗರದ ನಿರ್ವಹಣಾ ಸಾಮರ್ಥ್ಯದ ಮೇಲೆ ಗುರುತರವಾದ ಪರಿಣಾಮಗಳನ್ನು ಉಂಟುಮಾಡುತ್ತಿರುತ್ತವೆ. ಹೀಗೆ ಮಾಡಿರುವುದರಿಂದ ನಗರ ಪ್ರದೇಶಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಚಟುವಟಿಕೆಗಳ ಮೇಲೆ ಹೆಚ್ಚು ದುಷ್ಪರಿಣಾಮಗಳುಂಟಾಗಿ ನಗರಗಳ ನಿರ್ವಹಣೆಯು ಬಹಳ ಕಷ್ಟವಾಗಿರುತ್ತದೆ. ಆದ್ದರಿಂದ ಮಾಹಿತಿ ತಂತ್ರಜ್ಞಾನ ಸೂಕ್ತ ಮಾಹಿತಿಯನ್ನು ಸಂಗ್ರಹಣೆ, ಸಂಸ್ಕರಣೆ, ವಿಶ್ಲೇಷಣೆ ಮಾಡಿ ಸಮಸ್ಯೆಗಳಿಗೆ ಕಡಿಮೆ ಸಮಯ ಹಾಗೂ ಕಡಿಮೆ ವೆಚ್ಚದಲ್ಲಿ ಸೂಕ್ತ ಪರಿಹಾರ ಕಂಡುಕೊಳ್ಳುವುದರ ಮೂಲಕ ಸುಭದ್ರ ಹಾಗೂ ಸುಂದರವಾದ ವ್ಯಾಪಕ ನಗರ ಯೋಜನೆಯನ್ನು ರೂಪಿಸಿ ನಗರಗಳು ಸುರಕ್ಷಿತ ಹಾಗೂ ಪರಿಸರ ಸ್ನೇಹಮಯವಾಗಿ ರೂಪುಗೊಳ್ಳಲು ಸಹಕಾರಿಯಾಗಿರುತ್ತವೆ.

ಮಾಹಿತಿ ತಂತ್ರಜ್ಞಾನವನ್ನು ನಗರ ಯೋಜನೆಯೊಂದಿಗೆ ಅಳವಡಿಸಿ ತಯಾರಿಸಿದ ಮಾಹಿತಿ ವ್ಯವಸ್ಥೆ ಅಂದರೆ; ಮಾಹಿತಿ ತಂತ್ರಜ್ಞಾನವಾದ ಭೌಗೋಳಿಕ ಮಾಹಿತಿ ವ್ಯವಸ್ಥೆ ಮತ್ತು ದೂರ ಸಂವೇದಿ ತಂತ್ರಗಳು ಮುಖ್ಯವಾಗಿ ನಗರ ಯೋಜನೆಗೆ ಸಂಬಂಧಿಸಿದ ಮಾಹಿತಿಯ ಸೃಷ್ಟಿ ಮತ್ತು ನಿರ್ವಹಣೆಯಲ್ಲಿ ತೊಡಗಿವೆ. ಭೌಗೋಳಿಕ ಮಾಹಿತಿ ವ್ಯವಸ್ಥೆ ಸಂಘಟಿತವಾದಾಗಿನಿಂದಲೂ ಅಸಂಖ್ಯಾತ ಅಧ್ಯಯನಗಳನ್ನು ನಡೆಸಲಾಗಿದೆ. ಆದರೂ ಸಂಪೂರ್ಣವಾಗಿ ಹಾಗೂ ಸಮರ್ಪಕವಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಏಕಸ್ವಾಮ್ಯಗಳಿಸಲು ಇದು ಇನ್ನೂ ದೂರ ಸಾಗಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಸಂಖ್ಯಾತ್ಮಕ ನಕಾಶೆಯ ಪ್ರಯೋಗ ಮತ್ತು ತಿಳುವಳಿಕೆ ಕುರಿತಂತೆ ಭೌಗೋಳಿಕ ಮಾಹಿತಿ ತಂತ್ರಜ್ಞಾನವು ನಗರ ಯೋಜನೆ ರೂಪಿಸುವ ನಿಟ್ಟಿನಲ್ಲಿ ಸಾಗುತ್ತಿದೆ. ಆದ್ದರಿಂದ ಜಿ.ಐ.ಎಸ್. ಮತ್ತು ದೂರಸಂವೇದಿಗಳಂತಹ ಮಾಹಿತಿ ತಂತ್ರಜ್ಞಾನ ಸಾಧನಗಳು ಸರಿಯಾದ ಸಮಯಕ್ಕೆ ಸ್ಪಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳಲು ಮಾನವನಿಗೆ ಹೆಚ್ಚು ಸಹಕಾರಿಯಾಗಿವೆ.

20ನೆಯ ಶತಮಾನಕ್ಕಿಂತಲೂ ಮೊದಲು ಜನರು ವಿವಿಧ ಸಂಪರ್ಕ ಮಾಧ್ಯಮಗಳನ್ನು ಬಳಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಪಾರಿವಾಳಗಳು ಸಂದೇಶಗಳನ್ನು ರವಾನಿಸುವ ಸಾಧನಗಳಾಗಿದ್ದವು. ಅನಂತರ ಜನಪ್ರಿಯವಾದುದು ದೂರವಾಣಿ. ನಾಗರಿಕತೆ ಬೆಳೆದಂತೆ ಸಂಪರ್ಕದಲ್ಲಾಗುವ ವಿಳಂಬವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹಲವಾರು ವಿಧದ ಸಂಪರ್ಕ ಜಾಲಗಳು ಅಭಿವೃದ್ಧಿಗೊಂಡವು. ಇಂದು ಗಣಕಯಂತ್ರದ ಉಪಯೋಗಗಳಲ್ಲಿ ಅಂತರ್ಜಾಲದ ಬಳಕೆ ಬಹುಮುಖ್ಯವಾದುದು. ಇದು ವಿಸ್ತಾರವಾದ ಪ್ರಪಂಚವನ್ನು ಒಟ್ಟುಗೂಡಿಸುವಲ್ಲಿ ಅಥವಾ ಹತ್ತಿರ ತರುವಲ್ಲಿ ಯಶಸ್ವಿಯಾಗಿದೆ. ಅಂತರ್ಜಾಲದ ಬಳಕೆಯಿಂದ ಕಡಿಮೆ ವೆಚ್ಚದಲ್ಲಿ ಪ್ರಪಂಚದ ಯಾವುದೇ ಭಾಗವನ್ನು ಸಂಪರ್ಕಿಸಲು ಸಾಧ್ಯವಾಗಿದೆ. ಅಂತರ್ಜಾಲ ಎಂಬ ಪದದ ಅರ್ಥ ಜಾಲಗಳ ಜಾಲ ಪ್ರಪಂಚದ ಯಾವುದೇ ಮೂಲೆಯಲ್ಲಿರುವ ಗಣಕಯಂತ್ರವನ್ನು ಈ ಜಾಲದ ಮುಖಾಂತರ ಸಂಪರ್ಕಿಸಬಹುದಾಗಿದೆ.

ಮಾಹಿತಿ ತಂತ್ರಜ್ಞಾನದಿಂದ, ನೈಸರ್ಗಿಕ ಸಂಪನ್ಮೂಲಗಳಾದ ನೀರು ಹಾಗೂ ನೀರಿನ ಬಳಕೆ ಮತ್ತು ನಿರ್ವಹಣೆ, ಭೂ ಹಂಚಿಕೆ, ಸ್ವರೂಪ, ಭೂ ಬಳಕೆಯ ವಿವರ ಮತ್ತು ನಿರ್ವಹಣೆ ಕುರಿತಂತೆ ಹಲವಾರು ಸಂಪನ್ಮೂಲಗಳ ಮಾಹಿತಿ ಸಂಗ್ರಹಣೆ, ಸಂಸ್ಕರಣೆ, ನಿರ್ವಹಣೆ ಹಾಗೂ ಮಾನವನ ಏಳಿಗೆಗೆ ಆತನ ಸುತ್ತಮುತ್ತಲಿನ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ವಿವಿಧ ರೀತಿಯ ಯೋಜನೆಗಳನ್ನು ತಯಾರಿಸಿ ಕಾರ್ಯಗತಗೊಳಿಸಲು ಸಾಧ್ಯವಾಗಿದೆ. ಅಲ್ಲದೆ ಹೆಚ್ಚು ಆಪತ್ತನ್ನುಂಟುಮಾಡುವ ಚಂಡಮಾರುತ, ಭೂಕುಸಿತ, ನದಿ ಪ್ರವಾಹಗಳು, ಭೂಕಂಪಗಳು ಹಾಗೂ ತ್ಯಾಜ್ಯ ವಸ್ತುಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆ, ನಿರ್ವಹಣೆ ಮತ್ತು ವಿಶ್ಲೇಷಣೆಗಳನ್ನು ಮಾಡಿ ಸ್ಪಷ್ಟ ನಿರ್ಧಾರಗಳೊಡನೆ ಯೋಜನೆಗಳನ್ನು ರೂಪಿಸುವಲ್ಲಿ ಮಾಹಿತಿ ತಂತ್ರಜ್ಞಾನವು ಉಪಯೋಗಕ್ಕೆ ಬರುತ್ತದೆ.

ವ್ಯಾಪಕ ನಗರ ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಬೇಕಾಗುವ ಮಾಹಿತಿಯನ್ನು ಅಂದರೆ ಸ್ಥಳ ವ್ಯವಸ್ಥಿತ ಚಟುವಟಿಕೆಗಳು, ಭೂ ಉಪಯೋಗ ಮಾದರಿ, ವಸತಿ ಗುಣ ಲಕ್ಷಣಗಳು, ಜನಸಂಖ್ಯೆ ಮತ್ತು ಭೌತಿಕ, ಸಾಮಾಜಿಕ ಹಾಗೂ ಆರ್ಥಿಕ ಮೂಲ ಸೌಲಭ್ಯಗಳನ್ನು ಕುರಿತ ವಿವರಣೆ ಇತ್ಯಾದಿಗಳನ್ನು ಸಂಗ್ರಹಿಸಿ, ಸಂಸ್ಕರಿಸಿ ಹಾಗೂ ವಿಶ್ಲೇಷಿಸಿ ಕಡಿಮೆ ವೆಚ್ಚದಲ್ಲಿ ಹಾಗೂ ಕಡಿಮೆ ಸಮಯದಲ್ಲಿ ಯೋಜನೆಗಳನ್ನು ರೂಪಿಸಲು ಮಾಹಿತಿ ತಂತ್ರಜ್ಞಾನ ಹೆಚ್ಚು ಸ್ನೇಹಮಯ ತಂತ್ರಜ್ಞಾನವಾಗಿದೆ.

ಮಾಹಿತಿ ತಂತ್ರಜ್ಞಾನ ಮಾನವನ ಬದುಕಿನಲ್ಲಿ ಮತ್ತು ಅವನ ಆರ್ಥಿಕ ಚಟುವಟಿಕೆಗಳಲ್ಲಿ ಗುರುತರ ಬದಲಾವಣೆ ತಂದಿದೆ. ಕೈಗಾರಿಕೆ ಕ್ರಾಂತಿಯ ನಂತರ ಮಾನವನ ಚಟುವಟಿಕೆಗಳು ಹಾಗೂ ಅವುಗಳ ಆಂತರಿಕ ಕ್ರಿಯೆಗಳು ಯಾವುದೇ ನಗರದ ಆರ್ಥಿಕ ಚಟುವಟಿಕೆಗಳನ್ನು ಪುನರ್ ಸ್ಥಾಪಿಸಲಿದೆ. ನಗರ ಯೋಜಕರಿಗೆ ಅಗತ್ಯವಿರುವ ಅಂಕಿ ಸಂಖ್ಯಾ ಮಾಹಿತಿ ವಿಶ್ಲೇಷಣೆಯ ಉದ್ದೇಶವನ್ನು ಜಿ.ಐ.ಎಸ್. ಸ್ಪಷ್ಟೀಕರಿಸುತ್ತದೆ. ಯಾವುದೇ ನಗರದ ಬೆಳವಣಿಗೆಯ ಸ್ಥಿತಿಗಳತಿಗಳನ್ನು ಗತಕಾಲ, ಪ್ರಸ್ತುತ ಹಾಗೂ ಭವಿಷ್ಯತ್ತಿನವರೆಗೆ ಜಿ.ಐ.ಎಸ್. ಮೂಲಕ ಅವಲೋಕಿಸಿ ವಿಶ್ಲೇಷಿಸಬಹುದಾಗಿದೆ.

ಭೌಗೋಳಿಕ ಮಾಹಿತಿ ವ್ಯವಸ್ಥೆ ಸ್ಥಾನಿಕ ವಸ್ತುಗಳ ಹಂಚಿಕೆ ಮತ್ತು ಅವುಗಳ ಗುಣಲಕ್ಷಣಗಳು ಹಾಗೂ ಸಂಬಂಧಗಳನ್ನು ವಿವರಿಸುತ್ತದೆ. ನಗರ ಯೋಜಕರು ಯಾವುದೇ ನಗರದ ಗತಕಾಲ ಮತ್ತು ಪ್ರಸ್ತುತ ಅಂಕಿ ಸಂಖ್ಯೆ ಮತ್ತು ಸ್ಥಾನಿಕ ಮಾಹಿತಿಗಳನ್ನು ಜಿ.ಐ.ಎಸ್. ಮೂಲಕ ಸಂಗ್ರಹಿಸಿ, ಸಂಸ್ಕರಿಸಿ ವೀಕ್ಷಿಸಬಹುದಾಗಿದೆ. ಅಲ್ಲದೆ ಲಭ್ಯವಿರುವ ಮಾಹಿತಿಯನ್ನು ವಿಶ್ಲೇಷಿಸಿ ಭವಿಷ್ಯತ್ತಿನ ನಗರಗಳ ಸ್ವರೂಪವನ್ನು ಅರ್ಥಮಾಡಿಕೊಂಡು ನಗರವು ವ್ಯವಸ್ಥಿತ ರೀತಿಯಲ್ಲಿ ಬೆಳೆಯುವಂತೆ ಮಾಡಲು ಹಾಗೂ ನಿರ್ವಹಿಸಲು ಜಿ.ಐ.ಎಸ್. ಅನ್ನು ಸಾಧನವಾಗಿ ಬಳಸಬಹುದು.

ಭೌಗೋಳಿಕ ಮಾಹಿತಿ ವ್ಯವಸ್ಥೆ ಮತ್ತು ವಿವಿಧ ಮಾದರಿಗಳನ್ನು ನಗರ ಯೋಜನೆಯಲ್ಲಿ ಅನ್ವಯಿಸಿಕೊಳ್ಳುವುದರಿಂದ ಯೋಜನೆಗಳನ್ನು ವ್ಯವಸ್ಥಿತವಾಗಿ ವಿನ್ಯಾಸಗೊಳಿಸಬಹುದು ಅಲ್ಲದೆ ನಗರಗಳು ಹೆಚ್ಚು ಸುರಕ್ಷಿತ, ಸುಂದರ ಹಾಗೂ ಯೋಜನೆಯನ್ನು ಪರಿಣಾಮಕಾರಿ ವೆಚ್ಚವಾಗಿ ರೂಪಿಸಬಹುದು. ಅಲ್ಲದೆ ಸಾರ್ವಜನಿಕರಿಂದ ಹಾಗೂ ಸಂಬಂಧಿಸಿದ ಯೋಜನೆ ರೂಪಿಸಲು ಅಗತ್ಯವಿರುವ ಮಾಹಿತಿಯನ್ನು ವಿವಿಧ ಇಲಾಖೆಗಳಿಂದ ಸ್ವಯಂಚಾಲಿತ ಜಿ.ಐ.ಎಸ್. ಮೂಲಕ ಪಡೆದು ಪ್ರಾಧಿಕಾರದ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಸಂಭವನೀಯ ಯೋಜನೆ ರೂಪಿಸಲು ಸಾಧ್ಯವಾಗಿದೆ.

ಮಾಹಿತಿ ತಂತ್ರಜ್ಞಾನ ಕೈಗಾರಿಕೆ ಆಧಾರಿತ ಸಮಾಜವನ್ನು ಮಾಹಿತಿ ಸಮಾಜವನ್ನಾಗಿ ಪರಿವರ್ತಿಸುವುದರ ಮೂಲಕ ನಗರ ಯೋಜನೆಯಲ್ಲಿ ಹೊಸ ಆಯಾಮವನ್ನು ಸೃಷ್ಟಿಸಿದೆ. ಮಾಹಿತಿ ಆಧಾರಿತ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳನ್ನು ವಿಸ್ತರಿಸುವುದಲ್ಲದೆ ಮಿಶ್ರ ಭೂ ಉಪಯೋಗವಲಯಗಳನ್ನು ರೂಪಿಸುವುದರ ಮೂಲಕ ಮಾನವನ ಆರ್ಥಿಕ ಚಟುವಟಿಕೆಗಳನ್ನು ಅನೌಪಚಾರಿಕಗೊಳಿಸುವಲ್ಲಿ ಮಾಹಿತಿ ತಂತ್ರಜ್ಞಾನ ಬಹಳ ಸಹಕಾರಿಯಾಗಿರುತ್ತದೆ. ಸ್ಥಾನಿಕ ಅಡಚಣೆಗಳನ್ನು ಕಡಿಮೆ ಮಾಡುವುದರ ಮೂಲಕ ಆರ್ಥಿಕ ಚಟುವಟಿಕೆಗಳ ಧ್ರುವೀಕರಣ, ಕಡಿಮೆ ಸಮಯ, ಕಡಿಮೆ ಸ್ಥಳ ಅಲ್ಲದೆ ಉತ್ಪಾದನಾ ಅಂಶಗಳು ಮತ್ತು ಉತ್ಪಾದನಾ ವಿಧಾನ ಆರ್ಥಿಕ ರಚನೆಯ ಮೂಲ ಸ್ವರೂಪವನ್ನು ಬದಲಾಯಿಸಲಿದ್ದು, ಮಾಹಿತಿ ತಂತ್ರಜ್ಞಾನ ಪ್ರಸ್ತುತದಲ್ಲಿ ನಗರ ಯೋಜನೆಯ ಒಂದು ಪ್ರಮುಖ ಸಾಧನವಾಗಿ ರೂಪುಗೊಳ್ಳುತ್ತಿರುವುದಂತೂ ಸ್ಪಷ್ಟ. ಆದ್ದರಿಂದ ನಗರ ಮಾಹಿತಿ ವ್ಯವಸ್ಥೆಯನ್ನು ರೂಪಿಸುವುದು ತೀರಾ ಅಗತ್ಯವಾಗಿದೆಯೆಂದು ಹೇಳಬಹುದು. ಸಮಗ್ರ ನಗರಾಭಿವೃದ್ಧಿ ಮತ್ತು ಪರಿಸರ ಸ್ನೇಹಮಯತೆಯನ್ನು ಸಾಧಿಸಲು ಮಾಹಿತಿ ತಂತ್ರಜ್ಞಾನ ಭವಿಷ್ಯತ್ತಿನಲ್ಲಿ ಯೋಜಕರ ನೆರವಿಗೆ ಬರಲಿದೆ. **(ಟಿ.ಎಂ.ಎಂ.)**

**ಮಿಜೋರಾಮ್:** ಭಾರತದ ಒಂದು ರಾಜ್ಯ. ಈಶಾನ್ಯ ಭಾಗದಲ್ಲಿರುವ ಈ ರಾಜ್ಯವನ್ನು ಉತ್ತರದಲ್ಲಿ ಭಾರತದ ಅಸ್ಸಾಮ್ ಮತ್ತು ಮಣಿಪುರ ರಾಜ್ಯಗಳು, ಪೂರ್ವ ದಕ್ಷಿಣಗಳಲ್ಲಿ ಮಯನ್ಮಾರ್, ಪಶ್ಚಿಮದಲ್ಲಿ ಬಾಂಗ್ಲಾದೇಶ ಮತ್ತು ಭಾರತದ ತ್ರಿಪುರ ರಾಜ್ಯ ಸುತ್ತುವರೆದಿವೆ. ಮಿಜೋರಾಮ್‌ನ ವಿಸ್ತೀರ್ಣ 21,081 ಚ.ಕಿಮೀ. ಜನಸಂಖ್ಯೆ 8,88,573 (2001). ರಾಜಧಾನಿ ಐಜ್ವಾಲ್.

ಭೌತಲಕ್ಷಣ: ಮಿಜೋರಾಮ್ ಬೆಟ್ಟಗಳ ಪ್ರದೇಶ. ಮೀಜೊ ಭಾಷೆಯಲ್ಲಿ ಮಿಜೋರಾಮ್ ಎಂದರೆ ಬೆಟ್ಟಗಳು ಇರುವ ಪ್ರದೇಶ ಎಂದು ಅರ್ಥ. ಇಲ್ಲಿಯ ಬೆಟ್ಟಗಳು ದಕ್ಷಿಣೋತ್ತರವಾಗಿ ಹಬ್ಬಿವೆ. ಇವುಗಳ ಸರಾಸರಿ ಎತ್ತರ ಸಮುದ್ರಮಟ್ಟದಿಂದ 900 ಮೀ. ಅತ್ಯುನ್ನತ ಬ್ಲ್ಯೂಶಿಖರ 2,165 ಮೀ ಎತ್ತರವಾಗಿದೆ.




ಮಿಜೋರಾಮ್‌ನ ಉತ್ತರಭಾಗದಲ್ಲಿ ಹರಿಯುವ ಮುಖ್ಯ ನದಿಗಳು ಧಾಲೇಶ್ವರಿ (ತ್ಲಾವೆಂಗ್), ಸೊನಾಯ್ ಮತ್ತು ತುಯಿವಾವ್ಲ್. ಇವು ಬಾರಾಕ್ ನದಿಯನ್ನು ಸೇರುತ್ತವೆ. ದಕ್ಷಿಣದಲ್ಲಿ ಕೋಲದೀನದಿ ಮತ್ತು ಅದರ ಉಪನದಿಗಳು ಹರಿಯುತ್ತವೆ. ಪಶ್ಚಿಮದ ಮುಖ್ಯ ನದಿ ಕರ್ಣಪುಲಿ. ಇದು ಬಾಂಗ್ಲಾದೇಶದಲ್ಲಿ ಮುಂದುವರಿಯುತ್ತದೆ.

ವಾಯುಗುಣ: ಮಿಜೋರಾಮ್‌ನ ಕಣಿವೆಗಳು ಮಳೆಗಾಲದಲ್ಲಿ ನೀರಿನಿಂದ ಕೂಡಿದ್ದು ವಾಸಕ್ಕೆ ಯೋಗ್ಯವಾಗಿಲ್ಲ. ಇಲ್ಲಿಯ ಎತ್ತರ ಪ್ರದೇಶ ಹಿತಕರವಾದ ವಾಯುಗುಣದಿಂದ ಕೂಡಿದೆ. ಮಿಜೋರಾಮ್‌ನ ವಾರ್ಷಿಕ ಸರಾಸರಿ ಮಳೆ 254 ಸೆಂಮೀ. ಉತ್ತರದಲ್ಲಿ ಐಜ್ವಾಲ್‌ನಲ್ಲಿ 208 ಸೆಂಮೀ, ದಕ್ಷಿಣದ ಲುಂಗ್ಲೇನಲ್ಲಿ 350 ಸೆಂಮೀ ಮಳೆಯಾಗುತ್ತದೆ.

ಆರ್ಥಿಕತೆ: ಕೃಷಿ ಇಲ್ಲಿಯ ಮುಖ್ಯ ಆರ್ಥಿಕ ಜೀವಾಳ. ಕಾಡು ಕಡಿದು ಸುಟ್ಟು ಬರಿದಾದ ನೆಲದಲ್ಲಿ ಬೆಳೆ ತೆಗೆಯುವ ಅತ್ಯಂತ ಹಿಂದುಳಿದ 'ಜೂಮ್' ಬೇಸಾಯ ಪದ್ಧತಿ ಸಾಮಾನ್ಯ. ವೈಜ್ಞಾನಿಕವಾದ ಆಧುನಿಕ ಕೃಷಿ ಪದ್ಧತಿಗಳನ್ನು ಜಾರಿಗೆ ತರಲು ಸರ್ಕಾರ ಯತ್ನಿಸುತ್ತಿದೆ. ಬತ್ತ ಪ್ರಮುಖ ಆಹಾರಧಾನ್ಯ. ಮುಸುಕಿನ ಜೋಳ, ಶುಂಠಿ ಬೆಳೆಯುತ್ತಾರೆ. ಬೆಟ್ಟಗಳ ಇಳಿಜಾರುಗಳಲ್ಲಿ ಮೆಟ್ಟಲು ಮೆಟ್ಟಲಾಗಿ ನೆಲವನ್ನು ಕಡಿದು ಈ ಬೆಳೆಗಳನ್ನು ಬೆಳೆಯಲಾಗುತ್ತದೆ. ರಬ್ಬರ್, ಕಾಫಿ, ಚಹ ಮೊದಲಾದ ತೋಟದ ಬೆಳೆಗಳನ್ನು ಬೆಳೆಯಲು ಪ್ರಯತ್ನಗಳು ನಡೆದಿವೆ.

ಮಿಜೋರಾಮ್‌ನಲ್ಲಿ ದೊಡ್ಡ ಕೈಗಾರಿಕೆಗಳು ಇಲ್ಲ. ಕೈಮಗ್ಗ ಮತ್ತು ಕರಕುಶಲ ಕೈಗಾರಿಕೆಗಳಿವೆ. ರೇಷ್ಮೆ ಉದ್ಯಮವೂ ಹಳೆಯದು. ಶುಂಠಿರಸ ತೆಗೆಯುವುದು, ಎಣ್ಣೆ ಉತ್ಪಾದನೆ, ಮರಕೊಯ್ಯುವುದು, ಇಟ್ಟಿಗೆ, ಸಾಬೂನು ತಯಾರಿಕೆ ಮೊದಲಾದ ಸಣ್ಣ ಕೈಗಾರಿಕೆಗಳಿವೆ.

ಆಡಳಿತ: ಮಿಜೋರಾಮ್ ರಾಜ್ಯದ ಜಿಲ್ಲೆಗಳು ಐಜಾವಲ್, ಲುಂಗ್ಲೈ, ಚಂಪಾಯ್, ಕೊಲಾಸಿಬ್, ಲಾಂಗ್‌ಟ್ಲಾಯ್, ಮಾಮಿಟ್, ಸೈಹ ಮತ್ತು ಸರಚಿಪ್. ಐಜ್ವಾಲ್ ರಾಜಧಾನಿ. ರಾಜ್ಯದಲ್ಲಿ ಒಟ್ಟು 8 ಪಟ್ಟಣಗಳಿವೆ. ಐಜ್ವಾಲ್ ಜಿಲ್ಲೆಯ ವಿಸ್ತೀರ್ಣ 12,589 ಚ.ಕಿಮೀ. ಜನಸಂಖ್ಯೆ 3,39,812 (2001). ಲುಂಗ್ಲೈ ಜಿಲ್ಲೆ 4,536 ಚ.ಕಿಮೀ ವಿಸ್ತಾರವಾಗಿದೆ. ಇದರ ಜನಸಂಖ್ಯೆ 1,37,155 (2001). ಜಿಲ್ಲೆಯ ಆಡಳಿತ ಕೇಂದ್ರ ಲುಂಗ್ಲೈ. ಚಂಪಾಯ್ ಜಿಲ್ಲೆಯ ವಿಸ್ತೀರ್ಣ 3,957 ಚ.ಕಿಮೀ. ಜನಸಂಖ್ಯೆ 66,420 (2001). ಆಡಳಿತ ಕೇಂದ್ರ ಚಂಪಾಯ್. ಮಿಜೋರಾಮ್‌ನ ಭಾಷೆಗಳು ಮಿಜೋ ಮತ್ತು ಇಂಗ್ಲಿಷ್. ಇಲ್ಲಿ ಶೇ. 88ರಷ್ಟು ಮಂದಿ ಅಕ್ಷರಸ್ಥರು.

ಇತಿಹಾಸ: ಮಿಜೋ ಜನಗಳು ಮಂಗೋಲಿಯನ್ ಬುಡಕಟ್ಟಿಗೆ ಸೇರಿದವರು. ಇಲ್ಲಿಗೆ ಬರುವ ಮೊದಲು ಇವರು ಮಯನ್ಮಾರಿನ ಷಾನ್ ರಾಜ್ಯದ ಪ್ರದೇಶದಲ್ಲಿ ನೆಲೆಸಿದ್ದರು. ಮಯನ್ಮಾರನ್ನು ಬಿಟ್ಟು ಇವರು ಪಶ್ಚಿಮಾಭಿಮುಖವಾಗಿ ಸಾಗಿ ಲುಷಾಯಿ ಬೆಟ್ಟಗಾಡು ಪ್ರದೇಶವನ್ನು ಆಕ್ರಮಿಸಿಕೊಂಡರು. ಬ್ರಿಟಿಷ್ ಆಡಳಿತ ಇದ್ದಕಾಲದಲ್ಲಿ ಮಿಜೋ ಜನರು ಬ್ರಿಟಿಷ್ ಆಕ್ರಮಿತ ಪ್ರದೇಶಗಳ ಮೇಲೆ ಪದೇ ಪದೇ ದಾಳಿ ಮಾಡುತ್ತಿದ್ದರು. ಬ್ರಿಟಿಷ್ ಸೇನಾ ನೆಲೆಗಳ ಮೇಲೂ ಎರಿಬರುತ್ತಿದ್ದರು. ಬ್ರಿಟಿಷ್ ಸೇನೆ ಮೀಜೋಗಳ ಮೇಲೆ ಯುದ್ಧ ಮಾಡಿ ಅವರ ನೆಲವನ್ನು ವಶಪಡಿಸಿಕೊಂಡು 1891ರಲ್ಲಿ ಅದನ್ನು ಬ್ರಿಟಿಷ್ ಭಾರತಕ್ಕೆ ಸೇರಿಸಿತು.

1898ರಲ್ಲಿ ಇಡೀ ಮಿಜೋ ಪ್ರದೇಶವನ್ನು ಒಂದು ಜಿಲ್ಲೆಯಾಗಿ ರೂಪಿಸಿ ಮಿಜೋ ಬೆಟ್ಟವನ್ನು ಜಿಲ್ಲೆ ಎಂದು ಕರೆಯಲಾಯಿತು. ಹಾಗೂ ಅಸ್ಸಾಮ್ ಪ್ರಾಂತ್ಯಕ್ಕೆ ಇದನ್ನು ಸೇರಿಸಲಾಯಿತು. ಹೀಗೆ ಮಿಜೋಗಳು ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿದ್ದರೂ ಇವರ ಗ್ರಾಮಾಡಳಿತದಲ್ಲಿ ಬ್ರಿಟಿಷರು ಪ್ರವೇಶಿಸಲಿಲ್ಲ. ಮಿಜೋ ಗುಂಪುಗಳ ನಾಯಕರು ಹಿಂದಿನಿಂದ ಬಂದ ಪದ್ಧತಿಯಲ್ಲೇ ದಿನ ದಿನದ ಆಡಳಿತ ನಡೆಸುತ್ತಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಮಿಜೋರಾಮ್ ಅಸ್ಸಾಮ್ ರಾಜ್ಯದ ಒಂದು ಜಿಲ್ಲೆಯಾಗಿ ಮುಂದುವರಿಯಿತು. 1964ರಲ್ಲಿ ಸಂಸತ್ತು ಸ್ವೀಕರಿಸಿದ ಒಂದು ಅಧಿನಿಯಮದ ಪ್ರಕಾರ ಇದರ ಹೆಸರನ್ನು ಲುಷಾಯಿ ಬೆಟ್ಟ ಜಿಲ್ಲೆ ಎಂಬುದರಿಂದ ಮಿಜೋ ಬೆಟ್ಟ ಜಿಲ್ಲೆ ಎಂದು ಬದಲಾಯಿಸಲಾಯಿತು.

ಭಾರತ ಸರ್ಕಾರದ ಅಡಿಯಲ್ಲಿ ತಮ್ಮ ಪುರೋಭಿವೃದ್ಧಿ ಆಗುತ್ತಿಲ್ಲವೆಂಬ ಭಾವನೆಯಿಂದ ಅನೇಕ ಮಿಜೋಗಳು ಸ್ವಾತಂತ್ರ್ಯಕ್ಕಾಗಿ ಸಶಸ್ತ್ರ ಹೋರಾಟ ನಡೆಸತೊಡಗಿದ್ದರು. ಇವರಿಗೆ ಅನ್ಯ ದೇಶಗಳ ಬೆಂಬಲ ಪ್ರೋತ್ಸಾಹಗಳು ದೊರಕುತ್ತಿದ್ದುವು. ದಂಗೆಕೋರರನ್ನು ಅಡಗಿಸಲು ಸರ್ಕಾರ ಸೈನಿಕ ಕಾರ್ಯಾಚರಣೆ ನಡೆಸಬೇಕಾಯಿತು. ಸರ್ಕಾರ ಇದನ್ನು ಗಲಭೆಗೊಳಗಾದ ಪ್ರದೇಶವೆಂದು ಸಾರಿತು. ಮಿಜೋರಾಮ್‌ನಲ್ಲಿ ಶಾಂತಿ ಸ್ಥಾಪಿಸಲು ನಡಸಿದ ಯತ್ನಗಳು ಯಶಸ್ವಿಯಾಗಲಿಲ್ಲ. 1972ರಲ್ಲಿ ಇದಕ್ಕೆ ಮಿಜೋರಾಮ್ ಎಂದು ಹೆಸರು ನೀಡಿ ಕೇಂದ್ರಾಡಳಿತ ಪ್ರದೇಶವಾಗಿ ಮಾಡಿ ಅಸ್ಸಾಮಿನಿಂದ ಪ್ರತ್ಯೇಕಗೊಳಿಸಿದರು. ಅದರಿಂದಲೂ ದಂಗೆಕೋರರಿಗೆ ತೃಪ್ತಿಯಾಗಲಿಲ್ಲ.

1986 ಜೂನ್ 30ರಂದು ಭಾರತ ಸರ್ಕಾರಕ್ಕೂ ಮಿಜೋ ರಾಷ್ಟ್ರೀಯ ರಂಗಕ್ಕೂ ಶಾಂತಿ ಒಡಂಬಡಿಕೆಯಾಯಿತು. ಎರಡು ದಶಕಗಳಿಗೂ ಹೆಚ್ಚು ಕಾಲದ ಹೋರಾಟ ಕೊನೆಗೊಂಡಿತು. 1987 ಫೆಬ್ರವರಿ 20 ರಂದು ಪೂರ್ಣಪ್ರಮಾಣದ ರಾಜ್ಯವಾಯಿತು. ಮಿಜೋ ಈಗ ಭಾರತದ ಒಂದು ರಾಜ್ಯವಾಗಿದೆ.

ಮಿಜೋಗಳಲ್ಲಿ ಲುಷಾಯಿ, ಪಾವಿ, ಸೈಥೆ, ರಾಲ್ಟೆ, ಪಾಂಗ್ ಹ್ಮಾರ್, ಕುಕಿ, ಮರಾ ಲಾಖೆರ್ ಮುಂತಾದ ಅನೇಕ ಬುಡಕಟ್ಟುಗಳಿವೆ. 19ನೆಯ ಶತಮಾನದಲ್ಲಿ ಕ್ರೈಸ್ತ ಮಿಷನರಿಗಳ ಪ್ರಭಾವಕ್ಕೆ ಒಳಪಟ್ಟು ಅನೇಕರು ಕ್ರೈಸ್ತರಾಗಿ ಮತಾಂತರಗೊಂಡಿದ್ದಾರೆ. ಮಿಜೋ ಭಾಷೆಗೆ ಅದರದೇ ಲಿಪಿ ಇರಲಿಲ್ಲ. ಪಾದ್ರಿಗಳು ರೋಮನ್ ಲಿಪಿಯನ್ನು ಬಳಕೆಗೆ ತಂದರಲ್ಲದೆ ಅಲ್ಲಿಯ ಜನಕ್ಕೆ ಇಂಗ್ಲಿಷ್ ಬೋಧಿಸತೊಡಗಿದರು. ಇದರ ಫಲವಾಗಿ ಅಲ್ಲಿ ಅಕ್ಷರಸ್ಥರ

ಪ್ರಮಾಣ ಹೆಚ್ಚಿತು. ಇಂದು ಅಲ್ಲಿ ಕ್ರೈಸ್ತರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಅವರು ಇಂಗ್ಲಿಷ್ ಮಿಜೋ ಎರಡೂ ಭಾಷೆಗಳನ್ನಾಡುತ್ತಾರೆ. ಗಡಿ ಪ್ರದೇಶದಲ್ಲಿರುವ ಚಕ್ಮಾ ಮುಂತಾದ ಬುಡಕಟ್ಟುಗಳ ಜನರು ಬೌದ್ಧರು. ಅವರ ಭಾಷೆ ಬಂಗಾಲಿ. (ಎಚ್.ಎಸ್.ಕೆ.)

**ಮಿತವ್ಯಯ ಪರಿಮಾಣಗಳ ನಿರರ್ಥಕತೆ:** ಕೈಗಾರಿಕಾ ಸಂಸ್ಥಾಪಕರಿಗೆ ಮಿತವ್ಯಯಗಳು ಸಾಧ್ಯವಾಗದೆ, ಉಳಿತಾಯಗಳಾಚೆ ಉಂಟಾಗುವ ಹೆಚ್ಚಿನ ಆರ್ಥಿಕ ವ್ಯಯ. ಒಂದು ಮಹಾನಗರದಲ್ಲಿ ಹಲವು ಕೈಗಾರಿಕೆಗಳು ಸ್ಥಾನೀಕರಣ ಹೊಂದುವಾಗ ಅವುಗಳಿಗೆ ಅಗತ್ಯವಾಗಿ ಬೇಕಾಗಿರುವ ಮೂಲ ಸೌಲಭ್ಯಗಳಾದ ಉತ್ತಮ ಗುಣಮಟ್ಟದ ರಸ್ತೆಗಳು, ಸಿದ್ಧ ಮಾರುಕಟ್ಟೆ, ನುರಿತ ಕಾರ್ಮಿಕ ವರ್ಗ ಹಾಗೂ ಇತರೆ ಸೇವೆಗಳು ಲಭ್ಯವಿದ್ದರೆ ಕೈಗಾರಿಕೆಗಳು ಆರ್ಥಿಕ ಮಿತವ್ಯಯವನ್ನು ಹೊಂದುತ್ತವೆ.

ಅನೇಕ ಸೌಲಭ್ಯಗಳು ಬೃಹತ್ ನಗರಗಳಲ್ಲಿ ದೊರಕುವುದರಿಂದ ಕೈಗಾರಿಕೋದ್ಯಮಿಗಳು ಬೆಂಗಳೂರು, ಮುಂಬಯಿ, ಚೆನ್ನೈ, ಕೋಲ್ಕತ ಮೊದಲಾದ ನಗರಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಇಷ್ಟಪಡುತ್ತಾರೆ. ಮಿತವ್ಯಯವು ಒಂದು ಹಂತದವರೆಗೆ ಪರಿಣಾಮವಾಗಿ ಕಾರ್ಯನಿರ್ವಹಿಸುತ್ತದೆ, ಅಂದರೆ ಜನಸಂಖ್ಯೆಯ ಗಾತ್ರವನ್ನು ಅವಲಂಬಿಸಿರುತ್ತದೆ. ಯಾವುದೇ ಒಂದು ನಗರವು ಭೌತಿಕವಾಗಿ ಮತ್ತು ಸಾಮಾಜಿಕವಾಗಿ ವಿಸ್ತರಿಸಿದಂತೆಲ್ಲಾ ಕೈಗಾರಿಕೋದ್ಯಮಿಗಳಿಗೆ ಈ ಹಿಂದೆ ಲಭಿಸುತ್ತಿದ್ದ ಮಿತವ್ಯಯಗಳು ಕ್ಷೀಣಿಸುತ್ತವೆ. ಇದೇ ಪ್ರಕಾರವಾಗಿ ಮಹಾನಗರದಲ್ಲಿ ಹೊಸ ಕೈಗಾರಿಕೆಗಳು ಸ್ಥಾನೀಕರಣಗೊಂಡರೆ ಕೈಗಾರಿಕೋದ್ಯಮಿಗಳಿಗೆ ಮಿತವ್ಯಯದಲ್ಲಿ ಉಳಿತಾಯ ಸಾಧಿತವಾಗದೆ ಹೆಚ್ಚಿನ ವ್ಯಯವನ್ನು ಅನುಭವಿಸಬೇಕಾಗುತ್ತದೆ. (ಬಿ.ಇ.)

**ಮಿನಿಸೋಟ:** ಅಮೆರಿಕ ಸಂಯುಕ್ತ ಸಂಸ್ಥಾನದ ಉತ್ತರದಂಚಿನಲ್ಲಿರುವ ಒಂದು ರಾಜ್ಯ. ಉತ್ತರಕ್ಕೆ ಕೆನಡ, ಪೂರ್ವಕ್ಕೆ ವಿಸ್ಕಾನ್‌ಸಿನ್ ಮತ್ತು ಸುಪೀರಿಯರ್ ಸರೋವರ, ದಕ್ಷಿಣಕ್ಕೆ ಅಯೋವ ಮತ್ತು ಪಶ್ಚಿಮಕ್ಕೆ ಉತ್ತರ ಮತ್ತು ದಕ್ಷಿಣ ಡಕೋಟದಿಂದ ಸುತ್ತುವರಿದಿದ್ದು ಉ.ಅ $40^0 30'$–$49^0 23'$ ಪ. ರೇ. $83^0 23'$–$97^0 13'$ ನಲ್ಲಿದೆ. ಸುಪೀರಿಯರ್ ಸರೋವರದ 5729 ಚ.ಕಿಮೀ ಪ್ರದೇಶವನ್ನು ಬಿಟ್ಟು ಒಳಜಲಪ್ರದೇಶಗಳೂ ಸೇರಿದಂತೆ ಈ ರಾಜ್ಯದ ವಿಸ್ತೀರ್ಣ 217,735 ಚ.ಕಿಮೀ. ಜನಸಂಖ್ಯೆ 49,19,479 (2000). ರಾಜಧಾನಿ ಸೇಂಟ್‌ಪಾಲ್.

ಮೇಲ್ಮೈಲಕ್ಷಣ: ರಾಜ್ಯದ ಪೂರ್ವಕ್ಕೆ ಸೇಂಟ್ ಕ್ರಾಯ್ ಮತ್ತು ಮಿಸಿಸಿಪಿ ನದಿಗಳು, ಪಶ್ಚಿಮಕ್ಕೆ ಬಿಗ್‌ಸ್ಟೋನ್, ಟ್ರಾವರ್ಸ್ ಸರೋವರಗಳು ಮತ್ತು ರೆಡ್ ನದಿ, ಉತ್ತರಕ್ಕೆ ಉಡ್ಸ್ ಮತ್ತು ರೈನಿ ಸರೋವರಗಳು ಈ ರಾಜ್ಯದ ಗಡಿಗಳಾಗಿವೆ. ಮಿನಿಸೋಟ ಉತ್ತರ ದಕ್ಷಿಣವಾಗಿ 661 ಕಿಮೀ, ಪೂರ್ವಪಶ್ಚಿಮವಾಗಿ 575 ಕಿಮೀ ಅಗಲವಾಗಿದೆ. ಕುಕ್ ಕೌಂಟಿಯಲ್ಲಿರುವ ಈಗಲ್ ಪರ್ವತ ಶಿಖರ ಸಮುದ್ರಮಟ್ಟದಿಂದ 701 ಮೀ ಎತ್ತರವಿದೆ. ಸುಪೀರಿಯರ್ ಸರೋವರ ಪ್ರದೇಶ 183 ಮೀ ಎತ್ತರವಿರುವುದೇ ಈ ರಾಜ್ಯದ ಬಹು ತಗ್ಗುಪ್ರದೇಶವಾಗಿದೆ. ಮೆಸುಬಿ, ಮಿಸ್ಕಾ ಬೆಟ್ಟಶ್ರೇಣಿ ಎತ್ತರ ಪ್ರದೇಶಗಳು. ಈ ರಾಜ್ಯದ ನೈರುತ್ಯಕ್ಕೆ ಅನೇಕ ಸರೋವರಗಳಿಂದ ಕೂಡಿದ ಪ್ರೈರಿ ಹುಲ್ಲುಗಾವಲು, ನದಿಗಳು, ಈಶಾನ್ಯಕ್ಕೆ ದಟ್ಟವಾದ ಕಾಡುಗಳು ಇವೆ. ಮಿನಿಸೋಟದ ಮಧ್ಯಭಾಗದಲ್ಲಿ ಮಿಸಿಸಿಪಿ ನದಿಯ ಪಶ್ಚಿಮಕ್ಕೆ ಬಿಗ್‌ವುಡ್ಸ್ ಅರಣ್ಯ ಪ್ರದೇಶವಿದೆ.

ನದಿ ಸರೋವರ: ಮಿಸಿಸಿಪಿ, ಮಿನಿಸೋಟ, ರೆಡ್‌ಲೇಕ್, ರೈನಿ ಮತ್ತು ಸೇಂಟ್ ಲೂಯಿಸ್ ಪ್ರಮುಖ ನದಿಗಳು. ಮಿನಿಸೋಟದ ವೈಶಿಷ್ಟ್ಯವೆಂದರೆ ಸು. 700ರಿಂದ 10,000 ಸರೋವರಗಳಿಂದ ಕೂಡಿರುವುದು. ರಾಜ್ಯದ ಉತ್ತರಕ್ಕೆ ಅಧಿಕ ಸಂಖ್ಯೆಯಲ್ಲಿ ಸರೋವರಗಳು ಇವೆ. ಇವುಗಳಲ್ಲಿ ಸುಪೀರಿಯರ್, ಬಿಗ್‌ಸ್ಟೋನ್, ಟ್ರಾವರ್ಸ್, ರೈನಿ, ಮಿನಿಟೊಂಕ ಮತ್ತು ರೆಡ್ ಸರೋವರಗಳು ಮುಖ್ಯವಾದವು.

ವಾಯುಗುಣ: ಮಿನಿಸೋಟ ರಾಜ್ಯದಲ್ಲಿ ತೇವಾಂಶದ ಭೂಖಂಡ ವಾಯುಗುಣವಿದೆ. ಇಲ್ಲಿ ಬಿಸಿಲು ಕಡಿಮೆ. ಜನವರಿಯಲ್ಲಿ $-13.3^0$ ಸೆ ಗೆ ಉಷ್ಣತೆ ಇಳಿದರೆ ಜುಲೈನಲ್ಲಿ $17.2^0$ ಸೆ ವರೆಗೆ ಉಷ್ಣತೆ ಇರುತ್ತದೆ. ಉತ್ತರದಲ್ಲಿ ದಕ್ಷಿಣಕ್ಕಿಂತ ಹೆಚ್ಚು ಚಳಿ ಇರುವುದನ್ನು ಗುರುತಿಸಲಾಗಿದೆ. ಆಗಾಗ ಹಿಮದಿಂದ ಕೂಡಿದ ಮಳೆಯಾಗುತ್ತದೆ. ಒಟ್ಟಿನಲ್ಲಿ ವರ್ಷದಲ್ಲಿ 71.9 ಸೆಂಮೀ ಮಳೆಯಾಗುತ್ತದೆ.

ಸಸ್ಯ ಮತ್ತು ಪ್ರಾಣಿಸಂಪತ್ತು: ಉತ್ತರ ಮತ್ತು ಪೂರ್ವದಲ್ಲಿ ಕೋನಿಫೆರಸ್ ಕಾಡುಗಳು, ಪಶ್ಚಿಮ ಮತ್ತು ದಕ್ಷಿಣದಲ್ಲಿ ಪ್ರೈರಿ ಹುಲ್ಲುಗಾವಲು ಕಂಡುಬರುತ್ತದೆ. ಪೈನ್ ಜಾತಿ ಮರಗಳು ಹೇರಳವಾಗಿವೆ. ಜಿಂಕೆ, ಕಡವೆ, ಕರಡಿ, ನರಿ, ಗೊಫರ್ ಮೊದಲಾದ ಪ್ರಾಣಿಗಳಿವೆ. ಅನೇಕ ವಿಧದ ಪಕ್ಷಿಗಳು ಕಂಡುಬರುತ್ತವೆ. ಸರೋವರ ಮತ್ತು ನದಿಗಳಲ್ಲಿ ಹೇರಳವಾಗಿ ಮೀನುಗಳಿವೆ. ಮತ್ಸ್ಯೋದ್ಯಮ ಪ್ರಗತಿಯಲ್ಲಿದೆ.

ಕೃಷಿ: ವ್ಯವಸಾಯದಲ್ಲಿ ಈ ರಾಜ್ಯ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 5ನೆಯ ಸ್ಥಾನ ಪಡೆದಿದೆ. ಹಿಮನದಿಗಳಿಂದುಂಟಾದ ಫಲವತ್ತಾದ ನೆರೆ ಮಣ್ಣಿನಿಂದ ಕೂಡಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಬಾರ್ಲಿ, ಗೋಧಿ, ಕಾಳುಗಳು, ಆಲೂಗಡ್ಡೆ, ಸೋಯಾಬೀನ್ ಮತ್ತು ಹೊಗೆಸೊಪ್ಪು ಮೊದಲಾದವನ್ನು ಬೆಳೆಯುತ್ತಾರೆ. ಹಾಲು, ಬೆಣ್ಣೆ, ಗಿಣ್ಣು ಮತ್ತು ಹಾಲಿನಪುಡಿ ಉತ್ಪತ್ತಿಯಲ್ಲಿ ಈ ರಾಜ್ಯ ಹೆಸರು ಪಡೆದಿದೆ. ಇಲ್ಲಿ ಬೆಳೆಯುವ ವಿವಿಧ ಫಲಗಳಲ್ಲಿ ಸೇಬು ಮತ್ತು ದ್ರಾಕ್ಷಿ ಮುಖ್ಯವಾದವು.

ಖನಿಜ: ಮಿನಿಸೋಟ ಖನಿಜೋತ್ಪಾದನೆಯಲ್ಲಿ 10ನೆಯ ಸ್ಥಾನ ಪಡೆದಿದೆ. ಕಬ್ಬಿಣದ ಅದಿರು ಇಲ್ಲಿಯ ಮುಖ್ಯ ಖನಿಜ. ಕಬ್ಬಿಣದ ಅದಿರು ಮಿಸಾಜಿ ರೀಂಡ್‌ನಲ್ಲಿ ಹೇರಳವಾಗಿ ದೊರೆಯುತ್ತದೆ. ಮ್ಯಾಂಗನೀಸ್, ಗ್ರಾನೈಟ್, ಜೇಡಿಮಣ್ಣು ಇತರ ಮುಖ್ಯ ಖನಿಜಗಳು. ವರ್ಷದಲ್ಲಿ ಸು. 600 ಮಿಲಿಯನ್ ಪೌಂಡ್‌ಗಳ ಮೌಲ್ಯದ ಖನಿಜೋತ್ಪತ್ತಿಯುಂಟು. ಸಂಯುಕ್ತಸಂಸ್ಥಾನದ ಕಬ್ಬಿಣದ ಅದಿರಿನಲ್ಲಿ ಹೆಚ್ಚಿನ ಭಾಗ ಈ ರಾಜ್ಯ ಒಂದರಲ್ಲೇ ಉತ್ಪಾದಿಸಲಾಗುತ್ತದೆ. ಪ್ರಪಂಚದ ತೆರೆದ ದೊಡ್ಡ ಕಬ್ಬಿಣ ಗಣಿಪ್ರದೇಶಗಳಲ್ಲಿ ಈ ರಾಜ್ಯದ ಹಿಬ್ಬಿಂಗ್ ಬಳಿಯ ಗಣಿ ಪ್ರದೇಶವೂ ಒಂದು.

ಕೈಗಾರಿಕೆಗಳು: ಹಿಟ್ಟಿನ ಗಿರಣಿ ಇಲ್ಲಿಯ ಮುಖ್ಯ ಕೈಗಾರಿಕೆ. ಸೇಂಟ್‌ಪಾಲ್ ಮಾಂಸದ ತಯಾರಿಕೆಗೆ ಪ್ರಸಿದ್ಧಿಯಾಗಿದೆ. ಬೆಣ್ಣೆ, ಹಾಲು, ಹಾಲಿನಪುಡಿ ಮತ್ತು ಗಿಣ್ಣು ಹೇರಳವಾಗಿ ಉತ್ಪಾದಿಸುತ್ತಾರೆ. ಮುದ್ರಣ, ಬಣ್ಣದ ತಯಾರಿಕೆ ಇತರ ಮುಖ್ಯ ಕೈಗಾರಿಕೆಗಳು. 1982ರಲ್ಲಿ ವಿವಿಧ ಕಾರ್ಖಾನೆಗಳಲ್ಲಿ 3,59,600 ಮಂದಿ ಕಾರ್ಮಿಕರಿದ್ದು ಕೈಗಾರಿಕಾ ಸಿದ್ಧವಸ್ತುಗಳ ಬೆಲೆ 14,305 ಮಿಲಿಯನ್ ಡಾಲರುಗಳಾಗಿದ್ದುವು. ಮಿನಿಸೋಟದ ಒಟ್ಟು ವಿಸ್ತೀರ್ಣದಲ್ಲಿ 40ಭಾಗ ಕಾಡಿನಿಂದ ಕೂಡಿದ್ದು ಈ ರಾಜ್ಯ ಅರಣ್ಯೋತ್ಪನ್ನಗಳ ಕೈಗಾರಿಕೆಗಳಿಗೆ ಪ್ರಾಮುಖ್ಯ ಪಡೆದಿದೆ. ವ್ಯವಸಾಯದ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ 2ನೆಯ ಸ್ಥಾನ ಪಡೆದಿದೆ.

ಸಂಪರ್ಕ ಸಾಧನಗಳು: ಮಿನಿಸೋಟ ಅನೇಕ ನದಿ ಮತ್ತು ಸರೋವರಗಳಿಂದ ಕೂಡಿದ್ದು ಜಲಮಾರ್ಗದ ಅನುಕೂಲ ಪಡೆದಿದೆ. ಡಲೂತ್ ಮತ್ತು ಸುಪೀರಿಯರ್ ಇಲ್ಲಿಯ ಮುಖ್ಯ ಬಂದರುಗಳಾಗಿದ್ದು ಇವುಗಳ ಮುಖಾಂತರ ಕಬ್ಬಿಣದ ಅದಿರು ಮತ್ತು ಇತರ ವಸ್ತುಗಳ ಸಾಗಾಣಿಕೆಗೆ ಅನುಕೂಲಗಳಿವೆ. ಆಗ್ನೇಯಕ್ಕೆ ಸೇಂಟ್‌ಪಾಲ್ ಮತ್ತು ಮಿನಿಪೋಲಿಸ್, ಈಶಾನ್ಯಕ್ಕೆ ಡಲೂತ್‌ನಲ್ಲಿ ಅನೇಕ ರೈಲು ಮಾರ್ಗಗಳಿವೆ. ಮಿನಿಸೋಟ ಅನೇಕ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕ ಪಡೆದಿದೆ. ಈ ರಾಜ್ಯದ ಪ್ರಮುಖ ಪಟ್ಟಣಗಳಾದ ಮಿನಿಪೋಲಿಸ್, ಡಲೂತ್, ಸೇಂಟ್ ಪಾಲ್ ಮತ್ತು ರೊಚೆಸ್ಟರ್‌ಗಳಿಗೆ ವಾಯುಮಾರ್ಗಗಳಿವೆ.

ಮಿನಿಸೋಟ ವಿಶ್ವವಿದ್ಯಾಲಯ ಈ ರಾಜ್ಯದ ಪ್ರಮುಖ ಉನ್ನತ ವಿದ್ಯಾಸಂಸ್ಥೆ. ಇದು 1851 ರಲ್ಲಿ ಮಿನಿಪೋಲಿಸ್‌ನಲ್ಲಿ ಸ್ಥಾಪಿತವಾಯಿತು. ಈ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ, ಕಲೆ, ಸಾಹಿತ್ಯ, ನ್ಯಾಯ, ಕೃಷಿವಿಜ್ಞಾನ, ಲಲಿತಕಲೆ – ಇವುಗಳ ವಿಷಯದಲ್ಲಿ ಬೋಧನೆ ಮತ್ತು ಸಂಶೋಧನೆಗೆ ಅವಕಾಶವಿದೆ. 1983ರಲ್ಲಿ 1504 ಸಾರ್ವಜನಿಕ ಶಾಲೆಗಳೂ 603 ಖಾಸಗಿ ಶಾಲೆಗಳೂ 7 ರಾಜ್ಯ ವಿಶ್ವವಿದ್ಯಾಲಯಗಳೂ ಇದ್ದವು.

ಮಿನಿಸೋಟದಲ್ಲಿ ಹಲವಾರು ಸರೋವರಗಳೂ ಅನೇಕ ಪ್ರೇಕ್ಷಣೀಯ ಸ್ಥಳಗಳೂ ಇವೆ. ಮಿನಿಸೋಟ ಆರೋಹೆಡ್ ಮುಖ್ಯ ಪ್ರೇಕ್ಷಣೀಯ ಸ್ಥಳ. ಮಿನೆಹಹ ಮತ್ತು ಸೇಂಟ್ ಆಂತೋನಿ ಇಲ್ಲಿಯ ಮುಖ್ಯ ಜಲಪಾತಗಳು. ಇಟಾಸ್ಕ, ಲೆಂಡ್ಬಗ್, ಪೋರ್ಟ್‌ರಿಡ್ಜ್ ಇಲ್ಲಿಯ ಮುಖ್ಯ ರಾಷ್ಟ್ರೀಯ ಉದ್ಯಾನಗಳು.

ಆಡಳಿತ: 1858ರಲ್ಲಿ ಅಂಗೀಕರಿಸಿದ ಸಂವಿಧಾನದ ಮೇಲೆ ಈಗಿನ ಮಿನಿಸೋಟ ಆಡಳಿತ ವ್ಯವಸ್ಥೆಯಿದೆ. ಈ ರಾಜ್ಯವನ್ನು 67 ವಿಭಾಗಗಳಾಗಿ ವಿಂಗಡಿಸಿ ಪ್ರತಿಯೊಂದರಿಂದ ಒಬ್ಬೊಬ್ಬ ಸೆನೆಟರನ್ನು ಆರಿಸಲಾಗುತ್ತದೆ. ರಾಜ್ಯ ವಿಧಾನಸಭೆ 4 ವರ್ಷಗಳ ಅಧಿಕಾರಾವಧಿಯ 67 ಮಂದಿ ಸೆನೆಟರಿಂದ ಮತ್ತು 2 ವರ್ಷಗಳ ಅಧಿಕಾರಾವಧಿಯ 134 ಮಂದಿ ಪ್ರಜಾಪ್ರತಿನಿಧಿಗಳಿಂದ ಕೂಡಿದೆ. ರಾಜ್ಯದ ಮುಖ್ಯ ಕಾರ್ಯಾಂಗದ ಅಧಿಕಾರಗಳೆಂದರೆ ಗೌರ್ನರ್, ಲೆಫ್ಟಿನೆಂಟ್ ಗೌರ್ನರ್, ಕಾರ್ಯದರ್ಶಿ, ಖಜಾಂಚಿ ಹಾಗೂ ಅಟಾರ್ನಿ ಜನರಲ್. ರಿಪಬ್ಲಿಕನ್, ಡೆಮೊಕ್ರಾಟಿಕ್ ಮತ್ತು ರೈತ ಕಾರ್ಮಿಕ ಪಕ್ಷಗಳು ಇಲ್ಲಿಯ ಮುಖ್ಯ ರಾಜಕೀಯ ಪಕ್ಷಗಳು. ಮಿನಿಸೋಟದ ನ್ಯಾಯಾಂಗ ಶ್ರೇಷ್ಠ ನ್ಯಾಯಾಲಯ ಮತ್ತು ಜಿಲ್ಲಾ, ಪ್ರೊಬೇಟ್ ಮತ್ತು ಪುರಸಭಾ ನ್ಯಾಯಾಲಯಗಳಿಂದ ಕೂಡಿದೆ.

ಇತಿಹಾಸ: ಸಿಯೋಕ್ಸ್ ಇಂಡಿಯನ್ಸ್ ಉತ್ತರ ಮತ್ತು ಈಶಾನ್ಯದಲ್ಲಿ ವಾಸಿಸುವ ಪ್ರಮುಖ ಜನಾಂಗ. ಫ್ರಾನ್ಸ್, ಇಂಗ್ಲೆಂಡ್, ಸ್ಕಾಟಿಷ್, ಸ್ವಿಟ್ಜರ್ಲೆಂಡ್ ಮತ್ತು ಫ್ರೆಂಚ್ ಕೆನಡಿಯನ್ನರು ಮಿನಿಸೋಟಕ್ಕೆ ವಲಸೆ ಬಂದವರು. ಫ್ರಾನ್ಸ್ ಪ್ರಭುತ್ವ ಸು. 1 ಶತಮಾನದ ತನಕವೂ ಇದ್ದು 1763ರಲ್ಲಿ ಕೊನೆಗೊಂಡಿತು. ಅನಂತರ ಆಂಗ್ಲರ ಪ್ರಭುತ್ವ ಶುರುವಾಯಿತು. 1783ರಲ್ಲಿ ಆಂಗ್ಲರಿಂದ ಈ ರಾಜ್ಯ ಅಮೆರಿಕ ಸಂಯುಕ್ತ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತು. 1858 ಮೇ 11ರಂದು 32ನೆಯ ರಾಜ್ಯವಾಗಿ ಮಿನಿಸೋಟ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಸೇರಿಹೋಯಿತು. (ಎಂ.ಎ.ಎಚ್.)

**ಮಿನ್‌ಸ್ಕ್:** ಬೆಲಾರಸ್‌ನ ರಾಜಧಾನಿ. ಬೈಲೋರಷ್ಯ ಹಾಗೂ ಅದರ ಆಡಳಿತ ಕೇಂದ್ರ ನಗರ. ಸ್ವಿಸ್‌ಲಾಚ್‌ನದಿ ತೀರದಲ್ಲಿರುವ ಈ ನಗರ ಮಾಸ್ಕೊ ನಗರದ ಪಶ್ಚಿಮಕ್ಕೆ 756 ಕಿಮೀ ದೂರದಲ್ಲಿದೆ. ಜನಸಂಖ್ಯೆ 17,80,000 (2006).

ಕೈಗಾರಿಕಾ ಕೇಂದ್ರವಾದ ಈ ನಗರದಲ್ಲಿ ರೇಡಿಯೊ, ಟ್ರಕ್ ಮತ್ತು ಟ್ರ್ಯಾಕ್ಟರ್‌ಗಳನ್ನೂ ವಿವಿಧ ಯಂತ್ರೋಪಕರಣಗಳನ್ನೂ ತಯಾರಿಸುವ ಕಾರ್ಖಾನೆಗಳಿವೆ. ಮರಗೆಲಸಕ್ಕೆ ಸಂಬಂಧಿಸಿದ ಅನೇಕ ಉದ್ಯಮಗಳಿವೆ. ಮಾಸ್ಕೊ–ವಾರ್ಸಾ (ಪೋಲೆಂಡ್) ರೈಲು ಮಾರ್ಗದ ಒಂದು ಮುಖ್ಯ ನಿಲ್ದಾಣ. ಇಲ್ಲಿ ಇತರ ಸಂಪರ್ಕ ಸಾಧನಗಳಿವೆ. ಬೈಲೊರಷ್ಯನ್ ರಾಜ್ಯ ವಿಶ್ವವಿದ್ಯಾಲಯ, ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳು, ವಿಜ್ಞಾನ ಅಕಾಡೆಮಿ, ರಾಜ್ಯ ವಸ್ತು ಸಂಗ್ರಹಾಲಯ ಮತ್ತು ಆಧುನಿಕವಾಗಿ ಸಜ್ಜಾದ ಬೃಹತ್ ರಂಗಮಂದಿರ ಮೊದಲಾದವುಗಳು ಇಲ್ಲಿವೆ. ಎರಡನೆಯ ಮಹಾಯುದ್ಧ ಕಾಲದಲ್ಲಿ ಹೆಚ್ಚು ನಷ್ಟಕ್ಕೊಳಗಾಗಿದ್ದು ಈಗ ಆಧುನಿಕ ಕಟ್ಟಡಗಳಿಂದ ಕೂಡಿದ ಒಂದು ಪ್ರಮುಖ ನಗರವೆನಿಸಿದೆ. (ಡಿ.ಎಸ್.ಜೆ.)

**ಮಿಯಾಮಿ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಫ್ಲಾರಿಡ ರಾಜ್ಯದ ಒಂದು ಪ್ರಸಿದ್ಧ ವಿಹಾರ ಕೇಂದ್ರ. ರಾಜ್ಯದ ಆಗ್ನೇಯ ಭಾಗದಲ್ಲಿ ಬಿಸ್ಕೆನಿ ಕೊಲ್ಲಿಯಲ್ಲಿರುವ ಬಂದರು ನಗರ ಹಾಗೂ ಡೇಡ್ ಕೌಂಟಿಯ ಆಡಳಿತ ಕೇಂದ್ರ. 52 ಚ.ಕಿಮೀ ಒಳ ಜಲಪ್ರದೇಶವೂ ಸೇರಿ ಒಟ್ಟು ವಿಸ್ತೀರ್ಣ 140 ಚ.ಕಿಮೀ. ಜನಸಂಖ್ಯೆ 3,91,355 (2006).

ಸುಂದರ ಕಡಲತೀರ

ಮಿಯಾಮಿಯ ಆರ್ಥಿಕ ಜೀವನಾಡಿ ಇಲ್ಲಿನ ಪ್ರವಾಸೋದ್ಯಮ. ಇಲ್ಲಿಯ ಸುಂದರ ಸಮುದ್ರ ತಾಣಗಳು, ಏಕಾಂತಕ್ಕೆ ಇರುವ ಅನುಕೂಲಕರ ಸನ್ನಿವೇಶಗಳು ಹಾಗೂ ಪ್ರವಾಸಿಗಳ ಸೌಲಭ್ಯಗಳು ದೇಶವಿದೇಶಗಳಿಂದ ಲಕ್ಷಾಂತರ ಪ್ರವಾಸಿಗಳನ್ನು ಇಲ್ಲಿಗೆ ಆಕರ್ಷಿಸುತ್ತವೆ. ನಗರ ಉಷ್ಣತೆ ಬೇಸಗೆಯಲ್ಲಿ $28^0$ ಸೆ ಇದ್ದರೆ ಚಳಿಗಾಲದಲ್ಲಿ $19^0$ ಸೆ ಇರುತ್ತದೆ. ಪ್ರವಾಸಿಗಳಿಗಾಗಿ ವಿಶೇಷ ವಸತಿ ಸೌಕರ್ಯಗಳು ಮತ್ತು ಮನರಂಜನ ಕೇಂದ್ರಗಳಿವೆ. ಪ್ರವಾಸೋದ್ಯಮಕ್ಕೆ ಪೂರಕವಾಗಿ ಮೂರು ಸಾವಿರಕ್ಕೂ ಹೆಚ್ಚು ಉದ್ಯಮಗಳು ಹುಟ್ಟಿಕೊಂಡಿವೆ. ಬಟ್ಟೆಗಳ ಉತ್ಪನ್ನದಲ್ಲಿ ನ್ಯೂಯಾರ್ಕ್ ನಗರ ಬಿಟ್ಟರೆ ಇದು ಎರಡನೆಯದು. ಪೀಠೋಪಕರಣಗಳು, ಮುದ್ರಣ ಸಾಮಗ್ರಿಗಳು ಮತ್ತು ಸಾಗಣೆ ಸಲಕರಣೆಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಲಾಗುತ್ತದೆ. ಇಲ್ಲಿ ದೊಡ್ಡ ರೈಲು ನಿಲ್ದಾಣವಿದೆ. ಇಲ್ಲಿಯ ಅಂತಾರಾಷ್ಟ್ರೀಯ ವಿಮಾನನಿಲ್ದಾಣ ಅಮೆರಿಕದ ಬೃಹತ್ ನಿಲ್ದಾಣಗಳಲ್ಲೊಂದು. 90ಕ್ಕೂ ಹೆಚ್ಚು ವಿಮಾನಯಾನ ಸಂಸ್ಥೆಗಳು ಈ ನಿಲ್ದಾಣವನ್ನು ಉಪಯೋಗಿಸಿಕೊಳ್ಳುತ್ತವೆ. ಮಿಯಾಮಿ ಬಂದರಿಗೆ ವಿವಿಧ ದೇಶಗಳಿಂದ ಸರಕುಸಾಗಣೆಯ ಮತ್ತು ಪ್ರಯಾಣಿಕರ ಹಡಗುಗಳು ಬರುತ್ತವೆ.

ಶಿಕ್ಷಣ ಮತ್ತು ಜನಜೀವನ: ಮಿಯಾಮಿ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚಿನವರು ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂಜಾತರು. ಸು. 1/3 ಭಾಗ ಜನರು ಕ್ಯೂಬನರು. ಇವರು 1960ರ ದಶಕದಲ್ಲಿ ಕ್ಯೂಬ ಕಮ್ಯೂನಿಸ್ಟ್ ಆಡಳಿತಕ್ಕೆ ಒಳಪಟ್ಟಾಗ ವಲಸೆ ಬಂದವರು. ಇವರಲ್ಲದೆ ಜರ್ಮನ್, ಇಟಾಲಿಯನ್ ಮತ್ತು ರಷ್ಯ ಮೂಲದ ಜನರು ಗಣನೀಯವಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇ.25 ಭಾಗ ನೀಗ್ರೋಗಳಿದ್ದಾರೆ. ಬಾಪ್ಟಿಸ್ಟ್ ಇಲ್ಲಿಯ ದೊಡ್ಡ ಧಾರ್ಮಿಕ ಪಂಥ. ಇಲ್ಲಿ ಹಲವಾರು ಸರ್ಕಾರಿ ಮತ್ತು ಚರ್ಚ್ ಆಶ್ರಿತ ಶಾಲಾ ಕಾಲೇಜುಗಳಿವೆ. ಮಿಯಾಮಿ ವಿಶ್ವವಿದ್ಯಾಲಯ, ಸಾಗರ ಮತ್ತು ವಾತಾವರಣ ಅಧ್ಯಯನ ಸಂಸ್ಥೆ, ಸಾರ್ವಜನಿಕ ಗ್ರಂಥಾಲಯದ 18 ಶಾಖೆಗಳು; ಮನರಂಜನೆಗೆ ಅಪೆರಾ ಕಂಪನಿ ಇವೆ. ಕಲಾಮಂದಿರಗಳು ಮತ್ತು ಕಲಾವಸ್ತುಸಂಗ್ರಹಾಲಯಗಳಿವೆ. ಕ್ರಾನ್‌ಡನ್ ಪಾರ್ಕ್ ಮೃಗಧಾಮವಿದೆ. ವಿಜ್ಞಾನ ಮತ್ತು ಪ್ರಾಕೃತಿಕ ವಸ್ತುಸಂಗ್ರಹಾಲಯ ಮತ್ತು ಮತ್ಸ್ಯಾಗಾರ ಮೊದಲಾದವುಗಳಿವೆ.

ಮೆಟ್ರೊಪಾಲಿಟನ್ ಕೌಂಟಿ ಇಲ್ಲಿಯ ಆಡಳಿತ ನಡೆಸುತ್ತವೆ. ಚುನಾವಣೆ ಮೂಲಕ ಆಯ್ಕೆಯಾದ ಡೇಡ್ ಕೌಂಟಿಯ ಕಮಿಷನರ ಮಂಡಳಿ ಇದೆ. ಈ ಮಂಡಳಿ ಆಡಳಿತ 1957ರಿಂದ ಪ್ರಾರಂಭವಾದದ್ದು. ಇದು ಸಂಯುಕ್ತ ಸಂಸ್ಥಾನಗಳಲ್ಲೇ ಮೊದಲನೆಯ ಮೆಟ್ರೊಪಾಲಿಟನ್ ಸರ್ಕಾರವಾಗಿದೆ.

ಮೊದಲಿಗೆ ಇದು ರೆಡ್ ಇಂಡಿಯನ್ನರ ವಾಸಸ್ಥಳ. 1920ರ ದಶಕದಲ್ಲಿ ಇದು ದೊಡ್ಡ ನಗರವಾಗಿ ಬೆಳೆಯತೊಡಗಿತು. ಇಲ್ಲಿಯ ಸುಂದರ ಸಮುದ್ರ ತೀರ ಮತ್ತು ಹವೆ ಪ್ರವಾಸಿಗಳನ್ನು ಆಕರ್ಷಿಸಿದುವು. ದಿನನಿತ್ಯ ಸಾವಿರಾರು ಪ್ರವಾಸಿಗರು ಬರತೊಡಗಿದರು. ಪೈಪೋಟಿಯಿಂದ ವಸತಿಗೃಹಗಳು ಮತ್ತು ವಿಹಾರ ತಾಣಗಳನ್ನೂ ನಿರ್ಮಿಸಲಾಯಿತು. ನಗರ ದಿನೇದಿನೇ ಪ್ರವರ್ಧಮಾನಕ್ಕೆ ಬಂದಿತು.

ಮಿಯಾಮಿ ನಗರಕ್ಕೆ 4 ಕಿಮೀ ದೂರದಲ್ಲಿ ಪ್ರಪಂಚ ಪ್ರಸಿದ್ಧ ಮಿಯಾಮಿ ಸಮುದ್ರತೀರವಿದೆ. 16 ಕಿಮೀ ಉದ್ದ ಮತ್ತು 1.6 – 5 ಕಿಮೀ ಅಗಲವಿರುವ ಈ ಸಮುದ್ರತೀರ ಉತ್ತರ ಅಮೆರಿಕದ ಪ್ರಸಿದ್ಧ ವಿಹಾರ ಸ್ಥಳ. ಇಲ್ಲಿಗೆ ಲಕ್ಷಾಂತರ ಪ್ರವಾಸಿಗಳು ಬಂದು ಹೋಗುತ್ತಾರೆ. ಏಕಕಾಲದಲ್ಲಿ ಎರಡು ಲಕ್ಷ ಜನರಿಗೆ ಸೌಲಭ್ಯ ಕಲ್ಪಿಸುವ ವ್ಯವಸ್ಥೆ ಇಲ್ಲಿದೆ. (ಎಸ್.ಐ.ಎಚ್.)

**ಮಿಲಾನ್:** ಉತ್ತರ ಇಟಲಿಯ ಲಂಬಾರ್ಡಿ ಪ್ರಾಂತ್ಯದ ರಾಜಧಾನಿ. ಇಟಲಿಯ ಐತಿಹಾಸಿಕ ಬೃಹತ್ ನಗರಗಳ ಪೈಕಿ ಎರಡನೆಯದು ಮತ್ತು ಆರ್ಥಿಕೋದ್ಯಮ ಕೇಂದ್ರ. ಸ್ಥಳೀಯವಾಗಿ ಮಿಲಾನೊ ಎಂದು ಕರೆಯುತ್ತಾರೆ. ಅಡ್ಡಾ ಮತ್ತು ಟೆಸಿನೊ ನದಿಗಳ ನಡುವಿನ ಪೋ ಬಯಲಿನ ಮಧ್ಯದಲ್ಲಿ ಉ.ಅ. $45^0 28'$–ಪೂ.ರೇ. $9^0 2'$ ನಲ್ಲಿದೆ. ವಿಸ್ತೀರ್ಣ 182 ಚ.ಕಿಮೀ. ಜನಸಂಖ್ಯೆ 1308735 (2001).

ಇದು ಪ್ರಪಂಚದ ಪ್ರಾಚೀನ ನಗರಗಳಲ್ಲೊಂದು. ಇಟಲಿ ಮತ್ತು ಯುರೋಪಿನ ದೇಶಗಳ ಮಧ್ಯಮಮಾರ್ಗದಲ್ಲಿರುವ ಈ ನಗರ ಒಂದನೆಯ ಶತಮಾನಕ್ಕೂ ಹಿಂದೆಯೇ ಮುಖ್ಯ ವ್ಯಾಪಾರ ಕೇಂದ್ರವಾಗಿತ್ತು. ಈ ನಗರ ಆಧುನಿಕವಾಗಿ ಈಗ ಬೆಳೆದಿದೆ. ಅನೇಕ ಪ್ರಾಚೀನ ಸುಂದರ ಕಟ್ಟಡಗಳನ್ನು ಒಳಗೊಂಡಿದೆ. ಇಲ್ಲಿಯ ಗಾಥಿಕ್ ಕತೀಡ್ರಲ್ ಮಧ್ಯಯುಗದ ಯುರೋಪಿನ ಮೂರನೆಯ ಬೃಹತ್ ಚರ್ಚು. ಒಂದನೆಯ ನೆಪೋಲಿಯನ್ನನ ಆಜ್ಞೆಯಂತೆ 1805–13ರ ಅವಧಿಯಲ್ಲಿ ಇದನ್ನು ಪೂರ್ಣಗೊಳಿಸಲಾಯಿತು. ಇದು 149 ಮೀ ಉದ್ದ ಮತ್ತು 55 ಮೀ ಅಗಲವಿದೆ. ಇದರ ಗೋಪುರ 108 ಮೀ ಎತ್ತರವಿದೆ. ಇದರಲ್ಲಿ 3,000 ವಿಗ್ರಹಗಳೂ 52 ಕಂಬಗಳೂ ಇವೆ. ಬ್ರೆರಾ ಪ್ಯಾಲೇಸ್ (1615) ಹಳೆಯ ದೊಡ್ಡ ಗ್ರಂಥಾಲಯ. 18ನೆಯ ಶತಮಾನದಲ್ಲಿ ನಿರ್ಮಾಣವಾದ ಲಾಸ್ಕಾಲ ಯುರೋಪಿನ ಪ್ರಸಿದ್ಧ ಕಲಾಮಂದಿರ. ಪ್ರಪಂಚದಾದ್ಯಂತ ಬರುವ ಪ್ರವಾಸಿಗಳು ಇಲ್ಲಿ ಸಂಗೀತ ಕಚೇರಿಗಳಿಗೆ ಭೇಟಿ ನೀಡುತ್ತಾರೆ. ಇಲ್ಲಿಯ ಅಂಬ್ರೊಸಿಯನ್ ಗ್ರಂಥಾಲಯದಲ್ಲಿ ಪ್ರಾಚೀನ ಹಸ್ತಪ್ರತಿಗಳು ಮತ್ತು ವಿರಳಗ್ರಂಥಗಳು ಇವೆ. ಬ್ರೆರಾ ವಸ್ತುಸಂಗ್ರಹಾಲಯದಲ್ಲಿ ಇಟಲಿಯ ಚಿತ್ರಕಲೆಯ ಉತ್ತಮ ಮಾದರಿಗಳನ್ನು ಇಡಲಾಗಿದೆ. ಪೆಲ್ದಿ ಪೋಜೋಲಿ ವಸ್ತು ಸಂಗ್ರಹಾಲಯದಲ್ಲಿ ಆಧುನಿಕ ಕಲಾ ಸಂಗ್ರಹವಿದೆ. ಇಲ್ಲಿಯ ಸ್ಫೋರ್ಜ ಕ್ಯಾಸಲ್ ಮಿಲಾನಿನ ದೊರೆಗಳ ಅರಮನೆಯಾಗಿತ್ತು. ಸಂತಮೇರಿ ಚರ್ಚ್‌ನಲ್ಲಿ ಗೋಡೆಯ ಮೇಲೆ ಲಿಯೊನಾರ್ಡೊ ಡ ವಿಂಚಿ ಚಿತ್ರಿಸಿದ ಲಾಸ್ಟ್ ಸಪ್ಪರ್ ಎಂಬ ಇತಿಹಾಸ ಪ್ರಸಿದ್ಧ ಚಿತ್ರವಿದೆ. ರಾಜ್ಯಪತ್ರಾಗಾರ ಮಿಲಾನಿನಲ್ಲಿದೆ.

ಇಟಲಿಯ ಏಕೀಕರಣದ ತರುವಾಯ ಮಿಲಾನ್ ಕೈಗಾರಿಕಾ ನಗರವಾಗಿ ಬೆಳೆಯಿತು. ಇಟಲಿಯಾದ್ಯಂತ ಇರುವ ಅನೇಕ ಉದ್ಯಮ ಮತ್ತು ವ್ಯಾಪಾರ ಸಂಸ್ಥೆಗಳಿಗೆ ಇದು ಕೇಂದ್ರವಾಯಿತು. ಇಲ್ಲಿ ರಾಸಾಯನಿಕ ವಸ್ತುಗಳು, ವಿದ್ಯುತ್ ಉಪಕರಣಗಳು, ಕೃತಕ ಮತ್ತು ಹತ್ತಿಬಟ್ಟೆಗಳು, ಬಣ್ಣ, ಸೋಪು ಸಾಗಣೆ ಸಲಕರಣೆ ಇತ್ಯಾದಿಗಳ ಉತ್ಪಾದನೆಯಿದೆ. ಕ್ರೀಡಾ ಕೇಂದ್ರ ಮತ್ತು ಫುಟ್‌ಬಾಲ್ ಕ್ರೀಡಾಂಗಣವಿದೆ. ರಾಷ್ಟ್ರದ ಮುಖ್ಯ ಹೆದ್ದಾರಿಗಳೂ ಇಟಲಿಯ 26 ರೈಲು ಮಾರ್ಗಗಳು ಕೂಡುವ ಮುಖ್ಯ ನಿಲ್ದಾಣವೂ ಬೃಹತ್ ವಿಮಾನ ನಿಲ್ದಾಣವೂ ಇಲ್ಲಿವೆ.

ಮಿಲಾನಿಯನ್ನರು ಮಹತ್ವಾಕಾಂಕ್ಷಿಗಳೆಂದೂ ವ್ಯಾಪಾರ ವ್ಯವಹಾರದಲ್ಲಿ ಚತುರರೆಂದೂ ಪ್ರಸಿದ್ಧರಾಗಿದ್ದಾರೆ. ಹೆಚ್ಚುಮಂದಿ ರೋಮನ್ ಕೆಥೊಲಿಕ್ ಪಂಥದವರು. ಇಲ್ಲಿಯ ಜನ ರಸಿಕರೂ ಕಲಾರಾಧಕರೂ ನಾಟಕಪ್ರಿಯರೂ ಆಗಿದ್ದಾರೆ.

ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಕೆಲ್ಟರು ಇಲ್ಲೊಂದು ಪಟ್ಟಣ ಸ್ಥಾಪಿಸಿದರು. ಪ್ರ.ಶ.ಪೂ. 222ರಲ್ಲಿ ರೋಮನ್ನರು ಇದನ್ನು ವಶಪಡಿಸಿಕೊಂಡು ಮೆಡಿಯೊಲಾನಮ್ ಎಂದು ಕರೆದರು. ಇದೇ ಮುಂದೆ ಮಿಲಾನೊ ಅಥವಾ ಮಿಲಾನ್ ಎಂದು ಪ್ರಸಿದ್ಧವಾಯಿತು. 13ರಿಂದ 15ನೆಯ ಶತಮಾನದ ಅವಧಿಯಲ್ಲಿ ಇಲ್ಲಿಗೆ ಅನೇಕ ಕಲಾವಿದರು ಬಂದು ನೆಲಸಿದರು. ಅವರಿಗೆ ಈ ನಗರದ ಶ್ರೀಮಂತರ ಉದಾರ ಪ್ರೋತ್ಸಾಹ ಸಿಕ್ಕಿತು. ಉತ್ಕೃಷ್ಟ ಕಲಾಕೃತಿಗಳ ಮತ್ತು ಶಿಲ್ಪಗಳ ರಚನೆಯಾಯಿತು. ಮುಂದೆ ಈ ನಗರ ಸ್ಪೇನ್ (1535), ಆಸ್ಟ್ರಿಯ (1714) ಮತ್ತು ಫ್ರಾನ್ಸ್‌ಗಳ (1797) ವಶವಾಗಿತ್ತು. 1859ರಲ್ಲಿ ಮಿಲಾನ್ ಹೊಸದಾಗಿ ಸ್ಥಾಪಿಸಲಾದ ಏಕೀಕೃತ ಇಟಲಿಯ ಭಾಗವಾಗಿ ಪ್ರಮುಖ ಕೈಗಾರಿಕಾ ನಗರವಾಗಿ ಬೆಳೆಯಿತು. ಇಟಲಿಯ ಸರ್ವಾಧಿಕಾರಿಯಾಗಿದ್ದ ಮುಸೋಲಿನಿ ತನ್ನ ಫ್ಯಾಸಿಸ್ಟ್ ಚಳವಳಿಯನ್ನು ಮೊದಲಿಗೆ ಮಿಲಾನ್‌ನಲ್ಲಿ ಸ್ಥಾಪಿಸಿದ. ಎರಡನೆಯ ಮಹಾಯುದ್ಧದ ಅನಂತರ ಮಿಲಾನ್ ನಗರ ತ್ವರಿತವಾಗಿ ಬೆಳೆಯಿತು. (ಡಿ.ಎಸ್.ಜೆ.)

**ಮಿಲಿಯನ್ ನಗರಗಳು:** ಹತ್ತು ಲಕ್ಷದ ಜನಸಂಖ್ಯೆಯನ್ನು ಮೀರಿದ ನಗರಗಳನ್ನು ಸಾಮಾನ್ಯವಾಗಿ ಮಿಲಿಯನ್ ನಗರಗಳೆಂದು ಕರೆಯುತ್ತಾರೆ. ಪ್ರಪಂಚದಲ್ಲೇ 1850 ರಲ್ಲಿ ಲಂಡನ್ ಮತ್ತು ಪ್ಯಾರಿಸ್ ಎರಡೇ ಮಿಲಿಯನ್ ನಗರಗಳು ಕಂಡುಬಂದರೆ 1900ರ

ವೇಳೆಗೆ ಅವುಗಳ ಸಂಖ್ಯೆ 11ಕ್ಕೆ ಏರಿತು. ಮೇಲಿನ ನಗರಗಳ ಜೊತೆಗೆ ಬರ್ಲಿನ್ ವಿಯೆನ್ನ, ಮಾಸ್ಕೋ, ಫಿಲಿಡೆಲ್ಫಿಯ, ಸೈಂಟ್ ಪೀಟರ್ಸ್ ಬರ್ಗ್, ನ್ಯೂಯಾರ್ಕ್, ಶಿಕಾಗೊ, ಟೋಕಿಯೊ ಮತ್ತು ಕೋಲ್ಕತ ನಗರಗಳು ಈ ಮಿಲಿಯನ್ ನಗರಗಳ ಪಟ್ಟಿಗೆ ಸೇರಿದವು. ಇವುಗಳ ಸಂಖ್ಯೆ 1920 ರಲ್ಲಿ 20ಕ್ಕೆ, 1940 ರಲ್ಲಿ 50ಕ್ಕೆ, 1960 ರಲ್ಲಿ 80ಕ್ಕೆ 1980ರಲ್ಲಿ 197ಕ್ಕೆ ಅಧಿಕಗೊಂಡಿತು. 1990 ರಲ್ಲಿ 280 ಹಾಗೂ 2001 ರಲ್ಲಿ ಇವುಗಳ ಸಂಖ್ಯೆ 368 ಕ್ಕೆ ಏರಿತು. ಅಂದರೆ ದಶಕದಿಂದ ದಶಕಕ್ಕೆ ಜನಸಂಖ್ಯಾ ಬೆಳವಣಿಗೆಯು ನಗರಗಳಲ್ಲಿ ಅಧಿಕಗೊಳ್ಳುತ್ತಾ ಹೋಗಿದೆ.

ಪ್ರಸ್ತುತ ಭಾರತದಲ್ಲಿ ಸು. 36 ಮಿಲಿಯನ್ ನಗರಗಳು ಕಂಡುಬರುತ್ತವೆ (2001). ಅವು ಈ ಕೆಳಗಿನಂತಿವೆ:

ಭಾರತದ ಮಿಲಿಯನ್ ಜನಸಂಖ್ಯೆ ನಗರಗಳು

| | ನಗರ | ಜನಸಂಖ್ಯೆ (ಮಿಲಿಯನ್) |
|---|---|---|
| 1. | ಗ್ರೇಟರ್ ಮುಂಬಯಿ | 163 |
| 2. | ಕೋಲ್ಕತ | 132.0 |
| 3. | ದೆಹಲಿ | 127.9 |
| 4. | ಚೆನ್ನೈ | 64.0 |
| 5. | ಬೆಂಗಳೂರು | 56.0 |
| 6. | ಹೈದರಾಬಾದ್ | 55.0 |
| 7. | ಅಹಮದಬಾದ್ | 45.0 |
| 8. | ಪುಣೆ | 37.0 |
| 9. | ಸೂರತ್ | 28.0 |
| 10. | ಕಾನ್ಪುರ | 26.9 |
| 11. | ಜೈಪುರ | 23.2 |
| 12. | ಲಖನೌ | 22.6 |
| 13. | ನಾಗಪುರ | 21.2 |
| 14. | ಪಾಟ್ನ (ಪಟಣ) | 17.0 |
| 15. | ಇಂದೋರ್ | 16.3 |
| 16. | ವಡೋಧರ | 14.9 |
| 17. | ಭೂಪಾಲ್ | 14.5 |
| 18. | ಕೊಯಮತ್ತೂರು | 14.4 |
| 19. | ಲೂದಿಯಾನ | 13.9 |
| 20. | ಕೊಚ್ಚಿ | 13.5 |
| 21. | ವಿಶಾಖ ಪಟ್ಟಣ | 13.2 |
| 22. | ಆಗ್ರ | 13.2 |
| 23. | ವಾರಾಣಸಿ | 12.1 |
| 24. | ಮದುರೈ | 11.9 |
| 25. | ಮೀರತ್ | 11.6 |
| 26. | ಸಂಬಲ್ ಪುರ | 11.1 |
| 27. | ಜೆಂಷೆಡ್ಪುರ | 11.0 |
| 28. | ಅಸಾನ್ ಸೋಲ್ | 10.9 |
| 29. | ಧನಬಾದ್ | 10.6 |
| 30. | ಫರಿದಾಬಾದ್ | 10.5 |
| 31. | ಅಬಂದಾಬಾದ್ | 10.4 |
| 32. | ಅಮೃತ್‌ಸರ | 10.1 |
| 33. | ವಿಜಯವಾಡ | 10.1 |
| 34. | ರಾಜಕೋಟ್ | 10.0 |

(ಎಂ.ಡಿ.)

**ಮಿಲೆಟಸ್‌ನ ಥೇಲ್ಸ್:** ಸು. 7ನೆಯ ಶತಮಾನದ ಗ್ರೀಕ್ ತತ್ತ್ವಜ್ಞಾನಿ ಮತ್ತು ಪ್ರವಾಸಕಾರ. ರೇಖಾಗಣಿತಕ್ಕೆ ಸಂಬಂಧಿಸಿದ ಮೂಲ ಸಿದ್ಧಾಂತಗಳನ್ನು ಕಂಡುಹಿಡಿದವನು. ಈಜಿಪ್ಟ್‌ಗೆ ಪ್ರವಾಸ ಕೈಗೊಂಡಾಗ ಅಲ್ಲಲ್ಲಿ ಸ್ಥಳದ ಕೋನ, ಆಧಾರ ರೇಖೆ ಮತ್ತು ಸ್ಥಳದ ಲೆಕ್ಕಾಚಾರ ಮಾಡಿದ್ದ. ಇವನು ಈಜಿಪ್ಟಿನ ಮಾರ್ ರವರ ಪ್ರಭಾವಕ್ಕೆ ಒಳಗಾಗಿದ್ದು ರೇಖಾಗಣಿತ ಮತ್ತು ತ್ರಿಕೋನ ಸಮಿತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿದುಕೊಂಡಿದ್ದ. (ವೈ.ಪಿ.ಸಿ.)

**ಮಿಶ್ರ ಬೇಸಾಯ:** ಕೃಷಿ ಬೆಳೆಗಳ ಬೇಸಾಯ ಮತ್ತು ಪಶುಪಾಲನೆಯ ಜೊತೆ ಜೊತೆಯಾಗಿ ಸಾಗುವ ಬೇಸಾಯಗಳ ವಿಧಾನ. ಸಾಗುವಳಿ ಭೂಮಿಯನ್ನು ಕೃಷಿ ಬೆಳೆಗಳನ್ನು ಬೆಳೆಯುವುದಕ್ಕೆ ಮಾತ್ರವಲ್ಲದೆ ಜಾನುವಾರುಗಳ ಸಾಕಣೆ, ಕೋಳಿ ಸಾಕಣೆ, ರೇಷ್ಮೆ ಕೃಷಿ, ಜೇನು ಸಾಕಣೆ ಮೊದಲಾದ ಉದ್ದೇಶಗಳಿಗೆ ಸಂಯುಕ್ತವಾಗಿ ಬಳಕೆ ಮಾಡುವ ಬೇಸಾಯ ಪದ್ಧತಿಯಾಗಿದೆ. ಈ ಸಂಯುಕ್ತ ಚಟುವಟಿಕೆಗಳು ರೈತರ ಆರ್ಥಿಕತೆಯನ್ನು ಸಮತೋಲನಗೊಳಿಸುತ್ತವೆ. ಇತ್ತೀಚೆಗೆ ಈ ಕೃಷಿ ವಿಧಾನ ಪ್ರಚಲಿತವಾಗಿದೆ.

ಈ ಬೇಸಾಯ ವಾಯವ್ಯ ಯುರೋಪಿನ ಮಧ್ಯಂತರ ವ್ಯವಸಾಯ ಸಂತತಿಗೆ ಸೇರಿದೆ. ಇದು ಸಾಂದ್ರ ಬೇಸಾಯದ ಸ್ವರೂಪವನ್ನೊಳಗೊಂಡಿದೆ. ಆದರೆ ಇಂದು ವಾಣಿಜ್ಯ ಬೇಸಾಯ ಮತ್ತು ಪ್ರಾಣಿಗಳ ಸಾಕಣಿಕೆಯನ್ನೊಳಗೊಂಡ ಸ್ವರೂಪವಾಗಿ ಮಾರ್ಪಾಡಾಗಿದೆ. ಇದು ವಾಯವ್ಯ ಯುರೋಪಿನ ದೇಶಗಳು, ಅದರಲ್ಲಿಯೂ ಐರ್ಲೆಂಡಿನಿಂದ ಪೂರ್ವ ರಷ್ಯದವರೆಗೆ ಉತ್ತರ ಅಮೆರಿಕದ ಪಶ್ಚಿಮ ಅಪಲೇಷಿಯನ್ ಮತ್ತು 98° ಪೂರ್ವ ರೇಖಾಂಶದ ಪ್ರದೇಶ, ದಕ್ಷಿಣ ಆಫ್ರಿಕ, ಅರ್ಜೆಂಟೈನಾದ ಈಶಾನ್ಯಭಾಗ, ಆಸ್ಟ್ರೇಲಿಯದ ಆಗ್ನೇಯಭಾಗ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿ ಹಂಚಿಕೆಯಾಗಿದೆ. ಭಾರತದಲ್ಲಿ ಈ ಬೇಸಾಯ 1951 ರಲ್ಲಿ ಜಾರಿಗೆ ಬಂತು. ಆದರೆ ಇದರ ಪ್ರಗತಿ ತೃಪ್ತಿಕರವಾಗಿಲ್ಲ. ಈ ಬೇಸಾಯ ಪಂಜಾಬ್, ಹರಿಯಾಣ, ತಮಿಳುನಾಡು, ರಾಜಸ್ತಾನ ಮತ್ತು ಆಂಧ್ರ ಪ್ರದೇಶ ರಾಜ್ಯಗಳಲ್ಲಿ ಪ್ರಚಲಿತವಾಗಿದೆ.

ಮಿಶ್ರ ಬೇಸಾಯದಲ್ಲಿ ಭೂ ಹಿಡುವಳಿಗಳ ಗಾತ್ರ ಸಾಧಾರಣವಾಗಿರುತ್ತದೆ. ಇಂಗ್ಲೆಂಡಿನಲ್ಲಿ 10–15 ಹೆ. ಗಳಷ್ಟಿದ್ದು ಉತ್ತರ ಅಮೆರಿಕದಲ್ಲಿ 40–100 ಹೆ. ಗಳಷ್ಟಿದೆ. ಬೇಸಾಯ ಭೂಮಿಯ ಒಂದು ಭಾಗವನ್ನು ಜಾನುವಾರುಗಳ ಮೇವಿಗಾಗಿ ಬಿಡಲಾಗುವುದು. ವ್ಯವಸಾಯ ಚಟುವಟಿಕೆಯು ಸಂಪೂರ್ಣವಾಗಿ ಕುಟುಂಬದ ಸದಸ್ಯರಿಂದ ನಿರ್ವಹಿಸಲ್ಪಡುವುದು. ಬೆಳೆಗಳ ಆವರ್ತ ಪದ್ಧತಿಯನ್ನು ಅನುಸರಿಸುವುದರ ಮೂಲಕ ಬೆಳೆಗಳ ಇಳುವರಿ ಹೆಚ್ಚುವುದಲ್ಲದೆ, ಬೆಳೆಗಳನ್ನು ರೋಗಗಳಿಂದ ವಿಮುಕ್ತಗೊಳಿಸಲಾಗುವುದು ಅಲ್ಲದೆ ಮಣ್ಣಿನ ಸಾರವನ್ನು ವೃದ್ಧಿಸಲಾಗುವುದು. ಈ ಬೇಸಾಯ ಪದ್ಧತಿಗೆ ಸಾಕಷ್ಟು ಬಂಡವಾಳ ಅಗತ್ಯ. ಯಂತ್ರೋಪಕರಣಗಳ ಬಳಕೆ, ನೀರಾವರಿ ಸೌಲಭ್ಯ, ರಸಗೊಬ್ಬರ, ಸುಧಾರಿತ ತಳಿ, ಜಾನುವಾರುಗಳ ಸಾಕಣೆ ಇತ್ಯಾದಿಗಳಿಗಾಗಿ ಹೆಚ್ಚು ಹಣ ಆವಶ್ಯಕ. ಮಿಶ್ರ ಬೇಸಾಯದಲ್ಲಿ ಮೆಕ್ಕೆಜೋಳ, ಗೋದಿ, ಸೋಯಾ, ಅವರೆ, ಆಲೂಗೆಡ್ಡೆ, ಗೆಣಸು, ತರಕಾರಿಗಳು ಮತ್ತು ಹಣ್ಣುಗಳನ್ನು ಬೆಳೆಯಲಾಗುವುದು. ಪಾಶ್ಚಿಮಾತ್ಯ ದೇಶಗಳಲ್ಲಿ ಪಶುಗಳನ್ನು ಹಾಲು ಮತ್ತು ಮಾಂಸಕ್ಕೂ ಕುರಿಗಳನ್ನು ಮಾಂಸ ಹಾಗೂ ಉಣ್ಣೆಗಾಗಿಯೂ ಸಾಕುವರು. ಹೀಗೆ ಆಹಾರ ಧಾನ್ಯಗಳನ್ನು ಹಾಗೂ ಮತ್ತಿತರ ವ್ಯವಸಾಯ ಉತ್ಪನ್ನಗಳನ್ನು ಅನುಕೂಲಕರ ಮಟ್ಟದಲ್ಲಿ ಉತ್ಪಾದಿಸಿ ಮಾರುಕಟ್ಟೆಗಳಿಗೆ ಸಾಗಿಸಿ ಅವುಗಳ ಮಾರಾಟದ ಮೂಲಕ ಗರಿಷ್ಠ ಲಾಭ ಪಡೆಯುವುದು ಈ ಮಾದರಿಯ ಬೇಸಾಯದ ಮುಖ್ಯ ಉದ್ದೇಶವಾಗಿದೆ. (ಡಿ.ಆರ್.)

**ಮಿಶ್ರ, ಆರ್.ಪಿ.:** ಭಾರತದ ಹೆಸರಾಂತ ಭೂಗೋಳ ವಿಜ್ಞಾನಿ. ಭೂಗೋಳ ವಿಜ್ಞಾನ ಹಾಗೂ ಅರ್ಥಶಾಸ್ತ್ರಗಳೆರಡರಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು ಅನಂತರ ಡಾಕ್ಟೊರೇಟ್ ಪದವಿ ಪಡೆದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ವೃತ್ತಿಯನ್ನು

1964ರಲ್ಲಿ ಆರಂಭಿಸಿದರು. ಇಂದಿಗೂ ಹೆಚ್ಚು ಕ್ರಿಯಾಶೀಲರಾಗಿರುವ ಇವರು ಉತ್ತಮ ಸಂಶೋಧಕರು, ಲೇಖಕರು, ವಾಗ್ಮಿಗಳು ಆಗಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕ, ಮುಖ್ಯಸ್ಥ, ಅನಂತರ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಸ್ಥಾಪಕ ನಿರ್ದೇಶಕ. ಜಪಾನಿನ ನಗೋಯ ನಗರದ ಯುನೈಟೆಡ್ ನೇಷನ್ಸ್ ಸೆಂಟರ್ ಫಾರ್ ರೀಜನಲ್ ಡೆವಲಪ್‌ಮೆಂಟ್ಸ್‌ನಲ್ಲಿ ಉಪನಿರ್ದೇಶಕ, ಅಲಹಾಬಾದ್ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಹಲವಾರು ದೇಶಿಯ ಹಾಗೂ ವಿದೇಶಿಯ ವಿಶ್ವವಿದ್ಯಾನಿಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿರುವ ಹೆಗ್ಗಳಿಕೆ ಇವರದು. ದೆಹಲಿಯಲ್ಲಿ ಎರಡು ಸರ್ಕಾರೇತರ ಲಾಭರಹಿತ ಸಂಸ್ಥೆಗಳ ಸ್ಥಾಪನೆ– ದೆಹಲಿ ಸ್ಕೂಲ್ ಆಫ್ ನಾನ್‌ವಯಲೆನ್ಸ್ ಹಾಗೂ ಸಸ್ಟೈನಬಲ್ ಡೆವಲಪ್‌ಮೆಂಟ್ಸ್ ಫೌಂಡೇಷನ್. ದೆಹಲಿ ಸ್ಕೂಲ್ ಆಫ್

ಎಕನಾಮಿಕ್ಸ್‌ನಲ್ಲಿ ಭೂಗೋಳ ವಿಜ್ಞಾನ ವಿಭಾಗ ಹಾಗೂ ದೆಹಲಿ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಗಾಂಧಿಯನ್ ಸ್ಟಡೀಸ್ ಅಂಡ್ ಪೀಸ್ ರಿಸರ್ಚ್ ನೊಡನೆ ಸಂಶೋಧನೆಯಲ್ಲಿ ನಿರತರಾಗಿದ್ದಾರೆ.

ರೀಜನಲ್ ಪ್ಲಾನಿಂಗ್, ಫಂಡಮೆಂಟಲ್ಸ್ ಆಫ್ ಕಾರ್ಟೋಗ್ರಫಿ. ಡಿಫ್ಯೂಷನ್ ಆಫ್ ಅಗ್ರಿಕಲ್ಚರಲ್ ಇನ್ನೋವೇಷನ್ಸ್, ಮೆಡಿಕಲ್ ಜಿಯೋಗ್ರಾಫಿ – ಇವರ ಕೆಲವು ಮುಖ್ಯ ಕೃತಿಗಳು. ಪ್ರಸ್ತುತ 10 ಸಂಪುಟಗಳ ರಿ ಡಿಸ್ಕವರಿಂಗ್ ಗಾಂಧಿ ಹಾಗೂ ಎನ್‌ವಿರಾನ್‌ಮೆಂಟ್ ಎಥಿಕ್ಸ್; 3 ಸಂಪುಟಗಳ ನ್ಯಾಚುರಲ್ ಪ್ರಿನ್ಸಿಪಲ್ಸ್ ಆಫ್ ರೀಜನಲ್ ಪ್ಲಾನಿಂಗ್‌ಅಂಡ್ ಗಾಂಧಿಯನ್ ಎಕನಾಮಿಕ್ಸ್ – ಈ ಕೃತಿಗಳ ರಚನೆಗಳಲ್ಲಿ ನಿರತರಾಗಿದ್ದಾರೆ. (ಆರ್.ಎನ್.)

**ಮಿಷಿಗನ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ತರದಲ್ಲಿರುವ ಒಂದು ರಾಜ್ಯ. ಇದು ಉತ್ತರ ಅಮೆರಿಕದ ಪಂಚಮಹಾ ಸರೋವರಗಳ ಪೈಕಿ ಮೂರರ (ಸುಪೀರಿಯರ್, ಹುರಾನ್ ಮತ್ತು ಮಿಷಿಗನ್) ನಡುವೆ ಎರಡು ಪರ್ಯಾಯದ್ವೀಪಗಳ ರೂಪದಲ್ಲಿ ಹಬ್ಬಿದೆ. ಮಿಷಿಗನ್ ಸರೋವರ ಎರಡು ಪರ್ಯಾಯದ್ವೀಪಗಳ ನಡುವೆ ಇದೆ. ಈ ಎರಡೂ ಭೂಭಾಗಗಳ ನಡುವೆ ಹುರಾನ್ ಮತ್ತು ಮಿಷಿಗನ್ ಸರೋವರಗಳನ್ನು ಕೂಡಿಸುವ 6 ಕಿಮೀ ಅಗಲದ ಮ್ಯಾಕನಾಕ್ ಜಲಸಂಧಿ ಇದೆ. ವಿಸ್ಕಾನ್ಸಿನ್ ರಾಜ್ಯ, ಸುಪೀರಿಯರ್ ಸರೋವರ, ಕೆನಡದ ಆಂಟೇರಿಯೊ ಪ್ರಾಂತ್ಯ, ಹುರಾನ್ ಸರೋವರ–ಇವು ಉತ್ತರ ಪರ್ಯಾಯದ್ವೀಪದ ಮೇರೆಗಳು. ಹುರಾನ್ ಸರೋವರ, ಈರೀ ಸರೋವರ, ಒಹೈಯೊ ಮತ್ತು ಇಂಡಿಯಾನ ರಾಜ್ಯಗಳು, ಮಿಷಿಗನ್ ಸರೋವರ, ಕೆನಡದ ಕ್ವಿಬೆಕ್ ಪ್ರಾಂತ್ಯ–ಇವು ದಕ್ಷಿಣ ಪರ್ಯಾಯ ದ್ವೀಪವನ್ನು ಸುತ್ತುವರಿದಿವೆ. ರಾಜ್ಯದ ವಿಸ್ತೀರ್ಣ 1,50,779 ಚ.ಮೀ. ಜನಸಂಖ್ಯೆ 1,00,95,643 (2006). ರಾಜಧಾನಿ ಲ್ಯಾನ್‌ಸಿಂಗ್.

ಮಿಷಿಗನ್ನಿನ ಉತ್ತರ ಪರ್ಯಾಯದ್ವೀಪ ಬೆಟ್ಟಗುಡ್ಡ ಪ್ರದೇಶ. ದಕ್ಷಿಣ ಪರ್ಯಾಯದ್ವೀಪ ಲಘು ಏರಿಳಿತಗಳಿಂದ ಕೂಡಿದ ಮೈದಾನ. ಉತ್ತರದಲ್ಲಿ ಹಿಂದೆ ಒತ್ತಾದ ಮರಗಳಿದ್ದುವು. ಮರಕೊಯ್ಯುವ ಕೈಗಾರಿಕೆ ಅಲ್ಲಿ ಬೆಳೆಯಿತು. ಈಗ ಅಲ್ಲಿಯ ಕಾಡು ಬಹುತೇಕ ಬರಿದಾಗಿದೆ. ಮರ ನೆಡುವ ಕಾರ್ಯಕ್ರಮ ಜಾರಿಯಲ್ಲಿದೆ. ಪ್ರವಾಸಿಗರು ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. 1840ರ ದಶಕದಲ್ಲಿ ಅಲ್ಲಿ ಕಬ್ಬಿಣ ಮತ್ತು ತಾಮ್ರದ ಅದಿರುಗಳ ನಿಕ್ಷೇಪ ಪತ್ತೆಯಾಯಿತು. ಮಿಷಿಗನ್ ಗಿರಿಶ್ರೇಣಿಯ ಪ್ರದೇಶ ಈಗ ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ಪ್ರಮುಖಗಣಿಗಾರಿಕೆ ಕೇಂದ್ರವಾಗಿದೆ. ಅಮೆರಿಕದಲ್ಲಿ ಉತ್ಪಾದನೆಯಾಗುವ ಒಟ್ಟು ಕಬ್ಬಿಣ ಅದಿರಿನಲ್ಲಿ ಶೇ.13 ಭಾಗ ಅಲ್ಲಿಯದು. ಮೆಗ್ನೀಷಿಯಮ್ ಇಲ್ಲಿ ದೊರಕುವ ಮತ್ತೊಂದು ಪ್ರಮುಖ ಲೋಹ. ದಕ್ಷಿಣ ಪರ್ಯಾಯದ್ವೀಪದ ಮೈದಾನದಲ್ಲಿ ಮೆಕ್ಕೆಜೋಳ, ಹುಲ್ಲು, ಓಟ್ಸ್, ಗೋದಿ, ಆಲೂಗಡ್ಡೆ, ಹಣ್ಣು ಬೆಳೆಯುತ್ತವೆ. ದಕ್ಷಿಣ ಪರ್ಯಾಯದ್ವೀಪ ದೇಶದ ಪ್ರಮುಖ ಕೈಗಾರಿಕೆ ಪ್ರದೇಶವಾಗಿದೆ. ಇಲ್ಲಿರುವ ಪ್ರಮುಖಪಟ್ಟಣ ಡೆಟ್ರಾಯಿಟ್. ಇದು ಮೋಟರುವಾಹನಗಳ ಉತ್ಪಾದನೆಯ ಪ್ರಮುಖ ಕೇಂದ್ರ. ಇಲ್ಲಿ ವಿಮಾನ, ಸೇನಾ ಟ್ಯಾಂಕು, ಕೃತಕವಜ್ರ, ಔಷಧಿಗಳು, ರಾಸಾಯನಿಕ ಉಪಕರಣ ಮತ್ತು ಉಕ್ಕು ಕೈಗಾರಿಕೆಗಳೂ ಬೆಳೆದಿವೆ. ಸೇಂಟ್ ಕ್ಲೇರ್ ಮತ್ತು ಈರೀ ಸರೋವರಗಳನ್ನು ಕೂಡಿಸುವ, ಮಿಷಿಗನ್ ರಾಜ್ಯವನ್ನು ಕೆನಡದ ಆಂಟೇರಿಯೊ ಪ್ರಾಂತ್ಯದಿಂದ ಬೇರ್ಪಡಿಸುವ ಡೆಟ್ರಾಯಿಟ್ ನದಿಯ ದಂಡೆಯ ಮೇಲಿರುವ ಈ ನಗರ ಪ್ರಮುಖ ವ್ಯಾಪಾರದ ಹಾಗೂ ಭೂಜಲ ವಾಯುಮಾರ್ಗಗಳ ಕೇಂದ್ರ. ಮಿಷಿಗನ್ ರಾಜ್ಯದ ರಾಜಧಾನಿಯಾದ ಲ್ಯಾನ್ ಸಿಂಗ್‌ನ ಜನಸಂಖ್ಯೆ 1,30,000 (2000). ಇದು ಗ್ರ್ಯಾಂಡ್ ನದಿಯ ದಂಡೆಯ ಮೇಲೆ ಆ ನದಿ ಸಿಡಾರ್ ನದಿಯೊಂದಿಗೆ ಕೂಡುವ ಎಡೆಯಲ್ಲಿದೆ. ಮೋಟರು ವಾಹನ, ರಾಸಾಯನಿಕಗಳ ತಯಾರಿಕೆ ಇಲ್ಲಿಯ ಮುಖ್ಯ ಕೈಗಾರಿಕೆಗಳು.

ಬಿಳಿಯರ ಆಗಮನಕ್ಕೆ ಮುಂಚೆ ಈಗಿನ ಮಿಷಿಗನ್ ರಾಜ್ಯದ ಪ್ರದೇಶ ಅರಣ್ಯಾವೃತವಾಗಿತ್ತು. ಜಲಸಮೃದ್ಧಿಯಿಂದ ಕೂಡಿತ್ತು. ಅನೇಕ ವನ್ಯಮೃಗಗಳಿಗೆ ಆವಾಸಸ್ಥಾನವಾಗಿತ್ತು. ಅಲ್ಲಿಯ ಮೂಲ ನಿವಾಸಿಗಳಾದ ಇಂಡಿಯನ್ನರು ಇಲ್ಲಿ ಬೇಟೆಯಾಡಿ ಜೀವಿಸುತ್ತಿದ್ದರು. ಈ ಪ್ರದೇಶವನ್ನು ಮೊದಲು ಪರಿಶೋಧಿಸಿದವರು ಫ್ರೆಂಚರು. ಅವರು ಇದನ್ನು ಕೆನಡದ ಮಹಾತಪ್ಪಲು ಸಾಮ್ರಾಜ್ಯದ ಭಾಗವಾಗಿ ಮಾಡಿಕೊಂಡರು. ಅನಂತರ ಇದು ಬ್ರಿಟಿಷರಿಗೆ ಸೇರಿತು. ಅಮೆರಿಕನ್ ಸ್ವಾತಂತ್ರ್ಯ ಯುದ್ಧದ ಸಮಯದಲ್ಲಿ ಇದು ಬ್ರಿಟಿಷ್ ಸಾಮ್ರಾಜ್ಯಕ್ಕೆ ನಿಷ್ಠೆ ತೋರಿಸಿತ್ತು. 1830ರಿಂದ ಈಚೆಗೆ ಅಲ್ಲಿ ವಿಪುಲ ಜನವಸತಿಯ ಬೆಳವಣಿಗೆಯಾಯಿತು. ಇದು ಅಮೆರಿಕ ಸಂಯುಕ್ತ ಸಂಸ್ಥಾನಗಳ 26ನೆಯ ರಾಜ್ಯವಾಗಿ ಪ್ರವೇಶ ಪಡೆದದ್ದು 1937ರಲ್ಲಿ.

ಮಿಷಿಗನ್ ನಗರ : ಉತ್ತರ ಇಂಡಿಯಾನ ರಾಜ್ಯದ ಒಂದು ನಗರ. ಲಾಪೋರ್ಟೆವಿಭಾಗದಲ್ಲಿದೆ. ಮಿಷಿಗನ್ ಸರೋವರದ ದಕ್ಷಿಣ ದಂಡೆಯ ಮೇಲಿದೆ. ಇದನ್ನು ಮೇಜರ್ ಐಸಾಕ್ ಎಲ್ಸ್‌ಟನ್ 1830ರಲ್ಲಿ ಸ್ಥಾಪಿಸಿದ. ಹಿಂದೆ ಇದು ಮರದ ದಿಮ್ಮಿಯನ್ನು ಸಾಗಿಸುವ ಬಂದರು ಪಟ್ಟಣವಾಗಿತ್ತು. ಈಗ ಒಂದು ಬಳಿಯ ಬರ್ನ್ಸ್ ರೇವಿನ ಮೇಲೆ ಉಕ್ಕು ಕೈಗಾರಿಕೆಯಿದೆ. ಬೃಹತ್ ಮಿಷಿಗನ್ ಕೈಗಾರಿಕಾ ಸಂಕೀರ್ಣದಲ್ಲಿ ಇದೂ ಸೇರಿಕೊಂಡಿದೆ. ಮಹಾಸರೋವರಗಳ ಮೇಲೆ ನಿರ್ಮಾಣವಾದ ಪ್ರಥಮ ದ್ವೀಪಸ್ತಂಭಗಳ ಪೈಕಿ(1858) ಒಂದು ಇಲ್ಲಿದೆ. ಈಗ ಅಲ್ಲೊಂದು ವಸ್ತುಸಂಗ್ರಹಾಲಯವಿದೆ. ಇಂಡಿಯಾನ ರಾಜ್ಯದ ಬಂದೀಖಾನೆ ಇಲ್ಲಿದೆ. ಪರ್ಡ್ಯೂ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಇರುವುದು ಇಲ್ಲಿಗೆ 8 ಕಿಮೀ ದಕ್ಷಿಣದಲ್ಲಿರುವ ವೆಸ್ಟ್‌ವಿಲ್‌ನಲ್ಲಿ. *

ಮಿಷಿಗನ್ ಸರೋವರ : ಉತ್ತರ ಅಮೆರಿಕದ ಪಂಚಮಹಾ ಸರೋವರಗಳಲ್ಲಿ ಒಂದು; ವಿಸ್ತಾರದಲ್ಲಿ ಮೂರನೆಯದು. ಇವುಗಳ ಪೈಕಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೇರೆಯೊಳಗೇ ಪೂರ್ತಿಯಾಗುವ ಸರೋವರ ಇದೊಂದೆ. ಮಿಷಿಗನ್, ಇಲಿನಾಯ್, ಇಂಡಿಯಾನ ರಾಜ್ಯಗಳು ಇದನ್ನು ಸುತ್ತುವರಿದಿವೆ. ಉತ್ತರದ ಮ್ಯಾ ಕಿನಾಕ್ ಜಲಸಂಧಿಯಿಂದ ಇದು ಹುರಾನ್ ಸರೋವರದೊಂದಿಗೆ ಸಂಪರ್ಕ ಪಡೆದಿದೆ. ದಕ್ಷಿಣೋತ್ತರವಾಗಿ ಈ ಸರೋವರದ ಉದ್ದ 517 ಕಿಮೀ. ಗರಿಷ್ಠ ಅಗಲ 189 ಕಿಮೀ. ಗರಿಷ್ಠ ಆಳ 282 ಮೀ. ಇದರಲ್ಲಿಯ ನೀರು ಹರಿವಿನ ವೇಗ ಕಡಿಮೆ, ಹರಿವು ದಕ್ಷಿಣಾಭಿಮುಖ. ಪಶ್ಚಿಮದ ಕಡೆ ಅಪ್ರದಕ್ಷಿಣವಾಗಿ ನೀರು ಸುತ್ತುತ್ತದೆ. ಸರೋವರದೊಳಗೆ ಸು. 100 ನದಿಗಳು ತೊರೆಗಳಾಗಿ ಹರಿದು ಬರುತ್ತವೆ. ಕೆಲವು ಮಾತ್ರ ದೊಡ್ಡವು. ಸರೋವರದ ಉತ್ತರತುದಿಯಲ್ಲಿ ಇದರ ಬಹುತೇಕ ನಡುಗಡ್ಡೆಗಳಿವೆ. ಮಿಷಿಗನ್ ಸರೋವರದ ಮೂಲಕ ಸರಕು ಸಾಗಣೆ ವಿಶೇಷವಾಗಿ ನಡೆಯುತ್ತದೆ. ಮಹಾಸರೋವರ ಸೇಂಟ್ಸ್ ಲಾರೆನ್ಸ್ ಜಲಮಾರ್ಗ ಸಾಗುವುದು ಇದರ ಮೂಲಕ. ಇದರ ದಕ್ಷಿಣ ದಂಡೆಯ ಮೇಲಿರುವ ಪ್ರಮುಖ ಪಟ್ಟಣ. ಮಿಲ್ವಾಕೀ, ಗ್ರೀನ್ ಬೇ, ಮಿಷಿಗನ್‌ನಗರ, ವಾಕೆಗಾನ್, ಕೆನೋಷ, ರಾಸ್ವೆನ ಗ್ರ್ಯಾಂಡ್‌ಹೆವನ್ – ಇವು ಇಲ್ಲಿಯ ಕೆಲವು ಬಂದರು ಪಟ್ಟಣಗಳು. (ಎಚ್.ಎಸ್.ಕೆ.)

**ಮಿಸಿಸಿಪಿ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ರಾಜ್ಯ. ಆಗ್ನೇಯ ಭಾಗದಲ್ಲಿದೆ. ಉ.ಅ $30^0 13'–35^0$ ಮತ್ತು ಪ.ರೇ. $88^0 7'–91^0 4'$ ನಡುವೆ ಮೆಕ್ಸಿಕೊ ಕೊಲ್ಲಿಯ ತಗ್ಗಾದ ತೀರಪ್ರದೇಶದ ಬಯಲಿನಲ್ಲಿದೆ. ರಾಜ್ಯದ ಪಶ್ಚಿಮದ ಗಡಿಯಾಗಿ ಹರಿಯುವ ಮಿಸಿಸಿಪಿ ನದಿಯಿಂದ ಈ ಹೆಸರು ಬಂದಿದೆ. ಉತ್ತರದಲ್ಲಿ ಟೆನೆಸೀ, ದಕ್ಷಿಣದಲ್ಲಿ ಮೆಕ್ಸಿಕೊ ಕೊಲ್ಲಿ ಮತ್ತು ಲೂಸಿಯಾನ, ಪೂರ್ವಕ್ಕೆ ಅಲಬಾಮ, ಪಶ್ಚಿಮದಲ್ಲಿ ಅರ್ಕನ್‌ಸಾಸ್ ರಾಜ್ಯಗಳು ಸುತ್ತುವರಿದಿವೆ.

ಮಿಸಿಸಿಪಿ ತಗ್ಗು ಭೂಮಿ. ಸಮುದ್ರ ಪಾತಳಿಯಿಂದ ಸು. 244 ಮೀ ಎತ್ತರದಲ್ಲಿದೆ. ರಾಜ್ಯದ ಅತ್ಯುನ್ನತ ಬಿಂದು ಈಶಾನ್ಯದ 290 ಮೀ ಕೌಂಟಿಯಲ್ಲಿದೆ. ಉತ್ತರ ದಕ್ಷಿಣವಾಗಿ 566 ಕಿಮೀ, ಪೂರ್ವ ಪಶ್ಚಿಮವಾಗಿ 303 ಕಿಮೀ ವ್ಯಾಪಿಸಿದೆ. ದಕ್ಷಿಣದಲ್ಲಿ 71 ಕಿಮೀ ಅಗಲದ ಸಮುದ್ರತೀರ ಪ್ರದೇಶವಿದೆ. ರಾಜ್ಯದ ವಿಸ್ತೀರ್ಣ 123,584 ಚ.ಕಿಮೀ. ಜನಸಂಖ್ಯೆ 28,44,658 (2000). ರಾಜಧಾನಿ ಜಾಕ್ಸನ್. ಜನಸಂಖ್ಯೆ 1,84,256 (2006).

ಮೆಕ್ಸಿಕೊ ಕೊಲ್ಲಿಯ ತೀರದ ಮಣ್ಣು ಕೃಷಿಗೆ ಅನುಕೂಲವಾಗಿಲ್ಲ. ಆದರೆ ಅಲ್ಲಿಂದ ಕೆಲವು ಮೀಟರ್ ದೂರದಲ್ಲಿರುವ ಒಳಪ್ರದೇಶದ ಮಣ್ಣು ತರಕಾರಿ ಬೆಳೆಗೆ ಅನುಕೂಲವಾಗಿದೆ. ರಾಜ್ಯದ ಪಶ್ಚಿಮಭಾಗದಲ್ಲಿ ಮೆಕ್ಕಲುಮಣ್ಣಿನ ದಿಣ್ಣೆಗಳಿವೆ. ಇವು ಸುಲಭವಾಗಿ ಸವೆಯುವ ಆದರೆ ಸರಿಯಾಗಿ ಸಾಗುವಳಿ ಮಾಡಿದಲ್ಲಿ ಹೆಚ್ಚು ಉತ್ಪನ್ನಕೊಡುವ ಮಣ್ಣಿನಿಂದಾದವು. ಇವುಗಳ ಪಶ್ಚಿಮ ಪ್ರದೇಶ ನೆರೆಮಣ್ಣಿನದು. ಕೆಲವು ಅಣೆಕಟ್ಟುಗಳ ನೀರಾವರಿ ಸೌಕರ್ಯದಿಂದಾಗಿ ಹತ್ತಿ, ಹೈಬ್ರಿಡ್ ಕಾಳು ಮತ್ತು ಬತ್ತಗಳ ಉತ್ಪಾದನೆಗೆ ಪ್ರಸಿದ್ಧ. ಮೆಕ್ಕಲುದಿಣ್ಣೆ ಪ್ರದೇಶದ ಪೂರ್ವಕ್ಕೆ ಮತ್ತು ತೀರದ ಹುಲ್ಲುಗಾವಲುಗಳ ಉತ್ತರಕ್ಕೆ ಪೈನ್ ಕಾಡುಗಳಿವೆ. ರಾಜ್ಯದ ದಕ್ಷಿಣಾರ್ಧದ ಹೆಚ್ಚು ಭಾಗವನ್ನು ಈ ಕಾಡುಗಳು ಆವರಿಸಿವೆ.

ಈ ರಾಜ್ಯದಲ್ಲಿ ಐದು ಮುಖ್ಯ ನದಿಗಳೂ ಅನೇಕ ನಾಲೆಗಳೂ ಹರಿಯುತ್ತವೆ. ಈಶಾನ್ಯದಲ್ಲಿ ಟಾಂಬಿಗ್ಬೀ, ಆಗ್ನೇಯದಲ್ಲಿ ಲೀಫ್ ಮತ್ತು ಚಿಕಾಸೊವೆ ನದಿಗಳ ಸಂಗಮದಿಂದಾದ ಪಾಸ್ಕಗೂಲ ಮತ್ತು ದಕ್ಷಿಣ ಮಧ್ಯಪ್ರದೇಶದಲ್ಲಿ ಪರ್ಲ್‌ನದಿ ಹರಿಯುತ್ತವೆ. ಅನೇಕ ತೊರೆಗಳಿಂದಾದ ಯಜೂನದಿ ವಾಯವ್ಯದಲ್ಲಿ ಹರಿದು ವಿಕ್ಸ್‌ಬರ್ಗ್ ಹತ್ತಿರ ಮಿಸಿಸಿಪಿ ನದಿಯನ್ನು ಸೇರುತ್ತದೆ. ಮಿಸಿಸಿಪಿ ನದಿಯ ಉಪನದಿ ಬಗ್ ಬ್ಲ್ಯಾಕ್‌ನದಿ ಪಶ್ಚಿಮ ಮಧ್ಯಪ್ರದೇಶದಲ್ಲಿ ಹರಿಯುತ್ತದೆ. ಸಾರ್ಡಿಸ್, ಈನಿಡ್, ಅರ್ಕಬಟ್ಲಾ ಗ್ರೆನೆಡೆ, ಮೂನ್ ಮೊದಲಾದ ಮಾನವ ನಿರ್ಮಿತ ಸರೋವರಗಳಿವೆ.

ವಾಯುಗುಣ: ಮಿಸಿಸಿಪಿ ಬೆಚ್ಚನೆಯ ಹವಾಗುಣದಿಂದ ಕೂಡಿದೆ. ರಾಜಧಾನಿ ಜಾಕ್‌ಸನ್‌ನ ಉಷ್ಣತೆ ಜನವರಿಯಲ್ಲಿ $8.3^0$ಸೆ ಇದ್ದರೆ ಜುಲೈನಲ್ಲಿ $27.8^0$ಸೆ ಇರುತ್ತದೆ. ಕೆಲವು ಸಲ ರಾಜ್ಯದ ಸರಾಸರಿ ಉಷ್ಣತೆ $35^0$ಸೆ ಮೀರುವುದುಂಟು. ಬೇಸಗೆಯ ಸರಾಸರಿ ಉಷ್ಣತೆ $26.7^0$ಸೆ. ಚಳಿಗಾಲದ ಸರಾಸರಿ ಉಷ್ಣತೆ $8.9^0$ಸೆ. ತೀರ ಕಡಿಮೆ ಮಳೆಬೀಳುವ ಶರತ್ಕಾಲದ ದಿನಗಳು ಸಾಮಾನ್ಯವಾಗಿ ಹೆಚ್ಚು ಹಿತಕರವಾಗಿರುತ್ತವೆ. ವರ್ಷದಲ್ಲಿ ಸರಾಸರಿ 147.5 ಸೆಂಮೀ ಮಳೆಯಾಗುತ್ತದೆ. ತೀರಪ್ರದೇಶಗಳಲ್ಲಿ ಜೂನ್ – ಅಕ್ಟೋಬರ್ ತಿಂಗಳ ಮಧ್ಯದಲ್ಲಿ ಚಂಡಮಾರುತಗಳು ಬೀಸುವುದುಂಟು.

ಸಸ್ಯ, ಪ್ರಾಣಿಸಂಪತ್ತು: ರಾಜ್ಯದ ಅರ್ಧಕ್ಕೂ ಹೆಚ್ಚು ಪ್ರದೇಶ ಅರಣ್ಯದಿಂದ ಕೂಡಿದೆ. ಸೌಮ್ಯ ಹವಾಗುಣ, ದೀರ್ಘ ಫಸಲಿನ ಕಾಲ ಮತ್ತು ಸಾಕಷ್ಟು ಬೀಳುವ ಮಳೆ – ಇವು ರಾಜ್ಯದ ಸಸ್ಯ ಮತ್ತು ಪ್ರಾಣಿ ಜೀವನದ ಮೇಲೆ ಗಮನಾರ್ಹ ಪ್ರಭಾವ ಬೀರಿವೆ. ದಕ್ಷಿಣದ ಕೌಂಟಿ ಪ್ರದೇಶಗಳಲ್ಲಿ ಲೈವ್, ಓಕ್ ಮತ್ತು ತಾಳೆ ಮರಗಳೂ ಉತ್ತರದಲ್ಲಿ ವಿವಿಧ ಹಣ್ಣಿನಮರ ಮತ್ತು ಗಟ್ಟಿ ಮರಗಳೂ ವಿಶೇಷವಾಗಿವೆ. ವೃಕ್ಷ ಪ್ರದೇಶಗಳಲ್ಲಿ ಉದ್ದ ಎಲೆಯ ಪೈನ್ ಮುಖ್ಯ. ರಾಜ್ಯದಲ್ಲಿ ಕಂಡುಬರುವ ಇತರ ವೃಕ್ಷಗಳೆಂದರೆ ವಿಲೋ ಮತ್ತು ತುರಾಯಿಮರ. ಅಂಟನ್ನು ಒಸರುವ ಒಂದು ಬಗೆಯ ಮರವೂ ಇಲ್ಲಿದೆ. ಇವಲ್ಲದೆ ಬಿಳಿತೇಗ, ಹಿಕಂ, ಹನಿ ಲೋಕಸ್ಟ್, ಪಾಪ್ಲರ್, ಮೇಪಲ್, ಸೈಕಾ ಮೋರ್ ಮತ್ತು ಮ್ಯಾಗ್ನೋಲಿಯ ಮೊದಲಾದವೂ ಕಾಡುಗಳಲ್ಲಿ ವಿವಿಧ ಹೂಗಳ ಮರ, ಸಸ್ಯ ಹಾಗೂ ಕುರುಚಲು ಗಿಡಗಳೂ ಇವೆ. ಇವುಗಳಲ್ಲಿ ಮ್ಯಾಗ್ನೋಲಿಯ ಡಾಗ್‌ವುಡ್. ಕಿಡ್ ಬಡ್ ಮತ್ತು ಹನಿಸಕಲ್ ಸಾಮಾನ್ಯ. 1983ರಲ್ಲಿ ಅರಣ್ಯೋತ್ಪಾದನೆಯಿಂದ ಈ ರಾಜ್ಯಕ್ಕೆ 484 ಮಿಲಿಯನ್ ಡಾಲರುಗಳು ದೊರೆತಿದ್ದುವು. ಮಿತಿಯಿಲ್ಲದ ಬೇಟೆ ಮತ್ತು ಕೃಷಿ ಪ್ರದೇಶದ ವಿಸ್ತೀರ್ಣದಿಂದಾಗಿ ವನ್ಯಜೀವಿಗಳ ಸಂಖ್ಯೆ ಇಳಿಮುಖವಾಗಿದೆ. ತೋಳ ಮತ್ತು ಚಿರತೆ ನಿರ್ನಾಮವಾಗಿದ್ದರೆ, ಬಾಬ್‌ಕ್ಯಾಟ್ ಮತ್ತು ಕರಡಿ ತೀರ ವಿರಳವಾಗಿವೆ. ಜಿಗರೆಗಳು ಹೆಚ್ಚು ಕಂಡು ಬರುತ್ತಿವೆ. ಕಾಡು ಟರ್ಕಿ ತೋಳಗಳ ಸಂಖ್ಯೆ ಹೆಚ್ಚುತ್ತಿದೆ. ಅನೇಕ ಬಗೆಯ ಸ್ಥಳೀಯ ಮತ್ತು ವಲಸೆ ಹೋಗುವ ಪಕ್ಷಿಗಳು ಇಲ್ಲಿವೆ. ಸಿಹಿನೀರಿನಲ್ಲಿ ಕ್ಯಾಟ್‌ಫಿಶ್, ಬ್ರೀಮ್, ಬಾಸ್ ಸಿಗುತ್ತವೆ. ಕೊಲ್ಲಿಯಲ್ಲಿ ವಿಶೇಷವಾಗಿರುವ ಸೀಗಡಿ, ಸಿಂಪಿ ಮೀನುಗಳಿಂದಾಗಿ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಮೀನುಗಾರಿಕೆ ನಡೆಯುತ್ತದೆ.

ಕೃಷಿ: ರಾಜ್ಯದ ಬಹುಭಾಗ ಫಲವತ್ತಾದ ಮಣ್ಣಿನಿಂದ ಕೂಡಿದ್ದು ಕೃಷಿ ಜನರ ಮುಖ್ಯ ಕಸಬಾಗಿದೆ. ಅಮೆರಿಕದ ಹತ್ತಿ ಬೆಳೆಯುವ ನಾಲ್ಕುಮುಖ್ಯ ರಾಜ್ಯಗಳಲ್ಲಿ ಮಿಸಿಸಿಪಿ ಮೊದಲನೆಯದು. ಮುಸುಕಿನ ಜೋಳ, ಸೋಯಾಬೀನ್, ಬತ್ತ, ಗೋದಿ, ರೈ ಮತ್ತು ಜವೆ ಗೋದಿ ಅಧಿಕ ಪ್ರಮಾಣದಲ್ಲಿ ಬೆಳೆಯುತ್ತವೆ. ಮುಖ್ಯ ತರಕಾರಿ ಗೆಣಸಾದರೂ ಆಲೂಗೆಡ್ಡೆ, ಬಟಾಣಿ, ಅವರೆ ಮತ್ತು ಎಲ್ಲ ಬಗೆಯ ತರಕಾರಿ ಇಲ್ಲಿ ಬೆಳೆಯುತ್ತವೆ. ಪ್ಲಮ್, ಪೀಚ್, ಅಂಜೂರ ಮತ್ತು ಕಿತ್ತಳೆ ಹೇರಳವಾಗಿವೆ. ಮತ್ಸ್ಯೋದ್ಯಮಕ್ಕೆ ಈ ರಾಜ್ಯ ಪ್ರಸಿದ್ಧ. ಪ್ರತಿವರ್ಷ ಸು. 15 ಮಿಲಿಯನ್ ಡಾಲರುಗಳ ಬೆಲೆಯ ಮೀನುಗಳನ್ನು ಹಿಡಿಯಲಾಗುತ್ತದೆ. ವಿವಿಧ ಬಗೆಯ ಸೀಗಡಿಗಳಿಂದ ಪ್ರತಿವರ್ಷ ಸು. 4 ಮಿಲಿಯನ್ ಡಾಲರುಗಳ ಗಳಿಕೆಯಿದೆ.

ಕೈಗಾರಿಕೆ: ಎರಡನೆಯ ಮಹಾಯುದ್ಧದ ಅನಂತರ ಇಲ್ಲಿಯ ವಸ್ತ್ರ ತಯಾರಿಕಾ ಕೈಗಾರಿಕೆ ಅತಿ ಶೀಘ್ರವಾಗಿ ಬೆಳೆಯಿತು. ವಾಹನೋಪಕರಣಗಳ ತಯಾರಿಕೆ, ಆಹಾರಪದಾರ್ಥ ಸಂಸ್ಕರಣ, ಮರದ ಉತ್ಪಾದನೆಗಳು, ಬಟ್ಟೆ ಕಡಲ ಆಹಾರ ಪದಾರ್ಥಗಳು ಮತ್ತು ರಾಸಾಯನಿಕಗಳು, ಇತರ ಕೈಗಾರಿಕೆಗಳೂ 6 ತೈಲ ಶುದ್ಧೀಕರಣ ಕಾರ್ಖಾನೆಗಳೂ ಇಲ್ಲಿವೆ. 1983ರಲ್ಲಿ 2968 ಕಾರ್ಖಾನೆಗಳಿದ್ದು 2,04,821 ಮಂದಿ ಕಾರ್ಮಿಕರಿದ್ದರು. ಒಟ್ಟು ಗಳಿಕೆ 11,82,08,376 ಡಾಲರುಗಳು.

ಖನಿಜ ಸಂಪತ್ತು: ತೈಲ ಮತ್ತು ಅನಿಲಗಳು ಮುಖ್ಯವಾದವು. ಖನಿಜ ಇಂಧನಗಳ ಮೌಲ್ಯ ಎಲ್ಲ ಖನಿಜಗಳ ಉತ್ಪಾದಿತ ಮೌಲ್ಯದ 4ರಷ್ಟು ಆಗುತ್ತದೆ. 1981ರಲ್ಲಿ 3,43,81,093 ಬಿಲಿಯನ್ ಬ್ಯಾರಲ್ ಪೆಟ್ರೋಲಿಯಮ್ ಉತ್ಪಾದಿಸಲಾಗಿತ್ತು. 1981ರಲ್ಲಿ ಪೆಟ್ರೋಲಿಯಮ್ ಮತ್ತು ಅನಿಲದ ಮಾರಾಟದಿಂದ 1,80,76,70,550 ಡಾಲರುಗಳ ಗಳಿಕೆಯಾಗಿತ್ತು.

ಜನ: ಇಲ್ಲಿಯವರಲ್ಲಿ ಶೇ.98ಕ್ಕೂ ಹೆಚ್ಚು ಮಂದಿ ಬ್ರಿಟನ್, ಐರ್ಲೆಂಡ್ ಮತ್ತು ಉತ್ತರ ಯೂರೋಪಿನ ರಾಜ್ಯಗಳಿಂದ ಬಂದವರ ವಂಶಜರು. ಕರಿಯರೆಲ್ಲರೂ ಹಳೆಯ ಬುಡಕಟ್ಟಿನವರು ಹಾಗೂ ಇಲ್ಲಿಯೇ ಜನಿಸಿ ಬೆಳೆದವರು. 1940ರ ತನಕ ಕರಿಯರು ಬಹುಸಂಖ್ಯಾತರಾಗಿದ್ದರು. 1970ರ ಸುಮಾರಿಗೆ ಅವರ ಸಂಖ್ಯೆ ಶೇ.37ಕ್ಕೆ ಇಳಿದಿತ್ತು.

ಸಾರಿಗೆ: ಮಿಸಿಸಿಪಿ ನದಿ ಇಲ್ಲಿಯ ಸಾರಿಗೆಯ ಮುಖ್ಯ ನದಿ ಮಾರ್ಗಗಳಲ್ಲೊಂದಾಗಿದೆ. ಕಲ್ಲಿದ್ದಲು, ಉಕ್ಕು, ಕಾಳು, ವಾಹನಗಳು, ಸಕ್ಕರೆ ಮತ್ತು ಎಣ್ಣೆ – ಇವು ನದಿ ಮಾರ್ಗವಾಗಿ ಸಾಗಿಸಲಾಗುವ ಮುಖ್ಯ ಸರಕುಗಳು. ಗ್ರೀನ್‌ವಿಲ್, ವಿಕ್ಸ್‌ಬರ್ಗ್ ಮತ್ತು ನಾಚೆಜ್ ಮುಖ್ಯನದಿ ಬಂದರುಗಳು. ಗಲ್ಫ್‌ಪೋರ್ಟ್ ಮತ್ತು ಪಾಸ್ಕಗೂಲ ಬಂದರುಗಳಲ್ಲಿ ಸಾಗರ ಪ್ರಯಾಣದ ಹಡಗುಗಳು ನಿಲ್ಲಬಹುದಾಗಿದೆ. ಸಣ್ಣ ಪ್ರಮಾಣದ ಸಾಗರ ಪ್ರಯಾಣದ ಹಡಗುಗಳು ಮಿಸಿಸಿಪಿ ನದಿಯಲ್ಲಿ ನಾಚೆಜ್, ವಿಕ್ಸ್‌ಬರ್ಗ್ ಮತ್ತು ಗ್ರೀನ್‌ವಿಲ್‌ವರೆಗೆ ಹೋಗಬಹುದಾಗಿದೆ. ಹರಿಗೋಲುಗಳು ಮಿಸಿಸಿಪಿ ಪರ್ಲ್ ಮತ್ತು ಯಾಜೂ ನದಿಗಳಲ್ಲಿ ಸಂಚರಿಸುತ್ತವೆ. ರಾಜ್ಯದಲ್ಲಿ ಸು. 16,486 (1984) ಕಿಮೀ ಉದ್ದದ ಹೆದ್ದಾರಿಯಿದೆ. ಸು. 4782 (1984) ಕಿಮೀ ಉದ್ದದ ರೈಲುಮಾರ್ಗವಿದೆ. ಸು. 130 ವಿಮಾನ ನಿಲ್ದಾಣಗಳಿವೆ. ಒಟ್ಟಿನಲ್ಲಿ ಸಾರಿಗೆ ಸಂಪರ್ಕ ಉತ್ತಮ ಸ್ಥಿತಿಯಲ್ಲಿದೆ.

ರಾಜ್ಯದಲ್ಲಿ 30 ದಿನಪತ್ರಿಕೆಗಳನ್ನೂ ಸೇರಿಸಿ ಒಟ್ಟು 140 ವಾರ್ತಾಪತ್ರಿಕೆಗಳಿವೆ ಸು. 140 ರೇಡಿಯೊ ಕೇಂದ್ರಗಳೂ 11 ದೂರದರ್ಶನಕೇಂದ್ರಗಳೂ ಇದ್ದು ಆಧುನಿಕವಾದ ಎಲ್ಲ ಬಗೆಯ ಸಂಪರ್ಕ ಸಾಧನಗಳನ್ನು ಹೊಂದಿದೆ.

ಆಡಳಿತ: ರಾಜ್ಯ ಸರ್ಕಾರ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಿಂದ ಕೂಡಿದೆ. ಕಾರ್ಯಾಂಗದ ಇಲಾಖೆಗಳಲ್ಲಿ ಚುನಾಯಿತ ಮುಖ್ಯಸ್ಥರು ಇರುತ್ತಾರೆ. 122 ಸದಸ್ಯರ ಪ್ರತಿನಿಧಿಗಳ ಸಭೆ ಮತ್ತು 52 ಸದಸ್ಯರ ಸೆನೆಟ್‌ನ ದ್ವಿಸದನ ವಿಧಾನ ಮಂಡಲವಿದೆ. ಚುನಾಯಿತ ಅಧಿಕಾರಿಗಳ ಅವಧಿ 4 ವರ್ಷ. ರಾಜ್ಯದ ಕಾರ್ಯಾಂಗದ ಪ್ರಾಧಿಕಾರಿ ಗವರ್ನರ್, ಖಜಾಂಚಿ ಮತ್ತು ಸಾರ್ವಜನಿಕ ಲೆಕ್ಕಗಳ ಪರಿಶೋಧಕರು ತಮ್ಮ ಅವಧಿ ಮುಗಿದ ತಕ್ಷಣ ಆ ಸ್ಥಾನಗಳಿಗೆ ಮತ್ತೆ ಬರುವಂತಿಲ್ಲ. ಉಳಿದ ಚುನಾಯಿತ ಅಧಿಕಾರಿಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ.

ಸರ್ವೋಚ್ಚ ನ್ಯಾಯಾಲಯವಿದೆ. ಛಾನ್ಸರಿ ಮತ್ತು ಸಂಚಾರೀ ನ್ಯಾಯಾಲಯಗಳಿಂದ ಸರ್ವೋಚ್ಚ ನ್ಯಾಯಾಲಯಕ್ಕೆ ನಿವೇದನೆಗಳು ಸಲ್ಲುತ್ತವೆ. ನ್ಯಾಯಾಧೀಶರ ಅವಧಿ 8 ವರ್ಷಗಳು.

ಶಿಕ್ಷಣ: ಶಿಕ್ಷಣ ಕ್ಷೇತ್ರದಲ್ಲಿ ಈ ರಾಜ್ಯಕ್ಕೆ ವಿಶಿಷ್ಟವಾದ ಇತಿಹಾಸವಿದೆ ಸಂಯುಕ್ತಸಂಸ್ಥಾನಗಳಲ್ಲಿ ಬಹುಶಃ ಮೊದಲನೆಯದಾದ ಸರ್ಕಾರಪೋಷಿತ ಸ್ತ್ರೀಯರಿಗೆ ಡಿಪ್ಲೊಮ ತರಬೇತಿಗಳನ್ನು ನೀಡುವ ಸಂಸ್ಥೆ ಇಲ್ಲಿ 1884ರಲ್ಲಿ ಸ್ಥಾಪಿತವಾಯಿತು. ಇದಕ್ಕೆ ಹೊರತಾಗಿ ಇಲ್ಲಿ 18 ಕಿರಿಯ ಕಾಲೇಜುಗಳು, 4 ವರ್ಷದ ಪದವಿ 5 ಕಾಲೇಜುಗಳು, 3 ವಿಶ್ವವಿದ್ಯಾಲಯಗಳು, ಒಂದು ವೈದ್ಯಕೀಯ ಕೇಂದ್ರ ಹಾಗೂ ಗಲ್ಫ್ ಕೋಸ್ಟ್ ರೀಸರ್ಚ್ ಲ್ಯಾಬೊರೇಟರಿ ಮೊದಲಾದವುಗಳಿದ್ದು ಶಿಕ್ಷಣ ಕ್ಷೇತ್ರದಲ್ಲೂ ಮುಂದುವರಿದ ರಾಜ್ಯವಾಗಿದೆ. (ಜ.ಕೆ.ಯು.)

**ಮೀನುಗಾರಿಕೆ:** ಜಲಜೀವಿಗಳನ್ನಾಧರಿಸಿದ ಉದ್ಯಮ. ಆಹಾರದ ಒಂದು ಘಟಕವಾಗಿ ಮೀನುಗಳನ್ನು ಹಿಡಿಯುವುದು, ಸಾಕುವುದು, ಸಂಸ್ಕರಿಸುವುದು, ಬಳಸುವುದು ಇಲ್ಲಿನ ಉದ್ದೇಶ.

ಶೇ. 60–82ರವರೆಗೆ ತೇವಾಂಶ, ಶೇ. 13–20ರ ವರೆಗೆ ಪ್ರೋಟೀನ್ ಹಾಗೂ ಕೊಂಚ ಪರಿಮಾಣದಲ್ಲಿ ಕೊಬ್ಬನ್ನುಳ್ಳ ಮೀನಿನ ಮಾಂಸ ಒಂದು ಉತ್ಕೃಷ್ಟ ಆಹಾರ. ಜೊತೆಗೆ ಮೀನಿನ ಮಾಂಸದಲ್ಲಿ ಗಣನೀಯ ಪರಿಮಾಣದಲ್ಲಿ ಯಥೋಚಿತ ಮತ್ತು ಯೋಗ್ಯ ರೂಪದಲ್ಲಿ ಆಹಾರದ ಅತ್ಯವಶ್ಯ ವಸ್ತುಗಳಾದ ವಿಟಮಿನ್‌ಗಳು ಅಡಕಗೊಂಡಿವೆ.

ಬಹುಶಃ ಈ ಕಾರಣದಿಂದಲೇ ಇಂಥ ಸಂಪೂರ್ಣ ಸತ್ತ್ವಶಾಲಿ ಆಹಾರವಾದ ಮೀನನ್ನು ಪ್ರಾಚೀನ ಮಾನವ ತನ್ನ ಆಹಾರದಲ್ಲಿ ಬಳಸಲು ಪ್ರಾರಂಭಿಸಿದ. ಮೊದಮೊದಲು ಆದಿಮಾನವ ಬರಿಗೈಗಳಿಂದ ಇಲ್ಲವೆ ಒರಟು ಭರ್ಜಿಗಳ ಬಳಕೆಯಿಂದ ಮೀನನ್ನು ಹಿಡಿಯುತ್ತಿದ್ದ. ಪ್ರಪಂಚದ ಅನೇಕ ಕಡೆಗಳಲ್ಲಿ ಇಂದಿಗೂ ಈ ವಿಧಾನಗಳನ್ನೇ ಅನುಸರಿಸುವುದುಂಟು. ಅನಂತರದಲ್ಲಿ ಮೀನು ಹಿಡಿಯಲು ಬಲೆಗಳ ಬಳಕೆ ರೂಢಿಗೆ ಬಂತು. ಆಳವಿಲ್ಲದ ಕೊಳಗಳ ಅಥವಾ ಮಡುಗಳ ಪ್ರವೇಶ ದ್ವಾರಗಳಲ್ಲಿ ಅಡ್ಡಲಾಗಿ ಸಾಮಾನ್ಯವಾಗಿ ಕಲ್ಲುಗಳ ಮತ್ತು ಕಡ್ಡಿಗಳ ಇಲ್ಲವೆ ಜೇಡಿಮಣ್ಣಿನ ಅಣೆಕಟ್ಟುಗಳನ್ನು ಈ ಕಾರಣಕ್ಕಾಗಿಯೇ ಕಟ್ಟುತ್ತಿದ್ದರು. ಮೀನುಗಳು ಬರತಗಳ ಕಾಲದಲ್ಲಿ ಹಾಗೂ ನದಿಗಳು ಮಳೆಯಿಂದ ಉಬ್ಬಿದ ಸಮಯಗಳಲ್ಲಿ ಈ ಅಣೆಕಟ್ಟಿನ ಮೇಲೆ ಈಜುತ್ತಿದ್ದು ನೀರು ಕಡಿಮೆಯಾದಾಗ ತಡೆಯಿಂದಾಗಿ ಹಿಂತಿರುಗಿ ಈಜಲು ಸಾಧ್ಯವಾಗದೆ ಉಳಿಯುತ್ತಿದ್ದವು. ಆಗ ಅವುಗಳನ್ನು ಸುಲಭವಾಗಿ ಹಿಡಿಯಲಾಗುತ್ತಿತ್ತು. ಮೀನನ್ನು ದೊಡ್ಡ ಪರಿಮಾಣದಲ್ಲಿ ಹಿಡಿಯಲು ಮಾಡಿದ ಪ್ರಥಮ ಹಾಗೂ ಅಂತ್ಯದ ಸರಳ ಪ್ರಯತ್ನವಿದು. ಜೀವನೋಪಾಯಕ್ಕಾಗಿ ಮೀನನ್ನು ಹಿಡಿಯುವ ಉದ್ಯೋಗ ಹಾಗೂ ವಾಣಿಜ್ಯ ಮೀನುಗಾರಿಕೆಗಳು ಸಹ ಬಹಳ ಹಿಂದಿನಿಂದ ರೂಢಿಯಲ್ಲಿವೆ.

ಗ್ರೀಸ್, ಸಿಸಿಲಿ, ಸ್ಪೇನ್, ಭಾರತ, ಚೀನಗಳನ್ನೊಳಗೊಂಡಂತೆ ಪ್ರಪಂಚದ ಅನೇಕ ದೇಶಗಳಲ್ಲಿ ಮೀನುಗಾರಿಕೆ ಅತ್ಯಂತ ಹಿಂದಿನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಹೆಚ್ಚು ಕಡಿಮೆ ಸಮುದ್ರದ ಎಲ್ಲ ಭಾಗಗಳಲ್ಲಿಯೂ ಮೀನುಗಳು ವಾಸಿಸುತ್ತವೆ. ಆದರೆ ಕೆಲವು ನಿರ್ದಿಷ್ಟ ನೆಲೆಗಳನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಅವು ಚದುರಿ ಹೋಗುವುವಲ್ಲದೆ ಸಂಖ್ಯೆಯಲ್ಲಿ ಸಹ ಕಡಿಮೆ ಇರುತ್ತವೆ. ಹೆಚ್ಚಿನ ಮೊತ್ತದಲ್ಲಿ ಮೀನುಗಳಿರುವ ಇಂಥ ನಿರ್ದಿಷ್ಟ ನೆಲೆಗಳನ್ನೇ ಮೀನುಗಾರಿಕೆ ನೆಲೆಗಳೆಂದು ಕರೆಯಲಾಗುತ್ತದೆ. ಮೀನುಗಾರಿಕೆ ನೆಲೆಗಳು ಸಾಮಾನ್ಯವಾಗಿ ತೀರ ಪ್ರದೇಶದಿಂದಾಚೆಗೆ ಸ್ವಲ್ಪ ದೂರದವರೆಗೆ ಸು. 200 ಮೀ. ಆಳದವರೆಗಿನ ನೀರಿನಲ್ಲಿ ಇರುತ್ತವೆ. ಭೂಖಂಡದ ಸಮತಟ್ಟಿನ ಭಾಗಗಳಲ್ಲಿ ಮೀನುಗಳು ಆಹಾರವನ್ನು ಪಡೆಯುವುವಲ್ಲದೇ ಮೊಟ್ಟೆಗಳನ್ನಿಟ್ಟು ಮರಿಗಳನ್ನೂ ಮಾಡುತ್ತವೆ. ಇಂಥ ಸ್ಥಳಗಳಲ್ಲಿಯೇ ಮೀನುಗಳನ್ನು ಸಮೃದ್ಧವಾಗಿ ಹಿಡಿಯಲಾಗುತ್ತದೆ. ಮೀನು ಹಿಡಿಯುವ ಪ್ರದೇಶಗಳ ಪೈಕಿ ಅತ್ಯುತ್ತಮವಾದದ್ದು ನ್ಯೂಫೌಂಡ್‌ಲ್ಯಾಂಡ್ ತೀರಪ್ರದೇಶ. ಈ ಪ್ರದೇಶದಲ್ಲಿ ಅಪರಿಮಿತ ಮೊತ್ತದಲ್ಲಿ ಕಾಡ್, ಹ್ಯಾಲಿಬಟ್, ಹೆರಿಂಗ್ ಹಾಗೂ ಉತ್ತರ ಸಮುದ್ರಗಳಲ್ಲಿ ಸಿಕ್ಕುವ ಪ್ರಾಯಶಃ ಎಲ್ಲ ತೆರನ ಮೀನುಗಳನ್ನು ಪ್ರತಿವರ್ಷವೂ ಹಿಡಿಯಲಾಗುತ್ತಿದೆ. ಈ ಕಾರಣದಿಂದಲೇ ಅಮೆರಿಕ, ಕೆನಡ, ರಷ್ಯ, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ದೇಶಗಳಿಂದ ಮೀನು ಹಿಡಿಯುವ ಹಡಗುಗಳು ಈ ಪ್ರದೇಶಕ್ಕೆ ಯಾವಾಗಲೂ ಬರುತ್ತಿರುತ್ತವೆ.

ನಾರ್ವೆಯ ತೀರ ಪ್ರದೇಶದಲ್ಲಿ ಕೂಡ ಮುಖ್ಯವಾದ ಮೀನುಗಾರಿಕೆ ಕಂಡುಬರುತ್ತದೆ. ಪೆಸಿಫಿಕ್ ಸಾಗರದಲ್ಲಿ ಜಪಾನ್ ವಿಪುಲವಾದ ಮೀನುಗಾರಿಕೆಯ ಕಾರ್ಯ ನಡೆಸುತ್ತದೆ. ಪೋರ್ಚುಗಲ್ ಹಾಗೂ ಸ್ಪೇನ್‌ಗಳಲ್ಲಿ ಬೂತಾಯ ಮೀನಿನ ಮೀನುಗಾರಿಕೆ ಅಧಿಕವಾಗಿದೆ. ಉತ್ತರ ಅಮೆರಿಕದ ಉತ್ತರ ಪೆಸಿಫಿಕ್ ತೀರದಲ್ಲಿ ಸ್ಯಾಲ್ಮನ್ ಮತ್ತು ಕ್ಯಾಲಿಫೋರ್ನಿಯದಲ್ಲಿ ಟ್ಯೂನ ಮೀನುಗಾರಿಕೆಗಳು ಅತ್ಯಂತ ಹೆಸರುವಾಸಿಯಾದವು. ಖಾರಿ ತೀರಗಳ ಉದ್ದಕ್ಕೂ ಪ್ರಖ್ಯಾತ ಸೀಗಡಿ ಮೀನುಗಾರಿಕೆ ಕಂಡುಬರುತ್ತದೆ.

ಬಹುಪಾಲು ದೇಶಗಳಲ್ಲಿ ವಿಶೇಷವಾಗಿ ಉಷ್ಣವಲಯಗಳಲ್ಲಿ ವಾಸಿಸುವ ಸಿಹಿ ನೀರಿನ ಮೀನುಗಳು ಆಹಾರ ಸಂಗ್ರಹದ ಅಮೂಲ್ಯವಾದ ಮೂಲವನ್ನು ಒದಗಿಸಿದರೂ ಮಾನವ ಜನಾಂಗದ ಆಹಾರದ ಮುಖ್ಯಪಾಲು ಸಮುದ್ರದ ಮೀನುಗಳು. ಪ್ರಪಂಚದ ಒಟ್ಟು ಮೀನುಗಾರಿಕೆ ಉತ್ಪಾದನೆಯಲ್ಲಿ ಕಡಲ ಮೀನು ಉತ್ಪಾದನೆ ಶೇ.74 ರಷ್ಟಿದೆ. 2003 ನೆಯ ವರ್ಷದಲ್ಲಿ ಒಟ್ಟು 132.2 ದ.ಲ. ಟನ್ ಮೀನು ಉತ್ಪಾದಿಸಲಾಗಿದ್ದು ಅದರಲ್ಲಿ 98 ದ.ಲ. ಟನ್ ಕಡಲಿನಿಂದ ಹಾಗೂ 34.20 ಲಕ್ಷ ಟನ್ ಒಳನಾಡಿನಿಂದ ಉತ್ಪಾದಿಸಲಾಗಿದೆ (ನೋಡಿ ಕೋಷ್ಟಕ–1). ಸಮುದ್ರ ಮೀನುಗಾರಿಕೆ ಇತಿಹಾಸ ಕಾಲದಿಂದಲೂ ತಮ್ಮ ವಾಣಿಜ್ಯದ ಉಪಯುಕ್ತತೆಯಿಂದ ಪ್ರತ್ಯೇಕವಾಗಿಯೂ ರಾಷ್ಟ್ರಗಳ ಹಣೆಬರಹಗಳಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿರುವುದು ಸೋಜಿಗವೇ ಸರಿ. ಮೀನು ಹಿಡಿಯುವುದು ಪ್ರಪಂಚದಲ್ಲಿ ಬೇಟೆಯ ಅತ್ಯಂತ ಆದಿರೂಪಗಳಲ್ಲೊಂದು ಎಂದು ಭಾವಿಸಲಾಗಿದೆ. ಮಾನವರು ಕೃಷಿಕರಾಗುವುದಕ್ಕಿಂತ ಮೊದಲೇ ಬಹಳ ಮಟ್ಟಿಗೆ ಬೇಟೆಗಾರರೇ ಆಗಿದ್ದರು. ಈ ಕಾರಣದಿಂದ ಮೀನು ಹಿಡಿಯುವುದು ಪ್ರಪಂಚದ ಅತಿ ಪುರಾತನವಾದ ಉದ್ಯಮವೆಂದೇ ಹೇಳಬಹುದು. ಹೀಗೆ ಪ್ರಾಚೀನಕಾಲದಿಂದಲೂ ಸಮುದ್ರ ವ್ಯಾಪಾರದ ಬೆಳೆವಣಿಗೆಯಲ್ಲಿ ಮೀನುಗಾರಿಕೆ ಹೆಚ್ಚು ಪ್ರಮುಖ ಪಾತ್ರವನ್ನು ಪಡೆದು ಹಡಗುಗಳ ನಿರ್ಮಾಣಕ್ಕೂ ಮೀನುಗಳನ್ನು ಹುಡುಕುತ್ತ ಅಜ್ಞಾತ ದೇಶಗಳನ್ನು ಶೋಧಿಸಲು ಪ್ರೇರಣೆಯನ್ನೂ ಒದಗಿಸಿದೆ. ಯಾವುದಾದರೊಂದು ಪಟ್ಟಣ ಅಥವಾ ಬಂದರಿನ ನೆಲೆಯನ್ನು ಗುರುತಿಸುವುದಕ್ಕೆ ಮೀನುಗಾರಿಕೆಯ ಉದ್ಯಮದೊಂದಿಗೆ ಅದು ಪಡೆದಿರುವ ಸಂಬಂಧವನ್ನು ಉಲ್ಲೇಖಿಸದೆ ಇರಲು ಸಾಧ್ಯವಿಲ್ಲ.

ಪ್ರಪಂಚದ ಮೀನು ಉತ್ಪಾದನೆ ಮತ್ತು ಬಳಕೆಯ ಪ್ರಮಾಣ (ದ.ಲ. ಟನ್)

| | 1998 | 1999 | 2000 | 2001 | 2002 | 2003 |
|---|---|---|---|---|---|---|
| ಉತ್ಪಾದನೆ: | | | | | | |
| ಒಳನಾಡು | | | | | | |
| ಹಿಡುವಳಿ | 8.1 | 8.5 | 8.7 | 8.7 | 8.7 | 9.0 |
| ಮೀನುಕೃಷಿ | 18.5 | 20.2 | 21.3 | 22.5 | 23.9 | 25.2 |
| ಒಟ್ಟು ಒಳನಾಡು | 26.6 | 28.7 | 30.0 | 31.2 | 32.6 | 34.2 |
| ಕಡಲು | | | | | | |
| ಹಿಡುವಳಿ | 79.6 | 85.2 | 86.8 | 84.2 | 84.5 | 81.3 |
| ಮೀನುಕೃಷಿ | 12.0 | 13.3 | 14.2 | 15.2 | 15.9 | 16.7 |
| ಒಟ್ಟು ಕಡಲು | 91.6 | 98.5 | 101.0 | 99.4 | 100.4 | 98.0 |
| ಹಿಡುವಳಿಯಿಂದ ಒಟ್ಟು | 87.7 | 93.8 | 95.5 | 92.9 | 93.2 | 90.3 |
| ಮೀನುಕೃಷಿಯಿಂದ ಒಟ್ಟು | 30.6 | 33.4 | 35.5 | 37.8 | 39.8 | 41.9 |
| **ಒಟ್ಟು ಉತ್ಪಾದನೆ** | 118.3 | 127.2 | 131.0 | 130.7 | 133.0 | 132.2 |
| ಬಳಕೆ : | | | | | | |
| ಆಹಾರದ ಬಳಕೆಗೆ | 93.6 | 95.4 | 96.8 | 99.5 | 100.7 | 103.0 |
| ಆಹಾರೇತರ ಬಳಕೆಗೆ | 24.6 | 31.8 | 34.2 | 31.1 | 32.2 | 29.2 |
| ಜನ ಸಂಖ್ಯೆ (100 ಕೋಟಿ) | 5.9 | 6.0 | 6.1 | 6.1 | 6.2 | 6.3 |
| ಪ್ರತಿ ವ್ಯಕ್ತಿಗೆ ಮೀನು ಸರಬರಾಜು (ಕೆಜಿ/ವರ್ಷಕ್ಕೆ) | 15.8 | 15.9 | 15.9 | 16.2 | 16.2 | 16.3 |

(ವಿ.ಸೂ: ಜಲ ಸಸ್ಯಗಳನ್ನು ಹೊರತುಪಡಿಸಿ ಒಂದು ಅಂದಾಜು. (ಆಧಾರ: ಆಹಾರ ಮತ್ತು ಕೃಷಿ ಸಂಸ್ಥೆಯ ವರದಿ)

ಕಡಲ ಉತ್ಪಾದನೆ ಕ್ರಮೇಣ ಸ್ಥಿರಗೊಳ್ಳುತ್ತಿದ್ದು ಬಹುತೇಕ ದೇಶಗಳಲ್ಲಿನ ಉತ್ಪಾದನೆ ಸ್ಥಿರವಾಗಿದೆ. ಆದರೆ ಒಳನಾಡು ಉತ್ಪಾದನೆಗೆ ವಿಪುಲ ಅವಕಾಶಗಳಿದ್ದು ಮೀನುಕೃಷಿಯಿಂದ ಉತ್ಪಾದನೆ ತೀವ್ರಗತಿಯಲ್ಲಿ ಹೆಚ್ಚುತ್ತಿದೆ. 2002–03 ರ ಅಂಕಿ–ಅಂಶಗಳ ಪ್ರಕಾರ ಚೀನ ಮೀನು ಉತ್ಪಾದನೆಯಲ್ಲಿ ಅತ್ಯಂತ ಮುಂದುವರೆದ ದೇಶವಾಗಿದೆ. ವರ್ಷವೊಂದರಲ್ಲಿ 44.3 ದ.ಲ. ಟನ್ ಗಳ ಮೀನು ಉತ್ಪಾದನೆಯಾಗಿದೆ. ಕಡಲ ಹಾಗೂ ಒಳನಾಡು ಒಟ್ಟು ಮೀನು ಹಿಡುವಳಿಯಲ್ಲಿ ಭಾರತ ಪ್ರಪಂಚದಲ್ಲಿ 7ನೆಯ ಅತಿ ಹೆಚ್ಚು ಮೀನು ಉತ್ಪಾದಿಸುವ ರಾಷ್ಟ್ರವಾಗಿದೆ. ಒಳನಾಡು ಮೀನು ಉತ್ಪಾದನೆಯಲ್ಲಿ ಚೀನ ಪ್ರಥಮ ಸ್ಥಾನದಲ್ಲಿದ್ದರೆ ಭಾರತ ಎರಡನೆಯದು. ಒಳನಾಡು ಹಿಡುವಳಿಯಲ್ಲಿ ಶೇ. 68 ರಷ್ಟು ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಆಗುತ್ತಿದೆ. ಮೀನುಗಾರಿಕೆ ಅನೇಕ ದೇಶಗಳ ಆರ್ಥಿಕ ವ್ಯವಸ್ಥೆಯ ಜೀವಾಳವಾಗಿದೆ.

ಜಲ ಸಂಪನ್ಮೂಲದ ಆಧಾರದಲ್ಲಿ ಎರಡು ವಿಧದ ಮೀನುಗಾರಿಕೆ ಅಸ್ತಿತ್ವದಲ್ಲಿದೆ: ಒಂದು ಕಡಲ ಮೀನುಗಾರಿಕೆ. ಇನ್ನೊಂದು ಒಳನಾಡಿನ ಮೀನುಗಾರಿಕೆ. ಮೀನುಗಾರಿಕೆ ವಿಧಾನದ ಮೇಲೆ ಮತ್ತೆ ಎರಡು ವಿಧಗಳಿವೆ. ಒಂದು ಹಿಡುವಳಿ ಆಧರಿಸಿದ ಮೀನುಗಾರಿಕೆ (ಕ್ಯಾಪ್ಚರ್ ಫಿಶರೀಸ್), ಮತ್ತೊಂದು ಜಲಕೃಷಿ (ಅಕ್ವಾಕಲ್ಚರ್) ಅಥವಾ ಮೀನುಕೃಷಿ.

ಕಡಲ ಮೀನುಗಾರಿಕೆ: ಹಿಡುವಳಿಯನ್ನಾಧರಿಸಿದ ಕಡಲ ಮೀನುಗಾರಿಕೆ ಪ್ರಮುಖವಾದುದು. ಕಡಲ ಮೀನುಗಾರಿಕೆಯನ್ನು ಸ್ಥೂಲವಾಗಿ ಆಳ ಸಮುದ್ರದ ಮೀನುಗಾರಿಕೆ ಮತ್ತು ಕರಾವಳಿ ಮೀನುಗಾರಿಕೆಯೆಂದು ವರ್ಗೀಕರಿಸಬಹುದು. ಭೂಖಂಡದ ನೀರಿನೊಳಗಿನ ಮರಳುದಂಡೆಗಳ ಹಾಗೂ ಮಹಾಸಮುದ್ರಗಳ ದಂಡೆಗಳ ಆಳ ಸಮುದ್ರದ ಮೀನುಗಾರಿಕೆಗಳು ಹೆಚ್ಚು ಕಡಿಮೆ ಸಂಪೂರ್ಣವಾಗಿ 200 ಮೀ ಆಳದ ಮಿತಿಯೊಳಗೇ ನೆಲಸಿರುವುದು ಕಂಡುಬರುತ್ತದೆ. ಆದರೆ ಬಹಳಷ್ಟು ಮೀನುಗಾರಿಕೆಗಳು 100 ಮೀ ಆಳಕ್ಕೆ ಮಾತ್ರ ಸೀಮಿತವಾಗಿವೆ. ಪ್ರಪಂಚದ ಪ್ರಮುಖ ಮೀನುಗಾರಿಕೆ ನೆಲೆಗಳು ಉತ್ತರ ಸಮಶೀತೋಷ್ಣ ವಲಯದಲ್ಲಿದೆ. ಅದರಲ್ಲಿಯೂ ಹೆಚ್ಚಾಗಿ ಉತ್ತರ ಅಕ್ಷಾಂಶ $40^{0}$ – $70^{0}$ ವರೆಗಿನ ನಡುವಣ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ. ಈ ಪ್ರದೇಶಗಳಲ್ಲಿ ಸಾಮಾನ್ಯವಾಗಿ 200ಮೀ ಗಿಂತ ಕಡಿಮೆ ಆಳವಿರುವ ಅನೇಕ ವಿಸ್ತಾರ ಕ್ಷೇತ್ರಗಳಿದ್ದು ಅಮೂಲ್ಯವಾದ ನೀರಿನ ತಳದ ವಾಸಿಗಳಾದ ಅಥವಾ ನೀರಿನ ಕೆಳಸ್ತರಗಳಲ್ಲಿ ಜೀವಿಸುವ ಮೀನುಗಳಿಗೆ ಆಶ್ರಯವಿತ್ತಿರುವ ನೆಲೆಗಳಾಗಿವೆ. ಇಂಥ ಮೀನುಗಳನ್ನೇ ಅವಲಂಬಿಸಿರುವ ಅಸಂಖ್ಯಾತ ಎಳೆಬಲೆಯಿಂದ (ಟ್ರಾಲ್) ಮೀನು ಹಿಡಿಯುವ ಕೈಗಾರಿಕೆಗಳಿವೆ. ಉತ್ತರದ ಸಮುದ್ರಗಳಲ್ಲಿ ಮೀನುಗಾರಿಕೆಗಳ ಕೇಂದ್ರೀಕರಣ ಯಾವ ರೀತಿ ಇದೆ ಎನ್ನುವುದು ಪ್ರಪಂಚದ ಒಟ್ಟು ಉತ್ಪನ್ನದ ಶೇ.70ರಷ್ಟು ಅಮೆರಿಕ, ಕೆನಡ, ಜಪಾನ್, ಗ್ರೇಟ್‌ಬ್ರಿಟನ್, ಫ್ರಾನ್ಸ, ಸ್ಪೇನ್, ನಾರ್ವೆ, ಚೀನ ಹಾಗೂ ರಷ್ಯದಂಥ ರಾಷ್ಟ್ರಗಳು ಒಟ್ಟುಗೂಡಿ ಪ್ರತಿನಿಧಿಸುವುದರಿಂದಲೇ ಅದು ಗೊತ್ತಾಗುತ್ತದೆ. ಇತ್ತೀಚೆಗೆ ಭಾರತದಲ್ಲಿ ಸಮುದ್ರ ಮೀನುಗಾರಿಕೆಯನ್ನು ಚುರುಕಾಗಿ ಅಭಿವೃದ್ಧಿಗೊಳಿಸಲಾಗಿದೆ. ಇದೇ ರೀತಿ ಶ್ರೀಲಂಕ, ಥೈಲೆಂಡ್, ಇಂಡೊನೇಷ್ಯ, ಕಾಂಬೋಡಿಯ, ಬಾಂಗ್ಲಾದೇಶ ಹಾಗೂ ಮಲೇಷ್ಯಯಗಳಲ್ಲಿ ಸಮುದ್ರ ಮೀನುಗಾರಿಕೆಯ ಅಭಿವೃದ್ಧಿಯಾಗಿದ್ದರೂ ಒಳನಾಡಿನ ಮೀನುಗಾರಿಕೆಯೇ ಅತ್ಯಂತ ವಾಣಿಜ್ಯ ಪ್ರಾಮುಖ್ಯವನ್ನು ಪಡೆದಿದೆ.

ಮೀನು ಹಿಡಿಯುವ ಅನೇಕ ಹಾಗೂ ವೈವಿಧ್ಯಮಯ ವಿಧಾನಗಳ ಬಗ್ಗೆ ಮಾಹಿತಿ ವಿಪುಲವಾಗಿದೆ. ಪುರಾತನ ಕಾಲದಲ್ಲಿ ಪೌರಾತ್ಯ ದೇಶಗಳಲ್ಲಿ ಪಳಗಿಸಿದ ನೀರು ನಾಯಿ, ರೆಮೋರ ಅಥವಾ ಹೀರುಮೀನು ಹಾಗೂ ಕಾರ್ಮೊರೆಂಟ್ ಪಕ್ಷಿ ಮುಂತಾದವುಗಳ ಸಹಾಯದಿಂದ ಮೀನು ಹಿಡಿಯುವ ಪದ್ಧತಿಯಿಂದ ಮೊದಲುಗೊಂಡು ಇತ್ತೀಚಿನ ಆಧುನಿಕ ರೀತಿಯ ವೈವಿಧ್ಯಮಯ ಸಲಕರಣೆಗಳ ಬಳಕೆಯ ಕ್ರಮದ ತನಕ ಸಾಗಿದೆ. ಮೀನುಗಳನ್ನು ಮುಖ್ಯವಾಗಿ ನಾಲ್ಕು ರೀತಿಯಲ್ಲಿ ಹಿಡಿಯಬಹುದು. ಅವೆಂದರೆ ಈಟಿ, ಬೋನು, ಬಲೆ ಮತ್ತು ಗಾಳಗಳು. ಅತ್ಯಂತ ಪ್ರಾಚೀನ ಮೀನು ಹಿಡಿಯುವ ಸಲಕರಣೆಗಳು ನಿಶ್ಚಯವಾಗಿಯೂ ಈಟಿ ಮತ್ತು ಬೋನುಗಳೇ ಆಗಿದ್ದುವು. ಈಗಲೂ ಇವನ್ನು ಪ್ರಪಂಚದ ಅನೇಕ ಭಾಗಗಳಲ್ಲಿ ಉಪಯೋಗಿಸುವುದುಂಟು. ಇಂಥ ಪುರಾತನ ಬೋನುಗಳಿಂದ ಇತ್ತೀಚಿನ ಹೆಚ್ಚು ಸಮರ್ಥವಾದ ಮೀನು ಅಣೆಕಟ್ಟು ಅಥವಾ ಒಡ್ಡುಗಳವರೆಗೆ (ಫಿಶ್ ವಿಯರ್) ಇಂಥ ಮೀನುಗಾರಿಕೆ ವಿಕಸಿಸಿದೆ. ಈ ಮೀನುಅಣೆಕಟ್ಟಿನಲ್ಲಿ ಅನುಸರಿಸುವ ಸಾಮಾನ್ಯ ನಿಯಮವೆಂದರೆ ಮೀನುಗಳನ್ನು ಪ್ರವಾಹಭರತಕ್ಕೆ ಪ್ರವೇಶಿಸುವಂತೆ ಮಾಡಿ ಉಬ್ಬರದ ನೀರಿನ ಇಳಿತದ ಮೇಲೆ ಉಳಿಸಿಕೊಂಡು ಅನಂತರ ಅವುಗಳನ್ನು ಹಿಡಿಯುವುದು. ಈಗಲೂ ಈ ಪದ್ಧತಿ ಅನೇಕ ಕಡೆಗಳಲ್ಲಿ ರೂಢಿಯಲ್ಲಿದೆ. ಸರಳ ಮೀನು ಅಣೆಕಟ್ಟುಗಳಿಂದ ಮುಂದಕ್ಕೆ ವಿಶಾಲವಾದ ಸರಳು ಹಾಗೂ ಕೊಂಬೆಗಳಿಂದ ಒಂದಕ್ಕೊಂದು ಹೆಣೆದು ಮಾಡಿದ ಬೇಲಿಯ ರಚನೆಯವರೆಗೆ ಅಭಿವೃದ್ಧಿಗೊಂಡಿತು. ಇವುಗಳಿಂದ ಕ್ರಮೇಣ ಸ್ಥಿರವಾಗಿ ನೆಲೆಗೊಳಿಸುವ ಬಲೆಗಳು ವಿಕಾಸಗೊಂಡವು. ಬಹುಶಃ ಗಾಳಗಳು ಸಹ ಮಾನವನ ಇತಿಹಾಸದ ಆದಿಯ ಮಜಲಲ್ಲಿಯೇ ಉಪಯೋಗದಲ್ಲಿದ್ದವು. ಅಂತಿಮವಾಗಿ ಅಣೆಕಟ್ಟನ್ನು ಮೀನು ಪ್ರವೇಶಿಸುವುದನ್ನೇ ಕಾಯುತ್ತಾ ಇರುವುದಕ್ಕೆ ಬದಲು ಮೀನಿಗೇ ಬಲೆಯನ್ನು ತರುವ ಪ್ರಯತ್ನಗಳನ್ನು ಮಾಡಲಾಯಿತು. ಈ ಪ್ರಯತ್ನಗಳೇ ಪ್ರಥಮ ಎಳೆಬಲೆ ದೋಣಿಗಳು ಅಥವಾ ದೋಣಿಗಳಿಂದಾಗಲೀ ತೀರದಿಂದಾಗಲೀ ಬಳಕೆಯಾಗುವ ಸೀನ್ ಬಲೆಗಳ ಶೋಧನೆಗೆ ನಾಂದಿಯಾದವು.

ಇತ್ತೀಚಿನ ವಾಣಿಜ್ಯದ ಮೀನುಗಾರಿಕೆಯಲ್ಲಿ ಬಹುತೇಕವಾಗಿ ಉಪಯೋಗಿಸುವ ನಾಲ್ಕು ಪ್ರಧಾನ ವಿಧಾನಗಳೆಂದರೆ ಎಳೆಬಲೆಯಿಂದ ಮೀನು ಹಿಡಿಯುವುದು (ಟ್ರಾಲ್ ಬಲೆಗಳು), ಮೇಲು ಅಂಚಿನಲ್ಲಿ ತೇಲು ಬೆಂಡುಗಳನ್ನು ಕೆಳದಂಚಿನಲ್ಲಿ ಭಾರಗಳನ್ನು ಕಟ್ಟಿ ಮೀನುಗಳನ್ನು ಸುತ್ತುವರಿದು ದಡಕ್ಕೆ ಎಳೆಯಬಹುದಾದ ಬಲೆಗಳಿಂದ ಹಿಡಿಯುವುದು (ಪರ್ಸ್ ಸೀನ್ ಬಲೆಗಳು), ಗಾಳಿಯ ಹರವಿನಲ್ಲಿ ಹೊಡೆದುಕೊಂಡು ಹೋಗುತ್ತಿರುವಾಗ ಕೊಚ್ಚು ಬಲೆ ಹಾಕಿ ಮೀನುಹಿಡಿಯುವುದು (ಗಿಲ್ ನೆಟ್) ಹಾಗೂ ಗಾಳದ ಹುರಿಯಿಂದ ಮೀನು ಹಿಡಿಯುವುದು (ಲಾಂಗ್ ಲೈನ್) . ಪ್ರತಿಯೊಂದು ವಿಧಾನ ಒಂದು ವಿಶಿಷ್ಟ ಬಗೆಯ ಸಾಧನದ ಉಪಯೋಗದಿಂದೊಡಗೂಡಿ ನಿರ್ದಿಷ್ಟ ಜಾತಿಯ ಮೀನುಗಳನ್ನು ಹಿಡಿಯುವುದಕ್ಕೆ ಯೋಜಿತವಾಗಿದೆ. ಎಳೆಬಲೆ ದೋಣಿಗಳು. ಸೀನ್ ಬಲೆ ದೋಣಿಗಳು ಹಾಗೂ ಗಾಳದ ಹುರಿಯದೋಣಿಗಳು ವಿಶೇಷವಾಗಿ ಕಾಡ್, ಹ್ಯಾಡಕ್, ಹೇಕ್, ಹ್ಯಾಲಿಬಟ್, ಪ್ಲೇಸ್ ಮತ್ತು ಚಪ್ಪಟೆ ಮೀನುಗಳಂಥ ನೀರಿನ ತಳದಲ್ಲಿ ವಾಸಿಸುವ ಮೀನುಗಳನ್ನು ಹಿಡಿಯಲು ಉಪಯುಕ್ತವಾದರೆ ಹೆರ್ರಿಂಗ್, ಪಿಲ್‌ಚಾರ್ಡ್ ಮತ್ತು ಬಂಗುಡೆ ಮುಂತಾದ ವಿಸ್ತಾರಸಮುದ್ರದ ಮೇಲಿನ ಮೀನುಗಳನ್ನು ಹಿಡಿಯಲು ಕೊಚ್ಚುಬಲೆ ದೋಣಿ ಸಹಾಯಕ.

ಸಮತಲವಾಗಿದ್ದು ಶಂಖಾಕೃತಿಯುಳ್ಳ ಬಲೆಯೇ ಎಳೆಬಲೆ. ಇದರ ಒಂದು ತುದಿಯಲ್ಲಿ ಅಗಲವಾದ ಬಾಯಿ ಇದೆ. ಇನ್ನೊಂದು ತುದಿ ಚೂಪಾಗಿ ಹೋಗುತ್ತ ಕಟ್ಟಕಡೆಯಲ್ಲಿ ಚೀಲ ಅಥವಾ ಸಂದಿಯಲ್ಲಿ (ಕಾಡ್ ಎಂಡ್) ಅಂತ್ಯಗೊಳ್ಳುತ್ತದೆ. ಈ ಬಲೆಯ ಉದ್ದ ಸು.30ಮೀ ವಿಸ್ತಾರವಾದ ಈ ಚೀಲ ಹಡಗಿನ ಮೇಲಿರುವ ಒಂದು ಬಲಿಷ್ಠ ಎತ್ತುಗೆಯಂತ್ರಕ್ಕೆ ಜೋಡಣೆಗೊಂಡಿದ್ದು ಹಡಗಿನ ಹಗ್ಗಗಳ ಸಹಾಯದಿಂದ ಸಮುದ್ರ ತಳದ ಉದ್ದಕ್ಕೂ ನಿಧಾನವಾಗಿ ಎಳೆಯಲ್ಪಡುತ್ತದೆ. ಮೀನುಗಳು ಒಂದು ಸಲ ಬಲೆಯೊಳಕ್ಕೆ ಬಂದರೆ ಬಲೆಯಿಂದ ಹೊರಕ್ಕೆ ಈಜಿಕೊಂಡು ಹೋಗದಂತೆ ಕವಾಟದಂತಿರುವ ವಿಶೇಷ ಸಾಧನಗಳು ತಡೆಯುತ್ತವೆ. ಬಲೆಯ ಕೆಳಗಿನ ಅಂಚಾಗಿ ರೂಪುಗೊಂಡಿರುವ ಪಾದಹಗ್ಗ ಮುಖ್ಯವಾಗಿ ಮರಳಿನಲ್ಲಿ ಹುಗಿದು ನೆಲಸಿರುವ ಚಪ್ಪಟೆಮೀನುಗಳಂಥ ಮೀನುಗಳನ್ನು ಎಬ್ಬಿಸಲು ನೆರವಾಗುತ್ತದೆ. ಸು. 12–15 ಮೀ ಉದ್ದದ ದಪ್ಪ ಮರದ ತೊಲೆಯನ್ನು ಬಾಯಿಯ ಮೇಲಿನ ಅಂಚಿನಲ್ಲಿ ಜೋಡಿಸಲಾಗಿರುವ ತೊಲೆ ಎಳೆಬಲೆಯನ್ನು (ಬೀಮ್ ಟ್ರಾಲ್) ಸಂಶೋಧನೆಯ ಉದ್ದೇಶಗಳಿಗಾಗಿ ಉಪಯೋಗಿಸುವುದುಂಟು. ಆದರೆ ವಿಶೇಷವಾಗಿ ಅತ್ಯಂತ ವ್ಯಾಪಕವಾಗಿ ಉಪಯೋಗಿಸುವ ಬಲೆ ಎಂದರೆ ಅಟ್ಟರ್ ಎಳೆಬಲೆ. ಇದರ ಬಾಯಿಯ ಸುತ್ತ ಮರದ ತೊಲೆಯ ರಚನೆಯಿಲ್ಲ. ಬಲೆಯ ಬಾಯಿ 2–8 ಮೀ ಉದ್ದದ ಹಾಗೂ 1–2 ಮೀ ಎತ್ತರದ ಭಾರವುಳ್ಳ ಕಬ್ಬಿಣದಿಂದ ಕೂಡಿದ ಮರದಿಂದ ರಚಿತವಾದ ಎರಡು ದೊಡ್ಡ ಬಾಗಿಲುಗಳು ಅಥವಾ ಅಟ್ಟರ್ ಹಲಗೆಗಳ ಸಹಾಯದಿಂದ ತೆರೆದಿರುತ್ತದೆ. ಸಮುದ್ರತಳದ ಉದ್ದಕ್ಕೂ ಈ ಬಲೆಯನ್ನು ನಿಧಾನವಾಗಿ ಎಳೆದಾಗ ನೀರಿನ ಪ್ರತಿರೋಧ ಶಕ್ತಿ ಎರಡು ಬಾಗಿಲುಗಳನ್ನು ದೂರಕ್ಕೆ ತಳ್ಳುವುದರಿಂದ ಬಲೆಯ ಬಾಯಿ ಹೆಚ್ಚು ತೆರೆಯುತ್ತದೆ.

ಅನೇಕ ರಾಷ್ಟ್ರಗಳಲ್ಲಿ ವಿವಿಧ ರೀತಿಯ ಸೀನ್ ಬಲೆಗಳ ಉಪಯೋಗವಿದೆ. ಸೀನ್ ಬಲೆ ಉದ್ದವಾಗಿದ್ದು ಇದರ ಮೇಲಿನ ಅಂಚಿನಲ್ಲಿ ತೇಲುಬೆಂಡುಗಳನ್ನು ಕೆಳಗಿನ ಅಂಚಿನಲ್ಲಿ ಭಾರಗಳನ್ನು ಕಟ್ಟಲಾಗಿರುತ್ತದೆ. ಈ ಬಲೆಯನ್ನು ಮೀನಿನ ಒಂದು ಹಿಂಡು ಕಂಡುಬಂದಾಗ ಅದನ್ನು ಸುತ್ತುವರಿಯುವಂತೆ ಮಾಡಿ ಮೀನುಗಳನ್ನು ಬಲೆಯಲ್ಲಿ ಬಂಧಿಸಲಾಗುತ್ತದೆ. ಅನಂತರ ಸುಲಭವಾಗಿ ಹಿಡಿದು ತೆಗೆದುಕೊಳ್ಳಲು ಸಾಧ್ಯವಾಗುವಂತೆ ಕ್ರಮಕ್ರಮವಾಗಿ ದೋಣಿಯ ಹತ್ತಿರಕ್ಕೆ ಬಲೆಯನ್ನು ಎಳೆಯುತ್ತಾರೆ. ಈ ಬಲೆ ಸಾಮಾನ್ಯವಾಗಿ ಚಲಿಸುತ್ತಿರುವ ಒಂದು ದೋಣಿಯಿಂದ ಬಿಡಲ್ಪಡುವುದು ಅಥವಾ ಮೀನುಹಿಂಡನ್ನು ಒಂದು ವೃತ್ತ ಅಥವಾ ಅರ್ಧ ವೃತ್ತದಲ್ಲಿ ಸುತ್ತುವರಿಯುವಂತೆ ದೋಣಿಯಿಂದ ಹಾಯಿಸಲ್ಪಡುವುದು. ಕೊನೆಯಲ್ಲಿ ವಿಶೇಷ ಎತ್ತುಗೆ ಯಂತ್ರದ ಸಹಾಯದಿಂದ ದೋಣಿಯೊಳಕ್ಕೆ ಇಲ್ಲವೆ ಹಗ್ಗದ ಸಹಾಯದಿಂದ ದಡದ ಮೇಲಕ್ಕೆ ಎಳೆಯಲಾಗುತ್ತದೆ.

ಪರ್ಸ್‌ಸೀನ್ ಎಂಬುದು ಚೀಲ ಬಲೆಗಳ ಪೈಕಿ ವಿಶೇಷ ತೆರನಾದದ್ದು. ಇದರಿಂದ ಬಂಗುಡೆ, ಟ್ಯೂನ ಹೆರ್ರಿಂಗ್ ಹಾಗೂ ಮೆನ್‌ಹ್ಯಾಡೆನ್‌ನಂಥ ಗುಂಪುಗುಂಪಾಗಿ ಈಜುವ ಮೇಲಿನ ಸ್ತರದಲ್ಲಿರುವ ಮೀನುಗಳನ್ನು ಹಿಡಿಯಲು ಸಾಧ್ಯವಾಗುತ್ತದೆ. ಈ ಬಲೆಯನ್ನು ಕೊಂಡೊಯ್ಯುವ ದೋಣಿಗಳಿಗೆ ಪರ್ಸ್‌ಸೀನ್ ದೋಣಿಗಳೆಂದು ಕರೆಯುತ್ತಾರೆ. ಇದರೊಂದಿಗೆ ಒಂದು ಚಿಕ್ಕ ದೋಣಿಯಿದ್ದು ಇದನ್ನು ಡಿಂಗ ಎಂದು ಕರೆಯುತ್ತಾರೆ. ಮೀನಿನ ಹಿಂಡು ಕಾಣಿಸಿಕೊಂಡಾಗ ಅದನ್ನು ಸುತ್ತುವರಿದು ಬಂಧಿಸುವಂತೆ ಈ ಬಲೆಯನ್ನು ಹೂಡುತ್ತಾರೆ. ತರುವಾಯ ಬಲೆಯನ್ನು ಒಂದು ರೀತಿಯ ಚೀಲ ಅಥವಾ ಕೋಶದೊಳಕ್ಕೆ ಒಟ್ಟಿಗೆ ತಳದಲ್ಲಿ ಉಂಗುರಗಳ ಮೇಲೆ ಚಲಿಸುವ ಹಗ್ಗದ ಸಹಾಯದಿಂದ ಎಳೆಯುತ್ತಾರೆ. ಬಿರಟೆಯಿಂದ ರಚಿತವಾದ ತೇಲುವ ಚೆಂಡುಗಳಿಂದ ಬಲೆಯ ಶಿಖರ ನೆಟ್ಟಗೆ ನಿಲ್ಲುವಂತೆ ಮಾಡಲಾಗುವುದು.

ಇತ್ತೀಚೆಗೆ ಬ್ರಿಟಿಷ್ ಮೀನುಗಾರಿಕೆಯಲ್ಲಿ ಡೇನಿಷ್ ಸೀನ್ ಅಥವಾ ಸ್ನರ್‌ವಾಡ್ ಎಂಬ ಬಲೆಯನ್ನು ಬಳಸಲಾಗುತ್ತದೆ. ಈ ಬಲೆ ಅನೇಕ ಅಂಶಗಳಲ್ಲಿ ಟ್ರಾಲ್ ಹಾಗೂ ಸೀನ್‌ಗಳ ಮಧ್ಯಮ ರೀತಿಯದು. 50 ಮೀ ಗಿಂತಲೂ ಉದ್ದವಿರುವ ಈ ಬಲೆಯ ಪ್ರತಿಯೊಂದು ಪಾರ್ಶ್ವಕ್ಕೂ ಸು. 1 ಕಿಮೀಗೂ ಮೀರಿದ ಹಡಗಿನ ಎಳೆಯುವ ಹಗ್ಗವನ್ನೂ ಕಟ್ಟಲಾಗಿರುತ್ತದೆ. ಬಲೆಗೆ ಹೊಂದಿಕೊಂಡಂತೆ 15–20 ಮೀ ಉದ್ದದ ಒಂದು ದೊಡ್ಡ ಚೀಲ ಇರುತ್ತದೆ. ದಡದಮೇಲೆ ಎಳೆದು ತರಲಾಗದ ಈ ಬಲೆಯನ್ನು ತೀರದಾಚೆಯ ನೀರಿನಲ್ಲಿರುವ ಒಂದು ದೋಣಿಯಿಂದ ಕಾರ್ಯಾಚರಣೆಗೊಳಿಸುತ್ತಾರೆ.

ಕೊಚ್ಚುಬಲೆಗಳ (ಗಿಲ್ ನೆಟ್) ಕಾರ್ಯವಿಧಾನದ ಮೂಲತತ್ತ್ವ ಎಳೆಬಲೆ ಹಾಗೂ ಸೀನ್ ಬಲೆಗಳಿಗಿದ್ದಕ್ಕಿಂತ ಭಿನ್ನ ರೀತಿಯದು. ಕಾರ್ಯನಿರ್ವಹಣೆಯಲ್ಲಿ ಇದು ನಿಜವಾಗಿಯೂ ಮೀನುಗಳನ್ನು ಸಮೀಪಿಸುವುದಿಲ್ಲ. ಆದರೆ ಈ ಬಲೆಯನ್ನು ಸ್ಥಿರವಾಗಿ ನೆಲೆಗೊಂಡಿರುವ ಬಲೆ ಮತ್ತು ಬೋಯುಗಳಂತಲ್ಲದೆ ನಿಧಾನವಾಗಿ ಚಲಿಸುತ್ತಿರುವ ಹಡಗಿಗೊ ಇಲ್ಲವೆ ತೇಲುತ್ತಿರುವ ಈಜುಬುರುಡೆಗೂ ಕಟ್ಟಲಾಗಿರುತ್ತದೆ. ಈ ಬಲೆ ಭಾರ ಹಾಗೂ ಗಾಳಿಯ ಪ್ರಭಾವದಿಂದಾಗಿ ಹಡಗಿನ ಅಥವಾ ತೇಲುಬುರುಡೆಯ ಜೊತೆಗೇ ಚಲಿಸುತ್ತದೆ. ಕೊಚ್ಚುಬಲೆಯಲ್ಲಿ ಹಿಡಿಯುವಂಥ ಮೀನುಗಳೆಂದರೆ ಸಮುದ್ರತಳದ ಮೇಲೆ ನೀರಿನ ಸ್ತರಗಳಲ್ಲಿ ಈಜುತ್ತ ತಮ್ಮ ಕಾಲವನ್ನು ಕಳೆಯುವ, ಆದರೆ ಹಗಲಿನಲ್ಲಿ ಸಂಪೂರ್ಣವಾಗಿ ಬಹಳ ಆಳಕ್ಕೆ ಇಳಿದು ರಾತ್ರಿಯಲ್ಲಿ ನೀರಿನ ಮೇಲ್ಮೈಯನ್ನು ಸಮೀಪಿಸುವ ಸ್ವಭಾವದ ಮೀನುಗಳು. ರಚನೆಯಲ್ಲಿ ಪ್ರತಿಯೊಂದು ಬಲೆಯೂ ಸು. 12 ಮೀ ಆಳವುಳ್ಳ ಬಲಯುತವಾದ ಜಾಲದ ಒಂದು ಸರಳ ಹರವು. ಅದರ ಮೇಲಿನ ಅಂಚು ಬಿರಟೆಗಳಿಂದ ತೇಲುವಂತಿದ್ದರೆ ಕೆಳಗಿನ ಅಂಚು ಸೀಸದಗುಂಡುಗಳಿಂದ ಕೆಳಕ್ಕೆ ಜಗ್ಗುವಂತಿರುತ್ತದೆ. ರಾತ್ರಿ ಸಮೀಪಿಸಿದಂತೆ ಭರತದೊಂದಿಗೆ ಈ ಬಲೆಗಳನ್ನು ಬೀಸುತ್ತಾರೆ. ಒಂದೇ ಹಡಗಿನಿಂದ ಸು. 85 ಬಲೆಗಳನ್ನು ಒಂದೇ ಕಾಲದಲ್ಲಿ ಉಪಯೋಗಿಸುತ್ತಾರೆ. ಆಗ ನೀರಿನ ಮೇಲ್ಮೈಯಲ್ಲಿ ಅಥವಾ ಕೆಲವು ಮೀಟರು ಆಳದಲ್ಲಿ ಸು. 5 ಕಿಮೀ ಉದ್ದದವರೆಗೆ ನೆಟ್ಟಗೆ ನಿಂತು ನೇತಾಡುತ್ತಿರುವ ಜಾಲದ ಒಂದು ಸಂಪೂರ್ಣ ಭಿತ್ತಿಯಂತೆಯೇ ಇವು ತೋರಿ ಬರುತ್ತವೆ. ಜಾಲದ ಭಿತ್ತಿಯ ಒಂದು ಕೊನೆಯಿಂದ ಕಟ್ಟಿರುವ ಹಡಗು ಭರತದೊಂದಿಗೆ ಅನೇಕ ಗಂಟೆಗಳ ತನಕ ಚಲಿಸುತ್ತಿರುತ್ತದೆ. ಈ ಬಲೆಯ ಜಾಲರಂಧ್ರಗಳು ಮೀನುಗಳ ತಲೆಯನ್ನು ನೂಕಲು ಮಾತ್ರ. ಆದರೆ ದೇಹವನ್ನು ಹೊರಕ್ಕೆ ತಳ್ಳಲು ಸಾಧ್ಯವಾಗದಷ್ಟು ಚಿಕ್ಕವಾಗಿರುತ್ತವೆ. ಈ ಜಾಲರಂಧ್ರದೊಳಗೆ ಒಂದು ಸಲ ಮೀನಿನ ಕಿವಿರುಮುಚ್ಚಳಗಳು ಹೊಕ್ಕರೆ ಮೀನಿಗೆ ತನ್ನ ತಲೆಯನ್ನು ಅದರಿಂದ ಬಿಡಿಸಿಕೊಳ್ಳಲು ಅಸಾಧ್ಯವಾಗುತ್ತದೆ. ಹೀಗೆ ಕತ್ತಲೆಯಲ್ಲಿ ಅಸಂಖ್ಯಾತ ಮೀನುಗಳು ಬಲೆಯೊಳಕ್ಕೆ ಈಜಿಕೊಂಡು ಬಂದು ಅದಕ್ಕೆ ಸಿಕ್ಕಿಕೊಳ್ಳುತ್ತವೆ. ಬೆಳಗಾದಾಗ ಹಡಗಿಗೆ ಈ ಬಲೆಗಳೆಲ್ಲವನ್ನೂ ಎಳೆದುಕೊಂಡು ಬಂದು ಬಲೆಯಿಂದ ಮೀನುಗಳನ್ನು ಬಿಡಿಸಿ ಸಂಗ್ರಹಿಸುತ್ತಾರೆ.

ಕಾಡ್ ಹಾಗೂ ಹ್ಯಾಲಿಬಟ್‌ಗಳಂಥ ತಳವಾಸಿ ಮೀನುಗಳನ್ನು ಹಿಡಿಯುವ ಪದ್ಧತಿಯೆ ಗಾಳದ ಹುರಿಯಿಂದ ಮೀನು ಹಿಡಿಯುವ ಪದ್ಧತಿಯೆನಿಸುತ್ತದೆ (ಲಾಂಗ್ ಲೈನಿಂಗ್). ನ್ಯೂ ಫೌಂಡ್‌ಲೆಂಡ್ ತೀರಗಳಲ್ಲಿ ಈ ವಿಧಾನದಿಂದ ಕಾರ್ಯಾಚರಣೆಯಲ್ಲಿದ್ದ ಕಾಡ್ ಮೀನುಗಾರಿಕೆ ಪ್ರಪಂಚದಲ್ಲಿಯೇ ಪ್ರಖ್ಯಾತವಾಗಿತ್ತು. ಹಳೆಯ ಕೈಗಾಳದ ಹುರಿಯ ಬಳಕೆ ಈಗ ಬಹು ವಿರಳ. ಬದಲಿಗೆ ಉದ್ದಗಾಳದ ಹುರಿಯ ಉಪಯೋಗ ರೂಢಿಗೆ ಬಂದಿದೆ. ಇದು ಸು. 4000 ಮೀ ಗಿಂತ ಹೆಚ್ಚು ಉದ್ದವಿದ್ದು 0.75–2 ಮೀ ಉದ್ದದ ಗಿಡ್ಡಕೊಕ್ಕೆ ಹುರಿಗಳಿಗೆ (ಸ್ನೂಡ್ಸ್) ನಿಯಮಿತವಾದ ಅಂತರಗಳಲ್ಲಿ ಕಟ್ಟಿರುವ ಕೊಕ್ಕೆಗಳನ್ನು ಹೊಂದಿರುತ್ತದೆ. ಬಲೆಯಿರುವ ಸ್ಥಳವನ್ನು ಪತ್ತೆಮಾಡಲು ಅನುಕೂಲವಾಗುವಂತೆ ಒಂದು ತೇಲು ಬುರುಡೆ ಅಥವಾ ತೇಲುಚೆಂಡನ್ನು ಪ್ರತಿಯೊಂದು ದಾರಕ್ಕೂ ಕಟ್ಟಲಾಗಿರುತ್ತದೆ.

ಒಂದು ದೊಡ್ಡ ಮೋಟರ್ ಲೈನರಿನ ಒಂದು ಏಕೈಕ ಗಾಳದ ಹುರಿಯಮೇಲೆ ಕೊಕ್ಕೆಗಳ ಸಂಖ್ಯೆ 1000–5000 ರಷ್ಟಿರಬಹುದು. ಈ ಕೊಕ್ಕೆಗಳಿಗೆ ಸಿಕ್ಕಿಸುವ ಪ್ರಾಣಿಗಳೆಂದರೆ ಎರೆಗಳು. ಶಂಖ ಮೀನು, ಜೋಡು ಚಿಪ್ಪಿನ ಪ್ರಾಣಿಗಳು, ಕಟಲ್ ಮೀನುಗಳು ಹಾಗೂ ಹೆರ್ರಿಂಗ್‌ಗಳನ್ನೊಳಗೊಂಡಂತೆ ವಿವಿಧ ಬಗೆಯ ಮೀನುಗಳು. ಗಾಳದ ಹುರಿಗಳನ್ನು ಬೆಳಗ್ಗೆ ಇಲ್ಲವೆ ಮಧ್ಯಾಹ್ನ ಕಾಲಗಳಲ್ಲಿ ಹೂಡುತ್ತಾರೆ. ಈಚೆಗೆ ಸಾಮಾನ್ಯವಾಗಿ ಗಾಳದ ಹುರಿಯಿಂದ ಸ್ಯಾಲ್ಮನ್, ಕೆಂಪು ಸ್ನಾಪರ್, ಟ್ಯೂನ, ಹಾಲು ಹೆಂಚು, ಶಾರ್ಕ್ ಮೀನುಗಳನ್ನು ಹಿಡಿಯುವುದುಂಟು.

ಮೀನುಗಾರಿಕೆಯಲ್ಲಿ ಮೀನುಗಳ ಪಾತ್ರ ಹಿರಿದಾದರೂ ಸೀಗಡಿಗಳು (ಪ್ರಾನ್ಸ್) ಸಿಂಪಿಗಳು (ಆಯಿಸ್ಟರ್ಸ್), ಮರುವಾಯಿಗಳು (ಕ್ಲ್ಯಾಮ್ಸ್), ಸಮುದ್ರನಳ್ಳಿಗಳು (ಲಾಬ್‌ಸ್ಟರ್ಸ್), ಏಡಿಗಳು (ಕ್ರ್ಯಾಬ್ಸ್) ಮುಂತಾದವು ಅನಂತರದ ಸ್ಥಾನವನ್ನು ಆಕ್ರಮಿಸುತ್ತವೆ. ಇವು ಕೂಡ ಈಗ ವಾಣಿಜ್ಯದ ಮೀನುಗಾರಿಕೆಯ ಮುಖ್ಯ ಅಂಗವೇ ಆಗಿದ್ದು ಭಾರತವನ್ನು ಒಳಗೊಂಡಂತೆ ಅನೇಕ ರಾಷ್ಟ್ರಗಳಲ್ಲಿ ಸೀಗಡಿ ಮೀನುಗಾರಿಕೆ ಇತ್ತೀಚೆಗೆ ವಿದೇಶಿ ವಿನಿಮಯ ಗಳಿಸುವಂಥ ಉದ್ಯಮವಾಗಿ ರೂಪುಗೊಂಡಿದೆ. ಅಳಿವೆಗಳಲ್ಲಿ, ತೀರಪ್ರದೇಶಗಳಲ್ಲಿ ಹಾಗೂ ಆಳಸಮುದ್ರಗಳಲ್ಲಿ ವಾಸಮಾಡುವ ಸೀಗಡಿಗಳನ್ನು ಸಾಮಾನ್ಯವಾಗಿ ಯಾಂತ್ರೀಕೃತ ದೋಣಿಗಳ ಎಳೆಬಲೆಗಳಿಂದ ಹಿಡಿಯುತ್ತಾರೆ. ಜಪಾನ್ ಹಾಗೂ ಇತರ ಕೆಲವು ರಾಷ್ಟ್ರಗಳು ಈಚೆಗೆ ಚೌಳು ನೀರಿನಲ್ಲಿ ಸೀಗಡಿಕೃಷಿಯನ್ನು ಕೈಗೊಂಡಿವೆ. ಸಿಂಪಿಗಳು ಹಾಗೂ ಮರುವಾಯಿಗಳು ನೀರಿನ ಅಲ್ಪ ಸೆಳೆತವಿರುವ ಆಳವಿಲ್ಲದ ನೀರಿನಲ್ಲಿ ವಾಸಿಸುತ್ತಿದ್ದು. ಇಂಥವು ಕೂಡ ನದಿ,

ಸಮುದ್ರಗಳ ಮೀನುಗಾರಿಕೆಯಲ್ಲಿ ಮುಖ್ಯವೆನಿಸಿವೆ. ಈಗ ನದಿಗಳಲ್ಲಿ ಸಿಂಪಿ ಮತ್ತು ಮರುವಾಯಿಗಳನ್ನು ಕೃಷಿಮಾಡುವ ಮೂಲಕ ವಿಸ್ತಾರವಾದ ಒಂದು ಉದ್ಯೋಗವೇ ಸ್ಥಾಪಿತವಾಗಿದೆ. ಇಂಥಲ್ಲಿ ಸಿಂಪಿಗಳು ಹಾಗೂ ಮರುವಾಯಿಗಳಿಗೆ ರಕ್ಷಣೆಯನ್ನು ಕೊಡಲು ಬೇಲಿಯನ್ನು ಕಟ್ಟಿ ಅವನ್ನು ನಾಟಿ ಮಾಡಿ ಬೆಳೆಸಲಾಗುತ್ತದೆ. ಯುಕ್ತಕಾಲದಲ್ಲಿ ಅವನ್ನು ಇತರ ಬೆಳೆಗಳಂತೆಯೇ ಸಿಂಪಿಗಳನ್ನು ಕಬ್ಬಿಣದಿಂದ ಮಾಡಿದ ಉದ್ದವಾದ ಹಿಡಿಗಳುಳ್ಳ ಸಿಂಪಿ ಇಕ್ಕಳಗಳಿಂದ ಮರುವಾಯಿಗಳನ್ನು ವಿಶಿಷ್ಟ ಬಗೆಯ ಹಲುಬೆಗಳಿಂದ ಸಂಗ್ರಹಿಸಲಾಗುತ್ತದೆ. ಸಮುದ್ರ ನಳ್ಳಿಗಳನ್ನು ಹಾಗೂ ಏಡಿಗಳನ್ನು ಮರದ ಅಥವಾ ತಂತಿಯ ಬೋನುಗಳಿಂದ ಹಿಡಿಯಲಾಗುತ್ತದೆ. ಸರ್ವೋತ್ಕೃಷ್ಟವಾದ ಸಮುದ್ರ ನಳ್ಳಿಗಳು ಮತ್ತು ಮರುಪಾಯಿಗಳು ಕೆನಡದಿಂದ ; ಸಿಂಪಿಗಳು ಅಮೆರಿಕ, ರೋಡ್ ದ್ವೀಪಗಳು, ಕನೆಕ್ಟಿಕಟ್, ಲಾಂಗ್ ಐಲೆಂಡ್‌ಗಳು, ಚೆಸಾಪೀಕ್ ಕೊಲ್ಲಿ, ಭಾರತ ಮತ್ತು ಇತರ ರಾಷ್ಟ್ರಗಳಿಂದ ದೊರಕುತ್ತವೆ. ನ್ಯೂ ಇಂಗ್ಲೆಂಡ್‌ನ ತೀರ ಇಚ್ಚಿಪ್ಪು ಮೀನುಗಾರಿಕೆಗೆ ಹೆಸರಾಗಿದೆ.

ಸಮುದ್ರತೀರದಲ್ಲಿ ಕಂಡುಬರುವ ಮೀನು ಹಿಡಿಯುವಿಕೆಗೆ ಕರಾವಳಿ ಮೀನುಗಾರಿಕೆ ಎಂದು ಹೆಸರು. ಇದರಲ್ಲಿ ಮೊದಲನೆಯ ಪದ್ಧತಿಯೆಂದರೆ ವಿವಿಧ ರೀತಿಯ ಬಲೆಗಳಿಂದ ಪರಂಪರಾನುಗತವಾಗಿ ನಡೆದುಬಂದ ಮಾನವಶಕ್ತಿಯಿಂದ ನಡೆಸಲಾಗುವ ಸಾಂಪ್ರದಾಯಿಕ ಮೀನುಗಾರಿಕೆ. ಯಾಂತ್ರೀಕೃತದೋಣಿಗಳಿಂದ ವೈವಿಧ್ಯಮಯ ಬಲೆಗಳನ್ನು ಬಳಸಿ ಮೀನು ಹಿಡಿಯುವ ಮೀನುಗಾರಿಕೆ ಮತ್ತೊಂದು. ಹೀಗೆ ಹಿಡಿದ ಮೀನುಗಳನ್ನು, ರಫ್ತಿಗಾಗಿ ಸಂಸ್ಕರಣ ಮಾಡುವುದು ಮೀನುಗಾರಿಕೆಯ ಮೂರನೆಯ ಹಂತ. ರಂಪಣಿ, ಕಿವಿರುಬಲೆ, ಎಸೆಬಲೆ ಮತ್ತು ಇತರ ಬಲೆಗಳಿಂದ ತೀರದುದ್ದಕ್ಕೂ ಸಮುದ್ರ ಮೀನುಗಳಾದ ಬಂಗುಡೆ, ಬೂತಾಯಿ ಮುಂತಾದವುಗಳನ್ನು ಹಿಡಿಯುತ್ತಾರೆ. ಯಾಂತ್ರೀಕೃತ ದೋಣಿಗಳಿಂದ ಅಟ್ಟರ್ ಟ್ರಾಲ್ ಎಳೆಬಲೆ, ಸಂಚಿಬಲೆ (ಪರ್ಸೀನ್) ಇತ್ಯಾದಿ ಸಾಧನಗಳನ್ನು ಬಳಸಿ ಹೇರಳ ಮೊತ್ತದಲ್ಲಿ ಮೀನುಗಳನ್ನು ಹಿಡಿಯುವುದುಂಟು. ಇದಕ್ಕೋಸ್ಕರವಾಗಿಯೇ ಸುಧಾರಿತ ಯಾಂತ್ರಿಕ ದೋಣಿಗಳನ್ನು ರಚಿಸುವುದಕ್ಕೆ ದೋಣಿ ನಿರ್ಮಾಣ ಕೇಂದ್ರಗಳು ಸ್ಥಾಪಿತವಾಗಿವೆ. ಅಂತೆಯೇ ಮೀನುಗಾರರ ತರಬೇತಿ ಕೇಂದ್ರಗಳ ಸ್ಥಾಪನೆಯೂ ಆಗಿದೆಯಲ್ಲದೆ ಮೀನುಗಾರಿಕೆ ಬಂದರುಗಳ ಹಾಗೂ ಇಳಿದಾಣಗಳ ನಿರ್ಮಾಣವೂ ನಡೆಯುತ್ತಿದೆ.

ಒಳನಾಡು ಮೀನುಗಾರಿಕೆ: ಸಾಮಾನ್ಯವಾಗಿ ಕೆರೆ, ಕೊಳ, ನದಿ, ಸರೋವರ ಮುಂತಾದ ಸಿಹಿನೀರು ಪ್ರದೇಶಗಳಲ್ಲಿ ಮತ್ತು ಅಳಿವೆಗಳಲ್ಲಿ ಮೀನುಗಳನ್ನು ಹಿಡಿಯುವ ಮತ್ತು ಸಾಕಾಣಿಕೆ ಪದ್ಧತಿಗೆ ಒಳನಾಡು ಮೀನುಗಾರಿಕೆ ಎಂದು ಹೆಸರು. ಸಿಹಿನೀರು ಪ್ರದೇಶಗಳು ವೈವಿಧ್ಯಮಯವಾಗಿರುವಂತೆಯೇ ಇವುಗಳಲ್ಲಿ ಮೀನು ಹಿಡಿಯಲು ವಿವಿಧ ರೀತಿಯ ಯಥೋಚಿತ ಸಾಧನ ಸಲಕರಣೆಗಳೂ ಉಪಯೋಗಿಸಲ್ಪಡುತ್ತವೆ.

ಒಳನಾಡು ಮೀನುಗಾರಿಕೆಯಲ್ಲಿ ಉಪಯುಕ್ತವೆನಿಸುವ ಪ್ರಮುಖ ಸಾಧನಗಳೆಂದರೆ– ತೆಪ್ಪ, ತೋಡು ದೋಣಿ ಮತ್ತು ಹರಿಗೋಲುಗಳು. ದೋಣಿಗಳಲ್ಲಿ ಹಲಗೆಗಳಿಂದ ನಿರ್ಮಿಸಿದ ದೋಣಿಗಳು ಮತ್ತು ದೊಡ್ಡ ಮೀನು ಹಿಡಿಯುವ ದೋಣಿಗಳು ಬಳಕೆಯಲ್ಲಿವೆ. ಬಾಳೆಯದಿಂಡು ಮತ್ತು ಶೋಲ ಕಡ್ಡಿಗಳಿಂದ ಕಂತೆಗಳನ್ನು ಒಟ್ಟಿಗೆ ಕಟ್ಟಿ ಅದರ ಮೇಲೆ ಊದಿ ಉಬ್ಬಿಸಿದ ಚರ್ಮವನ್ನು ಬಿಗಿದು ಒಂದು ಒರಟು ತೆಪ್ಪವನ್ನು ರಚಿಸಿ ತೆಪ್ಪದ ಮೇಲೆ ಕುಳಿತು ಬಲೆಹಾಕಿ ಮೀನು ಹಿಡಿಯುತ್ತಾರೆ. ಮಗುಚಿಹಾಕಿದ ಮಡಕೆಗಳನ್ನು ಬಿದಿರುಗಳ ಪಟ್ಟಿಯೊಡನೆ ಕೂಡಿಸಿ ಕಟ್ಟಿಹಾಕಿದರೆ ಇನ್ನೊಂದು ರೀತಿಯ ತೆಪ್ಪವಾಗುತ್ತದೆ. ದನ ಹಾಗೂ ಎಮ್ಮೆ ಚರ್ಮವನ್ನು ಉಪಯೋಗಿಸಿ, ಬಿದಿರಿನಿಂದ ರಚಿಸಿದ ದುಂಡಗಿನ ಹರಿಗೋಲನ್ನು ರಚಿಸುವುದುಂಟು. ಇತ್ತೀಚೆಗೆ ಫೈಬರ್ ಗ್ಲಾಸ್‌ನಿಂದ ತಯಾರಿಸಿದ ಸಿಂಥಟಿಕ್ ಹರಿಗೋಲುಗಳೂ ಬಳಕೆಯಲ್ಲಿವೆ. ತೋಡು ದೋಣಿಗಳಲ್ಲಿ ಮುಖ್ಯವಾದವು– ಡೋಂಗ ಮತ್ತು ಏಕ್ಥಾ. ಡೋಂಗ ಹಲಗೆಗಳಿಂದ ರಚಿತವಾಗಿದೆಯಾದರೆ ಏಕ್ಥಾ ತಾಳೆಯಮರದ ಕೆಳಗಿನ ತುದಿಗಳಿಂದ ರಚಿತವಾಗಿದೆ. ಡಿಂಗ್ಹಿನ್ ಮತ್ತು ಚಿಪ್ ಎಂಬವನ್ನು ಹಲಗೆಗಳಿಂದ ನಿರ್ಮಿಸಲಾಗುತ್ತದೆ. ನದಿಗಳಲ್ಲಿ ಮೀನುಹಿಡಿಯುವುದಕ್ಕೂ ಅವುಗಳನ್ನು ಸಾಗಿಸುವುದಕ್ಕೂ ಇವು ಉಪಯುಕ್ತ. ದೊಡ್ಡ ಮೀನು ಹಿಡಿಯುವ ದೋಣಿಗಳು ಒಳ್ಳೆಯ ಮರದಿಂದ ರಚಿತವಾಗಿದ್ದು ಗಟ್ಟಿಮುಟ್ಟಾಗಿಯೂ ಬಲಯುತವಾಗಿಯೂ ಇರುವುವು. ಇವನ್ನು ಹುಟ್ಟುಗಳಿಂದಲೂ ಎಣ್ಣೆಯಂತ್ರಗಳಿಂದಲೂ ನಡೆಸಬಹುದು.

ಸಿಹಿನೀರಿನ ಮೀನುಗಳನ್ನು ಹಿಡಿಯುವ ಸಲಕರಣೆಗಳಲ್ಲಿ ವೈವಿಧ್ಯವಿದೆ. ಅವೆಂದರೆ ಗಾಳದ ಹುರಿ, ಕಿವಿರು ಬಲೆ, ಎಳೆಯುವ ಬಲೆ, ಸಂಚಿ ಬಲೆ, ಎಸೆಯುವ ಬಲೆ, ಬೋನು ಮುಂತಾದವು.

ಗಾಳದ ಹುರಿಗಳಿಂದ ಮೀನುಹಿಡಿಯುವ ಕ್ರಮದಲ್ಲಿ ಮೂರು ವಿಧ: ಗಾಳದ ಕೋಲು ಮತ್ತು ಹುರಿ, ಉದ್ದವಾದ ಗಾಳದ ಹುರಿ ಮತ್ತು ಎಸೆಯುವ ಗಾಳದ ಹುರಿ. ಈ ಎಲ್ಲ ಗಾಳದ ಹುರಿಗಳಿಂದ ಹುಳುಗಳನ್ನೋ ಸೀಗಡಿಗಳನ್ನೋ ಕಳೆಮೀನುಗಳನ್ನೋ ಎರೆಗಳಂತೆ ಉಪಯೋಗಿಸಿ ಮೀಸೆಮೀನು, ಗೆಂಡೆ, ಬಿಳಿಮೀನು (ಮಹಸೀರ್), ಹಾವುಮೀನು, ಕುಚ್ಚುಮೀನು ಮುಂತಾದವನ್ನು ಹಿಡಿಯುತ್ತಾರೆ. ಕಿವಿರು ಬಲೆಗಳು ಹಾಗೂ ಪಾತಾಳಗರಡಿ ಬಲೆಗಳು ಏಕಭಿತ್ತಿಯ ಬಲೆಗಳು. ಮೀನುಗಳು ಇವುಗಳ ಬಲೆಗಳ ಕಣ್ಣುಗಳಲ್ಲಿ ತಮ್ಮ ಕಿವಿರು ಮುಚ್ಚಳದ ಹಿಂದಿನ ಭಾಗದಿಂದ ಸಿಕ್ಕುತ್ತವೆ. ವಿವಿಧ ರೀತಿಯ ಕಿವಿರು ಬಲೆಗಳಿಂದ ವರ್ಷಪೂರ್ತಿ ಗೆಂಡೆಗಳಂಥ ಮೀನುಗಳನ್ನು ಹಿಡಿಯುವುದುಂಟು. ಕೆರೆಗಳಲ್ಲಿ ಸಿಹಿನೀರಿನ ಸರೋವರಗಳಲ್ಲಿ ಸಾಮಾನ್ಯವಾಗಿ ಎಳೆಯುವ ಬಲೆ ಮತ್ತು ತೀರದ ಸೀನ್‌ಬಲೆಗಳಿಂದ ಪರಿಣಾಮಕಾರಿಯಾಗಿ ಮಾಲಾಗಳು. ಗಾರ್‌ಮೀನುಗಳು, ಅರೆಕೊಕ್ಕುಗಳು, ಸಣ್ಣ ಮೀನುಗಳು, ಸೀಗಡಿಗಳು ಮತ್ತು ಏಡಿಗಳನ್ನು ಹಿಡಿಯಲಾಗುತ್ತದೆ. ಸ್ಥಿರವಾದ ನೆಲೆಗೊಳಿಸುವ ಶಂಕ್ವಾಕಾರದ ಸಂಚಿಬಲೆ ಮತ್ತು ಬೆದರು ಗಾಳದ ಹುರಿಗಳಿಂದ ಹೆಚ್ಚಾಗಿ ಮಾಲಾಗಳು, ನೆಮಟಲೋಸ್ ನಾಸಸ್, ಕಾಣೆ, ಮಟ್ಟತಲೆಯ ಮೀನು, ಸೀಗಡಿ, ತುರಗಿಮೀನು, ಬಿಳಿಸುರಗಿಮೀನು ಹಾಗೂ ಕೋಬಿಡ್ ಮೀನುಗಳನ್ನು ಹಿಡಿಯುವುದುಂಟು. ಸ್ಥಿರವಾಗಿ ನಿಂತ ಬೋನುಬಲೆಗಳಾದ ಸ್ಟೇಕ್‌ಬಲೆ ಮತ್ತು ಮುಳುಗು ಬಲೆಗಳಿಂದ ಸರೋವರ ಮೀನುಗಳನ್ನೂ ವಿಶೇಷವಾಗಿ ಸೀಗಡಿಗಳನ್ನೂ ಹಿಡಿಯುತ್ತಾರೆ. ಅತ್ಯಂತ ಸಾಮಾನ್ಯವಾಗಿ ಉಪಯೋಗಿಸುವ ಎಸೆ ಬಲೆಯಿಂದ ಅಳಿವೆ ಹಾಗೂ ನದಿಗಳಲ್ಲಿ ವಿವಿಧ ಮೀನುಗಳನ್ನೂ ಸೀಗಡಿಗಳನ್ನೂ ಹಿಡಿಯುವುದುಂಟು. ಮೀನುಗಳನ್ನು ಹಿಡಿಯಲು ಮೀನು ಬೋನುಗಳೂ ಸಹಾಯಕಾರಿ. ಬೆತ್ತದಿಂದ ಹೆಣೆದು ಮಾಡಿದ ಬೋನುಗಳು ರೂಢಿಯಲ್ಲಿ ಕಡಿಮೆ. ದಂಡಿ, ಆಯಾಕಾರ, ವೃತ್ತಾಕಾರ, ಪಂಜರದ ಬೋನುಗಳೆಂದು ಹೆಸರುವಾಸಿಯಾಗಿದೆ. ಮೀನು ಹಿಡಿಯುವ ಇನ್ನೊಂದು ವಿಶಿಷ್ಟ ವಿಧಾನವೆಂದರೆ ಮೀನುಗಳನ್ನು ನಿಶ್ಚೇತನಗೊಳಿಸಿ ಹಿಡಿಯುವುದು. ಇದರಲ್ಲಿ ಮೂರು ವಿಧಗಳುಂಟು. 1 ಯಾಂತ್ರಿಕ ಜಡಗೊಳಿಸುವಿಕೆ: ಡೈನಾಮೈಟನ್ನು ನೀರಿನಲ್ಲಿ ಆಸ್ಫೋಟಿಸಿ ಮೀನುಗಳನ್ನು ಜಡಗೊಳಿಸಿ ಹಿಡಿಯುವುದಿದೆ. 2 ರಾಸಾಯನಿಕ ಜಡಗೊಳಿಸುವಿಕೆ : ವಿವಿಧ ರೀತಿಯ ವಿಷಗಳಿಂದ ಮೀನುಗಳನ್ನು ಮಂಕುಗೊಳಿಸಿ ಹಿಡಿಯುವುದುಂಟು. 3 ವಿದ್ಯುತ್ತಿನಿಂದ ಜಡಗೊಳಿಸುವಿಕೆ: ವಿದ್ಯುತ್ ಕ್ಷೇತ್ರವನ್ನು ನಿರ್ಮಿಸಿ ಮೀನುಗಳನ್ನು ಮರವಡಿಸಿ ಹಿಡಿಯುವುದು. ಆದರೆ ಈ ವಿಧಾನಗಳು ಅಪಾಯಕಾರಿಯಾದ್ದರಿಂದ ನಿಷೇಧಕ್ಕೊಳಗಾಗಿವೆ

ಸಂಸ್ಕರಣೆ ಮತ್ತು ಮೀನು ಉತ್ಪನ್ನಗಳು: ಮೀನುಗಾರಿಕೆಯಲ್ಲಿ ಮೀನು ಸೆರೆಹಿಡಿಯುವುದಕ್ಕೆ ಪ್ರಥಮ ಪ್ರಾಶಸ್ತ್ಯ. ಅನಂತರದ ಕ್ರಮಗಳಿಗೂ ಆದ್ಯತೆ ಉಂಟು. ಮೀನು ಹಿಡಿದ ಮೇಲೆ ಅವನ್ನು ಉಪಯೋಗಿಸುವ ತನಕ ಜೋಪಾನಮಾಡಿ ರಕ್ಷಿಸುವುದು ಅತ್ಯಂತ ಆವಶ್ಯಕ. ಮೀನು, ಸೀಗಡಿ, ಸಿಂಪಿಗಳ ಮಾಂಸ ಶೀಘ್ರವಾಗಿ ಕೊಳೆತುಹೋಗುವಂಥ ಸರಕು. ಮೀನು ಸತ್ತ ತತ್‌ಕ್ಷಣವೇ ಬ್ಯಾಕ್ಟೀರಿಯಾದಂಥ ಸೂಕ್ಷ್ಮ ಜೀವಿಗಳ ಆಕ್ರಮಣದಿಂದಾಗಿ, ಹಾಗೂ ಅದರ ದೇಹದಲ್ಲಿರುವ ಕಿಣ್ವಗಳ ಕ್ರಿಯೆಯಿಂದಾಗಿ ಕೆಲವು ಅನಪೇಕ್ಷಣೀಯ ಬದಲಾವಣೆಗಳಿಗೆ ಒಳಗಾಗುವುದರಿಂದ ಅದನ್ನು ಹಾಗೆಯೇ ಬಿಟ್ಟರೆ ಕೊನೆಯಲ್ಲಿ ಅದು ಮಾನವನ ಉಪಯೋಗಕ್ಕೆ ಬಾರದಂತೆ ಅನುಪಯುಕ್ತವಾಗುತ್ತದೆ. ಹಿಡಿದ ಮೀನುಗಳನ್ನು ದೀರ್ಘಕಾಲ ಕೆಡದಂತೆ ಸಂರಕ್ಷಿಸಲು ಆಧುನಿಕ ಸಾಧನಗಳನ್ನು ವಿಧಾನಗಳನ್ನು ರೂಪಿಸಲಾಗಿದೆ. ಆಗತಾನೆ ಹಿಡಿದ ಮೀನುಗಳನ್ನು ದೂರದ ಸ್ಥಳಗಳಿಗೆ ಒಯ್ಯಲು ಮಂಜುಗಡ್ಡೆಯ ಬಳಕೆ ವ್ಯಾಪಕವಾಗಿದೆ. ಅಲ್ಲದೆ ಬಹುಕಾಲ ಕೆಡದಂತೆ ಸಂಗ್ರಹಿಸಲು ಹಲವಾರು ವಿಧಾನಗಳು ಬಳಕೆಯಲ್ಲಿವೆ. ಉದಾ. ಶೀತಘನೀಕರಣ, ಡಬ್ಬೀಕರಣ, ಒಣಗಿಸುವಿಕೆ ಇತ್ಯಾದಿ.

ಉಪಯೋಗದಲ್ಲಿರುವ ಮೀನುಸಂಸ್ಕರಣದ ಮುಖ್ಯ ವಿಧಾನಗಳಿವು: 1. ಉಪ್ಪು ಹಾಕುವಿಕೆ ಅಥವಾ ಉಪ್ಪುನೀರಿನಲ್ಲಿ ಊನಿ ಹಾಕುವಿಕೆ 2. ಹೊಗೆ ಹಾಕುವಿಕೆ 3. ಒಣಗಿಸುವಿಕೆ, 4. ಶೀತಘನೀಕರಣ ಹಾಗೂ 5. ಡಬ್ಬಿಜೋಪಾಸನೆ. ಉಪ್ಪು ಹಾಕುವಿಕೆ ಪ್ರಪಂಚಾದ್ಯಂತ ಬಳಕೆಯಲ್ಲಿರುವ ಒಂದು ಸಾಮಾನ್ಯ ವಿಧಾನ. ಯುರೋಪ್ ಹಾಗೂ ಅಮೆರಿಕಗಳಲ್ಲಿ ಕಾಡ್‌ಮೀನುಗಳನ್ನು ಹೀಗೆ ಉಪ್ಪು ಹಾಕಿ ಒಣಗಿಸುವುದು ಒಂದು ಪ್ರಮುಖ ಉದ್ಯಮವಾಗಿದೆ. ಈ ವಿಧಾನ ಉಳಿದ ದೇಶಗಳಲ್ಲಿಯೂ ಇತ್ತೀಚೆಗೆ ವ್ಯಾಪಕವಾಗುತ್ತಿದೆ. ಕೆಲವು ವೇಳೆ ಇಡೀ ಕಾರ್ಯವಿಧಾನವನ್ನು ದಡದ ಮೇಲೆಯೇ ನಡೆಸಲಾಗುವುದು. ಮೀನುಗಳನ್ನು ಹಿಡಿದ ತತ್‌ಕ್ಷಣವೇ ಅವುಗಳ ತಲೆತೆಗೆದು ದೇಹವನ್ನು ಸೀಳಿ ಶುಚಿಮಾಡಿ ಉಪ್ಪುಹಾಕಿ ಉಪ್ಪಿನ ಸ್ತರಗಳ ಮಧ್ಯೆ ಇರುವಂತೆ ಮಾಡಿ ಮೀನುಕುಳಿಗಳಲ್ಲಿ ರಾಶಿ ಮಾಡಲಾಗುತ್ತದೆ. ಅನಂತರ ಸಂಸ್ಕರಣಸ್ಥಳಕ್ಕೆ ಉಪ್ಪೂರಿಸಿದ ಮೀನುಗಳನ್ನು ಸಾಗಿಸುತ್ತಾರೆ. ಇಲ್ಲಿಯೇ ಅವುಗಳನ್ನು ಒಣಗಿಸಿ ರಫ್ತುಮಾಡಲು ಪೀಪಾಯಿಗಳಲ್ಲಿ ಪ್ಯಾಕ್ ಮಾಡಿ ಇಡುತ್ತಾರೆ. ಅನೇಕ ಶತಮಾನಗಳ ತನಕ ಉಪ್ಪು ಹಾಕಿದ ಮೀನು (ಕಾಡ್) ಯುರೋಪಿನ ವಿವಿಧ ದೇಶಗಳ ಅರ್ಥವ್ಯವಸ್ಥೆಯಲ್ಲಿ ಒಂದು ಪ್ರಮುಖ ಪಾತ್ರವಹಿಸಿತ್ತೆಂಬುದು ಉಲ್ಲೇಖಾರ್ಹ. ಹೊಗೆ ಹಾಕುವುದು ಸಾಮಾನ್ಯವಾಗಿ ಹೆರಿಂಗ್, ವೈಟಿಂಗ್, ಕಾಡ್, ಲಿಂಗ್, ಸೈಥ್ ಹ್ಯಾಡಕ್, ಮೀಸೆಮೀನು, ಬಂಗಡೆ ಮುಂತಾದ ಮೀನುಗಳಿಗೆ ಅನ್ವಯವಾಗುತ್ತದೆ. ಆದಿಮಾನವ ತಾನು ಹಿಡಿದ ಮೀನನ್ನು ಶಿಬಿರದ ಹೊರಗೆ ಬೆಂಕಿಯ ಮೇಲೆ ತೂಗಾಡಿಸುತ್ತ ಹೊಗೆ ಊಡುತ್ತಿದ್ದ. ಈಗಲೂ ಅನೇಕ ಹಳೆಯ ಜನಾಂಗಗಳಲ್ಲಿ

ಈ ಪದ್ಧತಿ ಉಂಟು. ಆದರೆ ವಾಣಿಜ್ಯ ಮೀನುಗಾರಿಕೆ ಬೆಳೆದಂತೆ ಹೆಚ್ಚಿನ ಸಾಮರ್ಥ್ಯದ ವಿಧಾನಗಳು ಅಗತ್ಯವಾದವು. ಆಧುನಿಕ ಹೊಗೆಮನೆಯಲ್ಲಿ ಒಂದೇ ಸಮಯದಲ್ಲಿ ಸಾವಿರಾರು ಮೀನುಗಳನ್ನು ಸಂಸ್ಕರಿಸಬಹುದಾಗಿದೆ. ಉರುವಲಾಗಿ ಉಪಯೋಗಿಸುವ ಮರಗಳು ವಿಶೇಷವಾದ ಪ್ರಾಮುಖ್ಯ ಪಡೆದಿವೆ. ಗಡಸುಮರಗಳಾದ ಓಕ್, ಹಿಕರಿ, ಮಹಾಗನಿ ಮುಂತಾದ ಮರಗಳನ್ನು ಸಾಮಾನ್ಯವಾಗಿ ಈ ಕಾರ್ಯಕ್ಕೆ ಬಳಸಲಾಗುತ್ತದೆ. ಏಕೆಂದರೆ ಈ ಮರಗಳಲ್ಲಿ ಕಡಿಮೆ ಮೊತ್ತದ ಎಣ್ಣೆ ಹಾಗೂ ರಾಳಗಳಿರುವವಲ್ಲದೆ ಇವು ಮೀನಿಗೆ ಒಂದು ಬಗೆಯ ರುಚಿಯನ್ನು ಸಹ ಕೊಡಬಲ್ಲವು. ನೇರ ಮರವನ್ನೇ ಉರಿಸಿ ಹೊಗೆ ಉಂಟುಮಾಡುವುದಿಲ್ಲ. ಆದರೆ ಮರದಪುಡಿಯನ್ನು ಉರಿಸುತ್ತ ದಟ್ಟವಾದ ಹೊಗೆಯ ಮೋಡಗಳನ್ನು ಉತ್ಪತ್ತಿಮಾಡಿ ಮೀನುಗಳನ್ನು ಸುಡುತ್ತಾರೆ. ಹೊಗೆ ಊಡುವುದರ ಮೊದಲು ಮೀನಿನ ತಲೆ ಕತ್ತರಿಸಿ ಕೆಳಗಿನ ಭಾಗದವರೆಗೆ ಸೀಳಿ, ಒಳಗಿನ ಭಾಗಗಳನ್ನು ತೆಗೆದು ಹಾಕಲಾಗುತ್ತದೆ. ಅನಂತರ ಅದನ್ನು ತೊಳೆದು ಅಲ್ಪಕಾಲದ ತನಕ ಉಪ್ಪುನೀರಿನ ಸಾರದ್ರಾವಣದಲ್ಲಿ ಮುಳುಗಿಸಿ ಒಣಗಿಸಿ 5ರಿಂದ 6 ಗಂಟೆಯತನಕ ಹೊಗೆಗೆ ಹಿಡಿಯಲಾಗುತ್ತದೆ. ಮೀನಿನ ಸಂಸ್ಕರಣದ ಇನ್ನೊಂದು ವಿಧಾನ ಒಣಗಿಸುವಿಕೆ. ಬಿಸಿಲು ಹೆಚ್ಚಾಗಿರುವಂಥ ಉಷ್ಣವಲಯ ದೇಶಗಳಲ್ಲಿ ಈ ಕ್ರಮ ಹೆಚ್ಚು ಪ್ರಚಲಿತವಿದೆ. ಒಣಗಿದ ಮೀನುಗಳೇ ಪ್ರಧಾನ ಆಹಾರವಾಗಿರುವ ದೇಶಗಳಾದ ಆಫ್ರಿಕ, ಭಾರತ, ಮಲೇಷ್ಯ, ಫಿಲಿಪೀನ್ಸ್, ಚೀನ ಹಾಗೂ ಜಪಾನ್‍ಗಳಲ್ಲಿ ಈ ವಿಧಾನ ಜನಪ್ರಿಯ ಆಗಿದೆ. ಸಾಮಾನ್ಯವಾಗಿ ಮೀನುಗಳನ್ನು ಸರಳವಾಗಿ ಕತ್ತರಿಸಿ ಒಳಗಿನ ಭಾಗಗಳನ್ನು ತೆಗೆದುಹಾಕಿ ಬಿಸಿಲಿನಲ್ಲಿ ಒಣಗಲು ಬಿಡುತ್ತಾರೆ. ಆದರೆ ಕೆಲವು ವೇಳೆ ಒಣಗಿಸುವ ಮೊದಲು ಸ್ವಲ್ಪಮಟ್ಟಿಗೆ ಉಪ್ಪಿನಲ್ಲಿ ಹಾಕುವುದುಂಟು. ಶೀತಘನೀಕರಣ ಒಂದು ಆಧುನಿಕ ಆಹಾರ ಸಂರಕ್ಷಣಾ ವಿಧಾನ. ಇದರಲ್ಲಿ ಮೀನುಗಳನ್ನು ಅತ್ಯಂತ ಕಡಿಮೆ ಉಷ್ಣತೆಯಲ್ಲಿ ಕೆಡದಂತೆ ರಕ್ಷಿಸಬಹುದಾಗಿದೆ. ವಿದೇಶಗಳಿಗೆ ರಫ್ತು ಮಾಡಲಾಗುವ ಮೀನುಗಳು, ಸೀಗಡಿಗಳನ್ನು ಸೂಕ್ತರೀತಿಯಲ್ಲಿ ಪೊಟ್ಟಣೀಕರಿಸಿ ಅವುಗಳನ್ನು ಶೀತಘನೀಕರಣ ಯಂತ್ರದಲ್ಲಿ ಸು. 1 – 1.50 ಗಂಟೆ ಅವಧಿಯಲ್ಲಿ $-25^0$ ಸೆ ನಿಂದ $40^0$ ಸೆ. ಗೆ ತರಲಾಗುತ್ತದೆ. ತದನಂತರ ಇವುಗಳನ್ನು $-18^0$ ಸೆ ಉಷ್ಣತೆಯಲ್ಲಿ ಶೇಖರಿಸಿಡಲಾಗುವುದು. ಈ ವಿಧಾನದಿಂದ ಆಹಾರವನ್ನು 6 ತಿಂಗಳವರೆಗೆ ಉತ್ತಮ ಸ್ಥಿತಿಯಲ್ಲಿಡಬಹುದು. ಮೀನು ಸಂಸ್ಕರಣದ ಇನ್ನೊಂದು ವಿಧಾನವೆಂದರೆ ಡಬ್ಬಿಚೋಪಾಸನೆ. ಇದು ಸಂರಕ್ಷಣೆಯ ಆಧುನಿಕ ವಿಧಾನವಾಗಿದ್ದು ಆನೇಕ ಅನುಕೂಲಗಳನ್ನು ಪಡೆದಿದೆ. ಅಮೆರಿಕದಲ್ಲಂತೂ ಇದು ಅತ್ಯಂತ ಮುಖ್ಯವಾದ ಉದ್ಯಮವೇ ಆಗಿಹೋಗಿದೆ. ಅಮೆರಿಕದಲ್ಲಿ ಪೆಸಿಫಿಕ್ ಸಾಲ್ಮನ್, ಯುರೋಪಿನಲ್ಲಿ ಹೆರಿಂಗ್, ಸ್ಪ್ರಾಟ್, ಬೂತಾಯಿ, ಆ್ಯಂಚೊವಿ, ಬಂಗುಡೆ ಹಾಗೂ ಟನ್ನಿಗಳು, ಫ್ರಾನ್ಸ್ ಹಾಗೂ ಪೋರ್ಚುಗಲ್‍ಗಳಲ್ಲಿ ಬೂತಾಯಿ ಉದ್ಯಮ ಅತ್ಯಂತ ಮುಖ್ಯವೆನಿಸಿವೆ. ಡಬ್ಬಿಚೋಪಾಸನೆ ಈ ರೀತಿ ಇದೆ: ಮೊದಲು ಮೀನಿನ ತಲೆ ಹಾಗೂ ಒಳಭಾಗಗಳನ್ನು ತೆಗೆದುಹಾಕಿ ದೇಹಕ್ಕೆ ಸ್ವಲ್ಪವಾಗಿ ಉಪ್ಪನ್ನು ಚಿಮುಕಿಸಲಾಗುತ್ತದೆ. ಅನಂತರ ಸ್ವಲ್ಪ ಕಾಲದ ತನಕ ಉಪ್ಪು ನೀರಿನೊಳಗೆ ಮುಳುಗಿಸಿ ಹೊರತೆಗೆದು ತೊಳೆದು ಒಣಗಿಸಲಾಗುತ್ತದೆ. ಕೊನೆಯಲ್ಲಿ ಅದನ್ನು ಆಲಿವ್ ಮುಂತಾದ ಎಣ್ಣೆಯಲ್ಲಿ ಎರಡು ನಿಮಿಷಗಳತನಕ ಕರಿಯಲಾಗುತ್ತದೆ. ಜೊತೆಗೆ ಇತರ ಸಂಬಾರ ಘಟಕಗಳಾದ ಲಿಂಬೆ ಎಣ್ಣೆ, ಲವಂಗ, ಬೇ ಎಲೆಗಳ ಭಟ್ಟಿಯಿಂದ ಪಡೆದ ಸುಗಂಧದ್ರವ, ಮಸಾಲೆ ಅಣಬೆ ಮುಂತಾದ ಪದಾರ್ಥಗಳೊಂದಿಗೆ ಮಿಶ್ರ ಮಾಡಲಾಗುತ್ತದೆ. ಕೊನೆಗೆ ಡಬ್ಬಿಯೊಳಗೆ ಆಲಿವ್ ಎಣ್ಣೆ ಹಾಕಿ ಮೀನನ್ನು ತುಂಬಿ ಗಾಳಿ ಸೇರದಂತೆ ಮೊಹರು ಮಾಡಲಾಗುತ್ತದೆ. ನಾರ್ವೆಯಲ್ಲಿ ಸಹ ಸ್ಪ್ರಾಟ್ (ಕ್ಲೂಪಿಯ ಸ್ಪ್ರಾಟಸ್) ಮತ್ತು ಹೆರಿಂಗ್ ಎಳೆಯ ಮೀನುಗಳನ್ನು (ಕ್ಲೂಪಿಯ ಹ್ಯಾರಂಗಸ್) ಇದೇ ರೀತಿ ಸಂಸ್ಕರಿಸಲಾಗುತ್ತದೆ.

ಮೀನುಗಳ ಮಾಂಸದ ಕಣಕದಿಂದ ತಯಾರಿಸಲಾಗುವ ಮೀನು ಸಾಸೇಜ್, ಮೀನಿನದೋಸೆ ಉಂಡೆ (ರಿಸೋಲ್ಸ್), ಆ್ಯಂಚೊವಿ ಪಿಷ್ಟದ ವ್ಯಂಜನ, ಮೀನುದೋಸೆ, ಕ್ಯಾವೀಯಾರ್ ವ್ಯಂಜನ ಮುಂತಾದವು ಕೂಡ ಮೀನುಗಾರಿಕೆಯ ಉಪೋತ್ಪನ್ನಗಳೇ ಆಗಿವೆ. ಅಲ್ಲದೆ ಇತರ ಉತ್ಪನ್ನಗಳಾದ ಶಾರ್ಕ್ ಮಾಂಸದ ಕಣಕ, ಶಾರ್ಕ್‍ಮೀನಿನ ಯಕೃತ್ತಿನ ಎಣ್ಣೆ, ಮೀನಿನ ಮರವಜ್ರ, ಮೀನಂಟುವಜ್ರ ಮುಂತಾದವು ಪ್ರಸಿದ್ಧವಾಗಿವೆ. ಕಡಿಮೆ ಬೆಲೆಯ ಮೀನುಗಳನ್ನು ಗೊಬ್ಬರ ಮತ್ತು ಪಶು ಆಹಾರ ತಯಾರಿಕೆಯಲ್ಲಿಯೂ ಬಳಸಲಾಗುವುದು. ಸ್ತನಿಗಳಾದ ತಿಮಿಂಗಲ, ಸೀಲ್, ಕಡಲಸಿಂಹ, ಕಡಲಹಸು ಹಾಗೂ ಉರಗವರ್ಗದ ಆಮೆಗಳ ಮೀನುಗಾರಿಕೆ ಸಹ ಇತ್ತೀಚೆಗೆ ಜನಪ್ರಿಯವಾಗುತ್ತಿದೆ. ಹೀಗಾಗಿ ಮೀನುಗಾರಿಕೆ ಪ್ರಪಂಚದ ಒಂದು ಅತ್ಯಂತ ವಾಣಿಜ್ಯ ಹಾಗೂ ಜೀವನೋಪಾಯದ ಉದ್ಯಮವಾಗಿ ಬೆಳೆದಿದೆ.

ಜಲಕೃಷಿ: ಮೀನುಗಾರಿಕೆಯ ಆಧುನಿಕ ವಿಧಾನ ಜಲಕೃಷಿ (ಅಕ್ವಾಕಲ್ಚರ್). ನಿರ್ದಿಷ್ಟವಾದ ಜಲ ಪ್ರದೇಶದಲ್ಲಿ ನಿರ್ದಿಷ್ಟವಾದ ಜಲಜೀವಿಯನ್ನು ವೈಜ್ಞಾನಿಕ ರೀತಿಯಲ್ಲಿ ಬೆಳೆಸುವುದಕ್ಕೆ ಜಲಕೃಷಿಯೆಂದು ಹೆಸರು. ಇದಕ್ಕೆ ಮೀನುಕೃಷಿ ಎಂದೂ ಕರೆಯಬಹುದು. ಮೀನುಸಾಕಾಣಿಕೆ ಬಹಳ ಹಿಂದಿನಿಂದಲೂ ಇತ್ತೆಂಬುದು ತಿಳಿದುಬಂದಿದೆ. ಮೀನುಸಾಕಾಣಿಕೆಯಲ್ಲಿ ಈಜಿಪ್ಟಿನ ಜನರು ಬಹುಶಃ ಪ್ರಪಂಚದಲ್ಲೇ ಮೊದಲಿಗರಿರಬೇಕೆಂಬುದಕ್ಕೆ ಪುರಾವೆಗಳಿವೆ. ಪ್ರ.ಶ.ಪೂ. ಸು. 2500 ರಲ್ಲೇ ಈಜಿಪ್ಟಿನಲ್ಲಿದ್ದ ಮೀನು ಸಾಕಾಣಿಕೆ ಬಗ್ಗೆ ಅಲ್ಲಿನ ಪಿರಮಿಡ್‍ಗಳ ಮೇಲಿನ ಕೆತ್ತಿರುವ ಚಿತ್ರಣಗಳಿಂದ ತಿಳಿದುಬರುತ್ತದೆ. ಪ್ರ.ಶ.ಪೂ. ಸು. 2000 ರಲ್ಲಿ ಚೀನ ದೇಶದಲ್ಲಿ ಗೆಂಡೆ ಮೀನುಗಳ ಸಾಕಾಣಿಕೆಯನ್ನು ವ್ಯಾಪಕವಾಗಿ ಮಾಡಲಾಗುತ್ತಿತ್ತು. ಭಾರತದಲ್ಲಿಯೂ ಮೀನುಕೃಷಿಯನ್ನು ನೂರಾರು ವರ್ಷಗಳಿಂದ ಮಾಡಲಾಗುತ್ತಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜ ಸೋಮೇಶ್ವರನ ವಿಶ್ವಕೋಶ ಸ್ವರೂಪದ ಗ್ರಂಥದಲ್ಲಿ ಇದರ ಬಗ್ಗೆ ಉಲ್ಲೇಖಗಳಿವೆ. ಬಹಳ ಹಿಂದೆ ಮೀನು ಕೃಷಿಯೆಂದರೆ ಕೆರೆ,ಕೊಳ, ನದಿಗಳಲ್ಲಿ ದೊರೆಯುವ ಮೀನುಗಳನ್ನು ಕೃತಕವಾಗಿ ನಿರ್ಮಿಸಿದ ತೊಟ್ಟಿಗಳಲ್ಲಿ ಕೆಲಕಾಲ ಇಟ್ಟುಕೊಂಡು ಬೇಕಾದಾಗ ಹಿಡಿಯುವುದೇ ಆಗಿತ್ತು.

ಕಾಲಕ್ರಮೇಣ ನದಿಗಳಿಂದ ಮೀನಿನ ಮರಿಗಳನ್ನು ಹಿಡಿದು ತಂದು ಕೊಳಗಳಲ್ಲಿ ಸಾಕುವ ವಿಧಾನ ರೂಢಿಗೆ ಬಂತು. ಈ ವಿಧಾನ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಬಹಳ ಹಿಂದಿನಿಂದಲೂ ಮಾಡಲಾಗುತ್ತಿತ್ತು. ತದನಂತರ ಇತರೆ ರಾಜ್ಯಗಳಿಗೂ ಈ ವಿಧಾನ ಹರಡಿತು. ಬಂಗಾಲದಲ್ಲಿ ಬಂಡ್‍ಗಳನ್ನು ನಿರ್ಮಿಸಿ ಗೆಂಡೆಮೀನುಗಳ ಮರಿಮಾಡಿಸುವಿಕೆ ಪ್ರಾರಂಭವಾದ ಅನಂತರ ಗೆಂಡೆ ಮೀನುಗಳ ಕೃಷಿ ಹೆಚ್ಚು ಹೆಚ್ಚು ಜನಪ್ರಿಯವಾಗತೊಡಗಿತು. ಗೆಂಡೆ ಮೀನುಗಳು ನಿಂತ ಕೊಳಗಳ ನೀರಿನಲ್ಲಿ ಮರಿ ಮಾಡುವುದಿಲ್ಲವಾದ್ದರಿಂದ ಇವುಗಳ ಕೃಷಿಗೆ ಬಹಳ ಕಾಲ ಮೀನುಮರಿಗಳ ಕೊರತೆಯಿತ್ತು. ಭಾರತದಲ್ಲಿ 1957 ರಲ್ಲಿ ಗೆಂಡೆ ಮೀನುಗಳ ಪ್ರಚೋದಿತ ಸಂತಾನೋತ್ಪತ್ತಿ ವಿಧಾನವನ್ನು ಪರಿಚಯಿಸಿದ ಅನಂತರವಂತೂ ಗೆಂಡೆ ಮೀನುಗಳ ಮರಿಗಳ ಲಭ್ಯತೆ ಹೆಚ್ಚಾಗಿ ಇವುಗಳ ಜಲಕೃಷಿ ತೀವ್ರಗತಿಯಲ್ಲಿ ಬೆಳೆಯತೊಡಗಿತು. ಪ್ರಸ್ತುತ ಆಂಧ್ರ ಪ್ರದೇಶ, ಪಶ್ಚಿಮ ಬಂಗಾಲ, ಪಂಜಾಬ್ ರಾಜ್ಯಗಳು ಗೆಂಡೆ ಮೀನುಕೃಷಿಯ ಮುಂಚೂಣಿಯಲ್ಲಿವೆ. ಕರ್ನಾಟಕದಲ್ಲಿರುವ ಅಗಾಧ ಕೆರೆ ಜಲಾಶಯಗಳಲ್ಲಿಯೂ ಗೆಂಡೆ ಮೀನುಮರಿಗಳನ್ನು ಬಿತ್ತನೆ ಮಾಡಿ ಬೆಳೆಸಲಾಗುತ್ತಿದೆ.

ಜಾಗತಿಕ ಮಟ್ಟದಲ್ಲಿ ಹೇಳುವುದಾದರೂ ಇತ್ತೀಚಿನ ಎಫ್.ಎ.ಒ. ಅಂಕಿ–ಅಂಶಗಳ ಪ್ರಕಾರ ಒಟ್ಟು ಉತ್ಪಾದನೆಯ ಶೇ. 42 ರಷ್ಟು ಗೆಂಡೆ ಮೀನುಗಳು ಮತ್ತದರ ಸಂಬಂಧಿ ಸಿಪ್ರಿನಿಡೆ ಕುಟುಂಬದ ಮೀನುಗಳು ಜಲಕೃಷಿಯಿಂದ ಬರುತ್ತಿವೆ. ಇತ್ತೀಚೆಗೆ ಕಡಲ ಹಿಡುವಳಿ ಉತ್ಪನ್ನ ಸ್ಥಿರಗೊಳ್ಳುತ್ತಿದ್ದು ಹೆಚ್ಚುತ್ತಿರುವ ಜನಸಂಖ್ಯೆಯ ಆಹಾರ ಬೇಡಿಕೆ ನೀಗಿಸಲು ಇರುವ ವಿಪುಲ ಅವಕಾಶವೆಂದರೆ, ಮೀನುಕೃಷಿ. ಕಡಲ ಮೀನುಗಳ ಕೃಷಿಗಿಂತ ಒಳನಾಡು ಮೀನುಗಳ ಕೃಷಿ ತೀವ್ರಗತಿಯಲ್ಲಿ ಹೆಚ್ಚುತ್ತಿದೆ. 2003 ರಲ್ಲಿ ಹಿಡುವಳಿಯಿಂದ ಒಟ್ಟು 90.30 ದ.ಲ. ಟನ್ ಉತ್ಪಾದನೆಯಾಗಿದ್ದರೆ ಮೀನುಕೃಷಿಯಿಂದ 34.20 ದ.ಲ. ಟನ್ ಉತ್ಪಾದನೆಯಾಗಿದೆ. ಗಮನಿಸಬೇಕಾದ ಅಂಶವೆಂದರೆ 2002 ಕ್ಕೆ ಹೋಲಿಸಿದರೆ ಹಿಡುವಳಿಯ ಉತ್ಪಾದನೆ ಶೇ.3 ರಷ್ಟು ಕುಸಿತ ಕಂಡಿದ್ದರೆ ಮೀನುಕೃಷಿಯಿಂದ ಉತ್ಪಾದನೆ ಶೇ.5 ರಷ್ಟು ಹೆಚ್ಚಿದೆ. ಏಷ್ಯದ ದೇಶಗಳಿಂದ ಶೇ. 90ರಷ್ಟು ಮೀನುಕೃಷಿ ಉತ್ಪಾದನೆಯಾಗುತ್ತಿದೆ. ಇದರಿಂದ ಮೀನುಕೃಷಿಯಿಂದ ಉತ್ಪಾದನೆ ಹೆಚ್ಚಿಸಲು ವಿಪುಲ ಅವಕಾಶಗಳಿವೆ.

ಜಲಕೃಷಿ ಉತ್ಪಾದನೆಯಲ್ಲಿ ಸಿಹಿನೀರು ಮೀನುಗಳದ್ದೇ ಸಿಂಹಪಾಲು. ಆದರೂ ಪ್ರಪಂಚದಲ್ಲಿ ಅನೇಕ ಜಾತಿಯ ಸಿಹಿನೀರು ಹಾಗೂ ಕಡಲ ಜಲಚರಗಳನ್ನು ಸಾಕಾಣಿಕೆ ಮಾಡಲಾಗುತ್ತದೆ, ಸೀಗಡಿ, ಕಡಲ ಚಿಪ್ಪುಮೀನುಗಳು, ಮುತ್ತಿನ ಚಿಪ್ಪುಗಳು, ಕಾಡ್ ಮೀನು, ಹೇಕ್, ಹೆಡಕ್, ಟ್ಯೂನಾಗಳು, ಸಿಹಿನೀರು ಸೀಗಡಿ, ಏಡಿಗಳು, ಸಿಹಿನೀರು ಚಿಪ್ಪುಪ್ರಾಣಿಗಳು ಹೀಗೆ ನೂರಾರು ಜಾತಿಯ ಜಲಚರಗಳ ಕೃಷಿ ಮಾಡಲಾಗುತ್ತಿದೆ. ಇವುಗಳ ಮೀನುಮರಿಗಳ ಉತ್ಪಾದನೆ, ಪಾಲನೆ ಕೇಂದ್ರಗಳ (ಹ್ಯಾಚರಿ) ಸ್ಥಾಪನೆ ಮತ್ತು ನಿರ್ವಹಣೆ ಜಲಕೃಷಿಯ ಒಂದು ಅವಿಭಾಜ್ಯ ಉದ್ಯಮವಾಗಿದೆ.

ಜಲಕೃಷಿ ಕೈಗೊಳ್ಳಬೇಕಾದರೆ ಗಮನದಲ್ಲಿಡಬೇಕಾದ ಪ್ರಮುಖ ಅಂಶಗಳೆಂದರೆ ಕೊಳ ನಿರ್ಮಾಣಕ್ಕೆ ಸ್ಥಳದ ಆಯ್ಕೆ, ಉತ್ತಮ ಹಾಗೂ ಹೇರಳ ನೀರಿನ ಲಭ್ಯತೆ, ಶೀಘ್ರವಾಗಿ ಬೆಳೆಯುವ, ಬೇಡಿಕೆಯುಳ್ಳ ಸೂಕ್ತ ತಳಿಯ ಆಯ್ಕೆ, ಆ ತಳಿಯ ಬಿತ್ತನೆಮರಿಗಳ ಲಭ್ಯತೆ, ಪಾಲನಾ ವಿಧಾನ, ನಿರ್ವಹಣಾ ವಿಧಾನ ಹಿಡುವಳಿ ಮತ್ತು ಮಾರಾಟ ವಿಧಾನಗಳು. (ಬಿ.ಎಚ್.ಎಂ.)

**ಮುಂಡಗೋಡ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತ ಕೇಂದ್ರ. ಪಶ್ಚಿಮಕ್ಕೆ ಯಲ್ಲಾಪುರ, ದಕ್ಷಿಣಕ್ಕೆ ಶಿರಸಿ ತಾಲ್ಲೂಕುಗಳೂ ಉತ್ತರ ಮತ್ತು ಪೂರ್ವದಿಕ್ಕಿನಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ. ಶಿಗ್ಗಾವಿ ಮತ್ತು ಹಾನಗಲ್ಲು ತಾಲ್ಲೂಕುಗಳೂ ಇವೆ. ತಾಲ್ಲೂಕನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿದೆ. ಒಟ್ಟು 94 ಗ್ರಾಮಗಳುಂಟು. ಜನಸಂಖ್ಯೆ 90,707.

ಇದು ಮಲೆನಾಡು ಪ್ರದೇಶ. ಇದರ ವಾಯವ್ಯ ಭಾಗದಲ್ಲಿ ಬೇಡ್ತಿ ನದಿ ಹರಿದು ಯಲ್ಲಾಪುರ ತಾಲ್ಲೂಕನ್ನು ಬೇರ್ಪಡಿಸಿದೆ. ತಾಲ್ಲೂಕು ಸಣ್ಣ ಪುಟ್ಟ ಬೆಟ್ಟಗುಡ್ಡಗಳಿಂದ ಕೂಡಿದೆ. ಅರಣ್ಯಪ್ರದೇಶದಲ್ಲಿ ಸಾಗುವಾನಿತೋಪುಗಳಿವೆ. ಕೆರೆಗಳಿಂದಲೂ ಸಣ್ಣಪುಟ್ಟ

ತೊರೆಗಳಿಂದಲೂ ಜಲಸಮೃದ್ಧವಾಗಿದೆ. ಸರಾಸರಿ ವಾರ್ಷಿಕ ಮಳೆ 320 ಸೆಂಮೀ ಹೆಚ್ಚು ಭಾಗ ಫಲವತ್ತಾದ ಜಿಗುಟು ಕರಿ ಮಣ್ಣಿನಿಂದ ಮತ್ತು ಜಂಬುಮಣ್ಣಿನಿಂದ ಕೂಡಿದೆ. ಇಲ್ಲಿಯ ಮುಖ್ಯ ಬೆಳೆ ಬತ್ತ, ಜೋಳ, ತೊಗರಿ, ಅಡಕೆ ಮತ್ತು ಇತರ ತೋಟದ ಬೆಳೆಗಳನ್ನೂ ಬೆಳೆಸುತ್ತಾರೆ. ಪಶುಪಾಲನೆ ಇದೆ.

ತಾಲ್ಲೂಕಿನಲ್ಲಿ ವಿದ್ಯುತ್ತು, ಅಂಚೆ, ತಂತಿ, ದೂರವಾಣಿ ಸೌಕರ್ಯಗಳಿವೆ. ವ್ಯಾಪಾರ ವಾಣಿಜ್ಯಕ್ಕೆ ಆರ್ಥಿಕ ನೆರವು ನೀಡುವ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ಅಕ್ಕಿ ಗಿರಣಿಗಳು, ಸರ್ಕಾರಿ ಔಷಧಾಲಯ, ಕೃಷಿ ತರಬೇತಿ ಶಾಲೆ ಮತ್ತು ಇತರ ಶಾಲೆಗಳೂ ಇವೆ. ಮಂಗಳೂರು–ಮುಂಬಯಿ, ಕಾರವಾರ–ಧಾರವಾಡಗಳ ಹೆದ್ದಾರಿಗಳು ಈ ತಾಲ್ಲೂಕಿನ ಮೂಲಕ ಹಾದು ಹೋಗಿವೆ.

ಮುಂಡಗೋಡ ತಾಲ್ಲೂಕಿನ ಆಡಳಿತಕೇಂದ್ರ. ಇದು ತಾಲ್ಲೂಕಿನ ಪೂರ್ವ ಅಂಚಿನಲ್ಲಿದೆ. ಜನಸಂಖ್ಯೆ 16,171. ಈ ಊರಿನ ಸುತ್ತಲೂ ಬತ್ತ, ಜೋಳ, ದ್ವಿದಳ ಧಾನ್ಯಗಳನ್ನು ಬೆಳೆಸುವರು. ಬೇಸಾಯ ಮತ್ತು ಪಶುಪಾಲನೆ ಇಲ್ಲಿಯ ಮುಖ್ಯವೃತ್ತಿ. ಉತ್ತಮತಳಿಯ ಜಾನುವಾರುಗಳನ್ನು ಸಾಕುವರು. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಮೀಪದ ಪಟ್ಟಣಗಳಿಗೆ ಸಾಗಿಸುವರು. ವ್ಯಾಪಾರ ಸಂಪರ್ಕ 64 ಕಿಮೀ ದೂರದ ಹುಬ್ಬಳ್ಳಿಯೊಂದಿಗೆ ಹೆಚ್ಚು. ಇಲ್ಲಿಂದ 4 ಕಿಮೀ ದೂರದಲ್ಲಿರುವ ಇಂದೂರು ಮತ್ತು ಕುಸೂರು ಎಂಬಲ್ಲಿ ಎರಡೂವರೆ ಸಾವಿರ ಮಂದಿ ಟಿಬೆಟಿಯನ್ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲಾಗಿದೆ. ಇವರು ಹೆಚ್ಚಾಗಿ ಜೋಳದ ಬೇಸಾಯ ಮಾಡುತ್ತಾರೆ. ಇಲ್ಲಿ ಒಂದು ನಗರ ಪಂಚಾಯಿತಿ ಇದೆ. ಈ ಸ್ಥಳ ಮಂಗಳೂರು–ಮುಂಬಯಿ, ಕಾರವಾರ–ಧಾರವಾಡಗಳ ಹೆದ್ದಾರಿಯೊಂದರ ಮೇಲಿರುವ ಕಾರಣ ಹೆಚ್ಚಿನ ವಾಹನ ಸಂಚಾರದಿಂದ ಕೂಡಿದೆ. ಇಲ್ಲಿಂದ 16 ಕಿಮೀ ದಕ್ಷಿಣಕ್ಕೆ ಧರ್ಮಾಜಲಾಶಯ ಮತ್ತು ಧರ್ಮಾ ವಸಾಹತುಗಳಿವೆ. ಇಲ್ಲಿ ಒಂದು ಕೃಷಿತರಬೇತಿ ಶಾಲೆ ಇದೆ. *

**ಮುಂಡರಗಿ:** ಗದಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯಸ್ಥಳ. ಈ ತಾಲ್ಲೂಕನ್ನು ಪಶ್ಚಿಮ ಮತ್ತು ವಾಯವ್ಯದಲ್ಲಿ ಗದಗ ತಾಲ್ಲೂಕು, ನೈಋತ್ಯ ಮತ್ತು ಪಶ್ಚಿಮದಲ್ಲಿ ಶಿರಹಟ್ಟಿ ತಾಲ್ಲೂಕು. ಪೂರ್ವದಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 877.4 ಚ.ಕಿಮೀ. ಗ್ರಾಮಗಳು 32. ಜನಸಂಖ್ಯೆ 92,644. ಈ ತಾಲ್ಲೂಕಿನ ದಕ್ಷಿಣ ಮತ್ತು ನೈಋತ್ಯದಲ್ಲಿ ತುಂಗಭದ್ರಾನದಿ ಮುಂಡರಗಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಯಿಂದ ಪ್ರತ್ಯೇಕಿಸುತ್ತದೆ. ಗದಗ ತಾಲ್ಲೂಕಿನಿಂದ ಮುಂದುವರಿದು ಹರಿಯುವ ಹಿರೇಹಳ್ಳ ಈ ತಾಲ್ಲೂಕಿನ ಮಧ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿದು ತುಂಗಭದ್ರಾವನ್ನು ಕೂಡಿಕೊಳ್ಳುತ್ತದೆ. ಇದು ಮಳೆಗಾಲದಲ್ಲಿ ತುಂಬಿ ಹರಿದು ಬೇಸಗೆಯಲ್ಲಿ ಬತ್ತುವುದುಂಟು. ವಾರ್ಷಿಕ ಸರಾಸರಿ ಮಳೆ 47 ಸೆಂಮೀ. ತಾಲ್ಲೂಕಿನಲ್ಲಿ ಕೆಂಪುಮಿಶ್ರಿತ ಕಪ್ಪುಮಣ್ಣಿನ ಭೂಮಿ ವಿಶೇಷವಾಗಿದೆ. ಖುಷ್ಕಿ ವ್ಯವಸಾಯ ಹೆಚ್ಚು. ಬಾವಿ, ಹಳ್ಳ ತೊರೆಗಳಿಂದ ವ್ಯವಸಾಯಕ್ಕೆ ನೀರನ್ನು ಒದಗಿಸಿಕೊಳ್ಳುವುದುಂಟು. ಜೋಳ, ದ್ವಿದಳಧಾನ್ಯಗಳು, ಮೆಣಸಿನಕಾಯಿ, ಸೇಂಗ, ಹತ್ತಿ, ಗೋದಿ ಮತ್ತು ತರಕಾರಿಗಳನ್ನು ಬೆಳೆಸುತ್ತಾರೆ. ಈ ತಾಲ್ಲೂಕಿಗೆ ಮೋಟರುವಾಹನಗಳ ಸಂಪರ್ಕ ಉಂಟು. ಈ ತಾಲ್ಲೂಕಿನಲ್ಲಿ ಅಂಚೆ, ತಂತಿ, ಶಾಲೆಗಳ ಮತ್ತು ವೈದ್ಯಕೀಯ ಸೌಲಭ್ಯವುಂಟು.

ಮುಂಡರಗಿ ಈ ತಾಲ್ಲೂಕಿನ ಮುಖ್ಯ ಕೇಂದ್ರ. ಗದಗ ನಗರಕ್ಕೆ ಆಗ್ನೇಯದಲ್ಲಿ 38 ಕಿಮೀ ದೂರದಲ್ಲಿದೆ. ಜನಸಂಖ್ಯೆ 20,318. ಈ ಊರು ಗದಗ–ಬಳ್ಳಾರಿ ರಸ್ತೆಯಲ್ಲಿರುವುದಲ್ಲದೆ ಕೊಪ್ಪಳ, ಬೆಲತ್ತಿ ಮೊದಲಾದ ಊರುಗಳೊಡನೆ ಮಾರ್ಗ ಸಂಪರ್ಕವನ್ನು ಹೊಂದಿದೆ. ಇಲ್ಲಿ ಶೇಂಗ, ಹತ್ತಿ ವ್ಯಾಪಾರವಿದೆ, ಮಾಧ್ಯಮಿಕ ಶಾಲೆಗಳಿವೆ. *

**ಮುಂಬಯಿ:** ಮಹಾರಾಷ್ಟ್ರ ರಾಜ್ಯದ ರಾಜಧಾನಿ. ಹಿಂದೆ ಬೊಂಬಾಯಿ ಪ್ರಾಂತ್ಯದ ಅನಂತರ ಬೊಂಬಾಯಿ ರಾಜ್ಯದ ರಾಜಧಾನಿಯಾಗಿತ್ತು. ಪಶ್ಚಿಮ ಭಾರತದ ಪ್ರಮುಖ ಬಂದರು. ನಗರದ ಹಳೆಯ ಭಾಗ ಇರುವುದು ಒಂದು ದ್ವೀಪದ ಮೇಲೆ, ಅದು ತಗ್ಗಾದ ಮೈದಾನ. ಇದರಲ್ಲಿ ಕಾಲುಭಾಗ ಸಮುದ್ರಮಟ್ಟಕ್ಕಿಂತ ಕೆಳಗೆ ಇದೆ. ಈ ಮೈದಾನದ ಆಚೀಚೆ ಸಮಾನಾಂತರದಲ್ಲಿ ಹಬ್ಬಿರುವ ಎರಡು ತಗ್ಗುಬೆಟ್ಟಗಳಿವೆ. ಇವು ದ್ವೀಪದ ತುದಿಯಿಂದಾಚೆಗೆ ಒಂದನ್ನೊಂದು ಕೂಡುತ್ತವೆ. ಅಲ್ಲಿ ಕಡಿದಾದ ಬಂಡೆಯ ಮೇಲೆ ದ್ವೀಪಸ್ತಂಭವೊಂದನ್ನು ನಿರ್ಮಿಸಲಾಗಿದೆ. ಈ ಬೆಟ್ಟಗಳ ಪಶ್ಚಿಮದ ಸಾಲು ಎದ್ದು ಕಾಣುವಂತಿದೆ. ಮಲಬಾರ್ ಹಿಲ್ ಸಮುದ್ರಮಟ್ಟದಿಂದ 54.86 ಮೀ ಎತ್ತರವಾಗಿದೆ. ಪೂರ್ವದ ಸಾಲು ಏರುತಗ್ಗುಗಳಿಂದ ಕೂಡಿದ್ದು ಇಲ್ಲಿ ಮಜಗಾಂವ್, ಸೆವ್ರಿ, ಪರೆಲ್ ಮುಂತಾದ ಬೆಟ್ಟಗಳಿವೆ. ಸು. 18 ಕಿಮೀ ಉದ್ದ, 5–6 ಕಿಮೀ ಅಗಲ ಇರುವ ಈ ದೀಪದ ವಿಸ್ತೀರ್ಣ ಸು. 39 ಚ.ಕಿಮೀ. ಇದರ ನಡುವಣ ಭಾಗ ಬ್ಯಾಕ್ ಬೇ. ಈ ದ್ವೀಪಕ್ಕೂ ಉತ್ತರದ ದೊಡ್ಡ ದ್ವೀಪಕ್ಕೂ ಮುಖ್ಯ ಭೂಭಾಗಕ್ಕೂ ಸಂಪರ್ಕ ಹೆಚ್ಚಿದಂತೆ ಮುಂಬಯಿ ಮಹಾನಗರವಾಗಿ ಬೆಳೆಯಿತು. ಮುಂಬಯಿ ನೈಸರ್ಗಿಕ ರೇವು ಹೊಂದಿರುವ ನಗರ. ಸಣ್ಣ ಗುಡ್ಡಗಳ ನಡುವಣ ಕಿರಿದಾದ ಕಡಲಚಾಚು ನೈಸರ್ಗಿಕ ಸೌಂದರ್ಯದಿಂದ ಕೂಡಿದೆ. ಮುಂಬಯಿ ಮಹಾನಗರದ ವಿಸ್ತೀರ್ಣ 603 ಚ.ಕಿಮೀ. ಜನಸಂಖ್ಯೆ 1,19,14,398 (2001).

ಇಂದು ಮುಂಬಯಿ ಆಡಳಿತ ಕೇಂದ್ರವಾಗಿರುವ ಮುಂಬಯಿನಗರ ಜಿಲ್ಲೆಯಾಗಿದೆ. ವಿಸ್ತೀರ್ಣ 157 ಚ.ಕಿಮೀ. ಇದ್ದು ಜನಸಂಖ್ಯೆ 33,26,837 ಇದೆ. ಮುಂಬಯಿ ಹೊರವಲಯದ ಆಡಳಿತ ಕೇಂದ್ರ ಬಾಂದ್ರ. ಇದರ ವಿಸ್ತೀರ್ಣ 446 ಚ.ಕಿಮೀ. ಜನಸಂಖ್ಯೆ 85,87,561.

ಛತ್ರಪತಿ ಶಿವಾಜಿ ಟರ್ಮಿನಸ್

ಬೆಳವಣಿಗೆ : ಭಾರತದ ಮಹಾದ್ವಾರ ಎಂಬ ಹೆಸರು ಪಡೆದಿರುವ ಮುಂಬಯಿ ಪ್ರದೇಶದಲ್ಲಿ ಪ್ರಸಕ್ತಶಕಪೂರ್ವದ ಹಿಂದಿನಿಂದಲೂ ಕೋಳಿ ಎಂಬ ಜನರು ನೆಲಸಿದ್ದರು. ಅವರ ಕುಲದೇವತೆಯಾದ ಮುಂಬಾದೇವಿಯಿಂದಾಗಿ ಇದಕ್ಕೆ ಮುಂಬಾಪುರಿ, ಮುಂಬೂಲ ಎಂಬ ಹೆಸರು ಬಂತೆಂದೂ ಹೇಳಲಾಗಿದೆ. ಮುಂಬಯಿ ಮೂಲತಃ ಏಳು ನಡುಗಡ್ಡೆಗಳ ಸಮೂಹದಾಗಿದ್ದು ಆ ನಡುಗಡ್ಡೆಗಳು ಭೂಭಾಗದ ಮುಂದೆ ಕಡಲಂಚಿನಲ್ಲಿ ಹರಡಿಕೊಂಡಿದ್ದುದರಿಂದ ಅದನ್ನು ಮೊದಲು ಮುಂಬೆಟ್ಟ (ಕನ್ನಡ) ಎಂದು ಕರೆಯಲಾಗುತ್ತಿತೆಂದೂ ಮುಂದೆ ಅದೇ ಮುಂಬೆ, ಮುಂಬಯಿ ಎಂದಾಯಿತೆಂದೂ ಪ್ರತೀತಿ. ಮುಂಬಯಿ ಉಪನಗರವೆನಿಸುವ ಕಾಲದಿಂದಲೂ ದೊರೆತ ಕಲ್ಲಿನ ಉಪಕರಣಗಳಿಂದ ಈ ನಗರದಲ್ಲಿ ಶಿಲಾಯುಗದಿಂದಲೇ ಜನವಸತಿ ಇತ್ತೆಂದು ಊಹಿಸಲಾಗಿದೆ. ಬೇಸಾಯ ಮತ್ತು ಮೀನುಗಾರಿಕೆ ಕಸಬಾಗಿದ್ದ ಕೋಳಿಜನರು ಮೂಲತಃ ಕನ್ನಡಿಗರೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಬರುಬರುತ್ತ ಮೀನ, ಅಗ್ರಿ, ನಾಗ, ಭೋಯಿ ಇತ್ಯಾದಿ ಜನರು ಕೋಳಿಜನರೊಡನೆ ಬಂದು ಸೇರಿಕೊಂಡರೆಂದೂ ಅಂತೆಯೇ ಮುಂಬಯಿ ನಗರದಲ್ಲಿ ಕೋಳಿವಾಡಾದಂತೆ ಮಂಜಗಾಂವ, ಅಗ್ರಿಪಾಡಾ, ನಾಗಪಾಡಾ, ಭೋಯಿವಾಡಾ ಇತ್ಯಾದಿ ಪ್ರದೇಶಗಳುಂಟಾದುವೆಂದೂ ಹೇಳಲಾಗಿದೆ. ಬೋರೀವಲಿ (ಬೋರೀವಳ್ಳಿ), ಕಾಂದೀವಲಿ (ಕಾಂದೀವಳ್ಳಿ), ವರ್ಸೋವ (ತೇರುಗಟ್ಟಿ), ಡೊಂಬೀವಲಿ (ಡೊಂಬೀವಳ್ಳಿ), ಕನ್ಹೇರಿ (ಕಣ್ಣೇರಿ), ಮುಂಬ್ರಾ (ಮುಂಬೇರಿ), ಕುರ್ಲ (ಕೊರ್ಲ) ಮುಂತಾದ ಹೆಸರುಗಳು ಕನ್ನಡ ಮೂಲವನ್ನೇ ಸೂಚಿಸುತ್ತವೆ.

ಟಾಲಮಿ ಹೆಸರಿಸಿರುವ ಹೆಪ್ಟನೀಸಿಯವೇ ಮುಂದೆ ಮುಂಬಯಿ ಎಂದು ಪ್ರಸಿದ್ಧವಾದ ಏಳುದ್ವೀಪಗಳೆಂದು ನಾರ್ವೆಯ ವಿದ್ವಾಂಸ ಕ್ರಿಶ್ಚಿಯನ್ ಲಾಸೆನ್ ಅಭಿಪ್ರಾಯಪಟ್ಟಿರುವುದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಇವುಗಳ ಪೈಕಿ ಮಧ್ಯದ ದ್ವೀಪ ಮುಂಬಯಿ, ಅದಕ್ಕೆ ಪಶ್ಚಿಮದ್ದು ವೋರ್ಲಿ: ಅನಂತರ ಪ್ರದಕ್ಷಿಣವಾಗಿ, ಪರೇಲ್, ಸೆವ್ರಿ–ಸೈಯನ್, ಮಜಗಾಂವ್, ಕೊಲಾಬಾ ಇತ್ಯಾದಿ. ಇವು ಒಂದೊಂದೂ ಉಳಿದವುಗಳೊಡನೆ ಕಡಲಚಾಚುಗಳಿಂದ ಬೇರ್ಪಟ್ಟಿದ್ದುವು. 9ನೆಯ ಶತಮಾನದಿಂದ 1348ರ ತನಕ ಅದು ವಿವಿಧ ರಾಜ್ಯದ ಆಳ್ವಿಕೆಗೆ ಒಳಪಟ್ಟಿತ್ತು. ಅನಂತರ ಅದು ಗುಜರಾತಿನ ಸುಲ್ತಾನನ ವಶಕ್ಕೆ ಬಂತು. ಗುಜರಾತಿನ ಸುಲ್ತಾನ ಬಹಾದೂರ್ ಷಾ ಅದನ್ನು ಪೋರ್ಚುಗೀಸರಿಗೆ ವಹಿಸಿ ಕೊಟ್ಟ (1534). ಇಂಗ್ಲಿಷ್ ದೊರೆ 2ನೆಯ ಚಾರ್ಲ್ಸ್ ಮತ್ತು ಪೋರ್ಚುಗಲ್ ದೊರೆಯ ತಂಗಿ ಕ್ಯಾತರೀನ್ ಬ್ರೆಗಾಂನ್ಜಾರ ಮದುವೆಯ ಸಂದರ್ಭದಲ್ಲಿ ಅವನಿಗೆ ನೀಡಲಾದ ವರದಕ್ಷಿಣೆಯಲ್ಲಿ ಮುಂಬಯಿಯೂ ಸೇರಿತ್ತು (1662). ಬ್ರಿಟಿಷ್ ಸೇನೆ ಅಲ್ಲಿಗೆ ಬರಲು ಯತ್ನಿಸಿದಾಗ ಅಲ್ಲಿಯ ಪೋರ್ಚುಗೀಸ್ ವೈಸ್‌ರಾಯ್ ಎಡೆ ಕೊಡಲಿಲ್ಲ (1662). ಎರಡು ವರ್ಷಗಳಿಗೂ ಹೆಚ್ಚು ಕಾಲ ಹೋರಾಟ ನಡೆದ ಮೇಲೆ ಬ್ರಿಟಿಷರು ಅದನ್ನು ವಶಪಡಿಸಿಕೊಂಡರು. 1668ರ ಮಾರ್ಚ್ 27ರಂದು ಬ್ರಿಟಿಷ್ ದೊರೆ ಅದನ್ನು ವರ್ಷಕ್ಕೆ ಕೇವಲ 10 ಪೌಂಡ್ ಬಾಡಿಗೆಯ ಮೇಲೆ ಈಸ್ಟ್ ಇಂಡಿಯ ಕಂಪನಿಗೆ ಕೊಟ್ಟ. 1672ರಲ್ಲಿ ಸೂರತ್ತಿನ ಅಧ್ಯಕ್ಷ ಜಿರಾಲ್ಡ್ ಅಂಜಿಯೆರ್ ತನ್ನ ಸರ್ಕಾರದ ರಾಜಧಾನಿಯನ್ನು ಅಲ್ಲಿಗೆ ವರ್ಗಾಯಿಸಿದ. ಅವನೇ ಮುಂಬಯಿ ನಗರದ ಸ್ಥಾಪಕ. ಆಗ ಮುಂಬಯಿ ಅತ್ಯಂತ

ಅನಾರೋಗ್ಯಕರ ಪ್ರದೇಶವಾಗಿತ್ತು. ಮುಂಬಯಿಯಲ್ಲಿರುವವರಿಗೆ ಎರಡೇ ವರ್ಷ ಆಯಸ್ಸು ಎಂಬುದು ಗಾದೆ ಮಾತಾಗಿತ್ತು. ಅವನು ಈ ಪ್ರದೇಶವನ್ನು ಸ್ವಚ್ಛಗೊಳಿಸಿ ಅಲ್ಲೊಂದು ಆಸ್ಪತ್ರೆಯನ್ನೂ ಉಚ್ಚನ್ಯಾಯಾಲಯವನ್ನೂ ಸ್ಥಾಪಿಸಿದ. ಗುಜರಾತಿನ ಪಾರ್ಸಿ ವರ್ತಕರು ಅಲ್ಲಿಗೆ ಬಂದು ನೆಲಸಿದರು. ಮುಂಬಯಿಯ ಅಭಿವೃದ್ಧಿಯಲ್ಲಿ ಇವರ ಪಾತ್ರ ದೊಡ್ಡದು. ಡಚ್ ಆಕ್ರಮಣಕಾರರ ವಿರುದ್ಧ ಜೆರಾಲ್ಡ್ ಅಲ್ಲೊಂದು ಕೋಟೆ ಕಟ್ಟಿದ. ಇವನು ನಿಧನನಾದಾಗ (1677) ಮುಂಬಯಿ ನಗರದ ಜನಸಂಖ್ಯೆ 60,000 ಇತ್ತು. ಆ ವೇಳೆಗಾಗಲೆ ಮುಂಬಯಿ ಪ್ರಾಮುಖ್ಯ ಗಳಿಸಿತ್ತು.

ದೊರೆಯ ಸೇನೆಗೂ ಕಂಪನಿ ಸರ್ಕಾರಕ್ಕೂ ನಡುವೆ ಆಗಾಗ ಘರ್ಷಣೆಗಳಾಗುತ್ತಿದ್ದುವು. 1683ರಲ್ಲಿ ಎದ್ದ ದಂಗೆಯನ್ನು ಅಡಗಿಸಲಾಯಿತು. 18ನೆಯ ಶತಮಾನದಲ್ಲಿ ನಗರ ಬಹಳ ಬೆಳವಣಿಗೆ ಸಾಧಿಸಿತು. ಅದರ ಸುತ್ತ ಕೋಟೆಯನ್ನು ಬಲಪಡಿಸಲಾಗಿತ್ತು. ದ್ವೀಪಗಳ ನಡುವಣ ಕಡಲ ಚಾಚುಗಳನ್ನು ಇಂಗಿಸಿ ನೆಲವನ್ನು ವಾಸಯೋಗ್ಯವಾಗಿ ಮಾಡುವ ಪ್ರಯತ್ನ ಸಾಗಿತ್ತು. ವೊರ್ಲಿ ಮತ್ತು ಮಾಹಿಮ್ ನಡುವೆ ಸಂಪರ್ಕ ಏರ್ಪಡಿಸಿದ್ದು ಒಂದು ದೊಡ್ಡ ಸಾಧನೆ. ಅದನ್ನು ಆಗ ಮಾಡಿಸಿದವನು. ಗವರ್ನರ್ ಆಗಿದ್ದ ವಿಲಿಯಮ್ ಹಾರ್ನ್‌ಬಿ (1771–84). ಇವನು ನಿರ್ಮಿಸಿದ ಒಡ್ಡುದಾರಿಗೆ ಹಾರ್ನ್‌ಬಿ ವೆಲಾರ್ಡ್ ಎಂದೇ ಹೆಸರು.

**ಮುಂಬೈ ಸ್ಟಾಕ್ ಎಕ್ಸ್‌ಚೇಂಜ್ ಕಟ್ಟಡ**

ಮೀನುಗಾರರ ಏಳುದ್ವೀಪಗಳಿಂದ ಇಂದಿನ ಆಧುನಿಕ ಮುಂಬಯಿ ನಗರವನ್ನು ಕಟ್ಟಿ ಬೆಳೆಸಿದವರು ಅನೇಕರು. ಇವರ ಪೈಕಿ ಪಾರ್ಸಿಜನರನ್ನು ಮರೆಯುವಂತಿಲ್ಲ. ಇವರಲ್ಲಿ ಮೊದಲಿಗನೆಂದರೆ ಲಾವ್‌ಜಿನಸರ್‌ವಾಂಜಿ ವಾಡಿಯ. ಇವನೊಬ್ಬ ಹಡಗು ನಿರ್ಮಾಪಕ ಅಥವಾ ವಾಡಿಯ. ಆ ಕಸಬಿನ ಹೆಸರೇ ಇವನ ಮನೆತನಕ್ಕೆ ಬಂತು. ಅವನು ಸೂರತ್ತಿನಿಂದ ಮುಂಬಯಿಗೆ ಬಂದ ಹಡಗುಕಟ್ಟೆಗಳ ವಿಸ್ತರಣೆಯ ಮೇಲುಸ್ತುವಾರಿ ನೋಡಿಕೊಂಡ (1773). ಇವನು ಆರಂಭಿಸಿದ. ಬ್ರಿಟಿಷ್ ಯುದ್ಧ ನೌಕಾಂಗಣದ ನೌಕೆಗಳೂ ಸೇರಿದಂತೆ ಅನೇಕ ಹಡಗುಗಳು ನಿರ್ಮಾಣವಾದುವು. ಆ ಉದ್ಯಮದಿಂದಾಗಿ ಅನೇಕ ಕುಶಲ ಕಾರ್ಮಿಕರು ತಯಾರಾದರು. ಹೀಗಾಗಿ ಮುಂಬಯಿ ಕೈಗಾರಿಕಾ ನಗರವಾಗಲು ಸಾಧ್ಯವಾಯಿತು. ವಿದೇಶ ಸ್ಪರ್ಧೆಯ ನಿರ್ಮೂಲನದೊಂದಿಗೆ ಅದರ ವ್ಯಾಪಾರೋದ್ಯಮಗಳು ಬೆಳೆದುವು. ಮುಂಬಯಿಯ ದಕ್ಷಿಣದಲ್ಲಿ ಮರಾಠಾ ಕಡಲುಕೊಳ್ಳೆಗಾರರ ನೆಲೆಯೆನಿಸಿದ್ದ ಘೆರಿಯಾ ಅಥವಾ ವಿಜಯದುರ್ಗವನ್ನು ರಾಬರ್ಟ್‌ಕ್ಲೈವ್ ಮತ್ತು ಚಾರ್ಲ್ಸ್ ವಾಟ್ಸನ್ನರು ಧ್ವಂಸ ಮಾಡಿದರು (1756). ಪೋರ್ಚುಗೀಸ್ ಬಲವೂ ಕುಗ್ಗಿತು. ಫ್ರೆಂಚರ ವಸಾಹತುಗಳನ್ನು ಬ್ರಿಟಿಷರು ವಶಪಡಿಸಿಕೊಂಡದ್ದರಿಂದ ಅವರ ಸ್ಪರ್ಧೆ ಅಡಗಿತು. ಸಾಲ್ಬಾಯ್ ಕೌಲಿನ ಪ್ರಕಾರ ಮರಾಠರು ಸಾಲ್ಸೆಟ್ ದ್ವೀಪ ಮತ್ತು ಬಸ್ಸೇನ್ ಬಂದರನ್ನು ಬ್ರಿಟಿಷರಿಗೆ ಒಪ್ಪಿಸಿದ್ದರಿಂದ ಮುಂಬಯಿ ಬೆಳೆವಣಿಗೆ ತ್ವರೆಯಿಂದ ಮುಂದುವರಿಯಿತು (1782).

**ನೆಹರು ಕೇಂದ್ರ**

ಮರಾಠಾ ಚಕ್ರಾಧಿಪತ್ಯದ ಪತನದೊಂದಿಗೆ ಬ್ರಿಟಿಷರ ಹೊಸ ಪ್ರಾಂತ್ಯವಾದ ಅಂದಿನ ಬೊಂಬಾಯಿ (ಮುಂಬಯಿ) ರಾಜಧಾನಿಯಾಯಿತು. ಇದರಿಂದ ಮುಂಬಯಿಯ ಪ್ರಗತಿ ಪ್ರಾಮುಖ್ಯಗಳು ಹೆಚ್ಚಿದುವು. ಮೌಂಟ್ ಸ್ಟೂವರ್ಟ್ ಎಲ್ಫಿನ್‌ಸ್ಟನ್ ಆ ಪ್ರಾಂತ್ಯದ ಪ್ರಥಮ ಲೆಫ್ಟನಂಟ್ ಗವರ್ನರ್ (189–27) ಆದ. ಮುಂಬಯಿಯಿಂದ ಇಂಗ್ಲೆಂಡಿಗೆ ಸೂಯೆಜ್ ಕಾಲುವೆ ತೆರೆದಾಗ ಈ ಸಂಚಾರ ಸಾಧ್ಯವಾದದ್ದು 1849ರಲ್ಲಿ. ಸೂಯೆಜ್ ಕಾಲುವೆ ತೆರೆದಾಗ ಈ ಸಂಚಾರದ ಕಾಲ 45 ದಿನಗಳಿಂದ 30 ದಿನಗಳಿಗೆ ಇಳಿಯಿತು. ಆ ವೇಳೆಗೆ ರೈಲುಮಾರ್ಗಗಳ ನಿರ್ಮಾಣವಾಗಿತ್ತು. ಒಳನಾಡಿನ ಹತ್ತಿ ಮುಂಬಯಿಗೆ ಬರತೊಡಗಿತ್ತು. ಅದು ಮುಂಬಯಿಯ ಹತ್ತಿಗಿರಣಿ ಕೈಗಾರಿಕೆಗೆ ತಳಹದಿ ಹಾಕಿತು. ಮುಂಬಯಿಯಿಂದ ಥಾಣೆಗೆ ರೈಲು ಸಂಚಾರ ಆರಂಭವಾದದ್ದು 1853ರಲ್ಲಿ. 1864ರ ವೇಳೆಗೆ ರೈಲುಮಾರ್ಗಗಳು ವಿಸ್ತರಿಸಿದುವು. ವಿಕ್ಟೋರಿಯ ಟರ್ಮಿನಸ್ ನಿಲ್ದಾಣದ ನಿರ್ಮಾಣವಾದದ್ದು ಹಿಂದೆ ಕಡಲಿದ್ದು ನೆಲವಾದ ಪ್ರದೇಶದಲ್ಲಿ. ಬಾರ್ಟ್ಲ್ ಫ್ರಿಯರ್ ಗವರ್ನರ್ ಆಗಿದ್ದ ಕಾಲದಲ್ಲಿ (1862–67) ಕೋಟೆಯ ಗೋಡೆಗಳನ್ನು ಕೆಡವಲಾಯಿತು. ಅಮೆರಿಕದ ಅಂತರ್ಯುದ್ಧದಿಂದಾಗಿ ಮುಂಬಯಿಯ ವ್ಯಾಪಾರ ವಿಶೇಷ ಅಭ್ಯುದಯ ಪಡೆಯಿತು (1861–63). ಭಾರತದ ಹತ್ತಿಗೆ ಬ್ರಿಟನ್ನಿನ ಬೇಡಿಕೆ ಬೆಳೆದು ಬೆಲೆಗಳು ಏರಿದವು. ವ್ಯಾಪಾರಿಗಳು ಲಾಭದ ಕೊಳ್ಳೆ ಹೊಡೆದರು. ಯುದ್ಧ ಅಂತ್ಯಗೊಂಡಾಗ ಹಠಾತ್ತನೆ ವ್ಯಾಪಾರ ಕುಸಿದು ನಗರದ ತಳಪಾಯವೇ ಅಲುಗಾಡುವಂತಾಯಿತು. ಕ್ರಮೇಣ ಮತ್ತೆ ವ್ಯಾಪಾರ ಕುದುರಿ ಮುಂಬಯಿ ಚೇತರಿಸಿಕೊಂಡಿತು.

1884ನೆಯ ವರ್ಷ ಮುಂಬಯಿಯ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲು. ಕವಾಸ್‌ಜಿ ನಾನಾಭಾಯ್ ದಾವಾರ್ ಎಂಬಾತ ಆ ವರ್ಷ ಮುಂಬಯಿಯಲ್ಲಿ ಪ್ರಥಮ ಹತ್ತಿ ಗಿರಣಿ ಸ್ಥಾಪಿಸಿದ. ಮುಂದಿನ ಐದು ವರ್ಷಗಳಲ್ಲಿ ಇನ್ನೂ ಐವತ್ತು ಗಿರಣಿಗಳು ಸ್ಥಾಪಿತವಾದವು. ಇನ್ನೊಬ್ಬ ಉದ್ಯಮಶೀಲ ಪಾರ್ಸಿ–ಜಮ್‌ಷೆಟ್‌ಜಿ ನಸರ್‌ವಾಂಜಿ (1839–

1904). ಈತ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯನ್ನು ಆರಂಭಿಸಿದ. ಪಶ್ಚಿಮ ಘಟ್ಟಗಳಲ್ಲಿ ಹರಿದು ಹೋಗುತ್ತಿದ್ದ ನದಿಯ ನೀರನ್ನು ಬಳಸಿಕೊಂಡು ಜಲವಿದ್ಯುತ್ ಉತ್ಪಾದಿಸುವ ಕನಸು ಕಂಡವ ಈತ. ಇವನ ಮಗ ಸರ್ ದೊರಾಬ್‌ಜಿ ಟಾಟಾ ಅದನ್ನು ಕಾರ್ಯಗತಗೊಳಿಸಿದ (1915). ಮುಂಬಯಿಗೆ ಅಗ್ಗದ ವೆಚ್ಚದಲ್ಲಿ ಯಥೇಚ್ಛ ವಿದ್ಯುಚ್ಛಕ್ತಿ ದೊರಕುವಂತಾಯಿತು. ಹಲವಾರು ಕೈಗಾರಿಕೆಗಳ ಸ್ಥಾಪನೆಯಾಯಿತು. ಕಾಗದ, ಹಿಟ್ಟು, ಅಕ್ಕಿ, ಎಣ್ಣೆ, ಮರ, ಹಗ್ಗ, ಚರ್ಮ, ಕಲ್ಲು, ಸಿಮೆಂಟ್, ಲೋಹಗೆಲಸ, ಸಕ್ಕರೆ, ಹೊಗೆಸೊಪ್ಪು, ಚಹ, ಹೆಂಚು, ಇಟ್ಟಿಗೆ ಮುಂತಾದ ಹಲವಾರು ಗಿರಣಿಗಳೂ ಕಾರ್ಖಾನೆಗಳೂ ಆರಂಭವಾದವು. ಮುದ್ರಣಾಲಯಗಳೂ ಕಾರ್ಯಾಗಾರಗಳೂ ಸ್ಥಾಪಿತವಾದವು. ವಿದ್ಯುತ್ ಟ್ರಾಮ್, ವಿದ್ಯುತ್ ರೈಲು ಬಂದವು.

ಇವೆಲ್ಲ ಚಟುವಟಿಕೆಗಳೊಂದಿಗೆ 19ನೆಯ ಶತಮಾನದ ಕೊನೆಯ ವೇಳೆಗೆ ಮುಂಬಯಿ ನಗರದ ಸ್ವರೂಪವೇ ಬಹಳ ಮಟ್ಟಿಗೆ ಬದಲಾಗಿತ್ತು. ಈಗ ಮಹಾತ್ಮಗಾಂಧಿ ರಸ್ತೆ ಎನಿಸಿರುವ ಎಸ್‌ಪ್ಲನೇಡ್‌ನ ಉದ್ದಕ್ಕೂ ಕಟ್ಟಡಗಳು ಸಾಲುಗಟ್ಟಿದುವು. ಅವುಗಳಲ್ಲಿ ಮುಖ್ಯವಾದ ಕೆಲವು ಕಟ್ಟಡಗಳು: ಸರ್ಕಾರಿ ಸಚಿವಾಲಯ, ಉಚ್ಚ ನ್ಯಾಯಾಲಯ, ವಿಶ್ವವಿದ್ಯಾಲಯದ ಕಟ್ಟಡಗಳು, ಗಡಿಯಾರ ಗೋಪುರ, ಮರಾಮತ್ ಇಲಾಖೆ ಕಛೇರಿ, ಅಂಚೆ ಕಛೇರಿ ಇವೆಲ್ಲ ಯುರೋಪಿನ ಗಾಥಿಕ್ ಶೈಲಿಯಲ್ಲಿ ನಿರ್ಮಾಣವಾದ ಕಟ್ಟಡಗಳು. ಕ್ರಾಫರ್ಡ್ ಮಾರುಕಟ್ಟೆ ಕೂಡ ನಿರ್ಮಾಣವಾಯಿತು (1873). ನಗರಕ್ಕೆ ಸುರಕ್ಷಿತ ನೀರು ಪೂರೈಕೆಯ ಹಾಗೂ ಒಳಚರಂಡಿಯ ವ್ಯವಸ್ಥೆಗಳು ಬಂದುವು (1879).

ನಗರ ಜನಸಂಖ್ಯೆ 1891ರ ವೇಳೆಗೆ 8,21,000 ಆಗಿತ್ತು. ನಗರದ ಜನ ಸಂದಣಿಯೊಂದಿಗೆ ಕೊಳೆಗೇರಿಗಳೂ ಬೆಳೆಯತೊಡಗಿದವು. ನಗರದ ಬೆಳೆವಣಿಗೆ ವ್ಯವಸ್ಥಿತವಾಗಿ ಮುಂದುವರಿಯುವಂತೆ ಮಾಡಲು ನಗರಾಭಿವೃದ್ಧಿ ಮಂಡಲಿಯ ಸ್ಥಾಪನೆಯಾಯಿತು. ಬ್ಯಾಕ್ ಬೇ (ಹಿನ್ನೀರು) ಪ್ರದೇಶದ ಅಭಿವೃದ್ಧಿ ಯೋಜನೆ ಕಾರ್ಯಗತವಾಯಿತು (1918), 526.11 ಹೆ. ಪ್ರದೇಶವನ್ನು ಒಳಗೊಳ್ಳುವಂತೆ ಕೊಲಾಬಾ ಬಳಿಯಿಂದ ಮೇರೀನ್ ಲೈನ್ಸ್‌ವರೆಗೆ ಕಡಲಿಗೆ ತಡೆ ಗೋಡೆ ಕಟ್ಟುವ ಮಹಾಕಾರ್ಯವಿದು. ಆದರೆ ಇದರಲ್ಲಿ ಹಲವಾರು ದೋಷಗಳಾದ್ದರಿಂದ ಈ ಬಗ್ಗೆ ವಿಚಾರಣೆ ನಡೆಯಿತು (1926). ಕೊನೆಗೆ ಹಂತ ಹಂತವಾಗಿ ಇದನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಎರಡನೆಯ ಮಹಾಯುದ್ಧದ ಅನಂತರ ಈ ಕೆಲಸ ಮುಂದುವರಿಯಿತು. ಚೌಪಾಟಿ ಸೀಫೇಸ್ ರಸ್ತೆಯಿಂದ ಹಾರ್ವೆ ರಸ್ತೆ ಕೂಡುವವರೆಗೆ ನಿರ್ಮಿಸಲಾದ ಮೆರೀನ್ ಡ್ರೈವ್ ಭಾರತದ ಪ್ರಥಮ ಜೋಡಿ ಹೆದ್ದಾರಿ. ಉಪನಗರಗಳ ನಿರ್ಮಾಣವೂ ಭರದಿಂದ ಸಾಗಿತು.

ಬಾಂದ್ರ–ವರ್ಲಿ ಸೀಲಿಂಕ್

1901ರಲ್ಲಿ ನಗರದ ಜನಸಂಖ್ಯೆ (ಉಪನಗರವೂ ಸೇರಿ) 8,47,497. 1941ರ ವೇಳೆಗೆ ಇದು 16,95,168 ಆಗಿತ್ತು. 1951ರಲ್ಲಿ ಜನಸಂಖ್ಯೆ 23,29,020. ಮುಂಬಯಿ ಭಾರತದ ಪ್ರಥಮ ಜನಭರಿತ ನಗರವಾಗಿ ಬೆಳೆದಿದೆ. ಎರಡನೆಯದ್ದು ಕೋಲ್ಕತ. ಮುಂಬಯಿ ಒಂದು ರೀತಿಯಲ್ಲಿ ಅಂತಾರಾಷ್ಟ್ರೀಯ ನಗರ. ಇಲ್ಲಿ ಹಲವಾರು ದೇಶಗಳ ಜನರೂ, ಹಲವಾರು ಧರ್ಮ, ಭಾಷೆಗಳವರೂ ಇದ್ದಾರೆ. ಮರಾಠಿಯಲ್ಲದೆ ಗುಜರಾತಿ, ಉರ್ದು, ಹಿಂದಿ, ಕೊಂಕಣಿ, ತೆಲುಗು, ಸಿಂಧಿ, ತಮಿಳು, ಕನ್ನಡ ಆಡುವವರೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 2001ರ ಜನ ಗಣತಿಯ ಪ್ರಕಾರ ನಗರದ ಜನ ಸಂಖ್ಯೆ 1,63,68,084. ಜನದಟ್ಟಣೆಯನ್ನು ಕಡಿಮೆ ಮಾಡಲು 1970ರಲ್ಲಿ ಸರ್ಕಾರ ಹೊಸ ಮುಂಬಯಿ ಯೋಜನೆಯನ್ನಾರಂಭಿಸಿ ವಿಶಾಲ ಪ್ರದೇಶವನ್ನು ವಶಪಡಿಸಿಕೊಂಡು ವಸತಿಗಳನ್ನು ನಿರ್ಮಿಸುವ ಕೆಲಸ ಕೈಗೊಂಡಿತು. ಆ ದಶಕದ ಆದಿಯಲ್ಲಿ ಥಾಣೆ ಆಖಾತದ ಮೇಲೆ ಬೃಹತ್ ಸೇತುವೆಯೊಂದನ್ನು ನಿರ್ಮಿಸಲಾಯಿತು.

ವೈಶಿಷ್ಟ್ಯಗಳು: ಪ್ರಾದೇಶಿಕವಾಗಿ ನಗರ ವಿಸ್ತರಿಸಿದ್ದರೂ ಅದರ ಕೆಲವು ಹಳೆಯ ವೈಶಿಷ್ಟ್ಯಗಳು ಉಳಿದುಕೊಂಡಿವೆ. ಕೋಟೆ ಪ್ರದೇಶ ಮುಂಬಯಿಯ ಕೇಂದ್ರ ಪ್ರದೇಶ. ಅದು ಆಡಳಿತ ಹಾಗೂ ವಾಣಿಜ್ಯ ವಲಯ. ಬಂದರು ಕಟ್ಟೆಗಳು, ಮಧ್ಯೆ ಹಾಗೂ ಪಶ್ಚಿಮ ರೈಲ್ವೆ ನಿಲ್ದಾಣಗಳು, ಬ್ಯಾಂಕುಗಳು, ಸ್ಟಾಕ್‌ಎಕ್ಸ್‌ಚೇಂಜ್ ವ್ಯವಹಾರ ಸಂಸ್ಥೆಗಳು, ಸರ್ಕಾರಿ ಕಛೇರಿಗಳು ಹೋಟೇಲುಗಳು, ಶಿಕ್ಷಣ ಸಂಸ್ಥೆಗಳು, ದೂರವಾಣಿ ಮತ್ತು ತಂತಿ ಕಛೇರಿಗಳು ಇಲ್ಲಿ ಕಿಕ್ಕಿರಿದಿವೆ. ಹಲವಾರು ಗಗನಚುಂಬಿ ಕಟ್ಟಡಗಳು ಎದ್ದಿವೆ. ದಕ್ಷಿಣಕ್ಕೆ ಕೊಲಾಬಾವರೆಗೂ ವಾಣಿಜ್ಯ ಸಂಕೀರ್ಣ ಮತ್ತು ವಸತಿಗಳು ಹಬ್ಬಿವೆ. ದಕ್ಷಿಣದಲ್ಲಿ ರಕ್ಷಣಾ ಬಲಗಳ ವಲಯವಿದೆ.

ಕೋಟೆ ಪ್ರದೇಶದ ಉತ್ತರಕ್ಕೆ ವಾಣಿಜ್ಯ ಮತ್ತು ವಸತಿಗಳಿವೆ. ಕಾಲ್ಬದೇವಿ. ಗಿರ್‌ಗಾಂವ್, ಮಹಮ್ಮದಾಲಿ ರಸ್ತೆ ಪ್ರಮುಖವಾಗಿವೆ. ಇದು ಮಧ್ಯಮ ವರ್ಗದ ಜನರಿರುವ ವಲಯ. ನಡುನಡುವೆ ಸಗಟು ಹಾಗೂ ಚಿಲ್ಲರೆ ವ್ಯಾಪಾರ ಮಾರುಕಟ್ಟೆಗಳಿವೆ. ಇದರ ಪಶ್ಚಿಮಕ್ಕೆ ಎದುರಾಗಿ ಉನ್ನತ ವರ್ಗಗಳ ವಸತಿಗೃಹಗಳಿವೆ. ಪೂರ್ವಕ್ಕೆ ಬಂದರುಕಟ್ಟೆಗಳ ಸಾಲು ಮುಂದುವರಿದಿದೆ. ರೈಲ್ವೆ ಅಂತಿಮ ನಿಲ್ದಾಣಗಳೂ ಇವೆ.

ಇನ್ನೂ ಉತ್ತರಕ್ಕೆ ಪರೇಲ್ ಜವಳಿ ಕೈಗಾರಿಕೆ ಪ್ರದೇಶ. ಇಲ್ಲಿ ಹಲವಾರು ಗಿರಣಿಗಳೂ, ಕಾರ್ಮಿಕ ವಸತಿಗಳೂ ಇವೆ. ನೈರುತ್ಯಕ್ಕೆ ಮಲಬಾರ್ ಮತ್ತು ಕೊಲಾಬಾ ಗುಡ್ಡಗಳ ಮೇಲೆ ಶ್ರೀಮಂತರ ವಸತಿಗಳಿವೆ. ಪಶ್ಚಿಮದ ಕಡಲ ಗಾಳಿಯ ತಂಪು ಆಹ್ಲಾದಕರ. ಹಾರ್ನ್‌ಬಿ ವೆಲ್ಲಾರ್ಡ್‌ನ ರಕ್ಷಣಾ ಗೋಡೆಯಿಂದ ಈ ಪ್ರದೇಶದ ತಗ್ಗಿನ ಜೌಗುನೆಲವನ್ನು ಬಳಕೆಗೆ ಯೋಗ್ಯವಾಗಿ ಮಾಡಲಾಗಿದೆ. ಇದರ ಒಂದು ಭಾಗವೇ ಮಹಾಲಕ್ಷ್ಮೀ ರೇಸ್‌ಕೋರ್ಸ್ ಮತ್ತು ವಿಶಾಲ ಮೈದಾನ. ಇಲ್ಲೂ ವಾಸದ ಮನೆಗಳು ಬೆಳೆಯುತ್ತಿವೆ.

ಎರಡನೆಯ ಮಹಾಯುದ್ಧಕ್ಕೆ ಮೊದಲು ಉಪನಗರದ ಅಭಿವೃದ್ಧಿ ಪರೇಲ್ ಮತ್ತು ಮಾಹಿಮ್ ಕಡಲು ಚಾಚಿನ ಪ್ರದೇಶಕ್ಕೆ ಸೀಮಿತವಾಗಿತ್ತು. ದಾದರ್ ಮತ್ತು ಶಿವಾಜಿ ಪಾರ್ಕ್ ಪ್ರದೇಶದ ಅಭಿವೃದ್ಧಿಯಾಯಿತು. ಯುದ್ಧದ ಅನಂತರ ಪಶ್ಚಿಮ ಮತ್ತು ಮಧ್ಯ ರೈಲ್ವೆ ಮಾರ್ಗಗಳ ಉದ್ದಕ್ಕೂ ಸಣ್ಣ ಸಣ್ಣ ಆಕರ್ಷಕ ಉಪನಗರಗಳು ಬೆಳೆದವು. ಮುಖ್ಯವಾಗಿ ಪೂರ್ವಭಾಗದಲ್ಲಿ ಹಳೆಯ ಮುಂಬಯಿ–ಆಗ್ರ ರಸ್ತೆಯ ಬದಿಗೆ ಹೊಸ ಕೈಗಾರಿಕೆಗಳು ಎದ್ದಿವೆ. ಥಾಣವನ್ನೂ ದಾಟಿ ಹಬ್ಬಿವೆ. ಸಾಮಾನ್ಯವಾಗಿ ವಸತಿಗೃಹಗಳಿಂದ ಕೂಡಿದ ಪಶ್ಚಿಮ ಕರಾವಳಿ ಪ್ರದೇಶದಲ್ಲೂ ಹೊಸ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಿವೆ. ಮಧ್ಯವಲಯದಲ್ಲಿ ಮಾತ್ರ ಮುಖ್ಯವಾಗಿ ಛತ್ರಪತಿ ಶಿವಾಜಿ (ಸಾಂತಾಕ್ರೂಜ್) ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದಾಗಿ ತೆರೆದ ವಿಶಾಲ ಪ್ರದೇಶ ಉಳಿದಿದೆ. ರೈಲ್ವೆಯ ವಿದ್ಯುದೀಕರಣ ಹಾಗೂ ಎಕ್ಸ್‌ಪ್ರೆಸ್ ಮಾರ್ಗಗಳ ನಿರ್ಮಾಣದಿಂದಾಗಿ ಹೊಸ ನಗರ ಪ್ರದೇಶಗಳ ನಿರ್ಮಾಣ ಸುಲಭವಾಗಿದೆ.

ಸಮಸ್ಯೆಗಳು: ಯುದ್ಧಾನಂತರದಲ್ಲಿ ಮುಂಬಯಿ ನಗರ ಸ್ಫೋಟಿಸುವ ರೀತಿಯಲ್ಲಿ ಬೆಳೆಯುತ್ತಿರುವುದನ್ನು ಅದರ ಭೂದೃಶ್ಯದ ಬದಲಾವಣೆಯಲ್ಲಿ ಕಾಣಬಹುದು. ಮಲಬಾರ್ ಹಿಲ್ ಮೇಲೆ ಗಗನಚುಂಬಿ ಕಟ್ಟಡಗಳು ಬೆಳೆಯುತ್ತಿವೆ. ಇತರ ಎಡೆಗಳಲ್ಲೂ ಎತ್ತರದ ಕಟ್ಟಡಗಳು ಮೇಲೆದ್ದು ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಿವೆ. ಅಂಧೇರಿ, ಕುರ್ಲ ಮುಂತಾದೆಡೆಗಳಲ್ಲಿ ಬೆಟ್ಟಗಳ ಪ್ರದೇಶವನ್ನು ಆಕ್ರಮಿಸಿಕೊಳ್ಳಲಾಗುತ್ತಿದೆ. ವಡಾಲ, ಬಂದ್ರ ಮುಂತಾದ ಎಡೆಗಳಲ್ಲಿ ಕಡಲಭಾಗದ ಪ್ರದೇಶವನ್ನು ಬಳಕೆಗೆ ಯೋಗ್ಯವಾಗಿ ಮಾಡಲಾಗಿದೆ. ಎಕ್ಸ್‌ಪ್ರೆಸ್ ಹಾದಿಗಳ ಆಧುನಿಕ ಕೈಗಾರಿಕಾ ಕಟ್ಟಡಗಳ ನಿರ್ಮಾಣವಾಗಿದೆ. ಸದಾ ಕಿಕ್ಕಿರಿದು ತುಂಬಿದ ಉಪನಗರ ರೈಲುಗಳೂ ನಿರಂತರವಾಗಿ ಬೆಳೆಯುತ್ತಿರುವ ಕೊಳೆಗೇರಿಗಳೂ ಅನಿಯಂತ್ರಿತ ನಗರ ಬೆಳೆವಣಿಗೆಯ ದೃಶ್ಯಗಳು.

ಈ ನಗರ ಎದುರಿಸುತ್ತಿರುವ ಸಮಸ್ಯೆಗಳು ಹಲವು. ದೇಶದ ಇತರ ಕಡೆಗಳಿಂದ ಜನರ ಒಳವಲಸೆ ನಿರಂತರವಾಗಿ ಸಾಗಿದೆ. ಕೆಲವು ಪ್ರದೇಶಗಳಲ್ಲಿ ಎಕರೆಗೆ 1520ಕ್ಕೂ ಹೆಚ್ಚು ಜನಸಾಂದ್ರತೆಯಿದೆ. ನಾಗರಿಕ ಸೌಲಭ್ಯಗಳು ಎಲ್ಲರಿಗೂ ದೊರಕುತ್ತಿಲ್ಲ. ಒಳನಾಡಿನ ಆರ್ಥಿಕ ದುಸ್ಥಿತಿಯೇ ಈ ಜನದಟ್ಟಣೆಗೆ ಕಾರಣವೆಂಬುದು ಪರಿಣಿತರ ಅಭಿಮತ. ಉಪನಗರಗಳಲ್ಲಿ ಕೈಗಾರಿಕೆಗಳು ಬೆಳೆಯುತ್ತಿರುವುದೂ ಹಳೆಯ ದ್ವೀಪ ಪ್ರದೇಶಗಳಲ್ಲಿರುವ ಕೈಗಾರಿಕೆಗಳನ್ನು ಹೊರಕ್ಕೆ ವರ್ಗಾಯಿಸಲು ಒಪ್ಪದಿರುವುದೂ ಕಾರಣಗಳು. ಮುಂಬಯಿ ಹಿಂದೆ ಜವಳಿ ಕೈಗಾರಿಕೆಯ ಕೇಂದ್ರವಾಗಿತ್ತು. ಈಗ ಅನೇಕ ಹೊಸ ಕೈಗಾರಿಕೆಗಳು ಅಲ್ಲಿವೆ. ಮಧ್ಯಮ ಗಾತ್ರದ ಮತ್ತು ಸಣ್ಣ ಎಂಜಿನಿಯರಿಂಗ್ ಘಟಕಗಳು, ಔಷಧ ತಯಾರಿಕೆ ಉದ್ಯಮಗಳು, ಪೆಟ್ರೋಲಿಯಮ್, ರಸಾಯನಿಕ ಮತ್ತು ಇತರ ಹಲವು ಉದ್ಯಮಗಳು ಅಲ್ಲಿ ಸ್ಥಾಪಿತವಾಗಿವೆ. ಇವುಗಳಿಂದ ಉದ್ಯೋಗಾವಕಾಶಗಳು ಹೆಚ್ಚುತ್ತಿವೆಯಾದರೂ ವಸತಿ ಸಮಸ್ಯೆ ತೀವ್ರವಾಗಿದೆ. ಎಲ್ಲೆಲ್ಲೂ ಕೊಳೆಗೇರಿಗಳು ಬೆಳೆಯುವುದಕ್ಕೆ ಇದು ಕಾರಣ. ಅನೇಕ ಕಾರ್ಮಿಕರು ಒಂದೆಡೆ ನೆಲೆನಿಲ್ಲದಿರುವುದು, ಹಂಗಾಮಿಯಾಗಿ ಕೆಲಸ ಮಾಡುತ್ತಿರುವುದೂ ಕಾರಣವಾಗಿವೆ. ಗ್ರಾಮಪ್ರದೇಶದ ಸ್ಥಿತಿ ಸುಧಾರಣೆಯಾಗದೆ ನಗರದ ಸಮಸ್ಯೆಗಳ ಪರಿಹಾರ ಸಂಭವವಿಲ್ಲ. ಸಹಕಾರಿ ಗೃಹನಿರ್ಮಾಣ ವ್ಯವಸ್ಥೆ ಗೃಹನಿರ್ಮಾಣ

ಮಂಡಳಿ ಮುಂತಾದವು ವಸತಿ ಸಮಸ್ಯೆಯ ಪರಿಹಾರಕ್ಕೆ ಯತ್ನ ನಡೆಸಿವೆ. ಮುಂಬಯಿ ಮಹಾನಗರಯೋಜನಾ ಮಂಡಲಿ, ಹೊಸ ನಗರಕೇಂದ್ರಗಳ ನಿರ್ಮಾಣ ಮುಂತಾದವುಗಳೂ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿವೆ.

ಸಾಂಸ್ಕೃತಿಕ ಮತ್ತು ಇತರ ಚಟುವಟಿಕೆಗಳು: ಮುಂಬಯಿ ನಗರ ಒಂದು ಮುಖ್ಯ ಬೌದ್ಧಿಕ ಕೇಂದ್ರ. 1804ರಲ್ಲಿ ಬಾಂಬೇ ಲಿಟರರಿ ಸೊಸೈಟಿ ಸ್ಥಾಪನೆಯಾಯಿತು. 1827ರಲ್ಲಿ ಅದು ರಾಯಲ್ ಏಷ್ಯಾಟಿಕ್ ಸೊಸೈಟಿಯ ಶಾಖೆಯಾಗಿ ಪರಿವರ್ತನೆಗೊಂಡಿತು. ಅದರ ತ್ರೈಮಾಸಿಕ ಪತ್ರಿಕೆ ಅಂತಾರಾಷ್ಟ್ರೀಯ ಖ್ಯಾತಿಗಳಿಸಿವೆ. ಅದರ ಅಮೂಲ್ಯ ಗ್ರಂಥಾಲಯ 1841ರಲ್ಲಿ ಆರಂಭವಾಯಿತು. ಬೊಂಬಾಯಿ ವಿಶ್ವವಿದ್ಯಾಲಯವೂ ಸ್ಥಾಪಿತವಾಯಿತು (1857). ಬ್ಯಾಕ್ಟೀರಿಯ ನಿರೋಧ ಲಸಿಕೆ ತಯಾರಿಸುವ ಹಾಫ್‌ಕಿನ್ ಸಂಸ್ಥೆ ಅಲ್ಲಿ ಆರಂಭವಾಯಿತು (1890). ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯ ಸ್ಥಾಪಿತವಾಯಿತು (1904). ಅದರಲ್ಲಿ ಕಲೆ, ಪುರಾತತ್ತ್ವ, ಸಸ್ಯವಿಜ್ಞಾನ ಎಂಬ ಮೂರು ವಿಭಾಗಗಳಿವೆ. ಈಚೆಗೆ ಕೈಗಾರಿಕಾ ವಿಭಾಗವೊಂದು ಆರಂಭವಾಯಿತು. ಅಲ್ಲೇ ಜಹಾಂಗೀರ್ ಕಲಾ ಗ್ಯಾಲರಿಯಿದೆ. ಸಂಸ್ಕೃತ ಪ್ರಾಚೀನ ಹಾಗೂ ಆಧುನಿಕ ಭಾರತೀಯ ಭಾಷೆಗಳು, ಇತಿಹಾಸ, ಧರ್ಮಗಳಲ್ಲಿ ಸಂಶೋಧನೆ ಮತ್ತು ಪ್ರಸಾರಕ್ಕಾಗಿ ನೆಹರು ಕೇಂದ್ರ, ಭಾರತೀಯ ವಿದ್ಯಾಭವನ ಸ್ಥಾಪಿತವಾಯಿತು (1938). ರೊರಾಬ್ಜಿ ಟಾಟಾ ಅವರು ಸ್ಥಾಪಿಸಿದ (1945) ಟಾಟಾ ಮೂಲಭೂತ ಸಂಶೋಧನ ಸಂಸ್ಥೆ ಮುಂಬಯಿಯಲ್ಲಿದೆ. ಟಾಟಾ ಸಮಾಜ ವಿಜ್ಞಾನಿಗಳ ಸಂಸ್ಥೆಯೂ (1936) ಪ್ರಖ್ಯಾತವಾದದ್ದು.

ಮುಂಬಯಿ ಒಂದು ಪ್ರಮುಖ ರೇವು ಪಟ್ಟಣ. ಅದು ಹಲವು ಕೈಗಾರಿಕೆಗಳ, ವಾಣಿಜ್ಯ ಚಟುವಟಿಕೆಗಳ, ಹಣಕಾಸು ವಹಿವಾಟುಗಳ ಕೇಂದ್ರ. ಟ್ರಾಂಬೆಯಲ್ಲಿ ತೈಲ ಸಂಸ್ಕರಣ ಕೇಂದ್ರ ಮತ್ತು ಪರಮಾಣು ವಿದ್ಯುತ್ ಸ್ಥಾವರಗಳೂ ಇವೆ.

ಮುಂಬಯಿ ನೈಸರ್ಗಿಕ ಆಳ ಕಡಲ ರೇವು. ಸು. 110 ಚ.ಕಿಮೀ ವಿಸ್ತಾರವಾಗಿದೆ. ಅಲೆಗ್ಸಾಂಡ್ರ, ಪ್ರಿನ್ಸ್, ವಿಕ್ಟೋರಿಯ ಮುಂತಾದ ಹಲವು ಬಂದರುಕಟ್ಟೆಗಳಿವೆ. ಬಂದರು ಅಭಿವೃದ್ಧಿ ಮತ್ತು ವಿಸ್ತರಣೆಯ ಕಾರ್ಯ ಸತತವಾಗಿ ಸಾಗಿದೆ. ಬಾಲಾರ್ಡ್ ಹಡಗು ಇಳಿದಾಣದ ಉದ್ದ 457.20 ಮೀ. ಅಲ್ಲಿ 228.60 ಮೀ ವರೆಗಿನ ಉದ್ದದ ಹಡಗುಗಳು ನಿಲ್ಲಬಹುದು. ಪಕ್ಕದ ರೈಲು ನಿಲ್ದಾಣದಿಂದ ಮಧ್ಯ ಮತ್ತು ಪಶ್ಚಿಮ ರೈಲುಗಾಡಿಗಳು ದೇಶದ ಎಲ್ಲೆಡೆಗಳಿಗೂ ಹೋಗಿಬರುತ್ತವೆ. ಮುಂಬಯಿ ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕೋಲ್ಕತದ ಮೂಲಕ ಪೂರ್ವದ ನಗರಗಳಿಗೂ ಸಂಪರ್ಕ ಕಲ್ಪಿಸಿದೆ. ದೇಶದೊಳಗಿನ ಎಲ್ಲ ಪ್ರಮುಖ ನಗರಗಳೊಂದಿಗೆ ವಿಮಾನ ಸಂಪರ್ಕವಿದೆ. ಬಾಂದ್ರ–ಒರ್ಲಿ ಸೀಲಿಂಕ್ ಇತ್ತೀಚಿನ ಬೆಳವಣಿಗೆಯಾಗಿದೆ. (ಜಿ.ವಿ.ಎಸ್.ಇ.)

**ಮುಕ್ತ ವ್ಯಾಪಾರ ವಲಯ :** ಅಂತಾರಾಷ್ಟ್ರೀಯ ವ್ಯಾಪಾರ ವ್ಯವಹಾರಗಳು ಸುಗಮವಾಗಲು ಸಹಾಯಕವಾದ ಆರ್ಥಿಕ ನೀತಿ (ಫ್ರೀ ಟ್ರೇಡ್ ಜೋನ್). ಸರ್ಕಾರಗಳು ಅಲ್ಲಿನ ಆಮದು ರಫ್ತಿನ ಮೇಲೆ ಯಾವುದೇ ರೀತಿಯ ನಿಯಂತ್ರಣಗಳನ್ನು ವಿಧಿಸುವುದಿಲ್ಲ. ಇತ್ತೀಚಿನ ದಶಕಗಳಲ್ಲಿ ಮುಕ್ತ ವ್ಯಾಪಾರ ವಲಯಗಳ ಬೆಳೆವಣಿಗೆ ಕಂಡುಬರುತ್ತದೆ. ಇದು ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕೇಂದ್ರೀಕೃತವಾಗಿರುವುದನ್ನು ಕಾಣಬಹುದು.

ಈ ವ್ಯವಸ್ಥೆಯಲ್ಲಿ ಕಚ್ಚಾವಸ್ತು ಮತ್ತು ಸಿದ್ಧವಸ್ತುಗಳ ಆಮದು ಮತ್ತು ರಫ್ತಿಗೆ ಯಾವುದೇ ರೀತಿಯ ತೆರಿಗೆಗಳಾಗಲೀ ನಿರ್ಬಂಧಗಳಾಗಲೀ ಇರುವುದಿಲ್ಲ. ಈ ರೀತಿಯ ವ್ಯಾಪಾರ ನಡೆಯುವುದರಿಂದ ಮುಂದುವರೆದ ರಾಷ್ಟ್ರಗಳು ಹಿಂದುಳಿದ ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ಕಚ್ಚಾವಸ್ತುವನ್ನು ರಫ್ತು ಮಾಡುತ್ತವೆ. ಹಿಂದುಳಿದ ರಾಷ್ಟ್ರಗಳು ಅವುಗಳನ್ನು ಆಮದು ಮಾಡಿಕೊಂಡು ಕೈಗಾರಿಕೆಯ ಸಹಾಯದಿಂದ ಸಿದ್ಧ ವಸ್ತುವನ್ನಾಗಿ ಮಾರ್ಪಡಿಸುತ್ತವೆ. ಇದರಿಂದ ಹಿಂದುಳಿದ ರಾಷ್ಟ್ರದ ಪ್ರದೇಶದಲ್ಲಿ ಆರ್ಥಿಕ ಬೆಳವಣಿಗೆಯಾಗುತ್ತದೆ. ಜನರಿಗೆ ಉದ್ಯೋಗಾವಕಾಶಗಳು ನಿರ್ಮಾಣವಾಗಿ ಬಡತನ ನಿವಾರಣೆಯಾಗುತ್ತದೆ. ಮುಕ್ತ ವ್ಯಾಪಾರ ವಲಯ ಪ್ರದೇಶಗಳಲ್ಲಿ ತೆರಿಗೆಗಳು, ಆಮದು ಮತ್ತು ರಫ್ತಿನ ಮೇಲಿನ ಹಾಗೂ ಕೆಲವೊಂದು ಕಟ್ಟುಪಾಡುಗಳು ಕಂಡುಬರುವುದಿಲ್ಲ. 2002ನೆಯ ಇಸವಿಯಲ್ಲಿ ಸು. 43 ಮಿ. ಜನರು ಮುಕ್ತ ವ್ಯಾಪಾರ ವಲಯದಲ್ಲಿ ಕಾರ್ಯನಿರತರಾಗಿದ್ದು ಇವರು 116 ದೇಶಗಳಲ್ಲಿ ಹಂಚಿಕೆಯಾಗಿದ್ದಾರೆ. ಇದು ಮುಖ್ಯವಾಗಿ ಎಲೆಕ್ಟ್ರಾನಿಕ್ಸ್ ಉಪಕರಣಗಳು, ಬಟ್ಟೆ ಪಾದರಕ್ಷೆಗಳು, ಆಟದ ವಸ್ತು ಇತ್ಯಾದಿಗಳ ಉತ್ಪಾದನೆ ಮತ್ತು ವ್ಯಾಪಾರವನ್ನು ಮುಖ್ಯವಾಗಿ ಒಳಗೊಂಡಿದೆ. ಮುಕ್ತ ವ್ಯಾಪಾರದ ಪ್ರಮುಖ ಉದ್ದೇಶವೆಂದರೆ ಅಂತಾರಾಷ್ಟ್ರೀಯ ವ್ಯಾಪಾರವನ್ನು ವಿಸ್ತರಿಸುವುದು. ರಫ್ತು ಮಾಡುವ ಕೈಗಾರಿಕಾ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಉದ್ಯೋಗಾವಕಾಶಗಳನ್ನು ಕಲ್ಪಿಸುವುದಾಗಿದೆ. (ಎಚ್.ಎಸ್.ಡಿ.)

**ಮುಖ್ಯಭಾಗದಿಂದ ದೂರವಿರುವ ರಾಷ್ಟ್ರ:** ಕೆಲವೊಂದು ರಾಷ್ಟ್ರಗಳು ಇಕ್ಕಟ್ಟಾಗಿದ್ದು, ಅದರ ಕೆಲ ಭಾಗದ ಮೇರೆಗಳು ಮುಖ್ಯ ಭಾಗದಿಂದ ದೂರವಿರುತ್ತವೆ. ಇವುಗಳು ಸಾಮಾನ್ಯವಾಗಿ ಪ್ರಸ್ಥಭೂಮಿ ಅಥವಾ ಕಾರಿಡಾರ್‌ಗಳಲ್ಲಿರುತ್ತವೆ. ಇಂತಹ ಸ್ವರೂಪ ಹೊಂದಿರುವ ರಾಷ್ಟ್ರಗಳನ್ನು ಪ್ರೋರುಪ್ಟೆಡ್ ಸ್ಟೇಟ್ ಎನ್ನುವರು. ಇವುಗಳನ್ನು ಜರ್ಮನ್ ಭೂಗೋಳವಿಜ್ಞಾನಿಗಳು ಹೊರವಲಯದ ಮುಂದುವರೆದ ಬೆಳೆವಣಿಗೆ ಕೇಂದ್ರಗಳು ಎಂದು ಕರೆಯುತ್ತಾರೆ. ಈ ಬಗೆಯ ರಾಷ್ಟ್ರಕ್ಕೆ ಉದಾಹರಣೆಯೆಂದರೆ ಆಫ್ರಿಕದ ಸಮಭಾಜಕ ಪ್ರದೇಶದಲ್ಲಿರುವ ಝೈರೆ. ಇದೊಂದು ಇಕ್ಕಟ್ಟಾದ ರಾಷ್ಟ್ರವಾಗಿದ್ದು, ಎರಡು ಹೊರವಲಯಗಳನ್ನು ಒಳಗೊಂಡಿದೆ. 1. ಈ ದೇಶದ ರಾಜಧಾನಿ ಪ್ರದೇಶ ಹೊರವಲಯದಲ್ಲಿ ಅಭಿವೃದ್ಧಿಯಾಗಿದೆ. ಇದು ಅಟ್ಲಾಂಟಿಕ್ ಸಾಗರದಲ್ಲಿ ಕಾಂಗೋ ಹಾಗೂ ಅಂಗೋಲಗಳ ನಡುವೆ ಮಲಾಡಿ ಎಂಬ ರಾಜಧಾನಿ ಪ್ರದೇಶವಾಗಿದೆ. 2. ಝೈರೆ ರಾಷ್ಟ್ರದ ಕಟಂಗ್ ಪ್ರದೇಶ ಆಗ್ನೇಯದ ಕಡೆಗೆ (ಜಾಂಬಿಯ) ಹಬ್ಬಿದೆ. ಅಲ್ಲದೇ ನಮೀಬಿಯ ರಾಷ್ಟ್ರವೂ ಈ ತರಹದ ರಾಷ್ಟ್ರಕ್ಕೆ ಉದಾ: ರಾಷ್ಟ್ರದ ಮುಖ್ಯಭಾಗಗಳಿಂದ ದೂರವಿರುವ ರಾಷ್ಟ್ರಗಳು ಗಡಿಗಳಿಗೆ ಸಂಬಂಧಿಸಿದ ತೀವ್ರ ಸಮಸ್ಯೆಯನ್ನು ಮೇಲಿಂದ ಮೇಲೆ ಎದುರಿಸುತ್ತಿವೆ. ಹಲವಾರು ಪ್ರೊರುಪ್ಟೆಡ್ ರಾಷ್ಟ್ರಗಳು ಸ್ಥಿತ್ಯಂತರ ವಲಯಗಳನ್ನು ನಿರ್ಮಿಸುತ್ತವೆ. (ಎಸ್.ಎಸ್.ಎಸ್.)

**ಮುಡುಕುತೊರೆ:** ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದಲ್ಲಿರುವ ಒಂದು ಪವಿತ್ರಬೆಟ್ಟ, ಸೋಮಗಿರಿ ಎಂಬ ಹೆಸರೂ ಇದೆ. ಬೆಟ್ಟಕ್ಕೆ ಹೊಂದಿಕೊಂಡಂತೆ ಬೆಟ್ಟಹಳ್ಳಿ ಎಂಬ ಗ್ರಾಮವಿದೆ. ಇದೊಂದು ಯಾತ್ರಾಸ್ಥಳ. ತಲಕಾಡಿಗೆ ಉತ್ತರದಲ್ಲಿ ಸು. 4 ಕಿಮೀ ದೂರದಲ್ಲಿ ಕಾವೇರಿ ನದಿಯ ಎಡದಂಡೆಯ ಮೇಲೆ, ನದಿ ಇದ್ದಕ್ಕಿದ್ದಂತೆ ತಿರುವು ಪಡೆದುಕೊಳ್ಳುವ ಸ್ಥಳದ ಬಳಿ ಇದೆ. ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯವಿದೆ. ಇಲ್ಲಿಯ ಮಲ್ಲಿಕಾರ್ಜುನ ಲಿಂಗ ತಲಕಾಡಿನ ಪಂಚಲಿಂಗಗಳಲ್ಲೊಂದು. ಈ ದೇವಾಲಯದ ಪ್ರಾಕಾರದಲ್ಲಿ ಸು. 100 ವರ್ಷಕ್ಕೂ ಹಿಂದಿನ ಒಂದು ಮಂಟಪವಿದೆ. ಇದರ ಗೋಡೆಗಳ ಮೇಲೆ ಚಿತ್ರಗಳನ್ನು ಕೆತ್ತಿರುವುದರಿಂದ ಇದನ್ನು ಚಿತ್ರಮಂಟಪವೆಂದೇ ಕರೆಯುತ್ತಾರೆ. ಚಿತ್ರಗಳಲ್ಲಿ ಶಿವಪುರಾಣದ ದೃಶ್ಯಾವಳಿಗಳನ್ನು ಕೆತ್ತಲಾಗಿದೆ. ಬೆಟ್ಟದ ಮೇಲೆ ಪ್ರತಿವರ್ಷ ಜನವರಿ–ಫೆಬ್ರುವರಿ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಸು. 10,000ಕ್ಕೂ ಹೆಚ್ಚು ಜನ ಪಾಲ್ಗೊಳ್ಳುವರು. ಈ ಸಂದರ್ಭದಲ್ಲಿ ತಲಕಾಡಿನ ವೈದ್ಯೇಶ್ವರ ದೇವಾಲಯದ ತಾಂಡವೇಶ್ವರ ಪ್ರತಿಮೆಯನ್ನು ಇಲ್ಲಿಗೆ ತಂದಿಡಲಾಗುತ್ತದೆ. *

**ಮುದ್ದೇಬಿಹಾಳ:** ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಪಟ್ಟಣ. ಬಿಜಾಪುರದ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಹುನಗುಂದ, ಪಶ್ಚಿಮದಲ್ಲಿ ಬಾಗಲಕೋಟೆ ವಾಯವ್ಯದಲ್ಲಿ ಬಸವನ ಬಾಗೇವಾಡಿ, ಉತ್ತರದಲ್ಲಿ ಸಿಂದಗಿ–ಈ ತಾಲ್ಲೂಕುಗಳೂ ಪೂರ್ವದಲ್ಲಿ ರಾಯಚೂರು ಜಿಲ್ಲೆಯ ಸುರಪುರ ಮತ್ತು ಲಿಂಗಸುಗೂರು ತಾಲ್ಲೂಕುಗಳೂ ಸುತ್ತುವರಿದಿವೆ. ನಾಲತವಾಡ, ಮುದ್ದೇಬಿಹಾಳ, ಧವಳಗಿ ಮತ್ತು ತಾಳಿಕೋಟೆ ಹೋಬಳಿಗಳು. ತಾಲ್ಲೂಕಿನಲ್ಲಿ 154 ಗ್ರಾಮಗಳು ಮತ್ತು 2 ಪಟ್ಟಣಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 1,507 ಚ.ಕಿಮೀ. ಜನಸಂಖ್ಯೆ 1,84,856 (1981).

ಈ ತಾಲ್ಲೂಕು ಬಹುಪಾಲು ಮಟ್ಟಸ ಪ್ರದೇಶ. ಕೃಷ್ಣಾನದಿ ಈ ತಾಲ್ಲೂಕಿನ ದಕ್ಷಿಣದ ಗಡಿಯಾಗಿ ಬಾಗಲಕೋಟೆ, ಹುನಗುಂದ, ಲಿಂಗಸುಗೂರು ತಾಲ್ಲೂಕುಗಳನ್ನು ಬೇರ್ಪಡಿಸುವಂತೆ ಆಗ್ನೇಯ ಮತ್ತು ಪೂರ್ವಾಭಿಮುಖವಾಗಿ ಹರಿಯುತ್ತದೆ. ತಾಲ್ಲೂಕಿನ ಪಶ್ಚಿಮ ಗಡಿಯಾಗಿ ಹರಿಯುವ ಹಿರೇಹಳ್ಳ ನೈರುತ್ಯಾಭಿಮುಖವಾಗಿ ಸಾಗಿ ಕೃಷ್ಣಾನದಿಯನ್ನು ಸೇರುತ್ತದೆ. ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ದೋಣಿನದಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಸೊಗಲಿ ನದಿ ತಾಲ್ಲೂಕಿನ ಉತ್ತರಭಾಗದಲ್ಲಿ ಪೂರ್ವಾಭಿಮುಖವಾಗಿ ಹರಿದು ದೋಣಿ ನದಿಯನ್ನು ಸೇರುತ್ತದೆ. ಇವಲ್ಲದೆ ಕೆಲವು ಸಣ್ಣ ಹಳ್ಳಗಳೂ ಈ ತಾಲ್ಲೂಕಿನಲ್ಲಿವೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 72.2 ಸೆಂಮೀ.

ಈ ತಾಲ್ಲೂಕಿನಲ್ಲಿ ಕಪ್ಪುಮಣ್ಣಿನ ಪ್ರದೇಶವೇ ಹೆಚ್ಚು. ದೋಣಿ ನದಿಯ ದಡಗಳಲ್ಲಿ ಕೆಲವು ಕಡೆ ಸು. 9 ಮೀ ಆಳದವರೆಗೂ ಹುಸಿಮಣ್ಣು ಶೇಖರವಾಗಿದೆ. ಇದು ಮನುಷ್ಯ ಮತ್ತು ಪ್ರಾಣಿಗಳ ಪ್ರಾಣಕ್ಕೆ ಕುತ್ತಾಗಿರುವುದೂ ಉಂಟು. ಬಿಜಾಪುರಜಿಲ್ಲೆಯ ಇತರ ತಾಲ್ಲೂಕುಗಳಿಗಿಂತ ಈ ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಹೆಚ್ಚು ಭೂಮಿಯನ್ನು ಬಳಸಿಕೊಳ್ಳಲಾಗಿದೆ. 1963–64ರಲ್ಲಿ 136,790 ಹೆ. ಪ್ರದೇಶದಲ್ಲಿ ವ್ಯವಸಾಯ ಮಾಡಲಾಗಿತ್ತು. ದೋಣಿನದಿಯಿಂದಾಗಿ ತಾಳೀಕೋಟೆ ಪ್ರದೇಶ ಬಹು ಫಲವತ್ತಾಗಿದ್ದು ಸಮೃದ್ಧ ವ್ಯವಸಾಯವಿದೆ. ತಾಲ್ಲೂಕಿನಲ್ಲಿ ನೀರಾವರಿ ವ್ಯವಸಾಯ ಬಹು ಕಡಿಮೆ. 1963–64ರ ಅಂಕಿಅಂಶಗಳ ಪ್ರಕಾರ ಕೆರೆಗಳಿಂದ ಸು. 60 ಹೆ. ಬಾವಿಗಳಿಂದ ಸು. 670, ಹೆ. ಮಾತ್ರ ಬೇಸಾಯಕ್ಕೆ ಒಳಪಟ್ಟಿದ್ದುವು. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಈ ತಾಲ್ಲೂಕಿನ ಸಿದ್ಧಾಪುರದಲ್ಲಿ ಒಂದು ಅಣೆಕಟ್ಟೆ ಕಟ್ಟಿ ಅದರ ಎಡನಾಲೆಯಿಂದ 1,13,316 ಹೆ. ನೀರೊದಗಿಸಿಕೊಳ್ಳುವ ಹವಣಿಕೆ ಇದೆ.

ಈ ತಾಲ್ಲೂಕಿನಲ್ಲಿ ಜೋಳ, ಗೋದಿ, ನೆಲಗಡಲೆ, ಸಜ್ಜೆ, ಬತ್ತ, ಹೆಸರು, ತೊಗರಿ, ಅವರೆ ಮತ್ತು ಕಬ್ಬನ್ನು ಬೆಳೆಯುತ್ತಾರೆ. ಪಶುಪಾಲನೆಯೂ ಇದ್ದು ಪಶುಗಳ ರಕ್ಷಣೆಗೆ ಮತ್ತು ಅಭಿವೃದ್ಧಿಗೆ ಸಹಕಾರಿಯಾಗಿ ತಾಲ್ಲೂಕು ಮತ್ತು ಗ್ರಾಮಮಟ್ಟದಲ್ಲಿ ಪಶುವೈದ್ಯಾಲಯಗಳಿವೆ.

ತಾಲ್ಲೂಕಿನಲ್ಲಿ ಹತ್ತಿ ಎಕ್ಕುವ ಕಾರ್ಖಾನೆಗಳನ್ನು ಬಿಟ್ಟರೆ ಉಳಿದಂತೆ ಕೆಲವು ಗ್ರಾಮೀಣ ಕೈಗಾರಿಕೆಗಳು ಮಾತ್ರ ಇವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕು ಮತ್ತು ನಿಯಂತ್ರಿತ ಮಾರುಕಟ್ಟೆಗಳಿವೆ. ಹೂವಿನಹಿಪ್ಪರಗಿ–ಮುದ್ದೇಬಿಹಾಳ–ಹುನಗುಂದ ಮಾರ್ಗ ಮುದ್ದೇಬಿಹಾಳ–ತಾಳೀಕೋಟೆ ಮಾರ್ಗ, ಹಿಪ್ಪರಗಿ–ತಾಳೀಕೋಟೆ–ಹುಣಸಗಿಮಾರ್ಗ– ಇವು ತಾಲ್ಲೂಕಿನ ಮುಖ್ಯರಸ್ತೆಗಳು.

ತಾಳೀಕೋಟೆ ಈ ತಾಲ್ಲೂಕಿನಲ್ಲಿರುವ ಇತಿಹಾಸ ಪ್ರಸಿದ್ಧ ಪಟ್ಟಣ. ಮುದ್ದೇಬಿಹಾಳದ ವಾಯವ್ಯದಲ್ಲಿ ಸು. 10 ಕಿಮೀ ದೂರದಲ್ಲಿರುವ ಬಾಸರಕೋಡು ಗ್ರಾಮದಲ್ಲಿ ಜಕ್ಕಣಾಚಾರ್ಯ ನಿರ್ಮಿತವೆಂದು ಹೇಳುವ ಒಂದು ಜೈನ ದೇವಾಲಯ (ಬಸದಿ), 1750ರಲ್ಲಿ ನಿರ್ಮಿಸಿದ ಮಲ್ಲಿಕಾರ್ಜುನ ಮತ್ತು 1805ರಲ್ಲಿ ಕಟ್ಟಿರುವ ಮೂರುಲಿಂಗ ಗುಡಿಯೂ ಇವೆ. ಮುದ್ದೇಬಿಹಾಳದ ಆಗ್ನೇಯ ದಿಕ್ಕಿನಲ್ಲಿ ಸು. 20 ಕಿಮೀ ದೂರದಲ್ಲಿರುವ ನಾಲತವಾಡ ದೊಡ್ಡಗ್ರಾಮ. ಇಲ್ಲಿ ಮೂರು ದೇವಾಲಯಗಳೂ ಇವೆ. ತಾಳೀಕೋಟೆಯಿಂದ ದಕ್ಷಿಣಕ್ಕೆ 10 ಕಿಮೀ ದೂರದಲ್ಲಿರುವ ಶಿವಪುರ ಗ್ರಾಮದ ಹತ್ತಿರ ಹಗರಟಗಿ ತೀರ್ಥವಿದೆ. ಮುದ್ದೇಬಿಹಾಳದ ಪಶ್ಚಿಮಕ್ಕೆ ಸು. 20 ಕಿಮೀ ದೂರದಲ್ಲಿ ಕೃಷ್ಣಾನದಿಯ ಎಡದಂಡೆಯ ಮೇಲಿರುವ ಯಲಗೂರು ಗ್ರಾಮ ಅಲ್ಲಿಯ ಆಂಜನೇಯ ದೇವಾಲಯದಿಂದ ಪ್ರಸಿದ್ಧವಾಗಿದೆ (ಆಲಮಟ್ಟಿ ರೈಲ್ವೆ ನಿಲ್ದಾಣ ಈ ಗ್ರಾಮದಿಂದ 5 ಕಿಮೀ ದೂರದಲ್ಲಿದೆ).

ಮುದ್ದೇಬಿಹಾಳ ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣ. ಬಿಜಾಪುರದ ಆಗ್ನೇಯಕ್ಕೆ 83 ಕಿಮೀ ದೂರದಲ್ಲಿದೆ. ಆಲಮಟ್ಟಿ ರೈಲ್ವೆನಿಲ್ದಾಣದಿಂದ ಇಲ್ಲಿಗೆ 27 ಕಿಮೀ ದೂರ. ಜನಸಂಖ್ಯೆ 28,219 (2001). ಪರ್ವತಗಿರಿ ಮತ್ತು ಮುದ್ದೇಬಿಹಾಳ ಎರಡೂ ಸೇರಿ ಈ ಊರು ಪುರಸಭೆಯಾಗಿದೆ. ಊರಿನಿಂದ ಹುನಗುಂದ, ಚಿಮ್ಮಲಗಿ ನಾಲತವಾಡ, ತಾಳೀಕೋಟೆ, ಬಸವನಬಾಗೇವಾಡಿ ಮೊದಲಾದೆಡೆಗಳಿಗೆ ಉತ್ತಮ ರಸ್ತೆ ಸಂಪರ್ಕವಿದ್ದು ಮುದ್ದೇಬಿಹಾಳ ವ್ಯಾಪಾರ ಕೇಂದ್ರವಾಗಿ ಬೆಳೆಯುತ್ತಿದೆ. ಈ ಊರಿನಲ್ಲಿ ಒಂದು ಈಶ್ವರದೇವಾಲಯವಿದೆ.

ಬಾಸರಕೋಡ ನಾಡಗೌಡರ ಪೂರ್ವಜರಾದ ಪರಮಣ್ಣನವರಿಂದ ಈ ಊರು ಸ್ಥಾಪಿತವಾಯಿತು (1680). ಅದೇ ಮನೆತನದ ಹುಚ್ಚಪ್ಪನವರು ಇಲ್ಲಿ ಒಂದು ಕೋಟೆಯನ್ನು ಕಟ್ಟಿಸಿದರು (1720). ಈಗ ಆ ಕೋಟೆಯ ಭಗ್ನಾವಶೇಷಗಳನ್ನು ಕಾಣಬಹುದು. *

**ಮುಧೋಳ:** ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ ಪಟ್ಟಣ. ಬಾಗಲಕೋಟೆ ಜಿಲ್ಲೆಯ ವಾಯುವ್ಯ ಭಾಗದಲ್ಲಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಜಮಖಂಡಿ, ಪೂರ್ವದಲ್ಲಿ ಬೀಳಗಿ ಮತ್ತು ಬಾಗಲಕೋಟೆ, ಆಗ್ನೇಯದಲ್ಲಿ ಬಾದಾಮಿ ತಾಲ್ಲೂಕುಗಳೂ ವಾಯವ್ಯ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಬೆಳಗಾಂವಿ ಜಿಲ್ಲೆಯೂ ಸುತ್ತುವರಿದಿವೆ. ಲೋಕಾಪುರ ಮತ್ತು ಮುಧೋಳ ಇಲ್ಲಿಯ ಹೋಬಳಿಗಳು. 77 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 955.41 ಚ.ಕಿಮೀ. ಜನಸಂಖ್ಯೆ 28,235.

ಬೆಳಗಾಂವಿ ಜಿಲ್ಲೆಯಿಂದ ಹರಿದು ಬರುವ ಘಟಪ್ರಭಾ ಮುಧೋಳ ಪಟ್ಟಣಕ್ಕೆ ಪಶ್ಚಿಮದಲ್ಲಿ ಸು. 13 ಕಿಮೀ ದೂರದಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ ಅಡ್ಡಕ್ಕೆ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿದು ಬಾಗಲಕೋಟೆ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮುಧೋಳ ತಾಲ್ಲೂಕಿನಲ್ಲಿ ಉತ್ತಮ ಸುಣ್ಣಕಲ್ಲು ಸಿಗುವುದಲ್ಲದೆ ಲೋಕಾಪುರ ಮತ್ತು ನದಿ ದಂಡೆಗುಂಟ ಮೆಕ್ಕಲುಮಣ್ಣನ್ನೂ ಮೆದುಕಾವಿ ಬಣ್ಣದ ಜೇಡಿಮಣ್ಣನ್ನೂ ಕಾಣಬಹುದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 46 ಸೆಂಮೀ ಘಟಪ್ರಭಾ ನದಿ ಎಡದಂಡೆ ಯೋಜನೆಯಿಂದ ಈ ತಾಲ್ಲೂಕಿನ ಹೆಚ್ಚು ಭೂಮಿಗೆ ಜಲಸಮೃದ್ಧಿ ಒದಗಿಬಂದಿದೆ. ಇಲ್ಲಿಯ ಮುಖ್ಯ ಬೆಳೆ ಜೋಳ, ಗೋದಿ, ಸೇಂಗ ಮತ್ತು ದ್ವಿದಳಧಾನ್ಯಗಳು, ಪಶುಪಾಲನೆ ವ್ಯವಸಾಯದ ಒಂದು ಅಂಗವಾಗಿ ಬೆಳೆದುಬಂದಿದೆ. ಅವುಗಳ ರಕ್ಷಣೆಗೆ ಪಶುವೈದ್ಯಾಲಯಗಳಿವೆ.

ಸುಣ್ಣ ತಯಾರಿಕೆ, ಉಣ್ಣೆ ಉತ್ಪಾದನೆ ಇಲ್ಲಿನ ಕೈಗಾರಿಕೆಗಳು. ವ್ಯಾಪಾರ ವಾಣಿಜ್ಯಕ್ಕೆ ಪೂರಕವಾಗಿ ಬ್ಯಾಂಕುಗಳಿವೆ. ಮುಧೋಳ ತಾಲ್ಲೂಕಿನ ಬೆಳಗಲಿ ಗ್ರಾಮ ಮುಧೋಳದ ಪಶ್ಚಿಮದಲ್ಲಿ 11 ಕಿಮೀ ದೂರದಲ್ಲಿದೆ. ಇದೇ ರನ್ನನ ಜನ್ಮಸ್ಥಳ ಎಂದು ಕೆಲವರು ಹೇಳುವರು. ಚಿತ್ರ ಭಾನುಕೋಟ ಘಟಪ್ರಭಾ ನದಿದಂಡೆಯಲ್ಲಿರುವ ಚಿಕ್ಕ ಗ್ರಾಮ. ಮುಧೋಳಕ್ಕೆ ಆಗ್ನೇಯದಲ್ಲಿ 22 ಕಿಮೀ ದೂರದಲ್ಲಿದೆ. ಮುಧೋಳಕ್ಕೆ ವಾಯವ್ಯದಲ್ಲಿ 19 ಕಿಮೀ ದೂರದಲ್ಲಿರುವ ಮಹಾಲಿಂಗಪುರ ಒಂದು ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರ.

ಮುಧೋಳ ಈ ತಾಲ್ಲೂಕು ಮತ್ತು ಹೋಬಳಿಯ ಕೇಂದ್ರ. ಬಾಗಲಕೋಟೆ ವಾಯವ್ಯದಲ್ಲಿ ಜಮಖಂಡಿಯ ದಕ್ಷಿಣಕ್ಕೆ 19ಕಿಮೀ ದೂರದಲ್ಲಿ ಘಟಪ್ರಭಾ ನದಿ ಎಡದಂಡೆಯ ಮೇಲಿದೆ. ಪಟ್ಟಣ ಇಂದು ವ್ಯಾಪಾರಕೇಂದ್ರವಾಗಿ ವಿಸ್ತರಿಸುತ್ತಿದೆ. ಜನಸಂಖ್ಯೆ 42,443. ಹಿಂದಿನ ಸುಂದರ ಪಟ್ಟಣ ಮದುವಳಲ್ ಇಂದಿನ ಮುಧೋಳವಾಗಿದೆ ಎಂದು ಹೇಳುವರು. ರನ್ನಮಹಾಕವಿಯ ಜನ್ಮಸ್ಥಳವಾಗಿದ್ದು ಆತನದೆಂದು ಹೇಳುವ ಒಂದು ಹಳೆಯ ಮನೆಯನ್ನು ಈಗಲೂ ತೋರಿಸುವರು. ಇಲ್ಲಿ ಒಂದು ಕಲ್ಲಿನ ಮೂರ್ತಿ ಇದ್ದು ಅದು ಕವಿಯದೆಂದು ಹೇಳುವುದಿದೆ. ಮುಧೋಳ ಹಿಂದೆ ಸಂಸ್ಥಾನಿಕ ಪ್ರದೇಶವಾಗಿದ್ದು ಆ ಸಂಸ್ಥಾನಿಕರ ಹಳೆಯ ವಾಡೆ ಇದೆ. ಊರಿನ ಉತ್ತರಭಾಗದಲ್ಲಿ ಮುಸ್ಲಿಮ್ ಸಂತನೊಬ್ಬನ ದರ್ಗಾ ಇದೆ. ಮುಧೋಳದಲ್ಲಿ ಪೌರಸಭಾಡಳಿತವಿದೆ. (ಆರ್.ಎಂ.ಆರ್.)

**ಮುಪ್ಪಟ್ಟೆ ಗಾಜು ದಿಕ್ಸೂಚಿ ಸರ್ವೇಕ್ಷಣೆ:** ಕೌನಿಕ ಅಳತೆಗಳನ್ನು ಮಾಡಲು ಉಪಯೋಗಿಸಲ್ಪಡುವ ಅತಿ ಸರಳವಾದ ಸರ್ವೇಕ್ಷಣೆ. ಈ ಸರ್ವೇಕ್ಷಣೆ ಉತ್ತರ–ದಕ್ಷಿಣ ರೇಖೆಗೆ ಸಂಬಂಧಿಸಿದಂತೆ ವಿವಿಧ ರೇಖೆಗಳು ಉಂಟುಮಾಡುವ ಕೋನಗಳನ್ನು ಅಳೆಯುವುದರ ಮೇಲೆ ಅವಲಂಬಿತವಾಗಿದೆ. ನೆಲದ ಮೇಲಿನ ಮತ್ತು ನಕ್ಷೆಯ ಮೇಲಿನ ವಿವರಗಳ ನಡುವಿರುವ ರೂಪಕ ಸಂಬಂಧಗಳನ್ನು ಉಳಿಸಿಕೊಳ್ಳಲು ಒಂದೇ ಒಂದು ರೇಖೆಯನ್ನು ಅಳೆಯಲಾಗುತ್ತದೆ.

ಮುಪ್ಪಟೆ ಗಾಜು ದಿಕ್ಸೂಚಿ–ಮಧ್ಯದಲ್ಲಿ ಸದಾ ಉತ್ತರದ ಕಡೆಗೆ ಮುಖ ಮಾಡಿರುವ ಕಾಂತ ಸೂಚಿ ಇರುವ ಸು. 15 ಸೆಂಮೀ ವ್ಯಾಸದ ಲೋಹದ ಪೆಟ್ಟಿಗೆಯಾಗಿರುತ್ತದೆ. $360^0$ ಅಂಶಗಳನ್ನು ಗುರುತಿಸಿದ ಅಲ್ಯುಮಿನಿಯಮ್ ಬಳೆಯಾಕಾರದ ಪಟ್ಟಿಯನ್ನು ಕಾಂತ ಸೂಚಿಗೆ ಜೋಡಿಸಲಾಗಿರುತ್ತದೆ. ಕಾಂತ ಸೂಚಿಯ ದಕ್ಷಿಣಕ್ಕೆ $0^0$ ಮತ್ತು $360^0$, ಉತ್ತರಕ್ಕೆ $180^0$, ಪೂರ್ವಕ್ಕೆ $270^0$ ಮತ್ತು ಪಶ್ಚಿಮಕ್ಕೆ $90^0$ಗಳಿರುತ್ತದೆ. ಈ ಕೋನ ಮಾಪಕ ಪಟ್ಟಿ ಮತ್ತು ಕಾಂತಸೂಚಿಯ ಪೆಟ್ಟಿಗೆಯ ಮಧ್ಯದಲ್ಲಿರುವ ಲೋಹದ ತಿರುಗಣಿಯ ಮೇಲೆ ಓಲಾಡುತ್ತಿರುತ್ತದೆ. ಪೆಟ್ಟಿಗೆಯ ಒಂದು ಕಡೆ ಸಮಕೋನ ತ್ರಿಕೋನಾಕಾರದ ಮುಪ್ಪಟೆ ಗಾಜನ್ನು ಜೋಡಿಸಲಾಗಿರುತ್ತದೆ. ಈ ಅಂಕಿಗಳನ್ನು ತಲೆಕೆಳಗಾಗಿರುವಂತೆ ಗುರುತಿಸಲಾಗಿರುತ್ತದೆ. ಪೆಟ್ಟಿಗೆಯ ಒಂದು ಕಡೆ ಸಮಕೋನ ತ್ರಿಕೋನಾಕಾರದ ಮುಪ್ಪಟೆ ಗಾಜನ್ನು ಜೋಡಿಸಲಾಗಿರುತ್ತದೆ. ಕೋನಮಾಪಕ ಪಟ್ಟಿಯಲ್ಲಿರುವ ಅಂಕಿಗಳನ್ನು



ಮುಪ್ಪಟೆ ಗಾಜು ದಿಕ್ಸೂಚಿ

ಮುಪ್ಪಟ್ಟೆಗಾಜಿನೊಳಗಿಂದ ಓದಲಾಗುತ್ತದೆ. ಈ ಮುಪ್ಪಟ್ಟೆ ಗಾಜಿನ ಮೇಲ್ಗಡೆ ವಸ್ತುಗಳನ್ನು ವೀಕ್ಷಿಸಲು ಒಂದು ಲಂಬ ಸೀಳುಗುಂಡಿ ಇರುತ್ತದೆ. ಮತ್ತೊಂದು ಕಡೆ ಪ್ರತಿಫಲಕ ಕನ್ನಡಿಯನ್ನು ಜೋಡಿಸಿರುವ ದೃಷ್ಟಿ ಫಲಕದ ಲೋಹದ ಚೌಕಟ್ಟಿರುತ್ತದೆ. ದೃಷ್ಟಿಫಲಕದ ಮಧ್ಯದಲ್ಲಿ ಲಂಬವಾಗಿ ಜೋಡಿಸಿದ ಕುದುರೆ ಕೇಶವಿರುತ್ತದೆ. ವಸ್ತುಗಳನ್ನು ಸೀಳುಗುಂಡಿಯೊಳಗಿಂದ ಕುದುರೆ ಕೇಶದೊಡನೆ (ಹೇರ್ ಲೈನ್) ಹೊಂದಾಣಿಕೆಯಾಗುವಂತೆ ವೀಕ್ಷಿಸಲಾಗುತ್ತದೆ. ಪ್ರಕಾಶಮಯ ವಸ್ತುಗಳನ್ನು ವೀಕ್ಷಿಸುವ ಸಲುವಾಗಿ ಸೀಳುಗುಂಡಿಯ ಹತ್ತಿರ ಬಣ್ಣದ ಗಾಜುಗಳಿರುತ್ತವೆ. ದಿಕ್ಸೂಚಕದ ಸಮತಲದ ಅತಿಕೆಳಗೆ ಅಥವಾ ಮೇಲಿರುವ ವಸ್ತುಗಳನ್ನು ವೀಕ್ಷಿಸಲು ದೃಷ್ಟಿ ಫಲಕಕ್ಕೆ ಸರಿದಾಡುವ ಕನ್ನಡಿಯನ್ನು ಜೋಡಿಸಲಾಗಿರುತ್ತದೆ. ಸರ್ವೇಕ್ಷಣೆ ಮುಗಿದ ಮೇಲೆ ದೃಷ್ಟಿ ಫಲಕವನ್ನು ಪೆಟ್ಟಿಗೆಯ ಮೇಲೆ ಚಪ್ಪಟೆಯಾಗಿ ಮಡಿಚಲಾಗುತ್ತದೆ. ಈ ಪೆಟ್ಟಿಗೆಯ ಮೇಲೆ ಲೋಹದ ಮುಚ್ಚಳವಿರುತ್ತದೆ.

ಮುಪ್ಪಟ್ಟೆಗಾಜು ದಿಕ್ಸೂಚಿಯ ಸಹಾಯದಿಂದ ಗುರುತಿಸುವ ಕೋನಗಳನ್ನು ದಿಕ್‌ಮಾನಗಳೆಂದು ಕರೆಯುತ್ತಾರೆ. ಸೂಚಿತ ದಿಕ್ಕು ಕಾಂತ ಉತ್ತರವಾದರೆ ದಿಕ್ ಮಾನಗಳನ್ನು ಕಾಂತ ದಿಕ್‌ಮಾನಗಳೆನ್ನುತ್ತಾರೆ. ಮುಪ್ಪಟ್ಟೆಗಾಜು ದಿಕ್ಸೂಚಿ ಸರ್ವೇಕ್ಷಣೆಯಲ್ಲಿ ನಾವು ವ್ಯವಹರಿಸುವುದು ಕಾಂತ ದಿಕ್‌ಮಾನಗಳನ್ನು ಮಾತ್ರ. ದಿಕ್‌ಮಾನಗಳನ್ನು ಹೇಳುವ ಎರಡು ವಿಧಾನಗಳಿವೆ. ಅವುಗಳೆಂದರೆ ಪೂರ್ಣ ವೃತ್ತ ವಿಧಾನ ಮತ್ತು ಚತುರ್ಥಾಂಶ ವಿಧಾನ. ಪೂರ್ಣ ವೃತ್ತ ವಿಧಾನದಲ್ಲಿ $0^0$–$360^0$ ಗಳಿರುತ್ತವೆ. ವೃತ್ತ ಚತುರ್ಥಾಂಶ ವಿಧಾನದಲ್ಲಿ ದಿಕ್‌ಮಾನಗಳು $0^0$ – $90^0$ ಗಳವರೆಗೆ ಇರುತ್ತವೆ. ಅವುಗಳ ಹಿಂದೆ N (ಉತ್ತರ) ಅಥವಾ S (ದಕ್ಷಿಣ) ಎಂಬ ಮುಂದೆ E (ಪೂರ್ವ) ಅಥವಾ W (ಪಶ್ಚಿಮ) ಎಂಬ ಚಿಹ್ನೆಗಳು ಅದು ಯಾವ ವೃತ್ತ ಚತುರ್ಥಾಂಶಕ್ಕೆ ಸೇರಿದೆಯೆಂಬುದನ್ನು ತೋರಿಸಲು ಬರುತ್ತವೆ.

ಮುಪ್ಪಟ್ಟೆಗಾಜು ದಿಕ್ಸೂಚಿ ಸರ್ವೇಕ್ಷಣೆಯಲ್ಲಿ ಎರಡು ಪ್ರಕಾರಗಳಿರುತ್ತವೆ. ತ್ರಿಕೋನೀಕರಣ ಮತ್ತು ವಕ್ರಪಥ. ತ್ರಿಕೋನೀಕರಣ ವಿಧಾನದಲ್ಲಿ ಸಂಪೂರ್ಣ ಕ್ಷೇತ್ರವನ್ನು ಅನೇಕ ತ್ರಿಕೋನಗಳಾಗಿ ವಿಭಾಗಿಸಲ್ಪಡುತ್ತದೆ ಮತ್ತು ಪ್ರತಿಯೊಂದು ತ್ರಿಕೋನದ ಮೂರು ಮೂಲೆಗಳಲ್ಲಿ ಕೋನಗಳನ್ನು ಅಳೆಯಲಾಗುತ್ತದೆ. ವಕ್ರಪಥವಿಧಾನದಲ್ಲಿ ಸರ್ವೇಕ್ಷಣೆ ಮಾಡಬೇಕಾದ ಕ್ಷೇತ್ರದ ಮೇರೆಗೆ ಅನುಗುಣವಾಗಿ ಕೆಲವು ಸ್ಥಾನಗಳನ್ನು ನಿರ್ಧರಿಸಿ ಪ್ರತಿಯೊಂದು ಸ್ಥಾನದ ದಿಕ್ಕು ಮತ್ತು ಕೋನ ಹಾಗೂ ಅವುಗಳ ಅಂತರವನ್ನು ಅಳೆಯಲಾಗುತ್ತದೆ. ಈ ಪ್ರಕಾರವಾಗಿ ಎಲ್ಲಾ ಸ್ಥಾನಗಳಿಗೆ ಚಲಿಸಿ ಅಳತೆ ಮಾಡುವ ಕಾರಣದಿಂದ ಈ ವಿಧಾನಕ್ಕೆ ವಕ್ರಪಥ ವಿಧಾನವೆನ್ನುತ್ತಾರೆ. ಈ ವಿಧಾನದಲ್ಲಿ ಸಂವೃತ್ತ ಮತ್ತು ತೆರೆದ ವಕ್ರಪಥಗಳೆಂಬ ಎರಡು ವಿಭಿನ್ನ ಪ್ರಕಾರಗಳಿವೆ. ಸಂವೃತ್ತ ವಕ್ರಪಥ ವಿಧಾನದಲ್ಲಿ ಸರ್ವೇಕ್ಷಣೆ ನಡೆಸುವ ವ್ಯಕ್ತಿ ಕ್ರಮವಾಗಿ ವಿವಿಧ ಸ್ಥಾನಗಳಿಗೆ ಚಲಿಸಿ ಭೂಮಾಪನ ನಡೆಸಿ ಪುನಃ ಆರಂಭಗೊಂಡ ಸ್ಥಾನಕ್ಕೆ ಬರುತ್ತಾನೆ. ತೆರೆದ ವಕ್ರಪಥ ವಿಧಾನದಲ್ಲಿ ಸರ್ವೇಕ್ಷಣೆ ನಡೆಸುವ ವ್ಯಕ್ತಿಯು ಮತ್ತೊಮ್ಮೆ ಆರಂಭದ ಸ್ಥಾನಕ್ಕೆ ಬರುವುದಿಲ್ಲ. ಈ ಪ್ರಕಾರದ ಭೂಮಾಪನವನ್ನು ಸಾಮಾನ್ಯವಾಗಿ ರಸ್ತೆ, ರೈಲು ಮಾರ್ಗ ಮೊದಲಾದವುಗಳ ಸರ್ವೇಕ್ಷಣದಲ್ಲಿ ಅನುಸರಿಸಲಾಗುತ್ತದೆ.

ಈ ಸರ್ವೇಕ್ಷಣ ಅರಣ್ಯ ಪ್ರದೇಶ, ತಗ್ಗು, ದಿಣ್ಣೆ ಪ್ರದೇಶಗಳ ಭೂ ಮಾಪನಕ್ಕೆ ಹಾಗೂ ಸೈನಿಕ ಉದ್ದೇಶಗಳಿಗಾಗಿಯೂ ಉಪಯೋಗಿಸಲ್ಪಡುತ್ತದೆ. ಈ ಉಪಕರಣವನ್ನು ಉಪಯೋಗಿಸುವುದು ಮತ್ತು ಸಾಗಿಸುವುದು ಬಹಳ ಸುಲಭವಾಗಿರುತ್ತದೆ. ಈ ಪ್ರಕಾರದ ಸರ್ವೇಕ್ಷಣೆಯು ಕಾಂತಶಿಲೆ ಅಥವಾ ಕಬ್ಬಿಣ ಅದಿರುಗಳುಳ್ಳ ಪ್ರದೇಶಗಳ ಭೂಮಾಪನಕ್ಕೆ ಯೋಗ್ಯವಾಗಿರುವುದಿಲ್ಲ. ಇದು ದಿಶಾಕೋನಗಳನ್ನು ಅಳೆಯಲು ಮತ್ತು ಅತ್ಯಂತ ದೂರದ ವಸ್ತುಗಳನ್ನು ವೀಕ್ಷಣೆ ಮಾಡುವಲ್ಲಿ ಕೋನ ದೂರದರ್ಶಕಕ್ಕಿಂತ ನಿಷ್ಕೃಷ್ಟವಾಗಿರುತ್ತದೆ. (ಬಿ.ಪಿ.)

**ಮುರ್ಡೇಶ್ವರ:** ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಒಂದು ಗ್ರಾಮ ಮತ್ತು ಯಾತ್ರಾಸ್ಥಳ. ಪ್ರಕೃತಿಸೌಂದರ್ಯಕ್ಕೆ ಹೆಸರಾದದ್ದು. ಭಟ್ಕಳದ ಉತ್ತರದಲ್ಲಿ 15 ಕಿಮೀ ಹಾಗೂ ಹೊನ್ನಾವರಕ್ಕೆ 27 ಕಿಮೀ ದೂರದಲ್ಲಿದೆ. ಈ ಗ್ರಾಮದ ಮೂರು ಕಡೆ ಬತ್ತದ ಗದ್ದೆ, ತೆಂಗಿನಮರ ಹಾಗೂ ಬೆಟ್ಟಗಳ ಸಾಲು ಸುತ್ತಿದ್ದು ಪಶ್ಚಿಮದಲ್ಲಿ ಅರಬ್ಬೀ ಸಮುದ್ರತೀರದ ಸೊಬಗು ಇದೆ. ಕೃಷಿ, ಮೀನುಗಾರಿಕೆ–ಇವು ಇಲ್ಲಿಯ ಮುಖ್ಯ ಉದ್ಯೋಗ. ಮುರ್ಡೇಶ್ವರದ ರೇವು ಅತ್ಯಂತ ಸುಂದರ. ಇಲ್ಲಿಯ ಹವೆ ಆರೋಗ್ಯಕರವಾದುದು. ಬೇಸಗೆ ಮಾತ್ರ ತಾಪದಾಯಕ. ಸು. 380 ಸೆಂಮೀ ವಾರ್ಷಿಕ ಮಳೆ ಆಗುತ್ತದೆ. ಗ್ರಾಮಸಮೀಪ ಒಂದು ಹೆಂಚಿನ ಕಾರ್ಖಾನೆ ಇದೆ. ಇಲ್ಲಿ ಯುದ್ಧಗಳು ನಡೆದ ಕುರುಹುಗಳು ಈಗಲೂ ಕಂಡುಬರುತ್ತವೆ. ಯುದ್ಧದಲ್ಲಿ ಮಡಿದ ಯೋಧರ 30 ಸಮಾಧಿಗಳು ಇವೆ. ಈ ಗ್ರಾಮದ ಸಮುದ್ರದಂಡೆಯ ಮೇಲೆ ಸುಂದರ ಬಸದಿಯಿದೆ. ಜೈನಮೂರ್ತಿಗಳನ್ನು ಹೋಲುವ ಮೂರ್ತಿಗಳೂ ಇಲ್ಲಿವೆ.

ಇಲ್ಲಿಯ ಸಮುದ್ರ ದಂಡೆಯ ಕುಂದುಗಿರಿ ಎಂಬ ಗುಡ್ಡದ ಮೇಲೆ ಮುರ್ಡೇಶ್ವರನ ಚಿಕ್ಕ ಶಿಲಾ ಗುಡಿ ಇದೆ. ಈ ಲಿಂಗ ಈಶ್ವರನ ಆತ್ಮಲಿಂಗದ ಒಂದು ಭಾಗ, ಆದ್ದರಿಂದ ಈ ಸ್ಥಳ ಪೌರಾಣಿಕಕಾಲದಿಂದ ಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ. ಈ ಗುಡಿ ಆದಿಚಾಲುಕ್ಯ ಶಿಲ್ಪ ಮಾದರಿಯಲ್ಲಿದೆ. ಇದನ್ನು ಪಾಂಡವರು ಕಟ್ಟಿಸಿದರು ಎಂಬ ದಂತಕತೆ ಇದೆ. 4–5ನೆಯ ಶತಮಾನದಲ್ಲಿ ಇದು ನಿರ್ಮಾಣವಾಗಿರಬೇಕೆಂದು ಪ್ರತೀತಿ.

ರಾವಣೇಶ್ವರ ತನ್ನ ತಾಯಿಗೆ ಈಶ್ವರನ ಆತ್ಮಲಿಂಗವನ್ನು ತಂದುಕೊಡುವ ಹಾದಿಯಲ್ಲಿ ವಿನಾಯಕ ಉಪಾಯದಿಂದ ಅದನ್ನು ಭೂಸ್ಪರ್ಶ ಮಾಡಿಸಿದ. ರಾವಣೇಶ್ವರ ಪಾತಾಳಕ್ಕೆ ಇಳಿಯುತ್ತಿರುವ ಲಿಂಗವನ್ನು ಬಲವಾಗಿ ಹಿಡಿದು ಎಳೆದದ್ದರಿಂದ ಲಿಂಗದ ಕೊಂಚಭಾಗ ಮುರುಡಿ ಕೈಯಲ್ಲಿ ತುಂಡಾಗಿ ಬಂತು. ಮುರುಡು ಮುರುಡು ಎಂದು ರಾವಣ ಅದನ್ನು ಬಿಸಾಡಿದನಂತೆ. ಅವನು ಉಚ್ಚರಿಸಿದ ಮುರುಡು ಶಬ್ದವೇ ಮುರ್ಡೇಶ್ವರ ಎಂದಾಯಿತೆನ್ನುವರು. ಹಾಗೆ ಆತ ಎಸೆದ ತುಂಡುಗಳಲ್ಲಿ ಒಂದು ಕಾರವಾರದ ಪೂರ್ವದಿಕ್ಕಿನಲ್ಲಿ ಬಿದ್ದು ಅದಕ್ಕೆ ಸಜ್ಜೇಶ್ವರ ಎಂದೂ ಇನ್ನೊಂದು ತುಂಡು ಕುಮಟಾದ ದಕ್ಷಿಣದಿಕ್ಕಿನಲ್ಲಿ ಬಿದ್ದು ಅದು ಧಾರೇಶ್ವರ ಎಂದೂ ಮತ್ತೊಂದು ತುಣುಕು ಹೊನ್ನಾವರದ ದಕ್ಷಿಣದಿಕ್ಕಿನಲ್ಲಿ ಬಿದ್ದು ಗುಣವಂತೇಶ್ವರ ಎಂದೂ ಹೆಸರಾದುವು. ಗಣಪತಿ ಗೋಕರ್ಣದಲ್ಲಿ ಪ್ರತಿಷ್ಠಾಪಿಸಿದ ಆತ್ಮಲಿಂಗ ಮಹಾಬಲೇಶ್ವರ ಎಂಬುದಾಗಿ ಪಂಚಕ್ಷೇತ್ರಗಳಾದವು. ಮುರ್ಡೇಶ್ವರ ದೇವಾಲಯದ ನವೀಕರಣಕಾರ್ಯ ಮುಗಿದಿದೆ (1985). ಇತ್ತೀಚೆಗೆ ಸಾಕಷ್ಟು ಎತ್ತರದ ಪ್ರವೇಶಗೋಪುರವನ್ನು ನಿರ್ಮಿಸಲಾಗಿದೆ. (ಆರ್.ಜಿ.ಆರ್.ಎ.)

**ಮುರ್ಷಿದಾಬಾದ್:** ಪಶ್ಚಿಮ ಬಂಗಾಲದ ಒಂದು ಜಿಲ್ಲೆ; ತಾಲ್ಲೂಕು ಮತ್ತು ಪಟ್ಟಣ. ಈ ಜಿಲ್ಲೆಯನ್ನು ಈಶಾನ್ಯ ಮತ್ತು ಪೂರ್ವದಲ್ಲಿ ಬಾಂಗ್ಲಾದೇಶ, ಉತ್ತರದಲ್ಲಿ ಮಾಲ್ಡ, ಪಶ್ಚಿಮದಲ್ಲಿ ಬೀರ್‌ಭೂಮ್, ದಕ್ಷಿಣದಲ್ಲಿ ನದಿಯ ಮತ್ತು ಬರ್ದ್ವಾನ್ ಜಿಲ್ಲೆಗಳು ಸುತ್ತುವರಿದಿವೆ. ಜಲ್‌ಪೈಗುರಿ ಉಪವಿಭಾಗಕ್ಕೆ ಸೇರಿರುವ ಈ ಜಿಲ್ಲೆಯ ವಿಸ್ತೀರ್ಣ 5341 ಚ.ಕಿಮೀ. ಜನಸಂಖ್ಯೆ 5.8 ಲಕ್ಷ. ಜಿಲ್ಲಾ ಆಡಳಿತಕೇಂದ್ರನಗರ ಬರ್ಹಾಂಪುರ, ಜನಸಂಖ್ಯೆ 2,89,724.

ಜಿಲ್ಲೆಯ ಉತ್ತರ ಮತ್ತು ಈಶಾನ್ಯಭಾಗದಲ್ಲಿ ಗಂಗಾನದಿ ಹರಿಯುತ್ತದೆ. ಅದರ ಬಲದಂಡೆಯ ಫಲವತ್ತಾದ ಭೂಮಿ ಈ ಜಿಲ್ಲೆಗೆ ದೊರೆತಿದೆ. ಭಾಗೀರಥಿ ನದಿ ಈ ಜಿಲ್ಲೆಯ ಮಧ್ಯದಲ್ಲಿ ಪ್ರವಹಿಸುವುದು. ಇವಲ್ಲದೆ ಜಲಂಗಿನದಿ ಹಾಗೂ ಇತರ ಸಣ್ಣಪುಟ್ಟ ಉಪನದಿಗಳಿದ್ದು ಈ ಜಿಲ್ಲೆಯಲ್ಲಿ ಜಲಾಭಾವವಿಲ್ಲ. ಜಿಲ್ಲೆ ಫಲವತ್ತಾದ ಮೆಕ್ಕಲು ಮಣ್ಣಿನಿಂದ ಕೂಡಿದ್ದು ಬತ್ತ, ಕಬ್ಬು, ಹೊಗೆಸೊಪ್ಪು, ಸೆಣಬು, ಗೋದಿ, ಎಣ್ಣೆ ಬೀಜ ಮುಂತಾದವನ್ನು ಬೆಳೆಸುತ್ತಾರೆ. ಈ ಜಿಲ್ಲೆ ಮಾವಿನ ಹಣ್ಣುಗಳಿಗೆ ಪ್ರಸಿದ್ಧ. ಹಿಪ್ಪುನೇರಿಳೆಯನ್ನೂ ಹೆಚ್ಚಾಗಿ ಬೆಳೆಸುತ್ತಾರೆ. ರೇಷ್ಮೆ, ಹತ್ತಿಬಟ್ಟೆ ಮತ್ತು ಕಸೂತಿ ಹಾಗೂ ನಕ್ಕಿ ಕೆಲಸಗಳಿಗೆ ಹೆಸರಾದದ್ದು. ಕಂಚು ಹಿತ್ತಾಳೆ ಪಾತ್ರೆಗಳನ್ನೂ, ಸಂಗೀತವಾದ್ಯಗಳನ್ನೂ ತಯಾರಿಸುವುದು ಈ ಜಿಲ್ಲೆಯ ಮುಖ್ಯ ಕೈಗಾರಿಕೆ, ದಂತದ ಕೆತ್ತನೆ, ಕುಸುರಿ ಕೆಲಸಕ್ಕೆ ಮುರ್ಷಿದಾಬಾದ್ ಹೆಸರಾದದ್ದು.

ಮುರ್ಷಿದಾಬಾದ್ ನಗರ ಭಾಗೀರಥಿ ನದಿಯ ಎಡದಂಡೆಯ ಮೇಲಿದೆ. ಇತಿಹಾಸ ಪ್ರಸಿದ್ಧವಾದ ಈ ಪಟ್ಟಣವನ್ನು 16ನೆಯ ಶತಮಾನದಲ್ಲಿ ಅಕ್ಬರ್ ಸ್ಥಾಪಿಸಿದನೆಂದೂ ನವಾಬ ಮುರ್ಷಿದ್ ಕುಲಿಖಾನ್ ಢಾಕದಿಂದ ಇಲ್ಲಿಗೆ ತನ್ನ ರಾಜಧಾನಿಯನ್ನು ಬದಲಾಯಿಸಿ ಈ ಊರಿಗೆ ಮುರ್ಷಿದಾಬಾದ್ ಎಂದು ಹೆಸರಿಟ್ಟನೆಂದೂ ತಿಳಿದುಬರುತ್ತದೆ (1704). ನಿಜಾಮತ್ ಕಿಲ, ನವಾಬರ ಅರಮನೆ, ಮೋತಿ ಸರೋವರ, ಮುರಾದ್ ಭಾಗ್ ಅರಮನೆ, ಬಂಗಾಲದ ಕೊನೆಯ ನವಾಬನಾದ ಅಲಿವರ್ದಿಖಾನ್‌ನ ಮತ್ತು ಸಿರಾಜ್ ಉದ್‌ದೌಲ ಇವರ ಸಮಾಧಿಯಿರುವ ಖುಸುಭಾಗ್ ಮುಂತಾದ ಪ್ರೇಕ್ಷಣೀಯ ಸ್ಥಳಗಳಿವೆ. ರಸ್ತೆ ರೈಲು ಸಂಪರ್ಕವಿದೆ. ವ್ಯಾಪಾರಕೇಂದ್ರ, ರೇಷ್ಮೆ ನೇಯ್ಗೆಗೆ ಪ್ರಸಿದ್ಧ. 1869ರಿಂದಲೂ ಪುರಸಭಾ ಆಡಳಿತವಿದೆ. (ಆರ್.ಎಂ.ಆರ್.)

**ಮುಳಬಾಗಲು:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ. ವಾಯವ್ಯ ಮತ್ತು ಪಶ್ಚಿಮದಲ್ಲಿ ಶ್ರೀನಿವಾಸಪುರ, ದಕ್ಷಿಣದಲ್ಲಿ ಬಂಗಾರಪೇಟೆ, ಪಶ್ಚಿಮಕ್ಕೆ ಕೋಲಾರ ತಾಲ್ಲೂಕ್ಕೂ, ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶವೂ ಸುತ್ತುವರಿದಿವೆ. ಒಂದು ಪಟ್ಟಣ ಮತ್ತು 344 ಗ್ರಾಮಗಳು ಇವೆ. ದುಗ್ಗಸಂದ್ರ, ಮುಳಬಾಗಲು, ಬೈರಕೂರು, ತಾಯಲೂರು ಮತ್ತು ಅವನಿ ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 836.4 ಚ.ಕಿಮೀ. ಜನಸಂಖ್ಯೆ 2,31,065. ವಾರ್ಷಿಕ ಸರಾಸರಿ ಮಳೆ 755.19 ಮಿಮೀ. ಬೆಟ್ಟಗುಡ್ಡಗಳಿಂದ ಕೂಡಿದೆ. ಮುಳಬಾಗಲು ಮತ್ತು ಆವನಿ ಬಳಿಯ ಬೆಟ್ಟಗಳು ದೊಡ್ಡವು. ಮುಖ್ಯ ಬೆಟ್ಟಶ್ರೇಣಿಯೊಂದು ಮಧ್ಯದಲ್ಲಿ ಹಬ್ಬಿದ್ದು ಇದರ ಪಶ್ಚಿಮ ಪ್ರದೇಶದಲ್ಲಿ ವಿಶಾಲ ಕಣಿವೆಗಳಿದ್ದರೆ ಪೂರ್ವದಲ್ಲಿ ಕಿರುಕಣಿವೆಗಳಿವೆ. ಪಿಂಗಾಣಿ ಸಾಮಾನು ತಯಾರಿಕೆಗೆ ಉಪಯುಕ್ತವಾಗುವ ಬಿಳಿಜೇಡಿ ಮತ್ತು ಕೆಂಪುಜೇಡಿ ಮಣ್ಣುಂಟು. ವ್ಯವಸಾಯಕ್ಕೆ ಪೂರಕವಾಗುವಂಥ ಹಲವಾರು ಕೆರೆಗಳೂ ಬಾವಿಗಳೂ ಇವೆ. ರಾಗಿ, ಬತ್ತ, ನೆಲಗಡಲೆ ಮುಖ್ಯ ಬೆಳೆಗಳು, ದ್ವಿದಳ ಧಾನ್ಯಗಳನ್ನೂ ಹಣ್ಣುಗಳನ್ನೂ ಬೆಳೆಸುತ್ತಾರೆ. ಪಶುಪಾಲನೆ ಉಂಟು. ಇಲ್ಲಿ ಉಕ್ಕಿನ ಪೀಠೋಪಕರಣ ಮತ್ತು ಕೈಮಗ್ಗದ ಬಟ್ಟೆ ತಯಾರಿಸುತ್ತಾರೆ.

ಮುಳಬಾಗಲು ಹೋಬಳಿ ಮತ್ತು ತಾಲ್ಲೂಕು ಆಡಳಿತ ಕೇಂದ್ರ. ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಲಾರದ ಪೂರ್ವಕ್ಕೆ 30 ಕಿಮೀ ದೂರದಲ್ಲಿದೆ. ಜನಸಂಖ್ಯೆ 44,031. ಮುಳಬಾಗಲು ತಿರುಪತಿಗೆ ಹೋಗುವ ಮಾರ್ಗದಲ್ಲಿ ಕರ್ನಾಟಕ ರಾಜ್ಯದ ಪೂರ್ವಗಡಿಯಲ್ಲಿ ಮುಗ್ಗಿಲಿಬೆಟ್ಟಗಳ ಶ್ರೇಣಿಯಲ್ಲಿರುವುದರಿಂದ ಅದನ್ನು ಮೂಡಲಬಾಗಿಲು ಎಂದು ಕರೆದು, ಮುಂದೆ ಅದೇ ಮುಳಬಾಗಲು ಆಗಿದೆಯೆನ್ನುವರು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಮುಳಬಾಗಲು ಈ ಪ್ರಾಂತ್ಯದ ಆಡಳಿತ ಕೇಂದ್ರವಾಗಿತ್ತು.

ಪಟ್ಟಣದಲ್ಲಿ ನಗರಸಭಾಡಳಿತವಿದೆ. ಪಟ್ಟಣದ ಹತ್ತಿರ ಕೆಲವು ಪುರಾತನ ದೇವಾಲಯಗಳುಂಟು. ತಿರುಪತಿಗೆ ಹೋಗುವವರು ಇಲ್ಲಿಯ ನರಸಿಂಹತೀರ್ಥದಲ್ಲಿ ಮಿಂದು, ಮುಡಿಕೊಟ್ಟು ಹೋಗುವ ಪದ್ಧತಿ ಇದೆ. ಈ ಪಟ್ಟಣದ ಹತ್ತಿರ ಇರುವ ಬೆಟ್ಟದ ಮೇಲೆ ರಾಮತೀರ್ಥ ಮತ್ತು ಲಕ್ಷ್ಮಣತೀರ್ಥಗಳೆಂಬ ಎರಡು ಕೊಳಗಳಿವೆ. ಮುಳಬಾಗಿಲಿನಿಂದ 1.5 ಕಿಮೀ ದೂರದಲ್ಲಿ ಶ್ರೀಪಾದರಾಯರ ಬೃಂದಾವನವಿದೆ. ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಸೋಮೇಶ್ವರಸ್ವಾಮಿ ಜಾತ್ರೆ ನಡೆಯುತ್ತದೆ. ಇಲ್ಲಿರುವ ಆಂಜನೇಯಸ್ವಾಮಿ ದೇವಾಲಯ ಪ್ರಸಿದ್ಧ. (ಕೆ.ಎ.ಆರ್.)

**ಮುಳ್ಳಯ್ಯನಗಿರಿ:** ಕರ್ನಾಟಕದ ಅತ್ಯುನ್ನತ ಗಿರಿ ಶಿಖರ. ಸಮುದ್ರಮಟ್ಟದಿಂದ 1,925 ಮೀ ಎತ್ತರವಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಶ್ರೇಣಿ ಒಳಚಾಚಿರುವ ಬೆಟ್ಟಸಾಲಿನಲ್ಲಿ ಚಿಕ್ಕಮಗಳೂರು ಪಟ್ಟಣದ ಉತ್ತರಕ್ಕಿದೆ.

ಈ ಗಿರಿಯ ಎತ್ತರ ಪ್ರದೇಶಗಳಿಂದ ಧುಮುಕುವ ಜಲಪಾತಗಳು ಮತ್ತು ದಟ್ಟವಾಗಿ ಹಬ್ಬಿರುವ ಕಾಡು ನೋಡಲು ಅತ್ಯಂತ ರಮಣೀಯ. ಶಿಖರದಿಂದ ದೂರ ಪ್ರದೇಶಗಳ ವಿಹಂಗಮನೋಟ ಕಂಡುಬರುತ್ತದೆ. ಸೋಮವಾಹಿನಿ, ಹೊನ್ನಮ್ಮನ ಹಳ್ಳ, ವೇದಾ, ಆವತಿ ಮುಂತಾದ ತೊರೆಗಳು ಈ ಗಿರಿಯಲ್ಲಿ ಹುಟ್ಟುತ್ತವೆ. ವೇದಾನದಿಗೆ ಶಮನಗಿರಿ ಬಳಿ ಅಣೆಕಟ್ಟು ಹಾಕಿ ಅಯ್ಯನ ಕೆರೆ ನಿರ್ಮಿಸಿದ್ದಾರೆ. ಪುರಾಣ ಪ್ರಸಿದ್ಧ ರುಕ್ಮಾಂಗದ ಮಹಾರಾಜ ಈ ಕೆರೆ ನಿರ್ಮಿಸಿದನೆಂದು ಪ್ರತೀತಿ. ವೇದಾ ಮತ್ತು ಆವತಿ ತೊರೆಗಳು ಕಡೂರಿನ ಬಳಿ ತಂಗಲಿ ಎಂಬಲ್ಲಿ ಕೂಡಿ ವೇದಾವತಿ ಎಂಬ ಹೆಸರು ಪಡೆದು ಮುಂದೆ ಪ್ರವಹಿಸುತ್ತದೆ. ಈ ಪರ್ವತಶ್ರೇಣಿಯಲ್ಲಿ ಹೇರಳವಾಗಿ ಕಬ್ಬಿಣದ ಅದುರು ದೊರೆಯುತ್ತದೆ. ಇಲ್ಲಿಯ ಕಾಡುಗಳಲ್ಲಿ ಹುಲಿ, ಕಾಡುಕೋಣ, ಚಿರತೆ, ಸಾರಂಗ, ಮುಳ್ಳುಹಂದಿ ಮುಂತಾದ ಪ್ರಾಣಿಗಳೂ ತೇಗ, ಶ್ರೀಗಂಧ, ನಂದಿ, ಮತ್ತಿ ಮುಂತಾದ ಮರಗಳೂ ಇವೆ. ಅಮೂಲ್ಯವಾದ ಅನೇಕ ಔಷಧೋಪಯೋಗಿ ಗಿಡಮೂಲಿಕೆಗಳಿಗೆ ಈ ಗಿರಿ ಪ್ರಸಿದ್ಧ. ಈ ಗಿರಿಸಾಲನ್ನೇ ಪುರಾಣಗಳಲ್ಲಿ ಚಂದ್ರದ್ರೋಣ ಪರ್ವತವೆಂದು ಕರೆಯಲಾಗಿದೆ. ರಾಮ ರಾವಣರ ಯುದ್ಧಕಾಲದಲ್ಲಿ ಹನುಮಂತ ಈ ಗಿರಿಯಿಂದಲೇ ಸಂಜೀವಿನಿ ಮೂಲಿಕೆಯನ್ನು ತೆಗೆದುಕೊಂಡು ಹೋದನೆಂಬ ಐತಿಹ್ಯವಿದೆ. ಈ ಗಿರಿಯ ಹೊರ ಮೈಯಲ್ಲಿ ಅತ್ಯುತ್ತಮ ಕಾಫಿ ತೋಟಗಳು, ಕಿತ್ತಳೆ, ಏಲಕ್ಕಿ ತೋಟಗಳು ಇವೆ. (ಎಂ.ಜಿ.ಕೆ.)

**ಮೂಡಬಿದರೆ:** ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಒಂದು ಪಟ್ಟಣ. ದಕ್ಷಿಣ ಭಾರತದ ಜೈನಕಾಶಿಯೆಂದು ಖ್ಯಾತಿವೆತ್ತ ತೀರ್ಥಕ್ಷೇತ್ರ. ಮಂಗಳೂರು–ಕಾರ್ಕಳ ರಸ್ತೆಯಲ್ಲಿ ಮಂಗಳೂರಿನ ಈಶಾನ್ಯಕ್ಕೆ 35 ಕಿಮೀ ದೂರದಲ್ಲಿದೆ. ಜನಸಂಖ್ಯೆ 25,610. 17ನೆಯ ಶತಮಾನದಲ್ಲಿ ಇದು ಪುತ್ತಿಗೆಯ ಚೌಟರಸರ ರಾಜಧಾನಿಯಾಗಿತ್ತು.

ಶಾಸನಗಳಲ್ಲಿ ಬಿದರೆ ಎಂದು ಸಾಮಾನ್ಯವಾಗಿ ಕರೆಯಲಾಗುವ ಮೂಡಬಿದರೆ ಪ್ರಾಚೀನ ಕಾಲದಿಂದಲೂ ಜೈನಮತಕ್ಕೆ ಹೆಸರಾದ ಊರು. ಒಂದು ಕಾಲದಲ್ಲಿ ಅಧಿಕ ಸಂಖ್ಯೆಯ ಊರಾಗಿದ್ದರೂ ಕಾಲಾಂತರದಲ್ಲಿ ಜನವಾಸ ಕಡಿಮೆಯಾಗಿ ನೆಲ ಹಾಳುಬಿದ್ದು ಎಲ್ಲೆಲ್ಲೂ ಬಿದಿರಿನ ಮೆಳೆಗಳು ಬೆಳೆದುಕೊಂಡವು. ಒಮ್ಮೆ ಶ್ರವಣಬೆಳಗೊಳದಿಂದ ಇಲ್ಲಿಗೆ ಬಂದ ಓರ್ವ ಜೈನ ಗುರುವಿನ ಆದೇಶದಂತೆ ಬಿದಿರ ಹಿಂಡಲುಗಳನ್ನು ಕಡಿದು ನೆಲ ಅಗೆದಾಗ ಅಲ್ಲೊಂದು ಪಾರ್ಶ್ವನಾಥಸ್ವಾಮಿ ವಿಗ್ರಹ ದೊರಕಿತು. ಸಮೀಪದಲ್ಲಿ ನೆಲೆಸಿದ್ದ ಜೈನರು ಅಲ್ಲಿಯೇ ಒಂದು ಬಸದಿ ಕಟ್ಟಿಸಿ ಆ ಪ್ರತಿಮೆಯನ್ನು ಅದರಲ್ಲಿ ಪ್ರತಿಷ್ಠಾಪಿಸಿದರು. ಈ ಬಸದಿಗೆ ಹಳೇಬಸದಿ ಅಥವಾ ಗುರುಬಸದಿ ಎಂಬ ಹೆಸರು ಬಂತು. ಈಗಲೂ ಇಲ್ಲಿಯ ಜೈನ ಪೀಠಾಧಿಪತಿಗಳಿಗೆ ಪಟ್ಟವಾಗುವುದು ಈ ಬಸದಿಯಲ್ಲಿಯೇ. ಚರಿತ್ರೆಯ ವಿವರಣೆಗಳಲ್ಲೂ ಶಾಸನಗಳಲ್ಲೂ ಮೂಡಬಿದರೆ ಒಂದು ನಗರವೆಂದು ಪ್ರಸಿದ್ಧವಿದ್ದು ಎಂಟುಮಂದಿ ಸೆಟ್ಟಿಕಾರರ (ವ್ಯಾಪಾರಸ್ಥರು) ಮತ್ತು ನಾಲ್ವರು ಎಳಮೆಗಳು (ವ್ಯವಸಾಯಗಾರರು) ಇದನ್ನು ಆಳುತ್ತಿದ್ದರೆಂದು ತಿಳಿದುಬರುತ್ತದೆ.

ಮೂಡಬಿದರೆಯಲ್ಲಿ 18 ಬಸದಿಗಳಿವೆ. ಸಾವಿರ ಕಂಬಗಳ ಬಸದಿ ಎಂದು ಪ್ರಖ್ಯಾತವಾಗಿರುವ ತ್ರಿಭುವನತಿಲಕ ಚೂಡಾಮಣಿ ಚೈತ್ಯಾಲಯ ಇಲ್ಲಿಯ ಮುಖ್ಯ ಆಕರ್ಷಣೆ. ದಕ್ಷಿಣಭಾರತದಲ್ಲೇ ಉತ್ಕೃಷ್ಟವಾಗಿರುವ ವಾಸ್ತು ನಿರ್ಮಾಣಗಳ ಪೈಕಿ ಇದೊಂದು. ಇದನ್ನು 1431ರಲ್ಲಿ ನಿರ್ಮಿಸಲಾಯಿತೆಂದು ಇಲ್ಲಿಯ ಗದ್ದಿಗೆ ಮಂಟಪದಲ್ಲಿರುವ ಶಿಲಾಲೇಖದಲ್ಲಿ ಉಲ್ಲೇಖಿಸಲಾಗಿದೆ. ಮೂಡಬಿದರೆಯ ಈಶಾನ್ಯದಲ್ಲಿ ಪೂರ್ವಕಾಲದ ವೈಭವವನ್ನು ಸೂಚಿಸತಕ್ಕ ಕೋಟೆ ಇದೆ. ಇದರಲ್ಲಿ ಹನ್ನೊಂದು ಬತೇರಿಗಳುಂಟು. ಇಲ್ಲೊಂದು ಹನುಮಂತ ಗುಡಿಯೂ ಇದೆ.

ಮಹಿಷಮರ್ದಿನಿಯ ಗೌರೀದೇಗುಲ, ಗೋಪಾಲಕೃಷ್ಣ ಮಂದಿರ, ವೆಂಕಟರಮಣ ದೇವಾಲಯ ಮತ್ತು ಮಹಾಲಕ್ಷ್ಮೀದೇವಾಲಯ ಸಹ ಇಲ್ಲಿವೆ. ಈ ಊರಿನ ಜೈನಮಠ ಪ್ರಸಿದ್ಧವಾದದ್ದು. ಅಭಿನವ ಚಾರುಕೀರ್ತಿ ಪಂಡಿತಾಚಾರ್ಯ ಎಂಬುದು ಇಲ್ಲಿಯ ಆಚಾರ್ಯರ ಬಿರುದು. ಇಲ್ಲಿ ಎರಡು ಚರ್ಚುಗಳೂ ಮೂರು ಮಸೀದಿಗಳೂ ಇವೆ. ಪಟ್ಟಣದ ಸಮೀಪದಲ್ಲಿ ಪೂರ್ವಕ್ಕೆ ಸು. 2 ಕಿಮೀ ದೂರದಲ್ಲಿ ಕೋಡಂಕಲ್ಲು (ಕೊಡಂಜೆ ಕಲ್ಲು) ಎಂಬ ಎರಡು ಕೋಡುಗಳುಳ್ಳ 277 ಮೀ ಎತ್ತರದ ಬೆಟ್ಟವಿದೆ. ಈ ಬೆಟ್ಟದ ಮೇಲೆ ಒಂದು ನ್ಯಾಯ ಬಸದಿ ಇದೆ. ಇಲ್ಲಿ ಹಿಂದೆ ಅಪರಾಧಿಗಳ ವಿಚಾರಣೆ ನಡೆಯುತ್ತಿತ್ತಂತೆ.

ಮೂಡಬಿದರೆಯಲ್ಲಿ ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ. ಅನಾನಸು (ನೆಲ ಹಲಸು) ನಾರು ಸಂಶೋಧನ ಕೇಂದ್ರವೊಂದು ಇಲ್ಲಿದೆ. *

**ಮೂಡಿಗೆರೆ:** ಚಿಕ್ಕಮಗಳೂರು ಜಿಲ್ಲೆಯ ನೈರುತ್ಯ ಭಾಗದಲ್ಲಿರುವ ಒಂದು ತಾಲ್ಲೂಕು ಮತ್ತು ಅದರ ಮುಖ್ಯಪಟ್ಟಣ. ಈ ತಾಲ್ಲೂಕನ್ನು ಪೂರ್ವದಲ್ಲಿ ಬೇಲೂರು, ಆಗ್ನೇಯದಲ್ಲಿ ಸಕಲೇಶಪುರ, ದಕ್ಷಿಣ ಮತ್ತು ನೈರುತ್ಯದಲ್ಲಿ ಬೆಳ್ತಂಗಡಿ, ಪಶ್ಚಿಮದಲ್ಲಿ ಕಾರ್ಕಳ, ಉತ್ತರದಲ್ಲಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳು ಸುತ್ತುವರಿದಿವೆ. ಗೋಣಿಬೀಡು, ಬಣಕಲ್, ಬಾಳೂರು, ಮೂಡಿಗೆರೆ ಮತ್ತು ಕಳಸ ಈ ತಾಲ್ಲೂಕಿನ ಹೋಬಳಿಗಳು. ಗ್ರಾಮಗಳು 140. ವಿಸ್ತೀರ್ಣ 1,163.6 ಚ.ಕಿಮೀ. ಜನಸಂಖ್ಯೆ 1,41,255.

ಈ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿದ್ದು ಪರ್ವತಮಯವಾಗಿದೆ. ಪಶ್ಚಿಮದ ಅಂಚಿನುದ್ದಕ್ಕೂ ಪಶ್ಚಿಮಘಟ್ಟಗಳ ಬೆಟ್ಟಶ್ರೇಣಿ ಇದೆ. ಇದರಲ್ಲಿ ಕುದುರೆಮುಖ (1.894 ಮೀ), ಬಲ್ಲಾಳರಾಯನದುರ್ಗ (1505 ಮೀ). ಎಪ್ಪತ್ತು ಮಂದಿಗುಡ್ಡ, ಶಿಸಿಲುಕುಡಿ, ಜೇನುಕಲ್ಲುಗುಡ್ಡ ಬಹು ಎತ್ತರದ ಶಿಖರಗಳು, ತಾಲ್ಲೂಕಿನ ಇತರ ಭಾಗಗಳೂ ಬಲುಮಟ್ಟಿಗೆ ಏರುತಗ್ಗಾಗಿದ್ದು ಕಣಿವೆ, ಕಮರಿಗಳು, ದಿಣ್ಣೆ ಬೆಟ್ಟಗಳಿಂದ ಕೂಡಿವೆ.

ಈ ತಾಲ್ಲೂಕು ಬಲುಮಟ್ಟಿಗೆ ಧಾರವಾಡ ಶಿಲಾಶ್ರೇಣಿಯ ಪ್ರದೇಶ. ಕೆಲವು ಭಾಗಗಳಲ್ಲಿ ಕಬ್ಬಿಣದ ಅದಿರು ಮತ್ತು ಗ್ರಾನೈಟುಗಳು ಹೇರಳವಾಗಿವೆ. ಕುದುರೆಮುಖ ಕಬ್ಬಿಣದ ಅದಿರಿನ ಹರವು ಪ್ರಸಿದ್ಧವಾದದ್ದು. ಕುದುರೆಗುಂಡಿ ಮತ್ತು ಬಾಳೆಗದ್ದೆ ಮೊದಲಾದ ಸ್ಥಳಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಬಳಸುವ ಕಲ್ಲುಗಳನ್ನು ಹೇರಳವಾಗಿ ತೆಗೆಯಲಾಗುತ್ತದೆ. ಕೆಲವೆಡೆ ಮರಳು ಮತ್ತು ಜೇಡಿಮಣ್ಣು ಹೆಚ್ಚಾಗಿ ದೊರೆಯುತ್ತದೆ.

ಜಲಸಂಪತ್ತು ಇಲ್ಲಿಯ ಪ್ರಮುಖ ಪ್ರಾಕೃತಿಕ ಸಂಪನ್ಮೂಲಗಳಲ್ಲೊಂದು. ಭದ್ರಾ ಮತ್ತು ಹೇಮಾವತಿ ಹುಟ್ಟುವುದು ಈ ತಾಲ್ಲೂಕಿನಲ್ಲಿ. ಹೇಮಾವತಿ ನದಿಗೆ ಕೊಟ್ಟಿಗೆಹಾರದ ಬಳಿ ಸೋಮಾವತಿ, ಮುಗ್ಗುರವಳ್ಳಿಯ ಬಳಿ ಬಕ್ಕಿಹಳ್ಳ, ಕೆಸವಳಲು ಕೂಡಿಗೆಯಲ್ಲಿ ಕಪಿಲ ಅಥವಾ ಕಡದಾಳುಹಳ್ಳ ಹಾಗೂ ಉದುಸೆ ಬಳಿ ಬೆರಣಿಹಳ್ಳ ಮೊದಲಾದ ದೊಡ್ಡ ತೊರೆಗಳು ಕೂಡಿಕೊಳ್ಳುತ್ತವೆ. ತಾಲ್ಲೂಕಿನ ಉತ್ತರ ಮತ್ತು ಪೂರ್ವಭಾಗದ ಕಾಡುಗಳಲ್ಲಿ ಹರಿಯುವ ಅನೇಕ ತೊರೆಗಳು ಭದ್ರಾನದಿಯನ್ನು ಸೇರುತ್ತವೆ. ಇವಲ್ಲದೆ ಈ ತಾಲ್ಲೂಕಿನ ಬೆಟ್ಟಗುಡ್ಡಗಳಲ್ಲಿ ಅನೇಕ ಚಿಕ್ಕ ಹಳ್ಳಗಳೂ ಹರಿಯುತ್ತವೆ. ಜೂನ್–ಸೆಪ್ಟೆಂಬರ್ ಮಾಸಗಳಲ್ಲಿ ಅಧಿಕ ಮಳೆ, ಬೈರಾಪುರ ಎಸ್ಟೇಟ್ ಮತ್ತು ಕೊಟ್ಟಿಗೆಹಾರ ಈ ತಾಲ್ಲೂಕಿನ ಹೆಚ್ಚು ಮಳೆ ಬೀಳುವ ಪ್ರದೇಶಗಳು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ ಸು. 250 ಸೆಂಮೀ.

ಬೆಟ್ಟಗುಡ್ಡಗಳ ಮೇಲೆ ಸದಾ ಹಸುರುಭರಿತ ಕಾಡುಗಳು ಕಂಡುಬರುತ್ತವೆ. ಈ ಕಾಡುಗಳಲ್ಲಿ ಕರ್ನಾಟಕದ ಕಾಡುಗಳಲ್ಲಿ ದೊರೆಯುವ ಎಲ್ಲ ಮರಗಳೂ ಬೆಳೆಯುತ್ತವೆ. ಅವುಗಳಲ್ಲಿ ಶ್ರೀಗಂಧ, ಹಲಸು, ತೇಗ, ಮತ್ತಿ, ದಬ್ಬೆ, ನಂದಿ, ಸಂಪಿಗೆ ಮೊದಲಾದವು ಮುಖ್ಯವಾದವು. ಇಲ್ಲಿಯ ಮೀಸಲು ಕಾಡುಗಳಲ್ಲಿ ಬಾಳೂರು, ಸಾರಗೂಡು, ಕುಂದೂರು, ಮುದ್ರೆಮನೆ ಮೊದಲಾದ ಅರಣ್ಯಗಳು ಮುಖ್ಯವಾದವು. ಇವಲ್ಲದೆ ಪಶ್ಚಿಮ ಘಟ್ಟದ ಉದ್ದಕ್ಕೂ ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನಲ್ಲಿ ಅರಣ್ಯ ಪ್ರದೇಶವಿದೆ. ಅಲ್ಲಲ್ಲಿ ನೂರಾರು ಎಕರೆಗಳಷ್ಟು ಈಚಲು ಗಿಡಗಳ ಹರವುಗಳನ್ನು ಕಾಣಬಹುದು.

ಮಲೆನಾಡಿನ ಕೆಲವೆಡೆಗಳಲ್ಲಿಯಂತೆ ಇಲ್ಲಿಯ ಪ್ರಾಣಿ ಸಂಪತ್ತೂ ಹೇರಳವಾಗಿದೆ. ಕಾಡುಗಳಲ್ಲಿ ಆನೆ, ಹುಲಿ, ಹಂದಿ, ಕಾಡೆಮ್ಮೆ, ಸಾರಂಗ, ಕಡವೆ ಮೊದಲಾದ ಪ್ರಾಣಿಗಳಿವೆ. ಆದರೆ ಕಾಫಿ ಮತ್ತು ಏಲಕ್ಕಿ ತೋಟಗಳ ಸಾಗುವಳಿಯಿಂದ, ಬೇಟೆ ಮತ್ತು ಕಾಡು ಕಡಿಯುವುದರಿಂದಾಗಿ ಈ ಪ್ರಾಣಿಗಳ ಸಂಖ್ಯೆ ಇಳಿಮುಖವಾಗುತ್ತಿದೆ.

ಬತ್ತ ಇಲ್ಲಿಯ ಮುಖ್ಯ ಆಹಾರ ಬೆಳೆ. ಕೆಲವೆಡೆ ರಾಗಿಯನ್ನೂ ಸ್ವಲ್ಪಮಟ್ಟಿಗೆ ಬೆಳೆಯುವರು. ಮಳೆಯ ನೀರೇ ಮುಖ್ಯ ಆಧಾರ. ಈ ತಾಲ್ಲೂಕಿನಲ್ಲಿ ಕಾಫಿ ಪ್ಲಾಂಟೇಷನ್ನುಗಳು ವ್ಯಾಪಕವಾಗಿವೆ. ಇಲ್ಲಿ ಅರೇಬಿಕ ಮತ್ತು ಆಧುನಿಕ ಆಯ್ಕೆ ತಳಿಗಳ ಜತೆಗೆ ರೊಬಸ್ಟ ಕಾಫಿಯನ್ನು ಹೆಚ್ಚಾಗಿ ಬೆಳೆಸುತ್ತಾರೆ. ಈ ತಾಲ್ಲೂಕಿನಲ್ಲಿ ಅದರಲ್ಲೂ ವಿಶೇಷವಾಗಿ ಕಳಸದ ಸುತ್ತಮುತ್ತ ಅಡಿಕೆ ಬೆಳೆಯುತ್ತಾರೆ. ಅಲ್ಲಿಯೇ ಕೆಲವು ಟೀ ತೋಟಗಳೂ ಇವೆ. ಸ್ವಲ್ಪ ಪ್ರಮಾಣದಲ್ಲಿ ಮೆಣಸನ್ನೂ ಬೆಳೆಸಲಾಗುತ್ತಿದೆ. ಏಲಕ್ಕಿ ಈ ತಾಲ್ಲೂಕಿನ ಮುಖ್ಯ ವಾಣಿಜ್ಯ ಬೆಳೆಯಾಗಿತ್ತು. ಆದರೆ ಕೆಲವು ದಶಕಗಳಿಂದ ಮಳೆ ಕಡಿಮೆಯಾದುದರಿಂದ ಮತ್ತು ಆಧುನಿಕ ಕಾಫಿ ಸಾಗುವಳಿ ಜನಪ್ರಿಯವಾದುದರಿಂದ ಏಲಕ್ಕಿ ಬೆಳೆಯುವ ಪ್ರದೇಶ ಕ್ರಮೇಣ ಕಡಿಮೆಯಾಗುತ್ತಿದೆ. ಏಲಕ್ಕಿಗೆ ಇರುವ ಅನಿಶ್ಚಿತ ಬೆಲೆಯೂ ಇದಕ್ಕೆ ಒಂದು ಕಾರಣ. ಆದರೂ ಇಂದು ಏಲಕ್ಕಿ ಸಾಗುವಳಿಯನ್ನು ಆಧುನಿಕ ರೀತಿಯಲ್ಲಿ ನಡೆಸುವ ಹೊಸ ಪ್ರಯತ್ನಗಳು ಕಂಡುಬರುತ್ತಿವೆ. ಮೂಡಿಗೆರೆ ಕೈಮರದ ಬಳಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಿರುವ ಪ್ರಾದೇಶಿಕ ಏಲಕ್ಕಿ ಸಂಶೋಧನ ಕೇಂದ್ರವಿದ್ದು ಈ ಬೆಳೆಯ ಸಾಗುವಳಿಗೆ ಸಹಕಾರಿಯಾಗಿದೆ.

ಈ ತಾಲ್ಲೂಕಿನಲ್ಲಿ ದೊಡ್ಡ ಕೈಗಾರಿಕೆಗಳಿಲ್ಲ. ಕೆಲವೆಡೆ ಅಕ್ಕಿ ಗಿರಣಿಗಳಿವೆ. ಮೂಡಿಗೆರೆಯ ಬಳಿ ಮರ ಕೊಯ್ಯುವ, ಕೆಳಗೂರಿನಲ್ಲಿ ಚಹ ಹದ ಮಾಡುವ ಕಾರ್ಖಾನೆಗಳು ಇವೆ. ಬಿದಿರಿನ ವಸ್ತುಗಳನ್ನು ತಯಾರಿಸುವುದು, ಗಾಡಿ ಕೂಡಿಸುವುದು, ಕಬ್ಬಿಣದ ಕೆಲಸ, ಮಡಕೆ ಮಾಡುವುದು, ವಾಹನಗಳ ದುರಸ್ತಿ ಮಾಡುವುದು ಮೊದಲಾದ ಗೃಹಕೈಗಾರಿಕೆಗಳಿವೆ. ಕುದುರೆಗುಂಡಿ ಮತ್ತು ಬಾಳೆಗದ್ದೆ ಸ್ಥಳಗಳಲ್ಲಿ ಕಟ್ಟಡಕ್ಕೆ ಬಳಸುವ ಕಲ್ಲುಗಳನ್ನು ತೆಗೆಯುವರು. 1976ರಿಂದ ಕಾರ್ಯಾಚರಣೆಯಲ್ಲಿದ್ದ ಕುದುರೆಮುಖ ಕಬ್ಬಿಣ ಅದಿರು ಯೋಜನೆ ಈ

ತಾಲ್ಲೂಕಿಗೆ ಮಹತ್ತ್ವದ್ದು. ತಾಲ್ಲೂಕಿನಲ್ಲಿ ಸಹಕಾರ ಸಂಘಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಇವೆ ಆರ್ಥಿಕ ಚಟುವಟಿಕೆಗೆ ಇವು ಸಹಕಾರಿ ಪ್ಲಾಂಟೇಷನ್‌ಗಳಿಗೆ ಸಂಬಂಧಿಸಿದಂತೆ ಕಾರ್ಮಿಕಸಂಘಟನೆಯೂ ಹಲವೆಡೆ ಇದೆ.

ಈ ತಾಲ್ಲೂಕಿನ ಸರಹದ್ದಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಸಂಪರ್ಕಿಸುವ ಚಾರ್ಮಾಡಿಘಾಟ್ ಮಾರ್ಗ ಇದೆ. ಮೂಡಿಗೆರೆ–ಚಿಕ್ಕಮಗಳೂರು, ಮೂಡಿಗೆರೆ–ಸಕಲೇಶಪುರ, ಮೂಡಿಗೆರೆ–ಮಾರ್ಕೊನಹಳ್ಳಿ–ಬೇಲೂರು, ಮೂಡಿಗೆರೆ–ಕೊಟ್ಟಿಗೆಹಾರ–ಉರುವಿನ ಖಾನ್–ಬಾಳೆ ಹೊನ್ನೂರು, ಮೂಡಿಗೆರೆ–ಕಳಸ–ಕುದುರೆಮುಖ, ಮೂಡಿಗೆರೆ–ದಾರದಹಳ್ಳಿ–ದೇವವೃಂದ ರಸ್ತೆಗಳು ತಾಲ್ಲೂಕಿನ ಮುಖ್ಯ ಮಾರ್ಗಗಳು.

ಮಲೆನಾಡಿನಲ್ಲಿ ವಿಶೇಷವಾಗಿರುವ ಸುಗ್ಗಿಹಬ್ಬದ ಆಚರಣೆ ಈ ತಾಲ್ಲೂಕಿನಲ್ಲೆಲ್ಲ ಕಂಡುಬರುತ್ತದೆ. ಹಲವು ಗ್ರಾಮಗಳು ಗುಂಪುಗಳೂ ಸೇರಿ ಒಂದು ಸಾವಿರವೆಂದು ಒಟ್ಟಾಗಿ ಈ ಹಬ್ಬ ಆಚರಿಸುತ್ತಾರೆ. ಸುಗ್ಗಿದೇವತೆಗಳು ಪಾರ್ವತಿಯ ಅವತಾರವೆಂದು ಹಬ್ಬದಲ್ಲಿ ಹೆಣ್ಣು ದೇವತೆಗಳನ್ನು ಪೂಜಿಸುತ್ತಾರೆ. ಯುಗಾದಿ ತರುವಾಯ ದೇವವೃಂದದಲ್ಲಿ ನಡೆಯುವ ರಾಮೇಶ್ವರ ರಥೋತ್ಸವ ಈ ನಾಡಿನ ಹಬ್ಬ. ಹಾಗೆಯೇ ಪಲ್ಗುಣಿಯಲ್ಲಿ ಮೂರುಸಾವಿರ ನಾಡ ಜಾತ್ರೆ ನಡೆಯುತ್ತದೆ. ಕಳಸದಲ್ಲಿ ನಡೆಯುವ ಕಳಸೇಶ್ವರಸ್ವಾಮಿ ಜಾತ್ರೆ, ಹೊರನಾಡು ಅನ್ನಪೂರ್ಣೇಶ್ವರಿ ಜಾತ್ರೆ–ಇವು ತಾಲ್ಲೂಕಿನ ಮುಖ್ಯ ಉತ್ಸವಗಳು. ಈ ತಾಲ್ಲೂಕಿನ ಸುಗ್ಗಿ ಕುಣಿತ, ಕೋಲಾಟ ಪ್ರಸಿದ್ಧ.

ತಾಲ್ಲೂಕಿನ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ ಅನೇಕ ಪೌರಾಣಿಕ ಐತಿಹ್ಯಗಳಿವೆ. ಇಲ್ಲಿಯ ಹೇರಿಕೆ ಗ್ರಾಮದ ಸಮೀಪದಲ್ಲಿರುವ ಪಾಂಡವರ ಗುಡ್ಡದಲ್ಲಿ ಹಿಂದೆ ಪಾಂಡವರು ವಾಸಿಸುತ್ತಿದ್ದರೆಂದು ಹೇಳುವುದುಂಟು. ಈ ತಾಲ್ಲೂಕಿನಲ್ಲಿ ಕಳಸ, ಹೊರನಾಡು. ದೇವವೃಂದ ಮೊದಲಾದ ಧಾರ್ಮಿಕ ಕೇಂದ್ರಗಳೂ ಅಂಗಡಿ, ಬಲ್ಲಾಳರಾಯನದುರ್ಗ ಮೊದಲಾದ ಐತಿಹಾಸಿಕ ಸ್ಥಳಗಳೂ ಇವೆ. ಬಲ್ಲಾಳ ರಾಯನದುರ್ಗದಲ್ಲಿ ಹೊಯ್ಸಳರ ಕಾಲದ ಕೋಟೆ ಇದೆ. ಇಲ್ಲಿಯ ಪಶ್ಚಿಮ ಘಟ್ಟದಲ್ಲಿ ಸು. 1520 ಮೀ ಎತ್ತರದಲ್ಲಿ ಗುತ್ತಿಹಳ್ಳಿಯ ಬಳಿ ಇರುವ ದೇವರಮನೆ ಭೈರವೇಶ್ವರ ಮತ್ತು ಭೈರಾಪುರದ ಬಳಿಯ ಭೈರವೇಶ್ವರ ದೇವಾಲಯಗಳು ಹೊಯ್ಸಳರ ಕಾಲದವು.

ಮೂಡಿಗೆರೆ ಹೋಬಳಿ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಕಡೂರು–ಮಂಗಳೂರು ಹೆದ್ದಾರಿಯಲ್ಲಿ ಕಡೂರಿನ ನೈಋತ್ಯಕ್ಕೆ 73 ಕಿಮೀ ದೂರದಲ್ಲೂ ಚಿಕ್ಕಮಗಳೂರಿಗೆ 33 ಕಿಮೀ ದೂರದಲ್ಲೂ ಇದೆ. ಪುರಸಭಾಡಳಿತವಿರುವ ಪಟ್ಟಣ. ಜನಸಂಖ್ಯೆ 8,962. ಇಲ್ಲಿಗೆ ಸು. ಎರಡೂವರೆ ಕಿಮೀ ದೂರದಲ್ಲಿ ಪ್ರಾದೇಶಿಕ ಏಲಕ್ಕಿ ಸಂಶೋಧನ ಕೇಂದ್ರವಿದೆ. ಇಲ್ಲಿ ಹಲವು ಪ್ರಾಚೀನ ಶಾಸನಗಳಿವೆ. ಹಿಂದಿನಿಂದಲೂ ಈ ಊರು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗುವ ಮುಖ್ಯ ಸಂಚಾರಮಾರ್ಗದಲ್ಲಿದ್ದು ಪ್ರಾಮುಖ್ಯ ಪಡೆದಿತ್ತು. *

**ಮೆಕ್ಕ:** ಮುಸ್ಲಿಮರ ಪವಿತ್ರ ಯಾತ್ರಾಸ್ಥಳ ಹಾಗೂ ಮುಹಮ್ಮದ್ ಪೈಗಂಬರನ ಜನ್ಮಸ್ಥಳ. ಸೌದಿ ಅರೇಬಿಯದ ಹೇಜಸ್‌ನ ಮುಖ್ಯಪಟ್ಟಣ. ಜನಸಂಖ್ಯೆ 1.3 ಮಿ. (2006). ಕೆಂಪು ಸಮುದ್ರದ ಜೆಡ್ಡ ರೇವು ಪಟ್ಟಣದಿಂದ ಪೂರ್ವಕ್ಕೆ 80 ಕಿಮೀ ದೂರದಲ್ಲಿರುವ ಈ ನಗರ ಒಂದುಕಾಲದಲ್ಲಿ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಪ್ರವಾದಿ ಮುಹಮ್ಮದನ ಧರ್ಮಬೋಧೆ ಪ್ರಾರಂಭವಾದುದೂ ಈ ನಗರದಲ್ಲಿಯೇ. ಇಸ್ಲಾಮ್ ಧರ್ಮ ಅರೇಬಿಯದ ಹೊರಗಡೆ ಹರಡತೊಡಗಿದಾಗ, ಮೆಕ್ಕ ನಗರದ ರಾಜಕೀಯ ಪ್ರಭಾವ ಕುಂಠಿತಗೊಂಡು, ಧಾರ್ಮಿಕ ಮಹತ್ತ್ವ ಉಳಿದುಕೊಂಡಿತು.

ಇದೊಂದು ಅಗಲವಾದ ಕಣಿವೆ ಪ್ರದೇಶ. ಇದರ ಸುತ್ತಲೂ ಎತ್ತರದ ಬೆಟ್ಟಗಳಿವೆ. ಪಶ್ಚಿಮದಲ್ಲಿ ಉಪನಗರಗಳು ಬೆಳೆದಿವೆ. ಕಣಿವೆಯ ಅತ್ಯಂತ ವಿಶಾಲ ಭಾಗದಲ್ಲಿ ಮೆಕ್ಕ ನಗರದ ಮಹಾ ಮಸೀದಿಯಿದೆ. ಮಸೀದಿಯಲ್ಲಿರುವುದು ವಿಸ್ತಾರ ಚತುಃಶಾಲೆ; ಚತುಃಶಾಲೆಯ ಸುತ್ತಲೂ ಅಮೃತಶಿಲೆಯ ಇಲ್ಲವೆ ಕರಿಕಲ್ಲಿನ ಸಾಲು ಗಂಬಗಳು; ಮಧ್ಯಭಾಗದಲ್ಲಿ ಕಾಬಾ ಶಿಲೆಯಿದೆ. ಇಸ್ಲಾಮ್ ಮತಸ್ಥಾಪನೆಗೂ ಹಿಂದೆಯೇ ನಿರ್ಮಿತವಾಗಿ, ಮತ್ತೆ ಪುನರ್ನಿರ್ಮಿತವಾದ ಈ ಕಾಬಾವೇ ಇಸ್ಲಾಮ್ ಧರ್ಮದ ಗರ್ಭಗುಡಿ. ಕಾಬಾವಿನ ಆಗ್ನೇಯ ಮೂಲೆಯ ಗೋಡೆಯಲ್ಲಿ ಬೆಳ್ಳಿಯ ಚೌಕಟ್ಟಿನಲ್ಲಿ ಅಚ್ಚೊತ್ತಿದಿಟ್ಟ ಶ್ಯಾಮಲ ಶಿಲೆ ಇಸ್ಲಾಮ್ ಧರ್ಮಕ್ಕೂ ಪೂರ್ವದಲ್ಲಿಯೇ ಪರಮ ಪೂಜ್ಯವಸ್ತುವಾಗಿದ್ದಿತು. ಈ ಶ್ಯಾಮಲ ಶಿಲೆ ಇಸ್ಲಾಮ್ ಧರ್ಮದ ಅತ್ಯಂತ ಪವಿತ್ರ ಸಂಕೇತ; ಯಾತ್ರಿಕರು ಅದಕ್ಕೆ ಮುತ್ತಿಡುತ್ತಾರೆ; ಇಲ್ಲವೆ ವಂದನೆ ಸಲ್ಲಿಸುತ್ತಾರೆ. ನೈಋತ್ಯಮೂಲೆಯಲ್ಲಿ ಕಂದುಬಣ್ಣದ ಯೆಮಿನಿ ಶಿಲೆಯಿದೆ. ಅದನ್ನು ಯಾತ್ರಿಕರು ಸ್ಪರ್ಶಿಸಬೇಕು. ಮನಸೆಳೆಯುವ ಕಸೂತಿ ಹಾಕಿದ ಕರಿಯ ದುಕೂಲ ಕಾಬಾವನ್ನು ಅಡಿಯಿಂದಮುಡಿಯವರೆಗೆ ಶೃಂಗರಿಸಿರುತ್ತದೆ. ಈ ದುಕೂಲಕ್ಕೆ ಕಿಸ್ವಾ ಎಂದು ಹೆಸರು. ಇದು ಈಜಿಪ್ಟ್ ದೇಶದಲ್ಲಿ ಸಿದ್ಧವಾಗುವುದು. ಪ್ರತಿವರ್ಷವೂ ಕಾಬಾವಿಗೆ ಹೊಸ ದುಕೂಲ ಬರುತ್ತದೆ. ಹಿಂದಿನ ವರ್ಷದ ಕಿಸ್ವಾವನ್ನು ಕತ್ತರಿಸಿ ಯಾತ್ರಿಕರಿಗೆ ವಿಕ್ರಯಿಸಲಾಗುವುದು. ಮಸೀದಿಯೊಳಗೆ ಪ್ರಸಿದ್ಧವಾದ ಝೆಮ್ ಝೆಮ್ ಬಾವಿಯಿದೆ. ಬಾವಿಯ ನೀರು ಕೊಂಚ ಉಪ್ಪು. ಈ ನೀರಿಗೆ ಪವಾಡ ಶಕ್ತಿಯಿದೆಯೆಂದು ಯಾತ್ರಿಕರ ನಂಬಿಕೆ.

ಮೆಕ್ಕ ಯಾತ್ರೆಗೆ ಬರುವವರು ಬಿಳಿಯ ಬಟ್ಟೆ (ಇಹ್ರಾಮ್) ಧರಿಸಬೇಕು; ಅರಾಫತ್ ಬಯಲಿನಲ್ಲಿ ನಿಂತಿರಬೇಕು; ಮುನಾದಲ್ಲಿರುವ ಸೈತಾನನ ಪ್ರತಿಮೆಗೆ ಕಲ್ಲೆಸೆಯಬೇಕು; ಅಲ್ಲಿಂದ ಮೆಕ್ಕ ನಗರಕ್ಕೆ ತೆರಳಿ ಟಾವಫ್ (ಎಂದರೆ ಕಾಬಾವಿನ ಮಂಡಲಕ್ಕೆ ಪ್ರದಕ್ಷಿಣೆ ಹಾಕುವ) ವಿಧಿಯನ್ನೂ ಸಾಯ್ (ಎಂದರೆ ಸಾಫಾದಿಂದ ಮಾರ್ವಾವರೆಗೆ ಓಡುವ) ವಿಧಿಯನ್ನು ನೆರವೇರಿಸಬೇಕು; ಕೊನೆಗೆ ಮುಖಕ್ಷೌರ ಮಾಡಿಕೊಂಡು ತಲೆಗೂದಲು ಕತ್ತರಿಸಬೇಕು.

ನೇಜ್ದ್ ರಾಜ ಇಬನ್ ಸಾವೂದ್ ಮೆಕ್ಕ ನಗರವನ್ನು ಹಿಡಿದ (1924). ಅಂದಿನಿಂದ ಯಾತ್ರಿಕರು ನಿರ್ಭಯವಾಗಿ ಸಂಚರಿಸಲು ಸಾಧ್ಯವಾಗಿದೆ. ಇಲ್ಲಿ ಜನಾರೋಗ್ಯ ರಕ್ಷಣೆ ಸಮರ್ಪಕವಾಗಿದೆ. (ಜೆ.ಎಸ್.ಎಸ್.)

**ಮೆಕ್ಕಲು:** ನೀರಿನ ಹರಿವಿನಿಂದ ಉಂಟಾದ ಮರಳು, ಮಣ್ಣು ಇತ್ಯಾದಿಗಳ ಅಸಂಗತ ಶಿಲಾನಿಕ್ಷೇಪ (ಅಲ್ಯೂವಿಯಮ್). ನದಿಗಳು ಗಿರಿಶಿಖರಗಳಲ್ಲಿ ಹುಟ್ಟಿ, ಕಣಿವೆಗಳ ಮೂಲಕ ಹರಿದು ವಿಶಾಲ ಬಯಲಲ್ಲಿ ನಿಧಾನವಾಗಿ ಹರಿಯುತ್ತ ಕೊನೆಗೆ ಸರೋವರವನ್ನೋ ಕಡಲನ್ನೋ ಸೇರುತ್ತವೆ. ಶಿಲಾಕ್ಷಯದಿಂದ ನೀರಿನಲ್ಲಿ ತೇಲಿಕೊಂಡು ಬರುವ ಕಲ್ಲಿನ ಹುಡಿ (ರಾಕ್ ಡೆಬ್ರಿಸ್) ನೀರಿನ ವೇಗ ಇಲ್ಲವೆ ರಾಶಿ ಕಡಿಮೆ ಆದಾಗ ಅಲ್ಲಲ್ಲೇ ನಿಕ್ಷೇಪಗೊಳ್ಳುತ್ತದೆ. ಕಣಿವೆಯ ಮೇಲುಗಡೆ ಹೊಳೆಯ ನೀರಿನಲ್ಲಿ ಕೊಚ್ಚಿಕೊಂಡು ಬಂದ ದಪ್ಪದಪ್ಪ ಕಲ್ಲು, ಮರಳು, ಮಣ್ಣು, ಬೀಸಣಿಗೆಯ ಇಲ್ಲವೆ ಶಂಕುವಿನ ಆಕಾರದಲ್ಲಿ ಒಂದೆಡೆ ಶೇಖರವಾಗುತ್ತದೆ. ಇದಕ್ಕೆ ಮೆಕ್ಕಲು ಬೀಸಣಿಗೆ (ಅಲ್ಯೂವಿಯಲ್ ಫ್ಯಾನ್) ಅಥವಾ ಶಂಕು (ಕೋನ್) ಎಂದು ಹೆಸರು. ಮೆಕ್ಕಲು ಶಿಲೆಯಂತೆ ಗಟ್ಟಿಯಾದಾಗ ಅದನ್ನು ಹಳೆಯ ಮೆಕ್ಕಲು (ಓಲ್ಡ್ ಅಲ್ಯೂವಿಯಲ್) ಎಂದು ಕರೆಯುವುದಿದೆ. ಪ್ರಾಚೀನ ಪ್ರವಾಹದಿಂದ ಉಂಟಾದ ನಿಕ್ಷೇಪಗಳು ಅಷ್ಟೇನೂ ಎತ್ತರದವಾಗಿರುವುದಿಲ್ಲ; ಕಣಿವೆ ಬಾಯ ಬಳಿ ಕಡಿದಾಗಿರುತ್ತವೆ. ಪ್ರವಾಹಕಾಲದಲ್ಲಿ ನದಿಯ ವೇಗ ಅತ್ಯಧಿಕ. ಅದು ಹೊತ್ತುಕೊಂಡು ಬರುವ ವಸ್ತುವಿನ ಪ್ರಮಾಣವೂ ಅತ್ಯಧಿಕ. ಉದಾಹರಣೆಗೆ ಚೀನದ ಹ್ವೊಯಾಂಗ್ ಪೋ ನದಿ ರಭಸದಿಂದ ಹರಿಯುವಾಗ ಬೇಸಗೆಯಲ್ಲಿ ಒಯ್ಯುವ ಮೆಕ್ಕಲಿನ ಪ್ರಮಾಣ ಸಾಮಾನ್ಯವಾಗಿ ಅದು ಹೊತ್ತು ತರುವ ಪ್ರಮಾಣದ 400ಪಟ್ಟು ಹೆಚ್ಚಾಗಿರುತ್ತದೆ. ಉತ್ತರ ಭಾರತದಲ್ಲಿ ಹರಿಯುವ ಗಂಗಾನದಿ ಮಳೆಗಾಲದಲ್ಲಿ ಕಡಲಿಗೆ ಸಾಗಿಸುವ ಮೆಕ್ಕಲಿನ ಪ್ರಮಾಣವಾದರೂ ಉಳಿದ ಕಾಲದಲ್ಲಿ ಒಯ್ಯುವ ಹೊರೆಯ 24ಪಟ್ಟು ಇರುತ್ತದೆ. ಉತ್ತರ ಅಮೆರಿಕದ ಮಿಸಿಸಿಪಿ ನದಿ ಪ್ರತಿಯೊಂದು ನಿಮಿಷಕ್ಕೂ 10 ಲಕ್ಷ ಟನ್ ನೀರನ್ನೂ 800 ಟನ್ ಮಣ್ಣನ್ನೂ 200 ಟನ್ ದ್ರವ್ಯಲವಣಗಳನ್ನೂ ಕಡಲಿಗೆ ಸುರಿಯುತ್ತದೆ. ಪ್ರಪಂಚದ ನದಿಗಳೆಲ್ಲ ವರ್ಷಂಪ್ರತಿ ಸಾಗರಗಳಿಗೆ ಸೇರಿಸುವ ಈ ಮೊತ್ತ ಸು. $1529 \times 10^7$ ಘ.ಮೀ ಗಳು ಎಂಬುದು ಒಂದು ಅಂದಾಜು.

ಮೆಕ್ಕಲ್ಲುಳ್ಳ ಬೀಸಣಿಗೆ ಆಕೃತಿ ಪ್ರದೇಶ

ಇವೆಲ್ಲವೂ ಶಿಲಾಕ್ಷಯದಿಂದಲೇ ಬಂದವು. ನದಿಯ ನೀರು ಮುಂದಕ್ಕೆ ಹರಿಯುವಾಗ ಅದು ತನ್ನ ಪಾತ್ರದ ಆಳವನ್ನೂ ಅಗಲವನ್ನೂ ಹಿಗ್ಗಿಸುತ್ತ ಹೋಗುತ್ತದೆ; ನೆಲದ ಅಡಿಯನ್ನು ಕೊರೆಯುತ್ತದೆ, ದಡಗಳನ್ನು ಸವೆಸುತ್ತದೆ. ಪ್ರವಾಹಕಾಲದಲ್ಲಿ ಹೊಳೆಗಳು ತಮ್ಮ ದಡಗಳ ಮೇಲೆ ಎರಡೂ ಕಡೆಗಳ ಬಯಲಲ್ಲಿ ವಿಸ್ತಾರಕ್ಕೆ ಫಲವತ್ತಾದ ಮೆಕ್ಕಲುಮಣ್ಣನ್ನು ಹರಡುತ್ತವೆ. ನದಿಯ ನೀರು ಹಿಂದೆ ಸರಿದಾಗ ಉಳಿಯುವ ಈ ಬಯಲಿಗೆ ಪ್ರವಾಹ ಮೈದಾನ (ಫ್ಲಡ್ ಪ್ಲೇನ್) ಎಂದು ಹೆಸರು. ಪರಂಬು ಎಂಬ ಹೆಸರೂ ಇದೆ. ಉತ್ತರ ಭಾರತದಲ್ಲಿರುವ ಸಿಂಧೂ ಗಂಗಾ ಬ್ರಹ್ಮಪುತ್ರನದಿಗಳು ಸು. 10–15 ದ.ಲ. ವರ್ಷಗಳಿಂದ ಹಿಮಾಲಯ

ಪರ್ವತದ ಶಿಲೆಗಳನ್ನು ಸವೆಸುತ್ತ ಬಂದು ಶೇಖರಿಸಿದ ಮೆಕ್ಕಲು ಮಣ್ಣಿನ ರಾಶಿಯೇ ಗಂಗಾ ಸಿಂಧೂ ನದಿಗಳ ಬಯಲು ಎನಿಸಿದೆ. ಪ್ರಪಂಚದ ಅತ್ಯಂತ ಹುಲುಸಾದ ಭೂಭಾಗಗಳ ಪೈಕಿ ಇದೂ ಒಂದು. ಉತ್ತರ ಹಿಮಾಲಯಪರ್ವತ ಮತ್ತು ದಕ್ಷಿಣದ ಪರ್ಯಾಯದ್ವೀಪದ ಮಧ್ಯ ಭಾಗಗಳು ನಿಧಾನವಾಗಿ ತಗ್ಗುತ್ತ ಇರುವ ಭೂಭಾಗಗಳ ಪೈಕಿ ಸೇರಿವೆ. ಇಲ್ಲೆಲ್ಲ ಸಾವಿರಾರು ಮೀಟರುಗಳ ಎತ್ತರದವರೆಗೆ ಮೆಕ್ಕಲು ಮಣ್ಣು ಸಂಗ್ರಹಗೊಂಡಿದೆ. ಇಲ್ಲಿಯ ನೆಲ ಇನ್ನೂ ಪತ್ತೆ ಆಗಿಲ್ಲ. ಆರ್.ಡಿ. ಓಲ್ಡ್‌ಹ್ಯಾಮ್ (1917) ಎಂಬ ಭೂವಿಜ್ಞಾನಿ ಇಲ್ಲಿಯ ನೆಲದ ಆಳ 304–457 ಮೀ ಎಂದು ಅಂದಾಜು ಮಾಡಿದ್ದ. ಕೋಲ್ಕತ ನಗರದ ಸಮೀಪ ಒಂದೆಡೆ 491.33 ಮೀ ಆಳದವರೆಗೆ ಕೊವೆ ಬಿದ್ದಿತ್ತು (1927); ಮುಂದೆ 380.06 ಮೀ ಆಳದವರೆಗೆ ಕೊವೆ ಬಿದ್ದಿತ್ತು (1938). ಇ.ಎ. ಗ್ಲೆನ್ನೀ ಎಂಬ ವಿಜ್ಞಾನಿ ಇಲ್ಲಿಯ ಮೆಕ್ಕಲು ನಿಕ್ಷೇಪದ ನೆಲದ ಆಳ ಸು. 1981 ಮೀ ಎಂದು ಅಂದಾಜು ಮಾಡಿದ್ದಾನೆ. ಮರಳು ಮಣ್ಣುಗಳ ಪದರಗಳೊಡನೆ ಮೆಕ್ಕಲಿನಲ್ಲಿ ಸಸ್ಯರಾಶಿ ಹಾಗೂ ಕಂಕರೆ (ಅಶುದ್ಧವಾದ ಸುಣ್ಣಕಲ್ಲು) ಪದರಗಳು ಪರ್ಯಾಯವಾಗಿ ಕಾಣಸಿಗುತ್ತವೆ. ಹೊಳೆಯ ನೀರಿನಲ್ಲಿ ತೇಲಿಕೊಂಡೊ ಕೊಚ್ಚಿಕೊಂಡೊ ಬಂದ ಜಲ್ಲಿಕಲ್ಲುಗಳೂ ಮರಳಿನ ಕಣಗಳೂ ಪರಸ್ಪರ ಸಂಘರ್ಷಿಸಿ ದುಂಡನೆಯ ಇಲ್ಲವೆ ಮೊಟ್ಟೆಯ ಆಕಾರ ಪಡೆಯುತ್ತವೆ. ಮರುಭೂಮಿಗಳಲ್ಲಿ ಗಾಳಿ ಬೀಸುವುದರಿಂದ ಬಂದು ಶೇಖರಗೊಳ್ಳುವ ಮರಳಿನ ಕಣಗಳು ಮತ್ತಷ್ಟು ದುಂಡಾಗಿರುತ್ತವೆ. ಅಲ್ಲಿ ಸಿಡಿಲಿನಿಂದ ಕೂಡಿದ ಮಳೆಯಾಗುವುದು ಅಪೂರ್ವ. ಹಾಗೇನಾದರೂ ಆದಾಗ ಉಂಟಾಗುವ ನೀರಿನ ಪ್ರವಾಹದ ವೇಗ ಬಯಲುಸೀಮೆಯಲ್ಲಿ ಸಾಗುವಾಗ ತಗ್ಗುತ್ತದೆ. ಹೀಗಾಗಿ ಮರುಭೂಮಿಯ ಕಣಗಳು ಬಯಲುನೆಲದಲ್ಲಿ ಮೆಕ್ಕಲಾಗಿ ನಿಕ್ಷೇಪಿಸುತ್ತವೆ.

ಮೆಕ್ಕಲು ನಿಕ್ಷೇಪಗಳು: ಮೆಕ್ಕಲಿನೊಂದಿಗೆ ಕೂಡಿಕೊಂಡು ಉಂಟಾಗಿರುವ ಭಾರ ಖನಿಜಕಣ ಸಂಗ್ರಹಣೆ (ಪ್ಲೇಸರ್ ಡಿಪಾಸಿಟ್ಸ್), ಭೂಮಿಯ ಮೇಲಿನ ಶಿಲಾಶೈಥಿಲ್ಯದಿಂದ ಚೂರಾಗಿರುವ ಕಣಗಳನ್ನು ಗಾಳಿಯಾಗಲೀ ಹರಿವ ನೀರಾಗಲೀ ಮುಂದಕ್ಕೆ ಸಾಗಿಸುವಾಗ ಹಗುರಕಣಗಳು ಮುಂದುಮುಂದಕ್ಕೆ ತೇಲಿಕೊಂಡು ಹೋಗುವಾಗ ಭಾರಖನಿಜಗಳು ಹರಿವಿಗೆ ತಡೆಯುಂಟಾದೆಡೆ ಶೇಖರವಾಗುತ್ತಿರುತ್ತವೆ. ಇವನ್ನು ಹೆಚ್ಚಾಗಿ ನದಿಮೆಕ್ಕಲಿನೊಂದಿಗೆ ಕಾಣುವುದೇ ಸಾಮಾನ್ಯ. ಎಲ್ಲ ಖನಿಜಗಳೂ ಈ ಕ್ರಮದಲ್ಲಿ ಶೇಖರಣೆಯಾಗುವುದು ಸಾಧ್ಯವಿಲ್ಲ. ಹೀಗಾಗಲೂ ಅವುಗಳಿಗೆ ಮುಖ್ಯವಾಗಿ ಮೂರು ಗುಣಗಳಿರಬೇಕು: ಅಧಿಕ ಸಾಪೇಕ್ಷ ಸಾಂದ್ರತೆ, ರಾಸಾಯನಿಕ ಸಂಯೋಜನೆಯಲ್ಲಿ ಕೆಡದಿರುವುದು ಮತ್ತು ಬಾಳಿಕೆ. ಈ ವಿಶೇಷಗುಣಗಳು ಚಿನ್ನ, ಪ್ಲಾಟಿನಮ್, ತವರ, ಮ್ಯಾಗ್ನಟೈಟ್, ಕ್ರೋಮೈಟ್, ಇಲ್ಮನೈಟ್, ತಾಮ್ರ, ರತ್ನಗಳು ಮೊದಲಾದ ಖನಿಜಗಳಲ್ಲಿ ಇರುವುದು ಕಂಡು ಬಂದಿವೆ.

ಮೆಕ್ಕಲು ನಿಕ್ಷೇಪಗಳ ರೂಪಣೆಯಾದರೂ ಮನುಷ್ಯನಿಗೆ ಪ್ರಕೃತಿದತ್ತವಾಗಿ ಬಂದಿರುವ ಭಾಗ್ಯ. ನೂರಾರು ಟನ್ನುಗಳಷ್ಟು ಶಿಲಾಕಣಗಳಲ್ಲಿ ಬೆರೆತುಹೋಗಿರುವ ಹಲವಾರು ಟನ್ನುಗಳಷ್ಟು ಖನಿಜಗಳು ಬೇರ್ಪಟ್ಟು ಒಂದೆಡೆ ಶೇಖರಗೊಳ್ಳುತ್ತವೆ. ಈ ಕಾರ್ಯದಲ್ಲಿ ಖನಿಜಕಣಗಳ ಸಾಪೇಕ್ಷ ಸಾಂದ್ರತೆಯಲ್ಲಿಯ ವ್ಯತ್ಯಾಸ, ಕಣಗಳ ಗಾತ್ರ ಮತ್ತು ಆಕಾರ, ನೀರಿನ ಹರಿವಿನ ವೇಗ ಮೊದಲಾದ ಅಂಶಗಳು ಪ್ರಧಾನ ಪಾತ್ರ ವಹಿಸುತ್ತವೆ. ಅಧಿಕ ಸಾಂದ್ರತೆಯ ಖನಿಜಗಳು ಭಾರವಾಗಿರುವುದರಿಂದ ಅದೇ ಗಾತ್ರದ ಆದರೆ ಕಡಿಮೆ ಸಾಪೇಕ್ಷಸಾಂದ್ರತೆಯ ಖನಿಜಕಣಗಳಿಗಿಂತಲೂ ಬಹುಬೇಗ ನೀರಿನಲ್ಲಿ ಮುಳುಗುತ್ತವೆ. ಈ ತೆರನ ವ್ಯತ್ಯಾಸಗಳು ವಾಯುವಿಗಿಂತಲೂ ನೀರಿನಲ್ಲಿ ಹೆಚ್ಚು ನಿರ್ದಿಷ್ಟವಾಗಿ ಕಂಡುಬರುತ್ತವೆ. ಖನಿಜಗಳ ಮುಳುಗುವಿಕೆಯಾದರೂ ಅವುಗಳ ಹೊರಮೈಯ ಆಕಾರವನ್ನು ಅವಲಂಬಿಸಿದೆ. ಇದೇ ಕಾರಣಕ್ಕಾಗಿ ದುಂಡನೆಯ ಕಣ ಚಪ್ಪಟೆಯಾಗಿರುವ ಪದರುಕಣಗಳಿಗಿಂತಲೂ ಬಹುಬೇಗ ನೀರಿನಲ್ಲಿ ಮುಳುಗುತ್ತದೆ.

ನೀರಿನ ಹರಿವಿನ ವೇಗ, ಅದರಲ್ಲಿಯ ಬದಲಾವಣೆಗಳೂ ಇಲ್ಲಿ ಮುಖ್ಯ. ನೀರಿನ ಹರಿವಿಗೆ ಹಠಾತ್ತನೆ ತಡೆಯುಂಟಾದಾಗ, ಅದರೊಡನಿರುವ ಖನಿಜ ಕಣಗಳು ಅದರಲ್ಲೂ ಭಾರವಾದವು ಶೀಘ್ರಗತಿಯಲ್ಲಿ ಕೆಳಕ್ಕೆ ತಂಗಿ ಶೇಖರಗೊಳ್ಳುತ್ತವೆ. ಉತ್ತಮದರ್ಜೆಯ ಖನಿಜಕಣನಿಕ್ಷೇಪ ಉಂಟಾಗಲು ಇದರ ಜೊತೆಗೆ ಅಧಿಕ ಪ್ರಮಾಣದಲ್ಲಿ ಖನಿಜಗಳ ಸರಬರಾಜು ಅಗತ್ಯ. ಜೊತೆಗೆ ಅಧಿಕ ಪ್ರಮಾಣದ ಶಿಥಿಲೀಕರಣ ಮತ್ತು ಆ ಪ್ರದೇಶದ ನೀರು ವೇಗವಾಗಿ ಹರಿಯಲು ಅನುಕೂಲಕರ ಸನ್ನಿವೇಶವೂ ಇರಬೇಕು. ಹೀಗಾದಲ್ಲಿ ಮಾತ್ರ ಉತ್ತಮ ದರ್ಜೆಯ ಮೆಕ್ಕಲು ನಿಕ್ಷೇಪಗಳು ಉಂಟಾಗಲು ಸಾಧ್ಯ.

ಬೆಟ್ಟದ ಇಳಿಜಾರಿನಲ್ಲಿ ಶಿಥಿಲೀಕರಣ ಉಂಟಾದಲ್ಲಿ ಭಾರಖನಿಜಕಣಗಳು ಹಗುರ ಶಿಲಾಕಣಗಳಿಗಿಂತಲೂ ನಿಧಾನವಾಗಿ ಇಳಿಜಾರಿನಲ್ಲಿ ಮುಂದೂಡಲ್ಪಡುತ್ತವೆ. ಇದರಿಂದ ಕ್ರಮೇಣ ಭಾರಕಣಗಳು ಒಂದೆಡೆ ಶೇಖರವಾಗಿ ಮೆಕ್ಕಲು ನಿಕ್ಷೇಪ ರೂಪುಗೊಳ್ಳುತ್ತದೆ. ಇವುಗಳ ಉತ್ಪತ್ತಿಯಲ್ಲಿ ನೀರಿಗಿಂತ ಗಾಳಿಯೇ ಹೆಚ್ಚಿನ ಪಾತ್ರ ವಹಿಸುತ್ತದೆ. ನದಿದಡದಲ್ಲಿ ಉಂಟಾದ ನಿಕ್ಷೇಪಗಳಿಗೆ ನದಿಮೆಕ್ಕಲು ನಿಕ್ಷೇಪಗಳೆಂದೂ ಸಮುದ್ರ ತೀರ ಪ್ರದೇಶಗಳಲ್ಲಿ ಉಂಟಾಗುವ ನಿಕ್ಷೇಪಗಳಿಗೆ ಕರೆನಿಕ್ಷೇಪಗಳೆಂದೂ ಹೆಸರು. ಮರುಭೂಮಿಗಳಲ್ಲೂ ಈ ಬಗೆಯ ಖನಿಜ ಶೇಖರಣೆಯನ್ನು ಕಾಣಬಹುದು. ಇಂಥಲ್ಲಿ ಗಾಳಿಯದೇ ಪ್ರಧಾನ ಪಾತ್ರವಾಗಿರುವುದರಿಂದ ಇವಕ್ಕೆ ವಾಯುನಿಕ್ಷೇಪಗಳೆಂದು ಹೆಸರು.

ಮೆಕ್ಕಲು ನಿಕ್ಷೇಪಗಳು ಬೆಟ್ಟದ ಇಳಿಜಾರಿನಲ್ಲಿ ಕಂಡುಬರುತ್ತವೆ. ನದಿ ಅಥವಾ ಕರೆಯ ನಿಕ್ಷೇಪಗಳ ಬೆಳವಣಿಗೆಯಲ್ಲಿ ಇದು ಮೊದಲ ಹಂತ. ಇವುಗಳಲ್ಲಿ ಭಾರ ಖನಿಜಗಳು ಅಡಿಯಲ್ಲಿದ್ದು ಹಗುರಖನಿಜಗಳಿಂದ ಮುಚ್ಚಿಹೋಗುತ್ತವೆ. ಕ್ರಮೇಣ ಇಳಿಜಾರಿನಲ್ಲಿ ಪ್ರವಹಿಸುವ ಮಳೆಯ ನೀರಿನಿಂದಲೋ ಬೀಸುವ ಗಾಳಿಯಿಂದಲೋ ಮೇಲಿನ ಖನಿಜಗಳು ಕೊಚ್ಚಿಹೋಗಿ ಒಳಗೆ ಹುದುಗಿರುವ ಖನಿಜನಿಕ್ಷೇಪಗಳು ಕಾಣಿಸಿಕೊಳ್ಳುತ್ತವೆ. ಈ ಬಗೆಯ ನಿಕ್ಷೇಪಗಳಲ್ಲಿ ಮುಖ್ಯವಾದವೆಂದರೆ ಚಿನ್ನ ಮತ್ತು ತವರ. ಎಷ್ಟೋ ವೇಳೆ ಮ್ಯಾಂಗನೀಸ್, ಟಂಗಸ್ಟನ್, ಕಯೊನೈಟ್, ಬೆರೈಟ್ ಮತ್ತು ರತ್ನಗಳೂ ಕಂಡುಬರುವುದುಂಟು.

ಆಸ್ಟ್ರೇಲಿಯ, ನ್ಯೂಜಿಲೆಂಡ್, ದಕ್ಷಿಣ ಅಮೆರಿಕ ಮತ್ತು ಉತ್ತರ ಅಮೆರಿಕದ ಕ್ಯಾಲಿಫೋರ್ನಿಯ ಪ್ರದೇಶಗಳಲ್ಲಿ ಉತ್ತಮ ದರ್ಜೆಯ ಮೆಕ್ಕಲುಚಿನ್ನದ ನಿಕ್ಷೇಪಗಳು ದೊರೆತಿವೆ. ದಕ್ಷಿಣ ಅಮೆರಿಕದ ಗಯಾನದಲ್ಲೂ (ಬ್ರಿಟಿಷ್ ಗಿಯಾನ) ಇವು ಕಂಡುಬಂದಿವೆ. ಮಲೇಷ್ಯ, ಇಂಡೋನೇಷ್ಯ, ಮಯನ್ಮಾರ್, ಸಯಾಮ್, ನೈಜೀರಿಯ ಮತ್ತು ಆಸ್ಟ್ರೇಲಿಯಗಳಲ್ಲಿ ಈ ವರ್ಗದ ಮ್ಯಾಂಗನೀಸ್ ನಿಕ್ಷೇಪಗಳೂ ಭಾರತದ ಹಲವೆಡೆ ವಿಲ್‌ಫ್ರಮೈಟ್, ಕಯೊನೈಟ್ ಮತ್ತು ಬರೈಟ್ ಖನಿಜನಿಕ್ಷೇಪಗಳೂ ಇವೆ.

ಮೆಕ್ಕಲು ನಿಕ್ಷೇಪಗಳಲ್ಲಿ ನದಿಮೆಕ್ಕಲು ನಿಕ್ಷೇಪಗಳು ಬಲು ಮುಖ್ಯ. ಚಿನ್ನ, ತವರ, ಪ್ಲಾಟಿನಮ್ ಮತ್ತು ರತ್ನಗಳು ಅಧಿಕ ಪ್ರಮಾಣದಲ್ಲಿ ಈ ನಿಕ್ಷೇಪಗಳಲ್ಲಿ ದೊರೆತಿವೆ. ಖನಿಜವನ್ನು ಒಪ್ಪಮಾಡುವುದೂ ಅಷ್ಟುಕಷ್ಟತರವಲ್ಲ. ಬಹುಶಃ ಗಣಿಗಾರಿಕೆಯ ಪ್ರಾರಂಭ ಈ ಬಗೆಯ ನಿಕ್ಷೇಪಗಳಲ್ಲೇ ಆಗಿರಬಹುದು.

ಚಿನ್ನದ ನಿಕ್ಷೇಪಗಳಲ್ಲಿ ಬಲು ಸೂಕ್ಷ್ಮಕಣಗಳಿಂದ ದೊಡ್ಡ ದೊಡ್ಡ ಗಾತ್ರಗಳವರೆಗಿನ ಚಿನ್ನ ಲಭಿಸುತ್ತದೆ. ಸೂಕ್ಷ್ಮಕಣಗಳಿಗೆ ವರ್ಣಗಳು (ಕಲರ್ಸ್) ಎಂದು ಹೆಸರು. ಗಟ್ಟಿಗಳು ಸಾಮಾನ್ಯವಾಗಿ ಬಟಾಣಿ ಇಲ್ಲವೆ ನೆಲಗಡಲೆ ಕಾಳಿನ ತೂಕದವಿರುತ್ತವೆ. ಇಲ್ಲಿಯ ತನಕ ದೊರೆತ ಗಟ್ಟಿಗಳಲ್ಲೆಲ್ಲ ಆಸ್ಟ್ರೇಲಿಯದಲ್ಲಿ ದೊರೆತ ಬಟಾರ್ಟ್ ಎಂಬ ಚಿನ್ನದ ಗಟ್ಟಿಯೇ ಗಾತ್ರದಲ್ಲಿ ಅತ್ಯಂತ ದೊಡ್ಡದು ಎನಿಸಿದೆ. ಭಾರತದ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಪಲವನಹಳ್ಳಿಯಲ್ಲಿ ದೊರೆತ ಗಟ್ಟಿಯೊಂದರಲ್ಲಿ ಸು. 1.253 ಕೆಜಿಯಷ್ಟು ಚಿನ್ನವಿದ್ದುದಾಗಿ ಹೇಳಲಾಗಿದೆ. ಇಂಥ ನಿಕ್ಷೇಪಗಳು ನದಿಯ ತೀರಗಳಲ್ಲಿದ್ದು ಇವು ಆಕಾರದಲ್ಲಿ ಸಾಮಾನ್ಯವಾಗಿ ಚಪ್ಪಟೆ ತಟ್ಟೆಯಂತೆ ಇರುತ್ತವೆ.

ಪ್ರಪಂಚದಲ್ಲಿ ಉತ್ಪತ್ತಿಯಾಗುವ ಪ್ಲಾಟಿನಮ್ ಲೋಹದ ಹೆಚ್ಚಿನ ಭಾಗ ನದಿ ಮತ್ತು ಸಮುದ್ರತೀರದ ಮೆಕ್ಕಲು ನಿಕ್ಷೇಪಗಳಲ್ಲಿ ದೊರಕುತ್ತದೆ. ಅನೇಕ ಸ್ಥಳಗಳಲ್ಲಿ ಪ್ಲಾಟಿನಮ್ ಚಿನ್ನದೊಡನೆ ನಿಕಟ ಸಂಬಂಧವನ್ನು ತೋರ್ಪಡಿಸುತ್ತದೆ. ಈ ಲೋಹ ಸಹ ದೂಳಿನಂತಿರುವ ನವುರಾದ ಸೂಕ್ಷ್ಮರೇಕುಗಳಾಗಿಯೊ ಕೆಲವೊಮ್ಮೆ ಸಣ್ಣಸಣ್ಣ ಗಟ್ಟಿಗಳಾಗಿಯೊ ದೊರೆಯುತ್ತದೆ. ಪ್ರಪಂಚದ ಪ್ಲಾಟಿನಮ್ ಉತ್ಪನ್ನದ ಹೆಚ್ಚಿನ ಭಾಗ ರಷ್ಯದ ಯೂರಲ್ ಪ್ರಾಂತ್ಯದಲ್ಲಿಯ ಮೆಕ್ಕಲು ನಿಕ್ಷೇಪಗಳಿಂದ ಬರುತ್ತದೆ. ಇಲ್ಲಿಯ ನದಿಗಳು ಪೇಲಿಯೊಜೋಯಿಕ್ ಕಲ್ಪದ ಪೆರಿಡೊಟೈಟ್ ಎಂಬ ಪ್ಲಾಟಿನಮ್ ಖನಿಜಯುಕ್ತ ಬೇಸಿಕ್ ಶಿಲೆಗಳ ಮೂಲಕ ಹರಿದುಬರುತ್ತದೆ. ಅಮೆರಿಕದ ಕೊಲಂಬಿಯ, ಆಸ್ಟ್ರೇಲಿಯದ ಟಾಸ್ಮೇನಿಯ, ನ್ಯೂಸೌತ್‌ವೇಲ್ಸ್, ಆಫ್ರಿಕದ ಇಥಿಯೋಪಿಯ, ಜಪಾನ್, ಪನಾಮ ಮತ್ತು ಪಪುವ ದೇಶಗಳ ಮೆಕ್ಕಲು ನಿಕ್ಷೇಪಗಳಲ್ಲೂ ಪ್ಲಾಟಿನಮ್ ದೊರೆಯುತ್ತದೆ.

ವಜ್ರ ಮೊದಲಾದ ರತ್ನಗಳು ಬಹುತೇಕ ಮೆಕ್ಕಲು ನಿಕ್ಷೇಪಗಳಲ್ಲಿ ಕಂಡುಬರುತ್ತದೆ. ಸು. 1871 ರಲ್ಲಿ ದಕ್ಷಿಣ ಆಫ್ರಿಕದ ಪ್ರಸಿದ್ಧ ಕಿಂಬರ್ಲಿ ವಜ್ರದ ಗಣಿಗಳಲ್ಲಿ ಕೆಲಸ ಪ್ರಾರಂಭವಾಯಿತು. ಅದಕ್ಕೂ ಮುನ್ನ ಭಾರತ ಮತ್ತು ಬ್ರೆಜಿಲಿನ ಮೆಕ್ಕಲು ನಿಕ್ಷೇಪಗಳು ಇತಿಹಾಸ ಪ್ರಸಿದ್ಧ ವಜ್ರಗಳಿಗೆ ಮುಖ್ಯ ಆಕರಗಳಾಗಿದ್ದುವು. ಕಾಶ್ಮೀರ, ಶ್ರೀಲಂಕ, ಅಮೆರಿಕದ ಉತ್ತರ ಕಾರೊಲೀನ ಮತ್ತು ಜಾರ್ಜಿಯ ಪ್ರಾಂತಗಳ ಮೆಕ್ಕಲುಗಳಲ್ಲಿ ಕೆಂಪು, ಮಾಣಿಕ್ಯ, ನೀಲಮಣಿ, ಪಚ್ಚೆ ಮೊದಲಾದ ರತ್ನಗಳು ಸಿಗುತ್ತವೆ.

ಸಮುದ್ರ ನಿಕ್ಷೇಪಗಳು: ಇವು ಕಡಲಕರೆಯ ನಿಕ್ಷೇಪಗಳು. ಇವುಗಳ ಬೆಳವಣಿಗೆಯಲ್ಲಿ ಸಮುದ್ರದ ಅಲೆಗಳದೇ ಮುಖ್ಯಪಾತ್ರ. ಜೊತೆಗೆ ತೀರಪ್ರದೇಶದ ಅಲೆಗಳೂ ಈ ಬಗೆಯ ನಿಕ್ಷೇಪಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯುತ್ತವೆ. ಹೀಗಾದಾಗ ಹಗುರ ಕಣಗಳನ್ನು ಅಲೆಗಳು ಬಲು ವೇಗದಿಂದ ಹೊತ್ತು ಬಹುದೂರಕ್ಕೆ ಸಾಗಿಸುತ್ತವೆ. ಭಾರ ಖನಿಜಕಣಗಳು ಯಾವುವಾದರೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಶೇಖರಗೊಳ್ಳುತ್ತ ಹೋಗುತ್ತವೆ. ಅಲೆಗಳು ರಭಸದಿಂದ ಕರೆಯನ್ನು ಕೊಚ್ಚಿದಾಗಲೂ ಹಗುರಕಣಗಳು ಬೇರ್ಪಟ್ಟು ದೂರಕ್ಕೆ ಒಯ್ಯಲ್ಪಡುತ್ತವೆ. ಇಂಥ ನಿಕ್ಷೇಪಗಳಲ್ಲಿ ದೊರೆಯುವ ಮುಖ್ಯ ಖನಿಜಗಳು ಎಂದರೆ ಚಿನ್ನ, ಇಲ್ಮನೈಟ್, ರೂಟೈಲ್, ವಜ್ರ, ಮೋನಜೈಟ್, ಕ್ವಾರ್ಟ್ಸ್, ಗಾರ್ನೆಟ್ ಇತ್ಯಾದಿ.

ಸಮುದ್ರತೀರದ ಮೆಕ್ಕಲು ನಿಕ್ಷೇಪಗಳ ಖನಿಜಗಳಾದರೊ ಸಮುದ್ರವನ್ನು ಸೇರುವ ನದಿಮೆಕ್ಕಲು, ಕರಾವಳಿಯ ತೀರಪ್ರದೇಶಗಳ ಶಿಲೆಗಳ ಶಿಥಿಲೀಕರಣ ಇವುಗಳಿಂದ ಉಂಟಾದವು. ಇವುಗಳ ಪೈಕಿ ಅಲಾಸ್ಕ ಪ್ರಾಂತ್ಯದ ನೊವೆ ಎಂಬಲ್ಲಿಯ ಚಿನ್ನದ

ನಿಕ್ಷೇಪಗಳು ಸುಪ್ರಸಿದ್ಧ. ಭಾರತದ ಕೇರಳದ ಕರಾವಳಿಯಲ್ಲಿಯ ಈ ತೆರನ ನಿಕ್ಷೇಪಗಳು ಇಲ್ಮನೈಟ್, ರೂಟೈಲ್, ಮೋನಜೈಟ್, ಗಾರ್ನೆಟ್ ಮುಂತಾದ ಖನಿಜಗಳು ಹೇರಳವಾಗಿ ದೊರೆಯುತ್ತವೆ. ಕೇರಳದ ಕರಾವಳಿಯ ನಿಕ್ಷೇಪಗಳಲ್ಲಿ ಲಾಭದಾಯಕ ರೀತಿಯಲ್ಲಿ ಗಣಿಕೆಲಸ ನಡೆಯುತ್ತಿದೆ. ಶ್ರೀಲಂಕ, ಬ್ರೆಜಿಲ್, ಆರ್ಜೆಂಟೀನ, ಅಮೆರಿಕ, ಫ್ಲಾರಿಡ್, ಕ್ಯಾಲಿಫೋರ್ನಿಯ ಕರಾವಳಿಗಳಲ್ಲೂ ಇಂಥ ನಿಕ್ಷೇಪಗಳಿವೆ. ದಕ್ಷಿಣ ಆಫ್ರಿಕದ ನಾಮಕ್ವಾಲ್ಯಾಂಡ್ ಪ್ರದೇಶದ ಸಮುದ್ರತೀರದ ಮೆಕ್ಕಲಿನಲ್ಲಿ 1928 ರಲ್ಲಿ 50 ಮಿ ಡಾಲರ್ ಬೆಲೆ ಬಾಳುವ ಖನಿಜಸಂಪತ್ತು ದೊರೆತಿತ್ತು. (ಬಿ.ವಿ.ಜೆ.)

**ಮೆಕ್ಕೆ ಜೋಳದ ಪ್ರದೇಶ :** ಮುಸುಕಿನ ಜೋಳ ಉತ್ಪಾದನ ವಲಯ (ಕಾರ್ನ್‌ಬೆಲ್ಟ್). ಹತ್ತೊಂಬತ್ತನೆಯ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯ ಜೊತೆಗೆ ಆರ್ಥಿಕ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಕಾರಣವಾದ ಅನೇಕ ಅಂಶಗಳಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯೂ ಸಹ ಒಂದಾಗಿತ್ತು. ಕೇಂದ್ರ ಅಕ್ಷಾಂಶದ ಪ್ರಸ್ಥಭೂಮಿ ಮತ್ತು ಬಯಲು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದ ಈ ಆಹಾರದ ಬೆಳೆಗಳನ್ನು ಇಂದು ವಿಸ್ತಾರವಾದ ಭೂಪ್ರದೇಶದಲ್ಲಿ ವಾಣಿಜ್ಯದ ದೃಷ್ಟಿಯಿಂದ ಯಂತ್ರೋಪಕರಣಗಳ ಸಹಾಯದಿಂದ ಬೆಳೆಯಲಾಗುತ್ತಿದೆ. ಮಧ್ಯ ಅಮೆರಿಕದ ಜನರಿಗೆ ಈಗಲೂ ಇದು ಪ್ರಮುಖ ಆಹಾರಧಾನ್ಯ. ಕ್ರಿಸ್ಟೋಫರ್ ಕೊಲಂಬಸ್ ಇದನ್ನು ಯುರೋಪು ದೇಶಗಳಿಗೆ ಪರಿಚಯಿಸಿದ.

ವಾಣಿಜ್ಯದ ದೃಷ್ಟಿಯಿಂದ ಈ ಆಹಾರ ಧಾನ್ಯದ ಉತ್ಪಾದನೆ ಕೆಲವೇ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ. ಉದಾ: ಅಮೆರಿಕ, ಚೀನ, ಕೆನಡ, ಬ್ರೆಜಿಲ್, ಅರ್ಜೆಂಟೀನ ಮತ್ತು ಆಸ್ಟ್ರೇಲಿಯ ಹಾಗೂ ಯುರೋಪಿನ ವಿಶಾಲ ಮೈದಾನಗಳು ಜೊತೆಗೆ ಕಜಕೀಸ್ತಾನದ ಉತ್ತರದಲ್ಲಿ ಹರಿಯುವ ಓಲ್ಗಾ ನದಿಯ ಪೂರ್ವಭಾಗ, ಪಶ್ಚಿಮ ಸೈಬೀರಿಯದ ದಕ್ಷಿಣಭಾಗ, ಪಂಪಾಸ್ ಪ್ರದೇಶ ಪ್ರಪಂಚದಲ್ಲೇ ಮೆಕ್ಕೆಜೋಳದ ಉತ್ಪಾದನೆ ಹೆಸರಾಗಿವೆ. ಈ ಮೇಲಿನ ಎಲ್ಲಾ ಪ್ರದೇಶಗಳು ಸಮಶೀತೋಷ್ಣ ವಲಯದಲ್ಲಿ ಕಂಡುಬರುವ ಪ್ರದೇಶಗಳಾಗಿವೆ.

ವಾಣಿಜ್ಯ ದೃಷ್ಟಿಯಲ್ಲಿ ಆಹಾರ ಧಾನ್ಯಗಳ ಬೇಸಾಯದಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳೆಂದರೆ, ಭೂ ಹಿಡುವಳಿಗಳ ಗಾತ್ರ ವಿಸ್ತಾರವಾಗಿದ್ದು ಅದು 240 ರಿಂದ 1600 ಹೆ. ಗಳಷ್ಟಿರುತ್ತದೆ. ಮೆಕ್ಕೆಜೋಳ ಪ್ರಮುಖ ಬೆಳೆಯಾಗಿದ್ದು ಸಂಪೂರ್ಣ ಯಾಂತ್ರಿಕೃತ ಹಾಗೂ ವೈಜ್ಞಾನಿಕ ಮಾದರಿಯ ಬೇಸಾಯವಾಗಿರುತ್ತದೆ. ಇಲ್ಲಿ ನೀರಾವರಿಗೆ ಹೆಚ್ಚಿನ ಮಹತ್ವವಿರುವುದಿಲ್ಲ. (ಎಸ್.ಎಚ್.)

**ಮೆಕ್ಸಿಕೊ:** ಮಧ್ಯ ಅಮೆರಿಕದ ಒಂದು ಸಂಯುಕ್ತ ಗಣರಾಜ್ಯ. ಇದರ ಉತ್ತರದಲ್ಲಿ ಅಮೆರಿಕ. ಪಶ್ಚಿಮ ಮತ್ತು ದಕ್ಷಿಣದಲ್ಲಿ ಪೆಸಿಫಿಕ್ ಸಾಗರ, ಆಗ್ನೇಯದಲ್ಲಿ ಗ್ವಾಟೆಮಾಲ, ಬಲೀಜ್ ಹಾಗು ಕೆರಿಬಿಯನ್ ಸಮುದ್ರ ಮತ್ತು ಈಶಾನ್ಯದಲ್ಲಿ ಮೆಕ್ಸಿಕೊಕೊಲ್ಲಿ ಇವೆ. ವಿಸ್ತೀರ್ಣ 1,964,382 ಚ.ಕಿಮೀ. ಜನಸಂಖ್ಯೆ ಸು. 106202900 (2005). ಜನಸಾಂದ್ರತೆ ಚ.ಕಿಮೀ.ಗೆ 55. ಅಧಿಕೃತ ಭಾಷೆ ಸ್ಪ್ಯಾನಿಷ್. ರಾಜಧಾನಿ ಮೆಕ್ಸಿಕೊ ನಗರ. ಜನಸಂಖ್ಯೆ 13096686.

ಮೇಲ್ಮೈ ಲಕ್ಷಣಗಳು: ಮೆಕ್ಸಿಕೊ ಹೆಚ್ಚು ಮರುಭೂಮಿ ಪ್ರದೇಶವಾಗಿದ್ದು ಇಲ್ಲಿ ಯಾವ ದೊಡ್ಡ ನದಿಗಳೂ ಇಲ್ಲ. ದೇಶದ ಬಹುಪಾಲು ಪ್ರದೇಶದಲ್ಲಿ ಜಲಾಭಾವವಿದೆ. ಮೆಕ್ಸಿಕೊ ದೇಶ ಉತ್ತರ ಭಾಗದಲ್ಲಿ ವಿಶಾಲವಾಗಿದ್ದು 2,100 ಕಿಮೀ ಅಗಲವಿದೆ. ದಕ್ಷಿಣಕ್ಕೆ ಬರುತ್ತಿದ್ದಂತೆ ಕ್ರಮೇಣ ಅದರ ವಿಸ್ತೀರ್ಣ ಕಡಿಮೆಯಾಗಿ ದಕ್ಷಿಣ ತುದಿಯಲ್ಲಿಯ ಭೂಕಂಠ ಕೇವಲ 225 ಕಿಮೀ ಅಗಲವಿದೆ. ಮೆಕ್ಸಿಕೊದ ವೈಶಿಷ್ಟ್ಯವೆಂದರೆ ಬಾಜಾ ಕ್ಯಾಲಿಫೋರ್ನಿಯ ಪರ್ಯಾಯ ದ್ವೀಪ. 40ರಿಂದ 241 ಕಿಮೀ ಅಗಲವಿದ್ದು ಮೆಕ್ಸಿಕೊದ ವಾಯವ್ಯ ತುದಿಯಿಂದ ಆಗ್ನೇಯದೆಡೆಗೆ 1,223.60 ಕಿಮೀ ದೂರದವರೆಗೆ ಪೆಸಿಫಿಕ್ ತೀರಕ್ಕೆ ಸಮಾಂತರವಾಗಿ ಇದೆ. ಇದನ್ನು ಮುಖ್ಯ ಭೂಭಾಗದಿಂದ ಕ್ಯಾಲಿಫೋರ್ನಿಯ ಕೊಲ್ಲಿ ಪ್ರತ್ಯೇಕಿಸಿದೆ. ಬಾಜಾ ಕ್ಯಾಲಿಫೋರ್ನಿಯ ಪರ್ಯಾಯದ್ವೀಪದಿಂದ 483 ಕಿಮೀ ದಕ್ಷಿಣಕ್ಕೆ ಹಾಗೂ ಮ್ಯಾನ್‌ಜನಿಲೋ ಬಂದರಿನ 724 ಕಿಮೀ ಪಶ್ಚಿಮಕ್ಕೆ ಅಗ್ನಿ ಪರ್ವತಗಳಿಂದ ಕೂಡಿದ ರಿವಿಲ್ಲಗಗೀಡೊ ದ್ವೀಪಸ್ತೋಮವಿದೆ.

ಮೆಕ್ಸಿಕೊವನ್ನು ಸೀಯರಮಾಡ್ರೀ ಪರ್ವತಸ್ತೋಮಗಳು, ಮಧ್ಯಭಾಗದ ಪ್ರಸ್ಥಭೂಮಿ, ಚಿಯಾಪಾಸ್ ಮೇಲ್ನಾಡು, ಯೊಕಟಾನ್ ಪರ್ಯಾಯದ್ವೀಪ, ತೀರದ ಬಯಲುಪ್ರದೇಶ ಮತ್ತು ಬಾಜಾ ಕ್ಯಾಲಿಫೋರ್ನಿಯ ಎಂದು ಆರು ಭಾಗಗಳಾಗಿ ವಿಂಗಡಿಸಬಹುದು.

ಸೀಯರ ಮಾಡ್ರೀ ಪರ್ವತಸ್ತೋಮ: ಮೆಕ್ಸಿಕೊದ $^{2}/_{3}$ ಭಾಗವನ್ನು ಆವರಿಸಿಕೊಂಡಿದೆ. V ಆಕಾರದಲ್ಲಿರುವ ಈ ಪರ್ವತಸ್ತೋಮದ ಕೆಳಭಾಗ ದಕ್ಷಿಣ ಮೆಕ್ಸಿಕೋದಲ್ಲಿದ್ದು ಎರಡು ಬಾಹುಗಳು ಉತ್ತರದೆಡೆಗೆ ಅಮೆರಿಕದ ಗಡಿಯವರೆಗೂ ಹಬ್ಬಿಕೊಂಡಿವೆ. ಪೂರ್ವಬಾಹು ಮೆಕ್ಸಿಕೊ ಕೊಲ್ಲಿಯ ತೀರಕ್ಕೆ ಸಮಾಂತರವಾಗಿದ್ದು ಇದನ್ನು ಸೀಯರಮಾಡ್ರೀ ಓರಿಯಂಟಲ್ ಎಂದು ಕರೆಯುತ್ತಾರೆ. ಪಶ್ಚಿಮದ ಬಾಹು ಪೆಸಿಫಿಕ್ ತೀರ ಹಾಗೂ ಒಳನಾಡಿನ ಮಧ್ಯೆ ಅಡ್ಡಗಟ್ಟೆಯಾಗಿದ್ದು ಇದಕ್ಕೆ ಸೀಯರ ಮಾಡ್ರೀ ಆಕ್ಸಿಡೆಂಟಲ್ ಎಂದು ಹೆಸರು. ಇದು ಸೀಯರ ಮಾಡ್ರೀ ಓರಿಯಂಟಲ್‌ಗಿಂತ ಹೆಚ್ಚು ಪ್ರದೇಶವನ್ನು ಆವರಿಸಿಕೊಂಡಿದ್ದು ಏರುಪೇರುಗಳಿಂದ ಕೂಡಿದೆ. ಪಶ್ಚಿಮ ಬಾಹುವಿನ ಸರಾಸರಿ ಎತ್ತರ 3,047.56 ಮೀ. ಅರಿಜ಼ೋನ ಹಾಗೂ ನ್ಯೂ ಮೆಕ್ಸಿಕೊಗಳ ಒಳಭಾಗದವರೆಗೂ ಚಾಚಿಕೊಂಡಿದೆ. V ಆಕಾರದ ತಳಭಾಗಕ್ಕೆ ಸೀಯರ ಮಾಡ್ರೀ ದೆಲ್ ಸುರ್ ಎಂಬ ಹೆಸರಿದ್ದು ಇದು ಮೆಕ್ಸಿಕೊ ನಗರ ಹಾಗೂ ಟವಾಂಟ್‌ಪೆಕ್ ಭೂಕಂಠದ ಮಧ್ಯಭಾಗದಲ್ಲಿದೆ.




ಮಧ್ಯಭಾಗದ ಪ್ರಸ್ಥಭೂಮಿ: ಇದು ದೇಶದ $\frac{1}{6}$ ಭಾಗವನ್ನು ಆವರಿಸಿದ್ದು ಸೀಯರ ಮಾಡ್ರೀ ಓರಿಯಂಟಲ್ ಹಾಗೂ ಸೀಯರ ಮಾಡ್ರೀ ಆಕ್ಸಿಡೆಂಟಲ್‌ಗಳ ನಡುವೆ ಇದೆ. ಈ ಪ್ರಸ್ಥಭೂಮಿ ಅಮೆರಿಕದ ಕಡೆಯ ಗಡಿಭಾಗದಲ್ಲಿ 1097 ಮೀ. ಎತ್ತರದಿಂದ ಪ್ರಾರಂಭವಾಗಿ ಮೆಕ್ಸಿಕೋ ನಗರದ ಸಮೀಪದಲ್ಲಿ ಸು. 2,34,384 ಮೀಗೂ ಹೆಚ್ಚು ಎತ್ತರವಿದೆ. ಇದರ ದಕ್ಷಿಣ ಭಾಗ ಫಲವತ್ತಾಗಿದ್ದು ಇಲ್ಲಿ ಮೆಕ್ಸಿಕೊದ ಒಟ್ಟು ಜನಸಂಖ್ಯೆಯ $\frac{2}{3}$ ಭಾಗದಷ್ಟು ಜನ ವಾಸಿಸುತ್ತಾರೆ. ಉತ್ತರಭಾಗ ಮರುಭೂಮಿ ಪ್ರದೇಶವಾಗಿದ್ದು ಜನವಸತಿ ಹೆಚ್ಚಾಗಿಲ್ಲ. ಪ್ರಸ್ಥಭೂಮಿಯ ಮಧ್ಯಭಾಗದ ದಕ್ಷಿಣ ತುದಿಯಲ್ಲಿ ವಿಶಾಲವಾದ ಹಾಗೂ ಫಲವತ್ತಾದ ಮೆಕ್ಸಿಕೊ ಕಣಿವೆಯಿದ್ದು ಇಲ್ಲಿಯೇ ಮೆಕ್ಸಿಕೊ ನಗರವಿದೆ.

ಮೆಕ್ಸಿಕೊ ಕೊಲ್ಲಿಯ ದಕ್ಷಿಣಕ್ಕೆ ಅನೇಕ ಅಗ್ನಿಪರ್ವತಗಳಿದ್ದು ಇದರಲ್ಲಿ ಕೆಲವು ಜೀವಂತವಾಗಿವೆ. ಈ ದೇಶದ ಅತಿ ಹೆಚ್ಚು ಎತ್ತರದ ಶಿಖರ ಆರ್‌ಜ಼ಬ (6232 ಮೀ). ಈ ಪರ್ವತ ಶಂಕುವಿನಾಕೃತಿಯಲ್ಲಿದ್ದು ಉತ್ತರ ಅಮೆರಿಕದ ಅತ್ಯಂತ ಎತ್ತರದ ಮೂರನೆಯ ಪರ್ವತವಾಗಿದೆ.

ಚಿಯಾಪಾಸ್ ಮೇಲ್ನಾಡು: ಟವಾಂಟ್‌ಪೆಕ್ ಭೂಕಂಠದ ಪೂರ್ವಕ್ಕೆ ಹಾಗೂ ಗ್ವಾಟಮಾಲದೊಂದಿಗೆ ಗಡಿಯ ಪಶ್ಚಿಮಕ್ಕೆ ಇರುವ ಪರ್ವತ ಪ್ರದೇಶ. ಕಡಿದಾದ ಹಾಗೂ ದುರ್ಗಮವಾದ ಈ ಬೆಟ್ಟ ಸು. 4,890 ಮೀ ಎತ್ತರವಿದೆ. ಫಲವತ್ತಾದ ಚಿಯಾಪಾಸ್ ಕಣಿವೆಯಲ್ಲಿ ವ್ಯವಸಾಯವುಂಟು.

ಯೊಕಟಾನ್ ಪರ್ಯಾಯ ದ್ವೀಪ: ಮೆಕ್ಸಿಕೊದ ಆಗ್ನೇಯ ತುದಿಯಲ್ಲಿರುವ ಈ ಭಾಗ ಮೆಕ್ಸಿಕೊ ಕೊಲ್ಲಿ ಮತ್ತು ಕೆರಿಬಿಯನ್ ಸಮುದ್ರಗಳ ನಡುವೆ ಇದೆ. ಇದರ $\frac{2}{3}$ ಭಾಗ ಮೆಕ್ಸಿಕೊಗೆ ಸೇರಿದ್ದು, ಇದರ ಆಗ್ನೇಯಭಾಗ ಬಲೀಜ್ ಮತ್ತು ಗ್ವಾಟಮಾಲಗಳಿಗೆ ಸೇರಿದೆ. ಇದರ ಬಹುಭಾಗ ದಟ್ಟವಾದ ಉಷ್ಣವಲಯದ ಕಾಡುಗಳಿಂದ ಕೂಡಿದೆ. ಇದು ಮಾಯಾ ಇಂಡಿಯನ್ನರ ವಾಸಸ್ಥಾನವಾಗಿದ್ದು ಸಾವಿರಾರು ವರ್ಷಗಳ ಹಿಂದೆ ಇವರ ಪೂರ್ವಜರು ದೊಡ್ಡ ನಗರಗಳನ್ನು ಇಲ್ಲಿ ಸ್ಥಾಪಿಸಿದ್ದರು.

ತೀರದ ಮೈದಾನ ಪ್ರದೇಶ: ಇದು ಪೂರ್ವದಲ್ಲಿ ಸೀಯರ ಮಾಡ್ರೀ ಓರಿಯಂಟಲ್ ಹಾಗೂ ಮೆಕ್ಸಿಕೊ ಕೊಲ್ಲಿಗಳ ನಡುವೆ ಮತ್ತು ಪಶ್ಚಿಮದಲ್ಲಿ ಸೀಯರ ಮಾಡ್ರೀ ಆಕ್ಸಿಡೆಂಟಲ್ ಹಾಗೂ ಪೆಸಿಫಿಕ್ ಸಾಗರಗಳ ನಡುವೆ ಇರುವ ಪ್ರದೇಶ. ಇದು ಕೆಲವು ಕಡೆ ಕೆಲವು ಕಿಮೀ ಮಾತ್ರ ಅಗಲವಿದ್ದು ಮತ್ತೆ ಕೆಲವೆಡೆ 322 ಕಿಮೀ ಅಗಲವಿದೆ. ಪೆಸಿಫಿಕ್ ತೀರದ ಬಯಲು ಪ್ರದೇಶದ ಬಹುಪಾಲು ಮರುಭೂಮಿ. ಮೆಕ್ಸಿಕೊ ಕೊಲ್ಲಿಯ ತೀರದ ಬಯಲು ಪ್ರದೇಶ ದಟ್ಟವಾದ ಕಾಡುಗಳಿಂದಲೂ ಜೌಗು ಪ್ರದೇಶದಿಂದಲೂ ಕೂಡಿದೆ. ಇಲ್ಲಿ ಕ್ರಿಮಿಕೀಟಗಳೂ ಸಾಂಕ್ರಾಮಿಕ ರೋಗಗಳೂ ಹೆಚ್ಚು. ಸರ್ಕಾರ ಈ ರೋಗಗಳನ್ನು ನಿವಾರಿಸಿ ಫಲವತ್ತಾದ ಭೂ ಪ್ರದೇಶಗಳಲ್ಲಿ ಜನವಸತಿ ಕಲ್ಪಿಸಲು ಪ್ರಯತ್ನಿಸುತ್ತಿದೆ.

ಬಾಜಾ ಕ್ಯಾಲಿಫೋರ್ನಿಯ: ಈ ಪ್ರದೇಶ ಮೆಕ್ಸಿಕೊದ ವಾಯವ್ಯ ತುದಿಯಿಂದ ದಕ್ಷಿಣಕ್ಕೆ ಸು. 1304 ಕಿಮೀ ಉದ್ದಕ್ಕೆ ಚಾಚಿಕೊಂಡಿರುವ ಇಕ್ಕಟ್ಟಾದ ಪ್ರದೇಶ. ಇದರ ಪೂರ್ವಭಾಗದಲ್ಲಿ ಕಡಿದಾದ ಬೆಟ್ಟಗಳಿವೆ. ಪಶ್ಚಿಮಭಾಗದಲ್ಲಿ ಪೆಸಿಫಿಕ್ ಸಾಗರವೂ ಪೂರ್ವಕ್ಕೆ ಕ್ಯಾಲಿಫೋರ್ನಿಯ ಕೊಲ್ಲಿಯೂ ಇವೆ.

ನದಿ ಸರೋವರಗಳು: ಇಲ್ಲಿ ಹರಿಯುವ ನದಿಗಳ ಉದ್ದ ಕಡಿಮೆಯಿದ್ದು ರಭಸದಿಂದ ಹರಿಯುತ್ತವೆ. ಆಳ ಹೆಚ್ಚಾಗಿಲ್ಲದಿರುವುದರಿಂದ ನೌಕಾಯಾನಕ್ಕೆ ಯೋಗ್ಯವಿಲ್ಲ. ಆದರೆ ಈ ನದಿಗಳು ಜಲವಿದ್ಯುತ್ ಉತ್ಪಾದನೆಗೆ ಹಾಗೂ ನೀರಾವರಿಗೆ ಬಹಳ ಸಹಾಯಕವಾಗಿವೆ. ರೀಯೊ ಗ್ರಾಂಡ ನದಿ ಅಮೆರಿಕದ ದಕ್ಷಿಣ ಗಡಿಯ $\frac{2}{3}$ ಭಾಗ ಉದ್ದಕ್ಕೂ ಹರಿಯುತ್ತದೆ. ಪೂರ್ವ ಮೆಕ್ಸಿಕೊದ ಇತರ ಪ್ರಮುಖ ನದಿಗಳೆಂದರೆ ಪಾನ್‌ಕೋ, ಕೋಆಟ್‌ಸಕೋ ಆಲ್‌ಕಾಸ್, ಗ್ರೀಹಾಲ್ವ ಮತ್ತು ಊಸಮಸಿಂಟ.

ಸೀಯರ ಮಾಡ್ರೀ ಅಕ್ಸಿಡೆಂಟಲ್‌ನಿಂದ 25 ಕ್ಕೂ ಹೆಚ್ಚು ನದಿಗಳು ಕಡಿದಾದ ಇಳಿಜಾರಿನಲ್ಲಿ ಹರಿದು ಪೆಸಿಫಿಕ್ ಸಾಗರ ಹಾಗೂ ಕ್ಯಾಲಿಫೋರ್ನಿಯ ಕೊಲ್ಲಿಯನ್ನು ಸೇರುತ್ತವೆ. ಆಳವಾದ ಬರಾಂಕ ಡೆಲ್‌ಕೊಬ್ರೆ ಕಮರಿಯ ಮೂಲಕ ಯುರಿಕ್ ನದಿ ಹರಿಯುತ್ತದೆ. ಭೂವಿಜ್ಞಾನಿಗಳ ಅಭಿಪ್ರಾಯದಂತೆ ಇದು ಆರಿಜ಼ೋನದ ಗ್ರಾಂಡ್ ಕ್ಯಾನ್ಯನ್‌ಗಿಂತ ಅಗಲವೂ ಆಳವೂ ಆಗಿದೆ. ಬಾಲ್ಸಾಸ್ ಹಾಗೂ ಲೆರ್ಮಾ ನದಿಗಳು ಮೆಕ್ಸಿಕೋ ನಗರ ಹಾಗೂ ಪೆಸಿಫಿಕ್ ಸಾಗರಗಳ ನಡುವೆ ಹರಿಯುತ್ತವೆ.

ಚಾಪಾಲಾ ಸರೋವರ ಮೆಕ್ಸಿಕೊದ ಪಶ್ಚಿಮ ಮಧ್ಯಭಾಗದಲ್ಲಿ ಸು. 1080 ಚ.ಕಿಮೀ ವಿಸ್ತಾರವಾದ ಪ್ರದೇಶದಲ್ಲಿದ್ದು ದೇಶದ ಅತ್ಯಂತ ದೊಡ್ಡ ಸರೋವರವಾಗಿದೆ. ಇಲ್ಲಿಯ ಪಾಟ್ಸ್‌ಕ್ವಾರೋ ಉತ್ತರ ಅಮೆರಿಕದ ಅತ್ಯಂತ ಸುಂದರ ಸರೋವರಗಳಲ್ಲೊಂದು. ಇದು ಸಮುದ್ರಮಟ್ಟಕ್ಕೆ 20.401 ಮೀ ಎತ್ತರದಲ್ಲಿ ಮೆಕ್ಸಿಕೊ ನಗರದ ಪಶ್ಚಿಮದಲ್ಲಿ ಪರ್ವತಗಳ ನಡುವೆ ಇದೆ. ಮೆಕ್ಸಿಕೊ ನಗರದ ಸುತ್ತಮುತ್ತ ಅನೇಕ ಸಣ್ಣ ಸರೋವರಗಳಿವೆ. ದೇಶದ ಇತರ ದೊಡ್ಡ ಸರೋವರಗಳೆಂದರೆ ಕ್ವಿಟ್‌ಸೇವೊ ಹಾಗೂ ಮ್ಯಾಗ್ಡಲೀನ.

ದೇಶದ ಅನೇಕ ಕಡೆ ಇರುವ ಬಿಸಿನೀರಿನ ಚಿಲುಮೆಗಳ ನೀರು ಆರೋಗ್ಯದಾಯಕವೆನ್ನುವರು. ಮೆಕ್ಸಿಕೊ ನಗರದ ಆಗ್ನೇಯ ಭಾಗದಲ್ಲಿರುವ ಟೇವಕಾನ್ ಚಿಲುಮೆಗಳ ನೀರನ್ನು ಬಾಟಲ್‌ಗಳಲ್ಲಿ ತುಂಬಿ ಹೊರದೇಶಾದ್ಯಂತ ಮಾರಲಾಗುತ್ತದೆ. ಆಗ್ವಸ್ಕಾಲ್‌ಯನ್‌ಟಾಸ್ ನಗರಕ್ಕೆ ಆ ಹೆಸರು ಬರಲು ಕಾರಣ ಅಲ್ಲಿಯ ಬಿಸಿನೀರಿನ ಚಿಲುಮೆಗಳು. ಸ್ಪಾನಿಷ್ ಭಾಷೆಯಲ್ಲಿ ಆಗ್ವಸ್ಕಾಲ್‌ಯನ್‌ಟಾಸ್ ಎಂದರೆ ಬಿಸಿನೀರು ಎಂದರ್ಥ.

ವಾಯುಗುಣ: ಕರ್ಕಾಟಕ ಸಂಕ್ರಾಂತಿ ವೃತ್ತ ಮೆಕ್ಸಿಕೊದ ಮಧ್ಯಭಾಗದಲ್ಲಿ ಹಾದು ಹೋಗುತ್ತದೆ. ಇದರಿಂದ ದೇಶದ ಉತ್ತರ, ಪೂರ್ವ ಹಾಗೂ ಮಧ್ಯ ಭಾಗಗಳ ಮೇಲೆ ಧ್ರುವದ ಕಡೆಯಿಂದ ತಂಪುಗಾಳಿ ಬೀಸಿ ಉಷ್ಣತೆ ಕಡಿಮೆಯಾಗುತ್ತದೆ; ಮಳೆ ಹೆಚ್ಚಾಗಿ ಬೀಳುತ್ತದೆ. ಉತ್ತರಭಾಗ ಮರುಭೂಮಿ ಪ್ರದೇಶವಾಗಿದ್ದು ಮಳೆ ಕಡಿಮೆ ಬೀಳುವುದರಿಂದ ಬೇಸಾಯಕ್ಕೆ ಅನುಕೂಲವಿಲ್ಲ. ಶುಷ್ಕ ಹವೆಯ ಕಾರಣ ಉತ್ತರ ಭಾಗದ ಹವಾಗುಣದಲ್ಲಿ ತೀವ್ರ ವೈಪರೀತ್ಯ ಕಂಡು ಬರುತ್ತದೆ. ದಕ್ಷಿಣ ಭಾಗದಲ್ಲಿ ತೇವಾಂಶದಿಂದ ಕೂಡಿದ ಹವೆಯಿದ್ದು ಮೆಕ್ಸಿಕೊ ಕೊಲ್ಲಿಯ ತೀರಪ್ರದೇಶದಲ್ಲಿ ವಾತಾವರಣ ಹೆಚ್ಚು ಉಷ್ಣತೆ ಹಾಗೂ ತೇವಾಂಶದಿಂದ ಕೂಡಿದ್ದು ಇಲ್ಲಿ ಮೇ – ನವೆಂಬರ್ ತನಕ ಮಳೆ ಬೀಳುತ್ತದೆ.

ಸಸ್ಯ ಹಾಗೂ ಪ್ರಾಣಿ ಸಂಪತ್ತು: ಇಲ್ಲಿಯ ಸಸ್ಯಸಂಪತ್ತು ಬಹು ವೈವಿಧ್ಯದಿಂದ ಕೂಡಿದೆ. ಇಲ್ಲಿ 12,000ಕ್ಕೂ ಹೆಚ್ಚು ಜಾತಿಯ ಸಸ್ಯಗಳಿದ್ದು ಅದರಲ್ಲಿ $\frac{1}{6}$ ಭಾಗ ಸ್ಥಳೀಯವಾದವು. ದೇಶದ ಉತ್ತರ, ವಾಯವ್ಯ ಹಾಗೂ ಮಧ್ಯಭಾಗಗಳಲ್ಲಿ ನೀರಿನ ಆಸರೆ ಕಡಿಮೆಯಿರುವ ಕಾರಣ ಪಾಪಾಸುಕಳ್ಳಿ, ಭೂತಾಳೆ, ಮರಗೆಣಸು ಹಾಗೂ ಕುರುಚಲು ಗಿಡಗಳು ಬೆಳೆಯುತ್ತವೆ. ದಕ್ಷಿಣ ಹಾಗೂ ಪೂರ್ವ ಭಾಗಗಳಲ್ಲಿ ಯೂಕಟಾನ್ ಮತ್ತು ಪಶ್ಚಿಮ ತೀರಗಳಲ್ಲಿ ಉಷ್ಣವಲಯದ ಕಾಡುಗಳನ್ನೂ ಸವನ್ನಾ ಹುಲ್ಲುಗಾವಲುಗಳನ್ನೂ ಕಾಣಬಹುದು. ಮಧ್ಯಭಾಗದ ಪರ್ವತಗಳು ಹಾಗೂ ಸೀಯರ್ ಮಾಡ್ರೀ ಪರ್ವತಗಳಲ್ಲಿ ಸು. 1522 ರಿಂದ 3962 ಮೀ ಎತ್ತರದವರೆಗೆ ಶಂಕುವಿನಾಕಾರದ ಕಾಯಿಬಿಡುವ ಮರಗಳು ಹಾಗೂ ಜರ್ಮನ್ ಓಕ್ ಮರಗಳು ಹೇರಳವಾಗಿವೆ. ತೀರಪ್ರದೇಶಗಳಲ್ಲಿ ಹಾಗೂ ಜೌಗುಪ್ರದೇಶದಲ್ಲಿ ಮ್ಯಾಂಗ್ರೋವ್ ಮರಗಳಿವೆ. ಮೆಕ್ಸಿಕೊದ ಕಾಡುಗಳಲ್ಲಿ ಓಕ್, ಹಾರ್ನ್‌ಬೀಮ್, ಲಿಂಡೆನ್, ಪೈನ್, ಫರ್ ಮೊದಲಾದ ಗಟ್ಟಿಮರಗಳು ಬೆಳೆಯುತ್ತವೆ.

ಇಲ್ಲಿ ದಕ್ಷಿಣ ಹಾಗೂ ಉತ್ತರ ಅಮೆರಿಕಗಳಲ್ಲಿರುವ ಪ್ರಾಣಿವರ್ಗಗಳು ಕಂಡು ಬರುತ್ತವೆ. ಮರುಭೂಮಿ ಪ್ರದೇಶಗಳಲ್ಲಿ ದಂಶಕ ಜಾತಿಗೆ ಸೇರಿದ ಪ್ರಾಣಿಗಳಿವೆ. ಪರ್ವತ ಪ್ರದೇಶಗಳಲ್ಲಿ ಕಪ್ಪುಕರಡಿ, ರಾತ್ರಿಸಂಚಾರಿ ಮಾಂಸಾಹಾರಿ ರಾಕೂನ್, ಬೆಕ್ಕಿನಜಾತಿಯ ಲಿಂಕ್ಸ್, ಪ್ಯೂಮ ಎಂಬ ಹಿಂಸ್ರ ಮೃಗ, ಕೆಂಪು ಹುಲಿ ಮೊದಲಾದ ಪ್ರಾಣಿವರ್ಗಗಳು ಹಾಗೂ ಸವನ್ನಾ ಪ್ರದೇಶದಲ್ಲಿ ಜಿಂಕೆ, ಆ್ಯಂಟ್ ಈಟರ್ ಹಾಗೂ ಮುಳ್ಳು ಹಂದಿಗಳನ್ನು ಕಾಣಬಹುದು. ದಕ್ಷಿಣ ಭಾಗದ ಉಷ್ಣವಲಯದ ಕಾಡುಗಳಲ್ಲಿ ಕೋತಿ, ಟೇಪರ್ ಹಾಗೂ ಜಾಗ್ವಾರ್‌ಗಳಿವೆ. ಇಲ್ಲಿಯ ಪ್ರಮುಖ ರಾಷ್ಟ್ರೀಯ ಉದ್ಯಾನಗಳು ಕ್ಯಾನನ್ ಡೆಲ್ ರಿಯೋ ಬ್ಲಾಂಕೊ, ಕೆಂಬ್ರೆಸ್ ಡಿ ಮಾಂಟೆರೆ. ಲಾ ಮಾಲಿಂಚೆ, ನೆವಾಡೋ ಡಿ ಟೊಲುಕಾ, ಸೀಯೆರಡಿ ಸ್ಯಾನ್‌ಪೆಡ್ರೊ ಮಾರ್ಟಿರ್ ಹಾಗೂ ಪಿಕೋ ಡಿ ಟ್ಯಾನ್‌ಸಿಟಾರೊ ಮೀನು ಹಾಗೂ ಇತರ ಜಲಚರಗಳು ಕ್ಯಾಲಿಫೋರ್ನಿಯ ಕೊಲ್ಲಿ ಹಾಗೂ ಪೆಸಿಫಿಕ್ ಸಾಗರಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಜನಜೀವನ: ಸ್ಪಾನಿಷ್ ಮಾತನಾಡುವ ದೇಶಗಳ ಪೈಕಿ ಮೆಕ್ಸಿಕೊ ಪ್ರಪಂಚದಲ್ಲಿಯೇ ಅತಿ ದೊಡ್ಡ ದೇಶ. ಅಮೆರಿಕ ಖಂಡದ ಮೂರನೆಯ ಅತಿ ಹೆಚ್ಚು ಜನಸಂಖ್ಯೆಯಿರುವ ದೇಶ (ಮೊದಲನೆಯದು ಅಮೆರಿಕ, ಎರಡನೆಯದು ಬ್ರೆಜ಼ಿಲ್). ಸ್ಪ್ಯಾನಿಷ್ ಶೇ. 92ರಷ್ಟು ಜನರ ಮಾತೃ ಭಾಷೆಯಾಗಿದೆ. ಇದಲ್ಲದೆ ಇಲ್ಲಿ ಸ್ಥಳೀಯ ಭಾಷೆಯ ಐದು ಸಮುದಾಯವಿವೆ. ಅವುಗಳೆಂದರೆ ನಾವಾಟ್, ಮಾಯ, ಜಾ ಪೊಟಿಕ್, ಓಟೋಮಿ ಮತ್ತು ಮಿಸ್‌ಟೆಕ್. ಈ ಸಮುದಾಯದಲ್ಲಿ 59 ಆಡುಭಾಷೆಗಳಿವೆ.

ಇಲ್ಲಿಯ ಜನರಲ್ಲಿ ಶೇ. 92.6ರಷ್ಟು ರೋಮನ್ ಕೆಥೊಲಿಕರು. 1857ರ ರಾಜ್ಯಾಂಗದ ಪ್ರಕಾರ ಚರ್ಚನ್ನು ದೇಶದ ಆಡಳಿತದಿಂದ ಪ್ರತ್ಯೇಕಿಸಲಾಯಿತು. 1917ರ ರಾಜ್ಯಾಂಗದಲ್ಲಿ ರೋಮನ್ ಕೆಥೊಲಿಕ್ ಹಾಗೂ ಉಳಿದೆಲ್ಲ ಧರ್ಮಗಳ ಮೇಲೆ ಬಿಗಿಯಾದ ಕಟ್ಟುಪಾಡುಗಳನ್ನು ವಿಧಿಸಲಾಯಿತು. ಯಾವ ಧಾರ್ಮಿಕ ಸಂಸ್ಥೆಯೂ ಭೂಮಿಯ ಒಡೆತನವನ್ನು ಹೊಂದುವಂತಿಲ್ಲ ಹಾಗೂ ಚರ್ಚಿನ ಆಸ್ತಿಯೆಲ್ಲವೂ ದೇಶಕ್ಕೆ ಸೇರಿದ್ದು. 1920ರ ದಶಕದಲ್ಲಿ ರಾಜಕೀಯದ ಮೇಲೆ ಪುರೋಹಿತಶಾಹಿಯ ಪ್ರಭಾವವನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಂಡಿತು. ಇದರ ಫಲವಾಗಿ 1929–31ರಲ್ಲಿ ಚರ್ಚುಗಳನ್ನು ಮುಚ್ಚಲಾಗಿತ್ತು. ಅನಂತರ ಸರ್ಕಾರ ಹಾಗೂ ಚರ್ಚುಗಳ ನಡುವೆ ಒಪ್ಪಂದವಾಗಿ ಸಾರ್ವಜನಿಕ ವ್ಯವಹಾರಗಳಲ್ಲಿ ತಲೆಹಾಕದ ಚರ್ಚ್‌ಗಳೆಲ್ಲವೂ ಮುಕ್ತವಾಗಿ ಚಟುವಟಿಕೆಗಳನ್ನು ನಡೆಸಲು ಅವಕಾಶವಾಯಿತು. ದೇಶದಲ್ಲಿ ಶೇ. 3.3 ರಷ್ಟು ಪ್ರಾಟೆಸ್ಟಂಟರು ಹಾಗೂ 4.1 ರಷ್ಟು ಉಳಿದ ಮತಾವಲಂಬಿಗಳು ಇದ್ದಾರೆ (1980).

ದೇಶದ ಜನಸಂಖ್ಯೆಯ ಅರ್ಧದಷ್ಟು ಭಾಗ ಮೆಸ್ಟಿಜೋಗಳು. ಇದನ್ನು ಬಿಟ್ಟರೆ ಎರಡನೆಯ ಅತಿದೊಡ್ಡ ಪಂಗಡ ಇಂಡಿಯನ್ನರು. ಇದಲ್ಲದೆ ಇಲ್ಲಿಯೇ ಹುಟ್ಟಿದ ಯುರೋಪಿಯನ್ನರು ಹಾಗು ಸ್ಪೇನ್, ಅಮೆರಿಕ, ಚೀನ, ಫ್ರಾನ್ಸ್ ಹಾಗೂ ಗ್ವಾಟೆಮಾಲಗಳಿಂದ ವಲಸೆ ಬಂದವರಿದ್ದಾರೆ.



ಕಾರ್ಲ್‌ಬಾಡ್ ಅಂತರ್‌ಜಲಗುಹೆ

ಆರ್ಥಿಕತೆ : ಮೆಕ್ಸಿಕೊದ ಅತಿ ಪ್ರಮುಖ ಉದ್ಯಮ ಪೆಟ್ರೋಲಿಯಮ್ ಉತ್ಪಾದನೆ. ಪೆಟ್ರೋಲಿಯಮ್ ಉತ್ಪಾದನೆಯಲ್ಲಿ ಮೆಕ್ಸಿಕೊ ವಿಶ್ವದಲ್ಲಿಯೇ ಅಗ್ರಸ್ಥಾನ ಪಡೆದಿತ್ತು. (1921). ಆದರೆ 1938ರ ವೇಳೆಗೆ ಈ ಉದ್ಯಮವನ್ನು ರಾಷ್ಟ್ರೀಕರಣ ಮಾಡಿದಾಗ ಉತ್ಪಾದನೆ ತೀವ್ರಗತಿಯಲ್ಲಿ ಕೆಳಗಿಳಿಯಿತು. ತಬಾಸ್ಕೊ ಮತ್ತು ಚೆಯಾಪಾಸ್‌ಗಳಲ್ಲಿ ಬೃಹತ್‌ಪ್ರಮಾಣದ ಪೆಟ್ರೋಲಿಯಮ್ ನಿಕ್ಷೇಪಗಳು ಪತ್ತೆಯಾದಾಗ 1970ರ ದಶಕದಲ್ಲಿ ಉತ್ಪಾದನೆ ಗಮನಾರ್ಹ ಪ್ರಮಾಣದಲ್ಲಿ ಏರಿತು. 1981–84ರ ಅವಧಿಯಲ್ಲಿ ಮೆಕ್ಸಿಕೊ ಪೆಟ್ರೋಲಿಯಮ್ ಉತ್ಪಾದನೆಯಲ್ಲಿ ನಾಲ್ಕನೆಯ ದೇಶವಾಗಿತ್ತು. 1985ರಲ್ಲಿ ಮೆಕ್ಸಿಕೊದಲ್ಲಿಯ ಪೆಟ್ರೋಲಿಯಮ್ ಹಾಗೂ ನೈಸರ್ಗಿಕ ಅನಿಲದ ನಿಕ್ಷೇಪ 250,000 ಮಿ. ಬ್ಯಾರಲ್‌ಗಳಿವೆಯೆಂದು ಅಂದಾಜು ಮಾಡಲಾಗಿದ್ದು ಇದು ಪ್ರಪಂಚದ ಐದನೆಯ ಅತಿ ಹೆಚ್ಚು ನಿಕ್ಷೇಪವಿರುವ ದೇಶವಾಗಿದೆ. ಅಮೆರಿಕಕ್ಕೆ ಅತ್ಯಂತ ಹೆಚ್ಚು ತೈಲವನ್ನು ಮೆಕ್ಸಿಕೊ ರಫ್ತು ಮಾಡುತ್ತದೆ. ಈಗ ಬರ್ಮುಡೆಜ್ ಕ್ಯಾಂಟೆರೆಲ್ ಮತ್ತು ಚೀಕಾಟಪೆಕ್‌ಗಳಲ್ಲಿ ತೈಲಬಾವಿಗಳಿವೆ. ನೈಸರ್ಗಿಕ ಅನಿಲದ ಬಗ್ಗೆ ಅಮೆರಿಕದೊಂದಿಗೆ ಆಗಿರುವ ಒಪ್ಪಂದದಂತೆ ಮೆಕ್ಸಿಕೊಗೆ ವಿಪುಲವಾಗಿ ಹಣ ದೊರೆಯುತ್ತದೆ. ಕೈಗಾರಿಕೆಗಳಿಗೆ ಬೇಕಾದ ಶಕ್ತಿಯಲ್ಲಿ ಶೇ. 90 ರಷ್ಟು ಪೆಟ್ರೋಲಿಯಮ್‌ನಿಂದಲೇ ದೊರೆಯುತ್ತಿದೆ.

ಪ್ರವಾಸೋದ್ಯಮ ಮೆಕ್ಸಿಕೊದ ಎರಡನೆಯ ಅತಿಹೆಚ್ಚು ವಿದೇಶಿ ವಿನಿಮಯ ತರುವ ಉದ್ಯಮ. ಇಲ್ಲಿಗೆ ಬರುವ ಪ್ರವಾಸಿಗಳ ಪೈಕಿ ಶೇ. 88ರಷ್ಟು ಅಮೆರಿಕದವರು ಹಾಗೂ ಕೆನಡದವರು. ಇಲ್ಲಿಯ ಅಗ್ನಿ ಪರ್ವತಗಳು, ಸಮುದ್ರತೀರದ ಮನೋಹರ ಪ್ರಕೃತಿ

ದೃಶ್ಯಗಳು, ಸಿಯೆರ ನೆವಾಡ ಪ್ರಸಿದ್ಧವಾದವು. ಮಾಯ ಹಾಗೂ ಆಜ್ಟೆಕ್ ನಾಗರಿಕತೆಗಳ ಹಾಗು ಸ್ಪ್ಯಾನಿಷ್ ವಸಾಹತುಗಳ ಅವಶೇಷಗಳು ಚಾರಿತ್ರಿಕ ಹಾಗೂ ಕಲಾತ್ಮಕ ದೃಷ್ಟಿಯಿಂದ ಮಹತ್ವದ ಸ್ಥಾನ ಪಡೆದಿವೆ. ಪೆಸಿಫಿಕ್ ತೀರದ ಜಿ ವಾಟನೆ ಜೊ ಹಾಗೂ ಕೆರಿಮಿಯನ್ ತೀರದ ಕ್ಯಾನ್‍ಕನ್‍ಗಳನ್ನು ಪ್ರವಾಸ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲಾಗಿದೆ.

ಮೆಕ್ಸಿಕೊದಲ್ಲಿ ಖನಿಜ ಸಂಪತ್ತು ಅಪಾರ ಹಾಗೂ ವೈವಿಧ್ಯಮಯ, ಪ್ರಪಂಚದ ಬೆಳ್ಳಿಯ ಒಟ್ಟು ಉತ್ಪಾದನೆಯ 1/6 ಭಾಗ ಇಲ್ಲಿಯೇ ಸಿಗುತ್ತದೆ. ಫ್ಲೋರೈರ್ಡನ ಉತ್ಪಾದನೆಯಲ್ಲಿ ಇದು ಪ್ರಪಂಚದಲ್ಲಿಯೇ ಪ್ರಥಮ ಸ್ಥಾನವನ್ನೂ ಬಿಸ್ಮತ್‍ನ ಉತ್ಪಾದನೆಯಲ್ಲಿ ಮೂರನೆಯ ಸ್ಥಾನವನ್ನೂ ಪಡೆದಿದೆ. ಚವಾವಾಡ್ಯುರಾಂಗೋ ಸೊನೊರ ಕ್ವರೆಟಾರೊ ಮತ್ತು ನುಯೆವೊಲಿಯಾನ್‍ಗಳಲ್ಲಿಯ ಯುರೇನಿಯಮ್‍ನ ಒಟ್ಟು ನಿಕ್ಷೇಪ 15,000 ಟನ್ನುಗಳೆಂದು ಅಂದಾಜು ಮಾಡಲಾಗಿದೆ. ಕಲ್ಲಿದ್ದಲು ಹೇರಳವಾಗಿ ದೊರೆಯುತ್ತಿದ್ದು ಇದರ ಒಟ್ಟು ನಿಕ್ಷೇಪ 5,448 ಮಿ. ಟನ್ನುಗಳು. ಇಲ್ಲಿ ಕಬ್ಬಿಣದ ಅಪಾರ ನಿಕ್ಷೇಪವಿದೆ. ಇಲ್ಲಿಯ ಉಕ್ಕಿನ ಕೈಗಾರಿಕೆ ಲ್ಯಾಟಿನ್ ಅಮೆರಿಕದಲ್ಲಿಯೇ ಎರಡನೆಯ ಸ್ಥಾನ ಪಡೆದಿದೆ. ನೈಸರ್ಗಿಕ ಜೇನುತುಪ್ಪ ಮೆಕ್ಸಿಕೊದ ಒಂದು ಮುಖ್ಯ ರಫ್ತಿನ ವಸ್ತು.

ಮೆಕ್ಸಿಕೊದಲ್ಲಿ ಒಟ್ಟು 48 ಮಿ.ಹೆ. ಅರಣ್ಯವಿದ್ದು ಇಲ್ಲಿ ಮಹಾಗನಿ, ದೇವದಾರು, ಲಾಗ್‍ವುಡ್ ಮೊದಲಾದ ಗಟ್ಟಿಮರಗಳಿವೆ. ಇಲ್ಲಿಯ ಕಾಡುಗಳಲ್ಲಿರುವ ಸ್ಯಾಪೊಡಿಲದಿಂದ ಚ್ಯೂಯಿಂಗ್‍ಗಮ್ ತಯಾರಿಸುತ್ತಾರೆ.

ಶೇ. 80ರಷ್ಟು ಪ್ರದೇಶ ಕೃಷಿಯೋಗ್ಯವಲ್ಲದಿದ್ದರೂ ಮೆಕ್ಕೆಜೋಳ, ಗೋದಿ, ಅಕ್ಕಿ ಹಾಗೂ ಬೀನ್ಸ್ ಇವನ್ನು ಮುಖ್ಯವಾಗಿ ಬೆಳೆಯುತ್ತಾರೆ. ಇಲ್ಲಿಂದ ರಫ್ತಾಗುವ ಪ್ರಮುಖ ಉತ್ಪನ್ನಗಳು ಹತ್ತಿ, ಸಕ್ಕರೆ, ಕಾಫಿ, ಹಣ್ಣು ಮತ್ತು ತರಕಾರಿ. ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖವಾಗಿದೆ. ಅರಣ್ಯ ಹಾಗೂ ಮೀನುಗಾರಿಕೆಯಿಂದ ಶೇ. 33ರಷ್ಟು ಉದ್ಯೋಗ ದೊರಕುತ್ತದೆ. ಮೆಕ್ಸಿಕೊದ ಈಗಿನ ಆರ್ಥಿಕ ನೀತಿಯಲ್ಲಿ ಜನಸಂಖ್ಯೆಯ ಬೆಳವಣಿಗೆಗೆ ಅನುಸಾರವಾಗಿ ಕೃಷಿ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ಪಶುಪಾಲನೆಯೂ ಇಲ್ಲಿ ವ್ಯಾಪಕವಾಗಿದೆ. ಮೀನುಗಾರಿಕೆಯನ್ನು ಹೆಚ್ಚಾಗಿ ಸಹಕಾರಿ ಸಂಸ್ಥೆಗಳು ನಡೆಸುತ್ತವೆ. ಸೀಗಡಿಯನ್ನು ಅಮೆರಿಕಕ್ಕೆ ರಫ್ತು ಮಾಡುವ ಪ್ರಮುಖ ದೇಶವಾಗಿದೆ.

ಇಲ್ಲಿಯ ಪ್ರಮುಖ ಕೈಗಾರಿಕೆಗಳು ಕಬ್ಬಿಣ ಮತ್ತು ಉಕ್ಕು, ಅಲ್ಯೂಮಿನಿಯಮ್, ಗಾಜು, ಕಾಗದ, ಬಟ್ಟೆ ಇತ್ಯಾದಿ. ಕೈಗಾರಿಕೆಗಳು ಮೆಕ್ಸಿಕೊ ನಗರದಲ್ಲಿಯೇ ಹೆಚ್ಚು ಕೇಂದ್ರೀಕೃತವಾಗಿದೆ. ಮಾಂಟ ರೇ ಹಾಗೂ ಗ್ವಾಡಲಹಾರ ಪ್ರದೇಶಗಳಲ್ಲಿ ಕೈಗಾರಿಕೆಗಳಿವೆ. (ಜಿ.ಎಸ್.ಎಸ್.)

**ಮೆಗಲೊ ಪೊಲಿಸ್:** ಹಲವಾರು ನಗರಗಳು ಪರಸ್ಪರ ಸಮೀಪದಲ್ಲಿದ್ದು, ಅವುಗಳು ಬೆಳವಣಿಗೆಯನ್ನು ಹೊಂದಿ ಪರಸ್ಪರ ಹೆಣೆದುಕೊಂಡಿರುವ ಒಂದು ವ್ಯವಸ್ಥೆ. ಮೆಗಾ ಎಂದರೆ ಬೃಹತ್, ಪೊಲಿಸ್ ಎಂದರೆ ನಗರ ಎಂದರ್ಥ. ಇದನ್ನು ಜೀನ್‍ಗಾಟ್‍ಮನ್ 1961 ರಲ್ಲಿ ತನ್ನ ಮೆಗಲೊ ಪೊಲಿಸ್: ದಿ ಅರ್ಬನೈಸ್ಡ್ ನಾರ್ತ್ ಈಸ್ಟರ್ನ್ ಸೀ ಬೋರ್ಡ್ ಆಫ್ ದಿ ಯುನೈಟೆಟ್ ಸ್ಟೇಟ್ಸ್ ಎಂಬ ಗ್ರಂಥದಲ್ಲಿ ಪ್ರಚುರಪಡಿಸಿದ. ಇಂದು ಪ್ರಪಂಚದ ಕೆಲವು ಭಾಗಗಳನ್ನು ಮೆಗಲೊ ಪೊಲಿಸ್ ಎಂದೇ ಕರೆಯಲಾಗುತ್ತಿದೆ. ಅಮೆರಿಕ ಈಶಾನ್ಯ ಅಟ್ಲಾಂಟಿಕ್ ತೀರ ಹಾಗೂ ಜಪಾನಿನ ಪೂರ್ವ ತೀರಗಳು ಪ್ರಪಂಚದ ಅತಿ ಮುಖ್ಯ ಮೆಗಲೊ ಪೊಲಿಸ್‍ಗಳಾಗಿವೆ. (ಎಸ್.ಎನ್.)

**ಮೆಜೆಲಾನಿಕ್ ಮೇಘಗಳು :** ಬ್ರಹ್ಮಾಂಡೀಯ ವ್ಯವಸ್ಥೆಗೆ ಅತ್ಯಂತ ಸಮೀಪ ಇರುವ ನಾಕ್ಷತ್ರಿಕ ಮೇಘಗಳಿಂದ ಒಡಗೂಡಿದ, ದಕ್ಷಿಣ ಅರ್ಧಗೋಳಾಕಾಶದ, ಸ್ವತಂತ್ರವಾದ ಎರಡು ಬ್ರಹ್ಮಾಂಡಗಳು (ಮೆಜೆಲಾನಿಕ್ ಕ್ಲೌಡ್ಸ್). ಬ್ರಹ್ಮಾಂಡಗಳ ಸ್ಥಳೀಯ ಗುಂಪಿಗೆ (ಲೋಕಲ್ ಗ್ರೂಪ್) ಸೇರಿದೆ. ಪೋರ್ಚುಗೀಸ್ ನಾವಿಕ ಫರ್ಡಿನೆಂಡ್ ಮೆಜೆಲಾನ್ (ಸು.1480–1521) ಎಂಬುವವ ಮೊದಲಿಗೆ ವೀಕ್ಷಿಸಿದ್ದರಿಂದ ಈ ಹೆಸರು ಬಂದಿದೆ. ಇವನ್ನು ದೊಡ್ಡ ಮೆಜೆಲಾನಿಕ್ ಮೇಘ (ಲಾರ್ಜರ್ ಮೆಜೆಲಾನಿಕ್ ಕ್ಲೌಡ್–ಎಲ್‍ಎಂಸಿ) ಮತ್ತು ಚಿಕ್ಕ ಮೆಜೆಲಾನಿಕ್ ಮೇಘ (ಸ್ಮಾಲರ್ ಮೆಜೆಲಾನಿಕ್ ಕ್ಲೌಡ್–ಎಸ್‍ಎಂಸಿ) ಎಂದು ವರ್ಗೀಕರಿಸಿದೆ. ಅಮೆರಿಕದ ಖಗೋಳವಿಜ್ಞಾನಿ ಎಡ್ವಿನ್ ಪೊವೆಲ್ ಹಬ್ಬಲ್ (1889–1953) ವರ್ಗೀಕರಣದಲ್ಲಿ ಇವು ಇರ್ರೆಗ್ಯುಲರ್ ಗ್ಯಾಲಕ್ಸೀಸ್– ಎಂದರೆ ಯಾವುದೇ ಬಗೆಯ ರಚನೆಯನ್ನಾಗಲಿ ಸಮಾಂಗತೆಯನ್ನಾಗಲಿ ಪ್ರದರ್ಶಿಸಿಸುವ ಬ್ರಹ್ಮಾಂಡಗಳು. ಇದನ್ನು ಸಾಮಾನ್ಯವಾಗಿ ರಾತ್ರಿಯ ನಿರ್ಮಲ ಆಕಾಶದಲ್ಲಿ ಬರಿಯ ಕಣ್ಣಿನಿಂದಲೇ ನೋಡಬಹುದು. ಇವು ಅನುಕ್ರಮವಾಗಿ ಸು. 94,000 ಜ್ಯೋತಿರ್ವರ್ಷ ಮತ್ತು 84,000 ಜ್ಯೋತಿರ್ವರ್ಷಗಳ ದೂರದಲ್ಲಿವೆ. ಇವು ಆಕಾಶಗಂಗೆಯಿಂದ (ಗ್ಯಾಲಕ್ಸಿ) ಕೊಂಚ ಮಾತ್ರ ಹೊರಗಿವೆ. ಇವನ್ನು ನಮ್ಮ ಬ್ರಹ್ಮಾಂಡದ ಸಂಗಾತಿಗಳು ಎಂದು ಸಂಬೋಧಿಸುವುದೂ ಉಂಟು. ಇವನ್ನು ದಕ್ಷಿಣದ ಖಂಡಗಳಿಂದ ಸುಲಭವಾಗಿ ಗುರುತಿಸಬಹುದು.

ನಮ್ಮದರಂತೆಯೇ ಇರುವ ಇತರ ಬ್ರಹ್ಮಾಂಡಗಳ ಅಸ್ತಿತ್ವವನ್ನು ಅನೇಕ ಖಗೋಳ ವಿಜ್ಞಾನಿಗಳು 1930ರ ಕಡೆಯ ದಶಕದ ತನಕವೂ ಒಪ್ಪಿಕೊಂಡಿರಲಿಲ್ಲ. ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿ ಮೆಜೆಲಾನಿಕ್ ಮೇಘಗಳ ದೂರಗಳನ್ನು ಕುರಿತ ತಪಾಸಣೆಯೂ ನಡೆದಿತ್ತು. ಹಾರ್ವರ್ಡ್ ವೀಕ್ಷಣಾಲಯದಲ್ಲಿ ಕೆಲಸ ಮಾಡುತ್ತಿದ್ದ ಹೆನ್ರೀಟ ಲಿವಿಯವಿಟ್ ಎಂಬ ಖಗೋಳವೀಕ್ಷಕಿಗೆ ಒಂದು ಸುಳಿವು ದೊರೆಯಿತು (1912). ದಕ್ಷಿಣ ಅಮೆರಿಕದ ಪೆರು ರಾಷ್ಟ್ರದ ಅರೆಸಿಬೋ ಎಂಬ ಸ್ಥಳದಲ್ಲಿ ಸ್ಥಾಪಿಸಲಾಗಿದ್ದ ಹಾರ್ವರ್ಡ್ ದೂರದರ್ಶಕವನ್ನು ಬಳಸಿ ತೆಗೆದಿದ್ದ ಛಾಯಾಚಿತ್ರಗಳನ್ನು ಈಕೆ ಕಳೆದ ನಾಲ್ಕು ವರ್ಷಗಳಿಂದಲೂ ಅಧ್ಯಯನ ಮಾಡುತ್ತಿದ್ದಳು. ಎರಡೂ ಮೆಜೆಲಾನಿಕ್ ಮೇಘಗಳಲ್ಲಿ ಸಿಫೀಯಿಡ್ಡುಗಳೆಂಬ ಚಂಚಲ ನಕ್ಷತ್ರಗಳ ಬಗ್ಗೆ ವಿಶೇಷ ಗಮನವಿತ್ತಿದ್ದಳು. ಈ ಮೇಘಗಳಲ್ಲಿ ಸಿಫೀಯಿಡ್ಡುಗಳೆಂಬ (ಗಾತ್ರದಲ್ಲಿ ಆಗುವ ಸಂಕೋಚನೆ ಮತ್ತು ವ್ಯಾಕೋಚನೆಗಳ ಸಲುವಾಗಿ ತಮ್ಮ ಉಜ್ವಲತೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಪ್ರದರ್ಶಿಸುವ ಚಂಚಲ ಕಾಂತೀಯ ನಕ್ಷತ್ರಗಳು ಇವು) ನಕ್ಷತ್ರಗಳು ಇರುವುದೂ ಸ್ಥಿರಪಟ್ಟಿತು. *

**ಮೆಡಿಟರೇನಿಯನ್ ಕೃಷಿ:** ಭೂಗೋಳ ವಿಜ್ಞಾನದ ದೃಷ್ಟಿಯಲ್ಲಿ ಮೆಡಿಟರೇನಿಯನ್ ಕೃಷಿ ಪದ್ಧತಿ ಪ್ರಪಂಚದ ಎಲ್ಲಾ ಕೃಷಿ ಪದ್ಧತಿಗಿಂತ ಹೆಚ್ಚು ಪ್ರಸಿದ್ಧಿ ಪಡೆದಿದೆ. ಯುರೋಪಿನ ಮೆಡಿಟರೇನಿಯನ್ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಈ ಕೃಷಿ ಪದ್ಧತಿಯನ್ನು ಅದೇ ಹೆಸರಿನಿಂದ ಸೂಚಿಸಲಾಗಿದೆ. ಅತ್ಯಂತ ಪುರಾತನ ಕೃಷಿ ಪದ್ಧತಿಯಾಗಿರುವ ಇದು ಮಾನವ ಮತ್ತು ಪ್ರಕೃತಿಯ ನಡುವೆ ಇರುವ ಸಹಕಾರವನ್ನು ತಿಳಿಸುತ್ತದೆ. ಆದುದರಿಂದ ಇದನ್ನು ಒಂದು ಸಂಪೂರ್ಣ ಕೃಷಿ ಪ್ರದೇಶ ಎನ್ನಲಾಗಿದೆ.

ಮೆಡಿಟರೇನಿಯನ್ ಕೃಷಿ ಪದ್ಧತಿ ಪ್ರಮುಖವಾಗಿ ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿನ ಪ್ರದೇಶವನ್ನು ಒಳಗೊಂಡಿದ್ದು ಯುರೋಪಿನ ದಕ್ಷಿಣಭಾಗ, ಆಫ್ರಿಕದ ಉತ್ತರಭಾಗ ಮತ್ತು ಪಶ್ಚಿಮ ಏಷ್ಯವನ್ನು ಒಳಗೊಂಡಿದೆ. ಜೊತೆಗೆ ಕ್ಯಾಲಿಫೋರ್ನಿಯ, ಚಿಲಿದೇಶದ ಕೇಂದ್ರಭಾಗ, ದಕ್ಷಿಣ ಆಫ್ರಿಕದ ದಕ್ಷಿಣ ಭಾಗ ಹಾಗೂ ಆಸ್ಟ್ರೇಲಿಯಗಳಲ್ಲಿ ಕಾಣಬಹುದು.

ಮೆಡಿಟರೇನಿಯನ್ ವಾಯುಗುಣ ಚಳಿಗಾಲದಲ್ಲಿ ತೇವಾಂಶವಾಗಿದ್ದು, ಗರಿಷ್ಠ ಮಳೆ ಪಡೆದರೆ ಬೆಸಿಗೆ ಒಣ ಹಾಗೂ ಶುಷ್ಕವಾಗಿರುತ್ತದೆ. ಈ ಬಗೆಯ ವಾಯುಗುಣವು ತೋಟಗಾರಿಕೆ ಬೆಳೆ ಮತ್ತು ಹೈನುಗಾರಿಕೆಗೆ ಹೆಚ್ಚು ಸೂಕ್ತವಾಗಿದೆ. ಋತುಮಾನಿಕ ಮಳೆಯನ್ನು ಆದರಿಸಿ ದ್ವಿದಳ ಧಾನ್ಯಗಳು ಹಾಗೂ ತರಕಾರಿಯನ್ನು ಹೆಚ್ಚಾಗಿ ಉತ್ಪಾದಿಸುವ ಈ ಪ್ರದೇಶ ಮೃದುಗೋದಿ (ಚಳಿಗಾಲದ ಗೋದಿ) ಯನ್ನು ಉತ್ಪಾದಿಸುವಲ್ಲಿ ಹೆಸರುವಾಸಿಯಾಗಿದೆ. ತೋಟಗಾರಿಕೆಯಲ್ಲಿ ಆಲಿವ್. (ಜೀತವೃಕ್ಷ) ಅಂಜೂರ, ದ್ರಾಕ್ಷಿಗಳನ್ನು ಹೆಚ್ಚಾಗಿ ಉತ್ಪಾದಿಸುವ ಈ ಪ್ರದೇಶದಲ್ಲಿ ಹುಳಿಗೆ ಸಂಬಂಧಿಸಿದ ಹಣ್ಣುಗಳ ಉತ್ಪಾದನೆಗಳು ಪ್ರಪಂಚದಲ್ಲೆ ಹೆಸರುವಾಸಿಯಾಗಿದೆ. ಆದ್ದರಿಂದ ಈ ಪ್ರದೇಶವನ್ನು ದ್ರಾಕ್ಷಿಯ ನಾಡು ಎಂದು ಸಹ ಕರೆಯುವರು. ಇದರಿಂದ ಈ ಪ್ರದೇಶದಲ್ಲಿ ಮದ್ಯದ ಉದ್ಯಮ ಹೆಚ್ಚು ಅಭಿವೃದ್ಧಿ ಹೊಂದಿದ್ದು ಇದನ್ನು ಮದ್ಯಗಳ ನಾಡು ಎಂದು ಸಹ ಕರೆಯಲಾಗಿದೆ. ಈ ಪ್ರದೇಶಗಳಲ್ಲಿ ಪ್ರಪಂಚದ ಒಟ್ಟು ಮದ್ಯದ ಉತ್ಪಾದನೆಯಲ್ಲಿ ಶೇ. 60 ಭಾಗದಷ್ಟು ಕೇಂದ್ರಿಕೃತವಾಗಿದ್ದು ಇಟಲಿ, ಫ್ರಾನ್ಸ್, ಸ್ಪೇನ್ ಮತ್ತು ಗ್ರೀಸ್ ದೇಶಗಳು ಅಗ್ರಸ್ಥಾನದಲ್ಲಿವೆ. ಸ್ಥಳೀಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರ ಲಕ್ಷಣಗಳಿಂದ ಇಡೀ ಪ್ರದೇಶದಲ್ಲಿ ಜೀವನಾಧಾರ ಬೇಸಾಯವನ್ನು ಕಾಣಬಹುದು. (ಎಸ್.ಎಚ್.)

**ಮೆಡಿಟರೇನಿಯನ್ ಸಮುದ್ರ:** ಯುರೋಪ್ ಮತ್ತು ಆಫ್ರಿಕ ಖಂಡಗಳ ನಡುವೆ ಇರುವ ಭೂಮಧ್ಯ ಸಮುದ್ರ. ಅಟ್ಲಾಂಟಿಕ್ ಸಾಗರದ ಒಂದು ಭಾಗ ಚಾಚಿಕೊಂಡಿರುವಂತೆ ಕಾಣುತ್ತದೆ. ಈ ಸಮುದ್ರ ಯುರೋಪಿಯನ್ ನಾಗರಿಕತೆಯ ತೊಟ್ಟಿಲು ಎನಿಸಿದ್ದು ಪಾಶ್ಚಾತ್ಯ ಸಂಸ್ಕೃತಿ ಮತ್ತು ನಾಗರಿಕತೆಗಳ ಹುಟ್ಟು ಹಾಗೂ ಬೆಳವಣಿಗೆಗೆ ಕಾರಣವಾಗಿದೆ ಎನ್ನಬಹುದು. ಇಲ್ಲಿಯ ಕ್ರಾಂತಿಕಾರಕ ಸಂಸ್ಕೃತಿ ಸಮುದ್ರದಾಚೆಯ ಭೂಪ್ರದೇಶಗಳಲ್ಲಿ ಹರಡಲು ಈ ಜಲಭಾಗ ಕಾರಣವಾಯಿತು. ಮೆಡಿಟರೇನಿಯನ್ ಇತಿಹಾಸದಲ್ಲಿ ಈ ಸಮುದ್ರ ತನ್ನ ತೀರದಿಂದ ತೀರಕ್ಕೆ ಹೊಸ ವಿಚಾರಗಳನ್ನು ಸಂಸ್ಕೃತಿಯನ್ನು ಪ್ರಚಾರಮಾಡುವುದರಲ್ಲಿ ಪ್ರಮುಖ ಪಾತ್ರವಹಿಸಿದೆ.

ಸನ್ನಿವೇಶ ಮತ್ತು ವಿಸ್ತೀರ್ಣ : ಮೆಡಿಟರೇನಿಯನ್ ಸಮುದ್ರ ಉತ್ತರದಲ್ಲಿ ಯುರೋಪ್, ದಕ್ಷಿಣದಲ್ಲಿ ಆಫ್ರಿಕ, ಪೂರ್ವದಲ್ಲಿ ಏಷ್ಯ ಮೈನರ್ ಮತ್ತು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರಗಳಿಂದ ಸುತ್ತುವರಿದಿದೆ. ಪೂರ್ವಪಶ್ಚಿಮವಾಗಿ ಇದರ ಉದ್ದ 3,540 ಕಿಮೀ ಉತ್ತರ ದಕ್ಷಿಣವಾಗಿ ಇದರ ಅಗಲ 970 ಕಿಮೀ (ಈ ಅಂತರ ಲಿಬಿಯ ಮತ್ತು ಯುಗೊಸ್ಲಾವಿಯ ನಡುವಿನದು). ಮರ್ಮೊರ ಮತ್ತು ಕಪ್ಪುಸಮುದ್ರ ಬಿಟ್ಟು ಮೆಡಿಟರೇನಿಯನ್ ಸಮುದ್ರದ ಒಟ್ಟು ವಿಸ್ತೀರ್ಣ ಸು. 2,510,000 ಚ.ಕಿಮೀ.

ಭೂವಿಜ್ಞಾನಿಗಳ ಹೇಳಿಕೆಯಂತೆ ಈ ಸಮುದ್ರ ಬಲುಹಿಂದೆ ಭೂಮಿಯ ಅರ್ಧಭಾಗ ಆವರಿಸಿದ್ದ ಟೆತಿಸ್ ಎಂಬ ಸಮುದ್ರದ ಉಳಿಕೆಯೆನ್ನುವರು. ಈ ಸಮುದ್ರದ ಆಂತರಿಕ ರಚನೆ, ಆಕಾರ ಹಾಗೂ ಇದನ್ನು ಸುತ್ತುವರಿದಿರುವ ಪರ್ವತಗಳು ಇತ್ಯಾದಿ ಅಂಶಗಳನ್ನು

ಯುರೇಷ್ಯ ಆಫ್ರಿಕಖಂಡಗಳ ಪರಿಚ್ಛಿನ್ನ ಹಾಗೂ ಹಿಂಜರಿತ ಕ್ರಿಯೆಗಳಿಂದ ನಿರ್ಧರಿಸಿದೆ. ಟರ್ಷಿಯರಿ ಯುಗದಲ್ಲಿ ಉಂಟಾದ ಈ ಖಂಡಗಳ ಒಳಮುಖ ಚಲನೆ ಆಲ್ಪೈನ್ ಪರ್ವತಶ್ರೇಣಿಯ ಉಗಮಕ್ಕೆ ನಾಂದಿಯಾಯಿತು. ಈ ಆಲ್ಪೈನ್ ಪರ್ವತ ಟೆತಿಸ್ ಸಮುದ್ರದಲ್ಲಿ ಶೇಖರವಾದ ಗಸಿಯಿಂದ ಕೂಡಿದೆಯೆನ್ನುವರು. ಇಲ್ಲಿಯ ಭೂಭಾಗಗಳ ಪರಸ್ಪರ ಮಡಿಕೆಯಿಂದ ತಗ್ಗಾದ ಪ್ರದೇಶ ಹಾಗೂ ಕುಸಿದುಬಿದ್ದ ಭಾಗಗಳು ಸಮುದ್ರದ ಒಳಭಾಗದಲ್ಲಿ ಅಗಾಧ ಪ್ರದೇಶವನ್ನುಂಟುಮಾಡಿವೆ. ಇತ್ತೀಚೆಗೆ ಈ ಸಮುದ್ರ ಹೆಚ್ಚು ಅಗಲವಾಗಿ ಆಕಾರ ಬದಲಾಯಿಸಿದೆ. ಈ ಪ್ರದೇಶದ ಭೂಭಾಗಗಳ ಪರಸ್ಪರ ಸಮಾಂತರ ಚಲನೆಯಿಂದ ಏಡ್ರಿಯಾಟಿಕ್ ಸಮುದ್ರ ಉಂಟಾಯಿತೆನ್ನುವರು. ಸಮುದ್ರದ ಮಧ್ಯಭಾಗದಲ್ಲಿ ಭೂಕಂಪನ ಮತ್ತು ಜ್ವಾಲಾಮುಖಿಗಳ ಶ್ರೇಣಿ ಅಸ್ತಿತ್ವದಲ್ಲಿದ್ದು ಆಂತರಿಕ ಭೂ ಚಟುವಟಿಕೆ ಇನ್ನೂ ಮುಂದುವರಿಯುತ್ತಿದೆಯೆಂದು ನಂಬಲಾಗಿದೆ.

ಜಲಾಂತರ್ಗತ ಪರ್ವತ ಶ್ರೇಣಿಯೊಂದು ಪಶ್ಚಿಮ ಸಿಸಿಲಿ ಮತ್ತು ಟ್ಯುನೀಷಿಯ ನಡುವೆ ಅಡ್ಡಲಾಗಿದ್ದು ಸಮುದ್ರವನ್ನು ಪೂರ್ವ ಮತ್ತು ಪಶ್ಚಿಮದೆಂದು ಎರಡಾಗಿ ಭಾಗಿಸಿದೆ. ಪೂರ್ವಪ್ರದೇಶ ಪಶ್ಚಿಮ ಪ್ರದೇಶಕ್ಕಿಂತ ಆಳವಾಗಿದೆ. ಇಲ್ಲಿ ಸಮುದ್ರದ ಆಳ 1,501–5,150 ಮೀ ವರೆಗಿದೆ.

ಪೂರ್ವ ಮೆಡಿಟರೇನಿಯನ್ ಒಳಭಾಗದಲ್ಲಿ ನೂರಾರು ಸಣ್ಣ ಸಣ್ಣ ತಗ್ಗಾದ ಭಾಗಗಳು ಕಂಡುಬರುತ್ತವೆ. ಈ ಭಾಗದ ಏಡ್ರಿಯಾಟಿಕ್ ಸಮುದ್ರ ಪ್ರದೇಶದಲ್ಲೂ ಅನೇಕ ತಗ್ಗಾದ ಪ್ರದೇಶಗಳಿವೆ. ಪೂರ್ವ ಮೆಡಿಟರೇನಿಯನ್ ಸಮುದ್ರದ ಆಳ ದಕ್ಷಿಣದಿಂದ ಉತ್ತರಕ್ಕೆ ಹೋದಂತೆ ಕಡಿಮೆಯಾಗುವುದು. ಈ ಭಾಗದ ಏಡ್ರಿಯಾಟಿಕ್ ಸಮುದ್ರವನ್ನು ಬಿಟ್ಟು ಉಳಿದ ಭಾಗಗಳಲ್ಲಿ ಹೆಚ್ಚು ಆಳವಿದ್ದು ಕಡಿದಾದ ಖಂಡಾವರಣ ಪ್ರದೇಶವಿದೆ. ಈ ಭಾಗದ ವಾಯುಗುಣ ಬೇಸಗೆ ಕಾಲದಲ್ಲಿ ಉತ್ತರದಿಂದ ಬೀಸುವ ಮಾರುತಗಳು ಏಜಿಯನ್ ಭಾಗಕ್ಕೆ ತಂಪು ತರುತ್ತವೆ. ಈ ಸಮುದ್ರದ ಮಧ್ಯಭಾಗ ಹೆಚ್ಚು ಆಳವಿಲ್ಲದ ಏಡ್ರಿಯಾಟಿಕ್ ಮತ್ತು ಅಧಿಕ ಆಳದಿಂದ ಕೂಡಿದ ಅಯೋನಿಯನ್ ಸಮುದ್ರ ಪ್ರದೇಶಗಳಿಂದ ಕೂಡಿದೆ. ಈ ಮಧ್ಯಭಾಗ ದಕ್ಷಿಣ ಆಫ್ರಿಕದಿಂದ ಬೀಸುವ ಹೆಚ್ಚು ತಾಪದಿಂದ ಕೂಡಿದ ಸಿರಾಕೋ ಮಾರುತಗಳ ಮತ್ತು ಉತ್ತರದ ಏಡ್ರಿಯಾಟಿಕ್‌ನಿಂದ ಬೀಸುವ ಬೋರಾ ಮಾರುತಗಳ ಪ್ರಭಾವಕ್ಕೊಳಗಾಗಿದೆ.

ಮೆಡಿಟರೇನಿಯನ್ ಸಮುದ್ರದ ಪಶ್ಚಿಮಭಾಗದಲ್ಲಿ ಜಿಬ್ರಾಲ್ಟರ್, ಸಿಸಿಲಿ, ಇಟಲಿ ಮತ್ತು ಅದಕ್ಕೆ ಸೇರಿದ ಪ್ರದೇಶಗಳು ನೇಪಲ್ಸ್, ಕಾರ್ಸಿಕ, ಸಾರ್ಡೀನಿಯ, ಸ್ಪೇನ್ ಮತ್ತು ಬಾಲಿಯರಿಕ್ ದ್ವೀಪಗಳು ಇವೆ. ವಾಯವ್ಯ ದಿಕ್ಕಿನ ಗಲ್ಫ್ ಆಫ್ ಲಯನ್ಸ್ ಪ್ರದೇಶದಲ್ಲಿ ಬೀಸುವ ಚಳಿಗಾಲದ ಚಂಡಮಾರುತದಿಂದಾಗಿ ಹಾನಿಯಾಗುವುದುಂಟು.

ಈ ಸಮುದ್ರದ ತಳ ಮಂದದ ಕಂದುಬಣ್ಣದ ಗಸಿಯಿಂದ ಕೂಡಿದೆ. ಈ ಗಸಿಯ ಬಹುಪಾಲು ತಿಳಿಯಮಣ್ಣಿನಿಂದ ಕೂಡಿದ್ದು ಶೇ. 50ರಷ್ಟು ಕ್ಯಾಲ್ಸಿಯಂ ಕಾರ್ಬೋನೇಟ್ ಆಗಿದೆ. ಕಾರಣವೇನೆಂದರೆ ಈ ಸಮುದ್ರಕ್ಕೆ ಸೇರುವ ನದಿಗಳ ಉಗಮ ಸ್ಥಾನದಿಂದ ಸಮುದ್ರ ಸೇರುವ ದೂರ ಬಹಳ ಕಡಿಮೆ ಇರುವುದರಿಂದ ನದಿಗಳು ತಮ್ಮೊಡನೆ ತಂದ ಗಸಿಯನ್ನೆಲ್ಲ ಸಮುದ್ರದ ತಳಭಾಗದಲ್ಲಿಯೇ ಶೇಖರಿಸುತ್ತವೆ. ಆದರೆ ನೈಲ್ ಮತ್ತು ಪೋ ನದಿಗಳು ಇದಕ್ಕೆ ಹೊರತಾಗಿವೆ.

ಲವಣತೆ : ಮೆಡಿಟರೇನಿಯನ್ ಸಮುದ್ರದಿಂದ ನೀರು ಹೆಚ್ಚು ಪ್ರಮಾಣದಲ್ಲಿ ಆವಿಯಾಗುವುದರಿಂದ ಜಲದಲ್ಲಿಯ ಲವಣಾಂಶ ಅಟ್ಲಾಂಟಿಕ್ ಸಾಗರ ಮತ್ತು ಕಪ್ಪು ಸಮುದ್ರಕ್ಕಿಂತ ಅಧಿಕವಾಗಿರುತ್ತದೆ. ಲವಣತೆಯ ಪ್ರಮಾಣ ಸಮುದ್ರದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹೋದಂತೆ ಅಧಿಕವಾಗುತ್ತ ಹೋಗುತ್ತದೆ. ಸಾಮಾನ್ಯವಾಗಿ ಮಳೆಗಾಲ ಕಡಿಮೆಯಾದಂತೆ ಲವಣತೆ ಹೆಚ್ಚಾಗುತ್ತದೆಯಲ್ಲದೆ ನದಿಯ ನೀರು ಬಂದು ಸೇರುವ ಜಾಗದಲ್ಲಿ ಕಡಿಮೆ ಇರುತ್ತದೆ.

ನೀರಿನ ಸಮತೋಲನ : ಸಮುದ್ರದ ನೀರಿನ ಬಾಷ್ಪೀಕರಣ, ಮಳೆ ಮತ್ತು ಜಿಬ್ರಾಲ್ಟರ್ ಜಲಸಂಧಿ ಮೂಲಕ ಅಟ್ಲಾಂಟಿಕ್ ಸಾಗರದಿಂದ ಮೆಡಿಟರೇನಿಯನ್ ಸಮುದ್ರದೊಳಕ್ಕೆ ಹರಿಯುವ ನೀರು – ಇವು ಈ ಸಮುದ್ರದ ನೀರಿನ ಸಮತೋಲನ ಕಾರ್ಯದಲ್ಲಿ ಪ್ರಮುಖಪಾತ್ರ ವಹಿಸಿದೆ. ಸಾಮಾನ್ಯವಾಗಿ ಸಮುದ್ರಕ್ಕೆ ಸೇರುವ ನೀರಿನ ಪ್ರಮಾಣ ನಷ್ಟವಾಗುವ ನೀರಿನ ಪ್ರಮಾಣಕ್ಕಿಂತ ಅಧಿಕವಾಗಿರುತ್ತದೆ. ಇದರಿಂದಾಗಿ ನೀರಿನ ಸಮತೋಲನದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಇದನ್ನು ನಿವಾರಿಸಲು ಅಟ್ಲಾಂಟಿಕ್ ಸಾಗರದಿಂದ ಜಿಬ್ರಾಲ್ಟರ್ ಜಲಸಂಧಿ ಮೂಲಕ ಮೆಡಿಟರೇನಿಯನ್ ಸಮುದ್ರಕ್ಕೆ ಮೇಲ್ ಪ್ರವಾಹ ಮೆಡಿಟರೇನಿಯನ್ ಸಮುದ್ರದಿಂದ ಅಟ್ಲಾಂಟಿಕ್ ಸಾಗರಕ್ಕೆ ಒಳಪ್ರವಾಹ ಹರಿಯುತ್ತಲೇ ಇರುತ್ತವೆ. ಈ ಬಗೆಯಲ್ಲಿ ಮೆಡಿಟರೇನಿಯನ್ ಸಮುದ್ರದ ಜಲ ಸಮತೋಲನವಾಗುತ್ತಲೇ ಇರುತ್ತದೆ.

ಉಷ್ಣತೆ: ಈ ಸಮುದ್ರದ ಮೇಲ್ಪದರದ ಉಷ್ಣತೆ ಋತುಮಾನಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತದೆ. ಸಾಮಾನ್ಯವಾಗಿ ಮೇಲ್ಮಟ್ಟದಲ್ಲಿ $16^0$ಸೆ ಇರುತ್ತದೆ. ಬೇಸಗೆಯಲ್ಲಿ ಮೇಲಿನ ಉಷ್ಣತೆ $27^0$ಸೆ. ಮುಟ್ಟುವುದೂ ಇದೆ. ಚಳಿಗಾಲದಲ್ಲಿ $4^0$ಸೆ ಇಳಿಯುವುದೂ ಉಂಟು. ಸಮುದ್ರ ಮಧ್ಯಪ್ರದೇಶದ ಒಳಗಡೆ ಮತ್ತು ತಳದಲ್ಲಿ ವರ್ಷವಿಡೀ ಉಷ್ಣತೆ $13^0$–$15^0$ಸೆ. ವರೆಗೆ ಇರುತ್ತದೆ.

ಚಳಿಗಾಲದಲ್ಲಿ ಈ ಸಮುದ್ರದ ಮೇಲಿನ ಗಾಳಿ ಬೆಚ್ಚಗಿದ್ದು ಕಡಿಮೆ ಒತ್ತಡ ಪ್ರದೇಶವಾಗಿ ಮಾರ್ಪಾಡಾಗುತ್ತದೆ. ಇದಕ್ಕೆ ವಿರುದ್ಧವಾಗಿ ಭೂಪ್ರದೇಶದಿಂದ ಹೆಚ್ಚು ಒತ್ತಡವುಳ್ಳ ಗಾಳಿ ಸಮುದ್ರದ ಕಡೆಗೆ ನುಗ್ಗುತ್ತದೆ. ಬೇಸಗೆಯಲ್ಲಿ ಸಮುದ್ರದ ಮೇಲಿನ ಪ್ರದೇಶ ಹೆಚ್ಚು ಒತ್ತಡದಿಂದ ಕೂಡಿದ್ದು ಸುತ್ತಲಿನ ಭೂ ಪ್ರದೇಶದಲ್ಲಿ ಕಡಿಮೆ ಒತ್ತಡವಿರುತ್ತದೆ. ಆಗ ಸಮುದ್ರದ ಮೇಲಿನ ಗಾಳಿ ಭೂಪ್ರದೇಶದ ಕಡೆಗೆ ಬೀಸುತ್ತದೆ. ಈ ಪ್ರದೇಶದ ವಾರ್ಷಿಕ ಮಳೆ ಪ್ರಮಾಣ ಪಶ್ಚಿಮದಿಂದ ಪೂರ್ವಕ್ಕೆ ಹಾಗೂ ಉತ್ತರದಿಂದ ದಕ್ಷಿಣಕ್ಕೆ ಹೋದಂತೆ ಕಡಿಮೆಯಾಗುತ್ತದೆ. ಉದಾ: ಸಮುದ್ರದ ಉತ್ತರಭಾಗದ ಡಾಲ್ಮೇಷಿಯ ತೀರದ ಬಳಿ ವಾರ್ಷಿಕ ಮಳೆಯ ಪ್ರಮಾಣ ಸು. 457 ಸೆಂಮೀ ಆದರೆ ದಕ್ಷಿಣದ ಸಹರ ಮರುಭೂಮಿಯ ಬಳಿ ಸು. 2 ಸೆಂಮೀ ಈ ಸಮುದ್ರತೀರದ ಸ್ಪೇನ್, ಇಟಲಿ ಮತ್ತು ಗ್ರೀಸ್ ದೇಶಗಳಲ್ಲಿ ಚಳಿಗಾಲದಲ್ಲಿ ಮಳೆಯಾಗುತ್ತದೆ. ಇದಕ್ಕೆ ಪ್ರತಿಯಾಗಿ ಇಟಲಿಯ ಉತ್ತರಭಾಗ, ಯೂಗೋಸ್ಲಾವಿಯದ ಮಧ್ಯಭಾಗಗಳಲ್ಲಿ ಬೇಸಗೆಯಲ್ಲಿ ಹೆಚ್ಚು ಪರಿಸರಣ ಮಳೆಯಾಗುತ್ತದೆ. ಈ ಎರಡು ಕಾಲಗಳ ಮಧ್ಯೆ ವಸಂತ ಮತ್ತು ಶರದೃತುವಿನಲ್ಲಿ ಮೆಡಿಟರೇನಿಯನ್ ಪ್ರದೇಶದಲ್ಲಿ ಹೆಚ್ಚು ಮಳೆಯಾಗುವುದು.

ಮೆಡಿಟರೇನಿಯನ್ ಪ್ರದೇಶದಲ್ಲಿ ಚಳಿಗಾಲದ ಉಷ್ಣತೆ ಅತಿ ಕಡಿಮೆ ಆಗುವುದಿಲ್ಲ. ಆದರೆ ಯೂಗೋಸ್ಲಾವಿಯ ಮತ್ತು ಟರ್ಕಿಯ ಒಳನಾಡುಗಳು ಪೂರ್ವ ಯುರೋಪಿನಿಂದ ಬೀಸುವ ಚಳಿಗಾಳಿಗೆ ಸಿಕ್ಕಿ ವಿಪರೀತ ಚಳಿಯನ್ನು ಅನುಭವಿಸುತ್ತವೆ, ಸಮುದ್ರತೀರದ ನಾಡುಗಳಲ್ಲಿ ತೀರಕ್ಕಿಂತ ಒಳನಾಡಿನಲ್ಲಿ ಚಳಿ ಅಧಿಕ ಮತ್ತು ಪೂರ್ವತೀರಗಳಲ್ಲಿ ಪಶ್ಚಿಮತೀರಗಳಿಗಿಂತ ಇನ್ನೂ ಹೆಚ್ಚು ಚಳಿಯಿರುತ್ತದೆ. ಬೇಸಗೆಯಲ್ಲಿ ಉಷ್ಣತೆ ಭೂಪ್ರದೇಶದ ಮೇಲೆ ಅಧಿಕವಿದ್ದು ಆಫ್ರಿಕ ತೀರದಲ್ಲಿ ಪೂರ್ವಕ್ಕೆ ಚಲಿಸಿದಂತೆ ಅಧಿಕ ಶಾಖ ಪ್ರಸರಿಸುತ್ತದೆ. ಏಷ್ಯದ ಬೇಸಿಗೆ ಒಣ ಮಾರುತ ಎಸ್ಟಿಯನ್ ಪೂರ್ವ ಮೆಡಿಟರೇನಿಯನ್ನಿನಲ್ಲಿ ಬೀಸಿ ಆ ಪ್ರದೇಶ ಒಣಹವೆಯಿಂದ ಕೂಡಿರುವಂತೆ ಮಾಡುತ್ತದೆ. ಸಿರಾಕೋ ಒಣಮಾರುತ ಮೆಡಿಟರೇನಿಯನ್ ದಕ್ಷಿಣ ಮತ್ತು ಪೂರ್ವದಲ್ಲಿ ಆರಂಭವಾಗಿ ಉತ್ತರ ತೀರಕ್ಕೆ ಬೀಸುತ್ತದೆ. ಈ ಬಗೆಯ ವಿವಿಧ ಮಾರುತಗಳಿಂದ ಮೆಡಿಟರೇನಿಯನ್ ಪ್ರದೇಶದಲ್ಲಿ ಆಗಾಗ ಮಳೆಯಾಗುತ್ತದೆ.

1953ರಲ್ಲಿ ಏಕಾಂಗಿಯಾಗಿ ದೋಣಿಯಲ್ಲಿ ಒಂದು ಸುತ್ತು ಪ್ರಪಂಚಪರ್ಯಟನೆ ಮಾಡಿದ ಅಮೆರಿಕದ ನಾವಿಕ ಕಾರ್ಲ್ ಪೀಟರ್‌ಸನ್ ಕ್ರೀಟ್ ಮತ್ತು ಮಾಲ್ಟ ನಡುವೆ ಕಂಡುಬಂದ ವಿಶಿಷ್ಟಬಗೆಯ ಹವೆಯ ಪರಿಸ್ಥಿತಿ ಅಟ್ಲಾಂಟಿಕ್ ಸಾಗರ, ಪೆಸಿಫಿಕ್ ಮತ್ತು ಹಿಂದುಮಹಾಸಾಗರಗಳಲ್ಲೆಲ್ಲೂ ಕಾಣಲಿಲ್ಲ ಎಂದಿದ್ದಾನೆ. ವಸಂತಋತು ಮತ್ತು ಬೇಸಗೆ ಕಾಲಗಳಲ್ಲಿ ತಂಗಾಳಿ ಬೀಸುವುದರಿಂದ ಮೆಡಿಟರೇನಿಯನ್ ಸಮುದ್ರ ಶಾಂತವಾಗಿರುತ್ತದೆ. ಹೆಚ್ಚು ಉಬ್ಬರವಿಳಿತಗಳ ಅಬ್ಬರವಿರುವುದಿಲ್ಲ. ಇಲ್ಲಿಯ ಪರಮಾವಧಿ ಏರಿಳಿತಗಳೆಂದರೆ: ಕೇವಲ 30.4 ಸೆಂಮೀ ಮಾತ್ರ. ಈ ಸಮುದ್ರ ಸಾಗರಪ್ರವಾಹಗಳನ್ನು ಹೊಂದಿದೆ. ಈ ಸಮುದ್ರದ ಮೇಲ್ಮೈಜಲ ಹೆಚ್ಚು ಆವಿಯಾಗುವಿಕೆಯಿಂದ ಉಂಟಾಗುವ ನಷ್ಟವನ್ನು ತುಂಬಲು ಎರಡು ಸಾಗರ ಪ್ರವಾಹಗಳಿವೆ. ಅವು ಜಿಬ್ರಾಲ್ಟರ್ ಜಲಸಂಧಿಯ ಮೂಲಕ ಅಟ್ಲಾಂಟಿಕ್ ಸಾಗರದಿಂದ ಹರಿದು ಬರುವ ಪ್ರವಾಹ ಮತ್ತು ಕಪ್ಪು ಸಮುದ್ರದಿಂದ ಹರಿದುಬರುವ ಪ್ರವಾಹ. ಹೊರಗಿನಿಂದ ಹೊಸ ತಿಳಿನೀರಿನ ಉಷ್ಣೋತ್ಪಾದಕ ಪ್ರವಾಹ ಮೇಲ್ಭಾಗದಲ್ಲಿ ಹರಿದು ಒಳಬಂದಂತೆಲ್ಲ ಹೆಚ್ಚು ಸಾಂದ್ರತೆ ಮತ್ತು ಲವಣತೆಯಿಂದ ಕೂಡಿದ ಭಾರವಾದ ತಣ್ಣೀರು ಆಳದಲ್ಲಿ ಹೊರಕ್ಕೆ ಹರಿಯುವುದರಿಂದ ಮೆಸಿನಾ ಮುಂತಾದ ರೇವುಗಳಲ್ಲಿ ಸಾಮಾನ್ಯ ಉಬ್ಬರವುಂಟಾಗುವುದು. ಹೆಚ್ಚು ಉಬ್ಬರವಿಳಿತಗಳ ಆರ್ಭಟದಿಂದ ಮುಕ್ತವಾಗಿರುವ ಮೆಡಿಟರೇನಿಯನ್ ಸಮುದ್ರ ನೌಕಾಯಾನಕ್ಕೆ ಸುಲಲಿತವಾಗಿದೆ.

ಈ ಸಮುದ್ರದ ಸುತ್ತಲೂ ಬೆಳೆದ ಅನೇಕ ಸಂಸ್ಕೃತಿ ಮತ್ತು ನಾಗರಿಕತೆಗಳ ಜನನಕ್ಕೆ ಇದರ ಸುಲಭ ನೌಕಾಯಾನ, ಅಲ್ಪ ಚಳಿಗಾಲ ಮತ್ತು ಸಮಧಾತು ದೀರ್ಘ ಬೇಸಗೆಯಿಂದ ಕೂಡಿದ ಆಹ್ಲಾದಕರ ವಾಯುಗುಣ ಕಾರಣವಾಗಿದೆಯೆನ್ನಬಹುದು.

ತೀರದ ಮೀನುಗಾರಿಕೆ ಈ ಸಮುದ್ರ ಸುತ್ತಲಿನ ಅನೇಕ ದೇಶಗಳ ಆರ್ಥಿಕಾಭಿವೃದ್ಧಿಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಕೆಲವು ಕಡೆ ದೋಣಿಗಳ ಆಕಾರ ಇನ್ನೂ ಸಾಂಪ್ರದಾಯಿಕವಾಗಿಯೇ ಉಳಿದಿದೆ. ಸಿಸಿಲಿಯ ನೈಋತ್ಯತೀರದ ತೆರೆದ ಸಾಂಪ್ರದಾಯಿಕ ಹರಿಗೋಲುಗಳು ಪ್ರತಿ ಬೇಸಗೆಯಲ್ಲೂ ಉತ್ತರ ಆಫ್ರಿಕ ತೀರದ ಕಡೆಗೆ ಹಾದು ಹೋಗುವುವು. 2000 ವರ್ಷಗಳ ಅವಧಿಯಲ್ಲೂ ಈ ದೋಣಿಗಳ ರೂಪದಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ.

ಮೆಡಿಟರೇನಿಯನ್ ಚರಿತ್ರೆ ಅದರ ಸುತ್ತಲ ದೇಶಗಳ ಹುಟ್ಟು, ಬೆಳವಣಿಗೆ, ಯುದ್ಧ—ಅವುಗಳ ನಾಶ ಮತ್ತು ಹೊಸ ಸಂಸ್ಕೃತಿಯ ಹುಟ್ಟುಗಳ ವಿಷಯವೇ ಆಗಿದೆ. ಮೊದಲನೆಯದಾಗಿ ರೋಮನ್ನರಿಗಿಂತ ಮೊದಲು ಕಡಲ ತಡಿಯ ಕಾರ್ತೇಜ್ (ಪ್ರಾಚೀನ ಗ್ರೀಸ್) ರಾಜ್ಯಗಳ ವಿಕಾಸವನ್ನು ಕಾಣಬಹುದು. ಅದೇ ಕಾಲದಲ್ಲಿ ಮೆಡಿಟರೇನಿಯನ್ ತೀರದಲ್ಲಿ ಮತ್ತು ಅಟ್ಲಾಂಟಿಕ್ ಸಾಗರ ತೀರದಲ್ಲಿ ಅನೇಕ ವ್ಯಾಪಾರ ಕೇಂದ್ರಗಳು ಬೆಳೆದು ಅವುಗಳಲ್ಲಿಯೇ ಪೈಪೋಟಿ ಪ್ರಾರಂಭವಾಯಿತು. ಪ್ರ.ಶ.ಪೂ. ಮೂರನೆಯ ಶತಮಾನದಲ್ಲಿ ಈ ಸಮುದ್ರತೀರದ ಭೂಪ್ರದೇಶಗಳನ್ನು ಒಂದೇ ಆಡಳಿತಕ್ಕೆ ಒಳಪಡಿಸಿದವರು ರೋಮನ್ನರು.

ಜಿನೀವ ಮತ್ತು ವೆನಿಸ್ ನಗರಗಳು ಪ್ರಸಿದ್ಧಿಗೆ ಬಂದುವು. ಈ ರೋಮನ್ ಸಾಮ್ರಾಜ್ಯ 4 – 11ನೆಯ ಶತಮಾನದಲ್ಲಿ ಜರ್ಮನ್ನರ ದಾಳಿಗೆ ತುತ್ತಾಯಿತು. ಇದೇ ವೇಳೆಯಲ್ಲಿ ಮಧ್ಯಪ್ರಾಚ್ಯ ರಾಷ್ಟ್ರಗಳು, ಉತ್ತರ ಆಫ್ರಿಕ, ಸ್ಪೇನ್ ಹಾಗೂ ಸಿಸಿಲಿಯ ಮೇಲೆ ಅರಬ್ಬರು ದಾಳಿ ನಡೆಸಿದರು. ಈ ವೇಳೆಯಲ್ಲಿ ಮೆಡಿಟರೇನಿಯನ್ ತೀರಪ್ರದೇಶಗಳಲ್ಲಿ ವ್ಯಾಪಾರ ನಿಂತು, ಅಟ್ಲಾಂಟಿಕ್ ತೀರಪ್ರದೇಶದಲ್ಲಿ ಈ ವ್ಯಾಪಾರ ಕೇಂದ್ರಿಕೃತವಾಯಿತು. ಈ ಮಧ್ಯೆ 800ರಲ್ಲಿ ಯುರೋಪ್ ಖಂಡದ ಏಕಾಡಳಿತದ ಸಂಘಟನಾಕಾರ್ಯ ನಡೆಯಿತು.

11ನೆಯ ಶತಮಾನದ ವೇಳೆಗೆ ಒಳಜಗಳಗಳ ಕಾರಣದಿಂದ ಅರಬ್ ಸಾಮ್ರಾಜ್ಯ ಕ್ಷೀಣಿಸುತ್ತ ಬಂದಿತು. ಧರ್ಮಯುದ್ಧ ತಲೆದೋರಿ ಮೆಡಿಟರೇನಿಯನ್ ತೀರದ ಬಂದರುಗಳಾದ ಕಾನ್‌ಸ್ಟಾಂಟಿನೋಪಲ್, ಬಾರ್ಸಿಲೋನ, ಇಟಲಿಯ ವಾಣಿಜ್ಯ ಕೇಂದ್ರಗಳು ವ್ಯಾಪಾರದಲ್ಲಿ ಮೊದಲಿನ ಸ್ಥಾನವನ್ನು ಮತ್ತೆ ಪಡೆದುಕೊಂಡವು. 15ನೆಯ ಶತಮಾನದ ಆಟೋಮನ್ ಟರ್ಕರ ಏಳಿಗೆ ಮೆಡಿಟರೇನಿಯನ್ ಪ್ರದೇಶದಲ್ಲಿ ಒಂದು ಆಘಾತವನ್ನು ತಂದೊಡ್ಡಿತು. ಇದೇ ಸಮಯಕ್ಕೆ ಆಫ್ರಿಕದ ಕೇಪ್ ಆಫ್ ಗುಡ್ ಹೋಪ್ ಮಾರ್ಗವಾಗಿ ಆಗ್ನೇಯ ಏಷ್ಯ ರಾಷ್ಟ್ರಗಳಿಗೆ ಕಂಡುಹಿಡಿದ ಜಲಮಾರ್ಗ ಯುರೋಪಿನ ವ್ಯಾಪಾರಾಭಿವೃದ್ಧಿಗೆ ಅನುಕೂಲವಾಯಿತು.

1869ರಲ್ಲಿ ಸೂಯೆಜ್ ಕಾಲುವೆಯ ಆರಂಭ, ವಾಯವ್ಯ ಯುರೋಪಿನ ಕೈಗಾರಿಕಾಭಿವೃದ್ಧಿಗೆ ಉತ್ತರ ಆಫ್ರಿಕದ ರಾಷ್ಟ್ರಗಳಲ್ಲಿ ಫ್ರೆಂಚರ ವ್ಯಾಪಾರ ಮಳಿಗೆಗಳ ಆರಂಭಕ್ಕೆ ಎಡೆಮಾಡಿಕೊಟ್ಟಿತ್ತಲ್ಲದೇ ಯುರೋಪ್ ಹಾಗೂ ಏಷ್ಯ ಖಂಡಗಳ ಮಧ್ಯೆ ಹೆಚ್ಚು ಸಂಪರ್ಕ ಬೆಳೆಯಲು ಕಾರಣವಾಯಿತು.

ಮೆಡಿಟರೇನಿಯನ್ ಸಮುದ್ರಮಾರ್ಗ ವಸ್ತು ಸಾಗಣೆಯಲ್ಲಿ ಎಷ್ಟೇ ಪ್ರಮುಖವಾದರೂ ಇದರ ಸುತ್ತಲ ಪ್ರದೇಶಗಳು ಸಾಕಷ್ಟು ಕೈಗಾರಿಕಾಭಿವೃದ್ಧಿ ಸಾಧಿಸಲಾಗಿಲ್ಲ. ವಾಯವ್ಯ ಯುರೋಪ್ ರಾಷ್ಟ್ರಗಳ ನೇರ ಹಾಗೂ ಪರಸ್ಪರ ಸ್ಪರ್ಧೆ ಮೆಡಿಟರೇನಿಯನ್ ಪ್ರದೇಶಗಳು ತಮ್ಮ ಪ್ರಾಚೀನ ಕಸುಬಾದ ವ್ಯವಸಾಯದಲ್ಲಿಯೇ ಉಳಿಯುವಂತೆ ಮಾಡಿದುವು. 18ನೆಯ ಶತಮಾನದಿಂದ ಎರಡನೆಯ ಮಹಾಯುದ್ಧ ಕಾಲದ ತನಕ ಮೆಡಿಟರೇನಿಯನ್ ಪ್ರದೇಶದ ಪ್ರಮುಖ ಬಂದರುಗಳು ಬ್ರಿಟಿಷರ ಆಡಳಿತಕ್ಕೆ ಸೇರಿದ್ದವು. ಹಾಗೆಯೇ ಎರಡನೆಯ ಮಹಾಯುದ್ಧ ಕಾಲದಲ್ಲಿ ಅಮೆರಿಕನ್ನರು ಅನೇಕ ಆಫ್ರಿಕನ್ ರಾಷ್ಟ್ರಗಳನ್ನು ವಶಪಡಿಸಿಕೊಂಡರು. ಈ ರೀತಿಯ ಅಮೆರಿಕನ್ನರ ಆಗಮನ ಯುರೋಪ್ ರಾಷ್ಟ್ರಗಳಿಗೆ ಮೆಡಿಟರೇನಿಯನ್ ಪ್ರದೇಶದ ಮೇಲಿದ್ದ ಒಡೆತನಕ್ಕೆ ಅಡ್ಡಿಯುಂಟಾಯಿತು. ತದನಂತರ ಅಮೆರಿಕ ಮೆಡಿಟರೇನಿಯನ್ ಪ್ರದೇಶದ ಒಡೆತನವನ್ನು ಪಡೆಯುವುದರಲ್ಲಿ ಮುಂದಾಯಿತು. ಇದಾದ ಬಳಿಕ ಅಮೆರಿಕ ಇನ್ನೂ ಮುನ್ನುಗ್ಗಿ ಮಧ್ಯಪ್ರಾಚ್ಯ ರಾಷ್ಟ್ರಗಳ ಎಣ್ಣೆಯ ಒಡೆತನವನ್ನು ಪಡೆದು ಯುರೋಪ್ ರಾಷ್ಟ್ರಗಳಾಗಲಿ ಮತ್ತು ರಷ್ಯ ದೇಶವಾಗಲಿ ಈ ಪ್ರದೇಶಗಳ ಪ್ರಾಬಲ್ಯ ಪಡೆಯದಂತೆ ಅಡ್ಡಿಯುಂಟುಮಾಡಿತು. ಇಂದು ಮೆಡಿಟರೇನಿಯನ್ ಸಮುದ್ರದ ಸುತ್ತಲೂ ರಾಷ್ಟ್ರೀಯ ಹಾಗೂ ರಾಜಕೀಯ ಪ್ರಜ್ಞೆ ಎಚ್ಚೆತ್ತ ಅನೇಕ ರಾಷ್ಟ್ರಗಳು ತಲೆ ಎತ್ತಿವೆ. ಅವುಗಳಲ್ಲಿ ಇಸ್ರೇಲ್, ಅರಬ್ ಗಣರಾಜ್ಯಗಳು ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಪಾಶ್ಚಾತ್ಯರ ಪ್ರಜಾಪ್ರಭುತ್ವ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿವೆ. ಪಾಶ್ಚಾತ್ಯ ಸಂಸ್ಕೃತಿ ಈ ದೇಶಗಳ ಮೇಲೆ ಪ್ರಭಾವಬೀರಿ ಅವುಗಳ ಮುಖವಾಡವನ್ನೇ ಬದಲಾಯಿಸಿದೆ. ಫ್ರೆಂಚರು ಮೆಡಿಟರೇನಿಯನ್ ಗೆಳೆಯರ ಸಂಘ ಮತ್ತು ಮೆಡಿಟರೇನಿಯನ್ ವಿಶ್ವವಿದ್ಯಾಲಯ ಸ್ಥಾಪಿಸಿಕೊಂಡಿದ್ದಾರೆ. **(ಕೆ.ಆರ್.)**

**ಮೆಡೀರಾ:** ಉತ್ತರ ಅಟ್ಲಾಂಟಿಕ್ ಸಾಗರದಲ್ಲಿರುವ ಒಂದು ದ್ವೀಪಸ್ತೋಮ. ಪೋರ್ಚುಗೀಸರ ಆಡಳಿತಕ್ಕೆ ಸೇರಿದೆ. ಮೆಡೀರಾ ಮತ್ತು ಪೋರ್ಟೋಸ್ಯಾಂಟೊ ಜನವಸತಿಯಿರುವ ಮುಖ್ಯದ್ವೀಪಗಳು. ಜನವಸತಿಯಿಲ್ಲದ ಡೆಸೆರ್ಟಾಸ್ ಮತ್ತು ಸೆಲ್ವಿಜೆನ್ಸ್ ಎಂಬ ಎರಡು ಪುಟ್ಟ ದ್ವೀಪಗಳೂ ಈ ಸಮೂಹಕ್ಕೆ ಸೇರಿವೆ. ಇವುಗಳಲ್ಲಿ ಮೆಡೀರಾ ದ್ವೀಪವೇ ಹೆಚ್ಚು ವಿಶಾಲವಾದದ್ದು. ದ್ವೀಪಗಳ ಒಟ್ಟು ವಿಸ್ತೀರ್ಣ 794 ಚ.ಕಿಮೀ. ಜನಸಂಖ್ಯೆ 2,60,000. ರಾಜಧಾನಿ ಫನ್‌ಸಾಲ್. ಈ ದ್ವೀಪಸಮೂಹ ಅಟ್ಲಾಂಟಿಕ್ ಸಾಗರದ ಪರ್ವತಶ್ರೇಣಿಗೆ ಸೇರಿದ್ದು ಸಮುದ್ರಮಟ್ಟದಿಂದ 1860 ಮೀ ಎತ್ತರವಿದೆ. ಇಲ್ಲಿ ಆಕರ್ಷಕ ಹೂವಿನ ಗಿಡಗಳೂ ಮತ್ತು ವಿವಿಧ ಜಾತಿಯ ಮರಬಳ್ಳಿಗಳೂ ಇರುವುದರಿಂದ ಈ ದ್ವೀಪಸಮೂಹವನ್ನು ಅದರಲ್ಲೂ ಮೆಡೀರಾವನ್ನು ಅಟ್ಲಾಂಟಿಕ್ ಸಾಗರದ ಶಿಲಾ ಉದ್ಯಾನವೆನ್ನುತ್ತಾರೆ.

ಕಬ್ಬು ಮುಖ್ಯ ಬೆಳೆ. ವಿವಿಧ ಕಾಳುಗಳು, ತರಕಾರಿಗಳು, ಬಾಳೆ, ಕಿತ್ತಳೆ, ಮಾವು ಮತ್ತು ದ್ರಾಕ್ಷಿ ಹೆಚ್ಚು ಬೆಳೆಯುತ್ತಾರೆ. ಈ ದ್ವೀಪ ದ್ರಾಕ್ಷಾರಸಕ್ಕೆ ಪ್ರಸಿದ್ಧ. ಮರದ ಸಾಮಾನುಗಳನ್ನೂ ಕಸೂತಿ ಕೆಲಸವನ್ನೂ ಮಾಡುತ್ತಾರೆ. ಇಲ್ಲಿಯ ಜನ ಮೀನು ಹಿಡಿಯುವುದರಲ್ಲಿ ನಿಸ್ಸೀಮರು. ಫನ್‌ಸಾಲ್ ಬಂದರು ನಗರ. ಇಲ್ಲಿಂದ ಲಿಸ್ಬನ್ ಮತ್ತು ಪೋರ್ಚುಗಲ್, ಇಂಗ್ಲೆಂಡ್ ಮುಂತಾದ ದೇಶಗಳೊಡನೆ ಸಮುದ್ರ ವ್ಯಾಪಾರ ಹಾಗೂ ಉತ್ತರ ಆಫ್ರಿಕ ಮತ್ತು ಯುರೋಪ್ ದೇಶಗಳೊಡನೆ ವಾಯುಯಾನ ಸಂಪರ್ಕವಿದೆ.

ಗಾನ್‌ಸಾಲ್ ವೆಜ್ ಝಾರ್ಕೋ ಎಂಬ ಪೋರ್ಚುಗೀಸ್ ನಾವಿಕ 1418–1420ರಲ್ಲಿ ಈ ನಡುಗಡ್ಡೆಗಳನ್ನು ಕಂಡುಹಿಡಿದ. 1421ರಲ್ಲಿ ಫನ್‌ಸಾಲ್ ಪಟ್ಟಣ ಸ್ಥಾಪಿಸಿದ ಹಾಗೆಯೇ ಪೋರ್ಚುಗೀಸ್ ನೆಲೆಗಳು ಸ್ಥಾಪಿಸಲ್ಪಟ್ಟು ಇಲ್ಲಿಯ ವ್ಯಾಪಾರ ವೃದ್ಧಿ ಹೊಂದಿತು. ಈ ದ್ವೀಪ ಸಮೂಹ 1580–1640ರ ತನಕ ಸ್ಪ್ಯಾನಿಷರ ವಶವಾಗಿತ್ತು. 1801ರಲ್ಲಿ ಮತ್ತು 1807–14ರಲ್ಲಿ ಈ ನಡುಗಡ್ಡೆಗಳು ಬ್ರಿಟಿಷರ ಅಧೀನದಲ್ಲಿದ್ದು ಈಗ ಪೋರ್ಚುಗೀಸರಿಗೆ ಸೇರಿವೆ. **(ಕೆ.ವಿ.ಎಸ್.ಯು.)**

**ಮೆಲನೇಷ್ಯ:** ಪೆಸಿಫಿಕ್ ದ್ವೀಪಸ್ತೋಮದಲ್ಲಿರುವ ಮೂರು ಮುಖ್ಯ ವಿಭಾಗಗಳ ಪೈಕಿ ಒಂದು. ಉಳಿದೆರಡು ಮೈಕ್ರೊನೇಷ್ಯ ಮತ್ತು ಪಾಲಿನೇಷ್ಯ. ಆಸ್ಟ್ರೇಲಿಯ ನ್ಯೂಗಿನಿಯ ಈಶಾನ್ಯದಲ್ಲಿದೆ. ಮೆಲನೇಷ್ಯ ಎಂದರೆ ಕಪ್ಪು ದ್ವೀಪಗಳು ಎಂದರ್ಥ. ಈ ದ್ವೀಪಗಳ ಹೆಚ್ಚು ಮಂದಿ ಕಪ್ಪು ಬಣ್ಣದವರಾಗಿರುವುದೇ ಇದಕ್ಕೆ ಈ ಹೆಸರು ಬರಲು ಕಾರಣ. ಪೆಸಿಫಿಕ್ ದ್ವೀಪಸ್ತೋಮದಲ್ಲಿ ಅತ್ಯಂತ ದೊಡ್ಡ ದ್ವೀಪಗಳಾದ ನ್ಯೂಗಿನಿ ಮತ್ತು ನ್ಯೂ ಬ್ರಿಟನ್‌ಗಳು ಮೆಲನೇಷ್ಯದಲ್ಲಿ ಸೇರಿವೆ. ಮೆಲನೇಷ್ಯದ ಒಟ್ಟು ಭೂಭಾಗ 5,40,000 ಚ.ಕಿಮೀ. ಜನಸಂಖ್ಯೆ ಎಲ್ಲ ದ್ವೀಪಗಳು ಸೇರಿದಂತೆ 2,22,00,000(1998).

ಮೆಲನೇಷ್ಯದ ಪ್ರಮುಖ ದ್ವೀಪಗಳಿವು: ಪಶ್ಚಿಮ ನ್ಯೂಗಿನಿ (ಇರೀಯಾನ್ ಬಾರಾತ್ ಅಥವಾ ಪಶ್ಚಿಮ ಇರೀಯಾನ್) ಇಂಡೊನೇಷ್ಯದ ಪ್ರಾಂತ್ಯಕ್ಕೆ ಸೇರಿದೆ. 4,21,923 ವಿಸ್ತೀರ್ಣ, ಜನಸಂಖ್ಯೆ 1,313,000. ಫೀಜಿ ಒಂದು ಸ್ವತಂತ್ರ ದ್ವೀಪ. ವಿಸ್ತೀರ್ಣ 18,376, ಜನಸಂಖ್ಯೆ 8,09,000. ನ್ಯೂ ಕ್ಯಾಲಿಡೋನಿಯ ಫ್ರೆಂಚ್ ಸಾಗರೋತ್ತರ ಪ್ರದೇಶ. ವಿಸ್ತೀರ್ಣ 18,998 ಜನಸಂಖ್ಯೆ 2,00,000. ಪಪುವ ನ್ಯೂಗಿನಿ ಸ್ವತಂತ್ರ್ಯ ದ್ವೀಪ. ವಿಸ್ತೀರ್ಣ 4,62,840. ಜನಸಂಖ್ಯೆ 45,00,000. ಸಾಲೊಮನ್ಸ್ ದ್ವೀಪಗಳು ಸ್ವತಂತ್ರ್ಯ ರಾಷ್ಟ್ರ. ವಿಸ್ತೀರ್ಣ 29,758. ಜನಸಂಖ್ಯೆ 4,04,000(1997). ವನುವಾಟು ಸ್ವತಂತ್ರ್ಯ ರಾಷ್ಟ್ರ. ವಿಸ್ತೀರ್ಣ 14,763. ಜನಸಂಖ್ಯೆ 1,77,500.

ಭೂಲಕ್ಷಣ : ಮೆಲನೇಷ್ಯ ದ್ವೀಪಗಳು ಜ್ವಾಲಾಮುಖಿ ಮೂಲದಿಂದ ಉಂಟಾದವು. ಇಲ್ಲಿ ಭೂಮಿ ರೂಪಾಂತರ ಹೊಂದಿದ ಸೆಡಿಮೆಂಟರಿ ಮಣ್ಣು ಹಾಗೂ ಅಂತಸ್ಸರಣದಿಂದ ಕೂಡಿದೆ. ಎಲ್ಲ ದ್ವೀಪಗಳೂ ಗುಡ್ಡಗಾಡು ಪ್ರದೇಶದಿಂದ ಕೂಡಿವೆ. ನ್ಯೂಗಿನಿ, ಫೀಜಿ ಮೊದಲಾದ ದೊಡ್ಡ ದ್ವೀಪಗಳಲ್ಲಿ ಇಕ್ಕಟ್ಟಾದ ಸಮುದ್ರತೀರ ಹಾಗೂ ಅಕ್ಕಪಕ್ಕದ ಭೂಮಿಯ ಅಭಿವೃದ್ಧಿಗೆ ಕಾರಣವಾದ ನದಿವ್ಯೂಹಗಳಿವೆ. ಹವಳದ ದಿಬ್ಬಗಳಿಂದ ಕೂಡಿದ ಸಣ್ಣ ದ್ವೀಪಗಳಿವೆ. ಮೇಲನೇಷ್ಯದ ಎಲ್ಲ ಭಾಗಗಳಲ್ಲಿಯೂ ಆಗಾಗ್ಗೆ ಭೂಕಂಪ ಮತ್ತು ಜ್ವಾಲಾಮುಖಿ ವಿಸ್ಫೋಟವಾಗುತ್ತಿರುತ್ತದೆ.

ಈ ದ್ವೀಪಗಳಲ್ಲಿ ಉಷ್ಣವಲಯದ ಹವೆಯಿದ್ದು ವರ್ಷವೆಲ್ಲ ಬೇಸಗೆಯ ವಾತಾವರಣವಿರುತ್ತದೆ. ಆದರೆ ನ್ಯೂಗಿನಿಯ ಬೆಟ್ಟಪ್ರದೇಶದಲ್ಲಿ ತಂಪಾದ ಹವಾಗುಣವಿರುತ್ತದೆ. ಇಲ್ಲಿಯ ಸರಾಸರಿ ಉಷ್ಣತೆ $25^{0}$ಸೆ.– $28^{0}$ಸೆ. ಮಳೆ ಡಿಸೆಂಬರ್ – ಏಪ್ರಿಲ್‌ತನಕ ಸಾಂದ್ರೀಕೃತವಾಗಿದ್ದು ಗಾಳಿ ಬೀಸುವ ಕಡೆಗಳಲ್ಲಿ ವಾರ್ಷಿಕ ಮಳೆ ಪ್ರಮಾಣ 700–900 ಸೆಂಮೀ. ಗಾಳಿ ಮರೆಯ ಕಡೆಯ ಭಾಗಗಳಲ್ಲಿ ಅದರ ಪ್ರಮಾಣ 100–200 ಸೆಂಮೀ. ಮಳೆಯ ಪ್ರಮಾಣ ದ್ವೀಪದಿಂದ ದ್ವೀಪಕ್ಕೆ ಬದಲಾಗುತ್ತದೆ. ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಮಳೆಗಾಲ. ಆಗಾಗ ಬೀಸುವ ಬಿರುಗಾಳಿಯಿಂದ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಗುವುದು.

ಮೆಲನೇಷ್ಯದ ಉತ್ತರಭಾಗದಲ್ಲಿ ದಟ್ಟವಾದ ಉಷ್ಣವಲಯದ ಕಾಡುಗಳಿವೆ. ಈ ಕಾಡುಗಳಲ್ಲಿ ಬ್ರೆಡ್‌ಫ್ರೂಟ್, ರಬ್ಬರ್, ತಾಳೆ, ತೇಗ ಮತ್ತು ಗಂಧದ ಮರಗಳಿವೆ. ಮಧ್ಯ ಹಾಗೂ ದಕ್ಷಿಣಭಾಗದ ದ್ವೀಪಗಳಲ್ಲಿ ಮಾನ್‌ಸೂನ್ ಮತ್ತು ಸವನ್ನ ಸಸ್ಯವರ್ಗಗಳಿವೆ. ತೀರಪ್ರದೇಶದಲ್ಲಿ ಮ್ಯಾಂಗ್ರೋವ್ ಜೌಗುಪ್ರದೇಶಗಳಿವೆ. ಇಲ್ಲಿ ಕಂಡುಬರುವ ಪ್ರಾಣಿಗಳೆಂದರೆ ಕಾಂಗರೂ, ಆ್ಯಂಟ್ ಈಟರ್, ಜಿಂಕೆ, ಇಲಿ, ಬಾವಲಿ ವಿವಿಧ ಬಗೆಯ ಮೀನುಗಳು ಹಾಗೂ ಪಕ್ಷಿಗಳು.

ಜನಜೀವನ : ಮೆಲನೇಷ್ಯದ ನಿವಾಸಿಗಳನ್ನು ಓಷನಿಕ್ ನೀಗ್ರೋಯಿಡ್ ಪಂಗಡಕ್ಕೆ ಸೇರಿದವರೆಂದು ಪರಿಗಣಿಸಲಾಗಿದೆ. ಇವರಲ್ಲಿ ಮೂರು ಮುಖ್ಯ ಪಂಗಡಗಳಿವೆ – ಮೆಲನೇಷ್ಯನ್ನರು, ಪಪ್ಪುವನ್ನರು ಮತ್ತು ಪಿಗ್ಮಿಗಳು. ಕೊನೆಯ ಎರಡು ಪಂಗಡದ ಜನರು ನ್ಯೂಗಿನಿಯಲ್ಲಿ ಮಾತ್ರ ಇದ್ದಾರೆ. ಹೆಚ್ಚುಮಂದಿ ಕಪ್ಪು ಬಣ್ಣದವರಾದ್ದರಿಂದ ಇವರನ್ನು ನೀಗ್ರೋಗಳೆಂದು ಕೆಲವರು ಪರಿಗಣಿಸುತ್ತಾರೆ. ಕೆಲವು ಪಂಗಡಗಳಲ್ಲಿ ಅನುವಂಶಿಕತೆಯ ಕಾರಣದಿಂದ ತಿಳಿ ಕಂದುಬಣ್ಣದ ಜನರನ್ನು ನೋಡಬಹುದು. ಇವರ ತಲೆಗೂದಲು ಗುಂಗುರಾಗಿದೆ. ದೊಡ್ಡ ದವಡೆ ಹಾಗೂ ಬಾಚಿಹಲ್ಲುಗಳು ಇವರ ದೈಹಿಕ ಲಕ್ಷಣಗಳು. ಮೆಲನೇಷ್ಯದಲ್ಲಿ ಅಲ್ಪಸಂಖ್ಯೆಯ ಯುರೋಪಿಯನ್ನರು, ಪಾಲಿನೇಷ್ಯನ್ನರು, ಚೀನಿಯರು, ವಿಯಟ್ನಾಮಿಯರು, ಅರಬ್ ಮತ್ತು ಯಹೂದಿಗಳು ಇದ್ದಾರೆ. ಮೆಲನೇಷ್ಯದಲ್ಲಿ 700 ಕ್ಕೂ ಹೆಚ್ಚು ಪ್ರತ್ಯೇಕ ಭಾಷೆಗಳಿವೆ. ಸಾಲೊಮನ್ಸ್, ನ್ಯೂ ಬ್ರಿಟನ್ ಹಾಗೂ ನ್ಯೂಗಿನಿ ದ್ವೀಪಗಳ ಒಳನಾಡಿನಲ್ಲಿ ಬಳಕೆಯಲ್ಲಿರುವ ಭಾಷೆಗಳಿಗೆ ಪಪ್ಪುವನ್ ಎಂದು ಕರೆಯಲಾಗುತ್ತದೆ. ಈ ದ್ವೀಪಗಳ ತೀರ ಪ್ರದೇಶದಲ್ಲಿ ಮತ್ತು ಮೆಲನೇಷ್ಯದ ಉಳಿದ ಎಲ್ಲ ಭಾಗಗಳಲ್ಲಿ

ಆಸ್ಟ್ರೋನೇಷ್ಯನ್ ಅಥವಾ ಮಲಯೊ – ಪಾಲಿನೇಷ್ಯನ್ ಮೂಲಕ್ಕೆ ಸೇರಿದ ಭಾಷೆಗಳು ಬಳಕೆಯಲ್ಲಿವೆ. ಇಲ್ಲಿಯ ದ್ವೀಪಗಳಲ್ಲಿ ಇಂಗ್ಲಿಷನ್ನು ಹೆಚ್ಚು ಬಳಸುತ್ತಾರೆ. ಸಾಲೊಮನ್ಸ್, ಪಾಪುವ ನ್ಯೂಗಿನಿ, ಫೀಜಿ ಮತ್ತು ನಾರ್‌ಫೋಕ್ ದ್ವೀಪಗಳ ಆಡಳಿತ ಭಾಷೆ ಇಂಗ್ಲಿಷ್, ನ್ಯೂ ಕ್ಯಾಲಿಡೋನಿಯದ ಆಡಳಿತ ಭಾಷೆ ಫ್ರೆಂಚ್, ವನುವಾಟು ಮತ್ತು ಬಿಸ್ಮಾರ್ಕ್‌ಗಳಲ್ಲಿ ಫ್ರೆಂಚ್ ಹಾಗೂ ಇಂಗ್ಲಿಷ್ ಆಡಳಿತಭಾಷೆಗಳು. ಅಮೆರಿಕದ ನ್ಯಾಸ ಪ್ರದೇಶಗಳ ದ್ವೀಪಗಳಲ್ಲಿ ಜಪಾನೀ ಭಾಷೆಯನ್ನು ಆಡುತ್ತಾರೆ. ಈ ದ್ವೀಪಗಳು 1920 – 45ರ ತನಕ ಜಪಾನಿನ ಸ್ವಾಧೀನದಲ್ಲಿದ್ದುದೇ ಇದಕ್ಕೆ ಕಾರಣ.

ಫೀಜಿ ಬಿಟ್ಟು ಮೆಲನೇಷ್ಯದ ಉಳಿದ ದ್ವೀಪಗಳಲ್ಲಿ ಪಿಡ್ಜಿನ್ ಇಂಗ್ಲಿಷ್ ಅಥವಾ ನಿಯೋ ಮೆಲನೇಷ್ಯನ್ ಎಂಬ ಭಾಷೆ ಬಳಕೆಯಲ್ಲಿದೆ. ಇದರಲ್ಲಿ ಇಂಗ್ಲಿಷ್ ಹಾಗೂ ಇತರ ಸ್ಥಳೀಯ ಭಾಷೆಗಳ ಪದಗಳಿವೆ. ನೂರಾರು ಭಾಷೆಗಳನ್ನಾಡುವ ಜನರಿರುವ ಮೆಲನೇಷ್ಯದಲ್ಲಿ ಪಿಡ್ಜಿನ್ ಇಂಗ್ಲಿಷ್ ಸಂಪರ್ಕ ಭಾಷೆಯಾಗಿದೆ.

19 ನೆಯ ಶತಮಾನದಿಂದೀಚೆಗೆ ಕ್ರೈಸ್ತಧರ್ಮ ಇಲ್ಲಿಯ ಪ್ರಮುಖ ಧರ್ಮವಾಗಿದೆ. ಇದಕ್ಕೆ ಮೊದಲು ಇಲ್ಲಿ ಬೇರೆ ಬೇರೆ ದೇವರುಗಳನ್ನು ನಂಬುವ ಜಟಿಲವಾದ ಪುರಾಣಗಳಿರುವ ಅನೇಕ ಮತಧರ್ಮಗಳಿದ್ದವು. ಇಲ್ಲಿ ಹಿಂದೆ ನರಮಾಂಸಭಕ್ಷಣೆ ಅಸ್ತಿತ್ವದಲ್ಲಿತ್ತಂತೆ. ಈಗಲೂ ನ್ಯೂಗಿನಿಯಲ್ಲಿ ಮಾತ್ರ ಅಪರೂಪವಾಗಿ ನರಮಾಂಸಭಕ್ಷಣೆ ಉಂಟೆಂದು ಪ್ರತೀತಿ. ಮೆಲನೇಷ್ಯದ ಕೆಲವು ಭಾಗಗಳಲ್ಲಿ ಕಾರ್ಗೋ ಎಂಬ ಮತಧರ್ಮ ಅಸ್ತಿತ್ವದಲ್ಲಿತ್ತು. ಪಾಶ್ಚಿಮಾತ್ಯರ ಜೀವನದೊಡನೆ ಹೋಲಿಸಿಕೊಂಡ ಕೆಲವರು ತಮ್ಮ ಜೀವನಮಟ್ಟದ ಬಗ್ಗೆ ಅತೃಪ್ತಿಪಟ್ಟರಂತೆ. ಅವರ ಅತೃಪ್ತಿಯೇ ಈ ಧರ್ಮದ ಉಗಮಕ್ಕೆ ಮೂಲಕಾರಣವೆನ್ನುವರು. ಈ ಧರ್ಮವನ್ನು ನಂಬುವ ಪಾಶ್ಚಿಮಾತ್ಯರು ತಾವು ಅನುಭವಿಸುತ್ತಿರುವ ಭೋಗವಸ್ತುಗಳಲ್ಲಿ ತಮಗೂ ಒಂದು ಪಾಲಿದೆಯೆಂದು ಈ ಭೋಗವಸ್ತುಗಳು ತುಂಬಿರುವ ದೊಡ್ಡ ಹಡಗುಗಳು ಅಥವಾ ವಿಮಾನಗಳು ಒಂದು ದಿನ ಇಲ್ಲಿಗೆ ಬಂದು ತಮ್ಮ ದಾರಿದ್ರ್ಯ ನೀಗುತ್ತವೆಂಬ ಮಿಥ್ಯಾ ನಂಬಿಕೆಯುಳ್ಳವರು.

ಮೆಲನೇಷ್ಯದಲ್ಲಿ ಬಹುಪಾಲು ಪಂಗಡಗಳು ಸಣ್ಣ ಪ್ರಮಾಣದವು. ಇವು ಒಂದೇ ಅನುವಂಶಿಕತೆಯ ಆಧಾರದ ಮೇಲೆ ರೂಪಿತವಾಗಿವೆ. ಬಹುಪಾಲು ಹಳ್ಳಿಗಳು ಸ್ವತಂತ್ರವಾಗಿವೆ. ಕೆಲವು ಪಂಗಡಗಳ ಮುಖಂಡತ್ವ ವಂಶಪಾರಂಪರ್ಯವಾಗಿ ಬರುವುದು. ಉಳಿದವುಗಳಲ್ಲಿ ಪಂಗಡದ ಶಕ್ತಿಶಾಲಿ ವ್ಯಕ್ತಿ ನಾಯಕನಾಗುತ್ತಾನೆ.

ಯುರೋಪಿಯನ್ನರ ಸಂಬಂಧ ಇಲ್ಲಿಯ ಅನೇಕ ಪಂಗಡಗಳಿಗೆ ವಿನಾಶಕಾರಿಯಾಗಿ ಪರಿಣಮಿಸಿತು. ಬಂದೂಕುಗಳು, ಹೊಸ ರೋಗಗಳು, ಬಲಾತ್ಕಾರದ ಜೀತಪದ್ಧತಿ ಇವುಗಳಿಂದ ಅನೇಕ ಪಂಗಡಗಳು ನಾಶವಾಗುವ ಸ್ಥಿತಿಗೆ ಬಂದವು. ಇತ್ತೀಚಿನ ಜವಾಬ್ದಾರಿಯುತ ಯುರೋಪಿಯನ್ ಸರ್ಕಾರಗಳು ತಮ್ಮ ಜನರು ಮಾಡುತ್ತಿದ್ದ ದುರುಪಯೋಗವನ್ನು ನಿಲ್ಲಿಸಿ ವೈದ್ಯಕೀಯ ಹಾಗೂ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಸ್ಥಳೀಯರಿಗೆ ಕಲ್ಪಿಸಿದವು. ಆರ್ಥಿಕ ಅಭಿವೃದ್ಧಿ ಹಾಗೂ ಪಂಗಡಗಳ ನಡುವೆ ಪರಸ್ಪರ ಯುದ್ಧ ನಿಲುಗಡೆಯಿಂದ ಸೌಹಾರ್ದಯುತ ಸಂಬಂಧ ಬೆಳೆಯಿತು. ಯುರೋಪಿಯನ್ನರ ಸಂಪರ್ಕದಿಂದ ಹೊಸ ಆರ್ಥಿಕ ಆವಶ್ಯಕತೆಗಳು ಮತ್ತು ಧಾರ್ಮಿಕ ನಂಬಿಕೆಗಳು ಪ್ರಚಾರವಾದವು. ಇವು ಸಿಗದೆ ಆಶಾಭಂಗವಾದ ಮೆಲನೇಷ್ಯನ್ನರು ಹೊಸ ಧಾರ್ಮಿಕ ಪಂಗಡಗಳನ್ನು ಪ್ರಾರಂಭಿಸಿದರು. ಕಾರ್ಗೋ ಕಲ್ಟ್ ಎಂಬುದು ಇದರಲ್ಲಿ ಒಂದು. ಎರಡನೆಯ ಮಹಾಯುದ್ಧದ ಅನಂತರ ಜನರ ಅತೃಪ್ತಿ ಇನ್ನೂ ಹೆಚ್ಚಾಗಿ ಕಾರ್ಗೋ ಕಲ್ಟ್ ಮೆಲನೇಷ್ಯದ ಎಲ್ಲ ಭಾಗಗಳಲ್ಲೂ ಹರಡಿತು. ರಾಜಕೀಯ ಹಾಗೂ ಆರ್ಥಿಕ ಸ್ವಯಂಭಿವೃದ್ಧಿಯ ಉದ್ದೇಶ ಹೊಂದಿದ ಅನೇಕ ಮತಪದ್ಧತಿಗಳು ಪ್ರಾರಂಭವಾದವು. ಇವುಗಳಲ್ಲಿ ಅಡ್ಮಿರಾಲಿಟಿ ದ್ವೀಪಗಳಲ್ಲಿಯ ಪಲಿಯೊ ಚಳವಳಿ ಹಾಗೂ ಸಾಲೊಮನ್ ದ್ವೀಪಗಳಲ್ಲಿಯ ಮಾರ್ಚಿಂಗ್ ರೂಲ್ ಚಳವಳಿ ಸೇರಿದೆ. ಈ ಹೊಸ ಮತಪದ್ಧತಿಗಳು ಅನೇಕ ವೇಳೆ ಯುರೋಪಿಯನ್ ಅಧಿಕಾರಶಾಹಿಗೆ ವಿರೋಧವಾಗಿ ರಾಜಕೀಯ ಬಿಕ್ಕಟ್ಟಿಗೆ ಕಾರಣವಾದವು.

ಮೆಲನೇಷ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 75 ರಷ್ಟು ಜನ ಪಪುವ ನ್ಯೂಗಿನಿ ಒಂದರಲ್ಲೇ ವಾಸಿಸುತ್ತಾರೆ. ಶೇ. 15 ರಷ್ಟು ಜನ ಫೀಜಿಯಲ್ಲಿಯೂ ಶೇ. 6 ರಷ್ಟು ಸಾಲೊಮನ್ ದ್ವೀಪಗಳಲ್ಲೂ ಶೇ. 3 ರಷ್ಟು ನ್ಯೂ ಕ್ಯಾಲಿಡೋನಿಯ ಮತ್ತು ವನುವಾಟು ದ್ವೀಪದಲ್ಲೂ ವಾಸಿಸುತ್ತಾರೆ. ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ಇಲ್ಲಿ ಹೆಚ್ಚು. ಹೀಗಾಗಿ ಮೆಲನೇಷ್ಯದ ಜನಸಂಖ್ಯೆಯ 2/5 ರಷ್ಟು ಜನ 15 ವರ್ಷಗಳಿಗಿಂತ ಕಡಿಮೆ ವಯಸ್ಸಿನವರು. ನಗರವಾಸಿಗಳ ಒಟ್ಟು ಜನ ಸಂಖ್ಯೆ 1/5 ಭಾಗಕ್ಕೂ ಕಡಿಮೆ.

ಆಡಳಿತ : ಫೀಜಿ, ಪಪುವ ನ್ಯೂಗಿನಿ, ಸಾಲೊಮನ್ ದ್ವೀಪಗಳು ಮತ್ತು ವನುವಾಟು ಕಾಮನ್‌ವೆಲ್ತ್ ಸಮುದಾಯದಲ್ಲಿ ಸ್ವತಂತ್ರ್ಯ ರಾಜ್ಯಗಳು. ಇವುಗಳಲ್ಲಿ ಪಾರ್ಲಿಮೆಂಟರಿ ಪದ್ಧತಿಯ ಸರ್ಕಾರಗಳಿವೆ. ನ್ಯೂ ಕ್ಯಾಲಿಡೋನಿಯ ಫ್ರೆಂಚ್ ಸಾಗರೋತ್ತರ ಪ್ರದೇಶ. ನಾರ್‌ಫೋಕ್ ದ್ವೀಪ ಆಸ್ಟ್ರೇಲಿಯಕ್ಕೆ ಸೇರಿದೆ. ಮೆಲನೇಷ್ಯದ ನ್ಯಾಯಾಂಗ ಪದ್ಧತಿ ಬ್ರಿಟಿಷ್ ಅಥವಾ ಫ್ರೆಂಚ್ ಮಾದರಿಯಲ್ಲಿದೆ.

ಮೆಲನೇಷ್ಯದಲ್ಲಿ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಸಾಕಷ್ಟಿಲ್ಲದಿದ್ದರೂ ಉಚಿತ ಅಥವಾ ಕಡಿಮೆ ಬೆಲೆಗೆ ವೈದ್ಯಕೀಯ ಸಹಾಯ ದೊರೆಯುತ್ತದೆ. ದೊಡ್ಡ ದ್ವೀಪಗಳಲ್ಲಿ ಆಸ್ಪತ್ರೆಗಳಿವೆ. ಉಳಿದ ಸಣ್ಣ ದ್ವೀಪಗಳಲ್ಲಿ ಔಷಧಾಲಯಗಳಿದ್ದರೂ ಇಲ್ಲಿ ವೈದ್ಯಕೀಯ ಸಿಬ್ಬಂದಿಯ ಕೊರತೆಯಿದೆ.

ಆರ್ಥಿಕತೆ : ಇಲ್ಲಿಯ ಜನರ ಮುಖ್ಯ ಕಸಬು ಕೃಷಿ ಹಾಗೂ ಮೀನುಗಾರಿಕೆ. ಬ್ರೆಡ್‌ಫ್ರೂಟ್, ಟಾರೋ, ಕೆಸವು, ಗೆಣಸು, ಕಬ್ಬು, ತಾಳೆ, ಬಾಳೆಹಣ್ಣು, ರಬ್ಬರ್, ಕೋಕೋ, ತರಕಾರಿಗಳು, ಹೊಗೆಸೊಪ್ಪು ಇಲ್ಲಿ ವಿಶೇಷವಾಗಿ ಬೆಳೆಯಲಾಗುತ್ತದೆ. ಫೀಜಿ ಮತ್ತು ನ್ಯೂ ಹೆಬ್ರಿಡೀಸ್ ದ್ವೀಪಗಳಲ್ಲಿ ಕಾವಾ ಎಂಬ ಪಾನೀಯ ತಯಾರಿಸುವರು. ಇಲ್ಲಿ ಕೃಷಿ ಭೂಮಿಯ ಒಡೆತನ ಒಟ್ಟು ಸಮುದಾಯಕ್ಕೆ ಸೇರಿದೆ. ವೈಯಕ್ತಿಕ ಒಡೆತನವಿಲ್ಲ. ಪಶುಪಾಲನೆ ಸಹ ಸಾಮುದಾಯಿಕವಾಗಿ ನಡೆಸಲಾಗುತ್ತಿದೆ. ಹಂದಿ, ನಾಯಿ ಮತ್ತು ಕೋಳಿ ಇಲ್ಲಿಯ ಸಾಕುಪ್ರಾಣಿಗಳು. ನ್ಯೂಕ್ಯಾಲಿಡೋನಿಯ, ನ್ಯೂಗಿನಿ ಹಾಗೂ ಫೀಜಿಗಳಲ್ಲಿ ಗಣಿ ಉದ್ಯಮ ಪ್ರಮುಖವಾಗಿದೆ. ನಿಕ್ಕಲ್ ಉತ್ಪಾದನೆಯಲ್ಲಿ ಪ್ರಪಂಚದಲ್ಲಿಯೇ ಅತ್ಯಂತ ಪ್ರಮುಖ ರಾಷ್ಟ್ರಗಳಲ್ಲಿ ನ್ಯೂಕ್ಯಾಲಿಡೋನಿಯ ಒಂದು. ಪಪುವ ನ್ಯೂಗಿನಿಯಲ್ಲಿ ತಾಮ್ರ, ಬೆಳ್ಳಿ ಮತ್ತು ಚಿನ್ನ ಸಿಗುತ್ತದೆ.

ಇತಿಹಾಸ : ಪಶ್ಚಿಮ ಮೆಲನೇಷ್ಯದಲ್ಲಿ 30,000 ವರ್ಷಗಳಿಗೂ ಹಿಂದಿನಿಂದ ಪಾಪುವನ್ ಜನ ನೆಲೆಸಿದ್ದಾರೆಂದು ಹೇಳಲಾಗಿದೆ. ಆಸ್ಟ್ರೋನೇಷ್ಯನ್ ಮಾತನಾಡುವ ಜನ ಸು. 5,000 ವರ್ಷಗಳ ಹಿಂದೆ ಈ ಪ್ರದೇಶವನ್ನು ಪ್ರವೇಶಿಸಿದರೆಂದೂ 50,000 ವರ್ಷಗಳಿಗೂ ಹಿಂದೆ ನ್ಯೂಗಿನಿಯ ಮೂಲಕ ಮಾನವರು ಆಸ್ಟ್ರೇಲಿಯವನ್ನು ಪ್ರವೇಶಿಸಿದರೆಂದೂ ಕೆಲವು ತಜ್ಞರ ಅಭಿಪ್ರಾಯ.

ಇಲ್ಲಿಗೆ ಬಂದ ಯುರೋಪಿಯನ್ನರಲ್ಲಿ ಮೊದಲನೆಯವನು 1567 ರಲ್ಲಿ ಸಾಲೊಮನ್ ದ್ವೀಪವನ್ನು ಸೇರಿದ ಸ್ಪೇನ್ ದೇಶೀಯ ಆಲ್ವಾರೋ ಡಿ ಮಜೆಂಡಾನಾ. ಸ್ಪೇನಿನವರಾದ ಫರ್ನಾಂಡಿಸ್ ಡಿ ಕ್ವಿರೋಸ್ ಎಂಬಾತ ನ್ಯೂ ಹೆಬ್ರಿಡೀಸ್ ದ್ವೀಪವನ್ನೂ ವಾಜ್ ಡಿ ಟೋರೆಸ್ ಎಂಬಾತ ಆಗ್ನೇಯ ನ್ಯೂಗಿನಿಯನ್ನು ಕಂಡುಹಿಡಿದರು (1606). ಡಚ್ಚನಾದ ಜಾಕ್ವಿಸ್ ಲಿ ಮೆರೆ ಎಂಬಾತ ಬಿಸ್ಮಾರ್ಕ್ ದ್ವೀಪಸ್ತೋಮ, ನ್ಯೂ ಐರ್ಲೆಂಡ್ ಮತ್ತು ಹನೋವರ್ ದ್ವೀಪಗಳಿಗೆ ಬಂದ (1615–16). ಅಬೆಲ್‌ಜಾನ್ಸೂನ್ ಟಾಸ್ಮಾನ್ ಎಂಬಾತ 1642 ರಲ್ಲಿ ಫೀಜಿ ಹಾಗೂ ನ್ಯೂಬ್ರಿಟಿಷ್ ತಲಪಿದ. 18 ನೆಯ ಶತಮಾನದ ಮೊದಲ ಭಾಗದಲ್ಲಿ ಬ್ರಿಟಿಷರ ಪರಿಶೋಧನೆ ಇಲ್ಲಿ ಪ್ರಾರಂಭವಾಯಿತು. ಬ್ರಿಟಿಷ್ ನಾವಿಕ ಕ್ಯಾಪ್ಟನ್ ಜೇಮ್ಸ್ ಕುಕ್ ಫೀಜಿ, ನ್ಯೂ ಕ್ಯಾಲಿಡೋನಿಯ, ನ್ಯೂ ಹೆಬ್ರಿಡೀಸ್ ಮತ್ತು ನಾರ್ಫೋಕ್ ದ್ವೀಪಗಳನ್ನು 1772–75 ರಲ್ಲಿ ಪೆಸಿಫಿಕ್ ಸಾಗರದ ತನ್ನ ದ್ವಿತೀಯ ಕಡಲ ಯಾನದಲ್ಲಿ ಪರಿಶೋಧಿಸಿದ. ಇಲ್ಲಿ ಬಂದು ನೆಲೆಸಿದವರಲ್ಲಿ 19ನೆಯ ಶತಮಾನದಲ್ಲಿ ಬಂದ ಮಿಷನರಿಗಳೇ ಮೊದಲನೆಯವರು.

1828 ರಲ್ಲಿ ಪಶ್ಚಿಮ ನ್ಯೂಗಿನಿಯನ್ನು ಡಚ್ಚರು , 1853 ರಲ್ಲಿ ನ್ಯೂ ಕ್ಯಾಲಿಡೋನಿಯವನ್ನು ಫ್ರೆಂಚರು, ಫೀಜಿ (1874) ಹಾಗು ನ್ಯೂಗಿನಿಯ ಆಗ್ನೇಯ ಭಾಗವನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಂಡರು (1888). ಜರ್ಮನ್ನರು ಈಶಾನ್ಯ ನ್ಯೂಗಿನಿ ಮತ್ತು ಸಾಲೊಮನ್ ದ್ವೀಪಗಳ ಸ್ವಲ್ಪ ಭಾಗವನ್ನು ವಶಪಡಿಸಿಕೊಂಡರು (1884). ಸಾಲೊಮನ್ ದ್ವೀಪಗಳ ಉಳಿದ ಭಾಗದಲ್ಲಿ ಬ್ರಿಟನ್ ರಕ್ಷಣಾಧಿಕಾರವನ್ನು ಸ್ಥಾಪಿಸಿತು (1893). ನ್ಯೂ ಹೆಬ್ರಿಡೀಸ್ ಸ್ವಾಮ್ಯಕ್ಕಾಗಿ ಇಂಗ್ಲಿಷರ ಮತ್ತು ಫ್ರೆಂಚರ ನಡುವೆ ಪೈಪೋಟಿಯಾಗಿ 1906 ರಲ್ಲಿ ಇಬ್ಬರೂ ಪ್ರಭುತ್ವ ಸ್ಥಾಪಿಸಿದರು. ಆಸ್ಟ್ರೇಲಿಯನ್ನರು 1909 ರಲ್ಲಿ ಬ್ರಿಟಿಷ್ ಅಧೀನದ ನ್ಯೂಗಿನಿಯಲ್ಲಿ ಆಡಳಿತ ನಡೆಸಲು ಪ್ರಾರಂಭಿಸಿ, 1914 ರಲ್ಲಿ ಜರ್ಮನ್ನರ ಅಧೀನದಲ್ಲಿದ್ದ ನ್ಯೂಗಿನಿಯ ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಪಶ್ಚಿಮ ನ್ಯೂಗಿನಿ 1969 ರಲ್ಲಿ ಇಂಡೋನೇಷ್ಯದ ಪ್ರಾಂತ್ಯವಾಯಿತು. 1975 ರಲ್ಲಿ ನ್ಯೂಗಿನಿಯ ಪೂರ್ವ ಭಾಗ ಸ್ವತಂತ್ರವಾಗಿ ಪಪುವ ನ್ಯೂಗಿನಿ ಎಂಬ ಹೆಸರು ಪಡೆಯಿತು. 1978 ರಲ್ಲಿ ಸಾಲೊಮನ್ ದ್ವೀಪಗಳು ಸ್ವತಂತ್ರವಾದವು. (ಜಿ.ಎಸ್.ಎಸ್.)

**ಮೆಲ್ಬರ್ನ್:** ಆಸ್ಟ್ರೇಲಿಯದ ದೊಡ್ಡ ನಗರಗಳ ಪೈಕಿ ಎರಡನೆಯದು. ವಿಕ್ಟೋರಿಯ ರಾಜ್ಯದ ರಾಜಧಾನಿ. ವಾಣಿಜ್ಯ ಮತ್ತು ಕೈಗಾರಿಕೆಯ ಪ್ರಮುಖ ಕೇಂದ್ರ ನಗರವಾಗಿದ್ದು ಪೋರ್ಟ್ ಫಿಲಿಪ್‌ಕೊಲ್ಲಿ ಬಳಿಯಿದೆ. ನಗರ ವಿಸ್ತೀರ್ಣ 5,960 ಚ.ಕಿಮೀ. ಜನಸಂಖ್ಯೆ 31,88,000 (2002). ಉಷ್ಣಾಂಶ ಜುಲೈ ತಿಂಗಳಲ್ಲಿ $13^0$ಸೆ. ಜನವರಿಯಲ್ಲಿ $26^0$ಸೆ. ವಾರ್ಷಿಕ ಸರಾಸರಿ ಮಳೆ 68 ಸೆಂಮೀ. ಈ ನಗರದಲ್ಲಿ ರಾಜ್ಯ ವಿಕ್ಟೋರಿಯ ಗ್ರಂಥಾಲಯ, ಸಂಸತ್‌ಭವನ, ಅನೇಕ ಮುಖ್ಯ ಸುಂದರ ಕಟ್ಟಡಗಳು ಇವೆ. ನಗರದ ಉದ್ದಕ್ಕೂ ಹರಿಯುವ ಯರ ನದಿಯ ಅಕ್ಕಪಕ್ಕದಲ್ಲಿ ಸುಂದರ ಉದ್ಯಾನಗಳನ್ನೂ ತೋಟಗಳನ್ನೂ ನಿರ್ಮಿಸಲಾಗಿದೆ. ಫ್ಲೆಮಿಂಗ್‌ಟನ್ ವೈಹಾಳಿಪಥದಲ್ಲಿ (ರೇಸ್‌ಕೋರ್ಸ್) ಪ್ರತಿ ವರ್ಷವೂ ಮೆಲ್ಬರ್ನ್‌ಕಪ್ ಎಂಬ ಪ್ರಸಿದ್ಧ ಕುದುರೆ ಜೂಜು ನಡೆಯುತ್ತದೆ.

ನಗರದಲ್ಲಿ ಲಾಟ್ರೋಬ್ (1964), ಮೆಲ್ಬರ್ನ್ (1855) ಮತ್ತು ಮೊನಾಷ್ (1958) ಎಂಬ ವಿಶ್ವವಿದ್ಯಾಲಯಗಳಿವೆ. ಎಂಜಿನಿಯರಿಂಗ್ ಶಿಕ್ಷಣ ಪಡೆಯಲು ದಿ ರಾಯಲ್

ಮೆಲ್ಬರ್ನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬ ಸಂಸ್ಥೆಯುಂಟು. ಸುಪ್ರಸಿದ್ಧ ಗಾನಗೋಷ್ಠಿಗಳೂ ನಾಟಕ ಪ್ರಹಸನಗಳೂ ವಿಕ್ಟೋರಿಯ ಕಲಾಕೇಂದ್ರದಲ್ಲಿ (1968) ಜರುಗುತ್ತವೆ. ದಿ ನ್ಯಾಷನಲ್ ಗ್ಯಾಲರಿ ಆಫ್ ವಿಕ್ಟೋರಿಯ ಎಂಬುದು ಪ್ರಖ್ಯಾತ ಕಲಾವಸ್ತು ಸಂಗ್ರಹಾಲಯ ಇಲ್ಲಿದೆ.

ನಗರವಾಸಿಗಳ ಪೈಕಿ ಬಹುಮಂದಿ ಬ್ರಿಟಿಷ್ ಮೂಲದವರು. ಇಲ್ಲಿಯ ಒಟ್ಟು ಜನಸಂಖ್ಯೆಯಲ್ಲಿ ಸು. ಮುಕ್ಕಾಲುಭಾಗ ಆಸ್ಟ್ರೇಲಿಯದಲ್ಲೇ ಹುಟ್ಟಿ ಬೆಳೆದವರು. ಇಂಗ್ಲೆಂಡ್, ಗ್ರೀಸ್, ಇಟಲಿ ಮತ್ತಿತರ ಯುರೋಪ್ ರಾಷ್ಟ್ರಗಳಿಂದ ವಲಸೆ ಬಂದು ನೆಲೆಸಿರುವವರೂ ಉಂಟು. ಇವರು ಎರಡನೆಯ ಮಹಾಯುದ್ಧ ಸಮಯದಲ್ಲಿ ಈ ನಗರಕ್ಕೆ ಬಂದು ತಳವೂರಿದವರು. ಸು. 2700 ಮಂದಿ ಆಸ್ಟ್ರೇಲಿಯದ ಮೂಲವಾಸಿಗಳು ಇಲ್ಲಿ ನೆಲೆಸಿದ್ದಾರೆ. ನಗರವಾಸಿಗಳಲ್ಲಿ ಶೇ. 70 ರಷ್ಟು ಕುಟುಂಬಗಳು ಸ್ವಂತ ಮನೆಗಳನ್ನು ಹೊಂದಿವೆ. ನಗರದ ಪೂರ್ವ, ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಚಿಕ್ಕ ಚಿಕ್ಕ ಕುಟುಂಬಗಳಿರುವ ಉಪನಗರಗಳಿವೆ. ನಗರದ ಎಲ್ಲ ದಿಕ್ಕಿಗೂ ಸಾರಿಗೆ ವ್ಯವಸ್ಥೆ ಇಲ್ಲದಿದ್ದರೂ ಹೆದ್ದಾರಿಗಳಲ್ಲಿ ವಾಹನ ಸಂದಣಿ ಹೆಚ್ಚು.

ಸ್ವಯಂಚಾಲಿತ ಹಾಗೂ ಇನ್ನಿತರ ಯಂತ್ರಗಳು, ರಾಸಾಯನಿಕಗಳು, ಆಹಾರ ಪದಾರ್ಥಗಳು, ನೇಯ್ದ ಸರಕುಗಳು ಇಲ್ಲಿಯ ಪ್ರಮುಖ ಉತ್ಪನ್ನಗಳು. ನಗರದ ಸು. 10,000 ವಿವಿಧ ಕಾರ್ಖಾನೆಗಳು ಸು. 4,00,000 ಮಂದಿಗೆ ಕೆಲಸ ಒದಗಿಸಿವೆ. ನಗರದಲ್ಲಿ ಬ್ಯಾಂಕುಗಳೂ, ಜೀವ ವಿಮಾಕಚೇರಿಗಳೂ ಎಸ್ಟೇಟ್ ಕಂಪನಿಗಳೂ ಇವೆ. ಈ ನಗರದಲ್ಲೇ ಆಸ್ಟ್ರೇಲಿಯದ ದೊಡ್ಡ ಕೈಗಾರಿಕಾ ನಿಗಮವಾದ ಬ್ರೋಕನ್ ಹಿಲ್ ಪ್ರೊಪ್ರೈಟರಿ ಕಂಪನಿಯ ಪ್ರಧಾನ ಕಚೇರಿ ಇದೆ. ಈ ಕಂಪನಿ ಉಕ್ಕು ತಯಾರಿಕೆಗೆ ಮತ್ತು ಉಕ್ಕಿನ ಉತ್ಪನ್ನಗಳಿಗೆ ಪ್ರಸಿದ್ಧಿ. ಮೆಲ್ಬರ್ನ್ ಉತ್ತಮ ಬಂದರಾದ್ದರಿಂದ ಸರಕು ಸಾಗಾಣಿಕೆಗೆ ಅನುಕೂಲವಾಗಿದೆ. ಟ್ಯುಲಮೆರೈನ್ ಎಂಬಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ.

ಮೂಲನಿವಾಸಿಗಳಿಂದ ಕೂಡಿದ್ದ ಈ ನಗರಕ್ಕೆ ಮೊದಲನೆಯವನಾಗಿ ಕುರಿ ಸಾಗಾಣಿಕೆಗಾಗಿ ವಿಶಾಲ ಪ್ರದೇಶದ ಆವಶ್ಯಕತೆಯಿದ್ದ ಟಾಸ್ಮೇನಿಯ ದ್ವೀಪದ ಒಂದು ಗುಂಪಿನ ಪ್ರತಿನಿಧಿಯಾಗಿ ಬಂದ ಬ್ಯಾಟ್‌ಮನ್, ಈ ಪ್ರದೇಶವನ್ನು 1835ರ ಜೂನ್ ತಿಂಗಳಲ್ಲಿ ಗುರುತಿಸಿದ. ಸ್ಥಳೀಯ ಮೂಲನಿವಾಸಿಗಳಿಗೆ ಕಂಬಳಿಯನ್ನು, ಯುದ್ಧ ಕೊಡಲಿಗಳನ್ನು ಮತ್ತಿತರ ಸಾಮಗ್ರಿಗಳನ್ನು ಕೊಟ್ಟು ಅವರಿಂದ 240,000 ಹೆ. ಪ್ರದೇಶವನ್ನು ಕೊಂಡುಕೊಂಡ. 1835 ರ ಅಕ್ಟೋಬರ್ ತಿಂಗಳಲ್ಲಿ ಜಾನ್ ವಾಸ್ಕೋಫಾಕ್‌ನರ್ ಎಂಬವನ ನೇತೃತ್ವದಲ್ಲಿ ಟಾಸ್‌ಮೇನಿಯದ ಮತ್ತೊಂದು ಗುಂಪು ಇಲ್ಲಿಗೆ ಆಗಮಿಸಿತು. ವಿಲಿಯಮ್ ಲ್ಯಾಂಬ್, ವೈಕೌಂಟ್ ಮೆಲ್ಬರ್ನ್ (ಬ್ರಿಟಿಷ್ ಪ್ರಧಾನಿ) ಅವರ ಗೌರವಾರ್ಥ ನ್ಯೂ ಸೌತ್‌ವೇಲ್ಸ್‌ನ ರಾಜ್ಯಪಾಲ ಇದಕ್ಕೆ ಮೆಲ್ಬರ್ನ್ ಎಂಬುದಾಗಿ ನಾಮಕರಣ ಮಾಡಿದ.

1847 ರಲ್ಲಿ ಮೆಲ್ಬರ್ನ್ ಒಂದು ನಗರವೆಂದು ರಾಜ್ಯಕ್ಕೆ ಸೇರ್ಪಡೆಯಾಯಿತು. 1851 ರಲ್ಲಿ ನ್ಯೂಸೌತ್‌ವೇಲ್ಸ್‌ನ ಭಾಗವೊಂದು ಪ್ರತ್ಯೇಕವಾಗಿ ವಿಕ್ಟೋರಿಯ ಎಂದು ನಾಮಕರಣಗೊಂಡಿತು. ಮೆಲ್ಬರ್ನ್ ಅದರ ರಾಜಧಾನಿಯಾಯಿತು. ಅದೇ ವರ್ಷ ಗಣಿ ಕೆಲಸಗಾರರು ವಿಕ್ಟೋರಿಯ ಪ್ರಾಂತ್ಯದಲ್ಲಿ ಚಿನ್ನವನ್ನು ಶೋಧಿಸಿದರು. ಪರಿಣಾಮವಾಗಿ ಗಣಿಕೆಲಸಗಾರರ, ಮಾಲೀಕರ ಪೈಪೋಟಿ ಆರಂಭವಾಯಿತು. ಇದರಿಂದಾಗಿ ಜನಸಂಖ್ಯೆ 23,000 ಇದ್ದದ್ದು 140,000 (1861) ಆಯಿತು. ಸಿಡ್ನಿ ನಗರ ಬೆಳೆಯುವ ತನಕ (1902) ಮೆಲ್ಬರ್ನ್ ಆಸ್ಟ್ರೇಲಿಯದ ದೊಡ್ಡ ನಗರವೆಂದೇ ಖ್ಯಾತಿಗಳಿಸಿತ್ತು. ಅಲ್ಲದೆ 1901 – 27 ರ ತನಕ ಮೆಲ್ಬರ್ನ್ ಆಸ್ಟ್ರೇಲಿಯದ ರಾಜಧಾನಿಯಾಗಿತ್ತು. ಅನಂತರ ಈ ಸ್ಥಾನವನ್ನು ಕ್ಯಾನ್‌ಬೆರಾ ಆಕ್ರಮಿಸಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ (1939 – 45) ಈ ನಗರದಲ್ಲಿ ಅನೇಕ ಹೊಸ ಕೈಗಾರಿಕೆಗಳೂ ವಾಣಿಜ್ಯ ಸಂಸ್ಥೆಗಳೂ ಸ್ಥಾಪಿತಗೊಂಡವು. ಅದಕ್ಕನುಸಾರವಾಗಿ ದುಡಿಯುವ ಕೆಲಸಗಾರರೂ ಬಂದರು. 1950 – 60 ರ ಅವಧಿಯಲ್ಲಿ ನಗರ ಶೀಘ್ರಗತಿಯಲ್ಲಿ ಬೆಳೆಯಿತು. (ಆರ್.ಎಂ.ಕೆ.)

**ಮೆಸಪೊಟೇಮಿಯ[1]:** ಅರ್ಜೆಂಟೈನದಲ್ಲಿ ಪರಾನಾ ಮತ್ತು ಉರುಗ್ವೇ ನದಿಗಳ ನಡುವಣ ಫಲವತ್ತಾದ ಪ್ರದೇಶ. ವಿಸ್ತೀರ್ಣ ಸು. 1,91,660 ಚ.ಕಿಮೀ. ಬೆಟ್ಟಗುಡ್ಡಸಾಲುಗಳು, ನಡುನಡುವೆ ಜವುಗು ಪ್ರದೇಶಗಳು ಹಾಗೂ ಅರಣ್ಯಗಳಿಂದ ಕೂಡಿದ ಈ ಪ್ರದೇಶದ ಸರಾಸರಿ ವಾರ್ಷಿಕ ಮಳೆ ಸು. 100–150 ಸೆಂಮೀ. ಎಂಟ್ರೆರಿಯಾಸ್ ಮತ್ತು ಕಾರಿಯಾಂಟೆಸ್ ಪ್ರಾಂತ್ಯಗಳಿಂದ ಹಾಗೂ ಮಿಸಿಯೋನಸ್ ಪ್ರದೇಶದಿಂದ ಕೂಡಿದ ಇಲ್ಲಿಗೆ ಪೋಲೆಂಡ್, ರಷ್ಯ ಹಾಗೂ ಇತರ ಐರೋಪ್ಯ ದೇಶಗಳಿಂದ ಜನರು ಬಂದು ನೆಲೆಸಿದ್ದಾರೆ. ಹುಲ್ಲುಗಾವಲುಗಳು ಹೇರಳವಾಗಿದ್ದು ಅಪಾರ ಸಂಖ್ಯೆಯಲ್ಲಿ ದನಕರುಗಳಿಗೆ ಮೇವನ್ನು ಒದಗಿಸುತ್ತವೆ. ಕುರಿ ಸಾಕಣೆ ಪ್ರಧಾನ ವೃತ್ತಿ; ಸಾಗಾಣಿಕೆಯೂ ಸುಲಭ ಹಾಗೂ ಅಗ್ಗ. ಧಾನ್ಯ, ದವಸ, ಕಬ್ಬು, ನೆಲಗಡಲೆ ಮುಂತಾದವು ಇಲ್ಲಿಯ ಮುಖ್ಯ ಬೆಳೆಗಳು. (ಎಚ್.ಎಂ.ಎನ್.ಆರ್.)

**ಮೆಸಪೊಟೇಮಿಯ[2]:** ಮಧ್ಯಪ್ರಾಚ್ಯದ ಯೂಫ್ರಟೀಸ್ ಮತ್ತು ಟೈಗ್ರೀಸ್ ನದಿಗಳ ನಡುವಣ ಪ್ರದೇಶ ಅಂದರೆ ಅಂತರ್ನದಿ ವಲಯವನ್ನು ಮೆಸಪೊಟೇಮಿಯ (ನದಿಗಳ ನಡುವಣ ನಾಡು) ಎಂದು ಕರೆಯಲಾಗಿದೆ. ಆಗ್ನೇಯಕ್ಕೆ ಪರ್ಷಿಯನ್ ಖಾರಿ, ಪೂರ್ವ ಮತ್ತು ಉತ್ತರಕ್ಕೆ ಇರಾನ್, ಪಶ್ಚಿಮ ಹಾಗೂ ದಕ್ಷಿಣಕ್ಕೆ ಜೋರ್ಡಾನ್ ಆಚೆಗಿನ ಪ್ರದೇಶ ಮತ್ತು ಸೌದಿಅರೇಬಿಯದ ಮರುಭೂಮಿ ಇವುಗಳಿಂದ ಆವೃತವಾದ ವಾಸಯೋಗ್ಯ ಪ್ರದೇಶವಿದು. ಇಲ್ಲಿಯ ಎರಡು ಪ್ರಮುಖ ಭೌಗೋಳಿಕ ವಿಭಾಗಗಳೆಂದರೆ ಉತ್ತರದ ಪ್ರಸ್ಥಭೂಮಿ ಮತ್ತು ದಕ್ಷಿಣದ ಬಯಲುಪ್ರದೇಶ. ಪ್ರಾಚೀನ ಕಾಲದಲ್ಲಿ ಬ್ಯಾಬಿಲೋನಿಯ ಮತ್ತು ಅಸ್ಸೀರಿಯಗಳನ್ನು ಒಳಗೊಂಡಿದ್ದ ಮೆಸಪೊಟೇಮಿಯ ಈಗ ಸ್ವತಂತ್ರ್ಯ ಅರಬ್ಬೀ ರಾಜ್ಯವಾದ ಇರಾಕ್ ಆಗಿದೆ. ಇದು ಪುರಾತನ ನಾಗರೀಕತೆಯ ಕೇಂದ್ರ.

ಇತಿಹಾಸ : ಮೆಸಪೊಟೇಮಿಯದ ಪ್ರಸ್ಥಭೂಮಿಯಲ್ಲಿ ನವ ಶಿಲಾಯುಗದಷ್ಟು ಹಿಂದೆಯೇ ಮಾನವವಸತಿ ಆರಂಭವಾಯಿತೆಂದು ಹೇಳಬಹುದು. ಆದರೆ ಇಲ್ಲಿಯ ಬಯಲುಪ್ರದೇಶ ಪ್ರ.ಶ.ಪೂ. 5 – 4 ನೆಯ ಸಹಸ್ರಮಾನದ ತನಕ ಶಿಲಾಯುಗ ಸಂಸ್ಕೃತಿಯೂ ಪ್ರವೇಶಿಸದ ಜವುಗು ಪ್ರದೇಶವಾಗಿ ಉಳಿದಿತ್ತು. ಹಾಗಿದ್ದರೂ ಮೊದಲ ಮಹಾನಾಗರಿಕತೆಗಳು ಹುಟ್ಟಿ ಬೆಳೆದುದು ಈ ಬಯಲು ಪ್ರದೇಶದಲ್ಲಿಯೇ. ಮೆಸಪೊಟೇಮಿಯದ ಇತಿಹಾಸವನ್ನು ಪ್ರಾಚೀನ ಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲ ಎಂದು ಮೂರು ಪ್ರಧಾನ ಭಾಗಗಳಾಗಿ ವಿಂಗಡಿಸಬಹುದು. ಈ ಭಾಗಗಳು ಸಾಮ್ರಾಜ್ಯ, ವಂಶ ಅಥವಾ ಅಧಿಕಾರದಲ್ಲಿ ಉಂಟಾದ ಏರುಪೇರುಗಳಿಗೆ ಅನುಗುಣವಾಗಿ ಪುನರ್ ವಿಂಗಡಣೆಯಾಗುತ್ತವೆ. ಈ ನದಿಗಳ ನಡುವಣ ಭೂಮಿಯಲ್ಲಿ ಸಾಮ್ರಾಜ್ಯಗಳು ಹುಟ್ಟಿಬೆಳೆದು, ಯಶಸ್ಸಿನ ಶಿಖರವೇರಿ, ಕಳೆಗುಂದಿ ಅವನತಿ ಹೊಂದಿ ನಿರ್ನಾಮವಾಗಿವೆ. ವಿವಿಧ ಹಂತದ ಸಂಸ್ಕೃತಿ ಇಲ್ಲಿ ವಿಕಾಸಹೊಂದಿದೆ. (ಎಚ್.ಎಂ.ಎನ್.ಆರ್.)

**ಮೆಸಾಚುಸೆಟ್ಸ್:** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ಮೆಸಾಚುಸೆಟ್ಸ್ ಅಮೆರಿಕದ ಈಶಾನ್ಯ ಭಾಗದಲ್ಲಿದ್ದು ನ್ಯೂ ಇಂಗ್ಲೆಂಡ್ ವಲಯದ ಆರು ರಾಜ್ಯಗಳಲ್ಲಿ ಒಂದು. ಉತ್ತರಕ್ಕೆ ವೆರ್ಮಾಂಟ್ ಮತ್ತು ನ್ಯೂ ಹ್ಯಾಂಪ್ ಷೈರ್, ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ, ದಕ್ಷಿಣಕ್ಕೆ ರೋಡ್ ದ್ವೀಪ, ಕನೆಕ್ಟಿಕಟ್ ರಾಜ್ಯಗಳು ಮತ್ತು ಅಟ್ಲಾಂಟಿಕ್ ಸಾಗರ ಹಾಗೂ ಪಶ್ಚಿಮಕ್ಕೆ ನ್ಯೂಯಾರ್ಕ್ ರಾಜ್ಯ ಇದನ್ನು ಸುತ್ತುವರೆದಿದೆ. ವಿಸ್ತೀರ್ಣ 27360 ಚ.ಕಿಮೀ. ಜನಸಂಖ್ಯೆ 63,49,097 (2005). ರಾಜಧಾನಿ ಬಾಸ್ಟನ್. ಜನಸಂಖ್ಯೆ: 5,96,638 (2003)

ಭೂಲಕ್ಷಣ : ಈ ಪ್ರಾಂತ್ಯದ ತೀರಪ್ರದೇಶದ ಭಾಗಗಳು ಕೊನೆಯ ಹಿಮಯುಗದಲ್ಲಿ ಬೃಹತ್ ಹಿಮರಾಶಿಗಳಿಂದ ಕೂಡಿದ್ದವು. ಈ ಹಿಮರಾಶಿ ಸಾಗರಕ್ಕೆ ಸರಿದ ಮೇಲೆ ಅಲ್ಲಿ ಗಟ್ಟಿ ಮೇಲ್ಪದರದ ಕಲ್ಲುಗುಡ್ಡಗಳಿಂದ ಕೂಡಿದ ಸಮತಟ್ಟಾದ ಬಯಲುಗಳು ನಿರ್ಮಾಣಗೊಂಡವು. ಈ ವಲಯ ಮಧ್ಯ ಮೆಸಾಚುಸೆಟ್ಸ್‌ನ ಪ್ರಸ್ಥಭೂಮಿಯವರೆಗೂ ವ್ಯಾಪಿಸಿದೆ. ಪಶ್ಚಿಮದ ಕಡೆ ಕಲ್ಲುಗುಡ್ಡ ಬೆಟ್ಟಗಳಿಂದ ಕೂಡಿದ ಪ್ರದೇಶವಿದೆ. ಅಲ್ಲಲ್ಲಿ ಮರಳು ಮಿಶ್ರಿತ ನೆಲ ಕಂಡುಬರುತ್ತದೆ. ಮಧ್ಯ ಪ್ರಸ್ಥಭೂಮಿ ಮತ್ತು ಪಶ್ಚಿಮ ವಲಯದಲ್ಲಿ ಅಸಂಖ್ಯಾತ ನದಿತೊರೆಗಳು ಹರಿಯುತ್ತವೆ. ಅದರ ಆಚೆಗೆ ಕನೆಕ್ಟಿಕಟ್ ಕಣಿವೆ ಇದೆ. ಆಮೇಲೆ ಬೆರ್ಕ್‌ಷೈರ್ ಬೆಟ್ಟ ಶ್ರೇಣಿ ಬರುತ್ತದೆ. ಮೆಸಾಚುಸೆಟ್ಸ್‌ನ ಸರಹದ್ದಿನಲ್ಲಿ ಟಕೊನಿಕ್ ಶ್ರೇಣಿ ಇದೆ. ಪೂರ್ವಕ್ಕೆ ಹೂಸ್ಯಾಕ್ ಪರ್ವತ ಶ್ರೇಣಿ ಹಬ್ಬಿದೆ. ರಾಜ್ಯದ ಅತಿ ಎತ್ತರದ ಶಿಖರ ಮೌಂಟ್ ಗ್ರೆಲಾಕ್ (1064 ಮೀ.), ಇದು ಟಕೊನಿಕ್ ಶ್ರೇಣಿಯಲ್ಲಿದೆ.

ಮೆಸಾಚುಸೆಟ್ಸ್ ವಿಸ್ತಾರವಾದ ತೀರಪ್ರದೇಶ ಹೊಂದಿದೆ. ಸು. 104 ಕಿಮೀ ಉದ್ದದ ಕೇಪ್‌ಕಾಡ್ ಎಂಬ ಪರ್ಯಾಯ ದ್ವೀಪ, ಮುಖ್ಯ ಭೂಭಾಗದಿಂದ ಪೂರ್ವಕ್ಕೆ ಅಟ್ಲಾಂಟಿಕ್ ಸಾಗರದಲ್ಲಿ ಚಾಚಿದ್ದು ಅನಂತರ ಉತ್ತರಕ್ಕೆ ಬಾಗಿದೆ. ಇದರ ಅಗಲ 1.6 ಕಿಮೀ ನಿಂದ 36 ಕಿಮೀ ಈ ಕೊಲ್ಲಿಯ ಉತ್ತರದಲ್ಲಿರುವ ಅಟ್ಲಾಂಟಿಕ್ ಸಾಗರದ ಒಳಸರಿಕೆ ಭಾಗವನ್ನು ಮೆಸಾಚುಸೆಟ್ಸ್ ಕೊಲ್ಲಿ ಎಂದು ಕರೆಯಲಾಗಿದೆ.

ನದಿಗಳು : ಈ ರಾಜ್ಯದಲ್ಲಿ ನಿಬಿಡವಾಗಿ ನದಿಗಳು ಹರಿಯುತ್ತವೆ. ಒಟ್ಟು ಸು. 19 ಮುಖ್ಯ ಒಳಹರಿವು ವ್ಯವಸ್ಥೆಗಳಿವೆ. 1200 ಕ್ಕೂ ಹೆಚ್ಚು ಸರೋವರಗಳು ಮತ್ತು ಕೊಳಗಳಿವೆ. ಇಲ್ಲಿಯ ಅನೇಕ ನದಿಗಳು ಮತ್ತು ಸರೋವರಗಳಿಗೆ ಪ್ರಾಚೀನ ರೆಡ್‌ಇಂಡಿಯನ್ನರು ಇಟ್ಟ ಹೆಸರುಗಳನ್ನೇ ಉಳಿಸಿಕೊಳ್ಳಲಾಗಿದೆ. ಕನೆಕ್ಟಿಕಟ್, ಟಾನ್‌ಟನ್, ಮೆರ್ರಿಮ್ಯಾಕ್, ಹೌಸ್ಟಾನಿಕ್, ಬ್ಲಾಕ್ ಸ್ಟೋನ್, ಕಾನ್‌ಕರ್ಡ್, ಚಾರ್ಲ್ಸ್ ಇವು ಇಲ್ಲಿಯ ಮುಖ್ಯ ನದಿಗಳು.

ವಾಯುಗುಣ : ಪಶ್ಚಿಮ ಮೆಸಾಚುಸೆಟ್ಸ್‌ನಲ್ಲಿ ವಾಯುಗುಣ ತಂಪಾಗಿಯೂ ಶುಷ್ಕವಾಗಿಯೂ ಇರುತ್ತವೆ. ಚಳಿಗಾಲದಲ್ಲಿ ತೀರಪ್ರದೇಶಕ್ಕಿಂತ ಒಳನಾಡಿನಲ್ಲಿ ಹಿಮಸುರಿತ ಹೆಚ್ಚು. ಜುಲೈ – ಆಗಸ್ಟ್ ಅತ್ಯಂತ ತಾಪಭರಿತ ತಿಂಗಳುಗಳು. ಒಟ್ಟಿನಲ್ಲಿ ಇಲ್ಲಿಯ ವಾಯುಗುಣ ಸಮಶೀತೋಷ್ಣವೆನ್ನಬಹುದು.

ಸಸ್ಯ ಮತ್ತು ಪ್ರಾಣಿವರ್ಗ : ಈ ರಾಜ್ಯದಲ್ಲಿ 43 ರಾಷ್ಟ್ರೀಯ ಉದ್ಯಾನಗಳು ಮತ್ತು 28 ಮೀಸಲು ಅರಣ್ಯಗಳಿವೆ. ಬಾಸ್ಟನ್ ಬಳಿ ಇರುವ ಆರ್ನಾಲ್ಡ್ ಮರಗಿಡಗಳ ತೋಪಿನಲ್ಲಿ ಅಮೆರಿಕದ ಅತಿ ದೊಡ್ಡ ಮರಗಿಡಗಳ ಸಂಗ್ರಹವೊಂದಿದೆ. ಇಲ್ಲಿನ ಅರಣ್ಯಗಳಲ್ಲಿ ಸ್ಯಾಂಡ್ ಪೈಪರ್, ಬ್ಲೂಹಾರನ್, ಟರ್‌ಸ್ಟೋನ್, ಮೊದಲಾದ ದೊಡ್ಡ ಜಾತಿಯ ಮರಗಳಿವೆ.

ಅಸಂಖ್ಯಾತ ಪಕ್ಷಿ ಸಂಕುಲವಿದೆ. ಅವುಗಳಲ್ಲಿ ಕಡಲ ಸಂಬಂಧವಾದ ಜಲಪಕ್ಷಿಗಳು ಅಧಿಕ. ಗಲ್, ಸ್ಕೋಟರ್, ಕಾರ್‌ಮೊರೆಂಟ್, ಮೊದಲಾದ ನೀರ ಹಕ್ಕಿಗಳಿವೆ. ಮಿಂಚುಳ್ಳಿ, ಕೋಗಿಲೆ ಜಾತಿಯ ವಾರ್ಬ್, ಬಾಬ್‌ವೈಟ್ ಗುಬ್ಬಚ್ಚಿ, ಗಿಡುಗ, ಗ್ರಾಸ್, ಕಾಡುಟರ್ಕಿ

ಮತ್ತು ಹಕ್ಕಿ ಬಾಣ (ಫೀಸೆಂಟ್) ಮೊದಲಾದ ಪಕ್ಷಿಗಳಿವೆ. ಮೂರು ರಾಷ್ಟ್ರೀಯ ವನ್ಯಪ್ರಾಣಿ ಧಾಮಗಳಿವೆ. ಅಲ್ಲಿ ಜಿಂಕೆ, ಹಿಮಮೊಲ, ಕೆಂಪುನರಿ, ವುಡ್‌ಚಿಂಕ್ ಮಸ್ಕ್ರೆಟ್, ಆಟರ್, ಚಿಪ್‌ಮಂಕ್ ಮೊದಲಾದ ಪ್ರಾಣಿಗಳಿವೆ.

ಸಾಗರ ಮತ್ತು ನದಿ ಸರೋವರಗಳಲ್ಲಿ ವಿವಿಧ ಜಾತಿಯ ಅಸಂಖ್ಯ ಮೀನುಗಳಿವೆ. ಇಲ್ಲಿಯ ಮುಖ್ಯ ಕಸಬುಗಳಲ್ಲಿ ಮೀನುಗಾರಿಕೆಯೂ ಒಂದು.

ಖನಿಜ : ಸುಣ್ಣದಕಲ್ಲು, ಬಳಪದಕಲ್ಲು, ಸಿಲಿಕ, ಸ್ಫಟಿಕ ಶಿಲೆ, ಜೇಡ, ಎಮೆರಿ, ಬೆಣಚುಕಲ್ಲು ಮೊದಲಾದ ಸ್ವಾಭಾವಿಕ ಖನಿಜಗಳಿವೆ.

ಆರ್ಥಿಕತೆ : ಮೆಸಾಚುಸೆಟ್ಸ್ ವಸಾಹತು ಕಾಲದಿಂದಲೂ ಆರ್ಥಿಕ ಚಟುವಟಿಕೆಯಿಂದ ಕೂಡಿದ ರಾಜ್ಯ. ಮೊದಲ ನೆಲೆಸಿಗರು ಇಲ್ಲಿ ಅನೇಕ ಕೈಗಾರಿಕೆಗಳನ್ನೂ, ಶಿಕ್ಷಣ ಸಂಸ್ಥೆಗಳನ್ನೂ ಸ್ಥಾಪಿಸಿದರು. ಇಲ್ಲಿಯ ಆರ್ಥಿಕ ಬೆಳೆವಣಿಗೆಗೆ ಮೇಫ್ಲವರ್ ದಿವಸಗಳಿಂದಲೂ ಗುರುತಿಸಬಹುದಾದ ಪರಂಪರೆ ಹೊಂದಿದ ಸು. 800 ಮನೆತನಗಳು ಪ್ರಮುಖ ಕಾಣಿಕೆ ಸಲ್ಲಿಸಿವೆ. ಪ್ರಾರಂಭದಿಂದಲೂ ಬಾಸ್ಟನ್ ನಗರ ರಾಷ್ಟ್ರದ ಹಣಕಾಸು ವ್ಯವಹಾರ ಕೇಂದ್ರಗಳಲ್ಲೊಂದು. ಕೈಗಾರಿಕೆ ಇಲ್ಲಿಯ ಸಂಪತ್ತಿನ ಜೀವಾಳ. ಶೇ. 37 ರಷ್ಟು ಜನರು ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಾರೆ. ಗಡಿಯಾರದ ಕಾರ್ಖಾನೆಗಳು ವಾಲ್ಟ್‌ಹ್ಯಾಮ್ ; ಸೇಲಮ್ ಮತ್ತು ಬಾಸ್ಟನ್‌ಗಳಲ್ಲಿವೆ. ಗಾರ್ಡ್‌ಸರ್ ತೂಗು ಆಸನಗಳ ಉದ್ಯಮಕ್ಕೆ ಪ್ರಸಿದ್ಧ. ಗ್ರೀನ್‌ಫೀಲ್ಡ್‌ನಲ್ಲಿ ಕಟ್ಲರಿ ಮತ್ತು ಕೈಉಪಕರಣ ತಯಾರಿಕಾ ಘಟಕಗಳಿವೆ. ಸ್ಪ್ರಿಂಗ್ ಫೀಲ್ಡ್ ಬಂದೂಕುಗಳು ಮತ್ತು ಮೋಟಾರ್ ಸೈಕಲ್‌ಗಳ ತಯಾರಿಕೆಗೆ ಹೆಸರಾಗಿದೆ. ಪೀಬಾಡಿಯಲ್ಲಿ ಚರ್ಮದ ವಸ್ತುಗಳ ತಯಾರಿಕೆಯಿದೆ. ಹೋಲ್‌ಯೋಕ್ ಮತ್ತು ನ್ಯೂಬರಿಗಳಲ್ಲಿ ಬೆಳ್ಳಿಪಾತ್ರೆಗಳ ಉದ್ಯಮ ಪ್ರಧಾನ. ಬಾಸ್ಟನ್‌ನಲ್ಲಿ ರೇಜರ್ ಬ್ಲೇಡುಗಳ ಕಾರ್ಖಾನೆಗಳಿವೆ. ಇಂದು ಮೆಸಾಚುಸೆಟ್ಸನ ಹಲವಾರು ಪಟ್ಟಣಗಳಲ್ಲಿ ಕಾಗದ ತಯಾರಿಕೆ, ಮುದ್ರಣ, ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆ, ಉಡುಪು, ಶೃಂಗಾರ ಸಾಮಗ್ರಿಗಳ ಉದ್ಯಮಗಳಿವೆ. ಲೈನ್ ನಗರ ಅಮೆರಿಕದ ಪ್ರಮುಖ ಬೂಟು ತಯಾರಿಕಾ ಕೇಂದ್ರ. ಲೈನ್ ರಾಕ್‌ಗಳಲ್ಲಿ ಜೆಟ್ ವಿಮಾನಗಳ ಎಂಜಿನ್ ತಯಾರಿಕಾ ಕಾರ್ಖಾನೆ ಇದೆ. ಈ ರಾಜ್ಯದಲ್ಲಿ ನೌಕೆಗಳು ಮತ್ತು ಸಣ್ಣ ದೋಣಿಗಳನ್ನು ತಯಾರಿಸುವರು.

ವ್ಯವಸಾಯ : ವ್ಯವಸಾಯ ಇಲ್ಲಿಯ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸದಿದ್ದರೂ ವ್ಯವಸ್ಥಿತವಾಗಿ ಏರ್ಪಟ್ಟಿದೆ. ಧಾನ್ಯ, ಹೊಗೆಸೊಪ್ಪು, ತರಕಾರಿ ಜಾನುವಾರುಗಳಿಗಾಗಿ ಹುಲ್ಲು ಬೆಳೆಯುವರು. ಕ್ರಾನ್‌ಬೆರ್ರಿ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಪ್ರಮುಖ ಸ್ಥಾನದಲ್ಲಿದೆ. ಆದಾಗ್ಯೂ ಶೇ. 2 ರಷ್ಟು ಜನಸಂಖ್ಯೆ ಮಾತ್ರ ವ್ಯವಸಾಯದಲ್ಲಿ ತೊಡಗಿದೆ. ಕೋಳಿ ಸಾಕಾಣಿಕೆಯ ಆದಾಯ ವ್ಯವಸಾಯದ ಆದಾಯದ ಶೇ. 10 ರಷ್ಟಿದೆ.

ಸಾರಿಗೆ : ಈ ರಾಜ್ಯದಲ್ಲಿ ರಾಷ್ಟ್ರದ ಪ್ರಥಮ ರೈಲುಮಾರ್ಗ ರಚಿತವಾಯಿತು. ಬಾಸ್ಟನ್‌ನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇಲ್ಲಿ ಮೊದಲ ಪ್ರಯಾಣಿಕರ ಸುರಂಗ ರೈಲುಮಾರ್ಗ ರಚಿತವಾಯಿತು. ಒಟ್ಟು 2400 ಕಿಮೀ ಉದ್ದದ ರೈಲುಮಾರ್ಗ. 5440 ಕಿಮೀ ಉದ್ದದ ರಸ್ತೆ ಮಾರ್ಗವಿದೆ. ಪ್ರವಾಸೋದ್ಯಮ ರಾಜ್ಯದ ಆದಾಯ ಮೂಲಗಳಲ್ಲಿ ಎರಡನೆಯ ಸ್ಥಾನ ಪಡೆದಿದೆ.

ಶಿಕ್ಷಣ : ಮೆಸಾಚುಸೆಟ್ಸ್, ಶಿಕ್ಷಣದಲ್ಲಿ ಪ್ರಾರಂಭದಿಂದಲೂ ಮುಂದಿರುವ ರಾಜ್ಯ. ಮೊದಲಿಗೆ ತಂಡೋಪತಂಡವಾಗಿ ಬಂದು ನೆಲೆಸಿದ ಆಂಗ್ಲ ಪ್ಯೂರಿ ಟನ್ನರು ಸ್ಥಾಪಿಸಿದ ಕಾಮನ್‌ವೆಲ್ತ್ ಇಲ್ಲಿ ಧಾರ್ಮಿಕ ಸಾಮಾಜಿಕ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ದೃಢವಾದ ಬುನಾದಿ ಹಾಕಿತು. ಅಮೆರಿಕದ ಅತ್ಯಂತ ಹಳೆಯ ಶಿಕ್ಷಣ ಸಂಸ್ಥೆಯಾದ ಹಾರ್ವರ್ಡ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು (1636). ಇದು ಬಾಸ್ಟನ್ ಬಳಿ ನ್ಯೂಟೌನಿನಲ್ಲಿದ್ದು ಈ ಕ್ಷೇತ್ರಕ್ಕೆ ಕೇಂಬ್ರಿಜ್ ಎಂಬ ಹೆಸರನ್ನು ಇಡಲಾಯಿತು (1638). ಇದು ಚಾರ್ಲ್ಸ್ ನದಿಯ ದಡದಲ್ಲಿ ಬಾಸ್ಟನ್‌ಗೆ ಎದುರಾಗಿ ನಿರ್ಮಿತವಾಗಿದೆ. ಈ ವಿಶ್ವವಿದ್ಯಾಲಯ ಶಿಕ್ಷಣ, ಇತಿಹಾಸ, ಸಾಹಿತ್ಯ ಮತ್ತು ವಿಜ್ಞಾನ ವಿಷಯಗಳ ಅಧ್ಯಯನದಲ್ಲಿ ಇಡೀ ರಾಷ್ಟ್ರದಲ್ಲೇ ಪ್ರಸಿದ್ಧ. ಇದರಲ್ಲಿ ತಾಂತ್ರಿಕ ಸಂಶೋಧನಾ ಸಂಸ್ಥೆ ರಾಡ್‌ಕ್ಲಿಫ್ ಕಾಲೇಜು ಲೇಸ್ಲಿ ಕಾಲೇಜುಗಳಲ್ಲಿ ಸೇರಿವೆ. 1852 ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಜಾರಿಗೆ ಬಂದಿತು. ಇಂದು ರಾಜ್ಯಾದ್ಯಂತ ಅರವತ್ತಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಸ್ಥಾಪನೆಯಾಗಿವೆ. ಸ್ಥಳೀಯ ಸಮಿತಿಗಳು ಶಿಕ್ಷಣದ ಬಹುಪಾಲು ಜವಾಬ್ದಾರಿ ಹೊತ್ತಿವೆ. ಇಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿವೆ. ವೈದ್ಯಕೀಯ ಸಂಶೋಧನೆಯಲ್ಲಿ ಇಲ್ಲಿಯ ಸಂಸ್ಥೆಗಳು ಅಗ್ರಸ್ಥಾನ ಪಡೆದಿವೆ. ಬಾಸ್ಟನ್‌ನಲ್ಲಿ ಮಕ್ಕಳ ಕ್ಯಾನ್ಸರ್ ಸಂಶೋಧನ ಪ್ರತಿಷ್ಠಾನವಿದೆ ಹಾಗೂ ಜಾರ್ಜ್ ವಾಷಿಂಗ್‌ಟನ್ ಗ್ರಂಥಾಲಯವಿದೆ. ಮಸಾಚುಸೆಟ್ಸ ತಾಂತ್ರಿಕ ಸಂಸ್ಥೆ ಎಂಐಟಿ ಹೆಚ್ಚು ಪ್ರಾಖ್ಯಾತಿಗಳಿಸಿದೆ.

ಜನಜೀವನ : ಸಮುದ್ರ ತೀರ ಇಲ್ಲಿಯ ಜನಜೀವನದಲ್ಲಿ ಪ್ರಮುಖಪಾತ್ರ ವಹಿಸಿದೆ. ಸಮುದ್ರ ವ್ಯಾಪಾರ, ಸೂರ್ಯಸ್ನಾನ, ಈಜುವಿಕೆ, ಮೀನುಗಾರಿಕೆ ಇವು ತೀರ ಪ್ರದೇಶದ ಪಟ್ಟಣಗಳ ಮತ್ತು ಪ್ರವಾಸಿ ಸ್ಥಳಗಳ ಬೆಳೆವಣಿಗೆಗೆ ಕಾರಣವಾಗಿವೆ. ಬಾಸ್ಟನ್, ಪ್ಲಿಮತ್, ಡರ್ಬರಿ, ಮಾರ್ಷ್ ಫೀಲ್ಡ್, ಸಿಚ್‌ವಾಟ್ ಕೊಹಸೆಟ್ ಇತ್ಯಾದಿ ಪ್ರಮುಖ ನಗರಗಳು ತೀರಪ್ರದೇಶದಲ್ಲಿವೆ. ಗ್ಲೌಸೆಸ್ಟರ್ ಮತ್ತು ಕೇಪ್ ಆನ್‌ಗಳು ಮುಖ್ಯ ಮೀನುಗಾರಿಕೆ ಕೇಂದ್ರಗಳು. ಕೈಗಾರಿಕೆ, ವ್ಯಾಪಾರ ಮತ್ತು ಪ್ರವಾಸೋದ್ಯಮಗಳು ಇಲ್ಲಿಯ ಜನಜೀವನದ ಮೇಲೆ ಹೆಚ್ಚು ಪರಿಣಾಮ ಬೀರಿವೆ. ಪ್ರಾರಂಭದಲ್ಲಿ ಪ್ರಾಟೆಸ್ಟೆಂಟ್ ಜನರ ಆಧಿಕ್ಯವಿದ್ದರೂ ಕ್ರಮೇಣ ರೋಮನ್ ಕ್ಯಾಥೊಲಿಕರ ಸಂಖ್ಯೆ ಅಧಿಕವಾಗಿದೆ. ಜನರು ಧರ್ಮಾಚರಣೆಯಲ್ಲಿ ನಂಬಿಕೆ ಹೊಂದಿದ್ದಾರೆ. ಸರ್ಕಾರ ಚಿತ್ತವಿಕಲರಿಗಾಗಿ ಅನಾಥಾಲಯವನ್ನು ಸ್ಥಾಪಿಸಿದೆ.

ದೊಡ್ಡ ನಗರ, ಚಾರ್ಟರ್ಡ್ ನಗರ ಮತ್ತು ಪಟ್ಟಣಗಳ ಆಡಳಿತ ಮಂಡಳಿಗಳಿವೆ. ಬಾಸ್ಟನ್ ಪ್ರಾರಂಭದಿಂದಲೂ ರಾಷ್ಟ್ರೀಯ ಸಾಂಸ್ಕೃತಿಕ ಕೇಂದ್ರಗಳಲ್ಲಿ ಅಗ್ರಸ್ಥಾನದಲ್ಲಿದೆ. ಉನ್ನತ ಸಾಹಿತ್ಯ ಪರಂಪರೆ ಇದೆ.

ಬಾಸ್ಟನ್, ಬ್ರಿಕ್‌ಟನ್, ಫಾಲ್ ರಿವರ್, ಪಿಟ್ಸ್‌ಬರ್ಗ್, ಲಿಯೊಮೆಸ್ಟರ್, ಲಾರೆನ್ಸ್‌ಹ್ಯಾವರ್‌ಹಿಲ್, ನ್ಯೂಬೆಡ್‌ಫೋರ್ಡ್, ಪಿಟ್ಸ್‌ಫೀಲ್ಡ್, ಸ್ಪ್ರಿಂಗ್‌ಫೀಲ್ಡ್, ಚಿಕೊಪಿ, ಹೋಲ್‌ಯೋಕ್ ಮತ್ತು ವೊರ್‌ಸೆಸ್ಟರ್ ಮೊದಲಾದ ಪ್ರಮುಖ ನಗರಗಳಿವೆ. ಬಿನ್‌ಕೆರ್ ಹಿಲ್ ಸ್ಮಾರಕ, ಆಲ್ಡೆನ್ ಹೌಸ್, ಓಲ್ಡ್ ನಾರ್ತ‌ಚರ್ಚ್, ಪ್ರಾವಿನ್ಸ್‌ಟೌನ್, ಸ್ಟೇಟ್ ಹೌಸ್, ವಾಲ್ಡೆನ್ ಪಾಂಡ್, ಪ್ಲಿಮತ್, ಓಲ್ಡ್ ಸ್ಟರ್‌ಬ್ರಿಡ್ಜ್ ವಿಲೇಜ್, ಪಾನೆವಿಲ್ ಹಾಲ್ ಇಲ್ಲಿಯ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು. ಇವುಗಳಲ್ಲದೆ ಅನೇಕ ರಾಷ್ಟ್ರೀಯ ವನಗಳು ಮತ್ತು ಅರಣ್ಯಗಳೂ ಇವೆ. (ಡಿ.ಎಸ್.ಜೆ.)

**ಮೇಕೆದಾಟು:** ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ದಟ್ಟವಾದ ಅರಣ್ಯದ ನಡುವೆ ಕಾವೇರಿ ನದೀ ಪಾತ್ರದಲ್ಲಿರುವ ಒಂದು ಪ್ರೇಕ್ಷಣೀಯ ಸ್ಥಳ. ಬೆಂಗಳೂರಿನ ದಕ್ಷಿಣಕ್ಕೆ ಸಾತನೂರು ಮಾರ್ಗವಾಗಿ 113 ಕಿಮೀ ಕನಕಪುರದಿಂದ ಸಾತನೂರು, ಆಲಹಳ್ಳಿ, ಉಯ್ಯಂಬಳ್ಳಿಗಳ ಮಾರ್ಗವಾಗಿ ದಕ್ಷಿಣದಲ್ಲಿ ಸು. 40 ಕಿಮೀ ದೂರದಲ್ಲಿದೆ.

ಕನಕಪುರದ ಮಾರ್ಗವಾಗಿ ಅರ್ಕಾವತಿ ನದಿ ಸು. 32 ಕಿಮೀ ಮೈದಾನ ಪ್ರದೇಶದಲ್ಲಿ ಹರಿದು ಕಡೆಗೆ ತಾಲ್ಲೂಕಿನ ದಕ್ಷಿಣದ ಪ್ರದೇಶವಾದ ಅರಣ್ಯವನ್ನು ಹೊಕ್ಕು ಕಾವೇರಿಯನ್ನು ಸಂಗಮ ಎನ್ನುವೆಡೆ ಸೇರುತ್ತದೆ. ಅಲ್ಲಿ ಸಂಗಮೇಶ್ವರನ ದೇವಾಲಯ ಮತ್ತು ಒಂದು ಪ್ರವಾಸಿ ಮಂದಿರ ಇವೆ. ಇಲ್ಲಿಂದ ಅರ್ಕಾವತಿಯನ್ನು ದಾಟಿ ಕಾವೇರಿಯ ಎಡ ದಂಡೆಯ ಮೇಲೆ ಸು. 5 ಕಿಮೀ ದೂರದಲ್ಲಿ ಮೇಕೆದಾಟು ಸಿಕ್ಕುತ್ತದೆ. ಪ್ರವಾಸಿಗರಿಗೆ ಮುಖ್ಯ ಆಕರ್ಷಣೀಯ ಕೇಂದ್ರ ಮೇಕೆದಾಟು ಎಂದು ಪ್ರಸಿದ್ಧವಾಗಿದ್ದರೂ ಆ ಆಕರ್ಷಣೆಯ ಪೂರ್ವ ಸಿದ್ಧತೆ ಸಂಗಮದಿಂದಲೇ ಆರಂಭವಾಗುತ್ತದೆ. ಅರ್ಕಾವತಿಯಿಂದ ಕಾವೇರಿ ದಟ್ಟವಾದ ಅರಣ್ಯದ ನಡುವೆ ಮುಂದೆ ಪ್ರವಹಿಸಿದಂತೆ ಅದರ ಪಾತ್ರ ಕ್ರಮಕ್ರಮವಾಗಿ

ಕಿರಿದಾಗುತ್ತ ಬರುತ್ತದೆ. ಅಲ್ಲಿಂದ ಇಳಿಜಾರು ಹೆಚ್ಚುತ್ತ ಹೋಗುವುದರಿಂದ ನೀರಿನ ಪ್ರವಾಹ ಭೋರ್ಗರೆಯುತ್ತ ವನಾಂತರ ಪ್ರದೇಶವೆಲ್ಲ ಗಂಭೀರ ಸ್ವರದಿಂದ ತುಂಬಿರುತ್ತದೆ. ಶತಮಾನಗಳ ಪ್ರವಾಹದ ಹೊಡೆತಕ್ಕೆ ಸಿಕ್ಕಿದ ಇಕ್ಕೆಲಗಳ ಬೆಟ್ಟಗಳ ಬಂಡೆಗಳು, ಚಿತ್ರ ವಿಚಿತ್ರವಾಗಿ ಕೊರೆದು ಹೋಗಿ ನಿಸರ್ಗ ನಿರ್ಮಿಸಿರುವ ಮಹೋನ್ನತ ಶಿಲ್ಪಕಲಾ ಕೃತಿಗಳಿಂದ ಕಂಗೊಳಿಸುತ್ತಿರುತ್ತವೆ. ಪಾತಾಳದಲ್ಲಿ ಧುಮುಕಿ ಇಳಿದೋಡುತ್ತಿರುವ ನದಿಯ ಎತ್ತರವಾದ ಎರಡು ಪಾರ್ಶ್ವಗಳಲ್ಲೂ ಮರಗಳ ಸಾಲಿನ ಹಸುರಿನ ಸಾಂದ್ರತೆ ಪ್ರಪಾತದ ಪ್ರವಾಹದ ಮೇಲೆ ಕತ್ತಲು ಗರೆಯುತ್ತ ಅದರ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿವೆ. ಇಂಥ ಗಂಭೀರತೆಯ ನಡುವೆ ಮುಂದೆ ಪ್ರವಹಿಸಿದಂತೆ ನದಿಯ ಪಾತ್ರ ತೀರ ಇಕ್ಕಟ್ಟಾಗುತ್ತ ಬಂದು ಕೊನೆಗೆ ಮೇಕೆದಾಟನ್ನು ಸೇರುತ್ತದೆ. ಇಲ್ಲಿ ನದಿಯ ಪಾತ್ರ ಮೇಕೆ ದಾಟಬಲ್ಲಷ್ಟು ಕಿರಿದಾಗಿದೆ ಎಂದು ಉತ್ಪ್ರೇಕ್ಷೆಯಿಂದ ಹೇಳುವಷ್ಟು ಕಿರಿದಾಗಿದೆ ಎಂದೇ ಇಲ್ಲಿಗೆ ಮೇಕೆದಾಟು ಎಂಬ ಹೆಸರು. ನದಿಯ ಎಡದಡದಲ್ಲಿ ಧುಮ್ಮಿಕ್ಕುವ ನೀರಿಗೆ ಸೋಂಕುವಂತೆ ಪಕ್ಕದಲ್ಲಿ ಅಗಲವಾದ ಚಪ್ಪಟೆ ಬಂಡೆಕಲ್ಲೊಂದಿದೆ. ಇದಕ್ಕೆ ಟೇಬಲ್‌ರಾಕ್ ಎಂದು ಹೆಸರು. ಪ್ರವಾಸಿಗರು ಇದರ ಮೇಲೆ ನಿಂತು ನಿಸರ್ಗದ ರಮ್ಯ ಸೊಬಗನ್ನು ವೀಕ್ಷಿಸಬಹುದು. ನದಿ ಮುಂದಕ್ಕೆ ಪ್ರವಹಿಸಿದಂತೆ ಅದರ ಪಾತ್ರ ವಿಸ್ತರಿಸುತ್ತ ಹೋಗುತ್ತದೆ.

ಜಲರಾಶಿ ಹರಡಿಕೊಂಡು ಹೆಚ್ಚು ಇಳಿಜಾರಿಲ್ಲದ ಬಯಲಿನಲ್ಲಿ ನಿಧಾನವಾಗಿ ಮುಂದೆ ಸಾಗುತ್ತ ಕೊಳ್ಳೇಗಾಲ ತಾಲ್ಲೂಕಿನ ಪೂರ್ವ ಮತ್ತು ದಕ್ಷಿಣದ ಗಡಿಗಳನ್ನೂ ಆವರಿಸಿದಂತೆ ಹರಿದು ತಮಿಳುನಾಡನ್ನು ಸೇರುತ್ತದೆ. ಕಾವೇರಿ ನದಿಯ ಕಣಿವೆಯ ಈ ಪಾತ್ರ ಭೂಗೋಳ ವಿಜ್ಞಾನಿಗಳಿಗೆ ಸಂಶೋಧನ ವಸ್ತುವಾಗಿ ಪರಿಣಮಿಸಿದೆ. ಅನೇಕ ಭೂಗೋಳ ವಿಜ್ಞಾನಿಗಳ ಪ್ರಕಾರ ಇದು ನದಿಹರಣದ ಒಂದು ಉದಾಹರಣೆ. ಹಿಂದೆ ಅತಿ ಸಣ್ಣ ನದಿಯೊಂದು ಹರಿಯುತ್ತಿದ್ದ ಕಣಿವೆಯನ್ನು ಕಾವೇರಿನದಿ ಆಕ್ರಮಿಸಿರಬಹುದೆಂಬ ವಾದವೂ ಇದೆ.(ಕೆ.ಎನ್.ಯು.)

**ಮೇಘಾಲಯ:** ಭಾರತದ ಈಶಾನ್ಯ ದಿಕ್ಕಿನಲ್ಲಿರುವ ಒಂದು ರಾಜ್ಯ. ಈ ರಾಜ್ಯದ ದಕ್ಷಿಣ, ನೈಋತ್ಯ ಭಾಗದಲ್ಲಿ ಬಾಂಗ್ಲಾದೇಶ, ಉಳಿದ ಮೂರೂ ದಿಕ್ಕುಗಳಲ್ಲಿ ಭಾರತದ ಅಸ್ಸಾಮ್ ರಾಜ್ಯ ಇದನ್ನು ಸುತ್ತುವರಿದಿದೆ. 7 ಜಿಲ್ಲೆಗಳಿಂದ ಕೂಡಿರುವ ಈ ರಾಜ್ಯದ ವಿಸ್ತೀರ್ಣ 22,429 ಚ.ಕಿಮೀ. ಜನಸಂಖ್ಯೆ 23,06,069. ರಾಜಧಾನಿ ಷಿಲಾಂಗ್.

ಹಿಂದಿನ ಅಸ್ಸಾಮ್ ರಾಜ್ಯದ ಖಾಸಿ ಜೈಂತಿಯ ಬೆಟ್ಟಗಳ ಹಾಗೂ ಗಾರೋ ಬೆಟ್ಟಗಳ ಜಿಲ್ಲೆಗಳನ್ನು ಪ್ರತ್ಯೇಕಿಸಿ ಸ್ವಯಮಾಡಳಿತ ಘಟಕವಾಗಿ 1970ರ ಏಪ್ರಿಲ್ 2ರಂದು ರಚಿಸಲಾಯಿತು. ಇದೊಂದು ರಾಜ್ಯವೆಂದು 1972ರ ಜನವರಿ 21ರಂದು ಘೋಷಿಸಲಾಯಿತು.

ಭೌತಲಕ್ಷಣ : ಖಾಸಿ, ಜೈಂತಿಯ ಮತ್ತು ಗಾರೋ ಬುಡಕಟ್ಟಿನ ಜನರ ಈ ರಾಜ್ಯ ಪರ್ವತಮಯ. ರಾಜಧಾನಿ ಷಿಲಾಂಗ್ ಎತ್ತರವಾದ ಪ್ರಸ್ಥಭೂಮಿಯ ಮಧ್ಯದಲ್ಲಿದೆ. 6,956 ಮೀ ಎತ್ತರದ ಷಿಲಾಂಗ್ ಶಿಖರ ರಾಜ್ಯದಲ್ಲಿ ಅತ್ಯುನ್ನತವಾದ್ದು. ಗಾರೋ ಬೆಟ್ಟಗಳ ನಾಕ್ರೆಕ್ ಎಂಬುದು ಎರಡನೆಯದು. ಅತ್ಯಂತ ಸುಂದರವಾದ ನೈಸರ್ಗಿಕ ಸನ್ನಿವೇಶಗಳಿಂದ ಕೂಡಿದ ಮೇಘಾಲಯ ಪೂರ್ವದ ಸ್ಕಾಟ್ಲೆಂಡ್ ಎಂದು ಪ್ರಸಿದ್ಧವಾಗಿದೆ. ಇಲ್ಲಿ ಅನೇಕ ಉನ್ನತ ಶಿಖರಗಳೂ ಜಲಪಾತಗಳು ಸರೋವರಗಳೂ ಕಣಿವೆಗಳೂ ಹುಲ್ಲುಗಾವಲುಗಳೂ ಇವೆ.




ಮೇಘಾಲಯದಲ್ಲಿ ಅನೇಕ ನದಿಗಳು ಹರಿಯುತ್ತಿವೆ. ಆದರೆ ಯಾವುದೂ ನೌಕಾಸಂಚಾರಕ್ಕೆ ಯೋಗ್ಯವಾಗಿಲ್ಲ. ಗಾರೋ ಗಿರಿ ಪ್ರದೇಶದ ನದಿಗಳು ಕೃಷ್ಣಾಮ್ (ಡಾಮ್‌ರಿಂಗ್), ಕಾಳು (ಜಿಕಾ), ಭುಗ್ವೆ (ಬುಗಿ), ನಿಟಾಯ್ (ಡಾರೆಂಗ್) ಮತ್ತು ಸೋಮೇಶ್ವರಿ (ಸಿಮ್‌ಸಾಂಗ್). ಖಾಸಿ ಗಿರಿ ಪ್ರದೇಶದಲ್ಲಿ ಹರಿಯುವ ನದಿಗಳು ಕಿನ್ಷಿ ಖ್ರಿ, ಉಮ್‌ತ್ರ್ಯೂ, ಉಮ್‌ನ್‌ಗಾಟ್, ಉಮಿಯಾಮ್, ಮಾಂಫ್ಲಾಂಗ್ ಮತ್ತು ಉಮಿಯಾಮ್ ಖ್ವಾನ್, ಜೈಂತಿಯ ಗಿರಿ ಜಿಲ್ಲೆ ಪ್ರದೇಶದ ನದಿಗಳು ಕುಪ್ಲಿ, ಮಿಂಟ್‌ಡು ಮತ್ತು ಮಿಂಟಾಂಗ್. ಇವು ಬೆಟ್ಟಗಳ ಇಳಿಜಾರಿನಲ್ಲಿ ವೇಗವಾಗಿ ಹರಿದು ಅಲ್ಲಲ್ಲಿ ಜಲಪಾತಗಳನ್ನು ಸೃಷ್ಟಿಸಿವೆ. ಚಿರಾಪುಂಜಿಯ ಬಳಿ ಮಾಸ್ಮಾಯ್ ಹಳ್ಳಿಯ ನೊಹಸನ್‌ಗಿತಿಯಾಂಗ್ ಜಲಪಾತ ಅತ್ಯಂತ ಸುಂದರವಾದ್ದೆಂದು ಪ್ರಖ್ಯಾತವಾಗಿದೆ. ಹಲವು ತೊರೆಗಳ ನೀರು ಇಲ್ಲಿ ಕೂಡಿ ಕಡಿದಾದ ಬಂಡೆಯ ಮೇಲಿಂದ ಧುಮುಕುತ್ತದೆ.

ರಾಜ್ಯದ ಸರಾಸರಿ ವಾರ್ಷಿಕ ಮಳೆ ಸು. 1200 ಸೆಂಮೀ. ಷಿಲ್ಲಾಂಗಿನಲ್ಲಿ ಬೀಳುವ ವಾರ್ಷಿಕ ಮಳೆ 203 ಸೆಂಮೀ. ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ಮಳೆ ಬೀಳುವುದು ಚಿರಾಪುಂಜಿ– ಮಾಸಿನ್ರಾಮ್ ಪ್ರದೇಶದ ಖಾಸಿ ಬೆಟ್ಟಗಳ ದಕ್ಷಿಣ ಪಾರ್ಶ್ವದಲ್ಲಿ. ಇಲ್ಲಿಯ ವಾರ್ಷಿಕ ಸರಾಸರಿ ಮಳೆ 1270 ಸೆಂಮೀ.

ಜನಜೀವನ : ಇಲ್ಲಿಯ ಪ್ರಮುಖ ಬುಡಕಟ್ಟುಗಳು ಖಾಸಿ, ಜೈಂತಿಯ ಮತ್ತು ಗಾರೋ. ಇವು ಅತ್ಯಂತ ಪ್ರಾಚೀನ ಬುಡಕಟ್ಟುಗಳು. ಈ ಬುಡಕಟ್ಟುಗಳ ಜನರ ಸಂಖ್ಯೆ ಸು. ಹತ್ತು ಲಕ್ಷ ಎಂದು ಅಂದಾಜು ಮಾಡಲಾಗಿದೆ. ಖಾಸಿ, ಗಾರೋ ಮತ್ತು ಇಂಗ್ಲಿಷ್ ಇಲ್ಲಿಯ ಪ್ರಮುಖ ಭಾಷೆಗಳು. ಸಾಕ್ಷರತೆಯ ಪ್ರಮಾಣ ಶೇ. 62.6.

ಇಲ್ಲಿಯ ಬುಡಕಟ್ಟಿನ ಜನ ವಿನೋದಪ್ರಿಯರು. ಸಂಗೀತ, ನೃತ್ಯ ಮತ್ತು ಕ್ರೀಡೆಗಳಲ್ಲಿ ಇವರಿಗೆ ಆಸಕ್ತಿ. ಹಬ್ಬಹರಿದಿನಗಳಲ್ಲಿ ಇವರ ಸಂಗೀತ ನೃತ್ಯಗಳ ಸದ್ದು ಗಿರಿಕಣಿವೆಗಳಲ್ಲಿ ಪ್ರತಿಧ್ವನಿಸುತ್ತವೆ.

ಆಡಳಿತ: ನೈಋತ್ಯ ಮಂಡಲಿಯ ಸದಸ್ಯ ರಾಜ್ಯವಾದ ಮೇಘಾಲಯದಲ್ಲಿ ವಿಧಾನಸಭೆಯಿದೆ : ಮೇಲ್ಮನೆಯಾದ ವಿಧಾನ ಪರಿಷತ್ತು ಇಲ್ಲ : ವಿಧಾನಸಭೆಯಲ್ಲಿ 60 ಸದಸ್ಯರಿರುತ್ತಾರೆ. ಖಾಸಿ ಬೆಟ್ಟಗಳ ಪ್ರದೇಶದಿಂದ 29 ಸದಸ್ಯರೂ ಜೈಂತಿಯ ಗಿರಿಪ್ರದೇಶದಿಂದ 7 ಸದಸ್ಯರೂ ಗಾರೋ ಗಿರಿ ಪ್ರದೇಶದಿಂದ 24 ಸದಸ್ಯರೂ ಆಯ್ಕೆಯಾಗುತ್ತಾರೆ.

ಮೇಘಾಲಯದಲ್ಲಿ ಹಿಂದೆ ಖಾಸಿ– ಜೈಂತಿಯ ಮತ್ತು ಗಾರೋ ಎಂಬ ಎರಡು ಜಿಲ್ಲೆಗಳಿದ್ದು ಮೂರು ಉಪವಿಭಾಗಗಳಿದ್ದವು. ಅಭಿವೃದ್ಧಿಯನ್ನು ತ್ವರೆಗೊಳಿಸಲೂ ಆಡಳಿತ ಜನರಿಗೆ ಹೆಚ್ಚು ಹತ್ತಿರವಾಗುವಂತೆ ಮಾಡಲೂ ರಾಜ್ಯವನ್ನು ಈಗ ಏಳು ಜಿಲ್ಲೆಗಳಾಗಿ, ಹತ್ತು ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ರಾಜ್ಯದಲ್ಲಿ 30 ಸಮುದಾಯ ಅಭಿವೃದ್ಧಿ ಘಟಕಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಜಿಲ್ಲೆಗಳನ್ನು ಕುರಿತ ವಿವರ ಈ ರೀತಿ ಇದೆ:

| ಜಿಲ್ಲೆ | ವಿಸ್ತೀರ್ಣ (ಚ.ಕಿಮೀ) | ಜನಸಂಖ್ಯೆ | ಮುಖ್ಯಸ್ಥಳ |
|---|---|---|---|
| ಪೂರ್ವ ಖಾಸಿ ಬೆಟ್ಟಗಳು | 2,748 | 6,60,994 | ಷಿಲಾಂಗ್ |
| ಪಶ್ಚಿಮ ಖಾಸಿ ಬೆಟ್ಟಗಳು | 5,247 | 2,94,115 | ನಾಂಗ್‌ಸ್ಟಾಯಿನ್ |
| ಪೂರ್ವ ಗಾರೋ ಬೆಟ್ಟಗಳು | 2,603 | 2,47,555 | ವಿಲಿಯಂನಗರ್ |
| ಪಶ್ಚಿಮ ಗಾರೋ ಬೆಟ್ಟಗಳು | 3714 | 5,15,813 | ಟುರಾ |
| ಜೈಂತಿಯ ಬೆಟ್ಟಗಳು | 3,819 | 2,95,692 | ಜೊವೈ |
| ರಿ–ಬೋಯ್ | 2448 | 1,92,795 | ನಾನ್ಸ್‌ಪಾ |
| ದಕ್ಷಿಣ ಗಾರೋ ಬೆಟ್ಟಗಳು | 1850 | 99,105 | ಬಾಗ್ಮಾರಾ |

ಪ್ರವಾಸಿ ಕೇಂದ್ರಗಳು : ಮೇಘಾಲಯ ಪ್ರವಾಸಿಗಳ ಸ್ವರ್ಗವೆಂದು ಪ್ರಸಿದ್ಧವಾಗಿದೆ. ಇಲ್ಲಿಯ ಪ್ರವಾಸಿ ಆಕರ್ಷಣೆಗಳು ಹಲವಾರು ಮತ್ತು ವೈವಿಧ್ಯಮಯ. ಇಲ್ಲಿ ಅಲೆಯಲೆಯಾಗಿ ಹಬ್ಬಿರುವ ಬೆಟ್ಟಗಳ ಸಾಲು, ಏರಿಳಿಯುವ ಹುಲ್ಲುಗಾವಲುಗಳು, ಬೆಟ್ಟಗಳಿಗೆ ಮೆತ್ತಿದಂತಿರುವ ದಟ್ಟ ಹಸುರಿನ ಕಾಡುಗಳು ಬೆಟ್ಟಗಳ ಪಕ್ಕಗಳಿಂದ ಧುಮ್ಮಿಕ್ಕುವ ಜಲಪಾತಗಳೂ, ಹಾವಿನಂತೆ ಹರಿಯುವ ಹೊಳೆಗಳು, ಬೇಸಾಯಕ್ಕೆ ಒಳಪಟ್ಟ ಮೆಟ್ಟಲು ನೆಲಗಳು, ಸ್ವಚ್ಛಂದವಾಗಿ ಕಾಡಿನಲ್ಲಿ ಅಲೆಯುವ ವನ್ಯಮೃಗಗಳು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿವೆ. ಕೆಲವು ಮುಖ್ಯ ಪ್ರವಾಸಿ ಕೇಂದ್ರಗಳೆಂದರೆ ಉನಿಯಾಮ್ ಸರೋವರ, ಕಿಲಾಂಗ್ ಬಂಡೆ, ನೊಹ್‌ಸನ್‌ಗಿತಿಯಾಂಗ್ ಜಲಪಾತ, ಮತ್ತು ನಾರ್ಟಿಯಾಂಗ್ ಐತಿಹಾಸಿಕ ನೆಲೆ. ಉನಿಯಾಮ್ ಸರೋವರ ಷಿಲಾಂಗ್– ಗುಹಾವತಿ ರಸ್ತೆಯ ಬದಿಯಲ್ಲಿದೆ. ನಯನಮನೋಹರವಾದ ಈ ಸರೋವರ ಮೀನು ಹಿಡಿಯುವವರ ಮೋಜಿನ ತಾಣ. ಕಿಲಾಂಗ್ ಬಂಡೆ ಸು. 214 ಮೀ ಗಳಿಗಿಂತಲೂ ಎತ್ತರವಾದ ಗ್ರಾನೈಟ್ ಶಿಲೆ. ಹುಲ್ಲುಗಾವಲಿನ ನಡುವೆ ಎದ್ದು ನಿಂತಿರುವ ಈ ಬಂಡೆ ಷಿಲಾಂಗಿನ ಪಶ್ಚಿಮಕ್ಕೆ 50 ಕಿಮೀ ದೂರದಲ್ಲಿದೆ. ಚಿರಾಪುಂಜಿಯ ಬಳಿ ಮಾಸ್ಮಾಯ್ ಹಳ್ಳಿಯಲ್ಲಿರುವ ನೊಹ್‌ಸನ್‌ಗಿತಿಯಾಂಗ್ ಜಲಪಾತ ಇಡೀ ಭಾರತದಲ್ಲೇ ಅತ್ಯಂತ ಸುಂದರವಾದ್ದು ಎಂದು ಪರಿಗಣಿಸಲಾಗಿದೆ. ಮಸ್ಮಾಯ್ ಗುಹೆಗಳೂ ಪ್ರೇಕ್ಷಣೀಯ. ಷಿಲಾಂಗಿಗೆ ಸು. 90 ಕಿಮೀ ದೂರದಲ್ಲಿರುವ ನಾರ್ಟಿಯಾಂಗ್‌ನಲ್ಲಿ 1500–1835ರ ಕಾಲದಲ್ಲಿ ರಚಿಸಲಾದ ಹಲವಾರು ಏಕಶಿಲಾ ವಿಗ್ರಹಗಳಿವೆ. ಇವುಗಳ ಪೈಕಿ 8.22 ಮೀ ಎತ್ತರದ 15.24 ಸೆಂಮೀ ದಪ್ಪದ ಅತ್ಯಂತ ಎತ್ತರದ ವಿಗ್ರಹವಿದೆ.

ಅರ್ಥವ್ಯವಸ್ಥೆ : ಜನರಿಗೆ ನೆಲವೇ ಪ್ರಮುಖ ಜೀವನಾಧಾರ. ಆದರೆ ನೆಲ ಪರ್ವತಮಯವಾಗಿರುವುದರಿಂದ ಕೃಷಿ ಸೌಲಭ್ಯ ಕಡಿಮೆ. ಝೂಮ್ ಪದ್ಧತಿಯ ಬೇಸಾಯ ಸಾಮಾನ್ಯ. ಕಾಡು ಸುಟ್ಟು ಬೆಳೆತೆಗೆದು, ಅದು ಬರಡಾದಾಗ ಅದನ್ನು ಬಿಟ್ಟು ಬೇರಡೆ ಅದೇ ರೀತಿ ಬೇಸಾಯ ಮಾಡುವ ಇವರ ಪದ್ಧತಿ ವಿನಾಶಕಾರಿ. ಗಿರಿಜನರ ಈ ಪದ್ಧತಿಯನ್ನು ಹೋಗಲಾಡಿಸಿ ವೈಜ್ಞಾನಿಕ ಕೃಷಿ ಪದ್ಧತಿಯನ್ನು ಸ್ಥಾಪಿಸಲು ಸರ್ಕಾರ ಯತ್ನಿಸುತ್ತಿದೆ. ನೆಲದ ಸಾರವನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಭೂಮಿಯನ್ನು ಹಳ್ಳಿಗಳಲ್ಲಿ ಹಂಚಿ, ಅವರಿಗೆ ರಸಗೊಬ್ಬರ, ಬೀಜ, ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. ಕನಿಷ್ಟ 50 ಕುಟುಂಬಗಳ ಹಲವಾರು ಹಳ್ಳಿಗಳು ಈಗ ಅಲ್ಲಿ ಮೇಲೆದ್ದಿವೆ.

ರಾಜ್ಯದಲ್ಲಿ ಕೈಗಾರಿಕೆಗಳು ಅಷ್ಟಾಗಿ ಬೆಳೆದಿಲ್ಲ. ಮೇಘಾಲಯ ಕೈಗಾರಿಕಾ ನಿಗಮ ಹೊಸ ಕೈಗಾರಿಕೆಗಳ ಸ್ಥಾಪನೆಗೆ ನೆರವು ನೀಡುತ್ತಿದೆ. ಪ್ಲೈವುಡ್, ತೈಲ, ರಸಾಯನ, ಫೈಟೊ –ರಸಾಯನ, ಸುಣ್ಣಕಲ್ಲು ಗಣಿಗಾರಿಕೆ, ಕ್ಯಾಲ್ಸಿನೇಟ್ಸ್ ಮತ್ತು ಸಿಮೆಂಟ್ ಕೈಗಾರಿಕೆಗಳಿವೆ. ಸಿಮೆಂಟ್ ಕೈಗಾರಿಕೆ ಸರ್ಕಾರಿ ವಲಯದ್ದು. ಇದು ಚಿರಾಪುಂಜಿಯಲ್ಲಿ ಸ್ಥಾಪಿತವಾಗಿದೆ. ಇದರ ಉತ್ಪಾದನ ಸಾಮರ್ಥ್ಯ ದಿನವೊಂದಕ್ಕೆ 930 ಟನ್. ಭಾರತದ ರಕ್ಷಣಾ ದೃಷ್ಟಿಯಿಂದಲೂ ಈಶಾನ್ಯ ದಿಕ್ಕಿನ ಈ ರಾಜ್ಯ ಪ್ರಾಮುಖ್ಯ ಪಡೆದಿದೆ. (ಎಚ್.ಎಸ್.ಕೆ.)

**ಮೇನ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಈಶಾನ್ಯ ತುದಿಯಲ್ಲಿರುವ ಹಾಗೂ ನ್ಯೂ ಇಂಗ್ಲೆಂಡ್ ವಿಭಾಗದ ಆರು ರಾಜ್ಯಗಳಲ್ಲಿ ಅತ್ಯಂತ ದೊಡ್ಡ ರಾಜ್ಯ. ಉ. ಅ. $43^{0}4'$ – $47^{0}28'$ ಹಾಗೂ ಪ. ರೇ. $66^{0}57'$ – $71^{0}7'$ ನಡುವೆ ಇದೆ. ಈಶಾನ್ಯ ಮತ್ತು ವಾಯವ್ಯದಲ್ಲಿ ಕೆನಡದ ಪ್ರಾಂತ್ಯಗಳಾದ ಕ್ವಿಬೆಕ್ ಮತ್ತು ನ್ಯೂಬ್ರನ್ಸ್‌ವಿಕ್ ಹಾಗೂ ಪಶ್ಚಿಮದಲ್ಲಿ ನ್ಯೂ ಹ್ಯಾಂಪ್‌ಷೈರ್. ದಕ್ಷಿಣ ಮತ್ತು ಆಗ್ನೇಯದಲ್ಲಿ ಅಟ್ಲಾಂಟಿಕ್ ಸಾಗರ ಇದನ್ನು ಸುತ್ತುವರಿದಿದೆ. ಪೈನ್ ಮರಗಳ ರಾಜ್ಯ ಎಂದು ಹೆಸರಾಗಿರುವ ಮೇನ್ ವಿಸ್ತೀರ್ಣದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ರಾಜ್ಯದಲ್ಲಿ 39 ನೆಯದು. ಒಳನಾಡಿನ ಜಲಪ್ರದೇಶ 5,944 ಚ.ಕಿಮೀ ಸೇರಿಸಿ ಈ ರಾಜ್ಯದ ಒಟ್ಟು ವಿಸ್ತೀರ್ಣ 86542 ಚ.ಕಿಮೀ. ಜನಸಂಖ್ಯೆ 12,74,923 (2000). ರಾಜಧಾನಿ ಅಗಸ್ಟ. ಜನಸಂಖ್ಯೆ: 18560 (2000)

ಭೂಲಕ್ಷಣ : ಅಪಲೇಷಿಯನ್ ಪರ್ವತ ಪಂಕ್ತಿಗಳು ನ್ಯೂಹ್ಯಾಂಪ್‌ಷೈರ್ ಮೂಲಕ ರಾಜ್ಯವನ್ನು ಪ್ರವೇಶಿಸಿ ರಾಜ್ಯದಲ್ಲಿಯ ಅತ್ಯಂತ ಎತ್ತರ ಶಿಖರ ಕಟಾಡನ್‌ನಲ್ಲಿ (1606 ಮೀ) ಕೊನೆಗೊಳ್ಳುತ್ತದೆ. ನ್ಯೂ ಹ್ಯಾಂಪ್‌ಷೈರ್ ಹಾಗೂ ಕ್ವಿಬೆಕ್‌ನೊಡನೆ ಇರುವ ಗಡಿಪ್ರದೇಶ ಅತ್ಯಂತ ದುರ್ಗಮವಾಗಿದ್ದು ನೀರ್ಗಲ್ಲುಗಳಿಂದ ಕೂಡಿದ ಪರ್ವತ ಶೀಖರಗಳು, ಸರೋವರಗಳು ಮತ್ತು ಇಕ್ಕಟ್ಟಾದ ಕಣಿವೆಗಳಿಂದ ಕೂಡಿದೆ. ಇಲ್ಲಿಯ ಪರ್ವತಗಳಲ್ಲಿ ಪ್ರಮುಖವಾದವು ಸ್ಯಾಡಲ್ ಬ್ಯಾಕ್, ಮೌಂಟ್ ಅಬ್ರಹಾಮ್, ಮೌಂಟ್ ಬಿಗೆಲೋವ್ ಮತ್ತು ಮೌಂಟ್ ಬ್ಲೂ. ಇವುಗಳ ದಕ್ಷಿಣ ಭಾಗ ಸಾಗರದೆಡೆಗೆ ಇಳಿಜಾರಾಗಿದ್ದು ಉತ್ತರ ಹಾಗೂ ಪೂರ್ವ ಭಾಗಗಳು ಗುಡ್ಡಗಾಡು ಮತ್ತು ವಿಶಾಲವಾದ ನದಿಬಯಲುಗಳಿಂದ ಕೂಡಿದೆ.

ರಾಜ್ಯದ ದಕ್ಷಿಣದ ತುದಿಯಲ್ಲಿರುವ ಕಿಟ್ಟರಿಯಿಂದ ರಾಜ್ಯದ ಅತ್ಯಂತ ದೊಡ್ಡ ನಗರ ಪೋರ್ಟ್‌ಲೆಂಡ್‌ನ ನೈಋತ್ಯದಲ್ಲಿರುವ ಕೇಪ್ ಎಲಿಜಬೆತ್‌ವರೆಗೆ ಉದ್ದವಾದ ಸಮುದ್ರ ತೀರವಿದ್ದು (ಸು. 5630 ಕಿಮೀ) ಮಧ್ಯೆ ಮಧ್ಯೆ ಬಂಡೆಗಳಿಂದ ಕೂಡಿದ ಭೂಶಿರಗಳಿವೆ. ಕೇಪ್ ಎಲಿಜಬೆತ್‌ನ ಉತ್ತರ ಹಾಗೂ ಪೂರ್ವದಲ್ಲಿಯ ತೀರಪ್ರದೇಶ ಪರ್ಯಾಯ ದ್ವೀಪಗಳಿಂದ ಇಕ್ಕಟ್ಟಾದ ಅಳಿವೆ, ಕೊಲ್ಲಿ ಹಾಗೂ ಹಿಮಯುಗದ ನೀರ್ಗಲ್ಲುಗಳಿಂದ ಸಮುದ್ರದಾಳಕ್ಕೆ ತಳ್ಳಿರುವ ಬೆಟ್ಟ ಮತ್ತು ಕಣಿವೆಗಳಿಂದ ಕೂಡಿದೆ. ಇಲ್ಲಿ ಬರುವ ಸಮುದ್ರದಲೆಗಳು ಸು. 3.7 ರಿಂದ 7.3 ಮೀ ಎತ್ತರವಿದ್ದು ಅತ್ಯಂತ ಬಲವಾದವು. ಇದಕ್ಕೆ ಸೇರಿದ 1200 ಕ್ಕೂ ಹೆಚ್ಚು ದ್ವೀಪಗಳಿವೆ. ತೀರಪ್ರದೇಶದಾಚೆಗೆ ಮೇನ್ ರಾಜ್ಯದಲ್ಲಿರುವ ಸು. 1600 ಕ್ಕೂ ಹೆಚ್ಚು ಸರೋವರಗಳಿಂದ ಜಲವಿದ್ಯುತ್ ತಯಾರಿಸಲಾಗುತ್ತದೆ. ಇಲ್ಲಿಯ ಕೆನೆಬೆಕ್ ನದಿ ಹುಟ್ಟುವ ಮೂಸ್‌ಹೆಡ್ ಸರೋವರ 311 ಚ.ಕಿಮೀ ಇದ್ದು ನ್ಯೂ ಇಂಗ್ಲೆಂಡ್ ಪ್ರದೇಶದಲ್ಲಿಯೇ ಅತಿ ದೊಡ್ಡದೆನಿಸಿದೆ. ರೇಂಜ್ಲೆಸ್, ಚೆಸನ್‌ಕುಕ್, ಟಿನ್ ಮತ್ತು ಗ್ರ್ಯಾಂಡ್ ಇಲ್ಲಿಯ ಇತರ ಪ್ರಮುಖ ಸರೋವರಗಳು. ಈ ರಾಜ್ಯದ ನದಿಗಳು ಹೆಚ್ಚಾಗಿ ಉತ್ತರದಿಂದ ದಕ್ಷಿಣದೆಡೆಗೆ ಹರಿಯುತ್ತವೆ. ಸೆಂಟ್ ಜಾನ್ ಹಾಗೂ ಅದರ ಉಪನದಿಯಾದ–ಅಲಗಾಸ್ ಉತ್ತರಕ್ಕೆ ಅನಂತರ ಪೂರ್ವಕ್ಕೆ ಹರಿದು ನ್ಯೂಬ್ರನ್ಸ್‌ವಿಕ್‌ನ ಮೂಲಕ ಸಮುದ್ರವನ್ನು ಸೇರುತ್ತದೆ. ದಕ್ಷಿಣ ಇಳಿಜಾರಿನಲ್ಲಿ ರಭಸವಾಗಿ ಹರಿಯುವ ಹಾಗೂ ಜಲಪಾತಗಳಿಂದ ಕೂಡಿದ ಪೆನಾಬ್ ಸ್ಕಾಟ್, ಕೆನೆಬೆಕ್, ಆ್ಯಂಡ್ರೋಸ್ಕೊಗಿನ್ ಮತ್ತು ಸ್ಯಾಕೊ ನದಿಗಳಿವೆ. ಮೇನ್‌ನ ನೈಋತ್ಯ ಭಾಗದ ಭೂಮಿ ಗ್ರಾನೈಟ್‌ನಿಂದ ಕೂಡಿದ್ದು ತೀರಪ್ರದೇಶ, ಮಧ್ಯಭಾಗ ಮತ್ತು ಪೂರ್ವಭಾಗಗಳಲ್ಲಿ ಭೂಮಿ ಜೇಡಿಮಣ್ಣು, ಪದರುಗಲ್ಲು, ಮರಳು ಮತ್ತು ಸುಣ್ಣಕಲ್ಲಿನಿಂದ ಕೂಡಿದೆ. ಈಶಾನ್ಯ ಭಾಗದ ಆರೂಸ್ಟೂಕ್ ಕೌಂಟಿಯಲ್ಲಿ ಜೇಡಿಮಣ್ಣಿನ ಭೂಮಿಯಿದ್ದು ರಾಜ್ಯದಲ್ಲೇ ಈ ಭಾಗ ಅತ್ಯಂತ ಫಲವತ್ತಾದ ಪ್ರದೇಶವೆನಿಸಿದೆ.

ವಾಯುಗುಣ: ಮೇನ್ ರಾಜ್ಯವನ್ನು ಅದರ ಹವಾಗುಣಕ್ಕನುಗುಣವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ದಕ್ಷಿಣದ ಒಳಭಾಗ, ತೀರ ಪ್ರದೇಶ ಹಾಗೂ ಉತ್ತರಭಾಗ. ದಕ್ಷಿಣಭಾಗ ಹಾಗೂ ತೀರಪ್ರದೇಶಗಳು ದಕ್ಷಿಣ ಮತ್ತು ಪಶ್ಚಿಮದೆಡೆಯಿಂದ ಬೀಸುವ ಮಾರುತಗಳಿಂದ ಪ್ರಭಾವಿತವಾಗಿವೆ. ಇಲ್ಲಿನ ವಾರ್ಷಿಕ ಸರಾಸರಿ ಉಷ್ಣತೆ ಉತ್ತರದಲ್ಲಿ $3^{0}$–$4^{0}$ಸೆ ದಕ್ಷಿಣದಲ್ಲಿ ಹಾಗೂ ತೀರ ಪ್ರದೇಶದಲ್ಲಿ $6^{0}$–$7^{0}$ಸೆ. ರಾಜ್ಯದ ಸರಾಸರಿ ಉಷ್ಣತೆ ಬೇಸಗೆಯಲ್ಲಿ $17^{0}$ಸೆ ಹಾಗೂ ಚಳಿಗಾಲದಲ್ಲಿ $7^{0}$ಸೆ. ವರ್ಷದ ಸು. 80 ದಿನಗಳಲ್ಲಿ ಬಿಸಿಲಿರುತ್ತದೆ. ವಾರ್ಷಿಕ ಅನುಪಾತದ ಪ್ರಮಾಣ 106–116 ಸೆಂಮೀ. ಉತ್ತರಭಾಗ ಹಾಗೂ ಎತ್ತರ ಪ್ರದೇಶಗಳಲ್ಲಿ ಹಿಮಪಾತ ಸರಾಸರಿ 254–950 ಸೆಂಮೀ ಗಳಿಗೂ ಹೆಚ್ಚಾಗಿರುತ್ತದೆ.

ಸಸ್ಯ ಹಾಗೂ ಪ್ರಾಣಿ ಸಂಪತ್ತು: ಇಲ್ಲಿ ಕಂಡುಬರುವ ಸಸ್ಯ ಹಾಗೂ ಪ್ರಾಣಿಗಳು ಉತ್ತರ ಧ್ರುವದ ಸಮೀಪದ ಮತ್ತು ಅಪಲೇಷಿಯನ್ ವಂಶಗಳ ಸಂಯುಕ್ತ ವರ್ಗಕ್ಕೆ ಸೇರಿದವು. ಮೇನ್ ಬಿಳಿ ಪೈನ್ ವೃಕ್ಷಗಳಿಗೆ ಹೆಸರುವಾಸಿ. ಇಲ್ಲಿಯ ಇತರ ಮರಗಳು ಫರ್, ಸ್ಪ್ರೂಸ್, ಹೆಮ್ಲಾಕ್, ಬಾಲ್ಸಮ್ ಫರ್, ಮೇಪಲ್, ಬಿಳಿದೇವದಾರು ಇತ್ಯಾದಿ. ಉತ್ತರ ಸಮಶೀತೋಷ್ಣವಲಯದಲ್ಲಿ ಬೆಳೆಯುವ ಹೂಗಿಡಗಳನ್ನು ಇಲ್ಲಿ ಕಾಣಬಹುದು. ಇಲ್ಲಿ ಕಂಡುಬರುವ ಪ್ರಾಣಿಗಳು ಜಿಂಕೆ, ಕಡವೆ, ಕಪ್ಪು ಕರಡಿ, ನರಿ, ಲಿಂಕ್ಸ್, ಮೊಲ, ಮುಳ್ಳುಹಂದಿ ಇತ್ಯಾದಿ. ಸಂಗ್‌ಬರ್ಡ್, ಸಮುದ್ರ ಹಕ್ಕಿಗಳು, ಸರೋವರದ ಹಕ್ಕಿಗಳು ಇಲ್ಲಿ ಹೇರಳವಾಗಿವೆ. ಇಲ್ಲಿ ಸಿಗುವ ಜಲಚರ ಪ್ರಾಣಿಗಳೆಂದರೆ ಸೀಲ್, ತಿಮಿಂಗಲ, ಕಾಡ್, ಸಾಲಮನ್, ಸೀಗಡಿ, ಚಿಪ್ಪುಮೀನು ಇತ್ಯಾದಿ.

ಜನಜೀವನ : ಮೇನ್ ತೀರಪ್ರದೇಶವನ್ನು ನ್ಯೂ ಇಂಗ್ಲೆಂಡ್ ಪ್ರಾಂತ್ಯದ ಯಾಂಕಿಗಳ ಸಾಂಪ್ರದಾಯಿಕ ವಾಸಸ್ಥಾನವೆಂದು ಕರೆಯುವುದುಂಟು. ಇಲ್ಲಿಯ ಅನೇಕ ಸಮುದಾಯಗಳು ಹಿಂದೆ ಸಾಗರ ಹಾಗೂ ನದೀವ್ಯಾಪಾರಗಳ ಪ್ರಮುಖ ಕೇಂದ್ರಗಳಾಗಿದ್ದವು. ಕಿಟ್ಟರಿಯಿಂದ ಕ್ಯಾಸ್ಕೋ ಕೊಲ್ಲಿಯ ಮೇಲಿನ ಪೋರ್ಟ್‌ಲೆಂಡ್ ನಗರ ಪ್ರದೇಶದವರೆಗೆ ಇರುವ ನೈಋತ್ಯ ತೀರಪ್ರದೇಶ ಪ್ರವಾಸ ಸ್ಥಳವಾಗಿದೆ. ಬಾತ್‌ನಿಂದ ಬೆಲ್‌ಫಾಸ್ಟ್‌ವರೆಗೆ ಇರುವ ಮಧ್ಯದ ತೀರಪ್ರದೇಶ ಮೀನುಗಾರಿಕೆ ಹಾಗೂ ಕಡಲಸಂಬಂಧದ ಚಟುವಟಿಕೆಗಳ ಕೇಂದ್ರ. ಪೆನಾಬ್‌ಸ್ಕಾಟ್ ಕೊಲ್ಲಿಯ ಪೂರ್ವತೀರದಿಂದ ಸೇಂಟ್ ಕ್ರಾಯಿಕ್ಸ್ ನದಿಯ ಮೇಲಿನ ಕಲಾಯಿಸ್‌ವರೆಗೆ ಪೂರ್ವ ತೀರಪ್ರದೇಶವಿದೆ.

ರಾಜ್ಯದ ಜನಸಂಖ್ಯೆ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗಳ ಬಹುಭಾಗ ಮೇನ್‌ನ ಮಧ್ಯ ಹಾಗೂ ದಕ್ಷಿಣ ಭಾಗ ನ್ಯೂ ಹ್ಯಾಪ್‌ಷೈರ್ ಗಡಿಯಿಂದ ಪೆನಾಬ್‌ಸ್ಕಾಟ್ ನದಿಯವರೆಗೆ ಕೇಂದ್ರೀಕೃತವಾಗಿದೆ. ಆರೂಸ್ಟೂಕ್ ಕೌಂಟಿಯಲ್ಲಿ ಇಂಗ್ಲಿಷ್ ಹಾಗೂ ಐರಿಷ್ ವಲಸೆಗಾರರು ನೆಲಸಿದ್ದು ಇವರ ಭಾಷೆ ಮೇನ್‌ಗಿಂತ ಹೆಚ್ಚಾಗಿ ಅಕ್ಕಪಕ್ಕದ ರಾಜ್ಯಗಳೊಡನೆ ಹೆಚ್ಚು ಹೋಲಿಕೆ ಪಡೆದಿದೆ. ರೂಸ್ಟೂಕ್ ಕೌಂಟಿಯ ಉತ್ತರ ಗಡಿಯಲ್ಲಿರುವ ಸೇಂಟ್ ಜಾನ್ ಕಣಿವೆಯಲ್ಲಿ ಫ್ರೆಂಚ್ ಮೂಲದ ಜನ ನೆಲೆಸಿದ್ದು ಇಂದಿಗೂ ತಮ್ಮ ಫ್ರೆಂಚ್ ವ್ಯಕ್ತಿತ್ವ ಹಾಗೂ ಫ್ರೆಂಚ್ ನುಡಿಯನ್ನು ಉಳಿಸಿಕೊಂಡಿರುವುದು ಕಂಡುಬರುತ್ತದೆ.

ಮೇನ್‌ನ ಅತ್ಯಂತ ದೊಡ್ಡ ನಗರ ಪೋರ್ಟ್‌ಲೆಂಡ್. ಜನಸಂಖ್ಯೆ: 63882 (2004). ಇದು ರಾಜ್ಯದ ವಾಣಿಜ್ಯ ಹಾಗೂ ಸಾರಿಗೆಯ ಕೇಂದ್ರವಾಗಿದೆ. ಉಕ್ಕು ಮತ್ತು ಕಾಗದದ ಕಾರ್ಖಾನೆಗಳು ಹಾಗೂ ಇತರ ವೈವಿಧ್ಯಮಯ ಕೈಗಾರಿಕೆಗಳಿವೆ. ಬ್ಯಾಂಗಾರ್ ನಗರ ಪೆನಾಬ್‌ಸ್ಕಾಟ್ ನದಿಯ ಮೇಲಿದ್ದು, ಪೂರ್ವ ಹಾಗೂ ಉತ್ತರ ಮೇನ್‌ನ ವಾಣಿಜ್ಯ ಕೇಂದ್ರವಾಗಿದೆ. ಕೆನೆಬೆಕ್ ನದಿಯ ಮೇಲಿರುವ ಆಗಸ್ಟ ರಾಜ್ಯದ ರಾಜಧಾನಿ. ಇದು ಬಟ್ಟೆ, ಪಾದರಕ್ಷೆ ಮತ್ತು ಕಾಗದದ ಕೈಗಾರಿಕಾ ಕೇಂದ್ರ. ರಾಜ್ಯದ ಇತರ ಪ್ರಮುಖ ನಗರಗಳು ಲೆವಿಸ್ಟನ್, ಆಬರ್ನ್, ಬಿಡೆಫೋರ್ಡ್, ವಾಟರ್‌ವಿಲ್ಲೆ.

ನ್ಯೂ ಇಂಗ್ಲೆಂಡ್ ನಿವಾಸಿಗಳಲ್ಲಿ ಇಂಗ್ಲಿಷ್ – ಸ್ಕಾಟ್–ಐರಿಷ್ ಪ್ರಾಟೆಸ್ಟಂಟ್ ವಲಸೆಗಾರರು ಬಹುಸಂಖ್ಯಾತ ವರ್ಗದವರಾಗಿದ್ದು ಇಲ್ಲಿಯ ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅಕಾಡಿಯನ್ನರೆಂದು ಕರೆಯುವ ಫ್ರೆಂಚ್ ಮೂಲದವರು ಇಲ್ಲಿಯ ಎರಡನೆಯ ಬಹುಸಂಖ್ಯಾತ ವರ್ಗ. ಇವರನ್ನು 1763 ರಲ್ಲಿ ನೋವಾ ಸ್ಕಾಟಿಯದಿಂದ ಬ್ರಿಟಿಷರು ಹೊರಹಾಕಿದರು. ಇವರು ಸೇಂಟ್ ಜಾನ್ ಕಣಿವೆಯಲ್ಲಿ ಹಾಗೂ ಲೂಸಿಯಾನಿಯದಲ್ಲಿ ನೆಲಸಿದರು. ಸೇಂಟ್ ಜಾನ್ ಕಣಿವೆಯಲ್ಲಿ ಫ್ರೆಂಚ್ ಪ್ರಮುಖ ಭಾಷೆಯಾಗಿದ್ದು, ಮೇನ್‌ನ ಕೈಗಾರಿಕಾ ನಗರಗಳಲ್ಲಿ ದ್ವಿತೀಯ ಭಾಷೆಯಾಗಿದೆ. 18 ನೆಯ ಶತಮಾನದಲ್ಲಿ ಇಲ್ಲಿಗೆ ಐರಿಷ್ ಜನರು ವಲಸೆ ಬಂದರು. ಮೇನ್ ರೋಮನ್ ಕೆಥೊಲಿಕ್‌ರಲ್ಲಿ ಬಹುಭಾಗ ಐರಿಷ್ ಹಾಗೂ ಫ್ರೆಂಚರಿದ್ದಾರೆ. 1870 ರ ದಶಕದಲ್ಲಿ ಕೃಷಿಯ ಅಭಿವೃದ್ಧಿ ಹಾಗೂ ಜನಸಂಖ್ಯೆಯ ಬೆಳವಣಿಗೆಯ ಉದ್ದೇಶಕ್ಕಾಗಿ ಆರೂಸ್ಟೂಕ್ ಕೌಂಟಿಯಲ್ಲಿ ಸರ್ಕಾರ ಸ್ವೀಡಿಷ್ ವಸಾಹತಿನ ಸ್ಥಾಪನೆಗೆ ಉತ್ತೇಜನ ನೀಡಿತು. ಇಲ್ಲಿ ವಾಸಿಸುವ ಇತರ ಜನರ ಮೂಲ ಅಮೆರಿಕನ್ ಇಂಡಿಯನ್ನರು. ಮೇನ್‌ನಲ್ಲಿಯ ಬಿಳಿಯರಲ್ಲದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 9 ಕ್ಕಿಂತ ಕಡಿಮೆ.

ಆರ್ಥಿಕತೆ: ಕೈಗಾರಿಕಾ ಕ್ರಾಂತಿಯ ಕಾಲದಲ್ಲಿ ಮೇನ್‌ನಲ್ಲಿ ಸಿಗುತ್ತಿದ್ದ ಅರಣ್ಯ ಸಂಪತ್ತು, ಜಲಸಂಪತ್ತು, ಕಡಿಮೆ ಕೂಲಿಗೆ ಸಿಗುವ ನಿಪುಣ ಕೆಲಸಗಾರರು ಇವೆಲ್ಲ ಉದ್ಯಮಿಗಳನ್ನು ಇಲ್ಲಿಗೆ ಆಕರ್ಷಿಸಿದವು. ಬಟ್ಟೆ ಹಾಗೂ ಪಾದರಕ್ಷೆಗಳ ಕಾರ್ಖಾನೆಗಳು ಸ್ಥಾಪಿತವಾದವು.

ಇಲ್ಲಿಯ ಅತ್ಯಂತ ಫಲವತ್ತಾದ ಪ್ರದೇಶವಾದ ಆರೂಸ್ಟೂಕ್ ಕೌಂಟಿಯ ಪ್ರಮುಖ ಬೆಳೆ ಆಲೂಗೆಡ್ಡೆ. ಉಳಿದ ಭಾಗದಲ್ಲಿಯ ಭೂಮಿ ಹಾಗೂ ಮಣ್ಣಿನ ಗುಣ ದೊಡ್ಡ ಪ್ರಮಾಣದ ಕೃಷಿಗೆ ಯೋಗ್ಯವಾಗಿಲ್ಲ. ಸಮುದ್ರ ನಳ್ಳಿಗಳನ್ನು ಬಿಟ್ಟರೆ ಉಳಿದ ಮೀನುಗಾರಿಕೆ ಸೀಮಿತವಾಗಿದೆ. ಈ ಕಾರಣಗಳಿಂದ ನ್ಯೂ ಇಂಗ್ಲೆಂಡಿನಲ್ಲಿ ಕಡಿಮೆ ಆದಾಯವಿರುವ ರಾಜ್ಯಗಳಲ್ಲಿ ಮೇನ್ ಎರಡನೆಯದೆನಿಸಿದೆ.

ಇಲ್ಲಿ ಸಿಗುವ ನೈಸರ್ಗಿಕ ಸಂಪತ್ತಿನಲ್ಲಿ ಪ್ರಮುಖವಾದವು ಮರ, ಮರಳು, ಗ್ರಾವೆಲ್, ಸುಣ್ಣಕಲ್ಲು, ಹಾಗೂ ಮೀನು. ಅಲ್ಪ ಪ್ರಮಾಣದಲ್ಲಿ ತಾಮ್ರ, ಸತು ಫೆಲ್‌ಸ್ಪಾರ್ ಹಾಗೂ ಅರ್ಧಪ್ರಶಸ್ತ ಹರಳುಗಳು ಸಿಗುತ್ತವೆ. ಸಸ್ಯಾಗಾರವನ್ನು ತೋಟಗಾರಿಕೆಗಾಗಿ ಹೊರತೆಗೆಯಲಾಗುತ್ತದೆ. ಇಲ್ಲಿಯ ಪ್ರಮುಖ ಬೆಳೆಗಳು ಆಲೂಗಡ್ಡೆ, ಸೇಬು, ಬ್ಲೂಚೆರ್ರಿ, ಓಟ್ಸ್ ಇತ್ಯಾದಿ. ಪಶುಪಾಲನೆ ಹಾಗೂ ಕೋಳಿ ಸಾಕಾಣಿಕೆ ಇತರ ಕಸಬುಗಳು. ಮನೋಹರವಾದ ಸರೋವರಗಳು, ಸಮುದ್ರತೀರ, ಈಜಲು, ದೋಣಿವಿಹಾರಕ್ಕೆ, ಮೀನುಗಾರಿಕೆಗೆ, ಬೇಟೆಯಾಡಲು ಮೇನ್‌ನ ಪ್ರಮುಖ ಆಕರ್ಷಣೆಯಾಗಿವೆ. ಮೌಂಟ್ ಡೆಸರ್ಟ್ ದ್ವೀಪದಲ್ಲಿಯ ಅಕಾಡಿಯ ನ್ಯಾಷನಲ್ ಪಾರ್ಕ್, ಬಾಕ್ಸಟರ್ ಸ್ಟೇಟ್ ಪಾರ್ಕ್, ಕಟಾಡಿನ ಪರ್ವತದ ಸುತ್ತಮುತ್ತ 80,940 ಹೆಕ್ಟೇರ್ ವಿಸ್ತೀರ್ಣದ ಅರಣ್ಯ ಪ್ರದೇಶ, 147 ಕಿಮೀ ಉದ್ದದ ಜಲಮಾರ್ಗ ಹಾಗೂ ನೂರಕ್ಕೂ ಹೆಚ್ಚು ರಾಜ್ಯಪಾರ್ಕ್‌ಗಳು ಮತ್ತು ಐತಿಹಾಸಿಕ ಸ್ಥಳಗಳು ಇದನ್ನು ಜನಪ್ರಿಯ ಪ್ರವಾಸಿ ಕೇಂದ್ರವನ್ನಾಗಿ ಮಾಡಿವೆ. (ಜಿ.ಎಸ್.ಎಸ್.)

**ಮೇರಿಲೆಂಡ್:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ರಾಜ್ಯ. ಬ್ರಿಟಿಷರ ವಿರುದ್ಧ ಹೋರಾಡಿ ಒಕ್ಕೂಟವನ್ನೇರ್ಪಡಿಸಿಕೊಂಡ ಮೊದಲ 13 ರಾಜ್ಯಗಳಲ್ಲಿ ಮೇರಿಲೆಂಡ್ ಸಹ ಸೇರಿದೆ. ಅಟ್ಲಾಂಟಿಕ್ ಸಾಗರದ ತೀರದಲ್ಲಿ ಚೆಸ್‍ಪೀಕ್ ಕೊಲ್ಲಿಯ ಎರಡೂ ಕಡೆ ಹಬ್ಬಿರುವ ಈ ರಾಜ್ಯ ಉತ್ತರ ಅಕ್ಷಾಂಶ $37^0 53'$ ರಿಂದ $39^0 43'$ ಪಶ್ಚಿಮ ರೇಖಾಂಶ $75^0 4'$ ರಿಂದ $79^0 29'$ ನಡುವೆ ಇದೆ. ಉತ್ತರದಲ್ಲಿ ಪೆನ್ಸಿಲ್ವೇನಿಯ, ಪೂರ್ವದಲ್ಲಿ ಡೆಲವೇರ್, ಅಟ್ಲಾಂಟಿಕ್ ಸಾಗರ ಮತ್ತು ವರ್ಜೀನಿಯದ ಸ್ವಲ್ಪಭಾಗ, ದಕ್ಷಿಣ ಮತ್ತು ಪಶ್ಚಿಮದಲ್ಲಿ ಡಿಸ್ಟ್ರಿಕ್ಟ್ ಆಫ್ ಕೊಲಂಬಿಯ, ಪೋಟೋಮ್ಯಾಕ್ ನದಿ ಹಾಗೂ ಪಶ್ಚಿಮ ವರ್ಜೀನಿಯ ಇದರ ಮೇರೆಗಳು. ರಾಜ್ಯದೊಳಗಿನ ಜಲಾವೃತ ಭಾಗ 1,777 ಚ.ಕಿ.ಮೀ ಸೇರಿ ಇದರ ವಿಸ್ತೀರ್ಣ 32,133 ಚ.ಕಿಮೀ. ಚೆಸ್‍ಪೀಕ್ ಕೊಲ್ಲಿಯ 4,470 ಚ.ಕಿಮೀ ಜಲಾವೃತ ಭಾಗ ಇದರಲ್ಲಿ ಸೇರಿಲ್ಲ. ಜನಸಂಖ್ಯೆ 56,00,388 (2000). ವಿಸ್ತೀರ್ಣದಲ್ಲಿ ಒಕ್ಕೂಟದ ರಾಜ್ಯಗಳ ಪೈಕಿ 42 ನೆಯದು ಹಾಗೂ ಜನಸಂಖ್ಯೆಯಲ್ಲಿ 21ನೆಯದು. ರಾಜಧಾನಿ ಅನಾಪೊಲಿಸ್. ಜನಸಂಖ್ಯೆ; 36217 (2004). ಬಾಲ್ಟಿಮೋರ್ 641943 (2004) ಪ್ರಮುಖ ನಗರ.

ಭೂ ಲಕ್ಷಣ: ಮೇರಿಲೆಂಡ್ ವೈವಿಧ್ಯಮಯ ಭೂಲಕ್ಷಣಗಳಿಂದ ಕೂಡಿದೆ. ಇಲ್ಲಿಯ ಪ್ರಮುಖ ಭೂಭಾಗಗಳೆಂದರೆ ಅಟ್ಲಾಂಟಿಕ್ ತೀರದ ಬಯಲು ಪ್ರದೇಶ, ಬ್ಲೂರಿಡ್ಜ್, ಅಪಲೇಷಿಯನ್ ಪರ್ವತಪಂಕ್ತಿಗಳು ಹಾಗೂ ಅಪಲೇಷಿಯನ್ ಪ್ರಸ್ಥಭೂಮಿ. ಚೆಸ್‍ಪೀಕ್ ಕೊಲ್ಲಿ ರಾಜ್ಯವನ್ನು ಎರಡು ಭಾಗಗಳಾಗಿ ವಿಭಜಿಸಿದೆ. ಪೂರ್ವಭಾಗ ಕೆಳಮಟ್ಟದ ಸಮತಲವಾದ ಬಯಲು ಪ್ರದೇಶವಾಗಿದ್ದು ಉತ್ತರಕ್ಕೆ ಹೋದಂತೆಲ್ಲ ಎತ್ತರವಾಗುತ್ತದೆ. ಪಶ್ಚಿಮ ಭಾಗಗಳಲ್ಲಿ ಸ್ವಲ್ಪವಾಗಿ ಮಾತ್ರ ಸಮತಲ ಪ್ರದೇಶವಿದ್ದು ಉಳಿದ ಭಾಗ ಬೆಟ್ಟಗುಡ್ಡಗಳು, ಕಣಿವೆಗಳು ಹಾಗೂ ಪ್ರಸ್ಥಭೂಮಿಗಳಿಂದ ಕೂಡಿದೆ. ಇಲ್ಲಿಯ ನದಿಗಳಲ್ಲಿ ಬಹುಪಾಲು ಚೆಸ್‍ಪೀಕ್ ಕೊಲ್ಲಿಯನ್ನು ಸೇರುತ್ತವೆ. ರಾಜ್ಯದ ಮುಖ್ಯ ನದಿಗಳೆಂದರೆ ಚೆಸ್ಟರ್, ಚಾಪ್ಟ್ಯಾಂಕ್, ಎಲ್ಕ್ ನಾಂಟಿಕೋಕ್, ಪ್ಯಾಟುಕ್ಸೆಂಟ್ ಹಾಗೂ ಪೋಟೊಮ್ಯಾಕ್. ಇಲ್ಲಿಯ ಮಾನವ ನಿರ್ಮಿತ ಸರೋವರಗಳಲ್ಲಿ ಯಾಕ್‍ಗನೀ ನದಿಯ ಉಪನದಿಯೊಂದಕ್ಕೆ ಕಟ್ಟಿರುವ ಅಣೆಕಟ್ಟಿನಿಂದ ಉಂಟಾಗಿರುವ ಡೀಪ್‍ಕ್ರೀಕ್ ಸರೋವರ ಅತ್ಯಂತ ದೊಡ್ಡದು. ಸು. 1600 ಹೆಕ್ಟೇರ್ ಪ್ರದೇಶವನ್ನು ಆವರಿಸಿರುವ ಈ ಸರೋವರವನ್ನು ವಿದ್ಯುತ್ ಉತ್ಪಾದನೆಗೂ ಬಳಸಿಕೊಳ್ಳಲಾಗಿದೆ.

ಹವಾಗುಣ: ಅಟ್ಲಾಂಟಿಕ್ ಸಾಗರ, ಚೆಸ್‍ಪೀಕ್ ಕೊಲ್ಲಿ ಹಾಗೂ ಅಪಲೇಷಿಯನ್ ಪರ್ವತಗಳ ಪ್ರಭಾವಕ್ಕೆ ಇಲ್ಲಿಯ ಹವಾಗುಣ ಒಳಪಟ್ಟಿದೆ. ಹವೆ ಆರ್ದ್ರವಾಗಿದ್ದು ಬೇಸಗೆಯಲ್ಲಿ ಸೆಕೆ ಹೆಚ್ಚಾಗಿಯೂ ಚಳಿಗಾಲ ಸೌಮ್ಯವಾಗಿಯೂ ಇರುತ್ತದೆ. ವಾರ್ಷಿಕ ಸರಾಸರಿ ಮಳೆ 112 ಸೆಂಮೀ. ರಾಜ್ಯದಲ್ಲೆಡೆ ಬಹುಮಟ್ಟಿಗೆ ಬೀಳುತ್ತದೆ.

ಸಸ್ಯ ಮತ್ತು ಪ್ರಾಣಿ ಸಂಪತ್ತು : ರಾಜ್ಯದಲ್ಲಿ ಅರಣ್ಯಸಂಪತ್ತು ಹೇರಳವಾಗಿದ್ದು ಒಟ್ಟು ವಿಸ್ತೀರ್ಣದ ಶೇ. 40 ರಷ್ಟು ಅಂದರೆ ಸು. 10,90,000 ಹೆಕ್ಟೇರ್ ಅರಣ್ಯವಿದೆ. ಇಲ್ಲಿಯ ಮರಗಳಲ್ಲಿ ಪ್ರಮುಖವಾದವು ಓಕ್, ಬೀಚ್, ಪಾಪ್ಲರ್, ಲೀಕಸ್ಟ್, ಎಲ್ಮ್, ಹಿಕರಿ, ಸ್ಪ್ರೂಸ್, ಹೆಮ್‍ಲಾಕ್, ಪೈನ್ ಇತ್ಯಾದಿ. ಇಲ್ಲಿ ಕಾಣಸಿಗುವ ವನ್ಯ ಜೀವಿಗಳು ಬಾಬ್ ಕ್ಯಾಟ್, ಕರಡಿ, ಜಿಂಕೆ, ನರಿ, ಮೊಲ ಇತ್ಯಾದಿ. ಚೆಸ್‍ಪೀಕ್ ಪ್ರದೇಶಗಳಲ್ಲಿ ವಿವಿಧ ಜಾತಿಯ ಕಾಡುಬಾತುಗಳು ಇವೆ. ಸಾಂಗ್ ಬರ್ಡ್, ಹದ್ದು, ಗೂಬೆ ಇತರ ಪಕ್ಷಿಗಳು. ಅಟ್ಲಾಂಟಿಕ ತೀರ ಹಾಗೂ ಚೆಸ್‍ಪೀಕ್ ಕೊಲ್ಲಿಯಲ್ಲಿ 2000 ಕ್ಕೂ ಹೆಚ್ಚು ಜಾತಿಯ ಮೀನುಗಳನ್ನು ನೋಡಬಹುದು. ಇಲ್ಲಿಯ ಆಯ್‍ಸ್ಟರ್ ಮತ್ತು ಏಡಿಗಳು ಜನಪ್ರಿಯವಾದವು.

ಆರ್ಥಿಕತೆ: ಅರಣ್ಯಗಳನ್ನು ಬಿಟ್ಟು ಮೇರಿಲೆಂಡ್‍ನ ಇತರ ಭಾಗಗಳು ಫಲವತ್ತಾಗಿ ವ್ಯವಸಾಯಕ್ಕೆ ಯೋಗ್ಯವಾಗಿವೆ. ಕೃಷಿಯನ್ನು ಅವಲಂಬಿಸಿರುವವರ ಸಂಖ್ಯೆ ಶೇ. 3 ರಷ್ಟು ಅನುಕೂಲ ಹವಾಗುಣ, ಉತ್ತಮ ಸಾರಿಗೆ ವ್ಯವಸ್ಥೆ ಹಾಗೂ ಮಾರುಕಟ್ಟೆ ಸೌಲಭ್ಯಗಳ ಸಾಮೀಪ್ಯ ಮತ್ತು ಮೇರಿಲೆಂಡ್ ವಿಶ್ವವಿದ್ಯಾಲಯ ಕೃಷಿ ವಿಭಾಗದ ಸಮರ್ಥ ಮಾರ್ಗದರ್ಶನ ಇಲ್ಲಿಯ ವ್ಯವಸಾಯಕ್ಕೆ ಹೆಚ್ಚು ಉತ್ತೇಜನ ನೀಡಿದೆ. ರಾಜ್ಯದ ದಕ್ಷಿಣಭಾಗದ ಮುಖ್ಯ ಬೆಳೆ ಹೊಗೆಸೊಪ್ಪು, ಇತರ ಬೆಳೆಗಳು ಗೋದಿ, ಓಟ್ಸ್, ಬಾರ್ಲಿ, ರೈ ಮುಂತಾದವು. ಪಶುಪಾಲನೆ ಹಾಗೂ ಹೈನುಗಾರಿಕೆ ಇಲ್ಲಿಯ ಪ್ರಮುಖ ಉದ್ಯಮಗಳಲ್ಲೊಂದು. ಕೋಳಿ ಸಾಕಣೆ ಮತ್ತು ಮೀನುಗಾರಿಕೆ ಇಲ್ಲಿಯ ಲಾಭದಾಯಕ ಉದ್ಯಮ. ಆಯ್‍ಸ್ಟರ್ ಉತ್ಪಾದನೆಯಲ್ಲಿ ಮೇರಿಲೆಂಡ್ ಅಮೆರಿಕದಲ್ಲೇ ಪ್ರಥಮ.

ಕೈಗಾರಿಕೆ: ರಾಜ್ಯದ ಎಲ್ಲೆಡೆ ಕೈಗಾರಿಕೆಗಳು ಹರಡಿದ್ದರೂ ಬಾಲ್ಟಿಮೋರ್ ಪ್ರದೇಶದಲ್ಲಿ ಕೇಂದ್ರೀಕೃತವಾಗಿವೆ. ಪೂರ್ವ ತೀರಪ್ರದೇಶದಲ್ಲಿ ತರಕಾರಿ, ಕೋಳಿ ಮತ್ತು ಮೀನು ಸಂಸ್ಕರಣದ ಕೈಗಾರಿಕೆಗಳಿವೆ. ಈ ರಾಜ್ಯದ ಪ್ರಮುಖ ಕೈಗಾರಿಕೆಗಳು ಹಡಗುಗಳ ತಯಾರಿಕೆ, ಮೂಲಲೋಹಗಳು, ಸಾರಿಗೆ ಉಪಕರಣಗಳು, ಆಹಾರ ಸಂಸ್ಕರಣ, ರಾಸಾಯನಿಕ ವಸ್ತುಗಳು, ಯಂತ್ರೋಪಕರಣಗಳು, ಉಡುಪುಗಳು, ಮರದ ಸಾಮಾನುಗಳು, ಕಾಗದ, ಮುದ್ರಣ ಮತ್ತು ಪ್ರಕಾಶನ, ಬಾಲ್ಟಿಮೋರ್‍ನ ಹೊರವಲಯದಲ್ಲಿರುವ ಬೆತ್ಲೆಹೇಮ್ ಸ್ಟೀಲ್ ಕಾರ್ಪೊರೇಷನ್ ಪ್ರಪಂಚದ ಅತ್ಯಂತ ದೊಡ್ಡ ಉಕ್ಕಿನ ಕಾರ್ಖಾನೆಗಳಲ್ಲೊಂದಾಗಿದೆ. ಇಲ್ಲಿಯ ಗಣಿಗಳಿಂದ ಗ್ರಾನೈಟ್, ಸುಣ್ಣದ ಕಲ್ಲು, ಜೇಡಿಮಣ್ಣು, ಕಲ್ಲಿದ್ದಲು, ಪ್ರಾಕೃತಿಕ ಅನಿಲಗಳನ್ನು ತೆಗೆಯಲಾಗುತ್ತದೆ.

ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಸ್ಥಾಪಿಸಿದ 13 ಮೂಲ ರಾಜ್ಯಗಳಲ್ಲಿ ಮೇರಿಲೆಂಡ್ ಒಂದಾಗಿದ್ದರೂ ಇಲ್ಲಿ ಗುಲಾಮಗಿರಿ ಚಾಲ್ತಿಯಲ್ಲಿತ್ತು. 1861ರ ಅಂತರ್ಯುದ್ಧದ ಸಮಯದಲ್ಲಿ ಜನತೆ ಪರ ಮತ್ತು ವಿರೋಧದ ಎರಡು ಗುಂಪುಗಳಾಗಿತ್ತು. ಕೊನೆಗೆ ಮೇರಿಲೆಂಡ್ ಸಂಯುಕ್ತಸಂಸ್ಥಾನಗಳೊಡನೆ ಸೇರಿ 1864ರಲ್ಲಿ ಗುಲಾಮಗಿರಿಯನ್ನು ರದ್ದುಗೊಳಿಸಿತು.

20ನೆಯ ಶತಮಾನದಲ್ಲಿ ಮೇರಿಲೆಂಡ್‍ನ ಕೈಗಾರಿಕೋದ್ಯಮದ ವ್ಯಾಪಕ ಅಭಿವೃದ್ಧಿಯಾಯಿತು. 1917ರಲ್ಲಿ ಅಮೆರಿಕ ಒಂದನೆಯ ಮಹಾಯುದ್ಧದಲ್ಲಿ ಸೇರಿದ ಅನಂತರ ಇಲ್ಲಿಯ ಕೈಗಾರಿಕೆಗಳು ಹಾಗೂ ಹಡಗುಕಟ್ಟೆಗಳು ಮತ್ತಷ್ಟು ಅಭಿವೃದ್ಧಿಯಾಗಿ ಈಗ ಮೇರಿಲೆಂಡ್ ಅಮೆರಿಕದ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲೊಂದಾಗಿದೆ. ಇದು ಬಾಹ್ಯಾಕಾಶ ಸಂಶೋಧನೆ ಮತ್ತು ಅಭಿವೃದ್ಧಿಯ ರಾಷ್ಟ್ರೀಯ ಕೇಂದ್ರವಾಗಿದೆ. ಗ್ರೀನ್‍ಬೆಲ್ಟ್‍ನಲ್ಲಿರುವ ನಾಸಾದ ಗಾಡ್ಡಾರ್ಡ್ ಸ್ಪೇಸ್ ಸ್ಟಡಿ ಸೆಂಟರ್ ಬಾಹ್ಯಾಕಾಶ ಯೋಜನಾ ಕಾರ್ಯಕೇಂದ್ರ.

ಮೇರಿಲೆಂಡ್ ಅಮೆರಿಕದ ಪ್ರವಾಸಿ ಆಕರ್ಷಕ ಕೇಂದ್ರಗಳಲ್ಲೊಂದು. ರಾಜ್ಯದಲ್ಲಿ ಅನೇಕ ಪುರಾತನ ಕಟ್ಟಡಗಳೂ ಚರಿತ್ರಾರ್ಹಸ್ಥಳಗಳೂ ಇವೆ. 1814ರಲ್ಲಿ ಬಾಲ್ಟಿಮೋರ್‍ನಲ್ಲಿ ಸ್ಥಾಪಿಸಲಾದ ಪೀಲ್ ವಸ್ತುಸಂಗ್ರಹಾಲಯವಿದೆ. ಪ್ರವಾಸಿಗಳಿಗೆ ನೌಕಾಯಾನ, ಮೀನು ಹಿಡಿಯುವುದು, ಈಜುವುದು ಮತ್ತು ಬೇಟೆಗಳಿಗೆ ಇಲ್ಲಿ ಪ್ರಶಸ್ತ ಸ್ಥಳಗಳಿವೆ. (ಜಿ.ಎಸ್.ಎಸ್.)

**ಮೇಲುಕೋಟೆ:** ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿ ಕಸಬೆಯಿಂದ ಉತ್ತರಕ್ಕೆ 29 ಕಿಮೀ ದೂರದಲ್ಲಿರುವ ಪಟ್ಟಣ, ಹೋಬಳಿ ಕೇಂದ್ರ, ಪ್ರಸಿದ್ಧ ಯಾತ್ರಾಸ್ಥಳ. ಸಮುದ್ರಮಟ್ಟದಿಂದ 1,013 ಮೀ ಎತ್ತರದಲ್ಲಿ ಗಿರಿಪಂಕ್ತಿಯೊಂದರ ಮೇಲೆ ಮಟ್ಟಸ ಪ್ರದೇಶದಲ್ಲಿ ಸುಂದರ ಸನ್ನಿವೇಶದಲ್ಲಿದೆ. ಇಲ್ಲಿಗೆ ಮಂಡ್ಯ, ಮೈಸೂರು, ಬೆಂಗಳೂರು ಮೊದಲಾದ ಸ್ಥಳಗಳಿಂದ ಉತ್ತಮ ರಸ್ತೆ ಸಂಪರ್ಕವಿದೆ. ಪುರಸಭಾಡಳಿತಕ್ಕೆ ಒಳಪಟ್ಟಿದೆ. ಜನಸಂಖ್ಯೆ 3,082.

ಮೇಲುಕೋಟೆಯ ಮುಖ್ಯ ಆಕರ್ಷಣೆ ಚೆಲುವನಾರಾಯಣ ದೇವಸ್ಥಾನ. ಮೂಲ ಗುಡಿಯಲ್ಲಿ ಗರ್ಭಗುಡಿ ಮತ್ತು ಅದರ ಸುತ್ತಲೂ ಕತ್ತಲೆ ಪ್ರದಕ್ಷಿಣೆ ಇದೆ (ಇದು ವರ್ಷಕ್ಕೊಂದು ದಿನ ವೈರಮುಡಿ ಉತ್ಸವದ ರಾತ್ರಿ ತೆರೆಯಲ್ಪಡುವುದು). 14ನೆಯ ಶತಮಾನದಲ್ಲಿ ಮೇಲುಕೋಟೆ ಮಹಮ್ಮದೀಯರ ದಾಳಿಗೆ ಈಡಾಗಿತ್ತು. ವಿಜಯನಗರದ ಅರಸು ಮಲ್ಲಿಕಾರ್ಜುನ ಮಂತ್ರಿ ತಿಮ್ಮಣ ದಂಡನಾಯಕ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ (1460). ಚಕ್ರತ್ತಾಳ್ವಾರ್ ಸನ್ನಿಧಿ ಮುಂದೆಯೂ ಶ್ರೀಯದುಗಿರಿ ಅಮ್ಮನವರ ಸನ್ನಿಧಿ ಮುಂದೆಯೂ ಇರುವ ಮಂಟಪ ತಿಮ್ಮಣ ದಂಡನಾಯಕನಿಂದ ಕಟ್ಟಲಾಗಿದೆಯೆಂದು ಅಲ್ಲಿಯೇ ಕಂಬದ ಮೇಲಿರುವ ಒಂದು ಶಾಸನ ಹೇಳುತ್ತದೆ. ಇಲ್ಲಿರುವ ಒಂದೊಂದು ಕಂಬದಲ್ಲೂ ರಾಮಾಯಣ ಮತ್ತು ಮಹಾಭಾರತ ಕಥೆಗಳು ಕಣ್ಣಿಗೆ ಕಟ್ಟುವಂತೆ ಕೆತ್ತಲ್ಪಟ್ಟಿವೆ.

ರತ್ನಖಚಿತ ವೈರಮುಡಿ ಕಿರೀಟ ಚೆಲುವ ನಾರಾಯಣಸ್ವಾಮಿ ಗುಡಿಯ ಅಮೂಲ್ಯ ವಸ್ತುಗಳಲ್ಲಿ ಒಂದು. ಪ್ರತಿ ವರ್ಷ ಈ ಕಿರೀಟವನ್ನು ಉತ್ಸವ ಮೂರ್ತಿಗೆ ಧರಿಸಿ ವೈಭವಯುತವಾಗಿ ವೈರಮುಡಿ ಉತ್ಸವವನ್ನು ಏಪ್ರಿಲ್ ತಿಂಗಳಲ್ಲಿ ನಡೆಸಲಾಗುತ್ತದೆ. ಇದು ಸಾವಿರಾರು ಜನರನ್ನು ಆಕರ್ಷಿಸುತ್ತದೆ. ಇಲ್ಲಿಯ ಅಷ್ಟತೀರ್ಥಗಳಲ್ಲಿ ಕಲ್ಯಾಣಿ ಅಗ್ರಗಣ್ಯವಾದುದು. ಇದು ರಾಮನುಜರ ಕಾಲಕ್ಕೆ ಮುಂಚೆಯೇ ಇತ್ತೆಂದು ಹೇಳಲಾಗಿದೆ. ಇದರ ಸುತ್ತ ಅನೇಕ ಮಂಟಪಗಳಿವೆ. ರಾಮಾನುಜ ಸಿದ್ಧಾಂತದ ಅನುಯಾಯಿಗಳ ಯತಿರಾಜಮಠ, ಪರಕಾಲ ಮಠ, ವಾನಮಾಲೈಮಠ ಮುಂತಾದವೂ ಇಲ್ಲಿವೆ. ಆಧುನಿಕ ಕನ್ನಡ ಸಾಹಿತ್ಯದ ಹಿರಿಯ ಕವಿ ಪುತಿನ ಅವರ ಜನ್ಮಸ್ಥಳವಿದು. *

**ಮೇಲುಗಾಲುವೆ:** ಯಾವುದೇ ಉದ್ದೇಶಕ್ಕಾಗಲಿ ನೀರನ್ನು ಹೊಳೆಗಳ ಮೇಲೂ ನೆಲದ ಕೆಳಗಡೆಯೂ ದೂರದ ಮತ್ತೊಂದೆಡೆ ಸಾಗಿಸುವ ತೂಬು ಇಲ್ಲವೆ ಸುರಂಗ ವ್ಯವಸ್ಥೆ (ಅಕ್ವಿಡಕ್ಟ್). ಇಂಥ ಏರ್ಪಾಡುಗಳು 14ನೆಯ ಶತಮಾನದಲ್ಲಿ ಈಜಿಪ್ಟಿನಲ್ಲಿ ಬಳಕೆಯಲ್ಲಿತ್ತು ಎಂದು ತಿಳಿದುಬರುತ್ತದೆ. ರೋಮ್ ನಗರಕ್ಕೆ ಕುಡಿಯುವ ನೀರನ್ನು ದೂರದ ಸರೋವರಗಳಿಂದ ಒದಗಿಸುತ್ತಿದ್ದ ಮೇಲುಗಾಲುವೆಗಳನ್ನು ಎಂಜಿನಿಯರಿಂಗ್ ಚಾತುರ್ಯವೆನ್ನಬಹುದು. ಲಯನ್ಸ್‍ನಗರ ಜೆರುಸಲೆಮ್‍ಗಳಲ್ಲೂ ಮೇಲುಗಾಲುವೆಯ ಏರ್ಪಾಡು ಇತ್ತು. ಜರ್ಮನಿ, ಇಂಗ್ಲೆಂಡುಗಳಲ್ಲಿ ಇದ್ದ ಮೇಲುಗಾಲುವೆಯ ವ್ಯವಸ್ಥೆಯಲ್ಲಿ ಕಲ್ಲುಗಾರೆಯಿಂದ ಮಾಡಿದ ತೂಬುಗಳು ಕಬ್ಬಿಣದ ನಡುಪಟ್ಟಿಗಳಿಂದ ಕೂಡಿಸಿದ ಮರದ ತೂಬುಗಳು ಇದ್ದುವು.

ಮೇಲುಗಾಲುವೆ ಮೂಲಕ ನೀರು ಸರಬರಾಜು ಕೆಲವು ಉದ್ದೇಶಗಳಿಗಾಗಿದ್ದವು : 1 ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜು, 2 ನೀರಾವರಿ ಸೌಲಭ್ಯದ ಏರ್ಪಾಡು, 3 ಜಲವಿದ್ಯುತ್ತಿನ ಉತ್ಪಾದನೆ ಇತ್ಯಾದಿ. ಇಲ್ಲೆಲ್ಲ ಉದ್ದನೆಯ ದೊಡ್ಡ ಮೇಲುಗಾಲುವೆಗಳು ಅಗತ್ಯ. ಹಿಂದಿನ ಕಾಲದಲ್ಲಿ ಮೇಲುಗಾಲುವೆಗಳನ್ನು ಕಲ್ಲುಗಾರೆಯಿಂದ ಕಟ್ಟಿ ನೀರು ಹರಿಯುವ ದಿಕ್ಕಿನಲ್ಲಿ ಕೊಂಚ ಇಳುಕಲ್ಲನ್ನು ಒದಗಿಸುತ್ತಿದ್ದರು. ಬದಲಾದ ಸಂದರ್ಭಗಳಿಗೆ

ಅನುಗುಣವಾಗಿ ನೀರನ್ನು ಸುರಂಗಗಳಲ್ಲಿಯೂ ದೊಡ್ಡ ತೂಬುಗಳಲ್ಲಿಯೂ ಆಧುನಿಕ ಒತ್ತಡದಲ್ಲಿ ಒಯ್ಯುವುದು ಆಧುನಿಕ ವಿಧಾನ. ಮೇಲುಗಾಲುವೆಯ ನಿರ್ಮಾಣದಲ್ಲಿ ಎಳೆತದ ತ್ರಾಸಭರಿಸುವಂಥ ಎರಕದ ಕಬ್ಬಿಣದ ತೂಬುಗಳನ್ನೊ ಉಕ್ಕಿನ ತೂಬುಗಳನ್ನೊ ಭದ್ರಕಾಂಕ್ರೀಟಿನ ತೂಬು ಇಲ್ಲವೆ ಸುರಂಗಗಳನ್ನೊ ಬಳಸುವುದಿದೆ. ಮೇಲುಗಾಲುವೆಗಳು ನಗರಗಳ ನೀರಿನ ಸರಬರಾಜಿನ ಯೋಜನೆಗಳಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಪ್ರಪಂಚದ ಆಧುನಿಕ ನಗರಗಳಿಗೆ ಸರಬರಾಜಾಗುವ ನೀರಿನ ನೂರಾರು ಕಿಲೋಮೀಟರುಗಳ ಉದ್ದದ ಸುರಂಗ ಇಲ್ಲವೆ ತೂಬಿನ ಮೂಲಕ ಹರಿದುಬರುತ್ತದೆ. ಜಲವಿದ್ಯುತ್ತಿನ ಯೋಜನೆಗಳಲ್ಲಿ ಅಧಿಕ ಒತ್ತಡವನ್ನು ತಡೆಯುವ ಮೇಲುಗಾಲುವೆಗಳ ಉಪಯೋಗ ಉಂಟು. (ಎಚ್.ಸಿ.ಕೆ.)

**ಮೈಕೆಲ್ ಫ್ರಾಂಕ್ ಗುಡ್ ಚೈಲ್ಡ್:** 1944– ಬ್ರಿಟಿಷ್–ಅಮೆರಿಕನ್ ಭೂಗೋಳವಿಜ್ಞಾನಿ. ಅಮೆರಿಕದ ಸಾಂತಬಾರ್ಬರದಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದಾರೆ. ಕೆನಡದ ಪಶ್ಚಿಮ ಆಂಟೋರಿಯೊ ವಿಶ್ವವಿದ್ಯಾಲಯದಲ್ಲಿ 19 ವರ್ಷಗಳ ಕಾಲ ಸೇವೆಸಲ್ಲಿಸಿ 1988ರಲ್ಲಿ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯವನ್ನು ಸೇರಿದರು. ಇವರು 1965ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯದಿಂದ ಭೌತವಿಜ್ಞಾನದಲ್ಲಿ ಪದವಿಪಡೆದರು. 2002ರಲ್ಲಿ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿಯಿಂದ ಪುರಸ್ಕೃತಗೊಂಡರು.

ಮೆಕ್‌ಮಾಸ್ಟರ್ ವಿಶ್ವವಿದ್ಯಾಲಯದಲ್ಲಿ ಸಂಶೋಧನ ವಿದ್ಯಾರ್ಥಿಯಾಗಿದ್ದಾಗ ಗುಡ್‌ಚೈಲ್ಡ್ ಕೆನಡ ದೇಶದ ಅತ್ಯಂತ ಉದ್ದವಾದ (20 ಕಿಮೀ) ಕ್ಯಾಸಲ್‌ಬಾರ್ಡ್ ಗುಹೆಯನ್ನು ಮರುಶೋಧಿಸಿದರು. ಇವರು ಭೂಗೋಳವಿಜ್ಞಾನಕ್ಕೆ ನೀಡಿದ ಅತ್ಯಂತ ಮಹತ್ತರವಾದ ಕೊಡುಗೆಯೆಂದರೆ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಭೂಗೋಳವಿಜ್ಞಾನಕ್ಕೆ ನೀಡಿರುವುದು. ಈ ಅದ್ಭುತವಾದ ತಂತ್ರಜ್ಞಾನ ಭೂಗೋಳವಿಜ್ಞಾನದ ಬೆಳವಣಿಗೆಯ ಗತಿಯನ್ನೇ ಬದಲಾಯಿಸಿತು. ನಕ್ಷೆಗಳನ್ನು ಗಣಕಯಂತ್ರಗಳಲ್ಲಿ ತಯಾರಿಸುವ ವಿಧಾನ ನಕ್ಷಾಶಾಸ್ತ್ರಕ್ಕೆ ಒಂದು ಹೊಸ ಆಯಾಮವನ್ನು ನೀಡಿತು. ಇವರು ಭೂರಚನಾ ಶಾಸ್ತ್ರಜ್ಞರೂ ಕಾರ್ಸ್ಟ್ ವಿಜ್ಞಾನಿಯೂ ಆಗಿದ್ದಾರೆ.

ಇವರಿಗೆ ಅನೇಕ ಶೈಕ್ಷಣಿಕ ಸಂಸ್ಥೆಗಳು ಹಲವಾರು ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. 2001ರಲ್ಲಿ ಪರಿಸರ ಸಂಶೋಧನ ವ್ಯವಸ್ಥೆಯ ಸಂಸ್ಥೆ (ಎನ್‌ವಿರಾನ್‌ಮೆಂಟಲ್ ಸಿಸ್ಟಮ್ಸ್ ರೀಸರ್ಚ್ ಇನ್‌ಸ್ಟಿಟ್ಯೂಟ್) ಇವರ ಜೀವಮಾನದ ಸಾಧನೆಯನ್ನು ಗುರುತಿಸಿ ಪುರಸ್ಕರಿಸಿದೆ (2001). ಇವರು ನಕ್ಷಾಶಾಸ್ತ್ರಕ್ಕೆ ನೀಡಿದ ಕೊಡುಗೆಗಾಗಿ ಕೆನಡದ ನಕ್ಷಾಶಾಸ್ತ್ರ ಸಂಘ 1999ರಲ್ಲಿ ಪುರಸ್ಕರಿಸಿದೆ. ಇವರಿಗೆ 2004ರಲ್ಲಿ ಕಾನೂನಿನಲ್ಲಿ ಗೌರವ ಡಾಕ್ಟರೇಟ್, ವಿಜ್ಞಾನದಲ್ಲಿ ಗೌರವ ಡಾಕ್ಟರೇಟ್ ಹಾಗೂ 1999ರಲ್ಲಿ ಲವಾಲ್ ವಿಶ್ವವಿದ್ಯಾನಿಲಯ ವಿಜ್ಞಾನದಲ್ಲಿ ಮತ್ತೊಂದು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. ಹೀಗೆ ಇವರಿಗೆ ಅನೇಕ ವಿಶ್ವವಿದ್ಯಾಲಯ ಹಾಗೂ ಕಾನೂನು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿಗೌರವಿಸಿವೆ. (ಕೆ.ಎಂ.)

**ಮೈಕ್ರೊನೇಷ್ಯ:** ಪೆಸಿಫಿಕ್ ಸಾಗರದಲ್ಲಿರುವ ಮೂರು ಮುಖ್ಯ ದ್ವೀಪಸ್ತೋಮಗಳ ವಿಭಾಗಗಳಲ್ಲೊಂದು. ಉಳಿದೆರಡು ಮೆಲನೇಷ್ಯ ಮತ್ತು ಪಾಲಿನೇಷ್ಯ. ಪಾಲಿನೇಷ್ಯದ ಪಶ್ಚಿಮಕ್ಕೆ ಮತ್ತು ಮೆಲನೇಷ್ಯದ ಉತ್ತರಕ್ಕೆ ಇರುವ ಈ ದ್ವೀಪ ಸಮೂಹ ಉತ್ತರ ಅಕ್ಷಾಂಶ $1^0$–$20^0 32'$, ಹಾಗೂ ಪೂರ್ವರೇಖಾಂಶ $131^0$–$177^0$ ನಡುವೆ ಇದೆ. ಮೈಕ್ರೊನೇಷ್ಯ ಉತ್ತರದಲ್ಲಿ ಮಿಡ್ವೆ ದ್ವೀಪದಿಂದ 5000 ಕಿಮೀ ದಕ್ಷಿಣದಲ್ಲಿರುವ ನ್ಯೂಜಿಲೆಂಡ್‌ವರೆಗಿನ ವಿಸ್ತಾರವಾದ ಪ್ರದೇಶವನ್ನು ಆವರಿಸಿದೆ. ಮೈಕ್ರೊನೇಷ್ಯ ಎಂದರೆ ಸಣ್ಣ ದ್ವೀಪಗಳು ಎಂದರ್ಥ. ಇಲ್ಲಿರುವ ಒಟ್ಟು ದ್ವೀಪಗಳ ಸಂಖ್ಯೆ 2000ಕ್ಕೂ ಹೆಚ್ಚೆಂದು ಅಂದಾಜು ಮಾಡಲಾಗಿದೆ. ಅತ್ಯಂತ ದೊಡ್ಡ ದ್ವೀಪ ಗ್ವಾಮ್. ಇದು 48 ಕಿಮೀ ಉದ್ದ ಹಾಗೂ 6 ರಿಂದ 15 ಕಿಮೀ ಅಗಲವಾಗಿದೆ. ಮಾರಿಯಾನಾಸ್‌ನಲ್ಲಿರುವ ಗ್ವಾಮ್, ಸೈಪಾನ್ ಮತ್ತು ಟೆನಿಯನ್, ಕೆರೊಲಿನ್ಸ್‌ನಲ್ಲಿಯ ಯಾಪ್, ಪಲಾವೊ, ಟ್ರುಕ್, ಪನಾಪೆ ಮತ್ತು ಕುಸಾಯ್, ಜ್ವಾಲಾಮುಖಿಯ ಮೂಲದಿಂದ ಉಂಟಾಗಿರುವ ಎತ್ತರದ ದ್ವೀಪಗಳು. ಉಳಿದವು ಚದುರಿದ ಹವಳದ ದಿಬ್ಬಗಳಿಂದ ನಿರ್ಮಿತವಾದವು. ಮಾರಿಯಾನಾಸ್‌ನಲ್ಲಿಯ ಸು. 964 ಮೀ ಎತ್ತರದ ಅಗ್ರಿಹಾನ್ ಅತ್ಯಂತ ಎತ್ತರ ದ್ವೀಪ. ಮೈಕ್ರೊನೇಷ್ಯದಲ್ಲಿಯ ಒಟ್ಟು ಭೂಭಾಗ 702 ಚ.ಕಿಮೀ. ಇದರ ಬಹುಪಾಲು ಸಮಭಾಜಕ ವೃತ್ತದ ಉತ್ತರಕ್ಕಿದೆ. ಒಟ್ಟು ಜನಸಂಖ್ಯೆ 108,105 (2002). ರಾಜಧಾನಿ ಪಾಲಿಕರ್.




ಭೂಲಕ್ಷಣ : ಮೈಕ್ರೊನೇಷ್ಯದ ದ್ವೀಪಗಳು ಸಮುದ್ರದಾಳದ ಬಿರುಕುಗಳಿಂದ ಹೊರಬಂದ ಲಾವಾರಸದಿಂದ ಉಂಟಾದ ಕಡಿದಾದ ಭೂಭಾಗವನ್ನು ಹೊಂದಿವೆ. ಸಾಮಾನ್ಯವಾಗಿ ಎಲ್ಲ ದ್ವೀಪಗಳಲ್ಲೂ ಕಡಿದಾದ ಶಿಖರಗಳು, ಬೆಟ್ಟ ಸಾಲುಗಳು, ಆಳವಾದ ಕಮರಿಗಳು, ಜಲಪಾತಗಳು ಹವಳದ ದಿಬ್ಬಗಳು ಹಾಗೂ ಮಧ್ಯೆ ಆಳವಿಲ್ಲದ ನೀರಿನಿಂದ ಕೂಡಿದ ಚಕ್ರಾಕಾರದ ಹವಳದ ದಿಬ್ಬಗಳು (ಅಟಾಲ್‌ಗಳು) ಕಂಡುಬರುತ್ತವೆ. ಇವುಗಳ ಪೈಕಿ ಮಾರ್ಷಲ್ಸ್‌ನಲ್ಲಿಯ ಕ್ವಾಜಾಲೇನ್ ಅಟಾಲ್ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದು.

ಇಲ್ಲಿ ವರ್ಷವಿಡೀ ಹೆಚ್ಚುಕಡಿಮೆ ಒಂದೇ ರೀತಿ ಉಷ್ಣತೆ ಕಂಡುಬರುತ್ತದೆ. ಸರಾಸರಿ ಉಷ್ಣತೆ $27^0$ ಸೆ ನಿಂದ $29^0$ ಸೆ. ಮೇ ನಿಂದ ಡಿಸೆಂಬರ್ ತನಕ ಮಳೆಗಾಲ. ಉಳಿದ ಕಾಲದಲ್ಲಿ ಒಣಹವೆ ಇರುತ್ತದೆ. ವರ್ಷದುದ್ದಕ್ಕೂ ಬಿರುಗಾಳಿಯ ಭಯವಿದ್ದು ಜುಲೈನಿಂದ ಅಕ್ಟೋಬರ್‌ವರೆಗೆ ಇದರ ಹಾವಳಿ ಹೆಚ್ಚು. ಇಲ್ಲಿಯ ವಾರ್ಷಿಕ ಅನುಪಾತದ ಪ್ರಮಾಣ 250 ಸೆಂಮೀ ಗಳಿಗೂ ಹೆಚ್ಚು.

ಭೂ ಪ್ರದೇಶದ $1/3$ ಭಾಗ ಕೃಷಿಯೋಗ್ಯವಾಗಿದೆ. ತೆಂಗು ಮತ್ತು ಕಸಾವಾ ಇಲ್ಲಿಯ ಮುಖ್ಯ ಬೆಳೆಗಳು. ಒಟ್ಟು ಭೂಪ್ರದೇಶದ $1/6$ ರಷ್ಟು ಭಾಗ ಅರಣ್ಯ ಪ್ರದೇಶ. ಮ್ಯಾಂಗ್ರೋವ್ ಮತ್ತು ಸಮುದ್ರ ತೀರದಲ್ಲಿ ಕಂಡುಬರುವ ಕಾಡುಗಳು ಇಲ್ಲಿ ಹೆಚ್ಚಾಗಿದ್ದು ಉಳಿದ ಭಾಗ ಕುರುಚಲು ಗಿಡಗಳನ್ನೊಳಗೊಂಡಿದೆ. ಇಲ್ಲಿ ಸರ್ಪಗಳು, ಹಲ್ಲಿಗಳು ಹಾಗೂ ಅನೇಕ ಬಗೆಯ ಪಕ್ಷಿಗಳೂ ಇವೆ. ಮರಳು ದಿಬ್ಬಗಳು ಮತ್ತು ಲಗೂನ್‌ಗಳಲ್ಲಿ ಸಮುದ್ರನಳ್ಳಿ, ಸೀಗಡಿ, ಚಿಪ್ಪುಮೀನು, ಸಿಂಪಿ, ಆಕ್ಟೋಪಸ್ ಮತ್ತು ಆಮೆಗಳು ಹೇರಳವಾಗಿವೆ. ಮೈಕ್ರೊನೇಷ್ಯದ ದ್ವೀಪಗಳ ಭೂಮಿ ಅಗ್ನಿಶಿಲೆಗಳಿಂದ ನಿರ್ಮಿತವಾದ್ದರಿಂದ ಇಲ್ಲಿ ಖನಿಜಗಳು ಸಿಗುವುದಿಲ್ಲ.

ಜನಜೀವನ: ಜನಸಾಂದ್ರತೆ ಅಲ್ಲಿ ದ್ವೀಪದಿಂದ ದ್ವೀಪಕ್ಕೆ ಬದಲಾಗುತ್ತದೆ. ಕೆಳಮಟ್ಟದ ದ್ವೀಪಗಳಿಂದ ಎತ್ತರದ ದ್ವೀಪಗಳಿಗೆ ಆರ್ಥಿಕ ಮತ್ತು ಇತರ ಅನುಕೂಲತೆಗಳ ಕಾರಣದಿಂದ ವಲಸೆ ಹೆಚ್ಚಾಗಿದೆ. ಅಲ್ಲಿಯ ಜನ ಉದ್ದವಾಗಿದ್ದು ಬಿಳಿಬಣ್ಣದವರಾಗಿ ಗುಂಗುರು ಕೂದಲುಗಳಿಂದ ಕೂಡಿರುತ್ತಾರೆ. ಏಷ್ಯದ ಸಮೀಪದ ದ್ವೀಪಗಳ ನಿವಾಸಿಗಳಿಗೆ ಎತ್ತರದ ಕೆನ್ನೆಯೆಲುಬು ಮತ್ತು ನೇರವಾದ ಕೂದಲು ಇರುತ್ತದೆ. ಪಾಲಿನೇಷ್ಯದ ಸಮೀಪದ ದ್ವೀಪವಾಸಿಗಳು ಎತ್ತರವಾಗಿದ್ದು ತಿಳಿಬಣ್ಣ ಹೊಂದಿರುತ್ತಾರೆ.

ಮೈಕ್ರೊನೇಷ್ಯದಲ್ಲಿ 9 ಪ್ರಮುಖ ಭಾಷೆಗಳಿವೆ. ಇವು ಮಲಯೊ–ಪಾಲಿನೇಷ್ಯದ ಮೂಲಕ್ಕೆ ಸೇರಿದ್ದು ಪರಸ್ಪರ ಸಂಬಂಧ ಹೊಂದಿವೆ. ಎಲ್ಲಿಸ್ ದ್ವೀಪಗಳು, ನುಕುವಾರೊ ಮತ್ತು ಕಪಿಂಗ– ಮರಂಗಿ ದ್ವೀಪಗಳಲ್ಲಿ ಪಾಲಿನೇಷ್ಯನ್ ಭಾಷೆಗಳನ್ನು ಮಾತನಾಡುತ್ತಾರೆ. ಮೈಕ್ರೊನೇಷ್ಯದ ಎಲ್ಲ ಭಾಗಗಳಲ್ಲೂ ಇಂಗ್ಲಿಷ್ ಬಳಕೆಯಲ್ಲಿದೆ.

ಆರ್ಥಿಕತೆ: ಮೈಕ್ರೊನೇಷ್ಯದ ಬಹುಪಾಲು ದ್ವೀಪಗಳು ಆರ್ಥಿಕವಾಗಿ ಹಿಂದುಳಿದಿವೆ. ಇಲ್ಲಿಯ ಜನರ ಮುಖ್ಯ ಕಸಬು ಕೃಷಿ ಮತ್ತು ಮೀನುಗಾರಿಕೆ. ಪ್ರಮುಖ ಬೆಳೆ ತೆಂಗು. ಜೊತೆಗೆ ಬ್ರೆಡ್‌ಫ್ರೂಟ್, ಕಸಾವಾ, ಟಾರೋ, ಗೆಣಸು, ಬಾಳೆಹಣ್ಣು, ಕಿತ್ತಳೆ, ಅನಾನಸ್ ಮತ್ತು ತರಕಾರಿಗಳನ್ನೂ ಕೆಲವು ದ್ವೀಪಗಳಲ್ಲಿ ಭತ್ತ, ಮೆಕ್ಕೆಜೋಳ ಮತ್ತು ಕೋಕೋವನ್ನೂ

ಬೆಳೆಯುತ್ತಾರೆ. ಎಲ್ಲ ದ್ವೀಪಗಳಲ್ಲಿ ಹಂದಿ ಮತ್ತು ಕೋಳಿ ಸಾಕುತ್ತಾರೆ. ಗ್ವಾಮ್, ಮತ್ತಿತರ ದೊಡ್ಡ ದ್ವೀಪಗಳಲ್ಲಿ ಎಮ್ಮೆ ಮತ್ತು ದನಗಳನ್ನು ಸಾಕುತ್ತಾರೆ. ಹಾಲು ಮತ್ತಿತರ ಹೈನು ಪದಾರ್ಥಗಳನ್ನು ಎಲ್ಲ ದ್ವೀಪಗಳಲ್ಲೂ ಆಮದು ಮಾಡಿಕೊಳ್ಳಲಾಗುತ್ತದೆ. ಮೀನು ಎಲ್ಲ ಕಡೆಗಳಲ್ಲೂ ಹೇರಳವಾಗಿ ದೊರೆಯುತ್ತಿದ್ದರೂ ಕೆಲವೇ ದ್ವೀಪಗಳಲ್ಲಿ ವಾಣಿಜ್ಯಮಟ್ಟದಲ್ಲಿ ಮೀನುಗಾರಿಕೆ ನಡೆಸಲಾಗುತ್ತಿದೆ. ಜಪಾನು ಮೀನುಗಾರಿಕೆಯ ಹಕ್ಕನ್ನು ಒಪ್ಪಂದದ ಮೇಲೆ ತೆಗೆದುಕೊಂಡಿದೆ. ಬದಲಾಗಿ ಅಭಿವೃದ್ಧಿಗಾಗಿ ಧನಸಹಾಯ ನೀಡಲು ಒಪ್ಪಿಕೊಂಡಿದೆ.

ಇಲ್ಲಿ ಯಾವ ಖನಿಜಗಳೂ ದೊರೆಯುವುದಿಲ್ಲ. ಅನೇಕ ದ್ವೀಪಗಳಲ್ಲಿ ಹವಳದ ಸುಣ್ಣಕಲ್ಲನ್ನು ಸಿಮೆಂಟ್ ತಯಾರಿಸಲು ಉಪಯೋಗಿಸುತ್ತಾರೆ. ಗ್ವಾಮ್‌ನಲ್ಲಿ ಪೆಟ್ರೋಲಿಯಮ್ ಶುದ್ಧೀಕರಣದ ಕಾರ್ಖಾನೆ, ಸಿಮೆಂಟ್, ಬಟ್ಟೆ ಮತ್ತು ಗಡಿಯಾರಗಳನ್ನು ತಯಾರಿಸುವ ಕಾರ್ಖಾನೆಗಳಿವೆ. ಉಳಿದ ದ್ವೀಪಗಳಲ್ಲಿ ಕೊಬ್ಬರಿ ಎಣ್ಣೆ ಮತ್ತು ಮೀನುಗಳ ಸಂಸ್ಕರಣ, ಪೀಠೋಪಕರಣ, ಸಣ್ಣ ದೋಣಿಗಳು, ಪಾನೀಯಗಳು ಮತ್ತು ಕುಶಲವಸ್ತುಗಳ ತಯಾರಿಕೆ ನಡೆಯುತ್ತದೆ. ಕಿರಿಬಾತಿಯಲ್ಲಿ ಬಟ್ಟೆಯ ಕಾರ್ಖಾನೆಯಿದೆ. ಪ್ರವಾಸೋದ್ಯಮ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಸೊಗಸಾದ ಸಮುದ್ರ ತೀರಗಳು, ಮನೋಹರ ಪ್ರಕೃತಿ ಸೌಂದರ್ಯ, ಸ್ಥಳೀಯವಾಗಿ ತಯಾರಾದ ಕರ ಕುಶಲ ವಸ್ತುಗಳು, ಮನಮೋಹಕ ನೃತ್ಯ ಮತ್ತಿತರ ಸಮಾರಂಭಗಳು ಎರಡನೆಯ ಮಹಾಯುದ್ಧ ನಡೆದ ಸ್ಥಳಗಳು, ದೋಣಿ ಸಂಚಾರ ಇಲ್ಲಿಯ ಆಕರ್ಷಣೆಗಳು. (ಜಿ.ಎಸ್.ಎಸ್.)

**ಮೈದಾನಗಳು :** ಕಡಿಮೆ ಎತ್ತರ ಮತ್ತು ಸಮತಟ್ಟಾದ ವಿಶಾಲ ಭೂಭಾಗ (ಪ್ಲೈನ್ಸ್). ಫಿಂಚ್ ಮತ್ತು ತ್ರಿವಾರ್ಥಾ ಎಂಬ ವಿದ್ವಾಂಸರ ಅನುಸಾರ ಮೈದಾನವು ಸಮುದ್ರ ಮಟ್ಟದಿಂದ ಸು. 154 ಮೀ ಎತ್ತರದವರೆಗಿನ ಸಮತಟ್ಟಾದ ಪ್ರದೇಶವಾಗಿದೆ. ಇದು ಸಾಧಾರಣ ಇಳಿಜಾರು ಮತ್ತು ಕಡಿಮೆ ಏರಿಳಿತ ಹೊಂದಿದ ತಗ್ಗು ಪ್ರದೇಶವೆಂದು ಹೇಳಬಹುದು.

ಮೈದಾನದ ವಿಧಗಳು: ಮೈದಾನಗಳನ್ನು ಅವುಗಳ ಆಕಾರ,ಸ್ಥಾನ, ನಿರ್ಮಾಣ ಮತ್ತು ವಾಯುಗುಣಗಳ ಆಧಾರಗಳ ಮೇಲೆ ಅನೇಕ ವಿಧಗಳಾಗಿ ವಿಂಗಡಿಸಬಹುದು.

1) ಆಕಾರದ ಆಧಾರದ ಮೇಲಿಂದ ಮೈದಾನಗಳನ್ನು ಚಪ್ಪಟೆ ಮೈದಾನ (15 ಮೀ ಗಿಂತ ಕಡಿಮೆ ಎತ್ತರ) ಏರಿಳಿತ ಮೈದಾನ (15 ರಿಂದ 50 ಮೀ ಎತ್ತರ), ಅಲೆಯಾಕಾರದ ಮೈದಾನ (50 ರಿಂದ 100 ಮೀ ಎತ್ತರ) ಮತ್ತು ವಿಚ್ಛೇದಿತ ಮೈದಾನ (100 ರಿಂದ 175 ಮೀ ಎತ್ತರ)ಗಳೆಂದು ವಿಂಗಡಿಸಬಹುದು.

2) ಸ್ಥಾನದ ಆಧಾರದ ಮೇಲಿಂದ ಮೈದಾನಗಳನ್ನು ಖಂಡಾಂತರ ಮೈದಾನ ಮತ್ತು ಕರಾವಳಿ ಮೈದಾನಗಳೆಂದು ಎರಡು ವಿಧಗಳಾಗಿ ವಿಂಗಡಿಸಬಹುದು. ಖಂಡಾಂತರ ಮೈದಾನಗಳು ಖಂಡಗಳ ಒಳಭಾಗದಲ್ಲಿರುವ ವಿಶಾಲ ಮೈದಾನಗಳಾಗಿವೆ. ಉದಾ: ಉತ್ತರ ಅಮೆರಿಕದ ಮಹಾ ಮೈದಾನಗಳು ರಷ್ಯದ ಸ್ಟೆಪೀಸ್ ಗಂಗ ಬ್ರಹ್ಮಪುತ್ರ ಮಹಾ ಮೈದಾನ, ಇತ್ಯಾದಿ ಕರಾವಳಿ ಮೈದಾನಗಳು ಸಮುದ್ರದ ಅಂಚಿನಗುಂಟ ಇಕ್ಕಟ್ಟಾದ ಪಟ್ಟಿಯ ರೂಪದಲ್ಲಿರುತ್ತವೆ. ಕರಾವಳಿಯಲ್ಲಿ ನದಿ ಮುಖದಲ್ಲಿರುವ ಮೈದಾನಗಳು ಹೆಚ್ಚು ಅಗಲವಾಗಿರುತ್ತವೆ. ಉದಾ: ಭಾರತದ ಪೂರ್ವ ಕರಾವಳಿ ಮೈದಾನಗಳು. ಆದರೆ ಕರಾವಳಿ ಸಮೀಪ ಪರ್ವತಗಳಿದ್ದಲ್ಲಿ ಮೈದಾನಗಳು ಇಕ್ಕಟ್ಟಾಗಿರುತ್ತವೆ. ಉದಾ: ಭಾರತದ ಪಶ್ಚಿಮ ಕರಾವಳಿ ಮೈದಾನಗಳು

3) ನಿರ್ಮಾಣದ ಆಧಾರದ ಮೇಲಿಂದ ಮೈದಾನಗಳನ್ನು ಆಂತರಿಕ ಶಕ್ತಿಗಳಿಂದ ನಿರ್ಮಾಣವಾದ ಮೈದಾನ ಮತ್ತು ಬಾಹ್ಯ ಶಕ್ತಿಗಳಿಂದ ನಿರ್ಮಾಣವಾದ ಮೈದಾನಗಳೆಂದು ಎರಡು ವಿಧಗಳಾಗಿ ವಿಂಗಡಿಸಬಹುದು.

ಖಂಡ ನಿರ್ಮಾಣ ಶಕ್ತಿಯ ಮೂಲಕ ಭೂಚಿಪ್ಪಿನಲ್ಲಿ ಉತ್ಕ್ಷೇಪ ಮತ್ತು ಕುಸಿತಗಳುಂಟಾಗುತ್ತವೆ. ಈ ಪ್ರಕ್ರಿಯೆಗಳಿಂದ ವಿಶೇಷವಾಗಿ ಸಮುದ್ರ ಕರಾವಳಿಗಳಲ್ಲಿ ನಿಮಜ್ಜನ ಮತ್ತು ಉನ್ಮಜ್ಜನ ಮೈದಾನಗಳು ನಿರ್ಮಾಣವಾಗುತ್ತವೆ. ಭಾರತದ ಕೋರಮಂಡಲ ಮತ್ತು ಉತ್ಕಲ ಕರಾವಳಿ ಮೈದಾನಗಳು ನಿಮಜ್ಜನ (ಭೂಕುಸಿತ) ಮೈದಾನಗಳ ಉದಾಹರಣೆಗಳಾಗಿವೆ. ಅದರಂತೆ ಅಮೆರಿಕ ಸಂಯುಕ್ತ ಸಂಸ್ಥಾನದ ಫ್ಲೋರಿಡ ಕರಾವಳಿ ಮೈದಾನ ಉನ್ಮಜ್ಜನ ಕರಾವಳಿ ಮೈದಾನದ ಉದಾಹರಣೆಗಳಾಗಿವೆ.

ಜ್ವಾಲಾಮುಖಿಯಿಂದ ಹೊರಚಿಮ್ಮಲ್ಪಟ್ಟ ಕ್ಷಾರೀಯ ಶಿಲಾರಸವು ಭೂಮಿಯ ಮೇಲೆ ವಿಸ್ತಾರವಾಗಿ ಹರಡಿ ಗಟ್ಟಿಯಾಗಿ ಚದ್ದರಿನರೂಪದಲ್ಲಿ ಶಿಲಾರಸ ಮೈದಾನ ನಿರ್ಮಾಣವಾಗುವುದು. ನ್ಯೂಜಿಲೆಂಡ್, ಐಸ್‌ಲೆಂಡ್, ಫ್ರಾನ್ಸ್, ಅರ್ಜೆಂಟೈನ ಮೊದಲಾದ ದೇಶದಲ್ಲಿ ಶಿಲಾರಸ ಮೈದಾನಗಳಿವೆ.

ನದಿ, ಹಿಮನದಿ, ಅಂತರ್ಜಲ, ಗಾಳಿ ಮತ್ತು ಸಮುದ್ರದ ಅಲೆಗಳ ಸವೆತ ಮತ್ತು ಸಂಚಯನ ಕಾರ್ಯಗಳಿಂದ ಮೈದಾನಗಳು ನಿರ್ಮಾಣವಾಗುತ್ತವೆ. ಇವುಗಳನ್ನು ಬಾಹ್ಯ ಶಕ್ತಿಗಳಿಂದ ನಿರ್ಮಾಣವಾದ ಮೈದಾನಗಳೆಂದು ಕರೆಯುವರು. ಅವು ಕೆಳಗಿನಂತಿವೆ.

ಮೆಕ್ಕಲು ಮೈದಾನ, ಮಹಾಪೂರ ಮೈದಾನ, ನದಿ ಮುಖಜಭೂಮಿ ಮೈದಾನ, ಹಿಮನದಿ, ಕಲ್ಲು, ಮರಳು ಜೇಡಿ ಮೈದಾನ, ಅಂತ್ಯ ಮುರುಕಲುಗುಪ್ಪೆ ಮೈದಾನ, ಉತ್ಕಾಲಿತ ಮೈದಾನ, ಸುಣ್ಣದಕಲ್ಲು ಮೈದಾನ, ಚಿಲುಮೆ ನಿಕ್ಷೇಪ ಮೈದಾನ ಗಾಳಿ, ಪರ್ವತವಾದ ಮೈದಾನ, ರೆಗ್, ಹಮಡಾ ಮತ್ತು ಸೆರಿಕ್ ಸಮುದ್ರ ಅಲೆ, ಉಬ್ಬರವಿಳಿತ ಜವುಗು ಮೈದಾನ, ಅಳಿವೆ ಮೈದಾನ, ಮರಳು ದಂಡೆ ಮೈದಾನ.

ಮೈದಾನಗಳ ಮಹತ್ವ: ಮೈದಾನಗಳು ಜನವಸತಿ ಮತ್ತು ಆರ್ಥಿಕ ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ. ಮೈದಾನಗಳು ಕೃಷಿ ಮತ್ತು ಕೈಗಾರಿಕಾ ಕೇಂದ್ರಗಳಾಗಿವೆ. ಇಲ್ಲಿ ರೈಲು ಮಾರ್ಗ, ರಸ್ತೆ, ಒಳನಾಡ ಜಲ ಮಾರ್ಗ (ನದಿ ಮತ್ತು ಕಾಲುವೆ) ಹಾಗೂ ವಾಯುಮಾರ್ಗಗಳ ಜಾಲ ಹರಡಿರುತ್ತವೆ. ಉತ್ತಮ ವಾಯುಗುಣ, ಕೃಷಿ, ಕೈಗಾರಿಕೆ ಮತ್ತು ಸಾರಿಗೆ ಸಂಪರ್ಕಗಳ ಅನುಕೂಲತೆಗಳಿಂದಾಗಿ ಹೆಚ್ಚಿನ ಭಾಗ ಜನಸಂಖ್ಯೆ ಮೈದಾನಗಳಲ್ಲಿ ಕಂಡುಬರುತ್ತದೆ. ಆದ್ದರಿಂದ ಪ್ರಪಂಚದ ಮಹಾನಗರಗಳು ಮತ್ತು ವ್ಯಾಪಾರ ಕೇಂದ್ರಗಳು ಮೈದಾನಗಳಲ್ಲಿ ಅಭಿವೃದ್ಧಿ ಹೊಂದಿರುತ್ತವೆ. (ಎಸ್.ಎಸ್.ಎನ್)

**ಮೈಸೂರು :** ಕರ್ನಾಟಕ ರಾಜ್ಯ ದಕ್ಷಿಣ ಭಾಗದ ಒಂದು ಜಿಲ್ಲೆ. ಇದು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿಶಿಷ್ಟತೆಯನ್ನು ಹೊಂದಿರುವ ಜಿಲ್ಲೆ. ಇಲ್ಲಿನ ಪಾರಂಪರಿಕ ಮೈಸೂರು ನಗರ ಪ್ರಪಂಚ ಪ್ರಸಿದ್ಧವಾದ ದಸರವನ್ನು ಪ್ರತಿವರ್ಷ ಆಚರಿಸುತ್ತಿದೆ. ಅಕ್ಷಾಂಶಿಕ ವಿಸ್ತಾರ $11^{0}60'–20^{0}17'$ ಉ. $75^{0}19'–77^{0}17'$ ಪೂ.ರೇ. ಸಮುದ್ರ ಮಟ್ಟಕ್ಕಿರುವ ಎತ್ತರ 619 ಮೀ. ಇದರ ಪೂರ್ವಕ್ಕೆ ಹಾಗೂ ದಕ್ಷಿಣಕ್ಕೆ ಚಾಮರಾಜನಗರ ಜಿಲ್ಲೆ, ಉತ್ತರಕ್ಕೆ ಮಂಡ್ಯ ಹಾಗೂ ಹಾಸನ ಜಿಲ್ಲೆ, ಪಶ್ಚಿಮಕ್ಕೆ ಕೊಡಗು ಜಿಲ್ಲೆ ಮತ್ತು ಕೇರಳ ರಾಜ್ಯಗಳಿವೆ. ವಿಸ್ತೀರ್ಣ 6269 ಚ.ಕಿಮೀ. ಜನಸಂಖ್ಯೆ 26,24,911.




ಮೈಸೂರು ಜಿಲ್ಲೆ ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಹೆಗ್ಗಡದೇವನಕೋಟೆ, ಹುಣಸೂರು, ಕೃಷ್ಣರಾಜನಗರ, ನಂಜನಗೂಡು, ಪಿರಿಯಾಪಟ್ಟಣ, ಮೈಸೂರು, ತಿರುಮಕೂಡಲು ನರಸೀಪುರ.

ಭೂಸ್ವರೂಪ: ಜಿಲ್ಲೆಯಲ್ಲಿ ಅಗ್ನಿ ಮತ್ತು ರೂಪಾಂತರ ಶಿಲೆಗಳಿವೆ. ಮೈಸೂರಿನಲ್ಲಿ ನಸುಗೆಂಪು ಬಣ್ಣದ ಗ್ರಾನೈಟ್ ಮತ್ತು ನೀಸ್ ಶಿಲೆಗಳಿವೆ. ಇದನ್ನು ಚಾಮುಂಡಿ ಗ್ರಾನೈಟ್ ಎಂದು ಕರೆಯಲಾಗಿದೆ. ಭಾರತದ ದಖನ್ ಪ್ರಸ್ಥಭೂಮಿಯ ಭಾಗವಾದ ಕರ್ನಾಟಕದ ದಕ್ಷಿಣ ಭಾಗಕ್ಕೆ ಈ ಭಾಗ ಸೇರಿದೆ. ಪಶ್ಚಿಮದಿಂದ ಪೂರ್ವಕ್ಕೆ ಸಾಧಾರಣ ಇಳಿಜಾರಿದೆ. ಅಲ್ಲಲ್ಲಿ ಅವಶಿಷ್ಟ ಬೆಟ್ಟಗಳಿವೆ. ಮೈಸೂರು ನಗರದ ಪೂರ್ವಭಾಗದಲ್ಲಿ ಚಾಮುಂಡಿಬೆಟ್ಟವಿದ್ದು ಆ ಪ್ರದೇಶ ಎತ್ತರ ಭಾಗವಾಗಿದೆ (1,074 ಮೀ) ಇದು ತನ್ನದೇ ಆದ ಭೂಇತಿಹಾಸ ಮತ್ತು ರಚನೆಯುನ್ನು ಹೊಂದಿದೆ. ಕಠಿಣವಾದ ಗ್ರಾನೈಟ್ ಶಿಲೆಗಳು ಉತ್ಪತ್ತಿಯಾಗುವುದರೊಂದಿಗೆ ಈ ಬೆಟ್ಟವು ನಿರ್ಮಾಣವಾಗಿದೆ. ಚಾಮುಂಡಿಬೆಟ್ಟದ ಆಗ್ನೇಯಕ್ಕೆ ಉತ್ತನಹಳ್ಳಿ ಬೆಟ್ಟವಿದ್ದು ಇದು ಮತ್ತೊಂದು ಮಹತ್ವದ ಭೂಸ್ವರೂಪವಾಗಿದೆ. ಮೈಸೂರು ನಗರದಿಂದ ಉತ್ತರಕ್ಕೆ ಮಂಡ್ಯ ಜಿಲ್ಲೆಯಲ್ಲಿ ಹರಿಯುವ ಕಾವೇರಿನದಿಯ ಕಡೆಗೆ ಇಳಿಜಾರು ಕಂಡುಬರುತ್ತದೆ.

ನದಿಗಳು : ಕಾವೇರಿ ನದಿ ಜಿಲ್ಲೆಯ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಿದ್ದು ಜೀವನದಿ ಎಂದು ಹೆಸರು ಪಡೆದಿದೆ. ಇದರ ಉಪನದಿಗಳಾದ ಕಬಿನಿ ಮತ್ತು ಲಕ್ಷ್ಮಣತೀರ್ಥ ಮುಖ್ಯವಾದವು. ಕಾವೇರಿ ನದಿ ಜಿಲ್ಲೆಯ ಮೈಸೂರು ಮತ್ತು ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಈ ನದಿಗೆ ತಿರುಮಕೂಡಲು ನರಸೀಪುರದಲ್ಲಿ ಕಬಿನಿ ನದಿ ಸಂಗಮವಾಗುತ್ತದೆ.

ಕಬಿನಿ, ಕಾವೇರಿ ನದಿಯ ಒಂದು ಪ್ರಮುಖ ಉಪನದಿ. ಈ ನದಿ ಕೇರಳ ರಾಜ್ಯದ ಉತ್ತರ ವೈನಾಡಿನಲ್ಲಿ (2140 ಮೀ) ಉಗಮ ಹೊಂದಿ ಜಿಲ್ಲೆಯನ್ನು ಹೆಗ್ಗಡದೇವನಕೋಟೆಯಲ್ಲಿ ಪ್ರವೇಶಿಸಿ ನಂಜನಗೂಡು ತಾಲ್ಲೂಕಿನಲ್ಲಿ ಹರಿದು ತಿರುಮಕೂಡಲು ನರಸೀಪುರದ ಬಳಿ ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಗೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಲಕ್ಷ್ಮಣಪುರದ ಬೀರವಾಳು ಸಮೀಪ ಸಣ್ಣ ಕಟ್ಟೆಯನ್ನು ಕಟ್ಟಲಾಗಿದೆ. ಹೆಗ್ಗಡದೇವನಕೋಟೆಯಲ್ಲಿ ಸುಮಲ್ಲ, ಬರಲಾಹೊಳೆ ಮತ್ತು ವಡ್ಡಳ್ಳಿಹೊಳೆಗಳೂ ಕಬಿನಿಯನ್ನು ಸೇರುತ್ತವೆ. ಲಕ್ಷ್ಮಣತೀರ್ಥ ಕಾವೇರಿಯ ಮತ್ತೊಂದು ಉಪನದಿ. ಇದು ಪಶ್ಚಿಮಘಟ್ಟದ ಬ್ರಹ್ಮಗಿರಿ ಬೆಟ್ಟಗಳಲ್ಲಿ (ಕೊಡಗು ಜಿಲ್ಲೆ) ಹುಟ್ಟಿ 130 ಕಿಮೀ ದೂರ ಹರಿದು ಸು. 1690 ಚ.ಕಿಮೀ ಜಲಾನಯನ ಪ್ರದೇಶ ಹೊಂದಿದೆ. ಹುಣಸೂರಿನಲ್ಲಿ ಜಿಲ್ಲೆಯನ್ನು ಪ್ರವೇಶಿಸಿ ಕೃಷ್ಣರಾಜನಗರ ತಾಲ್ಲೂಕಿನಲ್ಲೂ ಹರಿದು ಅನಂತರ ಕಾವೇರಿಯನ್ನು ಸೇರುತ್ತದೆ.

ವಾಯುಗುಣ: ಜಿಲ್ಲೆಯ ವಾಯುಗುಣ ವರ್ಷಪೂರ್ತಿ ಹಿತಕರವಾಗಿರುತ್ತದೆ. ಗರಿಷ್ಠ ಉಷ್ಣಾಂಶ $32^0$ಸೆ ನಿಂದ $35^0$ಸೆ ನಷ್ಟಿರುತ್ತದೆ. ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ 78 ಸೆಂಮೀ. ಮಳೆಯು ಜಿಲ್ಲೆಯಲ್ಲಿ ಅಸಮವಾಗಿ ಬೀಳುತ್ತದೆ, ಹುಣಸೂರು, ಪಿರಿಯಾಪಟ್ಟಣ ಮತ್ತು ಹೆಗ್ಗಡ ದೇವನಕೋಟೆಗಳಲ್ಲಿ ಹೆಚ್ಚಿದ್ದು ಮೈಸೂರು ನಂಜನಗೂಡು, ಕೃಷ್ಣರಾಜನಗರ ಮತ್ತು ತಿರುಮಕೂಡಲು ನರಸೀಪುರಗಳಲ್ಲಿ ಕಡಿಮೆ. ಮಳೆ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಬರುತ್ತದೆ. ಅಕ್ಟೋಬರ್‌ನಲ್ಲಿ ಹೆಚ್ಚು.

ಸಸ್ಯವರ್ಗ: ಜಿಲ್ಲೆಯಲ್ಲಿ ಸು. 62851 ಹೆ. ಪ್ರದೇಶದಲ್ಲಿ ಅರಣ್ಯವಿದೆ. ಹೆಗ್ಗಡದೇವನಕೋಟೆ ಮತ್ತು ಪಿರಿಯಾಪಟ್ಟಣಗಳಲ್ಲಿ ಹೆಚ್ಚಿನ ಅರಣ್ಯ ಪ್ರದೇಶ ಕಂಡುಬರುತ್ತದೆ. ನೀಲಗಿರಿ ತೋಪುಗಳು, ಬಿದಿರು, ತೇಗ, ಶ್ರೀಗಂಧದ ಮುಂತಾದ ಮರಗಳಿವೆ.

ಪ್ರಾಣಿವರ್ಗ: ಹುಲಿ, ಚಿರತೆ, ಕಾಡುಬೆಕ್ಕು, ಆನೆ, ಕರಡಿ ಕಾಡೆಮ್ಮೆ ಮತ್ತು ಜಿಂಕೆ ಜಿಲ್ಲೆಯ ಪ್ರಮುಖ ಪ್ರಾಣಿ ಸಂಪನ್ಮೂಲವಾಗಿವೆ.

ಭೂಬಳಕೆ : ಒಟ್ಟು ವಿಸ್ತೀರ್ಣ 6,76,382 ಹೆ. ಇದರಲ್ಲಿ ಅರಣ್ಯ ಪ್ರದೇಶ 62,851 ಹೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ, 1,12,746 ಹೆ, ಸಾಗುವಳಿ ಮಾಡದಿರುವ ಭೂಮಿ 83,133 ಹೆ. ದ್ವಿದಳ ನೀರಾವರಿ ಕ್ಷೇತ್ರ 11,4,016 ಹೆ. ಗಳು. ಬೃಹತ್ ಜಲಾಶಯಗಳಾದ ಕಬಿನಿ, ಹಾರಂಗಿ, ಹೇಮಾವತಿ ಹಾಗು ಕೃಷ್ಣರಾಜಸಾಗರ ಮತ್ತು ಮಧ್ಯಮ ನೀರಾವರಿ ಜಲಾಶಯಗಳಾದ ನುಗು, ತಾರಕ ಮತ್ತು ಗುಂಡ್ಲು ಜಲಾಶಯಗಳಿಂದ 97064 ಹೆ. ಪ್ರದೇಶ ನೀರಾವರಿಯಾಗುತ್ತದೆ. ಜಿಲ್ಲೆಯ ಒಟ್ಟು ನೀರಾವರಿ ಪ್ರದೇಶದಲ್ಲಿ ಕಾಲುವೆ, ಕೆರೆ, ಬಾವಿ, ಕೊಳವೆಬಾವಿ ಹಾಗೂ ಇತರ ನೀರಾವರಿಗಳು ಕಂಡುಬರುತ್ತವೆ.

ವ್ಯವಸಾಯ: ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. 63. ಜನರು ಗ್ರಾಮೀಣ ಪ್ರದೇಶದವರಾಗಿದ್ದು ಕೃಷಿ ಇವರ ಪ್ರಮುಖ ಕಸಬಾಗಿದೆ. ಜಿಲ್ಲೆಯ ಆದಾಯಕ್ಕೆ ಕೃಷಿ ಪ್ರಮುಖ ಪಾತ್ರವಹಿಸುತ್ತದೆ. ಪ್ರಮುಖ ಏಕದಳದ ಬೆಳೆಗಳೆಂದರೆ ಬತ್ತ (ಶೇ. 51.19), ರಾಗಿ (ಶೇ. 33.39), ಜೋಳ (ಶೇ. 9.17) ಮತ್ತು ಮುಸುಕಿನ ಜೋಳ (ಶೇ. 6.2). ಜಿಲ್ಲೆಯ ಪ್ರಮುಖ ದ್ವಿದಳ ಧಾನ್ಯಗಳೆಂದರೆ ಕಡಲೆ ಮತ್ತು ತೊಗರಿ, ಕಬ್ಬು, ಸಂಬಾರ ಪದಾರ್ಥಗಳು ಹಿಪ್ಪನೇರಳೆ, ಹತ್ತಿ, ಎಣ್ಣೆಕಾಳು, ಹೊಗೆಸೊಪ್ಪು ಮುಖ್ಯ ವಾಣಿಜ್ಯ ಬೆಳೆಗಳಾಗಿವೆ. ಮಾವು, ಬಾಳೆ, ಕಲ್ಲಂಗಡಿ, ಸಪೋಟ, ಗೊಡಂಬಿ ಮತ್ತು ಸೀಬೆ ಮುಖ್ಯ ಹಣ್ಣಿನ ಬೆಳೆಗಳಾಗಿವೆ. ಬದನೆ, ಟೊಮೊಟೊ, ಮೆಣಸಿನಕಾಯಿ, ಕುಂಬಳ, ಮೂಲಂಗಿ, ಬೆಂಡಕಾಯಿ, ಬೀನ್ಸ್ ಮುಖ್ಯ ತರಕಾರಿ ಬೆಳೆಗಳಾಗಿವೆ. ಹೂವುಗಳಲ್ಲಿ ಸುಗಂಧರಾಜ, ಮಲ್ಲಿಗೆ, ಸೇವಂತಿಗೆ, ಹಾಗೂ ಕಾಕಡ ವಾಣಿಜ್ಯ ಬೆಳೆಗಳಾಗಿವೆ.

ಪಶುಪಾಲನೆ: ರೈತರು ವ್ಯವಸಾಯದ ಜೊತೆ ಜೊತೆಯಲ್ಲೆ, ಜಾನುವಾರುಗಳನ್ನು ಸಾಕುವುದರಲ್ಲಿ ಆಸಕ್ತಿ ತೋರಿಸಿ ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡಿರುತ್ತಾರೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಪ್ರಾರಂಭವಾಗಿವೆ. ಕ್ಷೀರಸಂಸ್ಕರಣ ಕೇಂದ್ರ ಸಂಗ್ರಹಿಸಿದ ಹಾಲನ್ನು ಪರೀಕ್ಷಿಸಿ ಹಾಲು ಮೊಸರು, ಬೆಣ್ಣೆ, ತುಪ್ಪ ಮತ್ತು ಪೇಡ ಮುಂತಾದವುಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತದೆ. 2.41 ಲಕ್ಷ ಟನ್ ಹಾಲು ಮತ್ತು 1,145 ಲಕ್ಷ ಮೊಟ್ಟೆಗಳ ಉತ್ಪಾದನೆಯಾಗಿದೆ (2002). ರೇಷ್ಮೆ: ಜಿಲ್ಲೆಯಲ್ಲಿ ಹಿಪ್ಪನೇರಳೆ ಬೆಳೆಯುತ್ತಿದ್ದು ರೇಷ್ಮೆಗೂಡು ಉದ್ದಿಮೆಯು (ರೇಷ್ಮೆಹುಳು ಸಾಕಣಿಕೆ) ಕಂಡುಬರುತ್ತದೆ.

ಖನಿಜಗಳು : ನಂಜನಗೂಡು, ಮೈಸೂರು ನಡುವಣ ಮ್ಯಾಗ್ನಸೈಟ್ ಹಾಗೂ ಸುಣ್ಣಕಲ್ಲು, ಡಾಲೋಮೈಟ್ ಖನಿಜಗಳು ಕಂಡುಬರುತ್ತದೆ. ಮಾಗ್ನಸೈಟ್ ಅದಿರು ನಂಜನಗೂಡಿನ ಸಮೀಪ (ಕಡಕೊಳ) ಗಣಿಗಳು ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಸ್ವಾಧೀನದಲ್ಲಿದೆ.

ಕೈಗಾರಿಕೆ : ಮೈಸೂರು ಜಿಲ್ಲೆ ಅನೇಕ ಕೈಗಾರಿಕೆಗಳನ್ನು ಹೊಂದಿದೆ. ಮಾಹಿತಿ ತಂತ್ರಜ್ಞಾನ ಉದ್ದಿಮೆ, ನೋಟು ಮುದ್ರಣ, ಉಣ್ಣೆಬಟ್ಟೆ, ಹತ್ತಿಬಟ್ಟೆ, ಪಾನೀಯ, ಕಾಗದ, ರೇಷ್ಮೆ, ಸಕ್ಕರೆ, ಗೃಹಬಳಕೆ ವಸ್ತುಗಳು ಇತ್ಯಾದಿ ಕೈಗಾರಿಕೆಗಳಿವೆ.

ಸಾರಿಗೆ : ಜಿಲ್ಲೆಯಲ್ಲಿ ರಸ್ತೆ ಮತ್ತು ರೈಲು ಸಾರಿಗೆ ಸೌಕರ್ಯವಿದೆ. ಒಟ್ಟು 5,007 ಕಿಮೀ ಉದ್ದದ ರಸ್ತೆಯಿದ್ದು ಅದರಲ್ಲಿ 81.6 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಮತ್ತು 629 ಕಿಮೀ ಉದ್ದದ ರಾಜ್ಯಹೆದ್ದಾರಿಯನ್ನು ಒಳಗೊಂಡಿದೆ. ಜಿಲ್ಲೆಯ ಮೈಸೂರು ನಗರದಿಂದ ಬೆಂಗಳೂರು ಧಾರವಾಡ, ಬೆಳಗಾವಿ, ಮುಂಬಯಿ, ಚೆನ್ನೈ, ಹೈದರಾಬಾದ್ ಮುಂತಾದ ಕಡೆಗೆ ರೈಲು ಸಂಪರ್ಕವಿದೆ. ಮೈಸೂರು ನಗರದ ದಕ್ಷಿಣಕ್ಕೆ ಮಂಡಕಳ್ಳಿ ಸ್ಥಳೀಯ ವಿಮಾನ ನಿಲ್ದಾಣವಿದ್ದು ಮುಂದಕ್ಕೆ ಅದನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅಭಿವೃದ್ಧಿ ಪಡಿಸುವ ಯೋಜನೆಯಿದೆ.

ಜನಸಂಖ್ಯೆ : ಮೈಸೂರು ಜಿಲ್ಲೆಯ ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿ 4 ನೆಯ ಸ್ಥಾನ ಪಡೆದಿದೆ. ಇಲ್ಲಿನ ಒಟ್ಟು ಜನಸಂಖ್ಯೆ 26.41 ಲಕ್ಷ ಇದರಲ್ಲಿ 13.44 ಲಕ್ಷ ಪುರುಷರು ಮತ್ತು 12.96 ಲಕ್ಷ ಮಹಿಳೆಯರು ಜನಸಾಂದ್ರತೆ ಪ್ರತಿ ಚ.ಕಿಮೀಗೆ 383.

ಪ್ರೇಕ್ಷಣೀಯ ಸ್ಥಳಗಳು: ಜಿಲ್ಲೆ ಪ್ರೇಕ್ಷಣೀಯ ಸ್ಥಳಗಳಿಗೆ ಹೆಸರುವಾಸಿಯಾಗಿದೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ, ತಲಕಾಡಿನ ಪಂಚಲಿಂಗೇಶ್ವರ, ತಿರುಮಕೂಡಲು ನರಸೀಪುರದ ಬಳಿಯ ಸೋಮನಾಥಪುರ ದೇವಾಲಯ, ಮೈಸೂರು ಅರಮನೆ, ಚಾಮುಂಡಿ ಬೆಟ್ಟ, ಮೈಸೂರಿನ ಜಗನ್ಮೋಹನ ಅರಮನೆ, ಪ್ರಾಣಿಸಂಗ್ರಹಾಲಯ, ಪ್ರಕೃತಿ ಮ್ಯೂಸಿಯಂ, ನಾಗರಹೊಳೆ ಇತ್ಯಾದಿ.

ಮೈಸೂರು ತಾಲ್ಲೂಕು: ಇದು ಮೈಸೂರು ಜಿಲ್ಲೆಯಲ್ಲಿ ಉತ್ತರ ದಿಕ್ಕಿಗಿದೆ. $12^0 04'$ ಮತ್ತು $12^0 26'$ ಉತ್ತರ ಅಕ್ಷಾಂಶಗಳು $76^0 26'$ ಮತ್ತು $76^0 48'$ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಪೂರ್ವ ಪಶ್ಚಿಮವಾಗಿ ಸು. 46 ಕಿಮೀ ಉದ್ದ ಮತ್ತು ದಕ್ಷಿಣೋತ್ತರವಾಗಿ 34 ಕಿಮೀ ಅಗಲವಾಗಿದೆ. ಪಶ್ಚಿಮದಿಂದ ಪೂರ್ವಕ್ಕೆ ಕಿರಿದಾಗುತ್ತೆ. ಇದರ ಉತ್ತರಕ್ಕೆ ಪಾಂಡವಪುರ ಮತ್ತು ಶ್ರೀರಂಗಪಟ್ಟಣ, ಪೂರ್ವಕ್ಕೆ ತಿರುಮಕೂಡಲು ನರಸೀಪುರ, ದಕ್ಷಿಣಕ್ಕೆ ನಂಜನಗೂಡು, ನೈರುತ್ಯಕ್ಕೆ ಹೆಗ್ಗಡದೇವನ ಕೋಟೆ, ಪಶ್ಚಿಮಕ್ಕೆ ಹುಣಸೂರು, ಮತ್ತು ವಾಯವ್ಯಕ್ಕೆ ಕೃಷ್ಣರಾಜನಗರ ತಾಲ್ಲೂಕುಗಳಿವೆ. ವಾಯವ್ಯ ಮತ್ತು ಆಗ್ನೇಯ ಭಾಗದಲ್ಲಿ ಅನುಕ್ರಮವಾಗಿ ಲಕ್ಷ್ಮಣ ತೀರ್ಥ ಮತ್ತು ಕಬಿನಿ ನದಿಗಳು ತಾಲ್ಲೂಕಿನ ಗಡಿಗಳಂತೆ ಸ್ಪರ್ಶಿಸುತ್ತ ಹರಿಯುತ್ತದೆ. ಈ ತಾಲ್ಲೂಕನ್ನು 4 ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ: ಮೈಸೂರು ಕಸಬಾ, ವರುಣ, ಜಯಪುರ, ಇಲವಾಲ.

ಮೈಸೂರು ತಾಲ್ಲೂಕಿನ ವಿಸ್ತೀರ್ಣ 813.6 ಚ.ಕಿಮೀ. ಜನಸಂಖ್ಯೆ 10,20,410. ಇದರಲ್ಲಿ 5,21,624 ಪುರುಷರು ಮತ್ತು 8,02,784 ಸ್ತ್ರೀಯರು. ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 1,048 ಮಂದಿ.

ಕೆರೆಗಳು ತಾಲ್ಲೂಕಿನಾದ್ಯಂತ ಕಂಡುಬರುತ್ತವೆ. ಇವು ಋತುಕಾಲಿಕವಾದವು. ಕುಕ್ಕರಹಳ್ಳಿ ಕೆರೆ, ಲಿಂಗಾಂಬುಧಿಕೆರೆ, ಮಂಡಕಳ್ಳಿ ಕೆರೆ, ವರುಣ ಕೆರೆ, ಕಾರಂಜಿಕೆರೆ, ಮಾರ್ಬಳ್ಳಿ ಕೆರೆ ಮತ್ತು ಗಜ್ಜಗಳ್ಳಿ ಕೆರೆಗಳು ತಾಲ್ಲೂಕಿನ ಪ್ರಮುಖ ಕೆರೆಗಳು. ಉಷ್ಣವಲಯದ ಮಾನ್ಸೂನ್ ವಾಯುಗುಣ. ಬೇಸಗೆಯಲ್ಲಿ ಉಷ್ಣಾಂಶ ಹೆಚ್ಚು ಏಪ್ರಿಲ್‌ನಲ್ಲಿ $34^0$ಸೆ. ಮುಟ್ಟುವುದು. ಹಾಗು ಆರ್ದ್ರತೆ ಕಡಿಮೆ. ಚಳಿಗಾಲದಲ್ಲಿ ಉಷ್ಣಾಂಶ ಕಡಿಮೆಯಾಗುವುದು. ವಾರ್ಷಿಕ ಮಳೆ 798 ಮಿಮೀ. ತಾಲ್ಲೂಕಿನಾದ್ಯಂತ ಮರಳು ಮಿಶ್ರಿತ ಕೆಂಪುಮಣ್ಣು ವ್ಯಾಪಕವಾಗಿ ಹಂಚಿಕೆಯಾಗಿದೆ. ಕೆಂಪುಗೋಡು ಮತ್ತು ಮರಳು ಮಿಶ್ರಿತ ಜೇಡಿ ಅಲ್ಲಲ್ಲಿ ಚದುರಿದಂತೆ ಹಂಚಿಕೆಯಾಗಿದೆ. ತಾಲ್ಲೂಕಿನ ನೈರುತ್ಯಭಾಗ, ಅದರಲ್ಲೂ ಹೆಗ್ಗಡದೇವನಕೋಟೆ ಹಾಗೂ ಹುಣಸೂರು ತಾಲ್ಲೂಕುಗಳ ಗಡಿಗಳಿಗೆ ಹೊಂದಿಕೊಂಡ ಭಾಗದಲ್ಲಿ ಕಾಯ್ದಿರಿಸಿದ ಅರಣ್ಯ ಪ್ರದೇಶವಿದೆ. ಚಾಮುಂಡಿ ಬೆಟ್ಟದ ಪಾರ್ಶ್ವ ಇಳಿಜಾರು, ಇಲವಾಲ, ವರುಣ ಪ್ರದೇಶಗಳಲ್ಲಿ ನೆಡುತೋಪುಗಳು ಕಂಡುಬರುತ್ತವೆ.

ಭೂಬಳಕೆ : ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. 9.29 ಅರಣ್ಯಕ್ಕೆ ಶೇ. 16.67 ವ್ಯವಸಾಯಕ್ಕೆ ದೊರೆಯದ ಭೂಮಿ, ವ್ಯವಸಾಯ ಮಾಡಲಾಗದ ಭೂಮಿ ಶೇ. 12.30 ಮತ್ತು ಸಾಗುವಳಿ ಭೂಮಿ ಶೇ. 66.27 ಆದ್ದರಿಂದ ತಾಲ್ಲೂಕಿನ ಹೆಚ್ಚು ಭಾಗದಲ್ಲಿ ಸಾಗುವಳಿ ಕಂಡುಬರುತ್ತದೆ. ಕಾಲುವೆ, ಬಾವಿ ಮತ್ತು ಕೆರೆಗಳು ಈ ಪ್ರದೇಶದ ಮುಖ್ಯ ನೀರಾವರಿ ಮೂಲಗಳು. ಈಗ ಕೊಳವೆ ಬಾವಿ ನೀರಾವರಿ ಪ್ರಚಲಿತವಾಗಿದೆ. ನೀರಾವರಿಗೆ ಒಳಪಟ್ಟಿರುವ ನಿವ್ವಳ ಪ್ರದೇಶ 12,410 ಹೆ. ನೀರಾವರಿಗೆ ಒಳಪಟ್ಟಿರುವ ಭೂಮಿಯಲ್ಲಿ ಶೇ. 52 ಭಾಗ ಕಾಲುವೆ, ಶೇ. 2.01 ಭಾಗ ಬಾವಿ ಮತ್ತು ಶೇ. 17.32 ಭಾಗ ಕೆರೆಯಿಂದ ಪೂರೈಕೆಯಾಗಿವೆ. ಇತ್ತೀಚೆಗೆ ಕೊಳವೆ ಬಾವಿ ಪ್ರಚಲಿತವಾಗಿ ಶೇ. 28.20 ಪ್ರದೇಶಕ್ಕೆ ನೀರಾವರಿ ಕೊಟ್ಟಿದೆ.

ಕೃಷಿ : ತಾಲ್ಲೂಕಿನ ಒಟ್ಟು ಕ್ಷೇತ್ರದಲ್ಲಿ ಶೇ. 65 ಭಾಗ (81740 ಹೆ.) ಪ್ರದೇಶ ಕೃಷಿಗೆ ಬಳಕೆಯಾಗುತ್ತಿದೆ. ತಾಲ್ಲೂಕಿನ ಪ್ರಮುಖ ಏಕದಳ ಧಾನ್ಯ ಬೆಳೆಗಳೆಂದರೆ; ಬತ್ತ, ರಾಗಿ, ಜೋಳ ಮತ್ತು ಮುಸುಕಿನ ಜೋಳ, ಕಡಲೆ, ತೊಗರಿ, ಅವರೆ, ಹಲಸಂದೆ, ಹೆಸರು, ಹುರುಳಿ ಪ್ರಮುಖ ದ್ವಿದಳ ಧಾನ್ಯಗಳು. ಕಬ್ಬು, ಎಣ್ಣೆಕಾಳುಗಳು, ಹತ್ತಿ ಹೊಗೆಸೊಪ್ಪು, ತೆಂಗು, ಅಡಕೆ ಹಾಗೂ ಸಾಂಬಾರ ಪದಾರ್ಥಗಳು ಪ್ರಮುಖ ವಾಣಿಜ್ಯ ಬೆಳೆಗಳು.

ಇತ್ತೀಚೆಗೆ ದ್ರಾಕ್ಷಿ, ಸೀಬೆ, ಪರಂಗಿ, ಮಾವು ಮುಂತಾದ ಹಣ್ಣುಗಳೂ ಮಲ್ಲಿಗೆ, ಗುಲಾಬಿ, ಕಾಕಡ, ಸುಗಂಧರಾಜ, ಸಂಪಿಗೆ, ಜಾಜಿ ಮುಂತಾದ ಹೂಗಳನ್ನು ವಾಣಿಜ್ಯ ದೃಷ್ಟಿಯಿಂದ ಬೆಳೆಯಲಾಗುತ್ತಿದೆ.

ಪಶುಪಾಲನೆ : ತಾಲ್ಲೂಕಿನಲ್ಲಿ ದನಕರುಗಳು, ಎಮ್ಮೆ, ಕುರಿ, ಕೋಳಿ ಮುಂತಾದವುಗಳನ್ನು ರೈತರು ವ್ಯವಸಾಯದ ಜೊತೆಗೆ ಸಾಕುತ್ತಿದ್ದಾರೆ.

ಖನಿಜ: ಗಾರ್ನೆಟ್ ಎಂಬ ಅಪರೂಪದ ಹರಳು ನಿಕ್ಷೇಪ ಈ ತಾಲ್ಲೂಕಿನ ಕೆಲಭಾಗಗಳಲ್ಲಿ ಕಂಡುಬರುತ್ತದೆ. ಜೊತೆಗೆ ಮಾಗ್ನಸೈಟ್, ಕ್ರೋಮೈಟ್, ಬಳಪದ ಕಲ್ಲು ಮತ್ತು ಸುಣ್ಣದಕಲ್ಲುಗಳು ದೊರೆಯುತ್ತವೆ. ಕಡಕೋಳ ಬಳಿ ಮಾಗ್ನಸೈಟ್ ಗಣಿಯಿದ್ದು ಅದು ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿಯ ನಿಯಂತ್ರಣದಲ್ಲಿದೆ.

ಕೈಗಾರಿಕೆ : ತಾಲ್ಲೂಕಿನಲ್ಲಿ ಸು. 500 ರಷ್ಟು ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿವೆ. ಹತ್ತಿ, ರೇಷ್ಮೆ, ಉಣ್ಣೆ ಜವಳಿ, ಗಂಧದ ಎಣ್ಣೆ, ಸಾಬೂನು, ಅಗರಬತ್ತಿ ಬೀಡಿ ತಯಾರಿಕೆ, ಟೈರ್ ತಯಾರಿಕೆ, ದ್ವಿಚಕ್ರ ವಾಹನ, ರಾಸಾಯನಿಕ ವಸ್ತು, ಸಕ್ಕರೆ ಮುಂತಾದ ಕೈಗಾರಿಕೆಗಳಿವೆ.

ಸಾರಿಗೆ – ಸಂಪರ್ಕ : ರಸ್ತೆ ಮತ್ತು ರೈಲು ಸಾರಿಗೆ ಸೌಲಭ್ಯವಿದ್ದು 36 ಕಿಮೀ ಉದ್ದದ ರೈಲುಮಾರ್ಗವನ್ನು ಹೊಂದಿದೆ. ತನ್ಮೂಲಕ ಬೆಂಗಳೂರು, ಅರಸಿಕೆರೆ, ಹಾಸನ, ನಂಜನಗೂಡು ಮತ್ತು ಚಾಮರಾಜನಗರಗಳೊಡನೆ ಸಂಪರ್ಕವುಂಟು ತಾಲ್ಲೂಕಿನಲ್ಲಿ ರಸ್ತೆ ಸಾರಿಗೆ ಮುಖ್ಯವಾದದು 31 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, 68 ಕಿಮೀ ಉದ್ದದ ರಾಜ್ಯ ಹೆದ್ದಾರಿ, 172 ಕಿಮೀ ಉದ್ದ ಜಿಲ್ಲಾ ಮಾರ್ಗಗಳಿವೆ. ಮೈಸೂರಿನ ಸಮೀಪ ಮಂಡಕಳ್ಳಿಯಲ್ಲಿ ವಿಮಾನ ನಿಲ್ದಾಣವಿದೆ. ಇತ್ತೀಚೆಗೆ ಅದನ್ನು ಪ್ರಮುಖ ವಿಮಾನ ನಿಲ್ದಾಣವಾಗಿ ಪರಿವರ್ತಿಸಲು ಯೋಚಿಸಲಾಗಿದ್ದು, ನಿರ್ಮಾಣಕಾರ್ಯಸಾಗಿದೆ.

**ನಗರ :** ಮೈಸೂರು ಜಿಲ್ಲೆ ಮತ್ತು ತಾಲ್ಲೂಕುಗಳ ಆಡಳಿತ ಕೇಂದ್ರ. ಕರ್ನಾಟಕದ ಎರಡನೆಯ ಬೃಹತ್ ನಗರ. ಬೆಂಗಳೂರು ನಗರದಿಂದ 140 ಕಿಮೀ ದೂರದಲ್ಲಿ ನೈಋತ್ಯ ದಿಕ್ಕಿಗಿದೆ. ಇದು $12^0 18'$ ಉ. ಅ. ಮತ್ತು $76^0 12'$ ಪೂ.ರೇ. ಪರಿಮಿತಿಯಲ್ಲಿದೆ. ವಿಸ್ತೀರ್ಣ 121 ಚ.ಕಿಮೀ ಸಮುದ್ರಮಟ್ಟದಿಂದ 763 ಮೀ ಎತ್ತರದಲ್ಲಿದೆ. ಆಗ್ನೇಯ ಭಾಗದಲ್ಲಿ ಚಾಮುಂಡಿ ಬೆಟ್ಟದಿಂದ ಸುತ್ತುವರೆದಿದ್ದು ಇದರ ಸಾಮಾನ್ಯ ಮಟ್ಟ ಪಶ್ಚಿಮದಿಂದ ಪೂರ್ವದ ಕಡೆಗೆ ಇಳಿಜಾರಾಗುತ್ತ ಹೋಗುತ್ತದೆ. ನಗರದ ಜನಸಂಖ್ಯೆ 7,86,000. ನಗರ ಶಾಲಾ ಕಾಲೇಜುಗಳು, ಚಿತ್ರಮಂದಿರಗಳು, ಮಾರುಕಟ್ಟೆಗಳೂ, ವಾಣಿಜ್ಯ ಸಂಕೀರ್ಣಗಳು, ಆಸ್ಪತ್ರೆಗಳು, ಕೈಗಾರಿಕೆಗಳು, ಕಲಾಮಂದಿರ, ವಿಶ್ವವಿದ್ಯಾನಿಲಯ, ಸಂಕೀರ್ಣಗಳು, ಉದ್ಯಾನವನ ಮುಂತಾದವುಗಳು ಗಣನೀಯವಾಗಿ ಬೆಳೆದು ನಗರ ವಿಸ್ತಾರಗೊಳ್ಳುತ್ತಿದೆ.

ಮೈಸೂರು ನಗರ ಅದ್ಭುತವಾದ ಹಾಗೂ ಸುಂದರವಾದ ಅನೇಕ ಸ್ಮಾರಕಗಳನ್ನು ಹೊಂದಿದೆ. ಇಂತಹ ಸ್ಮಾರಕಗಳಲ್ಲಿ ಮೈಸೂರು ಅರಮನೆ ಪ್ರಸಿದ್ಧವಾದುದು. ದಸರಾ ಕಾಲದಲ್ಲಿ ನಡೆಯುವ ಅರಮನೆಯ ಪ್ರಾಂಗಣದ ದೀಪಾಲಂಕರ ನೋಡುವವರಿಗೆ ಮೈನವಿರೇಳಿಸುತ್ತದೆ. ಅರಮನೆ ಸಮೀಪ ಪಶ್ಚಿಮ ದಿಕ್ಕಿನಲ್ಲಿ ಕಂಡುಬರುವ ಮತ್ತೊಂದು ಸುಂದರ ಕಟ್ಟಡ ಜಗನ್ಮೋಹನ ಅರಮನೆ. ಇಲ್ಲಿ ರಾಜಾರವಿವರ್ಮ, ಖಾನ ಬಹದ್ದೂರ್, ಈಶ್ವರದಾಸ್ ಮುಂತಾದವರ ಕಲಾಕೃತಿಗಳಿವೆ. ನಗರದ ಪೂರ್ವ ಭಾಗದಲ್ಲಿ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಮತ್ತೊಂದು ಸುಂದರ ಕಟ್ಟಡ ಲಲಿತಮಹಲ್ ಅರಮನೆ. ಈಗ ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆಯವರು ಇದನ್ನು ವಹಿಸಿಕೊಂಡು ಪಂಚತಾರಾ ಹೋಟೆಲ್ ಆಗಿ ಪರಿವರ್ತಿಸಿದ್ದಾರೆ. ಮೈಸೂರು ನಗರ ಇಂದು ದೇಶದ ಪ್ರಮುಖವಾದ ಸಾಂಸ್ಕೃತಿಕ ಮತ್ತು ಶಿಕ್ಷಣ ಕೇಂದ್ರವಾಗಿದೆ. ಇಲ್ಲಿ ಮಾನವಿಕ, ವಿಜ್ಞಾನ–ತಂತ್ರಜ್ಞಾನ, ಕಂಪ್ಯೂಟರ್, ವಿಜ್ಞಾನ, ವಾಣಿಜ್ಯ, ಲಲಿತಕಲೆ, ವ್ಯಾಯಾಮ, ನ್ಯಾಯಶಾಸ್ತ್ರ, ಶಿಕ್ಷಣ ಹಾಗು ವೈದಕೀಯ ಕಾಲೇಜುಗಳಿವೆ. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಹಾಗೂ ಸಂಶೋಧನ ಕೇಂದ್ರಗಳು ಮಾನಸ ಗಂಗೋತ್ರಿ ಆವರಣದಲ್ಲಿವೆ. ಇದಲ್ಲದೆ ರೀಜನಲ್ ಕಾಲೇಜು, ವಾಕ್ ಶ್ರವಣ ಸಂಸ್ಥೆ, ಪೊಲೀಸ್ ತರಬೇತಿ ಕೇಂದ್ರ, ಕೇಂದ್ರ ಆಹಾರ ಸಂಶೋಧನಾಲಯ, ಡಿಫೆನ್ಸ್ ಫುಡ್ ರೀಸರ್ಚ್ ಲ್ಯಾಬರೇಟರಿ, ರೇಷ್ಮೆ ಕೃಷಿ ಸಂಶೋಧನಾಲಯಗಳು, ಕೇಂದ್ರೀಯ ಭಾಷಾ ಸಂಸ್ಥಾನ ಇಲ್ಲಿವೆ.

ಮೈಸೂರು ಉದ್ಯಾನವನಗಳ ನಗರವೆಂದೇ ಪ್ರಸಿದ್ಧಿಯಾಗಿದೆ. ಇಲ್ಲಿ ನಿಷಾದ್‌ಬಾಗ್, ಕರ್ಜನ್ ಪಾರ್ಕ್, ಚೆಲುವಾಂಬ ಪಾರ್ಕ್, ಮಧುವನ ಮುಂತಾದ ಉದ್ಯಾನವನಗಳಿವೆ. ಇಲ್ಲಿನ ಗೋಥಿಕ್ ಶೈಲಿಯ ಸಂತ ಫಿಲೋಮಿನ ಚರ್ಚ್ ಪ್ರಸಿದ್ಧವಾದುದು. ಇಲ್ಲಿನ ಚಾಮರಾಜೇಂದ್ರ ಮೃಗಾಲಯ, ನಗರದ ಸಮೀಪದ ಕೆ.ಆರ್.ಎಸ್. ಬೃಂದಾವನ, ಜಲಾಧಾರಿತ ಯೋಜನೆ ಆರಾಮಧಾಮಗಳು ಪ್ರಪಂಚದ ಎಲ್ಲೆಡೆಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. (ಬಿ.ಸಿ.ಕೆ.)

**ಮೊಜ಼ಾಂಬಿಕ್:** ಆಫ್ರಿಕ ಖಂಡದ ಒಂದು ಗಣರಾಜ್ಯ. ದ.ಅ. $10^0$–$25^0$ ಹಾಗೂ ಪೂ.ರೇ. $30^0$–$41^0$ಗಳ ನಡುವೆ ಹಬ್ಬಿದೆ. ಈ ರಾಜ್ಯ ಆಫ್ರಿಕ ಖಂಡದ ಆಗ್ನೇಯದಲ್ಲಿ ಉತ್ತರ ದಕ್ಷಿಣವಾಗಿ ಹರಡಿದೆ. ಇದರ ಪೂರ್ವಕ್ಕೆ ಹಿಂದೂಸಾಗರ; ದಕ್ಷಿಣಕ್ಕೆ ದಕ್ಷಿಣ ಆಫ್ರಿಕ; ನೈಋತ್ಯಕ್ಕೆ ಸ್ವಾಜೀಲ್ಯಾಂಡ್, ಪಶ್ಚಿಮಕ್ಕೆ ದಕ್ಷಿಣ ಆಫ್ರಿಕ ಮತ್ತು ಜ಼ಿಂಬಾಬ್ವೇ ಹಾಗೂ ಉತ್ತರಕ್ಕೆ ಮಲಾವೀ, ಝಾಂಬಿಯ ಮತ್ತು ಟಾಂಜಾನಿಯ ಇದರ ಮೇರೆಗಳಾಗಿವೆ. ಒಟ್ಟು ವಿಸ್ತೀರ್ಣ 783.030 ಚ.ಕಿಮೀ, ಜನಸಂಖ್ಯೆ 19,406,703 (2002). ರಾಜಧಾನಿ ಮಪೂಟೊ. ಇದರ ಜನಸಂಖ್ಯೆ: 10,95,300 (2002).




ಭೌತಲಕ್ಷಣ : ಮೊಜ಼ಾಂಬಿಕ್ ಹಿಂದೂಮಹಾಸಾಗರದ 2,504 ಕಿಮೀ ದೀರ್ಘ ತೀರಪ್ರದೇಶವನ್ನು ಹೊಂದಿದೆ. ಈ ತೀರಪ್ರದೇಶದ ಉದ್ದಕ್ಕೂ ಸು. 50 ದೊಡ್ಡ ಮತ್ತು ಸಣ್ಣ ನದಿಗಳು ಸಮುದ್ರ ಸೇರುತ್ತವೆ. ಈ ನದಿಗಳ ಹರಿವಿನಿಂದಾಗಿ ತೀರಪ್ರದೇಶ ವಿಸ್ತಾರವಾದ ಬಯಲುಗಳಿಂದ ಕೂಡಿದ್ದು ಫಲವತ್ತಾಗಿದೆ. ದಕ್ಷಿಣದಿಂದ ಝಾಂಬೀಜಿ ನದಿಯವರೆಗೂ ತೀರಪ್ರದೇಶ ಹೆಚ್ಚಾಗಿ ಮರಳಿನಿಂದ ಕೂಡಿದೆ. ಅಲ್ಲಿ ಜೌಗುಪ್ರದೇಶಗಳು ಕಂಡುಬರುತ್ತವೆ. ಝಾಂಬೀಜ಼ೀಯ ಉತ್ತರಕ್ಕೆ ಅಲ್ಲಲ್ಲಿ ಕಲ್ಲಿನ ಬೆಟ್ಟಗಳು ಎದ್ದಿವೆ. ಮೊಜ಼ಾಂಬಿಕ್ ಕ್ಯುಲಿಮಿನ್ ಬೇರಾ ಮತ್ತು ಮಪೂಟೊ ದೊಡ್ಡ ಬಂದರುಗಳು. ಇಂದು ಮಪೂಟೊ ಎಂದು ಹೆಸರು ಪಡೆದಿರುವ ಬಂದರು ಮತ್ತು ರಾಜಧಾನಿಗೆ ಪೋರ್ಚುಗೀಸರು ಲರೆನ್ಸೊ ಮಾರ್ಕೆಸ್ ಎಂದು ಕರೆದಿದ್ದರು. ಇದು ದೆಲಾಗ ಕೊಲ್ಲಿಯಲ್ಲಿದ್ದು ಪ್ರಪಂಚದ ಉತ್ತಮ ಸ್ವಾಭಾವಿಕ ಬಂದರುಗಳಲ್ಲಿ ಒಂದಾಗಿದೆ. ಮೊಜ಼ಾಂಬಿಕ್‌ನ ಉತ್ತರ ತುದಿಗೆ ಸಮಾಂತರವಾಗಿ ಹಿಂದೂಮಹಾಸಾಗರದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಸು. 970 ಕಿಮೀ ಉದ್ದದ ಮಡಗಾಸ್ಕರ್ ದ್ವೀಪ ಹಬ್ಬಿದೆ. ಇವೆರಡರ ನಡುವೆ ಸು. 384 ಕಿಮೀ ಅಗಲದ ಮೊಜ಼ಾಂಬಿಕ್ ಜಲಸಂಧಿಯಿದೆ.

ತೀರದಿಂದ ಒಳನಾಡಿನತ್ತ ಸರಿದಂತೆ ಭೂಮಿ ಎತ್ತರವಾಗುತ್ತ ಹೋಗುತ್ತದೆ. ಸು. 229 ಮೀ ಎತ್ತರವಿರುವ ತೀರದ ಬಯಲುಗಳು ದಕ್ಷಿಣದಲ್ಲಿ ಅಗಲವಾಗಿಯೂ ಉತ್ತರಕ್ಕೆ ಹೋದಂತೆ ಕಿರಿದಾಗಿಯೂ ಇವೆ. ಇವು ವ್ಯವಸಾಯಕ್ಕೆ ಯೋಗ್ಯವಾಗಿವೆ. ನದಿಗಳಿಂದುಂಟಾದ ಕಣಿವೆಗಳು ಮತ್ತು ತಗ್ಗಾದ ಬೆಟ್ಟಗಳು ಇಲ್ಲಿಯ ಪ್ರಧಾನ ಭೂಲಕ್ಷಣಗಳು ಝಾಂಬೀಜ಼ೀನದಿಯ ಉತ್ತರದ ಒಳನಾಡಿನಲ್ಲಿ ಸವನ್ನಾ ಮಾದರಿಯ ಹುಲ್ಲುಗಾವಲು ಕಂಡುಬರುತ್ತದೆ.

ಈ ಬಯಲುಗಳ ಪಶ್ಚಿಮಕ್ಕೆ ಸರಿದಂತೆ ಸಿಗುವ ಪ್ರಸ್ಥಭೂಮಿಯ ಎತ್ತರ ಸು. 150–610 ಮೀ ಇದೆ. ಆಫ್ರಿಕದ ಮುಖ್ಯ ಪ್ರಸ್ಥಭೂಮಿಯ ಅಂಚು ಮೊಜ಼ಾಂಬಿಕ್‌ನ ಪಶ್ಚಿಮ ಗಡಿಯುದ್ದಕ್ಕೂ ಹಬ್ಬಿದೆ. ಜ಼ಿಂಬಾಬ್ವೆ ಮತ್ತು ಮಲಾವೀ ಗಡಿಗಳಲ್ಲಿ ಬೆಟ್ಟ ಶೇಣಿಗಳು ಎತ್ತರವಾಗಿವೆ. ಮಲಾವೀ ಸರೋವರದ ಬಳಿ 2,207 ಮೀ ಎತ್ತರದ ಬೆಟ್ಟ ಶ್ರೇಣಿ ಇದೆ. ಝಾಂಬೀಜಿ ನದಿಯ ಆಚೆ ಉತ್ತರಕ್ಕೆ ಹೋದಂತೆಲ್ಲ ಎತ್ತರದ ಬೆಟ್ಟಗುಡ್ಡ ಸಾಲುಗಳು ಸಿಗುತ್ತವೆ. ಈ ನದಿಯ ದಕ್ಷಿಣಕ್ಕಿರುವ ಏಕಮಾತ್ರ ಕಡಿದಾದ ಬೆಣಚುಕಲ್ಲಿನ ಬೆಟ್ಟಶ್ರೇಣಿಯ ಶಿಖರ 1,863 ಮೀ ಎತ್ತರವಿದೆ.

ನದಿಗಳು : ಆಫ್ರಿಕದ ದಕ್ಷಿಣ ಮಧ್ಯಪ್ರಸ್ಥಭೂಮಿಯಿಂದ ಹುಟ್ಟುವ ನದಿಗಳಲ್ಲಿ ಕೆಲವು ಮೊಜ಼ಾಂಬಿಕ್ ಮೂಲಕ ಹರಿದು ಮೊಜ಼ಾಂಬಿಕ್ ಜಲಸಂಧಿಯಲ್ಲಿ ಹಿಂದೂ ಮಹಾಸಾಗರವನ್ನು ಸೇರುತ್ತವೆ. ಝಾಂಬೀಜ಼ೀ ಮೊಜ಼ಾಂಬಿಕ್‌ನ ಮುಖ್ಯ ನದಿ. ಅದು ಜೈರೆ ಮತ್ತು ಅಂಗೋಲಗಳ ಸರಹದ್ದಿನ ಬಳಿ ಝಾಂಬಿಯಾದಲ್ಲಿ ಹುಟ್ಟಿ ಪೂರ್ವದತ್ತ ಅಡ್ಡಡ್ಡಲಾಗಿ ಹರಿದು ಸುಮಾರಾಗಿ ಮೊಜ಼ಾಂಬಿಕ್‌ನ ಮಧ್ಯಭಾಗದಲ್ಲಿ ಪ್ರವೇಶಿಸಿ ಮೊಜ಼ಾಂಬಿಕ್ ಜಲಸಂಧಿಯ ಬಳಿ ಸಮುದ್ರ ಸೇರುತ್ತದೆ. ಈ ನದಿಯ ಉದ್ದ 2570 ಕಿಮೀ. ಲೂ ಆನ್

ವಾ, ಸಿರೆ, ಕಾಫುಯೀ ಮತ್ತು ಸಾನ್‌ಯಾಟೀ ಇದರ ಉಪನದಿಗಳು. ಜ಼ಾಂಬೀಜೀನದಿ ನೌಕಾಯಾನಕ್ಕೂ ಅನುಕೂಲವಾಗಿದೆ. ಲಿಂಪೋಪೊ, ಸೇನ್, ಬುಜಿ, ಲೂರಿಯೊ, ಮೆಸಲು ಮತ್ತು ರೂವೂಮ ಇಲ್ಲಿಯ ಇತರ ನದಿಗಳು.

ವಾಯುಗುಣ : ಇಲ್ಲಿಯದು ಶುಷ್ಕ ವಾಯುಗುಣ, ಏಪ್ರಿಲ್‌ನಿಂದ ಸಪ್ಟೆಂಬರ್ ತನಕ ಬೇಸಗೆ, ಅಕ್ಟೋಬರ್‌ನಿಂದ ಮಾರ್ಚ್‌ತನಕ ಮಳೆಗಾಲ, ಮಪೂಟೊ ನಗರದಲ್ಲಿ ಜನವರಿಯಲ್ಲಿ 25.6$^0$ಸೆ. ಉಷ್ಣತೆಯಿದ್ದರೆ, ಜುಲೈನಲ್ಲಿ 18.3$^0$ಸೆ.ಗೆ ಇಳಿದಿರುತ್ತದೆ. ವಾರ್ಷಿಕ ಸರಾಸರಿ ಮಳೆ 76 ಸೆಂಮೀ. ಹಾಗೆಯೇ ಬೇರೆ ನಗರದ ಉಷ್ಣತೆ ಜನವರಿಯಲ್ಲಿ 27.8$^0$ಸೆ. ಇದ್ದರೆ ಜುಲೈನಲ್ಲಿ 20.6$^0$ಸೆ. ಗೆ ಇಳಿದಿರುತ್ತದೆ. ವಾರ್ಷಿಕ ಸರಾಸರಿ ಮಳೆ 152 ಸೆಂಮೀ. ಉತ್ತರದಿಂದ ದಕ್ಷಿಣಕ್ಕೆ ಬಂದಹಾಗೆ ಮಳೆಯೂ ಕಡಿಮೆಯಾಗುತ್ತದೆ.

ಸಸ್ಯಸಂಪತ್ತು : ಮೊಜಾಂಬಿಕ್ ಬಹುತೇಕ ಉಷ್ಣವಲಯ ಕಾಡಿನಿಂದ ಮತ್ತು ಸವನ್ನಾ ಹುಲ್ಲುಗಾವಲುಗಳಿಂದ ಕೂಡಿದೆ. ಮುಖ್ಯ ನದಿಗಳ ಮೇಲೆ ಹರಿವಿನ ಪ್ರದೇಶದಲ್ಲಿ ಮೊಪನೆ ಮರಗಳೂ ಸವನ್ನಾದಲ್ಲಿ ಬೊಬಾಬ್ ಮರಗಳೂ ಜ಼ಾಂಬೀಜ಼ೀಯ ಮುಖಜಭೂಪ್ರದೇಶದಲ್ಲಿ ಮ್ಯಾಂಗ್ರೋವ್ ಮರಗಳೂ ಬೆಳೆಯುತ್ತವೆ. ನದಿದಂಡೆಗಳಲ್ಲಿ ಮತ್ತು ಜೌಗುಪ್ರದೇಶದಲ್ಲಿ ಬಂಬು ಮತ್ತು ಚೂಪು ಹುಲ್ಲು ಯಥೇಚ್ಛವಾಗಿ ಬೆಳೆಯುತ್ತವೆ. ಕಣಿವೆಗಳಲ್ಲಿ ಕರಿಮರ ಮತ್ತು ಎಬೊನಿ ಮರಗಳನ್ನು ಕಾಣಬಹುದು. ಕಿರಿದಾದ ಕಮರಿಗಳಲ್ಲಿ ನಾಟಾಕ್ಕೆ ಬಳಸುವ ದೊಡ್ಡಮರಗಳು ಬೆಳೆಯುತ್ತವೆ. ತೀರಪ್ರದೇಶದುದ್ದಕ್ಕೂ ತೆಂಗಿನ ಮರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಇವುಗಳ ಜೊತೆಗೆ ಈಚಲು ಮೊದಲಾದ ತಾಳೆಜಾತಿಯ ಮರಗಳಿವೆ.

ಪ್ರಾಣಿ ಸಂಪತ್ತು : ಆಫ್ರಿಕ ಖಂಡದಲ್ಲಿ ಬಹುತೇಕ ಪ್ರಾಣಿಗಳು ಮೊಜ಼ಾಂಬಿಕ್‌ನಲ್ಲೂ ಕಂಡುಬರುತ್ತವೆ. ಸಿಂಹ, ಜೀಬ್ರ, ಹುಲಿ, ಚಿರತೆ, ತೋಳ, ಆನೆ, ಖಡ್ಗಮೃಗ, ಜಿಂಕೆ, ಕಾಡೆಮ್ಮೆ, ಚಿಗರಿ, ಜಿರಾಫೆ, ಹೇಸರಗತ್ತೆ, ತೋಳ, ನರಿ, ಕಾಡುಬೆಕ್ಕು, ಮುಂಗುಸಿ, ಮಂಗ ಇತ್ಯಾದಿ ಅಸಂಖ್ಯಾತ ಪ್ರಾಣಿವರ್ಗಗಳಿವೆ. ನದಿಗಳಲ್ಲಿ ನೀರಾನೆ, ನೀರು ನಾಯಿ, ಮೊಸಳೆ, ಮೀನು ಮುಂತಾದವು, ಹೆಬ್ಬಾವು, ನಾಗರಹಾವು, ಮಂಡಲದ ಹಾವು ಇವೆ. ಮೀನುಗಾರಿಕೆಗೆ ಒಳ್ಳೆಯ ಸಂಪನ್ಮೂಲವಿದೆ. ಫ್ಲೆಮಿಂಗೊ, ಹದ್ದು, ಕೊಕ್ಕರೆ, ಗಿಡುಗ, ಕಾಡುಬಾತು ಇತ್ಯಾದಿ ಪಕ್ಷಿ ಸಂಕುಲವಿದೆ. ದನ, ಕುರಿ, ಮೇಕೆ, ಹಂದಿ, ಕತ್ತೆ ಮತ್ತು ಕೋಳಿ ಸಾಕುಪ್ರಾಣಿಗಳು.

ಖನಿಜ ಸಂಪತ್ತು : ಈ ದೇಶದ ಖನಿಜಸಂಪತ್ತಿನ ಸಮಗ್ರ ಸಮೀಕ್ಷೆ ಇನ್ನೂ ಆಗಿಲ್ಲ. ಸೊಫಾಲದಲ್ಲಿ ಚಿನ್ನ, ಮೊಜ಼ಾಂಬಿಕ್‌ನಲ್ಲಿ ಕಬ್ಬಿಣದ ಅದಿರು ಮತ್ತು ದಕ್ಷಿಣ ಆಫ್ರಿಕದ ಸರಹದ್ದಿನಲ್ಲಿ ಮ್ಯಾಂಗನೀಸ್ ನಿಕ್ಷೇಪಗಳಿವೆ. ಉತ್ತರದ ಮೂರೂರದಲ್ಲಿ ಟ್ಯಾಂಟಲೈಟ್ ಎಂಬ ವಿರಳ ಖನಿಜವಿದೆ. ಬ್ರಗಾಂಜದಲ್ಲಿ ಚಿನ್ನ, ನಂಪದಲ್ಲಿ ಕಬ್ಬಿಣ ಮತ್ತು ಕ್ಯಾಟುನೆಯಲ್ಲಿ ಮ್ಯಾಂಗನೀಸ್ ಮತ್ತು ಕಲ್ನಾರು ದೊರೆತಿವೆ. ಪಚ್ಚೆ, ಗ್ರಾಫೈಟ್, ಮೈಕ, ಬಿಸ್‌ವಂತ್ ಮುಂತಾದ ಲೋಹಗಳು ಸಣ್ಣ ಪ್ರಮಾಣದಲ್ಲಿ ಕಂಡುಬಂದಿದೆ. ತೀರ ಪ್ರದೇಶದಲ್ಲಿ ತೈಲ ನಿಕ್ಷೇಪಗಳಿವೆ. ಮಪೂಟೊದ ವಾಯವ್ಯದಲ್ಲಿ ಸ್ವಾಭಾವಿಕ ಅನಿಲ ದೊರೆತಿದೆ. ಕಲ್ಲಿದ್ದಲು ನಿಕ್ಷೇಪ ಯಥೇಚ್ಛವಾಗಿ ಕಂಡುಬಂದಿದೆ.

ವ್ಯವಸಾಯ : ವ್ಯವಸಾಯ ಬೆಳೆಗಳು ಇಲ್ಲಿಯ ಮುಖ್ಯ ವಸ್ತುಗಳಾಗಿವೆ. ಹೊಗೆಸೊಪ್ಪು, ಗೇರುಬೀಜ ಮತ್ತು ಹತ್ತಿ ಮುಖ್ಯ ಬೆಳೆಗಳು. ಕಬ್ಬು ಮತ್ತು ಅದಕ್ಕೆ ಸಂಬಂಧಿಸಿದ ಉತ್ಪಾದನೆಗಳು ವ್ಯವಸಾಯೋತ್ಪನ್ನದ ಶೇ. 10 ರಷ್ಟಿದೆ. ಎಣ್ಣೆ ಕಾಳುಗಳು, ಜೋಳ, ಚಹ, ಕತ್ತಾಳೆ ನಾರು ಮತ್ತು ಕೊಬ್ಬರಿ ಉತ್ಪಾದಿಸುವರು.

ಕೈಗಾರಿಕೆ : ಆಹಾರ ಸಂಸ್ಕರಣ ಮತ್ತು ತೈಲ ಶುದ್ಧೀಕರಣ ಇಲ್ಲಿಯ ಮುಖ್ಯ ಕೈಗಾರಿಕೆಗಳಾಗಿವೆ. ಹತ್ತಿ, ಸಕ್ಕರೆ, ಹೊಗೆಸೊಪ್ಪು, ಗೇರುಬೀಜ ಮತ್ತು ಇತರ ವ್ಯವಸಾಯ ಉತ್ಪನ್ನಗಳನ್ನು ರಫ್ತು ಮಾಡುವ ಮೊದಲು ನಡೆಸುವ ಸಂಸ್ಕರಣ ಕಾರ್ಯದಲ್ಲಿ ತೊಡಗಿವೆ. ಪಾದರಕ್ಷೆಗಳು, ಸಿಮೆಂಟ್, ರಾಸಾಯನಿಕ ಗೊಬ್ಬರ, ಪಾನೀಯಗಳು ಮತ್ತು ಹತ್ತಿಬಟ್ಟೆ ತಯಾರಿಕೆಗೆ ಸಂಬಂಧಿಸಿದ ಅನೇಕ ಕೈಗಾರಿಕೆಗಳಿವೆ. ರೈಲು ಮತ್ತು ಹಡಗುಕಟ್ಟೆ ಉದ್ಯಮಗಳು ಬೆಳೆದಿವೆ.

ಗಣಿಗಾರಿಕೆಗೆ ವಿಪುಲ ಅವಕಾಶಗಳಿದ್ದರೂ ಅದಿನ್ನೂ ಪ್ರಾರಂಭದ ಸ್ಥಿತಿಯಲ್ಲಿದೆ. ಸಂಪ ಯೋಜನೆಯಂಥ ಕೆಲವು ಬೃಹತ್ ಯೋಜನೆಗಳು ಕಾರ್ಯಗತವಾಗುತ್ತಿವೆ. ವಾರ್ಷಿಕವಾಗಿ 2,70,000 ಮೆಟ್ರಿಕ್ ಟನ್ ಕಲ್ಲಿದ್ದಲು ಉತ್ಪಾದನೆಯಾಗುತ್ತಿದೆ. ಮೀನುಗಾರಿಕೆ ಗಣನೀಯ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಒದಗಿಸಿದೆ. ಕೈಗಾರಿಕೆಯಲ್ಲಿ ದೇಶ ಇನ್ನೂ ಪ್ರಾರಂಭದ ಹಂತದಲ್ಲಿದೆ.

ಹಣಕಾಸು : ಇಲ್ಲಿಯ ನಾಣ್ಯ ಎಸ್ಕ್ಯುಡೊ. ತೂಕ ಮತ್ತು ಅಳತೆಗೆ ಮೆಟ್ರಿಕ್ ಪದ್ಧತಿಯನ್ನು ಬಳಸಲಾಗುತ್ತಿದೆ. ನೆರೆಯ ದೇಶಗಳಿಗೆ ಸರಕುಸಾಗಣೆ ಮತ್ತು ಬಂದರುಗಳ ಸೌಲಭ್ಯ ಒದಗಿಸಿರುವುದರಿಂದ ಮುಖ್ಯವಾಗಿ ಮೊಜ಼ಾಂಬಿಕ್‌ಗೆ ಆದಾಯ ಬರುತ್ತದೆ. ಅದರಲ್ಲಿ ರೈಲುಮಾರ್ಗದ ಬಳಕೆ ಮತ್ತು ಬಂದರುಗಳ ಬಳಕೆಗಾಗಿ ದಕ್ಷಿಣ ಆಫ್ರಿಕ ಮತ್ತು ಮಲಾವೀ ದೇಶಗಳು ಅಧಿಕ ಬಾಡಿಗೆ ನೀಡುತ್ತವೆ. ಮಪೂಟೊ ರಾಜಧಾನಿಯಷ್ಟೇ ಅಲ್ಲದೆ ರಾಷ್ಟ್ರದ ಹಣಕಾಸಿನ ಕೇಂದ್ರವೂ ಆಗಿದೆ. ಸಾರಿಗೆ ಸಂಪರ್ಕ ವ್ಯವಸ್ಥೆ ಸರ್ಕಾರದ ಸ್ವಾಮ್ಯದಲ್ಲಿದೆ. ಗಣಿಗಾರಿಕೆಯ ಹೆಚ್ಚು ಭಾಗ ಖಾಸಗಿಯವರ ಕೈಯಲ್ಲಿದೆ. ದಕ್ಷಿಣ ಆಫ್ರಿಕ ಮತ್ತು ಜರ್ಮನಿಗಳಿಂದ ಹೆಚ್ಚು ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ಸಾರಿಗೆ ಸಂಪರ್ಕ: ವ್ಯವಸ್ಥೆ ಸಾಕಷ್ಟು ಅಭಿವೃದ್ಧಿಗೊಂಡಿಲ್ಲ. ಪೋರ್ಚುಗೀಸರು ಆದಾಯದ ದೃಷ್ಟಿಯಿಂದ ನೆರೆಯ ರಾಷ್ಟ್ರಗಳ ಸರಕುಸಾಗಣೆ ವ್ಯವಸ್ಥೆಗೆ ಹೆಚ್ಚು ಮಹತ್ತ್ವ ಕೊಟ್ಟರು. ಇದರಿಂದ ಆಂತರಿಕಸಾರಿಗೆ ವ್ಯವಸ್ಥೆ ದುರ್ಬಲವಾಗಿದೆ. ದೇಶದಲ್ಲಿ ಇರುವ ರಸ್ತೆ ಮತ್ತು ರೈಲುಮಾರ್ಗಗಳನ್ನು ದಕ್ಷಿಣದಲ್ಲಿ ಮಪೂಟೊ, ಮಧ್ಯಭಾಗದಲ್ಲಿ ಬೇರ ಮತ್ತು ಉತ್ತರದಲ್ಲಿ ಮೊಜ಼ಾಂಬಿಕ್ ಬಂದರುಗಳತ್ತ ಕೇಂದ್ರೀಕರಿಸಲಾಗಿದೆ. ರಸ್ತೆ ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಕೆಳಮಟ್ಟದ್ದಾಗಿದೆ. ದೊಡ್ಡ ನಗರಗಳ ಮತ್ತು ಕೈಗಾರಿಕಾ ಕೇಂದ್ರಗಳ ನಡುವೆ ಮಾತ್ರ ಉತ್ತಮ ರಸ್ತೆಗಳಿವೆ. 4,600 ಕಿಮೀ ಉತ್ತಮ ರಸ್ತೆಯೂ ಸೇರಿದಂತೆ ಒಟ್ಟು 30,000 ಕಿಮೀ ರಸ್ತೆ ಮಾರ್ಗವಿದೆ. ಇಲ್ಲಿಯ ರೈಲುಮಾರ್ಗ ಮಪೂಟೊ. ಮೊಜ಼ಾಂಬಿಕ್, ಬೇರ, ಇನ್‌ಯಾಂಬೈನ್ ಮತ್ತು ಕೆಲಮಾನೀ ಎಂಬ ಐದು ಸ್ವತಂತ್ರ ಜಾಲಗಳಿಂದ ಕೂಡಿದೆ. ದಕ್ಷಿಣ ಆಫ್ರಿಕ, ಸ್ವಾಜಿಲ್ಯಾಂಡ್, ಜ಼ಿಂಬಾಬ್ವೆ, ಮಲಾವೀ ಇತ್ಯಾದಿ ದೇಶಗಳೊಂದಿಗೆ ಸಂಪರ್ಕ ಹೊಂದಿದ ಅಂತಾರಾಷ್ಟ್ರೀಯ ಜಾಲಗಳಿವೆ. ದೇಶದ ಒಟ್ಟು ರೈಲುಮಾರ್ಗ 3,800 ಕಿಮೀ. ಮಪೂಟೊ, ಬೇರ ಮತ್ತು ನಂಪೂಲ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು. ಇವಲ್ಲದೆ ಇತರ 16 ವಿಮಾನ ನಿಲ್ದಾಣಗಳಿವೆ. ಆಫ್ರಿಕದ ವಿವಿಧ ದೇಶಗಳಿಗೆ ಮೊಜ಼ಾಂಬಿಕ್‌ನ ಬಂದರುಗಳನ್ನು ಬಳಸುವುದರಿಂದ ಇಲ್ಲಿ ನೌಕಾಸಾರಿಗೆ ಮತ್ತು ಸಾಗಣೆ ಹೆಚ್ಚು ಅಭಿವೃದ್ಧಿಗೊಂಡಿದೆ. ಮಪೂಟೊ ಪ್ರಪಂಚದಲ್ಲೇ ಅತ್ಯಂತ ದೊಡ್ಡ ಸ್ವಾಭಾವಿಕ ಬಂದರುಗಳಲ್ಲೊಂದು. ಬೇರ, ನಕಲ ಮತ್ತು ಕೆಲಮಾನೀ ಇತರ ಬಂದರುಗಳು.

ಶಿಕ್ಷಣ : ಮೊಜ಼ಾಂಬಿಕ್ ಮುಖ್ಯವಾಗಿ ಕರಿಯರ ನಾಡು. ಇವರು ಬಹುತೇಕ ಬಂಟು ಭಾಷಾಗುಂಪಿಗೆ ಸೇರಿದ ಆಡು ನುಡಿಗಳನ್ನು ಬಳಸುತ್ತಾರೆ. ಸ್ವಾಹಿಲಿ ಸಂಪರ್ಕ ಭಾಷೆಯಾಗಿ ಬಳಕೆಯಾಗುತ್ತಿದೆ. ದೇಶೀಯರಲ್ಲಿ ಶೇ. 60 ಮಂದಿ ಪಾರಂಪರಿಕ ಆಫ್ರಿಕನ್ ಧರ್ಮವನ್ನು ಆಚರಿಸುತ್ತಾರೆ. ಈ ಧರ್ಮದ ಮುಖ್ಯ ತಿರುಳು ಸರ್ವ ಚೇತನ ಸಿದ್ಧಾಂತ. ಉಳಿದವರಲ್ಲಿ ಶೇ. 34 ಭಾಗ ರೋಮನ್ ಕೆಥೊಲಿಕ್ ಅಥವಾ ಇಸ್ಲಾಮ್ ಧರ್ಮಾನುಯಾಯಿಗಳಾಗಿದ್ದಾರೆ. 1975 ರಲ್ಲಿ ದೇಶ ಸ್ವತಂತ್ರವಾದಾಗ ಬಹುತೇಕ ಪೋರ್ಚುಗೀಸರು ಮೊಜ಼ಾಂಬಿಕನ್ನು ತೊರೆದರು. ಉಳಿದವರೆಲ್ಲ ಅರಬ್ಬರು ಮತ್ತು ಭಾರತೀಯರು ಅಲ್ಪಸಂಖ್ಯಾತರಾಗಿದ್ದು ತೀರಪ್ರದೇಶದ ಪಟ್ಟಣಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ಮಪುಟೊದಲ್ಲಿ 1962 ರಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಪ್ರಾಥಮಿಕ ಶಾಲೆಗಳು, ಸೆಕೆಂಡರಿ ಶಾಲೆಗಳು ಶಿಕ್ಷಣವನ್ನು ಒದಗಿಸುತ್ತವೆ. ಆಸ್ಪತ್ರೆಗಳು ಮತ್ತು ವೈದ್ಯಕೀಯ ಕೇಂದ್ರಗಳಿವೆ.

1498 ಮಾರ್ಚ್ 2ರಂದು ವಾಸ್ಕೋಡಗಾಮ ಮೊಜ಼ಾಂಬಿಕ್ ದ್ವೀಪಕ್ಕೆ ಭೇಟಿ ನೀಡಿದ. 1506 ರಲ್ಲಿ ಸೊಫಾಲವನ್ನು ಪೋರ್ಚುಗೀಸರು ವಶಪಡಿಸಿಕೊಂಡರು. ಅಲ್ಲಿಂದ ಮುಂದೆ ಕ್ರಮೇಣ ಈ ಪ್ರದೇಶ ಪೋರ್ಚುಗೀಸರ ಅಧೀನಕ್ಕೊಳಪಟ್ಟಿತು. ಮೊಜ಼ಾಂಬಿಕ್ ಪೋರ್ಚುಗೀಸರ ಆಡಳಿತದಲ್ಲಿ ಪಾಶ್ಚಾತ್ಯ ಜೀವನ ಶೈಲಿ ಮತ್ತು ಭಾಷೆಯ ಪ್ರಭಾವಕ್ಕೊಳಗಾಯಿತು. ಆದರೆ ಈ ಸುದೀರ್ಘ ಶತಮಾನಗಳಲ್ಲಿ ಅಲ್ಲಿಯ ಜನಜೀವನದ ಸ್ಥಿತಿ ಉತ್ತಮಗೊಳ್ಳಲಿಲ್ಲ. ಪೋರ್ಚುಗಲ್ ಈ ದೇಶದಿಂದ ತನಗೆ ಬರಬಹುದಾದ ಗರಿಷ್ಠ ಆದಾಯದ ಮೇಲೆ ನಿಗಾ ಇಟ್ಟಿತ್ತು. ಇದರಿಂದ ಇಲ್ಲಿ ಗಣಿಗಳು, ರೈಲುಮಾರ್ಗಗಳಷ್ಟೇ ನಿರ್ಮಾಣವಾದುವು. ದೇಶೀಯರು ಹೀನಸ್ಥಿತಿಯಲ್ಲಿದ್ದರು. ಮುಂದಿನ ಸ್ವಾತಂತ್ರ್ಯ ಹೋರಾಟ 1950 ರ ದಶಕದಲ್ಲಿ ಗೆರಿಲ್ಲಾ ಯುದ್ಧವಾಗಿ ತಿರುಗಿತು.

1960 ರಲ್ಲಿ ಮೊಜ಼ಾಂಬಿಕ್ ವಿಮೋಚನಾ ಹೋರಾಟರಂಗದ ಸ್ಥಾಪನೆಯಾಯಿತು. ಒಂದು ದಶಕದ ಹೋರಾಟದ ಅನಂತರ 1974 ರಲ್ಲಿ ಮೊಜ಼ಾಂಬಿಕ್ ಸ್ವಾತಂತ್ರ್ಯ ಪಡೆಯಿತು. ದೇಶದ ಆಡಳಿತವನ್ನು ಫ್ರೆಲಿಮೊ ವಹಿಸಿಕೊಂಡಿತು. 1975 ಸೆಪ್ಟೆಂಬರ್ 16ರಂದು ಮೊಜ಼ಾಂಬಿಕ್ ಗಣರಾಜ್ಯ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಸೇರಿತು. (ವಿ.ಎಸ್.ಎ.)

**ಮೊನಾಕೊ:** ಫ್ರಾನ್ಸಿನ ಆಗ್ನೇಯದಿಕ್ಕಿನ ಮೆಡಿಟರೇನಿಯನ್ ಸಮುದ್ರ ತೀರದ ಒಂದು ಪುಟ್ಟ ಸ್ವತಂತ್ರ ಸಂವಿಧಾನಬದ್ಧ ಅರಸೊತ್ತಿಗೆ. ಮೆಡಿಟರೇನಿಯನ್ ತೀರದ ನೀಸ್ ರೇವುಪಟ್ಟಣದ ಪೂರ್ವಕ್ಕೆ ಸು. 24 ಕಿಮೀ ದೂರದಲ್ಲಿದೆ. ಈ ರಾಜ್ಯದ ದಕ್ಷಿಣದಲ್ಲಿ ಮೆಡಿಟರೇನಿಯನ್ ಸಮುದ್ರ, ಉಳಿದ ಮೂರು ದಿಕ್ಕುಗಳಲ್ಲಿ ಫ್ರಾನ್ಸ್ ದೇಶ ಸುತ್ತುವರಿದಿದೆ. ವಿಸ್ತೀರ್ಣ 31,892 ಚ.ಕಿಮೀ. ಜನಸಂಖ್ಯೆ 44,75,232 (2000). ರಾಜಧಾನಿ ಮೊನಾಕೊ.

ರಾಜ್ಯದಲ್ಲಿ ಮೊನಾಕೊವಿಲೆ, ಲಾ ಕೋಂಡಾಮೀನ್, ಫಾಂಟ್‌ವಿಲೆ ನಗರಪಾಲಿಕೆಗಳು ಒಟ್ಟುಗೂಡಿದಂತಿವೆ. ಲಾ ಕೋಂಡಾಮೀನ್ ವಾಣಿಜ್ಯಕೇಂದ್ರ, ಫಾಂಟ್‌ವಿಲೆ ಕೈಗಾರಿಕಾಕೇಂದ್ರ. ಮೆಡಿಟರೇನಿಯನ್ ಹವಾಗುಣವಿದ್ದು ಬೇಸಗೆಯಲ್ಲಿ ಬಿಸಿಲ ತಾಪ ಹೆಚ್ಚಿಲ್ಲ. ಚಳಿಗಾಲ

ಹಿತಕರ. ರಾಜ್ಯದ ಭಾಷೆ ಫ್ರೆಂಚ್. ಇಟಾಲಿಯನ್ ಮತ್ತು ಫ್ರೆಂಚ್ ಭಾಷೆಗಳ ಸಂಮಿಶ್ರಣವಾದ ಮೊನಾಗಸ್ಕ್ ಎಂಬ ಭಾಷೆ ಹಾಗೂ ಇಟಾಲಿಯನ್ ಮತ್ತು ಇಂಗ್ಲಿಷ್ ಸಹ ಬಳಕೆಯಲ್ಲಿವೆ. ಹೆಚ್ಚು ಜನ ರೋಮನ್ ಕೆಥೊಲಿಕ್ ಕ್ರೈಸ್ತಧರ್ಮಕ್ಕೆ ಸೇರಿದವರು.

ಆರ್ಥಿಕತೆ : ರಾಜ್ಯದ ಆದಾಯ ನೇರ ಮತ್ತು ಪರೋಕ್ಷ ತೆರಿಗೆಗಳು ವಿದ್ಯುಚ್ಛಕ್ತಿ, ಕೈಗಾರಿಕೆ ಹಾಗೂ ಪ್ರವಾಸೋದ್ಯಮಗಳಿಂದ ಬರುತ್ತದೆ. ಬ್ಯಾಂಕ್ ಹಾಗೂ ವಿಮೆ ಯೋಜನೆಗಳು ಸುವ್ಯವಸ್ಥಿತವಾಗಿವೆ. 1958 ರಿಂದ ಭೂಮಿಯನ್ನು ಉಪಯುಕ್ತವಾಗಿ ಬಳಸಿಕೊಳ್ಳುವ ಯೋಜನೆಯ ಪ್ರಕಾರ ಉಪಯೋಗಕ್ಕೆ ತಂದುಕೊಂಡು ಭೂಮಿಯ ಮೇಲೆ ಹೋಟೆಲುಗಳು, ವಸತಿ ಯೋಗ್ಯ ಸಮುಚ್ಚಯ ಕಟ್ಟಡಗಳು ಹಾಗೂ ಅಂಗಡಿಗಳನ್ನು ಕಟ್ಟಲಾಗಿದೆ. ರಾಜ್ಯದ ಆದಾಯ ಶೇ. 40 ಉದ್ಯಮಗಳಿಂದ, ಶೇ. 30 ಕಟ್ಟಡಗಳ ಬಾಡಿಗೆಯಿಂದ, ಶೇ. 25 ಪ್ರವಾಸೋದ್ಯಮದಿಂದ ಬರುತ್ತದೆ; ಮಾಂಟೆಕಾರ್ಲೊ ಮತ್ತು ಕ್ಯಾಸಿನೋ ಜೂಜಿನ ಸಂಸ್ಥೆಗಳಿಂದ ಶೇ. 3.65 ರಷ್ಟು ಆದಾಯವಿದೆ.




ಸಾರಿಗೆ ಮತ್ತು ಸಂಪರ್ಕ : ರಾಜ್ಯದಲ್ಲಿ 46 ಕಿಮೀ ಉದ್ದದಷ್ಟು ರಸ್ತೆ. ಫ್ರಾನ್ಸಿನ ರೈಲ್ವೆ ಈ ರಾಜ್ಯದ ಸಂಪರ್ಕ ಕಲ್ಪಿಸಿದೆ. ನೀಸ್ ಇದರ ಸಮೀಪ ವಿಮಾನ ನಿಲ್ದಾಣ.

ಪ್ರವಾಸೋದ್ಯಮ : ಬೇಸಗೆ ಮತ್ತು ಚಳಿಗಾಲದಲ್ಲಿರುವ ಆಹ್ಲಾದಕರವಾದ ಹವಾಗುಣ, ಮಾಂಟೆಕಾರ್ಲೊದಲ್ಲಿ ದೊರಕುವ ಸೌಲಭ್ಯಗಳು ಹಾಗೂ ಅಲ್ಲಿಯ ಕ್ಯಾಸಿನೋ ಜೂಜು ಮಂದಿರಗಳ ಆಕರ್ಷಣೆ – ಇವುಗಳಿಂದ ಪ್ರವಾಸೋದ್ಯಮ ಉಚ್ಛ್ರಾಯ ಸ್ಥಿತಿಯಲ್ಲಿದೆ. ಇಲ್ಲಿಯ ವಾರ್ಷಿಕ ಮೋಟಾರ್ ರ‍್ಯಾಲಿ ಬಲು ಪ್ರಸಿದ್ಧ. (ವಿ.ಜಿ.ಕೆ.)

**ಮೊರಾಕ್ಕೊ:** ಆಫ್ರಿಕ ಖಂಡದ ವಾಯವ್ಯದಲ್ಲಿರುವ ಒಂದು ದೇಶ. ಉತ್ತರದಲ್ಲಿ ಜಿಬ್ರಾಲ್ಟರ್ ಜಲಸಂಧಿ, ವ್ಯಾಯವ್ಯದಲ್ಲಿ ಉತ್ತರ ಅಟ್ಲಾಂಟಿಕ್ ಸಾಗರ, ಈಶಾನ್ಯದಲ್ಲಿ ಮೆಡಿಟರೇನಿಯನ್ ಸಮುದ್ರ. ಪೂರ್ವ ಆಗ್ನೇಯ ಮತ್ತು ದಕ್ಷಿಣದಲ್ಲಿ ಆಲ್ಜೀರಿಯಗಳಿವೆ, ವಿಸ್ತೀರ್ಣ 458730 ಚ.ಕಿಮೀ. ಜನಸಂಖ್ಯೆ 3,27,25,847 (2002). ಉ.ಅ. $27^0$–$35^0$ ಹಾಗೂ ಪ. ರೇ. $10^0$–$13^0$ನ ನಡುವೆ ಇದೆ. ಪೂರ್ವ – ಪಶ್ಚಿಮವಾಗಿ 1,223 ಚ.ಕಿಮೀ ಮತ್ತು ಉತ್ತರ ದಕ್ಷಿಣವಾಗಿ 703 ಚ.ಕಿಮೀ ಇದ್ದು ಅಟ್ಲಾಂಟಿಕ್ ಸಾಗರದ 985 ಕಿಮೀ ಮತ್ತು ಮೆಡಿಟರೇನಿಯನ್ ಸಮುದ್ರದ 377 ಕಿಮೀ ತೀರಪ್ರದೇಶ ಹೊಂದಿದೆ. ರಾಜಧಾನಿ ರಬಾತ್. ಜನಸಂಖ್ಯೆ 12,20,000 (2002).

ಮೇಲ್ಮೈ ಲಕ್ಷಣ : ಮೊರಾಕ್ಕೊದ ಬಹುಭಾಗ ಪ್ರಸ್ಥಭೂಮಿ ಪ್ರದೇಶ. ಸರಾಸರಿ ಎತ್ತರ 806 ಮೀ. ಈ ಪ್ರಸ್ಥಭೂಮಿಯ ಉತ್ತರದಲ್ಲಿ ಆರ್‌ರಿಫ್ ಪರ್ವತ ಶ್ರೇಣಿ ಪ್ರದೇಶವಿದೆ. ಮೊರಾಕ್ಕೊವನ್ನು ಹೆಚ್ಚಾಗಿ ವ್ಯಾಪಿಸಿರುವ ಅಟ್ಲಾಸ್ ಪರ್ವತ ಶ್ರೇಣಿಯಿದೆ. ಇವು ಪೂರ್ವ ಮೊರಾಕ್ಕೊವನ್ನು ವಾಯವ್ಯ ಮೊರಾಕ್ಕೊವಿನಿಂದ ಮತ್ತು ಅಟ್ಲಾಂಟಿಕ್ ತೀರದಿಂದ ಬೇರ್ಪಡಿಸುತ್ತದೆ. ಪೂರ್ವ ಮೊರಾಕ್ಕೊ ಮತ್ತು ಅಟ್ಲಾಂಟಿಕ್ ಮೊರಾಕ್ಕೊ ನಡುವೆ ದುರ್ಗಮ ಪರ್ವತ ಶ್ರೇಣಿಯಿದ್ದು ಈಶಾನ್ಯ ಭಾಗದಲ್ಲಿರುವ ಕಿರಿದಾದ ತಾಜ್ ಕಣಿವೆಯೊಂದೇ ಈ ಪರ್ವತ ಶ್ರೇಣಿಗಳ ನಡುವಿನ ಮಾರ್ಗವಾಗಿದೆ. ಆರಿಫ್ ಪರ್ವತ ಶ್ರೇಣಿ ಯುರೋಪಿನ ಐಬೀರಿಯನ್ ಪರ್ಯಾಯ ದ್ವೀಪದಿಂದ ದಕ್ಷಿಣಾಭಿಮುಖವಾಗಿ ಹಬ್ಬಿರುವ ಸಂಕೀರ್ಣ ಪರ್ವತ ವಲಯದ ಒಂದು ಭಾಗ. ಮುಂದೆ ಭೌಗೋಳಿಕವಾಗಿ ಬದಲಾವಣೆಗಳುಂಟಾಗಿ ಆಫ್ರಿಕ ಮತ್ತು ಯುರೋಪುಗಳು ಪ್ರತ್ಯೇಕಗೊಂಡಾಗ ಈ ಪರ್ವತ ಶ್ರೇಣಿಯ ಅವಿರತತೆ ಕಡಿದು ಹೋಯಿತು. ಸುಣ್ಣ ಕಲ್ಲಿನ ಅತ್ಯಂತ ಎತ್ತರವುಳ್ಳ ಶಿಖರವನ್ನು ಗ್ರಾಂಡ್ ಅಟ್ಲಾಸ್ ಪರ್ವತ ಶ್ರೇಣಿಯಲ್ಲಿ ಕಾಣಬಹುದು. ಈ ಪರ್ವತ ಪ್ರದೇಶಗಳಲ್ಲಿ ಆಗಾಗ ಭೂಕಂಪನಗಳು ಸಂಭವಿಸುತ್ತವೆ. ಇಲ್ಲಿಯ ಅಟ್ಲಾಸ್ ಪರ್ವತ ಮೂರು ಪ್ರತ್ಯೇಕ ಶ್ರೇಣಿಗಳಿಂದ ಕೂಡಿದೆ. ಈ ಪೈಕಿ ಹೈ ಅಟ್ಲಾಸ್ 736 ಕಿಮೀ ಉದ್ದವಿರುವ ಮತ್ತು ಅತಿ ಎತ್ತರದ ಶ್ರೇಣಿ. ಇದು ಅಟ್ಲಾಂಟಿಕ್ ತೀರದಂಚಿನಿಂದ ಸಣ್ಣಗುಡ್ಡಗಳೋಪಾದಿಯಲ್ಲಿ ಪ್ರಾರಂಭವಾಗಿ ಇದ್ದಕ್ಕಿದ್ದಂತೆ 2015 ಮೀ ಎತ್ತರದವರೆಗೆ ಏರಿ ಮುಂದುವರಿದು ಅತ್ಯುನ್ನತ ಎತ್ತರ 4,615 ಮೀ ಮುಟ್ಟುತ್ತದೆ. ಮಧ್ಯ ಅಟ್ಲಾಸ್ ಹೈ ಅಟ್ಲಾಸ್‌ನಿಂದ ಕವಲೊಡೆದು ಉತ್ತರಾಭಿಮುಖವಾಗಿ ಹಬ್ಬಿ 3,290 ಮೀ ಮುಟ್ಟಿದೆ. ದಕ್ಷಿಣದ ಕವಲು ಹೈ ಅಟ್ಲಾಸ್‌ನಿಂದ ನೈರುತ್ಯಾಭಿಮುಖವಾಗಿ ಹಬ್ಬಿ ಅಟ್ಲಾಂಟಿಕ್ ಸಾಗರದ ಕಡೆಗೆ ಚಾಚಿಕೊಂಡಿದೆ. ಅಟ್ಲಾಸ್‌ನಿಂದ ಪೂರ್ವಕ್ಕೆ ಪೂರ್ವ ಮೊರಾಕ್ಕೊವಿನ ಎತ್ತರದ ಪ್ರಸ್ಥಭೂಮಿಗಳು ಇವೆ. ಒಳನಾಡಿನ ಬಯಲುಗಳು ಚಿಕ್ಕವಾಗಿವೆ. ಸು. 217 ಮೀ ಎತ್ತರವಿರುವ ತೀರ ಪ್ರದೇಶದ ಪ್ರಸ್ಥಭೂಮಿ ರಬಾತ್‌ನಿಂದ ಎತ್ತರ ಕುಗ್ಗುತ್ತ ಹೋಗುತ್ತದೆ. ಕೊನೆಗೆ ಅದು ಸಹರ ಅಟ್ಲಾಸ್ ಎಂದು ಕರೆಸಿಕೊಂಡು ಆಲ್ಜೀರಿಯದಲ್ಲಿ ಮುಂದುವರಿಯುತ್ತದೆ.




ನದಿಗಳು : ಮುಲೂಯ ಮೊರಾಕ್ಕೊದ ಮುಖ್ಯ ನದಿ. ಪೂರ್ವ ಮೊರಾಕ್ಕೊವಿನ ಸಹರ ಪ್ರದೇಶದಲ್ಲಿ ಡೆಡೆಸ್ ರ್ಥರಿಸ್, ಜಿಜ್ ಮತ್ತು ಗೀರ್ ನದಿಗಳು ಹರಿಯುತ್ತವೆ. ಇವೆಲ್ಲ ಹೈ ಅಟ್ಲಾಸ್‌ನಲ್ಲಿ ಹುಟ್ಟುತ್ತವೆ. ಅವು ಈ ಪರ್ವತ ಭಾಗದಲ್ಲಿ ರಮಣೀಯ ಕಣಿವೆಗಳನ್ನುಂಟುಮಾಡಿವೆ. ಮುಂದೆ ಮರುಭೂಮಿಯಲ್ಲಿ ಇಂಗಿಹೋಗುತ್ತದೆ. ಮುಲೂಯ ನದಿ ಮಧ್ಯ ಅಟ್ಲಾಸ್‌ನಲ್ಲಿ ಹುಟ್ಟಿ ಸು. 515 ಕಿಮೀ ದೂರ ಹರಿದು ಮೆಡಿಟರೇನಿಯನ್ ಸಮುದ್ರ ಸೇರುತ್ತದೆ. ಆರಿಫ್ ಪರ್ವತ ಶ್ರೇಣಿಯಲ್ಲಿ ಲೋನ್ ರ್ಥಿಸ್ ಮೊದಲಾದ ತೊರೆಗಳಿವೆ. ಪಶ್ಚಿಮ ಆರಿಫ್‌ನಲ್ಲಿ ಹುಟ್ಟುವ ಲಾಕಸ್, ಅಟ್ಲಾಂಟಿಕ್ ಸಾಗರವನ್ನು ಲರಾಸ್ ಬಳಿ ಸೇರುತ್ತದೆ. ಸೀಬೂ ನದಿ ಮೈಧಿಯಾ ಬಳಿ ಸಾಗರ ಸೇರುತ್ತದೆ.

ವಾಯುಗುಣ : ಮೊರಾಕ್ಕೊದ ತೀರಪ್ರದೇಶದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಬಿಟ್ಟರೆ ಉಳಿದಂತೆ ಸಮಶೀತೋಷ್ಣ ವಾಯುಗುಣ ಹೊಂದಿದೆ. ಪಶ್ಚಿಮದ ಮಾರುತಗಳು ವರ್ಷದ ಬಹುಕಾಲ ಬೀಸುತ್ತಿದ್ದು ಅದು ವಾಯುಗುಣ ಬದಲಾವಣೆಗೆ ಮತ್ತು ಅನಿಯತ ಮಳೆ ಬೀಳುವುದಕ್ಕೆ ಕಾರಣವಾಗಿದೆ. ಬೇಸಗೆಯಲ್ಲಿ ಸೌಮ್ಯ ಹವೆ ಇರುತ್ತದೆ. ಇದಕ್ಕೆ ಕ್ಯಾನರಿ ದ್ವೀಪಗಳ ಕಡೆಯಿಂದ ಆಗ್ನೇಯಕ್ಕೆ ಹರಿಯುವ ಶೀತಸಾಗರ ಪ್ರವಾಹ ಸಹಾಯಕವಾಗಿದೆ. ಒಳಪ್ರದೇಶಕ್ಕೆ ಬಂದಂತೆಲ್ಲ ಖಂಡಾಂತರ ವಾಯುಗುಣ ಕಂಡುಬರುತ್ತದೆ. ಕೆಲವೊಮ್ಮೆ ಅಪರೂಪವಾಗಿ ಮೂಡಲಗಾಳಿ ಬೀಸುತ್ತದೆ. ಈ ಮರಳುಗಾಡಿನ ಮಾರುತ ಬೀಸಿದಾಗ ಉಷ್ಣತೆ $35^0$ಸೆ ನಿಂದ $40^0$ಸೆ ಗೆ ಏರುತ್ತದೆ. ತೀರ ಪ್ರದೇಶದ ಟ್ಯಾನ್ ಜೀರ್‌ನಲ್ಲಿ $12^0$ಸೆ ಜನವರಿಯಲ್ಲಿದ್ದರೆ ಆಗಸ್ಟ್‌ನಲ್ಲಿ $24^0$ಸೆ ಇರುತ್ತದೆ. ಅದೇ ತಿಂಗಳುಗಳಲ್ಲಿ ಕಾಸಬ್ಲಾಂಕದಲ್ಲೂ ಸುಮಾರಾಗಿ ಅಷ್ಟೇ ಉಷ್ಣತೆ ಇರುತ್ತದೆ. ಒಳನಾಡಿನ ಕೆಲವು ಪ್ರದೇಶಗಳಲ್ಲಿ ಉಷ್ಣತಾ ವ್ಯತ್ಯಾಸ ಹೆಚ್ಚು. ಪರ್ವತ ಪ್ರದೇಶಗಳಲ್ಲಿ ಕೆಲವೊಮ್ಮೆ – $20^0$ಸೆ ನಷ್ಟು ಉಷ್ಣತೆ ಕುಗ್ಗಿರುತ್ತದೆ. ಮಳೆಗಾಲದ ಅವಧಿ ನವಂಬರ್‌ನಿಂದ ಜನವರಿ ತನಕ, ಕೆಲವೊಮ್ಮೆ ಮಾರ್ಚ್ ತನಕವೂ ಮಳೆ ಬರುವುದುಂಟು. ಉತ್ತರದ ಆರ್‌ರಿಫ್ ಮತ್ತು ಮೊಮೆಸ್ ಅಟ್ಲಾಸ್‌ಗಳಲ್ಲಿ ವಾರ್ಷಿಕ ಸರಾಸರಿ ಮಳೆ 119 ಸೆಂಮೀ ದಕ್ಷಿಣದ ಕಡೆ ಅಟ್ಲಾಸ್‌ವರೆಗೆ ಕೇವಲ 20–25 ಸೆಂಮೀ ಮಳೆಬೀಳುವ ಪ್ರದೇಶಗಳಿವೆ. 2015 ಮೀ ಎತ್ತರದ ಪರ್ವತಗಳಲ್ಲಿ ಮಂಜು ಬೀಳುತ್ತದೆ. ಉತ್ತರದ ಅಟ್ಲಾಂಟಿಕ್ ಬಯಲುಗಳಲ್ಲು 40 ಸೆಂಮೀವರೆಗೆ ಮಳೆಬೀಳುವ ಪ್ರದೇಶಗಳಿವೆ.

ಸಸ್ಯ ಮತ್ತು ಪ್ರಾಣಿಸಂಪತ್ತು : ಇಲ್ಲಿಯ ಸಸ್ಯವರ್ಗ ಪಶ್ಚಿಮ ಮೆಡಿಟರೇನಿಯನ್ ಮಾದರಿಯದು. ಪರ್ವತ ಪ್ರದೇಶಗಳಲ್ಲಿ ಸೀಡರ್, ಫರ್ ಮತ್ತು ಜೂನಿಪರ್ ಮರಗಳಿವೆ. ದಕ್ಷಿಣಕ್ಕೆ ಉಷ್ಣವಲಯದ ಆರ್ಗನ್ ಮರಗಳು ವ್ಯಾಪಕವಾಗಿವೆ. ಕಾರ್ಕ್, ಓಕ್ ಮರಗಳು,

ರಿಪ್ ಮತ್ತು ರ‍್ಹಾರ್ಬ್ ಪ್ರದೇಶಗಳಲ್ಲಿ ಹೆಚ್ಚು ಕಂಡುಬರುತ್ತದೆ. ಮುಲೂಯ ಕಣಿವೆ ಮತ್ತು ಸೂಸ್‌ನ ಎತ್ತರದ ಪ್ರದೇಶಗಳಲ್ಲಿ ಪೈನ್ ಜಾತಿಯ ಥೂಜ ಮರಗಳು ಹೆಚ್ಚಾಗಿವೆ. ಕಡಿಮೆ ಮಳೆಬರುವ ಪ್ರಸ್ಥಭೂಮಿ ಪ್ರದೇಶಗಳಲ್ಲಿ ಕಾಡು ಆಲಿವ್ ಮತ್ತು ಮಾಸ್ಟಿಕ್ ಮರಗಳು ಕಂಡುಬರುತ್ತವೆ. ಬಯಲುಗಳ ಒಣಪ್ರದೇಶಗಳಲ್ಲಿ ಕುಳ್ಳಾದ ಪಾಮ್ ಮರಗಳಿವೆ. ತದ್ಲ ಮತ್ತು ಹೌಜ್ ಪ್ರದೇಶಗಳಲ್ಲಿ ಜೂ ಜೂಬ್ ಎಂಬ ಹಣ್ಣು ಬಿಡುವ ಮರಗಳಿವೆ. ಮರುಭೂಮಿಯ ಉತ್ತರದ ಗಡಿಯಲ್ಲಿ ಅಟ್ಲಾಸ್‌ನ ಪೂರ್ವಕ್ಕೆ ದ್ರಾಕ್ಷಿ ಬೆಳೆ ಕಂಡುಬರುತ್ತದೆ.

ಒಂಟೆಗಳು ಮತ್ತು ಕುದುರೆಗಳು ಪ್ರಾಚೀನ ಕಾಲದಿಂದಲೂ ಇವೆ. ಕಾಡುಕುರಿ, ಚಿಗರಿ, ಮೊದಲಾದ ಪ್ರಾಣಿಗಳು ಅಟ್ಲಾಸ್ ಪ್ರದೇಶದಲ್ಲಿವೆ. ಕರಾವಳಿಯಲ್ಲಿ ಹೇರಳ ಮತ್ಸ್ಯ ಸಂಪತ್ತಿದೆ. ಮೀನನ್ನು ಡಬ್ಬಿಗಳಲ್ಲಿ ತುಂಬಿ ರಫ್ತು ಮಾಡುತ್ತಾರೆ. ದನ ಮತ್ತು ಕುರಿಗಳನ್ನು ಸಾಕುತ್ತಾರೆ.

ಆರ್ಥಿಕ ಸ್ಥಿತಿ: ದೇಶದಲ್ಲಿ ಖನಿಜ ಮತ್ತು ಜಲವಿದ್ಯುತ್ ಸಂಪನ್ಮೂಲಗಳು ಸಾಕಷ್ಟಿದ್ದರೂ ಇತರ ಕಾರಣಗಳ ಜೊತೆಗೆ ಇಲ್ಲಿಯ ಯೋಜನೆಗಳಲ್ಲಿ ಸಾಕಷ್ಟು ಯಶಸ್ಸು ಸಾಧಿಸಲಾಗದೆ ಆರ್ಥಿಕ ಪ್ರಗತಿ ಕುಂಠಿತವಾಗಿದೆ.

ಪ್ರಪಂಚದ ಒಟ್ಟು ಫಾಸ್ಫೇಟ್ ನಿಕ್ಷೇಪದ ಶೇ. 40ರಷ್ಟು ಇಲ್ಲೇ ಇದ್ದು ಫಾಸ್ಫೇಟ್ ಉತ್ಪಾದಕ ರಾಷ್ಟ್ರಗಳಲ್ಲಿ ಮುಂದಾಗಿದೆ. ಅಂದಾಜು ನಿಕ್ಷೇಪ 57.200 ಮಿಲಿಯನ್ ಟನ್‌ಗಳು. 1982 ರಲ್ಲಿ 17.00 ಮಿಲಿಯನ್ ಟನ್ ಫಾಸ್ಫೇಟ್. ಸೀಸ, ಕೊಬಾಲ್ಟ್, ಸತುವು, ಮ್ಯಾಂಗನೀಸ್, ಕಚ್ಚಾತೈಲ ಮತ್ತು ಬೆಳ್ಳಿಯ ಉತ್ಪಾದನೆಯಿದೆ. ಮಿಲಿಯನ್ ಎಸೆವಿರದ ಬಳಿ ಸ್ವಾಭಾವಿಕ ಅನಿಲ ಪತ್ತೆಯಾಗಿದೆ. ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲು ಮುಖ್ಯ ಮೂಲ.

ಕೃಷಿ: ಈ ದೇಶದ ಶೇ. 70 ಮಂದಿ ಕೃಷಿಯನ್ನು ಅವಲಂಬಿಸಿದ್ದಾರೆ. ಇಲ್ಲಿಯ ಮುಖ್ಯ ಬೆಳೆ ಗೋದಿ, ಬಾರ್ಲಿ; ಜೊತೆಗೆ ತಿಂಗಳ ಹುರುಳಿ, ಕಡಲೆ, ಮೆಂತ್ಯ, ಕೊತ್ತಂಬರಿ, ಜೀರಿಗೆ, ತೊಗರಿ ಹಾಗೂ ಇತರ ಕಾಳುಗಳು, ಹತ್ತಿ, ಕಬ್ಬು ಮೊದಲಾದವನ್ನೂ ಬೆಳೆಸುತ್ತಾರೆ. ಕಾಡುತಾಳೆ ಮರ ಎಲ್ಲೆಲ್ಲೂ ಕಂಡುಬಂದು ಬಹು ಉಪಯೋಗಿ ಎನಿಸಿದೆ. ಟಿಜ್ರ ಮರವನ್ನು ಚರ್ಮ ಹದಮಾಡಲು ಬಳಸುತ್ತಾರೆ. ಸ್ವಲ್ಪ ಪ್ರಮಾಣದಲ್ಲಿ ದ್ರಾಕ್ಷಿ ಬೆಳೆ ಇದೆ. ಕಾರ್ಕ್, ದೇವದಾರು ಮತ್ತು ಓಕ್ ಮರ, ಆಲಿವ್ ಬಳ್ಳಿ ಮತ್ತು ಎಸ್ಪಾರ್ಟೊ ಹುಲ್ಲುಗಳ ಉತ್ಪನ್ನಗಳು ಇಲ್ಲಿ ರಫ್ತು ವಸ್ತುಗಳಾಗಿವೆ. ಜಂಬಿಸರ ಜಾತಿಯ ವಿವಿಧ ಹಣ್ಣುಗಳನ್ನು ಬೆಳೆಸುತ್ತಾರೆ.

ಕುರಿ, ಮೇಕೆ ಮತ್ತು ಒಂಟೆಗಳಿಂದ ಬರುವ ಆದಾಯ ವ್ಯವಸಾಯದಿಂದ ಬರುವ ಒಟ್ಟು ಆದಾಯ 1/3 ಭಾಗದಷ್ಟಿದೆ. ಹತ್ತಿಬಟ್ಟೆಗಳು ಮತ್ತು ಹದಗೊಳಿಸಿದ ಆಹಾರ ವಸ್ತುಗಳು ಮುಖ್ಯ ರಫ್ತು ವಸ್ತುಗಳಾಗಿವೆ.

1973ರಿಂದಲೂ ದೇಶದಲ್ಲಿ ಪಂಚವಾರ್ಷಿಕ ಯೋಜನೆ ಜಾರಿಯಲ್ಲಿದೆ. 1982ರಲ್ಲಿ ಸಿಮೆಂಟ್ ಉತ್ಪಾದನೆ ಇದೆ. ಸಕ್ಕರೆ ಸಂಸ್ಕರಣದ ಘಟಕಗಳಿವೆ. ಫ್ರೆಂಚ್ ಸಹಯೋಗದಿಂದ ಕೆಸಬ್ಲಾಂಕದಲ್ಲಿ ಪ್ರಾಚೀನ ಕರ ಕುಶಲ ವಸ್ತುಗಳ ತಯಾರಿಕಾ ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. ಕಲಾವಸ್ತುಗಳಾದ ರತ್ನಗಂಬಳಿಗಳು, ಚರ್ಮದ ವಸ್ತುಗಳು ಮತ್ತು ಲೋಹ ತಯಾರಿಕೆಗಳ ಉದ್ಯಮ ಬೆಳೆಯುತ್ತಿದೆ. ವಿದೇಶಗಳಿಗೆ ಈ ಉತ್ಪನ್ನಗಳು ರಫ್ತಾಗುತ್ತಿವೆ. ಮೊರಾಕ್ಕೊ ಐರೋಪ್ಯ ಮಾರುಕಟ್ಟೆಯೊಂದಿಗೆ ಮೈತ್ರಿ ಹೊಂದಿದೆ. ಇದರಿಂದಾಗಿ ಅದರ ಉತ್ಪನ್ನಗಳಿಗೆ ಬೇಡಿಕೆ ಇದೆ.

ಸಾರಿಗೆ ಸಂಪರ್ಕ : ಪ್ರಾಂತೀಯ ರಾಜಧಾನಿಗಳಾದ ಊಜ್ದಾ, ಫೆಜ್, ಮರಾಕೆಷ್, ಆಗ್ದೀರ್ ಮತ್ತು ಟ್ಯಾನ್‌ಜೀರ್‌ಗಳ ನಡುವೆ ಒಳ್ಳೆಯ ಸಂಪರ್ಕ ಜಾಲವಿದೆ. ಈ ನಗರಗಳಿಂದ ವಾಣಿಜ್ಯ ಕೇಂದ್ರ ಕೆಸಬ್ಲಾಂಕದೊಡನೆ ಹೆದ್ದಾರಿ ಸಂಪರ್ಕಗಳಿವೆ.

ಊಜ್ದಾ, ತಾಜಾ, ಫೆಜ್, ಮೆಕ್‌ನೆಸ್, ರಬಾತ್ ಮತ್ತು ಕೆಸಬ್ಲಾಂಕಗಳು ರಾಷ್ಟ್ರದ ರೈಲ್ವೆ ಸಂಪರ್ಕ ವ್ಯವಸ್ಥೆಯಲ್ಲಿ ಸೇರಿವೆ. ಮರಾಕೆಷ್–ಕೆಸಬ್ಲಾಂಕ–ಫೆಜ್ ಮಧ್ಯೆ ವಿದ್ಯುತ್ ರೈಲುಮಾರ್ಗವಿದೆ. ಉತ್ತರದ ಟ್ಯಾನ್‌ಜೀರ್‌ನಿಂದ ದಕ್ಷಿಣದ ಫಾಸ್ಫೇಟ್ ಗಣಿಗಳವರೆಗೂ ರೈಲುಮಾರ್ಗವನ್ನು ವಿಸ್ತರಿಸಲಾಗಿದೆ. 1981ರಲ್ಲಿ ಒಟ್ಟು 1,779 ಕಿಮೀ ರೈಲುಮಾರ್ಗವಿತ್ತು.

ದೇಶದಲ್ಲಿ 30 ವಾಣಿಜ್ಯ ವಿಮಾನ ನಿಲ್ದಾಣಗಳಿವೆ. ಅವುಗಳ ಪೈಕಿ 8 ಅಂತಾರಾಷ್ಟ್ರೀಯ ನಿಲ್ದಾಣಗಳು. ನೌಸೆರ್, ಟ್ಯಾನ್‌ಜೀರ್, ಬೋಕ್ ಹಾಫ್, ಸಲೆ, ಆಗ್ದೀರ್ ಮುಖ್ಯ ನೆಲೆಗಳು. ರಾಯಲ್ ಏರ್ ಮೊರಾಕ್ಕೊ 1953ರಲ್ಲಿ ಪ್ರಾರಂಭವಾಯಿತು. ಕೆಸಬ್ಲಾಂಕ ಮತ್ತು ಟ್ಯಾನ್‌ಜೀರ್‌ಗಳು ಇಲ್ಲಿನ ದೊಡ್ಡ ಬಂದರುಗಳು ಹಾಗೂ ಪ್ರಮುಖ ನೌಕಾ ಸಾರಿಗೆ ಮತ್ತು ಪ್ರವಾಸಿ ಕೇಂದ್ರಗಳು. ಆಗ್ದೀರ್ ಮತ್ತು ಮೊಹಮ್ಮದಿಯ ಕೂಡ ದೊಡ್ಡ ಬಂದರುಗಳು. ಇವಲ್ಲದೆ ಸಫಿ, ಕೆನಿಟ್ರ, ನಡೊರ್‌ಗಳು ಇತರ ಬಂದರುಗಳು. ಯುರೋಪಿನ ಕೆಲವು ರಾಷ್ಟ್ರಗಳ ಆರ್ಥಿಕ ಹಿತಾಸಕ್ತಿಗಳು ಇಲ್ಲಿರುವುದರಿಂದ ಇವುಗಳೊಂದಿಗೆ ನೌಕಾಸಂಚಾರ ಹೆಚ್ಚಿದೆ.

ಶಿಕ್ಷಣ: ಮೊರಾಕ್ಕೊದ ಒಟ್ಟು ಆದಾಯದ ಐದನೆಯ ಒಂದು ಭಾಗವನ್ನು ಶಿಕ್ಷಣಕ್ಕೆ ವಿನಿಯೋಗಿಸಲಾಗುತ್ತಿದೆ. 7ರಿಂದ 13 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ ವಿಧಿಸಲಾಗಿದ್ದರೂ ಶಾಲೆಗೆ ಹೋಗುವ ವಿದ್ಯಾರ್ಥಿಗಳಲ್ಲಿ ಶೇ. 50 ಮಂದಿಗೆ ಮಾತ್ರ ಅವಕಾಶ ಸಿಗುತ್ತಿದೆ. ಸಾಂಪ್ರದಾಯಿಕ ಅರಾಬಿಕ್ ಶಾಲೆಗಳು ಮತ್ತು ಖಾಸಗಿ ಶಾಲೆಗಳಿವೆ. ಖಾಸಗಿ ಶಾಲೆಗಳಲ್ಲಿ ಹಲವು ವಿದೇಶಿ ಶಾಲೆಗಳಿವೆ. ಒಟ್ಟು 6 ವಿಶ್ವವಿದ್ಯಾಲಯಗಳಿವೆ. ಫ್ರೆಂಚ್ ಸಾಂಸ್ಕೃತಿಕ ಮಿಷನ್ ಇಲ್ಲಿಯ ಮುಖ್ಯ ವಿದೇಶಿ ಶಿಕ್ಷಣ ಸಂಸ್ಥೆ. ಇದು ಮೊರೊಕೋದ ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣ ನೀಡುತ್ತಿದೆ. ವಯಸ್ಕರ ಶಿಕ್ಷಣ ಜಾರಿಯಲ್ಲಿದೆ. ಆರೋಗ್ಯ: ನಾಗರಿಕ ಸೌಲಭ್ಯಗಳು ಪಟ್ಟಣಗಳ ಜನರಿಗೆ ಲಭ್ಯವಾಗಿದ್ದರೂ ಗ್ರಾಮೀಣ ಜನತೆ ಅವುಗಳಿಂದ ಇನ್ನೂ ದೂರ ಉಳಿದಿದ್ದಾರೆ. ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ದೇಶದ ಜನಸಂಖ್ಯೆಯ ದೃಷ್ಟಿಯಿಂದ ತೀರ ಕಡಿಮೆ.

ಮೊರಾಕ್ಕೊದಲ್ಲಿ ಅರಾಬಿಕ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಪತ್ರಿಕೆಗಳು ಪ್ರಕಟವಾಗುತ್ತಿವೆ. ಅಲ್ಲಿ ಸ್ವತಂತ್ರ ಪತ್ರಿಕಾ ಸಂಸ್ಥೆ ಇದೆ. ಸುದ್ದಿ ಪ್ರಸಾರ ಮತ್ತು ವಯಸ್ಕರ ಶಿಕ್ಷಣದಲ್ಲಿ ಆಕಾಶವಾಣಿ ಪ್ರಮುಖ ಪಾತ್ರವಹಿಸುತ್ತವೆ. ಆಕಾಶವಾಣಿಯಲ್ಲಿ ಅರಾಬಿಕ್, ಬರ್ಬರ್, ಫ್ರೆಂಚ್, ಸ್ಪ್ಯಾನಿಷ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಸಾರ ಮಾಡಲಾಗುತ್ತದೆ. ರಬಾತ್‌ನಲ್ಲಿ ದೂರದರ್ಶನ ಕೇಂದ್ರವಿದೆ.

ಮುಖ್ಯ ಸ್ಥಳಗಳು: ಕೆಸಬ್ಲಾಂಕ ಮೊರಾಕ್ಕೊದ ಅತ್ಯಂತ ದೊಡ್ಡ ನಗರ. ಇದನ್ನು ಪ್ರಾಚೀನ ನಗರ ಅಸ್ಸಾದ ನಿವೇಶನದಲ್ಲಿ ಸ್ಥಾಪಿಸಲಾಗಿದೆ. ಪೋರ್ಚುಗೀಸರು ಕಟ್ಟಿದ ಈ ನಗರ ವಾಣಿಜ್ಯ ಬಂದರೂ ಹೌದು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಚರ್ಚಿಲ್ ಮತ್ತು ರೂಸ್‌ವೆಲ್ಟರು ಇಲ್ಲಿ ಸಭೆ ಸೇರಿದ್ದರು. ಇಂದು ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರವೆನಿಸಿದೆ. ಟ್ಯಾನ್‌ಜೀರ್ ಇನ್ನೊಂದು ಮುಖ್ಯ ಬಂದರು ನಗರ. ಇದು ಜಿಬ್ರಾಲ್ಟರ್ ಜಲಸಂಧಿಯಲ್ಲಿದೆ. ರೋಮನ್ನರು ಇಲ್ಲಿ ಒಂದು ಪಟ್ಟಣ ಕಟ್ಟಿದ್ದರು. ಈಗ ಇದು ಬೇಸಗೆ ರಾಜಧಾನಿ. ಮರಾಕೆಷ್ ಪ್ರಾಚೀನ ರಾಜಧಾನಿ 1062ರಲ್ಲಿ ಸ್ಥಾಪಿತವಾಯಿತು. ಇದು ಮೊರಾಕ್ಕೊದ ಪಾರಂಪರಿಕ ರಾಜಧಾನಿಗಳಲ್ಲೊಂದು. ಇಲ್ಲಿ ಪ್ರಾಚೀನ ಮಸೀದಿಗಳು, ಅರಮನೆಗಳು ಇವೆ. ಮಧ್ಯಯುಗದಲ್ಲಿ ಇಸ್ಲಾಮಿನ ಪ್ರಮುಖ ಕೇಂದ್ರಗಳಲ್ಲೊಂದಾಗಿತ್ತು. ಜನಸಂಖ್ಯೆ 7,45,541. ಫೆಜ್ ನಗರವನ್ನು 793ರಲ್ಲಿ ಸ್ಥಾಪಿಸಲಾಯಿತು. ಇದು ಇಸ್ಲಾಮಿನ ಪವಿತ್ರ ನಗರಗಳಲ್ಲೊಂದು. ಜನಸಂಖ್ಯೆ 7,74,754. ಇಲ್ಲಿ ಅರಮನೆ ಮತ್ತು ಅನೇಕ ಮಸೀದಿಗಳಿವೆ. ಮೆಕ್‌ನೆಸ್ ಮಧ್ಯಯುಗದ ರಾಜಧಾನಿ. ಜನಸಂಖ್ಯೆ 5,30,171. ಅರಮನೆ, ಮಸೀದಿಗಳಿವೆ. ಸಫಿ, ಊಜ್ದಾ, ಸಾವೂಟಾ, ಮಜಗಾನ್, ಕೆನಿಟ್ರಾ, ಆಗ್ದೀರ್, ಮೊಹಮ್ಮದೀಯ ಮೊದಲಾದವು ಮೊರಾಕ್ಕೊದ ಇತರ ಮುಖ್ಯ ನಗರಗಳಾಗಿವೆ.

ಮೊರಾಕ್ಕೊದ ಜನಸಂಖ್ಯೆಯನ್ನು ಮುಖ್ಯವಾಗಿ ಅರಬ್ಬರು ಮತ್ತು ಬರ್ಬರರೆಂದು ವಿಂಗಡಿಸಬಹುದು. ಈ ವಿಂಗಡನೆಗೆ ಜನಾಂಗ ಲಕ್ಷಣಗಳಿಗಿಂತಲೂ ಭಾಷೆಯೇ ಮುಖ್ಯ ಆಧಾರವಾಗಿದೆ. ಇಂದು ಅರಬ್ ಮತ್ತು ಬರ್ಬರ್ ಭಾಷೆಗಳೆರಡನ್ನೂ ಬಳಸುವವರು ಹೆಚ್ಚಾಗಿದ್ದಾರೆ. ಬರ್ಬರ್ ಒಂದನ್ನೇ ಮಾತನಾಡುವವರ ಪ್ರಮಾಣ ಶೇ. 25ನ್ನು ದಾಟುವುದಿಲ್ಲ. ಪರ್ವತಪ್ರದೇಶಗಳಲ್ಲಷ್ಟೇ ಇವರು ಆಧುನಿಕವಾಗಿದ್ದಾರೆ. ಅರಬ್ಬರು 7ನೆಯ ಶತಮಾನದಿಂದ ಇಸ್ಲಾಮ್ ಧರ್ಮದ ವಿಸ್ತರಣೆಯೊಂದಿಗೆ ಇಲ್ಲಿಗೆ ಅಧಿಕವಾಗಿ ಬಂದು ನೆಲಸತೊಡಗಿದರು. ಇವರಲ್ಲದೆ ನೀಗ್ರೋಗಳು, ಸ್ಪೇನಿಯಾರ್ಡರು, ಫ್ರೆಂಚರು, ಯಹೂದಿಗಳು ಅಲ್ಪ ಪ್ರಮಾಣದಲ್ಲಿ ಬಂದು ನೆಲಸಿದ್ದಾರೆ. ಸ್ಪ್ಯಾನಿಷ್ ಮತ್ತು ಫ್ರೆಂಚ್ ಭಾಷೆಗಳು ನಗರ ಪ್ರದೇಶಗಳಲ್ಲಿ ಬಳಕೆಯಲ್ಲಿವೆ. ರಾಷ್ಟ್ರೀಯ ಭಾಷೆ ಅರಾಬಿಕ್. ಇದನ್ನು ಶೇ. 75ರಷ್ಟು ಜನ ಮಾತನಾಡುತ್ತಾರೆ. ಫ್ರೆಂಚ್ ಸಹ ಭಾಷೆಯಾಗಿ ಮುಂದುವರಿದಿದೆ. ಅರಾಬಿಕ್ ಮತ್ತು ಫ್ರೆಂಚ್‌ನಲ್ಲಿ ಸ್ಥಳೀಯ ಸಾಹಿತ್ಯ ರಚನೆಯಾಗಿದೆ. ಇಲ್ಲಿನ ಹಣ ಡಿರ್‍ಹಾಮ್. (ಡಿ.ಎಸ್.ಜೆ.)

**ಮೊಹೆಂಜೋದಾರೊ:** ಪ್ರ.ಶ.ಪೂ. 3ನೆಯ ಸಹಸ್ರಮಾನಕ್ಕೆ ಸೇರಿದ ಹಾಗೂ ವೇದಪೂರ್ವಯುಗದ ಸಿಂಧೂ ನಾಗರಿಕತೆಗೆ ಸಂಬಂಧಿಸಿದ ಪ್ರಧಾನ ನಿವೇಶನ. ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಲಾರ್ಕಾನ್ ಜಿಲ್ಲೆಯಲ್ಲಿ ಡೊಕ್ರಿ ರೈಲ್ವೆನಿಲ್ದಾಣದಿಂದ ಸು. 11 ಕಿಮೀ ದೂರದಲ್ಲಿದೆ. 1912ರಲ್ಲಿ ಡಿ. ಆರ್. ಭಂಡಾರ್‌ಕರ್ ಇಲ್ಲಿಯ ಕೆಲವು ಅವಶೇಷಗಳ ಛಾಯಾಚಿತ್ರ ತೆಗೆದಿದ್ದರು. ಆದರೆ ಈ ನಿವೇಶನದ ಮಹತ್ತ್ವ ಬೆಳಕಿಗೆ ಬಂದದ್ದು 1922ರಲ್ಲಿ ಆರ್.ಡಿ. ಬ್ಯಾನರ್ಜಿ ಎಂಬ ವಿದ್ವಾಂಸರಿಂದ. 1923ರಲ್ಲಿ ಇವರು ಇಲ್ಲಿಯ ಸ್ತೂಪ ಪ್ರದೇಶದಲ್ಲಿ ಅಗೆಯುತ್ತಿದ್ದಾಗ ಕೆಲವು ಕುಷಾಣ ನಾಣ್ಯಗಳೂ ಸೇರಿದಂತೆ ಅನೇಕ ವಸ್ತುಸಾಮಗ್ರಿಗಳು ದೊರೆತವು. ಸುಮಾರು ಇದೇ ಸಮಯದಲ್ಲಿ ಹರಪ್ಪ ಎಂಬಲ್ಲಿ ಭೂಶೋಧನೆಯಲ್ಲಿ ನಿರತರಾಗಿದ್ದ ಡಿ. ಆರ್. ಸಾಹ್ನಿಯವರಿಗೆ ಮಣ್ಪಾತ್ರೆಗಳು ಚಿತ್ರಸಂಕೇತವಿರುವ ಮುದ್ರೆಗಳೂ ಲಭ್ಯವಾದವು. ಇವೆರಡೂ ನಿವೇಶನಗಳಲ್ಲಿ ಉಪಲಬ್ಧವಾದ ಅವಶೇಷಗಳನ್ನು ಅಧ್ಯಯನಮಾಡಿದ ಸರ್ ಜಾನ್ ಮಾರ್ಷಲ್ ಅವರು 1924ರ ಇಲಸ್ಟ್ರೇಟೆಡ್ ಲಂಡನ್ ನ್ಯೂಸ್ ಪತ್ರಿಕೆಯಲ್ಲಿ ತಮ್ಮ ಸಂಶೋಧನೆಯನ್ನು ಪ್ರಕಟಿಸಿದರು.

ಮೊಹೆಂಜೋದಾರೊ ಎಂದರೆ ಸತ್ತವರ ದಿಬ್ಬ ಎಂದು ಮಾರ್ಷಲ್ ಅರ್ಥೈಸಿದ್ದರೆ, ಸಂಗಮದ ದಿಬ್ಬ ಎನ್ನುವುದು ಎಫ್. ಡಬ್ಲ್ಯು. ಥಾಮಸ್ ನೀಡುವ ಅರ್ಥ. ಸು. 240 ಎಕರೆ ಪ್ರದೇಶಗಳಲ್ಲಿ ಹರಡಿರುವ ನಿವೇಶನದಲ್ಲಿ ಕ್ರಮವಾಗಿ ಮಾರ್ಷಲ್. ಇ.ಜೆ.ಎಚ್. ಮ್ಯಾಕೆ, ಸರ್ ಮಾರ್ಟಿಮರ್ ವೀಲರ್ ಉತ್ಖನನ ನಡೆಸಿದ್ದಾರೆ. ಇಲ್ಲಿಯ ರಚನೆಗಳು

ಹರಪ್ಪದವಕ್ಕಿಂತ ಸುಸ್ಥಿತಿಯಲ್ಲಿದ್ದವು. ಕಡಿಮೆ ಮಳೆ, ಏರುಪೇರಿನ ಉಷ್ಣತೆ, ಧೂಳು ಬಿರುಗಾಳಿಗಳಿಂದ ಕೂಡಿರುವ ಇಂದಿನ ಮೊಹೆಂಜೋದಾರೊ ಹಿಂದೊಮ್ಮೆ ದಟ್ಟಕಾಡುಗಳಿಂದ, ಸಮೃದ್ಧ ಮಳೆಯಿಂದ ಕೂಡಿದ ವಾಸಯೋಗ್ಯ ಪ್ರದೇಶವಾಗಿತ್ತು. ಸುಟ್ಟ ಇಟ್ಟಿಗೆಯ ಬಳಕೆ ಇದನ್ನು ಸಮರ್ಥಿಸುತ್ತದೆ. ಅಲ್ಲದೆ ಸಿಂಧೂ ಮುದ್ರೆಗಳ ಮೇಲೆ ಆನೆ, ಘೇಂಡಾಮೃಗ, ಹುಲಿ ಮುಂತಾದ ಪ್ರಾಣಿಗಳ ಚಿತ್ರಗಳು ಕಂಡು ಬಂದಿವೆ. ಸಾಮಾನ್ಯವಾಗಿ ಈ ಬಗೆಯ ಪ್ರಾಣಿಗಳು ವಾಸಿಸುವುದು ದಟ್ಟವಾದ ಅರಣ್ಯಪ್ರದೇಶಗಳಲ್ಲಿಯೇ. ಸಪ್ತಸಿಂಧೂ ಪ್ರದೇಶದಲ್ಲಿ ಮಳೆ ಹೆಚ್ಚೆಂದು ಋಗ್ವೇದದಲ್ಲಿ ಹೇಳಿರುವುದೂ ಗಮನಾರ್ಹ. ಸಿಂಧೂನದಿಯ (ಅಥವಾ ಅದರ ಪ್ರಮುಖ ಶಾಖೆಯ) ತೀರದಲ್ಲಿಯೇ ಹಿಂದೆ ಮೊಹೆಂಜೋದಾರೊ ನಗರವಿತ್ತು. ಈಗ ಸಿಂಧೂ ನದಿ ಮೊಹೆಂಜೋದಾರೊದಿಂದ ಸು. 5 ಕಿಮೀ ದೂರದಲ್ಲಿ ಹರಿಯುತ್ತಿದೆ.

ಇಲ್ಲಿಯ ಮನೆಗಳ ಮುಖ್ಯ ಲಕ್ಷಣ ಎಂದರೆ ತೆರೆದ ಅಂಗಳ ಮತ್ತು ಅದರ ಸುತ್ತ ಕೋಣೆಗಳನ್ನು ಕಟ್ಟಿರುವುದು. ಮಹಡಿಯಲ್ಲಿ ಸ್ನಾನದ, ಮಲಗುವ ಮತ್ತು ವಾಸದ ಕೋಣೆಗಳಿದ್ದರೆ ಕೆಳಗೆ ಉಗ್ರಾಣ ಹಾಗೂ ಅಡುಗೆ ಕೋಣೆಗಳಿದ್ದವು. ನೀರಿನ ವ್ಯವಸ್ಥೆ ಉತ್ತಮವಾಗಿತ್ತು. ಕಟ್ಟಡದ ಹೊರಗೋಡೆಗಳು ಸರಳವಾಗಿದ್ದು ಅಲಂಕಾರರಹಿತವಾಗಿದ್ದವು. ದೊಡ್ಡ ಮನೆಗಳಲ್ಲಿ ಹೆಚ್ಚು ಕೋಣೆಗಳಿರುತ್ತಿದ್ದವು. ಮೂವತ್ತು ಕೋಣೆಗಳ ಮನೆಯೂ ಇದ್ದ ಉದಾಹರಣೆಯುಂಟು. ಪ್ರಯೋಜನದ ದೃಷ್ಟಿಯಿಂದ ಸರಳ ರಚನೆಗಳನ್ನು ನಿರ್ಮಿಸಿದ ಇಲ್ಲಿಯ ಜನರು ಆರೋಗ್ಯ ಹಾಗೂ ಶುಚಿತ್ವಕ್ಕೆ ವಿಶೇಷ ಗಮನವಿತ್ತಿದ್ದರು. ನೆಲದ ಇಳಿಜಾರು, ನೀರು ಹೊರಹೋಗಲು ವ್ಯವಸ್ಥೆ ಮುಂತಾದವು ಸ್ನಾನದ ಕೋಣೆಗಳಲ್ಲಿ ಎದ್ದು ಕಾಣುತ್ತದೆ. ಬಚ್ಚಲಿನ ನೀರು ಹೊರಹೋಗಿ ರಸ್ತೆಯ ಒಳಚರಂಡಿಗೆ ಸೇರುವಂತೆ ವ್ಯವಸ್ಥೆ ಬೆರಗುಂಟುಮಾಡುತ್ತದೆ.

ಸಭಾಭವನ ಹಾಗೂ ಸಾರ್ವಜನಿಕ ಸ್ನಾನದ ತೊಟ್ಟಿಗಳು ಗಮನಿಸಬೇಕಾದ ಇತರ ರಚನೆಗಳು. 1925–26ರಲ್ಲಿ ಸರ್‌ಜಾನ್ ಮಾರ್ಷಲ್ ಬೆಳಕಿಗೆ ತಂದ ಮಹಾಸ್ನಾನ ಕೊಳದ ಕೆಲವು ಭಾಗಗಳನ್ನು 1927–28ರಲ್ಲಿ ಮ್ಯಾಕೆಯವರು ಪರಿಶೋಧಿಸಿದರು. ಒಳ ಅಂಗಳದ ಮಧ್ಯದಲ್ಲಿ ಕೊಳವಿದ್ದು ನಾಲ್ಕು ಕಡೆಗೂ ಮೊಗಸಾಲೆಗಳಿವೆ. ಸ್ನಾನತೊಟ್ಟಿಯ ಪಕ್ಕದಲ್ಲಿ ನೀರು ಜಿನುಗದಂತೆ ಮಾಡಲು ವಿಶೇಷವಾಗಿ ನಿರ್ಮಿಸಿದ ಇಟ್ಟಿಗೆಯ ಚೂರುಗಳ ಅಂಚುಗಳಿಗೆ ಬಿಟ್ಯುಮೆನ್ನಿನ ಲೇಪನವಾಗಿದ್ದು. ಕೊಳಕ್ಕೆ ನೀರನ್ನು ಒದಗಿಸುವ ಹಾಗೂ ಹೊರ ಸಾಗಿಸುವ ವ್ಯವಸ್ಥೆ ಪರಿಪೂರ್ಣವಾಗಿತ್ತು. ಈ ಬಗೆಯ ವ್ಯವಸ್ಥೆ ಇತರ ಸಮಕಾಲೀನ ನಾಗರಿಕತೆಗಳಾವುದರಲ್ಲಿಯೂ ಕಾಣದಂಶವಾಗಿದೆ. ಕೊಳದ ಕಟ್ಟಡಕ್ಕೆ ಆರು ಪ್ರವೇಶದ್ವಾರಗಳಿವೆ. 1927–28ರಲ್ಲಿ ಸ್ತೂಪಕಟ್ಟಡಕ್ಕೂ ಮಹಾಸ್ನಾನ ಕೊಳಕ್ಕು ನಡುವೆ ಸ್ನಾನಗೃಹಗಳ ಸಮೂಹವೊಂದು ಪತ್ತೆಯಾಯಿತು. ಪ್ರಾಯಶಃ ಪುರೋಹಿತವರ್ಗದವರ ಬಳಕೆಗಾಗಿ ಇವನ್ನು ನಿರ್ಮಿಸಿದ್ದಿರಬೇಕೆಂದು ಊಹಿಸಲಾಗಿದೆ.

ಮೊಹೆಂಜೋದಾರೊವಿನ ಬಾವಿಗಳ ಪಾರ್ಶ್ವಕ್ಕೆ ವಿಶೇಷ ಬೆಣೆಯಾಕಾರದ ಇಟ್ಟಿಗೆಗಳನ್ನು ಜೋಡಿಸಲಾಗಿದ್ದಿತು. ಇಲ್ಲಿಯ ಉತ್ತರ–ದಕ್ಷಿಣ ರಸ್ತೆ ವಿಶಾಲವಾಗಿದ್ದು ದ್ವಿಚಕ್ರವಾಹನ ಮತ್ತು ಪಾದಚಾರಿಗಳ ಓಡಾಟಕ್ಕೆ ಅನುಕೂಲಕರವಾಗಿತ್ತು. ಹೆಚ್ಚು ಜನಸಂಚಾರವಿದ್ದುದು 10 ಮೀ ಅಗಲದ, ಸು. 1 ಕಿಮೀ ಉದ್ದದ ಪೂರ್ವ ಹಲವು ಬೀದಿಗಳಿದ್ದವು. ಧಾನ್ಯ ಸಂಗ್ರಹ ಕಟ್ಟಡ ಹಾಗೂ ಕಾಲುವೆಮನೆಗಳನ್ನೂ ಮೊಹೆಂಜೊದಾರೊದಲ್ಲಿ ಗುರುತಿಸಲಾಗಿದೆ.

ಗೋದಿ, ಬಾರ್ಲಿ, ಖರ್ಜೂರ, ಹತ್ತಿ ಮುಂತಾದವು ಆಗಿನ ಮುಖ್ಯ ಬೆಳೆಗಳು. ಪ್ರಾಣಿಸಾಕಾಣಿಕೆ ಇಲ್ಲಿಯ ಜನರಿಗೆ ತಿಳಿದಿತ್ತು. ಮಾಂಸಾಹಾರ ಬಳಕೆಯಲ್ಲಿತ್ತು. ನೂಲು ತೆಗೆಯುವುದು, ಬಣ್ಣ ಹಾಕುವುದು, ಕಸೂತಿ ಮುಂತಾದವು ಜನರಿಗೆ ಪರಿಚಿತವಾಗಿದ್ದವು. ಹೆಂಗಸರು ಅಲಂಕಾರಪ್ರಿಯರಾಗಿದ್ದರು. ವಿವಿಧ ವಿನ್ಯಾಸದ ವಿಪುಲ ಆಭರಣಗಳು, ಕಾಡಿಗೆ ಕಡ್ಡಿ, ರಂಗು ಮುಂತಾದವು ಇಲ್ಲಿ ಲಭ್ಯವಾಗಿವೆ. ಕೋಳಿಕಾಳಗ ಜನಪ್ರಿಯ ಕ್ರೀಡೆಯಾಗಿತ್ತು. ಗೂಳಿ–ಎಮ್ಮೆಗಳೊಡನೆ ಹೋರಾಡುವ ಸ್ಪರ್ಧೆಯೂ ಇತ್ತೆಂದು ತೋರುತ್ತದೆ. ಮಕ್ಕಳ ಆಟದ ವಸ್ತು ರಾಶಿಯಲ್ಲಿ ಪಗಡೆ ದಾಳ, ಗೋಲಿ, ಚೆಂಡು ಮುಂತಾದವು ಸಿಕ್ಕಿವೆ. ಚರ್ಟ್‌ಶಿಲೆಯಲ್ಲಿ ಸಿದ್ಧಪಡಿಸಿದ ಹಲವು ಬಗೆಯ ತೂಕದ ಕಲ್ಲುಗಳು ಬಳಕೆಯಲ್ಲಿದ್ದವು. ಇವು ಸೂಸಾ ಮತ್ತು ಇರಾಕ್‌ಗಳಲ್ಲಿ ದೊರೆತ ತೂಕದ ಕಲ್ಲುಗಳಿಗಿಂತ ಹೆಚ್ಚು ನಿಖರವಾದವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಚಿಪ್ಪಿನ ಮಾನವೊಂದರ ತುಣುಕನ್ನು ಮ್ಯಾಕೆ ಇಲ್ಲಿ ಅನ್ವೇಷಿಸಿದ್ದಾರೆ.

ಗೃಹಕೃತ್ಯದ ಸಾಮಗ್ರಿಗಳು, ಮೃತ್ಪಾತ್ರೆಗಳು, ತಾಮ್ರ ಹಾಗೂ ಕಂಚಿನ ಉಪಕರಣಗಳು ಹೇರಳವಾಗಿ ಇಲ್ಲಿ ಸಿಕ್ಕಿವೆ. ಇಲ್ಲಿಯ ಜನರಿಗೆ ತಾಮ್ರದ ಅದುರನ್ನು ಕರಗಿಸಿ ಎರಕ ಹೊಯ್ಯುವ ಕಲೆ ತಿಳಿದಿತ್ತು. ಭರ್ಜಿ, ಶೂಲ, ಶಿರಸ್ತ್ರಾಣ ಬಾಣ, ಬಗೆಬಗೆಯ ಚಾಕುಗಳು, ಕತ್ತಿ, ಸೂಜಿ, ದಬ್ಬಳ, ಮೀನುಗಾಳ, ಗದೆ ಮುಂತಾದ ಹತ್ತು ಹಲವು ಸಮಗ್ರಿಗಳು ಇಲ್ಲಿ ಉಪಲಬ್ಧವಾಗಿವೆ. ಇಲ್ಲಿ ಕಂಡುಬಂದ ಗರಗಸ ಪ್ರಂಪಚದಲ್ಲಿಯೇ ಪ್ರಾಚೀನವಾದುದೆಂದು ಸರ್ ಫ್ಲಿಂಡರ್ಸ್ ಪೆಟ್ರಿ ಸೂಚಿಸಿದ್ದಾರೆ. ಮಣ್ಣಿನ ಗಿಲಿಕೆ, ಕೋಳಿ ಅಥವಾ ಪಾರಿವಾಳ ರೂಪದ ಪೀಪಿ, ಚಕ್ರ, ಪ್ರಾಣಿ ಗೊಂಬೆಗಳು, ಪಕ್ಷಿರಥ, ಪೀಠೋಪಕರಣ, ಬಂಡಿ ಮುಂತಾದ ಆಟದ ವಸ್ತುಗಳನ್ನು ಮಣ್ಣಿನಲ್ಲಿ ಕಲಾತ್ಮಕವಾಗಿ ತಯಾರಿಸಲಾಗಿದೆ.

ಮಡಕೆಕುಡಿಕೆಗಳನ್ನು ತಿಗರಿಯಿಂದ ತಯಾರಿಸಲಾಗುತ್ತಿತ್ತು. ಸುಟ್ಟರೆ ನೇರಳೆ, ನಸುಗೆಂಪು ಅಥವಾ ಬೂದುಬಣ್ಣಕ್ಕೆ ತಿರುಗುವ ಮತ್ತು ಬಂಧದಲ್ಲಿ ಬಿಗಿಯಾದ ಜೇಡುಮಣ್ಣು ಇವುಗಳ ತಯಾರಿಕೆಗೆ ಯುಕ್ತ ಸಾಮಗ್ರಿಯಾಗಿತ್ತು. ಮೃತ್ಪಾತ್ರೆಗಳ ಮೇಲೆ ಕ್ರೀಮ್, ಚಾಕಲೇಟ್ ಅಥವಾ ಕೆಂಪುವರ್ಣಗಳ ಲೇಪನವೂ ಗೋಚರಿಸುತ್ತದೆ. ಹಿಡಿಕೆಗಳಿರುವ ಮಡಕೆಗಳು ಹೆಚ್ಚು ಸಾಮಾನ್ಯವಾಗಿ ಕಂಡುಬರುತ್ತವೆ. ಪಾನಪಾತ್ರೆ ವಿಶಿಷ್ಟವಾದುದು. ಮಡಕೆ ಹಾಗೂ ಜಾಡಿಗಳ ಕಂಠಭಾಗದಲ್ಲಿ ರಂಧ್ರಗಳಿವೆ. ದಾರ ಪೋಣಿಸಿ ಮುಚ್ಚಳಹಾಕಿ ಕಟ್ಟಲೋ ಪಾತ್ರೆಗಳನ್ನು ಮೇಲಿನಿಂದ ತೂಗುಹಾಕಲೋ ಅವನ್ನು ಕೊರೆದಿರಬೇಕೆಂದು ಊಹಿಸಬಹುದು. ಮೃತ್ಪಾತ್ರೆಗಳ ಮೇಲೆ ಪರಸ್ಪರ ಕತ್ತರಿಸುವ ವೃತ್ತಾಸಾಲುಗಳ ಮತ್ತು ಗೆರೆಗಳ ವಿನ್ಯಾಸ ಅಥವಾ ಅಪರೂಪಕ್ಕೆ ಪ್ರಾಣಿಚಿತ್ರಗಳ ಅಲಂಕರಣ ಕಂಡುಬರುತ್ತದೆ. ಟೆಲ್ ಅಸ್ಮಾರ್‌ನಲ್ಲಿ ಕಂಡುಬಂದಂಥ ಟಗರಿನ ಆಕೃತಿಯ ಪಾತ್ರೆಯೊಂದು ಇಲ್ಲಿ ಲಭ್ಯವಾಗಿರುವುದು ಗಮನಾರ್ಹ.

ಜೇಡಿಮಣ್ಣಿನ ಪ್ರತಿಮೆಗಳೂ ಇಲ್ಲಿ ದೊರೆತಿವೆ. ತ್ರಿಪರ್ಣಿ ವಿನ್ಯಾಸದ ಮೇಲು ವಸ್ತ್ರ ಹೊದ್ದಿರುವ ಪುರೋಹಿತ ಅಥವಾ ಶ್ರೀಮಂತನ ಮೂರ್ತಿ ಸುಪ್ರಸಿದ್ಧವಾದುದು. ಅರ್ಧನಿಮೀಲಿತ ನೇತ್ರ, ಚಾಚಿದ ಮೂಗು, ಸಾಮಾನ್ಯ ಗಾತ್ರದ ಬಾಯಿ, ಸಣ್ಣಗಡ್ಡದ ಈ ಮೂರ್ತಿ ಸಿಂಧೂ ಜನರ ಕಲಾಪ್ರಜ್ಞೆಗೆ ಹಾಗೂ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಕಲ್ಲಿನ ಪ್ರತಿಮೆಗಳು ವಿರಳ. ಪ್ರಾಣಿಚಿತ್ರದಲ್ಲಿ ಕಂಡುಬರುವ ಸಹಜ ಸೊಬಗು ಮನಸೆಳೆಯುತ್ತದೆ. ಹಲವಾರು ಮುದ್ರೆಗಳ ಮೇಲಿನ ಗೂಳಿ, ಕಾಡುಕೋಣ, ಘೇಂಡಾಮೃಗ, ಹುಲಿ, ಕರಡಿ ಮುಂತಾದವನ್ನು ಗಮನಿಸಿದರೆ ಈ ಅಂಶ ಸ್ಪಷ್ಟಪಡುತ್ತದೆ. ಸಿಂಧೂ ಮುದ್ರೆಗಳ ಮೇಲಿನ ಬರಹಗಳನ್ನು ಹಂಟರ್ ಲಾಂಗ್‌ಡನ್ ಹ್ರಾಂಜಿಯವರಿಂದ ಹಿಡಿದು ಈಚಿನ ಎಸ್. ಆರ್. ರಾವ್., ಶಂಕರ ಮೊಕಾಶಿ ಪುಣೇಕರ್, ಎಲ್.ಎಸ್.ರಾವ್, ಕಲ್ಯಾಣ ರಾಮನ್ ಮತ್ತಿತರವರೆಗೆ ಹಲವು ವಿದ್ವಾಂಸರು ಓದಲು ಪ್ರಯತ್ನಿಸಿದ್ದಾದರೂ ಸರ್ವಸಮ್ಮತ ಅಭಿಪ್ರಾಯವಿನ್ನೂ ಮೂಡಿಲ್ಲ. ವಿದ್ವಾಂಸರ ಅಧ್ಯಯನ ಪ್ರಯತ್ನಗಳು ನಡೆಯುತ್ತಿವೆ.

ಇಲ್ಲಿಯ ಜನರ ಧಾರ್ಮಿಕ ಜೀವನದ ಬಗೆಗೆ ಕೆಲವು ಸುಳಿವುಗಳಷ್ಟೇ ದೊರೆಯುತ್ತವೆ. ಮಾತೃದೇವತೆಯ ಆರಾಧನೆ ಪ್ರಧಾನವಾಗಿತ್ತು. ಮಣ್ಣಿನ ನಗ್ನಸ್ತ್ರೀ ಮೂರ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಶಿವ, ಲಿಂಗ, ವೃಷಭ, ವೃಕ್ಷಾದಿಗಳನ್ನೂ ಪೂಜಿಸಲಾಗುತ್ತಿತ್ತು. ಹುಲಿ, ಆನೆ, ಘೇಂಡಾಮೃಗ ಮುಂತಾದವೂ ಪೂಜ್ಯವಸ್ತುಗಳಾಗಿದ್ದವು.

ಮೊಹೆಂಜೋದಾರೊ ಹಠಾತ್ತಾಗಿ ದಾಳಿಗೀಡಾಗಿ ನಾಶವಾದಂತೆ ತೋರುತ್ತದೆ. ವಿವಿಧ ಭಂಗಿಯಲ್ಲಿ ಎಲ್ಲೆಂದರಲ್ಲಿ ಬಿದ್ದಿರುವ ಜನರ ಅಸ್ಥಿಪಂಜರಗಳು ಈ ಅಭಿಪ್ರಾಯಕ್ಕೆ ಪೋಷಕವಾಗಿವೆ. ನದಿಯ ಅನೂಹ್ಯ ಪ್ರವಾಹ, ಅರಣ್ಯಗಳ ನಾಶ ಇತ್ಯಾದಿ ಸಂಗತಿಗಳೂ ಈ ಬಗೆಯ ಹಠಾತ್‌ನಾಶಕ್ಕೆ ಕಾರಣವಾಗಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ಈ ನೆಲೆಯಲ್ಲಿ ಹಲವು ಸಮಾಧಿಗಳೂ ಗೋಚರಿಸಿದ್ದು, ಅವುಗಳಲ್ಲಿ ಮೃತನಿಗೆ ಸಂಬಂಧಿಸಿದ ವಸ್ತುಗಳನ್ನೂ ಹುಗಿದಿಟ್ಟದ್ದು ಕಂಡುಬಂದಿದೆ. ಕಳೇಬರಗಳನ್ನು ಪಶುಪಕ್ಷಿಗಳಿಗೆ ತೆರೆದಿಟ್ಟು, ಉಳಿದ ಅಸ್ಥಿಗಳನ್ನು ಆರಿಸಿ ಸಮಾಧಿಮಾಡುವ ಪದ್ಧತಿಯೂ ಆಗ ಇತ್ತು. ಇವನ್ನು ಅಸಮಗ್ರ ಹುಗಿತವೆಂದು ಪರಿಗಣಿಸಲಾಗಿದೆ. ಭಸ್ಮಪಾತ್ರೆಗಳು ಸಿಕ್ಕಿರುವುದರಿಂದ ದಹನಾನಂತರ ಹೂಳುವ ಪದ್ಧತಿಯೂ ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ.

ಇಲ್ಲಿಯ ಜನರು ಅನೇಕ ಬುಡಕಟ್ಟಿಗೆ ಸೇರಿದವರಾಗಿದ್ದರು. ಮೆಡಿಟರೇನಿಯನ್ ಬುಡಕಟ್ಟಿನ ಜನ ಹೆಚ್ಚು ಪ್ರಮಾಣದಲ್ಲಿದ್ದರು; ವೆಡ್ಡ, ಆಲ್ಪೈನ್ ಬುಡಕಟ್ಟಿನ ಮಂಗೋಲಿಯನ್ ಬುಡಕಟ್ಟಿನ ಜನರಿದ್ದುದಕ್ಕೂ ಉದಾಹರಣೆಗಳು ಕಾಣಸಿಗುತ್ತವೆ. ಸಮಕಾಲೀನ ಮೆಸಪೊಟೇಮಿಯದ ಸುಮೇರಿಯನ್ ಸಂಸ್ಕೃತಿಯ ಜನರಿಗೂ ಸಿಂಧೂ ಸಂಸ್ಕೃತಿಯ ಜನರಿಗೂ ವ್ಯಾವಹಾರಿಕ ಸಂಬಂಧವಿತ್ತೆಂದು ತಿಳಿದುಬರುತ್ತದೆ. ರಫ್ತು–ಆಮದು ನಡೆಯುತ್ತಿದ್ದವು. ಸಿಂಧೂ ನಾಗರಿಕತೆಗೆ ಕಾರಣರಾದವರು ದ್ರಾವಿಡರು ಅಥವಾ ಆರ್ಯರ ಒಂದು ಶಾಖೆ ಎಂಬ ವಾದ ವಿವಾದ ನಡೆದಿದೆ. ಈಗಲೂ ಇದು ವಿವಾದಾಸ್ಪದ ಸಮಸ್ಯೆಯಾಗಿಯೇ ಉಳಿದಿದೆ. **(ಎಚ್.ಎಂ.ಎನ್.ಆರ್.)**

**ಮೊಳಕಾಲ್ಮುರು:** ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಪಟ್ಟಣ. ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದ್ದು ಜಿಲ್ಲೆಯ ಈಶಾನ್ಯದಿಕ್ಕಿನಲ್ಲಿದೆ. ಈ ತಾಲ್ಲೂಕನ್ನು ದಕ್ಷಿಣದಲ್ಲಿ ಚಳ್ಳಕೆರೆ ತಾಲ್ಲೂಕು, ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶ, ವಾಯವ್ಯ ಮತ್ತು ಪಶ್ಚಿಮದಲ್ಲಿ ಬಳ್ಳಾರಿ ಜಿಲ್ಲೆ ಸುತ್ತುವರಿದಿವೆ. ಈ ತಾಲ್ಲೂಕಿನಲ್ಲಿ ದೇವಸಮುದ್ರ ಮತ್ತು ಮೊಳಕಾಲ್ಮುರು ಹೋಬಳಿಗಳೂ ಒಂದು ಪಟ್ಟಣವೂ 91 ಗ್ರಾಮಗಳೂ ಇವೆ. ವಿಸ್ತೀರ್ಣ 736.2 ಚ.ಕಿಮೀ. ಜನಸಂಖ್ಯೆ 1,26,648.

ತಾಲ್ಲೂಕು ಹೆಚ್ಚಿನ ಮಟ್ಟಿಗೆ ಕಣಶಿಲೆಯ ಬೆಟ್ಟಗುಡ್ಡಗಳ ಪ್ರದೇಶ. ಮಧ್ಯೆ ಮಧ್ಯೆ ಇರುವ ಕಣಿವೆ ಪ್ರದೇಶಗಳು ಸು. ಮಟ್ಟಸವಾಗಿದ್ದು ಜನವಸತಿಗೆ ಯೋಗ್ಯವಾಗಿವೆ. ಪೂರ್ವಘಟ್ಟ ಶ್ರೇಣಿಗೆ ಸೇರಿದ ಒಂದು ಚಾಚು ಇಲ್ಲಿ ಹಬ್ಬಿದೆ. ಸುತ್ತಮುತ್ತ ಹರಡಿರುವ ಬೆಟ್ಟಗುಡ್ಡಗಳಲ್ಲಿ ಬ್ರಹ್ಮಗಿರಿ (706 ಮೀ), ನುಂಕಪ್ಪನ ಗುಡ್ಡ (ನುಂಕೆ ಭೈರವ, 921 ಮೀ), ಜಟಂಗ ರಾಮೇಶ್ವರ ಬೆಟ್ಟ (1,057 ಮೀ) ಮತ್ತು ಶಾಂತಿಗುಡ್ಡ (790 ಮೀ) ಮುಖ್ಯವಾದವು.

ಇಲ್ಲಿಯ ಮುಖ್ಯನದಿ ಜನಗಹಳ್ಳ, ಇದನ್ನು ಚಿನ್ನಹಗರಿ ಎಂದೂ ಕರೆಯುತ್ತಾರೆ. ಚಿತ್ರದುರ್ಗ ಮತ್ತು ಜಗಳೂರು ತಾಲ್ಲೂಕುಗಳ ಮುಖಾಂತರ ಹರಿದುಬರುವ ಈ ನದಿ ಮೊಳಕಾಲ್ಮುರು ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆಯ ಎಲ್ಲೆಯಾಗಿ ಸ್ವಲ್ಪ ದೂರ ಹರಿದು ತಾಲ್ಲೂಕಿನ ಮಧ್ಯಭಾಗದಲ್ಲಿ ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಹರಿದು ಮುಂದೆ ವೇದಾವತಿಯನ್ನು ಕೂಡಿಕೊಳ್ಳುವುದು. ಈ ನದಿಗೆ ಕೆಲವು ಹಳ್ಳಗಳು ಬಂದು ಸೇರುವುದುಂಟು.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 52 ಸೆಂಮೀ. ವ್ಯವಸಾಯಕ್ಕೆ ಅನುಕೂಲವಾಗಿ ಅನೇಕ ಕೆರೆ ಬಾವಿಗಳೂ ಇವೆ. ತಲಪರಿಗೆಗಳೂ ಬಹು ಸಂಖ್ಯೆಯಲ್ಲಿದ್ದು ಉಪಯುಕ್ತವಾಗಿವೆ. ಜೋಳ, ರಾಗಿ, ಬತ್ತ, ತೊಗರಿ, ಗೋದಿ, ಎಣ್ಣೆಬೀಜಗಳು, ಕಬ್ಬು, ಶೇಂಗಾ, ಹೊಗೆಸೊಪ್ಪು ಮತ್ತು ಹತ್ತಿ ಬೆಳೆಸುತ್ತಾರೆ.

ತಾಲ್ಲೂಕಿನಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಚಿತ್ರದುರ್ಗ-ಬಳ್ಳಾರಿ ರಸ್ತೆ, ಮೊಳಕಾಲ್ಮುರು-ಕೂಡ್ಲಿಗಿ, ಕೂಡ್ಲಿಗಿ-ದೇವಸಮುದ್ರ, ಮೊಳಕಾಲ್ಮುರು-ರಾಯದುರ್ಗ ಈ ಹಾದಿಗಳು ತಾಲ್ಲೂಕಿನ ಮುಖ್ಯ ಸಂಪರ್ಕ ಮಾರ್ಗಗಳು. ಈ ತಾಲ್ಲೂಕಿನಲ್ಲಿ ತಯಾರಾಗುವ ಕೈಮಗ್ಗದ ರೇಷ್ಮೆಬಟ್ಟೆಗಳು ಪ್ರಸಿದ್ಧವಾದವು.

ಕೊಂಡಲಹಳ್ಳಿ, ಕೋನಸಾಗರ, ನಾಗಸಮುದ್ರ, ಬೊಮ್ಮಗೊಂಡನಕೆರೆ, ಹಿರೇಕೆರೆಹಳ್ಳಿ, ದೇವಸಮುದ್ರ ಮತ್ತು ರಾಯಪುರ ಕೆಲವು ಮುಖ್ಯ ಗ್ರಾಮಗಳು. ಬ್ರಹ್ಮಗಿರಿ, ಜಟಂಗ ರಾಮೇಶ್ವರ ಮತ್ತು ಸಿದ್ಧಾಪುರಗಳಲ್ಲಿ ಅಶೋಕನ ಶಾಸನಗಳು ದೊರಕಿವೆ. ಅಲ್ಲದೆ ಇವುಗಳ ಬಳಿಯಲ್ಲಿ ಇಸಿಲ ಎಂಬ ಬಹು ಪ್ರಾಚೀನ ಪಟ್ಟಣವೂ ಇತ್ತೆಂಬ ಅಭಿಪ್ರಾಯವಿದೆ. ನುಂಕೆಭೈರವ ಬೆಟ್ಟದಲ್ಲಿ ಪ್ರತಿ ವೈಶಾಖದಲ್ಲಿ ಜಾತ್ರೆ ನಡೆಯುತ್ತದೆ. ಬೊಮ್ಮಘಟ್ಟದ ರಾಮದೇವರ ಜಾತ್ರೆಯೂ ಈ ಸುತ್ತಿನಲ್ಲಿ ಪ್ರಸಿದ್ಧ. ಮೊಳಕಾಲ್ಮುರು ಪಟ್ಟಣ ಈ ತಾಲ್ಲೂಕಿನ ಹಾಗೂ ಹೋಬಳಿಯ ಆಡಳಿತ ಕೇಂದ್ರ. ಬೆಂಗಳೂರು-ರಾಯದುರ್ಗ ಮಾರ್ಗದಲ್ಲಿ ಬಳ್ಳಾರಿಗೆ ದಕ್ಷಿಣಕ್ಕೆ 62 ಕಿಮೀ ದೂರದಲ್ಲೂ ಚಿತ್ರದುರ್ಗದ ಈಶಾನ್ಯಕ್ಕೆ 84 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 14,131. ಊರಿನ ಸುತ್ತಮುತ್ತಲೂ ಬೆಟ್ಟಗುಡ್ಡಗಳಿದ್ದು, ಉತ್ತರಕ್ಕೆ ವಿಶಾಲವಾದ ಒಂದು ಕೆರೆ ಇದೆ. ಇದನ್ನು ನಾಯಕನಹಟ್ಟಿಯ ನಾಯಕನೊಬ್ಬ ತನ್ನ ತಾಯಿಯ ಹೆಸರಿನಲ್ಲಿ ಕಟ್ಟಿಸಿದ್ದಾನೆ. ಮೊಳಕಾಲ್ಮುರು ಸುತ್ತಲ ನಗರಗಳಿಗೆ ಉತ್ತಮ ರಸ್ತೆಗಳಿಂದ ಸಂಪರ್ಕ ಹೊಂದಿದ್ದು ವ್ಯಾಪಾರ ಕೇಂದ್ರವಾಗಿ ಬೆಳೆಯುತ್ತಿದೆ. ಪಟ್ಟಣ ಪೌರಸಭಾಡಳಿತಕ್ಕೆ ಒಳಪಟ್ಟಿದೆ. *

**ಮೋಜಣಿ:** ಬಿಂದುಗಳ ಸ್ಥಾನನಿರ್ಧರಣೆಗಾಗಿ ಇಲ್ಲವೇ ಬಿಂದು ಮತ್ತು ಎಲ್ಲೆಗಳನ್ನು ಗುರುತುಮಾಡುವುದಕ್ಕಾಗಿ, ಇಲ್ಲವೇ ಭೂಮಟ್ಟ ಮೇಲಿರುವ ವಿವರಗಳನ್ನು ದಾಖಲಿಸುವುದಕ್ಕಾಗಿ ನಡೆಸುವ ಮಾಪನಕಾರ್ಯ (ಸರ್ವೆ). ಪೈಮಾಷಿ, ಸರ್ವೇಕ್ಷಣೆ ಪರ್ಯಾಯನಾಮಗಳು. ತುದಿ, ಬೆಟ್ಟದಕೋಡು, ಪರ್ವತಶೃಂಗ, ನೆಲದ ಚಾಚು, ಭೂಶಿರ ಮುಂತಾದವುಗಳ ಎಲ್ಲೆ, ವಿಸ್ತಾರ, ಆಕಾರ ಮೊದಲಾದವನ್ನು ನಿಖರವಾಗಿ ನಿರ್ಧರಿಸಲು ಅಗತ್ಯವಿರುವ ಅಂಶಗಳನ್ನು ಸಂಗ್ರಹಿಸಿ ಸಾಮಾನ್ಯವಾಗಿ ನಕ್ಷೆ ತಯಾರಿಸುವುದು ಈ ಕಾರ್ಯದ ಪ್ರಧಾನ ಮಜಲು. ಬಿಂದುಗಳು ಭೂಮೇಲ್ಮೈಯ ಮೇಲಾಗಲಿ ಇಲ್ಲವೆ ತಳದಲ್ಲಾಗಲಿ ಅಥವಾ ಆ ಮೇಲ್ಮೈಯಿಂದ ಎತ್ತರಕ್ಕೆ ಇರಬಹುದು. ಈ ಕೆಲಸ ನಿರ್ವಹಿಸುವ ವ್ಯಕ್ತಿಗೆ ಮೋಜಣಿದಾರ, ಪೈಮಾಷಿದಾರ, ಸರ್ವೇಕ್ಷಕ (ಸರ್ವೇಯರ್) ಎಂಬ ಹೆಸರುಗಳಿವೆ.

ಮೋಜಣಿ ನಾಗರಿಕತೆಯಷ್ಟೇ ಪ್ರಾಚೀನವಾದದ್ದು. ಇದು ಮೂಡಿ ಬಂದದ್ದು ಈಜಿಪ್ಟಿನಲ್ಲಿ. ಪ್ರತಿಯೊಂದು ವರ್ಷದಲ್ಲೂ ಅಲ್ಲಿಯ ನೈಲ್‌ನದಿಯಲ್ಲಿ ಪ್ರವಾಹ ಕಾಣಿಸಿಕೊಂಡು ಅದರಿಂದ ಉಂಟಾದ ಹೆಚ್ಚುವರಿ ನೀರಿನಿಂದ ಅಲ್ಲಿಯವರ ಹೊಲ ಗದ್ದೆಗಳು ನೀರಿನಿಂದ ಆವೃತವಾಗುತ್ತಿದ್ದುವು. ಹೀಗಾಗಿ ಆ ಪ್ರದೇಶಗಳ ಹೊಸ ಹೊಸ ಎಲ್ಲೆಗಳನ್ನು ಅವರು ಮೋಜಣಿಯಿಂದ ನಿರ್ಧರಿಸಿಕೊಳ್ಳತೊಡಗುತ್ತಿದ್ದರು. ಕಾಲಸಂದಂತೆ ಮೋಜಣಿಯ ವಿಧಿ ವಿಧಾನಗಳಲ್ಲಿ ಪರಿಷ್ಕಾರಗಳು ಆಗಿ ಭೂವಿಜ್ಞಾನಿ ಹಾಗೂ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಮೋಜಣಿ ಎನ್ನುವುದು ಅತ್ಯಗತ್ಯ ಹಾಗೂ ಪ್ರಧಾನ ಅಂಶ ಎನಿಸಿದೆ. ಈ ಲೇಖನವನ್ನು ಮುಂದಿನ ಉಪಶೀರ್ಷಿಕೆಗಳ ಅಡಿಯಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ:

ಮೋಜಣಿಯ ವರ್ಗೀಕರಣ, ಮೋಜಣಿಯ ತತ್ತ್ವಗಳು, ವಿವಿಧ ಪ್ರಕಾರದ ಮೋಜಣಿಗಳು, ಮೋಜಣಿ ಸಲಕರಣೆಗಳು.

ಮೋಜಣಿಯ ವರ್ಗೀಕರಣ : (1) ಮೋಜಣಿಗೆ ಒಳಪಡುವ ಭೂ ಪ್ರದೇಶದ ರೀತ್ಯಾ ವರ್ಗೀಕರಣ:

(ಅ) ನೆಲಮೋಜಣಿ (ಲ್ಯಾಂಡ್ ಸರ್ವೆ) : (i) ಭೂಸ್ವರೂಪಲಕ್ಷಣ ಮೋಜಣಿ (ಟೋಪೊಗ್ರಾಫಿಕ್ ಸರ್ವೆ) : ಇದರಲ್ಲಿ ಕಾಲುವೆ, ತೊರೆ, ನದಿ, ಸರೋವರ, ರಸ್ತೆ, ರೈಲ್ವೆ, ಕಾಡು, ಬೆಟ್ಟ, ಪಟ್ಟಣ, ಹಳ್ಳಿಗಳು ಮೊದಲಾದವುಗಳನ್ನು ಸಮತಲ ಮತ್ತು ಲಂಬಸ್ಥಾನದಲ್ಲಿ ರೇಖೀಯಮಾಪನ (ಲೀನಿಯರ್ ಮೆಷರ್‌ಮೆಂಟ್) ಹಾಗೂ ಕೋನಮಾಪನಗಳ ಮೂಲಕ ಅವುಗಳ ಸ್ವಾಭಾವಿಕ ಲಕ್ಷಣ ಮತ್ತು ಸ್ಥಾನವನ್ನು ದಾಖಲಿಸುವುದಿದೆ. (ii) ವಾರಸುದಾರ ಭೂಮೋಜಣಿ (ಕೆಡಾಸ್ಟ್ರಲ್ ಸರ್ವೆ) : ಇದರಲ್ಲಿ ವಾರಸುದಾರನ ಆಸ್ತಿಯ ಎಲ್ಲೆ, ಭೂವಿಸ್ತೀರ್ಣ ಲೆಕ್ಕಾಚಾರ, ಮುನಿಸಿಪಾಲಿಟಿ ಎಲ್ಲೆ ಮುಂತಾದವುಗಳನ್ನು ದಾಖಲಿಸಲಾಗುವುದು. (iii) ಪಟ್ಟಣ ಭೂ ಮೋಜಣಿ (ಸಿಟಿ ಸರ್ವೆ) : ರಸ್ತೆಯೋಜನೆ, ನೀರು ಸರಬರಾಜು ಯೋಜನೆ, ಒಳಚರಂಡಿ ಯೋಜನೆ, ವಿದ್ಯುತ್ ತಂತಿ ಕಂಬಗಳು ಮುಂತಾದವುಗಳನ್ನು ರೂಪಿಸುವುದು ಈ ವಿಭಾಗದಲ್ಲಿ ಕಾಣಬರುತ್ತದೆ.

(ಆ) ಜಲಪ್ರದೇಶದ ಮೋಜಣಿ (ಹೈಡ್ರೋಗ್ರಾಫಿಕ್ ಸರ್ವೆ) : ಜಲಸಂಬಂಧ ಅಂದರೆ ಜಲಸಾಗಣೆ, ಬಂದರುಕಟ್ಟೆ ನಿರ್ಮಾಣ, ಸರಾಸರಿ ಸಮುದ್ರಮಟ್ಟದ ನಿರ್ಧರಣೆ ಮುಂತಾದ ಹಲವಾರು ಮಾಹಿತಿಗಳನ್ನು ಇಲ್ಲಿ ಪಡೆಯುವರು. ಈ ಕೆಲಸಕ್ಕಾಗಿ ನದಿಗಳ ಸ್ವರೂಪ ಸಮೀಕ್ಷೆ, ದಡದಿಂದ ಅಳೆಯುವಿಕೆ, ದೋಣಿಯಲ್ಲಿ ಕುಳಿತು ನೀರಿನ ಆಳ ತಿಳಿಯುವುದು, ಸಮುದ್ರದ ಉಬ್ಬರವಿಳಿತವನ್ನು ಪರಿಶೀಲಿಸುವುದು ಮುಂತಾದವುಗಳನ್ನು ಅಳವಡಿಸಿಕೊಳ್ಳುತ್ತಾರೆ.

(ಇ) ಖಗೋಳೀಯ ಮೋಜಣಿ (ಆಸ್ಟ್ರನೋಮಿಕಲ್ ಸರ್ವೆ) : ಭೂ ಪ್ರದೇಶದ ರೇಖೆಯ ಸಾರಾಸಗಟು ಸ್ಥಾನವನ್ನು ದಿಕ್ಕುಗಳಿಗೆ ಅನುಗುಣವಾಗಿ ನಿರ್ಧರಿಸುವುದು ಇಲ್ಲಿಯ ಮುಖ್ಯ ಉದ್ದೇಶ. ಈ ಮೋಜಣಿಯಲ್ಲಿ ಸೂರ್ಯ ಮತ್ತು ನಕ್ಷತ್ರಗಳ ಚಲನವಲನಗಳನ್ನು ಅಭ್ಯಸಿಸಲಾಗುತ್ತದೆ.

(2) ಮೋಜಣಿಯ ಗುರಿಯ (ಆಬ್ಜೆಕ್ಟ್) ರೀತ್ಯ ವರ್ಗೀಕರಣ (ಅ) ಪೂರ್ವಭಾವಿ ಮೋಜಣಿ (ರಿಕಾನೆಸನ್ಸ್ ಸರ್ವೆ) : ಇದು ಎಲ್ಲ ವಿಧದ ಮೋಜಣಿಯ ಪ್ರಾರಂಭದಲ್ಲಿ ಮಾಡಬೇಕಾದಂಥದು. ಪೂರ್ಣ ಪ್ರಮಾಣದ ಮೋಜಣಿಗೆ ತೊಡಗುವ ಮುನ್ನ ಮೋಜಣಿಗೆ ಒಳಪಡಿಸಬೇಕಾದ ಪ್ರದೇಶದಲ್ಲಿ ಸ್ವತಃ ಓಡಾಡಿ ಕಣ್ಣು ಅಂದಾಜಿನಲ್ಲಿ ಅದನ್ನು ಪರೀಕ್ಷಿಸಬೇಕಾಗುತ್ತದೆ. ಇದರಿಂದ ಮೋಜಣಿಗೆ ಒಳಪಡುವ ಪ್ರದೇಶದ ವೈಖರಿ ಮತ್ತು ಮೋಜಣಿ ವಿಧಾನದ ಒಟ್ಟಾರೆ ಅಂದಾಜು ಲಭ್ಯವಾಗುತ್ತದೆ. ಇದರ ಜೊತೆಗೆ ಅಂದಾಜು ನಕ್ಷೆಯನ್ನು ಸ್ಥಳದಲ್ಲಿ ಚಿತ್ರಿಸಿಕೊಳ್ಳುವುದೂ ಉಂಟು. (ಆ) ಎಂಜಿನಿಯರಿಂಗ್ ಮೋಜಣಿ: ರಸ್ತೆ, ಒಳಚರಂಡಿ, ನೀರು ಸರಬರಾಜು. ಜಲಾಶಯ ಮುಂತಾದ ಯೋಜನೆಗಳಲ್ಲಿ ಅಗತ್ಯವಾಗುವ ಭೂಕೆಲಸದ ಗಾತ್ರ (ವಾಲ್ಯೂಮ್) ಮತ್ತು ಇನ್ನಿತರ ಪ್ರಮುಖ ದತ್ತಾಂಶಗಳ ಬಗ್ಗೆ ಇಲ್ಲಿ ತಿಳಿದುಕೊಳ್ಳಬಹುದು. (ಇ) ಮಿಲಿಟರಿ ಮೋಜಣಿ: ಮಿಲಿಟರಿ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಮೋಜಣಿಗಳನ್ನು ಇಲ್ಲಿ ನಡೆಸಲಾಗುತ್ತದೆ. (ಈ) ಗಣಿಮೋಜಣಿ : ಈ ಮೋಜಣಿಯಿಂದ ನೆಲದಲ್ಲಿ ಹುದುಗಿರುವ ಖನಿಜ ಸಂಪತ್ತಿನ ಪರಿಮಾಣದ ಅಂದಾಜು ತಿಳಿಯುವುದು ಸಾಧ್ಯ. (ಉ) ಭೂವೈಜ್ಞಾನಿಕ ಮೋಜಣಿ : ಭೂಮಿಯ ಮೇಲೆ ಮತ್ತು ಒಳಗೆ ವ್ಯಾಪಿಸಿರುವ ಹಲವು ಸ್ತರಗಳ ಇರುವಿಕೆ, ಲಕ್ಷಣ ಮುಂತಾದ ವಿಚಾರಗಳನ್ನು ಇಲ್ಲಿ ತಿಳಿಯಬಹುದು. (ಊ) ಪುರಾತತ್ತ್ವೀಯ ಮೋಜಣಿ: ಪಳೆಯುಳಿಕೆ, ನೆಲದಡಿಯಲ್ಲಿ ಹುದುಗಿ ಹೋಗಿರುವ ನಾಗರಿಕತೆಯ ಅವಶೇಷಗಳು ಮೊದಲಾದವನ್ನು ಅರಿತುಕೊಳ್ಳಲು ಹಾಗೂ ಅಭ್ಯಸಿಸಲು ಮಾಡುವ ಮೋಜಣಿ.

(3) ಉಪಕರಣ ರೀತ್ಯ ವರ್ಗೀಕರಣ (ಅ) ಸರಪಳಿ ಮೋಜಣಿ (ಚೇನ್ ಸರ್ವೆ). (ಆ) ದಿಕ್ಸೂಚಿ ಮೋಜಣಿ (ಕಂಪಾಸ್ ಸರ್ವೆ), (ಇ) ಸಮತಲ ಮೇಜು ಮೋಜಣಿ (ಪ್ಲೇನ್‌ಟೇಬಲ್ ಸರ್ವೆ), (ಈ) ಪಾತಳಿ ಮೋಜಣಿ (ಲೆವೆಲಿಂಗ್ ಸರ್ವೆ), (ಉ) ಅಂತರಕೋನಮಾಪಕ ಮೋಜಣಿ (ತಿಯೋಡಲೈಟ್ ಸರ್ವೆ), (ಊ) ಟ್ಯಾಕಿಯೋಮೆಟ್ರಿಕ್ ಮೋಜಣಿ, (ಋ) ಛಾಯಾಚಿತ್ರ ಮೋಜಣಿ.

ಮೋಜಣಿಯ ತತ್ತ್ವಗಳು : ಇದರಲ್ಲಿ ಎರಡು ಮೂಲತತ್ತ್ವಗಳಿವೆ. ಈ ತತ್ತ್ವಗಳ ಮೇಲೆ ಹಲವು ಬಗೆಯ ಮೋಜಣಿಯ ವಿಧಿವಿಧಾನಗಳು ನಿಂತಿವೆ.

(1) ಮೋಜಣಿಯನ್ನು ಇಡೀ ಪ್ರದೇಶದಿಂದ (ಹೋಲ್ ಏರಿಯ) ಆಂಶಿಕ ಪ್ರದೇಶಕ್ಕೆ ನಡೆಸುವುದು: ಮೋಜಣಿಯಲ್ಲಿ ಅತ್ಯಂತ ನಿಖರವಾಗಿ ನಿಯಂತ್ರಣ ಬಿಂದುಗಳನ್ನು (ಕಂಟ್ರೋಲ್ ಪಾಯಿಂಟ್ಸ್) ಊರ್ಜಿತಗೊಳಿಸುವುದು ಮೊದಲ ಹಂತ. ಹಾರಿಜೀಯ ನಿಯಂತ್ರಣ ಬಿಂದುಗಳನ್ನು (ಹಾರಿಜಾಂಟಲ್ ಕಂಟ್ರೋಲ್ ಪಾಯಿಂಟ್ಸ್) ತ್ರಿಭುಜನ (ಟ್ರೈಯಾಂಗ್ಯುಲೇಷನ್) ರೀತ್ಯ ಅಥವಾ ನಿಷ್ಕೃಷ್ಟ ಪಥದಲ್ಲಿ (ಪ್ರಿಸೈಸ್ ಟ್ರ್ಯಾವರ್ಸ್) ನೆಲೆಗೊಳಿಸಬೇಕಾಗುತ್ತದೆ. ಹೀಗೆ ತ್ರಿಭುಜನ ರೀತ್ಯ ನಡೆಸಲು ಮೋಜಣಿಗೆ ಒಳಪಡಿಸಬೇಕಾದ ಪ್ರದೇಶವನ್ನು ದೊಡ್ಡ ದೊಡ್ಡ ತ್ರಿಭುಜಗಳ ಆಕಾರದಲ್ಲಿ ನಿಖರತೆಯಿಂದ ವಿಭಾಗಿಸಲಾಗುವುದು. ಈ ತ್ರಿಭುಜಪ್ರದೇಶಗಳನ್ನು ಮತ್ತೆ ಇನ್ನಷ್ಟು ಚಿಕ್ಕ ಚಿಕ್ಕ ತ್ರಿಭುಜಗಳನ್ನಾಗಿ ವಿಭಾಗಿಸಿ ಮೋಜಣಿ ನಡೆಸಿದ್ದಲ್ಲಿ ಅಷ್ಟೊಂದು ನಿಖರತೆಯ ಮೋಜಣಿಯಂತಲ್ಲದಿದ್ದರೂ ಫಲಿತಾಂಶದಲ್ಲಿ ನಿರ್ಲಕ್ಷಿಸಬಹುದಾದಂಥ ದೋಷ ಮಾತ್ರ ಉಳಿಯುತ್ತದೆ ಅಷ್ಟೆ. ಈ

ವಿಧಾನದಿಂದ ಸಂಗ್ರಹಿತದೋಷಗಳನ್ನು ತಡೆಯಬಹುದು ಮಾತ್ರವಲ್ಲದೆ ಅವನ್ನು ನಿಯಂತ್ರಿಸಬಹುದು ಕೂಡ. ಆಂಶಿಕ ಪ್ರದೇಶದಿಂದ ಇಡೀ ಪ್ರದೇಶಕ್ಕೆ ಮಾಡುವ ರೀತಿಯಲ್ಲಿ ಮೋಜಣಿ ನಡೆಸಿದ್ದಲ್ಲಿ ಸಣ್ಣ ದೋಷಗಳೇ ಬಲು ದೊಡ್ಡದಾಗಿ ಬೆಳೆದು, ನಿಯಂತ್ರಣ ಬಿಂದುಗಳ ಸಂಬಂಧ ಕೈತಪ್ಪಿಹೋಗುವ ಸಾಧ್ಯತೆ ಉಂಟು.

(2) ಹೊಸ ನಿಲ್ದಾಣ ಸ್ಥಾನವನ್ನು (ಸ್ಟೇಷನ್ ಪಾಯಿಂಟ್) ದೃಢಪಡಿಸಿಕೊಳ್ಳಬೇಕಾದರೆ ಕೊನೆಯ ಪಕ್ಷ ಎರಡು ಸ್ವತಂತ್ರ ಪ್ರಕ್ರಿಯೆಗಳಿಂದ ನಿರ್ಧರಿಸಬೇಕಾಗುತ್ತದೆ. ರೇಖೀಯಮಾಪನ. ಕೋನೀಯಮಾಪನ ಅಥವಾ ಎರಡೂ ಒಟ್ಟಾರೆ ಸೇರಿದ ಮಾಪನಗಳಿಂದ ನಿರ್ಧರಿಸಿದ ಬಿಂದುಗಳಿಂದ ಹೊಸ ನಿಲ್ದಾಣಗಳ ಸ್ಥಾನವನ್ನು ಪಡೆಯಬಹುದು. ಉದಾಹರಣೆಗೆ ಸರಪಳಿ ಮೋಜಣಿಯ ಸಂದರ್ಭದಲ್ಲಿ ಮುಖ್ಯರೇಖೆ ಮತ್ತು ನಿಲ್ದಾಣಬಿಂದುಗಳ ಮಾಪನೆಯನ್ನು ನಕ್ಷೆಯಲ್ಲಿ ರೂಪಿಸುವಾಗ ಅವನ್ನು ಪ್ರತಿಬಂಧರೇಖೆಯಿಂದ (ಚೆಕ್‌ಲೈನ್) ಪರೀಕ್ಷೆಗೆ ಒಳಪಡಿಸಬೇಕಾಗುತ್ತದೆ.

**ವಿವಿಧ ಪ್ರಕಾರದ ಮೋಜಣಿಗಳು:** 1. ಸರಪಳಿ ಮೋಜಣಿ : ಈ ಪ್ರಕಾರದ ಮೋಜಣಿಯಲ್ಲಿ ಕೇವಲ ರೇಖೀಯ (ಲೀನಿಯರ್) ಮಾಪನೆಯನ್ನು ಮಾಡಲಾಗುತ್ತದೆ. ಚಿಕ್ಕ ಪ್ರದೇಶದ, ತೆರೆದ ಬಯಲಿನಲ್ಲಿಯ ಎಲ್ಲ ಬಗೆಯ ಸಮತಲ ವಿವರಗಳನ್ನು ಪೂರ್ಣವಾಗಿ ಈ ವಿಧಾನದಿಂದ ಪಡೆಯಬಹುದು. ಈ ಮೋಜಣಿಯಲ್ಲಿ ಪ್ರದೇಶವನ್ನು ತ್ರಿಭುಜದ ಜಾಲಗಳನ್ನಾಗಿ ಮಾಡುವುದರಿಂದ ಅವುಗಳ ಭುಜಗಳನ್ನು ಮತ್ತು ಪಾದವನ್ನು ಸುಲಭವಾಗಿ ಅಳೆಯಬಹುದು. ಈ ತ್ರಿಭುಜಗಳು ಸುಸಂಬದ್ಧವಾಗಿದ್ದರೆ ಉತ್ತಮ ಫಲಿತಾಂಶ ದೊರಕುತ್ತದೆ. ಸುಸಂಬದ್ಧ ತ್ರಿಭುಜವೆಂದರೆ ಅದರ ಯಾವುದೇ ಕೋನ $30^0$ಗಿಂತ ಕಡಿಮೆಯೂ $120^0$ಗಿಂತ ಜಾಸ್ತಿಯೂ ಇರುವುದಿಲ್ಲ.

2. ದಿಕ್ಸೂಚಿ ಮೋಜಣಿ : ಸರಪಳಿ ಮೋಜಣಿಯಲ್ಲಿ ತಿಳಿಸಿದಂತೆ ಸಮತಲವಾಗಿರುವ ಚಿಕ್ಕ ಪ್ರದೇಶದಲ್ಲಿ ನಡೆಸುವ ಮೋಜಣಿಗೆ ಸರಪಳಿಯೊಂದೇ ಸಾಕು. ಆದರೆ ವಿಶಾಲಪ್ರದೇಶ ಇಲ್ಲವೆ ಬೆಟ್ಟಪ್ರದೇಶಗಳಲ್ಲಿ ಮೋಜಣಿ ನಡೆಸುವುದಾದರೆ ಸರಪಳಿಯ ಜೊತೆಗೆ ಕೋನವನ್ನು ತಿಳಿಸುವ ಉಪಕರಣವನ್ನು ಬಳಸಬೇಕಾಗುತ್ತವೆ. ಕೋನ ಮಾಪಿಸಲು ಮೋಜಣಿದಾರರ ದಿಕ್ಸೂಚಿ (ಸರ್ವೇಯರ್ಸ್ ಕಂಪಾಸ್) ಮತ್ತು ಮುಪ್ಪಟಗಜು ದಿಕ್ಸೂಚಿ (ಪ್ರಿಸಮ್ಯಾಟಿಕ್ ಕಂಪಾಸ್) ಬಲು ಉಪಯೋಗಕ್ಕೆ ಬರುತ್ತದೆ. ಇವನ್ನು ವಿದ್ಯುತ್ ಕಂಬಗಳ ಸನಿಹದಲ್ಲಿ ಬಳಸಬಾರದು. ಏಕೆಂದರೆ, ದಿಕ್ಸೂಚಿಯ ಕಾಂತ ಸ್ಥಳೀಯ ಆಕರ್ಷಣೆಗೆ ಈಡಾಗಿ ಮಾಪನನಿರ್ಧರಣೆಯಲ್ಲಿ ಏರುಪೇರುಗಳುಂಟಾಗುವ ಸಾಧ್ಯತೆ ಇರುತ್ತದೆ.

3. ಸಮತಲಮೇಜು ಮೋಜಣಿ : ನಕ್ಷಾರೀತ್ಯಾ ಮೋಜಣಿ ನಡೆಸುವ ಒಂದು ವಿಧಾನ. ಇದರಲ್ಲಿ ಪ್ರದೇಶದ ವೀಕ್ಷಣೆ ಮತ್ತು ಅದನ್ನು ಸ್ಥಳದಲ್ಲೇ ಹಾಳೆಯ ಮೇಲೆ ರೂಪಿಸುವುದೇ ಕ್ರಮ. ಏಕಕಾಲದಲ್ಲಿ ಎರಡೂ ಕಾರ್ಯಗಳು ಒಂದೆಡೆಯೇ ನಡೆಯುತ್ತವೆ. ಪ್ರದೇಶವೊಂದರ ಭೂವಿವರ, ನೇರ ಅಳತೆ, ಬಂಧಿತಬಿಂದುಗಳು ಮೊದಲಾದ ವಿವರಗಳನ್ನು ಕೊಡುವ ನಕ್ಷಾ ಕೈಪಿಡಿ ಈ ಮೋಜಣಿಗೆ ನೆರವಾಗುತ್ತದೆ. ಈ ಪ್ರಕಾರದಲ್ಲಿ ದಿಕ್ಸೂಚಿ ಮತ್ತು ದೂರದರ್ಶಕೀಯ ಅಲಿಡೇಡ್ ಎಂಬ ಉಪಕರಣಗಳನ್ನು ಬಳಸಲಾಗುತ್ತದೆ. ದಟ್ಟವಾದ ಕಾಡು ಹಾಗೂ ಹೆಚ್ಚು ಮಳೆ ಬರುವ ಪ್ರದೇಶದಲ್ಲಿ ಈ ಪ್ರಕಾರದ ಮೋಜಣಿ ಪ್ರಯೋಜನವಾಗುವುದಿಲ್ಲ.

4. ಪಾತಳಿ ಮೋಜಣಿ: ಇದು ಲಂಬಕ್ಷೇತ್ರ ಮಾಪನಕ್ಕೆ ಸಂಬಂಧಿಸಿದೆ. ಈ ಬಗೆಯ ಮೋಜಣಿಯಲ್ಲಿ (ಅ) ಯಾವುದೇ ಬಿಂದುವಿನ ಪಾತಳಿಯನ್ನು ಒಂದು ದತ್ತರೇಖೆಯಿಂದ ಅಳೆಯುವುದು ಹಾಗೂ (ಆ) ಎರಡು ಬಿಂದುಗಳ ಪರಸ್ಪರ ಲಂಬ ಎತ್ತರವನ್ನು ಒಂದು ದತ್ತರೇಖೆಯಿಂದ ನಿಶ್ಚಯಿಸುವುದು ಇದೆ. ಈ ಕಾರ್ಯಕ್ಕೆ ಸಾಮಾನ್ಯವಾಗಿ ಡಂಪಿ ಲೆವಲ್ ಎಂಬ ಉಪಕರಣವನ್ನು ಬಳಸಲಾಗುವುದು.

5. ಅಂತರಕೋನಮಾಪಕ ಮೋಜಣಿ : ಅಂತರಕೋನಮಾಪಕ (ಥಿಯೋಡಲೈಟ್) ಎಂಬ ಉಪಕರಣದಿಂದ ಲಂಬಕೋನ (ಹಾರಿಜಾಂಟಲ್ ಆಂಗಲ್) ಮತ್ತು ಊರ್ಧ್ವಕೋನಗಳನ್ನು (ವರ್ಟಿಕಲ್ ಆಂಗಲ್) ಅತ್ಯಂತ ನಿಖರವಾಗಿ ಅಳೆಯಬಹುದು. ನಿಖರ ಮೋಜಣಿ ಅಗತ್ಯವಾದೆಡೆ ಈ ವಿಧಾನ ಬಲು ಉಪಯುಕ್ತ. ಲಂಬಕೋನ, ಊರ್ಧ್ವಕೋನ, ಮೋಜಣಿಯ ರೇಖೆಯನ್ನು ವಕ್ರಪಥದಂತೆ ಮುಂದುವರೆಸುವುದು, ಏರಿಳಿತಗಳನ್ನು (ಗ್ರೇಡ್ಸ್) ಕೊಡುವುದು, ಎರಡು ಬಿಂದುಗಳ ಪಾರಸ್ಪರಿಕ ಅಂತರ ವ್ಯತ್ಯಾಸ ತಿಳಿಯುವುದು, ತಿರುವುಗಳನ್ನು ಹಾಕುವುದು ಮುಂತಾದ ಸಂದರ್ಭಗಳಲ್ಲಿ ಈ ಮೋಜಣಿ ಪ್ರಕಾರ ಬಳಕೆಯಲ್ಲಿದೆ.

ಈ ಪ್ರಕಾರದ ಮೋಜಣಿಯ ಉದ್ದೇಶ ಭೂಮಿಯ ಮೇಲಿನ ಬಿಂದುಗಳ ಪಾರಸ್ಪರಿಕ ಹಾಗೂ ಅವುಗಳ ನಿರಪೇಕ್ಷ ಸ್ಥಾನಗಳನ್ನು (ಆಬ್ಸೊಲ್ಯೂಟ್ ಪೋಸಿಷನ್ಸ್) ಅಧಿಕ ನಿಖರತೆಯಿಂದ ನಿರ್ಧರಿಸುವುದು. ಪಾರಸ್ಪರಿಕ ಸ್ಥಾನವನ್ನು ಉದ್ದ ಮತ್ತು ಕೋನಗಳ ಮುಖಾಂತರವೂ ನಿರಪೇಕ್ಷ ಸ್ಥಾನವನ್ನು ಅಕ್ಷಾಂಶ, ರೇಖಾಂಶ ಮತ್ತು ಸರಾಸರಿ ಸಮುದ್ರಮಟ್ಟದ ರೀತ್ಯವೂ ನಿರ್ಧರಿಸಲಾಗುತ್ತದೆ. ಇಲ್ಲಿ ಸಮತಲ ಹಿಡಿತಬಿಂದುಗಳನ್ನು ತ್ರಿಭುಜನ ವಿಧಾನದ ರೀತ್ಯ ತಿಳಿಯಲಾಗುತ್ತದೆ. ಈ ತ್ರಿಭುಜನ ಮೋಜಣಿಯಲ್ಲಿ ಹಲವಾರು ತ್ರಿಭುಜಗಳ ಗುಂಪೇ ಇದ್ದು ಅವುಗಳ ಪಾದರೇಖೆ ಮತ್ತು ಕೋನಗಳನ್ನು ನಿಖರವಾಗಿ ಅಳೆಯಲಾಗುತ್ತದೆ.

6. ಟ್ಯಾಕಿಯೋಮೆಟ್ರಿಕ್ ಮೋಜಣಿ (ದೂರಭಂದ ಮಾಪಕ): ಕೋನಮಾಪನ ವಿಧಾನದಿಂದ ಮೋಜಣಿ ನಡೆಸುವ ವಿಧಾನವಿದು. ಈ ಮೋಜಣಿಯಲ್ಲಿ ಮಸೂರಬಿಂಬಗಳ ಮೂಲಕ ಭೂಪ್ರದೇಶದ ಲಂಬ ಉದ್ದ ಮತ್ತು ಊರ್ಧ್ವ ಔನ್ನತ್ಯಗಳನ್ನು ಪರೋಕ್ಷವಾಗಿ ಕಂಡುಹಿಡಿಯುವುದಿದೆ. ಈ ವಿಧಾನ ತ್ವರಿತ ಹಾಗೂ ಅನುಕೂಲವಾದ್ದು. ಇದು ಸರಪಳಿ ಮೋಜಣಿಗಿಂತ ಕಡಿಮೆ ನಿಖರತೆಯಿಂದ ಕೂಡಿದ್ದರೂ ಕಷ್ಟತರವಾದ ಪ್ರದೇಶ, ಹಳ್ಳಕೊಳ್ಳ, ಸರೋವರ ಮುಂತಾದೆಡೆಗಳಲ್ಲಿ ಸರಪಳಿ ಮೋಜಣಿ ನಡೆಸುವುದು ಅಸಾಧ್ಯವಾದಲ್ಲೆಲ್ಲ ಈ ಬಗೆಯ ಮೋಜಣಿ ಬಲು ಉಪಯುಕ್ತ. ಈ ಮೋಜಣಿಯನ್ನು ಸಮಪಾತಳಿನಕ್ಷೆ (ಕಾಂಟೂರ್ ಮ್ಯಾಪ್ಸ್) ತಯಾರಿಸಲು ಹೆಚ್ಚಾಗಿ ಬಳಸಲಾಗುತ್ತದೆ.

7. ಛಾಯಾಚಿತ್ರ ಮೋಜಣಿ : ಈ ಪ್ರಕಾರದ ಮೋಜಣಿಯಲ್ಲಿ ಯಾವ ಪ್ರದೇಶ ಮೋಜಣಿಗೆ ಒಳಪಡಬೇಕಾಗಿದೆಯೋ ಆ ಪ್ರದೇಶದ ಹಲವಾರು ಛಾಯಾಚಿತ್ರಗಳನ್ನು ವಿಮಾನದಿಂದ ತೆಗೆದು, ಪ್ರದೇಶದ ಮೋಜಣಿ ವಿಶ್ಲೇಷಣೆ ನಡೆಸುವುದಿದೆ. ಕೃತಕ ಭೂಉಪಗ್ರಹಗಳಿಂದಲೂ ಅಭ್ಯಸಿಸುವುದೂ ಆಗಿದೆ (ಉದಾಹರಣೆಗೆ ಇನ್‌ಸ್ಯಾಟ್–1ಸಿ). ಹೀಗೆ ತೆಗೆದ ಛಾಯಾಚಿತ್ರಗಳಿಂದ ಭೂಮಿಯ ಜಲ ಮತ್ತು ಖನಿಜಸಂಪತ್ತನ್ನು ತಿಳಿಯಲಾಗುತ್ತಿದೆ. ಈ ಮೋಜಣಿ ವಿಧಾನವನ್ನು ಮಿಲಿಟರಿ ಕಾರ್ಯಾಚರಣೆಗಳಲ್ಲೂ ಬಳಸಿಕೊಳ್ಳುವುದಿದೆ.

ಜೆಫ್‌ಕಾಟ್: ಎತ್ತರ ಮತ್ತು ದೂರವನ್ನು ಅಳೆಯಲು ಬಳಸುವ ಒಂದು ಮೋಜಣಿ ಉಪಕರಣ. ಇದನ್ನು ಟ್ಯಾಕಿಯೊಮೀಟರ್, ಟ್ಯಾಕಿಮೀಟರ್ ಎಂದು ಕರೆಯುವುದಿದೆ. ಈ ಉಪಕರಣದಲ್ಲಿ ಅಡಕವಾಗಿರುವ ಸ್ಟೇಡಿಯ ಮುಳ್ಳು ಎತ್ತರ ಮತ್ತು ದೂರಕ್ಕೆ ಅನುಗುಣವಾಗಿ ಸ್ವತಶ್ಚಲಿಯಾಗಿ ವ್ಯತ್ಯಾಸ ತೋರಿಸುತ್ತದೆ. ಈ ಮುಳ್ಳಿನ ಅಂತರವನ್ನು ಈ ಉಪಕರಣಕ್ಕೆ ಸಂಬಂಧಿಸಿದ ಸ್ಥಿರಸಂಖ್ಯೆಯಿಂದ ಗುಣಿಸಿದರೆ ಲಂಬ ದೂರವನ್ನು ನಿರ್ಧರಿಸಬಹುದು. ಎರಡು ಬಿಂದುಗಳ ನಡುವಣ ಪ್ರದೇಶದಲ್ಲಿ ಎತ್ತರದಲ್ಲಿಯ ವ್ಯತ್ಯಾಸವನ್ನೂ ಈ ಉಪಕರಣದ ಸಹಾಯದಿಂದ ಕಂಡುಹಿಡಿಯಬಹುದು. ಕೆಲವೊಂದು ಉಪಕರಣಗಳಲ್ಲಿ ಸ್ಟೇಡಿಯ ಮುಳ್ಳಿನ ಬದಲಿಗೆ ಪ್ಲಾಟಿನಮ್ ಮುಳ್ಳನ್ನು ಅಳವಡಿಸಿರುವುದೂ ಉಂಟು. ಸಮಕೋನವನ್ನು ಅಳೆಯುವ ಆವಶ್ಯಕತೆಯೇ ಇಲ್ಲದೆ ಈ ಉಪಕರಣದ ಸಹಾಯದಿಂದ ಲಂಬ ದೂರವನ್ನೂ ಎತ್ತರವನ್ನೂ ನಿರ್ಧರಿಸಬಹುದು. ಇದಕ್ಕೆ ಹೊಂದಿಸಿರುವ ದೂರದರ್ಶಕವನ್ನು ಕೆಳಕ್ಕೂ ಮೇಲಕ್ಕೂ ತಿರುಗಿಸಿದಾಗ ಉಪಕರಣದಲ್ಲಿರುವ ನಿಶ್ಚಲ ಮುಳ್ಳು ಹಾಗೂ ಅದರ ಮೇಲ್ಭಾಗದಲ್ಲಿರುವ ಸ್ಟೇಡಿಯ ಮುಳ್ಳು ಮಾನದಂಡದ ಮೇಲೆ ಒಂದು ನಿರ್ದಿಷ್ಟ ಅಂತರವನ್ನು ಸೂಚಿಸುತ್ತದೆ. ಈ ಅಂತರಸಂಖ್ಯೆಯನ್ನು ಸ್ಥಿರಸಂಖ್ಯೆ ನೂರರಿಂದ ಗುಣಿಸಿದರೆ ಲಂಬ ದೂರವನ್ನು ನಿರ್ಧರಿಸಬಹುದು. ಹಾಗೆಯೇ ನಿಶ್ಚಲಮುಳ್ಳು ಮತ್ತು ಅದರ ಕೆಳಭಾಗದ ಸ್ಟೇಡಿಯ ಮುಳ್ಳು ಮಾನದಂಡದ ಮೇಲೆ ಸೂಚಿಸುವ ಅಂತರವನ್ನು ಸ್ಥಿರಸಂಖ್ಯೆ ಹತ್ತರಿಂದ ಗುಣಿಸುವುದರಿಂದ ಎತ್ತರದಲ್ಲಿಯ ವ್ಯತ್ಯಾಸವನ್ನು ಕಂಡುಹಿಡಿಯಬಹುದು.

ಈ. ಮೋಜಣಿ ಸಲಕರಣೆಗಳು : ಮೋಜಣಿಕಾರ್ಯದಲ್ಲಿ ಉಪಯೋಗಿಸುವ ಕೆಲವೊಂದು ಉಪಕರಣಗಳಿವು : ಟ್ರಾನ್‌ಸಿಟ್, ಸರಪಳಿ, ಗಡಿಸ್ಥಂಭ, ಆ್ಯರೋ (ಬಾಣಗಳು), ಸರ್ವೇಯರ್ಸ್ ಕಂಪಾಸ್ (ಮೋಜಣಿದಾರರ ದಿಕ್ಸೂಚಿ), ಪ್ರಿಸಮ್ಯಾಟಿಕ್ ಕಂಪಾಸ್ (ಅಶ್ರಕೀಯ ದಿಕ್ಸೂಚಿ), ಪ್ಲೇನ್ ಟೇಬಲ್ (ಸಮತಲ ಮೇಜು) ಉಪಕರಣಗಳು, ಡಂಪಿ ಲೆವಲ್, ಅಬ್ನಿ ಲೆವೆಲ್, ಬಾಕ್ಸ್ ಸೆಕ್ಸ್‌ಟೆಂಟ್, ಥಿಯೊಡಲೈಟ್ (ಅಂತರಕೋನಮಾಪಕ), ಡಿಲ್ಸೆಸ್ ಕ್ಲೈನೋಮೀಟರ್, ಆಪ್ಟಿಕಲ್ ಸ್ಕೈರ್, ಸಿಲೋನ್ ಘಾಟ್ ಟ್ರೇಸರ್, ಪ್ಲ್ಯಾನಿಮೀಟರ್, ಸಬ್‌ಟೆನ್ಸ್‌ಬಾರ್, ಪೆಂಟೊಗ್ರಾಫ್, ಸೌಂಡಿಂಗ್ ರಾಡ್ ಇತ್ಯಾದಿ. ಮೋಜಣಿಯ ವಿವಿಧ ಅಗತ್ಯಗಳಿಗೆ ಅನುಗುಣವಾಗಿ ಆಯಾ ಸಲಕರಣೆಗಳನ್ನು ಬಳಸಿಕೊಳ್ಳುವುದಿದೆ. (ಜೆ.ಎಂ.ಎಸ್.;ಆರ್.ಎಚ್.ಎಸ್.)

**ಮೋಡಗಳು:** ವಾಯುಮಂಡಲದ ತೇವಾಂಶ ಘನೀಕರಿಸಲ್ಪಟ್ಟು ವಾಯುವಿನಲ್ಲೇ ತೇಲುವಷ್ಟು ಹಗುರವಾಗಿರುವ ಸೂಕ್ಷ್ಮ ನೀರಿನ ಹನಿಗಳ ಅಥವಾ ಹಿಮಕಣಗಳ ರಾಶಿಯೇ ಮೋಡ. ಅತಿಸೂಕ್ಷ್ಮವಾದರೂ ಕಣ್ಣಿಗೆ ಗೋಚರಿಸುವಂತಹ, ಸಾಮಾನ್ಯವಾಗಿ 0.02–0.06 ಮಿಮೀ ವ್ಯಾಸವುಳ್ಳ ನೀರಿನ ಕಣಗಳೊ ಅಥವಾ ಅದೇ ಪ್ರಮಾಣದ ಹಿಮಕಣಗಳು ಕೂಡಿ ರಾಶಿಗೊಂಡಿರುವುದೇ ಮೋಡ. ಧೂಳಿನ ಕಣ, ಹೊಗೆಯ ಕಣ, ಉಪ್ಪಿನ ಕಣ, ಪುಷ್ಪ ಪರಾಗ ಮುಂತಾದ ದ್ರವ್ಯಕಣಗಳ ಮೇಲೆ ತೇವಾಂಶ ಸಂಚಯವಾಗಿ ಘನೀಕರಣಗೊಳ್ಳುವುದರಿಂದ ಮೋಡಗಳು ಸೃಷ್ಟಿಯಾಗುವವು. ವಾಯುವಿನ ಊರ್ಧ್ವಮುಖ ಚಲನಾಕ್ರಿಯೆಯ ಪರಿಣಾಮದಿಂದ ಏರ್ಪಡುವ ಘನೀಕರಣ ಅಥವಾ ಬಾಷ್ಪ ಘನೀಕರಣದಿಂದಲೂ ತೇವಾಂಶವುಳ್ಳ ವಾಯು ಪರ್ವತಗಳು ಅಥವಾ ಔನ್ನತ್ಯ ಭೂಸ್ವರೂಪಗಳ ಮೇಲೇರಿದಂತೆ ಉಂಟಾಗುವ ಸ್ಥಿರೋಷ್ಣ ಶೀತಲನ ಕ್ರಿಯೆಯ ಪರಿಣಾಮದಿಂದಲೂ ಹಾಗೂ ಉಷ್ಣ ಮತ್ತು ಶೀತವಾಯು ರಾಶಿಗಳು ಸಂಧಿಸಿದಾಗಲೂ ಮೋಡಗಳು ನಿರ್ಮಾಣಗೊಳ್ಳುವವು.

ಮೋಡಗಳ ನಿರ್ಮಾಣದ ಹಂತದಲ್ಲಿ ಸ್ಥಿರೋಷ್ಣ ಪ್ರಕ್ರಿಯೆಯನ್ನು ತಿಳಿಯುವುದು ಅವಶ್ಯಕ. ವಿವಿಧ ಕಾರಣಗಳಿಂದ ವಾಯು ಮೇಲೇರುವುದು ಅಥವಾ ಇಳಿಯುವುದರಿಂದ ವಾಯು ಉಷ್ಣಾಂಶವನ್ನು ಕಳೆದುಕೊಳ್ಳುವುದು ಅಥವಾ ಪಡೆಯುವುದು. ಇದನ್ನು ಸ್ಥಿರೋಷ್ಣವೆನ್ನುವರು. ವಾಯು ಮೇಲೇರಿದಂತೆ ತಂಪಾಗುತ್ತಾ ವಿಕಸನಗೊಳ್ಳುವುದು. ಇದಕ್ಕೆ ಪ್ರತಿಯಾಗಿ ವಾಯು ಕೆಳಗಿಳಿದಂತೆ ಶಾಖವನ್ನು ಪಡೆಯುತ್ತಾ ಸಂಕುಚನಗೊಳ್ಳುವುದು. ಇಂತಹ ಸಂದರ್ಭಗಳಲ್ಲಿ ವಾಯು ಶಾಖವನ್ನು ಹೊರವಲಯಗಳಿಂದ ಪಡೆದುಕೊಳ್ಳದೆ ಹಾಗೂ ಹೊರವಲಯಗಳಿಗೆ ಶಾಖವನ್ನು ಬಿಟ್ಟುಕೊಡದೆ, ಅನಿಲಗಳ ವಿಕಸನ ಮತ್ತು ಸಂಕುಚನಗಳಿಂದ ಉಷ್ಣಾಂಶದಲ್ಲಿ ಬದಲಾವಣೆಯಾಗುವುದು. ಈ ಪ್ರಕ್ರಿಯೆ ಅಥವಾ ಉಷ್ಣಾಂಶದ ಬದಲಾವಣೆಯನ್ನೇ ಸ್ಥಿರೋಷ್ಣ ಬದಲಾವಣೆ ಎನ್ನುವರು. ಇದರಲ್ಲಿ ಎರಡು ವಿಧ. 1. ಶುಷ್ಕ ಸ್ಥಿರೋಷ್ಣ ಬದಲಾವಣೆ ಮತ್ತು 2. ಆರ್ದ್ರಸ್ಥಿರೋಷ್ಣ ಬದಲಾವಣೆ. ಜಲಸಂಪೂರಿತವಾಗದ ವಾಯು ಮೇಲೇರಿದಂತೆ ಹೆಚ್ಚು ಉಷ್ಣಾಂಶವನ್ನು ಕಳೆದುಕೊಳ್ಳುವುದು. ಹಾಗೆಯೇ ಕೆಳಗಿಳಿಯುವಾಗಲೂ ಹೆಚ್ಚು ಉಷ್ಣಾಂಶವನ್ನು ಪಡೆಯುವುದು. ಇದನ್ನು ಶುಷ್ಕ ಸ್ಥಿರೋಷ್ಣ ಬದಲಾವಣೆ ಎನ್ನುವರು. ಇದಕ್ಕೆ ಪ್ರತಿಯಾಗಿ ಸಂಪೂರಿತಗೊಂಡ ವಾಯು ಮೇಲೇರಿದಂತೆ ಕಡಿಮೆ ಉಷ್ಣಾಂಶವನ್ನು ಕಳೆದುಕೊಳ್ಳುವಂತೆಯೇ ಕೆಳಗಿಳಿಯುವಾಗಲೂ ಅಷ್ಟೇ ಪ್ರಮಾಣದ ಶಾಖವನ್ನು ಕಳೆದುಕೊಳ್ಳುವುದು. ಇದನ್ನು ಆರ್ದ್ರ ಸ್ಥಿರೋಷ್ಣವೆನ್ನುವರು. ಈ ರೀತಿಯಲ್ಲಿ ಶಾಖವನ್ನು ಕಳೆದುಕೊಂಡ ಜಲಸಂಪೂರಿತ ವಾಯು ಇಬ್ಬನಿ ಬಿಂದುವಿನ ಮಟ್ಟವನ್ನು ತಲುಪಿದಾಗ ಘನೀಕರಣ ಕ್ರಿಯೆ ಪ್ರಾರಂಭಗೊಂಡು ನೀರಿನ ಅಥವಾ ಹಿಮದ ಸೂಕ್ಷ್ಮಕಣಗಳ ರಾಶಿಯಾಗಿ ಮೋಡಗಳು ಉತ್ಪತ್ತಿಯಾಗುವವು.

ಕ್ಯೂಮುಲಸ್

ಪ್ರಾಮುಖ್ಯತೆ: ಮೋಡಗಳು ವಾಯುಮಂಡಲದ ಮೂಲಾಂಶಗಳಲ್ಲಿ ಒಂದಾಗಿದ್ದು, ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ. ಇವು ವೃಷ್ಟಿರೂಪಗಳಿಗೆ ಮೂಲವಾಗಿವೆ. ಆದರೆ ಎಲ್ಲಾ ಮೋಡಗಳಿಂದ ವೃಷ್ಟಿಯನ್ನು ನಿರೀಕ್ಷಿಸಲಾಗುವುದಿಲ್ಲ. ಆದರೂ ಮೋಡವಿಲ್ಲದೇ ವೃಷ್ಟಿಯಿಲ್ಲ. ಸೂರ್ಯ ಹಾಗೂ ಭೂವಿಕಿರಣದಿಂದ ಬರುವ ಶಾಖದ ಭಾಗಾಂಶವನ್ನು ಹೀರಿಕೊಳ್ಳುವ ಮತ್ತು ಪ್ರತಿಫಲಿಸುವ ಮೂಲಕ ಮೋಡಗಳು ಉಷ್ಣಾಂಶದ ಆಯವ್ಯಯದ ಮೇಲೆ ಪ್ರಭಾವ ಬೀರುವವು. ವಾಯುಮಂಡಲದ ಇತರ ಮೂಲಘಟಕಗಳ ಮೇಲೂ ಪ್ರಭಾವ ಬೀರುತ್ತ ವಾಯುಗುಣ ಮತ್ತು ಹವಾಗುಣವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ವರ್ಗೀಕರಣ: ಮೋಡಗಳನ್ನು ಎತ್ತರ, ಆಕಾರ, ವರ್ಣ, ಪಾರದರ್ಶಕತ್ವ ಮತ್ತು ಉತ್ಪತ್ತಿಗಳನ್ನಾಧರಿಸಿ ವಿಂಗಡಿಸಬಹುದಾಗಿದೆ. 19ನೆಯ ಶತಮಾನದವರೆಗೂ ವೈಜ್ಞಾನಿಕವಾಗಿ ಮೋಡಗಳ ವರ್ಗೀಕರಣವಾಗಿರಲಿಲ್ಲ. ಇಂಗ್ಲಿಷ್ ಔಷಧಶಾಸ್ತ್ರಜ್ಞ ಹಾಗೂ ಪ್ರಕೃತಿಶಾಸ್ತ್ರಜ್ಞನಾದ ಲ್ಯೂಕ್ ಹೋವರ್ಡ್ 1803ರಲ್ಲಿ ಮೋಡಗಳನ್ನು ವಿಂಗಡಿಸಿದ. ಈತನ ವರ್ಗೀಕರಣ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾರ್ವತ್ರಿಕವಾಗಿ ಪುರಸ್ಕರಿಸಲ್ಪಟ್ಟಿತ್ತು. ಇದನ್ನಾಧರಿಸಿ 1890ರಲ್ಲಿ ವಿಶ್ವಪವನ ಶಾಸ್ತ್ರ ಸಂಸ್ಥೆ ಮೋಡಗಳನ್ನು 4 ಪ್ರಮುಖ ಗುಂಪು ಹಾಗೂ 10 ಉಪವಿಭಾಗಗಳಾಗಿ ವಿಂಗಡಿಸಿತು. ಅವುಗಳನ್ನು ಲ್ಯಾಟಿನ್ ಭಾಷಾ ಸಂಕೇತಾಕ್ಷರಗಳಿಂದ ಹೆಸರಿಸಲಾಗಿದೆ. ಈ ವಿಂಗಡಣೆ ಬಹುವಾಗಿ ಮೋಡಗಳ ನಿರ್ಮಾಣದ ಎತ್ತರವನ್ನಾಧರಿಸಿದೆ.

1. ಹಿಮಕಣ ಮೋಡಗಳು (ಸಿರಸ್): ವಾಯುಮಂಡಲದ ಅತ್ಯುನ್ನತ ಮಟ್ಟದಲ್ಲಿ ಶ್ವೇತವರ್ಣದ ರೇಷ್ಮೆಯ ಎಳೆಯಂತೆ ರಚನೆಯುಳ್ಳ ಮೋಡಗಳು. ಕುಂತಲ ಮೋಡಗಳೆಂತಲೂ ಕರೆಯುವರು. ಇವು ಸಣ್ಣ ಸಣ್ಣ ಹಿಮಕಣಗಳಿಂದ ರೂಪಿತವಾಗಿದ್ದು ಪಾರದರ್ಶಕತ್ವವುಳ್ಳವು. ಹಿಮದ ಹಳಕುಗಳ ರಾಶಿಯಿಂದಾದುದರಿಂದ ಇವುಗಳನ್ನು ಸಿರಸ್ ಎನ್ನುವರು. ಲ್ಯಾಟಿನ್ ಭಾಷೆಯಲ್ಲಿ ಸಿರಸ್ ಎಂದರೆ ಗುಂಗುರು ಛಾ ಎಂದರ್ಥ. ನೋಡಲು ಕುದುರೆಯ ಬಾಲವನ್ನು ಹೋಲುವವು. ಸೂರ್ಯೋದಯ ಮತ್ತು ಸೂರ್ಯಾಸ್ತಗಳ ಸಂದರ್ಭದಲ್ಲಿ ವರ್ಣರಂಜಿತವಾಗಿ ಕಾಣಿಸುತ್ತವೆ. ಇವು ಸ್ವಚ್ಛ ಹವಾಮಾನದ ಸೂಚಕ. ಈ ಮೋಡಗಳಿಂದ ಯಾವುದೇ ವೃಷ್ಟಿರೂಪದ ಸೃಷ್ಟಿಯಿಲ್ಲ.

2. ಹಿಮಕಣರಾಶಿ ಮೋಡಗಳು (ಸಿರೂ ಕ್ಯೂಮುಲಸ್): ವಾಯುಮಂಡಲದ ಅತಿ ಎತ್ತರದಲ್ಲಿ ಹಿಮಹಳಕುಗಳಿಂದ ರೂಪಿತಗೊಂಡು ಅಲ್ಲಲ್ಲಿ ಸಣ್ಣಗುಡ್ಡೆಗಳಂತೆ ರಾಶಿಗೊಂಡ ಹಾಗೂ ಸಾಲುಸಾಲಾಗಿ ಅಲೆಗಳಂತೆ ಗೋಚರಿಸುವ ಹಿಮಕಣರಾಶಿ ಮೋಡಗಳು. ಇವುಗಳ ನಡುವೆ ನೀಲಿ ಆಕಾಶ ಕಾಣಿಸುತ್ತದೆ. ಬೇಸಗೆಯಲ್ಲಿ ತಂಡತಂಡವಾಗಿ ಕಡಲ ತಡಿಗೆ ಬರುವ ಮ್ಯಾಕರಲ್ ಜಾತಿಯ ಮೀನಿನ ಮೇಲ್ಮೈಯನ್ನು ಹೋಲುವ ರಚನೆಯುಳ್ಳ ಈ ಮೋಡಗಳನ್ನು ಮ್ಯಾಕರಲ್ ಮೋಡ ಅಥವಾ ಕುಂತಲ ಒಡ್ಡು ಮೋಡ ಎಂತಲೂ ಕರೆಯುವರು. ಇವು 6 ಕಿಮೀ ಗಳಿಗೂ ಮೇಲ್ಮಟ್ಟದಲ್ಲಿ ಕಂಡುಬರುತ್ತವೆ.

ಸಿರಸ್

3. ಹಿಮಕಣ ಪದರು ಮೋಡಗಳು (ಸಿರೂ ಸ್ಟ್ರಾಟಸ್): ಇವು ಸು. 7 ಕಿಮೀ ಗಳಿಗಿಂತಲೂ ಎತ್ತರದ ವಾಯುಮಂಡಲದಲ್ಲಿ ಏಕ ಪ್ರಕಾರವಾಗಿ ತೆಳುವಾದ ಬಿಳಿಯ ವರ್ಣದ ಹಾಳೆಯಂತೆ ಗೋಚರಿಸುತ್ತವೆ. ಇವು ಸಮುದ್ರ ತೀರದ ಮರಳಿನ ತೆರೆಯನ್ನು ಹೋಲುವವು. ಹೀಗಾಗಿ ಹಿಮಕಣಗಳು ತೆರೆಗಳಂತಿರುವುದರಿಂದ ಹಿಮ ಕಣ ಪದರು ಮೋಡ ಅಥವಾ ಕುಂತಲಸ್ತರ ಮೋಡಗಳೆಂದು ಕರೆಯುವರು. ಈ ಮೋಡಗಳೊಳಗಿಂದ ಸೂರ್ಯನ ಕಿರಣಗಳು ಹಾಯ್ದು ಬರುವಾಗ ವಕ್ರೀಭವನವೇರ್ಪಟ್ಟು ಸೂರ್ಯನ ಸುತ್ತಲೂ ತೇಜೋಮಂಡಲ ವೇರ್ಪಡುವುದು. ಇದು ಮುಂದೆ ಸಂಭವಿಸಬಹುದಾದ ಬಿರುಗಾಳಿಯ ಮುನ್ಸೂಚನೆಯಾಗಿರುತ್ತದೆ.

ಹಿಮಹಳಕುಗಳಿಂದ ಬೆಳಕು ವಕ್ರೀಕರಣಗೊಳ್ಳುವುದರಿಂದ ಸೂರ್ಯ–ಚಂದ್ರರ ಸುತ್ತಲೂ ವರ್ತುಲಾಕೃತಿಯ ತೇಜೋಮಂಡಲ ವೇರ್ಪಡುವುದು. ಆದರೆ ಪ್ರಭಾಮಂಡಲ ನೀರಿನ ಹನಿಗಳಲ್ಲಿ ಬೆಳಕು ವಕ್ರವಿಯೋಜನೆಗೊಳ್ಳುವುದರಿಂದ ನಿರ್ಮಾಣಗೊಳ್ಳುವುದು. ತೇಜೋಮಂಡಲಕ್ಕಿಂತ ಪ್ರಭಾಮಂಡಲ ವ್ಯಾಸದಲ್ಲಿ ಚಿಕ್ಕದಾಗಿರುತ್ತದೆ.

4. ಉನ್ನತ ರಾಶಿಮೋಡಗಳು (ಆಲ್ಟೊ ಕ್ಯೂಮುಲಸ್): ಇವು ಪ್ರಚಲನ ಪ್ರವಾಹ ಪ್ರಕ್ರಿಯೆಯಿಂದ ನಿರ್ಮಿತವಾಗುತ್ತದೆ. ನೋಡಲು ಗುಡ್ಡೆ ಹಾಕಿದ ಉಣ್ಣೆಯಂತೆ ಗೋಚರಿಸುವವು. ಬಿಳಿ ಅಥವಾ ನಸುಕಂದು ವರ್ಣದಿಂದ ಕೂಡಿರುತ್ತವೆ. ಆಂಗ್ಲಭಾಷೆಯ ಆಲ್ಟೋ ಶಬ್ದಕ್ಕೆ ಉನ್ನತ ಎಂದೂ ಮತ್ತು ಲ್ಯಾಟಿನ್ ಭಾಷೆಯ ಕ್ಯುಮುಲಸ್‌ಗೆ ರಾಶಿ ಎಂದೂ ಅರ್ಥ. ಹೀಗಾಗಿ ಇವುಗಳಿಗೆ ಉನ್ನತ ರಾಶಿಮೋಡ ಎಂದು ಹೆಸರು ಬಂದಿದೆ. ಬೇಸಗೆಯಲ್ಲಿ ಹೆಚ್ಚು ಗೋಚರಿಸುತ್ತದೆ. ಇವು ಪಾರದರ್ಶಕವಾಗಿದ್ದು ಅವುಗಳೊಳಗಿಂದ ಸೂರ್ಯ–ಚಂದ್ರರ ಬೆಳಕು ಹಾಯ್ದು ಬರುವುದು. ಸು. 24–6 ಕಿಮೀ ಎತ್ತರದ ವಾಯುಮಂಡಲದಲ್ಲಿ ನಿರ್ಮಿತವಾಗುವವು.

5. ಉನ್ನತ ಪದರು ಮೋಡಗಳು (ಆಲ್ಟೊ ಸ್ಟ್ರಾಟಸ್): ನಸು ಬೂದು ಅಥವಾ ನೀಲಿ ಹಾಳೆಯಂತೆ ನಿರ್ಮಿತಗೊಳ್ಳುವ ಮೋಡಗಳು. ಉನ್ನತ ರಾಶಿಮೋಡಗಳಷ್ಟೇ ಎತ್ತರದಲ್ಲಿ ರಚನೆಯಾಗಿದ್ದು ಹಿಮಕಣ ಪದರುಮೋಡಗಳಂತೆ ಗೋಚರಿಸುವವು. ಇವು

ದಟ್ಟವಾಗಿದ್ದು, ಅವುಗಳೊಳಗಿಂದ ಸೂರ್ಯ–ಚಂದ್ರರನ್ನು ವೀಕ್ಷಿಸಿದರೆ, ಅವು ಮಂದ ಪ್ರಕಾಶದೊಂದಿಗೆ ಬೆಳಗುವವು. ಇಂಥ ಮೋಡಗಳಿಂದ ಪ್ರಭಾಮಂಡಲವೇನೂ ನಿರ್ಮಾಣವಾಗುವುದಿಲ್ಲ. ಇವು ನಿರಂತರವಾದ ಜಡಿಮಳೆಯನ್ನು ಸುರಿಸುತ್ತವೆ.



ಆಲ್ಟೊಸ್ಟ್ರಾಟಸ್

6. ವೃಷ್ಟಿ ಪದರು ಮೋಡಗಳು (ನಿಂಬಸ್ ಸ್ಟ್ರಾಟಸ್): ವಾಯುಮಂಡಲದ ಕೆಳಮಟ್ಟದಲ್ಲಿ ಗೋಚರಿಸುವ ದಟ್ಟವಾದ ಪದರಿನಂತೆ ಗೋಚರಿಸುವ ಮೋಡಗಳು ನಿಂಬಸ್ ಪದದಿಂದ ಬಂದದ್ದು. ನಿಂಬೋ ಎಂದರೆ ವೃಷ್ಟಿ ಮೇಘವೆಂದರ್ಥ. ಈ ವಿಧದ ಮೋಡಗಳಲ್ಲಿ ಅಪರಿಮಿತ ಜಲಾಂಶ ಸಾಂದ್ರೀಕರಣಗೊಂಡಿರುವುದರಿಂದ ಧಾರಾಕಾರವಾದ ಮಳೆಯನ್ನು ಸುರಿಸುತ್ತವೆ. ಆದರೆ ಮಳೆ ಬೀಳುವ ಸಂದರ್ಭದಲ್ಲಿ ಮಿಂಚು, ಗುಡುಗು ಅಥವಾ ಆಲಿಕಲ್ಲುಗಳನ್ನೊಳಗೊಂಡಿರುವುದಿಲ್ಲ. ಇವು ದಟ್ಟವಾದ ಬೂದು ಬಣ್ಣ ತಳೆದಿರುತ್ತವೆ. ಸಾಕಷ್ಟು ಎತ್ತರದವರೆಗೆ ವ್ಯಾಪಿಸಿರುವುದರಿಂದ ಇತರ ಮೋಡಗಳೊಂದಿಗೂ ಮಿಶ್ರಣಗೊಳ್ಳುವುದರಿಂದ ಇವು ಮಿಶ್ರ ಮೋಡಗಳಾಗಿ ಪರಿಣಮಿಸುವವು.

ವಿವಿಧ ಮೋಡಗಳು

7. ಪದರು ಮೋಡಗಳು (ಸ್ಟ್ರಾಟಸ್): ಲ್ಯಾಟಿನ್ ಭಾಷೆಯ ಸ್ಟ್ರಾಟಮ್ ಎಂಬ ಪದದಿಂದ ಸ್ಟ್ರಾಟಸ್ ಶಬ್ದ ಬಳಕೆಗೆ ಬಂದಿದೆ. ಸ್ಟ್ರಾಟಸ್ ಎಂದರೆ ಸ್ತರ ಅಥವಾ ಪದರುವೆಂದರ್ಥ. ಭೂಮೇಲ್ಮೈಗೆ ಸಮೀಪವಿರುವ ವಾಯುಮಂಡಲದ ಕೆಳಮಟ್ಟದಲ್ಲಿ ಸಮರೂಪ ಹಾಳೆಯಂತೆ ರೂಪಿತವಾದ ತಗ್ಗುಮೋಡಗಳೇ ಪದರು ಮೋಡ. ಇವುಗಳನ್ನು ಭೂಮಟ್ಟದಲ್ಲಿ ನೋಡಿದಾಗ ಕಾವಳವನ್ನು ಹೋಲುತ್ತವೆ. ಆದಾಗ್ಯೂ ಭೂಮೇಲ್ಮೈಗೆ ಹೊಂದಿಕೊಂಡಿರುವುದಿಲ್ಲ. ಇವು 24 ಕಿಮೀ ಎತ್ತರದವರೆಗೆ ರಚನೆಯಾಗಿರುತ್ತವೆ. ಇವು ಮೇಲ್ಮುಖ ವಾಯುಪ್ರವಾಹದಿಂದ ಅಥವಾ ಚದುರುವಿಕೆ ಕ್ರಿಯೆಯಿಂದ ನಿರ್ಮಾಣವಾಗುತ್ತವೆ. ಹೆಚ್ಚು ಘನೀಕರಣಕ್ಕೊಳಪಟ್ಟಾಗ ವೃಷ್ಟಿಪದರು ಮೋಡಗಳಾಗಿ ಪರಿಣಮಿಸುವವು. ಹಾಗೆಯೇ ಮಾರುತಗಳಿಂದ ಚದುರಿಸಲ್ಪಟ್ಟಾಗ ಹಲವು ತುಂಡುಗಳಾಗಿ ವಿಭಜಿಸಲ್ಪಡುತ್ತವೆ. ಈ ಸ್ವರೂಪದಲ್ಲಿರುವಾಗ ಅವುಗಳನ್ನು ತುಣುಕು ಪದರುಮೋಡಗಳು (ಫ್ರಾಸ್ಟೊ ಸ್ಟ್ರಾಟಸ್) ಎನ್ನುವರು. ಪದರು ಮೋಡಗಳನ್ನು ಮುಸುಕಿದ್ದು ಇವುಗಳಿಂದ ತುಂತುರು ಮಳೆ ಬೀಳುವುದು.

8. ಪದರು ರಾಶಿ ಮೋಡಗಳು (ಸ್ಟ್ರಾಟೊ ಕ್ಯೂಮಲಸ್): ಅಚ್ಚ ಬೂದು, ಬಿಳಿ ಬಣ್ಣದ ಗೋಳಾಕಾರದ ಮೋಡಗಳ ರಾಶಿ. ಇವು ಜಲಸಮೃದ್ಧವೂ, ತೂಕವೂ ಉಳ್ಳ ಏಕರೂಪದ ಮೋಡಗಳು. ಹೀಗಾಗಿ ಈ ಮೋಡಗಳು ವಾಯುಮಂಡಲದ ಕೆಳಸ್ತರದಲ್ಲಿ ಕಂಡುಬರುವವು. ಅಂದರೆ ಸು. 2400 ಮೀ ಎತ್ತರದಲ್ಲಿ ನಿರ್ಮಿತವಾದರೂ ಕೆಲವೊಮ್ಮೆ ಇದಕ್ಕೂ ತಗ್ಗಿನಲ್ಲಿ ರಚನೆಯಾಗುವುದುಂಟು. ವಾಯುಮಂಡಲದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿರುತ್ತವೆ. ಅದರಲ್ಲೂ ಉಷ್ಣವಲಯದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿರುತ್ತದೆ. ಮೇಲ್ಭಾಗ ಮಾರುತಗಳು ಬೀಸುವ ಕಡೆಗೆ ಬಾಗಿರುತ್ತವೆ. ಇಂತಹ ಮೋಡಗಳು ವಾಯುವಿನ ಮೇಲ್ಮುಖ ಹಾಗೂ ಕೆಳಮುಖ ಚಲನೆಯಿಂದ ಉತ್ಪತ್ತಿಯಾಗುವವು. ಘನೀಕರಣ ಕ್ರಿಯೆ ಗರಿಷ್ಠ ಮಟ್ಟವನ್ನು ಮುಟ್ಟಿದಾಗ ಈ ಮೋಡಗಳಿಂದ ಮಳೆ ಹಾಗೂ ಹಿಮವೃಷ್ಟಿ ಪ್ರಾರಂಭಗೊಳ್ಳುವವು.

9. ರಾಶಿ ಮೋಡಗಳು (ಕ್ಯೂಮುಸಲ್): ಸಮತಟ್ಟಾದ ತಳಭಾಗವುಳ್ಳ ಗೋಪುರಾಕೃತಿಯ ದಟ್ಟವಾದ ವ್ಯಾಪಕ ಮೋಡಗಳು. ಇವುಗಳಿಗೆ ಒಡ್ಡುಮೋಡವೆಂದು ಮತ್ತೊಂದು ಹೆಸರು. ಇವು ನೋಡಲು ರಾಶಿ ಹಾಕಿದ ಹತ್ತಿ ಅಥವಾ ಉಣ್ಣೆಯಂತೆ ಗೋಚರಿಸುತ್ತವೆ. ಹೂಕೋಸಿನಾಕಾರದಲ್ಲಿ ನಿರ್ಮಾಣವಾಗುವವು. ಪರಿಸರಣ ಕ್ರಿಯೆಯಿಂದ ಉಂಟಾಗುವ ಈ ಮೋಡಗಳು ಕಪ್ಪು ವರ್ಣದಿಂದ ಕೂಡಿರುತ್ತವೆ. ಆದರೆ ಘನೀಕರಣ ಹೊಂದಿರುವ ಈ ಮೋಡಗಳ ಮೇಲ್ಭಾಗವು ನಸುಗಪ್ಪು ವರ್ಣವನ್ನು ಹೊಂದಿರುತ್ತವೆ. ಸಂಜೆಯ ವೇಳೆಗೆ ಪರಿಸರಣವಹನವು ಕಡಿಮೆಯಾಗುವುದರೊಂದಿಗೆ ತಿಳಿಯಾದ ವಾತಾವರಣವನ್ನು ಮೂಡಿಸುತ್ತದೆ. ಅನಂತರ ಈ ಮೋಡಗಳು ಅದೃಶ್ಯವಾಗುತ್ತಾ ಇತರ ಪ್ರಕಾರದ ಮೋಡಗಳೊಂದಿಗೆ ಮಿಶ್ರಣಗೊಳ್ಳುವವು. ಉದಾ: ರಾಶಿ ವೃಷ್ಟಿ ಮೋಡಗಳು.

10. ರಾಶಿ ವೃಷ್ಟಿ ಮೋಡಗಳು (ಕ್ಯೂಮುಲೋ ನಿಂಬಸ್): ಅತ್ಯಂತ ಎತ್ತರಕ್ಕೆ ಊರ್ಧ್ವಮುಖವಾಗಿ ಬೆಳವಣಿಗೆ ಹೊಂದಿ ರಾಶಿಯಂತೆ ದಟ್ಟವಾಗಿ ನಿರ್ಮಿತಗೊಂಡಿರುವ ಮೋಡಗಳು. ಇವುಗಳ ಮೇಲ್ಭಾಗ ವಿಸ್ತಾರವಾಗಿ ಹರಡಿಕೊಂಡಿದ್ದು ನೋಡಲು ಅಡಿಗಲ್ಲಿನಂತೆ ಕಾಣಿಸುವವು. ಪಕ್ಕದಿಂದ ನೋಡಿದರೆ ಜಾಜ್ವಲ್ಯಮಾನವಾದ ಬಿಳಿಯ ಬಣ್ಣದಿಂದಲೂ ಮತ್ತು ತಳಭಾಗ ಕಪ್ಪುವರ್ಣದಿಂದ ಗೋಚರಿಸುವವು. ಈ ವಿಧದ ಮೋಡಗಳಿಂದ ಸಿಡಿಲುಗುಡುಗು, ಮಿಂಚು ಮತ್ತು ಆಲಿಕಲ್ಲುಗಳನ್ನೊಳಗೊಂಡ ಮುಸಲಧಾರೆಯ ಮಳೆ ಬೀಳುವುದು. ಭೂಮಟ್ಟದಿಂದ ವೀಕ್ಷಿಸಿದರೆ ಸಂಪೂರ್ಣವಾಗಿ ಆಕಾಶವೇ ಮುಸುಕಿದಷ್ಟು ಈ ಮೋಡಗಳು ಹರಡಿದ್ದು ವೃಷ್ಟಿಪದರು ಮೋಡಗಳಂತೆ ಕಂಡುಬರುವವು.

ಮಿಂಚು: ಮಿಂಚು ಎಂಬ ಪದದ ಸಾಮಾನ್ಯ ಅರ್ಥ ಆಕಾಶದಲ್ಲಿ ವಿದ್ಯುತ್ತಿನ ಬೆಳಕು ಕಾಣಿಸುವುದು. ವಿಶಾಲಾರ್ಥದಲ್ಲಿ ಮೋಡಗಳಿಂದ ಬಿಡುಗಡೆಯಾಗಿ ಕ್ಷಣ ಮಾತ್ರದಲ್ಲಿ ಕಣ್ಣು ಕೋರೈಸುವಷ್ಟು ಪ್ರಕಾಶಿಸಿ ದೃಗ್ಗೋಚರವಾಗುವ ಬೆಳಕು. ಗಾತ್ರದಲ್ಲಿ ದೊಡ್ಡದಾದ ಮಳೆಯ ಹನಿಗಳ ಒಡೆತ ಹಾಗೂ ತೀವ್ರಗತಿಯಲ್ಲಿ ವಾಯುವಿನ ಪ್ರಚಲನ ಪ್ರವಾಹಗಳಲ್ಲಿ ಸ್ಥಾಯಿ ವಿದ್ಯುತ್ತಿನ ಪ್ರಬಲ ಶಕ್ತಿಯ ಬಿಡುಗಡೆಯ ಅನುಷಂಗಿಕ ಬೆಳವಣಿಗೆಯ ಪರಿಣಾಮದಿಂದ ಮಿಂಚು ಉತ್ಪತ್ತಿಯಾಗುವುದು.

ಮಳೆಯ ಹನಿಗಳು ಗುಡುಗು ಬಿರುಗಾಳಿಯಲ್ಲಿ (ಥಂಡರ್ ಸ್ಟಾರಮ್) ದೊಡ್ಡದಾಗುತ್ತಾ ಒಡೆದು ಹೋಗಲು ಪ್ರಾರಂಭಿಸುವವು. ದಪ್ಪ ಹನಿಗಳು ಮೋಡದ ತಳಭಾಗದಲ್ಲಿ ಸಂಗ್ರಹವಾಗುತ್ತವೆ. ಸೂಕ್ಷ್ಮವಾದ ನೀರಿನ ಕಣಗಳು ಹಾಗೂ ನೀರಾವಿಗಳು ಮೋಡದ ಮೇಲ್ಬದಿ ಮತ್ತು ಹೊರಬದಿಗೆ ಒಯ್ಯಲ್ಪಡುವವು. ಮಳೆಯ ಹನಿಗಳು ಒಡೆದು ಹೋಗುವುದಕ್ಕೆ ಮೊದಲು ಧನ ಮತ್ತು ಋಣ

ಮೋಡಗಳ ವರ್ಗೀಕರಣ ಮತ್ತು ಪೂರಕ ವಿವರ.

| ಹೆಸರು | ಸಂಕೇತಾಕ್ಷರ | ಪ್ರಮುಖ ಘಟಕ | ಎತ್ತರ (ಕಿಮೀ) | ವೃಷ್ಟಿ |
|---|---|---|---|---|
| **ಅ. ಉನ್ನತ ಮೋಡಗಳು, (5.5 ರಿಂದ 13.7 ಕಿಮೀ ಎತ್ತರ)** | | | | |
| 1. ಹಿಮಕಣಮೋಡ | CI | ಹಿಮಕಣ | 5–13 | ಇಲ್ಲ |
| 2. ಹಿಮಕಣರಾಶಿಮೋಡ | CC | ಹಿಮಕಣ | 5–13 | ಇಲ್ಲ |
| 3. ಹಿಮಕಣ ಪದರು ಮೋಡ | CS | ಹಿಮಕಣ | 5–13 | ಇಲ್ಲ |
| **ಆ. ಮಧ್ಯಮ ಮೋಡಗಳು (2ರಿಂದ 5.5 ಕಿಮೀ ಎತ್ತರ)** | | | | |
| 4. ಉನ್ನತ ರಾಶಿ ಮೋಡ | AC | ನೀರು | 2–7 | ಸ್ವಲ್ಪ/ಇಲ್ಲ |
| 5. ಉನ್ನತ ಪದರು ಮೋಡ | AS | (ಸ್ವಲ್ಪ ಹಿಮ) | 2–7 | ಒಮ್ಮೊಮ್ಮೆ |
| **ಇ. ಕೆಳಮಟ್ಟದ ಮೋಡಗಳು (ಸಮುದ್ರ ಮಟ್ಟದಿಂದ 2 ಕಿಮೀ)** | | | | |
| 6. ವೃಷ್ಟಿ ಪದರು ಮೋಡ | NS | ನೀರು + ಹಿಮ | 1–3 | ನಿರಂತರ ಮಳೆ ಅಥವಾ ಹಿಮವೃಷ್ಟಿ |
| 7. ಪದರು ಮೋಡ | ST | ನೀರು | $0–^1/_2$ | ತುಂತರು/ಇಲ್ಲ |
| 8. ಪದರು ರಾಶಿಮೋಡ | SC | ನೀರು | $^1/_2–2$ | ಕಡಿಮೆ/ಇಲ್ಲ |
| **ಈ. ಊರ್ಧ್ವಮುಖ ಬೆಳೆವಣಿಗೆಯ ಮೋಡಗಳು** | | | | |
| 9. ರಾಶಿ ಮೋಡ | CU | ನೀರು | $^1/_2–2$ | ಸ್ವಲ್ಪ |
| 10. ರಾಶಿ ವೃಷ್ಟಿಮೋಡ | CB | ನೀರು+ಹಿಮ | $^1/_2–2$ | ಧಾರಾಕಾರವಾದ ಗುಡುಗು ಮಿಂಚಿನಿಂದ ಕೂಡಿದ ಮಳೆ |

ವಿದ್ಯುತ್ತನ್ನು ಸಮಾನ ಪ್ರಮಾಣದಲ್ಲಿ ಹೊಂದಿ ತಟಸ್ಥ ಗುಣವುಳ್ಳವಾಗಿ ಪರಿಣಮಿಸುವವು. ಪ್ರಬಲವಾದ ಪ್ರಚಲನ ಪ್ರವಾಹದಿಂದ ಒಡೆಯಲ್ಪಡುವ ಧನ ಮತ್ತು ಋಣ ಹನಿಗಳು ತಮ್ಮ ವಿದ್ಯುತ್ ವಹನ ಕ್ರಿಯೆಯ ಮೂಲಕ ಮೋಡಗಳ ವಿಶಿಷ್ಟ ಭಾಗದಲ್ಲಿ ವಿದ್ಯುತ್‌ನ್ನು ಸಂಗ್ರಹಗೊಳಿಸುತ್ತವೆ. ಹೀಗೆ ಸಂಗ್ರಹಗೊಂಡ ವಿದ್ಯುತ್ ಪರಮಾವಧಿ ಮಟ್ಟವನ್ನು ತಲುಪಿದಾಗ ಅದು ಮೋಡದ ಒಂದು ಬದಿಯಿಂದ ಮತ್ತೊಂದು ಬದಿಗೆ ಪ್ರವಹಿಸುವುದು. ಇದಕ್ಕೆ ಮೋಡ ಮತ್ತು ಭೂಮಿಗಳ ನಡುವೆ ಅಥವಾ ಮೋಡದ ವಿವಿಧ ಭಾಗಗಳ ನಡುವೆ ಏರ್ಪಡುವ ಅಸಮಾನವಾದ ವಿದ್ಯುತ್ ಸಾಮರ್ಥ್ಯ ಕಾರಣ. ಇದರಿಂದ ಮೋಡದ ಮೇಲ್ಭಾಗ ಧನಾತ್ಮಕವಾಗಿಯೂ ಮತ್ತು ಕೆಳಭಾಗ ಋಣಾತ್ಮಕವಾಗಿಯೂ ವರ್ತಿಸುವವು. ವಿದ್ಯುತ್ ಸಾಮರ್ಥ್ಯದಲ್ಲಿ ವ್ಯತ್ಯಾಸ ಅತಿಯಾದಾಗ ವಿದ್ಯುತ್ ವಿಸರ್ಜನೆಗೊಂಡು ಮಿಂಚು ಉಂಟಾಗುವುದು. ಮೋಡದಿಂದ ಮೋಡಕ್ಕೆ ಅಥವಾ ಮೋಡದೊಳಗೆ ಮಿಂಚು ಹರಿಯುವುದು ಸಾಮಾನ್ಯ. ಕೆಲವೊಮ್ಮೆ ಋಣ ವಿದ್ಯುತ್ ಧ್ರುವವಾಗಿರುವ ಮೋಡದ ತಳದಲ್ಲಿರುವ ಭೂಮಿ ಧನಧ್ರುವದಂತೆ ವರ್ತಿಸಿದಾಗ ಮಿಂಚು ಭೂಮಿಗೆ ಹರಿಯುವುದು. ಈ ರೀತಿಯ ಮಿಂಚು ಅತ್ಯಂತ (ಶೇ.10) ಕಡಿಮೆ.

ಗುಡುಗು–ಸಿಡಿಲು: ಮಿಂಚಿನ ರೂಪದಲ್ಲಿ ವಿದ್ಯುತ್ ಬಿಡುಗಡೆಯಾಗುವಾಗ ಅಡ್ಡಬರುವ ವಾಯು ಬಲವಂತವಾಗಿ ತ್ವರಿತಗತಿಯಲ್ಲಿ ಎರಡೂ ಬದಿಗಳಿಗೂ ದೂಡಲ್ಪಟ್ಟು ಅಲ್ಲಿ ನಿರ್ವಾತವೇರ್ಪಡುವುದು. ಈ ನಿರ್ವಾತದ (ಶೂನ್ಯತೆ) ಕಡೆಗೆ ಅಕ್ಕಪಕ್ಕದಿಂದ ವಾಯು ರಾಶಿಗಳು ಮಿಂಚಿನ ವೇಗದಲ್ಲೇ ನುಗ್ಗಿ ಬರುವಾಗ ಏರ್ಪಡುವ ಶಬ್ದ ತರಂಗವೇ ಗುಡುಗು. ಭೂಮಿಯ ಸೆಳೆತ ತೀವ್ರಗೊಂಡಾಗ ವಿದ್ಯುತ್ ಪ್ರವಾಹ ಸಿಡಿಲಾಗಿ ಪರಿಣಮಿಸುವುದು. ಮಿಂಚು ಮತ್ತು ಗುಡುಗುಗಳು ಏಕಕಾಲದಲ್ಲೇ ಏರ್ಪಟ್ಟರೂ ಬೆಳಕು ಮತ್ತು ಧ್ವನಿಗಳ ವೇಗಗಳಲ್ಲಿರುವ ವ್ಯತ್ಯಾಸದಿಂದ ಮಿಂಚು ಮೊದಲು ಗೋಚರಿಸುವುದು. (ಪಿ.ಎಂ.)

**ಮೋಹೋರೋವಿಚ್ ವಿಚ್ಛಿನ್ನತೆ:** ಭೂಮಿಯ ಹೊರಹೊದಿಕೆ (ಕ್ರಸ್ಟ್) ಮತ್ತು ಮ್ಯಾಂಟಲ್ ಭೂಪ್ರದೇಶ ಭಾಗವನ್ನು ಬೇರ್ಪಡಿಸುವ ವಲಯ (ಮೋಹೋರೋವಿಚ್ ಡಿಸ್‌ಕಂಟಿನ್ಯುಯಿಟಿ). ಯೂಗೋಸ್ಲಾವಿಯದ ಭೂವಿಜ್ಞಾನಿ ಎ. ಮೋಹೋರೋವಿಚ್ (1857–1936) ಎಂಬುವರು ಇದನ್ನು ಆವಿಷ್ಕಾರ ಮಾಡಿದ್ದರಿಂದ ಈ ವಿಚ್ಛಿನ್ನತೆಗೆ ಇವರ ಹೆಸರೇ ಅನ್ವರ್ಥವಾಗಿದೆ. ಮೋಹೋ ಎಂಬುದು ಹ್ರಸ್ವರೂಪ. ಖಂಡಗಳ ಕೆಳಭಾಗದಲ್ಲಿ ಸು. 10–70 ಕಿಮೀ ವರೆಗೂ ಸಾಗರತಳಗಳ ತಳಭಾಗದಿಂದ 6 ಕಿಮೀ ಕೆಳಗೂ ವ್ಯಾಪಿಸಿದೆ. ಈ ಭೂವಿಜ್ಞಾನಿ ಭೂಕಂಪನಗಳಿಂದ ಉಂಟಾಗುವ ಧಕ್ಕಾತರಂಗಗಳ ಗತಿಯನ್ನು ಅಧ್ಯಯನ ಮಾಡುತ್ತಿದ್ದಾಗ ಈ ವಿಚ್ಛಿನ್ನತೆ ಇರುವುದನ್ನು ಗುರುತಿಸಿದ (1909). ಧಕ್ಕಾತರಂಗಗಳು ಭೂಹೊರಹೊದಿಕೆಯ ಮೂಲಕ ಸೆಕೆಂಡಿಗೆ 6ರಿಂದ 7ಕಿಮೀ ವೇಗದಿಂದ ಚಲಿಸುತ್ತವೆ.

ಭೂಮಿಯ ಹೊರಹೊದಿಕೆಯ ಮೂಲಕ ಭೂವೈಜ್ಞಾನಿಕ ಅಧ್ಯಯನಗಳ ಸಲುವಾಗಿ ಮೋಹೋರೋವಿಚ್ ವಿಚ್ಛಿನ್ನತೆಯ ಪ್ರದೇಶದ ಕೆಳಗೆ ಒಂದು ರಂಧ್ರವನ್ನು ಕೊರೆಯಲು ಉದ್ದೇಶಿಸಲಾಗಿತ್ತು. ಈ ರಂಧ್ರಕ್ಕೆ ಮೋಹೋಲ್ ಎಂದು ಹೆಸರಿಡಲಾಯಿತು. ಭೂಮಿಯ ಪ್ರಾವಾರದ (ಮ್ಯಾಂಟಲ್) ರಚನೆ, ವಿಕಿರಣಪಟುತ್ವ ಮತ್ತು ಉಷ್ಣತೆಗಳ ವಿಚಾರವಾಗಿ ಮೋಹೋಲ್ ಯೋಜನೆ ಮಾಹಿತಿ ಒದಗಿಸುವುದೆಂದು ವಿಜ್ಞಾನಿಗಳು ಬಗೆದಿದ್ದರು. ಸಮುದ್ರದ ಮೇಲೆ ತೇಲು ವೇದಿಕೆಯನ್ನು (ಫ್ಲೋಟಿಂಗ್ ಪ್ಲ್ಯಾಟ್‌ಫಾರ್ಮ್) ಏರ್ಪಡಿಸಿ ಅಲ್ಲಿಂದ ರಂಧ್ರಕೊರೆಯುವ ಏರ್ಪಾಡು ನಡೆದಿತ್ತು. ಪ್ರಾಯೋಗಿಕ ರಂಧ್ರಕೊರೆತ ಪ್ರಾರಂಭವಾದದ್ದೂ ಉಂಟು. ಯೋಜನೆಗೆ ತಗಲುತ್ತಿದ್ದ ಹೆಚ್ಚುವರಿ ವೆಚ್ಚದ ಸಲುವಾಗೂ ಅಂತರಿಕ್ಷ ಸಂಶೋಧನೆ ಮತ್ತು ವಿಯೆಟ್ನಾಂ ಯುದ್ಧಗಳ ಸಲುವಾಗೂ ಈ ಯೋಜನೆಯನ್ನು ಕೈಬಿಡಲಾಯಿತು (1966). (ಕೆ.ಎಸ್.ಯು.)

**ಮ್ಯಾಂಗನೀಸ್ ಅದಿರು:** ಪ್ರಮುಖ ಮಿಶ್ರ ಲೋಹ ಖನಿಜ. ಇದನ್ನು ಉಕ್ಕಿನ ಕಾಠಿಣ್ಯತೆಯನ್ನು ಹೆಚ್ಚಿಸಲು ಬಳಸಲಾಗುವುದು. ಮ್ಯಾಂಗನೀಸ್ ಉತ್ಪನ್ನದ ಶೇ 90ರಷ್ಟನ್ನು ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಲ್ಲಿ ಬಳಸಲಾಗುವುದು. ಅಲ್ಲದೆ, ವಿದ್ಯುತ್ ಉಪಕರಣಗಳು, ಯಂತ್ರೋಪಕರಣಗಳು, ಗಾಜಿನ ತಯಾರಿಕೆ, ರಾಸಾಯನಿಕ ಕೈಗಾರಿಕೆಗಳಲ್ಲಿ, ಕ್ವಾಲಿಟಿ ಪ್ರಿಂಟಿಂಗ್, ಪಿಂಗಾಣಿ ಪದಾರ್ಥಗಳ ತಯಾರಿಕೆ, ಬೆಳ್ಳಿ ಮತ್ತು ಸೀಸಗಳನ್ನು ಕರಗಿಸಲು, ಪಾತ್ರೆಗಳಿಗೆ ಬಣ್ಣ ಹಾಕುವುದಕ್ಕೆ ಮುಂತಾದವುಗಳಲ್ಲಿ ಬಳಕೆ ಮಾಡಲಾಗುವುದು.

ವಿಧಗಳು: ಪ್ರಕೃತಿಯಲ್ಲಿ ಇದು ಅದಿರಿನ ರೂಪದಲ್ಲಿ ದೊರೆಯುತ್ತದೆ. ಪ್ರಮುಖ ಅದಿರುಗಳೆಂದರೆ ಪೈರೋಲೊಸೈಟ್, ಸಿಲೊಮಲೇನಾ ಮತ್ತು ಮ್ಯಾಗ್ನಸೈಟ್. ಪೈರೂಲೋಸೈಟ್ ಶೇ. 60, ಸಿಲೊಮೆಲೇನಾ ಶೇ. 40–60 ರಷ್ಟು ಮ್ಯಾಂಗನೀಸ್ ಅಂಶವನ್ನು ಒಳಗೊಂಡಿರುತ್ತದೆ. ಬ್ರೌನೈಲ್, ಹಾಸ್ಮಾಮನೈಟ್, ಪೊಲಿಯನೈಟ್, ರೋಡೋ ಕ್ರೋಸೈಟ್, ಮತ್ತು ರೋಡೋನೈಟ್ ಇತರ ಮ್ಯಾಂಗನೀಸ್ ಅದಿರುಗಳು.

ಹಂಚಿಕೆ ಮತ್ತು ಉತ್ಪಾದನೆ: ಪ್ರಪಂಚದ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ರಾಷ್ಟ್ರಗಳೆಂದರೆ ಚೀನ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಗ್ಯಾಬನ್, ಬ್ರೆಜಿಲ್, ಭಾರತ ಮತ್ತು ಮೆಕ್ಸಿಕೊ.

ಚೀನ: ಪ್ರಪಂಚದ ಅತಿ ಹೆಚ್ಚು ಮ್ಯಾಂಗನೀಸ್ ಉತ್ಪಾದಿಸುವ ರಾಷ್ಟ್ರ. 100 ಮಿ. ಮೆಟ್ರಿಕ್ ಟನ್‌ಗಳಷ್ಟು (ಶೇ. 20) ನಿಕ್ಷೇಪವಿದೆ. ಉತ್ಪಾದನೆ 43 ಲಕ್ಷಟನ್ನುಗಳು (2001). ಇಲ್ಲಿನ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ಪ್ರದೇಶಗಳು ಕ್ವಾಂಗ್ಸಿ, ಹುನಾನ್, ಕಿಯಾಂಗ್ಸು, ಚೆಕ್ವಾನ್, ಕಾನ್ಸು ಮತ್ತು ಯುನಾನ್ ಪ್ರಾಂತ್ಯಗಳು. ಚೀನ ಮ್ಯಾಂಗನೀಸ್ ರಫ್ತು ಮಾಡುತ್ತದೆ.

ದಕ್ಷಿಣ ಆಫ್ರಿಕ: ಎರಡನೆಯ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ರಾಷ್ಟ್ರ (ಶೇ. 14.5) ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ಕೇಂದ್ರ ಕಿಂಬರ್ಲಿಯ ವಾಯವ್ಯ ಭಾಗಕ್ಕಿರುವ ಪೋಸ್ಟ್ ಮೆಸ್‌ಬರ್ಗ್.

ಉಕ್ರೇನ್: ಉತ್ಪಾದನೆಯಲ್ಲಿ 3ನೆಯ ಸ್ಥಾನ (ಶೇ. 12) ನಿಕೊಪಾಲ್ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ಪ್ರದೇಶ. ಇತ್ತೀಚೆಗೆ ನಿಕೊಪಾಲ್ ಸಮೀಪವಿರುವ ಬೊಕ್‌ಸೊಯ್, ಕೊಕ್‌ಮ್ಯ, ಮ್ಯಾಂಗನೀಸ್ ಉತ್ಪಾದನೆಯಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ.

ಬ್ರೆಜಿಲ್: ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 10ರಷ್ಟನ್ನು ಉತ್ಪಾದಿಸುತ್ತಿದೆ. ಮ್ಯಾಂಗನೀಸ್ ದೊರೆಯುವ ಪ್ರದೇಶಗಳೆಂದರೆ ಮಿನಾಸ್ ಗೆರಾಯಿಸ್, ಬಾಹಿಯ ಮತ್ತು ಯುರುಕುಮ್ ಬೆಟ್ಟಗಳು.

ಆಸ್ಟ್ರೇಲಿಯ: ಉತ್ಪಾದನೆ ಶೇ. 8.7, ಮ್ಯಾಂಗನೀಸ್ ದೊರೆಯುವ ಪ್ರಾಂತ್ಯಗಳೆಂದರೆ. ವಿಕ್ಟೋರಿಯ, ಕ್ವೀನ್ಸ್‌ಲೆಂಡ್, ಮತ್ತು ಪಶ್ಚಿಮ ಆಸ್ಟ್ರೇಲಿಯ. ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ಗಣಿ ಲಿಯೋನಾರ.

ಅಮೆರಿಕ ಸಂಯುಕ್ತ ಸಂಸ್ಥಾನ: ಮಾಂಟನಾ, ದಕ್ಷಿಣ ಡಕೋಟ, ನ್ಯೂ ಮೆಕ್ಸಿಕೊ, ಅರ್ಕಾನ್ಸಸ್, ಅರಿಝೋನ, ಮತ್ತು ಜಾರ್ಜಿಯ ಪ್ರಾಂತ್ಯಗಳಲ್ಲಿ ಮ್ಯಾಂಗನೀಸ್ ದೊರೆಯುತ್ತದೆ.

ಭಾರತ: ಉತ್ತಮ ದರ್ಜೆಯ ಹಾಗೂ ವಿಫುಲವಾದ ಮ್ಯಾಂಗನೀಸ್ ನಿಕ್ಷೇಪವನ್ನು ಹೊಂದಿದೆ. ಉತ್ಪಾದನೆ ಶೇ. 6.9. ಒರಿಸ್ಸ ಪ್ರಮುಖ ಮ್ಯಾಂಗನೀಸ್ ಉತ್ಪಾದಕ ರಾಜ್ಯ. ಕರ್ನಾಟಕ, ಮಹಾರಾಷ್ಟ್ರ, ಗೋವ, ಆಂಧ್ರಪ್ರದೇಶ, ಜಾರ್ಖಂಡ್, ಗುಜರಾತ್, ರಾಜಸ್ಥಾನಗಳಲ್ಲಿಯೂ ಮ್ಯಾಂಗನೀಸ್ ಉತ್ಪಾದಿಸಲಾಗುತ್ತಿದೆ.

ಜಾರ್ಜಿಯ, ಗ್ಯಾಬನ್, ಜಪಾನ್, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಸಹ ಮ್ಯಾಂಗನೀಸ್ ಉತ್ಪಾದಿಸುತ್ತವೆ. ಪ್ರಪಂಚದ ಒಟ್ಟು ಮ್ಯಾಂಗನೀಸ್ ಉತ್ಪಾದನೆ 22 ದ. ಲ. ಟನ್ನುಗಳು (2001).

ಅಂತಾರಾಷ್ಟ್ರೀಯ ವ್ಯಾಪಾರ: ಪ್ರಪಂಚದ ಪ್ರಮುಖ ಉಕ್ಕು ಉತ್ಪಾದಿಸುವ ರಾಷ್ಟ್ರಗಳು ಮ್ಯಾಂಗನೀಸ್ ಅಮದು ಮಾಡಿಕೊಳ್ಳುವ ರಾಷ್ಟ್ರಗಳಲ್ಲಿ ಮುಖ್ಯವಾದುದು ಅಮೆರಿಕ ಸಂಯುಕ್ತ ಸಂಸ್ಥಾನ. ಇತರ ರಾಷ್ಟ್ರಗಳೆಂದರೆ ಜರ್ಮನಿ, ಫ್ರಾನ್ಸ್, ಬೆಲ್ಜಿಯಂ ಮತ್ತು ಜಪಾನ್. (ಬಿ.ಸಿ.ಕೆ.)

**ಮ್ಯಾಂಚೆಸ್ಟರ್:** ಇಂಗ್ಲೆಂಡಿನ ನಾಲ್ಕು ಮಹಾನಗರಗಳ ಪೈಕಿ ಒಂದು. ಪ್ರಸಿದ್ಧ ಕೈಗಾರಿಕಾ ಕೇಂದ್ರ. ಲಂಕಾಷೈರ್ ಕೌಂಟಿಗೆ ಸೇರಿದೆ. ಲಂಡನ್ ನಗರದ ವಾಯವ್ಯಕ್ಕೆ 298 ಕಿಮೀ, ಲಿವರ್‌ಪೂಲ್ ನಗರದ ಪೂರ್ವಕ್ಕೆ 50 ಕಿಮೀ ದೂರದಲ್ಲಿರುವ ಈ ನಗರದ ಬಳಿ ಇರ್ವೆಲ್, ಈರ್ಕ್ ಮತ್ತು ಮೆಡ್ಲಾಕ್ ನದಿಗಳು ಕೂಡುತ್ತವೆ. ನಗರ ಉ.ಅ. $59^0$ ಪ.ರೇ. $20^0$ ನಲ್ಲಿದೆ. ಜನಸಂಖ್ಯೆ 42,09,132 (2006).

ಇಂಗ್ಲೆಂಡಿನ ದೊರೆ ಒಂದನೆಯ ವಿಲಿಯಮ್‌ನ ಕಾಲದಲ್ಲಿ ಪ್ರಕಟಗೊಂಡ ಡೂಮ್ಸ್‌ಡೆ ಬುಕ್‌ನಲ್ಲಿ (1086) ಮ್ಯಾಂಚೆಸ್ಟರ್ ಗ್ರಾಮ ಕುರಿಸಾಕಣೆ ಮತ್ತು ತುಪ್ಪಟ ಕೈಗಾರಿಕೆಗಳ ಸ್ಥಳವೆಂದು ದಾಖಲೆಯಾಗಿದೆ. ಈಗಿನ ನಗರ ನಿವೇಶನದಲ್ಲಿ ಹಿಂದೆ ಕೆಲ್ಟಿಕ್ ಮತ್ತು ರೋಮನ್ನರು ನೆಲಸಿದ್ದರೆಂಬುದಕ್ಕೆ ಆಧಾರಗಳಿವೆ. ಟ್ಯೂಡರ್ ಅರಸರ ಕಾಲದಲ್ಲಿ ಪಟ್ಟಣ ದೊಡ್ಡ ವ್ಯಾಪಾರ ಸ್ಥಳವಾಗಿದ್ದು 19 ನೆಯ ಶತಮಾನದಲ್ಲಿ ಹತ್ತಿ ವ್ಯಾಪಾರ ಮತ್ತು ಕೈಗಾರಿಕೆಗಳ ಕೇಂದ್ರವಾಯಿತು. ಬಟ್ಟೆ, ರಬ್ಬರ್, ಕಾಗದ, ಯಂತ್ರೋಪಕರಣಗಳ ತಯಾರಿಕೆ, ತೈಲಶುದ್ಧೀಕರಣ ಮತ್ತು ರಾಸಾಯನಿಕ ವಸ್ತುಗಳ ಉತ್ಪನ್ನಗಳಿಗೆ ಮ್ಯಾಂಚೆಸ್ಟರ್ ಪ್ರಸಿದ್ಧವಾಗಿದೆ.

ಇಲ್ಲಿ 15 ನೆಯ ಶತಮಾನದ ಕ್ರೈಸ್ತ ದೇವಾಲಯ, ಪುರಭವನ, ವಿಶ್ವವಿದ್ಯಾಲಯ, ಮಹಾ ಗ್ರಂಥಾಲಯ, ಕಲಾಪ್ರದರ್ಶನ ಶಾಲೆ ಹಾಗೂ ಹಳೆಯ ವಾಣಿಜ್ಯ ಭವನ ಮುಂತಾದವುಗಳಿವೆ. ಎರಡನೆಯ ಮಹಾಯುದ್ಧ ಕಾಲದಲ್ಲಿ ನಷ್ಟಕ್ಕೊಳಗಾದ ಕಟ್ಟಡಗಳನ್ನು ದುರಸ್ತಿ ಮಾಡಲಾಗಿದೆ. ಹೀಟನ್ ಪಾರ್ಕ್ ಮುಂತಾದ ಸುಂದರ ಉದ್ಯಾನಗಳಿವೆ. ಮ್ಯಾಂಚೆಸ್ಟರ್ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೆನಿಸಿದೆ.

ಒಳನಾಡಿನಿಂದ ಸಮುದ್ರ ತೀರಕ್ಕೆ ಹಡಗುಗಳು ಸಂಚರಿಸಲು ಮ್ಯಾಂಚೆಸ್ಟರ್ ನಾಲೆಯ ನಿರ್ಮಾಣದಿಂದಾಗಿ (1894) ಈ ನಗರ ವ್ಯಾಪಾರ ವಾಣಿಜ್ಯದಲ್ಲಿ ಬೇಗನೆ ಉಚ್ಛ್ರಾಯ ಸ್ಥಿತಿಗೆ ಬಂತು. ಮ್ಯಾಂಚೆಸ್ಟರನಿಂದ ನೆರೆಹೊರೆಯ ನಗರಗಳಿಗೆ ರೈಲು, ರಸ್ತೆ, ಹಾಗೂ ವಿಮಾನ ಸಂಚಾರವಿದೆ. ನಗರದಲ್ಲಿ 4 ಮುಖ್ಯ ರೈಲು ನಿಲ್ದಾಣಗಳಿವೆ. 1830 ರಲ್ಲಿ ಮ್ಯಾಂಚೆಸ್ಟರ್– ಲಿವರ್‌ಪೂಲ್ ರೈಲುಮಾರ್ಗ ಪ್ರಾರಂಭವಾದದ್ದು ಪಟ್ಟಣದ ಇತಿಹಾಸದಲ್ಲಿ ಬಹಳ ಮುಖ್ಯ ಘಟನೆ. ರಿಂಗ್‌ವೇ ಬಳಿ ವಿಮಾನ ನಿಲ್ದಾಣ ಇದೆ. ಮ್ಯಾಂಚೆಸ್ಟರ್ ಗಾರ್ಡಿಯನ್ (1821) ಈ ನಗರದ ಪ್ರಸಿದ್ಧ ದಿನ ಪತ್ರಿಕೆ. (ವಿ.ಜಿ.ಕೆ.)

**ಮ್ಯಾಗ್ನಟೈಟ್:** ಮೆಗ್ನಿಸಿಯಮ್ ಸಂಯುಕ್ತವನ್ನು ಪಡೆಯುವ ಮುಖ್ಯ ಅದಿರು. ಇದನ್ನು ವಿಶೇಷವಾಗಿ ಅಗ್ನಿ ನಿರೋಧಕವಾಗಿ ಬಳಸಲಾಗುತ್ತದೆ. ಪ್ರಪಂಚದಲ್ಲಿ ಇದರ ನಿಕ್ಷೇಪ ವ್ಯಾಪಕವಾಗಿಲ್ಲದ ಕಾರಣ ಇದರ ಸ್ಥಾನದಲ್ಲಿ ಡಾಲ್ಟೈಟ್‌ನ್ನು ಬಳಸಲಾಗುತ್ತಿದೆ. (ಬಿ.ಸಿ.ಕೆ.)

**ಮ್ಯಾನಿಟೋಬ:** ಕೆನಡದ ಒಂದು ಪ್ರಾಂತ್ಯ. ಇದರ ಉತ್ತರಕ್ಕೆ ಕೀವೆಟನ್ ಜಿಲ್ಲೆ, ಈಶಾನ್ಯಕ್ಕೆ ಹಡ್ಸನ್ ಕೊಲ್ಲಿ, ಪೂರ್ವಕ್ಕೆ ಅಂಟೇರಿಯೊ, ದಕ್ಷಿಣಕ್ಕೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮಿನಿಸೋಟ ಹಾಗೂ ಉತ್ತರ ಡಕೋಟ ಮತ್ತು ಪಶ್ಚಿಮಕ್ಕೆ ಸಸ್ಕಾಚೆವಾನ್ ರಾಜ್ಯ ಸುತ್ತುವರಿದಿವೆ. ಜಲಾವೃತ ಪ್ರದೇಶಗಳೂ ಸೇರಿದಂತೆ ಇದರ ವಿಸ್ತೀರ್ಣ 6,47,797 ಚ.ಕಿಮೀ ಜನಸಂಖ್ಯೆ 11,77,765 (2005). ರಾಜಧಾನಿ ವಿನ್‌ಪೆಗ್. ಜನಸಂಖ್ಯೆ 6,33,457 (2005).

ಭೂಲಕ್ಷಣ : ಮ್ಯಾನಿಟೋಬದ ದಕ್ಷಿಣ ತುದಿಯಭಾಗ ಸಮತಲದ ಹುಲ್ಲುಗಾವಲುಗಳಿಂದ ಕೂಡಿದೆ. ಉತ್ತರದ ತಗ್ಗುಪ್ರದೇಶ ಹಿಮಯುಗದ ಅಗಾಸೀ ಸರೋವರದ ಭಾಗವಾಗಿದ್ದು ಇದರಲ್ಲಿ ವಿನ್‌ಪೆಗ್, ವಿನ್‌ಪೆಗೋಸಿಸ್ ಮತ್ತು ಮ್ಯಾನಿಟೋಬ ಸರೋವರಗಳು ಸೇರಿವೆ. ಮ್ಯಾನಿಟೋಬ ಸರೋವರ ಈ ಪ್ರಾಂತ್ಯದ ರೆಡ್‌ನದಿಯ ತಗ್ಗು ಪ್ರದೇಶದಲ್ಲಿರುವ ಸರೋವರ. 1738 ರಲ್ಲಿ ಪಿಯೆರ್ ಡಿ ಲಾವೆರೆಂಡ್ರೆ ಇದನ್ನು ಶೋಧಿಸಿದ. ಈ ಸರೋವರ 4,705.84 ಚ.ಕಿಮೀ ವಿಸ್ತೀರ್ಣವಿದೆ. ಇದರ ದಕ್ಷಿಣ ತುದಿ ವಿನ್‌ಪೆಗ್‌ನಿಂದ ವಾಯವ್ಯದಲ್ಲಿ 129 ಕಿಮೀ ದೂರದಲ್ಲಿದೆ. ವಿನ್‌ಪೆಗೋಸಿಸ್ ಸರೋವರದಿಂದ ಇಕ್ಕಟ್ಟಾದ ಭೂಸಂಧಿ ಇದನ್ನು ಪ್ರತ್ಯೇಕಿಸಿದೆ. ಇದು ಮೀನುಗಾರಿಕೆಯ ಪ್ರಮುಖ ಕೇಂದ್ರ. ಸುತ್ತ ಮುತ್ತ ಸಣ್ಣ ವಸಾಹತುಗಳು ಹಾಗೂ ಪ್ರವಾಸ ಸ್ಥಳಗಳು ಹಬ್ಬಿವೆ. ಮ್ಯಾನಿಟೋಬದಲ್ಲಿ 38,000 ಕ್ಕೂ ಹೆಚ್ಚು ಸರೋವರಗಳಿದ್ದು ಇಲ್ಲಿಯ ವಿನ್‌ಪೆಗ್ ಸರೋವರ ಪ್ರಪಂಚದಲ್ಲಿಯೇ 13 ನೆಯ ದೊಡ್ಡ ಸರೋವರ. ರೆಡ್ ಹಾಗೂ ಅಸಿನಬಾಯ್ನ್ ನದಿಗಳು ವಿನ್‌ಪೆಗ್ ಸರೋವರವನ್ನು ಸೇರುವ ಪ್ರದೇಶಗಳು. ಎತ್ತರದ ಪ್ರಸ್ಥಭೂಮಿಗಳಿಂದ, ಕಾಡಿನಿಂದ ನದೀಕಣಿವೆಗಳಿಂದ, ಸುಣ್ಣ ಕಲ್ಲಿನ ಸ್ತರಗಳಿಂದ, ಜಾಡುಗಳು ಹಾಗೂ ಜೌಗು ಪ್ರದೇಶಗಳಿಂದ ಕೂಡಿವೆ. ಇಲ್ಲಿಂದ ಉತ್ತರಕ್ಕೆ ಹಾಗೂ ತಗ್ಗುಪ್ರದೇಶದ ಪೂರ್ವಕ್ಕೆ ಭೂವಿಜ್ಞಾನದ ಪ್ರಕಾರ ಕೇಂಬ್ರಿಯನ್ ಅಥವಾ ಪ್ರಿಕೇಂಬ್ರಿಯನ್ ಕವಚವಿದ್ದು ಬಂಡೆಗಳಿಂದಲೂ ಕಾಡುಗಳಿಂದಲೂ ನದಿಗಳಿಂದಲೂ ಕೂಡಿದೆ. ಪ್ರಾಂತ್ಯದ 3/4 ರಷ್ಟು ಭಾಗವನ್ನು ಆವರಿಸಿರುವ ಈ ಪ್ರದೇಶದಲ್ಲಿ ನೆಲ್ಸನ್ ಹಾಗೂ ಚರ್ಚಿಲ್ ನದಿಗಳು ಹರಿದು ಹಡ್ಸನ್ ಕೊಲ್ಲಿಯನ್ನು ಸೇರುತ್ತವೆ. ಹಡ್ಸನ್ ಕೊಲ್ಲಿಯ ತಗ್ಗುಪ್ರದೇಶ ಒಳನಾಡಿನಲ್ಲಿ 161 ಕಿಮೀ ದೂರ ಹಬ್ಬಿದ್ದು ಸಮತಲದ ಹುಲ್ಲುಗಾವಲಿನಿಂದ ಕೂಡಿದೆ. ಶೇ. 50 ಕ್ಕಿಂತ ಹೆಚ್ಚು ಭೂಪ್ರದೇಶ ಅರಣ್ಯಾವೃತ. ಮ್ಯಾನಿಟೋಬದ ಎತ್ತರದ ಪ್ರದೇಶ ಸಸ್ಕಾಚ್‌ವಾನ್ ಗಡಿಭಾಗದಲ್ಲಿದ್ದು ಇಲ್ಲಿ ರೈಡಿಂಗ್, ಡಕ್ ಮತ್ತು ಪಾರ್ಕ್ಯುಪಿನ್ ಪರ್ವತಗಳಿವೆ. ಅತ್ಯಂತ ಎತ್ತರವಾದ ಶಿಖರ ಬಾಲ್ಡೀ (831ಮೀ).

ಹವಾಗುಣ : ಇಲ್ಲಿ ಸಾಧಾರಣ ಒಣ ಹವೆಯಿದ್ದು ಉಷ್ಣತೆ ಋತುಗಳಿಗನುಸಾರವಾಗಿ ಬದಲಾವಣೆ ಹೊಂದುತ್ತವೆ. ಸರಾಸರಿ ಉಷ್ಣತೆ ವಿನ್‌ಪೆಗ್‌ನಲ್ಲಿ ಜನವರಿಯಲ್ಲಿ $13^0$ಸೆ. ಹಾಗೂ ಜುಲೈನಲ್ಲಿ $26^0$ಸೆ. ಇರುತ್ತದೆ. ವಾರ್ಷಿಕ ಮಳೆಯ ಪ್ರಮಾಣ ಸು. 30 – 60 ಸೆಂಮೀ ಇರುತ್ತದೆ. ಇದರಲ್ಲಿ ಶೇ. 70 ರಷ್ಟು ಭಾಗ ಮೇನಿಂದ ಅಕ್ಟೋಬರ್‌ವರೆಗೆ ಬೀಳುತ್ತದೆ.

ಸಸ್ಯ ಹಾಗೂ ಪ್ರಾಣಿಸಂಪತ್ತು : ಮ್ಯಾನಿಟೋಬದಲ್ಲಿ 3,10,788 ಚ.ಕಿ.ಮೀಗೂ ಹೆಚ್ಚು ಅರಣ್ಯವಿದ್ದು ಇಲ್ಲಿ ಸ್ಪ್ರೂಸ್, ಅಸ್ಪೆನ್, ಜಾಕ್‌ಪೈನ್ ಪಾಪ್ಲರ್, ಬಾಲ್ಸಮ್, ಐಟ್‌ಬರ್ಚ್ ಹಾಗೂ ಟ್ಯಾಮರಾಕ್ ಮರಗಳಿವೆ. ದಕ್ಷಿಣದಲ್ಲಿ ಹುಲ್ಲುಗಾವಲುಗಳಿದ್ದು ಮರಗಳು ಕಡಿಮೆ.

ಪ್ರಾಂತ್ಯದ ಉತ್ತರಭಾಗದ ಕಾಡುಗಳಲ್ಲಿ ಕ್ಯಾರಿಬೊ, ಮೂಸ್ ಎಂಬ ಕಡವೆ ಜಾತಿಗೆ ಸೇರಿದ ಪ್ರಾಣಿ, ಎಲ್ಕ್, ಕರಡಿ, ಬೀವರ್, ನರಿ, ಲಿಂಕ್ಸ್, ಮಾರ್ಟಿನ್ ಮತ್ತು ಮಿಂಕ್ ಪ್ರಾಣಿಗಳನ್ನು ಕಾಣಬಹುದು. ದಕ್ಷಿಣದ ಭಾಗಗಳಲ್ಲಿ ಜಿಂಕೆ, ಕೊಯೊಟ್ಟೆ ಮೊಲ, ಕಸ್ತೂರಿ ಇಲಿ ಇವೆ. ಹಡ್ಸನ್ ಕೊಲ್ಲಿಯ ಸುತ್ತಮುತ್ತ ಹಿಮಕರಡಿಗಳು ವಾಸಿಸುತ್ತವೆ. ಎತ್ತರದ ಪ್ರದೇಶಗಳಲ್ಲಿ ಗ್ರೌಸ್, ಕೋಳಿ ಮುಂತಾದವು ಇವೆ. ಮ್ಯಾನಿಟೋಬದ ಜೌಗುಪ್ರದೇಶ ಹಾಗೂ ಸರೋವರಗಳಲ್ಲಿ ಬಾತುಕೋಳಿಗಳು ಮತ್ತು ಮೀನುಗಳು ಹೇರಳವಾಗಿವೆ. ವಿನ್‌ಪೆಗ್ ಗೋಲ್ಡ್‌ಐ ಎಂಬ ಬಿಳಿಮೀನು ಪ್ರಪಂಚದಲ್ಲೇ ಪ್ರಸಿದ್ಧವಾಗಿದೆ. ಹಡ್ಸನ್‌ಕೊಲ್ಲಿಯಲ್ಲಿ ಬೆಲೂಗ ತಿಮಿಂಗಿಲಗಳು ಸಿಗುತ್ತವೆ.

ಅರಣ್ಯ ಹಾಗೂ ಪ್ರಾಣಿ ಸಂಪತ್ತನ್ನು ರಕ್ಷಿಸಲು ಪ್ರಾಂತ್ಯದ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಆಸ್ಥೆವಹಿಸಿವೆ. ಮ್ಯಾನಿಟೋಬದಲ್ಲಿ ಸಿಗುವ ಒಳನಾಡಿನ ಮೀನುಗಳ ಸಂಖ್ಯೆ ಪ್ರಪಂಚದಲ್ಲೇ ಎರಡನೆಯ ಸ್ಥಾನ ಪಡೆದಿವೆ. ಕೆಲವು ಸರೋವರಗಳಲ್ಲಿ ಸಿಗುವ ಮೀನುಗಳ ಪೈಕಿ ಪಾದರಸದ ಅಂಶ ಕಂಡುಬಂದದ್ದರಿಂದ 1970 ರಲ್ಲಿ ಮೀನುಗಾರಿಕೆಯನ್ನು ನಿಲ್ಲಿಸಬೇಕಾಯಿತು. ಈ ಜಲಮಾಲಿನ್ಯಕ್ಕೆ ಕಾರಣವಾದ ಕೈಗಾರಿಕಾ ಸಂಸ್ಥೆಗಳ ಮೇಲೆ ಸರ್ಕಾರ ಕ್ರಮತೆಗೆದುಕೊಂಡಿದೆ.

ಜನಜೀವನ : ಮ್ಯಾನಿಟೋಬದ 3/4 ರಷ್ಟು ಜನ ನಗರವಾಸಿಗಳಾಗಿದ್ದರೂ ಪ್ರಾಂತ್ಯ ತನ್ನ ಗ್ರಾಮಜೀವನದ ಸಾಂಪ್ರದಾಯಿಕತೆಯನ್ನು ಉಳಿಸಿಕೊಂಡಿದೆ. ವಿನ್‌ಪೆಗ್ ಕೆನಡದ ನಾಲ್ಕನೆಯ ಅತಿದೊಡ್ಡ ನಗರವಾಗಿದ್ದು ಪ್ರಾಂತ್ಯದ ಅರ್ಧದಷ್ಟು ಜನ ಇಲ್ಲಿ ವಾಸಿಸುತ್ತಾರೆ. ವಿನ್‌ಪೆಗ್ ಕೆನಡದ ಪ್ರಮುಖ ಸಾಂಸ್ಕೃತಿಕ ಹಾಗೂ ಕಲೆಗಳ ಕೇಂದ್ರವಾಗಿದೆ. ವಿನ್‌ಪೆಗ್, ಬ್ರಾನ್‌ಡನ್, ಥಾಂಪ್‌ಸನ್ ಪೋರ್ಟೇಜ್ ಲಾ ಪಿರ್ರೀ, ಸೆಲ್ ಕರ್ಕ್ ಇವು ಈ ಪ್ರಾಂತ್ಯದ ಮುಖ್ಯ ನಗರಗಳು. ದಕ್ಷಿಣ ಭಾಗದಲ್ಲಿ ನಗರವಾಸಿಗಳ ಸಂಖ್ಯೆ ಹೆಚ್ಚು. ಗ್ರಾಮೀಣ ಪ್ರದೇಶದಲ್ಲಿ ಜಮೀನು ಹಿಡುವಳಿ ಸರಾಸರಿ 200 ಹೆಕ್ಟೇರ್ ವಿಸ್ತೀರ್ಣವಿದ್ದು ಯಾಂತ್ರಿಕ ಸೌಲಭ್ಯಗಳಿಂದ ಕೂಡಿವೆ.

1812 ರಲ್ಲಿ ಇಲ್ಲಿಗೆ ವಲಸೆಬಂದ ಸ್ಕಾಟಿಷ್ ಹಾಗೂ ಐರಿಷ್ ಜನ ರೆಡ್ ನದೀ ವಸಾಹತಿನಲ್ಲಿ ಕೃಷಿ ಪ್ರಾರಂಭಿಸಿದರು. 1870 ರಿಂದ 1900 ರ ನಡುವೆ ರೈಲು ಹಾಗೂ ರಸ್ತೆ ಸಾರಿಗೆ ಸೌಲಭ್ಯಗಳ ಕಾರಣದಿಂದ ಮ್ಯಾನಿಟೋಬದ ಜನಸಂಖ್ಯೆ ಹತ್ತರಷ್ಟು ಹೆಚ್ಚಾಯಿತು. ಇಲ್ಲಿಗೆ ಯುರೋಪ್ ಹಾಗೂ ಪೂರ್ವ ಕೆನಡದಿಂದ ಜನರು ವಲಸೆ ಬಂದರು. 1930 ನೆಯ ದಶಕದ ಮುಗ್ಗಟ್ಟು ಹಾಗೂ ಎರಡನೆಯ ಮಹಾಯುದ್ಧದ ಕಾರಣಗಳಿಂದ ಜನಸಂಖ್ಯೆ ಇಳಿಮುಖವಾಗಿ, ಯುದ್ಧಾನಂತರ ಮತ್ತೆ ಜನಸಂಖ್ಯೆ ಏರಲು ಪ್ರಾರಂಭವಾಯಿತು.

ಬ್ರಿಟಿಷ್ ಮೂಲದ ಜನರು ಮ್ಯಾನಿಟೋಬದ ಎಲ್ಲ ಕಡೆಯೂ ಇದ್ದಾರೆ. ಫ್ರೆಂಚ್ ಮೂಲದವರನ್ನು ರೆಡ್ ನದಿಯ ಉದ್ದಕ್ಕೂ ಹಾಗೂ ಅಮೆರಿಕ ಸಂಯುಕ್ತಸಂಸ್ಥಾನಗಳ ಗಡಿಯಿಂದ ವಿನಿಪೆಗ್‌ವರೆಗೂ ಕಾಣಬಹುದು. ಕ್ವಿಬೆಕ್ ಪ್ರಾಂತವನ್ನು ಬಿಟ್ಟರೆ ಸೇಂಟ್ ಬೋನಿಫೇಸ್‌ನಲ್ಲಿಯ ಫ್ರೆಂಚರ ಸಂಖ್ಯೆ ಇಡೀ ಕೆನಡದಲ್ಲಿಯೇ ಅತಿಹೆಚ್ಚು. ಜರ್ಮನರು ಮ್ಯಾನಿಟೋಬದ ದಕ್ಷಿಣ ಮಧ್ಯಭಾಗದಲ್ಲಿ ನೆಲೆಸಿದರೆ ಮ್ಯಾನಿಟೋಬದಲ್ಲಿ 40,000ಕ್ಕೂ ಹೆಚ್ಚು ಇಂಡಿಯನ್ನರು ಹಾಗೂ ಎಸ್ಕಿಮೋಗಳು ಇದ್ದಾರೆ. ಇಲ್ಲಿಯ ಇಂಡಿಯನ್ನರಲ್ಲಿ 50 ಕ್ಕೂ ಹೆಚ್ಚು ಪಂಗಡಗಳಿದ್ದು ನಾಲ್ಕು ಇಂಡಿಯನ್ ಭಾಷೆಗಳನ್ನು ಮಾತನಾಡುತ್ತಾರೆ. ಇಲ್ಲಿಯ ಪ್ರಮುಖ ಧಾರ್ಮಿಕ ಪಂಗಡಗಳು ರೋಮನ್ ಕೆಥೊಲಿಕ್, ಯುನೈಟೆಡ್ ಚರ್ಚ್ ಆಫ್ ಕೆನಡ ಹಾಗೂ ಆಂಗ್ಲಿಕನ್ ಚರ್ಚ್ ಆಫ್ ಕೆನಡ. ಇವರಲ್ಲದೆ ಯಹೂದಿಗಳು, ಗ್ರೀಕ್ ಸಂಪ್ರದಾಯವಾದಿಗಳು, ಉಕ್ರೈಯನ್ ಕೆತೊಲಿಕ್ಕರು ಸಹ ಇದ್ದಾರೆ.

ಇಂಡಿಯನ್ನರು ತಮ್ಮ ಪ್ರದೇಶಗಳಿಂದ ನಗರಗಳಿಗೆ, ಪ್ರಮುಖವಾಗಿ ವಿನ್‌ಪೆಗ್‌ಗೆ ಬಹುಸಂಖ್ಯೆಯಲ್ಲಿ ವಲಸೆ ಬರುತ್ತಿರುವುದರಿಂದ ಪ್ರಾಂತ ಸರ್ಕಾರಕ್ಕೆ ಸಮಸ್ಯೆಯಾಗಿದೆ. ನಗರಗಳಲ್ಲಿ ಇವರಿಗೆ ಉದ್ಯೋಗ ಸಿಗದೆ ಕೊಳೆಗೇರಿಗಳಲ್ಲಿ ವಾಸಮಾಡಬೇಕಾಗಿದೆ. ಫೆಡರಲ್ ಸರ್ಕಾರ, ಪ್ರಾಂತೀಯ ಸರ್ಕಾರ ಹಾಗೂ ನಗರ ಆಡಳಿತಾಂಗಗಳು ಈ ಸಮಸ್ಯೆಯನ್ನು ನಿವಾರಿಸಲು ಪ್ರಯತ್ನಿಸುತ್ತಿದ್ದರೂ ಫಲಪ್ರದವಾಗಿಲ್ಲ.

ಆರ್ಥಿಕತೆ : ಮ್ಯಾನಿಟೋಬದ ದಕ್ಷಿಣ ಭಾಗದ ಭೂಮಿ ಫಲವತ್ತಾಗಿದ್ದು ಕೃಷಿ ಪ್ರಮುಖ ಉದ್ಯಮವಾಗಿದೆ. ಗೋದಿ ಇಲ್ಲಿಯ ಮುಖ್ಯ ಬೆಳೆ. ಇತರ ಬೆಳೆಗಳು ಓಟ್ಸ್, ಬಾರ್ಲಿ, ರೈ, ಫ್ಲಾಕ್ಸ್, ರೇಪ್‌ಸೀಡ್, ಸೂರ್ಯಕಾಂತಿ, ಶುಗರ್‌ಬೀಟ್ ಹಾಗೂ ತರಕಾರಿಗಳು. ಕೆನಡಿಯನ್ ಶೀಲ್ಡ್ ಪ್ರದೇಶದಲ್ಲಿ ಶೇ. 80 ಕ್ಕೂ ಹೆಚ್ಚು ಖನಿಜಸಂಪತ್ತಿನ ನಿಕ್ಷೇಪವಿದೆ. ಇಲ್ಲಿ ದೊರೆಯುವ ಖನಿಜಗಳು ನಿಕ್ಕಲ್, ಸತು, ತಾಮ್ರ, ಸಣ್ಣ ಪ್ರಮಾಣದಲ್ಲಿ ಚಿನ್ನ ಮತ್ತು ಬೆಳ್ಳಿ. ಮ್ಯಾನಿಟೋಬದಲ್ಲಿಯ ಸೀಸಿಯಮ್ ಅದಿರಿನ ನಿಕ್ಷೇಪ ಪ್ರಪಂಚದಲ್ಲೇ ಅತಿದೊಡ್ಡದು. ಇಲ್ಲಿಯ ಅರಣ್ಯಗಳು ವಾಣಿಜ್ಯ ದೃಷ್ಟಿಯಿಂದ ಉಪಯುಕ್ತವಾದುವು.

ಕೈಗಾರಿಕೆಗಳಲ್ಲಿ ಮುಖ್ಯವಾದವು ಆಹಾರ ಹಾಗೂ ಪಾನೀಯಗಳ ತಯಾರಿಕೆ, ಬಟ್ಟೆ ಮತ್ತು ಲೋಹದ ವಸ್ತುಗಳು, ರಾಸಾಯನಿಕ ವಸ್ತುಗಳು, ರಾಕೆಟ್ಟುಗಳು, ಸಾರಿಗೆ ಉಪಕರಣಗಳು, ವ್ಯವಸಾಯದ ಉಪಕರಣಗಳು, ಸಿಮೆಂಟ್ ಇತ್ಯಾದಿ. ಪಿನಾವಾದ ಅಣುಶಕ್ತಿ ಸಂಶೋಧನಾ ಕೇಂದ್ರ, ದಿ ಪಾಸ್‌ನ ಸಮಗ್ರ ಅರಣ್ಯೋತ್ಪನ್ನಗಳ ಸಂಕೀರ್ಣ, ಥಾಂಪ್‌ಸನ್‌ನ ನಿಕ್ಕಲ್ ಸಂಕೀರ್ಣ, ಪೈನ್‌ಫಾಲ್ಸ್‌ನ ಪಲ್ಪ್ ತಯಾರಿಸುವ ಕಾರ್ಖಾನೆ ಹಾಗೂ ಬ್ರಾನ್‌ಡನ್‌ನ ಗೊಬ್ಬರ ಕಾರ್ಖಾನೆ ಇಲ್ಲಿನ ಪ್ರಮುಖ ಕೈಗಾರಿಕೆಗಳು. ನೆಲ್ಸನ್ ಹಾಗೂ ಸಸ್ಕಾಚ್‌ವಾನ್ ನದಿಗಳಲ್ಲಿ ಬೃಹತ್ ವಿದ್ಯುದುತ್ಪಾದನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಕೆನಡ ಪೂರ್ವ ಹಾಗೂ ಪಶ್ಚಿಮ ಭಾಗಗಳ ನಡುವಿನ ಆಯಕಟ್ಟಿನ ಸ್ಥಾನದಲ್ಲಿರುವುದರಿಂದ ಮ್ಯಾನಿಟೋಬ ಪ್ರಮುಖ ಸಾರಿಗೆ ಕೇಂದ್ರವಾಗಿದೆ. ಟ್ರಾನ್ಸ್-ಕೆನಡ ಹೆದ್ದಾರಿ ಹಾಗೂ ಮುಖ್ಯ ರೈಲ್ವೆ ಮಾರ್ಗಗಳು ವಿನ್‌ಪೆಗ್ ಮೂಲಕ ಹಾದು ಹೋಗುತ್ತವೆ. ಇಲ್ಲಿಂದ ಕೆನಡ, ಯುರೋಪ್ ಹಾಗೂ ಅಮೆರಿಕದ ಎಲ್ಲ ಭಾಗಗಳಿಗೆ ವಿಮಾನ ಸೌಕರ್ಯವಿದೆ. ಹಡ್ಸನ್ ಕೊಲ್ಲಿಯ ಮೇಲಿನ ಚರ್ಚಿಲ್ ನಿಂದ ಯುರೋಪಿಗೆ ನೇರ ಸಮುದ್ರ ಮಾರ್ಗವಿದ್ದು ಇದು ಬೇಸಗೆಯ ಕೊನೆಯಲ್ಲಿ ಹತ್ತು ವಾರಗಳ ತನಕ ತೆರೆದಿರುತ್ತದೆ. ವಿನ್‌ಪೆಗ್ ಸರೋವರದ ಮೂಲಕ ಜಲಯಾನದ ಸೌಕರ್ಯವಿದೆ.

ಸಾಂಸ್ಕೃತಿಕ ಜೀವನ : ಮ್ಯಾನಿಟೋಬದ ಮಿಶ್ರ ಜನಾಂಗದ ಜೀವನ ವೈವಿಧ್ಯದಿಂದ ಕೂಡಿದೆ. ಇಲ್ಲಿಯ ಯುರೋಪಿಯನ್, ಏಷ್ಯನ್, ಇಂಡಿಯನ್ ಹಾಗೂ ಎಸ್ಕಿಮೋ ಪಂಗಡಗಳು ತಮ್ಮ ಸಾಂಪ್ರದಾಯಿಕ ಪ್ರತ್ಯೇಕತೆಯನ್ನು ಪದ್ಧತಿಗಳು, ನೃತ್ಯ, ಕಲೆ, ಸಂಗೀತ, ಭಾಷೆ ಹಾಗೂ ಕುಶಲಕಲೆಗಳ ಮೂಲಕ ಉಳಿಸಿಕೊಂಡಿವೆ. ಇಲ್ಲಿಯ ರಾಯಲ್ ವಿನ್‌ಪೆಗ್ ಬ್ಯಾಲೆ ಜಗತ್ಪ್ರಸಿದ್ಧ. ಇತರ ಕಲಾಕೇಂದ್ರಗಳು ವಿನ್‌ಪೆಗ್ ಸಿಂಫೊನಿ ಆರ್ಕೆಸ್ಟ್ರಾ, ಮ್ಯಾನಿಟೋಬ ಥಿಯೇಟರ್ ಸೆಂಟರ್ ಹಾಗೂ ವಿನ್‌ಪೆಗ್ ಆರ್ಟ್ ಗ್ಯಾಲರಿ. ಇತರ ಸಾಂಸ್ಕೃತಿಕ ಚಟುವಟಿಕೆಗಳೆಂದರೆ ದಿ ಪಾಸ್‌ನ ಟ್ರಾಪರ್ಸ್ ಹಬ್ಬ, ಫ್ಲಿನ್ ಫ್ಲಾನ್‌ನ ಟ್ರೌಟ್ ಹಬ್ಬ, ಗಿಮ್ಲಿಯ ವಾರ್ಷಿಕ ಐಲ್ಯಾಂಡಿಕ್ ಆಚರಣೆ ಇತ್ಯಾದಿ.

ಮ್ಯಾನಿಟೋಬ 18ನೆಯ ಶತಮಾನದುದ್ದಕ್ಕೂ ಇಂಗ್ಲಿಷ್ ಹಾಗೂ ಫ್ರೆಂಚರ ನಡುವಣ ಕಾದಾಟದ ಕೇಂದ್ರವಾಗಿತ್ತು. ಹಡಗುಗಳು ಹಾಗೂ ರೈಲು ಮಾರ್ಗಗಳು ಅಮೆರಿಕ ದೊಡನೆ 1867ರಲ್ಲಿ ಸಂಬಂಧ ಕಲ್ಪಿಸಿದುವು. ಇದರಿಂದ ಪೂರ್ವಕೆನಡ, ಬ್ರಿಟನ್ ಹಾಗೂ ಯುರೋಪ್‌ಗಳಿಂದ ದಕ್ಷಿಣಭಾಗದ ಮೂಲಕ ಇಲ್ಲಿಗೆ ಜನ ವಲಸೆ ಬರಲು ಪ್ರಾರಂಭಿಸಿದರು. ಹಡ್ಸನ್ ಬೇ ಕಂಪನಿಯಿಂದ ಹೊಸದಾಗಿ ಪ್ರಾರಂಭವಾದ ಕೆನಡದ ಡೊಮಿನಿಯನ್ ಸರ್ಕಾರ ಈ ಪ್ರದೇಶವನ್ನು 1869 ರಲ್ಲಿ ಪಡೆದು ಕೊಂಡಿತು. 1870 ರಲ್ಲಿ ಮ್ಯಾನಿಟೋಬ ಪ್ರಾಂತ್ಯ ನಿರ್ಮಾಣವಾಗಿ, ಕೆನಡಿಯನ್ ಒಕ್ಕೂಟದಲ್ಲಿ ಸೇರಿತು. 1870 ರ ಅನಂತರ ಫೋರ್ಟ್ ಗ್ಯಾರಿಯ ಸುತ್ತಲೂ ವಿನ್‌ಪೆಗ್ ಪಟ್ಟಣ ಬೆಳೆಯಿತು. 1878 ರಲ್ಲಿ ಅಮೆರಿಕದೊಡನೆ ಹಾಗೂ 1881 ರಲ್ಲಿ ಪೂರ್ವಕೆನಡದೊಡನೆ ರೈಲುಸಂಪರ್ಕ ಕಲ್ಪಿಸಲಾಯಿತು. ಚರ್ಚಿಲ್ ಬಂದರಿನ ವರೆಗೆ 1929 ರಲ್ಲಿ ರೈಲುಮಾರ್ಗ ನಿರ್ಮಾಣವಾಯಿತು. ಮ್ಯಾನಿಟೋಬದ ಜನಸಂಖ್ಯೆ 1871 ರಲ್ಲಿ 25,000 ಇದ್ದದ್ದು 1901 ರ ವೇಳೆಗೆ 2,50,000 ಆಗಿ 1931 ರ ವೇಳೆಗೆ 7,00,000 ಆಯಿತು. ಪ್ರಾಂತ್ಯದ ಗಡಿಗಳನ್ನು 1881 ಹಾಗೂ 1912 ರಲ್ಲಿ ವಿಸ್ತರಿಸಲಾಯಿತು.

(ಜಿ.ಎಸ್.ಎಸ್.)

**ಮ್ಯಾಸಿಡೋನಿಯ:** ಒಂದು ಸ್ವತಂತ್ರ ದೇಶ. ಆಗ್ನೇಯ ಯುರೋಪಿನ ಬಾಲ್ಕನ್ ಪ್ರದೇಶದಲ್ಲಿದೆ. ಮ್ಯಾಸಿಡೋನಿಯ ಪರ್ವತಗಳಿಂದ ಸುತ್ತುವರಿಯಲ್ಪಟ್ಟಿರುವ ಬಾಲ್ಕನ್ ಪರ್ಯಾಯ ದ್ವೀಪದ ಭೂವೇಷ್ಠಿತ ರಾಜ್ಯ. ಉ.ಅ. $42^0 0'$ ಮತ್ತು ಪೂ.ರೇ. $21^0 26'$ನಲ್ಲಿ ವ್ಯಾಪಿಸಿದೆ. ಇದರ ಒಟ್ಟು ಭೌಗೋಳಿಕ ಕ್ಷೇತ್ರ 25,333 ಚ.ಕಿಮೀ. ಇದರ ಗಡಿಭಾಗಗಳೆಂದರೆ ಉತ್ತರದಲ್ಲಿ ಸರ್ಬಿಯ, ಪಶ್ಚಿಮದಲ್ಲಿ ಆಲ್ಬೇನಿಯ, ದಕ್ಷಿಣದಲ್ಲಿ ಗ್ರೀಸ್ ಮತ್ತು ಪೂರ್ವದಲ್ಲಿ ಬಲ್ಗೇರಿಯ. ಜನಸಂಖ್ಯೆ 2,022,547 (2002).




ಇಲ್ಲಿನ ಜನಸಾಂದ್ರತೆ ಚ.ಕಿಮೀಗೆ 79. ಇದರ ರಾಜಧಾನಿ ಸ್ಕೊಪ್‌ಜಿ. ಇದರ ಜನಸಂಖ್ಯೆ 5 ಲಕ್ಷ.

ಮೇಲ್ಮೈ ಲಕ್ಷಣ: ಭೌಗೋಳಿಕವಾಗಿ ಈ ರಾಜ್ಯ ವರ್ದಾರ್ ನದಿಯ ಕೇಂದ್ರ ಕಣಿವೆಯಲ್ಲಿದೆ. ನದಿಯ ಎರಡೂ ಕಡೆಗಳಲ್ಲಿಯೂ ಎತ್ತರವಾದ ಪರ್ವತ ಶ್ರೇಣಿಗಳಿವೆ. ಇಲ್ಲಿಯ ಭೂಮೇಲ್ಮೈ ಏರಿಳಿತಗಳಿಂದ ಕೂಡಿದ್ದು ಸಾರಾ ಮತ್ತು ಒಸೊಗೊವೊ ನದಿಗಳ ಮಧ್ಯ ಇರುವ ಭಾಗವೆ ವರ್ದಾರ್ ಕಣಿವೆ. ಇಲ್ಲಿನ ಮೂರು ಮುಖ್ಯ ಸರೋವರಗಳೆಂದರೆ – ಒಹ್ರಿನ್, ಪ್ರಸ್ಪ ಮತ್ತು ಓಜ್ರನ್. ಇವು ಮ್ಯಾಸಿಡೋನಿಯದ ದಕ್ಷಿಣದ ಗಡಿಭಾಗಗಳಾಗಿದ್ದು, ಆಲ್ಬೇನಿಯ ಮತ್ತು ಗ್ರೀಸ್ ದೇಶಗಳನ್ನು ಪ್ರತ್ಯೇಕಿಸುತ್ತವೆ. ಒಹ್ರಿನ್ ಸರೋವರ ಅತಿ ಪುರಾತನವಾದುದು. ಇಲ್ಲಿ ಅನಾದಿಕಾಲದಿಂದಲೂ ಪ್ರಾಣಿ ಮತ್ತು ಸಸ್ಯವರ್ಗವಿತ್ತೆಂದು ತಿಳಿದುಬಂದಿದೆ.

ಇಲ್ಲಿನ ಭೂ ಅಂತರಾಳ ಅಸ್ಥಿರವಾಗಿದ್ದು ಆಗಿಂದಾಗ್ಗೆ ಭೂಕಂಪನಗಳಿಗೆ ತುತ್ತಾಗುತ್ತದೆ. 1963ರಲ್ಲಿ ಸಂಭವಿಸಿದ ಭೂಕಂಪದಲ್ಲಿ ರಾಜಧಾನಿ ಸ್ಕೊಪ್‌ಜಿ ಹೆಚ್ಚಿನ ಹಾನಿಗೊಳಗಾಯಿತು.

ಮ್ಯಾಸಿಡೋನಿಯದ ಕೆಲವು ಪರ್ವತಗಳು ರಮಣೀಯ. ಈ ಪರ್ವತಶ್ರೇಣಿಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ: ದಿನರ್ರಕ ಮತ್ತು ರೊಡೊಪ್ಸಕ ಶ್ರೇಣಿಗಳು. ದಿನರ್ರಕ ಶ್ರೇಣಿ ನಿರಂತರವಾಗಿ ನಗ್ನೀಕರಣಗೊಂಡಿದೆ. ರೊಡೊಪ್ಸಕ ಶ್ರೇಣಿ ಇತ್ತೀಚಿನದು. ಇದು ಏರು ತಗ್ಗುಗಳಿಂದ ಕೂಡಿದೆ. ಆಲ್ಪೈನ್ ಸೀನರೀಸ್ ಈ ವರ್ಗಕ್ಕೆ ಸೇರುತ್ತದೆ. ಇಲ್ಲಿನ ಪ್ರಮುಖ ಹತ್ತು ಪರ್ವತಗಳಿವು: ಕೊರಬ್ (2764 ಮೀ), ಸಾರ್ (2749 ಮೀ),

# ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಷಯ ವಿಶ್ವಕೋಶ
## ಇತಿಹಾಸ ಮತ್ತು ಪುರಾತತ್ತ್ವ

**ಅಂಗಡಿ:** ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಒಂದು ಹಳ್ಳಿ. ಘಟ್ಟದಿಂದ ಕರಾವಳಿಗೆ ಹೋಗುವ ಮಾರ್ಗಮಧ್ಯದಲ್ಲಿರುವ ಈ ಸ್ಥಳದಲ್ಲಿದ್ದ ಅಂಗಡಿಗಳಿಂದಾಗಿ ಇದಕ್ಕೆ ಈ ಹೆಸರು ಬಂದಿದೆಯೆಂದು ಊಹಿಸಲಾಗಿದೆ. 11–12ನೆಯ ಶತಮಾನದ ಶಾಸನಗಳಲ್ಲಿ ಇದನ್ನು ಸೊಸವೂರು ಎಂದು ಕರೆದಿದೆ. ಬುಕ್ಕರಾಯನ ಕಾಲದಲ್ಲೂ (1359) ಇದೇ ಹೆಸರಿತ್ತು. ಆದರೆ ಅಚ್ಚುತರಾಯನ ಕಾಲದ ಹೊತ್ತಿಗೆ (1539) ಅಂಗಡಿ ಎಂಬ ಹೆಸರು ಪ್ರಚಾರಕ್ಕೆ ಬಂದಿತ್ತು. ವಿಷ್ಣುವರ್ಧನನ ಕಾಲದ ಶಶಪುರ, ಶಶಕಪುರ ಎಂಬ ಹೆಸರುಗಳೂ ಈ ಊರನ್ನೇ ನಿರ್ದೇಶಿಸುತ್ತವೆ. ಇದು ಹೊಯ್ಸಳರ ಮೂಲಸ್ಥಾನವಾಗಿತ್ತು. ಸಳ ಇಲ್ಲಿ ಹುಲಿಯನ್ನು ಕೊಂದು ಹೊಯ್ಸಳ ವಂಶದ ಹೆಸರಿಗೆ ಕಾರಣನಾದ ಎಂದು ಅನೇಕ ಶಾಸನಗಳು ತಿಳಿಸುತ್ತವೆ. ನೃಪಕಾಮ ಸೊಸವೂರಿನಿಂದ ಆಳುತ್ತಿದ್ದ. ಇವನ ಮಗ ವಿನಯಾದಿತ್ಯ ತನ್ನ ರಾಜಧಾನಿಯನ್ನು



ಹೊಯ್ಸಳರ ದೇವಾಲಯ

ದೋರಸಮುದ್ರಕ್ಕೆ ಬದಲಾಯಿಸಿದಂತೆ ತೋರುತ್ತದೆ. ಮುಂದೆ ಬಂದ ಹಲವು ಹೊಯ್ಸಳ ಅರಸರು ತಮ್ಮ ಪೂರ್ವಜರ ಹುಟ್ಟೂರಾದ ಅಂಗಡಿಗೆ ಹೋಗಿಬರುತ್ತಿದ್ದರೆಂದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಹೊಯ್ಸಳರ ಕುಲದೇವತೆಯಾದ ವಾಸಂತಿಕಾ ದೇವಿಯೇ ಇಲ್ಲಿಯ ಮುಖ್ಯ ದೇವತೆಯಾದ ವಸಂತಮ್ಮ ಎಂದು ಹೇಳಲಾಗಿದೆ. ಅನೇಕ ಜೈನಯತಿಗಳು ಇಲ್ಲಿದ್ದು ಬಸದಿಗಳನ್ನು ಕಟ್ಟಿಸಿದ್ದರೆಂಬುದಕ್ಕೂ ಶಾಸನಾಧಾರಗಳಿವೆ. ಅಂಗಡಿಯ ಪಕ್ಕದಲ್ಲಿರುವ ಉಗ್ಗೇನಹಳ್ಳಿಯಲ್ಲಿ ಕೋಟೆಹರ ಎಂಬ ಪ್ರದೇಶವಿದೆ. ಇಲ್ಲಿನ ಒಂದು ಶಾಸನ ರಾಚಮಲ್ಲ ಪೆರ್ಮಾನಡಿಕಾಮ ಹೊಯ್ಸಳನ ಕಾಲದ್ದು.

ಇಲ್ಲಿರುವ ವಾಸಂತಿಕಾ ಗುಡಿ ಹೆಂಚು ಹೊದಿಸಿರುವ ಈಚಿನ ಕಟ್ಟಡ. ಒಳಗೆ ಐವರು ದೇವಿಯರ ಮಣ್ಣಿನ ಮೂರ್ತಿಗಳಿವೆ. ಇವಕ್ಕೆ ಪಂಚಮುಖ ಅಥವಾ ತ್ರಿಮುಖಗಳಿವೆ. ಇವು ಶಕ್ತಿದೇವತೆಗಳಿಗೆ ವಿಶಿಷ್ಟವಾದ ಆಯುಧಗಳನ್ನು ಹಿಡಿದಿವೆ. ಇಲ್ಲಿ ಸು. 10–11ನೆಯ ಶತಮಾನದ ಎರಡು ಜೈನಬಸದಿಗಳ ಅವಶೇಷಗಳುಂಟು. ಇಲ್ಲಿರುವ ಕೇಶವ, ವೀರಭದ್ರ ಮತ್ತು ಶಿವ ದೇವಾಲಯಗಳೂ ಶಿಥಿಲವಾಗಿವೆ. ಕೇಶವ ದೇವಾಲಯದ ಮೂರ್ತಿ ಒಂದು ಉತ್ತಮ ಹೊಯ್ಸಳ ಶಿಲ್ಪ.

(ಎಂ.ಎಚ್.)

**ಅಂಡಮಾನ್ ಮತ್ತು ನಿಕೋಬಾರ್:** ಭಾರತಕ್ಕೆ ಸೇರಿದ ಸು.223 ದ್ವೀಪಗಳನ್ನು ಒಳಗೊಂಡಿರುವ ಈ ಸ್ತೋಮ ಬಂಗಾಲಕೊಲ್ಲಿಯ ಪೂರ್ವಭಾಗದಲ್ಲಿದೆ. ವಿಸ್ತೀರ್ಣ 5360 ಚ. ಕಿಮೀ. ಅಂಡಮಾನ್ ದ್ವೀಪ ಸ್ತೋಮದಲ್ಲಿ ಉತ್ತರ ಅಂಡಮಾನ್, ಮಧ್ಯ ಅಂಡಮಾನ್, ದಕ್ಷಿಣ ಅಂಡಮಾನ್ ಮತ್ತು ಪುಟ್ಟ ಅಂಡಮಾನ್‌ಗಳೆಂಬ ನಾಲ್ಕು ದ್ವೀಪಗಳಿವೆ. ನಿಕೋಬಾರ್ ಸ್ತೋಮದಲ್ಲಿ ಕಾರ್‌ನಿಕೋಬಾರ್, ಪುಟ್ಟನಿಕೋಬಾರ್ ಮತ್ತು ಗ್ರೇಟ್ ನಿಕೋಬಾರ್ ಎಂಬ ಮೂರು ದ್ವೀಪಗಳಿವೆ. ಈ ಎರಡು ಸ್ತೋಮಗಳನ್ನು ಹತ್ತನೆಯ ಡಿಗ್ರಿಯ ಕಡಲುಗಾಲುವೆ ಬೇರ್ಪಡಿಸಿದೆ. ಪ್ರಧಾನ ರೇವುಪಟ್ಟಣ ಪೋರ್ಟ್ ಬ್ಲೇರ್ (ಸ್ಥಾಪನೆ 1858). ಚೆನ್ನೈಗೆ 1120 ಕಿಮೀ, ರಂಗೂನಿಗೆ 624 ಕಿಮೀ ಹಾಗೂ ಕೋಲ್ಕತಕ್ಕೆ 1170 ಕಿಮೀ ದೂರದಲ್ಲಿದೆ.

ಈ ದ್ವೀಪಸ್ತೋಮ ಬಹಳ ಹಿಂದಿನಿಂದಲೂ ಪ್ರಸಿದ್ಧ. ಇತ್ಸಿಂಗ್, ಮಾರ್ಕೊಪೋಲೊ, ನಿಕಾಲೊ ಕಾಂಟಿ ಮತ್ತು ಇತರ ಪ್ರವಾಸಿಗರು ಇವುಗಳ ವಿಷಯವಾಗಿ ಬರೆದಿದ್ದಾರೆ. 1789ರಲ್ಲಿ ಕ್ಯಾಪ್ಟನ್ ಆರ್ಕಿಬಾಲ್ಡ್ ಬ್ಲೇರ್ ಎಂಬುವನು ಇಲ್ಲಿ ಬ್ರಿಟಿಷ್ ವಸಾಹತುವನ್ನು ಸ್ಥಾಪಿಸಿದ. ಬಹಳಕಾಲ ಈ ದ್ವೀಪಗಳು ದುಷ್ಕರ್ಮಿಗಳ, ಕೊಲೆಪಾತಕಿಗಳ ಮತ್ತು ರಾಜಕೀಯ ಬಂಧಿಗಳ ನಿವಾಸವಾಗಿದ್ದವು. 1858ರಲ್ಲಿ ಜಾರಿಗೆ ಬಂದ ಬಂಧಿಗಳ ರವಾನೆಯ ಕಾನೂನು 1945ರಲ್ಲಿ ರದ್ದಾಯಿತು. 1942ರಲ್ಲಿ ಜಪಾನರು ಈ ದ್ವೀಪವನ್ನಾಕ್ರಮಿಸಿದರು. 1956ರಿಂದ ಈಚೆಗೆ ಇದು ಭಾರತದ ಕೇಂದ್ರಾಡಳಿತ ವ್ಯವಸ್ಥೆಗೆ ಒಳಪಟ್ಟಿದೆ.

ಈ ದ್ವೀಪಗಳು ಬೆಟ್ಟಗುಡ್ಡಗಳಿಂದ ತುಂಬಿವೆ; ಇವು ಹೆಚ್ಚಾಗಿ ಹವಳ ದ್ವೀಪಗಳು. ಇದರಿಂದಾಗಿ ಭೂಮಿಯ ಮೇಲ್ಮೈ ಲಕ್ಷಣ ಬಹಳ ವ್ಯತ್ಯಾಸಗೊಂಡಿದೆ. ಉತ್ತರ ದಕ್ಷಿಣಾಭಿಮುಖವಾಗಿ ಹಬ್ಬಿರುವ 304.5ರಿಂದ 762ಮೀ ಎತ್ತರದ ಬೆಟ್ಟಗಳು ಮತ್ತು ಅವುಗಳ ಮಧ್ಯೆ ಉಂಟಾಗಿರುವ ಕಣಿವೆಗಳು ಮೇಲ್ಮೈ ಲಕ್ಷಣದ ವೈಶಿಷ್ಟ್ಯ. ಕರಾವಳಿಯಲ್ಲಿ ಅನೇಕ ಕೊಲ್ಲಿಗಳಿವೆ. ಅವುಗಳಲ್ಲಿ ಮುಖ್ಯವಾದುವು ಬ್ಲೇರ್, ಕಾಲ್‌ಪಾಂಗ್, ಕಾಲಾರ ಮತ್ತು ಕಾಂಗೊ. ನದಿಗಳೆಲ್ಲ ಸಣ್ಣವು; ಮಳೆಗಾಲದಲ್ಲಿ ಮಾತ್ರ ಇವುಗಳಲ್ಲಿ ಪ್ರವಾಹ ಬರುವುದುಂಟು. ಇಲ್ಲಿನ ವಾಯುಗುಣ ಸಾಗರಿಕ ಉಷ್ಣವಲಯದ ಮಾದರಿಯದು. ಸರಾಸರಿ ಸಾಪೇಕ್ಷ ಆರ್ದ್ರತೆ ಶೇ.80. ವಾರ್ಷಿಕ ಮಳೆ ಉತ್ತರ ಭಾಗದಲ್ಲಿ 75 ಮಿಮೀ, ದಕ್ಷಿಣ ಭಾಗದಲ್ಲಿ 120 ಮಿಮೀ. ಇಲ್ಲಿನ ಸಸ್ಯವರ್ಗದಲ್ಲಿ ಪ್ರಧಾನವಾದವು ದಟ್ಟವಾದ ಉಷ್ಣವಲಯದ ಕಾಡುಗಳು; ನಿತ್ಯಹರಿದ್ವರ್ಣದ, ಚಳಿಗಾಲದಲ್ಲಿ ಎಲೆಯುದುರುವ ಮತ್ತು ಮ್ಯಾನ್‌ಗ್ರೋವ್

ಎಂಬ ಜಾತಿಯ ಮರಗಳಿಂದ ತುಂಬಿ ಎಲ್ಲೆಡೆ ಹಬ್ಬಿವೆ. ನಿತ್ಯಹರಿದ್ವರ್ಣದ ಕಾಡುಗಳು ನದಿ ಕಣಿವೆಗಳಲ್ಲಿಯೂ ಬೆಟ್ಟಗಳ ಮೇಲ್ಭಾಗದಲ್ಲಿಯೂ ಕಾಣಬರುವವು. ಬೆಟ್ಟಗಳ ಇಳಿಜಾರುಗಳಲ್ಲಿ ಮತ್ತು ತಗ್ಗು ಪ್ರದೇಶಗಳಲ್ಲಿ ಅಗಲವಾದ ಎಲೆಯುಳ್ಳ ಮರಗಳು ಬೆಳೆಯುತ್ತವೆ. ಮ್ಯಾನ್‍ಗ್ರೋವ್ ಕಾಡುಗಳು ಕರಾವಳಿಯಲ್ಲಿ ಹೆಚ್ಚು.

ಈ ದ್ವೀಪಗಳ ಆರ್ಥಿಕ ಸಂಪತ್ತು ಅರಣ್ಯ, ಮೀನುಗಾರಿಕೆ ಮತ್ತು ವ್ಯವಸಾಯಗಳನ್ನ ವಲಂಬಿಸಿದೆ. ಕೆಲವು ಮುಖ್ಯ ಜಾತಿಯ ಮರಗಳು ಇಲ್ಲಿಂದ ರಫ್ತಾಗುತ್ತವೆ. ಮೀನುಗಾರಿಕೆ ಹೆಚ್ಚಾಗಿ ಬೆಳೆಯಲವಕಾಶವಿದ್ದರೂ ಈಗ ಇಲ್ಲಿನ ಜನರ ಅವಶ್ಯಕತೆಯನ್ನು ಮಾತ್ರ ಪೂರೈಸುವಷ್ಟಿದೆ. ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗಳ ನೆಲೆಸುನಾಡಾದಾಗಲೇ ಇಲ್ಲಿ ಭೂ ವ್ಯವಸಾಯ ಪ್ರಾರಂಭ ವಾಯಿತು; ಈಗ ಕೇವಲ ಶೇಕಡ ಒಂದರಷ್ಟು ಭೂಮಿಯನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಉಷ್ಣವಲಯದ ಬೆಳೆಗಳಾದ ಎಣ್ಣೆ ಕಾಳುಗಳು, ಕಬ್ಬು, ಬತ್ತ, ಸಿಹಿ ಆಲೂಗೆಡ್ಡೆ, ಬಾಳೆ, ಪರಂಗಿ, ಮಾವು, ಸೇಬು, ತೆಂಗು, ರಬ್ಬರ್, ಚಹ ಇವೇ ಮುಂತಾದವುಗಳನ್ನು ಬೆಳೆಯ ಲಾಗುತ್ತದೆ. ಆಹಾರಕ್ಕಾಗಿ ಕೋಳಿ ಸಾಕಣೆ ಎಲ್ಲೆಡೆಯೂ ಕಂಡುಬರುತ್ತದೆ. ಮರ ಕಡಿಯುವುದು ಮತ್ತು ಮರ ಕೊಯ್ಯುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಜನರ ಮುಖ್ಯ ಉದ್ಯೋಗ. ಜಾತಂ ದ್ವೀಪದಲ್ಲಿರುವ ಮರ ಕೊಯ್ಯುವ ಕಾರ್ಖಾನೆ ಭಾರತದಲ್ಲಿಯೇ ದೊಡ್ಡದು. ಪೋರ್ಟ್‍ಬ್ಲೇರ್‍ನಲ್ಲಿ ಒಂದು ಬೆಂಕಿಪೊಟ್ಟಣದ ಕಾರ್ಖಾನೆ ಇದೆ. ವಿವಿಧ ಕೈಗಾರಿಕೆಗಳ ಬೆಳವಣಿಗೆಗೆ ಇಲ್ಲಿ ಸಾಕಷ್ಟು ಅನುಕೂಲಗಳಿವೆ.

ಸು.400 ಹಳ್ಳಿಗಳಿವೆ. ಈ ದ್ವೀಪಸ್ತೋಮದಲ್ಲಿ ಪೋರ್ಟ್‍ಬ್ಲೇರ್ ಒಂದೇ ಜನನಿಬಿಡವಾದ ಪಟ್ಟಣ. 1951–61ರ ಅವಧಿಯಲ್ಲಿ ಪೂರ್ವಬಂಗಾಲದಿಂದ ನಿರಾಶ್ರಿತರನ್ನು ಇಲ್ಲಿ ನೆಲೆಸುವಂತೆ ಮಾಡಿದುದರಿಂದ ಜನಸಂಖ್ಯೆ ಶೇ.105ಕ್ಕೆ ಹೆಚ್ಚಿತು. ಸ್ಥಳೀಯ ಬುಡಕಟ್ಟಿನ ಒಟ್ಟು ಜನಸಂಖ್ಯೆ 20,000ಕ್ಕೂ ಹೆಚ್ಚಾಗಿದೆ. ಇದು ಒಟ್ಟು ಜನಸಂಖ್ಯೆಯ ಶೇ.25 ರಷ್ಟಿದೆ. ಇಲ್ಲಿನ ಜಾರಾವಾಸ್, ಒಂಗೇಸ್, ಅಂಡಮಾನೀಸ್ ಮತ್ತು ಸೆಂಟಿನಲೀಸ್ ಪಂಗಡದವರು ಪ್ರಪಂಚದ ಅತ್ಯಂತ ಪುರಾತನ ಜನಾಂಗಗಳಿಗೆ ಸೇರಿದವರು. ದಟ್ಟವಾದ ಕಾಡುಗಳು, ಅನಾಗರಿಕ ಜನ, ಪ್ರವೇಶಿಸಲು ಅಸಾಧ್ಯವಾದ ಭೂಸ್ಥಿತಿ–ಇವುಗಳಿಂದ ಈ ದ್ವೀಪಗಳು ಮುಖ್ಯವಾಗಿ ವಿಚಿತ್ರವಾದೊಂದು ಅಸ್ತಿತ್ವವನ್ನು ಪಡೆದಿವೆ. ಇತ್ತೀಚಿನವರೆಗೆ ಈ ದ್ವೀಪಗಳು ದಂಡನೆಗೊಳಗಾದ ಅಪರಾಧಿ ಗಳನ್ನಿಡುವ ಸ್ಥಳವಾಗಿದ್ದವು. ಇಂದು ಭಾರತ ಒಕ್ಕೂಟದ ಒಂದು ಭಾಗವಾಗಿದೆ. ಇಲ್ಲಿಯ ಅರಣ್ಯ ಮತ್ತು ಮೀನುಗಾರಿಕೆಯ ಸಂಪತ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಂಡರೆ ಈ ದ್ವೀಪಗಳ ಭವಿಷ್ಯ ಉತ್ತಮವಾಗುತ್ತದೆ. (ಎ.ಬಿ.ಎಂ.; ಎಚ್.ಆರ್.)

**ಅಂತಾರಾಷ್ಟ್ರೀಯ ಸಮ್ಮೇಳನಗಳು:** ಪರಸ್ಪರ ಹಿತಾಸಕ್ತಿಯುಳ್ಳ ರಾಷ್ಟ್ರಗಳು ಒಂದೆಡೆ ಸೇರಿ ವಿಚಾರ ವಿಮರ್ಶೆ ಮಾಡುವ ಕಾರ್ಯಕ್ರಮಗಳಿಗೆ ಸಮ್ಮೇಳನವೆನ್ನಬಹುದು. ಇದು ರೂಢಿಗೆ ಬಂದದ್ದು ಒಂದನೆಯ ಮಹಾಯುದ್ಧದಿಂದೀಚೆಗೆ. 1964ರಲ್ಲಂತೂ ಇಂಥ ನೂರಾರು ಸಮ್ಮೇಳನಗಳು ಜರುಗಿದುವು. ಇವುಗಳನ್ನು ಸರ್ಕಾರಿ ಸಮ್ಮೇಳನಗಳು (ಉದಾ : ಕೈರೋ ನಗರದಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಸಮ್ಮೇಳನ) ಮತ್ತು ಖಾಸಗಿ ಸಮ್ಮೇಳನಗಳು (ಉದಾ : ಜರ್ಮನಿಯ ಹೋಹೆನ್ ಬೀಸ್ಟೀನ್‍ನಲ್ಲಿ ಜರುಗಿದ ಕ್ರೈಸ್ತವಿದ್ಯಾ ಸಮ್ಮೇಳನ) ಎಂದು ಎರಡು ವಿಭಾಗ ಮಾಡಬಹುದು. ಅಂತಹ ಸರ್ಕಾರಿ ಸಮ್ಮೇಳನಗಳನ್ನು ಮಾತ್ರ ಅಂತಾರಾಷ್ಟ್ರೀಯ ಎಂದು ಹೇಳುವುದು ತಪ್ಪಾಗುತ್ತದೆ. ಮೂರು ಅಥವಾ ಹೆಚ್ಚು ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡು, ಧ್ಯೇಯ ಹಾಗೂ ಕಾರ್ಯಕ್ರಮಗಳಲ್ಲಿ ಅಂತಾರಾಷ್ಟ್ರೀಯ ರೂಪು ಪಡೆದಿರುವ ಎಲ್ಲ ಸಮ್ಮೇಳನಗಳನ್ನೂ ಅಂತಾರಾಷ್ಟ್ರೀಯ ಸಮ್ಮೇಳನಗಳೆಂದು ಕರೆಯುವುದು ಸೂಕ್ತ.

ಆದರೂ ಸಾಮಾನ್ಯ ಜನರ ಭಾವನೆಯಲ್ಲಿ ಮಾತ್ರ ಅಂತಾರಾಷ್ಟ್ರೀಯ ಸಂಸ್ಥೆಗಳೆಂದರೆ: 1. ರಾಷ್ಟ್ರಗಳಿಗೆ ಸಮಾನವಾಗಿ ಸಂಬಂಧಿಸಿದ ವಿಷಯ ಹಾಗೂ ಸಮಸ್ಯೆಗಳನ್ನು ಚರ್ಚಿಸಿ ನಿರ್ಧರಿಸಲು ಆ ದೇಶಗಳ ಪ್ರತಿನಿಧಿಗಳನ್ನೊಳಗೊಂಡ ಸಮ್ಮೇಳನಗಳು. 2. ವ್ಯವಸ್ಥಿತ ಅಂತಾರಾಷ್ಟ್ರೀಯ ಸಂಸ್ಥೆಗಳು. ಇಂಥ ಸಮ್ಮೇಳನಗಳನ್ನು ಕರೆಯಲು ಕಾರಣವಾದ ಮುಖ್ಯ ವಿಷಯಗಳೆಂದರೆ, ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸುವುದು, ನಡೆಯಬಹುದಾದ ಯುದ್ಧವನ್ನು ತಡೆಗಟ್ಟುವುದು. 1919ರಲ್ಲಿ ಮಹಾಯುದ್ಧವನ್ನು ನಿಲ್ಲಿಸುವುದಕ್ಕೆಂದು ಆಹ್ವಾನಿಸಿದ ಪ್ಯಾರಿಸ್ ಶಾಂತಿ ಸಮ್ಮೇಳನ ಮೊದಲನೆಯದಕ್ಕೆ ಉದಾಹರಣೆ. ಶಾಂತಿಯುತವಾಗಿ ಅಂತಾರಾಷ್ಟ್ರೀಯ ವಿವಾದಗಳನ್ನು ಬಗೆಹರಿಸುವುದಕ್ಕಾಗಿ 1907ರಲ್ಲಿ ಕರೆದ ಹೇಗ್ ಸಮ್ಮೇಳನ ಎರಡನೆಯದಕ್ಕೆ ಉದಾಹರಣೆ. ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ಕಾರಣವಾದ ಇತರ ವಿಷಯಗಳೆಂದರೆ ವಾಣಿಜ್ಯ, ಆರೋಗ್ಯ, ಕಾರ್ಮಿಕರ ಸ್ಥಿತಿ, ಶಿಕ್ಷಣ ಮತ್ತು ಶಿಶುಪೋಷಣೆ.

ಅಂತಾರಾಷ್ಟ್ರೀಯ ಸಮ್ಮೇಳನಗಳು ಯಶಸ್ವಿಯಾಗಬೇಕಾದರೆ, ಎರಡು ವಿಧದ ಸಿದ್ಧತೆಗಳನ್ನು ನಡೆಸಬೇಕಾಗುತ್ತದೆ. 1. ಆಡಳಿತ ವರ್ಗದ ಸಂಘಟನೆ, ವಾಹನಸೌಕರ್ಯ, ವಾಸಸ್ಥಳದ ಅನುಕೂಲತೆಗಳು, ಆಡಳಿತ ಶಾಖೆಗೆ, ಸಮ್ಮೇಳನಕ್ಕೆ ಬೇಕಾದ ಸ್ಥಳಾವಕಾಶಗಳನ್ನು ಒದಗಿಸುವುದು, ಸಮಾಚಾರ ಸಾಗಣೆ, ಭಾಷಾಂತರಕ್ಕೆ ಬೇಕಾದ ಸೌಲಭ್ಯಗಳು, ಅವಶ್ಯ ಸಾಮಗ್ರಿಗಳ ಸರಬರಾಜು, ಬ್ಯಾಂಕು ವ್ಯವಸ್ಥೆ, ಸಮ್ಮೇಳನದ ಕಾರ್ಯಕಲಾಪಗಳು ಸೌಹಾರ್ದದಿಂದ ಯಶಸ್ವಿಯಾಗಿ ಪೂರೈಸಬೇಕಾದರೆ ಈ ಸೌಲಭ್ಯಗಳು ದೋಷರಹಿತವಾಗಿರಬೇಕು. ಉದಾ: ಸಮಿತಿಗಳ ಕೊಠಡಿಗಳಲ್ಲಿ ನಿರಾಳವಾಗಿ ಕೂಡುವ ವ್ಯವಸ್ಥೆ, ತಾಂತ್ರಿಕ ರೀತಿಯ ಏರ್ಪಾಡುಗಳಲ್ಲಿ ಬಗೆಹರಿಸಬೇಕಾದ ಸಮಸ್ಯೆಗಳ ನಿಷ್ಕೃಷ್ಟ ನಿರೂಪಣೆ, ಸಮ್ಮೇಳನ ಸಾಧಿಸಬೇಕಾದ ಧ್ಯೇಯಗಳು (ಒಟ್ಟಿನಲ್ಲಿ ಅಜೆಂಡ ಅಥವಾ ಕಾರ್ಯಸೂಚಿ), ಕಾರ್ಯಕ್ರಮದ ಸ್ವರೂಪ ಮತ್ತು ಸಾಧನಗಳ ನಿರ್ಣಯ ಅಂದರೆ ಸರ್ವಸದಸ್ಯ ಸಮ್ಮೇಳನಗಳು ಎಷ್ಟು ಬಾರಿ ಸೇರಬೇಕು, ಸಮಿತಿಗಳೆಷ್ಟಿರಬೇಕು ಎಂಬುದು ಮತ್ತು ಚರ್ಚೆಗಳಲ್ಲಿ ಭಾಗವಹಿಸುವವರಿಗೆ ಬೇಕಾದ ಆಧಾರ ಕಾಗದ ಪತ್ರಗಳನ್ನೊದಗಿಸುವುದು–ಇತ್ಯಾದಿ.

ಅಂತಾರಾಷ್ಟ್ರೀಯ ಸಮ್ಮೇಳನಗಳು ಮೂರು ವಿಧಗಳಲ್ಲಿ ಮುಕ್ತಾಯಗೊಳ್ಳಬಹುದು: 1. ಸಾಂಪ್ರದಾಯಿಕ ಅಥವಾ ಔಪಚಾರಿಕ ಅಂತಾರಾಷ್ಟ್ರೀಯ ಒಪ್ಪಂದಕ್ಕೆ ಎಲ್ಲರೂ ಸಹಿ ಹಾಕಬಹುದು; ಉದಾ: 1919ರಲ್ಲಿ ನಡೆದ ಪ್ಯಾರಿಸ್ ಸಮ್ಮೇಳನದ ಫಲವಾಗಿ ಎಲ್ಲರ ಒಪ್ಪಿಗೆ ಪಡೆದ ವರ್ಸೇಲ್ಸ್ ಕರಾರು. 2. ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ ಮಾತ್ರ ಹೊರ ಬೀಳಬಹುದು. 3. ಸದಸ್ಯರ ಒಟ್ಟು ಅಭಿಪ್ರಾಯಗಳನ್ನೊಳಗೊಂಡು ಅಧಿಕಾರಯುತ ಪ್ರಕಟಣೆ ಯನ್ನು ಕೊಡಬಹುದು; ಉದಾ: 1953ರ ಬಾಂಡುಂಗ್ ಸಮ್ಮೇಳನದ ವರದಿ. (ಎ.ಎ.)

**ಅಂತಿಚಕ್:** ಬಿಹಾರ ರಾಜ್ಯದ ಭಾಗಲ್ಪುರ ಜಿಲ್ಲೆಯಲ್ಲಿರುವ ಬೌದ್ಧವಿಹಾರ. 9ನೆಯ ಶತಮಾನದ ಆರಂಭದಲ್ಲಿ ಪಾಲ ದೊರೆ ಧರ್ಮಪಾಲನಿಂದ ನಿರ್ಮಿಸಲ್ಪಟ್ಟಿತು. 13ನೆಯ ಶತಮಾನದಲ್ಲಿ ನಾಶವಾಯಿತು. ಗಂಗಾ ನದಿ ದಡದ ಮೇಲೆ ಈ ವಿಹಾರವಿದೆಯೆಂದೂ ಇದು ವಿಶಾಲವಾದ ಪೌಳಿ ಗೋಡೆಗಳಿಂದ ಆವೃತವಾಗಿದೆಯೆಂದೂ ಇದರ ಮಧ್ಯಭಾಗದಲ್ಲಿ ಒಂದು ದೊಡ್ಡ ಬೌದ್ಧ ಅಧ್ಯಯನ ಸಭಾಂಗಣವಿದೆಯೆಂದೂ ಟಿಬೆಟ್ ಆಕರಗಳಲ್ಲಿ ಉಲ್ಲೇಖವಿದೆ. ಇಲ್ಲಿಗೆ ಭಾರತದ ವಿವಿಧ ಭಾಗಗಳಿಂದ ವಿದ್ವಾಂಸರು ಅಧ್ಯಯನಕ್ಕೆ ಬರುತ್ತಿದ್ದರೆಂದು ತಿಳಿದುಬರುತ್ತದೆ.

ಈ ನೆಲೆಗೆ 1811ರಲ್ಲಿ ಮೊದಲ ಬಾರಿಗೆ ಫ್ರಾನ್ಸಿಸ್ ಬುಕನನ್ ಭೇಟಿನೀಡಿದ್ದ. ವಿಕ್ರಮಶೀಲ ಇಲ್ಲಿರುವ ಹತ್ತಿರದ ಪತರ್‍ಘಟ್ಟಾಕ್ಕೆ ಹೊಂದಿಕೊಂಡಿತ್ತು. ಇತ್ತೀಚೆಗೆ ಪಟಣ ವಿಶ್ವವಿದ್ಯಾಲಯದ ಬಿ.ಪಿ.ಸಿನ್ಹ ಅಂತಿಚಕ್‍ನಲ್ಲಿ 1960–69ರವರೆಗೆ ಉತ್ಖನನ ನಡೆಸಿ ಇದರ ಸಂಬಂಧವನ್ನು ವಿಕ್ರಮಶೀಲದೊಂದಿಗೆ ಗುರುತಿಸಿದ್ದಾರೆ. ಇಲ್ಲಿರುವ ಚೈತ್ಯ ತ್ರಿಕೂಟ ವಿನ್ಯಾಸದಲ್ಲಿದೆ. 9–13ನೆಯ ಶತಮಾನದ ಅವಧಿಯಲ್ಲಿ 3 ಹಂತಗಳಲ್ಲಿ ಈ ಚೈತ್ಯದ ನಿರ್ಮಾಣವಾಯಿತು. ಭೂಮಿಯ ತಳಮಟ್ಟದಿಂದ ಅಧಿಷ್ಠಾನ 15ಮೀ ಎತ್ತರವಿದ್ದು, ಅದರ ಸುತ್ತಳತೆ 100ಮೀ ಇದೆ. ಈ ಚೈತ್ಯ ಇಟ್ಟಿಗೆಗಳಿಂದ ನಿರ್ಮಾಣಗೊಂಡಿದೆ. ಇದರಲ್ಲಿ ವಿಶಾಲವಾದ ಹಾಗೂ ಸಣ್ಣ ಕೋಣೆಗಳಿವೆ. ಚೈತ್ಯದ ನಡುವೆ ದಾರಿಗಳಿದ್ದು ಇವುಗಳ ನಡುವೆ ಓಡಾಡಬಹುದಾಗಿದೆ. ಮೇಲಿನ ದಾರಿ ಕೆಳಗಿನ ದಾರಿಗಿಂತ 2ಮೀ ಎತ್ತರದಲ್ಲಿದೆ. ಬಾಂಗ್ಲಾದೇಶದ ಪಹರಪುರ್ ನಲ್ಲಿರುವ ಸೋಮಪುರ ಮಹಾ ವಿಹಾರದಂತಿರುವ ಈ ವಿಹಾರದ ಗೋಡೆಗಳು ಸುಂದರವಾದ ಸುಡಾವೆ ಮಣ್ಣಿನ ಫಲಕಗಳಿಂದ ಶೋಭಿತವಾಗಿವೆ. 1972ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ನಡೆಸಿದ ಉತ್ಖನನದಲ್ಲಿ 330 ಚ.ಮೀ ನ ಬೌದ್ಧ ವಿಹಾರ ಲಭ್ಯವಾಗಿದ್ದು, ಇದು 208 ಸಣ್ಣ ಕೋಣೆಗಳನ್ನು ಹೊಂದಿರುವುದು ಕಂಡುಬಂದಿದೆ. ವಿಹಾರದ ಉತ್ತರ ದ್ವಾರದಲ್ಲಿ ಚೌಕಾಕಾರದ ಮತ್ತು ವೃತ್ತಾಕಾರದ ರಚನೆಗಳು ಒಳ ಹಾಗೂ ಹೊರ ಗೋಡೆಗಳ ಮೇಲೆ ರಚಿತಗೊಂಡಿವೆ. ಈ ಕೋಣೆಗಳ ನಡುವೆ ಸಾಮಾನ್ಯವಾದ ಅಂಗಳವಿದೆ. ಮುಖ್ಯದ್ವಾರದ ಚಾವಣಿಗೆ ಆಧಾರವಾಗಿ 7.8ಮೀ ಎತ್ತರದ ಏಕಶಿಲಾ ಸ್ತಂಭಗಳನ್ನು ನಿಲ್ಲಿಸಲಾಗಿದೆ. ದಕ್ಷಿಣ ವಿಹಾರದ ದ್ವಾರವನ್ನೂ ಶೋಧಿಸಲಾಗಿದೆ. ಅಲ್ಲದೆ ಈಶಾನ್ಯದ ಮೂಲೆಯಲ್ಲಿ ಒಂದು ದೊಡ್ಡ ಚರಂಡಿಯೂ ತಳಪಾಯದಲ್ಲಿ ಕೆಲವು ಕೋಣೆಗಳೂ ಕಂಡುಬಂದಿವೆ.

ವಿಕ್ರಮಶೀಲದಲ್ಲಿ ದೊರೆತಿರುವ ಅವಶೇಷಗಳು ಬೌದ್ಧ ಮತ್ತು ವೈದಿಕಧರ್ಮದ ದೇವತೆಗಳು, ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಒಳಗೊಂಡಿವೆ. ಬುದ್ಧ, ಮೈತ್ರೇಯ, ವಜ್ರಪಾಣಿ, ಅವಲೋಕಿತೇಶ್ವರ ಮತ್ತು ಮಂಜುಶ್ರೀ ಮೊದಲಾದ ಹಿತ್ತಾಳೆಯ ವಿಗ್ರಹಗಳೂ ದೊರೆತಿವೆ. ಜೊತೆಗೆ ಕಲ್ಲು, ಕಬ್ಬಿಣ, ತಾಮ್ರ, ಬೆಳ್ಳಿ, ಹಿತ್ತಾಳೆಯ ವಸ್ತುಗಳೂ ಕೆಲವು ಬೆಳ್ಳಿ ಮತ್ತು ತಾಮ್ರದ ನಾಣ್ಯಗಳೂ ಸಿಕ್ಕಿವೆ. ಕೆಂಪು ಹಾಗೂ ಬೂದುಬಣ್ಣದ ಮಣ್ಪಾತ್ರೆಗಳೂ ಇಲ್ಲಿವೆ. (ಎನ್‍ಆರ್.)

**ಅಂತ್ಯ ಹಳೆಶಿಲಾಯುಗ ಸಂಸ್ಕೃತಿ:** ಹಳೆಶಿಲಾಯುಗದ ಕೊನೆಯ ಹಂತ. ಸು. 40,000 ದಿಂದ 10,000 ವರ್ಷಗಳ ಹಿಂದೆ, ಹಿಮಯುಗದ ಮುಕ್ತಾಯ ಹಂತದಲ್ಲಿ ನೈರುತ್ಯ ಏಷ್ಯ, ಯುರೋಪ್, ಆಫ್ರಿಕ ಮತ್ತು ಏಷ್ಯ ಖಂಡಗಳಲ್ಲಿ ಅಂತ್ಯ ಹಳೆಶಿಲಾಯುಗ ಸಂಸ್ಕೃತಿಗಳು ಹುಟ್ಟಿಬೆಳೆದವು. ಈ ಹಂತದ ಜನರು ದೈಹಿಕವಾಗಿ ಈಗಿನ ಮಾನವರಂತೆ ಇದ್ದರು. ಅಂದರೆ ಇವರು ಸಹ ಹೋಮೋ ಸೇಪಿಯನ್ಸ್ ಮಾನವ ವಂಶಕ್ಕೆ ಸೇರಿದವರಾ ಗಿದ್ದರು. ಭೂಮಿಯ ಮೇಲೆ ಈಗ ಉಳಿದಿರುವ ಏಕೈಕ ಮಾನವವಂಶವಿದು.

**ಪ್ರಪಂಚ:** ನೈರುತ್ಯ ಫ್ರಾನ್ಸಿನ ಡೊರ್‍ಡೊನೆ ಪ್ರದೇಶದಲ್ಲಿರುವ ಕ್ರೋ–ಮ್ಯಾಗ್ನನ್ ಎಂಬ ಹೆಸರಿನ ಕಲ್ಲಾಸರೆಯಲ್ಲಿ ಈ ಯುಗದ ಮಾನವನ ಪಳೆಯುಳಿಕೆಗಳು 1868ರಲ್ಲಿ ಮೊದಲ ಬಾರಿಗೆ ದೊರೆತವು. ಹೀಗಾಗಿ ಇವರನ್ನು ಕ್ರೋ–ಮ್ಯಾಗ್ನನ್ ಜನರೆಂದೇ ಕರೆಯಲಾಯಿತು. ಈ ಜನ ಲಂಬಕಾಯದವರೂ ಸದೃಢ ದೇಹದವರೂ ಆಗಿದ್ದರು. ಆದರೆ ಇವರ ಅಂಗರಚನೆಯಲ್ಲಿ ಕೆಲವೊಂದು ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ.

ರಷ್ಯ, ಫ್ರಾನ್ಸ್, ಆಫ್ರಿಕ ಮತ್ತು ಚೀನಗಳಲ್ಲಿ ಸಿಕ್ಕಿರುವ ಈ ಜನರ ಪಳೆಯುಳಿಕೆಗಳಲ್ಲಿ ಸೂಕ್ಷ್ಮ ದೈಹಿಕ ವ್ಯತ್ಯಾಸಗಳಿವೆ. ವಿಕಾಸ ಚರಿತ್ರೆಯ ದೃಷ್ಟಿಯಿಂದ ಮಾನವನ ಸಾಧನೆಗಳು ಶೃಂಗವನ್ನು ತಲುಪಿದ ಪ್ರಥಮ ಹಂತವಿದು. ಈ ಹಂತದ ಶಿಲೋಪಕರಣ ತಯಾರಿಕಾ ತಂತ್ರಗಾರಿಕೆಯಲ್ಲಿ ಹೊಸತನ ಕಂಡುಬರುತ್ತದೆ. ಸಮಾನಾಂತರ ಅಂಚಿನ ನೀಳ, ತೆಳು ಅಲಗುಗಳನ್ನು ತಯಾರಿಸುವ ತಂತ್ರವನ್ನು ಈ ಜನ ಕಂಡುಕೊಂಡರು. ಇಂತಹ ಅಲಗುಗಳನ್ನು ವಿವಿಧ ನಮೂನೆಯ ಉಪಕರಣಗಳನ್ನಾಗಿ ಮಾರ್ಪಡಿಸಲಾಗುತ್ತಿತ್ತು ಇಂತಹ ಒಂದು ಹೊಸ ನಮೂನೆ ಬದಿ ಮೊಂಡಾಗಿಸಿದ ಅಲಗುಗಳು (ಬ್ಯಾಕ್ಡ್ ಬ್ಲೇಡ್ಸ್). ಇವುಗಳ ಅಂಚನ್ನು ಮರದ ಹಿಡಿಕೆಯಲ್ಲಿ ಸಿಕ್ಕಿಸಲು ನೆರವಾಗುವಂತೆ ಮೊಂಡುಗೊಳಿಸಲಾಗುತ್ತಿತ್ತು. ಇವನ್ನು ಪ್ರಾಯಶಃ ಈಟಿಗಾಳಗಳ ಬದಿಯಲ್ಲಿ ಮುಳ್ಳಿನಂತೆ (ಬಾರ್ಬ್) ಸಿಕ್ಕಿಸಲಾಗುತ್ತಿತ್ತು. ಮತ್ತೊಂದು ಹೊಸ ನಮೂನೆ ಉಳಿಯಂತೆ ಚೂಪು ತುದಿಯುಳ್ಳ ಕೊರಗ/ಕೊರೆಯುಳಿ (ಬ್ಯೂರಿನ್). ಮೂಳೆ ಮತ್ತು ಜಿಂಕೆಯ ಕೊಂಬುಗಳನ್ನು ಕೊರೆಯುವ ಕಾರ್ಯದಲ್ಲಿ ಇವು ಪ್ರಾಯಶಃ ಉಪಯುಕ್ತವಾಗಿದ್ದವು. ವಿವಿಧ ನಮೂನೆಯ ಮೊನೆಗಳೂ ಒಂದು ಅಥವಾ ಎರಡೂ ಬದಿಯಲ್ಲಿ ಮುಳ್ಳಿರುವ ಜಿಂಕೆಕೊಂಬಿನಿಂದ ಮಾಡಿದ ಈಟಿಗಾಳಗಳೂ ನೈರುತ್ಯ ಫ್ರಾನ್ಸ್‌ನಲ್ಲಿ, ಅಲ್ಲದೆ ಯುರೋಪಿನ ಇತರ ಭಾಗಗಳಲ್ಲಿಯೂ ಸಿಕ್ಕಿವೆ. ಈ ಹಂತದ ಉಪಕರಣಗಳು ಸಾಮಾನ್ಯವಾಗಿ ಚಕಮಕಿ ಕಲ್ಲಿನಲ್ಲಿ (ಫ್ಲಿಂಟ್) ಮಾಡಿದವು.

ಕಲೆಯ ದೃಷ್ಟಿಯಿಂದಲೂ ಮಹತ್ತ್ವವಾದ ಹಂತವಿದು. ಯುರೋಪಿನಲ್ಲಿ ಆರಿಗ್ನೇಷಿಯನ್ ಸಂಸ್ಕೃತಿಯೊಂದಿಗೆ ಪ್ರಾರಂಭವಾದ ಕಲೆಯ ಬೆಳವಣಿಗೆ ಮ್ಯಾಗ್ಡಲೇನಿಯನ್ ಸಂಸ್ಕೃತಿಯ ಅವಧಿಯಲ್ಲಿ ಒಂದು ಮಟ್ಟದ ಪರಿಪಕ್ವತೆಯನ್ನು ಪಡೆಯಿತು. ಬಹುವರ್ಣದ ಗುಹಾಚಿತ್ರಗಳು ಮತ್ತು ಸೊಗಸಾಗಿ ಅಲಂಕರಿಸಿದ ದಿನಬಳಕೆಯ ವಸ್ತುಗಳು–ಇವೆರಡೂ ಈ ಜನರ ಕಲಾಭಿರುಚಿಗೆ ಹಿಡಿದ ಕನ್ನಡಿಯಾಗಿದೆ. ಫ್ರಾನ್ಸ್ **(ನೋಡಿ–ಲ್ಯಾಸ್ಕೊ)** ಮತ್ತು ಸ್ಪೇನಿನ **(ನೋಡಿ–ಅಲ್ತಮೀರ)** ನೈಸರ್ಗಿಕ ಗುಹೆಗಳ ಸೂರು–ಗೋಡೆಗಳ ಮೇಲೆ ವಿಭಿನ್ನ ವಸ್ತುವಿಷಯಗಳ ಹಲವಾರು ಬಹುವರ್ಣಚಿತ್ರಗಳಿವೆ. ಬಂಡೆಗಳ ಮೇಲಿನ ರೇಖಾಚಿತ್ರಗಳೂ ಈ ಪ್ರದೇಶದಲ್ಲಿ ಬಹುಸಂಖ್ಯೆಯಲ್ಲಿವೆ. ಈ ಕಾಲದ ಕಲೆಯ ಮತ್ತೊಂದು ರೂಪಣವೆಂದರೆ ವೀನಸ್ ಸ್ತ್ರೀ ಆಕೃತಿಗಳು, ಹಿಮಆನೆಯ ದಂತ, ಕಲ್ಲು ಅಥವಾ ಜೇಡಿಮಣ್ಣಿನಿಂದ ಮಾಡಿದ ಸ್ಥೂಲಕಾಯದ ಗರ್ಭಾವಸ್ಥೆಯಲ್ಲಿರುವ ನಗ್ನ ಸ್ತ್ರೀಯರ ಈ ಪುಟ್ಟ ಮೂರ್ತಿಗಳು ವಂಶಾಭಿವೃದ್ಧಿಯ ಅಥವಾ ಸುಭದ್ರತೆ–ಯಶಸ್ಸಿನ ಸಂಕೇತಗಳಾಗಿದ್ದಿರಬಹುದು. ಈ ಹಂತದಲ್ಲಿ ಭಾಷೆ ಹುಟ್ಟಿದ್ದರಿಂದ ಸಂವಹನ ಸಾಧ್ಯವಾಗಿ ಈ ಎಲ್ಲ ಪ್ರಗತಿಗಳಾದವು ಎಂದು ಹಲವು ತಜ್ಞರು ತರ್ಕಿಸುತ್ತಾರೆ.

ಯುರೋಪಿನಲ್ಲಿ ಅಂತ್ಯ ಹಳೆಶಿಲಾಯುಗದ ಬೆಳವಣಿಗೆಯ ಎಲ್ಲ ಹಂತಗಳು ದಾಖಲಾಗಿರುವ ಮಾದರಿ ಪ್ರದೇಶ ನೈರುತ್ಯ ಫ್ರಾನ್ಸ್. ಸು.40,000–12,000 ವರ್ಷಗಳ ಹಿಂದಿನ ಅವಧಿಗೆ ಸೇರುವ ಈ ಸಾಂಸ್ಕೃತಿಕ ಹಂತಗಳನ್ನು ಚಾಟೆಲ್‌ಪೆರ್ರೋನಿಯನ್ (35,000–29,000), ಆರಿಗ್ನೇಷಿಯನ್ (34,000–29,000), ಗ್ರಾವೆಟ್ಟಿಯನ್ (28,000–22,000), ಸಲೂತ್ರಿಯನ್ (21,000–19,000) ಮತ್ತು ಮ್ಯಾಗ್ಡಲೇನಿಯನ್ (18,000–12,000) ಎಂದು ಹೆಸರಿಸಲಾಗಿದೆ.

ಪೂರ್ವ ಮತ್ತು ನೈರುತ್ಯ ಫ್ರಾನ್ಸಿನ ಮೊಟ್ಟಮೊದಲ ಅಂತ್ಯ ಹಳೆಶಿಲಾಯುಗ ಉಪಸಂಸ್ಕೃತಿ ಚಾಟೆಲ್‌ಪೆರ್ರೋನಿಯನ್. ಇದನ್ನು ಆದಿ ಪೆರಿಗೋರ್ಡಿಯನ್, ಪೆರಿಗೋರ್ಡಿಯನ್ I, ಆದಿ ಆರಿಗ್ನೇಷಿಯನ್ ಎಂದೂ ಕರೆಯಲಾಗಿದೆ. ಈ ಸಂಸ್ಕೃತಿ ಇದರ ಪೂರ್ವದಲ್ಲಿದ್ದ ಮೌಸ್ಟೀರಿಯನ್ ಸಂಸ್ಕೃತಿಯಿಂದ ಬೆಳೆದಂತೆ ತೋರುತ್ತದೆ. ಚಾಟೆಲ್‌ಪೆರ್ರೋನಿಯನ್ ಸಂಸ್ಕೃತಿಯ ಸ್ಥಾನ ಮತ್ತು ಕಾಲಮಾನಗಳ ಬಗ್ಗೆ ಪುರಾತತ್ತ್ವ ಶಾಸ್ತ್ರಜ್ಞರಲ್ಲಿ ಒಮ್ಮತವಿಲ್ಲ. ನಿಯಾಂಡರ್ತಲ್ ಮಾನವವಂಶಕ್ಕೆ ಸೇರಿದ, ನೈರುತ್ಯ ಫ್ರಾನ್ಸ್–ಉತ್ತರ ಸ್ಪೇನ್ ಪ್ರದೇಶಕ್ಕೆ ಸೀಮಿತಗೊಂಡಿದ್ದ ಸಂಸ್ಕೃತಿ ಇದಾಗಿತ್ತೆಂಬುದಕ್ಕೆ ಬಹುಮತವಿದೆ. ಚಾಟೆಲ್ ಪೆರ್ರೋನಿಯನ್ ಸಂಸ್ಕೃತಿ ಆರಿಗ್ನೇಷಿಯನ್ ಸಂಸ್ಕೃತಿಯ ಪೂರ್ವದಲ್ಲಿಯೇ ಆರಂಭವಾಗಿದ್ದರೂ ಇವೆರಡೂ ಸಂಸ್ಕೃತಿಗಳು ಕೆಲಸಾವಿರ ವರ್ಷಗಳ ಕಾಲ ಒಟ್ಟೊಟ್ಟಿಗೆ ಅಸ್ತಿತ್ವದಲ್ಲಿದ್ದವು. ಚಾಟೆಲ್‌ಪೆರ್ರೋನಿಯನ್ ಸಂಸ್ಕೃತಿಯಲ್ಲಿ ಕಾಣುವ ಅಪರೂಪದ ಉಪಕರಣ ನಮೂನೆ ಬದಿಮೊಂಡಾಗಿಸಿದ ಚೂರಿ/ಅಲಗು. ಚಾಟೆಲ್‌ಪೆರ್ರೋನಿಯನ್ ಚೂರಿ ಎಂದೇ ಕರೆಯಲಾಗುವ ಈ ಉಪಕರಣಗಳ ಒಂದು ತುದಿ ಚೂಪಾಗಿದ್ದು ಬದಿ ಮೊಂಡಾಗಿರುತ್ತದೆ ಇವು ಇಂದಿನ ಪುಟ್ಟ ಮಡಚುವ ಚೂರಿಯನ್ನು (ಪೆನ್‌ನೈಫ್) ಹೋಲುತ್ತವೆ. ಚಾಟೆಲ್‌ಪೆರ್ರೋನಿಯನ್ ಮೊನೆ ಎಂದು ಕರೆಯುವ, ಚೂಪು ಮೊನೆಯಿದ್ದು ಡೊಂಕಾಗಿರುವ ಅಲಗುಗಳು, ಕೊರೆಯುಳಿ ಮತ್ತು ಹೆರೆಚಕ್ಕೆ ಈ ಹಂತದ ಇತರ ಉಪಕರಣ ನಮೂನೆಗಳು, ಮೂಳೆಯ ದಬ್ಬಳಗಳು, ತೂತುಳ್ಳ ಹಲ್ಲುಗಳು, ಮೂಳೆಯ ಪದಕಗಳು ಈ ಸಂಸ್ಕೃತಿಯಲ್ಲಿದ್ದರೂ ಇವುಗಳ ಸಂಖ್ಯೆ ನಗಣ್ಯ.

ಆರಿಗ್ನೇಷಿಯನ್ ಸಂಸ್ಕೃತಿ ದಕ್ಷಿಣ ಫ್ರಾನ್ಸಿನಲ್ಲಿರುವ ಆರಿಗ್ನಾಕ್ ಎಂಬ ವಸತಿನೆಲೆಯಿಂದ ತನ್ನ ಹೆಸರನ್ನು ಪಡೆದಿದೆ. ಈ ಪ್ರದೇಶದಲ್ಲಿ ಚಾಟೆಲ್‌ಪೆರ್ರೋನಿಯನ್ ಮತ್ತು ಗ್ರಾವೆಟ್ಟಿಯನ್ ಹಂತಗಳ ಸ್ತರಗಳ ನಡುವಿನ ಸ್ತರಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳಿವೆ. ಅಪರೂಪದ ಮಾದರಿಯ ಹೆರೆಚಕ್ಕೆಗಳೇ ಆರಿಗ್ನೇಷಿಯನ್ ಸಂಸ್ಕೃತಿಯ ಲಕ್ಷಣ. ಶಂಕುವಿನಾಕಾರದ ಶಿಲಾಗಟ್ಟಿಯಿಂದ ತೆಗೆದ ನೀಳ ಆದರೆ ಕಿರಿದಾಗಿರುವ ಅಲಗುಗಳು ಈ ಸಂಸ್ಕೃತಿಯ ಮತ್ತೊಂದು ಛಾಪು. ಇದಲ್ಲದೆ, ಸಾಮಾನ್ಯ ನಮೂನೆಯ ಹೆರೆಚಕ್ಕೆಗಳು, ಬದಿ ಮೊಂಡಾಗಿಸಿದ ಅಲಗುಗಳು, ಬಗೆಬಗೆಯ ಕೊರೆಯುಳಿಗಳು ಮತ್ತು ಚಕ್ಕೆಯ ಉಪಕರಣಗಳೂ ಇವೆ. ದಬ್ಬಳ, ಚಪ್ಪಟೆಯಾದ ಭರ್ಜಿಯ ಮೊನೆ, ಸೀಳಿದ ತೊಟ್ಟಿನ ಮೂಳೆಯ ಮೊನೆ (ಸ್ಪ್ಲಿಟ್ ಬೇಸ್ಡ್), ಜಿಂಕೆ ಕೊಂಬಿನ ತೂತುಳ್ಳ ಉದ್ದ ತುಂಡುಗಳು ಮೊದಲಾದ ಉಪಕರಣಗಳಿಗೂ ತೂತುಳ್ಳ ಹಲ್ಲು ಮತ್ತು ಕಪ್ಪೆಚಿಪ್ಪುಗಳು, ಕೆತ್ತನೆಯುಳ್ಳ ಮೂಳೆಯ ಪದಕ, ಕೈಕಡಗಗಳು, ದಂತದಮಣಿ ಮೊದಲಾದ ಆಭರಣಗಳಿಗೂ ಈ ಸಂಸ್ಕೃತಿ ಹೆಸರುವಾಸಿ. ದಂತದ ಮೇಲೆ ಕೆತ್ತಿದ ಪ್ರಾಣಿ ಮತ್ತು ಮಾನವ ಆಕೃತಿಗಳು ಈ ಹಂತದಲ್ಲಿ ಮೊಟ್ಟಮೊದಲ ಬಾರಿಗೆ ಕಾಣಿಸಿಕೊಳ್ಳುತ್ತವೆ. ಮೂಳೆಯಿಂದ ಮಾಡಿದ ಕೊಳಲು ಅಥವಾ ಸೀಟಿಗಳೂ ಕೆಲವೊಂದು ವಸತಿ ನೆಲೆಗಳಲ್ಲಿ ಸಿಕ್ಕಿವೆ. ಶೀತಲವೂ ಶುಷ್ಕವೂ ಆದ ಹವಾಮಾನವಿದ್ದ ಈ ಕಾಲಾವಧಿಯಲ್ಲಿ ಹಿಮಸಾರಂಗ, ಹಿಮಆನೆ, ರೋಮವುಳ್ಳ ಖಡ್ಗಮೃಗ, ಕುದುರೆ, ಕಾಡೆಮ್ಮೆ ಮೊದಲಾದ ಪ್ರಾಣಿಗಳು ಹಿಂಡಿನಲ್ಲಿ ಜೀವಿಸುತ್ತಿದ್ದವು. ಜನರು ಈ ಎಲ್ಲ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಮೂಳೆ ಮತ್ತು ದಂತದ ಮೇಲೆ ಈ ಪ್ರಾಣಿಗಳ ರೇಖಾಚಿತ್ರಗಳನ್ನು ಕೆತ್ತಿರುವುದು ವಿಶೇಷ. ಯುರೋಪ್, ಲೆವಂಟ್ (ಟರ್ಕಿ ಮತ್ತು ನೆರೆಹೊರೆಯ ದೇಶಗಳು), ಬಾಲ್ಕನ್, ಪ್ಯಾಲಸ್ಟೀನ್, ಇರಾನ್, ಅಫ್ಘಾನಿಸ್ತಾನಗಳಲ್ಲಿ ಆರಿಗ್ನೇಷಿಯನ್ ಮಾದರಿಯ ಉಪಕರಣ ಸಮುಚ್ಚಯಗಳಿವೆ. ಸೈಬೀರಿಯದವರೆಗೂ ಈ ಸಂಸ್ಕೃತಿ ಹಬ್ಬಿತ್ತು.

ಲೆವಂಟಿನಲ್ಲಿ ಅಂತ್ಯ ಹಳೆಶಿಲಾಯುಗದ ಆದಿ ಸಂಸ್ಕೃತಿ ಎಮಿರನ್ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಇದು ಆದಿ ಆರಿಗ್ನೇಷಿಯನ್‌ಗೆ ಸಮಕಾಲೀನವಾಗಿತ್ತು. ಮೌಂಟ್ ಕಾರ್ಮೆಲ್ ಮತ್ತು ಜಾಬ್ರುದ್ ಪರ್ವತಗಳಲ್ಲಿರುವ ಗುಹಾನೆಲೆಗಳು ಸುಪ್ರಸಿದ್ಧ. ಮೊಂಡಾಗಿಸಿದ ಬದಿಯ ಅಲಗುಗಳು, ಕೊರೆಯುಳಿ ಮತ್ತು ನಾನಾಬಗೆಯ ಹೆರೆಚಕ್ಕೆಗಳು ಎಮಿರನ್ ಸಮುಚ್ಚಯಗಳಲ್ಲಿವೆ. ಇದೇ ಸಮಯದಲ್ಲಿ ಉತ್ತರ ಆಫ್ರಿಕ ಮತ್ತು ಕಿರೆನೈಕದಲ್ಲಿ ಅಂತ್ಯ ಹಳೆಶಿಲಾಯುಗದ್ದೇ ಆದ ಡಬ್ಬ ಎಂದು ಕರೆಯಲಾಗುವ ಸಂಸ್ಕೃತಿಯಿತ್ತು.

ಆರಿಗ್ನೇಷಿಯನ್ ಸಂಸ್ಕೃತಿಯ ತರುವಾಯದಲ್ಲಿ ಗ್ರಾವೆಟ್ಟಿಯನ್ ಸಂಸ್ಕೃತಿ ಬೆಳೆಯಿತು. ಫ್ರಾನ್ಸಿನ ಲಾ ಗ್ರಾವೆಟ್ ಹೆಸರಿನ ನೆಲೆಯಲ್ಲಿ ಈ ಸಂಸ್ಕೃತಿಯ ಗುಣಲಕ್ಷಣಗಳನ್ನು ಪ್ರಥಮ ಬಾರಿಗೆ ಪತ್ತೆಹಚ್ಚಲಾಯಿತು. ಗ್ರಾವೆಟ್ ಮೊನೆ ಎಂದು ಹೆಸರಾದ ಮೊನೆಯುಳ್ಳ ಪುಟ್ಟ ಅಲಗು ಈ ಸಂಸ್ಕೃತಿಯ ಹೆಗ್ಗುರುತು. ಇದರ ಒಂದು ಬದಿಯು ಮೊಂಡಾಗಿರುತ್ತದೆ. ಗ್ರಾವೆಟ್ಟಿಯನ್ ಸಂಸ್ಕೃತಿಯ ಜನರು ಕಾಡೆಮ್ಮೆ, ಕುದುರೆ, ಹಿಮಸಾರಂಗ, ಹಿಮಆನೆ ಮೊದಲಾದ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವಾಗ ಭರ್ಜಿಯನ್ನು ಉಪಯೋಗಿಸುತ್ತಿದ್ದರು. ಬಲೆಯ ಆವಿಷ್ಕಾರವಾದದ್ದು ಇವರಿಂದಲೇ. ಸಣ್ಣ ಸ್ತನಿ ಪ್ರಾಣಿಗಳು, ಮೀನು ಹಾಗೂ ಹಕ್ಕಿಗಳನ್ನು ಹಿಡಿಯುವಲ್ಲಿ ಬಲೆಗಳು ಉಪಯುಕ್ತ ಎಂಬುದನ್ನು ಇವರು ಪ್ರಥಮ ಬಾರಿಗೆ ಕಂಡುಹಿಡಿದರು. ಬುಟ್ಟಿ ಹೆಣೆಯುವ ಕಲೆಯೂ ಇವರಿಗೆ ಗೊತ್ತಿತ್ತು. ಶೀತಲ ಹವಾಮಾನಕ್ಕೆ ಒಗ್ಗಿಕೊಳ್ಳಲು ಅನೇಕ ಉಪಾಯಗಳನ್ನು ಈ ಜನರು ಹುಡುಕಿಕೊಂಡರು. ಮೊಲ–ನರಿ ಮೊದಲಾದ ಪ್ರಾಣಿಗಳ ತೊಗಲನ್ನು ದಂತದ ಸೂಜಿಯಿಂದ ಹೊಲಿದು ಬೆಚ್ಚಗಿನ ಉಡುಪುಗಳನ್ನು ಇವರು ತಯಾರಿಸುತ್ತಿದ್ದರು. ಹಿಮ ಆನೆಯ ಮೂಳೆಗಳ ಹಂದರದ ಮೇಲೆ ಪ್ರಾಣಿ ಚರ್ಮವನ್ನು ಹೊದಿಸಿ ಮಾಡಿದಂತಹ ಗುಡಿಸಲುಗಳಲ್ಲಿ ಇವರು ವಾಸಿಸುತ್ತಿದ್ದರು. ಮರಗಳು ವಿರಳವಾಗಿರುವ ಸ್ಟೆಪಿ ಬಯಲಿನಲ್ಲಿ ಇವರು ಇಂತಹ ಅಳವಡಿಕೆಯನ್ನು ಮಾಡಿಕೊಂಡಿದ್ದರು. ಕೆಲವೊಂದು ಪಂಗಡಗಳು ಅರೆ–ಸ್ಥಾಯಿ ಗ್ರಾಮಗಳಲ್ಲಿ ನೆಲೆಸಿದ್ದವು. ಗ್ರಾವೆಟ್ಟಿಯನ್ ಸಂಸ್ಕೃತಿ ವೀನಸ್ ಮೂರ್ತಿಗಳಿಗೆ ಪ್ರಸಿದ್ಧ. ಫ್ರಾನ್ಸ್, ಇಟಲಿ, ಆಸ್ಟ್ರಿಯ, ಚೆಕೊಸ್ಲೊವಾಕಿಯ ಮತ್ತು ಉಕ್ರೇನ್ ಪ್ರದೇಶಗಳಲ್ಲಿ ಪಸರಿಸಿದ್ದ ಈ ಸಂಸ್ಕೃತಿಯನ್ನು ಎರಡು ಪ್ರಾದೇಶಿಕ ಗುಂಪುಗಳಾಗಿ ವಿಭಜಿಸಲಾಗಿದೆ – ಪಶ್ಚಿಮ ಗ್ರಾವೆಟ್ಟಿಯನ್ (ಫ್ರಾನ್ಸಿನ ಗುಹಾನೆಲೆಗಳು) ಮತ್ತು ಪೂರ್ವ ಗ್ರಾವೆಟ್ಟಿಯನ್ (ಮಧ್ಯ ಯುರೋಪ್ ಮತ್ತು ರಷ್ಯದ ಬಯಲು ನೆಲೆಗಳು).

ಗ್ರಾವೆಟ್ಟಿಯನ್ ಅನಂತರ ಬೆಳೆದ ಸಂಸ್ಕೃತಿ ಸಲೂತ್ರಿಯನ್. ಫ್ರಾನ್ಸಿನ ಪೂರ್ವ ಭಾಗದಲ್ಲಿರುವ ಸಲೂತ್ರೆ ನೆಲೆಯಿಂದ ತನ್ನ ಹೆಸರನ್ನು ಪಡೆದಿರುವ ಈ ಸಂಸ್ಕೃತಿ ಹಿಂದಿನ ಎಲ್ಲಾ ಅಂತ್ಯ ಹಳೆಶಿಲಾಯುಗ ಸಂಸ್ಕೃತಿಗಳಿಗಿಂತ ಭಿನ್ನವಾಗಿದೆ. ಫ್ರಾನ್ಸ್, ಸ್ಪೇನ್ ಮತ್ತು ಇಂಗ್ಲೆಂಡಿನ ಕೆಲಭಾಗಗಳಲ್ಲಷ್ಟೇ ಹರಡಿದ್ದ ಈ ಸಂಸ್ಕೃತಿಯ ಛಾಪು ಆಕರ್ಷಕ ಮೊನೆಗಳು, ತೆಳ್ಳಗೆ, ಚಪ್ಪಟೆಯಾಗಿ ಎಲೆಯಾಕಾರದಲ್ಲಿರುವ ಈ ಮೊನೆಗಳನ್ನು ಲಾರೆಲ್ ಎಲೆಯಾಕಾರದ ಮೊನೆ ಮತ್ತು ವಿಲ್ಲೋ ಎಲೆಯಾಕಾರ ಮೊನೆ ಎಂದು ಕರೆಯಲಾಗುತ್ತದೆ. ಅದುಮಿಕೆ ಅಥವಾ ಒತ್ತಡ ವಿಧಾನದಿಂದ ತಯಾರಿಸಿದ, ಉತ್ಕೃಷ್ಟ ಮಟ್ಟದ ಕುಶಲತೆಯನ್ನು ತೋರುವ ಮೊನೆಗಳಿವು. ಹಿಡಿಕೆಯೊಳಗೆ ಸಿಕ್ಕಿಸುವಂತೆ ತೊಟ್ಟುಳ್ಳ ಭರ್ಜಿ ಮೊನೆ ಈ ಸಂಸ್ಕೃತಿಯ ಮತ್ತೊಂದು ಪ್ರಮುಖ ಗುರುತು. ತೊಟ್ಟಿರುವ ಬಾಣದ ಮೊನೆ, ಎರಡೂ ಬದಿಯಲ್ಲಿ ಮುಳ್ಳುಗಳುಳ್ಳ ಬಾಣದ ಮೊನೆ, ಹೆರೆಚಕ್ಕೆ, ಚೂರಿಯಂತಹ ಅಲಗು ಮತ್ತು ಗರಗಸದಂತಹ ಅಂಚುಳ್ಳ ಉಪಕರಣಗಳು ಗ್ರಾವೆಟ್ಟಿಯನ್ ಸಂಸ್ಕೃತಿಯ ಸಮುಚ್ಚಯಗಳಲ್ಲಿವೆ. ಕುದುರೆ, ಹಿಮಸಾರಂಗ, ಹಿಮಆನೆ, ಸಿಂಹ, ಖಡ್ಗಮೃಗ, ಕರಡಿ ಮತ್ತು ಕಾಡೆತ್ತು (ಔರೆಕ್ಸ್)ಗಳನ್ನು ಈ ಜನರು ಬೇಟೆಯಾಡುತ್ತಿದ್ದರು. ಯುರೋಪಿನಲ್ಲಾಗುತ್ತಿದ್ದ ಸಾಂಸ್ಕೃತಿಕ ಬೆಳವಣಿಗೆಗಳ ಉಚ್ಛ್ರಾಯ ಹಂತವನ್ನು ಮ್ಯಾಗ್ಡಲೇನಿಯನ್ ಸಂಸ್ಕೃತಿ ಪ್ರತಿನಿಧಿಸುತ್ತದೆ. ಫ್ರಾನ್ಸಿನ ಡೊರ್‌ಡೊನೆ ಪ್ರದೇಶದಲ್ಲಿರುವ ಲಾ ಮ್ಯಾಡೆಲೀನ್ ನೆಲೆಯಿಂದ ಈ ಹೆಸರು ಬಂದಿದೆ. ನೈರುತ್ಯ ಫ್ರಾನ್ಸ್,

ಈಶಾನ್ಯ ಸ್ಪೇನ್, ಮಧ್ಯ ಯುರೋಪ್ ಮತ್ತು ಸೈಬೀರಿಯ ಪ್ರದೇಶಗಳು ಈ ಸಂಸ್ಕೃತಿಯ ವ್ಯಾಪ್ತಿಯಲ್ಲಿದ್ದವು. ಮುಕ್ತಾಯದ ಹೊತ್ತಿಗೆ ಈ ಸಂಸ್ಕೃತಿ ಪಶ್ಚಿಮದಲ್ಲಿ ಪೋರ್ಚುಗಲ್‌ನಿಂದ ಪೂರ್ವದಲ್ಲಿ ಪೋಲೆಂಡ್‌ವರೆಗೆ ಹಬ್ಬಿತ್ತು. ಬದಿ ಮೊಂಡಾಗಿಸಿದ ಬಗೆಬಗೆಯ ಅಲಗುಗಳು, ಕೊರೆಯುಳಿ, ಹೆರೆಚಕ್ಕೆ, ಕೊರಗ ಮತ್ತು ಈಟಿಮೊನೆಗಳನ್ನು ಈ ಸಂಸ್ಕೃತಿಯ ಜನರು ಉಪಯೋಗಿಸುತ್ತಿದ್ದರು. ಗುಹೆ, ಕಲ್ಲಾಸರೆ ಮತ್ತು ಬಿಡಾರಗಳಲ್ಲಿ ವಾಸಿಸುತ್ತಿದ್ದ ಈ ಜನರು ಹೆಚ್ಚಾಗಿ ಹಿಮಸಾರಂಗ ಗಳನ್ನು ಬೇಟೆಯಾಡುತ್ತಿದ್ದರು. ಕೆಂಪು ಜಿಂಕೆ, ಕುದುರೆ, ಕಾಡೆಮ್ಮೆ ಮೊದಲಾದ ದೊಡ್ಡ ಸ್ತನಿ ಪ್ರಾಣಿಗಳ ಮೂಳೆಗಳೂ ಈ ಸಂಸ್ಕೃತಿಯ ನೆಲೆಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ದೊರೆತಿವೆ. ಈ ಸಂಸ್ಕೃತಿಯ ವಿಶೇಷತೆ ಮೂಳೆ, ಜಿಂಕೆಕೊಂಬು ಮತ್ತು ಆನೆ ದಂತದಿಂದ ಮಾಡಿದ ಉಪಕರಣಗಳು. ಕಲಾವಂತಿಕೆ ಮತ್ತು ಕ್ರಿಯೋದ್ದೇಶಗಳೆರಡೂ ಮೇಳೈಸುವಂತೆ ರಚಿಸಿರುವ ಉಪಕರಣಗಳಿವು. ಒಂದು ಅಥವಾ ಎರಡೂ ಬದಿಗಳಲ್ಲಿ



ಶಿಲೋಪಕರಣಗಳು

ಮುಳ್ಳುಗಳುಳ್ಳ ಈಟಿಗಾಳ, ಭರ್ಜಿ, ಸುತ್ತಿಗೆ, ಬಾಚಿ, ಕೋಲು, ಕಣ್ಣಿರುವ ಸೂಜಿ ಮೊದಲಾದ ಉಪಕರಣಗಳನ್ನು ಕೊರೆದು ಮಾಡಿದ ವಿವಿಧ ವಿನ್ಯಾಸಗಳಿಂದಲೂ ಪ್ರಾಣಿಗಳ ರೇಖಾಚಿತ್ರಗಳಿಂದಲೂ ಅತ್ಯಂತ ಸುಂದರ ವಾಗಿ ಅಲಂಕರಿಸಲಾಗಿದೆ. ಚೌಕ ಅಥವಾ ಆಯತಾಕಾರದ ಜಾಲಂದ್ರ, ಸುರುಳಿ, ರೇಖಾ ವಿನ್ಯಾಸಗಳನ್ನೂ ಕುದುರೆ ಮತ್ತು ಕಾಡೆಮ್ಮೆಗಳ ಶಿರದ ರೇಖಾಚಿತ್ರಗಳನ್ನೂ ಮೂಳೆಯ ಹಿಡಿಕೆಗಳ ಮೇಲೆ ಕೆತ್ತಲಾಗಿದೆ. ಸಮುದ್ರದ ಶಂಖ–ಚಿಪ್ಪುಗಳು ಮತ್ತು ಮಾಂಸಭಕ್ಷಕ ಪ್ರಾಣಿಗಳ ಛೇದಿತ ಹಲ್ಲುಗಳನ್ನು ಪ್ರಾಯಶಃ ಸರಪದಕಗಳಂತೆ ಬಳಸಲಾಗುತ್ತಿತ್ತು. ಗುಹಾಚಿತ್ರಕಲೆ ಈ ಹಂತದಲ್ಲಿ ಉತ್ತುಂಗವನ್ನು ತಲುಪಿತು. ಫ್ರಾನ್ಸಿನ ಲಾಸ್ಕೊ ಮತ್ತು ಸ್ಪೇನಿನ ಅಲ್ತಮೀರ ಗುಹಾನೆಲೆಗಳು ಮ್ಯಾಗ್ಡಲೇನಿಯನ್ ಚಿತ್ರಕಲೆಗೆ ಪ್ರಪಂಚ ಪ್ರಸಿದ್ಧ. ಈ ಗುಹೆಗಳಲ್ಲಿ ಕುದುರೆ – ಕಾಡೆಮ್ಮೆಗಳ ಮತ್ತು ಪುರುಷ–ಸ್ತ್ರೀಯರ ಬಹುವರ್ಣದ ನೈಜ ಚಿತ್ರಗಳೊಂದಿಗೆ ಹಸ್ತದ ಮುದ್ರೆಗಳು, ಸರಳ ರೇಖೆಗಳು ಮತ್ತು ಬಿಂದುಗಳ ಬಹುಸುಂದರ ವರ್ಣ ವಿನ್ಯಾಸಗಳಿವೆ.

ಮ್ಯಾಗ್ಡಲೇನಿಯನ್ ಸಂಸ್ಕೃತಿಗೆ ಸಮಕಾಲೀನವಾದ ಮತ್ತು ತರುವಾಯದ ಕೆಲವೊಂದು ಸಂಸ್ಕೃತಿಗಳು ಯುರೋಪಿನಲ್ಲಿದ್ದವು. ಇವು ಕೊನೆಯ ಹಿಮಘಟ್ಟವಾದ ವೂರ್ಮ್‌ನ ಅಂತ್ಯ ಅವಧಿಗೆ ಸೇರುವ ಅಂತ್ಯ ಹಳೆಶಿಲಾಯುಗೋತ್ತರ (ಎಪಿ–ಪೇಲಿಯೋಲಿತಿಕ್) ಸಂಸ್ಕೃತಿಗಳು; ಅಂದರೆ ಇವು ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗದ ನಡುವಿನ ಸ್ಥಿತ್ಯಂತರ ಹಂತದವು. ಇಂತಹ ಸಂಸ್ಕೃತಿಗಳಲ್ಲೊಂದಾದ ಹಂಬರ್ಗಿಯನ್ (ಪ್ರ.ಶ.ಪೂ. 12,400–12,000) ಉತ್ತರ ಜರ್ಮನಿ ಮತ್ತು ಹಾಲೆಂಡ್ ಪ್ರದೇಶದಲ್ಲಿತ್ತು. ಬೇಸಗೆ ಕಾಲದಲ್ಲಿ ಬಯಲು ನೆಲೆಗಳಲ್ಲಿ ವಾಸಿಸುತ್ತಿದ್ದ ಈ ಜನರ ಮುಖ್ಯ ಕಸಬು ಹಿಮಸಾರಂಗಗಳ ಬೇಟೆ. ಇವರ ವಿವಿಧ ಈಟಿಗಾಳಗಳು ಮ್ಯಾಗ್ಡಲೇನಿಯನ್ ಈಟಿಗಾಳಗಳನ್ನು ನೆನಪಿಗೆ ತರುತ್ತವೆ.

ಅಹ್ರೆನ್ಸ್‌ಬರ್ಗಿಯನ್ (ಪ್ರ.ಶ.ಪೂ. 10,700–9,600) ಹಂಬರ್ಗಿಯನ್ ಸಂಸ್ಕೃತಿಯನ್ನು ಹೋಲುವ, ಆದರೆ ಅದರ ತರುವಾಯದಲ್ಲಿ ಹುಟ್ಟಿಬಂದ ಸಂಸ್ಕೃತಿ. ಜರ್ಮನಿಯ ಸ್ಟೆಲ್‌ಮೂರ್ ನೆಲೆಯಲ್ಲಿ ಈ ಎರಡೂ ಸಂಸ್ಕೃತಿಗಳ ಅವಶೇಷಗಳಿವೆ. ಅಹ್ರೆನ್ಸ್‌ಬರ್ಗಿಯನ್ ಜನರೂ ಹಿಮಸಾರಂಗಗಳನ್ನು ಬೇಟೆಯಾಡುತ್ತಿದ್ದರು. ಇವರ ಈಟಿಗಾಳಗಳು, ತೊಟ್ಟಿರುವ ಮೊನೆಗಳು, ಬಾಣದ ಮೊನೆಗಳನ್ನು ಸಿಕ್ಕಿಸುತ್ತಿದ್ದ ಮರದ ಕೋಲುಗಳು ಈ ಸಂಸ್ಕೃತಿಯ ವಸತಿ ಪದರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಈ ಸಂಸ್ಕೃತಿಯೂ ಉತ್ತರ ಜರ್ಮನಿ ಮತ್ತು ಹಾಲೆಂಡ್ ಪ್ರದೇಶಗಳಲ್ಲಿ ವ್ಯಾಪಿಸಿತ್ತು.

ಪೋಲೆಂಡ್ ಮತ್ತು ಉಕ್ರೇನಿನಲ್ಲಿ ಉಪಸ್ಥಿತವಿದ್ದ, ತೊಟ್ಟಿರುವ ಮೊನೆಗಳನ್ನು ಪ್ರಧಾನವಾಗಿ ಬಳಸುತ್ತಿದ್ದ ಮತ್ತೊಂದು ಅಂತ್ಯ ಹಳೆಶಿಲಾಯುಗೋತ್ತರ ಸಂಸ್ಕೃತಿ ಸ್ವಿಡೇರಿಯನ್. ಇದಕ್ಕೂ ಪಶ್ಚಿಮದಲ್ಲಿ, ಅಂದರೆ ವಾಯವ್ಯ ಯುರೋಪಿನ ಅಂಚಿನಲ್ಲಿರುವ ಬಯಲುಗಳಲ್ಲಿ ಅಂತ್ಯ ಹಳೆಶಿಲಾಯುಗೋತ್ತರ ವರ್ಗಕ್ಕೆ ಸೇರುವ ನಾನಾ ಸ್ವರೂಪದ ಶಿಲೋಪಕರಣ ಸಮುಚ್ಚಯ ಗಳಿವೆ. ಇವನ್ನು ಒಟ್ಟಾಗಿ ಫೆಡೆರ್‌ಮೆಸ್ಸೆರ್–ಗ್ರುಪ್ಪೆನ್ (ಪ್ರ.ಶ.ಪೂ. 10,000–8,700) ಎಂದು ಕರೆಯಲಾಗುತ್ತದೆ. ಫೆಡೆರ್‌ಮೆಸ್ಸೆರ್ ಎಂದರೆ ಜರ್ಮನ್ ಭಾಷೆಯಲ್ಲಿ ಮಡಚುವ ಚೂರಿ ಎಂದರ್ಥ. ಫೆಡೆರ್‌ಮೆಸ್ಸೆರ್–ಗ್ರುಪ್ಪೆನ್ ಸಮೂಹದಲ್ಲಿ ಇಂತಹ ಚೂರಿಯ ಅಲಗುಗಳನ್ನು ಹೋಲುವ ಉಪಕರಣಗಳಿವೆ. ಇವು ಒಂದು ಅಂಚು ಮೊಂಡಾಗಿದ್ದು ಮತ್ತೊಂದು ಅಂಚು ಹರಿತವಾಗಿರುವ ಅಲಗುಗಳು. ತೊಟ್ಟಿರುವ ಮೊನೆಗಳೂ ಈ ಸಮೂಹಗಳಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಬ್ರಿಟನ್ ಪ್ರದೇಶದಲ್ಲಿದ್ದ ಮತ್ತೊಂದು ಅಂತ್ಯ ಹಳೆಶಿಲಾಯುಗೋತ್ತರ ಸಂಸ್ಕೃತಿ ಕ್ರೆಸ್‌ವೆಲ್ಲಿಯನ್. ಡರ್ಬಿಷೈರ್, ದಕ್ಷಿಣ ವೇಲ್ಸ್, ಸಾಮರ್‌ಸೆಟ್ ಮತ್ತು ಡೆವನ್‌ನಲ್ಲಿರುವ ಗುಹಾನೆಲೆಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳಿವೆ. ಹಲವು ಬಗೆಯ ಬದಿ ಮೊಂಡಾಗಿಸಿದ ಅಲಗು, ಮೊನೆ, ಹೆರೆಚಕ್ಕೆ, ಕೊರಗ, ವಿಷಮ ಚತುರ್ಭುಜಗಳು ಈ ಸಂಸ್ಕೃತಿಯ ವಿಶಿಷ್ಟ ಚಿಹ್ನೆಗಳು. ಅವೆಲೈನ್ ಹೋಲ್ಸ್, ಕೆಂಟ್ ಗುಹೆ ಮೊದಲಾದ ಬ್ರಿಟನ್ನಿನ ಗುಹಾನೆಲೆಗಳಲ್ಲಿ ಮ್ಯಾಗ್ಡಲೇನಿಯನ್ ಮಾದರಿಯ ಈಟಿಗಾಳಗಳು ಮತ್ತು ದಕ್ಷಿಣ ವೇಲ್ಸ್‌ನ ಕ್ಯಾಟ್‌ಹೋಲ್ ಗುಹೆಯಲ್ಲಿ ಇದೇ ಮಾದರಿಯ ಮೂಳೆಯ ಸೂಜಿಗಳು ಕ್ರೆಸ್‌ವೆಲ್ಲಿಯನ್ ಸಂಸ್ಕೃತಿಯ ವಸತಿ ಪದರಗಳಲ್ಲಿ ಕಂಡುಬಂದಿವೆ.

ಅಂತ್ಯ ಹಳೆಶಿಲಾಯುಗೋತ್ತರ ಸಂಸ್ಕೃತಿಗಳು ಹಿಮಯುಗ ಮತ್ತು ಈಗಿನ ಯುಗದ ಸಂಧಿಕಾಲದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಲಕ್ಷಣಗಳನ್ನು ಕ್ರಮೇಣ ಮೈಗೂಡಿಸಿ ಕೊಂಡವು. ಈಗಿನ ಯುಗದ ಆದಿಯಲ್ಲಿ ವರ್ಧಿಸಿದ ಅರಣ್ಯ ಪರಿಸರಕ್ಕೆ ತನ್ನನ್ನು ಒಗ್ಗಿಸಿಕೊಂಡ ಮೊದಲ ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಮ್ಯಾಗ್ಲೆಮೋಶಿಯನ್. ಬೇಟೆ ಮತ್ತು ಮೀನುಗಾರಿಕೆ ಯನ್ನು ಮುಖ್ಯ ಕಸಬಾಗಿಸಿಕೊಂಡಿದ್ದ ಈ ಪಂಗಡಗಳು ಚಕಮಕಿ ಕಲ್ಲಿನ ಕೊಡಲಿಗಳ ಜೊತೆಗೆ ಸೂಕ್ಷ್ಮ ಶಿಲೋಪಕರಣಗಳನ್ನು ಬಳಸತೊಡಗಿದವು.

**ಭಾರತ:** ಮಧ್ಯ ಹಳೆಶಿಲಾಯುಗದ ಅನಂತರ ಹಾಗೂ ಸೂಕ್ಷ್ಮ ಶಿಲಾಯುಗದ ಪೂರ್ವದ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಹಂತ. ಈ ಸಂಸ್ಕೃತಿಯ ಅವಶೇಷಗಳು ಭಾರತದಾದ್ಯಂತ ಕಂಡುಬಂದಿವೆ. ಇವು 3 ಭಿನ್ನ ಪ್ರಕಾರದ ನೆಲೆಗಳಾದ ನದಿಯ ಸ್ತರಗಳು, ಬಯಲು ಪ್ರದೇಶದ ನೆಲೆಗಳು ಮತ್ತು ಗುಹಾ ನೆಲೆಗಳಲ್ಲಿ ಕಾಣಬರುತ್ತವೆ. ಹೆಚ್ಚಿನ ನೆಲೆಗಳು ಬಯಲು ಪ್ರದೇಶಗಳಲ್ಲಿವೆ. ಈ ಹಂತದ ಮುಖ್ಯ ಲಕ್ಷಣವೆಂದರೆ ಅಲಗು ತಂತ್ರಜ್ಞಾನ. ವಿವಿಧ ಬಗೆಯ ಶಿಲೆಗಳಿಂದ ಮಾಡಿದ ಅಲಗುಗಳು ಹಾಗೂ ಅಲಗನ್ನು ಮಾರ್ಪಡಿಸಿ ಮಾಡಲಾದ ಉಪಕರಣಗಳು ಈ ಕಾಲದ ನೆಲೆಗಳನ್ನು ಗುರುತಿಸುವಲ್ಲಿ ಸಹಕಾರಿಯಾಗುತ್ತವೆ. ಬಿಹಾರಿನ ಪಲಮಾವ್ ಮತ್ತು ಸಿಂಗ್‌ಭೂಮ್ ಜಿಲ್ಲೆ, ಅಸ್ಸಾಮಿನ ಗಾರೋ ಬೆಟ್ಟಗಳು, ಉತ್ತರ ಪ್ರದೇಶದ ಅಲಹಾಬಾದ್, ಬಾಂದ ಮತ್ತು ಮಿರ್ಜಾಪುರ್ ಜಿಲ್ಲೆಗಳು, ಮಧ್ಯ ಪ್ರದೇಶದ ಮಂಡ್ಲ ಮತ್ತು ರೈಸನ್ ಜಿಲ್ಲೆಗಳು, ರಾಜಸ್ಥಾನದ ಅಜ್ಮೀರ್ ಜಿಲ್ಲೆ, ಗುಜರಾತಿನ ಬರೋಡ ಜಿಲ್ಲೆ, ಮಹಾರಾಷ್ಟ್ರದ ಅಹಮದ್‌ನಗರ್, ಧುಳೆ, ಪುಣೆ, ಜಳಗಾಂವ್ ಮತ್ತು ನಾಂದೇಡ್ ಜಿಲ್ಲೆಗಳು, ಕರ್ನಾಟಕದ ಸಾಲ್ವಡಗಿ – ಮಸ್ಕನಾಳ್, ಬಿಜಾಪುರ ಜಿಲ್ಲೆ ಹುಣಸಗಿ–ಬೈಚಬಾಳು ಬಯಲುಗಳು, ಆಂಧ್ರಪ್ರದೇಶದ ಕರೀಂನಗರ, ಗುಂಟೂರು, ನೆಲ್ಲೂರು, ಪ್ರಕಾಶಂ, ಕಡಪ, ಚಿತ್ತೂರ್ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ಈ ಹಂತದ ಸಮುಚ್ಚಯಗಳು ಹೇರಳವಾಗಿವೆ.

ಭೇಡಾಘಾಟ್, ಧರಮ್‌ಪುರಿ, ಚಂದ್ರೆಸಲ್, ಮೆಹ್ತಖೇಡಿ, ನಾಗದ, ಬೇಲನ್ ಬಯಲು, ನಂದಿಪಲ್ಲೆ, ಇನಾಂಗಾಂವ್ ಮತ್ತು ಪಾಟ್ನೆಗಳಿಂದ ದೊರೆತಿರುವ ಇಂಗಾಲ–14ರ ಕಾಲಮಾನ ಗಳಿಂದ ಈ ಸಾಂಸ್ಕೃತಿಕ ಹಂತ ಪ್ರ.ಶ.ಪೂ. 40,000–8,000ದ ಅವಧಿಯಲ್ಲಿದ್ದುದಾಗಿ ತಿಳಿದುಬಂದಿದೆ. ಕರ್ನೂಲಿನ ಕೆಲವು ಅವಶೇಷಗಳನ್ನು ಔಷ್ಣದೀಪ್ತಿ ಕಾಲನಿರ್ಣಯ ತಂತ್ರಕ್ಕೆ ಒಳಪಡಿಸಲಾಗಿದ್ದು ಇದರಿಂದ ದೊರೆತ ಕಾಲಮಾನಗಳೂ ಇದೇ ಕಾಲಾವಧಿಗೆ ಸೇರುತ್ತವೆ.

ಉಪಕರಣ ತಂತ್ರಜ್ಞಾನ: ಸಮಾನಾಂತರ ನೀಳ ಅಲಗುಗಳು ಅಂತ್ಯ ಹಳೆಶಿಲಾಯುಗದ ಗುರುತುಗಳಾಗಿವೆ. ಇವನ್ನು ಒತ್ತಡ ಅಥವಾ ಪರೋಕ್ಷ ವಿಧಾನದಿಂದ ತಯಾರಿಸಲಾಗುತ್ತಿತ್ತು. ಅಲಗುಗಳ ಒಂದು ಅಂಚಿನಲ್ಲಿ ಸೂಕ್ಷ್ಮ ಚಕ್ಕೆಗಳನ್ನು ತೆಗೆದು ಅವನ್ನು ತ್ರಿಕೋನ, ಅರ್ಧಚಂದ್ರಾ

ಕೃತಿ, ಕೊರಗ, ಕೊರೆಯುಳಿ, ಮೊನೆ ಮೊದಲಾದ ಉಪಕರಣಗಳಾಗಿ ಪರಿವರ್ತಿಸಲಾಗುತ್ತಿತ್ತು. ಲೆವಾಲ್ವ ಮತ್ತು ಬಿಲ್ಲೆಯಾಕಾರದ ಮೂಲಶಿಲಾ ವಿಧಾನದಿಂದ ತಯಾರಿಸಿದ ವಿವಿಧ ಹೆರೆಚಕ್ಕೆ ಹಾಗೂ ಮೊನೆಗಳನ್ನೂ ಈ ಜನ ಉಪಯೋಗಿಸುತ್ತಿದ್ದರು. ಈ ಹಂತದಲ್ಲಿ ಯುರೋಪಿನಲ್ಲಿರುವಂತೆ ಭಾರತದಲ್ಲಿ ಪ್ರಾದೇಶಿಕ ಉಪಸಂಸ್ಕೃತಿಗಳಿರಲಿಲ್ಲ. ಆದರೆ ಉಪಕರಣ ನಮೂನೆಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆ. ಉದಾಹರಣೆಗೆ, ಬಿಹಾರ ಮತ್ತು ಅಸ್ಸಾಂಗಳಲ್ಲಿ ದೊಡ್ಡ, ಮಂದ ಚಕ್ಕೆಗಳಿಂದ ಮಾಡಲಾದ ಮೊನೆ, ಹೆರೆಚಕ್ಕೆ, ಕೊರೆಯುಳಿ, ಕೊರಗ ಮೊದಲಾದ ಉಪಕರಣಗಳು ಕಂಡುಬರುತ್ತವೆ. ಇವನ್ನು ಚಕ್ಕೆ-ಅಲಗು ಸಮುಚ್ಚಯಗಳೆಂದು (ಫ್ಲೇಕ್-ಬ್ಲೇಡ್ಸ್) ಕರೆಯಲಾಗುತ್ತದೆ. ಇವುಗಳೊಂದಿಗೆ ಸಣ್ಣ ಗಾತ್ರದ ಕೊಚ್ಚುವ ಉಪಕರಣಗಳೂ ಒಮ್ಮೊಮ್ಮೆ ದೊರೆಯುತ್ತವೆ. ರಾಜಸ್ತಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಒರಿಸ್ಸ, ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರದ ಕೆಲಭಾಗಗಳಲ್ಲಿ ಇರುವ ಸಮುಚ್ಚಯಗಳನ್ನು ಅಲಗು ಸಮುಚ್ಚಯ ವೆನ್ನಲಾಗುತ್ತದೆ. ಏಕೆಂದರೆ ಇಲ್ಲಿ ಕಂಡುಬರುವ ಉಪಕರಣಗಳು ಸಾಮಾನ್ಯ ಬಗೆಯವೇ ಆದರೂ ಅವು ಪ್ರಧಾನವಾಗಿ ಸಮಾನಾಂತರ ಅಲಗುಗಳಿಂದ ತಯಾರಾ ದಂತಹವು. ಚರ್ಟ್, ಅಗೇಟ್, ಜಾಸ್ಪರ್, ಕ್ಯಾಲ್ಸೆಡನಿ ಮೊದಲಾದ ವಿವಿಧ ಶಿಲೆಗಳಿಂದ ಇವನ್ನು ಮಾಡಲಾಗಿದೆ. ಭೀಂಬೇಟ್ಕದ 3-ಎಫ್-23 ಕಲ್ಲಾಸರೆಯಲ್ಲಿ ಕ್ವಾರ್ಟ್ಸೈಟ್ ನಿಂದ ತಯಾರಾದ ಉಪಕರಣಗಳು ಅಧಿಕ ಸಂಖ್ಯೆಯಲ್ಲಿವೆ. ಆಂಧ್ರಪ್ರದೇಶದ ಸಾಗಿಲೇರು, ಚೆಯ್ಯೂರು ಮತ್ತು ಪಾಲೇರು ನದಿಪಾತ್ರಗಳಲ್ಲಿ ಕ್ವಾರ್ಟ್ಸೈಟ್‍ನೊಂದಿಗೆ ಚರ್ಟ್‍ಯುಕ್ತ ಸುಣ್ಣಕಲ್ಲನ್ನು ಬಳಸಲಾಗಿದೆ. ಕರ್ನೂಲಿನ ಮುಚ್ಚಟ್ಲ ಚಿಂತಾಮನು ಗವಿಯಲ್ಲಿ ಶಿಲೋಪಕರಣಗಳೊಂದಿಗೆ ಮೂಳೆಯ ಉಪಕರಣಗಳೂ ಅಂತ್ಯ ಹಿಮಯುಗದ ಪ್ರಾಣಿ ಪಳೆಯುಳಿಕೆಗಳೂ ದೊರೆತಿವೆ. ಗೋದಾವರಿ ನದಿ ತೀರದಲ್ಲಿರುವ ವಾಂಕ್ಡಿ ಮತ್ತು ಮಾಣಿಕಗುಡೆಮ್‍ಗಳಲ್ಲಿಯೂ (ಅದಿಲಾಬಾದ್ ಜಿಲ್ಲೆ) ಅಲಗಿನ ಉಪಕರಣಗಳ ಜೊತೆಗೆ ಸಸ್ತನಿ ಪ್ರಾಣಿಗಳ ಮೂಳೆಯ ತುಂಡುಗಳಿದ್ದವು. ಅಳಿದುಳಿದ ಆಹಾರ ಅವಶೇಷಗಳು ಇವಾಗಿರುವ ಸಾಧ್ಯತೆಯಿದೆ. ಮುಚ್ಚಟ್ಲ ಚಿಂತಾಮನು ಗವಿಯಲ್ಲಿ ಈ ಹಂತಕ್ಕೆ ಸೇರುವ ಚಪ್ಪಡಿಕಲ್ಲುಗಳ ಮೇಲೆ ಅರೆಯುವ ಗುಳಿಗಳಿದ್ದು ಇವು ವನ್ಯ ಧಾನ್ಯ ಸಂಸ್ಕರಣೆಯಲ್ಲಿ ಬಳಕೆಯಾಗಿದ್ದಿರಬೇಕು.

ಉತ್ತರ ಪ್ರದೇಶದ ಬೇಲನ್ ಮತ್ತು ಸೋನ್ ಬಯಲುಗಳಲ್ಲೂ ಆಂಧ್ರಪ್ರದೇಶದ ಪೂರ್ವಘಟ್ಟ ಶ್ರೇಣಿಯ ದಕ್ಷಿಣ ಭಾಗದಲ್ಲಿಯೂ ಮೊಂಡಾಗಿಸಿದ ಅಲಗುಗಳು ಮತ್ತು ಕೊರೆಯುಳಿಗಳು ಸಾಮಾನ್ಯವಾಗಿ ಕಂಡುಬರುವುದರಿಂದ ಇಲ್ಲಿಯ ಸಮುಚ್ಚಯಗಳನ್ನು ಅಲಗು-ಕೊರೆಯುಳಿ ಸಮುಚ್ಚಯವೆಂದು ಕರೆಯಲಾಗುತ್ತದೆ. ಬೇಲನ್ ಬಯಲಿನಲ್ಲಿರುವ ಲೋಹಂಡ್ ನಾಲಾದಲ್ಲಿ ಈ ಹಂತದ ಮುಳ್ಳುಗಳಿರುವ ಮೂಳೆಯ ಈಟಿಗಾಳ ದೊರೆತಿರು ವುದು ವಿಶೇಷವಾಗಿದೆ. ಬೇಲನ್, ಅದ್ವಾ ಮತ್ತು ಲಿಲ್ಲಿ ನದಿಬಯಲುಗಳಲ್ಲಿ ಅಂತ್ಯ ಹಳೆ ಶಿಲಾಯುಗೋತ್ತರ ನೆಲೆಗಳು ಅವುಗಳ ಮೂಲಸ್ಥಾನದಲ್ಲಿ ಕಂಡುಬಂದಿವೆ. ಇಂತಹ ನೆಲೆಗಳಲ್ಲಿ ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗ ಲಕ್ಷಣಗಳ ಮಿಶ್ರಣವನ್ನು ಕಾಣಬಹುದು. ಕೈಮೂರ್ ಬೆಟ್ಟಗಳಲ್ಲಿರುವ ಬಾಘೈಖೋರ್, ಲೇಖಾನಿಯ, ಲಹರಿಯದಿಹ್ ಮೊದಲಾದ ಕಲ್ಲಾಸರೆಗಳೂ ಚೋಪನಿ-ಮಾಂಡೊ, ಮೈಹರ್ (ಲಿಲ್ಲಿ ಬಯಲು) ಮೊದಲಾದ ಬಯಲು ನೆಲೆಗಳೂ ಮುಖ್ಯ ಅಂತ್ಯ ಹಳೆಶಿಲಾ ಯುಗೋತ್ತರ ನೆಲೆಗಳಾಗಿವೆ. ಪೂರ್ವಘಟ್ಟ ಪ್ರದೇಶ ಗಳಲ್ಲಿ ರಲ್ಲಕಳವ ಮತ್ತು ರಂಜನ ಬಯಲುಗಳಲ್ಲಿರುವ ವೇದುಲಚೆರುವು, ನಲ್ಲಗುಂಡ್ಲು, ಬೆಳ್ಳು ಮೊದಲಾದ ನೆಲೆಗಳನ್ನು ಹೆಸರಿಸಬಹುದು. ಬದಿ ಮೊಂಡಾಗಿಸಿದ ನೇರ ಹಾಗೂ ವಕ್ರ ಅಲಗುಗಳು, ಅಲಗಿನ ತುಂಡುಗಳಿಂದ ಮಾಡಿದ ಮೊನೆಗಳು, ಕಿತ್ತಳೆ ತೊಳೆಯಷ್ಟು ದೊಡ್ಡದಾದ ಅರ್ಧಚಂದ್ರಾ ಕೃತಿಗಳು, ದೊಡ್ಡ ಗಾತ್ರದ ತ್ರಿಕೋಣ ಮತ್ತು ಅಸಮ ಚತುರ್ಭುಜಗಳು ಇಲ್ಲಿಯ ಸಮುಚ್ಚಯ ಗಳಲ್ಲಿವೆ. ಇವು ಯುರೋಪ್ ಮತ್ತು ನೈರುತ್ಯ ಏಷ್ಯಗಳಲ್ಲಿರುವ ಚಾಟೆಲ್‍ಪೆರ್ರೋನಿಯನ್/ ಆರಿಗ್ನೇಷಿಯನ್/ಗ್ರಾವೆಟ್ಟಿಯನ್ ಉಪಕರಣಗಳನ್ನು ಹೋಲುತ್ತವೆ. ಇವುಗಳನ್ನು ಕ್ವಾರ್ಟ್ಸೈಟ್ ಮತ್ತು ಲಿಡಿಯನ್ನೈಟ್ ಶಿಲೆಗಳಿಂದ ತಯಾರಿಸಲಾಗಿದೆ. ಕೆಲವು ನೆಲೆಗಳಲ್ಲಿ ಅರೆಯುವ ಗುಳಿಗಳು ಮತ್ತು ತೂತಿರುವ ಸಣ್ಣ ಚಪ್ಪಟೆ ಕಲ್ಲುಗಳು ಸಿಕ್ಕಿವೆ. ತೂತುಳ್ಳ ಕಲ್ಲುಗಳನ್ನು ಮೀನಿನ ಬಲೆಯಲ್ಲಿ ಭಾರಕ್ಕಾಗಿ ಸಿಕ್ಕಿಸುವ ಕಲ್ಲುಗಳಂತೆ ಉಪಯೋಗಿಸಿರುವ ಸಾಧ್ಯತೆಯಿದೆ. ಈ ನೆಲೆಗಳು ನೀರಿನ ಸೆಲೆಗೆ ಹತ್ತಿರದಲ್ಲಿರುವುದು ಗಮನಾರ್ಹ. ಸೋನ್ ನದಿಬಯಲಿನಲ್ಲಿರುವ ಬಾಘೋರ್-1 ರಲ್ಲಿ ಮಾತ್ರ ದೇವತಾ ಆರಾಧನೆಯ ಕುರುಹುಗಳು ಪತ್ತೆಯಾಗಿವೆ. ಇಲ್ಲಿಯ ಉತ್ಖನನದಲ್ಲಿ ಮಾತೃದೇವತೆಯೆಂದು ತಿಳಿಯಲಾದ ಶಿಲೆಯೊಂದರ ಸುತ್ತಲೂ ಸಮಾಂತರದಲ್ಲಿ ಕಲ್ಲಿನಲ್ಲಿ ತ್ರಿಕೋನ ವಿನ್ಯಾಸ ರಚನೆಗೊಂಡಿರುವುದು ಕಂಡುಬಂತು. ಇಲ್ಲಿಂದ ಅನತಿ ದೂರದಲ್ಲಿ ಇದನ್ನು ಹೋಲುವ ಮತ್ತೊಂದು ರಚನೆಯಿದ್ದು ಅದನ್ನು ಸ್ಥಳೀಯ ಬುಡಕಟ್ಟು ಇಂದಿಗೂ ಪೂಜಿಸುತ್ತದೆ.

ಮೂಳೆಯ ಉಪಕರಣಗಳು: ಕರ್ನೂಲಿನ ಗುಹಾನೆಲೆಗಳು ಮೂಳೆಯ ಉಪಕರಣಗಳಿಗೆ ಹೆಸರುವಾಸಿಯಾಗಿವೆ. ಬ್ರೂಸ್‍ಫುಟ್ ಮತ್ತು ಅವನ ಮಗ ಹೆನ್ರಿ ಫುಟ್ ಬಿಲ್ಲಾಸರ್ಗಮ್ ಗುಹೆಯಲ್ಲಿ (1880) ನಡೆಸಿದ ಉತ್ಖನನದಲ್ಲಿ ಅಂತ್ಯ ಹಿಮಯುಗದ ಪ್ರಾಣಿ ಪಳೆಯುಳಿಕೆಗಳ ಜೊತೆಯಲ್ಲಿ ಮೂಳೆಯ ಉಪಕರಣಗಳು ಗಣನೀಯ ಸಂಖ್ಯೆಯಲ್ಲಿ ದೊರೆತವು. ಮಾನವನ ಕೈವಾಡದ ಚಿಹ್ನೆಗಳಿರುವ ಸು.1700 ಮೂಳೆಯ ತುಂಡುಗಳನ್ನು ಇವರು ಸಂಗ್ರಹಿಸಿದರು. ಇವುಗಳಲ್ಲಿ 200 ಸಿದ್ಧ ಉಪಕರಣಗಳಾಗಿದ್ದವು. ದಬ್ಬಳ/ ಕೊರಗ, ಮುಳ್ಳು ಸಹಿತ ಅಥವಾ ರಹಿತ ಬಾಣದ ಮೊನೆಗಳು, ಹೆರೆಚಕ್ಕೆ, ಉಳಿ, ರಂಧ್ರಕ, ಬೆಣೆ, ಸಾಕೆಟ್ಟುಗಳು ಈ ಸಂಗ್ರಹದಲ್ಲಿ ಇದ್ದವು. ಇವು ಫ್ರಾನ್ಸಿನ ಮ್ಯಾಗ್ಡಲೇನಿಯನ್ ಸಂಸ್ಕೃತಿಯ ಮೂಳೆಯ ಉಪಕರಣಗಳನ್ನು ಹೋಲುತ್ತವೆಂದು ಬ್ರೂಸ್‍ಫುಟ್ ಅಭಿಪ್ರಾಯಪಟ್ಟಿರುವನು. 1970ರ ದಶಕದಲ್ಲಿ ಕೆ. ತಿಮ್ಮಾರೆಡ್ಡಿಯವರು ಈ ಗುಹೆಯಲ್ಲಿ ನಡೆಸಿದ ಉತ್ಖನನದಲ್ಲಿಯೂ ಮೂಳೆಯ ಉಪಕರಣಗಳು ದೊರೆತಿವೆ. ಇದೇ ಸಮಯದಲ್ಲಿ ಮೂರ್ತಿಯವರು ಮುಚ್ಚಟ್ಲ ಚಿಂತಾಮನು ಗವಿಯಲ್ಲಿ ನಡೆಸಿದ ಉತ್ಖನನದಲ್ಲಿಯೂ ಮೂಳೆಯ ಉಪಕರಣಗಳು ಸಾಕಷ್ಟು ಪ್ರಮಾಣದಲ್ಲಿ (1652) ಕಂಡುಬಂದವು. ಮೂಳೆಯ ಉಪಕರಣಗಳಲ್ಲಿ ಹೆರೆಚಕ್ಕೆ, ಉಳಿ, ರಂಧ್ರಕ, ತೊಟ್ಟಿರುವ ಮೊನೆ, ದಬ್ಬಳ, ಮುಳ್ಳು, ಚಪ್ಪಟೆ ಚಮಚ ಮೊದಲಾದ ನಮೂನೆಗಳಿದ್ದವು. ಉಪಕರಣಗಳು ಒರಟಾಗಿ ಮಾಡಲ್ಪಟ್ಟಂತಹವು. ಈ ಗುಹೆ ಅರೆಕಾಲಿಕ ಬಿಡಾರ ತಾಣವಾಗಿದ್ದುದರಿಂದ ಇಲ್ಲಿ ಕುಶಲ ಕಲೆಗಾರಿಕೆಯನ್ನು ತೋರುವ ಉಪಕರಣಗಳಿಲ್ಲ ಎಂಬುದು ಉತ್ಖನನಕಾರರ ಅಭಿಪ್ರಾಯ. ಉಪಕರಣಗಳಿಗಾಗಿ ದೊಡ್ಡ ಮೂಳೆಗಳನ್ನೇ ಸಾಮಾನ್ಯವಾಗಿ ಆರಿಸಿ ಬೇಕಾದ ಉದ್ದಕ್ಕೆ ಇವನ್ನು ತುಂಡರಿಸಿಕೊಳ್ಳಲಾಗುತ್ತಿತ್ತು. ಅನಂತರ ಇಂತಹ ತುಂಡುಗಳಿಂದ ಒಂದೇ ಉದ್ದದ ಚಕ್ಕೆಯನ್ನು ತೆಗೆಯಲಾಗುತ್ತಿತ್ತು ಇಲ್ಲವೇ ಉದ್ದುದ್ದಕ್ಕೆ ಅವನ್ನು ಪಟ್ಟಿಯಂತೆ ಸೀಳಲಾಗುತ್ತಿತ್ತು. ಇಂತಹ ಚಕ್ಕೆ ಅಥವಾ ಪಟ್ಟಿಗಳ ತುದಿಯಲ್ಲಿ ಸಣ್ಣಸಣ್ಣ ಚಕ್ಕೆಗಳನ್ನು ತೆಗೆದು ಬೇಕಾದ ಆಕಾರಕ್ಕೆ ಅವನ್ನು ಮಾರ್ಪಡಿಸಲಾಗುತ್ತಿತ್ತು. ಕೊನೆಯದಾಗಿ ಇವುಗಳನ್ನು ಉಜ್ಜಿ ನಯಗೊಳಿಸಲಾಗುತ್ತಿತ್ತು.

ಆಹಾರ ಪದ್ಧತಿ: ಅಲಗು ಮತ್ತು ಬದಿ ಮೊಂಡಾಗಿಸಿದ ಅಲಗುಗಳನ್ನು ಮರ ಅಥವಾ ಮೂಳೆಯ ಹಿಡಿಕೆಯಲ್ಲಿ ಸಿಕ್ಕಿಸಿ ಸಂಯುಕ್ತ ಉಪಕರಣಗಳಂತೆ ಬಳಸಲಾಗುತ್ತಿತ್ತು. ಇವುಗಳನ್ನು ಬಳಸಿ ಬಾಣ, ಈಟಿಗಾಳ, ಈಟಿ ಅಥವಾ ಮುಳ್ಳಿರುವ ಮೊನೆಗಳನ್ನು ತಯಾರಿಸುತ್ತಿದ್ದಿರಬೇಕು. ಹೆರೆಚಕ್ಕೆ, ಕೊರಗ, ಕೊರೆಯುಳಿಗಳು ಮೂಳೆ ಮತ್ತು ಮರಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ಉಪಯುಕ್ತವಾಗಿದ್ದವು. ಒಟ್ಟಿನಲ್ಲಿ ಅಂತ್ಯ ಹಳೆಶಿಲಾಯುಗದ ಉಪಕರಣಗಳು ದೊಡ್ಡ ಹಾಗೂ ಸಣ್ಣ ಪ್ರಾಣಿಗಳ ಬೇಟೆ ಮತ್ತು ಮೀನುಗಾರಿಕೆಗೆ ವಿಶೇಷವಾಗಿ ರೂಪಿಸಿದ ಸಾಧನ ಗಳಾಗಿದ್ದವು. ಕಾಡು ಬೆಕ್ಕು, ಮುಳ್ಳುಹಂದಿ, ಮೊಲ, ಕಾಡುದನ, ಕಾಡೆಮ್ಮೆ, ನೀಲಗಾಯ್, ಚಿಂಕಾರ (ಸಣ್ಣ ಜಾತಿಯ ಜಿಂಕೆ), ಕೃಷ್ಣಮೃಗ, ಸಾಂಬಾರ, ಕಾಡುಹಂದಿ, ವಿವಿಧ ಜಾತಿಯ ಜಿಂಕೆಗಳು, ಉಡ, ಹಕ್ಕಿ ಹಾಗೂ ಆಮೆಯ ಮೂಳೆಗಳು ಕರ್ನೂಲಿನ ಗುಹೆಗಳಲ್ಲಿ ಈ ಹಂತದ ಪದರಗಳಲ್ಲಿ ಕಂಡುಬಂದಿದ್ದು ಇವು ಬೇಟೆಯ ಪ್ರಾಣಿಗಳಾಗಿದ್ದವು ಎಂದು ತಿಳಿಯುತ್ತದೆ. ಇಂತಹ ಚುರುಕು ಪ್ರಾಣಿಗಳನ್ನು ಬೇಟೆಯಾಡಲು ಸಾಕಷ್ಟು ಪರಿಣತಿ ಬೇಕು. ಅಲ್ಲದೆ ಇವುಗಳ ಬೇಟೆಯಲ್ಲಿ ವಿವಿಧ ಪ್ರಕಾರದ ಬಲೆ, ಬೋನು, ಬಿಲ್ಲು-ಬಾಣ ಮೊದಲಾದ ತಂತ್ರಗಳ ನೆರವನ್ನೂ ಇವರು ಪಡೆದಿದ್ದಿರಬೇಕು. ಇಂದಿಗೂ ಬೇಟೆ-ಆಹಾರ ಸಂಗ್ರಹಣೆಯನ್ನು ಜೀವನಕ್ರಮವಾಗಿ ಹೊಂದಿರುವ ಚೆಂಚು, ಯನಡಿ, ಬೋಯ, ಯೆರುಕುಲ ಮೊದಲಾದ ಬುಡಕಟ್ಟು ಪಂಗಡಗಳು ಸಣ್ಣ ಪ್ರಾಣಿಗಳನ್ನು ಬಲೆ-ಬೋನಿನಿಂದ ಹಿಡಿಯುತ್ತಾರೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದೇ ಸಾದೃಶ್ಯದ ಆಧಾರದ ಮೇಲೆ ಅಂತ್ಯ ಹಳೆಶಿಲಾಯುಗ ಕಾಲದಲ್ಲಿ ಗೆಡ್ಡೆ, ಗೆಣಸು, ಹೂವು, ಸೊಪ್ಪು-ಸದೆ, ನಾರು-ಬೇರು, ಅಣಬೆಗಳನ್ನು ಜನ ಸಂಗ್ರಹಿಸುತ್ತಿದ್ದರು ಎಂದು ತಿಳಿಯಬಹುದು. ಹುಳ-ಹುಪ್ಪಟೆಗಳು ಮತ್ತು ಜೇನು ಸಹ ಪೂರಕ ಆಹಾರವಾಗಿದ್ದಿರಬಹುದು. ಮಧ್ಯ ಭಾರತದಲ್ಲಿರುವ ಸೂಕ್ಷ್ಮ ಶಿಲಾಯುಗ ಚಿತ್ರಗಳಲ್ಲಿ ಬೇಟೆ, ಮೀನುಗಾರಿಕೆ, ಸಸ್ಯ ಮತ್ತು ಜೇನು ಸಂಗ್ರಹಣೆ ಮೊದಲಾದ ದೃಶ್ಯಗಳು ಭಿತ್ತಿಗೊಂಡಿರುವುದು ಗಮನಾರ್ಹ.

ಕಲೆಯ ಅಭಿವ್ಯಕ್ತಿಯ ಮೊದಲ ನಿದರ್ಶನವೂ ಈ ಕಾಲದಲ್ಲಿ ಕಂಡುಬರುತ್ತದೆ. ಉಷ್ಟ್ರಪಕ್ಷಿಯ ಮೊಟ್ಟೆಯ ಚೂರುಗಳಿಂದ ಮಾಡಲಾದ ಮಣಿಗಳು ಹಾಗೂ ರೇಖಾಚಿತ್ರ ಗಳುಳ್ಳ ಮೊಟ್ಟೆಯ ಚೂರುಗಳು ಭೀಂಬೇಟ್ಕದ 3-ಎಫ್-28 ಗುಹೆ, ಚಂಬಲ್ ಕಣಿವೆ ಯಲ್ಲಿರುವ ರಾಮ್‍ಗಡ್, ನರ್ಮದಾ ಬಯಲಿನಲ್ಲಿರುವ ಕಾಪರ್‍ಖೇಡ, ರಾಜಸ್ತಾನದಲ್ಲಿರುವ ಕೋಟ ಮತ್ತು ಚಂದ್ರೆಸಲ್ ಮತ್ತು ಮಹಾರಾಷ್ಟ್ರದಲ್ಲಿರುವ ಪಾಟ್ನೆ ಮೊದಲಾದ ನೆಲೆಗಳಲ್ಲಿ ಸಿಕ್ಕಿವೆ. ಇವಲ್ಲದೆ ಭೀಂಬೇಟ್ಕದಲ್ಲಿರುವ ಗುಹೆ-ಕಲ್ಲಾಸರೆಗಳಲ್ಲಿ ಈ ಹಂತಕ್ಕೆ ಸೇರಿಸಬಹುದಾದ ಶಿಲಾಚಿತ್ರಗಳಿವೆ. ಗುಂಪಿನಲ್ಲಿರುವ ಖಡ್ಗಮೃಗ, ಕಾಡೆಮ್ಮೆ, ಕಾಟಿ, ಆನೆ ಮತ್ತು ಹಂದಿಗಳ ಕೆಲವು ರೇಖಾಚಿತ್ರಗಳನ್ನು ಅಂತ್ಯ ಹಳೆಶಿಲಾ ಯುಗದ್ದೆಂದು ಗುರುತಿಸಲಾಗಿದೆ. ಇವನ್ನು ಹಸುರು ಮತ್ತು ಕಡುಗೆಂಪು ಬಣ್ಣದಲ್ಲಿ ಚಿತ್ರಿಸಲಾಗಿದೆ. ಕಡ್ಡಿಯ ದೇಹದ ಮನುಷ್ಯರ ಚಿತ್ರಗಳನ್ನೂ ಅಲ್ಲಲ್ಲಿ ಬಿಡಿಸಿದ್ದಾರೆ. (ಎಂ.ಎಲ್.ಕೆ.ಎಂ.)

**ಅಂಬಾರಿ:** ಅಸ್ಸಾಮ್ ರಾಜ್ಯದ ಕಾಮರೂಪ್ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ರಾಜಧಾನಿಯಾದ ಗುವಹಾಟಿ ನಗರದ ಮಧ್ಯಭಾಗದಲ್ಲಿ ಬ್ರಹ್ಮಪುತ್ರ ನದಿಯ ಪಶ್ಚಿಮದ ದಂಡೆಯ ಮೇಲಿರುವ ಈ ನೆಲೆ ಪುರಾತನ ಕಾಲದಿಂದಲೂ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಿಗೆ ಕೇಂದ್ರಬಿಂದುವಾದ ಸ್ಥಳ. ಪ್ರಾಗ್‍ಜ್ಯೋತಿಷ ಎಂಬ ಹೆಸರಿನಿಂದ ಮಹಾಕಾವ್ಯಗಳ ಕಾಲದಿಂದಲೂ ಪ್ರಖ್ಯಾತಿಯನ್ನು ಹೊಂದಿತ್ತು. ಮಗಧ ಮತ್ತು ಚೀನ ದೇಶಗಳ ನಡುವೆ ಹಾದು ಹೋಗುವ ವ್ಯಾಪಾರದ ಹಾದಿಯ ಹೆಬ್ಬಾಗಿಲಾಗಿತ್ತು. 1969-71ರಲ್ಲಿ ಇಲ್ಲಿ ಉತ್ಖನನ ನಡೆಸಲಾಯಿತು. ಉತ್ಖನನದಲ್ಲಿ ಅನುಕ್ರಮವಾಗಿ ಎರಡು ಹಂತಗಳನ್ನು

ಗುರುತಿಸಲಾಗಿದೆ. ಮೊದಲನೆಯ ಹಂತ 7 ರಿಂದ 12ನೆಯ ಶತಮಾನದವರೆಗಿನದು. ಎರಡನೆಯ ಹಂತ 13 ರಿಂದ 17ನೆಯ ಶತಮಾನದವರೆಗಿನದು. ಉತ್ಖನನದಲ್ಲಿ ದೊರಕಿದ ಕೆಲವು ವಿಗ್ರಹಗಳು 8–9ನೆಯ ಶತಮಾನದ್ದು. ಮೇಲಿನ ಸ್ತರಗಳಲ್ಲಿ ದೊರಕಿದ ಇದ್ದಿಲು ಚೂರುಗಳನ್ನು ಇಂಗಾಲ–14ರ ತಂತ್ರದಿಂದ 1030±130 ಕಾಲದ್ದೆಂದು ಗೊತ್ತುಮಾಡಲಾಗಿದೆ. ಪ್ರಾಗ್ಜ್ಯೋತಿಷ 7ನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದುದರಿಂದ ಪುರಾತತ್ತ್ವಜ್ಞರು ಇದನ್ನು 7ನೆಯ ಶತಮಾನಕ್ಕೆ ಹೊಂದಿಸಲು ಪ್ರಯತ್ನಿಸಿದ್ದಾರೆ. ಇಲ್ಲಿರುವ ಹಲವಾರು ಕಟ್ಟಡಗಳು ಈ ಕಾಲದವು. ಈ ಕಟ್ಟಡಗಳಲ್ಲಿ ಎರಡು ವಿಧದ (21x21x4 ಸೆಂಮೀ ಮತ್ತು 26x26x6 ಸೆಂಮೀ) ಇಟ್ಟಿಗೆಗಳನ್ನು ಉಪಯೋಗಿಸ ಲಾಗಿದೆ. ಹೆಂಚುಗಳು, ಜೇಡಿಮಣ್ಣಿನ ಬಚ್ಚಲ ಮೋರಿಯ ಕೊಳವೆಗಳು ಮತ್ತು ಕಲ್ಲಿನ ದಿಂಡುಗಳು ಮುಂತಾದವು ಕಟ್ಟಡಗಳಿಗೆ ಉಪಯೋಗಿಸಿರುವ ಬೇರೆ ಸಾಮಗ್ರಿಗಳು. ಗಟ್ಟಿಯಾದ ನೆಲಗಟ್ಟುಗಳುಳ್ಳ ಹಾಸುಕಲ್ಲುಗಳಿಂದ ಮುಚ್ಚಲ್ಪಟ್ಟ ಚರಂಡಿಗಳು, ಇಟ್ಟಿಗೆಯ ದಪ್ಪನಾದ ಗೋಡೆ ಮತ್ತು ಸುಟ್ಟ ಮಣ್ಣಿನ ಉಂಗುರಾಕಾರದ ಮಂಡಲಗಳೂ ಬೆಳಕಿಗೆ ಬಂದಿವೆ. ವಿಷ್ಣು, ಸೂರ್ಯ, ದುರ್ಗೆ, ಹತ್ತುಕೈಗಳ ನರ್ತನ ಶಿವ, ಬೇರೆ ಬೇರೆ ಆಕಾರ ಮತ್ತು ಅಳತೆಗಳ ಲಿಂಗಗಳೂ ಯೋಗಪೀಠಗಳೂ ನಂದಿ, ಅಗ್ನಿ, ಸರ್ಪದ ಹೆಡೆಯ ಪ್ರಭಾವಳಿ ಇರುವ ಯಾಮುನ ಮುನಿಗಳ ವಿಗ್ರಹಗಳೂ ದೊರಕಿವೆ. ದೊಡ್ಡ ವಿಗ್ರಹಗಳು ಕಂದುಬಣ್ಣದ ಬಳಪದಕಲ್ಲಿನಿಂದಲೂ ಸಣ್ಣವಿಗ್ರಹಗಳು ಅಭ್ರಕ ಕಲ್ಲುಗಳಿಂದಲೂ ನಿರ್ಮಿತಗೊಂಡಿವೆ. ಮಣ್ಪಾತ್ರೆಗಳನ್ನು ಬಿಳಿಯ ಅಥವಾ ಮಾಸಲು ಹಳದಿಬಣ್ಣದ ಚೀನಿಮಣ್ಣಿನಿಂದ ತಯಾರಿಸಲಾಗಿದೆ. ಯಾವರೀತಿಯ ಅಲಂಕಾರವೂ ಇಲ್ಲದ ಚೀನಿ ಮಣ್ಣಿನಿಂದ ತಯಾರಿಸ ಲಾದ ಹಲವಾರು ತಂಬಿಗೆಗಳು ಮತ್ತು ನುಣುಪಾದ ಚೆನ್ನಾಗಿ ಸುಟ್ಟ ಕೆಂಪುಮಣ್ಣಿನ ಮಡಕೆಗಳೂ ದೊರಕಿವೆ. ಈ ಮಡಕೆಗಳಿಗೆ ಯಾವ ರೀತಿಯ ಬಣ್ಣದ ಲೇಪವಾಗಲಿ ಮತ್ತು ಪಟ್ಟಿಯಾಗಲಿ ಇಲ್ಲ. ತಿಗುರಿ ಮೇಲೆ ತಯಾರಿಸಿದ ಮಣ್ಪಾತ್ರೆಗಳು ಮಹತ್ತ್ವಪೂರ್ಣವಾಗಿವೆ. ಆದರೆ ಕೆಲವು ತಟ್ಟಿದ ಮತ್ತು ಮುದ್ರಿಸಿದ ಚಿಹ್ನೆಗಳಿರುವ ಒರಟು ಆಕಾರದ ಮಣ್ಪಾತ್ರೆಗಳು ಕೈಯಿಂದ ತಯಾರಾಗಿವೆ. ಹೊಳೆಯುವ ಕೆಂಪು ಮಣ್ಪಾತ್ರೆಗಳೂ ಮತ್ತು ಗಾಢವಾದ ಕಂದುಬಣ್ಣದ ಮಣ್ಪಾತ್ರೆಗಳು ದೊರಕುತ್ತವೆ. ಚಾಕೊಲೇಟ್ ಬಣ್ಣದಿಂದ ಲೇಪಿತವಾದ ಕೆಲವು ತಟ್ಟೆಗಳು, ಸೆಲೆಡಾನ್ ಮತ್ತು ಹಸುರುಬಣ್ಣವನ್ನು ಲೇಪಿಸಿರುವ ಮಡಕೆಗಳೂ ದೊರೆತಿವೆ. ಗೋಲಾಕಾರದ ಜಾಡಿ, ತಟ್ಟೆ, ಚೂಪಾದ ಅಂಚುಳ್ಳ ಬಟ್ಟಲು, ತಾಂಬಾಳ, ನಳಿಕೆಯುಳ್ಳ ಪಾತ್ರೆ, ಚಪ್ಪಟೆಯಾದ ಕಂಠವುಳ್ಳ ಮುಚ್ಚಳ ಮತ್ತು ಕಾಲಿರುವ ತಟ್ಟೆ ಇವೇ ಮೊದಲಾದವು ದೊರಕಿವೆ. ಕೆಲವು ಪಾತ್ರೆಗಳು ಕಂಠದ ಮತ್ತು ಹೊರ ಮೈಮೇಲೆ ಮಾವಿನಕಾಯಿ, ಸೂರ್ಯ, ಗುಲಾಬಿಯ ಆಕಾರಗಳು ಮತ್ತುಬಿಲ್ಲೆಗಳ ಆಕಾರಗಳಿಂದ ಅಲಂಕೃತವಾಗಿವೆ. ಕಂದುಬಣ್ಣದ ಕೆಲವು ಪಾತ್ರೆಗಳ ಮೇಲೆ ಕಮಲದಾಕಾರ ವನ್ನು ಕೆತ್ತಿ ಬಿಂಬಿಸಲಾಗಿದೆ. ಕುಷಾಣರ ಕಾಲದ ಮುಚ್ಚಳದಂತಿರುವ ಮಸಿಕುಡಿಕೆಯ ಆಕಾರದ ಮುಚ್ಚಳ ಮತ್ತು ಕೊಂಬುಗಳಂಥ ಚಾಚುಗಳುಳ್ಳ ಗ್ರೀಕ್ ಪಾತ್ರೆಯಂತಿರುವ ಕೊಂಬಿನಂಥ ಪಾತ್ರೆ ಅಪರೂಪದ್ದಾಗಿವೆ. ಅವಶೇಷಗಳು ಬೆರಕೆಯಾಗಿವೆ. ಸುಟ್ಟಮಣ್ಣಿನ ಸುಂದರವಾದ ಅಪ್ಸರೆ ಮತ್ತು ನರ್ತನ ಸುಂದರಿಯರ ಬೊಂಬೆಗಳು ಶ್ರೇಷ್ಠ ನಮೂನೆಗಳಾಗಿವೆ. ಅಲ್ಲದೆ ಸುಟ್ಟಮಣ್ಣಿನ ಸಣ್ಣ ಮುಖಲಿಂಗ, ಗಣೇಶ ಮತ್ತು ಪಕ್ಷಿಗಳೂ ಇವೆ. ಒಂದು ಮುದ್ರೆಯ ಅಂಚಿನಲ್ಲಿ ಕಿರೀಟವನ್ನು ಧರಿಸಿರುವ ಕೆತ್ತಿದ ಮಾನವನ ಆಕಾರವಿದೆ. ಹಲವಾರು ಜೇಡಿಮಣ್ಣಿನ ಮಣಿಗಳು, ಬಳೆಗಳು, ಕಿವಿಯ ಆಭರಣಗಳು ಮತ್ತು ಚಿಕ್ಕ ಚೆಂಡುಗಳೂ ದೊರೆತಿವೆ. ಕಬ್ಬಿಣದ ಬಾಣದ ಮೊನೆ, ತಾಮ್ರದ ಬಳೆಗಳು ಮತ್ತು ಬಂಗಾರದ ಮುದ್ರೆ ಮೊದಲಾದವು ಲೋಹದ ಅವಶೇಷಗಳಾಗಿವೆ.

ಎರಡನೆಯ ಹಂತದ ಎಲ್ಲಾ ಪದರಗಳೂ ಬೆರಕೆಯಾಗಿರುವುದರಿಂದ ಈ ಹಂತದ ಬಗೆಗೆ ಸ್ಪಷ್ಟ ಮಾಹಿತಿಯಿಲ್ಲ. ಹಿಂದಿನ ಕಾಲದ ಏಳಿಗೆಯ ಸ್ಥಿತಿ ಮತ್ತು ಸಮೃದ್ಧಿಯ ಅವನತಿಯನ್ನು ಇಲ್ಲಿ ಕಾಣಬಹುದು. ಕಟ್ಟಡಗಳ ಅವಶೇಷಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ಕೆಲವು ವಿಗ್ರಹಗಳನ್ನು ಅವುಗಳ ಶೈಲಿಯಿಂದ ಈ ಕಾಲಕ್ಕೆ ಸಂಬಂಧಿಸಿರಬಹುದೆಂದು ಹೇಳಬಹುದು. ಇಲ್ಲಿ ಸಿಕ್ಕಿರುವ ಗಾಜುಮೆರುಗಿನ ಪಾತ್ರೆಗಳನ್ನು ಈ ಕಾಲಕ್ಕೆ ಸೇರಿಸಬಹುದು. ಇಂಡೊ–ಬ್ರಿಟಿಷ್ ಕಂಪನಿಯ ಒಂದು ತಾಮ್ರದ ನಾಣ್ಯವೂ ಇಲ್ಲಿ ದೊರೆತಿದೆ. 18–19ನೆಯ ಶತಮಾನಗಳಲ್ಲಿ ಉಂಟಾದ ಭೂಕಂಪದಿಂದ ಈ ಸ್ಥಳವನ್ನು ತ್ಯಜಿಸಲಾಯಿತು. (ಸಿ.ಕೆ.ಎಂ.)

**ಅಂಬೇಡ್ಕರ್, ಬಿ.ಆರ್.:** ಭಾರತ ಸಂವಿಧಾನದ ಪಿತಾಮಹ ಹಾಗೂ ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿ. ಇವರು 1891 ಏಪ್ರಿಲ್ 14 ರಂದು ಮ್ಹಾವು ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದ ಅಸ್ಪೃಶ್ಯ ಮಹರ್ ಸಮುದಾಯದ ಕುಟುಂಬದಲ್ಲಿ ಜನಿಸಿದರು. ತಂದೆ ರಾಮಜಿ ಮಲೋಜಿ ಸಂಕಪಾಲ್. ತಾಯಿ ಭೀಮಾಬಾಯಿ. ಭಾರತೀಯ ಸಮಾಜದ ಅಸ್ಪೃಶ್ಯರು ತುಳಿತಕ್ಕೊಳಗಾದ ಜಾತಿಗಳು ಮತ್ತು ಅಸ್ಪೃಶ್ಯರಷ್ಟೆ ದಮನಿಸಲ್ಪಟ್ಟ ಭಾರತೀಯ ಸ್ತ್ರೀ ಸಮೂಹದ ಉದ್ಧಾರಕ್ಕಾಗಿ ಅಂಬೇಡ್ಕರ್ ನಡೆಸಿದ ಹೋರಾಟ ಬಹು ದೀರ್ಘವಾದದ್ದು. ಈ ಮಾನವತಾ ವಾದಿಯ ಪಯಣದಲ್ಲಿ ಜಾತಿವಿನಾಶ, ಅಸ್ಪೃಶ್ಯತೆ ನಿವಾರಣೆ, ಸ್ತ್ರೀಯರ ಸಮಾನ ಹಕ್ಕುಗಳಿಗಾಗಿ ಹೋರಾಟ, ಪ್ರಜಾಸತ್ತೆಯ–ಸಾಮಾಜಿಕ ಪ್ರಜಾಪ್ರಭುತ್ವದ ಸ್ಥಾಪನೆ, ರಾಷ್ಟ್ರೀಯತೆ, ರಾಷ್ಟ್ರದ ಕಲ್ಪನೆಗಳಂಥ ಮೈಲುಗಲ್ಲುಗಳಿವೆ. ಸ್ವತಂತ್ರ ಭಾರತದ ತಳಹದಿಯಲ್ಲಿ ಅವರ ಹೋರಾಟದ ಫಲಗಳನ್ನು ದೀನದಲಿತರಿಗೆ, ಸ್ತ್ರೀಯರಿಗೆ ಹಂಚಿಕೊಡಲು ಅವರೇ ರೂಪಿಸಿದ ಸಂವಿಧಾನವಿದೆ.

ಆಧುನಿಕ ಭಾರತದ ಸಾಮಾಜಿಕ ಕ್ರಾಂತಿಯ ನೇತಾರರಲ್ಲಿ ಅಗ್ರಗಣ್ಯ, ದಲಿತಜನಾಂಗದ ಭಾಗ್ಯ ವಿಧಾತ ಅಂಬೇಡ್ಕರ್‌ರವರು ಹಲವು ಮಹನೀಯರ ಚಿಂತನೆಗಳಿಂದ ಸ್ಫೂರ್ತಿ ಪಡೆದಿದ್ದಾರೆ, ಪ್ರಭಾವಿತರಾಗಿದ್ದಾರೆ. ಅಂಬೇಡ್ಕರ್‌ರವರು ಬಾಲ್ಯದಲ್ಲಿ ಸಂತ ಕಬೀರರ ದೋಹಾಗಳಿಂದ ಪ್ರಭಾವಿತರಾದರು. ಇಹದ ಹಚ್ಚಡವನ್ನು ಇಳೆಯ ಮೇಲಿನ ಮಗ್ಗದಲ್ಲೆ ನೈತಿಕತೆಯ ಎಳೆಗಳಿಂದ ನೇಯಬೇಕೆಂದು ಇಹ ಸತ್ಯವೆಂದು ಹಾಡಿದ್ದ ಕಬೀರರ ದೋಹಾಗಳೇ ಮನೆಯಲ್ಲಿ ಅಂಬೇಡ್ಕರ್ ಅವರ ತಂದೆ–ತಾಯಿಯರ ಹಾಡು, ಪಾಡು, ಪ್ರಾರ್ಥನೆಗಳಾಗಿದ್ದವು. ಶೋಷಿತ ವರ್ಗಗಳಿಗೆ ಆಧ್ಯಾತ್ಮಿಕ ಮಾರ್ಗದ ಮೂಲಕ ಅರಿವಿನ ಬೆಳಕನ್ನು ಹೊತ್ತಿಸಿದ್ದ ಕಬೀರರ ಚಿಂತನೆಗಳು ಅಂಬೇಡ್ಕರರಿಗೆ ಎಳೆ ವಯಸ್ಸಿನಲ್ಲೆ ಅವರ ಮುಂದಿನ ದಾರಿ ಯಾವುದೆಂದು ತೋರಿಸಿದ್ದವು.

ಬಾಲ್ಯಾವಸ್ಥೆಯಿಂದ ಯೌವನಕ್ಕೆ ಕಾಲಿಟ್ಟ ಅಂಬೇಡ್ಕರ್‌ರವರಿಗೆ ಮನುಷ್ಯ ವಿಧಿಯ ಕೈಗೊಂಬೆಯಲ್ಲ, ಅವನ ಭವಿಷ್ಯವನ್ನು ಅವನೇ ರೂಪಿಸಿಕೊಳ್ಳಬಲ್ಲ ಮತ್ತು ರಾಜಯೋಗ್ಯ ಅಥವಾ ಹಿರಿಯ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ಒಬ್ಬ ವ್ಯಕ್ತಿ ದೊಡ್ಡವನಾಗಲಾರ ಎಂದು ಸಾವಿರ ವರ್ಷಗಳ ಹಿಂದೆಯೇ ಸಾರಿ ಸಾರಿ ಹೇಳಿದ್ದ ಬುದ್ಧನ ತತ್ತ್ವಗಳು ಪ್ರಿಯವಾದವು. ಭಾರತದಲ್ಲಿ ಜಾತಿಗಳು ಅವುಗಳ ರಚನೆ, ಉತ್ಪತ್ತಿ ಮತ್ತು ಬೆಳೆವಣಿಗೆ ಎಂಬ ಕೃತಿಯನ್ನು ರಚಿಸುವ ಹೊತ್ತಿಗೆ ಅವರು ಅಪಾರವಾದ ಬೌದ್ಧ ಸಾಹಿತ್ಯವನ್ನು ಅಭ್ಯಸಿಸಿದ್ದರು. ಬುದ್ಧ ಮಾರ್ಗ ಅವರಿಗೆ ಭಾರತದಲ್ಲಿ ಬೆಳೆದ ಜಾತಿ ಆಧಾರಿತ ಸಮಾಜವನ್ನು ವಿಶ್ಲೇಷಿಸಲು ಒಂದು ಸಮರ್ಥವಾದ ದಿಕ್ಕನ್ನು ಸೂಚಿಸಿತು. ಈ ವೇಳೆಗೆ ಅವರು ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಿಂದ ಪದವೀಧರರಾಗಿದ್ದರು. ಮುಂದೆ ಹಿಂದುಧರ್ಮ, ಸಮಾಜದ ವಿಶ್ಲೇಷಣೆಗೆ ಬುದ್ಧನ ಚಿಂತನೆಯ ಅನರ್ಘ್ಯ ರತ್ನಗಳಾದ ಅನಿಚ್ಚ (ನಶ್ವರತೆ) ಮತ್ತು ಅನಕ್ತ (ಅನಾತ್ಮ)ಗಳನ್ನೇ ನೀಡಿದ್ದ.

ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಸ್ವಾತಂತ್ರ್ಯ ಬಹುದೊಡ್ಡದೆಂದು ಪ್ರತಿಪಾದಿಸಿದ್ದ ಜ್ಯೋತಿಬಾಫುಲೆ ಅಂಬೇಡ್ಕರ್‌ರವರ ಮೇಲೆ ಬೀರಿದ ಪ್ರಭಾವ ಅಪಾರ. ಗಾಂಧೀಜಿಯವರನ್ನೇ ಮಿಸ್ಟರ್ ಗಾಂಧಿ ಎಂದು ಕರೆದಿದ್ದ ಅಂಬೇಡ್ಕರ್‌ರವರು ಜ್ಯೋತಿ ಬಾಫುಲೆಯವರನ್ನು ಮಹಾತ್ಮ ಎಂದು ಸಂಭೋದಿಸಿದ್ದರು. ಪಶ್ಚಿಮ ಭಾರತದ ಭಾಗದಲ್ಲಿ ಸಿಂದಿ, ಕುಂಬಾರ, ನಾವಿದ, ಕೋಳಿ, ಮಹಾರ್, ಮಾಂಗ್, ಮಾಲಿ, ಚಮ್ಮಾರ ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸಿದ್ದ ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕ ಶಾಲೆಯನ್ನೇ ಸ್ಥಾಪಿಸಿದ್ದ ಜ್ಯೋತಿಬಾಫುಲೆಯನ್ನು ಅಂಬೇಡ್ಕರ್‌ರವರು ಬಹುವಾಗಿ ಪ್ರಶಂಸಿಸಿದ್ದರು. ಅಂಬೇಡ್ಕರ್ ರವರನ್ನು ಪ್ರಭಾವಿತಗೊಳಿಸಿದ ಮತ್ತೊಬ್ಬ ಭಾರತೀಯ ಚಿಂತಕರೆಂದರೆ ಎಂ.ಜಿ. ರಾನಡೆ. ರಾನಡೆಯವರ ರಾಜಕೀಯ ತತ್ತ್ವಶಾಸ್ತ್ರ, ಅಂಬೇಡ್ಕರ್‌ರವರು ರಾಜಕೀಯ ಕ್ಷೇತ್ರದಲ್ಲಿಯ ವಾಸ್ತವಿಕೆಗಳನ್ನು ಎದುರಿಸುವ ಮತ್ತು ಅವುಗಳನ್ನು ಕ್ರಮಬದ್ಧವಾಗಿ ವಿಶ್ಲೇಷಿಸಿ ಪರಿಹಾರ ಕಂಡುಕೊಳ್ಳುವಲ್ಲಿ ನೆರವಾಯಿತು. ಬುದ್ಧ, ಕಬೀರ, ಜ್ಯೋತಿಬಾಫುಲೆ, ರಾನಡೆಯವರ ಚಿಂತನೆಗಳೊಂದಿಗೆ ತಮ್ಮ ಮುಂದಿನ ಶಿಕ್ಷಣಕ್ಕಾಗಿ ಅಂಬೇಡ್ಕರ್‌ರವರು ವಿದೇಶಕ್ಕೆ ತೆರಳಿದರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿಯ ವ್ಯಾಸಂಗಾವಧಿಯಲ್ಲಿ ಜಾನ್‌ಡ್ಯೂಯಿಯವರ ವಿಚಾರಸರಣಿಯಿಂದ ಬಹಳವಾಗಿ ಆಕರ್ಷಿತರಾದರು. ವರ್ತಮಾನದ ವಾಸ್ತವಿಕ ಸಮಸ್ಯೆಗಳನ್ನು ಚರಿತ್ರೆ, ಮತಧರ್ಮ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳಂಥ ಶಿಸ್ತುಗಳ ಅಂತರ್ ಅಧ್ಯಯನದ ಮೂಲಕ ವಿಶ್ಲೇಷಿಸಿ ಪರಿಹಾರ ಕಂಡುಕೊಳ್ಳಲು ಅವರಿಗೆ ಡ್ಯೂಯಿ ದಾರಿ ತೋರಿಸಿದರು. ಕೊಲಂಬಿಯ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದರು.

ಹೀಗೆ ಪೂರ್ವ ಮತ್ತು ಪಶ್ಚಿಮಗಳ ಅಪೂರ್ವ ಚಿಂತನೆಗಳಿಂದ ಪಕ್ವವಾದ ವ್ಯಕ್ತಿತ್ವವನ್ನು ರೂಪಿಸಿಕೊಂಡ ಅಂಬೇಡ್ಕರ್‌ರವರು ಭಾರತಕ್ಕೆ ಮರಳಿ 1919ರಲ್ಲಿ ಸೌತ್ ಬರ್ರೋ ಸಮಿತಿಯ ಮುಂದೆ ಹಾಜರಾಗಿ, ದೇಶದ ರಾಜಕೀಯ ರಂಗಕ್ಕೆ ಪ್ರವೇಶಿಸಿದರು. ಅದು ಬ್ರಿಟಿಷ್ ಆಳಿಕೆಯ ವಿರುದ್ಧ ರಾಷ್ಟ್ರೀಯ ಆಂದೋಳನ ಪ್ರಖರವಾಗುತ್ತಿದ್ದ ಕಾಲ. ಭಾರತ ರಾಷ್ಟ್ರೀಯ ಕಾಂಗ್ರೆಸ್ ರಾಷ್ಟ್ರೀಯ ಚಳುವಳಿಯ ಚುಕ್ಕಾಣಿ ಹಿಡಿದಿತ್ತು. ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕದಿಂದ ಹಿಂತಿರುಗಿ ಕಾಂಗ್ರೆಸ್‌ನ ನಾಯಕರಾಗಿದ್ದರು. ಕಾಂಗ್ರೆಸ್ ದೇಶದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ ತನ್ನ ಕಾರ್ಯದ ಮುಖ್ಯ ಗುರಿಯೆಂದು ಹೋರಾಡುತ್ತಾ ಸಾಮಾನ್ಯ ಜನತೆಯನ್ನು ತನ್ನ ಕಕ್ಷೆಯೊಳಕ್ಕೆ ಸೆಳೆಯುತ್ತಿತ್ತು. ಇಂಥ ಸಂದರ್ಭದಲ್ಲಿ ಅಂಬೇಡ್ಕರ್‌ರವರು ರಾಜಕೀಯ ಅಥವಾ ಇನ್ನಾವುದೇ ಬಗೆಯ ಸ್ವಾತಂತ್ರ್ಯಕ್ಕಿಂತಲೂ ಭಾರತದಲ್ಲಿ ಆವಶ್ಯಕವಾಗಿರುವುದು ಸಮಾನತೆ

ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ಸ್ಥಾಪನೆ ಎಂದು ಹೇಳಿದ್ದು. ಸಾಮಾಜಿಕ ಸಮಾನತೆ ಮತ್ತು ಸಮಾನ ಭಾಗಿತ್ವಕಾಗಿ ಅಸ್ಪೃಶ್ಯ ವರ್ಗದವರಿಗೆ ಮತದಾನದ ಹಕ್ಕನ್ನು ನೀಡಬೇಕೆಂಬ ತಮ್ಮ ಮನವಿಯನ್ನು ಸೌತ್ ಬರೋ ಸಮಿತಿಯ ಮುಂದೆ ಮಂಡಿಸಿದರು. ಜೀವನ ನಿರ್ವಹಣೆಗಾಗಿ ಸಿಡೇನ್ ಹ್ಯಾಮ್ ಕಾಲೇಜಿನ ಅಹ್ವಾನವನ್ನು ಒಪ್ಪಿ ವಾಣಿಜ್ಯ ಅರ್ಥಶಾಸ್ತ್ರ ಪ್ರಾಧ್ಯಾಪಕರಾದರು. ಸಾರ್ವಜನಿಕ ರಂಗದಲ್ಲಿ ತಮ್ಮ ಅಭಿಪ್ರಾಯಗಳನ್ನು ದಿಟ್ಟವಾಗಿ ಸಂವಹನಗೊಳಿಸುವುದು ಮತ್ತು ತಮ್ಮ ಹೋರಾಟದ ಚಿತ್ರಣವನ್ನು ಸ್ಪಷ್ಟವಾಗಿ ಸಮಾಜದ ಮುಂದಿಡುವುದಕ್ಕಾಗಿ ಅವರು ಮೂಕನಾಯಕ ಪತ್ರಿಕೆಯನ್ನು ಆರಂಭಿಸಿದರು. 1923ರಲ್ಲಿ ಡಿ.ಎಸ್‌ಸಿ ಪದವಿ ಪಡೆದು ಬ್ಯಾರಿಸ್ಟರ್ ಆಗಿ ನೇಮಿಸಲ್ಪಟ್ಟರು. ಇದೇ ಸಮಯದಲ್ಲಿ ರೂಪಾಯಿ ಒಳಗೊಂಡ ಸಮಸ್ಯೆ ಕೃತಿ ರಚಿಸಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಒಳಹೊಕ್ಕು ಅದು ಭಾರತದಲ್ಲಿ ಜಾತಿ ಪದ್ಧತಿಯ ಬಗ್ಗೆ ಅನುಸರಿಸಿದ ತಟಸ್ಥ ನೀತಿ ಮತ್ತು ಜಾತಿ ಪದ್ಧತಿಯನ್ನು ಮುಂದುವರೆಯುವಂತೆ ಮಾಡಿದ್ದರ ಹಿನ್ನೆಲೆಯಲ್ಲಿದ್ದ ಅದರ ಹಿತಾಸಕ್ತಿಗಳನ್ನು ಮನಗಂಡರು. ಬ್ರಿಟಿಷರಿಂದ ದಲಿತ–ಶೋಷಿತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ, ಬದಲಾಗಿ ಸಾಮ್ರಾಜ್ಯಶಾಹಿ ಶೋಷಕರಿಗೆ ಬೆಂಗಾವಲಾಗಿದೆ ಎನ್ನುವ ಖಚಿತ ನಿಲುವಿಗೆ ಬಂದರು. ಮುಂದೆ ಎಂದಿಗೂ ಅವರು ಈ ನಿಲುವಿನಿಂದ ಹಿಂದಕ್ಕೆ ಸರಿಯಲಿಲ್ಲ. ಸಮುದಾಯವನ್ನು ಸಂಘಟಿಸುವುದಕ್ಕಾಗಿ ಬಹಿಷ್ಕೃತ ಹಿತಕಾರಿಣಿ ಸಭಾವನ್ನು ಸ್ಥಾಪಿಸಿದರು. ಈ ಸಭಾದ ಮೂಲಕ ಅಸ್ಪೃಶ್ಯ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳನ್ನು ಸ್ಥಾಪಿಸಲಾಯಿತು. ಬಹಿಷ್ಕೃತ ಸಭಾ ಸ್ಥಾಪನೆಯ ಅನಂತರ ಅಂಬೇಡ್ಕರ್‌ರವರ ಮುಂದಿನ ಮಹತ್ತ್ವದ ಹೆಜ್ಜೆಯೇ ಮಹಾಡ್ ಸತ್ಯಾಗ್ರಹ. ಅವರ ಮಾತಿನಲ್ಲಿಯೇ ಹೇಳುವುದಾದರೆ ಈ ಸತ್ಯಾಗ್ರಹ ದೇಶದಲ್ಲಿ ಸಮಾನತೆಯ ಯುಗವನ್ನು ಉದ್ಘಾಟಿಸಿತು. ಸಾವಿರಾರು ವರ್ಷಗಳಿಂದ ಅಸ್ಪೃಶ್ಯರು ಇತರೇ ಸ್ಪೃಶ್ಯ ಸಮುದಾಯದವರು ಬಳಸುವ ಕೆರೆ, ಬಾವಿ, ನದಿ, ಇನ್ನಿತರ ಜಲ ಮೂಲಗಳನ್ನು ಸ್ಪರ್ಶಿಸಬಾರದೆಂಬ ಹಿಂದು ಧರ್ಮದ ಕಟ್ಟಪ್ಪಣೆಯ ಶೃಂಖಲೆಯನ್ನು ಮುರಿದು ಹಾಕಲು ಅವರು ತೀರ್ಮಾನಿಸಿದರು. ಈ ಕೆಲಸಕ್ಕಾಗಿ ಅವರು ಮಹಾಡ್ ಎನ್ನುವ ಸ್ಥಳದಲ್ಲಿದ್ದ ಚಾವುದರ್ ಎನ್ನುವ ಕೆರೆಯನ್ನು ಆರಿಸಿಕೊಂಡರು. ಆ ಕೆರೆಯೊಳಕ್ಕೆ ಪ್ರವೇಶಿಸಿ ಕೆರೆಯ ನೀರನ್ನು ಮುಟ್ಟಬೇಕೆಂದು 1927ರ ಡಿಸೆಂಬರ್ 25–27ರ ವರೆಗೆ ಚಾವುದರ್ ಬಳಿ ತಮ್ಮ ಸಾವಿರಾರು ಅನುಯಾಯಿಗಳೊಂದಿಗೆ ಸತ್ಯಾಗ್ರಹ ಹೂಡಿದರು. ಸವರ್ಣೀಯ ಹಿಂದುಗಳು ಅಸ್ಪೃಶ್ಯರು ಕೆರೆಯ ನೀರನ್ನು ಮುಟ್ಟುವುದನ್ನು ತಡೆಯಲು ಹಿಂಸಾತ್ಮಕ ಮಾರ್ಗದಲ್ಲಿ ಸಜ್ಜುಗೊಂಡರು. ಜಾತಿ ಪದ್ಧತಿಯ ಬಗ್ಗೆ ತಟಸ್ಥ ನೀತಿ ಅನುಸರಿಸಿ ತಮ್ಮ ಆಳಿಕೆಯ ಉದ್ದಕ್ಕೂ ಸಾಮಾಜಿಕ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವುದನ್ನೇ ನೀತಿಯನ್ನಾಗಿಸಿಕೊಂಡಿದ್ದ ಬ್ರಿಟಿಷ್ ಸರ್ಕಾರ ಅಂಬೇಡ್ಕರ್‌ರವರ ಮೇಲೆ ಅತೀವ ಒತ್ತಡವನ್ನು ಹೇರಿ ಉದ್ದೇಶಿತ ಸತ್ಯಾಗ್ರಹ ಗುರಿ ಮುಟ್ಟದ ಹಾಗೆ ನೋಡಿಕೊಂಡಿತು. ಡಿಸೆಂಬರ್ 25ರಂದು ಜಿಲ್ಲಾ ನ್ಯಾಯಾಧೀಶರು ಮಹಾಡ್‌ನಲ್ಲಿದ್ದ ತಮ್ಮ ತಾತ್ಕಾಲಿಕ ಕಛೇರಿಗೆ ಅಂಬೇಡ್ಕರರನ್ನು ಅಹ್ವಾನಿಸಿದರು. ತಮ್ಮ ಕಛೇರಿಗೆ ಬಂದ ಅಂಬೇಡ್ಕರ್‌ರವರಿಗೆ ಸೌಮ್ಯ ಆದರೆ ಖಚಿತವಾಗಿ ಕೆರೆಗೆ ಪ್ರವೇಶಿಸಕೂಡದೆಂಬ ಸರ್ಕಾರದ ಆದೇಶವನ್ನು ತಿಳಿಸಿದರು. ಈ ಬಿಗುವಿನ ವಾತಾವರಣದಲ್ಲಿ ಕೊನೆಗೆ ಅಂಬೇಡ್ಕರ್ ಸತ್ಯಾಗ್ರಹಗಳನ್ನು ಉದ್ದೇಶಿಸಿ ಮಾತಾಡಬಹುದು ಮತ್ತು ಸತ್ಯಾಗ್ರಹ ಶಿಬಿರದಲ್ಲಿ ಕಲಾಪಗಳನ್ನು ನಡೆಸಬಹುದೆಂಬ ತೀರ್ಮಾನಕ್ಕೆ ಬರಲಾಯಿತು. ಸರ್ಕಾರ ಮತ್ತು ಸವರ್ಣೀಯರ ವಿರೋಧದ ನಡುವೆ ಒಂಟಿಯಾದ ಅಂಬೇಡ್ಕರ್ ನಾಗರಿಕರೆನಿಸಿಕೊಂಡ ಸವರ್ಣೀಯರಿಂದ ಮತ್ತು ಭಾರತದಲ್ಲಿ ನಾಗರಿಕ ಸರಕಾರದ ಸ್ಥಾಪನೆಯೇ ತನ್ನ ಗುರಿಯೆಂದು ಘೋಷಿಸಿಕೊಂಡಿದ್ದು ಬ್ರಿಟಿಷ್ ಸರ್ಕಾರದಿಂದ ಸಂಭವಿಸಬಹುದಾದ ಹಿಂಸೆ, ಹಲ್ಲೆಗಳಿಂದ ತನ್ನ ಅಸಹಾಯಕ ಸಮುದಾಯವನ್ನು ರಕ್ಷಿಸಿಕೊಳ್ಳಲು ಸತ್ಯಾಗ್ರಹವನ್ನು ಹಿಂದಕ್ಕೆ ಪಡೆದರು. ನಾವು ಈ ಕೆರೆಯ ನೀರನ್ನು ಕುಡಿಯದಿದ್ದರೆ ನಾಶವಾಗಿಯೇನು ಹೋಗುವುದಿಲ್ಲ, ಬದಲಿಗೆ ನಾವು ಈ ಕೆರೆಗೆ ಪ್ರವೇಶಿಸಬೇಕೆನ್ನುವುದು, ಅಸ್ಪೃಶ್ಯರು ಸಹ ಮನುಷ್ಯರೇ ಎನ್ನುವುದನ್ನು ಸಾಬೀತುಮಾಡಲು ಮಾತ್ರವೇ ಎಂದು ಸಾರಿದರು. ಇಲ್ಲೆ ಮನುಸ್ಮೃತಿಯನ್ನು ಸುಟ್ಟು ಮನುಸ್ಮೃತಿ ಅನ್ಯಾಯದ ಗುರುತೆಂದು ಮತ್ತು ಅದರ ಅಡಿಯಲ್ಲಿ ಯುಗ ಯುಗಾಂತರಗಳಿಂದ ಅಸ್ಪೃಶ್ಯರನ್ನು ಸದೆಬಡಿಯಲಾಗಿದೆ. ದಮನಕ್ಕೀಡುಮಾಡಿ ಧ್ವನಿಯೆತ್ತಲಾಗದ ಬಡತನಕ್ಕೀಡು ಮಾಡಲಾಗಿದೆ ಎಂದೂ ಸಾರಿದರು. ಮಹಾಡ್‌ನಲ್ಲಿ ಜಲಮೂಲಗಳ ಮೇಲಿನ ನಿರ್ಬಂಧವನ್ನು ತೊಡೆದು ಹಾಕಲು ಪ್ರಯತ್ನಿಸಿದ ಅನಂತರ ಅಂಬೇಡ್ಕರ್ 1930ರ ದಶಕದಲ್ಲಿ ದೇಶದಲ್ಲಿ ತೀವ್ರವಾಗಿ ಚರ್ಚೆಯಾಗುತ್ತಿದ್ದ ಅಸ್ಪೃಶ್ಯರ ದೇವಾಲಯ ಪ್ರವೇಶದ ಪ್ರಶ್ನೆಯನ್ನು ಕೈಗೆತ್ತಿಕೊಂಡರು. ದೇವಾಲಯಗಳು ಯಾವುದೇ ಒಂದು ಸಮುದಾಯದ ಅಥವಾ ಯಾವುದೇ ವ್ಯಕ್ತಿಯ ಸ್ವತ್ತುಗಳಲ್ಲ. ಅವು ಇಡಿ ಶಹಿಂದು ಸಮುದಾಯಗಳ ಒಟ್ಟು ದುಡಿಮೆಯ ಆಧಾರದ ಮೇಲೆ ನಿರ್ಮಿಸಲ್ಪಟ್ಟಿವೆ. ಆದ್ದರಿಂದ ಅವುಗಳು ಸಾರ್ವಜನಿಕ ಆಸ್ತಿ, ಎಲ್ಲರಿಗೂ ಅಲ್ಲಿ ಸಮಾನ ಅವಕಾಶವಿರಬೇಕು ಎಂದು ಪ್ರತಿಪಾದಿಸಿದರು. ನಾಸಿಕದಲ್ಲಿರುವ ಕಾಲಾರಾಮ್ ದೇವಾಲಯದೊಳಕ್ಕೆ ಅಸ್ಪೃಶ್ಯರು ಪ್ರವೇಶಿಸಲು ಅನುವು ಮಾಡಿಕೊಡಬೇಕೆಂದು ಸವರ್ಣೀಯರ ಮನಃ ಪರಿವರ್ತನೆಗಾಗಿ ಸತ್ಯಾಗ್ರಹ ನಡೆಸಿದರು. ಅಸ್ಪೃಶ್ಯರ ದೇವಾಲಯ ಪ್ರವೇಶಾತಿಯ ಬಗ್ಗೆ ಅಂಬೇಡ್ಕರ್‌ರವರಿಗೆ ಅಂಥ ಒಲವೇನೂ ಇರಲಿಲ್ಲ. ಆದರೂ ಅವರ ಗುರಿ ಧಾರ್ಮಿಕ ವಲಯದಲ್ಲಿ ಸಮಾನತೆಯನ್ನು ಸ್ಥಾಪಿಸಬೇಕೆನ್ನುವುದೇ ಆಗಿತ್ತು. ಇಲ್ಲಿ ಅವರು ಸವರ್ಣೀಯರಿಂದ ಅಪಾರವಾದ ವಿರೋಧ, ಪ್ರಾಣಬೆದರಿಕೆಗಳನ್ನು ಎದುರಿಸಬೇಕಾಯಿತು. ಬ್ರಿಟಿಷ್ ಸರ್ಕಾರವಂತೂ ಈ ವಿಷಯದಲ್ಲಿ ಯಥಾಸ್ಥಿತಿ ವಾದವನ್ನೆ ಮುಂದುವರೆಸಿತು. ಈ ವಿದ್ಯಮಾನಗಳನ್ನು ಗಮನಿಸಿದ ಅಂಬೇಡ್ಕರ್‌ರವರಿಗೆ ಹಿಂದುಗಳ ಮನಃ ಪರಿವರ್ತನೆಯ ಮೂಲಕ ಅಸ್ಪೃಶ್ಯರ ಏಳಿಗೆಯ ಕನಸು ನನಸಾಗಲಾರದೆಂಬ ವಿಷಯ ಸ್ಪಷ್ಟವಾಗಿ ಅರಿವಾಯಿತು. ದೇವಾಲಯ ಪ್ರವೇಶಾತಿಯಂಥ ವಿಷಯಗಳು ಅನಗತ್ಯವಾಗಿ ತಮ್ಮ ಅಮೂಲ್ಯವಾದ ಸಮಯವನ್ನು ಹಾಳು ಮಾಡುತ್ತಿವೆ. ಅಸ್ಪೃಶ್ಯ ಸಮುದಾಯಕ್ಕೆ ಮೊದಲು ಬೇಕಾಗಿರುವುದು ವಿದ್ಯೆ, ಸರಕಾರಿ ನೌಕರಿಗಳಲ್ಲಿ ಮೀಸಲಾತಿ ಮತ್ತು ರಾಜಕೀಯ ಹಕ್ಕುಗಳೇ ಹೊರತು ದೇವಾಲಯಗಳ ಪ್ರವೇಶ ಮುಖ್ಯವಲ್ಲವೆಂದರಿತು ಪಾರ್ಲಿಮೆಂಟರಿ ಪ್ರಜಾಸಕ್ತಿಯ ಸ್ಥಾಪನೆಯತ್ತ ತೀವ್ರ ಪ್ರಯತ್ನ ನಡೆಸಿದರು.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಆಂತರಿಕವಾಗಿ ಸಾಮಾಜಿಕ ಸಮಾನತೆಯ ತಳಹದಿಯ ಮೇಲಿರಬೇಕು ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ಮೇಲೆ ರಾಜಕೀಯ ಸ್ವಾತಂತ್ರ್ಯ ಬರಬೇಕೆನ್ನುವುದು ಅವರ ದೃಢ ನಿಲುವಾಗಿತ್ತು. ಈ ಆಶಯಗಳನ್ನು ಹೊತ್ತು ಅಂಬೇಡ್ಕರ್ 1930ರ ಅನಂತರ ಒಬ್ಬ ಸಾಮಾಜಿಕ ಕ್ರಾಂತಿಕಾರಿಯಾಗಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. ಮುಂದಿನ ಒಂದು ದಶಕದವರೆಗೆ ಭಾರತದ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಇವರ ಪ್ರಭಾವ ಗಾಢವಾಗಿ ಅಚ್ಚೊತ್ತಿದೆ.

ಭಾರತದ ರಾಷ್ಟ್ರೀಯ ಆಂದೋಳನದ ಇತಿಹಾಸದಲ್ಲಿ ಕಳೆದ ಶತಮಾನದ 4ನೆಯ ದಶಕ ಬಹಳ ನಿರ್ಣಾಯಕವಾದ ಕಾಲ. ರಾಷ್ಟ್ರೀಯ ಕಾಂಗ್ರೆಸ್ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಮುನ್ನುಗ್ಗುತ್ತಿತ್ತು. ಭಾರತೀಯ ಸಮಾಜದಲ್ಲಿದ್ದ ದಲಿತ–ಶೋಷಿತರು, ಅಲ್ಪಸಂಖ್ಯಾತರು ಎಚ್ಚರಗೊಂಡು ತಮ್ಮ ವಿಮೋಚನೆಗೆ ಹೋರಾಡುತ್ತಿದ್ದರು. ಮಹಮ್ಮದ್ ಆಲಿ ಜಿನ್ನಾ ಮುಸ್ಲಿಂ ಸಮುದಾಯಕ್ಕೆ ಕೋಮು ಆಧಾರದ ಮೇಲೆ ರಾಜಕೀಯದಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ತಮ್ಮ ವಾದವನ್ನು ಸರ್ಕಾರದ ಮುಂದೆ ಮಂಡಿಸುತ್ತಿದ್ದರು. ಬ್ರಿಟಿಷರಿಗೂ ತಮ್ಮ ಯೂನಿಯನ್ ಜಾಕ್ ಧ್ವಜ ಇನ್ನೂ ಹೆಚ್ಚು ಕಾಲ ಭಾರತದ ಬಾನಂಗಳದಲ್ಲಿ ಹಾರಾಡಲಾರದೆಂಬ ಸತ್ಯ ಸಹ ಈ ಕಾಲದಲ್ಲೆ ಅರಿವಾಗಿ ಹೋಗಿತ್ತು. ಆದರೂ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯನ್ನೇನೂ ಕೈ ಬಿಟ್ಟಿರಲಿಲ್ಲ. ತಾವು ನಿರ್ಗಮಿಸುವ ಹೊತ್ತಿಗೆ ಕೊನೆಯ ಪಕ್ಷ ದೇಶವನ್ನು ಅನೇಕ ಭಾಗಗಳನ್ನಾಗಿ ಒಡೆಯಬೇಕೆನ್ನುವುದು ಬ್ರಿಟಿಷರ ಆಲೋಚನೆಯಾಗಿತ್ತು. ಒಂದೇ ಸಮನೆ ಏರುತ್ತಿದ್ದ ಮಹಾತ್ಮ ಗಾಂಧೀಜಿಯವರ ಜನಪ್ರಿಯತೆ ಮತ್ತು ಕಾಂಗ್ರೆಸ್ ಚಳವಳಿ ಜನಸಮೂಹದ ಚಳವಳಿಯಾಗಿ ಪರಿವರ್ತನೆಯಾಗುತ್ತಿದ್ದ ಅಂಶ ಬ್ರಿಟಿಷರಲ್ಲಿ ಅಸ್ಥಿರತೆಯನ್ನು ಹುಟ್ಟಿಸಿತ್ತು. ಬಲಿಷ್ಠವಾಗುತ್ತಿರುವ ರಾಷ್ಟ್ರೀಯ ಚಳವಳಿಗೊಂದು ತಡೆಹಾಕಲು ಬ್ರಿಟಿಷರು, ದೇಶಿಯ ರಾಜರ ಸ್ಥಾನಮಾನ, ಮುಸ್ಲಿಂ ಸಮುದಾಯ, ದಲಿತ–ಶೋಷಿತರ ಮತ್ತು ಅಲ್ಪ ಸಂಖ್ಯಾತರ ಸ್ಥಾನಮಾನಗಳ ಬಗೆಗಿನ ಪ್ರಶ್ನೆಗಳನ್ನು ರಾಷ್ಟ್ರ ರಾಜಕಾರಣದಲ್ಲಿ ಬೆರೆಸಿದರು. ದೇಶದ ರಾಜಕೀಯ ರಂಗ ಗೊಂದಲದ ಗೂಡಾಯಿತು. ಬ್ರಿಟಿಷರ ಇಷ್ಟಾರ್ಥ ತಕ್ಕಮಟ್ಟಿಗೆ ಸಿದ್ಧಿಸಿತು. ಗಾಂಧೀಜಿಯವರು ಸಹ ದಂಡಿಯ ಯಾತ್ರೆಯ ಅನಂತರ ಈ ಗೊಂದಲಗಳನ್ನು ಎಲ್ಲ ಸಮುದಾಯಗಳ ನಾಯಕರೊಂದಿಗೆ ಕುಳಿತು ಮಾತುಕತೆ ಸಂಧಾನದ ಮೂಲಕ ಪರಿಹರಿಸಿಕೊಳ್ಳುವ ಆಶಯವನ್ನು ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ದುಂಡುಮೇಜಿನ ಪರಿಷತ್ತನ್ನು ಕೂಡಿಸಬೇಕೆಂಬ ಆಲೋಚನೆ ಬಂದಿತು. ಬ್ರಿಟಿಷ್ ಸರಕಾರ 1931–33ರವರೆಗೆ ಲಂಡನ್ನಿನಲ್ಲಿ ಮೂರು ದುಂಡು ಮೇಜಿನ ಸಭೆಗಳಿಗೆ ವ್ಯವಸ್ಥೆ ಮಾಡಿತು.

ಈ ಮೂರು ಸಭೆಗಳಿಗೆ ಬ್ರಿಟಿಷ್ ಸರ್ಕಾರ ಅಂಬೇಡ್ಕರ್ ಅವರನ್ನು ಆಹ್ವಾನಿಸಿ ಅಸ್ಪೃಶ್ಯ ಶೋಷಿತ ಸಮುದಾಯಗಳ ಪರವಾಗಿ ಅವುಗಳ ಸ್ಥಾನಮಾನಗಳು, ಹಕ್ಕು ಬಾಧ್ಯತೆ ಬಗ್ಗೆ ಚರ್ಚಿಸಿ ಸಲಹೆ ನೀಡಲು ಸೂಚಿಸಿತು. ಈ ಆಹ್ವಾನವನ್ನು ಒಪ್ಪಿಕೊಂಡರೂ ಬ್ರಿಟಿಷರ ಎಲ್ಲ ಕುತಂತ್ರಗಳನ್ನು ಸಾಮ್ರಾಜ್ಯಶಾಹಿಯ ಒಡೆದು–ಆಳುವ ನೀತಿಯ ಎಲ್ಲ ಮಗ್ಗಲುಗಳನ್ನು ಚೆನ್ನಾಗಿ ಬಲ್ಲವರಾಗಿದ್ದ ಅಂಬೇಡ್ಕರ್ ಒಬ್ಬ ಅಪೂರ್ವ ರಾಷ್ಟ್ರೀಯವಾದಿಯಾಗಿದ್ದರು. ಅನನ್ಯ ದೇಶಭಕ್ತರಾದ ಇವರಿಗೆ ಒಂದೇ ಒಂದು ಬಲವಾದ ಅನುಮಾನವೆಂದರೆ ಸವರ್ಣೀಯ ಹಿಂದುಗಳು. ಬ್ರಿಟಿಷರು ಭಾರತದಿಂದ ತೆರಳಿದ ಮೇಲೆ ಶೋಷಿತ ಸಮುದಾಯಗಳನ್ನು ಬಗ್ಗು ಬಡಿಯುತ್ತಾರೆ ಎನ್ನವುದೇ ಆಗಿತ್ತು. ಇದು ಸಕಾರಣೀಕವಾದದ್ದೂ ಆಗಿತ್ತು. ಆದುದರಿಂದಲೇ ಬ್ರಿಟಿಷರಿದ್ದಾಗಲೇ ಸಂವಿಧಾನಿಕ ಪಟ್ಟುಗಳಿಂದ ಸವರ್ಣೀಯ ಹಿಂದುಗಳನ್ನು ಮಣಿಸಿ ಅವರಿಂದ ಶೋಷಿತ ವರ್ಗಗಳ ಸಾಮಾಜಿಕ ಸಮಾನತೆಗೆ ಮಾನ್ಯತೆ ಪಡೆಯಬೇಕೆನ್ನುವುದು ಅಂಬೇಡ್ಕರ್ ಅವರ ಆಲೋಚನೆಯಾಗಿತ್ತು. ಇದಕ್ಕಿಂತಲೂ ಮಿಗಿಲಾಗಿ ನವಭಾರತದ ನಿರ್ಮಾಣದ ಮೂಲದಲ್ಲಿ ಸಾಮಾಜಿಕ ಸಮಾನತೆ–ಸಾಮಾಜಿಕ ನ್ಯಾಯಗಳಂತಹವು ಇದ್ದೇ ಇರಬೇಕು. ಸಮಾನತೆಯಿರದೆ ರಾಜಕೀಯ ಸ್ವಾತಂತ್ರ್ಯ ಬಹುಕಾಲ ಬಾಳಲಾರದು ಎಂಬುದು ಇವರ ಖಚಿತ ಅಭಿಪ್ರಾಯವಾಗಿತ್ತು. ಈ ಅಂಶಗಳ ಹಿನ್ನೆಲೆಯಲ್ಲೆ ಇವರು ಆಗ ದೇಶದಲ್ಲಿ ನಡೆಯುತ್ತಿದ್ದ ಸಾಂವಿಧಾನಿಕ ಬೆಳವಣಿಗೆಗಳಲ್ಲಿ ಶೋಷಿತ ಸಮುದಾಯಗಳ ಸಮಾನತೆಯ ವಿಷಯವನ್ನು ಅತ್ಯಾವಶ್ಯಕವಾಗಿ ಪರಿಗಣಿಸಲೇಬೇಕಾದ ಒಂದು ಸಂವಿಧಾನಿಕ ಅಂಶವನ್ನಾಗಿ ಸೇರಿಸಲು ದುಂಡುಮೇಜಿನ ಪರಿಷತ್‌ಗಳನ್ನು ಬಳಸಿಕೊಳ್ಳಲು ಯೋಚಿಸಿದರು. ಇದೊಂದು ವಿಶಿಷ್ಟವಾದ ಸಂದರ್ಭ. ಒಂದು ಕಡೆ ಜಾತೀಯತೆಯನ್ನನುಸರಿಸುವ ಮನಃ ಪರಿವರ್ತನೆಗಾಗಿ ನಿಂತ ಗಾಂಧಿ ಇನ್ನೊಂದು ಕಡೆ ಗಾಂಧಿಯವರ ಕರೆಗೆ ಅರೆ ಮನಸ್ಸಿನಿಂದ

ಮುಖ ತಿರುಗಿಸುತ್ತಿದ್ದ ಜೊತೆಗೆ ಎಲ್ಲವನ್ನೂ ಭಕ್ಷಿಸಲು ಕಾದು ಕುಳಿತಿದ್ದ ಬ್ರಿಟಿಷರು, ಇಲ್ಲೆ ಈ ಎಲ್ಲವುಗಳ ಮಧ್ಯೆಯೇ ಅಂಬೇಡ್ಕರ್ ತಮ್ಮ ಹಾದಿಯನ್ನು ಸುಗಮಗೊಳಿಸಿಕೊಳ್ಳಬೇಕಾಗಿತ್ತು. ಮೊದಲನೆಯ ದುಂಡುಮೇಜಿನ ಸಮ್ಮೇಳನ ಹೆಚ್ಚಿನದ್ದೇನನ್ನೂ ಸಾಧಿಸಲಿಲ್ಲ. ಇದು ಮುಂದಿನ ಸಮ್ಮೇಳನಕ್ಕೆ ಪೂರ್ವಭಾವಿ ತಯಾರಿಯಂತಿತ್ತು. ಎರಡನೆಯ ದುಂಡುಮೇಜಿನ ಸಮ್ಮೇಳನದಲ್ಲಿ ಅಂಬೇಡ್ಕರ್ ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ನೀಡಬೇಕೆಂದು ಪುರಾವೆಗಳ ಸಮೇತ ತಮ್ಮ ವಾದವನ್ನು ಮಂಡಿಸಿ, ಬ್ರಿಟಿಷ್ ಪ್ರಧಾನಿ ರಾಮ್ಸೆ ಮೆಕ್‌ಡೊನಾಲ್ಡ್‌ರಷ್ಟೇ ಅಲ್ಲದೆ ಇಂಗ್ಲೆಂಡಿನ ಬುದ್ಧಿಜೀವಿ ವರ್ಗದಲ್ಲೂ ಭಾರತದ ಅಸ್ಪೃಶ್ಯರ ದಯನೀಯ ಸ್ಥಿತಿಯ ಬಗ್ಗೆ ಸಹಾನುಭೂತಿ, ಅನುಕಂಪಗಳನ್ನು ಗಳಿಸಿದರು. ಈ ದಿಶೆಯಲ್ಲಿ ಲಂಡನ್ನಿನ ಪತ್ರಿಕೆಗಳು ಅಂಬೇಡ್ಕರ್ ಅವರನ್ನು ಬಹುವಾಗಿ ಪ್ರಶಂಸಿಸಿದವು. ಅವರನ್ನು ಅಪ್ರತಿಮ ಮೇಧಾವಿ, ಅಪಾರ ಬದ್ಧತೆಯುಳ್ಳ, ಶುದ್ಧಾಂತಃಕರಣದಿಂದ ತುಳಿತಕ್ಕೊಳಗಾದ ಸಮುದಾಯಗಳನ್ನು ಮುನ್ನಡೆಸುತ್ತಿರುವ ಮಹಾನ್ ನಾಯಕ, ನಂಬಿರುವ ತತ್ತ್ವಗಳನ್ನು ಎಂದೂ ಬಿಡದ ವ್ಯಕ್ತಿತ್ವವುಳ್ಳ ತೇಜಸ್ವಿನಾಯಕನೆಂದು ಸಂಡೆ ಕ್ರಾನಿಕಲ್ ಪತ್ರಿಕೆ (1931 ಜುಲೈ) ಅನಂತರ ಪ್ರಕಟಿಸಿತು.

ದುಂಡುಮೇಜಿನ ಪರಿಷತ್ತಿನ ಅಲ್ಪ ಸಂಖ್ಯಾತ ಸಮಿತಿಯ ಅಧ್ಯಕ್ಷರಾಗಿದ್ದ ಬ್ರಿಟನ್ ಪ್ರಧಾನಿ ರಾಮ್ಸೆ ಮೆಕ್ ಡೋನಾಲ್ಡ್ 1932 ಆಗಸ್ಟ್ ತಿಂಗಳಲ್ಲಿ ಭಾರತದ ಅಸ್ಪೃಶ್ಯ–ಶೋಷಿತ ಸಮುದಾಯಗಳಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ನೀಡಿ 71 ಸ್ಥಾನಗಳನ್ನು ಅಸ್ಪೃಶ್ಯ ಶೋಷಿತರಿಗೆ ಪ್ರಾಂತೀಯ ಮತ್ತು ಕೇಂದ್ರ ಸಭೆಗಳಲ್ಲಿ ಮೀಸಲಾಗಿರಿಸಿದರು. 71 ಸ್ಥಾನಗಳು ಅಂದರೆ ಮತಕ್ಷೇತ್ರಗಳನ್ನು ಹೆಚ್ಚಾಗಿ ಅಸ್ಪೃಶ್ಯ ಶೋಷಿತರೇ ವಾಸಿಸುತ್ತಿದ್ದ ಪ್ರದೇಶಗಳನ್ನು ಕೇಂದ್ರವನ್ನಾಗಿರಿಸಿಕೊಂಡು ರಚಿಸಲು ನಿರ್ಧರಿಸಲಾಗಿತ್ತು. ಈ ಪ್ರತ್ಯೇಕ ಮತದಾನದ ಹಕ್ಕಿನಲ್ಲಿ ಅಸ್ಪೃಶ್ಯ–ಶೋಷಿತರು ಎಂದು ಮತಗಳನ್ನು ಪಡೆದುಕೊಂಡರು. ಇವುಗಳಲ್ಲಿ ಒಂದು ಅಸ್ಪೃಶ್ಯರು ಸಾಮಾನ್ಯ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದರೆ ಅವರು ಅಲ್ಲಿಯೇ ಸ್ಪರ್ಧೆಯಲ್ಲಿರುವ ಉಮೇದುವಾರನಿಗೆ ಮತ ಚಲಾಯಿಸುವ ಹಕ್ಕು, ಇನ್ನೊಂದು ಹಕ್ಕಿನಲ್ಲಿ ಅಸ್ಪೃಶ್ಯ ಶೋಷಿತರು ಉದ್ದೇಶಿತ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸುವ ತಮ್ಮ ಸಮುದಾಯಕ್ಕೆ ಸೇರಿದ ಅಭ್ಯರ್ಥಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುವುದು. ಈ ಪ್ರತ್ಯೇಕ ಮತದಾನದ ಹಕ್ಕಿನ ವೈಶಿಷ್ಟ್ಯತೆಯೆಂದರೆ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸುವ ಅಭ್ಯರ್ಥಿಯನ್ನು ಮತದಾನಕ್ಕೆ ಅರ್ಹರಾದ ಅಸ್ಪೃಶ್ಯ–ಶೋಷಿತರು ಮಾತ್ರವೇ ಚುನಾಯಿಸುವಂತಹದ್ದು ಸಾಂವಿಧಾನಿಕ ಮಾರ್ಗೋಪಾಯಗಳಿಂದ ಶೋಷಿತ ಸಮುದಾಯಗಳನ್ನು ಸವರ್ಣೀಯರಿಂದ ರಕ್ಷಿಸಿಕೊಳ್ಳಬೇಕು ಎನ್ನುವ ಅಂಬೇಡ್ಕರ್ ಆಶಯ ಫಲಿಸಿತು. ಆದರೆ ಮಹಾತ್ಮ ಗಾಂಧೀಜಿಯವರು ಈ ಬೆಳವಣಿಗೆಗಳಿಂದ ಅಸಮಾಧಾನಗೊಂಡು, ಬ್ರಿಟಿಷರ ತೀರ್ಮಾನವನ್ನು ವಿರೋಧಿಸಿದರು. ಇವರು 1932 ಮಾರ್ಚಿನಲ್ಲಿಯೇ ಅಸ್ಪೃಶ್ಯ ಶೋಷಿತ ಸಮುದಾಯಗಳಿಗೇನಾದರೂ ಪ್ರತ್ಯೇಕ ಮತದಾನದ ಹಕ್ಕನ್ನೇನಾದರೂ ಕೊಟ್ಟರೆ ಅದನ್ನು ತಮ್ಮ ಪ್ರಾಣವನ್ನೆ ಪಣಕ್ಕಿಟ್ಟು ವಿರೋಧಿಸುತ್ತೇನೆ ಎಂದೇ ಸಾರಿದ್ದರು. ಪ್ರತ್ಯೇಕ ಮತದಾನದ ಹಕ್ಕನ್ನು ಪಡೆದು ಅಸ್ಪೃಶ್ಯ–ಶೋಷಿತ ಸಮುದಾಯಗಳು ಒಟ್ಟು ಹಿಂದು ಸಮಾಜದಿಂದ ದೂರ ಸರಿದರೆ ಅವುಗಳು ಒಂಟಿಯಾಗಿ ಮತ್ತಷ್ಟು ಹಿಂಸೆ, ಶೋಷಣೆಗೆ ಗುರಿಯಾಗುತ್ತವೆ ಎನ್ನುವುದು ಇವರ ಆತಂಕವಾಗಿತ್ತು. ಈ ಹಕ್ಕಿನ ಮೂಲಕ ಹಿಂದು ಸಮಾಜದ ಸವರ್ಣೀಯರು ಮತ್ತು ಶೋಷಿತ ಸಮುದಾಯಗಳು ಪರಸ್ಪರ ದೂರ ಸರಿಯುತ್ತವೆ. ಇದರಿಂದ ಬ್ರಿಟಿಷರ ಒಡೆದು ಆಳುವ ನೀತಿ ಫಲಿಸಿ ರಾಷ್ಟ್ರೀಯ ಚಳವಳಿಗೆ ಪೆಟ್ಟು ಬೀಳುತ್ತದೆ ಎನ್ನುವುದು ಅವರ ಆಲೋಚನೆಯಾಗಿತ್ತು. ಅಲ್ಲದೆ ಅಸ್ಪೃಶ್ಯತೆ ಹಿಂದು ಸಮಾಜಕ್ಕಂಟಿದ ಶಾಪ ಅದನ್ನು ಸವರ್ಣೀಯರೇ ತೊಡೆದು ಹಾಕಬೇಕು, ಇದು ಸಾಧ್ಯವಾಗಬೇಕಾದರೆ ಸವರ್ಣೀಯರು ಮತ್ತೆ ಅಸ್ಪೃಶ್ಯ ಸಮುದಾಯಗಳು ದೂರಸರಿಯಕೂಡದು ಎನ್ನುವುದು ಇವರ ಧೃಡವಾದ ಅಭಿಪ್ರಾಯವೂ ಆಗಿತ್ತು. ಗಾಂಧೀಜಿಯವರ ಈ ವಿರೋಧದ ಹಿನ್ನೆಲೆಯನ್ನು ಕುರಿತು ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ಸಾವಿರಾರು ಪುಟಗಳಷ್ಟು ಸಾಹಿತ್ಯ ರಚಿತವಾಗಿದೆ.

ಗಾಂಧೀಜಿಯವರು ಯರವಾಡ ಜೈಲಿನಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದರು. ದೇಶದ ಮೂಲೆ ಮೂಲೆಗಳಿಂದ ಗಾಂಧೀಜಿಯವರ ಜೀವವುಳಿಸಬೇಕೆಂದು ಕಾಳಜಿಪೂರ್ವಕವಾದ ಒತ್ತಾಯಗಳು ಮತ್ತು ಅಂಬೇಡ್ಕರ್‌ರವರ ವಿರುದ್ಧ ವ್ಯಕ್ತಿಗತ ನಿಂದನೆ, ಅಪಮಾನ, ಬೆದರಿಕೆಗಳು ಬಂದವು. ಉಪವಾಸ ಮುಂದುವರೆದಂತೆ ಅಂಬೇಡ್ಕರ್‌ರವರ ಮೇಲೆ ವಿಪರೀತ ಒತ್ತಡಗಳು ಹೇರಿಕೊಂಡವು. ಕಾಂಗ್ರೆಸ್ ನಾಯಕರಂತೂ ಈ ವಿಷಯವನ್ನು ದೇಶವ್ಯಾಪಿಯಾಗಿ ಪ್ರಸಾರ ಮಾಡಿದರು. ಗಾಂಧೀಜಿಯವರ ಆರೋಗ್ಯ ವಿಷಮಿಸತೊಡಗಿತು. ಗಾಂಧೀಜಿಯವರ ಪ್ರಾಣಕ್ಕೇನಾದರೂ ಆಪತ್ತು ಸಂಭವಿಸಿದರೆ ಅಸ್ಪೃಶ್ಯ ಸಮುದಾಯಗಳು ಅತ್ಯಂತ ಅಪಾಯಕಾರಿ ಸನ್ನಿವೇಶಕ್ಕೀಡಾಗುವುದು ವಾಸ್ತವ ಸಂಗತಿಯಾಗಿತ್ತು. ಜೊತೆಗೆ ಆಳದಲ್ಲಿ ಅತ್ಯಂತ ಮಾನವೀಯ ಅಂತಃಕರಣಿಯಾಗಿದ್ದ ಅಂಬೇಡ್ಕರ್‌ರವರಿಗೆ ಗಾಂಧೀಜಿಯವರ ಪ್ರಾಣಕ್ಕೆ ಅಪಾಯವುಂಟು ಮಾಡುವುದು ಇಷ್ಟವಾದ ಸಂಗತಿಯಾಗಿರಲಿಲ್ಲ. ಉಭಯ ನಾಯಕರು ಒಪ್ಪಂದಕ್ಕೆ ಬರಲು ಸಮ್ಮತಿಸಿದರು. 1932 ಸೆಪ್ಟೆಂಬರ್ 24 ರಂದು ಪೂನ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದದ ಪ್ರಕಾರ ಪ್ರತ್ಯೇಕ ಮತದಾನದ ಹಕ್ಕು, ಅಂದರೆ ದುಂಡುಮೇಜಿನ ಪರಿಷತ್ತಿನಲ್ಲಿ ಶೋಷಿತ ಸಮುದಾಯಗಳಿಗೆ ಕೊಟ್ಟಿದ್ದ ಎರಡು ಮತಗಳನ್ನು ಬಿಟ್ಟುಕೊಡಬೇಕಾಯಿತು. ಪ್ರತಿಯಾಗಿ ಕಾಂಗ್ರೆಸ್ ಬ್ರಿಟಿಷ್ ಸರಕಾರ ಅಸ್ಪೃಶ್ಯರಿಗೆ ಕೊಟ್ಟಿದ್ದ 71 ಸ್ಥಾನಗಳಿಗಿಂತಲೂ ಹೆಚ್ಚಿಗೆ ಅಂದರೆ 148 ಸ್ಥಾನಗಳನ್ನು ಪ್ರಾಂತೀಯ ಸಭೆಗಳಲ್ಲಿ ಮೀಸಲಾಗಿಡಲು ಒಪ್ಪಿಕೊಂಡಿತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ಒಪ್ಪಂದಕ್ಕೆ ಸಹಿ ಹಾಕಿದ ಅಂಬೇಡ್ಕರ್, ದಲಿತರಿಗೆ ಕೈಕೊಳ ಹಾಕಿ ನಿರ್ದಯಿ ಸವರ್ಣೀಯ ಹಿಂದುಗಳ ಕೈಗೆ ಕೊಟ್ಟಂತೆ ಎಂದು ಮರುಗಿದರು. ಪೂನಾ ಒಪ್ಪಂದದ ಅನಂತರ ಅಂಬೇಡ್ಕರ್ ದೀನದಲಿತ, ಕಾರ್ಮಿಕ–ಕೃಷಿ ಕೂಲಿಗಾರರನ್ನು ಸಂಘಟಿಸುವತ್ತ ಮುನ್ನಡೆದರು. 1935ರ ಸುಮಾರಿಗೆ ಭಾರತೀಯ ರೈತ ಕಾರ್ಮಿಕರು ಕಡುಕಷ್ಟಕ್ಕೆ ಸಿಕ್ಕಿದ್ದರು. ಜಾಗತಿಕ ಆರ್ಥಿಕ ಕುಸಿತದ ಪ್ರಭಾವಕ್ಕೆ ಒಳಗಾಗಿದ್ದರು. ಇವರ ಪರವಾಗಿ ಹೋರಾಟ ಮಾಡಬೇಕಾಗಿದ್ದ ಕಾಂಗ್ರೆಸ್ ಸಿರಿವಂತ ರೈತರ ಅಪ್ಪುಗೆಯಲ್ಲಿತ್ತು. ಉತ್ತರ ಪ್ರದೇಶ, ಬಿಹಾರ, ಮದರಾಸು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ನಾಯಕರು, ಜಮೀನ್ದಾರರು ಮತ್ತು ಬ್ರಿಟಿಷರೊಂದಿಗೆ ಸೇರಿ ರೈತರ ವಿರುದ್ಧವೇ ನಿಂತಿದ್ದರು. ಇಂಥ ಶೋಚನೀಯ ಸ್ಥಿತಿಯಲ್ಲಿದ್ದ ರೈತ ಕಾರ್ಮಿಕರ ನೆರವಿಗಾಗಿ ಅಂಬೇಡ್ಕರ್ ಧಾವಿಸಿದರು.

1936ರಲ್ಲಿ ದಲಿತರನ್ನು ಒಳಗೊಂಡಂತೆ ಎಲ್ಲ ಜಾತಿಯ ಬಡವರನ್ನು ಪ್ರತಿನಿಧಿಸುವ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಕಟ್ಟಿದರು. ಗ್ರಾಮೀಣ ಪರಿಸರದಲ್ಲಿದ್ದ ಅಸ್ಪೃಶ್ಯ– ಶೋಷಿತರು ಜಾತಿ–ಪಾಳೆಗಾರಿಕೆ ವ್ಯವಸ್ಥೆಯಲ್ಲಿ ನರಳುತ್ತಿರುವ ಬಗ್ಗೆ ಸ್ಪಷ್ಟ ಅರಿವಿದ್ದ ಅಂಬೇಡ್ಕರ್ ಖೋಟಿ ಮತ್ತು ವತನ್ ಪದ್ಧತಿಗಳ ರದ್ದತಿಗಾಗಿ ಹೋರಾಟವನ್ನು ಆರಂಭಿಸಿದರು. ಬಾಂಬೆ ಪ್ರಾಂತ್ಯದಲ್ಲೆಲ್ಲ ಸಂಚರಿಸಿದ ಅವರು ರೈತ ಕೃಷಿ ಕೂಲಿಗರನ್ನು ಸಂಘಟಿಸಿದರು ಈ ಪದ್ಧತಿಗಳ ರದ್ದತಿಗಾಗಿ ಒತ್ತಾಯಿಸಿ ಕರಡು ಶಾಸನವನ್ನೂ ಬರೆಸಿದರು. ಇವರು ಸರಕಾರದ ಮುಂದಿಟ್ಟಿದ್ದ ಬೇಡಿಕೆಗಳಾದ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ, ಗೇಣಿ ವಾಪಾಸಾತಿ, ಜಮೀನ್ದಾರಿ ಕಟ್, ವತನ್ ಪದ್ಧತಿಗಳ ರದ್ದತಿ ಮತ್ತು ಸಣ್ಣ ಹಿಡುವಳಿದಾರರಿಗೆ ನೀರಿನ ತೆರಿಗೆಯಲ್ಲಿ ಶೇ. 50 ರಿಯಾಯಿತಿ ಇವು ಅಂದಿನ ಸಂದರ್ಭದಲ್ಲಿ ನಿಜವಾಗಿಯೂ ಕ್ರಾಂತಿಯಾಗಿದ್ದವು. 1937ರ ಚುನಾವಣೆಯಲ್ಲಿ 15 ಸ್ಥಾನಗಳನ್ನು ಗೆದ್ದ ಸ್ವತಂತ್ರ ಕಾರ್ಮಿಕರ ಪಕ್ಷ ಬಾಂಬೆ ವಿಧಾನ ಸಭೆಯಲ್ಲಿ ಮುಖ್ಯ ವಿರೋಧ ಪಕ್ಷವಾಗಿ ಕೆಲಸ ಮಾಡಿತು. ರೈತ ಕಾರ್ಮಿಕ ಕ್ಷೇತ್ರದಲ್ಲಿ 1940ರ ಅನಂತರ ಅಂಬೇಡ್ಕರ್ ಹೆಚ್ಚು ತೊಡಗಿಸಿಕೊಂಡಂತೆ ಕಾಣುವುದಿಲ್ಲ. ಪ್ರಾಯಶಃ ಇವರು ಮಂತ್ರಿಯಾದದ್ದು ಮತ್ತು ಮಂತ್ರಿ ಪದವಿಯ ಮೂಲಕ ಸಿಕ್ಕುವ ಅಧಿಕಾರ ಬಲದಿಂದ ಅಸ್ಪೃಶ್ಯ–ಶೋಷಿತ ಸಮುದಾಯಗಳ ಏಳಿಗೆಗೆ ಅವಶ್ಯಕವಾದ ಕಾನೂನುಗಳನ್ನು ರಚಿಸಿ ಸರ್ಕಾರ ಒಪ್ಪಿಗೆ ಪಡೆಯುವ ಬಗ್ಗೆಯೇ ಮಗ್ನರಾಗಿರಬೇಕು. ಈ ದಿನಗಳಲ್ಲಿಯೇ ಇವರು ಬಾಂಬೆ ಪ್ರಾಂತ್ಯದ ಸರಕಾರಿ ಸೇವೆಗಳಲ್ಲಿ ದಲಿತರಿಗೆ ಮೀಸಲಾತಿಯನ್ನು ದೊರಕಿಸಿಕೊಟ್ಟರು. ಮುಂದಕ್ಕೆ 1946ರಲ್ಲಿ ಮೀಸಲಾತಿಯನ್ನು ಎಲ್ಲ ಕೇಂದ್ರ ಮತ್ತು ಪ್ರಾಂತೀಯ ಸರಕಾರಿ ದೇವಾಲಯಕ್ಕೆ ವಿಸ್ತರಿಸಲಾಯಿತು. ಸಕ್ರಿಯವಾಗಿ ದುಡಿಯದ ವರ್ಗಗಳೊಂದಿಗೆ ಅವರು 1940ರ ಅನಂತರ ಕಾಣದಿದ್ದರೂ ಅವರು ಕಾರ್ಲ್ ಮಾರ್ಕ್ಸರ ವಾದವನ್ನು ಎಂದೂ ಟೀಕಿಸಿಲ್ಲ. ವಿರೋಧವೆನಿಸಿದರೂ ಕಮ್ಯೂನಿಸ್ಟರ ಬಗ್ಗೆ ಮಾರ್ಕ್ಸ್‌ವಾದವನ್ನು ಅವರು ಚೈತನ್ಯಶೀಲ ವಾದದ್ದು ಎಂದೇ ಭಾವಿಸಿದ್ದರು. ಸಮಾಜದ ಆರ್ಥಿಕ ರಚನೆ ಮತ್ತು ವ್ಯಕ್ತಿ ಸ್ವಾತಂತ್ರ್ಯ ಒಂದೇ ನಾಣ್ಯದ ಎರಡು ಮುಖಗಳೆಂದು ದೃಢವಾಗಿ ನಂಬಿದ್ದ ಅವರ ಆರ್ಥಿಕ ಚಿಂತನೆಗಳು ಮತ್ತೆ ಮತ್ತೆ ಮರುಚಿಂತನೆಯನ್ನು ನಿರೀಕ್ಷಿಸುವಷ್ಟು ಪರಿಣಾಮಕಾರಿ ಯಾಗಿವೆ. ಭೂಮಿ ರಾಜ್ಯದ ಸ್ವಾಮ್ಯಕ್ಕೆ ಒಳಪಟ್ಟಿರಬೇಕು, ವಿಮೆ ಪ್ರಮುಖ ಮತ್ತು ಅತ್ಯಾವಶ್ಯಕವಾದ ಕೈಗಾರಿಕೆಗಳು ರಾಜ್ಯದ ಹತೋಟಿಯಲ್ಲಿರಬೇಕು, ಸಾಮೂಹಿಕ ಬೇಸಾಯ ಪದ್ಧತಿಗಳು ಸ್ವತಂತ್ರ ಭಾರತದ ರಾಜಕೀಯ ಅರ್ಥವ್ಯವಸ್ಥೆಯ ತಳಹದಿಯಲ್ಲಿರಬೇಕು ಎನ್ನುವುದು ಇವರ ಆಶಯವಾಗಿತ್ತು.

ಭಾರತೀಯ ಸ್ತ್ರೀ ಸಮೂಹದ ದಾಸ್ಯವನ್ನು ತೊಡೆದು ಹಾಕಲು ಇವರು ಮಾಡಿದ ಪ್ರಯತ್ನಗಳು ಜಾತಿ ವಿನಾಶ ಮತ್ತು ಅಸ್ಪೃಶ್ಯತೆ ನಿರ್ಮೂಲನೆಗಾಗಿ ನಡೆಸಿದ ಹೋರಾಟದಷ್ಟೇ ಮಹತ್ತ್ವವಾಗಿದೆ. ಸಂಸ್ಕೃತ ಮತ್ತು ಪಾಳಿ ಭಾಷೆಗಳಲ್ಲಿ ಉದ್ದಾಮ ಪಂಡಿತರಾಗಿದ್ದ ಅವರು ವೇದಗಳು, ಉಪನಿಷತ್ತುಗಳು, ಸ್ಮೃತಿಗಳು ಮತ್ತು ಇನ್ನಿತರ ವೇದ ವಾಙ್ಮಯಗಳನ್ನು ಸ್ವತಃ ಅಧ್ಯಯನ ಮಾಡಿದವರಾಗಿದ್ದರು. ಭಾರತದ ಸಮಾಜದಲ್ಲಿದ್ದ ಚಾತುರ್ವರ್ಣದ ವ್ಯವಸ್ಥೆಯನ್ನು ಕ್ರಮಬದ್ಧ ಮಾಡಿದ ಮನುವನ್ನು ಉಗ್ರವಾಗಿ ಟೀಕಿಸುತ್ತಿದ್ದರು. ಪ್ರ.ಶ.ಪೂ. ಯುಗದಲ್ಲಿ ಕೇವಲ ಸಾಮಾಜಿಕ ತತ್ತ್ವಗಳಾಗಿದ್ದ ಸ್ತ್ರೀಯರ ಮೇಲಿನ ನಿರ್ಬಂಧಗಳನ್ನು ಮನು ಪ್ರ.ಶ. ಯುಗಾರಂಭದಲ್ಲಿ ಕಾನೂನುಗಳನ್ನಾಗಿ ಮಾಡಿದ ಎಂದು ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದಾರೆ. ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ, ಈ ನಿರ್ಬಂಧದಿಂದ ಮುಕ್ತಗೊಳಿಸದಿದ್ದರೆ ನವ ಭಾರತ ನಿರ್ಮಾಣವಾಗಲಾರದು ಎನ್ನುವುದು ಅವರ ಬಲವಾದ ನಂಬಿಕೆಯಾಗಿತ್ತು. ಇವರು ಮನುವನ್ನು ಕುರಿತ ತಮ್ಮ ಪಾಂಡಿತ್ಯಪೂರ್ಣ ಟೀಕೆಗಳಿಂದಷ್ಟರಿಂದಲೇ ತೃಪ್ತರಾಗಲಿಲ್ಲ. ಹಿಂದು ಕಾನೂನು ಮಸೂದೆಯ ಕರಡು ಪ್ರತಿಯನ್ನು ರಚಿಸಿ ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸಿದರು. ವಿವಾಹ, ವಿವಾಹ ವಿಚ್ಛೇದನಾ ಜೀವನಾಂಶ ಸೂತ್ರಗಳು ಮತ್ತು ದತ್ತು ಸ್ವೀಕಾರದಂಥ ವಿಷಯಗಳಲ್ಲಿ ಸ್ತ್ರೀಯರಿಗೆ ಗರಿಷ್ಠ ಪ್ರಮಾಣದ ಸ್ವಾತಂತ್ರ್ಯ ಮತ್ತು ಹಕ್ಕುಗಳು ದೊರೆಯುವಂತೆ ನೋಡಿಕೊಂಡರು. ಹೆಣ್ಣುಮಕ್ಕಳಿಗೆ ತವರಿನ ಆಸ್ತಿಯಲ್ಲೂ ಪಾಲು ಸಿಕ್ಕಬೇಕೆನ್ನುವುದು ಇವರು ಮಂಡಿಸಿದ ಕಾನೂನಿನ ಮುಖ್ಯಾಂಶಗಳು. ಈ ಮಸೂದೆಯನ್ನು ಶ್ಯಾಮಪ್ರಸಾದ್ ಮುಖರ್ಜಿ ಮತ್ತು ಮದನ ಮೋಹನ ಮಾಳವೀಯರಂಥ ನಾಯಕರೇ ವಿರೋಧಿಸಿದರು. ಮುಖ್ಯವಾಗಿ ಸ್ತ್ರೀಯರಿಗೆ ಯೋಗ್ಯವಾದ ಶಿಕ್ಷಣ ದೊರಕಬೇಕು, ಶಿಕ್ಷಣ ಪಡೆದ ಸುರಕ್ಷಿತ ಮಹಿಳೆ ತನ್ನ ವಿಮೋಚನೆಗೆ ತಾನೇ ದಾರಿ ಮಾಡಿಕೊಳ್ಳುತ್ತಾಳೆ ಮತ್ತು ಉಳಿದ ಸ್ತ್ರೀಯರ ಮುಂದಾಳಾಗುತ್ತಾಳೆ

ಎನ್ನುವುದು ಇವರ ಆಶಯವಾಗಿತ್ತು. ಮುಂದೆ ಇವರು ನೆಹರೂ ಮಂತ್ರಿ ಮಂಡಲದಿಂದ ಹೊರಬಿದ್ದುದೂ ಈ ಹಿಂದು ಕಾನೂನು ಮಹಿಳೆಯರಿಗೆ ಕೊಡಬೇಕಾಗಿದ್ದ ನ್ಯಾಯಬದ್ಧವಾದ ಸ್ಥಾನಮಾನಗಳು, ಹಕ್ಕುಗಳ ವಿಷಯದಲ್ಲಿ ಎದ್ದ ಭಿನ್ನಮತದಿಂದಲೇ ಎನ್ನುವುದು ಮಹಿಳಾ ವಿಮೋಚನೆಯ ಬಗ್ಗೆ ಇವರಿಗಿದ್ದ ಬದ್ಧತೆಯ ಹೆಗ್ಗುರುತು.

1940 ರ ಅನಂತರ ಇವರು ರಾಜಕೀಯವಾಗಿ ಕಳೆಗುಂದಿದ್ದರು. ಇವರ ಜನಪ್ರಿಯತೆಯ ಬಹುಭಾಗವನ್ನು ಕಾಂಗ್ರೆಸ್ ಮತ್ತು ಎಡಪಂಥೀಯರು ಕಸಿದುಕೊಂಡಿದ್ದರಿಂದ ಇವರ ಪಕ್ಷ 1946ರಲ್ಲಿ ಸೋಲನ್ನು ಅನುಭವಿಸಿತು. ಕ್ರಿಪ್ಸ್ ನಿಯೋಗ ಕೂಡಾ ಇವರ ಯಾವ ಬೇಡಿಕೆಯ ಬಗೆಗೂ ಹೆಚ್ಚು ಗಮನ ಕೊಡಲಿಲ್ಲ. ಆದರೂ ಇವರ. ಶಕ್ತಿಯ ಬಗ್ಗೆ ಅರಿವಿದ್ದ ಬ್ರಿಟಿಷ್ ಸರ್ಕಾರ ಇವರನ್ನು ರಕ್ಷಣಾ ಸಲಹೆ ಸಮಿತಿಗೂ ಅನಂತರ ಕಾರ್ಮಿಕ ಮಂತ್ರಿಯನ್ನಾಗಿಯೂ ಆಯ್ಕೆ ಮಾಡಿತು. ಶಿಕ್ಷಣ ಪಡೆದಿದ್ದ ದಲಿತ ಮುಂದಾಳುಗಳು ಮಹತ್ವಾಕಾಂಕ್ಷಿಗಳಾಗಿ ಅಧಿಕಾರಕ್ಕಾಗಿ ಕಾಂಗ್ರೆಸ್‌ನತ್ತ ವಾಲುತ್ತಿದ್ದುದ್ದು ಅತಿಯಾದ ವ್ಯಥೆಯನ್ನು ತಂದಿತ್ತು. 1942 ಜುಲೈ ತಿಂಗಳಲ್ಲಿ ಇವರು ಸ್ವತಂತ್ರ ಕಾರ್ಮಿಕ ಪಕ್ಷವನ್ನು ವಿಸರ್ಜಿಸಿ ಅಖಿಲಭಾರತ ಪರಿಶಿಷ್ಟ ವರ್ಗಗಳ ಒಕ್ಕೂಟವನ್ನು ಸ್ಥಾಪಿಸಿದರು.

ರಾಜಕೀಯದ ಏಳು ಬೀಳುಗಳಲ್ಲಿ ಜರ್ಝರಿತರಾದರೂ ಇವರು ಬೌದ್ಧಿಕವಾಗಿ ಪ್ರಜ್ವಲಿಸುತ್ತಲೇ ಇದ್ದರು. 1943 ರಲ್ಲಿ ರಾನಡೆ, ಗಾಂಧಿ ಮತ್ತು ಜಿನ್ನಾ ಎನ್ನುವ ಕೃತಿಯನ್ನು ರಚಿಸಿ, ಕಾಂಗ್ರೆಸ್ ದಲಿತ–ಶೋಷಿತರಿಗೆ ಮಾಡಿದ್ದೇನು ಎಂದು ಅವರನ್ನು ತರಾಟೆಗೆ ತೆಗೆದುಕೊಂಡರು. ಕಾಂಗ್ರೆಸ್ ಸ್ವತಂತ್ರ ಭಾರತವನ್ನು ಬನಿಯಾ–ಬ್ರಾಹ್ಮಣ ಕೂಟಕ್ಕೆ ಒಪ್ಪಿಸುತ್ತದೆ ಎಂದು ದೂರಿದರು. 1946ರಲ್ಲಿ ಮತ್ತೊಂದು ಮಹತ್ತ್ವದ ಕೃತಿ ಶೂದ್ರರು–ಯಾರು? ಎಂಬುದನ್ನು ರಚಿಸಿ, ಭಾರತದಲ್ಲಿ ಬೆಳೆದ ಜಾತಿ ಪದ್ಧತಿಯನ್ನು ವಿವರಿಸಿದರು. ಜಾತಿ ಪದ್ಧತಿಯ ಬಗ್ಗೆ ಶೋಧಿಸುತ್ತಲೆ ಈ ಜಾತಿಗಳನ್ನು ವರ್ಣಗಳ ಚೌಕಟ್ಟಿನಲ್ಲಿರಿಸಿದ್ದು ಮತ್ತು ಅಸ್ಪೃಶ್ಯತೆಯನ್ನು ಸೃಷ್ಟಿಸಿದ್ದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದರು. ಋಗ್ವೇದ ಕಾಲದಿಂದ ಕೌಟಿಲ್ಯನವರೆಗೆ ಭಾರತದ ಸಮಾಜದಲ್ಲಿ ಅಸ್ಪೃಶ್ಯತೆ ಇರಲಿಲ್ಲ, ದಾಸ್ಯತ್ವಕ್ಕೂ ಅಸ್ಪೃಶ್ಯತೆಗೂ ಸಂಬಂಧವಿರಲಿಲ್ಲ.

ಪ್ರ.ಶ.ದ ಆರಂಭದ ಶತಮಾನಗಳಲ್ಲಿ ಅಸ್ಪೃಶ್ಯತೆ ಸೃಷ್ಟಿಯಾಯಿತು. ಬ್ರಾಹ್ಮಣರು ಈ ಕಾಲದ ಘಟ್ಟದಲ್ಲಿ ಅಳಿದುಳಿದಿದ್ದ ಬೌದ್ಧರ ಮೇಲೆ ಅಸ್ಪೃಶ್ಯತೆಯನ್ನು ಹೇರಿ ಅವರನ್ನು ಅಸ್ಪೃಶ್ಯರೆಂದು ಕರೆದರು ಎನ್ನುವುದನ್ನು ಸಾದರ ಪೂರ್ವಕವಾಗಿ ನಿರೂಪಿಸಿದರು. ಅಸ್ಪೃಶ್ಯರು ಮೂಲತಃ ಬೌದ್ಧ ಧರ್ಮೀಯರು ಎಂದು ಸಾಬೀತು ಪಡಿಸಿದರು. ಬ್ರಿಟಿಷರಿಂದ ಅಧಿಕಾರ ಹಸ್ತಾಂತರವಾಗಲು ಭೂಮಿಕೆ ಸಿದ್ಧವಾಗುತ್ತಿದ್ದ ದಿನಗಳಲ್ಲಿ ಇವರು ರಾಜಕೀಯವಾಗಿ ತೀವ್ರ ಹಿನ್ನಡೆಯಲ್ಲಿದ್ದರು. ಸಂವಿಧಾನ ರಚನಾ ಸಭೆಗೆ ಬಂಗಾಳದಿಂದ ಮುಸ್ಲಿಂ ಲೀಗ್ ಬೆಂಬಲದಿಂದ ಆಯ್ಕೆಯಾಗಿದ್ದರೂ ದೇಶ ವಿಭಜನೆಯಾಗಿದ್ದುದರಿಂದ ಸದಸ್ಯತ್ವ ಕಳೆದುಕೊಂಡರು. ಅನಂತರ ಬಾಂಬೆ ವಿಧಾನಸಭೆ ಇವರನ್ನು ಆರಿಸಿ ಕಳುಹಿಸಿತು. ಆದರೆ ಈ ಮಧ್ಯೆ ಸಂವಿಧಾನ ರಚನಾ ಸಭೆಗೆ ನಾಮಕರಣಗೊಂಡು ನೆಹರೂ ಮಂತ್ರಿ ಮಂಡಳದಲ್ಲಿ ಕಾನೂನು ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಭಾರತದ ಸಂವಿಧಾನದ ಕರಡು ಪ್ರತಿಯ ನಿರ್ಮಾಣ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದರು. ನವಭಾರತ ಚಿರಕಾಲ ಬಾಳಬೇಕೆನ್ನುವುದು ಇವರ ಆಶಯವಾಗಿತ್ತು. ಅದಕ್ಕಾಗಿ ಅದನ್ನು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಭದ್ರ ಬುನಾದಿಯ ಮೇಲೆ ನಿಲ್ಲಿಸಲು ಸಂವಿಧಾನವನ್ನು ರಚಿಸಿದರು. ಪ್ರಜಾಪ್ರಭುತ್ವ ಇವರಿಗೆ ಕೇವಲ ಆಡಳಿತ ಕ್ರಮವಾಗಿರಲಿಲ್ಲ, ಬದಲಾಗಿ ಅದು ಒಂದು ಜೀವನ ಕ್ರಮವಾಗಿತ್ತು. ಸಂವಿಧಾನದಲ್ಲಿ ಸಾಮಾಜಿಕ ನ್ಯಾಯ ದಲಿತ ಶೋಷಿತರಿಗೆ–ಸ್ತ್ರೀಯರಿಗೆ ಆವಶ್ಯಕವಾಗಿದ್ದ ಮೀಸಲಾತಿ, ಕಾನೂನಿನ ಸಂರಕ್ಷಣೆಗಳನ್ನು ವಿಧಿವತ್ತಾಗಿ ಹಕ್ಕುಗಳೆಂದು ಸ್ವೀಕರಿಸಿದರು. ತಮ್ಮ ಪಾಂಡಿತ್ಯ ಮತ್ತು ನೈಪುಣ್ಯಗಳಿಂದ ನೆಹರೂ ಮಂತ್ರಿ ಮಂಡಲದಲ್ಲಿ ಪ್ರತಿಗಾಮಿ ಧೋರಣೆ ಹೊಂದಿದ್ದ ಹಲವು ಮಂತ್ರಿಗಳ ವಿರೋಧದ ನಡುವೆಯೇ ಸಂವಿಧಾನದ ಕರಡು ಪ್ರತಿಯನ್ನು ಮಂಡಿಸಿದರು. ಮುಂದೆ ಸಂವಿಧಾನವನ್ನು ಅಂಗೀಕರಿಸಲಾಯಿತು. ಭಾರತವನ್ನು ಗಣರಾಜ್ಯವೆಂದು ಘೋಷಿಸಲಾಯಿತು. ಇವೆಲ್ಲದರ ಮಧ್ಯೆ ಅಂಬೇಡ್ಕರ್ ಅವರು ತೀವ್ರ ತುಮುಲಕ್ಕೊಳಗಾಗಿದ್ದರು. ಅಂತರಾಳದಲ್ಲಿ ವಿರೋಧವನ್ನು ತುಂಬಿಕೊಂಡಿದ್ದ ಸಹೋದ್ಯೋಗಿಗಳೊಂದಿಗೆ ಇವರು ನೆಹರು ಮಂತ್ರಿ ಮಂಡಲದಲ್ಲಿ ಬಹಳ ಕಾಲ ಮುಂದುವರಿಯಲಾಗಲಿಲ್ಲ. ಇವರು ಜೀವನದುದ್ದಕ್ಕೂ ವಿರೋಧಿಸುತ್ತಿದ್ದ ಶೋಷಿತವರ್ಗದವರಿಗೆ ಅಧಿಕಾರ ಹಸ್ತಾಂತರವಾಗಿತ್ತು. ಪ್ರಜಾಪ್ರಭುತ್ವದ ಸಫಲತೆಗೆ ಅವಶ್ಯಕವಾದ ನೈತಿಕತೆ, ಒಂದು ಬಲವಾದ ವಿರೋಧ ಪಕ್ಷ, ರಾಜಕೀಯ ಇಚ್ಛಾಶಕ್ತಿ ಗಳಂತಹವುಗಳ ಕೊರತೆ ಇವರಿಗೆ ಕಾಣತೊಡಗಿತು. ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಮಂತ್ರಿ ಮಂಡಲದಿಂದ ಹೊರ ಬಂದು ನಿರಾಳವಾದರು. 1953 ರಲ್ಲಿ ಚುನಾವಣೆಗೆ ಸ್ಪರ್ಧಿಸಿ ಪರಾಭವಗೊಂಡರಾದರೂ ಈ ಸೋಲೇನೂ ಇವರನ್ನು ಹೆಚ್ಚು ಕಂಗೆಡಿಸಲಿಲ್ಲ. ಇವರು ತಮ್ಮ ಜೀವನದ ಸಂಕಲ್ಪದಲ್ಲಿ ಮುಖ್ಯವಾಗಿದ್ದ ಜಾತಿ ವಿನಾಶದ ಕಡೆಗೆ ಯೋಚಿಸ ತೊಡಗಿದರು. ಹಿಂದು ಧರ್ಮದಲ್ಲಿದ್ದುಕೊಂಡೇ ಜಾತಿಯನ್ನು ನಿರ್ಮೂಲನ ಮಾಡುವುದು ಅಸಾಧ್ಯವೆಂದು ಇವರಿಗೆ ಮನವರಿಕೆಯಾಯಿತು. ಹಿಂದುಗಳು ಎಂದಿಗೂ ಮನಃಪರಿವರ್ತನೆ ಹೊಂದಿ ಅಸ್ಪೃಶ್ಯರು ಮತ್ತು ಇನ್ನಿತರ ತುಳಿತಕ್ಕೊಳಗಾದ ಸಮುದಾಯಗಳನ್ನು ಸಮಾನರೆಂದು ಪರಿಗಣಿಸಲಾರರು ಎಂಬ ತೀರ್ಮಾನಕ್ಕೆ ಬಂದರು. ಬೌದ್ಧಧರ್ಮ ಇವರಿಗೆ ವಿಮೋಚನೆಯ ದಾರಿಯಾಗಿ ಕಾಣಿಸಿತು. ಈ ಹೊತ್ತಿಗಾಗಲೇ ಬುದ್ಧನ ಉಪದೇಶಗಳು ಇವರ ದಾರಿದೀಪಗಳಾಗಿದ್ದವು. ಅಲ್ಲದೆ ಬಹು ಹಿಂದೆಯೇ ಇವರು ಹಿಂದುವಾಗಿ ಹುಟ್ಟಿದ್ದೇನೆ, ಆದರೆ ಹಿಂದುವಾಗಿ ಸಾಯಲಾರೆ ಎಂದು ಘೋಷಿಸಿದರು. 1956 ನವೆಂಬರ್ 14 ರಂದು ನಾಗಪುರದ ಚಾರಿತ್ರಿಕ ಸಮಾರಂಭದಲ್ಲಿ ಸಾವಿರಾರು ಅನುಯಾಯಿಗಳೊಂದಿಗೆ ಬೌದ್ಧ ಧರ್ಮವನ್ನು ಸೇರಿದರು. ಬುದ್ಧನ ಮಾರ್ಗವನ್ನು ಅನುಸರಿಸಿದ ಅನಂತರ ಹೆಚ್ಚುಕಾಲ ಇವರು ಬದುಕಲಿಲ್ಲ. ಶೋಷಿತ ಸಮುದಾಯಗಳ ಉದ್ಧಾರಕ್ಕಾಗಿ ಶ್ರೀಗಂಧದಂತೆ ತಮ್ಮನ್ನು ತಾವೇ ತೇಯ್ದುಕೊಂಡ ಇವರು ಅದೇ ವರ್ಷ ಡಿಸೆಂಬರ್ 6 ರಂದು ಮಹಾನಿರ್ವಾಣವನ್ನು ಹೊಂದಿದರು. ಭೌತಿಕವಾಗಿ ಅವರಿಲ್ಲದಿದ್ದರೂ ಇವರ ಅಪರೂಪದ ವ್ಯಕ್ತಿತ್ವ, ಸಾಧನೆಗಳು ಮತ್ತು ಪ್ರಖರವಾದ ವ್ಯಕ್ತಿತ್ವ ಅವರನ್ನು ಅಮರ ಗೊಳಿಸಿವೆ.

(ಎ.ಎನ್.;ಎಂ.ಟಿ.ಕೆ.)

**ಅಕಾಲಿ ಚಳವಳಿ:** ಸಿಖ್ಖರ ಧಾರ್ಮಿಕ ಮತ್ತು ರಾಜಕೀಯ ಸಂಸ್ಥೆಯಾದ ಶಿರೋಮಣಿ ಅಕಾಲಿ ದಳ ಸಿಖ್ಖರಿಗಾಗಿ ಪಂಜಾಬಿನಲ್ಲಿ ಪ್ರತ್ಯೇಕ ಸಿಖ್ಖ್ ರಾಜ್ಯಕ್ಕಾಗಿ ಹೋರಾಡಲು ಸ್ಥಾಪಿತವಾದಸಂಸ್ಥೆ. ಸಿಖ್ಖರ ಹಕ್ಕುಬಾಧ್ಯತೆಗಳನ್ನು ಕಾಪಾಡುವುದೇ ಇದರ ಮುಖ್ಯ ಧ್ಯೇಯ. ಈ ಸಂಸ್ಥೆ ಕಾಲಾನುಕ್ರಮದಲ್ಲಿ ಪಂಜಾಬಿ ಭಾಷೆಯ ಆಧಾರದ ಮೇಲೆ ಪ್ರತ್ಯೇಕ ರಾಜ್ಯಸ್ಥಾಪನೆಗೆ ಬೇಡಿಕೆಯನ್ನೊಡ್ಡಿತು. ಅಕಾಲಿದಳ ರಾಜಕೀಯ ವ್ಯವಹಾರದಲ್ಲಿ ಇಂದಿಗೂ ಕಾರ್ಯಾಚರಣೆಯಲ್ಲಿದೆ.

ಈ ಆಂದೋಲನ ಗುರುದ್ವಾರ ಸುಧಾರಣ ಚಳವಳಿ ರೂಪದಲ್ಲಿ ಪ್ರಾರಂಭವಾಗಿ ಅದಕ್ಕೆ ಮುಂಚೆ ಇದ್ದ ರಾಜಕೀಯ ಸಭಾಪಕ್ಷವನ್ನು ಮುಂದೂಡಿತು. ಸಿಖ್ ಧರ್ಮದಲ್ಲಿ ಧಾರ್ಮಿಕ ಮತ್ತು ರಾಜಕೀಯ ತತ್ತ್ವಗಳು ಒಂದನ್ನೊಂದು ಅವಲಂಬಿಸಿರುವುದೆಂದೂ ಸಿಖ್ಖರು ಪ್ರತ್ಯೇಕವಾದ ಜನಾಂಗವೆಂದೂ ತೋರಿಸುವುದೇ ಇದರ ಮುಖ್ಯ ಉದ್ದೇಶ. ಈ ಚಳವಳಿಯ ಉಗಮ 1920ರ ಗುರುದ್ವಾರ ಸುಧಾರಣಾ ಚಳವಳಿ ಕಾಲಕ್ಕೆ ಹೋಗುತ್ತದೆ. ಪ್ರಾರಂಭದಲ್ಲಿ ಇದು ಭಾಗಶಃ ಒಂದು ಸೈನಿಕಸಂಸ್ಥೆಯಾಗಿದ್ದು ಅಕಾಲಿದಳ ಎಂಬ ಹೆಸರನ್ನು ಪಡೆಯಿತು. ಈ ಸಂಸ್ಥೆಯ ಇತಿಹಾಸ ಇದರ ಶ್ರೇಷ್ಠನಾಯಕನಾದ ಯಜಮಾನ ತಾರಾಸಿಂಗನ ರಾಜಕೀಯ ಜೀವನದೊಂದಿಗೆ ಬೆಸೆದಿತ್ತು.

ಅಮೃತಸರದಲ್ಲಿರುವ ಸುವರ್ಣದೇವಾಲಯ ಅಕಾಲಿದಳದ ಕಾರ್ಯಚಟುವಟಿಕೆಗಳ ಕೇಂದ್ರಸ್ಥಾನವಾಗಿದೆ. ಇದನ್ನು ಸಿಖ್ಖರ ಮೆಕ್ಕಾ ಎಂದು ಕರೆಯಲಾಗುತ್ತದೆ. ಅಕಾಲಿದಳದ ಸದಸ್ಯತ್ವ ಸಿಖ್ ಜನಾಂಗಕ್ಕೆ ಮಾತ್ರ ಸೀಮಿತವಾಗಿದೆ. ದಳದ ಮೇಲ್ವಿಚಾರಣೆಗಾಗಿ ಒಬ್ಬ ಅಧ್ಯಕ್ಷನಿರುವನು. 1930ರಿಂದಲೂ ಯಜಮಾನ ತಾರಾಸಿಂಗ್ ತಾನು ನಿಧನನಾಗುವವರೆಗೂ (1988) ಈ ದಳದ ಅಧ್ಯಕ್ಷನಾಗಿದ್ದ. ಅಕಾಲಿದಳ ಪಂಜಾಬಿ ಸುಭಾ ಸ್ಥಾಪನೆಯ ಹೋರಾಟ ಕಾಲದಲ್ಲಿ ಅನೇಕ ದೊಡ್ಡ ದೊಡ್ಡ ಹಣಕಾಸಿನ ಸಂಸ್ಥೆಗಳಿಂದ ಸಹಾಯವನ್ನು ಪಡೆಯುತ್ತಿತ್ತು. ರಾಜಕೀಯ ಹೋರಾಟ, ಕ್ರಮೇಣ ಆಕ್ರಮಣ ನೀತಿ ಮತ್ತು ಚಳವಳಿಗಳು ಇದರ ಗುರಿ ಸಾಧನೆಯ ಮಾರ್ಗಗಳಾದವು. ಇಂಥ ಚಳವಳಿಗಳಲ್ಲಿ ಪಂಜಾಬಿ ಸುಭಾ ಸ್ಥಾಪನೆಯಾಗಿ 1955 ಮತ್ತು 1960–61ರಲ್ಲಿ ಮಾಡಿದ ಘೋಷಣೆಗಳು ಬಹು ಮುಖ್ಯವಾದುವು. ಅಕಾಲಿದಳ ತನ್ನ ಅನೇಕ ಕಾರ್ಯ ಚಟುವಟಿಕೆಗಳಲ್ಲಿ ಬಹಳ ಮಟ್ಟಿಗೆ ಯಶಸ್ಸು ಸಾಧಿಸಿತು. ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ 1966ರಲ್ಲಿ ಅಕಾಲಿದಳದವರ ಪಂಜಾಬಿ ಸುಭಾ ಬೇಡಿಕೆಯ ಮೇರೆಗೆ ಪಂಜಾಬಿ ಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಹೊಂದಿರುವ ಪ್ರತ್ಯೇಕ ಪಂಜಾಬ್ ರಾಜ್ಯಸ್ಥಾಪನೆಗೆ ಅನುಮೋದನೆ ನೀಡಿತು. ಅಂತೆಯೆ 1967ರಲ್ಲಿ ಪಂಜಾಬ್ ರಾಜ್ಯ ವಿಭಜಿಸಲ್ಪಟ್ಟು ಹರಿಯಾಣ ಮತ್ತು ಪಂಜಾಬುಗಳೆಂಬ ಎರಡು ಪ್ರತ್ಯೇಕ ರಾಜ್ಯಗಳು ಅಸ್ತಿತ್ವಕ್ಕೆ ಬಂದುವು. (ಆರ್.ಜಿ.ಎಸ್.;ಎಸ್.ಎಂ.ಎಸ್.)

**ಅಕ್ಕಮಹಾದೇವಿ:** ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿದ್ದ ಶಿವಶರಣೆ ಹಾಗೂ ಅನುಭಾವಿ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಗೆ ಹತ್ತಿರವಿರುವ ಉಡುತಡಿ ಎಂಬ ಊರಿನಲ್ಲಿ ಸುಮತಿ ಮತ್ತು ನಿರ್ಮಲಶೆಟ್ಟಿಯರಿಗೆ ಮಗಳಾಗಿ ಹುಟ್ಟಿ ಅಪೂರ್ವ ಸುಂದರ ತರುಣಿಯಾಗಿ ಬೆಳೆದಳು. ಊರಿನ ರಾಜ ಕೌಶಿಕನ ಮೋಹದೃಷ್ಟಿ ಈ ಯುವತಿಯ ಮೇಲೆ ಬಿತ್ತು. ಆತ ಜೈನ. ಈಕೆ ವೀರಶೈವ ಸಂಪ್ರದಾಯಕ್ಕೆ ಸೇರಿದವಳು. ಹೀಗಾಗಿ ಇವರಿಬ್ಬರ ನಡುವೆ ವಿವಾಹ ಸಾಧ್ಯವಿರಲಿಲ್ಲ. ಮದುವೆಗೆ ಮತ್ತೂ ಒಂದು ಅಡ್ಡಿಯಿತ್ತು – ಮೊದಲನೆಯದಕ್ಕಿಂತ ದೊಡ್ಡದು. ಕೌಶಿಕ ಲೌಕಿಕ ವ್ಯಕ್ತಿ, ಅಕ್ಕಮಹಾದೇವಿ ಅಲೌಕಿಕ ವ್ಯಕ್ತಿ. ಅವನ ವ್ಯವಹಾರವೆಲ್ಲ ಪ್ರಾಪಂಚಿಕ, ಇವಳದೋ ಆಧ್ಯಾತ್ಮಿಕ. ಆದರೆ ರಾಜನ ಬಲ, ದರ್ಪಕ್ಕೆ ಅಕ್ಕಮಹಾದೇವಿಯ ತಾಯಿ–ತಂದೆಗಳು ಮಣಿದಂತೆ ತೋರುತ್ತದೆ. ಮಹಾದೇವಿಗೆ ಮದುವೆ ಆಯಿತು ಎಂದು ಕೆಲವರೂ ಆಗಲಿಲ್ಲ ಎಂದು ಕೆಲವರೂ ವಾದಿಸುತ್ತಾರೆ. ಫಲಿತಾಂಶ ಮಾತ್ರ ಸ್ಪಷ್ಟವಾಗಿದೆ. ಅಕ್ಕ ಸಾಂಸಾರಿಕ ಜೀವನ ನಡೆಸಲಿಲ್ಲ. ಉಟ್ಟ ಉಡಿಗೆಯನ್ನೂ ತೊಟ್ಟ ತೊಡಿಗೆಯನ್ನೂ ಕಿತ್ತೆಸೆದು ನಗ್ನಳಾಗಿ, ತಲೆಗೂದಲನ್ನು ಮಾತ್ರ ಬಟ್ಟೆಯಾಗಿ ಹೊದೆದು ತನ್ನ ಇಷ್ಟದೈವವಾದ ಚೆನ್ನಮಲ್ಲಿಕಾರ್ಜುನನನ್ನು ಹುಡುಕುತ್ತ ನಡೆದಳು. ಬಸವಣ್ಣನವರ ಆಧ್ಯಾತ್ಮಿಕ ಕೀರ್ತಿಯನ್ನು ಕೇಳಿ ಕಲ್ಯಾಣವನ್ನು ಸೇರಿದಳು. ಇವಳ ತೀವ್ರವೈರಾಗ್ಯವನ್ನು, ಭಗವತ್ಪರವಾದ ಹಂಬಲವನ್ನು ಬಸವಣ್ಣ, ಅಲ್ಲಮಪ್ರಭು ಮತ್ತಿತರ ಉನ್ನತಶ್ರೇಣಿಯ

ಅನುಭಾವಿಗಳು ಹಾಡಿ ಹೊಗಳಿದರು. ಅಕ್ಕಮಹಾದೇವಿ ಕಲ್ಯಾಣದಿಂದ ಶ್ರೀಶೈಲಕ್ಕೆ ನಡೆದು ಅಲ್ಲಿ ಕದಳಿಯಲ್ಲಿ ಬಯಲಾದಳು ಎಂಬುದು ಐತಿಹ್ಯ. ಅಕ್ಕಮಹಾದೇವಿ ಅನೇಕ ವಚನಗಳನ್ನು ರಚಿಸಿದ್ದಾಳೆ. ಚನ್ನಮಲ್ಲಿಕಾರ್ಜುನ ಎಂಬುದು ಈಕೆಯ ವಚನಗಳ ಅಂಕಿತ. ಕಾವ್ಯ ಸೌಂದರ್ಯದಲ್ಲಿ, ಭಾವ ನಿರ್ಭರತೆಯಲ್ಲಿ, ಸೂಕ್ತಿ ಸದೃಶವಾದ ಪದಪುಂಜಗಳ ರಚನೆಯಲ್ಲಿ ಈಕೆಯ ವಚನಗಳಿಗೆ ಸರಿದೂಗುವ ವಚನಗಳು ಇಡೀ ವಚನಸಾಹಿತ್ಯ ರಾಶಿಯಲ್ಲಿ ಬಹಳವಾಗಿಲ್ಲ. ಲೋಕವೆಂಬ ಮಾಯೆಗೆ ಶರಣಚಾರಿತ್ರ ಮರುಳಾಗಿ ತೋರುವುದು, ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ, ಸಂತೆಯೊಳ 'ಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ, ಅತ್ತಲಿತ್ತ ಹರಿವ ಮನದ ಶಿರವನರಿದಡೆ ಬಚ್ಚ ಬರಿಯ ಬಯಲು ಚನ್ನಮಲ್ಲಿಕಾರ್ಜುನ –ಇವು ಅಕ್ಕಮಹಾದೇವಿಯ ಅಪೂರ್ವರೀತಿಯ ಮಾತಿಗೆ ಕೆಲವು ನಿದರ್ಶನಗಳು. (ಸಿ.ಪಿ.)

**ಅಕ್ಕಿ ಆಲೂರು:** ಧಾರವಾಡ ಜಿಲ್ಲೆಯ ಹಾನಗಲ್ಲು ಸಮೀಪದಲ್ಲಿರುವ ಒಂದು ಐತಿಹಾಸಿಕ ಗ್ರಾಮ. ಇಲ್ಲಿ 1977ರಲ್ಲಿ ರೋಂ ಅರಸರ 46 ಬೆಳ್ಳಿನಾಣ್ಯಗಳು ಆಕಸ್ಮಿಕವಾಗಿ ಸಿಕ್ಕಿದವು. ಇಲ್ಲಿಯ ಮುಲ್ತಾನ ಕಟ್ಟೆ ಹೊಲದಲ್ಲಿ ಉಳುತ್ತಿರುವಾಗ ಈ ಬೆಳ್ಳಿನಾಣ್ಯಗಳಿದ್ದ ಒಂದು ಮಣ್ಣಿನ ತಂಬಿಗೆ ನೀಲಪ್ಪ ಮತ್ತು ರಾಮಪ್ಪ ಇವರಿಗೆ ಸಿಕ್ಕಿತು. ಅವುಗಳನ್ನು ಜಿಲ್ಲಾ ಖಜಾನೆ ನಿರ್ದೇಶಕ ಎ.ಎಲ್. ಸಾಲಗಾಂವ್ಕರ್ ಅವರು ತಮ್ಮ ವಶಕ್ಕೆ ತೆಗೆದುಕೊಂಡು ರಾಜ್ಯದ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆಗೆ ಕೊಟ್ಟರು. ಈ ನಾಣ್ಯಗಳು ಅಗಸ್ಟಸ್ (ಪ್ರ.ಶ.ಪೂ.29–ಪ್ರ.ಶ. 14) (ಎರಡು), ಆಂಟೋನಿಯಸ್ ಪಯಸ್ (161, ಒಂದು), ಎರಡನೆಯ ಥಿಯೋಡೊಸಿಯಸ್ (408, ಹತ್ತು), ಮಾರ್ಸಿಯನ್ (450, ಐದು), ಮೊದಲನೆಯ ಲಿಯೊ (457, ಆರು), ಜೆನೊ (474–90) (4), ಅನಸ್ಟಸಿಯಸ್ (491–518) (ಹದಿನೈದು) ಮತ್ತು ಒಂದನೆಯ ಜಸ್ಟಿನಸ್ (519–271, ಒಂದು) ಚಕ್ರವರ್ತಿಗಳ ಕಾಲದವು. ಇನ್ನುಳಿದ ಎರಡು ನಾಣ್ಯಗಳು ಯಾವ ಚಕ್ರವರ್ತಿಯ ವೆಂಬುದು ತಿಳಿಯದು. ಒಂದು ಬದಿಯಲ್ಲಿ ಚಕ್ರವರ್ತಿಯ ಹೆಸರು ಇನ್ನೊಂದು ಬದಿಯಲ್ಲಿ ಟಂಕಸಾಲೆಯ ಹೆಸರುಗಳಿವೆ. ಇವೆಲ್ಲವನ್ನೂ ಕಾನ್‌ಸ್ಟಾಂಟಿನೋಪಲ್‌ನಲ್ಲಿ (ಈಗಿನ ಇಸ್ತಾಂಬುಲ್) ಅಚ್ಚು ಹಾಕಲಾಗಿದೆ.

ಇತ್ತೀಚಿನವರೆಗೂ ಕರ್ನಾಟಕದ ಇತರೆಡೆಗಳಲ್ಲಿ ಹಾಗೂ ದಕ್ಷಿಣ ಭಾರತದ ಹಲವಾರು ಸ್ಥಳಗಳಲ್ಲಿ ರೋಮನ್ ಚಿನ್ನ ಹಾಗೂ ಬೆಳ್ಳಿ ನಾಣ್ಯಗಳು ಆಕಸ್ಮಿಕವಾಗಿ ಬೆಳಕಿಗೆ ಬಂದಿವೆ. ಅವುಗಳಲ್ಲಿ ಹೆಚ್ಚಿನವು ಅಗಸ್ಟಸ್ ಮತ್ತು ಟೈಬಿರಿಯಸ್ ಕಾಲದವು. 1891ರಲ್ಲಿ ಯಶವಂತಪುರ ರೈಲ್ವೆ ನಿಲ್ದಾಣದ ಬಳಿ ಪ್ರಸಕ್ತಶಕದ ಆರಂಭದ ಅಗಸ್ಟಸ್, ಟೈಬಿರಿಯಸ್, ಕ್ಲಾಡಿಯಸ್ ಮತ್ತು ಆಂಟೋನಿಯ ಇವರ ಕಾಲದ 163 ಬೆಳ್ಳಿ ನಾಣ್ಯಗಳು ದೊರೆತವು. ತಿರುವನಂತಪುರದ ಹತ್ತಿರವಿರುವ ಪುದನ್ನರು ಮತ್ತು ತಮಿಳುನಾಡಿನ ಮದುರೈ ಜಿಲ್ಲೆಯ ತಿರುಮಂಗಲಮ್‌ನಲ್ಲಿ ಉತ್ತರಕಾಲೀನ ಚಕ್ರವರ್ತಿಗಳ ಕಾಲದ ನಾಣ್ಯಗಳು ಬೆಳಕಿಗೆ ಬಂದಿವೆ. 1965ರಲ್ಲಿ ಬೆಂಗಳೂರಿನ ಎಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ ವಿಮಾನ ಹಾರುವ ಹಾದಿಯನ್ನು ಮಾಡುತ್ತಿದ್ದಾಗ ಉದ್ದನೆ ಕುತ್ತಿಗೆಯ ಒಂದು ಹೂಜಿಯಲ್ಲಿ ಅಗಸ್ಟಸ್ ಮತ್ತು ಟೈಬೀರಿಯಸ್ ಕಾಲದ 256 ಬೆಳ್ಳಿ ನಾಣ್ಯಗಳು ಸಿಕ್ಕಿದವು.

ಅಕ್ಕಿ ಆಲೂರಿನ ಶೋಧವಿಶೇಷ. ಇದು ಹಾನಗಲ್ಲು–ಬನವಾಸಿ ಪ್ರದೇಶದಲ್ಲಿದೆ. ರಾಜಧಾನಿಯಾಗಿದ್ದ ಬನವಾಸಿಯಿಂದ ಆಳುತ್ತಿದ್ದ ಸಾತವಾಹನ–ಆದಿ ಕದಂಬರ ಆಳಿಕೆಯ ಕೊನೆಯವರೆಗೂ ಈ ಪ್ರದೇಶ ರೋಂ ದೇಶದೊಡನೆ ಬಿರುಸಿನಿಂದ ವ್ಯಾಪಾರ ನಡೆಸುತ್ತಿತ್ತೆಂದು ಇದು ಸೂಚಿಸುತ್ತದೆ. ಇಲ್ಲೆಲ್ಲ 1–2ನೆಯ ಶತಮಾನದ ಇಟ್ಟಿಗೆ ಕಟ್ಟಡಗಳು, ಚಿನ್ನ–ಬೆಳ್ಳಿ ನಾಣ್ಯಗಳೆ ಮೊದಲಾದ ನಗರ ಸಂಸ್ಕೃತಿ ಲಕ್ಷಣಗಳು ಗೋಚರಿಸುತ್ತವೆ. (ಎ.ಎಸ್.)

**ಅಕ್ಬರ್:** 1542–1605. ಮೊಗಲ್ ಸಂತತಿಯ ಸಾಮ್ರಾಟರಲ್ಲಿ ಮೂರನೆಯವ. ಭಾರತದ ಚರಿತ್ರೆಯಲ್ಲಿ ಅತ್ಯಂತ ಪ್ರಸಿದ್ಧರಾದ ಸಾಮ್ರಾಟರಲ್ಲಿ ಒಬ್ಬ. ಹುಮಾಯೂನನ ಮಗ. ಷೇರ್‌ಷಹನಿಂದ ಸೋತು ರಾಜ್ಯಭ್ರಷ್ಟನಾಗಿ ಸಹಾಯವನ್ನರಸುತ್ತ ಹುಮಾಯೂನ್ ಅಲೆದಾಡುತ್ತಿದ್ದಾಗ ಅಮರಕೋಟೆಯಲ್ಲಿ 1542ರಲ್ಲಿ ಅಕ್ಬರ್ ಜನಿಸಿದ. ಪಟ್ಟಕ್ಕೆ ಬಂದಾಗ ಇವನು 14 ವರ್ಷದ ಬಾಲಕ. ತಂದೆಯ ಕಾಲದಲ್ಲಾದ ರಾಜಕೀಯ ವಿಪ್ಲವಗಳ ಪರಿಣಾಮವಾಗಿ ಸಾಮ್ರಾಜ್ಯದ ನಾನಾ ಕಡೆಗಳಲ್ಲಿ ವಿದ್ರೋಹಿಗಳು ಬಲಗೊಂಡಿದ್ದರು. ಅವರ ಹಾವಳಿಯನ್ನು ತಡೆಗಟ್ಟಿ ಪ್ರಾಂತ್ಯಗಳನ್ನು ತನ್ನ ಹತೋಟಿಗೆ ತಂದುಕೊಂಡು ಸುಭದ್ರ ಆಡಳಿತವನ್ನು ಸ್ಥಾಪಿಸುವುದಕ್ಕೆ ಬಹುಕಾಲ ಹಿಡಿಯಿತು. ಸ್ವತಂತ್ರರಾಗಲೆತ್ನಿಸುತ್ತಿದ್ದ ಸಾಮಂತರನ್ನು ಸೋಲಿಸಿ, ಹೊಸ ಪ್ರಾಂತ್ಯಗಳನ್ನು ಗೆದ್ದು, ದೇಶದಲ್ಲಿದ್ದ ಅರಾಜಕತೆಯನ್ನು ಕೊನೆಗಾಣಿಸಿ, ಬಹಳ ಕಾಲದಿಂದಲೂ ಇಲ್ಲದೇ ಇದ್ದ ರಾಜಕೀಯ ಐಕ್ಯತೆಯನ್ನೂ ಆಡಳಿತ ಭದ್ರತೆಯನ್ನೂ ಏರ್ಪಡಿಸಿದ. ರಾಷ್ಟ್ರೀಯತೆ, ಐಕ್ಯತೆ ಮತ್ತು ಹಿಂದು–ಮುಸಲ್ಮಾನರ ಪರಸ್ಪರ ಸ್ನೇಹ ಸೌಹಾರ್ದ– ಈ ಮೂರು ಮುಖ್ಯಾಂಶಗಳನ್ನು ಬೆಳೆಸುವ ಸಂಪ್ರದಾಯವನ್ನು ಹಾಕಿಕೊಟ್ಟ. ಅವನ ರಾಜಕೀಯ ಧೋರಣೆ ಮತೀಯ ಪ್ರಭಾವಕ್ಕೊಳಗಾಗಿರಲಿಲ್ಲ. ಈತ ರಜಪೂತ ಕನ್ಯೆಯೊಬ್ಬಳನ್ನು ಮದುವೆಯಾದ. ಹಿಂದು ಯಾತ್ರಿಕರ ಮೇಲೆ ಈ ಹಿಂದೆ ಇದ್ದ ತಲೆಗಂದಾಯ ವನ್ನೂ ರದ್ದುಗೊಳಿಸಿದ. ಮುಸಲ್ಮಾನ್ ಪ್ರಜೆಗಳಿಂದಲೇ ಕೂಡಿದ್ದ ಕಾಬೂಲ್ ಪ್ರಾಂತಕ್ಕೆ ಮಾನಸಿಂಗನನ್ನು ಪ್ರಾಂತ್ಯಾಧಿಕಾರಿಯನ್ನಾಗಿ ಮಾಡಿದ. ಆವರೆಗೂ ಸೈನ್ಯಕ್ಕೆ ಸೇರಲು ಮುಸಲ್ಮಾನರು ಮಾತ್ರ ಅರ್ಹತೆ ಪಡೆದಿದ್ದರು. ಅಕ್ಬರನು ಅರ್ಹತೆಯ ಆಧಾರದ ಮೇಲೆ ಹಿಂದು ಮುಸಲ್ಮಾನರಲ್ಲಿ ಭೇದವನ್ನೆಣಿಸದೆ ಸೈನ್ಯದಲ್ಲಿ ಹುದ್ದೆಗಳನ್ನು ನೀಡಿದ. ನ್ಯಾಯವಾದಿಯೂ ಗುಣಗ್ರಾಹಿಯೂ ಆಗಿದ್ದ ಇವನು ಪ್ರಜೆಗಳಲ್ಲಿ ಭೇದವನ್ನೆಣಿಸದೆ ಎಲ್ಲರಿಗೂ ನ್ಯಾಯವನ್ನು ದೊರಕಿಸಿಕೊಟ್ಟ. ಈತ ದೊಡ್ಡ ಹುದ್ದೆಗಳನ್ನು ಕೊಡುತ್ತಿದ್ದುದು ಕುಶಲತೆ ಮತ್ತು ಸಾಮರ್ಥ್ಯದ ಆಧಾರದಮೇಲೆ. ತನ್ನ ನೀತಿಯಿಂದ ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿ, ಆ ಮೂಲಕ ಮೊಗಲರಲ್ಲಿ ತಾವು ಪರಕೀಯರೆಂಬ ಭಾವನೆಯನ್ನು ಹೋಗಲಾಡಿಸಿದ. ಹಿಂದುಗಳಿಗೆ ಇವನ ಆಡಳಿತ ಪರಕೀಯವೆನಿಸಲಿಲ್ಲ. ಇದಲ್ಲದೇ ಇವನು ಹಿಂದುಸಮಾಜದಲ್ಲಿ ಬೆಳೆದು ಬಂದಿದ್ದ ಸ್ತ್ರೀ ಶಿಶುಹತ್ಯೆ, ಸಹಗಮನ ಮತ್ತು ಪ್ರಾಣಿಬಲಿ ಮುಂತಾದ ಪದ್ಧತಿಗಳನ್ನು ತಪ್ಪಿಸಲು ಮತ್ತು ವಿಧವಾವಿವಾಹವನ್ನು ಜಾರಿಗೆ ತರಲು ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡ. ಇವನು ಜಾರಿಗೆ ತಂದ ಆಡಳಿತ ಪದ್ಧತಿ ಮುಂದೆ ಬ್ರಿಟಿಷರೂ ಅನುಕರಿಸು ವಂಥದ್ದಾಗಿತ್ತು. ಅಕ್ಬರನ ಆಡಳಿತದಲ್ಲಿ ಸರ್ಕಾರಕ್ಕೂ ರೈತರಿಗೂ ನೇರವಾದ ಸಂಪರ್ಕವಿದ್ದು ಮಧ್ಯಸ್ಥಗಾರರಿಗೆ ಅವಕಾಶವಿರಲಿಲ್ಲ.

ಅಕ್ಬರನ ಮತೀಯನೀತಿ ಇತಿಹಾಸದಲ್ಲಿ ಸ್ಮರಣೀಯವಾಗಿದೆ. ಉನ್ನತ ಧ್ಯೇಯಗಳನ್ನು ಹೊಂದಿ ಭಾವಜೀವಿಯಾಗಿದ್ದ ಈತ ಎಲ್ಲ ಮತಗಳ ತತ್ತ್ವಗಳನ್ನೂ ಗ್ರಹಿಸಿ ಮತೀಯ ಐಕ್ಯತೆಯನ್ನು ಉಂಟುಮಾಡುವ ಗುರಿಯನ್ನು ಹೊಂದಿದ್ದ. ಈ ಗುರಿಯನ್ನು ಸಾಧಿಸಲು

ಅಕ್ಬರ್, ಸಮಾಲೋಚನ ಸಭೆಯಲ್ಲಿ (ವರ್ಣಚಿತ್ರ)

1581ರಲ್ಲಿ ದೀನ್–ಇಲಾಹಿ ಎಂಬ ಹೊಸ ಮತವನ್ನು ಸ್ಥಾಪಿಸಿದ. ಅದು ಪ್ರಗತಿಪರ ವಿಚಾರ ಶೀಲರ ಸಂಘವಾಗಿತ್ತು; ಸರ್ವಧರ್ಮ ಸಹಿಷ್ಣುತೆಯ ಆದರ್ಶವಾಗಿತ್ತು. ಈ ಹೊಸ ಮತದ ಪ್ರಕಾರ ಸರ್ವಶಕ್ತನಾದ ದೇವರು ಒಬ್ಬನೇ. ಎಲ್ಲರೂ ದುರ್ಗುಣಗಳನ್ನು ತ್ಯಜಿಸಿ ಸದ್ಗುಣಗಳನ್ನು ಅನುಸರಿಸಿ ವಿವೇಚನೆಗೆ ತಲೆಬಾಗಬೇಕು. ಪೂಜೆ–ಪುನಸ್ಕಾರ ಮತ್ತು ಪುರೋಹಿತರ ಆವಶ್ಯಕತೆ ಇಲ್ಲ. ದೀನ್–ಇಲಾಹಿ ಸರ್ವ ಮತಗಳ ಆಧ್ಯಾತ್ಮಿಕ ಮತ್ತು ತಾತ್ತ್ವಿಕ ಸಂಪ್ರದಾಯಗಳ ಸಂಗ್ರಹವಾಗಿತ್ತು. ಧರ್ಮೋಪದೇಶಕರಿಗಾಗಲೀ ಮೌಢ್ಯ ಮತ್ತು ಕಂದಾಚಾರಗಳಿಗಾಗಲೀ ಈ ಮತದಲ್ಲಿ ಅವಕಾಶವಿರಲಿಲ್ಲ. ಈ ಮತಕ್ಕೆ ಸೇರಲು ಯಾರನ್ನೂ ಬಲಾತ್ಕರಿಸುತ್ತಿರಲಿಲ್ಲ. ವಿಚಾರಶೀಲರಾದ 18 ಜನರು ಮಾತ್ರ ಅದನ್ನು ಅವಲಂಬಿಸಿದ್ದರು. ಅವರಲ್ಲಿ ರಾಜ ಬೀರಬಲ್ಲನೂ ಒಬ್ಬ. ಅಕ್ಬರ್ ವೈಯಕ್ತಿಕವಾಗಿ ಆಧ್ಯಾತ್ಮಿಕ ಜೀವನದ ರಹಸ್ಯಗಳನ್ನು ಅರಿಯಲು ಕುತೂಹಲಿಯಾಗಿದ್ದ. ಇವನು ಅನೇಕ ವೇಳೆ ಏಕಾಂಗಿಯಾಗಿ ತನ್ನ ಅರಮನೆಯ ಪ್ರಾಂಗಣದಲ್ಲಿ ಕುಳಿತು ಮಧ್ಯರಾತ್ರಿಯವರೆಗೂ ನಭೋಮಂಡಲವನ್ನು ವೀಕ್ಷಿಸುತ್ತ ಜೀವನದ ಸತ್ಯಾಸತ್ಯಗಳ ವಿಚಾರವಾಗಿ ದೀರ್ಘಾಲೋಚನೆಗಳಲ್ಲಿ ಮಗ್ನನಾಗುತ್ತಿದ್ದ. ಜನರ ಮತೀಯ ಮೌಢ್ಯಗಳನ್ನು ಕಂಡು ಮರುಗುತ್ತಿದ್ದ. ಸರ್ವಧರ್ಮ ಸಮನ್ವಯವಾದ ದೀನ್–ಇಲಾಹಿಯ ಮುಖಾಂತರ ಜನರ ಭಿನ್ನಭಾವಗಳನ್ನು ತೊಡೆದು ಹಾಕುವ ಗುರಿಯನ್ನು ಹೊಂದಿದ್ದ. ಈ ಪ್ರಯತ್ನದಲ್ಲಿ ಕೆಲವು ಅಂಶಗಳು ಇವನಿಗೆ ಸಹಕಾರಿಯಾದುವು. ಮೊದಲನೆ ಯದಾಗಿ ಈತನ ತಂದೆ ಮತ್ತು ತಾತ ಸಂಪ್ರದಾಯಶರಣರಾಗಿರದೆ ಉದಾರ ಪಂಥಿಗಳಾಗಿದ್ದರು. ಎರಡನೆಯದಾಗಿ ಈತ ರಜಪೂತ ಸ್ತ್ರೀಯೊಡನೆ ಏರ್ಪಡಿಸಿಕೊಂಡ ವೈವಾಹಿಕ ಸಂಬಂಧ ಇವನ ವಿಚಾರಧಾರೆಯನ್ನು ಬದಲಾಯಿಸಿತು. ಕೊನೆಯದಾಗಿ ನಿಕಟವರ್ತಿಗಳಾದ ಶೇಕ್ ಮುಬಾರಕ್, ಫೈಜಿ ಮತ್ತು ಅಬುಲ್ ಫಜ಼ಲ್ ಅವರ ಭಾವನೆಗಳು ಮತ್ತು ವಿಚಾರಧಾರೆಗಳು ಅಕ್ಬರನ ಮೇಲೆ ಪರಿಣಾಮ ಬೀರಿದುವು. ಜೀವಾತ್ಮಗಳು ಪರಮಾತ್ಮನ ಅಂಶಗಳು ಮತ್ತು ಕೊನೆಗೆ ಪರಮಾತ್ಮನಲ್ಲೇ ಐಕ್ಯವಾಗುತ್ತವೆ ಎಂಬ ಸೂಫಿ ತತ್ತ್ವದಲ್ಲಿ ಇವನಿಗೆ ಬಹಳ ನಂಬಿಕೆ. ಅಕ್ಬರ್ 1575ರಲ್ಲಿ ಸಿಕ್ರಿ ಎಂಬಲ್ಲಿ ಇಬದತ್‌ಖಾನವನ್ನು (ಪ್ರಾರ್ಥನಾ ಮಂದಿರ) ಕಟ್ಟಿಸಿದ. ಇಲ್ಲಿ ಸಾಮ್ರಾಜ್ಯದ ಎಲ್ಲ ಭಾಗಗಳಿಂದಲೂ ಹಿಂದು, ಜೈನ, ಪಾರಸಿ,

ಕ್ರೈಸ್ತ ಮತ್ತು ಮಹಮದೀಯ ಧರ್ಮದ ಪಂಡಿತರು ಸಭೆ ಸೇರಿ ಅಕ್ಬರನ ಸಂದೇಹಗಳನ್ನು ನಿವಾರಿಸಬೇಕಾಗಿದ್ದಿತು. ಆದರೆ ನಾನಾ ಪಂಥಗಳ ವಿದ್ವಾಂಸರು ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಮುಂದುಮಾಡಿಕೊಂಡು ವಾದ ವಿವಾದದಲ್ಲಿ ನಿರತರಾಗಿ ಸಮಸ್ಯೆಗಳನ್ನೇ ಸೃಷ್ಟಿಸಿದರು. ಆದ್ದರಿಂದ ಅಕ್ಬರ್ ತಾನೇ ಸರ್ವಧರ್ಮಗಳ ಮುಖಂಡತ್ವವನ್ನು ವಹಿಸಿಕೊಂಡು ಮತೀಯ ಕಚ್ಚಾಟಗಳನ್ನು ನಿಲ್ಲಿಸಿ ತನ್ನ ತೀರ್ಪನ್ನು ಅವರು ಒಪ್ಪುವಂತೆ ವಿಧೇಯಕ ಮಾಡಿದ. ಅಕ್ಬರ್ ತಾನೊಬ್ಬ ಪ್ರವಾದಿ ಎಂದು ನಂಬಿಯೂ ಇರಲಿಲ್ಲ. ಹಾಗೆ ಪ್ರಚಾರವನ್ನೂ ಮಾಡಲಿಲ್ಲ. ಆದರೆ ವಿಭಿನ್ನ ಮತೀಯರನ್ನು ಸಮತೆಯ ಆಧಾರದ ಮೇಲೆ ಒಂದುಗೂಡಿಸಲು ಸತತವಾಗಿ ಪ್ರಯತ್ನಪಟ್ಟ. ಅಲ್ಲದೇ ಅವನ ಆಳಿಕೆ ಅನೇಕ ಮಹಾ ಘಟನಾವಳಿಗಳಿಂದ ಕೂಡಿದ ಉಜ್ವಲ, ಐತಿಹಾಸಿಕ ಕಾಲವಾಗಿತ್ತು. ಆದ್ದರಿಂದ ಚರಿತ್ರಕಾರರು ಅಕ್ಬರನನ್ನು ಮಹಾಶಯ ಎಂದು ಕರೆದಿದ್ದಾರೆ. (ಬಿ.ಎಸ್.ಎ.)

**ಮನ್ಸಬ್ದಾರಿ ಪದ್ಧತಿ:** ಅಕ್ಬರ್ ಜಾರಿಗೆ ತಂದ ಅನೇಕ ಆಡಳಿತಾತ್ಮಕ ಸುಧಾರಣೆಗಳಲ್ಲಿ ಇದೂ ಒಂದು. ಮನ್ಸಬ್‌ರ್ ಇದೊಂದು ಅಧಿಕಾರ ಸೂಚಕಪದ. ಪರ್ಷಿಯದಲ್ಲಿ ಜಾರಿಯಲ್ಲಿದ್ದ ಈ ಮಾದರಿಯ ಆಡಳಿತವನ್ನು ಭಾರತದಲ್ಲಿಯೂ ಜಾರಿಗೆ ತಂದ ಯಶಸ್ಸು ಅಕ್ಬರನಿಗೆ ಸಲ್ಲುತ್ತದೆ. ಈ ಪದ್ಧತಿಯಲ್ಲಿ ನಾಗರಿಕರೂ ಸೈನಿಕ ಅಧಿಕಾರಿಗಳೂ ಸೇರಿದ್ದರು. ಮನ್ಸಬ್ದಾರರು ರಕ್ಷಣಾ ವ್ಯವಸ್ಥೆಯನ್ನು ನಿರ್ವಹಿಸುವುದರ ಜೊತೆಗೆ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಇತರೆ ಜವಾಬ್ದಾರಿಗಳನ್ನೂ ವಹಿಸಿಕೊಳ್ಳಬೇಕಾಗಿತ್ತು. ಇದರಲ್ಲಿ ಯುದ್ಧಾಕ್ರಮಣದಂತ ಸೈನಿಕ ಕಾರ್ಯಾಚರಣೆಯೂ ಸೇರಿತ್ತು. ರಾಜ ಭಗವಾನ್‌ದಾಸ್, ರಾಜ ತೋದರಮಲ್ಲ ಮೊದಲಾದ ಆಡಳಿತಾಧಿಕಾರಿಗಳು ಸೈನ್ಯದಲ್ಲೂ ನಾಯಕತ್ವ ವಹಿಸಿಕೊಳ್ಳುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಈ ಪದ್ಧತಿಯಲ್ಲಿ ವರ್ಗಗಳಿದ್ದವು: ಅವು 1. ಉಮ್ರಾ (ಶ್ರೇಷ್ಠದರ್ಜೆ) 2. ಸಾಮಾನ್ಯ ದರ್ಜೆ 3. ಕನಿಷ್ಠ ದರ್ಜೆ. ಉಮ್ರಾಗಳು 12,000 ಕುದುರೆಗಳ ಒಡೆಯರಾಗಿದ್ದರಲ್ಲದೆ ಈ ಪದವಿಯನ್ನು ಚಕ್ರವರ್ತಿಗಳ ಹತ್ತಿರದ ಸಂಬಂಧಿಗಳಿಗೆ, ಆಪ್ತರಿಗೆ ಮಾತ್ರ ನೀಡಲಾಗುತ್ತಿತ್ತು. ಸಾಮಾನ್ಯ ಮನ್ಸಬ್ದಾರರು 1000 ಕುದುರೆಗಳ ಮೇಲ್ವಿಚಾರಣೆ ಹೊಂದಿದ್ದರು. ಕನಿಷ್ಠ ದರ್ಜೆಯ ಮನ್ಸಬ್ದಾರ 10 ಕುದುರೆಗಳ ಉಸ್ತುವಾರಿಯನ್ನು ಹೊಂದಿರುತ್ತಿದ್ದ. ಅಬುಲ್‌ಫಜಲ್‌ನ ಪ್ರಕಾರ ಒಟ್ಟು 66 ಶ್ರೇಣಿಗಳಿದ್ದಾಗ್ಯೂ 33 ಶ್ರೇಣಿಗಳು ಮಾತ್ರ ಆಚರಣೆಯಲ್ಲಿದ್ದವು. ಮನ್ಸಬ್ದಾರರು ಮೊಗಲ್ ಸಾಮ್ರಾಜ್ಯದ ಆಡಳಿತದ ಆಧಾರ ಸ್ಥಂಭಗಳಂತಿದ್ದರು. ಪ್ರತಿವರ್ಷ ಇವರು ಚಕ್ರವರ್ತಿಗೆ ಕುದುರೆಗಳ ಮತ್ತು ಸೈನಿಕರ ಸರಬರಾಜು ಮಾಡಬೇಕಾಗಿತ್ತು. ಇವರು ಎಷ್ಟು ಕುದುರೆಗಳ ಮೇಲ್ವಿಚಾರಕರಾಗಿದ್ದರೆಂಬುದರ ಮೇಲೆ ಸಂಬಳವನ್ನು ನಿಗದಿ ಮಾಡಲಾಗುತ್ತಿತ್ತು. ಇವರಿಗೆ ಜಹಗೀರು ಅಥವಾ ನಗದು ರೂಪದಲ್ಲಿ ವೇತನವನ್ನು ಕೊಡಲಾಗುತ್ತಿತ್ತು. ಕುದುರೆಯೊಂದಕ್ಕೆ 25 ರೂಪಾಯಿಗಳ ವಾರ್ಷಿಕ ವೆಚ್ಚವನ್ನು ನೀಡಲಾಗುತ್ತಿತ್ತು. 1,000 ಕುದುರೆಗಳ ಮನ್ಸಬ್ದಾರ ಮಾಸಿಕ ವೇತನವಾಗಿ 8,000 ರೂಪಾಯಿ ಪಡೆಯುತ್ತಿದ್ದ. ಆ ವೇತನದಲ್ಲಿ ಸೇನೆ ಹಾಗೂ ಕುದುರೆಗಳ ಬಾಬ್ತು ಸೇರಿರುತ್ತಿದ್ದಿತು.

ಮನ್ಸಬ್ದಾರ ಪದವಿ ವಂಶಪಾರಂಪರ್ಯವಾಗಿರಲಿಲ್ಲ ಮತ್ತು ಇವರು ಆಸ್ತಿಯನ್ನು ತಮ್ಮ ಮಕ್ಕಳಿಗೆ ಅಥವಾ ಉತ್ತರಾಧಿಕಾರಿಗಳಿಗೆ ಕೊಡುವಂತಿರಲಿಲ್ಲ. ಆದುದರಿಂದ ಇವರು ವೈಭವದ ಜೀವನ ನಡೆಸುತ್ತಿದ್ದರು. ಕಲೆ, ಸಾಹಿತ್ಯ, ಶಿಕ್ಷಣ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಿಗೆ ಉತ್ತೇಜನ ನೀಡುತ್ತಿದ್ದರು. ಮನ್ಸಬ್ದಾರರ ಮರಣಾನಂತರ ಇವರ ಸಂಪತ್ತು ರಾಜ್ಯ ಬೊಕ್ಕಸಕ್ಕೆ ಸೇರಬೇಕಾಗಿತ್ತು. ಇವರು ನೇರವಾಗಿ ಚಕ್ರವರ್ತಿಯ ಅಧೀನದಲ್ಲಿದ್ದರು. ಇವರನ್ನು ಯಾವುದೇ ಕಾರಣ ನೀಡಿ ತೆಗೆದು ಹಾಕುವ ಅಧಿಕಾರ ಚಕ್ರವರ್ತಿಗೆ ಮಾತ್ರವಿತ್ತು. ದುರ್ಬಲ ಚಕ್ರವರ್ತಿಗಳ ಕಾಲದಲ್ಲಿ ಕೆಲವರು ತಮ್ಮ ಅಧೀನದಲ್ಲಿದ್ದ ಸೈನಿಕರ ನೆರವಿನಿಂದ ದಂಗೆಯೆದ್ದು ಸ್ವತಂತ್ರರಾಗುವ ಪ್ರಯತ್ನಗಳು ಹೆಚ್ಚಿದ್ದವು. ಈ ಪ್ರವೃತ್ತಿಯೇ ಉಲ್ಬಣಗೊಂಡು ಮೊಗಲ್ ಸಾಮ್ರಾಜ್ಯದ ಅವನತಿಗೆ ಒಂದು ಕಾರಣವಾಯಿತೆಂದು ಅಭಿಪ್ರಾಯಪಡಲಾಗಿದೆ. (ಎನ್‌ಆರ್.)

**ರಜಪೂತ ನೀತಿ:** ಅಕ್ಬರನು ರಜಪೂತರೊಂದಿಗೆ ಹೊಂದಿದ್ದ ಸಂಬಂಧ ವಿಶಾಲ ಅರ್ಥದ ತಳಹದಿಯ ಮೇಲೆ ನಿಂತಿದೆ. ಪ್ರಾರಂಭದಲ್ಲಿ ಜಮೀನ್ದಾರರು ಮತ್ತು ಸ್ಥಳೀಯ ರಾಜರನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಈ ನೀತಿಯನ್ನು ಹುಮಾಯೂನನೇ ಪ್ರಾರಂಭಿಸಿದ್ದ. ಅಬುಲ್ ಫಜ಼ಲ್ ಜಮೀನ್ದಾರರ ಮನಸ್ಸನ್ನು ಗೆಲ್ಲಲು ಅವರೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಂಡ. ಭಾರತದ ಆಗಿನ ಪ್ರಖ್ಯಾತ ಭಾರಿ ಜಮೀನ್ದಾರನಾದ ಮೆವಾತಿಯ ಜಮಾಲ್‌ಖಾನ್‌ನ ಸುಂದರ ಮಗಳನ್ನು ವಿವಾಹವಾದ ಮತ್ತು ಬೈರಾಂಖಾನ್‌ನಿಗೆ ತನ್ನ ತಂಗಿಯನ್ನು ಮದುವೆ ಮಾಡಿ ಕೊಟ್ಟ ಎಂದಿದ್ದಾನೆ. ಹೀಗೆ ಹುಮಾಯೂನನ ನೀತಿಯನ್ನು ಅಕ್ಬರ ಅನುಸರಿಸಿದ ಮತ್ತು ವಿಸ್ತರಿಸಿದ.

1562ರಲ್ಲಿ ಅಕ್ಬರ ಅಜ್ಮೀರ್‌ನ ಷೇಕ್ ಮೊಯಿನುದ್ದೀನ್ ಚಿಸ್ತಿಯ ಸಮಾಧಿಗೆ ಭೇಟಿ ನೀಡಿದ. ಹೋಗುವ ಮಾರ್ಗದಲ್ಲಿ ರಜಪೂತ ರಾಜ್ಯವಾದ ಅಂಬರ್ ಸಹ ಇತ್ತು. ಇದರ ದೊರೆ ರಾಜ ಬಿಹಾರಿಮಲ್‌ನು ಅಕ್ಬರ್ ಸಿಂಹಾಸನಕ್ಕೆ ಏರಿದಾಗಿನಿಂದ ಅವನ ಮೇಲೆ ಒಳ್ಳೆಯ ಭಾವನೆಯನ್ನಿಟ್ಟುಕೊಂಡಿದ್ದ. ಅಕ್ಬರ್ ಅಜ್ಮೀರ್‌ಗೆ ಭೇಟಿ ನೀಡಿದಾಗ ಸ್ವತಃ ಬಂದು ತನ್ನ ಮಗಳಾದ ಜೋದಾಬಾಯಿ ಮರಿಯಾಮ್ ಉಜ್ ಜಮಾನಿಯನ್ನು ಮದುವೆ ಮಾಡಿಕೊಡುವ ಇಂಗಿತ ವ್ಯಕ್ತಪಡಿಸಿದ. ಅಕ್ಬರ್ ಒಪ್ಪಿ ಸಂಬಾರ್‌ನಲ್ಲಿ ಮದುವೆಯಾದ. ಇದೇ ವೇಳೆಗೆ ಸ್ಥಳೀಯ ಮೊಗಲ್ ಗವರ್ನರನು ಬಿಹಾರಿಮಲ್ಲನಿಗೆ ಕಿರುಕುಳ ಕೊಡುತ್ತಿದ್ದು ಇದರಿಂದ ರಕ್ಷಣೆ ಪಡೆಯಲು ಮತ್ತು ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಬಿಹಾರಿಮಲ್ಲ ಈ ವಿವಾಹಸಂಬಂಧಕ್ಕೆ ಮುಂದಾದ. ಅಕ್ಬರ್ ವಿವಾಹವಾಗಿ ವಾಪಸಾಗುವಾಗ ಬಿಹಾರಿಮಲ್ಲನು ಹೇರಳ ವರದಕ್ಷಿಣೆಯನ್ನು ತನ್ನ ಮಗಳಿಗೆ ನೀಡಿದ ಮತ್ತು ತನ್ನ ಮಗ ಭಗವಾನ್ ದಾಸ್‌ನ ನೇತೃತ್ವದಲ್ಲಿ ರಜಪೂತ ಪದ್ಧತಿಯ ಪ್ರಕಾರ ರಜಪೂತ ಸೈನಿಕರನ್ನು ಹೊಸ ದಂಪತಿಗಳಿಗೆ ರಕ್ಷಣೆ ನೀಡಲು ಕಳುಹಿಸಿದ. ಅಕ್ಬರ್ ಈ ರಜಪೂತರ ವಿಧೇಯತೆ ಮತ್ತು ಪ್ರೀತಿಯನ್ನು ಮತ್ತು ರಜಪೂತರ ಸಂಬಂಧವನ್ನು ಒಪ್ಪಿಕೊಂಡ. ಅನಂತರ ಭಗವಾನ್‌ದಾಸ್‌ನ ಮಗ ಮಾನ್‌ಸಿಂಗನನ್ನು ಸಾಮ್ರಾಜ್ಯದ ಸೈನ್ಯಕ್ಕೆ ಸೇರಿಸಿಕೊಂಡ. ಅಕ್ಬರ್ ರಜಪೂತ ಹೆಂಡತಿಯಿಂದ ಆಕರ್ಷಿತನಾಗಿ ಅವಳಲ್ಲಿ ನಿಜವಾದ ಪ್ರೀತಿಯನ್ನು ಬೆಳೆಸಿಕೊಂಡ ಮತ್ತು ಅವಳನ್ನು ಪಟ್ಟದ ರಾಣಿ ಸ್ಥಾನಕ್ಕೇರಿಸಿದ. ಈ ರಜಪೂತ ಹೆಂಡತಿ ಅಕ್ಬರನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಭಾವನೆಗಳನ್ನು ಬದಲಾಯಿಸಿದಳು ಮತ್ತು ಮುಂದಿನ ವಾರಸುದಾರ ಸಲೀಂ(ಜಹಂಗೀರ್)ಗೆ ಆಗಸ್ಟ್ 30, 1569ರಲ್ಲಿ ಜನ್ಮ ನೀಡಿದಳು.

ಅಕ್ಬರನ ಈ ವೈವಾಹಿಕ ಸಂಬಂಧ ರಾಜ್ಯದ ನೀತಿಯನ್ನೇ ಬದಲಾಯಿಸಿತು. ಅಕ್ಬರ್ ಅಂಬರ್‌ನ ರಜಪೂತರ ಪ್ರೀತಿಪೂರ್ವಕ ಸಂಬಂಧಕ್ಕೆ ಮಾರುಹೋದ. ಹಾಗೆಯೇ ರಜಪೂತರೂ ಅಕ್ಬರನ ಜೀವ ರಕ್ಷಣೆಗೆ ಮತ್ತು ಮೊಗಲ್ ಸಾಮ್ರಾಜ್ಯದ ರಕ್ಷಣೆಗೆ ತಮ್ಮ ಪ್ರಾಣ ಅರ್ಪಿಸಲು ಮುಂದಾದರು. ರಜಪೂತ ಯೋಧರು ಬೇರೆ ಸೈನಿಕರಿಗಿಂತ ಹೆಚ್ಚಿನ ಧೈರ್ಯ, ಪ್ರಾಮಾಣಿಕತೆ, ಹೋರಾಟ ಪ್ರದರ್ಶಿಸಿದರು. ಹಿಂದಿನ ಮುಸ್ಲಿಂ ಆಡಳಿತಗಾರರಿಗೆ ರಜಪೂತರೇ ಪ್ರಮುಖ ವೈರಿಗಳಾಗಿದ್ದರು. ಈಗ ರಜಪೂತರಿಗೂ ಸ್ನೇಹ, ಗೌರವಗಳನ್ನು ನೀಡಿ ಅವರ ಸ್ವಗೌರವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನಡೆದುಕೊಂಡಿದ್ದರಿಂದ ಸಾಮ್ರಾಜ್ಯದ ಆಧಾರ ಸ್ತಂಭಗಳಂತಾದರು.

ಹಿಂದೆ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ಅವರನ್ನು ಸಾಮಾಜಿಕ–ಧಾರ್ಮಿಕ ರಂಗಗಳಲ್ಲಿ ಮುಸ್ಲಿಮರಿಗಿಂತ ಕೀಳಾಗಿ ನೋಡುತ್ತಿದ್ದರು ಮತ್ತು ಅವರಿಗೆ ನಾಗರಿಕ ಹಕ್ಕುಗಳನ್ನು ನಿರಾಕರಿಸಿದರು. ಷಿಯ, ಸುನ್ನಿ ಮುಸ್ಲಿಮರಲ್ಲಿದ್ದ ದ್ವೇಷ ಮುಂತಾದ ಪರಿಸ್ಥಿತಿಯಲ್ಲಿ ತನ್ನ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳಲು ಮುಸ್ಲಿಮರಲ್ಲದ ಬೇರೆಯವರ ಆವಶ್ಯಕತೆಯು ಬಹಳವಿತ್ತು. ಇಂಥ ಸಂದರ್ಭದಲ್ಲೇ ದೊರಕಿದ ರಜಪೂತರ ಸಂಬಂಧವನ್ನು ಬುದ್ಧಿವಂತಿಕೆಯಿಂದ ಮತ್ತು ದೂರಾಲೋಚನೆಯಿಂದ ಬಳಸಿಕೊಂಡ.

ಅಕ್ಬರ್ ತನ್ನ ರಜಪೂತ ನೀತಿಯನ್ನು ಒಂದು ಕೈಲಿ ಹೂವನ್ನು ಇನ್ನೊಂದು ಕೈಲಿ ಕತ್ತಿಯನ್ನು ಹಿಡಿದು ಸಾಧಿಸಿದ. ಅಕ್ಬರನು ರಜಪೂತ ರಾಜ್ಯಗಳ ಮತ್ತು ಪ್ರಜೆಗಳ ಜೊತೆ ಮೂರು ವಿಧದ ಸಂಬಂಧ ಹೊಂದಿದ್ದ. ಮೊದಲ ಗುಂಪಿನ ರಜಪೂತರೆಂದರೆ–ಅಂಬರ್, ಬಿಕನೇರ್ ಮತ್ತು ಜೈಸಲ್ಮೇರ್‌ನವರು. ಇವರು ಸ್ವಂತ ಇಚ್ಛೆಯಿಂದ ತಮ್ಮ ವಿಧೇಯತೆಯನ್ನು ಒಪ್ಪಿ ಸಾಮ್ರಾಜ್ಯ ವ್ಯವಸ್ಥೆಯಲ್ಲಿ ಒಂದಾಗಿದ್ದರು. ಎರಡನೆಯ ವರ್ಗದ ರಜಪೂತ ರಾಜ್ಯಗಳೆಂದರೆ ರಣತಂಬೂರ್ ಮತ್ತು ಮರ್ತ್. ಇವರು ಗೌರವಾನ್ವಿತವಾಗಿ ಹೋರಾಡಿ ಕೊನೆಗೆ ಅಕ್ಬರನೊಡನೆ ಗೌರವಯುತ ಒಪ್ಪಂದಕ್ಕೆ ಬಂದಿದ್ದರು. ಮೂರನೆಯ ವರ್ಗದ ರಜಪೂತ ರಾಜ್ಯಗಳೆಂದರೆ ಮೇವಾಡದ ರಾಣ ಉದಯಸಿಂಗ್ ಮತ್ತು ಅವನ ಅನುಯಾಯಿಗಳು. ಇವರು ತಮ್ಮ ಪ್ರಾಂತೀಯ ಸ್ವಾತಂತ್ರ್ಯ, ಗೌರವ, ಸ್ವಾಭಿಮಾನಗಳನ್ನು ಯಾವುದೇ ಹಿತಾಸಕ್ತಿಗೂ ಬಲಿಕೊಡಲು ತಯಾರಾಗದೆ ಹೋರಾಡಿದ ವೀರರು.

ಅಕ್ಬರನ ಈ ರಜಪೂತ ನೀತಿಯಿಂದ ಎರಡು ಪರಿಣಾಮಗಳು ಉಂಟಾದವು. ಮೊದಲನೆಯದಾಗಿ ಅಕ್ಬರನು ರಜಪೂತರ ಸ್ವಾತಂತ್ರ್ಯ ಮತ್ತು ಕ್ಷಾತ್ರ ಗುಣವನ್ನು ತನ್ನ ಕತ್ತಿಯ ನೀತಿಯಿಂದ ತುಂಡರಿಸಿದ. ಎರಡನೆಯದು ರಜಪೂತರ ಆತ್ಮಗೌರವ ಮತ್ತು ಘನತೆಗಳಿಗೆ ಆಗಿದ್ದ ಗಾಯಗಳು ಅಕ್ಬರನ ಉದಾರಯುತ ಮತ್ತು ಸ್ನೇಹಪೂರ್ವಕ ನಡವಳಿಕೆಯಿಂದ ಮಾಯವಾದವು. ರಜಪೂತರು ಆಡಳಿತದಲ್ಲಿ ಭಾಗವಹಿಸುವಿಕೆಯಿಂದ ದೇಶದ ರಾಜಕೀಯ ಏಕೀಕರಣ ಮತ್ತು ಸಾಮ್ರಾಜ್ಯದ ವಿಸ್ತರಣಾ ನೀತಿಗೆ ಸಹಾಯಕವಾಯಿತು. ರಜಪೂತರು ಸಾಮಾಜಿಕ–ರಾಜಕೀಯ ನಾಯಕತ್ವ ಹೊಂದಿದ್ದು ಮೊಗಲ್ ಸಾಮ್ರಾಜ್ಯದ ರಕ್ಷಣೆ ಮತ್ತು ಉನ್ನತಿಗೆ ಬೆಂಬಲ ನೀಡಿದ್ದರಿಂದ ಅವರ ಪ್ರಭಾವದಲ್ಲಿದ್ದ ಜನಸಮುದಾಯವೂ ಸಹ ಮೊಗಲ್ ಸಾಮ್ರಾಜ್ಯಶಾಹಿಯನ್ನು ಬೆಂಬಲಿಸಿತು.

ರಜಪೂತರು ಸೈನ್ಯದಲ್ಲಿ ಸೇರಿದ್ದರಿಂದ ಸಾಮ್ರಾಜ್ಯದ ಸೈನ್ಯ ಬಲಗೊಂಡಿತು. ಅಕ್ಬರನು ಭಗವಾನ್‌ದಾಸನನ್ನು 5000 ಕುದುರೆಗಳ ಮನ್‌ಸಬ್ದಾರನನ್ನಾಗಿಯೂ ಮಾನ್‌ಸಿಂಗ್‌ನನ್ನು 7000 ಕುದುರೆಗಳ ಮನ್‌ಸಬ್ದಾರನನ್ನಾಗಿಯೂ ನೇಮಿಸಿದ. ಅಕ್ಬರನು ತನ್ನ ನೀತಿಯ ಪ್ರಕಾರ ಹೆಚ್ಚಿನ ಸಂಖ್ಯೆಯ ಹಿಂದುಗಳನ್ನು ಆಡಳಿತದ ಉನ್ನತ ಹುದ್ದೆಗಳಿಗೆ ನೇಮಿಸಿದ. ಭಗವಾನ್‌ದಾಸನನ್ನು ಲಾಹೋರ್‌ನ ಉಪರಾಜ್ಯಪಾಲನನ್ನಾಗಿಯೂ, ಮಾನ್‌ಸಿಂಗನನ್ನು ಬಿಹಾರ ಮತ್ತು ಬಂಗಾಲಗಳ ಪ್ರಾಂತ್ಯಾಧಿಕಾರಿಯಾಗಿಯೂ ಇನ್ನಿತರ ರಜಪೂತ ರಾಜರನ್ನು ಆಗ್ರ, ಅಜ್ಮೀರ್ ಮತ್ತು ಗುಜರಾತ್‌ಗಳ ಮುಖ್ಯಸ್ಥರನ್ನಾಗಿಯೂ ನೇಮಿಸಿದ. ಒಟ್ಟಾರೆ ರಜಪೂತರು ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಂಡು ತಮ್ಮ ರಾಜ್ಯಗಳನ್ನು ಆಳದಿದ್ದರೂ ಸಾಮ್ರಾಜ್ಯ ವ್ಯವಸ್ಥೆಯಲ್ಲಿ ಸೇರಿಕೊಂಡು ಭಾರತದ ಅನೇಕ ಪ್ರದೇಶಗಳಲ್ಲಿ ಆಳಿಕೆ ನಡೆಸಿದರು.

ಅಕ್ಬರನ ನೀತಿಯನ್ನೇ ಮುಂದಿನ ಜಹಂಗೀರ್ ಮತ್ತು ಷಹಜಹಾನ್ ಮುಂದುವರೆಸಿದರು. ಜಹಂಗೀರನು ಕಾಠೇವಾಡ, ಜೋದಾಪುರ, ಜೈಸಲ್ಮೇರ್ ಮತ್ತು ಬಿಕನೇರ್‌ಗಳ ರಾಜಕುಮಾರಿಯರನ್ನು ಮದುವೆಯಾಗಿದ್ದ. (ಆರ್.)

**ಫತೆಪುರ್ ಸಿಕ್ರಿ:** ಫತೆಪುರ್ ಸಿಕ್ರಿ ಪಕ್ಕದಲ್ಲಿರುವ ದಿವಾನ್-ಇ-ಖಾಸ್‌ನಲ್ಲಿ (ಆಪ್ತ ಸಮಾಲೋಚನಾಗೃಹ) ಅಕ್ಬರ್ ತನ್ನ ಮಂತ್ರಿಗಳೊಡನೆ ಮಹತ್ತ್ವದ ರಾಜಕೀಯ ವ್ಯವಹಾರಗಳನ್ನು ಕುರಿತು ಸಮಾಲೋಚನೆ ನಡೆಸುತ್ತಿದ್ದ. ಇದು ವಿಶಿಷ್ಟ ವಿನ್ಯಾಸದ ಚೌಕಾಕಾರದ ಕಟ್ಟಡ. ಇದರ ಕೇಂದ್ರಭಾಗದಲ್ಲಿ ಬಹು ಅಲಂಕರಣವಿರುವ ಒಂದೇ ಕಲ್ಲಿನ ಎತ್ತರದ ಕಂಬ, ಅದರ ಮೇಲೆ ತಲೆಕೆಳಕಾದ ಕಮಲದಂತೆ ಕಾಣುವ ಅತ್ಯಾಕರ್ಷಕ ಅಲಂಕಾರದ ಬೋದಿಗೆಯಿದೆ. ಈ ಬೋದಿಗೆಯನ್ನು ಆಧರಿಸಿದಂತೆ ಕಟಾಂಜನ ಸಹಿತವಾದ ವೃತ್ತಾಕಾರದ ವೇದಿಕೆಯಿದ್ದು ಅದರ ನಾಲ್ಕೂ ಮೂಲೆಗಳಿಂದ ಹೊರಡುವ ಕಿರುಸೇತುವೆ ದಾರಿಗಳು, ಕಟ್ಟಡದ ಮೂಲೆಗಳಲ್ಲಿರುವ ಮೊದಲನೆಯ ಅಂತಸ್ತಿನ ಕೊಠಡಿಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಮೊದಲ ಅಂತಸ್ತಿನಲ್ಲಿ ಪರಸ್ಪರ ಸಂಪರ್ಕವಿರುವ ಎಂಟು ಕೊಠಡಿಗಳಿದ್ದು, ಅವುಗಳಲ್ಲಿ ಅಕ್ಬರನ ಎಂಟುಮಂದಿ ಮಂತ್ರಿಗಳು ಮತ್ತು ಮಧ್ಯದಲ್ಲಿ ಅಕ್ಬರ್ ಕುಳಿತುಕೊಳ್ಳಲು ಈ ವ್ಯವಸ್ಥೆ ಮಾಡಲಾಗಿತ್ತು. ಈ ಕಟ್ಟಡದ ಮೇಲ್ಛಾವಣಿಯ ಮೇಲೂ ಕಟಾಂಜನವಿರುವ ವೃತ್ತಾಕಾರದ ವೇದಿಕೆಯಿದ್ದು ಅದನ್ನು ಚಕ್ರವರ್ತಿ ಸೂರ್ಯೋಪಾಸನೆಗೆ ಬಳಸಿರಬಹುದು. ತುರ್ಕಿಸ್ತಾನದ ರಾಜಕುಮಾರಿ, ಅಕ್ಬರನ ಪತ್ನಿ ತುರ್ಕಿಶ್ ಸುಲ್ತಾನಾಳ ಅರಮನೆ ಶ್ರೀಮಂತ ಕುಸುರಿ ಅಲಂಕರಣದಿಂದ ಆಭರಣದ ಪೆಟ್ಟಿಗೆಯಂತೆ ಕಾಣುವ ಕಟ್ಟಡ ಖ್ವಾಬ್ ಘರ್ (ಸ್ವಪ್ನಸೌಧ), ಅಕ್ಬರನ ಸ್ವಂತ ಶಯನಗೃಹ, ಒಂದು ಚೌಕಾಕಾರದ ಕೊಠಡಿ. ಇದರ ಗೋಡೆ, ಛಾವಣಿಗಳನ್ನು ಸುಂದರವಾದ ವರ್ಣಚಿತ್ರಗಳು ಹಾಗೂ ಪರ್ಷಿಯನ್ ಸಾಹಿತ್ಯದ ರಸವತ್ತಾದ ದ್ವಿಪದಿಗಳಿರುವ ಶಾಸನಗಳಿಂದ ಸಿಂಗರಿಸಲಾಗಿದೆ. ಈ ಕೊಠಡಿಯ ಮುಂದಿರುವ ಹಜಾರದ ಛಾವಣಿಯನ್ನು ಬಣ್ಣದ ಹೆಂಚುಗಳಂತೆ ಕಾಣುವ ಕಲ್ಲುಗಳಿಂದ ರೂಪಿಸಿದೆ. ಪಾಂಚ್-ಮಹಲ್ ಕ್ರಮೇಣ ಕಿರಿದಾಗುತ್ತ ಹೋಗುವ ವಿವಿಧ ರೀತಿಯ ಕಂಬ ತೊಲೆಗಳಿಂದಲೇ ಕಟ್ಟಿದ ಐದಂತಸ್ತಿನ ಆಕರ್ಷಕ ನಿರ್ಮಾಣ. ಅಂತಃಪುರದ ಅರಮನೆಗಳ ಬಿಸಿಲುಮಚ್ಚಿಗೆ (ಹಮ್ಮಾರಾ) ಹೊಂದಿಕೊಂಡಂತಿರುವ ಈ ಕಟ್ಟಡವನ್ನು ಅಂತಃಪುರದ ಸ್ತ್ರೀಯರು, ಮನರಂಜನೆ, ವಾಯುವಿಹಾರಗಳಿಗೆ ಬಳಸುತ್ತಿದ್ದರು. ಹಿಂದುಧರ್ಮದಿಂದ ಪ್ರಭಾವಿತಳಾದ ಅಕ್ಬರನ ಕ್ರೈಸ್ತರಾಣಿ ಮರಿಯಮ್‌ಳ ಅರಮನೆಯ ಕೊಠಡಿಯೊಂದರಲ್ಲಿ ಕೀರ್ತಿಮುಖ, ರಾಮ, ಹನುಮಂತರ ಕೆತ್ತನೆಗಳಿರುವ ಕಂಬವಿದೆ. ಅಲ್ಲದೆ ಇದರ ಗೋಡೆ, ಛಾವಣಿಗಳನ್ನು ವರ್ಣಚಿತ್ರಗಳಿಂದಲೂ ಸಿಂಗರಿಸಿದೆ. ಜೋಧಾಬಾಯಿಯ ಅರಮನೆ ಮುಕ್ತ ಅಂಗಳದ ಸುತ್ತ ನಾಲ್ಕು ಕೊಠಡಿಗಳಿರುವಂತಹ ವಿನ್ಯಾಸದ ಭವನವಾಗಿದ್ದು ಇದರ ಪಶ್ಚಿಮದ ಕೊಠಡಿಯನ್ನು ದೇವರ ಮನೆಯಂತೆ ಉಪಯೋಗಿಸಲಾಗಿತ್ತು. ಈ ಕಟ್ಟಡದ ಮೇಲಿನ ಅಂತಸ್ತಿನಲ್ಲಿ ಆಕಾಶನೀಲಿ ಬಣ್ಣದ ಹೆಂಚುಗಳನ್ನು ಹೊದಿಸಿರುವುದು ಗಮನಾರ್ಹ ಅಂಶ. ಕೆಳಗೆ ನಾಲ್ಕು ಕೊಠಡಿಗಳು ಮತ್ತು ಮೊದಲಂತಸ್ತಿನಲ್ಲಿ ಎರಡು ಕೊಠಡಿಗಳನ್ನು ಹೊಂದಿರುವ ಬೀರಬಲ್‌ನ ಅರಮನೆಯೆಂದು ಕರೆಯಲಾಗುವ ಕಟ್ಟಡ ಈ ಸಮುಚ್ಚಯದಲ್ಲಿರುವ ಇನ್ನೊಂದು ಅತಿಶಯ ಅಲಂಕರಣದ ಭವನ. (ಎಂ.ವಿ.ವಿ.)

**ಅಘೋರಿ ಪಂಥ:** ನರಮಾಂಸಭಕ್ಷಣವೇ ಮೊದಲಾದ ವಾಮಾಚಾರಗಳನ್ನುಳ್ಳ ಸಂನ್ಯಾಸಿಗಳ ಪಂಥ. ಇವರು ಅಘೋರ (ಘೋರನಲ್ಲದ) ಶಿವನ ಉಪಾಸಕರು. ಭಾರತದಲ್ಲಿ ಬಹಳ ಹಿಂದಿನಿಂದಲೂ ಬಿಹಾರ, ಪಶ್ಚಿಮ ಬಂಗಾಲ, ಅಜ್ಮೀರ, ಮೇವಾರ, ಬೀರಾರ್ ಮುಂತಾದ ಪ್ರಾಂತಗಳಲ್ಲಿ ಇವರು ಆಗಾಗ ಕಾಣಿಸಿಕೊಂಡಿದ್ದಾರೆ. 1901ರ ಸುಮಾರಿನಲ್ಲಿ ಇವರ ಸಂಖ್ಯೆ 5580 ಇತ್ತೆಂದು ತಿಳಿದುಬರುತ್ತದೆ. ಬೊಂಬಾಯಿನ ಮಾನವಶಾಸ್ತ್ರಸಂಘಕ್ಕಾಗಿ ತೆಗೆದಿರುವ ಕೆಲವು ಛಾಯಾಚಿತ್ರಗಳ ಪ್ರಕಾರ ಅಘೋರಿಗಳ ವೇಷಭೂಷಣಗಳು ಬಹು ವಿಚಿತ್ರವಾಗಿವೆ. ಮೈಗೆ ಸ್ಮಶಾನಭಸ್ಮಲೇಪ, ಎದೆಗೆ ತ್ರಿಮೂರ್ತಿಗಳ ಐಕ್ಯತೆಯನ್ನು ತೋರುವ ಕೆಲವು ಚಿಹ್ನೆಗಳು, ರುದ್ರಾಕ್ಷಿ ಮಾಲೆ, ಕಾಡಿನ ಕರಡಿಯ ಹಲ್ಲುಗಳು ಮತ್ತು ಹಾವಿನ ಮೂಳೆಗಳಿಂದ ಮಾಡಿದ ಸರಗಳು, ಕೈಯಲ್ಲಿ ನರಕಪಾಲ. ಈ ಫಕೀರರ ಸಂಖ್ಯೆ ಈಚೆಗೆ ಬಹು ಕಡಿಮೆಯಾಗಿದೆ. (ಜಿ.ಎಚ್.)

**ಅಚ್ಯುತರಾಯ:** 1520-42. ವಿಜಯನಗರದ ತುಳುವ ವಂಶದ ರಾಜ, ತುಳುವ ನರಸನಾಯಕನ ಮಗ. ಕೃಷ್ಣದೇವರಾಯನ ಬಲತಮ್ಮ. ನಾಗಲಾದೇವಿ ಈತನ ತಾಯಿ. ಅರಮನೆಯಲ್ಲಿ ಪಿತೂರಿಗಳನ್ನು ತಪ್ಪಿಸಲು ಕೃಷ್ಣದೇವರಾಯ ಇವನನ್ನು ಚಂದ್ರಗಿರಿಯಲ್ಲಿ ಸ್ವಲ್ಪಕಾಲ ಬಂಧನದಲ್ಲಿಟ್ಟಿದ್ದ. ಆದರೆ ಕೊನೆಗೆ ಇವನನ್ನೇ ಸಿಂಹಾಸನಕ್ಕೆ ಉತ್ತರಾಧಿಕಾರಿಯೆಂದು ನೇಮಿಸಿದ್ದರಿಂದ ಅವನ ಆಳಿಕೆಯ ಕೊನೆಯಲ್ಲಿ ಇವನೂ ಆಡಳಿತದಲ್ಲಿ ಸಹಕರಿಸುತ್ತಿದ್ದನೆಂದು ಕಾಣುತ್ತದೆ. 1528ರ ಒಂದು ಶಾಸನದಿಂದ ಇವನು ಚಕ್ರವರ್ತಿ ಬಿರುದನ್ನು ಹೊಂದಿ ರಾಜ್ಯವನ್ನಾಳುತ್ತಿದ್ದನೆಂದು ತಿಳಿದುಬರುತ್ತದೆ.

ಕೃಷ್ಣದೇವರಾಯ ನಿಧನನಾದಾಗ ಅಚ್ಯುತರಾಯ ಚಂದ್ರಗಿರಿಯಲ್ಲಿದ್ದ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅಳಿಯ ರಾಮರಾಯ ತನ್ನ ಮೈದುನನನ್ನು (ಕೃಷ್ಣದೇವರಾಯನ ಕಿರಿಯ ಮಗ) ರಾಜನನ್ನಾಗಿ ಮಾಡಲು ಪ್ರಯತ್ನಿಸಿದ. ಅವನನ್ನು ರಾಜನೆಂದು ಘೋಷಿಸಿ ರಾಜ್ಯವನ್ನು ಕಸಿದುಕೊಳ್ಳಲು ಪ್ರಯತ್ನಿಸಿದ. ಇದರಲ್ಲಿ ರಾಮರಾಯನಿಗೆ ಹಲವು ಅಧಿಕಾರಿಗಳ ಬೆಂಬಲವೂ ಇತ್ತು. 30,000 ಕಾಲಾಳುಗಳು, 3,000 ಆನೆಗಳು ಮತ್ತು ಅಶ್ವದಳಗಳನ್ನೊಳಗೊಂಡಿದ್ದ ಪ್ರಬಲ ಸೈನ್ಯವಿದ್ದ ಚೋಳ ಪ್ರಾಂತ್ಯಾಧಿಕಾರಿ ನರಸಿಂಗರಾಯ ದಂಡನಾಯಕ ಇವನ ಬೆಂಬಲಿಗನಾಗಿದ್ದ. ಅಚ್ಯುತರಾಯ ಚಂದ್ರಗಿರಿಯಿಂದ ಬರುವವರೆಗೆ ಇವನ ಪರವಾಗಿ ರಾಜ್ಯವನ್ನು ನರಸಿಂಗರಾಯನೇ ವಹಿಸಿಕೊಂಡ. ಕೃಷ್ಣದೇವರಾಯನ ಮರಣದ ಸುದ್ದಿ ತಿಳಿದ ಕೂಡಲೆ ರಾಮರಾಯನ ಪಿತೂರಿಯನ್ನು ತಿಳಿದಿದ್ದ ಅಚ್ಯುತರಾಯ ಚಂದ್ರಗಿರಿಯಿಂದ ಮೊದಲು ತಿರುಪತಿಗೆ ಹೋಗಿ ಅಲ್ಲಿ ರಾಜ್ಯಪಟ್ಟಾಭಿಷೇಕ ಮಾಡಿಕೊಂಡ. ಅಲ್ಲಿಂದ ಕಾಳಹಸ್ತಿಗೆ ಹೋಗಿ ಅಲ್ಲಿ ಎರಡನೆಯ ಬಾರಿ ರಾಜ್ಯಾಭಿಷೇಕ ಮಾಡಿಕೊಂಡ. ಅನಂತರ ತನ್ನ ಬೆಂಬಲಿಗರು ರಾಮರಾಯನ ಬಲವನ್ನು ಮುರಿದಿದ್ದನ್ನು ತಿಳಿದು 1530ರಲ್ಲಿ ವಿಜಯನಗರಕ್ಕೆ ಬಂದ. ರಾಮರಾಯನೊಡನೆ ಒಪ್ಪಂದ ಮಾಡಿಕೊಂಡು, ಕೃಷ್ಣದೇವರಾಯನ ಮಗನ ಪರವಾಗಿ ತಾವಿಬ್ಬರೂ ಆಳಿಕೆಯಲ್ಲಿ ಸಹಭಾಗಿಗಳಾಗಿರುವಂತೆ ಒಪ್ಪಿದ. ಇದಾದ ಅನಂತರ ಮೂರನೆಯ ಬಾರಿ ಇವನ ಪಟ್ಟಾಭಿಷೇಕ ವಿಜಯನಗರದಲ್ಲಿ ನಡೆಯಿತು. ಈ ಏರ್ಪಾಡು 1535ರವರೆಗೆ ಸಮರ್ಪಕವಾಗಿ ಮುಂದುವರಿಯಿತು. ಆ ಹೊತ್ತಿಗೆ ಕೃಷ್ಣದೇವರಾಯನ ಕಿರಿಯ ಮಗ ನಿಧನನಾದುದರಿಂದ ರಾಮರಾಯನ ಬಲ ಕುಗ್ಗಿತು. ಇದರಿಂದ ಅಚ್ಯುತರಾಯನ ಧೋರಣೆ ಬದಲಾಯಿತು; ಅಂತರ್ಯುದ್ಧ ಪ್ರಾರಂಭವಾಯಿತು. ಕೊನೆಗೆ ರಾಮರಾಯ ಅಚ್ಯುತರಾಯನನ್ನೇ ಸೆರೆಹಿಡಿದು ತಾನೇ ರಾಜನೆಂದು ಘೋಷಿಸಿಕೊಂಡ. ಆದರೆ ಇದಕ್ಕೆ ಶ್ರೀಮಂತರ ವಿರೋಧವಿದ್ದುದರಿಂದ ಅಚ್ಯುತರಾಯನ ತಮ್ಮನ ಮಗನಾದ ಸದಾಶಿವರಾಯನ ಹೆಸರಿನಲ್ಲಿ ಆಡಳಿತವನ್ನು ನಡೆಸಲಾರಂಭಿಸಿದ. ಅದೇ ವೇಳೆಗೆ ರಾಜ್ಯದ ದಕ್ಷಿಣ ಭಾಗದಲ್ಲಿ ಉದ್ಭವವಾದ ದಂಗೆಗಳನ್ನು ಅಡಗಿಸಲು ರಾಮರಾಯ ರಾಜಧಾನಿಯನ್ನು ಬಿಡಬೇಕಾಯಿತು. ಆ ಸಂದರ್ಭದಲ್ಲಿ ಅಚ್ಯುತರಾಯ ಬಿಡುಗಡೆ ಹೊಂದಿದ ಕೂಡಲೇ ರಾಮರಾಯ ಹಿಂದಿರುಗಿ ಅಚ್ಯುತರಾಯನೊಡನೆ ಒಪ್ಪಂದ ಮಾಡಿಕೊಂಡ. ಈ ಒಪ್ಪಂದದ ಪ್ರಕಾರ ಅಚ್ಯುತರಾಯನ ರಾಜತ್ವ ಭದ್ರವಾಯಿತು.

ಈ ಅಂತಃಕಲಹಗಳ ಜೊತೆಗೆ ಕೃಷ್ಣದೇವರಾಯನ ಮರಣದ ತರುಣದಲ್ಲೇ 1530-31ರಲ್ಲಿ ಬಿಜಾಪುರದ ಸುಲ್ತಾನನಾಗಿದ್ದ ಆದಿಲ್‌ಷಾ ವಿಜಯನಗರದ ಮೇಲೆ ದಂಡೆತ್ತಿ ಬಂದು, ರಾಯಚೂರು ಮತ್ತು ಮುದ್ಗಲ್ಲು ಪ್ರದೇಶವನ್ನು ಆಕ್ರಮಿಸಿಕೊಂಡ. ಮತ್ತೆ ಎರಡನೆಯ ಬಾರಿ ನಾಗಲಾಪುರದವರೆಗೆ ದಂಡೆತ್ತಿ ಬಂದು ಅದನ್ನು ಹಾಳುಮಾಡಿದ. ಆದರೆ ಅಚ್ಯುತರಾಯ ಅವನ್ನು ಪುನಃ ಸ್ವಾಧೀನಪಡಿಸಿಕೊಂಡ. 1531-32ರಲ್ಲಿ ತಿರುವಡಿ (ಈಗಿನ ತಿರುವನಂತಪುರ ಮತ್ತು ತಿನ್ನವೆಲ್ಲಿ ಜಿಲ್ಲೆಯ ಭಾಗಗಳು) ರಾಜನ ಮೇಲೆ ದಂಡೆತ್ತಿ ಹೋದ. ಇದರ ಫಲವಾಗಿ ತಿರುವಡಿ ರಾಜ ಅಧೀನನಾಗಿ ಕಪ್ಪ ಕೊಡಲು ಒಪ್ಪಿದ. ಆಗ ದಂಗೆ ಎದ್ದಿದ್ದ ಉಮ್ಮತ್ತೂರು ಪ್ರಭುಗಳನ್ನೂ ಅಡಗಿಸಿದ. ಸ್ವಲ್ಪ ಕಾಲಾನಂತರ ತಿರುವಡಿ ರಾಜ ಪಾಂಡ್ಯ ರಾಜ್ಯದ ದೊರೆ ಜಟಾವರ್ಮನ್ ತ್ರಿಭುವನ ಚಕ್ರವರ್ತಿ ವಲ್ಲಭ ದೇವನನ್ನು ಸೋಲಿಸಿ ಅವನನ್ನು ಪದಚ್ಯುತಗೊಳಿಸಿದ. ಅಚ್ಯುತರಾಯ ಪಾಂಡ್ಯ ರಾಜನಿಗೆ ಅವನ ರಾಜ್ಯವನ್ನು ಪುನಃ ಕೊಟ್ಟು ಅವನ ಮಗಳಾದ ವರದಾಂಬಳನ್ನು ವಿವಾಹವಾದ. 1531ರಲ್ಲಿ ಒರಿಸ್ಸ ರಾಜನಾಗಿದ್ದ ಪ್ರತಾಪರುದ್ರ ಹಿಂದೆ ಕೃಷ್ಣದೇವರಾಯನಿಗೆ ಒಪ್ಪಿಸಿದ್ದ ಕೃಷ್ಣಾನದಿಯ ದಕ್ಷಿಣ ಭಾಗದ ಪ್ರದೇಶಗಳನ್ನು ಸುಲ್ತಾನ ಕುತ್ಬ್‌ಷಾನ ಬೆಂಬಲದೊಡನೆ ಆಕ್ರಮಿಸಿದ. ಅಚ್ಯುತರಾಯ ಅವನನ್ನು ಸೋಲಿಸಿ, ಒರಿಸ್ಸಾದವರೆಗೆ ಹೋಗಿ ಅಲ್ಲಿ ತನ್ನ ವಿಜಯಸ್ತಂಭವನ್ನು ನೆಟ್ಟ. ಶಾಸನದ ಹೇಳಿಕೆಗಳ ಪ್ರಕಾರ ಸಿಂಹಳ ಅಚ್ಯುತರಾಯನ ಅಧೀನರಾಜ್ಯವಾಗಿತ್ತು. 1534ರಲ್ಲಿ ಇಸ್ಮಾಯಿಲ್ ಆದಿಲ್‌ಷಾನ ಮರಣಾನಂತರ ಅಚ್ಯುತರಾಯ ರಾಯಚೂರು ಪ್ರದೇಶವನ್ನು ಆಕ್ರಮಿಸಿಕೊಂಡ. ಕೃಷ್ಣದೇವರಾಯನ ಕಾಲದಲ್ಲಿ ಸ್ನೇಹಿತರಾಗಿದ್ದ ಪೋರ್ಚುಗೀಸರು ಇವನ ಕಾಲದಲ್ಲಿ ವಿರೋಧಿಗಳಾಗಿ ಮಾರ್ಪಟ್ಟು ತೀರಪ್ರದೇಶದಲ್ಲಿ ವಸಾಹತುಗಳನ್ನು ಸ್ಥಾಪಿಸಿ, ದೇವಸ್ಥಾನಗಳನ್ನು ಕೊಳ್ಳೆ ಹೊಡೆದು, ಜನರ ಕಗ್ಗೊಲೆ ಮಾಡಿದರು. 1536-37ರಲ್ಲಿ ಸಂಭವಿಸಿದ ಗುತ್ತಿಯ ದಂಗೆಯನ್ನು ಅಡಗಿಸಿದ.

ತನ್ನ ಆಳಿಕೆಯ ಉದ್ದಕ್ಕೂ ಇವನು ರಾಜಕೀಯ ಪ್ರಕ್ಷುಬ್ಧತೆಯ ಮಧ್ಯೆ ತೊಳಲಾಡಬೇಕಾಗಿ ಬಂದರೂ ರಾಜ್ಯದ ಒಟ್ಟು ಕ್ಷೇಮಕ್ಕೆ ಭಂಗಬರದಂತೆ ಧೈರ್ಯ ಹಾಗೂ ಉಪಾಯದಿಂದ ಆಡಳಿತ ನಿರ್ವಹಿಸಿದನೆಂದೇ ಹೇಳಬಹುದು. ಅಚ್ಯುತರಾಯ ದೇವಸ್ಥಾನಗಳಿಗೆ ಮತ್ತು ಬ್ರಾಹ್ಮಣರಿಗೆ ಅನೇಕ ದಾನವನ್ನು ಮಾಡಿದ್ದಾನೆ. ವೈಷ್ಣವಮತಾವಲಂಬಿಯಾಗಿದ್ದ ಇವನು ಕಂಚಿಯ ವರದರಾಜ ದೇವಸ್ಥಾನಕ್ಕೆ ಹಲವು ಅಮೂಲ್ಯ ಕಾಣಿಕೆಗಳನ್ನು ನೀಡಿ, ಅಲ್ಲಿ ಲಕ್ಷ ಹೋಮವನ್ನು ಮಾಡಿಸಿ, ಅನೇಕ ತೆರಿಗೆಗಳಿಗೆ ವಿನಾಯಿತಿ ನೀಡಿದ. ವಿಜಯನಗರದ ವಿಠಲ ಸ್ವಾಮಿ ದೇವಸ್ಥಾನದಲ್ಲಿ ಹನ್ನೆರಡು ಶ್ರೀವೈಷ್ಣವ ಆಳ್ವಾರರ ಪ್ರತಿಮೆಗಳನ್ನು ಸ್ಥಾಪಿಸಿದ. ಆನಂದನಿಧಿ ಎಂಬ ಪುದುವಟ್ಟನ್ನು ಸ್ಥಾಪಿಸಿದ. ಕಂಚಿಯಲ್ಲಿ ತುಲಾಭಾರವನ್ನು ಮಾಡಿಕೊಂಡು 1,000 ಗೋವುಗಳನ್ನು ದಾನಮಾಡಿದ. ಅಚ್ಯುತರಾಯಾಭ್ಯುದಯಮ್ ಮತ್ತು ಭಾಗವತ ಚಂಪೂಗಳನ್ನು ಬರೆದ ರಾಜನಾಥ ಡಿಂಡಿಮ, ವರದಾಂಬಿಕಾಪರಿಣಯದ ಕರ್ತೃ ತಿರುಮಲಾಂಬಾ ಇವನ ಪೋಷಣೆಯಲ್ಲಿದ್ದ ಮುಖ್ಯ ಕವಿಗಳು. ಅಚ್ಯುತರಾಯನಿಗೆ ವರದಾಂಬಿಕಾ ಅಲ್ಲದೆ ಇನ್ನಿಬ್ಬರು ಪತ್ನಿಯರೂ ಇದ್ದರು. ಇವನಿಗೆ ವೆಂಕಟಾದ್ರಿ ಎಂಬ ಮಗನಿದ್ದು, ಅವನಿಗೆ 1530ರಲ್ಲಿ ಯುವರಾಜಪಟ್ಟವೂ ಆಗಿತ್ತು. ಅಚ್ಯುತರಾಯ 1542ರಲ್ಲಿ ನಿಧನನಾದ. (ಎ.ವಿ.ವಿ.;ಬಿ.ಎಸ್.ಕೆ.)

**ಅಜಂತ:** ಮಹಾರಾಷ್ಟ್ರದ (ಹಿಂದಿನ ಹೈದರಾಬಾದ್ ಸಂಸ್ಥಾನದ) ಔರಂಗಾಬಾದ್ ಜಿಲ್ಲೆಯಲ್ಲಿರುವ ಪ್ರಸಿದ್ಧ ಐತಿಹಾಸಿಕ ಸ್ಥಳ. ಇದು ಮಲೆಸೀಮೆ, ಚಂದರ್, ಶತಮಾಲ, ವಿಂಧ್ಯಾದ್ರಿ, ಸಹ್ಯಾದ್ರಿ ಎಂದು ಕರೆಯಲ್ಪಡುವ ಪಶ್ಚಿಮಘಟ್ಟಗಳ ಬೆಟ್ಟಗಳ ನಡುವೆ ಇದೆ. ಇವುಗಳ ಸರಾಸರಿ ಎತ್ತರ 1200 ಮೀ. ಇವು ಮನಮಾಡದಿಂದ ಬೀರಾರಿನವರೆಗೆ ವಿಸ್ತರಿಸಿವೆ. ಅಲ್ಲಲ್ಲಿ ವ್ಯಾಪಾರಿಗಳ, ಸೈನ್ಯದ ಓಡಾಟ ಸಾಗಣೆಗೆಳಿಗನುಕೂಲವಾದ ಕಣಿವೆ ದಾರಿಗಳಿವೆ. ದಕ್ಷಿಣ ಪ್ರಸ್ಥಭೂಮಿಯ ಉತ್ತರಗಡಿಯಾದ ಈ ಶ್ರೇಣಿ ಬೀರಾರಿನಲ್ಲಿ 600 ಮೀ ಎತ್ತರವಾಗಿದೆ. ಅಜಂತ ಕಣಿವೆ ಔರಂಗಾಬಾದ್ ಮತ್ತು ಎಲ್ಲೋರಗಳಿಂದ ಸು.160 ಕಿಮೀ ದೂರದಲ್ಲಿದೆ.

(ಎಸ್.ಡಿ.ಎಂ.)

ಊರಿಗೆ 6ಕಿಮೀ ದೂರದಲ್ಲಿ ಪ್ರಪಂಚಪ್ರಸಿದ್ಧವಾದ ಅಜಂತ ಗುಹಾಂತರ ದೇವಾಲಯಗಳು ವಾಘ್ ಕಣಿವೆಯ ಮನೋಹರವಾದ ನೈಸರ್ಗಿಕ ಸನ್ನಿವೇಶದಲ್ಲಿವೆ. ಕಲೆಯ ಪ್ರಭೇದಗಳಾದ ಶಿಲ್ಪ, ಕೆತ್ತನೆ ಹಾಗೂ ವರ್ಣಲೇಪನ ಇವುಗಳ ಕೇಂದ್ರವೆನಿಸಿರುವ ಅಜಂತ ಭಾರತೀಯ ಪರಮೋತ್ಕೃಷ್ಟ ಕಲಾನೈಪುಣ್ಯದ ಚಿರಂತನಸಾಕ್ಷಿಯಾಗಿದೆ. ಇಲ್ಲಿ ಬೆಟ್ಟವನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ ಚಿತ್ರಗಳನ್ನು ಬಿಡಿಸುವ ಕಾರ್ಯ ಪ್ರಶ.ಪೂ.2ನೆಯ ಶತಮಾನದಲ್ಲಿ ಪ್ರಾರಂಭವಾಗಿ ಅವಿಚ್ಛಿನ್ನವಾಗಿ 7ನೆಯ ಶತಮಾನದವರೆಗೂ ಮುಂದುವರಿಯಿತು. ಶಾತವಾಹನ, ವಾಕಾಟಕ ಮತ್ತು ಬಾದಾಮಿ ಚಳುಕ್ಯ ಸಂತತಿಗಳ ಅರಸರು ಬೌದ್ಧಭಿಕ್ಷುಗಳಿಗಾಗಿ ಗುಹಾಂತರದೇವಾಲಯಗಳನ್ನು ನಿರ್ಮಿಸಿದರು. ಶಿಲ್ಪಿಗಳು ಗುಹಾಲಯಗಳ ನಿರ್ಮಾಣ ಹಾಗೂ ಕಲಾವಿನ್ಯಾಸದಲ್ಲಿ ತಮ್ಮ ಚಾತುರ್ಯವನ್ನು ತೋರಿಸಿರುವರು. ಮತನಿಷ್ಠೆ ಹಾಗೂ ಪರಂಪರಾನುಗತವಾಗಿ ಬೆಳೆಸಿಕೊಂಡು ಬಂದ ಕಲಾಪರಿಪೂರ್ಣತೆಯನ್ನು ವರ್ಣಲೇಪನದಲ್ಲಿ ಬೌದ್ಧಭಿಕ್ಷುಗಳು ಅತ್ಯುನ್ನತವಾಗಿ ಪ್ರದರ್ಶಿಸಿರುವರು.

7ನೆಯ ಶತಮಾನದಲ್ಲಿ ಅಜಂತಕ್ಕೆ ಭೇಟಿಯಿತ್ತಿದ್ದ ಯುವಾನ್‌ಚಾಂಗನ ಬರೆವಣಿಗೆಗಳಿಂದ, ಇಲ್ಲಿ ಬಹು ಸಂಖ್ಯೆಯಲ್ಲಿ ಬೌದ್ಧಭಿಕ್ಷುಗಳು ವಾಸಿಸುತ್ತಿದ್ದರೆಂದೂ ಇವರು ಹತ್ತಿರದಲ್ಲಿದ್ದ ಇಂದ್ರಕಾಂತವೆಂಬ ಪಟ್ಟಣಕ್ಕೆ ಆಗಾಗ ಭಿಕ್ಷಾಟನೆಗಾಗಿ ಹೋಗುತ್ತಿದ್ದರೆಂದೂ ತಿಳಿದುಬರುತ್ತದೆ. ಇವನು ಅಜಂತ ಕಲಾಕೇಂದ್ರದ ಪ್ರಕೃತಿ ಸೌಂದರ್ಯವನ್ನೂ ಗುಹಾಂತರ ದೇವಾಲಯಗಳ ಸೌಂದರ್ಯವನ್ನೂ ವಿಶೇಷವಾಗಿ ಪ್ರಶಂಸಿಸಿರುವನು. ಬೌದ್ಧಮತ ಕ್ಷೀಣಿಸಿದ ಮೇಲೆ ಈ ಸ್ಥಳ ನಿರ್ಲಕ್ಷಿಸಲ್ಪಟ್ಟಿತು. ಅನಂತರ 19ನೆಯ ಶತಮಾನದ ಪೂರ್ವಾರ್ಧದಲ್ಲಿ ಆಂಗ್ಲ ವಿದ್ವಾಂಸರ ಗಮನಕ್ಕೆ ಬಂದು ಅವರಲ್ಲಿ ವಿಸ್ಮಯವನ್ನೂ ಕುತೂಹಲವನ್ನೂ ಕೆರಳಿಸಿ ನಮ್ಮ ನಾಡಿನ ಹಾಗೂ ಪ್ರಪಂಚದ ಕಲಾತಜ್ಞರ ಗಮನವನ್ನು ಅತ್ತ ಸೆಳೆದುವು. ಅಜಂತದಲ್ಲಿ ಒಟ್ಟು 30 ಗುಹಾಂತರ ದೇವಾಲಯಗಳಿವೆ. ಅನೇಕ ಗುಹಾಲಯಗಳಲ್ಲಿ ಕಾಲ ಮತ್ತು ಪ್ರಕೃತಿಯ ಹೊಡೆತದಿಂದ ಚಿತ್ರಗಳು ನಾಶವಾಗಿವೆ. ಆದರೂ ಅವುಗಳ ಭವ್ಯಕಲ್ಪನೆಯನ್ನು ಚಿತ್ರಿಸಿಕೊಳ್ಳಲು ಎಡೆಯಿದೆ. ಪಳೆಯುಳಿಕೆಗಳನ್ನು ಇತ್ತೀಚೆಗೆ ಉದ್ಧಾರಮಾಡಿ ಕಾಪಾಡಿಕೊಂಡು ಬರುವ ಏರ್ಪಾಡು ಮಾಡಲಾಗಿದೆ. ಹಾಳಾಗಿರುವ ಭಾಗಗಳ ಪಡಿಯಚ್ಚು ಮಾಡಿಕೊಳ್ಳಲಾಗಿದೆ.

ದೇವಾನುದೇವತೆಗಳ, ಅಪ್ಸರೆಯರ, ಕಿನ್ನರರ, ಪ್ರಭು, ಪ್ರಭೃತಿಗಳ, ಗಣ್ಯರ, ವೀರರ, ಹಳ್ಳಿ, ನಗರಗಳ, ಸಂತರ ಮತ್ತು ಮಹರ್ಷಿಗಳ ಚಿತ್ರಗಳು ಸಹಜವಾಗಿ, ಸುಂದರವಾಗಿ, ಮನೋಜ್ಞವಾಗಿ ಒಡಮೂಡಿವೆ. ಒಂದು ಮತ್ತು ಎರಡನೆಯ ಗುಹಾಲಯಗಳಲ್ಲಿ ಪುಲಕೇಶಿಯ ಆಸ್ಥಾನವನ್ನೂ ಪರ್ಷಿಯ ರಾಯಭಾರಿಗಳ ಆಗಮನವನ್ನೂ ಜೀವಂತವಾಗಿ ಚಿತ್ರಿಸಿದ್ದಾರೆ. ಈ ಗುಹೆಗಳಲ್ಲಿರುವ ಜಿಂಕೆಗಳ ಹಾಗೂ ಶಿವಪಾರ್ವತಿಯರ ಭಿತ್ತಿಚಿತ್ರಗಳು ಅತ್ಯಂತ ಸುಂದರವಾಗಿವೆ. 17ನೆಯ ಗುಹೆಯಲ್ಲಿ ಬೌದ್ಧಮತದ ನಿಯಮನಿಷ್ಠೆಯಲ್ಲಿದ್ದ ನಿರಂತರ ಶ್ರದ್ಧೆ ಹಾಗೂ ಪರಂಪರಾನುಗುತವಾಗಿ ಬೆಳೆಸಿಕೊಂಡು ಬಂದ ಚಿತ್ರಕಲಾಭ್ಯಾಸ ಇವುಗಳ ಅನುಭವದ ಆನಂದ ಪರವಶತೆಯನ್ನೂ ಕೌಶಲವನ್ನೂ ಅನಾಮಧೇಯ ಬೌದ್ಧಭಿಕ್ಷುಗಳು ಪರಮೋತ್ಕೃಷ್ಟವಾಗಿ ಅಜಂತ ಗುಹಾಂತರ ದೇವಾಲಯಗಳಲ್ಲಿ ಪ್ರದರ್ಶಿಸಿದ್ದಾರೆ. ಸೌಮ್ಯತೆ, ಅಸದೃಶವಾದ ಕುಂಚಕೌಶಲ, ಎಣೆಯಿಲ್ಲದ ವರ್ಣವಿನ್ಯಾಸದ ವೈಖರಿ, ಅಸಾಧಾರಣ ಪ್ರೌಢಿಮೆ–ಇವುಗಳಿಗೆ ಅಜಂತ ಭಿತ್ತಿಚಿತ್ರಗಳು ಅದ್ವಿತೀಯ ನಿದರ್ಶನಗಳಾಗಿವೆ ಯೆಂದು ಕಲಾವಿಮರ್ಶಕರು ಪ್ರಶಂಸಿಸಿದ್ದಾರೆ. (ಜಿ.ಆರ್.ಆರ್.)

**ವಾಸ್ತುಶಿಲ್ಪ:** ಇಲ್ಲಿನ ನೈಸರ್ಗಿಕ ಸೌಂದರ್ಯ, ಶಿಲ್ಪಕಲೆ, ಚಿತ್ರಕಲೆ, ಎದುರಿಗೆ ಸಮೀಪದಲ್ಲಿಯೇ ಜುಳು ಜುಳು ಎಂದು ಮಂಜುಳ ಧ್ವನಿಗೈಯುತ್ತ ಹರಿಯುವ ವಾಘೋರಾ ನದಿ ಚಿಕ್ಕ ಏಳು ಜಲಪಾತಗಳಿಂದ ಕೂಡಿಕೊಂಡು ರಮ್ಯವಾಗಿದೆ. ನದಿಯ ಕೊಳ್ಳ ಗಂಭೀರ ಶಾಂತತೆಯಿಂದ ಮೆರೆಯುತ್ತಿದೆ.

ಸು.200 ಬೌದ್ಧ ಭಿಕ್ಷುಗಳು ಇಲ್ಲಿಯ ಗುಹೆಗಳಲ್ಲಿ ವಾಸಮಾಡಿಕೊಂಡಿದ್ದಿರಬೇಕು. ಇವರು ಸುತ್ತಮುತ್ತಲಿನ ನಿಸರ್ಗ ರಮಣೀಯತೆಯಲ್ಲಿ ತಮ್ಮ ಅಧ್ಯಾತ್ಮ ಸಾಧನೆಯನ್ನು ಮಾಡುತ್ತಿದ್ದರು. ಇವರ ದರ್ಶನ ಪಡೆದು ಇವರಿಗೆ ಅನ್ನ, ಬಟ್ಟೆಗಳನ್ನೊದಗಿಸಿ ಇವರಿಂದ ಆಶೀರ್ವಾದ ಪಡೆಯಲು ಜನರು ಇಲ್ಲಿಗೆ ಮೇಲಿಂದ ಮೇಲೆ ಬರುತ್ತಿದ್ದರು. ಸು.1 ಕಿಮೀ ಉದ್ದವಾದ ಕುದುರೆಲಾಳದ ಆಕಾರದ ಬೆಟ್ಟದ ನಿಡಿದಾದ ಓರೆಯಲ್ಲಿ ಈ ಗುಹಾಂತರ ದೇವಾಲಯಗಳನ್ನು ಕೊರೆದಿದ್ದಾರೆ. ಇವು ಹೆಚ್ಚಾಗಿ ಬೌದ್ಧಮತಕ್ಕೆ ಸಂಬಂಧಿಸಿದುವು. ಸ್ಥೂಲವಾಗಿ ಹೀನಯಾನ ಮತ್ತು ಮಹಾಯಾನ ಎಂಬ ಎರಡು ಬೌದ್ಧಪಂಥಗಳಿಗೆ ಸಂಬಂಧಪಟ್ಟುವೆಂದೂ ಬೌದ್ಧ ಮೂರ್ತಿಗಳ, ಬಣ್ಣದ ಚಿತ್ರಗಳು ಮತ್ತು ಕಂಬಗಳ ರಚನೆಯಿಂದ ವಿಂಗಡಿಸಬಹುದು. ಇವುಗಳ ರಚನೆ ಪ್ರ.ಶ.ಪೂ.2ನೆಯ ಶತಮಾನದಿಂದ ಆರಂಭವಾಗಿ 7ನೆಯ ಶತಮಾನದವರೆಗೂ ನಡೆಯಿತು. ಮೇಲಿನವು 28. ಜೊತೆಗೆ ಹೊಸದಾಗಿ 2 ಗುಹೆಗಳನ್ನು ಪತ್ತೆ ಮಾಡಲಾಗಿದೆ. ಇವುಗಳ ಆಕಾರಾದಿಗಳು ಉಳಿದವುಗಳಿಗಿಂತ ಭಿನ್ನವಾಗಿದೆ. ಒಟ್ಟಿನಲ್ಲಿ ಈ ಮೂವತ್ತರ ಕ್ರಮಾಂಕಗಳನ್ನು ಪಶ್ಚಿಮದ ತುದಿಯಿಂದ ಪ್ರಾರಂಭ ಮಾಡಿ ಪೂರ್ವದಲ್ಲಿರುವ 8ನೆಯ ಗುಹಾಂತರ ದೇವಾಲಯದವರೆಗೂ ಕೊಟ್ಟಿದ್ದಾರೆ.

ಅಜಂತದ ವಾಸ್ತುಶಿಲ್ಪ, ಮೂರ್ತಿಶಿಲ್ಪಗಳಲ್ಲಿಯ ಕಲೆ ಗಣನೀಯವಾಗಿ ಉತ್ತಮ ಮಟ್ಟದ್ದಾಗಿದ್ದು ವೈವಿಧ್ಯಮಯವಾಗಿದೆ. ಕಂಬಗಳ ಮಾಟ, ಅಲಂಕಾರ ಪದ್ಧತಿ, ಮೂರ್ತಿಗಳ ಮೈಕಟ್ಟು, ಪ್ರಮಾಣ, ಅಲಂಕಾರ ಕಲೆ ಮನ ಮೆಚ್ಚುವಂತಿವೆ. ನಿರ್ಮಾತೃಗಳಾದ ಸ್ಥಪತಿಗಳು ಒಳ್ಳೆ ದಕ್ಷತೆಯಿಂದ ಕೆಲಸ ಮಾಡಿ ಮೂರ್ತಿಗಳಲ್ಲಿ, ವರ್ಣಚಿತ್ರಗಳಲ್ಲಿ ಜೀವಕಳೆ ತುಂಬಿದ್ದಾರೆ.



19ನೆಯ ಗುಹಾ ಚೈತ್ಯಾಲಯ

ಅಜಂತದ ಚೈತ್ಯಗಳಿಗೆ ಕಂಬಗಳುಳ್ಳ ಮುಖಮಂಟಪ, ಹಿಂಬದಿಯಲ್ಲಿ ಅರ್ಧವರ್ತುಲಾಕಾರದ ನಡು ಅಂಕಣ, ಅದರ ಪಕ್ಕಗಳಲ್ಲಿ ಕಂಬಗಳ ಸಾಲಿನಿಂದ ಬೇರ್ಪಡಿಸಿದ ಬದಿಯ ಅಂಕಣಗಳು, ಸ್ತೂಪ, ಗುಮ್ಮಟ, ಚಾವಣಿಯ ಕೋಣೆ – ಇತ್ಯಾದಿ ಇರುತ್ತವೆ. ಹೀನಯಾನ ಪಂಥದ ವಿಹಾರಗಳಲ್ಲಿ ಬಾಗಿಲು ದಾಟಿದ ಕೂಡಲೆ ಒಂದು ವಿಶಾಲವಾದ ನಡುಸಾಲೆ ಕಾಣುತ್ತದೆ. ಇದರ ಮೂರು ಗೋಡೆಗಳಲ್ಲಿ ಕಲ್ಲಿನ ಹಾಸಿಗೆಯುಳ್ಳ ಸಣ್ಣ ಕೋಣೆಗಳಿವೆ. ಇವುಗಳ ಕಾಲ ಸು.3ನೆಯ ಶತಮಾನದವರೆಗೆ. ಮಹಾಯಾನ ತಲೆದೋರಿದಂದಿನಿಂದ ವಿಹಾರಗಳ ರಚನೆಯಲ್ಲಿ ಮಾರ್ಪಾಡಾಯಿತು. ಮಧ್ಯದ ಮಂಟಪದ ಸುತ್ತ ನಾಲ್ಕು ಕಡೆಗೂ ಹೋಗಲು ಬರುವಂತೆ ಮೊಗಸಾಲೆಗಳಾದುವು. ಎದುರಿನ ಗೋಡೆಯ ಮಧ್ಯದಲ್ಲಿ ಗರ್ಭಗುಡಿ ಬಂದಿತು. ಇದರಲ್ಲಿ ಬುದ್ಧನ ಮೂರ್ತಿಯನ್ನು ಕಡೆದು ಪೂಜಿಸಹತ್ತಿದ್ದರು. ಮಹಾಯಾನದಲ್ಲಿ ಚಿತ್ರ ಮತ್ತು ಮೂರ್ತಿಗಳಿಗೆ ಅವಕಾಶ ದೊರೆತದ್ದರಿಂದ ಬದಿಯ ಅಂಕಣಗಳಲ್ಲಿ ಮಾಡಗಳನ್ನು ಕೊರೆಯುವ ಮತ್ತು ಹೆಚ್ಚು ಹರವಾದ ಒಳಗೋಡೆಗಳನ್ನು ನಿರ್ಮಿಸುವ ಆವಶ್ಯಕತೆ ಉಂಟಾಯಿತು. ಇದಕ್ಕೆ ಕಂಬಗಳು ನೆರವಾದುವು.

11, 7 ಮತ್ತು 6ನೆಯ ವಿಹಾರಗಳು ಮಧ್ಯಂತರದ ಅವಸ್ಥೆಯನ್ನು ಸೂಚಿಸುತ್ತವೆ. ಇವುಗಳ ರಚನೆ ಹೀನಯಾನ ವಿಹಾರಗಳ ರಚನೆಯಿಂದ ಬೇರೆಯಾಗಿದ್ದರೂ ಮಂಟಪದಲ್ಲಿಯ ಕಂಬಗಳ ರಚನೆಯಲ್ಲಿ ಕಟ್ಟಡಗಳಲ್ಲಿ ಹಿಂದೆ ಬಳಸಲಾದ ನಮೂನೆಯಿದೆ. ಈ ಮೂರು ವಿಹಾರಗಳಲ್ಲಿ 11ನೆಯದು ಎಲ್ಲಕ್ಕೂ ಮೊದಲು ಹುಟ್ಟಿದೆ. ಇದರಲ್ಲಿಯ ನಾಲ್ಕು ಕಂಬಗಳು ಪ್ರಾಕಾರದ ಮಧ್ಯದಲ್ಲಿ ತಯಾರಿಸಿದ ಒಂದು ಮಂಟಪವನ್ನು ನಿರ್ದೇಶಿಸುತ್ತವೆ. 7ನೆಯದರಲ್ಲಿ

# ಅಜಂತ

ಇಂಥ ಎರಡು ಮಂಟಪಗಳನ್ನು ಕಾಣಬಹುದು. ಮುಂದೆ ಅನೇಕ ಕಂಬಗಳು ಕೂಡಿಕೊಂಡು ದೊಡ್ಡ ಮಂಟಪದ ರಚನೆಗೆ ಕಾರಣವಾದುವು. ಇವುಗಳಲ್ಲಿ 6ನೆಯ ಶತಮಾನದಲ್ಲಿ ನಿರ್ಮಿಸಲಾದ 16ನೆಯ ಗುಹಾಲಯ ಕಲೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು. ಇದನ್ನು ಬೆಟ್ಟದೊಳಕ್ಕೆ 19.50 ಮೀ ಕೊರೆದು ನಿರ್ಮಿಸಲಾಗಿದೆ. 20 ಕಂಬಗಳನ್ನು ಅಂದವಾಗಿ ಕೊರೆದಿದ್ದಾರೆ. ಮುಖಮಂಟಪದಲ್ಲಿ 5 ಕಂಬಗಳಿವೆ. ರಂಗಮಂಟಪದಲ್ಲಿ ಪ್ರತಿಯೊಂದು ಕಡೆಯೂ 7 ಚಿಕ್ಕ ಚಿಕ್ಕ ಕೋಣೆಗಳಿವೆ. ಗರ್ಭಗೃಹದಲ್ಲಿ ಪ್ರಲಂಬ–



ಬೌದ್ಧ ಗುಹಾಲಯಗಳ ಸಮಗ್ರ ನೋಟ

ಪಾದಾಸನನಾಗಿರುವ ಬುದ್ಧದೇವನ ಮೂರ್ತಿ ಇದೆ. 14ನೆಯ ಗುಹಾಲಯ ಸರಿಸುಮಾರಾಗಿ ಇದೇ ಮಾದರಿಯನ್ನು ಹೋಲುವುದು. ಇಲ್ಲಿ 22.50 ಮೀ ವಿಸ್ತಾರವಾದ ಹಜಾರವಿದೆ. 20 ಸುಂದರವಾದ ಕಂಬಗಳನ್ನು ಕೊರೆದು ಬಿಡಿಸಲಾಗಿದೆ. ಈ ಗುಹಾಲಯವನ್ನು ಅತ್ಯಂತ ಸುಂದರವಾದ ಮಂದಿರವನ್ನಾಗಿಸಬೇಕೆಂಬ ಇಚ್ಛೆಯಿಂದ ಕೊರೆದಂತಿದೆ. ಆದರೆ ಕೊರೆಯುವ ಕೆಲಸ ಪೂರ್ಣವಾಗಿಲ್ಲ. ಈ ಗುಹಾಲಯದಲ್ಲಿ ವಾಕಾಟಕ ಹರಿಷೇಣನ ಶಾಸನವಿದೆ. 1, 2, 4, 17, 21, 23 ಮತ್ತು 24 ನೆಯ ಗುಹಾಲಯ ಗಳು ಕಲಾದೃಷ್ಟಿಯಿಂದ ಉನ್ನತವಾದ ಕಟ್ಟಡ ವಿನ್ಯಾಸವನ್ನು ಪ್ರದರ್ಶಿಸುತ್ತವೆ. 1 ಮತ್ತು 2ನೆಯ ಗುಹಾಲಯಗಳು ಮನೋಜ್ಞವಾದ ಶಿಲ್ಪ ಹಾಗೂ ಕೆತ್ತನೆಯ ಕೆಲಸಗಳಿಗೆ ಉದಾಹರಣೆಯಾಗಿವೆ. ಕಂಬಗಳು ಅಂದವಾದ ಕೆತ್ತನೆಯ ಕೆಲಸ ಹಾಗೂ ಸುಂದರವಾಗಿ ಕಡೆದ ಬೋದಿಗೆಗಳನ್ನು ಹೊಂದಿವೆ. 19 ಮತ್ತು 26ನೆಯ ಗುಹಾಲಯಗಳಲ್ಲಿಯೂ ಉತ್ತಮ ಕೆತ್ತನೆಯ ಕೆಲಸಗಳನ್ನು ನೋಡಬಹುದು. ಈ ಕೆಲಸಗಳು ಮುಂಬರಲಿದ್ದ ದಕ್ಷಿಣ ಭಾರತದ ಶಿಲ್ಪ ಕಲಾಸಂಪನ್ನತೆಯ ಮುಂಬೆಳಗಿನ ಪ್ರಜ್ಞೆಯಂತಿದೆ ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

2ನೆಯ ಗುಹಾಂತರ ದೇವಾಲಯದಲ್ಲಿ ಬ್ರಾಹ್ಮಿಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿರುವ ಕ್ಷಾಂತಿವಾದಿ (ತಾತ್ಪರ್ಯ ಬೋಧಕ), ಸುರಸುತಿ (ಸರಸ್ವತಿ) ಮೈತ್ರೀ, ಬಲಜಾತಕ ಕ್ಷಾಂತಿಜಾತಕದ ಒಂದೆರಡು ಶ್ಲೋಕಗಳನ್ನು ಬಣ್ಣದಲ್ಲಿ ಬರೆಯಲಾಗಿದೆ. 19ನೆಯದು ಉತ್ತಮರೀತಿಯಲ್ಲಿ ರಚಿತವಾದ ಚೈತ್ಯಾಲಯ. ಇದೇನೂ ಅಷ್ಟು ದೊಡ್ಡದಲ್ಲ. ಹೊರಗೆ 11.40 ಮೀ ಉದ್ದ 9.60 ಮೀ ಅಗಲವಾಗಿದೆ. ಒಳಭಾಗದ ಉದ್ದ 13.80 ಮೀ, ಅಗಲ 7.20 ಮೀ. ಹಿಂದೆ ಒಂದು ಹೊರಪ್ರಾಕಾರವೂ ಎರಡೂ ಬದಿಗಳಲ್ಲಿ ಕಿರುದೇವಾಲಯಗಳೂ ಇದ್ದಿರಬೇಕು. ಮುಂದಿನ ಗೋಡೆಗೆ ಮೂರು ಪ್ರವೇಶದ್ವಾರಗಳ ಬದಲಾಗಿ ಒಂದೇ ಇದೆ. ಮುಂದುಗಡೆ ಹೊರಮಂಟಪ ಇದ್ದು ಚೈತ್ಯಾಲಯಕ್ಕೆ ಕಲಾಸಿರಿಯನ್ನು ತಂದುಕೊಟ್ಟಿದೆ.

26ನೆಯದೂ ಒಂದು ಚೈತ್ಯಾಲಯ. 20.40 ಮೀ ಉದ್ದ, 10.80 ಮೀ ಅಗಲ ಮತ್ತು 9.30 ಮೀ ಎತ್ತರವಿದೆ. ಪ್ರವೇಶದ್ವಾರದಲ್ಲಿಯ ಎರಡು ಕಂಬಗಳಲ್ಲದೆ ಇದಕ್ಕೆ 3.60 ಮೀ ಎತ್ತರವಾದ 26 ಕಂಬಗಳಿವೆ. ಅಲಂಕಾರ ಹೆಚ್ಚು. ಸ್ತೂಪದ ಮೇಲೆ ಹಲವು ಕೆತ್ತನೆಗಳಿವೆ. ಆದರೆ, ಮೊದಲಿನ ಚೈತ್ಯಗಳಲ್ಲಿದ್ದ ನಯ ಮತ್ತು ಲಯ ಇಲ್ಲಿ ತಪ್ಪಿದೆ. ಚೈತ್ಯ ಕಿಂಡಿಯ ಹತ್ತಿರ ಸುಂದರವಾದ ಅನೇಕ ಆಕೃತಿಗಳನ್ನು ಕೆತ್ತಿದ್ದಾರೆ. ಇಲ್ಲಿಯ ಮೂರ್ತಿಗಳು ವಿಶೇಷ ಪ್ರಮಾಣದಲ್ಲಿದ್ದರೂ ವೈವಿಧ್ಯವಿಲ್ಲದ್ದರಿಂದ ಮನಸ್ಸನ್ನು ಸೆಳೆಯುವುದಿಲ್ಲ.

1ನೆಯ ಗುಹಾಂತರ ದೇವಾಲಯದಲ್ಲಿಯ ಶಿಲಾಮೂರ್ತಿಗಳು ಬಹು ಸುಂದರವಾಗಿವೆ. ಮುಂಭಾಗದಲ್ಲಿ ಉತ್ತಮ ರೀತಿಯ ಕೆತ್ತನೆ ಕೆಲಸ ಮಾಡಿದ್ದಾರೆ. 26ನೆಯ ಗುಹಾಂತರ ದೇವಾಲಯದಲ್ಲಿ ಬುದ್ಧ ನಿರ್ಯಾಣದ ಬೃಹತ್ ಚಿತ್ರವನ್ನು ಕೆತ್ತಿದ್ದಾರೆ. ಆನಂದನೇ ಮೊದಲಾದ ಅವನ ಅನುಯಾಯಿಗಳು ದೇಹದ ಹತ್ತಿರ ಕುಳಿತು ಶೋಕಿಸುತ್ತಿದ್ದಾರೆ. ಚಿತ್ರಸಂಯೋಜನೆ ಸುಂದರವಾಗಿದೆ. 1ನೆಯ ಗುಹಾಂತರ ದೇವಾಲಯದ ಒಂದು ಕಂಬದ ಬೋಧಿಗೆಯ ಮೇಲೆ ನಾಲ್ಕು ದೇಹ, ಒಂದೇ ಮುಖವುಳ್ಳ ನಾಲ್ಕು ಜಿಗರೆಗಳನ್ನು ಬಹು ಸುಂದರವಾಗಿ, ಜೀವಂತವೋ ಎನ್ನುವಂತೆ ಕೆತ್ತಿದ್ದಾರೆ. ಚೌಕಟ್ಟಿನ ಮೇಲಿರುವ ಕೆತ್ತನೆ ಮನಮೋಹಕವಾಗಿದೆ. ಅಜಂತದ ಒಂದು ವಿಹಾರದಲ್ಲಿ ಗರ್ಭಗುಡಿಯಲ್ಲಿಯ ಬುದ್ಧನ ಮೂರ್ತಿ, ಎದುರಿನಿಂದ ನೋಡಿದರೆ ಗಂಭೀರ ಮೌನದಲ್ಲಿದ್ದಂತೆ ತೋರುತ್ತದೆ. ಅದನ್ನೇ 45$^{0}$ ಕೋನದಲ್ಲಿ ನಿಂತು ನೋಡಿದರೆ ನಗುವಂತೆ ತೋರುತ್ತದೆ. (ಎ.ಎಂ.ಎ.)

**ಪರ್ಸಿಬ್ರೌನ್‌ನ ಅಭಿಪ್ರಾಯದಂತೆ ಇವುಗಳ ಕಾಲಮಾನ ಈ ಪ್ರಕಾರವಿದೆ:**

| | |
|---|---|
| 1 ಹೀನಯಾನ ಗುಹಾಂತರ ದೇವಾಲಯಗಳ ಗುಂಪು (ಪ್ರ.ಶ.ಪೂ.2ನೆಯ ಶತಮಾನದಿಂದ ಪ್ರ.ಶ.2ನೆಯ ಶತಮಾನ) | 8, 12, 13ನೆಯ ವಿಹಾರಗಳು 9, 10ನೆಯ ಚೈತ್ಯ ಗೃಹಗಳು. |
| 2 ಮಧ್ಯಂತರ (ಪ್ರ.ಶ. 2ನೆಯ ಶತಮಾನದಿಂದ ಸು.450 ರವರೆಗೆ.) | ------ |
| 3 ಮಹಾಯಾನ ಗುಹಾಂತರ ದೇವಾಲಯಗಳ ಗುಂಪು (450 ರಿಂದ 642ರ ವರೆಗೆ) | 11. 7, ಮತ್ತು 6ನೆಯ ವಿಹಾರಗಳು (450–500) |
| 19ನೆಯ ಚೈತ್ಯಾಲಯ (ಸು. 550) | 15. 10, 16, 17, 20ನೆಯ ವಿಹಾರಗಳು ಮತ್ತು 21 ರಿಂದ 25ರ ವರೆಗಿನ ವಿಹಾರಗಳು ಮತ್ತು 26ನೆಯ ಚೈತ್ಯಗೃಹ (550–600). |

1ರಿಂದ 5ರ ವರೆಗಿನ ವಿಹಾರಗಳು (600–25) 26 ಮತ್ತು 27ನೆಯ ಗುಹಾಂತರ ದೇವಾಲಯಗಳು (625–42).

ಆದರೆ ಈಚೆಗೆ ಸಾಮಾನ್ಯವಾಗಿ ಅಜಂತದ ಗುಹೆಗಳನ್ನು ಕಾಲಾನುಕ್ರಮವಾಗಿ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ:

1ನೆಯ ಗುಂಪು – 8–13 ಗುಹೆಗಳು.(ಪ್ರ.ಶ.ಪೂ.3–1ನೆಯ ಶತಮಾನದವರೆಗೆ ಸಾತವಾಹನರ ಪೋಷಣೆ).

2ನೆಯ ಗುಂಪು – 14–19 ಗುಹೆಗಳು.(ಪ್ರ.ಶ.ಪೂ.1–ಪ್ರ.ಶ.6ನೆಯ ಶತಮಾನದವರೆಗೆ ವಾಕಾಟಕ ರಾಜರ ಪೋಷಣೆ.)

3ನೆಯ ಗುಂಪು – 1–6 ಗುಹೆಗಳು (4–7ನೆಯ ಶತಮಾನದವರೆಗೆ).

7ನೆಯ ಗುಹೆಯ ನಿರ್ಮಾಣದ ಕಾಲ ನಿರ್ಣಯವಾಗಿಲ್ಲ. ಸಿಸ್ಟರ್ ನಿವೇದಿತಾ 3ನೆಯ ಶತಮಾನವೆಂದೂ ಮುಕುಳ್‌ಡೇ 1ನೆಯ ಶತಮಾನವೆಂದೂ ನಿರ್ಣಯಿಸುತ್ತಾರೆ. ಆದರೆ 9, 10ನೆಯ ಗುಹೆಗಳು ಅತಿ ಪ್ರಾಚೀನವಾದುವೆನ್ನುವುದರಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ (ಪ್ರ.ಶ.ಪೂ.350–200). ನೀಹಾರ್ ರಂಜನ್‌ರಾಯ್ ಅವರ ಅಭಿಪ್ರಾಯದಂತೆ ಇವು 1ನೆಯ ಶತಮಾನದ ಮಧ್ಯಕಾಲಕ್ಕೆ ಸೇರುತ್ತವೆ.

2, 3, 4, 5, 23, 24, 27ನೆಯ ಗುಹೆಗಳು ಮತ್ತು 21ನೆಯ ಗುಹೆಯ ಮುಂಭಾಗ ಅಸಂಪೂರ್ಣವಾದವು. ಮಿಕ್ಕವೆಲ್ಲವು ಸಂಪೂರ್ಣವಾದವು. 7, 8, 11ನೆಯ



10ನೆಯ ಬೌದ್ಧ ಗುಹಾಲಯ

ಗುಹೆಗಳು ಪ್ರಾಕೃತಿಕ ಗವಿಗಳಾಗಿದ್ದು ಕೆಲವು ಮಾರ್ಪಾಡುಗಳಿಂದ ದೇವಾಲಯಗಳಾಗಿವೆ. ಈ ಗುಹೆಗಳ ಪೈಕಿ 2, 9, 10, 15, 16, 19, 26, 29. ಪೂಜಾರ್ಹವಾದ ಚೈತ್ಯಗಳು. ಮಿಕ್ಕವು ಭಿಕ್ಕುಗಳ ವಾಸಕ್ಕೆ ಕೊರೆದ ವಿಹಾರ ಅಥವಾ ಸಂಗ್ರಾಮಗಳು. ಆದರೆ, 15, 25ರ ಗುಹೆಗಳು ಎರಡೂ ಉದ್ದೇಶಗಳಿಗೆ ಅನುಕೂಲವಾದವು. 8ನೆಯ ಗುಹೆ ಬೆಟ್ಟದ ಬುಡದಲ್ಲಿಯೂ 29ನೆಯದು ಬೆಟ್ಟದ ಶಿಖರದಲ್ಲೂ ನಿರ್ಮಿತವಾಗಿವೆ. 8, 9, 10, 12, 13ನೆಯ ಗುಹೆಗಳು ಬೌದ್ಧರ ಹೀನಯಾನ ಪಂಗಡಕ್ಕೂ ಮಿಕ್ಕವು ಮಹಾಯಾನ ಪಂಗಡಕ್ಕೂ ಸೇರಿವೆ. ಹೀನಯಾನ ಗುಹೆಗಳಲ್ಲಿ ಶಿಲ್ಪಚಿತ್ರಗಳು ಕಡಿಮೆ; ಮಹಾಯಾನದವುಗಳಲ್ಲಿ ಹೆಚ್ಚು, ಏಕೆಂದರೆ ಹೀನಯಾನ ಮತದಲ್ಲಿ ಬುದ್ಧನ ಸಂಕೇತಗಳಾದ ಪಾದಗಳು, ಧರ್ಮಚಕ್ರ,

ದಂತಗಳು, ಸಂಪುಟಗಳಲ್ಲಿಟ್ಟು ಜೋಪಾನ ಮಾಡಿದ ಬೂದಿ – ಇವಕ್ಕೆ ಮಾತ್ರ ಸಲ್ಲತಕ್ಕದ್ದು. ದೈಹಿಕರೂಪವನ್ನು ಶಿಲ್ಪ ಚಿತ್ರಾದಿಗಳಲ್ಲಿ ಕೂಡ ನಿಷೇಧಿಸಲಾಗಿತ್ತು (ದಶಧಮ್ಮಿಕಸುತ್ತ; ವಿಶುದ್ಧಿಮಗ್ಗ) ಹೀನಯಾನ ಯುಗದಲ್ಲಿ ಬುದ್ಧನ ಜನನ, ತ್ಯಾಗ, ಜ್ಞಾನಸಂಪಾದನೆ, ಮಹಾಪರಿನಿರ್ವಾಣ– ಇವು ಮಾತ್ರ ಶಿಲ್ಪದಲ್ಲಿ ಪ್ರದರ್ಶಿತವಾದವು. ಏಕೆಂದರೆ ಧರ್ಮಸೂತ್ರದ ಪ್ರಕಾರ ದೀಕ್ಷೆ ಪಡೆದವರು ಬಣ್ಣಗಳಿಂದ ಚಿತ್ರಿತವಾದುವನ್ನು, ಒಡವೆ ನವರತ್ನಗಳು ಮುಂತಾದ ಅಲಂಕಾರ ವಸ್ತುಗಳನ್ನು ನೋಡಲು ಕೂಡ ಪ್ರಯತ್ನಿಸಬಾರದು. ಪಂಚೇಂದ್ರಿಯಗಳಿಗೆ ಹಿತವಾದ ಸಂಗೀತ, ಸಾಹಿತ್ಯ, ಮೃಷ್ಟಾನ್ನ ಮುಂತಾದುವೆಲ್ಲವೂ ಅವರಿಗೆ ನಿಷಿದ್ಧ. ಮಹಾಯಾನ ಪಂಥದಲ್ಲಿ (ನಾಗಾರ್ಜುನ) ಬುದ್ಧನ ದೈಹಿಕ ನಿರೂಪಣೆ ಮತ್ತು ಅವನ ಪೂರ್ವಜನ್ಮದ ಕಥನ ರೂಢಿಗೆ ಬಂತು.

**ಭಿತ್ತಿಚಿತ್ರಗಳು:** ಅಜಂತದ ಗುಹೆಗಳಲ್ಲಿ ಕೆಲವು (1, 2) ಚಿತ್ರರಚನೆಯಲ್ಲೂ ಕೆಲವು (19, 26) ವಾಸ್ತುಶಿಲ್ಪದಲ್ಲೂ ಮತ್ತೆ ಕೆಲವು (16, 17) ವಾಸ್ತುಶಿಲ್ಪ, ಮೂರ್ತಿ ಶಿಲ್ಪ, ಚಿತ್ರಾಲಂಕಾರಗಳಲ್ಲೂ ಅಗ್ರಸ್ಥಾನ ಪಡೆದಿವೆ. ಹೀನಯಾನ ಕ್ಷೀಣಿಸಿದ ಅನಂತರ ಅಂದರೆ ಅಶೋಕನ ತರುವಾಯ ಮಹಾಯಾನ ವೃದ್ಧಿ ಹೊಂದಿದ ಮೇಲೆ, ಪಾರಸಿಕ, ಚೀನ,

ಮಹಾಜನ ಜಾತಕದ ಒಂದು ದೃಶ್ಯ (ವರ್ಣಚಿತ್ರ)

ಗಾಂಧಾರ, ಕಲಾಸಂಪ್ರದಾಯಗಳು ಹೈಂದವ ಸಂಸ್ಕೃತಿಯ ಮೇಲೆ ಪರಿಣಾಮ ಬೀರಿದ ಅನಂತರ, ಚಿತ್ರದ ವಸ್ತು ವಿಸ್ತೃತವಾಯಿತು. ಬುದ್ಧನ ಜೀವಿತಕ್ಕೆ ಹೊಂದಿದ ಜಾತಕ ಕಥಾನಕ, ಆರ್ಯದೇವನ ಜಾತಕಮಾಲೆ, ಅಶ್ವಘೋಷನ ಬುದ್ಧಚರಿತಂ, ಸೌಂದರಾನಂದ, ಸಾರಿಪುತ್ರ ಪ್ರಕರಣ, ಪ್ರಮುಖ ಭಿಕ್ಕುಗಳ ಜೀವಿತಗಳು, ಚರಿತ್ರಾತ್ಮಕ ಘಟನೆಗಳು, ಲೌಕಿಕ ಜೀವನದ ನಾನಾ ಸನ್ನಿವೇಶಗಳು, ಪ್ರಕೃತಿ ಸೌಂದರ್ಯವನ್ನು ಸಾರುವ ಮೃಗ, ಪಕ್ಷಿ, ವೃಕ್ಷ, ಪುಷ್ಪಸಂಪತ್ತುಗಳು ಮುಂತಾದುವು ವರ್ಣಚಿತ್ರಗಳಲ್ಲಿಯೂ ಶಿಲ್ಪದಲ್ಲಿಯೂ ಅತ್ಯಂತ ಸೊಬಗಿನಿಂದ ರೂಪುಗೊಂಡವು. ಈ ಸಂದರ್ಭದಲ್ಲಿ ಅಜಂತ ಚಿತ್ರಕಾರನ ಮೇಲ್ಮಟ್ಟದ ಕಲಾದೃಷ್ಟಿ ಗಣನೀಯವಾದುದು. ಇವನ ಯೋಗದೃಷ್ಟಿಯಲ್ಲಿ, ಜೀವಿಗಳೆಲ್ಲ ಸಮಾನತೆ ಪಡೆದು ಅವರವರ ಸೊಬಗನ್ನು ಸ್ವೇಚ್ಛೆಯಿಂದ ಪ್ರಪಂಚಕ್ಕೆ ಬೀರುತ್ತ ಮಾನವ ಜಾತಿಯನ್ನು ಶಾಂತಿಯುತವಾದ ಉನ್ನತಮಟ್ಟಕ್ಕೆ ಎತ್ತುವುದಲ್ಲದೆ, ಎಲ್ಲರ ಜನಸ್ಥಾನವಾದ ಪರಮಾತ್ಮನಲ್ಲಿ ಐಕ್ಯತೆ ಪಡೆಯಲು ಸಹಕಾರಿಯಾಗುತ್ತಿದ್ದವು. ಇವನ ದೇವತಾರಾಧನೆಯಲ್ಲಿ ಪ್ರಕೃತಿ ಸೌಂದರ್ಯಾರಾಧನೆ ಮೊದಲ ಮೆಟ್ಟಿಲಾಗಿತ್ತು. ಇವನಾಕಾಂಕ್ಷೆ ಜೀವನ ಸಮನ್ವಯ; ಗುರಿ, ಪರಮಾತ್ಮನನ್ನು ಸೇರುವಿಕೆ; ಇವನ ವೃತ್ತಿ ಬ್ರಹ್ಮಚರ್ಯ. ಇವನ ಮನೋಭಾವ ಬುದ್ಧನ ಮನೋಭಾವದಂತೆ ಅತಿ ಮೃದು. ಸೂರ್ಯಚಂದ್ರಾದಿಗಳ ಬೆಳಕಿನಂತೆ ಅವನ ಕರುಣೆ ವಿಶ್ವದಾದ್ಯಂತ ಹರಡುತ್ತ ಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡುವ ಚೇತನವನ್ನು ಹೊಂದಿತ್ತು. ಚಿತ್ರದ ಹಿನ್ನೆಲೆಯಾದ ಪಶು ಪಕ್ಷಿ ಪ್ರಾಣಿಗಳ ಸಮುದಾಯದ ಚಟುವಟಿಕೆಗಳಿಗೂ ಮುನ್ನೆಲೆಯಾದ ಮಾನವ ಪ್ರವೃತ್ತಿಗಳಿಗೂ (ಜಾತಕ ಕಥನ ದೃಶ್ಯಗಳು) ಇರುವ ಅನುಪಮ ಸಮ್ಮೇಳನ ಪ್ರತಿಯೊಂದು ವರ್ಣಚಿತ್ರದಲ್ಲೂ ಮನೋಜ್ಞವಾಗಿ ರೂಪಿತವಾಗಿದೆ. ಇಂಥ ಸಮ್ಮೇಳನ ಇವನ ಕಲ್ಪನಾಶಕ್ತಿಯಲ್ಲಿ, ರಚನಾವಿಧಾನದಲ್ಲಿ ನಿರ್ದಿಷ್ಟವಾಗಿ ಕಂಡುಬರುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಆಧ್ಯಾತ್ಮಿಕ ಒಗ್ಗಟ್ಟನ್ನು ಇವನು ತನ್ನ ಹಲವಾರು ವರ್ಣಚಿತ್ರಗಳಲ್ಲಿ ಸಾಧಿಸಿರುತ್ತಾನೆ. ಇವನ ದಯೆ, ಸರ್ವಾಂತರ್ಯಾಮಿಯಾದ ದೇವತಾ ಸ್ವರೂಪವನ್ನು ತಾಳಿ, ಕುಂಚರೇಖೆಗಳಲ್ಲಿ ತುಂಬಿ ತುಳುಕಾಡುತ್ತಿದೆ. ಇವನ ಚಿತ್ರ ಕೇವಲ ಬಣ್ಣಗಳ ಸಮ್ಮಿಲನ ಮಾತ್ರವಲ್ಲ ತನ್ನ ಮನೋವೃತ್ತಿಯಲ್ಲಿ ಸಾಧಿಸಿದ ಮಾಧುರ್ಯವನ್ನು ತನ್ನ ಕೃತಿಗಳಲ್ಲಿ ಅವಿಚ್ಛಿನ್ನವಾಗಿ ಇಳಿಸಿದ್ದಾನೆ.

ಅಜಂತದ ಚಿತ್ರಗಳ ಮುಖ್ಯಗುರಿ ಧರ್ಮಬೋಧನೆ. ಬೌದ್ಧ ಭಿಕ್ಷುಗಳು, ಕೆಂಪು, ಹಸುರು, ಹಳದಿ, ಊದ, ಧೂಮ್ರ ಮತ್ತು ನೀಲವರ್ಣಗಳಿಂದ ಬಿಡಿಸಿರುವ ಭಿತ್ತಿಚಿತ್ರಗಳು ವರ್ಣನಾತೀತವಾದ ಸೌಂದರ್ಯವನ್ನೂ ಕೌಶಲವನ್ನೂ ಪ್ರದರ್ಶಿಸುತ್ತವೆ. ಚಿತ್ರಕಾರರು ಸಾಂಪ್ರದಾಯಿಕ ನೀತಿಯನ್ನನುಸರಿಸದಾಗ್ಯೂ ತಮ್ಮ ಪ್ರತಿಭೆ ಮತ್ತು ಸ್ವಾತಂತ್ರ್ಯವನ್ನು ತೋರ್ಪಡಿಸಿದ್ದಾರೆ. ಬೋಧಿಸತ್ತ್ವ ಬುದ್ಧದೇವನ ಜೀವನದ ಪ್ರಮುಖ ಘಟನೆಗಳು ಸಜೀವವಾಗಿ ಪಡಿಮೂಡಿವೆ. ಹೂಬಳ್ಳಿಗಳ, ಗೂಳಿ, ಕಪಿ, ನವಿಲು ಮುಂತಾದ ಪ್ರಾಣಿ ಪಕ್ಷಿಗಳ ಚಿತ್ರಗಳು ನೈಜ ಜೀವಿಗಳಂತಿವೆ. ಸ್ತ್ರೀ ಚಿತ್ರಗಳು ಭಾರತೀಯ ಸ್ತ್ರೀಯರ ಸಹಜವಾದ ಶರೀರಭಂಗಿ, ಪ್ರಮಾಣ, ಅಲಂಕಾರ, ಮಾರ್ದವ, ಲಾವಣ್ಯಗಳನ್ನು ನಿದರ್ಶಿಸುತ್ತವೆ.

ಪ್ರಾಚೀನ ಹೈಂದವ ಕಲಾಸಂಸ್ಕೃತಿಯಲ್ಲಿ ಬುದ್ಧನ ಮಹಾನಿರ್ಯಾಣದ (ಪ್ರ.ಶ.ಪೂ.480) ಹಿಂದೆ ಚಿತ್ರರಚನೆಯಲ್ಲಿ 3 ಶೈಲಿಗಳಿದ್ದವೆಂದೂ ಇವುಗಳಲ್ಲಿ ಮೊದಲನೆಯದಾದ ದೇವಶೈಲಿ ದೇವತೆಗಳಿಗೆ ಸಂಬಂಧಿಸಿದ್ದು, ಈ ರೀತಿಯಲ್ಲಿ ಅಜಂತದ ಅತಿ ಪ್ರಾಚೀನವಾದ ಚಿತ್ರಗಳು ರಚಿತವಾದುವೆಂದೂ ಎರಡನೆಯದು ಯಕ್ಷರ ಶೈಲಿ ಪುಣ್ಯಾಯನರಿಗೆ (ಒಳ್ಳೆಜನ, ಶೀಲವಂತರು) ಸಂಬಂಧಿಸಿದ್ದು. ಅಶೋಕನ ಕಾಲದ ಚಿತ್ರಕಾರರು (ಪ್ರ.ಶ.ಪೂ.250) ಅದನ್ನು ಅನುಸರಿಸಿದ ರೆಂದೂ ಮೂರನೆಯ ನಾಗಾಶೈಲಿ ನಾಗಾರ್ಜುನರಿಂದ (200) ಪೋಷಿತವಾಯಿತೆಂದೂ ಟಿಬೆಟ್ಟಿನ ಚರಿತ್ರಕಾರನಾದ ತಾರನಾಥ (17ನೆಯ ಶತಮಾನ) ತಿಳಿಸಿರುತ್ತಾನೆ. ದೇವಶೈಲಿಯನ್ನು ಮಗಧರಾಜನಾದ ಬುದ್ಧಪಕ್ಷನ ಕಾಲದಲ್ಲಿ (5–6 ಶತಮಾನ) ಶಿಲ್ಪಿ ಮತ್ತು ಚಿತ್ರಕಾರನಾದ ಬಿಂಬಸಾರ ಜೀರ್ಣೋದ್ಧಾರ ಮಾಡಿದನೆಂದೂ ಯಕ್ಷಶೈಲಿಯನ್ನು ಉದಯಪುರದ ರಾಜನಾದ ಶಿಲಾದಿತ್ಯಗಹಿಳನ ಕಾಲದಲ್ಲಿ (7ನೆಯ ಶತಮಾನ) ಶೃಂಗಧಾರನೆಂಬ ಚಿತ್ರಕಾರ ಜೀರ್ಣೋದ್ಧಾರ ಮಾಡಿದನೆಂದೂ ಮೂರನೆಯ ನಾಗಾಶೈಲಿಯನ್ನು ವಂಗದೇಶದ ರಾಜನಾದ ಧರ್ಮಪಾಲ, ಮಗ ದೇವಪಾಲರ ಕಾಲದಲ್ಲಿ (9ನೆಯ ಶತಮಾನ) ಚಿತ್ರಕಾರನಾದ ಧೀಮನ್, ಮಗ ಬಿತ್ಫಲೋ ಜೀರ್ಣೋದ್ಧಾರ ಮಾಡಿದರೆಂದೂ ತಾರನಾಥನ ಬರೆಹದಿಂದ ತಿಳಿದುಬರುತ್ತದೆ. ಅಜಂತದ ಭಿತ್ತಿಚಿತ್ರಗಳಲ್ಲಿ ಈ ಮೂರು ಪದ್ಧತಿಗಳು ಅಲ್ಲಲ್ಲಿ ಕಂಡುಬರುತ್ತವೆ.

ಅಜಂತ ಚಿತ್ರಗಳನ್ನು ಸ್ಥೂಲವಾಗಿ 3 ಪಂಗಡಗಳಾಗಿ ವಿಂಗಡಿಸಬಹುದು: 1. ಅಶುದ್ಧಾಲಂಕಾರದವು; 2 ಶುದ್ಧರೂಪಾತ್ಮಕವಾದವು; 3 ಕಥನಾತ್ಮಕವಾದವು. 3ನೆಯ ಪಂಗಡದಲ್ಲಿ ಮತ್ತೂ 3 ಭಾಗಗಳಿವೆ. i ಸಮಕಾಲೀನ ಚರಿತ್ರಾತ್ಮಕ ಕಥನ; ii ಗೌತಮನ ಸಂಸಾರತ್ಯಾಗ, ಬುದ್ಧನಾದುದು ಮತ್ತು ಮಹಾಪರಿನಿರ್ವಾಣಗಳ ಕಥನ ; iii ಆರ್ಯದೇವ (ಆರ್ಯಸೂರ್ಯ 3ನೆಯ ಶತಮಾನ) ಜಾತಕಮಾಲೆಯ ಅಶ್ವಘೋಷ ಬುದ್ಧಚರಿತಂ, ಸೌಂದರಾನಂದಂ, ಸಾರಿಪುತ್ರ ಪ್ರಕರಣಗಳು ಬೌದ್ಧರ ದಿವ್ಯಾವಧಾನ ಮುಂತಾದುವುಗಳಲ್ಲಿ ವರ್ಣಿಸಿದ ಚರಿತ್ರೆ–ಇವೆಲ್ಲವೂ ಸೇರಿರುತ್ತವೆ.

ಅಶುದ್ಧಾಲಂಕಾರಕ್ಕೆ, ಅತಿ ಸಹಜವಾಗಿ, ಚಿತ್ರವಿಚಿತ್ರವಾಗಿ, ಅಸಂಖ್ಯಾತವಾಗಿ, ಮನೋಹರವಾಗಿ, ಆಕರ್ಷಕವಾಗಿ ರಚಿತವಾದ ಕಿನ್ನರ ಕಿಂಪುರುಷ ಮಾನವ ಪಶುಪಕ್ಷಿ ಪರ್ಣ ಲತಾಸಮುದಾಯಗಳನ್ನೊಳಗೊಂಡ ನಕ್ಷೆಗಳ ಸುರುಳಿಗಳು ಸೇರಿರುತ್ತವೆ. ಇವುಗಳಲ್ಲಿ ಗಮನಿಸಬೇಕಾದ್ದು ಚಿತ್ರಕಾರನ ದಯಾರ್ದ್ರಹೃದಯ ಮತ್ತು ಜೀವಕೋಟಿಯ ಸೂಕ್ಷ್ಮಪರಿಚಯ (1, 2ನೆಯ ಗುಹೆಗಳ ಒಳಮಾಳಿಗೆಯ ಮತ್ತು 17ನೆಯದಲ್ಲಿರುವ ವಿಜಯನ ಸಿಂಹಳ ವಿಜಯದ ಅಂಚುಗಳ ಶೃಂಗಾರ) ಇವುಗಳಲ್ಲಿ ಅತಿ ಉತ್ಕೃಷ್ಟವಾದದ್ದು ಈ ಅಂಚುಗಳು (ಗುಹೆ 17). ಖಗವರ್ಗಕ್ಕೆ ಸೇರಿದ ಹಂಸ, ಕೊಕ್ಕರೆ, ಬಾತು, ಕಲಹಂಸ–ಇವುಗಳ ಜಲಕ್ರೀಡೆಯ ದೃಶ್ಯಗಳು ಅಸಂಖ್ಯಾತ ಮಾದರಿಗಳಲ್ಲಿವೆ. ಶುದ್ಧರೂಪಾತ್ಮಕ ಪಂಗಡಕ್ಕೆ ಸೇರಿದವು; ಅತ್ಯುತ್ತಮವಾದ ಪ್ರಣಯದಂಪತಿಗಳು (ಗುಹೆ 17), ಬೆನ್ನು ತಿರುಗಿಸಿ ಕುಳಿತ ಸ್ತ್ರೀ (ಗುಹೆ 17). ಕಮಲಪುಷ್ಪ ಹಿಡಿದ ಆಪ್ತಸಖಿಯೊಡನಿರುವ ಕಪ್ಪು ವರ್ಣದ ಯುವರಾಣಿ (ಗುಹೆ 17). ನಾಟ್ಯದ ಅನಂತರ ವಿಶ್ರಾಂತಿಗಾಗಿ ಕಂಬಕ್ಕೆ ಒರಗಿದ ಅಪ್ಸರೆ (ಗುಹೆ 2). ಅಲಂಕರಣ (ಗುಹೆ 17). ಗಾಂಧರ್ವ ದಂಪತಿಗಳ ಪ್ರಣಯ (ಗುಹೆ 4). 4 ದೇಹಗಳಿಗೆ ಒಂದೇ ಶಿರಸ್ಸುಳ್ಳ ಜಿಂಕೆಗಳು (ಗುಹೆ 1). ಹೋರಿಗಳ ಜಗಳ (ಗುಹೆ 1). ಅಂತರಿಕ್ಷದಲ್ಲಿ ಸಂಚರಿಸುವ ಸ್ವರ್ಗೀಯರು (ಗುಹೆ 17). ಒಂಟಿಯಾಗೋ ಒಟ್ಟಾರೆಯೋ ಇರುವ ಜಾತಕ ಕಥೆಗಳನ್ನು ವರ್ಣಿಸುವ ಮಾನುಷ ರೂಪಗಳು–ಮುಂತಾದವು ಸೇರಿರುತ್ತವೆ. ಬುದ್ಧ ಜೀವನದ ದೃಶ್ಯಗಳ ಪೈಕಿ ಬೋಧಿಸತ್ತ್ವ ಪದ್ಮಪಾಣಿ (ಗುಹೆ 1). ಗೌತಮನ ಜನನ (ಗುಹೆ 2). ಮಹಾಜನಕ ಜಾತಕಕ್ಕೆ ಸೇರಿದ ಅಂತಃಪುರ ಪ್ರವೇಶದಲ್ಲಿನ ಭಿಕ್ಕು (ಗುಹೆ 1), ಕಂಬದ ಮೇಲಿನ ಬುದ್ಧ(ಗುಹೆ 10), ಛದ್ದಂತ ಜಾತಕ (ಗುಹೆ 10, 17), ಅಂತಃಪುರ ದೃಶ್ಯ, ನರ್ತಕಿಯರು (ಗುಹೆ 1), ವೃತ್ತಾಕಾರವಾದ ರಂಗಮಂಟಪ (ಗುಹೆ 16), ಮಹಾಸರ್ಪಜಾತಕ (ಗುಹೆ 1)–ಇವು ಅತ್ಯುತ್ಕೃಷ್ಟವಾದವು. ಇವು ವಿಶ್ವವಿಖ್ಯಾತವಾದ ಲಿಯೊನಾರ್ಡೋ–ದ–ವಿನ್ಸಿಯ ಮೋನಲಿಸ, ಅಂತಿಮ ಔತಣ ಎಂಬ ಎರಡು ಚಿತ್ರಗಳನ್ನು ಮೀರಿಸುವಂತಿವೆ. ಈ ಬೋಧಿಸತ್ತ್ವ ಪದ್ಮಪಾಣಿ (ಗುಹೆ 1), ಭಿಕ್ಷಾಟನಕ್ಕೆ ಹೊರಟ ಬುದ್ಧ ಹಾಗೂ ಅವನ ಹೆಂಡತಿ, ಮಗ ರಾಹುಲ (ಗುಹೆ 17). 9, 10ನೆಯ ಗುಹೆಗಳ ಚಿತ್ರಗಳು–ಇವು ವಾಕಾಟಕ ರಾಜರ ಪೋಷಣೆಯಲ್ಲೂ 16, 17ನೆಯ ಗುಹೆಗಳ ಚಿತ್ರಗಳು 626–28 ರಲ್ಲೂ ಚಿತ್ರಿಸಲಾದವೆಂದು ಪಾರಸಿಕ ಖುಸ್ರು ಕಳುಹಿಸಿದ ರಾಯಭಾರದ ದೃಶ್ಯ ಸೂಚಿಸುತ್ತದೆ (ಗುಹೆ 1). ಈಗ ಉಳಿದಿರುವ ಚಿತ್ರಗಳಿಂದ ಛದ್ದಂತ ಜಾತಕ 10, 17ನೆಯ ಗುಹೆಗಳಲ್ಲೂ ಬ್ರಾಹ್ಮಣ ವಿದುರ, ಸಿಬಿ, ಶಂಖಪಾಲಿ, ಕ್ಷಾಂತಿವಾದ ಜಾತಕಗಳು 2ನೆಯ ಗುಹೆಯಲ್ಲೂ ಹಸ್ತಿ, ಛದ್ದಂತದ ಉತ್ತರಭಾಗ, ಉನ್ಮಗ್ಗ ಮುಂತಾದ ಜಾತಕಗಳು, ಅಶ್ವಘೋಷನ ಸೌಂದರಾನಂದದ ಜೊತೆಯಲ್ಲಿ 16ನೆಯ ಗುಹೆಯಲ್ಲೂ ರೂರೂ, ಮಹಾಕಪಿ, ಶಶಕ, ಮಾತೃಪೋಷಕ, ಸಿಬಿ, ವಿಶ್ವಂತರ,

ನಳ, ಹಂಸ, ಯುವರಾಜ, ಮಹಾನಾಗ ಮುಂತಾದವು 17ನೆಯ ಗುಹೆಯಲ್ಲೂ ಮಾರನ ಪರೀಕ್ಷೆ, ಮಹಾಜನಕ, ಛಾಂಪೇಯ, ಸಿಬಿ, ಮಹಾನಾಗ ಪಂಚಿಕ ಮುಂತಾದವು; 1ನೆಯ ಗುಹೆಯಲ್ಲೂ ಮತ್ಸ್ಯ, ಮಹೇಶ, ಸಿಬಿ, ನಿಕ್ರೋಧ, ಶರಭಂಗ, ವೆಸ್ಸಂತರ, ಸೂತಸೋಮ ಮಾತೃಪೋಷಕ, ಮೈತ್ರಿಬಲ, ವಲಹಸ್ಸಾ ಮುಂತಾದವು 2ನೆಯ ಗುಹೆಯಲ್ಲೂ ಕೆಟ್ಟಿರುವ ಗುಹೆಗಳಲ್ಲೂ ಅತ್ಯಂತ ಭಕ್ತಿ, ಶ್ರದ್ಧೆಗಳಿಂದ ಬಿಡಿಸಿದ ಚಿತ್ರಗಳಿವೆ. ಕೆಲವು ಜಾತಕ ಚಿತ್ರಗಳ ರಚನೆ ಆರ್ಯದೇವನ ಜಾತಕಮಾಲೆಯ ವಿವರಗಳನ್ನು ಅನುಸರಿಸಿವೆ. ಅಲ್ಲದೆ ಕೆಲವು ಚಿತ್ರಗಳ ಮೇಲೆ ಜಾತಕಮಾಲೆಯ ನುಡಿಗಳು ಬರೆಯಲ್ಪಟ್ಟಿವೆ. ಉದಾ: ಹೆಣ್ಣು ಹುಲಿಗೆ ಬೋಧಿಸತ್ತ್ವ ಗೌತಮನ ದೇಹಾರ್ಪಣದ ಚಿತ್ರ.

ಸಮಕಾಲೀನ ಚರಿತ್ರಾತ್ಮಕ ದೃಶ್ಯಗಳಲ್ಲಿ ಮುಖ್ಯವಾದವು: ಇಮ್ಮಡಿ ಪುಲಕೇಶಿ ತನ್ನ ದರ್ಬಾರಿನಲ್ಲಿ ಪಾರಸಿಕ ರಾಜ ಖುಸ್ರುವಿನ ರಾಯಭಾರಿಯನ್ನು ಸ್ವಾಗತಿಸುವುದು (ಗುಹೆ 1). ಇದರಲ್ಲಿ ಖುಸ್ರು, ಅವನ ರಾಣಿಯರ ಚಿತ್ರಗಳಿವೆ. ಅಶೋಕನ ಮಗನಾದ ವಿಜಯನ ಸಿಂಹಳವಿಜಯದ (ಗುಹೆ 17) ಚಿತ್ರದ ನರ್ತಕಿಯರ ವೃಂದ ಅತಿ ಮನೋಹರವಾಗಿದೆ.

ಕಣ್ಣು ಕೋರೈಸುವಂಥ ಬಣ್ಣಗಳು, ನೈಜವಲ್ಲದ ಭಂಗಿಗಳು, ಪ್ರವೃತ್ತಿಗಳು, ಅಜಂತದ ಚಿತ್ರರಚನೆಗೆ ಅತಿ ದೂರವಾದವು. ಆತ್ಮಸಂತೋಷ ಸಂಘಸುಧಾರಣೆ ಜ್ಞಾನಾಭಿವೃದ್ಧಿ–ಇವೇ ಆ ಎಲ್ಲ ಚಿತ್ರಗಳ ಪರಮೋದ್ದೇಶ. ಆಧ್ಯಾತ್ಮಿಕ ಶಾಂತಿಯನ್ನು ಸೂಸುವ ಚಿತ್ರಗಳಲ್ಲದೆ, ಮನೋವಿಕಾರಗಳ ಚಿತ್ರಣ ಅಲ್ಲೆಲ್ಲೂ ಕಂಡುಬರುವುದಿಲ್ಲ. ಪ್ರಕೃತಿಯಲ್ಲಿನ ಖಗ, ಮೃಗ, ಜಲ, ತರು, ಪತ್ರ, ಪುಷ್ಪಾದಿಗಳನ್ನು ಅನುಕರಿಸಿರುವುದರಿಂದ ಕೃತಿಗಳು ಶೋಭಾಯಮಾನ ವಾಗಿವೆ. ಅತ್ಯುತ್ತಮವಾದ ಮಾನುಷಸೌಂದರ್ಯಕ್ಕೆ ಅವು ಸಂಕೇತಗಳಾಗಿವೆ. ಉದಾ: ಬೋಧಿಸತ್ತ್ವ ಪದ್ಮಪಾಣಿ (ಗುಹೆ 1), ಹಸ್ತದಲ್ಲಿ ದಳದಳವಾಗಿ ವಿಕಸಿಸುತ್ತಿರುವ ಕಮಲ ಪ್ರಪಂಚದ ಸೃಷ್ಟಿ ಸಂಕೇತ. ಯುವತಿಯ ಪಾದ, ಕಣ್ಣು, ಬೆರಳು ಮುಖಲಾಲಿತ್ಯ ಅಂಗಚ್ಛಾಯೆ–ಒಂದೊಂದು ಅವಳ ಸಾಕಾರ ಸೌಂದರ್ಯ ಮನಮುಟ್ಟುವಂತಿದೆ. ಭಗವದ್ಗೀತೆಯ ಪದ್ಮಪತ್ರ ಮಿವಾಂಭಸ ಎಂಬ ನುಡಿಗಳು ಕಮಲದ ನಿರ್ಲಿಪ್ತತೆಯನ್ನೂ ಅಶ್ಲೇಷಿತ ಜೀವನವನ್ನೂ ಸೂಚಿಸುತ್ತವೆ. ಕೊಳಲನ್ನೂದುವ ಬೆರಳುಗಳ ಲಾಲಿತ್ಯ ಕೊಳಲಿನ ಸ್ವರದಂತೆ ಸುಮಧುರ (ಗುಹೆ 1, 17). ಸಾಂಸಾರಿಕ ವಿಷಯಗಳಿಂದ ಮಲಿನವಾಗದಂಥ ಜೀವಿತವನ್ನು ಕಮಲಪುಷ್ಪ ಸೂಚಿಸಿದರೆ, ಮಾಲಿನ್ಯರಹಿತವಾಗಿ ಮನೋಹರವಾದ ಭಂಗಿಗಳಲ್ಲಿ ಕ್ರೀಡಿಸುವ, ಹಂಸ ಮುಂತಾದ ಜಲಪಕ್ಷಿಗಳು (ಗುಹೆ 2, 17) ಮಾನವನ ಜೀವನ್ಮುಕ್ತಿಯ ಆನಂದವನ್ನು ಸಾರುತ್ತವೆ. ಇಂಥ ದೃಶ್ಯಗಳೆಲ್ಲ ಮಾನವನ ದೈವಿಕ ಪ್ರವೃತ್ತಿಯನ್ನು ಮುದ್ರಿಸಿಟ್ಟಂತೆ ತೋರುತ್ತವೆ.

ಅಜಂತದ ಶಿಲ್ಪ, ಚಿತ್ರರಚನೆಗಳ ವಿಶಾಲದೃಷ್ಟಿ, ಆಧ್ಯಾತ್ಮಿಕ ಜ್ಞಾನ, ಲಲಿತಕಲೆಗಳಲ್ಲಿನ ಕೌಶಲ, ಭಾರತದೇಶದ ಮತ್ತಾವ ಭಾಗದಲ್ಲೂ ಕಂಡುಬರುವುದಿಲ್ಲ. ಕಲೆಗಾರರ ದೃಷ್ಟಿಯಲ್ಲಿ ಚಿಕ್ಕದು, ದೊಡ್ಡದು ಅನ್ನುವ ಭಾವನೆ ಇರಲಿಲ್ಲ. ಕ್ರಿಮಿಕೀಟಗಳಿಂದ ಹಿಡಿದು ಘನದೇವತೆ ಗಳವರೆಗೆ ಎಲ್ಲವೂ ಸಮಾನತೆಯನ್ನು ಹೊಂದಿದ್ದುವು. ಅವರ ಕಣ್ಣಿಗೆ ಆನಂದದಾಯಕವಾದ ಪರಮೇಶ್ವರನ ಮಾಧುರ್ಯ ಸೃಷ್ಟಿಯ ಆದ್ಯಂತ ಸುತ್ತುವರಿದು ಸಕಲ ಚರಾಚರವಸ್ತುಗಳಲ್ಲಿ ತುಂಬಿ ತುಳುಕಿ ತಾಂಡವವಾಡುತ್ತಲಿತ್ತು. ಬುದ್ಧನಿಗೆ ಮತ್ತು ಬೌದ್ಧಧರ್ಮಕ್ಕೆ ಸಂಬಂಧಿಸಿ ದವಾದರೂ ಈ ಶಿಲ್ಪ ಚಿತ್ರಗಳಲ್ಲಿ ಸಾರ್ವಕಾಲಿಕ ಮೌಲ್ಯವನ್ನುಳ್ಳ ಧರ್ಮ ಮತ್ತು ಕಲೆ ಪ್ರತಿಬಿಂಬಿತವಾಗಿವೆ.

ಚಿತ್ರಗಳಲ್ಲಿಯ ಸ್ತ್ರೀಯರೆಲ್ಲ ಯುವತಿಯರು. ಆನಂದದಿಂದ ಪ್ರಫುಲ್ಲಿತವಾದ ನೇತ್ರ, ವದನಗಳನ್ನು ಪಡೆದಿದ್ದರೂ ಭಂಗಿಗಳ ನಿರೂಪಣೆ ಅತ್ಯಂತ ರಸಯುತವಾಗಿದ್ದರೂ ನೋಡುವ ವರಿಗೆ ಕಾಮುಕ ಭಾವನೆಗಳನ್ನು, ಮನೋವಿಕಾರಗಳನ್ನು ಕೆದುಕುವುದಿಲ್ಲ. (ನರ್ತಕಿ, ಗುಹೆ 2; ನರ್ತಕಿಯರು, ಗುಹೆ 1, 17; ಅಲಂಕರಣೆ, ಗುಹೆ 17; ಕಪ್ಪು ಯುವ ರಾಣಿ, ಗುಹೆ 1; ದಂಪತಿಗಳು, ಗುಹೆ 17). ತಮ್ಮ ನೃತ್ಯಭಂಗಿಗಳೆಲ್ಲ ಅವರು ಆತ್ಮ ಸಂಯಮವನ್ನು, ದೈವಿಕ ಕ್ರಮದ ಜೀವಾಳವನ್ನು ಪ್ರಚುರಮಾಡುತ್ತಲಿದ್ದಾರೆ.

ಅಜಂತದ ಕಲೆಗಾರನ ಸ್ಫೂರ್ತಿ ಅವನ ಹೃದಯ ಸೌಂದರ್ಯದಿಂದ ಜನಿಸಿರುವುದೇ ಹೊರತು ಬಾಹ್ಯ ಪ್ರಪಂಚದಲ್ಲಿಯ ಸೌಂದರ್ಯದಿಂದ ಅಲ್ಲ. ವಿನಯ, ಗಾಂಭೀರ್ಯ ಮತ್ತು ಸಮತೋಲನ ಅವನ ಕೃತಿಗಳಲ್ಲಿ ಶಾಂತಿಯುತವಾಗಿ ತಾಂಡವವಾಡುತ್ತಲಿವೆ.

ವಿವಿಧ ಬಣ್ಣದ ತಂತುಗಳಿಂದ ನೇಯ್ದ ವಸ್ತ್ರದಂತೆ ಕಾಣುವ ದೇವಾಂಶ ಸಂಭೂತ ಚಿತ್ರಗಳು ಮಾತ್ರವೇ ಅಲ್ಲ; ಸಾಮಾನ್ಯ ಜೀವನದ ದೃಶ್ಯಗಳು ಕೂಡ ಅಲ್ಲಿವೆ. ಎಲ್ಲ ಕಾಲಕ್ಕೂ ಎಲ್ಲರ ಜೀವನಾವಸ್ಥೆಗಳಿಗೂ ಸಂಬಂಧಿಸಿದಂತೆ ಚೈತನ್ಯವನ್ನು ನೀಡುವ ರೂಪಲಕ್ಷಣಗಳನ್ನು ಇವು ಒದಗಿಸುತ್ತವೆ. ರೂಪಗಳ ರೇಖಾವಿಲಾಸ ನಿರ್ಮಲ ಪ್ರಶಾಂತತೆಯನ್ನು ವಿರಾಜಿಸುತ್ತಿದೆ. ಆನಂದಮಯವಾದ ರೇಖೆಗಳ ಹಿನ್ನೆಲೆಯಲ್ಲಿ ಪರವಸ್ತುವಿನ ಛಾಯೆ ಕಂಡುಬರುತ್ತದೆ. ಚಿತ್ರಗಳಲ್ಲಿ ಅಪಾರವಾದ ಹುಮ್ಮಸ್ಸು, ಕರುಣೆ ಹೊಮ್ಮುತ್ತಿವೆ. ಇಂಥ ಗಂಭೀರತೆ ಇತರೆಡೆಗಳಲ್ಲಿ ಅಪರೂಪ. ಚಿತ್ರಗಳಲ್ಲಿ ಎಲ್ಲೆಲ್ಲಿಯೂ ಯೌವನದ ಉತ್ಸಾಹ, ಸಂತೋಷ ಗೋಚರವಾಗಿ ಆಶಾಭಾವದ ಪ್ರವೃತ್ತಿ ಇರುವುದಾದರೂ ಪ್ರಾಪಂಚಿಕ ಜೀವನ ಸರ್ವಾವಸ್ಥೆಗಳಲ್ಲೂ ಕ್ಷಣಿಕವಾದ ದ್ದೆಂಬ ಸೂಚನೆ, ಶಾಶ್ವತ ಶಾಂತಿಯನ್ನೂ ಬಯಸುವ ಇಚ್ಛೆ ಎಲ್ಲೆಡೆಯೂ ಪ್ರಕಟಿತವಾಗಿದೆ.

ಕಲ್ಲಿನ ಗೋಡೆಯನ್ನು ಸಂತ್ರಾಸು ಕೆಲಸದಿಂದ ಸಮಪಡಿಸಲಾಗಿದೆ. ಮರಳು, ಧಾತುಮಿಶ್ರಿತ ಮಣ್ಣು, ಬತ್ತದ ಹುಲ್ಲು, ಹೊಟ್ಟು ಅಥವಾ ತೌಡು, ಪಾಚಿ, ಕಪ್ಪೆಚಿಪ್ಪು ಮುಂತಾದು ವನ್ನು ಬೆಲ್ಲದ ನೀರಿನಲ್ಲಿ ಆರು ತಿಂಗಳು ಕೊಳೆಸಿ ನುಣ್ಣಗೆ ಮಾಡಿದ ಗಾರೆಯನ್ನು ಗೋಡೆಗೆ ಗಿಲಾವು ಮಾಡಲಾಗಿದೆ. ಇದರ ಹಸಿ ಆರುವುದರೊಳಗೆ ಧಾತುರಾಗದ ಕುಂಚ ಗಳಿಂದ ಸ್ಥೂಲ ಚಿತ್ರಗಳನ್ನು ಗುರುತು ಮಾಡಿಕೊಂಡು ಅನಂತರ ಬಣ್ಣ ಹಾಕಲಾಗಿದೆ. ಈ ಕ್ರಮವನ್ನು ಫ್ರೆಸ್ಕೊ ಬ್ಯೂನೊ ಎಂದು ಕರೆಯುತ್ತಾರೆ. ಗಾರೆ ಒಣಗಿದ ಮೇಲೆ ಚಿತ್ರ ಬರೆದರೆ, ಅವು ಹೆಚ್ಚು ಕಾಲ ನಿಲ್ಲವು. ಈ ವಿಧಾನವನ್ನು ಫ್ರೆಸ್ಕೊ ಸೆಕ್ಕೊ ಎನ್ನುತ್ತಾರೆ. ಫ್ರೆಸ್ಕೊ ಬ್ಯೂನೊ ವಿಧಾನದಲ್ಲಿ ರಚಿತವಾದ ಅಜಂತ ಚಿತ್ರಗಳು 2,000 ವರ್ಷಗಳಾದರೂ ಇನ್ನೂ ಉಳಿದು ಬಂದಿವೆ. ಆದರೆ ಎರಡನೆಯ ವಿಧಾನದಂತೆ ಬರೆಯಲ್ಪಟ್ಟ ಲೇಪಾಕ್ಷಿ ಚಿತ್ರಗಳು ಈ 400 ವರ್ಷಗಳಲ್ಲಿ ಕೆಟ್ಟಿವೆ.

ಫ್ರೆಸ್ಕೊ ಬ್ಯೂನೊ ವಿಧಾನವನ್ನು ಇಟಲಿ ದೇಶ ಭಾರತೀಯರಿಂದ ಕಲಿತು ಬಳಸಿಕೊಂಡು ಪಾಂಪೇಯ ಮ್ಯೂರಲ್‌ಗಳನ್ನು ನಿರ್ಮಿಸಿದೆ. ಭಾರತೀಯರಿಗೆ ಯಥಾ ದೃಷ್ಟಿ ನಿರೂಪಣೆ, ಬೆಳಕು ನೆರಳುಗಳ ವಿನ್ಯಾಸ ಗೊತ್ತಿರಲಿಲ್ಲವೆನ್ನುವುದು ಸುಳ್ಳು. ಬೋಧಿಸತ್ತ್ವ ಪದ್ಮಪಾಣಿ, ಅಭಿಷೇಕ ದೃಶ್ಯ, ಕಪ್ಪುವರ್ಣ ಯುವರಾಣಿ (ಗುಹೆ 1), ಅಪ್ಸರೆ (ಗುಹೆ 2); ದುಂಡಾದ ರಂಗಮಂಟಪ (ಗುಹೆ 16); ಬುದ್ಧ, ಅವನ ಹೆಂಡತಿ ಮತ್ತು ಮಗ, ಅಂತಃಪುರದ ಪ್ರವೇಶ ದಲ್ಲಿನ ಭಿಕ್ಕು (ಗುಹೆ 17) ಮುಂತಾದವು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. (ಪಿ.ಎಸ್.)



ಇಟ್ಟಿಗೆಯ ವಿಹಾರ (4–5ನೆಯ ಶತಮಾನ)

**ಉತ್ಖನನ:** ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಇತ್ತೀಚೆಗೆ ಅಜಂತ ಬೆಟ್ಟಗಳ ತಪ್ಪಲಲ್ಲಿ ಉತ್ಖನನ ನಡೆಸಿತು. ಉತ್ಖನನದಲ್ಲಿ ಇಟ್ಟಿಗೆ ಚೂರುಗಳು, ಕುಸಿದ ಗೋಡೆಗಳು ಕಂಡುಬಂದವು.

ವಾಸ್ತು ರಚನೆ: ಇಲ್ಲಿಯ ಗಜಪೃಷ್ಠಾಕಾರದ ಬೌದ್ಧ ವಿಹಾರದಲ್ಲಿ ಸಾಲಾಗಿ ಸಣ್ಣ ಸಣ್ಣ ಕೋಣೆಗಳಿವೆ. ಮುಖ್ಯ ದ್ವಾರ ಪೂರ್ವಾಭಿಮುಖವಾಗಿದೆ. ದಕ್ಷಿಣ ಭಾಗದಲ್ಲಿ ಸಾಲಾಗಿ ಐದು ಚಿಕ್ಕ ಕೋಣೆಗಳು, ಉತ್ತರ ಭಾಗದಲ್ಲಿ ಮೂರು ಕೋಣೆಗಳು ಹಾಗೂ ಪಶ್ಚಿಮದ ಮಧ್ಯಭಾಗದಲ್ಲಿ ಒಂದು ಕೋಣೆಗಳಿವೆ; ಇವೆಲ್ಲವನ್ನೂ ಸೇರಿಸುವ ಮಾರ್ಗವೊಂದಿದೆ (ಎದುರು ಭಾಗದಲ್ಲಿ). ಆಯತಾಕಾರದ ವೇದಿಕೆ ಇದ್ದು ಸ್ತೂಪವನ್ನು ನಿಲ್ಲಿಸಲು ಸ್ಥಳವನ್ನು ಬಿಡಲಾಗಿದೆ. ವಿಹಾರ ದಕ್ಷಿಣ, ಪಶ್ಚಿಮ, ಉತ್ತರದಲ್ಲಿ ಬೇರೆ ಬೇರೆ ಮಾದರಿಯಲ್ಲಿವೆ. ಗೋಡೆಗೆ ಸುಣ್ಣದ ಲೇಪನ ಮಾಡಿದ್ದು ಕಂಡುಬರುತ್ತದೆ. ವಿವಿಧ ಆಕಾರದ ಇಟ್ಟಿಗೆಗಳನ್ನು ನಿರ್ಮಾಣಕ್ಕೆ ಬಳಸಲಾಗಿದೆ. ದಕ್ಷಿಣ ಭಾಗದ ಮುಖ್ಯ ಗೋಡೆ ಎತ್ತರವಾಗಿದೆ.

ಪಶ್ಚಿಮ ಭಾಗ ಉಪನಾ, ಊರ್ಧ್ವಪದ್ಮ, ಅಧಿಷ್ಠಾನ ಮತ್ತು ಕಂಠ, ಪಟ್ಟಿಕಾ, ಕಪೋತವನ್ನು ತೋರಿಸುತ್ತವೆ. ಉತ್ತರ ಭಾಗದಲ್ಲಿ ಮೂರು ಸಣ್ಣ ಕೋಣೆಗಳಿವೆ. ಇಟ್ಟಿಗೆಗಳು ಭೂಮಿಯಲ್ಲಿ ಹೂತುಹೋಗಿವೆ. ಅಧಿಷ್ಠಾನವನ್ನು ಸಂರಕ್ಷಿಸಿಡಲಾಗಿದೆ. ವಿಹಾರದ ಪೂರ್ವಭಾಗದ ಮಧ್ಯ ದಲ್ಲಿ ಆಯತಾಕಾರದ ಇಟ್ಟಿಗೆಯ ವೇದಿಕೆ ಇದೆ. ವೇದಿಕೆಯ ಒಳಭಾಗ ಭಿನ್ನವಾಗಿದ್ದು ಇಟ್ಟಿಗೆ, ಕಲ್ಲುಚೂರುಗಳಿಂದ ತುಂಬಿದೆ. ವೇದಿಕೆಯ ತಳಪಾಯದ ಮೇಲೆ ಎತ್ತರವಾದ ಸ್ಥಳದಲ್ಲಿ ಸ್ತೂಪವನ್ನು ನಿರ್ಮಿಸಿ, ಮಧ್ಯದಲ್ಲಿ ಸಣ್ಣ ಕೋಣೆಗಳು ಹಾಗೂ ವಿಹಾರಕ್ಕೆ ಮಾರ್ಗಗಳು ಇವೆ.

ಉತ್ಖನನಗಳಲ್ಲಿ 4 ಮತ್ತು 5 ನೆಯ ಶತಮಾನದ ಕೆಂಪು, ಕಪ್ಪು, ಕಂದುಬಣ್ಣದ ಮಣ್ಪಾತ್ರೆಗಳೂ, ನೀರು ಸಿಂಪಡಿಸುವ ದಾನಿಗಳೂ ದೊರೆತಿವೆ. ಬೆಣಚುಕಲ್ಲು, ಚಿಪ್ಪು ಮತ್ತು ಗಾಜಿನಿಂದ ಮಾಡಿದ ಮಣಿಗಳು, ದಂತದ ಲೋಲಕಗಳು, ಕಬ್ಬಿಣ ಮತ್ತು ತಾಮ್ರದ ವಸ್ತುಗಳು, ಉಂಗುರಗಳು, ಚಾಕು, ಭರ್ಜಿಯಂತಹ ಆಯುಧಗಳು, ಅರೆಯುವ ಮತ್ತು ಬೀಸುವ ಕಲ್ಲುಗಳು ಇತರ ಲಭ್ಯ ಸಾಮಗ್ರಿಗಳು.

ಕುತೂಹಲ ಮೂಡಿಸುವ ಚಿನ್ನದ ನಾಣ್ಯವೊಂದು ದೊರೆತಿದೆ. ಇದರ ಒಂದು ಮುಖದಲ್ಲಿ ಬಿಜಾಂಟಿಯನ್ ದೊರೆ ಥಿಯೋಡೊಸಿಸ್‌ನ ಪ್ರತಿಕೃತಿಯಿದೆ. ಈ ನಾಣ್ಯ ದುಂಡಗಿದ್ದು ಎರಡು ರಂಧ್ರಗಳನ್ನು ಹೊಂದಿದೆ. ನಾಣ್ಯಮುಮ್ಮುಖವೊಂದರ ಮೇಲೆ

ಎಡಭಾಗದಲ್ಲಿ ಕಾನ್‌ಸ್ಟಾಂಟಿನೋಪಲ್ ಕುಳಿತಂತೆ ಹಾಗೂ ಬಲದಲ್ಲಿ ಈಟಿಯನ್ನು ಹಿಡಿದು ಕೊಂಡಂತೆ ಮುದ್ರಿಸಲಾಗಿದೆ. ಇವುಗಳನ್ನು ಕೊರಳಹಾರದ ಪದಕದಂತೆಯೂ ಬಳಸಲಾಗುತ್ತಿತ್ತು. ಪ್ರ.ಶ. ಆರಂಭದಿಂದ ರಾಷ್ಟ್ರಕೂಟ ಕಾಲದವರೆಗಿನ ಶಾಸನಗಳಲ್ಲಿ ಅಜಂತ ಗುಹೆಗಳ ಬಗೆಗೆ ಮಾಹಿತಿ ದೊರೆಯುತ್ತದೆ. ವಾಕಾಟಕ ಕಾಲದ ಗುಹೆಗಳು 4 ಮತ್ತು 5 ನೆಯ ಶತಮಾನ ದವಾಗಿದ್ದು ಮಡಕೆಗಳು, ಅಧಿಷ್ಠಾನದ ಮಾದರಿಗಳು, ಇಟ್ಟಿಗೆ ಗೋಡೆಗಳು ಇಲ್ಲಿನ ಉತ್ಖನನದಲ್ಲಿ ದೊರೆತಿವೆ. ಸುಣ್ಣಕಲ್ಲಿನ ಪ್ರತಿಮೆಗಳು ಮತ್ತು ಮಹಿಷಾಸುರ ಮರ್ದಿನಿ ಪ್ರತಿಮೆಗಳು ಈ ಕಾಲದ ಕಲೆಗೆ ಸಾಕ್ಷಿಯಾಗಿವೆ. (ವಿ.ಇ.ಎಸ್.ವಿ.)

**ಅಜಿಲರು:** ತುಳುನಾಡಿನ ಸ್ಥಳೀಯ ಅರಸುಮನೆತನಗಳ ಪೈಕಿ ವೇಣೂರಿನ ಅಜಿಲ ಅರಸು ಮನೆತನವೂ ಒಂದು. ಈ ಅರಸು ಮನೆತನದವರು ದಕ್ಷಿಣಕನ್ನಡ ಜಿಲ್ಲೆಯ ವೇಣೂರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಸುತ್ತಮುತ್ತಲ ಪ್ರದೇಶವನ್ನು ಆಳುತ್ತಿದ್ದರು. ಇವರ ರಾಜ್ಯವನ್ನು ಪುಂಜಳಿಕೆಯ ರಾಜ್ಯ ಅಥವಾ ಅರುವದ ರಾಜ್ಯ ಎಂದೂ ಗುರುತಿಸಲಾಗಿದೆ. ಅಜಿಲವಂಶದ ಪ್ರಾಚೀನತಮ ಉಲ್ಲೇಖ ಕಂಡುಬರುವುದು 1340 ರ ತೆಂಕ ಶಾರಂದೂರು ಶಾಸನದಲ್ಲಿ. ಪ್ರಾಯಶಃ ಹೊಯ್ಸಳರ ಕಾಲದಿಂದಲೇ ಈ ಪ್ರದೇಶವನ್ನಾಳುತ್ತಿದ್ದ ಅಜಿಲರು ಅನಂತರ ವಿಜಯನಗರದ ಅಧಿಪತ್ಯವನ್ನು ಒಪ್ಪಿಕೊಂಡು ತಮ್ಮ ಆಳಿಕೆಯನ್ನು ಮುಂದುವರಿಸಿದರು. ಕೆಳದಿ ಅರಸರ ಕಾಲದಲ್ಲಿ ಕೆಳದಿ ವೆಂಕಟಪ್ಪ ನಾಯಕ ತುಳುನಾಡಿನ ಮೇಲೆ ಧಾಳಿಗೈದ ಸಂದರ್ಭದಲ್ಲಿ ಅಜಿಲ ಅರಸರನ್ನು ಸೋಲಿಸಿದ. ಈ ಎಲ್ಲ ಏಳುಬೀಳುಗಳ ನಡುವೆಯೂ ಸು. 1750ರ ತನಕ ಅಜಿಲರ ಆಳಿಕೆ ಮುಂದುವರಿಯಿತು.

1479ರ ಶಾಸನೋಲ್ಲೇಖಿತ ಮಾಂಡಲಿಕ ಸೋಮನಾಥ ಅರಸನಿಂದ ಮೊದಲ್ಗೊಂಡು 1750ರಲ್ಲಿ ಆಳಿಕೆ ನಡೆಸುತ್ತಿದ್ದ ಇಮ್ಮಡಿ ತಿಮ್ಮಣ್ಣಾಜಿಲನ ವರೆಗೆ 13 ಮಂದಿ ಅರಸರ ಹೆಸರುಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಮಧುರಕ್ಕದೇವಿ, ಶಂಕರದೇವಿ, ಪದುಮಲ ದೇವಿ ಮೊದಲಾದ ರಾಣಿಯರೂ ಪಟ್ಟವನ್ನೇರಿ ಆಳಿಕೆ ನಡೆಸಿದ್ದು ಈ ಅರಸು ಮನೆತನದ ವೈಶಿಷ್ಟ್ಯ. ಅಜಿಲ ಅರಸರ ಪೈಕಿ 1600 ರಿಂದ 1620ರ ತನಕ ರಾಜ್ಯವನ್ನಾಳಿದ ತಿಮ್ಮಣ್ಣಾಜಿಲ ಅತ್ಯಂತ ಹೆಸರುವಾಸಿಯಾಗಿದ್ದಾನೆ. ಇವನು 1604ರಲ್ಲಿ ತನ್ನ ರಾಜಧಾನಿಯಾದ ವೇಣೂರಿನಲ್ಲಿ 35 ಅಡಿ ಎತ್ತರದ ಬಾಹುಬಲಿಯ ಏಕಶಿಲಾ ವಿಗ್ರಹವನ್ನು ಸ್ಥಾಪಿಸುವ ಮೂಲಕ ತನ್ನ ಹೆಸರನ್ನು ಚಿರಸ್ಥಾಯಿಯನ್ನಾಗಿಸಿದ. ಔನ್ನತ್ಯದ ದೃಷ್ಟಿಯಿಂದ ಕರ್ನಾಟಕದ ಬಾಹುಬಲಿ ವಿಗ್ರಹಗಳ ಪೈಕಿ ಇದಕ್ಕೆ ಮೂರನೆಯ ಸ್ಥಾನ. ಪ್ರಬಲರಾದ ನೆರೆಯ ಕಾರ್ಕಳದ ಭೈರರಸರು ಮತ್ತು ಬಂಗಾಡಿಯ ಬಂಗರೊಡನೆ ನಿರಂತರವಾದ ವೈರತ್ವದ ನಡುವೆಯೂ ವೇಣೂರಿನ ಅಜಿಲರು ತಮ್ಮ ರಾಜಕೀಯ ಪ್ರಾಬಲ್ಯವನ್ನು ಉಳಿಸಿ ಬೆಳೆಸಿಕೊಂಡು ಬಂದರು.

ಅಜಿಲ ವಂಶದವರಲ್ಲಿ ಅಳಿಯಸಂತಾನ ಪದ್ಧತಿ ರೂಢಿಯಲ್ಲಿತ್ತು. ಜೈನ ಧರ್ಮಾ ವಲಂಬಿಗಳಾಗಿದ್ದ ಇವರು ವೇಣೂರಿನಲ್ಲಿ ಆರು ಜಿನಮಂದಿರಗಳನ್ನು ನಿರ್ಮಿಸುವ ಮತ್ತು ಬಾಹುಬಲಿಯ ವಿಗ್ರಹವನ್ನು ಪ್ರತಿಷ್ಠಾಪಿಸುವ ಮೂಲಕ ಜೈನ ವಾಸ್ತುಶಿಲ್ಪದ ಬೆಳವಣಿಗೆಗೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಜೈನರಾಗಿದ್ದರೂ ಇವರ ಕುಲದೇವರು ವೇಣೂರಿನ ಶ್ರೀ ಮಹಾಲಿಂಗೇಶ್ವರ. ತಮ್ಮ ರಾಜ್ಯದಲ್ಲಿ ವೀರಶೈವ ಧರ್ಮಕ್ಕೂ ಇವರು ರಾಜಾಶ್ರಯ ನೀಡಿದ್ದರು. ವೇಣೂರಿನ ಪ್ರಧಾನ ಅರಮನೆಯಲ್ಲದೆ ಕೇಳ, ಬರಾಯ ಮತ್ತು ಅಳದಂಗಡಿ ಗಳಲ್ಲೂ ಇವರ ಅರಮನೆಗಳಿದ್ದವು. ಕಾಲಾಂತರದಲ್ಲಿ ಕಾರಣಾಂತರದಿಂದ ವೇಣೂರಿನಿಂದ ಸಮೀಪದ ಅಳದಂಗಡಿಗೆ ತಮ್ಮ ರಾಜಕೀಯ ಕೇಂದ್ರವನ್ನು ಸ್ಥಳಾಂತರಿಸಿದ ಅಜಿಲ ಅರಸುಮನೆತನದ ವಂಶಸ್ಥರು ಅಳದಂಗಡಿಯಲ್ಲಿ ವಾಸಿಸುತ್ತಿದ್ದಾರೆ. (ಪಿ.ಜಿಬಿ.)

**ಅಝಿಲಿಯನ್ ಸಂಸ್ಕೃತಿ:** ದಕ್ಷಿಣ ಫ್ರಾನ್ಸ್, ಮಧ್ಯ ಯುರೋಪ್, ಬೆಲ್ಜಿಯಂ ಮತ್ತು ಉತ್ತರ ಬ್ರಿಟನ್ ಪ್ರದೇಶಗಳಲ್ಲಿ ಹರಡಿದ್ದ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿ. ಫ್ರಾನ್ಸಿನ ಪಿರನೆಸ್ ಪರ್ವತ ಪ್ರದೇಶದಲ್ಲಿರುವ ಮಜ್-ದ-ಅಝಿಲ್ ಎಂಬ ಸ್ಥಳದಲ್ಲಿ ಮೊದಲು ಗುರುತಿಸಲ್ಪಟ್ಟದ್ದರಿಂದ ಅಝಿಲಿಯನ್ ಎಂಬ ಹೆಸರು ರೂಢಿಯಾಯಿತು. ಹಳೆ ಶಿಲಾಯುಗದ ಮ್ಯಾಗ್ಡಲೇನಿಯನ್ ಅವಶೇಷಗಳ ಮೇಲ್ಪದರಗಳಲ್ಲಿ ಇದರ ಅವಶೇಷಗಳು ಲಭಿಸಿರುವುದರಿಂದ ಇದರ ಕಾಲ ಪ್ರ.ಶ.ಪೂ.8000 ಇರಬಹುದೆಂದು ಹೇಳಬಹುದು. ಬೇಟೆಯಿಂದಲೇ ಜೀವಿಸು ತ್ತಿದ್ದ ಈ ಜನ, ಸಣ್ಣ ಶಿಲೋಪಕರಣಗಳನ್ನು, ಎಲುಬಿನ ಉಪಕರಣಗಳನ್ನು ಮೀನಿನ ಬೇಟೆಗಾಗಿ ಕೆಂಪು ಜಿಂಕೆಯ ಕೊಂಬಿನಿಂದ ಮಾಡಿದ ಹಾರ್ಪೂನ್ ಎಂಬ ಆಯುಧವನ್ನು ಉಪಯೋಗಿಸುತ್ತಿದ್ದರು. ಈ ಕಾಲದಲ್ಲಿ ಪಶುಪಾಲನೆ ಬಳಕೆಯಿರಲಿಲ್ಲವಾದರೂ ನಾಯಿ ಮಾತ್ರ ಪಳಗಿದ ಪ್ರಾಣಿಯಾಗಿದ್ದಿತು. ಚುಕ್ಕೆಗಳು, ಉದ್ದ ಅಡ್ಡ ಗೆರೆಗಳು, ವೃತ್ತಗಳು ಮುಂತಾದ ಕಪ್ಪುಬಣ್ಣದ ಚಿಹ್ನೆಗಳಿಂದ ಚಿತ್ರಿತವಾದ ಸಣ್ಣ ಗುಂಡುಕಲ್ಲುಗಳು ಈ ಸಂಸ್ಕೃತಿಯ ಅವಶೇಷಗಳೊಡನೆ ದೊರಕುತ್ತವೆ. ಬವೇರಿಯದ ಆಫ್‌ನೆಟ್‌ನಲ್ಲಿ ದೊರಕಿರುವ ಈ ಕಾಲದ ತಲೆಬುರುಡೆಗಳ ಗುಡ್ಡೆಗಳು ಈ ಜನರು ಆಚರಿಸುತ್ತಿದ್ದ ಶವಸಂಸ್ಕಾರ ಪದ್ಧತಿಯ ಬಗ್ಗೆ ಮಾಹಿತಿ ನೀಡುತ್ತವೆ. (ಎಸ್.ಎನ್.)

**ಅಟಾಟರ್ಕ್, ಕೆಮಾಲ್:** 1880-1938. ಆಧುನಿಕ ತುರ್ಕಿಯ ನಿರ್ಮಾಪಕ, ಮೊದಲನೆಯ ರಾಷ್ಟ್ರಾಧ್ಯಕ್ಷ. 1934ರ ಮೊದಲಿಗೆ ಈತನನ್ನು ಮುಸ್ತಫ ಕೆಮಾಲ್, ಕೆಮಾಲ್ ಪಾಷ ಎಂದು ಕರೆಯುತ್ತಿದ್ದರು. ಮಧ್ಯಮವರ್ಗದ ಕುಟುಂಬವೊಂದರಲ್ಲಿ ಜನಿಸಿದ. ಸೈನ್ಯಕ್ಕೆ ಸೇರಿ 1908ರ ತುರ್ಕಿ ಯುವಕ ಕ್ರಾಂತಿಯಲ್ಲಿ ಭಾಗವಹಿಸಿದ. 1914-18ರ ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿ ಗ್ಯಾಲಿಪೊಲಿ, ಮೆಸಪೊಟೇಮಿಯ ಮುಂತಾದ ಕಡೆಗಳಲ್ಲಿ ಹೋರಾಡಿ ಸಮರ್ಥ ಸೇನಾಧಿಪತಿಯೆಂದು ಹೆಸರು ಗಳಿಸಿದ. ತುರ್ಕಿ ಯುದ್ಧದಲ್ಲಿ ಸೋತ ಅನಂತರ ರಾಷ್ಟ್ರೀಯ ಪಕ್ಷವೊಂದನ್ನು ನಿರ್ಮಿಸಿ ತುರ್ಕಿಯ ಸ್ವಾತಂತ್ರ್ಯ ಸಾಧನೆಗಾಗಿ ಪಣತೊಟ್ಟು ನಿಂತು, 1921-22ರಲ್ಲಿ ಅನಟೋಲಿಯವನ್ನು ಆಕ್ರಮಿಸಿದ್ದ ಗ್ರೀಕರನ್ನು ಹೊಡೆ ದೋಡಿಸಿ, ಸುಲ್ತಾನನ ಆಳ್ವಿಕೆಯನ್ನೇ ರದ್ದುಮಾಡಿ, 1923ರ ಲಾಸೇನ್ ಸಮ್ಮೇಳನದಲ್ಲಿ ಸ್ವತಂತ್ರ ತುರ್ಕಿ ರಾಜ್ಯಕ್ಕೆ ಮನ್ನಣೆ ಸಂಪಾದಿಸಿದ. 1923ರಲ್ಲಿ ಜನರು ಕೃತಜ್ಞತೆಯಿಂದ ಇವನನ್ನೇ ರಾಷ್ಟ್ರದ ಅಧ್ಯಕ್ಷನನ್ನಾಗಿ ಆರಿಸಿದರು. ತನ್ನ ನಿಧನದವರೆಗೂ ಈತ ಅಧ್ಯಕ್ಷನಾಗಿಯೇ ಮುಂದುವರಿದ. ಜೀವನದ ಎಲ್ಲ ರಂಗಗಳಲ್ಲೂ ತುರ್ಕಿಯ ಜನತೆ ಆಧುನಿಕತೆಯೊಡನೆ ಪಾಶ್ಚಾತ್ಯರಂತಾಗ ಬೇಕೆಂದು ನಿರ್ಣಯಿಸಿ ನಾನಾ ಸುಧಾರಣೆಗಳನ್ನು ಜಾರಿಗೆ ತಂದ. ಸಂಪ್ರದಾಯಬದ್ಧರಾದ ತುರ್ಕಿ ಜನರು ಆಗ ನವೀನ ರೀತಿ ನೀತಿಗಳನ್ನು ಅಂಗೀಕರಿಸಿದ್ದು ಸೋಜಿಗದ ವಿಚಾರ; ಇದರಿಂದ ದೇಶ ಪ್ರಗತಿಯತ್ತ ಸಾಗಿತ್ತು. (ಎ.ಎಂ.)

**ಅಟ್ಲಾಂಟಿಕ್ ಸನ್ನದು:** ವಿಶ್ವಸಂಸ್ಥೆಯನ್ನು ಸ್ಥಾಪಿಸಲು ಪ್ರಪಂಚದ ಅನೇಕ ರಾಷ್ಟ್ರಗಳೂ ಅವುಗಳ ನಾಯಕರೂ ನಡೆಸಿದ ಅನೇಕ ಪ್ರಯತ್ನಗಳಲ್ಲಿ ಈ ಸನ್ನದು ಬಹು ಮುಖ್ಯವಾದ ಒಂದು ಮೈಲಿಗಲ್ಲಾಗಿ ಪರಿಗಣಿಸಲಾಗಿದೆ. ಅದು ಈಗಿನ ವಿಶ್ವಸಂಸ್ಥೆಯ ಅಡಿಗಲ್ಲೆಂದೇ ಹೇಳಬಹುದು. ಈ ಸನ್ನದು 1941 ಆಗಸ್ಟ್ 14ನೆಯ ತಾರೀಕು ಪ್ರಪಂಚದ ಎರಡು ಬಲಾಢ್ಯ ರಾಷ್ಟ್ರಗಳಾದ ಅಮೆರಿಕ ಮತ್ತು ಇಂಗ್ಲೆಂಡ್ ದೇಶಗಳಿಂದ ಪ್ರಕಟಿಸಲಾಯಿತು. ಅಮೆರಿಕ ಪರವಾಗಿ ಆಗಿನ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ರೂಸ್ವೆಲ್ಟರೂ ಇಂಗ್ಲೆಂಡ್ ದೇಶದ ಪರವಾಗಿ ಆಗಿನ ಮಹಾ ಪ್ರಧಾನಿಗಳಾಗಿದ್ದ ವಿನ್‌ಸ್ಟನ್ ಚರ್ಚಿಲರೂ ಉತ್ತರ ಅಟ್ಲಾಂಟಿಕ್‌ನಲ್ಲಿ ಒಂದು ಯುದ್ಧದ ಹಡಗಿನಲ್ಲಿ ಸಂಧಿಸಿ ಒಂದು ತೀರ್ಮಾನಕ್ಕೆ ಬಂದಾದಮೇಲೆ ಅವರಿಬ್ಬರ ಹೆಸರಿ ನಲ್ಲಿ ಈ ಸನ್ನದನ್ನು ಪ್ರಕಟಿಸಲಾಯಿತು. ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸಿ ವಿಶ್ವದಲ್ಲಿ ಯುದ್ಧಗಳನ್ನು ತಡೆಗಟ್ಟುವುದಕ್ಕೂ ವಿಶ್ವಸಂಸ್ಥೆಯನ್ನು ಸ್ಥಾಪಿಸುವುದಕ್ಕೂ ಮತ್ತು ಭವಿಷ್ಯದಲ್ಲಿ ವಿಶ್ವದ ಏಳಿಗೆಗೂ ಪ್ರಯತ್ನಿಸಬೇಕೆಂದು ಎರಡು ರಾಷ್ಟ್ರಗಳೂ ಈ ಕೆಲವು ತತ್ತ್ವಗಳನ್ನು ಪಾಲಿಸಬೇಕೆಂದೂ ಒಪ್ಪಿಕೊಳ್ಳಲಾಯಿತು.

1. ಎರಡು ರಾಷ್ಟ್ರಗಳೂ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ತಮ್ಮ ಸ್ವಪ್ರತಿಷ್ಠೆಯಿಂದ ಪ್ರಾದೇಶಿಕ ವಿಸ್ತರಣೆಗೆ ಪ್ರಯತ್ನಿಸಬಾರದು. 2. ಯಾವುದೇ ಒಂದು ದೇಶದ ಜನಗಳ ಅಭಿಲಾಷೆಗೆ ವಿರುದ್ಧವಾಗಿ ಪ್ರಾದೇಶಿಕ ಬದಲಾವಣೆಗಳೂ ಆಗಕೂಡದು. ಅಂಥ ಬದಲಾವಣೆ ಗಳಿಗೆ ಎರಡು ದೇಶಗಳೂ ಉತ್ತೇಜನ ಕೊಡುವುದಿಲ್ಲ. 3. ಎಲ್ಲ ರಾಷ್ಟ್ರಗಳ ಜನರೂ ತಮಗೆ ಯಾವ ವಿಧವಾದ ಸರ್ಕಾರ ಬೇಕೊ ಅಂಥದನ್ನು ರಚಿಸಿಕೊಳ್ಳುವುದನ್ನು ಮತ್ತು ಅವರ ಹಕ್ಕುಗಳನ್ನು ಕಾಪಾಡಿಕೊಳ್ಳುವುದನ್ನು ಎರಡು ರಾಷ್ಟ್ರಗಳೂ ಗೌರವಿಸುತ್ತವೆ. 4. ಎಲ್ಲ ರಾಷ್ಟ್ರಗಳ ವಾಣಿಜ್ಯ ವ್ಯಾಪಾರಗಳ ಮತ್ತು ಆರ್ಥಿಕ ಅಭಿವೃದ್ಧಿಗೂ ಎರಡು ರಾಷ್ಟ್ರಗಳೂ ಪ್ರಯತ್ನಿಸುತ್ತವೆ. 5. ಎರಡು ರಾಷ್ಟ್ರಗಳು ಎಲ್ಲ ರಾಷ್ಟ್ರಗಳ ಸಾಮಾಜಿಕ ಭದ್ರತೆ, ಆರ್ಥಿಕ ಅಭಿವೃದ್ಧಿ ಮತ್ತು ಜನರ ಜೀವನಮಟ್ಟ ಹೆಚ್ಚಿಸಲು ಶ್ರಮಿಸುತ್ತವೆ. 6. ವಿಶ್ವದಲ್ಲಿ ಶಾಂತಿಯನ್ನು ಏರ್ಪಡಿಸಿ, ಜನಗಳನ್ನು ಯುದ್ಧಭೀತಿಯಿಂದ ಮತ್ತು ಸಾಮಾನ್ಯ ಕೊರತೆಗಳಿಂದ ಪಾರುಮಾಡಲು ಎರಡು ರಾಷ್ಟ್ರಗಳೂ ಕೆಲಸ ಮಾಡುತ್ತವೆ. 7. ಸಮುದ್ರಯಾನದ ಹತೋಟಿ ಯಾವ ಒಂದು ರಾಷ್ಟ್ರದ ಹಕ್ಕಲ್ಲ. ಪ್ರಪಂಚದ ಎಲ್ಲ ರಾಷ್ಟ್ರಗಳ ಜನರೂ ವಿಶ್ವದ ಯಾವ ಭಾಗಕ್ಕಾದರೂ ಹೋಗುವಂತೆ ಅವಕಾಶ ಕಲ್ಪಿಸಲು ಎರಡು ರಾಷ್ಟ್ರಗಳೂ ಸಹಾಯಮಾಡುತ್ತವೆ. 8. ಯುದ್ಧವನ್ನೂ ಆಕ್ರಮಣ ಭೀತಿಯನ್ನುಂಟುಮಾಡುವುದನ್ನೂ ಸಾರ್ವತ್ರಿಕವಾಗಿ ನಿಷೇಧಿಸುವುದಲ್ಲದೆ ಪ್ರಪಂಚದ ಯಾವ ರಾಷ್ಟ್ರವೂ ಬಲಪ್ರಯೋಗ ಮಾಡದಂತೆ ಎರಡು ರಾಷ್ಟ್ರಗಳೂ ನೋಡಿಕೊಳ್ಳುತ್ತವೆ.

ಈ ಮೇಲಿನ ಎಂಟು ತತ್ತ್ವಗಳು ಅಟ್ಲಾಂಟಿಕ್ ಸನ್ನದಿನಲ್ಲಿ ಸೇರಿವೆ. ಇವು ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ಬಹು ಮುಖ್ಯವಾಗಿವೆ. ಆದುದರಿಂದ ಅಂತಾರಾಷ್ಟ್ರೀಯ ರಾಜಕೀಯ ಕ್ಷೇತ್ರದಲ್ಲಿ ಅಟ್ಲಾಂಟಿಕ್ ಸನ್ನದಿಗೆ ಒಂದು ಪ್ರಮುಖ ಸ್ಥಾನವಿದೆ. (ಎಂ.ಕೆ.ಆರ್.)

**ಅತ್ತಿರಂಪಾಕ್ಕಮ್:** ತಮಿಳುನಾಡು ರಾಜ್ಯದ ತಿರುವಳ್ಳೂರು ಜಿಲ್ಲೆಯಲ್ಲಿರುವ ಹಳೆಶಿಲಾಯುಗದ ನೆಲೆ. ಕೊರ್ತಲಯಾರ್ ನದಿಯಿಂದ 1 ಕಿಮೀ ಉತ್ತರದಲ್ಲಿದೆ. ಈ ನದಿ ಪಾತ್ರದಲ್ಲಿ ಶೇಲ್ (ಜೇಡಿಗಲ್ಲು) ಪದರದ ಮೇಲಿರುವ ಫ್ಲೆರಿಕ್ರಿಟ್ ಪದರದಲ್ಲಿ ಆದಿ ಹಳೆಶಿಲಾಯುಗದಿಂದ (ಅಶೂಲಿಯನ್) ಮಧ್ಯ ಹಳೆ ಶಿಲಾಯುಗದವರೆಗಿನ ಉಪಕರಣ ಸಮುಚ್ಚಯಗಳು ಕಂಡುಬರುತ್ತವೆ. ಈ ನೆಲೆಯ ಪಶ್ಚಿಮದಲ್ಲಿ ಅಳ್ಳಿಕುಳ್ಳಿ ಬೆಟ್ಟ ಶ್ರೇಣಿಯಿದೆ.

ಈ ನೆಲೆ ರಾಬರ್ಟ್ ಬ್ರೂಸ್‌ಫುಟ್ ಮತ್ತು ವಿಲಿಯಮ್ ಕಿಂಗ್‌ರವರ ಶೋಧನೆಗಳಲ್ಲಿ 1863ರಲ್ಲಿ ಬೆಳಕಿಗೆ ಬಂದಿತು. ಇಲ್ಲಿ ಉಪಕರಣ ಸಮುಚ್ಚಯಗಳು ಕೊರ್ತಲಯಾರ್ ನದಿಯ ಸಮತಟ್ಟಿನಲ್ಲಿ ಇರುವುದನ್ನು 1938ರಲ್ಲಿ ವಿ.ಡಿ.ಕೃಷ್ಣಸ್ವಾಮಿಯವರು ಗುರುತಿಸಿದ್ದರು. ಅಂತ್ಯ ಅಶೂಲಿಯನ್, ಮಿಕೋಕ್ವಿಯನ್ ಮತ್ತು ಲೆವಾಲ್ವ ಮಾದರಿಯ ಉಪಕರಣಗಳು ಈ ಸಮತಟ್ಟಿನ ಸ್ತರಗಳಲ್ಲಿದ್ದವು. ಇಂತಹ ಸಮುಚ್ಚಯಗಳನ್ನು ಇವರು 5ನೆಯ ಉದ್ಯಮವೆಂದು ಕರೆದರು. ಇದೇ ಸಮುಚ್ಚಯಗಳಿಗೆ ಟಿ.ಟಿ.ಪ್ಯಾಟರ್‌ಸನ್ ಅವರು ಮದರಾಸಿನ ಹಳೆಶಿಲಾಯುಗ

ಸಮುಚ್ಚಯಗಳೆಂದು ಹೆಸರು ಕೊಟ್ಟರು. ಕೋರ್ತಲಯಾರ್ ನದಿಯ ಸಮತಟ್ಟಿನಲ್ಲಿ ಅಂತ್ಯ ಅಶೂಲಿಯನ್ ಮಾದರಿಯ ಕೈಗೊಡಲಿ ಮತ್ತು ಕಡಿಕತ್ತಿಗಳು ಇರುವುದನ್ನು ಇವರೂ ಸಮರ್ಥಿಸಿದರು.

ಕೆ.ಡಿ. ಬ್ಯಾನರ್ಜಿಯವರು 1962–67ರ ನಡುವೆ ಇಲ್ಲಿ ಸಣ್ಣ ಪ್ರಮಾಣದಲ್ಲಿ ಉತ್ಖನನ ನಡೆಸಿದರು. ಇಲ್ಲಿ ನದಿಯ ಸಮತಟ್ಟುಗಳೇ ಇಲ್ಲ; ಇಲ್ಲಿರುವುದು ಸಮುದ್ರ ಸೃಷ್ಟಿತ ಸ್ತರಗಳು ಎಂಬ ಅಭಿಪ್ರಾಯವನ್ನು ಇವರು ತಳೆದರು. ಇವರ ಪ್ರಕಾರ ಇಲ್ಲಿ ಸವೆದುಹೋದ ಶೇಲ್ ಪದರದ ಮೇಲೆ ಅಶೂಲಿಯನ್ ಮಾದರಿಯ ಉಪಕರಣಗಳಿವೆ. ಇದರ ಮೇಲಿರುವ ಡೆಟ್ರೈಟಲ್ ಲ್ಯಾಟರೈಟ್ (ಜಂಬುಕಲ್ಲು) ಪದರದಲ್ಲಿ ಆದಿ ಹಳೆಶಿಲಾಯುಗೋತ್ತರ ಉಪಕರಣಗಳಿವೆ.



ಆದಿ ಹಳೆಶಿಲಾಯುಗ ಸಂಸ್ಕೃತಿಯ ನೆಲೆಯ ಉತ್ಖನನ

ಶಾಂತಿಪಪ್ಪುರವರು ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ಉತ್ಖನನ ನಡೆಸುತ್ತಿದ್ದು, 6 ಸ್ತರಗಳನ್ನು ಇವರು ಗುರುತಿಸಿದ್ದಾರೆ. ಅತ್ಯಂತ ಕೆಳಗಿರುವ 6ನೆಯ ಸ್ತರ ಜೇಡಿಮಣ್ಣಿನ ಪದರ. ಇದರಲ್ಲಿ ಅಶೂಲಿಯನ್ ಉಪಕರಣಗಳಿವೆ. ಇದರ ಮೇಲಿರುವ ಜಲ್ಲಿಯ ಪದರದಲ್ಲಿ (5ನೆಯ ಸ್ತರ) ಮೂಲಶಿಲೆಗಳು, ಅವುಗಳ ತಿರುಳು ಮತ್ತು ಚಕ್ಕೆಗಳು ಮಾತ್ರ ಇವೆ. ಇವು ಆದಿ ಹಳೆಶಿಲಾಯುಗೋತ್ತರ ಉಪಕರಣಗಳಾಗಿರಬಹುದು. 3 ಮತ್ತು 4ನೆಯ ಸ್ತರಗಳು ಹೂಳುಮಣ್ಣು ಮಿಶ್ರಿತ ಜೇಡಿಮಣ್ಣಿನ ಪದರಗಳಾಗಿದ್ದು ಇದರಲ್ಲಿ ಆದಿ ಹಳೆಶಿಲಾಯುಗ ಮತ್ತು ಮಧ್ಯ ಹಳೆಶಿಲಾಯುಗದ ನಡುವಿನ ಸ್ಥಿತ್ಯಂತರ ಹಂತದ ಉಪಕರಣಗಳಿವೆ. 2ನೆಯ ಸ್ತರದಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳಿವೆ. 6ನೆಯ ಸ್ತರದಲ್ಲಿ ದೊಡ್ಡದೊಡ್ಡ ಚಕ್ಕೆಗಳಿಂದ ತಯಾರಾದ ಕೈಗೊಡಲಿ ಮತ್ತು ಕಡಿಕತ್ತಿಗಳು ಹೇರಳವಾಗಿವೆ ಆದರೆ ಮೂಲಶಿಲೆಗಳು/ತಿರುಳುಗಳು ಇಲ್ಲ. ಆದ್ದರಿಂದ 3–4 ಕಿಮೀ ವ್ಯಾಪ್ತಿಯೊಳಗಿರುವ ಕಲ್ಲಿನ ನಿಕ್ಷೇಪದ ಸ್ಥಳಗಳಲ್ಲಿಯೇ ದೊಡ್ಡ ಚಕ್ಕೆಗಳನ್ನು ಎಬ್ಬಿಸಿ ತೆಗೆದು ಅವನ್ನು ಇಲ್ಲಿಗೆ ತಂದು ಉಪಕರಣವಾಗಿ ಮಾರ್ಪಾಡುಗೊಳಿಸುತ್ತಿದ್ದಿರಬೇಕು. 5 ಮತ್ತು 2ನೆಯ ಸ್ತರಗಳಲ್ಲಿ ಇಲ್ಲಿಯೇ ಉಪಕರಣಗಳನ್ನು ತಯಾರಿಸುತ್ತಿದ್ದ ಕುರುಹುಗಳಿವೆ. ಇವೆಂದರೆ ಮೂಲಶಿಲೆಗಳು, ಸುತ್ತಿಗೆಕಲ್ಲು, ತ್ಯಾಜ್ಯ ಚಕ್ಕೆಗಳು, ತಯಾರಿಕೆಯ ಹಂತದಲ್ಲಿರುವ ಉಪಕರಣಗಳು ಹಾಗೂ ಸಣ್ಣಸಣ್ಣ ಚಕ್ಕೆಗಳು, ಕೈಗೊಡಲಿ, ಕಡಿಕತ್ತಿ ಮುಂತಾದ ದ್ವಿಮುಖ ಉಪಕರಣಗಳು ಈ ಹಂತಗಳಲ್ಲಿಲ್ಲ. ಈ ಉತ್ಖನನದಿಂದ ತಿಳಿದುಬಂದ ವಿಷಯವೇನೆಂದರೆ ಇಲ್ಲಿನ ಉಪಕರಣಗಳು ಕ್ರಿಟೇಷಿಯಸ್ ಕಾಲದಲ್ಲಿ ಸಂಚಯಗೊಂಡ ಶೇಲ್ ಅಥವ ಜೇಡಿಮಣ್ಣಿನ ಪದರದಲ್ಲಿಲ್ಲ, ಬದಲಿಗೆ ಇವು ನದಿ–ಸೃಷ್ಟಿತ ಜೇಡಿಮಣ್ಣಿನ ಪದರದಲ್ಲಿವೆ. ಅವಡಿ ಶೇಲ್‌ನ ನಿಕ್ಷೇಪದ ಮೇಲೆ ನದಿಯು ಹರಿಯುವಾಗ ಶಿಲೆಯು ಸವೆದು ಇದರ ಕಣಗಳು ನದಿಯೊಂದಿಗೆ ಸಾಗಿಬಂದು ಇಲ್ಲಿ ಶೇಖರಗೊಂಡು ಪದರವಾಗಿದೆ. (ಎಸ್.ಪಿ.)

**ಅತ್ರಂಜಿಖೇಡ:** ಉತ್ತರ ಪ್ರದೇಶ ರಾಜ್ಯದ ಇಟಾ ಜಿಲ್ಲೆಯಲ್ಲಿ ಕಾಳಿನದಿಯ ಬಲದಂಡೆಯಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿಗೆ ಗೌತಮಬುದ್ಧ ಭೇಟಿ ನೀಡಿದ್ದನೆಂಬುದಾಗಿ ಊಹಿಸಲಾಗಿದ್ದು, ಅವನು ಭೇಟಿ ನೀಡಿದ್ದರಿಂದ ನದಿಗೆ ವೈರಂಜಾ ಅಥವಾ ವೈರಾಗ್ಯ ಎಂದು ಹೆಸರು ಬಂದಿತೆಂದು ನಂಬಿಕೆಯಿದೆ. ಇದರ ಹೆಚ್ಚಿನ ಮಾಹಿತಿ ಪಾಳಿ ಸಾಹಿತ್ಯದಲ್ಲಿದೆ. ಚೀನದ ಬೌದ್ಧ ಯಾತ್ರಿಕನಾದ ಯುವಾನ್‌ಚಾಂಗ್ ಈ ಪ್ರದೇಶವನ್ನು ಪಿ–ಲೋ–ಸಾನ್–ನ ಎಂದು ಕರೆದಿದ್ದಾನೆ. ಜೈನರು ಇದನ್ನು ಅಂತರಾಂಜಿ ಎಂತಲೂ ಕರೆದಿದ್ದಾರೆ. ಇದು ಅಕ್ಬರನ ಕಾಲದಲ್ಲಿ ಕನೌಜ್ ಆಡಳಿತ ವಿಭಾಗದ ಪರಗಣವಾಗಿತ್ತು. ಈ ನೆಲೆಯಲ್ಲಿ ಅಲಿಗಡ್ ಮುಸ್ಲಿಂ ವಿಶ್ವವಿದ್ಯಾಲಯ 1962–64ರಲ್ಲಿ ಉತ್ಖನನ ಮಾಡಿತು. ಪ್ರ.ಶ.ಪೂ.2ನೆಯ ಸಹಸ್ರಮಾನದ ಆರಂಭಕಾಲದಿಂದ ಮಧ್ಯಯುಗೀನ ಕಾಲದವರೆಗಿನ ಅವಶೇಷಗಳು ಇಲ್ಲಿವೆ. ಇಲ್ಲಿ ಕಂಡುಬಂದಿರುವ ಹಂತಗಳೆಂದರೆ: ಕಾವಿಬಣ್ಣದ ಮಣ್ಪಾತ್ರೆ ಸಂಸ್ಕೃತಿ; ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಸಂಸ್ಕೃತಿ; ವರ್ಣಚಿತ್ರಿತ ಬೂದುಬಣ್ಣದ ಮಣ್ಪಾತ್ರೆ ಸಂಸ್ಕೃತಿ; ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆ ಸಂಸ್ಕೃತಿ, ಕುಷಾಣ ಮತ್ತು ಕುಷಾಣೋತ್ತರ ಕಾಲ; ಮಧ್ಯಯುಗೀನ ಕಾಲ.

ಹಂತ I (ಪ್ರ.ಶ.ಪೂ.2ನೆಯ ಸಹಸ್ರಮಾನದ ಮೊದಲರ್ಧ ಭಾಗ): ಈ ಹಂತದ ಕಾವಿಬಣ್ಣದ ಮಣ್ಪಾತ್ರೆಗಳು ವಿಶಿಷ್ಟವಾಗಿದೆ. ಹೆಚ್ಚಿನ ಪಾತ್ರೆಗಳು ಮಂದವಾಗಿವೆ. ಈ ವಿಧದ ಪಾತ್ರೆಗಳು ಬಹದ್ರಾಬಾದ್, ಅಂಬಖೇರಿ, ಹಸ್ತಿನಾಪುರ, ಸೈಪೈ ಮುಂತಾದ ನೆಲೆಗಳಲ್ಲಿ ದೊರೆತಿವೆ. ಬಟ್ಟಲು, ಮಡಕೆ, ಮುಚ್ಚಳ, ಕಾಲಿರುವ ತಟ್ಟೆ ಮುಂತಾದ ಪ್ರಕಾರಗಳ ಪಾತ್ರೆಗಳಿವೆ. ಕೆಲವು ಕಪ್ಪು–ಕಂದು ಮಿಶ್ರಿತ ಬಣ್ಣದ್ದಾಗಿದೆ. ಇವುಗಳ ಮೇಲ್ಮೈಯಲ್ಲಿ ಕಪ್ಪುಬಣ್ಣದಲ್ಲಿ ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಈ ರೀತಿ ರೇಖಾ ಚಿತ್ರಗಳಿಂದ ಅಲಂಕರಿಸಿದ ಮಣ್ಪಾತ್ರೆಗಳು ಲಾಲ್‌ಖಿಲಾ ಹೊರತುಪಡಿಸಿ ಇನ್ನೆಲ್ಲೂ ದೊರೆತಿಲ್ಲ. ಈ ಹಂತದ ಜನವಸತಿ ನದಿ ಪ್ರವಾಹದಿಂದ ನಾಶವಾಗಿರಬಹುದೆಂದು ಅಭಿಪ್ರಾಯವಿದೆ. ಇಲ್ಲಿನ ಜನರು ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆಯುತ್ತಿದ್ದರು. ಬೇಸಗೆಯಲ್ಲಿ ಬತ್ತವನ್ನು, ಚಳಿಗಾಲದಲ್ಲಿ ಜವೆಯನ್ನು ಬೆಳೆಯುತ್ತಿದ್ದರು. ಇವರು ದ್ವಿದಳ ಧಾನ್ಯಗಳನ್ನೂ ಸಹ ಬೆಳೆಯುತ್ತಿದ್ದರು. ಚಿರ್ ಕಟ್ಟಿಗೆಯನ್ನು ಹಿಮಾಲಯದ ತಪ್ಪಲಿನಿಂದ ತರುತ್ತಿದ್ದರು. ಇವರು ಮಾಂಸಾಹಾರವನ್ನೂ ಸೇವಿಸುತ್ತಿದ್ದರು. ಹಸು ಇವರ ವಿಶೇಷ ಸಾಕುಪ್ರಾಣಿಯಾಗಿತ್ತು. ಈ ಜನರಿಗೆ ಇಟ್ಟಿಗೆಯ ಬಳಕೆ ಗೊತ್ತಿರಲಿಲ್ಲ ವೆಂಬುದು ಇಲ್ಲಿನ ಕಟ್ಟಡಗಳ ನಿರ್ಮಾಣದಿಂದ ತಿಳಿಯುತ್ತದೆ. ಮನೆಗಳ ಗೋಡೆಗಳನ್ನು ಸಾಮಾನ್ಯವಾಗಿ ತಡಿಕೆ ಜೇಡಿಮಣ್ಣಿನ ಲೇಪನ, ಜೊಂಡು(ಹುಲ್ಲು) ಮುಂತಾದವುಗಳಿಂದ ನಿರ್ಮಿಸಿ ಅವುಗಳಿಗೆ ಮಣ್ಣಿನ ಸಾರಣೆಯನ್ನು ಮಾಡುತ್ತಿದ್ದರು.

ಹಂತ II (ಪ್ರ.ಶ.ಪೂ.1450–1200): ಇಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಕಂಡುಬಂದಿವೆ. ತಾಮ್ರ ಮತ್ತು ಅರೆ–ಅಮೂಲ್ಯ ಕಲ್ಲುಗಳ ಹಲವಾರು ವಸ್ತುಗಳು ಈ ಹಂತದಲ್ಲಿವೆ. ಅರೆ–ಅಮೂಲ್ಯ ಕಲ್ಲನ್ನು ರಾಜಸ್ತಾನದ ರಣಥಂಬೋರ್ ಪ್ರದೇಶದಿಂದ ತರಲಾಗಿದೆ. ತಾಮ್ರವನ್ನೂ ರಣಥಂಬೋರ್ ಅಥವಾ ಅಕ್ಕ–ಪಕ್ಕದ ಪ್ರದೇಶಗಳಿಂದಲೇ ತರಲಾಗಿದೆ. ಈ ಕಾಲದ ಜನ ಬತ್ತ, ಜವೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಈ ಕಾಲದಲ್ಲಿ ತೇಗದ ಮರ ಹೆಚ್ಚು ಉಪಯೋಗಿಸಲ್ಪಡುತ್ತಿದ್ದು, ಇದನ್ನು ಪಕ್ಕದ ಸಾತ್ಪುರ ಪ್ರದೇಶದಿಂದ ತರಲಾಗುತ್ತಿತ್ತು.

ಹಂತ III (ಪ್ರ.ಶ.ಪೂ. 1200–600): ಈ ಹಂತದ ಮುಖ್ಯ ಅನ್ವೇಷಣೆಯೆಂದರೆ ಕಬ್ಬಿಣದ ವಸ್ತುಗಳು. ಈಟಿಮೊನೆ, ಬಾಣದಮೊನೆ, ಚಾಕುಗಳು, ಉಳಿಗಳು, ಕೊಂಡಿಗಳು, ಕೊಡಲಿ, ಇಕ್ಕುಳ ಮುಂತಾದ ವಸ್ತುಗಳಿವೆ. ಈ ಕಾಲದಲ್ಲಿ ಕಬ್ಬಿಣದ ಕೈಗಾರಿಕೆ ಅಭಿವೃದ್ಧಿ ಹೊಂದಿತ್ತೆಂದು ಈ ನೆಲೆಯಿಂದ ತಿಳಿದುಕೊಳ್ಳಬಹುದಾಗಿದೆ. ಇದಲ್ಲದೆ ಈ ನೆಲೆಯಲ್ಲಿ ತಾಮ್ರದ ವಸ್ತುಗಳು ಸಹ ಲಭ್ಯವಾಗಿವೆ. ಉದಾ: ಉಂಗುರದ ಚೂರುಗಳು, ಬಳೆಗಳು, ಕೊಂಡಿಗಳು, ಸಲಾಕೆಗಳು, ಉಳಿಗಳು, ಮೊಳೆಯಾಕಾರದ ಸೂಜಿ, ಮುಳ್ಳಿನ ಚಿಮಟ, ಚುಚ್ಚುವ ಸೂಜಿಗಳು, ಬಾಣದ ಮೊನೆಗಳು. ಸುಡಾವೆಮಣ್ಣಿನ ಎತ್ತು, ಹಂದಿ ಮೊದಲಾದ ಪ್ರಾಣಿಗಳ ಗೊಂಬೆಗಳೂ ದೊರೆತಿವೆ. (ಎನ್‌ಆರ್.)

**ಅಥೆನ್ಸ್:** ಮೆಡಿಟರೇನಿಯನ್ ಸಮುದ್ರದ ಈಶಾನ್ಯದ ತೀರದಲ್ಲಿರುವ ಗ್ರೀಸ್ ದೇಶದ ರಾಜಧಾನಿ. ಎರಡು ಸಾವಿರ ವರ್ಷಕ್ಕೂ ಹಿಂದಿನಿಂದ ಪ್ರಸಿದ್ಧಿ ಪಡೆದಿದೆ. ಪ್ರಪಂಚದ ಸಂಸ್ಕೃತಿಯ ಬೆಳವಣಿಗೆಗೆ ಈ ನಗರ ನೀಡಿರುವ ಕಾಣಿಕೆ ಅಪಾರ. ನಗರದ ಉತ್ತರಕ್ಕೆ, ಈಶಾನ್ಯಕ್ಕೆ ಮತ್ತು ಆಗ್ನೇಯಕ್ಕೆ ಮ್ಯೂಸೆಸ್, ನಿಂಫ್ ಮತ್ತು ನಿಕ್ಸ್ ಪರ್ವತಶ್ರೇಣಿಗಳಿವೆ. ಆಕ್ರೋಪೋಲಿಸ್ ಎಂಬುದು ಪ್ರಾಚೀನ ಅಥೆನ್ಸ್ ಪಟ್ಟಣ. ನಿಯೋಪೋಲಿಸ್ ಎಂಬ ಹೊಸನಗರ ಆಕ್ರೋಪೋಲಿಸ್‌ಗೆ ಪಶ್ಚಿಮದಲ್ಲಿದೆ.

ಅಥೆನ್ಸ್ ನಗರದ ಖ್ಯಾತಿ ಉಳಿದಿರುವುದು ಇಲ್ಲಿ ಗ್ರೀಕರು ಬೆಳೆಸಿ ಪೋಷಿಸಿ ಪ್ರಪಂಚಕ್ಕೆ ನೀಡಿರುವ ಸಂಸ್ಕೃತಿಯಿಂದ. ಒಂದು ದೊಡ್ಡ ವಿಶ್ವವಿದ್ಯಾಲಯ (1837), ವಿವಿಧ ಕಲಾಸಂಘ, ವೈಜ್ಞಾನಿಕ ವಿದ್ಯಾಶಾಲೆ, ಪ್ರಾಚ್ಯಶೋಧನ ಸಂಸ್ಥೆಗಳು, ವಿವಿಧ ವಸ್ತುಸಂಗ್ರಹಾಲಯಗಳು, ಅನೇಕ ಗ್ರಂಥಾಲಯಗಳು ಇಲ್ಲಿವೆ. ಗ್ರೀಕ್ ಕ್ರೈಸ್ತಧರ್ಮಾಧಿಕಾರಿಯ ಆಲೋಚನಾಸಭೆಯೂ ಇಲ್ಲಿದೆ. ಪ್ರಾಚೀನ ಗ್ರೀಕ್ ಸಂಸ್ಕೃತಿಗೆ ಅದರ ಚರಿತ್ರೆಗೆ ಸಂಬಂಧಪಟ್ಟ ಸ್ಮಾರಕಗಳು, ಅವಶೇಷಗಳು, ಇಂದಿಗೂ ನಾನಾ ದೇಶಗಳ ಪ್ರವಾಸಿಗರನ್ನು ಸೆಳೆಯುತ್ತಿವೆ. ಬಹುಮಟ್ಟಿಗೆ, ಗ್ರೀಕ್ ಸಂಸ್ಕೃತಿ ಎಂದರೆ ಅಥೆನ್ಸ್ ಎಂದೇ ಹೇಳಬಹುದು. ಅಥೆನ್ಸ್ ನಗರ ಸ್ಥಾಪಿತವಾದದ್ದು ಪ್ರ.ಶ.ಪೂ.15ನೆಯ ಶತಮಾನದಲ್ಲಿರಬಹುದು ಎಂದು ಕೆಲವರ ಅಭಿಪ್ರಾಯ. ಆದರೆ ಇದರ ಭವ್ಯ ಭವಿಷ್ಯತ್ತಿನ ಮುನ್ಸೂಚನೆ ಕಂಡುಬಂದದ್ದು ಪ್ರ.ಶ.ಪೂ.6ನೆಯ ಶತಮಾನದ ಕಾಲಕ್ಕೆ. ಅದಕ್ಕೆ ಮೊದಲು ನಿರಂಕುಶಾಧಿಪತಿಗಳು ರಾಜ್ಯವಾಳುತ್ತಿದ್ದರು. ಕ್ರಮೇಣ ಅಧಿಕಾರ ಶ್ರೀಮಂತ ವರ್ಗದವರ ಹತೋಟಿಗೆ ಬಂದಿತು. 6ನೆಯ ಶತಮಾನದಲ್ಲಿ ಸರ್ವಾಧಿಕಾರಿಯಾಗಿ ಬಂದ ಸೋಲನ್ ಎಂಬಾತ ಸಾಮಾನ್ಯ ಜನರ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂಬ ಉದ್ದೇಶದಿಂದ ಸುಧಾರಣೆಗಳನ್ನು ಜಾರಿಗೆ ತಂದವರಲ್ಲಿ ಮೊದಲಿಗ. ಕೆಳವರ್ಗದ ಜನರ ನೆಮ್ಮದಿಗೆ ಪ್ರತಿಕೂಲವಾಗಿದ್ದ ಕಾಯಿದೆಗಳು ತೊಡೆದು ಹಾಕಲ್ಪಟ್ಟವು. ನೆಮ್ಮದಿಯ ಪರಿಣಾಮವಾಗಿ, ಹೊರದೇಶಗಳಿಂದ ಜನರು ಅಥೆನ್ಸಿಗೆ ಬಂದು ನೆಲಸತೊಡಗಿದರು. ಹೊರದೇಶಗಳೊಡನೆ ವ್ಯಾಪಾರ ಬೆಳೆಯಿತು. ಜನರು ಕುಶಲಕಲೆಗಳ ಕಡೆಗೆ ಗಮನ ಕೊಟ್ಟರು.

ಸೋಲನ್ನನ ತರುವಾಯ ಬಂದ ಪಿಸಿಸ್ಟ್ರಾಟಸ್ ಮತ್ತು ಅವನ ಮಕ್ಕಳು ಹಿಪಿಯಾಸ್ ಮತ್ತು ಹಿಪಾರ್ಕಸ್ಸರ ಕಾಲದಲ್ಲೂ ಅಥೆನ್ಸಿನ ಪ್ರಗತಿ ಯಾವ ಅಡೆತಡೆಯೂ ಇಲ್ಲದೆ ಸಾಗಿತು. ನೀರಾವರಿ ಕೆಲಸಗಳು ನಡೆದವು; ಕೈಗಾರಿಕೆ, ವ್ಯಾಪಾರ, ರಸ್ತೆನಿರ್ಮಾಣ, ಹಬ್ಬಹರಿದಿನಗಳಲ್ಲಿ ಸಾರ್ವಜನಿಕ ಸಮಾರಂಭಗಳಿಗೆ ಪ್ರೋತ್ಸಾಹ, ಕಲೆಗಳಿಗೆ ಉತ್ತೇಜನ–ಇವೆಲ್ಲ ಜನರಿಗೆ ದೊರೆತು ಇದು ಗ್ರೀಕ್ ಸಂಸ್ಕೃತಿಯ ಕೇಂದ್ರವಾಯಿತು. ಪ್ರ.ಶ.ಪೂ.507ರಲ್ಲಿ ಕ್ಲೇಸ್ತನೀಸ್ ಅಧಿಕಾರ ವಹಿಸಿ, ಅಥೆನ್ಸಿನಲ್ಲಿ ಪ್ರಜಾಪ್ರಭುತ್ವವನ್ನೇರ್ಪಡಿಸಿದ. ಇವನ ಸುಧಾರಣೆ ಪೂರ್ಣ ಯಶಸ್ವಿಯಾಗದಿದ್ದರೂ ಇದು ಮುಂದೆ ಪೆರಿಕ್ಲೀಸ್‌ನ ಕಾಲದ ಅಥೆನ್ಸ್‌ಗೆ ಮಾರ್ಗ ಸೂಚಿಯಾಯಿತು. ಆದರೆ ಈ ಮಧ್ಯೆ ಪರ್ಷಿಯದೊಡನೆ ಯುದ್ಧಮಾಡ ಬೇಕಾದ ಪ್ರಸಂಗವೊದಗಿ (ಪ್ರ.ಶ.ಪೂ. 500–449), ಅಥೆನ್ಸಿನ ಪರಿಸ್ಥಿತಿ ಬದಲಾಯಿಸಿತು. ಸ್ಪಾರ್ಟಗಿಂತ ಅಥೆನ್ಸ್ ಚಿಕ್ಕದು, ಯುದ್ಧದಲ್ಲೂ ಅದರಷ್ಟು ಬಲಯುತವಾಗಿರಲಿಲ್ಲ; ಆದರೂ ಕಾರ್ಯಪಟುತ್ವದಲ್ಲಿ, ದಕ್ಷತೆಯಲ್ಲಿ, ಅದಕ್ಕಿಂತ ಮೇಲು. ಈ ಯುದ್ಧದಲ್ಲಿ ಅಥೆನ್ಸಿನ ಮಿಲ್ಟಿಯಾಡಿಸ್, ಥೆಮಿಸ್ಟಾಕ್ಲಿಸ್, ಸೈಮನ್ ಮೊದಲಾದ ವೀರರ ಶೌರ್ಯ, ಕದನಕೌಶಲಗಳು ಅಥೆನ್ಸಿಗೆ ಕೀರ್ತಿತಂದುವು. ಮ್ಯಾರಥಾನ್, ಸೆಲ್ಯಾಮಿಸ್ ಮುಂತಾದ ಕದನಗಳಲ್ಲಿ ಅಥೆನ್ಸ್‌ಗಳಿಸಿದ ವಿಜಯ ಪ್ರಖ್ಯಾತ ವಾದದ್ದು. ಆದರೆ ಈ ಕದನಗಳಿಂದ, ತನಗೆ ಬಲಿಷ್ಠ ನೌಕೆಯೊಂದಿಲ್ಲದ ಕೊರತೆಯನ್ನು ಅಥೆನ್ಸ್ ಮನಗಂಡಿತು; ಮತ್ತು ಅಂಥ ಚಿಕ್ಕ ದೇಶದಲ್ಲೂ ನಗರ ರಾಜ್ಯಗಳಿದ್ದವೇ ವಿನಾ ಇಡೀ ದೇಶ ಒಂದಾಗಿರಲಿಲ್ಲ. ಅಥೆನ್ಸ್ ಆಗ ಯುದ್ಧ ದಲ್ಲಿ ಅಪ್ರತಿಮ ಸಾಹಸ ಪ್ರದರ್ಶಿಸಿ, ಬಲವಾದ ನೌಕೆಯೊಂದನ್ನು ಪಡೆದು ದರ ಪರಿಣಾಮವಾಗಿ ಪ್ರ.ಶ.ಪೂ.478 ರಲ್ಲಿ ಡೇಲಿಯನ್ ಒಕ್ಕೂಟ ವನ್ನು ಸ್ಥಾಪಿಸಲು ಸಾಧ್ಯವಾಯಿತು. ಆದರೆ, ಸದಾ ವೈಮನಸ್ಯ ಹೊಂದಿದ್ದ ನಗರ ರಾಜ್ಯಗಳು, ಸ್ಪಾರ್ಟಾದ ಹುರುಡು–ಇವುಗಳಿಂದ ಅಥೆನ್ಸ್ ಪರ್ಷಿಯದೊಂದಿಗೆ ಶಾಂತಿ ಒಪ್ಪಂದವನ್ನು ಪ್ರ.ಶ.ಪೂ.449ರಲ್ಲೂ ಸ್ಪಾರ್ಟ ದೊಂದಿಗೆ ರಾಜಿಯನ್ನು ಪ್ರ.ಶ.ಪೂ.445ರಲ್ಲೂ ಮಾಡಿ ಕೊಂಡಿತು. ಈ ಪರಿಸ್ಥಿತಿಯಲ್ಲಿ ಪೆರಿಕ್ಲಿಸ್ ಆಡಳಿತಸೂತ್ರಗಳನ್ನು ತನ್ನ ಕೈಗೆ ತೆಗೆದುಕೊಂಡ. ಇವನ ಕಾಲದಲ್ಲೇ ಅಥೆನ್ಸ್ ಏಳಿಗೆಯ ಪರಮಾವಧಿಯನ್ನು ತಲುಪಿದ್ದು. ಇವನ ಕಾಲದಲ್ಲೇ ಸಾಕ್ರಟೀಸ್ ಅಥೆನ್ಸಿನ ಬೀದಿಗಳಲ್ಲಿ ಸಂಚರಿಸಿ ಸಂವಾದರೂಪದಲ್ಲಿ ಜನರಲ್ಲಿ ಜ್ಞಾನಪ್ರಸಾರ ಮಾಡಿದ್ದು; ಈಸ್ಕಿಲಸ್ ತನ್ನ ಪ್ರಖ್ಯಾತ ರುದ್ರನಾಟಕಗಳನ್ನು ಬರೆದದ್ದು; ಸೊಫೊಕ್ಲಿಸ್, ಯೂರಿಪಿಡೀಸ್ ತಮ್ಮ ಅಸದೃಶವಾದ ಕೃತಿಗಳನ್ನು ರಚಿಸಿದ್ದು. ಅಥೆನ್ಸಿನ ಪ್ರತಿಭಾವಂತರು ವಾಸ್ತುಶಿಲ್ಪ, ಮೂರ್ತಿಶಿಲ್ಪ, ವರ್ಣಚಿತ್ರಣ–ಎಲ್ಲ ಕಲೆಗಳಲ್ಲೂ ವಿಸ್ಮಯಕಾರಕವಾದ ಪ್ರಗತಿಯನ್ನು ಸಾಧಿಸಿದರು. ಅನುಪಮವಾದ ಪಾರ್ಥೆನಾನ್ ನಿರ್ಮಿತವಾದದ್ದೂ ಈ ಕಾಲದಲ್ಲೇ.

ಅಥೆನಾ ದೇವತೆ

ಪೆರಿಕ್ಲಿಸ್ ಜಾರಿಗೆ ತಂದ ಸುಧಾರಣೆಗಳು, ಅವನ ಕಾಲದಲ್ಲಾದ ಜನಪ್ರಗತಿ ಇವಾವುದೂ ಬಹುಕಾಲ ಉಳಿಯಲಿಲ್ಲ. ಸ್ಪಾರ್ಟದೊಂದಿಗೆ ಇದ್ದ ವೈಮನಸ್ಯ ಬೆಳೆಯಿತು. ಪ್ರ.ಶ.ಪೂ.431ರಲ್ಲಿ ಅವೆರಡು ರಾಜ್ಯಗಳ ನಡುವೆ ಪೆಲಪೊನೀಸಿಯನ್ ಯುದ್ಧ ಪ್ರಾರಂಭವಾಗಿ 404ರವರೆಗೂ ನಡೆಯಿತು. ಎರಡೂ ರಾಜ್ಯಗಳಿಗೂ ಅಪಾರ ನಷ್ಟವಾಯಿತು. ಎರಡೂ ಸೋತವು. ಒಕ್ಕೂಟಕ್ಕೆ ಸೇರಿದ್ದ ಮಿತ್ರ ರಾಜ್ಯಗಳು ಎಂದೋ ಅಥೆನ್ಸಿನ ಮೈತ್ರಿಯನ್ನು ತ್ಯಜಿಸಿದ್ದವು. ಪ್ರ.ಶ.ಪೂ.338ರಲ್ಲಿ ಮ್ಯಾಸಿಡೋನಿಯದ ದೊರೆ ಫಿಲಿಪ್ಪನು ಗ್ರೀಸ್ ದೇಶವನ್ನು ಗೆದ್ದು ತನ್ನ ವಶಪಡಿಸಿಕೊಂಡ. ಅವನ ಮಗ ಅಲೆಕ್ಸಾಂಡರ್ ಗ್ರೀಸಿನ ಮೇಲಣ ಹತೋಟಿಯನ್ನು ಇನ್ನೂ ಬಲಪಡಿಸಿದ. ಅಥೆನ್ಸ್ ಒಂದು ಪ್ರಾಂತೀಯ ನಗರವಾಗಿ ಉಳಿಯಿತು. ಈ ದುರ್ದಶೆಯ ಕಾಲದಲ್ಲೂ ಅಥೆನ್ಸಿನ ಸಾಂಸ್ಕೃತಿಕ ಚಟುವಟಿಕೆಗಳು, ಸಾಧನೆಗಳು ಮುಂದುವರೆದವು. ಅರಿಸ್ಟೋಫೆನಿಸ್ ತನ್ನ ಹರ್ಷನಾಟಕಗಳಲ್ಲಿ ಆಗಿನ ಜನಜೀವನವನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ. ಪ್ಲೇಟೋ ತನ್ನ ಅಕಾಡಮಿಯಲ್ಲಿ ಜೀವನ ರಹಸ್ಯಗಳನ್ನು ಹೊರಗೆಡವಿದ; ಇವನ ಗುರು ಸಾಕ್ರಟೀಸ್, ಜನಸಾಮಾನ್ಯರಲ್ಲಿ ಜ್ಞಾನಪ್ರಸಾರ ಮಾಡುತ್ತಲಿದ್ದ, ಪ್ಲೇಟೋವಿನ ಶಿಷ್ಯ ಅರಿಸ್ಟಾಟಲ್ ಜ್ಞಾನಭಂಡಾರವನ್ನೇ ಸೂರೆಗೊಳ್ಳಲೆತ್ನಿಸಿದ.

ರೋಂ ಸಾಮ್ರಾಜ್ಯ ಸ್ಥಾಪಿತವಾದ ಮೇಲೆ ಅಥೆನ್ಸ್ ಆ ಸಾಮ್ರಾಜ್ಯಕ್ಕೆ ಸೇರಿ ಹೋಯಿತು. ಅಥೆನ್ಸಿನ ಸಂಸ್ಕೃತಿ ಸಾಮ್ರಾಜ್ಯದ ನಾನಾಕಡೆ ಹರಡಿತು. 5ನೆಯ ಶತಮಾನದ ಅನಂತರ ಆ ಸಾಮ್ರಾಜ್ಯ ಕೊನೆಗೊಂಡ ಮೇಲೆ, ಯುರೋಪಿನ ಆಗ್ನೇಯ ಏಷ್ಯ ರಾಜ್ಯಗಳ ಕ್ಷೋಭೆಗೊಂಡ ರಾಜಕೀಯಕ್ಕೆ ಸಿಕ್ಕಿ, ಅಥೆನ್ಸ್ ಬಹುಕಾಲ ಯಾವುದಾದರೊಂದು ಬಲಿಷ್ಠ ರಾಜ್ಯದ ಅಧೀನ ದಲ್ಲುಳಿಯಬೇಕಾಯಿತು. ತುರ್ಕಿಯ ಸುಲ್ತಾನರ ಆಳಿಕೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಸ್ಥಾಪಿತವಾದ ಮೇಲೆ, ಅನೇಕ ಬಾರಿ ಅಥೆನ್ಸ್ ಅವರ ಧಾಳಿಗೆ ಸಿಕ್ಕಿ, ಅಲ್ಲಿನ ಭವ್ಯಮಂದಿರಗಳು, ದೇವಾಲಯಗಳು, ಅನುಪಮ ಶಿಲ್ಪಕಲಾ ಮೂರ್ತಿಗಳು ನಾಶ ಹೊಂದಿದವು. 1834ರಲ್ಲಿ ಗ್ರೀಸ್ ಸ್ವತಂತ್ರ ರಾಜ್ಯವಾಗಿ ಅಥೆನ್ಸ್ ಅದರ ರಾಜಧಾನಿಯಾದ ಮೇಲೆ ಈಗಿನ ಅಥೆನ್ಸ್ ನಗರ ನಿರ್ಮಿತವಾಯಿತು. ಎರಡನೆಯ ಮಹಾಯುದ್ಧದಲ್ಲಿ 3 ವರ್ಷ ಕಾಲ (1941–44) ಅಥೆನ್ಸನ್ನು ಜರ್ಮನರು ಆಕ್ರಮಿಸಿದ್ದರು. ಅಥೆನ್ಸಿನ ಹಿರಿಮೆಯ ಹೆಗ್ಗುರುತಾಗಿ ಹತ್ತಿರದಲ್ಲೇ ಆಕ್ರೋಪೋಲಿಸ್ ಎಂಬ ಗುಡ್ಡವಿದೆ. ಅದರ ಮೇಲೆ ಅಥೀನ ದೇವತೆಗಾಗಿ ಕಟ್ಟಿದ್ದ ಪಾರ್ಥೆನಾನ್ ಎಂಬ ಕಲಾ ಪರಿಪೂರ್ಣತೆಯನ್ನು ಮೆರೆಸುವ ಸುಂದರ ದೇವಾಲಯ, ಪ್ರೊಪೀಲಿಯ ಎಂಬ ಭವ್ಯವಾದ ಮುಖಮಂಟಪ, ಅಥೆನಾ ದೇವತೆಗಾಗಿ ನಿರ್ಮಿತವಾದ ಪಾರ್ಥೆನಾನ್ ಗಿಂತಲೂ ಹೆಚ್ಚು ಪುರಾತನವಾದ ಎರೆಕ್ತಿಯಂ ದೇವಾಲಯ–ಇವುಗಳ ಮತ್ತು ಅನೇಕ ಕಟ್ಟಡಗಳ ಅವಶೇಷಗಳು, ಅಥೆನ್ಸಿನ ನಾಗರಿಕರು ಬೆಳೆಸಿದ ಉಚ್ಚತಮ ಸಂಸ್ಕೃತಿಯ ಕುರುಹಾಗಿ ಇಂದಿಗೂ ಉಳಿದಿವೆ. (ಎ.ಎಂ.)

**ಅನಂತ ಮಾಲಿಕೆ:** ಇತ್ತೀಚೆಗೆ ಎಕ್ಸಟಿರ್ ಮತ್ತು ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯಗಳ ಒಂದು ಸಂಶೋಧನ ತಂಡ, ವಿಜ್ಞಾನಿ ನ್ಯೂಟನ್ ಕಂಡುಹಿಡಿದನೆನ್ನಲಾದ ಗಣಿತಶಾಸ್ತ್ರದ ಒಂದು ಶಾಖೆಯಾದ ಕ್ಯಾಲ್ಕುಲಿಸ್‌ನ(ಕಲನಶಾಸ್ತ್ರ) ಮಹತ್ತ್ವದ ಅನಂತ ಮಾಲಿಕೆಯನ್ನು (ಇನ್‌ಫಿನಿಟ್ ಸಿರೀಸ್) ಈ ವಿಜ್ಞಾನಿಗಿಂತ ಮುಂಚೆ, ಸು.350 ವರ್ಷಗಳಷ್ಟು ಮುಂಚೆಯೇ ಕೇರಳ ವಿದ್ವಾಂಸರ ತಂಡ (ಕೇರಳ ಸ್ಕೂಲ್) ಶೋಧನೆಯನ್ನು ಮಾಡಿದೆಯೆಂದು ಘೋಷಿಸಿದೆ. ಇದಲ್ಲದೆ ಈ ಪಂಥ ಈಗಿನ ಪೈ ಬೆಲೆಯನ್ನು 3.5 ದಶಮಾಂಶ ಸ್ಥಾನದವರೆಗೂ ತೋರಿಸುತ್ತಿದ್ದರೆ ಈ ಪರಿಷತ್ 9 ರಿಂದ 17 ದಶಮಾಂಶ ಸ್ಥಾನದವರೆಗೂ ಬೆಲೆಯನ್ನು ಗೊತ್ತು ಮಾಡಿದೆಯೆಂದು ಹೇಳಿದೆ. ಈ ಮಹತ್ತ್ವದ ವಿಷಯಗಳನ್ನು 15 ನೆಯ ಶತಮಾನದಲ್ಲಿ ಕೇರಳಕ್ಕೆ ಬಂದಿದ್ದ ಜೆಸುಯಿಟ್ ಕ್ರೈಸ್ತ ಸಂಸ್ಥೆಗಳು (ಸೊಸೈಟಿ ಆಫ್ ಜೀಸಸ್) ತೆಗೆದುಕೊಂಡು ಹೋಗಿ ಅವು ಕೊನೆಗೆ ನ್ಯೂಟನ್ ವಿಜ್ಞಾನಿಗೂ ತಲುಪುವಂತಾಯಿತೆಂದು ಭಾವಿಸಲಾಗಿದೆ. ಈ ತಂಡದ ಜಾರ್ಜ್ ವರ್ಗಿಸ್ ಜೋಸೆಫ್ ತಮ್ಮ ಪುಸ್ತಕ ಕ್ರೆಸ್ಟ್ ಆಫ್ ದಿ ಪೀಕಾಕ್ ಎ ನಾನ್ ಯುರೋಪಿಯನ್ ರೂಲ್ ಆಫ್ ಮ್ಯಾಥಮ್ಯಾಟಿಕ್ಸ್ ಎಂಬ ಪುಸ್ತಕದ ಮೂರನೆಯ ಆವೃತ್ತಿಯನ್ನು ಪ್ರಿನ್‌ಸ್ಟನ್ ಯೂನಿವರ್ಸಿಟಿಯ ಪ್ರಕಟಣೆಗೆ ಸಿದ್ಧಪಡಿಸುತ್ತಿದ್ದರು. ಆಗ ಅವರು ಕೆಲವು ಭಾರತೀಯ ಪ್ರಾಚೀನ ಪತ್ರಿಕೆಗಳನ್ನು ಪರಿಶೀಲನೆ ಮಾಡುತ್ತಿದ್ದಾಗ ಈ ಸಂಗತಿ ಅವರ ಗಮನಕ್ಕೆ ಬಂದಿತು. ಹೀಗಾಗಿ ಇದು ಯುರೋಪಿಯನ್ನರ ಕೊಡುಗೆ ಎಂದೇ ಪರಿಗಣಿಸಬೇಕಿಲ್ಲ. ಆದರೆ 17ನೆಯ ಶತಮಾನದ ಕಲನಶಾಸ್ತ್ರದ ಇನ್‌ಫಿನಿಟ್ ಸಿರೀಸ್ ವಿಷಯದಲ್ಲಿ ನ್ಯೂಟನ್‌ನ ಸಾಧನೆ ವಿಶಿಷ್ಟವಾದುದು. ಆದರೆ ಕ್ಯಾಲ್‌ಕ್ಯುಲಸ್ ಗಣಿತದ ಅತಿ ಮುಖ್ಯವಾದ ಅನಂತಮಾಲಿಕೆ ಕಂಡುಹಿಡಿದ ಮಾಧವ ಮತ್ತು ನೀಲಕಂಠರು ನ್ಯೂಟನ್‌ಗೆ ಸಮಾನರೆಂದು ಅಭಿಪ್ರಾಯಪಡಲಾಗಿದೆ. ಆದರೆ ಇಂಥ ದೃಷ್ಟಾಂತಗಳು ಪ್ರಸಿದ್ಧವಾಗದಿರಲು ಕಾರಣ ಅವು ಇಂಗ್ಲಿಷ್‌ನಲ್ಲಿರದೆ ಸ್ಥಳೀಯ ಭಾಷೆಗಳಲ್ಲಿರುವುದು. ಮಧ್ಯಯುಗೀನ ಕೇರಳದಲ್ಲಿ ಪ್ರಕಾಂಡ ಪಂಡಿತರಿದ್ದರು. ಇಲ್ಲಿ ನೆಲೆಸಿದ ಜೆಸುಯಿಟರು ಇಲ್ಲಿನ ಶಾಸ್ತ್ರ–ವಿಜ್ಞಾನಗಳನ್ನು ಅಧ್ಯಯನ ಮಾಡಿದರು. ಯುರೋಪಿನ ಜೆಸುಯಿಟ್‌ನ ಸಂಶೋಧಕರಿಂದ ಇತರ ವಿಜ್ಞಾನಿಗಳು ಇಂಥ ವೈಜ್ಞಾನಿಕ ಶೋಧನೆಗಳ ವಿಷಯಗಳನ್ನು ಪಡೆಯಲು ವಿಶೇಷ ಆಸಕ್ತಿಯನ್ನು ವಹಿಸಿದರು. (ಎ.ಎಸ್.;ಎನ್.ಎಲ್.)

**ಅನಗವಾಡಿ:** ಬಾಗಲಕೋಟೆ ಜಿಲ್ಲೆಯ ಘಟಪ್ರಭಾ ನದಿ ಹಳ್ಳದಲ್ಲಿಯ ಆದಿ ಮತ್ತು ಮಧ್ಯ ಹಳೆಶಿಲಾಯುಗದ ಒಂದು ನೆಲೆ. ಈ ನಿವೇಶನ ಹಳ್ಳದ ಪರಿಸರದಲ್ಲಿ ಬಯಲು ಭೂಮಿಯಲ್ಲಿ ಇರುವ ಅಶೂಲಿಯನ್ ಮಾದರಿಯ ಸಂಸ್ಕೃತಿ ನೆಲೆಗೆ ಒಂದು ನಿದರ್ಶನ ವಾಗಿದ್ದು ತನ್ನ ಅರೆ–ಮೂಲ ಸ್ಥಿತಿಯಲ್ಲಿದೆ. ಪಪ್ಪು ಅವರು ಈ ನಿವೇಶನವನ್ನು 1975ರಲ್ಲಿ ಶೋಧಿಸಿ ಸಣ್ಣ ಪ್ರಮಾಣದ ಉತ್ಖನನಕ್ಕೆ ಒಳಪಡಿಸಿದರು. ನೆಲದ ಮಟ್ಟದಿಂದ ಹರಳುಗಳಿಂದ ಕೂಡಿದ ಇಲ್ಲಿ 40–60ಮೀ ದಪ್ಪದ ಗಟ್ಟಿ ಮರಳು ಸ್ತರ ಕಂಡುಬಂದಿತು. 80–85ಮೀ ನಷ್ಟು ಹಳ್ಳದುದ್ದಕ್ಕೂ ಇದೆ. ಈ ಸ್ತರದ ದಪ್ಪವಾದ ಭಾಗದಲ್ಲೆಲ್ಲ ಅಶೂಲಿಯನ್ ಮಾದರಿಯ ಮಾನವ ನಿರ್ಮಿತ ಉಪಕರಣಗಳಿದ್ದವು. ಇವು ಇದ್ದ ಸ್ಥಿತಿಯನ್ನು ನೋಡಿದರೆ ಇವುಗಳ ತಯಾರಿಕೆ ಇದೇ ಸ್ಥಳದಲ್ಲಿ ಅಥವಾ ಸಮೀಪದ ಸ್ಥಳದಲ್ಲಿ ಆದಂತೆ ಕಾಣುತ್ತದೆ. ಉಪಕರಣಗಳ ಸಂಗ್ರಹದಲ್ಲಿ ವಿವಿಧ ಪ್ರಕಾರಗಳ ಶಿಲಾ ಕೈಕೊಡಲಿಗಳು, ಮಚ್ಚುಗಳು, ಹೆರೆಯುವ ಕತ್ತಿಗಳು, ಚಕ್ರದಾಕಾರದವು ಮುಂತಾದವು ಇವೆ. ಅಶೂಲಿಯನ್ ಸಂಪ್ರದಾಯದ ಆದಿಭಾಗದ ಸ್ವಲ್ಪ ಭಿನ್ನರೀತಿಯ ಉಪಕರಣಗಳಾಗಿವೆ. ಇವುಗಳಿರುವ ಹಂತದ ಮೇಲ್ಭಾಗದಲ್ಲಿ ಇಂಥ

ಉಪಕರಣಗಳು ಆಕಾರದಲ್ಲಿ ಚಿಕ್ಕದಾಗಿವೆ. ಇವುಗಳ ಜೊತೆಗೆ ಮರಳುಕಲ್ಲಿನ ಸಣ್ಣಸಣ್ಣ ಚಕ್ಕೆ ಉಪಕರಣಗಳಿರುವುದು ಆದಿ ಹಳೆಶಿಲಾಯುಗ ಹಂತ ಮತ್ತು ಮಧ್ಯ ಹಳೆಶಿಲಾಯುಗ ಹಂತಗಳ ನಡುವಿನ ಸ್ಥಿತ್ಯಂತರವನ್ನು ಸೂಚಿಸಬಹುದೆಂದು ತರ್ಕಿಸಲಾಗಿದೆ.

ಅನಗವಾಡಿಯ ಸುತ್ತ ದೊರೆಯುವ ಗಷ್ಟು ಮರಳುಕಲ್ಲಿನ ಕ್ವಾರ್ಟ್ಸೈಟ್ ಕಲ್ಲುಗಳಿಂದ ಈ ಉಪಕರಣಗಳನ್ನು ಮಾಡಲಾಗಿದೆ. ಕ್ವಾರ್ಟ್ಸೈಟ್ ಕಲ್ಲು ವಿಪುಲವಾಗಿ ಇಲ್ಲಿದೆ. ಹಳೆ ಶಿಲಾಯುಗದ ಕೊನೆಯಲ್ಲಿ ಈ ಪ್ರದೇಶದಲ್ಲಿ ಉತ್ತಮ ಭೂರಚನೆಯಿದ್ದು ಇದೊಂದು ಮಹತ್ತ್ವದ ಸಾಂಸ್ಕೃತಿಕ ಕೇಂದ್ರವಾಗಿತ್ತು. ಸಮತಟ್ಟಾದ ಪ್ರಸ್ಥ ಪ್ರದೇಶದಲ್ಲಿ ಹರಡಿದ ಅರಣ್ಯ, ಹಿತಕಾರಿಯಾದ ಅರೆ-ಒಣ ಮುಂಗಾರು ಹವೆ, ನಿರಂತರವಾದ ಜಲ ಸೌಲಭ್ಯ, ವಿಪುಲವಾದ ಕಾಡು, ಮೃಗಸಂಕುಲ, ಉಪಕರಣಗಳಿಗೆ ಯೋಗ್ಯ ಶಿಲಾದಿನ್ನೆಗಳ ಪೂರೈಕೆ- ಈ ಬಗೆಯ ಪರಿಸರದ ಕಾರಣಗಳಿಂದಾಗಿ ಇಲ್ಲಿ ಅಶೂಲ್ ಮಾದರಿ ಸಂಸ್ಕೃತಿ ಬೆಳೆಯಿತು. *

**ಅನುಭವಮಂಟಪ:** ಸು.12ನೆಯ ಶತಮಾನದಲ್ಲಿ ಶಿವಶರಣ ಶರಣೆಯರು ಒಂದೆಡೆ ಸೇರಿ ತಮ್ಮ ಜ್ಞಾನನಿಧಿಯನ್ನು ಹಂಚಿಕೊಳ್ಳುತ್ತಿದ್ದ ಒಂದು ಪವಿತ್ರ ಸ್ಥಳ. ಅವರವರ ಅನುಭವಗಳ ಗಟ್ಟಿತನದ ಪರೀಕ್ಷೆಗೆ ಒಳಪಡುತ್ತಿದ್ದ ಒಂದು ನೆಲೆ. ಅನುಭಾವಿಗಳ ಈ ಸಂಗಮಕ್ಕೆ ಶಿವಾನುಭವ ಮಂಟಪ ಕಟ್ಟಿದ್ದು ಬೀದರ್ ಜಿಲ್ಲೆಯ ಕಲ್ಯಾಣ ಪಟ್ಟಣದಲ್ಲಿ. ಕಳಚುರಿ ಅರಸ ಬಿಜ್ಜಳನ ಮುಖ್ಯಮಂತ್ರಿಯಾಗಿದ್ದ ಬಸವಣ್ಣ ಇದರ ಸ್ಥಾಪಕರು. ಸು.1160ರಲ್ಲಿ ಕಲ್ಯಾಣ ಪಟ್ಟಣದ ತ್ರಿಪುರಾಂತಕ ಕೆರೆಯ ಬಳಿಯಿದ್ದ ತ್ರಿಪುರಾಂತಕ ಗುಡ್ಡದಲ್ಲಿ ಇದನ್ನು ಬಸವಣ್ಣನವರು ಕಟ್ಟಿಸಿದ್ದರೆನ್ನಲಾಗಿದೆ. 4 ಮಹಾದ್ವಾರಗಳ ಮತ್ತು 36 ಕಂಬಗಳನ್ನೊಳ ಗೊಂಡಿದ್ದ ಐತಿಹಾಸಿಕ ಮತ್ತು ಧಾರ್ಮಿಕ ಮಹತ್ತಿನ ಒಂದು ತಾಣವಾಗಿತ್ತೆನ್ನಬಹುದು.

ಬಸವಣ್ಣನವರಿಂದ ಆಕರ್ಷಿತರಾಗಿ ಕಲ್ಯಾಣ ಪಟ್ಟಣದ ಅನುಭವ ಮಂಟಪಕ್ಕೆ ಬಂದ ನೂರಾರು ಶರಣ ಶರಣೆಯರಲ್ಲಿ ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ, ಅಕ್ಕನಾಗಮ್ಮ, ಮಲ್ಲಿಗಮ್ಮ, ಮಡಿವಾಳ ಮಾಚಿದೇವ, ಮುಕ್ತಾಯಕ್ಕ, ಸಿದ್ಧರಾಮ, ಹರಳಯ್ಯ, ಹಡಪದ ಅಪ್ಪಣ್ಣ, ಮಧುವರಸ, ಮೇದರಕಕ್ಕಯ್ಯ, ಆಯ್ದಕ್ಕಿಮಾರಯ್ಯ ಮೊದಲಾದವರನ್ನು ಹೆಸರಿಸಬಹುದು. ಶೂನ್ಯಸಿಂಹಾಸನದ ದೊರೆ ಅಲ್ಲಮಪ್ರಭು ಅನುಭವ ಮಂಟಪದ ಅಧ್ಯಕ್ಷರಾಗಿ ಬಸವಾನುಯಾಯಿಗಳನ್ನು ಮುನ್ನಡೆಸಿದರು. ಕರ್ನಾಟಕದ ಧಾರ್ಮಿಕ ಕ್ರಾಂತಿಗೆ ಈ ಸ್ಥಳ ಕೇಂದ್ರವಾಗಿ ಕಾರ್ಯ ನಿರ್ವಹಿಸಿತು. (ಸಿ.ಪಿ.)

**ಅನುರಾಧಪುರ:** ಬೌದ್ಧರ ಒಂದು ಪವಿತ್ರ ಯಾತ್ರಾ ಸ್ಥಳ. ಶ್ರೀಲಂಕ ದೇಶದ ರಾಜಧಾನಿ ಕೊಲಂಬೊದಿಂದ ಉತ್ತರಕ್ಕೆ 205 ಕಿಮೀ ದೂರದಲ್ಲಿರುವ ಶ್ರೀಲಂಕದ ಪ್ರಾಚೀನ ರಾಜಧಾನಿ. ಮಲ್ವಲು ಓಯಾ ನದಿಯ ದಂಡೆಯ ಮೇಲಿದೆ. ಇದನ್ನು ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಸ್ಥಾಪಿಸಲಾಯಿತು. ಆದರೆ ಇಲ್ಲಿ ಇದಕ್ಕೂ ಪೂರ್ವದಲ್ಲಿ ಪ್ರ.ಶ.ಪೂ. ಸು.10,000 ವರ್ಷಗಳ ಹಿಂದೆಯೇ ಜನವಸತಿಯಿದ್ದ ಕುರುಹುಗಳು ಉತ್ಖನನಗಳಲ್ಲಿ ದೊರೆತಿವೆ. ಸುತ್ತಲೂ ರಕ್ಷಣಾ ಗೋಡೆಯಿದ್ದ ವಸತಿ ನೆಲೆಯಿಂದ ಪ್ರ.ಶ.ಪೂ.900-600 ವರೆಗಿನ ಕುದುರೆಗಳನ್ನು ಉಪಯೋಗಿಸುತ್ತಿದ್ದ ಜನರ ಮಣ್ಪಾತ್ರೆ ಚೂರುಗಳು, ಕಬ್ಬಿಣದ ಉಪಕರಣಗಳು, ದನ-ಕರು ಮೊದಲಾದ ಪ್ರಾಣಿಗಳ ಮತ್ತು ಕೃಷಿ ಅವಶೇಷಗಳನ್ನು ಸಂಗ್ರಹಿಸಲಾಗಿದೆ. ಪ್ರ.ಶ.ಪೂ.ಸು.700-600 ರಲ್ಲಿ 50 ಹೆಕ್ಟೇರಿನಷ್ಟು ವಿಶಾಲವಾಯಿತು. ರಾಜ್ಯದ ರಾಜಧಾನಿಯಾಗಿ ಪ್ರ.ಶ. 11ನೆಯ ಶತಮಾನ ಆರಂಭದವರೆಗೂ ಮುಂದುವರೆಯಿತು. ಈ ಶತಮಾನಗಳ ಅವಧಿಯಲ್ಲಿ ದಕ್ಷಿಣ ಏಷ್ಯದಲ್ಲಿಯೇ ನಾಗರಿಕತೆ ಮತ್ತು ಸ್ಥಿರವಾದ ಆಡಳಿತವನ್ನು ಹೊಂದಿದ ಪ್ರಬಲವಾದ ರಾಜಕೀಯ ಶಕ್ತಿಯಾಗಿತ್ತು. ರಾಮಾಯಣದಲ್ಲಿ ಬರುವ ಅಸುರ ರಾಜ ರಾವಣನ ರಾಜಧಾನಿ ಎಂಬ ನಂಬಿಕೆ ಹಿಂದುಗಳಿಗಿದೆ. ಪ್ರಪಂಚದಲ್ಲಿ ಇದೊಂದು ಮಹತ್ತ್ವದ ಪುರಾತತ್ತ್ವ ನೆಲೆಯಾಗಿದ್ದು, ಇದನ್ನು ವಿಶ್ವಪರಂಪರೆ ಸ್ಮಾರಕವೆಂದು ಘೋಷಿಸಲಾಗಿದೆ.

ಮೌರ್ಯ ಚಕ್ರವರ್ತಿ ಅಶೋಕ ಭಾರತದಲ್ಲಿ ಆಳುತ್ತಿದ್ದಾಗ ದೇವಾನಾಂಪ್ರಿಯ ತಿಸ್ಸಾ ಎಂಬಾತ ಅನುರಾಧಪುರದ ರಾಜನಾಗಿದ್ದ. ಬೌದ್ಧಧರ್ಮ ಪ್ರಚಾರಕ್ಕೆ ಹೊರಟ ಅಶೋಕನ ಅನೇಕ ಬೌದ್ಧ ಭಿಕ್ಷುಗಳನ್ನು ಇವನು ಬರಮಾಡಿಕೊಂಡು ಇಲ್ಲಿ ವಸತಿ ಕಲ್ಪಿಸಿಕೊಟ್ಟು, ಬೌದ್ಧಧರ್ಮದ ಸಂಪ್ರದಾಯಬದ್ಧ ಥೇರವಾದಿಗಳ ಮಹಾ ವಿಹಾರವನ್ನು ಸ್ಥಾಪಿಸಿದ (ಪ್ರ.ಶ.249). ಅಭಯಗಿರಿ ವಿಹಾರವನ್ನು ರಾಜ ಮಹಾಸೇನ (ಪ್ರ.ಶ.ಪೂ.310-275) ಜೇತವನರಮಯ ನಿರ್ಮಿಸಿದ. ಇದು ಪ್ರಪಂಚದಲ್ಲಿಯೇ ಎತ್ತರವಾದ (ಸು. 98 ಮೀ) ಇಟ್ಟಿಗೆಯ ನಿರ್ಮಾಣವಾಗಿದೆ. ಇದು ಮಹಾವಿಹಾರ ಮತ್ತು ಅಭಯಗಿರಿ ಭಿಕ್ಷುಗಳ ಮಠದ ನಡುವೆ ಇದೆ. ಈ ನಗರದ ದಕ್ಷಿಣದಲ್ಲಿ ಬುದ್ಧನಿಗೆ ಜ್ಞಾನೋದಯವಾದ ಅರಳಿ ಮರದ ಕೊಂಬೆ (ಬೋಧಿವೃಕ್ಷ) ಯೊಂದನ್ನು ಬುದ್ಧಗಯಾದಿಂದ ತಂದು ನೆಟ್ಟು ಸ್ತೂಪವನ್ನು ಕಟ್ಟಲಾಯಿತು. ಆ ಕೊಂಬೆ ಈಗ ಹೆಮ್ಮರವಾಗಿದೆ. ಮಹಾವಿಹಾರದ ಧೂಪರಾಮ, ಉತ್ತರಕ್ಕೆ ಅಭಯಗಿರಿ, ಪೂರ್ವಕ್ಕೆ ಪುಬ್ಬರಾಮ, ವಾಯವ್ಯಕ್ಕೆ ತನೊವನ ಮತ್ತು ಆಗ್ನೇಯಕ್ಕೆ ಜೇತವನರಮಯ ಇದೆ. ರಾಜ ಕೀರ್ತಿಶ್ರೀ ಮೇಘವನ (ಮೇಘವಾಹನ) ತನ್ನ ಆಳಿಕೆಯ ಕಾಲದಲ್ಲಿ ಭಾರತದಿಂದ ಬುದ್ಧನ ಹಲ್ಲನ್ನು ತಂದು ಇಟ್ಟು ಧಮ್ಮಚಕ್ಕ (ಧರ್ಮ ಚಕ್ರ) ಎಂಬ ಭವನವನ್ನು ಕಟ್ಟಿಸಿದ. ರಾಜ ವಸಭನು ಅಭಯವಾಪಿ ಎಂಬ ಕೆರೆಯನ್ನು ನಿರ್ಮಿಸಿದ. ಇವನು ಕಲವೆಲ ಮತ್ತು ಚಿತ್ತರಾಜ ಎಂಬ ಯಕ್ಷರಿಗೆ ದೇವಾಲಯಗಳನ್ನು ಸ್ಥಾಪಿಸಿದ. ನಿಗಂಥರಿಗೆ, ಅಲೆದಾಡುವ ಸಂನ್ಯಾಸಿಗಳಿಗೆ, ಆಜೀವಕರಿಗೆ ಮತ್ತು ಬ್ರಾಹ್ಮಣರಿಗೆ ವಾಸಸ್ಥಳವನ್ನು ನಿರ್ಮಿಸುವ ಕಾರ್ಯವನ್ನು ಗುಲಾಮರಿಗೆ ವಹಿಸಿದ್ದ. ಮಹಾವಂಶದ ಪ್ರಕಾರ ರಾಜ ಪಂಡುಕಭಯ ಅನುರಾಧಪುರವನ್ನು ಪ್ರ.ಶ.ಪೂ 4ನೆಯ ಶತಮಾನಕ್ಕೆ ಮೊದಲೇ ರಾಜಧಾನಿಯಾಗಿ ಮಾಡಿದ. ಈ ನಗರವನ್ನು ಇವನ ಯೋಜನೆಯಂತೆ ಅಭಿವೃದ್ಧಿಪಡಿಸಲಾಯಿತು. ಇವನ ಮಗ ಮುತಸಿವ ತನ್ನ 60 ವರ್ಷಗಳ ಆಳಿಕೆಯಲ್ಲಿ ಮಹಾಮೇಘವನ ಉದ್ಯಾನವನವನ್ನು ನಿರ್ಮಿಸಿದ. ಇದು ಶ್ರೀಲಂಕದ ಬೌದ್ಧ ಧರ್ಮದ ಇತಿಹಾಸದಲ್ಲಿ ಮುಖ್ಯ ಪಾತ್ರ ವಹಿಸಿತು. ಇವನ ಮಗ ಮತ್ತು ಉತ್ತರಾಧಿಕಾರಿಯಾದ ದೇವನಾಂಪಿಯ ತಿಸ್ಸಾನ ಆಳ್ವಿಕೆಯಲ್ಲಿ ಬೌದ್ಧಧರ್ಮ ಶ್ರೀಲಂಕಕ್ಕೆ ಪರಿಚಯಿಸಲ್ಪಟ್ಟಿತು. ಬುದ್ಧನ ಪರಿನಿರ್ವಾಣದ 236 ವರ್ಷಗಳ ಅನಂತರ ಪ್ರವೇಶಿಸಿತು (ಪ್ರ.ಶ.ಪೂ. 250-210).

ಮಹಾವಂಶ ಗ್ರಂಥದಲ್ಲಿ ರಾಜ ಕುತ(ಟ) ಕನ್ನತಿಸ್ಸಾ ಮೊದಲ ನಗರದ 3.5 ಮೀ ಎತ್ತರ ಗೋಡೆಯನ್ನು ಕಂದಕದ ಸಹಿತ ನಿರ್ಮಿಸಿದ. ರಾಜ ವಸಭ ಈ ಗೋಡೆಯನ್ನು ಹೆಚ್ಚಿಸಿ ಸು. 4.5 ಮೀ-8.2 ಮೀ ವಿಸ್ತರಿಸಿದ. ಇದರ ನಿರ್ಮಾಣದಲ್ಲಿ ಭವಿಷ್ಯವಾದಿಗಳ ಮತ್ತು ವಾಸ್ತುಶಿಲ್ಪಿಗಳ ಸಲಹೆಗಳನ್ನು ಪಡೆಯುತ್ತಿದ್ದನೆಂದು ಉಲ್ಲೇಖಿಸಿದೆ.

ಚೀನಿ ಯಾತ್ರಿಕ ಫಾಹಿಯಾನ್ ಈ ನಗರಕ್ಕೆ ಭೇಟಿ ಕೊಟ್ಟಾಗ ಆತನಿಗೆ ಈ ನಗರ ಯೋಜನೆ ಮೆಚ್ಚುಗೆಯಾಯಿತು. ನಗರದಲ್ಲಿ ಪ್ರಮುಖವಾಗಿ ಎರಡು ಭಾಗಗಳಿವೆಯೆಂದೂ ಒಂದರಲ್ಲಿ ಶ್ರೀಮಂತ ವರ್ತಕರು ವಾಸಿಸುತ್ತಿದ್ದರೆಂದೂ ಉಲ್ಲೇಖಿಸಿದ್ದಾನೆ. ವರ್ತಕರಲ್ಲಿ ಅನೇಕರು ವಿದೇಶಿ ಮೂಲದವರೆಂದೂ ದಕ್ಷಿಣ ಭಾರತದವರೇ ಅಧಿಕವಾಗಿದ್ದರೆಂದೂ ಪರ್ಷಿಯ ಮತ್ತು ಮೆಡಿಟರೇನಿಯನ್ ಪ್ರದೇಶದವರು ಇಲ್ಲಿದ್ದರೆಂದೂ ಇನ್ನೊಂದು ಭಾಗದಲ್ಲಿ ಕೃಷಿಯಿಂದ ಆದಾಯ ಪಡೆಯುತ್ತಿದ್ದವರು ವಾಸಿಸುತ್ತಿದ್ದರೆಂದೂ ಬೇರೊಂದು ಗ್ರಂಥದಲ್ಲಿ ಉಲ್ಲೇಖವಿದೆ.

ದೇವನಾಂಪ್ರಿಯ ತಿಸ್ಸಾನ ಮರಣಾನಂತರ ದಕ್ಷಿಣ ಭಾರತದ ಕೆಲವು ಆಕ್ರಮಣಕಾರರು ಅನೇಕ ಬಾರಿ ಈ ನಗರದ ಮೇಲೆ ಧಾಳಿ ಮಾಡಿದರು. ಪಲ್ಲವರು ಮತ್ತು ಚೋಳರು ಧಾಳಿ ಮಾಡಿದ ಅನಂತರ ಪಾಂಡ್ಯರು ಆಕ್ರಮಣ ಮಾಡಿ ಇಲ್ಲಿಯ ಐಶ್ವರ್ಯವೆಲ್ಲವನ್ನೂ ದೋಚಿಕೊಂಡು ಹೋದರು. ಅನಂತರ ಚೋಳರ ದಾಳಿಗೆ ಸಿಕ್ಕ ಈ ನಗರ ಮತ್ತಷ್ಟು ಕ್ಷೀಣಿಸಿತು. ಈ ನಗರ ಪ್ರ.ಶ.ಪೂ.5ನೆಯ ಶತಮಾನದಿಂದ ಪ್ರ.ಶ. 1017ರ ವರೆಗೆ ರಾಜಧಾನಿಯಾಗಿತ್ತು. 1017ರಲ್ಲಿ ಚೋಳರ ಧಾಳಿಯ ಅನಂತರ ರಾಜಧಾನಿಯನ್ನು ಸುರಕ್ಷಿತ ಸ್ಥಳವಾದ ಪೋಲೊನ್ನರುವಕ್ಕೆ ಬದಲಾಯಿಸಲಾಯಿತು. ನೀರಾವರಿಯ ಕೊಳಗಳು ನಾಶವಾಗಿದ್ದರಿಂದ ಪ್ರಜೆಗಳು ಅನುರಾಧಪುರವನ್ನು ತೊರೆದರು. 19ನೆಯ ಶತಮಾನದಲ್ಲಿ ನೂರಾರು ಕೆರೆಗಳನ್ನು ಬ್ರಿಟಿಷರು ಪುನಃ ದುರಸ್ತಿಮಾಡಿದರು. ಅರಣ್ಯವನ್ನು ಕಡಿದು ಪಾಳುಬಿದ್ದ ನಗರವನ್ನು ಅಭಿವೃದ್ಧಿಪಡಿಸಿದರು.

ಅವಶೇಷಗಳು ಮೂರು ವಿಧದವು: ಡಾಗೊಬ, ವಿಹಾರ ಮತ್ತು ಪೊಕುನಗಳು. ಡಾಗೊಬಗಳು ಗಂಟೆಯಾಕಾರದ ಕಲ್ಲಿನ ರಾಶಿ, ಕೆಲವು ಸೆಂಮೀ ಯಿಂದ 340 ಮೀ ಸುತ್ತಳತೆಯುಳ್ಳದ್ದು; ವಿಹಾರಗಳನ್ನು ಎತ್ತರವಾದ ಕಲ್ಲಿನ ವೇದಿಕೆ ಮೇಲೆ ಕಲ್ಲಿನ ಕಂಬಗಳಿಂದ ನಿರ್ಮಿಸಲಾಗಿದೆ. ರಾಜ ದುಟ್ಠಗಾಮಿಣಿ ಪ್ರ.ಶ.ಪೂ.164ರಲ್ಲಿ ನಿರ್ಮಿಸಿದ ಹಿತ್ತಾಳೆಯ ಅರಮನೆ ಅತ್ಯಂತ ಪ್ರಸಿದ್ಧವಾಗಿದೆ. ಪೊಕುನಗಳು ಸ್ನಾನದ ಕೊಳಗಳು ಅಥವಾ ಕುಡಿಯುವ ನೀರನ್ನು ಸರಬರಾಜು ಮಾಡುವ ಕೆರೆಗಳು. ಕಾಡಿನ ಎಲ್ಲ ಸ್ಥಳದಲ್ಲೂ ಈ ಕೆರೆಗಳು ಹರಡಿವೆ. (ಎ.ಎಸ್.;ಎನ್.ಎಲ್.)

**ಅನ್ಯಾತಿಯನ್:** ಬರ್ಮದ ಇರವಾಡಿ ನದಿಕಣಿವೆಯಲ್ಲಿನ ಶಿಲಾಯುಗದ ಜನ ಸಂಸ್ಕೃತಿ. ಮಧ್ಯ ಪ್ಲೀಸ್ಟೋಸೀನ್ ಯುಗದ ಆರಂಭದಲ್ಲಿ ಹುಟ್ಟಿರಬಹುದಾದ ಈ ಜೀವನಕ್ರಮ ಯುಗದ ಕೊನೆಯವರೆಗೂ ಇನ್ನೂ ಈಚಿನವರೆಗೂ ಮುಂದುವರಿಯಿತು (ಪ್ರ.ಶ.ಪೂ.ಸು. 300,000 ದಿಂದ ಪ್ರ.ಶ.ಪೂ. 12,000 ವರ್ಷದವರೆಗೆ). ಹೆರೆಯುವ, ಕೊಚ್ಚುವ ಸಾಧನಗಳು ಮತ್ತು ವಿಶೇಷ ತರಹದ ಕೈಬಾಚಿಗಳು ಈ ಕಾಲದ ಸಾಮಾನ್ಯ ಶಿಲಾಯುಧಗಳು. ಇವೆಲ್ಲ ಒಂದು ರೀತಿಯ ವೃಕ್ಷಶಿಲೆಗಳಿಂದ (ಫಾಸ್ಸಿಲ್‌ವುಡ್) ಮಾಡಿದವು. ಈ ಸಂಸ್ಕೃತಿ ಆಗ್ನೇಯ ಏಷ್ಯ, ಚೀನ ಮತ್ತು ಉತ್ತರ ಪಂಜಾಬ್‌ಗಳನ್ನು ಒಳಗೊಂಡ ವಿಶಾಲಪ್ರದೇಶದಲ್ಲಿದ್ದ ಸಮಕಾಲೀನ ಸಂಸ್ಕೃತಿಯ ವರ್ಗಕ್ಕೆ ಸೇರಿದ್ದಾಗಿದೆ. (ಎಸ್.ಎನ್.)

**ಅರ್ನ್‌ಫೀಲ್ಡ್ ಸಂಸ್ಕೃತಿ:** ಪ್ರ.ಶ.ಪೂ.ಸು.1300-750 ಅವಧಿಯಲ್ಲಿ ಮಧ್ಯ ಯುರೋಪಿನಲ್ಲಿ ಅಸ್ತಿತ್ವದಲ್ಲಿದ್ದ ಕಂಚಿನಯುಗದ ಒಂದು ಸಂಸ್ಕೃತಿ. ಶವಗಳ ದಹನ ಸಂಸ್ಕಾರದ ಅನಂತರ ಅಳಿದುಳಿದ ಬೂದಿ-ಎಲುಬುಗಳನ್ನು ಸಂಗ್ರಹಿಸಿಟ್ಟ ಮಣ್ಪಾತ್ರೆಗಳನ್ನು ವಿಶಾಲವಾದ ಬಯಲಿನಲ್ಲಿ ಹುಗಿದಿಟ್ಟ ನೆಲೆ ಆಂಗ್ಲಭಾಷೆಯಲ್ಲಿ ಅರ್ನ್‌ಫೀಲ್ಡ್ ಎಂದಾಗಿದೆ. ಇವುಗಳ ಉತ್ಖನನ-ಅಧ್ಯಯನಗಳಿಂದ ತಿಳಿದುಬರುವ ಸಂಸ್ಕೃತಿಯೆ ಅರ್ನ್‌ಫೀಲ್ಡ್ ಸಂಸ್ಕೃತಿ. ಈ ಸಂಸ್ಕೃತಿಯ ಬೆಳವಣಿಗೆಯಲ್ಲಿ ಐದು ಉಪಹಂತಗಳನ್ನು ಗುರುತಿಸಲಾಗಿದೆ.

ಈ ಸಂಸ್ಕೃತಿ ಇದರ ಹಿಂದೆ ಇದ್ದ ಕಂಚಿನಯುಗದ ತುಮುಲುಸ್ ಸಂಸ್ಕೃತಿಯಿಂದ ಬೆಳೆದು ಬಂತೆನ್ನಲಾಗಿದೆ. ಇವುಗಳಲ್ಲಿ ಕಂಡುಬಂದ ಶವಸಂಸ್ಕಾರದ ವಿಧಿವಿಧಾನ ಹಾಗೂ ಮಣ್ಪಾತ್ರೆಗಳಿಂದ ಇದು ಸೂಚಿತವಾಗಿದೆ. ಈ ಸಂಸ್ಕೃತಿಯ ಜನಸಮುದಾಯದಲ್ಲಿ ಹೂಳುವುದು

ಮತ್ತು ದಹನ ಕ್ರಿಯೆ ಎರಡೂ ಪದ್ಧತಿಗಳಿದ್ದುವು. ಇದು ಜರ್ಮನಿಯ ಕೆಲವು ಭಾಗಗಳಲ್ಲಿ ಕಂಡುಬಂದಿದೆ. ಕೆಲವು ಶವಕುಣಿಗಳಲ್ಲಿ ತುಮುಲುಸ್ ಸಂಸ್ಕೃತಿಯಲ್ಲಿ ಸಾಮಾನ್ಯವಾಗಿ ಕಾಣಬರುವ ಗೀರುಗಳುಳ್ಳ ಪಾತ್ರೆ ಮತ್ತು ಅರ್ನ್‌ಫೀಲ್ಡ್ ಸಂಸ್ಕೃತಿಯ ಖಡ್ಗಗಳು ಇಲ್ಲಿವೆ. ಈ ಸಂಸ್ಕೃತಿಯ ವಿಶಿಷ್ಟ ಮಣ್ಪಾತ್ರೆಗಳೂ ದೊರೆತಿವೆ. ದಹನಕ್ರಿಯೆ ಪದ್ಧತಿ ಬಹುಮಟ್ಟಿಗೆ ಬಾಲ್ಕನ್ ಸಮುದಾಯದಲ್ಲಿ ಹುಟ್ಟಿ ತುಮುಲುಸ್ ಸಂಸ್ಕೃತಿ ಪ್ರದೇಶಕ್ಕೆ ವಿಸ್ತರಿಸಿರಬೇಕೆಂಬ ಅಭಿಪ್ರಾಯವಿದೆ. ಇದು ಪಶ್ಚಿಮ ಹಂಗೇರಿಯಿಂದ ಪೂರ್ವ ಫ್ರಾನ್ಸಿನವರೆಗೂ ಆಲ್ಪ್ಸ್ ಪರ್ವತಪ್ರದೇಶದಿಂದ ಉತ್ತರಸಮುದ್ರದವರೆಗೆ ಹಬ್ಬಿತ್ತು. ಈ ಸಂಸ್ಕೃತಿಯ ವಿವಿಧ ಮಣ್ಪಾತ್ರೆಗಳ ಆಧಾರದ ಮೇಲೆ ಒಳಪಂಗಡಗಳನ್ನು ಗುರುತಿಸಲಾಗಿದೆ. ಕೆಲವು ಮಣ್ಪಾತ್ರೆಗಳ ಎಲ್ಲೆ ನಿಗದಿ ಮಾಡಿದಂತೆ ನಿರ್ದಿಷ್ಟ ಭಾಗದಲ್ಲಿ ಮಾತ್ರ ದೊರೆಯುತ್ತದೆ. ಆದ್ದರಿಂದ ಈ ಸಂಸ್ಕೃತಿಯ ಜನಸಮುದಾಯದಲ್ಲಿ ರಾಜಕೀಯ ವ್ಯವಸ್ಥೆಯಿದ್ದಿರಬಹುದು. ಲೋಹ ಕೈಗಾರಿಕೆ ಎಲ್ಲೆಡೆಯಲ್ಲಿ ನಿರ್ಬಂಧವಿಲ್ಲದೆ ಅಧಿಕ ಪ್ರಮಾಣದಲ್ಲಿ ಹರಡಿದ್ದು ಇನ್ನೊಂದು ವೈಶಿಷ್ಟ್ಯ. ಪ್ರಾಯಶಃ ಕೈಗಾರಿಕೆ ಕಾರ್ಯಗಾರಗಳು ಇಲ್ಲಿದ್ದು ಇಡೀ ಪ್ರದೇಶದಲ್ಲಿದ್ದ ಗಣ್ಯವ್ಯಕ್ತಿಗಳಿಗೆ ಸರಕುಗಳನ್ನು ಪೂರೈಸುತ್ತಿದ್ದರೆಂದು ಕಾಣುತ್ತದೆ. ಇವರಲ್ಲಿ ಒಂದು ಶವಕುಣಿಯಲ್ಲಿ ಒಂದು ಶವ ಹೂಳುವ ಪದ್ಧತಿ ಸಾಮಾನ್ಯವಾಗಿತ್ತು. ಆದರೆ ಅಪರೂಪವಾಗಿ ತುಮುಲುಸ್ ಸಂಸ್ಕೃತಿಯಲ್ಲಿದ್ದಂತೆ ಒಂದು ದೊಡ್ಡ ಕಲ್ಲುಗ್ಗುಪ್ಪೆಯಡಿಯಲ್ಲಿ ಒಂದಕ್ಕಿಂತ ಹೆಚ್ಚು ಶವಕುಣಿಗಳು ಇರುತ್ತಿದ್ದುವು.

ಈ ಸಂಸ್ಕೃತಿಯ ಆದಿ ಉಪಹಂತದಲ್ಲಿ ಮನುಷ್ಯಾಕೃತಿ ಶವಕುಣಿಯನ್ನು ಮಾಡಿ ಇದರ ನೆಲಕ್ಕೆ ಕಲ್ಲುಹಾಸಿ ಇದರ ಮೇಲೆ ಶವಸಂಸ್ಕಾರ ಮಾಡಿದ ಬೂದಿ ಮತ್ತು ಅಸ್ಥಿಯನ್ನು ಹರಡಲಾಗುತ್ತಿತ್ತು. ಅನಂತರ ಕಾಲದಲ್ಲಿ ಅಸ್ಥಿ–ಬೂದಿಯನ್ನು ಮಣ್ಪಾತ್ರೆಗಳಲ್ಲಿ ಹಾಕಿಡುವ ಸಂಪ್ರದಾಯ ಬೆಳೆಯಿತು. ಈ ಬದಲಾವಣೆ ಜನಸಮುದಾಯದವರ ಸಾವಿನ ಮುಂಚಿನ ಮತ್ತು ಅನಂತರ ಜೀವನದ ಬಗೆಗಿನ ನಂಬಿಕೆ ಮತ್ತು ಪರಿಕಲ್ಪನೆಗಳಲ್ಲಿ ಬದಲಾವಣೆಗಳನ್ನು ಸೂಚಿಸಬಹುದೆಂದು ತಜ್ಞರ ಅಭಿಪ್ರಾಯ. ಒಂದೊಂದು ನೆಲೆಯಲ್ಲಿಯೂ ಇವುಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಿರುತ್ತದೆ. ಬವೇರಿಯದಲ್ಲಿ ನೂರಾರು ಅಸ್ಥಿಪಾತ್ರೆ ಶವಕುಣಿಗಳಲ್ಲಿದ್ದರೆ, ಅತಿದೊಡ್ಡ ನೆಲೆಯಲ್ಲಿ ಬಡೆನ್–ವ್ಯುರ್ಟೆಂಬರ್ಗ್‌ನಲ್ಲಿ ಕೇವಲ 30 ಶವಕುಣಿಗಳಿವೆ. ಶವಕುಣಿ ಸರಳ ಗುಂಡಿಯಾಗಿರಬಹುದು. ಇಲ್ಲವೆ ಇದರೊಳಗೆ ಕರಂಡ ವಿರಬಹುದು. ಮಣ್ಪಾತ್ರೆಯಲ್ಲಿಟ್ಟಿದ್ದರೆ ಇದನ್ನು ಮತ್ತೊಂದು ಪಾತ್ರೆಯಿಂದ ಮುಚ್ಚಿರಬಹುದು. ಇವುಗಳ ಮೇಲೆ ಕಲ್ಲನ್ನಾಗಲಿ ಮರದ ಕಂಬವನ್ನಾಗಲಿ ನೆಟ್ಟಿರಬಹುದು. ಅಸ್ಥಿಪಾತ್ರೆಯ ಜೊತೆಗೆ ಕೆಲವು ಬಟ್ಟಲು, ಲೋಟ ಮುಂತಾದ ಮಣ್ಪಾತ್ರೆಗಳಿರಬಹುದು. ಜೊತೆಗೆ ಕ್ಷೌರಕತ್ತಿ, ಲೋಹದ ಆಯುಧಗಳು, ಕಂಕಣ, ಪದಕ ಮತ್ತು ಸೂಜಿಗಳು ಇರಬಹುದು. ಕೆಲವು ಶವಕುಣಿಗಳಲ್ಲಿ ಸುಟ್ಟ ಪ್ರಾಣಿಗಳ ಎಲುಬುಗಳು ಇವೆ. ಶ್ರೀಮಂತ ವರ್ಗದ ಶವಕುಣಿಗಳು ಅಪರೂಪವಾಗಿ ಕಲ್ಮನೆಯಲ್ಲಿ, ಸಾಮಾನ್ಯವಾಗಿ ಮರದ ಪೆಟ್ಟಿಗೆಗಳಲ್ಲಿ ಅಸ್ಥಿಪಾತ್ರೆ ಇಡಲಾಗುತ್ತಿತ್ತು. ಈ ಶವಕುಣಿ ಮೇಲೆ ಕಲ್ಲುಗುಪ್ಪೆ ಇರುತ್ತಿತ್ತು. ಇವುಗಳಲ್ಲಿ ಉತ್ತಮ ವರ್ಗದ ಮಣ್ಪಾತ್ರೆಗಳು, ಸಾಮಾನ್ಯವಾಗಿ ಹಂದಿಯ ಎಲುಬು, ಚಿನ್ನದ ಉಂಗುರ ಅಥವಾ ತಗಡು, ಅಪರೂಪವಾಗಿ ಸಣ್ಣ ಸಣ್ಣ ಹೊರೆಬಂಡಿ ಇರುತ್ತವೆ. ಕೆಲವದರಲ್ಲಿ ಇಬ್ಬರು, ಮೂರು ಜನರ ಅಸ್ಥಿ ಅವಶೇಷಗಳು ಇರಬಹುದು. ಕಂಚಿನ ಪಾತ್ರೆಗಳಲ್ಲಿ ಸೇರಿಸಲ್ಪಟ್ಟ ಹಿಡಿಕೆಯುಳ್ಳ ಲೋಟಗಳು, ಕಡಾಯಿಗಳು ಇರುತ್ತವೆ. ಉಪಕರಣಗಳಲ್ಲಿ ಕಾವನ್ನು ಸಿಗಿಸಲು ಮಾಡಿದ ತೂತಿನ ಕೊಡಲಿಗಳು ಗಮನಾರ್ಹ. ಕಂಚಿನ ಹಿಡಿಕೆಯುಳ್ಳ ಎಲೆಯಾಕಾರದ ಖಡ್ಗಗಳು, ಗುರಾಣಿಗಳು, ನಾಲ್ಕು ಚಕ್ರಗಳ ಹೊರೆಬಂಡಿ ಮುಂತಾದವು ವಿಶೇಷವಾದುವು.

ಶವಕುಣಿಗಳಲ್ಲಿ ಕಂಡುಬಂದ ವಿಶಿಷ್ಟ ವಸ್ತುವೆಂದರೆ ರಥಗಳು. ಇವುಗಳಿಗೆ ಮರದ ಅಥವಾ ಕಂಚಿನ ಅರೆಕಾಲು ಚಕ್ರಗಳು, ನಾಲ್ಕು ಚಕ್ರದ ಹೊರೆಬಂಡಿ ಮಾದರಿಗಳು. ಅಪರೂಪಕ್ಕೆ ಮಣ್ಣಿನ ಹೊರೆಬಂಡಿ ಮಾದರಿ ಇರುತ್ತಿದ್ದವು. ವೊರ್‌ವೊಹ್ಲದೆದಲ್ಲಿ ದೊರೆತ ಕಬ್ಬಿಣದ ಉಂಗುರ ಮಧ್ಯ ಯುರೋಪಿನಲ್ಲಿಯೇ ಅತ್ಯಂತ ಪ್ರಾಚೀನ. ಇದರ ಕಾಲಮಾನ ಪ್ರ.ಶ.ಪೂ.15ನೆಯ ಶತಮಾನ.

ಇವರ ವಾಸ್ತವ್ಯದ ನೆಲೆಗಳು ತುಮುಲುಸ್ ಸಂಸ್ಕೃತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿವೆ. ಇವರ ವಾಸ್ತವ್ಯ ಆಗಾಗ್ಗೆ ಗುಡ್ಡಗಳ ಮೇಲೆ ಅಥವಾ ನದಿಯ ತಿರುವಿನಲ್ಲಿರುತ್ತಿತ್ತು. ಮನೆಗಳನ್ನು ತಡಿಕೆ ಗೋಡೆಯಿಂದ ಕಟ್ಟುತ್ತಿದ್ದರು. ಸು.4.5×5ಮೀ ವಿಸ್ತಾರದ ಎರಡು ಪಾರ್ಶ್ವ ಮೊಗಸಾಲೆಗಳಿಂದ ಕೂಡಿದ ಮನೆಗಳು ಸಾಮಾನ್ಯ. ವೆಲಟಿಸ್ ಉತ್ಖನನದಲ್ಲಿ ಈ ಪ್ರಕಾರದ 44 ಮನೆಗಳನ್ನು ಅನಾವರಣಗೊಳಿಸಲಾಗಿದೆ. ನೋವಿಜ್ಞ್ ಸಂಸ್ಕೃತಿಯಲ್ಲಿ ದೊಡ್ಡ ಗಂಟೆಯಾಕಾರದ ಸಂಗ್ರಹಣ ಗುಂಡಿಗಳು ಕಂಡುಬಂದಿವೆ. ರಡೊನಿಸ್ ಎಂಬ ನೆಲೆಯಲ್ಲಿ 100ಕ್ಕೂ ಹೆಚ್ಚಿನ ಗುಂಡಿಗಳಿದ್ದು ಇವುಗಳನ್ನು ಧಾನ್ಯ ಶೇಖರಣೆಗೆ ಉಪಯೋಗಿಸಲಾಗುತ್ತಿತ್ತು. ಬೆಟ್ಟಗಳ ಮೇಲೆ ತನ್ನ ವಾಸ್ತವ್ಯ ನೆಲೆಯನ್ನು ಮಾಡಿಕೊಳ್ಳುವುದು ಈ ಸಂಸ್ಕೃತಿಯ ಇನ್ನೊಂದು ವಿಶಿಷ್ಟ ಲಕ್ಷಣ. ಈ ನೆಲೆಗಳ ಸುತ್ತಲೂ ರಕ್ಷಣೆ ಗೋಡೆಗಳಿರುತ್ತಿತ್ತು. ಈ ಗೋಡೆಗಳನ್ನು ದೊಡ್ಡಕಲ್ಲುಗಳಿಂದ ಅಥವಾ ಮರದ ಹಲಗೆಗಳಿಂದ ನಿರ್ಮಿಸಲಾಗಿತ್ತು. ಲೋಹದ ಕೈಗಾರಿಕೆ ಸಾಮಾನ್ಯವಾಗಿ ರಕ್ಷಣಾಗೋಡೆಯಿಂದ ಆವೃತವಾದ ನೆಲೆಗಳಲ್ಲಿರುತ್ತಿತ್ತು. ಇನ್ನೊಂದು ಗಮನಾರ್ಹ ಸಂಗತಿ ಎಂದರೆ ದಕ್ಷಿಣ ಜರ್ಮನಿ ಮತ್ತು ಸ್ವಿಟ್ಜರ್‌ಲೆಂಡ್ ಸರೋವರದ ಹತ್ತಿರ ಒಂದೇ ಕೊಠಡಿಯ ಆಸರೆ ಕಂಬದ ಮನೆಗಳನ್ನು ತಡಿಕೆ ಗೋಡೆಗಳಿಂದ ಅಥವಾ ಮರದ ದಿಮ್ಮಿಗಳಿಂದ ಕಟ್ಟಲಾಗುತ್ತಿತ್ತು. ಇವುಗಳ ಕಾಲಮಾನ ನಿರ್ಧರಿಸಲು ಸುಟ್ಟುಹೋದ ಇಂತಹ ಮನೆಗಳ (ಸ್ವಿಟ್ಜರ್‌ಲೆಂಡ್‌ನ ಝುಗ್) ಅವಶೇಷಗಳ ವೃಕ್ಷ–ಉಂಗುರ ವಿಧಾನದಿಂದ ನಿರ್ಧರಿಸಿದ ಕಾಲಮಾನಗಳು ಸಹಕಾರಿಯಾಗಿವೆ.

ಈ ಸಂಸ್ಕೃತಿಯ ಇನ್ನೊಂದು ವಿಶಿಷ್ಟ ಲಕ್ಷಣವೆಂದರೆ ನದಿಗಳಲ್ಲಿ ಮತ್ತು ಜೌಗು ಪ್ರದೇಶದಲ್ಲಿ ದೇವರಿಗೆ ಪ್ರಾಯಶಃ ಅರ್ಪಣ ಮನೋಭಾವದಿಂದ ಕಂಚಿನ ವಸ್ತುಗಳನ್ನು ಹುದುಗಿಸಿಡುತ್ತಿದ್ದುದು. ಇವರ ಧಾರ್ಮಿಕ ಆಚರಣೆಯಲ್ಲಿ ಪ್ರಾಣಿಬಲಿ, ನರಬಲಿಯೂ ರೂಢಿಯಲ್ಲಿತ್ತು. ತುರಿಂಗಿಯ ಕೈಪ್ಪಹೌಸೆರ್ ಗವಿಗಳಲ್ಲಿ ಮುಂಡವಿಲ್ಲದ ಮಾನವ ಅಸ್ಥಿಪಂಜರ ಮತ್ತು ಪ್ರಾಣಿಗಳ ಎಲುಬುಗಳು ಈ ಪದ್ಧತಿಯನ್ನು ಸೂಚಿಸುತ್ತವೆ. ಇವುಗಳ ಜೊತೆಗೆ ಗಂಟುಗಂಟಾದ ಸಸ್ಯಗಳ ನಾರುಗಳು, ಕೂದಲು ಮತ್ತು ಕಂಚಿನ ಕೊಡಲಿ, ಪದಕ, ಸೂಜಿ, ಧಾನ್ಯ ಮುಂತಾದವುಗಳನ್ನು ಇಡಲಾಗುತ್ತಿತ್ತು. ಬಹುಶಃ ಈ ಜನಸಮುದಾಯ ನರಮಾಂಸ ಭಕ್ಷಕರಾಗಿದ್ದಿರಬಹುದು. ಶವಕುಣಿಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೆ ಧಾರ್ಮಿಕ ವಿಧಿಗೆ ಅನುಗುಣವಾಗಿ ಶವವನ್ನು ಕತ್ತರಿಸಿ ಕುಣಿಗಳಲ್ಲಿಟ್ಟು ಸುಡಲಾಗುತ್ತಿತ್ತೆಂದು ಕಾಣುತ್ತದೆ. ನೀರುಹಕ್ಕಿಗಳ ಬಗ್ಗೆ ಗೀಳು ಇದ್ದಂತೆ ಕಾಣುತ್ತದೆ. ಇವುಗಳ ಹಲವಾರು ಚಿತ್ರಗಳೂ ಮೂರು ಆಯಾಮದ ಆಕೃತಿಗಳೂ ವಿಶೇಷವಾಗಿ ಕಂಡುಬಂದಿವೆ. ಇವರು ದನ, ಕರು, ಹಂದಿ, ಕುರಿ, ಮೇಕೆ, ಕುದುರೆ, ನಾಯಿ, ಬಾತುಕೋಳಿಗಳನ್ನು ಸಾಕುತ್ತಿದ್ದರು. ವ್ಯವಸಾಯಕ್ಕೋಸ್ಕರ ಕಾಡುಗಳನ್ನು ಕಡಿದು ಬಯಲು ಪ್ರದೇಶವಾಗಿ ಪರಿವರ್ತಿಸಿ ಗೋದಿ, ಬಾರ್ಲಿ, ಬೇಳೆಕಾಳುಗಳು, ಹುರುಳಿ, ಸಜ್ಜೆ, ಓಟ್ಸ್ ಬೆಳೆಯಲಾಗುತ್ತಿತ್ತು. ಸೇಬು, ಡೇರ್ಝಿಲ್ ಬೀಜ, ಪೇರುಹಣ್ಣು, ಅಂಜೂರ ಮುಂತಾದವನ್ನು ಆಹಾರಕ್ಕಾಗಿ ಸಂಗ್ರಹಿಸಲಾಗುತ್ತಿತ್ತು. ಸೋಸುವ ತಟ್ಟೆ ಇದ್ದಿತು. ದ್ರಾಕ್ಷಾರಸವನ್ನು ಸೋಸಲು ಉಪಯೋಗಿಸಿರಬೇಕೆಂದು ಊಹಿಸಲಾಗಿದೆ. ತಕ್ಕಲಿಗಳಿಂದ ತುಪ್ಪಟದ ದಾರವನ್ನು ತೆಗೆದು ಮಗ್ಗದಲ್ಲಿ ನೇಯುತ್ತಿದ್ದರು. ಕಂಚಿನ ಕಡ್ಡಿಯಿಂದ ಹೊಲಿಯುತ್ತಿದ್ದರು. ಇವರು ಆಡುತ್ತಿದ್ದ ಭಾಷೆ ತಿಳಿದುಬಂದಿಲ್ಲ. ಇವರು ಕೆಲ್ಟ್ ಜನಾಂಗದ ಪೂರ್ವಜರೆಂಬ ಅಭಿಪ್ರಾಯವಿದೆ. (ಎ.ಎಸ್.;ಎನ್.ಎಲ್.)

**ಅನ್ವಯಕಲೆ:** ದೃಶ್ಯ ಪ್ರಕಾರಗಳಲ್ಲಿಯ ಒಂದು ಬಹುಮುಖ್ಯ ಭಾಗ (ಅಪ್ಲೈಡ್ ಆರ್ಟ್). ಇದನ್ನು ಸ್ಥೂಲವಾಗಿ ಜಾಹಿರಾತು ಕಲೆ ಎಂದು ಕೂಡ ಹೇಳಬಹುದು. ಜಾಹಿರಾತು ಎಂದಾಕ್ಷಣ ವ್ಯಾಪಾರಿ ಮನೋಭಾವದ ಅರ್ಥವ್ಯಾಪ್ತಿಯಲ್ಲ. ಒಂದು ಕಲಾಕೃತಿ ರಚನೆಯಾದ ಮೇಲೆ ಅದು ಜನರನ್ನು ತಲುಪಬೇಕು. ಕಲಾಕೃತಿ ಸಾಮಾಜಿಕವಾದದ್ದು ಮತ್ತು ಅದನ್ನು ಪ್ರಸಿದ್ಧಿಗೊಳಿಸುವ ಕಾರ್ಯಕ್ಕೆ ಜಾಹಿರಾತಿನಂತಹ ಗುಣವಿದೆ.

ಅನ್ವಯಕಲೆಯ ಪರಿಕಲ್ಪನೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸೈದ್ಧಾಂತಿಕವಾಗಿ 16–17ನೆಯ ಶತಮಾನದಲ್ಲಿಯೇ ಆರಂಭವಾಯಿತು. ಮುದ್ರಣಯುಗದಿಂದ ಇಂದಿನ ಕಂಪ್ಯೂಟರ್ ಯುಗದವರೆಗೂ ತನ್ನ ಪ್ರಪಂಚವ್ಯಾಪಿ ಬೆಳೆವಣಿಗೆಯನ್ನು ಹೊಂದಿದೆ. ಭಾರತದ ಮಟ್ಟಿಗೆ ಈ ಕಲ್ಪನೆ 19ನೆಯ ಶತಮಾನಕ್ಕೆ ಸೇರುತ್ತದೆ. ಈ 20ನೆಯ ಶತಮಾನದಲ್ಲಿ ಕಲಾಶಿಕ್ಷಣದ ಅಧ್ಯಯನ ವಿಷಯವಾಗಿ ಕಮರ್ಷಿಯಲ್ ಆರ್ಟ್ಸ್, ಅಡ್ವರ್ಟೈಸಿಂಗ್ ಆರ್ಟ್, ಅಪ್ಲೈಡ್ ಆರ್ಟ್ ಅಥವಾ ಅನ್ವಯಕಲೆ ಎಂದು ಬೆಳೆದಿದೆ. ಈ ಪರಿಕಲ್ಪನೆ ಭಾರತದ ಪ್ರಾಚೀನ ಕಾಲಕ್ಕೂ ಅನ್ವಯಿಸಬಹುದು.

ಪ್ರಾಗೈತಿಹಾಸಿಕ ಕಾಲದ ಆದಿ ಮಾನವನ ಗುಹಾ ಚಿತ್ರಗಳು ಪ್ರಾಯಶಃ ನಮಗೆ ತಿಳಿದಿರುವ ಅತ್ಯಂತ ಪ್ರಾಚೀನ ಸಂವಹನ ದೃಶ್ಯ ಸಂಕೇತಗಳಾಗಿವೆ. ಅವುಗಳ ಉದ್ದೇಶ ಧಾರ್ಮಿಕ ಅಥವಾ ಸಾಮಾಜಿಕ ಆಗಿದ್ದರೂ ಆ ಕಲಾವಿದರು ಬಿಂಬಿಸಿದ ಅತ್ಯಂತ ಸರಳಶೈಲಿಯ ನೇರ ಗುರುತುಗಳಾಗಿವೆ. ಇವುಗಳನ್ನು ಚಿತ್ರಿಸಿದ ಸ್ಥಳ ಇಂದಿನ ಪ್ರೌಢ ಸಂಪ್ರದಾಯದ ಭಿತ್ತಿಗಳಿದ್ದಂತೆ ಇರುವ ಅಂದಿನ ಗುಹಾಬಂಡೆಗಳು. ಅವುಗಳನ್ನು ಅನ್ವಯಿಕ ಸೃಷ್ಟಿಯ ಪ್ರಥಮ ಪುರಾವೆಗಳೆಂದು ಹೇಳಬಹುದು.

ಹರಪ್ಪ ಸಂಸ್ಕೃತಿಯ ನಾಗರಿಕತೆಯ ಪ್ರೌಢತೆಯನ್ನು ಬಿಂಬಿಸುವಂತಿರುವ ಆ ಕಾಲದ ಲೋಹ, ಶಿಲೆ ಹಾಗೂ ಸುಡಾವೆಮಣ್ಣಿನ ಗೊಂಬೆಗಳು ಮತ್ತು ಸುಡಾವೆ ಮಣ್ಣಿನ ಅಚ್ಚೊತ್ತಿದ ಮುದ್ರೆಗಳು ಅನ್ವಯಿಕ ಪರಿವ್ಯಾಪ್ತಿಯಲ್ಲಿಯೇ ಬೆಳೆದಿವೆ. ಹರಪ್ಪದ ಮುದ್ರೆಗಳು ಪ್ರಾಯಶಃ ಅತ್ಯಂತ ಪ್ರಾಚೀನ ಮುದ್ರಣದ ತಂತ್ರಗಾರಿಕೆಯನ್ನು ಸೂಚಿಸುತ್ತವೆ.

ಇತಿಹಾಸ ಆರಂಭ ಕಾಲದ ದಾಖಲೆಗಳಲ್ಲಿ ಅಶೋಕನ ಶಾಸನಗಳು ಮುಖ್ಯ ಉದಾಹರಣೆಗಳಾಗಿವೆ. ಅವನ ಶಾಸನಗಳು ಬೌದ್ಧಧರ್ಮದ ಪ್ರಚಾರ ಫಲಕಗಳೆಂದರೆ ತಪ್ಪಾಗಲಾರದು. ಇಂದಿನ ನವಯುಗದ ಭಿತ್ತಿಪತ್ರಗಳ ರೀತಿಯಲ್ಲಿ ಅಶೋಕನ ಶಾಸನಗಳು ದೇಶದ ಉದ್ದಗಲಕ್ಕೂ ಬಂಡೆಗಳು, ಸ್ತಂಭಗಳು ಹಾಗೂ ಶಿಲಾಫಲಕದ ಮೇಲೆ ಅಂದಿನ ಪ್ರಮುಖ ಜನಸಂಚಾರದ ರಸ್ತೆಗಳಿಗೆ ಹೊಂದಿಕೊಂಡಂತೆ ಹಾಕಲ್ಪಟ್ಟಿವೆ. ಅಶೋಕನ ಉದ್ದೇಶ ಬುದ್ಧನ ತತ್ವಗಳನ್ನು ಪ್ರಚಾರ ಮಾಡುವುದಾಗಿದೆ. ಅಂದರೆ ಒಂದು ಅರ್ಥದಲ್ಲಿ ಇಂದಿನ ಜಾಹಿರಾತಿನಂತೆ ಎಂದು ಹೇಳಬಹುದು. ಬೌದ್ಧ ಶಿಲ್ಪಕಲೆ ಕೂಡ ಇದೇ ಹಿನ್ನೆಲೆಯಲ್ಲಿ ಬೆಳೆವಣಿಗೆಯಾಗಿದೆ. ಜಾತಕ ಕತೆಗಳನ್ನು, ಬುದ್ಧನ ಪವಾಡಗಳನ್ನು ದೃಶ್ಯರೂಪದಲ್ಲಿ ಶಿಲ್ಪ ಮತ್ತು ಚಿತ್ರಗಳೆರಡರಲ್ಲೂ ಬಿಂಬಿಸಿರುವುದನ್ನು ಬಾರ್ಹುತ್, ಸಾಂಚಿ, ಅಮರಾವತಿ, ಸನ್ನತಿ, ಅಜಂತ ಮೊದಲಾದ ಬೌದ್ಧ ನೆಲೆಗಳಲ್ಲಿ ನೋಡಬಹುದು. ಈ ವಿವರಗಳು ಜನರಿಗೆ ತಿಳಿಯುವಂತೆ ದೃಶ್ಯಭಾಷೆಯ ರೂಪದಲ್ಲಿ ಮೊತ್ತಮೊದಲ ಬಾರಿಗೆ ರಚನೆಯಾಗಿವೆ. ಈ ಶಿಲ್ಪಗಳಲ್ಲಿಯೂ ಕೂಡ ಜಾಹಿರಾತಿನಂತಹ ಅಥವಾ ಪ್ರಚಾರಕಲೆಯ ಅಂಶ ಇಲ್ಲದೆ ಇಲ್ಲ.

ತತ್ಪರಿಣಾಮವಾಗಿ ಪೌರಾಣಿಕ ಮತ್ತು ನೈತಿಕ ಕಥಾನಕಗಳನ್ನು ಹಾಗೂ ನಿತ್ಯ ಜೀವನದ ವಿವಿಧ ಮುಖಗಳನ್ನು ವರ್ಣಚಿತ್ರ ಮತ್ತು ಚಿತ್ರ ಫಲಕಗಳ ಮೂಲಕ ಜನಸಾಮಾನ್ಯರ, ಸುಧಾರಣೆಗೆ ಮತ್ತು ಏಳಿಗೆಗೆ ಪರಿಣಾಮಕಾರಿಯಾಗಿ ತಿಳಿಸುವ ಕಲಾ ಸಂಪ್ರದಾಯ ವ್ಯಾಪಕವಾಗಿ ಬೆಳೆಯಿತು. ಬಾದಾಮಿ ಚಳುಕ್ಯ ಕಾಲದ ದೇವಾಲಯಗಳಲ್ಲಿ ಇದನ್ನು ವಿಶೇಷವಾಗಿ ಕಾಣಬಹುದು. ಜೀವನಮೌಲ್ಯಗಳನ್ನು ಪ್ರತಿಪಾದಿಸುವ ರಾಮಾಯಣ, ಮಹಾಭಾರತ, ಭಾಗವತ, ಶೈವ, ವೈಷ್ಣವ ಪುರಾಣಗಳು, ಪಂಚತಂತ್ರ, ಕಥಾಸರಿತ್ಸಾಗರ ಮೊದಲಾದ ನೀತಿಬೋಧಕ ಗ್ರಂಥಗಳಿಂದಲೂ ಜನಸಾಮಾನ್ಯರಿಗೆ ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ತಿಳಿಸಲು ಹಲವಾರು ಚಿತ್ರಫಲಕಗಳನ್ನು ದೇವಾಲಯದ ಗೋಡೆಗಳು ಮತ್ತು ಕಂಬಗಳ ಮೇಲೆ ರೂಪಿಸಲಾಯಿತು. ದಿನ ಕಳೆದಂತೆ ಈ ಪ್ರಕಾರದ ಕಲಾಸಂದೇಶ ಕಡಿಮೆಯಾಗಿ ಮತ್ತೆ ಹೊಯ್ಸಳ, ವಿಜಯನಗರದ ಕಾಲದಲ್ಲಿ ಊರ್ಜಿತಗೊಂಡಿರುವುದನ್ನು ಕಾಣಬಹುದು. ಇಂದಿನ ಕಾಲದಲ್ಲಿಯೂ ಇಂತಹ ಕೆಲವು ಕಥಾನಕಗಳನ್ನು ಪ್ರಚಾರ ಮಾಧ್ಯಮ ಕಲೆಯಲ್ಲಿ ಅಳವಡಿಸಿಕೊಂಡಿರುವುದನ್ನು ಕಾಣಬಹುದು. (ಎಲ್.ಆರ್.ಆರ್.)

**ಅಪ್ಪುಕಲ್ಲು:** ತಮಿಳುನಾಡು ರಾಜ್ಯದಲ್ಲಿ ವೆಲ್ಲೂರಿನಿಂದ 22 ಕಿಮೀ ದೂರದಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿಯ ಗಂಗೈನಲ್ಲೂರ್ ಬೆಟ್ಟದ ನೈರುತ್ಯ ತುದಿಯಲ್ಲಿ ಉತ್ಖನನ ನಡೆಸಲಾಯಿತು. ನಯನಾರ್ ಕೊಲ್ಲು ಎಂಬ ಪ್ರಾಚೀನ ನೆಲೆಯಲ್ಲಿ 1977–79ರ ಅವಧಿಯಲ್ಲಿ ಕೆ. ವಿ. ರಾಮನ್ ಅವರ ನೇತೃತ್ವದಲ್ಲಿ ಮದರಾಸ್ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗದಿಂದ ಗುಂಡಿಗಳನ್ನು ತೋಡಲಾಯಿತು.


ತಾಮ್ರ–ಶಿಲಾ ಸಂಸ್ಕೃತಿಯ ತಾಮ್ರ ಖಡ್ಗಗಳು

ಮೂರು ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ. 1ನೆಯ ಹಂತ: ಬೃಹತ್ ಶಿಲಾಯುಗ, 2ನೆಯ ಹಂತ: ಆದಿ ಚಾರಿತ್ರಿಕ ಕಾಲ, 3ನೆಯ ಹಂತ: ಮಧ್ಯಯುಗೀನ ಕಾಲ. 1989–90 ಸಮಯದಲ್ಲಿ ಈ ನೆಲೆಯ ಸಮೀಪದ ಬೆಟ್ಟದ ಮೇಲಿನ ಒಂದು ಪೊಟರೆಯಲ್ಲಿ ತಾಮ್ರದ ಉದ್ದನೆಯ ಖಡ್ಗಗಳು ಆಕಸ್ಮಿಕವಾಗಿ ಬೆಳಕಿಗೆ ಬಂದುವು. ಅಡ್ಡಲಾಗಿ ಎರಡು ಕಡೆ ಬಾಗಿದ ಸರಳುಗಳುಳ್ಳ ಹಿಡಿಕೆ, ಮಧ್ಯದಲ್ಲಿ ಉಬ್ಬು ಇರುವ ಚಪ್ಪಟೆ ಕತ್ತಿಗಳು ರಾಜಸ್ತಾನದ ಫತೆಗಡ, ರಾಯಚೂರು ಜಿಲ್ಲೆಯ ಕಲ್ಲೂರು (1942), ತಮಿಳುನಾಡಿನ ಕರಿಚಿಪ್ಪದೂರು (ಪೊಲ್ಲಾಚಿ ಹತ್ತಿರ, ಕೊಯಮತ್ತೂರು ಜಿಲ್ಲೆ) ಮತ್ತು ಶವನಿಪಟ್ಟಿಯಲ್ಲಿ (ರಾಮನಾಥಪುರಂ ಜಿಲ್ಲೆ) ದೊರೆತ ಖಡ್ಗಗಳಂತಿವೆ. ತಾಮ್ರ–ಶಿಲಾಯುಗ ನೆಲೆಯ ಚಂದೋಳಿ (ಮಹಾರಾಷ್ಟ್ರ) ಮತ್ತು ಅಂತ್ಯ ಹರಪ್ಪ ಸಂಸ್ಕೃತಿಯ ಸನೌಲಿಯ ಶವಕುಣಿಯೊಂದರಲ್ಲಿ ದೊರೆತ ಕಠಾರಿ ಮತ್ತು ಖಡ್ಗದಂತಿವೆ. ಆದ್ದರಿಂದ ಇವು ತಾಮ್ರ–ಶಿಲಾಯುಗ ಸಂಸ್ಕೃತಿಯದೆಂದು ಹೇಳಬಹುದು. (ಎಸ್.ಬಿ.)

**ಅಬು ಸಿಂಬೆಲ್:** ಎರಡನೆಯ ರ‍್ಯಾಮ್ಸೆಸ್ ದೊರೆಯ (ಪ್ರ.ಶ.ಪೂ.ಸು.13ನೆಯ ಶತಮಾನ) ದೇವಾಲಯ ಸಮೂಹ ಇರುವ ಸ್ಥಳ. ಈ ನೆಲೆಯನ್ನು ನೋಡಲು ಬಂದವರಿಗೆಲ್ಲ ಅಬು ಸಿಂಬೆಲ್ ಎಂಬ ಸ್ಥಳೀಯ ಯುವಕ ತೋರಿಸುತ್ತಿದ್ದುದರಿಂದ ಈ ನೆಲೆಗೆ ಅಬು ಸಿಂಬೆಲ್ ಎಂದು ಕ್ರಮೇಣ ಹೆಸರಾಯಿತು. ಈಜಿಪ್ಟಿನ ಆಸ್ವಾನ್ ಪ್ರಾಂತದಲ್ಲಿ (ಪ್ರಾಚೀನ ನುಬಿಯ) ನೈಲ್ ನದೀತೀರದಲ್ಲಿದೆ. ಮರಳುಗಲ್ಲಿನ ಹೆಬ್ಬಂಡೆಗಳನ್ನು ಕೊರೆದು ಈ ದೇವಾಲಯಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಎರಡು ಸುಪ್ರಸಿದ್ಧವಾದುವು. ದೊಡ್ಡ ದೇವಾಲಯದ ಮುಂಭಾಗದಲ್ಲಿ ದೊರೆಯ ನಾಲ್ಕು ಬೃಹತ್ ವಿಗ್ರಹಗಳನ್ನು ಬಾಗಿಲ ಇಕ್ಕಡೆಗಳಲ್ಲೂ ಎರಡೆರಡರಂತೆ ಕಡೆದಿದ್ದಾರೆ. ಕುಳಿತಿರುವ ಈ ಒಂದೊಂದು ವಿಗ್ರಹದ ಎತ್ತರ 20.52 ಮೀ, ಭಾರ 1,200ಟನ್. ಇವುಗಳ ಕಾಲುಗಳ ಮೇಲೆ ಮತ್ತು ಸಮೀಪದಲ್ಲಿ ಮುಂದೆ ಈ ವಲಯಕ್ಕೆ ಧಾಳಿಯಿಟ್ಟ ಗ್ರೀಕ್, ಕಾರಿಯನ್ ಮತ್ತು ಫೊನೀಶಿಯನ್ ಯೋಧರು ತಮ್ಮ ಹೆಸರುಗಳನ್ನು ಸ್ವಂತ ಲಿಪಿಗಳಲ್ಲಿ ಕೆತ್ತಿದ್ದಾರೆ. ಇವು (ವಿಶೇಷವಾಗಿ ಫೊನೀಶಿಯನ್) ಆಯಾ ಲಿಪಿಗಳ ಬಳಕೆಯ ಬಗ್ಗೆ ಅತ್ಯಂತ ಪ್ರಾಚೀನ ಕುರುಹುಗಳು.

ನಿರ್ಮಾಣ: ಈ ದೇವಾಲಯಗಳ ನಿರ್ಮಾಣಕಾಲ 3200 ವರ್ಷಗಳಿಗಿಂತಲೂ ಹಿಂದಿನದು. ಆ ಕಾಲದ ಜನರ ನಂಬಿಕೆಯಂತೆ ಈಜಿಪ್ಟಿನ ದೇವಾಂಶ ಸಂಭೂತರಾದ ಎರಡನೆಯ ರ‍್ಯಾಮ್ಸೆಸ್, ಅವನ ಪ್ರಿಯಪತ್ನಿ ಮಹಾರಾಣಿ ನೆಫೆರ್ತಾರಿ ಇವರ ಯಶಸ್ಸು, ವೈಭವಗಳ ಸಂಕೇತಸ್ಮಾರಕಗಳಿವು. ಇದರ ಗರ್ಭಗುಡಿಯಲ್ಲಿರುವ ಶಿಲಾವಿಗ್ರಹಗಳ ಮೇಲೆ ವರ್ಷದಲ್ಲಿ ಎರಡು ಬಾರಿ ಉದಯರವಿಕಿರಣಗಳು ನೇರವಾಗಿ ಬೀಳುವಂತೆ ರಚಿಸಲಾಗಿದೆ. ದೇವಾಲಯ ಸೂರ್ಯ ನಿವೇದಿತವಾದರೂ ರಾಜನನ್ನೇ ದೈವತ್ವದ ಸಂಕೇತವಾಗಿ ಹಾಗೂ ಗೌರವಾರ್ಥ ಸ್ಮಾರಕ ಇದಾಗಿದೆ. ಸಮೀಪದ ಸಣ್ಣ ದೇವಾಲಯ ರಾಣಿಯ ಗೌರವಾರ್ಥ ಸ್ಮಾರಕ. ಇದರ ನುಗ್ಗು ಬಾಗಿಲಿನಲ್ಲಿ ರಾಜರಾಣಿಯರ ಆರು ಪ್ರತಿಮೆಗಳು ಒತ್ತಟ್ಟಿಗೆ ನಿಂತಿವೆ. ರ‍್ಯಾಮ್ಸೆಸ್ ರಾಜ ಇನ್ನೂ ಆರು ದೇವಾಲಯಗಳನ್ನು ನುಬಿಯದಲ್ಲಿಯ ಹೆಬ್ಬಂಡೆಗಳಲ್ಲಿ ಕಂಡರಿಸಿದ್ದಾನೆ. ಅಬು ಸಿಂಬೆಲ್ ಕಲೆ ಮತ್ತು ತಾಂತ್ರಿಕ ವಿಜ್ಞಾನಗಳ ಅಪೂರ್ವ ಮೇಳವಾಗಿದೆ.

ಪುನರ್ದರ್ಶನ: ರ‍್ಯಾಮ್ಸೆಸ್‌ನ ಮರಣಾನಂತರ ದೇವಾಲಯಗಳು ಕ್ರಮೇಣ ಮಾಸಲಾರಂಭಿಸಿದುವು. ಪಶ್ಚಿಮ ಮರುಭೂಮಿಯ ಮರಳ ಕಣಗಳ ನಿರಂತರ ಹೊಯ್ಲು, ಮುಂದಿನ ಪೀಳಿಗೆಯವರ ಅನಾಸ್ಥೆ ಈ ಕಾರಣಗಳಿಂದ ಅಬು ಸಿಂಬೆಲ್ ಭೌತಿಕವಾಗಿಯೂ ಮುಚ್ಚಿ ಹೋಗತೊಡಗಿತು. ಅಬು ಸಿಂಬೆಲ್ ವಿಚಾರ ಪ್ರಶ.ಪೂ. 6ನೆಯ ಶತಮಾನದವರೆಗೂ ಸಾಕ್ಷಿ ದೊರೆಯುತ್ತದೆ. ಮುಂದೆ ಚಿರನಿದ್ರೆಗೀಡಾದ ಈ ವೈಭವದ ಪುನರ್ದರ್ಶನವಾದದ್ದು ಪ್ರ.ಶ.1813ರಲ್ಲಿ ಸು.2300 ವರ್ಷಗಳ ಅನಂತರ. ಜಾನ್ ಲೆವಿಸ್ ಬುರ್ಖಾಡೆ ಎಂಬ ವಿದೇಶಿಯಾತ್ರಿಕ ಅಬು ಸಿಂಬೆಲ್ ಐತಿಹ್ಯಗಳಿಂದ ಆಕರ್ಷಿತನಾಗಿ ನುಬಿಯದಲ್ಲಿ ಅಲೆಯುತ್ತಿದ್ದಾಗ ಕಂಡದ್ದು ಮರಳ ಗುಡ್ಡದ ಮೇಲೆ ಚಾಚಿದ್ದ ಎರಡು ತಲೆಗಳನ್ನು. ಆ ವಿಗ್ರಹಗಳು ಕುಳಿತಿವೆಯೇ ಅಥವಾ ನಿಂತಿವೆಯೇ ಎಂದು ಅವನಿಗೆ ತೀರ್ಮಾನಿಸಲಾಗಲಿಲ್ಲ. ಮುಂದಿನ ದಿಟ್ಟ ಹೆಜ್ಜೆ ಇಟ್ಟ ಕೀರ್ತಿ ಇಟಲಿಯ ಪ್ರವಾಸಿ ಜಿ.ಬಿ. ಬೆಲ್ಜೋನಿಯದು (1817). ಶತಮಾನಗಳಿಂದ ಹರಡಿದ್ದ ಮರಳರಾಶಿಯನ್ನು ಆತ ತೆಗೆದು ದೇವಾಲಯ ಪ್ರವೇಶ ಮಾಡಿದ. ಅದರೊಳಗಿನ ಅದ್ಭುತ ಕಲಾಪ್ರೌಢಿಮೆ, ಭವ್ಯ ವಾಸ್ತುಶಿಲ್ಪ– ಇವುಗಳಿಗೆ ಮಾರುಹೋದ. ಈ ರೀತಿ ಆಧುನಿಕ ಜಗತ್ತು ಅಬು ಸಿಂಬೆಲ್‌ನ ಪುನರ್ದರ್ಶನ ಮಾಡಿತು.

ಸ್ಥಳಾಂತರ: ಈಜಿಪ್ಟ್ ದೇಶದ ಮಹಾಭಿಧಮನಿ ಎಂದು ಪ್ರಸಿದ್ಧವಾಗಿರುವ ನೈಲ್‌ನದಿಗೆ ಆಸ್ವಾನ್ ಪ್ರಾಂತದಲ್ಲಿ ಅದೇ ಹೆಸರಿನಿಂದ ಒಂದು ದೊಡ್ಡ ಅಣೆಕಟ್ಟು ಕಟ್ಟಲು ಸರ್ಕಾರ ನಿರ್ಧರಿಸಿತು. ಆದರೆ ಇದರಿಂದ ಶೇಖರಣೆಯಾಗುವ ನೀರಿನ ರಾಶಿ ಅಬು ಸಿಂಬೆಲನ್ನು ಮುಳುಗಿಸುವುದು ಎಂದು ತಿಳಿಯಿತು. 1960ರಲ್ಲಿ ಈಜಿಪ್ಟ್ ಮತ್ತು ಸೂಡಾನ್ ಸರ್ಕಾರಗಳು ಯುನೆಸ್ಕೋಗೆ (ಯುನೈಟೆಡ್ ನೇಷನ್ಸ್ ಎಜ್ಯುಕೇಷನಲ್ ಸೈಂಟಿಫಿಕ್ ಮತ್ತು ಕಲ್ಚರಲ್ ಆರ್ಗನೈಸೇಷನ್) ಅಬು ಸಿಂಬೆಲನ್ನು ಹೇಗಾದರೂ ರಕ್ಷಿಸಬೇಕು ಎಂದು ಪ್ರಾರ್ಥನೆ ಸಲ್ಲಿಸಿದುವು. ಸಮಸ್ಯೆಯ ಗಂಭೀರತೆಯನ್ನು ಗಮನಿಸಿದ ಯುನೆಸ್ಕೊ ಅದರ ರಕ್ಷಣೆಗೆ ಹಾಗೂ ಸ್ಥಳಾಂತರಕ್ಕೆ ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ಕರೆನೀಡಿತು. ಇದರ ಫಲ ಅಬು ಸಿಂಬೆಲ್ ಸ್ಥಳಾಂತರ, ಬೃಹದ್ವಾಸ್ತು ಶಿಲ್ಪ ರಕ್ಷಣೆಯಲ್ಲಿ ನೆರವೇರಿದ ಅದ್ವಿತೀಯ ಸಾಹಸ. ರಕ್ಷಣೆಗೆ ಬಂದ ಸೂಚನೆಗಳು ಹಲವಾರು–ಸುತ್ತಲೂ ದೊಡ್ಡ ಒಡ್ಡುಗಳನ್ನು ಕಟ್ಟಿ ದೇವಾಲಯಗಳಿಗೆ ನೀರು ಬರದಂತೆ ಮಾಡಬೇಕು; ಭಾರೀ ಪಾರದರ್ಶಕ ಕವಚದಿಂದ ದೇವಾಲಯಗಳನ್ನು ಮುಚ್ಚಿ ಒಳಗೆ ವಿದ್ಯುದ್ದೀಪಗಳನ್ನು ಉರಿಸಿ ಜಲಾಂತರ್ಗತ ಅಬು ಸಿಂಬೆಲನ್ನು ಜನರಿಗೆ ತೋರಿಸಬೇಕು; ತಳಹದಿ ಸಮೇತ ದೇವಾಲಯಗಳನ್ನು ಕಿತ್ತು ಸ್ಥಳಾಂತರಿಸಬೇಕು ಇತ್ಯಾದಿ. ಪ್ರಾಯೋಗಿಕತೆ, ವೆಚ್ಚ, ಕಾಲಾವಕಾಶ– ಈ ದೃಷ್ಟಿಯಿಂದ ಪರಿಶೀಲಿಸಿದಾಗ ಪರಿಹಾರಗಳು ಸ್ವೀಕೃತವಾಗಲಿಲ್ಲ. ಸ್ವೀಕೃತಯೋಜನೆಯ ವಿವರವಿಷ್ಟು: ಎತ್ತಿ ಸ್ಥಳಾಂತರಿಸಲು ಅನುಕೂಲಿಸುವಂತೆ ಸಮಗ್ರಶಿಲಾರಚನೆಯನ್ನೂ ಹೋಳು ಹೋಳಾಗಿ ವಿಭಾಗಿಸಲು ಬಲುದೊಡ್ಡ ನಕಾಶೆ


2ನೆಯ ರ‍್ಯಾಮ್ಸೆಸನ ಪ್ರತಿಮಾಗೃಹ

ಸಿದ್ಧವಾಯಿತು; ಇಲ್ಲಿ ಕೃತಿಗಳಿಗೆ ಇನಿತೂ ಊನ ಬರಬಾರದು; ಇದರ ಪ್ರಕಾರ ಬೆಟ್ಟದ ಮೇಲುಭಾಗದಿಂದ ಗರಗಸ ಕೊಯ್ತದ ಆರಂಭ; ನಕಾಶೆ ವಿಧಿಸಿರುವ ಗೆರೆಗಳ ಮೇಲೆ ನಿಖರವಾಗಿ ಗರಗಸ ಹರಿಯಬೇಕು; ಯಾವ ಕೊಯ್ತದ ಗಾಯವೂ 6 ಮಿಮೀ ಗಿಂತ

ಹೆಚ್ಚು ಅಗಲವಾಗಕೂಡದು; ಗರಗಸ ಹರಿಯದಲ್ಲಿ ಬಲುನಿಯಂತ್ರಿತವಾಗಿ ಅಕ್ಕಪಕ್ಕದಲ್ಲಿ ಏನೂ ಅಪಘಾತ ಸಂಭವಿಸದಂತೆ ಡೈನಮೈಟ್ ಪ್ರಯೋಗ; ಕೊಯ್ದ ಶಿಲಾಖಂಡಗಳನ್ನು ಕ್ರೇನ್ ಮುಂತಾದವುಗಳ ಸಹಾಯದಿಂದ ಮಗುವನ್ನು ಎತ್ತಿದಷ್ಟು ಹಗುರವಾಗಿ ಎಚ್ಚರಿಕೆಯಿಂದ ಸಾಗಿಸಬೇಕು; ಹೀಗೆ ಮಾಡುವಾಗ ಒಂದು ವಿಭಾಗದ ಸ್ಥಾನ ನಿರ್ದೇಶಕಗಳನ್ನು ಸೂಚಿಸುವ ಸ್ಪಷ್ಟ ಸಂಕೇತಗಳು ಅದರ ಮೇಲೆ ನಿರೂಪಿತವಾಗಿರಬೇಕು; ಈ ಕೊಯ್ತ ಸ್ಥಳಾಂತರ ಮುಗಿದ ಮೇಲೆ ಕೆಳಗಿನಿಂದ ಮೇಲಕ್ಕೆ ಶಿಲಾಖಂಡಗಳನ್ನು ಕ್ರಮಬದ್ಧವಾಗಿ ಜೋಡಿಸಿ ಅಬು ಸಿಂಬೆಲ್ ಪುನರ್ರಚನೆಯನ್ನು ಪೂರ್ಣಗೊಳಿಸಬೇಕು. ಈ ಯೋಜನೆಯ ಪ್ರಕಾರ ಎರಡು ದೇವಾಲಯಗಳನ್ನು ಕೊಯ್ದು ಒಟ್ಟಿದ್ದಾಗ ಅವು 950 ವಿಭಿನ್ನ ಶಿಲಾಖಂಡಗಳ ಅಪೂರ್ವ ಮೇಳವಾಗಿದ್ದವು. ದೇವಾಲಯಗಳ ಹೊಸ ನಿವೇಶನ ಪೂರ್ವ ಸ್ಥಾನದಿಂದ 63–60ಮೀ ಎತ್ತರದಲ್ಲಿಯೂ ನದಿದಂಡೆಯಿಂದ 207ಮೀ ದೂರದಲ್ಲಿಯೂ ಇದೆ.

ರ‍್ಯಾಮ್ಸೆಸ್ ವಿಗ್ರಹದ ಮುಖದ ಖಂಡದ ಭಾರ 19 ಟನ್. 1964ರಲ್ಲಿ ಪ್ರಾರಂಭವಾದ ಈ ಪರಮ ತಾಂತ್ರಿಕ ಸಾಹಸ ಆಸ್ವಾನ್ ಜಲಾಶಯದ ಮಟ್ಟ ಏರುತ್ತಿದ್ದಂತೆ ಅನುರೂಪ ವೇಗದಿಂದ ಮುಂದುವರಿದು 1969ರ ಹೊತ್ತಿಗೆ ಪೂರ್ಣ ಯಶಸ್ವಿಯಾಯಿತು. ಖರ್ಚು ಆಗ 50 ಮಿಲಿಯನ್ ಡಾಲರ್‌ಗಿಂತಲೂ ಹೆಚ್ಚು ವ್ಯಯವಾಯಿತು. ಈ ಸ್ಥಳಾಂತರದಿಂದ ರ‍್ಯಾಮ್ಸೆಸ್‌ಗೆ ಆಗಿರುವ ಗಾಯಗಳನ್ನು ಗುಣಪಡಿಸಬಹುದೇ ಎಂಬ ಪ್ರಶ್ನೆಗೆ ವಾಸ್ತುಶಿಲ್ಪಜ್ಞರೊಬ್ಬರ ಉತ್ತರವಿದು: “ರಾಜನ ಗಾಯಗಳನ್ನು ಗುಣಪಡಿಸುತ್ತೇನೆ. ಜೋಡಣೆ ಗಾಯಗಳನ್ನು ಮಾಯಿಸುವುದು ಮಾತ್ರವಲ್ಲ ಮಾಯಗೊಳಿಸುವುದೂ ಸಾಧ್ಯವಿದೆ. ಆದರೆ ಇದು ಪ್ರಾಮಾಣಿಕ ಕ್ರಮವೇ” ಉದಯರವಿಕಿರಣಗಳಿಂದ ಪುನಃ ನಗು ಬಿಂಬಿಸುತ್ತಿರುವ ರ‍್ಯಾಮ್ಸೆಸ್ ವಿಗ್ರಹ ನೈಲ್ ಜಲಾಶಯದ ಮಹಾವಿಸ್ತಾರದ ಚಿರಸಂಕೇತವಾಗಿದೆ. *

**ಅಬ್ಬಕ್ಕ:** 16ನೆಯ ಶತಮಾನದ ಮಧ್ಯಭಾಗದಲ್ಲಿ ಆಳುತ್ತಿದ್ದ ವೀರರಾಣಿ. ಪುತ್ತಿಗೆಯ ಚೌಟ ಅರಸು ಮನೆತನದ ಒಂದು ಶಾಖೆಯ ಅರಸರು ಉಲ್ಲಾಳದಿಂದ ಆಳುತ್ತಿದ್ದರು. ಈಕೆಗೆ ಬುಕಾದೇವಿ (ಬುಕ್ಕಾದೇವಿ) ಎಂದೂ ಹೆಸರಿದ್ದಂತೆ ಪೋರ್ಚುಗೀಸರ ದಾಖಲೆಗಳಿಂದ ತಿಳಿಯುತ್ತದೆ. ಚಿಕ್ಕರಾಜ್ಯವೊಂದರ ಅಧಿಪತಿಯಾಗಿದ್ದರೂ ವಿದೇಶಿಯರ ಬಲವನ್ನು ಮುರಿಯಲು ಸರ್ವಪ್ರಯತ್ನ ಮಾಡಿದ ಇವಳು ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದಳು.

ಈಕೆ ಬಂಗರಾಜನೊಬ್ಬನನ್ನು ಮದುವೆಯಾಗಿದ್ದಳು. ಆತ ಪೋರ್ಚುಗೀಸರ ಪಕ್ಷ ವಹಿಸಿದ್ದ ಕಾರಣ ಈಕೆ ಮಲಬಾರಿನ ಹಲವು ಅರಸುಗಳೊಡನೆ ಸ್ನೇಹ ಬೆಳೆಸಿ ಪೋರ್ಚುಗೀಸರ ವಿರುದ್ಧ ನಿಂತಳು. ಪೋರ್ಚುಗೀಸರು ಇವಳ ಸಹಾಯಕನಾಗಿದ್ದ ಕಣ್ಣಾನೂರಿನ ಅರಸನ ವಿರುದ್ಧ ಸೆಣಸಿದಾಗ ಈಕೆ ಪೋರ್ಚುಗೀಸರಿಗೆ ಕೊಡಬೇಕಾಗಿದ್ದ ಕಪ್ಪವನ್ನು ತಡೆಹಿಡಿದಳು. 1555ರಲ್ಲಿ ಪೋರ್ಚುಗೀಸ್ ನೌಕಾಧಿಕಾರಿ ದೋಮ್ ಆಳ್ವಾರೆಸ್ ದ ಸಿಲ್ವೀರಾ ಮಂಗಳೂರನ್ನು ಆಕ್ರಮಿಸಿಕೊಳ್ಳಲು 21 ಹಡಗುಗಳ ಭಾರಿ ಪಡೆಯೊಡನೆ ಬಂದಾಗ ಈಕೆ ವೀರಾವೇಶದಿಂದ ಹೋರಾಡಿದಳು. ಕೊನೆಗೆ ಕಲ್ಲಿಕೋಟೆಯ ಜಾಮೋರಿನ್ ಪ್ರವೇಶಿಸಿ, ಅವರ ನಡುವೆ ರಾಜಿ ಮಾಡಿಸಿದ. 3 ವರ್ಷಗಳ ಅನಂತರ ಇವಳು ಮತ್ತೊಮ್ಮೆ ಕಣ್ಣಾನೂರಿನ ರಾಜನ ಪಕ್ಷ ವಹಿಸಿ ಪೋರ್ಚುಗೀಸರೊಡನೆ ನೌಕಾಯುದ್ಧ ಹೂಡಿದಳು. ಆಗ ರಾಣಿ ನಷ್ಟವನ್ನನುಭವಿಸಿದರೂ (1555) ಮತ್ತೊಮ್ಮೆ 1566ರಲ್ಲಿ ನಡೆದ ಯುದ್ಧದಲ್ಲಿ ರಾಣಿಯದೇ ಮೇಲ್ಗೈಯಾಯಿತು. ಪೋರ್ಚುಗೀಸ್ ಗವರ್ನರನಾಗಿದ್ದ ಪೀಕ್ಸೋಟ್ ಈ ಯುದ್ಧದಲ್ಲಿ ಜೀವತೆತ್ತ. ಪುನಃ 1567ರಲ್ಲಿ ಪೋರ್ಚುಗೀಸರು ಅಗಾಧ ಸೈನ್ಯದೊಡನೆ ಬಂದರು. ಮೊದಲು ಅರಬ್ಬರ ಅನಿರೀಕ್ಷಿತ ಧಾಳಿಗಳಿಂದ ಪೋರ್ಚುಗೀಸರು ನಲುಗಿದರೂ ಕೊನೆಗೆ ಮಂಗಳೂರು, ಉಲ್ಲಾಳ ಅವರ ಕೈವಶವಾದವು. ರಾಣಿ ತಲೆಮರೆಸಿಕೊಂಡಳು ಎಂಬುದು ಪೋರ್ಚುಗೀಸನೊಬ್ಬನ ಹೇಳಿಕೆ.

ಪ್ರಾಯಶಃ ಈಕೆಯ ಮಗಳಾದ ಇನ್ನೊಬ್ಬ ಅಬ್ಬಕ್ಕದೇವಿಯೂ ಸಾಹಸಿಯಾಗಿದ್ದಳು. ಈಕೆ ಬಂಗದೊರೆ ವೀರನರಸಿಂಹಲಕ್ಷ್ಮಪ್ಪರಸನ ಹೆಂಡತಿಯಾಗಿದ್ದಳು. ಇವಳೂ ಪೋರ್ಚುಗೀಸರ ವಿರುದ್ಧ ನಿಂತುದಲ್ಲದೆ, ಬಿದನೂರಿನ ವೆಂಕಟಪ್ಪನಾಯಕನ ಸಹಾಯ ಪಡೆದು ಪೋರ್ಚುಗೀಸರನ್ನು ಸೋಲಿಸಿದ್ದಂತೆ ತಿಳಿಯುತ್ತದೆ. ಈ ಘಟನೆ ನಡೆದದ್ದು 1618ರಲ್ಲಿ. 1623ರಲ್ಲಿ ಮಂಗಳೂರಿಗೆ ಬಂದಿದ್ದ ಇಟಲಿಯ ಪ್ರವಾಸಿ ಪಿಯತ್ರೊ ಡೆಲ್ಲಾವೆಲ್ಲ ಈಕೆಯ ಅಸಾಧಾರಣ ಧೈರ್ಯವನ್ನು ಮನಃಪೂರ್ವಕವಾಗಿ ಹೊಗಳಿದ್ದಾನೆ. (ವಿ.ಜಿ.ಕೆ.)

**ಅಬ್ದುಲ್ ಖಾದಿರ್ ಬದೌನಿ:** ಮೊಗಲ್ ಕಾಲದ ಹೆಸರಾಂತ ಇತಿಹಾಸ ಬರೆಹಗಾರ. ಇವನನ್ನು ಸಾಮಾನ್ಯವಾಗಿ ಮುಲ್ಲ ಅಬ್ದುಲ್ ಖಾದಿರ್ ಬದೌನಿ ಎಂದು ಕರೆಯುತ್ತಾರೆ. ಮೊಗಲ್ ಇತಿಹಾಸದ ದೃಷ್ಟಿಯಿಂದ ಅಬುಲ್ ಫಜಲ್‌ನ ಬರೆವಣಿಗೆಗಳು ಹಾಗೂ ಅಬ್ದುಲ್ ಖಾದಿರ್ ಬದೌನಿಯ ಬರೆವಣಿಗೆಗಳು ಬಹಳ ಮುಖ್ಯವೆನಿಸುತ್ತವೆ. ಅಬುಲ್‌ಫಜಲ್ ಅಕ್ಬರನ ಗೆಳೆಯನಾಗಿದ್ದು ಅವನ ಪರವಾಗಿ ಬರೆದಿದ್ದಾನೆ. ಆ ಕಾಲದಲ್ಲಿ ಅಬುಲ್ ಫಜಲ್‌ನಿಗಿಂತ ಹೆಚ್ಚು ಕ್ರಿಯಾಶೀಲ ಮತ್ತು ವಿಮರ್ಶಕನೆಂದು ಪ್ರಸಿದ್ಧನಾಗಿದ್ದವನು ಅಬ್ದುಲ್ ಖಾದಿರ್ ಬದೌನಿ. ಇವನು 1540ರಲ್ಲಿ ಜನಿಸಿದ. ಈತ ಮೊದಲಿಗೆ ಷೇಕ್ ಹಕೀಮ್ ಬಳಿ ವಿದ್ಯಾಭ್ಯಾಸ ಮಾಡಿದ. ಅನಂತರ ಆ ಕಾಲದ ವಿಚಾರವಾದಿ ಎಂದು ಹೆಸರು ಪಡೆದಿದ್ದ ಷೇಕ್ ಮುಬಾರಕನ ಬಳಿ ವ್ಯಾಸಂಗ ಮಾಡಿದ. ಷೇಕ್ ಮುಬಾರಕನ ಪುತ್ರರೇ ಅಬುಲ್ ಫೈಜಿ ಹಾಗೂ ಅಬುಲ್ ಫಜಲ್. ಈ ತಂದೆ ಮಕ್ಕಳು ಅಂದಿನ ಕಾಲದಲ್ಲಿ ತಮ್ಮ ಮನೋವೈಶಾಲ್ಯತೆಯಿಂದ ಬಹಳ ಪ್ರಸಿದ್ಧರಾಗಿದ್ದು ಅಂದಿನ ಉದಾರವಾದಿ ಚಿಂತನೆಗೆ ಹೆಸರಾಗಿದ್ದರು. ಆದರೆ ಬದೌನಿ ಸಾಂಪ್ರದಾಯಿಕತೆಗೆ ಹೊಂದಿಕೊಂಡಿದ್ದನೆಂದು ಅವನು ಪಡೆದಿರುವ ಮುಲ್ಲ ಎಂಬ ಹೆಸರಿನಿಂದ ತಿಳಿಯುತ್ತದೆ. 1574ರಲ್ಲಿ ಈತನು ಅಕ್ಬರನ ಆಸ್ಥಾನ ಸೇರಿದ. ಅಕ್ಬರ್ ಈತನ ವಿಶಿಷ್ಟ ಹಾಗೂ ಅಪರೂಪದ ಪಾಂಡಿತ್ಯವನ್ನು ಗುರುತಿಸಿ ಈತನಿಗೆ ಇಮಾಮ್ ಹುದ್ದೆ ನೀಡಿ ಜೀವನೋಪಾಯಕ್ಕೆ ಒಂದು ಸಾವಿರ ಬಿಘಾ ಭೂಮಿ ನೀಡಿದ. ಅಕ್ಬರ್ ಈತನ ತಾತ್ತ್ವಿಕ ಚಿಂತನೆಯಿಂದ ತುಂಬ ಪ್ರಭಾವಿತಗೊಂಡಿದ್ದ. ಆದರೆ ಅಕ್ಬರನ ಆಸ್ಥಾನದಲ್ಲಿ ಅಬುಲ್ ಫಜಲ್‌ನ ಏಳಿಗೆಯಿಂದ ಇವನು ಅಸೂಯೆಗೊಂಡಿದ್ದ. ಆದ್ದರಿಂದ ಈತ ತನ್ನ ಕೃತಿ ‘ಮಂತ್‌ಕಾಬ್–ಎಲ್–ತಾವರಿಖ್’ ಅಥವಾ ‘ತಾರೀಖ್–ಇ–ಬದೌನಿ’ ಯಲ್ಲಿ ಅಕ್ಬರ್‌ನ ವಿರುದ್ಧ ಹಲವಾರು ಟೀಕೆಗಳಿವೆ. ಅವನು ಹೇಳುವುದೊಂದು ಮಾಡುವುದು ಇನ್ನೊಂದು ಎಂದು ತೀವ್ರವಾಗಿ ಟೀಕಿಸಿದ್ದಾನೆ. ಅಕ್ಬರನ ಧಾರ್ಮಿಕ ನೀತಿಯಾದ ದೀನ್–ಇ–ಇಲಾಹಿ, ರತಪೂತ ನೀತಿ ಮತ್ತು ಉದಾರನೀತಿಗಳನ್ನು ಟೀಕಿಸಿದ್ದಾನೆ. ಈತ ಆ ಕಾಲದ ಶ್ರೇಷ್ಠ ತಾತ್ತ್ವಿಕ ಚಿಂತಕರಾದ ಅಬ್ದುಲ್ ಫೈಜಿ ಹಾಗೂ ಅಬುಲ್ ಫಜಲ್‌ನನ್ನು ದ್ವೇಷಿಸುತ್ತಿದ್ದ. ಅಕ್ಬರ್ ಇತರ ಧರ್ಮದ ತತ್ತ್ವಜ್ಞಾನಿಗಳಿಗೆ ನೀಡಿದ ಆಶ್ರಯವನ್ನೂ ಈತ ಟೀಕಿಸಿದ್ದ. ಬದೌನಿ ತನ್ನ ಕೃತಿಯಲ್ಲಿ ಅಕ್ಬರ್‌ನೊಂದಿಗಿದ್ದ ಕೆಲವು ರಜಪೂತ ಅಧಿಕಾರಿಗಳಾದ ರಾಜ ಭಗವಾನ್ ದಾಸ್, ರಾಜ ತೋದರ್‌ಮಲ್ಲ ಮತ್ತು ಮಾನಸಿಂಗರನ್ನು ಕೂಡ ಟೀಕಿಸಿದ್ದಾನೆ.

ಅಕ್ಬರ್‌ನ ದೃಷ್ಟಿಗೆ ಬಿದ್ದ ಹೆಂಗಸು ಅವನ ವಶವಾಗುತ್ತಿದ್ದಳು. ಒಂದು ವೇಳೆ ಅವಳು ವಿವಾಹಿತೆಯಾಗಿದ್ದರೆ ವಿಚ್ಛೇದನ ಪಡೆದು ಅವನ ಜನಾನಾ ಸೇರಬೇಕಿತ್ತು ಎಂದು ಬದೌನಿ ಬರೆದಿದ್ದಾನೆ. ಈತ 1555–56ರ ಕ್ಷಾಮದ ಬಗ್ಗೆ ಬರೆಯುತ್ತ ಜನರು ಹೊಟ್ಟೆಗೆ ಇಲ್ಲದೆ ಕಂಗಾಲಾಗಿದ್ದರು. ಬರಗಾಲದಿಂದ ದೇಶವೆಲ್ಲ ಬರಿದಾಯಿತು. ಹೊಲ ಉಳಲು ರೈತರೆ ಇಲ್ಲ ಎಂದು ಹೇಳಿದ್ದಾನೆ. ತೋದರಮಲ್ಲನ ಕಂದಾಯ ವ್ಯವಸ್ಥೆ ಖಜಾನೆ ತುಂಬಲು ಜನರ ರಕ್ತ ಹೀರುವ ಕುಯುಕ್ತಿಯಾಗಿತ್ತು ಎಂದಿದ್ದಾನೆ. ಕಂದಾಯ ಕೊಡಲಾಗದವರು ತಮ್ಮ ಹೆಂಡತಿ ಮಕ್ಕಳನ್ನು ಮಾರಬೇಕಿತ್ತು ಎಂದು ವರ್ಣಿಸಿದ್ದಾನೆ. ಈತ ಮಾನಸಿಂಗನನ್ನು ಅಕ್ಬರ್‌ಗೆ ಸೈನ್ಯವನ್ನು ಪೂರೈಸುವ ದಳ್ಳಾಳಿ ಎಂದು ಕರೆದಿದ್ದಾನೆ. ಈ ಎಲ್ಲ ಟೀಕೆಗಳಿಂದಾಗಿ ಅಬ್ದುಲ್ ಖಾದಿರ್ ಬದೌನಿಯ ಕೃತಿಯನ್ನು ಅಕ್ಬರನ ಕಾಲದಲ್ಲಿ ಪ್ರಕಟಿಸಲು ಸಾಧ್ಯವಾಗಿಲ್ಲವೆಂದು ಕಾಣಿಸುತ್ತದೆ. ಆ ಗ್ರಂಥ ಅನಂತರ ಜಹಂಗೀರನ ಕಾಲದಲ್ಲಿ ಪ್ರಕಟಗೊಂಡಿದೆ. ಒಟ್ಟಿನಲ್ಲಿ ಇವನ ಚಿಂತನೆ ಆ ಕಾಲದ ಚಿಂತನೆಗಿಂತ ವಿಭಿನ್ನವಾಗಿತ್ತು. ಇದು ಬರೆಹಗಾರನಾಗಿ ಇವನ ಧೈರ್ಯ ಸಾಹಸವನ್ನು ತೋರಿಸುವಂತಿದೆ. (ಎನ್.ವೈ.ಎಚ್.)

**ಅಬ್ದುಲ್ ರಜ್ಜಾಕ್:** ಇಮ್ಮಡಿ ದೇವರಾಯನ ಆಳಿಕೆಯಲ್ಲಿ ಈತ ಪರ್ಷಿಯ ದೇಶದಿಂದ ರಾಯಭಾರಿಯಾಗಿ ವಿಜಯನಗರಕ್ಕೆ ಬಂದು (1443) ಅಲ್ಲಿ 7 ತಿಂಗಳು ಇದ್ದು ವೈಭವಪೂರ್ಣವಾಗಿದ್ದ ವಿಜಯನಗರ ಸಾಮ್ರಾಜ್ಯದ ಬಗ್ಗೆ ಕಣ್ಣಾರೆ ಕಂಡು ಕಿವಿಯಾರೆ ಕೇಳಿದ ಸಂಗತಿಗಳನ್ನು ಬರೆದಿಟ್ಟಿದ್ದಾನೆ. ಚಾರಿತ್ರಿಕ ದೃಷ್ಟಿಯಿಂದ ಇವನ ಬರೆವಣಿಗೆ ಬಹು ಉಪಯುಕ್ತವಾಗಿದೆ. ವಿಜಯನಗರ ಪಟ್ಟಣ ಅತಿ ವಿಸ್ತಾರವೂ ಸುಭದ್ರವೂ ಸೇನಾಬಲದಿಂದ ಸುಸಜ್ಜಿತವೂ ಸುಖಸೌಲಭ್ಯಗಳಿಂದ ಕೂಡಿದುದೂ ಆಗಿದ್ದು, ಅಲ್ಲಿಯ ವಿಶಾಲವಾದ ಅಂಗಡಿಬೀದಿಗಳಲ್ಲಿ ಮುತ್ತು ರತ್ನಗಳ ಮುಕ್ತವ್ಯಾಪಾರ ನಡೆಯುತ್ತಿತ್ತೆಂದು ಆತ ವರ್ಣಿಸಿದ್ದಾನೆ. (ಪಿ.ಬಿ.ಡಿ.)

**ಅಮರಾವತಿ:** ಆಂಧ್ರಪ್ರದೇಶ ರಾಜ್ಯದ ಗುಂಟೂರು ಜಿಲ್ಲೆಯ ಸತ್ತೇನಪಲ್ಲಿ ತಾಲ್ಲೂಕಿಗೆ ಸೇರಿದಂತೆ ಕೃಷ್ಣಾ ನದಿಯ ದಂಡೆಯ ಮೇಲಿರುವ ಐತಿಹಾಸಿಕ ಸ್ಥಳ. ಧಾನ್ಯಕಟಕ ಇದರ ಹಳೆಯ ಹೆಸರು. ಹಿಂದೆ ಇದು ಸಾತವಾಹನರ ರಾಜಧಾನಿಯಾಗಿತ್ತು. 10ನೆಯ ಶತಮಾನದ ಸುಮಾರಿಗೆ ಇಲ್ಲಿನ ಅಮರೇಶ್ವರ ದೇವಾಲಯ ಪ್ರಸಿದ್ಧವಾಗಿತ್ತು. ಇಲ್ಲಿ ನಡೆಯುವ ಶಿವರಾತ್ರಿ ಉತ್ಸವ ಬಹಳ ವೈಭವಪೂರಿತವಾಗಿರುತ್ತದೆ. ಬೌದ್ಧಸ್ತೂಪದ ಕಲಾಕುಶಲತೆ ಈ ಸ್ಥಳ ಪ್ರಸಿದ್ಧಿಗೆ ಕಾರಣವಾಗಿದೆ. ಪ್ರ.ಶ.ಪೂ ಕೆಲವು ದಶಕಗಳಲ್ಲೇ ಆರಂಭವಾಗಿ ಪ್ರ.ಶ.4ನೆಯ ಶತಮಾನದವರೆಗೂ ಇಲ್ಲಿನ ವಿಹಾರಗಳ ಸ್ತೂಪದ ನಿರ್ಮಾಣ ನಡೆಯಿತು. ಆಂಧ್ರ ಸಾತವಾಹನ ರಾಜರು ಮಹಾಯಾನ ಬೌದ್ಧಧರ್ಮವನ್ನು ಪ್ರೋತ್ಸಾಹಿಸಿ ಇಲ್ಲಿ ಚೈತ್ಯಗಳನ್ನೂ ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟಿಸಿದರು. ಇಲ್ಲಿಯ ಸ್ತೂಪಶಿಲ್ಪಗಳು ಪ್ರಪಂಚಖ್ಯಾತವಾಗಿವೆ; ಬುದ್ಧನ ಜಾತಕಕಥೆಗಳಿಂದಲೂ ಜೀವಿತ ವೃತ್ತಾಂತಗಳಿಂದಲೂ ವಿವರಗಳನ್ನು ಆಯ್ದುಕೊಂಡು ಶಿಲ್ಪಿಗಳು ಇಲ್ಲಿ ರಮಣೀಯವಾದ ಶಿಲ್ಪಗಳನ್ನು ಕಡೆದಿದ್ದಾರೆ. (ಎಸ್.ಕೆ.ಆರ್.)

ಕರ್ನಲ್ ಮೆಕೆನ್ಜಿ ಅಮರಾವತಿ ವಾಸ್ತುಶಿಲ್ಪವನ್ನು ಬೆಳಕಿಗೆ ತಂದ (1898). ಇದು ಭಾರತೀಯ ವಾಸ್ತುಶಿಲ್ಪ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿತು. ಶಿಲ್ಪಕಲಾಕೃತಿ ಬಹುಭಾಗ ಈಗ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ಚೆನ್ನೈನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲೂ ಸಾಕಷ್ಟು ಕಲಾಕೃತಿಗಳಿವೆ.

ಇಲ್ಲಿನ ಮುಖ್ಯ ವಾಸ್ತುಕೃತಿಯೆಂದರೆ ಮಹಾಸ್ತೂಪ. ಇಲ್ಲಿನ ಸ್ತೂಪಗಳು ಸಾಂಚಿ ಮತ್ತು ಬಾರ್ಹುತ್‌ನಲ್ಲಿರುವ ಸ್ತೂಪಗಳಿಗಿಂತ ಕೆಲವು ವಿಷಯಗಳಲ್ಲಿ ಭಿನ್ನವಾಗಿದ್ದು, ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿದ್ದವು. ಇಲ್ಲಿನ ಸ್ತೂಪ ಪ್ರ.ಶ.ಪೂ.1ನೆಯ ಶತಮಾನದಿಂದ

ಪ್ರ.ಶ. ಆರಂಭದಿಂದ 3ನೆಯ ಶತಮಾನದವರೆಗೆ ನಾಲ್ಕು ಹಂತಗಳಲ್ಲಿ ಬೆಳೆಯಿತೆಂದು ಹೇಳಬಹುದು. ಈ ಸ್ತೂಪ ಈ ಶತಮಾನಕ್ಕೆ ಸಾಮಾನ್ಯವಾದ ಅಲಂಕಾರದಿಂದ ಭೂಷಿತವಾಗಿ ಭಾರತದ ಅತ್ಯುತ್ತಮ ಸ್ತೂಪಗಳಲ್ಲಿ ಒಂದೆನಿಸಿಕೊಂಡಿತ್ತು. ನಶಿಸಿಹೋಗಿದ್ದರೂ ಇದರ ಭವ್ಯತೆಯನ್ನು ಈಗಲೂ ಊಹಿಸಬಹುದು. ಇದರ ವ್ಯಾಸ 48.50 ಮೀ, ಎತ್ತರ ಸು.36 ಮೀ. ಈ ಬೃಹತ್ ಸ್ತೂಪ ಬಿಳಿಯ ಸುಣ್ಣಶಿಲೆಯ ಶಿಲ್ಪಫಲಕಗಳಿಂದ ಆಚ್ಛಾದಿತವಾಗಿತ್ತು. ನಾಲ್ಕು ದಿಕ್ಕುಗಳಲ್ಲೂ 5 ಆಯಕ ಸ್ತಂಭಗಳಿದ್ದು ಇವು ಇದರ ವಿಶಿಷ್ಟ ಲಕ್ಷಣವಾಗಿತ್ತು. ಅಂಡದ ಮೇಲೆ ಚೌಕ ಹರ್ಮಿಕೆಯೂ ಅದರ ಮೇಲೆ ಛತ್ರಿಯೂ ಇದ್ದುವು.

ಸ್ತೂಪ ಚಿತ್ರಫಲಕ

ಈ ಸ್ತೂಪವನ್ನು ಅಲಂಕರಿಸಿದ್ದ ಶಿಲ್ಪಫಲಕಗಳೇ ಪ್ರಾಚೀನ ಆಂಧ್ರ ಕಲಾಕಾರರ ಮಹಾಕೃತಿಗಳು. ಈ ಶಿಲ್ಪಫಲಕಗಳಲ್ಲಿ ಜಾತಕ ಮತ್ತು ಅವದಾನದ ಕಥೆಗಳು ಮತ್ತು ಬುದ್ಧನ ಜೀವನಕ್ಕೆ ಸಂಬಂಧಿಸಿದ ಘಟನೆಗಳು ಕೆತ್ತಲ್ಪಟ್ಟಿವೆ. ಇಲ್ಲಿ ದೊರಕಿರುವಷ್ಟು ಕೆಲವು ಜಾತಕ ಕಥಾಶಿಲ್ಪಗಳು ಮತ್ತೆಲ್ಲೂ ದೊರಕಿಲ್ಲವೆಂದೇ ಹೇಳಬಹುದು. ಇವುಗಳಲ್ಲಿ ಷಡ್ದಂತ, ಹಂಸ, ವಿಧುರಪಂಡಿತ, ಮಾಂಧಾತ ಮುಂತಾದ ಜಾತಕಗಳು ಗಮನಾರ್ಹವಾದುವು. ಇಲ್ಲಿಯ ಶಿಲ್ಪಗಳು ಸ್ತ್ರೀಸೌಂದರ್ಯವನ್ನು ನಯನಮನೋಹರವಾಗಿ ತೋರಿಸುತ್ತವೆ. ನಾಲ್ಕು ಸ್ತ್ರೀಯರು ಬುದ್ಧಪಾದವನ್ನು ಪೂಜಿಸುತ್ತಿರುವ ಶಿಲ್ಪಫಲಕದಲ್ಲಿ ಸುಂದರ ಸ್ತ್ರೀಯರ ನಯವಾದ ಮತ್ತು ಸಹಜವಾದ ಅಂಗವಿನ್ಯಾಸಗಳು ಬಹು ಚೆನ್ನಾಗಿ ರೂಪುಗೊಂಡಿವೆ. ಇಲ್ಲಿ ಸ್ತ್ರೀಯರ ಅಂಗಸೌಷ್ಠವ ಆಕರ್ಷಕವಾದರೂ ಶೃಂಗಾರಕ್ಕೆಡೆಗೊಡುವಂತಿಲ್ಲ. ಅವರೆಲ್ಲರೂ ಬೌದ್ಧಧರ್ಮದಿಂದ ಚೇತನಗೊಂಡ ವ್ಯಕ್ತಿಗಳಾಗಿ ಕಂಗೊಳಿಸುತ್ತಿದ್ದಾರೆ. ಪ್ರಾಣಿಶಿಲ್ಪಗಳು ಸಹಜವಾಗಿ ಬಂದಿರುವುದು ಇಲ್ಲಿಯ ಶಿಲ್ಪದ ಮತ್ತೊಂದು ವೈಶಿಷ್ಟ್ಯ. ನಳಗಿರಿ ಎಂಬ ಆನೆ ಕೋಪಾವಿಷ್ಟವಾಗಿ ಜನರಲ್ಲಿ ಭೀತಿಯನ್ನುಂಟುಮಾಡಿ, ಬುದ್ಧನ ದರ್ಶನವಾದಕೂಡಲೇ ಸೌಮ್ಯವಾಗಿ, ಬುದ್ಧನ ಪಾದದಡಿಯಲ್ಲಿ ಮುದುರಿಕೊಂಡು ನಿಂತಿರುವ ಘಟನೆ ಒಂದು ಮಹಾಕೃತಿ. ಅಮರಾವತಿಯಲ್ಲಿ ಮೊದಲು ಹೀನಯಾನಧರ್ಮದ ಪ್ರಕಾರ ಬುದ್ಧನ ಪಾದ, ಬೋಧಿವೃಕ್ಷ, ಸಿಂಹಾಸನ ಮುಂತಾದ ಸಂಕೇತಗಳೇ ಬುದ್ಧನನ್ನು ಸೂಚಿಸುತ್ತಿದ್ದುವು. 2ನೆಯ ಶತಮಾನದ ಅನಂತರ ಗಾಂಧಾರ ಮತ್ತು ಮಥುರಾಶಿಲ್ಪಗಳಿಂದ ಪ್ರಭಾವಿತಗೊಂಡು ಅಮರಾವತಿಯಲ್ಲೂ ಬುದ್ಧ ವಿಗ್ರಹಗಳು ನಿರ್ಮಾಣವಾದುವು. ಸಾಂಪ್ರದಾಯಿಕವಾದ ಮತ್ತು ಮಹಾಪುರುಷಲಕ್ಷಣಗಳನ್ನೊಳಗೊಂಡ ಬುದ್ಧ ವಿಗ್ರಹಗಳು ಅಮರಾವತಿಯ ಶಿಲ್ಪಗಳಿಂದಲೇ ಸ್ಪಷ್ಟಗೊಳಿಸಲ್ಪಟ್ಟವೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಅಪರೂಪವಾಗಿ 3–4ನೆಯ ಶತಮಾನದ ಶೈವ ವೈಷ್ಣವ ಶಿಲ್ಪಗಳು ಇಲ್ಲಿ ದೊರೆತಿವೆ. ಇವುಗಳಲ್ಲಿ ದ್ವಿಭುಜ ನರಸಿಂಹ ದೇವರ ಶಿಲ್ಪವು ಗಮನಾರ್ಹ. ಸಮಕಾಲೀನ ಗಾಂಧಾರ ಶಿಲ್ಪ ಶೈಲಿಯ ಪ್ರಭಾವ ಸ್ವಲ್ಪ ಮಟ್ಟಿಗೆ ಇಲ್ಲಿಯ ಮತ್ತು ಸುತ್ತಮುತ್ತಲಿನ ಬೌದ್ಧ ಹಾಗೂ ಇತರ ಶಿಲ್ಪಗಳಲ್ಲಿ ಕಾಣಿಸಿ ಕೊಂಡರೂ ಇವುಗಳಲ್ಲಿಯ ವ್ಯಕ್ತಿಗಳ ಮೈಮಾಟ, ಭಾವ–ಭಂಗಿಗಳು ಕೆತ್ತನೆ ತಂತ್ರ ಗಾಂಧಾರ ಮತ್ತು ಮಥುರಾ ಶಿಲ್ಪಶೈಲಿಗಳಿಗಿಂತ ಸ್ಪಷ್ಟವಾಗಿ ಭಿನ್ನವಾಗಿದ್ದು ಈ ಪ್ರದೇಶದ ಶಿಲ್ಪಶೈಲಿಯನ್ನು ಅಮರಾವತಿ ಶೈಲಿಯೆಂದೇ ಗುರುತಿಸಲಾಗಿದೆ.

ಈ ಮಹಾಸ್ತೂಪದ ನೆಲೆಯಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ (ಹೈದರಾಬಾದ್ ವೃತ್ತ) ಉತ್ಖನನವನ್ನು ನಡೆಸಿ ಈ ಮಹಾಸ್ತೂಪದ ಮೂಲ ನಿರ್ಮಾಣ ಅಶೋಕನ ಕಾಲದಲ್ಲಿಯೆ ಆಯಿತೆಂದೂ ಇದರ ಸಮೀಪದಲ್ಲಿ ಆತನ ಅಶೋಕ ಸ್ತಂಭದ ಭಗ್ನಾವಶೇಷವಿದೆಯೆಂದು ತಿಳಿದುಬಂದಿದೆ. (ಎ.ಎಸ್.)

ಅಮರಾವತಿಯ ಸಮೀಪದಲ್ಲಿರುವ ಘಂಟಸಾಲ, ಗೋಲಿ, ಭಟ್ಟಿಪ್ರೋಲು, ಜಗ್ಗಯ್ಯಪೇಟ, ಗುಡಿವಾಡ ಮುಂತಾದ ಕಡೆಗಳಲ್ಲಿರುವ ಶಿಲ್ಪಗಳು ಅಮರಾವತಿಯ ಮಾದರಿಯಲ್ಲೇ ಇರುವುದರಿಂದ ಇವೆಲ್ಲವೂ ಆ ಶಿಲ್ಪಶೈಲಿಗೆ ಸೇರಿದುವೆಂದು ಹೇಳಬಹುದು. ಇಷ್ಟೇ ಅಲ್ಲದೆ, ಅಮರಾವತಿ ಶಿಲ್ಪಗಳು, ಭಾರತದ ಗಡಿಯನ್ನು ದಾಟಿ, ಆಗ್ನೇಯ ಏಷ್ಯದ ರಾಜ್ಯಗಳಲ್ಲೂ ದೊರಕಿವೆ. ಚಂಪಾರಾಜ್ಯದ ಡಾಂಗ್ ಡುವಾಂಗ್, ಸುಮಾತ್ರದ್ವೀಪದ ಪ್ಯಾಲೆಂಬಂಗ್ ಮತ್ತು ಸೆಲಿಬೆಸ್‌ನ ಸೆಂಪಗ ಎಂಬ ಸ್ಥಳಗಳಲ್ಲಿ ಅಮರಾವತಿ ಶಿಲ್ಪಶೈಲಿಗೆ ಸೇರಿದ ಬುದ್ಧವಿಗ್ರಹಗಳು ದೊರಕಿವೆ. ಇವು ಅಮರಾವತಿಯ ಶಿಲ್ಪದ ಪ್ರಾಮುಖ್ಯ ಮತ್ತು ಜನಾನುರಾಗದ ಕುರುಹುಗಳು.

(ಎ.ವಿ.ಎನ್.)

**ಅಮೀರ್ ಖುಸ್ರು:** 1253–1325. ಭಾರತದ ಪ್ರಸಿದ್ಧ ಪಾರಸಿ ಕವಿ ಮತ್ತು ಇತಿಹಾಸಜ್ಞ, ಹಿಂದುಸ್ಥಾನದ ಗಿಳಿ, ಕವಿರಾಜನೆನೆಸಿಕೊಂಡ ಈತನ ಪೂರ್ಣ ಹೆಸರು ಅಮೀರ್ ನಸಿರ್ ಅಲ್‌ದಿನ್ ಅಬು ಅಲ್ ಹಸನ್ ಕುಸ್ರಾವ್ ಇಬ್ನ ಅಮೀರ್ ಸೈಫ್ ಅಲ್ದಿನ್ ಮಹಮುದ್ ದೀಲವಿ. ಭಾರತದ ಈ ಸೂಫಿ ಕವಿ ತನ್ನ ಬರೆವಣಿಗೆಯಲ್ಲಿ ಬಳಸಿರುವ ಭಾಷೆ ಪರ್ಷಿಯನ್. ತಂದೆ ಸರ್ಫ್ ಅಲ್ ದಿನ್ ಮಹಮುದ್ ಕುಶ್ ಪ್ರಾಂತದ ಖಾರಕೀತಯ್ಯನ್ ಲಚಿನ್ ಬುಡಕಟ್ಟಿನ ನಾಯಕ. ಮಂಗೋಲರು ಟ್ರಾನ್ಸಾಕ್ಸಿಯಾ ಮೇಲೆ ಧಾಳಿ ಮಾಡಿದಾಗ ಭಾರತಕ್ಕೆ ಬಂದು ನೆಲೆಸಿದ. ಅನಂತರ ಈತ ಇಮಾದ್ ಅಲ್ ಮುಲ್ಕ ಎಂಬಾತನ ಮಗಳನ್ನು ಮದುವೆಯಾದ. ಉತ್ತರ ಪ್ರದೇಶದ ಇಟಾ ಜಿಲ್ಲೆಯ ಪಾಟಿಯಾಲ ಎಂಬಲ್ಲಿ 1253ರಲ್ಲಿ ಅಮೀರ್ ಖುಸ್ರು ಜನಿಸಿದ. ಸ್ವ ಪ್ರತಿಭೆ ಹಾಗೂ ಕಾವ್ಯ ರಚನೆಯ ಸಾಮರ್ಥ್ಯ ದಿಂದಾಗಿ ದೆಹಲಿ ಸುಲ್ತಾನನ ಆಸ್ಥಾನ ಕವಿಯಾದ. ಒಮ್ಮೆ ಇವನ ತಂದೆ ಮೂರು ಮಕ್ಕಳನ್ನು ದೆಹಲಿಯ ಚಿಸ್ತಿ ಪಂಥದ ಸೂಫಿ ಸಂತ ಕವಿ ನಿಜಾಮ್ ಅಲ್‌ದಿನ್ ಅಪ್ಲುಯ ಬಳಿಗೆ ಕರೆದೊಯ್ದು. ಆ ಸಂತ ಅಮೀರ್ ಖುಸ್ರುವನ್ನು ಹರಸಿ ತನ್ನ ಪ್ರಿಯ ಶಿಷ್ಯನನ್ನಾಗಿ ಮಾಡಿಕೊಂಡ. ಖುಸ್ರುವಿನ ಬರೆಹಗಳಲ್ಲಿ ಈ ಗುರುವಿನ ಪ್ರಭಾವ ಎದ್ದು ಕಾಣುತ್ತದೆ. ಪರ್ಷಿಯನ್ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದ ಖುಸ್ರು ಅರೇಬಿಕ್, ಹಿಂದಿ ಹಾಗೂ ಸಂಸ್ಕೃತ ಭಾಷೆಗಳನ್ನು ಬಾಲ್ಯದಲ್ಲೆ ಕಲಿತಿದ್ದ. ಪರ್ಷಿಯನ್ ಪಂಡಿತ ಕವಿ ನಿಜಾಮಿಯವರ ಸಾಹಿತ್ಯ ಇವನ ಮೇಲೆ ಪ್ರಭಾವ ಬೀರಿತ್ತು. ಕವಿತೆ ಹಾಗೂ ಸಂಗೀತಶಾಸ್ತ್ರದ ಅಧ್ಯಯನ ಮಾಡಿ ಶ್ರೇಷ್ಠ ಕವಿ ಹಾಗೂ ಸಂಗೀತಗಾರನೆಂದು ಬಹುಬೇಗ ಪ್ರಸಿದ್ಧಿಯಾದ.

ಖುಸ್ರು ಅಭಿವೃದ್ಧಿಪಡಿಸಿದ್ದ ಸಿತಾರ್ ವಾದನವನ್ನು ಆ ಕಾಲದ ಪ್ರಸಿದ್ಧ ಸಂಗೀತ ವಿದ್ವಾಂಸರಾದ ರೂಡಕಿ ಹಾಗೂ ಫಾರೂಕಿ ದೆಹಲಿ ಸುಲ್ತಾನರ ಆಸ್ಥಾನದಲ್ಲಿ ನುಡಿಸುವ ಮೂಲಕ ಪ್ರಶಂಸೆಗಳಿಸುವಂತಾಯಿತು. ಷೇಕ್ ಮುಸ್ಲಿಮ್ ಅಲ್ ದಿನ್ ಸಾದಿ ಎಂಬಾತ ಖುಸ್ರುವನ್ನು ರಾಜಕುಮಾರ ಮಹಮ್ಮದ್‌ನ ಆಸ್ಥಾನಕ್ಕೆ ಪರಿಚಯಿಸಿದಾಗ ಈತನ ಖ್ಯಾತಿ ಉತ್ತುಂಗಕ್ಕೇರಿತು. ದೆಹಲಿ ಸುಲ್ತಾನರ ಆಸ್ಥಾನದಲ್ಲಿ ಗೌರವ ಸ್ಥಾನ ಪಡೆದುಕೊಂಡ ಖುಸ್ರುವಿನ ಸುತ್ತ ಸಾಹಿತಿಗಳು, ಸಂಗೀತಗಾರರು ಹಾಗೂ ಗೌರವಾನ್ವಿತರ ಬಳಗ ನೆರೆಯಿತು. ಗುರು ನಿಜಾಮುದ್ದೀನ್ ಚಿಸ್ತಿಯವರ ಜೊತೆ ಸೇರಿ ಖುಸ್ರು ಅನೇಕ ಸೂಫಿ ತತ್ವಗಳನ್ನು ಪ್ರಚಾರಕ್ಕೆ ತಂದ. ಸಂಪ್ರದಾಯ ಹಾಗೂ ದೈವಿಕತೆಯ ವೈಭವದ ಬಗೆಗೆ ಕ್ರಾಂತಿಕಾರಕ ಹೇಳಿಕೆಗಳನ್ನು ವ್ಯಕ್ತಪಡಿಸುತ್ತಿದ್ದ. ಸಂಗೀತ ಕುರಿತು ರಚಿಸಿರುವ ದಿವಾನ್ಸ್‌ಗಳಲ್ಲಿ ಅಲಂಕಾರ, ಉಪಮೆ, ನೈಸರ್ಗಿಕ ವರ್ಣನೆ, ಜನಸಾಮಾನ್ಯರ ಉತ್ಸಾಹಗಳಿಂದಾಗಿ ಇವನ ಕಾವ್ಯ ಸ್ವರ ಮಾಧುರ್ಯದಿಂದೊಡಗೂಡಿ ಹೃದಯಸ್ಪರ್ಶಿಯಾಗಿದೆ. ನುಡಿ ಬಂಧ ಶಾಯರಿ ಹಾಗೂ ಕಿರು ಕವಿತೆಗಳು ಜನಪ್ರಿಯವಾಗಿವೆ.

ಈತ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಈತನ ವೀರಕಾವ್ಯ ಕಾಮ್ಸೆ ಭಾರತ ಹಾಗೂ ಇರಾನಿಯನ್ನರ ಮೆಚ್ಚಿನ ಕಾದಂಬರಿ. ಸೂಫಿ ಸಂತ ನಿಜಾಮುದ್ದಿನ್ ಚಿಸ್ತಿಯ ಬೋಧನೆ ಕುರಿತ ಅಫ್ಜಲ್ ಅಲ್ ಫವೇಜ್ ಎಂಬ ಗ್ರಂಥ ಪರ್ಷಿಯದ ಪ್ರಸಿದ್ಧ ಕವಿ ಹಫೀಜ್‌ನಿಂದ ಪ್ರಶಂಸೆ ಪಡೆದಿದೆ.

ಭಾರತದ ಮುಸ್ಲಿಂ ಆಳಿಕೆಯಲ್ಲಿನ ಏಕೈಕ ಪರಿವರ್ತನಶೀಲ ಕವಿಯೆಂದು ಖುಸ್ರುವನ್ನು ಗುರುತಿಸಲಾಗುತ್ತದೆ. ಖಜಾಯಿನ್–ಅಲ್ ಪುತುಹ್ ಎಂಬ ಕೃತಿ ರಾಜ ಸುಲೈಮಾನ್ ಹಾಗೂ ರಾಣಿ ಶೆಭಾರವರ ಕುರಿತ ಪ್ರೇಮ ಕಥೆ. ಅಲಾ ಉದ್ದೀನ್ ಖಿಲ್ಜಿಯ ರಣತಂಬೂರ್ ಕದನ ಹಾಗೂ ಆರಂಭದ ದೆಹಲಿ ಸುಲ್ತಾನರ ಆಳಿಕೆಯ ಬಗೆಗೆ ಈತನ ಬರೆಹಗಳಿಂದ ಮಾಹಿತಿ ದೊರಕುತ್ತದೆ. ಈತ ಮೂರು ಗದ್ಯ ಕವನ ಸಂಗ್ರಹಗಳ ಬೃಹತ್ ಸಂಪುಟಗಳನ್ನು ರಚಿಸಿದ್ದಾನೆ. ಇವನು ರಚಿಸಿರುವ ಪಂಜ್‌ಗಂಗ್ (ಐದು ಭಂಡಾರ) ಎಂಬ ಗ್ರಂಥದಲ್ಲಿ ಐದು ಪ್ರಮುಖ ಅಂಶಗಳ ಮೇಲೆ ಸಾಹಿತ್ಯ ರಚನೆಯಾಗಿದೆ. ಮೊದಲ ಸಂಪುಟದಲ್ಲಿ ತಾಫಲ್ ಅಲ್ ಸಫೀರ್ ಎಂಬುದು ಯುವ ಜನತೆಯ ಕುರಿತ ಸಾಹಿತ್ಯ, ಷಟ್ಪದಿ, ಶಾಯರಿಯನ್ನು ಕುರಿತು ಬರೆದಿರುವ 16 ರಿಂದ 19 ವಯಸ್ಸಿನವರಿಗೆ ಪ್ರಿಯವಾದ ಸಂಗ್ರಹ. ಎರಡನೆಯದು ವಾಸತ್ ಅಲ್ ಹಯತ್ ಎಂಬ ಕವಿತೆಗಳ ಸಂಗ್ರಹ– 20 ರಿಂದ 34 ವರ್ಷ ವಯಸ್ಕರಿಗೆ. ಮೂರನೆಯದು ಗುರಾತ್ ಅಲ್ ಕಮಾಲ್ ಎಂಬುದು ತನ್ನ ಸಹೋದರನ ವಿನಂತಿಯ ಮೇರೆಗೆ ಸಂಗ್ರಹಿಸಿರುವ ಮಧ್ಯಕಾಲೀನ ಕವಿತೆಗಳು. ಇಲ್ಲಿ ಕವಿಯ ಜೀವನ ಚರಿತ್ರೆ ದೊರೆಯುತ್ತದೆ. ಬಖಿವ–ಐ ನಖಿವಾಹೆ ಎಂಬುದು ನಾಲ್ಕನೆಯದು–ಭಾರತೀಯ ರಾಜರನ್ನು ಹೊಗಳಿ ಬರೆದಿರುವ ಇಳಿವಯಸ್ಸಿನ ಕವಿತೆಯ ಸಂಗ್ರಹ. ನಿಹಾಯತ್ ಅಲ್ ಕಮಾಲ್ ಎಂಬುದು ಇವನ ಕೊನೆಯ ಸಂಗ್ರಹ.

ಗದ್ಯರೂಪದ ಇತರೆ ಪ್ರಮುಖ ಕೃತಿಗಳೆಂದರೆ ಸಮನಿ ವಹ್ ಕುಸ್ರಾವಿಯಾ ಎಂಬ ಕಥಾ ಸಂಗ್ರಹ. ಇದು ಘೋರಿ ಸಂತತಿಯವರ ಆಳಿಕೆಯಲ್ಲಿ ಇಸ್ಲಾಂ ಸಂಸ್ಕೃತಿ ವಿಸ್ತರಿಸಿದ ಬಗೆಗೆ ಮಾಹಿತಿ ನೀಡುತ್ತದೆ. ತಾಜ್ ಉಲ್ ಪುತಾಹ ಎಂಬುದು ಸುಲ್ತಾನ ಜಲಾಲುದ್ದೀನ್ ಫಿರೋಜುನನ್ನು ಹೊಗಳಿಬರೆದ ಕೃತಿ. ನವಸಫಿರ್ ಎಂಬ ಮಸ್ನವಿ ಕವನ ಸಂಗ್ರಹ ಒಂಬತ್ತು ಅಧ್ಯಾಯಗಳ ಬೃಹತ್ ಸಂಪುಟ. ಖುತ್ಬುದಿನ್ ಮುಬಾರಕ್‌ಷಾ ಖಿಲ್ಜಿಯನ್ನು ಸ್ಮರಿಸಿರುವ ಕೃತಿ. ಮಾತ್ಲ ಅಲ್ ಅನ್ವರ್ ಸೂಫಿ ಸಂತರ ತತ್ವಗಳನ್ನು ಕುರಿತದ್ದು. ಸಿರಿನ್ ವಾ ಕುಸ್ತಾವಿ ರಾಜ ಹಾಗೂ ಕವಿಯ ನಡುವಿನ ಸಂವಾದ ಕೃತಿ ಮಜ್ನು–ಡಿ–ಲೈಲಾ ಹಾಗೂ ಐನ್–ಐ–ನಿಖಂದರಿಯ ಎಂಬ ರಚನೆಗಳನ್ನು ಪರ್ಷಿಯನ್ ಸೂಫಿ ಕವಿ ನಿಜಾಮಿಯ ರಚನೆಗಳಿಂದ ಪ್ರೇರಿತವಾಗಿ ರಚಿಸಿದವುಗಳಾಗಿವೆ. ಅಲೆಗ್ಸಾಂಡರ್ ವಿಜಯದ ಅನಂತರ ಸಾವಿನ ಬಗೆಗಿನ ಕಥಾನಕ, ಖುಸ್ರುವಿನ ಕೃತಿ ಹಸ್ತ ಪೈಕರ್ ಕೃತಿಯ (ನಿಜಾಮಿ ರಚನೆ) ಆಧರಿಸಿ ರಚಿಸಿರುವ ಅಸ್ತ ಬಹಸ್ತ.

ಅಮೀರ್ ಖುಸ್ರುವಿನ ರಚನೆಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಿಲ್ಲದಿದ್ದರೂ ಭಾರತೀಯ ಸಂಗೀತ ಪ್ರಪಂಚದಲ್ಲಿ ಇವನ ಕಲ್ಪನೆಗಳು ಸ್ಮರಣೀಯವೆನಿಸಿವೆ. 1325 ರಲ್ಲಿ ನಿಧನ ಹೊಂದಿದ ಖುಸ್ರುವನ್ನು ದೆಹಲಿಯಲ್ಲಿ ಇವನ ಗುರು ಸೂಫಿ ಸಂತ ನಿಜಾಮುದ್ದೀನ್ ಚಿಸ್ತಿಯವರ ಸಮಾಧಿಯ ಪಕ್ಕದಲ್ಲೆ ಹೂಳಲಾಗಿದೆ. (ಸಿ.ಜಿ.ಎಸ್.)

**ಅಮೃತಮಂಗಳಂ:** ತಮಿಳುನಾಡು ರಾಜ್ಯದ ಚೆಂಗಲ್‌ಪೇಟ್ ಜಿಲ್ಲೆಯ ಪೂನ್ನೈ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾಗೋರಿಗಳ ನೆಲೆ. ಜಂಬಿಟ್ಟಿಗೆ ಕಲ್ಲಿನ ಈ ಪ್ರದೇಶದಲ್ಲಿ ಶಿಲಾಗೋರಿಗಳ ನಿರ್ಮಾಣ ವಿಧಾನವನ್ನು ತಿಳಿಯುವ ಸಲುವಾಗಿ 1955ರಲ್ಲಿ ಇಲ್ಲಿ ಉತ್ಖನನ ನಡೆಸಲಾಯಿತು. ಈ ನೆಲೆಯಲ್ಲಿ 250ಕ್ಕೂ ಹೆಚ್ಚು ಕಲ್ಲುಗುಪ್ಪೆಗಳಿದ್ದು, ಉತ್ಖನನಕ್ಕೆ ಮುಂಚೆ ಕೆಲವು ಕಲ್ಲುಗುಪ್ಪೆಗಳಲ್ಲಿ ಸ್ಥಳೀಯರು ಅಗೆದಿದ್ದ ಗುಂಡಿಗಳಲ್ಲಿ ಅಸ್ಥಿ ಮಡಕೆಗಳು ಕಂಡುಬಂದವು. ಇಂಥ 17 ಕಲ್ಲುಗುಪ್ಪೆಗಳ ಉತ್ಖನನದಿಂದ ಅಸ್ಥಿಮಡಕೆಗಳನ್ನು ಹೊರತೆಗೆಯಲಾಗಿ ಇವೆಲ್ಲವೂ ಬೃಹತ್ ಶಿಲಾ ಸಂಸ್ಕೃತಿ ಸಂಪ್ರದಾಯಕ್ಕೆ ಸೇರಿದವೆಂಬುದು ಖಚಿತವಾಯಿತು. ಈ ಮಡಕೆಗಳೊಳಗೆ ಅಸ್ಥಿ ಅವಶೇಷಗಳು, ಮಣ್ಪಾತ್ರೆಗಳು ಹಾಗೂ ಕಬ್ಬಿಣ ಉಪಕರಣಗಳಿದ್ದವು. ಶವವನ್ನು ನೇರವಾಗಿ ಮಡಕೆಯೊಳಗೆ ಹೂಳಿದ ಇಲ್ಲವೇ ನೈಸರ್ಗಿಕವಾಗಿ ಜೀರ್ಣಗೊಳ್ಳಲು ಬಿಟ್ಟು ಅನಂತರ ಅಳಿದುಳಿದ ಅಸ್ಥಿ ಅವಶೇಷಗಳನ್ನು ಮಡಕೆಯೊಳಗೆ ಇಟ್ಟಂತಹ ನಿದರ್ಶನಗಳೆರಡೂ ಇಲ್ಲಿ ಕಂಡುಬಂದವು. ಅಸ್ಥಿ ಮಡಕೆಗಳು ಕೈಯಿಂದ ಮಾಡಿದವಾಗಿದ್ದು ವಿವಿಧ ಗಾತ್ರದ್ದಾಗಿದ್ದವು. ಇವು ಚೂಪು ಬುಡದ ದೊಡ್ಡ ಜಾಡಿಗಳು. ಇವುಗಳ ಭುಜದ ಮೇಲೆ ಸರಳ ಅಲಂಕರಣವಿತ್ತು. ಇವುಗಳೊಳಗೆ ಅಸ್ಥಿ ಅವಶೇಷಗಳು, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಮತ್ತು ಕೆಂಪು ಪಾತ್ರೆ ಹಾಗೂ ಕಬ್ಬಿಣ ಉಪಕರಣಗಳನ್ನಿಟ್ಟು ಮಣ್ಣನ್ನು ತುಂಬಲಾಗಿತ್ತು. ಅಸ್ಥಿ ಮಡಕೆಯನ್ನಿಡಲು ಅಗೆದ ಕುಣಿಯ ತಳಭಾಗದಲ್ಲಿ ಮಡಕೆಯ ಚೂಪುತುದಿ ಕೂಡುವಂತೆ, ಅದಕ್ಕೆ ತಕ್ಕಂತೆ ಸಣ್ಣ ಕುಣಿಯನ್ನೂ ಅಗೆಯಲಾಗಿತ್ತು. ಮಡಕೆಯ ಬಾಯನ್ನು ಅರೆ ಗೋಳಾಕೃತಿಯ ದೊಡ್ಡ ಮುಚ್ಚಳದಿಂದ ಮುಚ್ಚಲಾಗಿತ್ತು. ಮುಚ್ಚಳದ ಮೇಲೆ ಅಲ್ಲಲ್ಲಿ ಸಣ್ಣ ಮಣ್ಪಾತ್ರೆಗಳನ್ನು ಇಡಲಾಗಿತ್ತು. ಮೂರು ಮಣ್ಪಾತ್ರೆಗಳ ಮೇಲೆ ಗೀಚುಗೆರೆಗಳಿದ್ದವು. ಅಪರೂಪವಾಗಿ ಗುಂಡಿಯ ಮೇಲೆ ಜಂಬಿಟ್ಟಿಗೆ ಕಲ್ಲನ್ನು ಸುತ್ತ ಜೋಡಿಸಲಾಗಿತ್ತು. ಅಮರಾವತಿ ಸ್ತೂಪದ ಕೆಳಗೆ ಕಂಡುಬಂದ ಅಸ್ಥಿಪಾತ್ರೆಗಳನ್ನು ಇವು ಹೋಲುವುದರಿಂದ ಈ ನೆಲೆಯ ಕಾಲಮಾನ ಪ್ರ.ಶ.ಪೂ.3ನೆಯ ಶತಮಾನದ ಉತ್ತರಾರ್ಧವೆಂದು ಹೇಳಬಹುದು. (ಎ.ಎಸ್.;ಎನ್.ಎಲ್.)

**ಅಮೃತಸರದ ಒಪ್ಪಂದ:** ರಣಜಿತ್‌ಸಿಂಗನಿಗೂ ಬ್ರಿಟಿಷರಿಗೂ 1809 ಏಪ್ರಿಲ್ 25ರಂದು ನಡೆದ ಈ ಒಪ್ಪಂದ ಬ್ರಿಟಿಷರ ವ್ಯಾಪ್ತಿಯನ್ನು ಹೆಚ್ಚಿಸಿತಾಗಿ ಭಾರತದ ಚರಿತ್ರೆಯಲ್ಲಿ ಮುಖ್ಯವಾಗಿದೆ.

ರಣಜಿತ್ ಸಿಂಗ್ ತನ್ನ ಸ್ಥಾನವನ್ನು ಬಲಪಡಿಸಿಕೊಂಡ ಮೇಲೆ ಸಟ್ಲೆಜ್ ನದಿಯ ಸುತ್ತಮುತ್ತಲ ಸಣ್ಣಪುಟ್ಟ ಸಿಖ್ ರಾಜ್ಯಗಳೆಲ್ಲವನ್ನೂ ತನ್ನ ಅಧೀನಕ್ಕೆ ಒಳಪಡಿಸಿಕೊಂಡು, ಸಿಖ್ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ಆಸೆಯಿಂದ 1806–07ರಲ್ಲಿ ಮುನ್ನುಗ್ಗಿದ. ಇದನ್ನು ಗಮನಿಸಿದ ಬ್ರಿಟಿಷರು ಬಲಯುತನಾದ ಅವನು ಫ್ರೆಂಚರ ಮೇಲೆ ಯುದ್ಧಮಾಡಲು ತಮಗೆ ಸಹಾಯಕನಾಗುತ್ತಾನೆಂದು ಭಾವಿಸಿ ಅವನೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಯೋಚಿಸಿದರು. ಅಷ್ಟರಲ್ಲಿ ನೆಪೋಲಿಯನ್ ಭಾರತದ ಮೇಲೆ ದಂಡೆತ್ತಿ ಬರುವ ಸಂಭವ ಕಡಿಮೆಯಾಗಲು ಬ್ರಿಟಿಷರು ರಣಜಿತ್ ಸಿಂಗನೊಡನೆ ಒಪ್ಪಂದ ಮಾಡಿಕೊಳ್ಳುವ ಬದಲು ಅವನ ಮೇಲೆ ಒಂದು ಸೈನ್ಯವನ್ನು ಕಳುಹಿಸಿದರು. ಸಟ್ಲೆಜ್ ನದಿಯ ಪೂರ್ವಕ್ಕಿರುವ ಸಣ್ಣಪುಟ್ಟ ಸಿಖ್ ರಾಜ್ಯಗಳು ಈ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯಕರಾಗಿ ತನ್ನ ಮೇಲೆ ಯುದ್ಧಮಾಡಬಹುದೆಂಬ ಶಂಕೆಯಿಂದ, ರಣಜಿತ್ ಸಿಂಗ್ ಬ್ರಿಟಿಷರೊಡನೆ ಯುದ್ಧಕ್ಕೆ ಬದಲು ಒಪ್ಪಂದ ಮಾಡಿಕೊಂಡ. ಇದೇ ಅಮೃತಸರದ ಒಪ್ಪಂದ. ಇದರ ಪ್ರಕಾರ ರಣಜಿತ್‌ಸಿಂಗ್ ಸಟ್ಲೆಜ್ ನದಿಯ ಬಲಭಾಗದ ಪ್ರದೇಶಗಳಲ್ಲಿ ಮಾತ್ರ ರಾಜ್ಯವಾಳಬೇಕೆಂದೂ ಮಿಕ್ಕ ಇತರ ಸಿಖ್ ರಾಜ್ಯಗಳು ಬ್ರಿಟಿಷರ ಆಧಿಪತ್ಯಕ್ಕೆ ಒಳಪಡಬೇಕೆಂದೂ ತೀರ್ಮಾನವಾಯಿತು. ಇದರಿಂದ ಬ್ರಿಟಿಷರ ರಾಜ್ಯ ಸಟ್ಲೆಜ್ ನದಿಯವರೆಗೂ ವಿಸ್ತರಿಸಿತು ಮತ್ತು ಲೂಧಿಯಾನ ನಗರದಲ್ಲಿ ಬ್ರಿಟಿಷರ ಸೈನ್ಯ ತಂಗುವ ಏರ್ಪಾಡೂ ಆಯಿತು. (ಎಂ.ಎಸ್.ಬಿ.)

**ಅಮೆರಿಕ:** ಪ್ರಪಂಚದ 7 ಮುಖ್ಯ ಭೂಖಂಡಗಳಲ್ಲಿ ಒಂದು. ಉತ್ತರ ಮತ್ತು ದಕ್ಷಿಣ ಅಮೆರಿಕ ಇವು ಭೂಮಿಯ ಪಶ್ಚಿಮ ಭಾಗದಲ್ಲಿರುವ ಎರಡು ಮುಖ್ಯ ಭೂಖಂಡಗಳು. ಅತ್ಯಂತ ಸಂಪದ್ಭರಿತ, ಪ್ರಭಾವಯುತ ರಾಷ್ಟ್ರವಾದ ಉತ್ತರ ಅಮೆರಿಕದ ಇತಿಹಾಸ ಗಮನಾರ್ಹವಾದುದು. ಇದು 18ನೆಯ ಶತಮಾನದಿಂದೀಚೆಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಗಳಿಗೆ ಸ್ಫೂರ್ತಿ ಉತ್ತೇಜನಗಳನ್ನಿತ್ತಿದೆ. ಅದೊಂದು ಭವ್ಯ ರೋಮಾಂಚನಕಾರಿ ಇತಿಹಾಸ.

ಕೊಲಂಬಸನ ಸಮುದ್ರಯಾನ ಸಾಹಸದಿಂದ ಪಶ್ಚಿಮ ಮತ್ತು ಪೂರ್ವದೇಶಗಳ ಸಮಾಗಮಕ್ಕೆ ಅನುಕೂಲವಾಯಿತು. ಆತ ಫ್ಲಾರಿಡ ತೀರ ಪ್ರದೇಶದ ಬಹುಮಾಸ್ ಗುಂಪಿನ ಸಾನ್ ಸಾಲ್ವೆಡಾರ್ ದ್ವೀಪವನ್ನು ಕಂಡುಹಿಡಿದು (1492) ತಾನು ಪೌರಸ್ತ್ಯ ದೇಶಗಳಿಗೆ ಜಲಮಾರ್ಗವನ್ನು ಕಂಡುಹಿಡಿದನೆಂದು ತಿಳಿದು ಅಲ್ಲಿನ ನಿವಾಸಿಗಳನ್ನು ಇಂಡಿಯನ್ಸ್ ಎಂದು ಕರೆದ. ಅನಂತರ ಅಮೆರಿಗೊ ವೆಸ್ಪೂಚಿಯ ಸಾಹಸದಿಂದಾಗಿ ಆ ಭೂಭಾಗಕ್ಕೆ ಅವನ ಹೆಸರನ್ನೇ ಇಟ್ಟು ಅಮೆರಿಕವೆಂದು ಕರೆಯಲಾಯಿತು. ಅಮೆರಿಕ ಹೊಸ ಪ್ರಪಂಚವೆಂದು ಕರೆಯಲ್ಪಟ್ಟರೂ ಅದು ಹಳೆಯ ಪ್ರಪಂಚವೇ ಆಗಿತ್ತು. ಸಮುದ್ರಯಾನ ಸಾಹಸಿಗಳು ಕಂಡುಹಿಡಿದ ಭೂಭಾಗ ಪೌರಸ್ತ್ಯ ಸಂಸ್ಕೃತಿಗಳ ಮೂಲಾಂಶಗಳನ್ನುಹೊಂದಿದ್ದ ಜನಾಂಗಗಳದ್ದಾಗಿದ್ದಿತು. ಈ ಸಂಸ್ಕೃತಿಗಳ ಕೇಂದ್ರಸ್ಥಾನಗಳು ಉತ್ತರ ಅಮೆರಿಕ, ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳ ಎಲ್ಲೆಗಳಲ್ಲಿದ್ದುವು. ಯುಕಾಟನ್ನಿನ ಮಾಯಾ **(ನೋಡಿ)**, ಮೆಕ್ಸಿಕೋದ ಆಜ್ಟೆಕ್‌ಸಂಸ್ಕೃತಿ **(ನೋಡಿ)** ಮತ್ತು ಪೆರುವಿನ ಇಂಕ **(ನೋಡಿ)** ಸಂಯುಕ್ತ ಸಂಸ್ಥಾನಗಳ ಆಗ್ನೇಯ ಭಾಗದ ಪ್ಯೂಬ್ಲೋ ನಿವಾಸಿಗಳು, ಸ್ಥಿರವಾಗಿ ನೆಲಸಿ ಉತ್ತಮ ನಾಗರಿಕತೆಯನ್ನು ಬೆಳೆಸಿದ್ದರು. ಅಟ್ಲಾಂಟಿಕ್ ತೀರ ಪ್ರದೇಶದಲ್ಲಿದ್ದ ಇಂಡಿಯನ್ನರು ಅಲೆಮಾರಿ ಜನ. ಈ ನಾಗರಿಕತೆಗಳ ಜನರಿಗೆ ದೊಡ್ಡ ಪಟ್ಟಣಗಳನ್ನು, ದೇವಾಲಯಗಳನ್ನು, ಅರಮನೆಗಳನ್ನು ಕಟ್ಟುವುದು ತಿಳಿದಿತ್ತು; ಬರೆವಣಿಗೆ, ಮಣ್ಪಾತ್ರೆಗಳನ್ನು ಮಾಡುವುದು, ಸಾಮಾಜಿಕ ವ್ಯವಸ್ಥೆ, ಕಲೆ ಮುಂತಾದ ವಿಷಯಗಳು ತಿಳಿದಿದ್ದವು. ಮೂಢನಂಬಿಕೆಗಳನ್ನು ಅತಿಯಾಗಿ ಬೆಳೆಸಿಕೊಂಡಿದ್ದರು. ನರಬಲಿ ಕೊಡುವ ಪದ್ಧತಿ ಇವರಲ್ಲಿ ರೂಢಿಯಲ್ಲಿತ್ತು. ಇವುಗಳಲ್ಲದೆ ಪೆರುವಿನ ಇಂಕ ಜನ ಹೇರಳವಾಗಿ ದೊರೆಯುತ್ತಿದ್ದ ಚಿನ್ನ ಮತ್ತು ಬೆಳ್ಳಿಯನ್ನು ಮನೆಕಟ್ಟುವ ಇಟ್ಟಿಗೆಗಳನ್ನಾಗಿ ಬಳಸುತ್ತಿದ್ದರು. 16ನೆಯ ಶತಮಾನದಲ್ಲಿ ಸ್ಪೇನಿನವರು ಮತ್ತು ಪೋರ್ಚುಗೀಸರು ಸ್ವಾಸ್ಥ್ಯಸ್ಥಾಪನೆ ಮತ್ತು ವ್ಯಾಪಾರದ ದೃಷ್ಟಿಯಿಂದ ಆ ಪ್ರದೇಶಗಳನ್ನೂ ಸ್ವಾಧೀನಪಡಿಸಿಕೊಂಡ ಮೇಲೆ, ಆ ನಾಗರಿಕತೆಗಳ ನೆಲೆವೀಡುಗಳು ನಿರ್ನಾಮಗೊಂಡು, ಇಂದು ಅವುಗಳ ವಿಷಯ ಒಂದು ಕಟ್ಟು ಕಥೆಯಂತಾಗಿದೆ. ಅಮೆರಿಕದ ಇನ್ನಿತರ ಭಾಗಗಳಲ್ಲಿ ವಾಸಮಾಡಿಕೊಂಡಿದ್ದ ರೆಡ್ ಇಂಡಿಯನ್ನರ ಸಾಹಸ ಶೌರ್ಯಗಳು ಯುರೋಪಿನವರ ಆಧುನಿಕ ಯುದ್ಧಸಲಕರಣೆಗಳ ಮುಂದೆ ವಿಫಲಗೊಂಡು ಅವರ ಪ್ರಭಾವ ಕುಗ್ಗಿತು.

**ವಸಾಹತುಗಳ ಸ್ಥಾಪನೆ:** 15ನೆಯ ಶತಮಾನದ ಅಂತ್ಯಭಾಗದಲ್ಲಿ ಕೊಲಂಬಸ್, ಅಮೆರಿಗೊ ವೆಸ್ಪೂಚಿ ಇವರ ಅನಂತರ ಇಂಗ್ಲಿಷ್ ನಾವಿಕ ಜಾನ್ ಕ್ಯಾಬಟ್ ಮತ್ತು ಫ್ರೆಂಚರ ಜಾಕ್ವಿಯಸ್ ಕಾರ್ಡಿಯರ್ ಎಂಬ ನಾವಿಕರು ಅಮೆರಿಕವನ್ನು ಸಂದರ್ಶಿಸಿದರು. ಪರಿಣಾಮ ಸ್ಪೇನಿನವರು, ಇಂಗ್ಲಿಷರು, ಫ್ರೆಂಚರು ಕೆಲವು ಕಾಲದಮೇಲೆ ಡಚ್ಚರು ಮತ್ತು ಸ್ವೀಡನ್ನಿನವರು ಅಮೆರಿಕದ ವಿವಿಧ ಭಾಗಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಇವರಲ್ಲಿ ಸ್ಪೇನಿನವರು, ಇಂಗ್ಲಿಷರು ಮತ್ತು ಫ್ರೆಂಚರು ಮುಖ್ಯರಾದವರು. ಸ್ಪೇನಿನವರು ಫ್ಲಾರಿಡದಲ್ಲಿ ಸ್ಥಾಪಿಸಿದ್ದೇ ಅಮೆರಿಕದಲ್ಲಿ ಯುರೋಪಿಯನ್ನರ ಪ್ರಥಮ ವಸಾಹತು. ಸ್ವಲ್ಪ ಕಾಲದಲ್ಲಿಯೇ ಸ್ಪೇನಿನವರು ತಮ್ಮ ಅಧಿಕಾರವನ್ನು ಪಶ್ಚಿಮದಲ್ಲಿ ಕ್ಯಾಲಿಫೋರ್ನಿಯದವರೆಗೆ ವಿಸ್ತರಿಸಿದರು. ಫ್ರೆಂಚರು ತಮ್ಮ ವಸಾಹತುಗಳನ್ನು ಮೊದಲು ಕೆನಡದಲ್ಲಿ ಸ್ಥಾಪಿಸಿ ಅನಂತರ ಲೂಸಿಯಾನದವರೆಗೆ ತಮ್ಮ ಪ್ರಭಾವವನ್ನು ವಿಸ್ತರಿಸಲೆತ್ನಿಸಿದರು. ಬ್ರಿಟಿಷರ ವಸಾಹತುಗಳು ಹೆಚ್ಚಾಗಿ ಅಟ್ಲಾಂಟಿಕ್ ತೀರ ಪ್ರದೇಶದಲ್ಲಿ ಸ್ಥಾಪಿತವಾಗಿದ್ದವು. ಅವರು 1607ರಲ್ಲಿ

ವರ್ಜೀನಿಯದಲ್ಲಿನ ಜೇಮ್ಸ್ ಟೌನಿನಲ್ಲಿ ಸ್ಥಾಪಿಸಿದ ಪಾಳಯವೇ ಅವರ ಪ್ರಥಮ ವಸಾಹತು. ಈ ವಸಾಹತುಗಳು ಬ್ರಿಟಿಷ್ ಚಕ್ರವರ್ತಿಯಿಂದ ಅಪ್ಪಣೆ ಪಡೆದ ಕಂಪನಿಗಳಿಂದ ಸ್ಥಾಪಿಸಲ್ಪಟ್ಟಿದ್ದವು. 1620ರಲ್ಲಿ ಅಮೆರಿಕವನ್ನು ತಲುಪಿದ ಕ್ರೈಸ್ತ ಪಾದ್ರಿಗಳು ಮತಪ್ರಸಾರಕ್ಕಾಗಿ ಮತ್ತೊಂದು ರೀತಿಯ ವಸಾಹತುಗಳನ್ನು ಸ್ಥಾಪಿಸಿದರು. ಇಂಗ್ಲೆಂಡಿನ ಧನಿಕ ವರ್ತಕರು ಮೇರಿಲ್ಯಾಂಡ್ ಮತ್ತು ಪೆನ್ಸಿಲ್ವೇನಿಯಗಳಲ್ಲಿ ಸ್ಥಾಪಿಸಿದ್ದ ವಸಾಹತುಗಳು ಮತ್ತೊಂದು ರೀತಿಯವು. ಇವು ಬ್ರಿಟಿಷ್ ಚಕ್ರವರ್ತಿಯಿಂದ ಆಸ್ತಿಪಾಸ್ತಿಗಳನ್ನು ಹೊಂದುವ ಅನುಕೂಲತೆಯನ್ನು ಪಡೆದಿದ್ದವು. ಇವುಗಳಿಗೆ ಪಶ್ಚಿಮದಲ್ಲಿದ್ದ ಫ್ರೆಂಚರ ವಸಾಹತುಗಳಿಂದ ತೊಂದರೆ ಇತ್ತಾದ ಕಾರಣ ಈ ವಸಾಹತುಗಳಿಗೆ ಬ್ರಿಟಿಷ್ ನೌಕಾಪಡೆಯ ರಕ್ಷಣೆ ಇತ್ತು. ಏಕೆಂದರೆ ಫ್ರೆಂಚರು ಕೆನಡದಿಂದ ಲೂಸಿಯಾನದವರೆಗೂ ಕೋಟೆಗಳನ್ನು ನಿರ್ಮಿಸಬೇಕೆಂಬ ಪ್ರಯತ್ನದಲ್ಲಿದ್ದರು. ಏಳುವರ್ಷಗಳ ಯುದ್ಧದಲ್ಲಿ (1750–65) ಫ್ರೆಂಚರು ಮತ್ತು ಇಂಗ್ಲಿಷರು ಯುರೋಪು ಮತ್ತು ಭಾರತದಲ್ಲೇ ಅಲ್ಲದೆ ಅಮೆರಿಕದಲ್ಲೂ ಹೋರಾಡಿದರು. ಯುದ್ಧದಲ್ಲಿ ಫ್ರೆಂಚರು ಸೋತು ಅಮೆರಿಕದಲ್ಲಿದ್ದ ತಮ್ಮ ವಸಾಹತುಗಳನ್ನು ಇಂಗ್ಲಿಷರಿಗೆ ಬಿಟ್ಟುಕೊಟ್ಟರು. ಉತ್ತರ ಅಮೆರಿಕದಲ್ಲಿ ಸ್ಥಾಪಿತವಾಗಿದ್ದ ಬ್ರಿಟಿಷರ 13 ಕಾಲೋನಿಗಳು: ಮೆಸಾಚುಸೆಟ್ಸ್, ನ್ಯೂ ಹ್ಯಾಮ್ ಷೈರ್, ರೋಡ್ ಐಲೆಂಡ್, ಕನೆಕ್ಟಿಕಟ್, ಪೆನ್ಸಿಲ್ವೇನಿಯ, ನ್ಯೂಯಾರ್ಕ್, ನ್ಯೂಜೆರ್ಸಿ, ಡೆಲಾವೇರ್, ಮೆರಿಲ್ಯಾಂಡ್, ವರ್ಜೀನಿಯ, ನಾರ್ತ್‌ಕೆರೊಲಿನ, ಸೌತ್ ಕೆರೊಲಿನ ಮತ್ತು ಜಾರ್ಜಿಯ – ಇವುಗಳೆಲ್ಲ ಇಂಗ್ಲೆಂಡಿನ ರಕ್ಷಣೆಯಲ್ಲಿದ್ದು ಪ್ರತಿಯೊಂದೂ ಒಬ್ಬೊಬ್ಬ ಇಂಗ್ಲಿಷ್ ಗವರ್ನರ್‌ನ ಮೇಲ್ವಿಚಾರಣೆಯಲ್ಲಿದ್ದಿತು. ಈ ರೀತಿಯ ರಾಜಕೀಯ ವ್ಯವಸ್ಥೆಯಲ್ಲಿದ್ದ ವಸಾಹತುಗಳಲ್ಲಿ 18ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಪಂಚದ ಇತಿಹಾಸದಲ್ಲೇ ಮೊದಲ ಬಾರಿಗೆ ಕ್ರಾಂತಿ ನಡೆಯಿತು. ಈ ಕ್ರಾಂತಿಯನ್ನು ಅಮೆರಿಕ ಸ್ವಾತಂತ್ರ್ಯ ಹೋರಾಟವೆಂದು ಕರೆಯುತ್ತಾರೆ.

**ಸ್ವಾತಂತ್ರ್ಯ ಹೋರಾಟ:** 1775ರಲ್ಲಿ ಪ್ರಾರಂಭವಾಯಿತು. ಇದಕ್ಕೆ ಕಾರಣಗಳು ಅನೇಕ. ಇವುಗಳಲ್ಲಿ ರಾಜಕೀಯ, ಆರ್ಥಿಕ ಮತ್ತು ರಕ್ಷಣಾ ವಿಷಯಕ್ಕೆ ಸಂಬಂಧಪಟ್ಟ ಕಾರಣಗಳು ಮುಖ್ಯ. ರಾಜಕೀಯವಾಗಿ ವಸಾಹತುಗಳ ಆಡಳಿತ ವ್ಯವಸ್ಥೆಯಲ್ಲಿ ಅನೇಕ ಲೋಪದೋಷಗಳಿದ್ದವು. ಪ್ರತಿಯೊಂದು ವಸಾಹತೂ ಪ್ರತ್ಯೇಕ ಆಡಳಿತವ್ಯವಸ್ಥೆಯನ್ನು ಹೊಂದಿ ಬ್ರಿಟಿಷ್ ಚಕ್ರವರ್ತಿಯ ಪರವಾಗಿ ಆಡಳಿತ ನಡೆಸುವ ರಾಜ್ಯಪಾಲರ ಅಧೀನದಲ್ಲಿದ್ದವು. ರಾಜ್ಯಪಾಲರು ಪ್ರತಿನಿಧಿಸಭೆಗಳನ್ನು ಕಡೆಗಣಿಸಿ, ನಿರಂಕುಶ ಪ್ರಭುಗಳಂತೆ ವರ್ತಿಸುತ್ತಿದ್ದು ಜನನಿಂದನೆಗೆ ಗುರಿಯಾಗಿದ್ದರು. ಇದಲ್ಲದೆ ಆ ಜನರ ಪ್ರತಿನಿಧಿಗಳನ್ನು ಹೊಂದದೆ ಇದ್ದ ಬ್ರಿಟನ್ನಿನ ಪಾರ್ಲಿಮೆಂಟ್ ಸಭೆ ವಸಾಹತುಗಳಿಗೆ ಕಾನೂನುಗಳನ್ನು ಮಾಡುವುದೂ ಅವರಲ್ಲಿ ಅತೃಪ್ತಿ ಅಸಮಾಧಾನಗಳು ಬೆಳೆಯುವಂತೆ ಮಾಡಿತ್ತು. ಆರ್ಥಿಕ ವ್ಯವಸ್ಥೆಯಲ್ಲೂ ಅನೇಕ ಕುಂದುಕೊರತೆಗಳಿದ್ದು ಕ್ರಾಂತಿಗೆ ಪ್ರೋತ್ಸಾಹ ದೊರಕಿತು. ವಸಾಹತುಗಳು ತಮ್ಮ ಹಿತಕ್ಕಾಗಿಯೇ ಇರುವುವೆಂದು ತಿಳಿದು ಬ್ರಿಟಿಷರು ಅವುಗಳ ವ್ಯಾಪಾರ ವಾಣಿಜ್ಯಗಳ ಮೇಲೆ ಅನೇಕ ರೀತಿಯ ನಿರ್ಬಂಧಗಳನ್ನು ಹಾಕಿದ್ದರು. ವಸಾಹತುಗಳು ತಮ್ಮಲ್ಲಿನ ಕಚ್ಚಾಪದಾರ್ಥಗಳನ್ನು ಬ್ರಿಟನ್ನಿಗಲ್ಲದೆ ಮತ್ತಾವ ದೇಶಗಳಿಗೂ ಕಳುಹಿಸಕೂಡದೆಂದೂ ನೇರವಾಗಿ ಯಾವ ದೇಶದೊಂದಿಗೂ ವ್ಯಾಪಾರಸಂಪರ್ಕವನ್ನಿಟ್ಟುಕೊಳ್ಳಕೂಡದೆಂದು ವಿಧಿಸಿದ್ದು ಒಂದು ನಿದರ್ಶನ. ಇಂಥ ಕ್ರಮ ಕಳ್ಳವ್ಯಾಪಾರಕ್ಕೆ ಪ್ರೋತ್ಸಾಹ ಕೊಟ್ಟಿತು. ಇದನ್ನರಿತ ಬ್ರಿಟಿಷ್ ಸರ್ಕಾರ ಅವುಗಳ ಮೇಲೆ ಉಗ್ರಕ್ರಮಗಳನ್ನು ಕೈಗೊಂಡಿತು. ಇದರಿಂದ ಕ್ರೋಧಗೊಂಡ ವಸಾಹತುಗಳು ದಂಗೆಯೆದ್ದುವು. ಇವುಗಳಲ್ಲದೆ ರಕ್ಷಣಾ ವೆಚ್ಚದ ಸಮಸ್ಯೆಯೂ ಕ್ರಾಂತಿಗೆ ಕಾರಣವಾಯಿತು. ಸಪ್ತವಾರ್ಷಿಕ ಯುದ್ಧದಲ್ಲಿ ಬ್ರಿಟಿಷರು ಗೆದ್ದರೂ ಅಪಾರ ಹಾನಿಯನ್ನನುಭವಿಸಿದ್ದರು. ಯುದ್ಧದಿಂದಾಗಿ ಅವರ ಬೊಕ್ಕಸ ಬರಿದಾಯಿತು. ಅಲ್ಲದೆ ಈ ಯುದ್ಧವಾದಮೇಲೆ ಅಮೆರಿಕನ್ನರು ಮತ್ತೆ ದಂಗೆ ಎದ್ದುದರಿಂದ ಅವರ ವಿರುದ್ಧ ಹೋರಾಡಲು ಅಗತ್ಯವಾದ ಭೂ ಮತ್ತು ನೌಕಾಬಲವನ್ನು ನಿರ್ಮಿಸಲು ಆಲೋಚಿಸಿದ ಬ್ರಿಟಿಷ್ ಸರ್ಕಾರ, ವಸಾಹತುಗಳ ದಿನಬಳಕೆಯ ವಸ್ತುಗಳಾದ ಸಕ್ಕರೆ, ಚಹ ಹಾಗೂ ಕಾಗದಪತ್ರಗಳ ಮೇಲೆ ಹೊಸ ತೆರಿಗೆಗಳನ್ನು ಹಾಕಿ ಹಣ ಕೂಡಿಸಲು ಯತ್ನಿಸಿತು. ಕ್ರೋಧಗೊಂಡ ಅಮೆರಿಕನ್ನರು ಅವುಗಳನ್ನು ತೀವ್ರವಾಗಿ ವಿರೋಧಿಸಿದ್ದಲ್ಲದೆ ತಮ್ಮ ಪ್ರತಿನಿಧಿಗಳಿಲ್ಲದ ಶಾಸನಸಭೆ ತಮ್ಮ ಮೇಲೆ ವಿಧಿಸುವ ಯಾವ ಕಾಯಿದೆಗೂ ತಾವು ಬದ್ಧರಲ್ಲವೆಂದು ಹೇಳಿಬಿಟ್ಟರು.

1773ರಲ್ಲಿ ನಡೆದ ಬೋಸ್ಟನ್ ಘಟನೆಯಿಂದ ಅಮೆರಿಕದ ಸ್ವಾತಂತ್ರ್ಯ ಹೋರಾಟ ಆರಂಭವಾಯಿತೆಂದು ಹೇಳಬಹುದು. ಬೋಸ್ಟನ್ ರೇವಿನ ಕೆಲವು ಜನ ಹೊಸ ತೆರಿಗೆಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಸಲುವಾಗಿ ಈಸ್ಟ್ ಇಂಡಿಯ ಕಂಪನಿಗೆ ಸೇರಿದ ಚಹ ತುಂಬಿದ ಕೆಲವು ಹಡಗುಗಳನ್ನು ಲೂಟಿ ಮಾಡಿ ಅವುಗಳಲ್ಲಿದ್ದ ಚಹವನ್ನು ಸಮುದ್ರಕ್ಕೆಸೆದರು. ಉದ್ರೇಕಗೊಂಡ ಬ್ರಿಟಿಷ್ ಸರ್ಕಾರ ಗಲಭೆಕೋರರ ವಿರುದ್ಧ ಉಗ್ರಕ್ರಮಗಳನ್ನು ಕೈಗೊಂಡು ಬೋಸ್ಟನ್ ರೇವುಪಟ್ಟಣವನ್ನು ಮುಚ್ಚಿ ಮೆಸಾಚುಸೆಟ್ಸ್ ವಸಾಹತಿಗೆ ಸ್ವಯಂ ಆಡಳಿತವನ್ನು ರದ್ದು ಮಾಡಿತು. ಈ ಕ್ರಮ ವಸಾಹತುಗಳವರನ್ನು ರೊಚ್ಚಿಗೇಳಿಸಿತು. ಅವರು ಶಸ್ತ್ರಕದನಕ್ಕೆ ಸಿದ್ಧರಾದರು. 1774ರಲ್ಲಿ ವಸಾಹತಿನವರು ತಮ್ಮತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಮರೆತು ಫಿಲಡೆಲ್ಫಿಯದಲ್ಲಿ ಸಮಾವೇಶಗೊಂಡು ಹಕ್ಕುಗಳ ಘೋಷಣೆಯೊಂದನ್ನು ಹೊರಡಿಸಿ ಬ್ರಿಟನ್ನಿನ ವಿರುದ್ಧ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಲು ತೀರ್ಮಾನ ಕೈಗೊಂಡು ಜಾರ್ಜ್ ವಾಷಿಂಗ್‌ಟನ್ ಎಂಬುವನನ್ನು ಮುಖ್ಯ ನಾಯಕನನ್ನಾಗಿ ಮಾಡಿಕೊಂಡರು.

1775ರಲ್ಲಿ ಮೊದಲ ಕಾಳಗ ಜರುಗಿತು. ಹೋರಾಟದ ಮೊದಲ ದಿನಗಳಲ್ಲಿ ಅಮೆರಿಕನ್ನರು ಸುಸಜ್ಜಿತರಾದ ಬ್ರಿಟಿಷ್ ಸೈನಿಕರಿಂದ ಬ್ರೂಕ್ಲಿನ್ (1777) ಮತ್ತು ಬ್ರಾಂಡಿವೈನ್ (1777) ಮೊದಲಾದ ಸ್ಥಳಗಳಲ್ಲಿ ಸೋತರು. ಆದರೂ ಧೃತಿಗೆಡದೆ ಹೋರಾಟವನ್ನು ಮುಂದುವರಿಸಿದರು. 1776 ಜುಲೈ 4 ರಂದು ಥಾಮಸ್ ಜೆಫರ್‌ಸನ್ನನಿಂದ ನಿರೂಪಿತವಾದ ವಸಾಹತುಗಳ ಸ್ವಾತಂತ್ರ್ಯ ಘೋಷಣೆಯೊಂದನ್ನು ಹೊರಡಿಸಿದರು. 1777 ಅಕ್ಟೋಬರ್ 17ರಲ್ಲಿ ಜಾರ್ಜ್ ವಾಷಿಂಗ್‌ಟನ್ನನ ನೇತೃತ್ವದಲ್ಲಿ ಅಮೆರಿಕದ ಸೈನಿಕರು ಸರಟೋಗ ಯುದ್ಧದಲ್ಲಿ ಮೊದಲಬಾರಿ ವಿಜಯ ಸಂಪಾದಿಸಿದರು. ಇದು ಅವರ ಬಿಡುಗಡೆಯ ಹೋರಾಟದಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿತು. ಇದಾದಮೇಲೆ ಫ್ರಾನ್ಸ್ ಮತ್ತು ಸ್ಪೇನ್ ದೇಶಗಳು ಸಪ್ತವಾರ್ಷಿಕ ಯುದ್ಧದಲ್ಲಿ ತಮಗುಂಟಾದ ಅಪಜಯದ, ಅವಮಾನದ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ಅಮೆರಿಕನ್ನರಿಗೆ ಸಹಾಯ ಮಾಡಲು ಮುಂದೆ ಬಂದುವು. ಇದರಿಂದ ಅಮೆರಿಕನ್ನರ ಪ್ರಾಬಲ್ಯ ಹೆಚ್ಚಿ ಅವರು ವಿಜಯಗಳ ಮೇಲೆ ವಿಜಯಗಳನ್ನು ಗಳಿಸಿದರು. ಕೊನೆಗೆ 1781 ಅಕ್ಟೋಬರ್ 19ರಲ್ಲಿ ಬ್ರಿಟಿಷರ ದಂಡನಾಯಕನಾದ ಕಾರ್ನ್‌ವಾಲಿಸ್, ಯಾರ್ಕ್‌ಟೌನ್ ಎಂಬಲ್ಲಿ ಅಮೆರಿಕನ್ನರಿಗೆ ಸೋತು ಶರಣಾಗತನಾದ. ಅಲ್ಲಿಗೆ ಅಮೆರಿಕದ ಸ್ವಾತಂತ್ರ್ಯ ಯುದ್ಧ ಮುಕ್ತಾಯಗೊಂಡು 1783ರಲ್ಲಿ ಆದ ಪ್ಯಾರಿಸ್ ಒಪ್ಪಂದದ ಪ್ರಕಾರ ಅಮೆರಿಕದ ವಸಾಹತುಗಳು ಸ್ವತಂತ್ರವೆಂದು ಬ್ರಿಟಿಷ್ ಸರ್ಕಾರ ಒಪ್ಪಿಕೊಂಡಿತು. ಅಮೆರಿಕ ಸಂಯುಕ್ತಸಂಸ್ಥಾನ ಹೀಗೆ ಜನ್ಮತಾಳಿತು. ಪೂರ್ವತೀರದ 13 ಪ್ರಾಂತ್ಯಗಳ ಈ ಸಾಹಸದಿಂದ ರೂಪುಗೊಂಡ ಸಂಯುಕ್ತಸಂಸ್ಥಾನ ಪೆಸಿಫಿಕ್ ಸಾಗರದವರೆಗೂ ವ್ಯಾಪಿಸಿ ಉತ್ತರ ಅಮೆರಿಕದ ಮಧ್ಯಭಾಗವನ್ನೆಲ್ಲ ಒಳಗೊಂಡಿದೆ.

ಬೆಳೆವಣಿಗೆ: ಬ್ರಿಟಿಷರ ವಿರುದ್ಧ ಹೋರಾಡಿದ 13 ವಸಾಹತುಗಳು ಶಾಶ್ವತವಾದ ಒಕ್ಕೂಟವೊಂದನ್ನೇರ್ಪಡಿಸಿಕೊಂಡುವು. ಫಿಲಡೆಲ್ಫಿಯದಲ್ಲಿ 1787ರಲ್ಲಿ ಕೆಲವು ದೇಶಾಭಿಮಾನಿಗಳೂ ರಾಜಕೀಯ ತಜ್ಞರೂ ಸಭೆಸೇರಿ ತಮ್ಮ ರಾಷ್ಟ್ರಕ್ಕೆ ಪ್ರಪಂಚದಲ್ಲಿ ಮತ್ತೆಲ್ಲಿಯೂ ಕಾಣಸಿಗದಂಥ ಒಂದು ಹೊಸ ರಾಜ್ಯಾಂಗವನ್ನು ರಚಿಸಿಕೊಂಡರು. ಇದರ ರಚನೆಯಲ್ಲಿ ಅಲೆಗ್ಸಾಂಡರ್ ಹ್ಯಾಮಿಲ್ಟನ್, ಜೇಮ್ಸ್ ಮ್ಯಾಡಿಸನ್, ಥಾಮಸ್ ಜೆಫರ್‌ಸನ್ ಮೊದಲಾದವರು ಬಹು ಮುಖ್ಯ ಪಾತ್ರವಹಿಸಿದ್ದರು. ಲೇಖರೂಪ ರಾಜ್ಯಾಂಗಗಳಲ್ಲಿ ಅಮೆರಿಕದ ರಾಜ್ಯಾಂಗವೇ ಮೊಟ್ಟಮೊದಲನೆಯದು. ಇದರ ನಿರ್ಮಾಪಕರು ಬಹುಮಟ್ಟಿಗೆ ರೂಸೋ ಮತ್ತು ಮಾಂಟೆಸ್ಕ್ಯೂ ವಿಚಾರಧಾರೆಗಳಿಂದ ಪ್ರೇರಿತರು. ಇವರ ರಾಜ್ಯಾಂಗದ ಪ್ರಕಾರ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ಪ್ರತ್ಯೇಕವಾಗಿದ್ದು, ಆಡಳಿತ ನಿರ್ವಹಣೆಯ ಜವಾಬ್ದಾರಿ ಕೇಂದ್ರದಲ್ಲಿ ಹೆಚ್ಚಿನ ಅಧಿಕಾರವನ್ನು ಹೊಂದಿರುವ ಅಧ್ಯಕ್ಷನ ಕೈಲಿದೆ. ರಾಷ್ಟ್ರಕ್ಕೆ ಶಾಸನ ಮಾಡುವ ಹೊಣೆಗಾರಿಕೆ ಪ್ರತಿನಿಧಿಸಭೆ ಮತ್ತು ಸೆನೆಟ್ಟುಗಳಿಗೆ ಸೇರಿದೆ. ಇವರ ರಾಜಕೀಯ ರಂಗದಲ್ಲಿ ಮುಖ್ಯವಾಗಿ ರಿಪಬ್ಲಿಕನ್ ಮತ್ತು ಡೆಮೊಕ್ರೆಟಿಕ್ ಎಂಬ ಎರಡು ಪಕ್ಷಗಳಿವೆ. ರಿಪಬ್ಲಿಕನ್ ಪಕ್ಷಕ್ಕೆ ಆನೆಯೂ ಡೆಮೊಕ್ರೆಟಿಕ್ ಪಕ್ಷಕ್ಕೆ ಕತ್ತೆಯೂ ಮುಖ್ಯ ಚಿಹ್ನೆಗಳು. ಶ್ರೇಷ್ಠನ್ಯಾಯಾಲಯ ರಾಷ್ಟ್ರದ ಉಚ್ಚತಮ ನ್ಯಾಯಾಲಯ. ಅಲ್ಲದೆ ಸಂಯುಕ್ತರಾಷ್ಟ್ರಕೂಟಕ್ಕೆ ಸೇರಿದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಪ್ರತ್ಯೇಕ ರಾಜ್ಯಾಂಗ ಮತ್ತು ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಆದರೂ ಅವು ಎಲ್ಲ ವಿಷಯಗಳಲ್ಲೂ ಸ್ವತಂತ್ರವಲ್ಲ. ಈ ರೀತಿ ರಚಿಸಿಕೊಂಡ ಸರ್ಕಾರ ವ್ಯವಸ್ಥೆಗೆ 1789ರಲ್ಲಿ ಜಾರ್ಜ್ ವಾಷಿಂಗ್‌ಟನ್ ಅವಿರೋಧವಾಗಿ ಸಂಯುಕ್ತಸಂಸ್ಥಾನಗಳ ಪ್ರಥಮಾಧ್ಯಕ್ಷನಾಗಿ (ಅವಧಿ 4 ವರ್ಷ) ಚುನಾಯಿತನಾದ. ಮತ್ತೊಂದು ಚುನಾವಣೆಯಲ್ಲಿ ಎರಡನೆಯ ಬಾರಿ ಚುನಾಯಿತನಾಗಿ ಅಧ್ಯಕ್ಷನಾಗಿದ್ದು 1797ರಲ್ಲಿ ಅಧಿಕಾರದಿಂದ ನಿವೃತ್ತಿ ಹೊಂದಿದ. ಅವನ ಜ್ಞಾಪಕಾರ್ಥವಾಗಿಯೇ ರಾಷ್ಟ್ರದ ರಾಜಧಾನಿಗೆ ವಾಷಿಂಗ್‌ಟನ್ ಎಂದು ಹೆಸರಿಡಲಾಗಿದೆ.

ಮನ್ರೋನೀತಿ: 1817–25 ಅವಧಿಯಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷನಾಗಿದ್ದ ಜೇಮ್ಸ್ ಮನ್ರೋ ಘೋಷಣೆಯೊಂದನ್ನು ಹೊರಡಿಸಿದ. ಅದು ಅಮೆರಿಕದ ಇತಿಹಾಸದಲ್ಲಿ ಮನ್ರೋತತ್ತ್ವವೆಂದು ಪ್ರಸಿದ್ಧವಾಗಿದೆ. ಒಂದನೆಯ ನೆಪೋಲಿಯನ್ನನ ಪತನಾನಂತರ ಯುರೋಪಿನ ರಾಜಕೀಯದಲ್ಲಿ ಮುಖ್ಯ ಪಾತ್ರ ವಹಿಸಿದ್ದ ಆಸ್ಟ್ರಿಯದ ಛಾನ್ಸಲರ್ ಮೆಟರ್ನಿಕ್ ಪ್ರಜಾಪ್ರಭುತ್ವದ ತತ್ತ್ವಗಳನ್ನು ಹತ್ತಿಕ್ಕಲೋಸುಗ, ಅದರ ವಿರುದ್ಧ ಹೋರಾಡುವ ತೀರ್ಮಾನವೊಂದನ್ನು ಕೈಗೊಂಡ. ಇದರ ಪ್ರಕಾರ ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳಲ್ಲಿದ್ದ ಸ್ಪೇನಿನ ವಸಾಹತುಗಳಲ್ಲಿ ಪುನಃ ನಿರಂಕುಶಾಧಿಕಾರವನ್ನು ಸ್ಥಾಪಿಸುವ ಪ್ರಯತ್ನ ನಡೆಯಲು ಅಲ್ಲಿ ದಂಗೆಗಳಾದುವು. ಈ ಸಂದರ್ಭದಲ್ಲಿ ಅಧ್ಯಕ್ಷ ಜೇಮ್ಸ್ ಮನ್ರೋ ಅಮೆರಿಕ ಅಮೆರಿಕನ್ನರಿಗೆ ಮಾತ್ರ ಸೇರಿದುದೆಂದು ಘೋಷಿಸಿದ. ಯುರೋಪಿನ ಯಾವ ರಾಜ್ಯವೇ ಆಗಲಿ ಅಮೆರಿಕದ ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕುವುದನ್ನು ಸಂಯುಕ್ತಸಂಸ್ಥಾನಗಳು ಸ್ನೇಹವಿರುದ್ಧ ಕ್ರಮವೆಂದು ಭಾವಿಸುತ್ತವೆಂದು ತಿಳಿಸಿದ. ಈ ಘೋಷಣೆ ಲ್ಯಾಟಿನ್ ಅಮೆರಿಕ ರಾಜ್ಯಗಳು ಸ್ವಾತಂತ್ರ್ಯ ಗಳಿಸಿಕೊಳ್ಳುವುದಕ್ಕೆ ಸಹಾಯಕವಾದುದಲ್ಲದೆ, ಅಮೆರಿಕ ಪ್ರಪಂಚದ ರಾಜಕೀಯ ವ್ಯವಹಾರದಿಂದ ದೂರವಿರುವುದಕ್ಕೂ ಕಾರಣವಾಯಿತು. ಆದರೆ ಇಂಥ ಪ್ರತ್ಯೇಕತೆಯ ತತ್ತ್ವ ವಿಕಾಸಗೊಳ್ಳುತ್ತಿರುವ ಈಚಿನ ವಿಶ್ವದಲ್ಲಿ ಸಾಧ್ಯವಾಗಲಿಲ್ಲ. ಅಧ್ಯಕ್ಷ ಥಿಯೊಡರ್ ರೂಸ್‌ವೆಲ್ಟ್ (1901–09) ಈ ತತ್ತ್ವವನ್ನು ನಿರಾಕರಿಸಿ ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳ ಆಂತರಿಕ ವ್ಯವಹಾರಗಳಲ್ಲಿ ಪ್ರವೇಶಿಸಿದ. ಆದರೂ ಮನ್ರೋತತ್ತ್ವ ಎರಡನೆಯ

ಮಹಾಯುದ್ಧಾನಂತರವೂ ಅಮೆರಿಕನ್ನರ ರಾಜಕೀಯ ಜೀವನದಮೇಲೆ ತನ್ನ ಪ್ರಭಾವ ಬೀರಿತು. ಅದರಿಂದಲೇ ಅಮೆರಿಕ ಪ್ರಪಂಚ ರಾಜಕೀಯದ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಹಿಂಜರಿಯುತ್ತಿತ್ತು.

**ಅಂತರ್ಯುದ್ಧ:** 1861–65. ನಾನಾ ದೇಶಿಯರು, ನಾನಾ ಜನಾಂಗದವರು, ವಿವಿಧ ವರ್ಣೀಯರನ್ನೊಳಗೊಂಡು ಪ್ರಗತಿ ಸಾಧಿಸತೊಡಗಿದ್ದ ಸಂಯುಕ್ತಸಂಸ್ಥಾನಕ್ಕೆ 1861–65ರ ಅವಧಿಯಲ್ಲಿ ವಿಷಮಪರಿಸ್ಥಿತಿಯೊಂದೊದಗಿ, ದೇಶವೇ ಇಬ್ಭಾಗವಾಗುವ ಭಯ ತಲೆದೋರಿತು. ರಾಜಧಾನಿಗೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿದ್ದ ರಾಜ್ಯಗಳಲ್ಲಿ ಕೆಲವು ಭಿನ್ನಾಭಿಪ್ರಾಯಗಳಿದ್ದುವು. ಅವುಗಳಲ್ಲಿ ಗುಲಾಮಗಿರಿಯ ರದ್ದಿನ ಪ್ರಶ್ನೆ ಮುಖ್ಯವಾದುದು. ರಾಜಧಾನಿಗೆ ಉತ್ತರ ಭಾಗದಲ್ಲಿದ್ದ ರಾಜ್ಯಗಳು ಕೈಗಾರಿಕೆಯಲ್ಲಿ ಮುಂದುವರಿದು ಗುಲಾಮಗಿರಿಯ ರದ್ದತಿ ಬಯಸಿದುವು. ಆದರೆ ದಕ್ಷಿಣದ ರಾಜ್ಯಗಳು ವ್ಯವಸಾಯವನ್ನೇ ಮುಖ್ಯ ಕಸಬನ್ನಾಗಿ ಮಾಡಿಕೊಂಡಿದ್ದರಿಂದ ರದ್ದತಿಯನ್ನು ನಿಷೇಧಿಸಿದುವು. 1829ರಲ್ಲಿ ಮೆಕ್ಸಿಕೊರಾಜ್ಯ ಗುಲಾಮಗಿರಿಯನ್ನು ನಿಷೇಧಿಸಿತು. ಇದನ್ನು ಟೆಕ್ಸಾಸ್ ವಿರೋಧಿಸಿ 1836ರಲ್ಲಿ ಸ್ವತಂತ್ರವಾಗಿ ಸಂಯುಕ್ತಸಂಸ್ಥಾನಗಳ ಕೂಟಕ್ಕೆ ಸೇರಲು ಅಪ್ಪಣೆ ಕೇಳಿತು. ಗುಲಾಮಗಿರಿಯನ್ನು ಹೊಂದಿದ್ದ ರಾಜ್ಯಗಳ ಪ್ರಭಾವ ಸಂಯುಕ್ತಸಂಸ್ಥಾನಗಳ ಕಾಂಗ್ರೆಸ್ಸಿನಲ್ಲಿ ಹೆಚ್ಚಾಗುವುದೆಂದು ತಿಳಿದು ಉತ್ತರದ ರಾಜ್ಯಗಳು ಅದನ್ನು ವಿರೋಧಿಸಿದುವು. ಗುಲಾಮಗಿರಿಯ ರದ್ದಿನ ಪ್ರಶ್ನೆ ಚುನಾವಣೆವರ್ಷವಾದ 1860ರಲ್ಲಿ ಉತ್ಕಟಪರಿಸ್ಥಿತಿಯನ್ನು ಮುಟ್ಟಿತು. ಅಧ್ಯಕ್ಷಪದವಿಗೆ ಅಭ್ಯರ್ಥಿಗಳಲ್ಲೊಬ್ಬನಾಗಿದ್ದ ಅಬ್ರಹಾಂ ಲಿಂಕನ್ ಗುಲಾಮಗಿರಿ ಅಮಾನುಷವೆಂದು ನಂಬಿ ಅದಕ್ಕೆ ವಿರೋಧಿಯಾಗಿದ್ದ. ಚುನಾವಣೆ ಅಬ್ರಹಾಂ ಲಿಂಕನ್ನನ ವಿಜಯದಲ್ಲಿ ಕೊನೆಗೊಂಡು 1861 ಮಾರ್ಚ್‍ನಲ್ಲಿ ಆತ ಅಧಿಕಾರ ವಹಿಸಿಕೊಂಡ. ದಕ್ಷಿಣದ ರಾಜ್ಯಗಳಾದ ವರ್ಜೀನಿಯ, ನಾರ್ತ್ ಕೆರೊಲಿನ, ಸೌತ್ ಕೆರೊಲಿನ, ಜಾರ್ಜಿಯ, ಫ್ಲಾರಿಡ, ಟೆನೆಸಿ, ಅಲಬಾಮ, ಮಿಸಿಸಿಪಿ, ಅರ್ಕಾನ್ಸಾಸ್, ಲೂಸಿಯಾನ ಮತ್ತು ಟೆಕ್ಸಾಸ್ ರಾಜ್ಯಗಳು ಸಂಯುಕ್ತ ರಾಜ್ಯಕೂಟ ದಿಂದ ಹೊರಬಂದು, ತಮ್ಮದೇ ಆದ ರಾಜ್ಯಾಂಗವನ್ನು ನಿರ್ಮಿಸಿಕೊಂಡು ಜೆಫರ್‌ಸನ್ ಡೇವಿಸ್‍ನನ್ನು ಅಧ್ಯಕ್ಷನನ್ನಾಗಿಯೂ ಜನರಲ್ ಲೀಯನ್ನು ಮುಖ್ಯ ಸೇನಾಪತಿ ಯನ್ನಾಗಿಯೂ ನೇಮಿಸಿಕೊಂಡವು. ಅಲ್ಲದೆ ತಮ್ಮ ರಾಷ್ಟ್ರಕ್ಕೆ ಕಾನ್ಫೆಡರಸಿ ಎಂದು ಹೆಸರನ್ನಿಟ್ಟು ಕೊಂಡರು. ಚಾರ್ಲ್ಸ್‍ಟನ್ ಬಂದರಿನಲ್ಲಿನ ಫೋರ್ಟ್‍ಸಮ್ಟರ್‌ನ ಒಂದು ಸಣ್ಣ ಘಟನೆಯಿಂದಾಗಿ ಉತ್ತರ ಮತ್ತು ದಕ್ಷಿಣ ರಾಜ್ಯಗಳಿಗೆ ಯುದ್ಧ ಪ್ರಾರಂಭವಾಯಿತು. ಅಧ್ಯಕ್ಷ ಲಿಂಕನ್ ಈ ಗಲಭೆಯನ್ನು ಹತ್ತಿಕ್ಕಲು 75,000 ಬಲದ ಸೈನ್ಯವನ್ನು ಸಜ್ಜುಗೊಳಿಸಿದ. ಅಂತೆಯೇ ದಕ್ಷಿಣದವರೂ ಸಿದ್ಧರಾದರು. ಕೈಗಾರಿಕೆಯಲ್ಲಿ ಮುಂದುವರಿದಿದ್ದ ಉತ್ತರದ ರಾಜ್ಯಗಳು ಅತ್ಯುತ್ತಮ ನೌಕಾಪಡೆಯನ್ನೂ ಹೊಂದಿದ್ದುವು. ದಕ್ಷಿಣದ ರಾಜ್ಯಗಳು ಹೆಚ್ಚಿನ ಸೇನಾಪಡೆಯನ್ನು ಹೊಂದಿದ್ದುವು. ಯುದ್ಧ ಪ್ರಾರಂಭವಾದ ಮೊದಲ ವರ್ಷಗಳಲ್ಲಿ ಯಾವುದೂ ಇತ್ಯರ್ಥವಾಗದೆ, 1864ರಲ್ಲಿ ಜನರಲ್ ಗ್ರಾಂಟ್ ಉತ್ತರದ ರಾಜ್ಯಗಳ ಮುಖ್ಯಸೇನಾಧಿಪತಿಯಾಗಿ ನೇಮಕಗೊಂಡ ಮೇಲೆ, ಅದೃಷ್ಟದೇವತೆ ಅವರನ್ನು ಒಲಿದಳು. ಕೊನೆಗೆ ದಕ್ಷಿಣದ ರಾಜ್ಯಗಳ ಸೈನ್ಯ ಅಪ್ಪೊಮಾಟಕ್ಸ್ ಎಂಬಲ್ಲಿ ಸೋತು ಶರಣಾಯಿತು. 1865ರಲ್ಲಿ ಅಂತರ್ಯುದ್ಧ ಉತ್ತರ ರಾಜ್ಯಗಳ ವಿಜಯದಲ್ಲಿ ಪರಿಸಮಾಪ್ತಿಗೊಂಡಿತು. ಈ ಯುದ್ಧದಲ್ಲಿ ಆದ ಸಾವುನೋವುಗಳು, ಕಷ್ಟನಷ್ಟಗಳು ಅಪರಿಮಿತ. ಅಧ್ಯಕ್ಷ ಅಬ್ರಹಾಂ ಲಿಂಕನ್ ಸಂಯುಕ್ತಸಂಸ್ಥಾನಗಳ ಏಕತೆಯನ್ನು ಕಾಪಾಡಿದ್ದಲ್ಲದೆ, ಗುಲಾಮಗಿರಿಯನ್ನು ರದ್ದುಮಾಡಿ ವಿಶ್ವ ಇತಿಹಾಸದಲ್ಲೇ ಅಮರನಾಗಿದ್ದಾನೆ. ದಕ್ಷಿಣದವರ ಮೇಲೆ ಯುದ್ಧ ಮಾಡಿದರೂ ಆತ ಅವರ ಹಿತಾಕಾಂಕ್ಷಿಯೂ ಆಗಿದ್ದ.

**ಸಂಯುಕ್ತ ಸಂಸ್ಥಾನಗಳ ಬೆಳವಣಿಗೆ:** 13 ರಾಜ್ಯಗಳಿಂದ ಆರಂಭವಾದ ಸಂಯುಕ್ತಸಂಸ್ಥಾನ ಕಾಲಾನುಕ್ರಮದಲ್ಲಿ 51 ರಾಜ್ಯಗಳಿಂದ ಕೂಡಿ, ಉತ್ತರದಲ್ಲಿ ಗ್ರೇಲೇಕ್ಸ್‍ನಿಂದ ಹಿಡಿದು ದಕ್ಷಿಣದಲ್ಲಿ ಮೆಕ್ಸಿಕೊ ಕೊಲ್ಲಿಯವರೆಗೂ ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರದಿಂದ ಹಿಡಿದು ಪಶ್ಚಿಮದಲ್ಲಿ ಪೆಸಿಫಿಕ್ ಸಾಗರದವರೆಗೂ ವಿಸ್ತರಿಸಿ ಬೃಹತ್ ರಾಷ್ಟ್ರವಾಯಿತು. ಇಂಥ ವಿಸ್ತರಣೆ ಬಹಳಮಟ್ಟಿಗೆ ಯುದ್ಧರಹಿತವಾಗಿತ್ತು. ಬೇರೆ ಬೇರೆ ರಾಷ್ಟ್ರಗಳ ಅಧೀನದಲ್ಲಿದ್ದ ಕೆಲವು ಪ್ರದೇಶಗಳನ್ನು ಕೊಂಡುಕೊಳ್ಳಲಾಯಿತು. ಮಿಸಿಸಿಪಿ ಅಥವಾ ಲೂಸಿಯಾನಕ್ಕೆ ಪಶ್ಚಿಮದಲ್ಲಿದ್ದ ವಿಶಾಲವಾದ ಭೂಭಾಗವನ್ನು ಫ್ರಾನ್ಸಿನ ಒಂದನೆಯ ನೆಪೋಲಿಯನ್ನನಿಂದ (1803), ಫ್ಲಾರಿಡವನ್ನು ಸ್ಪೇನಿನವರಿಂದ (1819) ಕೊಂಡರು. ಮೆಕ್ಸಿಕೊ ರಾಜ್ಯದಿಂದ ಹೊರಹೊರಟ (1836) ಟೆಕ್ಸಾಸ್ ರಾಜ್ಯದ ಅಧ್ಯಕ್ಷನಾಗಿದ್ದ (1846) ಜೇಮ್ಸ್ ನಾಕ್ಸ್ ಪೋಲ್ಕ್ ಮೆಕ್ಸಿಕೊದ ಮೇಲೆ ಯುದ್ಧವನ್ನು ಸಾರಿ ಅದರಿಂದ ನ್ಯೂ ಮೆಕ್ಸಿಕೊ ಮತ್ತು ಕ್ಯಾಲಿಫೋರ್ನಿಯಗಳನ್ನು ಸಂಯುಕ್ತಸಂಸ್ಥಾನಕ್ಕೆ ಸೇರಿಸಿದ. 19ನೆಯ ಶತಮಾನದ ಉತ್ತರಾರ್ಧದಲ್ಲಿ ಸಂಯುಕ್ತ ಸಂಸ್ಥಾನಗಳು ಇನ್ನೂ ವಿಸ್ತಾರಗೊಂಡವು. ಬೇರಿಂಗ್ ಕೊಲ್ಲಿಯಲ್ಲಿ ಮೀನು ಹಿಡಿಯುವ ಸಲುವಾಗಿ ಅಲಾಸ್ಕ ಪ್ರದೇಶ ವನ್ನು 1867ರಲ್ಲಿ ರಷ್ಯದವರಿಂದ ಕೊಂಡುಕೊಂಡರು. 1898 ಫೆಬ್ರವರಿಯಲ್ಲಿ ಸಂಯುಕ್ತ ಸಂಸ್ಥಾನದ ಮೈನೆ ಎಂಬ ನೌಕೆಯೊಂದು ಹವಾನ ಬಂದರಿನಲ್ಲಿ ಸುಟ್ಟು ಬೂದಿಯಾಗಲು ಅಧ್ಯಕ್ಷ ಮೆಕಿನ್ಲೆ ಸ್ಪೇನಿನ ಮೇಲೆ ಯುದ್ಧ ಘೋಷಿಸಿದ. ಈ ಯುದ್ಧ ಮೂರು ತಿಂಗಳು ನಡೆದು ಸ್ಪೇನಿನವರು ಸೋತರು. 1898ರ ಪ್ಯಾರಿಸ್ಸಿನ ಕರಾರಿನಂತೆ ಸ್ಪೇನಿನವರು ಕ್ಯೂಬದಿಂದ ಹಿಂದೆಗೆದುದಲ್ಲದೆ ಪೋರ್ಟೊರಿಕೊ, ಗುಅಮ್ ಮತ್ತು ಫಿಲಿಪೈನ್ ದ್ವೀಪಗಳನ್ನು ಸಂಯುಕ್ತ ಸಂಸ್ಥಾನಕ್ಕೆ ಬಿಟ್ಟುಕೊಟ್ಟರು. ಈ ಅವಧಿಯಲ್ಲಿಯೆ ಸಂಯುಕ್ತಸಂಸ್ಥಾನ ಹವಾಯ್ ದ್ವೀಪಗಳನ್ನು ವಶಪಡಿಸಿಕೊಂಡಿತು. ಈ ರೀತಿ ಸಂಯುಕ್ತಸಂಸ್ಥಾನ ವಿಶಾಲಗೊಂಡು 20ನೆಯ ಶತಮಾನದ ಆದಿಭಾಗದಲ್ಲಿ ಸಮುದ್ರಗಳಲ್ಲಿನ ರಾಜ್ಯಗಳ ಮೇಲೂ ತನ್ನ ಅಧಿಕಾರವನ್ನು ಹೊಂದಿತ್ತು. ಈ ರಾಜ್ಯಗಳನ್ನು ರಕ್ಷಿಸುವ ಸಲುವಾಗಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಅದರ ವ್ಯಾಪಾರ ವಾಣಿಜ್ಯಗಳ ಹಿತರಕ್ಷಣೆಗೂ ಸುಸಜ್ಜಿತವಾದ ಸೇನಾಪಡೆ ಮತ್ತು ನೌಕಾ ಪಡೆಯನ್ನು ನಿರ್ಮಿಸಿಕೊಂಡಿತು.

ಸಂಯುಕ್ತಸಂಸ್ಥಾನಗಳ ವಿಸ್ತರಣೆ ಕೇವಲ ಹೊಸ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದೇ ಆಗಿರದೆ, ಆ ಪ್ರದೇಶಗಳಲ್ಲಿ ಪ್ರಾಚೀನ ವ್ಯವಸಾಯ ಪದ್ಧತಿಯನ್ನು ಅನುಸರಿಸಿಕೊಂಡಿದ್ದ ಜನಗಳನ್ನು ಆಧುನಿಕ ವ್ಯವಸಾಯಪದ್ಧತಿ, ಕೈಗಾರಿಕೆ ಮತ್ತು ಬಂಡವಾಳಶಾಹಿ ಸಮಾಜದತ್ತ ಮಾರ್ಪಡಿಸುವುದೂ ಆಗಿತ್ತು. ಹೊಸಪ್ರಪಂಚದ ಹೇರಳವಾದ ನೈಸರ್ಗಿಕ ಸಂಪತ್ತು, ಜನರ ಶಾರೀರಿಕಸಾಮರ್ಥ್ಯ, ಕಷ್ಟಸಹಿಷ್ಣುತೆ, ದೃಢನಿರ್ಧಾರ ಹಾಗೂ ಅವರ ರಾಜಕೀಯ ಪ್ರತ್ಯೇಕ ತಾತ್ತ್ವ– ಇವು ಆ ದೇಶ ಐಶ್ವರ್ಯಭರಿತ ರಾಷ್ಟ್ರವಾಗಿ ಬೆಳೆಯಲು ಸಹಕಾರಿ ಯಾದುವು.

ಸಂಯುಕ್ತಸಂಸ್ಥಾನಗಳ ರಾಜಕೀಯ ಪ್ರತ್ಯೇಕತಾನೀತಿ 20ನೆಯ ಶತಮಾನದಲ್ಲಿ ಬದಲಾವಣೆ ಹೊಂದಿತು. 1914ರಲ್ಲಿ ಪ್ರಾರಂಭವಾದ ಮೊದಲ ಮಹಾಯುದ್ಧದಲ್ಲಿ ಜರ್ಮನರನ್ನು ಸೋಲಿಸುವ ಸಲುವಾಗಿ ಸಂಯುಕ್ತಸಂಸ್ಥಾನಗಳು ಮಿತ್ರರಾಷ್ಟ್ರಗಳ ಕಡೆ ಸೇರಬೇಕಾಯಿತು. ಇದರಿಂದ ಜರ್ಮನ್ನರ ಸೋಲು ನಿಶ್ಚಿತವಾಗಿ 1918 ನವೆಂಬರಿನಲ್ಲಿ ಜರ್ಮನ್ನರು ಶರಣಾಗತರಾದರು.

ಒಂದನೆಯ ಮಹಾಯುದ್ಧದಿಂದ ಇಡೀ ಪ್ರಪಂಚದ ಮಾನವಜನಾಂಗವೇ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು. ಅಂದಿನ ಪ್ರಪಂಚನಾಯಕರುಗಳಲ್ಲಿ ಒಬ್ಬನಾಗಿದ್ದ ಅಮೆರಿಕದ ಅಧ್ಯಕ್ಷ ವುಡ್ರೊ ವಿಲ್ಸನ್ (1913–21) ಪ್ರಪಂಚದಲ್ಲಿ ಯುದ್ಧವನ್ನು ತಪ್ಪಿಸಿ, ಮಾನವಕೋಟಿಗೆ ಶಾಂತಿಯನ್ನು ದೊರಕಿಸಿಕೊಡುವ ಸಲುವಾಗಿ ಇತರ ಪ್ರಮುಖ ರಾಷ್ಟ್ರಗಳ ಸೌಜನ್ಯದಿಂದ ಲೀಗ್ ಆಫ್ ನೇಷನ್ಸ್ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿದ. ಇದು ಪ್ರಜಾಪ್ರಭುತ್ವದ ರಕ್ಷಣೆ ಮತ್ತು ವಿಶ್ವಶಾಂತಿ ಸ್ಥಾಪನೆಯ ಜವಾಬ್ದಾರಿಯನ್ನು ಹೊತ್ತು ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿತು. ಆದರೆ 1939ರಲ್ಲಿ ಪ್ರಾರಂಭವಾದ ದ್ವಿತೀಯ ಮಹಾಯುದ್ಧ (1939–45) ಮಾನವಕೋಟಿಯನ್ನು ಘೋರ ದುರಂತಗಳಿಗೀಡುಮಾಡಿತು. ಈ ಯುದ್ಧದಲ್ಲಿ ಜಪಾನ್ ಜರ್ಮನಿಯ ಪಕ್ಷವನ್ನು ವಹಿಸಿ ಅಮೆರಿಕನ್ನರ ನೆಲೆಗಳ ಮೇಲೆ ಬಾಂಬುಧಾಳಿ ನಡೆಸಿತು. ಉದ್ರಿಕ್ತಗೊಂಡ ಅಮೆರಿಕನ್ನರು ಮಿತ್ರರಾಷ್ಟ್ರಗಳ ಪಕ್ಷವನ್ನು ವಹಿಸಿ ಶತ್ರುಗಳ ಸೋಲಿಗೆ ಅಪಾರವಾಗಿ ಸಹಾಯಮಾಡಿದ್ದಲ್ಲದೆ, ಜಪಾನೀಯರ ಮೇಲೆ ಯುದ್ಧವನ್ನು ಘೋಷಿಸಿ ಆ ರಾಜ್ಯದ ಮುಖ್ಯನಗರಗಳಾದ ನಾಗಸಾಕಿ ಮತ್ತು ಹಿರೋಷಿಮಗಳ ಮೇಲೆ 1945ರಲ್ಲಿ ಆಟಂಬಾಂಬುಗಳನ್ನು ಹಾಕಿ ನಿಮಿಷಾರ್ಧದಲ್ಲಿ ಲಕ್ಷಾಂತರ ಜನರನ್ನು ಬೂದಿಮಾಡಿ ಜಪಾನೀಯರ ಪ್ರಾಬಲ್ಯವನ್ನು ಮುರಿದರು. ಅನಂತರ ಜಪಾನ್, ಜರ್ಮನಿ ಮತ್ತು ಇಟಲಿಗಳು ಶರಣಾಗತವಾಗಿ ಎರಡನೆಯ ಮಹಾಯುದ್ಧ ಕೊನೆಗೊಂಡಿತು.

ಯುದ್ಧದಿಂದ ಬಳಲಿದ ಜನತೆಗೆ ಸುಖಶಾಂತಿಗಳನ್ನು ದೊರಕಿಸಿಕೊಡಬೇಕೆಂದು ಅಧ್ಯಕ್ಷನಾಗಿದ್ದ ಫ್ರಾಂಕ್ಲಿನ್ ರೂಸ್‍ವೆಲ್ಟ್ (1933–45) ಮತ್ತು ಇತರ ಮಹಾವ್ಯಕ್ತಿಗಳ ಸಾಹಸದ ಫಲವಾಗಿ ವಿಶ್ವಸಂಸ್ಥೆ ಜನ್ಮತಾಳಿತು. ಈ ಸಂಸ್ಥೆ ಮಾನವಜನಾಂಗದ ಕಲ್ಯಾಣಕ್ಕಾಗಿ ಜನ್ಮವೆತ್ತಿದ ಸಂಸ್ಥೆ.ಪ್ರಪಂಚದಲ್ಲಿ ಯುದ್ಧಗಳನ್ನು ತಪ್ಪಿಸಿ ಶಾಂತಿಯನ್ನು ಸ್ಥಾಪಿಸುವುದೇ ಇದರ ಪರಮೋದ್ದೇಶ. ಇದರ ಪ್ರಧಾನ ಕಛೇರಿ ಅಮೆರಿಕದ ನ್ಯೂಯಾರ್ಕ್ ನಗರದಲ್ಲಿದೆ.

ಕಳೆದ ಒಂದು ಶತಮಾನದ ಕಾಲದಲ್ಲಿ ಕೈಗಾರಿಕೆ, ವ್ಯಾಪಾರ, ವಿಜ್ಞಾನ, ಸಾಹಿತ್ಯ ಮುಂತಾದ ಎಲ್ಲ ರಂಗಗಳಲ್ಲೂ ಸಂಯುಕ್ತ ಸಂಸ್ಥಾನ ಗಣನೀಯ ಪ್ರಗತಿಯನ್ನು ಸಾಧಿಸಿದೆ; ಈ ಸಾಧನೆಗಳಿಗೆ ಅವರ ದೃಢನಿರ್ಧಾರ, ಕಷ್ಟಸಹಿಷ್ಣುತೆಗಳೇ ಕಾರಣ. ಇಂಥ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವ ಅಮೆರಿಕನ್ನರು ಪ್ರಪಂಚದಲ್ಲೇ ಅತ್ಯಂತ ಮುಂದುವರಿದ ಜನಾಂಗದವರಾಗಿದ್ದಾರೆ. ಇಂದು ಬಂಡವಾಳಶಾಹಿ ಮತ್ತು ಸಮಾಜವಾದವೆಂದು ವಿಭಜನೆಗೊಂಡಿರುವ ವಿಶ್ವದಲ್ಲಿ ಅಮೆರಿಕನ್ನರು ಬಂಡವಾಳಶಾಹಿವಾದದ ಪ್ರತಿಪಾದಕರಾಗಿಯೂ ರಷ್ಯನ್ನರು ಸಮಾಜವಾದದ ಪ್ರತಿಪಾದಕರಾಗಿಯೂ ಪ್ರತಿಸ್ಪರ್ಧಿಗಳಾಗಿದ್ದರು. ಇಬ್ಬರೂ ತಮ್ಮ ಉಗ್ರವಾದ ಗಳನ್ನು ಕಾಲಕ್ರಮೇಣ ಬದಲಿಸಿಕೊಳ್ಳುತ್ತ ವಿಶ್ವಕಲ್ಯಾಣದತ್ತ ಸಾಗುತ್ತಿದ್ದಾರೆ.

ರಷ್ಯದ ಪತನಾನಂತರ ಮುಕ್ತಾಯಗೊಂಡ ಶೀತಲಸಮರ ಮತ್ತೊಂದು ಬಗೆಯ ಜಾಗತಿಕ ಸಮಸ್ಯೆಯನ್ನು ತಂದೊಡ್ಡಿದೆ. ಅದರಲ್ಲಿ ಪ್ರಮುಖವಾಗಿ ಇತ್ತೀಚೆಗೆ ಅಮೆರಿಕ ಸಂಯುಕ್ತ ಸಂಸ್ಥಾನದ ಅಧಿಕಾರವರ್ಗದವರ ರಾಜನೀತಿ ಪ್ರಮುಖವಾಗಿ ಪಶ್ಚಿಮ ಏಷ್ಯದ ತೈಲಸಂಪತ್ತಿನ ರಾಷ್ಟ್ರಗಳೊಡನೆ ಅವರು ಅನುಸರಿಸುತ್ತಿರುವ ಆರ್ಥಿಕನೀತಿ ಇಡೀ ವಿಶ್ವದ ಅಸಮಾಧಾನಕ್ಕೆ ಕಾರಣವಾಗುತ್ತಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಅಮೆರಿಕ ನಡೆಸುತ್ತಿರುವ ರಾಜಕೀಯ ತಂತ್ರಗಾರಿಕೆಗಳು ಭಯೋತ್ಪಾದನೆ ಅಂತಾರಾಷ್ಟ್ರೀಯ ಬೃಹತ್ ಸಮಸ್ಯೆಯಾಗಿ ಬೆಳೆಯಲು ಕಾರಣವಾಗಿದೆ. ಕೊಲ್ಲಿಯುದ್ಧಗಳ ಪರಿಣಾಮಗಳು ಪ್ರಮುಖವಾಗಿ ಅಮೆರಿಕದ ನ್ಯೂಯಾರ್ಕ್ ನಗರದ ಡಬ್ಲ್ಯುಟಿಸಿ (ವಿಶ್ವ ವಾಣಿಜ್ಯ ಕೇಂದ್ರ) ಅವಳಿ ಗೋಪುರಗಳ ಧ್ವಂಸ, ಇರಾಕಿನ ಮಾಜಿ ಅಧ್ಯಕ್ಷ ಸದ್ದಾಂ ಹುಸೇನ್‍ನ ಪತನ, ಬಿನ್ ಲ್ಯಾಡೆನ್‍ನಂತಹ ಜಾಗತಿಕ ಭಯೋತ್ಪಾದಕನ ಅನಾಗರಿಕ ಕೃತ್ಯ ಮುಂತಾದವುಗಳು ಅಮೆರಿಕದ ಇಂದಿನ ಜಾಗತಿಕ ಪ್ರಾಮುಖ್ಯತೆಯ ಇಳಿಮುಖಕ್ಕೆ ಕಾರಣಗಳಾಗಿವೆ. (ಆರ್.ಜಿ.ಎಸ್.)

**ಅಮೋಘವರ್ಷ I:** ರಾಷ್ಟ್ರಕೂಟ ವಂಶದ ರಾಜ (ಸು.814-78). 3ನೆಯ ಗೋವಿಂದನ ಮಗ. ಇವನ ಮೊದಲ ಹೆಸರು ಶರ್ಮ. ಅಮೋಘವರ್ಷ ಎಂಬುದು ಪಟ್ಟಾಭಿಷಿಕ್ತನಾದ ಮೇಲೆ ಇಟ್ಟುಕೊಂಡ ಹೆಸರು. ಈತನಿಗೆ ನೃಪತುಂಗ, ರಟ್ಟಮಾರ್ತಾಂಡ, ವೀರನಾರಾಯಣ, ಅತಿಶಯ ಧವಳ ಎಂಬ ಬಿರುದುಗಳೂ ಇದ್ದವು.

ಗೋವಿಂದ ವಿಂಧ್ಯ ಪರ್ವತದ ತಪ್ಪಲಲ್ಲಿ ಶ್ರೀಭವನದಲ್ಲಿ ಬೀಡುಬಿಟ್ಟಿದ್ದಾಗ ಅಮೋಘ ವರ್ಷ ಹುಟ್ಟಿದನೆಂದು ಸಂಜಾನ ಶಾಸನದಲ್ಲಿ ಹೇಳಿದೆ. 803ರ ಮಣ್ಣೆಯ ಶಾಸನದಲ್ಲಿ ಗೋವಿಂದ ಶ್ರೀಭವನದಲ್ಲಿದ್ದ ಸಂಗತಿ ಉಕ್ತವಾಗಿದೆಯಾದ ಕಾರಣ ಅಮೋಘವರ್ಷ ಸು.800ರಲ್ಲಿ ಹುಟ್ಟಿರಬಹುದು. 814ರಲ್ಲಿ ಗೋವಿಂದ ಮೃತನಾದ. ಆಗ ಪಟ್ಟಕ್ಕೆ ಬಂದ ಅಮೋಘವರ್ಷ 14 ವರ್ಷದ ಬಾಲಕ. ಆದರೆ ಗೋವಿಂದ ತೀರಿಕೊಳ್ಳುವ ಮೊದಲು ಗುಜರಾತಿನಲ್ಲಿದ್ದ ತನ್ನ ತಮ್ಮನ ಮಗ ಕರ್ಕನನ್ನು ರಾಜಧಾನಿಗೆ ಕರೆಸಿ, ಅಮೋಘವರ್ಷ ವಯಸ್ಸಿಗೆ ಬರುವವರೆಗೂ ರಾಜ್ಯಸೂತ್ರಗಳನ್ನು ನಿರ್ವಹಿಸುವಂತೆ ವ್ಯವಸ್ಥೆ ಮಾಡಿದ್ದ.

ಅಮೋಘವರ್ಷನ ಆಳಿಕೆಯ ಮೊದಲ ಮೂರು ವರ್ಷಗಳಲ್ಲಿ ಯಾವ ಘಟನೆಗಳು ಆಗಲಿಲ್ಲ. ಅನಂತರ ಈತ ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ಸಾಮ್ರಾಟ ಇನ್ನೂ ಹದಿವಯಸ್ಸಿನವನಾದ್ದರಿಂದ, ರಾಷ್ಟ್ರಕೂಟ ಮತ್ತು ಚಾಳುಕ್ಯ ಮನೆತನದ ಹಲವರು ಬಂಡೆದ್ದು ರಾಜ್ಯಾಕ್ರಮಣ ಮಾಡುವ ಸನ್ನಾಹದಲ್ಲಿದ್ದರು (ಸು.817). ಇವರಲ್ಲಿ ಪ್ರಾಯಶಃ ಸ್ತಂಭನ ಮಗ ಶಂಕರಗಣ ಮತ್ತು ಹಿಂದೆ ಗೋವಿಂದನಿಂದ ಪರಾಜಿತನಾಗಿದ್ದ ಪೂರ್ವ ಚಾಳುಕ್ಯ ರಾಜ ಇಮ್ಮಡಿ ವಿಜಯಾದಿತ್ಯ ಮುಖ್ಯ ಪಾತ್ರ ವಹಿಸಿರಬೇಕು. ಇವರ ಕಾರ್ಯಚರಣೆಗಳಿಂದ ಅಮೋಘವರ್ಷ ಕೆಲಕಾಲ ರಾಜ್ಯವನ್ನು ತ್ಯಜಿಸಿಹೋಗಬೇಕಾದ ಪರಿಸ್ಥಿತಿಯೂ ಒದಗಿದಂತೆ ತೋರುತ್ತದೆ. ಆದರೆ, ವಡೋದರ ತಾಮ್ರಶಾಸನದಲ್ಲಿ ಹೇಳಿರುವಂತೆ, ಗುಜರಾತಿನ ರಾಜ ಕರ್ಕ ಬಂಡುಕೋರರನ್ನು ಗೆದ್ದು ಅಮೋಘವರ್ಷನನ್ನು ಸಿಂಹಾಸನಕ್ಕೇರಿಸಿದ (ಸು.821). ಈ ಕಾಲದಲ್ಲಿ ಪಾತಾಮಲ್ಲ (ಈತನೇ ಕರ್ಕನಿರಬಹುದು) ಶತ್ರುಗಳನ್ನು ನಿಗ್ರಹಿಸಿ, ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ ಅಮೋಘವರ್ಷನನ್ನು ಅವನ ವಂಶಾನುಗತ ಸಿಂಹಾಸನದ ಮೇಲೆ ಉಪಸ್ಥಿತಗೊಳಿಸಿದನೆಂದು ಸಂಜಾನ ತಾಮ್ರಶಾಸನ ತಿಳಿಸುತ್ತದೆ.

ಅಮೋಘವರ್ಷನ ಆಳಿಕೆಯ ಮೊದಲ ವರ್ಷಗಳಲ್ಲಿ ರಾಜ್ಯದೊಳಗಲ್ಲದೆ ಹೊರಗೂ ಶತ್ರುವರ್ಧನೆಯಾಗುತ್ತಿತ್ತು. ಗಂಗ ಎರಡನೆಯ ಶಿವಮಾರ ಸಾಮ್ರಾಟನ ಮೇಲೆ ದಂಗೆಯೆದ್ದ (ಸು.816). ಪೂರ್ವಚಾಳುಕ್ಯವಂಶದ ಇಮ್ಮಡಿ ವಿಜಯಾದಿತ್ಯ ಸಹ ಸ್ವತಂತ್ರನಾಗಿದ್ದ. ಆದರೆ ಅಮೋಘವರ್ಷ ಕರ್ಕ ಮತ್ತು ದಂಡನಾಯಕರ ಸಹಾಯದಿಂದ ಶಿವಮಾರನನ್ನು ಸೋಲಿಸಿದ. ಆತ ಕಾಗಿಮೊಗೆಯೂರು ಎಂಬಲ್ಲಿ ನಡೆದ ಯುದ್ಧದಲ್ಲಿ ಮಡಿದನೆಂದು ತೋರುತ್ತದೆ. ಇವನ ಮಗ ರಾಚಮಲ್ಲ ಪುನಃ ತನ್ನ ರಾಜ್ಯದ ದಕ್ಷಿಣ ಭಾಗಗಳನ್ನು ರಾಷ್ಟ್ರಕೂಟರಿಂದ ಗಳಿಸಿಕೊಂಡ. ಅತ್ತ ವಿಜಯಾದಿತ್ಯ ಸು.15 ವರ್ಷಗಳ ಕಾಲ ನಿರ್ಬಾಧಿತನಾಗಿ ಉಳಿದ. ಸು.830ರಲ್ಲಿ ಅಮೋಘವರ್ಷ ವೆಂಗಿಯ ಮೇಲೆ ನಡೆದು ವಿಂಗವಲ್ಲೀ ಕದನದಲ್ಲಿ ಚಾಳುಕ್ಯರನ್ನು ಸದೆಬಡಿದು ರಾಜ್ಯಾಕ್ರಮಣ ಮಾಡಿದ. ದಿನೇದಿನೇ ಪ್ರವರ್ಧಮಾನಕ್ಕೆ ಬರುತ್ತಿದ್ದ ಗಂಗ ರಾಚಮಲ್ಲನನ್ನು ಅಮೋಘವರ್ಷನ ದಂಡನಾಯಕ ಬಂಕೆಯ ಕಾವೇರಿಯಿಂದ ದಕ್ಷಿಣಕ್ಕೆ ಓಡಿಸಿದ (ಸು.830). ಇತ್ತ ಗಂಗ ಚಾಳುಕ್ಯರ ತೊಂದರೆಗಳನ್ನು ನಿವಾರಿಸಿಕೊಳ್ಳುತ್ತಿದ್ದಂತೆಯೇ ಗುಜರಾತಿನ ರಾಷ್ಟ್ರಕೂಟ ಮನೆತನದ ಅರಸ 1ನೆಯ ಧ್ರುವ ಇವನ ಮೇಲೆ ಯುದ್ಧ ಸಾರಿದ. ಹಿಂದೆ ಈ ಮನೆತನದವರು ನಿಷ್ಠಾವಂತ ಸಾಮಂತರಾಗಿದ್ದರೂ ಈ ಕಲಹವೇಕೆ ಉಂಟಾಯಿತೆಂದು ತಿಳಿಯುವುದಿಲ್ಲ. ಅಮೋಘವರ್ಷ ಧ್ರುವನನ್ನು ಸೋಲಿಸಿದರೂ ಅವನ ಮಗ ಅಕಾಲವರ್ಷ ಪುನಃ ಪ್ರಬಲನಾದ. ಆಗ ಅಮೋಘವರ್ಷ ದಕ್ಷಿಣದಲ್ಲಿ ಕಾರ್ಯನಿರತನಾಗಿದ್ದ ತನ್ನ ನೆಚ್ಚಿನ ದಂಡನಾಯಕ ಬಂಕೆಯನನ್ನು ಗುಜರಾತಿಗೆ ಕಳುಹಿಸಿದ. ಈ ಹೊತ್ತಿಗೆ ಗುಜರಾತದ ರಾಷ್ಟ್ರಕೂಟ ಸಿಂಹಾಸನವನ್ನೇರಿದ್ದ 2ನೆಯ ಧ್ರುವನನ್ನು ಬಂಕೆಯ ಸೋಲಿಸಿದ. ಆದರೆ ದಕ್ಷಿಣದಲ್ಲಿ ಬಂಕೇಶನಂಥ ನಾಯಕರಿಲ್ಲದ ಸಂದರ್ಭದಲ್ಲಿ ಗಂಗ ರಾಚಮಲ್ಲ ಮತ್ತೆ ಗಂಗವಾಡಿಯ ಬಹುಭಾಗವನ್ನು ಆಕ್ರಮಿಸಿದ. ಪೂರ್ವದಲ್ಲಿ ವೆಂಗಿಯ 3ನೆಯ ವಿಜಯಾದಿತ್ಯನ ಸೇನಾನಿ ಪಾಂಡಿರಂಗ ರಾಷ್ಟ್ರಕೂಟರನ್ನು ಹಿಮ್ಮೆಟ್ಟಿಸಿ, ವಿಜಯಾದಿತ್ಯನಿಗೆ ವೆಂಗಿ ರಾಜ್ಯವನ್ನು ಸಾಧಿಸಿಕೊಟ್ಟ. ಪೂರ್ವ ಚಾಳುಕ್ಯರು ರಾಷ್ಟ್ರಕೂಟ ರಾಜ್ಯಕ್ಕೆ ಮತ್ತೆ ಮುನ್ನುಗ್ಗಲಿಲ್ಲವಾಗಿ, ಅಮೋಘವರ್ಷನೂ ತೆಪ್ಪಗಾದ.

ಹಲವು ಕಡೆಗಳಿಂದ ತೊಂದರೆಗಳನ್ನು ಸತತವಾಗಿ ಎದುರಿಸಬೇಕಾಗಿ ಬಂದ ಅಮೋಘವರ್ಷ ಯುದ್ಧಕ್ಕಿಂತಲೂ ಸಂಧಾನ ಹೆಚ್ಚು ಅಪೇಕ್ಷಿತವೆಂದು ಅರಿತಿರಬೇಕು. ಸು.860ರಲ್ಲಿ ತನ್ನ ಮಗಳು ಚಂದೊಬ್ಬಲಬ್ಬೆಯನ್ನು ಗಂಗ ರಾಜಕುಮಾರ ಬೂತುಗನಿಗೆ ಮದುವೆ ಮಾಡಿಕೊಟ್ಟು ಅವರೊಡನೆ ಶಾಂತಿ ಸಾಧಿಸಿಕೊಂಡ ಹಾಗೆಯೇ ಚೇದಿ ರಾಜಕುಮಾರಿಯನ್ನು ತನ್ನ ಮಗನಿಗೆ ತಂದುಕೊಂಡು ಅತ್ತಲೂ ಸುಸಂಬಂಧವನ್ನು ಬೆಳೆಸಿದ. ಮಾನ್ಯಖೇಟದ ಹಾಗೂ ಗುಜರಾತಿನ ರಾಷ್ಟ್ರಕೂಟ ವಂಶದವರಿಗೆ, ಉತ್ತರದಲ್ಲಿ ಸಾಮಾನ್ಯ ವೈರಿಗಳಾಗಿದ್ದ ಗೂರ್ಜರ ಪ್ರತಿಹಾರರು ಇವರ ಮೇಲೆ ಬೀಳುವ ಸನ್ನಾಹವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಅಮೋಘವರ್ಷ ಮತ್ತು ಗುಜರಾತಿನ ರಾಷ್ಟ್ರಕೂಟ 2ನೆಯ ಧ್ರುವ ಒಂದುಗೂಡಿದರು. ಜ್ಞಾತಿಕಲಹ ಕೊನೆಗೊಂಡಿತು (ಸು.860). ಕ್ಷಾತ್ರಸಾಧನೆಗಳ ದೃಷ್ಟಿಯಿಂದ ಅಮೋಘವರ್ಷನ ಆಳಿಕೆ ಇವನ ಪಿತೃ, ಪಿತಾಮಹರ ಹಿರಿಮೆಯನ್ನು ಮುಟ್ಟಲಾರದಾದರೂ ಇತರ ರಂಗಗಳಲ್ಲಿ ಈತನು ನೀಡಿರುವ ಕಾಣಿಕೆ ಗಮನಾರ್ಹವಾದವು. ತನ್ನ 64 ವರ್ಷದ ದೀರ್ಘ ಆಳಿಕೆಯ ಕಾಲದಲ್ಲಿ ಸತತವಾಗಿ ಶತ್ರುಬಾಧೆಯನ್ನು ಈತ ಅನುಭವಿಸಿದರೂ ಪ್ರಜಾಕ್ಷೇಮಕ್ಕಾಗಿ, ಧರ್ಮೋದ್ಧಾರಕ್ಕಾಗಿ ಬಹು ಆಸಕ್ತಿಯನ್ನು ವಹಿಸಿದ್ದಂತೆ ತೋರುತ್ತದೆ. ಲೋಕೋಪದ್ರವ ಶಾಂತಿಗೆಂದು ತನ್ನ ಎಡಗೈ ಬೆರಳನ್ನೇ ಮಹಾಲಕ್ಷ್ಮಿಗೆ ಬಲಿಯಾಗಿ ಕೊಟ್ಟನೆಂದು ಇವನ ಸಂಜಾನ ತಾಮ್ರಶಾಸನದಲ್ಲಿ ಹೇಳಿದೆ. ಇವನ ತ್ಯಾಗದ ವಿಷಯ ಹಲವು ಕಾಲದವರೆಗೆ ಜನರ ನೆನಪಿನಲ್ಲಿದ್ದು, 17ನೆಯ ಶತಮಾನದ ಭಟ್ಟಾಕಳಂಕ ಈತನನ್ನು ಶಿಬಿ, ದಧೀಚಿಯರಿಗೆ ಹೋಲಿಸಿದ್ದಾನೆ. ಈತನ ಧರ್ಮನಿಷ್ಠೆ ಬಹು ಘನತರವಾಗಿದ್ದು, ಹಲವು ಬಾರಿ ಲೋಕವ್ಯವಹಾರದಲ್ಲಿ ಆಸಕ್ತಿಯನ್ನು ಕಳೆದುಕೊಂಡು ರಾಜ್ಯತ್ಯಾಗ ಮಾಡಿದಂತೆ ಕಾಣುತ್ತದೆ. ಅಮೋಘವರ್ಷ ಜೈನಮತಾವಲಂಬಿ. ಜಿನಸೇನಾಚಾರ್ಯ ಈತನ ಗುರು ಎಂಬ ವಿಷಯ ಗುಣಭದ್ರಾಚಾರ್ಯರ ಉತ್ತರ ಪುರಾಣ ದಿಂದ ತಿಳಿಯುತ್ತದೆ. ಇವನ ಮಗನಿಗೆ ಗುರುವಾಗಿದ್ದ ಗುಣಭದ್ರಾಚಾರ್ಯರೂ ಇವನ ಭಕ್ತಿ ಗೌರವಗಳಿಗೆ ಪಾತ್ರರಾಗಿದ್ದರು.

ಅಮೋಘವರ್ಷ ಸಾಹಿತ್ಯಪೋಷಕನೂ ಆಗಿದ್ದ. ಪ್ರಶ್ನೋತ್ತರಮಾಲಿಕಾ ಎಂಬ ಸಂಸ್ಕೃತ ಗ್ರಂಥವನ್ನೂ ಪ್ರಸಿದ್ಧ ಕವಿರಾಜಮಾರ್ಗವನ್ನೂ ಈತನೇ ಬರೆದನೆಂಬ ಹೇಳಿಕೆಗಳಿದ್ದರೂ ಇವು ವಿವಾದಾಸ್ಪದ. ಈತನ ಆಶ್ರಯದಲ್ಲಿದ್ದ ಶ್ರೀವಿಜಯ ಮೊದಲಾದ ಕವಿಗಳು ಕೃತಿರಚನೆ ಮಾಡಿದರು. ಶಾಕಟಾಯನನೆಂಬ ಜೈನ ವೈಯಾಕರಣಿ ಅಮೋಘವೃತ್ತಿಯನ್ನೂ ಮಹಾವೀರಾಚಾರ್ಯ ಗಣಿತಸಾರಸಂಗ್ರಹವನ್ನೂ ಇವನ ಕಾಲದಲ್ಲಿ ರಚಿಸಿದರು. ಇವನ ಗುರುಗಳಾದ ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಪೂರ್ವಪುರಾಣ ಮತ್ತು ಪಾರ್ಶ್ವಾಭ್ಯುದಯ ಗ್ರಂಥಗಳನ್ನೂ ಜಯಧವಲಾ ಟೀಕೆಯನ್ನೂ ರಚಿಸಿದ್ದಾರೆ. ಇವರ ಶಿಷ್ಯ ಗುಣಭದ್ರಾಚಾರ್ಯರು ಪೂರ್ವಪುರಾಣವನ್ನು ಪೂರ್ಣಗೊಳಿಸಿದರಲ್ಲದೆ ಉತ್ತರಪುರಾಣವನ್ನೂ ರಚಿಸಿದ್ದಾರೆ.

ಅಮೋಘವರ್ಷನ ಮಗ ಕೃಷ್ಣ. ಚಂದೊಬ್ಬಲಬ್ಬೆ ಮತ್ತು ರೇವಕನಿಮ್ಮಡಿ ಹೆಣ್ಣು ಮಕ್ಕಳು. ಇವರಲ್ಲಿ ಪ್ರಾಯಶಃ ಹಿರಿಯವಳಾದ ರೇವಕನಿಮ್ಮಡಿ ಗಂಗರಾಜಕುಮಾರನೊಬ್ಬನನ್ನು ಮದುವೆಯಾಗಿ ರಾಯಚೂರು ಪ್ರದೇಶದಲ್ಲಿ ಆಳುತ್ತಿದ್ದಳು (ಸು.837). *

**ಅಮ್ರೇಲಿ:** ಗುಜರಾತ್ ರಾಜ್ಯದ ಅಮ್ರೇಲಿ ಜಿಲ್ಲೆಯಲ್ಲಿರುವ ಚಾರಿತ್ರಿಕ ಕಾಲದ ವಸತಿ ನೆಲೆ. ವಲ್ಲಭಿಯ ರಾಜ 2ನೆಯ ಧಾರಸೇನನ ತಾಮ್ರಶಾಸನದಲ್ಲಿ ಅಮ್ರಿಲಿಕ ಎಂದು ಉಲ್ಲೇಖಗೊಂಡಿದೆ. 1934-44ರಲ್ಲಿ ಎಚ್.ಆರ್. ಶಾಸ್ತ್ರೀ ಹಾಗೂ ಎ.ಎಸ್. ಗದ್ರೆ ಮತ್ತು 1952-53ರಲ್ಲಿ ಎಸ್.ಆರ್. ರಾವ್ ಇಲ್ಲಿ ಉತ್ಖನನ ನಡೆಸಿದಾಗ ಪ್ರ.ಶ.ಪೂ. 1ನೆಯ ಶತಮಾನದಿಂದ ಪ್ರ.ಶ. 8ನೆಯ ಶತಮಾನದವರೆಗಿನ ಅವಶೇಷಗಳು ಬೆಳಕಿಗೆ ಬಂದವು. ಅಲ್ಲದೆ ತಾಮ್ರ-ಶಿಲಾಯುಗದ ತೆಳುವಾದ ವಸತಿ ಪದರವೂ ಕಂಡುಬಂದಿತು. ಮುಖ್ಯ ಪ್ರಾಚ್ಯಾವಶೇಷವೆಂದರೆ ಪ್ರ.ಶ.ಪೂ. 1ನೆಯ ಶತಮಾನದ ಸಮಾಧಿಗಳು. ದಹನ ಅನಂತರದ ಅಸ್ಥಿ ಅವಶೇಷವನ್ನು ಸಣ್ಣ ಮಡಕೆಯೊಳಗಿಟ್ಟು ಹೂಳಿ ಸುತ್ತಲೂ ಕಲ್ಲುವೃತ್ತವನ್ನು, ಕೆಲವೊಮ್ಮೆ ವೃತ್ತದ ಒಳಗೆ ಕಲ್ಲುಪ್ಪೆಯನ್ನು ರಚಿಸಲಾಗಿದೆ. ಕುಮಾರಗುಪ್ತನ ಬೆಳ್ಳಿ ನಾಣ್ಯಗಳು, ಕ್ಷತ್ರಪ ರಾಜರ ಸೀಸ ಮತ್ತು ಬೆಳ್ಳಿ ನಾಣ್ಯಗಳು, ಗಾಂಧಾರ ಪ್ರಭಾವವನ್ನು ತೋರುವ ಅಕ್ಕಸಾಲಿಯ ಅಚ್ಚು, ನಗ್ನ ಮಾನವಾಕೃತಿಯ ಹಿಡಿಕೆಯುಳ್ಳ ಜಾಡಿಗಳು, ದೇವತೆಯರ ಕೆತ್ತನೆಯುಳ್ಳ ಕಲ್ಲಿನ ಫಲಕಗಳು, ಗಡ್ಡಧಾರಿ ಯವನನ ಚಿತ್ರವಿರುವ ಮಣ್ಣಿನ ಫಲಕ, ಶಿಲಾದಿತ್ಯನ ಮುದ್ರೆ, ಹೊಳಪಿನ ಕೆಂಪು ಪಾತ್ರೆ ಮುಂತಾದುವು ಇತರ ಸಾಂಸ್ಕೃತಿಕ ಅವಶೇಷಗಳಾಗಿವೆ. (ವಿ.ಎಸ್.)

**ಅಯೋಧ್ಯೆ:** ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯಲ್ಲಿರುವ ಈಗಿನ ಅವಧ್ ಪಟ್ಟಣವೆ ಪ್ರಾಚೀನ ಅಯೋಧ್ಯೆ. ಘಾಗ್ರಾನದಿಯ (ಸರಯೂ) ದಂಡೆಯಮೇಲೆ ಫೈಜಾಬಾದ್ ಪಟ್ಟಣಕ್ಕೆ ಅನತಿ ದೂರದಲ್ಲಿದೆ. ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ಬಹು ಪ್ರಸಿದ್ಧವಾಗಿದೆ. ಮನು ಇದನ್ನು ಸ್ಥಾಪಿಸಿದನೆಂದು ಪ್ರತೀತಿ. ಹಿಂದುಗಳ ಮೋಕ್ಷಪ್ರದವಾದ ಏಳು ನಗರಗಳಲ್ಲಿ ಇದೂ ಒಂದು. ಇಕ್ಷ್ವಾಕು ವಂಶದ ಅರಸರ ರಾಜಧಾನಿ. ರಾಮಾಯಣ ಕಾಲದಲ್ಲಿ ದಶರಥನ ರಾಜಧಾನಿಯಾಗಿತ್ತು. ರಾಮನ ಅವತಾರವಾದುದು ಇಲ್ಲಿಯೇ. ರಾಮಾಯಣದಲ್ಲಿ ಈ ನಗರದ ಬಹುಮುಖ ವರ್ಣನೆಯಿದ್ದು ಅಯೋಧ್ಯೆ ಮಹಾತ್ಮೆ ಎಂಬ ಕಾವ್ಯವೂ ಇದೆ. ಮಹಾಭಾರತದ ಕಾಲದಲ್ಲಿ ಬೃಹದ್ರಥ ಅಯೋಧ್ಯೆಯಿಂದ ಕೋಸಲ ಸೇನೆಯನ್ನು ಕುರುಕ್ಷೇತ್ರಕ್ಕೆ ಕೊಂಡೊಯ್ದನೆಂದು ತಿಳಿದುಬರುತ್ತದೆ. ವೃಷಭ, ಅಜಿತ ಮೊದಲಾದ ತೀರ್ಥಂಕರರ ಜನ್ಮಸ್ಥಳವಾದ್ದರಿಂದ ಇದು ಜೈನರಿಗೂ ಪವಿತ್ರ ಕ್ಷೇತ್ರ. 640ರಲ್ಲಿ ಯುವಾನ್‌ಚಾಂಗ್ ಅಯೋಧ್ಯೆಗೆ ಬಂದಾಗ ಅಲ್ಲಿ 20 ಬೌದ್ಧಸ್ತೂಪಗಳೂ 3000 ಭಿಕ್ಷುಗಳೂ ಇದ್ದುದಾಗಿ ವರದಿಮಾಡಿದ್ದಾನೆ. ರಾಮನಿಗೆ ಸಂಬಂಧಿಸಿದಂತೆ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಇಂದ್ರನೀಲಮಣಿಯಿಂದ ಮಾಡಲ್ಪಟ್ಟ ಹನುಮಂತನ ವಿಗ್ರಹವಿರುವ ದೇವಾಲಯ ಬಹು ಸುಂದರವಾಗಿದೆ. (ಎ.ಕೆ.;ಎಸ್.ಎನ್.ಕೆ.;ಎಸ್.ಆರ್.)

**ಅಯ್ಯಾವೊಳೆ ಐನೂರ್ವರು:** ಕರ್ನಾಟಕದ ಶಾಸನಗಳಲ್ಲಿ ಶ್ರೇಣಿ (ಸಂಸ್ಕೃತ ಶ್ರೇಣಿ), ಕೊತ್ತಳಿ ಎಂಬ ಪದಗಳು, ಮಧ್ಯಕಾಲೀನ ಕುಶಲಕರ್ಮಿಗಳ ಹಾಗೂ ವರ್ತಕರ ಸಂಘಗಳನ್ನು ಮಧ್ಯಯುಗದ ಯುರೋಪಿನ ಗಿಲ್ಡ್‌ಗಳಂತೆ ಸೂಚಿಸುತ್ತವೆ. ಕುಶಲಕರ್ಮಿಗಳು ಮತ್ತು ವರ್ತಕರು ತಮ್ಮ ತಮ್ಮ ಶ್ರೇಣಿಗಳ(ವೃತ್ತಿಸಂಘ) ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದಂತೆ ಕಾಣುತ್ತದೆ. ಕನ್ನಡನಾಡಿನವನೇ ಆದ ವಿಖ್ಯಾತ ಧರ್ಮಶಾಸ್ತ್ರ ಭಾಷ್ಯಕಾರ (ಯಾಜ್ಞವಲ್ಕ್ಯ

ಸ್ಮೃತಿ) ವಿಜ್ಞಾನೇಶ್ವರ(11ನೆಯ ಶತಮಾನ) ತನ್ನ ಮಿತಾಕ್ಷರದಲ್ಲಿ ಶ್ರೇಣಿ ಪದವನ್ನು ಹೀಗೆ ಅರ್ಥೈಸಿದ್ದಾನೆ: ನಾನಾ ಜಾತಿಗೆ ಸೇರಿದ, ಆದರೆ ಒಂದೇ ಬಗೆಯ ಪರಿಶ್ರಮದಿಂದ (ದುಡಿಮೆ) ಜೀವನೋಪಾಯವನ್ನು ಹೊಂದಿರುವ ವೃತ್ತಿಸಂಘ–ಉದಾ: ಕುದುರೆ ವ್ಯಾಪಾರಿ, ವೀಳೆಯದೆಲೆ ವ್ಯಾಪಾರಿ, ನೇಕಾರ, ಚರ್ಮಕಾರ ಇತ್ಯಾದಿ. ಈ ಶ್ರೇಣಿಗಳ ನಿಬಂಧನೆಗಳು (ಕಟ್ಟಳೆ) ಕಾನೂನಿನ ಬಲವುಳ್ಳವು; ಇವನ್ನು ರಾಜನಾಗಲಿ ಸರ್ಕಾರವಾಗಲಿ ಎತ್ತಿ ಹಿಡಿಯಬೇಕು ಎಂದಿದ್ದಾನೆ. ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ಇಂಥ ಶ್ರೇಣಿಗಳ ದೊಡ್ಡಜಾಲವೇ ಇತ್ತು. ಕುಶಲಕರ್ಮಿಗಳು ಉತ್ಪಾದನೆಯಲ್ಲಿ ತೊಡಗಿದ್ದರೆ, ವರ್ತಕರು ವಿತರಣೆಯಲ್ಲಿ ನಿರತರಾಗಿದ್ದರು.

ಕರ್ನಾಟಕದ ಶಾಸನಗಳಲ್ಲಿ ಅನೇಕ ವರ್ತಕ ಸಂಘಗಳ ಪ್ರಸ್ತಾಪವಿದೆ: ನಾನಾದೇಶಿಗರು, ಸೆಟ್ಟಿಯರು, ಸೆಟ್ಟಿಗುತ್ತರು, ಮುಮ್ಮುರಿದಂಡರು, ಗವರೆಗಳು, ಗಾತ್ರಿಗರು ಇತ್ಯಾದಿ. ಇವು ಸ್ವಾಯತ್ತತೆ ಹೊಂದಿದ್ದು ತಮ್ಮದೇ ಆದ ಸಂಪ್ರದಾಯ, ಲಾಂಛನ ಮತ್ತು ಪ್ರಶಸ್ತಿಗಳನ್ನು ಹೊಂದಿದ್ದುದು ಕಾಣುತ್ತದೆ. ಇಡೀ ದಕ್ಷಿಣಭಾರತದಲ್ಲೆಲ್ಲಾ ಇವುಗಳ ಅಸ್ತಿತ್ವ ಗಮನಾರ್ಹ. ಆದರೂ ಈ ಶ್ರೇಣಿಗಳ ಸೂಕ್ತ ಅರ್ಥವನ್ನಾಗಲೀ ಕಾರ್ಯಾಚರಣೆಯನ್ನಾಗಲೀ ಗ್ರಹಿಸುವುದು ಕಷ್ಟವೇ. ಈ ಎಲ್ಲ ವರ್ತಕ ಸಂಘಗಳ ಸದಸ್ಯರಲ್ಲಿ ಅತ್ಯಂತ ಪ್ರಖ್ಯಾತರೂ ಪ್ರಭಾವಶಾಲಿಗಳೂ ಆಗಿದ್ದವರೆಂದರೆ ಅಯ್ಯಾವೊಳೆ(ಐಹೊಳೆ) ಐನೂರ್ವರೆಂಬುದಂತೂ ನಿರ್ವಿವಾದ.

ಅಯ್ಯಾವೊಳೆ ಐನೂರ್ವರಿಗೆ ಸಂಬಂಧಿಸಿದ ಉಲ್ಲೇಖ, ಐಹೊಳೆಯಲ್ಲಿನ ಲಾಡಖಾನ್ ದೇವಾಲಯದ ಪೂರ್ವಗೋಡೆಯ ಮುಂಭಾಗದಲ್ಲಿರುವ 8–9ನೆಯ ಶತಮಾನದ ಶಾಸನದಲ್ಲಿದೆ ಎಂದು ಫ್ಲೀಟ್ ಅವರು ಹೇಳಿದ್ದುಂಟು. ಆದರೆ ಈ ಶಾಸನ ಪ್ರಸ್ತಾಪಿಸುವ ಆರ್ಯಪುರದ (ಐಹೊಳೆಯ) ಐನೂರ್ವರು ದಾನಪಡೆದ ಚಾತುರ್ವಿದ್ಯಾ ಸಮುದಾಯದ ಬ್ರಾಹ್ಮಣರೇ ಹೊರತು, ವರ್ತಕ ಸಂಘದವರಿರಲಾರರು. ತಮಿಳುನಾಡಿನ ಮನಸಂದೈನಲ್ಲಿನ (ಪುದುಕೋಟ್ಟೈ ಪ್ರದೇಶ) 2 ತಮಿಳು ಶಾಸನಗಳೇನೋ (9ನೆಯ ಶತಮಾನ) ಐನೂರ್ರುವರ್ ವರ್ತಕ ಸಂಘವನ್ನು ಪ್ರಸ್ತಾಪಿಸುತ್ತವೆ. ಈ ವರ್ತಕ ಸಂಘಕ್ಕೆ ಸಂಬಂಧಿಸಿದಂತೆ ಉತ್ತರದಲ್ಲಿ ಕೊಲ್ಲಾಪುರ, ಮೀರಜ್; ದಕ್ಷಿಣದಲ್ಲಿ ಕೊಯಮತ್ತೂರು, ಕಿನ್ನವೆಲ್ಲಿ ಪ್ರದೇಶಗಳಲ್ಲಿ ಶಾಸನಗಳು ಕಂಡುಬಂದಿವೆ. ಬಹುತೇಕ ಶಾಸನಗಳು ಕರ್ನಾಟಕದ ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ, ಹಾಸನ, ಬೆಂಗಳೂರು ಮುಂತಾದ ಜಿಲ್ಲೆಗಳಲ್ಲಿ; ಆಂಧ್ರಪ್ರದೇಶದ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಲ್ಲಿ ಸಿಕ್ಕಿದ್ದು, ಬಹುಶಃ ಈ ಪ್ರದೇಶಗಳು ಇವರ ವ್ಯಾಪಾರ ವಹಿವಾಟುಗಳ ಪ್ರಮುಖ ಕೇಂದ್ರಗಳಾಗಿದ್ದಂತೆ ಕಾಣುತ್ತದೆ. ಅತ್ಯಂತ ಈಚಿನ ಶಾಸನವೆಂದರೆ, 1680ರದು ಎನ್ನಲಾಗಿದೆ.

ವೀರಬಣಂಜುಕ್ಕ ಪ್ರಶಸ್ತಿ: ಈ ವರ್ತಕ ಸಂಘದ ಪ್ರಶಸ್ತಿಯನ್ನು ಕುರಿತಂತೆ ಒಂದು ವಿಚಾರ. ವಿವಿಧ ಪ್ರದೇಶಗಳಲ್ಲಿ, ವ್ಯತ್ಯಾಸಗಳೊಂದಿಗೆ, ಇವರ ಪ್ರಶಸ್ತಿ ಹೆಚ್ಚೂಕಡಿಮೆ ಒಂದೇ ಮಾದರಿಯಲ್ಲಿರುತ್ತದೆ. ಅದನ್ನು ಹೀಗೆ ಸಂಗ್ರಹಿಸಬಹುದು: ಐನೂರ್ವರು ಸದಸ್ಯರ ವೈಯಕ್ತಿಕ ಗುಣಗಳ ಪ್ರಶಂಸೆ; ಇವರ ವಂಶದ ಕಾಲ್ಪನಿಕ ಮೂಲ ಇತ್ಯಾದಿ. ಅಯ್ಯಾವೊಳೆಯನ್ನು ಅಹಿಚ್ಛತ್ರಕ್ಕೆ ಹೋಲಿಸಲಾಗಿದೆ. ಇವರು ಅಯ್ಯಾವೊಳೆ ಪುರದ ಪರಮೇಶ್ವರಪ್ಪ ಐನೂರ್ವರ್ ಸ್ವಾಮಿಗಳು. ಇವರದು ಪ್ರಪಂಚದಲ್ಲೇ ವಿಖ್ಯಾತವಾದ 500 ವೀರ ಶಾಸನಗಳು. ಇವರು ವೀರಬಣಂಜುಧರ್ಮ ಪ್ರತಿಪಾಳಕರು. ಶೌರ್ಯ– ಸಾಹಸಾದಿಗಳಿಗೆ ವಿಶ್ವದಲ್ಲೇ ವಿಖ್ಯಾತರಂತೆ! ಇವರದು ಗುಡ್ಡ ಧ್ವಜ; ಗುಡ್ಡಶಾಸ್ತ್ರ. ಈ ಪದಗಳ ಸೂಕ್ತ ಅರ್ಥ ತಿಳಿಯದು. ಈ ವರ್ತಕ ಸಂಘದ ಶಾಸನಗಳು ಇಡೀ ದಕ್ಷಿಣ ಭಾರತದಲ್ಲೆಲ್ಲ ಅಲ್ಲದೆ, ಇವರ ತಮಿಳು ಶಾಸನಗಳು ಥೈಲೆಂಡ್, ಸುಮಾತ್ರ, ಮಯನ್ಮಾರ್ ಮತ್ತು ಶ್ರೀಲಂಕ ದೇಶಗಳಲ್ಲಿ ಸಿಕ್ಕಿರುವುದು ಮಹತ್ತ್ವದ್ದು. ಅಲ್ಲೆಲ್ಲಾ ಕೋಟೆಗಳಿಂದ ರಕ್ಷಿತವಾದ ತಮ್ಮ ವ್ಯಾಪಾರ ಕೋಠಿಗಳನ್ನು ರಕ್ಷಿಸಲು, ತಮ್ಮದೇ ಆದ ರಕ್ಷಣಾ ಪಡೆಯನ್ನು ಹೊಂದಿದ್ದರು. ವ್ಯಾಪಾರದ ಸಲುವಾಗಿ ದಕ್ಷಿಣ ಭಾರತದಲ್ಲಿ ಚೇರ, ಚೋಳ, ಪಾಂಡ್ಯ; ಉತ್ತರಭಾರತದಲ್ಲಿ ಮಗಧ, ಕಾಂಭೋಜ; ವಿದೇಶಗಳೆನಿಸುವ ಪಾರಸ, ಮಲೆಯ ಇತ್ಯಾದಿಗಳಿಗೆ ಭೂಮಾರ್ಗ ಮತ್ತು ಜಲಮಾರ್ಗಗಳಲ್ಲಿ ಪ್ರಯಾಣಿಸುತ್ತಿದ್ದರು (ಪಾದಮಾರ್ಗ ಜಲಮಾರ್ಗದೊಳು ಷಟ್ಖಂಡ– ಮಂಡಲಗಳಂ ಪೊಕ್ಕು). ಇವರು ವ್ಯಾಪಾರ ವಹಿವಾಟಿನಲ್ಲಿ ಮಾರುತ್ತಿದ್ದ– ಕೊಳ್ಳುತ್ತಿದ್ದ ಸರಕುಗಳು ಶಾಸನಗಳಲ್ಲಿ ಹೀಗಿದೆ : ಉತ್ತಮ ಆನೆಗಳು (ಭದ್ರಹಸ್ತಿ), ಒಳ್ಳೆಯ ಜಾತಿಯ ಕುದುರೆಗಳು (ಜಾತ್ಯಶ್ವ), ವಿವಿಧ ವಜ್ರ ವೈಡೂರ್ಯಗ ಳಂಥ ಪ್ರಶಸ್ತಿ ಶಿಲೆಗಳು, ಸಾಂಬಾರ ಪದಾರ್ಥಗಳು, ಸುಗಂಧ ದ್ರವ್ಯಗಳು, ಔಷಧಗಳು, ಬಟ್ಟೆ ಬತ್ತ ಹತ್ತಿ ಸಕ್ಕರೆ, ಗೋದಿ, ಅಡಕೆ ಇತ್ಯಾದಿ. ಸಗಟು ಹಾಗೂ ಚಿಲ್ಲರೆ ವ್ಯಾಪಾರಗಳೆರಡೂ ಇದ್ದುವು. ಅಂತರ್ದೇಶೀಯ ಸಾಗಾಣಿಕೆಗೆ ಕುದುರೆ, ಕತ್ತೆ, ಎತ್ತು, ಕೋಣ, ಆನೆ ಹಾಗೂ ಒಂಟೆಗಳನ್ನು ಬಳಸುತ್ತಿದ್ದರು; ದ್ವೀಪಾಂತರಗಳಿಗೆ ಹಡಗುಗಳಲ್ಲಿ ಪ್ರಯಾಣಿಸುತ್ತಿದ್ದರು.

ಮಧ್ಯಕಾಲೀನ ಯುಗದಲ್ಲಿ ಇವರದು ಸುಭದ್ರವಾದ ಬ್ಯಾಂಕ್‌ಗಳೆಂದು ಸಾರ್ವಜನಿಕರಲ್ಲಿ ದೃಢವಿಶ್ವಾಸವಿತ್ತು. ಠೇವಣಿಯನ್ನು ಸ್ವೀಕರಿಸಿ, ಇತರರಿಗೆ ಬಡ್ಡಿಯ ಮೇಲೆ ಸಾಲವನ್ನು (ಲೇವಾದೇವಿ) ಕೊಡುತ್ತಿದ್ದರು. ಅಲ್ಲದೆ, ಇತರರು ಮಾಡಿದ ಧಾರ್ಮಿಕ ದತ್ತಿಗಳಿಗೆ ಇವರು ಧರ್ಮದರ್ಶಿಗಳೂ ಹೌದು. ಮಾತ್ರವಲ್ಲ, ಇವರು ಹಲವು ಪಟ್ಟಣ–ನಗರಗಳಲ್ಲಿ ದೇವಾಲಯಗಳನ್ನೂ ಕೆರೆಗಳನ್ನೂ ಅನ್ನಸತ್ರಗಳನ್ನೂ ಕಟ್ಟಿಸಿ ಕೃತಾರ್ಥರೆನಿಸಿದ್ದಾರೆ. ಉದಾರ ವಾಗಿ ದಾನ–ದತ್ತಿಗಳನ್ನೂ ನೀಡಿದ್ದಾರೆ. ಅಯ್ಯಾವೊಳೆ ಐನೂರ್ವರದು ಬಹುಮುಖ ಪ್ರತಿಭೆ, ಸಾಧನೆಗಳು. ಇವರಲ್ಲಿ ಕೆಲವು ಖ್ಯಾತ ವ್ಯವಹಾರಿಗಳು ಅಂದಿನ ಆಳರಸರ ಮನ್ನಣೆಗೂ ಪಾತ್ರರಾಗಿದ್ದರು. ಇವರ ಇನ್ನೊಂದು ವಿಶೇಷವೆಂದರೆ ಇವರು ತಮ್ಮದೇ ಆದ ಒಂದು ಮುದ್ರೆಯನ್ನು ಹೊಂದಿದ್ದರು. ಇರಿವಬೆಡಂಗ ಸತ್ಯಾಶ್ರಯನ ಆಳ್ವಿಕೆಯ ಕಾಲದ, ಬೆಡ್ಕಿಹಾಳದ ತಾಮ್ರಪಟಗಳಿಗೆ (1000) ಸೇರಿಸಿರುವ ತಾಮ್ರದುಂಗರದಲ್ಲಿ ಈ ಮುದ್ರೆಯನ್ನು ನೋಡಬಹುದು. ಉಬ್ಬುಚಿತ್ರದಲ್ಲಿ ಮಹಿಷಾಸುರ ಮರ್ದಿನಿ ಇರುವ ಮುದ್ರೆಯಿದ್ದು ಈ ತಾಮ್ರಶಾಸನದ ಪಾಠ ತಿಳಿಸುವಂತೆ, ಒಬ್ಬ ಯೋಧ ಹಲವು ವೈರಿಗಳನ್ನು ಕೊಂದು ಜಯಶೀಲನಾದಾಗ, ಅಯ್ಯಾವೊಳೆ ಐನೂರ್ವರು ಅವನ ಧೈರ್ಯ–ಸಾಹಸಗಳನ್ನು ಮೆಚ್ಚಿ ಪಗೆಯಂ ಬೆಂಕೊಳ್ವ ಎಂಬ ಬಿರುದನ್ನು ಕೊಟ್ಟು ಪ್ರೋತ್ಸಾಹಿಸಿದರಂತೆ, ಕೆಲವು ತೆರಿಗೆಗಳಿಂದ ವಿನಾಯಿತಿಯನ್ನು ಕೊಟ್ಟರಂತೆ. (ಜಿ.ಎಸ್.)

**ಅರವಿಂದ ಘೋಷ್:** 1872–1950. ಪೂರ್ಣಯೋಗಮಾರ್ಗವನ್ನು ಪ್ರಪಂಚಕ್ಕೆ ತೋರಿದ ಮಹಾಯೋಗಿ. 1872 ಆಗಸ್ಟ್ 15 ರಂದು ಜನಿಸಿದರು. ತಂದೆ ಕೃಷ್ಣಧನ ಘೋಷ್, ತಾಯಿ ಸ್ವರ್ಣಲತಾದೇವಿ. ಅಣ್ಣ ವಿನಯಭೂಷಣ, ತಮ್ಮ ಮನಮೋಹನ, ತಂಗಿ ಸರೋಜಿನಿ.

ಅರವಿಂದ ಘೋಷ್ ಅವರು ಐದು ವರ್ಷದವರಿದ್ದಾಗಲೇ ತಮ್ಮ ಸಹೋದರರೊಡನೆ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಆರಂಭಿಸಿದರು (1879–92). ಹದಿನಾಲ್ಕು ವರ್ಷಗಳ ಕಾಲ ಮ್ಯಾಂಚೆಸ್ಟರ್, ಲಂಡನ್, ಕೇಂಬ್ರಿಜ್‌ಗಳಲ್ಲಿ ಅಧ್ಯಯನಮಾಡಿ ಲ್ಯಾಟಿನ್, ಗ್ರೀಕ್‌ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದು ಪ್ರಥಮಶ್ರೇಣಿಯಲ್ಲಿ ತೇರ್ಗಡೆಯಾದರು. ತಂದೆಯ ಅಭಿಲಾಷೆಯಂತೆ ಐ.ಸಿ.ಎಸ್. ಪರೀಕ್ಷೆಯನ್ನು ತೆಗೆದುಕೊಂಡರು. ಆದರೆ ಇವರು ಕುದುರೆ ಸವಾರಿ ಪರೀಕ್ಷೆಗೆ ಹೋಗದಿದ್ದುದರಿಂದ ಐ.ಸಿ.ಎಸ್. ಪದವಿಗೆ ಅನರ್ಹರಾದರು.



ಗಾಯಕವಾಡ ಮಹಾರಾಜರ ಆಹ್ವಾನವನ್ನು ಸ್ವೀಕರಿಸಿ 1893 ಫೆಬ್ರವರಿ 2ರಂದು ಬರೋಡವನ್ನು ಸೇರಿದರು. ಕೆಲವು ಸಮಯದ ಬಳಿಕ ಬರೋಡ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. ಈ ಉದ್ಯೋಗದ ಜೊತೆಗೆ ಅವರು ಮಹಾರಾಜರ ಆಪ್ತಕಾರ್ಯದರ್ಶಿಯಾಗಿಯೂ ಕೆಲಸ ಮಾಡಬೇಕಾಯಿತು. ಇದೇ ಸಮಯದಲ್ಲಿ ತಂದೆ ಕಾಲವಾಗಲು ತಾಯಿ, ತಮ್ಮ, ತಂಗಿಯರ ಜೀವನನಿರ್ವಹಣೆಯ ಹೊರೆ ಅವರ ಮೇಲೆ ಬಿತ್ತು.

ಅರವಿಂದರ ದೃಷ್ಟಿ ತಮ್ಮ ಮಾತೃಭಾಷೆಯಾದ ಬಂಗಾಲಿಯನ್ನು ಕಲಿತು ಬಂಕಿಮಚಂದ್ರ, ಮಧುಸೂದನದತ್, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟಾಕೂರ್ ಮೊದಲಾದವರ ಕೃತಿಗಳನ್ನು ಮೂಲ ಭಾಷೆಯಲ್ಲಿಯೇ ಅಧ್ಯಯನ ಮಾಡುವತ್ತ ಹರಿಯಿತು. ಸ್ವಾಮಿ ವಿವೇಕಾನಂದರ ಕೃತಿಗಳ ಭಾಷಾ ಪ್ರೌಢಿಮೆ, ಗಾಂಭೀರ್ಯ, ಅವುಗಳ ರಸಾಸ್ವಾದನೆ ಅವರನ್ನು ಆಕರ್ಷಿಸಿತು. ಇವರ ಮೇಲೆ ಪ್ರಭಾವ ಬೀರಿದ ಶ್ರೇಷ್ಠಕೃತಿಯೆಂದರೆ ಶ್ರೀ ರಾಮಕೃಷ್ಣ ಪರಮಹಂಸರ ವಚನಾಮೃತ ಭರ್ತೃಹರಿಯ ನೀತಿಶತಕ, ಕಾಳಿದಾಸನ ವಿಕ್ರಮೋರ್ವಶೀಯ ಮೊದಲಾದ ಸಂಸ್ಕೃತ ಕೃತಿಗಳನ್ನು ಇವರು ಇಂಗ್ಲಿಷಿಗೆ ಭಾಷಾಂತರ ಮಾಡಿದುದಲ್ಲದೆ, ವಾಲ್ಮೀಕಿರಾಮಾಯಣ ಮತ್ತು ವ್ಯಾಸ ಭಾರತದ ಕೆಲವು ಭಾಗಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ್ದಾರೆ.

ಮೃಣಾಲಿನಿ ಎಂಬ 14 ವರ್ಷದ ಕನ್ಯೆಯನ್ನು 1901ರಲ್ಲಿ ಅರವಿಂದರು ವಿವಾಹವಾದರು. ಆ ಸಂದರ್ಭದಲ್ಲಿ ಅವರು ಬರೋಡ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅಲ್ಲಿ ಇವರು ಪಡೆಯುತ್ತಿದ್ದ ಮಾಸಿಕ ವೇತನ 710 ರೂಪಾಯಿಗಳು. ಅಂತರ್ಮುಖಿಗಳಾದ ಇವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಂಕಲ್ಪಮಾಡಿದರು. ಸರ್ಕಾರದ ಕೆಲಸಕ್ಕೆ ರಾಜೀನಾಮೆ ನೀಡಿ, ಕೇವಲ 150 ರೂಪಾಯಿಗಳ ಮಾಸಿಕವೇತನಕ್ಕೆ ರಾಷ್ಟ್ರೀಯ ಕಾಲೇಜಿನ ಪ್ರಿನ್ಸಿಪಾಲರಾದರು.

1906 ಡಿಸೆಂಬರ್ 26ರಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಪೂರ್ಣಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಧ್ಯೇಯವೆಂದು ನಿರ್ಣಯಹೊರಡಿಸಲು ಅರವಿಂದರೇ ಕಾರಣರು. ಅಂದಿನಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸುವವರೆಗೆ ಕಾಂಗ್ರೆಸ್ಸಿನ ಧ್ಯೇಯ ಅದೇ ಆಗಿತ್ತು. 1907ರ ಡಿಸೆಂಬರ್ ತಿಂಗಳಿನಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿ ಸಂಚರಿಸಿ, ಜನರಲ್ಲಿ ದೇಶ ಪ್ರೇಮ ಹೊರಚಿಮ್ಮುವಂತೆ ಪರಿಣಾಮಕಾರಿಯಾದ ಭಾಷಣ ಮಾಡಿದರು. ಬೊಂಬಾಯಿಯಿಂದ ಬರೋಡಕ್ಕೆ ಹೋದಾಗ, ಅಲ್ಲಿ ವಿಷ್ಣು ಭಾಸ್ಕರಲೇಲೆ ಎಂಬ ಯೋಗಿಯ ಸಂದರ್ಶನ ಇವರಿಗಾಯಿತು. ಅವರ ಸಾನ್ನಿಧ್ಯದಲ್ಲಿ ಪ್ರಾಣಾಯಾಮ ಮೊದಲಾದ ಯೋಗಸಾಧನೆ ಮಾಡಿ ವಿಶೇಷ ಅನುಭವಗಳನ್ನು ಪಡೆದರು. ಈ ಜಗತ್ತು ಈಶ್ವರನ ಭೂಮಿಕೆ ಎಂಬುದು ಇವರಿಗೆ ಸ್ಪಷ್ಟವಾಯಿತು. ಭಾರತಮಾತೆ ಸಾಕ್ಷಾತ್ ರಾಜೇಶ್ವರಿಯಾಗಿ ಅವರಿಗೆ ಪ್ರತ್ಯಕ್ಷಳಾದಳು. ಬ್ರಹ್ಮತೇಜಸ್ಸಿನಿಂದಲೇ ಭಾರತದ ಸ್ವಾತಂತ್ರ್ಯ ಸಾಧ್ಯವೆಂಬುದು ಇವರ ಗಟ್ಟಿಯಾದ ನಿಲುವು.

ಕಲ್ಕತ್ತೆಗೆ ಹಿಂತಿರುಗಿದ ಬಳಿಕ, ಬಿಪಿನ್‌ಚಂದ್ರಪಾಲರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ವಂದೇಮಾತರಂ ಇಂಗ್ಲಿಷ್ ವಾರಪತ್ರಿಕೆಯಲ್ಲಿ ತೇಜೋಪೂರ್ಣವಾದ ಲೇಖನಗಳನ್ನು ಬರೆದು ಯುವಕರನ್ನು ಸ್ವಾತಂತ್ರ್ಯಸಮರಕ್ಕೆ ಸಿದ್ಧಪಡಿಸಿದರು. ಫಲವಾಗಿ ಭಾರತದಲ್ಲಿ ಸ್ವಾತಂತ್ರ್ಯಸಂಗ್ರಾಮ ಉಗ್ರರೂಪಕ್ಕೆ ತಿರುಗಿತು. ಇದನ್ನು ಕಂಡ ಬ್ರಿಟಿಷ್ ಸರ್ಕಾರ ಆ ಪತ್ರಿಕೆಯ ಸಂಪಾದಕರನ್ನೂ ಅರವಿಂದರನ್ನೂ ರಾಜದ್ರೋಹದ ಆಪಾದನೆಯ ಮೇಲೆ ಸೆರೆಮನೆಗೆ ಕಳುಹಿಸಿತು. ಕೆಲವು ದಿನಗಳ ಬಳಿಕ ಅರವಿಂದರನ್ನು ಬಿಟ್ಟರೂ ಪುನಃ 1908 ಮೇ 4 ರಂದು ಸು.1 ವರ್ಷಕಾಲ ಅವರಿಗೆ ಕಾರಾಗೃಹವಾಸದ ಶಿಕ್ಷೆಯಾಯಿತು. ಇದರಿಂದ ಸ್ವಲ್ಪವೂ ಧೃತಿಗೆಡದ ಅವರಿಗೆ ಸೆರೆಮನೆ ಯೋಗಸಾಧನೆಯ ಕ್ಷೇತ್ರವಾಯಿತು. ವೇದ, ಉಪನಿಷತ್ತು, ಗೀತೆ ಮೊದಲಾದ ಸದ್ಗ್ರಂಥಗಳ ಪಠನದಿಂದ ಅವರಿಗಾದುದು ಸರ್ವಂ ಖಲ್ವಿದಂ ಬ್ರಹ್ಮ ಎಂಬುದರ ಅನುಭೂತಿ, ಕಡೆಗೆ ಕಲ್ಕತ್ತೆಯ ಸುಪ್ರಸಿದ್ಧ ವಕೀಲರಾದ ಚಿತ್ತರಂಜನದಾಸರ ಪ್ರಯತ್ನದಿಂದಾಗಿ ಸೆರೆಮನೆಯಿಂದ ಹೊರಬರುವಂತಾಯಿತು.

ಕಾರಾಗೃಹದಿಂದ ಹೊರಬಂದ ಅರವಿಂದರು ಇಂಗ್ಲಿಷಿನಲ್ಲಿ ಕರ್ಮಯೋಗಿ, ಬಂಗಾಳಿಯಲ್ಲಿ ಧರ್ಮ ಎಂಬ ಸಾಪ್ತಾಹಿಕಗಳನ್ನು ಆರಂಭಿಸಿದರು. ಪ್ರಚಂಡಶಕ್ತಿಯ ಅವತರಣ ವಾಗದೆ ಭಾರತಕ್ಕೆ ಸ್ವಾತಂತ್ರ್ಯ ಅಸಾಧ್ಯವೆಂಬುದು ಇವರ ಲೇಖನಗಳಿಂದ ವ್ಯಕ್ತವಾಯಿತು. ಇವರ ಲೇಖನಗಳು ಅನೇಕ ಯುವಕರಿಗೆ ಸ್ಫೂರ್ತಿ ನೀಡಿದುವು. ಅಂತರ್ಮುಖಿಗಳಾದ ಇವರು ಯೋಗಸಾಧನೆಯಲ್ಲಿ ತೊಡಗಲು ಸಂಕಲ್ಪಿಸಿದರು. 1910 ಏಪ್ರಿಲ್ 4ರಂದು ಪಾಂಡಿಚೇರಿಯನ್ನು ಪ್ರವೇಶಿಸಿ, ತಮ್ಮ ಭೌತಿಕಶರೀರವನ್ನು ತ್ಯಜಿಸುವವರೆಗೆ ಇವರು ಅಲ್ಲಿಂದ ಚಲಿಸಲಿಲ್ಲ. ದಿವ್ಯಜೀವನದಲ್ಲಿ ಸುಪ್ರತಿಷ್ಠಿತವಾಗುವುದೆ ಮಾನವನ ಆದರ್ಶವೆಂಬುದು ಇವರಿಗೆ ಸ್ಪಷ್ಟವಾಯಿತು. ಸು.7 ವರ್ಷಗಳ ಕಾಲ ಆರ್ಯ ಎಂಬ ಪತ್ರಿಕೆಯಲ್ಲಿ ವೇದರಹಸ್ಯ, ಉಪನಿಷತ್ತುಗಳ ವ್ಯಾಖ್ಯಾನ, ದಿವ್ಯಜೀವನದ ಆದರ್ಶ, ಯೋಗಸಮನ್ವಯ, ಭಾರತೀಯ ಸಂಸ್ಕೃತಿಯ ಹಿರಿಮೆ, ಮಾನವಕುಲದ ಅಭ್ಯುದಯ, ಸಾಹಿತ್ಯ, ದರ್ಶನ–ಇತ್ಯಾದಿ ಹಲವು ವಿಷಯಗಳನ್ನು ಕುರಿತ ಇವರ ಪ್ರಬುದ್ಧ ಲೇಖನಗಳು ಪ್ರಕಟವಾದವು.

1920 ಏಪ್ರಿಲ್ 24ರಂದು ಮೇರಿ ರಿಚರ್ಡ್ಸ್ ಎಂಬ ಫ್ರಾನ್ಸ್ ದೇಶದ ಮಹಿಳೆ ಅರವಿಂದರ ಶಿಷ್ಯಳಾಗಿ ಪಾಂಡಿಚೇರಿಯಲ್ಲಿ ನೆಲೆಸಿ ಅರವಿಂದಾಶ್ರಮವನ್ನು ರೂಪಿಸುವುದರಲ್ಲಿ ಕಾರ್ಯಶೀಲ ಳಾದಳು. ಮಹಾಸಾಧಕರಾದ ಅರವಿಂದರಲ್ಲಿ 1926 ನವೆಂಬರ್ 24ರಂದು ಅತಿಮಾನಸತ್ವ ಅವತರಣವಾಯಿತು. ಅಷ್ಟರಿಂದಲೇ ಇವರು ತೃಪ್ತರಾಗದೆ ಸಮಷ್ಟಿಯಲ್ಲಿ ಅತಿಮಾನಸತ್ವ ಅವಿರ್ಭವಿಸಲೆಂಬ ಅಭೀಪ್ಸೆಯಿಂದ ಮಹತ್ತರ ತಪಸ್ಸಿನಲ್ಲಿ ನಿರತರಾದರು. ಇವರ ಸಂದರ್ಶನ ದೊರಕುವುದು ಸಾಧಕರಿಗೆ ದುರ್ಲಭವಾದರೂ ವರ್ಷಕ್ಕೆ ನಾಲ್ಕು ಬಾರಿ ಇವರನ್ನು ಸಂದರ್ಶಿಸಲು ಅವಕಾಶವಿತ್ತು. ಸಾಧಕರಿಂದ ಇವರಿಗೆ ಸಹಸ್ರಾರು ಪತ್ರಗಳಿದ್ದರೂ ಅವುಗಳಿಗೆ ಉತ್ತರ ಬರೆಯಲು ಇವರು ಮರೆಯುತ್ತಿರಲಿಲ್ಲ.

ಅರವಿಂದರ ಕೃತಿಗಳು ಹಿಮಾಲಯ ಸದೃಶವಾಗಿವೆ. ಗೀತಾಪ್ರಬಂಧಗಳು, ಯೋಗಸಮನ್ವಯ, ದಿವ್ಯ ಜೀವನ, ಸಾವಿತ್ರಿ ಮೊದಲಾದವು ಇವರ ಪ್ರಮುಖ ಕೃತಿಗಳು. ಇವರ ಗೀತಾಪ್ರಬಂಧಗಳಲ್ಲಿಯ ಗೀತೆಯ ಚಿಂತನೆ, ಭಾವ ವಿಚಾರಗಳೆಲ್ಲ ಯಾವ ಮತಪ್ರಚಾರಕ್ಕಾಗಿಯೂ ನಿಯೋಜಿತವಾಗಿಲ್ಲ. ಹಲವು ದೃಷ್ಟಿಗಳನ್ನು ಸಮನ್ವಯಗೊಳಿಸುವ ಅಪೂರ್ವತೆ ಇಲ್ಲಿದೆ. ವಿಶ್ವವ್ಯಾಪಕ ತತ್ತ್ವಗಳನ್ನು ರೂಪಿಸಿ ಮಾನವತ್ವದಿಂದ ದೇವತ್ವಕ್ಕೇರುವ ಸತ್ಪಥವನ್ನು ಈ ಕೃತಿ ತೋರಿಸುತ್ತದೆ. ಜಗತ್ತಿನ ಕಲ್ಯಾಣಕ್ಕಾಗಿ ಕಾರ್ಯತತ್ಪರರಾದರೆ ಆಧುನಿಕ ನಾಗರಿಕ ಜೀವನ ಸಾರ್ಥಕವಾಗುತ್ತದೆ ಎಂಬ ವಿಚಾರಗಳು ಈ ಕೃತಿಯಲ್ಲಿವೆ. ಯೋಗಸಮನ್ವಯ ಎಂಬ ಕೃತಿ ನಮ್ಮ ದೃಷ್ಟಿಯನ್ನು ದಿವ್ಯಜೀವನದತ್ತ ಅರಳಿಸುತ್ತದೆ. ದಿವ್ಯ ಜೀವನ ಕೃತಿಯಲ್ಲಿ ಅರವಿಂದರು ತಮ್ಮ ದರ್ಶನವನ್ನು ತರ್ಕಬದ್ಧವಾಗಿ, ವಿಚಾರಪೂರ್ಣವಾಗಿ ಯೌಗಿಕ ಬೆಳಕಿನಿಂದ ರೂಪಿಸಿದ್ದಾರೆ. ಸಾವಿತ್ರಿ ಒಂದು ಯೌಗಿಕ ಕಾವ್ಯ. ಅರವಿಂದರ ಯೌಗಿಕ ಅನುಭವಗಳು ಇಲ್ಲಿ ಕಾವ್ಯ ರೂಪದಲ್ಲಿ ಮೈವೆತ್ತಿವೆ. ಮಹಾಭಾರತದ ಕಥಾಸೂತ್ರವೇ ಇದಕ್ಕೆ ಆಧಾರ. ಅರವಿಂದರ ಕೃತಿಗಳ ಅಧ್ಯಯನದಿಂದ ಹೊಸದೃಷ್ಟಿ ಹೊಸ ಅಭಿರುಚಿಗಳು ಮೂಡಿ ಜೀವನ ಪಥ ದೃಗ್ಗೋಚರವಾಗುತ್ತದೆ. ಹಿಂದಿನ ಮಹಾತ್ಮರೆಲ್ಲರ ವಿಚಾರಧಾರೆಗಳನ್ನು ವಿಮರ್ಶಿಸಿ, ಮಹತ್ತ್ವಪೂರ್ಣವಾದ ಪೂರ್ಣಯೋಗಮಾರ್ಗವನ್ನು ಜನತೆಯ ಮುಂದೆ ಇಟ್ಟವರು ಇವರು. ಹೀಗೆ ಅರವಿಂದರು ಭಾರತದ ಪ್ರಸಿದ್ಧ ದಾರ್ಶನಿಕರಾಗಿ, ಕವಿ, ನಾಟಕಕಾರ, ವಿಮರ್ಶಕರಾಗಿ, ಆಧ್ಯಾತ್ಮಿಕ ಮಾರ್ಗದರ್ಶಕರಾಗಿ ಪ್ರಮುಖರಾಗಿದ್ದರು. ಮಹಾಯೋಗಿ ಎನಿಸಿದ್ದ ಇವರು 1950 ಡಿಸೆಂಬರ್ 5 ರಂದು ನಿಧನಹೊಂದಿದರು. (ಕೆ.ಎ.)

**ಅರಿಕಮೇಡು:** ತಮಿಳುನಾಡು ರಾಜ್ಯದ ಪಾಂಡಿಚೇರಿಯಿಂದ 3 ಕಿಮೀ ದೂರದಲ್ಲಿ, ಬಂಗಾಲಕೊಲ್ಲಿಯ ತೀರದಲ್ಲಿ ಮರಳು ದಂಡೆಯಿಂದ ಬೇರ್ಪಟ್ಟು ಉಂಟಾಗಿರುವ ನದಿ (ಲಗೂನ್) ದಡದಲ್ಲಿರುವ ಐತಿಹಾಸಿಕ ಸ್ಥಳ. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ವೀರೈ ಎಂದು ಕರೆಯಲಾಗಿರುವ ಮೀನುಗಾರರ ಗ್ರಾಮ ವೀರಂಪಟ್ಟಿಯಿಂದ ಸು.500 ಮೀ ಉತ್ತರಕ್ಕಿದೆ. ಪಾಂಡಿಚೇರಿಯಿಂದ ಅನತಿ ದೂರದಲ್ಲಿ, ಸಮುದ್ರತಟದಲ್ಲಿಯೇ ಇರುವುದರಿಂದ ಈ ಊರನ್ನು ಸಾಧಾರಣವಾಗಿ ಪೆರಿಪ್ಲಸ್ ಆಫ್ ದಿ ಎರಿಥ್ರಿಯನ್ ಸೀ ಮತ್ತು ಟಾಲಮಿಯ ಜಿಯೋಗ್ರಫಿಯಲ್ಲಿ ಉಲ್ಲೇಖವಾಗಿರುವ ಪ್ರಸಿದ್ಧ ಬಂದರು ಪಟ್ಟಣವಾದ ಪೊದೌಕೆ (=ಪುದುಚೇರಿ=ಹೊಸಪಟ್ಟಣ) ಎಂದೇ ಗುರುತಿಸಲಾಗಿದೆ. 1937ರಲ್ಲಿ ಹಾಗೂ ಅನಂತರ ಜೋವು ಡುಬ್ರೈಲ್ (1941) ಈ ನಿವೇಶನದಿಂದ ರೋಮನ್ ಚಕ್ರವರ್ತಿ ಅಗಸ್ಟಸನ ತಲೆಯ ಚಿತ್ರ ಕೆತ್ತಿದ ಮಣಿಯೂ ಸೇರಿದಂತೆ ಅನೇಕ ಅಮೂಲ್ಯ ಮಣಿರತ್ನಗಳನ್ನು ಸಂಗ್ರಹಿಸಿದ ಸ್ಥಳರೋಮನ್ ವಸಾಹತು ಪಟ್ಟಣವಾಗಿತ್ತೆಂದು ಭಾವಿಸಿದ ಬಳಿಕ ಪಾಂಡಿಚೇರಿಯ ಕೆಲವು ಫ್ರೆಂಚ್ ನಿವಾಸಿಗಳು ಇಲ್ಲಿ ಮನಸ್ಸಿಗೆ ಬಂದಂತೆ ಅಗೆದು ಬಾವಿ ಹಾಗೂ ಉಂಗುರ ಬಾವಿಗಳನ್ನು ಶೋಧಿಸಿದರಲ್ಲದೆ ಐತಿಹಾಸಿಕ ಹಾಗೂ ಕಲಾತ್ಮಕ ಮಹತ್ತ್ವದ ಅನೇಕ ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದರು. 1944ರಲ್ಲಿ ಪಾಂಡಿಚೇರಿಗೆ ಭೇಟಿನೀಡಿದ ಅಂದಿನ ಭಾರತೀಯ ಪುರಾತತ್ತ್ವ ಇಲಾಖೆಯ ಮಹಾನಿರ್ದೇಶಕ ಸರ್ ಮಾರ್ಟಿಮರ್ ವೀಲರ್ ಈ ಪ್ರಾಚ್ಯವಸ್ತುಗಳನ್ನು ಅಧ್ಯಯನ ಮಾಡಿ ಅವು ನಿಸ್ಸಂದೇಹವಾಗಿಯೂ ರೋಮನ್ ಮೂಲದ್ದೆಂದು ಊಹಿಸಿದ. ನಿರ್ದಿಷ್ಟ ಕಾಲಾನುಕ್ರಮಣಿಕೆಯಲ್ಲಿ ದೊರೆತ ಇಂತಹ ಪ್ರಾಚ್ಯ ವಸ್ತುಗಳನ್ನು ಆಧಾರವಾಗಿಟ್ಟುಕೊಂಡರೆ ದಕ್ಷಿಣಭಾರತದಾದ್ಯಂತ ಅಲ್ಲಲ್ಲಿ ಚದುರಿದಂತೆ ಕಂಡುಬರುವ, ಇದೇ ರೀತಿಯ ಹಾಗೂ ಇವುಗಳ ಜೊತೆಗೆ ದೊರೆಯುವ ಭಾರತೀಯ ಮೂಲದ ಪ್ರಾಚ್ಯವಸ್ತುಗಳ ಕಾಲವನ್ನು ನಿರ್ಣಾಯಕವಾಗಿ ತಿಳಿಯಲು ಒಂದು ಆಧಾರ ರೇಖೆ ಒದಗುತ್ತದೆಂದು ಭಾವಿಸಿದ. ಇದೇ ಉದ್ದೇಶದಿಂದ ಮಾರ್ಟಿಮರ್ ವೀಲರ್ ತನ್ನ ಸಹೋದ್ಯೋಗಿಗಳ ನೆರವಿನಿಂದ ಈ ನಿವೇಶನದಲ್ಲಿ ಶಾಸ್ತ್ರೀಯ ಉತ್ಖನನ ನಡೆಸಿದ (1945). ಪುನಃ 1947–50ರಲ್ಲಿ ಜೀನ್ ಮೇರಿ ಕಾಸಲ್ ಉತ್ಖನನ ನಡೆಸಿದರು. ಇತ್ತೀಚೆಗೆ ಪಾಂಡಿಚೇರಿಯ ವಿಮಲಾ ಬೆಗ್ಲೆಯವರು ಇಲ್ಲಿ ಉತ್ಖನನ ಕೈಗೊಂಡಿದ್ದಾರೆ.

1945ರ ವೇಳೆಗಾಗಲೇ ಸ್ಥಳೀಯರು ಈ ನಿವೇಶನದ ಹಲವು ಭಾಗಗಳನ್ನು ಅಗೆದು ಬತ್ತದಗದ್ದೆ ಹಾಗೂ ತೆಂಗಿನತೋಟ ಮಾಡಲು ನೆಲವನ್ನು ಬಹುತೇಕ ಸಮತಟ್ಟಾಗಿಸಿದ್ದರು. ಆದರೂ ದಕ್ಷಿಣದ ಸ್ವಲ್ಪ ಭಾಗ ಸಾಕಷ್ಟು ಸುಸ್ಥಿತಿಯಲ್ಲಿದ್ದು, ಉತ್ಖನನದಲ್ಲಿ ಇಟ್ಟಿಗೆಯಿಂದ ಕಟ್ಟಿದ ಸು. 45 ಮೀ ಉದ್ದದ ಒಂದು ಅಡ್ಡಗೋಡೆ ಮತ್ತು ಪೂರ್ವಕ್ಕೆ ಒಂದು ಸಣ್ಣ ಪಾರ್ಶ್ವಕೋಣೆ ಇದ್ದ ದೊಡ್ಡ ಸರಕುಕೋಠಿ ಬೆಳಕಿಗೆ ಬಂತು. ಈ ಕೋಠಿಯ ಹೊರಮೈಗೆ ಸುಣ್ಣದ ದಪ್ಪಲೇಪನ ನೀಡಿ ನೀರೂರದಂತೆ ಭದ್ರಪಡಿಸಲಾಗಿತ್ತು. ನಿವೇಶನದ ಉತ್ತರ ಭಾಗದಲ್ಲಿ ನಿರ್ಮಾಣ ಚಟುವಟಿಕೆಗಳು ಮೂರು ಹಂತಗಳಲ್ಲಿ ಬಹುಕಾಲ ನಿರಂತರವಾಗಿ ನಡೆದಂತೆ ಕಂಡು ಬಂದು ಮೊದಲೆರಡು ಹಂತಗಳಲ್ಲಿ ಮೂರು ಉಪಹಂತಗಳನ್ನು ಗುರುತಿಸಬಹುದಾಗಿತ್ತು. ಮೊದಲ ಹಂತದ ಎರಡನೆಯ ಉಪಹಂತದಲ್ಲಿ ಕಟ್ಟಲಾದ ಇಟ್ಟಿಗೆಯ ಮಧ್ಯಮಗಾತ್ರದ ಎರಡು ಕೊಳಗಳನ್ನು ಅನೇಕ ಸಲ ದುರಸ್ತಿ ಮಾಡಿ ಎರಡನೆಯ ಹಂತದ ಕೊನೆಯವರೆಗೆ ಉಪಯೋಗಿಸಲಾಗಿತ್ತು. ಇವಕ್ಕೆ ಹೊಂದಿಕೊಂಡಂತೆ ಚರಂಡಿ ವ್ಯವಸ್ಥೆ, ಸುತ್ತ ನೀಡಿದ್ದ ಸುಭದ್ರ ಹಾಸಿಟ್ಟಿಗೆ (ಬ್ರಿಕ್ ಪೇವ್‌ಮೆಂಟ್) ಮತ್ತು ಯಾವುದೇ ರೀತಿಯ ಗೃಹಬಳಕೆಯ ಲಕ್ಷಣವಿಲ್ಲದಿದ್ದುದರಿಂದ ಇವು ಮಸ್ಲಿನ್ ಬಟ್ಟೆಗಳಿಗೆ ಬಣ್ಣ ಹಾಕಲು ಉಪಯೋಗಿಸುತ್ತಿದ್ದ ತೊಟ್ಟಿಗಳೆಂದು ನಿರ್ಧರಿಸಲಾಯಿತು.

ಅರಿಕಮೇಡುವಿನಲ್ಲಿ ಪ್ರ.ಶ.ಪೂ.1 ನೆಯ ಕೊನೆಯ ಅಥವಾ ಶತಮಾನದ ಮೊದಲ ದಶಕಗಳಿಂದಲೇ ಅಂದರೆ ಪಾತ್ರೆಗಳು ಈ ಪ್ರದೇಶಕ್ಕೆ ಪರಿಚಯವಾಗುವುದಕ್ಕೂ ಮೊದಲೇ ಜನವಸತಿಯಿತ್ತು. ಸು.200ರ ವೇಳೆಗೆ ವಿಶಿಷ್ಟವಾದ ಅರೆಟೈನ್ ಮಣ್ಪಾತ್ರೆಗಳು ಇಲ್ಲಿ ಬೆಳಕಿಗೆ ಬಂದವು. ಹಾಗಾಗಿ ಇಲ್ಲಿ ಕಂಡು ಬರುವ ನಿರ್ಮಿತಿಗಳಲ್ಲಿ ಬಹಳಷ್ಟು 3ನೆಯ ಶತಮಾನಕ್ಕೂ ಈಚಿನವು. ಇಷ್ಟಾದರೂ ಈ ಪಟ್ಟಣ ತನ್ನ ಇತಿಹಾಸದುದ್ದಕ್ಕೂ ಸಕ್ರಿಯವಾಗಿ ಇಂಡೊ–ರೋಮನ್ ವಾಣಿಜ್ಯ ಕೇಂದ್ರವಾಗಿಯೇ ಉಳಿದಿತ್ತು.

ಖಚಿತವಾದ ಕಾಲನಿರ್ಣಯಕ್ಕೆ ಸಹಾಯಕವಾಗಿ ರೋಮ್‌ನಿಂದ ಆಮದಾದ ಮೂರು ಮುಖ್ಯ ರೀತಿಯ ಮಣ್ಪಾತ್ರೆಗಳು ಇಲ್ಲಿ ದೊರಕಿವೆ:

ಅರೆಟೈನ್ ಪಾತ್ರೆಗಳು: ಮುದ್ರಾಂಕಿತ ಮಣ್ಪಾತ್ರೆಗಳೆಂದು ವಿಶೇಷವಾಗಿ ಗುರುತಿಸಲಾ ಗುವ ಕಡುಗೆಂಪು ಹೊಳಪಿನ ಈ ಮಣ್ಪಾತ್ರೆಗಳು ಪೂರ್ವ ಯುರೋಪ್ ಮೂಲದವು. ಅರಿಕಮೇಡುವಿನಲ್ಲಿ ದೊರೆತಿರುವ ಈ ಎಲ್ಲ ಪಾತ್ರೆ ಚೂರುಗಳು ಇಟಲಿಯ ಅರೆಜೋ ಎಂಬ ಊರಿನಲ್ಲಿ ಮಾತ್ರ ಉತ್ಪಾದಿಸಲಾಗುತ್ತಿತ್ತು. ತಯಾರಿಸುವ ಊರಿನ ಹೆಸರನ್ನೇ ಆಧರಿಸಿ ಇವು ಅರೆಟೈನ್ ಪಾತ್ರೆಗಳೆಂದು ಪ್ರಸಿದ್ಧವಾಗಿವೆ. ಅರಸ ಹಾಗೂ ಶ್ರೀಮಂತರ ವಿಲಾಸ ಗೃಹಗಳಲ್ಲಿ ಉಪಯೋಗಿಸುವುದಕ್ಕಾಗಿ ವಿಶೇಷವಾಗಿ ತಯಾರಾಗುತ್ತಿದ್ದ, ಅತಿ ಶ್ರೇಷ್ಠ ಮಟ್ಟದ ಈ ಪಾತ್ರೆಗಳು ಪ್ರ.ಶ.ಪೂ.1 ನೆಯ ಶತಮಾನದಲ್ಲಿ ಆರಂಭವಾಗಿ ಸು.50ರ ವೇಳೆಗೆ ಪಶ್ಚಿಮ ದೇಶಗಳ ಮಾರುಕಟ್ಟೆಯಿಂದ ಹೊರಬಿದ್ದವು. ಹೀಗೆ ಕೇವಲ $1–1^1/_2$ ಶತಮಾನಗಳ ಕಾಲ ಜನಪ್ರಿಯವಾಗಿ ಪ್ರಚಲಿತವಾಗಿದ್ದ ಈ ವಿಶಿಷ್ಟ ಪಾತ್ರೆಗಳು ಉತ್ಪಾದನಾ ಕ್ಷೇತ್ರದಿಂದ ರೋಮಿನೊಡನೆ ವಾಣಿಜ್ಯ, ಸಾಂಸ್ಕೃತಿಕ ಸಂಪರ್ಕವಿದ್ದ ಸ್ಥಳಗಳಲೆಲ್ಲ ವಿವಿಧ ಸ್ತರಗಳಲ್ಲಿ ದೊರೆಯುತ್ತಿದ್ದು ಆಯಾ ಪ್ರದೇಶದ ಸಂಸ್ಕೃತಿಯ ಸ್ತರಗಳ ಕಾಲವನ್ನು ಖಚಿತವಾಗಿ ನಿರ್ಣಯಿಸಲು ಸಹಾಯಕ ಸಾಮಾಗ್ರಿಗಳಾಗಿವೆ.

ಮಾರ್ಟಿಮರ್ ವೀಲರನ ಉತ್ಖನನದಲ್ಲಿ ಅರಿಕಮೇಡುವಿನಲ್ಲಿ ಈ ಮಣ್ಣಿನ ಪಾತ್ರೆಗಳ 29 ಚೂರುಗಳು ದೊರೆತಿದ್ದು, ಸಾಧಾರಣವಾಗಿ ಎಲ್ಲವೂ ಕಾಲುಳ್ಳ (ಪೀಠಸಹಿತವಾದ) ಊಟದ ಬಟ್ಟಲುಗಳು ಮತ್ತು ಬೋಗುಣಿಗಳ ಭಾಗಗಳಾಗಿವೆ. ಇವುಗಳಲ್ಲಿ ಮೂರರ ಕೆಳಭಾಗದಲ್ಲಿ ಅನುಕ್ರಮವಾಗಿ VIBII (VIBIE ಅಥವಾ VIBIF), AMVRI ಮತ್ತು ITTA ಎಂಬ ಮುದ್ರೆಗಳಿದ್ದವು.

ಮಧುಪಾತ್ರೆಗಳು (ಆಂಫೊರ): ಉದ್ದಕತ್ತಿನ, ಎರಡೂ ಬದಿಯಲ್ಲಿ ಹಿಡಿಗಳಿರುವ ಮಧ್ಯಮ ಹಾಗೂ ದೊಡ್ಡಗಾತ್ರದ ಈ ಕಲಶದಂತಹ ಪಾತ್ರೆಗಳಲ್ಲಿ ವಿದೇಶಿ ಮದ್ಯ, ಸುಗಂಧತೈಲ ಮತ್ತಿತರ ದ್ರವಪದಾರ್ಥಗಳನ್ನು ಸಂಗ್ರಹಿಸುತ್ತಿದ್ದು, ಬಹುತೇಕ ಮಧುಕಲಶಗಳೆಂದೇ ಕರೆಯಲಾಗುತ್ತದೆ. ಈ ಪಾತ್ರೆಯ ಚೂರುಗಳು ಅರಿಕಮೇಡುವಿನ ಎಲ್ಲ ಸ್ತರಗಳಲ್ಲಿಯೂ ದೊರೆತಿದ್ದು ಹೆಚ್ಚಿನವುಗಳಲ್ಲಿ ಒಳಭಾಗದ ಪೊರೆಯಂತಹ ಲೇಪನದಲ್ಲಿ ಮೆಡಿಟರೇನಿಯನ್ (ವಿದೇಶಿ) ಮದ್ಯದಲ್ಲಿ ಸಾಮಾನ್ಯವಾಗಿ ಕಂಡುಬರುವ ರೇಸಿನ್ ರಾಸಾಯನಿಕಗಳಿವೆ.

ರೌಲೆಟ್ ಚಿತ್ರಗಳಿರುವ ಪಾತ್ರೆಗಳು: ಒಳಬಾಗಿದ ಕೊಕ್ಕಿನಂತಹ ಕಚ್ಚು ಕಚ್ಚಾದ ಅಂಚಿನ ದೊಡ್ಡ ಬಟ್ಟಲಿನಂತಹ ಊಟದ ತಟ್ಟೆಗಳು ಬೂದುಬಣ್ಣದಿಂದ ಕಪ್ಪುಬಣ್ಣದವರೆಗೆ ವಿವಿಧ ವರ್ಣಗಳಲ್ಲಿ ದೊರೆಯುತ್ತವೆ. ತಟ್ಟೆಯ ಒಳತಲ ಭಾಗದಲ್ಲಿ ರೌಲೆಟ್‌ನಿಂದ (ಇದೊಂದು ಸಣ್ಣಯಂತ್ರ) ಮೂಡಿಸಿದ ಒಂದೇ ಕೇಂದ್ರವುಳ್ಳ ಎರಡು ಮೂರು ಮುದ್ರೆಗಳ ವೃತ್ತಗಳ ಅಲಂಕರಣ ಈ ಪಾತ್ರೆಗಳ ವೈಶಿಷ್ಟ್ಯ. ಈ ಪಾತ್ರೆಗಳ ಬಾಹ್ಯ ಆಕಾರ, ಉಪಯೋಗಗಳಲ್ಲಿ ಯಾವುದೇ ರೀತಿಯ ಹೊರಪ್ರಭಾವ ಕಂಡು ಬರದಿದ್ದರೂ ರೌಲೆಟ್‌ನಿಂದ ಮೂಡಿಸಿದ ಮುದ್ರೆಗಳ ಸಾಲು ನಿಸ್ಸಂದೇಹವಾಗಿ ಬಾಹ್ಯ ಸಂಪರ್ಕದಿಂದ ಬಂದಿದೆ. ಈ ಮಣ್ಪಾತ್ರೆಗಳು ಮೊದಲಿಗೆ ಅರಿಕಮೇಡುವಿನಲ್ಲಿ ವಿಶೇಷವಾಗಿ ಕಂಡುಬಂದರೂ ಇತ್ತೀಚಿನ ವರ್ಷಗಳಲ್ಲಿ ಭಾರತದಾದ್ಯಂತ ವಿವಿಧ ಕಾಲಮಾನದ ಸಾಂಸ್ಕೃತಿಕ ಸ್ತರಗಳಲ್ಲಿ ವ್ಯಾಪಕವಾಗಿ ಬೆಳಕಿಗೆ ಬಂದಿವೆ. ಇವು ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಶಾತವಾಹನ ಕಾಲದಲ್ಲಿ ಪ್ರಾಚ್ಯವಸ್ತುಗಳ ಜೊತೆ ಹೆಚ್ಚಾಗಿ ದೊರೆತಿವೆ.

ಈ ಮುಖ್ಯ ವಸ್ತುಗಳ ಜೊತೆಗೆ ನೆಲದ ಮೇಲೆ ಅಲ್ಲಲ್ಲಿ ದೊರೆತಿರುವ ಚೀನ ಮೂಲದ ಸೆಲಡನ್ ಪಾತ್ರೆಗಳು, ಬಹುಶಃ ಮುದ್ರೆಯುಂಗುರಕ್ಕೆ ಕೂರಿಸಿದ್ದಿರಬಹುದಾದ ಕೆತ್ತಿದ ರೋಮನ್ ಚಕ್ರವರ್ತಿ ಅಗಸ್ಟಸನ ತಲೆಯ ಚಿತ್ರ, ದೀರ್ಘವೃತ್ತಾಕಾರದ ನಸುಗೆಂಪು ಕಾರ್ನಿಲಿಯನ್ ಶಿಲೆಯ ಅಮೂಲ್ಯ ಮಣಿ, ಕೆಂಪುಬಣ್ಣದ ಉತ್ತಮ ದರ್ಜೆಯ ರೋಮನ್ ದೀಪ, ದೀಪದ ಕಂಬವನ್ನು ಎರಕ ಹೊಯ್ದು ಸೇರಿಸಿದ ಬಿಳಿಯಗಾಜಿನ ಬೋಗುಣಿ, ಸಮಾನಾಂತರವಾಗಿ ಎರಡೂ ಬದಿಯಲ್ಲಿ ಉಬ್ಬುತಗ್ಗಿರುವ ನೀಲಿಗಾಜಿನ ಬೋಗುಣಿ–ಇವು ಅರಿಕಮೇಡುವಿನಲ್ಲಿ ದೊರೆತ ವಿದೇಶಿ ಮೂಲದ ಇನ್ನಿತರ ವಸ್ತುಗಳು. ಇವುಗಳಲ್ಲಿ ಅಗಸ್ಟಸನ ತಲೆಯ ಚಿತ್ರಕೆತ್ತಿದ ಮಣಿ ಫ್ರೆಂಚರು 1939 ರಲ್ಲಿ ನಡೆಸಿದ ಉತ್ಖನನದಲ್ಲಿ ದೊರೆತ ಅಮೂಲ್ಯ ಪ್ರಾಚ್ಯವಸ್ತು. 1940ರಲ್ಲಿಯೇ ಈ ಮಣಿಯನ್ನು ಹಾನೋಯ್‌ನಲ್ಲಿರುವ ವಸ್ತುಸಂಗ್ರಹಾಲಯಕ್ಕೆ ಒಯ್ಯಲಾಯಿತೆಂಬ ಉಲ್ಲೇಖಗಳಿವೆ.

ಕಡಿಮೆ ಸಂಖ್ಯೆಯಲ್ಲಿ ದೊರೆತಿರುವ ವಿದೇಶಿ ಮೂಲದ ಈ ಅಪರೂಪದ ವಸ್ತುಗಳಲ್ಲದೆ ಪ್ರಾದೇಶಿಕ ಸಂಸ್ಕೃತಿಯನ್ನು ಪ್ರತಿನಿಧಿಸುವ ಬೂದುಬಣ್ಣದ ಮಣ್ಪಾತ್ರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳಕಿಗೆ ಬಂದಿವೆ. ಈ ಪ್ರಾದೇಶಿಕ ಮಣ್ಪಾತ್ರೆಗಳಿಗೂ ಆಕಾಲಕ್ಕೆ ದಕ್ಷಿಣಭಾರತದಾದ್ಯಂತ ಪ್ರಚಲಿತವಿದ್ದ ಬೃಹತ್ ಶಿಲಾಯುಗ ಸಂಸ್ಕೃತಿಯ ಮಣ್ಪಾತ್ರೆಗಳಿಗೂ ಯಾವುದೇ ನೇರ ಸಂಬಂಧ ಕಲ್ಪಿಸಲು ಸಾಧ್ಯವಿಲ್ಲ. ಬೂದುಬಣ್ಣ ಪ್ರಧಾನವಾಗಿರುವ ಈ ಪಾತ್ರೆಗಳಲ್ಲಿ ಒಂದು ವಿಶಿಷ್ಟ ಆಕಾರದ ಸಣ್ಣ ಗಾತ್ರದ ಬಟ್ಟಲು ಗಮನಾರ್ಹ. ಬೂದು, ಬೂದುಮಿಶ್ರಿತ ಗುಲಾಬಿ, ಕಪ್ಪು–ಕೆಂಪು ಅಥವಾ ಹೊರಮೈಯಲ್ಲಿ ಉತ್ತಮ ಗುಣಮಟ್ಟದ ಗುಲಾಬಿ ಲೇಪನವಿದ್ದು ಒಳಮೈಯಲ್ಲಿ ಕಪ್ಪು ಲೇಪನವುಳ್ಳ ಈ ಪಾತ್ರೆ, ಕಿರಿದಾದ ಮಟ್ಟಸ ತಳವನ್ನು ಹೊಂದಿದ್ದು ಕ್ರಮೇಣ ಬಾಯಿಯ ಬಳಿ ಅಗಲವಾಗಿದೆ. ಇದರ ಒಳಮೈಯಲ್ಲಿ ಮನಸಿಟ್ಟು ಮೂಡಿಸಿದ ಮೀನು ಅಥವಾ ಪಕ್ಷಿಗಳ ಚಿತ್ರಗಳಿರುವ ವೃತ್ತಫಲಕಗಳ ಸಾಲು, ನಡುನಡುವೆ ಅಡ್ಡಗೀಟುಗಳ ಸಾಲು ಹಾಗೂ ತಳದ ಒಳಮೈಯಲ್ಲಿ ಒಂದೇ ಕೇಂದ್ರವುಳ್ಳ ಕುಳಿವರ್ತುಲಗಳ ಅಲಂಕರಣವಿರುತ್ತದೆ. ಜೊತೆಗೆ ಹೆಚ್ಚಿನ ಪಾತ್ರೆಗಳ ಮೇಲೆ ಪ್ರಾಚೀನ ತಮಿಳು ಲಿಪಿಯಲ್ಲಿರುವ ರೇಖಾಕ್ಷರಗಳ ಶಾಸನಗಳಿವೆ.

ಅರಿಕಮೇಡುವಿನಲ್ಲಿ ಪ್ರಥಮಬಾರಿಗೆ ವೀಲರ್ ತನ್ನ ಹಾಗೂ ಹಿಂದಿನ ಉತ್ಖನನಗಳಲ್ಲಿ ಹೊರನಾಡಿನ ಸಂಪರ್ಕಕ್ಕೆ ಸಂಬಂಧಿಸಿದಂತೆ ದೊರೆತ ಎಲ್ಲ ಮಾಹಿತಿಯನ್ನು ವಿಶ್ಲೇಷಿಸಿ ಈ ವಾಣಿಜ್ಯ ಕೇಂದ್ರ ಅಗಸ್ಟಸನ ಕಾಲದಲ್ಲಿ ಪ್ರಾರಂಭವಾಗಿ ಸು.2 ಶತಮಾನಗಳ ಕಾಲ ಪ್ರವರ್ಧಮಾನದಲ್ಲಿತ್ತೆಂದು ಅಭಿಪ್ರಾಯಪಟ್ಟ. ತನ್ನ ಉತ್ಖನನ ವರದಿಯನ್ನು ಅರಿಕಮೇಡು ಪೂರ್ವಭಾರತ ಕರಾವಳಿಯ ಒಂದು ಇಂಡೊ–ರೋಮನ್ ವಾಣಿಜ್ಯ ಕೇಂದ್ರವೆಂದು ಅರ್ಥಪೂರ್ಣವಾಗಿ ಹೆಸರಿಸಿದೆ. ಅಲ್ಲದೆ ಈ ಉತ್ಖನನ ವಿವರಗಳನ್ನು ಒಂದು ಆಧಾರರೇಖೆಯಾಗಿ ಬಳಸಿ ಹಲವಾರು ಸ್ಥಳೀಯ ಸಂಸ್ಕೃತಿಗಳ ಕಾಲನಿರ್ದೇಶನ ಮಾಡಿದ.

ಆದರೆ ಅರಿಕಮೇಡು ಸೇರಿದಂತೆ ಭಾರತದ ಕರಾವಳಿ ಮತ್ತು ಒಳನಾಡುಗಳಲ್ಲಿ ಮುಂದುವರೆದಿರುವ ಸಂಶೋಧನೆಗಳಿಂದ ಇತ್ತೀಚಿಗೆ ಬೆಳಕಿಗೆ ಬಂದಿರುವ ಆಧಾರ ಸಾಮಾಗ್ರಿಗಳ ಹಿನ್ನೆಲೆಯಲ್ಲಿ ಈ ಸ್ಥಳದಲ್ಲಿ ದೊರೆತ ಮಾಹಿತಿಗಳನ್ನು ಪುನಃ ಪರಿಶೀಲನೆಗೆ ಒಳಪಡಿಸಿದರೆ ಅನೇಕ ಗಮನಾರ್ಹ ಅಂಶಗಳು ತಿಳಿದು ಬರುತ್ತವಲ್ಲದೆ ವ್ಹೀಲರ್ ಕೈಗೊಂಡ ನಿರ್ಣಯಗಳೂ ಪುನರ್ವಿಮರ್ಶೆಗೊಳಗಾಗುತ್ತವೆ.

ಈ ನೆಲೆಯಲ್ಲಿ 1945ರ ಉತ್ಖನನದಲ್ಲಿ ದೊರೆತ ಮಣ್ಪಾತ್ರೆಗಳಲ್ಲಿ ಆದಿ ಹಂತದ ಕೆಲವೇ ಚೂರುಗಳು ನವಶಿಲಾಯುಗ ಸಂಸ್ಕೃತಿಯವೆಂದು ಗುರುತಿಸಲ್ಪಟ್ಟಿವೆ. ಹೊರ ಚಾಚಿದ ನೀಳ ಅಂಚಿನ ಉಬ್ಬು ಹೊಟ್ಟೆಯ ಮಸುಕು ಬೂದುಬಣ್ಣದ ಮಧ್ಯಮ ಪ್ರಮಾಣದ ಮಡಕೆ ಈ ಸಾಂಸ್ಕೃತಿಕ ಹಂತದಲ್ಲಿ ಸಾಮಾನ್ಯವಾಗಿದೆ. ಈ ಪ್ರಕಾರದ ಮಡಕೆ ಮತ್ತು ಉಜ್ಜಿನಯ ಮಾಡಿದ ತ್ರಿಕೋಣಾಕೃತಿಯ ಒಂದು ಕಲ್ಲಿನ ಕೊಡಲಿಯೂ ದೊರೆತಿವೆ. ಬಹುಶಃ ಇಲ್ಲಿ ಜನವಸತಿ ನವಶಿಲಾಯುಗ ಹಂತದಿಂದ ಆರಂಭವಾಯಿತೆಂದು ಕಾಣುತ್ತದೆ. (ಎಂ.ವಿ.ವಿ.;ಎಚ್.ಆರ್.)

**ಅರಿಕೇಸರಿ II:** 10ನೆಯ ಶತಮಾನದ ಪೂರ್ವಭಾಗದಲ್ಲಿ ಆಳುತ್ತಿದ್ದ ವೇಮುಲವಾಡದ ಚಾಳುಕ್ಯ ಶಾಖೆಯ ಪರಾಕ್ರಮಿ ಅರಸು. ಮಹಾಕವಿ ಪಂಪನ ಆಶ್ರಯದಾತ. ವೇಮುಲವಾಡ ಶಾಖೆಯ ಅರಸರು 7–8ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಇಂದಿನ ಆಂಧ್ರಪ್ರದೇಶದ ನಿಜಾಮಾಬಾದ್, ಕರೀಂನಗರ, ನಲ್ಗೊಂಡ ಮತ್ತು ಕರ್ನಾಟಕದ ರಾಯಚೂರು ಜಿಲ್ಲೆಗಳ ಭಾಗಗಳನ್ನು ಒಳಗೊಂಡ ಪ್ರದೇಶದಲ್ಲಿ ರಾಷ್ಟ್ರಕೂಟರ ಅಧೀನದಲ್ಲಿ ರಾಜ್ಯವಾಳುತ್ತಿದ್ದರು. ಕರೀಂನಗರ ಜಿಲ್ಲೆಯ ವೇಮುಲವಾಡ (ಲೇಮುಲವಾಡ, ಲಂಬುಳವಾಟಕ, ವೆಂಬುಳವಾಟಕಪತ್ತನ, ವೆಂಬುಳವಾಟ) ಅವರ ರಾಜಧಾನಿಯಾಗಿತ್ತು. ಅವರ ವಂಶಾನುಕ್ರಮಣಿಕೆ ಹೀಗಿದೆ: ಯುದ್ಧಮಲ್ಲ ವಿನಯಾದಿತ್ಯ I, ಅರಿಕೇಸರಿ I, ನರಸಿಂಹ I ಮತ್ತು ಭದ್ರದೇವ I (ನರಸಿಂಹನ ಜ್ಯೇಷ್ಠಪುತ್ರ), ಯುದ್ಧಮಲ್ಲ II, ಭದ್ರದೇವ II (ಬದ್ದೆಗ), ಯುದ್ಧಮಲ್ಲ III, ನರಸಿಂಹ II, ಅರಿಕೇಸರಿ II, ಭದ್ರದೇವ III, ಅರಿಕೇಸರಿ III.

ಈ ಪರಂಪರೆಯಲ್ಲಿನ ಇಮ್ಮಡಿ ಅರಿಕೇಸರಿಯ ವಿಚಾರಗಳು ವೇಮುಲವಾಡ ಮತ್ತು ಪರಭಣಿ ಶಾಸನಗಳಲ್ಲಿ ಮತ್ತು ಪಂಪನ ವಿಕ್ರಮಾರ್ಜುನವಿಜಯದಲ್ಲಿ ದೊರೆಯುತ್ತವೆ. ಅರಿಕೇಸರಿ ಇಮ್ಮಡಿ ನರಸಿಂಹನಿಗೆ ಜಾಕವ್ವೆಯಲ್ಲಿ ಮಗನಾಗಿ ಜನಿಸಿದ. ಜಾಕವ್ವೆ ರಾಷ್ಟ್ರಕೂಟ ಚಕ್ರವರ್ತಿ 3ನೆಯ ಇಂದ್ರನ ಸೋದರಿಯಿರಬಹುದೆಂದು ಕೆಲವರ ಊಹೆ. ಪಂಪ ಇಂದ್ರೇಂದ್ರನ ತೋಳ್ತೊಟ್ಟಿಲಾಗಿರೆ ಬಳೆದಂ ಎಂಬುದಾಗಿ ಅರಿಕೇಸರಿಯ ಬಾಲ್ಯವನ್ನು ವರ್ಣಿಸಿರುವುದರಿಂದ, ಅರಿಕೇಸರಿ ಮುಮ್ಮಡಿ ಇಂದ್ರನ ಪ್ರೀತ್ಯಾದರಗಳಿಗೆ ಪಾತ್ರನಾಗಿದ್ದನೆಂದು ತಿಳಿದುಬರುತ್ತದೆ. ಆತ ಇಂದ್ರನ ಪುತ್ರಿ ರೇವಕನಿಮ್ಮಡಿಯನ್ನು ವರಿಸಿದ್ದನೆಂಬುದಾಗಿ ವೇಮುಲವಾಡದ ಶಾಸನದಲ್ಲಿ ಹೇಳಿದೆ. ಆದರೆ ರಾಷ್ಟ್ರಕೂಟ ಕುಲದ ಲೋಕಾಂಬಿಕೆ ಎಂಬುವಳು ಪತ್ನಿ ಎಂಬುದಾಗಿ ಪರಭಣಿ ತಾಮ್ರಪಟಗಳಲ್ಲಿದೆ. ಲೋಕಾಂಬಿಕೆ ಎಂಬುದು ರೇವಕನಿಮ್ಮಡಿಯ ಬಿರುದೇ, ಪ್ರತಿನಾಮವೇ ಅಥವಾ ಇನ್ನೊಬ್ಬ ಹೆಂಡತಿಯ ಹೆಸರೇ ಎಂಬುದು ಸ್ಪಷ್ಟವಿಲ್ಲ. ಅರಿಕೇಸರಿಗೆ ಸಾಮಂತಚೂಡಾಮಣಿ, ಉದಾತ್ತನಾರಾಯಣ, ಆರೂಢಸರ್ವಜ್ಞ, ಕದನತ್ರಿಣೇತ್ರ, ಸಹಜ ಮನೋಜ, ಶರಣಾಗತಜಲನಿಧಿ, ಗುಣಾರ್ಣವ, ಪ್ರಿಯಗಳ್ಳ–ಮುಂತಾದ ಹಲವು ಬಿರುದುಗಳಿದ್ದುವೆಂಬುದಾಗಿ ವೇಮುಲವಾಡದ ಶಾಸನದಿಂದಲೂ ಪಂಪನ ವಿಕ್ರಮಾರ್ಜುನ ವಿಜಯದಿಂದಲೂ ತಿಳಿದುಬರುತ್ತದೆ.

ಮಿತಿಮೀರಿ ನಡೆಯುತ್ತಿದ್ದ ಚಕ್ರವರ್ತಿ ಗೋವಿಂದನನ್ನು ಓಡಿಸಿ ತನ್ನನ್ನು ನಂಬಿಬಂದ ಬದ್ದೆಗದೇವನಿಗೆ ಸಾಮ್ರಾಜ್ಯಪದವನ್ನು ಅರಿಕೇಸರಿ ಕೈಗೂಡಿಸಿದನೆಂದು ಪಂಪಭಾರತದಲ್ಲಿ ಹೇಳಿದೆ. ಇದರ ಬಗೆಗೆ ಚರಿತ್ರಕಾರರ ವಿವರಣೆಯಿದು: ರಾಷ್ಟ್ರಕೂಟ ಚಕ್ರವರ್ತಿ 4ನೆಯ ಗೋವಿಂದ ತನ್ನ ಅಣ್ಣ ಇಮ್ಮಡಿ ಅಮೋಘವರ್ಷನನ್ನು ಪದಚ್ಯುತಗೊಳಿಸಿ, ಸಿಂಹಾಸನವನ್ನು ಹಿಡಿದಿದ್ದನಲ್ಲದೆ ಪ್ರಜಾನುರಾಗ ಗಳಿಸದೆ ಆತ ವ್ಯಸನಾಸಕ್ತನಾಗಿದ್ದ. ಅರಿಕೇಸರಿ ಪ್ರಜಾಭಿಪ್ರಾಯವನ್ನು ಲಕ್ಷಿಸಿ ಪ್ರಜೆಗಳ ಗೌರವಾದರಗಳನ್ನು ಗಳಿಸಿದ ಬದ್ದೆಗನ ಪಕ್ಷವಹಿಸಿದ. ಬಿಜ್ಜನ ವ್ಯವಹಾರದಲ್ಲಿ ಗೋವಿಂದನ ಸೈನ್ಯ ಅರಿಕೇಸರಿಯಿಂದ ಸೋಲನ್ನು ಅನುಭವಿಸಿತು. ಆಗ ತ್ರಿಪುರಿಗೆ ಓಡಿ ಹೋಗಿದ್ದ ಬದ್ದೆಗ ಮುಮ್ಮಡಿ ಅಮೋಘವರ್ಷನನ್ನು ಕರೆಸಿ ವೇಮುಲವಾಡದಲ್ಲಿಯೇ ಆತನನ್ನು ರಾಷ್ಟ್ರಕೂಟ ಚಕ್ರವರ್ತಿಯೆಂದು ಘೋಷಿಸಿ ಗೋವಿಂದನನ್ನು ಪದಚ್ಯುತಿಗೊಳಿಸಿ ಆತನ ಸ್ಥಾನದಲ್ಲಿ ನಿಲ್ಲಿಸಿದ. ಇದು ಪ್ರಾಯಶಃ ನಡೆದದ್ದು 934–35ರಲ್ಲಿ.

ಅರಿಕೇಸರಿಯ ಆಸ್ಥಾನ ಕವಿಯೂ ಆತ್ಮೀಯ ಸ್ನೇಹಿತನೂ ಆಗಿದ್ದ ಪಂಪ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ ಎಂಬ ಎರಡು ಮಹಾಕಾವ್ಯಗಳನ್ನು ರಚಿಸಿದ್ದಾನೆ. (ಟಿ.ವಿ.ವಿ.)

**ಅರೇಬಿಯ:** ಏಷ್ಯಖಂಡದ ನೈರುತ್ಯ ಭಾಗದಲ್ಲಿರುವ ಅರೇಬಿಯ ಪರ್ಯಾಯದ್ವೀಪದ ಉದ್ದ 20,000 ಕಿಮೀ. ದೇಶದ ಬಹುಭಾಗವೆಲ್ಲ ಮರಳುಗಾಡು. ಚರಿತ್ರಪೂರ್ವ ಕಾಲದಲ್ಲಿ ಇಲ್ಲಿಯ ಜನರ ಸ್ಥಿತಿ ಮತ್ತು ಸೆಮಿಟಿಕ್ ಭಾಷೆಯನ್ನಾಡುವ ಇತರ ಜನಾಂಗಗಳೊಂದಿಗೆ ಇವರ ಸಂಬಂಧ ಈ ವಿಷಯಗಳು ಖಚಿತವಾಗಿ ತಿಳಿದುಬಂದಿಲ್ಲ.

ಪ್ರ.ಶ.ಪೂ.1000 ವರ್ಷಗಳ ಹಿಂದೆಯೇ ಅರೇಬಿಯದಲ್ಲಿ ಪ್ರತ್ಯೇಕ ಬುಡಕಟ್ಟಿಗೆ ಸೇರಿ, ಪ್ರತ್ಯೇಕ ಸಮಾಜ ವ್ಯವಸ್ಥೆ ಹೊಂದಿದ್ದ ಎರಡು ಜನಾಂಗದವರಿದ್ದರು. ಒಂದು ಜನಾಂಗದವರು ಕಹತನಿ ಎಂಬ ಬುಡಕಟ್ಟಿಗೆ ಸೇರಿದವರು, ತಾವು ಶುದ್ಧ ಅರಬ್ಬರೆಂದು ನಂಬಿದ್ದರು. ತಮ್ಮದೇ ಆದ ಭಾಷೆ ಸಂಸ್ಕೃತಿ, ಮತಧರ್ಮಗಳನ್ನು ಬೆಳೆಸಿಕೊಂಡು ಬಂದಿದ್ದರು. ಇವರು ನೆಲೆಸಿದ್ದುದು ದಕ್ಷಿಣದ ಸಮುದ್ರತೀರಪ್ರದೇಶಗಳಲ್ಲಿ. ಅರೇಬಿಯದ ಇತರ ಭಾಗಗಳೆಲ್ಲ ಮರಳುಗಾಡು, ಇದರಲ್ಲಿ ಅಲ್ಲಲ್ಲಿ ನೀರಿನ ಆಸರೆ ಇದ್ದ ತಂಪುಜಾಗಗಳು (ಓಯೆಸಿಸ್) ಇದ್ದುವು. ಇಲ್ಲಿಯ ಬೆದೂಯಿನ್ ಜನ ಒಂದು ಕಡೆ ನೆಲಸದೆ ಸ್ಥಳದಿಂದ ಸ್ಥಳಕ್ಕೆ ಸುತ್ತಬೇಕಾಗಿತ್ತು. ಒಂಟೆ ಇವರ ವಾಹನ, ಮುಖ್ಯ ಜೀವನಾಧಾರ. ಅಬ್ರಹಾಂ ಮತ್ತು ಅವನ ಹೆಣ್ಣಾಳು (ಈಜಿಪ್ಷಿಯನವಳು) ಹೇಗರರ ಮಗನಾದ ಇಶ್ಮೇಲ್ ಇವರಲ್ಲಿ ಹನ್ನೆರಡು ಪಂಗಡಗಳಿಗೆ ಮೂಲಪುರುಷನೆಂದೂ ಇವರು ಮಿಶ್ರಜನಾಂಗದವರೆಂದೂ ಪರಿಗಣಿಸಲ್ಪಟ್ಟಿದ್ದರು. ಬೆದೂಯಿನ್ನರ ವ್ಯಾಪ್ತಿ ಉತ್ತರದ ಸಿರಿಯ, ಮೆಸಪೊಟೇಮಿಯ ರಾಜ್ಯಗಳವರೆಗೂ ಇತ್ತು. ದಕ್ಷಿಣ ಅರೇಬಿಯದಲ್ಲಿ ನೆಲೆಸಿದ್ದ

ಅರಬ್ಬೀಯರು ಉಚ್ಚ್ರಾಯಸ್ಥಿತಿಯಲ್ಲಿದ್ದಾಗ ಬೆದೂಯಿನ್ನರ ಮೇಲೂ ಅವರ ಸಂಸ್ಕೃತಿಯ ಪ್ರಭಾವ ಕೊಂಚ ಬಿದ್ದಿತ್ತು; ಏಕೆಂದರೆ ಅವರು ಅರೇಬಿಯದ ಮಧ್ಯ ಮತ್ತು ಉತ್ತರ ಭಾಗಗಳಲ್ಲಿ ನೆಲಸುನಾಡುಗಳನ್ನು ನಿರ್ಮಿಸಿಕೊಂಡಿದ್ದರು.

ಪ್ರ.ಶ. ವರ್ಷ ಪ್ರಾರಂಭವಾದ ಮೇಲೆ ಅರೇಬಿಯದ ಜನ ಅರೇಮಿಯನ್ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರು. ಅಲ್ಲಲ್ಲೇ ವಾಸಿಸುತ್ತಿದ್ದ ಯೆಹೂದ್ಯರು ಮತ್ತು ಕ್ರೈಸ್ತರ ಸಂಪರ್ಕದಿಂದ ಈ ಪ್ರಭಾವ ಬಲಗೊಂಡಿತು. ಮೊದಲಿನ ಎರಡು ಮೂರು ಶತಮಾನಗಳಲ್ಲಿ ಹೆಚ್ಚಾಗಿ ಅರೇಮಿಯನ್ ಸಂಸ್ಕೃತಿಯನ್ನು ಹೊಂದಿದ್ದ ಕೆಲವು ಸಣ್ಣ ರಾಜ್ಯಗಳು ಸ್ಥಾಪಿಸಲ್ಪಟ್ಟುವು. ಇವುಗಳಲ್ಲಿ ಟ್ರಾನ್ಸ್‌ಜೋರ್ಡಾನನ ನಬಟೆಯನ್ ರಾಜ್ಯ ಮತ್ತು ಎಡೆಸ್ಸ, ಪಾಲ್ಮೈರ ರಾಜ್ಯಗಳು ಮುಖ್ಯವಾದುವು. 5–7ನೆಯ ಶತಮಾನದವರೆಗಿನ ಅವಧಿಯಲ್ಲಿ ಟ್ರಾನ್ಸ್ ಜೋರ್ಡಾನಿನ ದೊರೆಗಳು ಉತ್ತರದ ಬೈಜಾನ್‌ಟೀನ್ ದೊರೆಗಳೊಂದಿಗೆ ಮೈತ್ರಿ ಬೆಳೆಸಿಕೊಂಡು ಪ್ರಬಲರಾದರು. ಪೂರ್ವಭಾಗದ ರಾಜ್ಯಗಳು, ಪರ್ಷಿಯದ ಸಸ್ಸೇನಿಯನ್ ದೊರೆಗಳೊಂದಿಗೆ ಮೈತ್ರಿ ಬೆಳೆಸಿದುವು.

ದಕ್ಷಿಣ ಅರೇಬಿಯದ ಜನ ಪ್ರ.ಶ.ಪೂ. 6ನೆಯ ಶತಮಾನದಿಂದ 2ನೆಯ ಶತಮಾನದ ವರೆಗೂ ಉಚ್ಚ್ರಾಯ ಸ್ಥಿತಿಯಲ್ಲಿದ್ದರು. ಉತ್ತಮ ರೀತಿಯಲ್ಲಿ ಭೂವ್ಯವಸಾಯ ನಡೆಸುತ್ತಿದ್ದರು. ಸಾಂಬ್ರಾಣಿ ಮುಂತಾದ ಧೂಪದ ವಸ್ತುಗಳನ್ನೂ ಮೆಣಸು ಮುಂತಾದ ಸಾಂಬಾರ ದಿನಸಿಗಳನ್ನೂ ಹೊರದೇಶಗಳಿಗೆ ಕಳುಹಿಸುತ್ತಿದ್ದರು. ಭಾರತ ಮತ್ತು ಆಫ್ರಿಕಗಳೊಂದಿಗೆ ವ್ಯಾಪಾರ ಸಂಪರ್ಕವಿತ್ತು. ಆದರೆ ಈ ಕಾಲದ ಉತ್ತರಾರ್ಧದಲ್ಲಿ ಹೆಮ್ಯಾರೈಟ್ ಎಂಬ ಜನರ ಪ್ರಾಬಲ್ಯ ಹೆಚ್ಚಿ ಇವರ ಅವನತಿ ಪ್ರಾರಂಭವಾಯಿತು. ಈ ಜನರ ಅವನತಿಗೆ ಕಾರಣ. ಮಾರಿಬ್ ಎಂಬ ಭಾರಿ ಜಲಾಶಯದ ಅಣೆಕಟ್ಟೆ ಒಡೆದು ಫಲವತ್ತಾದ ಪ್ರದೇಶಗಳು ನಗರಗಳು ಕೊಚ್ಚಿ ಹೋದವೆಂದು ಹೇಳಲಾಗಿದೆ. ಇವರಲ್ಲಿ ಅನೇಕರು ಉತ್ತರದ ಪ್ರದೇಶಗಳಿಗೆ ವಲಸೆ ಹೋದರು; ಬೆದೂಯಿನ್ ಜನರ ಮೇಲೆ ತಮ್ಮ ಪ್ರಭಾವ ಬೀರಿದರು. ಆದರೆ ಈ ಕಾಲದ ಘಟನೆಗಳ ವಿವರ ಅಸ್ಪಷ್ಟ.

5–6ನೆಯ ಶತಮಾನಗಳು ಅರೇಬಿಯದ ಚರಿತ್ರೆಯಲ್ಲಿ ವೀರಯುಗಗಳೆಂದು ಕೆಲವರು ಭಾವಿಸುತ್ತಾರೆ. ಆ ಕಾಲದ ಬೆದೂಯಿನ್ನರ ಹುರುಪು, ಉತ್ಸಾಹ, ಚೈತನ್ಯ, ಔದಾರ್ಯ, ದಾತೃತ್ವ, ಇವರ ಸ್ವಾತಂತ್ರ್ಯಪ್ರಿಯತೆ ಮತ್ತು ಪ್ರತಿವೈರ ಸಾಧನೆ–ಇವೆಲ್ಲ ಆಗಿನ ಕವಿತೆಗಳಲ್ಲಿ ಚಿತ್ರಿತವಾಗಿವೆ. ಎಲ್ಲ ಬೆದೂಯಿನ್ ಜನರೂ ಅಲೆಮಾರಿಜೀವನ ನಡೆಸುತ್ತಿರಲಿಲ್ಲ. ಒಂದು ಕಡೆ ನೆಲೆ ನಿಂತು ವ್ಯವಸ್ಥಿತ ಜೀವನ ನಡೆಸಿಕೊಂಡು ಬಂದಿದ್ದ ಪಂಗಡಗಳೂ ಕೆಲವು ಕಡೆಗಳಲ್ಲಿ ಇದ್ದುವು. ಆದರೆ, ಕುರಾನಿನಲ್ಲಿ ವರ್ಣಿತವಾಗಿರುವ ಬೆದೂಯಿನ್ ಜೀವನಚಿತ್ರದಲ್ಲಿ ಇವರ ಅನಾಗರಿಕತೆ, ವಂಚನೆ, ಕುಡಿತ, ಹೆಣ್ಣು ಶಿಶುಗಳನ್ನು ಸಜೀವವಾಗಿ ಹೂಳುವುದು. ಸ್ತ್ರೀದಾಸ್ಯ ಮುಂತಾದುವೇ ಹೆಚ್ಚಾಗಿ ವರ್ಣಿತವಾಗಿವೆ. ದಕ್ಷಿಣದ ಯೆಮೆನ್ ಪ್ರಾಂತ್ಯದಲ್ಲಿ ಪ್ರಾಚೀನಕಾಲದ ವೈಭವ ಅಳಿಸಿಹೋಗಿದ್ದರೂ ಹಿಂದಿನ ಸಂಸ್ಕೃತಿ ಮಾತ್ರ ಮುಂದುವರೆದಿತ್ತು. 525ರಲ್ಲಿ ಇವರು ಅಬಿಸೀನಿಯ ಸೈನ್ಯದ ಧಾಳಿಯನ್ನು ಎದುರಿಸಬೇಕಾಯಿತು. 50 ವರ್ಷಗಳ ತರುವಾಯ ಪರ್ಷಿಯದ ಸೈನ್ಯ ನುಗ್ಗಿ ಬಂದು ಅಪಾರ ಕಷ್ಟನಷ್ಟಗಳನ್ನುಂಟು ಮಾಡಿತು. ಇವೆರಡು ಧಾಳಿಗಳ ಪರಿಣಾಮವಾಗಿ ಯೆಮೆನ್ ರಾಜ್ಯ ನಾಶಹೊಂದಿತು.

ಹೀಗೆ 7ನೆಯ ಶತಮಾನದವರೆಗೂ ಅರೇಬಿಯ ನಾನಾ ರೀತಿಯ ರಾಜಕೀಯ ವಿಪ್ಲವಗಳಿಗೆ ಸಿಕ್ಕಿ ಐಕ್ಯವನ್ನೇ ಕಂಡಿರಲಿಲ್ಲ. ರೋಮನರು, ಕಾನ್‌ಸ್ಟಾಂಟಿನೋಪಲ್‌ನ ದೊರೆಗಳು, ಪರ್ಷಿಯನ್ನರು, ಅರೇಬಿಯ ತಮಗೆ ಸೇರಿದ್ದೆಂದು ಹೇಳಿಕೊಳ್ಳುತ್ತಾ ಬಂದರು, ಆದರೆ ವಾಸ್ತವವಾಗಿ ಅರಬ್ಬಿಯನ್ನರು ಸ್ವತಂತ್ರರಾಗಿಯೇ ಉಳಿದಿದ್ದರು. ಕ್ರೈಸ್ತರು, ಯೆಹೂದ್ಯರು, ಪರ್ಷಿಯನ್ನರು ಮೊದಲಾದವರ ಮತ, ಸಂಸ್ಕೃತಿಗಳು ಗಡಿ ಪ್ರದೇಶಗಳ ಅರಬ್ಬಿಯನ್ನರ ಮೇಲೆ ಪ್ರಭಾವ ಬೀರಿದ್ದುವು. ಓಮಾನ್ ಮತ್ತು ಪರ್ಷಿಯ ಕೊಲ್ಲಿ ಪ್ರಾಂತಗಳಲ್ಲಿ ವ್ಯಾಪಾರದಲ್ಲಿ ತೊಡಗಿ ಜೀವನ ನಡೆಸುತ್ತಿದ್ದ ಗುಂಪುಗಳಿದ್ದುವು. ಪಶ್ಚಿಮ ಭಾಗದ ಹೆಜಾಜ್ ಮತ್ತು ನೆಜ್ಡ್‌ನಂಥ ಮಧ್ಯದ ವಿಶಾಲ ತಂಪುಜಾಗಗಳಲ್ಲಿ ಚಿಕ್ಕ ನಗರರಾಜ್ಯಗಳು ಬೆಳೆದಿದ್ದುವು. ಇವುಗಳಲ್ಲಿ ಮದೀನ ಮತ್ತು ಮೆಕ್ಕ ಮುಖ್ಯವಾದುವು. ಮದೀನ ನಗರದಲ್ಲಿ ಯೆಮೆನ್ನಿನಿಂದ ವಲಸೆ ಬಂದು ನೆಲೆಸಿದ್ದ ಜನರೇ ಹೆಚ್ಚಾಗಿದ್ದರು. ಜನಸಂಖ್ಯೆ ಸು.15,000. ಮೆಕ್ಕ ಅದಕ್ಕಿಂತ ಕೊಂಚ ದೊಡ್ಡ ನಗರ. ಇವೆರಡೂ ಕಾರವಾನ್ ಮೂಲಕ ನಡೆಯುತ್ತಿದ್ದ ದೊಡ್ಡ ವ್ಯಾಪಾರ ಕೇಂದ್ರಗಳೂ ಆಗಿದ್ದವು. ಮೆಕ್ಕ ನಗರದ ಪ್ರಾಮುಖ್ಯ ಅದು ಅರಬ್ಬಿಯನ್ನರೆಲ್ಲರಿಗೂ ಯಾತ್ರಾಸ್ಥಳವಾಗಿದ್ದುದರಿಂದ ಹೆಚ್ಚಾಗಿತ್ತು. ಇಲ್ಲಿ ವಾಸಿಸಿದ್ದವರು ಬಹುಮಟ್ಟಿಗೆ ಅರಬ್ಬಿಯನ್ನರು. ಇವರೆಲ್ಲ ಮೆಕ್ಕದಲ್ಲಿದ್ದ ಕಾಬಾ ಎಂಬ ಉಲ್ಕಾಶಿಲೆಯೊಂದನ್ನು ಪೂಜಿಸುತ್ತಿದ್ದರು.

ಬಹುಸಂಖ್ಯಾತ ಅರಬ್ಬರು ಮೂರ್ತಿ ಪೂಜೆಯನ್ನು ಮಾಡುತ್ತಿದ್ದರೂ ಗಡಿ ಪ್ರದೇಶಗಳ ಜನರಲ್ಲಿ ಅನೇಕರು ಕ್ರೈಸ್ತಧರ್ಮದ ಪ್ರಭಾವಕ್ಕೆ ಒಳಗಾಗಿದ್ದುದರಿಂದ ಅನೇಕರ ಮನಸ್ಸು ದೇವರೊಬ್ಬನೇ ಎಂಬ ಕಲ್ಪನೆಯ ಕಡೆಗೆ ಹರಡಿತ್ತು ಎಂದು ಹೇಳಬಹುದು. ಇಂಥವರಲ್ಲಿ ಖುರೈಷ್ ಪಂಗಡವೇ ಮುಖ್ಯವಾದುದು. ಈ ಜನ ವ್ಯಾಪಾರ ನಡೆಸುತ್ತ ಹೊರದೇಶಗಳೊಂದಿಗೆ ಸಂಪರ್ಕವನ್ನು ಹೊಂದಿದ್ದರು. ಈ ಗುಂಪಿನವನಾದ ಮಹಮ್ಮದ್ ಪೈಗಂಬರ ಅರಬ್ಬಿಯನ್ನರನ್ನೆಲ್ಲ ಒಟ್ಟುಗೂಡಿಸಿ ಇಸ್ಲಾಂ ಧರ್ಮವನ್ನು ಸ್ಥಾಪಿಸಿ ಮುಸ್ಲಿಮರ ಏಳಿಗೆಗೆ ಕಾರಣನಾದ. ಅವನ ಉಪದೇಶವೇ ಪವಿತ್ರ ಖುರಾನ್, ಶಾಂತಿ, ವಿಶ್ವಬಂಧುತ್ವ, ಸಮಾನತೆ ಇವು ಅವನ ಸಂದೇಶದ ತಿರುಳೂ ಆಗಿದೆ. ಹಿಂದಿನಿಂದಲೂ ವ್ಯಾಪಾರಕೇಂದ್ರವಾಗಿ, ಅರಬ್ಬಿಯನ್ನರೆಲ್ಲ ಸಂಧಿಸುತ್ತಿದ್ದ ಯಾತ್ರಾಸ್ಥಳವಾದ ಮೆಕ್ಕಪಟ್ಟಣ. ಹೀಗೆ ಅವರನ್ನು ಒಟ್ಟುಗೂಡಿಸಿ ಅವರಲ್ಲಿ ನವಚೈತನ್ಯ. ಸ್ಫೂರ್ತಿಗಳನ್ನು ತುಂಬಿ ಹೊಸ ರಾಷ್ಟ್ರ ನಿರ್ಮಾಣಕ್ಕೆ ಯೋಗ್ಯವಾದ ಕೇಂದ್ರವಾಯಿತು.

ಇಸ್ಲಾಂ ರಾಜ್ಯಸ್ಥಾಪನೆ ಆದದ್ದು, ಪೈಗಂಬರ್ ಮೆಕ್ಕದಿಂದ ಮದೀನಕ್ಕೆ ಹೋದ ವರ್ಷ(622) ಎಂದು ಹೇಳಬಹುದು. ಏಕೆಂದರೆ, ಆಗಿನಿಂದಲೇ ಆತ ಹೆಜಾಜ್ ಮತ್ತು ನೆಜ್ಡ್ ಜನರಲ್ಲಿ ತನ್ನ ಸಂದೇಶವನ್ನು ಬೀರಿ, ಮೆಕ್ಕ ವರ್ತಕರು ಕಾರವಾನ್ ಮೂಲಕ ನಡೆಸುತ್ತಿದ್ದ ವ್ಯಾಪಾರಕ್ಕೆ ತಡೆಹಾಕುವಂತೆ ಮಾಡಿ, ಕೊನೆಗೆ ಮೆಕ್ಕದ ಜನರೂ ತನಗೆ ಶರಣಾಗತರಾಗುವಂತೆ ಮಾಡುವ ಕಾರ್ಯವನ್ನು ಕೈಗೊಂಡದ್ದು. ಈ ಕೆಲಸಕ್ಕೆ 8 ವರ್ಷ ಬೇಕಾಯಿತು. ಕೊನೆಗೆ 630ರಲ್ಲಿ ಮೆಕ್ಕದ ಜನರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. 632ರಲ್ಲಿ ಆತ ಮರಣಹೊಂದಿದಾಗ ಪಶ್ಚಿಮ ಅರೇಬಿಯದ ಜನರೆಲ್ಲ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು. ಇಸ್ಲಾಂ ರಾಜ್ಯ ಸ್ಥಾಪನೆ ಆಗಿತ್ತು.

ಪೈಗಂಬರನ ತರುವಾಯ ಅವನ ಸ್ಥಾನಕ್ಕೆ ಬಂದು ಅಬೂಬಕರ್‌ನ ಕಾಲದಲ್ಲಿ ಅರೇಬಿಯದ ಪೂರ್ವಭಾಗವೂ ಹೊಸ ಇಸ್ಲಾಂ ರಾಜ್ಯಕ್ಕೆ ಸೇರಿ, ಅರಬ್ಬಿಯನ್ನರು ಸುತ್ತಲಿನ ರಾಜ್ಯಗಳಲ್ಲೆಲ್ಲ ನುಗ್ಗಿದರು. ಕೆಲವೇ ವರ್ಷಗಳಲ್ಲಿ ಪಶ್ಚಿಮ ಏಷ್ಯದ ಮತ್ತು ಆಫ್ರಿಕದ ಉತ್ತರತೀರ ಪ್ರದೇಶಗಳೂ ಅವರ ಕೈವಶವಾಗಿ ಇಸ್ಲಾಂ ಚಕ್ರಾಧಿಪತ್ಯವೇ ನಿರ್ಮಿತವಾಯಿತು. ಅಷ್ಟು ದೂರ ವ್ಯಾಪಿಸಿದ ರಾಜ್ಯವನ್ನಾಳಲು ಮದೀನ ಅನುಕೂಲವಾದ ಕೇಂದ್ರವಾಗಿರಲಿಲ್ಲ. ಆದ್ದರಿಂದ 661ರಲ್ಲಿ ರಾಜಧಾನಿಯನ್ನು ಡಮಾಸ್ಕಸ್‌ಗೆ ವರ್ಗಾಯಿಸಿದರು. 745ರವರೆಗೂ ಉಮ್ಮಾಯಿದ್ ಮನೆತನದ ಖಲೀಫರು ಆಳಿದರು. ಅವರ ಕಾಲದಲ್ಲಿ ಸಾಮ್ರಾಜ್ಯದ ಒಗ್ಗಟ್ಟಿಗೆ ಭಂಗವುಂಟಾಗಲಿಲ್ಲ. ತರುವಾಯ ಆಳಿದ ಅಬ್ಬಾಸಿದ್ ಕಲೀಫರ ಕಾಲದಲ್ಲಿ ಅರೇಬಿಯದ ಮೇಲೆ ಕೇಂದ್ರ ಸರ್ಕಾರದ ಹಿಡಿತ ಕಡಿಮೆಯಾಗಿ, ಅಲ್ಲಿಯ ಬೆದೂಯಿನ್ ಗುಂಪುಗಳು ಸ್ವತಂತ್ರಜೀವನ ನಡೆಸತೊಡಗಿದುವು. ಎಲ್ಲರೂ ಮುಸ್ಲಿಮರೇ ಆಗಿದ್ದರೂ ಅವರ ಆಚಾರವಿಚಾರಗಳಲ್ಲಿ ವೈವಿಧ್ಯ ಬೆಳೆಯತೊಡಗಿತು. ಅರೇಬಿಯದ ರಾಜಕೀಯ ಏಕತೆ ಮಾಯವಾಯಿತು.

ಯೆಮೆನ್ ಮತ್ತು ಓಮೆನ್ ಪ್ರಾಂತಗಳು ಮೊದಲು ಸ್ವತಂತ್ರವಾದುವು. ಅಲ್ಲಿಯ ಬೆದೂಯಿನ್ನರು ಸುತ್ತಲಿನ ಪ್ರಾಂತಗಳಿಗೆ ನುಗ್ಗಿ ಲೂಟಿ ದರೋಡೆ ನಡೆಸತೊಡಗಿದರು; ಮೆಕ್ಕ ಯಾತ್ರಿಕರೂ ಇವರ ಹಾವಳಿಗೆ ತುತ್ತಾದರು. ಇಸ್ಲಾಂ ಧರ್ಮದ ಜನ್ಮಸ್ಥಳಗಳಾದ ಮೆಕ್ಕ, ಮದೀನ ಮತ್ತು ಅವುಗಳ ಸುತ್ತಮುತ್ತಲಿನ ಪ್ರಾಂತಗಳ ಮೇಲೆ, ಧರ್ಮಗುರುಗಳು ಎಂಬ ತಮ್ಮ ಗೌರವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಕಲೀಫರು ತಮ್ಮ ಹತೋಟಿಯನ್ನು ಇಟ್ಟುಕೊಳ್ಳಲೆತ್ನಿಸಿದರು. ಆದರೆ ಆ ಹತೋಟಿ ಹೆಸರಿಗೆ ಮಾತ್ರ. ಇಲ್ಲಿ ಪೈಗಂಬರನ ವಂಶೀಯರಾದ ಷರೀಫರು ಯಾದವೀ ಕಲಹಗಳಲ್ಲಿ ತೊಡಗಿ ಬಹುಮಟ್ಟಿಗೆ ಸ್ವತಂತ್ರರಾಗಿಯೇ ಇದ್ದರು. ಈಜಿಪ್ಟಿನ ದೊರೆಗಳ ಬೆಂಬಲ ತಮ್ಮ ವ್ಯಾಪಾರಕ್ಕೆ ಅತ್ಯವಶ್ಯವಾಗಿದ್ದುದರಿಂದ ಹೆಸರಿಗೆ ಮಾತ್ರ ಅವರಿಗೆ ಪ್ರಭುನಿಷ್ಠಾಪ್ರತಿಜ್ಞೆಯನ್ನು ಸಲ್ಲಿಸುತ್ತಿದ್ದರು. ಯೆಮೆನ್ ಪ್ರಾಂತ್ಯದಲ್ಲೂ ಇದೇ ರೀತಿ ಪರಸ್ಪರ ಕಲಹಗಳಲ್ಲಿ ತೊಡಗಿದ್ದ ಗುಂಪುಗಳು ಇದ್ದವು. 1174ರಲ್ಲಿ ಈಜಿಪ್ಟಿನ ಸುಲ್ತಾನ ಸಲಾವುದ್ದೀನನ ತಮ್ಮ ಈ ಪ್ರಾಂತವನ್ನು ಗೆದ್ದು ಸ್ವಾಧೀನಪಡಿಸಿಕೊಂಡ. ಕೊಂಚ ಕಾಲದಲ್ಲೇ ಆ ಹತೋಟಿ ಸಡಿಲವಾಗಿ ಅಲ್ಲಿನ ಪಂಗಡಗಳಲ್ಲಿ ಪರಸ್ಪರ ಕಲಹಗಳು ಮತ್ತೆ ಪ್ರಾರಂಭವಾದುವು. ಏಡನ್ ಮತ್ತು ಅದರ ಸುತ್ತಣ ಪ್ರಾಂತಗಳ ಪರಿಸ್ಥಿತಿ ಮಾತ್ರ ಬಹುಮಟ್ಟಿಗೆ ಉತ್ತಮವಾಗಿತ್ತು. ಕೆಂಪು ಸಮುದ್ರ ಮತ್ತು ಅರಬ್ಬೀ ಸಮುದ್ರಗಳ ಮೇಲಿನ ವ್ಯಾಪಾರಕ್ಕೆ ಇದು ಮಧ್ಯ ಪ್ರದೇಶವಾಗಿದ್ದುದೇ ಇದಕ್ಕೆ ಕಾರಣ. ಆ ಪ್ರಾಂತ ಜೈದಿ ಷಿಯರ ಮನೆತನದ ಆಳ್ವಿಕೆಯಲ್ಲಿತ್ತು. ಒಮೆನ್ ಪ್ರಾಂತವನ್ನು ಖಾರಿಜೈಟ ಪಂಗಡದವರು ಆಳುತ್ತಿದ್ದು ಪರ್ಷಿಯ ಕೊಲ್ಲಿಯ ಮೂಲಕ ನಡೆಯುತ್ತಿದ್ದ ವ್ಯಾಪಾರದಲ್ಲಿ ತೊಡಗಿದ್ದ ಈ ಜನರ ಜೀವನ ಪ್ರತ್ಯೇಕವಾಗಿದ್ದು ಅರೇಬಿಯದ ಇತರ ಭಾಗಗಳೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿರಲಿಲ್ಲ.

15ನೆಯ ಶತಮಾನದಲ್ಲಿ ಮುಸ್ಲಿಮರು ಕಾನ್‌ಸ್ಟಾಂಟಿನೋಪಲ್ (ಈಗಿನ ಇಸ್ತಾಂಬೂಲ್) ಅಥವಾ ಬೈಜ಼ಾಂಟಿಯಂ ನಗರವನ್ನು ಸ್ವಾಧೀನಪಡಿಸಿಕೊಂಡು ಯುರೋಪಿನೊಳಗೂ ವ್ಯಾಪಿಸತೊಡಗಿದರು. ಆಟೋಮನ್ ಸುಲ್ತಾನರೆಂದು ಅವರ ಹೆಸರು. 16ನೆಯ ಶತಮಾನದಲ್ಲಿ ಇವರ ಸಾರ್ವಭೌಮತ್ವವನ್ನು ಹೆಜಾಜ್ ಜನರೂ ಒಪ್ಪಿಕೊಂಡರು. ಏಕೆಂದರೆ ಈಜಿಪ್ಟ್ ಕೂಡ ಆ ಸುಲ್ತಾನರ ಕೈವಶವಾಗಿತ್ತು. ಮದೀನದಲ್ಲೊಬ್ಬ ಪ್ರಾಂತಾಧಿಕಾರಿಯನ್ನು ನೇಮಿಸಲಾಯಿತು. 1536ರಲ್ಲಿ ಯೆಮೆನ್ ಪ್ರಾಂತವೂ ಸುಲ್ತಾನರ ಕೈವಶವಾಯಿತು. ಆದರೆ ಮುಂದಿನ ಶತಮಾನದಲ್ಲೇ ಅಲ್ಲಿನ ಜೈದಿಗಳು ಅಲ್ಲಿದ್ದ ಆಟೊಮನ್ ಅಧಿಕಾರಿಗಳನ್ನು ಓಡಿಸಿ ಸ್ವತಂತ್ರರಾದರು. ಅವರ ಆಳಿಕೆ (19ನೆಯ ಶತಮಾನದಲ್ಲಿ ಕೊಂಚ ಕಾಲ ಹೊರತು) ಇಂದಿನವರೆಗೂ ನಡೆದುಕೊಂಡು ಬಂದಿದೆ. ಆದರೆ ಏಡನ್ ಮತ್ತು ಲಾಹೆಜ್‌ಗಳಲ್ಲಿ ಅಬ್ದಾಲಿಗಳು, ಹದ್ರಮೌತ್‌ನಲ್ಲಿ ಕಾಥೀರಿಗಳು ಸ್ವತಂತ್ರರಾದರು. ಪೂರ್ವದ ಓಮೆನ್ ಪ್ರಾಂತ 16ನೆಯ ಶತಮಾನದಲ್ಲಿ ಪರ್ಷಿಯನ್ ಖಾರಿಯನ್ನು ತಮ್ಮ ಹತೋಟಿಗೆ ತಂದುಕೊಂಡ ಪೋರ್ಚುಗೀಸರ ಪ್ರಭಾವಕ್ಕೆ ಸಿಕ್ಕಿತು. ಆದರೆ ಬ್ರಿಟಿಷರ ಸಹಾಯದಿಂದ ಪರ್ಷಿಯನ್ನರು ಅವರನ್ನು ಹೊಡೆದೋಡಿಸಿದರು. ಸ್ಥಳೀಯ ಮುಸ್ಲಿಂ ನಾಯಕರು ಓಮನ್ನಿನಿಂದಲೂ ಅವರನ್ನು ಓಡಿಸಿದರು. ಈ ಘಟನೆಗಳಿಗೆ ಮುಖ್ಯ ಕಾರಣ ಅರಬ್ಬೀ ಸಮುದ್ರದ ಮೂಲಕ ಬಹುಕಾಲದಿಂದಲೂ ಅರಬ್ಬಿಯನ್ನರು

ಪೂರ್ವದೇಶಗಳೊಂದಿಗೆ ನಡೆಸುತ್ತಿದ್ದ ವ್ಯಾಪಾರವನ್ನು ವಶಪಡಿಸಿಕೊಳ್ಳುವುದಕ್ಕೆ ಮೊದಲು ಪೋರ್ಚುಗೀಸರು, ಅನಂತರ ಬ್ರಿಟಿಷರು ನಡೆಸಿದ ಸ್ಪರ್ಧೆ. 18ನೆಯ ಶತಮಾನದ ಮಧ್ಯಕಾಲ ಕಳೆದ ಅನಂತರ ಅರೇಬಿಯದ ಚರಿತ್ರೆ ಬದಲಾವಣೆ ಹೊಂದಿತು. ವಹಾಬೀ ಎಂಬ ವೀರನಿಯಮಿಗಳಾದ ಮುಸ್ಲಿಂ ಪಂಗಡದವರು ನೆಜ್ಡ್ ಪ್ರಾಂತದಲ್ಲಿ ರಾಜ್ಯವೊಂದನ್ನು ಕಟ್ಟಿದರು. ದರ್‍ಯೆಯದ ಸೌದಿ ಅಮೀರರು ಇವರ ಮುಖಂಡರು. 18ನೆಯ ಶತಮಾನದ ಅಂತ್ಯಕಾಲಕ್ಕೆ ಇವರ ರಾಜ್ಯ ಉತ್ತರ ಅರೇಬಿಯ ಪ್ರದೇಶವನ್ನೆಲ್ಲ ಒಳಗೊಂಡು ಸಿರಿಯ ಮತ್ತು ಇರಾಕ್ ದೇಶಗಳವರೆಗೂ ಹರಡಿತು. ಆದರೆ ಇದರಿಂದ ಆಟೋಮನ್ ಸುಲ್ತಾನನ ಅಧೀನನಾಗಿದ್ದ ಈಜಿಪ್ಟಿನ ಸುಲ್ತಾನ್ ಮೆಹಮ್ಮೆಟ್ ಅಲಿಗೂ ಸೌದಿ ಅಮೀರರಿಗೂ ಯುದ್ಧ ಪ್ರಾಪ್ತವಾಯಿತು. ಮೆಹಮ್ಮೆಟ್ ಅಲಿಗೆ ಬ್ರಿಟಿಷರ ಬೆಂಬಲ ಇತ್ತು, ಮೆಕ್ಕ, ಮದೀನ ಮತ್ತು ರಾಜಧಾನಿಯಾದ ದರ್‍ಯೆಯ ಶತ್ರುಗಳ ಕೈಸೇರಿದುವು. ರಿಯಾದ್ ಎಂಬ ನಗರ ಹೊಸ ರಾಜಧಾನಿಯಾಯಿತು. ಯುದ್ಧ ಬಹುಕಾಲ ನಿಲ್ಲದೆ ಅರೇಬಿಯದ ಈ ಪ್ರಾಂತ ಬಹಳ ರಾಜಕೀಯ ಗೊಂದಲಕ್ಕೆ ಸಿಲುಕಿತು. 19ನೆಯ ಶತಮಾನ ಪೂರ್ತಿ ಈ ಪರಿಸ್ಥಿತಿ ಮುಂದುವರೆಯಿತು. ಕೊನೆಗೆ 1902ರಲ್ಲಿ ಸಮರ್ಥನಾದ ಅಬ್ದುಲ್ ಅಜೀಜ್ ಇಬ್ನ್‌ಸೌದ್ ಎಂಬ ಅಮೀರ ರಾಜಧಾನಿಯಾದ ರಿಯಾದನ್ನು ವಶಪಡಿಸಿಕೊಂಡು ವಹಾಬೀ ರಾಜ್ಯವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ಕೈಗೊಂಡ. ತುರ್ಕಿ ಸುಲ್ತಾನರ ಅಧಿಕಾರ ಸಡಿಲವಾದರೂ ಪೂರ್ತಿ ಹೋಗಿರಲಿಲ್ಲ; 1869ರಲ್ಲಿ ಸೂಯೆಜ್ ಕಾಲುವೆ ನಿರ್ಮಿತವಾದ ಮೇಲೆ ಅವರು ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳಲೆತ್ನಿಸಿದರು. ಆದರೆ ಬ್ರಿಟಿಷರಿಗೂ ತಮ್ಮ ಸಾಮ್ರಾಜ್ಯ ರಕ್ಷಣೆಗಾಗಿ ಆ ಕಾಲುವೆಯ ಮೇಲೆ ಹತೋಟಿಯನ್ನಿಟ್ಟು ಕೊಳ್ಳುವುದು ಅತ್ಯವಶ್ಯವಾಗಿತ್ತು. ಈ ಮಧ್ಯೆ ಮೆಕ್ಕದ ಷರೀಫರು ಪ್ರಬಲರಾಗುತ್ತ ಬಂದರು. ಅವರಲ್ಲಿ ಅತ್ಯಂತ ಸಮರ್ಥನಾದ ಹುಸೇನ್ ಇಬ್ನ್ ಆಲಿ ಕೊಂಚ ಕೊಂಚವಾಗಿ ತನ್ನ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತ ಬಂದ. ಒಂದನೆಯ ಮಹಾಯುದ್ಧಕ್ಕೆ ಮುಂಚೆಯೇ ಇಬ್ನ್ ಸೌದನಿಗೂ ಅವನಿಗೂ ಘರ್ಷಣೆ ಪ್ರಾರಂಭವಾಯಿತು.

ಆಟೊಮನ್ ರಾಜ್ಯದ ಶಕ್ತಿ 18ನೆಯ ಶತಮಾನದಲ್ಲಿ ಕ್ರಮೇಣ ಕುಂದುತ್ತ ಬಂತು. ಪಶ್ಚಿಮ ಅರೇಬಿಯದಲ್ಲಿ ಪ್ರಾಬಲ್ಯ ಬೆಳೆಸಿಕೊಂಡು ತನ್ನ ಸಾಮ್ರಾಜ್ಯರಕ್ಷಣೆಗೆ ಅನುಕೂಲ ಮಾಡಿಕೊಳ್ಳಬೇಕೆಂದು ಇಂಗ್ಲೆಂಡ್ 19ನೆಯ ಶತಮಾನದ ಮೊದಲಿನಿಂದಲೂ ಪ್ರಯತ್ನಿಸುತ್ತ ಬಂದಿತ್ತು. ನೆಪೋಲಿಯನ್ನನೊಡನೆ ನಡೆಸಿದ ಯುದ್ಧದ (1802–15) ಕಾಲದಲ್ಲೇ ಪರ್ಷಿಯ ಕೊಲ್ಲಿಯನ್ನು ತನ್ನ ಹತೋಟಿಗೆ ತಂದುಕೊಂಡಿತು. 1839ರಲ್ಲಿ ಬ್ರಿಟಿಷ್ ಸೈನ್ಯ ಏಡನನ್ನು ವಶಪಡಿಸಿಕೊಂಡಿತು. ಆಟೊಮನ್ ಸುಲ್ತಾನರೊಂದಿಗೂ ಸ್ಥಳೀಯ ಅಮೀರರೊಂದಿಗೂ ಒಪ್ಪಂದಗಳನ್ನು ಮಾಡಿಕೊಂಡು ಅದರ ಉತ್ತರದ ಮತ್ತು ಪೂರ್ವದ ತೀರಪ್ರದೇಶಗಳ ಮೇಲೆ ತನ್ನ ಪ್ರಭಾವ ಬೆಳೆಸಿತು. 1914ರಲ್ಲಿ ಒಂದನೆಯ ಮಹಾಯುದ್ಧ ಪ್ರಾರಂಭವಾದ ಮೇಲೆ, ತುರ್ಕಿ ಸುಲ್ತಾನನಿಗೆ ವಿರೋಧವಾಗಿ ನಿಂತ ಅರಬ್ಬೀ ಅಮೀರರಿಗೆಲ್ಲ ಇಂಗ್ಲೆಂಡಿನ ಸಹಾಯ ದೊರಕಿತು. ಷರೀಫ್ ಹುಸೇನನ ಮಗ ಫೈಸಲ್ ಕಾಬವನ್ನು ಸ್ವಾಧೀನಪಡಿಸಿಕೊಂಡ ಉತ್ತರ ಅರೇಬಿಯದ ಜನ ಅವನೊಂದಿಗೆ ಸೇರಿಕೊಂಡರು. ಫೈಸಲ್ ಹೆಜಾಜಿನ ದೊರೆಯಾದ. ಇದರಿಂದ ಇಬ್ನ್ ಸೌದನೊಂದಿಗೆ ಯುದ್ಧ ಪ್ರಾರಂಭವಾಯಿತು. 1924ರಲ್ಲಿ ಮೆಕ್ಕ ಕೂಡ ವಹಬೀಗಳ ಕೈಸೇರಿತು.

ನಾಲ್ಕು ಶತಮಾನಗಳ ಕಾಲ ಅರೇಬಿಯ ಆಟೋಮನ್ ಚಕ್ರಾಧಿಪತ್ಯಕ್ಕೆ ಸೇರಿದ್ದರೂ ಅರೇಬಿಯರು ತಮ್ಮ ಸಂಸ್ಕೃತಿ, ಜೀವನ ಕ್ರಮಗಳನ್ನು ಕಳೆದುಕೊಂಡಿರಲಿಲ್ಲ. ಅವುಗಳನ್ನು ಬೆಳೆಸಬೇಕೆಂಬ ಆಸೆ 19ನೆಯ ಶತಮಾನದಲ್ಲಿ ತೀವ್ರವಾಯಿತು. ಒಂದನೆಯ ಮಹಾಯುದ್ಧಾನಂತರ 1919ರಲ್ಲಿ ಆದ ಒಪ್ಪಂದದಲ್ಲಿ ಬ್ರಿಟಿಷರ ಮತ್ತು ಫ್ರೆಂಚರ ಮೇಲ್ವಿಚಾರಣೆಗೆ ಒಳಪಟ್ಟ ಅನೇಕ ಸಣ್ಣ ರಾಜ್ಯಗಳು ನಿರ್ಮಿತವಾದುವು. ಸೌದಿ ಅರೇಬಿಯ ಮತ್ತು ಯೆಮೆನ್ ಮಾತ್ರ ಸ್ವತಂತ್ರ ರಾಜ್ಯಗಳಾಗಿ ಉಳಿದುವು. 1943ರ ಕಾಲಕ್ಕೆ ಇವೆಲ್ಲ ಸ್ವತಂತ್ರವಾದುವು. 1944ರಲ್ಲಿ ಅರೇಬಿಯದ ಎಲ್ಲ ರಾಜ್ಯಗಳ ಸಮ್ಮೇಳನವೊಂದು ನಡೆದು ಅರಬ್ಬೀ ಒಕ್ಕೂಟವೊಂದನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು. ಮರುವರ್ಷ ಒಪ್ಪಂದವೂ ಆಯಿತು. ಈ ಒಕ್ಕೂಟದ ಅರಬ್ಬೀ ರಾಜ್ಯಗಳು–ಸೌದಿ ಅರೇಬಿಯ, ಯೆಮನ್, ಮಸ್ಕತ್ ಮತ್ತು ಓಮೆನ್, ಬೆಹರಿನ್, ಕುವೈತ್, ಕ್ವಾತಾರ್, ಕೆಲವು ಷೇಕ್ ರಾಜ್ಯಗಳು ಮತ್ತು ಏಡನ್. ಈ ಎಲ್ಲ ರಾಜ್ಯಗಳ ಮುಖ್ಯ ಸಂಪತ್ತು ಅಪರಿಮಿತ ತೈಲ. ಇದಕ್ಕಾಗಿ ಪಶ್ಚಿಮದ ದೊಡ್ಡ ರಾಷ್ಟ್ರಗಳು–ಮುಖ್ಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡ್–ಅಪಾರ ಹಣ ವೆಚ್ಚ ಮಾಡಿರುವುದರಿಂದ ಆ ಸರ್ಕಾರಗಳ ರಾಜಕೀಯ ಪ್ರಭಾವ ಇದ್ದೇ ಇದೆ. ಈಗ ಅರೇಬಿಯದಲ್ಲಿ ಸೌದಿ ಮನೆತನದ ಆಳ್ವಿಕೆ ಇದೆ.

**ಭಾರತದಲ್ಲಿ ಅರಬ್ಬೀಯರು:** ಭಾರತದೊಂದಿಗೆ ಪ್ರಾಚೀನ ಕಾಲದಿಂದಲೂ ವ್ಯಾಪಾರ ಸಂಪರ್ಕ ಹೊಂದಿದವರಲ್ಲಿ ಅರಬ್ಬರು ಪ್ರಮುಖರು. ಪೈಗಂಬರ್ ಮಹಮ್ಮದರ ಇಸ್ಲಾಂ ಧರ್ಮಬೋಧೆ ಅರಬ್ಬಿಯನ್ನರಿಗೆ ಹೊಸ ಹುರುಪನ್ನು ಕೊಟ್ಟಿತ್ತು. ಬಾಗದಾದಿನ ಕಲೀಫರ ಕಾಲದಲ್ಲಿ 8 ನೆಯ ಶತಮಾನ ಮುಗಿಯುವುದರೊಳಗೇ ಅರಬ್ಬಿಯನ್ನರು ಉತ್ತರ ಆಫ್ರಿಕದ ಮೆಡಿಟರೇನಿಯನ್ ತೀರ ಪ್ರದೇಶಗಳನ್ನಲ್ಲದೆ ಭಾರತದ ವಾಯವ್ಯ ಸರಹದ್ದಿನವರೆಗೂ ಇದ್ದ ಪಶ್ಚಿಮ ಏಷ್ಯ ಪ್ರದೇಶಗಳನ್ನೆಲ್ಲ ವಶಪಡಿಸಿಕೊಂಡಿದ್ದರು. ವ್ಯಾಪಾರಕ್ಕಾಗಿ ಬರುತ್ತಲೇ ಇದ್ದ ಅರಬ್ಬರಿಗೆ ಭಾರತದ ಪರಿಚಯವಿತ್ತು. ಬಲೂಚಿಸ್ತಾನ ಮತ್ತು ಆಫ್ಘಾನಿಸ್ತಾನ ಪ್ರಾಂತಗಳನ್ನು ಗೆದ್ದಮೇಲೆ ಭಾರತಕ್ಕೆ ನುಗ್ಗುವ ಯೋಚನೆ ಮಾಡಿದರು. ಆಗ ದಾಹಿರ್ ಸಿಂಧೂದೇಶವನ್ನಾಳುತ್ತಿದ್ದ. ಇರಾಕಿನ ಪ್ರಾಂತಾಧಿಪತಿಯಾಗಿದ್ದ ಅಲ್ ಹಜಾಜ್ ಎಂಬುವನು ಸಿಂಧೂ ದೇಶಕ್ಕೆ ಸೈನ್ಯ ವೊಂದನ್ನು ಕಳುಹಿಸಿದ. ದಾಹಿರ್ ಅದನ್ನು ಸೋಲಿಸಿ ಹಿಮ್ಮೆಟ್ಟಿಸಿದ. ಇಂಥ ಪ್ರಯತ್ನಗಳು ಹಲವು ನಡೆದು ವಿಫಲವಾದವು. ಕೊನೆಗೆ ಅಲ್ ಹಜಾಜ್ ತನ್ನ ಅಳಿಯ ಮಹಮ್ಮದ್ ಬಿನ್ ಕಾಸಿಂನ ಕೈಕೆಳಗೆ ದೊಡ್ಡ ಸುಸಜ್ಜಿತ ಸೈನ್ಯವೊಂದನ್ನು ಕಳುಹಿಸಿದ. ಸ್ವಧರ್ಮಭ್ರಷ್ಟರಾದ ಕೆಲವು ಅಧಿಕಾರಿಗಳು, ಕೆಲವು ಬೌದ್ಧ ಪುರೋಹಿತರು ದಾಹಿರ್‌ನನ್ನು ತ್ಯಜಿಸಿ ಶತ್ರುವಿನ ಕಡೆ ಸೇರಿದರು. ಇದರಿಂದ ಸಿಂಧೂನದಿಯವರೆಗಿನ ಪ್ರಾಂತಗಳನ್ನು ಗೆದ್ದು ಆ ನದಿಯನ್ನು ದಾಟಿಬರುವುದಕ್ಕೂ ಕಾಸಿಂನಿಗೆ ಅನುಕೂಲವಾಯಿತು. ರಾವೋರ್ ಎಂಬಲ್ಲಿ ಭೀಕರ ಕದನ ನಡೆಯಿತು(712). ದಾಹಿರ್ ಸೋತದ್ದಲ್ಲದೆ ರಣರಂಗದಲ್ಲಿ ಮಡಿದ. ರಾವೋರ್ ಕೋಟೆ ಕಾಸಿಂನ ಕೈವಶವಾಯಿತು. ಸಿಂಧೂರಾಜ್ಯದ ದಕ್ಷಿಣ ಭಾಗವೆಲ್ಲ ಅರಬ್ಬರ ಸ್ವಾಧೀನ ವಾಯಿತು. ಮುಸ್ಲಿಮರ ಈ ಆಕ್ರಮಣದಿಂದ ಪಶ್ಚಿಮ ಏಷ್ಯದ ರಾಜ್ಯಗಳಿಗೂ ಭಾರತಕ್ಕೂ ನಡುವೆ ಹೆಚ್ಚು ಸಾಂಸ್ಕೃತಿಕ ಸಂಪರ್ಕವೇರ್ಪಡಲು ಅನುಕೂಲವಾಯಿತೆನ್ನಬಹುದು.

(ಎಂ.ಎ.)

ಅರಬ್ಬರ ಆಗಮನಕ್ಕಿಂತ ಮುಂಚೆ ಭಾರತ ರಾಜಕೀಯವಾಗಿ ವಿಘಟಿತವಾಗಿತ್ತು. ಹರ್ಷನ ಮರಣಾನಂತರ ಉತ್ತರ ಭಾರತದಲ್ಲಿ ಅವನು ಕಟ್ಟಿದ್ದ ಸಾಮ್ರಾಜ್ಯ ಸೂಕ್ತ ಉತ್ತರಾಧಿಕಾರಿಗಳಿಲ್ಲದೆ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳಿಂದ ವಿಘಟಿತಗೊಂಡಿತು. ಈ ವೇಳೆಗೆ ಉತ್ತರ–ಭಾರತದಲ್ಲಿ ಒಂದು ಕೇಂದ್ರೀಯ ಸರ್ಕಾರವಿಲ್ಲದೆ ಅದು ಹಲವಾರು ಭಾಗಗಳಾಗಿ ಹಂಚಿ ಹೋಗಿತ್ತು. ಅವುಗಳೆಂದರೆ:

ಕನೌಜ್: ಅಂದಿನ ಪ್ರಮುಖ ರಾಜ್ಯಗಳಲ್ಲಿ ಒಂದಾಗಿತ್ತು. ಹರ್ಷನ ಅನಂತರ ಯಶೋವರ್ಮ ಇದರ ರಾಜನಾಗಿದ್ದ. ಇವನು ಕನೌಜ್‌ನ ವೈಭವವನ್ನು ಹೆಚ್ಚಿಸಿದ್ದ. ಇವನ ರಾಜ್ಯ ಹಿಮಾಲಯದಿಂದ ನರ್ಮದ ನದಿಯವರೆಗೂ ವಿಸ್ತರಿಸಿತ್ತು. ಪೂರ್ವದಲ್ಲಿ ಬಂಗಾಲದಿಂದ ಥಾನೇಶ್ವರದವರೆಗೆ ವಿಸ್ತರಿಸಿದ್ದರೂ ಅದು ಕೇವಲ ನಾಮಮಾತ್ರವಾಗಿತ್ತು. ಆದರೆ ಇವನ ಏಳಿಗೆ ಸಹಿಸದ ಕಾಶ್ಮೀರದ ಲಲಿತಾದಿತ್ಯ ಇವನನ್ನು ಯುದ್ಧದಲ್ಲಿ ಕೊಂದ.

ಮಾಳ್ವ: ಅಂದು ಮಾಳ್ವ ಗೂರ್ಜರ ಪ್ರತಿಹಾರರ ಒಡೆತನದಲ್ಲಿತ್ತು. ಇವರ ಒಡೆತನದಲ್ಲಿ ಮಾರವಾಡ ಬ್ರೋಚ್ ಹಾಗೂ ಅದರ ಆಸುಪಾಸಿನ ಪ್ರದೇಶವಿತ್ತು.

ಕಾಶ್ಮೀರ: ಅಂದು ಕಾಶ್ಮೀರ ದುರ್ಲಭವರ್ಧನನೆಂಬ ರಾಜನ ಅಧೀನದಲ್ಲಿತ್ತು. ಇವನ ಮೊಮ್ಮಗ ಚಂದ್ರಪೀಡ ಅಧಿಕಾರಕ್ಕೆ ಬಂದರೂ ಅವನ ಸೋದರ ಲಲಿತಾದಿತ್ಯನೇ ಪ್ರಬಲನಾಗಿದ್ದ. ಇವನು ಕನೌಜ್‌ನ ಯಶೋವರ್ಮನನ್ನು ಕದನದಲ್ಲಿ ಸೋಲಿಸಿ ಕೊಂದ. ಇವನು ಸನಾತನ ಧರ್ಮದ ರಕ್ಷಕನಾಗಿದ್ದು ಮಾರ್ತಾಂಡದಲ್ಲಿ ಸೂರ್ಯ ದೇವಸ್ಥಾನ ನಿರ್ಮಿಸಿದ್ದ.

ಆಫ್ಘಾನಿಸ್ತಾನ ಹಾಗೂ ಸಿಂಧ್: ಆಫ್ಘಾನಿಸ್ತಾನ ಅಂದು ಹಿಂದು ರಾಜನ ಆಳಿಕೆಯಲ್ಲಿದ್ದರೂ ಅದರ ಒಡೆಯರು ಯಾರು ಎಂಬುದು ತಿಳಿದಿಲ್ಲ. ಆದರೆ ಸಿಂಧ್‌ನಲ್ಲಿ ಅಂದು ಶೂದ್ರ ರಾಜ್ಯ ಇತ್ತು. ಇದು ಹರ್ಷ ಸಾಮ್ರಾಜ್ಯದ ಒಂದು ಭಾಗವಾಗಿತ್ತು, ಆದರೆ ಅನಂತರ ಬ್ರಾಹ್ಮಣ ಮಂತ್ರಿ ಚಾಚ ಆ ರಾಜನನ್ನು ಪದಚ್ಯುತಗೊಳಿಸಿ ತಾನೇ ರಾಜನಾದ. ಇವನ ಪುತ್ರ ದಾಹಿರ. ಇವನ ರಾಜ್ಯ ದೇಬಲ, ನಿರೂನ, ಬ್ರಾಹ್ಮಣಬಾದ್, ಅರೋರಗಳನ್ನು ಒಳಗೊಂಡಿತ್ತು. ಈತ ಬೌದ್ಧಧರ್ಮೀಯರಿಗೆ ತೀವ್ರವಾದ ಕಷ್ಟ ಕೋಟಲೆ ನೀಡಿ, ಅವರು ಕುದುರೆಸವಾರಿ ಮತ್ತು ಶಸ್ತ್ರಾಸ್ತ್ರ ಹೊಂದುವುದನ್ನು ನಿಷೇಧಿಸಿದ್ದ. ಅವರು ಬರಿಗಾಲಿನಲ್ಲಿ ನಡೆಯುವಂತೆ ಆದೇಶಿಸಿದ್ದ. ಆದ್ದರಿಂದ ಅವರು ಅನಂತರದಲ್ಲಿ ಅರಬ್ ಧಾಳಿಕೋರ ಮಹ್ಮದ್–ಬಿನ್–ಕಾಸಿಮ್ ಪರ ವಹಿಸಿದರು.

ಬಂಗಾಲ: ಅಂದು ಬಂಗಾಲ ಪಾಲರ ಅಧೀನದಲ್ಲಿತ್ತು. ಗೋಪಾಲ ಇದರ ಸ್ಥಾಪಕ. ಇವರ ಅಧೀನದಲ್ಲಿ ಬಂಗಾಲ ಶಾಂತಿ ಸಮೃದ್ಧಿ ಹೊಂದಿತ್ತು. ಇವರು ಬೌದ್ಧಧರ್ಮಕ್ಕೆ ಪ್ರೋತ್ಸಾಹ ನೀಡುತ್ತಿದ್ದರು.

ನೇಪಾಲ ಹಾಗೂ ಅಸ್ಸಾಂ: ಅಂದು ನೇಪಾಲ ಮತ್ತು ಅಸ್ಸಾಂ ಸ್ವತಂತ್ರವಾಗಿದ್ದವು. ಆದರೆ ಈ ರಾಜ್ಯಗಳು ಭಾರತದ ರಾಜಕೀಯದ ಮೇಲೆ ಅಂತಹ ಪ್ರಭಾವ ಬೀರುತ್ತಿರಲಿಲ್ಲ.

ದಕ್ಷಿಣ ಭಾರತ: ಅಂದು ದಕ್ಷಿಣ ಭಾರತ ಬಾದಾಮಿ ಚಳುಕ್ಯರ ಅಧೀನದಲ್ಲಿತ್ತು. ಚಳುಕ್ಯರ ಧಾಳಿಯಿಂದ ಪತನದ ಹಾದಿಯಲ್ಲಿ ಪಲ್ಲವರು ಇದ್ದು ಅಲ್ಲಿ ಅಂದು ಚೋಳ, ಪಾಂಡ್ಯ, ಚೇರ ಮುಂತಾದ ಸಣ್ಣ ಪುಟ್ಟ ರಾಜ್ಯಗಳು ಆಗ ತಾನೆ ಏಳಿಗೆ ಹೊಂದುತ್ತಿದ್ದವು. ಒಟ್ಟಿನಲ್ಲಿ ಅಂದು ದಕ್ಷಿಣ ಭಾರತವೂ ಅಂತಹ ಬಲಿಷ್ಠ ಕೇಂದ್ರ ಸರ್ಕಾರವಿದ್ದ ರಾಜ್ಯಗಳನ್ನು ಹೊಂದಿರಲಿಲ್ಲ. ರಾಜ್ಯದಲ್ಲಿ ರಾಜನ ಅಧಿಕಾರಕ್ಕೆ ಮಿತಿ ಇರದಿದ್ದರೂ ಮಂತ್ರಿಗಳ ಸಹಾಯದಿಂದ ರಾಜ್ಯಭಾರ ನಡೆಸುತ್ತಿದ್ದ. ಪ್ರಾಂತೀಯ ಹಾಗೂ ಸ್ಥಳೀಯ ಅಧಿಕಾರ ವರ್ಗ ಸಹ ಪ್ರಬಲವಾಗಿತ್ತು. ಅವರ ಮೇಲೆ ರಾಜರಿಗೆ ಅಂತಹ ಯಾವುದೇ ಅಧಿಕಾರ ಇರಲಿಲ್ಲ. ಇವರ ಅಡಿಯಲ್ಲಿ ಸೈನ್ಯ ಇದ್ದುದರಿಂದ ಪ್ರಬಲರಾಗಿದ್ದರು. ದಕ್ಷಿಣ ಭಾರತ ಸಾಮಾಜಿಕವಾಗಿ ವರ್ಗ ಸಮಾಜವಾಗಿದ್ದು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯ ಮತ್ತು ಶೂದ್ರರಿದ್ದರು. ಕೆಲವು ಬ್ರಾಹ್ಮಣರು ರಾಜರಾಗಿದ್ದರು. ಹೆಚ್ಚು ಶೂದ್ರ ರಾಜ್ಯಗಳಿದ್ದವು. ದಕ್ಷಿಣ ಭಾರತದಲ್ಲಿ ಕ್ಷತ್ರಿಯ ಪರಂಪರೆ ಇಲ್ಲವೆಂದು ಕಾಣುತ್ತದೆ. ಸ್ಥಳೀಯ ಶೂದ್ರ ಮತ್ತು ಹಿಂದುಳಿದ ವರ್ಗಗಳು ಕ್ಷತ್ರಿಯರಾಗಿ ಸಾಮಾಜಿಕ ಅಂಗೀಕಾರ

ಪಡೆದು ರಾಜ್ಯಗಳನ್ನು ಸ್ಥಾಪಿಸಿದ್ದು ಕಾಣಿಸುತ್ತದೆ. ಸ್ತ್ರೀಯರ ಮೇಲೆ ಹಲವಾರು ಅನಿಷ್ಟಕಾರಿ ಪದ್ಧತಿ ಹೇರಲಾಗಿತ್ತು. ವಿದ್ಯೆ ಕೇವಲ ಉನ್ನತ ವರ್ಗದ ಸ್ವತ್ತಾಗಿತ್ತು. ಬೌದ್ಧಧರ್ಮ ಹಾಗೂ ಜೈನಧರ್ಮ ಇದನ್ನು ಪರಿಹರಿಸುವಲ್ಲಿ ವಿಫಲವಾಗಿದ್ದವು. ಅಂದು ಸನಾತನ ಧರ್ಮ ಜೈನ ಹಾಗೂ ಬೌದ್ಧ ಧರ್ಮದ ವಿರುದ್ಧ ಪ್ರಬಲವಾಗಿ ನಿಂತಿದ್ದರೂ ಈ ಮೂರು ಧರ್ಮಗಳು ಹಲವಾರು ಪಂಥಗಳನ್ನು ಹೊಂದಿ ಸಮಾಜ ವಿಘಟನೆ ಹೊಂದಿತ್ತು.

ಅರಬ್ಬರು ಮರಳುಗಾಡು ಪ್ರದೇಶದ ಜನರಾಗಿದ್ದು, ಅವರಿಗೆ ಆರಂಭದಿಂದಲೂ ಭಾರತದ ಸಂಪತ್ತಿನ ಮೇಲೆಯೇ ಕಣ್ಣು ಇತ್ತು. ಆದರೆ ಅವರಲ್ಲಿ ಒಗ್ಗಟ್ಟು ಇರಲಿಲ್ಲ. ಪ್ರ.ಶ. ಏಳನೆಯ ಶತಮಾನದ ಆರಂಭದಲ್ಲಿ ಪ್ರವಾದಿ ಮಹಮ್ಮದನಿಂದ ಸ್ಥಾಪಿತಗೊಂಡ ಇಸ್ಲಾಂ ಧರ್ಮ ಅವರಲ್ಲಿ ಒಗ್ಗಟ್ಟನ್ನು ಮೂಡಿಸಿತು. ಮಹಮ್ಮದನ ಮರಣದ ವೇಳೆಗೆ ಇಸ್ಲಾಂ ಅರಬ್ಬರ ಮರಳುಗಾಡಿನಲ್ಲಿ ನೆಲೆಯೂರಿತ್ತು. ಮಹಮ್ಮದನ ಅನಂತರ ಬಂದ ಖಲೀಫರ ಕಾಲದಲ್ಲಿ ಅದು ಇನ್ನೂ ವಿಸ್ತರಿಸಿ ವಿಶ್ವದ ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳೆಯಿತು. ಇವರ ಕಾಲದಲ್ಲಿ ಪರ್ಷಿಯ, ಈಜಿಪ್ಟ್, ಫಜಿ, ಸಿರಿಯ ಮುಂತಾದ ಪ್ರದೇಶಗಳು ಅಧೀನಕ್ಕೆ ಬಂದವು. ಅರಬ್ಬರ ಪ್ರಥಮ ಧಾಳಿ ಭಾರತದ ಮೇಲೆ 637 ರಲ್ಲಿ ನಡೆಯಿತು. ಖಲೀಫ ಓಮರ್ ಒಂದು ನೌಕಾಸೇನೆಯನ್ನು ಭಾರತದ ಪಶ್ಚಿಮ ಕರಾವಳಿಯ ಥಾಣಕ್ಕೆ ಕಳುಹಿಸಿದ್ದ. ಆದರೆ ಅದನ್ನು ಬಾದಾಮಿ ಚಳುಕ್ಯರ ಇಮ್ಮಡಿ ಪುಲಕೇಶಿ ಹಿಮ್ಮೆಟ್ಟಿಸಿದ. 644ರಲ್ಲಿ ಖಲೀಫರು ಮಕ್ರನ್ ಪ್ರದೇಶವಲ್ಲದೆ ಹಲ್ಮಂಡ್ ನದಿಯ ಪ್ರದೇಶ ಕಾಬೂಲ್ ರಾಜ್ಯಗಳನ್ನು ವಶಪಡಿಸಿ ಕೊಂಡರು. ಆದರೆ ಅರಬ್ಬರ ಆಕ್ರಮಣ 8ನೆಯ ಶತಮಾನದಲ್ಲಿ ತೀವ್ರಗೊಂಡಿತ್ತು. ಇದಕ್ಕೆ ಕಾರಣವಾದ ಅಂಶವೆಂದರೆ ಶ್ರೀಲಂಕದಲ್ಲಿ ಮೃತನಾದ ಒಬ್ಬ ಮುಸ್ಲಿಂ ವ್ಯಾಪಾರಿಯ ಸಂಪತ್ತು ಹಾಗೂ ಅವನ ಪರಿವಾರ ಸಿಂಧೂ ನದಿಯ ಮೂಲಕ ಹೋಗುತ್ತಿದ್ದಾಗ ಅಲ್ಲಿನ ಕಡಲ್ಗಳ್ಳರು ಅದನ್ನು ಲೂಟಿ ಮಾಡಿದ್ದರು. ಅದನ್ನು ಸರಿಪಡಿಸುವಂತೆ ಹಾಗೂ ಕಡಲ್ಗಳ್ಳರನ್ನು ಶಿಕ್ಷಿಸುವಂತೆ ಅಂದು ಇರಾಕ್‌ನ ರಾಜ್ಯಪಾಲ ಹಿಜಾಜ್ ಸಿಂಧ್ ರಾಜನಾದ ದಾಹಿರನನ್ನು ಕೇಳಿಕೊಂಡ. ಆದರೆ ದಾಹಿರ ಅದನ್ನು ನಿರಾಕರಿಸಿದ ಕಾರಣ ಸಿಂಧ್ ಮೇಲೆ ಧಾಳಿ ಆರಂಭವಾಯಿತು. ಕೆಲವರು ಅದು ಶ್ರೀಲಂಕದ ದೊರೆ ಖಲೀಫನಿಗೆ ಕಳುಹಿಸಿದ ಉಡುಗೊರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

711 ರಲ್ಲಿ ನಡೆದ ಧಾಳಿ ವಿಫಲಗೊಂಡು ಅದರ ನಾಯಕತ್ವ ವಹಿಸಿದ್ದ ಹುಬೇದುಲ್ಲಾ ಮರಣ ಹೊಂದಿದ್ದ. ಇದರಿಂದ ಹಿಜಾಜ್ ಕೋಪಗೊಂಡು ಮರುವರ್ಷವೇ ತನ್ನ ಸೋದರಳಿಯ ಮಹಮ್ಮದ್–ಬಿನ್–ಕಾಸಿಂನ ನೇತೃತ್ವದಲ್ಲಿ ಭಾರಿ ಸೈನ್ಯವನ್ನು ಕಳುಹಿಸಿಕೊಟ್ಟು ದೇಬಲನ್ನು ವಶಪಡಿಸಿಕೊಂಡ. ಅಲ್ಲಿನ ಹಿಂದು ಹಾಗೂ ಬೌದ್ಧರನ್ನು ಇಸ್ಲಾಂಗೆ ಪರಿವರ್ತನೆಗೊಳ್ಳಿ ಇಲ್ಲವೆ ಮರಣವನ್ನು ಎದುರಿಸಿ ಎಂದು ಹೇಳಿದ. ಬಹಳಷ್ಟು ಜನ ಮತಾಂತರಗೊಂಡರು. ಅನೇಕ ಯುವಕರನ್ನು ಕೊಲ್ಲಲಾಯಿತು. ಖಾಸಿಂ ಅನಂತರ ನೆರೂನೆಗೆ ಮುತ್ತಿಗೆ ಹಾಕಿದ. ಆದರೆ ಅಲ್ಲಿನ ಬಹುಸಂಖ್ಯಾತ ಬೌದ್ಧರು ಯಾವುದೇ ಪ್ರತಿರೋಧ ಒಡ್ಡದೆ ಶರಣಾದರು. ಖಾಸಿಮನು ಸೆಹವಾನನ್ನು ಗೆದ್ದ. ಅದು ಬ್ರಾಜ ಎಂಬ ದಾಹಿರನ ದಾಯಾದಿಯ ಒಡೆತನ ದಲ್ಲಿತ್ತು. ಇದರಿಂದ ಎಚ್ಚೆತ್ತ ದಾಹಿರ 50,000 ಸೈನಿಕ ಪಡೆಯೊಂದಿಗೆ ಬ್ರಾಹ್ಮಣಬಾದ್‌ನಿಂದ ರೇವರ್ ರಣಭೂಮಿಗೆ ಹೊರಟ. ಈ ವೇಳೆಗೆ ಕೆಲವು ದ್ರೋಹಿಗಳ ಸಹಾಯದಿಂದ ಖಾಸಿಂ ಸಹ ಸಿಂಧೂ ನದಿಯನ್ನು ದಾಟಿ ರೇವರ್ ತಲುಪಿದ. ಅದರಂತೆ 712 ಜೂನ್ 20 ರಂದು ಸಂಭವಿಸಿದ ಯುದ್ಧದಲ್ಲಿ ದಾಹಿರ ಸೋತ. ಏಕೆಂದರೆ ಅವನು ಮೊದಲು ಎತ್ತರವಾದ ಆನೆಯ ಮೇಲೇ ಕುಳಿತು ಯುದ್ಧ ಮಾಡುತ್ತಿದ್ದು, ಆನೆಯ ಕಣ್ಣಿಗೆ ಬಾಣ ನಾಟಿ ಅದು ಯುದ್ಧರಂಗದಿಂದ ಹೊರಕ್ಕೆ ಹೋಯಿತು. ಆದರೂ ಅಶ್ವವೇರಿ ಯುದ್ಧಕ್ಕೆ ಬಂದರೂ ರಾಜನನ್ನು ಕಾಣದೆ ಸೈನಿಕರು ಪಲಾಯನ ಮಾಡಿದ್ದರಿಂದ ದಾಹಿರನು ಸೋತ. ಆದರೂ ಅನಂತರ ರೇವರ್ ಕೋಟೆಯ ಮುತ್ತಿಗೆಯನ್ನು ದಾಹಿರನ ಪತ್ನಿ ರಾಣಿಬಾಯಿ ತಡೆದಳು, ಅದು ವಿಫಲವಾದಾಗ ಅಗ್ನಿಪ್ರವೇಶಿಸಿದಳು.

ಅನಂತರ ಖಾಸಿಂ ಬ್ರಾಹ್ಮಣಬಾದ್‌ಗೆ ತೆರಳಿ ಅಲ್ಲಿ ದಾಹಿರನ ಪುತ್ರ ಜೈಸಿಂಗನನ್ನು ಸೋಲಿಸಿ. ದಾಹಿರನ ಪತ್ನಿ ಹಾಗೂ ಪುತ್ರಿಯರನ್ನು ಸೆರೆಹಿಡಿದ. ನಂತರ ರಾಜಧಾನಿ ಅರೋರೂ ಸಹ ವಶವಾಯಿತು. ಈ ಪ್ರದೇಶದಲ್ಲಿ ಹೇರಳ ಚಿನ್ನವಿದ್ದ ಕಾರಣ ಇದಕ್ಕೆ ಮುಲ್ತಾನ್ ಎಂದು ಹೆಸರಿಡಲಾಗಿತ್ತು. ಖಾಸಿಮನು ಕನೌಜ್‌ನ ಧಾಳಿಯನ್ನು ಯೋಜಿಸುತ್ತಿದ್ದ ಸಮಯದಲ್ಲಿ ಖಲೀಫನ ಕೋಪಕ್ಕೆ ತುತ್ತಾಗಿ ಮರಣ ಹೊಂದಿದ. ಖಾಸಿಂನ ಮರಣದ ಬಗ್ಗೆ ಭಿನ್ನಾಭಿಪ್ರಾಯ ಗಳಿವೆ. ಚಚನಾಮದ ಪ್ರಕಾರ ದಾಹಿರನ ಇಬ್ಬರು ಪುತ್ರಿಯರು ಖಾಸಿಂ ತಮ್ಮನ್ನು ಅಪವಿತ್ರ ಗೊಳಿಸಿ ತಮ್ಮ ಬಳಿಗೆ ಕಳುಹಿಸಿದ್ದಾನೆ ಎಂದು ಖಲೀಫನಿಗೆ ತಿಳಿಸಿದಾಗ ಕೋಪಗೊಂಡ ಖಲೀಫ ಖಾಸಿಂಗೆ ಮರಣ ದಂಡನೆ ವಿಧಿಸಿದ. ಆದರೆ ಅನಂತರ ಅದು ಹುಸಿ ಎಂದು ತಿಳಿದಾಗ ದಾಹಿರನ ಪುತ್ರಿಯರನ್ನು ಕೊಲ್ಲಿಸಿದ. ಆದರೆ ಇದನ್ನು ಒಪ್ಪದ ಕೆಲವು ಇತಿಹಾಸ ಕಾರರ ಪ್ರಕಾರ 715ರ ಅನಂತರ ಅಧಿಕಾರಕ್ಕೆ ಬಂದ ಸುಲೆಮನ್ ಖಾಸಿಮನನ್ನು ಕೊಲ್ಲಿಸಿದ ನೆಂದು ತಿಳಿಸುತ್ತಾರೆ. ಇದರಿಂದ ಅರಬ್ಬರ ಧಾಳಿ ಸಿಂಧ್ ಪ್ರಾಂತ್ಯಕ್ಕೆ ಸೀಮಿತವಾಗಿತ್ತು ಮತ್ತು 871ರಲ್ಲಿ ಇಲ್ಲಿನ ಅರಬ್ಬರು ಖಲೀಫನಿಂದ ಸ್ವತಂತ್ರರಾದರು. ಮುಂದೆ ಇಲ್ಲಿ ಮುಲ್ತಾನ ಹಾಗೂ ಮನ್ಸೂರು ಎಂಬ ರಾಜ್ಯಗಳು ಉದಯವಾದವು.

ಸಿಂಧ್‌ನಲ್ಲಿ ಅರಬ್ಬರು 150 ವರ್ಷಗಳ ಕಾಲ ಆಡಳಿತ ನಡೆಸಿದರಾದರೂ ಅಂತಹ ಯಾವ ಸುಧಾರಣೆಯನ್ನೂ ಕೈಗೊಳ್ಳಲಿಲ್ಲ. ಸಿಂಧ್ ಮತ್ತು ಮುಲ್ತಾನಗಳಿಂದ ವಾರ್ಷಿಕವಾಗಿ 1.5 ಕೋಟಿ ದಿಹಾರಮ್‌ಗಳ ಆದಾಯ ಬರುತ್ತಿತ್ತು. ಜಸಿಯ ಎಂಬ ತಲೆಗಂದಾಯ ವಿಧಿಸುವುದರ ಜೊತೆಗೆ ಖರಜ್ ಕೂಡ ವಸೂಲಿ ಮಾಡಲಾಗುತ್ತಿತ್ತು. ಭೂಕಂದಾಯವನ್ನು ನಗದು ಮತ್ತು ವಸ್ತು ರೂಪದಲ್ಲಿ ಸಲ್ಲಿಸಬಹುದಿತ್ತು. ಕಂದಾಯದ ಲೆಕ್ಕ–ಪತ್ರಗಳನ್ನು ಇಡಲಾಗುತ್ತಿತ್ತು. ಪ್ರಾಂತಗಳನ್ನು ಜಿಲ್ಲೆಗಳಾಗಿ ವಿಂಗಡಿಸಿ ಅವುಗಳ ಆಡಳಿತಕ್ಕೆ ಸೈನಿಕ ಅಧಿಕಾರಿ ಗಳನ್ನು ನೇಮಿಸಲಾಗುತ್ತಿತ್ತು. ಸೈನ್ಯಾಧಿಕಾರಿಗಳಿಗೆ ಜಹಗೀರ್‌ಗಳನ್ನೂ ಧರ್ಮಾಧಿಕಾರಿಗಳಿಗೆ ಭೂ–ದತ್ತಿಗಳನ್ನೂ ನೀಡಲಾಗುತ್ತಿತ್ತು. ಆದಾಗ್ಯೂ ಅರಬ್ಬರ ಸಿಂಧ್ ಆಕ್ರಮಣ ಅಂತಹ ಪ್ರಭಾವವನ್ನು ಉಂಟು ಮಾಡಲಿಲ್ಲ. ಅರಬ್ಬರ ಆಳಿಕೆ ಕೇವಲ ವಾಯವ್ಯ ಭಾರತಕ್ಕೆ ಸೀಮಿತವಾಗಿದ್ದು ಉಳಿದ ಭಾಗಕ್ಕೆ ಅದರ ಪ್ರಭಾವ ಅಷ್ಟಿರಲಿಲ್ಲ. ಅರಬ್ಬರು ಇಲ್ಲಿನ ಭಾಷೆ, ಕಲೆ, ಆಚಾರ, ವಿಚಾರ, ಸಂಸ್ಕೃತಿಗಳ ಮೇಲೆ ಪ್ರಭಾವ ಬೀರಲಿಲ್ಲ. ಏಕೆಂದರೆ ಈ ವಿಚಾರಗಳಲ್ಲಿ ಭಾರತೀಯರು ಅರಬ್ಬರಿಗಿಂತ ಉತ್ತಮ ಮಟ್ಟದಲ್ಲಿದ್ದರು. ಭಾರತೀಯರ ವಿದ್ವತ್ತಿಗೆ ಅರಬ್ಬರು ಮಾರು ಹೋಗಿ ಭಾರತೀಯರ ಕಲೆಯಿಂದ ಪ್ರಭಾವಿತರಾಗಿ ಅಲ್ಲಿ ತಮ್ಮ ಶೈಲಿಯ ಕಟ್ಟಡಗಳನ್ನು ವಿನ್ಯಾಸಗೊಳಿಸಿದರು. ಭಾರತೀಯರು ತಮ್ಮ ಧರ್ಮವೇ ಶ್ರೇಷ್ಠ ಎಂದು ಭಾವಿಸಿ ಇಸ್ಲಾಂಗೆ ಮತಾಂತರಗೊಳ್ಳಲಿಲ್ಲ. ಆದರೆ ಅರಬ್ಬರು ಸ್ಥಳೀಯ ಮಹಿಳೆಯರನ್ನು ವಿವಾಹವಾಗಿ ಮಿಶ್ರ ಪೀಳಿಗೆ ಜನಿಸಲು ಕಾರಣರಾದರು. ಸಿಂಧ್ ಮತ್ತು ಮುಲ್ತಾನ್‌ಗಳ ಭೂಮಿ ಅರಬ್ಬರ ವಶವಾಯಿತು. ಬಾಗ್ದಾದ್‌ನ ಖಲೀಫ್ ಮನ್ಸೂರನು ಭಾರತೀಯ ವಿದ್ವಾಂಸರಿಂದ ಬ್ರಹ್ಮ ಸಿದ್ಧಾಂತದ ಕೃತಿಯನ್ನು ಅರಬ್ಬಿ ಭಾಷೆಗೆ ಭಾಷಾಂತರಿಸಿದ್ದ.

ಹೀಗೆ ಹಲವಾರು ವರ್ಷಗಳವರೆಗೆ ಆಡಳಿತ ನಡೆಸಿದ ಅರಬ್ಬರು ಖಾಸಿಂ ಖಾನನ ಅನಂತರ ಬಂದ ದುರ್ಬಲ ಉತ್ತರಾಧಿಕಾರಿಗಳಿಂದಾಗಿ ಅವನತಿ ಹೊಂದಿದರು. (ಎಸ್.ವೈ.ಎಚ್.)

**ಅರಬ್ ವ್ಯಾಪಾರಿಗಳು:** 1ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿಯ ವ್ಯಾಪಾರ ಸ್ಥಾನವಾದ ಮುಜಿರಿಸ್ ಅಥವಾ ಈಗಿನ ಕ್ರಾಂಗನೂರಿನಲ್ಲಿ ಅರಬ್ ಸಮುದಾಯದವರಿದ್ದರು. ರೋಮನ್ ವಿದ್ವಾಂಸ ಪ್ಲಿನಿಯ ಪ್ರಕಾರ ಪಶ್ಚಿಮ ಕರಾವಳಿಯ ಮಲಬಾರು ಪ್ರಾಂತ್ಯದಲ್ಲಿ ಅರಬರು ನೆಲೆಸಿದ್ದರು. ಕೆಲವು ವರ್ಷಗಳ ಅನಂತರ ಮಲಬಾರು ಪ್ರಾಂತ್ಯದಿಂದ ಪೂರ್ವ ಕರಾವಳಿಯ ಬಂಗಾಲ ಪ್ರಾಂತ್ಯಕ್ಕೆ ವಲಸೆ ಹೋದರು. ಭಾರತದಲ್ಲಿ ನೆಲೆಸಿದ ಹೆಚ್ಚಿನ ಸಂಖ್ಯೆಯ ಅರಬರು ಅರಬ್ ಪ್ರದೇಶಗಳಾದ ಯೆಮೆನ್ ಮತ್ತು ಹದ್ರಮೌತ್‌ಗಳಿಂದ ಬಂದವರಾಗಿದ್ದರು.

ಹತ್ತನೆಯ ಶತಮಾನದವರೆಗೆ ಹೆಚ್ಚಿನ ಸಂಖ್ಯೆ ಅರಬರನ್ನು ಕೊಂಕಣ ಗುಜರಾತ್ ಪ್ರದೇಶಗಳಲ್ಲಿ ಕಾಣಬಹುದು. ಕೆಲವು ಅರಬರನ್ನು ಈ ಸ್ಥಳಗಳಲ್ಲಿ 7ನೆಯ ಶತಮಾನದಲ್ಲೂ ಕಾಣಬಹುದು. ಹೆಚ್ಚಿನ ವಿದೇಶಿ ಪ್ರವಾಸಿಗಳೂ 10ನೆಯ ಶತಮಾನದಲ್ಲಿ ಕೊಂಕಣ ಪ್ರದೇಶ ದಲ್ಲಿದ್ದ ಅರಬ್ ವ್ಯಾಪಾರಿಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಗುಜರಾತ್ ಮತ್ತು ಕೊಂಕಣದಿಂದ ತೇಗದ ಮರವನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಅರೇಬಿಯಕ್ಕೆ ಕಳುಹಿಸುತ್ತಿದ್ದರು. ಗುಜರಾತ್ ಮತ್ತು ಕೊಂಕಣ ಪ್ರದೇಶಗಳು ರಾಷ್ಟ್ರಕೂಟರ ಅಧೀನದಲ್ಲಿತ್ತು. ಅರಬರು ರಾಷ್ಟ್ರಕೂಟರ ರಾಜನನ್ನು ಬಲ್ಲಹಾರ ದೊರೆ ಎಂದು ಕರೆಯುತ್ತಿದ್ದರು. ಬಲ್ಲಹಾರ ದೊರೆ ಅರಬ್ ವ್ಯಾಪಾರಿಗಳಿಗೆ ಮಸೀದಿಗಳನ್ನು ನಿರ್ಮಿಸಲು ಅನುಮತಿ ಕೊಟ್ಟನು. ಅಲ್–ಮಸೂದಿಯ ಪ್ರಕಾರ ಪಶ್ಚಿಮ ಕರಾವಳಿಯಾದ್ಯಂತ ಹತ್ತು ಸಾವಿರ ಮುಸ್ಲಿಮರು ನೆಲೆಸಿದ್ದರಲ್ಲದೆ ಆಡಳಿತದಲ್ಲಿಯೂ ಪ್ರಮುಖ ಸ್ಥಾನವನ್ನು ಪಡೆದಿದ್ದರು.

ಪಶ್ಚಿಮ ಕರಾವಳಿಯ ಶಾಸನಗಳಲ್ಲಿ ಅರಬ್ ಮತ್ತು ಇತರೆ ಮುಸ್ಲಿಂ ವ್ಯಾಪಾರಿಗಳ ಕುರಿತು ಉಲ್ಲೇಖಗಳಿವೆ. ಈ ಶಾಸನಗಳು ಅರಬ್ಬರು ಮತ್ತು ಭಾರತೀಯರ ಸಂಬಂಧ ಮತ್ತು ಅರಬ್ ವ್ಯಾಪಾರದ ವಿವರಗಳನ್ನು ನೀಡುತ್ತವೆ. ಸಾಮಾನ್ಯವಾಗಿ ಬಹಳ ಧೀರ್ಘ ಪ್ರಯಾಣದ ಅನಂತರ ಅರಬ್ಬರು ಭಾರತದ ಕರಾವಳಿ ತೀರವನ್ನು ತಲುಪುತ್ತಿದ್ದರು. ಈ ಕಾರಣದಿಂದಾಗಿ ಇವರು ಭಾರತದಲ್ಲಿ ಹಲವು ದಿನಗಳ ಕಾಲ ಇರಬೇಕಾದ ಪರಿಸ್ಥಿತಿ ಬರುತ್ತಿತ್ತು. ಕಾಲಾನಂತರದಲ್ಲಿ ಶಾಶ್ವತವಾಗಿ ಇವರು ಭಾರತದ ಕರಾವಳಿ ತೀರದಲ್ಲಿ ನೆಲೆಸಲು ಪ್ರಾರಂಭಿಸಿದ ರಲ್ಲದೆ ಭಾರತದ ಸ್ತ್ರೀಯರನ್ನು ವಿವಾಹವಾದರು. ಇದರಿಂದ ಕರಾವಳಿಯ ತೀರದಲ್ಲಿ ಮಿಶ್ರ ಜನಾಂಗಗಳಾದ ನವಾಯತರು ಮತ್ತು ಮಾಪಿಳ್ಳೆಯರು ಕಾಣಿಸಿಕೊಂಡರು. ನವಾಯತರು ಅಂದರೆ ಹೊಸಬರು. ಹೊಸತಾಗಿ ನೆಲೆಸಿದ್ದರಿಂದ ಇವರನ್ನು ನವಾಯತರು ಎಂದು ಕರೆಯ ಲಾಯಿತು. ಇವರನ್ನು ಗೋವಾ ಕರ್ನಾಟಕದ ಕಡಲತೀರಗಳಲ್ಲಿಯೂ ಕಾಣಬಹುದು. ಮಾಪಿಳ್ಳೆಯವರು ಕೇರಳ ಮತ್ತು ಕರ್ನಾಟಕದ ಕಡಲ ತೀರಗಳಲ್ಲಿ ನೆಲೆಸಿದ್ದರು. ಈ ಹೊಸ ಸಮುದಾಯಗಳಿಂದ ಪಶ್ಚಿಮ ಕರಾವಳಿಯ ತೀರದಲ್ಲಿ ಗಮನಾರ್ಹ ಬದಲಾವಣೆಗಳು ಉಂಟಾಯಿತು. ಇವರ ಆಗಮನವು ಸ್ಥಳೀಯರಿಗೆ ಕುತೂಹಲ ಮತ್ತು ಉತ್ಸಾಹಗಳನ್ನು ತರುವುದರೊಂದಿಗೆ ಆಗಾಗ್ಗೆ ನಡೆಯುತ್ತಿದ್ದ ಘರ್ಷಣೆಗಳಿಂದಾಗಿ ಅವರ ಬಗ್ಗೆ ಭಯವನ್ನೂ ಉಂಟುಮಾಡಿತ್ತು. ಇವರು ಪಳ್ಳಿ ಎಂಬ ಸ್ಥಳಗಳಲ್ಲಿ ವಾಸಿಸುತ್ತಿದ್ದರು. ಪಳ್ಳಿ ಶಬ್ದವನ್ನು ಕುರಿತು ಸಂಶೋಧಕರಲ್ಲಿ ಜಿಜ್ಞಾಸೆಯಿದೆ. ಪಳ್ಳಿ ಎಂದರೆ ಗ್ರಾಮ ಅಥವಾ ಮಸೀದಿ ಎಂದೂ ಬೇರೆ ಬೇರೆ ಸಂಶೋಧಕರು ವಾದಿಸಿದ್ದಾರೆ. 8–9ನೆಯ ಶತಮಾನದಲ್ಲಿ ಮುಸ್ಲಿಮರು ಮಲಬಾರ್ ಪ್ರಾಂತ್ಯದಲ್ಲಿ ಮಸೀದಿಗಳನ್ನು ಕಟ್ಟಿದರು. ಹೆಚ್ಚಿನ ಅರಬ್ಬರು ಈ ಸಮುದಾಯದಲ್ಲಿ ಕೊಲ್ಲಂ ಪ್ರದೇಶದಲ್ಲಿ ನೆಲೆಸಿದ್ದರು.

ಮಲಬಾರು ಪ್ರಾಂತ್ಯದ ಹೆಚ್ಚಿನ ಅರಬ್ಬರು ಶಿಯಾ ಧರ್ಮಕ್ಕೆ ಸೇರಿದವರಾಗಿದ್ದರು. ದಕ್ಷಿಣ ಭಾರತದ ಮುಸ್ಲಿಮರು ದಕ್ಷಿಣ ಪೂರ್ವ ಏಷ್ಯದ ಮುಸ್ಲಿಮ್‌ರೊಂದಿಗೆ ಧಾರ್ಮಿಕ ಮತ್ತು ಆರ್ಥಿಕ ಸಂಬಂಧಗಳನ್ನು ಇರಿಸಿಕೊಂಡಿದ್ದರು. 14ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿಯಲ್ಲಿ ಅರಬ್ಬರು ಮತ್ತು ಇತರೆ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇಬನ್ ಬಟೂಟನ ಪ್ರಕಾರ ದಕ್ಷಿಣಭಾರತದ ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಮುಸ್ಲಿಮರಿದ್ದರು, ಇವರಲ್ಲಿ ಅನೇಕರು ದಕ್ಷಿಣ ಅರೇಬಿಯದಿಂದ ಬಂದವರಾಗಿದ್ದರು.

ಪಶ್ಚಿಮ ಕರಾವಳಿಯಲ್ಲಿ ನೆಲೆಸಿದ ಅರಬ್ ವ್ಯಾಪಾರಿಗಳು ಸ್ಥಳೀಯ ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದರು. ಸ್ಥಳೀಯ ಶಾಸನಗಳ ಪ್ರಕಾರ ಅರಬ್ ವ್ಯಾಪಾರಿಗಳು ಮತ್ತು ಅವರ ಸಂಘ ಹಂಜಮಾನ ಸ್ಥಳೀಯ ದೇವಸ್ಥಾನಗಳಿಗೆ ದೇಣಿಗೆಯನ್ನು ನೀಡಿದ್ದರು. ಇದರಿಂದಾಗಿ ಇವರು ಸ್ಥಳೀಯ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಕರಾವಳಿ ತೀರದ ವ್ಯಾಪಾರಿಗಳು ಅರೇಬಿಯದ ಕೆಲವು ವ್ಯಾಪಾರ ಕೇಂದ್ರಗಳ ಜೊತೆ ಸಂಬಂಧ ಇರಿಸಿಕೊಂಡಿದ್ದರು. ಉದಾ: 12ನೆಯ ಶತಮಾನದ ಒಂದು ದಾಖಲೆಯಲ್ಲಿ ಮರಗಳ್ಳರು ಮತ್ತು ಏಡನ್ ವ್ಯಾಪಾರಸಂಬಂಧದ ಉಲ್ಲೇಖವಿದೆ. ನಡುವೆ ಇದ್ದ ಅರಬರು ಕುದುರೆ ವ್ಯಾಪಾರದಲ್ಲಿ ಪಳಗಿದವರಾಗಿದ್ದರು. ವಿಜಯನಗರ ಕಾಲದಲ್ಲಿ ಯುದ್ಧಗಳಲ್ಲಿ ಕುದುರೆಗಳ ಆವಶ್ಯಕತೆ ಇದ್ದಿತು. ವಿಜಯನಗರದ ರಾಯರು ಕುದುರೆಗಳನ್ನು ಪಡೆಯಲು ಎಷ್ಟೇ ಮೊತ್ತವಾದರೂ ಕೊಡಲು ತಯಾರಿದ್ದರು. ಏಕೆಂದರೆ ವಿಜಯನಗರದ ಅರಸರು ಬಹಮನಿ ರಾಜರ ಜೊತೆಗೆ ಹಲವು ಬಾರಿ ಯುದ್ಧ ಮಾಡುವ ಪ್ರಸಂಗ ಒದಗಿ ಬಂದಿತ್ತು.

ಕರಾವಳಿ ಕರ್ನಾಟಕದ ಗ್ರಂಥಗಳಲ್ಲಿ ಪೌರು, ಗುಲಾಮಿ ಇತ್ಯಾದಿ ಅರಬ್ ಶಬ್ದಗಳನ್ನು ಕಾಣಬಹುದು. ಕರಾವಳಿ ಕರ್ನಾಟಕದ ವ್ಯಾಪಾರ ಸ್ಥಳಗಳಾದ ಬಸರೂರು, ಬಾರಕೂರು, ಬೇಕಲ ಹಾಗೂ ಕಾಸರಗೋಡು ಕುರಿತು ಅರಬ್ ವ್ಯಾಪಾರಿಗಳಿಗೆ ತಿಳಿದಿತ್ತು. ಅರಬ್ ಸಾಹಿತ್ಯದಲ್ಲಿ ಭಾರತದ ಕರಾವಳಿ ಪ್ರದೇಶಕ್ಕೆ ಬಂದ ಅರಬ್ ಪ್ರವಾಸಿಗರಾದ ಯಾಕುತ್, ದಾಮಿಷ್ಕಿ ಮತ್ತು ಅಬುಲ್ ಫಿದಾ ಕುರಿತು ಮಾಹಿತಿ ದೊರಕುತ್ತದೆ.

1510ರ ಅನಂತರ ಪೋರ್ಚುಗೀಸ್ ರಾಜ್ಯ ಭಾರತದಲ್ಲಿ ಉದಯವಾಯಿತು. ಇದು ಅರಬ್ ವ್ಯಾಪಾರಿಗಳಿಗೆ ಒಂದು ಸವಾಲಾಗಿ ಪರಿಣಮಿಸಿತು. ಅರಬ್ಬರು ಪೋರ್ಚುಗೀಸರ ಜೊತೆಗೆ ಅರೇಬಿಯದಲ್ಲಿ ಮತ್ತು ಭಾರತದಲ್ಲಿ ಯುದ್ಧ ಮಾಡಬೇಕಾದ ಪ್ರಸಂಗ ಒದಗಿ ಬಂದಿತ್ತು. 16ನೆಯ ಶತಮಾನದಲ್ಲಿ ಪೋರ್ಚುಗೀಸರು ಕರಾವಳಿ ಪ್ರಾಂತ್ಯಗಳಲ್ಲಿ ಅದರಲ್ಲೂ ಗೋವ ಮತ್ತು ಗುಜರಾತ್‌ಗಳಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿದ್ದರು. ಇದರಿಂದಾಗಿ ಅರಬ್ಬರ ಪ್ರಾಮುಖ್ಯತೆ ಕಡಿಮೆಯಾಯಿತು. ಆದರೂ ಪೋರ್ಚುಗೀಸ್ ದಾಖಲೆ ಪತ್ರಗಳಲ್ಲಿ ಅರಬ್ಬರ ಕುರಿತು ಹೆಚ್ಚಿನ ಸಂಖ್ಯೆಯಲ್ಲಿ ಮಾಹಿತಿ ದೊರೆಯುತ್ತದೆ. ಈ ಸಂದರ್ಭದಲ್ಲಿ ಅರಬ್ಬರು ಕರಾವಳಿ ಕರ್ನಾಟಕ ಮತ್ತು ಮಲಬಾರು ಪ್ರಾಂತ್ಯಗಳಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿದರು.

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಅರಬ್ಬರು ಪಶ್ಚಿಮ ಕರಾವಳಿಯ ವ್ಯಾಪಾರದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿರುವುದು ಕಂಡುಬರುತ್ತದೆ. ಈ ಪ್ರದೇಶದ ರಾಜರುಗಳು ಅರಬ್ ವ್ಯಾಪಾರಿಗಳ ಹಿತರಕ್ಷಣೆ ಮಾಡಿದರು. ಆದರೆ ಯುರೋಪಿಯನ್ನರ ಆಗಮನದ ಅನಂತರ ಪಶ್ಚಿಮ ಕರಾವಳಿಯಲ್ಲಿ ಅರಬ್ಬರ ಪ್ರಾಮುಖ್ಯತೆ ಕುಂದಿತು. (ಎಸ್.)

**ಅಲ್‌ಖೈದಾ: ನೋಡಿ–ಭಯೋತ್ಪಾದನೆ**

**ಅಲಾವುದ್ದೀನ್ ಖಿಲ್ಜಿ:** 1296–1316. ಭಾರತದಲ್ಲಿ ವಿಶಾಲ ಮಹಮ್ಮದೀಯ ಸಾಮ್ರಾಜ್ಯವನ್ನು ಸ್ಥಾಪಿಸಲೆತ್ನಿಸಿದವರಲ್ಲಿ ಮೊದಲಿಗ. ಜಲಾಲುದ್ದೀನ್ ಖಿಲ್ಜಿಯ ಅಳಿಯ, ಉತ್ತರಾಧಿಕಾರಿ. ಈತ ದೆಹಲಿ ಸುಲ್ತಾನರಲ್ಲೆಲ್ಲ ಬಲಿಷ್ಠ. ದಕ್ಷಿಣದ ಹಿಂದು ರಾಜ್ಯಗಳ ಮೇಲೆ ಮೊಟ್ಟಮೊದಲು ಮಹಮ್ಮದೀಯರ ರಾಜಕೀಯ ಪ್ರಭಾವವನ್ನು ಸ್ಥಾಪಿಸಿದ. ಜಲಾಲುದ್ದೀನನ ಆಳಿಕೆಯ ಕೊನೆಗಾಲದಲ್ಲಿ ಖಾರ ಮತ್ತು ಮಾಳವ ರಾಜ್ಯಗಳ ಪ್ರಾಂತ್ಯಾಧಿಕಾರಿಯಾಗಿದ್ದ, ಸುಖವಿಹೀನ ಗೃಹಜೀವನದಿಂದುದ್ದೀಪಿತನಾದ ಅಲಾವುದ್ದೀನ್ 1294ರಲ್ಲಿ 8000 ಅಶ್ವಬಲ ಸಮೇತನಾಗಿ ವಿಂಧ್ಯಪರ್ವತವನ್ನು ದಾಟಿ, ದೇವಗಿರಿಯನ್ನು ಮುತ್ತಿ ಅಲ್ಲಿನ ರಾಜನಾದ ಯಾದವ ರಾಮಚಂದ್ರನನ್ನೂ ಆತನ ಮಗ ಶಂಕರದೇವನನ್ನೂ ಸೋಲಿಸಿ ಚಿನ್ನ, ಬೆಳ್ಳಿ, ರತ್ನ ಮೊದಲಾದ ಅಪಾರಸಂಪತ್ತಿನ ಕೊಳ್ಳೆಯೊಡನೆ ಹಿಂದಿರುಗಿದನು. ವಿಜಯಿ ಅಲಾವುದ್ದೀನನನ್ನು ಸುಲ್ತಾನ್ ಜಲಾಲುದ್ದೀನನು ಗಂಗಾತೀರದಲ್ಲಿ ಸ್ವಾಗತಿಸುವಂತೆ ನಿಷ್ಕರ್ಷೆಯಾಯಿತು. ಗುಪ್ತವಾಗಿ ಮೊದಲೇ ನಿರ್ಧರಿಸಿದ್ದಂತೆ ಸಂದರ್ಶನದ ವೇಳೆಯಲ್ಲಿ ಅಲಾವುದ್ದೀನ್ ಕುತಂತ್ರದಿಂದ ಮಾವನನ್ನು ಕೊಲೆಮಾಡಿಸಿ ದಕ್ಷಿಣದಿಂದ ದೋಚಿ ತಂದಿದ್ದ ಐಶ್ವರ್ಯವನ್ನು ತನಗೆ ಬೇಕಾದವರಿಗೆ ಹಂಚಿ, 1296ರಲ್ಲಿ ದೆಹಲಿ ಸಿಂಹಾಸನವನ್ನಾಕ್ರಮಿಸಿ, ತನ್ನ ವಿರೋಧಿಗಳನ್ನು ಕ್ರೌರ್ಯದಿಂದ ನಿರ್ನಾಮ ಮಾಡಿದ. ಇವನ 20 ವರ್ಷಗಳ ಆಳಿಕೆ ಭಯೋತ್ಪಾದನೆಯ ರಕ್ತಪಾತದ ಕಾಲವಾಗಿತ್ತು. ಆ ವೇಳೆಯಲ್ಲಿ ಪಂಜಾಬ್ ಮತ್ತು ವಾಯವ್ಯ ಪ್ರದೇಶದಲ್ಲಿ ಮಂಗೋಲರ ಭೀತಿ ವಿಶೇಷವಾಗಿತ್ತು. ಅವರು ಪದೇಪದೇ ಆಕ್ರಮಣಗಳನ್ನು ಮಾಡಿ ಸೂರೆ ಮತ್ತು ಕೊಳ್ಳೆಯಿಂದ ಹಿಂದಿರುಗುತ್ತಿದ್ದರು. 1307ರಲ್ಲಿ ಅವರ ದಂಡು ದೆಹಲಿಯವರೆಗೂ ಬಂದಿತ್ತು. ಅಲಾವುದ್ದೀನ್ ಸತತವಾಗಿ ಕಾಲುಶತಮಾನಕಾಲ ಹೋರಾಡಿ ಮಂಗೋಲರ ಹಾವಳಿಯನ್ನು ತಡೆಗಟ್ಟಿದ. ಗಡಿನಾಡಿನ ರಕ್ಷಣಾಕಾರ್ಯಗಳನ್ನು ಪುನರ್ವ್ಯವಸ್ಥೆಗೊಳಿಸಿ ತುಗಲಕ್ ಎಂಬ ಸೇನಾನಾಯಕನ ವಶಕ್ಕೆ ಅಲ್ಲಿನ ಕಾವಲುಸೈನ್ಯವನ್ನು ಒಪ್ಪಿಸಿದ. ಮಹಾತ್ವಾಕಾಂಕ್ಷಿಯಾದ ಅಲಾವುದ್ದೀನನಿಗೆ ಒಂದು ಹೊಸ ಮತವನ್ನು ಸ್ಥಾಪಿಸಬೇಕೆಂಬ ಹಾಗೂ ಅಲೆಕ್ಸಾಂಡರನಂತೆ ಪ್ರಪಂಚವನ್ನೇ ಗೆಲ್ಲಬೇಕೆಂಬ ಆಕಾಂಕ್ಷೆಗಳು ಹುಟ್ಟಿದವು. ಅಲಾ ಉಲ್ ಮುಲ್ಕ್ ಎಂಬ ತನ್ನ ಆಪ್ತ ಖಾಜಿಯ ಹಿತೋಕ್ತಿಯಿಂದ ಈ ಎರಡು ಅಭಿಲಾಷೆಗಳನ್ನೂ ಕೈಬಿಟ್ಟು ಹಿಂದುಸ್ತಾನವನ್ನೆಲ್ಲ ಜಯಿಸಲುದ್ಯುಕ್ತ ನಾದ. ಮೊದಲು ರಾಜಪುತ್ರ ಸಂಸ್ಥಾನಗಳ ಕಡೆಗೆ ತಿರುಗಿ ಕ್ರೌರ್ಯದಿಂದ ಗುಜರಾತ್, ರಣಥಂಬೋರ್ ಮತ್ತು ಮೇವಾರ್ ರಾಜ್ಯಗಳನ್ನು ವಶಪಡಿಸಿಕೊಂಡ. ರಾಣಾ ಕರ್ಣಸಿಂಗನ ರಾಣಿ ಪದ್ಮಿನಿಯನ್ನು ಪಡೆಯಲು ಅಲಾವುದ್ದೀನ್ ಚಿತ್ತೂರನ್ನು ಮುತ್ತಿದನೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ.

1305ರ ವೇಳೆಗೆ ಇಡೀ ಉತ್ತರ ಹಿಂದುಸ್ತಾನದಲ್ಲಿ ಖಿಲ್ಜಿ ಸಾಮ್ರಾಜ್ಯ ಏರ್ಪಟ್ಟಿತು. ಅನಂತರ ಅಲಾವುದ್ದೀನ್ ರಾಜಕೀಯ ಮತ್ತು ಆರ್ಥಿಕ ಲೋಭದಿಂದ ದಕ್ಷಿಣದ ಕಡೆಗೆ ತನ್ನ ಗಮನ ಹರಿಸಿದ. ದಕ್ಷಿಣ ರಾಜ್ಯಗಳ ಆಕ್ರಮಣಕ್ಕೆ ತನ್ನ ಆಪ್ತ ಗುಲಾಮನೂ ಪರಾಕ್ರಮಿಯೂ ಆದ ಮಲಿಕ್ ಕಾಫ಼ರನನ್ನು (ಮಲಿಕ್ ನಾಯಿಬ್) ನೇಮಿಸಿದ. ಆತ ತನ್ನ ಮೊದಲ ಧಾಳಿಯಲ್ಲಿ ರಾಜ ರಾಮಚಂದ್ರ ಕ್ರಮವಾಗಿ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿರಲಿಲ್ಲವೆಂಬ ನೆಪದ ಮೇಲೆ ದೇವಗಿರಿಯನ್ನು ಮುತ್ತಿ ಕೊಳ್ಳೆ ಹೊಡೆದ. ಎರಡನೆಯ ದಂಡಯಾತ್ರೆಯಲ್ಲಿ ವಾರಂಗಲ್ಲಿನ ಪ್ರತಾಪರುದ್ರನನ್ನು ಸೋಲಿಸಿದ. 1313ರಲ್ಲಿ ಹೊಯ್ಸಳ 3ನೆಯ ವೀರಬಲ್ಲಾಳನನ್ನು ಸೋಲಿಸಿ ದೋರಸಮುದ್ರವನ್ನು ಕೊಳ್ಳೆ ಹೊಡೆದ. ಮಧುರೆ ಹಾಗೂ ರಾಮೇಶ್ವರದವರೆಗೂ ದಂಡೆತ್ತಿಹೋಗಿ ಪಾಂಡ್ಯರನ್ನು ಸೋಲಿಸಿ ವಿಶೇಷವಾದ ಐಶ್ವರ್ಯವನ್ನು ದೋಚಿದ. ಈ ದಂಡಯಾತ್ರೆಗಳಿಂದ ಸಾವಿರಾರು ಮಂದಿ ಮಡಿದರು, ಅನೇಕ ಪಟ್ಟಣಗಳು ಹಾಗೂ ದೇವಾಲಯಗಳು ನಾಶವಾದವು. ಅಪಾರ ಸಂಪತ್ತು ಸುಲ್ತಾನನ ವಶವಾಯಿತು.

ಅಲಾವುದ್ದೀನ್ ಆಡಳಿತ ವ್ಯವಸ್ಥೆಯನ್ನು ಇಸ್ಲಾಂ ಮತೀಯ ಆಧಾರದ ಮೇಲೆ ರೂಪಿಸದೆ ತನ್ನ ಪರಮಾಧಿಕಾರಕ್ಕೆ ಸೂಕ್ತವಾಗುವಂತೆ ಮಾರ್ಪಾಡಿಸಿಕೊಂಡ. ಆಡಳಿತ, ಸೈನ್ಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಅಗತ್ಯ ವಸ್ತುಗಳ ಮಾರಾಟದ ಮೇಲೆ ಉಗ್ರವಾದ ಹತೋಟಿ ವಿಧಿಸಿದ. ಮಾದಕ ಪದಾರ್ಥಗಳ ಸೇವನೆ, ಜೂಜಾಟ, ಶ್ರೀಮಂತರು ಒಟ್ಟಿಗೆ ಕಲೆಯುವುದು ನ್ಯಾಯಬಾಹಿರವೆಂದು ಘೋಷಿಸಿದ. ತಪ್ಪಿತಸ್ಥರೆಂದು ಕಂಡವರನ್ನು ಕ್ರೂರವಾಗಿ ದಂಡಿಸಿದ. ಹಿಂದುಗಳು ದಂಗೆಯೇಳಬಹುದೆಂಬ ಭೀತಿಯಿಂದ ಅವರ ಮೇಲೆ ಭಾರವಾದ ತೆರಿಗೆಗಳನ್ನು ವಿಧಿಸಿದ. ಮಹಮ್ಮದೀಯರಲ್ಲಿ ಆಡಳಿತ ವಿರುದ್ಧ ಅಸಮಾಧಾನವೂ ಹಿಂದುಗಳಲ್ಲಿ ಕಡುಬಡತನ ಮತ್ತು ಅಸಹಾಯಕತೆಯ ನೋವೂ ಅಂದಿನ ಸಾಮಾಜಿಕ ಸ್ಥಿತಿಯ ನೈಜ ಪ್ರತಿಬಿಂಬಗಳಾಗಿದ್ದುವು. ಕ್ರೂರಿಯಾದ ಅಲಾವುದ್ದೀನನ ಅಂತ್ಯ ದುಃಖಮಯವಾಗಿತ್ತು. ಅತಿಭೋಗದಿಂದ ಇವನ ಆರೋಗ್ಯ ಕೆಟ್ಟಿತ್ತು. ಅರಮನೆಯಲ್ಲಿ ಗೃಹಕಲಹಗಳುದ್ಭವಿಸಿ ದಂಗೆಗಳಾದವು. ಕೊನೆಗೆ ಮಲಿಕ್ ಕಾಫ಼ರ್ ಅಲಾವುದ್ದೀನನನ್ನು ಕೊಲೆಮಾಡಿ ಸಿಂಹಾಸನವೇರಿದ. ಆದರೆ ಒಂದು ತಿಂಗಳಲ್ಲೇ ಕಾಫ಼ರನ ಕೊಲೆಯಾಗಿ ಅಲಾವುದ್ದೀನನ ಮಗ ಕುತುಬ್ ಉದ್ದೀನ್ 1316ರಲ್ಲಿ ಮುಬಾರಕ್ ಎಂಬ ಬಿರುದಿನಿಂದ ಸುಲ್ತಾನನಾದ. (ಜಿ.ಆರ್.ಆರ್.)

**ಅಲಿಘರ್ ಚಳವಳಿ:** 19ನೆಯ ಶತಮಾನದ ಕೊನೆಯ ದಶಕದಲ್ಲಿ ರಾಷ್ಟ್ರೀಯ ಆಂದೋಲನದ ಬಗ್ಗೆ ಮುಸ್ಲಿಮರ ಮನೋಧರ್ಮ ಕೊಂಚ ಬದಲಾದುದನ್ನು ಸೂಚಿಸುವ ಒಂದು ಘಟನೆ. ರಾಮಮೋಹನರಾಯ್, ಟಿಳಕ್, ರಾನಡೆ ಮೊದಲಾದ ಅನೇಕ ಸಮಾಜ ಸುಧಾರಕರ ನಿರಂತರ ಶ್ರಮದ ಫಲವಾಗಿ ಹಿಂದುಗಳಲ್ಲಿ ಜನಜಾಗೃತಿಯುಂಟಾಗಿತ್ತು; ಅವರು ಇಂಗ್ಲಿಷ್ ವ್ಯಾಸಂಗ ಮಾಡಿ ಸರ್ಕಾರದ ಹುದ್ದೆಗಳನ್ನು ದೊರಕಿಸಿಕೊಂಡಿದ್ದರು. ಮುಸ್ಲಿಮರು ಮಾತ್ರ ಹಿಂದುಳಿದಿದ್ದರು. ಹಿಂದುಗಳಂತೆಯೇ ಅವರೂ ಆಧುನಿಕ ಶಿಕ್ಷಣ ಪಡೆದು ಮುಂದುವರಿಯಲೆಂಬ ಉದ್ದೇಶದಿಂದ ಮುಸಲ್ಮಾನರ ಮುಖಂಡರಾಗಿದ್ದ ಸರ್ ಸೈಯದ್ ಅಹಮದ ಖಾನ್ ಅವರ ಪ್ರೇರಣೆಯಂತೆ ಅಲಿಘರ್‌ನಲ್ಲಿ ಮಹಮ್ಮದ್ ಆಂಗ್ಲೊ ಓರಿಯಂಟಲ್ ಕಾಲೇಜ್ ಎಂಬ ವಿದ್ಯಾಸಂಸ್ಥೆ ಸ್ಥಾಪಿತವಾಯಿತು (1875). ಭಾರತದಲ್ಲಿ ಅಂದು ಬೀಸುತ್ತಿದ್ದ ರಾಜಕೀಯ ಮಾರುತದ ವೇಗ ಒತ್ತಡಗಳ ಸೂಕ್ಷ್ಮವನ್ನರಿತ ಬ್ರಿಟಿಷ್ ಅಧಿಕಾರವರ್ಗ ಹಿಂದು ಮುಸಲ್ಮಾನರ ಐಕ್ಯದಿಂದ ಒದಗಬಹುದಾದ ವಿಪತ್ತನ್ನು ಮನಗಂಡು ಅದನ್ನು ಆಗದಂತೆ ಮಾಡಲು ಯತ್ನಿಸಿದರು. ಇಸ್ಲಾಂ ಧರ್ಮೀಯರಲ್ಲಿ ಜಾಗೃತಿಯನ್ನು ಮೂಡಿಸುವ ಯತ್ನದಲ್ಲಿ ಅವರು ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಪ್ರಾರಂಭದಲ್ಲಿ ಹಿಂದು–ಮುಸ್ಲಿಂ ಏಕತೆಯ ಪ್ರತಿಪಾದಕರಾಗಿದ್ದ ಅವರು ಕಾಲಾನಂತರ ಬದಲಾದರು. ಹೆಚ್ಚಾಗಿ ಹಿಂದುಗಳೇ ಇದ್ದ ಕಾಂಗ್ರೆಸ್ಸಿಗೆ ಮುಸ್ಲಿಮರು ಸೇರದಂತೆ ಮಾಡಲೆತ್ನಿಸಿದರು. 1883–99ರವರೆಗೆ ಅಲಿಘರ್ ಕಾಲೇಜಿನ ಪ್ರಾಧ್ಯಾಪಕನಾಗಿದ್ದ ಬೆಕ್, ಸೈಯದ್‌ಅಹಮದ್ ಮತ್ತು ಇತರ ಮುಸ್ಲಿಂ ಮುಖಂಡರ ಮನಸ್ಸನ್ನು ಕಾಂಗ್ರೆಸ್ಸಿಗೆ ವಿರೋಧವಾಗಿ ತಿರುಗಿಸುವ ಕಾರ್ಯದಲ್ಲಿ ಯಶಸ್ವಿಯಾದ. ಕಾಂಗ್ರೆಸ್ಸಿಗೆ ಸೇರಿದರೆ ಅಲ್ಪ ಸಂಖ್ಯಾತರಾದ ಮುಸ್ಲಿಮರಿಗೆ

ಯಾವರೀತಿಯ ಪ್ರಯೋಜನವೂ ಇಲ್ಲ; ಅವರು ಬಹುಸಂಖ್ಯಾತರಾದ ಹಿಂದುಗಳ ಅಡಿಯಾಳುಗಳಾಗಿ ಬಾಳಬೇಕಾಗುತ್ತದೆ ಎಂದು ಬೋಧಿಸಿದ. ಅವನ ಯತ್ನ ಫಲಿಸಿತು. ಸರ್ ಸೈಯದ್ ಅಹಮದ್ ಕೂಡ, ಕಾಂಗ್ರೆಸ್ಸಿಗೆ ಸೇರುವುದರಿಂದ ಮುಸ್ಲಿಮರಿಗೆ ಯಾವ ಪ್ರಯೋಜನವೂ ಇಲ್ಲ ಎಂದು ನಂಬಿ ಬ್ರಿಟಿಷ್ ರಾಜಕಾರಣಿಗಳು ಮತ್ತು ಅಧಿಕಾರಿಗಳ ಪ್ರೇರಣೆಯಿಂದ ಸರ್ ಸಯ್ಯದ್‌ಅಹಮ್ಮದ್‌ಖಾನನು ಬನಾರಸಿನ ಶ್ರೀಮಂತ ಜಮೀನುದಾರ ಯುನೈಟೆಡ್ ಇಂಡಿಯ ಪೇಟ್ರಿಯಾಟ್ ಅಸೋಸಿಯೇಶನ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ. ಅಲಿಘರ್‌ನಲ್ಲಿ ಹೀಗೆ ಪ್ರಾರಂಭವಾದ ಈ ಚಳವಳಿ, ಬ್ರಿಟಿಷ್ ರಾಜಕಾರಣಿಗಳ ಒಡೆದು ಆಳುವ ನೀತಿಯಿಂದ ಪುಷ್ಟಿಗೊಂಡು ಬೆಳೆಯಿತು. (ಬಿ.ಎಸ್.ಎ.)

**ಅಲೆಕ್ಸಾಂಡರ್:** ಪ್ರ.ಶ.ಪೂ.356–23. ಮ್ಯಾಸಿಡೋನಿಯದ ದೊರೆ. ಪರ್ಷಿಯ ಸಾಮ್ರಾಜ್ಯವನ್ನು ಸೋಲಿಸಿ ಭಾರತದವರೆಗೂ ದಂಡೆತ್ತಿ ಬಂದ ಮಹಾನಾಯಕ. ತಂದೆ ಫಿಲಿಪ್. ಆತ ರಾಜನಾಗಿ ದೇಶವನ್ನು ಸುಭದ್ರ ತಳಹದಿಯ ಮೇಲೆ ಸತತವಾಗಿ ದುಡಿದು ಮಗನ ಪ್ರಗತಿಗೆ ಕಾರಣನಾದ. ತಂದೆಯ ಮರಣಾನಂತರ ಪ್ರ.ಶ.ಪೂ.336ರಲ್ಲಿ ತನ್ನ 20ನೆಯ ವಯಸ್ಸಿನಲ್ಲಿ ಅಲೆಕ್ಸಾಂಡರ್ ಪಟ್ಟಕ್ಕೆ ಬಂದು ದೇಶದಲ್ಲಿ ತಲೆ ಎತ್ತುತ್ತಿದ್ದ ಅಶಾಂತಿ, ಅರಾಜಕತೆಗಳನ್ನು ನಿವಾರಿಸಿದ. ತಂದೆಯಂತೆ ರಾಜ್ಯವಿಸ್ತರಣೆಗೆ ಮನಸ್ಸು ಮಾಡಿದ. ಬಾಲ್ಯದಲ್ಲೇ ತಂದೆಯ ನೇತೃತ್ವದಲ್ಲಿ ಪಡೆದ ಉತ್ತಮ ವಿದ್ಯಾಭ್ಯಾಸದ ಜೊತೆಗೆ ಇವನಲ್ಲಿದ್ದ ಪ್ರತಿಭೆಯೂ ಸೇರಿ ಇವನ ವ್ಯಕ್ತಿತ್ವ ಪ್ರಜ್ವಲಿಸತೊಡಗಿತು. ಇವನದು ಎತ್ತರವಾದ ನಿಲುವು, ಸ್ಫುರದ್ರೂಪ. ಉತ್ತಮ ದೇಹದಾರ್ಢ್ಯವುಳ್ಳವನಾಗಿದ್ದ. ಗ್ರೀಕ್ ನಾಗರಿಕತೆ ಸಂಸ್ಕೃತಿಗಳನ್ನು ಇವನು ಬಹುವಾಗಿ ಮೆಚ್ಚಿದ್ದ. ಹೋಮರನ ಇಲಿಯಡ್ ಮಹಾಕಾವ್ಯ ಇವನ ತುದಿನಾಲಗೆಯಲ್ಲಿತ್ತು. ಪ್ರಸಿದ್ಧ ವಿದ್ವಾಂಸನಾದ ಅರಿಸ್ಟಾಟಲ್ ಇವನ ಗುರು. ತತ್ತ್ವಶಾಸ್ತ್ರ, ವೈದ್ಯ, ವಿಜ್ಞಾನಗಳಲ್ಲಿ ಅಪಾರ ಆಸಕ್ತಿಯುಳ್ಳವ. ಗ್ರೀಕ್ ರಾಜ್ಯಗಳನ್ನು ಸೋಲಿಸಿದನಾದರೂ ತಂದೆಯಂತೆ ಉದಾರ ನೀತಿಯನ್ನನುಸರಿಸಿ ಅವರ ಬೆಂಬಲವನ್ನು ಗಳಿಸಿಕೊಂಡ. ತಂದೆಯ ಕೊಲೆಗೆ ಕಾರಣರೆಂದು ಕಂಡುಬಂದ ಲೈಸೆಸ್ಟಿಸ್‌ನ ರಾಜರನ್ನು ತೀರಿಸಿ ತನ್ನ ವೈರಿಗಳೆನಿಸಿದ ಇತರರನ್ನೂ ನಿರ್ನಾಮ ಮಾಡಿದ. ಅನಂತರ ದಕ್ಷಿಣಕ್ಕೆ ತಿರುಗಿ ಥೆಸಲೆಯನ್ನು ಗೆದ್ದು ಗ್ರೀಕ್ ಒಕ್ಕೂಟದಲ್ಲಿ ಮುಂದಿನ ಏಷ್ಯ ದಿಗ್ವಿಜಯ ಕಾರ್ಯದ ಮಹಾದಂಡನಾಯಕನಾಗಿ ಆಯ್ಕೆಗೊಂಡ. ಆದರೂ ಉತ್ತರ ಗ್ರೀಸಿನ ಇಲ್ಲಿರಿಯ ಮತ್ತು ಥ್ರೇಸ್ ಪ್ರದೇಶಗಳಲ್ಲಿ ಅಲೆಕ್ಸಾಂಡರನಿಗೆ ವಿರುದ್ಧವಾಗಿ ದಂಗೆಗಳಾದುವು. ಆದರೆ ಅಲೆಕ್ಸಾಂಡರ್ ತತ್‌ಕ್ಷಣವೇ ಆ ಪ್ರದೇಶಗಳಿಗೆ ಹೋಗಿ ದಂಗೆಗಳನ್ನು ಅಡಗಿಸಿದ. ಥ್ರೇಸ್‌ನಲ್ಲಿ ಯಾರೋ ಅಲೆಕ್ಸಾಂಡರನನ್ನು ಕೊಂದುಹಾಕಿದರೆಂಬ ಸುಳ್ಳು ಸಮಾಚಾರ ಥೀಬ್ಸ್ ನಗರದಲ್ಲಿ ಹರಡಿ ಥೀಬ್ಸನ್ನರು ಮ್ಯಾಸಿಡೋನಿಯದ ರಕ್ಷಣ ಸೈನ್ಯಗಳಿಗೆ ಮುತ್ತಿಗೆ ಹಾಕಿದರು. ಅಲೆಕ್ಸಾಂಡರ್ ಥೀಬ್ಸ್ ನಗರದ ಮೇಲೆ ಧಾಳಿಮಾಡಿ ಆ ನಗರವನ್ನು ನಾಶ ಮಾಡಿದ. ಹೆಂಗಸರು, ಮಕ್ಕಳು ಎಂದು ಲಕ್ಷಿಸದೆ ಸು.30,000 ಥೀಬ್ಸನ್ನರನ್ನು ಸೆರೆಹಿಡಿದು ಗುಲಾಮರನ್ನಾಗಿಸಿದ. ಗ್ರೀಕರ ಸೊಲ್ಲು ಅಡಗಿ ಅವರು ಅಲೆಕ್ಸಾಂಡರನನ್ನು ತಮ್ಮ ನಾಯಕನೆಂದು ಒಪ್ಪಿಕೊಳ್ಳಬೇಕಾಯಿತು. ಗ್ರೀಸ್ ದೇಶ ಅಲೆಕ್ಸಾಂಡರನ ವಶವಾಯಿತು.

ಅಲೆಕ್ಸಾಂಡರನ ದಂಡಯಾತ್ರೆ: ಗ್ರೀಸಿನಲ್ಲಿ ಸುಭದ್ರ ಆಡಳಿತವನ್ನು ಸ್ಥಾಪಿಸಿ, ತನ್ನ ಜೀವನದ ಮಹತ್ತ್ವಾಕಾಂಕ್ಷೆಯನ್ನು ಸಾಧಿಸಲು ಸಂಕಲ್ಪ ಮಾಡಿದ. ಮೊದಲನೆಯದಾಗಿ ಪರ್ಷಿಯನ್ನರು ಗ್ರೀಸಿನಲ್ಲಿ ತನಗೆ ಮಾಡಿದ ದೌರ್ಜನ್ಯಕ್ಕೋಸ್ಕರ ಸೇಡು ತೀರಿಸಿಕೊಳ್ಳುವುದು; ಎರಡನೆಯದಾಗಿ ಪ್ರಪಂಚವನ್ನೇ ಗೆದ್ದು ಎಲ್ಲೆಲ್ಲಿಯೂ ಗ್ರೀಕರ ನಾಗರಿಕತೆಯನ್ನು ಸ್ಥಾಪಿಸುವುದು–ಇವೇ ಇವನ ಮುಖ್ಯ ಉದ್ದೇಶಗಳಾಗಿದ್ದುವು. ಗ್ರೀಸಿನ ಆಡಳಿತವನ್ನು ತನ್ನ ಅನುಯಾಯಿಯಾದ ಅಂಟಿಪೇಟರ್‌ಗೆ ವಹಿಸಿ, ಸರಿಯಾದ ವ್ಯವಸ್ಥೆ ಮಾಡಿ, ತನ್ನ ಪ್ರಬಲವಾದ ಸೈನ್ಯದೊಡನೆ ಹೆಲೆಸ್ಪಾಂಟ್ ಪ್ರದೇಶಕ್ಕೆ ಹೋದ. ಮೊದಲು ಪುರಾತನವಾದ ಟ್ರಾಯ್ ನಗರವನ್ನು ಪ್ರವೇಶಿಸಿ ಚಿಲೆಸ್ಸಿ ಸಮಾಧಿಗೆ ತನ್ನ ಗೌರವ ಸಲ್ಲಿಸಿದ (ಪ್ರ.ಶ.ಪೂ.334). ಹೆಲೆಸ್ಪಾಂಟನ್ನು ದಾಟಿ ಏಷ್ಯ ಮೈನರಿಗೆ ಬಂದ. ಪರ್ಷಿಯ ದೇಶದ ರಾಜನಾದ ಡೇರಿಯಸ್ ಯುದ್ಧಕ್ಕೆ ಯಾವ ಸಿದ್ಧತೆಗಳನ್ನೂ ಮಾಡಿರಲಿಲ್ಲವಾಗಿ ಕಷ್ಟವಿಲ್ಲದೆ ಫ್ರಿಜಿಯ ಪ್ರದೇಶ ತಲುಪಿದ.

ಗ್ರಾನಿಕಸ್ ನದಿತೀರದಲ್ಲಿ ಪರ್ಷಿಯನ್ನರು ಅಲೆಕ್ಸಾಂಡರನ ಸೈನ್ಯವನ್ನು ಎದುರಿಸಿದರು. ಗ್ರೀಕರ ಸೈನ್ಯ ಸುವ್ಯವಸ್ಥಿತ ರೀತಿಯಲ್ಲಿ ಕಾದಾಡಿತು. ಪರ್ಷಿಯನ್ನರ ರಾವುತರನ್ನು ಚದುರಿಸಲಾಯಿತು. ಕೊನೆಗೆ ಪರ್ಷಿಯನ್ನರು ಸಂಪೂರ್ಣವಾಗಿ ಸೋತರು (ಪ್ರ.ಶ.ಪೂ.334). ಏಷ್ಯಮೈನರನ್ನು ಪ್ರವೇಶಿಸಲು ಅಲೆಕ್ಸಾಂಡರನಿಗೆ ಯಾವ ತೊಂದರೆಯೂ ಇರಲಿಲ್ಲ. ಆದರೂ ಮೊದಲು ಫಿನಿಷಿಯನ್ನರ ನೌಕೆಯನ್ನು ಸೋಲಿಸಬೇಕಾಗಿತ್ತು. ಸಾರ್ಡಿಸ್ ಮತ್ತು ಇಫಿಸಸ್ ನಗರವನ್ನು ಕಷ್ಟವಿಲ್ಲದೆ ಹಿಡಿದಿದ್ದಾಯಿತು. ಮಿಲೆಟಸ್ ನಗರವನ್ನು ದೌರ್ಜನ್ಯದಿಂದ ವಶಮಾಡಿಕೊಳ್ಳಬೇಕಾಯಿತು. ರೋಡ್ಸ್‌ನ ಮೆಮ್ನಾನ್ ಎಂಬಾತ ಪರ್ಷಿಯನ್ನರ ಪರವಾಗಿ ಹಾಲಿಕರ್ನಸೆಸ್‌ನಲ್ಲಿ ಯುದ್ಧಕ್ಕೆ ಸಿದ್ಧತೆ ಮಾಡಿಕೊಂಡಿದ್ದ.

ಡೇರಿಯಸ್ ಧೈರ್ಯಮಾಡಿ ಪ್ರಬಲವಾದ ಸೈನ್ಯದೊಡನೆ ಸಿಲೀಸಿಯ ಪ್ರದೇಶಕ್ಕೆ ಬಂದ. ಇಸ್ಸಸ್ ನಗರದಲ್ಲಿ ಯುದ್ಧವಾಯಿತು (ಪ್ರ.ಶ.ಪೂ.333). ಪರ್ಷಿಯನ್ನರ ಸೈನ್ಯ ಸಣ್ಣ ಮೈದಾನದಲ್ಲಿ ಚಲಿಸುವುದೇ ಕಷ್ಟವಾಯಿತು. ಡೇರಿಯಸ್ ಭಯಪಟ್ಟು ಓಡಿಹೋದ. ಪರ್ಷಿಯನ್ನರು ದಿಕ್ಕುತೋಚದೆ ಚದುರಿದರು. ಬಿಟ್ಟುಹೋದ ಐಶ್ವರ್ಯ ಗ್ರೀಕರ ವಶವಾಯಿತು. ಕೊನೆಗೆ ಡೇರಿಯಸ್ಸನ ತಾಯಿ, ಹೆಂಡತಿ, ಸಂಸಾರವೆಲ್ಲವೂ ಅಲೆಕ್ಸಾಂಡರನ ಆಶ್ರಯ ಪಡೆಯಬೇಕಾಯಿತು. ಅಲೆಕ್ಸಾಂಡರ್ ಅವರನ್ನು ಮರ್ಯಾದೆಯಿಂದ ರಕ್ಷಿಸಿದ. ಅಲೆಕ್ಸಾಂಡರ್ ಪರ್ಷಿಯ ದೇಶದ ಮೇಲೆ ನುಗ್ಗುವುದಕ್ಕೆ ಮುಂಚೆ ದಕ್ಷಿಣಕ್ಕೆ ತಿರುಗಿ ಸಿರಿಯ ಮತ್ತು ಈಜಿಪ್ಟಿಗೆ ಹೋದ. ಮಧ್ಯದಲ್ಲಿ ಸಿಕ್ಕಿದ ನಗರಗಳು ಅವನ ವಶವಾದವು. ಟೈರ್ ನಗರ ಸುಲಭವಾಗಿ ಸ್ವಾಧೀನವಾಗಲಿಲ್ಲ. ಅದು ಒಂದು ದ್ವೀಪ. ಸುತ್ತಲೂ ಭದ್ರವಾದ ಕೋಟೆಯಿತ್ತು. ಅಲೆಕ್ಸಾಂಡರ್ ದಡದಿಂದ ದ್ವೀಪಕ್ಕೆ ಸೇತುವೆಯನ್ನು ರಚಿಸಿ, ಕೋಟೆಗೆ ಲಗ್ಗೆ ಹಾಕಿ ವಶಪಡಿಸಿಕೊಂಡ. ಇವನ ಕೀರ್ತಿ ಹರಡಿತು. ಆದರೆ ಅಲ್ಲಿ ಇವನು ಮಾಡಿದ ಅಮಾನುಷ ಕೊಲೆಗಳೂ ಹಿಂಸೆಗಳೂ ಥೀಬ್ಸ್‌ನಲ್ಲಿ ಮಾಡಿದ ಅನ್ಯಾಯಗಳಿಗೆ ಯಾವ ರೀತಿಯಲ್ಲೂ

ಪರ್ಷಿಯನ್ ಯೋಧನನ್ನು ಹೊಡೆಯುತ್ತಿರುವುದು

ಕಡಿಮೆಯಾಗಿರಲಿಲ್ಲ. 8,000 ಜನರನ್ನು ಕೊಂದ. 30,000 ಜನರನ್ನು ಗುಲಾಮರನ್ನಾಗಿ ಮಾಡಿದ. ಒಡನೆ ನಗರ ಕಷ್ಟವಿಲ್ಲದೆ ಇವನ ವಶವಾಯಿತು. ಮುಂದಕ್ಕೆ ಪ್ಯಾಲಸ್ತೀನ್ ಮೇಲೆ ಧಾಳಿ ಮಾಡಿ ವಶಪಡಿಸಿಕೊಂಡ. ನಗರದ ರಾಜ್ಯಪಾಲನಾದ ಬೇಟಿಸ್ ಕ್ರೂರವಾದ ಶಿಕ್ಷೆಗೆ ಗುರಿಯಾದ. ಅವನನ್ನು ಹಗ್ಗಕ್ಕೆ ಕಟ್ಟಿ, ಸಾಯುವವರೆಗೂ ಎಳೆದಾಡಲಾಯಿತು.

ಗಾರ್ಡಿಯನ್ ಗಂಟು: ಇಪ್ಸಸ್ ಕದನಕ್ಕೆ ಮುಂಚೆ ಅಲೆಕ್ಸಾಂಡರ್ ಫ್ರಿಜಿಯ ದೇಶದ ಹಿಂದಿನ ರಾಜಧಾನಿಯಾದ ಗಾರ್ಡಿಯನ್ ನಗರಕ್ಕೆ ಬಂದ. ಈ ಸ್ಥಳದಲ್ಲಿ ಒಂದು ಪುರಾತನವಾದ ರಥವಿತ್ತು. ಇದನ್ನು ಫ್ರಿಜಿಯನ್ನರ ಮೊದಲನೆಯ ದೊರೆಯಾದ ಗಾರ್ಡಿಯಸ್ ಕಟ್ಟಿದನೆಂಬ ಐತಿಹ್ಯವಿತ್ತು. ರಥದ ಕಂಬಕ್ಕೆ ಕಟ್ಟಿದ್ದ ತೊಗಟೆಯ ಗಂಟನ್ನು ಯಾರು ಬಿಚ್ಚುವರೋ ಅವರು ಏಷ್ಯವನ್ನು ಆಳುವರು ಎಂದು ಭವಿಷ್ಯ ಹೇಳುತ್ತಿದ್ದರು. ಅಲೆಕ್ಸಾಂಡರ್ ಕಷ್ಟವಿಲ್ಲದೆ ತನ್ನ ಕತ್ತಿಯಿಂದ ಗಾರ್ಡಿಯನ್ ಗಂಟನ್ನು ಕತ್ತರಿಸಿದ. ಆಕಸ್ಮಿಕವಾಗಿ ಉಂಟಾದ ಸಿಡಿಲು ಜ್ಯೂಸ್ ದೇವತೆಯ ಒಪ್ಪಿಗೆಯ ಸಂಕೇತ ಎಂದು ನುಡಿಯಲಾಯಿತು. ಮುಂದಕ್ಕೆ ಅಲೆಕ್ಸಾಂಡರ್ ಟಾರಸ್ ಗುಡ್ಡದಿಂದ ಸಿಲೀಸಿಯ ಪ್ರದೇಶಕ್ಕೆ ಹೋದ. ಪರ್ಷಿಯನ್ನರು ಯುದ್ಧಮಾಡದೆ ಹಿಮ್ಮೆಟ್ಟಿದರು. ಟಾರ್ಸಸ್‌ನಗರ ವಶವಾಯಿತು.

ಈಜಿಪ್ಟಿನ ದಂಡಯಾತ್ರೆ: ಟೈರ್ ಮುತ್ತಿಗೆಯ ಅನಂತರ ಅಲೆಕ್ಸಾಂಡರ್ ಈಜಿಪ್ಟನ್ನು ಸೇರಿದ. ಈಜಿಪ್ಟ್ ಎರಡು ಶತಮಾನಗಳಿಂದ ಪರ್ಷಿಯ ದೇಶಕ್ಕೆ ಅಡಿಯಾಳಾಗಿ ನೊಂದಿತ್ತು. ಅಲೆಕ್ಸಾಂಡರ್‌ನನ್ನು ಜನ ಹರ್ಷದಿಂದ ಗೌರವಿಸಿದರು. ಇವನನ್ನು ತಮ್ಮ ರಾಜನೆಂದು ಭಾವಿಸಿ ಹೂಮಾಲೆ ಹಾಕಿದರು. ನಾಲ್ಕು ತಿಂಗಳುಗಳ ಕಾಲ ಅಲ್ಲಿದ್ದು ಈಜಿಪ್ಟಿಯನ್ನರು ತೋರಿದ ಆದರ, ಸತ್ಕಾರ, ಪೂಜೆಗಳಿಂದ ಅಲೆಕ್ಸಾಂಡರ್ ಸಂತುಷ್ಟನಾದ. ದೈವಾಂಶ ಸಂಭೂತನೆಂದು ಹೆಮ್ಮೆಪಟ್ಟ. ನೈಲ್ ನದಿಯ ಪಶ್ಚಿಮಕ್ಕೆ ಹೋಗಿ ಅಲೆಕ್ಸಾಂಡ್ರಿಯ ನಗರವನ್ನು ಸ್ಥಾಪಿಸಿದ. ಮುಂದೆ ಅದು ಅನೇಕ ಶತಮಾನಗಳವರೆಗೂ ಗ್ರೀಕರ ವಾಣಿಜ್ಯ ಮತ್ತು ನಾಗರಿಕತೆಯ ಕೇಂದ್ರವಾಯಿತು. ಮರುಭೂಮಿಯ ಹಸುರು ನೆಲದಲ್ಲಿದ್ದ ಅಮನ್ ದೇವಾಲಯವನ್ನು ಭೇಟಿಮಾಡಿದ. ಈಜಿಪ್ಟಿನವರು ಇವನ ದೈವಭಕ್ತಿಯಿಂದ ಮುಗ್ಧರಾಗಿ, ವಿಶೇಷ ಗೌರವವನ್ನು ತೋರಿಸಿದರು. ಈಜಿಪ್ಟ್ ದಂಡಯಾತ್ರೆಯಾದ ಮೇಲೆ ಪ್ರ.ಶ.ಪೂ.331ರಲ್ಲಿ ಟೈರ್‌ಗೆ ಬಂದ. ಮೆಸಪೊಟೇಮಿಯ ಮರುಭೂಮಿಯ ಉಷ್ಣತೆಯನ್ನು ತಪ್ಪಿಸಿಕೊಳ್ಳಲು ಥಾಪ್ಸಕಸ್ ನಗರದಲ್ಲಿ ಯೂಫ್ರೆಟಿಸ್ ನದಿಯನ್ನೂ ಅಲ್ಲಿಂದ ಮುಂದೆ ಟೈಗ್ರಿಸ್ ನದಿಯನ್ನೂ ದಾಟಿ, ಎಡದಡದಲ್ಲಿದ್ದ ಗಾಗ್‌ಮೆಲ ಪಟ್ಟಣವನ್ನು ಸೇರಿದ.

3ನೆಯ ಡೇರಿಯಸ್ ಸು.1 ಕೋಟಿ ಕಾಲಾಳುಗಳೂ 40,000 ರಾವುತರನ್ನು ಕಲೆಹಾಕಿದನಾದರೂ ಸೈನ್ಯದಲ್ಲಿ ಏನೇನೂ ಶಿಸ್ತಿರಲಿಲ್ಲ. ಅಲೆಕ್ಸಾಂಡರ್ ತನ್ನ ರಾವುತರನ್ನು ಪರ್ಷಿಯನ್ನರ ಮೇಲೆ ನುಗ್ಗಿಸಿ ಚದುರಿಸಿದ. ಅಲೆಗ್ಸಾಂಡರನ ಯುದ್ಧತಂತ್ರದಿಂದ ಗಾಗಮೇಲ

ಕದನ (ಪ್ರ.ಶ.ಪೂ.331) ಪ್ರಸಿದ್ಧವಾಗಿದೆ. ಇದನ್ನು ಅರ್ಬೆಲ ಯುದ್ಧವೆಂದೂ ಕರೆಯುವುದುಂಟು. ಮುನ್ನಡೆದು ಬರುತ್ತಿದ್ದ ಅಲೆಗ್ಸಾಂಡರ್‌ನನ್ನು ಎದುರಿಸಿ ಯುದ್ಧಮಾಡುವ ಉದ್ದೇಶದಿಂದ ಪ್ರಾಚೀನ ನಿನೆವೆಯ ಹತ್ತಿರದ ಗಾಗಮೇಲ ಬಯಲಿನಲ್ಲಿ ಡೇರಿಯಸ್ ತನ್ನ ದೊಡ್ಡ ಸೈನ್ಯದೊಡನೆ ಸಜ್ಜಾದ. ಅಲೆಗ್ಸಾಂಡರ್ ತನ್ನ ಸೈನ್ಯಕ್ಕೆ 4 ದಿನಗಳ ಬಿಡುವು ಕೊಟ್ಟು ಯುದ್ಧಸ್ಥಳವನ್ನು ಪರಿಶೀಲಿಸಿದ. ರಾತ್ರಿಯ ವೇಳೆ ಯುದ್ಧ ಆರಂಭಿಸಬೇಕೆಂದು ಅಲೆಗ್ಸಾಂಡರನಿಗೆ ಸಲಹೆ ಮಾಡಿದಾಗ, ನಾನು ವಿಜಯವನ್ನು ಕದಿಯುವುದಿಲ್ಲ ಎಂದು ಹೇಳಿದ. ರಾತ್ರಿವೇಳೆಗಿಂತ ಹಗಲು ಹೊತ್ತು ಪರ್ಷಿಯನ್ನರ ಮೇಲೆ ವಿಜಯ ಪಡೆಯುವುದರಿಂದ ಇಡೀ ಏಷ್ಯದಲ್ಲಿ ತನ್ನ ಕೀರ್ತಿ ಸ್ಥಾಪನೆಗೆ ಅನುಕೂಲವಾಗುವುದೆಂದು ಅರಿತು ಡೇರಿಯಸ್‌ನ ಮೇಲೆ ಯುದ್ಧ ಪ್ರಾರಂಭಿಸಿದ. ಡೇರಿಯಸ್‌ನೇ ಮೊದಲು ರಣರಂಗದಿಂದ ಪಲಾಯನ ಮಾಡಿದ್ದರಿಂದ ವಿಜಯ ಅಲೆಗ್ಸಾಂಡರನದಾಯಿತು. ಡೇರಿಯಸ್ ಮೀಡಿಯ ರಾಜಧಾನಿಯಾದ ಎಕ್ಬಟಾನ ನಗರದಲ್ಲಿ ಬಚ್ಚಿಟ್ಟುಕೊಂಡ. ಪರ್ಷಿಯನ್ನರ ಸಾಮ್ರಾಜ್ಯ ನುಚ್ಚುನೂರಾಯಿತು.

ವಿಜಯಿಯಾದ ಅಲೆಕ್ಸಾಂಡರ್ ಬ್ಯಾಬಿಲೋನಿಯವನ್ನು ಆಕ್ರಮಿಸಿದ. ಪರ್ಷಿಯ ದೇಶದ ರಾಜಧಾನಿಯಾದ ಸೂಸ ನಗರವನ್ನು ವಶಪಡಿಸಿಕೊಂಡ. ಅಲ್ಲಿ ಹೆಚ್ಚು ಕೊಳ್ಳೆ ಸಿಕ್ಕಿತು. ಅದರಲ್ಲಿ 50,000 ಟಾಲೆಂಟ್ (12,000,000 ಪೌಂಡು) ನಗದು ಸೇರಿತ್ತು. ಪರ್ಷಿಯ ದೇಶದ ಸೇನಾನಾಯಕನಾದ ಏರಿಯೊಬರ್ಜನಿಸ್ ಅಲೆಕ್ಸಾಂಡರ್‌ನನ್ನು ವಿರೋಧಿಸಿದ. ಅಲೆಕ್ಸಾಂಡರ್ ಅವನ ಸೈನ್ಯವನ್ನು ಚದರಿಸಿ ಪರ್ಸಿಪೋಲಿಸ್ ಎಂಬ ಸುಂದರವಾದ ನಗರವನ್ನು ಗೆದ್ದುಕೊಂಡ. ಇಲ್ಲಿಯೂ ಅಪರಿಮಿತವಾದ ಕೊಳ್ಳೆ ಸಿಕ್ಕಿತು. ಇಲ್ಲಿ ಸರ್ಕ್ಸಸನ ಅರಮನೆಯನ್ನು ಸುಡಲಾಯಿತು. ಅಲೆಕ್ಸಾಂಡರ್ ಈ ಅನಾಗರಿಕ ಕೃತ್ಯವನ್ನು ಕುಡಿತದ ಅಮಲಿನಲ್ಲಿದ್ದಾಗ ಕೇವಲ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ಮಾಡಿದನೆಂಬ ಪ್ರತೀತಿ ಇದೆ. ಸೈನ್ಯದವರು ಮಾಡಿದ ಸುಲಿಗೆ, ಅಮಾನುಷ ಕೃತ್ಯಗಳಿಗೆ ಮಿತಿಯಿರಲಿಲ್ಲ.

ಅಲೆಕ್ಸಾಂಡರ್ ಡೇರಿಯಸ್ಸನನ್ನು ಬೆನ್ನಟ್ಟಿ ಹಿಡಿಯಬೇಕೆಂಬ ಸಂಕಲ್ಪ ಮಾಡಿ ಎಕ್ಬಟಾನ ನಗರಕ್ಕೆ ಹೋದ. ಅಲ್ಲಿಂದ ಹಕ್ಕಿ ಹಾರಿ ಹೋಯಿತು ಎಂಬುದಾಗಿ ತಿಳಿಯಿತು. ಮುಂದಕ್ಕೆ ವೈರಿಯನ್ನು ಬೆನ್ನಟ್ಟಿ ಪೂರ್ವದ ಕಡೆಗೆ ಹೋದ. ಬ್ಯಾಕ್ಟ್ರಿಯ ಪ್ರದೇಶದ ಬೆಸ್ಸಸ್ ಡೇರಿಯಸ್ಸನನ್ನು ಸೆರೆಹಿಡಿದಿರುವನೆಂದು ತಿಳಿಯಿತು. ಅಲೆಕ್ಸಾಂಡರ್ ತತ್‌ಕ್ಷಣವೇ ಬ್ಯಾಕ್ಟ್ರಿಯದ ಕಡೆ ಧಾವಿಸಿ, ಬೆಸ್ಸಸ್‌ನನ್ನೂ ಆತನ ಸ್ನೇಹಿತರನ್ನೂ ಹಿಡಿಯುವುದರಲ್ಲಿದ್ದ. ಆದರೆ ಅವರು ತಮ್ಮ ಕುದುರೆಗಳನ್ನು ಹತ್ತಿ ತಪ್ಪಿಸಿಕೊಂಡರು. ಡೇರಿಯಸ್ ಓಡಿಹೋಗಲು ಒಪ್ಪದಿರಲು ಬೆಸ್ಸಸ್ ಅವನನ್ನು ಕೊಂದುಹಾಕಿದ. ಅಲೆಕ್ಸಾಂಡರನಿಗೆ ಈ ದುರಂತಸುದ್ದಿ ತಿಳಿಯಿತು. ಕನಿಕರದಿಂದ ಡೇರಿಯಸ್ಸನ ಶವವನ್ನು ಮರ್ಯಾದೆಯಿಂದ ಪರ್ಸಪಲಿಸ್ ನಗರದಲ್ಲಿ ಸಂಸ್ಕಾರ ಮಾಡಲು ವ್ಯವಸ್ಥೆಮಾಡಿದ.

ಅಲೆಕ್ಸಾಂಡರ್ ಬ್ಯಾಕ್ಟ್ರಿಯ (ಉತ್ತರ ಆಫ್ಘಾನಿಸ್ತಾನ) ದೇಶದ ಮೇಲೆ ದಂಡೆತ್ತಿ ಹೋದ. ಬೆಸ್ಸಸ್ ತಾನೇ ಪರ್ಷಿಯ ದೇಶದ ರಾಜನೆಂದು ಘೋಷಿಸಿ ಅರ್ಟಗ್ಸರ್ಕ್ಸಸ್ ಎಂಬ ಬಿರುದನ್ನು ಪಡೆದ. ಅಲೆಕ್ಸಾಂಡರ್ ಈ ದಂಡಯಾತ್ರೆಯಲ್ಲಿ ಅದ್ಭುತ ಸಾಹಸ ತೋರಿಸಿದ. ಅನೇಕ ದಟ್ಟವಾದ ಗುಡ್ಡಗಾಡುಗಳನ್ನು ದಾಟಬೇಕಾಯಿತು. ಹಿರತ್ ಮತ್ತು ಕಂದಹಾರ್ ಬಳಿ ಹೊಸ ಅಲೆಕ್ಸಾಂಡ್ರಿಯ ಪಟ್ಟಣವನ್ನು ನಿರ್ಮಿಸಿದ. ಚಳಿಗಾಲದಲ್ಲಿ ಹಿಂದುಕುಷ್ ಪರ್ವತವನ್ನು ದಾಟಿದ. ಆಕ್ಸಸ್ ನದಿಯನ್ನು ದಾಟುವಾಗ ಹರಿಗೋಲಿನ ಮೇಲೆ ತೇಲಿಕೊಂಡುಹೋದ. ಕೊನೆಗೆ ಬೆಸ್ಸಸ್‌ನನ್ನು ಹಿಡಿದು, ಅಂಗವಿಹೀನನನ್ನಾಗಿ ಮಾಡಿ, ಅವನ ರಾಜಧಾನಿಯಲ್ಲೇ ಶೂಲಕ್ಕೇರಿಸಿದ. ಈ ದಂಡಯಾತ್ರೆಯಲ್ಲಿ ಮತ್ತೊಂದು ಅಮಾನುಷ ಕೃತ್ಯ ನಡೆಯಿತು. ತನ್ನ ರಾವುತರ ನಾಯಕನಾದ ಪರ್ಮಿನಿಯೋವಿನ ಮಗನಾದ ಫಿಲೋಟಸ್ ತನ್ನನ್ನು ಕೊಲೆಮಾಡಲು ಒಳಸಂಚು ಮಾಡಿದನೆಂಬ ಗುಮಾನಿ ಬರಲು, ಸರಿಯಾಗಿ ವಿಚಾರಿಸದೆ ಅಲೆಕ್ಸಾಂಡರ್ ಅವನನ್ನು ಕೊಂದುದಲ್ಲದೆ ಎಕ್ಬಟಾನದಲ್ಲಿದ್ದ ಅವನ ತಂದೆ ಪರ್ಮಿಯೋನನ್ನೂ ಕೊಲ್ಲಿಸಿದ.

ಬ್ಯಾಕ್ಟ್ರಿಯದಿಂದ ಅಲೆಕ್ಸಾಂಡರ್ ಸೊಗ್ಡಿಯಾನದ (ತುರ್ಕಿಸ್ತಾನದ) ಮೇಲೆ ನುಗ್ಗಿದ. ಈ ಪ್ರಾಂತ ಆಕ್ಸಸ್ ನದಿಯ ಆಚೆ ಪರ್ಷಿಯನ್ನರಿಗೆ ಸೇರಿತ್ತು. ಇಲ್ಲಿನ ಸಿಥಿಯನ್ನರು ಭಯಂಕರವಾಗಿ ಕಾದಾಡಿದರು. ಆದರೆ ಅಲೆಕ್ಸಾಂಡರ್ ಅವರನ್ನು ಜಯಿಸಿ ಜಕ್ಸಾರ್ಟಿಸ್ ನದಿಯ ತೀರವನ್ನು ತನ್ನ ಸಾಮ್ರಾಜ್ಯದ ಎಲ್ಲೆಯಾಗಿ ಗೊತ್ತು ಮಾಡಿದ. ಈ ಪ್ರದೇಶದಿಂದಲೇ ಮಂಗೋಲರ ತಂಡಗಳು ಪಾಶ್ಚಾತ್ಯ ದೇಶಗಳ ದಂಡಯಾತ್ರೆಯನ್ನು ಕೈಗೊಂಡವು.

ದಂಗೆಯನ್ನಡಗಿಸಲು ಅಲೆಕ್ಸಾಂಡರ್ ಸಮರ್‌ಖಂಡ್‌ನಲ್ಲಿದ್ದಾಗ ಒಂದು ದುರಂತ ನಡೆಯಿತು. ಅಲೆಕ್ಸಾಂಡರನ ನಡತೆ, ಪೌರ್ವಾತ್ಯ ನಡೆನುಡಿ ಬ್ಯಾಕ್ಟ್ರಿಯ ರಾಜಕುಮಾರಿ ರಾಕ್ಸಾನಳನ್ನು ಮದುವೆಯಾದದ್ದು, ಏಷ್ಯದವರನ್ನು ತನ್ನ ಸೈನ್ಯದಲ್ಲಿ ಸೇರಿಸಿದ್ದುದು ಇವನ ಸೈನಿಕರಿಗೆ ಸರಿಬೀಳಲಿಲ್ಲ. ಒಂದು ರಾತ್ರಿ ನಾಯಕ ಕುಡಿತದ ಅಮಲಿನಲ್ಲಿದ್ದಾಗ ಭಟ್ಟಂಗಿಗಳು ಹೊಗಳುತ್ತಿದ್ದರು. ಇವನ ಪ್ರಿಯ ಮಿತ್ರನಾದ ಕ್ಲೀಟಸ್‌ಗೆ ಈ ಹೊಗಳಿಕೆ ಹಿಡಿಸಲಿಲ್ಲ. ದಿಗ್ವಿಜಯಕ್ಕೆ ಫಿಲಿಪ್‌ನ ಸೈನ್ಯವೇ ಕಾರಣವೆಂದೂ ಗ್ರಾನಿಕಸ್ ಕದನದಲ್ಲಿ ತಾನು ಅಲೆಕ್ಸಾಂಡರನನ್ನು ಬದುಕಿಸಿದನೆಂದೂ ಬಹಿರಂಗವಾಗಿ ಘೋಷಿಸಿದ. ಹೀಗೆ ಹಂಗಿಸಿದ್ದರಿಂದ ಅಲೆಕ್ಸಾಂಡರನಿಗೆ ನಾಚಿಕೆಯಾಗಿ, ರೋಷದಿಂದ ಕ್ಲೀಟಸ್‌ನನ್ನು ತತ್‌ಕ್ಷಣವೇ ತನ್ನ ಭಲ್ಲೆಯಿಂದ ತಿವಿದು ಕೊಂದುಹಾಕಿದ. ಕುಡಿತದ ಅಮಲು ಕಳೆದ ಮೇಲೆ ಪಶ್ಚಾತ್ತಾಪಪಟ್ಟು, ಮೂರು ದಿನಗಳವರೆಗೂ ಊಟ ನಿದ್ರೆ ಇಲ್ಲದೆ ದುಃಖಿಸಿದ.

ಅಲೆಕ್ಸಾಂಡರ್ ಪ್ರ.ಶ.ಪೂ.327ರಲ್ಲಿ ಹಿಂದುಸ್ಥಾನದ ಮೇಲೆ ದಂಡಯಾತ್ರೆ ಪ್ರಾರಂಭಿಸಿದ. ಹಿಂದುಕುಷ್ ಪರ್ವತವನ್ನು ದಾಟಿ, ಕಾಬೂಲಿಗೆ ಬಂದ. ತಕ್ಕ ಸೈನ್ಯ ವ್ಯವಸ್ಥೆಯನ್ನು ಮಾಡಿ, ಕಾಬೂಲಿನಿಂದ ಖೈಬರ್ ಕಣಿವೆಗೆ ಬಂದು, ವಾಯವ್ಯದಲ್ಲಿ ಗುಡ್ಡಗಾಡಿನ ಜನರ ಮೇಲೆ ನುಗ್ಗಿದ. ಸಿಂಧೂನದಿಯನ್ನು ದಾಟಿದಾಗ ಸಮರ್ಥನಾದ ಪುರೂರವಸ್‌ನ ಮೇಲೆ ಯುದ್ಧ ಮಾಡಬೇಕಾಯಿತು. ಜೀಲಂ ನದಿಯ ತೀರದಲ್ಲಿ ಪುರೂರವಸ್ ಪ್ರಬಲವಾದ ಸೈನ್ಯವನ್ನೂ ಆನೆಗಳನ್ನೂ ಸಿದ್ಧಪಡಿಸಿದ್ದ. ಅಲೆಕ್ಸಾಂಡರನ ಕುದುರೆಗಳು ಆನೆಗಳನ್ನು ನೋಡಿ ಬೆದರಿದವು. ಹಿಂದುಸ್ಥಾನವನ್ನು ಜಯಿಸುವುದು ಕಷ್ಟವೆಂದು ಮನದಟ್ಟಾಯಿತು. ಸೈನಿಕರಿಗೆ ಆನೆಗಳ ಹೊಡೆತವನ್ನು ತಪ್ಪಿಸಿಕೊಳ್ಳುವುದೇ ಬಹಳ ಕಷ್ಟವಾಯಿತು. ಚತುರನಾದ ಅಲೆಕ್ಸಾಂಡರ್ ಪಕ್ಕದಿಂದ ಆನೆಗಳ ಮೇಲೆ ಧಾಳಿ ಮಾಡಿ ಅವುಗಳನ್ನು ಗಾಬರಿಪಡಿಸಿದ. ಇದರಿಂದ ಅವು ಚೆಲ್ಲಾಪಿಲ್ಲಿಯಾಗಿ ಓಡಿಹೋದವು. ಪುರೂರವಸ್ ಶತ್ರುಗಳ ವಶನಾದ. ತನ್ನನ್ನು ರಾಜನನ್ನಾಗಿ ಕಾಣು ಎಂದು ಪುರೂರವಸ್ ಕೇಳಿಕೊಂಡ. ಆತ ತೋರಿಸಿದ ಧೈರ್ಯ ಸಾಹಸಗಳನ್ನು ಕಂಡು ಮೆಚ್ಚಿ ಅಲೆಕ್ಸಾಂಡರ್ ಅವನ ದೇಶವನ್ನು ಹಿಂದಿರುಗಿ ಅವನಿಗೇ ಕೊಟ್ಟ. ಆದರೆ ಈ ವಿಷಯದಲ್ಲಿ 1894–1924 ಅವಧಿಯಲ್ಲಿ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿ ಮೇಲ್ವಿಚಾರಕರಾಗಿದ್ದ ಇ.ಎ.ಡಬ್ಲ್ಯೂ.ಬ್ಯಾಡ್ಜ್ ಇಥಿಯೋಪಿಯ ಗ್ರಂಥಗಳಿಗೆ ಸೇರಿಸಿದ ತಮ್ಮ ದಿ ಲೈಫ್ ಆ್ಯಂಡ್ ಎಕ್ಸ್‌ಪ್ಲಾಯಿಟ್ಸ್ ಆಫ್ ಅಲೆಕ್ಸಾಂಡರ್ ಎಂಬ ನಿರೂಪಣೆಯಲ್ಲಿ ಹೀಗೆ ಬರೆದಿದ್ದಾರೆ: ಜೀಲಂ ನದಿದಂಡೆಯಲ್ಲಿ ಇವರಿಬ್ಬರಲ್ಲಿ ನಡೆದ ಯುದ್ಧದಲ್ಲಿ ಅಲೆಗ್ಸಾಂಡರನ ಸೈನ್ಯ ವಿಪರೀತ ನಷ್ಟವನ್ನು ಅನುಭವಿಸುತ್ತಿದ್ದುದನ್ನು ಕಂಡು ಇವನ ಸೈನಿಕರು ತಮ್ಮ ದೇಶಬಾಂಧವರನ್ನು ಕಳೆದುಕೊಂಡ ಅತೀವ ದುಃಖದಲ್ಲಿ ತಮ್ಮ ಆಯುಧೋಪಕರಣಗಳನ್ನು ತ್ಯಜಿಸಿ ಶರಣಾಗತರಾಗಲು ಬಯಸಿದರು. ಅಲೆಕ್ಸಾಂಡರನು ಕೂಡ ತಮ್ಮ ಪೂರ್ಣ ನಾಶ ನಿಶ್ಚಿತವೆಂಬುದನ್ನು ಮನಗಂಡು ಪುರೂರವನಲ್ಲಿ ಕ್ಷಮೆಕೇಳುತ್ತಾ ಅವನ ಶೌರ್ಯ, ಸಾಹಸದ ಅರಿವಾಗಿದೆಯೆಂದು, ತನ್ನಿಂದ ಇನ್ನು ತನ್ನ ಸೈನ್ಯ ನಾಶವಾಗುವುದನ್ನು ನೋಡಲಾಗದೆಂದು, ಇವರನ್ನು ಮೃತ್ಯುವಿನ ದವಡೆಗೆ ತಳ್ಳಿದ ತಾನೆ ಅಪರಾಧಿಯೆಂದು ಒಬ್ಬ ಒಳ್ಳೆಯ ರಾಜನಿಗೆ ತನ್ನ ಸೈನ್ಯವನ್ನು ಹೀಗೆ ಸಾವಿಗೀಡುಮಾಡುವುದು ತಕ್ಕುದಲ್ಲವೆಂದು ಆದ್ದರಿಂದ ಯುದ್ಧವನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಂಡನೆಂದು ನಿರೂಪಿಸಿದ್ದಾರೆ. ಅನಂತರ ಪೂರ್ವಾಭಿಮುಖವಾಗಿ ನಂದರ ರಾಜ್ಯವನ್ನು ಗೆಲ್ಲಬೇಕೆಂದು ಹೊರಟ. ಆದರೆ ಸಟ್ಲೆಜ್ ನದಿಯ ತೀರದಲ್ಲಿ ಇವನ ಸೈನಿಕರು (ಬಹುಶಃ ಪ್ರಥಮ ಬಾರಿ ಅನುಭವಿಸಿದ ತಮ್ಮ ದುರಂತದ ಅನುಭವದಿಂದಲೊ ಏನೊ) ಮುಂದಕ್ಕೆ ಹೋಗಲು ಅವಕಾಶ ಕೊಡದೆ ದಂಗೆಯೆದ್ದರು. ಅವರು ಜೈತ್ರಯಾತ್ರೆಗಳಿಂದ ದಣಿದಿದ್ದರು. ಅದರಲ್ಲೂ ನಂದರ ಸೈನ್ಯಶಕ್ತಿ ಅದ್ಭುತವಾದುದೆಂದು ತಿಳಿದಮೇಲೆ, ಏನು ಮಾಡಿದರೂ ಮಗಧ ರಾಜ್ಯದ ಮೇಲೆ ಯುದ್ಧ ಮಾಡುವುದಿಲ್ಲವೆಂದು ಸಂಕಲ್ಪಿಸಿ ಹಿಂದಕ್ಕೆ ಹೋಗಬೇಕೆಂದು ಹಟಮಾಡಿದರು. ಕೊನೆಗೆ ಅಲೆಕ್ಸಾಂಡರ್ ಅವರ ಕೋರಿಕೆಗೆ ಒಪ್ಪಬೇಕಾಯಿತು. ಸಿಂಧೂನದಿಯನ್ನು ದಾಟಿ ಪ್ರ.ಶ.ಪೂ.325ರಲ್ಲಿ ಸೂಸ ಪಟ್ಟಣವನ್ನು ಸೇರಿದ. ಅಲ್ಲಿಂದ ಬ್ಯಾಬಿಲಾನ್ ನಗರಕ್ಕೆ ಹೋದಾಗ ಅಕಸ್ಮಾತ್ತಾಗಿ ಜ್ವರ ಬಂದು ಕೇವಲ 32ನೆಯ ವಯಸ್ಸಿನಲ್ಲಿ ನಿಧನನಾದ (ಪ್ರ.ಶ.ಪೂ.323).

ಅಲೆಕ್ಸಾಂಡರನ ವಿಶಾಲ ಸಾಮ್ರಾಜ್ಯ ಗ್ರೀಸಿನಿಂದ ಪಂಜಾಬಿನವರೆಗೂ ವಿಸ್ತರಿಸಿತ್ತು. ಇವನ ಕೀರ್ತಿ ಎಲ್ಲೆಲ್ಲಿಯೂ ಹರಡಿತ್ತು. ಕೇವಲ 12 ವರ್ಷಗಳಲ್ಲಿ ಇವನು ಇಡೀ ಒಂದು ಜೀವಮಾನದ ಸಾಧನೆಯನ್ನು ಸಾಧಿಸಿದ್ದ. ಇವನ ರಾಜನೀತಿ ಕುಶಲತೆಯ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಇವನು ಮಾಡಿದ ರಾಜಕೀಯ ಸಾಧನೆ ಅದ್ಭುತವಾದುದೆಂದು ಹೇಳಬೇಕು. ಮುಖ್ಯವಾಗಿ ಪಾಶ್ಚಾತ್ಯ ಪೌರ್ವಾತ್ಯ ನಾಗರಿಕತೆಗಳನ್ನು ಒಂದುಗೂಡಿಸಬೇಕೆಂಬುದು ಇವನ ಅಭಿಲಾಷೆಯಾಗಿತ್ತು. ಇವನ ವಿಷಯವಾಗಿ ನಡೆದದ್ದನ್ನು ಹೇಳಿದರೂ ಕಥೆಯಂತೆಯೇ ತೋರುತ್ತದೆ. ಇವನ ಜೀವನ ಅಷ್ಟು ಆಶ್ಚರ್ಯಕರವಾದದ್ದು. ಸೈನಿಕರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿದ. ಹ್ಯಾನಿಬಾಲ್, ಸೀಸರ್, ನೆಪೋಲಿಯನ್‌ರ ಹಾಗೆ ಯುದ್ಧದಲ್ಲಿ ಕೀರ್ತಿ ಪಡೆದ. ಆದರೆ ಇವನ ಶಾಶ್ವತವಾದ ಕೀರ್ತಿ ಪೂರ್ವ ಪಶ್ಚಿಮ ಭೇದಗಳನ್ನು ತೊಡೆದುಹಾಕಿ, ಈ ಪ್ರದೇಶಗಳ ಜನರ ನಡುವೆ ವಿವಾಹವಾಗುವುದು, ಏಷ್ಯದವರನ್ನು ತನ್ನ ಸೈನ್ಯದಲ್ಲಿ ಸೇರಿಸುವುದು, ಅಲೆಕ್ಸಾಂಡ್ರಿಯ ಹೆಸರಿನ ನವೀನ ನಗರಗಳನ್ನು ಸ್ಥಾಪಿಸುವುದು–ಇವುಗಳ ಮೂಲಕ ಗ್ರೀಕರ ನಾಗರಿಕತೆಯನ್ನು ಭದ್ರವಾಗಿ ಸ್ಥಾಪಿಸಿ ಹರಡುವುದೇ ಇವನ ಸಂಕಲ್ಪವಾಗಿತ್ತು. ಇವನ ಅಕಾಲಮೃತ್ಯು ಶಾಶ್ವತವಾದ ಕಾರ್ಯಸಾಧನೆಗೆ ಅಡಚಣೆಯನ್ನುಂಟುಮಾಡಿತಾದರೂ ಇವನನ್ನು ಮಹಾಶಯನೆಂದು ಹೇಳಲು ಯಾವ ಸಂಶಯವೂ ಇಲ್ಲ. ಪ್ರಪಂಚದ ಚರಿತ್ರೆಯಲ್ಲಿ, ಪೂರ್ವ ಪಶ್ಚಿಮ ದಿಕ್ಕುಗಳ ಸಂಪರ್ಕದ ಇತಿಹಾಸದಲ್ಲಿ ಇವನು ಅಚ್ಚಳಿಯದ ಕೀರ್ತಿ ಗಳಿಸಿದ್ದಾನೆ.

ಅಲೆಕ್ಸಾಂಡರನ ಆಶೆ ಬಹುಮಟ್ಟಿಗೆ ನೆರವೇರಿತೆಂದೇ ಹೇಳಬೇಕು. ಕ್ರಮೇಣ ಪೂರ್ವ ಪಶ್ಚಿಮ ರಾಷ್ಟ್ರಗಳ ಮಧ್ಯದ ಸಂಪರ್ಕ ಬೆಳೆದು ನಿಕಟವಾಯಿತು. ವ್ಯಾಪಾರ ಅಭಿವೃದ್ಧಿಯಾದುದಲ್ಲದೆ ಕಾಲಕ್ರಮೇಣ ಗ್ರೀಕ್ ಮತ್ತು ಮಗಧರಾಜ್ಯಗಳ ನಡುವೆ ರಾಜತಾಂತ್ರಿಕ ಸಂಬಂಧಗಳು ಏರ್ಪಟ್ಟವು. ಎರಡೂ ಸಂಸ್ಕೃತಿಗಳು ಪರಸ್ಪರ ಬೆರೆತು ಬೆಳೆದವು. ಬಹುಕಾಲದವರೆಗೆ ಭಾರತದ ನಾಣ್ಯ ಪದ್ಧತಿಯ ಮೇಲೆ ಗ್ರೀಕ್ ಪ್ರಭಾವ ಕಾಣಬರುತ್ತಿತ್ತೆಂದು ವಿದ್ವಾಂಸರ ಮತ. ಹಿಂದು ದರ್ಶನ, ತತ್ತ್ವಶಾಸ್ತ್ರಗಳೂ ಗ್ರೀಕ್ ಜನರ ಹೃದಯವನ್ನು ಗೆದ್ದವು. ಅಲೆಕ್ಸಾಂಡರನ ಜೊತೆ

ಆಗಮಿಸಿದ್ದ ಗ್ರೀಕ್ ವಿದ್ವಾಂಸರು ಭಾರತದ ಬಗ್ಗೆ ಬರೆದಿದ್ದಾರೆ. ಒಟ್ಟಿನಲ್ಲಿ ಅಲೆಕ್ಸಾಂಡರನ ದಂಡಯಾತ್ರೆ ಕೇವಲ ರಾಜ್ಯಾಕ್ರಮಣದಲ್ಲೇ ಪರ್ಯವಸಾನವಾಗಲಿಲ್ಲ. ವೈಮನಸ್ಸು ದ್ವೇಷಗಳಲ್ಲಿ ಮುಕ್ತಾಯಗೊಳ್ಳದೆ ಪೂರ್ವಪಶ್ಚಿಮಗಳ ನಂಟಸ್ತಿಕೆಯನ್ನು ಹೆಚ್ಚಿಸಿತು. (ಬಿ.ಕೆ.ಜ.; ಜಿ.ಆರ್.ಆರ್.)

**ಅಲೆಕ್ಸಾಂಡ್ರಿಯ:** ಉತ್ತರ ಈಜಿಪ್ಟಿನ ಮುಖ್ಯ ರೇವುಪಟ್ಟಣ. ಈಜಿಪ್ಟಿನ ಎರಡನೆಯ ಮಹಾನಗರ. ಪ್ರ.ಶ.ಪೂ.332ರಲ್ಲಿ ಮ್ಯಾಸಿಡೋನಿಯದ ದೊರೆ ಅಲೆಕ್ಸಾಂಡರ್ ಮಹಾಶಯ ನಿಂದ ಕಟ್ಟಲ್ಪಟ್ಟಿತೆಂದು ಪ್ರತೀತಿ.

ಈಜಿಪ್ಟ್ ದೇಶದ ಪ್ರಾಚೀನ ಮತ್ತು ಐತಿಹಾಸಿಕ ಪಟ್ಟಣವಾದರೂ ಈಗ ಇದೊಂದು ಆಧುನಿಕ ಮಹಾನಗರ. ಕೆಳ ಈಜಿಪ್ಟಿನ ನೈಲ್‌ನದಿ ಹಾಗೂ ಮೆಡಿಟರೇನಿಯನ್ ಸಮುದ್ರಕ್ಕೆ ಸಮೀಪದಲ್ಲಿದೆ. ಇಲ್ಲಿಂದ ಕೈರೋಗೆ 207 ಕಿಮೀ. ಈಜಿಪ್ಟಿನ ದೊಡ್ಡ ಪಟ್ಟಣಗಳಿಗೆ ರೈಲು ಸಂಪರ್ಕವಿದೆ. ಅರಬ್ಬರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಮೆಡಿಟರೇನಿಯನ್ ವಾಯುಗುಣವಿದ್ದು ಮಳೆ ಅತಿ ಕಡಿಮೆ. ಬೇಸಗೆಯಲ್ಲಿ ಆಲಿಕಲ್ಲಿನ ಮಳೆಯಾಗುತ್ತದೆ. ಡಿಸೆಂಬರ್-ಮಾರ್ಚ್ ತಿಂಗಳವರೆಗೆ ಬಿಸಿಲಿನಿಂದ ಕೂಡಿದ ಹಿತಕರ ಹವೆ ಇರುತ್ತದೆ. ಅಗಲವಾದ ಕಾಲುವೆಗಳಿಂದ ನೀರು ಹಾಯಿಸಿ ಎರಡು ಬಂದರುಗಳನ್ನು ಈ ನಗರದ ಸಮೀಪದಲ್ಲಿ ನಿರ್ಮಿಸಲಾಗಿದೆ. ದೊಡ್ಡ ಕೈಗಾರಿಕೆ ಮತ್ತು ವ್ಯಾಪಾರಕೇಂದ್ರ. ಈಜಿಪ್ಟಿನ ಆಮದು ರಫ್ತುಗಳ ಬಹುಭಾಗ ಈ ರೇವುಪಟ್ಟಣದ ಮುಖಾಂತರವೇ ನಡೆಯುತ್ತಿವೆ. ಅಲೆಕ್ಸಾಂಡ್ರಿಯ ವಿಶ್ವವಿದ್ಯಾಲಯದ ಕೇಂದ್ರ ಇಲ್ಲಿದೆ. (ಬಿ.ಕೆ.ಜಿ.)

ಅಲೆಕ್ಸಾಂಡರನ ಮರಣಾನಂತರ ಟಾಲಮಿ ಸಂತತಿಯ ಅರಸರು ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಈ ಅರಸರ ಆಳಿಕೆಯ ಕಾಲದಲ್ಲಿ ಈ ನಗರ ಸರ್ವತೋಮುಖವಾದ ಅಭಿವೃದ್ಧಿ ಹೊಂದಿತು. ಕಲೆ, ಧರ್ಮ, ವಿಜ್ಞಾನ ಹಾಗೂ ವ್ಯಾಪಾರ ಮುಂತಾದುವುಗಳಿಗೆ ಕೇಂದ್ರವಾಯಿತು. ಆ ಕಾಲದಲ್ಲಿ ಅಲೆಕ್ಸಾಂಡ್ರಿಯ ಮತ್ತು ಭಾರತದ ಮೌರ್ಯರ ರಾಜಧಾನಿಯಾದ ಪಾಟಲೀಪುತ್ರದ ಮಧ್ಯೆ ವಾಣಿಜ್ಯ, ರಾಜತಾಂತ್ರಿಕ ಹಾಗೂ ಮತೀಯ ಸಂಪರ್ಕವೇರ್ಪಟ್ಟಿತ್ತು. ವಿಶಾಲವಾದ ಮತ್ತು ಸುಂದರವಾದ ಅರಮನೆಗಳಿಂದಲೂ ಸುಸಜ್ಜಿತವಾದ ರಂಗ ಮಂಟಪಗಳಿಂದಲೂ ವಾಣಿಜ್ಯೋದ್ಯಮಗಳಿಂದಲೂ ಅಲೆಕ್ಸಾಂಡ್ರಿಯ ಶೋಭಿಸುತ್ತಿತ್ತು. ಜ್ಞಾನಪ್ರಿಯರೂ ಕಲಾಸಂಪನ್ನರೂ ಆದ ಟಾಲಮಿ ಅರಸರು ಸಹಸ್ರಾರು ಗ್ರಂಥಗಳಿಂದ ಕೂಡಿದ್ದ ಭವ್ಯ ಪುಸ್ತಕ ಭಂಡಾರವನ್ನು ಸ್ಥಾಪಿಸಿದ್ದರು. ಈ ಗ್ರಂಥಭಂಡಾರದಲ್ಲಿ ರೋಮ್, ಗ್ರೀಸ್, ಭಾರತ ಮತ್ತು ಈಜಿಪ್ಟಿಗೆ ಸಂಬಂಧಿಸಿದ ಗ್ರಂಥಗಳಿದ್ದವು. 1ನೆಯ ಶತಮಾನದಲ್ಲಿ ಕ್ರೈಸ್ತಧರ್ಮ ಇಲ್ಲಿ ಪ್ರಚಾರವಾಯಿತು.

ಈಜಿಪ್ಟ್‌ರಾಜ್ಯ ರೋಮನ್‌ಸಾಮ್ರಾಜ್ಯಕ್ಕೆ ಸೇರಿದ ಅನಂತರ ಈ ನಗರದ ಪ್ರಾಮುಖ್ಯ ಇನ್ನೂ ಹೆಚ್ಚಿತು. ಇಡೀ ರೋಮನ್ ಸಾಮ್ರಾಜ್ಯದಲ್ಲಿ ಇದು ಎರಡನೆಯ ದೊಡ್ಡ ಮುಖ್ಯ ಪಟ್ಟಣವಾಗಿದ್ದು ವ್ಯಾಪಾರ ಮತ್ತು ನಾನಾ ಸಂಸ್ಕೃತಿಗಳ ಕೇಂದ್ರವಾಗಿತ್ತು. ಅಲ್ಲದೆ ರೋಮನ್ ಸಾಮ್ರಾಜ್ಯದ ದಾಸ್ತಾನು ಸಂಗ್ರಹನಗರಗಳಲ್ಲೊಂದಾಗಿತ್ತು. 641ರಲ್ಲಿ ಕಲೀಫನಾದ ಉಮರನ ದಂಡನಾಯಕನೊಬ್ಬ ಅಲೆಕ್ಸಾಂಡ್ರಿಯವನ್ನು ಮುತ್ತಿ ವಶಪಡಿಸಿಕೊಂಡ. ಮುಸ್ಲಿಮರ ಪ್ರಾಬಲ್ಯ ಹೆಚ್ಚಿದಂತೆ ಈ ನಗರ ತನ್ನ ವಾಣಿಜ್ಯ ಮತ್ತು ಇತರ ಪ್ರಾಮುಖ್ಯಗಳನ್ನು ಕಳೆದುಕೊಂಡಿತು. 1798ರಲ್ಲಿ ನೆಪೋಲಿಯನ್ ಈಜಿಪ್ಟಿನ ದಂಡಯಾತ್ರೆಯನ್ನು ಕೈಗೊಂಡು ಅಲೆಕ್ಸಾಂಡ್ರಿಯವನ್ನು ಮುತ್ತಿದಮೇಲೆ ಈ ನಗರ ಪುನಶ್ಚೇತನಗೊಳ್ಳತೊಡಗಿತು. 19ನೆಯ ಶತಮಾನದ ಪೂರ್ವಾರ್ಧ ದಲ್ಲಿ ಮಹಮದಾಲಿಯ ಆಳಿಕೆಯಲ್ಲಿ ಅದರ ನವೋದಯ ಪ್ರಾರಂಭವಾಯಿತು. ಸಯ್ಯದ್ ಪಾಷಾನ ಆಳಿಕೆಯಲ್ಲಿ ಮತ್ತೆ ರಾಜಧಾನಿಯಾಗಿತ್ತು. (ಜಿ.ಆರ್.ಆರ್.)

ಗ್ರೀಕ್ ರೋಮನ್ ಮತ್ತು ಅರಬ್ಬೀ ಲೇಖಕರ ಕೆಲವು ಕೃತಿಗಳಿಂದ ಈ ಊರು ಹಿಂದೆ ಸಾಂಸ್ಕೃತಿಕ ಚಟುವಟಿಕೆಗಳ ನೆಲೆಯೂ ವ್ಯಾಪಾರ ಕೇಂದ್ರವೂ ಆಗಿದ್ದಿತಲ್ಲದೆ, ಇಲ್ಲಿ ಬೇರೆ ಬೇರೆ ಕಾಲಗಳ ಸುಂದರ ಕಟ್ಟಡಗಳೂ ಇದ್ದುವೆಂದು ತಿಳಿದುಬರುತ್ತದೆ. ವಿಶ್ವದ ಏಳು ಅದ್ಭುತ ಗಳಲ್ಲೊಂದೆಂದು ಪ್ರಸಿದ್ಧವಾಗಿರುವ 400' ಎತ್ತರದ ದೀಪ ಸ್ತಂಭ ಇಲ್ಲಿಯ ಫ್ಯಾರೋಸ್ ದ್ವೀಪದಲ್ಲಿದೆ. ಹಳೆಯ ವಾಸ್ತುಕೃತಿಗಳಲ್ಲಿ ಈಗ ಉಳಿದಿರುವುದು ಅತ್ಯಲ್ಪ. ಪಾಂಪೆಯ ಕಂಬ ವೆಂದು ಕರೆಯಲ್ಪಡುವ ಡಯೋಕ್ಲಿಟಿಯನ್ನನ ಸ್ಮಾರಕ ಅವುಗಳಲ್ಲೊಂದು. ಇದರ ಅಡಿಪಾಯದ ಕಟ್ಟೆಯ ಕಲ್ಲುಗಳ ಮೇಲೆ ಫೆರೋಗಳ ಕೆಲವು ಕುರುಹುಗಳು ಮಾತ್ರ ದೊರಕಿವೆ. ರೋಮ್‌ನ ಅಗಸ್ಟಸ್‌ನಿಂದ ಇಲ್ಲಿ ಸ್ಥಾಪಿತವಾದ ಎರಡು ದೊಡ್ಡ ಚೂಪು ಕಂಬಗಳಲ್ಲಿ (ಕ್ಲಿಯೋಪಾತ್ರಳ ಸೂಜಿಗಳು) ಈಗ ಒಂದು ನ್ಯೂಯಾರ್ಕ್‌ನಲ್ಲೂ ಇನ್ನೊಂದು ಲಂಡನ್‌ನಲ್ಲೂ ಇವೆ. ರೋಮನ್ನರ ಕಾಲದ ಕೆಲವು ಗೋರಿಗಳು ಊರಿನ ಸಮೀಪದಲ್ಲಿಯೇ ಉಳಿದುಬಂದಿವೆ. (ಎಸ್.ಎನ್.)

**ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್:** 1814-93. ಬ್ರಿಟಿಷ್ ಪುರಾತತ್ತ್ವಜ್ಞ ಮತ್ತು ಪುರಾತತ್ತ್ವ ಸರ್ವೇಕ್ಷಣಾ ಇಲಾಖೆಯ ಪ್ರಥಮ ನಿರ್ದೇಶಕ. ಜನ್ಮಸ್ಥಳ ಲಂಡನ್. ತಂದೆ ಸ್ಕಾಟಿಷ್ ಕವಿ ಅಲ್ಯಾನ್ ಕನ್ನಿಂಗ್‌ಹ್ಯಾಮ್. 19ನೆಯ ವಯಸ್ಸಿನಲ್ಲಿ ಬಂಗಾಲದಲ್ಲಿ ಅಭಿಯಂತರನಾಗಿ 19 ವರ್ಷ ಸೇವೆ ಸಲ್ಲಿಸಿದ. ಅನಂತರ 28 ವರ್ಷಗಳ ಕಾಲ ಭಾರತದಲ್ಲಿ ಬ್ರಿಟಿಷ್ ಸರ್ಕಾರ ದಲ್ಲಿ ಕೆಲಸ ಮಾಡಿದ. ಭಾರತಕ್ಕೆ ಬಂದ ಹೊಸದರಲ್ಲಿಯೆ ಜೇಮ್ಸ್ ಪ್ರಿನ್ಸೆಪ್‌ನೊಡನೆ ಸಂಪರ್ಕ ಬಂದು ಮೊದಲಿನಿಂದಲೂ ಭಾರತೀಯ ಪುರಾತತ್ತ್ವ ಮತ್ತು ಇತಿಹಾಸ-ಸಂಸ್ಕೃತಿಯಲ್ಲಿ ತುಂಬ ಆಸಕ್ತಿಯಿದ್ದ ಇವನಿಗೆ ವಿಶೇಷ ಉತ್ತೇಜನ ದೊರೆಯಿತು. ಅಂದಿನ ಭಾರತದ ವೈಸ್‌ರಾಯ್ ಆಗಿದ್ದ ಚಾರ್ಲ್ಸ್ ಜಾನ್‌ಕ್ಯಾನಿಂಗ್ ಅವರೊಡನೆ ಈ ದೇಶದಲ್ಲಿ ಪುರಾತತ್ತ್ವ ಇಲಾಖೆಯನ್ನು ಸ್ಥಾಪಿಸುವ ಸಲುವಾಗಿ ವ್ಯವಸ್ಥಿತವಾಗಿ ಪತ್ರ ವ್ಯವಹಾರ ನಡೆಸಿದ. ತತ್ಪರಿಣಾಮ ವಾಗಿ ಪುರಾತತ್ತ್ವ ಇಲಾಖೆ 1861ರಲ್ಲಿ ಸ್ಥಾಪಿಸಲ್ಪಟ್ಟು ಇದಕ್ಕೆ ಕನ್ನಿಂಗ್ ಹ್ಯಾಮ್ ಅವರನ್ನೇ ಮಹಾ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಇಲಾಖೆ ವತಿಯಿಂದ ಚೀನಿ ಬೌದ್ಧಯಾತ್ರಿಕರ ಬರವಣಿಗೆಗಳಲ್ಲಿ ವರ್ಣಿಸಿದ ಬೋಧ್‌ಗಯಾ, ನಾಲಂದ, ಸಾರನಾಥ್, ಸಾಂಚಿ, ತಕ್ಷಶಿಲಾ ಮೊದಲಾದ ಮಹತ್ತ್ವದ ಐತಿಹಾಸಿಕ ನೆಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅಲ್ಲಲ್ಲಿ ಉತ್ಖನನಗಳನ್ನು ನಡೆಸಿದ. ಈ ನೆಲೆಗಳಲ್ಲಿಯ ಸ್ಮಾರಕಗಳ ಸಂರಕ್ಷಣೆ ಕಾರ್ಯವನ್ನು ಕೈಗೊಂಡ. ಇಲಾಖೆಯ ವಾರ್ಷಿಕ ವರದಿಗಳಲ್ಲಿ ಈ ಎಲ್ಲ ಕಾರ್ಯಗಳ ವಿವರಣೆಗಳನ್ನು ಪ್ರಕಟಿಸಲಾಯಿತು. ಇಂಥ ಒಂದು ವರದಿಯಲ್ಲಿ ಇವನ ಸರ್ವೇಕ್ಷಣೆಯಲ್ಲಿ ಹರಪ್ಪ ನೆಲೆಯಲ್ಲಿ ದೊರೆತ ಮುದ್ರಿಕೆ, ನೀಳ ತೆಳು ಚಕ್ಕೆಗಳು ಮೊದಲಾದ ಪ್ರಾಚ್ಯಾವಶೇಷಗಳ ಚಿತ್ರವಿದೆ. ಆದರೆ ಈ ಅವಶೇಷಗಳ ಮಹತ್ತ್ವವನ್ನು ಅರಿಯಲು ಯಾವುದೇ ಪ್ರಯತ್ನ ಮಾಡದಿದ್ದುದು ಸೋಜಿಗವೇ ಸರಿ. ಇವನ ಸರ್ವೇಕ್ಷಣೆಯಲ್ಲಿ ಸಂಗ್ರಹಿಸಿದ ನಾಣ್ಯಗಳನ್ನು ಲಂಡನ್‌ನ ಬ್ರಿಟಿಷ್ ವಸ್ತುಸಂಗ್ರಹಾ ಲಯದಲ್ಲಿ ಪ್ರದರ್ಶಿಸಲಾಗಿದೆ.

ಸ್ಮಾರಕ ಸಂರಕ್ಷಣೆಯ ಕಾರ್ಯದಲ್ಲಿಯ ತನ್ನ ಅನುಭವವನ್ನು ಆಧರಿಸಿ ಕನ್ಸರ್ವೇಶನ್ ಮ್ಯಾನ್ಯುಯಲ್ ಎಂಬ ಒಂದು ಮಾರ್ಗದರ್ಶಿ ಗ್ರಂಥವನ್ನು ಬರೆದ. ಇದು ಇಂದಿಗೂ ಪುರಾತತ್ತ್ವ ಸ್ಮಾರಕಗಳ ಸಂರಕ್ಷಣೆ ಕಾರ್ಯದಲ್ಲಿ ಅತ್ಯಂತ ಉಪಯುಕ್ತ ಗ್ರಂಥವಾಗಿದೆ. ಇವನ ಇತರ ಗ್ರಂಥಗಳು: ಭಿಲ್ಸಟೋಪ್ಸ್ (1854), ದಿ ಏನ್ಷಿಯಂಟ್ ಜಿಯಾಗ್ರಫಿ ಆಫ್ ಇಂಡಿಯ (1871), ಎ ಬುಕ್ ಆಫ್ ಇಂಡಿಯನ್ ಇರಾಸ್ (1891).

ಇವನ ಅನುಪಮ ಸೇವೆಯನ್ನು ಗಮನಿಸಿ 1867ರಲ್ಲಿ ಬ್ರಿಟಿಷ್ ಸರ್ಕಾರ 'ಸರ್' ಪದವಿಯನ್ನು ಕೊಟ್ಟು ಗೌರವಿಸಿತು. ಈತ 1893ರಲ್ಲಿ ನಿಧನನಾದ. (ಎ.ಎಸ್.)

**ಅಲ್ತಮೀರ:** ಸ್ಪೇನ್ ದೇಶದ ಉತ್ತರ ಭಾಗದಲ್ಲಿ ಕ್ಯಾಂಟಬ್ರಿಯನ್ ಪರ್ವತ ಶ್ರೇಣಿ ಯಲ್ಲಿರುವ ಗುಹೆ. ಅಂತ್ಯ ಹಳೆಶಿಲಾಯುಗದ ಗವಿಚಿತ್ರಗಳಿಗೆ ಪ್ರಸಿದ್ಧವಾಗಿದೆ. ಹೊರಭಾಗದಲ್ಲಿ ಸುಣ್ಣಕಲ್ಲು ಬೆಟ್ಟಗಳಿದ್ದು, ಸು.27ಮೀ ವರೆಗೆ ಒಳಗೆ ಹೋಗಬಹುದಾದ ಈ ಗುಹೆಯಲ್ಲಿರುವ



ಗೂಳಿ, ಶಿಲಾಚಿತ್ರ

ಮುಖ್ಯ ಚಿತ್ರಗಳೆಲ್ಲವನ್ನೂ ಗುಹೆಯ ಪ್ರಾರಂಭದಿಂದ ಸು.18-30ಮೀ ದೂರದಲ್ಲೇ ಕಾಣ ಬಹುದು. ಗೂಳಿ, ಕಾಡುಹಂದಿ, ಕಾಡುಕುದುರೆ, ಕಾಟಿ, ಜಿಂಕೆ ಮುಂತಾದ ಹಲವು ಕಾಡು ಮೃಗಗಳ ವರ್ಣರಂಜಿತ ಚಿತ್ರಗಳು ಇಲ್ಲಿಯ ವೈಶಿಷ್ಟ್ಯ. ಗೂಳಿಗಳ ಬಲಿಷ್ಠ ದೃಢಕಾಯ ಎದ್ದು ಕಾಣುತ್ತದೆ. ಶಿಲಾಯುಗದ ಕಾಲಕ್ಕೆ ಸೇರಿದ್ದಾದರೂ ಇಲ್ಲಿಯ ಬಹುಪಾಲು ಚಿತ್ರಗಳು ಹಳೆಯ ಶಿಲಾಯುಗದ ಕೊನೆಯ ಭಾಗದಲ್ಲಿದ್ದ ಮ್ಯಾಗ್ಡಲೇನಿಯನ್ ಸಂಸ್ಕೃತಿಗೆ ಸೇರಿದ್ದವು. ಇಂಗಾಲ-14ರ ವೈಜ್ಞಾನಿಕ ವಿಧಾನದಿಂದ ಈ ಚಿತ್ರಗಳ ಕಾಲಮಾನ ಪ್ರ.ಶ.ಪೂ.ಸು.20,000-15,000ಗಳಷ್ಟು ಪುರಾತನದವೆಂದು ಗೊತ್ತುಮಾಡಲಾಗಿದೆ. (ಎಸ್.ಎನ್.)

**ಅಲ್ಲಮಪ್ರಭು:** 12ನೆಯ ಶತಮಾನದ ಧಾರ್ಮಿಕ ಕ್ರಾಂತಿಯ ಮಹತ್ತಾಧನೆಯ ಇತಿಹಾಸದಲ್ಲಿ ಬಹಳ ಪ್ರಮುಖನಾದ ವ್ಯಕ್ತಿ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಈತನ ಜನ್ಮಸ್ಥಳ. ತಂದೆ ನಿರಹಂಕಾರ, ತಾಯಿ ಸುಜ್ಞಾನಿ. ಅನಿಮಿಷಯೋಗಿ ಈತನ ಗುರು. ಇವನ ಬಾಲ್ಯಜೀವನದ ಪರಿಸರಗಳಾಗಲಿ ಮನೋವಿಕಾಸದ ಚಿತ್ರವಾಗಲಿ ದೊರೆಯದು. ಆದರೆ ಈತನ ಜೀವನದಲ್ಲೊಂದು ಪರಿವರ್ತನೆಯ ಘಟ್ಟ ತಾರುಣ್ಯದಲ್ಲಿ ಪ್ರಾಪ್ತವಾದಂತೆ ತೋರುತ್ತದೆ. ಅದು ಚಾಮರಸ ಹೇಳುವಂತೆ ಬನವಾಸಿಯ ಮಾಯಾದೇವಿಯಿಂದ ಆಗಿರಲಿ ಅಥವಾ ಹರಿಹರ ಹೇಳುವಂತೆ ಬಳ್ಳಿಗಾವೆಯ ಕಾಮಲತೆಯಿಂದ ಆಗಿರಲಿ ಅಂತೂ ಸಂಸಾರವನ್ನು

ಮೆಟ್ಟಿ ಮೇಲೇರುವ ಸಾಧನೆಗೆ ಪ್ರಭುವನ್ನು ಪ್ರಚೋದಿಸಿದ ಒಂದು ಘಟನೆ ನಡೆದಿರಬೇಕು. ಅದರಿಂದ ಪ್ರಭುವಿಗೆ ತನ್ನ ಅಂತರಂಗದಲ್ಲಿ ಅಡಗಿದ್ದ ಅತೀವವಾದ ಆಕಾಂಕ್ಷೆಯ ಅರಿವು ಆದಂತೆ ತೋರುತ್ತದೆ. ಮೊದಲಿನಿಂದಲೂ ಜ್ಞಾನ ವೈರಾಗ್ಯಗಳು ಈತನಲ್ಲಿ ಜೀವದ ಉಸಿರಾಟದಂತೆ ಸಹಜವಾಗಿದ್ದುವು. ಮನದ ಮುಂದಣ ಆಸೆಯನ್ನು ಕಿತ್ತು ಬಿಸುಟು ಬಾಲ್ಯದಲ್ಲಿಯೇ ಮಾಯೆಯನ್ನು ಗೆದ್ದ. ಮಹಾಶಿವಯೋಗಿಯಾಗಿ ಭಾರತದಾದ್ಯಂತ ಸಂಚರಿಸಿ, ನೂರಾರು ಸಾಧಕರನ್ನು ಸಂಧಿಸಿ ಅನೇಕ ಬಗೆಯ ಅನುಭವಗಳ ಗಣಿಯಾದ. ಮುಕ್ತಾಯಕ್ಕ, ಗೊಗ್ಗಯ್ಯ, ಸಿದ್ಧರಾಮ, ಗೋರಕ್ಷ, ಬಸವ, ಚೆನ್ನಬಸವ, ಅಕ್ಕಮಹಾದೇವಿ ಮೊದಲಾದ ನೂರಾರು ಶಿವಶರಣ–ಶರಣೆಯರಿಗೆ ಜ್ಞಾನ, ವೈರಾಗ್ಯ, ಭಕ್ತಿಗಳ ನೆಲೆಯನ್ನು ತೋರಿಸಿದ. ವೀರಶೈವ ಸಿದ್ಧಾಂತದ ಸಾರವನ್ನೇ ತನ್ನ ಇರವಿನಲ್ಲಿ ನಿರಿಸಿ ಶರಣಮಾರ್ಗಕ್ಕೆ ಗುರುವಾದ. ಅನುಭವ ಮಂಟಪದ ಅಧ್ಯಕ್ಷನಾದ. ಶೂನ್ಯಸಿಂಹಾಸನದ ದೊರೆಯಾದ. ಈತ ಡಾಂಭಿಕತೆ, ಅಂಧಶ್ರದ್ಧೆ, ಅಹಂಮನ್ಯತೆ, ಬಾಹ್ಯಾಡಂಬರ, ಅಜ್ಞಾನ, ಅಲ್ಪಜ್ಞಾನ, ಅಸತ್ಯ, ಅಸಹನೆ, ವಿಷಮತೆ, ವಿಕಾರತೆಗಳ ಪರಮ ವೈರಿ. ನಿಷ್ಠುರವಾದಿ, ಸತ್ಯವಾದಿ, ಮಹಾಪ್ರವಾದಿ. ಬಸವಣ್ಣನವರ ವಿಚಾರಕ್ರಾಂತಿಗೆ ತನ್ನ ಜ್ಞಾನ ವೈರಾಗ್ಯಗಳ ಕಾಂತಿಯನ್ನಿತ್ತು ಅದನ್ನು ಮುನ್ನಡೆಸಿದ. ಕಲ್ಯಾಣದ ಧಾರ್ಮಿಕ ಕ್ರಾಂತಿಗೆ ಬೆನ್ನೆಲುಬಾದ. ಕಲ್ಯಾಣದಲ್ಲಿ ಕೆಲವು ಕಾಲ ಇದ್ದು ಎಲ್ಲ ಶಿವಶರಣರಿಗೂ ಕೇಂದ್ರ ವ್ಯಕ್ತಿಯಾಗಿ ಬಾಳಿ, ಅನಂತರ ತನ್ನ ಕರ್ತವ್ಯ ಮುಗಿಯಿತ್ತ ಬಂದದ್ದನ್ನು ತಿಳಿದು ಶ್ರೀಶೈಲದತ್ತ ಹೊರಟು ಲಿಂಗಾಂಗಸಾಮರಸ್ಯದ ಕೊನೆಯ ನಿಲುವಿನಲ್ಲಿ ಕದಳಿಯಲ್ಲಿ ಲೀನವಾದ.

ಈತನ ಜೀವನಚರಿತ್ರೆ ಅನೇಕ ಕಡೆ ಅಸ್ಪಷ್ಟವಾಗಿದ್ದರೂ ಈತನ ವಚನಗಳಲ್ಲಿ ಮೂಡಿ ನಿಂತಿರುವ ಅನುಭವದ ಚಿತ್ರ ಅತ್ಯುಜ್ವಲವಾಗಿದೆ. ಗುಹೇಶ್ವರ ಎಂಬ ಅಂಕಿತವನ್ನಿಟ್ಟುಕೊಂಡು ನೂರಾರು ವಚನಗಳನ್ನು ರಚಿಸಿದ್ದಾನೆ. ಇವನ ಮಾತುಗಳು ನೇರ, ನಿಷ್ಠುರ ಭಾಷೆಯ ಅನಂತ ಸಾಧ್ಯತೆಗಳನ್ನು ಇವನ ವಚನಗಳಲ್ಲಿ ಕಾಣಬಹುದಾಗಿದೆ. ಕನ್ನಡ ಭಾಷೆ ಒಂದು ವಿಶೇಷ ಶಕ್ತಿಯನ್ನು ಈತನಿಂದ ಪಡೆಯಿತು. ಈತನ ಬೆಡಗಿನ ವಚನಗಳು ಕ್ಲಿಷ್ಟವಾಗಿದ್ದರೂ ಅನುಭವದ ಸಂಪತ್ತಿನಿಂದಲೂ ಅಲಂಕಾರ, ಉಪಮಾನ, ಹೋಲಿಕೆ, ಗಾದೆಯಂಥ ಸೂತ್ರ ರೂಪದ ಮಾತುಗಳಿಂದಲೂ ಉಜ್ವಲವಾಗಿದ್ದು ಪರಿಣಾಮಕಾರಿಯಾಗಿವೆ.

ಹೊನ್ನು ಮಾಯೆಯೆಂಬರು ಹೆಣ್ಣು ಮಾಯೆಯೆಂಬರು ಮಣ್ಣು ಮಾಯೆಯೆಂಬರು ಹೊನ್ನು ಮಣ್ಣು ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಕಾಣ, ಗುಹೇಶ್ವರದ ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನದ ಬೆಟ್ಟಕ್ಕೆ ಚಳಿಯಾದೊಡನೆ ಏನ ಹೊದಿಸುವರಯ್ಯ, ಕಂಡದ ಮೇಲೊಂದು ಅರಗಿನ ಕಂಭವಿದ್ದುದ ಕಂಡೆ ಅರಗಿನ ಕಂಭದ ಮೇಲೆ ಒಂದು ಹಂಸವಿದ್ದುದ ಕಂಡೆ ಕಂಭ ಬೆಂದು ಹಂಸೆ ಹಾರಿತ್ತು ಊರದ ಚೇಳಿನ ಏರದ ಬೇನೆಯಲ್ಲಿ ಮೂರುಲೋಕವೆಲ್ಲಾ ನರಳಿತ್ತು ಮುಂತಾದ ವಚನಗಳು ಅನುಭವದ ತೀವ್ರತೆಯನ್ನು ಮಾತಿನಲ್ಲಿ ಸಾಧಿಸುವ ಶಕ್ತಿಗೆ ಉಜ್ವಲ ಸಾಕ್ಷಿಗಳಾಗಿವೆ. ಸಾಧಕನಾಗಿ ಸಿದ್ಧನಾಗಿ ಅನುಭಾವಿಯಾಗಿ ಕವಿಯಾಗಿ ಕಾವ್ಯದ ಮಟ್ಟವನ್ನು ಮೀರಿನಿಂತ ಪ್ರವಾದಿಯಾಗಿ ಸಮಾಜಸುಧಾರಕನಾಗಿ ಸಮಾಜವನ್ನು ವ್ಯಾಪಿಸಿ ಆಚೆ ನಿಂತ ಜಂಗಮನಾಗಿ ಸಂಕೀರ್ಣ ವ್ಯಕ್ತಿತ್ವವನ್ನು ಪಡೆದು ಬಾಳಿನ ಮಹಾಯೋಗಿಯಾಗಿ ಅಲ್ಲಮ ಕಂಡುಬರುತ್ತಾನೆ. ಈತನ ವಚನರಚನೆ ಕನ್ನಡ ವಾಙ್ಮಯಕ್ಕೆ ಅಸಾಧಾರಣ ತೇಜಸ್ಸುಳ್ಳ ಕಾಣಿಕೆಗಳಾಗಿವೆ. ಈತನನ್ನು ಕುರಿತಾದ ಗ್ರಂಥಗಳು ಕನ್ನಡ, ತೆಲುಗು, ತಮಿಳು, ಸಂಸ್ಕೃತ ಮತ್ತು ಮರಾಠಿ ಭಾಷೆಗಳಲ್ಲಿ ರಚಿತವಾಗಿರುವುದು ಈತನ ಮಹಾವ್ಯಕ್ತಿತ್ವಕ್ಕೆ ನಿದರ್ಶನಗಳಾಗಿವೆ. (ಜಿ.ಎಸ್.ಪಿ.ಎಮ್.)

**ಅಲ್ಚಿನ್, ಎಫ್.ಆರ್. ಮತ್ತು ಬ್ರಿಜೆಟ್ ಅಲ್ಚಿನ್:** ದಕ್ಷಿಣ ಏಷ್ಯದ ಪುರಾತತ್ತ್ವ ಕ್ಷೇತ್ರಕ್ಕೆ ಮೌಲಿಕ ಕೊಡುಗೆ ನೀಡಿರುವ ಬ್ರಿಟಿಷ್ ದಂಪತಿಗಳು. ರೇಮಂಡ್ ಎಫ್. ಅಲ್ಚಿನ್ 1923ರಲ್ಲಿ ಹ್ಯಾರೋನಲ್ಲಿ ಜನಿಸಿದ. ಇವನು ಬಾಲ್ಯದಿಂದಲೇ ಪುರಾತತ್ತ್ವದ ನಂಟನ್ನು ಬೆಳೆಯಿಸಿಕೊಂಡ. 1920–30ರ ದಶಕಗಳಲ್ಲಿ ಶಾಲಾ ಹುಡುಗನಾಗಿದ್ದಾಗಲೇ ಇವನು ತರಿಸುತ್ತಿದ್ದ ಇಲ್ಲಸ್ಟ್ರೇಟೆಡ್ ಲಂಡನ್ ನ್ಯೂಸ್ ನಿಯತಕಾಲಿಕೆಯಲ್ಲಿ ಪ್ರಕಟವಾಗುತ್ತಿದ್ದ ಮೊಹೆಂಜೋದಾರೋ ಹಾಗೂ ಚನ್ಹುದಾರೋ ಕುರಿತ ಮ್ಯಾಕೆಯ ಪುರಾತತ್ತ್ವ ಲೇಖನಗಳು ಇವನನ್ನು ಆಕರ್ಷಿಸಿದ್ದವು. ಆದರೆ ಈ ಕ್ಷೇತ್ರವನ್ನು ವೃತ್ತಿಯಾಗಿಸಿಕೊಳ್ಳುವ ಹಂಬಲ ಆಗ ಇವನಲ್ಲಿರಲಿಲ್ಲ. 1944ರಲ್ಲಿ ಸೇನಾ ಸದಸ್ಯನಾಗಿ ಭಾರತಕ್ಕೆ ಬಂದುದು ಇವನ ಜೀವನದ ಒಂದು ಮುಖ್ಯ ಘಟ್ಟ. ಈ ಸಂದರ್ಭದಲ್ಲಿ ಸಾಂಚಿಗೆ ಇವನಿತ್ತ ಭೇಟಿ ಭಾರತೀಯ ಪುರಾತತ್ತ್ವದಲ್ಲಿ ಇವನಿಗೆ ಆಸಕ್ತಿ ಉಂಟಾಗಲು ಪ್ರೇರಣೆಯಾಯಿತು. ಅನಂತರ ಮಾಂಡುವಿನ ಸುತ್ತಮುತ್ತಲ ಸ್ಥಳಗಳನ್ನು ವೀಕ್ಷಿಸಿದುದು ಈ ಆಸಕ್ತಿಯನ್ನು ಮತ್ತಷ್ಟು ಹಿಗ್ಗಿಸಿತು. ಎರಡು ವರ್ಷಗಳ ಅನಂತರ ಸೇನೆಯಿಂದ ಹೊರಬಂದ ಇವನಿಗೆ ವೃತ್ತಿ ಆಯ್ಕೆಯ ಪ್ರಶ್ನೆ ಎದುರಾದಾಗ ಇವನು ಆಯ್ದುಕೊಂಡದ್ದು ಭಾರತೀಯ ಪುರಾತತ್ತ್ವ. ಇದೇ ವಿಷಯದಲ್ಲಿ ಎಂ.ಎ. ಹಾಗೂ ಪಿಎಚ್.ಡಿ. ಪದವಿ ಪಡೆದ. 1954–59ರವರೆಗೆ ಲಂಡನ್ನಿನ ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್‌ನಲ್ಲಿ ದಕ್ಷಿಣ ಏಷ್ಯ ಪುರಾತತ್ತ್ವವನ್ನು ಬೋಧಿಸಿದ. ಅನಂತರದ ಮೂರು ದಶಕಗಳನ್ನು (1959–89) ಇವನು ಕಳೆದದ್ದು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ. ಭಾರತೀಯ ಅಧ್ಯಯನದ ಎಮಿರಿಟಸ್ ರೀಡರ್ ಗೌರವ ಇವನಿಗೆ ದೊರೆತಿದೆ.

ಬ್ರಿಜೆಟ್ ಅಲ್ಚಿನ್ ಜನಿಸಿದ್ದು 1927ರಂದು ಆಕ್ಸ್‌ಫರ್ಡ್‌ನಲ್ಲಿ. ಬಾಲ್ಯದಲ್ಲಿಯೇ ಪುರಾತತ್ತ್ವದಲ್ಲಿ ಆಸಕ್ತಳಾಗಿದ್ದ ಇವಳು ಆಫ್ರಿಕದ ಕೇಪ್‌ಟೌನ್ ವಿಶ್ವವಿದ್ಯಾಲಯದಲ್ಲಿ ಪುರಾತತ್ತ್ವ ಹಾಗೂ ಮಾನವಶಾಸ್ತ್ರದಲ್ಲಿ ಬಿ.ಎ. ಪದವಿ ಪಡೆದಳು. ಲಂಡನ್ನಿನ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿಯಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸುವಾಗ ರೇಮಂಡ್‌ನ ಪರಿಚಯವಾಯಿತು.



ಆಗ ರೇಮಂಡ್ ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್ ಸಂಸ್ಥೆಯಲ್ಲಿ ಪಿಎಚ್.ಡಿ. ವಿದ್ಯಾರ್ಥಿಯಾಗಿದ್ದ. ಭಾರತೀಯ ಪುರಾತತ್ತ್ವದ ಬಗೆಗೆ ಬ್ರಿಜೆಟ್ ಗಮನ ಹರಿಸಿದ್ದು ರೇಮಂಡ್ ಜೊತೆ ವಿವಾಹವಾದ ಅನಂತರ. 1968ರಿಂದ ಇವಳು ಬ್ರಿಟಿಷ್ ಆರ್ಕಿಯಲಾಜಿಕಲ್ ಮಿಷನ್ ಟು ಪಾಕಿಸ್ತಾನ್ ತಂಡದ ನಿರ್ದೇಶಕಳಾಗಿದ್ದಳು. ಇವಳು ಕೇಂಬ್ರಿಜ್‌ನ ವೂಲ್ಫ್‌ಸನ್ ಕಾಲೇಜಿನ ಫೆಲೋ, ಏನ್ಷಿಯಂಟ್ ಇಂಡಿಯ ಅಂಡ್ ಇರಾನ್ ಟ್ರಸ್ಟ್‌ನ ಕಾರ್ಯದರ್ಶಿ, ಸೌತ್ ಏಷ್ಯನ್ ಸ್ಟಡೀಸ್ ಮಾಲಿಕೆಯ ಸಂಪಾದಕಿ ಹಾಗೂ ಯುರೋಪಿಯನ್ ಅಸೋಸಿಯೇಶನ್ ಆಫ್ ಸೌತ್ ಏಷ್ಯನ್ ಆರ್ಕಿಯಾಲಜಿಸ್ಟ್ಸ್‌ನ ಸೆಕ್ರೆಟರಿ ಜನರಲ್ ಆಗಿ ಸೇವೆ ಸಲ್ಲಿಸಿದ್ದಾಳೆ.

ದಕ್ಷಿಣ ಭಾರತೀಯ ನವಶಿಲಾಯುಗ ಸಂಸ್ಕೃತಿಗಳ ಮೇಲೆ ದೀರ್ಘ ಸಂಶೋಧನೆ ನಡೆಸಿದ ರೇಮಂಡ್ ಅಲ್ಚಿನ್ ಇದರ ಫಲಿತಾಂಶಗಳನ್ನು ನಿಯೋಲಿಥಿಕ್ ಕ್ಯಾಟಲ್ ಕೀಪರ್ಸ್ ಆಫ್ ಸೌತ್ ಇಂಡಿಯ (1963) ಎಂಬ ಕೃತಿಯ ರೂಪದಲ್ಲಿ ಪ್ರಕಟಿಸಿದ್ದಾನೆ. ನವಶಿಲಾಯುಗದಿಂದ ಆದಿಚಾರಿತ್ರಿಕ ಕಾಲದವರೆಗಿನ ಅವಶೇಷಗಳಿರುವ ಪಿಕ್ಲಿಹಾಳ್ ಹಾಗೂ ನವಶಿಲಾಯುಗ ಕಾಲದ ಬೂದಿದಿಬ್ಬವಾದ ಉತ್ನೂರ್‌ನಲ್ಲಿ ಉತ್ಖನನ ನಡೆಸಿ ವರದಿಗಳನ್ನು ಪ್ರಕಟಿಸಿದ್ದಾನೆ (1960–61). ಪಿಕ್ಲಿಹಾಳ್–ಮಸ್ಕಿ ಪ್ರದೇಶದಲ್ಲಿ ಕೆಲವು ಶಿಲಾಚಿತ್ರ ನೆಲೆಗಳನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸಿದ್ದಾನೆ. ದಿ ಆರ್ಕಿಯಾಲಜಿ ಆಫ್ ಅರ್ಲಿ ಹಿಸ್ಟಾರಿಕ್ ಸೌತ್ ಏಷ್ಯ: ಎಮರ್ಜೆನ್ಸ್ ಆಫ್ ಸಿಟೀಸ್ ಅಂಡ್ ಸ್ಟೇಟ್ಸ್(1995)– ಇದು ಇವನ ಮತ್ತೊಂದು ಮುಖ್ಯ ಕೃತಿ. ಭಾರತ, ಪಾಕಿಸ್ತಾನ ಮತ್ತು ಶ್ರೀಲಂಕದ ಶಿಲಾಯುಗ ಸಂಸ್ಕೃತಿಗಳ ಮೇಲೆ ಹಾಗೂ ಜನಾಂಗೀಯ ಅಧ್ಯಯನದಲ್ಲಿ ಬ್ರಿಜೆಟ್ ಅಲ್ಚಿನ್ ಹಲವಾರು ಸಂಶೋಧನೆ ನಡೆಸಿದ್ದಾಳೆ. ಮುಖ್ಯವಾದುದೆಂದರೆ ಬರೋಡ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಪುರಾವಾತಾವರಣದ ಬಗೆಗೆ ರಾಜಸ್ತಾನದಲ್ಲಿ ನಡೆಸಿದ ಅಂತರಶಿಸ್ತೀಯ ಸಂಶೋಧನೆ. ದಿ ಸ್ಟೋನ್ ಟಿಪ್ಡ್ ಆ್ಯರೋ ಹಾಗೂ ದಿ ಪ್ರಿ ಹಿಸ್ಟರಿ ಅಂಡ್ ಪ್ಯಾಲಿಯೋಜಿಯಾಗ್ರಫಿ ಆಫ್ ದಿ ಗ್ರೇಟ್ ಇಂಡಿಯನ್ ಡೆಸರ್ಟ್– ಇವು ಇವಳ ಪ್ರಮುಖ ಕೃತಿಗಳು. ದಿ ಬರ್ತ್ ಆಫ್ ಇಂಡಿಯನ್ ಸಿವಿಲೈಜೇಷನ್ ಮತ್ತು ದಿ ರೈಸ್ ಆಫ್ ಸಿವಿಲೈಜೇಷನ್ ಇನ್ ಇಂಡಿಯ ಅಂಡ್ ಪಾಕಿಸ್ತಾನ್– ಇವು ಇವರಿಬ್ಬರೂ ಸಹಯೋಗದಲ್ಲಿ ಬರೆದಿರುವ ಪುಸ್ತಕಗಳು. (ಎ.ಎಸ್.)

**ಅಶೋಕ:** ಪ್ರ.ಶ.ಪೂ.273–232. ಭಾರತದ ಇತಿಹಾಸದಲ್ಲಿ ಅಮರನಾಗಿರುವ ಈತ ಬಿಂದುಸಾರನ ಮಗ. ಚಂದ್ರಗುಪ್ತ ಮೌರ್ಯನ ಮೊಮ್ಮಗ. ಬಿಂದುಸಾರನ ಆಳಿಕೆ ಕೊನೆಗೊಂಡ ಪ್ರ.ಶ.ಪೂ.273ರಲ್ಲಿ ಪಟ್ಟಕ್ಕೆ ಬಂದ. ಚಕ್ರಾಧಿಪತಿಯಾಗುವ ಮೊದಲು ತಕ್ಷಶಿಲ ಮತ್ತು ಉಜ್ಜಯಿನಿಗಳಲ್ಲಿ ರಾಜ್ಯಪಾಲನಾಗಿದ್ದ. ಬಿಂದುಸಾರ ನಿಧನನಾದ ಮೇಲೆ, ರಾಜ್ಯಕ್ಕಾಗಿ ಮಕ್ಕಳಲ್ಲಿ ಸತತ ಹೋರಾಟ ನಡೆಯಿತು. ಹೋರಾಟದಲ್ಲಿ ಅಶೋಕನಿಗೆ ವಿಜಯ ಲಭಿಸಿತು.

ಶಾಸನಗಳಲ್ಲಿ ಅಶೋಕನನ್ನು ದೇವಾನಾಂಪ್ರಿಯ ಅಂದರೆ ದೇವತೆಗಳಿಗೆ ಪ್ರಿಯನಾದವ ಎಂದು ಸಂಬೋಧಿಸಲಾಗಿದೆ. ಅಶೋಕ ಎಂಬ ಹೆಸರು ಕರ್ನಾಟಕದ ಮಸ್ಕಿ ಶಾಸನದಲ್ಲಿ ಕಂಡುಬರುತ್ತದೆ. ಪಿಯದಸಿ ಅಥವಾ ಪ್ರಿಯದರ್ಶಿ ಎಂಬುದು ಅಶೋಕನ ತಂದೆ ಮತ್ತು ತಾತಂದಿರ ಬಿರುದು. ಅಶೋಕನ ಬಗ್ಗೆ ಈ ಸಂಬೋಧನೆಯೂ ಉಂಟು. ಅಶೋಕ ಪಟ್ಟಕ್ಕೆ ಬಂದ ಮೊದಲ ವರ್ಷಗಳ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಇತರ ಪ್ರಭುಗಳಂತೆ ಈತನೂ ರಾಜ್ಯವಿಸ್ತರಣೆಯಲ್ಲಿ ತೊಡಗಿದ್ದನೆಂದು ಹೇಳಲಾಗಿದೆ. ಅನಂತರ ಕೈಗೊಂಡ ಕಳಿಂಗಯುದ್ಧ ಇವನ ಜೀವನದಲ್ಲಿ ಒಂದು ಮಹತ್ತರ ಘಟನೆಯಾಗಿದೆ.

ಅಲ್ಲಿ ಕಂಡ ರಕ್ತದ ಕೋಡಿ, ಕೊಲೆ, ಹಿಂಸೆ ಮುಂತಾದ ಘೋರ ಘಟನೆಗಳು ಅಶೋಕನ ಮನಸ್ಸನ್ನು ಬದಲಾಯಿಸಿದುವು. ದಿಗ್ವಿಜಯಕ್ಕೆ ಬಂದ ದೊರೆ ಧರ್ಮವಿಜಯಿಯಾಗಿ ಹಿಂತಿರುಗಿದ. ಅಂದಿನಿಂದ ಅಶೋಕನ ರಾಜನೀತಿಯಲ್ಲಿ ಅನೇಕ ಬದಲಾವಣೆಗಳಾದವು. ಕಾಶ್ಮೀರದ ಚರಿತ್ರಕಾರ ಕಲ್ಹಣನ ಪ್ರಕಾರ ಅಶೋಕ ಮೊದಲಿಗೆ ಶಿವಭಕ್ತನಾಗಿದ್ದ. ಕಳಿಂಗ ಯುದ್ಧಾನಂತರ ಈತನ ಮನಸ್ಸು ಬೌದ್ಧ ಮತದತ್ತ ಹರಿಯಿತು. ಅಂದಿನಿಂದ ಈತ ಬುದ್ಧನ ಉಪಾಸಕನಾದ. ಬುದ್ಧಗಯೆಗೆ ತೆರಳಿ ಅಲ್ಲಿನ ಬೌದ್ಧಭಿಕ್ಷುಗಳೊಡನೆ ಸಂಬಂಧ ಬೆಳೆಸಿದ. ಬೌದ್ಧ ಭಿಕ್ಷು ಉಪಗುಪ್ತನಿಂದ ಪ್ರಭಾವಗೊಂಡು ಬೌದ್ಧಧರ್ಮದ ಪ್ರಚಾರಕ್ಕಾಗಿ ಬಹಳ ಶ್ರಮಿಸಿದ. ಧಾರ್ಮಿಕ ಪ್ರವಾಸಗಳನ್ನು ಕೈಗೊಂಡು ಧರ್ಮಪ್ರಚಾರ ಮಾಡಿದ. ಬೌದ್ಧ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ. ಬುದ್ಧನ ಜನ್ಮಸ್ಥಳವನ್ನು ಸಂದರ್ಶಿಸಿದ. ರಾಜ್ಯದಲ್ಲೆಲ್ಲ ಧರ್ಮಸ್ತಂಭಗಳನ್ನು ನೆಡಿಸಿದ. ಧರ್ಮಮಹಾಮಾತ್ರರೆಂಬ ಅಧಿಕಾರಿಗಳನ್ನು ನೇಮಿಸಿದ. ಜೊತೆಗೆ ರಾಜುಕರು ಮತ್ತು ಪ್ರಾದೇಶಿಕರು ಎಂಬ ಎರಡು ಬಗೆಯ ಅಧಿಕಾರಿ



**ಅಶೋಕನ ಶಿಲ್ಪ (1–2ನೆಯ ಶತಮಾನ), ಸನ್ನತಿ**

ಗಳನ್ನು ನೇಮಿಸಿದ. ಭಾರತ ಶಾಸನಗಳ ಪಿತಾಮಹನೆಂದು ಗೌರವಿಸಲ್ಪಟ್ಟಿರುವ ಈತ ದೇಶದ ಎಲ್ಲ ಕಡೆಗಳಲ್ಲಿ ಶಿಲಾಶಾಸನಗಳನ್ನು ನೆಡಿಸಿದ. ಪ್ರಪಂಚದ ಅನೇಕ ಭಾಗಗಳಿಗೆ ಧರ್ಮ ನಿಯೋಗಗಳನ್ನು ಕಳುಹಿಸಿದ. ಅಶೋಕನ ಮಕ್ಕಳಾದ ಮಹೇಂದ್ರ ಹಾಗೂ ಸಂಘಮಿತ್ರೆಯರು ಸಿಂಹಳಕ್ಕೆ ಹೋದ ನಿಯೋಗದ ನಾಯಕರಾಗಿದ್ದರು. ಬೌದ್ಧಧರ್ಮಕ್ಕೆ ಸಂಬಂಧಿಸಿದಂತೆ ಸುಂದರವಾದ ಸ್ತೂಪಗಳು, ಚೈತ್ಯಗಳು, ವಿಹಾರಗಳು, ಗುಹಾಲಯ ಮೊದಲಾದವುಗಳನ್ನೂ ಕಲ್ಲನ್ನು ಪ್ರಥಮವಾಗಿ ಬಳಸುವುದರ ಮೂಲಕ ನಿರ್ಮಿಸಿದ.

ಅಶೋಕ ಬೌದ್ಧಮತಾವಲಂಬಿಯಾಗಿದ್ದರೂ ಪರಧರ್ಮ ಸಹಿಷ್ಣುವಾಗಿದ್ದ. ಯಾವ ಧರ್ಮವನ್ನೂ ಈತ ನಿಂದಿಸಲಿಲ್ಲ. ಹಿಂದುಧರ್ಮ ಮತ್ತು ಜೈನಧರ್ಮಗಳಿಗೂ ಉತ್ತೇಜನ ನೀಡಿದ. ತಾನು ಮೆಚ್ಚಿ ಅನುಸರಿಸಿದ ಬೌದ್ಧಧರ್ಮವನ್ನು ಎಂದೂ ಇಷ್ಟಕ್ಕೆ ವಿರೋಧವಾಗಿ ಯಾರ ಮೇಲೂ ಹೇರಲಿಲ್ಲ. ನೈತಿಕ ಮಾರ್ಗಗಳನ್ನು ಬಹಳವಾಗಿ ಅನುಮೋದಿಸಿದ. ನೀತಿಯಿಲ್ಲದೆ ಸುಖವನ್ನು ಪಡೆಯುವುದು ಬಹಳ ಕಷ್ಟ ಎಂದು ಶಾಸನಗಳ ಮೂಲಕ ಸಾರಿದ. ಆಧ್ಯಾತ್ಮಿಕ ಅಂತರಾಳ ಜೀವನದ ಉದ್ದೇಶಗಳಲ್ಲಿ ಒಂದಾಗಿರಬೇಕೆಂದು ಹೇಳಿದ ಕೀರ್ತಿ ಇವನದು. ತಾನು ಹೇಳಿದ್ದನ್ನು ನಿತ್ಯ ಜೀವನದಲ್ಲಿ ಮಾಡಿ ತೋರಿಸಿದ ಉದಾತ್ತ ವ್ಯಕ್ತಿ ಈತ. ಅಹಿಂಸೆಯನ್ನು ಬೋಧಿಸಿ ಅದುವೇ ಹಿರಿಯ ಧರ್ಮವೆಂದು ಒತ್ತಿ ಹೇಳಿದ.

ಅಶೋಕ ಮಾಡಿದಷ್ಟು ಜನೋಪಕಾರಿ ಕೆಲಸಗಳನ್ನು ಮಾಡಿದ ರಾಜರು ಅತಿವಿರಳ. ಇವನ ಪ್ರಾಣಿದಯೆಯಂತೂ ಪ್ರಪಂಚಖ್ಯಾತವಾಗಿದೆ. ರಾಜ್ಯದಲ್ಲೆಲ್ಲ ಸಾಲು ಮರಗಳನ್ನು ನೆಡಿಸಿದ; ವಿಶ್ರಾಂತಿ ಗೃಹಗಳನ್ನು ತೆರೆದ; ಔಷಧಾಲಯಗಳನ್ನು ಕಟ್ಟಿಸಿದ. ದಾನಧರ್ಮಗಳಲ್ಲಂತೂ ಇವನದು ಎತ್ತಿದ ಕೈ. ಬಡವರು, ನಿರ್ಗತಿಕರು, ಅನಾಥರು, ಅಂಗವಿಕಲರು ಮೊದಲಾದವರಿಗೆ ಉದಾರವಾಗಿ ಸಹಾಯ ಮಾಡುತ್ತಿದ್ದ. ಬೇಡಿ ಬಂದ ಜನರಿಗೆ ಕೈತುಂಬ ನೀಡುತ್ತಿದ್ದ. ಇವನಷ್ಟು ಜನಾನುರಾಗಿಗಳಾದ ದೊರೆಗಳು ಬಹಳ ಅಪರೂಪ. ಅಶೋಕ ಚಕ್ರಾಧಿಪತ್ಯ ಯೋನ, ಕಾಂಭೋಜ, ಗಾಂಧಾರದಿಂದ ಹಿಡಿದು ಆಂಧ್ರಪ್ರದೇಶ ದವರೆಗೂ ಬಹು ವಿಸ್ತಾರವಾಗಿ ಹಬ್ಬಿತ್ತು. ಕಾಶ್ಮೀರ ಮತ್ತು ನೇಪಾಲಗಳೂ ಅಶೋಕನ ಅಧೀನದಲ್ಲಿದ್ದುವೆಂದು ತಿಳಿದುಬರುತ್ತದೆ. ಉತ್ತರ ಬಂಗಾಲ ಇವನ ರಾಜ್ಯದಲ್ಲಿ ಸೇರಿತ್ತು. ಇವನ ರಾಜ್ಯ ತಮಿಳು ದೇಶದವರೆಗೂ ಹಬ್ಬಿತ್ತು. ಈಚೆಗೆ ಬೆಳಕಿಗೆ ಬಂದಿರುವ ಕೆಲವು ಶಾಸನಗಳ ಪ್ರಕಾರ ಹಿಮಾಲಯದ ಅನೇಕ ಕಣಿವೆ ಪ್ರದೇಶಗಳು ಅಶೋಕನ ಆಳಿಕೆ ಗೊಳಪಟ್ಟಿದ್ದುವು.

ಭಾರತದ ಇತಿಹಾಸದಲ್ಲೇ ಏಕೆ, ಇಡೀ ಪ್ರಪಂಚದ ಇತಿಹಾಸದಲ್ಲಿ ಅಶೋಕನಿಗೆ ವಿಶಿಷ್ಟ ಸ್ಥಾನವಿದೆ. ಸಾವಿರಾರು ರಾಜಮಹಾರಾಜರುಗಳ ನಡುವೆ ಇವನು ಅತ್ಯಂತ ಪ್ರಕಾಶ ಮಾನವಾಗಿ ಶೋಭಿಸುತ್ತಿದ್ದಾನೆ. ಇವನ ಧರ್ಮಸಹಿಷ್ಣುತೆ, ಕಾರ್ಯತತ್ಪರತೆ, ಸೇವಾ ಮನೋಭಾವ, ಶಾಂತಿಪ್ರೇಮ–ಇವು ಸದಾಕಾಲ ಅಚ್ಚಳಿಯದೆ ನಿಂತಿವೆ. ಅಷ್ಟು ದೊಡ್ಡ ಸಾಮ್ರಾಜ್ಯದ ಒಡೆಯನಾಗಿ, ಅದರ ಸೂತ್ರಧಾರಿಯಾಗಿ ಪ್ರಜೆಗಳ ಅಭ್ಯುದಯವನ್ನು ಪಾಲಿಸಿದ ಕೀರ್ತಿ ಇವನದು. ಅಶೋಕ ಚಾಣಾಕ್ಷ ರಾಜಕಾರಣಿಯೂ ಆಗಿದ್ದ. ಅತ್ಯುನ್ನತ ಯೋಧನೂ ಆಗಿದ್ದ. ಹಾಗಿಲ್ಲದಿದ್ದರೆ ಅಷ್ಟು ದೊಡ್ಡ ಸಾಮ್ರಾಜ್ಯವನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತಿತ್ತು.

ಶೈಶವಾವಸ್ಥೆಯಲ್ಲಿದ್ದ ಬೌದ್ಧಧರ್ಮಕ್ಕೆ ಒಂದು ರೂಪುಕೊಟ್ಟು ಅದನ್ನು ವಿಶ್ವಧರ್ಮವನ್ನಾಗಿ ಮಾಡಿದ ಕೀರ್ತಿ ಅಶೋಕನಿಗೆ ಸಲ್ಲುತ್ತದೆ. ತನ್ನ ಪ್ರಜೆಗಳಲ್ಲಿ ಸದ್ಭಾವನೆಗಳನ್ನು ಮೂಡಿಸಿ, ಅವರು ಸತ್ಪ್ರಜೆಗಳಾಗಲು ಈತ ಸದಾ ಶ್ರಮಿಸಿದ. ಮಾನವತೆಯೇ ಮೂರ್ತಿವೆತ್ತಂತಿದ್ದ ಅಶೋಕನ ಹಿರಿಮೆ ಸದಾಕಾಲವೂ ನಿಲ್ಲುವಂಥದು. ಈತ ಕೇವಲ ಭಾರತದ ಇತಿಹಾಸಕ್ಕೆ ಸೇರಿದ ವ್ಯಕ್ತಿಯಲ್ಲ. ಮಾನವ ಕೋಟಿಯ ಪ್ರತಿನಿಧಿಯಾಗಿ, ಪ್ರಪಂಚದ ಇತಿಹಾಸದ ಮೊದಲಿಗರಲ್ಲಿ ಒಬ್ಬನಾಗಿದ್ದಾನೆ. ಈತ ಭಾರತ ಇತಿಹಾಸದ ಸೀಮಾಪುರುಷ. (ಜ.ವಿ.)

ಅಶೋಕ ಚಕ್ರ: ಅಶೋಕ ಮಹಾರಾಜನಿಂದ ಸಾರಾನಾಥದಲ್ಲಿ ನಿರ್ಮಾಣವಾದ ಸ್ಮಾರಕಸ್ತಂಭದ ಸಿಂಹಶೀರ್ಷಿಕೆಯಲ್ಲಿರುವ ಚಕ್ರ. ಅಶೋಕ ಈ ಸ್ತಂಭವನ್ನು ಚೂನಾರ್ ಪರ್ವತಗಳ ಕಲ್ಲಿನಲ್ಲಿ ಅತ್ಯಂತ ಸುಂದರವಾಗಿ ಕಡೆಸಿ ಸ್ಥಾಪಿಸಿ, ಅದರ ತುದಿಯನ್ನು ಧರ್ಮಚಕ್ರವನ್ನೊಳಗೊಂಡ ಸಿಂಹಶೀರ್ಷಿಕೆಯಿಂದಲಂಕರಿಸಿದ. ಇವನ ಆಳಿಕೆಯ ಅನಂತರ ಶತಮಾನಗಳ ಮೇಲೆ ಭಾರತವನ್ನು ಸಂದರ್ಶಿಸಿದ ಚೀನ ದೇಶದ ಬೌದ್ಧಯಾತ್ರಿಕರಾದ ಫಾಹಿಯಾನ್, ಯುವಾನ್‌ಚಾಂಗ್ ಮತ್ತು ಇತ್ಸಿಂಗ್–ಇವರು ಸಾರಾನಾಥದ ಸ್ತಂಭವನ್ನು ನೋಡಿ ವಿಸ್ಮಿತರಾಗಿ, ಈ ಕೃತಿ ದೇವಶಿಲ್ಪಿಗಳಿಂದ ನಿರ್ಮಾಣವಾಗಿರಬೇಕೆಂದು ಅಭಿಪ್ರಾಯಪಟ್ಟರು. ಪಾಶ್ಚಾತ್ಯ ವಿದ್ವಾಂಸ ವಿನ್‌ಸೆಂಟ್ ಸ್ಮಿತ್ ಈ ಸ್ಮಾರಕವನ್ನು ವಿವರಿಸುತ್ತ ಶಿಲ್ಪಕಲೆ ಮೌರ್ಯರ ಕಾಲದಲ್ಲಿ ಸರ್ವೋತ್ಕೃಷ್ಟ ಮಟ್ಟವನ್ನು ಮುಟ್ಟಿತೆಂದೂ 20ನೆಯ ಶತಮಾನದಲ್ಲೂ ಎಣೆಯಿಲ್ಲದ ಶಿಲ್ಪಕಲಾಕೃತಿಯಾಗಿ ಉಳಿದಿದೆಯೆಂದೂ ಅಭಿಪ್ರಾಯಪಟ್ಟಿದ್ದಾನೆ. ಸಾರಾನಾಥ ಸ್ಮಾರಕ ಪ್ರಾಚೀನ ಭಾರತದ ಶಿಲ್ಪಕಲೆಯ ಅತ್ಯಂತ ಶ್ರೇಷ್ಠವಾದ ಕೃತಿಯೆಂದು ಮಾರ್ಷಲ್ ಅಭಿಪ್ರಾಯಪಟ್ಟಿದ್ದಾನೆ.

ಬೌದ್ಧಧರ್ಮ ಭಾರತದಲ್ಲಿ ಕ್ಷೀಣಿಸಿದ ಅನಂತರ ಸಾರಾನಾಥ ಪಟ್ಟಣ ಹಾಳಾಯಿತು; ಅಶೋಕನ ಸ್ತಂಭ ಮುರಿದು ಬಿತ್ತು. 18 ಮತ್ತು 19ನೆಯ ಶತಮಾನಗಳಲ್ಲಿ ನಡೆದ ಪ್ರಾಚ್ಯ ಸಂಶೋಧನೆಯ ಕಾಲದಲ್ಲಿ ಸಾರಾನಾಥದ ಅವಶೇಷಗಳು ಬೆಳಕಿಗೆ ಬಂದವು. ಕಂಬ ಮುರಿದು ಬಿದ್ದಾಗ ಚಕ್ರವನ್ನೊಳಗೊಂಡ ಸಿಂಹಶೀರ್ಷ ಸ್ವಲ್ಪಮಟ್ಟಿಗೆ ಹಾನಿಗೊಳಗಾದರೂ ತೀರ ಭಿನ್ನವಾಗದೆ ತನ್ನ ಸೌಂದರ್ಯವನ್ನುಳಿಸಿಕೊಂಡಿದೆ. ಸ್ತಂಭ ಸು.50 ಅಡಿ ಎತ್ತರವಾಗಿದ್ದಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ಸಿಂಹಶೀರ್ಷದ ಕೆಳಭಾಗದಲ್ಲಿ ಗಂಟೆಯಾಕಾರದ ಒಂದು ಕಮಲಪುಷ್ಪವನ್ನು ಕೆತ್ತಲಾಗಿದೆ. ಇದು 2 ಅಡಿಗಳಷ್ಟು ಎತ್ತರವಾಗಿದೆ. ಅರಳಿದ ಕಮಲ ಹದಿನಾರು ದಳಗಳನ್ನು ಕೆಳಭಾಗಕ್ಕೆ ಒತ್ತಿಹಿಡಿದಂತೆ ಕೆತ್ತಲಾಗಿದೆ. ಗಂಟೆಯ ಆಕಾರದಲ್ಲಿ ಕೆತ್ತಲಾಗಿರುವ ಈ ಕಮಲದ ಮೇಲೆ ಚಕ್ರಾಕಾರವಾಗಿರುವ ಒಂದು ಪೀಠವಿದೆ. ಈ ಪೀಠ ಸು. ಒಂದು ಅಡಿ ಎತ್ತರವಾಗಿಯೂ 2 ಅಡಿ 10 ಅಂಗುಲ ಸುತ್ತಳತೆಯಿಂದಲೂ ಕೂಡಿದೆ. ಈ ಪೀಠದಲ್ಲಿ ನಾಲ್ಕು ದಿಕ್ಕಿಗೂ ನಾಲ್ಕು ಚಕ್ರಗಳು ಮತ್ತು ಪ್ರತಿ ಎರಡು ಚಕ್ರಗಳ ಮಧ್ಯೆ ಒಂದೊಂದರಂತೆ ಆನೆ, ವೃಷಭ, ಕುದುರೆ, ಸಿಂಹ–ಈ ನಾಲ್ಕು ಪ್ರಾಣಿಗಳನ್ನು ಕೆತ್ತಲಾಗಿದೆ. ಈ ಪೀಠದ ಮೇಲ್ಭಾಗದಲ್ಲಿ ಒಂದೊಂದು ಚಕ್ರದ ಮೇಲೂ ಒಂದೊಂದು ಸಿಂಹದಂತೆ ನಾಲ್ಕು ದಿಕ್ಕುಗಳಿಗೂ ಮುಖ ಮಾಡಿ, ಬಾಯಿತೆರೆದಿರುವ ನಾಲ್ಕು ಸಿಂಹಗಳು ಬೆನ್ನಿಗೆ ಬೆನ್ನುಕೊಟ್ಟು ನಿಂತಿವೆ. ಪ್ರತಿಯೊಂದು ಸಿಂಹವೂ 3 ಅಡಿ 9 ಅಂಗುಲ ಎತ್ತರವಾಗಿದೆ. ಅಲ್ಲಿ ದೊರಕಿರುವ ಇನ್ನೂ ಕೆಲವು ಅವಶೇಷಗಳ ಆಧಾರದ ಮೇಲೆ ಸಿಂಹಶೀರ್ಷಕ್ಕೆ ಶಿಖರವಾಗಿ ಇನ್ನೊಂದು ದೊಡ್ಡ ಶಿಲಾಚಕ್ರವನ್ನು ನಾಲ್ಕು ಸಿಂಹಗಳ ನಡುವೆ ನೇರವಾಗಿ ನಿಲ್ಲಿಸಲಾಗಿತ್ತೆಂದು ವಿದ್ವಾಂಸರು ನಂಬಿದ್ದಾರೆ. ಪೀಠದಲ್ಲಿ ಕಡೆದಿರುವ ಪ್ರತಿಯೊಂದು ಚಕ್ರದಲ್ಲೂ 24 ಅರಗಳು ಇವೆ. ಮೇಲಿನ ಚಕ್ರದಲ್ಲಿ 32 ಅರಗಳಿದ್ದುವೆಂದು ತಿಳಿದುಬಂದಿವೆ.

ಚಕ್ರ ಸಂಕೇತ ಸೂಚಕವೆಂದೂ ಅದಕ್ಕೆ ವಿಶಿಷ್ಟವಾದ ಅರ್ಥವಿದೆಯೆಂದೂ ವಿದ್ವಾಂಸರ ಅಭಿಪ್ರಾಯ. ಮೇಲಿನ ಮಹಾಚಕ್ರದ 32 ಅರಗಳು ಮಹಾಪುರುಷರಾದವರ 32 ಪುರುಷ ಲಕ್ಷಣಸೂಚಕವೆಂದೂ ಸಿಂಹಪೀಠದಲ್ಲಿನ ಚಕ್ರಗಳ 24 ಅರಗಳು ಕಾಲಗಣನೆಗೆ ಮಾನವಾದ ಸಂವತ್ಸರದ 24 ಪಕ್ಷಗಳನ್ನು ಸೂಚಿಸುವುದೆಂದೂ ಜ್ಞಾನಿಯಾದವ ಸದಾ ಕಾಲದಲ್ಲೂ ಎಚ್ಚರವಾಗಿರಬೇಕೆಂದೂ ಈ ಧರ್ಮಚಕ್ರ ಸದಾ ಜ್ಞಾಪಿಸುತ್ತಿರುತ್ತದೆ ಎಂದೂ ನಂಬಲಾಗಿದೆ.

ಧರ್ಮಚಕ್ರಗಳನ್ನೊಳಗೊಂಡ ಪೀಠದ ಮೇಲಿರುವ ಪ್ರಾಣಿಗಳು ಬುದ್ಧನ ಹಿಂದಿನ ಜನ್ಮಗಳ ಸಂಕೇತವೆಂದು ಬೌದ್ಧಜಾತಕಗಳಿಂದ ತಿಳಿದುಬರುತ್ತದೆ. ಅಲ್ಲದೆ ಭಾರತೀಯ ಸಂಪ್ರದಾಯ ದಲ್ಲಿ ಚಕ್ರಕ್ಕೆ ಬ್ರಹ್ಮಾಂಡಚಕ್ರ, ಭವಚಕ್ರ, ಕಾಲಚಕ್ರ, ಧರ್ಮಚಕ್ರ, ಸುದರ್ಶನಚಕ್ರ ಮೊದಲಾದ ಹಲವಾರು ಸಾಂಕೇತಿಕ ನಿರೂಪಣೆಗಳಿವೆ. ಬೌದ್ಧ ಪುರಾಣಗಳಲ್ಲಿ ಧರ್ಮಚಕ್ರಕ್ಕೆ ಸಂಬಂಧಿಸಿದ ವ್ಯಾಖ್ಯಾನಗಳು ಹೇರಳವಾಗಿ ದೊರೆಯುತ್ತವೆ. ದಿವ್ಯಜ್ಞಾನವನ್ನು ಬುದ್ಧಗಯೆಯ ಬಳಿಯಲ್ಲಿ ಪಡೆದ ಅನಂತರ ಬುದ್ಧ ಧರ್ಮಚಕ್ರವನ್ನು ಪ್ರವರ್ತಿಸುವುದಕ್ಕಾಗಿ ಕಾಶೀನಗರಕ್ಕೆ ಹೋಗುತ್ತೇನೆ ಎಂದು ಹೇಳಿದನಂತೆ. ಮತ್ತೊಂದು ಸಂದರ್ಭದಲ್ಲಿ ಬುದ್ಧ ಸ್ತ್ರೀಯಾಗಲೀ ಪುರುಷನಾಗಲೀ ಇಂಥ ಯಾನದಿಂದ ನಿರ್ವಾಣದ ಸಮೀಪಕ್ಕೆ ಹೋಗುವರು ಎಂಬುದಾಗಿ ಧರ್ಮಚಕ್ರದ ರೀತಿಯನ್ನು ಕುರಿತು ಹೇಳಿದನಂತೆ. ಕಳಿಂಗ ರಣರಂಗದ ಭೀಕರ ದೃಶ್ಯವನ್ನು ನೋಡಿದ ಸಾಮ್ರಾಟ್ ಅಶೋಕ ಬಹುವಾಗಿ ಮನನೊಂದ. ಇನ್ನು ಮುಂದೆ ಸಾಮ್ರಾಜ್ಯ ದಾಹಕ್ಕಾಗಿ ಯುದ್ಧ ಮಾಡುವುದಿಲ್ಲವೆಂದು ಸಂಕಲ್ಪ ಮಾಡಿದ. ಸಾಮ್ರಾಜ್ಯವನ್ನು ಅಶೋಕದತ್ತ ಒಯ್ಯಲು ತನ್ನ ಭೋಗ, ಭಾಗ್ಯ, ಸಂಪತ್ತು, ಸರ್ವಸ್ವವನ್ನೂ ತ್ಯಾಗ ಮಾಡಿದ. ಬುದ್ಧನಿಂದ ಪ್ರಸಾರವಾದ ಧರ್ಮಕ್ಕೆ ಶರಣಾದ. ಅದರ ಪ್ರಸಾರಕ್ಕಾಗಿ ಇನ್ನೂ ಅನೇಕ ಕಾರ್ಯಕ್ರಮಗಳ ಜೊತೆಗೆ ಶಿಲಾಶಿಲ್ಪವನ್ನೂ ಧರ್ಮಲಿಪಿಯನ್ನೂ (ಶಾಸನ) ಆಚರಣೆಗೆ ತಂದ.

ಧರ್ಮಚಕ್ರವನ್ನು ಭಾರತದ ರಾಷ್ಟ್ರೀಯ ಬಾವುಟಕ್ಕೆ ಅಳವಡಿಸಿಕೊಳ್ಳಲಾಗಿದೆ. ಜವಾಹರಲಾಲ್ ನೆಹರು ಭಾರತ ರಾಜ್ಯಾಂಗ ಸಭೆಯಲ್ಲಿ ಧ್ವಜ ವಿಚಾರವನ್ನು ಮಂಡಿಸುತ್ತ ಭಾರತದ ರಾಷ್ಟ್ರಧ್ವಜ ಅಡ್ಡಗಲವಾಗಿದ್ದು ಕೇಸರಿ, ಬಿಳಿ, ಹಸುರು ಬಣ್ಣಗಳಿಂದ ಕೂಡಿದ್ದು, ನಡುವಣ ಬಿಳಿಯ ಪಟ್ಟಿಯ ಮಧ್ಯಭಾಗದಲ್ಲಿ ಚರಕದ ಪ್ರತಿನಿಧಿಯಾಗಿ ಒಂದು ಚಕ್ರ ಸಾಗರ ನೀಲವರ್ಣದಲ್ಲಿ ಇರತಕ್ಕದ್ದು; ಈ ಚಕ್ರದ ರಚನೆ ಸಾರಾನಾಥದ ಅಶೋಕ ಸ್ತಂಭದ ಸಿಂಹಶೀರ್ಷದ ಪೀಠದಲ್ಲಿ ಕಾಣುವ ಚಕ್ರದ ಮಾದರಿಯಾಗಿರತಕ್ಕದ್ದು; ಚಕ್ರದ ಅಡ್ಡಳತೆ ಬಿಳಿಪಟ್ಟಿಯ ಅಗಲದಷ್ಟಿರತಕ್ಕದ್ದು; ಬಾವುಟದ ಅಗಲಕ್ಕೂ ಉದ್ದಕ್ಕೂ 2:3 ಪ್ರಮಾಣ ಇರ ತಕ್ಕದ್ದು ಎಂಬುದಾಗಿ 1947 ಜುಲೈ 22 ರಂದು ಘೋಷಿಸಿದರು.

ಅಶೋಕನ ಕಾಲದಲ್ಲಿ ಭಾರತದಲ್ಲಿ ಮೂಡಿದ್ದ ಐಕ್ಯ, ಶಾಂತಿ, ಸಮೃದ್ಧಿ–ಇವನ ಆಳಿಕೆಯ ಮೊದಲಾಗಲೀ ಅನಂತರವಾಗಲೀ ನಮ್ಮ ನಾಡಿನಲ್ಲಿ ಕಾಣಬಂದಿಲ್ಲ. ಸಕಲ ಜೀವಿಗಳ ಕಲ್ಯಾಣವೇ ತನ್ನ ಕರ್ತವ್ಯವೆಂದು ಬಗೆದಿದ್ದವನು ಅಶೋಕ. ಆಧುನಿಕ ಯುಗದ ಅಹಿಂಸಾ ಅಧ್ವರ್ಯು ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯವನ್ನು ಪಡೆದ ಭಾರತವು ಅಶೋಕ ಚಕ್ರವನ್ನು ತನ್ನ ಧ್ವಜಚಿಹ್ನೆಯನ್ನಾಗಿ ಆರಿಸಿಕೊಂಡಿರುವುದು ಅತ್ಯಂತ ಉಚಿತ ವಾಗಿದೆಯಲ್ಲದೆ ಭಾರತದ ಧ್ಯೇಯ ಸದ್ಧರ್ಮಸ್ಥಾಪನೆ ಎಂಬುದನ್ನು ಈ ಚಿಹ್ನೆ ಸೂಚಿಸುತ್ತಿದೆ.

(ಜಿ.ಆರ್.ಆರ್.)

ಶಾಸನಗಳು: ಈ ಶಾಸನಗಳು ಭಾರತದ ಇತಿಹಾಸದಲ್ಲಿ ಅತಿ ಪ್ರಮುಖವಾದುವು. ಎಲ್ಲರಿಗೂ ಅರ್ಥವಾಗುವಂತೆ ಅತಿ ಸರಳವಾದ ಭಾಷೆಯಲ್ಲಿ ಧರ್ಮೋಪದೇಶವನ್ನು ಕಲ್ಲು ಬಂಡೆಗಳ ಮೇಲೂ ಶಿಲಾಸ್ತಂಭಗಳ ಮೇಲೂ ಗವಿಗಳ ಗೋಡೆಯ ಮೇಲೂ ಅಶೋಕ ಕೆತ್ತಿಸಿದ್ದಾನೆ. ಈ ಶಾಸನಗಳು ಅಶೋಕ ಚಕ್ರವರ್ತಿಯ ಸ್ವಂತ ಮಾತುಗಳಾಗಿ ಪಾಳಿ ಭಾಷೆ ಯಲ್ಲಿ, ಅತಿ ಪ್ರಧಾನವಾದ ಮತ್ತು ಜನರ ಕಣ್ಣಿಗೆ ಸುಲಭವಾಗಿ ಗೋಚರಿಸುವ ಪ್ರದೇಶಗಳಲ್ಲಿ ಕೆತ್ತಲ್ಪಟ್ಟಿವೆ. ಅವುಗಳಲ್ಲಿ ಧರ್ಮದ ಸ್ವರೂಪವೂ ಜನರ ನಡವಳಿಕೆಗಾಗಿ ನೀತಿನಿಯಮಗಳೂ ಇವೆ. ಈ ಶಾಸನಗಳು ಯಾವ ನಿಯತವಾದ ಕಾಲಮಾನವನ್ನೂ ಸೂಚಿಸದೆ ಅಶೋಕನ ಆಳಿಕೆಯ ವರ್ಷಗಳ ಗಣನೆಯನ್ನು ಮಾತ್ರ ಹೇಳುತ್ತವೆ.

ಭಾರತದ ವಾಯವ್ಯದಲ್ಲಿ ಹಿಂದುಕುಷ್ ಪರ್ವತದಿಂದ ಹಿಡಿದು ಆಫ್ಘಾನಿಸ್ತಾನದ ಕೆಲವು ಭಾಗಗಳು, ಬಲೂಚಿಸ್ತಾನ, ಸಿಂಧೂದೇಶ–ಇವುಗಳನ್ನೊಳಗೊಂಡು ಪೂರ್ವದಲ್ಲಿ ಅಸ್ಸಾಂ ಅಥವಾ ಕಾಮರೂಪದವರೆಗೂ ಹರಡಿರುವ ಉತ್ತರ ಹಿಂದುಸ್ತಾನ ಮತ್ತು ಹಿಮಾಲಯ ಪರ್ವತದಿಂದ ಹಿಡಿದು ಮೈಸೂರು ದೇಶದ ಮೊಳಕಾಲ್ಮೂರುವರೆಗಿರುವ ಪೂರ್ವಪಶ್ಚಿಮ ಸಮುದ್ರಗಳ ಮಧ್ಯಪ್ರದೇಶಗಳಲ್ಲಿ ಅಲ್ಲಲ್ಲೇ ಒಟ್ಟೊಟ್ಟಾಗಿ ಅಥವಾ ಬಿಡಿಬಿಡಿಯಾಗಿ ಈ ಶಿಲಾಲೇಖನಗಳು ದೊರೆತಿವೆ.

ಕಾಶ್ಮೀರ, ನೇಪಾಲ, ಕರ್ನಾಟಕ ಮುಂತಾದ ಇವನ ಸೀಮಾಂತ ದೇಶಗಳಲ್ಲಿ ಶಾಸನಗಳು ದೊರೆತಿವೆ. ಇದುವರೆಗೂ ಅಶೋಕ ಬರೆಸಿರುವ 155 ಶಿಲಾಲೇಖಗಳನ್ನು ಕಂಡುಹಿಡಿದು ಇವುಗಳನ್ನು ಪ್ರಕಟಿಸಲಾಗಿದೆ. 1956ರಲ್ಲಿ ಬೊಂಬಾಯಿ ಪ್ರಾಂತದಲ್ಲಿ ಒಂದು ಶಾಸನ ಸಿಕ್ಕಿತು. 1962ರಲ್ಲಿ ಒಂದು ಹೊಸ ಶಾಸನ ದೊರೆತುದಾಗಿ ವರದಿಯಾಗಿತ್ತು. ಕರ್ನಾಟಕದ ಮಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರಗಳಲ್ಲೂ, 1977ರಲ್ಲಿ ಉದೆಗೊಳಂ (ಶಿರಗುಪ್ಪ ತಾ, ಬಳ್ಳಾರಿ ಜಿ.) ಮತ್ತು ನಿಟ್ಟೂರಿನಲ್ಲಿ ಎರಡೆರಡು, 1989–90ರಲ್ಲಿ ಸನ್ನತಿಯಲ್ಲಿ ಕಳಿಂಗ ಶಾಸನಗಳ ಪ್ರತಿ ಮತ್ತು 13 ಹಾಗೂ 14 ಹಿರಿ ಬಂಡೆಶಾಸನಗಳಿವೆ.

1. ಎರಡು ಗೌಣ ಶಿಲಾಶಾಸನಗಳು (ಪ್ರ.ಶ.ಪೂ.257): ಮೊದಲನೆಯದರಲ್ಲಿ ಅಶೋಕನ ವೈಯಕ್ತಿಕ ಚರಿತ್ರೆಯೂ ಎರಡನೆಯದರಲ್ಲಿ ಧರ್ಮವೂ ಸಂಗ್ರಹವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಈ ಶಾಸನಗಳು ದೊರಕುವುದು ಸಹಸ್ರಾಂ (ಬಿಹಾರ್), ರೂಪನಾಥ್ (ಮಧ್ಯಪ್ರದೇಶ), ಬೈರಾಟ್ (ರಾಜಪುಟಾಣ), ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ (ಚಿತ್ರದುರ್ಗ), ನಿಟ್ಟೂರು, ಉದೆಗೊಳಂ, ಮಸ್ಕಿ (ರಾಯಚೂರು), ಯೆರ್ರಗುಡಿ (ಕರ್ನೂಲು), ಕೊಪ್ಪಳ (ರಾಯಚೂರು), ಮಸ್ಕಿ, ಉದೆಗೊಳಂ, ನಿಟ್ಟೂರು ಶಾಸನಗಳಲ್ಲಿ ಅಶೋಕನ ಹೆಸರನ್ನು ಹೇಳುತ್ತದೆ. ಇತರ ಶಾಸನಗಳಲ್ಲಿ ಇವನ ಹೆಸರು ಪ್ರಿಯದರ್ಶಿಯೆಂದೇ ಇದೆ.

2. ಪಂಗೊರರಿಯ ಶಾಸನ: 1975–76ರಲ್ಲಿ ಮಧ್ಯಪ್ರದೇಶದ ಸಿಹೋರ್ ಜಿಲ್ಲೆಯ ಪಂಗೊರರಿಯದಲ್ಲಿಯ ಅಶೋಕನ ಬಂಡೆಶಾಸನ. ಇಲ್ಲಿ ಎರಡು ಶಾಸನಗಳಿವೆ. ಇವು ಬ್ರಾಹ್ಮಿಲಿಪಿ ಮತ್ತುಪ್ರಾಕೃತ ಭಾಷೆಯಲ್ಲಿವೆ. ಮೊದಲನೆಯ ಶಾಸನದಲ್ಲಿ ಮಹಾರಾಜ ಪಿಯದಸಿ (ಪ್ರಿಯದರ್ಶಿ), ಕುಮಾರ (ರಾಜಕುಮಾರ) ಸಂವ, ಮನೆಯದೇಸ (ಮಧ್ಯಪ್ರದೇಶ)ದಲ್ಲಿರುವ ಉ(ಒ)ಪುನಿತ ವಿಹಾರಕ್ಕೆ ಯಾತ್ರೆ ಹೋಗುವಾಗ ಧಾರ್ಮಿಕ ಸಂದೇಶವನ್ನು ಮಗನ ಮೂಲಕ ಕಳುಹಿಸುತ್ತಿರುವುದಾಗಿದೆ. ಪ್ರಾರಂಭದಲ್ಲಿ 256 ಎಂಬ ಸಂಖ್ಯೆ ಇದೆ. ಎರಡನೆಯದು ಕಿರು ಬಂಡೆಶಾಸನ. ಇದರಲ್ಲಿ ದೇವಾನಾಂಪಿಯ ಎಂಬ ಉಲ್ಲೇಖವಿದೆ.

3 ಭಾಬ್ರು ಶಾಸನ: ಇಲ್ಲಿ ಬೌದ್ಧ ಗ್ರಂಥಗಳಿಂದ ವಿಪುಲವಾಗಿ ಉದಾಹರಿಸಿರುವುದರಿಂದ ಅಶೋಕ ಬೌದ್ಧನಾದನೆಂಬುದಕ್ಕೆ ಆಧಾರವಿದೆ. ಕಾಲ ಲಘು ಶಾಸನಗಳದ್ದೇ.

4 ಹದಿನಾಲ್ಕು ಶಿಲಾಶಾಸನಗಳು: ಇವು ಅಶೋಕನ ರಾಜನೀತಿಯನ್ನೂ ನೀತಿ ಮಾರ್ಗ ವನ್ನೂ ವಿವರಿಸುತ್ತವೆ. ಕಾಲ ಪ್ರ.ಶ.ಪೂ.257. ಶಾಸನಗಳ ಪ್ರತಿಗಳು ಪೇಷಾವರ್ ಪ್ರಾಂತ್ಯದ ಷಾಬಾಸ್‌ಗಡಿ, ಮನ್‌ಸೇರ (ವಾಯವ್ಯಗಡಿ), ಕಾಲ್ಸಿ (ಡೆಹ್ರಾಡೂನ್), ಗಿರ್ನಾರ್ (ಸೌರಾಷ್ಟ್ರ), ಸೋಪಾರ (ಬೊಂಬಾಯಿ), ಧೌಳಿ (ಒರಿಸ್ಸ), ಜೌಗಡ (ಗಂಜಾಂ, ಒರಿಸ್ಸ), ಯರ‍್ರಗುಡಿ (ಆಂಧ್ರ)ಗಳಲ್ಲಿ ಸಿಕ್ಕಿವೆ.

5 ಕಳಿಂಗ ಶಾಸನಗಳು: ಕಳಿಂಗ ಯುದ್ಧವಾದ ಮೇಲೆ ಅಶೋಕ ಅನುಸರಿಸಿದ ಆಡಳಿತ ವ್ಯವಸ್ಥೆಯನ್ನು ವರ್ಣಿಸುತ್ತವೆ. ಗಡಿ ಪ್ರದೇಶದಲ್ಲಿ ವಾಸಿಸುವ ಜನರನ್ನು ಹೇಗೆ ನೋಡಿಕೊಳ್ಳ ಬೇಕೆಂದು ಸೂಚಿಸುತ್ತವೆ. ಇಲ್ಲಿನ ಎರಡು ಶಾಸನಗಳು 12 ಮತ್ತು 13ನೆಯ ಶಾಸನಗಳ ಆಜ್ಞೆಗಳ ಬದಲಾಗಿ ಕೆತ್ತಲ್ಪಟ್ಟಿವೆ.

6. ಬಿಹಾರ್ ಪ್ರಾಂತ್ಯದಲ್ಲಿರುವ ಬರಾಬರ್ ಬೆಟ್ಟದ ಗಡಿಗಳಲ್ಲಿನವು. ಗಯ ಪಟ್ಟಣಕ್ಕೆ 24 ಕಿಮೀ ದೂರದಲ್ಲಿವೆ. ಇಲ್ಲಿ ಮೂರು ಶಾಸನಗಳಿವೆ. ಅಶೋಕ ಆಜೀವಿಕ ಸಾಧುಗಳಿಗೆ ದಾನ ಮಾಡಿದ ವಿಷಯವಿದೆ. ಕಾಲ ಪ್ರ.ಶ.ಪೂ.ಸು.257–50.

7. ತೆರಾಯ್ ಸ್ತಂಭಶಾಸನಗಳು: ನೇಪಾಲದಲ್ಲಿವೆ. ಒಂದು ಬುದ್ಧನ ಜನ್ಮಸ್ಥಳವಾದ ರುಮಿಂಡೈ ಎಂಬಲ್ಲೂ ಮತ್ತೊಂದು ನಿಗ್ಲಿವ ಎಂಬಲ್ಲೂ ಇವೆ. ಕಾಲ ಪ್ರ.ಶ.ಪೂ.ಸು.249. ಈ ಶಾಸನಗಳಲ್ಲಿ ಅಶೋಕ ಪ್ರಾಚೀನ ಬುದ್ಧರಿಗೆ ಭಕ್ತಿಯನ್ನು ಸಲ್ಲಿಸಿದ್ದಾನೆ.

8. ಏಳು ಸ್ತಂಭಶಿಲಾಶಾಸನಗಳು: ಕಾಲ ಪ್ರ.ಶ.ಪೂ.243–42. ಇವು ಶಿಲಾಶಾಸನಗಳ ಪರಿಶಿಷ್ಟ ಭಾಗಗಳಂತಿದ್ದು ಹಿಂದಿನ ಶಾಸನಗಳ ಬೋಧನೆಯನ್ನು ಒತ್ತಿ ಹೇಳುತ್ತವೆ. ಅತಿ ಮುಖ್ಯವಾದುವು ದೆಹಲಿ, ಅಲಹಾಬಾದ್, ತೌರಿಯ ಅರಾರಜ್, ಲೌರಿಯ ನಂದನಗಡ ಮತ್ತು ರಾಮಪೂರ್ವಗಳಲ್ಲಿ ಇವೆ. ಉಳಿದವು ಇಂದಿನ ಬಿಹಾರದ ಚಂಪಾರಣ್ಯ ಪ್ರದೇಶಗಳಲ್ಲಿವೆ.

9. ನಾಲ್ಕು ಚಿಕ್ಕ ಶಿಲಾಸ್ತಂಭಶಾಸನಗಳು: ಕಾಲ ಪ್ರ.ಶ.ಪೂ.243–32. ಪ್ರತಿಗಳು ಅಲಹಾಬಾದ್, ಸಾಂಚಿ ಮತ್ತು ಸಾರಾನಾಥ ಪ್ರದೇಶಗಳಲ್ಲಿವೆ.

ಸಾವಿರಾರು ವರ್ಷಗಳಿಂದಲೂ ಅಶೋಕನ ಧರ್ಮಸಂದೇಶಗಳು ಶಿಲೆಯಲ್ಲಿ ಅಚ್ಚಳಿಯ ದಂತೆ ನಿಂತಿವೆ. ಇವುಗಳಲ್ಲಿ ಮುಖ್ಯವಾಗಿ ಕಳಿಂಗದ ಯುದ್ಧವಾದ ಮೇಲೆ ಅನುಭವಿಸಿದ ದುಃಖವೂ ಪಶ್ಚಾತ್ತಾಪವೂ ವರ್ಣಿತವಾಗಿವೆ. ಕೆಲವು ಶಾಸನಗಳು ಸ್ಥಳೀಯ ಅಧಿಕಾರಿಗಳಿಗೆ ಬುದ್ಧಿವಾದ ರೂಪವಾಗಿ ಕರ್ತವ್ಯಪರಿಪಾಲನೆಯನ್ನು ತಿಳಿಸುತ್ತವೆ. ಆದಷ್ಟು ಹೆಚ್ಚು ಶಾಸನಗಳನ್ನು ಕೊರೆಯಿಸಬೇಕೆಂದು ಅಶೋಕನೇ ಆಜ್ಞೆ ಮಾಡಿದ್ದಾನೆ. ತನ್ನ ಮಾತುಗಳನ್ನು ಸರಿಯಾಗಿ ಎಲ್ಲಿ ಲಿಪಿಕಾರರು ಕೊರೆಯುವುದಿಲ್ಲವೋ ಎಂಬ ಶಂಕೆಯನ್ನೂ ವ್ಯಕ್ತಪಡಿಸಿದ್ದಾನೆ. 7ನೆಯ ಧರ್ಮಶಾಸನದಲ್ಲಿ ಸೂರ್ಯ–ಚಂದ್ರರಿರುವವರೆಗೂ ಧರ್ಮ ಶಾಶ್ವತವಾಗಿರಲೆಂದು ಹಾರೈಸಿ ದ್ದಾನೆ. 4ನೆಯ ಶಿಲಾಶಾಸನದಲ್ಲಿ ಮುಂದಿನ ಪೀಳಿಗೆಗೂ ಧರ್ಮದ ಆವಶ್ಯಕತೆ ಇದೆಯೆಂಬು ದನ್ನು ಒತ್ತಿ ಹೇಳಿದ್ದಾನೆ. ನೆರೆಹೊರೆಯ ರಾಷ್ಟ್ರಗಳಲ್ಲೂ ಗಡಿನಾಡಿನ ಜನರಲ್ಲೂ ಐಕ್ಯ, ಶಾಂತಿಗಳನ್ನು ಘೋಷಿಸಿದ್ದಾನೆ. ಚಿಕ್ಕ ಶಿಲಾಶಾಸನಗಳಲ್ಲಿ ಸ್ವತಂತ್ರ ರಾಷ್ಟ್ರದ ಜನರೂ ಧರ್ಮಾಚರಣೆಯನ್ನು ಮಾಡಬೇಕೆಂದು ಹೇಳಿದ್ದಾನೆ. 13ನೆಯ ಶಾಸನದಲ್ಲಿ ಗೆದ್ದ ರಾಜ್ಯದ ಜನರಿಗೆ ಅಭಯವನ್ನು ಇತ್ತಿದ್ದಾನೆ. 12ನೆಯ ಶಾಸನದಲ್ಲಿ ಮತಸಹಿಷ್ಣುತೆಯನ್ನು ಸಾರಿ ಸಾರನಾಥ ಶಾಸನದಲ್ಲಿ ಭಿಕ್ಷುಗಳು ಪಕ್ಷಭಿದ್ರತೆಯನ್ನು ಬೆಳೆಸಬಾರದೆಂದು ಬುದ್ಧಿ ಹೇಳಿದ್ದಾನೆ. ಕೌಶಾಂಬಿ ಶಾಸನದಲ್ಲಿ ಮಹಾಮಾತ್ರರಿಗೆ ಚಕ್ರವರ್ತಿಯ ಬುದ್ಧಿವಾದವಿದೆ. ಭಾಬ್ರು ಶಾಸನದಲ್ಲಿ ವಿನಯಪಿಟಕದಿಂದ ಭಿಕ್ಷು ಭಿಕ್ಷುಣಿಯರಿಗೆ ಉಪದೇಶವಿದೆ. ಮಾದರಿಗಾಗಿ ಅಶೋಕನ ಒಂದು ಶಿಲಾಶಾಸನದ ಪೂರ್ಣ ಅನುವಾದವನ್ನು ಇಲ್ಲಿ ಕೊಡಲಾಗಿದೆ:

ಅಭಿಷಿಕ್ತನಾಗಿ 8 ವರ್ಷಗಳಾದಾಗ ದೇವಾನಾಂಪ್ರಿಯ ಪ್ರಿಯದರ್ಶಿ ರಾಜ ಕಲಿಂಗವನ್ನು ಜಯಿಸಿದ. ಒಂದೂವರೆ ಶತಸಹಸ್ರ ಜನರನ್ನು ಅಲ್ಲಿಂದ ಸೆರೆಹಿಡಿದು ಸಾಗಿಸಲಾಯಿತು. ಶತಸಹಸ್ರ ಜನರು ಅಲ್ಲಿ ಹತರಾದರು. ಈಗ ಕಲಿಂಗರು ಕೈವಶರಾದ ಅನಂತರ ದೇವಾನಾಂ ಪ್ರಿಯನ ಧರ್ಮಪಾಲನೆ, ಧರ್ಮಕಾಮತೆ ಹಾಗೂ ಧರ್ಮಾನುಶಾಸ್ತಿ ತೀವ್ರವಾದುವು. ಕಲಿಂಗವನ್ನು ಜಯಿಸಿದ್ದಕ್ಕಾಗಿ ದೇವಾನಾಂಪ್ರಿಯ ಅನುಶೋಚಿಸುತ್ತಾನೆ.

ಏಕೆಂದರೆ, ಅದುವರೆಗೂ ಜಯಿಸದೆ ಇದ್ದ ಒಂದು ದೇಶವನ್ನು ಜಯಿಸುವಾಗ ಅಲ್ಲಿ ವಧೆಯೂ ಮರಣವೂ ಸೆರೆಯೂ ನಡೆಯುವುದರಿಂದ ದೇವಾನಾಂಪ್ರಿಯನಿಗೆ ತುಂಬಾ ವೇದನೆ ಉಂಟಾಗಿದೆ. ಅಲ್ಲದೆ, ಹಿರಿಯರ ಶುಶ್ರೂಷೆ ಮಾತಾಪಿತೃಗಳ ಶುಶ್ರೂಷೆ, ಗುರು ಶುಶ್ರೂಷೆ, ಮಿತ್ರರು, ಇಷ್ಟರು, ಜ್ಞಾತಿಗಳು, ದಾಸರು, ಭೃತ್ಯರು ಇವರಲ್ಲಿ ಸಂಪ್ರತಿಪತ್ತಿ ದೃಢಭಕ್ತಿ ಮುಂತಾದುವುಗಳಿಂದ ಕೂಡಿ, ಅಲ್ಲಿ ವಾಸವಾಗಿದ್ದ ಬ್ರಾಹ್ಮಣರಿಗಾಗಲೀ, ಶ್ರಮಣರಿಗಾಗಲೀ, ಇತರ ಮತದವರಿಗಾಗಲೀ, ಗೃಹಸ್ಥರಿಗಾಗಲೀ ಗಾಯ ನೋವು ಸಾವು ನೆಂಟರಿಷ್ಟರ ಅಗಲಿಕೆ ಇವು ಸಂಭವಿಸುವುದರಿಂದ ದೇವಾನಾಂಪ್ರಿಯನಿಗೆ ಇನ್ನೂ ಹೆಚ್ಚಿನ ವೇದನೆ ಉಂಟಾಗಿದೆ ಅಥವಾ ನೆಮ್ಮದಿಯಿಂದಿದ್ದರೂ ತಾವು ತುಂಬಾ ಸ್ನೇಹದಿಂದ ಪ್ರೀತಿಸುವ ಇಷ್ಟಮಿತ್ರರು, ಪರಿಚಿತರು, ನೆಂಟರು ಇವರಿಗೆ ಅಪಘಾತಗಳಾದರೆ ಅಂತಹವರು ಆ ಅಪಘಾತ ತಮಗಾದಂತೆಯೇ ಪರಿತಪಿಸುವರು. ಹೀಗೆ, ಆದ ಕಷ್ಟಗಳಲ್ಲಿ ಸರ್ವ ಮನುಷ್ಯರೂ ಭಾಗಿಗಳಾದರೂ ದೇವಾನಾಂಪ್ರಿಯನ ಪಾಲು ಹೆಚ್ಚಿನದು.

ಯವನರ ಜನಪದವನ್ನು ಬಿಟ್ಟರೆ, ಬ್ರಾಹ್ಮಣ ಶ್ರಮಣರಿಲ್ಲದ ಜನಪದವೇ ಇಲ್ಲ. ಯಾವುದಾದರೊಂದು ಮತದಲ್ಲಿ ಶ್ರದ್ಧೆ ಇಲ್ಲದ ಮನುಷ್ಯರು ಎಲ್ಲಿಯೂ ಇಲ್ಲ. ಆದ್ದರಿಂದ, ಕಲಿಂಗ ದೇಶದಲ್ಲಿ ಹತರಾದ ಮೃತರಾದ ಗಾಯಗೊಂಡ ಜನರ ನೂರರಲ್ಲೊಂದು ಭಾಗವಾಗಲಿ ಸಾವಿರದರಲ್ಲೊಂದು ಭಾಗವಾಗಲಿ ಈಗ ಅದೇ ಕಷ್ಟಕ್ಕೊಳಗಾದರೆ ದೇವಾನಾಂಪ್ರಿಯನಿಗೆ ವೇದನೆ ಉಂಟಾಗುತ್ತದೆ. ಯಾರಾದರೂ ಅಪಕಾರ ಮಾಡಿದರೂ ಕ್ಷಮ್ಯವಾದದ್ದನ್ನೆಲ್ಲ ಕ್ಷಮಿಸತಕ್ಕದೆಂದು ದೇವಾನಾಂಪ್ರಿಯನು ಭಾವಿಸುವನು. ಈಗ ತಾನು ಜಯಿಸಿರುವ ಅಡವೀಜನ ಕೂಡ ತನ್ನಂತೆ ನಡೆಯಲು ತನ್ನಂತೆಯೇ ವಿಚಾರಮಾಡಲು ಅವನು ಪ್ರೇರಿಸುವನು.

ಹೀಗೆ ದೇವಾನಾಂಪ್ರಿಯ ಅನುತಾಪಪಡುತ್ತಿದ್ದರೂ ಅವನು ಪ್ರಭಾವಶಾಲಿಯಾದ್ದರಿಂದ ಅವರು ತಮ್ಮ ತಪ್ಪುಗಳಿಗೆ ನಾಚಿ ನಡೆಯಲಿ; ತಪ್ಪು ಮಾಡಿ ಅವರು ಹತರಾಗದಿರಲಿ. ದೇವಾನಾಂಪ್ರಿಯ ಸರ್ವಭೂತಗಳಿಗೂ ಅಕ್ಷತಿಯನ್ನೂ ಸಂಯಮವನ್ನೂ ಸಮಚರ್ಯೆಯನ್ನೂ ಮಾರ್ದವವನ್ನೂ ಇಚ್ಛಿಸುತ್ತಾನೆ.

ದೇವಾನಾಂಪ್ರಿಯ ಧರ್ಮವಿಜಯವನ್ನೇ ಮುಖ್ಯವಾದ ವಿಜಯವೆಂದು ಭಾವಿಸುತ್ತಾನೆ. ಇಲ್ಲಿಯೂ ಎಲ್ಲ ಹಂತಗಳಲ್ಲಿಯೂ ಆರುನೂರು ಯೋಜನಗಳವರೆಗೂ ಅಂತಿಯೋಕ ಎಂಬ ಯವನರಾಜ, ಆ ಅಂತಿಯೋಕನ ಆಚೆ ನಾಲ್ಕು ರಾಜರು-ತುರಮಾಯ (ಟಾಲೆಮಿ), ಅಂತಿಕಿನಿ(ಆಂಟಿಗೊನಸ್), ಮಕ(ಮಗಸ್), ಅಲಿಕಸುದ(ಅಲೆಕ್ಸಾಂಡರ್), ಕೆಳಗೆ ಚೋಳ ಪಾಂಡ್ಯ ತಾಮ್ರವರ್ಣಿತನಕ ದೇವಾನಾಂಪ್ರಿಯನಿಗೆ ಈ ಧರ್ಮವಿಜಯ ಮತ್ತೆ ಮತ್ತೆ ದೊರೆತಿದೆ.

ಹಾಗೆಯೇ ಇಲ್ಲಿ ರಾಜವಿಷಯದಲ್ಲೂ ಯವನ ಕಾಂಭೋಜರಲ್ಲೂ ನಭಕ ನಾಭ ಪಂಕ್ತಿಯರಲ್ಲೂ ಭೋಜಪಿಟಿನಿಕರಲ್ಲೂ ಆಂಧ್ರಪುಳಿಂದರಲ್ಲೂ ದೇವಾನಾಂಪ್ರಿಯನ ಧರ್ಮಾನುಶಾಸ್ತಿಯನ್ನು ಅನುಸರಿಸುವರು. ದೇವಾನಾಂಪ್ರಿಯನ ದೂತರು ಹೋಗದ ಕಡೆಗಳಲ್ಲಿ ಕೂಡ ಜನರು ದೇವಾನಾಂಪ್ರಿಯನ ಧರ್ಮವೃತ್ತವನ್ನೂ ವಿಧಾನವನ್ನೂ ಧರ್ಮಾನುಶಾಸ್ತಿಯನ್ನು ಕೇಳಿ ಅದನ್ನನುಸರಿಸುತ್ತಿರುವರು; ಮುಂದೆಯೂ ಅನುಸರಿಸುವರು. ಇದರಿಂದ ಎಲ್ಲ ಕಡೆಗಳಲ್ಲೂ ವಿಜಯ ದೊರೆತಿದೆ. ಈ ವಿಜಯದಿಂದ ಎಲ್ಲ ಕಡೆಗಳಲ್ಲೂ ಪ್ರೀತಿ ಉಂಟಾಗಿದೆ. ಧರ್ಮವಿಜಯದಿಂದ ಪ್ರೀತಿ ಲಭಿಸುತ್ತದೆ. ಹಾಗೆ ಲಭಿಸಿದ ಪ್ರೀತಿ ಸ್ವಲ್ಪವಾದರೂ ಪರದಲ್ಲಿ ಅದರಿಂದ ಮಹತ್ತಾದ ಫಲವುಂಟೆಂದು ದೇವಾನಾಂಪ್ರಿಯ ತಿಳಿದಿರುವನು.

ಇದಕ್ಕಾಗಿಯೇ ಈ ಧರ್ಮಲಿಪಿಯನ್ನು ಬರೆಸಿರುವುದು: ನನ್ನ ಪುತ್ರರೂ ಪ್ರಪೌತ್ರರೂ ಹೊಸ ವಿಜಯವನ್ನು ಗಳಿಸಬೇಕೆಂದು ಯೋಚಿಸದಿರಲಿ. ಒಂದು ವೇಳೆ ಅವರಿಗೆ ಹೊಸ ವಿಜಯ ರುಚಿಕರವಾಗಿ ಕಂಡುಬಂದರೂ ಅವರಿಗೆ ಕ್ಷಮೆಯೂ ಲಘುವಾದ ದಂಡನೆಗಳನ್ನು ಕೊಡುವ ಯೋಚನೆಯೂ ರುಚಿಸಲಿ. ಧರ್ಮವಿಜಯವೇ ವಿಜಯವೆಂದು ಅವರು ತಿಳಿಯಲಿ. ಇಹಲೋಕಕ್ಕೂ ಪರಲೋಕಕ್ಕೂ ಅದೇ. ಉಳಿದವುಗಳಲ್ಲಿ ಆಸೆಯನ್ನು ತೊರೆದು ಅವರು ಧರ್ಮರತಿಯನ್ನೇ ಬೆಳೆಸಲಿ. ಇಹ ಲೋಕಕ್ಕೂ ಪರಲೋಕಕ್ಕೂ ಅದೇ !

ಶಾಸನಗಳ ಲಿಪಿ: ಇವನ ಶಾಸನಗಳೆಲ್ಲ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳಲ್ಲಿವೆ. ಬ್ರಾಹ್ಮಿ ಬರೆಹವನ್ನು ಎಡಗಡೆಯಿಂದ ಬಲಗಡೆಗೂ ಖರೋಷ್ಠಿಯನ್ನು ಈಗಿನ ಉರ್ದು ಭಾಷೆಯಂತೆ ಬಲದಿಂದ ಎಡಕ್ಕೂ ಓದಬೇಕು. ಷಾಭಾಷ್‌ಗಡಿಯಲ್ಲಿರುವ 14 ಶಾಸನಗಳು, ಮನ್ಸೇರಾದಲ್ಲಿರುವ 1 ಶಾಸನ - ಒಟ್ಟು 15 ಶಾಸನಗಳು ಖರೋಷ್ಠಿ ಲಿಪಿಯಲ್ಲಿವೆ. ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಶಾಸನದ ಕೊನೆಯ ಪಂಕ್ತಿ ಖರೋಷ್ಠಿ ಯಲ್ಲಿದೆ. 1928-29ರಲ್ಲಿ ರಾವ್ ಬಹದ್ದೂರ್ ದಯಾರಾಮ್ ಸಾಹನಿಯವರು ಪ್ರಕಟಿಸಿರುವ ಶಾಸನದಲ್ಲಿ ಎಂಟು ಪಂಕ್ತಿಗಳು ಖರೋಷ್ಠಿಯಲ್ಲೂ ಉಳಿದ ಹದಿನೈದು ಬ್ರಾಹ್ಮಿ ಲಿಪಿಯಲ್ಲೂ ಇವೆ. ಈ ಲಿಪಿಗಳ ಮೂಲ ಸರಿಯಾಗಿ ತಿಳಿದಿಲ್ಲ. ಈಗ ಭಾರತದಲ್ಲಿ ಪ್ರಚಾರವಿರುವ ಎಲ್ಲ ಪ್ರಾಂತ್ಯಗಳ ಭಾಷೆಗಳ ಲಿಪಿಗಳಿಗೆಲ್ಲ ಬ್ರಾಹ್ಮಿಲಿಪಿಯೇ ಆಧಾರವೆಂದು ನಿಷ್ಕರ್ಷಿಸಲಾಗಿದೆ. ಸಿಂಧೂನದಿ ತೀರದ ಹರಪ್ಪ ಮೊಹೆಂಜೋದಾರೊ ಪ್ರದೇಶಗಳಲ್ಲಿ ಸಿಕ್ಕಿರುವ ಮುದ್ರಿಕೆಗಳಲ್ಲಿರುವ ಚಿತ್ರಲಿಪಿಗೂ ಬ್ರಾಹ್ಮಿ ಖರೋಷ್ಠಿ ಲಿಪಿಗಳಿಗೂ ನಡುವಣ (2000 ವರ್ಷಗಳು) ಸಂಬಂಧ ತಿಳಿಸುವ ಯಾವ ಬರೆವಣಿಗೆಯೂ ದೊರೆತಿಲ್ಲ. ಲಿಪಿ ಶಬ್ದ ಪ್ರಯೋಗವನ್ನು ಪಾಣಿನಿ ಪ್ರ.ಶ.ಪೂ.5ನೆಯ ಶತಮಾನದಲ್ಲಿ ಮಾಡಿದ್ದಾನೆ. ಇದು ಪಾರಸಿ ಭಾಷೆಯಿಂದ ಹುಟ್ಟಿದುದೆಂದು ಬೇಲಿ ಎಂಬ ವಿದ್ವಾಂಸ ಅಭಿಪ್ರಾಯಪಡುತ್ತಾನೆ. ಭಾರತದಲ್ಲಿ ಬರೆವಣಿಗೆ ಬೌದ್ಧರ ಕಾಲದಿಂದಲೇ ಪ್ರಚಾರವಾಯಿತೆಂದು ಹೇಳಬಹುದು. ಪ್ರ.ಶ.ಪೂ.5ನೆಯ ಶತಮಾನದ ಶೀಲಸುತ್ತ ಎಂಬ ಬೌದ್ಧ ಗ್ರಂಥದಲ್ಲಿ ಅಕ್ಖರಿಕ ಎಂಬ ಮಕ್ಕಳ ಆಟದ ವಿಷಯವಿದೆ. ಬುದ್ಧ ಚಿಕ್ಕವನಾಗಿದ್ದಾಗಲೇ ಬರೆವಣಿಗೆ ಕಲಿತನೆಂದು ಲಲಿತವಿಸ್ತರ ಎಂಬ ಗ್ರಂಥದಲ್ಲಿ ಹೇಳಿದೆ. ಈ ಗ್ರಂಥದಲ್ಲಿಯೇ ಬ್ರಾಹ್ಮಿಲಿಪಿಯ 64 ಪ್ರಭೇದಗಳು ಹೇಳಲ್ಪಟ್ಟಿವೆ. ಆದರೆ ಅಶೋಕನ ಬ್ರಾಹ್ಮಿಲಿಪಿಯಲ್ಲಿ ಔತ್ತರೇಯ, ದಾಕ್ಷಿಣಾತ್ಯ ಎಂಬ ಭೇದಗಳು ಮಾತ್ರ ಕಾಣುತ್ತವೆ.

ಶಾಸನಗಳ ಭಾಷೆ: ಅಶೋಕನ ಶಾಸನದ ಭಾಷೆಯನ್ನು ಅರ್ಧಮಾಗಧಿ ಎಂದು ಕರೆಯುವರು. ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳ ಭಾಷೆ ಪ್ರಾಕೃತ. ಈ ಕಾಲದಲ್ಲಿ ಹುಟ್ಟಿದ ಜೈನ, ಬೌದ್ಧಧರ್ಮ ಗ್ರಂಥಗಳೆಲ್ಲ ಪ್ರಾಕೃತ ಭಾಷೆಯಲ್ಲೇ ಇವೆ. ಭಾರತದ ಎಲ್ಲ ಕಡೆಯಲ್ಲೂ ಪ್ರಶ.ಪೂ.6-3ನೆಯ ಶತಮಾನದವರೆಗೆ ಪ್ರಾಕೃತ ಭಾಷೆ ವ್ಯವಹಾರದಲ್ಲಿತ್ತೆಂದು ಆ ಕಾಲಗಳಲ್ಲಿ ಹುಟ್ಟಿರುವ ಶಾಸನಗಳಿಂದ ತಿಳಿಯಬಹುದಾಗಿದೆ. ಈ ಶಾಸನಗಳನ್ನು ಓದಿ ಅರ್ಥವಿವರಣೆ ಕೊಟ್ಟ ಯಶಸ್ಸು ಜೇಮ್ಸ್ ಪ್ರಿನ್ಸೆಪ್ ಎಂಬ ವಿದ್ವಾಂಸನಿಗೆ ಸಲ್ಲತಕ್ಕದ್ದು. ದೇಶದ ನಾನಾ ಭಾಗಗಳಲ್ಲಿ ದೊರೆತ ಅಶೋಕನ ಶಾಸನಗಳ ಪ್ರತಿಯಿಟ್ಟುಕೊಂಡು ಅವುಗಳಲ್ಲಿ ಬರುವ ಒಂದೇ ವಿಧವಾದ ಚಿಹ್ನೆಗಳನ್ನು ಬೇರೆ ಬರೆದು ಅವುಗಳಿಗೆ ಶಬ್ದಸ್ವರೂಪ ಕೊಟ್ಟು ಕೆಲವು ಶಾಸನಗಳನ್ನು ಪ್ರಕಟಿಸಿದ ಮೇಲೆ ಅದೇ ಮಾರ್ಗವನ್ನು ಅನುಸರಿಸಿ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ಆಯಾ ಪ್ರಾಂತ್ಯಗಳಲ್ಲಿ ದೊರೆತ ಶಾಸನಗಳನ್ನು ಓದಿ ಪ್ರಕಟಿಸಿದರು. ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಸಿದ್ದಾಪುರದ ಸಮೀಪದಲ್ಲೇ ಇರುವ ಎಮ್ಮೆತಮ್ಮನ ಗುಂಡು ಎಂದು ಕರೆಯುವ ಬಂಡೆಯ ಶಾಸನ, ಅದಕ್ಕೆ ಸು.5 ಕಿಮೀ ದೂರದಲ್ಲಿರುವ ಜಟಿಂಗ ರಾಮೇಶ್ವರ ಬೆಟ್ಟದ ಮೇಲಿನ ಶಾಸನ, ಒಟ್ಟು ಮೂರು ಅಶೋಕನ ಶಾಸನಗಳನ್ನು ಬಿ.ಎಲ್.ರೈಸ್ ಎಪಿಗ್ರಾಫಿಯ ಕರ್ನಾಟಿಕ ಎಂಬ ಕನ್ನಡ ಶಾಸನಗಳ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಮೊದಮೊದಲು ಅಶೋಕನ ಶಾಸನಗಳು ರಾಯಲ್ ಏಷ್ಯಾಟಿಕ್ ಸೊಸೈಟಿಯ ಬಂಗಾಲ, ಬೊಂಬಾಯಿ, ಲಂಡನ್ ಶಾಖೆಗಳ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅನಂತರ ಇಂಡಿಯನ್ ಆಂಟಿಕ್ವೆರಿ, ಎಪಿಗ್ರಾಫಿಯ ಇಂಡಿಕ, ಎಪಿಗ್ರಾಫಿಯ ಕರ್ನಾಟಿಕ ಮುಂತಾದ ಸಂಪುಟಗಳಲ್ಲಿ ಈ ಶಾಸನಗಳನ್ನು ಓದಿ ಟೀಕೆ ಟಿಪ್ಪಣಿಗಳನ್ನು ಮಾಡಿ ಪ್ರಕಟಿಸಲಾಗಿದೆ. 1922ರವರೆಗೆ ಸಂಗ್ರಹಿಸಿದ ಅಶೋಕನ ಶಾಸನಗಳನ್ನೆಲ್ಲ ಸಂಗ್ರಹಿಸಿ ಹುಲ್ಷ್ ಎಪಿಗ್ರಾಫಿಯ ಇಂಡಿಕದ ಮೊದಲನೆಯ ಸಂಪುಟದಲ್ಲಿ ಶಾಸನಗಳ ಮೂಲ ರೂಪ, ಅದರ ಇಂಗ್ಲಿಷ್ ಭಾಷಾಂತರ, ಲಿಪಿ, ಭಾಷೆ ಮೊದಲಾದ ವಿಷಯಗಳನ್ನೆಲ್ಲ ವಿಮರ್ಶನಾತ್ಮಕವಾಗಿ ವಿವರಿಸಿ ಒಂದು ದೊಡ್ಡ ಉದ್ಗ್ರಂಥವನ್ನು ಪ್ರಕಟಿಸಿದ್ದಾನೆ. (ಆರ್.ಸಿ.;ಆರ್.ಸಿ.ಬಿ.)

**ಅಷ್ಟಾಹ್ನಿಕ ಪರ್ವ:** ಜೈನ ಹಬ್ಬಗಳಲ್ಲೊಂದು. ಈ ಹಬ್ಬವನ್ನು ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳ ಶುಕ್ಲಪಕ್ಷ ಅಷ್ಟಮಿಯಿಂದ ಹುಣ್ಣಿಮೆಯವರೆಗೆ ಆಚರಿಸಲಾಗುವುದು. ಇದಕ್ಕೊಂದು ಸಾಂಪ್ರದಾಯಿಕ ನಂಬುಗೆಯ ಹಿನ್ನೆಲೆಯಿದೆ. ಈ ಭೂಮಿಯಲ್ಲಿರುವ ದ್ವೀಪಗಳಲ್ಲಿ ಎಂಟನೆಯ ನಂದೀಶ್ವರ ದ್ವೀಪದಲ್ಲಿಯ 52 ಜಿನಾಲಯಗಳ ಪೂಜೆಯನ್ನು ಸ್ವರ್ಗವಾಸಿ ದೇವತೆಗಳು ಮಾತ್ರ ಮಾಡಲು ಸಾಧ್ಯ. ಇದು ಮಾನವರು ಆ ಸಮಯದಲ್ಲಿ ಆಚರಿಸುವ ಹಬ್ಬವಾಗಿದೆ. (ಎ.ಎಸ್.)

**ಅಸಹಕಾರ ಚಳವಳಿ:** ಸರ್ಕಾರದ ಅಥವಾ ವ್ಯವಸ್ಥೆಯ ವಿರುದ್ಧ ಜನತೆ ತನ್ನ ಅಸಮ್ಮತಿ, ವಿರೋಧ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸುವ ಒಂದು ವಿಧಾನ. ಇದು ಸಕ್ರಮವಿರಬಹುದು; ಅಕ್ರಮವೆನಿಸಿಕೊಳ್ಳಬಹುದು. ಒಂದು ಶಾಸನಕ್ಕೆ ಒಂದು ಕ್ಷೇತ್ರಕ್ಕೆ ಮೀಸಲಾಗಿರಬಹುದು ಅಥವಾ ಸರ್ಕಾರವನ್ನಷ್ಟೇ ಮಾರ್ಪಡಿಸುವ ಕ್ರಮವಾಗಿಯೂ ಇದನ್ನು ಬಳಸಿಕೊಳ್ಳಬಹುದು.

ಜನ ತಮ್ಮ ಸಹಕಾರವನ್ನು ನಿರಾಕರಿಸಿ, ಸರ್ಕಾರವನ್ನು ದಾರಿಗೆ ತರಬಹುದು ಎಂಬ ತತ್ತ್ವವನ್ನು ಥೋರೋ, ಟಾಲ್‌ಸ್ಟಾಯ್, ರಸ್ಕಿನ್ ಮೊದಲಾದವರು ಪ್ರತಿಪಾದಿಸಿದರು. ಈ ಸಿದ್ಧಾಂತವನ್ನೇ ಆಧಾರವಾಗಿಟ್ಟುಕೊಂಡು ಭಾರತದಲ್ಲಿ ಮಹಾತ್ಮಾ ಗಾಂಧಿ ಇದನ್ನು ಅನೇಕ ಸನ್ನಿವೇಶಗಳಲ್ಲಿ ಬೃಹತ್‌ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತಂದರು. ಸತ್ಯಯುತ, ಅಹಿಂಸಾತ್ಮಕ ಪ್ರತಿಭಟನೆ ಸತ್ಯಾಗ್ರಹ ಎನಿಸಿಕೊಂಡಿತು. ಅಮೆರಿಕದ ಅರಾಜಕತಾವಾದಿ ಬೆಂಜಮಿನ್ ಟಕರ್ ಅಸಹಕಾರದ ಹೋರಾಟವನ್ನು ಈ ರೀತಿ ಸಮರ್ಥಿಸುತ್ತಾನೆ: ಒಂದು ರಾಜ್ಯದ 1/5 ಭಾಗದ ಜನ ತೆರಿಗೆ ಕೊಡಲು ನಿರಾಕರಿಸಿದರೆ ಉಳಿದ ನಾಲ್ಕುಭಾಗದ ಪ್ರಜೆಗಳು ತೆರಿಗೆ ಕೊಡಲು ಸಮ್ಮತಿಸಿ ತೆರಿಗೆ ತೆತ್ತರೂ ಆ ಹಣವೆಲ್ಲ ತೆರಿಗೆ ವಸೂಲಿಗಾಗಿಯೇ ವೆಚ್ಚವಾಗಿ ಹೋಗುತ್ತದೆ. ಹಿಂಸಾತ್ಮಕ ಚಳವಳಿಯನ್ನು ಸರ್ಕಾರ ಸದೆಬಡಿಯಬಲ್ಲದು. ಆದರೆ ಅಹಿಂಸಾತ್ಮಕ ಹೋರಾಟವನ್ನು ತುಳಿದುಹಾಕುವುದು ಅಸಾಧ್ಯ.

ಪ್ಯಾಸಿಫಿಸಂ ಅಥವಾ ಯುದ್ಧವಿರೋಧ, ಶಾಂತಿಯುತ ಕಾನೂನುಭಂಗ (ಸಿವಿಲ್ ಡಿಸ್‌ಒಬಿಡಿಯನ್ಸ್) ಕಾನೂನು ಕಟ್ಟಳೆಗಳನ್ನು ವಿಧಿಪೂರ್ವಕ ವಿರೋಧಿಸುವುದು, ಸಾತ್ತ್ವಿಕ ವಿರೋಧ (ಪ್ಯಾಸಿವ್ ರೆಸಿಸ್ಟೆನ್ಸ್); ಅಸಹಕಾರ (ನಾನ್-ಕೋಆಪರೇಷನ್) ಇವು ಅಸಹಕಾರ ಚಳವಳಿಯ ವಿವಿಧ ರೂಪಾಂತರಗಳು. ನೈತಿಕ ಕಾರಣಗಳಿಗಾಗಿ ಯುದ್ಧವನ್ನು ವಿರೋಧಿಸುವುದು

ಯುದ್ಧವಿರೋಧಿಯ ಮುಖ್ಯ ಧ್ಯೇಯ. ಆತ ತನಗೆ ಏನೇ ವಿಪತ್ತು ಬಂದರೂ ಯುದ್ಧೋದ್ಯಮದಲ್ಲಿ ಸಹಕರಿಸನು; ಸಿಪಾಯಿ ಯಾಗಿ ದುಡಿಯನು. ಕೇವಲ ತಟಸ್ಥನಾಗಿರುವುದರಲ್ಲಿ ಆತ ಸಮಾಧಾನ ಪಡೆಯುವನು; ಇಲ್ಲವೆ ಯುದ್ಧವನ್ನು ಹೂಡುವನು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಸು.16,000 ಯುದ್ಧ ವಿರೋಧಿಗಳಿದ್ದರು. ಎರಡನೆಯ ಮಹಾಯುದ್ಧದಲ್ಲಿ ಮಾರ್ಚ್ 1940ರವರೆಗೆ ಇವರ ಸಂಖ್ಯೆ 26,681 ಇದ್ದಿತು. ತತ್ತ್ವಜ್ಞಾನಿ ಬರ್ಟ್ರೆಂಡ್ ರಸಲ್, ವಿಜ್ಞಾನಿ ಹಕ್ಸ್ಲಿ, ರಾಜಕಾರಣಿ ಫೆನ್ನರ್ ಬ್ರಾಕ್‌ವೆ ಮೊದಲಾದ ಮೇಧಾವಿಗಳು ಯುದ್ಧದಲ್ಲಿ ಭಾಗ ವಹಿಸಲು ನಿರಾಕರಿಸಿ ಸೆರೆಮನೆ ಸೇರಿದರು. ಈಗ ಅನೇಕ ದೇಶಗಳಲ್ಲಿ ಯುದ್ಧ ವಿರೋಧಿ ಸಂಸ್ಥೆಗಳಿವೆ.

ಧರ್ಮವಿರುದ್ಧ, ನೀತಿವಿರುದ್ಧ, ಅಪ್ರಿಯವಾದ ಅಥವಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಶಾಸನವನ್ನು ಶಾಂತಿಯುತ ಕ್ರಮಗಳಿಂದ ವಿರೋಧಿಸುವುದೇ ಶಾಂತಿಯುತ ಕಾನೂನುಭಂಗ ಚಳವಳಿ. ಅಪ್ರಿಯವಾದ ಶಾಸನವನ್ನು ಉದ್ದೇಶಪೂರ್ವಕವಾಗಿ ಧಿಕ್ಕರಿಸಿ ನ್ಯಾಯಾಲಯದ ವಿಚಾರಣೆಗೆ ಅದನ್ನು ಒಳಪಡಿಸುವುದೂ ಒಂದು ಕ್ರಮ. ಅಪ್ರಿಯ ಶಾಸನವನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರತಿಭಟಿಸಿ, ನ್ಯಾಯಾಲಯ ವಿಧಿಸುವ ಶಿಕ್ಷೆಯನ್ನು ಸ್ವಾಗತಿಸಿ ಅನುಭವಿಸುವುದು ಮತ್ತೊಂದು ಕ್ರಮ. ಜನಕ್ಕೆ ಬೇಡವಾದ ಕಾನೂನನ್ನು ಮಾತ್ರವಲ್ಲದೆ, ಸಾತ್ತ್ವಿಕ ವಿರೋಧ ಸರ್ಕಾರವನ್ನೇ ಪ್ರತಿಭಟಿಸಬಹುದು. ಈ ಪದ್ಧತಿ ಹಿಂಸಾಮಾರ್ಗವನ್ನೂ ತಿರಸ್ಕರಿಸದು.

1902ರಲ್ಲಿ ಇಂಗ್ಲೆಂಡಿನಲ್ಲಿ ಶಿಕ್ಷಣಶುಲ್ಕವನ್ನು ಪ್ರತಿಭಟಿಸಲು ನಡೆದ ಸಾತ್ತ್ವಿಕ ವಿರೋಧ ಚಳವಳಿಯಲ್ಲಿ ಭಾಗವಹಿಸಲು 60,000 ಜನ ಸಿದ್ಧರಾಗಿದ್ದು 254 ಜನ ಸೆರೆಮನೆ ಸೇರಿದರು. 18ನೆಯ ಶತಮಾನದಲ್ಲಿ ಹಂಗರಿಯ ಜನ ಡೀಕನ ಮುಂದಾಳತ್ವದಲ್ಲಿ ಆಸ್ಟ್ರಿಯ ಚಕ್ರವರ್ತಿ ಮಂತ್ರಿಮಂಡಲ ಸ್ಥಾಪಿಸಲು ಹಂಗರಿಯಲ್ಲಿ ಕೈಗೊಂಡ ಕ್ರಮವನ್ನು ಸಾತ್ತ್ವಿಕ ವಿರೋಧದಿಂದ ಪ್ರತಿಭಟಿಸಿದರು. 1857ರಲ್ಲಿ ಹಂಗರಿ ಪೂರ್ಣಸ್ವಾತಂತ್ರ್ಯ ಪಡೆಯಿತು. 1919ರಲ್ಲಿ ಈಜಿಪ್ಟ್ ಜಗಲೂಲ್‌ಪಾಷಾನ ನೇತೃತ್ವದಲ್ಲಿ ಬ್ರಿಟನ್‌ವಿರುದ್ಧ ಅಸಹಕಾರ ಚಳವಳಿ ಹೂಡಿ ಸ್ವಾತಂತ್ರ್ಯ ಗಳಿಸಿತು. 1910ರಿಂದ ಒಂಬತ್ತು ವರ್ಷಗಳ ಕಾಲ ಕೊರಿಯ ಸಾತ್ತ್ವಿಕ ವಿರೋಧ ಚಳವಳಿ ಹೂಡಿ ಜಪಾನಿನಿಂದ ಸ್ವಾತಂತ್ರ್ಯವನ್ನು ಗಳಿಸಿತು. 1923ರಲ್ಲಿ ಒಂದನೆಯ ಮಹಾಯುದ್ಧದ ತರುವಾಯ ಫ್ರೆಂಚರು ಜರ್ಮನಿಗೆ ಸೇರಿದ ರ್ಹೂರ್ ಕೈಗಾರಿಕಾ ಪ್ರದೇಶವನ್ನು ವಶಪಡಿಸಿಕೊಂಡರು. ಇದರಿಂದ ಕೋಪಗೊಂಡ ಜರ್ಮನ್ ಸರ್ಕಾರ ಫ್ರೆಂಚ್ ಸರ್ಕಾರದ ವಿರುದ್ಧ ಸಾತ್ತ್ವಿಕ ವಿರೋಧ ಚಳವಳಿ ಹೂಡಿ ಫ್ರೆಂಚರಿಗೆ ಒಂದು ಟನ್ ಕಲ್ಲಿದ್ದಲು ಸಹ ದೊರೆಯದಂತೆ ಮಾಡಿತು. 1925ರಲ್ಲಿ ಚಳವಳಿಯಿಂದ ಬೇಸತ್ತ ಫ್ರೆಂಚ್ ಸರ್ಕಾರ ತನ್ನ ಸೇನಾಬಲವನ್ನು ಹಿಂದಕ್ಕೆ ಕರೆಸಿಕೊಂಡು ಜರ್ಮನಿಯೊಡನೆ ಒಪ್ಪಂದಮಾಡಿಕೊಂಡಿತು. ಒಂದು ಸರ್ಕಾರ ಮತ್ತೊಂದು ಸರ್ಕಾರವನ್ನು ಸಾತ್ತ್ವಿಕ ವಿರೋಧ ಕ್ರಮದಿಂದ ವಿರೋಧಿಸಿರುವ ಅಪೂರ್ವ ನಿದರ್ಶನವಿದು. 1920–35ರ ವರೆಗೆ ಪಶ್ಚಿಮ ಸಮೋವದ ಜನ ನ್ಯೂಜಿಲೆಂಡ್ ಸರ್ಕಾರದ ವಿರುದ್ಧ ದೀರ್ಘಾವಧಿ ಸಾತ್ತ್ವಿಕ ವಿರೋಧ ಚಳವಳಿ ನಡೆಸಿ ತಮ್ಮ ಗುರಿ ಸಾಧಿಸಿಕೊಂಡರು. ಇವು ಚರಿತ್ರಾರ್ಹವಾದ ಕೆಲವು ನಿದರ್ಶನಗಳು.

ಈ ವಿಧಾನಗಳೆಲ್ಲ ಒಂದಾಗಿ ತೋರಿದರೂ ಸತ್ಯ, ಶಾಂತಿ, ಅಹಿಂಸೆ, ಆತ್ಮಬಲ– ಇವುಗಳ ಆಧಾರವಾದ ಮಹಾತ್ಮ ಗಾಂಧಿಯವರ ಸತ್ಯಾಗ್ರಹ ತತ್ತ್ವಶಃ ಪ್ರತ್ಯೇಕವಾದುದು. (ವಿ.ಎಸ್.ಎಸ್.)

**ಅಸುರ್ಗಡ:** ಒರಿಸ್ಸ ರಾಜ್ಯದ ಕಾಳಹಂಡಿ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಈ ನೆಲೆ ಸುತ್ತಮುತ್ತಲಿನ ಭೂ ಪ್ರದೇಶಕ್ಕಿಂತ ಸು.2 ಮೀ ಎತ್ತರದಲ್ಲಿದೆ. ಇಲ್ಲಿರುವ ಮನೋಹರವಾಗಿರುವ ಕೋಟೆ (ಸು.300×200 ಮೀ) ಬಹುಮುಖ್ಯ ಸ್ಮಾರಕವಾಗಿದೆ. ಕೋಟೆಯ ನಾಲ್ಕು ದಿಕ್ಕುಗಳಲ್ಲೂ ಮಹಾದ್ವಾರಗಳಿದ್ದು, ಅದರ ಗೋಡೆಗಳು ತಳಪಾಯದಿಂದ ಎದ್ದು ಕಾಣುತ್ತವೆ. ಈ ಗೋಡೆಗಳನ್ನು ಮಣ್ಣು ಮತ್ತು ಗಾರೆಯಿಂದ (ಕಂಕರ್) ಕಟ್ಟಲಾಗಿದೆ. ಅಂತೆಯೇ ದ್ವಾರಗಳ ಪ್ರವೇಶ ಭಾಗಗಳನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಈ ಕೋಟೆಯ ಮೂರು ಕಡೆಗಳಲ್ಲಿ ಕಂದಕಗಳನ್ನು ತೋಡಿದ್ದರೆ, ಮತ್ತೊಂದು ಕಡೆಯಲ್ಲಿ ಸಣ್ಣ ತೊರೆ ಇದೆ. ಸಂಬಾಲ್‌ಪುರ ವಿಶ್ವವಿದ್ಯಾಲಯದವರು ಕೈಗೊಂಡ ಕೋಟೆಯೊಳಗಿನ ಉತ್ಖನನದಲ್ಲಿ 5–6 ನೆಯ ಶತಮಾನಕ್ಕೆ ಸೇರಿದ ಇಟ್ಟಿಗೆಯ ನಿರ್ಮಿತಿ ದೊರಕಿದೆ. ಇದಕ್ಕೆ ಮುಂಚಿನ ಪದರಿನಲ್ಲಿ ಕಪ್ಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಕಂಡುಬಂದಿವೆ. ಮೇಲ್ಭಾಗದ ಪದರದಲ್ಲಿ ಮಧ್ಯಯುಗೀನ ಕೆಂಪುಬಣ್ಣದ ಪಾತ್ರೆಗಳಿವೆ. ಇನ್ನಿತರ ಅವಶೇಷಗಳೆಂದರೆ ಮುದ್ರಾಂಕಿತ ಬೆಳ್ಳಿ ನಾಣ್ಯಗಳು, ಪುರಿ–ಕುಷಾಣರ ತಾಮ್ರದ ನಾಣ್ಯಗಳು, ಸುಡಾವೆಮಣ್ಣಿನ ಆಕೃತಿಗಳು ಹಾಗೂ ಅರೆಪ್ರಶಸ್ತ ಶಿಲೆಯ ಮಣಿಗಳು. (ಎನ್‌ಆರ್.)

**ಅಸ್ಸಾಮಿನ ಪುರಾತತ್ತ್ವ:** ಬ್ರಹ್ಮಪುತ್ರ ಕಣಿವೆ ಮತ್ತು ಸಾದಿಯ ಗಡಿವಿಭಾಗಗಳಲ್ಲಿ ದೊರಕಿರುವ ನವ ಶಿಲಾಯುಗದ ಶಿಲೋಪಕರಣಗಳ ಬಗ್ಗೆ ವಿಶೇಷ ಅಧ್ಯಯನವನ್ನು ನಡೆಸಿರುವ ಅಬ್ದುಲ್ ಹಸನ್‌ದಾನಿ ಇಲ್ಲಿಯ ನವಶಿಲಾಯುಗದ ಸಂಸ್ಕೃತಿಗಳು ಚೀನ ಮತ್ತು ಆಗ್ನೇಯ ಏಷ್ಯದ ಸಂಸ್ಕೃತಿಗಳ ಬುಡಕಟ್ಟಿಗೆ ಸೇರಿದವೆಂದು ಭಾರತದ ಇತರ ಭಾಗಗಳಲ್ಲಿ ಪ್ರಚಲಿತವಾಗಿದ್ದ ನವಶಿಲಾಯುಗದ ಸಂಸ್ಕೃತಿಗಳಿಗೂ ಅಸ್ಸಾಮಿನದಕ್ಕೂ ಸ್ಪಷ್ಟ ಸಂಬಂಧವೇನೂ ಇಲ್ಲವೆಂದು ವಿವರಿಸಿದ್ದಾನೆ. ಅಲ್ಲದೆ ಈ ಶಿಲೋಪಕರಣಗಳಲ್ಲಿ ಕೆಲವು ಲೋಹದ ಉಪಕರಣಗಳ ಮಾದರಿಯಲ್ಲಿ ತಯಾರಿಸಲ್ಪಟ್ಟವೆಂದೂ ಇನ್ನು ಕೆಲವು ಲೋಹದ ತಂತಿ ಅಥವಾ ಉಳಿಯನ್ನು ಉಪಯೋಗಿಸಿಯೇ ಮಾಡಲ್ಪಟ್ಟಿರಬೇಕೆಂದು ನಿಷ್ಕರ್ಷಿಸಿ, ಅದೇ ಕಾರಣಗಳಿಂದ ಅಸ್ಸಾಮಿನ ನವಶಿಲಾಯುಗದ ಸಂಸ್ಕೃತಿಗಳು ಪ್ರ.ಶ.ಪೂ.1300 ಅಥವಾ 1200 ಕ್ಕಿಂತ ಈಚಿನವೆಂದು ಅಭಿಪ್ರಾಯಪಟ್ಟಿದ್ದಾನೆ. ಅಸ್ಸಾಮಿನ ನವಶಿಲಾಯುಗದ ಕೆಲವು ರೀತಿಯ ಉಪಕರಣಗಳನ್ನು ಮಾಡುವಾಗ ದೊಡ್ಡ ಕಲ್ಲಿನಿಂದ ಚಕ್ಕೆಗಳನ್ನು ತೆಗೆದು, ಅವುಗಳ ಸಾಮಾನ್ಯ ರೂಪವನ್ನು ಸಾಧಿಸಿದ ಅನಂತರ ಅಲ್ಲಲ್ಲಿ ಕಲ್ಲಿನಿಂದ ಕುಟುಕಿ ಓರೆಕೋರೆಗಳನ್ನು ಸರಿಪಡಿಸಿಕೊಂಡು, ಕೊನೆಯದಾಗಿ ಉಜ್ಜಿ ನಯಮಾಡುವುದು ಸಾಮಾನ್ಯ ವಿಧಾನವಾಗಿತ್ತು. ಈ ಶಿಲೋಪಕರಣಗಳೆಲ್ಲವೂ ಒಂದೇ ಸಾಂಸ್ಕೃತಿಕ ಪರಂಪರೆಗೆ ಸೇರಿದುವಾದರೂ ವಿವಿಧ ಪ್ರದೇಶಗಳಲ್ಲಿ ದೊರಕುವ ಉಪಕರಣಗಳ ರಚನಾರೀತಿಗಳಲ್ಲಿ ಮತ್ತು ಕಲ್ಲಿನ ಉಪಯೋಗದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿವೆ ಉದಾ: ಸಾದಿಯ ಗಡಿ ವಿಭಾಗದಲ್ಲಿಯ ಉಪಕರಣಗಳು ಜೇಡ್ ಕಲ್ಲಿನವಾದರೆ, ನಾಗಾಬೆಟ್ಟದವು ಪಟ್ಟೆಗಲ್ಲಿನವು. ಮರಳುಗಲ್ಲು ಮತ್ತು ಪಳೆಯುಳಿಕೆಯ ಮರ ಸಹ ಬಳಕೆಯಲ್ಲಿತ್ತು. ಅಸ್ಸಾಮಿನ ಶಿಲಾಯುಗದ ವಿಷಯದಲ್ಲಿ ಇಲ್ಲಿಯ ಉಪಕರಣಗಳ ಬಗ್ಗೆ ಮಾತ್ರ ತಿಳಿದು ಬಂದಿದೆ. ಪೂರ್ವಭಾರತದ ನವಶಿಲಾಯುಗದ ಸಂಸ್ಕೃತಿಯ ಕರ್ತೃಗಳು ಆಸ್ಟ್ರಿಕ್ ಭಾಷೆಯನ್ನಾಡುತ್ತಿದ್ದ ಜನರಿರಬಹುದೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. ಆದರೆ ಇದಕ್ಕೆ ಖಚಿತ ಆಧಾರಗಳೇನೂ ದೊರಕಿಲ್ಲ.

ಅಸ್ಸಾಮಿನ ಕೆಲವು ಪ್ರದೇಶಗಳಲ್ಲಿ ಬೃಹತ್‌ಶಿಲಾಸಮಾಧಿಗಳು ಬೆಳಕಿಗೆ ಬಂದಿವೆ. ಆದರೆ ಇವುಗಳ ಕಾಲವಾಗಲೀ ಕರ್ತೃಗಳ ವಿಷಯವಾಗಲೀ ಸಂಬಂಧಪಟ್ಟ ಸಂಸ್ಕೃತಿಯ ವಿವರವಾಗಲೀ ಏನೂ ತಿಳಿದಿಲ್ಲ. ಇತ್ತೀಚಿನವರೆಗೂ ಇಲ್ಲಿಯ ಕೆಲವು ಆದಿವಾಸಿಗಳು ಬೃಹತ್ ಶಿಲಾಸಮಾಧಿಗಳನ್ನು ನಿರ್ಮಿಸುತ್ತಿದ್ದರೆಂಬುದಕ್ಕೆ ಆಧಾರಗಳಿವೆ.

ಭೂಕಂಪ ಮತ್ತು ಅತಿವೃಷ್ಟಿ ಸಾಮಾನ್ಯವಾಗಿರುವ ಅಸ್ಸಾಮ್ ಪ್ರದೇಶದಲ್ಲಿ ಪ್ರಾಚೀನ ಕಾಲದ ಕಟ್ಟಡಗಳು ಉಳಿದುಬರುವುದು ಅಪೂರ್ವ. ಭಗ್ನಾವಶೇಷಗಳು ಅಲ್ಲಲ್ಲಿ ಇದ್ದಿರಬಹುದಾದರೂ ಅಲ್ಲಿಯ ಯಥೇಚ್ಛವಾದ ಸಸ್ಯರಾಶಿ ಇವನ್ನು ಜನರ ದೃಷ್ಟಿಯಿಂದ ಬಹುಬೇಗ ಹುದುಗಿಸಿಬಿಡುತ್ತದೆ. ಅಕಸ್ಮಾತ್ತಾಗಿ ಕೆಲವು ಗುರುತಿಸಲ್ಪಟ್ಟಿದ್ದರೂ ಈ ಪ್ರದೇಶದಲ್ಲಿ ಸಂಚಾರ ಸೌಲಭ್ಯಗಳು ಕಡಿಮೆಯಿರುವುದರಿಂದ ಇವು ವಿದ್ವಾಂಸರನ್ನು ಆಕರ್ಷಿಸುವುದೂ ಕಡಿಮೆ. ಹೀಗಾಗಿ ಅಸ್ಸಾಮಿನ ವಾಸ್ತುಶಿಲ್ಪದ ಬಗ್ಗೆ ನಮಗೆ ತಿಳಿದಿರುವ ವಿಷಯ ಅತ್ಯಲ್ಪ. ಈಗಿನ ಗುವಾಹಟಿ ಮತ್ತು ತೇಜಪುರ ಊರುಗಳು ಪ್ರಾಚೀನ ಪ್ರಸಿದ್ಧ ಪ್ರಾಗ್ಜೋತಿಷಪುರ ಮತ್ತು ಹಾರುಪ್ಪೇಶ್ವರ ಪಟ್ಟಣಗಳ ಮೇಲೆ ಕಟ್ಟಲ್ಪಟ್ಟಿವೆ. ಗುವಾಹಟಿಯಲ್ಲಿ ಅನತಿದೂರದಲ್ಲಿ ಕೆಲವು ದೇವಮೂರ್ತಿಗಳು ಬಂಡೆಯ ಮೇಲೆ ಕೆತ್ತಲ್ಪಟ್ಟಿವೆ. ವಿಷ್ಣು, ಸೂರ್ಯ, ಗಣೇಶ, ದುರ್ಗಾದೇವತೆಗಳ ವಿಗ್ರಹಗಳೂ ಕೆಲವು ಪ್ರಾಚೀನ ಕಟ್ಟಡಗಳ ಕಂಬಗಳೂ ಅಲ್ಲಲ್ಲಿಯ ಅಗೆತದಲ್ಲಿ ಬೆಳಕಿಗೆ ಬಂದಿದೆ. ಗುವಾಹಟಿಯ ಬಳಿಯ ಊರ್ವಶೀ ದ್ವೀಪದಲ್ಲಿ ಸಹ ಇದೇ ರೀತಿಯ ವಿಗ್ರಹಗಳು ಸಿಕ್ಕಿವೆ. ತೇಜಪುರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯನ್ನು ಕಟ್ಟುವಾಗ, ದೊಡ್ಡ ದೊಡ್ಡ ಶಿಲ್ಪಗಳು ಸಿಕ್ಕಿದ್ದವು. ಇದರಲ್ಲಿ ಕೆಲವನ್ನು ಅಲ್ಲಿಯ ನಗರಸಭೆಯ ಉದ್ಯಾನದಲ್ಲಿ ಇರಿಸಲಾಗಿದೆ; ಇವುಗಳಲ್ಲಿಯ ಒಂದು ಕಂಬ ಕೆಳಭಾಗದಲ್ಲಿ ಹದಿನಾರು ಮುಖದ್ದಾಗಿದ್ದು ಮೇಲ್ಭಾಗದಲ್ಲಿ ಕಲ್ಯಾಣ ಚಾಳುಕ್ಯರ ದೇವಾಲಯಗಳ ಕಂಬಗಳಂತೇ ಗುಂಡಗೆ ತಿರುಗಣೆಗಳಲ್ಲಿ ತಿರುಗಿಸಿದ್ದಂತೆ ಇವೆ. ಅದರ ಮೇಲ್ಭಾಗದಲ್ಲಿ ದೇವಾಲಯದ ಮಾದರಿಯ ಕೆತ್ತನೆಯಿದ್ದು ಒಳಗೆ ಲಿಂಗವನ್ನು ತೋರಿಸಿದೆ. ಬಾಗಿಲವಾಡದ ಮೇಲ್ಪಟ್ಟಿಯಾಗಿದ್ದ ಇನ್ನೊಂದು ಕಲ್ಲಿನಲ್ಲಿ ಮಧ್ಯೆ ಸೂರ್ಯ ಮೂರ್ತಿಯೂ ಪಕ್ಕಗಳಲ್ಲಿ ಬ್ರಹ್ಮ ಮತ್ತು ಶಿವ ವಿಗ್ರಹಗಳೂ ಕೆತ್ತಲ್ಪಟ್ಟಿವೆ. ಈ ವಾಸ್ತುಶಿಲ್ಪದ ಅವಶೇಷಗಳು 10ನೆಯ ಶತಮಾನಕ್ಕೆ ಸೇರಿದವು. ಅದೇ ಉದ್ಯಾನದಲ್ಲಿಟ್ಟಿರುವ ಗಜಲಕ್ಷ್ಮಿಯ ಚಿತ್ರವಿರುವ ಕಲ್ಲು ಪ್ರಾಯಶಃ 12ನೆಯ ಶತಮಾನದ ದೇವಾಲಯದ್ದಿರಬಹುದೆಂಬುದು ವಿದ್ವಾಂಸರ ಊಹೆ.

ಅಸ್ಸಾಮಿನ ಅತಿಪ್ರಾಚೀನ ದೇವಾಲಯದ ಭಾಗಗಳು ತೇಜ್‌ಪುರದ ಬಳಿಯ ದಹ್‌ಪಾರ್ವತೀಯ ಎಂಬ ಗ್ರಾಮದಲ್ಲಿವೆ. ಇಲ್ಲಿದ್ದ ಇಟ್ಟಿಗೆಯ ದೇವಾಲಯ 1897ರ ಭೂಕಂಪದಲ್ಲಿ ಬಿದ್ದುಹೋದುದರಿಂದ, ಅದರಡಿಯಲ್ಲಿ ಸೇರಿಹೋಗಿದ್ದ 6ನೆಯ ಶತಮಾನದ ಗುಪ್ತಶೈಲಿಯ ಕಟ್ಟಡದ ಭಾಗಗಳು ಬೆಳಕಿಗೆ ಬಂದವು. ಬಾಗಿಲಿನ ಎರಡು ಕಡೆಯ ಕಂಬಗಳಲ್ಲಿ ಗಂಗ, ಯಮುನ ಶಿಲ್ಪಗಳಿವೆ. ಗಣಗಳು ಮತ್ತು ನಾಗನಾಗಿ ವಿಗ್ರಹಗಳನ್ನು ಕೆತ್ತಿರುವ ಕಲ್ಲುಗಳು ಸಹ ಇಲ್ಲಿ ದೊರಕಿವೆ. ಕಾಮರೂಪ ಜಿಲ್ಲೆಯ ಪ್ರಸಿದ್ಧ ಶಾಕ್ತಪೀಠವಾದ ಕಾಮಾಖ್ಯಾಹದಲ್ಲಿ, ಈಗಿರುವ ದೇವಾಲಯ ಬಹಳ ಇತ್ತೀಚಿನದಾದರೂ 7–8ನೆಯ ಶತಮಾನದ ಕೆಲವು ಶಿಲ್ಪಗಳೂ ಸಿಕ್ಕಿವೆ. ಕಾಮಾಖ್ಯ ಬೆಟ್ಟದಮೇಲೆ ಕಂಡುಬಂದ 10ನೆಯ ಶತಮಾನದ ಕೆಲವು ಸರಸ್ವತೀವಿಗ್ರಹ ಒಂದು ಸುಂದರ ಶಿಲ್ಪ. ಈ ಶಿಲ್ಪದಲ್ಲಿ ಬಿಹಾರ ಮತ್ತು ಮಧ್ಯಭಾರತ ಶಿಲ್ಪ ಶೈಲಿಯ ಪ್ರಭಾವ ಸ್ಪಷ್ಟವಾಗಿದೆ.

ತೇಜಪುರದಿಂದ ಪೂರ್ವಕ್ಕೆ ಬಾಮುನಿ ಬೆಟ್ಟದ ಮೇಲೆ ಕಡೆದ ಗ್ರಾನೈಟ್ ಬಂಡೆಗಳಿಂದ ಕಟ್ಟಿದ್ದ ಹಲವು ದೇವಾಲಯಗಳ ಅವಶೇಷಗಳು ಮೂರುಕಡೆಗಳಲ್ಲಿ ಕಂಡುಬಂದಿವೆ. ಇವೆಲ್ಲ ಶೈವ ದೇವಾಲಯಗಳಿಗೆ ಸಂಬಂಧಪಟ್ಟವೆಂದೂ ಹೇಳಬಹುದು. ಲಖಿಮಪುರ ಜಿಲ್ಲೆಯ ಪುಲ್ಬಾರಿಯ ಬಳಿ ಸಹ ಹಳೆಯ ದೇವಾಲಯದ ಮುರುಕುಗಳೂ ಒಂದು ಕಲ್ಲಿನ ಕಮಾನೂ ಕೆಲವು ದೇವಮೂರ್ತಿಗಳೂ ಸಿಕ್ಕಿವೆ. ಸಿಬ್ಸಾಗರದಲ್ಲಿಯೂ ಒಂದು ವಿಷ್ಣುದೇವಾಲಯದ ಅವಶೇಷಗಳಿವೆ. ಆದರೆ ಇವಾವುದರ ಬಗ್ಗೆಯೂ ಹೆಚ್ಚು ವಿಷಯಗಳು ತಿಳಿದಿಲ್ಲ.

ದೀಮಾಪುರದಲ್ಲಿ ಒಂದು ದೊಡ್ಡ ಪಟ್ಟಣದ ಅವಶೇಷಗಳಿವೆ. ಇದು 1536ರಲ್ಲಿ ಅಹೋಮರ ಆಕ್ರಮಣದವರೆಗೂ ಕಚಾರಿ ದೊರೆಗಳ ರಾಜಧಾನಿಯಾಗಿತ್ತು. ಊರಿನ ಸುತ್ತಲೂ ಕೋಟೆ ಇದ್ದು ಅಲ್ಲಲ್ಲಿ ಭದ್ರವಾಗಿ ಕಟ್ಟಿದ ಹೆಬ್ಬಾಗಿಲುಗಳಿವೆ. ಊರಿನ ಸುತ್ತಳತೆ ಸು.48ಮೀ ಗಳು. ಕೋಟೆಯ ಒಳಗೆ, ಪೂರ್ವದ ಬಾಗಿಲಿನಿಂದ ಪ್ರಾರಂಭವಾಗಿ ದಕ್ಷಿಣೋತ್ತರವಾಗಿ ಸಮಾನಾಂತರವಾಗಿರುವ ಕಂಬಗಳ ಎರಡು ಸಾಲುಗಳಿವೆ. ಒಂದೊಂದೂ ನಾಜೂಕಾಗಿ



ದ್ವಿಭುಜ–ತ್ರಿಭುಜಾಕೃತಿ ಶಿಲೋಪಕರಣಗಳು

ಒಂದೇ ಕಲ್ಲಿನಲ್ಲಿ ಕೆತ್ತಲ್ಪಟ್ಟಿದ್ದು ಚದುರಂಗ ಕಾಯಿಯಂತೆ ಕಾಣುತ್ತದೆ. ಒಂದೊಂದೂ 1.80ಮೀ–2.70ಮೀ ಎತ್ತರವಿದ್ದು ದಪ್ಪವಿದೆ. ಇವಲ್ಲದೆ ಗ ಆಕಾರದಲ್ಲಿ ಕೆತ್ತಲ್ಪಟ್ಟಿರುವ ಹಲವಾರು ಕಲ್ಲುಗಳನ್ನೂ ಇಲ್ಲಿ ಸ್ಥಾಪಿಸಲಾಗಿದೆ. ಇವುಗಳ ಮೇಲೆ ಬಳ್ಳಿಗಳು ಮತ್ತು ಜ್ಯಾಮಿತಿಕ ಆಕೃತಿಗಳ ಸುಂದರ ಕೆತ್ತನೆಗಳಿವೆ. ಇದೇ ರೀತಿಯ ಕಂಬಗಳೂ ಅದೇ ಪ್ರಾಂತ್ಯದಲ್ಲಿ ಜಮಗುರಿ ರೈಲ್ವೆ ನಿಲ್ದಾಣದಿಂದ ಸು.20 ಕಿಮೀ ದೂರದಲ್ಲಿರುವ, ಕಾಸೋಮರಿ ಪಥಾರ ಎಂಬಲ್ಲೂ ಕಂಡುಬಂದಿವೆ. ಇವುಗಳ ಮೇಲಿರುವ ಕೆತ್ತನೆಗಳು, ಈಗಿನ ನಾಗಾ ಜನರಲ್ಲಿ ಈ ನಮೂನೆಯ ಮರದ ಕಂಬಗಳನ್ನು ಮೃತವೀರರ ಸ್ಮಾರಕವಾಗಿ ನೆಡುವ ಪದ್ಧತಿಯಿರುವುದರಿಂದ, ದೀಮಾಪುರ ಮತ್ತು ಕಾಸೋಮರಿ ಪಥಾರ್‌ನ ಕಂಬಗಳೂ ಈ ಉದ್ದೇಶಕ್ಕಾಗಿಯೇ ನೆಟ್ಟಿರಬಹುದೆಂದು ಊಹಿಸಬಹುದು. ಇತ್ತೀಚಿನವರೆಗೂ ನರಬಲಿಗೆ ಪ್ರಸಿದ್ಧವಾಗಿದ್ದ ಸಾದಿಯಾ ಬಳಿಯ ತಾಮ್ರೇಶ್ವರೀ ದೇವಾಲಯ ಬಹುಶಃ ಈ ಕಾಲದ್ದು. ದೇವಾಲಯದ ಮೇಲ್ಭಾಗ ತಾಮ್ರದ ತಗಡುಗಳಿಂದ ಹೊದಿಸಲ್ಪಟ್ಟಿದೆ. ಇಲ್ಲಿ ಸಿಕ್ಕಿರುವ ಕೆಲವು ಹಾಸು ಹೆಂಚುಗಳಲ್ಲಿಯ ಚಿತ್ರಗಳಿಗೂ ದೀಮಾಪುರದ ಕೆತ್ತನೆಗಳಿಗೂ ಸಾಮ್ಯವಿದೆ. ಕಚಾರಿ ಅರಸರ ರಾಜಧಾನಿಯಾಗಿದ್ದ ಮೈಬಾಂಗ್‌ನಲ್ಲಿಯೂ ಈ ಕಾಲದ ಕೋಟೆಯ ಗೋಡೆ, ಭಗ್ನ ಕಟ್ಟಡಗಳು ಮತ್ತು ಶಿಲ್ಪಗಳು ಉಳಿದುಬಂದಿವೆ. ಶಾಸ್‌ಪುರ್ ಎಂಬಲ್ಲಿಯೂ ಕಚಾರಿ ದೊರೆಗಳ ಕಾಲದ ಮನೆಗಳು, ಸ್ನಾನಗೃಹ ಮೊದಲಾದುವು ಕಂಡುಬಂದಿವೆ. ಇಲ್ಲಿಯ ಬಾಗಿಲ ಬಳಿಯೊಂದರ ಶಾಸನವು ಮೇಘನಾರಾಯಣನ ಕಾಲದಲ್ಲಿ ಕಟ್ಟಲ್ಪಟ್ಟ ವಿಷಯವನ್ನು ತಿಳಿಸುತ್ತದೆ.

ಸಾದಿಯದಿಂದ 240 ಕಿಮೀ ದೂರದಲ್ಲಿ ಕೆತ್ತಿದ ಗ್ರಾನೈಟ್ ಬಂಡೆಗಳಿಂದ ಕಟ್ಟಿರುವ ಶಿಶುಪಾಲನ ಮತ್ತು ಭೀಷ್ಮಕನ ಕೋಟೆಗಳು ಬಹುಶಃ ಅಹೋಮ್ ದೊರೆಗಳ ಕಾಲದವು. ಕಾಲಂಬರಿ ಎಂಬಲ್ಲಿ 1758ರಲ್ಲಿ ಕಟ್ಟಿದ ವಾಸುದೇವ ದೇವಾಲಯವೂ 1790ರಲ್ಲಿ ಗೌರಿನಾಥ ಸಿಂಹನಿಂದ ಕಟ್ಟಲ್ಪಟ್ಟ ಬೋರ್ದೋಲದ ದೇವಾಲಯವೂ ಬಿಷ್‌ನಾತ್‌ನ ಶಿವದೇವಾಲಯವೂ ಅಹೋಮ್ ವಾಸ್ತುಶಿಲ್ಪಕ್ಕೆ ಒಳ್ಳೆಯ ಉದಾಹರಣೆಗಳು. ಕಾಲಬರಿ ದೇವಾಲಯದಲ್ಲಿ ಈ ಕಾಲದ ರಂಗುರಂಗಿನ ಹಾಸುಹೆಂಚುಗಳಿಂದ ನೆಲವನ್ನು ಅಲಂಕರಿಸಿದ್ದಾರೆ. ಕಾಮರೂಪ ಜಿಲ್ಲೆಯ ಹಾಜೋ ಎಂಬಲ್ಲಿ ಇರುವ ಹಯಗ್ರೀವ ಮತ್ತು ಕೇದಾರನಾಥ ದೇವಾಲಯಗಳು, ಘಿಯಾಸುದ್ದೀನನ ಗೋರಿ ಗಮನಾರ್ಹವಾದ ಕಟ್ಟಡಗಳು. ಸಾದಿಯಾದಲ್ಲಿ ಶೇರ್‌ಷಾನ ಶಾಸನವಿರುವ (1542) ಒಂದು ಫಿರಂಗಿ ಇದೆ.

ಕಾಮರೂಪ ಜಿಲ್ಲೆಯ ಕಾಮಾಖ್ಯದ ಬಳಿಯ ನೀಲಾಚಲ ಬೆಟ್ಟದ ಮೇಲೆ ಸಿಕ್ಕಿರುವ 5ನೆಯ ಶತಮಾನದ ಶಾಸನವೇ ಇದುವರೆಗೆ ತಿಳಿದಿರುವಲ್ಲಿ ಹಳೆಯದು. ಪುಷ್ಯವರ್ಮನ ವಂಶದ ಸುರೇಂದ್ರವರ್ಮನ ಈ ಶಾಸನ ಗುಪ್ತಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿದ್ದು, ನೀಲಾಚಲ ಬೆಟ್ಟದಲ್ಲಿ ಬಲಭದ್ರ ಸ್ವಾಮಿಗಾಗಿ ಒಂದು ಗುಹೆಯನ್ನು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಹರ್ಷವರ್ಧನನ ಸಮಕಾಲೀನನಾದ ಭಾಸ್ಕರಶರ್ಮನ ದೊಂಬಿ ತಾಮ್ರಶಾಸನ (7ನೆಯ ಶತಮಾನ) ಪ್ರಾಲಂಭನ ವಂಶದ ವನಮಾಲನ ತೇಜ್‌ಪುರ ತಾಮ್ರ ಶಾಸನ ಮತ್ತು ಬಲವರ್ಮನ ನೌಗಾಂಗ್ ತಾಮ್ರಶಾಸನ (10ನೆಯ ಶತಮಾನ) ಅಸ್ಸಾಮಿನ ಪಾಲವಂಶದ ರತ್ನಪಾಲನ ಬಾರ್ಗಾವ್ ಮತ್ತು ಸ್ವಲ್ಕುಚಿ ತಾಮ್ರಶಾಸನಗಳು (11ನೆಯ ಶತಮಾನ) ಮತ್ತು ಅದೇ ವಂಶದ ಇಂದ್ರಪಾಲನ ಗೌಹತಿ ತಾಮ್ರ ಶಾಸನ (11ನೆಯ ಶತಮಾನ) ಚಾರಿತ್ರಿಕವಾಗಿ ಮುಖ್ಯವಾದ ಕೆಲವು ಶಾಸನಗಳು. ಇವೆಲ್ಲ ಭಾರತದ ಇತರೆಡೆಯ ಶಾಸನಗಳ ರೀತಿಯಲ್ಲಿಯೇ ಇದ್ದು, ಪೂರ್ವಗುಪ್ತಲಿಪಿಯಿಂದ ಬೆಳೆದು ಬಂದ ಬಂಗಾಲಿ–ಅಸ್ಸಾಮಿ ಲಿಪಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿವೆ. 1737ರ ಎರಡನೆಯ ರಾಮಸಿಂಹನ ಶತಕ್ ತಾಮ್ರಶಾಸನ ಕಾಚಾರಿ ಅರಸರ ಕಾಲದ ಮುಖ್ಯ ಶಾಸನ. ಅಹೋಂ ದೊರೆಗಳು ಮೊದಮೊದಲು ಅಹೋಂ ಭಾಷೆ ಮತ್ತು ಲಿಪಿಯಲ್ಲಿಯೇ ತಮ್ಮ ತಾಮ್ರ ಶಾಸನಗಳನ್ನು ಬರೆಸುತ್ತಿದ್ದರು. ಅನಂತರ ಶಾಸನಗಳು ಅಸ್ಸಾಮಿ ಲಿಪಿಯಲ್ಲಿ ಬರೆಯಲ್ಪಟ್ಟಿವೆ. ಇವುಗಳ ಭಾಷೆ ಭಾಗಶಃ ಸಂಸ್ಕೃತ, ಭಾಗಶಃ ಅಸ್ಸಾಮಿ. 1732ರಲ್ಲಿ ಶಿವಸಿಂಹ ಮತ್ತು ಅವನ ಪತ್ನಿ ಅಂಬಿಕಾಳಿಂದ ಕೊಡಲ್ಪಟ್ಟ ತಾಮ್ರಶಾಸನ. 1775ರ ಲಕ್ಷ್ಮೀನರಸಿಂಹನ ಶಾಸನ ಮತ್ತು 1792ರ ಗೌರೀನಾಥಸಿಂಹನ ಶಾಸನಗಳು ಅಹೋಂರ ತಾಮ್ರಶಾಸನಗಳಲ್ಲಿ ಮುಖ್ಯವಾದವು. ಇವರ ಶಿಲಾಶಾಸನಗಳು ಸಾಮಾನ್ಯವಾಗಿ ಸಂಸ್ಕೃತ ಭಾಷೆಯಲ್ಲಿವೆ.

ಅಸ್ಸಾಮಿನಲ್ಲಿ ಸಿಕ್ಕಿರುವ ಹೆಚ್ಚು ನಾಣ್ಯಗಳೆಲ್ಲ ಅಹೋಂ ರಾಜರ ಕಾಲಕ್ಕೆ ಸೇರಿದುವು. ಮೊದಲ ಅಹೋಂ ನಾಣ್ಯಗಳ ಬರೆಹ ಅಹೋಂ ಲಿಪಿ ಮತ್ತು ಭಾಷೆಯಲ್ಲಿಯೇ ಇರುತ್ತಿದ್ದವು. ಅನಂತರದವುಗಳಲ್ಲಿ ಅಸ್ಸಾಮಿ, ಬಂಗಾಲಿ ಲಿಪಿಯಲ್ಲಿ ಸಂಸ್ಕೃತದ ಬರೆಹವಿರುತ್ತದೆ. ಅಹೋಂರ ನಾಣ್ಯಗಳೆಲ್ಲ ಸಾಮಾನ್ಯವಾಗಿ ಬೆಳ್ಳಿಯವು. ಚಿನ್ನವು ಸಹ ಅಪೂರ್ವವಾಗಿ ಉಪಯೋಗಿಸಲ್ಪಡುತ್ತಿತ್ತು. ಹೆಚ್ಚಿನ ನಾಣ್ಯಗಳು ಅಷ್ಟಭುಜಾಕೃತಿಯಲ್ಲಿದ್ದು, ಮುಂಭಾಗದಲ್ಲಿ ರಾಜ ದುಂಬಿಯ ಸ್ವರೂಪದಲ್ಲಿ ಶಿವನ ಅಥವಾ ಇತರ ಹಿಂದು ದೇವರ ಪಾದವನ್ನು ಚುಂಬಿಸುತ್ತಿರುವ ಚಿತ್ರವನ್ನು ಹೊಂದಿವೆ. ಇವುಗಳ ಮೇಲೆ ರಾಜನ ಹೆಸರು ಮತ್ತು ಶಕ ಗಣನೆಯಲ್ಲಿ ನಾಣ್ಯದ ಅಚ್ಚಿನ ವರ್ಷ ನಮೂದಿಸಲ್ಪಟ್ಟಿವೆ. ನಾಣ್ಯಗಳ ತೂಕ 4.2 ಗ್ರೇನ್‌ನಿಂದ 176.7 ಗ್ರೇನ್‌ವರೆಗೆ ವಿವಿಧ ಮಾನಗಳಲ್ಲಿ ದೊರೆಯುತ್ತವೆ. ವೃತ್ತಾಕಾರದ ನಾಣ್ಯಗಳೂ ಪ್ರಮಥೇಶ್ವರೀ ಮತ್ತು ರಾಜೇಶ್ವರಸಿಂಹನ ಪಾರಸಿ ಬರೆಹವುಳ್ಳ ಚೌಕನೆಯ ನಾಣ್ಯಗಳೂ ಕೆಲವು ಅಪೂರ್ವವಾದವು. ಈಚೆಗೆ ಕಚಾರಿ ಅರಸರ ಕೆಲವು ನಾಣ್ಯಗಳು ಬೆಳಕಿಗೆ ಬಂದಿವೆ. (ಎಸ್.ಎನ್.)

**ಅಸ್ಸೀರಿಯ:** ಪ್ರಪಂಚದ ಪುರಾತನ ನಾಗರಿಕತೆಗಳ ಕೇಂದ್ರಗಳಲ್ಲೊಂದಾಗಿದ್ದ ಸುಮೇರಿಯದ ಒಂದು ಭಾಗ. ಬ್ಯಾಬಿಲೋನಿಯದ ಉತ್ತರಕ್ಕೆ 320 ಕಿಮೀ ದೂರದಲ್ಲಿತ್ತು. ಟೈಗ್ರಿಸ್ ನದಿಯ ದಡದ ಮೇಲಿದ್ದ ಅಷೂರ್ ಎಂಬ ನಗರ ಇದರ ಕೇಂದ್ರವಾಗಿತ್ತು. ಅಸ್ಸೀರಿಯನ್ನರು ದಮಾಸ್ಕಸ್, ಪ್ಯಾಲಸ್ತೀನ್ ಮತ್ತು ಕೆಳಗಣ ಈಜಿಪ್ಟ್‌ಗಳನ್ನು ವಶಪಡಿಸಿಕೊಂಡು ತಮ್ಮ ರಾಜ್ಯವನ್ನು ವಿಸ್ತರಿಸಿದರು. ಸೆರಗಾನ್, ಸೆನ್ನಾಚೆರಬ್ ಮತ್ತು ಅಸುರಬನಿಪಾಲ್ ಇಲ್ಲಿಯ ಮುಖ್ಯ ದೊರೆಗಳು. ಇವರಲ್ಲಿ ವ್ಯಾಪಾರ ಮತ್ತು ವಾಣಿಜ್ಯವೇ ಪ್ರಮುಖವಾಗಿತ್ತು. ಪ್ರಪಂಚದ ನಾನಾ ಭಾಗಗಳಿಂದ ಶಿಲ್ಪಿಗಳನ್ನು ಕರೆಸಿ ನಿನೇವೆ ಎಂಬಲ್ಲಿ ಸುಂದರವಾದ ಅರಮನೆಗಳನ್ನು ಕಟ್ಟಿಸಿದರು. ಚಾಲ್ಡಿಯನ್ನರು ಅಸ್ಸೀರಿಯನ್ನರನ್ನು ಸೋಲಿಸಿ ತಮ್ಮ ಪ್ರಭುತ್ವವನ್ನು ಪ್ರಾರಂಭಿಸಿದರು. ಸೆನ್ನಾಚೆರಬ್‌ನ ಮೊಮ್ಮಗ ಅಸುರಬನಿಪಾಲ್ ಎಂಬುವವನು ಇಲ್ಲಿ ವೀರಯೋಧನೆಂದು, ಉತ್ತಮ ವಿದ್ವಾಂಸನೆಂದು ಹೆಸರು ಗಳಿಸಿದ್ದ. ತನ್ನ ಆಡಳಿತ ಕಾಲದಲ್ಲಿ (ಪ್ರ.ಶ.ಪೂ.660–26) ಸು.2,20,000ದಷ್ಟು ಮಣ್ಣಿನ ಮುದ್ರೆಗಳನ್ನು ಸಂಗ್ರಹಿಸಿದ್ದ. ಈತನ ಕಾಲವನ್ನು ಅಸ್ಸೀರಿಯದ ಸುವರ್ಣ ಕಾಲವೆನ್ನಲಾಗಿದೆ. (ಜಿ.ವಿ.ಆರ್.)

ಅಸುರಬನಿಪಾಲ್, ಮಣ್ಣಿನಮೂರ್ತಿ

ಅತ್ಯಂತ ಪುರಾತನ ಮಾನವನ ಅವಶೇಷಗಳಾದ ಹಳೆ ಶಿಲಾಯುಗದ ಮಧ್ಯಕಾಲಕ್ಕೆ ಸೇರಿದ ಅಶೂಲಿಯನ್ – ಲೆವಾಲ್ವ ಹಂತದ ಕೈಗೊಡಲಿಗಳೂ ಚಕ್ಕೆ ಕಲ್ಲಿನ ಉಪಕರಣಗಳೂ

ಬಾರ್ದಾಬಲ್ಕ ಎಂಬಲ್ಲಿ ದೊರಕಿವೆ. ಹಜರ್‌ಮರ್ದ್ ಮತ್ತು ಷನಿದಾರ್ ಗುಹೆಗಳ ತಳಪದರಗಳಲ್ಲಿ ದೊರಕುವ ಚಕ್ಕೆ ಕಲ್ಲಿನ ಉಪಕರಣಗಳು ಮುಂದಿನ ಹಂತವಾದ ಲೆವಾಲ್ವ –ಮೌಸ್ಟೀರಿಯನ್ ಉಪಕರಣಗಳನ್ನು ಹೋಲುತ್ತದೆ. ಹಜರ್‌ಮರ್ದ್ ಅವಶೇಷಗಳು ಷನಿದಾರ್ ಅವಶೇಷ ಗಳಿಗಿಂತಲೂ ಹಳೆಯವೆಂದು ಅಲ್ಲಿ ದೊರಕಿದ ಕೈಗೊಡಲಿಗಳ ಆಧಾರದ ಮೇಲೆ ಹೇಳಲಾಗಿದೆ. ಹಜರ್‌ಮರ್ದ್ ಮತ್ತು ಷನಿದಾರ್ ನೆಲೆಗಳ ಮೇಲ್ಪದರಗಳಲ್ಲಿ ದೊರಕಿದ ಕಲ್ಲು ಚಕ್ಕೆಗಳ ಉಪಕರಣಗಳೂ ಸೂಕ್ಷ್ಮಶಿಲೋಪಕರಣಗಳೂ ಜಾರ್ಜಿಯ ಮತ್ತು ಪಲೆಗಾವ್ರಾ ಎಂಬಲ್ಲೂ ದೊರಕುತ್ತವೆ. ಇವುಗಳ ಆಧಾರದ ಮೇಲೆ ಈ ಜನರು ಸಮಕಾಲೀನ ಯುರೋಪಿನ ಜನರಿ ಗಿಂತಲೂ ಹೆಚ್ಚು ಮುಂದುವರೆದಿದ್ದರೆಂದು ಹೇಳಲಾಗಿದೆ. ಪ್ಯಾಲಸ್ತೀನಿನ ಶಿಲಾಯುಗದ



ಯುದ್ಧ ನೌಕೆ

ಷನಿದಾರ್ ಗುಹೆಯ ಮೇಲ್ಪದರಗಳ ಸಂಸ್ಕೃತಿ ಈ ಪ್ರದೇಶದ ಚಕ್ಕೆ ಕಲ್ಲಿನ ಉಪಕರಣಗಳ ಸಂಸ್ಕೃತಿಗಳಲ್ಲಿ ಹಳೆಯದೆಂದು ಹೇಳಬಹುದು.

ಮಧ್ಯ ಹಳೆಶಿಲಾಯುಗದ ಅವಶೇಷಗಳು ಷನಿದಾರ್ ಗುಹೆಯ ಮತ್ತು ಜಾರ್ಜಿಯದ ಮೇಲ್ಪದರಗಳಲ್ಲಿ ದೊರಕಿವೆ. ಇವುಗಳಿಗೂ ಪ್ಯಾಲಸ್ತೀನಿನ ನಟೂಫಿಯನ್ ಸಂಸ್ಕೃತಿಗೂ ಹೋಲಿಕೆಗಳಿದ್ದು, ಈ ಹಂತ ಆಹಾರೋತ್ಪಾದನೆಯ ಕಡೆಗೆ ಸಾಗುವ ಮೊದಲ ಹೆಜ್ಜೆಯಾಗಿತ್ತು.

ನವಶಿಲಾಯುಗದಲ್ಲಿ ಇಲ್ಲಿಯ ಮತ್ತು ಸುತ್ತಲಿನ ನೆಲೆಗಳಲ್ಲಿ ಆದಿಮಾನವ ಆಹಾರೋ ತ್ಪಾದನೆಯ ದಿಕ್ಕಿನಲ್ಲಿ ಹೆಚ್ಚು ಪ್ರಗತಿ ಸಾಧಿಸಿದ. ಕರೀಂಷಾಹಿರ್, ಜಾವಿಷೆಮಿ, ಷನಿದಾರ್ ಮ್ಲಾಫಾತ್_ಮುಂತಾದೆಡೆಗಳಲ್ಲಿ ಈ ಸಂಸ್ಕೃತಿಯ ಅತ್ಯಂತ ಪ್ರಾಚೀನ ಅವಶೇಷಗಳು ದೊರಕಿವೆ. ಕರೀಂಷಾಹಿರ್‌ನ ಆಹಾರೋತ್ಪತ್ತಿಯ ಹಲವು ಮಾಹಿತಿಗಳೂ ಕಲ್ಲುಕಟ್ಟಡದ ಅವಶೇಷಗಳೂ ಪ್ರ.ಶ.ಪೂ.6000ಕ್ಕೂ ಮೊದಲಿನವು. ಜಾರ್ಮೊ ನೆಲೆಯಲ್ಲಿ ಪ್ರಗತಿಪರ ಸಂಸ್ಕೃತಿಯ ಅವಶೇಷಗಳಾದ ಕಲ್ಲಿನ ಪಾತ್ರೆಗಳು, ಕಲ್ಲಿನ ಕುಡುಗೋಲು, ಸೂಕ್ಷ್ಮ ಶಿಲೋಪಕರಣಗಳು, ನಯಮಾಡಿದ ಕಲ್ಲಿನ ಉಪಕರಣಗಳು, ಕಟ್ಟಡಗಳ ಅವಶೇಷಗಳು, ಸಾಕಿದ ಕುರಿ ಮೇಕೆ ಹಂದಿಗಳ ಮೂಳೆಗಳು ದೊರೆಯುತ್ತವೆ. ಈ ಸಂಸ್ಕೃತಿಯ ಅಂತ್ಯಕಾಲದಲ್ಲಿ ಮಣ್ಪಾತ್ರೆಗಳು ಬಳಕೆಗೆ ಬಂದವು. ಗೋದಿ ಮತ್ತು ಬಾರ್ಲಿಗಳನ್ನು ಬೆಳೆಯುತ್ತಿದ್ದರು.

ಪ್ರಗತಿಪರ ನವಶಿಲಾಯುಗದ ಅವಶೇಷಗಳು ಹಸ್ಸುನಾ, ನಿನೆವೆ, ಅರ್ಪಾಚಿಯ, ಗಾವ್ರಾ ಎಂಬೆಡೆಗಳಲ್ಲಿ ದೊರಕುತ್ತವೆ. ವರ್ಣಚಿತ್ರಿತ ಮಣ್ಪಾತ್ರೆಗಳು, ಕಲ್ಲಿನ ಕುಡುಗೋಲು ಮತ್ತಿತರ ವ್ಯವಸಾಯೋಪಕರಣಗಳು, ಹಸಿ ಇಟ್ಟಿಗೆ ಗೋಡೆಗಳ ಮನೆಗಳೂ ಧಾನ್ಯ ಶೇಖರಣೆಗೆ ಭೂಮಿಯೊಳಗಿನ ಕಣಜಗಳು – ಈ ಸಂಸ್ಕೃತಿಯ ಮುಖ್ಯ ಸಾಧನೆಗಳು. ಮಕ್ಕಳ ಶವಗಳನ್ನು ಮಣ್ಣಿನ ಜಾಡಿಗಳಲ್ಲೂ ವಯಸ್ಕರ ಶವಗಳನ್ನು ಗುಂಡಿಗಳಲ್ಲೂ ಹೂಳುತ್ತಿದ್ದರು. ಬೇಟೆ ಗಾರಿಕೆಯ ಹಂತದಿಂದ ಸುಧಾರಿತ ವ್ಯವಸಾಯ ಪದ್ಧತಿಗಳ ಕಡೆಗೆ ಪ್ರಗತಿ ಕಂಡುಬರುತ್ತದೆ. ನೇಯ್ಗೆ ಕೆಲಸದ ಪರಿಚಯವಿತ್ತು. ಮಡಕೆ ಕುಡಿಕೆಗಳು ಕೆಂಪು, ಕಂದು ಮತ್ತು ಕಪ್ಪುಬಣ್ಣಗಳಿಂದ ಚಿತ್ರಿತವಾಗಿರುತ್ತಿದ್ದವು. ಈ ಸಂಸ್ಕೃತಿಯ ಅವಶೇಷಗಳು ಅಸ್ಸೀರಿಯದ ಹಲವೆಡೆಗಳಲ್ಲಿ ಕಂಡುಬಂದಿದೆ.

ಮುಂದಿನ ಹಂತವಾದ ತಾಮ್ರ–ಶಿಲಾಯುಗದ ಹಲಾಫ್ ಸಂಸ್ಕೃತಿಯಲ್ಲಿ ವರ್ಣಚಿತ್ರಿತ ವಾದ ವಿವಿಧಾಕೃತಿಗಳ ಮಡಕೆಗಳು ಉಪಯೋಗದಲ್ಲಿದ್ದವು. ಕಲ್ಲಿನ ಗುಂಡಿ ಮುದ್ರೆಗಳೂ ಮಣಿಗಳೂ ಸಣ್ಣ ಪಾತ್ರೆಗಳೂ ಬಳಕೆಗೆ ಬಂದವು. ಜನನೇಂದ್ರಿಯಗಳನ್ನು ಪ್ರಧಾನವಾಗಿ ರೂಪಿಸಿದ ಮಣ್ಣಿನ ಸ್ತ್ರೀಗೊಂಬೆಗಳು ಪ್ರಾಚೀನ ಕಾಲದಲ್ಲಿ ಮಾತೃದೇವತಾ ಪ್ರಧಾನವಾಗಿದ್ದ ಜನಸಾಮಾನ್ಯ ಆಚರಣೆಗಳ ಸಂಕೇತಗಳಾಗಿವೆ.

ಅನಂತರ ಈ ಪ್ರದೇಶ ದಕ್ಷಿಣ ಇರಾಕಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಯಿತು. ಪ್ರ.ಶ.ಪೂ.2ನೆಯ ಸಹಸ್ರಮಾನದ ಆರಂಭದಲ್ಲಿ ದಕ್ಷಿಣ ಇರಾಕಿನ ಪ್ರಭಾವದಿಂದ ಅಸ್ಸೀರಿಯದ ಜನ ಚಾರಿತ್ರಿಕ ಘಟ್ಟವನ್ನು ತಲುಪಿದರು. ಆ ವೇಳೆಗೆ ಸೆಮಿಟಿಕ್ ಸಮುದಾಯದ ಜನ ಇದನ್ನು ಆಕ್ರಮಿಸಿದರು. (ಬಿ.ಕೆ.ಜಿ.)

**ಅಸ್ಸೀರಿಯನ್ನರ ಕಲೆ:** ಇತಿಹಾಸ ಕಾಲದ ಪ್ರಾರಂಭದಲ್ಲಿ ಮೆಸಪೊಟೇಮಿಯದ ತಗ್ಗು ಪ್ರದೇಶ ಸುಮೇರೋ–ಅಕ್ಕೇಡಿಯನ್ನರ ಸಂಸ್ಕೃತಿಗೆ ಸ್ಥಾನವಾಗಿತ್ತು. ಈ ಪ್ರದೇಶದ ಪೂರ್ವ ಭಾಗ ಸುಮೇರಿಯನ್ನರಿಗೂ ಉತ್ತರಭಾಗ ಸೆಮಿಟಿಕ್ ವಂಶದ ಅಕ್ಕೇಡಿಯನ್ನರಿಗೂ ಸೇರಿದ್ದುವು. ಕಾಲಕ್ರಮೇಣ ದಕ್ಷಿಣ ಪಥದ ಅಕ್ಕೇಡಿಯನ್ನರನ್ನು ಬ್ಯಾಬಿಲೋನಿಯನರೆಂದು ಛಾಲ್ಡಿಯನ್ನ ರೆಂದೂ ವಾಯವ್ಯ ಪಥದಲ್ಲಿದ್ದವರನ್ನು ಅಸ್ಸೀರಿಯನ್ನರೆಂದೂ ಕರೆಯಲಾಯಿತು.

ಅಕ್ಕೆಡ್ ಪ್ರದೇಶದ ರಾಜನಾದ ಸಾರ್‌ಗಾನ್‌ನಿಂದ (ಪ್ರ.ಶ.ಪೂ.2500) ಸುಮೇರಿಯನ್ನರ ಕಡೆಯ ರಾಜನಾದ ಲೂಗಲ್‌ಜಗ್ಗಿಸಿ ಪರಾಭವ ಹೊಂದಿದ ಅನಂತರ ಸೆಮಿಟಿಕ್ ರಾಜವಂಶದ ಆಳ್ವಿಕೆ ಪ್ರಾರಂಭವಾಯಿತು. ಸೆಮಿಟಿಕ್ ಅಕ್ಕೇಡಿಯನ್ನರ ವೈಭವ ಹಮ್ಮುರಬಿ ಆಳ್ವಿಕೆಯಲ್ಲಿ ಶಿಖರಕ್ಕೇರಿತು. ಅವನ ಕಾಲದಲ್ಲಿ ಪಿನಾಜೆಗೆ ಬ್ಯಾಬಿಲಾನ್ ಎಂದು ಹೆಸರಾಯಿತು. ಹಮ್ಮುರಾಬಿ ಯೂಫ್ರಟೀಸ್ ತೀರದ ಮರಿ ಎನ್ನುವ ಪಟ್ಟಣವನ್ನು ಅದರ ಕಡೆಯ ರಾಜನಾದ ಜ಼ಿರೀಲಿನಿಂದ ಗೆದ್ದು ಅವನಿಗೆ ಹಿಂದಿನಿಂದ ಬಂದಿದ್ದ ಶೋಭಾಯಮಾನವಾದ ಅರಮನೆಯನ್ನು ಚಿತ್ರ ಮತ್ತಿತರ ಕಲಾಕೃತಿಗಳನ್ನು ನಾಶ ಮಾಡಿದ. ಈ ಚಿತ್ರಗಳಲ್ಲಿ ಕೆಲವು ಭಿತ್ತಿ ಚಿತ್ರಗಳು (ಮೂರಲ್ಸ್) ಯಜ್ಞಶಾಲೆಗೆ ಕರೆದೊಯ್ಯುವ ಗೂಳಿ, ಜಲ ಮತ್ತು ಅಗ್ನಿಯ ಯಜ್ಞ ಇಷ್ಟಾರ್‌ದೇವಿಯ ರಾಜ್ಯಾಭಿಷೇಕ ಮೊದಲಾದುವು (ಇವು ಈಜಿಪ್ಟಿನ ಕಲೆಯನ್ನು ಹೋಲುವುವು). ಪ್ರತಿಮೆಗಳಲ್ಲಿ ಪೈಕಿ, ಎರಡು ಕೊಂಬುಗಳುಳ್ಳ ಶಿರಸ್ತ್ರಾಣವನ್ನು ಧರಿಸಿ ಕೈಯಲ್ಲಿ ಕುಂಭವನ್ನು ಹಿಡಿದಿರುವ ದೇವಿಯ ಸ್ವರೂಪ ಇವೆಲ್ಲವೂ ಮುದ್ದಾಗಿವೆ. ಇವುಗಳಲ್ಲಿ ಚಿತ್ರಗಾರರ ನೈಜತೆ, ಸೌಲಭ್ಯ ಭಾವದೃಷ್ಟಿ, ರೇಖಾವಿಲಾಸಗಳು ಮನೋಹರವಾಗಿವೆ. ಆದರೆ ಇವೆಲ್ಲವೂ ಯಥಾರ್ಥ ದೃಷ್ಟಿಯಲ್ಲಿಲ್ಲ. ಕೆಲವು ಸುಮೇರರ ಆಧ್ಯಾತ್ಮಿಕತೆಗೆ ಸಾಂಕೇತಿಕ. ಇದೇ ಕೌಶಲದಿಂದ ಪತಾಕದ ತ್ರಿಕೋಣದ ಕೊನೆಗಳಲ್ಲಿ, ಅದರ ನಾನಾವರ್ಣದ ಫಲಕಗಳಲ್ಲಿ ರಚಿಸಲಾದ ರೂಪಗಳ ವೈಶಿಷ್ಟ್ಯವನ್ನು ಕಾಣಬಹುದು.

ಉತ್ತರ, ವಾಯವ್ಯ, ಈಶಾನ್ಯ ದಿಕ್ಕುಗಳಿಂದ ಬಂದ ಸುತ್ತಮುತ್ತಿನ ಬುಡಕಟ್ಟಿನ ಜನರಿಂದ ಪ್ರ.ಶ.ಪೂ.ಸು.2000ದಲ್ಲಿ ಬಾಬಿಲೋನಿಯ ರಾಜ್ಯಕ್ಕೆ ತೊಂದರೆ ಉಂಟಾಯಿತು– ಹಿಟ್ಟೈಟರಿಂದ (ಪ್ರ.ಶ.ಪೂ.1750), ವಾಯವ್ಯದ ಕಾಸ್ಸೈಟ್ಟರಿಂದ (ಪ್ರ.ಶ.ಪೂ.1550). ಪ್ರ.ಶ.ಪೂ.1550–1169ರ ವರೆಗೂ ಬ್ಯಾಬಿಲೋನಿಯ ಕಾಸ್ಸೈಟ್ಟರ ಆಡಳಿತದಲ್ಲಿದ್ದು ಅವರ ಆಡಳಿತ ಈಜಿಪ್ಟ್ ಮೇಲೆ ಪ್ರ.ಶ.ಪೂ.700ರಲ್ಲಿ ಹರಡಿತು. ಬ್ಯಾಬಿಲೋನಿಯದಲ್ಲಿ ಜೇಡಿಮಣ್ಣು ಎಷ್ಟು ಹೇರಳವೋ ಅಸ್ಸೀರಿಯದಲ್ಲಿ ಕಲ್ಲು ಅಷ್ಟು ಹೇರಳವಾಗಿದ್ದು, ಅವರು ದೇವಸ್ಥಾನ (ಜಿಗ್ಗುರಾಟ್), ಅರಮನೆ ಮುಂತಾದ ಕಟ್ಟಡಗಳಲ್ಲಿ, ಅವುಗಳ ಅತ್ಯದ್ಭುತವಾದ ಭಿತ್ತಿಚಿತ್ರಗಳ ಉಬ್ಬಿದ ಶಿಲ್ಪಾಕೃತಿಗಳ ಶೃಂಗಾರದಲ್ಲಿ, ಜೀವನದ ವೈಭವ ಮತ್ತು ಆಡಂಬರದಲ್ಲಿ ತೊಡಗಲು ಅವಕಾಶವಾಯಿತು. ಇದರ ಪರಿಣಾಮ ಅವರ ಆಡಳಿತ ಶಿಥಿಲಗೊಂಡು ನಾಶವಾಯಿತು. ಈ ರಾಜ್ಯ ಪರ್ಷಿಯನ್ ರಾಜನಾದ ಸೈರಸ್‌ನಿಂದ ಪರಾಭವ (ಪ್ರ.ಶ.ಪೂ.3–10–538) ಹೊಂದುವವರೆಗೂ ವೈಭವದಿಂದ ಮೆರೆಯಿತು.

ಕಟ್ಟಡದ ನಿರ್ಮಾಣದಲ್ಲಿ, ಅದರ ಅಲಂಕಾರದಲ್ಲಿ, ಅಸ್ಸೀರಿಯನ್ನರು ಸುಮೇರಿಯನ್ನರಿ ಗಿಂತಲೂ ದಕ್ಷಿಣ ಅಕ್ಕೇಡಿಯನ್ನರಿಗಿಂತಲೂ ಹೆಚ್ಚಾದ ನೈಪುಣ್ಯವನ್ನು ಸಾಧಿಸಿದರು. ಇವರ

ರಥದಲ್ಲಿ ಅಸ್ಸೀರಿಯ ದೊರೆ

ಶೈಲಿ ವಿಶಿಷ್ಟರೂಪಗಳನ್ನು ತಾಳಿದ್ದರೂ ಬಾಬಿಲೋನಿಯ ಸಂಪ್ರದಾಯಕ್ಕೇ ಹೊಂದಿಕೊಂಡಿದೆ. ಚಿತ್ರಗಳು ಉಚ್ಚಮಟ್ಟದವು. ಇವರು ಅಲಂಕಾರವನ್ನು ಅಂತಃಪುರಗಳಿಗೂ ಮಹಾದ್ವಾರಗಳಿಗೂ ಮಾನಸ್ತಂಭ ಮುಂತಾದ ಸ್ಮಾರಕ ಕಟ್ಟಡಗಳಿಗೂ ಹೆಚ್ಚಾಗಿ ಉಪಯೋಗಿಸಿ ದರು. ಸುಮೇರ್ ಅಕ್ಕೇಡಿಯನ್ನರ ಪುರಾಣ, ಇತಿಹಾಸಗಳು ಅವರ ಸಾಂಕೇತಿಕಶಾಸ್ತ್ರ ದೊಂದಿಗೆ ಯುದ್ಧದ ದೃಶ್ಯಗಳು, ಅರಮನೆಯ ಕ್ರೀಡಾಚಟುವಟಿಕೆಗಳು, ಬೇಟೆ ಮುಂತಾದುವು ಹೇರಳವಾಗಿ ವಿವರಣೆ ಸಹಿತ ಚಿತ್ರಿಸಲಾಯಿತು. ಪ್ರ.ಶ.ಪೂ. 689ರಲ್ಲಿ ಸೆನ್ನಾಚಿರಬ್ ಬ್ಯಾಬಿಲೋನಿಯವನ್ನು ನಾಶಮಾಡಿದ. ಅವನ ತರುವಾಯ ಬಂದ ರಾಜರಾದ ನೇಬೋಫೋಲಾಜ್ಜಾರ್ ಅವನ ಮಗ 2ನೆಯ ನೇಬೂ ಚೆಡ್ನಸರ್ ಇವರುಗಳಿಂದ ಪುನರುಜ್ಜೀವಿತವಾಯಿತು; ತನ್ನ

ಕಲಾಔನ್ನತ್ಯವನ್ನು ಪುನಃ ಪಡೆಯಿತು (ಪ್ರ.ಶ.ಪೂ.605–562). ಬ್ಯಾಬಿಲಾನ್ ಪಟ್ಟಣದ ವೈಶಾಲ್ಯ 15 ಮೈಲುಗಳ ಚತುರಸ್ರ; ಅದರ ತೂಗುದ್ಯಾನಗಳು; ಕಂದಕದ ಗೋಡೆಗಳು 50 ಮೊಳಗಳ ದಪ್ಪ 200 ಮೊಳಗಳ ಎತ್ತರ; ಅದರ ಮರ್ಡೂರ್ ದೇವಾಲಯದ ಆವರಣದಲ್ಲಿ ಸುಮೇರರ ದೇವಾಲಯದಂತೆ ನಿರ್ಮಿತವಾದ ಏಳು ಅಂತಸ್ತಿನ ಜಿಗ್ಗುರಾಟ್ ದೇವಾಲಯ; ಅದರ ಪೂರ್ವಕ್ಕೆ ನಿರ್ಮಿಸಲಾದ ಪ್ರದಕ್ಷಿಣೆ ಕೈಸಾಲೆ; ಅದರ ಗೋಡೆಗಳ ಮೇಲೆ ಸುಟ್ಟ ಹೆಂಚುಗಳಿಂದ ಹಾಸಲಾದ ಹಿನ್ನೆಲೆಯಲ್ಲಿ ಚಿತ್ರಿಸಿದ ಸಿಂಹಗಳ ಶ್ರೇಣಿಗಳು; ಇಷ್ಟಾರ್ ಮಹಾದ್ವಾರದ ಮುಖದಲ್ಲಿ ಘೋರ ಸರ್ಪಾಕೃತಿಗಳಿಂದ ಕೂಡಿದ ಹೋರಿ ರೂಪಾಲಂಕಾರ; ಘನತರವಾದ ಇತರ ದೇವಾಲಯಗಳು, ಅರಮನೆಗಳು ಮತ್ತು ಅವುಗಳ ಮೇಲ್ಮಟ್ಟದ ಶೃಂಗಾರ–ಇವೆಲ್ಲವೂ ಮರೆಯಲಾಗದ ಬ್ಯಾಬಿಲೋನಿಯ ಅಸ್ಸೀರಿಯನ್ನರ ವೈಭವವನ್ನು ಸಾರುತ್ತವೆ. ಉಪಯೋಗಿಸಿದ ಬಣ್ಣಗಳ ಪೈಕಿ ಮುಖ್ಯವಾದುವು ಆಕಾಶನೀಲಿ, ಊದಾ ಮತ್ತು ಶ್ವೇತ ಬಣ್ಣಗಳು. ಈ ಚಿತ್ರಗಳು ಇಂದಿನ ಪೋಸ್ಟರ್ ಚಿತ್ರಗ ಳಂತೆ ಕಂಡುಬಂದರೂ ಅವುಗಳ ರೇಖಾವಿಲಾಸದ ನೈಜತೆ, ಲಾವಣ್ಯ ಪ್ರಶಂಸನೀಯವಾಗಿವೆ.

ಅಸ್ಸೀರಿಯನ್ನರ ಕಲೆಯಲ್ಲಿ ಅಂಗಸಂಯೋಗ, ಪರಿಮಾಣ, ವಿವಿಧ ರೂಪಗಳ ವಿವರಣೆ, ಬಣ್ಣಿಸಿದ ರೂಪಗಳಿಗೂ ಬಣ್ಣಿಸದ ಖಾಲಿಜಾಗಗಳಿಗೂ ಇರುವ ಮಧುರಾತ್ಮಕ ಸಂಬಂಧ, ಉಡುಪುಗಳಲ್ಲಿ, ಒಡವೆಗಳಲ್ಲಿ ಪ್ರತ್ಯೇಕಿಸಲಾದ ರೇಖಾಲಂಕಾರ, ದೈಹಿಕ ವರ್ಣನೆ (ಹಣೆಯ ಸುಕ್ಕುಗಳು, ಹಸ್ತರೇಖೆಗಳು) ಮುಂತಾದುವು ಮನೋಹರವಾಗಿವೆ. ಖಾಲಿ ಜಾಗದಲ್ಲಿ ವಿಷಯಾಂಶಕ್ಕೆ ಸೇರದ ಶೃಂಗಾರ ಅತ್ಯಲ್ಪ. ಇವರ ಕಲಾಧೋರಣೆಯಲ್ಲಿ, ಕೆಲಸದಲ್ಲಿ, ನಿಷ್ಠೆ, ಘನತೆ ತುಂಬಿದೆ. ಮನುಷ್ಯಾಕೃತಿಗಳಲ್ಲಿ ಮಾಂಸಖಂಡಗಳ ಪಟುತ್ವ ಎದ್ದು ಕಾಣುತ್ತದೆ. ರಾಜರ ಆಕೃತಿಗಳಿಗೆ ಗಿಡುಗದ ಪಕ್ಕೆಗಳನ್ನು ಜೋಡಿಸಿ ಅವುಗಳ ಬೆಡಗನ್ನು ಸಾಂಪ್ರದಾಯಿಕ ಮುದ್ರೆ ಸಹಿತ ರೂಪಿಸಿದ್ದಾರೆ. ನರಸಿಂಹಾವತಾರದ ರೀತಿಯಲ್ಲಿ ಅವರ ದೈವಿಕ ಸ್ವರೂಪ ಮಾನುಷ ಮುಖವನ್ನೂ ಎತ್ತಿನ ಅಥವಾ ಸಿಂಹದ ದೇಹವನ್ನೂ ಗಿಡುಗದ ಪಕ್ಕೆಗಳನ್ನೂ ಕೊಟ್ಟು ರಮಣೀಯವಾಗಿ ಚಿತ್ರಿಸಿದ್ದಾರೆ. ಉಬ್ಬುಕೆತ್ತನೆ ಕೆಲಸದಲ್ಲಿ ಅಸ್ಸೀರಿಯನ್ನರ ಶಿಲ್ಪಾಕೃತಿಗಳು ವಿಶೇಷವಾಗಿ ದುಂಡುದುಂಡಾದುವು ಬಹಳ ಕಡಿಮೆ. ಇವುಗಳಲ್ಲೆಲ್ಲ ಶಕ್ತಿಯುತವಾದ ಒಂದು ರೀತಿಯ ತೀವ್ರತೆ, ಹಿಂಸಾತ್ಮಕದೃಷ್ಟಿ, ಜೀವಕಳೆ ತುಂಬಿತುಳುಕಾಡುತ್ತಿದ್ದರೂ ಅವು ಈಜಿಪ್ಷಿಯನ್ನರ ಶಿಲ್ಪಗಳಂತೆ ಶಾಂತತೆಯನ್ನಾಗಲೀ ಪ್ರಚಂಡಾಕೃತಿಯನ್ನಾಗಲೀ ಪರಾದೃಷ್ಟಿಯನ್ನಾಗಲೀ ಹೊಂದಿಲ್ಲ. ಗ್ರೀಕರ ಸೂಕ್ಷ್ಮ ಹಸ್ತ ಕೌಶಲ ಅವುಗಳಲ್ಲಿಲ್ಲ. ಅಸ್ಸೀರಿಯನ್ನರ ಅತ್ಯಂತ ದೊಡ್ಡ ಆಕೃತಿ 18' ಎತ್ತರ ಮೀರಿಲ್ಲ. ಆದರೆ ಗಾಂಭೀರ್ಯ, ನಿರ್ದಿಷ್ಟ ಭಾವಸಂಪತ್ತು ಅವಕ್ಕಿವೆ. ಅಸ್ಸೀರಿಯನ್ನರ ಅಲಂಕಾರ ಧೋರಣೆಗಳನ್ನು ಗ್ರೀಕರ ಶಿಲ್ಪಾಕೃತಿಗಳು ಉದ್ಯೋಗದಲ್ಲಿ ಹಿರಿಮೆಯನ್ನು ಸಾಧಿಸಿದರೆ, ಅಸ್ಸೀರಿಯನ್ನರ ಶಿಲ್ಪ ಭಾವಸಂಪತ್ತನ್ನು ಹೊಂದಿದೆ. (ಪಿ.ಎಸ್.)

**ಅಹಲ್ಯಾಬಾಯಿ ಹೋಳ್ಕರ್:** ಆಧುನಿಕ ಭಾರತದ ಇತಿಹಾಸ ಪ್ರಸಿದ್ಧ ಮಹಿಳೆ. ಹೋಳ್ಕರ್ ವಂಶದ ಮುಲ್ಹಾರರಾವ್ ಹೋಳ್ಕರನ ಮಗ ಖಂಡೇರಾಯನ ಪತ್ನಿ. ಗಂಡ 1754ರ ಕುಂಭೇರ್ ಮುತ್ತಿಗೆಯಲ್ಲಿ ನಿಧನನಾದಾಗ ಈಕೆಯೇ ರಾಜ್ಯಸೂತ್ರಗಳನ್ನು ಹಿಡಿದಳು (1754–95). ಐಶ್ವರ್ಯವನ್ನೂ ರಾಜ್ಯವನ್ನೂ ಅಪಹರಿಸಲು 1767ರಲ್ಲಿ ರಘೋಬ ಯತ್ನಿಸಿದಾಗ ಧೃತಿಗೆಡದೆ ಅವನನ್ನು ಎದುರಿಸಿದಳು. ರಘೋಬ ನಾಚಿಕೆಯಿಂದ ಹಿಂದಿರುಗಿದ. ಒಟ್ಟು 30 ವರ್ಷಗಳ ಕಾಲ ರಾಜ್ಯವನ್ನು ಆದರ್ಶ ರೀತಿಯಲ್ಲಿ ಆಳಿದಳು. ಅತ್ಯಂತ ದಕ್ಷತೆಯಿಂದ ಒಳಾಡಳಿತ ಸರ್ಕಾರವನ್ನು ಸ್ಥಾಪಿಸಿ ಶಾಂತಿಯನ್ನು ನೆಲೆಗೊಳಿಸಿದಳು. ಪ್ರಜೆಗಳ ಸೌಖ್ಯ ಸಾಧನೆಯೇ ಈಕೆಯ ಮುಖ್ಯ ಧ್ಯೇಯವಾಗಿತ್ತು. ಮಾಳವಪ್ರಾಂತದಲ್ಲಿ ಎಂದೂ ಕಾಣದಂಥ ಸುಖೀರಾಜ್ಯ ಸ್ಥಾಪನೆ ಮಾಡಿದಳು. ಈಗಿನ ಇಂದೂರು ಪಟ್ಟಣ ಈಕೆಯಿಂದಲೇ ಅಭಿವೃದ್ಧಿಗೆ ಬಂದದ್ದು. ಉದಾರಚರಿತಳೂ ಧರ್ಮಿಷ್ಠಳೂ ಆಗಿ ಮತಗ್ರಂಥಗಳ ಅಧ್ಯಯನದಲ್ಲಿ ಹೆಚ್ಚುಕಾಲ ಕಳೆಯುತ್ತಿದ್ದಳು. ದುರಭಿಮಾನ ಲವಲೇಶವೂ ಇರಲಿಲ್ಲ. ಈಕೆ ಅತ್ಯಂತ ಪರಿಶುದ್ಧಳಾದ, ಅತ್ಯಂತ ಆದರ್ಶಪ್ರಾಯಳಾದ ರಾಜ್ಯಾಡಳಿತಗಾರಳೆಂದು ಈಕೆಯ ಬಗ್ಗೆ ಸರ್ ಜಾನ್ ಮ್ಯಾಲ್‌ಕೋಮ್ ಹೇಳಿದ್ದಾನೆ. (ಎಚ್.ಜಿ.ಆರ್.)

**ಅಹಾರ್:** ರಾಜಸ್ತಾನ ರಾಜ್ಯದ ಉದಯಪುರ್ ಪಟ್ಟಣದಿಂದ 38 ಮೀ ದೂರದಲ್ಲಿರುವ ಪುರಾತತ್ತ್ವ ನೆಲೆ. ಬಾಣಾಸ್ ನದಿಯ ಉಪನದಿಯಾದ ಅಹಾರ್‌ನ ದಂಡೆಯ ಮೇಲೆ ದುಲ್ಕೋಟ್ ಎಂಬ ದಿಬ್ಬದಲ್ಲಿ ಪ್ರಾಚೀನ ಸಂಸ್ಕೃತಿಯ ಅವಶೇಷಗಳು ಲಭಿಸಿವೆ. 500 ಮೀ ಉದ್ದ, 275 ಮೀ ಅಗಲ ಹಾಗೂ 12.8 ಮೀ ಎತ್ತರದ ಈ ದಿಬ್ಬದಲ್ಲಿ ರಾಜಸ್ತಾನದ ಪುರಾತತ್ತ್ವ ಇಲಾಖೆಯ ಆರ್.ಸಿ. ಅಗರವಾಲ್‌ರು, ಪುಣೆಯ ಡೆಕ್ಕನ್ ಕಾಲೇಜಿನ ಎಚ್.ಡಿ.ಸಾಂಕಳಿಯ ಅವರ ನೇತೃತ್ವದಲ್ಲಿ ಉತ್ಖನನ ನಡೆಸಿದರು. ತಲಾ 3 ಉಪಹಂತಗಳನ್ನು ಹೊಂದಿರುವ 2 ಪ್ರಮುಖ ಸಂಸ್ಕೃತಿಗಳ ಕುರುಹುಗಳನ್ನು ಇಲ್ಲಿ ಶೋಧಿಸಲಾಯಿತು. ಮೊದಲ ಹಂತ ತಾಮ್ರಯುಗದ್ದಾಗಿದ್ದರೆ, ಎರಡನೆಯದು ಚಾರಿತ್ರಿಕ ಕಾಲದ ಸಂಸ್ಕೃತಿಯ ದಾಗಿದೆ. ಸೂಕ್ಷ್ಮ ಶಿಲೋಪಕರಣಗಳು ದೊರಕದೆ ಕೇವಲ ತಾಮ್ರದ ವಸ್ತುಗಳು ಹಾಗೂ ಕೆಂಪು–ಕಪ್ಪು ದ್ವಿವರ್ಣ ಮಣ್ಪಾತ್ರೆಗಳು ಕಂಡುಬಂದಿದ್ದರಿಂದ ಸಾಂಕಳಿಯರವರು ಈ ಸಂಸ್ಕೃತಿಯನ್ನು ತಾಮ್ರಯುಗ ಸಂಸ್ಕೃತಿಯೆಂದು ಹೆಸರಿಸಿದ್ದಾರೆ. ತಾಮ್ರಯುಗದ 1ನೆಯ ಉಪಹಂತದಲ್ಲಿ ಖಾಕಿಬಣ್ಣದ ಮಣ್ಣಿನ ಲೇಪನ ಹೊಂದಿರುವ ಬೋಗುಣಿಗಳು ಹೇರಳವಾಗಿ ದೊರೆತಿವೆ. 1ಬಿ ಉಪಹಂತದಲ್ಲಿ ಬೂದುಬಣ್ಣದ ಮಣ್ಪಾತ್ರೆಗಳಿವೆ. 1ಸಿ ಉಪಹಂತದಲ್ಲಿ ಕೆಂಪು–ಕಪ್ಪು ದ್ವಿವರ್ಣ ಬೋಗುಣಿಗಳು ಹಾಗೂ ಹೊಳಪಿನಿಂದ ಕೂಡಿದ ಕೆಂಪುಬಣ್ಣದ ಮಣ್ಪಾತ್ರೆಗಳು ದೊರಕಿವೆ. ಈ ನೆಲೆಯ ಪ್ರಮುಖ ಮಣ್ಪಾತ್ರೆಗಳೆಂದರೆ ಕೆಂಪು–ಕಪ್ಪು ದ್ವಿವರ್ಣ ಪಾತ್ರೆಗಳು. ಇವನ್ನು ಸುಡುವ ಮುನ್ನ ಇವುಗಳ ಮೇಲೆ ಬಿಳಿಬಣ್ಣದಲ್ಲಿ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಇಲ್ಲಿಯ ಮಣ್ಪಾತ್ರೆಗಳ ಪೈಕಿ ಬೋಗುಣಿಗಳೇ ಹೆಚ್ಚು. ಲೋಟ, ಹಂಡೆ, ಹೂಜಿಗಳು ಇತರ ಪ್ರಮುಖ ಆಕಾರಗಳು. ಕೆಲವು ಮಣ್ಪಾತ್ರೆಗಳು ಗೀರುಚಿತ್ರಗಳನ್ನು (ಗ್ರಾಫಿಟಿ ಮಾರ್ಕ್ಸ್) ಹೊಂದಿವೆ. ಬೂದು ಹಾಗೂ ಕಂದುಬಣ್ಣದ ಮಡಿಕೆಗಳು, ತವ, ಕಾವಲಿಗಳು ಸಿಕ್ಕಿವೆ. ಹದವಾದ ಮಣ್ಣಿನಿಂದ ಮಾಡಿದ ತಟ್ಟೆ (ಹರಿವಾಣ) ಹರಪ್ಪ ಮಾದರಿಯನ್ನು ಹೋಲುತ್ತದೆ.

ಮನೆಗಳನ್ನು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಗೋಡೆಗಳನ್ನು ಮಣ್ಣಿನಿಂದ ಕಟ್ಟಲಾಗಿದ್ದು ಮರಮುಟ್ಟುಗಳನ್ನು ಉಪಯೋಗಿಸಿ ಚಾವಣಿ ಮಾಡಲಾಗಿದೆ. ಕಪ್ಪು ಮತ್ತು ಕಂದುಬಣ್ಣದ ಮಣ್ಣಿನ ನೆಲವನ್ನು ಚೆನ್ನಾಗಿ ದಮ್ಮಸು ಮಾಡಲಾಗಿದೆ. ಉತ್ಖನನದಲ್ಲಿ ಮನೆಗಳ ಸಂಪೂರ್ಣ ನೆಲಗಟ್ಟು ದೊರೆಯದಿದ್ದರೂ ಅವು 10 ಮೀಗಿಂತ ದೊಡ್ಡದಾಗಿದ್ದು ಹಲವಾರು ಕೋಣೆಗಳನ್ನು ಹೊಂದಿದ್ದವು. ಪ್ರತಿಯೊಂದು ಮನೆಯಲ್ಲೂ ಅಡುಗೆ ಒಲೆ ಕಂಡುಬಂದಿದೆ. ಕೆಲವೆಡೆ ಒಲೆಗಳ ಪಕ್ಕದಲ್ಲಿ ಹಿಟ್ಟು ಬೀಸುವ ಕಲ್ಲು ಸಹ ದೊರೆತಿದೆ. ಆಹಾರ ಶೇಖರಣೆಗಾಗಿ ದೊಡ್ಡ ಮಡಕೆಗಳನ್ನು ಭೂಮಿಯೊಳಗೆ ಹೂಳಲಾಗಿದೆ. ಅಹಾರ್‌ನಲ್ಲಿ ಯಾವುದೇ ಕಲ್ಲಿನ ಉಪಕರಣಗಳು ದೊರಕದಿರುವುದು ವಿಶೇಷ. ಇಲ್ಲಿನ ಜನ ಸಮೀಪದಲ್ಲಿ ಹೇರಳವಾಗಿ ದೊರೆಯುತ್ತಿದ್ದ ತಾಮ್ರದ ಅದಿರಿನಿಂದ ಲೋಹವನ್ನು ಪಡೆದು ತಮಗೆ ಬೇಕಾದ ಉಪಕರಣಗಳನ್ನು ಮಾಡಿಕೊಳ್ಳುತ್ತಿದ್ದರು. ತಾಮ್ರದ ಗಣಿಗಾರಿಕೆ ಅವರ ಪ್ರಮುಖ ಆರ್ಥಿಕ ಕಸುಬಾಗಿತ್ತು. ಅಂತೆಯೇ ತಾಮ್ರದ ಕೊಡಲಿ, ಉಂಗುರ, ಬಳೆ, ಚಾಕು ಮುಂತಾದವುಗಳ ಜೊತೆಯಲ್ಲಿ ತಾಮ್ರದ ಕಿಟ್ಟ ಕೂಡ ದೊರಕಿದೆ. ಮರಳು ಅಥವಾ ಮಣ್ಣಿನ ಅಚ್ಚಿನಲ್ಲಿ ಅದಿರನ್ನು ಕಾಯಿಸಿ ಎರಕ ಹೊಯ್ದು ಲೋಹವನ್ನು ಈ ಜನ ಬಳಸುತ್ತಿದ್ದರು. ಇವಲ್ಲದೆ ಅನೇಕ ಮಣ್ಣಿನ ಮಣಿಗಳು ದೊರಕಿವೆ. ಕೆಲವು ನಿಕ್ಷಾರಿಸಿದ ಮಣಿಗಳು (ಎಚ್ಡ್) ಕೊರೆದ ರೇಖಾಚಿತ್ರದಿಂದ ಅಲಂಕೃತಗೊಂಡಿವೆ. ಇದೇ ರೀತಿಯ ಅಲಂಕೃತ ಮಣಿಗಳು ಪಶ್ಚಿಮ ಏಷ್ಯದಲ್ಲೂ ದೊರೆತಿವೆ. ಅರೆಪ್ರಶಸ್ತ ಶಿಲೆ, ಚಿಪ್ಪು, ಫಯಾನ್ಸ್, ಗಾಜು ಮತ್ತು ಸ್ಟಿಯಟೈಟ್‌ಗಳಲ್ಲಿ ಮಾಡಿದ ಮಣಿಗಳು ಇಲ್ಲಿ ದೊರಕಿವೆ. ಸುಡಾವೆ ಮಣ್ಣಿನ ಮೈ ಉಜ್ಜುವ ಬಿಲ್ಲೆ, ಕಿವಿಯೋಲೆ, ಆಟಿಕೆ, ದಾಳ, ಚಕ್ರ ಮತ್ತು ಚಂಡು, ಸುತ್ತಿಗೆ; ಎಲುಬಿನ ಮೊನಚಾದ ಆಯುಧ ಹಾಗೂ ಚಿಪ್ಪಿನ ಬಳೆಗಳು ಇಲ್ಲಿ ದೊರೆತ ಪ್ರಾಚ್ಯವಸ್ತುಗಳಾಗಿವೆ. ಇಲ್ಲಿಯ ಜನ ಬೋರ್ ಎಂಬ ಬತ್ತದ ತಳಿಯನ್ನು ಬೆಳೆಯುತ್ತಿದ್ದರು. ಇವರು ಹಸು, ಎಮ್ಮೆ, ಕುರಿ, ಮೇಕೆ, ಹಂದಿ ಮುಂತಾದ ಪ್ರಾಣಿಗಳನ್ನು ಸಾಕುತ್ತಿದ್ದು ಜಿಂಕೆ, ಪಕ್ಷಿ ಮುಂತಾದವುಗಳನ್ನು ಬೇಟೆಯಾಡುತ್ತಿದ್ದರು. ಇಂಗಾಲ–14ರ ಕಾಲನಿರ್ಣಯದ ಪ್ರಕಾರ 1ಎ ಉಪಹಂತ ಪ್ರ.ಶ.ಪೂ. 1940±95, 1ಬಿ ಉಪಹಂತ ಪ್ರ.ಶ.ಪೂ. 1785±110 ಹಾಗೂ 1ಸಿ ಉಪಹಂತ ಪ್ರ.ಶ.ಪೂ. 1550±110ರಲ್ಲಿ ಅಸ್ತಿತ್ವದಲ್ಲಿದ್ದವು.

2ನೆಯ ಹಂತ ಆದಿ ಇತಿಹಾಸ ಕಾಲದ್ದಾಗಿದ್ದು, ಈ ಜನ ಹಿಂದಿದ್ದ ತಾಮ್ರಯುಗದ ವಸತಿಯ ಮೇಲೆ ನೆಲೆಸಿದ್ದರು. ಆದ್ದರಿಂದಲೇ ಉತ್ಖನನದಲ್ಲಿ 1ಸಿ ಉಪಹಂತದಲ್ಲಿ ಅನೇಕ ಕುಳಿಗಳನ್ನು ಗಮನಿಸಲಾಗಿದೆ. 2ನೆಯ ಹಂತವನ್ನು ಮಣ್ಪಾತ್ರೆಗಳ ಆಧಾರದ ಮೇಲೆ 3 ಉಪಹಂತಗಳಾಗಿ ವಿಭಜಿಸಲಾಗಿದೆ. 2ಎ ಉಪಹಂತದ ಮಣ್ಪಾತ್ರೆಗಳು ರಂಗಮಹಲ್ (ಗುಜರಾತ್) ಪಾತ್ರೆಗಳನ್ನು ಹೋಲುತ್ತವೆ. 2ಸಿ ಉಪಹಂತದಲ್ಲಿ ಮಣ್ಪಾತ್ರೆಗಳು ಕೆಂಪುಬಣ್ಣದ್ದಾಗಿದ್ದು ನುಣುಪಾಗಿವೆ. ಈ ಕಾಲದ ಕಟ್ಟಡಗಳು ವಿರಳವಾಗಿದ್ದು ಕೇವಲ ಗಚ್ಚು ಮಾಡಿದ ಆಯತಾಕಾರದ ನೆಲ ಹಾಗೂ ಅದರಲ್ಲಿ ಉಂಗುರ ಬಾವಿಯಿದೆ. ಜೊತೆಯಲ್ಲಿ ಬೂದಿ, ಇದ್ದಿಲು ಹಾಗೂ ಪ್ರಾಣಿಯ ಮೂಳೆಗಳನ್ನು ಇಡಲಾಗಿದ್ದ ದೊಡ್ಡ ಹೂಜಿಯಾಕಾರದ ಮಣ್ಪಾತ್ರೆ ದೊರಕಿದೆ. 2ನೆಯ ಹಂತದ ವಿವಿಧ ಸ್ತರಗಳಲ್ಲಿ 6 ನಾಣ್ಯಗಳು ದೊರೆತಿದ್ದು ಅವುಗಳಲ್ಲಿ ಒಂದು ಪ್ರಶ.ಪೂ. 2ನೆಯ ಶತಮಾನದಲ್ಲಿ ಆಳಿದ ಅಪೋಲೋಡೋಟನದ್ದಾಗಿದೆ. 3 ನಾಣ್ಯಗಳ ಮೇಲೆ ಬ್ರಾಹ್ಮಿಲಿಪಿಯ ಅಕ್ಷರಗಳಿವೆ. ಕಿವಿಯೋಲೆ, ಬಳೆ ಮುಂತಾದ ತಾಮ್ರದ ವಸ್ತುಗಳು, ಕೊಡಲಿ, ಮೊಳೆಗಳು, ಬಾಣದ ಮೊನೆ ಮುಂತಾದ 79ಕ್ಕೂ ಹೆಚ್ಚಿನ ಕಬ್ಬಿಣದ ವಸ್ತುಗಳು ಈ ಹಂತದಲ್ಲಿ ದೊರಕಿವೆ. ಗಾಜಿನ ಬಳೆಚೂರು, ಚಿಪ್ಪಿನ ಬಳೆ, ಕಿವಿಯೋಲೆ ಮುಂತಾದವು ಇತರ ಪ್ರಾಚ್ಯವಸ್ತುಗಳು. ಚಿಪ್ಪಿನ ಅನೇಕ ನಿರುಪಯುಕ್ತ ವಸ್ತುಗಳು ಇಲ್ಲಿ ಹೇರಳವಾಗಿ ದೊರೆತಿದ್ದರಿಂದ ಇಲ್ಲಿ ಅದರ ಕಾರ್ಯಾಗಾರವಿತ್ತೆಂದು ತೋರುತ್ತದೆ. ಮೂಳೆಯ ಮೊನೆ, ಸುಡಾವೆ ಮಣ್ಣಿನ ಮೈಉಜ್ಜುವ ಬಿಲ್ಲೆ, ಆಟಿಕೆ, ಮಾನವಾಕೃತಿಗಳು, ಮಣಿಗಳು ಮುಂತಾದವು ಸಹ ಇಲ್ಲಿ ದೊರೆತಿವೆ. ಮಣ್ಪಾತ್ರೆಗಳಲ್ಲಿ ಕಂಡುಬಂದ ನವಣೆ ಅಥವಾ ಸಜ್ಜೆಯ ಹೊಟ್ಟಿನಿಂದ ಇಲ್ಲಿ ಈ ಕಾಳುಗಳನ್ನು ಬೆಳೆಯಲಾಗುತ್ತಿತ್ತೆಂದು ತಿಳಿಯುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ಸಜ್ಜೆಯ ಉಲ್ಲೇಖವಿದ್ದರೂ ಉತ್ತರ ಭಾರತದಲ್ಲಿ ಇದರ ಅವಶೇಷ ವಿರಳ. ಹಾಗಾಗಿ ಇದು ಮಹತ್ತ್ವಪೂರ್ಣ. 2ಎ ಉಪಹಂತವನ್ನು ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆ ಸಂಸ್ಕೃತಿ ಕಾಲಕ್ಕೂ 2ಬಿ ಉಪಹಂತವನ್ನು ಕುಷಾಣರ ಕಾಲಕ್ಕೂ 2ಸಿ ಉಪಹಂತವನ್ನು ಮಧ್ಯಯುಗ ಕಾಲಕ್ಕೂ ಸೇರಿಸಲಾಗಿದೆ. (ಎಸ್.ಜಿ.ಎಸ್.)

**ಅಳಗಂಕುಲಂ:** ತಮಿಳುನಾಡು ರಾಜ್ಯದ ರಾಮನಾಥಪುರಂ ಜಿಲ್ಲೆಯಲ್ಲಿರುವ ಆದಿ ಚಾರಿತ್ರಿಕ–ಮಧ್ಯಯುಗೀನ ಕಾಲದ ವಸತಿ ನೆಲೆ. ಸು. 8–11 ಹೆಕ್ಟೇರಿನಷ್ಟು ವಿಸ್ತೀರ್ಣದ ಒಂದು ಸಾಂಸ್ಕೃತಿಕ ದಿಬ್ಬ. ಸ್ಥಳೀಯವಾಗಿ ಇದನ್ನು ಕೊಟ್ಟೈಮೇಡು ಎಂದು ಕರೆಯಲಾಗುತ್ತದೆ. ಇಲ್ಲಿ ತಮಿಳುನಾಡಿನ ರಾಜ್ಯ ಪುರಾತತ್ತ್ವ ಇಲಾಖೆ ಉತ್ಖನನ ನಡೆಸಿತು. ಈ ಪಟ್ಟಣ ವೈಗೈ ನದಿಯ ಎಡದಂಡೆಯ ಮೇಲಿತ್ತು. ಈಗ ನದಿಯ ಈ ಭಾಗ ಸಂಪೂರ್ಣ ಬತ್ತಿಹೋಗಿದೆ.

ಉತ್ಖನನದಲ್ಲಿ 4 ಸಾಂಸ್ಕೃತಿಕ ಹಂತಗಳನ್ನು ಇಲ್ಲಿ ದಾಖಲಿಸಲಾಗಿದೆ. ಮೊದಲೆರಡು ಹಂತಗಳು (ಪ್ರ.ಶ.ಪೂ. 500–300 ಮತ್ತು ಪ್ರ.ಶ.ಪೂ.300–ಪ್ರ.ಶ. 100) ಆದಿ ಚಾರಿತ್ರಿಕ



ಚಿತ್ರಸಹಿತ ಮಣ್ಣಾತ್ರೆ

ಕಾಲಕ್ಕೂ 3ನೆಯ ಹಂತ (100–500) ಇದರ ತರುವಾಯದ ಕಾಲಕ್ಕೂ ಸೇರುತ್ತವೆ. 4ನೆಯ ಹಂತ ಮಧ್ಯಕಾಲೀನ ಯುಗದ ಆರಂಭಿಕ ಹಂತವಾಗಿದೆ (500–1200). ಆದಿಚಾರಿತ್ರಿಕ ಹಂತಗಳಲ್ಲಿ ಈ ನೆಲೆ ಒಂದು ಮುಖ್ಯ ಬಂದರು ಪಟ್ಟಣವಾಗಿತ್ತೆಂಬುದನ್ನು ಇಲ್ಲಿ ಸಿಕ್ಕ ಅವಶೇಷಗಳು ಸೂಚಿಸುತ್ತವೆ. ಇವುಗಳಲ್ಲಿ ಮುಖ್ಯವಾದುವೆಂದರೆ ಮೆಡಿಟರೇನಿಯನ್ ಮೂಲದ ಮದ್ಯ ಅಥವಾ ಆಲಿವ್ ಎಣ್ಣೆಯ ಜಾಡಿಗಳು (ಆಂಫೊರ), ಇಟಲಿ ಮೂಲದ ಅರೆಟೈನ್ ಮಾದರಿಯ ಪಾತ್ರೆಗಳು ಹಾಗೂ ಪ್ರಾಯಶಃ ರೋಮಿನಿಂದ ಬಂದ ಮುದ್ರಿತ ವಿನ್ಯಾಸವುಳ್ಳ ಪಾತ್ರೆಗಳು(ಸ್ಟ್ಯಾಂಪ್ಡ್ ವೇರ್), ಔತ್ತರೇಯ ಮೆರುಗಿನ ಕಪ್ಪು ಪಾತ್ರೆಗಳು, ಕುತೂಹಲಕಾರಿಯಾದ ಗೀರುಚಿತ್ರಗಳುಳ್ಳ ಮಣ್ಣಾತ್ರೆಗಳು ಮತ್ತು ವ್ಯಾಲಂಟೈನ್ ಮೊದಲಾದ ರೋಮಿನ ರಾಜರ ನಾಣ್ಯಗಳು. ಎರಡು ಮಣ್ಣಾತ್ರೆ ಚೂರುಗಳ ಮೇಲೆ ದೋಣಿಯ ಗೀರು ಚಿತ್ರವಿದ್ದು ಇದರಲ್ಲಿ ಒಂದು ರೋಮಿನ ಮಾದರಿಯ ದೋಣಿ ಅಥವಾ ಹಡಗು ಎಂದು ಗುರುತಿಸಲಾಗಿದೆ. ಪ್ರ.ಶ. 1–2 ಶತಮಾನದ ಮಾಸಲು ಕಂದುಬಣ್ಣದ ಮಣ್ಣಾತ್ರೆಯ ಚೂರೊಂದರ ಮೇಲೆ ಇರುವ ಇಬ್ಬರು ಹೆಂಗೆಳೆಯರ ಮುದ್ರಾಂಕಿತ ಚಿತ್ರವೂ ಗಮನ ಸೆಳೆಯುತ್ತದೆ. ಇವರ ರೂಪ, ವೇಷಗಳು ಈಜಿಪ್ಟಿನ ವರ್ಣಚಿತ್ರಗಳಲ್ಲಿರುವ ಸ್ತ್ರೀಯರನ್ನು ಹೋಲುತ್ತವೆ. ಈ ಕಾಲಾವಧಿಗೆ ಸೇರುವ ಇತರ ಅವಶೇಷಗಳೆಂದರೆ ಪಾಂಡ್ಯರ 2 ನಾಣ್ಯಗಳು (ಪ್ರ.ಶ.100–500), 2 ಮುದ್ರಾಂಕಿತ ನಾಣ್ಯಗಳು (ಪ್ರ.ಶ.ಪೂ.500–300), ತಮಿಳು–ಬ್ರಾಹ್ಮಿಲಿಪಿಯಲ್ಲಿ ನಾಮವಾಚಕ ಪದಗಳನ್ನು ಹೊಂದಿದ ಮಣ್ಣಾತ್ರೆ ಚೂರುಗಳು, ಆನೆ, ಗೂಳಿ, ಕುದುರೆಸವಾರ ಮೊದಲಾದ ಗೀರುಚಿತ್ರಗಳುಳ್ಳ ಮಣ್ಣಾತ್ರೆ ಭಾಗಗಳು, ತಯಾರಿಕೆಯ ಹಂತಗಳನ್ನು ತೋರಿಸುವ ಶಂಖಾಭರಣಗಳು ಹಾಗೂ ಅರೆಪ್ರಶಸ್ತ ಕಲ್ಲು–ಗಾಜಿನ ಮಣಿಗಳು. ಕೊನೆಯ ಎರಡು ವಸ್ತುಗಳು ಇಲ್ಲಿಂದ ರಫ್ತಾಗುತ್ತಿದ್ದಿರ ಬೇಕು. ಸ್ಥಳೀಯವಾಗಿ ತಯಾರಾಗುತ್ತಿದ್ದ ಮತ್ತೊಂದು ವಸ್ತುವೆಂದರೆ ಕೆಂಪುಬಣ್ಣದ ನಕ್ಷಾಂಕಿತ ಪಾತ್ರೆಗಳು. ಶ್ರೀಲಂಕ, ಜಾವ, ಸುಮಾತ್ರ, ಮಲೇಷ್ಯ ಮೊದಲಾದ ದೇಶಗಳು ಈ ಪಾತ್ರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದಂತೆ ತೋರುತ್ತದೆ. ತನ್ನ ಉಚ್ಛ್ರಾಯಕಾಲದಲ್ಲಿ ಅಳಗಂಕುಲಂ ಸಮಕಾಲೀನ ಬಂದರು ಪಟ್ಟಣಗಳಾದ ಕಾವೇರಿಪಟ್ಟಣಂ ಮತ್ತು ಕೊರಕೈನಷ್ಟೇ ಪ್ರಾಮುಖ್ಯವನ್ನು ಪಡೆದಿತ್ತೆಂಬುದು ಈ ಎಲ್ಲ ಅಂಶಗಳಿಂದ ಸ್ಪಷ್ಟವಾಗುತ್ತದೆ. ಸಾಗರೋತ್ತರ ವಾಣಿಜ್ಯ ವ್ಯವಹಾರಗಳಲ್ಲಿ ಇದು ಮುಖ್ಯ ಪಾತ್ರವಹಿಸಿತ್ತು. ವ್ಯಾಪಾರಕ್ಕಾಗಿ ಇಲ್ಲಿಗೆ ಬರುತ್ತಿದ್ದ ರೋಮನ್ನರ ವಸತಿ ಈ ಪಟ್ಟಣದಲ್ಲಿ ಇದ್ದಿರಬಹುದಾದ ಸಾಧ್ಯತೆಯಿದೆ. (ವಿ.ಎಸ್.)

**ಅಳಗರೈ:** ತಮಿಳುನಾಡು ರಾಜ್ಯದ ತಿರುಚ್ಚಿರಾಪಳ್ಳಿ ಜಿಲ್ಲೆಯಲ್ಲಿರುವ ಪ್ರಾಚೀನ ವಸತಿ ನೆಲೆ. ಇಲ್ಲಿ 3 ಸಾಂಸ್ಕೃತಿಕ ಹಂತಗಳಿವೆ. 1ನೆಯ ಹಂತ ಪ್ರಾಗೈತಿಹಾಸಿಕ ಕಾಲದ್ದಾಗಿದ್ದು ಅದರಲ್ಲಿ ಕಪ್ಪು ಮತ್ತು ಕೆಂಪುಬಣ್ಣದ ಹಾಗೂ ಬೂದುಬಣ್ಣದ ಲೇಪವುಳ್ಳ ಮಣ್ಣಾತ್ರೆ ದೊರಕಿವೆ. ಅಲ್ಲದೇ ಗುಡಾಣದಂತಹ ಮಡಕೆಯಲ್ಲಿ ಮಾನವನ ಎಲುಬುಗಳು ಮತ್ತು ಇತರೇ ವಸ್ತುಗಳನ್ನೂ ಇಡಲಾಗಿದೆ. ಚಿಪ್ಪಿನಿಂದ ತಯಾರಿಸಲಾದ ಬಳೆ, ಚಿಪ್ಪು ಹಾಗೂ ಗಾಜಿನ ಮಣಿಗಳು, ಸುಡಾವೆಮಣ್ಣಿನ ಮಣಿ ಮತ್ತು ಕಿವಿಯಾಭರಣಗಳು ಇಲ್ಲಿ ದೊರೆತ ಇತರೆ ಪ್ರಾಚ್ಯಾವಶೇಷಗಳು. 2ನೆಯ ಹಂತದಲ್ಲಿ ಬೂದುಬಣ್ಣದ ಲೇಪವುಳ್ಳ ಪಾತ್ರೆಗಳ ಪ್ರಮಾಣ ಕಡಿಮೆಯಾಗಿ ಕೆಂಪುಬಣ್ಣದ ಪಾತ್ರೆಗಳ ಸಂಖ್ಯೆ ಹೆಚ್ಚಿದೆ. ಅಪಕ್ವಕೆಂಪು ಮತ್ತು ಕಪ್ಪುಬಣ್ಣದ ಪಾತ್ರೆಗಳು ದೊರೆತಿದ್ದು ಅವುಗಳಲ್ಲಿ ಒಂದರ ಮೇಲೆ ಅಕ್ಷರಗಳನ್ನು ಮೂಡಿಸಲಾಗಿದೆ. 3ನೆಯ ಹಂತದಲ್ಲಿ ಲೇಪವುಳ್ಳ ಹಾಗೂ ಲೇಪರಹಿತ ಕೆಂಪುಬಣ್ಣದ ಪಾತ್ರೆಗಳು ಹಾಗೂ ವಿಜಯನಗರ ಕಾಲದ ತಾಮ್ರದ ನಾಣ್ಯಗಳು ದೊರಕಿವೆ. (ಎಸ್.ಜಿ.ಎಸ್.)

# ಆ

**ಆಂಕೋರ್‌ಥಾಮ್:** ಕಾಂಭೋಜ (ಕಾಂಬೋಡಿಯ) ದೇಶದ ಭವ್ಯ ವಾಸ್ತುಶಿಲ್ಪಗಳ ನಗರ. ಕಾಂಭೋಜದ ಖ್ಮರ್ ಭಾಷೆಯಲ್ಲಿ ಆಂಕೋರ್‌ಥಾಮ್ (ಥೋಮ್) ಎಂದರೆ ಮಹಾನಗರ ಎಂದರ್ಥ. ಪ್ರಸಿದ್ಧ ರಾಜನಾದ 7ನೆಯ ಜಯವರ್ಮ ಇದರ ನಿರ್ಮಾಪಕ. ಚಂಪ ರಾಜ್ಯದ ಸೈನ್ಯ ಈ ರಾಜಧಾನಿಯನ್ನು ಹಾಳುಮಾಡಿತ್ತಾದರೂ ಈ ಸ್ಥಳದಲ್ಲಿ ಅಳಿದು ಳಿದ ಅವಶೇಷಗಳನ್ನು ಸೇರಿಸಿ ಜಯವರ್ಮ ಇಲ್ಲಿ ಮಹಾನಗರವನ್ನು ನಿರ್ಮಿಸಿದ. ಈ ನಗರದ ವಿಸ್ತಾರ 10 ಚ.ಕಿಮೀ. ಕೋಟೆ ಗೋಡೆಯ ಎತ್ತರ ಸು.8 ಮೀ, ಉದ್ದ 12ಕಿಮೀ. ಇದರ ಸುತ್ತಲೂ 100 ಮೀ ಅಗಲದ ಕಂದಕವಿದೆ. ಈ ನಗರಕ್ಕೆ 20 ಮೀ ಎತ್ತರದ 5 ಮಹಾದ್ವಾರಗಳಿವೆ. ಕಂದಕಕ್ಕೆ ಮಾಡಿದ ಕಿರು ಸೇತುವೆಯ 2 ಬದಿಗಳಲ್ಲಿ ಕಟಾಂಜನಗಳಿವೆ. ಇದರ ಒಂದು ಬದಿಯಲ್ಲಿ 54 ದೇವತೆಗಳು, ಇನ್ನೊಂದು ಬದಿಯಲ್ಲಿ 54 ರಾಕ್ಷಸರು, ವಾಸುಕಿ ಸರ್ಪವನ್ನು ಹಗ್ಗದಂತೆ ಮಾಡಿಕೊಂಡು ಸಮುದ್ರ ಮಂಥನ ಮಾಡಿದ ಕತೆಯನ್ನು ಚಿತ್ರಿಸಲಾಗಿದೆ. 5 ಮಹಾದ್ವಾರಗಳ ಮೇಲೆ ಅದ್ಭುತವಾದ ಚತುರ್ಮುಖ ಅವಲೋಕಿತೇಶ್ವರ ಬುದ್ಧನ ಭವ್ಯ ಶಿಲ್ಪವಿದೆ. ಕೋಟೆಯೊಳಗೆ ಬಯಾನ್, ಬಫೂನ್ ಮತ್ತು ಫಿಮಿನಿಕ್ ಅರಮನೆ ಸಂಕೀರ್ಣ (ದೇವಲೋಕ) ಹಾಗೂ ಗಜವೇದಿಕೆಗಳಿವೆ. ನಗರದ ಮಧ್ಯದಲ್ಲಿ ಬಯಾನ್ ಎಂದು ಪ್ರಸಿದ್ಧವಾಗಿರುವ ಪರ್ವತ ದೇವಾಲಯವಿದೆ. ಇದರ 3ನೆಯ ಅಂತಸ್ತಿನಲ್ಲಿ ಅವಲೋಕಿತೇಶ್ವರನ 172 ಮುಖವನ್ನು ಬಿಂಬಿಸುವ ಶಿಖರಗಳಿವೆ; ಜೊತೆಗೆ ಸು.1200 ಮೀ ಉದ್ದದ ವರೆಗೆ 1100 ಅಪರೂಪದ ಉಬ್ಬುಶಿಲ್ಪಗಳಿವೆ. ಒಂದನೆಯ ಅಂತಸ್ತಿನಲ್ಲಿ ಗೋಡೆ ಮೇಲೆ 12ನೆಯ ಶತಮಾನದ ಜನಸಾಮಾನ್ಯರ ದೈನಂದಿನ ಜೀವನ ದೃಶ್ಯಗಳನ್ನು ಬಿಡಿಸಲಾಗಿದೆ. ಆರಂಭದಲ್ಲಿ ಬಯಾನ್ 2 ಅಂತಸ್ತಿನ ಶಿವದೇವಾಲಯವಾಗಿತ್ತು. ಅನಂತರ 2ನೆಯ ಅಂತಸ್ತಿನ ಮೇಲೆ ಅಡ್ಡಾದಿಡ್ಡಿಯಾಗಿ ಬೌದ್ಧಧರ್ಮದ ಮಹಾಯಾನ ಪಂಥದ ಕಟ್ಟಡವನ್ನು ನಿರ್ಮಿಸಲಾಯಿತು. ಅನಂತರ ಹಿಂದುಧರ್ಮ ಮತ್ತೆ ಉನ್ನತ ಸ್ಥಿತಿಗೆ ಬಂದಾಗ 3ನೆಯ ಅಂತಸ್ತಿನ ಬೌದ್ಧಧರ್ಮದ ಶಿಲ್ಪಗಳನ್ನು ಹೂಗೊಂಚಲಾಗಿ ಮಾರ್ಪಡಿಸಲಾಯಿತು. 2ನೆಯ ಅಂತಸ್ತಿನ ಗೋಡೆಯ ಒಳಮೈಯಲ್ಲಿ ಹಿಂದು ಪೌರಾಣಿಕ ಕತೆಗಳನ್ನು ನಿರೂಪಿಸಲಾಗಿದೆ. ಬಫೂನ್ ದೇವಾಲಯವನ್ನು ಮೇರು ಪರ್ವತದಾಕೃತಿಯಂತೆ ನಿರ್ಮಿಸಲಾಗಿದೆ. ಇದನ್ನು 2ನೆಯ ಉದಯಾದಿತ್ಯವರ್ಮನ (1050–66) ಅವಧಿಯಲ್ಲಿ ನಿರ್ಮಿಸಲಾಗಿದೆ. ಇದರ ಮಧ್ಯಭಾಗ 43ಮೀ ಎತ್ತರವಿದೆ. ಇದು ಸುಂದರವಾದ ದ್ವಾರಬಂಧ ಹಾಗೂ ಅಷ್ಟಕೋನ ಕಂಬಗಳಿಂದ ಅಲಂಕೃತವಾಗಿದೆ. ಗರ್ಭಗೃಹದ ಮೇಲಿನ ಶಿಖರ ಉಳಿದಿಲ್ಲ. ಇದರ ಪಶ್ಚಿಮಕ್ಕೆ 40ಮೀ ಉದ್ದದ ಬುದ್ಧನ ಮಹಾಪರಿನಿರ್ವಾಣ ಶಿಲ್ಪವಿದೆ. 5ನೆಯ ಜಯವರ್ಮ (968–1001) ಅರಮನೆ ಸಂಕೀರ್ಣವನ್ನು ಕಟ್ಟಿಸಿದ. ಇದರ ಪೂರ್ವದ ಬದಿಯಲ್ಲಿ ಗಜವೇದಿಕೆ ಇದೆ. ಈ ಆವರಣದೊಳಗೆ ನೂರಾರು ಮರದ ಕಟ್ಟಡಗಳಿದ್ದವು. ಉತ್ತರ ಗೋಡೆಯ ಹತ್ತಿರ ಕೆಂಪುಕಲ್ಲಿನ 2 ಕೊಳಗಳಿವೆ. ಫಿಮಿನಿಕವನ್ನು ರಾಜೇಂದ್ರವರ್ಮ (944–68) ಕಟ್ಟಿಸಿದ. ಇದು 3 ಅಂತಸ್ತಿನ ಮೇರು ಪರ್ವತದಾಕೃತಿಯ ದೇವಾಲಯವಾಗಿದ್ದು ಈಗ ದುಸ್ಥಿತಿಯಲ್ಲಿದೆ. ಉತ್ತರದ ಗೋಡೆ ಬದಿಯಲ್ಲಿ ಪ್ರಿಪಲಿಲೆ ಬೌದ್ಧ ದೇವಾಲಯವಿದೆ.



ವಿಷ್ಣುದೇವಾಲಯ

ಇದನ್ನು ನಿರ್ಮಿಸಿದವನು 7ನೆಯ ಜಯವರ್ಮ. ಇದರ ಪೂರ್ವ ಬದಿಗೆ ಶಿಲುಬೆಯಾಕಾರದ ತೆಪ್‌ಪ್ರೆನಮ್ ದೇವಾಲಯವಿದೆ. ಇದರಲ್ಲಿ ಬೌದ್ಧ ಮತ್ತು ಹಿಂದು ದೇವಾಲಯಗಳಿವೆ. 7 ಮೀ ಎತ್ತರದ ಲೆಪರ್‌ಕಿಂಗ್ ವೇದಿಕೆಯ ಮೇಲೆ ಇತ್ತೀಚಿನ ಮೂರ್ತಿಯೊಂದಿದೆ. ಇದು ಆಂಕೋರ್‌ಥಾಮ್ ನಿರ್ಮಿಸಿದ ರಾಜ ಯಶೋವರ್ಮನ ಮೂರ್ತಿ ಎಂಬುದು ಸ್ಥಳೀಯರ ನಂಬಿಕೆ. ಆದರೆ ಇದು ಶಿವನ ಮೂರ್ತಿಯಂತಿದೆ. ಮುಂದಿನ ತಡೆಗೋಡೆಗಳ ಮೇಲೆ ಕುಳಿತ ಭಂಗಿಯ ಅಪ್ಸರೆಯರ, ಸಭಿಕರ, ರಾಜಕುಮಾರರಿಂದ ಒಡಗೂಡಿದ ಕಿರೀಟಧಾರಿ ರಾಜನ ಉಬ್ಬುಶಿಲ್ಪಗಳ 5 ಪಟ್ಟಿಕೆಗಳಿವೆ. 12ನೆಯ ಶತಮಾನದಲ್ಲಿ ನಿರ್ಮಿಸಿದ 350ಮೀ ಉದ್ದದ ಗಜವೇದಿಕೆ ವಾಸ್ತುಶಿಲ್ಪ ಶೈಲಿಯಲ್ಲೂ ಗಾತ್ರದಲ್ಲೂ ಪ್ರಪಂಚವಿಖ್ಯಾತವಾಗಿದೆ.(ಬಿ.ಎಸ್.)

**ಆಂಕೋರ್‌ವಾಟ್:** ಪ್ರಪಂಚದ ಅತ್ಯದ್ಭುತ ಶಿಲ್ಪಕಲಾಮಾದರಿ. ಭಾರತೀಯ ವರ್ತಕರ ಅನವರತ ವ್ಯಾಪಾರ ಉದ್ದೇಶಿತ ಭೇಟಿಗಳಿಂದ ಪ್ರಸಕ್ತಶಕೆ ಪ್ರಾರಂಭವಾಗುವುದಕ್ಕೂ ಮೊದಲು ಈಗಿನ ಕಾಂಬೋಡಿಯ ಪುರಾತನ ಕಾಲದಿಂದ (ಕಾಂಭೋಜ) ಕಂಬೂಜ ದೇಶ ಎಂದು ಕರೆಯಲ್ಪಡುತ್ತಿತ್ತು. ರಾಜಕೀಯ ಪ್ರಭಾವದಿಂದ 1–4ನೆಯ ಶತಮಾನದವರೆಗೂ ಎರಡೂ ಪ್ರದೇಶಗಳಲ್ಲಿ (ಭಾರತ ಮತ್ತು ಕಾಂಬೋಡಿಯ) ಪರಸ್ಪರ ವಿನಿಮಯಗಳು ಅಭಿವೃದ್ಧಿಗೊಂಡವು. ಆದ ಕಾರಣ ಸ್ವಾಭಾವಿಕವಾಗಿ ಭೂಮಾರ್ಗ ಮತ್ತು ಸಮುದ್ರದಿಂದ ಭಾರತೀಯ ಪ್ರಭಾವ ಕಾಂಬೋಡಿಯ ಮತ್ತು ಭಾರತ–ಚೀನ ಗಡಿ ಪ್ರದೇಶದಲ್ಲಿ ಅಭಿವೃದ್ಧಿ ಹೊಂದುತ್ತಿದ್ದ ವಾಸ್ತುಶಿಲ್ಪದ ಮೇಲೆ ಅಗಾಧವಾಗಿ ಆಯಿತು. ಕಾಂಬೋಡಿಯ ದೇಶದ ಸ್ಥಳೀಯ ಖ್ಮರ್ ಶಿಲ್ಪಗಳು ವಿವಿಧ ರೀತಿಯ ಭಾರತೀಯ ಶಿಲ್ಪಶಾಸ್ತ್ರದ ಅಂಶಗಳನ್ನು ಸಮಾಗಮಗೊಳಿಸಿ ಮೂಲಕ್ಕಿಂತ ಶ್ರೇಷ್ಠವಾದ ತಮ್ಮದೇ ಶೈಲಿಯನ್ನು ರೂಢಿಸಿಕೊಂಡರು. ಉದಾಹರಣೆಗೆ ಮಹಾಮೇರು ಪರ್ವತದ ಪರಿಕಲ್ಪನೆ ಭಾರತದಲ್ಲಿ ಪ್ರಾಯಶಃ 9–10 ನೆಯ ಶತಮಾನಕ್ಕೂ ಮೊದಲಲ್ಲಿ ಕಂಡುಬರುತ್ತದೆ. ಮಹಾಮೇರು ಕ್ಷೀರ ಸಾಗರದ ಮಧ್ಯ ಇರುವ ದೇವತೆಗಳ ನಿವಾಸವೆಂದು ಹಿಂದಿನಿಂದ ನಂಬಲಾಗಿದೆ. ಈ ಪರ್ವತ ಅಗಾಧ ಗೋಡೆಯಿಂದ ಸುತ್ತುವರೆಯಲ್ಪಟ್ಟಿದೆ ಎನ್ನಲಾಗುತ್ತದೆ. ಈ ಕಲ್ಪನೆಯನ್ನು ಸಮನ್ವಯ ಗೊಳಿಸಿರುವುದಲ್ಲದೆ, ಸುಂದರವಾಗಿ ದೇವರಾಜ ಪಂಥದಲ್ಲಿ ಸಮನ್ವಯಗೊಂಡು 12ನೆಯ ಶತಮಾನದಲ್ಲಿ ಪ್ರಪಂಚದ ಅತ್ಯದ್ಭುತ ಶಿಲ್ಪಕಲಾಮಾದರಿಯಾಗಿ ಆಂಕೋರ್ ವಾಟ್ ಎಂದು ಪ್ರಖ್ಯಾತವಾಗಿದೆ.

ಎರಡನೆಯ ಸೂರ್ಯವರ್ಮನಿಂದ 1112–1152ರಲ್ಲಿ ಆಂಕೋರ್‌ವಾಟ್ ನಿರ್ಮಿಸಲ್ಪಟ್ಟು ವಿಷ್ಣುವಿಗೆ ಸಮರ್ಪಿಸಲ್ಪಟಿದೆ. ಆಂಕೋರ್ ವಾಟ್ ಸೂರ್ಯವರ್ಮನಿಗೆ ದೇವರಾಜ ನೆಂಬ ಹೆಸರು ತಂದಿದೆ. ದೇವಾಲಯದ ಸಂಕೀರ್ಣ 200 ಮೀ ಅಗಲದ ಕಂದಕದಿಂದ ಸುತ್ತುವರಿದಿದೆ. ಅಚ್ಚು ಹಾಕಿದ ದೊಡ್ಡ ದೊಡ್ಡ ಮರಳುಗಲ್ಲು ಬಂಡೆಗಳಿಂದ ನಿರ್ಮಿಸಿದ ಮೆಟ್ಟಿಲು ಕಟ್ಟೆಯುಳ್ಳ ಕ್ಷೀರ ಸಾಗರವನ್ನು ಪ್ರತಿಬಿಂಬಿಸಿದೆ. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯಕ್ಕೆ ಪಶ್ಚಿಮ ಭಾಗದಲ್ಲಿ ಕಂದಕವನ್ನು ದಾಟಲು 11.6 ಮೀ ಅಗಲದ ಮರಳುಗಲ್ಲು ಇಟ್ಟಿಗೆಗಳಿಂದ ಹಾಸಲ್ಪಟ್ಟ ಮಣ್ಣು ಕಟ್ಟೆ ದಾರಿಗೆ ನಿರ್ಮಿಸಿರುವ ಸಣ್ಣ ಸೇತುವೆ ಹಾದಿಗೆ ಅಡ್ಡಕಂಬಿಯನ್ನು ಸರ್ಪಾಕೃತಿಗಳಿಂದ ಅಲಂಕರಿಸಿ ಮಧ್ಯೆ ಮಧ್ಯೆ ಸಮಾನಾಂತರದಲ್ಲಿ ಐದು ಅಥವಾ ಏಳು ಹೆಡೆ ಸರ್ಪಗಳನ್ನು (ನಾಗರಗಳನ್ನು)ಕೆತ್ತಲಾಗಿದೆ. ಈ ಹಾದಿ ನಾಲ್ಕನೆಯ ಪ್ರಾಂಗಣದ ಮಹಾದ್ವಾರಕ್ಕೆ ಕೊಂಡೊಯ್ಯುತ್ತದೆ. ನಾಲ್ಕನೆಯ ಪ್ರಾಂಗಣವನ್ನು ಕೆಂಪು ಮರಳುಗಲ್ಲು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಇದು ಮಹಾಮೇರುವನ್ನು ಸುತ್ತುವರಿದ ಹೊರಗೋಡೆಯನ್ನು ಪ್ರತಿನಿಧಿಸುತ್ತದೆ. ಇದು 1025ಮೀ×800 ಮೀ ಪ್ರದೇಶವನ್ನು ಆವರಿಸಿದೆ. ನಾಲ್ಕು ಮಹಾದ್ವಾರಗಳ ಪೈಕಿ ಪಶ್ಚಿಮ ದಿಕ್ಕಿನ ಮಹಾದ್ವಾರ ಭವ್ಯವಾಗಿದ್ದು 220ಮೀ ಉದ್ದವಿದೆ.

ಮಹಾದ್ವಾರದ ದ್ವಾರ ಮಂಟಪ ಕೈಸಾಲೆಗೆ ಐದು ಪ್ರವೇಶಗಳಿದ್ದು, ಮಧ್ಯದ್ದು ಎಲ್ಲ ಕ್ಕಿಂತಲೂ ದೊಡ್ಡದಾಗಿದೆ. ಮಧ್ಯದ ಮೂರು ಪ್ರವೇಶಗಳಿಗೆ ಮುಕುಟ ಪ್ರಾಯವಾಗಿ ಗೋಪುರ ಗಳಿದ್ದು ಕಟ್ಟಡದ ಮುಂಭಾಗವನ್ನು ಅಪ್ಸರೆಯರ ಉಬ್ಬುಚಿತ್ರ ನಿಖರವಾದ ಉಬ್ಬುಚಿತ್ರಗಳಿಂದ ಸುಂದರವಾಗಿ ಅಲಂಕರಿಸಲಾಗಿದೆ. ಎಲ್ಲ ಪ್ರದೇಶಗಳೂ ಶಿಲುಬೆಯಾಕಾರದ ವಿನ್ಯಾಸ ಹೊಂದಿದ್ದು ಮೆಟ್ಟಿಲುಗಳಿಲ್ಲದ ಕಾರಣ ಆನೆಗಳಿಗೆ ಪ್ರವೇಶದ್ವಾರವಾಗಿದ್ದಿರಬಹುದು.

ಪಶ್ಚಿಮದ ಪ್ರವೇಶ ದ್ವಾರದ ಅನಂತರ 8 ಮೀ ಅಗಲದ ಮಣ್ಣುಕಟ್ಟೆ ಹಾಸುಗಳಲ್ಲಿನ ಹಾದಿ 360 ಮೀ ಉದ್ದವಿದೆ. ಹಾಸುದಾರಿಯ ಎರಡೂ ಪಾರ್ಶ್ವಗಳಲ್ಲಿ ನಿರ್ಮಿಸಿರುವ ಕಟಾಂಜನದ ಸಾಲಿನಲ್ಲಿ, ಸಮಾನಾಂತರದಲ್ಲಿ ಹಾವಿನ ಹೆಡೆಗಳನ್ನು ಕೆತ್ತಲಾಗಿದೆ. ಈ ಸಂಕೀರ್ಣದ ಹಾಸುಹಾದಿಯ ಎರಡೂ ಪಾರ್ಶ್ವದಲ್ಲಿರುವ ಎರಡು ಗ್ರಂಥಾಲಯಗಳು, ಬೃಹದಾಕಾರವಾದ ಬಯಲು ಪ್ರದೇಶ ಮತ್ತು ಅದಕ್ಕೆ ಪೂರ್ವಭಾಗದಲ್ಲಿನ ಚೌಕಾಕಾರದ ಎರಡು ಕೊಳಗಳು ದೇವಾಲಯಕ್ಕೆ ಮೆರಗು ನೀಡುತ್ತವೆ. ಎರಡು ಮತ್ತು ಮೂರನೆಯ ಆವರಣಗಳ ಮಧ್ಯೆ ಮತ್ತೆರಡು ಗ್ರಂಥಾಲಯಗಳಿದ್ದು ಕೊಳರಹಿತವಾಗಿವೆ. ಮೂಲ ದೇವಾಲಯ ಗಳಿದ್ದು ವಿನ್ಯಾಸದ ಪ್ರಕಾರ ಈ ಗ್ರಂಥಾಲಯಗಳು ಪರಿವಾರದೇವತೆಗಳಿಗೆ ನಿರ್ಮಿತವಾಗಿದ್ದ ಚಿಕ್ಕ ಗುಡಿಗಳಾಗಿರಬಹುದು. ಆದರೆ ಬುದ್ಧನಿಗೆ ಪುನಃ ಸಮರ್ಪಿತವಾದಾಗ ಗ್ರಂಥಾಲಯ ಗಳಾಗಿ ಮಾರ್ಪಟ್ಟಿರಬಹುದು. ಪೂರ್ವಭಾಗದ 4ನೆಯ ಆವರಣದ ಪ್ರಮುಖ ಮಧ್ಯ ಪ್ರವೇಶದ್ವಾರಕ್ಕೆ ಇರುವ ಕಾಲು ಹಾದಿಯಲ್ಲಿ ಕಟಾಂಜನ 3ಮೀ ಎತ್ತರದ ಸರ್ಪಾಕಾರ ಚಿಕ್ಕ, ಕಂಬಗಳ ಸಾಲು ಹೊಂದಿ ಕೊಂಡಿದ್ದು, ಇದು 3ಮೀ ಎತ್ತರದ ವೇದಿಕೆಗೆ ಶಿಲುಬೆಯಾಕಾರದ 4ನೆಯ ಆವರಣದಿಂದ ನೇರವಾಗಿ ಸಂಪರ್ಕವನ್ನು ಕಲ್ಪಿಸುತ್ತದೆ. ವೇದಿಕೆಯ ಮಿಕ್ಕ ಮೂರು ಭಾಗಗಳಲ್ಲಿ ಮೆಟ್ಟಿಲು ಗಳಿವೆ. ಮೆಟ್ಟಿಲುಗಳನ್ನು ರಕ್ಷಿಸುತ್ತಿರುವಂತೆ ಮುದುರಿ ಕುಳಿತ ಸಿಂಹಗಳ ದೃಶ್ಯ, ವೇದಿಕೆಯ ಗಾಂಭೀರ್ಯವನ್ನು ಹೆಚ್ಚಿಸುತ್ತವೆ. ಪ್ರಾಚೀನರು ವೇದಿಕೆಯಂತಿರುವ ಪ್ರದೇಶವನ್ನು ರಂಗಮಂಚ ದಂತೆ ಉಪಯೋಗಿಸುತ್ತಿದ್ದಿರಬಹುದು. ಇವತ್ತಿಗೂ ಈ ವೇದಿಕೆಯನ್ನು ವಿಶೇಷ ಸಮಾರಂಭ ಗಳಲ್ಲಿ ಸಾಂಪ್ರದಾಯಿಕ ನೃತ್ಯ–ಸಂಗೀತಗಳಿಗೆ ಉಪಯೋಗಿಸಲಾಗುತ್ತದೆ.

ಬೃಹತ್ ವಿಷ್ಣು ದೇವಾಲಯ

ಮೂರು ಮತ್ತು ನಾಲ್ಕನೆಯ ಆವರಣಗಳ ಮಧ್ಯೆ ಸರ್ಪ ಕಟಾಂಜನಗಳಿದ್ದು, ಭೂಮಿ ಯಿಂದ ಸು. 3ಮೀ ಎತ್ತರದಲ್ಲಿ ಶಕ್ತಿಯುತ ಬೃಹತ್ ಚೌಕಟ್ಟಿನ ತಳಪಾಯದ ಮೇಲಿದೆ. 3ನೆಯ ಆವರಣ, 4.5ಮೀ ಎತ್ತರದ ಚೌಕಟ್ಟಿನ ತಳಪಾಯದ ಮೇಲೆ ಭವ್ಯವಾಗಿ ನಿಂತಿದೆ. 4ನೆಯ ಆವರಣದಂತೆಯೇ ಮೂರನೆಯ ಆವರಣದ ಪೂರ್ವ ಮತ್ತು ಪಶ್ಚಿಮ ಕೈಸಾಲೆಗಳ ದ್ವಾರ ಮಂಟಪಗಳು 5 ಪ್ರವೇಶದ್ವಾರಗಳು ಪ್ರಾಂಗಣ ಮತ್ತು ಎತ್ತರದ ತೋರಣಗಳಿಂದ ಅಲಂಕರಿಸಲ್ಪಟ್ಟು ಕಣ್ಮನ ಸೆಳೆಯುತ್ತದೆ. ಆದರೆ ಮೂರನೆಯ ಆವರಣ ಪ್ರವೇಶಗಳು ಸ್ವಲ್ಪ ವಿಭಿನ್ನವಾಗಿದ್ದು, ತ್ರಿಕೋಣಾಕಾರ ಗೋಪುರಗಳು ಪ್ರವೇಶದಲ್ಲಿ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಮೂರು ಪ್ರವೇಶಗಳು ಮಾತ್ರ ಇವೆ. 3ನೆಯ ಆವರಣ 250×187 ಮೀ ಅಗಲ ವಾಗಿದ್ದು ದ್ವಾರಮಂಟಪದ ಹಿಂಭಾಗದ ಗೋಡೆಗಳಲ್ಲಿ ಉಬ್ಬು ಚಿತ್ರಗಳ ಕೈಸಾಲೆಯು ಕೆತ್ತಲಾಗಿದ್ದು 700 ಮೀ ಉದ್ದವಿದೆ. ಪ್ರಾಯಶಃ ಇದು ವಿಶ್ವದ ಅತಿ ಉದ್ದ ಫಲಕಗಳಲ್ಲಿ ಒಂದಾಗಿದೆ. ಎಂಟು ಫಲಕಗಳ ಕೆತ್ತನೆಗಳಲ್ಲಿ ಕೌರವಪಾಂಡವರ ಕುರುಕ್ಷೇತ್ರಯುದ್ಧ, ಎರಡನೆಯ ಸೂರ್ಯವರ್ಮನ ದಿಗ್ವಿಜಯಗಳು, ಸ್ವರ್ಗ ನರಕದ ದೃಶ್ಯಗಳು ದೇವ ಮತ್ತು ಅಸುರರ ಸಮುದ್ರಮಂಥನ, ಬಾಣಾಸುರ ಮತ್ತು ವಿಷ್ಣುವಿನ ನಡುವಣ ಯುದ್ಧ, ಕಾಲನೇಮಿ ಮತ್ತು ದೇವತೆಗಳ ಯುದ್ಧ, ರಾಮ ರಾವಣರ ಯುದ್ಧ ಮೊದಲಾದ ಉಬ್ಬು ಶಿಲ್ಪಗಳನ್ನು ಕಾಣ ಬಹುದು ಪ್ರವೇಶದ್ವಾರದ ಎಂಟು ಗೋಡೆಗಳಲ್ಲಿ ಸುಂದರ ಕೆತ್ತನೆ ಕೆಲಸಗಳನ್ನು ಕಾಣಬಹುದು.

2ನೆಯ ಮತ್ತು 3ನೆಯ ಆವರಣ ಮಧ್ಯದ ಚೌಕಪ್ರದೇಶವನ್ನು ಎರಡು ಪರಸ್ಪರ ಕತ್ತರಿಸುವ ಕೈಸಾಲೆಗಳಿಂದ 4 ಭಾಗಗಳಾಗಿ ಮಾಡಲಾಗಿದೆ. ಪ್ರತಿಯೊಂದು ಭಾಗದಲ್ಲೂ ಕೊಳದಂತಿರುವ ಚೌಕಾಕಾರ ಕಟ್ಟಡದ ಹಿಂದು ಭಾಗದಲ್ಲಿ ಚಾಚಿದ ಒಂದು ವೇದಿಕೆ ಇದ್ದು ಒಳಭಾಗಕ್ಕೆ ಚಾಚಿಕೊಂಡಿದೆ. ಈ ಪ್ರದೇಶವನ್ನು ವೇದಶಾಲೆ ಎಂದು ಗುರುತಿಸ ಬಹುದಾಗಿದೆ. ನಾಲ್ಕು ಕೊಳದಂತಿರುವ ಕಟ್ಟಡಗಳ ಕೊಳಗಳಾಗಿರದೆ ಧಾರ್ಮಿಕ ಅನುಷ್ಠಾನ ಗಳನ್ನು ನೆರವೇರಿಸುವ ಕಾರ್ಯಕ್ಕೆ ಉಪಯೋಗಿಸಲ್ಪಡುವ ಪ್ರದೇಶಗಳಾಗಿದ್ದು, ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತವೆ. ಇದರ ಸಂಶೋಧನೆ ಅಗತ್ಯವಾಗಿದೆ.

2ನೆಯ ಆವರಣ ಚೌಕಟ್ಟಿನ 7ಮೀ ತಳಪಾಯದ ಮೇಲಿದೆ. ಸುಂದರವಾಗಿ ಕೆತ್ತಿದ ತೋರಣಗಳ ಪ್ರಾಂಗಣದ 4 ಮೂಲೆಯಲ್ಲಿ ಹಂತಹಂತದ ಗೋಪುರಗಳನ್ನು ಹೊಂದಿದ್ದು ಸಾಧಾರಣವಾಗಿದೆ. ಎರಡನೆಯ ಮತ್ತು ಮೊದಲನೆಯ ಆವರಣದ ಮಧ್ಯ ಪ್ರದೇಶವನ್ನು ಹಾಸುಗಲ್ಲಿನಿಂದ ಸಜ್ಜುಗೊಳಿಸಲಾಗಿದೆ.

ಮೊದಲನೆಯ ಆವರಣ ಎರಡನೆಯ ಆವರಣಕ್ಕಿಂತ 13ಮೀ ಎತ್ತರದಲ್ಲಿದ್ದು, ಭೂಮಿಯಿಂದ 27ಮೀ ಎತ್ತರದಲ್ಲಿ ಬೃಹತ್ ಪೀಠದ ಚೌಕಟ್ಟಿನ ಮೇಲೆ ನಿಂತಿದೆ. ನಾಲ್ಕು ಮೂಲೆಯ ಪ್ರವೇಶ ಬಯಲಿನಲ್ಲಿ ಹಂತಹಂತವಾಗಿ ಗೋಪುರಗಳಿದ್ದು ಎರಡನೆಯ ಆವರಣದಂತೆಯೇ ಇದೆ. ಆವರಣದ ಮಧ್ಯದಲ್ಲಿ ದೇವಾಲಯ ಭವ್ಯವಾಗಿದೆ. ದೇವಾಲಯಕ್ಕೆ ನಾಲ್ಕೂ ದಿಕ್ಕಿನಲ್ಲಿ ಪ್ರವೇಶಗಳಿವೆ. ಕಲ್ಪನೆಯಲ್ಲಿ ಇದು ಸರ್ವತೋಭದ್ರ ದೇವಾಲಯದ ವಿಮಾನ. ಮೊದಲನೆಯ ಆವರಣದ ನೆಲದಿಂದ 36ಮೀ ಎತ್ತರದಲ್ಲಿದ್ದು ಭೂಮಿಯಿಂದ 63ಮೀ ಎತ್ತರದಲ್ಲಿದೆ. ನಾಲ್ಕು ಪ್ರವೇಶಗಳು ಮೊದಲನೆ ಆವರಣದ ಪ್ರವೇಶ ಕೈಸಾಲೆಗಳು ದ್ವಾರಮಂಟಪಗಳಿಂದ ಅಕ್ಷಯ ಕೈಸಾಲೆಗಳಿಂದ ಜೋಡಿಸಲಾಗಿದೆ. ಆವರಣ ಮತ್ತು ಮಂದಿರದ ಮಧ್ಯಪ್ರದೇಶವನ್ನು ಮರಳುಗಲ್ಲಿನ ಹಾಸುಗಳಿಂದ ನಿರ್ಮಿಸಲಾಗಿದೆ. ತೋರಣಗಳು ಮತ್ತು ಮಧ್ಯಮಂದಿರ ಗೋಡೆಗಳು ಹಾಗೂ ಶಿಖರದ ಮೇಲಿನ ಕೆತ್ತನೆಯ ಕೆಲಸ ಬಹು ಸೂಕ್ಷ್ಮ ಮತ್ತು ಸೌಂದರ್ಯಯುಕ್ತವಾಗಿವೆ. ಉಳಿದ ಆವರಣಗಳಂತೆಯೇ ತೋರಣಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣ ಕಥೆಗಳನ್ನು ಸುಂದರವಾದ ಕೆತ್ತನೆಯಲ್ಲಿ ನಿರೂಪಿಸಲಾಗಿದೆ.

ಸಂರಕ್ಷಣೆ: ಆಂಕೋರ್‌ವಾಟ್ ಶಿಥಿಲಗೊಳ್ಳಲು ಕಾರಣ ನೈಸರ್ಗಿಕ ಪ್ರಕ್ರಿಯೆಗಳು ಹಾಗೂ ಮಾನವ ನಿರ್ಲಕ್ಷ್ಯ. ಕಳೆದ ಶತಮಾನದಲ್ಲಿ ಕಾಂಬೋಡಿಯ ಫ್ರಾನ್ಸ್‌ನ ಅಧೀನದಲ್ಲಿದ್ದ ಕಾರಣ 1930ರಲ್ಲಿ ಆಂಕೋರ್‌ವಾಟನ್ನು ರಕ್ಷಿಸುವ ಪ್ರಯತ್ನ ಪ್ರಾರಂಭಿಸಿದರು. ಫ್ರಾನ್ಸ್‌ನ ಪ್ರಾಕ್ತನ ತಜ್ಞರು 1960ರಲ್ಲಿ ಆಂಕೋರ್ ಎಂಬ ಸಂರಕ್ಷಣಾ ವಿಭಾಗವನ್ನು ತೆರೆಯುವುದರ ಮೂಲಕ ಇವರು ಹೆಚ್ಚಿನ ಕೆಲಸಕ್ಕೆ ಚಾಲನೆ ನೀಡಿದರು. ದುರದೃಷ್ಟವಶಾತ್ ಅಂತರ್ಯುದ್ಧ ದಿಂದಾಗಿ ಫ್ರಾನ್ಸಿನ ಪ್ರಾಕ್ತನ ತಜ್ಞ ತಂಡ ಕಾಂಬೋಡಿಯದಿಂದ ಕಾಲ್ತೆಗೆಯಬೇಕಾಯಿತು. 1980ರ ಏಪ್ರಿಲ್‌ನಲ್ಲಿ ರಾಜಕುಮಾರ ನೋರೊಡಾಮ್‌ಸಿಹನೌಕ್ ಆಂಕೋರ್‌ವಾಟನ್ನು ರಕ್ಷಿಸಲು ಪ್ರಪಂಚದ ಎಲ್ಲ ದೇಶದ ಜನರಿಗೆ ಮನವಿ ಮಾಡಿದ. ಭಾರತ ಸರ್ಕಾರ ಈತನ ಮನವಿಯನ್ನು ಪರಿಗಣಿಸಿ 1980 ನವೆಂಬರ್‌ನಲ್ಲಿ ಮೂವರು ಸದಸ್ಯರನ್ನು ಒಳಗೊಂಡ ಒಂದು ತಂಡವನ್ನು ಆಂಕೋರ್‌ವಾಟ್‌ನ ಸಂರಕ್ಷಣೆ ಕಾರ್ಯಕ್ಕೆ ಕಳುಹಿಸಿತು. ಈ ಸಂಬಂಧ ಕಾಂಬೋಡಿಯ ಮತ್ತು ಭಾರತ 1986ರಲ್ಲಿ ಒಂದು ಒಪ್ಪಂದ ಮಾಡಿಕೊಂಡವು. ಭಾರತದ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1986ರ ನವೆಂಬರ್‌ನಲ್ಲಿ ಸಂರಕ್ಷಣೆಯ ಕಾರ್ಯ ಆರಂಭಮಾಡಿ 1993ರ ವರೆಗೆ ಇದನ್ನು ಮುಂದುವರಿಸಿತು.

ಸಂರಕ್ಷಣೆಗೊಳಗಾದ ಭಾಗಗಳೆಂದರೆ ಕಂದಕದ ಕಟ್ಟೆ (120 ಮೀ), ನಾಲ್ಕನೆಯ ಸುತ್ತಿನ ಆವರಣದ ಪಶ್ಚಿಮ ಪ್ರವೇಶದ್ವಾರ, ದಕ್ಷಿಣ ಮತ್ತು ಉತ್ತರ ಗ್ರಂಥಾಲಯ, ರಂಗಮಂಚ, ನಾಗಕಟಾಂಜನ, ಮೂರನೆಯ ಸುತ್ತಿನ ಆವರಣ, ಎರಡನೆಯ ಮತ್ತು ಮೂರನೆಯ ಸುತ್ತಾವರಣದಲ್ಲಿನ ಶಿಲುಬೆಯಾಕಾರದಲ್ಲಿರುವ ಮೊಗಸಾಲೆ, ಒಂದನೆಯ ಮತ್ತು ಎರಡನೆಯ ಸುತ್ತಾವರಣ ಹಾಗೂ ಮುಖ್ಯ ವಿಮಾನ. 3ನೆಯ ಸುತ್ತಿನ ಆವರಣದಲ್ಲಿರುವ ಸುತ್ತಾಲಯದ ದಕ್ಷಿಣ ಭಾಗವನ್ನು ಸಂರಕ್ಷಿಸುವ ಕೆಲಸ ಸವಾಲಿನದಾಗಿತ್ತು. ಇದರ ವೈಶಿಷ್ಟ್ಯ ಗೋಡೆಯ ಮೇಲೆ ಕೆತ್ತಲಾದ ಸಮುದ್ರ ಮಥನ ದೃಶ್ಯದ ಉಬ್ಬುಶಿಲ್ಪ. ಸುತ್ತಾಲಯದ ವಾಸ್ತುಭಾಗಗಳನ್ನು ಕಳಚಿಟ್ಟಿದ್ದ ಫ್ರೆಂಚ್ ಪುರಾತತ್ತ್ವಜ್ಞರು ಇದರ ಅಧಿಷ್ಠಾನ ಭಾಗವನ್ನಷ್ಟೇ ಪುನರ್‌ಜೋಡಿಸುವಲ್ಲಿ ಯಶಸ್ವಿಯಾಗಿದ್ದರು. ಪ್ರತಿಯೊಂದು 800ರಿಂದ 2000 ಕೆಜಿ ತೂಗುವ 2600 ಬಿಡಿ ವಾಸ್ತುಭಾಗಗಳನ್ನು ಸರಿಯಾಗಿ ಜೋಡಿಸಿ ದಕ್ಷಿಣ ಸುತ್ತಾಲಯವನ್ನು ಪೂರ್ಣವಾಗಿ ಪುನರ್‌ನಿರ್ಮಿಸುವುದು ಸಾಹಸವೇ ಆದರೂ ಭಾರತೀಯ ಪುರಾತತ್ತ್ವಜ್ಞರು ಇದನ್ನು ಯಶಸ್ವಿಯಾಗಿ ನಿರ್ವಹಿಸಿದರು. ಇದೇ ಸುತ್ತಾಲಯದ ಮೊಗಸಾಲೆಗಳಿಗೆ ಅರ್ಧ ಕಮಾನಿನಾಕಾರದ ಚಾವಣಿಯಿದ್ದು ಇವುಗಳ ಮೂಲ ರಚನೆಯಲ್ಲಿಯೇ ತಾಂತ್ರಿಕ ದೋಷವಿದ್ದುದು ಸಂರಕ್ಷಣೆಯ ಸಮಯದಲ್ಲಿ ಗಮನಕ್ಕೆ ಬಂದಿತು. ಇದರಿಂದಾಗಿ ಮೊಗಸಾಲೆಯ ಕಂಬಗಳು ತುಸು ವಾಲಿದ್ದು ಕಟ್ಟಡಕ್ಕೆ ಧಕ್ಕೆಯಾಗುವ ಸಾಧ್ಯತೆಯಿತ್ತು. ಇದನ್ನು ಸರಿಪಡಿಸಲು ಚಾವಣಿಗಳಿಗೆ ಭದ್ರವಾದ ತಾತ್ಕಾಲಿಕ ಆಧಾರಗಳನ್ನು ಮೊದಲಿಗೆ ನಿರ್ಮಿಸಲಾಯಿತು. ಅನಂತರ ಮೊಗಸಾಲೆಯ ಕಂಬಗಳನ್ನು ಚಾವಣಿಯಿಂದ ಬೇರ್ಪಡಿಸಿ ನೇರಗೊಳಿಸಲಾಯಿತು. ಚಾವಣಿಯ ಅಡ್ಡತೊಲೆಗಳನ್ನು ಸರಿಯಾದ ಸ್ಥಾನದಲ್ಲಿ ಇರಿಸಿ ಮೂಲ ದೋಷವನ್ನು ನಿವಾರಿಸಲಾಯಿತು. ಅಡ್ಡತೊಲೆಗಳು ಮತ್ತೆ ಸರಿಯಾದಂತೆ ಅವನ್ನು ಸ್ಟೀಲಿನ ಬೆಣೆಗಳಿಂದ ಕೂಡಿಸಲಾಯಿತು. ಈ ದುರಸ್ತಿಯಿಂದಾಗಿ ಚಾವಣಿಯ ತೂಕ ಮೊಗಸಾಲೆಯ ಕಂಬ ಹಾಗೂ ಇತರ ವಾಸ್ತು ಭಾಗಗಳ ಮೇಲೆ ಸರಿಸಮನಾಗಿ ಹರಡುವಂತಾಯಿತು. ಈ ಕಾರ್ಯದಲ್ಲಿ 123 ಕಂಬಗಳು, 123 ಅಡ್ಡ ತೊಲೆ ಹಾಗೂ ಜಂತಿಗಳಲ್ಲದೆ ಚಾವಣಿಯ 456 ಕಲ್ಲುತುಂಡುಗಳನ್ನು ಸಂಪೂರ್ಣವಾಗಿ ಕಳಚಿ ಮತ್ತೆ ಜೋಡಿಸಲಾಯಿತು. ಈ ಆವರಣದ ಈಶಾನ್ಯ ಮೂಲೆಯಲ್ಲಿರುವ ಪ್ರವೇಶ ಮಂಟಪದಲ್ಲಿಯೂ ಸಂರಕ್ಷಣಾ ಕಾರ್ಯ ಕೈಗೊಳ್ಳಲಾಯಿತು. ಪ್ರವೇಶಮಂಟಪಕ್ಕೆ ಮಧ್ಯದಲ್ಲಿ ಸುತ್ತಲೂ ಮುಂಚಾಚಿಕೊಂಡ ಸುಂದರ ಗೋಪುರವಿದ್ದು ಮಂಟಪದ ಎಂಟು ಗೋಡೆಗಳ ಮೇಲೆ ರಾಮಾಯಣ, ಕೃಷ್ಣಲೀಲೆ ಹಾಗೂ ಪುರಾಣಗಳಿಂದಾಯ್ದ ಕಥನಗಳನ್ನು ಉಬ್ಬುಶಿಲ್ಪ ಮಾಧ್ಯಮದಲ್ಲಿ ಅದ್ಭುತವಾಗಿ ಬಿಂಬಿಸಲಾಗಿದೆ. ಮಳೆನೀರಿನ ಸೋರಿಕೆಯಿಂದಾದ ತೀವ್ರ ಸವೆತದಿಂದಾಗಿ ಈ ಸಂಕೀರ್ಣ ಕೆತ್ತನೆಗಳು ಅಂದ ಕಳೆದುಕೊಂಡಿದ್ದವು. ಅಲ್ಲದೆ ಅಲ್ಲಲ್ಲಿ ಚಕ್ಕೆಯೆದ್ದು ಶಿಲ್ಪಗಳು ಹಾಳಾಗಿದ್ದವು. ಗೋಡೆಯ ನಡುವೆ ಹಾಗೂ ದ್ವಾರಬಂಧದ ಸಂದುಗಳಲ್ಲಿ ಗಿಡಮರಗಳ ಕೊಂಬೆ ನುಸುಳಿ ಈ ಭಾಗಗಳಲ್ಲಿ ಬಿರುಕುಗೊಂಡಿದ್ದವು. ಹಾಗಾಗಿ ಇಂತಹ ವಾಸ್ತು ಭಾಗಗಳನ್ನು ಬಿಚ್ಚಿ ಶಿಲ್ಪ-ಕೆತ್ತನೆಗಳ ಮೂಲ ಸೌಂದರ್ಯ-ಸಂಯೋಜನೆಗೆ ಕುಂದುಬಾರದಂತೆ ಎಚ್ಚರಿಕೆ ವಹಿಸಿ ಮತ್ತೆ ರಚಿಸುವುದು ಅನಿವಾರ್ಯವಾಗಿತ್ತು. ದುರಸ್ತಿಯನ್ನು ಪ್ರಾರಂಭಿಸುವ ಮೊದಲು



ವಿಷ್ಣುದೇವಾಲಯದ ತಳವಿನ್ಯಾಸ

ರಾಸಾಯನಿಕ ಅಥವಾ ಸಿಮೆಂಟಿನ ಗಾರೆಯನ್ನು ಬಳಸಿ ಉಬ್ಬುಶಿಲ್ಪ ದೃಶ್ಯಗಳನ್ನು ಬಲಪಡಿಸಲಾಯಿತು. ನಂತರ ಛಾವಣಿ ಹಾಗೂ ತೋರಣದ 348 ಭಾಗಗಳನ್ನು ಬಿಚ್ಚಿ ಕೈಲಾಸವನ್ನೆತ್ತುತ್ತಿರುವ ರಾವಣ ಹಾಗೂ ಮನ್ಮಥನನ್ನು ತನ್ನ ಕೆಂಗಣ್ಣಿನಿಂದ ದಹಿಸುತ್ತಿರುವ ಶಿವನ ಉಬ್ಬುಶಿಲ್ಪ ದೃಶ್ಯಗಳಲ್ಲಿ ಸ್ಥಳದಿಂದ ಸರಿದಿದ್ದ ಭಾಗಗಳನ್ನು ಸರಿಯಾಗಿ ಕೂಡಿಸಲಾಯಿತು. ಅಂತೆಯೇ ವಾಲಿ-ಸಂಹಾರ, ದಕ್ಷಿಣಾಮೂರ್ತಿ ಶಿವ, ಗೋವರ್ಧನಗಿರಿಯನ್ನೆತ್ತಿದ ಕೃಷ್ಣ, ಭಿಕ್ಷಾಟನಾಮೂರ್ತಿ ಮುಂತಾದ ಉಬ್ಬುಶಿಲ್ಪಗಳನ್ನು ಸಂರಕ್ಷಿಸಲಾಯಿತು. ಪ್ರವೇಶ ಮಂಟಪದ ಗೋಡೆಗಳನ್ನು ದುರಸ್ತಿಗೊಳಿಸಿದ ಮೇಲೆ ಚಾವಣಿ ಹಾಗೂ ತೋರಣವನ್ನು ಪುನರ್ ನಿರ್ಮಿಸಲಾಯಿತು. ಮಳೆ ನೀರಿನಿಂದ ಮತ್ತೆ ಧಕ್ಕೆಯೊದಗದಂತೆ ಮಂಟಪದ ಸಂದು ಗೊಂದುಗಳನ್ನು ಮುಚ್ಚಲಾಯಿತು.

ಒಟ್ಟಾರೆ 9000ಕ್ಕೂ ಹೆಚ್ಚು ವಾಸ್ತುಭಾಗಗಳನ್ನು ಭಾರತೀಯ ಪುರಾತತ್ತ್ವಜ್ಞರು ಪುನರ್ಜೋಡಿಸಿದರು. ನೂರಾರು ಕಂಬಗಳನ್ನು ಬಲಗೊಳಿಸಿದ್ದಲ್ಲದೆ ಇಡಿಯ ಸಂಕೀರ್ಣಕ್ಕೆ ಮಳೆಯ ನೀರು ಸೋರದಂತೆ ರಕ್ಷಣೆಯೊದಗಿಸಿದ್ದು ಇವರ ಕೊಡುಗೆ. ಆಂಗ್‌ಕೋರ್ ವಾಟ್‌ನಂತಹ ಅದ್ಭುತ ದೇವಾಲಯದ ಸಂರಕ್ಷಣೆ ಒಂದು ಭಗೀರಥ ಕಾರ್ಯ. ಇದರಲ್ಲಿ ಸು.20000 ನುರಿತ ಕೆಲಸಗಾರರು ಹಾಗೂ ಪರಿಣಿತ ತಜ್ಞರು ಅವಿರತವಾಗಿ ಶ್ರಮಿಸಿದರು.

(ಬಿ.ಎನ್.)

ಪುರಾತತ್ತ್ವ ನೆಲೆ ನಕಾಶೆ: ಆಸ್ಟ್ರೇಲಿಯದ ಸಿಡ್ನಿ ವಿಶ್ವವಿದ್ಯಾಲಯ ಹಾಗೂ ಕಾಂಬೋಡಿಯ ಮತ್ತು ಫ್ರಾನ್ಸ್ ದೇಶಗಳ ವಿದ್ವಾಂಸರ ತಂಡ ಆಂಕೋರ್‌ವಾಟ್ ಯೋಜನೆಯ ಅನುಸಾರ ರೆಸ್ಲೊಲ್ಯೂಷನ್ ಗ್ರೌಂಡ್ ಸೆನ್ಸಿಂಗ್ ರೆಡಾರ್ ಎಂಡ್ ಏರಿಯಲ್ ಫೋಟೋಗ್ರಫಿ ವಿಧಾನದಿಂದ ಈ ಪ್ರದೇಶದ ಸರ್ವೇಕ್ಷಣೆ ನಡೆಸಿತು. ಭೂಮಿಯೊಳಗಿನ ಮತ್ತು ಮೇಲಿನ ಲಕ್ಷಣ ಮತ್ತು ಅವಶೇಷಗಳನ್ನು ಅತಿಸೂಕ್ಷ್ಮವಾಗಿ ಗುರುತಿಸಿ ಪ್ರಾಚೀನ ನಗರದ ಒಂದು ವೈಜ್ಞಾನಿಕ ನಕಾಶೆಯನ್ನು ಸಿದ್ಧಪಡಿಸಿತು. ಈ ನಕಾಶೆಯಿಂದ ಪ್ರಸಿದ್ಧ ಆಂಕೋರ್‌ವಾಟ್ ನಿರ್ಮಿತಿಯ ಸುತ್ತಮುತ್ತ ಸು. 30ಚ.ಕಿಮೀ ವಿಸ್ತಾರದ ನಗರದ ಅವಶೇಷಗಳನ್ನು ಗುರುತಿಸಲು ಸಾಧ್ಯವಾಗಿದೆ.

ವಿವಿಧ ಪ್ರಾಚ್ಯವಸ್ತುಗಳು, ಭೂಮಿಯೊಳಗೆ ಹುದುಗಿರುವ 94 ದೇವಾಲಯ ಮತ್ತು ಭೂಮಿಯ ಮೇಲಿನ 74 ದೇವಾಲಯ, ರಸ್ತೆ, ಕಾಲುವೆ ಮುಂತಾದವುಗಳ ಬಗ್ಗೆ ಅಮೂಲ್ಯ ಮಾಹಿತಿಯ ಸಂಗ್ರಹಿಸಲಾಗಿದೆ. ಭೂಮಿಯೊಳಗಿನ ನಿರ್ಮಿತಿಗಳ ಮೇಲೆ ಬೆಳೆದಿರುವ ಸಸ್ಯವರ್ಗ ಮತ್ತು ತೇವವನ್ನು ಅತಿ ಸೂಕ್ಷ್ಮವಾಗಿ ರಡಾರ್ ಗುರುತಿಸಿದೆ. ಸರ್ವೇಕ್ಷಣೆಗೆ ಒಳಪಡಿಸಿದ ಭಾಗವೆಲ್ಲ ದಟ್ಟ ಅರಣ್ಯ ಪ್ರದೇಶವಾಗಿದೆ. ಈ ನಗರ ಪ್ರದೇಶ ಸು.120 ಚ.ಕಿಮೀ ವಿಸ್ತಾರವಾಗಿತ್ತು. ಸು. 10 ಚ.ಕಿಮೀ ಪ್ರದೇಶದಲ್ಲಿ ನಗರವಿದ್ದು, ಅದರ ಸುತ್ತಲೂ ಉಪನಗರಗಳಿದ್ದವು. ಇದರ ಆಗ್ನೇಯ ಮತ್ತು ವಾಯವ್ಯ ದಿಕ್ಕಿನಲ್ಲಿ ನಗರ ವಿಸ್ತರಿಸಿತ್ತೆಂದು ಕಾಣುತ್ತದೆ. ಹೀಗಾಗಿ ಈ ನಗರದ ಸರಹದ್ದನ್ನು ಪೂರ್ಣವಾಗಿ ಗುರುತಿಸಲಾಗಿಲ್ಲ. ಈ ನಗರದಲ್ಲಿ ಸು.5 ಲಕ್ಷ ಜನ ವಾಸಿಸುತ್ತಿದ್ದರೆಂದು ತಜ್ಞರು ಅಂದಾಜು ಮಾಡಿದ್ದಾರೆ.

ಆಂಕೋರ್‌ವಾಟ್ 16ನೆಯ ಶತಮಾನದವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆದರೆ 1860ರ ದಶಕದಲ್ಲಿ ಯುರೋಪಿನ ಅನ್ವೇಷಕರು ಈ ನೆಲೆಯನ್ನು ಪರಿಶೀಲಿಸುವ ಸಮಯದಲ್ಲಿ ದಟ್ಟವಾದ ಅರಣ್ಯದಿಂದ ಮುಚ್ಚಿಹೋಗಿತ್ತು. ನಗರ ದುಃಸ್ಥಿತಿಗೆ ಬರಲು ನಕಾಶೆಯಿಂದ ಮುಖ್ಯಕಾರಣಗಳನ್ನು ಕಂಡುಹಿಡಿಯಲು ಸಾಧ್ಯವಾಗಿದೆ. ಇಲ್ಲಿ ದೊಡ್ಡ ಪ್ರಮಾಣದಲ್ಲಿ ರಚಿಸಿಕೊಂಡ ನೀರು ಪೂರೈಕೆ ವ್ಯವಸ್ಥೆ ಪರಿಸರದ ಮೇಲೆ ಗಣನೀಯವಾಗಿ ದುಷ್ಪರಿಣಾಮ ಬೀರಿತು. ನಕಾಶೆಯಲ್ಲಿ ಕಾಲುವೆಗಳ ನೀರಿನ ಜಾಲ ಸ್ಥಳೀಯ ಪರಿಸರದ ಮೇಲಿನ ಒತ್ತಡದ ಸಾಮರ್ಥ್ಯವನ್ನು ಸೂಚಿಸುತ್ತದೆ. ಸು. 5ಚ.ಕಿಮೀ ಎತ್ತರದ ಪ್ರದೇಶದಿಂದ ನಗರದ ಮಧ್ಯದಲ್ಲಿರುವ ಸಂಗ್ರಹಣಾ ಜಲಾಶಯಕ್ಕೆ ಮತ್ತು ಅಲ್ಲಿಂದ ವ್ಯವಸಾಯದ ಭೂಮಿಗೆ ನೀರು ಪೂರೈಕೆಗಾಗಿ ಕಾಲುವೆ ಮಾಡಲು ಈ ಪ್ರದೇಶದ ಅರಣ್ಯವನ್ನು ನಾಶಪಡಿಸಿರುವುದು ಸ್ಪಷ್ಟ. ಒತ್ತದ ಕೃಷಿ ಸಾಧ್ಯವಾದದ್ದು ಇಂತಹ ಸುವ್ಯವಸ್ಥಿತವಾದ ನೀರಾವರಿಯಿಂದ. ಆದರೆ ಕಾಲುವೆ ರಚನೆಯಲ್ಲೂ ಕೆಲವು ದೋಷಗಳಿದ್ದವು. ಪರಿಸರಕ್ಕೆ ಉಂಟಾದ ಅತಿಹಾನಿಯಿಂದಾಗಿ ನಗರ ಪಾಳುಬಿದ್ದಿತು ಎನ್ನುವುದು ತಜ್ಞರ ಅಭಿಪ್ರಾಯ. (ಎ.ಎಸ್.;ಎನ್.ಎಲ್.)

**ಆಂಗ್ಲೋಸ್ಯಾಕ್ಸನರು:** ಬ್ರಿಟನ್ನಿನಲ್ಲಿ ರೋಮನರ ಆಧಿಪತ್ಯ ಕಳೆದ ಮೇಲೆ ಜರ್ಮನಿಯಿಂದ ಬಂದು ನೆಲಸಿದ ಜನ. ಆಂಗ್ಲರು ಮತ್ತು ಸ್ಯಾಕ್ಸನರು ಎಂಬ ಎರಡು ಜನಾಂಗದವರ ಮಿಲನದಿಂದ ಆದ ಜನಾಂಗವಿದು. ಇಂಗ್ಲೆಂಡಿನ ಪೂರ್ವ, ಮಧ್ಯ ಮತ್ತು ಉತ್ತರದ ಭಾಗಗಳಲ್ಲಿ ನೆಲೆಸಿ ಆಂಗ್ಲರು ಪೂರ್ವಆಂಗ್ಲೀಯ, ಮರ್ಸಿಯ, ನಾರ್ದಂಬ್ರಿಯ ಮುಂತಾದ ರಾಜ್ಯಗಳನ್ನು ಕಟ್ಟಿಕೊಂಡರು. ಜರ್ಮನಿಯಲ್ಲಿ ಆಂಗ್ಲರ ನೆರೆಯಲ್ಲೆ ಇದ್ದ ಸ್ಯಾಕ್ಸನರು 5ನೆಯ ಶತಮಾನದಲ್ಲಿ ಇಂಗ್ಲೆಂಡಿಗೆ ಬಂದು ನೆಲೆಸಿ ಸಸೆಕ್ಸ್, ವೆಸೆಕ್ಸ್ ಮತ್ತು ಎಸೆಕ್ಸ್ ಎಂಬ ರಾಜ್ಯಗಳನ್ನು ಕಟ್ಟಿದರು. ಜ್ಯೂಟರು ಬಂದು ಕೆಂಟ್ ಪ್ರಾಂತದಲ್ಲಿ ನೆಲಸಿದರು. ಮುಂದೆ ಡೇನರು, ನಾರ್ಮನ್ನರು ಮೊದಲಾದವರೂ ಬಂದರು. ಇವರೆಲ್ಲ ಪೂರ್ವದಿಂದಲೂ ಇಂಗ್ಲೆಂಡಿನಲ್ಲಿ ನೆಲಸಿದ್ದ ಕೆಲ್ಟ್‌ಜನರೊಂದಿಗೆ ಬೆರೆತುಹೋದರು. ಮುಂದೆ ಆಂಗ್ಲೋಸ್ಯಾಕ್ಸನ್ ಎಂಬ ಹೆಸರು 11ನೆಯ ಶತಮಾನದಲ್ಲಿ ಇಂಗ್ಲೆಂಡಿಗೆ ಬಂದು ರಾಜ್ಯ ಸ್ಥಾಪಿಸಿದ ನಾರ್ಮನರಿಗೇ ಅಲ್ಲದೆ ಹಿಂದೆ ಇಂಗ್ಲೆಂಡಿನಲ್ಲಿದ್ದ ಎಲ್ಲ ಜನರಿಗೂ ಅನ್ವಯಿಸುವಂತಾಯಿತು. *

**ಆಂಟೊನೈನ್ ಸಾಮ್ರಾಟರು:** 96–180ರವರೆಗೆ ರೋಮ್ ಸಾಮ್ರಾಜ್ಯವನ್ನಾಳಿದ ಐವರು ಉತ್ತಮ ಚಕ್ರವರ್ತಿಗಳಿಗೆ (ಫೈವ್ ಗುಡ್ ಎಂಪರರ್ಸ್) ಈ ಹೆಸರು ಬಂದಿದೆ. ಈ ಕಾಲಕ್ಕೆ ಮುಂಚೆ ಆಳಿದ ಫ್ಲೇವಿಯನ್ ಸಾಮ್ರಾಟರ ಕಾಲದಲ್ಲಿ ಒಳ್ಳೆಯ ಆಡಳಿತ ವ್ಯವಸ್ಥೆ ರೂಪುಗೊಂಡಿತು. ಆ ಸಾಮ್ರಾಟರ ಸೆನೆಟ್ ಸಭೆಯ ಗೌರವಸ್ಥಾನಕ್ಕೆ ಕುಂದುಬಾರದಂತೆ ನೋಡಿಕೊಂಡು ಸೈನ್ಯದ ಪ್ರಾಬಲ್ಯವನ್ನು ಬಹುಮಟ್ಟಿಗೆ ತಗ್ಗಿಸಿದರು. ಚಕ್ರವರ್ತಿಗಳಲ್ಲಿ ನಿರಂಕುಶ ಪ್ರವೃತ್ತಿ ಸ್ವಲ್ಪ ಸ್ವಲ್ಪ ಬೆಳೆಯುತ್ತಿದ್ದರೂ ಅವರ ಸಮರ್ಥ ಆಡಳಿತದಿಂದ ಜನ ತೃಪ್ತರಾಗಿದ್ದರು. ಈ ಪರಿಸ್ಥಿತಿಯನ್ನರಿತು, ಒಂದು ಶತಮಾನಕಾಲ ಆಳಿದ ಆಂಟೊನೈನ್ ಸಾಮ್ರಾಟರು ಫ್ಲೇವಿಯನ್ ಸಾಮ್ರಾಟರ ನೀತಿಯನ್ನು ಮುಂದುವರಿಸಿ ರಾಜ್ಯದಲ್ಲಿ ಶಾಂತಿ ಸುಭಿಕ್ಷಗಳನ್ನೇರ್ಪಡಿಸಿದ್ದರು. ಈ ಕಾಲವನ್ನು ರೋಮನ್ ಸಾಮ್ರಾಜ್ಯದ ಸುವರ್ಣಯುಗವೆಂದು ಕರೆಯಲಾಗಿದೆ.

ಚಕ್ರವರ್ತಿ ನರ್ವ (96–98) ಸೆನೆಟ್ ಮತ್ತು ಸೈನ್ಯವೆರಡರ ಮೆಚ್ಚುಗೆಯನ್ನೂ ಸಂಪಾದಿಸಿದ. ರಾಜ್ಯದಲ್ಲಿ ದಾರಿದ್ರ್ಯ ನಿವಾರಣೆಗಾಗಿ ಸಣ್ಣ ರೈತರ ಪರಿಸ್ಥಿತಿಯನ್ನು ಉತ್ತಮಗೊಳಿಸಿ ಜನಸಂಖ್ಯಾ ಪ್ರಮಾಣವನ್ನು ಹೆಚ್ಚಿಸುವುದಕ್ಕಾಗಿ ಆತ ಅನುಸರಿಸಿದ ನೀತಿಯಿಂದ ಪ್ರಜಾನುರಾಗವನ್ನೂ ಗಳಿಸಿದ. ಅವನಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಸಮರ್ಥ ಸೇನಾನಾಯಕನೂ ಉತ್ತರ ಜರ್ಮನಿಯ ಪ್ರಾಂತ್ಯಾಧಿಪತಿಯೂ ಆಗಿದ್ದ ಟ್ರೇಜನ್ ಎಂಬುವನನ್ನು ದತ್ತು ತೆಗೆದುಕೊಂಡು ಸಹಪ್ರಭುವನ್ನಾಗಿ ನೇಮಿಸಿದ. ಇದರಿಂದ ರಾಜಸಂತತಿಯವರೇ ದೊರೆಯಾಗಬೇಕೆಂಬ ನಿಯಮ ಸಡಿಲಿಸಿತು. ಚಕ್ರಾಧಿಪತ್ಯದ ಯಾವ ಪ್ರಾಂತದವರಾದರೂ ಸಾಮ್ರಾಟರಾಗಬಹುದೆಂಬ ಸಂಪ್ರದಾಯ ಪ್ರಾರಂಭವಾಯಿತು. ಟ್ರೇಜನ್ 98–117ರಲ್ಲಿ ಸಾಮ್ರಾಟನಾದ. ಈತ ತಮ್ಮ ರಾಜ್ಯಕ್ಕೆ ನಿರಂತರ ಕಿರುಕುಳ ಕೊಡುತ್ತಿದ್ದ ಡೇಸಿಯನ್ನರನ್ನು ಅಡಗಿಸಿ ಡೇಸಿಯ ಎಂಬ ಹೊಸ ಪ್ರಾಂತ್ಯವನ್ನು ನಿರ್ಮಿಸಿದ. ಇತರ ಗಡಿ ಪ್ರದೇಶಗಳಲ್ಲಿ ದಂಗೆಯೆದ್ದಿದ್ದ ಪಾರ್ಥಿಯನ್ನರು ಯಹೂದಿಗಳು ಮುಂತಾದವರ ಹಾವಳಿಯನ್ನಡಗಿಸಿದ. ಹತ್ತೊಂಬತ್ತು ವರ್ಷದ ಆಳಿಕೆಯೆಲ್ಲ ಯುದ್ಧದಲ್ಲೇ ಕಳೆದರೂ ಆತ ಆಡಳಿತವನ್ನು ಕಡೆಗಣಿಸಲಿಲ್ಲ. ತಪ್ಪು ಮಾಡಿದ ಪ್ರಾಂತ್ಯಾಧಿಪತಿಗಳಿಗೂ ನಿರ್ದಾಕ್ಷಿಣ್ಯವಾಗಿ ಶಿಕ್ಷೆಯಾಗುತ್ತಿತ್ತು. ರೋಮ್ ನಗರದಲ್ಲಿ ಭವ್ಯವಾದ ಅರಮನೆಗಳನ್ನೂ ರಮ್ಯವಾದ ಉದ್ಯಾನವನಗಳನ್ನೂ ನಿರ್ಮಿಸಲಾಯಿತು. ವಿಶಾಲವಾದ ರಸ್ತೆಗಳು, ಸೇತುವೆಗಳು, ನೀರಾವರಿ ಕಾಲುವೆಗಳು, ವ್ಯಾಪಾರಕ್ಕನುಕೂಲವಾದ ರೇವುಗಳು ನಿರ್ಮಿತವಾದವು. ಭವ್ಯವಾದ ಫೋರಂ ಟ್ರೇಜನ್ ಎಂಬ ಸಾರ್ವಜನಿಕ ಸಭಾಭವನವೊಂದು ನಿರ್ಮಾಣವಾಯಿತು. ಇವನು ಕ್ರೈಸ್ತರ ವಿಷಯದಲ್ಲಿ ಕ್ರೌರ್ಯದಿಂದ ವರ್ತಿಸಿದರೂ ಆಡಳಿತ ನೀತಿ ಸೌಮ್ಯವಾಗಿತ್ತು. 117ರಲ್ಲಿ ಈತ ಕಾಲವಾದ. ಸ್ವಲ್ಪಕಾಲದಲ್ಲೇ ಅವನ ಸಂಬಂಧಿ ಹೇಡ್ರಿಯನ್‌ನನ್ನು ಚಕ್ರವರ್ತಿಯನ್ನಾಗಿ ಸೈನ್ಯವೇ ಚುನಾಯಿಸಿತು. ಈತ ಟ್ರೇಜನ್‌ನ ಜೊತೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ ನುರಿತ ಯೋಧ. ಸಾಮ್ರಾಜ್ಯದ ಸರಹದ್ದು ಭಾಗಗಳಲ್ಲಿ ತಲೆದೋರಿದ ದಂಗೆಗಳೆಲ್ಲವನ್ನೂ ಅಡಗಿಸಿದ್ದಲ್ಲದೆ, ದೊಡ್ಡ ಪ್ರವಾಸ ಕೈಗೊಂಡು ಎಲ್ಲ ಪ್ರಾಂತ್ಯಗಳಿಗೂ ಭೇಟಿಯಿತ್ತ. ಇವನ ಕಾಲವೂ ಹೆಚ್ಚಾಗಿ ರಣರಂಗದಲ್ಲೇ ಕಳೆದರೂ ದಕ್ಷ ಆಡಳಿತವನ್ನೂ ಮುಂದುವರಿಸಿದ. ವಿದ್ಯಾಪಕ್ಷಪಾತಿಯೂ ಕಲಾಭಿರುಚಿಯುಳ್ಳವನೂ ಆಗಿದ್ದುದರಿಂದ ಭವ್ಯವಾದ ಹೊಸ ಕಟ್ಟಡಗಳನ್ನು ನಿರ್ಮಿಸಿದ. ಗ್ರೀಕ್ ಸಾಹಿತ್ಯದಲ್ಲಿ ಅಭಿರುಚಿ ಹೊಂದಿದ್ದು, ಅದನ್ನು ಹರಡಲು ಪ್ರೋತ್ಸಾಹ ನೀಡಿದ. 138ರಲ್ಲಿ ಕಾಲವಾದ.

ಇವನ ತರುವಾಯ ಅನುಕ್ರಮವಾಗಿ ಆಳಿದ ಆಂಟೊನೈನ್ಸ್ ಪಯಸ್ ಮತ್ತು ಮಾರ್ಕಸ್ ಅರೇಲಿಯಸ್ ಇಬ್ಬರೂ ಖ್ಯಾತ ಪರಂಪರೆಗನುಗುಣವಾಗಿ ರಾಜ್ಯಭಾರ ಮಾಡಿ ದೇಶದ ಕೀರ್ತಿಯನ್ನು ಹೆಚ್ಚಿಸಿದರು. ಇವರ ಆಳಿಕೆಯಲ್ಲಿ ಸ್ಪೈನ್‌ಗಾರ್, ಉತ್ತರ ಆಫ್ರಿಕ, ಏಷ್ಯ ಮೈನರ್ ಪ್ರಾಂತ್ಯಗಳಲ್ಲಿ ಬೃಹತ್ ನಗರಗಳು ರೂಪುಗೊಂಡವು. ಇವರ ಕಾಲದ ರೋಮನ್ ಚಕ್ರಾಧಿಪತ್ಯ ಉತ್ತರ ಆಫ್ರಿಕದ ಈಜಿಪ್ಟ್, ಸ್ಪೇನ್‌ನಿಂದ ಯುರೋಪಿನ ಬಹುಭಾಗ ಜರ್ಮನಿಯನ್ನು ಹೊರತುಪಡಿಸಿ, ಪಶ್ಚಿಮ ಏಷ್ಯದ ಪರ್ಷಿಯ ಪ್ರಾಂತ್ಯವನ್ನು ಹೊರತುಪಡಿಸಿ ಯೂಫ್ರಟೀಸ್ ಹಾಗೂ ನದಿ ಪ್ರಾಂತವನ್ನು ಒಳಗೊಂಡು ಅತೀ ವಿಸ್ತಾರವಾದ ಭೂಪ್ರದೇಶವನ್ನೊಳಗೊಂಡಿತ್ತು. *

**ಆಂಧ್ರಪ್ರದೇಶ ಶಿಲಾಚಿತ್ರಗಳು: ನೋಡಿ–ಶಿಲಾಚಿತ್ರಗಳು**

**ಆಂಫಿಕ್ಟಿಯೋನಿ:** ಪ್ರಾಚೀನ ಗ್ರೀಸಿನಲ್ಲಿ ನಗರರಾಜ್ಯಗಳಿದ್ದ ಕಾಲದಲ್ಲಿ ಪ್ರಮುಖ ದೇವಸ್ಥಾನಗಳ ಸಂರಕ್ಷಣೆಗೋಸ್ಕರ ಒಂದೊಂದು ಮುಖ್ಯ ದೇವಮಂದಿರದ ಸುತ್ತ ಇದ್ದ ರಾಜ್ಯಗಳು ಸೇರಿ ಏರ್ಪಡಿಸಿಕೊಂಡಿದ್ದ ಒಕ್ಕೂಟಗಳಿಗಿದ್ದ ಹೆಸರು. ಇವುಗಳ ಪೈಕಿ ಡೆಲ್ಫಿಯಲ್ಲಿದ್ದ ಅಪೋಲೋ ದೇವಮಂದಿರದ ಪೋಷಣೆಗಾಗಿ ಮಾಡಿಕೊಂಡಿದ್ದ ಒಕ್ಕೂಟ ಪ್ರಸಿದ್ಧವಾಗಿತ್ತು. ದೇವಸ್ಥಾನದ ಆಡಳಿತ, ಬಂದುಹೋಗುವ ಭಕ್ತಾದಿಗಳ ಯೋಗಕ್ಷೇಮ, ಜಾತ್ರೆ ಕಾಲದಲ್ಲಿ ಶಾಂತಿ ರಕ್ಷಣೆ, ಸುತ್ತಮುತ್ತಲಿನ ರಸ್ತೆಗಳ ದುರಸ್ತು ಮುಂತಾದ ಅನೇಕ ಕೆಲಸಗಳನ್ನು ಒಕ್ಕೂಟ ನೋಡಿಕೊಳ್ಳುತ್ತಿತ್ತು. ಕಾಲಕ್ರಮೇಣ ಒಕ್ಕೂಟದ ಸದಸ್ಯ ರಾಜ್ಯಗಳಲ್ಲಿ ರಾಜಕೀಯ ಮೈತ್ರಿ ಬೆಳೆಯಿತು. ಕೇವಲ ನಗರ ರಾಜ್ಯಗಳೇ ಇದ್ದ ಆ ಕಾಲದಲ್ಲಿ ಗ್ರೀಕರೆಲ್ಲ ಒಂದು ಎಂಬ ಭಾವನೆ ಬೆಳೆದು ರಾಷ್ಟ್ರೀಯ ಐಕ್ಯ ಏರ್ಪಡಲು ಅವರ ಭಾಷೆ, ಲಿಪಿಗಳ ಏಕತೆಯೊಂದಿಗೆ ಹೋಮರನಂಥ ಕವಿಗಳ ಕೃತಿಗಳು ಸಹಾಯ ಮಾಡಿದುವಲ್ಲದೆ ಇಂಥ ನೆರೆರಾಜ್ಯಗಳ ಒಕ್ಕೂಟಗಳೂ ನೆರವಾದುವು. (ಎಸ್.ಎನ್.)

**ಆಕರಗಳು:** ಕರ್ನಾಟಕ ಪ್ರದೇಶದಲ್ಲಿ ಆದಿ ಇತಿಹಾಸ ಕಾಲದಲ್ಲಿ ರಚನೆಯಾಗಿದ್ದಿರಬಹುದಾದ ಯಾವುದೇ ಸಂಸ್ಕೃತ, ಪ್ರಾಕೃತ ಇಲ್ಲವೆ ಕನ್ನಡ ಗ್ರಂಥಗಳು ಇದುವರೆಗೆ ಬೆಳಕಿಗೆ ಬಂದಿಲ್ಲ. ಆದರೆ ಆದಿ ಕದಂಬರ ತಾಮ್ರಶಾಸನಗಳಲ್ಲಿ ರಾಮಗೀತೆ, ಭೀಷ್ಮಗೀತೆ, ಮನುಗೀತೆ ಹಾಗೂ ಗಂಗ ಅರಸು ದುರ್ವಿನೀತನ ತಾಮ್ರ ಶಾಸನದಲ್ಲಿ, ಭಾರವಿ ಮಹಾಕವಿಯ ಕಿರಾತಾರ್ಜುನೀಯಂ ಎಂಬ ಮಹಾಕಾವ್ಯದ ಮೇಲೆ ಆ ಅರಸ ಬರೆದ ವ್ಯಾಖ್ಯಾನ ಹಾಗೂ ಶಬ್ದಾವತಾರ ಮತ್ತು ಬೃಹತ್‌ಕೋಶ ಮೊದಲಾದ ಕೃತಿಗಳ ಉಲ್ಲೇಖಗಳಿವೆ. ವೇದಗಳು, ವೇದಾಂಗಗಳು, ಕೌಟಿಲ್ಯನ ಅರ್ಥಶಾಸ್ತ್ರ, ವಾತ್ಸ್ಯಾಯನನ ಕಾಮಸೂತ್ರ ಮೊದಲಾದ ಮಹಾಕೃತಿಗಳ ಅಧ್ಯಯನವನ್ನು ಸಾಮಾನ್ಯವಾಗಿ ಎಲ್ಲ ಅರಸರು ಮಾಡುತ್ತಿದ್ದರು. ಆದರೆ ಇವು ಇಡೀ ಭಾರತಕ್ಕೆ ಅನ್ವಯವಾಗುವಂಥ ಅತೀ ಪ್ರಾಚೀನ ಕೃತಿಗಳು. ರಾಮಗೀತೆ, ವಿದುರಗೀತೆ, ಮನುಗೀತೆ ಮುಂತಾದವು ರಾಮಾಯಣ, ಮಹಾಭಾರತ ಮತ್ತು ಮನುಸ್ಮೃತಿಯ ಭಾಗ ಗಳಾಗಿದ್ದವು. ಅರಸರಿಗೆ ವೈಯಕ್ತಿಕ ಜೀವನದಲ್ಲಿ ಮುಖ್ಯವಾಗಿ ಆಡಳಿತದಲ್ಲಿ ಇವೆಲ್ಲವೂ ಮಾರ್ಗದರ್ಶಕವಾಗಿದ್ದವು. ದುರ್ವಿನೀತನ ವ್ಯಾಖ್ಯಾನ ಗ್ರಂಥ ಇದುವರೆಗೆ ಸಿಕ್ಕಿಲ್ಲ.

ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ (ಸು.814–880)ನಿಂದ ರಚಿತವಾಯಿತೆನ್ನಲಾದ ಕವಿರಾಜಮಾರ್ಗವು ಕನ್ನಡ ಸಾಹಿತ್ಯದ ಅತ್ಯಂತ ಪ್ರಾಚೀನ ಲಕ್ಷಣ ಗ್ರಂಥ. ಇದರ ಕರ್ತೃವಿನ ಬಗ್ಗೆ ವಾದವಿವಾದಗಳಿವೆ. ಇತ್ತೀಚಿನ ಶೋಧನೆ ಮತ್ತು ಅಧ್ಯಯನಗಳ ಪ್ರಕಾರ, ಇದರ ಕರ್ತೃ ಶ್ರೀವಿಜಯನೆಂಬ ಬಲವಾದ ಅಭಿಪ್ರಾಯವಿದೆ. ಪ್ರಾಚೀನ ಕನ್ನಡದ ವಿವಿಧ ಲಾಕ್ಷಣಿಕ ವಿಷಯಗಳನ್ನು ಇದರಲ್ಲಿ ಚರ್ಚಿಸಲಾಗಿದೆ. ಮುಖ್ಯವಾಗಿ ಅತಿ ವಿಶಿಷ್ಟವಾದ ಕನ್ನಡ ಚತ್ತಾಣ ಮತ್ತು ಬೆದಂಡೆಗಬ್ಬಂ ಹಾಗೂ ಪಗರಣ (ನಾಟಕದ ಒಂದು ಪ್ರಕಾರ) ಪ್ರಾಚೀನ ಕನ್ನಡದ ಛಂದಸ್ಸು ಮೊದಲಾದವುಗಳನ್ನು ಸೂಕ್ತ ಉದಾಹರಣೆಗಳಿಂದ ವಿಮರ್ಶಿಸಲಾಗಿದೆ. ಸಂದರ್ಭೋಚಿತವಾಗಿ ಪ್ರಾಚೀನ ಕವಿಗಳನ್ನು ಹಾಗೂ ಅವರ ಕೃತಿಗಳನ್ನು ಉದ್ಧರಿಸಲಾಗಿದೆ. ಆದರೆ ಈ ಕವಿಗಳ ಹಾಗೂ ಅವರಿಂದ ರಚಿತವಾಯಿತೆನ್ನಲಾದ ಕೃತಿಗಳ ಬಗ್ಗೆ ವಾದವಿವಾದಗಳಿವೆ. ವಿಮಲ, ನಾಗಾರ್ಜುನ, ಜಯಬಂಧು ಮೊದಲಾದ ಗದ್ಯಕವಿಗಳು, ಶ್ರೀವಿಜಯ, ರವಿವರ, ಶಂಕರ ಮೊದಲಾದ ಪದ್ಯ ಕವಿಗಳು ಉಲ್ಲೇಖಿತರಾಗಿದ್ದಾರೆ. ಕ್ರಮವಾಗಿ ಇವರ ಕೃತಿಗಳು ಪ್ರಶ್ನೋತ್ತರ ಮಾಲಾ, ಸುಹೃಲ್ಲೇಖ ಕರ್ನಾಟಕ ಮಣಿದರ್ಪಣ ಮೊದಲಾದವು. ಇವೆಲ್ಲವೂ ಆಯಾಯ ಕಾಲದಲ್ಲಿಯ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆ ಹಾಗೂ ಅರಳುವಿಕೆಯನ್ನು ಸೂಚಿಸುತ್ತದೆ.

ಈ ಪ್ರದೇಶದ ಅತ್ಯಂತ ಪ್ರಾಚೀನ ಶಾಸನ ಕವಿಗಳೆಂದರೆ ತಾಳಗುಂದದಲ್ಲಿಯ ಕದಂಬ ಅರಸ ಶಾಂತಿವರ್ಮನ ಕಾಲದ ಸ್ತಂಭಶಾಸನದ ಹಾಗೂ ಐಹೊಳೆಯಲ್ಲಿಯ (ಮೇಗುಟಿ ಜಿನೇಂದ್ರಾಲಯ) ಚಾಳುಕ್ಯ ಪ್ರಶಸ್ತಿ ಶಾಸನದ ಕರ್ತೃಗಳಾದ ಕುಬ್ಜ ಮತ್ತು ರವಿಕೀರ್ತಿ. ಈ ಶಾಸನಗಳಲ್ಲಿ ಸ್ರಗ್ಧರೆ, ಮತ್ತೇಭವಿಕ್ರೀಡಿತ ಮೊದಲಾದ ಸಂಸ್ಕೃತ ಭಾಷೆಯ

ಅತ್ಯುತ್ತಮ ಛಂದಸ್ಸುಗಳನ್ನು ಲೀಲಾಜಾಲವಾಗಿ, ಸಮಯೋಚಿತವಾಗಿ ಉಪಯೋಗಿಸಲಾಗಿದೆ. ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಒಂದು ಶಾಸನದಲ್ಲಿ ಉಲ್ಲೇಖಿತನಾದ ದೇವಯ್ಯನ ಮಗ ಅಚಲ ಚಾಳುಕ್ಯ ಅರಸು ಇಮ್ಮಡಿ ವಿಕ್ರಮಾದಿತ್ಯನ ಆಸ್ಥಾನ ಕವಿಯಾಗಿದ್ದ. ಸಂಸ್ಕೃತ ಶಾಸನಗಳನ್ನು ಬಿಟ್ಟರೆ ಮತ್ತೆ ಯಾವ ಕಾವ್ಯಗಳಾಗಲಿ, ಗ್ರಂಥಗಳಾಗಲಿ ದೊರೆತಿಲ್ಲ.

ಕರ್ನಾಟಕ ಪ್ರದೇಶವನ್ನು ಅಥವಾ ಸ್ಥಳಗಳನ್ನು ಉಲ್ಲೇಖಿಸುವ ಹಾಗೂ ಕೆಲವು ಕನ್ನಡ ಶಬ್ದಗಳುಳ್ಳ ಕೃತಿಗಳು ಲಭ್ಯವಿದೆ. ಅವು ಪರದೇಶಿ ಹಾಗೂ ಸ್ವದೇಶಿ ಸಾತವಾಹನ ಅರಸ ಹಾಲ ಸಾತಕರ್ಣಿ (ಸು.20–24) ರಚಿಸಿದ ಗಥಾಸತ್ತನೀ (=ಗಾಥಾಸಪ್ತಶತೀ) ಎಂಬ ಪ್ರಾಕೃತ ಕಾವ್ಯ ಉಲ್ಲೇಖನೀಯ. ಇದರಲ್ಲಿ ಕೆಲವು ಶಬ್ದಗಳು ಬಹುಮಟ್ಟಿಗೆ ಕನ್ನಡದವು. ಉದಾ: ಅಗ್ಗಳ (ಅಗಳಿ), ತುಪ್ಪ, ತುವರಿ (ತೊಗರಿ) ಮೊದಲಾದವು. ಈ ಕೃತಿಯಿಂದ ಉತ್ತರ ಕರ್ನಾಟಕವೂ ಸೇರಿಕೊಂಡಂತೆ ದಖನ್ನಿನ ಜನಜೀವನ ಶೈಲಿಯನ್ನು ತಿಳಿಯಲು ಸಹಾಯಕವಾಗಿದೆ. ಆದಿ ಇತಿಹಾಸಕಾಲದ ನೆಲೆಗಳ ಉತ್ಖನನಗಳಲ್ಲಿ ಕಂಡುಬಂದ ಮಾಹಿತಿಗಳು ಗಾಥಾಸಪ್ತಶತಿಯ ಚಿತ್ರವನ್ನು ಪುಷ್ಟೀಕರಿಸುತ್ತವೆ. ಅಲ್ಲದೆ ಸನ್ನತಿ ಮೊದಲಾದೆಡೆಗಳಲ್ಲಿಯ 1–2ನೆಯ ಶತಮಾನದ ಶಾಸನಗಳೂ ಕೂಡ ಪೂರಕ ಆಕರಗಳಾಗಿವೆ.

ಇದುವರೆಗೆ ತಿಳಿದಮಟ್ಟಿಗೆ ಇಮ್ಮಡಿ ಪುಲಕೇಶಿಯ ಮಗ ಚಂದ್ರಾದಿತ್ಯನ ಮಡದಿ ವಿಜಯಭಟ್ಟಾರಿಕಾ ಅಥವಾ ವಿಜ್ಜಿಕೆ ಕರ್ನಾಟಕದ ಪ್ರಥಮ ಕವಯಿತ್ರಿ ಎಂದು ಹೇಳಬಹುದು. ಇವಳು ರಚಿಸಿದ ಕೌಮುದೀ ಮಹೋತ್ಸವ ಎಂಬ ಒಂದು ಸಂಸ್ಕೃತ ನಾಟಕ ಈಗ ಲಭ್ಯವಿಲ್ಲ. ಮಹಾಕವಿ ಕಾಳಿದಾಸನ ತರುವಾಯ ವೈದರ್ಭೀ ಶೈಲಿಯನ್ನು ಅಷ್ಟೆ ಜಾಣ್ಮೆಯಿಂದ ಪರಿಣಾಮ ಕಾರಿಯಾಗಿ ಉಪಯೋಗಿಸಿದವಳೆಂದರೆ ಇವಳೊಬ್ಬಳೆ.

ಮೇರುಕೃತಿಗಳಾದ 2–3ನೆಯ ಶತಮಾನದ ವಾತ್ಸ್ಯಾಯನನ ಕಾಮಸೂತ್ರ, ಮಾಮೂಲ ನಾರರ ಅಹನಾನೂರು, ವರಾಹಮಿಹಿರನ (ಸು.505–582) ಬೃಹತ್‌ಸಂಹಿತಾ, ಸು.7ನೆಯ ಶತಮಾನದ ಪ್ರಪಂಚ ಹೃದಯ ಹಾಗೂ ಅರೆ ಐತಿಹಾಸಿಕ ಗ್ರಂಥಗಳಾದ ಮತ್ಸ್ಯ, ಮಾರ್ಕಂಡೇಯ, ಬ್ರಹ್ಮಾಂಡ, ಪದ್ಮಪುರಾಣಗಳಲ್ಲಿ ಕರ್ನಾಟಕದ ವಿಂಗಡಣೆಗಳು ಮತ್ತು ಐತಿಹಾಸಿಕ ಘಟನೆಗಳು ಅಲ್ಲಲ್ಲಿ ಉಲ್ಲೇಖಿತವಾಗಿವೆ. ಮೊದಲೆರಡರಲ್ಲಿ ಸಾತವಾಹನ ಅರಸು ಕುಂತಲ ಸಾತಕರ್ಣಿಯು ಮಲಯವತಿ ಮಹಾದೇವಿಯನ್ನು ನಿರ್ನಾಮ ಮಾಡಿದುದು; ವಸುಂಪನ್ ಪಾಂಡ್ಯನು ಪುನ್ನಾಟದ ಆಳರಸರನ್ನು ಸೋಲಿಸಿದುದು; ನೆಡುಂಚೆಳಿಯನ್ ಎರುಮೈಯೂರನ್ನು (ಮಹಿಷಮಂಡಲ); ನೆಡುನ್ ನೆರಲತನ್ ಪಶ್ಚಿಮ ಕಡಲತೀರದ ಕದಂಬರನ್ನು ಜಯಿಸಿದುದು–ಈ ವಿಷಯಗಳಿವೆ. ಇವುಗಳ ಸತ್ಯಾಸತ್ಯತೆ ಚರ್ಚಾಸ್ಪದ. ಇತರ ಗ್ರಂಥಗಳಲ್ಲಿ ವನವಾಸಿ, ಕರ್ನಾಟಕ, ಸಹ್ಯಾದ್ರಿ ಶ್ರೇಣಿಯ ಬದಿಯಲ್ಲಿಯ ಪರಶುರಾಮ ಭೂಮಿ (ಈಗಿನ ಉತ್ತರ ಕನ್ನಡದ ದಕ್ಷಿಣಭಾಗ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ), ಕುಂತಳ, ಮಹಿಷಿಕ ಮೊದಲಾದ ಪ್ರದೇಶಗಳನ್ನು ಸಂಕ್ಷಿಪ್ತವಾಗಿ ವರ್ಣಿಸಲಾಗಿದೆ.

ಶ್ರೀಲಂಕದ ಸು. 4ನೆಯ ಶತಮಾನದ ಐತಿಹಾಸಿಕ ಕಥಾನಕವಾದ ಮಹಾವಂಶದಲ್ಲಿ ಮೌರ್ಯ ಚಕ್ರವರ್ತಿ ಅಶೋಕ ತನ್ನ ರಾಜಧಾನಿ ಪಾಟಲೀಪುತ್ರದಿಂದ ಬನವಾಸಿಗೆ ಒಂದು ಬೌದ್ಧ ಧರ್ಮೋಪದೇಶ ಪ್ರಚಾರಕ ತಂಡವನ್ನು ಕಳುಹಿಸಿದ. ಬನವಾಸಿಯಿಂದ ಥೇರಾ ರಖ್ಖಿತನ ನೇತೃತ್ವದಲ್ಲಿ ಒಂದು ದೊಡ್ಡ ಬೌದ್ಧ ಭಿಕ್ಷುಗಳ ತಂಡ ಶ್ರೀಲಂಕದ ಅನುರಾಧ ಪುರದಲ್ಲಿಯ ಅರಸು ವಠ್ಠಗಾಮಿಣಿಯು (ಪ್ರ.ಶ.ಪೂ. ಸು. 29–17) ಕಟ್ಟಿಸಿದ ಮಹಾಸ್ತೂಪದ ಪ್ರತಿಷ್ಠಾಪನೆ ಸಮಾರಂಭದಲ್ಲಿ ಭಾಗವಹಿಸಲು ಹೋದ ವಿಷಯಗಳಿವೆ.

ಮಹಾಕವಿ ಕಾಳಿದಾಸನಿಂದ ರಚಿತವಾದದ್ದೆಂದು ಹೇಳಲಾದ ಕೌಂತಲೇಶ್ವರದೌತ್ಯದ ಪ್ರಕಾರ, ಕಾಳಿದಾಸನು ಒಬ್ಬ ಕುಂತಲಾಧಿಪನ ಆಸ್ಥಾನಕ್ಕೆ ಹೋಗಿದ್ದನಂತೆ ಮತ್ತು ಆ ರಾಜನ ಮಗಳು ಅಜಿತ ಭಟ್ಟಾರಿಕಾ ಉತ್ತರ ಭಾರತದ ಒಬ್ಬ ರಾಜನನ್ನು ಮದುವೆಯಾಗಿದ್ದಳಂತೆ, ತಾಳಗುಂದದ ಕದಂಬ ಅರಸು ಶಾಂತಿವರ್ಮನ ಶಾಸನದಲ್ಲಿ ಸೂಚ್ಯವಾಗಿ ಹೇಳಿರುವಂತೆ, ಆ ಅರಸನ ತಂದೆ ಕಾಕುಸ್ಥವರ್ಮನ ಮಗಳು ಗುಪ್ತವಂಶದ ರಾಜನನ್ನು ಮದುವೆಯಾದ ಉಲ್ಲೇಖವಿದೆ. ಕಾಳಿದಾಸನ ರಘುವಂಶಮ್ ಕಾವ್ಯದಲ್ಲಿ ಆಕರ ಕುರಿತ ಮಹತ್ತ್ವದ ಹೇಳಿಕೆ ಯೊಂದು ಹೀಗಿದೆ: ಅಥವಾ ಕೃತವಾಗ್ದ್ವಾರೇ ವಂಶೇಸ್ಮಿನ್ ಪೂರ್ವಸೂರಿಭಿಃ। ಮಣೌ ವಜ್ರಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿ ಮೇ ಗತಿಃ.

ಪ್ರಸಕ್ತಶಕ ಆರಂಭ ಶತಕಗಳ ಜೈನಾಚಾರ್ಯರುಗಳಾದ 1–2ನೆಯ ಶತಮಾನದ ಪುಷ್ಪದಂತ, ಭೂತಲಿ, ಕುಂದಕುಂದ ಹಾಗೂ ಸು.5ನೆಯ ಶತಮಾನದ ಸಿದ್ಧಸೇನ, ಯತೀಶ್ವರ ಮೊದಲಾ ದವರ ಕೆಲವು ಜೈನಗ್ರಂಥಗಳಿವೆ. ಅವುಗಳ ಛ್ಖಖ್ಖಂಡಾಗಮ (ಷಟ್‌ಖಂಡಾಗಮ), ಮೂಲಾಚಾರ ಸಮ್ಮಯಿಸುತ್ತ (ಸನ್ಮತಿಸೂತ್ರ), ತಿಲೋಯಪನ್ನತಿ (ತ್ರಿಲೋಕಪ್ರಜ್ಞಪ್ತಿ) ಮೊದಲಾದ ಕೆಲವು ತತ್ತ್ವಗ್ರಂಥಗಳಿವೆ. ಇವರಲ್ಲದೆ, ಅನಂತರ ಕಾಲದ ಕನ್ನಡ ಕವಿಗಳು ಪ್ರಶಂಸಿಸಿದ ಸಮಂತಭದ್ರ (ಸು. 5ನೆಯ ಶತಮಾನ), ಕವಿಪರಮೇಷ್ಠಿ (ಸು. 550) ಹಾಗೂ ಪೂಜ್ಯಪಾದರು (ಸು.7ನೆಯ ಶತಮಾನ) ಕನ್ನಡದಲ್ಲಿ ಕೃತಿಗಳನ್ನುರಚಿಸಿದ್ದು, ಅವು ತರುವಾಯ ಕಾಲದ ಕನ್ನಡ ಕವಿಗಳಿಗೆ ಸ್ಫೂರ್ತಿದಾಯಕವಾಗಿದ್ದುವೆಂದು ಬಗೆಯಲಾಗಿದೆ. ಆದರೆ ಅವು ಯಾವ ಕನ್ನಡ ಗ್ರಂಥಗಳೆಂ ಬುದು ತಿಳಿದಿಲ್ಲ. ವಾಗರ್ಥ ಸಂಗ್ರಹ ಮಹಾಪುರಾಣ ಕನ್ನಡ ಗ್ರಂಥವನ್ನು ಕವಿ ಪರಮೇಷ್ಠಿಯು ರಚಿಸಿದ್ದಿರಬೇಕು. ಆಪ್ತಮಿಮಾಂಸೆ, ರತ್ನಕರಂಡಕ, ಶ್ರಾವಕಾಚಾರ, ಸಮಂತಭದ್ರರ ಪೂಜ್ಯವಾಹಕ ಕಲ್ಯಾಣಕಾರಕ, ವೈದ್ಯಕೀಯ ವಿಷಯದ ಕಲ್ಯಾಣಕಾರಕ, ಆಗಮ ವಿಷಯದ ತತ್ತ್ವಾರ್ಥವೃತ್ತಿ ಎಂಬ ಮೊದಲಾದ ಕೆಲವು ಸಂಸ್ಕೃತ ಗ್ರಂಥಗಳು ಲಭ್ಯವಿವೆ.

ಇಂದ್ರನಂದಿಯ ಶ್ರುತಾವತಾರದಲ್ಲಿ ಶ್ಯಾಮಕಾಚಾರ್ಯ ಮತ್ತು ತುಂಬಲುರಾಚಾರ್ಯ ಎಂಬ ಇಬ್ಬರು ಜೈನಾಚಾರ್ಯರು ಷಟ್‌ಖಂಡಾಗಮದ ಮೇಲೆ ಕನ್ನಡದಲ್ಲಿಯೂ ವ್ಯಾಖ್ಯಾನ ವನ್ನು ಬರೆದಿರುವುದಾಗಿ ಹೇಳಿದೆ. ಮೊದಲನೆಯವರು ಈ ಗ್ರಂಥದ ಮೇಲೆ ಸಂಸ್ಕೃತ ಹಾಗೂ ಪ್ರಾಕೃತದಲ್ಲಿ ಅಲ್ಲದೆ ಕನ್ನಡದಲ್ಲಿಯೂ ಪದ್ಧತಿಗಳು ಎಂಬ ವ್ಯಾಖ್ಯಾನವನ್ನು ಬರೆದಿರು ವರಂತೆ. ತುಂಬಲುರಾಚಾರ್ಯರ ಕನ್ನಡ ವ್ಯಾಖ್ಯಾನದ ಹೆಸರು ಚೂಡಾಮಣಿ. ಆದರೆ ವ್ಯಾಖ್ಯಾನ ಕಾರರ ಕಾಲಮಾನ ಇನ್ನೂ ಅಸ್ಪಷ್ಟವಾಗಿಯೇ ಇದೆ. ಕೆಲವು ವಿದ್ವಾಂಸರು ಇವರು ಸು.1–2ನೆಯ ಶತಮಾನದವರೆಂದು ತರ್ಕಿಸಿದರೆ ಮತ್ತೆ ಕೆಲವರು ಇವರನ್ನು 7 ನೆಯ ಶತಮಾನದ ವರೆಗೂ ಒಯ್ಯುತ್ತಾರೆ. ಇವರೆಲ್ಲರ ಬಹಳಷ್ಟು ಕೃತಿಗಳು ದೊರೆತಿಲ್ಲ. ಇಲ್ಲವೆ ಉಳಿದಿಲ್ಲ. ಇವೆಲ್ಲವೂ ಸಾಮಾನ್ಯವಾಗಿ ಜೈನಧರ್ಮದ ನೀತಿ, ನಡತೆ, ತತ್ತ್ವಗಳಿಗೆ ಸಂಬಂಧಿಸಿದ್ದಿರಬೇಕು. ಆದರೆ ಕರ್ನಾಟಕದ ಪ್ರದೇಶದ ಸಂಸ್ಕೃತಿ ಮತ್ತು ಇತಿಹಾಸ ದೃಷ್ಟಿಯಿಂದ ಈ ಅಲ್ಪಸಂಖ್ಯೆಯ ಕೃತಿಗಳ ಅಧ್ಯಯನವಿನ್ನೂ ಆಗಬೇಕಾಗಿದೆ. ಕರ್ನಾಟಕದಲ್ಲಿ ಬೌದ್ಧಧರ್ಮದ ಒಂದೇ ಒಂದು ಗ್ರಂಥವೂ ಕೂಡ ಇದುವರೆಗೆ ಸಿಕ್ಕಿಲ್ಲ.

ಪರದೇಶಿಯರ ಬರೆವಣಿಗೆಗಳನ್ನು ಗಮನಿಸಿದರೆ, ಟಾಲಮಿಯ ಎ ಗೈಡ್ ಟು ಜಿಯಾಗ್ರಫಿ (ಪ್ರ.ಶ.ಸು. 150) ಯಲ್ಲಿ ಸಮಕಾಲೀನ ದಕ್ಷಿಣ ಭಾರತದಲ್ಲಿ ಪ್ರಸಿದ್ಧ ವಾಣಿಜ್ಯ ಕೇಂದ್ರಗಳಾಗಿದ್ದ ಕೆಲವು ಸ್ಥಳಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಗಳಿವೆ. ರೋಂ ಹಾಗೂ ಸುತ್ತಮುತ್ತಲಿನ ದೇಶಗಳ ವರ್ತಕರು ದಕ್ಷಿಣ ಭಾರತ, ಶ್ರೀಲಂಕ, ಆಗ್ನೇಯ ರಾಷ್ಟ್ರಗಳು ಹಾಗೂ ಚೀನದೇಶಗಳೊಡನೆ ವ್ಯಾಪಾರ ವ್ಯವಹಾರ ನಡೆಸುತ್ತಿದ್ದ ವರ್ತಕರುಗಳಿಂದ ವಾಣಿಜ್ಯ ಕೇಂದ್ರಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಸಿದ್ಧಮಾಡಿದ ಆ ಗ್ರಂಥದಲ್ಲಿ, ಕರ್ನಾಟಕ ಪ್ರದೇಶದಲ್ಲಿ ವೈಜಯಂತಿ ಹಾಗೂ ಬನವಾಸಿ, ಅಲೊ (ಯಲ್ಲಾಪುರ), ಪಲಶಿಕಾ (ಹಲಸಿ), ನಗರೂರು (ನಾಗೂರು, ಹುನಗುಂದ ತಾಲ್ಲೂಕು, ಬಿಜಾಪುರ ಜಿಲ್ಲೆ), ತವಸಿ, ಇಂಡಿ, ಗಡಹಿಂಗ್ಲಜ, ಸವಡಿ, ಹಿಪ್ಪರಿ, ಕಲ್ಕೇರಿ, ಮುದಗಲ್ಲು, ಪಟ್ಟದಕಲ್ಲು, ಚಿಮ್ಮಲಗಿ, ಬಾದಾಮಿ, ಪಾಂಕ್ತಿಪುರ (ಈಗಿನ ಹಾನಗಲ್ಲು), ಪುನ್ನಾಟ, ಆಳುಪಖೇಡ, ನಿತ್ರ (ನೇತ್ರಾವತಿ, ಈಗಿನ ಮಂಗಳೂರು) ಮೊದಲಾದ ಕೇಂದ್ರಗಳನ್ನು ಉಲ್ಲೇಖಿಸಲಾಗಿದೆ. ಈ ಕೇಂದ್ರಗಳ ಅಕ್ಷಾಂಶ ರೇಖಾಂಶಗಳನ್ನು ಹೇಳಿ ಇವುಗಳ ಸನ್ನಿವೇಶಗಳನ್ನು ಸೂಚಿಸಿದೆ. ಆದರೆ ಈ ಅಕ್ಷಾಂಶ ರೇಖಾಂಶಗಳು ಸರಿಯಾಗಿಲ್ಲ. ವೈಜಯಂತಿ ಮತ್ತು ಬನವಾಸಿ ಒಂದೇ. ಆದರೆ ಟಾಲಮಿಯ ಕೃತಿಯಲ್ಲಿ ಈ ಹೆಸರುಗಳನ್ನು ಭಿನ್ನ ಅಕ್ಷಾಂಶಗಳಲ್ಲಿ ತೋರಿಸಲಾಗಿದೆ. ವೈಜಯಂತಿ ಅಕ್ಷಾಂಶದಂತೆ ಅದು ಮಂಗಳೂರು ಹತ್ತಿರವಿತ್ತು. ಹೀಗೆ ಈ ಉಲ್ಲೇಖಗಳು ಸ್ವಲ್ಪಮಟ್ಟಿಗೆ ದೋಷಪೂರಿತವಾಗಿವೆ.

ಮೇಲೆ ಉಲ್ಲೇಖಿಸಿದ 18 ಸ್ಥಳಗಳಲ್ಲಿ 12 ಈಗಿನ ಉತ್ತರ ಕರ್ನಾಟಕದಲ್ಲಿ ಕೃಷ್ಣಾ ಬಯಲು ಪ್ರದೇಶದಲ್ಲಿವೆ. ಎರಡು ಕಡಲುತೀರ ಪ್ರದೇಶದಲ್ಲಿ, ಒಂದು ಮಾತ್ರ ದಕ್ಷಿಣ ಕರ್ನಾಟಕ ದಲ್ಲಿ ಮೈಸೂರಿನ ಬಳಿ ಇದೆ. ಬಹಳಷ್ಟು ಈ ಸ್ಥಳಗಳಲ್ಲಿ ಆದಿ ಇತಿಹಾಸ ಕಾಲದ ವಾಸ್ತವ್ಯ ನಗರ ನೆಲೆಗಳಿರುವುದು ಗಮನಾರ್ಹ. ಉದಾ: ಬನವಾಸಿ, ಬಾದಾಮಿ, ಹಾನಗಲ್ಲು, ಪಟ್ಟದಕಲ್ಲು, ಇಂಡಿ (ಇದಕ್ಕೆ ಹೊಂದಿಕೊಂಡಂತಿರುವ ಸಾತ್‌ಪುರ) ಇತ್ಯಾದಿ. ಆಳುಪಖೇಡ ಉಡುಪಿ ಹತ್ತಿರದ ಈಗಿನ ಉದ್ಯಾವರವಾಗಿದ್ದು, ಇಲ್ಲಿ ಪ್ರಾಚೀನ ಜನವಸತಿಯ ಕುರುಹುಗಳಿವೆ. ಮಂಗಳೂರು ಹತ್ತಿರದ ಮಣಿ ಮತ್ತು ಉಪ್ಪಿನಂಗಡಿಯಲ್ಲಿ ಅತಿ ಪ್ರಾಚೀನ ಅಂದರೆ ಹಳೆ ಶಿಲಾಯುಗದ, ಸೂಕ್ಷ್ಮ ಶಿಲಾಯುಗದ ಕಲ್ಲಿನ ಉಪಕರಣಗಳು ಈಚೆಗೆ ಶೋಧವಾಗಿವೆ. ಆದ್ದರಿಂದ ಈ ಪ್ರದೇಶದಲ್ಲಿ ಅನಂತರ ಪೂರ್ವಭಾವಿ ಹಾಗೂ ಆದಿ ಇತಿಹಾಸ ಕಾಲದ ಜನವಸತಿಯ ಸ್ಥಾನಗಳಿರುವ ಸಾಧ್ಯತೆಯಿದೆ. ಜೊತೆಗೆ ಕೆಲವೊಂದೆಡೆಗಳಲ್ಲಿ ಅಂದರೆ ಬನವಾಸಿ–ಹಾನಗಲ್ಲು ಹತ್ತಿರದ ಅಕ್ಕಿ ಆಲೂರಿನಲ್ಲಿ ರೋಂ ಸಾಮ್ರಾಜ್ಯದ 1–5ನೆಯ ಶತಮಾನದ ಬೆಳ್ಳಿ ಚಿನ್ನದ ನಾಣ್ಯಗಳ ಹುಂಡಿಗಳು ಆಕಸ್ಮಿಕವಾಗಿ ಬೆಳಕಿಗೆ ಬಂದಿದೆ.

ಸು.2ನೆಯ ಶತಮಾನದ ಒಂದು ಗ್ರೀಕ್ ಪ್ರಹಸನವನ್ನು ಗಮನಿಸಬಹುದು. 1899ರಲ್ಲಿ ಈಜಿಪ್ಟಿನ ಆಕ್ಸಿರಿಂಕಸ್–ಬಳಿ ಆಕಸ್ಮಿಕವಾಗಿ ಕಂಡುಬಂದ ಪ್ರಾಚೀನ ಲೇಖನ ಸಂಕಲನದ ಮೂರನೆಯ ಭಾಗದ 412 ನೆಯ ವಿಭಾಗದಲ್ಲಿ ಈ ಪ್ರಹಸನವಿದೆ. ಪಶ್ಚಿಮ ಕಡಲ ತೀರ ಪ್ರದೇಶದಲ್ಲಿ ಗ್ರೀಕರ ಹಡಗು ದುರಂತ; ಉದ್ಯಾವರ ಸಮೀಪದ ಅಲ್ಪೆ (ಆಳುಪರು ?) ಅಥವಾ ಮಲ್ಪೆಯ ನಾಯಕನಿಂದ ಸ್ತ್ರೀಯರೂ ಸೇರಿದಂತೆ ಆ ಹಡಗಿನ ಜನರ ವಶಪಡಿಸುವಿಕೆ, ಮತ್ತೆ ಕ್ರಮೇಣ ಈ ಜನರು ಚತುರತೆಯಿಂದ ತಪ್ಪಿಸಿಕೊಂಡು ತಮ್ಮ ಜನ್ಮಭೂಮಿಗೆ ಹಿಂದಿ ರುಗಿದುದು – ಈ ಘಟನೆಗಳನ್ನು ಹೆಣೆದು ಸೃಷ್ಟಿಸಿದ ಪ್ರಹಸನವಾಗಿದೆ. ಆ ಗ್ರೀಕ್ ಜನರು ನಾಯಕನ ವಶದಲ್ಲಿದ್ದ ಸ್ವಲ್ಪ ಸಮಯದಲ್ಲಿ ಸ್ಥಳೀಯರೊಡನೆ ಮಾತನಾಡುವ ಪ್ರಯತ್ನದಲ್ಲಿ ಅವರು ಕಲಿತಿದ್ದಿರಬಹುದಾದ ಲಲ್ಲೆ, ಮೀನ್ಯೆ (=ಮೀನು), ಲಸು ಬಡಿಯ ಮೊದಲಾದ ಕೆಲವು ಸ್ಥಳೀಯ ಶಬ್ದಗಳು ಕನ್ನಡವೆಂದು ವಾದವಿದೆ. ಆದರೆ ಈ ಪ್ರಹಸನದ ಘಟನೆಗಳು ನಡೆದ ಸ್ಥಳವನ್ನು ಗುರುತಿಸುವ ಹಾಗೂ ಅಪರಿಚಿತ ಶಬ್ದಗಳು ಕನ್ನಡವೆಂಬುದರ ಬಗ್ಗೆ ಇನ್ನೂ ಚರ್ಚೆಯಿದೆ.

**ಪುರಾತತ್ತ್ವ ಆಕರಗಳು:** ಪುರಾತತ್ತ್ವ ಆಕರಗಳು ತಕ್ಕಮಟ್ಟಿಗೆ ಆಶಾದಾಯಕವಾಗಿವೆ. ಅಲ್ಲಲ್ಲಿಯ ಕೆಲವು ತೆರವುಗಳನ್ನು ನಿಖರವಾಗಿ ಪೂರ್ಣಮಾಡಲು ಉಪಯುಕ್ತವಾಗಿವೆ. ಅಷ್ಟೇ ಅಲ್ಲ, ಈಗ ತಿಳಿದಿರುವ ಮಟ್ಟಿಗೆ ಆದಿ ಇತಿಹಾಸ ಕಾಲದ ಆರಂಭದ ಕಾಲಕ್ಕಿಂತಲೂ ಬಹಳ ಹಿಂದಿನಿಂದಲೂ ಅಂದರೆ ಪ್ರಾಗಿತಿಹಾಸ ಕಾಲದಿಂದ ಬೆಳೆದು ಬಂದ ಜನಸಾಮಾನ್ಯರ

ಜೀವನ ಶೈಲಿ ಸಾಧನೆಗಳನ್ನು ಮತ್ತು ಸಂಸ್ಕೃತಿಯ ಮುಖ್ಯ ಘಟ್ಟಗಳನ್ನು ತಿಳಿಯಲು ಸಾಧ್ಯವಾಗಿದೆ. ಆದರೆ ಇಂಥ ಎಲ್ಲ ಪ್ರಕಾರಗಳ ಪುರಾತತ್ತ್ವ ಕುರುಹುಗಳ ಆಕಸ್ಮಿಕ ಹಾಗೂ ವ್ಯವಸ್ಥಿತ ಶೋಧನೆ ಮತ್ತು ಇವುಗಳ ಮಹತ್ತ್ವ ಪ್ರಕಟವಾಗತೊಡಗಿದ್ದು ಹೆಚ್ಚು ಕಡಿಮೆ 19 ನೆಯ ಶತಮಾನದ ಮಧ್ಯಭಾಗದಿಂದ. ಪ್ರಾದೇಶಿಕ ಅನ್ವೇಷಣೆ ಹಾಗೂ ಉತ್ಖನನಗಳಿಂದ ಶೋಧವಾದ ಪುರಾತತ್ತ್ವ ಸಾಂಸ್ಕೃತಿಕ ಅವಶೇಷಗಳಲ್ಲಿ ಕಾಲಾನುಕ್ರಮವಾಗಿ ಎರಡು ಭಾಗಗಳಿವೆ: 1. ಪ್ರಾಗೈತಿಹಾಸಿಕ ಮತ್ತು 2. ಐತಿಹಾಸಿಕ.

ಯುರೋಪ್, ಆಫ್ರಿಕ ಮತ್ತು ಭಾರತದಲ್ಲಿಯ ಪ್ರಾಗೈತಿಹಾಸಿಕ ನಿವೇಶನಗಳ ಕ್ರಮಬದ್ಧವಾದ ಸತತ ಪ್ರಾದೇಶಿಕ ಅನ್ವೇಷಣೆ ಹಾಗೂ ಅನಂತರ ಉದ್ದೇಶಿತ ವೈಜ್ಞಾನಿಕ ಅಧ್ಯಯನಗಳಿಂದ ನಂಬಲಸಾಧ್ಯವಾಗದಷ್ಟು ಪ್ರಾಚೀನತಮ ಕಾಲದಿಂದ ಇತಿಹಾಸ ಕಾಲದ ವರೆಗಿನ ಮಾನವ ಸಂಸ್ಕೃತಿಯ ವಿಕಸನ ಹಂತಗಳು ಸ್ಪಷ್ಟವಾಗುತ್ತಾ ಬಂದಿವೆ. ಪ್ರಾಗೈತಿಹಾಸಿಕ ಸಂಸ್ಕೃತಿ ಪ್ರಗತಿಯಲ್ಲಿ ಕಾಲಾನುಕ್ರಮವಾಗಿ 1. ಆದಿ, ಮಧ್ಯ ಮತ್ತು ಅಂತ್ಯ ಎಂದು ಗುರುತಿಸ ಬಹುದಾದ ಮೂರು ಅನುಕ್ರಮ ಉಪಹಂತಗಳುಳ್ಳ ಹಳೆ ಶಿಲಾಯುಗ, 2. ಸೂಕ್ಷ್ಮ ಶಿಲಾ ಯುಗ, 3. ಹೊಸ ಶಿಲಾಯುಗ, 4. ಕಂಚಿನ ಇಲ್ಲವೆ ಶಿಲಾ–ತಾಮ್ರಯುಗ, ಮತ್ತು ಕೊನೆಯದಾಗಿ 5. ಆದಿ ಕಬ್ಬಿಣಯುಗದ ಎಂಬ ಐದು ಪ್ರಮುಖ ಘಟ್ಟಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

ಇಂದಿನ ಕರ್ನಾಟಕದಲ್ಲಿಯ ಪ್ರತಿಯೊಂದು ಭಾಗದಲ್ಲಿಯ ನದಿ ಬಯಲುಗಳಲ್ಲಿ ಆದಿ ಹಳೆ ಶಿಲಾಯುಗ ನೆಲೆಗಳಿವೆ. ಉದಾ: ಮಲಪ್ರಭೆಯ ಖ್ಯಾಡ ಡಾಣಕ–ಶಿರೂರು (ಬಿಜಾಪುರ ಜಿಲ್ಲೆ), ಘಟಪ್ರಭೆಯ ಅನಗವಾಡಿ (ಬಾಗಲಕೋಟೆ ಹತ್ತಿರ), ಕೃಷ್ಣೆಯ ಹುಣಸಗಿ (ಗುಲ್ಬರ್ಗ), ತುಂಗಭದ್ರೆಯ ನಿಟ್ಟೂರು (ಬಳ್ಳಾರಿ), ಕಿಬ್ಬನಹಳ್ಳಿ (ತುಮಕೂರು), ನೇತ್ರಾವತಿಯ ಮಣಿ (ಮಂಗಳೂರು) ಮೊದಲಾದವು. ಅನಗವಾಡಿ ಮತ್ತು ಹುಣಸಗಿಯಲ್ಲಿ ಈ ಸಾಂಸ್ಕೃತಿಕ ಹಂತದ ಕೆಲವು ಮಹತ್ತ್ವ ಅಂಶಗಳು ಗಮನಾರ್ಹ. ಇವು ಆದಿ ಹಳೆಶಿಲಾಯುಗ ಮಾನವ ಕಾರ್ಯಗಾರದ ಮೂಲ ನೆಲೆಗಳು. ಅನಗವಾಡಿಯಲ್ಲಿ ಆದಿ ಹಳೆಶಿಲಾಯುಗ ಹಂತದಿಂದ ಮಧ್ಯ ಹಳೆಶಿಲಾಯುಗ ಹಂತವನ್ನು ತಲುಪಿದ ಬಗ್ಗೆ ಒಂದೆರಡು ಸುಳುವುಗಳಿವೆ. ಹುಣಸಗಿಯಲ್ಲಿ ಕೆಲವು ಸ್ವಾರಸ್ಯ ಸಂಗತಿಗಳಿವೆ. ಆದಿ ಹಳೆ ಶಿಲಾಯುಗ ಮಾನವ ತನ್ನ ಉಪಕರಣಗಳನ್ನು ತಯಾರು ಮಾಡುವಾಗ ಬಿಸಿಲಿನ ತಡೆಯನ್ನು ನಿರ್ಮಿಸಿಕೊಂಡ ಕುರುಹುಗಳು, ಉಪಕರಣ ತಯಾರಿಕೆಯ ತಂತ್ರದಲ್ಲಿ ಉಪಯೋಗಿಸಿದ ಪೀಠ ಹಾಗೂ ಇದರ ಎದುರಿನಲ್ಲಿ ತಂತ್ರಗಾರನು ಕೆಲಸ ಮಾಡುವಾಗ ಕುಳಿತುಕೊಂಡಿದ್ದಿರ ಬಹುದಾದ ಕಲ್ಲಿನ ಆಸನ, ತಯಾರಿಕೆಯಲ್ಲಿ ಉಂಟಾದ ಪುಡಿ ಚಕ್ಕೆಗಳು, ಅನುಪಯುಕ್ತ ಕಲ್ಲು ಚೂರುಗಳು, ಅರೆ ಉಪಕರಣಗಳು, ಹೊಸ ಸಿದ್ಧ ಉಪಕರಣಗಳು ಮೊದಲಾದವು ಒಂದೆಡೆಯಲ್ಲಿದ್ದು, ಇದೊಂದು ಉಪಕರಣಗಳ ಕಾರ್ಯಗಾರದ ಮೂಲನೆಲೆಯೆಂಬುದು ಖಚಿತವಾಗಿದೆ. ಇವುಗಳೊಡನೆ ಸ್ವಲ್ಪ ದೂರದಿಂದ ಉದ್ದೇಶಪೂರ್ವಕವಾಗಿ ತಂದ ಕೆಮ್ಮಣ್ಣಿನ ತುಂಡುಗಳಿದ್ದವು. ಪ್ರಾಯಶಃ ಆಯ್ದ ಕೆಲವು ಉಪಕರಣಗಳಿಗೆ ಬಣ್ಣ ಹಾಕಿರಬಹುದೆಂದು ತರ್ಕ. ಇದುವರೆಗೆ ತಿಳಿದಮಟ್ಟಿಗೆ, ಆದಿ ಹಳೆ ಶಿಲಾಯುಗ ಮಾನವನು ಕೃತಕವಾಗಿ ಆಶ್ರಯವನ್ನು ನಿರ್ಮಿಸಿಕೊಂಡ ಕುರುಹುಗಳುಳ್ಳ ನೆಲೆಯು ಇಡಿ ಭಾರತದಲ್ಲಿ ಇದೊಂದೆ.

ನಿಟ್ಟೂರಿನಲ್ಲಿ (ಬಳ್ಳಾರಿ) ದೊರೆತ ಆದಿ ಹಳೆ ಶಿಲಾಯುಗದ ಉರುಟುಕಲ್ಲಿನ ಉಪಕರಣಗಳು ಇತರ ನೆಲೆಗಳಲ್ಲಿಯ ತಿರುಳುಕಲ್ಲಿನ ಇಲ್ಲವೆ ದಪ್ಪ ಚಕ್ಕೆ ಉಪಕರಣಗಳಿಂದ ತಾಂತ್ರಿಕವಾಗಿ ಮತ್ತು ಆಕಾರಗಳಲ್ಲಿ ಭಿನ್ನವಾಗಿದ್ದು ಬೇರೆ ಒಂದು ಪದ್ಧತಿಯನ್ನೆ ಸೂಚಿಸುತ್ತವೆ.

ಮಧ್ಯ ಹಳೆ ಶಿಲಾಯುಗ ವಿಶೇಷವಾಗಿ ಅಂತ್ಯ ಹಳೆ ಶಿಲಾಯುಗದ ನೆಲೆಗಳು ವಿರಳವೆಂದೇ ಹೇಳಬಹುದು. ಸಾಲ್ವಡಗಿ (ಬಿಜಾಪುರ), ಇಂಗಳೇಶ್ವರ (ಬಿಜಾಪುರ), ತಕ್ಕನಹಳ್ಳಿ (ದಾವಣಗೆರೆ), ಕಟ್ಟೆಬೆಳಗಲಿ (ಹಾಸನ) ಮೊದಲಾದವು ಪ್ರಮುಖವಾದವು. ಬೀದರ್ ಜಿಲ್ಲೆಯ ಮಾಂಜ್ರಾ–ಕಾರಂಜ ಭಾಗದಲ್ಲಿಯೂ ಈ ಸಾಂಸ್ಕೃತಿಕ ನೆಲೆಗಳಿವೆ.

ಮಲೆನಾಡಿನ ಭಾಗದಲ್ಲಿಯ ಸೂಕ್ಷ್ಮ ಶಿಲಾಯುಗ ನೆಲೆಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಕಾಲಾನುಕ್ರಮದಲ್ಲಿ ಮೂರು ವರ್ಗಗಳನ್ನಾಗಿ ವಿಂಗಡಿಸಲಾಗಿದೆ. ಇವಲ್ಲದೆ ಸಂಗನಕಲ್ಲು (ಬಳ್ಳಾರಿ), ಜಾಲಹಳ್ಳಿ (ಬೆಂಗಳೂರು), ಉಪ್ಪಿನಂಗಡಿ (ದಕ್ಷಿಣ ಕನ್ನಡ ಜಿಲ್ಲೆ), ಕಿಬ್ಬನಹಳ್ಳಿ ಮೊದಲಾದವು ಮಹತ್ತ್ವದ ನೆಲೆಗಳು. ಸಂಗನಕಲ್ಲಿನ ಉತ್ಖನನಗಳಲ್ಲಿ ಸ್ಪಷ್ಟವಾಗಿ ಸೂಕ್ಷ್ಮ ಶಿಲಾಯುಗ ಹಂತ ಮತ್ತು ಇದಕ್ಕೂ ಪೂರ್ವದ ಅಪರೂಪದ ಹಂತವೊಂದು ಇದೆ. ಮರಳಬಾವಿ (ಗುಲ್ಬರ್ಗ) ಒಂದು ವಿಶೇಷವಾದ ನೆಲೆ. ಇಲ್ಲಿ ಮಾತ್ರ ಸ್ಪಷ್ಟವಾಗಿ ಹಳೆ ಶಿಲಾ ಯುಗದ ಆದಿ, ಮಧ್ಯ ಮತ್ತು ಅಂತ್ಯ ಹಾಗೂ ಸೂಕ್ಷ್ಮ ಶಿಲಾಯುಗ ಹಂತಗಳ ಉಪಕರಣಗಳು ಕ್ರಮವಾಗಿ ಒಂದರ ಮೇಲೆ ಒಂದರಂತೆ ನಾಲ್ಕು ಪದರುಗಳಲ್ಲಿದ್ದುದು ಖಚಿತವಾಗಿ ಕಂಡುಬಂದದ್ದರಿಂದ ಪ್ರಥಮವಾಗಿ ಈ ಹಂತಗಳ ಕಾಲಾನುಕ್ರಮ ಮತ್ತು ಸಾಂಸ್ಕೃತಿಕ ಅನುಕ್ರಮ ನಿಸ್ಸಂಶಯವಾಗಿ ಗೊತ್ತಾಯಿತು.

ಮಾಂಜ್ರಾ–ಕಾರಂಜದಿಂದ ಕಾವೇರಿಯವರೆಗೆ ವಿವಿಧ ಪರಂಪರೆಯ ಪೂರ್ವಭಾವಿ ಇತಿಹಾಸ ಸಂಸ್ಕೃತಿಯ ನೂರಾರು ನೆಲೆಗಳಿವೆ. ತಿರುಮಕೂಡಲು ನರಸೀಪುರ (ಮೈಸೂರು), ಬನಹಳ್ಳಿ (ಕೋಲಾರ) ಮತ್ತು ಹಳ್ಳೂರು (ಧಾರವಾಡ) ಮುಖ್ಯವಾಗಿ ನೂತನ ಶಿಲಾಯುಗ ನೆಲೆಗಳು. ಕೃಷ್ಣಾ–ತುಂಗಭದ್ರ ಬಯಲಿನ ಬ್ರಹ್ಮಗಿರಿ (ಚಿತ್ರದುರ್ಗ), ತೆಕ್ಕಲಕೋಟೆ (ಬಳ್ಳಾರಿ), ಮಸ್ಕಿ, ಪಿಕ್ಲಿಹಾಳ್ (ರಾಯಚೂರು), ಕೃಷ್ಣಾ–ಭೀಮಾ ಪ್ರದೇಶದ ಬೂದಿಹಾಳ, ಕೊಡೇಕಲ್ಲು (ಗುಲ್ಬರ್ಗ) ಇವು ತಾಮ್ರ ಉಪಕರಣ ಆಭರಣಗಳ ಬಳಕೆಯಿದ್ದ ಸುಧಾರಿಸಿದ ಹಂತದ ನವಶಿಲಾಯುಗ ನೆಲೆಗಳು. ಕೃಷ್ಣಾ ಮೇಲ್ದಂಡೆ ಭಾಗದ ತೇರದಾಳ (ಬಿಜಾಪುರ), ಮಂಗಸೂಳಿ, ಸತ್ತಿ, ಕುಡಚಿ (ಬೆಳಗಾಂವಿ) ಮೊದಲಾದವು ಸ್ಪಷ್ಟವಾಗಿ ಶಿಲಾ–ತಾಮ್ರಯುಗ ನೆಲೆಗಳು. ತಿರುಮಕೂಡಲು ನರಸೀಪುರ, ಬ್ರಹ್ಮಗಿರಿ, ಮಸ್ಕಿ ಮೊದಲಾದ ನೆಲೆಗಳ ಉತ್ಖನನಗಳಲ್ಲಿ ಸ್ಪಷ್ಟವಾಗಿ ಕಂಡುಬಂದಂತೆ ಶಿಲಾ–ತಾಮ್ರಯುಗ, ಇಲ್ಲವೇ ಮುಂದುವರೆದ ನವಶಿಲಾಯುಗ, ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿ ಮತ್ತು ಆದಿ ಇತಿಹಾಸ ಹಂತಗಳ ಸಾಂಸ್ಕೃತಿಕ ಅವಶೇಷಗಳು ಈ ಅನುಕ್ರಮದಲ್ಲಿ ಮಣ್ಣಿನ ಪದರುಗಳಲ್ಲಿದ್ದವು. ಈ ಉತ್ಖನನಗಳಲ್ಲಿ ಇನ್ನೊಂದು ಸೂಕ್ಷ್ಮ ಅಂಶ ತಿಳಿದಿದೆ. ಶಿಲಾ ತಾಮ್ರದ ಹಂತದಲ್ಲಿಯ ನವಶಿಲಾಯುಗದ ಹಾಗೂ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಇದು ಆಯಾ ಭಾಗಗಳಲ್ಲಿಯ ನಿರಂತರ ಸಾಂಸ್ಕೃತಿಕ ಬೆಳೆವಣಿಗೆ ಮತ್ತು ಆಯಾಯ ಹಂತದ ಸ್ಥೂಲ ಕಾಲಮಾನವನ್ನು ತಿಳಿದುಕೊಳ್ಳಲು ಸಹಾಯಕಾರಿಯಾಗಿದೆ. ಈ ಉತ್ಖನನ ಗಳಿಂದ ಈ ಸಂಸ್ಕೃತಿಗಳ ಹೆಚ್ಚು ಕಡಿಮೆ ಸರಿಯಾದ ಕಾಲಮಾನಗಳನ್ನಲ್ಲದೆ, ಆಯಾಯ ಜನ ಸಮುದಾಯಗಳ ವಾಸ್ತವ್ಯದ ಕ್ರಮ, ವಸತಿಗಳು, ಆಹಾರ ಪದ್ಧತಿ, ಉದ್ಯೋಗ, ಕಲೆ, ಕಟ್ಟುಕಟ್ಟಳೆಗಳು, ಶವಸಂಸ್ಕಾರ ಕ್ರಮ, ಚಲನವಲನ, ಇತರ ಸಮುದಾಯಗಳೊಡನೆ ಸಂಪರ್ಕ ಮೊದಲಾದ ಸಾಮಾಜಿಕ ವಿಷಯಗಳನ್ನು ತಿಳಿಯಲು ಸಾಧ್ಯವಾಗಿದೆ. ಸಂಗನಕಲ್ಲಿನ ನವಶಿಲಾಯುಗ ಜನರು ವಾಸಿಸುತ್ತಿದ್ದ ಗುಡಿಸಲಿನ ನಿರ್ಮಿತಿ, ವಿನ್ಯಾಸ, ಉಪಯೋಗಿಸಿದ ಸರಕುಗಳು, ಮಂಗಸೂಳಿಯ ಮನೆಗಳ ಬಳಿ ಮಣ್ಣನ್ನು ಹಾಕಿ ದಮ್ಮಸು ಮಾಡಿದ ನೆಲಗಳು, ಶಿಲಾ ತಾಮ್ರಯುಗ ಜನರ ಮಣ್ಪಾತ್ರೆಗಳ ಮೇಲಿನ ಉತ್ತಮ ಕಲಾ ಅಭಿರುಚಿಯನ್ನು ತೋರಿಸುವ ನಾನಾ ಪ್ರಕಾರಗಳ ವರ್ಣ ರೇಖಾಚಿತ್ರಗಳು, ಈ ಒಂದೊಂದೂ ಆಯಾಯ ಜನ ಸಮುದಾಯದ ಜೀವನ ಶೈಲಿಯ ವೈಶಿಷ್ಟ್ಯವನ್ನು ತೋರಿಸುತ್ತವೆ.

ಬೀದರ ಜಿಲ್ಲೆ ಹಾಗೂ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳ ಉತ್ತರ ಭಾಗಗಳನ್ನು ಹೊರತುಪಡಿಸಿ ಇತರ ಎಲ್ಲೆಡೆಗಳಲ್ಲಿ ಬೃಹತ್‌ಶಿಲಾ ಸಂಸ್ಕೃತಿ ನೆಲೆಗಳಿವೆ. ಬಹುಸಂಖ್ಯೆಯಲ್ಲಿ ಇವು ವಿವಿಧ ರೀತಿಯ ಕಲ್ಮನೆಗಳ ನೆಲೆಗಳು. ಈ ಜನರ ವಾಸ್ತವ್ಯದ ನೆಲೆಗಳು ತೀರಾ ಕಡಿಮೆ ಸಂಖ್ಯೆಯಲ್ಲಿ ಕಂಡುಬಂದಿರುವುದು ಕುತೂಹಲಕಾರಿ. ತಡಕನಹಳ್ಳಿ (ಧಾರವಾಡ), ಕೊಮಾರನಹಳ್ಳಿ (ಚಿತ್ರದುರ್ಗ), ತೇರದಾಳ, ಹಳಿಂಗಳಿ (ಬಿಜಾಪುರ) ಮೊದಲಾದ ಬೃಹತ್‌ಶಿಲಾ ಗೋರಿ ನೆಲೆಗಳ ಉತ್ಖನನಗಳಿಂದ ನಾನಾ ಬೃಹತ್ ಶಿಲಾ ಗೋರಿಗಳ ರಚನೆ ಮತ್ತು ವಿನ್ಯಾಸ, ಶವಸಂಸ್ಕಾರ ವಿಧಾನಗಳು ಹಾಗೂ ಶವಸಂಸ್ಕಾರಗಳಲ್ಲಿ ಉಪಯೋಗಿ ಸಿದ ಮಣ್ಪಾತ್ರೆಗಳ ಕಬ್ಬಿಣ ಉಪಕರಣಗಳುಳ್ಳ ಮತ್ತು ಅಸ್ಥಿ ಅವಶೇಷಗಳಿಂದ ಒಂದೇ ಕಲ್ಮನೆಯಲ್ಲಿ ಅಥವಾ ಶವಕೋಣೆಯಲ್ಲಿ ಒಬ್ಬ ವ್ಯಕ್ತಿಗಿಂತ ಹೆಚ್ಚು ವ್ಯಕ್ತಿಗಳ ಅಸ್ಥಿ ಸಂಸ್ಕಾರ ವಾಗಿರುವಂಥ ಸ್ವಾರಸ್ಯಕರ ವಿಷಯಗಳು ತಿಳಿದಿವೆ. ಮಸ್ಕಿ, ಬ್ರಹ್ಮಗಿರಿ, ಸಂಗನಕಲ್ಲು ಮೊದಲಾ ದೆಡೆಗಳಲ್ಲಿಯ ಈ ಜನರ ಕೆಲವೇ ವಾಸ್ತವ್ಯ ನೆಲೆಗಳ ಉತ್ಖನನಗಳಿಂದ ಇವರ ಸಾಮಾನ್ಯ ನಿತ್ಯ ಜೀವನದ ಸ್ವರೂಪವೂ ಶೈಲಿಯೂ ತಿಳಿದುಬಂದಿದೆ. ಇನ್ನೊಂದು ಗಮನಾರ್ಹ ಅಂಶವೆಂದರೆ, ಹಳ್ಳೂರು, ತಡಕನಹಳ್ಳಿ, ಕೊಮಾರನಹಳ್ಳಿ ನೆಲೆಗಳಲ್ಲಿಯ ಬೃಹತ್ ಸಂಸ್ಕೃತಿಯ ಸಂಕೀರ್ಣದಲ್ಲಿ ಒಂದು ವಿಶಿಷ್ಟ ಮಾದರಿಯ ಮಣ್ಪಾತ್ರೆಗಳು ಕಾಣಿಸಿ ಕೊಳ್ಳುತ್ತವೆ. ಸ್ವಲ್ಪ ಕೆಂಪೊತ್ತಿದ ಬಿಸ್ಕತ್‌ಬಣ್ಣ ಮತ್ತು ಕಪ್ಪುಬಣ್ಣದ ದ್ವಿವರ್ಣ ಪಾತ್ರೆಯಾಗಿದ್ದು, ಇದರ ಒಳಗಡೆ ಇಲ್ಲವೆ ಹೊರಗಡೆ ಅಸ್ಪಷ್ಟ ಬಿಳಿ ಬಣ್ಣದ ರೇಖಾಚಿತ್ರಗಳಿವೆ. ಇಂತಹ ಮಣ್ಪಾತ್ರೆಗಳು ಗುಜರಾತ್ ಪ್ರದೇಶದಲ್ಲಿಯ ಹರಪ್ಪ ನಾಗರಿಕತೆ ಮತ್ತು ಸಮಕಾಲೀನ ಸಂಸ್ಕೃತಿಯ ಸಂಕೀರ್ಣಗಳಲ್ಲಿ ಬಳಕೆಯಲ್ಲಿದ್ದವು. ಆದ್ದರಿಂದ ಇಂಥ ಪಾತ್ರೆ ಕರ್ನಾಟಕ ದಲ್ಲಿಯೂ ಆದಿ ಕಬ್ಬಿಣಯುಗದ ಹಂತದಲ್ಲಿ ಕಂಡುಬಂದಿರುವುದು ಕುತೂಹಲಕಾರಿಯಾಗಿದೆ. ಈ ನೆಲೆಗಳ ಮಣ್ಣು, ಸುಟ್ಟ ಕಾಳು ಕಡ್ಡಿಗಳು, ಪ್ರಾಣಿ ಎಲುಬುಗಳು, ಕಲ್ಲಿನ ಮಣಿಗಳು, ಲೋಹದ ಸಾಮಾನುಗಳು, ಮೊದಲಾದವುಗಳ ಪ್ರಯೋಗಶಾಲೆಯ ವೈಜ್ಞಾನಿಕ ಅಧ್ಯಯನ ಗಳಿಂದ ಆಯಾಯ ಕಾಲದ ವಾಯುಗುಣ, ಪರಿಸರ, ಕಾಡು ಹಾಗೂ ಸಾಕುಪ್ರಾಣಿ ಸಂಪತ್ತು, ಅರಣ್ಯ ಹಾಗೂ ಕೃಷಿ ಉತ್ಪನ್ನಗಳು ಹಾಗೂ ತತ್‌ಸಂಬಂಧಗಳಿಂದ ಜನರ ಉದ್ಯೋಗ, ಆಹಾರ, ಪದ್ಧತಿ, ಕಚ್ಚಾವಸ್ತುಗಳ ಮೂಲ ನೆಲೆಗಳು ಮತ್ತು ಸಂಸ್ಕೃತಿಗಳ ಕಾಲಮಾನ ಮೊದಲಾದವುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಮಾನವ ಅಸ್ಥಿಗಳ ಅಧ್ಯಯನದಿಂದ ಲಿಂಗ, ವಯಸ್ಸುಗಳಲ್ಲದೆ ಆ ವ್ಯಕ್ತಿಗಳ ದೇಹಸ್ಥಿತಿ, ಅವರಿಗೆ ತಗುಲಿದ್ದ ರೋಗರುಜಿನಗಳು, ಶ್ರಮ ಮೊದಲಾದವು ವಿಚಾರಗಳೂ ತಿಳಿದುಬಂದಿದೆ.

ಪ್ರಾಗಿತಿಹಾಸ ಕಾಲದ ಕಲ್ಲಾಸರೆ/ಗವಿ ವರ್ಣಚಿತ್ರಗಳು, ಬಯಲು ಬಂಡೆ ಕುಟ್ಟು ಚಿತ್ರಗಳು ಹೆಚ್ಚಾಗಿ ಕೊಪ್ಪಳ–ಹಿರೆಬೆನಕಲ್ಲು–ಹಂಪಿ ಭಾಗ, ಪಟ್ಟದಕಲ್ಲು–ಕುಟಕನಕೇರಿ. ಐಹೊಳೆ ಭಾಗ ಹಾಗೂ ವಿರಳವಾಗಿ ಪಶ್ಚಿಮ ಘಟ್ಟ–ಕಡಲ ಪ್ರದೇಶಗಳಲ್ಲಿ ಇದುವರೆಗೆ ಸು.80 ನೆಲೆಗಳಲ್ಲಿ ಶೋಧಿತವಾಗಿವೆ. ವಿಶೇಷವಾಗಿ ಮೊದಲ ಎರಡು ಭಾಗಗಳಲ್ಲಿ ಇನ್ನೂ ಇಂಥ ನೂರಾರು ನೆಲೆಗಳಿರುವ ಸೂಚನೆಯಿದೆ. ಮುಖ್ಯವಾಗಿ ಅಂತ್ಯ ಹಳೆ ಶಿಲಾಯುಗದಿಂದ–ಆದಿ ಇತಿಹಾಸ ಕಾಲದವರೆಗಿನ ಚಿತ್ರಕಲೆ ಹಾಗು ಸಾಮಾಜಿಕ ಮನರಂಜನೆ ಕಟ್ಟು–ಕಟ್ಟಳೆ ಮೊದಲಾದ ವಿಷಯಗಳನ್ನು ಹೆಚ್ಚು ಸ್ಪಷ್ಟವಾಗಿ ತಿಳಿಯಲು ಪ್ರಮುಖ ಆಕರಗಳಾಗಿವೆ.

ಹೀಗೆ ಪ್ರಾದೇಶಿಕ ಅನ್ವೇಷಣೆ ಮತ್ತು ಉತ್ಖನನಗಳಿಂದ ತೋರಿಬಂದ ನೆಲೆಗಳ ನಿರ್ಮಿತಿಗಳ, ನಾನಾ ಪ್ರಕಾರದ ಅವಶೇಷಗಳ ವೈಜ್ಞಾನಿಕ ಅಧ್ಯಯನಗಳಿಂದ ವಿವಿಧ ಪರಿಸರಗಳಲ್ಲಿ ಅತಿ ಪ್ರಾಚೀನ ಕಾಲದಿಂದ ಆದಿ ಇತಿಹಾಸ ಕಾಲದವರೆಗಿನ ಜನಜೀವನ ಶೈಲಿ, ವೈಜ್ಞಾನಿಕ ತಂತ್ರಗಳು, ಸೌಂದರ್ಯ ಪ್ರಜ್ಞೆ, ಕಲೆ, ಸ್ವಲ್ಪಮಟ್ಟಿಗೆ ಸಾಮಾನ್ಯ ನಂಬಿಕೆಗಳು, ಸಾಧನೆಗಳು ಹಾಗೂ ಜೀವನ ಪದ್ಧತಿಯ ಮತ್ತು ತಂತ್ರಗಾರಿಕೆಗಳ ವೈಜ್ಞಾನಿಕ ಪ್ರಗತಿಯನ್ನು ಸ್ಥೂಲವಾಗಿ, ವ್ಯವಸ್ಥಿತವಾಗಿ ಪುನಃ ರಚಿಸಲು ಸಾಧ್ಯವಾಗಿದೆ.

ಇತಿಹಾಸ ಕಾಲದ ಪುರಾತತ್ತ್ವ: ಪ್ರಾಗಿತಿಹಾಸ ಹಾಗೂ ಪೂರ್ವಭಾವಿ ಇತಿಹಾಸದ ಸಂಸ್ಕೃತಿಗಳು: ಜನರ ಮುಂದಿನ ಪೀಳಿಗೆಗಳು ಹಾಗೂ ಇತರರು ಇತಿಹಾಸ ಕಾಲದಲ್ಲಿ ಅಲ್ಲಲ್ಲಿ ವಾಸ್ತವ ಮಾಡಿದ ನೆಲೆಗಳು ಬಹಳವಾಗಿವೆ. ಮೌರ್ಯ–ಸಾತವಾಹನ, ಆದಿ ಕದಂಬ–ಗಂಗ, ಆದಿ ಚಳುಕ್ಯ, ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಳುಕ್ಯ, ಹೊಯ್ಸಳ, ವಿಜಯನಗರ ಕಾಲದ ರಾಜಧಾನಿಗಳ, ನಗರಗಳ, ಗ್ರಾಮಗಳ, ಹಲವಾರು ನೆಲೆಗಳಿವೆ. ಅಷ್ಟೇ ಅಲ್ಲ ಕೆಲವು ನೆಲೆಗಳ ಆದಿ ಇತಿಹಾಸ ಕಾಲದಿಂದ ಬಂದ ಹೆಸರುಗಳೂ ಲಭ್ಯವಿದೆ. ಉದಾಹರಣೆಗೆ ಮೌರ್ಯ ಸಾಮ್ರಾಜ್ಯದ ಆಡಳಿತ ಕೇಂದ್ರವಾಗಿದ್ದ ಬ್ರಹ್ಮಗಿರಿಗೆ ಆ ಕಾಲದಲ್ಲಿ ಇದ್ದ ಹೆಸರು ಇಸಿಲ. ಇದು ಆ ಸಾಮ್ರಾಜ್ಯದ ಸುವರ್ಣಗಿರಿ ಪ್ರಾಂತ್ಯದಲ್ಲಿತ್ತು. ಈ ಸುವರ್ಣಗಿರಿ ನಿರ್ವಿವಾದವಾಗಿ ಗುರುತಿಸಲಾಗಿಲ್ಲ. ಆದರೂ ಇದು ಮಸ್ಕಿಯೇ ಆಗಿರಬಹುದೆಂಬ ಅಭಿಪ್ರಾಯಕ್ಕೆ ಹೆಚ್ಚು ಒತ್ತು ಇದೆ. ಇದರಂತೆಯೇ ಸಾತವಾಹನ ಕಾಲದ ಕೆಲವು ನಗರಗಳ ಹೆಸರುಗಳು ಇಂತಿವೆ. ಇಂಡಿ (ಬಿಜಾಪುರ), ಬಾದಾಮಿ, ಪಟ್ಟದಕಲ್ಲು, ಬನವಾಸಿ ಮೊದಲಾದ ಸ್ಥಳಗಳಲ್ಲಿ ಸಾತವಾಹನ ಕಾಲದ ನಗರಗಳಿದ್ದ ಕುರುಹುಗಳಿವೆ. ಬಾದಾಮಿಯ ಹೆಸರಿನ ಸಂಸ್ಕೃತ ರೂಪ ವಾತಾಪಿ. ಈ ಹೆಸರು ಬಾದಾಮಿಯಲ್ಲಿಯ ಒಂದನೆಯ ಪುಲಿಕೇಶಿ ಶಾಸನದಲ್ಲಿ ಉಲ್ಲೇಖಗೊಂಡಿದೆ. ಬಾದಾಮಿಗೆ ಇನ್ನೊಂದು ಹೆಸರು ವೈಜಯಂತಿ. ಹೀಗೆಯೆ ಇತರ ಹೆಸರುಗಳು ಅಂದರೆ ಪಲಾಶಿಕಾ (ಹಲಸಿ), ಪಾಂಕ್ತಿಪುರ (ಈಗಿನ ಹಾನಗಲ್ಲು), ಕೊಳನೂರು (ಕೋಲಾರ) ಮೊದಲಾದವು.

ಇಂಥ ಮಹತ್ವದ ನೆಲೆಗಳಲ್ಲಿ ಕೆಲವೊಂದು ಮಾತ್ರ ಹೈಗುಂದ (ಉತ್ತರ ಕನ್ನಡ), ಬನವಾಸಿ, ಗುಡ್ನಾಪುರ, ಚಂದ್ರವಳ್ಳಿ (ಚಿತ್ರದುರ್ಗ), ವಡಗಾಂವ್–ಮಾಧವಪುರ (ಬೆಳಗಾಂವಿ), ತಲಕಾಡು (ಮೈಸೂರು) ಮೊದಲಾದ ಕೆಲವೇ ನಗರಗಳನ್ನು ಪ್ರಾದೇಶಿಕ ಅನ್ವೇಷಣೆ ಹಾಗೂ ಉತ್ಖನನಗಳಿಂದ ಹೆಚ್ಚು ಅಧ್ಯಯನ ಮಾಡಲಾಗಿದೆ. ಆಯಾಯ ಕಾಲದ ಜನರ ನಿತ್ಯ ಬಳಕೆಯ ಅವಶೇಷಗಳಲ್ಲದೆ ದೊಡ್ಡ ದೊಡ್ಡ ಇಟ್ಟಿಗೆ ಕಟ್ಟಡಗಳು; ಮಣ್ಣಿನ, ದಂತದ, ಕಲ್ಲಿನ ಕಲಾತ್ಮಕ ಗೊಂಬೆಗಳು; ಆಯಾಯ ಕಾಲದಲ್ಲಿ ಚಲಾವಣೆಯಲ್ಲಿದ್ದ ವಿವಿಧ ನಾಣ್ಯಗಳೂ ದೊರೆತಿವೆ. ಇವೆಲ್ಲದರ ಸಮನ್ವಯ ಅಧ್ಯಯನದಿಂದ ಆಯಾತ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಷಯಗಳು, ವಾಸ್ತುಶಿಲ್ಪ ಮಾದರಿಗಳು ಮತ್ತು ಪ್ರಕಾರಗಳು, ವ್ಯಾಪಾರ ವ್ಯವಹಾರಗಳು, ನಾಣ್ಯಪದ್ಧತಿ ಮೊದಲಾದವುಗಳನ್ನು ತಿಳಿಯಲು ಆಗುವುದು. ಜಟಂಗರಾಮೇಶ್ವರದಲ್ಲಿಯ ಅಶೋಕ ಚಕ್ರವರ್ತಿಯ ಕಿರುಬಂಡೆಶಾಸನದ ಅಡಿಯಲ್ಲಿ ಪವಿತ್ರ ಬುದ್ಧಪಾದ ಜೋಡಿಯನ್ನು ರೇಖೆಯಲ್ಲಿ ಬಿಡಿಸಲಾಗಿದೆ. ಇದು ಸಾಂಕೇತಿಕವಾಗಿ ಇತಿಹಾಸಕಾಲದ ಅತ್ಯಂತ ಪ್ರಾಚೀನ ಹಂತದ ಸಾಮಾನ್ಯ ಪ್ರಯತ್ನ. ಇತ್ತೀಚೆಗೆ ಸನ್ನತಿಯ ಸಾತವಾಹನ ಕಾಲದ ನಗರದ ನೆಲೆಯ ಉತ್ಖನನದಲ್ಲಿ ಅತ್ಯಂತ ಅಪರೂಪದ ಹಾಗೂ ಮಹತ್ವದ ಒಂದು ಚಿತ್ರಿತ ವೃತ್ತ ಫಲಕ ದೊರೆತಿದೆ. ಈ ಫಲಕದ ಮೇಲಿನ ಹೊಳಪು ಹಾಗೂ ಚಿತ್ರಗಳ ಶೈಲಿ ಮೌರ್ಯಕಾಲದ ಕಲೆಯ ವಿಶೇಷ ಲಕ್ಷಣಗಳಾಗಿವೆ. ಆದ್ದರಿಂದಲೇ ಇದು ಬಹುಮಟ್ಟಿಗೆ ಮೌರ್ಯಕಾಲದ್ದಾಗಿರಬಹುದು. ಇವಲ್ಲದೆ ಆ ಕಾಲದ ವಿಶಿಷ್ಟ ಪ್ರಕಾರದ ಅತ್ಯಂತ ಹೊಳಪಿನ ಕಪ್ಪುಬಣ್ಣದ ಪಾತ್ರೆಗಳ ಚೂರುಗಳು ಕೂಡಕಂಡುಬಂದಿದೆ. ಇಂಥ ಪಾತ್ರೆಗಳು ಉತ್ತರ ಭಾರತದ ಗಂಗಾನದಿಯ ಬಯಲಿನಲ್ಲಿ ಪ್ರ.ಶ.ಪೂ ಸು. 6–3 ನೆಯ ಶತಮಾನದ ಅಂತರದಲ್ಲಿ ಬಳಕೆಯಲ್ಲಿದ್ದವು. ಆದ್ದರಿಂದ ಈ ವಿಶಿಷ್ಟ ಪಾತ್ರೆಯನ್ನು ಔತ್ತರೇಯ ಪಾತ್ರೆಗಳೆಂದು ವರ್ಣಿಸಲಾಗಿದೆ (ನಾರ್ಥರ್ನ್ ಬ್ಲ್ಯಾಕ್ ಪಾಲಿಷ್ಡ್ ಪಾಟರಿ). ಹೀಗೆ ಪ್ರಪ್ರಥಮ ಮೌರ್ಯಕಾಲದ ಕಲಾತ್ಮಕ ಕುರುಹುಗಳು ದೊರೆಯುತ್ತಿರುವುದು ಇದೇ ಪ್ರಥಮ.

ಬ್ರಹ್ಮಗಿರಿ, ಐಹೊಳೆ, ಪಟ್ಟದಕಲ್ಲು, ತಲಕಾಡು ಮೊದಲಾದೆಡೆಗಳಲ್ಲಿ ಸಾತವಾಹನ, ಆದಿ ಕದಂಬ, ಗಂಗ, ನಿರ್ಮಿತಿಗಳು ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ಬಂದಿವೆ. ಇವುಗಳಿಂದ ಇತ್ತೀಚಿನವರೆಗೂ ಗೊತ್ತಿರದ ಬಾದಾಮಿ ಚಳುಕ್ಯ ಪೂರ್ವದ ವಾಸ್ತು/ಮೂರ್ತಿ ಶಿಲ್ಪಕಲೆ, ವಿನ್ಯಾಸ, ಕೆಲವೊಂದು ಧಾರ್ಮಿಕ ವಿಷಯಗಳನ್ನು ಪ್ರಪ್ರಥಮವಾಗಿ ತಿಳಿಯಲು ಸಾಧ್ಯವಾಗಿದೆ.

ಚಾಳುಕ್ಯರ ರಾಜಧಾನಿಯಾಗಿದ್ದ ಬಾದಾಮಿ ಮತ್ತು ಇದರ ಸಮೀಪದ ಪಟ್ಟದಕಲ್ಲು, ಹಳೆ ಮತ್ತು ಹೊಸ ಮಹಾಕೂಟ, ಬಿ.ಎಸ್.ಜಾಲಿಹಾಳ, ಐಹೊಳೆ, ಲಕ್ಷ್ಮೇಶ್ವರ (ಚಾಳುಕ್ಯ ಕಾಲದ ಪುಲಿಗೆರೆ, ಧಾರವಾಡ), ಬನವಾಸಿ, ಮಣ್ಣೆ ಮೊದಲಾದ ಸ್ಥಳಗಳಲ್ಲಿ ಚಾಳುಕ್ಯ–ಗಂಗಕಾಲದ ಬೆಟ್ಟದಲ್ಲಿ ಕೊರೆದು ಹಾಗೂ ಕಡೆದ ಕಲ್ಲುಗಳಿಂದ ಕಟ್ಟಿದ ವೈವಿಧ್ಯಮಯ ವಿನ್ಯಾಸಗಳ ಅನೇಕ ವಾಸ್ತು ನಿರ್ಮಿತಿಗಳಿವೆ. ಅಷ್ಟೇ ಅಲ್ಲ, ಪಟ್ಟದಕಲ್ಲಿನಲ್ಲಿ ಹೆಸರೇ ಸೂಚಿಸುವಂತೆ ಬಾದಾಮಿ ಚಳುಕ್ಯ ಅರಸರು ತಮ್ಮ ಪಟ್ಟಬಂಧ ಮಹೋತ್ಸವವನ್ನು ನೆರವೇರಿಸಿಕೊಳ್ಳುತ್ತಿದ್ದರೆಂದು ಅನಂತರ ಕಾಲದ ಶಾಸನಗಳಲ್ಲಿ ಹೇಳಿದೆ. ಐಹೊಳೆ ಶ್ರೀಮಂತ ವರ್ತಕರ ಕೇಂದ್ರ. ಕ್ರಮೇಣ ಇಲ್ಲಿಯ ಪ್ರಬಲ ವಣಿಕ ಸಂಘ ಅಯ್ಯಾವೊಳೆ ಐನೂರ್ವರು ಎಂದು ಇಡೀ ದಕ್ಷಿಣ ಭಾರತದಲ್ಲಿಯೇ ಸುಪ್ರಸಿದ್ಧವಾಗಿತ್ತು. ಇಲ್ಲಿ ಬಾದಾಮಿ ಚಳುಕ್ಯ ಕಾಲದ ವಿಕಸನ ಹಂತದ ದೇವಾಲಯದ ವಿವಿಧ ಪ್ರಕಾರಗಳ ಆಕೃತಿಗಳು ಹಾಗೂ ಅನಂತರ ಕಾಲದ ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಕಾಲದ ಅನೇಕ ದೇವಾಲಯಗಳ ವೈವಿಧ್ಯ ವಾಸ್ತುಶಿಲ್ಪ ಹಂತಗಳು ವೀಕ್ಷಕರನ್ನು, ಅಧ್ಯಯನಶೀಲರನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತವೆ. ದೇವಾಲಯ ವಾಸ್ತುಶಿಲ್ಪದ ತಜ್ಞರು ಈ ನೆಲೆಯನ್ನು ಭಾರತೀಯ ದೇವಾಲಯಗಳ ಪ್ರಯೋಗ ಶಾಲೆ. ದೇವಾಲಯ ವಾಸ್ತುಶಿಲ್ಪ ತೊಟ್ಟಿಲು ಎಂದೆಲ್ಲ ವರ್ಣಿಸಿದ್ದಾರೆ. ಭಾರತದ ಪ್ರಾಚೀನ ದೇವಾಲಯದ ವಾಸ್ತುಶಿಲ್ಪದ ಎರಡು ಪ್ರಮುಖ ವಿನ್ಯಾಸಗಳಾದ ರೇಖಾನಗರ ಅಥವಾ ಭಾರತೀಯ ಆರ್ಯ ಅಥವಾ ಔತ್ತರೇಯ ಮತ್ತು ವಿಮಾನ ಅಥವಾ ದ್ರಾವಿಡ, ದಾಕ್ಷಿಣಾತ್ಯ ಇವು ಒಂದೆಡೆಯಲ್ಲಿರುವಂಥ ಸ್ಥಳವು ಬಾದಾಮಿ–ಐಹೊಳೆ–ಪಟ್ಟದಕಲ್ಲು – ಇಂಥ ದೇವಾಲಯಗಳಲ್ಲಿಯ, ಕಣ್ಣಿಗೆ ಕಟ್ಟುವಂತೆ ಲೌಕಿಕ ವಾಸ್ತುಶಿಲ್ಪ ಕೃತಿಗಳು, ಗೃಹಪೀಠೋಪಕರಣಗಳು, ಲಲಿತ ಕಲೆಗಳು, ಸಂಗೀತ ವಾದ್ಯಗಳು, ವೇಷ ಭೂಷಣಗಳು, ಕೇಶವಿನ್ಯಾಸ, ವಾಹನಗಳ ಪ್ರಕಾರಗಳು, ಯುದ್ಧ ಕೌಶಲ, ಶಸ್ತ್ರಾಸ್ತ್ರಗಳು, ಗುರುಕುಲಾಶ್ರಮ ಮೊದಲಾದ ಸಾಮಾಜಿಕ ರಚನೆ, ಆರ್ಥಿಕ ಮತ್ತು ಧಾರ್ಮಿಕ ದೃಶ್ಯಗಳು ಅಂದಿನ ಸಮಾಜದ ಸ್ವಾರಸ್ಯಕರ ವಿಷಯಗಳನ್ನು ತಿಳಿಯಲು ಬಹಳ ಸಹಾಯಕಾರಿಯಾಗಿವೆ. ಇವುಗಳಲ್ಲಿಯ ಕೆಲವೊಂದು ವಿಷಯಗಳನ್ನು ಬೇರೆ ಸರಿಯಾದ ಮೂಲಗಳಿಂದ ತಿಳಿಯಲಾಗುವುದಿಲ್ಲ. ಸಾತವಾಹನ ಅರಸರ ಕಾಲದ ನಾಣ್ಯ ಚಲಾವಣೆ ಮತ್ತು ಪದ್ಧತಿಗಳನ್ನು ಬಿಟ್ಟರೆ ಆದಿ ಕದಂಬ ಹಾಗೂ ಬಾದಾಮಿ ಚಳುಕ್ಯರ ಕಾಲದಲ್ಲಿ ಈ ಸಂಗತಿಗಳು ಕೂಡ ಇದುವರೆಗೆ ಸ್ವಲ್ಪವೂ ತಿಳಿದಿಲ್ಲ. ಇತ್ತೀಚೆಗೆ ಚಾಳುಕ್ಯ ಅರಸು ಕಾಲದ್ದೆಂದು ಹೇಳಬಹುದಾದ ಒಂದು ನಾಣ್ಯ ಪ್ರಥಮ ಬಾರಿಗೆ ಪತ್ತೆಯಾಗಿದೆ. (ಎ.ಎಸ್.)

**ಶಾಸನ ಆಕರಗಳು:** ಬಹಳ ಕಾಲದವರೆಗೂ ಉಳಿಯುವಂಥ ಕಲ್ಲು, ಲೋಹ ಮೊದಲಾದ ಸರಕುಗಳ ಮೇಲೆ ಸಮಕಾಲೀನ ಜವಾಬ್ದಾರಿಯುತ ಅಧಿಕಾರಿಗಳು ತಮ್ಮ ಕಾಲದ ಅರಸು ಮನೆತನ ಆಶ್ರಯದಾತನಾಗಿದ್ದ ಅರಸನ ಯೋಗ್ಯತೆ, ಸಾಧನೆ ಹಾಗೂ ಘನ ಉದ್ದೇಶಕ್ಕಾಗಿ ಮಾಡಿದ ದಾನಧರ್ಮಗಳು, ಕೆರೆಕಟ್ಟೆಗಳ ನಿರ್ಮಾಣ, ವಿದ್ಯಾಕೇಂದ್ರಗಳ ಸ್ಥಾಪನೆ, ಮೊದಲಾದ ವಿಷಯಗಳನ್ನು ಆಡಳಿತ ಅಧಿಕೃತ ದಾಖಲೆಗಳಾಗಿ, ಸಾರ್ವಜನಿಕರ ಪ್ರಕಟಣೆಯಾಗಿ ಬರೆದಿಟ್ಟ ರಾಜಾಜ್ಞೆಗಳೇ ಶಾಸನಗಳು. ಈ ಪ್ರಕಾರದ ಶಾಸನಗಳೇ ಅತ್ಯಧಿಕ. ಇವಲ್ಲದೆ ಘನವ್ಯಕ್ತಿಗಳ ಮರಣವನ್ನು ಸೂಚಿಸುವ ವೀರಗಲ್ಲುಗಳು ಮೊದಲಾದ ಸ್ಮಾರಕ ಶಾಸನಗಳೂ ಇವೆ. ಸಹಜವಾಗಿಯೇ ಇವುಗಳಲ್ಲಿ ಉತ್ಪ್ರೇಕ್ಷೆಯಿದ್ದರೂ ಕಾವ್ಯಮಯ ವರ್ಣನೆಯಿದ್ದರೂ ಇವು ಮಹತ್ತ್ವವನ್ನು ಪಡೆದಿವೆ ಎನ್ನುವುದು ಸರ್ವವಿಧಿತ. ಇಂಥ ಸಾವಿರಾರು ಶಾಸನಗಳ ಶೋಧನೆ, ಓದುವುದು, ಅರ್ಥೈಸುವುದು ಮತ್ತೆ ವಿಮರ್ಶೆ ಮಾಡುವುದರಿಂದ ಇತಿಹಾಸ ಕಾಲದ ರಾಜ್ಯಗಳು, ವಿಸ್ತಾರ ಗಡಿಗಳು, ರಾಜಕೀಯ ಸ್ಥಿತಿ, ರಾಜ್ಯಾಡಳಿತ, ಸಮಾಜ, ಕಲೆ, ಧರ್ಮ, ಆರ್ಥಿಕ ಪರಿಸ್ಥಿತಿ, ತೆರಿಗೆ ಪದ್ಧತಿ ಮೊದಲಾದ ವಿಷಯಗಳನ್ನು ಹೆಚ್ಚು ಕಡಿಮೆಯಾಗಿದ್ದರೂ ಕೂಡ ಎಡೆಬಿಡದೆ ನಮ್ಮ ದೇಶದ ಮತ್ತು ಪ್ರದೇಶಗಳ ನಂಬಲರ್ಹವಾದ ಇತಿಹಾಸವನ್ನು ಪುನರ್ರಚಿಸಲು ವಾಸ್ತವಿಕವಾಗಿ ಸಾಧ್ಯವಾಗಿದೆ. ಕರ್ನಾಟಕದಲ್ಲಿಯೂ ವ್ಯವಸ್ಥಿತವಾಗಿ 1885 ರಿಂದ ಈ ಶಾಸನಗಳ ಅಧ್ಯಯನವೂ ಚುರುಕುಗೊಂಡಿತು. ಜೆ.ಎಫ್.ಫ್ಲೀಟ್, ಬಿ.ಎಲ್.ರೈಸ್, ಆರ್.ನರಸಿಂಹಾಚಾರ್ಯ, ಎಂ.ಎಚ್.ಕೃಷ್ಣ, ಆರ್.ಎಸ್.ಪಂಚಮುಖಿ, ಪಿ.ಬಿ.ದೇಸಾಯಿ, ಜಿ.ಎಸ್.ಗಾಯಿ, ಕೆ.ವಿ.ರಮೇಶ, ಎಸ್.ಎಚ್.ರಿತ್ತಿ, ಎಂ.ಚಿದಾನಂದ ಮೂರ್ತಿ, ಎಂ.ಹನುಮಂತರಾವ್, ಬಿ.ಆರ್.ಗೋಪಾಲ, ಸೀತಾರಾಮಜಾಗೀರದಾರ, ಎಂ.ಎಂ.ಕಲ್ಬುರ್ಗಿ ಮೊದಲಾದವರು ಈ ಕ್ಷೇತ್ರದಲ್ಲಿ ಸತತವಾಗಿ ಶಾಸನಗಳ ಶೋಧನೆ, ಪರಿಶೋಧನೆ, ಅಧ್ಯಯನವನ್ನು ಮಾಡಿ ಶಾಸನ ಅಧ್ಯಯನ ಒಂದು ಗಟ್ಟಿನೆಲೆಯಲ್ಲಿ ನಿಲ್ಲುವ ಹಾಗೆ ಮಾಡಿದ್ದಾರೆ. ಇಷ್ಟಾದರೂ ಇಂದಿಗೂ ಹೊಸ ಶಾಸನಗಳು ಬೆಳಕಿಗೆ ಬರುತ್ತಲಿವೆ. ಶಾಸನಗಳನ್ನು ಇಂದಿನ ಹೊಸ ದೃಷ್ಟಿಕೋನದಲ್ಲಿ ಮತ್ತೆ ಮತ್ತೆ ವಿಮರ್ಶಿಸಲಾಗುತ್ತಿದೆ. ಇವೆಲ್ಲವೂ ಶಾಸನ ಅಧ್ಯಯನದಲ್ಲಿ ಸದಾ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಇರುವುದನ್ನು ಸೂಚಿಸುತ್ತವೆ. ಇತಿಹಾಸ ರಚನೆಯಲ್ಲಿ ಈ ಶಾಸನಗಳು ಎಂಥ ಮಹತ್ತ್ವದ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಕೆಲವೊಂದು ಉದಾಹರಣೆಗಳಿಂದ ತಿಳಿದುಕೊಳ್ಳಬಹುದು.

ಕರ್ನಾಟಕದಲ್ಲಿಯ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳು ಖಚಿತವಾಗಿ ರಾಜಾಜ್ಞೆ ಶಾಸನ ವರ್ಗಕ್ಕೆ ಸೇರಿದವು. ಈ ಅರಸನ ಒಟ್ಟು ಹತ್ತು ಕಿರು ಬಂಡೆಶಾಸನಗಳು, ಬ್ರಹ್ಮಗಿರಿ, ಜಟಂಗರಾಮೇಶ್ವರ, ಸಿದ್ಧಾಪುರ (ಚಿತ್ರದುರ್ಗ), ಕೊಪ್ಪಳ ಮತ್ತು ಮಸ್ಕಿ, (ರಾಯಚೂರು) ಮೊದಲಾದ ಸ್ಥಳಗಳಲ್ಲಿ ಹಿಂದೆ ಪತ್ತೆ ಹಚ್ಚಲಾಯಿತು. 1977ರಲ್ಲಿ ನಿಟ್ಟೂರು ಮತ್ತು ಉದೆಗೊಳಂನಲಿ (ಬಳ್ಳಾರಿ) ಇಂಥ ಶಾಸನಗಳಿದ್ದುದು ತಿಳಿದುಬಂದಿತು. ಈ ಶಾಸನಗಳಲ್ಲಿಯ ವಿಷಯ ಸ್ವಲ್ಪ ಹೆಚ್ಚು ಕಡಿಮೆ ಒಂದೆ; ಜನಸಾಮಾನ್ಯರಿಗೆ ಅವರ ಉತ್ಕರ್ಷಕ್ಕಾಗಿ ನೀತಿಬೋಧನೆ ಆದರೂ ಇವುಗಳಿರುವ ಸ್ಥಳಗಳಿಂದ ದಕ್ಷಿಣದಲ್ಲಿ ಆ ಚಕ್ರವರ್ತಿಯ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದ ಗಡಿಯನ್ನು ಗುರುತಿಸಲು ಸಹಾಯಕರವಾಗಿವೆ. 1915ರಲ್ಲಿ ಈ ಅರಸನ ಶಾಸನ ಮಸ್ಕಿಯಲ್ಲಿ ಪತ್ತೆಯಾಗುವುದಕ್ಕೆ ಮುಂದೆ ಉಳಿದ ಶಾಸನಗಳಲ್ಲಿ ಅರಸನನ್ನು ಅವನ ವಿಶೇಷ ನಾಮದಿಂದ ದೇವಾನಾಂಪಿಯ ಪಿಯದಸಿ (ದೇವಾನಾಂಪ್ರಿಯ, ಪ್ರಿಯದರ್ಶಿ) ಎಂದು ಸೂಚಿಸಲಾಗಿದೆ. ಅಶೋಕ ಮೌರ್ಯನ ಸಮಕಾಲೀನ ಶ್ರೀಲಂಕದ

ಒಬ್ಬ ಅರಸು (ಪ್ರ.ಶ.ಪೂ.ಸು.247–207) ತಿಸ್ಸನು ದೇವಾನಂಪಿಯನೆಂದು ಕರೆಯಲ್ಪಟ್ಟಿದ್ದ. ಇದಲ್ಲದೆ ಅಶೋಕನ ತಂದೆ ಬಿಂದುಸಾರನಿಗೂ ಈ ವಿಶೇಷ ಪದನಾಮವಿತ್ತೆಂದು ಪ್ರತೀತಿ. ಆದ್ದರಿಂದ ಈ ಅರಸು ಅಶೋಕ ಚಕ್ರವರ್ತಿ ಎಂದು ನಿಶ್ಚಯವಾಗಿ ಹೇಳಲಾಗುತ್ತಿರಲಿಲ್ಲ. ಮಸ್ಕಿಯಲ್ಲಿರುವ ಈ ಅರಸನ ಶಾಸನದಲ್ಲಿ ಇವನ ಅನ್ವರ್ಥನಾಮವಾದ ಅಸೋಕ (ಅಶೋಕ) ಎಂಬ ಹೆಸರು ವಿಶೇಷ ನಾಮದೊಂದಿಗೆ ಇರುವುದರಿಂದ ಈ ದೇವಾನಾಂಪ್ರಿಯ ಪ್ರಿಯದರ್ಶಿ ಮೌರ್ಯ ಚಕ್ರವರ್ತಿ ಅಶೋಕನೆಂದೇ ಖಚಿತವಾಯಿತು. ನಿಟ್ಟೂರು ಮತ್ತು ಉದೆಗೊಳಂ ಶಾಸನದಲ್ಲಿಯೂ ಅಸೋಕರಾಜನೆಂಬ ಉಲ್ಲೇಖವಿದೆ. 1990 ರಲ್ಲಿ ಸನ್ನತಿಯಲ್ಲಿ (ಗುಲ್ಬರ್ಗ) ಈ ಚಕ್ರವರ್ತಿಯ ಆಗಲೇ ಪ್ರಸಿದ್ಧವಾಗಿದ್ದ 14 ಹಿರೆ ಬಂಡೆಶಾಸನಗಳಲ್ಲಿ 13–14 ನೆಯ ಬಂಡೆ ಶಾಸನಗಳು ಮತ್ತು ಕಳಿಂಗದ ಎರಡು ಪ್ರತ್ಯೇಕ ಶಾಸನಗಳ ಪ್ರತಿಗಳು ಭಾಗಶಃ ಇದ್ದುದು ಆಕಸ್ಮಿಕವಾಗಿ ತಿಳಿಯಿತು.

ಬ್ರಹ್ಮಗಿರಿಯ ಶಾಸನದಲ್ಲಿ ಸುವರ್ಣಗಿರಿ ಮಹಾಮಾತ್ರರ ಮೂಲಕ ಇಸಿಲದ ಮಹಾಮಾತ್ರರಿಗೆ ಕಳುಹಿಸಿದ ರಾಜಾಜ್ಞೆಯೇ ಶಾಸನದ ವಿಷಯ. ಆದ್ದರಿಂದ ಆ ಚಕ್ರವರ್ತಿಯ ಕಾಲದಲ್ಲಿ ಇಸಿಲ ಎಂದು ಕರೆಯಲ್ಪಟ್ಟ ಈಗಿನ ಬ್ರಹ್ಮಗಿರಿ ಭಾಗ ಅಶೋಕ ಚಕ್ರವರ್ತಿಯ ಮಹಾಮಾತ್ರ ಆಡಳಿತ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಯಿತು. ಆಗಲೇ ಅಂಕಿಗಳಿಗೆ ಸಂಖ್ಯೆ ಸಂಕೇತದ ಸಾಮಾನ್ಯವಾಗಿ ಬಳಕೆಯಲ್ಲಿದ್ದುದು ಈ ಶಾಸನದಿಂದ ತಿಳಿಯಿತು. ಅಶೋಕನು ಧರ್ಮಪ್ರಚಾರಕ್ಕೋಸ್ಕರ ಕೈಗೊಂಡ ಪ್ರವಾಸ ದಿನಗಳು 256 ಎಂದು ತಿಳಿಸಲು ಅಂಕಿ ಸಂಕೇತಗಳನ್ನು ಬಳಸಲಾಗಿದೆ. ಸನ್ನತಿಯ ಶೋಧನೆ ಕೆಲವು ಮಹತ್ತ್ವದ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಬಹುಶಃ ಈ ಭಾಗವನ್ನು ಕಳಿಂಗ ರಾಜ್ಯವನ್ನು ಗೆಲ್ಲುವುದಕ್ಕೆ ಮುಂಚೆಯೆ ವಶಪಡಿಸಿಕೊಂಡಿದ್ದರಿಂದ ಕೊನೆಯದಾಗಿ ಕಳಿಂಗ ರಾಜ್ಯ ಗೆದ್ದ ಅನಂತರ ಅಲ್ಲಿ ಹಾಕಿಸಿದ ಪ್ರತ್ಯೇಕ ಶಾಸನಗಳ ಪ್ರತಿಗಳನ್ನು ಇಲ್ಲಿಯೂ ಹಾಕಿಸುವ ಅನಿವಾರ್ಯತೆ ಕಂಡುಬಂದಿರಬೇಕು. ಇದು ಸತ್ಯವಾಗಿದ್ದಲ್ಲಿ ಇವನ ಅಜ್ಜನಾದ ಮೌರ್ಯ ಚಕ್ರವರ್ತಿ ಚಂದ್ರಗುಪ್ತನ ರಾಜ್ಯದಲ್ಲಿ ಈ ಭಾಗ ಸೇರುತ್ತಿತ್ತೆಂಬುದು ಸತ್ಯಕ್ಕೆ ದೂರದ ಮಾತಾಗುತ್ತದೆ.

ದಖನ್ ಪ್ರಸ್ಥಭೂಮಿಯಲ್ಲಿ ಮೌರ್ಯರ ಅನಂತರ ರಾಜ್ಯವನ್ನು ಕಟ್ಟಿ ಆಳಿದ ಸಾತವಾಹನರ ಕಾಲದ ಕೆಲವು ಶಾಸನಗಳು ಉತ್ತರ ಕರ್ನಾಟಕದಲ್ಲಿವೆ. ಇವೆಲ್ಲವೂ ಹೆಚ್ಚಾಗಿ ದಾನ ಶಾಸನಗಳು. ನಾಸಿಕ (ಮಹಾರಾಷ್ಟ್ರ) ದಲ್ಲಿಯ ವಾಸಿಷ್ಠೀಪುತ್ರ ಪುಳುಮಾವಿಯ ರಾಜ್ಯಾಡಳಿತದ 19ನೆಯ ವರ್ಷದಲ್ಲಿ ಇವನ ಹಿಂದಿನ ಅರಸು ಗೌತಮಿಪುತ್ರ ಸಾತಕರ್ಣಿಯ ದಂಡಯಾತ್ರೆಗಳು ರಾಜ್ಯವಿಸ್ತಾರ ಮೊದಲಾದ ವಿವರಗಳನ್ನು ಕೊಡುವಂಥ ಶಾಸನ ತೀರ ಅಪರೂಪ. ಸನ್ನತಿಯಲ್ಲಿ ಮೂರು, ಮ್ಯಾಕೆದೋಣಿ (ಬಳ್ಳಾರಿ), ವಾಸನ (ಧಾರವಾಡ) ಮತ್ತು ಬನವಾಸಿಯಲ್ಲಿ ಒಂದೊಂದು ಈ ಅರಸರ ಕಾಲದ ಶಿಲಾಶಾಸನಗಳಿವೆ. ಸನ್ನತಿಯ ಒಂದು ಶಾಸನ ಗೌತಮಿಪುತ್ರ ಸಾತಕರ್ಣಿಗೆ ಸಂಬಂಧಿಸಿದೆ ಇದೊಂದು ಅಪರೂಪ ಶಾಸನ. ಇದು ನಾಸಿಕ ಶಾಸನದಂತೆ ಒಂದು ಪ್ರಶಸ್ತಿ. ಆ ಅರಸನ ಹಲವಾರು ಪ್ರಾಂತಗಳ ಮೇಲಿನ ಅಧಿಕಾರ ಮತ್ತು ಕ್ಷಹರಾತ ಕುಲದ ಉಚ್ಚಾಟನೆ ಮೊದಲಾದ ವಿಷಯಗಳಿವೆ. ಇದರಿಂದ ಈ ಭಾಗವು ನೇರವಾಗಿ ಸಾತವಾಹನರ ಆಡಳಿತಕ್ಕೆ ಒಳಪಟ್ಟಿರಬೇಕೆಂದು ದೃಢವಾಗುತ್ತದೆ. ಇದುವರೆಗೆ ಈ ಸ್ಥಳದಲ್ಲಿ ಪ್ರ.ಶ. 1–2ನೆಯ ಶತಮಾನದ 56ಕ್ಕೂ ಹೆಚ್ಚು ಪ್ರಾಕೃತ ಶಾಸನಗಳು ಹಾಗೂ ಹಲವಾರು ಬೌದ್ಧ ಶಿಲ್ಪಗಳು ಪ್ರಕಟವಾಗಿವೆ. ಆದ್ದರಿಂದ ಈ ನಗರ ಬೌದ್ಧಧರ್ಮ ಮತ್ತು ಕಲೆಯ ಒಂದು ಪ್ರಮುಖ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಸಾತವಾಹನ ಅರಸರ ವಂಶದ ಮೂಲಸ್ಥಳದ ಬಗ್ಗೆ ಚರ್ಚೆ ಇದೆ. ಮ್ಯಾಕೆದೋಣಿ ಶಾಸನ ಈ ದಿಶೆಯಲ್ಲಿ ಸ್ವಲ್ಪ ಆಶಾದಾಯಕವಾಗಿದೆ. ವಾಸನದ ಶಾಸನ ಚಂಡಶಿವ ದೇವಾಲಯ ನಿರ್ಮಾಣದ ವಿಷಯವನ್ನು ತಿಳಿಸುತ್ತದೆ. ಶೈವಧರ್ಮ ಮತ್ತು ಶಿವದೇವಾಲಯದ ನಿರ್ಮಾಣದ ಬಗ್ಗೆ ತಿಳಿಸುವಂಥ ಅತ್ಯಂತ ಪ್ರಾಚೀನತಮ ಶಾಸನವೂ ಇದಾಗಿದೆ. ಪ್ರಾಯಶಃ ಒಬ್ಬ ಸಾತವಾಹನ ಅರಸನ ದೇವಾಲಯವು ನಿರ್ಮಾಣವಾಗಿರಬಹುದು. ಬನವಾಸಿಯಲ್ಲಿ ಈ ವಾಸಿಷ್ಠೀಪುತ್ರ ಶಿವಶ್ರೀ ಪುಳುಮಾವಿಯ ಮಹಾರಾಣಿಯ ಹೆಸರಿನಲ್ಲಿಯ ಸ್ಮಾರಕ ಶಾಸನ ಬಹುಶಃ ಇವಳು ಈ ಪ್ರದೇಶದವಳಾಗಿರಬಹುದೆಂಬ ವಿಚಾರಕ್ಕೆ ಎಡೆ ಮಾಡಿಕೊಡುತ್ತದೆ. ಬನವಾಸಿಯಲ್ಲಿ ಸಾತವಾಹನ ಅರಸರ ಮಾಂಡಲಿಕರಾದ ಚುಟುಕುಲಾನಂದ ವಂಶದ ಎರಡು ಶಾಸನಗಳು ಒಂದು ಮಳವಳ್ಳಿ (ಶಿವಮೊಗ್ಗ)ಯಲ್ಲಿ, ಮತ್ತೊಂದು ಬನವಾಸಿಯಲ್ಲಿವೆ. ಇವೆರಡೂ ಕೂಡ ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿ (ವಿಷ್ಣು ಚುಟುಕುಲಾನಂದ ಶಾತಕರ್ಣಿ) ಆಡಳಿತ ಕಾಲದವು. ಮೊದಲನೆಯದರಲ್ಲಿ ಒಂದು ಪ್ರಕಾರದ ಬ್ರಹ್ಮದೇಯ (ಬ್ರಾಹ್ಮಣರಿಗೆ ದಾನ ಕೊಟ್ಟಿದ್ದು) ಮತ್ತು ದೇವಸ್ವ (ದೇವರ ಪ್ರಜಾದಿ ಕಾರ್ಯಗಳಿಗೆ ದಾನ ಕೊಟ್ಟಿದ್ದು) ದಾನಗಳ ವಿಷಯವಿದೆ. ಈ ಪ್ರಕಾರ ದಾನಗಳ ಬಗ್ಗೆ ತಿಳಿಸುವಂಥ ಅತ್ಯಂತ ಪ್ರಾಚೀನತಮ ಶಾಸನವಿದು. ಎರಡನೆಯದರಲ್ಲಿ ಈ ಅರಸನ ಮಗಳಾದ ಶಿವಕದ ನಾಗಸಿರಿ (ಶಿವಸ್ಕಂದ ನಾಗಶ್ರೀ) ಒಂದು ಬೌದ್ಧ ನಾಗಶಿಲ್ಪ, ಒಂದು ವಿಹಾರ ಮತ್ತು ಒಂದು ಕೆರೆಗಳನ್ನು ಮಾಡಿಸಿ ದಾನಕೊಟ್ಟ ವಿಷಯವಿದೆ ಹಾಗೂ ಮುಚಲಿಂಗ ನಾಗಶಿಲ್ಪವನ್ನು ರೂಪಿಸಿದ ಸಂಜಯತಿಯ ದಮೋರಕನ ಶಿಷ್ಯ ನಟಕನೆಂದು ಶಿಲ್ಪಿಯ ಹೆಸರನ್ನು ಹೇಳಿದೆ. ನಾಗಾರ್ಜುನ ಕೊಂಡ (ಗುಂಟೂರು ಜಿಲ್ಲೆ, ಆಂಧ್ರಪ್ರದೇಶ)ದಲ್ಲಿಯ ಕೆಲವು ಪ್ರಾಕೃತ ಶಾಸನಗಳು ಕರ್ನಾಟಕದಲ್ಲಿಯ ಬೌದ್ಧಧರ್ಮದ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲುತ್ತವೆ.

ಮೌರ್ಯ–ಸಾತವಾಹನ ಕಾಲದ ಶಾಸನಗಳೆಲ್ಲವೂ ಪ್ರಾಕೃತ ಭಾಷೆಯಲ್ಲಿದ್ದರೆ, ಇವರ ತರುವಾಯ ಸ್ವತಂತ್ರ ರಾಜ್ಯ ಸ್ಥಾಪನೆ ಮಾಡಿ ಆಳಿದ ಕದಂಬ ಮತ್ತು ಗಂಗ ವಂಶಜರ ಶಾಸನಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಕೆಲವೊಂದು ಶಿಲಾಶಾಸನಗಳನ್ನು ಬಿಟ್ಟರೆ ಹೆಚ್ಚಾಗಿ ಉಳಿದೆಲ್ಲವೂ ತಾಮ್ರಪಟ ಶಾಸನಗಳು. ಇವುಗಳಲ್ಲಿ ಬಹಳಷ್ಟು ದೇವಸ್ವ ಇಲ್ಲವೆ ಬ್ರಹ್ಮದೇಯ ದಾನಗಳಿಗೆ ಸಂಬಂಧಿಸಿದವು. ಚಂದ್ರವಳ್ಳಿಯ ಬಂಡೆಶಾಸನ ಕದಂಬ ರಾಜ್ಯ ಸ್ಥಾಪಕ ಮತ್ತು ಮೊದಲ ದೊರೆ ಮಯೂರಶರ್ಮನ ಕಾಲದ್ದು. ಈ ಶಾಸನ ಪ್ರಾಕೃತ ಭಾಷೆಯಲ್ಲಿದ್ದು, ಮಯೂರಶರ್ಮ ಗೆದ್ದ ರಾಜ್ಯಗಳ ಸರಮಾಲೆ ಇದೆ ಎಂದು ಈ ಹಿಂದೆ ಅದನ್ನು ಅರ್ಥೈಸಲಾಗಿತ್ತು. ಆದರೆ ಈಚಿನ ಹೆಚ್ಚು ಸೂಕ್ಷ್ಮವಾದ ಅಧ್ಯಯನದಿಂದ ಈ ಶಾಸನ ಸಂಸ್ಕೃತ ಭಾಷೆಯಲ್ಲಿದೆಯೆಂದೂ ಇದರಲ್ಲಿ ಮಯೂರಶರ್ಮನ ಕಾಲದಲ್ಲಿ ಕೊಪಣ (ಕೊಪ್ಪಳ)ದ ಚಾಮನೆಂಬುವನು ಇಲ್ಲಿದ್ದ ಒಂದು ಕೆರೆಯನ್ನು ದುರಸ್ತಿ ಮಾಡಿದ ವಿಷಯವಿದೆಯೆಂದೂ ಸ್ಪಷ್ಟವಾಗಿದೆ.

ಕದಂಬ ಅರಸು ಮನೆತನದ ಇತಿಹಾಸವನ್ನು ತಿಳಿಯಲು ತಾಳಗುಂದ ಮತ್ತು ಗುಡ್ನಾಪುರ ಸ್ತಂಭಶಾಸನಗಳು ಅತಿ ಮುಖ್ಯವಾದುವು. ಮೊದಲನೆಯದು ಕದಂಬವಂಶದ ಮೂಲ, ಕಂಚಿಯಲ್ಲಿ ಕದಂಬ ಮಯೂರಶರ್ಮನ ವಿದ್ಯಾಭ್ಯಾಸ, ಅಲ್ಲೊಂದು ಅವಮಾನಿತ ಪ್ರಸಂಗದಲ್ಲಿ ಅವನು ಕ್ರಮೇಣ ಬನವಾಸಿ ಪ್ರದೇಶದ ಮೇಲಿನ ಪಲ್ಲವರ ಅಧಿಕಾರದ ಕೊನೆಗಾಣಿಸುವಿಕೆ, ಕದಂಬ ರಾಜ್ಯ ಸ್ಥಾಪನೆ, ಈ ಅರಸು ಮನೆತನದ ಐದನೆಯ ಅರಸು ಶಾಂತಿವರ್ಮನ ತನಕ ವಂಶಾವಳಿ ಮತ್ತು ಶಾಂತಿವರ್ಮನ ತಂದೆ ಕಾಕುಸ್ಥವರ್ಮ ತಾಳಗುಂದದಲ್ಲಿ ಕೆರೆ ಕಟ್ಟಿಸಿದ ವಿಷಯವನ್ನು ತಿಳಿಸುತ್ತದೆ. ಈ ಪ್ರಶಸ್ತಿಯನ್ನು ಕುಬ್ಜನೆಂಬ ಕವಿ ಉತ್ತಮ ಸಂಸ್ಕೃತ ಕಾವ್ಯಶೈಲಿಯಲ್ಲಿ ರಚಿಸಿದ. ಗುಡ್ನಾಪುರದಲ್ಲಿಯ ಶಾಸನ ಇತರ ಕೆಲವು ಮಹತ್ತ್ವದ ವಿಷಯಗಳನ್ನು ತಿಳಿಸುತ್ತದೆ. ತಾಳಗುಂದ ಶಾಸನದಲ್ಲಿ ನಿರೂಪಿಸಿದ ಕದಂಬ ವಂಶಾವಳಿಯನ್ನು ಈ ಶಾಸನ ಇನ್ನೂ ಹಿಂದಕ್ಕೆ ತೆಗೆದುಕೊಂಡು ಹೋಗುತ್ತದೆ. ಇದರಲ್ಲಿ ಮಯೂರವರ್ಮನ ತಂದೆ ವೀರಶರ್ಮ ಮತ್ತು ಅಜ್ಜ ಬಂಧುಷೇಣ, ಇಲ್ಲಿಯ ಅರಮನೆಯ ಪಕ್ಕದಲ್ಲಿಯೇ ಒಂದು ಮನ್ಮಥ ದೇವಾಲಯದ ನಿರ್ಮಾಣ, ವಸಂತೋತ್ಸವದ ಆಚರಣೆ, ಗುಡ್ಡ (ಗುಡ್ನಾ) ಪುರದಲ್ಲಿ ಕೆರೆಯ ನಿರ್ಮಾಣ ಮೊದಲಾದ ವಿಷಯಗಳಿವೆ. ವಿಶೇಷವಾಗಿ 1 ರಿಂದ 9 ರ ತನಕ ಸಂಖ್ಯೆಗಳಿರುವುದು ಗಮನಾರ್ಹ. ಕದಂಬರ ಶಾಸನಗಳು ಸಮಕಾಲೀನ ಸಾಮಾನ್ಯ ಜನರ ಕನ್ನಡ ಭಾಷೆಯ ಬೆಳವಣಿಗೆಯನ್ನಲ್ಲದೆ ಪ್ರಬುದ್ಧ ಉತ್ತಮ ಕನ್ನಡ ಭಾಷೆಯ ಮಟ್ಟವನ್ನು ತಿಳಿಯಲು ನೆರವಾಗುತ್ತವೆ. ಅತ್ಯಂತ ಪ್ರಾಚೀನ ಉತ್ತಮ ಕನ್ನಡ ಶಾಸನವು ಹಲ್ಮಿಡಿಯಲ್ಲಿದೆ. ಇದರಂತೆ ಈ ಕಾಲದ ಕೆಳಗುಂದಲಿ (ಶಿವಮೊಗ್ಗ) ಮತ್ತು ಕಂಪ್ಲಿ (ಉತ್ತರ ಕನ್ನಡ) ಕನ್ನಡ ಶಾಸನಗಳು ಗಮನಾರ್ಹ.

ಇದರಂತೆಯೆ ಆದಿ ಗಂಗರ ಶಾಸನಗಳೂ ರಾಜ್ಯ ಸ್ಥಾಪನೆ, ವಂಶಾವಳಿ, ಪಲ್ಲವ, ಕದಂಬ ಮತ್ತು ಪುನ್ನಾಟರೊಡನೆ ಅವರ ಸಂಬಂಧ ಮೊದಲಾದ ವಿಷಯಗಳನ್ನು ತಿಳಿಸುತ್ತದೆ. ಈ ಅರಸರ ವಿದ್ಯಾಭ್ಯಾಸವನ್ನು ತಿಳಿಸುವಾಗ ಇವರ ಪ್ರಾವೀಣ್ಯ ಹಾಗೂ ಸ್ವಂತ ರಚನೆಗಳನ್ನು ಕೂಡ ಉಲ್ಲೇಖಿಸುತ್ತವೆ. ಗಂಗ ದುರ್ವಿನೀತನ ಕಿರಾತಾರ್ಜುನೀಯಮ್ ಕಾವ್ಯದ ಮೊದಲನೆಯ ಹದಿನೈದು ಸರ್ಗಗಳ ಮೇಲಿನ ವ್ಯಾಖ್ಯಾನ, ಶಬ್ದಾವತಾರ ಈ ಶಾಸನಗಳಲ್ಲಿ ಗಂಗರಸರ ಕೃತಿಗಳು ಕೂಡ ಕೊನೆಯ ಭಾಗ ಸಾಮಾನ್ಯ ಕನ್ನಡ ಭಾಷೆಯಲ್ಲಿದ್ದು, ಆ ಕಾಲದ ಗಡಿನಾಡಿನ ಭಾಗದಲ್ಲಿದ್ದ ಕನ್ನಡ–ತಮಿಳು ಮಿಶ್ರಹಂತ ಲಕ್ಷಣ ಸ್ವರೂಪವನ್ನು ತಿಳಿಯಲು ನೆರವಾಗುತ್ತದೆ.

ಬಾದಾಮಿ ಚಳುಕ್ಯರ ಶಾಸನಗಳು ಅಧಿಕ ಸಂಖ್ಯೆಯಲ್ಲಿದ್ದು, ಆ ಕಾಲದ ರಾಜಕೀಯ, ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸಗಳನ್ನು ಬಳಸಿದ್ದರೆ, ಶಿಲಾಶಾಸನಗಳಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳನ್ನು ಸಮಯೋಚಿತವಾಗಿ ಬಳಸಲಾಗಿದೆ. ಇವರ ಶಾಸನಗಳು ಶಕ ವರ್ಷಗಳಲ್ಲಿರುವುದರಿಂದ ಕಾಲಮಾನವನ್ನು ನಿರ್ಧರಿಸುವಲ್ಲಿ ಸಾತವಾಹನ, ಆದಿ ಗಂಗ–ಕದಂಬರ ಶಾಸನದಲ್ಲಿ ಕಾಣುವ ತೊಂದರೆಗಳು ಇವುಗಳಲ್ಲಿಲ್ಲ. ಇವರ ಶಾಸನಗಳಲ್ಲಿ ಇದುವರೆಗೆ ತಿಳಿದ ಮೊಟ್ಟಮೊದಲನೆಯದು ಶಕವರ್ಷ 465ರ (ಪ್ರ.ಶ.543) ಒಂದನೆಯ ಪುಲಕೇಶಿ ಶಾಸನ. ಇವನು ಬಾದಾಮಿಯ ಅಧಿಷ್ಠಾನದಲ್ಲಿ ಒಂದು ಬಲವಾದ ಕೋಟೆಯನ್ನು ಕಟ್ಟಿಸಿದ ವಿಷಯ ಇದರಲ್ಲಿದೆ. ಕರ್ನಾಟಕದಲ್ಲಿ ಶಕವರ್ಷವನ್ನು ಬಳಸಿದ ಶಾಸನಗಳಲ್ಲಿ ಇದು ಮೊದಲನೆಯದು. ಬಾದಾಮಿ ಮೂರನೆಯ ಗುಹಾದೇವಾಲಯದಲ್ಲಿಯ ಒಂದನೆಯ ಕೀರ್ತಿವರ್ಮನ ಕಾಲದ ಶಾಸನವು ಅಲ್ಲಿಯ ಅದ್ಭುತ ಗುಹಾ ವೈಷ್ಣವ ದೇವಾಲಯವನ್ನು ಈ ಅರಸನ ತಮ್ಮ ಮಂಗಳೇಶನು ತನ್ನ ಅಣ್ಣನ ಶ್ರೇಯಸ್ಸಿಗೋಸ್ಕರ ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಇದರ ಜೊತೆಗೆ ಒಂದು ಅಪರೂಪದ ಗಮನಾರ್ಹ ಸಂಗತಿ ಇದೆ; ಮಂಗಳೇಶನು ತಾನು ದೇವಾಲಯವನ್ನು ನಿರ್ಮಿಸಿದ ಪುಣ್ಯ ತನ್ನ ಅಣ್ಣನಿಗೆ ಹೋಗಬೇಕೆಂದು ವ್ಯಕ್ತಪಡಿಸಿದ ಸದಿಚ್ಛೆ. ಮಂಗಳೇಶನ ಮಹಾಕೂಟ ಸ್ತಂಭಶಾಸನದಲ್ಲಿ ಒಂದು ಶ್ಲೋಕ ಕಾಳಿದಾಸನ ರಘುವಂಶ ಮಹಾಕಾವ್ಯದ ಒಂದು ಶ್ಲೋಕದ ಅನುಕರಣೆ ಯಂತಿದೆ. ಅತಿ ಮುಖ್ಯ ಶಾಸನವೆಂದರೆ ಐಹೊಳೆಯ ಮೇಗುತಿಯಲ್ಲಿಯ ಚಾಳುಕ್ಯ ಪ್ರಶಸ್ತಿ. ಇದನ್ನು ರಚಿಸಿದವನು ಇಮ್ಮಡಿ ಪುಲಕೇಶಿ ಆಸ್ಥಾನದಲ್ಲಿಯ ಜೈನ ಕವಿ ರವಿಕೀರ್ತಿ. ತನ್ನ ಕಾವ್ಯ ಪ್ರತಿಭೆಯಲ್ಲಿ ಮಹಾಕವಿಗಳಾದ ಕಾಳಿದಾಸ, ಭಾರವಿ ಮೊದಲಾದ ಕವಿಗಳಿಗೆ ತಾನೇನೂ

ಕಡಿಮೆಯಿಲ್ಲವೆಂದು ಯೋಗ್ಯವಾಗಿಯೇ ಆತ್ಮವಿಶ್ವಾಸದಿಂದ ಹೇಳಿಕೊಂಡಿದ್ದಾನೆ. ನಿಜವಾಗಿಯೂ ಈ ಪ್ರಶಸ್ತಿ ಒಂದು ಉತ್ತಮ ಸಂಸ್ಕೃತ ಕಾವ್ಯ. ಇಲ್ಲಿ ಇನ್ನೊಂದು ಮುಖ್ಯ ವಿಷಯವಿದೆ. ರಘುವಂಶ ಮೊದಲಾದ ಮಹಾಕಾವ್ಯಗಳನ್ನು, ಅಭಿಜ್ಞಾನ ಶಾಕುಂತಲ ಮೊದಲಾದ ನಾಟಕಗಳನ್ನು ರಚಿಸಿದ ಮಹಾಕವಿ ಕಾಳಿದಾಸನ ಕಾಲದ ಬಗ್ಗೆ ಗಂಭೀರ ವಿವಾದವಿದೆ. ಈ ದಿಶೆಯಲ್ಲಿ ಈ ಶಾಸನ ಈ ಕಾಲಮಾನದ ನಿರ್ಣಯ ವಿಚಾರದಲ್ಲಿ ಇವನು 6ನೆಯ ಶತಮಾನಕ್ಕಿಂತ ಪೂರ್ವದವನೆಂಬ ಒಂದು ಸ್ಪಷ್ಟ ಸೂಚನೆಯನ್ನು ಕೊಡುತ್ತದೆ. ಇದು ಚಾಳುಕ್ಯ ವಂಶಾವಳಿಯನ್ನು ಮತ್ತು ತನ್ನ ಪ್ರಭು ಇಮ್ಮಡಿ ಪುಲಕೇಶಿಯ ದಿಗ್ವಿಜಯವನ್ನು ಸ್ವಾರಸ್ಯಕರವಾಗಿ ವರ್ಣಿಸುತ್ತದೆ. ಇನ್ನೊಂದು ಸ್ವಾರಸ್ಯಕರ ಸಂಗತಿಯೆಂದರೆ ಮಹಾಭಾರತ ಯುದ್ಧವಾದ ವರ್ಷದ ಜೊತೆಗೆ ತತ್ಸಮಾನ ಶಕವರ್ಷವನ್ನು ಉಪಯೋಗಿಸಿರುವುದು. ಅಲಂಪುರದಲ್ಲಿಯ ಬಾಲಬ್ರಹ್ಮೇಶ್ವರ ದೇವಾಲಯದ ವಿಜಯಾದಿತ್ಯನ ಶಾಸನ ಅಪರೂಪವಾಗಿದೆ. ಇದರಲ್ಲಿಯ 74 ಶ್ಲೋಕಗಳಲ್ಲಿ 22 ಶ್ಲೋಕಗಳು ಈ ಅರಸನ ಹುಟ್ಟು, ಬಾಲ್ಯ, ಯುವರಾಜ್ಯತ್ವ ಮತ್ತು ಉಳಿದ ಭಾಗದಲ್ಲಿ ಇವನ ಆಳಿಕೆಯನ್ನು ಮತ್ತು ಇವನು ಮಾಡಿದ ಅನೇಕ ಜನೋಪಕಾರಿ ಕಾರ್ಯಗಳನ್ನು ವರ್ಣಿಸುತ್ತವೆ. ಈ ವಂಶದ ಪ್ರಬಲ ಅರಸುಗಳಲ್ಲಿ ಕೊನೆಯವನಾದ ಇಮ್ಮಡಿ ವಿಕ್ರಮಾದಿತ್ಯ ಪ್ರಪ್ರಥಮವಾಗಿ ಸು.740–42ರಲ್ಲಿ ಕಾಂಚಿಯನ್ನು ಗೆದ್ದು ರಾಜಸಿಂಹೇಶ್ವರ ದೇವಾಲಯವನ್ನು ದರ್ಶನ ಮಾಡಿ ಅದರ ಸಂಪೂರ್ಣ ಸಂಪತ್ತನ್ನು ಆ ದೇವಾಲಯದ ಧಾರ್ಮಿಕ ಕಾರ್ಯಕ್ರಮಗಳಿಗೆ ಹಿಂತಿರುಗಿಸಿ ಕೊಟ್ಟ ವಿಷಯವನ್ನು ಆ ದೇವಾಲಯದ ಕದಂಬ ಮೇಲಿನ ಕನ್ನಡ ಶಾಸನ ತಿಳಿಸುತ್ತದೆ. ಪಟ್ಟದಕಲ್ಲಿನಲ್ಲಿಯ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯದ ಶಾಸನಗಳಲ್ಲಿ ಆ ದೇವಾಲಯವನ್ನು ಕಟ್ಟಿಸಿದ ಇಮ್ಮಡಿ ವಿಕ್ರಮಾದಿತ್ಯನ ಪಟ್ಟಮಹಿಷಿಯರಾದ ಲೋಕ ಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ಮತ್ತು ಈ ದೇವಾಲಯವನ್ನು ನಿರ್ಮಿಸಿದ ಮಹಾಶಿಲ್ಪಿಗಳು ಮತ್ತು ಅವರಿಗೆ ಮಾಡಿದ ಸನ್ಮಾನ ಮೊದಲಾದ ವಿಷಯಗಳಿವೆ.

ಇಂಥ ಪ್ರಶಸ್ತಿ ಶಾಸನಗಳಲ್ಲದೆ ಈ ಎಲ್ಲ ಸ್ಥಳಗಳಲ್ಲಿ ಶಿಲ್ಪಿಗಳ, ದಾನಿಗಳ ಹೆಸರುಗಳನ್ನು ಸೂಚಿಸುವ ಸಣ್ಣ ಸಣ್ಣ ಶಾಸನ ಫಲಕಗಳು, ಪಟ್ಟಿಗಳು ಇವೆ. ಇವುಗಳಲ್ಲಿ ಮಾಲಗಿತ್ತಿ ಶಿವಾಲಯವನ್ನು ಕಟ್ಟಿದ ಆರ್ಯಮಿಂಚಿ ಉಪಾಧ್ಯಾಯ, ಐಹೊಳೆಯಲ್ಲಿಯ ಹುಚ್ಚಪ್ಪಯ್ಯನ ಗುಡಿಯನ್ನು ಕಟ್ಟಿದ ನರಸೊಬ್ಬ ಮೊದಲಾದ ಹೆಸರಾಂತ ವಾಸ್ತುಶಿಲ್ಪಿಗಳ ಹೆಸರುಗಳು ಗಮನಾರ್ಹ.

ಕೊನೆಯದಾಗಿ ಬಾದಾಮಿಯಲ್ಲಿಯ ಕಪ್ಪೆ ಅರಭಟ್ಟ ಪ್ರಶಸ್ತಿಯನ್ನು ಗಮನಿಸಬೇಕು. ಇದರ ಆದಿಯಲ್ಲಿಯ ಶ್ಲೋಕ ಸಂಸ್ಕೃತ ಉಳಿದ ಪ್ರಧಾನಭಾಗ ಪೂರ್ಣ ಕನ್ನಡದಲ್ಲಿ ತ್ರಿಪದಿ ಛಂದಸ್ಸಿನಲ್ಲಿದೆ. ಇದು ತ್ರಿಪದಿ ಛಂದಸ್ಸಿನ ಬಳಕೆಯ ಪ್ರಾಚೀನತಮ ಉದಾಹರಣೆ. ಚಾಳುಕ್ಯ ಕಾಲದ ಕನ್ನಡ ಕಾವ್ಯಕ್ಕೆ ಒಂದು ಉತ್ತಮ ಉದಾಹರಣೆ. (ಎಸ್.ವಿ.ಪಿ.)

**ಸ್ಥಳೀಯ ಪುರಾಣ ಕಥೆಗಳು:** ಮೌರ್ಯ–ಸಾತವಾಹನ ಕಾಲದಿಂದ ಚಾಳುಕ್ಯ ಕಾಲದವರೆಗಿನ ಅವಧಿಯ ಯಾವುದೇ ಜನಪದ ಗೀತೆಗಳಾಗಲಿ, ಕಥೆಗಳಾಗಲಿ ಉಳಿದು ಬಂದಿಲ್ಲ. ಆದರೆ ಕೆಲವು ಐತಿಹಾಸಿಕ ಸತ್ಯಗಳನ್ನು ಒಳಗೊಂಡ ಸಾಮಾನ್ಯ ಸ್ಥಳೀಯ ಕಥೆಗಳು ಪರಂಪರಾಗತಗಳಾಗಿ ಬಂದಿವೆ. ಅವು ಈ ಕಾಲದ ಕೆಲವು ಪ್ರಮುಖವಾದ ಸ್ಥಳಗಳ ಬಗ್ಗೆ ದಂತಕಥೆಗಳಾಗಿವೆ. ಉದಾಹರಣೆಗೆ ಪಶ್ಚಿಮ ಕಡಲ ತೀರ ಭಾಗದಲ್ಲಿ ಪ್ರಚಲಿತ ಪೌರಾಣಿಕ ಪರಶುರಾಮನ ಕಥೆ; ಹಂಪಿ ಮತ್ತು ಸೊಂಡೂರಿನ ಹತ್ತಿರವಿರುವ ಕುಮಾರಸ್ವಾಮಿಬೆಟ್ಟ, ರಾಮಾಯಣದ ಕಿಷ್ಕಿಂಧ ಮತ್ತು ಕಾರ್ತಿಕೇಯ ವನ ಎಂಬ ಪ್ರತೀತಿ; ಚಿತ್ರದುರ್ಗ ಪ್ರದೇಶ ಮಹಾಭಾರತದ ಹಿಡಿಂಬಾಸುರನ ಪ್ರದೇಶವೆಂಬ ದಂತಕಥೆ; ಕಾವೇರಿ ಮೇಲ್ದಂಡೆ ಪ್ರದೇಶಗಳಲ್ಲಿ ಪ್ರಚಲಿತ ಅಗಸ್ತ್ಯ ಮತ್ತು ಲೋಪಾಮುದ್ರಾ ಕಥೆ ಮೊದಲಾದವು. ಇವುಗಳಲ್ಲಿ ಕೆಲವು ಕಥೆಗಳು ಸ್ಕಾಂದಪುರಾಣದ ಒಂದು ಭಾಗವಾದ ಸಹ್ಯಾದ್ರಿಖಂಡದಲ್ಲಿ ಇವೆ. ಇದು ಸು.13–14ನೆಯ ಶತಮಾನದಲ್ಲಿ ಸ್ಕಾಂದಪುರಾಣಕ್ಕೆ ಸೇರಿಸಲಾಗಿದೆ ಎಂದು ಮತ್ತು ಆಯಾಯ ಕಾಲದಲ್ಲಿ ಇಂಥ ಕಥೆಗಳನ್ನು ಕಲ್ಪಿಸಿಕೊಂಡು ತಮ್ಮ ತಮ್ಮ ಪ್ರದೇಶದ ಮಹತ್ತ್ವವನ್ನು ಹೆಚ್ಚಿಸಲೋಸುಗ ಇಂಥ ಕಥೆಗಳನ್ನು ಕಟ್ಟಿ ಪುರಾಣದಲ್ಲಿ ಸೇರಿಸಲಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಆದರೆ ಇಂಥ ಸ್ಥಳಗಳಲ್ಲಿ ನಡೆಸಿದ ಪುರಾತತ್ತ್ವ ಮತ್ತು ವೈಜ್ಞಾನಿಕ ಅಧ್ಯಯನಗಳು ಈ ಕಥೆಗಳಲ್ಲಿರುವ ಕೆಲವು ಅಂಶಗಳು ಐತಿಹಾಸಿಕ ಸತ್ಯವೆಂದು ಸೂಚಿಸುತ್ತವೆ. ಈ ಕಥೆಗಳು ಬಹಳ ಪುರಾತನವಾಗಿದ್ದು, ಮಧ್ಯಯುಗೀನ ಕಾಲದ ಕಾಲ್ಪನಿಕ ಕಥೆಗಳಲ್ಲ. ಪಶ್ಚಿಮತೀರ ಕಡಲ ಪ್ರದೇಶದಲ್ಲಿ ನಡೆಸಿದ ವೈಜ್ಞಾನಿಕ ವಿಶ್ಲೇಷಣೆ ಮತ್ತು ಪುರಾತತ್ತ್ವ ಶೋಧನೆಗಳು ಸು. 10 ಸಾವಿರದಿಂದ 1 ಲಕ್ಷ ಅಂತರದಲ್ಲಿ ಅರಬ್ಬೀ ಸಮುದ್ರದ ಮಟ್ಟದಲ್ಲಿ 2 ಸಲ ಏರಿಳಿತವಾಗಿದೆಯೆಂದು ಖಚಿತವಾಗಿ ತಿಳಿದುಬಂದಿದೆ. ಕೊನೆಯ ಬಾರಿ ಸಮುದ್ರದ ಮಟ್ಟ ಇಳಿದ ಅನಂತರ ಶಿಲಾ ಇಲ್ಲವೆ ಶಿಲಾ ತಾಮ್ರಯುಗ ಜನರು ಈ ಭಾಗಕ್ಕೆ ಬಂದು ನೆಲೆಸಿದರು ಮತ್ತು ಇವರು ವೈಚಾರಿಕತೆಯಲ್ಲಿ ಉದಾತ್ತಮಟ್ಟವನ್ನು ಹೊಂದಿ ಭವ್ಯಪರಂಪರೆಯನ್ನು ಹೊಂದಿದ್ದವರಾಗಿ ಕಾಣುತ್ತದೆ ಎಂದು ಪರಶುರಾಮನ ಕಥೆಯಲ್ಲಿ ಸೂಚಿತವಾದಂತಿದೆ. ಇದನ್ನು ಪುಷ್ಟೀಕರಿಸುವಂತೆ ಪುರಾತತ್ತ್ವ ಅನ್ವೇಷಣೆಯಲ್ಲಿ ಆದಿ ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ ಉಪಕರಣಗಳುಳ್ಳ ನೆಲೆಗಳನ್ನು ಮತ್ತು ಸೀತಾನದಿಯ ಬಯಲಿನಲ್ಲಿ ಅಲ್ಲಲ್ಲಿ ನವಶಿಲಾಯುಗದ ಕೊಡಲಿಗಳನ್ನು ಶೋಧಿಸಲಾಗಿದೆ. ಸೀತಾನದಿ ಮೇಲ್ದಂಡೆಯಿಂದ ಘಟ್ಟದ ಮೇಲೆ ಬಂದರೆ ಮೇಗರವಳ್ಳಿ, ತೀರ್ಥಹಳ್ಳಿ ಹತ್ತಿರ ಎಡೆಹಳ್ಳಿ ಮೊದಲಾದೆಡೆ ನೂತನ ಶಿಲಾಯುಗದ ಕೊಡಲಿ ಮತ್ತು ನೆಲೆ ಕಂಡುಬಂದಿವೆ. ತೀರ್ಥಹಳ್ಳಿ ಪ್ರದೇಶದಲ್ಲಿಯೇ ಪುರಾಣ ಪುರುಷ ಪರಶುರಾಮನು ನಿಂತು ಸಮುದ್ರವನ್ನು ದೂರ ಸರಿಸುವುದಕ್ಕೋಸ್ಕರ ಕೊಡಲಿಯನ್ನು ಎಸೆದನೆಂದು ಪ್ರತೀತಿ ಮತ್ತು ಈ ಪರಶುರಾಮ ಕಥೆಯು ಕನಿಷ್ಠ 2 ಸಾವಿರ ವರ್ಷಗಳಷ್ಟಾದರೂ ಪ್ರಾಚೀನ. ಮಹಾಕವಿ ಕಾಳಿದಾಸನ ಮಹಾಕಾವ್ಯ ರಘುವಂಶದಲ್ಲಿ ಈ ಘಟನೆಯನ್ನು ಉಪಮಾಲಂಕಾರದಲ್ಲಿ ಬಳಸಲಾಗಿದೆ. ಹೀಗೆಯೇ ಕಿಷ್ಕಿಂಧಾನಗರದ ಸಂಕ್ಷಿಪ್ತ ವರ್ಣನೆಯನ್ನು ಶಿರಸಂಗಿ (ಬೆಳಗಾವಿ) 1936ರ ಶಾಸನದಲ್ಲಿಯೂ ಉದ್ಧರಿಸಲಾಗಿದೆ. 8 ಮತ್ತು 10 ನೆಯ ಶತಮಾನದ ಪ್ರಸಿದ್ಧ ಪಾರ್ವತಿ ಮತ್ತು ಕಾರ್ತಿಕೇಯ ದೇವಾಲಯಗಳುಳ್ಳ ಕುಮಾರಸ್ವಾಮಿ ಬೆಟ್ಟವೇ ಕಾರ್ತಿಕೇಯವನ ಎಂಬುದು ಅಲ್ಲಿಯ ಮತ್ತು ಸಮೀಪದ ಕುಡತಿನಿಯ ಶಾಸನಗಳಿಂದಲೂ ಶಿಲ್ಪಗಳಿಂದಲೂ ಸ್ಪಷ್ಟವಾಗಿದೆ.

ರಾಮಾಯಣದ ಕಿಷ್ಕಿಂಧಾ ಕಾಂಡದಲ್ಲಿ ಹೇಳಿದಂತೆ, ರಾಮ–ಲಕ್ಷ್ಮಣರು ಋಷಿಗಳ ಮಾತಿನಂತೆ ಕಾರ್ತಿಕೇಯ ದೇವಾಲಯಕ್ಕೆ ಬಂದು ದೇವರನ್ನು ದರ್ಶನ ಮಾಡಿದಾಗ, ಕಾರ್ತಿಕೇಯ ಸ್ವಾಮಿ ಆ ಸ್ಥಳದಲ್ಲಿ ಸಿದ್ಧವಾಗುವ ಅತ್ಯಂತ ಶ್ರೇಷ್ಠ ಮಟ್ಟದ ಶಸ್ತ್ರಗಳನ್ನು ಸಂಗ್ರಹಿಸಿಕೊಳ್ಳಬೇಕೆಂದೂ ಅವುಗಳಿಂದ ಮಾತ್ರ ಪ್ರಬಲ ಶಸ್ತ್ರಗಳನ್ನುಳ್ಳ ಲಂಕಾಧಿಪತಿ ರಾವಣನನ್ನು ಎದುರಿಸಲು ಸಾಧ್ಯವಾಗುವುದೆಂದೂ ತಿಳಿಸಿದನಂತೆ. ಆ ಪ್ರದೇಶದಲ್ಲಿ ಅತ್ಯಂತ ಉತ್ತಮ ಮಟ್ಟದ ಕಬ್ಬಿಣದ ಅದಿರಿನ ಹೇರಳ ನಿಕ್ಷೇಪವಿದೆ. ಸುತ್ತ ಮುತ್ತಲಿರುವ, ಉದಾಹರಣೆಗೆ ಬ್ರಹ್ಮಗಿರಿಯಲ್ಲಿಯ ಬೃಹತ್‌ಶಿಲಾ ಸಂಸ್ಕೃತಿಯ ಕಂಡಿಕೋಣೆ ಗೋರಿಗಳಲ್ಲಿ ಹಲವು ಪ್ರಕಾರಗಳ ಅಂದರೆ ಈಟಿ, ಕತ್ತಿ, ಕಠಾರಿ, ಬಾಣದ ಮೊನೆ ಮೊದಲಾಗಿ ಅಧಿಕ ಸಂಖ್ಯೆಯಲ್ಲಿ ಶಸ್ತ್ರಗಳು ದೊರೆತಿವೆ. ಹಂಪಿಯ ಸಮೀಪ ಹಿರೇಬೆನಕಲ್ಲು ಗುಡ್ಡಗಳಲ್ಲಿಯ ಸಮಕಾಲೀನ ವರ್ಣಚಿತ್ರಗಳ ಗವಿಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದ ಕುದುರೆ ಸವಾರರಿರುವುದು ಗಮನಾರ್ಹ. ಇವೆಲ್ಲವನ್ನು ವ್ಯವಸ್ಥಿತವಾಗಿ ಸಮನ್ವಯ ಮಾಡಿದಾಗ ಕಾರ್ತಿಕೇಯ ವನದ ಭಾಗದಲ್ಲಿ ಪ್ರಾಚೀನ ಕಾಲದಲ್ಲಿಯ ಉತ್ತಮ ತರಗತಿಯ ಕಬ್ಬಿಣ/ಉಕ್ಕಿನ ಶಸ್ತ್ರಗಳ ತಯಾರಿಕೆ ದೊಡ್ಡ ಪ್ರಮಾಣದಲ್ಲಿ ಆಗುತ್ತಿದ್ದು, ಅವುಗಳು ಗುಣಮಟ್ಟಕ್ಕೆ ಹೆಸರುವಾಸಿಯಾಗಿರಬೇಕು. ಆದ್ದರಿಂದಲೇ ರಾಮಾಯಣದ ಮಹಾಕವಿಯೂ ಮೇಲೆ ಹೇಳಿದಂತೆ ವರ್ಣಿಸಿರಬೇಕು.

ಆದ್ದರಿಂದ ಇಂಥ ಕಥೆಗಳು ಆಯಾಯ ಪ್ರದೇಶದಲ್ಲಿಯ ಪುರಾತತ್ತ್ವ ಅವಶೇಷಗಳನ್ನು ಸರಿಯಾಗಿ ಅರ್ಥೈಸಲು ಮತ್ತು ಇವುಗಳ ಆಧಾರದ ಮೇಲೆ ಆಯಾಯ ಪ್ರದೇಶದ ಪ್ರಾಚೀನ ಜನರ ಇತಿಹಾಸ ಮತ್ತು ಸಂಸ್ಕೃತಿಯನ್ನು ಪುನರ್ರಚನೆಗೋಸ್ಕರ ಪರಿಶೀಲಿಸುವಷ್ಟು ಮಹತ್ತ್ವದ್ದಾಗಿವೆ. ಈ ಬಗೆಯ ಅಧ್ಯಯನ ಈಚೆಗೆ ಪ್ರಾರಂಭವಾಗಿದ್ದು ನಿರಂತರವಾಗಿ ನಡೆಯಬೇಕಾಗಿದೆ. (ಎ.ಎಸ್.)

**ಆಕ್ಟ್ ಆಫ್ ಸೆಟ್ಲ್‌ಮೆಂಟ್:** 1701ರಲ್ಲಿ ವಾರಸುದಾರತ್ವ ಕುರಿತಂತೆ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಅಂಗೀಕೃತವಾದ ಬಹುಮುಖ್ಯ ಕಾಯಿದೆ. ಇದರ ಪ್ರಕಾರ, ದೊರೆ ವಿಲಿಯಂಗಾಗಲಿ ವಾರಸುದಾರಳಾಗಿದ್ದ ರಾಜಪುತ್ರಿ ಆನ್‌ಳಿಗಾಗಲಿ ಮಕ್ಕಳಾಗದಿದ್ದರೆ ಮೊದಲನೆಯ ಜೇಮ್ಸ್‌ನ ಮೊಮ್ಮಗಳಾದ ಹ್ಯಾನೋವರ್‌ನ ರಾಜಪುತ್ರಿ ಸೋಫಿಯ ಅಥವಾ ಅವಳ ಸಂತತಿಯವರು ಇಂಗ್ಲೆಂಡಿನ ಸಿಂಹಾಸನಕ್ಕೆ ಉತ್ತರಾಧಿಕಾರಿಗಳೆಂದು ತೀರ್ಮಾನವಾಯಿತು. ಇವರು ಪ್ರಾಟೆಸ್ಟಂಟರೇ ಆಗಿರಬೇಕೆಂಬ ನಿಯಮ ಕೂಡ ಅದಕ್ಕೆ ಸೇರಿತ್ತು. ಇಂಗ್ಲೆಂಡಿನ ದೊರೆ ಪ್ರಾಟೆಸ್ಟಂಟ್ ಧರ್ಮಾವಲಂಬಿಯಾಗಿರಬೇಕು. ಅವನು ಪಾರ್ಲಿಮೆಂಟಿನ ಅನುಮತಿಯಿಲ್ಲದೆ ದೇಶದಿಂದ ಹೊರಗೆ ಹೋಗಕೂಡದು. ಹೊರದೇಶಗಳ ರಕ್ಷಣೆಗಾಗಿ ಇಂಗ್ಲೆಂಡಿನ ಸೈನ್ಯವನ್ನು ಉಪಯೋಗಿಸುವುದಕ್ಕೆ ಪಾರ್ಲಿಮೆಂಟಿನ ಅನುಮತಿ ಆವಶ್ಯಕ. ದೊರೆಯಿಂದ ನಿಯಮಿತನಾದವರಿಗೆ ಅಥವಾ ವೇತನ ಪಡೆಯುತ್ತಿರುವವರಿಗೆ, ಪಾರ್ಲಿಮೆಂಟಿನಲ್ಲಿ ಕುಳಿತುಕೊಳ್ಳಲು ಅಧಿಕಾರವಿಲ್ಲ– ಇವು ಇತರ ಷರತ್ತುಗಳು. ಜಾಕೊಬೈಟ್ ಧರ್ಮೀಯರು ನಡೆಸುತ್ತಿದ್ದ ಒಳಸಂಚುಗಳು, ದೊರೆ ವಿಲಿಯಮ್‌ಗಾಗಲಿ ಆನ್‌ಗಾಗಲಿ ಸಂತಾನವಿಲ್ಲದ್ದು, ವಿಲಿಯಮ್ ನಡೆಸುತ್ತಿದ್ದ ಹಾಲೆಂಡ್ ಪರ ರಾಜನೀತಿ ಇವು ಈ ಕಾಯಿದೆ ರಚನೆಗೆ ಮುಖ್ಯ ಕಾರಣಗಳು. (ಜಿ.ಎನ್.ಎಸ್.)

**ಆಕ್ಸಸ್ ನಾಗರಿಕತೆ:** ತುರ್ಕ್‌ಮೆನಿಸ್ತಾನ, ಉತ್ತರ ಅಫ್ಘಾನಿಸ್ತಾನ, ದಕ್ಷಿಣ ಉಜ್ಬೆಕಿಸ್ತಾನ ಮತ್ತು ಪಶ್ಚಿಮ ತಜಿಕಿಸ್ತಾನ ಪ್ರದೇಶಗಳಲ್ಲಿ ಪ್ರಸರಿಸಿದ್ದ ನಾಗರಿಕತೆ. ಮಧ್ಯ ಏಷ್ಯದ ಆಕ್ಸಸ್ ನದಿ ಪ್ರದೇಶದಲ್ಲಿದ್ದ ಪ್ರ.ಶ.ಪೂ.ಸು.2200–1700ರ ಕಾಲದ ಕಂಚಿನ ಯುಗದ ಸಂಸ್ಕೃತಿಗಳನ್ನು ಬಿ.ಎಂ.ಎ.ಸಿ. (ಬ್ಯಾಕ್ಟ್ರಿಯ ಮಾರ್ಜಿಯಾನ ಆರ್ಕಿಯಾಲಜಿಕಲ್ ಕಾಂಪ್ಲೆಕ್ಸ್) ಎಂಬ ಸಂಕ್ಷಿಪ್ತ ಹೆಸರಿನಲ್ಲಿ ಕರೆಯಲಾಗುತ್ತದೆ. ಇದರ ಕೇಂದ್ರಭಾಗ ಅಮುದರ್ಯ (ಆಕ್ಸಸ್). ಈ ಪ್ರದೇಶದ ಕಂಚುಯುಗದ ಸಂಸ್ಕೃತಿಗಳನ್ನು ಶೋಧಿಸಿ ಇವುಗಳ ಸಂಕೀರ್ಣಕ್ಕೆ ರಷ್ಯದ ಪುರಾತತ್ತ್ವಜ್ಞರಾದ ವಿಕ್ಟರ್ ಸರಿಯನಿದಿ ಈ ಹೆಸರು ಕೊಟ್ಟರು. ಈ ನೆಲೆಗಳು ಅಂಡ್ರೊನೊವೊ, ಯಜ್ ಸಂಸ್ಕೃತಿಗಳು ಮತ್ತು ಬಿ.ಎಂ.ಎ.ಸಿ. ಬಹುಮಟ್ಟಿಗೆ ವಲಸೆ ಹೋಗುತ್ತಿದ್ದ ಇಂಡೊ–ಇರಾನಿನ ಜನ ಸಮುದಾಯದವರೆಂದು ತಿಳಿಯಲಾಗಿದೆ. ನಮಜ್ಗ್‌ದೆಪೆ, ಅಲ್ತ್ಯನ್–ದೆಪೆ, ಕೆಲ್ ಬರ್ಜಿನ್, ದಶ್ಲಿ ಬಅಸಿಸ್, ತೊಹೊಲೊಕ್, ಕೆಲ್ಲೆಲ್ಲಿ, ಸಪೆಲ್ಲಿ ಮತ್ತು ದ್‌ಜರ್ಕುತನ್ ಮುಂತಾದ ನೆಲೆಗಳ ಉತ್ಖನನಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳ ಶೋಧನೆಯಾಗಿದೆ. ಈ

ನೆಲೆಗಳ ಸುತ್ತಲೂ ರಕ್ಷಣಾ ಗೋಡೆ ಮತ್ತು ಮಹಾದ್ವಾರಗಳಿವೆ. ಈ ವಿಶಿಷ್ಟ ಸಂಸ್ಕೃತಿ ಹುಟ್ಟಿದ ಮತ್ತು ಅಳಿದು ಹೋದ ವಿಷಯಗಳಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಸಂಸ್ಕೃತಿಯ ಮುದ್ರೆಗಳಂತವು ಸಿಂಧೂ–ಸರಸ್ವತಿ ನಾಗರಿಕತೆ, ಇರಾನ್ ಪ್ರಸ್ಥಭೂಮಿ, ಪರ್ಶಿಯನ್ ಕೊಲ್ಲಿಯಲ್ಲಿ ದೊರೆತಿವೆ. ಈ ಸಂಸ್ಕೃತಿಯ ಜನರು ನೀರಾವರಿಯಿಂದ ವ್ಯವಸಾಯ ಮಾಡಿ ಗೋದಿ ಮತ್ತು ಬಾರ್ಲಿ ಬೆಳೆಯುತ್ತಿದ್ದರು. ಇವರು ಸಮಕಾಲೀನ ಸ್ಟೆಪ್ಪಿ ಪ್ರದೇಶದ ಉತ್ತರದಿಶೆಯ ಆಂಡ್ರೊನೊವೊ ಸಂಸ್ಕೃತಿಯ ಜನರೊಡನೆ ಸಂಪರ್ಕ ಇಟ್ಟುಕೊಂಡಿದ್ದರು. ಈ ಸಂಸ್ಕೃತಿಯ ಭವ್ಯ ಕಟ್ಟಡಗಳಲ್ಲದೆ ಕಂಚಿನ ಉಪಕರಣಗಳು, ಮಣ್ಣಾತ್ರೆಗಳು ಮತ್ತು ಅರೆಪ್ರಶಸ್ತ ಕಲ್ಲಿನ ಅಲಂಕರಣ ಮಣಿಗಳು ವಿಶಿಷ್ಟವಾಗಿವೆ.

2001ರಲ್ಲಿ ತುರ್ಕ್‌ಮೆನಿಸ್ತಾನ ಉತ್ಖನನದಲ್ಲಿ ದೊರೆತ ಒಂದು ಚಿಕ್ಕ ಕಲ್ಲಿನ ಮುದ್ರಿಕೆಯಲ್ಲಿ ಜ್ಯಾಮಿತಿಯ ಗುರುತುಗಳಿರುವುದರಿಂದ ಈ ಜನರಲ್ಲಿ ಬಹುಮಟ್ಟಿಗೆ ಬರೆವಣಿಗೆ ಇತ್ತೆಂದು ಅಭಿಪ್ರಾಯವಿದೆ. ಆದರೆ ಈ ಎಲ್ಲ ಅವಶೇಷಗಳು ಸಿರಿಯ–ಅನಟೊಲಿಯ, ಮೆಸೊಪೊಟೇಮಿಯ, ಪರ್ಶಿಯ ಕೊಲ್ಲಿಯಲ್ಲಿ ದೊರೆತ ಮುದ್ರಿಕೆಗಳಿಗಿಂತ ಭಿನ್ನವಾಗಿದೆ. ಅಲ್‌ತ್ಯಾನ್–ದೆಪೆಯಲ್ಲಿ ದೊರೆತ ಚಿನ್ನದ ಗೂಳಿಯ ತಲೆ ಗಮನಾರ್ಹ. ಈ ಜನಸಮುದಾಯ ಬಹುಮಟ್ಟಿಗೆ ಪ್ರೊಟೊ–ಇಂಡೊ–ಯುರೋಪಿಯನ್ ಜನಸಮುದಾಯದಿಂದ ಬೇರ್ಪಟ್ಟು ಇಂಡೊ–ಇರಾನ್ ಜನರೆಂದು ಅಭಿಪ್ರಾಯಪಡಲಾಗಿದೆ. ಉತ್ಖನನಕಾರರಾದ ಸರಿಯನಿದಿ ಈ ಜನಸಮುದಾಯದ ಪ್ರಾಚ್ಯಾವಶೇಷಗಳಲ್ಲಿ ಪೂರ್ವಭಾವಿ ಹಂತದ ಜೊರಾಷ್ಟ್ರೀಯ ವಸ್ತುಗಳು ಮತ್ತು ಧಾರ್ಮಿಕ ವಿಧಿಯ ಅವಶೇಷಗಳನ್ನು ಗುರುತಿಸಿದ್ದಾರೆ. ಆದರೂ ಈ ರೀತಿ ಭಾಷೆ ಮತ್ತು ಜನಸಮುದಾಯವನ್ನು ಗುರುತಿಸಿರುವುದು ಚರ್ಚಾಸ್ಪದವಾಗಿದೆ. (ಎ.ಎಸ್.;ಎನ್.ಎಲ್.)

**ಆಕ್ಸಿರಿಂಕಸ್ ಪೆಪಿರಸ್:** ಈಜಿಪ್ಟ್ ದೇಶದ ಆಕ್ಸಿರಿಂಕಸ್ ಎಂಬಲ್ಲಿ 1897–1903ರ ನಡುವೆ ನಡೆಸಲಾದ ಉತ್ಖನನದಲ್ಲಿ ಈಜಿಪ್ಟ್ ದೇಶದ ಇತಿಹಾಸದ ಮೇಲೆ ವಿಶೇಷ ಬೆಳಕು ಬೀರುವ ಹಲವಾರು ವಲ್ಕಲೇಖಗಳು (ಪೆಪ್ಯೆರಿ) ಬೆಳಕಿಗೆ ಬಂದವು. ಈ ಎಲ್ಲ ದಾಖಲೆಗಳನ್ನು 1903ರಲ್ಲಿ ಬರ್ನಾರ್ಡ್ ಗ್ರೆನ್‌ಫೆಲ್ ಮತ್ತು ಆರ್ಥರ್ ಹಂಟ್ ಎಂಬುವರು ಆಕ್ಸಿರಿಂಕಸ್ ಪೆಪ್ಯೆರಿ ಎಂಬ ಗ್ರಂಥಮಾಲಿಕೆಯಲ್ಲಿ ಪ್ರಥಮಬಾರಿಗೆ ಪ್ರಕಟಿಸಿದರು. ಈ ದಾಖಲೆಗಳ ಪೈಕಿ ಭಾರತೀಯ ವಿದ್ವಾಂಸರ ಕುತೂಹಲವನ್ನು ಕೆರಳಿಸಿರುವ ಒಂದು ವಲ್ಕಲೇಖ ಕಂಡುಬಂದಿದೆ. ಈ ವಲ್ಕಲೇಖ ಗ್ರೀಕ್ ಪ್ರಹಸನದ ಒಂದು ಭಾಗವಾಗಿದೆ. ಪ್ರಹಸನದ ಕಥಾಭಾಗ ಈ ರೀತಿಯಲ್ಲಿದೆ:

ಭಾರತದ ಸ್ಥಳೀಯ ನಾಯಕನೋರ್ವನು ಖರೀತಿಯಾನ್ ಎಂಬ ಹೆಸರಿನ ಗ್ರೀಕ್ ತರುಣಿಯೋರ್ವಳನ್ನು ಹಿಂದೂ ಸಾಗರ ತೀರದ ದೇವಾಲಯವೊಂದರಲ್ಲಿ ಬಂಧನದಲ್ಲಿಟ್ಟಿರುತ್ತಾನೆ. ಆ ಸಂದರ್ಭ ಖರೀತಿಯಾನ್‌ಳ ಸಹೋದರ ಮತ್ತಾತನ ಸಂಗಡಿಗರು ಆ ಭಾರತೀಯ ನಾಯಕನಿಗೆ ದ್ರಾಕ್ಷಾರಸವನ್ನು ಕುಡಿಸಿ ಅಮಲುಗೊಳಿಸಿ, ಆತ ಮತ್ತಿನಲ್ಲಿದ್ದಾಗ ಖರೀತಿಯಾನ್‌ಳನ್ನು ಬಿಡುಗಡೆಗೊಳಿಸಿ ಕರೆದೊಯ್ಯುತ್ತಾರೆ. ಈ ಪ್ರಹಸನದಲ್ಲಿ ಸ್ಥಳೀಯ ನಾಯಕ ಮತ್ತು ಆತನ ಸಹಚರರು ವಿಚಿತ್ರವಾದ ಭಾಷೆಯೊಂದನ್ನಾಡುತ್ತಿರುವಂತೆ ನಿರೂಪಿಸಲಾಗಿದೆ. ಈ ಭಾಷೆಯನ್ನು ಕುರಿತಂತೆ ಮತ್ತು ಈ ಪ್ರಹಸನದ ಘಟನೆ ನಡೆದಿರುವ ಸ್ಥಳವನ್ನು ಕುರಿತಂತೆ ವಿದ್ವಾಂಸರು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರಸಿದ್ಧ ಭಾರತ ಶಾಸ್ತ್ರಜ್ಞ ಹುಲ್ಷ್‌ರವರು ಈ ಪ್ರಹಸನದಲ್ಲಿ ನಿರೂಪಿತವಾದ ಸ್ಥಳ ಕರ್ನಾಟಕದ ತೀರಪ್ರದೇಶವೆಂದೂ ಅಲ್ಲಿಯ ನಾಯಕ ಮತ್ತು ಆತನ ಸಹಚರರು ಆಡುವ ಭಾಷೆ ಕನ್ನಡವೆಂದೂ ಪ್ರಥಮಬಾರಿಗೆ ತಮ್ಮ ವಾದವನ್ನು ಮಂಡಿಸಿದರು. ಅನಂತರ ಭಾರತೀಯ ವಿದ್ವಾಂಸರಾದ ಶಾಮಾಶಾಸ್ತ್ರಿ, ಗೋವಿಂದಪೈ, ಬಿ.ಎ. ಸಾಲೆತ್ತೂರ್, ಶ್ರೀಕಂಠಶಾಸ್ತ್ರೀ ಮೊದಲಾದವರು ಹುಲ್ಷ್‌ರವರ ಅಭಿಪ್ರಾಯವನ್ನೇ ಎತ್ತಿಹಿಡಿದಿದ್ದಾರೆ. ಇದಕ್ಕೆ ವಿರುದ್ಧವಾಗಿ ಇ.ಪಿ. ರೈಸ್, ಎಲ್.ಡಿ. ಬಾರ್ನೆಟ್ ಮೊದಲಾದವರು ಇಲ್ಲಿ ಬರುವ ಮಾತುಗಳು ಕೇವಲ ಅರ್ಥಹೀನ ಪದ ಪುಂಜಗಳೇ ಹೊರತು ಯಾವುದೇ ಭಾಷೆಯ ಮಾತುಗಳಲ್ಲ ಎಂದು ವಾದಿಸಿದ್ದಾರೆ. ಈ ಮಾತುಗಳು ತುಳು ಭಾಷೆಯವಿರಬಹುದೆಂಬ ಅಭಿಪ್ರಾಯವೂ ಇತ್ತೀಚಿನ ದಿನಗಳಲ್ಲಿ ಕೆಲವರಿಂದ ವ್ಯಕ್ತವಾಗಿದೆ.

ಈ ಪ್ರಹಸನ ಚಾರಿತ್ರಿಕ ಘಟನೆಯೊಂದರ ನಿರೂಪಣೆ ಎಂಬಂತೆ ವಿಶ್ಲೇಷಿಸಿದ್ದಾರೆ. ಆದರೆ ಇದು ಐತಿಹಾಸಿಕ ಘಟನೆಯೊಂದರ ವಸ್ತುನಿಷ್ಠ ನಿರೂಪಣೆಯಲ್ಲ; ಇದೊಂದು ಕಾಲ್ಪನಿಕ ಕಥೆ ಎಂಬ ವಿಚಾರವನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಬೇಕು. ಈ ಪ್ರಹಸನ ಖ್ಯಾತ ಗ್ರೀಕ್ ನಾಟಕಕಾರ ಯುರಿಪಿಡಿಸನ ಇಫಿಜೀನಿಯಾ ಇನ್‌ಟಾರಿಸ್ ಎಂಬ ನಾಟಕದ ಕೀಳು ಅನುಕರಣೆ ಎಂಬುದು ಇಲ್ಲಿ ಗಮನಾರ್ಹ. ಮೇಲಾಗಿ ಲಭ್ಯವಿರುವ ವಲ್ಕಲೇಖವು ಈ ಪ್ರಹಸನದ ಪೂರ್ಣಕೃತಿಯಲ್ಲ. ಬದಲಾಗಿ ಅದರಲ್ಲಿರುವುದು ನಾಟಕದ ಒಂದಿಬ್ಬರು ನಟರು ತಮ್ಮ ಅಭ್ಯಾಸಕ್ಕಾಗಿ ಪ್ರತಿಮಾಡಿಕೊಂಡ ಪ್ರಹಸನದ ಭಾಗಮಾತ್ರ. ಇಲ್ಲಿ ಹಲವಾರು ಅಭಾಸಗಳೂ ನುಸುಳಿಕೊಂಡಿವೆ. 230 ಸಾಲುಗಳನ್ನು ಹೊಂದಿರುವ ಈ ಭಾಗದಲ್ಲಿ 26 ಸಾಲುಗಳಷ್ಟೆ ಭಾರತೀಯ ನಾಯಕ ಸಂಗಡಿಗರ ಭಾಷೆ ಎನ್ನಲಾದ ಮಾತುಗಳಲ್ಲಿವೆ. ವಿಚಿತ್ರವೆಂದರೆ ತನ್ನದೇ ಭಾಷೆಯನ್ನಾಡುವ ಆತ ಕೆಲವು ಬಾರಿ ಶುದ್ಧವಾದ ಗ್ರೀಕ್ ಭಾಷೆಯಲ್ಲಿ ಮಾತನಾಡುತ್ತಾನೆ. ಇನ್ನೊಂದೆಡೆಯಲ್ಲಿ ಗ್ರೀಕ್ ವಿದೂಷಕ ಭಾರತೀಯ ಭಾಷೆಯನ್ನಾಡುತ್ತಾನೆ. ಈ ಪ್ರಹಸನ ಕನ್ನಡ ಅಥವಾ ಇತರ ಯಾವುದೇ ಭಾರತೀಯ ಭಾಷೆ ಪ್ರಚಲಿತವಿಲ್ಲದ ಗ್ರೀಕ್ ಪ್ರದೇಶವಾದ ಅಲೆಗ್ಸಾಂಡ್ರಿಯದಲ್ಲಿ ಪ್ರದರ್ಶನಕ್ಕಾಗಿ ಇರುವ ಭಾಗ ಎಂಬುದು ಗಮನಾರ್ಹ. ಪ್ರಹಸನದ ಎಲ್ಲ ಮಾತುಗಳನ್ನು ಗ್ರೀಕ್ ಲಿಪಿಯಲ್ಲೇ ಬರೆಯಲಾಗಿದೆ. ಅಂದರೆ ಆ ಪಾತ್ರಗಳನ್ನು ಅಭಿನಯಿಸುವವರು ಗ್ರೀಕರೇ ಆಗಿದ್ದಿರಬೇಕು. ಹಾಗಿದ್ದಲ್ಲಿ ಆ ಗ್ರೀಕರಿಗೆ ಕನ್ನಡ ಭಾಷೆಯ ಜ್ಞಾನವಿತ್ತೆಂದು ತಿಳಿಯುವುದು ಸರಿ ಕಾಣುವುದಿಲ್ಲ. ಈ ಪ್ರಹಸನದಲ್ಲಿ ಎರಡು ಸಂದರ್ಭದಲ್ಲಿ ಮಾತ್ರ ಭಾರತದ ಕುರಿತ ಸೂಚನೆಗಳಿವೆ. 28ನೆಯ ಸಾಲಿನಲ್ಲಿ ಹಿಂದೂ ಸಾಗರದ ಉಲ್ಲೇಖ ಮತ್ತು 106ನೆಯ ಸಾಲಿನಲ್ಲಿ ಭಾರತೀಯ ನಾಯಕರು ಎಂಬ ಉಲ್ಲೇಖ. ವಿದೇಶದ ಯಾವುದೋ ಒಂದು ಪ್ರದೇಶವನ್ನು ನಾಟಕದ ಕಥಾರಂಗವಾಗಿ ಬಳಸುವುದು ನಾಟಕಕಾರನ ಉದ್ದೇಶ ಎಂಬುದು ಇಲ್ಲಿ ಮುಖ್ಯ. ಆದರೆ ನೈಜ ಘಟನೆಯೇ ಹಿಂದೂ ಸಾಗರತೀರದ ಭಾರತೀಯ ಪ್ರದೇಶವೊಂದರಲ್ಲಿ ನಡೆದಿದೆ ಎಂದು ಪ್ರಶ್ನಾತೀತವಲ್ಲ.

ಅನೇಕ ಗ್ರೀಕ್ ನಾಟಕಗಳಲ್ಲಿ ವಿದೇಶೀ ಪಾತ್ರಗಳು ಪ್ರವೇಶಿಸುವ ಸಂದರ್ಭಗಳಿದ್ದು ಅಲ್ಲಿ ಆ ದೇಶದ ಭಾಷೆಗಳೆಂದೂ ಅರ್ಥಹೀನವಾದ ಪದಪುಂಜಗಳನ್ನು ನುಡಿದು ರಂಜಿಸುವ ಉದಾಹರಣೆಗಳಿವೆ. ಆದ್ದರಿಂದ ಚಾರಿತ್ರಿಕ ಮತ್ತು ಸಾಂದರ್ಭಿಕ ಆಧಾರಗಳನ್ನು ಲಭ್ಯವಿರುವ ಪ್ರಹಸನದ ಸ್ವರೂಪ ಮತ್ತು ವಿವರಗಳನ್ನು ಗಣನೆಗೆ ತೆಗೆದುಕೊಂಡು ಈ ದಾಖಲೆಯ ಚಾರಿತ್ರಿಕ ಮಹತ್ತ್ವ ಮತ್ತು ಇದರಲ್ಲಿಯ ವಾದಗ್ರಸ್ತ ಪದಗಳ ಬಗ್ಗೆ ಕೂಲಂಕಷ ಪರಿಶೀಲನೆಯ ಪ್ರಯತ್ನ ಅವಶ್ಯ. (ಪಿ.ಜಿಬಿ.)

**ಆಗ್ಸ್‌ಬರ್ಗ್ ಒಕ್ಕೂಟ:** ಆಸ್ಟ್ರಿಯ, ಸ್ಪೇನ್, ಸ್ವೀಡನ್ ಮತ್ತು ಮಧ್ಯಯುರೋಪಿನ ಕೆಲವು ದೇಶಗಳು ಸೇರಿ 17ನೆಯ ಶತಮಾನದಲ್ಲಿ ಫ್ರಾನ್ಸಿನ ವಿರುದ್ಧ ರಚಿಸಿಕೊಂಡ ಒಂದು ಒಕ್ಕೂಟ. 17ನೆಯ ಶತಮಾನದ ಉತ್ತರಾರ್ಧದಲ್ಲಿ ಯುರೋಪಿನ ಅತ್ಯಂತ ಪ್ರತಿಭಾಶಾಲಿ ದೊರೆಯಾಗಿದ್ದ ಫ್ರಾನ್ಸಿನ 14ನೆಯ ಲೂಯಿ ಪರಮಪ್ರಭುವಾಗಬೇಕೆಂಬ ಆಸೆಯಿಂದ ಮಧ್ಯಯುರೋಪಿನ ರಾಷ್ಟ್ರಗಳ ಮೇಲೆ ನುಗ್ಗಬಹುದೆಂಬ ಭಯವುಂಟಾದಾಗ, ಆಸ್ಟ್ರಿಯದ ಚಕ್ರವರ್ತಿ ಮೊದಲನೆಯ ಲಿಯೋಪಾಲ್ಡ್ ಲೂಯಿಯ ಧಾಳಿಯನ್ನೆದುರಿಸುವುದಕ್ಕೆ ಮಧ್ಯ ಯುರೋಪಿನ ರಾಜ್ಯಗಳನ್ನೆಲ್ಲ ಒಟ್ಟುಗೂಡಿಸಿ 1686ರಲ್ಲಿ ಈ ಕೂಟವನ್ನೇರ್ಪಡಿಸಿದ. ಮಧ್ಯಯುರೋಪಿನಲ್ಲಿ ತಮಗೂ ಸೇರಿದ್ದ ಪ್ರಾಂತಗಳಿದ್ದುದರಿಂದ ಸ್ಪೇನ್ ಮತ್ತು ಸ್ವೀಡನ್ ಕೂಡ ಈ ಒಕ್ಕೂಟಕ್ಕೆ ಸೇರಿದುವು. ಒಕ್ಕೂಟವೇರ್ಪಟ್ಟುದರಿಂದ ಯುದ್ಧವೇನೂ ನಡೆಯಲಿಲ್ಲ. ಎರಡು ವರ್ಷ ಕಳೆದ ಮೇಲೆ ಫ್ರಾನ್ಸಿನ ಸೈನ್ಯಗಳು ಪ್ಯಾಲಟಿನೇಟ್ ಪ್ರಾಂತಕ್ಕೆ ನುಗ್ಗಿದಾಗ ಕೆಲವು ರಾಜ್ಯಗಳು ಈ ಒಕ್ಕೂಟವನ್ನು ತ್ಯಜಿಸಿದುವು. ಇಂಗ್ಲೆಂಡ್, ಸವಾಯ್, ಡಚ್, ನೆದರ್ಲೆಂಡ್ ಹೊಸದಾಗಿ ಸೇರಿಕೊಂಡವು. ಆಗ ಈ ಒಕ್ಕೂಟಕ್ಕೆ ಮಹಾರಾಷ್ಟ್ರಕೂಟ (ಗ್ರಾಂಡ್ ಅಲೈಯನ್ಸ್) ಎಂದು ಹೆಸರಾಯಿತು. ಮುಂದೆ ನಡೆದ ಯುದ್ಧಕ್ಕೆ ಆಗ್ಸ್‌ಬರ್ಗ್ ಒಕ್ಕೂಟದ ಸಮರ ಎಂದು ಹೆಸರಾಯಿತು. *

**ಆಗ್ನೇಯ ಏಷ್ಯ:** ಭಾರತದ ದಕ್ಷಿಣ ಪರ್ಯಾಯದ ಪೂರ್ವಭಾಗ. ಕಾಂಬೋಡಿಯ, ಲಾವೊಸ್, ಮಯನ್ಮಾರ್, ಥೈಲೆಂಡ್ ಮತ್ತು ವಿಯಟ್ನಾಮ್ ಹಾಗೂ ಮಲೇಷ್ಯ, ಸಿಂಗಪುರ, ಬೋರ್ನಿಯ, ಇಂಡೊನೇಷ್ಯ ಮತ್ತು ಫಿಲಿಪೀನ್ಸ್ ಹಾಗೂ ನೂರಾರು ದ್ವೀಪಗಳನ್ನೊಳಗೊಂಡ ಪ್ರದೇಶ.

ಆಗ್ನೇಯ ಏಷ್ಯದ ಭೂಭಾಗದಲ್ಲಿ ಉತ್ತರ–ದಕ್ಷಿಣವಾಗಿ ಹಬ್ಬಿರುವ ಅನೇಕ ಪರ್ವತಶ್ರೇಣಿಗಳಿವೆ. ಕಣಿವೆಗಳಲ್ಲಿ ಮಿಕಾಂಗ್ ಮತ್ತು ಇರವಾಡಿಗಳಂಥ ದೊಡ್ಡ ನದಿಗಳು ಹರಿಯುತ್ತವೆ. ದ್ವೀಪಭಾಗಗಳಲ್ಲಿ ಜೀವಂತ ಜ್ವಾಲಾಮುಖಿಗಳಿವೆ. ಹವೆ ಸಾಮಾನ್ಯವಾಗಿ ಉಷ್ಣವಲಯದಾಗಿದ್ದು ವಾರ್ಷಿಕ ಮಳೆ 100 ಸೆಂಮೀ. ಇಲ್ಲಿ ಅರಣ್ಯಪ್ರದೇಶ ಹೆಚ್ಚು.

**ಪ್ರಾಗಿತಿಹಾಸ:** ಆಗ್ನೇಯ ಏಷ್ಯದ ಪ್ರಾಗಿತಿಹಾಸ ಗೊಂದಲಮಯವಾಗಿದೆ. ಸ್ಥಾನಪಲ್ಲಟಗೊಂಡಂತಹ ಶಿಲೋಪಕರಣ ನೆಲೆಗಳೇ ಇಲ್ಲಿ ಹೆಚ್ಚಾಗಿ ಕಂಡುಬರುವುದು ಇದಕ್ಕೆ ಮುಖ್ಯ ಕಾರಣ. ಇಂತಹ ಅವಶೇಷಗಳಿಗೆ ನಿಖರವಾದ ಕಾಲಮಾನವನ್ನು ಪಡೆಯುವುದು ಸಾಧ್ಯವಾಗಿಲ್ಲ. ನಮೂನೆಯ ಆಧಾರದ ಮೇಲೆಯೂ ಶಿಲೋಪಕರಣಗಳನ್ನು ವರ್ಗೀಕರಿಸುವುದು ಕಷ್ಟಕರ. ಏಕೆಂದರೆ ಪ್ರಾಗಿತಿಹಾಸದುದ್ದಕ್ಕೂ ಇಲ್ಲಿ ಚಕ್ಕೆ–ಮಚ್ಚುಗತ್ತಿ ಉಪಕರಣಗಳ ಸಮುಚ್ಚಯಗಳೇ ಬಳಕೆಯಲ್ಲಿದ್ದವು. ಆಗ್ನೇಯ ಏಷ್ಯದ ಹೆಚ್ಚಿನ ಉಪಕರಣಗಳಿಗೆ, ಮುಖ್ಯವಾಗಿ ಆದಿ ಮತ್ತು ಮಧ್ಯ ಹಿಮಯುಗದ ಸಮುಚ್ಚಯಗಳಿಗೆ ವೈಜ್ಞಾನಿಕ ಕಾಲಮಾನವಾಗಲೀ ಭೂ–ಸಾಂಸ್ಕೃತಿಕ ಸಂದರ್ಭವಾಗಲೀ ಲಭ್ಯವಿಲ್ಲ.

ಆಗ್ನೇಯ ಏಷ್ಯದ ಅತ್ಯಂತ ಪುರಾತನ ದಾಖಲೆಗಳೆಂದರೆ ಹೋಮೋ ಎರೆಕ್ಟಸ್ ವಂಶದ ಮಾನವನ ಪಳೆಯುಳಿಕೆಗಳು. ಜಾವ ಮತ್ತು ಉತ್ತರ ವಿಯಟ್ನಾಂನಲ್ಲಿ ಹಲವಾರು ಪಳೆಯುಳಿಕೆ ನೆಲೆಗಳಿವೆ. 1891 ರಲ್ಲಿ ಜಾವದ ಟ್ರಿನಿಲ್‌ನಲ್ಲಿ ಈ ಆದಿ ಮಾನವನ ಪಳೆಯುಳಿಕೆಗಳು ಸಿಕ್ಕಾಗ ಆಫ್ರಿಕದಿಂದ ಹೊರಬಂದ ಮೊದಲ ಆದಿಮಾನವ ಇವನೆಂಬುದು ತಿಳಿಯಲಾಯಿತು. ಅನಂತರದಲ್ಲಿ ಇದೇ ಮಾನವನ ಪಳೆಯುಳಿಕೆಗಳು ಸ್ಯಾಂಡಂಗ್, ಪರ್ನಿಂಗ್, ಸಂಗೀರನ್ ಮತ್ತು ಸಂಬುಂಗ್‌ಮಕನ್‌ನಲ್ಲಿ ದೊರೆತವು. ಇವು ಪ್ರಾಯಶಃ 1.3 ದಶಲಕ್ಷದಿಂದ 5 ಲಕ್ಷ ವರ್ಷದ ಹಿಂದಿನ ಅವಧಿಯವು. ಸಂಗೀರನ್ ಪಳೆಯುಳಿಕೆಯ ಗರಿಷ್ಠ ಕಾಲಮಾನ 1.7 ದಶಲಕ್ಷ. ದುರದೃಷ್ಟವೆಂದರೆ ಈ ಪಳೆಯುಳಿಕೆ

ಗಳೊಂದಿಗಾಗಲೀ ಅವು ಸಿಕ್ಕ ನದಿ ಸ್ತರಗಳಲ್ಲಾಗಲೀ ಶಿಲೋಪಕರಣಗಳಿಲ್ಲ. ಇದರಿಂದಾಗಿ ಈ ಆದಿಮಾನವರು ಯಾವ ಶಿಲೋಪಕರಣ ತಂತ್ರಜ್ಞಾನವನ್ನು ಅವಲಂಬಿಸಿದ್ದರೆಂಬುದು ಅಸ್ಪಷ್ಟವಾಗಿದೆ. ಮಧ್ಯ ಹಿಮಯುಗದ್ದೆಂದು ತಿಳಿಯಲಾದ ಭೂಪದರಗಳಲ್ಲಿ ದೊರೆತಿರುವ ಕೆಲವು ಸಮುಚ್ಚಯಗಳನ್ನು ಹೋಮೋ ಎರೆಕ್ಟಸ್ ಮಾನವನು ತಯಾರಿಸಿದ್ದಿರಬಹುದೆಂಬ ಅನುಮಾನವಿದೆ. ಜಾವದಲ್ಲಿ ಸಿಕ್ಕಿರುವ ಇಂತಹ ಸಮುಚ್ಚಯಗಳನ್ನು ಪ್ಯಾಸಿಟೇನಿಯನ್, ಸಂಗೀರನ್ ಮತ್ತು ನ್ಯಾಂಡಂಗ್ ಎಂದು ಹೆಸರಿಸಲಾಗಿದೆ. ಪ್ಯಾಸಿಟೇನಿಯನ್ ಸಮುಚ್ಚಯಗಳಲ್ಲಿ ಮಚ್ಚುಗತ್ತಿ ಉಪಕರಣಗಳು (ಚಾಪರ್ಸ್ ಮತ್ತು ಚಾಪಿಂಗ್ ಉಪಕರಣಗಳು) ಪ್ರಧಾನವಾಗಿದ್ದರೆ ಸಂಗೀರನ್ ಸಮುಚ್ಚಯ ಸಣ್ಣಚಕ್ಕೆಗಳಿಂದ ಮಾಡಲಾದ ಉಪಕರಣಗಳನ್ನೊಳಗೊಂಡಿದೆ.

ದೇವಾಲಯ ದ್ವಾರ, ಬಾಂಟೀಶ್ರೀ

ನ್ಯಾಂಡಂಗ್ ಸಮುಚ್ಚಯದಲ್ಲಿ ಕೆಲವೇ ಕೆಲವು ಹೆರೆಚಕ್ಕೆಗಳೂ ತ್ರಿಕೋನಾಕಾರದ ಚಕ್ಕೆಗಳೂ ಇವೆ. ಇವಲ್ಲದೆ ಸುಲವೇಸಿ, ಫ್ಲೋರ್ಸ್ ಮತ್ತು ತಿಮೋರ್ ದ್ವೀಪಗಳಲ್ಲೂ ಮಧ್ಯ ಹಿಮಯುಗದ್ದೆನ್ನಲಾಗುವ ಪದರಗಳಲ್ಲಿ ಶಿಲೋಪಕರಣಗಳು ಪತ್ತೆಯಾಗಿವೆ. ಈ ಪೈಕಿ ಫ್ಲೋರ್ಸ್ ದ್ವೀಪದ ಅವಶೇಷಗಳು ಮಹತ್ತ್ವದ್ದಾಗಿವೆ. ಆದಿಮಾನವನು ಈ ದ್ವೀಪಕ್ಕೆ ಬಂದು ಇಲ್ಲಿ ನೆಲೆಸಿದುದಕ್ಕೆ ಸಣ್ಣಸಣ್ಣ ಚಕ್ಕೆಯ ಉಪಕರಣಗಳೇ ಸಾಕ್ಷಿ. ಈ ಸಮುಚ್ಚಯವನ್ನು ಮುಚ್ಚಿರುವ ಬೂದಿಯ ಪದರದ ಕಾಲಮಾನ ಸು.7 ಲಕ್ಷವರ್ಷಗಳು. ಬಾಹ್ಯ ಸಂಪರ್ಕವನ್ನು ಕಡಿದುಕೊಂಡ ಈ ಮಾನವ ಸಮೂಹ ಇನ್ನೂ ಸ್ಪಷ್ಟವಾಗಿ ತಿಳಿಯಲಾಗದ ನೈಸರ್ಗಿಕ ಪ್ರಕ್ರಿಯೆಗಳಿಂದಾಗಿ ಹಿಮಯುಗದ ಅಂತ್ಯದ ಹೊತ್ತಿಗೆ ಗಿಡ್ಡ ಆಕೃತಿಯನ್ನು ತಳೆಯಿತು. ಆನೆಯಂತಹ ದೈತ್ಯ ಪ್ರಾಣಿಯೂ ಕುಳ್ಳು ಸ್ವರೂಪವನ್ನು ಪಡೆದುಕೊಂಡಿದ್ದು ಆಶ್ಚರ್ಯಕರ.

ಸಂಗೀರನ್‌ನಲ್ಲಿ 2007ರಲ್ಲಿ ನಡೆದ ಉತ್ಖನನದಲ್ಲಿ ಸಿಕ್ಕ ಪ್ರಾಣಿಮೂಳೆಗಳ ಮೇಲೆ ಶಂಖ ಅಥವಾ ಚಿಪ್ಪಿನ ಉಪಕರಣಗಳಿಂದ ಮೂಡಿದ ಕಚ್ಚುಗುರುತುಗಳಿರುವುದು ಗಮನಾರ್ಹವಾಗಿದೆ. ಶಿಲೆಗಿಂತ ಹೆಚ್ಚಾಗಿ ಬಿದಿರು, ಚಿಪ್ಪು ಮುಂತಾದ ಜೈವಿಕ ವಸ್ತುಗಳನ್ನು ಹೋಮೋ ಎರೆಕ್ಟಸ್ ಮಾನವನು ಬಳಸಿರಬಹುದಾದ ಸಾಧ್ಯತೆಯನ್ನು ಈ ಅನ್ವೇಷಣೆ ಎತ್ತಿಹಿಡಿದಿದೆ. ಪ್ರಾಯಶಃ ಇದೇ ಕಾರಣಕ್ಕಾಗಿಯೇ ಈ ಅವಧಿಯ ಶಿಲೆಯ ಉಪಕರಣಗಳು ವಿರಳವಾಗಿ ದೊರೆಯುತ್ತವೆ. ಒಟ್ಟಾರೆ 40,000 ವರ್ಷ ಪೂರ್ವದ ಶಿಲೋಪಕರಣ ಸಂಸ್ಕೃತಿ–ತಂತ್ರಜ್ಞಾನ ಹಲವಾರು ದಶಕಗಳ ಅಧ್ಯಯನದ ನಂತರವೂ ಪ್ರಶ್ನಾತ್ಮಕವಾಗಿ ಉಳಿದಿದೆ. ಈ ಅವಧಿಯಲ್ಲಿ ಮಾನವನು ಇಲ್ಲಿ ಇದ್ದುದಕ್ಕೆ ಸ್ಪಷ್ಟ ಕುರುಹುಗಳು ಅವನ ಪಳೆಯುಳಿಕೆಗಳೇ ಹೊರತು ಶಿಲೋಪಕರಣಗಳಲ್ಲ.

40,000 ವರ್ಷಗಳ ಈಚಿನ ಪುರಾತತ್ತ್ವ ದಾಖಲೆ ಇಂಗಾಲ–14ರ ಕಾಲಮಾನ, ಸ್ತರೀಕೃತ ಗುಹಾನೆಲೆಗಳ ಕಾರಣದಿಂದಾಗಿ ಹೆಚ್ಚು ಖಚಿತವಾಗಿದೆ. 40,000–10,000 ವರ್ಷಗಳ ಅವಧಿಯಲ್ಲಿ ಚಕ್ಕೆಯ ಉಪಕರಣಗಳನ್ನು ಉಪಯೋಗಿಸುತ್ತಿದ್ದ ಅಲೆಮಾರಿ ಜನ ಸಮುದಾಯಗಳು (ಹೋಮೋ ಸೇಪಿಯನ್ಸ್) ಆಗ್ನೇಯ ಏಷ್ಯದಲ್ಲಿ ಹರಡಿದವು. ಚಕ್ಕೆಯ ಉಪಕರಣಗಳಲ್ಲದೆ ಬಗೆಬಗೆಯ ಕತ್ತರಿಸುವ ಉಪಕರಣಗಳನ್ನೂ ವಿರಳವಾಗಿ ದ್ವಿಮುಖ ಉಪಕರಣಗಳು ಹಾಗೂ ಅಲಗು–ಸೂಕ್ಷ್ಮಶಿಲೋಪಕರಣಗಳನ್ನೂ ಇವರು ಬಳಸುತ್ತಿದ್ದರು. ಈ ಅವಧಿಯ ಮುಖ್ಯ ನೆಲೆಗಳೆಂದರೆ ಥೈಲೆಂಡಿನ ಲಾಂಗ್ ರೋಂಗ್ರಿಯನ್ ಗುಹೆ (37,000–27,000), ವಿಯಟ್ನಾಂನ ಗುವೊಮ್ ಕಲ್ಲಾಸರೆ (23,000–18,000), ಸಾರವಾಕ್ ದ್ವೀಪದ ನಿಯ ಗುಹೆ (40,000–30,000), ಪಲವಾನ್ ದ್ವೀಪದ ತಬೊನ್ ಗುಹೆ, ಸುಲವೇಸಿಯ ಲಿಯಾಂಗ್ ಬುರುಂಗ್ ಕಲ್ಲಾಸರೆ ಇತ್ಯಾದಿ. ನಿಯ ಗುಹೆಯಲ್ಲಿ ಉಪಕರಣಗಳ ಜೊತೆಯಲ್ಲಿ ಮೂಳೆಯ ಮೊನೆ ಹಾಗೂ ಹಲ್ಲೆಗಳು ಲಭಿಸಿವೆ. ವೆಸ್ಟ್ ಮೌತ್ (14,000–8,000) ಎಂಬಲ್ಲಿ ಹಲವಾರು ಮಾನವ ಸಮಾಧಿಗಳು ಕುಳಿತ ಅಥವಾ ಕೈಕಾಲು ಮಡಸಿದ ಭಂಗಿಗಳಲ್ಲಿ ಕಂಡುಬಂದಿವೆ.

ಈಗಿನ ಯುಗದ (ಹಾಲೊಸೀನ್) ಆರಂಭದೊಂದಿಗೆ (ಸು.10,000 ವರ್ಷ) ಆಗ್ನೇಯ ಏಷ್ಯದ ಉಪಕರಣ ಸಮುಚ್ಚಯಗಳಲ್ಲಿ ಸೂಕ್ಷ್ಮ ಬದಲಾವಣೆಗಳು ಕಾಣಿಸಿಕೊಂಡವು. ಭೂಖಂಡ ದೇಶಗಳಲ್ಲಿ ಕೃಷಿ ಸಂಸ್ಕೃತಿಯ ಪ್ರಾರಂಭದವರೆಗೆ, ಅಂದರೆ ಪ್ರ.ಶ.ಪೂ.3000 ವರ್ಷಗಳವರೆಗೆ, ಚಕ್ಕೆ–ಕೊಚ್ಚುವ ಉಪಕರಣ ಸಂಪ್ರದಾಯವೇ ಮುಂದುವರೆದರೆ ಕೆಲವೊಂದು ದ್ವೀಪಗಳಲ್ಲಿ ಸೂಕ್ಷ್ಮಶಿಲೋಪಕರಣ ತಂತ್ರಜ್ಞಾನವು ಬಳಕೆಗೆ ಬಂದಿತು. ಭೂಖಂಡ ದೇಶಗಳ ಶಿಲೋಪಕರಣ ಸಮುಚ್ಚಯಗಳನ್ನು ಹೊಬೀನಿಯನ್ ಎಂದು ಹೆಸರಿಸಲಾಗಿದೆ. ಬರ್ಮದಿಂದ ಚೀನದವರೆಗಲ್ಲದೆ ದ್ವೀಪಗಳ ಪೈಕಿ ಉತ್ತರ ಸುಮಾತ್ರದವರೆಗೂ ಈ ಸಂಪ್ರದಾಯ ಹರಡಿತ್ತು. 13,000–3,000 ವರ್ಷಗಳ ಹಿಂದಿನ ಈ ಸಮುಚ್ಚಯಗಳು ವಿಯಟ್ನಾಂನ ಹೊವಬಿನ್ ಪ್ರಾಂತದಲ್ಲಿ 1920ರಲ್ಲಿ ಪ್ರಪ್ರಥಮವಾಗಿ ಗುರುತಿಸಲ್ಪಟ್ಟವು. ಈ ಸಂಸ್ಕೃತಿಯ ನೆಲೆಗಳು ಕಲ್ಲಾಸರೆಗಳಲ್ಲಿ ಅಧಿಕವಾಗಿ ಕಂಡುಬಂದಿವೆ. ಹೊಬೀನಿಯನ್ ಉಪಕರಣಗಳು ಅಂಡಾಕಾರದ, ಚಪ್ಪಟೆಯಾದ ನದಿಪಾತ್ರಗಳಲ್ಲಿ ಸಿಗುವ ಕಲ್ಲುಗಳಿಂದ ಮಾಡಲ್ಪಟ್ಟವು. ಇವುಗಳ ಅಂಚಿನುದ್ದಕ್ಕೂ ಇಬ್ಬದಿಯಲ್ಲಿ ಇಲ್ಲವೆ ಒಂದು ಬದಿಯಲ್ಲಿ ಅಲ್ಲಲ್ಲಿ ಚಕ್ಕೆಗಳನ್ನು ತೆಗೆಯಲಾಗಿರುತ್ತದೆ. ಇವುಗಳ ಜೊತೆ ತುದಿಯನ್ನು ಮಾತ್ರ ಉಜ್ಜಿ ನಯಗೊಳಿಸಿದಂತಹ ಉಪಕರಣಗಳು, ಅರೆಯುವ ಕಲ್ಲು, ಮೂಳೆಯ ಮೊನೆ ಹಾಗೂ ಹಲ್ಲೆಗಳು ವಿರಳವಾಗಿ ಸಿಗುತ್ತವೆ. ಹೊಬೀನಿಯನ್ ಸಂಸ್ಕೃತಿಯ ಮಧ್ಯ ಹಂತದಲ್ಲಿ ಮಾನವ ಸಮಾಧಿಗಳೂ ಅಂತ್ಯ ಹಂತದಲ್ಲಿ ಮಣ್ಪಾತ್ರೆಗಳೂ ಕಾಣಿಸಿಕೊಳ್ಳುತ್ತವೆ. ಮಣ್ಪಾತ್ರೆಗಳನ್ನು ಹುರಿ ಅಥವಾ ಚಾಪೆಯನ್ನು ಒತ್ತಿ ಮಾಡಿದ ವಿನ್ಯಾಸದಿಂದ ಅಲಂಕರಿಸಲಾಗಿದೆ. ಹೊಬೀನಿಯನ್ ಜನರು ಹಂದಿ ಮತ್ತು ಜಿಂಕೆಯನ್ನು ಹೆಚ್ಚಾಗಿ ಬೇಟೆಯಾಡುತ್ತಿದ್ದರು. ಈವರೆಗೆ ಥೈಲೆಂಡಿನ ಸ್ಪಿರಿಟ್ ಕೇವ್ (**ನೋಡಿ**) ಎಂಬ ಗುಹಾನೆಲೆಯಲ್ಲಿ ಮಾತ್ರ ಈ ಸಂಸ್ಕೃತಿಯ ಪದರಗಳಿಂದ ಅವರೆ, ಸೋರೆ, ಸೌತೆ, ಬಾದಾಮಿ, ಮೆಣಸು, ಅಡಕೆ, ವೀಳ್ಯ ಮುಂತಾದ ಸಸ್ಯಾವಶೇಷಗಳು ಲಭಿಸಿದ್ದು ಸಸ್ಯ ಸಂಗ್ರಹಣೆಯ ಬಗ್ಗೆ ವಿಶೇಷ ಮಾಹಿತಿ ಒದಗಿಸಿವೆ.

ಉತ್ತರ ಸುಮಾತ್ರವನ್ನು ಹೊರತುಪಡಿಸಿ ಉಳಿದ ದ್ವೀಪಗಳಲ್ಲಿ ರೈತಾಪಿ ಸಂಸ್ಕೃತಿ ಆರಂಭವಾಗುವವರೆಗೆ ಹಳೆಯ ಚಕ್ಕೆ ಸಂಪ್ರದಾಯವೇ ಮುಂದುವರೆಯಿತು. ಸುಲವೇಸಿ, ಜಾವ ಮತ್ತು ಫಿಲಿಪೀನ್ಸ್‌ನ ಕೆಲವು ಭಾಗಗಳಲ್ಲಿ ಮಾತ್ರ 8000–7000 ವರ್ಷಗಳ ಹಿಂದೆ ಅಲಗು ಹಾಗೂ ಅಲಗಿನಂತಹ ಚಕ್ಕೆಗಳನ್ನು ತಯಾರಿಸುವ ತಂತ್ರಗಳು ರೂಢಿಗೆ ಬಂದವು. ದಕ್ಷಿಣ ಸುಲವೇಸಿಯಲ್ಲಿರುವ ಇಂತಹ ಸಂಪ್ರದಾಯವನ್ನು ತಾವೋಲಿಯನ್ ಎಂದು ಕರೆಯಲಾಗುತ್ತದೆ. ಈ ದ್ವೀಪದ ಲುಉ ಲಿಯಾಂಗ್ ಮಾದರಿ ನೆಲೆಯಾಗಿದೆ. ಇಲ್ಲಿ ನಿರ್ದಿಷ್ಟ ರೇಖಾಕೃತಿಯ ಸೂಕ್ಷ್ಮಶಿಲೋಪಕರಣಗಳೊಂದಿಗೆ ಮೂಳೆಯ ಮೊನೆಗಳು, ಚಕ್ಕೆಯ ಉಪಕರಣಗಳು ಹಾಗೂ ಕೊಚ್ಚುವ ಉಪಕರಣಗಳಿವೆ. (ವಿ.ಎಸ್.)

**ಚರಿತ್ರೆ:** ಪ್ರಾಚೀನಕಾಲದಿಂದಲೇ ಆಗ್ನೇಯ ಏಷ್ಯದ ರಾಜ್ಯಗಳು ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿವೆ. ಇದರಿಂದ ಅಲ್ಲಿ ಬಹುಕಾಲ ಈ ಸಂಸ್ಕೃತಿ ನೆಲೆಸಿ ಭಾರತ ಮತ್ತು ಆಗ್ನೇಯ ಏಷ್ಯಗಳ ಸಾಮೀಪ್ಯವನ್ನು ಹೆಚ್ಚಿಸಿದೆ. ಫ್ರೆಂಚ್ ಮತ್ತು ಡಚ್ ವಿದ್ವಾಂಸರು ಈ ಸಂಸ್ಕೃತಿಯ ಅಧ್ಯಯನಕ್ಕೆ ತಳಹದಿಯನ್ನು ಹಾಕಿದ್ದಾರೆ. ಅದರಲ್ಲೂ ಸೀಡಸ್, ಕ್ರೋಮ್ ಸ್ಟುಟರ್‌ಹೀಮ್, ವಿನ್ಸ್‌ಡೆಟ್, ಪೆಲಿಯಟ್, ಜಿಲುಸ್ಕಿ, ಹಾರ್ವೆ ಮುಂತಾದ ವಿದ್ವಾಂಸರುಗಳ ಕೊಡುಗೆ ಗಮನಾರ್ಹ.

ಭಾರತೀಯ ಸಂಸ್ಕೃತಿ ಆಗ್ನೇಯ ಏಷ್ಯದಲ್ಲಿ ಯಾವ ರೀತಿ ಹರಡಿತು ಎಂದು ಹೇಳುವುದು ಕಷ್ಟ. ವಿನ್ಸ್‌ಡೆಟ್ ಹೇಳಿರುವಂತೆ ಹಿಂದುಗಳು ಆಗ್ನೇಯ ಏಷ್ಯಕ್ಕೆ ಹಠಾತ್ತನೆ ಪ್ರಯಾಣ ಮಾಡಲಿಲ್ಲ; ಅವರ ಪ್ರಯಾಣ ಹಿಂಸಾತ್ಮಕ ಕೃತ್ಯಗಳಿಂದಲೂ ಕೂಡಿರಲಿಲ್ಲ;

ಅದು ಶಾಂತಿಯುತವಾಗಿದ್ದುದಲ್ಲದೆ ಕ್ರಮಬದ್ಧವಾಗಿತ್ತು. ಸಾಂಬಾರ ಪದಾರ್ಥಗಳನ್ನು ಹೊತ್ತು ತಂದ ಹಡಗೊಂದು ಆಗ್ನೇಯ ಏಷ್ಯದ ರೇವುಪಟ್ಟಣದಲ್ಲಿ ಬೀಡುಬಿಟ್ಟಿತು. ಈ ಹಡಗಿನಲ್ಲಿದ್ದ ವಸ್ತುಗಳು ಮಾರಾಟವಾಗುವವರೆಗೆ ಭಾರತೀಯ ನಾವಿಕರು ಸ್ಥಳೀಯ ಜನಗಳೊಡನೆ ಬೆರೆತರು. ಸಂಸ್ಕೃತ ಭಾಷೆಯನ್ನು ಬಲ್ಲ ಭಾರತೀಯರು ಅಲ್ಲಿಯ ಜನಗಳ ಪ್ರೀತಿ ಮತ್ತು ವಿಶ್ವಾಸಗಳನ್ನು ಗಳಿಸಿಕೊಂಡರು; ಮತ್ತೆ ಕೆಲವರು ಆ ದೇಶದ ಸುಂದರ ಯುವತಿಯರನ್ನು ಮದುವೆಯಾದರು; ಮತ್ತೆ ಕೆಲವರು ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಜನಗಳಿಗೆ ಹೇಳಿದರು. ಅಷ್ಟರಲ್ಲಿಯೇ ಮತ್ತೊಂದು ಹಡಗು ಭಾರತದಿಂದ ಬಂದಿತು. ಈ ರೀತಿ ಆಗ್ನೇಯ ಏಷ್ಯ ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿರಬೇಕು.

ಕೌಂಡಿನ್ಯ, ಅಗಸ್ತ್ಯ ಮುಂತಾದ ಋಷಿಗಳೇ ಆಗ್ನೇಯ ಏಷ್ಯದಲ್ಲಿ ಭಾರತೀಯ ಸಂಸ್ಕೃತಿ ಹರಡಲು ಕಾರಣರಾದರೆಂದು ಶಾಸನಗಳಿಂದ ತಿಳಿಯುತ್ತದೆ. ಭಾರತೀಯ ಧಾರ್ಮಿಕ ಗ್ರಂಥಗಳ ಪ್ರಕಾರ ಸಮುದ್ರಯಾನ ನಿಷಿದ್ಧಕಾರ್ಯ. ಹಾಗಾದರೂ ಭಾರತೀಯರು ಆಗ್ನೇಯ ಏಷ್ಯಕ್ಕೆ ಹೋಗಲು ಕಾರಣಗಳೇನು ಎಂದು ನೋಡುವುದು ಆವಶ್ಯಕ. ವ್ಯಾಪಾರವೇ ಅತ್ಯಂತ ಪ್ರಮುಖವಾದ ಮತ್ತು ಪ್ರಬಲವಾದ ಕಾರಣವೆಂದು ತೋರುತ್ತದೆ. ಅಲೆಕ್ಸಾಂಡರನ ದಂಡೆಯಾತ್ರೆಯಿಂದಲೂ ಪರ್ಷಿಯನ್ನರ ಧಾಳಿಗಳಿಂದಲೂ ಭಾರತೀಯರಿಗೆ ಹೊರದೇಶಗಳಲ್ಲಿ ವ್ಯಾಪಾರ ಮಾಡುವ ಕುತೂಹಲ ಹೆಚ್ಚಾಯಿತು. ಪ್ರಾಚೀನ ಭಾರತೀಯರು ರೋಮ್ ದೇಶದೊಡನೆ ವ್ಯಾಪಾರ ಸಂಪರ್ಕಗಳನ್ನು ಹೊಂದಿದ್ದರು. ಆದರೆ ವೆಸ್‍ಪೆಸಿಯನ್ ಎಂಬ ಸಾಮ್ರಾಟ ರೋಮ್ ದೇಶಕ್ಕೆ ಆಗುತ್ತಿದ್ದ ನಷ್ಟವನ್ನು ತಪ್ಪಿಸಲು ಚಿನ್ನದ ನಾಣ್ಯಗಳು ಹೊರಕ್ಕೆಹೋಗದಂತೆ ತಡೆಹಾಕಿದ. ಇದರಿಂದ ಪ್ರಾಚೀನ ಭಾರತೀಯರು, ಚಿನ್ನಕ್ಕೋಸ್ಕರ ಬೇರೆ ದೇಶಗಳೊಡನೆ ಸಂಪರ್ಕ ಬೆಳೆಸಬೇಕಾಯಿತು. ಆಗ್ನೇಯ ಏಷ್ಯದ ಕೆಲವು ಭಾಗಗಳು ಸುವರ್ಣಭೂಮಿಯೆಂದು ಖ್ಯಾತಿ ಪಡೆದಿದ್ದುವು. ಆದ್ದರಿಂದ ಭಾರತೀಯರು ಈ ದೇಶಗಳ ಕಡೆಗೆ ತಮ್ಮ ಗಮನ ಹರಿಸಿದರು.

ಪುರುಷ ಶಿಲ್ಪ, ಬಾಂಟೇಶ್ರೀ

ಆಗ್ನೇಯ ಏಷ್ಯಕ್ಕೆ ಹೋದ ಭಾರತೀಯರು ಭಾರತದ ಯಾವ ಪ್ರಾಂತದವರು ಎನ್ನುವ ವಿಚಾರದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಇವರು ವಂಗದೇಶದವರೆಂದು ಕೆಲವರು ವಾದಿಸುತ್ತಾರೆ. ಆಗ್ನೇಯ ಏಷ್ಯದ ಶಿಲ್ಪಸಂಪತ್ತನ್ನು ಗಮನಿಸಿದರೆ ಗುಪ್ತರ ಕಾಲದ ಲಕ್ಷಣಗಳು ಅಲ್ಲಿ ವಿಶೇಷವಾಗಿರುವುದು ನಮ್ಮ ಗಮನಕ್ಕೆ ಬರುತ್ತದೆ. ಜಾವ ದ್ವೀಪದ ಶಿಲ್ಪಗಳಲ್ಲಿ ಪಾಲ ಮತ್ತು ಸೇನರ ಕಾಲದ ಶಿಲ್ಪಲಕ್ಷಣಗಳು ವಿಶೇಷವಾಗಿವೆ. ಜಾವದ ಶೈಲೇಂದ್ರರು ಒರಿಸ್ಸದ ಶೈಲೋದ್ಭವರೆಂದೂ ಅವರ ಶಾಸನಗಳ ಲಿಪಿ ನಾಗರಿ ಲಿಪಿಗೆ ಸಮೀಪವಾಗಿರುವುದೆಂದೂ ಅಷ್ಟೇ ಅಲ್ಲದೆ ಬಂಗಾಲ ಆಗ್ನೇಯ ಏಷ್ಯಕ್ಕೆ ಜಲ ಮತ್ತು ಭೂಮಾರ್ಗದಿಂದ ಬಹು ಹತ್ತಿರವಾಗಿರುವುದರಿಂದ ಬಂಗಾಲದವರೇ ಮೊಟ್ಟಮೊದಲು ಆಗ್ನೇಯ ಏಷ್ಯಕ್ಕೆ ಹೋದರೆಂದೂ ಕೆಲವರ ವಾದ. ಜಾವದ ಹೋಲಿಂಗ್ ಎಂಬುದು ಕಳಿಂಗ ಎಂಬುದರ ರೂಪಾಂತರವೆಂದೂ ತಲೈಂಗ್ ಎಂಬುದು ತೆಲುಂಗ ಎಂಬುದರ ರೂಪಾಂತರವೆಂದೂ ವಿಯಟ್‍ನಾಮಿನ ಡಾಂಗ್‍ಡುವಾಂಗ್‍ನಲ್ಲಿ, ಜಾವದ ಜೆಂಬರ್ ಮತ್ತು ಸೆಲಿಬಿಸ್ ದ್ವೀಪದ ಸೆಂಪಗ ಮುಂತಾದ ಕಡೆಗಳಲ್ಲಿ ದೊರಕಿರುವ ಬುದ್ಧನ ವಿಗ್ರಹಗಳು ಅಮರಾವತಿ ಶಿಲ್ಪಶೈಲಿಗೆ ಸೇರಿರುವುದರಿಂದ, ಆಂಧ್ರದೇಶದಿಂದ ಭಾರತೀಯರು ಆಗ್ನೇಯ ಏಷ್ಯಕ್ಕೆ ಪ್ರಥಮವಾಗಿ ಹೋದರೆಂದೂ ಕೆಲವರು ವಾದಿಸುತ್ತಾರೆ. ಜಾವ ದ್ವೀಪದ ಕೆಲವು ದೇವಾಲಯಗಳು ಚಳುಕ್ಯ ವಾಸ್ತುಶೈಲಿಯಲ್ಲಿರುವುದರಿಂದ ಕರ್ನಾಟಕದವರೇ ಪ್ರಥಮವಾಗಿ ಆಗ್ನೇಯ ಏಷ್ಯಕ್ಕೆ ಹೋದರೆಂದು ಕೆಲವರ ಅಭಿಪ್ರಾಯ. ಆಗ್ನೇಯ ಏಷ್ಯದ ಅನಾಗರಿಕ ಬುಡಕಟ್ಟಿಗೆ ಸೇರಿದ ಕೆಲವು ಜನಾಂಗಗಳ ಹೆಸರು ಚೋಳ, ಮಲಯಾಳಿ, ಪಾಂಡ್ಯ ಎಂದಿರುವುದರಿಂದಲೂ ಜಾವದ ಶೈಲೇಂದ್ರರು ಮತ್ತು ಪಾಂಡ್ಯರು ಮೀನಲಾಂಛನವನ್ನು ಹೊಂದಿರುವುದರಿಂದಲೂ ಆಗ್ನೇಯ ಏಷ್ಯದ ಪ್ರಾಚೀನ ಶಾಸನಗಳ ಲಿಪಿಗೂ ಪಲ್ಲವ ಲಿಪಿಗೂ ಬಹಳ ಹೋಲಿಕೆಗಳಿರುವುದರಿಂದಲೂ ಜಾವದ ಚಂಡಿಕಲಸನ್, ಚಂಡಿಜಾಗೋ ಮುಂತಾದ ದೇವಾಲಯಗಳು ಮಹಾಬಲಿಪುರದ ರಥಗಳನ್ನು ಬಹುವಾಗಿ ಹೋಲುವುದರಿಂದಲೂ ತಮಿಳು ದೇಶವೇ ಆಗ್ನೇಯ ಏಷ್ಯಕ್ಕೆ ಹೋದ ವಲಸೆಗಾರರ ಮೂಲನಿವಾಸಸ್ಥಾನವೆಂದೂ ಅನೇಕರು ವಾದಿಸುತ್ತಾರೆ. ಒಟ್ಟಿನಲ್ಲಿ ಬಂಗಾಲ, ಆಂಧ್ರ, ಕರ್ನಾಟಕ ಮತ್ತು ತಮಿಳುನಾಡಿನ ಪ್ರಭಾವ ಆಗ್ನೇಯ ಏಷ್ಯದ ಪ್ರಾಚೀನ ಸಂಸ್ಕೃತಿಯಲ್ಲಿ ವಿಶೇಷವಾಗಿ ಕಾಣುವುದರಿಂದ, ಭಾರತದ ಎಲ್ಲ ಭಾಗಗಳಿಂದಲೂ ಆಗ್ನೇಯ ಏಷ್ಯಕ್ಕೆ ಜನ ಹೋಗುತ್ತಿದ್ದರು ಎಂದು ಹೇಳಬಹುದು. ಆಗ್ನೇಯ ಏಷ್ಯಕ್ಕೂ ಭಾರತಕ್ಕೂ ಸಂಪರ್ಕ ಯಾವಾಗ ಪ್ರಾರಂಭವಾಯಿತು ಎಂದು ನಿರ್ಧರಿಸಲು ಸಾಕಷ್ಟು ಮಾಹಿತಿಗಳು ದೊರಕಿಲ್ಲ. ಅತ್ಯಂತ ಪ್ರಾಚೀನವಾದ ಮಾಹಿತಿ ರಾಮಾಯಣ ಮಹಾಕಾವ್ಯದಲ್ಲಿ ದೊರಕುತ್ತದೆ. ಸೀತೆಯನ್ನು ಹುಡುಕಲು ವಾನರರು ಜಾವ ದ್ವೀಪಕ್ಕೆ, ಸುವರ್ಣ ದ್ವೀಪಗಳಿಗೆ ಹೋಗಬೇಕೆಂದು ಸುಗ್ರೀವ ಆಜ್ಞೆ ಮಾಡಿದ ಉಲ್ಲೇಖ ದಿಂದ, ರಾಮಾಯಣ ಕಾಲದಲ್ಲಿಯೇ ಭಾರತೀಯರಿಗೆ ಆಗ್ನೇಯ ಏಷ್ಯದ ಪರಿಚಯವಿತ್ತೆಂದು ಗೊತ್ತಾಗುತ್ತದೆ. ಬೌದ್ಧಗ್ರಂಥವಾದ ನಿದ್ದೇಸದಲ್ಲಿಯೂ ಜಾತಕ ಕಥೆಗಳಲ್ಲಿಯೂ ಆಗ್ನೇಯ ಏಷ್ಯ ದ್ವೀಪಗಳ ಉಲ್ಲೇಖ ಬರುತ್ತದೆ. ಟಾಲಮಿಯ ಭೂಗೋಳ ಗ್ರಂಥದಲ್ಲಿ ಜಾವ ದ್ವೀಪ ವನ್ನೂ ಸುವರ್ಣ ದ್ವೀಪವೆಂದು ವರ್ಣಿಸಿರುವುದು ಗಮನಾರ್ಹ. ಪ್ರ.ಶ.132ರಲ್ಲಿ ಜಾವ ದ್ವೀಪದಲ್ಲಿ ದೇವವರ್ಮನೆಂಬ ರಾಜನಿದ್ದನೆಂದು ತಿಳಿದುಬರುತ್ತದೆ. ಇವುಗಳಿಂದ ಕ್ರಿಸ್ತನ ಕಾಲಕ್ಕಿಂತ ಮುಂಚೆಯೇ ಆಗ್ನೇಯ ಏಷ್ಯಕ್ಕೂ ಭಾರತಕ್ಕೂ ಸಾಂಸ್ಕೃತಿಕ ಸಂಪರ್ಕವಿತ್ತೆಂದು ಗೊತ್ತಾಗುತ್ತದೆ.

ಅಭಿರಾಜ ಎಂಬ ಕಪಿಲವಸ್ತುವಿನ ರಾಜ ಬರ್ಮದೇಶಕ್ಕೆ ಬಂದು ಆಳಲು ಪ್ರಾರಂಭಿಸಿದನೆಂದೂ ಪಾಟಲಿಪುತ್ರದಲ್ಲಿ ಪ್ರ.ಶ.ಪೂ.241ರಲ್ಲಿ ನಡೆದ 3ನೆಯ ಬೌದ್ಧ ಸಮ್ಮೇಳನ ಸೋನ ಮತ್ತು ಉತ್ತರ ಎಂಬುವವರನ್ನು ಬರ್ಮಕ್ಕೆ ಕಳುಹಿಸಲಾಗಿತ್ತೆಂದೂ ತಿಳಿದುಬರುತ್ತದೆ. ಯುವಾನ್‍ಚಾಂಗ್ ಬರ್ಮದಲ್ಲಿ ದ್ವಾರವತಿ ಎಂಬ ರಾಜ್ಯವನ್ನು ಗುರುತಿಸಿದ್ದಾನೆ. ಇದರ ಪಶ್ಚಿಮಕ್ಕೆ ಶ್ರೀಕ್ಷೇತ್ರ ರಾಜ್ಯವಿತ್ತು. ಇಲ್ಲಿ ಬೌದ್ಧಸ್ತೂಪಗಳ ಅವಶೇಷಗಳಿವೆ. ಅನಂತರ ಪ್ಯು ರಾಜ್ಯ ಬೆಳೆದು, ಇದರ ನಾಶವಾದ ಅನಂತರ ಅರಿಮರ್ದನಪುರ ಸಾಮ್ರಾಜ್ಯ ಸ್ಥಾಪನೆಯಾಯಿತು. ಈ ದೊರೆಗಳಲ್ಲಿ ಅನೋರಥ (1044–72) ಮತ್ತು ಕ್ಯಾನ್ಜಿತ್ಥ (1086–1112) ಮುಖ್ಯರಾದವರು. ಇವರ ಕಾಲದಲ್ಲಿ ಬೌದ್ಧಧರ್ಮ ಬರ್ಮದಲ್ಲಿ ಚೆನ್ನಾಗಿ ಬೇರೂರಿತು. ಇವರ ಅನಂತರ ನರಥು, ನರಪೈಸಿಥು, ಜಯಥೇಂದ ಮುಂತಾದವರು ಆಳಿದರು. ಮುಂದೆ ಕುಬ್ಲೈಖಾನನ ಮೊಮ್ಮಗನ ನೇತೃತ್ವದಲ್ಲಿ ಮಂಗೋಲ್ ಸೈನ್ಯ ಪ್ಯಾಗನ್ ರಾಜ್ಯಕ್ಕೆ ಮುತ್ತಿಗೆ ಹಾಕಿ ಅದನ್ನು ಲೂಟಿಮಾಡಿತು (1287).

ಸಯಾಂ ಅಥವಾ ಥೈಲೆಂಡ್‍ನಲ್ಲಿ 2ನೆಯ ಶತಮಾನಕ್ಕೆ ಸೇರಿದ ಭಾರತೀಯ ಅವಶೇಷಗಳು ದೊರಕಿದ್ದರೂ ಬಲವತ್ತರವಾದ ರಾಜ್ಯ ಸ್ಥಾಪನೆಯಾದುದು 13ನೆಯ ಶತಮಾನದಲ್ಲಿ. ಇದಕ್ಕೆ ಮುಂಚೆ ಇದು ಕಂಬುಜ ಮತ್ತು ಬರ್ಮ ದೇಶಗಳ ಆಳಿಕೆಗೆ ಒಳಪಟ್ಟಿತ್ತು. ಕಂಬುಜದ 7ನೆಯ ಜಯವರ್ಮನ ಮರಣಾನಂತರ ಇಂದ್ರಾದಿತ್ಯ ಸುಖೋಥೈ ಎಂಬುವನು ರಾಜ್ಯಸ್ಥಾಪನೆ ಮಾಡಿದ. ಇದರಲ್ಲಿ ರಾಮಕಮ್‍ಹೆಂಗ್ (1280–1318) ಅತ್ಯಂತ ಮುಖ್ಯನಾದವ. ಈತ ಸುಖೋಥಯದ ಜೊತೆಗೆ ಸಜ್ಜನಾಲಯ ಎಂಬ ಇನ್ನೊಂದು ರಾಜಧಾನಿಯನ್ನು ಸ್ಥಾಪಿಸಿದ. ಈ ರಾಜ್ಯದ ಪತನವಾದ ಅನಂತರ ಅಯುಥಿಯ (ಅಯೋಧ್ಯ) ಎಂಬ ಇನ್ನೊಂದು ರಾಜ್ಯ ಸ್ಥಾಪನೆಯಾಯಿತು. ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದ ಇದು ಅಂಥ ಮಹತ್ತರವಾದ ಪಾತ್ರವನ್ನೇನೂ ವಹಿಸಲಿಲ್ಲ.

ಭಾರತದಿಂದ ಪ್ರಯಾಣ ಮಾಡಿದ ಕಂಬು ಸ್ವಾಯಂಭುವ ಶಿವಭಕ್ತನಿಂದ ಸ್ಥಾಪಿತವಾದ ಕಂಬುಜರಾಜ್ಯ ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ವಿಶೇಷವಾಗಿ ಒಳಗಾಯಿತು. ಫೂನಾನ್ ಎಂಬುದು ಇಲ್ಲಿಯ ಮೊಟ್ಟಮೊದಲ ರಾಜ್ಯ. ಕೌಂಡಿನ್ಯನೆಂಬ ಬ್ರಾಹ್ಮಣ ಈ ರಾಜ್ಯದಲ್ಲಿ ಭಾರತೀಯ ಸಂಸ್ಕೃತಿ ಪ್ರಸರಣಕ್ಕೆ ಕಾರಣನಾದನೆಂದು ಪ್ರತೀತಿ. 6ನೆಯ ಶತಮಾನದಿಂದ ಜಯವರ್ಮ, ಶ್ರೇಷ್ಠವರ್ಮ, ಈಶಾನವರ್ಮ ಮುಂತಾದ ರಾಜರುಗಳು ಕಂಬುಜದಲ್ಲಿ ಆಳಿದರು. ಕಂಬುಜದ ಏಳಿಗೆಗೆ ಕಾರಣನಾದವ ಎರಡನೆಯ ಜಯವರ್ಮ (802–54). ಈತ ಶೈವಮತಾವಲಂಬಿಯಾಗಿದ್ದು ದೇವರಾಜ ಲಿಂಗದ ಉಪಾಸನೆಯನ್ನು ಪ್ರಾರಂಭಿಸಿದ. ಇಂದ್ರಪುರ, ಹರಿಹರಾಲಯ, ಅಮರೇಂದ್ರಪುರ ಮುಂತಾದ ನಗರಗಳನ್ನು ನಿರ್ಮಿಸಿದ. ಇಂದ್ರವರ್ಮ, ಯಶೋವರ್ಮರು ಆಳಿದ ಅನಂತರ ಎರಡನೆಯ ಸೂರ್ಯವರ್ಮ (1113–50) ರಾಜನಾದ. ಈತ ಪ್ರಪಂಚಖ್ಯಾತವಾದ ಆಂಕೋರ್‍ವಾಟ್ ದೇವಾಲಯವನ್ನು ಸ್ಥಾಪಿಸಿದ. ಇವನ ಕಾಲದಲ್ಲಿ ಸಂಸ್ಕೃತ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. 7ನೆಯ ಜಯವರ್ಮನೇ (1181–1201) ಕಂಬುಜರಾಜ್ಯದ ಅತ್ಯಂತ ಸಮರ್ಥ ದೊರೆ. ಈತ ಆಂಕೋರ್‍ಥಾಮ್ **(ನೋಡಿ)** ದೇವಾಲಯವನ್ನು ನಿರ್ಮಿಸಿದ. ಇವನ ಅನಂತರ ಕಂಬುಜ ರಾಜ್ಯದ ಅವನತಿ ಪ್ರಾರಂಭವಾಯಿತು. ಆಯುಥಿಯದ ರಾಜ ಕಂಬುಜವನ್ನು ವಶ ಮಾಡಿಕೊಂಡ.

ಮಲಯ ಪರ್ಯಾಯದ್ವೀಪ 1ನೆಯ ಶತಮಾನದಂದಲೇ ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿತ್ತು. ಪ್ರಾಚೀನ ಸಾಹಿತ್ಯದಲ್ಲಿ ಈ ದ್ವೀಪಗಳನ್ನು ಸ್ವರ್ಣದ್ವೀಪ ಅಥವಾ ಸುವರ್ಣಭೂಮಿ ಎಂದು ಉಲ್ಲೇಖಿಸಲಾಗಿದೆ. ಮೊಟ್ಟಮೊದಲು ಇದು ಬೌದ್ಧಧರ್ಮದ ಕೇಂದ್ರವಾಗಿತ್ತು. ಜಾವದಲ್ಲಿ 5ನೆಯ ಶತಮಾನದಲ್ಲಿ ಗುಣವರ್ಮನ ವಂಶದವರು ರಾಜ್ಯವಾಳುತ್ತಿದ್ದರು. ಇದೇ ಸಮಯದಲ್ಲಿ ಮಧ್ಯಜಾವದಲ್ಲಿ ಹೊಲಿಂಗ್ ಅಥವಾ ಕಳಿಂಗ ಎಂಬ ರಾಜ್ಯವಿದ್ದಿತು. ಸುಮಾತ್ರದಲ್ಲಿ 4ನೆಯ ಶತಮಾನದಲ್ಲಿ ಶ್ರೀವಿಜಯರಾಜ್ಯ ಸ್ಥಾಪನೆಯಾಗಿತ್ತು. ಬೋರ್ನಿಯೊ ದ್ವೀಪದಲ್ಲಿ ಬಲಯುತವಾದ ರಾಜ್ಯವಿಲ್ಲದಿದ್ದರೂ ಭಾರತೀಯ ಸಂಸ್ಕೃತಿ ವಿಶೇಷವಾಗಿ ಬಳಕೆಯಲ್ಲಿತ್ತು. ಮಲೇಷ್ಯದ ಈ ಸಣ್ಣಪುಟ್ಟ ರಾಜರುಗಳನ್ನೆಲ್ಲ

ಒಂದುಗೂಡಿಸಿ ಶೈಲೇಂದ್ರಸಾಮ್ರಾಜ್ಯ 8ನೆಯ ಶತಮಾನದಲ್ಲಿ ಬೆಳೆಯಿತು. ಶೈಲೇಂದ್ರರಿಗೂ ಭಾರತದ ಚೋಳರಿಗೂ ಅನೇಕ ನೌಕಾಯುದ್ಧಗಳು ನಡೆದವು. ಚೋಳರಾಜ ರಾಜೇಂದ್ರ ಶೈಲೇಂದ್ರರನ್ನು ಸೋಲಿಸಿ, ಅನೇಕ ಪ್ರದೇಶಗಳನ್ನು ತನ್ನ ವಶಮಾಡಿಕೊಂಡ. ಸ್ವಲ್ಪ ಕಾಲಾನಂತರ ಶೈಲೇಂದ್ರಸಾಮ್ರಾಜ್ಯ ಅವನತಿ ಹೊಂದಿತು.

ಜಾವ ದ್ವೀಪದಲ್ಲಿ 8ನೆಯ ಶತಮಾನದ ಆದಿಭಾಗದಲ್ಲಿ ಮತರಾಂ ರಾಜ್ಯಸ್ಥಾಪನೆಯಾಯಿತು. ಇದು ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟಿತು. ಸಿಂಡಕ್‌ರಾಜನ ಆಶ್ರಯದಲ್ಲಿ ಪೂರ್ವಜಾವ ಬಲಯುತವಾಗಿ ಬೆಳೆಯಿತು. ಈ ವಂಶದ ರಾಜರಲ್ಲಿ ಏರ್ಲಂಗ (1019–49) ಅತಿಮುಖ್ಯ. ಈತ ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಗಳಿಗೆ ವಿಶೇಷ ಪ್ರೋತ್ಸಾಹಕೊಟ್ಟ. ಏರ್ಲಂಗನ ಮರಣಾನಂತರ ರಾಜ್ಯ ಎರಡು ಭಾಗಗಳಾಗಿ ಕಡಿರಿ ಮತ್ತು ಸಿಂಘಸಾರಿ ಎಂಬ ರಾಜ್ಯಗಳಾದವು. ಸಾಹಿತ್ಯದೃಷ್ಟಿಯಿಂದ ಇವು ಬಹು ಮುಖ್ಯವಾದವು. ಈ ರಾಜ್ಯಗಳ ಪತನಾನಂತರ ಮಜಪಹಿತ್ ರಾಜ್ಯ ಸ್ಥಾಪನೆಯಾಯಿತು. ಕೃತನಗರ, ರಾಜಸನಗರ ಮುಂತಾದ ರಾಜರುಗಳು ಆಳಿದ ಅನಂತರ 1447ರ ಸಮಯಕ್ಕೆ ಮಜಪಹಿತ್ ರಾಜ್ಯನಾಶವಾಯಿತು. ಇಲ್ಲಿಗೆ ಜಾವ ದ್ವೀಪದಲ್ಲಿ ಭಾರತೀಯ ಸಂಸ್ಕೃತಿಯ ಅವನತಿಯಾಯಿತು. ಅದರ ಸಮೀಪದಲ್ಲೇ ಇರುವ ಬಾಲಿದ್ವೀಪದಲ್ಲಿ ಭಾರತೀಯ ಸಂಸ್ಕೃತಿ ಚೆನ್ನಾಗಿ ಅಭಿವೃದ್ಧಿಯಾಗಿತ್ತು. ಆದರೆ ರಾಜಕೀಯ ದೃಷ್ಟಿಯಿಂದ ಬಲವತ್ತರವಾದ ಸಾಮ್ರಾಜ್ಯಗಳಾವುವೂ ಇಲ್ಲಿ ಬೆಳೆಯಲಿಲ್ಲ.

ಚಂಪಾರಾಜ್ಯದಲ್ಲಿ (ವಿಯಟ್ನಾಮ್) 2ನೆಯ ಶತಮಾನದಿಂದಲೇ ಭಾರತೀಯರು ಬಂದು ನೆಲೆಸಿದ್ದರೆಂದು ಗೊತ್ತಾಗುತ್ತದೆ. ವೊಕಾನ್ ಶಾಸನದ ಶ್ರೀಮಾರನ ಮನೆತನದವರು ಭಾರತೀಯರೆಂದು ಚೆನ್ನಾಗಿ ಗೊತ್ತಾಗುತ್ತದೆ. 380–413ರವರೆಗೆ ಆಳಿದ ಭದ್ರವರ್ಮ ಮುಖ್ಯ ದೊರೆಗಳಲ್ಲೊಬ್ಬ. ಈತ ಭದ್ರೇಶ್ವರ ದೇವಾಲಯವನ್ನು ಸ್ಥಾಪಿಸಿದ. ಸ್ವಲ್ಪಕಾಲಾನಂತರ 530ರಲ್ಲಿ ರುದ್ರವರ್ಮ ಇನ್ನೊಂದು ರಾಜವಂಶವನ್ನು ಸ್ಥಾಪಿಸಿದ. 8ನೆಯ ಶತಮಾನದಲ್ಲಿ ಪಾಂಡುರಂಗವಂಶ ಸ್ಥಾಪಿತವಾಯಿತು. ಇದರಲ್ಲಿ ಮುಖ್ಯನಾದವ ಇಂದ್ರವರ್ಮ. ಅನಂತರ ಭೃಗುವಂಶ ಸ್ಥಾಪಿತವಾಯಿತು. ಎರಡನೆಯ ಇಂದ್ರವರ್ಮ (854–898) ಇಂದ್ರಪುರವೆಂಬ ಹೊಸನಗರವನ್ನು ಸ್ಥಾಪಿಸಿದ. ಭೃಗುವಂಶದಲ್ಲಿ ಹರಿವರ್ಮ, ಮೂರನೆಯ ಇಂದ್ರವರ್ಮ, ಪರಮೇಶ್ವರವರ್ಮ ಮುಂತಾದವರು ಮುಖ್ಯರು. ಈ ಮಧ್ಯೆ ಅನ್ನಾಂ ರಾಜ್ಯ ಚಂಪಾದ ಮೇಲೆ ಅನೇಕ ದಂಡಯಾತ್ರೆಗಳನ್ನು ನಡೆಸುತ್ತಿತ್ತು. ಇದರಿಂದಾಗಿ ಚಂಪಾರಾಜ್ಯವೂ ಅನ್ನಾಮಿನವರ ಕೈವಶವಾಯಿತು.

ಈ ಎಲ್ಲ ರಾಜ್ಯಗಳಲ್ಲೂ ಭಾರತೀಯ ಸಂಸ್ಕೃತಿಯ ಪ್ರಭಾವ ಕಾಣುತ್ತದೆ. ವರ್ಣಾಶ್ರಮ ಧರ್ಮಗಳು, ಶೈವ, ವೈಷ್ಣವ ಮತ್ತು ಬೌದ್ಧಧರ್ಮಗಳು ಪ್ರಚಲಿತವಾಗಿದ್ದುವು. ಸಂಸ್ಕೃತಭಾಷೆ ಆಡಳಿತ ಭಾಷೆಯಾಗಿತ್ತು. ನೂರಾರು ಸಂಸ್ಕೃತಶಾಸನಗಳು ಈ ರಾಜ್ಯಗಳಲ್ಲಿ ದೊರಕಿವೆ. ರಾಮಾಯಣ, ಮಹಾಭಾರತ ಮತ್ತು ಇತರ ಕಾವ್ಯಗಳು ಬಹಳ ಜನಾನುರಾಗಿಯಾಗಿದ್ದುವು. ಮನುಧರ್ಮಶಾಸ್ತ್ರ, ಅರ್ಥಶಾಸ್ತ್ರ ಮುಂತಾದವುಗಳಿಂದ ರಾಜರು ಸ್ಫೂರ್ತಿ ಪಡೆಯುತ್ತಿದ್ದರು. ಅಷ್ಟರಮಟ್ಟಿಗೆ ಭಾರತೀಯ ಸಂಸ್ಕೃತಿ ಈ ದೇಶಗಳಲ್ಲಿ ಚೆನ್ನಾಗಿ ಬೇರೂರಿತ್ತು. (ಎ.ವಿ.ಎನ್.)

ಭಾರತೀಯ ಸಂಸ್ಕೃತಿಯ ಪ್ರಭಾವ ಆಗ್ನೇಯ ಏಷ್ಯದಲ್ಲಿ ಕ್ಷೀಣವಾಗುತ್ತಿದ್ದಂತೆಯೇ ಅದರ ಸ್ಥಾನವನ್ನು ಪ್ರಪಂಚದ ಎರಡು ಮುಖ್ಯ ಮತಗಳೆನಿಸಿದ ಇಸ್ಲಾಂ ಮತ್ತು ಕ್ರೈಸ್ತಮತಗಳು ಆಕ್ರಮಿಸಿದುವು. ಆದರೂ ಭಾರತೀಯ ಸಂಸ್ಕೃತಿಯ ಪ್ರಭಾವದಿಂದ ಉಂಟಾದ ಪರಿಣಾಮಗಳು ಪೂರ್ಣವಾಗಿ ಅಳಿಸಿಹೋಗಲು ಸಾಧ್ಯವಾಗಲಿಲ್ಲ. ಜೊತೆಗೆ ಬೌದ್ಧಮತದ ಪ್ರಾಬಲ್ಯವೂ ಹೆಚ್ಚಾಯಿತು. ಸಾಮಾನ್ಯವಾಗಿ ಬರ್ಮ, ಥೈಲೆಂಡ್, ಕಾಂಬೋಡಿಯ ಮತ್ತು ವಿಯಟ್ನಾಮ್‌ಗಳು ಬೌದ್ಧಮತವನ್ನು ಅವಲಂಬಿಸಿದುವು. ಬರ್ಮ ಥೈಲೆಂಡ್‌ಗಳಲ್ಲಿ ಹೀನಯಾನ ಅಥವಾ ಥೇರವಾದ ತಂಡ ಕಾಂಬೋಡಿಯ ಮತ್ತು ವಿಯಟ್ನಾಮ್‌ಗಳಲ್ಲಿ ಮಹಾಯಾನ ಪಂಥ ಪ್ರಮುಖವಾದುವು. ಸು.1400ರಲ್ಲಿ ಮಲಯದೇಶದ ಪಶ್ಚಿಮತೀರದಲ್ಲಿ ಸ್ಥಾಪಿತವಾದ ಮಲಕ್ಕಾ ಎಂಬ ವ್ಯಾಪಾರಕೇಂದ್ರ ಆಗ್ನೇಯ ಏಷ್ಯದಲ್ಲಿ ಯುರೋಪಿಯನ್ನರು ಬರುವತನಕ ವ್ಯಾಪಾರಕ್ಕಲ್ಲದೆ, ಇಸ್ಲಾಂ ಮತದ ಪ್ರಸಾರಕ್ಕೂ ಕೇಂದ್ರವಾಗಿತ್ತು. ಮಲಕ್ಕಾದಿಂದಲೇ ಇಸ್ಲಾಂಧರ್ಮ ಮಲೇಷ್ಯ, ಇಂಡೊನೇಷ್ಯ ಮತ್ತು ಫಿಲಿಪ್ಪೀನ್ಸ್‌ನ ದಕ್ಷಿಣದ ಕೆಲವು ದ್ವೀಪಗಳಿಗೆ ಹಬ್ಬಿತು. ಆದರೆ ಕ್ರೈಸ್ತಧರ್ಮವೇ ಫಿಲಿಪ್ಪೀನ್ಸ್ ದ್ವೀಪಗಳಲ್ಲಿ ಪ್ರಾಮುಖ್ಯವಾಯಿತು.

ಯುರೋಪಿಯನ್ನರು ಆಗ್ನೇಯ ಏಷ್ಯದ ರಾಷ್ಟ್ರಗಳನ್ನು ತಮ್ಮ ವಸಾಹತುಗಳನ್ನಾಗಿ ಮಾಡಿಕೊಳ್ಳುವ ಮುನ್ನ ಈ ಭಾಗದ ರಾಜಕೀಯ ಇತಿಹಾಸ ಪರಸ್ಪರ ಕದನಗಳಿಂದಲೂ ಆಂತರಿಕ ಒಡಕುಗಳಿಂದಲೂ ತುಂಬಿತ್ತು. ಮಯನ್ಮಾರಿನವರು, ಮಯನ್ಮಾರಿನವರಲ್ಲದ ಇತರ ಜನಾಂಗಗಳಾದ ಶಾನ್‌ಕಾಚಿನ್ ಮತ್ತು ಮಾನ್‌ರನ್ನು ಗೆದ್ದು 11ನೆಯ ಶತಮಾನದ ಹೊತ್ತಿಗೆ ಪ್ಯಾಗನ್ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಈ ಸಾಮ್ರಾಜ್ಯದ ರಾಜಧಾನಿ ಪ್ಯಾಗನ್ ಪಟ್ಟಣವೇ ಆಗಿತ್ತು. ಈ ಸಾಮ್ರಾಜ್ಯದ ಅವಶೇಷಗಳನ್ನು ಇಂದಿಗೂ ಆ ನಗರದಲ್ಲಿ ನೋಡಬಹುದು. 13ನೆಯ ಶತಮಾನದ ಅನಂತರ ಈ ಸಾಮ್ರಾಜ್ಯ ಅವನತಿಗೊಂಡಿತು. 16ನೆಯ ಶತಮಾನದವರೆಗೂ ಮಯನ್ಮಾರ್ ಮತ್ತೆ ಒಂದಾಗಲಿಲ್ಲ. 16ನೆಯ ಶತಮಾನದಲ್ಲಿ ತೂಂಗೂ ರಾಜಮನೆತನದ ನೇತೃತ್ವದಲ್ಲೂ 18ನೆಯ ಶತಮಾನದಲ್ಲಿ ಅಲಂಗಪಾಂಗು ರಾಜಮನೆತನದ ನೇತೃತ್ವದಲ್ಲೂ ಮಯನ್ಮಾರ್ ಸ್ವಲ್ಪಕಾಲ ಉನ್ನತಸ್ಥಿತಿಗೆ ಬಂತು. ಈ ಮನೆತನದ ರಾಜರು ಕೊನೆಕೊನೆಗೆ ಅಶಕ್ತರಾಗಿ ಸುಖಲೋಲುಪರಾಗಿ ಮೂರು ಬರ್ಮಯುದ್ಧಗಳ ಅನಂತರ (1826, 1856, 1885), ಬ್ರಿಟಿಷರ ವಸಾಹತು ನೀತಿಗೆ 19ನೆಯ ಶತಮಾನದ ಆದಿಯಲ್ಲಿ ಒಳಗಾಗಬೇಕಾಯಿತು. ಕೊನೆಗೆ ಮಯನ್ಮಾರ್ ಸಂಪೂರ್ಣವಾಗಿ ಬ್ರಿಟಿಷರ ವಶವಾಯಿತು. ಸಯಾಂ ಅಥವಾ ಥೈಲೆಂಡಿನ ಇತಿಹಾಸ 13 ಮತ್ತು 14ನೆಯ ಶತಮಾನಗಳಲ್ಲಿ ಸ್ಥಾಪಿತವಾದ ನಗರರಾಜ್ಯಗಳಾದ ಸುಖೋಥೈ ಮತ್ತು ಚಿಯಾಂಗ್‌ಮಯ್‌ಗಳಿಂದ ಪ್ರಾರಂಭ ವಾಗುತ್ತದೆ. ಆದರೆ 1350ರಲ್ಲಿ ಸ್ಥಾಪಿತವಾದ ಅಯುತ್ತಯ ರಾಜಮನೆತನ (1350–1767) ಸಯಾಂನಲ್ಲಲ್ಲದೆ ಇಡೀ ಆಗ್ನೇಯ ಏಷ್ಯದಲ್ಲಿ ಪ್ರಾಮುಖ್ಯತೆ ಪಡೆಯಿತು. 1767ರಲ್ಲಿ ಬರ್ಮೀಯರ (ಈಗಿನ ಮಯನ್ಮಾರ್) ಧಾಳಿಯಿಂದಾಗಿ ಅಯುಥಿಯ ನಾಶವಾಯಿತು. ಅನಂತರ ಚಕ್ರಿಮನೆತನ ಬ್ಯಾಂಕಾಕ್ ನಗರದಲ್ಲಿ ತನ್ನ ಆಡಳಿತವನ್ನು ಪ್ರಾರಂಭಿಸಿತು (1782). ಈ ರಾಜಮನೆತನದ ಆಶ್ರಯದಲ್ಲಿ ಥೈಲೆಂಡ್ ಹೊಸ ಯುಗವನ್ನು ಕಂಡಿತು. ಆಗ್ನೇಯ ಏಷ್ಯದಲ್ಲೆಲ್ಲ ಥೈಲೆಂಡ್ ಮಾತ್ರ ಯುರೋಪಿಯನ್ನರ ವಸಾಹತು ನೀತಿಗೆ ಒಳಗಾಗಲಿಲ್ಲ. ಇದಕ್ಕೆ ಕಾರಣ ಚಕ್ರಿಮನೆತನದ ರಾಜರ ಉನ್ನತ ಹಾಗೂ ದಕ್ಷತೆಯ ರಾಜನೀತಿ. ಪಶ್ಚಿಮದಲ್ಲಿ ಬ್ರಿಟಿಷರು, ಪೂರ್ವದಲ್ಲಿ ಫ್ರೆಂಚರು ವಸಾಹತುಗಳನ್ನು ಸ್ಥಾಪಿಸಿದಾಗ, ಚಕ್ರಿಮನೆತನದ ರಾಜರು ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟುವುದರ ಮೂಲಕ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು.



ದಶಕಂಠ ರಾವಣ ಕೈಲಾಸವನ್ನೆತ್ತುತ್ತಿರುವುದು, ಬಾಂಟೇಶ್ರೀ

ಲಾವೋಸ್ ದೇಶದ ಇತಿಹಾಸ ಇತ್ತೀಚಿಗೆ ಪ್ರಾರಂಭವಾಯಿತು. 12ನೆಯ ಶತಮಾನದಲ್ಲಿ ತಲೆಎತ್ತಿದ್ದ ಚಿಕ್ಕ ಚಿಕ್ಕ ರಾಜ್ಯಗಳು, 1353ರ ಹೊತ್ತಿಗೆ ಲಾನ್‌ಗ್ಸಾಂಗ್ ರಾಜಮನೆತನದ ಅಧೀನಕ್ಕೆ ಒಳಗಾಗಿ, ಲುವಾಂಗ್ ಪ್ರಭಾಂಗ್ ನಗರದಿಂದ ತನ್ನ ಆಡಳಿತ ಪ್ರಾರಂಭಿಸಿತು. 18ನೆಯ ಶತಮಾನದ ಹೊತ್ತಿಗೆ ಲಾವೋಸ್‌ದೇಶದಲ್ಲಿ ಮೂರು ರಾಜಮನೆತನಗಳು, ಲುವಾಂಗ್ ಪ್ರಭಾಂಗ್‌ನಲ್ಲಿ, ವಿಯನ್ ಚಿಯನ್‌ನಲ್ಲಿ ಮತ್ತು ದಕ್ಷಿಣದ ಚಂಪಾಸಕ್‌ನಲ್ಲಿ ತಲೆಯೆತ್ತಿದುವು. ಅನಂತರ ಲಾವೋಸ್ ಸ್ವಲ್ಪಕಾಲ ಥೈಲೆಂಡಿನ ಅಧೀನದಲ್ಲಿದ್ದು 19ನೆಯ ಶತಮಾನದ ಆದಿಭಾಗದಲ್ಲಿ ಫ್ರೆಂಚರ ವಸಾಹತುನೀತಿಗೆ ತುತ್ತಾಯಿತು.

ಕಾಂಬೋಡಿಯ 12ನೆಯ ಮತ್ತು 13ನೆಯ ಶತಮಾನಗಳಲ್ಲಿ ಖ್ಮೆರ್ ಸಾಮ್ರಾಜ್ಯದ ನೇತೃತ್ವದಲ್ಲಿ ಅತ್ಯುನ್ನತ ಸ್ಥಿತಿಗೆ ಬಂದ ಅನಂತರ ಮತ್ತೆ ಅಂಥ ಯುಗವನ್ನು ನೋಡಲೇ ಇಲ್ಲ. ಇದಕ್ಕೆ ಕಾರಣ ಥಾಯ್ ಮತ್ತು ವಿಯಟ್ನಾಮೀಯರ ಪ್ರಾಬಲ್ಯ. 19ನೆಯ ಶತಮಾನದ ಆದಿಭಾಗದಲ್ಲಿ ಕಾಂಬೋಡಿಯ ಫ್ರೆಂಚರ ಅಧೀನಕ್ಕೊಳಗಾಯಿತು.

ವಿಯಟ್ನಮೀಸ್ ಅಥವಾ ಅನ್ನಮೀಸ್ ಜನಾಂಗದ ನಾಗರಿಕತೆಯ ಕೇಂದ್ರ ಕೆಂಪುನದಿಯ ಮುಖಜಭೂಮಿಯಾಗಿತ್ತು. ಈ ಜನಾಂಗದ ಇತಿಹಾಸ ಮುಖ್ಯವಾಗಿ ಉತ್ತರದಿಂದ ದಕ್ಷಿಣಕ್ಕೆ ವಲಸೆ ಬರುವುದೇ ಆಗಿತ್ತು. ಈ ಜನಾಂಗ ಚೀನಿ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿತ್ತು. ಪ್ರಶ.ಪೂ.111–ಪ್ರಶ.939ರವರೆಗೆ ವಿಯಟ್ನಾಮ್ ಚೀನದೇಶದ ಅಧೀನದಲ್ಲಿತ್ತು. ಈ ಕಾಲದಲ್ಲಿ ಅನೇಕ ಸಾರಿ ವಿಯಟ್ನಾಮ್ ಜನರು ಚೀನದ ರಾಜಕೀಯ ಆಡಳಿತದ ವಿರುದ್ಧ ದಂಗೆ ಎದ್ದರು. 1471ರಲ್ಲಿ ದಕ್ಷಿಣಕ್ಕೆ ಒತ್ತರಿಸಿ ಬರುತ್ತಿದ್ದ ವಿಯಟ್ನಮಿಸ್ ಜನಾಂಗ, ಈಗಿನ ದಕ್ಷಿಣ ವಿಯಟ್ನಾಮ್‌ನಲ್ಲಿದ್ದ ಚಂಪಾರಾಜ್ಯವನ್ನು ನಾಶಮಾಡಿದರು. ಅನಂತರ ಮೇಕಾಂಗ್ ನದಿಯ ಮುಖಜಭೂಮಿಯ ಪ್ರದೇಶವನ್ನು ಆಕ್ರಮಿಸಿಕೊಂಡು ಕಾಂಬೋಡಿಯನ್ನರನ್ನು ಅಲ್ಲಿಂದ ಓಡಿಸಿದರು. 18ನೆಯ ಶತಮಾನದ ಮಧ್ಯಭಾಗದಲ್ಲಿ ವಿಯಟ್ನಾಮ್ ತನ್ನದೇ ಆದ ಒಂದು ಸಾಮ್ರಾಜ್ಯವನ್ನು ಹೊಂದಿತ್ತು. 1857ರಲ್ಲಿ ಪ್ರಾರಂಭವಾದ ಫ್ರೆಂಚರ ಆಕ್ರಮಣ 1883ರಲ್ಲಿ ಮುಕ್ತಾಯವಾಗಿ, ವಿಯಟ್ನಾಮ್ ಸಂಪೂರ್ಣವಾಗಿ ಅವರ ವಶವಾಯಿತು.

1400ರಲ್ಲಿ ಸ್ಥಾಪಿತವಾದ ಮಲಕ್ಕಾ ವಾಣಿಜ್ಯಕೇಂದ್ರದಿಂದ ಮಲೇಷ್ಯದ ಆಧುನಿಕ ಇತಿಹಾಸ ಪ್ರಾರಂಭವಾಗುತ್ತದೆ. 15 ಮತ್ತು 16ನೆಯ ಶತಮಾನಗಳಲ್ಲಿ ಚಿಕ್ಕ ಚಿಕ್ಕ ಸುಲ್ತಾನ್ ರಾಜ್ಯಗಳು ಮಲಯದ ಅನೇಕ ಭಾಗಗಳಲ್ಲಿ ತಲೆಯೆತ್ತಿದುವು. 1511ರಲ್ಲಿ ಮಲಕ್ಕಾ ಪೋರ್ಚುಗೀಸರ ವಶವಾಯಿತು. ಬ್ರಿಟಿಷರು ಸಿಂಗಪುರವನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು, ಮಲಯದ ಸಣ್ಣ ಪುಟ್ಟ ರಾಜ್ಯಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡರು.

14ನೆಯ ಶತಮಾನದಲ್ಲಿ ಸ್ಥಾಪಿತವಾದ ಜಾವದ್ವೀಪದ ಮಜಪಹಿತ್ ಸಾಮ್ರಾಜ್ಯ ಇಂಡೊನೇಷ್ಯದ ಇತಿಹಾಸದಲ್ಲೆ ಬಹುಪ್ರಸಿದ್ಧವಾದದ್ದು. ಮಜಪಹಿತ್ ಹಿಂದುಸಂಸ್ಕೃತಿಯನ್ನು ಅನೇಕ ವಿಷಯಗಳಲ್ಲಿ ಅಳವಡಿಸಿಕೊಂಡಿತ್ತು. ಇದರ ಅವನತಿಯೊಂದಿಗೆ, ಇಸ್ಲಾಂ ಪ್ರಭಾವ ಇಂಡೊನೇಷ್ಯದಲ್ಲಿ ಬೆಳೆದು, ಅನೇಕ ಮುಸ್ಲಿಂ ರಾಜರುಗಳು ಜಾವ ಮತ್ತು ಸುಮಾತ್ರ ದ್ವೀಪಗಳಲ್ಲಿ ಪಾಳೆಪಟ್ಟುಗಳನ್ನು ಕಟ್ಟಿದರು. ಅವುಗಳಲ್ಲಿ ಮತಾರಾಂ ಮತ್ತು ಜೋಗ್ ಜಕಾರ್ತ ರಾಜ್ಯಗಳು ಮುಖ್ಯವಾದುವು. ಬಾಲಿದ್ವೀಪದಲ್ಲಿ ಮಾತ್ರ ಹಿಂದುಸಂಸ್ಕೃತಿ ಕೊನೆಯ



ವಿಷ್ಣುದೇವಾಲಯ ಗೋಪುರದ ಬೃಹತ್ ಶಿಲ್ಪ, ಬೇಯಾನ್

ವರೆಗೂ ಉಳಿದುಕೊಂಡು ಬಂದಿತು. 16ನೆಯ ಶತಮಾನದಲ್ಲಿ ವ್ಯಾಪಾರಕ್ಕಾಗಿ ಬಂದ ಡಚ್ಚರು, ಜಾವದ್ವೀಪದಿಂದ ಪ್ರಾರಂಭವಾಗಿ, ಇಂಡೊನೇಷ್ಯದ ಎಲ್ಲ ದ್ವೀಪಗಳನ್ನೂ ತಮ್ಮ ವಸಾಹತುಗಳನ್ನಾಗಿ ಮಾಡಿಕೊಂಡರು.

ಫಿಲಿಪೀನ್ಸ್‌ನ ಆಧುನಿಕ ಇತಿಹಾಸ ಸ್ಪಾನಿಷರ ಆಡಳಿತದಿಂದ ಪ್ರಾರಂಭವಾಗುತ್ತದೆ. 16ನೆಯ ಶತಮಾನದಲ್ಲಿ ಪ್ರಾರಂಭವಾದ ಇವರ ಆಡಳಿತ 1899ರವರೆಗೆ ಇತ್ತು. ಈ ಕಾಲದಲ್ಲಿ ಕ್ರೈಸ್ತಮತ ಯುರೋಪಿಯನ್ನರ ಸಂಸ್ಕೃತಿ ಪ್ರಭಾವಗಳು, ಫಿಲಿಪೀನ್ಸ್ ಜನಾಂಗದವರ ಮೇಲೆ ಅಚ್ಚೊತ್ತಿದುವು. 1899ರ ಅನಂತರ ಈ ದೇಶ ಅಮೆರಿಕದ ವಸಾಹತಾಯಿತು. ಯುರೋಪಿಯನ್ನರ ಮತ್ತು ಅಮೆರಿಕನ್ನರ ಆಗಮನದಿಂದಾಗಿ ಒಂದು ದೊಡ್ಡ ಕ್ರಾಂತಿಯೇ ಈ ಭಾಗದಲ್ಲಿ ವಾಸಮಾಡುವ ವಿವಿಧ ಜನಾಂಗಗಳ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಉಂಟಾಯಿತು. ಆಗ ಪ್ರಾರಂಭವಾದ ಕ್ರಾಂತಿ ಈಗಲೂ ಮುಂದುವರಿದಿದೆ.

ಯುರೋಪಿಯನ್ನರು 15ನೆಯ ಶತಮಾನದಲ್ಲಿ ಕೊಲಂಬಸ್‌ನಿಂದ ಪ್ರಾರಂಭವಾದ ಅನ್ವೇಷಣೆಯ ಅನಂತರ, ಆಗ್ನೇಯ ಏಷ್ಯದ ದ್ವೀಪಗಳಲ್ಲಿ ದೊರೆಯುವ ಮೆಣಸು, ಏಲಕ್ಕಿ, ಲವಂಗ ಮೊದಲಾದ ಸಾಂಬಾರ ಪದಾರ್ಥಗಳನ್ನು ಹುಡುಕಿಕೊಂಡು ಬಂದರು. ಮೊದಮೊದಲು ವ್ಯಾಪಾರವೇ ಅವರ ಮುಖ್ಯ ಉದ್ದೇಶವಾಗಿತ್ತು. ಹಾಗೆ ಬಂದವರಲ್ಲಿ ಪೋರ್ಚುಗೀಸರು ಮೊದಲಿಗರು. ಅವರು ಮಲಕ್ಕಾವನ್ನು ಆಕ್ರಮಿಸಿಕೊಂಡು ಆಗ್ನೇಯ ಏಷ್ಯದ ಆಧುನಿಕ ಇತಿಹಾಸವನ್ನು ಪ್ರಾರಂಭಿಸಿದರು (1511). ಅನಂತರ ಡಚ್ಚರು, ಇಂಗ್ಲಿಷರು, ಸ್ಪೇನಿನವರು, ಫ್ರೆಂಚರು, ಅಮೆರಿಕನ್ನರು ಪೋರ್ಚುಗೀಸರ ದಾರಿಯಲ್ಲೇ ಬಂದು, ವ್ಯಾಪಾರಕ್ಕಾಗಿ ಕೋಟೆಗಳನ್ನು ಕಟ್ಟಿದರು. ಅಲ್ಲಿಂದ ರಾಜಕೀಯದಲ್ಲಿ ಆಸಕ್ತಿಹೊಂದಿ, ಅವನತಿ ಹೊಂದುತ್ತಿದ್ದ ಚಿಕ್ಕಪುಟ್ಟ ರಾಜ್ಯಗಳನ್ನು ಕುತಂತ್ರಗಳಿಂದಲೂ ಯುದ್ಧಗಳಿಂದಲೂ ಸೋಲಿಸಿ 19ನೆಯ ಶತಮಾನದ ಹೊತ್ತಿಗೆ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಕ್ರೈಸ್ತಮತವೂ ಆಗ್ನೇಯ ಏಷ್ಯಕ್ಕೆ ಬಂತು. ಬರ್ಮ ಮತ್ತು ಮಲಯ ಬ್ರಿಟಿಷರ ವಶವಾದುವು. ಇಂಡೊನೇಷ್ಯ ಡಚ್ಚರ ವಶವಾಯಿತು. ಫಿಲಿಪೀನ್ಸ್ ಸ್ಪೇನಿನ ಅಧೀನದಲ್ಲಿ 1899ರವರೆಗೆ ಇದ್ದು ಅನಂತರ ಸ್ಪಾನಿಷ್-ಅಮೆರಿಕನ್ ಯುದ್ಧದ ಪರಿಣಾಮವಾಗಿ, ಅಮೆರಿಕದ ಆಶ್ರಯಕ್ಕೆ ಬಂತು. ಫ್ರೆಂಚರು 19ನೆಯ ಶತಮಾನದ ಹೊತ್ತಿಗೆ, ವಿಯಟ್ನಾಮ್, ಕಾಂಬೋಡಿಯ ಮತ್ತು ಲಾವೊಸ್‌ಗಳಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದರು. ಥೈಲೆಂಡ್ ಮಾತ್ರ ಯಾರ ಅಧೀನಕ್ಕೂ ಒಳಗಾಗಲಿಲ್ಲ.

ಆಗ್ನೇಯ ಏಷ್ಯದಲ್ಲಿ ಈ ರೀತಿ ಆರಂಭವಾದ ವಸಾಹತುಗಳಿಂದ ಯುರೋಪಿಯನ್ನರಿಗೆ ಮತ್ತು ಅಮೆರಿಕನ್ನರಿಗೆ ಎರಡು ರೀತಿಯ ಉಪಯೋಗವಿತ್ತು. ಒಂದು, ಇವು ಯುರೋಪಿನ ಕೈಗಾರಿಕೆಗಳಿಗೆ, ಕಚ್ಚಾಪದಾರ್ಥಗಳನ್ನು ಒದಗಿಸಿಕೊಡುತ್ತಿದ್ದುವು. ಎರಡು, ಯುರೋಪಿನಲ್ಲಿ ತಯಾರಾದ ಸಿದ್ಧವಸ್ತುಗಳಿಗೆ ಇವು ಮಾರುಕಟ್ಟೆಯಾಗಿದ್ದವು. ಟಿನ್, ರಬ್ಬರ್, ಅಕ್ಕಿ, ಪೆಟ್ರೋಲಿಯಂಗಳಿಗೆ ಆಗ್ನೇಯ ಏಷ್ಯ ಬಹಳ ಪ್ರಾಮುಖ್ಯವಾಗಿತ್ತೆಂಬ ಅಂಶವನ್ನು ಇಲ್ಲಿ ಸ್ಮರಿಸಬಹುದು.

ವಿವಿಧ ಯುರೋಪಿಯನ್ ರಾಷ್ಟ್ರಗಳು ಅನೇಕ ರೀತಿಯ ರಾಜ್ಯಾಡಳಿತ ಕ್ರಮಗಳನ್ನು, ನೀತಿಗಳನ್ನು ತಮ್ಮ ವಸಾಹತುಗಳಲ್ಲಿ ಅನುಸರಿಸಿದರು. ಇವುಗಳ ಪರಿಣಾಮಗಳಲ್ಲಿ ವ್ಯತ್ಯಾಸಗಳಿದ್ದರೂ ಅವರ ವಸಾಹತು ನೀತಿ ದೇಶೀಯ ಜನರಿಗೆ ಅಷ್ಟಾಗಿ ಉಪಯೋಗವಾಗಲಿಲ್ಲ. ಇವರಿಂದ ದೇಶೀಯರಿಗೆ ತೊಂದರೆಯೇ ಹೆಚ್ಚಾಯಿತು. ಯುರೋಪಿಯನ್ನರು ಸ್ಥಾಪಿಸಿದ ಗಣಿಗಳಲ್ಲಿ ರಬ್ಬರ್ ಮತ್ತು ಕಾಫಿತೋಟಗಳಲ್ಲಿ ದುಡಿಯಲು ಚೀನಿಯರು ಆಗ್ನೇಯ ಏಷ್ಯದ ರಾಷ್ಟ್ರಗಳಿಗೆ ವಲಸೆಹೋಗಿ, ಅಲ್ಲಿ ನಿಂತು, ಅನೇಕ ಸಾರಿ ಆ ದೇಶಗಳ ಸ್ವಾತಂತ್ರ್ಯ ಹೋರಾಟದಲ್ಲಿ ಸಮಸ್ಯೆಯಾದರು. ಭಾರತೀಯರು ಮಲಯ ಮತ್ತು ಮಯನ್ಮಾರಿನಲ್ಲೂ, ಚೀನಿಯರು ಇಂಡೊನೇಷ್ಯ, ಥೈಲೆಂಡ್, ಮಲಯಗಳಲ್ಲೂ ಹೆಚ್ಚಾಗಿ ಆಯಾ ದೇಶಗಳ ಜನಾಂಗದ ಸಮಾಜದಲ್ಲಿ ಮುಖ್ಯ ಅಂಶವಾದರು.

ವಸಾಹತುನೀತಿಯ ವಿರುದ್ಧವಾಗಿ, ದೇಶೀಯರು ಈ ಶತಮಾನದ ಆದಿಭಾಗದಿಂದ ಸ್ವಾತಂತ್ರ್ಯ ಚಳವಳಿಯನ್ನು ಪ್ರಾರಂಭಮಾಡಿದರು. ಮೊದಮೊದಲು ಈ ಸಂಗ್ರಾಮ ಆಧುನಿಕ ವಿದ್ಯಾಭ್ಯಾಸವನ್ನು ಪರದೇಶಗಳಲ್ಲಿ ಮುಗಿಸಿ ಬಂದ ವಿದ್ಯಾವಂತರಿಂದ ಪ್ರಾರಂಭವಾಗಿ, ಕೊನೆಗೆ 2ನೆಯ ಮಹಾಯುದ್ಧವಾದ ಅನಂತರ ಎಲ್ಲರೂ ಭಾಗವಹಿಸುವಂತಾಯಿತು. ಇಂಡೊನೇಷ್ಯದ ಸುಕಾರ್ನೊ ಮತ್ತು ಮಹಮದ್ ಹಟ್ಟಾ, ಮಯನ್ಮಾರಿನ ಅಂಗಸಾನ್ ಮತ್ತು ಉನೂ, ಫಿಲಿಪೀನ್ಸ್‌ನ ಜೋಸ್ ರಿಜಾಲೆ, ವಿಯಟ್ನಾಮ್‌ನ ಹೋಚಿಮಿನ್, ಮಲಯಾದ ಟುಂಕು ಅಬ್ದುಲ್ ರಹಮಾನ್ ಆಗ್ನೇಯ ಏಷ್ಯದ ಸ್ವಾತಂತ್ರ್ಯಸಂಗ್ರಾಮದ ಮೂಲಪುರುಷರಲ್ಲಿ ಅಗ್ರಗಣ್ಯರಾದರು. ಈ ಹೋರಾಟ ಜಪಾನೀಯರು ಆಗ್ನೇಯ ಏಷ್ಯವನ್ನು ಆಕ್ರಮಿಸಿಕೊಂಡ ಕಾಲದಲ್ಲಿ ಹೆಚ್ಚಾಯಿತು (1942–45). ಜಪಾನೀಯರ ವಿಜಯದಿಂದ ಯುರೋಪಿಯನ್ನರನ್ನು ಏಷ್ಯನ್ನರು ಗೆಲ್ಲಲು ಸಾಧ್ಯವಿಲ್ಲ ಎಂಬ ನಂಬಿಕೆ ನಶಿಸಿಹೋಯಿತು. 2ನೆಯ ಮಹಾಯುದ್ಧದ ಅನಂತರ ಒಂದೊಂದೇ ರಾಷ್ಟ್ರಗಳು ಸ್ವತಂತ್ರವಾದುವು. ಫಿಲಿಪೀನ್ಸ್ ಅಮೆರಿಕನ್ನರಿಂದ ಸ್ವಾತಂತ್ರ ಗಳಿಸಿತು (1946). ಮಯನ್ಮಾರ್ ಬ್ರಿಟಿಷ್‌ರಿಂದಲೂ (1948), ಇಂಡೊನೇಷ್ಯ ಡಚ್ಚರಿಂದಲೂ (1949), ವಿಯಟ್ನಾಮ್, ಲಾವೊಸ್ ಮತ್ತು ಕಾಂಬೋಡಿಯಗಳು (1954), ಮಲಯ ಫ್ರೆಂಚರಿಂದಲೂ (1957) ಸ್ವಾತಂತ್ರ್ಯ ಗಳಿಸಿದುವು.

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಆಗ್ನೇಯ ಏಷ್ಯ ಇತ್ತೀಚೆಗೆ ಬಹು ಪ್ರಾಮುಖ್ಯವಾಗಿದೆ. 1954ರಲ್ಲಿ ನಡೆದ ಜಿನೀವ ಒಪ್ಪಂದದ ಪ್ರಕಾರ ವಿಯಟ್ನಾಮ್‌ದೇಶ ಇಬ್ಭಾಗವಾಗಿ, ಉತ್ತರ ವಿಯಟ್ನಾಮ್ ಕಮ್ಯುನಿಸ್ಟರ ಹಿಡಿತಕ್ಕೆ ಬಂತು; ದಕ್ಷಿಣ ವಿಯಟ್ನಾಮ್ ಯುರೋಪಿನ ಮತ್ತು ಅಮೆರಿಕನ್ ಶಕ್ತಿಬಣಕ್ಕೆ ಸೇರಿದ ಪ್ರಜಾಸತ್ತೆಯ ರಾಷ್ಟ್ರವಾಯಿತು. ಈ ಸಮಸ್ಯೆ ಇವತ್ತಿಗೂ ಬೃಹದಾಕಾರವಾಗಿ ನಿಂತಿದೆ. ಅಮೆರಿಕ, ಚೀನ ಮತ್ತು ರಷ್ಯಗಳು ಆಗ್ನೇಯ ಏಷ್ಯದ ರಾಷ್ಟ್ರಗಳ ಪರ ಮತ್ತು ವಿರುದ್ಧವಾಗಿ ಬೆಂಬಲಕ್ಕೆ ನಿಂತು ತಮ್ಮ ತಮ್ಮ ಶಕ್ತಿ ಪ್ರದರ್ಶನ ನಡೆಸುತ್ತಿವೆ. ಅಮೆರಿಕದ ನೇತೃತ್ವದಲ್ಲಿ ಸಿಯಾಟೋ ಎಂಬ ಮಿಲಿಟರಿ ಬಣವನ್ನು ಫಿಲಿಪ್ಪಿನ್ಸ್, ಥೈಲೆಂಡ್, ಪಾಕಿಸ್ತಾನಗಳನ್ನು ಒಳಗೊಂಡಂತೆ ಕಮ್ಯುನಿಸ್ಟರ ಪ್ರಭಾವವನ್ನು ಆಗ್ನೇಯ ಏಷ್ಯದಲ್ಲಿ ತಡೆಯುವಂತೆ ರಚಿತವಾಯಿತು (1954). ಇಂಡೊನೇಷ್ಯದ ಬಾಂಡುಂಗ್‌ನಲ್ಲಿ ಮೊತ್ತಮೊದಲಿಗೆ ಏಷ್ಯನ್ ಮತ್ತು ಆಫ್ರಿಕನ್ ರಾಷ್ಟ್ರಗಳ ಅಗ್ರಸಮ್ಮೇಳನ ನಡೆಯಿತು (1955). ಕಾಂಬೋಡಿಯ, ಇಂಡೊನೇಷ್ಯ, ಲಾವೊಸ್ ಮತ್ತು ಮಯನ್ಮಾರ್ ದೇಶಗಳು ಯಾವ ಶಕ್ತಿಬಣಕ್ಕೂ ಸೇರದ ತಟಸ್ಥನೀತಿಯನ್ನು ಅನುಸರಿಸುತ್ತಿವೆ. (ಕೆ.ಎಸ್.ಎಸ್.)

**ವಾಸ್ತುಶಿಲ್ಪ:** ಪ್ರಾಚೀನ ಕಂಬುಜದ ವಾಸ್ತುಶಿಲ್ಪವನ್ನು ಶೈಲಿಯ ದೃಷ್ಟಿಯಿಂದ ಇಂಡೋಖ್ಮೆರ್ ಮತ್ತು ಖ್ಮೆರ್ ಎಂದು 2 ಪ್ರಕಾರಗಳಾಗಿ ವಿಂಗಡಿಸಬಹುದು. ಇಂಡೋಖ್ಮೆರ್ ಶೈಲಿಯ ವಾಸ್ತುಶಿಲ್ಪದಲ್ಲಿ ವಿಶೇಷವಾಗಿ ಭಾರತೀಯ ಸಂಪ್ರದಾಯಕ್ಕೆ ಸೇರಿದ ವಾಸ್ತುಶಿಲ್ಪದ ನಿರ್ಮಾಣ ವನ್ನು ಕಾಣುತ್ತೇವೆ. ಖ್ಮೆರ್ ಶೈಲಿಯಲ್ಲಿ ಭಾರತೀಯ ಪ್ರಭಾವ ಕಡಿಮೆಯಾದಂತೆ ತೋರುತ್ತದೆ. ಇಂಡೋಖ್ಮೆರ್ ಶೈಲಿಯ ದೇವಾಲಯವನ್ನು ವ್ಯಾಧಪುರದಲ್ಲಿ ಕಾಣಬಹುದು. ಇಲ್ಲಿಯ ದೇವಾಲಯಗಳು ಸಾಮಾನ್ಯವಾಗಿ ಇಟ್ಟಿಗೆಯಿಂದ ನಿರ್ಮಿತವಾದವು. ಗುಪ್ತಶೈಲಿಯ ದೇವಾಲಯಗಳನ್ನು ಇವು ಹೋಲುತ್ತವೆ. ಹಂಚೆ ಎಂಬಲ್ಲಿರುವ ಕಲ್ಲಿನ ದೇವಾಲಯ ಶೈಲಿಯ ದೃಷ್ಟಿಯಿಂದ ಐಹೊಳೆಯ ಲಾಡಖಾನ್ ದೇಗುಲಕ್ಕೆ ಸಮೀಪವರ್ತಿಯಾಗಿದೆ. ಪ್ರೆಕುಕ್ ಎಂಬ ಸ್ಥಳದಲ್ಲಿ ದೊರಕಿರುವ ದೇವಾಲಯವಂತೂ

ಭಾರತೀಯ ವಾಸ್ತುಸಂಪ್ರದಾಯಕ್ಕೇ ಸೇರಿದುದಾಗಿದೆ. ಇಲ್ಲಿರುವ ಮಕರ ತೋರಣ, ಹಂಸಗಳ ಸಾಲು, ಚೈತ್ಯ ಗವಾಕ್ಷಿಗಳು ಗಮನಾರ್ಹವಾದುವು. ಬಯಾಂಗ್ ಎಂಬಲ್ಲಿರುವ ಕಲ್ಲಿನ ದೇವಾಲಯ ಅತ್ಯಂತ ಮನೋಹರವಾದ ಕಟ್ಟಡ. ಇದು ಚೌಕನೆಯ ಹಜಾರ ಮತ್ತು ಪದರಗಳುಳ್ಳ ಶಿಖರಗಳನ್ನು ಹೊಂದಿದೆ. ಈ ಪದರಗಳಲ್ಲಿ ಅಲಂಕೃತವಾದ ಲತೆಗಳೂ ಇತರ ಪ್ರಾಣಿಗಳೂ ಶಿಲ್ಪಿತವಾಗಿವೆ. ಈ ದೇವಾಲಯ ಪಲ್ಲವ ಶೈಲಿಯ ಪನಮಲೈ ದೇಗುಲವನ್ನು ಬಹುವಾಗಿ ಹೋಲುತ್ತದೆ. ಇಂಡೋಖ್ಮೇರ್ ಶೈಲಿಯ ಶಿಲ್ಪದಲ್ಲಿ ರಾಜ್‌ಗಿಯಾ ಎಂಬಲ್ಲಿ

ಬೌದ್ಧ ದೇವಾಲಯ, ಬೇಯಾನ್

ದೊರಕಿರುವ ಅವಲೋಕಿತೇಶ್ವರ ವಿಗ್ರಹ ಮುಖ್ಯವಾದುದು. ಪ್ರಸಾತ್ ಅಂದೆತ್‌ನಲ್ಲಿ ಸಿಕ್ಕಿರುವ ಹರಿಹರನ ಶಿಲ್ಪ ಕಾಂಚಿಯ ಕೈಲಾಸನಾಥ ದೇವಾಲಯದ ಶಿಲ್ಪಗಳನ್ನು ನಮ್ಮ ಗಮನಕ್ಕೆ ತರುತ್ತದೆ.

ಖ್ಮೆರ್ ಶೈಲಿಯ ದೇವಾಲಯಗಳಲ್ಲಿ ಭಾರತೀಯ ಸಂಪ್ರದಾಯ ಅಷ್ಟಾಗಿ ಕಾಣಬುರುದಿಲ್ಲ. ಇಲ್ಲಿ ಮಕರತೋರಣಗಳಾಗಲೀ ಚೈತ್ಯ ಗವಾಕ್ಷಿಗಳಾಗಲೀ ದುಂಡನೆಯ ಕಂಬಗಳಾಗಲೀ ಕಾಣಬರುವುದಿಲ್ಲ. ಶಿಖರಗಳ ಬದಲು ಮನುಷ್ಯನ ಮುಖವುಳ್ಳ ಗೋಪುರಗಳಿವೆ. ಆದರೆ ಪೌರಾಣಿಕ ಕಥೆಗಳು ಮತ್ತು ಇತರ ಅಲಂಕಾರಗಳು ಭಾರತ ದೇಶದ ಸಂಪ್ರದಾಯಕ್ಕೇ ಸೇರಿದವುಗಳಾಗಿವೆ. ದೇವರಾಜಲಿಂಗ ಉಪಾಸನೆ ಖ್ಮೆರ್ ಶೈಲಿಯ ಅನೇಕ ದೇವಾಲಯ ಗಳಿಗೆ ದಾರಿ ಮಾಡಿಕೊಟ್ಟಿತು. ಅಮರೇಂದ್ರಪುರ, ಹರಿಹರಾಲಯ, ಯಶೋಧರ ಪುರ ಮುಂತಾದುವು ಬೆಳೆದವು. 12ನೆಯ ಶತಮಾನದ ಆಂಕೋರ್‌ವಾಟ್ ದೇವಾಲಯ ಖ್ಮೆರ್ ವಾಸ್ತುಶಿಲ್ಪದ ಮಹೋನ್ನತ ಕೃತಿ. ಇಲ್ಲಿ ಎಲ್ಲವೂ ಬೃಹತ್ ಪ್ರಮಾಣದಲ್ಲಿವೆ. ಮೊಟ್ಟಮೊದಲು ಇರುವ ಕಂದಕ ಸು. 180ಮೀ ಅಗಲವಾಗಿದ್ದು, ಒಂದು ಸುತ್ತುಬಂದರೆ ಸು.20 ಕಿಮೀ ಆಗುತ್ತದೆ. ಇದರ ಒಳಗೆ ಕೋಟೆಯಿದೆ. ಇದಕ್ಕೆ ಬರಲು ನಾಲ್ಕೂ ದಿಕ್ಕಿನಿಂದ ರಾಜಪಥವಿದೆ. ಮಧ್ಯದಲ್ಲಿ 60ಮೀ ಎತ್ತರದ ಶಿಖರವೂ ಅಲ್ಲಿಯೇ ಒಂದು ದೇವಾಲಯವೂ ಇದೆ. ದೇವಾಲಯದ ಗೋಡೆಗಳಲ್ಲಿ ರಾಮಾಯಣ ಮತ್ತು ಇತರ ಪೌರಾಣಿಕ ಕಥೆಗಳು ಶಿಲ್ಪಿತವಾಗಿವೆ. ಮತ್ತೆ ಕಂಬುಜದಲ್ಲಿ ಈ ರೀತಿಯ ವಾಸ್ತುಶಿಲ್ಪ ನಿರ್ಮಾಣವಾಗಲೇ ಇಲ್ಲ.

ಆಗ್ನೇಯ ಏಷ್ಯ ವಾಸ್ತುಶಿಲ್ಪಕ್ಕೆ ಜಾವ ದ್ವೀಪದ ಕೊಡುಗೆ ಮಹತ್ತರವಾದದ್ದು. ಜಾವದ ದೇವಾಲಯಗಳು ಸಾಮಾನ್ಯವಾಗಿ ಎತ್ತರದ ಆಧಾರಜಗಲಿ, ಚೌಕವಾದ ದೇವಾಲಯ ಮತ್ತು ಶಿಖರ ಚಚ್ಚೌಕವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತ ಬರುತ್ತದೆ. ಗೋಡೆಗಳ ಮೇಲೆ ಅಲಂಕಾರದ ಲತೆಗಳು, ಹೂಗಳು ಇರುತ್ತವೆ. ಕಾಲಮಕರ ಅಥವಾ ಕೀರ್ತಿಮುಖವೂ ಸಾಮಾನ್ಯವಾಗಿ ಕಾಣಬರುತ್ತದೆ. ಇಲ್ಲಿನ ದೇವಾಲಯಗಳಲ್ಲಿ ಕಂಬಗಳು ಇಲ್ಲವೆಂದೇ ಹೇಳಬೇಕು. ಮಧ್ಯ ಜಾವದಲ್ಲಿ 8–11ನೆಯ ಶತಮಾನದವರೆಗೆ ವಿಶೇಷವಾಗಿ ದೇವಾಲಯಗಳು ನಿರ್ಮಿತವಾದವು. ಡಿಯಾಂಗ್ ಪ್ರಸ್ಥಭೂಮಿಯಲ್ಲಿ 8ನೆಯ ಶತಮಾನಕ್ಕೆ ಸೇರಿದ ಅನೇಕ ದೇಗುಲಗಳಿವೆ. ಇಲ್ಲಿ ಮಹಾಭಾರತ ಕಥೆಯ ಶಿಲ್ಪಗಳು, ಈಶ್ವರ, ದುರ್ಗಿ, ಗಣೇಶ, ವಿಷ್ಣು, ಬ್ರಹ್ಮ ಮುಂತಾದ ದೇವತೆಗಳ ಶಿಲ್ಪಗಳೂ ದೊರಕಿವೆ. ಪ್ರಂಬಾನನ್ ಎಂಬಲ್ಲಿ ದೊರಕಿರುವ ಶಿಲ್ಪಗಳು ಗಮನಾರ್ಹವಾದುವು. ಚಂಡಿಕಲಶನ್, ಚಂಡಿಸರಿ, ಚಂಡಿಸೇವು ದೇವಾಲಯಗಳು ಪ್ರಂಬಾನನ್ ಪ್ರದೇಶದ ಮುಖ್ಯದೇವಾಲಯಗಳು. ಕೆಡು ಪ್ರದೇಶದ ದೇವಾಲಯಗಳಲ್ಲಿ ಚಂಡಿಮೆಂದುತ್ ಮತ್ತು ಚಂಡಿಪವನ್ ಮುಖ್ಯವಾದುವು. ಇಲ್ಲಿ ಶೈವ, ವೈಷ್ಣವ ಮತ್ತು ಬೌದ್ಧಧರ್ಮದ ಶಿಲ್ಪಗಳನ್ನು ಕಾಣಬಹುದು.

ಪ್ರಾಚೀನ ಜಾವದಲ್ಲಿ ಶೈವ, ವೈಷ್ಣವ, ಶಕ್ತಿ, ಆಗಮ ಮತ್ತು ಮಹಾಯಾನ ಪಂಥಗಳು ಮೇಳೈಸಿದುದ್ದಕ್ಕೆ ಈ ದ್ವೀಪದ ಧಾರ್ಮಿಕ ಸ್ಮಾರಕಗಳೇ ಸಾಕ್ಷಿ. ಡಿಯಂಗ್ ಪ್ರಸ್ಥಭೂಮಿಯ ವಾಸ್ತುನಿರ್ಮಿತಿಗಳು ಅತ್ಯಂತ ಪ್ರಾಚೀನವಾದುವು. ಇವು ಸರಳವಾಗಿದ್ದು ದ್ರಾವಿಡ ವಿಮಾನ ಮಾದರಿಯಂತೆ ಕಾಣುತ್ತವೆ. ಜಾವದ ಅತ್ಯಂತ ಮಹತ್ತರವಾದ ಕಲಾಕೃತಿಯೆಂದರೆ ಮಹಾಯಾನ ಪಂಥದ ಬೋರಬದೂರ್ ದೇವಾಲಯ. ಇದು ಒಂದು ಸಣ್ಣ ಬೆಟ್ಟದ ಮೇಲಿದೆ. ಈ ಸ್ತೂಪ ಬೌದ್ಧಸ್ಮಾರಕಗಳ ಮುಕುಟಮಣಿಯಾಗಿದೆ. ಈ ಸೌಧದಲ್ಲಿ ಕಿರಿದಾಗುತ್ತಾ ಹೋಗುವ ಒಂಬತ್ತು ಅಂತಸ್ತುಗಳಿದ್ದು ಅತ್ಯಂತ ಎತ್ತರದ ಅಂತಸ್ತಿನ ಮೇಲೆ ಘಂಟಾಕೃತಿಯ ಸ್ತೂಪವಿದೆ. ಈ ಸ್ತೂಪದ ಅಧಿಷ್ಠಾನ, ಗೋಡೆ ಹಾಗೂ ಕಟಾಂಜನಗಳ ಮೇಲೆ ಜಾತಕ ಹಾಗೂ ಅವದಾನಗಳಿಂದಾಯ್ದ ಕಥೆಗಳನ್ನೂ ಕರ್ಮವಿಭಾಗ–ಗಂಡವ್ಯೂಹ ಮುಂತಾದ ತಾಂತ್ರಿಕ ಪಠ್ಯಗಳ ಮುಖ್ಯತತ್ತ್ವಗಳನ್ನೂ ಕಂಡರಿಸಲಾಗಿದೆ. ಮೊದಲಿನ ಆರು ಅಂತಸ್ತುಗಳು ಚೌಕಾಕಾರ ದಲ್ಲೂ ಮೇಲಿನ ಮೂರು ಅಂತಸ್ತುಗಳು ವರ್ತುಲಾಕಾರದಲ್ಲೂ ಇವೆ. ವರ್ತುಲಾಕಾರದ ಅಂತಸ್ತುಗಳಲ್ಲಿ ಸುತ್ತಲೂ ಇರುವ ಸಣ್ಣಸ್ತೂಪಗಳಲ್ಲಿ 432 ಬುದ್ಧನ ವಿಗ್ರಹಗಳಿವೆ. ಮೇಲೆ ಹತ್ತಿಹೋಗಲು ನಾಲ್ಕು ದಿಕ್ಕುಗಳಲ್ಲೂ ಮೆಟ್ಟಿಲುಗಳಿವೆ. ವಾಸ್ತುಶಾಸ್ತ್ರದೃಷ್ಟಿ ಯಿಂದ ಮಾತ್ರವಲ್ಲದೇ ಶಿಲ್ಪಕಲೆಯ ದೃಷ್ಟಿಯಿಂದಲೂ ಬೋರಬದೂರ್ ಮಹತ್ತರವಾದುದು. ಇಲ್ಲಿ ಕೊನೆಯಪಕ್ಷ 1,500 ಶಿಲ್ಪಫಲಕಗಳಿವೆ. ಇವುಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಪಟ್ಟ ಕಥೆಗಳನ್ನು ಕಾಣಬಹುದು. ಶಿಲ್ಪಕಲಾ ದೃಷ್ಟಿಯಿಂದ ಅತ್ಯಂತ ನಯನಮನೋಹರವಾದ ಕಲಾಕೃತಿಗಳಿವು. ಇವನ್ನು ಬಿಟ್ಟರೆ ಲರಜೋಂಗ್‌ರಂಗ್ ಎಂಬಲ್ಲಿ ದೊರಕಿರುವ ದೇವಾಲಯಗಳು ಮುಖ್ಯವಾದುವು. ಇವು ಮಧ್ಯ ಜಾವದ ವಾಸ್ತುಶಿಲ್ಪದ ಅತ್ಯುತ್ತಮ ನಿದರ್ಶನವಾಗಿವೆ. ಬ್ರಹ್ಮ–ವಿಷ್ಣು–ಮಹೇಶ್ವರ ಗುಡಿಗಳು ಇತ್ಯಾದಿ ಈ ಸಂಕೀರ್ಣದ ಒಳ ಆವರಣದಲ್ಲಿವೆ. ಹೊರ ಆವರಣದಲ್ಲಿ 4 ಗುಂಪುಗಳಲ್ಲಿ 232 ಚಿಕ್ಕಗುಡಿಗಳಿವೆ. ತ್ರಿಮೂರ್ತಿ ಗುಡಿಗಳ ಅಧಿಷ್ಠಾನ ರಾಮಾಯಣ ದೃಶ್ಯಗಳಿಂದ ಅಲಂಕೃತವಾಗಿದೆ. ರುದ್ರ ಹಾಗೂ ಸೌಮ್ಯ ಭಾವ ಗಳೆರಡರಲ್ಲೂ ತೋರಿಸಿರುವ ಅಷ್ಟದಿಕ್ಪಾಲಕರು ಹಾಗೂ ಇನ್ನಿತರ 8 ದೇವತೆಗಳ ಶಿಲ್ಪಗಳು ಮುಖ್ಯ ಗೋಡೆಯ ಮೇಲಿವೆ. 4 ಸೋಪಾನಮಾರ್ಗಗಳಿರುವ ಎತ್ತರದ ಅಧಿಷ್ಠಾನದ ಮೇಲೆ ವಿಮಾನವನ್ನು ನಿರ್ಮಿಸಲಾಗಿದೆ. ಶಿಖರ ನಾಗರ ಹಾಗೂ ದ್ರಾವಿಡ ಮಾದರಿಗಳ ಅಂಶಗಳನ್ನು ಒಳಗೊಂಡಿವೆ. ಪೂರ್ವ ಜಾವದಲ್ಲಿ ಚಂಡಿಸಿಂಘಸಾರಿ, ಚಂಡಿಕಿಡಲ್, ಚಂಡಿಜಾಗೋ, ಪನರತನ್ ದೇವಾಲಯಗಳು ಮುಖ್ಯವಾದುವು. ಸಿಂಘಸಾರಿಯ ಪ್ರಜ್ಞಾಪಾರಮಿತ, ಬೆಲಹನ್‌ನ ಏರ್ಲಂಗ ಮಹಾರಾಜನ ಶಿಲ್ಪ, ಸಿಂಪಿಂಗ್‌ನ ಹರಿಹರನ ವಿಗ್ರಹ ಪ್ರಮುಖ ಶಿಲ್ಪಗಳು. ಬೆಲಹನ್‌ನಲ್ಲಿರುವ ಸ್ನಾನಗೃಹ ಏರ್ಲಂಗ ರಾಜನ ಸ್ಮರಣೆಗಾಗಿ ಕಟ್ಟಿದ ದೇವಾಲಯವಾಗಿದೆ.

ಚಂಪಾ ರಾಜ್ಯದ ವಾಸ್ತುಶಿಲ್ಪವನ್ನು ಮುಖ್ಯವಾಗಿ ಆರಂಭಿಕ ಹಂತಕ್ಕೆ ಸೇರುವ ಹೊವಲೈ, ಮೈಸನ್, ಡಾಂಗ್‌ಡುವಾಂಗ್ ಮತ್ತು ಪೋ ನಗರಗಳಲ್ಲಿ ಕಾಣಬಹುದು. ಮೈಸನ್ ಮತ್ತು ಪೋ ನಗರಗಳ ದೇವಾಲಯಗಳು (ಸು.8–10ನೆಯ ಶತಮಾನ) ಶೈವ ಧರ್ಮಕ್ಕೆ ಸೇರಿದುವು. ಇವು ದ್ರಾವಿಡ ವಿಮಾನ ಮಾದರಿಯ ಪ್ರಭಾವವನ್ನು ಸೂಚಿಸುತ್ತವೆ. ಪ್ರಾಚೀನ ವಿಜಯದ ರಾಜಧಾನಿ ಬಿನ್–ದಿನ್ ಮುಂತಾದೆಡೆ ಇರುವ ದೇವಾಲಯಗಳಲ್ಲಿ ವೇಸರ ಶಿಖರ ಮಾದರಿಯ ಅನುಕರಣೆಯನ್ನು ಸ್ಪಷ್ಟವಾಗಿ ಕಾಣಬಹುದು. ಇಷ್ಟಾದರೂ ಚಾಮ್ ವಾಸ್ತುಕಲೆ ವಿಶಿಷ್ಟವಾಗಿದೆ. ಡಾಂಗ್‌ಡುವಾಂಗ್‌ನಲ್ಲಿ ಬೌದ್ಧಧರ್ಮದ ಕಟ್ಟಡಗಳೇ ಹೆಚ್ಚು. ಚಂಪಾ ರಾಜ್ಯದ ದೇವಾಲಯಗಳು ಸಣ್ಣಗಿದ್ದು ಇಟ್ಟಿಗೆಯಿಂದ ಮಾಡಿದುವು. ಶಿಖರಗಳು ಮಹಾಬಲಿಪುರದ ರಥದ ಶಿಖರಗಳನ್ನು ಬಹುವಾಗಿ ಹೋಲುತ್ತವೆ. ಮೈಸನ್ನಿನ

ವಾನರಗಳಿಂದ ಸೇತುವೆ ನಿರ್ಮಾಣ ಶಿಲ್ಪ, ಬೇಯಾನ್

ಶಿವ, ಗಣೇಶ, ಸ್ಕಂದ ಮುಂತಾದ ದೇವರ ಶಿಲ್ಪಗಳೂ ಡಾಂಗ್‌ಡುವಾಂಗ್‌ನ ಲೋಕೇಶ್ವರನ ಶಿಲ್ಪವೂ ಬಹಳ ಉತ್ತಮ ವರ್ಗಕ್ಕೆ ಸೇರಿದುವು. ಇಲ್ಲಿಯ ಶಿಲ್ಪಕಲೆಯ ವಿಶೇಷತೆಯಿರುವುದು ಆಭರಣಗಳ ನಾಜೂಕಿನಲ್ಲಿ ಹಾಗೂ ಶಾರೀರಿಕ ಲಾಲಿತ್ಯದಲ್ಲಿ.

ಮಯನ್ಮಾರ್ ದೇಶಕ್ಕೂ ಮತ್ತು ಭಾರತಕ್ಕೂ ಹೆಚ್ಚು ಸಂಪರ್ಕಗಳಿದ್ದುದರಿಂದ, ಇಲ್ಲಿಯ ವಾಸ್ತುಶಿಲ್ಪಕಲೆಯಲ್ಲಿ ಭಾರತೀಯ ಸಂಪ್ರದಾಯದ ಪೂರ್ಣಪ್ರಭಾವವನ್ನು ಕಾಣುತ್ತೇವೆ. ಮಯನ್ಮಾರಿನಲ್ಲಿ ಅತ್ಯಂತ ಮುಖ್ಯವಾದುದು ಆನಂದ ದೇವಾಲಯ. ಇದು ಕ್ಯಾನ್ಜಿತ್ಥ ಎಂಬ ರಾಜನಿಂದ ನಿರ್ಮಿತವಾಯಿತು. ಇದು ಇಟ್ಟಿಗೆಯಿಂದ ಕಟ್ಟಲ್ಪಟ್ಟು ಸು.180 ಚ.ಮೀ ವಿಶಾಲ ವಾಗಿದೆ. ಮಧ್ಯದಲ್ಲಿ ಎತ್ತರವಾದ ಬುದ್ಧನ ವಿಗ್ರಹವಿದೆ. ಷ್ವೇಜಗಾನ್ ದೇವಾಲಯ, ಮಿಂಗಲ ಜೇದಿ ದೇವಾಲಯ, ಮಹಾಬೋಧಿ ಮುಂತಾದ ದೇವಾಲಯಗಳೂ ಮಯನ್ಮಾರಿನಲ್ಲಿ

ಮುಖ್ಯವಾದವು. ಮಯನ್ಮಾರಿನ ವಾಸ್ತುಕಲೆ ಥೈಲೆಂಡಿನ ದ್ವಾರವತಿ ಅವಧಿಯ ವಾಸ್ತುಕಲೆಗೆ ಸಮೀಪವಾಗಿದೆ. ಇಲ್ಲಿ ಸ್ತೂಪ ಹಾಗೂ ಕಮಾನಿನಾಕಾರದ ಸಣ್ಣ ಗುಡಿಗಳು ನಿರ್ಮಾಣವಾದವು. ಶಂಕುವಿನಾಕಾರ ಇಟ್ಟಿಗೆಯ ಸ್ತೂಪಗಳನ್ನು ವೃತ್ತಾಕಾರದ ಮೆಟ್ಟಿಲಿನ ರಚನೆಯುಳ್ಳ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಇವು ಬಂಗಾಲದ ಪಾಲ ಮತ್ತು ಸೇನರ ಕಾಲದ ಸ್ತೂಪಗಳನ್ನು ಹೋಲುತ್ತವೆ. ಕಮಾನಿನಾಕಾರದ ಗುಡಿಗಳು ಸರ್ವತೋಭದ್ರ ಮಾದರಿಯಲ್ಲಿವೆ. ಈ ಕಾಲದಲ್ಲಿ ಕಲ್ಲಿನ ಬುದ್ಧ ಹಾಗೂ ಬೋಧಿಸತ್ವ ಶಿಲ್ಪಗಳು ಸಾಮಾನ್ಯವಾಗಿವೆ. ಭೂಮಿಸ್ಪರ್ಷ ಮುದ್ರೆಯಲ್ಲಿಯ ಭಂಗಿ; ಮೇಲೆತ್ತಿದ ಅಭಯ ಮುದ್ರೆಯಲ್ಲಿಯ ಬಲಗೈ ಮತ್ತು ಪರಿನಿರ್ವಾಣ ಭಂಗಿಯಲ್ಲಿಯ ಮೂರು ಪ್ರಕಾರದ ಬುದ್ಧನ ಮೂರ್ತಿಗಳು ಸಾಮಾನ್ಯ.

ಸಯಾಮಿಯನ್ನರ ವಾಸ್ತುಕಲೆ ಸ್ಥಳೀಯ ಹಾಗೂ ಮಹಾಯಾನ ಪಂಥದ ಧಾರ್ಮಿಕ ಸಂಪ್ರದಾಯಗಳನ್ನು ಪ್ರತಿಫಲಿಸುತ್ತದೆ. ಇಲ್ಲಿಯ ವಾಸ್ತುಕಲೆಯಲ್ಲಿ ಪ್ರಾದೇಶಿಕ ಶಾಖೆಗಳು ಕಂಡುಬರುತ್ತವೆ. ಉತ್ತರ ಸಯಾಮಿನಲ್ಲಿ ಚಿಯಾಂಗ್ ಮಯ್ ಒಂದು ಮುಖ್ಯ ಕೇಂದ್ರ ವಾಗಿತ್ತು. ಸುಖೋದಯ ಮತ್ತು ಖ್ಮೇರ್ ಶೈಲಿಗಳೊಂದಿಗೆ ಕೂಡಿ ಇದು ಮುಂದೆ ಅಯುತ್ತಿಯ ಶಾಖೆಯಾಗಿ ಬೆಳೆಯಿತು. ಈ ಶಾಖೆಯ ಬುದ್ಧನ ವಿಗ್ರಹಗಳಲ್ಲಿ ನಾವೀನ್ಯವೇನೂ ಇಲ್ಲ. ಆದರೆ ಸುಖೋಥಯ ಶಾಖೆ ಸಿಂಹಳ ಶೈಲಿಯನ್ನು ಇಲ್ಲಿ ಮರುಸ್ಥಾಪಿಸಿದಂತಿದೆ. ಶ್ರೀಲಂಕ ದಲ್ಲಿರುವಂತೆ ಸಯಾಮಿನ ಸ್ತೂಪದ ಗುಮ್ಮಟದಲ್ಲಿ ಸಣ್ಣ ಗೂಡು ಇದ್ದು ಇದರ ಗೋಡೆಗಳು ಚಿತ್ರದಿಂದ ಅಲಂಕೃತವಾಗಿರುತ್ತದೆ. ಥಾಯಿ ವಾಸ್ತುಶಿಲ್ಪ 17ನೆಯ ಶತಮಾನದಲ್ಲಿ ಉತ್ತುಂಗವನ್ನು ತಲುಪಿತು.

ಖ್ಮರ್ ಕಲೆಯ ಕೆಲವೊಂದು ತಂತ್ರಗಳನ್ನು ಅನುಕರಿಸಿಯೂ ತನ್ನದೇ ಆದ ಅನನ್ಯ ಶೈಲಿಯನ್ನು ರೂಢಿಸಿಕೊಂಡದ್ದು ಸಯಾಮ್ ವಾಸ್ತುಶಿಲ್ಪದ ವಿಶಿಷ್ಟತೆ. ಇಂತಹದೇ ಪ್ರಭಾವ ಕ್ಕೊಳಗಾದ ಲಾವೊಸ್‍ನ ವಾಸ್ತುಶೈಲಿ ಮಾತ್ರ ಕೊನೆಯವರೆಗೆ ಅಯುತ್ತಿಯ ಕಲೆಯ ಒರಟು ಅನುಕರಣೆಯಾಗಿ ಉಳಿಯಿತು.

ಭಾರತೀಯ ಕಲಾಪರಂಪರೆಗಳು ಆಗ್ನೇಯ ಏಷ್ಯದಲ್ಲಿ ಅದ್ಭುತ ರೂಪಾಂತರಕ್ಕೊಳಗಾದದ್ದು ನಿರಂತರ ಚರ್ಚೆಯ ವಿಷಯವಾಗಿದೆ. ಭಾರತೀಯ ಧಾರ್ಮಿಕ ಪರಿಕಲ್ಪನೆಗಳ ಅತ್ಯುತ್ತಮ ವಾಸ್ತು–ಚಿತ್ರ–ಶಿಲ್ಪನಿದರ್ಶನಗಳು ನಮಗೆ ಕಾಣುವುದು ಆಗ್ನೇಯ ಏಷ್ಯದಲ್ಲೇ ಹೊರತು ಭಾರತದಲ್ಲಲ್ಲ ಎಂಬ ಅಭಿಪ್ರಾಯವಿದೆ. ಆದರೆ ಈ ಸ್ಮಾರಕಗಳ ನಿರ್ಮಾತೃಗಳಾದ ವಾಸ್ತುಶಿಲ್ಪ ಶಾಸ್ತ್ರಜ್ಞರು ಹಾಗೂ ಕಲಾಕಾರರು ಭಾರತೀಯ ಮೂಲದವರು ಎಂಬುದನ್ನು ಮರೆಯು ವಂತಿಲ್ಲ. ಸಂಸ್ಕೃತ ಮತ್ತು ಪಾಳಿ ಸಾಹಿತ್ಯದ ಹಾಗೂ ಭಾರತೀಯ ತತ್ತ್ವಜ್ಞಾನದ ಶ್ರೀಮಂತಿಕೆ ಯನ್ನು ಪರಿಚಯಿಸಿದವರೂ ಭಾರತೀಯ ವಿದ್ವಾಂಸರು. ಈ ಭದ್ರ–ಶ್ರೀಮಂತ ತಳಪಾಯದ ಮೇಲೆ ಸಾಗರೋತ್ತರ ವಾಣಿಜ್ಯ ಸಂಪತ್ತಿನ ಕೃಪೆಯಿಂದ ಸ್ಥಳೀಯ ಕಲಾಮೇಧಾವಿಗಳು ಮೇರುಕೃತಿಗಳನ್ನು ರಚಿಸಿದರು. (ಜಿ.ಕೆ.;ಎ.ವಿ.ಎನ್.)

**ಆಗ್ರ:** ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾಗಿರುವ ತಾಜ್‍ಮಹಲ್ ಇರುವ ನಗರ. ಯಮುನಾ ನದಿಯ ದಡದಲ್ಲಿ ದೆಹಲಿಗೆ 196 ಕಿಮೀ ದೂರದಲ್ಲಿದೆ. ಅಕ್ಬರ್ ಇದನ್ನು ಊರ್ಜಿತಗೊಳಿಸಿ (1566) ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಕಲಾತ್ಮಕವಾದ ಉಣ್ಣೆಯ ಜಮಖಾನಗಳು ಇಲ್ಲಿಂದ ದೇಶ ವಿದೇಶಗಳಿಗೆ ರಫ್ತಾಗುತ್ತವೆ.

ಆಗ್ರ ನಗರ ಐತಿಹಾಸಿಕವಾಗಿ ಪ್ರಸಿದ್ಧವಾದ ಸ್ಥಳ. ಇಟಾವ, ತೊಯಿಲ್, ಗ್ವಾಲಿಯರ್, ಢೋಲಪುರ ಮುಂತಾದ ಊರುಗಳ ನಾಯಕರನ್ನು ತನ್ನ ಹತೋಟಿಗೆ ತರಲು ಸಿಕಂದರ್‍ಲೋದಿ 1504ರಲ್ಲಿ ಈ ನಗರವನ್ನು ಕಟ್ಟಿಸಿ ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿದ. ಇದಕ್ಕೆ ಒಂದು ಕೋಟೆಯನ್ನೂ ಕಟ್ಟಿಸಿದ. ಮುಂದೆ ಮೊಗಲ ಬಾದಶಹನಾದ ಬಾಬರ್ ಇದನ್ನು ಗೆದ್ದು ಹಳೆಯ ಕೋಟೆಯಲ್ಲಿ ಜಾಮೀ ಮಸೀದಿಯನ್ನು ಕಟ್ಟಿಸಿದ. ತರುವಾಯ ಇದು ಅಕ್ಬರ್, ಜಹಂಗೀರ್, ಷಹಜಹಾನ್ ಮೊದಲಾದ ಮೊಗಲ ಬಾದಶಹರ ರಾಜಧಾನಿ ಯಾಗಿತ್ತು. ಅಕ್ಬರ್ ಈ ನಗರದ ಸಮೀಪದಲ್ಲಿ ಸಿಕ್ರಿ ಎಂಬಲ್ಲಿ ಸುಂದರ ಕಲ್ಲಿನ ಕಟ್ಟಡಗಳನ್ನು ಕಟ್ಟಿಸಿದ. ಈ ಕಟ್ಟಡಗಳ ರಚನೆ ಇತಿಹಾಸ ಪ್ರಸಿದ್ಧವಾದದ್ದು. ಅಕ್ಬರ್ ಇಲ್ಲಿಯೇ 16 ವರ್ಷ ಗಳ ಕಾಲ ವಾಸಮಾಡಿದ. ಇವನ ಕಾಲದ ಜಹಂಗೀರ್‍ಮಹಲ್ ಹಿಂದು ರಾಜನ ಅರಮನೆ ಯಂತಿದ್ದು ಮೊಗಲ್ ಶೈಲಿಯ ಮೇಲೆ ಆದ ಹಿಂದು ಪ್ರಭಾವಕ್ಕೆ ಸಾಕ್ಷಿಯಾಗಿದೆ.

ಕಲಾಪ್ರೇಮಿಯಾದ ಷಹಜಹಾನ್ ಅಕ್ಬರನ ಕಾಲದ ಕೋಟೆಯನ್ನು ದುರಸ್ತು ಮಾಡಿ ದ್ದಲ್ಲದೆ ಇಲ್ಲಿ ಸುಂದರ ಕಟ್ಟಡಗಳನ್ನು ಕಟ್ಟಿಸಿದ. ಈತ ಕಟ್ಟಿಸಿದ ಮೋತಿಮಸೀದಿ ಒಂದು ಉತ್ಕೃಷ್ಟ ಕಲಾಕೃತಿ. ತನ್ನ ಹೆಂಡತಿ ಮಮತಾಜಮಹಲಳ ಸ್ಮರಣೆಗಾಗಿ ನಿರ್ಮಿಸಿದ ತಾಜ್ ಮಹಲ್ ಎಂಬ ಶಿಲಾಸ್ಮಾರಕ ಪ್ರಪಂಚದಲ್ಲೇ ಶ್ರೇಷ್ಠ, ಅದ್ಭುತ ಕಲಾಕೃತಿಯಾಗಿದೆ. ಇದಲ್ಲದೆ ತನ್ನ ಹೆಂಡತಿಗಾಗಿ ಕಟ್ಟಿಸಿದ ಶಹಾಬುರ್ಜಿ ಗೋಪುರ, ಜುಮ್ಮಮಸೀದಿ, ದಿವಾನ–ಈ– ಅಮ್, ದಿವಾನ–ಈ–ಖಾಸ್ ಮೊದಲಾದುವು ಈಗಲೂ ಅಚ್ಚಳಿಯದೆ ಕಂಗೊಳಿಸುತ್ತವೆ. ಆದ್ದರಿಂದಲೇ ಇದು ಅರಮನೆಗಳ ಆಗರವಾಗಿದೆ. ಆದರೆ ಬಾಬರ್ ಮತ್ತು ಹುಮಾಯುನರ ಕಾಲದ ಮಸೀದಿಗಳು ಈಗ ಹಾಳಾಗಿವೆ. (ಎ.ವಿ.ಎನ್.;ಎಸ್.ಎಂ.ಎಚ್.)

ಉತ್ಖನನ: ತಾಜ್‍ಮಹಲ್ ಎದುರಿಗೆ ಯಮುನ ನದಿಯ ಎಡ ದಂಡೆಯ ಮೇಲೆ ಒಂದು ಚೌಕೋನ ಪ್ರಾಂಗಣವಿದೆ. ಇದು ನದಿಯ ಪ್ರವಾಹದ ಮೆಕ್ಕಲು ಮಣ್ಣಿನಿಂದ ಬಹು ಪಾಲು ಮುಚ್ಚಿಹೋಗಿತ್ತು. ಈ ನಿರ್ಮಿತಿಯ ಸುತ್ತಲೂ ಪೌಳಿ ಗೋಡೆ ಇತ್ತು. ಇದರ ಮೂಲೆ ಗಳಲ್ಲಿ ಮೀನಾರ್ ಮಾದರಿಯ ಎತ್ತರದ ಛತ್ರಿಯಾಕಾರದ ಮಂಟಪಗಳಿದ್ದವು. ದಕ್ಷಿಣ ಬದಿಯ ಪೂರ್ವದ ಕೊನೆಯಲ್ಲಿಯ ಛತ್ರಿ ಮಾತ್ರ ಉಳಿದಿದೆ. ಉತ್ಖನನದಲ್ಲಿ ಭವ್ಯವಾದ ಅಷ್ಟಭುಜಾ ಕೃತಿಯ ಒಂದು ಕೊಳ ಕಂಡು ಬಂತು. ಇದರ ಪ್ರತಿಯೊಂದು ಭುಜ 17.45ಮೀ ಉದ್ದ ವಿದೆ. ಇದರ ಒಟ್ಟು ವಿಸ್ತೀರ್ಣ 1469.79 ಚಮೀ. ಇದರ ತಳದಲ್ಲಿ ವೃತ್ತವಿನ್ಯಾಸದಲ್ಲಿ 25 ದುಂಡು ಗುಂಡಿಗಳಿದ್ದವು. ಇವು ಒಂದು ನಿರ್ದಿಷ್ಟ ರೇಖಾ ವಿನ್ಯಾಸದಲ್ಲಿದ್ದವು. ಮಧ್ಯದಲ್ಲಿ ನೀರಿನ ಚಿಲುಮೆ ಕೊಳವೆ ನಿಲ್ಲಿಸಲು ಲಿಖೌರಿ ಇಟ್ಟಿಗೆ ಮತ್ತು ಸುಣ್ಣ ಗಾರೆಯ ಚಿಲುಮೆಯಿತ್ತು



ಕೋಟೆ

ಇದರ ವ್ಯಾಸ ಮತ್ತು ಆಳ ಕ್ರಮವಾಗಿ 1.14ಮೀ ಮತ್ತು 1.84ಮೀ. ಈ ಗುಂಡಿಯ ಕೆಳ ಭಾಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಮೆರಗು ಮಣ್ಣಿನ ಕೊಳವೆ ಜೋಡಿಸಲಾಗಿದೆ. ಇದರ ಸುತ್ತ ಲಿನ ಚಿಲುಮೆಗಳನ್ನು ಈ ರೀತಿ ಜೋಡಿಸಿರಬೇಕು. ಹೀಗೆ ಕೇಂದ್ರದ ಚಿಲುಮೆಯಿಂದ ಎಲ್ಲ ಚಿಲುಮೆಗಳಿಗೆ ಏಕಪ್ರಕಾರವಾಗಿ ನೀರು ಹರಿಯುವಂತೆ ಮಾಡಲಾಗಿತ್ತು. ಮೇಲೆ ಕಲ್ಲಿನ ಚಪ್ಪಡಿಯಿಂದ ಮುಚ್ಚಲಾಗಿತ್ತು. ಕೇಂದ್ರದ ಚಿಲುಮೆಯ ಕೊಳವೆ ಅಮೃತ ಶಿಲೆಯದು. ಇದರ ಮೇಲಿನ ಭಾಗ ಅಷ್ಟದಳಗಳಾಗಿ ರೂಪಿಸಿ ಅರಳಿದ ಕಮಲದಂತೆ ಮಾಡಲಾಗಿತ್ತು. ಇದು 49ಸೆಂಮೀ ಎತ್ತರವಾಗಿ ಕಂಬದಂತೆ ಇತ್ತು. ಕೊಳವೆಯ ಸುತ್ತಳತೆ ತಳದಲ್ಲಿ 10 ಸೆಂಮೀ ದಿಂಡಿನ ಭಾಗ 7ಸೆಂಮೀ. ಈ ಕೊಳದ ತಳದಲ್ಲಿ ಈಶಾನ್ಯ, ಆಗ್ನೇಯ, ನೈರುತ್ಯ ಮತ್ತು ವಾಯವ್ಯ ದಿಕ್ಕಿನಲ್ಲಿ ಚಿಲುಮೆಯಿಂದ ಬಂದ ನೀರು ಹೊರಗೆ ಹೋಗಲು ತೂಬು ಗಳಿದ್ದವು. ಹೆಚ್ಚಿನ ನೀರನ್ನು ಉತ್ತರ ಬದಿಯಿಂದ ಕೆಳಗಿನ ಆಯತಾಕಾರದ ತೊಟ್ಟಿಗೆ ದುಮುಕುವಂತೆ ಮಾಡಲಾಗಿತ್ತು. ಈ ರೀತಿ ನೀರು ಸಣ್ಣ ಪ್ರಮಾಣದಲ್ಲಿ ದುಮುಕುವಂತೆ ಮಾಡುವ ತಂತ್ರ ಮೊಗಲ್ ವಾಸ್ತುಶಿಲ್ಪದ ಒಂದು ವೈಶಿಷ್ಟ್ಯ. ನೀರು ಹಾರುವ ಗೋಡೆಯಲ್ಲಿ ಗೂಡುಗಳಿದ್ದು ಇವುಗಳಲ್ಲಿ ದೀಪಗಳನ್ನು ಇಡಲಾಗುತ್ತಿತ್ತು. ಇದರಿಂದ ದುಮುಕುವ ನೀರು ಪ್ರಕಾಶಮಾನವಾಗಿ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿತ್ತು. ಕೆಳಗಿನ ಆಯತಾಕಾರದ ಕೊಳದಲ್ಲಿಯ ನೀರನ್ನು ಇದರ ಬುಡದಲ್ಲಿಯ ಕೊಳವೆ ಮೂಲಕ ನೆಲದಡಿಯ ಒಂದು ನಾಲೆಗೆ ಹೋಗುವಂತೆ ಮಾಡಲಾಗಿತ್ತು.

ಕೊಳದ ಗೋಡೆಗಳು ಅಗಲವಾಗಿದ್ದು ಇವನ್ನು ಎರಡು ಮೆಟ್ಟಿಲುಗಳ ಕಟ್ಟೆಯನ್ನು ಮಾಡಲಾಗಿತ್ತು. ಮೊದಲನೆಯ ಕಟ್ಟೆಯ ಮುಂಬದಿ ತೀರ ಸರಳವಾಗಿದೆ. ಮೇಲಿನ ಕಟ್ಟೆ ಮುಂಬದಿಯಲ್ಲಿ ಅಲಂಕಾರಕ ಕಮಾನು ಮೊನಚುಗಳಿವೆ. ಈ ಕಟ್ಟೆಗಳು ಒಳಗೆ ಮಣ್ಣಿನಿಂದ ಕೂಡಿದ್ದು ಹೊರ ಬದಿಯಲ್ಲಿ ಇಟ್ಟಿಗೆಗಳಿಂದ ಮುಚ್ಚಲ್ಪಟ್ಟಿವೆ. ಇದರ ದಕ್ಷಿಣ ಮತ್ತು ಉತ್ತರ ಬದಿಯಲ್ಲಿ ಬರದರಿ ಮಂಟಪಗಳಿವೆ. ಮಧ್ಯದಲ್ಲಿ ವರಾಂಡವಿದ್ದು ಎರಡು ಬದಿಯಲ್ಲಿ ಕೋಣೆ ಗಳಿರುತ್ತವೆ. ಈ ಪ್ರದೇಶದ ಉತ್ಖನನದಲ್ಲಿ ಮಧ್ಯಭಾಗ ಗಚ್ಚಿನಿಂದ ಕಟ್ಟಿದ ತುಂಡು ಕಲ್ಲಿನ ಚೌಕೋನ ಕೊಳ, ಇದರ ಮಧ್ಯದಲ್ಲಿ ಚಿಲುಮೆಯಿದ್ದುದು ತಿಳಿದುಬಂತು. ಇವೆಲ್ಲವು ಲಕ್ಷಣ ಮತ್ತು ಶೈಲಿಯ ದೃಷ್ಟಿಯಿಂದ ಷಹಜಹಾನನ ಕಾಲದ್ದೆಂದು ತರ್ಕಿಸಬಹುದು. (ಡಿ.)

**ಆಜ಼ಾದ್, ಮೌಲಾನಾ ಅಬ್ದುಲ್ ಕಲಾಂ:** 1888–1958. ಭಾರತದಲ್ಲಿ ಹಿಂದು ಗಳೂ ಮುಸ್ಲಿಮರೂ ಒಂದೇ ತಾಯ್ನಾಡಿನವರೆಂಬುದನ್ನು ಮನಗಂಡು ಅದಕ್ಕಾಗಿ ತಮ್ಮ ಜೀವನವನ್ನು ಸವೆಸಿದ ಭಾರತೀಯರಲ್ಲೊಬ್ಬರು. ಇವರದು ಪ್ರಸಿದ್ಧ ವಿದ್ವಾಂಸ ಮನೆತನ. ತಂದೆ ಮೌಲಾನಾ ಮೊಹಮ್ಮದ್ ಖೈರುದ್ದೀನ್ ವಿಖ್ಯಾತ ವಿದ್ವಾಂಸರಷ್ಟೇ ಅಲ್ಲದೆ ಧರ್ಮ ಗುರುವೂ ಆಗಿದ್ದರು. ಹಜ್ ಯಾತ್ರೆ ಮುಗಿಸಿದ ಮೇಲೆ ಅವರು ಕೋಲ್ಕತ್ತದಲ್ಲಿ ನೆಲೆಸಿದರು (1907). ಮುಸ್ಲಿಂ ಧರ್ಮದ ವಿಚಾರವಾಗಿ ಅವರು ಬರೆದ ಗ್ರಂಥಗಳು ವಿದ್ವಾಂಸರಿಂದ ಮಾನ್ಯತೆ ಪಡೆದ ಪ್ರಮಾಣ ಗ್ರಂಥಗಳಾಗಿವೆ. ಆಜ಼ಾದರ ತಾಯಿ ಇಸ್ಲಾಂ ಧರ್ಮದ ವಿಷಯ ದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದವರು. ಆಜ಼ಾದರು ತಮ್ಮ 16ನೆಯ ವಯಸ್ಸಿನಲ್ಲೇ ಧರ್ಮ ಶಾಸ್ತ್ರ, ಕಾವ್ಯ ಮತ್ತು ಇತಿಹಾಸಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿ ದೊಡ್ಡ ವಿದ್ವಾಂಸರೊಂದಿಗೆ ಗಹನವಾದ ವಿಷಯಗಳ ಮೇಲೆ ಚರ್ಚೆ ನಡೆಸುತ್ತಿದ್ದರು. ತುರ್ಕಿ, ಇರಾಕ್, ಈಜಿಪ್ಟ್, ಸಿರಿಯ ಮುಂತಾದ ದೇಶಗಳಲ್ಲಿ ಪ್ರವಾಸ ಮಾಡಿ ತಮ್ಮ ಜ್ಞಾನಭಂಡಾರವನ್ನು ಹೆಚ್ಚಿಸಿಕೊಂಡರು.

ಪಾಶ್ಚಾತ್ಯ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಇಂಗ್ಲಿಷಿನಲ್ಲೂ ತಕ್ಕಮಟ್ಟಿಗೆ ಪರಿಶ್ರಮ ಸಂಪಾದಿಸಿದ್ದರು. ನಾಡಿನ ದಾಸ್ಯ, ಬಡತನ, ಅಜ್ಞಾನ–ಇವು ಇವರ ಮನಸ್ಸನ್ನು ಕಲಕಿದವು.

ಬಾಲ್ಯದಿಂದಲೂ ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ ಇದ್ದುದರಿಂದ ಇವರು 15ನೆಯ ವಯಸ್ಸಿನಲ್ಲೇ ಒಂದು ಪತ್ರಿಕೆ ಹೊರಡಿಸಿದ್ದರು. ಇವರ ಬರೆಹದ ಪಾಂಡಿತ್ಯ, ಪ್ರೌಢಿಮೆ ಲಲಿತವೂ ಸರಳವೂ ಆದ ಶೈಲಿ ವಿದ್ವಾಂಸರ ಗಮನ ಸೆಳೆದವು. ಹಾಲಿ ಎಂಬ ಪ್ರಸಿದ್ಧ ಉರ್ದು ಕವಿ ಇವರ ಬರೆಹವನ್ನು ತುಂಬಾ ಮೆಚ್ಚಿದ್ದರು. 14ನೆಯ ವಯಸ್ಸಿನಲ್ಲೇ ಆಜ಼ಾದರು ಬೊಂಬಾಯಿಯ ಪ್ರಸಿದ್ಧ ವಿದ್ವಾಂಸರಾಗಿದ್ದ ಮೌಲಾನಾ ಷಿಬ್ಲಿಯವರೊಂದಿಗೆ ಉರ್ದು ಸಾಹಿತ್ಯದ ವಿಷಯವಾಗಿ ಪತ್ರಮುಖೇನ ವಿಚಾರವಿನಿಮಯ ಪ್ರಾರಂಭಿಸಿದರು. ಇವರ ಬರೆವಣಿಗೆಯಲ್ಲಿ ಕಂಡುಬಂದ ವಿದ್ಯಾಪ್ರೌಢಿಮೆ, ಶೈಲಿ ಇವುಗಳನ್ನು ನೋಡಿ ಷಿಬ್ಲಿಯವರು ಇವರೊಬ್ಬ ಇಳಿವಯಸ್ಸಿನ ಮೌಲ್ವಿಯಿರಬೇಕೆಂದು ಭಾವಿಸಿದ್ದರು. ಆಜ಼ಾದರು ಬೊಂಬಾಯಿಗೆ ಹೋಗಿ ಷಿಬ್ಲಿಯವರನ್ನು ಭೇಟಿ ಮಾಡಿದರು. 16 ವಯಸ್ಸಿನ ಬಾಲಕ ತಮ್ಮೊಂದಿಗೆ ಪತ್ರ ವ್ಯವಹಾರ ಮಾಡುತ್ತಿದ್ದವನು ಆಜ಼ಾದರ ಮಗನೆಂದು ಭಾವಿಸಿ, ಅವರ ತಂದೆಯ ಪಾಂಡಿತ್ಯವನ್ನು ಬಹುವಾಗಿ ಶ್ಲಾಘಿಸಿದರು. ಅವರು ಭಾವಿಸಿದ್ದ ತಂದೆ ಮತ್ತು ಎದುರು ಕೂತಿದ್ದ ಮಗ ಇಬ್ಬರೂ ಒಂದೇ ಎಂದು ತಿಳಿದಾಗ ಬೆರಗಾದರು.

ಭಾರತದ ಮುಸ್ಲಿಮರು ಎಚ್ಚೆತ್ತು, ವಿದ್ಯಾವಂತರಾಗಿ, ರಾಷ್ಟ್ರೀಯ ಭಾವನೆ ಬೆಳೆಸಿಕೊಂಡು ಹಿಂದುಗಳೊಂದಿಗೆ ಬೆರೆತು, ನಾಡಿನ ಉದ್ಧಾರಕ್ಕಾಗಿ ಶ್ರಮಿಸುವುದು ಅತಿಮುಖ್ಯವಾಗಿತ್ತು. ಇದನ್ನು ಸಾಧಿಸುವುದಕ್ಕಾಗಿ ಆಜ಼ಾದರು 1912ರಲ್ಲಿ ಅಲ್ ಹಿಲಾಲ್ ಎಂಬ ಉರ್ದು ಪತ್ರಿಕೆಯನ್ನು ಹೊರಡಿಸಿ ಕಲಂ ಆಜ಼ಾದ್ (ಸ್ವತಂತ್ರ ಲೇಖನಿ) ಎಂಬ ಗುಪ್ತನಾಮದಿಂದ ವಿಪುಲವಾಗಿ ಬರೆದರು. ಇವರ ಮನನಾಟುವಂಥ ಬರೆಹ, ಅದರಲ್ಲಿ ಕಂಡುಬಂದ ಇವರ ರಾಷ್ಟ್ರಾಭಿಮಾನ, ಭಾರತದ ಏಳಿಗೆಯ ವಿಚಾರದಲ್ಲಿ ಇವರ ಗಾಢಾನುರಕ್ತಿ–ಇವೆಲ್ಲ ಜನಮನವನ್ನು ಸೆಳೆದವು. ಮುಸ್ಲಿಮರಲ್ಲಿ ಹಾಗೂ ಯುವಜನಾಂಗದಲ್ಲಿ ರಾಷ್ಟ್ರೀಯ ಭಾವನೆ ಬೆಳೆಯತೊಡಗಿತು. ಇಂಥ ತರುಣರಲ್ಲಿ ಆಗ ಅಲಿಘರ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಯಾಗಿದ್ದ ಖಾನ್ ಅಬ್ದುಲ್ ಗಫಾರ್ ಖಾನರೂ ಒಬ್ಬರು.

ಈ ಮಧ್ಯೆ ಒಂದನೆಯ ಮಹಾಯುದ್ಧಕಾಲದಲ್ಲಿ ಬ್ರಿಟಿಷ್ ಸರ್ಕಾರ ಖಿಲಾಫತ್ ವಿಚಾರದಲ್ಲಿ ಮುಸ್ಲಿಮರಿಗೆ ಕೊಟ್ಟಿದ್ದ ವಾಗ್ದಾನದಂತೆ ಯುದ್ಧಾನಂತರ ನಡೆದುಕೊಳ್ಳಲಿಲ್ಲ; ಇದರಿಂದ ಭಾರತದ ಮುಸ್ಲಿಮರೂ ಬ್ರಿಟಿಷರಿಗೆ ವಿರೋಧಿಗಳಾದರು. ಆಜ಼ಾದರ ಬೋಧನೆಯಿಂದ ಪ್ರಭಾವಿತರಾಗಿದ್ದ ಮುಸ್ಲಿಮರು ಕಾಂಗ್ರೆಸ್ಸಿನೊಡನೆ ಮೈತ್ರಿ ಬೆಳೆಸಿದರು. ರಾಷ್ಟ್ರೀಯ ಭಾವನೆಯಿಂದ ಪ್ರೇರಿತರಾಗಿ ಅನೇಕ ಮುಸ್ಲಿಮರು ಕಾಂಗ್ರೆಸ್ಸಿಗೆ ಸೇರಿದರು. ಗಾಂಧೀಜಿಯವರ ಕರ ನಿರಾಕರಣೆ, ಸತ್ಯಾಗ್ರಹ ಇವೆಲ್ಲ ಜನರಲ್ಲಿ ರಾಷ್ಟ್ರಭಾವನೆಯನ್ನು ಹರಡಿದವು. ಆದರೆ ಬ್ರಿಟಿಷರು ಅರೆಮನಸ್ಸಿನಿಂದ ನೀಡಿದ ರಾಜಕೀಯ ಸುಧಾರಣೆಗಳನ್ನು ಒಪ್ಪಬೇಕೆ, ಬೇಡವೆ ಎಂಬ ವಿಷಯದಲ್ಲಿ ಕಾಂಗ್ರೆಸ್ಸಿಗರಲ್ಲೇ ಭಿನ್ನಾಭಿಪ್ರಾಯವುಂಟಾಗಿ ಏಕತೆಗೆ ಭಂಗವುಂಟಾಯಿತು. ಆಜ಼ಾದರು ಈ ಸುಧಾರಣೆಗೆ ವಿರೋಧವಾಗಿ ನಿಂತು, ಅಸಹಕಾರ ಚಳವಳಿಯನ್ನು ಮುಂದುವರಿಸಲೇಬೇಕು ಎಂದು ಕರೆ ಕೊಟ್ಟರು. ಸರ್ಕಾರ ಇವರನ್ನು ಬಂಧಿಸಿ ಒಂದು ವರ್ಷ ಸಜಾ ವಿಧಿಸಿತು. ನ್ಯಾಯಸ್ಥಾನದಲ್ಲಿ ಕೊಟ್ಟ ಹೇಳಿಕೆಯ ಕೊನೆಯಲ್ಲಿ ಆಜ಼ಾದರು ಈ ರೀತಿ ನುಡಿದರು: "ನೀವು ನ್ಯಾಯಮೂರ್ತಿಯಾಗಿಯೇ ಮುಂದುವರಿಯಿರಿ, ನಾನು ಅಪರಾಧಿಯಾಗಿಯೇ ಮುಂದುವರಿಯುತ್ತೇನೆ, ಮತ್ತೆ ಮತ್ತೆ ಈ ನಾಟಕ ಕೊನೆಗೆ ಮುಗಿಯಲೇಬೇಕು, ಆಗ ಭಗವಂತನ ನ್ಯಾಯಾಸ್ಥಾನದಲ್ಲಿ ನಾವೂ ಸಂಧಿಸುತ್ತೇವೆ. ಕಾಲಪುರುಷನೇ ಅಲ್ಲಿ ನ್ಯಾಯಮೂರ್ತಿ, ಅವನು ಕೊಡುವ ತೀರ್ಪನ್ನು ನೀವಾಗಲಿ, ನಾನಾಗಲಿ ಉಲ್ಲಂಘಿಸಲಾರೆವು".

ಅನಂತರ ಬ್ರಿಟಿಷ್ ಸರ್ಕಾರ ನೀಡಿದ ಅಲ್ಪಸ್ವಲ್ಪ ಸುಧಾರಣೆಗಳನ್ನು ಒಪ್ಪಿಕೊಳ್ಳುವ ವಿಷಯದಲ್ಲಿ ಕಾಂಗ್ರೆಸ್ಸಿನಲ್ಲೇ ಎರಡು ಪಂಗಡಗಳು ಹುಟ್ಟಿಕೊಂಡವು; ಗಾಂಧೀಜಿಯವರ ನೇತೃತ್ವದಲ್ಲಿ ಏರ್ಪಟ್ಟಿದ್ದ ಹಿಂದು ಮುಸ್ಲಿಂ ಏಕತೆ ಒಡೆಯಿತು; ಆಳರಸರು ತಮ್ಮ ಒಡೆದು ಆಳುವ ನೀತಿಗನುಸಾರವಾಗಿ ವೈಮನಸ್ಯ ಬೆಳೆಯುವುದಕ್ಕೆ ನೆರವು ನೀಡಿದರು; ಕೊನೆಗೆ ಜಿನ್ನಾರವರ ಪಾಕಿಸ್ತಾನ ಬೇಡಿಕೆ ಏಕತೆಯ ಚರಮಗೀತೆಯಾಯಿತು. 1947ರಲ್ಲಿ ಸ್ವಾತಂತ್ರ್ಯ ದೊರೆಯಿತು. ಈ ಪರ್ವಕಾಲದಲ್ಲಿ ಆಜ಼ಾದರು ಗಾಂಧೀಜಿಯವರ ಬಲಗೈಯಾಗಿ ನಿಂತು ರಾಷ್ಟ್ರದ ಸ್ವಾತಂತ್ರ್ಯ, ಏಕತೆಗಳಿಗಾಗಿ ದುಡಿದರು; ದೇಶದ ಅತ್ಯಂತ ಬಿಕ್ಕಟ್ಟಿನ ದಿನಗಳಲ್ಲಿ ಎರಡು ಬಾರಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನಿಂತು ಅಸಾಧಾರಣ ಸಾಮರ್ಥ್ಯದಿಂದ ಈ ಸಂಸ್ಥೆಯ ಕಾರ್ಯಕಲಾಪಗಳನ್ನು ನಿಯಂತ್ರಿಸಿದರು; ವಿರೋಧಿ ಮುಸ್ಲಿಂ ಪಂಗಡದವರ ಈರ್ಷೆ, ಅವಹೇಳನ, ಉಪದ್ರವಗಳನ್ನು ಕಡೆಗಣಿಸಿ ದೃಢನಿಶ್ಚಯದಿಂದ ದೇಶಸೇವೆಯನ್ನು ಮುಂದುವರಿಸಿದರು. ಸ್ವಾತಂತ್ರ್ಯ ಬಂದ ಮೇಲೆ ಕೇಂದ್ರ ಸರ್ಕಾರದ ವಿದ್ಯಾಮಂತ್ರಿಯಾದರು. ಅವರ ಪಾಂಡಿತ್ಯ ಅನೇಕ ವೇಳೆ ನಮ್ಮನ್ನು ಭಾವಪರವಶರನ್ನಾಗಿ ಮಾಡುತ್ತಿತ್ತು ಎಂಬುದಾಗಿ ಜವಾಹರಲಾಲ್ ನೆಹರೂ ತಮ್ಮ ಆತ್ಮಚರಿತ್ರೆಯಲ್ಲಿ ಒಂದೆಡೆ ಬರೆದಿದ್ದಾರೆ. (ಕೆ.ಎಸ್.)

**ಆಜ್ಟೆಕ್ ಸಂಸ್ಕೃತಿ:** ಸ್ಪೇನ್ ದೇಶದ ಜನರ ಆಗಮನಕ್ಕಿಂತ ಮುಂಚೆ ಮೆಕ್ಸಿಕೋದ ಸಂಸ್ಕೃತಿಗೆ ಅನ್ವಯಿಸುವುದಾದರೂ ರೂಢಿಯಲ್ಲಿ ಆಗ ಅಲ್ಲಿದ್ದ ನಹುವ ಮಾತನಾಡುವ ಟೆನೋಖಿಸ್ ಬುಡಕಟ್ಟಿನವರಿಗೆ ವಿಶೇಷವಾಗಿ ಸಂಬಂಧಪಟ್ಟಿದೆ. ಇದು 6000 ವರ್ಷಗಳಷ್ಟು ಪ್ರಾಚೀನ ಸಂಸ್ಕೃತಿ. ಈ ಜನ ಗವಿಯೊಂದರಿಂದ ಹೊರಟು ಅಲ್ಲಲ್ಲಿ ಕದನವಾಡುತ್ತ ತಮ್ಮ ಕಡೆಯ ಹೆಚ್ಚು ಜನರು ಗೆದ್ದವರ ದಾಸ್ಯಕ್ಕೊಳಗಾಗಲು, ಉಳಿದವರು ಮೆಕ್ಸಿಕೋ ಸರೋವರದ ಒಂದು ದ್ವೀಪಕ್ಕೆ ಓಡಿಹೋದರು, ಅಲ್ಲಿ ಹಿಂದೆ ನುಡಿದ ಒಂದು ಭವಿಷ್ಯವಾಣಿಯಂತೆ, ಪಾಪಾಸುಕಳ್ಳಿಯ ಮೇಲೆ ಹಾವನ್ನು ತಿನ್ನುತ್ತಿದ್ದ ಗಿಡುಗನ ಶಕುನವನ್ನು ನೋಡಲಾಗಿ, ಅಲ್ಲಿಯೇ ನೆಲೆಸಿದರು. ಇದು ದಂತಕಥೆ. ಇವರು ಕ್ರಮೇಣ ತಮ್ಮ ನೆಲೆಯನ್ನು ವಿಸ್ತರಿಸುತ್ತ ಒಂದು ಬಲವಾದ ಪ್ರಭುತ್ವವನ್ನು ಕಟ್ಟಿದರು.

ದಂಡನಾಯಕನಾಗಿದ್ದ ರಾಜಕುಮಾರನನ್ನೇ ರಾಜನನ್ನಾಗಿ ಆರಿಸುವುದು ಇವರ ರೂಢಿ, ರಾಜನೀತಿ. ಇವರ ಪ್ರಸಿದ್ಧ ರಾಜರುಗಳಲ್ಲಿ ಒಬ್ಬನಾದ ಅಹ್ಯುಟ್ಜಲ್ (1482–1502) ನೀರಿನ ಕಾಲುವೆಗಳನ್ನು ತೆಗೆಸಿ, ಮೆಕ್ಸಿಕೊದ ದೊಡ್ಡ ದೇವಾಲಯವನ್ನು ಕಟ್ಟಿಸಿದ. ಮಂಟೆಝುಮನ ಕಾಲದಲ್ಲಿ ಇವರ ಅಭ್ಯುದಯ ಉನ್ನತ ಶಿಖರಕ್ಕೇರಿತು.

ನಾಲ್ಕು ದಿಕ್ಕಿನಲ್ಲೂ ಒಡ್ಡಿನ ಹಾದಿಗಳಿಂದ ಆವರಿಸಿದ್ದ ಇವರ ನಗರ ಅನೇಕ ಕಾಲುವೆಗಳಿಂದ ಭೇದಿಸಲ್ಪಟ್ಟ ಬಹುಚತುರ್ಭುಜಾಕೃತಿಗಳಿಂದ ಕೂಡಿದ್ದು, ಮಧ್ಯದಲ್ಲಿ ದೊಡ್ಡ ಪಿರಮಿಡ್ಡಿನ ಮೇಲೆ ಒಂದು ಜೋಡಿ ದೇವಾಲಯ ಹಾಗೂ ಅದರ ಸಮೀಪದಲ್ಲಿದ್ದ ವಾಯುದೇವತೆಯ ದುಂಡು ದೇವಾಲಯಗಳಿಂದ ವಿರಾಜಿಸುತ್ತಿತ್ತು. ಟಿಯೊಪನ್ಜೊಲ್ಕೊ ನಲ್ಲಿರುವ ಸುಂದರ ದೇವಾಲಯ ಹಾಗೂ ಮಲಿನಸ್ಕೊನಲ್ಲಿರುವ ಕಮಾನಿನ ಬಾಗಿಲುಳ್ಳ ಒಂದೇ ಕಲ್ಲಿನ ದೇವಾಲಯ ಇವರ ವಾಸ್ತುಶಿಲ್ಪದ ಕುಶಲತೆಗೆ ಉತ್ತಮ ನಿದರ್ಶನಗಳು.

ಇವರ ಪಂಚಾಂಗ ಬಹಳ ತೊಡಕಿನದು. 260 ದಿವಸಗಳ ಪವಿತ್ರಕಾಲಮಾನವಲ್ಲದೆ 365 ದಿನಗಳ ಸೌರವರ್ಷಕಾಲಮಾನವೂ ರೂಢಿಯಲ್ಲಿತ್ತು. 52 ಸೌರವರ್ಷಗಳಿಗೊಮ್ಮೆ ಇವೆರಡರ ಮೊದಲ ದಿವಸಗಳು ಒಂದಾಗುತ್ತಿದ್ದವು. ಅಂಥ ದಿವಸಗಳಲ್ಲಿ ಹಿಂದೆ ತಮ್ಮ ದೇವತೆಗಳಿಂದ ಉದ್ಭವಿಸಿದ ಮಹಾ ಅನಿಷ್ಟಗಳಿಂದ ನಾಲ್ಕು ಸಲ ಪ್ರಪಂಚ ಹಾಳಾಯಿತೆಂದೂ ಮುಂದೆಯೂ ಭೂಕಂಪದಿಂದ ಹಾಳಾಗುವುದೆಂದೂ ಇವರ ನಂಬಿಕೆ. ಇವರದ್ದು ಚಿತ್ರಲಿಪಿ. ಯುಕಟಾನ್ ಬರೆವಣಿಗೆಯೂ ಇವರಿಗೆ ತಿಳಿದಿತ್ತು. ಇವರು ವಿಶೇಷವಾಗಿ ನಿಸರ್ಗದ ವಿವಿಧ ಶಕ್ತಿಗಳ ಆರಾಧಕರು. ಆದರೆ ಇವರ ಆರಾಧನೆಯ ಆಚರಣೆ ಅತಿ ಘೋರ. ತಮ್ಮ ದೇವತೆಗಳ ತೃಪ್ತಿಗೋಸ್ಕರ ವರ್ಷವಿಡೀ ಚಿತ್ರಹಿಂಸೆಯ ನರಬಲಿ ಕೊಡುತ್ತಿದ್ದರು. ಹೆಚ್ಚಾಗಿ ಇವರ ದೇವತೆಗಳು ಮಾನವ ಕಲ್ಪನೆಯಲ್ಲೇ ಅತಿ ವಿಚಿತ್ರ ಹಾಗೂ ಭಯಾನಕ ಸ್ವರೂಪವುಳ್ಳವು. ರಕ್ತಬಲಿ ಎಂದರೆ ಅವಕ್ಕೆ ಬಹುಪ್ರಿಯ. ಎಲ್ಲೋ ಒಂದೆರಡು ದೇವತೆಗಳು ಮಾತ್ರ ಉದಾರಿಗಳು, ದಯಾಪರರು. ಇವರು ಯುದ್ಧ ಮಾಡುತ್ತಿದ್ದುದು, ಮುಖ್ಯವಾಗಿ ಬಲಿಗ್ರಹಣಕ್ಕೋಸ್ಕರ. ಹುಡುಗರಿಗೆ 15ನೆಯ ವರ್ಷದಿಂದ ಯುದ್ಧ ಶಿಕ್ಷಣಕೊಟ್ಟು 20ನೆಯ ವಯಸ್ಸಿನಲ್ಲಿ ಯುದ್ಧಕ್ಕೆ ಕಳುಹಿಸುತ್ತಿದ್ದರು. ಪ್ರತಿಯೊಬ್ಬನೂ ಒಂದು ಬಲಿಯನ್ನು ತರುವ ತನಕ ತಲೆಗೂದಲನ್ನು ಕತ್ತರಿಸುವ ಹಾಗಿರಲಿಲ್ಲ. ವಿಜಯಶಾಲಿಗೆ ಚಿರತೆ ಅಥವಾ ಗಿಡುಗನ ಚರ್ಮವನ್ನು ಧರಿಸುವ ಗೌರವವಿರುತ್ತಿತ್ತು. ಪರಾಜಿತನನ್ನು ಸೈನ್ಯದಿಂದ ತೆಗೆದುಹಾಕಿ ಅವಮಾನಕ್ಕೀಡುಮಾಡುತ್ತಿದ್ದರು.

ದೇವತೆ, ವರ್ಣಚಿತ್ರ

ನಿಯಮಬದ್ಧವಾಗಿ ನಡೆಯುತ್ತಿದ್ದ ಇವರ ಸಂತೆಯಮಾಳ ಟ್ಲಟೆಲೊಲ್ಕೊ ಎಂಬಲ್ಲಿತ್ತು. ವಸ್ತ್ರಾಭರಣಗಳಿಗೆ ಖಾಷ್‌ಕಲ್ಲು, ಸಮುದ್ರದ ಚಿಪ್ಪು, ಪಕ್ಷಿಗಳ ಗರಿ ಮುಂತಾದುವುಗಳನ್ನು ದೂರ ಪ್ರದೇಶಗಳಿಂದ ತರಿಸಿಕೊಳ್ಳುತ್ತಿದ್ದರು. ಉತ್ತಮ ಕಲ್ಲುಗೆಲಸದಲ್ಲೂ ಚಿನ್ನ ಎರಕ ಹುಯ್ಯುವುದರಲ್ಲೂ ವಿವಿಧ ವರ್ಣದ ಗರಿಗಳನ್ನು ಟರ್ಕ್ವಾಯಿಜ್ ಕಲ್ಲಿನ ಚೂರುಗಳನ್ನು ಜೋಡಿಸುವ ಸುಂದರ ಕಲಾತ್ಮಕ ಕೆಲಸಗಳಲ್ಲೂ ಇಲ್ಲಿಯ ಕಾರ್ಮಿಕರು ನಿಪುಣರಾಗಿದ್ದರು.

ಸಂಚಾರ ವ್ಯವಸ್ಥೆ, ಜನಗಣತಿಯ ಕ್ರಮ, ರಾಜನೀತಿ, ನ್ಯಾಯತೀರ್ಮಾನ, ಸಮಾಜದಲ್ಲಿ ಸ್ತ್ರೀಯರಸ್ಥಾನ, ಮದುವೆ ಕಟ್ಟಳೆ, ಕಡ್ಡಾಯ ಶಿಕ್ಷಣ–ಈ ಮುಂತಾದವು ಬಹಳ ಸುಧಾರಿಸಿದ್ದು ಆ ಭಾಗದ ಪ್ರಪಂಚದಲ್ಲೇ. ಇವರು ಹೆಚ್ಚಿನ ಮಟ್ಟದ ಸಂಸ್ಕೃತಿಯುಳ್ಳವರಾಗಿದ್ದರು.

ಕೋರ್ಟ್‌ಜ಼್‌ನ ನೇತೃತ್ವದಲ್ಲಿ ಸ್ಪೇನಿನವರ (1519) ಕ್ರೂರ ಆಕ್ರಮಣ ಪ್ರಾರಂಭವಾದ ಮೇಲೆ ಇವರ ನಗರ ಹಾಗೂ ಸಂಸ್ಕೃತಿ ನಾಶವಾಯಿತು. (ಜಿ.ವಿ.ಆರ್.;ಎ.ಎಸ್.)

**ಆಟೋಮನ್ ಚಕ್ರಾಧಿಪತ್ಯ:** ತುರ್ಕಿ ಭಾಷೆಯನ್ನಾಡುತ್ತಿದ್ದ ಸಮೂಹದ ಸಾಮ್ರಾಜ್ಯ. ಸು.1300ರಲ್ಲಿ ಸ್ಥಾಪನೆಗೊಂಡು 1922ರವರೆಗೂ ಉಳಿದು ಬಂದಿತ್ತು. 1500–1600ರ ವರೆಗೆ ಇದು ಅತ್ಯಂತ ಪ್ರಬಲವಾಗಿದ್ದ ಕಾಲದಲ್ಲಿ ಟರ್ಕಿ, ಉತ್ತರ ಆಫ್ರಿಕದ ಕೆಲವು ಭಾಗಗಳು, ಏಷ್ಯ ನೈರುತ್ಯ ಭಾಗ ಮತ್ತು ಯುರೋಪಿನ ಆಗ್ನೇಯ ಭಾಗಗಳು ಈ ಚಕ್ರಾಧಿಪತ್ಯಕ್ಕೆ ಸೇರಿದ್ದವು. ಇದಕ್ಕೆ ತುರ್ಕಿ ಸಾಮ್ರಾಜ್ಯವೆಂಬ ಹೆಸರೂ ಇದ್ದು ಈಗಿನ ತುರ್ಕಿಸ್ಥಾನವನ್ನೂ ಒಳಗೊಂಡ ದೊಡ್ಡ ರಾಷ್ಟ್ರವಾಗಿತ್ತು. ಏಷ್ಯಮೈನರ್ ಇದರ ಕೇಂದ್ರ. ಆಗ ಶಾಸ್ತ್ರಸಮ್ಮತವಾದ ಸಾಂಪ್ರದಾಯಿಕ ಇಸ್ಲಾಂಧರ್ಮ ಸಂಪ್ರದಾಯಗಳು ಶಿಥಿಲವಾಗುತ್ತಾ ಬಂದಿದ್ದುವು; ಇಸ್ಲಾಮೀಯರ ನಾಗರಿಕತೆಯಲ್ಲೂ ಪ್ರಗತಿಯಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಸ್ಥಾಪಿತವಾದ ಹೊಸ ಸಾಮ್ರಾಜ್ಯ ಕೆಲಮಟ್ಟಿಗೆ ಇಸ್ಲಾಂ ಧರ್ಮ ಸಂಪ್ರದಾಯವನ್ನೇ ಬದಲಾಯಿಸಿತು. ಅಲ್ಲದೆ ಪೌರ್ವಾತ್ಯ ನಾಗರಿಕತೆಯ ಪ್ರಭಾವಕ್ಕೊಳಗಾಗಿ ಹೊಸ ಮಾರ್ಗದಲ್ಲಿ ಮುಂದುವರಿಯಿತು.

ಮಧ್ಯ ಏಷ್ಯದಲ್ಲಿ ಶತಮಾನಗಳ ಕಾಲ ಭವ್ಯ ಇತಿಹಾಸವನ್ನು ಹೊಂದಿದ್ದ ತುರುಷ್ಕರಲ್ಲಿ ಕೆಲವರು ಪಶ್ಚಿಮದ ಕಡೆ ವಲಸೆ ಹೋಗಿ ಮಧ್ಯಪ್ರಾಚ್ಯಕ್ಕೂ ಬಂದರು. ಅವರಲ್ಲಿ ಮೊದಲನೆಯ ಸುಲ್ತಾನ ಉಸ್ಮಾನ್ (1281–1325). ಅವನಿಂದಲೇ ಆ ವಂಶದ ಹೆಸರು ಬಂದದ್ದು. ಉಸ್ಮಾನ್ ಎಂಬ ಶಬ್ದವೇ ಆಟೋಮನ್ ಎಂದು ರೂಪಾಂತರ ಹೊಂದಿತು. ಅವನ ಮಗ ಅರ್‌ಹಾನ್ (1328–59). ಇಸ್ತಾಂಬುಲ್‌ಗೆ ಅಭಿಮುಖವಾಗಿ ಬರ್ಸಾವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಅರ್‌ಹಾನನ ಮಗನಾದ ಸುಲೈಮಾನ್ ಗ್ಯಾಲಿಪೋಲಿಯನ್ನು 1358ರಲ್ಲಿ ವಶಪಡಿಸಿಕೊಂಡ ಮೇಲೆ ತುರುಕರಿಗೆ ಮೊಟ್ಟಮೊದಲು ಯುರೋಪಿನಲ್ಲಿ ನೆಲೆಸಲು ಸಾಧ್ಯವಾಯಿತು. ಮುರಾದ್ I (1359–80) ಏಡ್ರಿಯನೋಪಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬೈಜಾಂಟೈನ್ ಸಾಮ್ರಾಜ್ಯ ಇಸ್ತಾನ್‌ಬುಲ್‌ಗೆ ಮಾತ್ರ ಸೀಮಿತವಾಗಿರುವಂತೆ ಮಾಡಿದ. ಸರ್ಬಿಯ ಮತ್ತು ಅದರ ಮಿತ್ರರಾಷ್ಟ್ರಗಳು ಪರಾಜಯ ಹೊಂದಿದುವು. ಇದೇ ಅವರ ಅತ್ಯಂತ ವೈಭವದ ಕಾಲವೆನ್ನಬಹುದು. ಅವರ ಸಾಮ್ರಾಜ್ಯ ವಿಸ್ತರಣೆ ಮುಂದುವರಿಯಿತು. ಮಹಮದ್ ಷಾ II (1451–81) ಸುಲ್ತಾನ 1453ರಲ್ಲಿ ಕಾನ್‌ಸ್ಟಾಂಟಿನೋಪಲ್ಲನ್ನೂ ವಶಪಡಿಸಿಕೊಂಡ. ಇವನ ಆಳಿಕೆಯಲ್ಲಿ ವಿದ್ಯೆಗೆ, ಕಲೆಗೆ, ವಿಶೇಷ ಪ್ರೋತ್ಸಾಹ ದೊರಕಿತು. ಈತ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ ಕಾನ್‌ಸ್ಟಾಂಟಿ ನೋಪಲನ್ನು ಭವ್ಯಸೌಧಗಳಿಂದ ಮಸೀದಿಗಳಿಂದ ಅಲಂಕರಿಸಿದ. ಅವನಿಗೆ 8 ವಿದೇಶಿ ಭಾಷೆಗಳ ಪರಿಚಯವಿತ್ತು. ಅಲ್ಲದೆ ತಾನು ಗೆದ್ದ ಪ್ರದೇಶಗಳಲ್ಲಿ ಜನರ ಮತ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ರಕ್ಷಿಸಿದ. ಇವನ ಅತ್ಯಂತ ವೈಭವಯುತವಾದ ಆಳಿಕೆಯಲ್ಲಿ ತುರ್ಕಿ ಸಾಮ್ರಾಜ್ಯದ ಸರ್ವತೋಮುಖ ಪ್ರಗತಿಯ ಪರಾಕಾಷ್ಠೆಯನ್ನು ಕಾಣಬಹುದು.

ತುರುಕರು ಬೆಲ್‌ಗ್ರೇಡನ್ನು 1521ರಲ್ಲಿ ವಶಪಡಿಸಿಕೊಂಡರು. 1522ರಲ್ಲಿ ರ್‍ಹೋಡ್ಸ್ ಅವರ ಕೈ ಸೇರಿತು. 1524ರಲ್ಲಿ ಹಂಗೇರಿಯನ್ನೂ ಗೆದ್ದರು. ಅವರ ಈ ಧಾಳಿ ಅಲ್‌ಜೀರಿ ಥಿಂದವರೆಗೂ ವ್ಯಾಪಿಸಿತು. ಅಲ್ಲದೆ ಆಫ್ರಿಕದ ಉತ್ತರ ಸಮುದ್ರ ತೀರಪ್ರದೇಶಗಳು ಅವರ ಕೈವಶವಾದುವು. ಆದರೆ ಮುಂದೆ ಬಂದ ಮೂವರು ಸುಲ್ತಾನರ ಕಾಲದಲ್ಲಿ ಈ ಕೀರ್ತಿ ವೈಭವಗಳು ಕುಂದಿದುವು.

4ನೆಯ ಅಹಮದ್‌ನ (1648–87) ಕಾಲದಲ್ಲಿ ಇಳಿಗತಿ ಕೊನೆಗೊಂಡು, ಆಟೋಮನ್ ಸಾಮ್ರಾಜ್ಯ ಪುನಶ್ಚೇತನಗೊಂಡಿತು. ಅವನ ಕಾಲದಲ್ಲಿ ಕ್ರೀಟ್, ಪೊಡೋಲಿಯ ಮತ್ತು ಉಕ್ರೇನಿನ ಒಂದು ಭಾಗ ತುರುಕರ ಕೈ ಸೇರಿದುವು. ಆದರೆ 1683ರಲ್ಲಿ ವಿಯನ್ನಾದ ಮೇಲೆ ಎರಡನೆಯ ಬಾರಿ ಮುತ್ತಿಗೆ ಹಾಕಿದರೂ ನಿಷ್ಫಲವಾಯಿತು.

ಮುಂದಿನ 150 ವರ್ಷಗಳು ತುರ್ಕಿ ಸಾಮ್ರಾಜ್ಯದ ಇತಿಹಾಸದಲ್ಲಿ ಗಮನಾರ್ಹವಾದುವು. ಏಕೆಂದರೆ ಆ ಸಾಮ್ರಾಜ್ಯ ಬಾಲ್ಕನ್ ರಾಜ್ಯಗಳೊಂದಿಗೆ ನಡೆಸಿದ ಯುದ್ಧಗಳಲ್ಲಿ ಮೇಲಿಂದ ಮೇಲೆ ಜಯಾಪಜಯಗಳನ್ನು ಅನುಭವಿಸಬೇಕಾಯಿತು. ಅಬ್ದುಲ್ ಮಜೀದ್ ಎಂಬುವನ (1839–61) ಕಾಲದಲ್ಲಿ ಈಜಿಪ್ಟಿನ ಮಹಮ್ಮದ್ ಅಲಿ ನಡೆಸಿದ ಧಾಳಿಯಿಂದ ಪಾರಾಗಲು ಪಾಶ್ಚಾತ್ಯ ರಾಷ್ಟ್ರಗಳ ನೆರವು ಪಡೆಯಬೇಕಾಯಿತು. 1876ರಲ್ಲಿ ಅಬ್ದುಲ್ ಹಮೀದ್ II ಸುಲ್ತಾನನಾದ. ರಷ್ಯ ತುರ್ಕಿಯ ವಿರುದ್ಧ ಯುದ್ಧ ಘೋಷಿಸಿತು (1877–78). ಈ ಯುದ್ಧ 1878ನೆಯ ಮಾರ್ಚ್‌ನಲ್ಲಾದ ಸ್ಯಾನ್ ಸ್ಟಿಫಾನೊ ಒಪ್ಪಂದದಿಂದ ಕೊನೆಗೊಂಡಿತು. ಒಪ್ಪಂದದ ಷರತ್ತುಗಳು ಇಂಗ್ಲೆಂಡ್ ಆಸ್ಟ್ರಿಯಗಳಿಗೆ ಒಪ್ಪಿಗೆಯಾಗಲಿಲ್ಲ. ಆಗ್ನೇಯ ಯುರೋಪಿನಲ್ಲಿ ಹೊಸದಾಗಿ ನಿರ್ಮಿತವಾದ ಸಣ್ಣ ರಾಜ್ಯಗಳಲ್ಲಿ ರಾಜಕೀಯ ಶಾಂತಿಗೆ ಅನುಕೂಲ ಸಮಾನ ಬಲತೆ ಏರ್ಪಟ್ಟಿರಲಿಲ್ಲವೆಂದು ಆ ಎರಡು ರಾಷ್ಟ್ರಗಳ ಆಕ್ಷೇಪಣೆ. ಈ ಕೊರತೆಯ ನಿವಾರಣೆಗಾಗಿ ಅದೇ ವರ್ಷದ ಜೂನ್–ಜುಲೈ ತಿಂಗಳುಗಳಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನವೊಂದು ಬರ್ಲಿನ್‌ನಲ್ಲಿ ನಡೆಯಿತು. ಇಲ್ಲಿ ಸ್ಯಾನ್ ಸ್ಟಿಫಾನೊ ಒಪ್ಪಂದ ಪರಿಷ್ಕರಣ ಹೊಂದಿ, ಬರ್ಲಿನ್ ಕೌಲು ಹೊರಬಂದಿತು. ಹೊಸ ಕ್ರೈಸ್ತ ರಾಜ್ಯಗಳು ಕೊಂಚ ಮಾರ್ಪಾಡು ಹೊಂದಿ ಹಾಗೆಯೇ ಉಳಿದುವು. ತುರ್ಕಿ ಮಾತ್ರ ತನ್ನ ಅಧೀನದಲ್ಲಿದ್ದ ಅನೇಕ ಪ್ರಾಂತಗಳನ್ನು ಕಳೆದುಕೊಂಡಿತು. ಕ್ರೀಟ್ ದ್ವೀಪವನ್ನು ಸ್ವಾಧೀನಪಡಿಸಿಕೊಳ್ಳಲು 1897ರಲ್ಲಿ ಗ್ರೀಕರು ತುರ್ಕಿಯ ಮೇಲೆ ಯುದ್ಧ ಹೂಡಿದಾಗ, ಸುಲ್ತಾನ್ ಹಮೀದ್ ಪಾಷಾ ಅವರನ್ನು ಸೋಲಿಸಿದ್ದಲ್ಲದೆ ಥೆಸಲಿ ಯನ್ನೂ ವಶಪಡಿಸಿಕೊಂಡ.

1908ರಲ್ಲಿ ಯಂಗ್ ಟರ್ಕ್ಸ್ ಚಳವಳಿ ಪ್ರಾರಂಭವಾದ ಮೇಲೆ ಆಧುನಿಕ ತುರ್ಕಿಯಲ್ಲಿ ಕ್ರಾಂತಿಕಾರಕ ರಾಜಕೀಯ ಘಟನೆಗಳು ಸಂಭವಿಸಿದುವು. ಸುಧಾರಣೆಗಳಿಗೆ, ಪ್ರಜಾಪ್ರಭುತ್ವಕ್ಕೆ ಅನುಕೂಲವಾದ ರಾಜ್ಯವ್ಯವಸ್ಥೆಯನ್ನು ರೂಪಿಸಿ, ಅದಕ್ಕನುಸಾರವಾಗಿ 17 ಡಿಸೆಂಬರ್ 1908ರಲ್ಲಿ ಶಾಸನ ಸಭೆಯೊಂದು ಸೇರಿತು. ಸಂವಿಧಾನಾತ್ಮಕ ಆಡಳಿತ ಪ್ರಾರಂಭವಾಯಿತು. ಮೊದಲನೆಯ ಮಹಾಯುದ್ಧದಲ್ಲಿ ತುರ್ಕಿದೇಶ ಜರ್ಮನಿಯ ಪರವಾಗಿತ್ತು. ಯುದ್ಧ ಮುಗಿದ ಕೂಡಲೇ ಆಕ್ರಮಣಶೀಲವಾಗಿದ್ದ ಗ್ರೀಕರ ಸೈನ್ಯ ಒಂದು ಇಜ಼್‌ಮೀರ್‌ನಲ್ಲಿ ನೆಲೆ ಯೂರಿತು. ಆಗ ದೇಶಪ್ರೇಮಿ ತುರ್ಕಿ ಯುವಕ ತಂಡವೊಂದು ಮುಸ್ತಫ ಕೆಮಾಲ್‌ನ ನೇತೃತ್ವದಲ್ಲಿ ಮುನ್ನುಗ್ಗಿ ಗ್ರೀಕರ ಸಂಚನ್ನು ವಿಫಲಗೊಳಿಸಿತು. 20 ಡಿಸೆಂಬರ್ 1920ರಂದು ತುರ್ಕಿಯ ಪಾರ್ಲಿಮೆಂಟಿನ ನ್ಯಾಷನಲಿಸ್ಟ್ ಪಕ್ಷದ ಸದಸ್ಯರು ಒಂದು ರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದರು. ಆ ಶಾಂತಿ ಒಪ್ಪಂದವನ್ನೇ ಹೊಸ ತುರ್ಕಿಯ ಸ್ವಾತಂತ್ರ್ಯ ಘೋಷಣೆ ದಿನವೆಂದು ಉಲ್ಲೇಖಿಸಲಾಗುತ್ತಿದೆ. 1920 ಏಪ್ರಿಲ್‌ನಲ್ಲಿ ಮುಸ್ತಫ ಕೆಮಾಲ್ ಮೊದಲ ರಾಷ್ಟ್ರೀಯ ಸರ್ಕಾರವನ್ನು ಅನಟೋಲಿಯ ಪರ್ವತ ಪ್ರದೇಶದಲ್ಲಿರುವ ಅಂಕಾರಾದಲ್ಲಿ ಸ್ಥಾಪಿಸಿದ. ಗ್ರೀಕರು ತುರ್ಕಿ ದೇಶದೊಳಕ್ಕೆ ನುಗ್ಗಿದಾಗ ಕೆಮಾಲ್ ಅವರನ್ನು ಹೊಡೆದೋಡಿಸಿದ. ಈ ಯುದ್ಧ 1923 ಲಾಸೇನ್ ಶಾಂತಿ ಒಪ್ಪಂದದಿಂದ ಕೊನೆಗೊಂಡಿತು. ಪಾಶ್ಚಾತ್ಯ ರಾಷ್ಟ್ರ ಗಳ ಮಾದರಿಯಲ್ಲಿ ಪ್ರಗತಿಪರ ಪ್ರಜಾಧಿಪತ್ಯ ಸ್ಥಾಪಿತವಾದಾಗ ಆಟೊಮನ್ ಸಾಮ್ರಾಜ್ಯ ಕೊನೆಗೊಂಡಿತು. (ಬಿ.ಎಸ್.ಎ.)

**ಆಡಮ್:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯ ಕೂಹಿ ತಾಲ್ಲೂಕಿನಲ್ಲಿರುವ ಪುರಾತತ್ತ್ವ ನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಮರೇಂದ್ರನಾಥ 1988–92ರಲ್ಲಿ ಇಲ್ಲಿ ಉತ್ಖನನ ನಡೆಸಿ ಐದು ವಿಭಿನ್ನ ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದ್ದಾರೆ. ಹಂತ 1: ಮಣ್ಪಾತ್ರೆರಹಿತ ಸೂಕ್ಷ್ಮ ಶಿಲಾಯುಗ (ಪ್ರ.ಶ.ಪೂ.ಸು. 2000–1500), ಹಂತ 2 : ವಿದರ್ಭ ತಾಮ್ರ–ಶಿಲಾಯುಗ (ಪ್ರ.ಶ.ಪೂ.ಸು. 1500–1000), ಹಂತ 3: ಕಬ್ಬಿಣಯುಗ (ಬೃಹತ್ ಶಿಲಾಯುಗ) (ಪ್ರ.ಶ.ಪೂ.ಸು. 1000–500), ಹಂತ 4: ಪ್ರಾಗ್‌ಮೌರ್ಯ ಮತ್ತು ಮೌರ್ಯರ ಕಾಲ (ಪ್ರ.ಶ.ಪೂ.ಸು. 500–150), ಹಂತ 5: ಭದ್ರ, ಸಾತವಾಹನ ಹಾಗೂ ಮಹಾರಠಿಗಳ ಕಾಲ (ಪ್ರ.ಶ.ಪೂ.ಸು. 150–ಪ್ರ.ಶ.250).

ಆಡಮ್‌ನ ಪ್ರಥಮ ನಿವಾಸಿಗಳು ಚರ್ಟ್, ಕ್ಯಾಲ್ಸೆಡನಿ, ಅಗೇಟ್ ಮತ್ತು ಬೆಣಚುಕಲ್ಲುಗಳಿಂದ ಅಲಗು, ಅರ್ಧಚಂದ್ರಾಕೃತಿ, ಮೊನೆ, ಉಳಿಯಂಥ ಉಪಕರಣ, ಹೆರೆಯುವ ಉಪಕರಣಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದರು. ವಿಶೇಷವೆಂದರೆ ಈ ಹಂತದಲ್ಲಿ ಮಣ್ಪಾತ್ರೆಗಳ ಆವಿಷ್ಕಾರ ಆಗಿರಲಿಲ್ಲ. ಬೇಟೆಗಾರಿಕೆ ಮತ್ತು ಮೀನುಗಾರಿಕೆ ಇವರ ಮುಖ್ಯ ಕಸುಬುಗಳಾಗಿದ್ದವು. ಇವರ ಮನೆಗಳಿಗೆ ಕೆಂಪು ದೊರಗು ಮಣ್ಣು ಹಾಕಿ ದಮ್ಮಸು ಮಾಡಿದ ನೆಲಗಟ್ಟು ಅಥವಾ ಜಂಬಿಟ್ಟಿಗೆ ಕಲ್ಲಿನ ಹಾಸು ಇದ್ದವು. ಇಂಥ ನೆಲಗಳ ಮೇಲೆ ಇದ್ದಲು ಹಾಗೂ ಎಲುಬುಗಳು ದೊರಕಿವೆ. ಈ ಕಾಲದಲ್ಲಾಗಲೇ ವ್ಯವಸಾಯ ಆರಂಭವಾಗಿರುವ ಸಾಧ್ಯತೆಯಿರಬಹುದೆಂದು ಉತ್ಖನನಕಾರರು ಅನುಮಾನಿಸಿದ್ದಾರೆ.

2ನೆಯ ಹಂತದಲ್ಲಿ ತಾಮ್ರ–ಶಿಲಾಯುಗದ ಅವಶೇಷಗಳಿವೆ. ವ್ಯವಸಾಯ ಹಾಗೂ ಪ್ರಾಣಿ ಸಾಕಾಣಿಕೆ ಈ ಕಾಲದ ಜನರ ಕಸುಬಾಗಿತ್ತು. ತಾಮ್ರದ ಸಲಕರಣೆಗಳು, ಸೂಕ್ಷ್ಮ ಶಿಲೋಪಕರಣಗಳು, ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿ ಹಾಗೂ ಎಲುಬಿನ ಉಪಕರಣಗಳು ಇವರು ಬಳಸಿದ ವಸ್ತುಗಳಾಗಿವೆ. ದಖನ್ ಹಾಗೂ ಮಧ್ಯ ಭಾರತದ ಸಮಕಾಲೀನ ತಾಮ್ರ–ಶಿಲಾಯುಗ ಸಂಸ್ಕೃತಿಗಳಾದ ಮಾಳ್ವ ಹಾಗೂ ಜೋರ್ವೆ ಜನ ಉಪಯೋಗಿಸುತ್ತಿದ್ದ ಮಣ್ಪಾತ್ರೆಗಿಂತ ಭಿನ್ನವಾದ ಪಾತ್ರೆಗಳನ್ನು ಆಡಮ್‌ನ ತಾಮ್ರ–ಶಿಲಾಯುಗದ ಜನ ಬಳಸುತ್ತಿದ್ದರು. ಇಲ್ಲಿಯ ಪಾತ್ರೆಗಳು ಸಾಮಾನ್ಯವಾಗಿ ಕೆಂಪುಬಣ್ಣದವು. ಈ ಪಾತ್ರೆಗಳ ಬಾಯಂಚು ಹಾಗೂ ಭುಜಭಾಗಗಳ ಮೇಲೆ ಕಪ್ಪುಬಣ್ಣದಲ್ಲಿ ಒಂದನ್ನೊಂದು ಛೇದಿಸುವ ವಕ್ರರೇಖೆಗಳು ಹಾಗೂ ಅಡ್ಡ ಸೀಳುಗೀಟುಳ್ಳ ಎಲೆಯೋಪಾದಿಯಂಥ ಚಿಹ್ನೆಗಳನ್ನು ಚಿತ್ರಿಸಿದ್ದಾರೆ. ಇಂಥ ಸ್ಥಳೀಯ ಲಕ್ಷಣಗಳಿಂದ ಕೂಡಿದ ಮಣ್ಪಾತ್ರೆಗಳನ್ನು ವಿದರ್ಭದ ಇನ್ನಿತರ ತಾಮ್ರ–ಶಿಲಾಯುಗ ನೆಲೆಗಳಾದ ಪೌನಾರ್ ಹಾಗೂ ಥಾರ್ಸಾದ ಆದಿಸ್ತರಗಳಿಂದ ವರದಿ ಮಾಡಲಾಗಿದೆ. ಶ್ರೀಕಂಡ, ಅಂಭೋರಾ ಖುರ್ದ್, ಪಂಚಖೇರಿ ಇತ್ಯಾದಿ ಅನ್ವೇಷಿತ ನೆಲೆಗಳಿಂದಲೂ ಇಂಥ ಮಣ್ಪಾತ್ರೆಗಳ ಭಗ್ನಾವಶೇಷಗಳು ದೊರಕಿವೆ. ಆದ್ದರಿಂದ ಇಂಥ ಸ್ಥಳೀಯ ಲಕ್ಷಣಗಳಿಂದ ಕೂಡಿದ ಮಣ್ಪಾತ್ರೆ ಗಳನ್ನೊಳಗೊಂಡ ತಾಮ್ರ–ಶಿಲಾಯುಗ ಹಂತವನ್ನು ವಿದರ್ಭ ತಾಮ್ರ–ಶಿಲಾಯುಗ ಎಂದು ಗುರುತಿಸಲಾಗಿದೆ. ಈ ಹಂತದ ಇತರ ಪ್ರಮುಖ ಅವಶೇಷಗಳೆಂದರೆ: ತಾಮ್ರದ ಉಂಗುರ, ಎಲುಬಿನ ಮೊನೆಗಳು ಹಾಗೂ ಹೆರೆಯುವ ಉಪಕರಣಗಳು, ಎಲುಬಿನ ಚಕ್ರದಂಥ ವಸ್ತು, ಸುಟ್ಟಮಣ್ಣಿನ ಮಣಿಗಳು ಇತ್ಯಾದಿ. ಇಂಗಾಲ–14ರ ಕಾಲಗಣನೆಯನ್ನಾಧರಿಸಿ ಈ ಹಂತ ಪ್ರ.ಶ.ಪೂ.ಸು.1300ರ ಅವಧಿಯೆಂದು ನಿರ್ಣಯಿಸಲಾಗಿದೆ. 3ನೆಯ ಹಂತ ವಿದರ್ಭ ಪ್ರಾಂತದ ಬೃಹತ್‌ಶಿಲಾಯುಗ ನೆಲೆಗಳಾದ ತಕಲ್‌ಘಾಟ್, ಮಹುರ್ಜರಿ, ನಾಯ್‌ಕುಂಡ್ ನೆಲೆಗಳ ಸಂಸ್ಕೃತಿಯನ್ನು ಹೋಲುತ್ತದೆ. ಕಬ್ಬಿಣದ ತಯಾರಿಕೆ ಯಿಂದಾಗಿ

ವ್ಯವಸಾಯದಲ್ಲಿ ಹೆಚ್ಚಿನ ಪ್ರಗತಿಯಾಯಿತು. ಬೃಹತ್‌ಶಿಲಾಯುಗದ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಕೆಂಪು ಮೇಲ್ಮೈಯಲ್ಲಿ ಕಪ್ಪು ವರ್ಣ ಚಿತ್ರವಿರುವ ದುಂಡು ತಟ್ಟೆಯ ಹೊರತಾಗಿ, ಇನ್ನುಳಿದ ಪ್ರಕಾರಗಳಾದ ಜಾಡಿ, ಅಡುಗೆ ಪಾತ್ರೆಗಳು ಹಾಗೂ ಬಟ್ಟಲುಗಳು ಮೊದಲಿನ ಹಂತದಿಂದ ಮುಂದುವರೆದವು. ವಸತಿ ರಚನೆಯಲ್ಲಿ ಬದಲಾವಣೆಗಳು ಕಂಡುಬಂದಿಲ್ಲ. ಆದರೆ ಈ ಹಂತದಿಂದ ಒಂದು ಶವ ಸಂಸ್ಕಾರ–ಕುಂಭ ದೊರೆತಿದ್ದು, ಅದರೊಳಗೆ ಅಸ್ತಿ ಅವಶೇಷಗಳುಳ್ಳ ಕಪ್ಪು–ಕೆಂಪು ದ್ವಿವರ್ಣದ ಬಟ್ಟಲನ್ನು ಇಡಲಾಗಿತ್ತು. ಪ್ರಥಮಬಾರಿಗೆ ಇಂಥ ಅವಶೇಷ ಈ ಪ್ರಾಂತದಲ್ಲಿ ಕಂಡುಬಂದಿದೆ.

ಈ ಹಂತದ ಗಮನಾರ್ಹ ಅವಶೇಷಗಳೆಂದರೆ ಕೊರೆದು ಅಲಂಕರಿಸಿದ ಕಾರ್ನೀಲಿಯನ್ ಮಣಿ, ಮರಳುಕಲ್ಲಿನ ಒನಕೆಗಳು, ಮೂಸೆಗಳು; ಎಲುಬಿನ ಮೊನೆಗಳು; ಕೆತ್ತುವ/ಬರೆಯುವ ಸಲಕರಣೆ; ಉಂಗುರದಂತಹ ಸುಟ್ಟ ಮಣ್ಣಿನ ಮಣಿಗಳು; ಕಲ್ಲು ಹಾಗೂ ಮಡಕೆಯ ತುಂಡುಗಳಿಂದ ತಯಾರಿಸಿದ ಕುಂಟೆ ಬಿಲ್ಲೆಗಳು; ಕಬ್ಬಿಣದ ಬಾಣದ ಮೊನೆ, ಉಳಿ, ಚಾಕು, ಗುಳ/ಮುಂಜಣ, ಸರಳು ಮತ್ತು ಮೊನೆಗಳು, ತಾಮ್ರದ ಸರಳು ಹಾಗೂ ಶಂಖದ ಬಳೆಗಳ ಅವಶೇಷ.

4ನೆಯ ಹಂತದಲ್ಲಿ ಎತ್ತರದ ಮಣ್ಣಿನ ರಕ್ಷಣಾಗೋಡೆಯನ್ನು ನಿರ್ಮಿಸಲಾಯಿತು. ಪ್ರಥಮ ಬಾರಿಗೆ ಆಯತಾಕಾರದ ಅಥವಾ ಅಂಡಾಕಾರ ತಳವಿನ್ಯಾಸವುಳ್ಳ ಸುಟ್ಟ ಇಟ್ಟಿಗೆ ಹಾಗೂ ಜೇಡಿ ಪದರಗಲ್ಲಿನ ಕಟ್ಟಡಗಳು ನಿರ್ಮಾಣಗೊಂಡವು. ವಸತಿಯೊಳಗೆ ಸಾರ್ವಜನಿಕ ಚರಂಡಿ ವ್ಯವಸ್ಥೆಯೂ ಇತ್ತು. ಒಂದು ಮನೆಯ ಸ್ನಾನಗೃಹದ ಪಕ್ಕದಲ್ಲಿ ವೃತ್ತಾಕಾರದ ಬಾವಿ ಇದ್ದುದನ್ನು ಬೆಳಕಿಗೆ ತರಲಾಗಿದೆ. ಈ ಕಾಲದ ಮಣ್ಪಾತ್ರೆಗಳಲ್ಲಿ ಅಭ್ರಕಯುಕ್ತ ಕೆಂಪುಬಣ್ಣದ ಪಾತ್ರೆ ಹಾಗೂ ಕಪ್ಪು ಮತ್ತು ಕೆಂಪುಬಣ್ಣದ ಪಾತ್ರೆಗಳು ಹೆಚ್ಚಾಗಿವೆ. ಔತ್ತರೇಯ ಮೆರುಗಿನ ಕಪ್ಪು ಪಾತ್ರೆಯ ಒಂದು ಚೂರು ದೊರೆತಿದೆ.

ಮುದ್ರಾಂಕಿತ ನಾಣ್ಯಗಳು; ಸುಟ್ಟಮಣ್ಣಿನ ಮಾನವ ಹಾಗೂ ಪ್ರಾಣಿ ಗೊಂಬೆಗಳು; ಕೊರೆದು ಅಲಂಕರಿಸಿದ ಕಾರ್ನೀಲಿಯನ್ ಮಣಿಗಳು; ಸುಟ್ಟಮಣ್ಣಿನ, ಅಗೇಟಿನ ಹಾಗೂ ಸ್ಫಟಿಕದ ಮಣಿಗಳು; ಕಬ್ಬಿಣ ಹಾಗೂ ಕಲ್ಲಿನಲ್ಲಿ ತಯಾರಿಸಿದ ಗೃಹಬಳಕೆಯ ದಿನನಿತ್ಯದ ಸಲಕರಣೆಗಳು ಇತರ ಅವಶೇಷಗಳು.

5ನೆಯ ಹಂತದಲ್ಲಿ ಭದ್ರ, ಸಾತವಾಹನ ಹಾಗೂ ಮಹಾರಠಿ ವಂಶದ ಮುದ್ರಾಂಕಿತ ನಾಣ್ಯಗಳು, ಎರಕಹೊಯ್ದ ನಾಣ್ಯಗಳು ಮತ್ತು ಮುದ್ರಿಸಿದ ನಾಣ್ಯಗಳು ವಿಪುಲ ಸಂಖ್ಯೆಯಲ್ಲಿ ದೊರೆತಿವೆ. ಇಲ್ಲಿ ದೊರೆತ ರೋಮನ್ ನಾಣ್ಯಗಳು, ಜೇಡಿಮಣ್ಣಿನ ಹಾಗೂ ಫಯಾನ್ಸ ಬ್ಯುಲೇ, ರೌಲೆಟ್ ಮಣ್ಪಾತ್ರೆಗಳು, ರೋಮನ್ ಪೌರಾಣಿಕ ವ್ಯಕ್ತಿಯ ಚಿತ್ರವುಳ್ಳ ಸುಟ್ಟಮಣ್ಣಿನ ಫಲಕ, ವಿದೇಶಿ ಲಕ್ಷಣಗಳುಳ್ಳ ಸುಟ್ಟಮಣ್ಣಿನ ಗೊಂಬೆಗಳು ರೋಮ್‌ನೊಂದಿಗಿದ್ದ ವ್ಯಾಪಾರ ಸಂಬಂಧದ ಪುರಾವೆಗಳಾಗಿವೆ.

ಕೆಂಪುಬಣ್ಣದ ಪಾತ್ರೆಗಳು ಅಧಿಕ ಸಂಖ್ಯೆಯಲ್ಲಿದ್ದರೆ, ಕಪ್ಪು ಹಾಗೂ ಪಿಂಗಾಣಿ ಮಣ್ಪಾತ್ರೆಗಳು ಅಲ್ಪ ಪ್ರಮಾಣದಲ್ಲಿವೆ. ಅಲಂಕೃತ ಮಣ್ಪಾತ್ರೆಗಳ ಮೇಲೆ ಪಕ್ಷಿಗಳು, ಗುಲಾಬಿ ಯಂಥ ಪುಷ್ಪ, ತ್ರಿರತ್ನ, ಸ್ವಸ್ತಿಕ ಇತ್ಯಾದಿ ಚಿತ್ರಗಳನ್ನು ಕಾಣಬಹುದು. ಮೃದು ಸುಣ್ಣಕಲ್ಲಿನಿಂದ ತಯಾರಿಸಿದ ಕರಡಿಕೆ, ಬಟ್ಟಲು, ಮುಚ್ಚಳಗಳು ಆಕರ್ಷಕವಾಗಿವೆ.

ವಸತಿ ರಚನೆಯಲ್ಲಿ ಯಾವ ವ್ಯತ್ಯಾಸವಿಲ್ಲದಿದ್ದರೂ ಈ ಹಂತದ ಕಟ್ಟಡಗಳ ಸಂಖ್ಯೆಯಲ್ಲಿ ಆದ ವೃದ್ಧಿ ಜನಸಂಖ್ಯೆಯ ವೃದ್ಧಿಯೊಂದಿಗೆ ಸುಭಿಕ್ಷೆ ಹಾಗೂ ಶ್ರೀಮಂತಿಕೆಯ ಅಪ್ರತ್ಯಕ್ಷ ಸಂಕೇತಗಳೆಂದು ಉತ್ಖನನಕಾರರು ಅಭಿಪ್ರಾಯಪಟ್ಟಿದ್ದಾರೆ. ನಗರದ ಮುಖ್ಯ ಪ್ರವೇಶದ್ವಾರ ಪೂರ್ವದಿಶೆಯಲ್ಲಿದ್ದು ಎಲ್ಲ ಪ್ರಮುಖ ಬೀದಿಗಳು ಈ ದ್ವಾರವನ್ನು ಸೇರುತ್ತವೆ. ಇದು ಒಂದು ಯೋಜಿತ ನಗರವಾಗಿತ್ತು. ಹೆಚ್ಚಿನ ಮನೆಕಟ್ಟಡಗಳ ತಳವಿನ್ಯಾಸ ಆಯತಾಕಾರವಾಗಿದ್ದರೆ, ಇನ್ನೂ ಕೆಲವೊಂದು ಚೌಕಾಕಾರ, ಅಂಡಾಕಾರ ಹಾಗೂ ವೃತ್ತಾಕಾರ ತಳವಿನ್ಯಾಸವನ್ನು ಹೊಂದಿದ್ದವು. ಮನೆಗಳೊಳಗೆ ಬಾವಿ ಇದ್ದವು. ನಗರದಲ್ಲಿ ಚರಂಡಿಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿತ್ತು. ಕಲ್ಲು, ಇಟ್ಟಿಗೆ, ಹೆಂಚು, ಮುರಮ್ ಹಾಗೂ ಗಾರೆಯನ್ನು ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಲಾಗಿತ್ತು.

ಈ ನಗರ ಅರೆಪ್ರಶಸ್ತ ಕಲ್ಲಿನ, ಬಂಗಾರ, ತಾಮ್ರ, ಗಾಜು ಮತ್ತು ಸುಟ್ಟುಮಣ್ಣಿನ ಮಣಿಗಳನ್ನು ತಯಾರಿಸುವ ಉದ್ಯಮ ಕೇಂದ್ರವಾಗಿತ್ತು. ದಂತ ಹಾಗೂ ಶಂಖದ ಬಳೆಗಳನ್ನೂ ಇಲ್ಲಿ ತಯಾರಿಸಲಾಗುತಿತ್ತು. ವಿಭಿನ್ನ ಶೈಲಿಯ ಸ್ತ್ರೀ–ಪುರುಷರ ಹಾಗೂ ಪ್ರಾಣಿಗಳ ಪಕ್ಷಿಗಳ ಮಣ್ಣಿನ ಗೊಂಬೆಗಳನ್ನು, ಅಚ್ಚಿನಿಂದ ತಯಾರಿಸಲಾಗಿದ್ದು ಅವು ಅಂದಿನ ಕಲೆಯ ಪ್ರತೀಕವಾಗಿವೆ.

(ಎಲ್.ಎಸ್.ಆರ್.)

**ಆತ್ಮಬಲಿದಾನ:** ಕರ್ನಾಟಕದಲ್ಲಿ ಪ್ರಚಲಿತವಿದ್ದ, ಪ್ರಿಯವ್ಯಕ್ತಿಯ ಸಂಪ್ರೀತಿಗಾಗಿ ಆತ್ಮಬಲಿದಾನ ನೀಡುವ ಒಂದು ಸಂಪ್ರದಾಯ. ರಾಜರಾಣಿಯರ ಅಂಗರಕ್ಷಕರು ರಾಜನ ಮರಣವಾದಲ್ಲಿ ತಮ್ಮ ಜೀವವನ್ನು ತ್ಯಜಿಸುತ್ತಿದ್ದುದುಂಟು. ಈ ಆತ್ಮಬಲಿದಾನ ಪತಿಗಾಗಿ ಪ್ರಿಯಸತಿಯ ಪ್ರಾಣೋತ್ಕ್ರಮಣ, ವ್ಯಕ್ತಿಗಾಗಿ ಪ್ರಿಯವ್ಯಕ್ತಿಯ ಪ್ರಾಣೋತ್ಕ್ರಮಣ (ಇದು ಮುಂದೆ ಒಡೆಯ–ಸೇವಕ ಸಂಬಂಧದಲ್ಲೂ ಬೆಳೆಯಿತು)– ಹೀಗೆ ಎರಡು ಕವಲುಗಳಲ್ಲಿ ಬೆಳೆದುಬಂದಿತು. ಇವುಗಳಲ್ಲಿ ಒಂದರ ಹೆಸರು ಸಹಗಮನ, ಇನ್ನೊಂದರ ಹೆಸರು ಕಿಬ್ಬಂಟಿ. ಈ ಕಿಬ್ಬಂಟಿ ಪುರುಷನಿಗಾಗಿ ಪುರುಷ, ಪುರುಷನಿಗಾಗಿ ಸ್ತ್ರೀ, ಸ್ತ್ರೀಗಾಗಿ ಸ್ತ್ರೀ, ಸ್ತ್ರೀಗಾಗಿ ಪುರುಷ– ಹೀಗೆ ಯಾವುದೇ ಬಗೆಯಲ್ಲಿ ಕೈಕೊಂಡ ಬಲಿದಾನವಾಗಿರಬಹುದು. ಪ್ರಿಯವ್ಯಕ್ತಿ ಜೀವಿಸಿದ್ದ ಪ್ರಸಂಗದಲ್ಲಿ ಶುಭಹಾರೈಸಿ, ಇಲ್ಲವೆ ಅವನು ಮರಣ ಹೊಂದಿದ ಪ್ರಸಂಗದಲ್ಲಿ ಮೋಕ್ಷ ಹಾರೈಸಿ ಇವರು ಆತ್ಮಬಲಿದಾನ ಮಾಡಿಕೊಳ್ಳುತ್ತಿದ್ದರು.

ಕರ್ನಾಟಕದ ಶಾಸನಗಳು ಕಾವ್ಯಗಳನ್ನು ಐತಿಹಾಸಿಕವಾಗಿ ನೋಡಿದರೆ ಈ ಸಂಪ್ರದಾಯ ಕಾಲದಿಂದ ಕಾಲಕ್ಕೆ ಕಿಬ್ಬಂಟಿ–ವೇಳೆವಾಳಿ–ಲೆಂಕವಾಳಿ ಎಂದು ಹೆಸರುಗಳನ್ನು ಬದಲಿಸುತ್ತ ಬಂದಿದೆಯೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಕಿಬ್ಬಂಟಿ ಗಂಗ–ರಾಷ್ಟ್ರಕೂಟರ ಕಾಲದಲ್ಲಿ, ವೇಳೆವಾಳಿ ಕಲ್ಯಾಣಚಾಳುಕ್ಯರ ಕಾಲದಲ್ಲಿ, ಲೆಂಕವಾಳಿ ಕಲ್ಯಾಣಚಾಳುಕ್ಯ–ಹೊಯ್ಸಳರ ಕಾಲದಲ್ಲಿ ಪ್ರಧಾನವಾಗಿ ಬಳಕೆಗೊಂಡ ಪದಗಳಾಗಿವೆ. ಕಿಬ್ಬಂಟಿ ಎಂಬುದು



ಮಾಸ್ತಿಕಲ್ಲು, ಸಸ್ತಾಪುರ

ಹೂಳುವ ಸಂಪ್ರದಾಯವನ್ನು, ವೇಳೆವಾಳಿ ಎಂಬುದು ಸುಡುವ ಸಂಪ್ರದಾಯವನ್ನು ಪ್ರತಿನಿಧಿಸಲು ಹುಟ್ಟಿದ ಪದಗಳಾಗಿರಬಹುದು. ಇವೆರಡರಲ್ಲಿ ಬಹುಶಃ ಕಿಬ್ಬಂಟಿ ಹಳೆಯ ಪದ, ವೇಳೆವಾಳಿ ಆಮೇಲೆ ಬೆಳಕಿಗೆ ಬಂದ ಪದವಾಗಿರುವಂತೆ ತೋರುತ್ತದೆ. ಹೀಗೆ ತರುವಾಯ ಬಳಕೆಯಾದ ವೇಳೆವಾಳಿ ಎಂಬುದು ಕಿಬ್ಬಂಟಿ ಪದವನ್ನು ತಳ್ಳಿ, ಎರಡೂ ಸಂಪ್ರದಾಯಗಳಿಗೆ ಅದೇ ಬಳಕೆಯಾಗುತ್ತಬಂದಿತೆಂದು ತೋರುತ್ತದೆ. ಕಿಬ್ಬಂಟಿ ಬಹಳ ಹಿಂದೆಯೇ ಕಾಣೆಯಾಗಿ ವೇಳೆವಾಳಿ 12ನೆಯ ಶತಮಾನದವರೆಗೆ ಬಳಕೆಯಲ್ಲಿತ್ತು.

ಜೋಳವಾಳಿ ಎಂಬುದು ವೈರಿಯೊಂದಿಗೆ ಹೋರಾಡಿ ಗೆಲ್ಲುವ ಇಲ್ಲವೆ ಮಡಿಯುವ ವ್ಯಕ್ತಿಯನ್ನು ಸೂಚಿಸಿದರೆ ಈ ವೇಳೆವಾಳಿ ತಾನಾಗಿಯೇ ಜೀವ ತ್ಯಾಗ ಮಾಡಿಕೊಳ್ಳುವ ಇಲ್ಲವೆ ಮಾಡಿಸಿಕೊಳ್ಳುವ ವ್ಯಕ್ತಿಯನ್ನು ಸೂಚಿಸುತ್ತದೆ. ಈ ಜೋಳವಾಳಿ–ವೇಳೆವಾಳಿ ಎಂಬಿವು ಒಂದು ಬಗೆಯ ಜೋಡುಪದಗಳೆಂಬಂತೆ ಕಲ್ಯಾಣ ಚಾಳುಕ್ಯರ ಕಾಲದವರೆಗೂ ಬಳಕೆಗೊಂಡಿವೆ. ಬಸವಣ್ಣನವರ ವಚನಗಳಲ್ಲಿ ವೇಳೆವಾಳಿ–ಜೋಳವಾಳಿ, ಅಂಕ–ಲೆಂಕ ಎರಡೂ ಪ್ರಯೋಗಗಳಿರುವುದರಿಂದ ಕಲಚುರಿ, ಹೊಯ್ಸಳರ ಕಾಲಕ್ಕೆ ಈ ಪದಗಳಿಗೆ ಪರ್ಯಾಯವಾಗಿ ಅಂಕ–ಲೆಂಕ ಪದಗಳು ಬಳಕೆಯಲ್ಲಿ ಬರತೊಡಗಿದ್ದವು.

ಪ್ರಾಚೀನ ಕಾಲದಲ್ಲಿ ಕೆಲವು ವೃತ್ತಿಯವರು ತಮ್ಮ ವೃತ್ತಿಸಂಘಗಳನ್ನು ಅಸ್ತಿತ್ವಕ್ಕೆ ತಂದಿದ್ದರು. ಉದಾ: ಉಗುರು ಮುನ್ನೂರ್ವರು, ಅಯ್ಯಾವೊಳೆ ಐನೂರ್ವರು ಇತ್ಯಾದಿ. ಈ ಮಾದರಿಯಲ್ಲಿ ಲೆಂಕವಾಳಿಗಳೂ ಲೆಂಕಸಾಸಿರ್ವರು ಎಂಬ ಸಂಘವನ್ನು ಅಸ್ತಿತ್ವಕ್ಕೆ ತಂದ ವಿಷಯ ಶಾಸನಗಳಲ್ಲಿ ಬರುತ್ತವೆ. ಬಹುಶಃ ಯಾವುದೋ ಊರಿನಲ್ಲಿ ಮೂಲತಃ ಸಾವಿರ ಜನ ಲೆಂಕರ ಸಂಸ್ಥೆಯಿದ್ದು, ಕಾಲಕ್ರಮದಲ್ಲಿ ಯಾವುದೇ ಊರಿನಲ್ಲಿ ಎಷ್ಟೇ ಜನ ಲೆಂಕರಿದ್ದರೂ ಆ ಸಂಘಕ್ಕೆ (ಸಮೂಹಕ್ಕೆ) ಲೆಂಕಸಾಸಿರ್ವರು ಎಂದು ಕರೆಯುವುದು ರೂಢಿಯಾಗಿರಬೇಕು.

ಲೆಂಕ ಇಲ್ಲವೆ ಲೆಂಕವಾಳಿ ಎಂಬ ಪದ ವೇಳೆವಾಳಿ ಎಂಬುದರ ಚಲಾವಣೆಯನ್ನು ಕಡಿಮೆ ಮಾಡಿ. ಹೊಯ್ಸಳರ ಕಾಲದಲ್ಲಿ ಹೆಚ್ಚು ಬಳಕೆಗೊಂಡಿತು. ಹೀಗಿರುವಾಗ ಈ ಆತ್ಮ ಬಲಿದಾನ ಸಂಪ್ರದಾಯದ ವ್ಯಕ್ತಿಗಳಿಗೆ ಹೊಯ್ಸಳರ ಕಾಲದಲ್ಲಿ ಗರುಡ ಎಂದೂ ಕರೆಯುತ್ತಿದ್ದ ರೆಂದು ವಿದ್ವಾಂಸರು ಹೇಳುವುದಕ್ಕೆ ಆಧಾರವಿದ್ದಂತೆ ಕಾಣುವುದಿಲ್ಲ. ಗರುಡ ಎಂದಾಕ್ಷಣ ನಮಗೆ ನೆನಪಾಗುವುದೆಂದರೆ ಕುವರಲಕ್ಷ್ಮನನ್ನು ಕುರಿತ ಬೇಲೂರು ಶಾಸನ. ಆದರೆ ಈ ಶಾಸನದಲ್ಲಿ ಕುವರಲಕ್ಷ್ಮನಿಗಾಗಿ ಪೊರೆದ ಮಗಂ, ಪ್ರಿಯಪುತ್ರಂ, ವೇಳ, ಲೆಂಕ, ಎಂಬ ಪದಗಳು ಬಳಕೆಯಾಗಿದ್ದು, ಇವು ಸಮಾನಾರ್ಥವನ್ನು ಕೊಡುತ್ತವೆ. ಇದರಿಂದ ಕುವರ ಲಕ್ಷ್ಮನನ್ನು ಬೇಲೂರು ಶಾಸನ ವೇಳೆವಾಳಿ ಅಥವಾ ಲೆಂಕವಾಳಿ ಎಂಬ ಪದದಿಂದ ಕರೆ ದಿದೆಯೇ ಹೊರತು ಅವನಿಗಾಗಿ ಗರುಡ ಎಂಬ ಪದವನ್ನು ಬಳಸಿಲ್ಲವೆನಿಸುತ್ತದೆ. ವೇಳೆವಾಳಿ ಸ್ಮಾರಕ ಕಂಬದ ಮೇಲೆ ಗರುಡನ ಮತ್ತು ವೇಳೆವಾಳಿವ್ಯಕ್ತಿಯ ವಿಗ್ರಹಗಳನ್ನು ಕೆತ್ತುವುದು ಸಂಪ್ರದಾಯ. ಶಾಸನ ಪದ್ಯದಲ್ಲಿ ಗರುಡ ಮತ್ತು ಲಕ್ಷ್ಮ-ಇವರ ವಿಗ್ರಹಗಳನ್ನು ಕೆತ್ತಿದುದನ್ನು ಸೂಚಿಸಲಾಗಿದೆ; ಮತ್ತು ಗರುಡನನ್ನು ಲಕ್ಷ್ಮನಿಗೆ ಉಪಮಾನವಾಗಿ ಬಳಸಲಾಗಿದೆ. ಹೀಗಾಗಿ ಗರುಡ ಎಂಬುದು ಆತ್ಮಬಲಿದಾನ ಮಾಡಿಕೊಳ್ಳುವವರಿಗೆ ಬಳಸುತ್ತಲಿದ್ದ ಪಾರಿಭಾಷಿಕ ಪದ ವೆಂದು ಶಾಸನದಲ್ಲಿ ಎಲ್ಲೂ ಸೂಚಿತವಾದಂತೆ ಕಾಣುವುದಿಲ್ಲ. (ಎಂ.ಎಂ.ಕೆ.)

**ಆದಿ ಇತಿಹಾಸ ಕಾಲದ ಸಂಸ್ಕೃತಿ: ಆಂಧ್ರಪ್ರದೇಶ:** ಸಾತವಾಹನರ ಆಡಳಿತ ಕ್ಷೇತ್ರವಾದ ಆಂಧ್ರಪ್ರದೇಶದಲ್ಲಿ ಆದಿ ಇತಿಹಾಸ ಕಾಲದ ವಸತಿ ನೆಲೆಗಳು ಅತ್ಯಧಿಕ ಸಂಖ್ಯೆ ಯಲ್ಲಿವೆ. ಇವರ ಆಳಿಕೆಯಲ್ಲಿ ಈ ಪ್ರದೇಶ ವ್ಯವಸಾಯ, ಉದ್ಯಮ, ಆಂತರಿಕ ಹಾಗೂ ವಿದೇಶಿ ವಾಣಿಜ್ಯ ವಲಯಗಳಲ್ಲಿ ಆರ್ಥಿಕ ಪ್ರಗತಿ ಸಾಧಿಸಿತು. ನಿಜ಼ಾಮಾಬಾದ್, ಕರೀಂನಗರ, ವಾರಂಗಲ್ ಮತ್ತು ಮೆಹಬೂಬ್ ನಗರ್ ಜಿಲ್ಲೆಗಳಲ್ಲಿ ಸಾತವಾಹನ ನೆಲೆಗಳು ಸಾಂದ್ರವಾಗಿವೆ. ಹೆಚ್ಚಿನ ನೆಲೆಗಳು ನದಿ ಅಥವಾ ಹಳ್ಳದ ತಟಗಳಲ್ಲಿವೆ. ಪ್ರಮುಖವಾದುವೆಂದರೆ ಪೆದ್ದಬಂಕೂರು, ಧುಳಿಕಟ್ಟ, ಕೋಟಿಲಿಂಗಾಲ, ಸತನಿಕೋಟ ಮತ್ತು ಕೊಂಡಾಪುರ. 18 ಹೆ. ಜಾಗದಲ್ಲಿ ವಿಸ್ತರಿಸಿರುವ ಧುಳಿಕಟ್ಟ ಮಣ್ಣಿನ ರಕ್ಷಣಾಗೋಡೆಯಿಂದ ಆವೃತವಾಗಿತ್ತು. ಇದಕ್ಕೆ ನಾಲ್ಕು ಪ್ರವೇಶದ್ವಾರಗಳಿದ್ದು ದಕ್ಷಿಣ ಪ್ರವೇಶದ್ವಾರಕ್ಕೆ ಹೊಂದಿ ಕಾವಲುಗಾರರಿಗಾಗಿ ಕಟ್ಟಿದ, ಇಟ್ಟಿಗೆ ಹಾಸಿನ ನೆಲವಿರುವ ಕೋಣೆಗಳಿದ್ದವು. ಕೋಟಿಲಿಂಗಾಲದಲ್ಲಿಯೂ ವಸತಿಗೆ ಇಂತಹುದೇ ರಕ್ಷಣಾಗೋಡೆಯಿತ್ತು. ಸವಿಸ್ತಾರ ವಿನ್ಯಾಸದ ರಕ್ಷಣಾಗೋಡೆಯಿದ್ದ ಮತ್ತೊಂದು ನೆಲೆ ಸತನಿಕೋಟ **(ನೋಡಿ)**. ಪೆದ್ದಬಂಕೂರು ಸಾತವಾಹನರ ಕಾಲದಲ್ಲಿ ಒಂದು ಸಾಮಾನ್ಯ ಹಳ್ಳಿಯಾಗಿತ್ತು. ಪ್ರಾಕಾರಸಹಿತವಾದ ಇಟ್ಟಿಗೆಯ ಮೂರು ಬೃಹತ್ ವಸತಿಗಳ ಅವಶೇಷಗಳು ಇಲ್ಲಿ ಕಂಡುಬಂದವು. ಉಳಿದ ಮನೆಗಳಿಗೆ ಅಂಡಾಕಾರದ ತಳವಿನ್ಯಾಸವಿತ್ತು. ಈ ವಸತಿನೆಲೆಗಳು ನೀರಿಗಾಗಿ ನದಿ ಅಥವಾ ಹಳ್ಳವನ್ನು ಆಶ್ರಯಿಸಿದ್ದವಾದರೂ ಇಟ್ಟಿಗೆಬಾವಿಗಳು ಇಲ್ಲಿ ಗಣನೀಯ ಸಂಖ್ಯೆಯಲ್ಲಿ ಕಂಡುಬಂದಿವೆ. ಪೆದ್ದಬಂಕೂರಿನಲ್ಲಿ 22 ಬಾವಿಗಳನ್ನು ಅನಾವರಣಗೊಳಿಸಲಾ ಯಿತು. ಆಯತ, ಅರ್ಧಚಂದ್ರಾಕೃತಿ ಮತ್ತು ಬೆಣೆಯಾಕಾರದ ಇಟ್ಟಿಗೆಗಳಿಂದ ಬಾವಿಗಳನ್ನು ಕಟ್ಟಲಾಗುತ್ತಿತ್ತು. ನಿರುಪಯೋಗಿಯಾದ ಕೆಲವು ಬಾವಿಗಳನ್ನು ಕಸದ ತೊಟ್ಟಿಯಾಗಿ ಬಳಸಿದ್ದಿರಬೇಕು. ಏಕೆಂದರೆ ಇವುಗಳ ತಳದಲ್ಲಿ ಒಡೆದ ಮಣ್ಪಾತ್ರೆ, ಹೆಂಚು, ಮೂಳೆಚೂರುಗಳು, ಕಬ್ಬಿಣದ ಕಿಟ್ಟ ಮೊದಲಾದ ತ್ಯಾಜ್ಯ ವಸ್ತುಗಳು ಸಿಕ್ಕವು. ಪೆದ್ದಬಂಕೂರು ಮತ್ತು ಧುಳಿಕಟ್ಟದಲ್ಲಿ ಅಧಿಕ ನೀರು ಹರಿದುಹೋಗಲು ಇಟ್ಟಿಗೆಯ ಒಳಚರಂಡಿಯನ್ನು ನಿರ್ಮಿಸಿದುದು ಕಂಡುಬಂತು. ಪೆದ್ದಬಂಕೂರಿನಲ್ಲಿ ನೀರಿನ ಸಂಗ್ರಹಣೆಗಾಗಿ ಕಟ್ಟಿದ ಇಟ್ಟಿಗೆ ತೊಟ್ಟಿಗಳೂ ಇದ್ದವು.

ಧುಳಿಕಟ್ಟ ಮತ್ತು ಕೋಟಿಲಿಂಗಾಲದಲ್ಲಿರುವ ಸ್ತೂಪಾವಶೇಷಗಳು ಬೌದ್ಧಧರ್ಮ ಈ ಪ್ರದೇಶದಲ್ಲಿ ವ್ಯಾಪಕವಾಗಿ ಹರಡಿದ್ದನ್ನು ಸೂಚಿಸುತ್ತವೆ. ಧುಳಿಕಟ್ಟದ ಸ್ತೂಪದ ತಳಪಾಯ ಮಣ್ಣುಕಲ್ಲಿನ ಉಂಡೆಗಳಿಂದ ನಿರ್ಮಿತವಾಗಿದ್ದು ಇದರ ಮೇಲೆ 2ಮೀ ಎತ್ತರದ ಇಟ್ಟಿಗೆಯ ಗರ್ಭವಿದೆ. ಗರ್ಭದ ಮೇಲೆ 5ಮೀ ಎತ್ತರದ ಅಂಡ ಅಥವಾ ಗುಮ್ಮಟವಿದೆ. ಹರ್ಮಿಕವು ಆಯತಾಕಾರದ್ದಾಗಿದೆ. ಸ್ತೂಪಕ್ಕೆ 47 ಆಯಕ ಕಂಬಗಳಿದ್ದು ಬುದ್ಧಪಾದದ ಬಳಿಯಿರುವ ಕಂಬದಲ್ಲಿ ನಾಗಮುಚಿಲಿಂದ ಶಿಲ್ಪವಿದೆ. ಶಿಲ್ಪದ ಮೇಲ್ಭಾಗದಲ್ಲಿ ಗಹಪತಿನೊ ಪಥಲಸ ಮತುಯ ಸಮಯ ದಾನಂ ಎಂಬ ಬ್ರಾಹ್ಮಿ ಶಾಸನವಿದೆ. ಮತ್ತೊಂದು ನಾಗಶಿಲ್ಪದಲ್ಲಿ ಪಿತ ನಂದಿ ಪುತಸ ದುಹುತೂಯ ಸಯೋನಿಜ ದಾನಂ ಎಂಬ ಶಾಸನವಿದೆ. ಸ್ತೂಪದ ವಾಯವ್ಯ ಭಾಗದಲ್ಲಿ ವಿಹಾರ ಕೋಣೆಗಳಿವೆ.

ಸಾತವಾಹನರ ಕಾಲದಲ್ಲಿ ಈ ಜನರ ಆಹಾರ ಆರ್ಥಿಕತೆ ಕೃಷಿ, ಪಶುಸಾಕಾಣಿಕೆ ಹಾಗೂ ಬೇಟೆಯನ್ನು ಅವಲಂಬಿಸಿತ್ತು. ಹಳ್ಳಿ-ಪಟ್ಟಣಗಳು ಫಲವತ್ತಾದ ಕರಿಮಣ್ಣಿನ ಬಯಲು ಗಳಲ್ಲಿರುವುದೂ, ಕಬ್ಬಿಣದ ಮಚ್ಚು, ನೇಗಿಲ ಕುಳಗಳು ಉತ್ಖನನದಲ್ಲಿ ದೊರಕಿರುವುದೂ ಕೃಷಿ ಬೆನ್ನೆಲುಬಾಗಿತ್ತೆಂಬುದನ್ನು ತಿಳಿಸುತ್ತದೆ. ಇದಕ್ಕೆ ಪೂರಕವಾಗಿ ಕರ್ನೂಲಿನ ವೀರಾಪುರಂ ನಲ್ಲಿ ಅಕ್ಕಿ, ಕರಿಹೆಸರು, ಬಟಾಣಿ, ಅವರೆ ಮೊದಲಾದ ದವಸಧಾನ್ಯಗಳ ಅವಶೇಷಗಳು ಸಿಕ್ಕಿವೆ. ಪೆದ್ದಬಂಕೂರಿನಲ್ಲಿ ದೊರೆತಿರುವ ಶಾಸನವುಳ್ಳ ಸುಡಾವೆಮಣ್ಣಿನ ಮುದ್ರೆಯೂ ಇಲ್ಲಿ ಉಲ್ಲೇಖನೀಯ. ಮುದ್ರೆಯ ಮಧ್ಯೆ ನೇಗಿಲು ಹಾಗೂ ನೊಗದ ಗೀರುಚಿತ್ರವಿದೆ; ಇದರ ಸುತ್ತ ವಿಜಯಪುರ ಹರ ಕಸ ರಥಸ ಎಂಬ ಬ್ರಾಹ್ಮಿ ಬರೆಹವಿದೆ. ಪಶುಸಾಕಾಣಿಕೆ ಹಾಗೂ ಬೇಟೆಗಾರಿಕೆಯ ಬಗೆಗೆ ಯೆಲ್ಲೇಶ್ವರಂ, ಪೆದ್ದಬಂಕೂರು, ವೀರಾಪುರಂ ಮೊದಲಾದ ನೆಲೆ ಗಳಲ್ಲಿ ಸಿಕ್ಕ ಪ್ರಾಣಿಮೂಳೆಗಳು ಮಾಹಿತಿ ನೀಡುತ್ತವೆ.

ಕಬ್ಬಿಣದಿಂದ ತಯಾರಿಸಿದ ಕೃಷಿಸಲಕರಣೆಗಳು, ಬಡಗಿ ಹಾಗೂ ಕಮ್ಮಾರರ ಉಪಕರಣ ಗಳು ಉತ್ಖನನದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದೊರೆತಿವೆ. ಉದಾ: ಚಪ್ಪಟೆ ಕೊಡಲಿ ಗಳು, ಉಳಿ, ಕೊರೆಯುಳಿ, ಅಲಗು, ಬಾಚಿ, ಮೊಳೆ ಇತ್ಯಾದಿ. ಗೃಹೋಪಯೋಗಿ ಸಲಕರಣೆ ಗಳೆಂದರೆ ಸೌಟು, ಚೂರಿ, ದೀಪ (ಹಣತೆ), ಸಲಾಕೆ, ಕೀಲಿ, ಉಂಗುರ ಇತ್ಯಾದಿ. ಬಾಣ ಹಾಗೂ ಭರ್ಜಿಯ ಮೊನೆಯಂತಹ ಆಯುಧೋಪಕರಣಗಳೂ ಕೆಲವೊಂದು ದೊರೆತಿವೆ. ಉಂಗುರ, ಬಳೆ, ತೋಳಬಂದಿ, ಸೂಜಿ, ಕಿವಿಯೋಲೆ, ಕಾಡಿಗೆಕಡ್ಡಿ ಮೊದಲಾದ ವಸ್ತು ಗಳನ್ನು ತಾಮ್ರದಿಂದಲೂ ಮಾಡಲಾಗುತ್ತಿತ್ತು. ತಾಮ್ರದ ಉಂಗುರವೊಂದರ ಮೇಲೆ ಅರಲಸ ಎಂದು ಕೆತ್ತಿರುವುದು ಗಮನಾರ್ಹ. ಮೂರು ಪ್ರಕಾರದ ತಾಯತಗಳು ಮತ್ತು ಮಣಿಗಳಿಂದ ಅಲಂಕರಣಗೊಂಡ ಸೊಂಟಪಟ್ಟಿಯುಳ್ಳ ಒಂದು ಗೊಂಬೆ ವಿಶೇಷವಾದುದು. ಗೊಂಬೆ ಪ್ರಶ.ಪೂ.ಸು.2ನೆಯ ಶತಮಾನದ್ದು. ವೀರಾಪುರ ಉತ್ಖನನದಲ್ಲಿ ದೊರೆತ ಅಂಧಕಾರಿ ಶಿವನ ಶಿಲ್ಪ ಇನ್ನೊಂದು ಗಮನಾರ್ಹ ಶೋಧನೆ.

ಸುಡಾವೆಮಣ್ಣಿನ ಸಣ್ಣಸಣ್ಣ ಗೊಂಬೆಗಳು ಉತ್ಖನನದಲ್ಲಿ ವಿಪುಲವಾಗಿ ದೊರೆತಿವೆ. ಕೆಲವು ಕೈಯಿಂದಲೇ ರೂಪುಗೊಳಿಸಿದುವಾದರೆ ಉಳಿದವು ಅಚ್ಚಿನಿಂದ ತಯಾರಿಸಿದವು. ಮೊದಲನೆಯ ವರ್ಗದಲ್ಲಿ ಒರಟಾಗಿ ಮಾಡಿದಂತಹ ಸ್ತ್ರೀ ಗೊಂಬೆಗಳೇ ಹೆಚ್ಚಾಗಿದ್ದು ಇವು ಕೋಸಾಂಬಿ, ಅಹಿಚ್ಛತ್ರ ಮತ್ತು ಸನ್ನತಿಯಲ್ಲಿ ದೊರೆತಿರುವ ಆಕೃತಿಗಳನ್ನು ಹೋಲುತ್ತವೆ. ಅಚ್ಚಿನಿಂದ ಮಾಡಿದವು ಒಳಭಾಗದಲ್ಲಿ ಟೊಳ್ಳಾಗಿರುತ್ತವೆ. ಇಂತಹ ಸ್ತ್ರೀ ಗೊಂಬೆಗಳಲ್ಲಿ ಮೂರು ನಮೂನೆಗಳಿವೆ. ಮೊದಲನೆಯ ನಮೂನೆಯ ಸ್ತ್ರೀ ಆಕೃತಿಗಳಲ್ಲಿ ಕೈಗಳು ಮೇಲಕ್ಕೆ ಎತ್ತಿರುತ್ತವೆ. ಮಕರ ಮಾದರಿಯ ಶಿರೋಪೇಟ, ಕಂಠಹಾರ, ಸೊಂಟಪಟ್ಟಿ ಹಾಗೂ ಕಂಕಣ ಗಳಿಂದ ಇವು ಭೂಷಿತವಾಗಿರುತ್ತವೆ. ಸಾತವಾಹನ ಹಾಗೂ ಇಕ್ಷ್ವಾಕು ಕಾಲದಲ್ಲಿ ಸಾಮಾನ್ಯ ವಾಗಿದ್ದಂತಹ ಆಕೃತಿಗಳಿವು. ಎರಡನೆಯ ನಮೂನೆಯ ಆಕೃತಿಗಳು ಕೆಯೊಲಿನ್ ನಿಂದ (ಬಿಳಿ ಜೇಡಿಮಣ್ಣು) ಮಾಡಿದಂತಹವು. ಎಡಗೈ ತೊಡೆಯ ಮೇಲಿದ್ದು ಬಲಗೈಯಲ್ಲಿ ಹಣ್ಣಿನ ಗೊಂಚಲು ಹಿಡಿದಿರುವ, ಯಜ್ಞೋಪವೀತಧಾರಿಯಾದ ಇಂತಹ ಸ್ತ್ರೀ ಆಕೃತಿಗಳು ಮಾತೃದೇವತೆಗಳಾಗಿರಬಹುದು. 3ನೆಯ ಪ್ರಕಾರದಲ್ಲಿ ಸ್ತ್ರೀ ತನ್ನ ವಕ್ಷವನ್ನು ಎತ್ತಿ ಹಿಡಿದಿರುವಳು; ಇವಳೂ ಯಜ್ಞೋಪವೀತವನ್ನೂ ಆಭರಣಗಳನ್ನೂ ಧರಿಸಿರುವಳು. ಈ ಆಕೃತಿಗಳು ಸಮೃದ್ಧಿ ಹಾಗೂ ಫಲವತ್ತತೆಯ ಪ್ರತೀಕವಾಗಿರಬಹುದು. ಧುಳಿಕಟ್ಟದ ಒಂದು ಆಕೃತಿ ವಿಶೇಷ ಗಮನ ಸೆಳೆಯುತ್ತದೆ. ಕೆಂಪು ಲೇಪನವುಳ್ಳ ಈ ಆಕೃತಿ ಗುಲಾಬಿಗುಚ್ಛದಿಂದ ಅಲಂಕೃತವಾದ ಟೋಪಿಯಂತಹ ಪೇಟವನ್ನು ಧರಿಸಿದ್ದು ನಗುತ್ತಿರುವಂತೆ ಬಾಯಿ ತೆರೆದಿದೆ. ಇದು ನೀರಿನ ಹೂಜಿಯ ನಳಿಕೆಯಾಗಿರಬಹುದು.

ಸಾತವಾಹನ ಕಾಲದ ಮಣ್ಪಾತ್ರೆಗಳು ತಿಗುರಿಯ ಮೇಲೆ ಮಾಡಿದವು. ಇವನ್ನು ಗೃಹೋ ಪಯೋಗಿ ಮತ್ತು ಧಾರ್ಮಿಕ ಮಹತ್ವವುಳ್ಳ ಪಾತ್ರೆಗಳಾಗಿ ವಿಂಗಡಿಸಬಹುದು. ಕಪ್ಪು-ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಮತ್ತು ಕೆಂಪು ಪಾತ್ರೆಗಳು ಸಾಮಾನ್ಯ ಪ್ರಕಾರಗಳು. ಸಂಗ್ರಹ ಜಾಡಿ, ನೀರಿನ ಕೊಡ, ಬಟ್ಟಲು, ಲೋಟ, ಮುಚ್ಚಳ, ಹಣತೆ ಮೊದಲಾದ ಸಾಮಾನ್ಯ ಪ್ರಕಾರದ ಪಾತ್ರೆಗಳು ದೊರೆತಿವೆ. ಕಂದುಬಣ್ಣದ ಪಾತ್ರೆಗಳು ಸಾತವಾಹನ ಆದಿ ಹಂತ ದಿಂದಲೂ ವಿಪುಲವಾಗಿವೆ. ಗೂಳಿ, ಕುದುರೆ, ಸಿಂಹ ಹಾಗೂ ಗಜಲಕ್ಷ್ಮಿ, ಸುಡಾವೆ ಮಣ್ಣಿನ ಗೊಂಬೆಗಳೂ ವಿಶೇಷವಾಗಿವೆ. ಹಾಗೆಯೇ ಹೊಳಪಿನ ಕಪ್ಪುವರ್ಣದ ಕಿರಿದಾದ ಬುಡದ ದ್ರಾಕ್ಷಾರಸದ ಪಾತ್ರೆಗಳೂ ಬಹಳ ಅಪರೂಪದವು. ಸ್ವಸ್ತಿಕ, ನಂದಿಪಾದ ಮುಂತಾದ ಮಂಗಳ ಸೂಚಕ ಚಿಹ್ನೆಗಳನ್ನು ಮುದ್ರೆಯೊತ್ತಿರುವಂತಹ ಪಾತ್ರೆಗಳು ಆಚರಣೆಗಳಲ್ಲಿ ಬಳಕೆಯಾಗಿ ದ್ದಿರಬೇಕು. ಕೆಲವೊಂದು ಪಾತ್ರೆಗಳ ಮೇಲೆ ಬ್ರಾಹ್ಮಿಯ ಮ ಅಕ್ಷರವನ್ನು ಕೊರೆಯಲಾಗಿದೆ. ಮೂರು ತೂತುಗಳು ಹಾಗೂ ಅಕ್ಕಪಕ್ಕದಲ್ಲಿ ನಂದಿಪಾದಸಹಿತ ಬ್ರಾಹ್ಮಿ ಮ ಅಕ್ಷರ ಮುದ್ರೆ ಯುಳ್ಳ ಒಂದು ಪಾತ್ರೆ ಮಂಗಳಕಲಶವಾಗಿರಬಹುದು.

ಪೆದ್ದಬಂಕೂರು, ಧುಳಿಕಟ್ಟ ಹಾಗೂ ಕೋಟಿಲಿಂಗಾಲದ ಉತ್ಖನನಗಳಲ್ಲಿಯೂ ಸರ್ವೇಕ್ಷಣೆಗಳಲ್ಲಿಯೂ ನೂರಾರು ನಾಣ್ಯಗಳು ಲಭಿಸಿವೆ. ಕೋಟಿಲಿಂಗಾಲದಲ್ಲಿ ಕಮ್ವಯಸಿರಿ, ಸಿರಿ ನಾರಣಸ, ರಾಞೊ ಗೋಬಧಸ, ರಾಞೊ ಸಮಗೋಪ, ಸಿರಿ ಚಿಮುಖ, ಸಿರಿ ಸಾತವಾಹ, ಸಿರಿ ಚಿಮುಖ ಸಾತವ(ಹ)ನರ ನಾಣ್ಯಗಳು ಸಿಕ್ಕಿವೆ. ಕಮ್ವಯಸಿರಿಯ ನಾಣ್ಯಗಳ ಒಂದು ಮುಖದಲ್ಲಿ ಬಿಲ್ಲುಬಾಣದ ಸುತ್ತ ಇವನ ಹೆಸರಿನ ಬರೆಹವಿದ್ದರೆ ಮತ್ತೊಂದು ಮುಖದಲ್ಲಿ 4 ನಂದಿಪಾದ ಚಿಹ್ನೆಗಳಿವೆ. ಸಿರಿ ನಾರಣಸನ ನಾಣ್ಯದ ಒಂದು ಮುಖದಲ್ಲಿ ಆನೆ, ಮರ ಹಾಗೂ ಅವನ ಹೆಸರೂ ಮತ್ತೊಂದು ಮುಖದಲ್ಲಿ ನಂದಿಪಾದ-ಚಕ್ರ ಚಿಹ್ನೆ ಗಳೂ ಇವೆ. ಗೋಬಧ ರಾಜನ ನಾಣ್ಯಗಳ ಒಂದು ಮುಖದಲ್ಲಿ ಮೂರು ಕಮಾನಿನ ಬೆಟ್ಟದ ಚಿತ್ರವಿದ್ದರೆ ಮತ್ತೊಂದು ಮುಖ ಬೋಳಾಗಿದೆ. ಸಿರಿಸಾತಕರ್ಣಿಯ ನಾಣ್ಯಗಳು ಆನೆ ಹಾಗೂ ಉಜ್ಜಯನಿ ಚಿಹ್ನೆಯನ್ನು ಉಳ್ಳವು. ಸಮಗೋಪನ ನಾಣ್ಯಗಳ ಒಂದು ಬದಿಯಲ್ಲಿ 3 ಕಮಾನಿನ ಬೆಟ್ಟ, ಮರ, ಬಿಲ್ಲು-ಬಾಣದ ಚಿಹ್ನೆಗಳಿವೆ. ಸ್ತರಕ್ರಮದ ಆಧಾರದ ಮೇಲೆ ಈ ನಾಣ್ಯಗಳನ್ನು ಮಹಾತಲವಾರ-ಸಮಗೋಪ-ಗೋಬಧ-ಸಾತವಾಹನ-ಈ ಅನುಕ್ರಮಣಿಕೆಯಲ್ಲಿ ಇಡಲಾಗಿದೆ. (ಕೆ.ವಿ.ವಿ.)

**ಕರ್ನಾಟಕ:** ಬೃಹತ್ ಶಿಲಾ-ಕಬ್ಬಿಣ ಯುಗದ ಅನಂತರದ ಹಂತ. ನಗರೀಕರಣ ಪ್ರಕ್ರಿಯೆ ವ್ಯಾಪಕಗೊಂಡದ್ದು ಈ ಹಂತದಲ್ಲಿ. ಬೃಹತ್ ಶಿಲಾಯುಗದಲ್ಲಿ ಕಬ್ಬಿಣ ತಂತ್ರಜ್ಞಾನ ದಲ್ಲಾದ ಉನ್ನತಿ, ಕಬ್ಬಿಣ ಉಪಕರಣ ಬಳಕೆಯಿಂದ ಕೃಷಿ ಚಟುವಟಿಕೆಗಳಲ್ಲಾದ ಸುಧಾರಣೆ,

ಮಣಿಗಾರಿಕೆ ಮುಂತಾದ ಉದ್ಯಮಗಳ ವಿಸ್ತರಣೆ ಈ ಎಲ್ಲ ಅಂಶಗಳು ಪ್ರ.ಶ.ಪೂ. ಸು.500ರ ಹೊತ್ತಿಗೆ ಕರ್ನಾಟಕದಲ್ಲಿ ಪಟ್ಟಣ ಹಾಗೂ ನಗರಗಳು ಬೆಳೆಯಲು ಪೂರಕವಾದವು. ಪ್ರ.ಶ.ಪೂ.4–3ನೆಯ ಶತಮಾನದ ಅನಂತರದ ವಿದ್ಯಮಾನಗಳನ್ನು ತಿಳಿಯುವಲ್ಲಿ ಶಾಸನ ಹಾಗೂ ಸಾಹಿತ್ಯಾಧಾರಗಳು ನೆರವಾಗುತ್ತವೆ. ಚಿತ್ರದುರ್ಗದ ಬ್ರಹ್ಮಗಿರಿ ಪ್ರದೇಶ ಇಸಿಲ ಮೌರ್ಯ ಅಶೋಕನ ಅವಧಿಯಲ್ಲಿ ಮಹಾಮಾತ್ರರ ಆಡಳಿತ ಕೇಂದ್ರವಾಗಿ ಅಭಿವೃದ್ಧಿ ಗೊಂಡಿತು. ಈ ಸಮಯದ ಮತ್ತೊಂದು ಪ್ರಮುಖ ಆಡಳಿತ ಕೇಂದ್ರ ಸನ್ನತಿ. ಇಲ್ಲಿ ಅಶೋಕನ ಪ್ರಧಾನ ಶಿಲಾಶಾಸನವಿರುವುದು ಮತ್ತು ರಾಜಾ ಅಸೋಕ ಎಂಬ ಬರೆಹವಿರುವ, ರಾಣಿಯರು ಹಾಗೂ ರಾಜಸೇವಕರೊಡಗೂಡಿದ ಅಶೋಕನ ಶಿಲ್ಪಕೃತಿ ಸಿಕ್ಕಿರುವುದು ಇದನ್ನು ಪುಷ್ಠೀಕರಿಸುತ್ತದೆ. ಅಶೋಕನ ಲಘು ಶಾಸನಗಳಿರುವ ಮಸ್ಕಿ, ನಿಟ್ಟೂರು, ಉದೇಗೊಳಂ, ಕೊಪ್ಪಳ ಮುಂತಾದ ಸ್ಥಳಗಳೂ ಪ್ರಾಯಶಃ ನಗರಗಳಾಗಿದ್ದವು. ಮೌರ್ಯ ರೊಂದಿಗೆ ಸಂಪರ್ಕದಲ್ಲಿದ್ದ ಮತ್ತೊಂದು ಸ್ಥಳ ಬನವಾಸಿ. ಬೌದ್ಧಧರ್ಮ ಪ್ರಚಾರಕ್ಕಾಗಿ ಬನವಾಸಿಗೆ ರಖ್ಖಿತನ ನೇತೃತ್ವದಲ್ಲಿ ತಂಡವೊಂದನ್ನು ಅಶೋಕ ಕಳಿಸಿದ್ದಾಗಿ ಶ್ರೀಲಂಕದ ವಂಶಾನುಚರಿತೆ/ದಾಖಲುಗಳಾದ ಮಹಾವಂಶ ಹಾಗೂ ದೀಪವಂಶಗಳು ತಿಳಿಸುತ್ತವೆ. ಸು. 150ರಲ್ಲಿ ಟಾಲಮಿ ತನ್ನ ಕೃತಿಯಲ್ಲಿ ಇಂಡಿ, ಹಿಪ್ಪರಗಿ (ಬಿಜಾಪುರ ಜಿಲ್ಲೆ), ಬಾದಾಮಿ, ಪಟ್ಟದಕಲ್ಲು (ಬಾಗಲಕೋಟೆ ಜಿಲ್ಲೆ), ಪುನ್ನಾಟ (ಮೈಸೂರು ಜಿಲ್ಲೆ) ಮುಂತಾದ ವಾಣಿಜ್ಯ ಕೇಂದ್ರ ಸ್ಥಳಗಳನ್ನು ಹೆಸರಿಸಿದ್ದಾನೆ. ಪುರಾತತ್ತ್ವೀಯ ಸರ್ವೇಕ್ಷಣೆ ಹಾಗೂ ಉತ್ಖನನಗಳಲ್ಲೂ ಪಟ್ಟಣ ಹಾಗೂ ನಗರಗಳ ಅವಶೇಷಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಬೆಳಕಿಗೆ ಬಂದಿವೆ. ಗಮನಾರ್ಹವಾದ ನೆಲೆಗಳೆಂದರೆ ಚಂದ್ರವಳ್ಳಿ, ಬ್ರಹ್ಮಗಿರಿ, ಕೊಪ್ಪಳ (ಚಿತ್ರದುರ್ಗ), ವಡಗಾಂವ್–ಮಾಧವಪುರ, ಹಲಶಿ (ಬೆಳಗಾಂವಿ), ಸನ್ನತಿ (ಗುಲ್ಬರ್ಗ) ಹಾನಗಲ್ಲು (ಹಾವೇರಿ), ಉದ್ಯಾವರ, ಹಟ್ಟಿಯಂಗಡಿ (ಉಡುಪಿ), ಬನವಾಸಿ, ಹೈಗುಂದ (ಉತ್ತರ ಕನ್ನಡ), ತಲಕಾಡು (ಮೈಸೂರು) ಮತ್ತು ರಾಜಘಟ್ಟ (ಬೆಂಗಳೂರು ಗ್ರಾಮಾಂತರ). ಈ ನೆಲೆಗಳಲ್ಲಿ ಕಟ್ಟಡಾವಶೇಷಗಳು, ಆಹತ ನಾಣ್ಯಗಳು ಸಾತವಾಹನ ರಾಜರಾದ ಗೌತಮಿಪುತ್ರ ಸಾತಕರ್ಣಿ, ವಾಸಿಷ್ಠಿಪುತ್ರ ಪುಳುಮಾವಿ ಮತ್ತು ಯಜ್ಞಶ್ರೀ ಸಾತಕರ್ಣಿ ಇವರ ಅಧೀನ ಇದ್ದ ಚುಟು ಮಹಾರಠಿ ಮೊದಲಾದ ರಾಜರುಗಳ ನಾಣ್ಯಗಳು, ಕ್ಷತ್ರಪ ನಾಣ್ಯದ ಅಚ್ಚುಗಳು ಆಗಸ್ಟನ್ (ಪ್ರ.ಶ.ಪೂ. 29–ಪ್ರ.ಶ. 14), ಟೈಬೀರಿಯಸ್ (ಪ್ರ.ಶ. 14–27) ಮೊದಲಾದ ರೋಮನ್ ರಾಜರ ನಾಣ್ಯಗಳು, ಸುಡಾವೆ ಮಣ್ಣಿನ ಬೊಂಬೆಗಳು, ಅರೆಪ್ರಶಸ್ತ ಶಿಲೆಗಳ ಮಣಿ, ಗಾಜು–ಶಂಖದ ಬಳೆಗಳು, ಹೊಳಪಿನ ಕೆಂಪು ಪಾತ್ರೆ–ಅರೆಟೈನ್ ಪಾತ್ರೆ ಮುಂತಾದ ಹೊರ (ರೋಂ) ದೇಶದ ಪ್ರಭಾವವುಳ್ಳ ಮಣ್ಪಾತ್ರೆಗಳು, ಶಾಸನಗಳು ದೊರೆತಿವೆ. ರೋಮನ್ ಮತ್ತು ಮುದ್ರಾಂಕಿತ ನಾಣ್ಯಗಳ ಗುಪ್ಪೆಗಳೂ ಕೆಲವೆಡೆ ಆಕಸ್ಮಿಕವಾಗಿ ಪತ್ತೆಯಾಗಿವೆ. ಅಕ್ಕಿಆಲೂರಿನಲ್ಲಿ (ಹಾವೇರಿ) ಆಂಟೋನಿಯಸ್ ಪಯಸ್, ಥಿಯೋಡೊಸಿಯಸ್, ಜೆನೊ, ಅನಸ್ತೇಸಿಯಸ್, ಜಸ್ಟಿನಸ್ ಮೊದಲಾದ ಬೈಜಾಂಟೀಯನ್ ರಾಜರ ಬೆಳ್ಳಿನಾಣ್ಯಗಳು ಅಗಸ್ಟಸ್–ಟೈಬೀರಿಯಸ್ ನಾಣ್ಯಗಳೊಂದಿಗೆ ಸಿಕ್ಕಿವೆ. ಕೊಪ್ಪಳ ಜಿಲ್ಲೆಯ ಸಿಂಧಗಿಯಲ್ಲಿ ಚಂತಸ ಎಂಬ ಬ್ರಾಹ್ಮಿ ಲಿಪಿಯ ಬರೆಹವುಳ್ಳ ತಾಮ್ರದ ತಂಬಿಗೆಯಲ್ಲಿ 5000ಕ್ಕೂ ಹೆಚ್ಚು ಮುದ್ರಾಂಕಿತ ನಾಣ್ಯಗಳಿದ್ದುದು ಮಹತ್ತ್ವದ ಶೋಧವಾಗಿದೆ.

ಉತ್ಖನನದಲ್ಲಿ ಕಂಡುಬಂದಿರುವ ಕಟ್ಟಡ–ವಾಸ್ತು ಅವಶೇಷಗಳಲ್ಲಿ ಮುಖ್ಯವಾದುವೆಂದರೆ ವಡಗಾಂವ್–ಮಾಧವಪುರದ ಇಟ್ಟಿಗೆಯಿಂದ ಕಟ್ಟಿದ ವಸತಿಗೃಹಗಳು, ಸಾರ್ವಜನಿಕ ಕಟ್ಟಡಗಳು, ವರ್ತುಲ ಹಾಗೂ ಚೌಕಾಕಾರದ ಬಾವಿಗಳು, ಬನವಾಸಿಯ ಗಜಪೃಷ್ಠಾಕಾರದ ಸಣ್ಣ ಕಟ್ಟಡ, ಕಣಗಿನಹಾಳದ (ಸನ್ನತಿ) ಶಿಲಾಸ್ತೂಪ, ಜಾತಕ ಕಥೆಗಳನ್ನು ನಿರೂಪಿಸುವ ಫಲಕಗಳು, ಸ್ಮಾರಕಶಿಲ್ಪಗಳು ಇತ್ಯಾದಿ. ಅತ್ಯಂತ ಗಮನಾರ್ಹ ನಗರ ನಿರ್ಮಿತಿ ವಡಗಾಂವ್–ಮಾಧವಪುರ ನಗರ ನೆಲೆಯಲ್ಲಿದ್ದ ಸು.7ಮೀ ಅಗಲದ ಪದೇ ಪದೇ ಗಟ್ಟಿ ಮಾಡಿದ ವಿಶಾಲವಾದ ಬೀದಿ ಸು.150ಮೀ ಉದ್ದದವರೆಗೂ ಅನಾವರಣಗೊಳಿಸಲಾಯಿತು. ಇದರ ಎರಡೂ ಬದಿಗಳಲ್ಲಿ ವಾಸದ ಮನೆಗಳಿದ್ದ ಕುರುಹುಗಳಿದ್ದವು. ಸಾಂಸ್ಕೃತಿಕ ಅವಶೇಷಗಳಲ್ಲಿ ಪ್ರಮುಖವಾದುವೆಂದರೆ ಸುಡಾವೆ ಮಣ್ಣಿನ ಬೊಂಬೆಗಳು, ಟೊಳ್ಳು ಅಥವಾ ಘನವಾದ, ಸರಳ ಹಾಗೂ ಅಲಂಕೃತ ಸ್ತ್ರೀ ಮತ್ತು ಪುರುಷಾಕೃತಿಗಳು ಬನವಾಸಿ ಮತ್ತು ಸನ್ನತಿಯಲ್ಲಿ ದೊರಕಿವೆ. ಆನೆ, ಗೂಳಿ, ಹಕ್ಕಿ ಮುಂತಾದ ಪ್ರಾಣಿಯಾಕೃತಿಗಳು ವಡಗಾಂವ್–ಮಾಧವ ಪುರದಲ್ಲಿವೆ. ಶಂಕುವಿನಾಕಾರದ ಅಲಂಕೃತ ಶಿಖರಾಕೃತಿ, ಧಾರ್ಮಿಕ ಹಾಗೂ ಲೌಕಿಕ ಮಹತ್ತ್ವವುಳ್ಳ ವರ್ತುಲಾಕಾರದ ಸಣ್ಣ ಶಿಲ್ಪಫಲಕಗಳು, ಶಿವಲಿಂಗ ಮುಂತಾದ ಧಾರ್ಮಿಕ ವಸ್ತುಗಳು ವಡಗಾಂವ್–ಮಾಧವಪುರ ಮತ್ತು ಚಂದ್ರವಳ್ಳಿಗಳಲ್ಲಿ ದೊರಕಿವೆ. ವಡಗಾಂವ್–ಮಾಧವಪುರದ ಸುಡಾವೆಮಣ್ಣಿನ ಮಾನವ ಶಿರಭಾಗ ಉಲ್ಲೇಖಾರ್ಹ; ಚೂಪು ನಾಸಿಕ, ದೊಡ್ಡ ಕಿವಿ, ಗುಂಗುರು ಕೂದಲು ಇವೆಲ್ಲವೂ ಗಾಂಧಾರ ಲಕ್ಷಣಗಳಾಗಿವೆ. ಇದೇ ನೆಲೆಯಲ್ಲಿ ಸಿಕ್ಕ ಒಂದು ವರ್ತುಲ ಫಲಕದಲ್ಲಿ ಶಿವಭಕ್ತನಾದ ಮಾರ್ಕಂಡೇಯನ ಕಥಾನಿರೂಪಣೆ ಯನ್ನು ಮೂಡಿಸಿರುವಂತೆ ತೋರುತ್ತದೆ. ಆನೆ ಮತ್ತು ಮಾವಟಿಗನ ಚಿತ್ರವುಳ್ಳ ಶಂಕುವಿ ನಾಕಾರದ ಮುದ್ರೆಯೊಂದು ಮಸ್ಕಿಯಲ್ಲಿ ಸಿಕ್ಕಿದ್ದು ಈ ತರಹದ ಪಡಿಯಚ್ಚಿರುವ ಮಣ್ಪಾತ್ರೆ ಚೂರೊಂದು ವಡಗಾಂವ್–ಮಾಧವಪುರದಲ್ಲಿ ಕಂಡುಬಂದಿರುವುದು ಕುತೂಹಲಕರವಾಗಿದೆ. ಶಿಲ್ಪಗಳಲ್ಲಿ ಗಮನ ಸೆಳೆಯುವಂತಹವು ಹೈಗುಂದದ ಯಕ್ಷ, ಗುಡ್ನಾಪುರ–ಸನ್ನತಿಯ ಕುಬ್ಜ ಯಕ್ಷರು ಮತ್ತು ಬನವಾಸಿಯ ಕಾರ್ತಿಕೇಯ ಮೂರ್ತಿ. ಸನ್ನತಿಯ ದೀಪಧಾರಿಯಾದ ಯಕ್ಷನ ಕೊರಳ ಹಾರದಲ್ಲಿರುವ ಗಜಲಕ್ಷ್ಮಿಯ ಪದಕ ಈ ಶೈಲಿಯ ಪ್ರಾಚೀನ ನಿದರ್ಶನ ವೆನಿಸಿಕೊಂಡಿವೆ.

ಈ ಕಾಲದ ಶಾಸನಗಳೆಲ್ಲವೂ ಪ್ರಾಕೃತ ಭಾಷೆ–ಬ್ರಾಹ್ಮಿ ಲಿಪಿಯಲ್ಲಿದ್ದು ಇವುಗಳಲ್ಲಿ ಬ್ರಹ್ಮಗಿರಿ ಶಾಸನ, ವಡಗಾಂವ್–ಮಾಧವಪುರದ ಶಾಸನ ಮತ್ತು ವಾಸಿಷ್ಠಿಪುತ್ರ ಸಾತಕರ್ಣಿಯ ಶಾಸನ ಪ್ರಮುಖವಾದವು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಸಂಖ್ಯೆಯ ಉಲ್ಲೇಖ, ಚಪಡ (ಚ ಪಡ?) ಎಂಬ ಲಿಪಿಕಾರನ ಹೆಸರು ಹಾಗೂ ಲಿಪಿಕರೇಣ ಎಂಬ ಕೊನೆಯ ಪದ ಖರೋಷ್ಠಿ ಲಿಪಿಯಲ್ಲಿರುವುದು ಮಹತ್ವಪೂರ್ಣವಾಗಿದೆ. ಸಾಕೇತದಿಂದ (ಅಯೋಧ್ಯ) ಬಂದ ಸೋಮಯಶಸ್‌ನೆಂಬ ಬ್ರಾಹ್ಮಣ ವಾಜಪೇಯವೂ ಸೇರಿದಂತೆ 80 ವೈದಿಕ ಯಜ್ಞ ಗಳನ್ನು ಮಾಡಿದುದಾಗಿ ವಡಗಾಂವ್–ಮಾಧವಪುರದ ಶಾಸನ ತಿಳಿಸುತ್ತದೆ. ಪ್ರಾಯಶಃ ಕಲಿಯುಗ ಶಕೆಯನ್ನಾಧರಿಸಿರುವ ಈ ಶಾಸನ 105ರ ನವೆಂಬರ್ 30ರಲ್ಲಿ ಸ್ಥಾಪಿತಗೊಂಡಿತು. ವಾಸಿಷ್ಠಿಪುತ್ರ ಪುಳುಮಾವಿಯ ಯುದ್ಧ ಸಾಧನೆಗಳನ್ನು ವಿವರಿಸುವ ಅವನ ಶಾಸನದಲ್ಲಿರುವ ಶಿಲ್ಪದೃಶ್ಯ ಮೃತ್ಯುವಶನಾದ ಗೌತಮಿಪುತ್ರ ಸಾತಕರ್ಣಿ ಹಾಗೂ ಶೋಕಾಚರಣೆಯಲ್ಲಿರುವ ಅವನ ಸೇವಕರ ಚಿತ್ರಣವಾಗಿರಬಹುದು. (ಎ.ಎಸ್.)

**ಉತ್ತರ ಭಾರತ:** ಪ್ರ.ಶ.ಪೂ. ಮೊದಲನೆಯ ಸಹಸ್ರಮಾನದ ಪೂರ್ವಾರ್ಧ ಸಮಯದಲ್ಲಿ ಮಧ್ಯ ಗಂಗಾಬಯಲಿನಲ್ಲಿ ಕಬ್ಬಿಣ ತಂತ್ರಜ್ಞಾನದ ಅರಿವಿದ್ದ ಗ್ರಾಮೀಣ ಸಂಸ್ಕೃತಿಗಳು ಸಣ್ಣ ಸಣ್ಣ ರಾಜ್ಯಗಳಾಗಿ ರೂಪುಗೊಂಡವು. ಈ ಸಂಕ್ರಮಣದ ವಿವಿಧ ಹಂತಗಳನ್ನು ಪುರಾತತ್ತ್ವ ಆಧಾರಗಳಿಂದ ಗುರುತಿಸಲು ಸಾಧ್ಯವಾಗಿಲ್ಲ. ಬೌದ್ಧ ಸಾಹಿತ್ಯ ತಿಳಿಸುವಂತೆ ಪ್ರ.ಶ.ಪೂ. 6ನೆಯ ಶತಮಾನದಲ್ಲಿ 16 ಮಹಾಜನಪದಗಳು ಉತ್ತರ ಮತ್ತು ಮಧ್ಯ ಭಾರತದಲ್ಲಿ ವರ್ಧಮಾನಕ್ಕೆ ಬಂದವು. ಇವುಗಳಲ್ಲಿ ಕೆಲವು ಗಣರಾಜ್ಯಗಳಾಗಿದ್ದರೆ ಇನ್ನುಳಿದವು ಸಣ್ಣ ಸ್ಥಾಯಿ ರಾಜ್ಯಗಳು. ಚಂಪ (ಅಂಗ ರಾಜ್ಯ), ವೈಶಾಲಿ (ಲಿಚ್ಛವಿ), ರಾಜಗಿರ್ (ಮಗಧ), ರಾಜಘಾಟ್ (ಕಾಶಿ), ಕೌಶಾಂಬಿ (ವತ್ಸ), ಶ್ರಾವಸ್ತಿ (ಕೋಸಲ), ಅಹಿಚ್ಛತ್ರ (ಪಾಂಚಾಲ), ಹಸ್ತಿನಾಪುರ (ಕುರು), ಮಥುರ (ಶೂರಸೇನ) ಮತ್ತು ಉಜ್ಜಯಿನಿ (ಅವಂತಿ) ಇವು ಕೆಲವು ಜನಪದಗಳ ರಾಜಧಾನಿಗಳು. ವಾಯವ್ಯ ಭಾರತದಲ್ಲಿ ತಕ್ಷಶಿಲೆ ಗಾಂಧಾರ ದೇಶದ ರಾಜಧಾನಿಯಾಗಿತ್ತು. ಈ ಎಲ್ಲ ನೆಲೆಗಳಲ್ಲಿಯೂ ಸಮಕಾಲೀನ ಅವಶೇಷಗಳು ಉತ್ಖನನದಲ್ಲಿ ದೊರೆತಿವೆ.

ಸದಾ ತುಂಬಿ ಹರಿಯುವ ನದಿಗಳು, ಸಕಾಲಿಕ ಮುಂಗಾರು, ಫಲವತ್ತಾದ ಮೆಕ್ಕಲು ಮಣ್ಣಿನ ಭೂಮಿ, ಏರುತಗ್ಗಿನ ಬಯಲು ಪ್ರದೇಶ, ದಟ್ಟ ಕಾಡು–ಇವೇ ಮುಂತಾದ ಅಂಶ ಗಳು ಇಂದಿನ ಹರಿಯಾಣ, ಪಂಜಾಬ್, ಉತ್ತರಪ್ರದೇಶ ಮತ್ತು ಬಿಹಾರ ಪ್ರದೇಶದಲ್ಲಿ ಪ್ರಪ್ರಥಮ ನಗರ ಕೇಂದ್ರಗಳು ಹುಟ್ಟಿ–ಬೆಳೆಯುವಲ್ಲಿ ಪೂರಕವಾದವು.

ಆದಿಚಾರಿತ್ರಿಕ ಹಂತದ ಉದಯದಲ್ಲಿ ಸಾಮಾನ್ಯ ಜನಜೀವನದಲ್ಲಿ ಅನೇಕ ಬದಲಾವಣೆ ಗಳಾದವು. ನಾಣ್ಯ ಪದ್ಧತಿ ಜಾರಿಗೆ ಬಂದುದರಿಂದ ವಾಣಿಜ್ಯ ವ್ಯವಹಾರಗಳು ಸುಲಲಿತವಾದವು; ಮಾರ್ಗ–ಹೆದ್ದಾರಿಗಳು ವೃದ್ಧಿಗೊಂಡವು; ತಾಮ್ರ–ಕಬ್ಬಿಣ ಮುಂತಾದ ಲೋಹಗಳ ಬಳಕೆ ಹೆಚ್ಚಿತು; ಸುಟ್ಟಇಟ್ಟಿಗೆ ವಾಸ್ತು–ಗೃಹಶಿಲ್ಪದ ಮಾಧ್ಯಮವಾಯಿತು; ಸಣ್ಣ–ದೊಡ್ಡ ವಸತಿಗಳು ಕಾಲಕ್ರಮೇಣ ಬೆಳೆದು ಪಟ್ಟಣ–ನಗರಗಳಾಗಿ ವರ್ಧಿಸಿದವು. ರಾಜಕೀಯ ವಲಯದಲ್ಲಿ ನಂದರಿಗೂ ಜನಪದಗಳಿಗೂ ಆಗಾಗ್ಗೆ ನಡೆಯುತ್ತಿದ್ದ ಒಳಜಗಳಗಳು ತಿಳಿದದ್ದೆ. ಅಂತಿಮ ಜಯ ಸಾಧಿಸಿದ ಮೌರ್ಯರು ಮಗಧ ಸಾಮ್ರಾಜ್ಯವನ್ನು ಭಾರತದ ಉದ್ದಗಲಕ್ಕೆ ವಿಸ್ತರಿಸಿದರು. ಧಾರ್ಮಿಕ ರಂಗದಲ್ಲಿ ಬೌದ್ಧಧರ್ಮದ ಪ್ರಭಾವ ಎಲ್ಲೆಡೆ ಹರಡುತ್ತಾ ಬಂತು. ಪ್ರ.ಶ.ಪೂ. 3ನೆಯ ಶತಮಾನದ ಹೊತ್ತಿಗೆ ಬಿಹಾರ ಮತ್ತು ಉತ್ತರಪ್ರದೇಶದಲ್ಲಿ ಬಲವಾಗಿ ಬೇರೂರಿದ್ದ ಬೌದ್ಧಧರ್ಮ ಪ್ರ.ಶ.ಪೂ.2–1ನೆಯ ಶತಮಾನದಲ್ಲಿ ದಖನ್ ಪ್ರದೇಶ ಮತ್ತು ದಕ್ಷಿಣ ಭಾರತಕ್ಕೆ ಪಸರಿಸಿತು. ಈ ಸಮಯದ ಮತ್ತೊಂದು ಪ್ರಭಾವಶಾಲಿ ಬೆಳೆವಣಿಗೆಯೆಂದರೆ ಬರೆವಣಿಗೆಯ ವಿಕಾಸ. ಪ್ರಾಯಶಃ ಮೌರ್ಯರಿಗೂ ಒಂದೆರಡು ಶತಮಾನಗಳ ಮುಂಚೆಯೇ ಬಳಕೆಗೆ ಬಂದ ಬ್ರಾಹ್ಮಿ ಲಿಪಿ ಅಶೋಕನ ಶಾಸನಗಳಲ್ಲಿ ಒಂದು ನಿರ್ದಿಷ್ಟ ರೂಪ ಪಡೆ ಯಿತು. ಪ್ರ.ಶ.ಪೂ.2ನೆಯ ಶತಮಾನದ ಹೊತ್ತಿಗೆ ಬ್ರಾಹ್ಮಿ ಶಾಸನಗಳು ಭಾರತದ ಹೆಚ್ಚಿನ ಭಾಗಗಳಲ್ಲಿ ಕಾಣಿಸಿಕೊಂಡವು. ಈ ಎಲ್ಲ ಬೆಳೆವಣಿಗೆಗಳಿಗೆ ಸಮಕಾಲೀನವಾಗಿದ್ದುದೆಂದರೆ ವಿಶಿಷ್ಟವಾದ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಯ ಬಳಕೆ. ಮಧ್ಯ ಗಂಗಾ ಬಯಲಿನಲ್ಲಿ ಪ್ರ.ಶ.ಪೂ. 6ರಿಂದ 3ನೆಯ ಶತಮಾನದ ವಸತಿನೆಲೆಗಳ ಹೆಗ್ಗುರುತು ಇದಾಗಿದೆ (ಈಗ ಈ ಪಾತ್ರೆಯ ಆರಂಭ ಕಾಲ ಪ್ರ.ಶ.ಪೂ.8ನೆಯ ಶತಮಾನಕ್ಕೂ ಹಿಂದಕ್ಕೆ ಹೋಗಿದೆ). ಅನಂತರ ಕಾಲದಲ್ಲಿ ಇದು ಭಾರತದ ಇತರ ಭಾಗಗಳಿಗೆ ಹರಡಿತು.

1940ಕ್ಕೂ ಮುಂಚೆ ವಿಸ್ತೃತ ಉತ್ಖನನಕ್ಕೆ ಒಳಗಾದ ಅಹಿಚ್ಛತ್ರ ನೆಲೆಯು ಆದಿಚಾರಿತ್ರಿಕ ಸಂಶೋಧನೆಗೆ ಒಂದು ಅಡಿಪಾಯ ಒದಗಿಸಿಕೊಟ್ಟಿತು. 1950ರ ದಶಕದಲ್ಲಿ ನಡೆದ ಹಸ್ತಿನಾಪುರದ (ಅಲಹಾಬಾದ್ ಜಿಲ್ಲೆ, ಉತ್ತರಪ್ರದೇಶ) ಉತ್ಖನನ ಐತಿಹಾಸಿಕ ಪುರಾತತ್ತ್ವ ಸಂಶೋಧನೆಯ 2ನೆಯ ಹಂತವನ್ನು ಪ್ರತಿನಿಧಿಸುತ್ತದೆ. ಆನಂತರದ ದಶಕಗಳಲ್ಲಿ ಅನೇಕ ನೆಲೆಗಳು ಉತ್ಖನನಕ್ಕೆ ಒಳಗಾದವು. ರೋಪರ್ ಮತ್ತು ಸುಘ್ (ಅಂಬಾಲ ಜಿಲ್ಲೆ), ಪುರಾನ ಖಿಲಾ (ದೆಹಲಿ), ಮಥುರ ಮತ್ತು ಅತ್ರಂಜಿಖೇಡ (ಇಟಾಹ್ ಜಿಲ್ಲೆ), ಕೌಶಾಂಬಿ, ರಾಜಘಾಟ್,

ಸಂಘೋಲ್ (ಲೂಧಿಯಾನ ಜಿಲ್ಲೆ), ಅಯೋಧ್ಯ (ಫೈಜಾಬಾದ್ ಜಿಲ್ಲೆ), ಶ್ರಾವಸ್ತಿ (ಗೊಂಡ ಜಿಲ್ಲೆ), ಸೊಹ್‌ಗೌರ (ಗೋರಖ್‌ಪುರ್ ಜಿಲ್ಲೆ), ಭೀತ ಮತ್ತು ಶೃಂಗವೇರಪುರ (ಅಲಹಾಬಾದ್ ಜಿಲ್ಲೆ), ಸಂಕೀಸ ಮತ್ತು ಕಂಪಿಲ್ (ಫರುಕಬಾದ್ ಜಿಲ್ಲೆ) ಮುಖ್ಯವಾದುವು. ವಾಯವ್ಯ ಹಾಗೂ ಉತ್ತರ ಭಾರತದಲ್ಲಿ ಔ.ಕ.ಪಾ. ಸಂಸ್ಕೃತಿ ವರ್ಣಚಿತ್ರಿತ ಬೂದುಬಣ್ಣದ ಪಾತ್ರ ಸಂಸ್ಕೃತಿಯ ಮುಂದುವರಿಕೆಯಾಗಿರುವುದು ಈ ಉತ್ಖನನಗಳಿಂದ ಸ್ಪಷ್ಟವಾಯಿತು. ಆದರೆ ಪೂರ್ವ ಭಾರತದಲ್ಲಿ (ಬಿಹಾರ) ಔ.ಕ.ಪಾ. ಸಂಸ್ಕೃತಿಯ ಪೂರ್ವದಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಯನ್ನು ಬಳಸುತ್ತಿದ್ದ ಸಂಸ್ಕೃತಿಯಿತ್ತು.

ಅಹಿಚ್ಛತ್ರ, ಭೀತ, ಕೌಶಾಂಬಿ, ಕನೌಜ್, ಮಥುರ, ರಾಜಘಾಟ್, ಸಂಕೀಸ, ಶ್ರಾವಸ್ತಿ ಮತ್ತು ತಿಲೌರಿಯಾ ಕೋಟ್‌ನಲ್ಲಿ ಕಂದಕ ಮತ್ತು ಪ್ರವೇಶದ್ವಾರ ಸಹಿತವಾದ ಕೋಟೆಯ ಅವಶೇಷಗಳು ಕಂಡುಬಂದಿವೆ. ಕಂದಕದಿಂದ ಅಗೆದು ತೆಗೆದ ಮಣ್ಣನ್ನೇ ಕೋಟೆ ಕಟ್ಟುವಲ್ಲಿ ಬಳಸಲಾಗಿದೆ. ಇಟ್ಟಿಗೆ ಕೋಟೆಗಳಿಗೆ ಮಾತ್ರ ಆಳವಾದ ಅಡಿಪಾಯವಿದೆ. ಅಹಿಚ್ಛತ್ರ ಹಾಗೂ ಶ್ರಾವಸ್ತಿಯಲ್ಲಿ ಪ್ರ.ಶ.ಪೂ.3–2ನೆಯ ಶತಮಾನದಲ್ಲಿ ಕಟ್ಟಲ್ಪಟ್ಟ ಕೋಟೆ ಪ್ರ.ಶ. 1ನೆಯ ಶತಮಾನದ ಅಂತ್ಯದವರೆಗೆ ಸುಸ್ಥಿತಿಯಲ್ಲಿತ್ತು. ಮಥುರದಲ್ಲಿ ವಸತಿಯ ಆರಂಭ ಕಾಲದಲ್ಲಿ (1ನೆಯ ಹಂತ: ಪ್ರ.ಶ.ಪೂ.325–100) ವಿಶಾಲವಾಗಿದ್ದು ಅರ್ಧಚಂದ್ರಾಕೃತಿಯ ವಿನ್ಯಾಸದ ಬೃಹತ್ ಮಣ್ಣಿನ ಕೋಟೆಯಿಂದ ರಕ್ಷಿತವಾಗಿತ್ತು. ಬುದ್ಧನ ಕಾಲದ ಮುಖ್ಯ ನಗರಗಳಲ್ಲೊಂದಾದ ಶ್ರಾವಸ್ತಿಯಲ್ಲಿ ಮೊದಲನೆಯ ಹಂತದಲ್ಲಿ (ಪ್ರ.ಶ.ಪೂ.600–400) ಔ.ಕ.ಪಾ. ಗಳು ಹೇರಳವಾಗಿವೆ; ಆದರೆ ಕೋಟೆಯ ಕುರುಹುಗಳಿಲ್ಲ. 2ನೆಯ ಹಂತದಲ್ಲಿ (ಪ್ರ.ಶ.ಪೂ.275–200) ವಸತಿಯ ಸುತ್ತ ಸು.5 ಕಿಮೀ ಸುತ್ತಳತೆಯ ಮಣ್ಣಿನ ಕೋಟೆಯನ್ನು ಕಟ್ಟಲಾಯಿತು. ಅನಂತರ ಸುಟ್ಟಇಟ್ಟಿಗೆಯ ಒತ್ತುಗೋಡೆಯಿಂದ ಇದನ್ನು ಭದ್ರಪಡಿಸಲಾಯಿತು. ಕೌಶಾಂಬಿಯ ರಕ್ಷಣಾ ಗೋಡೆ 4–6 ಕಿಮೀ ಸುತ್ತಳತೆಯ ದಾಗಿದ್ದು ಗೋಪುರ, ಬುರುಜು ಮತ್ತು ಪ್ರವೇಶದ್ವಾರಗಳಿಂದ ಕೂಡಿತ್ತು. ಔ.ಕ.ಪಾ. ಪಾತ್ರೆ ಬಳಕೆಗೆ ಬರುವ ಹೊತ್ತಿಗಾಗಲೇ ಈ ಕೋಟೆ ಅಸ್ತಿತ್ವದಲ್ಲಿತ್ತೆಂದು ತಿಳಿಯಲಾಗಿದೆ. 6 ಕಿಮೀ ಸುತ್ತಳತೆಯ ಅಹಿಚ್ಛತ್ರದ ಕೋಟೆ ಸಮದ್ವಿಬಾಹು ತ್ರಿಭುಜದ ವಿನ್ಯಾಸದಲ್ಲಿತ್ತು. ಈ ಎರಡೂ ನೆಲೆಗಳಲ್ಲಿ ಮೂಲತಃ ಮಣ್ಣಿನ ಕೋಟೆಯನ್ನು ಅನಂತರದ ಕಾಲದಲ್ಲಿ ಸುಟ್ಟಇಟ್ಟಿಗೆಯ ಗೋಡೆಯಿಂದ ಸ್ಥಿರಗೊಳಿಸಲಾಯಿತು. ಗಂಗಾನದಿ ದಡದಲ್ಲಿರುವ ರಾಜಘಾಟ್‌ನಲ್ಲಿ ಆದಿಚಾರಿತ್ರಿಕ ವಸತಿ ಪ್ರ.ಶ.ಪೂ. 500ಕ್ಕೂ ಮುಂಚೆಯೇ ಮಣ್ಣಿನ ಕೋಟೆಯಿಂದ ಆವೃತ ವಾಗಿತ್ತು. ಬಿಹಾರದ ಮುಖ್ಯನೆಲೆಯಾದ ಹಳೆಯ ರಾಜಗಿರ್‌ನ (ರಾಜಗೃಹ) ಸಾಲುಬೆಟ್ಟದ ನೆತ್ತಿಯಲ್ಲಿ ಸು.40 ಕಿಮೀ ಗಳವರೆಗೆ ಹಾದುಹೋಗಿರುವ ಕಲ್ಲಿನ ಕೋಟೆಯ ಕಾಲಮಾನವನ್ನು ನಿರ್ಧರಿಸುವುದಕ್ಕೆ ಆಧಾರಗಳಿಲ್ಲ. ಬಿಂಬಿಸಾರ ಮತ್ತು ಅಜಾತಶತ್ರು ಕಟ್ಟಿದ ಪಟ್ಟಣವೆಂದು ಹೇಳಲಾಗುವ ಹೊಸ ರಾಜಗಿರ್‌ನಲ್ಲಿ ಪಂಚಕೋನ ವಿನ್ಯಾಸದಲ್ಲಿರುವ ಮಣ್ಣಿನ ರಕ್ಷಣಾ ಕೋಟೆಯಿದೆ. ಔ.ಕ.ಪಾ. ಬಳಸುವ ವಸತಿ ಇಲ್ಲಿ ಆರಂಭವಾದ ಸ್ವಲ್ಪಸಮಯದ ಅನಂತರ ಕೋಟೆ ಕಟ್ಟಲ್ಪಟ್ಟಿತು. ವೈಶಾಲಿಯಲ್ಲಿ 3 ಸುತ್ತಿನ ಕೋಟೆಯಿದ್ದು ಮೊದಲ (ಪ್ರ.ಶ.ಪೂ.2ನೆಯ ಶತಮಾನ) ಹಾಗೂ ಕೊನೆಯ (ಪ್ರ.ಶ.1ನೆಯ ಶತಮಾನ) ಸುತ್ತಿನ ಗೋಡೆಗಳನ್ನು ಇಟ್ಟಿಗೆಯಿಂದಲೂ ಮಧ್ಯದನ್ನು (ಪ್ರ.ಶ.ಪೂ.1ನೆಯ ಶತಮಾನ) ಮಣ್ಣಿ ನಿಂದಲೂ ಕಟ್ಟಲಾಗಿದೆ. ಸೀಮಿತ ಉತ್ಖನನಕ್ಕೊಳಗಾಗಿರುವ ಚಂಪದಲ್ಲಿಯೂ (ಬಿಹಾರ) ಕಂದಕ ಹಾಗೂ ಮಣ್ಣಿನ ಕೋಟೆಗೋಡೆ ಕಂಡುಬಂದಿವೆ. ಸರಯೂ ನದಿ ಬಯಲಿನಂಚಿ ನಲ್ಲಿರುವ ಪಿಪ್ರಹ್ವದಲ್ಲಿ ಸ್ತೂಪ–ವಿಹಾರ ಮುಂತಾದ ಧಾರ್ಮಿಕ ಅವಶೇಷಗಳೂ ಸಮೀಪದ ಗಣ್ವರಿಯದಲ್ಲಿ ಇಟ್ಟಿಗೆಯ ಬೃಹತ್ ಕಟ್ಟಡಗಳೂ ಇತ್ತೀಚೆಗೆ ಬೆಳಕಿಗೆ ಬಂದಿದ್ದು ಇಲ್ಲಿ ಸಮೃದ್ಧವಾದ ಪಟ್ಟಣ ಇದ್ದಿತೆಂಬುದನ್ನು ಸಮರ್ಥಿಸುತ್ತವೆ. ಈ ಸ್ಥಳವೇ ಪ್ರಾಚೀನ ಕಪಿಲ ವಸ್ತುವಿರಬೇಕೆಂಬ ಅನುಮಾನವಿದೆ. ಸೊಹ್‌ಗೌರವು ಮೌರ್ಯ ಸಾಮ್ರಾಜ್ಯದ ಒಂದು ಪ್ರಸಿದ್ಧ ಆಡಳಿತ ಕೇಂದ್ರವಾಗಿತ್ತು. ಇಲ್ಲಿ ದೊರೆತಿರುವ ಕಂಚಿನ ಫಲಕ ಶಾಸನ ಮಹತ್ತ್ವದ್ದಾಗಿದೆ. ಕ್ಷಾಮ ಕಾಲದಲ್ಲಿ ದವಸ ಧಾನ್ಯಗಳನ್ನು ಕೂಡಿಡಲು ಕಣಜವೊಂದನ್ನು ಕಟ್ಟಿದ್ದನ್ನು ಮೌರ್ಯ ಕಾಲದ ಪ್ರಾಕೃತ ಭಾಷೆಯಲ್ಲಿರುವ ಈ ಶಾಸನ ಉಲ್ಲೇಖಿಸುತ್ತದೆ. ಕೋಪಿಯ ಕಂದಕ–ಕೋಟೆಯಿಂದಾವೃತವಾದ ವಸತಿಯಾಗಿದ್ದು ಒಂದು ಪ್ರಮುಖ ಗಾಜು ತಯಾರಿಕಾ ಕೇಂದ್ರವಾಗಿತ್ತು.

ಈ ನೆಲೆಗಳಲ್ಲಿ ಸಾಹಿತ್ಯಕ ವರ್ಣನೆಯನ್ನು ಹೋಲುವಂತಹ ನಗರ ವಿನ್ಯಾಸವಾಗಲೀ ಅರಮನೆಯಂತಹ ಕಟ್ಟಡ ಸಂಕೀರ್ಣವಾಗಲೀ ಕಾಣದಿರುವುದು ಕುತೂಹಲವೇ ಸರಿ. ಆದರೆ ಸಾರಾನಾಥ ಮತ್ತು ಶ್ರಾವಸ್ತಿಯಲ್ಲಿ ಅದ್ಭುತವಾದ ವಿಹಾರ ಮತ್ತು ಸ್ತೂಪಗಳಿರುವುದು ಗಮನಾರ್ಹ. ರೂಪಾರ್‌ನಲ್ಲಿ ಇಟ್ಟಿಗೆಯಿಂದ ಕಟ್ಟಿದ ದೊಡ್ಡ ಕೆರೆಯೊಂದರ ಅವಶೇಷಗಳು ಪತ್ತೆಯಾಗಿವೆ. ಇದರ ಉದ್ದೇಶ ಪ್ರಾಯಶಃ ಮಳೆಯ ನೀರನ್ನು ಸಂಗ್ರಹಿಸುವುದಾಗಿರಬೇಕು. ಕೆರೆಯ ತೂಬುಗಳಲ್ಲೊಂದನ್ನು ಸಹ ಅನಾವರಣಗೊಳಿಸಲಾಗಿದೆ. ಕೌಶಾಂಬಿಯಲ್ಲಿ ಕಂಡುಬಂದ 320×180ಮೀ ವಿಸ್ತೀರ್ಣದ ಕಲ್ಲಿನ ಕಟ್ಟಡವನ್ನು ಉತ್ಖನನಕಾರರು ಅರಮನೆ ಸಂಕೀರ್ಣವೆಂದು ಗುರುತಿಸಿದ್ದಾರೆ. 4 ಹಂತಗಳಲ್ಲಿ ನಿರ್ಮಾಣವಾದ ಈ ಕಟ್ಟಡ ಸಂಕೀರ್ಣದ ಕಾಲಮಾನ ಪ್ರ.ಶ.ಪೂ. 6–7ನೆಯ ಶತಮಾನ. ಇದೇ ನೆಲೆಯ ಈಶಾನ್ಯ ಮೂಲೆಯಲ್ಲಿ ಘೋಶಿತರಾಮ ಎಂದು ಪ್ರಸಿದ್ಧವಾಗಿರುವ ವಿಹಾರ–ಸ್ತೂಪ ಸಂಕೀರ್ಣದ ಅವಶೇಷಗಳಿವೆ. ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಕಟ್ಟಲ್ಪಟ್ಟ ಈ ಸ್ತೂಪವನ್ನು ಅನಂತರ ವಿಸ್ತರಿಸಲಾಯಿತು. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಮಾಡಿದ ಗಟ್ಟಿ ರಸ್ತೆಯೊಂದರ ಭಾಗಗಳನ್ನೂ ಈ ನೆಲೆಯಲ್ಲಿ ಗುರುತಿಸಲಾಗಿದೆ. ಹಲವಾರು ಬಾರಿ ದುರಸ್ತಿಗೊಳಗಾದ ಈ ರಸ್ತೆ ಪ್ರ.ಶ. 3ನೆಯ ಶತಮಾನದವರೆಗೆ ಬಳಕೆಯಲ್ಲಿತ್ತು. ಅಹಿಚ್ಛತ್ರದಲ್ಲಿಯೂ ಪ್ರ.ಶ.ಪೂ. 2ನೆಯ ಶತಮಾನದಿಂದ ಪ್ರಶ 7ನೆಯ ಶತಮಾನದವರೆಗೆ ಬಳಕೆಯಲ್ಲಿದ್ದ ರಸ್ತೆಯ ಕುರುಹುಗಳನ್ನು ಶೋಧಿಸಲಾಗಿದೆ. ಈ ಎಲ್ಲ ಆಧಾರಗಳು ಒಂದುಮಟ್ಟದ ನಗರ ಸಂಯೋಜನೆಯನ್ನು ಸೂಚಿಸುತ್ತವೆ.

ಆದಿಚಾರಿತ್ರಿಕ ಕಾಲದ ಗೃಹರಚನೆಯ ಬಗ್ಗೆಯೂ ಉತ್ಖನನದಿಂದ ಹೆಚ್ಚಿನ ಮಾಹಿತಿ ಲಭಿಸಿಲ್ಲ. ಅಹಿಚ್ಛತ್ರ, ರಾಜಘಾಟ್ ಮತ್ತು ಶ್ರಾವಸ್ತಿಯಲ್ಲಿ ಸುಟ್ಟ ಇಟ್ಟಿಗೆಯ ಗೃಹಾವಶೇಷಗಳು ಪ್ರ.ಶ.ಪೂ. 3–2ನೆಯ ಶತಮಾನಕ್ಕೆ ಮೊದಲು ಕಂಡುಬರುವುದಿಲ್ಲ. ಹೀಗಾಗಿ ಪ್ರ.ಶ.ಪೂ. 3ನೆಯ ಶತಮಾನದ ಪೂರ್ವದಲ್ಲಿ ಇಟ್ಟಿಗೆಯ ಬಳಕೆ ಸೀಮಿತವಾಗಿದ್ದಿರಬೇಕು. ವೈಶಾಲಿಯಲ್ಲಿ ಶುಂಗ–ಪೂರ್ವ ಅವಧಿಯಲ್ಲಿ ಏಕೈಕ ಇಟ್ಟಿಗೆಯ ಗೋಡೆಯಿದ್ದು ಶುಂಗರ ಕಾಲದಲ್ಲಿ ಇಟ್ಟಿಗೆ ಕಟ್ಟಡಗಳ ಸಮೂಹವೇ ಕಂಡುಬರುತ್ತದೆ. ಹಸ್ತಿನಾಪುರ, ಅಹಿಚ್ಛತ್ರ, ರಾಜಘಾಟ್, ತಿಲೌರಿಯಾ ಕೋಟ್, ಅತ್ರಂಜಿಖೇಡ ಮುಂತಾದ ನೆಲೆಗಳಲ್ಲಿಯೂ ಪ್ರ.ಶ.ಪೂ. 250–50ರ ಅವಧಿಯಲ್ಲಿ ಇಟ್ಟಿಗೆಯ ಅಧಿಕ ಬಳಕೆ ದಾಖಲಾಗಿದೆ. ಅನಂತರದ 2 ಶತಮಾನಗಳಲ್ಲಿ, ಅಂದರೆ ಕುಷಾಣರ ಅವಧಿಯಲ್ಲಿ ವಿಶಾಲ ಕೋಣೆಗಳಿಂದ ಕೂಡಿದ ಇಟ್ಟಿಗೆ ಕಟ್ಟಡಗಳ ಸಂಖ್ಯೆ ಅತ್ಯಧಿಕವಾಯಿತು. ಮಧ್ಯ ಗಂಗಾಬಯಲಿನಲ್ಲಿ 2 ಅಳತೆಯ ಇಟ್ಟಿಗೆಗಳು ಉಪಯೋಗಿಸಲ್ಪಡುತ್ತಿದ್ದವು. ಸಾಮಾನ್ಯವಾದುವು ಸಣ್ಣ ಅಳತೆಯ (44-45×23-24×6-7 ಸೆಂಮೀ) ಇಟ್ಟಿಗೆಗಳು; ದೊಡ್ಡ ಅಳತೆಯ ಇಟ್ಟಿಗೆಗಳು (48-50×29-31×5-7 ಸೆಂಮೀ) ಕೌಶಾಂಬಿ ಮುಂತಾದ ಕಡೆ ಅಪರೂಪವಾಗಿ ದೊರಕಿವೆ. ಮಥುರದಲ್ಲಿ ವಸತಿಯ 3ನೆಯ ಹಂತದ (ಪ್ರ.ಶ.ಪೂ.200–100) ಕೆಲವು ದೊಡ್ಡ ಮನೆಗಳ ಅಂಗಳದಲ್ಲಿ ಇಟ್ಟಿಗೆಯ ಹಾಸು ಇದ್ದುದು ವಿಶೇಷ. ಇನ್ನು ಕೆಲವು ಮನೆಗಳಲ್ಲಿ ನೆಲಕ್ಕೆ ಇಟ್ಟಿಗೆಯನ್ನು ಹಾಸಲಾಗಿತ್ತು. ಮನೆಗಳ ಛಾವಣಿಯು ಹೆಂಚಿನದಾಗಿತ್ತು. ಬಿಹಾರದ ಸಮಕಾಲೀನ ನೆಲೆಗಳಾದ ಕುಮ್ರಹಾರ, ವೈಶಾಲಿ, ಚಂಪ ಮತ್ತು ಚಿರಂಡ್‌ಗಳಲ್ಲಿಯೂ ಸಮಾನ ಬೆಳವಣಿಗೆ ದಾಖಲಾಗಿದೆ. ಇಲ್ಲಿಯ ಹೆಚ್ಚಿನ ಕಟ್ಟಡಗಳು ವಿಹಾರ ಸಂಕೀರ್ಣಗಳಾಗಿದ್ದು ಇಟ್ಟಿಗೆ ವಾಸ್ತುಶಿಲ್ಪ ಪ್ರೌಢಾವಸ್ಥೆಯನ್ನು ತಲುಪಿದುದರ ಸಂಕೇತವಾಗಿವೆ.

ನೆರೆಹೊರೆಯ ರಾಜ್ಯಗಳಲ್ಲಿರುವ ಕೆಲವು ಮುಖ್ಯ ಆದಿಚಾರಿತ್ರಿಕ ಪಟ್ಟಣಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಬಹುದು. ಭುವನೇಶ್ವರದ ಅಂಚಿನಲ್ಲಿರುವ ಶಿಶುಪಾಲಗಡದಲ್ಲಿ 1ನೆಯ ಹಂತದಲ್ಲಿ (ಪ್ರ.ಶ.ಪೂ. 300–200) ವಸತಿಗೆ ಕೋಟೆಯ ರಕ್ಷಣೆಯಿರಲಿಲ್ಲ; 2ನೆಯ ಹಂತದಲ್ಲಿ ಒಂದು ಬೃಹತ್ ಮಣ್ಣಿನ ಕೋಟೆಯನ್ನು ನಿರ್ಮಿಸಲಾಗಿ ಕೆಲ ಸಮಯದ ಅನಂತರ ಭದ್ರತೆಯ ದೃಷ್ಟಿಯಿಂದ ಇದಕ್ಕೆ ತಾಗಿ ಇಟ್ಟಿಗೆಯ ಒತ್ತುಗೋಡೆಯನ್ನು ರಚಿಸಲಾಯಿತು. ಈ ಕೋಟೆಯ ಪ್ರವೇಶದ್ವಾರದ ವಿನ್ಯಾಸ ಸವಿಸ್ತಾರವಾಗಿತ್ತು. ಚಂದ್ರಕೇತುಗಡ (24 ಪರಗಣ ಜಿಲ್ಲೆ, ಪಶ್ಚಿಮ ಬಂಗಾಲ) ಮತ್ತು ಮಂಗಲ್‌ಕೋಟ್‌ಗಳಲ್ಲೂ (ಬುರ್ದ್‌ವಾನ್ ಜಿಲ್ಲೆ) ಇದೇ ರೀತಿಯ ನಿರ್ಮಾಣ ಹಂತಗಳನ್ನು ಕಾಣಬಹುದು. ಕೋಟೆಯಿಂದಾವೃತವಾಗಿದ್ದ ಮೌರ್ಯರ ರಾಜಧಾನಿಯಾದ ಪಾಟಲಿಪುತ್ರ ಇಂದಿನ ಕುಮ್ರಹಾರ, ಬುಲಂದಿಬಾಗ್ ಮತ್ತು ಕಂಕರ್‌ಬಾಗ್ ಪ್ರದೇಶಗಳಲ್ಲಿ ವ್ಯಾಪಿಸಿತ್ತು. ಭಾರೀ ಗಾತ್ರದ ಕಟ್ಟಿಗೆಯ ಕಟಾಂಜನದ ಅವಶೇಷಗಳನ್ನು ಈ ಸ್ಥಳಗಳಲ್ಲಿ ಹೊರತೆಗೆಯಲಾಗಿದೆ. ಬುದ್ಧನ ಮರಣದ ಮುಂಚಿನ ವರ್ಷ ಈ ನಗರವನ್ನು ಕಟ್ಟಲಾಯಿತೆಂದು ಹೇಳಲಾಗುತ್ತದೆ. ಇದೊಂದು ಭವ್ಯ ನಗರವಾಗಿದ್ದುದಕ್ಕೆ ಮೆಗಾಸ್ತನೀಸನ ವರ್ಣನೆಯೇ ಸಾಕ್ಷಿ. ನಗರ ಅಸಮ ಚತುರ್ಭುಜದ ತಲವಿನ್ಯಾಸವನ್ನು ಹೊಂದಿತ್ತೆಂದೂ ಸುತ್ತಲೂ ಮರದ ತಡೆಗೋಡೆಯಿದ್ದು ಬಾಣಗಳನ್ನೆಸೆಯಲು ಗೋಡೆಯಲ್ಲಿ ಅಲ್ಲಲ್ಲಿ ರಂಧ್ರಗಳನ್ನು ಕೊರೆಯಲಾಗಿತ್ತೆಂದೂ ರಕ್ಷಣೆಗಾಗಿ ಕಂದಕವನ್ನು ಅಗೆಯಲಾಗಿತ್ತೆಂದೂ ಮೆಗಾಸ್ತನೀಸನು ತಿಳಿಸುತ್ತಾನೆ. ಕೋಟೆಗೋಡೆಗೆ ಹೊಂದಿದಂತೆ 570 ಗೋಪುರಗಳೂ 64 ಪ್ರವೇಶದ್ವಾರಗಳೂ ಇದ್ದುದಾಗಿ ಸಾಹಿತ್ಯಕ ಉಲ್ಲೇಖವಿದೆ.

ಪ್ರ.ಶ.ಪೂ. 3ನೆಯ ಶತಮಾನಕ್ಕೆ ಮುಂಚೆ ಸಾರ್ವತ್ರಿಕ ಒಳಚರಂಡಿ ವ್ಯವಸ್ಥೆಯಿದ್ದುದಕ್ಕೆ ಪುರಾತತ್ತ್ವ ಪುರಾವೆಗಳು ಇದುವರೆಗೆ ದೊರಕಿಲ್ಲ; ಆದರೆ ತಗ್ಗುಬಾವಿ ಅಥವಾ ಇಂಗುಕುಣಿಯಾಗಿದ್ದಿರಬಹುದಾದ ಸರಳ ಗುಂಡಿಗಳು ಕಂಡುಬಂದಿವೆ. ಪ್ರ.ಶ.ಪೂ. 3ನೆಯ ಶತಮಾನದ ಅನಂತರ ಉಂಗುರ ಬಾವಿಗಳು (ವ್ಯಾಸ 45–50 ಸೆಂಮೀ), ಇಂಗು ಜಾಡಿಗಳು (ಸೋಕೇಜ್ ಜಾರ್), ಸುಡಾವೆಮಣ್ಣಿನ ಚರಂಡಿ/ತೂಬುಗಳು ವಸತಿ ವ್ಯವಸ್ಥೆಯೊಳಗೆ ಅಂತರ್ಗತವಾದುದನ್ನು ಕಾಣಬಹುದು. ರೋಪರ್, ಹಸ್ತಿನಾಪುರ ಮತ್ತು ಶ್ರಾವಸ್ತಿಯಲ್ಲಿ ವಸತಿಯ ಪರಿಧಿಯ ಹೊರಗೆ ಇಂತಹ ಅವಶೇಷಗಳಿರುವುದು ಕುತೂಹಲಕಾರಿ. ಕೆಳ ಗಂಗಾಬಯಲಿನಲ್ಲಿರುವ ಮಂಗಲ್‌ಕೋಟ್‌ನಲ್ಲಿ ತಾಮ್ರ–ಶಿಲಾಯುಗದಿಂದ ಗುಪ್ತೋತ್ತರ ಕಾಲದವರೆಗಿನ ಸತತ ಸಾಂಸ್ಕೃತಿಕ ಹಂತಗಳಿದ್ದು ಆದಿಚಾರಿತ್ರಿಕ ಕಾಲದ ಅವಶೇಷಗಳು ಮಹತ್ತ್ವಪೂರ್ಣವಾಗಿವೆ. ಇಲ್ಲಿ ವಸತಿಯ 3ನೆಯ ಹಂತದಲ್ಲಿ ಔ.ಕ.ಪಾತ್ರೆಗಳು ಕಾಣಿಸಿಕೊಳ್ಳುತ್ತವೆ. 4ನೆಯ ಹಂತದಲ್ಲಿ (ಕುಷಾಣ ಅವಧಿ) ವಸತಿಯು ಸಮೃದ್ಧ ನಗರವಾಗಿ ಬೆಳೆದುದನ್ನು ಇಟ್ಟಿಗೆಯ ಕಟ್ಟಡಗಳು, ಉಂಗುರ ಹಾಗೂ ಇಟ್ಟಿಗೆಯ ಬಾವಿಗಳು, ಕಣಜಗಳು ಸೂಚಿಸುತ್ತವೆ. ಈ ಹಂತದಲ್ಲಿ ಪ್ರತಿ ಮನೆಯಲ್ಲಿಯೂ ಚರಂಡಿ ವ್ಯವಸ್ಥೆಯಿದ್ದುದು ವಿಶೇಷ.

ಮಣ್ಪಾತ್ರೆ ಹಾಗೂ ಮತ್ತಿತರ ಆಧಾರಗಳ ಮೇಲೆ ಉತ್ತರ ಭಾರತದ ಆದಿಚಾರಿತ್ರಿಕ ಕಾಲವನ್ನು 3 ಹಂತಗಳಾಗಿ ವಿಭಜಿಸಬಹುದು. ಇವು ಆದಿ ಹಂತ (ಪ್ರ.ಶ.ಪೂ. 600–300), ಮಧ್ಯಮ ಹಂತ (ಪ್ರ.ಶ.ಪೂ. 300–50) ಹಾಗೂ ಅಂತ್ಯ ಹಂತ (ಪ್ರ.ಶ.ಪೂ.50–ಪ್ರ.ಶ.300). ಆದಿ ಹಂತವನ್ನು ಪ್ರತಿನಿಧಿಸುವ ಪಾತ್ರೆಯಾದ ಔ.ಕ.ಪಾ. ವಿಶಿಷ್ಟತೆಯೆಂದರೆ ಮೆರುಗಿನ ಮೇಲ್ಮೈ. ಇದಕ್ಕೆ ಸಮಕಾಲೀನವಾದ ಪಾತ್ರೆಗಳೆಂದರೆ ಕಪ್ಪು ಲೇಪವುಳ್ಳ ಪಾತ್ರೆ, ಬೂದುಬಣ್ಣದ ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕೆಂಪು ಪಾತ್ರೆ ಮತ್ತು ಚಿತ್ರಿತ ಪಾತ್ರೆ, ತಟ್ಟೆ, ಬೋಗುಣಿ, ಉದ್ದ ಕತ್ತಿನ ಮಡಕೆಗಳು, ಸಂಗ್ರಹಣಾ ಜಾಡಿಗಳು–ಇವು ಕೆಂಪು ಪಾತ್ರೆಯಲ್ಲಿ ಕಂಡುಬರುವ ಆಕಾರಗಳು. ಕೌಶಾಂಬಿ ಮತ್ತು ಶ್ರಾವಸ್ತಿಯಲ್ಲಿ ಗೀರು ಅಲಂಕರಣೆಯಿರುವ ಆಟಿಕೆಯಂತಹ ಸಣ್ಣ ಪಾತ್ರೆಗಳೂ ದೊರೆತಿವೆ. ಮಧ್ಯಮ ಹಂತದಲ್ಲಿ ಔ.ಕ. ಪಾತ್ರೆಗಳ ಬಳಕೆ ಮುಂದುವರೆಯುತ್ತದೆ. ಆದರೆ ಈ ಪಾತ್ರೆಗಳು ಮಂದವಾಗುತ್ತವೆ. ಬೂದು ಮತ್ತು ಕೆಂಪುಪಾತ್ರೆಗಳನ್ನು ಹೊರತುಪಡಿಸಿ ಉಳಿದ ಬಗೆಗಳು ಮರೆಯಾಗುತ್ತವೆ. ಕೊನೆಯ ಹಂತದಲ್ಲಿ ಕೆಂಪು ಪಾತ್ರೆಗಳು ಮಾತ್ರ ಕಂಡುಬರುತ್ತವೆ. ಈ ಹಂತದಲ್ಲಿ ಇವು ಹೊಸ ಆಕಾರ ಅಲಂಕರಣೆಗಳನ್ನು ಪಡೆದುಕೊಳ್ಳುತ್ತವೆ. ಉದಾಹರಣೆಗೆ, ಲೋಟ, ನೀರುದಾನಿ (ಸ್ಪ್ರಿಂಕ್ಲರ್) ಹಾಗೂ ದಾನಿಗಳು. ಹಸ್ತಿನಾಪುರ, ರಾಜಘಾಟ್ ಮತ್ತಿತರ ನೆಲೆಗಳಲ್ಲಿ ಹೊಳಪಿನ ಕೆಂಪು ಪಾತ್ರೆಗಳ ಭಾಗಗಳೂ ಈ ಹಂತದಲ್ಲಿ ಸಿಕ್ಕಿವೆ. ಈ ಬಗೆಯಲ್ಲಿ ಗೀರಿನ ಅಲಂಕರಣೆಗಳೂ ತ್ರಿರತ್ನ, ನಂದಿಪಾದ, ಶ್ರೀವತ್ಸ ಮೊದಲಾದ ಚಿಹ್ನೆಗಳನ್ನು ಮುದ್ರೆಯೊತ್ತಿ ಮಾಡಿದ ಅಲಂಕರಣೆಗಳೂ ವಿಶೇಷವಾಗಿವೆ. ನಳಿಕೆಯುಳ್ಳ ಪಾತ್ರೆಗಳಲ್ಲಿ ನಳಿಕೆಯನ್ನು ಪ್ರಾಣಿಯ ಆಕಾರದಲ್ಲಿ, ವಿಶೇಷವಾಗಿ ಮೊಸಳೆಯ ಆಕಾರದಲ್ಲಿ ಮಾಡಿರುವುದು ಗಮನಾರ್ಹ.

ಬಿಹಾರ ಮತ್ತು ಅದಕ್ಕೆ ಆಗ್ನೇಯದಲ್ಲಿರುವ ರಾಜ್ಯಗಳಲ್ಲಿ ಇದಕ್ಕಿಂತ ಭಿನ್ನವಾದ ಸಾಂಸ್ಕೃತಿಕ ಪರಿಸರವಿದ್ದುದು ಪ್ರಾಚ್ಯಾವಶೇಷಗಳಿಂದ ವ್ಯಕ್ತವಾಗುತ್ತದೆ. ವೈಶಾಲಿ, ಚಂಪ, ರಾಜಗಿರ್ ಮುಂತಾದ ನೆಲೆಗಳ ಸ್ತರಾನುಕ್ರಮಣಿಕೆಯಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಅತ್ಯಂತ ಪ್ರಾಚೀನ ಸ್ಥಾನವನ್ನು ಆಕ್ರಮಿಸಿದೆ. ಇದರ ಮೇಲಿನ ಸ್ತರಗಳಲ್ಲಿ ಆದಿಚಾರಿತ್ರಿಕ ಕಾಲದ ಔ.ಕ. ಪಾತ್ರೆಯೂ ನಾಣ್ಯಗಳೂ ಇವೆ. ಔ.ಕ. ಪಾತ್ರೆಯ ಸಮಕಾಲೀನ ಪಾತ್ರೆಗಳೆಂದರೆ ಕೆಂಪುಪಾತ್ರೆ, ಬೂದುಬಣ್ಣದ ಪಾತ್ರೆ ಹಾಗೂ ಕಪ್ಪು ಲೇಪನವುಳ್ಳ ಪಾತ್ರೆಗಳು. ಔ.ಕ.ಪಾ.ದ ಪ್ರಕಾರದಲ್ಲಿ ಬಟ್ಟಲು, ಲೋಟ ಮತ್ತು ತಟ್ಟೆಗಳು ಅಧಿಕವಾಗಿವೆ. ಚಂಪದಲ್ಲಿ ಬಿಳಿ ಚಿತ್ರವುಳ್ಳ ಔ.ಕ.ಪಾ. ಕೆಲವು ಚೂರುಗಳು ಲಭ್ಯವಾಗಿವೆ. ಪ್ರ.ಶ.ಪೂ. 100ರ ಹೊತ್ತಿಗೆ ಔ.ಕ.ಪಾ. ಬಳಕೆ ಕಡಿಮೆಯಾಯಿತು.

ಆದಿಚಾರಿತ್ರಿಕ ಕಾಲದಲ್ಲಿ ಗಾಜು ಹೆಚ್ಚು ಬಳಕೆಯಲ್ಲಿತ್ತು. ಹಸ್ತಿನಾಪುರದಲ್ಲಿ ಬೂ.ಮ.ಪ. ಸಂಸ್ಕೃತಿಯ ಹಂತದಲ್ಲಿಯೇ ಗಾಜಿನ ವಸ್ತುಗಳು ಕೆಲವೊಂದಿವೆ. ಪ್ರ.ಶ.ಪೂ. 600–300ರ ಅವಧಿಯಲ್ಲಿ ಮಣಿ, ಬಳೆ, ಕೈಕಡಗ, ಪದಕ ಹೀಗೆ ಹತ್ತು ಹಲವಾರು ರೂಪಗಳನ್ನು ಗಾಜು ಪಡೆಯಿತು. ಪ್ರಸಕ್ತ ಶಕೆಯ ಆರಂಭದಿಂದ ಉಂಗುರ, ಬೆಜಲ್, ಉತ್ಕೀರ್ಣ ಮುದ್ರಿಕೆ (ಇಂಟ್ಯಾಗ್ಲಿಯೊ), ಪುಟ್ಟ ಕರಡಿಕೆ ಮುಂತಾದ ವಸ್ತುಗಳನ್ನು ಗಾಜಿನಿಂದ ತಯಾರಿಸುವ ಪರಂಪರೆ ಆರಂಭವಾಯಿತು. ನೀಲಿ, ಹಸುರು, ಹಳದಿ, ಹಸುರು ಮಿಶ್ರಿತ ನೀಲಿ ಹಾಗೂ ಕಪ್ಪು ಬಣ್ಣಗಳ ಗಾಜಿನ ವಸ್ತುಗಳು, ಮುಖ್ಯವಾಗಿ ವಿವಿಧಾಕಾರದ ಮಣಿ ಹಾಗೂ ಬಳೆಗಳು, ಅಹಿಚ್ಛತ್ರ, ಪಾಟಲಿಪುತ್ರ, ಕೋಪಿಯ, ರೋಪರ್, ರಾಜಘಾಟ್, ಸೋನ್‌ಪುರ್, ಆಲಂಗೀರ್‌ಪುರ ಮುಂತಾದ ನೆಲೆಗಳಲ್ಲಿ ಪ್ರ.ಶ.ಪೂ.500–100ರ ಅವಧಿಯ ವಸತಿ ಪದರಗಳಲ್ಲಿ ಸಿಕ್ಕಿವೆ. ಕೋಪಿಯದಲ್ಲಿ ಗಾಜಿನಮಣಿ ತಯಾರಿಕಾ ಘಟಕ ಇತ್ತೀಚೆಗೆ ಬೆಳಕಿಗೆ ಬಂದಿದೆ. ಗಾಜು ತಯಾರಿಕೆಯ ಅವಶೇಷಗಳು ಈ ನೆಲೆಯಲ್ಲಿ ಹೇರಳವಾಗಿವೆ.

ಬೂ.ಮ.ಪ. ಸಂಸ್ಕೃತಿಯೊಂದಿಗೆ ಮಧ್ಯಗಂಗಾ ಬಯಲು ಹಾಗೂ ಬಿಹಾರದಲ್ಲಿ ಪ್ರಚಲಿತಕ್ಕೆ ಬಂದ ಕಬ್ಬಿಣ ತಂತ್ರಜ್ಞಾನ ಆದಿಚಾರಿತ್ರಿಕ ಕಾಲದಲ್ಲಿ ಮತ್ತಷ್ಟು ಉತ್ಕರ್ಷಗೊಂಡಿತು. ಕೃಷಿಯ ಉಪಕರಣಗಳು (ಕೊಡಲಿ, ಬಾಚಿ, ಮಚ್ಚು), ಆಯುಧಗಳು (ಬಾಣ ಹಾಗೂ ಭರ್ಜಿಯ ಮೊನೆ, ಈಟಿ, ಅಲಗು), ಗೃಹ ಬಳಕೆಯ ವಸ್ತುಗಳು (ಮೊಳೆ, ಸರಪಳಿ, ಬಾಗಿಲಿನ ಚೌಕಟ್ಟು, ಸಟ್ಟುಗ), ಚಮ್ಮಾರ–ಕಮ್ಮಾರರ ಸಲಕರಣೆಗಳು (ಉಳಿ, ಕೊರೆಯುಳಿ) ಹಾಗೂ ಮತ್ತಿತ್ತರ ವಸ್ತುಗಳು (ಗಂಟೆ, ಕೈಕಡಗ, ಉಂಗುರ) ಕಬ್ಬಿಣದಲ್ಲಿ ತಯಾರಾದವು. ಕೌಶಾಂಬಿಯಲ್ಲಿ ಸಿಕ್ಕ ನೇಗಿಲಿನ ಕುಳವು ಮಹತ್ತ್ವದ ಅನ್ವೇಷಣೆಯಾಗಿದೆ. ತಾಮ್ರದ ಬಳಕೆಯೂ ಮುಂದುವರೆಯಿತು. ಕಾಡಿಗೆ ಕಡ್ಡಿ, ಕೈಕಡಗ, ಕಿವಿ ಓಲೆ, ಸೂಜಿ, ಪಿನ್ನು, ಪದಕ, ಬಳೆ, ಕೊಕ್ಕೆ, ಚಮಚ, ಬಟ್ಟಲು, ಮೊಳೆ, ಬಾಣದ ಮೊನೆ ಮುಂತಾದ ತಾಮ್ರದ ವಸ್ತುಗಳು ಹಲವಾರು ನೆಲೆಗಳಿಂದ ಲಭ್ಯವಾಗಿವೆ. ಹಸ್ತಿನಾಪುರದಲ್ಲಿ ಸಿಕ್ಕ ತಾಮ್ರದ ಮಚ್ಚು ಒಂದು ಅಪರೂಪದ ಉದಾಹರಣೆ. ಶ್ರಾವಸ್ತಿಯ ವಿಶಿಷ್ಟ ವಿನ್ಯಾಸದ ಬಳೆ (ಪ್ರ.ಶ.ಪೂ. 300–50) ಪರಿಣತಿಯ ಸೂಚಕವಾಗಿದೆ.

ಬಿಹಾರದ ವಸತಿನೆಲೆಗಳಲ್ಲಿ ಔ.ಕ.ಪಾ. ಜೊತೆಯಲ್ಲಿ ಬೆಳ್ಳಿ ಹಾಗೂ ತಾಮ್ರದ ಮುದ್ರಾಂಕಿತ ನಾಣ್ಯಗಳು ಕಂಡುಬರುತ್ತವೆ. ಪ್ರ.ಶ.ಪೂ. 400ರ ಹೊತ್ತಿಗೆ ಉತ್ತರ ಭಾರತದಲ್ಲಿ ನಾಣ್ಯಗಳು ಚಲಾವಣೆಯಲ್ಲಿದ್ದವು ಎಂಬುದು ನಿಸ್ಸಂದೇಹ. (ಎಂ.)

**ಆದಿ ಕಬ್ಬಿಣಯುಗ:** ಗಂಗಾನದಿ ಬಯಲಿನಲ್ಲಿ ಮಣ್ಪಾತ್ರೆಯ ಆಧಾರದ ಮೇಲೆ ಆದಿಕಬ್ಬಿಣಯುಗದ ಎರಡು ಸಂಸ್ಕೃತಿಗಳನ್ನು ಗುರುತಿಸಲಾಗಿದೆ. ಇವು ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಸಂಸ್ಕೃತಿ ಹಾಗೂ ಬೂದುಬಣ್ಣದ ಮಣ್ಪಾತ್ರೆ ಸಂಸ್ಕೃತಿ. ತಾಮ್ರ–ಶಿಲಾಯುಗದ ತರುವಾಯ ಬೆಳೆದ ಈ ಸಂಸ್ಕೃತಿಗಳು ಔತ್ತರೇಯ ಮೆರುಗಿನ ಕಪ್ಪುಬಣ್ಣದ ಪಾತ್ರೆ ಹಂತದ ಮುನ್ನ ಕ್ಷೀಣಿಸಿದವು. ಈ ಸಂಸ್ಕೃತಿಗಳಿಗೆ ಮುಂಚೆ ಇದ್ದ ಕಾವಿ ಬಣ್ಣದ ಪಾತ್ರೆ ಸಂಸ್ಕೃತಿ ಮತ್ತು ಅನಂತರ ಬಂದ ಔತ್ತರೇಯ ಮೆರುಗಿನ ಕಪ್ಪುಪಾತ್ರೆ ಸಂಸ್ಕೃತಿಗಳನ್ನು ಮೇರಠ್ ಜಿಲ್ಲೆಯ ಅಹಿಚ್ಛತ್ರದಲ್ಲಿ 1940ರ ದಶಕದಲ್ಲಿ ಶೋಧಿಸಲಾಯಿತು. ಸಿಂಧೂ ಬಯಲಿನ ನಾಗರಿಕತೆ ಮತ್ತು ಮೌರ್ಯ ಕಾಲಗಳ ನಡುವೆ ಯಾವ ಸಂಸ್ಕೃತಿಯೂ ಇರಲಿಲ್ಲವೆಂದು ಅಲ್ಲಿಯವರೆಗೆ ತಿಳಿಯಲಾಗಿತ್ತು. ಈ ಅವಧಿಯನ್ನು ಅಜ್ಞಾತಯುಗ ಎಂದೂ ಕರೆಯಲಾಗುತ್ತಿತ್ತು.

**ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಸಂಸ್ಕೃತಿ:** ಗಂಗಾನದಿಯ ಮಧ್ಯಮ ಮತ್ತು ಕೆಳ ದಂಡೆಯ ಬಯಲುಪ್ರದೇಶಗಳಲ್ಲಿ (ಉತ್ತರ ಪ್ರದೇಶದ ಪೂರ್ವ ಗಡಿಭಾಗ, ಬಿಹಾರ ಮತ್ತು ಪಶ್ಚಿಮ ಬಂಗಾಳ) ಈ ಸಂಸ್ಕೃತಿಯ ವಸತಿ ನೆಲೆಗಳು ಹರಡಿದ್ದವು. ಬಾಂಗ್ಲಾ ದೇಶದ ಬ್ರಹ್ಮಪುತ್ರ ಬಯಲಿನಲ್ಲೂ ಹಿಮಾಲಯದ ತಪ್ಪಲುಪ್ರದೇಶಗಳಲ್ಲೂ ಇಂಥ ಜನಸಮುದಾಯಗಳು ನೆಲೆಸಿದ್ದವು. ಈ ಸಂಸ್ಕೃತಿಯ ಪಶ್ಚಿಮ ಗಡಿಯಾದ ರಾಜಘಾಟ್‌ನಲ್ಲಿ (ವಾರಾಣಸಿ ಜಿಲ್ಲೆ) ಮೊದಲಬಾರಿಗೆ ಕಬ್ಬಿಣದ ವಸ್ತುಗಳು ಈ ಸಂಸ್ಕೃತಿಯ ಆದಿ ಹಂತದ ಸ್ತರಗಳಲ್ಲಿ ಕಂಡುಬಂದವು. ಪಾಂಡುರಾಜರ್ ಧೀಬಿ ಮತ್ತು ಮಹಿಸ್ದಲ್ (ಅಜಯ್ ನದಿಬಯಲು, ಪಶ್ಚಿಮ ಬಂಗಾಲ), ಚಿರಂಡ್ ಮತ್ತು ಸೋನ್‌ಪುರ್ (ಮಧ್ಯಮ ಗಂಗಾ ಬಯಲು, ಬಿಹಾರ), ವೈಶಾಲಿ, ತರದಿಹ್, ರಾಜ್‌ಗಿರ್ (ಬಿಹಾರ್), ಮಂಗಳ್‌ಕೋಟ್ ಮತ್ತು ಹತ್ತಿಗ್ರ (ಪಶ್ಚಿಮ ಬಂಗಾಲ) ಮುಖ್ಯ ವಸತಿನೆಲೆಗಳು.

ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಸಂಸ್ಕೃತಿ ಬೂದುಬಣ್ಣದ ಪಾತ್ರೆ ಸಂಸ್ಕೃತಿಗೆ ಸಮಕಾಲೀನವಾಗಿತ್ತು. ಇವೆರಡರ ವಸ್ತು ಸಂಸ್ಕೃತಿ ಹಾಗು ವಸತಿ ವಿನ್ಯಾಸದಲ್ಲಿ ಸಾಮ್ಯತೆಯಿದೆ. ಆದರೆ ಕುಂಭ ಕೈಗಾರಿಕೆಯಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಕಬ್ಬಿಣದ ಉಪಯೋಗ ಮತ್ತು ಪಾತ್ರೆ ಬಗೆಗಳನ್ನು ಹೊರತುಪಡಿಸಿದರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಸಂಸ್ಕೃತಿ ಇದರ ಪೂರ್ವದಲ್ಲಿದ್ದ ತಾಮ್ರ–ಶಿಲಾಯುಗ ಸಂಸ್ಕೃತಿಯ ಮುಂದುವರಿಕೆಯೇ ಆಗಿದೆ. ಕಬ್ಬಿಣ ತಂತ್ರಜ್ಞಾನವೂ ತಾಮ್ರ–ಶಿಲಾಯುಗದ ಕೊನೆಯಲ್ಲಿಯೇ ಬೆಳೆದುಬಂತು. ಇಂತಹ ಮಿಶ್ರ ಸಂಸ್ಕೃತಿಯನ್ನು ಕಬ್ಬಿಣ–ತಾಮ್ರ ಶಿಲಾಯುಗ ಎಂದು ಗುರುತಿಸಲಾಗಿದೆ. ಉದಾಹರಣೆಗೆ, ಮಹಿಸ್ದಲ್‌ನಲ್ಲಿ ಬಾಣದ ಮೊನೆ, ಭರ್ಜಿಯ ಮೊನೆ, ಉಳಿ, ಮೊಳೆಗಳನ್ನೊಳಗೊಂಡ ಕಬ್ಬಿಣದ ಅವಶೇಷಗಳಿರುವ ಸ್ತರದಲ್ಲೇ ಸೂಕ್ಷ್ಮಶಿಲೋಪಕರಣಗಳು ಗಣನೀಯ ಸಂಖ್ಯೆಯಲ್ಲಿವೆ. ಮಂಗಳ್‌ಕೋಟ್ ಉತ್ಖನನದಲ್ಲಿ ಇದೇ ಬಗೆಯ ಕಬ್ಬಿಣ ಉಪಕರಣಗಳು ವಸತಿಯ ಪ್ರಾರಂಭದಲ್ಲಿಯೇ ಕಂಡುಬಂದಿವೆ. ಈ ಸಂಸ್ಕೃತಿಯ ಕಬ್ಬಿಣ ಉಪಕರಣಗಳಲ್ಲಿ ಬೇಟೆ ಮತ್ತು ಯುದ್ಧದ ಆಯುಧಗಳೇ ಹೆಚ್ಚು; ಕೃಷಿ ಸಲಕರಣೆಗಳು ಕಡಿಮೆ.

ಆದಿ ಕಬ್ಬಿಣ ತಂತ್ರಜ್ಞಾನದ ಬಗೆಗೆ ಹೆಚ್ಚು ಮಾಹಿತಿಯಿಲ್ಲ. ಮಂಗಳ್‌ಕೋಟ್‌ನಲ್ಲಿ ಈ ತಂತ್ರಜ್ಞಾನದ ವಿಕಸನ ಹಂತಗಳು ದಾಖಲಾಗಿವೆ. ಇಲ್ಲಿ ಹಾಗೂ ಪಾಂಡುರಾಜರ್ ಧೀಬಿಯಲ್ಲಿ ವಸತಿಯ ಆದಿ ಹಂತಗಳಲ್ಲಿ ಕಬ್ಬಿಣ ಲೋಹವನ್ನು ಕಡಿಮೆ ತಾಪದಲ್ಲಿ ಅದಿರಿನಿಂದ ಪ್ರತ್ಯೇಕಿಸಲಾಗುತ್ತಿತ್ತು. ಹಾಗಾಗಿ ಉಪಕರಣಗಳಲ್ಲಿ ಕಿಟ್ಟದ ಅಂಶ ಅಧಿಕವಾಗಿದೆ. ಆದರೆ ಅನಂತರ ಹಂತಗಳ ಉಪಕರಣಗಳು ತಾಂತ್ರಿಕ ನಿಪುಣತೆಯನ್ನು ತೋರುತ್ತವೆ. ಪಾಂಡುರಾಜರ್ ಧೀಬಿಯಲ್ಲಿ ಸಿಕ್ಕಿರುವ ಕಬ್ಬಿಣದ ಪುಟ್ಟ ತಟ್ಟೆಯ ವೈಜ್ಞಾನಿಕ ಅಧ್ಯಯನದಿಂದ ಲೋಹಕ್ಕೆ ಅಧಿಕ ಇಂಗಾಲ ಕಣಗಳನ್ನು ಸೇರಿಸುತ್ತಿರಲಿಲ್ಲವೆಂಬುದು ತಿಳಿಯುತ್ತದೆ. ಆದರೆ ಜಮ್‌ಷೆಡ್‌ಪುರದ ಬಳಿಯಿರುವ ಬರುಡಿ (ಪ್ರ.ಶ.ಪೂ.800) ಮತ್ತು ಬೀರ್‌ಭುಮ್ ಜಿಲ್ಲೆಯ ಹತ್ತಿಗ್ರದಲ್ಲಿ ದೊರೆತ ಕಬ್ಬಿಣ ವಸ್ತುಗಳು ಮೆದು ಉಕ್ಕಿನಿಂದ ತಯಾರಾದುವಾಗಿವೆ. ಒಟ್ಟಿನಲ್ಲಿ, ತಂತ್ರಜ್ಞಾನದಲ್ಲಿ ಪ್ರಗತಿಯಾಗುತ್ತಿದ್ದಂತೆ ಉಪಕರಣಗಳ ವೈವಿಧ್ಯತೆ ಮತ್ತು ಪ್ರಮಾಣ ಹೆಚ್ಚಾದವು.

ಗಂಗಾನದಿಯ ಮಧ್ಯಮ ಪಾತ್ರದ ಪ್ರದೇಶದಲ್ಲಿರುವ ರಾಜಾ ನಲ್–ಕ–ಟೀಲ ಮತ್ತು ಮಲ್ಹರ್‌ನಲ್ಲಿ (ಮಿರ್ಜಾಪುರ ಜಿಲ್ಲೆ, ಉತ್ತರ ಪ್ರದೇಶ) ಇತ್ತೀಚೆಗೆ ದೊರಕಿರುವ ಕಬ್ಬಿಣ ಉಪಕರಣಗಳು ಪ್ರ.ಶ.ಪೂ. 1600/1400 ರಿಂದ 1000 ವರ್ಷಗಳಷ್ಟು ಪ್ರಾಚೀನವಾಗಿರುವುದು ಅತಿ ವಿಶೇಷ. ಏಕೆಂದರೆ ಭಾರತದಲ್ಲಿ ಕಬ್ಬಿಣ ತಯಾರಿಕೆ–ಬಳಕೆಯು ಪ್ರ.ಶ.ಪೂ. 1000–1200ರ ಹೊತ್ತಿಗೆ ಶುರುವಾಗಿದ್ದಿರಬೇಕೆಂದು ಈವರೆಗೆ ತಿಳಿಯಲಾಗಿತ್ತು. ಪಾಂಡುರಾಜರ್ ಧಿಬಿಯಲ್ಲಿ ಆದಿ ಕಬ್ಬಿಣ ಹಂತಕ್ಕೆ ಎರಡು ಇಂಗಾಲ–14ರ ಕಾಲಮಾನಗಳಿವೆ – ಪ್ರ.ಶ.ಪೂ. 1050–950 ಮತ್ತು ಪ್ರ.ಶ.ಪೂ.930. ಮಹಿಸ್ದಲ್‌ನಲ್ಲಿ ಕಬ್ಬಿಣ ಬಳಕೆಯ ಪ್ರ.ಶ.ಪೂ. 750–700ರ (ಇಂಗಾಲ 14ರ ಕಾಲಮಾನ) ಸಮಯದಲ್ಲಿ ಪ್ರಾರಂಭವಾಯಿತು. ಒಟ್ಟಾರೆ ಪ್ರ.ಶ.ಪೂ. 1000ದ ಹೊತ್ತಿಗೆ ಕಬ್ಬಿಣದ ಉಪಯೋಗ ಪೂರ್ಣಪ್ರಮಾಣದಲ್ಲಿ ಆಗುತ್ತಿದ್ದುದು ಈ ಕಾಲಮಾನಗಳಿಂದ ನಿಸ್ಸಂದೇಹವಾಗುತ್ತದೆ.

**ಬೂದು ಬಣ್ಣದ ಮಣ್ಪಾತ್ರೆ ಸಂಸ್ಕೃತಿ (ಬೂಮಪಾ):** ಸಿಂಧೂ–ಗಂಗಾ ದೋಆಬ್ ಮತ್ತು ಗಂಗಾನದಿಯ ಮೇಲ್ಬಯಲಿನಲ್ಲಿ ಪ್ರ.ಶ.ಪೂ.1ನೆಯ ಸಹಸ್ರವರ್ಷದ ಮೊದಲರ್ಧದ ವಸತಿ ನೆಲೆಗಳಲ್ಲಿ ಬೂದುಬಣ್ಣದ ಮಣ್ಪಾತ್ರೆ ಕಂಡುಬರುವ ಜೊತೆಗೆ ಕಬ್ಬಿಣದ ಬಳಕೆ ಆರಂಭವಾಯಿತು. ಕಬ್ಬಿಣ ತಂತ್ರಜ್ಞಾನ ಉಪಖಂಡದ ಎಲ್ಲ ಭಾಗಗಳಲ್ಲಿ ಸುಮಾರು ಒಂದೇ ಸಮಯಕ್ಕೆ ಅಭಿವೃದ್ಧಿ ಹೊಂದಿತೆಂಬುದನ್ನು ಇಲ್ಲಿ ಗಮನಿಸಬೇಕು. ಉತ್ತರ ಭಾರತದ ಹೆಚ್ಚಿನ ಭಾಗಗಳಲ್ಲಿ ಬೂಮಪಾ ಸಂಸ್ಕೃತಿ ಕಬ್ಬಿಣಯುಗದ ಆರಂಭಕ್ಕೆ ನಾಂದಿ ಹಾಡಿದೆ. ಇದಕ್ಕೆ ಈ ಹೆಸರು ಬರಲು ಕಾರಣ ಅತ್ಯಂತ ವಿಶಿಷ್ಟವಾದ ವರ್ಣಚಿತ್ರಿತ ಬೂದು ಬಣ್ಣದ ಕುಂಭ ಕೈಗಾರಿಕೆ. ಬೂಮಪಾ ಸಂಸ್ಕೃತಿಯ ವ್ಯಾಪ್ತಿ ವಿಶಾಲವಾಗಿತ್ತು. ಪಶ್ಚಿಮದಲ್ಲಿ ಚೋಲಿಸ್ತಾನ

ದಿಂದ ಪೂರ್ವದಲ್ಲಿ ಬಿಹಾರದವರೆಗೆ ಮತ್ತು ಮಧ್ಯಭಾರತದವರೆಗೆ ಇದು ಹರಡಿತ್ತು. ಪೂರ್ವದಲ್ಲಿರುವ ಅಲಹಾಬಾದಿನ ತ್ರಿವೇಣಿ ಸಂಗಮದಿಂದಾಚೆ ಬೂಮಪಾ ಸಂಸ್ಕೃತಿ ಕಂಡುಬರುವುದಿಲ್ಲ. ಈ ಪ್ರದೇಶದಿಂದಾಚೆಗೆ ಪ್ರ.ಶ.ಪೂ. 1000–600ರ ಅವಧಿಯಲ್ಲಿ ಕಪ್ಪು-ಕೆಂಪು ದ್ವಿವರ್ಣ ಪಾತ್ರೆ, ಸಾದಾ ಬೂದುಬಣ್ಣದ ಪಾತ್ರೆ ಮತ್ತು ಕಪ್ಪು ಲೇಪವುಳ್ಳ ಪಾತ್ರೆಗಳ ಸಮುಚ್ಚಯವಿರುವ ಸಂಸ್ಕೃತಿಯಿತ್ತು.

ಸಿಂಧೂ–ಗಂಗಾ ದೋಆಬ್ ಮತ್ತು ಗಂಗಾ ಮೇಲ್ಬಯಲು ಈ ಸಂಸ್ಕೃತಿಯ ಪ್ರಧಾನ ಪ್ರದೇಶವಾಗಿದೆ. 1940–90ರ ವರೆಗೆ 700 ಕ್ಕೂ ಹೆಚ್ಚು ವಸತಿಗಳನ್ನು ಮೇಲ್ಬಯಲಿನಿಂದ ವರದಿ ಮಾಡಲಾಗಿದ್ದರೆ ಪಂಜಾಬ್ ಮತ್ತು ಹರಿಯಾಣ ಪ್ರದೇಶದಲ್ಲಿ 50 ವಸತಿಗಳನ್ನು ಶೋಧಿಸಲಾಯಿತು. ಇವುಗಳಲ್ಲಿ ಹೆಚ್ಚಿನ ವಸತಿಗಳು ನದಿ ದಂಡೆಯ ಮೇಲಿವೆ. ಕೆಲವೇ ಕೆಲವು ಒಳಪ್ರದೇಶದಲ್ಲಿವೆ. ಗಡವಾಲಿನಲ್ಲಿ ಹಿಮಾಲಯದ ತಪ್ಪಲಿನಲ್ಲಿರುವ ಒಂದೇ ಒಂದು ವಸತಿಯನ್ನು ಬಿಟ್ಟರೆ ಬೆಟ್ಟಗುಡ್ಡ ಪ್ರದೇಶದಲ್ಲಿ ಯಾವ ವಸತಿಗಳೂ ಇಲ್ಲ.

ಪ್ರಮುಖ ಬೂಮಪಾ ನೆಲೆಗಳೆಂದರೆ–ಅಹಿಚ್ಛತ್ರ, ಆಲಂಗೀರ್‌ಪುರ, ಅಲ್ಲಾಪುರ, ಖಲಾಉವಾ, ಮಥುರ, ಸರಸ್ವತಿ, ನೋಹ್, ಕಂಪಿಲ್, ಜಖೇರ, ಅತ್ರಂಜಿಖೇಡ, ಹಸ್ತಿನಾಪುರ ಮತ್ತು ಡಪ್ಲಿ ಸಿಂಧು–ಗಂಗ ದೋಆಬ್‌ನಲ್ಲಿ ನಗರೀಕರಣಕ್ಕೆ ಈ ಸಂಸ್ಕೃತಿ ಕಾರಣವಾಯಿತು.

ಜೀವನಶೈಲಿ: ಬೇಸಾಯ ಮತ್ತು ಪಶುಸಾಕಣೆಯನ್ನು ಆಧರಿಸಿದ ಗ್ರಾಮೀಣ ಸಂಸ್ಕೃತಿ ಇದಾಗಿತ್ತು. ವಸತಿ ನೆಲೆಗಳು ಸಾಮಾನ್ಯವಾಗಿ ಸು.5–6 ಹೆ. ವಿಸ್ತೀರ್ಣದವು. ಬೂಮಪಾದ ವಸ್ತು ಸಂಸ್ಕೃತಿಯಲ್ಲಿ ನಗರೀಕರಣದ ಕುರುಹುಗಳು ಕಂಡುಬಂದಿಲ್ಲ. ಹಸ್ತಿನಾಪುರದ ಮಣ್ಣಿನ ಮೋಟು ಗೋಡೆಯನ್ನು ನಗರಪೂರ್ವ ಸ್ಥಿತಿಯ ಸೂಚಕವಾಗಿ ಕಾಣಲಾಗಿದೆ. ತಡಿಕೆ ಮನೆಗಳಲ್ಲಿ ಜನ ವಾಸಿಸುತ್ತಿದ್ದರು. ಕೆಲವೆಡೆ ಮಣ್ಣಿನ ಇಟ್ಟಿಗೆಗಳೂ ದೊರೆತಿವೆ. ಭಟ್ಟಿಯಲ್ಲಿ ಸುಟ್ಟ ಇಟ್ಟಿಗೆಗಳ ಚೂರುಗಳು ಮಾತ್ರ ಕೆಲವು ನೆಲೆಗಳಲ್ಲಿ ದೊರೆತಿರುವುದರಿಂದ ಇವುಗಳ ಗಾತ್ರ ಗೊತ್ತಾಗುವುದಿಲ್ಲ. ಮನೆಗಳಲ್ಲಿ ಒಂದು ಅಥವಾ ಎರಡು ಕೋಣೆಗಳಿರುತ್ತಿದ್ದವು; ಹುಲ್ಲಿನ ಮಾಡು ಇರುತ್ತಿತ್ತು. ಚಾವಣಿಯಿಂದ ತ್ರಿಕೋನಾಕಾರದ ಇಳಿಜಾರು ಗೋಡೆ ಇರುತ್ತಿತ್ತು; ನೆಲವನ್ನು ಮಣ್ಣಿನಿಂದ ಮಾಡಲಾಗುತ್ತಿತ್ತು. ಮೊಟ್ಟೆಯಾಕಾರದ ಮತ್ತು ಗುಂಡಾದ ಒಲೆಗುಂಡಿಗಳು ಕಂಡುಬಂದಿವೆ.

ಬೂಮಪಾ ಜನರು ಬತ್ತವನ್ನು ಪ್ರಧಾನವಾಗಿ ಬೆಳೆಯುತ್ತಿದ್ದರು. ಜೊತೆಗೆ ಗೋದಿ, ಜವೆ ಹಾಗೂ ದ್ವಿದಳಧಾನ್ಯಗಳು ಕಂಡುಬರುತ್ತವೆ. ವರ್ಷಕ್ಕೆ ಎರಡು ಬೆಳೆ ತೆಗೆಯಲಾಗುತ್ತಿತ್ತು. ಕುದುರೆ, ದನಕರು, ಎಮ್ಮೆ, ಕುರಿ, ಮೇಕೆ, ಹಂದಿ ಮತ್ತು ನಾಯಿಗಳ ಮೂಳೆಗಳು ಇವರ ನೆಲೆಗಳಲ್ಲಿ ಕಂಡುಬಂದಿವೆ. ಅವುಗಳ ಮೇಲೆ ಹರಿತವಾದ ಆಯುಧಗಳಿಂದ ಮೂಡಿದ ಗುರುತುಗಳಿರುವುದರಿಂದ ಮತ್ತು ಅವು ಸುಟ್ಟು ಕರಕಲಾಗಿರುವುದರಿಂದ ಅವನ್ನು ಮಾಂಸಕ್ಕಾಗಿ ಸಾಕುತ್ತಿದ್ದಿರಬೇಕು. ಸಸ್ಯಾಹಾರದ ಜೊತೆಗೆ ಮಾಂಸಾಹಾರವನ್ನೂ ಸೇವಿಸುತ್ತಿದ್ದರೆಂದು ಇದರಿಂದ ತಿಳಿಯಬಹುದು. ಜೊತೆಗೆ ಮಳಿಮೀನು, ನದಿಯಾಮೆ, ಉಡ, ಕೋಳಿಗಳನ್ನು ಬಳಸುತ್ತಿದ್ದರು. ಬೂಮಪಾ ಜನರಿಗೂ ಕುದುರೆಗೂ ಇದ್ದ ಸಂಬಂಧದಿಂದ ಅವರು ರಥ ವನ್ನು ಬಳಸುತ್ತಿದ್ದರೆಂದು ಬಿ.ಕೆ. ಥಾಪರ್ ಸುಳಿವು ನೀಡುತ್ತಾರೆ. ಅತ್ರಂಜಿಖೇಡದಲ್ಲಿ ದೊರೆತ ಪಾತ್ರೆಚೂರಿನ ಮೇಲೆ ಮೂಡಿರುವ ಬಟ್ಟೆಯ ಗುರುತು ಅವರ ಉಡುಪಿನ ಬಗ್ಗೆ ಹೇಳುತ್ತದೆ. ಕಡವೆ, ನೀಲಗಾಯ್, ಚಿರತೆಯಂತಹ ಕಾಡುಪ್ರಾಣಿಗಳ ಮೂಳೆಗಳು ದೊರೆತಿರುವುದರಿಂದ ಅವರು ಬೇಟೆಯಾಡುತ್ತಿದ್ದರು ಎಂದು ಕಾಣುತ್ತದೆ.

ಗಂಗಾ ಮೇಲ್ಬಯಲಿನ ಅಭಯಪುರ ಮತ್ತು ಅಲ್ಲಾಪುರಗಳ ವಸತಿಗಳಲ್ಲಿ ಮೂಳೆ ಉಪಕರಣ ತಯಾರಿಕೆಯ ಅವಶೇಷಗಳು ಕಂಡುಬಂದಿವೆ. ಕೂದಲಿಗೆ ಸಿಗಿಸುವ ಪಿನ್ನುಗಳಿಂದ ಹಿಡಿದು ಬೇಟೆಯ ಉಪಕರಣಗಳವರೆಗೆ ವಿವಿಧ ಮೂಳೆಯ ವಸ್ತುಗಳು ದೊರೆತಿವೆ. ತಯಾರಾದ ಉಪಕರಣಗಳನ್ನು ಮರಳುಗಲ್ಲಿನಿಂದ ಉಜ್ಜಿ ಹೊಳಪು ಕೊಡುತ್ತಿದ್ದುದು, ಗಟ್ಟಿಗೊಳಿಸಲು ಬೆಂಕಿಯಲ್ಲಿ ಕಾಯಿಸುತ್ತಿದ್ದುದು ಕಂಡುಬರುತ್ತದೆ. ಬಾಣದ ಮೊನೆ, ಈಟಿಯ ಮೊನೆಗಳನ್ನು ಈ ತಂತ್ರದಿಂದ ತಯಾರಿಸುತ್ತಿದ್ದರು. ಹಲವು ಉಪಕರಣಗಳನ್ನು ಜಿಂಕೆ ಕೊಂಬಿನಿಂದ ತಯಾರಿಸಿರುವುದನ್ನು ಗಮನಿಸಬಹುದು.

ಅಲಂಕಾರಕ್ಕೆ ಬಳಸುತ್ತಿದ್ದ ವಸ್ತುಗಳಲ್ಲಿ ತಾಮ್ರ, ಗಾಜು ಮತ್ತು ಸುಟ್ಟಮಣ್ಣಿನ ಬಳೆಗಳ ಜೊತೆಗೆ ಗಾಜು, ಮೂಳೆ, ಅರೆಪ್ರಶಸ್ತ ಶಿಲೆಗಳಿಂದ ಮಾಡಿದ ಮಣಿಗಳು ಮುಖ್ಯವಾದವು. ಕಿವಿಯೋಲೆ, ಸರಗಳನ್ನು ಹೆಂಗಸರು ತೊಡುತ್ತಿದ್ದರು. ಸುಟ್ಟಮಣ್ಣಿನ ದೊಡ್ಡ ದೊಡ್ಡ ಮಣಿಗಳನ್ನು ದನಕರುಗಳ ಅಲಂಕಾರಕ್ಕೆ ಬಳಸುತ್ತಿದ್ದರು. ಅತ್ರಂಜಿಖೇಡದಲ್ಲಿ ದೊರೆತ ಸುಟ್ಟಮಣ್ಣಿನ ಮಣಿಗಳ ಸರ ಗಮನಾರ್ಹ.

ಮನುಷ್ಯ ಹಾಗೂ ಪ್ರಾಣಿಗಳ ಸುಡಾವೆ ಮಣ್ಣಿನ ಆಕೃತಿ, ಸುಟ್ಟ ಮಣ್ಣಿನ ಹಣತೆ/ ದೀಪಗಳು, ಒಂದು ಚಕ್ರವುಳ್ಳ ಸುಟ್ಟ ಮಣ್ಣಿನ ಆಟದ ಸಾಮಾನುಗಳು, ದಂತ, ಮೂಳೆ, ಕಪ್ಪೆಚಿಪ್ಪಿನಿಂದ ತಯಾರಿಸಿದ ಅನೇಕ ವಸ್ತುಗಳು, ಮನರಂಜನಾ ಚಟುವಟಿಕೆಗಳ ಬಗ್ಗೆ ಸುಳಿವು ನೀಡುತ್ತವೆ. ಇವುಗಳ ಜೊತೆ ಪಗಡೆಕಾಯಿಗಳೂ ದಾಳಗಳೂ ಸಿಕ್ಕಿವೆ. ದಾಳಗಳನ್ನು ಮೂಳೆಯಿಂದ ಮಾಡಲಾಗಿದೆ. ನಾಲ್ಕು ಮುಖಗಳ ಮೇಲೆ 1, 2, 3, 4 ರ ಗುರುತುಗಳಿದ್ದ ದಾಳಗಳು ನೋಹ್ ಮತ್ತು ಆಲಂಗೀರ್‌ಪುರಗಳಲ್ಲಿ ಸಿಕ್ಕಿವೆ. ಪಿಟೀಲಿನಂತಹ ದೇಹವಿರುವ ಹೆಣ್ಣಿನ ಆಕೃತಿಗಳು ವಿಶಿಷ್ಟವಾದವು.

ತಂತ್ರಜ್ಞಾನ ಮತ್ತು ಕಬ್ಬಿಣದ ತಯಾರಿಕೆ ಪುರಾವೆಗಳು: ಬೂಮಪಾ ಅವಧಿಯಲ್ಲಿ ಪಾಂಚಾಲ ಪ್ರದೇಶ ಕಬ್ಬಿಣದ ತವರಾಗಿತ್ತೆಂದು ಊಹಿಸಲಾಗಿದೆ. ಅತ್ರಂಜಿಖೇಡ, ಜಖೇರ, ಅಹಿಚ್ಛತ್ರ ಮತ್ತು ಕಂಪಿಲಗಳು ಸಮೃದ್ಧ ಕಬ್ಬಿಣ ಅದಿರು ಹೊಂದಿದ ಆಗ್ರಾ–ಗ್ವಾಲಿಯರ್ ನಿಕ್ಷೇಪದ ಪ್ರದೇಶದಲ್ಲೇ ಇವೆ. ಮೊದಲೆರಡು ವಸತಿಗಳಲ್ಲಿ ಕಬ್ಬಿಣದ ಅದಿರಿನ ಕುಲುಮೆಗಳು ಆಲಂಕಾರಿಕವಾದ ಉಪಕರಣಗಳ ಜೊತೆಗೆ ಸಿಕ್ಕಿವೆ. ಅತ್ರಂಜಿಖೇಡದಲ್ಲಿ ಕುಲುಮೆ, ತಿದಿಯನ್ನು ಹೊಂದಿದ ಕಮ್ಮಾರಸಾಲೆಯ ಕುರುಹುಗಳಿವೆ. ಇಲ್ಲಿ ಕಬ್ಬಿಣದ ಇಕ್ಕಳ ಹಾಗೂ ಇತರ ಉಪಕರಣಗಳೂ ಸಿಕ್ಕಿವೆ.

ಆದಿ ಕಬ್ಬಿಣಯುಗ ತಂತ್ರಜ್ಞಾನದ ಬೆಳವಣಿಗೆಗೆ ಬೂಮಪಾ ಸಂಸ್ಕೃತಿಯ ಮಧ್ಯ ಹಾಗೂ ಅಂತ್ಯ ಹಂತಗಳಲ್ಲಿ ದೊರೆತಿರುವ ಹಲವು ಕಬ್ಬಿಣದ ಉಪಕರಣಗಳು ನಿದರ್ಶನವಾಗಿವೆ. ಇವುಗಳಲ್ಲಿ ಬಾಣದ ಮೊನೆ, ಈಟಿಯ ಮೊನೆ, ಕುಡುಗೋಲು, ಮೊಳೆ, ಕೇಶಸೂಜಿ, ಕೊಕ್ಕೆ, ಚಾಕು, ಉಳಿ ಇತ್ಯಾದಿಗಳಿವೆ. ಈ ಅವಧಿಯಲ್ಲಿ ತಾಮ್ರದ ಬಳಕೆ ಕಡಿಮೆಯಾಯಿತು. ಸಲಾಕೆ, ಉಗುರು ತೆಗೆಯುವ ಸಾಧನ, ಕೇಶಸೂಜಿ, ಬಳೆ, ಗಾಳದ ಕೊಕ್ಕೆ ಹಾಗೂ ಪಾತ್ರೆ ಗಳಲ್ಲಿ ಮಾತ್ರ ತಾಮ್ರವನ್ನು ಬಳಸಲಾಗುತ್ತಿತ್ತು.

ಕಬ್ಬಿಣದ ವಸ್ತುಗಳ ಅಧ್ಯಯನದಿಂದ ಪದರ ತಂತ್ರ ಬೂಮಪಾ ಕಾಲದಿಂದ ಬಳಕೆ ಯಲ್ಲಿತ್ತೆಂದು ಡಿ.ಪಿ. ಅಗ್ರವಾಲ್ ತಿಳಿಸುತ್ತಾರೆ. ಈ ತಂತ್ರದಲ್ಲಿ ಇಂಗಾಲ ಸಹಿತ ಮತ್ತು ಇಂಗಾಲರಹಿತ ಕಬ್ಬಿಣವನ್ನು ಒಂದರನಂತರ ಒಂದು ಪದರಗಳಲ್ಲಿ ಇಟ್ಟು ತಟ್ಟಿ ಬೆಸೆಯ ಲಾಗುತ್ತದೆ. ಆದರೆ ಗಟ್ಟಿಗೊಳಿಸುವ ಅಥವಾ ಹದಮಾಡುವ ಪ್ರಕ್ರಿಯೆಗೆ ಪುರಾವೆಗಳು ಸಿಕ್ಕಿಲ್ಲ. ಈ ತಂತ್ರ ಮೌರ್ಯರ ಕಾಲದವರೆಗೂ ಮುಂದುವರೆದುಕೊಂಡು ಬಂದಿತು. ಜಜಮಾನ್ ಎಂಬ ಸ್ಥಳದಲ್ಲಿ ದೊರೆತ ಪ್ರಶ.ಪೂ.ಸು.600–300 ಕ್ಕೆ ಸೇರಿದ ಕೊಡಲಿ ಇದಕ್ಕೆ ಉದಾಹರಣೆ ಯಾಗಿದೆ. ಅತ್ರಂಜಿಖೇಡದಲ್ಲಿ ಬೂಮಪಾ ಅವಧಿಗೆ ಸೇರುವ ನಾಲ್ಕು ಕಬ್ಬಿಣದ ವಸ್ತುಗಳಲ್ಲಿ ಮೂರರ ಮೇಲ್ಮೈಯಲ್ಲಿ ಇಂಗಾಲೀಕರಣದ ಲಕ್ಷಣಗಳಿವೆ. ನಾಲ್ಕನೆಯದು ಮೆದು ಕಬ್ಬಿಣವಾಗಿದೆ. ಮುಂಚಿನ ಕಮ್ಮಾರರಿಗೆ ಕಬ್ಬಿಣದ ಗುಣಗಳು ತಿಳಿದಿದ್ದವು. ಹೆಚ್ಚಿನ ಅಥವಾ ಕಡಿಮೆ ಇಂಗಾಲವುಳ್ಳ ಕಬ್ಬಿಣದ ಹಾಳೆಗಳನ್ನು ತಮಗೆ ಬೇಕಾದ ರೀತಿಯಲ್ಲಿ ಅವರು ಬಳಸಿಕೊಳ್ಳುತ್ತಿದ್ದರೆಂದು ಡಿ.ಪಿ.ಅಗ್ರವಾಲ್ ಹೇಳುತ್ತಾರೆ.

ಬೂದುಬಣ್ಣದ ಮಣ್ಣಿನ ಪಾತ್ರೆ: ಬೂಮಪಾ ಉತ್ಕೃಷ್ಟ ಗುಣಮಟ್ಟದ ಪಾತ್ರೆ. ಗಂಗಾ ಬಯಲಿನ ನುಣುಪಾದ ಮಣ್ಣಿನಿಂದ ಇದನ್ನು ಮಾಡಲಾಗುತ್ತಿತ್ತು. ಪಾತ್ರೆಗಳನ್ನು ಚೆನ್ನಾಗಿ ಸುಡಲಾಗಿದೆ. ನಾಜೂಕಾದ ಈ ಪಾತ್ರೆಗಳು ಒಡೆಯದಂತೆ ಅವನ್ನು ಆವಿಗೆಯೊಳಗೆ ಜೇಡಿ ಮಣ್ಣಿನ ದೊಡ್ಡ ಪಾತ್ರೆಯೊಳಗಿಟ್ಟು ಹನ್ನೆರಡು ಗಂಟೆಗಳ ಕಾಲ ಸು. $800^0$ ಸೆಂಟಿಗ್ರೇಡ್ ಉಷ್ಣಾಂಶದಲ್ಲಿ ಸುಟ್ಟಿರಬೇಕು. ದಿನನಿತ್ಯದ ಬಳಕೆಯ ಪಾತ್ರೆಗಳಲ್ಲಿ ತಟ್ಟೆ, ಬಟ್ಟಲುಗಳು, ಲೋಟಗಳು, ಒಳಮುಖವಾಗಿ ಬಾಗಿರುವ ಬದಿಯಿರುವ ಪಾತ್ರೆಗಳು, ಬೋಗುಣಿಗಳು, ದಾನಿಗಳು, ತಂಬಿಗೆಯಂತಹ ದಾನಿಗಳು, ಮೂತಿಯಿರುವ ಪಾತ್ರೆಗಳಿವೆ. ಅಪರೂಪದ ಆಕಾರವೆಂದರೆ, ಕಾಲಿರುವ ಪಾತ್ರೆ ಮತ್ತು ಹಿಡಿಕೆಯಿರುವ ಹೂಜಿ. ಈ ಕುಂಭಕಲೆಯ ಪರಂಪರೆಯಲ್ಲಿ ವರ್ಣಚಿತ್ರ ಬಿಡಿಸುವುದು ಒಂದು ವೈಶಿಷ್ಟ್ಯ. ಚಿತ್ರಗಳು ನೇರ ಗೆರೆ, ಅಲೆಯಂತಹ ಗೆರೆ ಮತ್ತು ಚುಕ್ಕೆ ಚುಕ್ಕೆ ವಿನ್ಯಾಸಗಳಲ್ಲಿವೆ. ಹೂವಿನ ಚಿತ್ರಗಳೂ ಸ್ವಸ್ತಿಕ ವಿನ್ಯಾಸವೂ ಸಾಮಾನ್ಯವಾಗಿವೆ. ಬೂದುಬಣ್ಣದ ಮೈಮೇಲೆ ಕಪ್ಪುಬಣ್ಣದಿಂದ ಈ ಚಿತ್ರಗಳನ್ನು ಬಿಡಿಸಿದ್ದಾರೆ. ಕೆಲವೊಮ್ಮೆ ಕಡು ಕಂದು, ಬಿಳಿ ಮತ್ತು ಕೆಂಪುಬಣ್ಣವನ್ನೂ ಬಳಸಲಾಗಿದೆ.

ಈ ಸಂಸ್ಕೃತಿಯ ಇತರ ಬಗೆಯ ಪಾತ್ರೆಗಳೆಂದರೆ ಸಾದಾ ಬೂದು ಪಾತ್ರೆ, ಕಪ್ಪು ಲೇಪನವುಳ್ಳ ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಲೇಪನವುಳ್ಳ ಹಾಗೂ ಲೇಪನವಿಲ್ಲದಿರುವ ಕೆಂಪು ಪಾತ್ರೆಗಳು.

ಶವಸಂಸ್ಕಾರ ಪದ್ಧತಿ: ಅಭಯಪುರದಲ್ಲಿ (ಪಿಲಿಭಿಟ್ ಜಿಲ್ಲೆ, ಉತ್ತರ ಪ್ರದೇಶ) ಇತ್ತೀಚಿಗೆ ನಡೆದ ಉತ್ಖನನದಲ್ಲಿ ಎರಡು ಮಾನವ ಸಮಾಧಿಗಳು ದೊರೆತಿವೆ. ಒಂದು ಸು. 50–60 ವರ್ಷ ವಯಸ್ಸಿನ ಗಂಡಸಿನದು; ಇನ್ನೊಂದು ಮಗುವಿನದು. ಮೊದಲನೆಯದರಲ್ಲಿ ಶವವನ್ನು ಈಶಾನ್ಯ–ನೈರುತ್ಯ ದಿಕ್ಕಿಗೆ ಅಂಗಾತ ಮಲಗಿಸಲಾಗಿದೆ. ಮನೆಯ ನೆಲದಲ್ಲೇ ಆಳವಿಲ್ಲದ ಗುಂಡಿ ತೋಡಿ ಹೂಳಲಾಗಿದೆ. ಒಳಮುಖವಾಗಿ ಬಾಗಿರುವ ಬದಿಯ ಬೂಮಪಾ ಬಟ್ಟಲು ಈ ಸಮಾಧಿಯಲ್ಲಿದೆ. ಮಗುವಿನ ತಲೆ ಉತ್ತರಕ್ಕೆ, ಕಾಲು ದಕ್ಷಿಣಕ್ಕೆ ಬರುವಂತೆ ಬಲಮಗ್ಗುಲಿನ ಮೇಲೆ ಮಲಗಿಸಿ ಹೂಳಲಾಗಿದೆ. ಈ ಸಮಾಧಿಯಲ್ಲಿ ದೊರೆತಿರುವುದು ಉದ್ದದ ಮೂಳೆಗಳು, ತಲೆಬುರುಡೆ ಹಾಗೂ ಎದೆಗೂಡಿನ ಮೂಳೆಯ ಚೂರುಗಳು. ಶವವನ್ನು ಸುಡುವುದಲ್ಲದೆ, ವಿಧ್ಯುಕ್ತವಾಗಿ ಹೂಳುವ ವಾಡಿಕೆಯೂ ಇತ್ತೆಂದು ಇದರಿಂದ ತಿಳಿದುಬರುತ್ತದೆ.

ವಯಸ್ಕನ ಅಸ್ಥಿಪಂಜರದ ಸೂಕ್ಷ್ಮ ರೋಗಶಾಸ್ತ್ರ ವಿಶ್ಲೇಷಣೆ ಮಾಡಿದಾಗ ಅಂಗರಚನೆಯ ವಿಚಿತ್ರ ಲಕ್ಷಣಗಳು ಕಂಡುಬಂದವು. ತಲೆಬುರುಡೆಯ ಹಣೆಭಾಗದ ಸಂಧಿ ಹಿಂಭಾಗದಲ್ಲಿತ್ತು; ದೊಡ್ಡ ಗಾತ್ರದ ವರ್ಮಿಯನ್ ಮೂಳೆಗಳು ಲ್ಯಾಮ್ಡಾದ ಬಳಿ ಇದ್ದವು; ಎರಡು ಮಾದರಿಗಳಲ್ಲಿ ಮುಖ್ಯ ನರದ ಬಳ್ಳಿ ತೆರೆದಿತ್ತು. ವಯಸ್ಸಾಗಿ ಬರುವ ರೋಗ ಹಾಗೂ ಇತರ ಮುಖ್ಯ ರೋಗಗಳೆಂದರೆ ತೊಡೆಯ ಮೂಳೆಯ ಮೇಲೆ ಕ್ಯಾನ್ಸರಿನಂಥ ಬೆಳವಣಿಗೆ, ತೊಡೆಯ ಮೂಳೆ ಸರಿದಿರುವುದು ಅಥವಾ ಮುರಿದಿರುವುದು, ಹಾಗೂ ಹುಳುಕು ಹಲ್ಲು ಮತ್ತು ಹಲ್ಲಿನ ಕಿಟ್ಟ.

ಕಾಲಮಾನ: ಗಂಗಾ–ಯಮುನಾ ಮೇಲ್ಬಯಲಿನ ಬೂಮಪಾ ಸಂಸ್ಕೃತಿಯ ಕಾಲ ಪ್ರ.ಶ.ಪೂ. 1100–700 ಎಂದು ಇಂಗಾಲ–14ರ ತಂತ್ರದಿಂದ ನಿಶ್ಚಯಿಸಲಾಗಿದೆ.

ಪರಿಸರ: ಬೂಮಪಾ ಸಂಸ್ಕೃತಿ ಪ್ರ.ಶ.ಪೂ.1000 ಅಥವಾ ಅದಕ್ಕಿಂತ ಸ್ವಲ್ಪ ಮುಂಚೆ ಸಿಂಧೂ–ಗಂಗಾ ಮಧ್ಯಭೂಮಿಯಲ್ಲಿರುವ ಸರಸ್ವತಿ–ದೃಶದ್ವತಿ ಕಣಿವೆಯಲ್ಲಿ ಆರಂಭವಾಗಿ, ಗಂಗಾ–ಯಮುನಾ ಬಯಲಿಗೆ ಸಾಗಿ, ಅನಂತರ ಪ್ರ.ಶ.ಪೂ.ಸು.600 ರಲ್ಲಿ ಗಂಗಾ ಕೆಳಬಯಲಿಗೆ ಬಂದಿರಬಹುದೆಂದು ಎಂ.ಕೆ. ಧವಳೀಕರ್ ಊಹಿಸುತ್ತಾರೆ.

ಬೂಮಪಾ ಜನರು: 1950ರ ದಶಕದಲ್ಲಿ ನಡೆದ ಸಂಶೋಧನೆಗಳಿಂದ ಬೂಮಪಾ ಜನರು ಮಹಾಭಾರತದಲ್ಲಿ ವರ್ಣಿಸಿದ ಜನರಿರಬಹುದು ಎಂದೂ ಅವರು ಬ್ರಾಹ್ಮಣಗಳ ಮತ್ತು ಉಪನಿಷತ್ತಿನ ಕಾಲದ ವೈದಿಕ ಗ್ರಂಥಗಳಲ್ಲಿ ಉಕ್ತವಾದವರೆಂದೂ ಊಹಿಸಲಾಗಿತ್ತು. ಬಿ.ಬಿ. ಲಾಲ್ ಈ ಅಭಿಪ್ರಾಯವನ್ನು ಮಂಡಿಸಿ ಗಂಗಾಬಯಲಿನಲ್ಲಿ ವ್ಯಾಪಕ ಶೋಧನೆ ನಡೆಸಿದರು. ಬೂಮಪಾ ಕುಂಬಾರಿಕೆ ಋಗ್ವೇದ ಕಾಲದ ಇಂಡೊ–ಆರ್ಯನ್ ಭಾಷೆಯಾಡುವ ಜನರಿಗೆ ಸೇರಿದ್ದೆಂದು ಅಲ್ಚಿನ್ನರೂ ಹೇಳುತ್ತಾರೆ. ಈ ಹೇಳಿಕೆಗಳಿಗೆ ಖಚಿತ ಆಧಾರಗಳಿಲ್ಲ.

(ಪಿ.ಎಸ್.ಜಿ.)

**ಆದಿಚನ್ನಲೂರು:** ತಮಿಳುನಾಡು ರಾಜ್ಯದ ತುತುಕುಡಿ ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗದ ನೆಲೆ. ತಾಮ್ರಪರ್ಣಿ ನದಿಯ ಬಲದಂಡೆಯ ಮೇಲಿರುವ ಈ ಗೋರಿನೆಲೆ ಜರ್ಮನಿಯ ಜಾಗೋರ್‌ನಿಂದ 1876 ರಲ್ಲಿ ಬೆಳಕಿಗೆ ಬಂದಿತು. ಪುರಾತತ್ತ್ವ ಸರ್ವೇಕ್ಷಣ ಸಂಸ್ಥೆಯ ದಕ್ಷಿಣ ವಲಯದ ಮುಖ್ಯಸ್ಥನಾಗಿದ್ದ ಅಲೆಗ್ಸಾಂಡರ್‌ರೀ 1903–04ರಲ್ಲಿ ಈ ಪ್ರದೇಶದಲ್ಲಿ ವಿಸ್ತೃತ ಶೋಧನೆ ಹಾಗೂ ಆದಿಚನ್ನಲೂರಿನಲ್ಲಿ ಉತ್ಖನನ ನಡೆಸಿದ.

ಈ ನೆಲೆಯಲ್ಲಿ ಗೋರಿಗಳು ಸು.25 ಹೆಕ್ಟೇರಿನಷ್ಟು ಪ್ರದೇಶದಲ್ಲಿ ಹರಡಿವೆ. ಇದು ಜರಗು ನೆಲವಾಗಿದ್ದು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಭೂಮಿಯ ಮೇಲ್ಪದರದ ಕೆಳಗೆ ಜಲ್ಲಿಕಲ್ಲಿನ ಪದರವಿದೆ. ಇದರ ಕೆಳಗಿರುವ ಸವಕಲಾದ ಬೆಣಚುಕಲ್ಲಿನ ಹಾಸಿನಲ್ಲಿ ಗುಂಡಿಗಳನ್ನು ತೋಡಿ ಅಸ್ಥಿಮಡಕೆಗಳನ್ನು ಹೂಳಲಾಗಿದೆ. ಗುಂಡಿಗಳು ಭೂಮಟ್ಟದಿಂದ 2–3 ಮೀ ಆಳದಲ್ಲಿದೆ. ಕೆಲವೊಂದು ಗುಂಡಿಗಳಲ್ಲಿ ಒಂದರ ಮೇಲೊಂದು ಅಸ್ಥಿಮಡಕೆಗಳು ಇದ್ದುವು. ಅರ್ಧ ಗೋಲಾಕಾರದ ಮುಚ್ಚಳದಿಂದ ಅಸ್ಥಿಮಡಕೆಗಳನ್ನು ಮುಚ್ಚಲಾಗಿದೆ. ಮಡಕೆಗಳ ಒಳಗೆ ಮಣ್ಣನ್ನು ತುಂಬದೆ ಗುಂಡಿಗಳನ್ನು ಮಾತ್ರ ಮಣ್ಣಿನಿಂದ ತುಂಬಲಾಗಿತ್ತು. ಪೂರ್ಣ ಸಮಾಧಿಗಳು ವಿರಳವೆಂದೇ ಹೇಳಬಹುದು. ಕೆಲವೊಂದು ಆಯ್ದ ಅಸ್ಥಿಗಳನ್ನು ಮಾತ್ರ ಇಟ್ಟಿರುವ ಪ್ರಾತಿನಿಧಿಕ ಅಸ್ಥಿಮಡಕೆಗಳು ಅಧಿಕವಾಗಿವೆ. ಅಸ್ಥಿ ಅವಶೇಷಗಳಿಲ್ಲದ, ಬರಿಯ ಕಾಣಿಕೆಗಳನ್ನೊಳಗೊಂಡ ಕೆಲವು ಮಡಕೆಗಳೂ ಇವೆ. ಕೆಲವು ಮಡಕೆಗಳಲ್ಲಿ ಬೂದಿ ಇದ್ದ ಕುರುಹುಗಳಿದ್ದವು. ಸಮಾಧಿ ಕಾಣಿಕೆಗಳನ್ನು ಅಸ್ಥಿಮಡಕೆಯ ಒಳಗೂ ಹೊರಗೂ ಇಡಲಾಗಿದೆ. ಉತ್ಖನನದಿಂದ ಹೊರತೆಗೆದ ಅಸ್ಥಿಮಡಕೆಗಳ ಸಂಖ್ಯೆ ತಿಳಿದಿಲ್ಲ.

ಅಸ್ಥಿ ಮಡಕೆಗಳು ದೊರಕು ಮಣ್ಣಿನಿಂದ ಮಾಡಿದ ಮಂದ ಕೆಂಪುಬಣ್ಣದ ಜಾಡಿಗಳು, ಅಂಡ ಗೋಲಾಕಾರದಲ್ಲಿರುವ ಈ ಮಡಕೆಗಳಿಗೆ ಬುಡದಲ್ಲಿ ಗೂಟದಂತಿರುವ ಚಾಚು ಇದೆ. ಬಾಯಿಯ ಅಂಚನ್ನು ದುಂಡಗಿನ ದಪ್ಪ ಬಳೆಯಂತೆ ಮಾಡಲಾಗಿದೆ. ಇವು 70 ಸೆಂಮೀ–1 ಮೀ ಎತ್ತರವಿದ್ದು, ಬಾಯಿಯ ವ್ಯಾಸ 1 ಮೀ ಇದೆ. ಕೆಲವೊಂದರ ಹೊರಮೈ ಮೇಲೆ ಬೆರಳಿನಿಂದ ಗೀರು ಮಾಡಿದ ತ್ರಿಕೋನ ಚಿಹ್ನೆಗಳ ಸಾಲುಗಳಿವೆ. ಕೆಲವೊಂದು ಮಡಕೆಗಳ ಒಳಭಾಗದಲ್ಲಿ ಕೊಕ್ಕೆಗಳಿವೆ. ಮಡಕೆಯೊಳಗೆ ಯಾವುದಾದರೂ ವಸ್ತುವನ್ನು ನೇತುಹಾಕಲು ಇವನ್ನು ಮಾಡಿದ್ದಿರಬೇಕು.



ಕಬ್ಬಿಣದ ಕೃಷಿ ಉಪಕರಣ

ಮಡಕೆಗಳೊಳಗೆ ಮತ್ತು ಅಪರೂಪವಾಗಿ ಹೊರಗೆ ಇಡಲಾಗಿದ್ದ ಕಬ್ಬಿಣದ ವಸ್ತುಗಳಲ್ಲಿ ಹಲವಾರು ಬಗೆಯ ಆಯುಧಗಳು, ಸಲಕರಣೆಗಳು ಹಾಗೂ ದೀಪಗಳು, ಚಪ್ಪಟೆಯಾದ ಉಳಿ, ತ್ರಿಶೂಲಾಕಾರದ ಭರ್ಜಿ, ಎರಡೂ ಬದಿ ಧಾರೆಯಿರುವ ಕತ್ತಿ, ಅರ್ಧ ಚಂದ್ರಾಕಾರದ ಕತ್ತಿ, ವಿವಿಧ ಬಗೆಯ ಈಟಿಗಳು, ಮುಳ್ಳಿರುವ ಈಟಿ, ಸಣ್ಣ ಕಠಾರಿ, ಚೂರಿ, ಬಾಣದ ಮೊನೆ, ಭರ್ಜಿಯ ಮೊನೆ, ಚಪ್ಪಟೆ ಕೊಡಲಿ, ಸನಿಕೆ, ಮೊಳೆ, ಹಣತೆ, ಪದಕಗಳು, ಗಂಟೆ, ಬಳೆ, ಸಣ್ಣ ಕೊಳವೆಯಾಕಾರದ ಸಣ್ಣ ಡಬ್ಬಿ ಮುಂತಾದವು ಇದ್ದವು.

ಕಂಚಿನ ವೈವಿಧ್ಯ ವಸ್ತುಗಳಲ್ಲಿ ಸರಳವಾದ ಬಟ್ಟಲು, ಜರಡಿಯಂತಹ ಬಟ್ಟಲು, ಸಮತಲದ ತಟ್ಟೆ, ಹೊರಮೈ ಮೇಲೆ ಅಡ್ಡ–ಉದ್ದ ಗೆರೆಗಳಿಂದ ಅಲಂಕೃತವಾದ ಬಟ್ಟಲು, ಪುಟ್ಟ ಜಾಡಿ, ಸಮಾನಾಂತರ ವೃತ್ತಗಳ ವಿನ್ಯಾಸವಿರುವ ವೃತ್ತಾಕಾರದ ಹಲಗೆ, ಸಿಂಬಿ, ದೊಡ್ಡ ಮಡಕೆಗಳ ಕತ್ತಿನ ಭಾಗ, ಕಿರಿದಾದ ಕುತ್ತಿಗೆಯ ಮಡಕೆ, ನಾಲ್ಕು ದಿಕ್ಕಿಗೆ ಮುಖ ಮಾಡಿ ನಿಂತ, ಸುರುಳಿಯಾದ ಕೊಂಬುಗಳಿರುವ ಪುಟ್ಟ ಟಗರುಗಳ ಮೂರ್ತಿಗಳನ್ನು ಬೆಸೆದ ತಟ್ಟೆ, ವಿವಿಧ ನಮೂನೆಯ ಸುಂದರ ಹಿಡಿಕೆಗಳು, ಜಿಂಕೆ, ಹುಂಜ, ಡೊಂಕು ಬಾಲದ ನಾಯಿ, ಉದ್ದ ಸುರುಳಿ ಕೊಂಬಿನ ಎಮ್ಮೆ ಮುಂತಾದವುಗಳ ಚಿಕ್ಕ–ಚಿಕ್ಕ ಮೂರ್ತಿಗಳು, ಗೆಜ್ಜೆ, ಬಳೆ, ಕಂಠಾಭರಣ ಹೀಗೆ ಅನೇಕ ಕಲಾತ್ಮಕ ವಸ್ತುಗಳಿವೆ. ಸು 20 ಚಿನ್ನದ ಮುಕುಟ ಅಥವಾ ಶಿರೋಮಾಲೆ ಇಲ್ಲಿಯ ಗೋರಿಗಳಿಂದ ಲಭಿಸಿರುವುದು ಗಮನಾರ್ಹ. ಹೆಚ್ಚಿನವು ಅಂಡಾಕಾರ ದಲ್ಲಿದ್ದು ಮೇಲ್ಮೈಯಲ್ಲಿ ಚುಕ್ಕೆಯ ವಿನ್ಯಾಸಗಳಿವೆ. ತಾಮ್ರದ ಇಂತಹ ವಸ್ತುಗಳು ಸಹ ದೊರೆತಿವೆ.



ಐದುಬಾಯಿ ಮಣ್ಣಿನ ಜಾಡಿ

ಕಾಣಿಕೆಯಾಗಿ ಆಕರ್ಷಿಸುವ ಮಣ್ಣಿನ ಪಾತ್ರೆಗಳಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಅಧಿಕ ಸಂಖ್ಯೆಯಲ್ಲಿವೆ. ಉಳಿದವು ಕಪ್ಪು ಬಣ್ಣದ ಮುಚ್ಚಳ ಮತ್ತು ಸಿಂಬಿಗಳು. ಇಲ್ಲಿ ಸಿಕ್ಕ ಪಾತ್ರೆಗಳಲ್ಲಿ ಶೇ.25ಕ್ಕೆ ಬೇರೆಡೆಗಳಲ್ಲಿಯವುಗಳಿಗೆ ಹೋಲಿಕೆಯಿಲ್ಲ. ಶೇ.30 ರಷ್ಟು ಮಣ್ಣಿನ ಪಾತ್ರೆಗಳು ಅತಿ ಅಪರೂಪದ ನಮೂನೆಗಳಾಗಿವೆ. v ಆಕಾರದ ಬಟ್ಟಲುಗಳು ಅಪರೂಪದ ಬಗೆಗಳಲ್ಲೊಂದು. ಉಳಿದ ಪಾತ್ರೆಗಳು (ಶೇ. 45) ಸಾಮಾನ್ಯ ಆಕಾರದವು. ಪುಟ್ಟ ಬಟ್ಟಲು, ಗೋಲ ಬಟ್ಟಲು, ಪುಟ್ಟ ಜಾಡಿ, ಅಲಂಕೃತ ಮುಚ್ಚಳಗಳು, ಉದ್ದ ಕತ್ತಿನ ಗೋಲಮೈಯ ಮಡಕೆ ಮುಂತಾದವು. ಸುಡಾವೆ ಮಣ್ಣಿನ ಕಿವಿಯ ಓಲೆಗಳು, ತಾಳಿಯಂತಹ ವಸ್ತುಗಳು, ಗೋಲ ಮಣಿಗಳು, ಕ್ವಾರ್ಟ್ಸೈಟ್ ಕಲ್ಲಿನ ರುಬ್ಬುಗುಂಡುಗಳು ಇಲ್ಲಿ ದೊರೆತ ಇತರ ವಸ್ತುಗಳಾಗಿವೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಟಿ.ಸತ್ಯಮೂರ್ತಿ ನಿರ್ದೇಶನದಲ್ಲಿ ಈ ಗೋರಿಗಳಲ್ಲಿ ಮತ್ತೆ ಉತ್ಖನನ ನಡೆಸಿತು (2004–05). ಆದಿಚನ್ನಲೂರು–ಕಲವೋಯ್ ರಸ್ತೆಗೆ ತಾಗಿರುವ ದಿಬ್ಬದ ಪಶ್ಚಿಮ ಇಳಿಜಾರಿನಲ್ಲಿ 60×60 ಮೀ ಪ್ರದೇಶದಲ್ಲಿ ಉತ್ಖನನ ನಡೆಸಿ ಮೂರು ಭಿನ್ನ ಸ್ತರಗಳಲ್ಲಿದ್ದ 165 ಅಸ್ಥಿ ಮಡಕೆಗಳನ್ನು ಹೊರತೆಗೆಯಲಾಯಿತು. ಸ್ತರದ ಆಧಾರದ ಮೇಲೆ ಇವನ್ನು ಮೂರು ಹಂತಗಳಾಗಿ ವಿಂಗಡಿಸಲಾಯಿತು. ಎಲ್ಲಕ್ಕಿಂತ ಪ್ರಾಚೀನವಾದ 1ನೆಯ ಹಂತದಲ್ಲಿ ಶೇ.70 ರಷ್ಟು ಅಸ್ಥಿಮಡಕೆಗಳಿದ್ದರೆ, ಮಧ್ಯದ 2ನೆಯ ಹಂತದಲ್ಲಿ ಶೇ. 25 ಹಾಗೂ 3ನೆಯ ಹಂತದಲ್ಲಿ ಶೇ.5 ರಷ್ಟು ಪ್ರಮಾಣದಲ್ಲಿ ಕಂಡುಬಂದವು.

ಮೊದಲನೆಯ ಹಂತದ ಅಸ್ಥಿಮಡಕೆಗಳು ಎಲ್ಲಕ್ಕಿಂತ ಪುರಾತನವಾದವು. ಇವನ್ನು ಇಳಿಜಾರಾಗಿರುವ ಜಂಬುಕಲ್ಲಿನ ಹಾಸಿನ ಮೇಲೆ ಅಥವಾ ಈ ಹಾಸಿನೊಳಗೆ ಅಗೆದ ಗುಂಡಿಯಲ್ಲಿ ಇಡಲಾಗಿದೆ. ಎಲ್ಲವೂ ಮಂದಗತಿಯ ತಿಗರಿಯ ಮೇಲೆ ಮಾಡಿದ, ಹೆಚ್ಚು–ಕಡಿಮೆ ಒಂದೇ ಗಾತ್ರದ ಕೆಂಪು ಮಡಕೆಗಳು. ಇವನ್ನು ಒಂದು ಅಥವಾ ವಿಶೇಷವಾಗಿ ಎರಡು ದೊಡ್ಡ ಗಾತ್ರದ ಮುಚ್ಚಳಗಳಿಂದ ಮುಚ್ಚಲಾಗಿದೆ. ಹೆಚ್ಚಿನ ಮಡಕೆಗಳೊಳಗೆ ಪೂರ್ಣ ಅಸ್ಥಿಪಂಜರಗಳಿವೆ. ಶವದ ಕೈಕಾಲುಗಳನ್ನು ಮಡಚಿ ಮಡಕೆಯೊಳಗೆ ಇಡಲಾಗಿದೆ. ಅಸ್ಥಿ ಅವಶೇಷಗಳೊಂದಿಗೆ ಕಬ್ಬಿಣದ ವಸ್ತುಗಳೂ ಇವೆ. ಜೈವಿಕ ವಸ್ತುವಿನಿಂದ ಮಾಡಿದಂತಹ ಮಣಿಗಳೂ ಕೆಲವೊಂದರಲ್ಲಿದ್ದುದು ವಿಶೇಷವಾಗಿದೆ. ಕೆಲವು ಮಡಕೆಗಳ ಒಳಭುಜದ ಮೇಲೆ ಕೊಕ್ಕೆಗಳಿವೆ. ಎರಡನೆಯ ಹಂತದ ವಿಶೇಷವೇನೆಂದರೆ ಇದಕ್ಕೆ ಸೇರುವ ಅಸ್ಥಿಮಡಕೆಗಳು ಕಪ್ಪು–ಕೆಂಪು ದ್ವಿವರ್ಣ ಪ್ರಕಾರದವು. ಈ ಪ್ರಕಾರದ ಮಡಕೆಗಳು ಬೇರೆಡೆಗಳಲ್ಲಿ ಅಸ್ಥಿಪಾತ್ರೆಗಳಾಗಿ ಬಳಕೆಯಾಗಿಲ್ಲ. ಅವರ ಉತ್ಖನನದಲ್ಲೂ ಇಂತಹ ಅಸ್ಥಿಮಡಕೆಗಳು ಸಿಕ್ಕಿರಲಿಲ್ಲ. ಮಂದಗತಿಯ ತಿಗರಿಯ ಮೇಲೆ ಮಾಡಿದ ತೆಳುವಾದ ಮಡಕೆಗಳು ಇವಾಗಿವೆ. ಶೇ. 90 ರಷ್ಟು ಮಡಕೆಗಳು ಪ್ರಾತಿನಿಧಿಕ (ಅಪೂರ್ಣ) ಸಮಾಧಿಗಳು; ಅಸ್ಥಿ ಅವಶೇಷಗಳಲ್ಲಿ ಹಲ್ಲುಗಳು ಹೆಚ್ಚಾಗಿ ಸಂರಕ್ಷಿತವಾಗಿವೆ. ಈ ಹಂತದ ಉಳಿದ ಅಸ್ಥಿ ಮಡಕೆಗಳು ನಯವಾದ ಮಣ್ಣಿನದಾಗಿದ್ದು ಇವುಗಳ ಬಣ್ಣ ಕೆಂಪು. ಈ ಹಂತದಿಂದ ಅತ್ಯಧಿಕ ಕಬ್ಬಿಣದ ಮತ್ತು ತಾಮ್ರದ ವಸ್ತುಗಳು ದೊರಕಿದವು. ಮೂರನೆಯ ಹಂತದಲ್ಲಿ ಕೆಲವೇ ಕೆಲವು ಒಡೆದುಹೋದ ಅಸ್ಥಿಮಡಕೆಗಳಿದ್ದವು. ಇವು ಸಹ ಪ್ರಾತಿನಿಧಿಕ ಸಮಾಧಿಗಳು. ಇವು ನೆರೆಯ ಕಾರಣದಿಂದ ಅಸ್ತವ್ಯಸ್ತವಾಗಿವೆ.

ಒಂದನೆಯ ಮತ್ತು ಎರಡನೆಯ ಹಂತದಲ್ಲಿ ಒಂದೊಂದು ಜೋಡಿ ಸಮಾಧಿಗಳಿದ್ದವು. ಒಂದರಲ್ಲಿ ಸ್ತ್ರೀ ಮತ್ತು ಪುರುಷರ ಅಸ್ಥಿಪಂಜರಗಳಿದ್ದು ಇವು ದಂಪತಿಗಳದ್ದಾಗಿರಬಹುದು, ಕೆಲವೊಂದು ಗುಂಡಿಗಳಲ್ಲಿ ಒಂದಕ್ಕಿಂತ ಹೆಚ್ಚು ಅಸ್ಥಿಮಡಕೆಗಳು ತೋರಿಬಂದವು. ಇಂತಹ ಗುಂಡಿಗಳನ್ನು ಬಹುಕಾಲ ಉಪಯೋಗಿಸಿರುವರೆಂದು ಕಾಣುತ್ತದೆ.

ಅಸ್ಥಿಮಡಕೆಗಳೊಳಗೆ ಸಾದಾಕೆಂಪು, ಹೊಳೆಯುವ ಕೆಂಪು, ಕಪ್ಪು–ಕೆಂಪು ದ್ವಿವರ್ಣ, ಬಿಳಿ ಚಿತ್ರಿತ ಕಪ್ಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪ್ರಕಾರಗಳ ಮಣ್ಪಾತ್ರೆಗಳಿವೆ. ಸಣ್ಣ ಮಡಕೆ ಹಾಗೂ ಮುಚ್ಚಳಗಳ ಮೇಲೆ ಬಿಳಿಬಣ್ಣದಲ್ಲಿ ವಿವಿಧ ವಿನ್ಯಾಸಗಳ ಚುಕ್ಕಿ ಚಿತ್ರಿಸಲಾಗಿದೆ. ಈ ವಿಧದ ಅಲಂಕರಣ ಹಳ್ಳೂರು, ಕೊಮಾರನಹಳ್ಳಿ, ಹೆಗ್ಗಡೆಹಳ್ಳಿ (ಕರ್ನಾಟಕ), ಪರುಂಬೈರ್, ತಿರುಕಲ್ಲುಪಟ್ಟಿ (ತಮಿಳುನಾಡು) ನೆಲೆಗಳ ಪಾತ್ರೆಗಳಲ್ಲಿರುವುದನ್ನು ನೆನಪಿಸಿ ಕೊಳ್ಳಬಹುದು. ಈ ಪಾತ್ರೆಗಳೊಂದಿಗೆ ಇಟ್ಟಿದ್ದ ಕಬ್ಬಿಣದ ಉಪಕರಣಗಳೆಂದರೆ ಬಾಣ–ಭರ್ಜಿಯ ಮೊನೆ, ಕೊಡಲಿ ಮತ್ತು ಉಳಿಗಳು. ಅವರ ಉತ್ಖನನದಲ್ಲಿ ಸಿಕ್ಕ ಪ್ರಮಾಣದಲ್ಲಿ ತಾಮ್ರದ ಹಾಗೂ ಇತರ ವಿವಿಧ ಪ್ರಶಸ್ತ ವಸ್ತುಗಳು ಇಲ್ಲಿ ಸಿಗಲಿಲ್ಲ. ಒಂದು ಸಮಾಧಿಯಲ್ಲಿ ತಾಮ್ರದ ಉಂಗುರಗಳು ಕಂಡು ಬಂದವು. ಹೊಟ್ಟು, ಕರಕಲಾದ ಬತ್ತ ಮುಂತಾದ ಸಸ್ಯಾವಶೇಷಗಳು, 1 ಮತ್ತು 2ನೆಯ ಹಂತದ ಕೆಲವು ಮಡಕೆಗಳಲ್ಲಿದ್ದವು.

ಅರ್ಧಗೋಲಾಕಾರದ ಮುಚ್ಚಳವೊಂದರ ಹೊರಭಾಗದ ಮೇಲೆ ಕುತೂಹಲಕಾರಿಯಾದ ಒಂದು ಗೀರುಚಿತ್ರವಿದೆ. ಇದು ಯಾವುದೋ ಘಟನೆಯನ್ನು ನಿರೂಪಿಸುವಂತಿದೆ. ಚಿತ್ರದ ಮಧ್ಯದಲ್ಲಿ ಅಗಲ ಮುಖದ, ಸಣ್ಣ ನಡುವಿನ, ತುಂಬಿದೆದೆಯ, ಎರಡೂ ಕೈಗಳನ್ನು ಚಾಚಿರುವ ಸ್ತ್ರೀಯ ಚಿತ್ರವಿದೆ. ಕೈಯಲ್ಲಿ ಅಂಡಾಕಾರದ ಯಾವುದೋ ವಸ್ತುವಿದೆ. ಈ ಚಿತ್ರದ ಎಡ ಭಾಗದಲ್ಲಿ ಜಿಂಕೆಯೂ ಅದರ ಕೆಳಗೆ ಮೊಸಳೆಯೂ ಇವೆ. ಬಲ ಭಾಗದಲ್ಲಿ ಗಿಡದ ಟೊಂಗೆ ಹೋಲುವ ಚಿತ್ರವಿದೆ. ಈ ಗಿಡದ ಮೇಲೆ ಕೊಕ್ಕರೆಯೊಂದು ಕೂತಿದೆ.

ಈ ಜನ ಮಧ್ಯಮ ಕಾಯದವರೂ ದೃಢ ಮೈಕಟ್ಟಿನವರೂ ಆಗಿದ್ದರೆಂಬುದು ಅಸ್ಥಿ ಪಂಜರಗಳ ವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ಇವರ ಹಲ್ಲುಗಳು ಅಷ್ಟೇನೂ ಸವೆದಿಲ್ಲದಿರುವುದರಿಂದ ಇವರು ಅರೆದು ಬೇಯಿಸಿದ ಸಸ್ಯಾಹಾರವನ್ನು ಸೇವಿಸುತ್ತಿದ್ದಿರಬಹುದು. ಇವರಲ್ಲಿ ಕೆಲವರು ಶೀತ ಸಂಬಂಧಿ ಖಾಯಿಲೆಗಳಿಂದ ಬಳಲುತ್ತಿದ್ದರು.ಈ ಸ್ಥಳ ಪ್ರಶ.ಪೂ. 1750–500 ರವರೆಗೆ ಸ್ಮಶಾನ ಭೂಮಿಯಾಗಿತ್ತು ಎಂಬುದು ಓ.ಎಸ್.ಎಲ್.ಕಾಲನಿರ್ಣಯ ತಂತ್ರದಿಂದ ನಿಗದಿಯಾಗಿದೆ. ಈ ನೆಲೆಯ ಸಮೀಪ ಸಮಕಾಲೀನ ಜನವಸತಿಯ ಕುರುಹುಗಳಿದ್ದವು. ಇಲ್ಲಿಯ ಉತ್ಖನನದಲ್ಲಿ ಪ್ರಾಯಶಃ ವಸತಿ ಸುತ್ತಲೂ ಇದ್ದ ಪೌಳಿಗೋಡೆಯ ಅವಶೇಷಗಳಿದ್ದುದು ಗಮನಾರ್ಹ. (ಟಿ.ಎಸ್.)

**ಆದಿಮಾನವ ಕಲೆ:** ಮಾನವ ತನ್ನ ದೈಹಿಕ ಮತ್ತು ಮಾನಸಿಕ ವಿಕಸನದ ಹಾದಿಯಲ್ಲಿ ನೆಟ್ಟಗೆ ನಡೆಯುವುದನ್ನು ಮತ್ತು ಕಲ್ಲಿನ ಆಯುಧಗಳನ್ನು ಮಾಡುವುದನ್ನು ಕಲಿತುಕೊಂಡಮೇಲೆ, ಕ್ರಮೇಣ ಸುಂದರ ರಚನೆಗಳನ್ನೂ ಮಾಡಲು ಆರಂಭಿಸಿದ. ತಾನು ಮಾಡುತ್ತಿರುವುದು ಕಲೆ ಎಂಬ ಸ್ಪಷ್ಟೋದ್ದೇಶ ಅವನಿಗೆ ಇತ್ತೆಂದು ಹೇಳಲಿಕ್ಕೆ ಬಾರದಾದರೂ ತಾನು ಮಾಡಿರುವ ಪ್ರತಿಯೊಂದು ಕೆಲಸದಲ್ಲೂ ಉಪಯೋಗಿಸುತ್ತಿದ್ದ ಪ್ರತಿಯೊಂದು ಪದಾರ್ಥ ಅಥವಾ ಸಾಧನದಲ್ಲೂ ತಾಂತ್ರಿಕ ನೈಪುಣ್ಯ, ನಯ, ನಾಜೂಕುಗಳನ್ನು ತರಲು ಪ್ರಯತ್ನಿಸಿದನೆಂಬುದು ನಿಜ. ಇವನ ಹೃದಯಾಂತರಾಳದಲ್ಲಿದ್ದ ಕಲಾಭಿರುಚಿ, ಕಲಾ ಮನೋಧರ್ಮ ಕ್ರಮೇಣ ಅವನ ಜೀವನದೊಂದಿಗೇ ಬೆಳೆದು ಬಂದಿತೆಂದು ಹೇಳಬಹುದು. ಅನೇಕಾನೇಕ ಉತ್ಖನನಗಳಿಂದ ದೊರಕಿರುವ ಅವಶೇಷಗಳಲ್ಲಿ ಅವನ ಕಲಾತ್ಮಕ ಕೃತಿಗಳಲ್ಲೂ ವಿವಿಧ ಹಂತಗಳನ್ನು ಕಾಣಬಹುದು. ಪ್ರಾರಂಭದಲ್ಲಿ ಅವನ ಕಲೆ ಉಪಯೋಗ ನಿಷ್ಠವಾಗಿದ್ದಿರಬೇಕು. ಏಕೆಂದರೆ ಜೀವನ ನಿರ್ವಹಣೆ ಮಾನವನ ಪ್ರಥಮೋದ್ದೇಶ. ಅನಂತರ ಕಲಾತ್ಮಕ ಜೀವನದ ಮಾತು ಬರುತ್ತದೆ.

ಆದಿಮಾನವನ ಕಲೆಯನ್ನು ಇತಿಹಾಸಪೂರ್ವ ಕಲೆ ಇಲ್ಲವೆ ಪ್ರಾಗೈತಿಹಾಸಿಕ ಕಲೆ ಎಂದೂ ಕರೆಯುವುದುಂಟು. ಇದನ್ನು ಬೇಟೆಗಾರರ ಕಲೆ, ಆಹಾರೋತ್ಪಾದಕರ ಕಲೆ, ಲೋಹಗಾರರ ಕಲೆ ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಮೊಟ್ಟಮೊದಲು ಮಾನವ ಮುಖ್ಯವಾಗಿ ಬೇಟೆಗಾರನಾಗಿದ್ದುದರಿಂದ ಇವನ ಕಲೆಯಲ್ಲಿ ಬೇಟೆಯ ಚಿತ್ರಗಳನ್ನು ವಿಶೇಷವಾಗಿ ಕಾಣಬಹುದು. ಈ ಚಿತ್ರಗಳು ಸಾಮಾನ್ಯವಾಗಿ ಹಳೆಯ ಶಿಲಾಯುಗದ ಅಂತ್ಯಭಾಗದಲ್ಲಿ ನಿರ್ಮಿತವಾದುವು. ಈ ಅಂತ್ಯ ಹಳೆ ಶಿಲಾಯುಗದ ಈ ಕಲೆಯಲ್ಲಿ ರೇಖಾಚಿತ್ರ, ಪ್ರಾಣಿ–ಮನುಷ್ಯ ವರ್ಣಚಿತ್ರ ಮತ್ತು ಶಿಲ್ಪಗಳನ್ನು ನೋಡಬಹುದು. ಯುರೋಪಿನ ಅಂತ್ಯ ಹಳೆಯ ಶಿಲಾಯುಗದ ಚಾಟಲ್ ಪೆರೋನಿಯನ್ ಕಾಲಕ್ಕೆ ಸೇರಿದ್ದುದು. ಅನಂತರದ ಆರಿಗ್ನೇಷಿಯನ್, ಗ್ರಾವೆಟ್ಟಿಯನ್ ಸಂಸ್ಕೃತಿಯ ಕಾಲದಲ್ಲಿ ಇದು ಬೆಳೆಯುತ್ತ ಮ್ಯಾಗ್ಡಲೀನಿಯನ್ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಆಫ್ರಿಕದ ಹಳೆಯ ಶಿಲಾಯುಗದ ಕೊನೆಯ ಭಾಗದಲ್ಲಿ ಮತ್ತು ಸೂಕ್ಷ್ಮಶಿಲಾಯುಗದ ಆದಿ ಭಾಗದಲ್ಲಿ ಕಲಾವಂತಿಕೆಯ ಚಿತ್ರ–ಗೊಂಬೆಗಳ ನಿರ್ಮಾಣವಾಯಿತು. ಹಳೆಯ ಶಿಲಾಯುಗದ ಮಾನವ ಉಪಯೋಗಿಸುತ್ತಿದ್ದ ಅನೇಕ ಆಯುಧಗಳಲ್ಲಿ ಕೊರೆಯುಳಿ (ಬ್ಯೂರಿನ್) ರೇಖಾಚಿತ್ರ ನಿರ್ಮಾಣಕ್ಕೆ ಅನುಕೂಲವಾಗಿತ್ತು. ಈ ರೇಖಾಚಿತ್ರಗಳು ಗುಹೆಗಳ ಗೋಡೆಗಳು, ಸಣ್ಣ ಶಿಲ್ಪಫಲಕಗಳು, ಮೂಳೆಯ ಆಯುಧಗಳ ಮೇಲೆ ರೂಪುಗೊಂಡಿವೆ. ಮ್ಯಾಗ್ಡಲೀನಿಯನ್ ಕಾಲದ ಮೂಳೆಯ ಆಯುಧಗಳು ಬಹು ಸುಂದರ ರೇಖಾಚಿತ್ರಗಳನ್ನು ಒಳಗೊಂಡಿವೆ. ವರ್ಣಚಿತ್ರಗಳನ್ನು ರಚಿಸಲು ಹಳೆಯ ಶಿಲಾಯುಗದ ಮಾನವ ವಿವಿಧ ಬಣ್ಣಗಳ ಕಲ್ಲುಗಳನ್ನು ದ್ರವದ ಸಹಾಯವಿಲ್ಲದೆ ಬಳಸುತ್ತಿದ್ದ. ಮತ್ತೆ ಕೆಲವು ಬಣ್ಣಗಳನ್ನು ಕೆಲವು ಎಲೆಗಳ ರಸದೊಂದಿಗೆ ಮಿಶ್ರಣ ಮಾಡಿ, ಆ ಮಿಶ್ರಣವನ್ನು ಟೊಳ್ಳಾಗಿರುವ ಮೂಳೆಯೊಳಗೆ ಸೇರಿಸಿ ಈಗಿನ ಲೇಖನಿಯಂತೆ ಉಪಯೋಗಿಸುತ್ತಿದ್ದ. ಈ ರೀತಿಯ ವರ್ಣಚಿತ್ರಗಳು ಮಾರ್‌ಸಾಲಾಸ್, ಅಲ್ಟಮೀರ, ಚೌವೆ, ನ್ಯೊಕ್ಸ್, ಲ್ಯಾಸ್ಕೊ ಮುಂತಾದ ಸ್ಥಳಗಳಲ್ಲಿ ದೊರಕಿವೆ. ಇವುಗಳಲ್ಲಿ ವಿಶೇಷವಾಗಿ ಬೇಟೆಯ ದೃಶ್ಯ ಇಲ್ಲವೇ ವಿವಿಧ ಪ್ರಾಣಿಗಳ ಚಿತ್ರಗಳು ಮಾತ್ರ ಇವೆ. ಈ ಕಾಲದ ಇನ್ನೊಂದು ರೀತಿಯ ವರ್ಣಚಿತ್ರವೆಂದರೆ ಬಣ್ಣವನ್ನು ಸಿಂಪಡಿಸಿ ಮಾಡುವ ಚಿತ್ರಗಳು (ಸ್ಪ್ರೇ ಪೇಂಟಿಂಗ್). ತನ್ನ ಅಂಗೈಯನ್ನು ಗೋಡೆಯ ಮೇಲಿಟ್ಟು, ತನ್ನ ಬಾಯಲ್ಲಿ ಬಣ್ಣದ ದ್ರವವನ್ನು ಇಟ್ಟುಕೊಂಡು, ಅದನ್ನು ಅಂಗೈಮೇಲೆ ಪಿಚಕಾರಿಯಂತೆ ಉಗುಳಿದಾಗ, ಅಂಗೈಯಿದ್ದ ಭಾಗ ಬಿಟ್ಟು ಮಿಕ್ಕ ಭಾಗವೆಲ್ಲವೂ ಬಣ್ಣವಾಗುತ್ತದೆ. ಅಂಗೈ ಹೊರಗೆ ತೆಗೆದಾಗ ಆ ಚಿತ್ರ ಬಣ್ಣದ ಹಿಂಬದಿಯಲ್ಲಿ ಬೆಳ್ಳಗೆ ಕಾಣುತ್ತದೆ. ಈ ಕಾಲದ ಶಿಲ್ಪಗಳಲ್ಲಿ ಪೂರ್ಣಶಿಲ್ಪ ಮತ್ತು ಉಬ್ಬುಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳಲ್ಲಿಯೂ ಮೊದಮೊದಲು ಪ್ರಾಣಿಶಿಲ್ಪಗಳು ನಿರ್ಮಾಣವಾದುವು. ಆದರೆ ವಿಶೇಷವಾಗಿ ನಾವು ಕಾಣುವುದು ಸಂತಾನೋತ್ಪತ್ತಿ ದೇವತೆಯನ್ನು ಸಂಕೇತಿಸುವ ಶಿಲ್ಪಗಳು. ಈ ಶಿಲ್ಪಗಳಲ್ಲಿ ಅಂಗಗಳು ಬಹು ಚೆನ್ನಾಗಿ ರೂಪಿತವಾಗಿರುತ್ತವೆ. ಇಂಥ ಶಿಲ್ಪಗಳು ಲೆಸ್ಪುಗ್, ವಿಲೆನ್‌ಡಾರ್ಫ್, ಮೊರಾವಿಯ ಮುಂತಾದ ಕಡೆಗಳಲ್ಲಿ ದೊರಕಿವೆ. ಲೌಸೆಲ್‌ನಲ್ಲಿ ದೊರಕಿರುವ ಉಬ್ಬುಶಿಲ್ಪದ ವಿಗ್ರಹ ಸುಣ್ಣಕಲ್ಲಿನದಾದರೂ ಅಂಗವಿನ್ಯಾಸ ಸ್ಪಷ್ಟವಾಗಿ ರೂಪುಗೊಂಡಿದೆ.

ಅಂತ್ಯ ಹಳೆಯ ಶಿಲಾಯುಗದ ಚಿತ್ರಗಳು, ಶಿಲ್ಪಗಳು ಸಾಮಾನ್ಯವಾಗಿ ದುರ್ಗಮವಾದ, ಕತ್ತಲು ಗುಹೆಗಳಲ್ಲಿವೆ. ಇಂತಹ ಗುಹೆಗಳಲ್ಲಿ ಚಿತ್ರಗಳನ್ನು ಮಾನವ ಏಕೆ ನಿರ್ಮಿಸಿದ ಎಂಬುದು ವಿವಾದಾಸ್ಪದ. ಫ್ರೆಂಚ್ ಪುರಾತತ್ತ್ವಜ್ಞ ಹೆನ್ರಿ ಬ್ರುಯೆಲ್ ಪ್ರಕಾರ ಶಿಲಾಚಿತ್ರಗಳು ಮೋಡಿ ಅಥವಾ ಮಾಟದ ಕುರುಹುಗಳೆಂದಿದ್ದಾನೆ. ರಹಸ್ಯ ಸ್ಥಳಗಳಲ್ಲಿ ಪ್ರಾಣಿಯ ಚಿತ್ರಗಳನ್ನು ಬರೆದರೆ ಬೇಟೆಯಾಡುವಾಗ ಪ್ರಾಣಿಯನ್ನು ಸುಲಭವಾಗಿ ಕೊಲ್ಲಬಹುದು ಎಂಬ ನಂಬಿಕೆ ಆದಿಮ ಜನರಲ್ಲಿದ್ದಿರಬಹುದು ಅಥವಾ ಈ ಮೂಲಕ ಬೇಟೆ ಪ್ರಾಣಿಗಳ ಸಂತತಿ ವರ್ಧಿಸಬಹುದೆಂಬ ಆಶಯವಿದ್ದಿರಬಹುದು. ಶಿಲಾಚಿತ್ರಗಳು, ಮುಖ್ಯವಾಗಿ ಅಮೂರ್ತ ವಿನ್ಯಾಸಗಳ ರೇಖಾಚಿತ್ರಗಳು ಉದ್ದೀಪಿತ ಅಥವಾ ಭ್ರಮಾಧೀನ ಸ್ಥಿತಿಯಲ್ಲಿ ಅಭಿವ್ಯಕ್ತಗೊಂಡ ಕಲಾಕಾರನ ಮಾನಸಿಕ ಪ್ರತಿಮೆಗಳು ಎಂಬ ಮತ್ತೊಂದು ಅಭಿಪ್ರಾಯವಿದೆ. ಇದು ಮಾಂತ್ರಿಕ ಕಲೆ ಎಂಬ ವಾದವೂ ಇದೆ.

ಆದಿಮಾನವ ನವಶಿಲಾಯುಗದ ನಾಗರಿಕತೆಯ ಹಂತವನ್ನು ತಲುಪಿದಾಗ ಸುತ್ತಮುತ್ತಲ ವಾತಾವರಣವೂ ಬದಲಾಗುತ್ತ ಬಂದಿತ್ತು. ಆದ್ದರಿಂದ ಅವನ ಸಾಧನ ಸಂಪತ್ತನ್ನು ಬದಲಾಯಿಸಿಕೊಳ್ಳಬೇಕಾಯಿತು. ಅವನು ಆಹಾರೋತ್ಪಾದಕನಾದ. ಒಂದು ಕಡೆ ನೆಲೆ ನಿಲ್ಲುವ ಹವ್ಯಾಸವನ್ನು ರೂಢಿಸಿಕೊಂಡ. ಇದರಿಂದ ಅವನ ಕಲಾಕೃತಿಗಳಲ್ಲಿ ಗಮನಾರ್ಹ ಬದಲಾವಣೆಗಳಾದವು. ಈಗ ಗಮನವೆಲ್ಲವೂ ಹೊಸದಾಗಿ ತಾನು ಮಾಡುವ ಮಡಕೆಗಳ ತಂತ್ರಗಾರಿಕೆಯಿಂದ ಮಾಡಿದ ಗಡಿಗೆ–ಕುಡಿಕೆಗಳನ್ನು ಅಲಂಕರಿಸಲು ಆರಂಭಿಸಿದ. ಯುರೋಪಿನ ವಿವಿಧ ಭಾಗಗಳಲ್ಲಿ ದೊರಕಿರುವ ನವಶಿಲಾಯುಗದ ಮಣ್ಪಾತ್ರೆಗಳು ಬಹು ಕಲಾತ್ಮಕವಾಗಿವೆ. ಮಡಕೆಯ ಮೇಲ್ಭಾಗದಲ್ಲಿ ವಿವಿಧಬಣ್ಣಗಳಿಂದ ಬರೆದ ಜ್ಯಾಮಿತಿಕ ಚಿಹ್ನೆಗಳು ಹಾಗೂ ಪ್ರಾಣಿಗಳ ಚಿತ್ರಗಳು ವಿಶೇಷವಾಗಿವೆ. ಮಡಕೆಯ ಮೇಲ್ಭಾಗದಲ್ಲಿ ಉಗುರಿನಿಂದ ಅನೇಕ ಅಲಂಕಾರಿಕ ವಿನ್ಯಾಸಗಳನ್ನು ಮಾಡುವುದು, ಇಲ್ಲವೇ ಮೊನಚಾದ ಉಪಕರಣದಿಂದ ಬುಟ್ಟಿಯ ಹೆಣಿಗೆಯಂಥ ಅಲಂಕಾರ ಮಾಡುವುದು ಈ ಕಾಲದ ಮಡಕೆಯಲ್ಲಿ ವಿಶೇಷವಾಗಿ ಕಾಣಬರುತ್ತವೆ. ಈ ಕಾಲದ ಶಿಲ್ಪಗಳೂ ಮಣ್ಣಿನಿಂದಲೇ ಮಾಡಿದವು. ಸೆರ್ನವೋಡದಲ್ಲಿ ದೊರಕಿರುವ ಪುರುಷ ಮತ್ತು ಸ್ತ್ರೀಯ ಎರಡು ಶಿಲ್ಪಗಳು ಗಮನಾರ್ಹವಾದುವು. ಕುಳಿತಿರುವ ಭಂಗಿಯಲ್ಲಿರುವ ಈ ಶಿಲ್ಪಗಳಲ್ಲಿ ಕಣ್ಣು, ಮೂಗು, ಬಾಯಿ, ಬೆರಳುಗಳು ಕಾಣುವಂತೆ ಕೆತ್ತಲ್ಪಟ್ಟಿವೆ. ಕೇವಲ ಮನುಷ್ಯನ ಆಕಾರವನ್ನು ಕೊಡುವುದೇ ಅಲ್ಲದೆ ವಿವಿಧ ಅಂಗಗಳನ್ನು ಸ್ಪಷ್ಟವಾಗಿ ತೋರಿಸುವುದರಲ್ಲಿ ನವಶಿಲಾಯುಗದ ಈ ಕಲೆಗಾರ ಸಮರ್ಥನಾಗಿದ್ದ. ಇದೇ ರೀತಿಯ ಶಿಲ್ಪಗಳು ಮೊರೇವಿಯ, ಹಂಗೆರಿ, ಸಾರ್ಡೀನಿಯ ಹಾಗೂ ಭಾರತದಲ್ಲಿ ಹರಪ್ಪ, ನವ್ದತೋಲಿ, ಕಯಥ, ಇನಾಂಗಾಂವ್, ಸಂಗನಕಲ್ಲು, ಪಿಕ್ಲಿಹಾಳ ಮುಂತಾದ ಕಡೆಗಳಲ್ಲಿ ದೊರಕಿವೆ.

ಶಿಲಾಯುಗದ ಮಾನವ ಒಂದು ದೊಡ್ಡ ಹೆಜ್ಜೆ ಮುಂದಿಟ್ಟು ಕಂಚಿನ ಯುಗದ ಮಾನವನೆನಿಸಿಕೊಂಡಮೇಲೆ, ಅವನ ಕಲೆಯಲ್ಲಿ ಮತ್ತೆ ಮಹತ್ತರವಾದ ಬದಲಾವಣೆಗಳು ಉಂಟಾದವು. ತಾಮ್ರ, ಕಂಚು, ಚಿನ್ನ ಮುಂತಾದ ಲೋಹಗಳ ಕೆಲಸದಲ್ಲಿ ಪರಿಶ್ರಮ ಸಾಧಿಸಿದಂತೆ ಅವನ ಕಲೆ ಅಭಿವೃದ್ಧಿ ಹೊಂದಿತು. ತಾಮ್ರದ ಪಾತ್ರೆಗಳನ್ನು ವಿವಿಧ ಆಕಾರಗಳಲ್ಲಿ ತಯಾರಿಸುವುದೇ ಅಲ್ಲದೆ, ಹಲವಾರು ರೀತಿಯ ಅಲಂಕಾರಿಕ ವಿನ್ಯಾಸಗಳನ್ನು ಅಳವಡಿಸತೊಡಗಿದ. ಈ ಕಾಲದ ಕಂಚಿನ ಪಾತ್ರೆಗಳು ನಿಜವಾಗಿಯೂ ಸುಂದರ ವಸ್ತುಗಳಾಗಿವೆ. ಇವನ ಕಲೆ ಪಾತ್ರೆಗಳಿಗೆ ಮಾತ್ರ ಸೀಮಿತಗೊಳ್ಳದೆ ಮನುಷ್ಯ–ಪ್ರಾಣಿಗಳ ಲೋಹಶಿಲ್ಪಗಳವರೆಗೂ ವ್ಯಾಪಿಸಿದೆ.

ಭಾರತದಲ್ಲಿಯೂ ಆದಿಮಾನವರ ಕಲೆಯ ಅವಶೇಷಗಳು ಅಷ್ಟಾಗಿ ದೊರಕಿಲ್ಲ. ಮಧ್ಯ ಭಾರತದ ಮಿರ್ಜಾಪುರ, ಮಾಣಿಕ್‌ಪುರ, ರಾಯ್‌ಗಡ ಜಿಲ್ಲೆಯ ಸಿಂಘನ್‌ಪುರ, ಹೊಶಂಗಾಬಾದ್ ಮುಂತಾದ ಸ್ಥಳಗಳಲ್ಲಿ ಗುಹೆಯ ಕಲ್ಲಿನಮೇಲೆ ಚಿತ್ರಗಳು ದೊರಕಿವೆ.

ಇವು ಇತಿಹಾಸದ ಪೂರ್ವಕಾಲದ ಆದಿಮಾನವನಿಂದ ರಚಿತವಾದುವೆಂದು ಕೆಲವರು ಅಭಿಪ್ರಾಯಪಟ್ಟರೂ ಈ ವಿಚಾರದಲ್ಲಿ ಒಮ್ಮತವಿರಲಿಲ್ಲ. ಇವುಗಳಲ್ಲಿ ಮನುಷ್ಯ, ಕುದುರೆ, ಮೊಸಳೆ, ಜಿಂಕೆ ಮುಂತಾದವುಗಳ ಚಿತ್ರಣವಿದೆ. ಇತ್ತೀಚಿನ ದಶಕಗಳಲ್ಲಿ ವರ್ಣ ಚಿತ್ರ ಗವಿಗಳು ದೊಡ್ಡ ಪ್ರಮಾಣದಲ್ಲಿ ಭೀಂಬೇಟ್ಕ, ಹಿರೆಬೆನಕಲ್ ಮೊದಲಾದ ಭಾರತದ ಜಮ್ಮು-ಲಡಾಕ್‌ನಿಂದ ಹಿಡಿದು ತಮಿಳುನಾಡು-ಕೇರಳ ಮಧ್ಯಭಾಗದವರೆಗೂ ಹೆಚ್ಚು ಕಡಿಮೆ ಎಲ್ಲ ಪ್ರದೇಶಗಳಲ್ಲಿ ಒಟ್ಟಾರೆ 5,000ಕ್ಕೂ ಹೆಚ್ಚು ಗವಿ-ಬಂಡೆಚಿತ್ರ ಕಲೆ ನೆಲೆಗಳು ಶೋಧವಾಗಿವೆ. ಇನ್ನೂ ಶೋಧವಾಗುತ್ತಲೇ ಇವೆ. (ಎ.ವಿ.ಎನ್.)

ಇತ್ತೀಚಿನವರೆಗೆ ಶೈಲಿ ಹಾಗೂ ಚಿತ್ರವಸ್ತುವಿನ ಆಧಾರದ ಮೇಲೆ ಶಿಲಾಚಿತ್ರಗಳ ಸಾಪೇಕ್ಷ ಕಾಲಮಾನವನ್ನಷ್ಟೇ ತಿಳಿಯಬಹುದಾಗಿತ್ತು. ವಿವಿಧ ನಿರಪೇಕ್ಷ ಕಾಲನಿರ್ಣಯ ವಿಧಾನಗಳನ್ನು ಈ ನಿಟ್ಟಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಈಗ ವ್ಯಾಪಕವಾಗಿ ನಡೆಯುತ್ತಿದ್ದು ಇಂಗಾಲ-14 ಹಾಗೂ ಆಕ್ಸಲರೇಟೆಡ್ ಮಾಸ್ ಸ್ಪೆಕ್ಟ್ರೋಮೆಟ್ರಿ (ಎ.ಎಂ.ಎಸ್.) ತಂತ್ರಗಳನ್ನು ಯುರೋಪಿನಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ಫ್ರಾನ್ಸಿನ ಷೋವೆಯಲ್ಲಿರುವ ಚಿತ್ರಗಳು 32,410 ವರ್ಷ ಹಳೆಯವೆಂಬುದು ಇಂಗಾಲ-14 ತಂತ್ರದಿಂದ ಸಾಬೀತಾಗಿದೆ. ಇದೇ ತಂತ್ರದ ಪ್ರಕಾರ ಲೆ ಪೋರ್ಟೆಲ್ ಚಿತ್ರಗಳ ಕಾಲಮಾನ ಸು.11,000 ವರ್ಷಗಳು. ಬಣ್ಣದ ಮೂಲ, ಅದನ್ನು ತಯಾರಿಸಿಕೊಳ್ಳುತ್ತಿದ್ದ ವಿಧಾನ ಮುಂತಾದ ವಿಷಯಗಳನ್ನು ಅರಿಯುವ ಉದ್ದೇಶದಿಂದ ಚಿತ್ರಗಳಲ್ಲಿ ಬಳಸಿರುವ ಬಣ್ಣದ ಕಣಗಳನ್ನು ಇತ್ತೀಚೆಗೆ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ಫ್ರಾನ್ಸಿನ ಲಾ ವಶೆ ನೆಲೆಯಲ್ಲಿಯ ಮೂಳೆಯ ಕಲಾಕೃತಿಗಳಿಗೆ ಲೇಪಿಸಿದ್ದ ಕಪ್ಪು ಮತ್ತು ಕೆಂಬಣ್ಣಗಳ ತುಣುಕುಗಳನ್ನು ಸ್ಕ್ಯಾನಿಂಗ್ ಎಲೆಕ್ಟ್ರಾನ್ ಮೈಕ್ರೊಸ್ಕೋಪ್, ಎಕ್ಸ್‌ರೆ ಡಿಫ್ರ್ಯಾಕ್ಷನ್ ಮತ್ತು ಪ್ರೋಟಾನ್ ಇಂಡ್ಯೂಸ್ಡ್ ಎಕ್ಸ್‌ರೆ ಎಮಿಷನ್ ವಿಶ್ಲೇಷಣೆಗಳಿಗೆ ಒಳಪಡಿಸಿದಾಗ ಕೆಂಬಣ್ಣವನ್ನು ಹೆಮಟೈಟ್‌ನಿಂದಲೂ (ಕಬ್ಬಿಣದ ಆಕ್ಸೈಡ್‌ನ ಅದಿರು) ಕಪ್ಪುಬಣ್ಣವನ್ನು ಮ್ಯಾಂಗನೀಸ್ ಡೈ ಆಕ್ಸೈಡ್‌ನಿಂದಲೂ ತಯಾರಿಸಿದ್ದುದಾಗಿ ತಿಳಿಯಿತು. ಈ ಬಣ್ಣಗಳೊಂದಿಗೆ ಬಯೋಟೈಟ್ ಮತ್ತು ಫೆಲ್ಡ್‌ಸ್ಪಾರ್ ಮಿಶ್ರಣವನ್ನೂ ಬೆರೆಸಲಾಗಿತ್ತು. ಲ್ಯಾಸ್ಕೊ ನೆಲೆಯಲ್ಲಿ ಬಳಸಿರುವ ಕಪ್ಪುಬಣ್ಣ ಮ್ಯಾಂಗನೀಸ್ ಡೈ ಆಕ್ಸೈಡ್, ಬೆಣಚುಕಲ್ಲಿನ ಪುಡಿ ಮತ್ತು ಕ್ಯಾಲ್ಸಿಯಂ ಫಾಸ್ಫೇಟ್‌ನ ಮಿಶ್ರಣವಾಗಿದೆ. ಶಿಲಾಯುಗ ಕಲಾಕಾರರ ಕಾರ್ಯವೈಖರಿ-ವ್ಯಾಪ್ತಿ ಹಾಗೂ ಬೌದ್ಧಿಕ ಸಾಮರ್ಥ್ಯಗಳನ್ನು ಅರ್ಥೈಸುವಲ್ಲಿ ಇಂತಹ ಅಧ್ಯಯನಗಳು ಮಹತ್ತ್ವಪೂರ್ಣ. (ವಿ.ಎಸ್.)

**ಆದಿಲ್‌ಶಾಹಿ ವಂಶ:** 1490-1686ರ ಅವಧಿಯಲ್ಲಿ ಉತ್ತರಕರ್ನಾಟಕದ ಬಹುಭಾಗ ಹಾಗೂ ದಖನ್ನಿನ ಇತರ ಪ್ರದೇಶಗಳ ಮೇಲೆ ಒಡೆತನ ನಡೆಸಿದ ರಾಜವಂಶ. ಆದಿಲ್‌ಶಾಹಿಗಳ ರಾಜಧಾನಿ ಬಿಜಾಪುರ. ಬಹಮನಿ ರಾಜ್ಯ ಒಡೆದುಹೋದಮೇಲೆ ಹುಟ್ಟಿಕೊಂಡ ಐದು ಶಾಹಿ ರಾಜ್ಯಗಳಲ್ಲಿ ಇವರದು ಅತ್ಯಂತ ಪ್ರಸಿದ್ಧವಾದುದು. ಆದಿಲ್‌ಶಾಹಿ ಹೆಸರು ಈ ವಂಶದ ಆಳ್ವಿಕೆಯ ಸ್ಥಾಪಕನಾದ ಯೂಸುಫ್ ಆದಿಲ್‌ಖಾನ್‌ನ ಹೆಸರಿನಮೇಲೆ ರೂಢಿತವಾಗಿದೆ. ಈತ ತಾನು ಆಟೋಮನ್ ಸಾಮ್ರಾಜ್ಯದ ಸುಲ್ತಾನ 2ನೆಯ ಮುರಾದ್‌ನ ವಂಶಸ್ಥನೆಂದು ಹೇಳಿಕೊಂಡಿದ್ದಾನೆ. ಆದರೆ ಇದು ಸ್ವಕಲ್ಪಿತ. ಈತ ಷೇಕ್ ಸಫಿಯ ಯುವಕ ಗುಲಾಮರಲ್ಲಿ ಒಬ್ಬನಾಗಿ ನೇಮಕವಾಗಿದ್ದ. ಈತನ ವಂಶಸ್ಥರಲ್ಲಿ ಮುಂದಿನವರು ಸಫವಿದ್ ಮನೆತನಕ್ಕೆ ನಿಷ್ಠೆ ತೋರಿಸುತ್ತಿದ್ದರು. ಈ ಮಾಹಿತಿಗಳು ಇವನು ಅಜರ್‌ಬೈಜಾನ್ ಪ್ರದೇಶದ ಮೂಲ ಪಂಗಡಗಳಿಗೆ ಸೇರಿದವನು ಎಂದು ತೋರಿಸುತ್ತವೆ.

**ರಾಜಕೀಯ ಇತಿಹಾಸ:** ದಖನ್ ಹಾಗೂ ದಕ್ಷಿಣ ಭಾರತದ ರಾಜಕೀಯದಲ್ಲಿ ಪರಿಣಾಮಕಾರಿ ಪಾತ್ರವಹಿಸಿದ್ದ ಈ ವಂಶದಲ್ಲಿ ಒಂಬತ್ತು ಸುಲ್ತಾನರು ಆಳಿದರು. ಅವರಲ್ಲಿ ಯೂಸುಫ್, ಅಲಿ, 2ನೆಯ ಇಬ್ರಾಹಿಂ ಮತ್ತು ಮಹಮ್ಮದ್ ಪ್ರಮುಖರು. ಇತರರು ಇವರಷ್ಟು ಬಲಶಾಲಿಗಳಲ್ಲದಿದ್ದರೂ ತಮ್ಮ ವಂಶದ ದಕ್ಷ ಪರಂಪರೆಯಲ್ಲೆ ಕರ್ತವ್ಯ ನಿರ್ವಹಿಸಿ ರಾಜ್ಯದ ಪ್ರಾದೇಶಿಕ ಸಮಗ್ರತೆಯನ್ನು ಉಳಿಸಿಕೊಂಡು ಬಂದರು. ಅಲ್ಲದೆ ಕಲೆ, ವಾಸ್ತುಶಿಲ್ಪ ಹಾಗೂ ಸಾಹಿತ್ಯ ರಂಗಗಳಲ್ಲಿನ ಹಲವು ಸಾಧನೆಗಳಿಗೂ ಕಾರಣರಾದರು.

ಮೊದಲ ದೊರೆ ಯೂಸುಫ್ ಆದಿಲ್ ಷಾ (1490-1510). ಮೊದಲು ಬಹಮನಿ ಅರಸರ ಅಧೀನದಲ್ಲಿ ಬಿಜಾಪುರದ ಪ್ರಾಂತಾಧಿಕಾರಿಯಾಗಿದ್ದ. ಬಹಮನಿ ಸಾರ್ವಭೌಮ ಮಹಮ್ಮದ್ ನಿರ್ಬಲನಾಗಿ ರಾಜ್ಯದ ವ್ಯವಹಾರ ಖಾಸಿಮ್ ಬರೀದ್‌ನ ಕೈಸೇರಿದಾಗ, ಈತ ಬಿಜಾಪುರದಲ್ಲಿ ಸ್ವತಂತ್ರನಾಗಿ ಆಳಲಾರಂಭಿಸಿದ. ಅಸೀಮ ವೀರನೂ ರಾಜಕೀಯ ಪಟುವೂ ಆಗಿದ್ದ ಈತನ ಆಳ್ವಿಕೆಯಲ್ಲಿ ರಾಜ್ಯ ವ್ಯವಸ್ಥಿತವಾಯಿತು. ಆದರೆ ಇವನ ಮರಣದ ವೇಳೆಗೆ ಪಕ್ಕದ ರಾಜ್ಯಗಳಿಂದ ಬಿಜಾಪುರಕ್ಕೆ ಅಪಾಯ ತಲೆದೋರಲಾರಂಭಿಸಿತು. ಇವನ ಮಗ ಇಸ್ಮಾಯಿಲ್ (1510-34) ಸಿಂಹಾಸನವೇರುವಾಗ ಕೇವಲ 13 ವರ್ಷದ ಬಾಲಕ. ಆ ಕಾಲದಲ್ಲಿ ರಾಜಪ್ರತಿನಿಧಿಯಾಗಿದ್ದ ಕಮಾಲ್ ಖಾನ್ ರಾಜ್ಯಾಧಿಕಾರವನ್ನು ತಾನೇ ವಶಮಾಡಿಕೊಳ್ಳಲು ಪ್ರಯತ್ನಿಸಿದ. ಆದರೆ ಇಸ್ಮಾಯಿಲನ ತಾಯಿ ಈ ಪ್ರಯತ್ನವನ್ನು ವಿಫಲಗೊಳಿಸಿದಳು. ಪರ್ಷಿಯ ಮೊದಲಾದೆಡೆಗಳಿಂದ ಬಂದು ದಖನ್ನಿನಲ್ಲಿ ನೆಲಸಿದ್ದ ಹೆಚ್ಚಿನ ಮಟ್ಟಿಗೆ ಷಿಯ ಪಂಥೀಯರಾಗಿದ್ದವರು ಮತ್ತು ಬಹುಮಟ್ಟಿಗೆ ಸ್ಥಳೀಯರೇ ಆಗಿದ್ದ ಸುನ್ನಿ ಪಂಥದವರು ಈ ಎರಡು ಪ್ರಭಾವೀ ಗುಂಪುಗಳೂ ಅಂದಿನ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದವು. ಆಗಾಗ್ಗೆ ತಲೆದೋರುತ್ತಿದ್ದ ಇವರ ವೈಮನಸ್ಯಗಳು ರಾಜ್ಯಗಳ ಮೇಲೆ ಅನೇಕ ರೀತಿಯ ಪರಿಣಾಮವನ್ನು ಬೀರುತ್ತಿದ್ದುವು. ಇಸ್ಮಾಯಿಲ್ ಪ್ರಬುದ್ಧನಾದ ಮೇಲೆ ದಖನೀ ಪಕ್ಷವನ್ನು ಸದೆಬಡೆದ. ಅಹಮದ್‌ನಗರ, ಬೀರಾರ್ ಮತ್ತು ಬಿದರೆಯ ಸುಲ್ತಾನರ ಸಂಯುಕ್ತ ವಿರೋಧವನ್ನು ಯಶಸ್ವಿಯಾಗಿ ಎದುರಿಸಿದ. 1534ರಲ್ಲಿ ಇವನು ಮೃತನಾದಾಗ ರಾಜ್ಯದ ಸ್ಥಿತಿ ಪುನಃ ಅಸ್ತವ್ಯಸ್ತವಾಯಿತು.

ಇಸ್ಮಾಯಿಲ್‌ನ ಉತ್ತರಾಧಿಕಾರಿಗಳಾದ ಮಲ್ಲು ಮತ್ತು ಅಲೂಫ್‌ಖಾನರು ಅಸಮರ್ಥರಾಗಿದ್ದರು. ಆಗ ರಾಜಮಾತೆ ಬೀಬೀಜಿ ಖಾನಂ ಬಲಿಷ್ಠ ಮಂತ್ರಿ ಅಸದ್‌ಖಾನನ ಸಹಕಾರದಿಂದ ಇಸ್ಮಾಯಿಲ್‌ನ ಮೂರನೆಯ ಮಗ ಇಬ್ರಾಹಿಂನನ್ನು ಸುಲ್ತಾನನೆಂದು ಘೋಷಿಸಿದಳು. ಇವನ 24 ವರ್ಷಗಳ (1535-58) ಆಡಳಿತದಲ್ಲಿ ರಾಜ್ಯದಲ್ಲಿ ಹಲವು ಮುಖ್ಯ ಬದಲಾವಣೆಗಳಾದವು. ಇವನು ಅಫಕ್ವೀಗಳನ್ನು (ವಿದೇಶೀಯರು) ಹಿಂದಿಟ್ಟು ದಖನೀಯರಿಗೆ ಪ್ರೋತ್ಸಾಹವಿತ್ತ. ಪಾರಸೀ ಬದಲು ಮರಾಠಿಯನ್ನು ಅಧಿಕೃತ ಭಾಷೆಯಾಗಿ ಹೆಚ್ಚು ಬಳಕೆಗೆ ತಂದ. ಇವನ ರಾಜನೀತಿಯಿಂದಾಗಿ ಸ್ವಂತ ಸಹೋದರ ಅಬ್ದುಲ್ಲನೂ ಸೇರಿದಂತೆ ಹಲವರು ದಂಗೆ ಎದ್ದರು. ಈ ದಂಗೆಯನ್ನು ಅಡಗಿಸಿದರೂ ರಾಜ್ಯದ ಏಳ್ಗೆ ಕುಂಠಿತವಾಯಿತು. ಇಬ್ರಾಹಿಂ 1558ರಲ್ಲಿ ನಿಧನನಾದ. ಉತ್ತರಾಧಿಕಾರಿಯಾದ ಇವನ



ಇಬ್ರಾಹಿಂ ರೋಜ

ಮಗ ಅಲಿ ಆದಿಲ್ ಷಾ (1558-80) ಶಾಹಿ ವಂಶದ ಅತ್ಯಂತ ಬಲಿಷ್ಠ ಹಾಗೂ ದಕ್ಷ ಸುಲ್ತಾನರಲ್ಲಿ ಒಬ್ಬ. ತನ್ನ ತಂದೆಯ ಕಾಲದಲ್ಲಿ ಹೆಚ್ಚು ತೊಂದರೆಗೊಳಗಾಗಿದ್ದ ಈತ ಕೆಲವು ಶ್ರೀಮಂತರ ನೆರವಿನಿಂದ ಸಿಂಹಾಸನವನ್ನೇರಿದ. ತನ್ನ ತಂದೆಯ ನೀತಿಯನ್ನು ಅನುಸರಿಸದೆ ಅಫಕ್ವೀಗಳನ್ನು ಪ್ರೋತ್ಸಾಹಿಸಿದ. ವಿಜಯನಗರದ ವಿರುದ್ಧ ಉಳಿದ ಶಾಹಿ ರಾಜರುಗಳ ಒಕ್ಕೂಟವನ್ನು ರಚಿಸಲು ಈತನೇ ಕಾರಣ. ಇವನ ಈ ಸಾಧನೆಯಿಂದಾಗಿ 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾಯಿತು. ಅಹಮದ್‌ನಗರದ ರಾಜವಂಶದೊಂದಿಗೆ ಪರಸ್ಪರ ರಕ್ತಸಂಬಂಧ ಬೆಳೆಸಿದ. ಶಿಥಿಲಗೊಂಡ ವಿಜಯನಗರ ಸಾಮ್ರಾಜ್ಯದತ್ತ ನಡೆದು ದಕ್ಷಿಣದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ರಾಜ್ಯ ವಿಸ್ತರಿಸಿದ. ಅಪಾರ ಐಶ್ವರ್ಯವನ್ನು ಸಂಪಾದಿಸಿದ. ಇವನ 23 ವರ್ಷಗಳ ಆಡಳಿತಕಾಲ ತೀವ್ರ ಚಟುವಟಿಕೆಗಳಿಂದ ಕೂಡಿತ್ತು. 1580ರಲ್ಲಿ ತನ್ನ ಸೇವಕನೊಬ್ಬನಿಂದ ಕೊಲೆಗೀಡಾದ.

ಅಲಿ ಆದಿಲ್ ಷಾನಿಗೆ ಸಂತಾನವಿಲ್ಲದಿದ್ದುದರಿಂದ ಇವನ ಸೋದರನ ಮಗ ಎರಡನೆಯ ಇಬ್ರಾಹಿಂ ಆದಿಲ್ ಷಾ (1580-1627) ಇನ್ನೂ ಒಂಬತ್ತು ವರ್ಷದ ಬಾಲಕನಾಗಿದ್ದಾಗಲೇ ಪಟ್ಟಕ್ಕೆ ಬಂದ. ಆದ್ದರಿಂದ ಮುಂದೆ 11 ವರ್ಷಗಳ ಕಾಲ ರಾಜ್ಯವನ್ನು ನಾಲ್ವರು ರಾಜಪ್ರತಿನಿಧಿಗಳು ಒಬ್ಬರ ಅನಂತರ ಒಬ್ಬರು ಆಳಿ ಪರಸ್ಪರ ಕುಟಿಲನೀತಿಗಳಿಂದ ಆಡಳಿತವನ್ನು ಸಾಕಷ್ಟು ಹದಗೆಡಿಸಿದರು. ಈ ಅವ್ಯವಸ್ಥೆಯ ಲಾಭ ಪಡೆದು ನೆರೆ ರಾಷ್ಟ್ರಗಳವರು ಬಿಜಾಪುರದ ಆಂತರಿಕ ವಿಷಯಗಳಲ್ಲಿ ಕೈಹಾಕಲಾರಂಭಿಸಿದರು. ಇದೇ ಕಾಲದಲ್ಲಿ ದಖನ್ನಿನ ರಾಜಕೀಯದಲ್ಲಿ ಮೊಗಲರು ಪ್ರವೇಶಿಸಿದ್ದರಿಂದ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು. ಇಬ್ರಾಹಿಂ ವಯಸ್ಸಿಗೆ ಬರುತ್ತಿದ್ದಂತೆ ಈ ಎಲ್ಲ ಸಮಸ್ಯೆಗಳನ್ನೂ ಎದುರಿಸಬೇಕಾಯಿತು. ಈ ಕಾರ್ಯಕ್ಕೆ ಇವನಿಗೆ ಸಹಾಯಕರೂ ಇರಲಿಲ್ಲ. ರಾಜಪ್ರತಿನಿಧಿ ದಿಲಾವರ್ ಖಾನನನ್ನು ಕಿತ್ತೊಗೆದು ತನ್ನ ಸಹೋದರ ಇಸ್ಮಾಯಿಲ್‌ನ ದಂಗೆಯನ್ನು ಅಡಗಿಸಿದ್ದು ಇಬ್ರಾಹಿಂನ ಮೊದಲ ಸಾಧನೆ. ಅಹಮದ್‌ನಗರದವರು ಬಿಜಾಪುರದ ತೊಂದರೆಗಳಿಗೆ ಮುಖ್ಯಕಾರಣರಾದ್ದರಿಂದ ಈತ ಮೊಗಲರ ಜೊತೆ ಸ್ನೇಹ ಬೆಳೆಸಿ ಅಹಮದ್‌ನಗರವನ್ನು ತುಳಿದ. ಬಿದರೆಯನ್ನು ವಶಪಡಿಸಿಕೊಂಡು ಅದನ್ನು ತನ್ನ ರಾಜ್ಯದೊಳಗೆ ಸೇರಿಸಿಕೊಂಡ (1619). ಇಬ್ರಾಹಿಂ ಸಾಕಷ್ಟು ದೀರ್ಘಕಾಲ ಆಳಿ ತನ್ನ ಕಲ್ಯಾಣ ಕಾರ್ಯಗಳಿಂದ ಜಗದ್ಗುರು ಎಂದು ಪ್ರಸಿದ್ಧನಾಗಿದ್ದ.

ಅನಂತರ ಪಟ್ಟಕ್ಕೆ ಬಂದ ಇವನ ಎರಡನೆಯ ಮಗ ಮಹಮ್ಮದ್ ಆದಿಲ್ ಷಾ (1627-56) ತನ್ನ ವಿರೋಧಿ ಸೋದರರನ್ನು ಹತ್ತಿಕ್ಕಿ, ಉತ್ತಮ ರಾಜಕೀಯ ಪಟುವಾಗಿ ಬೆಳೆದ. ಮೊಗಲ್ ಸಾಮ್ರಾಜ್ಯಶಾಹಿಯ ವಿಸ್ತರಣೆಯನ್ನು 1636ರ ವರೆಗೂ ಯಶಸ್ವಿಯಾಗಿ ತಡೆದ. ಆದರೆ ಅದೇ ವರ್ಷ ಅನಿವಾರ್ಯವಾಗಿ ಮೊಗಲರೊಂದಿಗೆ ಅಧೀನತ್ವದ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಉತ್ತರದಲ್ಲಿ ತನಗಾದ ನಷ್ಟವನ್ನು ಭರಿಸಲು ದಕ್ಷಿಣದ ಕಡೆ

ತಿರುಗಿ ಕರ್ನಾಟಕದ ಬಹುಭಾಗದ ಮೇಲೆ ಪ್ರಭುತ್ವ ಸ್ಥಾಪಿಸಿದ. ಇವನ ದಂಡನಾಯಕರುಗಳಾದ ರಣದುಲ್ಲಾಖಾನ್ ಮತ್ತು ಶಹಾಜೀ ಭೋಂಸ್ಲೆ ಅಪಾರ ಐಶ್ವರ್ಯವನ್ನೂ ಹೆಚ್ಚು ಪ್ರದೇಶಗಳನ್ನೂ ಗೆದ್ದುಕೊಟ್ಟರು. ಇವನ ಕಾಲದಲ್ಲಿ ಬಿಜಾಪುರ ವೈಭವದ ಉತ್ತುಂಗವನ್ನು ಕಂಡಿತು. ಇವನ ಕೊನೆಯ ಕಾಲದ ವೇಳೆಗೆ ಮರಾಠರು ಪ್ರಬಲಿಸಿದರು. ಇವನು ನಿಧನನಾಗುತ್ತಿದ್ದಂತೆಯೇ (1656) ಬಿಜಾಪುರ ಅವನತಿಯ ಹಾದಿ ಹಿಡಿಯಿತು. ಇವನ ಮಗ ಎರಡನೆಯ ಅಲಿ ಆದಿಲ್ ಷಾ (1656–72) ಅಧಿಕಾರಕ್ಕೆ ಬರುವಾಗ ಕೇವಲ 15 ವರ್ಷಗಳ ಬಾಲಕ. ಒಂದು ಕಡೆಯಿಂದ ಮೊಗಲರೂ ಇನ್ನೊಂದು ಕಡೆಯಿಂದ ಮರಾಠರೂ ರಾಜ್ಯವನ್ನು ಒತ್ತುತ್ತಿದ್ದರು. ಅಲಿ ಸುಮಾರು ಒಂದು ದಶಕದ ಕಾಲ ಸ್ಥೈರ್ಯದಿಂದ ವರ್ತಿಸಿದರೂ ಒಂದೇ ಸಮನೆ ಅನುಭವಿಸಿದ ಹೊರಗಿನ ಸೋಲುಗಳು ಮತ್ತು ಒಳಗಿನ ಸಂಚುಗಳಿಂದ ಶಕ್ತಿಗುಂದಿ ಅನತಿಕಾಲದಲ್ಲಿ ಮೃತನಾದ (1672). ಅನಂತರ ಇವನ ಮಗ ಕೇವಲ ನಾಲ್ಕು ವರ್ಷದ ಬಾಲಕ ಸಿಕಂದರ ಅಧಿಕಾರಕ್ಕೆ ಬಂದ. ಮೊಗಲರ ರಾಜ್ಯವಿಸ್ತರಣಾ ಪ್ರವಾಹ ಬಹು ರಭಸದಿಂದ ಹರಡುತ್ತಿದ್ದು 1686ರಲ್ಲಿ ಬಿಜಾಪುರವನ್ನೂ ಮುಳುಗಿಸಿತು. ಆ ಹೊತ್ತಿಗೆ ವಯಸ್ಸಿಗೆ ಬಂದಿದ್ದ ಸಿಕಂದರ್ ಶೌರ್ಯದಿಂದ ಹೋರಾಡಿದರೂ ಮೊಗಲರ ಯುದ್ಧ ತಂತ್ರಕ್ಕೆ ಇವನು ಸಾಟಿಯಾಗಿ ನಿಲ್ಲಲು ಸಾಧ್ಯವಾಗಲಿಲ್ಲ. ಆದಿಲ್‌ಶಾಹಿ ಸಾಮ್ರಾಜ್ಯ ಕಣ್ಮರೆಯಾಯಿತು. ಸಿಕಂದರ್ ಔರಂಗಜೇಬನ ಬಂದಿಯಾಗಿ 1700ರಲ್ಲಿ ನಿಧನನಾದ. (ಬಿ.ಎಸ್.ಎ.)

**ಆಡಳಿತ ವ್ಯವಸ್ಥೆ:** ಆದಿಲ್‌ಶಾಹಿಗಳು ತಮ್ಮ ಆಳ್ವಿಕೆಯ ಉತ್ತುಂಗ ಕಾಲದಲ್ಲಿ ಭಾರತ ಪರ್ಯಾಯ ದ್ವೀಪದ ಬಹುಭಾಗದ ಮೇಲೆ ಹತೋಟಿ ಹೊಂದಿದ್ದರು. ಅರಬ್ಬೀ ಸಮುದ್ರದಿಂದ ಹಿಡಿದು ಬಂಗಾಲ ಕೊಲ್ಲಿಯ ವರೆಗೂ ಇವರ ನಿಯಂತ್ರಣ ವ್ಯಾಪಿಸಿತ್ತು. ಇವರು ತಮ್ಮ



ಇಬ್ರಾಹಿಂ ಕುಟುಂಬದ ಸಮಾಧಿ

ಆಡಳಿತ ಪದ್ಧತಿಯಲ್ಲಿ ಬಹಮನಿ ಆಡಳಿತ ಸಂಪ್ರದಾಯಗಳನ್ನೂ ವ್ಯವಸ್ಥೆಯನ್ನೂ ಅಳವಡಿಸಿಕೊಂಡರು. ಇವರ ಸರ್ಕಾರ ವ್ಯವಸ್ಥೆ, ಧಾರ್ಮಿಕ ಅಥವಾ ಸೈನಿಕ ಪ್ರಧಾನವಾಗದೆ ಪ್ರಬಲ ಪ್ರಭುತ್ವ ವರ್ಗ ಮತ್ತು ಪ್ರಭಾವೀ ಅಧಿಕಾರಿವರ್ಗಗಳಿಂದ ಬೆಂಬಲಿತವಾದ ರಾಜತ್ವವಾಗಿತ್ತು. ಸುಲ್ತಾನ ನಿರಂಕುಶ ಅಧಿಕಾರ ಪಡೆದಿದ್ದರೂ ಮಜ್ಲಿಸ್–ಇ–ಖಲ್ವಾತ್ ಎಂಬ ಸಲಹೆಗಾರರ ಮಂಡಲಿಯನ್ನು ಇಟ್ಟುಕೊಂಡಿರುತ್ತಿದ್ದ. ವಕೀಲ್–ಇ–ಸುಲ್ತನತ್ (ಪ್ರಧಾನಮಂತ್ರಿ), ಅಮೀರ್–ಇ–ಜುಮ್ಲಾ (ಅರ್ಥಮಂತ್ರಿ), ಮಸ್ತಾಫಿ–ಅಲ್–ಮುಲ್ಕ್ (ಉಪ ಅರ್ಥಮಂತ್ರಿ), ಪೇಶ್ವ, ಅರಮನೆ ಮೇಲ್ವಿಚಾರಕ, ಗೂಢಚರ್ಯೆಯ ಅಧಿಕಾರಿಗಳು ಮೊದಲಾದವರಿಂದ ಕೂಡಿದ ಮಂತ್ರಿಮಂಡಲ ಸಹ ಇರುತ್ತಿತ್ತು. ಕೆಲವೊಂದು ವ್ಯತ್ಯಾಸಗಳನ್ನು ಬಿಟ್ಟರೆ ಮತ್ತೆಲ್ಲ ರೀತಿಯಿಂದಲೂ ಆದಿಲ್‌ಶಾಹಿಗಳ ಆಡಳಿತ ಪದ್ಧತಿ ಬಹಮನಿ ಪದ್ಧತಿಯನ್ನೇ ಹೋಲುತ್ತಿತ್ತು. ಬಹಮನಿ ರಾಜ್ಯಾಡಳಿತದಲ್ಲಿ ಬಿಜಾಪುರ ಒಂದು ತರಫ್ (ಪ್ರಾಂತ) ಮಾತ್ರ ಆಗಿತ್ತು. ಅದು ಸ್ವತಂತ್ರ ರಾಜ್ಯವಾದ ಮೇಲೆ ಅದರೊಳಗೆ ಮತ್ತಷ್ಟು ತರಫ್ ವಿಭಾಗಗಳನ್ನು ಮಾಡಲಾಗದಷ್ಟು ಚಿಕ್ಕದಾಗಿತ್ತು. ಆದ್ದರಿಂದ ತರಫ್ ಮತ್ತು ತರಫ್‌ದಾರ್ ಎಂಬ ಪದಗಳ ಬದಲಾಗಿ ಜಾಗೀರ್ ಮತ್ತು ಜಾಗೀರ್‌ದಾರ್ ಎಂಬ ಪದಗಳನ್ನು ಬಳಸಲಾಯಿತು. ಹೊಸದಾಗಿ ಸಾಧಿಸಿಕೊಂಡ ವಿಜಯನಗರ ಸಾಮ್ರಾಜ್ಯದ ಭಾಗಗಳನ್ನು ತಮ್ಮ ರಾಜ್ಯದ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ತರಲು ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲವಾದ್ದರಿಂದ ಆ ಭಾಗದಲ್ಲಿ ಅಧಿಕಾರ ಹೊಂದಿದ್ದ ಸ್ಥಳೀಯ ಪಾಳೆಯಗಾರರಿಗೆ ಆಡಳಿತವನ್ನು ಬಿಟ್ಟುಕೊಟ್ಟು, ಅವರು ನಿಗದಿಯಾದ ಕಪ್ಪವನ್ನು ಒಪ್ಪಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಕೆಲವು ಸಂದರ್ಭಗಳಲ್ಲಿ ಆ ಭಾಗಗಳನ್ನೂ ವಶಪಡಿಸಿಕೊಂಡು ರಾಜ್ಯದ ಅಧಿಕಾರಿಗಳಿಗೆ ಜಹಗೀರಾಗಿ ನೀಡಲಾಗುತ್ತಿತ್ತು. ಪ್ರಭುತ್ವದ ನಾಡುಗಳನ್ನು ಸರ್ಕಾರ್, ಪರಗಣ ಮತ್ತು ಮಂಡಾಗಳೆಂದು ವಿಭಾಗಿಸಲಾಗಿತ್ತು. ಪ್ರತಿಯೊಂದು ಸರ್ಕಾರದಲ್ಲಿಯೂ ನಾಲ್ವರು ಅಧಿಕಾರಿಗಳಿರುತ್ತಿದ್ದರು. ಅದರಲ್ಲಿ ಇಬ್ಬರು ಹಿಂದುಗಳು, ಒಬ್ಬ ಕಂದಾಯ ವಸೂಲಿ ಮಾಡುವವನು, ಇನ್ನೊಬ್ಬ ಲೆಕ್ಕಪತ್ರಗಳನ್ನಿಡುವವನು. ಸರ್ಕಾರದ ಮುಖ್ಯನಿಗೆ ಸುಬೇದಾರ ಅಥವಾ ಸರ್ ಹವಾಲ್ದಾರ್ ಎಂದು ಕರೆಯಲಾಗುತ್ತಿತ್ತು. ನಾಲ್ಕನೆಯ ಅಧಿಕಾರಿ ಖಾಜಿ, ಪರಗಣದಲ್ಲಿ ಕೊತ್ವಾಲ, ದೇಶಮುಖ್ ಮತ್ತು ದೇಸಾಯಿ ಗಳೆಂಬ ಮೂವರು ಅಧಿಕಾರಿಗಳಿರುತ್ತಿದ್ದರು. ಇವರು ಪೋಲೀಸ್ ಮತ್ತು ಕಂದಾಯದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಸಾಮಾನ್ಯವಾಗಿ ಕಂದಾಯದ ಅಧಿಕಾರಿಗಳು ಹಿಂದುಗಳಾಗಿರುತ್ತಿದ್ದರು. ಕಂದಾಯಕ್ಕೆ ಸಂಬಂಧಿಸಿದ ಪರಗಣದ ಆಡಳಿತವ್ಯವಸ್ಥೆಯೆಲ್ಲಾ ಇವರ ಜವಾಬ್ದಾರಿಯಲ್ಲಿರುತ್ತಿತ್ತು. ಹಳ್ಳಿಗಳು ಆಡಳಿತದ ಅತ್ಯಂತ ಚಿಕ್ಕ ಘಟಕಗಳಾಗಿದ್ದು ಅವುಗಳ ಆಡಳಿತಕ್ಕೆ ಪಂಚಾಯಿತಿಗಳು ಇರುತ್ತಿದ್ದುವು. ಇವುಗಳ ಆಡಳಿತದಲ್ಲಿ ಅಧಿಕಾರಿಗಳು ಸಾಮಾನ್ಯವಾಗಿ ತಲೆಹಾಕುತ್ತಿರಲಿಲ್ಲ. ಗ್ರಾಮದ ಮುಖ್ಯಸ್ಥ ಪಾಟೀಲ. ಅವನು ಪೋಲೀಸ್, ನ್ಯಾಯ ಮತ್ತು ಕಂದಾಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ. ಅವನಿಗೆ ಕುಲಕರ್ಣಿ (ಲೆಕ್ಕಾಧಿಕಾರಿ) ಎಂಬ ಸಹಾಯಕನಿರುತ್ತಿದ್ದ. ಜೊತೆಗೆ ಚೌಕಿದಾರ ಅಥವಾ ಕಾವಲುಗಾರನಿರುತ್ತಿದ್ದ. ಇವರ ಸೇವೆಗಾಗಿ ಇವರಿಗೆ ಸ್ವಲ್ಪ ಭೂಮಿಗಳನ್ನು ದತ್ತಿಯಾಗಿ (ಇನಾಂ) ನೀಡಲಾಗುತ್ತಿತ್ತು. ಪ್ರಭುತ್ವದ ಜಮೀನುಗಳಲ್ಲಿ ರೈತವಾರಿ ಪದ್ಧತಿ ಜಾರಿಯಲ್ಲಿತ್ತು. ಸರ್ಕಾರ ತನಾಬ್ ಅಥವಾ ಸರಪಳಿಯಿಂದ ಜಮೀನನ್ನು ಅಳೆದು ಕಂದಾಯ ನಿಗದಿಪಡಿಸುತ್ತಿತ್ತು. ಈ ಕಂದಾಯ ಆಯಾ ಪ್ರದೇಶ ಅಥವಾ ಫಲವತ್ತತೆಗನುಗುಣವಾಗಿ ಒಟ್ಟು ಉತ್ಪನ್ನದ 1/10 ರಿಂದ ½ ಭಾಗದವರೆಗೂ ಇರುತ್ತಿತ್ತು. ಇದಲ್ಲದೆ ಜಹಗೀರಿ, ಇನಾಂ, ಅಗ್ರಹಾರ ಮತ್ತು ವಕ್ಫ್‌ಗಳಂಥ ಪದ್ಧತಿಗಳೂ ಇದ್ದವು. ಸರ್ಕಾರಕ್ಕೆ ಯುದ್ಧದಲ್ಲಿ ಗೆದ್ದುತಂದ ಐಶ್ವರ್ಯ, ವಾರ್ಷಿಕ ಕಪ್ಪ, ವಸ್ತುಗಳ ಮೇಲಿನ ತೆರಿಗೆ, ವಾಣಿಜ್ಯ ಸುಂಕ, ವಿಶೇಷ ಸಂದರ್ಭಗಳಲ್ಲಿ ರಾಜನಿಗೆ ಬರುವ ಕಾಣಿಕೆಗಳು–ಇವು ಆದಾಯ ಮೂಲಗಳು. ರಾಯಚೂರು ಪ್ರದೇಶದ ವಜ್ರದ ಗಣಿಗಳಿಂದಲೂ ಉತ್ತಮ ಆದಾಯ ಬರುತ್ತಿತ್ತು.

**ಆರ್ಥಿಕ ಸಾಮಾಜಿಕ ಸ್ಥಿತಿ:** ಆದಿಲ್‌ಶಾಹಿ ರಾಜರು ಹೊರಗಿನಿಂದ ಬಂದವರಾದರೂ ಬಹುಬೇಗನೆ ಸ್ಥಳೀಯ ಜನರೊಂದಿಗೆ ಬೆರೆತು ಆ ಜನರ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಿದರು. ವ್ಯವಸಾಯ ಜನರ ಮುಖ್ಯ ಕಸಬಾಗಿತ್ತು. ಬತ್ತ, ಮುಸುಕಿನ ಜೋಳ, ಜೋಳ, ಸಜ್ಜೆ ಮತ್ತು ಕೆಲವೆಡೆ ಗೋದಿ ಮುಖ್ಯ ಆಹಾರ ಬೆಳೆಗಳಾಗಿದ್ದುವು. ತೊಗರಿ ಮುಖ್ಯವಾದ ದ್ವಿದಳಧಾನ್ಯ. ಕಾರವಾರ, ಕೊಂಕಣ ಭಾಗದಲ್ಲಿ ಬೆಳೆಯುತ್ತಿದ್ದ ಮೆಣಸು, ಏಲಕ್ಕಿ, ತೆಂಗು, ಗೇರುಬೀಜ ಮತ್ತು ವೀಳ್ಯದ ಎಲೆ ಇವು ಮುಖ್ಯ ವಾಣಿಜ್ಯ ಬೆಳೆಗಳಾಗಿದ್ದವು. ಪೂರ್ವಭಾಗದಲ್ಲಿರುವ ಕಪ್ಪುಮಣ್ಣಿನಲ್ಲಿ ಹತ್ತಿ ಸಾಗುವಳಿ ವ್ಯಾಪಕವಾಗಿತ್ತು. ಕಬ್ಬನ್ನು ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಹೊಗೆಸೊಪ್ಪನ್ನು ಪೋರ್ಚುಗೀಸರು ಭಾರತಕ್ಕೆ ತಂದರು. 17ನೆಯ ಶತಮಾನದ ಹೊತ್ತಿಗೆ ಅದರ ಸಾಗುವಳಿ ದಖನ್ ಪ್ರದೇಶದಲ್ಲಿ ದೃಢವಾಗಿ ಬೇರೂರಿತು. ಆರ್ಥಿಕ ದೃಷ್ಟಿಯಿಂದ ಈ ಬೆಳೆಗೆ ಹೆಚ್ಚು ಮಹತ್ತ್ವವಿತ್ತು. ವಿವಿಧ ಬಗೆಯ ಹಣ್ಣುಗಳು ಮತ್ತು ಹೂವುಗಳನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ ಮಾವು, ಬಾಳೆಹಣ್ಣು, ಕಿತ್ತಲೆ, ನಿಂಬೆ, ಕಲ್ಲಂಗಡಿ ಮುಖ್ಯವಾದವು. ದ್ರಾಕ್ಷಿ ಸಹ ದಖನ್ನಿನ ಎತ್ತರ ಪ್ರದೇಶದಲ್ಲಿ ಬೆಳೆಯುತ್ತಿತ್ತು. ಕೊಂಕಣ ಪ್ರದೇಶದಲ್ಲಿ ಹಲಸು, ಅನಾನಸು ಮತ್ತು ಪರಂಗಿ ಹಣ್ಣುಗಳು ಬೆಳೆಯುತ್ತಿದ್ದವು. ಹುಣಿಸೆಮರಗಳು ಇದ್ದವು. ಶುಂಠಿಯನ್ನೂ ಬೆಳೆಯಲಾಗುತ್ತಿತ್ತು. ಸ್ವಲ್ಪಮಟ್ಟಿಗೆ ಗಸಗಸೆ ಸಹ ಬೆಳೆಯುತ್ತಿದ್ದು, ಅದರಿಂದ ತಯಾರಿಸಿದ ಅಫೀಮು ಔಷಧವಾಗಿಯೂ ಭಂಗಿ ಸೇದಲೂ ಉಪಯೋಗವಾಗುತ್ತಿತ್ತು.

ಸಕ್ಕರೆಯನ್ನು ಕರ್ನಾಟಕ ಭಾಗದಲ್ಲಿ ಉತ್ಪಾದಿಸಿ ಪರ್ಷಿಯ ಮತ್ತು ಅರೇಬಿಯ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಬಿಜಾಪುರದಲ್ಲಿ ಹತ್ತಿ ಮತ್ತು ರೇಷ್ಮೆ ಕೈಗಾರಿಕೆಗಳು ಸುಸ್ಥಿತವಾಗಿದ್ದುವು. ಈ ಹಲವಾರು ಕೈಗಾರಿಕೆಗಳು ಕೊಂಕಣದ ಬಂದರುಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ಥಾಪಿತವಾಗಿದ್ದವು. ಬಿಜಾಪುರದ ಹತ್ತಿ ವಸ್ತುಗಳಿಗೆ ಪರ್ಷಿಯ, ಅರೇಬಿಯ ಮತ್ತು ಪೂರ್ವ ಆಫ್ರಿಕ ಭಾಗಗಳಲ್ಲಿ ಹೆಚ್ಚು ಬೇಡಿಕೆ ಇತ್ತು. ನೇಯ್ಗೆಯವರಿಗೆ ಹಲವು ತೆರಿಗೆಗಳ ರಿಯಾಯಿತಿ ನೀಡಿ ನೇಯ್ಗೆ ಕೈಗಾರಿಕೆಗೆ ಉತ್ತೇಜನ ನೀಡಲಾಗುತ್ತಿತ್ತು. ಹುಬ್ಬಳ್ಳಿ, ಲಕ್ಷ್ಮೇಶ್ವರ ಮತ್ತು ಕಾರವಾರಗಳಲ್ಲಿ ಹತ್ತಿ ಕೈಗಾರಿಕೆ ಸಮೃದ್ಧವಾಗಿದ್ದುದನ್ನು ಇಂಗ್ಲಿಷರು ಕಂಡಿದ್ದಾರೆ. ದಖನ್ನಿನಲ್ಲಿ ತಯಾರಾಗುತ್ತಿದ್ದ ಹತ್ತಿಬಟ್ಟೆಗಳಲ್ಲಿ ಕ್ಯಾಲಿಕೋ ಮತ್ತು ಮಸ್ಲಿನ್ ಮುಖ್ಯ ಬಗೆಗಳು. ಬಿಜಾಪುರ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ ರತ್ನಗಂಬಳಿಯನ್ನು ನೇಯುವುದು ವಿಶೇಷವಾಗಿತ್ತು. ಧಾರವಾಡ ಸೀರೆಗಳಿಗೆ ಪ್ರಸಿದ್ಧವಾಗಿತ್ತು. ರಾಜ್ಯದ ವಿವಿಧ ಭಾಗಗಳಲ್ಲಿ ಕಲ್ಲುಪ್ಪನ್ನು ತಯಾರಿಸಲಾಗುತ್ತಿತ್ತು. ಸ್ವಲ್ಪಮಟ್ಟಿಗೆ ಕಬ್ಬಿಣದ ಅದಿರನ್ನು ತೆಗೆಯಲಾಗುತ್ತಿತ್ತು. ಇವುಗಳ ಜೊತೆಗೆ ಈ ರಾಜ್ಯದಲ್ಲಿ ನೀಲಮಣಿ, ಪದ್ಮರಾಗ, ಪಚ್ಚೆ ಮೊದಲಾದ ಅಮೂಲ್ಯ ಕಲ್ಲುಗಳು ದೊರೆಯುತ್ತಿದ್ದವು. ಇವುಗಳಲ್ಲಿ ವಜ್ರ ಬಹು ಮುಖ್ಯವಾದುದು. 16 ಮತ್ತು 17ನೆಯ ಶತಮಾನಗಳಲ್ಲಿ ಬಿಜಾಪುರಕ್ಕೆ ಭೇಟಿನೀಡಿದ ಬಹುತೇಕ ಪ್ರವಾಸಿಗಳೆಲ್ಲ ಈ ರಾಜ್ಯದಲ್ಲಿದ್ದ ವಜ್ರದ ಗಣಿಗಳ ಬಗ್ಗೆ ಹೇಳಿದ್ದಾರೆ. ಇಲ್ಲಿ ಸು. 15 ವಜ್ರದ ಗಣಿಗಳಿದ್ದವು. ಇಲ್ಲಿನ ವಜ್ರಗಳು ಉತ್ತಮ ದರ್ಜೆಯವಾಗಿದ್ದುವು. ಆದರೆ ಗಾತ್ರದಲ್ಲಿ ಗೋಲ್ಕೊಂಡದ್ದಕ್ಕಿಂತ ಚಿಕ್ಕದಾಗಿರುತ್ತಿದ್ದವು. ವಜ್ರವನ್ನು ಕತ್ತರಿಸುವ ಮತ್ತು ಸಾಣೆಹಿಡಿಯುವ ಅನೇಕ ಕೆಲಸಗಾರರು ಈ ಗಣಿಗಳ ಬಳಿ ಇರುತ್ತಿದ್ದರು. ಈ ಉದ್ಯಮ ಗುಜರಾತಿ ವ್ಯಾಪಾರಿಗಳ ಕೈಯಲ್ಲಿತ್ತು. ಗಣಿಗಳು ರಾಜನ ಆಸ್ತಿಯಾಗಿದ್ದುವು. ಉತ್ಪಾದಕರಿಗೆ ಗೇಣಿಯ ಮೇಲೆ ಕೊಡಲಾಗುತ್ತಿತ್ತು. ಇಲ್ಲಿಂದ ವಜ್ರಗಳು ಸೂರತ್, ಗೋವ, ಆಗ್ರ, ದೆಹಲಿ ಮತ್ತಿತರ ಸ್ಥಳಗಳಿಗೆ ಹೋಗುತ್ತಿದ್ದವು.

ಆದಿಲ್‌ಶಾಹಿ ರಾಜ್ಯದಲ್ಲಿ ಹಿಂದುಗಳೇ ಅಧಿಕಸಂಖ್ಯೆಯಲ್ಲಿದ್ದರು. ಅವರಲ್ಲಿ ಈಗಿನಂತೆಯೇ ಜಾತಿಪದ್ಧತಿ ಇತ್ತು. ಬ್ರಾಹ್ಮಣರು ಸಮಾಜದಲ್ಲಿ ಉತ್ತಮ ವರ್ಗಕ್ಕೆ ಸೇರಿದ್ದು ಹೆಚ್ಚಿನ ಅಧಿಕಾರ ಪಡೆದಿದ್ದರು. ಹಿಂದುಗಳ ಎಲ್ಲ ಧಾರ್ಮಿಕ ವಿಧಿಗಳಿಗೂ ಅವರ ಆವಶ್ಯಕತೆಯಿತ್ತು. ಅವರಲ್ಲಿ ಕೆಲವರು ವೈದ್ಯಕೀಯ ವೃತ್ತಿಯನ್ನು ಕೈಗೊಂಡಿದ್ದರು. ಪ್ರತಿಯೊಂದು ಕುಟುಂಬವೂ ಸಾಮಾನ್ಯ ಕಾಯಿಲೆಗೆ ಬೇಕಾಗುವ ಗಿಡಮೂಲಿಕೆಗಳನ್ನು ಇಟ್ಟುಕೊಂಡಿರುತ್ತಿತ್ತು.

**ಆದಿಲ್‌ಶಾಹಿ ವಂಶಾವಳಿ:**




ಜನರ ಮನರಂಜನೆಗಳು ಸುಲಭ ರೀತಿಯವಾಗಿರುತ್ತಿದ್ದವು. ಹಳ್ಳಿಯಿಂದ ಹಳ್ಳಿಗೆ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸಿ ಮನರಂಜನೆ ನೀಡುವ ವಿವಿಧ ಬಗೆಯ ವಲಸೆಗಾರರ ಗುಂಪುಗಳಿದ್ದವು. ಅವರಲ್ಲಿ ಹಾವಾಡಿಗರು, ದೊಂಬರು, ಹರಿಕಥೆ ಮಾಡುವವರು ಇದ್ದರು. ವಿನೋದಕ್ಕಾಗಿ ಕೋಳಿ ಜೂಜು ಸಾಮಾನ್ಯವಾಗಿತ್ತು. ರಾಜಮನೆತನದವರು ಮತ್ತು ಶ್ರೀಮಂತರು ಬೇಟೆಯಾಡುತ್ತಿದ್ದರು. ವಾರ್ಷಿಕ ಜಾತ್ರೆಗಳು ಮತ್ತು ಉತ್ಸವಗಳು ಅಲ್ಲಲ್ಲಿ ಜರುಗುತ್ತಿದ್ದು ಬಡಜನರಿಗೆ ನಿತ್ಯದುಡಿತದಿಂದ ಬಿಡುವನ್ನು ಒದಗಿಸುತ್ತಿದ್ದವು. ಬೇರೆ ಬೇರೆಡೆಗಳಲ್ಲಿದ್ದ ಸ್ನೇಹಿತರು ಅಲ್ಲಿ ಒಂದುಗೂಡಲು ಅವಕಾಶವಾಗುತ್ತಿತ್ತು. ಮುಸ್ಲಿಮರು ಉರುಸ್ ಸಂದರ್ಭದಲ್ಲಿ ಒಟ್ಟಿಗೆ ಸೇರುತ್ತಿದ್ದರು. ಹರಿದಾಸರು ಗ್ರಾಮದಿಂದ ಗ್ರಾಮಕ್ಕೆ ತೆರಳಿ ಧರ್ಮಬೋಧೆಯನ್ನೂ ಮನರಂಜನೆಯನ್ನೂ ನೀಡುತ್ತಿದ್ದರು. ಬಡವರು ದಟ್ಟಿಯಷ್ಟನ್ನೇ ಕಟ್ಟುತ್ತಿದ್ದರು. ಹೆಂಗಸರೂ ಹೆಚ್ಚು ಬಟ್ಟೆ ಧರಿಸುತ್ತಿರಲಿಲ್ಲ. ಬ್ರಾಹ್ಮಣರು ಆಂಗ್ರಕ ಎಂಬ ಮುಸ್ಲಿನ್‌ನ ನಿಲುವಂಗಿ ಹಾಕಿಕೊಂಡು ಪೇಟ ಇಟ್ಟುಕೊಳ್ಳುತ್ತಿದ್ದರು. ಮುಸ್ಲಿಮರು ಬಿಗಿಯಾದ ಪೈಜಾಮ, ಅಂಗಿ, ಉದ್ದನೆಯ ಕೋಟು ಮತ್ತು ಪೇಟವನ್ನು ಧರಿಸುತ್ತಿದ್ದರು. ಶ್ರೀಮಂತ ಹಿಂದು ಮಹಿಳೆಯರು ಆಭರಣವನ್ನು ಹೆಚ್ಚಾಗಿ ಧರಿಸುತ್ತಿದ್ದರು. ಮೂಗುತಿ, ಕಾಲ್ಗಡಗ, ಕೈಕಡಗ ಮತ್ತು ಕಂಠಾಭರಣಗಳು ಮುಖ್ಯವಾಗಿದ್ದವು. ಬಡವರು ಗಾಜಿನ ಬಳೆಗಳನ್ನು ತೊಡುತ್ತಿದ್ದರು. ಶ್ರೀಮಂತರ ಮನೆಗಳು ಸುಸಜ್ಜಿತವಾಗಿರುತ್ತಿದ್ದವು. ಕೆಲವು ರೋಗಗಳು ಹಾಗೂ ಹುಳಹುಪ್ಪಟೆಗಳನ್ನು ದೂರವಿಡಲು ನೆಲಕ್ಕೆ ಸೆಗಣಿ ಸಾರಿಸುತ್ತಿದ್ದರು (ಪೆಟ್ರೊಡೆಲ್ಲವೆಲ್ಲ ಇದನ್ನು ಇಟಲಿಯಲ್ಲೂ ರೂಢಿಗೆ ತರಲು ಬಯಸಿದ್ದನಂತೆ). ಬ್ರಾಹ್ಮಣರು, ಬನಿಯಾಗಳು ಸಸ್ಯಾಹಾರಿಗಳಾಗಿದ್ದರು. ಅಕ್ಕಿ, ಜೋಳ, ಗೋದಿ ಮತ್ತು ದ್ವಿದಳಧಾನ್ಯಗಳು, ತುಪ್ಪ, ತರಕಾರಿ ಅವರ ಮುಖ್ಯ ಆಹಾರವಾಗಿತ್ತು. ಉಳಿದ ಜಾತಿಯವರು ಮಾಂಸ, ಮೀನು ಮೊದಲಾದವುಗಳನ್ನೂ ಉಪಯೋಗಿಸುತ್ತಿದ್ದರು. ಕೊಂಕಣ ಕರಾವಳಿಯಲ್ಲಿ ಮೀನು ವಿಶೇಷವಾಗಿ ದೊರಕುತ್ತಿತ್ತು. ಸಾಮಾನ್ಯ ಜನರು ಅನ್ನ ಮತ್ತು ಧಾನ್ಯಗಳನ್ನು ಆಹಾರವಾಗಿ ಬಳಸುತ್ತಿದ್ದರೆಂದು ಫ್ರೈಯರ್ ಹೇಳಿದ್ದಾನೆ. ಮುಸ್ಲಿಮರು ಮಾಂಸ ಮತ್ತು ಗೋದಿಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಹಿಂದುಗಳು ಎಲೆಯಲ್ಲಿ ಊಟಮಾಡುತ್ತಿದ್ದರು. ಅರಮನೆಯಲ್ಲಿ ಪಿಂಗಾಣಿ ಪಾತ್ರೆಗಳು ಉಪಯೋಗದಲ್ಲಿದ್ದವು. ವೀಳ್ಯದ ಎಲೆಯನ್ನು ಎಲ್ಲ ವರ್ಗದ ಜನರೂ ಉಪಯೋಗಿಸುತ್ತಿದ್ದರು. ಪೋರ್ಚುಗೀಸ ಹೆಂಗಸರು, ಗಂಡಸರೂ ಈ ಅಭ್ಯಾಸ ಬೆಳೆಸಿಕೊಂಡಿದ್ದರು. *

**ವಾಸ್ತುಶಿಲ್ಪ ಮತ್ತು ವರ್ಣಚಿತ್ರಕಲೆ (ಸಾಹಿತ್ಯಕ):** ಸಾಹಿತ್ಯಕವಾಗಿ ಆದಿಲ್‌ಶಾಹಿ ಕಾಲದ ಇತಿಹಾಸವನ್ನು ಹಲವಾರು ಸಮಕಾಲೀನ ಇತಿಹಾಸಕಾರರು, ಕವಿಗಳು ತಮ್ಮ ಕೃತಿಗಳಲ್ಲಿ ಬರೆದಿಟ್ಟಿದ್ದಾರೆ. ಅವು ಬಹುತೇಕ ಪರ್ಷಿಯನ್, ಉರ್ದು ಹಾಗೂ ಕಿಂಚಿತ್ ಕನ್ನಡ, ಮರಾಠಿ ಮತ್ತು ಸಂಸ್ಕೃತ ಭಾಷೆಗಳಲ್ಲಿವೆ. ಇವುಗಳಲ್ಲಿ ಚರಿತ್ರೆಗೆ ಹೆಚ್ಚು ಒತ್ತು. ವಾಸ್ತುಶಿಲ್ಪ ಮತ್ತು ವರ್ಣಚಿತ್ರಕಲೆಗೆ ಗಮನ ಕಡಿಮೆ. ಸಾಂದರ್ಭಿಕವಾಗಿ ಕೆಲವು ವಾಸ್ತುಶಿಲ್ಪಗಳ ರಚನೆಯ ಕಾಲ, ಕಟ್ಟಿದವರ, ಕಟ್ಟಿಸಿದವರ ಮಾಹಿತಿಗಳನ್ನು ಈ ಕೃತಿಗಳಲ್ಲಿ ಗುರುತಿಸಬಹುದಾಗಿದೆ.

ಪರ್ಷಿಯನ್ ಗ್ರಂಥಗಳಲ್ಲಿ ಪ್ರಮುಖವಾಗಿ ಹೆಸರಿಸಬಹುದಾದ ಕೃತಿಗಳು: ಮಹ್ಮದ ಕಾಶಿಮ ಫೆರಿಸ್ತನ ಗುಲ್ಶನೆ–ಇಬ್ರಾಹಿಮೀ ಅಥವಾ ತಾರಿಖ–ಇ–ಫರಿಶ್ತಾ (1605), ಜುಹುರನ ಮಹಮ್ಮದನಾಮಾ (1641), ಫಿತುರಖಾನದ ಹಫ್ತ–ಕುರ್ಸಿ (1660) ಹಾಗೂ ಇವುಗಳನ್ನು ಮತ್ತು ಇನ್ನಷ್ಟು ಕೃತಿಗಳನ್ನು ಆಧರಿಸಿ ಬರೆದ–ಫಕೀರ ಮಹಮ್ಮದ ಝುಬೇರಿಯ ಬುಸಾತೀನೆ–ಸಲಾತೀನ ಎಂಬ ಗ್ರಂಥಗಳು. ಅಬ್ದುಲ್ಲಾ ದೆಹಲಿಯ ಇಬ್ರಾಹಿಮನಾಮಾ ಹಾಗೂ ಮುಲ್ಲಾ ನುಸ್ರತಿಯ ಅಲಿ–ನಾಮಾ, ನೂರುಲ್ಲಾ ಇಬ್ನ ಕಾಜಿಯ ತಾರೀಖ್–ಇ–ಅಲಿ ಕಾವ್ಯಗಳಲ್ಲಿ ಬರುವ ವಿಜಾಪುರ ನಗರ ಹಾಗೂ ಕೆಲವು ವಾಸ್ತು ರಚನೆಗಳ ವರ್ಣನೆಗಳಿಂದ ಗುರುತಿಸಬಹುದಾಗಿದೆ. ಸಂಸ್ಕೃತದಲ್ಲಿ ಎರಡನೆಯ ಆದಿಲ್‌ಶಾನ ಆಸ್ಥಾನದ ಜ್ಯೋತಿಷಿ ತಮ್ಮಣ್ಣ ಭಟ್ಟ ದೈವಜ್ಞನ ಇತಿಹಾಸವನ್ನೂ ಇಲ್ಲಿ ಹೆಸರಿಸಬೇಕು. ಇತಿಹಾಸದಲ್ಲಿಯೇ ವಿಜಾಪುರದ ಅರಮನೆಯ ಕೋಟೆಯನ್ನು ಆದಿಲಶಾಹೀ ರಾಜ್ಯದ ಸಂಸ್ಥಾಪಕ ಯೂಸುಫ್ ಆದಿಲ್‌ಷಾ 1513–14ರಲ್ಲಿ ಕಟ್ಟಿಸಿದ. ಆದರೆ ಇದನ್ನು ಕಟ್ಟಿದ ವಿವರಗಳು ಸಿಗುವುದಿಲ್ಲ. ಒಂದನೆಯ ಅಲಿ ಆದಿಲ್‌ಷಾ 1557–80 ನಗರಕ್ಕೂ ಹಾಗೂ ಅರಮನೆಗೂ ಗಟ್ಟಿಮುಟ್ಟಾದ ಕೋಟೆಯನ್ನು 1566ರಲ್ಲಿ ಕಟ್ಟಿದ ವಿವರಗಳು ದೊರೆಯುತ್ತವೆ.

ಅಲಿ ಆದಿಲಷಾ ನಗರದ ಸುತ್ತಲೂ ಗಟ್ಟಿಮುಟ್ಟಾದ, ಸುಣ್ಣ ಗಚ್ಚು ಮತ್ತು ಕಲ್ಲಿನ ಕೋಟೆಯನ್ನು ಕಟ್ಟಿಸಿದ. ಈ ಕೋಟೆಯನ್ನು ಕಟ್ಟುವ ಕಾರ್ಖಾನೆಯ ಕೆಲಸದ ಮೇಲೆ ಕಿಶ್ವರಖಾನನನ್ನು ಮುಖ್ಯಸ್ಥನನ್ನಾಗಿ ನಿಯಮಿಸಿದ. ರಾಜ್ಯದ ಎಲ್ಲ ಊರುಗಳಲ್ಲಿಯ ಚತುರರಾದ ಗೌಂಡಿಗಳನ್ನು ಮತ್ತು ಕಲ್ಲು ಕಡೆಯುವವರನ್ನು ಕರೆದು ಸೇರಿಸಿದ. ಅವರ ಮೇಲೆ ಕಣ್ಗಾವಲಿಕೆಗಾಗಿ ಗುಮಾಸ್ತರನ್ನು ನಿಯಮಿಸಿ ಕೋಟೆಯ ಒಂದೊಂದು ಭಾಗಕ್ಕೆ ಸರ್ಕಾರದಲ್ಲಿಯ ಒಬ್ಬೊಬ್ಬ ಸರದಾರನನ್ನು ನಿಯಮಿಸಿದನು. ಇಡೀ ಕೋಟೆಯನ್ನು 2 ವರ್ಷ 6 ತಿಂಗಳಲ್ಲಿ ಕಟ್ಟಿದರಂತೆ. ಕೋಟೆಯ ಉದ್ದ 6 ಫರಸಖ (28.8 ಕಿಮೀ) ಆಯಿತು. ಫರಸಖ ಎಂಬ ಪದ ಪಾರಸೀ ಭಾಷೆಯದು. ಪಾರಸೀ ಶಬ್ದಕೋಶದ ಪ್ರಕಾರ ಒಂದು ಫರಸಖ ಎಂದರೆ 3 ಮೈಲು.

ಕೋಟೆಯನ್ನು ಕಟ್ಟುವ ಕೆಲಸ ಹಿಜರಿ ಸನ್ 973ರಲ್ಲಿ ಮುಗಿಯಿತು (1565–66). ಕೋಟೆಯ ಗೋಡೆಯ ಅಗಲ 8 ಗಜ (7.20ಮೀ), ಎತ್ತರ 20 ಗಜ (18.0 ಮೀ) ಇದ್ದು 120 ಬುರುಜುಗಳಿವೆಯಂತೆ. ಕೋಟೆಯ ಸುತ್ತ 6,000 ತೂಬುಗಳನ್ನು ಕೊರೆಯ

ಲಾಗಿದೆಯೆಂದೂ ಹೇಳಲಾಗಿದೆ. ಕೋಟೆಯಲ್ಲಿ 70 ಕಳ್ಳಕಿಂಡಿಗಳಿವೆಯಂತೆ. ಕೋಟೆಗೆ 6 ಬಾಗಿಲುಗಳಿದ್ದು, ಅರಮನೆಯ ಕೋಟೆ ಗೋಡೆಗೆ ಮುಖ ಮಾಡಿದ ಬಾಗಿಲಿಗೆ ಮೆಕ್ಕಾ ಬಾಗಿಲು ಎಂದೂ ಉಳಿದ ಬಾಗಿಲುಗಳಿಗೆ ಆ ಬಾಗಿಲುಗಳ ಹತ್ತಿರ ಇದ್ದ ಊರುಗಳ ಹೆಸರನ್ನೆ ಇಡಲಾಗಿದೆ. ಆದರೆ ಆ ಬಾಗಿಲುಗಳ ಹೆಸರುಗಳನ್ನು ಹೇಳಿಲ್ಲ. ಅದರಂತೆ ಕೋಟೆಗೆ ಅಗಲವಾದ ಮತ್ತು ಆಳವಾದ ಕಂದಕವನ್ನೂ ತೋಡಲಾಗಿದ್ದು ಅದರಲ್ಲಿ ನೀರು ಯಾವತ್ತೂ ಕಡಿಮೆಯಾಗುವುದಿಲ್ಲವೆಂದು ಹೇಳಲಾಗಿದೆ. ಮುಂದುವರಿದು ಹೇಳುತ್ತ ಅಲಿ ಆದಿಲ್‌ಷಾನ ತಂದೆ ಇಬ್ರಾಹೀಮ್ ಆದಿಲ್‌ಷಾನು ನಗರದ ಮಧ್ಯದಲ್ಲಿ ಅರಮನೆಯ ಸಮೇತ ಎರಡು ಕೋಟೆಗಳನ್ನು ಹಾಗೂ ಎರಡು ಕಂದಕಗಳನ್ನು ಕಟ್ಟಿಸಿದ್ದನೆಂದೂ ಹೇಳಲಾಗಿದೆ. ಬಹುಶಃ ಯೂಸುಫ್ ಆದಿಲ್‌ಷಾನು ಕಟ್ಟಿದ ಅರಮನೆಯ ಕೋಟೆ ಗೋಡೆಯನ್ನು ಆತನ ಮೊಮ್ಮಗ ಇಬ್ರಾಹೀಮ ಇನ್ನಷ್ಟು ಗಟ್ಟಿಮುಟ್ಟಾಗಿ ಕಟ್ಟಿರಬೇಕು. ಅಲಿ ಆದಿಲ್‌ಷಾನು ನಗರದ ಸುತ್ತ ಭವ್ಯವಾದ ಕೋಟೆ ಗೋಡೆಯನ್ನು ಕಟ್ಟಿದ ಅನಂತರ ನಗರದ ಶ್ರೇಷ್ಠಿಗಳು, ಶ್ರೀಮಂತರು, ಸರದಾರರು ದೊಡ್ಡ ದೊಡ್ಡ ಮಹಲುಗಳನ್ನು, ವಾಡೆಗಳನ್ನು ತಮ್ಮ ವಾಸಸ್ಥಾನಕ್ಕಾಗಿ ಕಟ್ಟಲು ತೊಡಗಿದರಂತೆ.

**ನೀರು ಸರಬರಾಜು:** ಜೀವನಾಧಾರ ನೀರಿನ ವ್ಯವಸ್ಥೆಯ ವಾಸ್ತುಶಿಲ್ಪ ಆಧುನಿಕರನ್ನೂ ಅಚ್ಚರಿಗೊಳಿಸುತ್ತದೆ. ವಿಜಾಪುರದ ಪಶ್ಚಿಮ ಹಾಗೂ ದಕ್ಷಿಣಕ್ಕೆ ಭೂಮಿ ಎತ್ತರವಾಗಿದ್ದುದನ್ನು ಗಮನದಲ್ಲಿಟ್ಟುಕೊಂಡು, ಭೂಮಿಗೆ ಬಿದ್ದ ಮಳೆಯ ನೀರನ್ನು ಒಂದು ಹನಿಯನ್ನೂ ಬಿಡದೆ ಸಂಗ್ರಹಿಸಿ ನಗರಕ್ಕೆ ತರಲಾಗಿದೆ. ಇದೊಂದು ಅಪರೂಪ ಶಿಲ್ಪಿಯ ಅಗಾಧ ಕರ್ತೃತ್ವ ಶಕ್ತಿಯಾಗಿದೆ.



**ಗೋಳಗುಮ್ಮಟ**

ಆದಿಲ್‌ಶಾಹಿ ಕಾಲದ ನೀರಿನ ವ್ಯವಸ್ಥೆ ಕುರಿತು ಮೊದಲಿಗೆ ಗಮನ ಹರಿಸಿದ ಬಾದಶಹ ಒಂದನೆಯ ಅಲಿ ಆದಿಲ್‌ಷಾ ಎಂದು ಫೆರಿಸ್ತ ಹೇಳುತ್ತಾನೆ. ಫೆರಿಸ್ತನನ್ನು ಆಧರಿಸಿಯೇ ಬರೆದ ಬುಸಾತಿನೆ–ಸಲಾತಿನದಲ್ಲಿ ಈ ಕುರಿತು ಸ್ವಲ್ಪ ವಿವರವಿದೆ. ವಿಜಾಪುರದ ಕೋಟೆಯನ್ನು ಕಟ್ಟಿದ ಕಿಶ್ವರಖಾನನೇ ಬಾದಶಹನ ಆಣತಿಯಂತೆ ಐದು ಕೋಸು ದೂರದಿಂದ ನಗರಕ್ಕೆ ನಲ್ಲಿ ನೀರನ್ನು ತಂದ. ದಾರಿಯಲ್ಲಿಯ ಬಂಡೆಗಳನ್ನು ಕೊರೆದು ನೀರನ್ನು ತಂದು ಕೋಟೆಯ ಹತ್ತಿರ ಒಂದು ದೊಡ್ಡ ಹೌದನ್ನು ಕಟ್ಟಿಸಿದ. ಆ ಹೌದಿಗೆ ಕಾರಂಜೆ ಎಂದು ಹೆಸರು. ಆ ಹೌದು ಯಾವಾಗಲೂ ತುಂಬಿರುವಂತೆ ನೀರಿನ ಸರಬರಾಜು ಆಗುತ್ತಿತ್ತು. ನಗರದ ಎಲ್ಲ ಜನರೂ ಈ ನೀರನ್ನು ಉಪಯೋಗಿಸುತ್ತಿದ್ದರು.

**ಪ್ರಾರ್ಥನಾ ಮಂದಿರಗಳು:** ಆದಿಲಶಾಹಿ ಕಾಲದ ಮೊದಲ ಮಸೀದಿಯ ಉಲ್ಲೇಖವನ್ನು ಯೂಸುಫ್ ಆದಿಲ್‌ಷಾನು 1512–13ರಲ್ಲಿ ಕಟ್ಟಿದ. ಅದಕ್ಕೂ ಮೊದಲೆ 1488–89ರಲ್ಲಿ ಫಾರೂಕ್ ಮಹಲದ ಹತ್ತಿರ ಖ್ವಾಜಾ ಜಹಾನನು ಒಂದು ಮಸೀದಿಯನ್ನು ಕಟ್ಟಿದ್ದನಂತೆ. ಆದರೆ ಅರಮನೆಯ ಆವರಣದಲ್ಲಿ ಇರುವ ಒಂದೇ ಒಂದು ಮಸೀದಿಯನ್ನು ನೋಡಿದರೆ, ಇವೆರಡೂ ಒಂದೇ ಆಗಿರಬೇಕು. ಅನಂತರ ಒಂದನೆಯ ಇಬ್ರಾಹಿಂ 1551ರಲ್ಲಿ ಒಂದು ಜುಮ್ಮಾ ಮಸೀದಿಯನ್ನು ಕಟ್ಟಿದನೆಂಬ ಉಲ್ಲೇಖ ದೊರೆಯುತ್ತದೆ. ವಿಜಾಪುರದ ಸುಪ್ರಸಿದ್ಧ ಜುಮ್ಮಾ ಮಸೀದಿಯನ್ನು ಒಂದನೆಯ ಅಲಿ ಆದಿಲ್‌ಷಾನು 1577–78ರಲ್ಲಿ ಕಟ್ಟಲು ಪ್ರಾರಂಭಿಸಿದ. ಇದು ದಕ್ಷಿಣ ಭಾರತದಲ್ಲಿಯೆ ಅತಿ ದೊಡ್ಡದಾದ ಮಸೀದಿ. ಅಲಿ ಆದಿಲ್‌ಷಾ ಅಲ್ಲದೆ ಮುಂದಿನ ನಾಲ್ವರು ಬಾದಶಹರು ಹಾಗೂ ಔರಂಗಜೇಬ್ ಕೂಡ ಈ ಕಟ್ಟಡದ ವಿಸ್ತಾರಕ್ಕೆ ಕಾರಣರಾಗಿದ್ದಾರೆ.

ಜುಮ್ಮ ಮಸೀದಿ ಪೂರ್ವ ಪಶ್ಚಿಮವಾಗಿ 135ಮೀ ಉದ್ದ ದಕ್ಷಿಣೋತ್ತರವಾಗಿ 67.5ಮೀ ಅಗಲದ ಒಂದು ಚೌಕೋನಾಕೃತಿಯ ಬೃಹತ್ ಕಟ್ಟಡ. ಉತ್ತರ–ದಕ್ಷಿಣ ದಿಕ್ಕುಗಳಿಗೆ ಭವ್ಯವಾದ ಪ್ರವೇಶದ್ವಾರಗಳು ಇವೆ. ಆದರೆ ಕಟ್ಟಡದ ಸೌಂದರ್ಯ ಎದ್ದು ಕಾಣುವುದು ಅದರ ಏಳು ಕಮಾನುಗಳಿಂದ. ಪ್ರತಿಯೊಂದು 8.4ಮೀ ಅಗಲ 7.5ಮೀ ಎತ್ತರವಿದ್ದ ಮಧ್ಯದ ಕಮಾನು ಅಲಂಕೃತವಾಗಿದೆ. ಭವ್ಯವಾದ ಸಭಾಗೃಹದಲ್ಲಿ ಪ್ರಾರ್ಥನೆಗಾಗಿ 2250ಮೀ ಚೌಕಾಕಾರದ ಸ್ಥಳಗಳಿವೆ. ಮೇಲೆ 17.1ಮೀ ವ್ಯಾಸದ ಗುಮ್ಮಟವಿದೆ. ಅದರ ಸುತ್ತಲೂ ತಳದಲ್ಲಿ 33 ಗುಮ್ಮಟಗಳಿವೆ.

ಎರಡನೆಯ ಇಬ್ರಾಹಿಮ್ ಆದಿಲ್‌ಷಾ 1588ರಲ್ಲಿ ಕಟ್ಟಿದ ಮಲಿಕಾಯೆ ಜಹಾಂ ಮಸೀದಿಯಲ್ಲದೆ ಎರಡನೆಯ ಅಲಿ ಆದಿಲ್‌ಷಾ ಕೂಡ ಒಂದು ಮಸೀದಿಯನ್ನು ಕಟ್ಟಿಸಿದ್ದ ನೆಂಬುದಾಗಿ ತಿಳಿದುಬರುತ್ತದೆ.

**ಮಹಲುಗಳು/ಉಪನಗರಗಳು/ಉದ್ಯಾನವನಗಳು:** ಯೂಸುಫ್ ಆದಿಲ್‌ಷಾ 1515–16 ಫಾರೂಕ ಮಹಲನ್ನು ಕಟ್ಟಿಸಿದ. ಇದು ಇಂದಿನ ಜಿಲ್ಲಾಧಿಕಾರಿಗಳ ಕಚೇರಿಯಾಗಿದೆ. ಆತನ ಅನಂತರ ಪಟ್ಟಕ್ಕೆ ಬಂದ ಇಸ್ಮಾಯಿಲ್ 1520–21ರಲ್ಲಿ ಚಂಪಾಮಹಲನ್ನು, ಒಂದನೆಯ ಇಬ್ರಾಹಿಂ 1528–29ರಲ್ಲಿ ಹದಿನಾರು ಕಂಬಗಳ ಅಂದರೆ ಸೋಲಹ ಕಂಬಾ ಮಹಲನ್ನು, ಒಂದನೆಯ ಅಲಿ ಆದಿಲ್‌ಷಾ 1560–61ರಲ್ಲಿ ಹೀರಾಮಹಲನ್ನು 1561–62ರಲ್ಲಿ ಕಂಕಣ ಮಹಲ್ ಮತ್ತು ಗಗನ ಮಹಲನ್ನು ಕಟ್ಟಿಸಿದ. ಬಹುಶಃ ಕಂಕಣ ಮಹಲ್ ಎಂಬುದೇ ಗಗನ ಮಹಲ್ ಆಗಿರಬೇಕು. 1649ರಲ್ಲಿ ಗಗನ ಮಹಲ್ ಕಟ್ಟಡ ಸುಟ್ಟುಹೋಯಿತು. ಎರಡನೆಯ ಇಬ್ರಾಹಿಂ ಆದಿಲ್‌ಷಾ ಸಾತ ಮಜಲಿ ಮಹಲನ್ನು 1583 ಕಟ್ಟಿಸಿದ. 1580ರಲ್ಲಿ ಬುಲಂದ ಮಹಲ್ ಮತ್ತು ಹಫ್ತಗಗನ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದನೆಂಬ ಉಲ್ಲೇಖವಿದೆ. ಈ ಬಾದಶಹ ದಿಲಖುಶ್ ಮಹಲ್ ಎಂಬ ಕಟ್ಟಡವನ್ನು ಕಟ್ಟಿಸಿದನೆಂಬ ಉಲ್ಲೇಖ ಎರಡು ಗ್ರಂಥಗಳಲ್ಲಿ ಬರುತ್ತದೆ. ಆದರೆ ಇದು ಯಾವ ಕಟ್ಟಡವೆಂಬುದನ್ನು ಗುರುತಿಸಬೇಕಾಗಿದೆ. ಇದಲ್ಲದೆ 1588ರಲ್ಲಿ ಆನಂದ ಮಹಲನ್ನು ಕಟ್ಟಿಸಿದ. ಎರಡನೆಯ ಇಬ್ರಾಹೀಮ್ 1599–1600ರಲ್ಲಿ ನವರಸಪುರ ಉಪನಗರವನ್ನು ಕಟ್ಟಲು ಪ್ರಾರಂಭಿಸಿ ಮುಂದಿನ ಐದಾರು ವರುಷಗಳಲ್ಲಿ ಕಟ್ಟಿ ಮುಗಿಸಿದ್ದ. 1602ರಲ್ಲಿ ಕಲ್ಲೂನ ಮಗನು ಜೋಹರಾಪುರವನ್ನು ಕಟ್ಟಿದ. 1646ರಲ್ಲಿ ಸುಲ್ತಾನ ಮಹ್ಮದ್ ಆದಿಲ್‌ಷಾ ಆಸಾರ್ ಮಹಲ್ ಕಟ್ಟಡವನ್ನು ಕಟ್ಟಿಸಿದ. ಇದಕ್ಕೆ ದಾದ ಮಹಲ್ ಎಂಬ ಹೆಸರೂ ಇತ್ತು. ಎರಡನೆಯ ಅಲಿ ಆದಿಲ್‌ಷಾ 1659ರಲ್ಲಿ ಹಸನಿ ಮಹಲ್, ಅಲಿ ಮಹಲ್, 1602ರಲ್ಲಿ ಅರ್ಶ್ ಮಹಲುಗಳನ್ನು ಕಟ್ಟಿಸಿದ. ಹಸನಿ ಮಹಲ್ ಹಾಗೂ ಅಲಿ ಮಹಲ್ ಕಟ್ಟಡಗಳನ್ನು ಗುರುತಿಸಬೇಕಾಗಿದೆ. ಬಾರಾಇಮಾಮರಿ ಗಾಗಿ ಹಸನಿ ಮಹಲನ್ನು ಕಟ್ಟಲಾಯಿತು. ಅಲಿ ಮಹಲು ಪೂರ್ತಿಯಾಗಿ ಸಾಗವಾನಿ ಕಟ್ಟಿಗೆಯಿಂದ ಕಟ್ಟಲಾಗಿತ್ತು. ಅದು ಬೆಬಿಲೋನಿಯದಲ್ಲಿಯ ಖೈಬಾನಾಕ್ ಕಟ್ಟಡವನ್ನು ಹೋಲುತ್ತಿತ್ತು. ಬಣ್ಣ ಹಚ್ಚಿದ ಅಲಿ ಮಹಲ್ ಎಂದರೆ ಬಾದಶಹನ ಮುತ್ತು, ಸ್ವರ್ಗೀಯ ಆನಂದ. ಅಲ್ಲಿಯ ಚಿತ್ರಗಳು, ಅಲಂಕಾರಗಳು ಜಗತ್ ಶೋಭಾದಾಯಕವಾದವುಗಳು. ಹೊಸದಾಗಿ ಕಟ್ಟಿದ 'ಚೌತಂ'ವು ಅದಕ್ಕೊಂದು ಆಭರಣವಾಗಿದೆ ಎಂದೆಲ್ಲ ವರ್ಣಿಸಲಾಗಿದೆ. ಬಾದಶಹರು ಕಟ್ಟಿಸಿದ ಕಟ್ಟಡಗಳಲ್ಲದೆ ಇತರರು ಕಟ್ಟಿದ ಮುಬಾರಕಖಾನ ಮಹಲ್, ಮೆಹ್ತರ್ ಮಹಲ್ ಮುಂತಾದವುಗಳು ಕೂಡ ಗಮನಾರ್ಹವಾಗಿವೆ.

**ಸಮಾಧಿಗಳು:** ಆದಿಲ್‌ಶಾಹಿ ವಂಶದ ಮೂವರು ಬಾದಶಹರು ಭವ್ಯ ಸಮಾಧಿ ಕಟ್ಟಡಗಳನ್ನು ಕಟ್ಟಿದ್ದಾರೆ. ಎರಡು ಪೂರ್ತಿಗೊಂಡಿವೆ; ಒಂದು ಪೂರ್ತಿಗೊಂಡಿಲ್ಲ. ಪಾರಸೀ ಗ್ರಂಥಗಳಲ್ಲಿ ಉಳಿದೆಲ್ಲ ಕಟ್ಟಡಗಳ ವಾಸ್ತುಶಿಲ್ಪಗಳ ವಿವರಗಳನ್ನು ಕೊಟ್ಟಿದ್ದರೂ ಪ್ರಪಂಚ ಪ್ರಸಿದ್ಧವಾದ ಈ ಕಟ್ಟಡಗಳ ಹೆಸರುಗಳನ್ನು ಕೂಡ ಉಲ್ಲೇಖಿಸದಿದ್ದುದು ಅಚ್ಚರಿಯೇ ಸರಿ. ಬುಸಾತಿನೆ–ಸಲಾತಿನದಲ್ಲಿ ಗೋಳಗುಮ್ಮಟದ ವರ್ಣನೆ ಬರುತ್ತಾದರೂ ಅದರ ಕಾಲಮಾನ ವಿವರ ಇತ್ಯಾದಿಗಳನ್ನು ಕೊಟ್ಟಿಲ್ಲ. ಸುಲ್ತಾನ ಮಹ್ಮದ್ ಆದಿಲ್‌ಷಾನು ಜೀವಂತವಾಗಿದ್ದಾಗಲೇ ಗುಮ್ಮಟವನ್ನು ಕಟ್ಟಿಸಿದ್ದ ಎಂದು ವರ್ಣಿಸಲಾಗಿದೆ. ಎರಡನೆಯ ಇಬ್ರಾಹೀಮ್ ಆದಿಲ್‌ಷಾನನ್ನು ಜೋಹರಾಪುರದಲ್ಲಿ ಸಮಾಧಿ ಮಾಡಲಾಯಿತೆಂದು ಹೇಳಲಾಗುತ್ತದೆ. ಇಬ್ರಾಹೀಮ್ ರೋಜಾ ಕಟ್ಟಡವನ್ನು ಕಟ್ಟಿದ ಉಲ್ಲೇಖಗಳಿಲ್ಲ! ಬಹುಶಃ ಸಮಾಧಿ ಕಟ್ಟಡವನ್ನು ಕಟ್ಟಿದ ಅನಂತರ ಅದಕ್ಕೆ ಇಬ್ರಾಹಿಂ ರೋಜಾ ಎಂಬ ಹೆಸರು ಬಂದಿರಲೂ ಸಾಕು. ಅದರಂತೆ ಸುಲ್ತಾನ ಮಹ್ಮದನ ಸಮಾಧಿಯನ್ನು ಬಾದಶಾಹಪುರದಲ್ಲಿ ಮಾಡಲಾಯಿತೆಂದೂ, ಎರಡನೆಯ ಅಲಿ ಆದಿಲ್‌ಷಾನ ಸಮಾಧಿಯನ್ನು ಶಾಹಪೇಟದಲ್ಲಿ ಮಾಡಲಾಯಿತೆಂದೂ ಹಫ್ತ–ಕುರ್ಸಿಯ ಫಿತುರಖಾನ ಹೇಳುತ್ತಾನೆ. ಒಂದನೆಯ ಅಲಿ ಆದಿಲ್‌ಷಾನ ಸಮಾಧಿಯನ್ನು ಕೋಟೆಯ ಒಳಗಡೆಯ ಲಷ್ಕರ ಬಜಾರದಲ್ಲಿ ಮಾಡಲಾಯಿತು. ಫಿತುರ್‌ಖಾನ ಅಸದಖಾನ ಲ್ಯಾರಿ ಎರಡನೆಯ ಅಲಿ ಆದಿಲ್‌ಷಾ ಕಾಲದಲ್ಲಿ ಇದ್ದವನು (1656–72). ಈತನಿಗೆ ಆದಿಲ್‌ಶಾಹೀ ಇತಿಹಾಸ ಚೆನ್ನಾಗಿ ಗೊತ್ತಿದ್ದುದನ್ನು ಕೇಳಿ 2ನೆಯ ಅಲಿ ಆದಿಲ್‌ಷಾನೆ ಇತಿಹಾಸ ಬರೆಯಲು ಹೇಳಿದ್ದರಂತೆ. ಅದರಂತೆ ಬರೆದುದಾಗಿ ಹೇಳುತ್ತಾನೆ. ಹಫ್ತ ಕುರ್ಸಿಯನ್ನು ಬರೆದ 150 ವರ್ಷಗಳ ಅನಂತರ ಬುಸಾತಿನೆ–ಸಲತಿನ್ ಬರೆದದ್ದು. ಆದ್ದರಿಂದ ಬಾದಶಹರ ಸಮಾಧಿಗಳಿಗೆ ಹೆಸರುಗಳು ಅನಂತರ ಬಂದಿರಬಹುದೆಂದು ಊಹಿಸಬಹುದು.

ಒಂದು ದಂತ ಕಥೆಯ ಪ್ರಕಾರ ಎರಡನೆಯ ಇಬ್ರಾಹಿಂ ಆದಿಲ್‌ಷಾ (1580–1626) ಸೂಕ್ಷ್ಮ ಕೆತ್ತನೆಯ ಕುಸುರಿ–ಕೆಲಸದ ಸುಂದರ ಕಟ್ಟಡ ಇಬ್ರಾಹಿಂ ರೋಜಾವನ್ನು ಕಟ್ಟಿದಾಗ ಮಗ ಮಹ್ಮದ್ ಆದಿಲ್‌ಷಾ (1626–56) ಸೂಕ್ಷ್ಮತೆಗೆ – ಕುಸುರಿ ಕೆಲಸಕ್ಕೆ ಅವಕಾಶವಿಲ್ಲದೆ ಭವ್ಯವಾದ ಸರಳ ಗಾಂಭೀರ್ಯದ ಕಟ್ಟಡ ಗೋಳ–ಗುಮ್ಮಟವನ್ನು ಕಟ್ಟಿಸಿದ. ಆತನ ಮಗ ಎರಡನೆಯ ಅಲಿ ಆದಿಲ್‌ಷಾನಿಗೆ (1656–72) ಸೂಕ್ಷ್ಮತೆ ಹಾಗೂ

ಭವ್ಯತೆಗಳಿಗೆ ಮಿಗಿಲಾದ ಕಟ್ಟಡವನ್ನು ಕಟ್ಟಿಸುವ ಯೋಜನೆಯನ್ನು ಹಾಕಿಕೊಂಡಿದ್ದ. ಆತನ ದೌರ್ಭಾಗ್ಯದಿಂದ ಅದು ಪೂರ್ತಿಯಾಗದೆ ಅರ್ಧ ಕೆಲಸಕ್ಕೆ ಪರ್ಯಾಯ ಶಬ್ದ ಬಾರಾ-ಕಮಾನ್ ಆಯಿತು! ಕಟ್ಟಡದ ತಳಪಾಯ ಹಾಗೂ ಕಟ್ಟೋಣದ ಕ್ಷೇತ್ರ ಗೋಳ ಗುಮ್ಮಟಕ್ಕಿಂತ ದೊಡ್ಡದಾಗಿದೆ ಎಂಬುದನ್ನು ನೆನೆಸಿಕೊಂಡಾಗ, ಅಲಿರೋಜಾ ಕಟ್ಟಡ ಪೂರ್ತಿಗೊಂಡಿದ್ದರೆ ಪ್ರಪಂಚದಲ್ಲಿಯೆ ಅದೊಂದು ಅದ್ಭುತ ಕಟ್ಟಡವಾಗುತ್ತಿತ್ತು. (ಎಂ.ವಿ.ಎ.)

**ವರ್ಣಚಿತ್ರಗಳು:** ವಿಜಾಪುರ ಹಾಗೂ ಸುತ್ತಮುತ್ತ ಎರಡು ಸ್ಥಳಗಳಲ್ಲಿ ಆದಿಲಶಾಹಿ ಕಾಲದವೆಂದು ಹೇಳಲಾಗುವ ಭಿತ್ತಿ ಚಿತ್ರಗಳು ದೊರೆಯುತ್ತವೆ. ಒಂದು, ನಗರದ ಆಸಾರ ಮಹಲದಲ್ಲಿ; ಇನ್ನೊಂದು ಹತ್ತಿರದ ಕುಮಟಗಿ ಗ್ರಾಮದಲ್ಲಿ. 1580-1626ರ ಮಧ್ಯದಲ್ಲಿ ಆಳಿದ ಎರಡನೆಯ ಇಬ್ರಾಹೀಮ್ ಆದಿಲ್‌ಷಾ ಕುಮಟಗಿಯಲ್ಲಿ ಕ್ರೀಡ ವಿನೋದಕ್ಕೆಂದು ಕಟ್ಟಿಸಿದ ಜಲ ಮಂಟಪದಲ್ಲಿ ಚಿತ್ತಾರಗಳು, ವ್ಯಕ್ತಿ ಚಿತ್ರಗಳು ಇವೆ. ಅವು ಕಾಣಿಸದಷ್ಟು ಅಳಿಸಿ ಹೋಗಿವೆ. ಅಲ್ಲಿಯ ಪೋಲೋ ಆಟದ ಚಿತ್ರ, ಪಕೀರನ ವೇಷದ ಸುಲ್ತಾನನ ಚಿತ್ರಗಳು ಗಮನಾರ್ಹವಾಗಿದ್ದು ಅವುಗಳಲ್ಲಿ ಯುರೋಪಿನ ಛಾಯಾಕರಣದ ರೀತಿಯನ್ನೇ ವಿದ್ವಾಂಸರು ಗುರುತಿಸಿದ್ದಾರೆ. ನಗರದ ಆಸಾರ್ ಮಹಲದಲ್ಲಿಯ ಮೇಲಿನ ಮೂರು ಕೋಣೆಗಳಲ್ಲಿ ಗೋಡೆಗಳ ತುಂಬ ಬರೆದ ವರ್ಣ ಚಿತ್ರಗಳನ್ನು ಇಂದಿಗೂ ಕಾಣಬಹುದು. ಅವುಗಳು ನೀಲ ಬಣ್ಣ ಪ್ರಧಾನವಾಗಿರುವ ಆಲಂಕಾರಿಕ ಚಿತ್ತಾರಗಳಿಂದಲೂ ಅಲ್ಲೊಂದು ಇಲ್ಲೊಂದು ವ್ಯಕ್ತಿ ಚಿತ್ರಗಳಿಂದಲೂ ತುಂಬಿಕೊಂಡಿವೆ. 1642-43ರಲ್ಲಿ ಸುಲ್ತಾನ ಮಹ್ಮದ್ ಆದಿಲ್‌ಷಾನು ದಾದ ಮಹಲ ಕಟ್ಟಿಸಲು 1646ರಲ್ಲಿ ಪ್ರಾರಂಭಿಸಿದನೆಂದು ಮತ್ತು ಹಫ್ತ ಕುರ್ಸಿಯಲ್ಲಿ ಬಂಗಾರದ ಬಣ್ಣ ಹಚ್ಚಿದರು ಎಂದು ಮಹಮ್ಮದ ನಾಮ ಹೇಳುತ್ತದೆ. ಅದೇ ಗ್ರಂಥದಲ್ಲಿ ಮುಂದುವರೆದು ಎರಡನೆಯ ಅಲಿ ಆದಿಲ್‌ಷಾನ ಇತಿಹಾಸವನ್ನು ಬರೆಯುತ್ತ 1659ರಲ್ಲಿ ಅಲಿ ಮಹಲ್‌ನ ಚಿತ್ರವನ್ನು ಕೊಡುತ್ತ, ಅದನ್ನು ಸಂಪೂರ್ಣ ಸಾಗವಾನಿ ಮರದಿಂದ ಕಟ್ಟಿ ಅದಕ್ಕೆ ವಿಶೇಷ ಬಣ್ಣವನ್ನು ಕೊಡಲಾಯಿತು. ಆದುದರಿಂದ ಅಲಿ ಮಹಲದಲ್ಲಿಯ ಚಿತ್ರಗಳು ಮತ್ತು ಅಲಂಕಾರಗಳು ಜಗತ್ ಶೋಭಾದಾಯಕವಾಗಿವೆ. ದಾದ ಮಹಲ್ ಅಲಿ ಮಹಲಾಗಿ ಇಂದು ಆಸಾರ್ ಮಹಲ್ ಆಗಿರಬಹುದೆ? ಏಕೆಂದರೆ ಗ್ರಂಥಸ್ಥವಾಗಿ ಆಸಾರ್ ಮಹಲ್ ಹೆಸರಿನ ಉಲ್ಲೇಖ ದೊರೆತಿಲ್ಲ. (ಕೆ.ಕಿ.ಕೆ.)

**ವಾಸ್ತುಶೈಲಿ:** ಬಿಜಾಪುರದ ಆದಿಲ್‌ಶಾಹಿ ವಂಶಸ್ಥರ ಆಡಳಿತ ಕಾಲದಲ್ಲಿ ಸು. 16-17ನೆಯ ಶತಮಾನದಲ್ಲಿ ನಿರ್ಮಿಸಲಾದ ಭವ್ಯಸ್ಮಾರಕಗಳ ವಾಸ್ತುಶೈಲಿ ವಿವರ ಇಲ್ಲಿ ಸಂಕ್ಷಿಪ್ತವಾಗಿ ನೀಡಿದೆ. ಆದಿಲ್‌ಶಾಹಿ ದೊರೆಗಳು ಸಮರ್ಥ ಸಾಮ್ರಾಜ್ಯ ನಿರ್ಮಾಪಕರಾಗಿದ್ದುದ್ದರ ಜೊತೆಗೆ ಎಲ್ಲ ಪ್ರಕಾರದ ಲಲಿತಕಲೆಗಳಿಗೂ ಪ್ರೋತ್ಸಾಹ ನೀಡಿ, ಸಾಹಿತ್ಯ ಸಂಗೀತಗಳಿಗೂ ಆಶ್ರಯ ನೀಡಿದ್ದರು. ಬಿಜಾಪುರದಲ್ಲಿ ದಖನ್ನಿ ಪ್ರಸಿದ್ಧ ಕಲಾಪ್ರಕಾರ ಚಿಕಣಿಚಿತ್ರಕಲೆ ಉತ್ತುಂಗಕ್ಕೇರಿತು. ವಿವಿಧ ತಲವಿನ್ಯಾಸ ಊರ್ಧ್ವವಿನ್ಯಾಸಗಳನ್ನುಳ್ಳ ರಾಜಸೌಧ, ಅನೇಕ ರೀತಿಯ ಸಾಮಾಜಿಕ ಹಾಗೂ ಧಾರ್ಮಿಕ ಕಟ್ಟಡಗಳು ವರ್ಣರಂಜಿತ ವಿಹಾರಭವನ, ಅಪೂರ್ವ ತಾಂತ್ರಿಕ ನೈಪುಣ್ಯವನ್ನು ಪ್ರದರ್ಶಿಸುವ ಜಲಪೂರೈಕೆಯ ರಚನೆ, ದುರ್ಗಮ ರಕ್ಷಣಾ ವ್ಯವಸ್ಥೆಯ ಕಟ್ಟಡಗಳಿಂದ ರಾಜಧಾನಿ ಅಲಂಕೃತವಾಗಿದ್ದು, ಈಗ ಉಳಿದಿರುವ ಭಗ್ನಾವಶೇಷಗಳು ಬಿಜಾಪುರದ ಅಂದಿನ ವೈಭವ ಹಾಗೂ ವಾಸ್ತು ಸಾಧನೆಗಳ ಜೀವಂತ ಕುರುಹುಗಳಾಗಿವೆ.

ಕರ್ನಾಟಕದ ಜನಪ್ರಿಯ ಪ್ರವಾಸಿ ಕೇಂದ್ರಗಳಲ್ಲಿ ಒಂದಾಗಿರುವ ಬಿಜಾಪುರ ಮತ್ತು ಅದರ ಪರಿಸರದಲ್ಲಿರುವ ಸ್ಮಾರಕಗಳ ಸರ್ವೇಕ್ಷಣ ದಾಖಲತಿಗೆ ಮೊದಲಿಟ್ಟ ಆದ್ಯರಲ್ಲಿ ಜೇಮ್ಸ್ ಫರ್ಗ್ಯುಸನ್ ಮತ್ತು ಹೆನ್ರಿ ಕಸಿನ್ಸ್ ಪ್ರಮುಖರು. ಪುರಾತತ್ತ್ವ ಇಲಾಖೆಯ ಅಂದಿನ ಪಶ್ಚಿಮ ವಲಯ (ಇಂದಿನ ಔರಂಗಾಬಾದ್ ವಲಯ) ಅಧೀಕ್ಷಕರಾಗಿ ಈ ಪ್ರದೇಶದಲ್ಲಿನ ವಿವಿಧ ಗಾತ್ರ, ಪ್ರಾಮುಖ್ಯದ ಸು. 320 ಕಟ್ಟಡಾವಶೇಷಗಳ ವ್ಯವಸ್ಥಿತ, ವೈಜ್ಞಾನಿಕ ದಾಖಲಾತಿ ಮಾಡಿ ನಕ್ಷೆ, ಛಾಯಚಿತ್ರ, ಶಾಸನಗಳಿಂದ ಪುಷ್ಟವಾದ ವರದಿಗಳನ್ನು ಪ್ರಕಟಿಸಿದರು. ಅವರ ಬಿಜಾಪುರ್ ಅಂಡ್ ಇಟ್ಸ್ ಆರ್ಕಿಟೆಕ್ಚರ್ ಇಂದಿಗೂ ಒಂದು ಮೇರುಕೃತಿ. ಬಿಜಾಪುರದ ಸ್ಮಾರಕಗಳಲ್ಲಿ ಜಾಮೀ ಮಸೀದಿ, ಇಬ್ರಾಹಿಂ ರೋಜಾ ಮುಂತಾದವೂ ಸೇರಿದಂತೆ 95 ಅತ್ಯುತ್ತಮ ಸ್ಮಾರಕಗಳನ್ನು ಕೇಂದ್ರ ಪುರಾತತ್ವ ಇಲಾಖೆ ರಾಷ್ಟ್ರೀಯ ಪ್ರಾಮುಖ್ಯತೆಯ ಸ್ಮಾರಕಗಳೆಂದು ಸಂರಕ್ಷಿಸುತ್ತಿದೆ.

ದಕ್ಷಿಣ ಭಾರತದ ಪ್ರಾರಂಭಿಕ ಹಂತದ ಮಹಮ್ಮದೀಯ ಕಟ್ಟಡಗಳು ಪ್ರಚಲಿತ ಇಸ್ಲಾಮೀ ಶೈಲಿಗಳ ಅನುಕರಣೆಗಳಾಗಿದ್ದರೂ ಕ್ರಮೇಣ ಸ್ಥಳೀಯ ಹಿಂದು ವಾಸ್ತುಶೈಲಿಯ ಕಲ್ಪನೆ, ನಿರ್ಮಾಣತಂತ್ರ ಹಾಗೂ ಆಲಂಕಾರಿಕ ಅಂಶಗಳ ಉತ್ತಮ ಲಕ್ಷಣಗಳ ಔಚಿತ್ಯಪೂರ್ಣ ಅಳವಡಿಕೆಯಿಂದ ವಿಶಿಷ್ಟ ದಖನಿ ವಾಸ್ತುಶೈಲಿಯಾಗಿ ರೂಪುಗೊಂಡಿತು. ಪ್ರಮಾಣಬದ್ಧವಾದ ವೇದಿಕೆಯ ಮೇಲೆ ಕಮಲದಳಗಳ ನಡುವಿನಿಂದ ಮೇಲೇರುವ ಅಲಂಕೃತ ಚಿತ್ತಾಕರ್ಷಕ ವಿನ್ಯಾಸದ ಗುಮ್ಮಟ, ಮೇಲ್ಛಾವಣಿಯ ಮೋಹಕ ಕಂಗುರಗಳ ಸಾಲು, ಅವುಗಳಿಗೆ ಆಧಾರವಾಗಿರುವ ಶ್ರೀಮಂತ ಕೆತ್ತನೆಯ ಮುಂಚಾಚಿದ ಸಜ್ಜ, ಬಾಗಿ ಬಳುಕುವ ಕಮಾನುಗಳು, ಅವುಗಳ ಮೂಲೆಗಳಲ್ಲಿಯ ಸೂಕ್ಷ್ಮ ಅಲಂಕರಣ, ಕಂಬಗಳ ಬದಲಿಗೆ ಬಳಸಿರುವ ಬೃಹದ್ಗಾತ್ರದ ಕಮಾನುಗಂಬಗಳು ಇವು ಬಿಜಾಪುರ ವಾಸ್ತುಶೈಲಿಯ ಕೆಲವು ವಿಶಿಷ್ಟ ಲಕ್ಷಣಗಳು. ಕೊರೆದು ಮೂಡಿಸಿದ ಗಾರೆಯ ಮನೋಹರ ಹೂಬಳ್ಳಿಗಳ ಹಾಗೂ ಜ್ಯಾಮಿತೀಯ ವಿನ್ಯಾಸಗಳಿರುವ ಫಲಕ, ಕುರಾನಿನ ಸೂಕ್ತಿ ಹಾಗೂ ಇತರ ಶಾಸನಗಳಿರುವ, ಅಲಂಕರಣವಿರುವ ಹೊರ ಭಿತ್ತಿಗಳು, ಕಲಶ ಸಹಿತ ತೆಳು ನೀಳವಾದ ಮನಸಳೆಯುವ ಮಿನಾರುಗಳು ಈ ನಿರ್ಮಿತಿಗಳ ಸೌಂದರ್ಯವನ್ನು ಹೆಚ್ಚಿಸಿವೆ. ಕೆಲವು ಮುಖ್ಯ ಕಟ್ಟಡಗಳನ್ನು ಭಿತ್ತಿಚಿತ್ರಗಳಿಂದಲೂ ಅಲಂಕರಿಸಲಾಗಿದೆ. ಸಹಜವಾಗಿ ಈ ವಾಸ್ತುಶೈಲಿಯಲ್ಲಿ ಇಸ್ಲಾಮೀ ಶೈಲಿಯ ವಿಶಿಷ್ಟ ಲಕ್ಷಣವಾದ ವೈಶಾಲ್ಯ , ಭವ್ಯ ಬೃಹದ್ಗಾತ್ರ, ಪ್ರಮಾಣಬದ್ಧತೆ, ಅಕ್ಷಸಮತೆಗಳು ಪ್ರಧಾನವಾಗಿವೆ. ಕೆಲವು ಕಟ್ಟಡಗಳಲ್ಲಿ ಗುಮ್ಮಟಗಳ ಬದಲಾಗಿ ಬಳಸಿರುವ ವಿಶಿಷ್ಟ ತಂತ್ರಗಾರಿಕೆಯಿಂದ ರೂಪಿಸಿದ ವಿಸ್ಮಯಕಾರಿ ವೈಶಾಲ್ಯದ ಸಮತಲ ವಿತಾನಗಳು (ಮೇಲ್ಛಾವಣಿ) ಅಪ್ರತಿಮ ವಾಸ್ತು ಸಾಹಸಗಳೇ ಆಗಿವೆ.

ಮಹಮ್ಮದ್ ಆದಿಲ್‌ಷಾನ ಸಮಾಧಿ ಸ್ಥಳವಾದ ಗೋಳಗುಮ್ಮಟ (1656) ಹಿಂದು-ಇಸ್ಲಾಂ ಶೈಲಿಯ ಅತ್ಯುತ್ಕೃಷ್ಟ ಉದಾಹರಣೆ. ಧ್ವನಿ ಸಂಯೋಜನೆ, ವಾಸ್ತುತಂತ್ರಜ್ಞಾನ ಹಾಗೂ ಸೌಂದರ್ಯ ತತ್ತ್ವಗಳ ಕಲಾತ್ಮಕ ಸಂಯೋಜನೆಯಿಂದ ರೂಪಗೊಂಡು ಉನ್ನತ ವೇದಿಕೆಯ ಮೇಲೆ ನಿರ್ಮಿತವಾದ ಈ ಕಟ್ಟಡ ವಿಸ್ತಾರವಾದ ತಲವಿನ್ಯಾಸ,



ಆದಿಲ್‌ಶಾಹಿ ಕಾಲದ ವರ್ಣಚಿತ್ರ

ಬೃಹತ್ಪ್ರಮಾಣದ ಗುಮ್ಮಟ, ಮೂಲೆಗಳಲ್ಲಿ ಜೋಡಿಸಲಾದ ಅಷ್ಟಕೋನಾಕಾರದ ಮೋಹಕ ಸ್ತಂಭಗೋಪುರ (ಮಿನಾರು) ಮತ್ತು ವಿಶೇಷವಾಗಿ ತನ್ನ ಪಿಸುಗುಟ್ಟುವ ಹಜಾರ ದಿಂದಾಗಿ ಪ್ರಪಂಚದ ವಾಸ್ತು ನಿರ್ಮಿತಿಗಳಲ್ಲಿಯೇ ಒಂದು ಅದ್ಭುತವೆನಿಸಿದೆ. ಈ ಕಟ್ಟಡವನ್ನು ವಿಶ್ವಪರಂಪರೆ ಸ್ಮಾರಕವನ್ನಾಗಿ ಪರಿಗಣಿಸುವ ಪ್ರಯತ್ನವಾಗಿ ವಿಶ್ವ ಪರಂಪರೆಯ ಸಮಿತಿಯ ಪರೀಕ್ಷಾರ್ಥಕ ಪಟ್ಟಿಯಲ್ಲಿ ನಮೂದಿಸಲು ವಿನಂತಿಸಲಾಗಿದೆ. ಕಲಾತ್ಮಕವಾದ ಅಂಡು ಮಸೀದಿ, ವರ್ಣಮಯ ಭಿತ್ತಿಚಿತ್ರಗಳಿಗೆ ಪ್ರಸಿದ್ಧವಾದ ಅಸಾರ್ ಮಹಲ್,ವಿಶಿಷ್ಟ ತಲವಿನ್ಯಾಸಗಳ ಜೋಡುಗುಮ್ಮಟ,ಸಾಮಾಜಿಕ ನಿರ್ಮಿತಿಗಳ ಉತ್ತಮ ಮಾದರಿಗಳಾದ ಸಾತ್ ಮಂಜಿಲ್ ಹಾಗೂ ಗಗನ್ ಮಹಲ್, ಸರಳ ಸುಂದರ ವಿನ್ಯಾಸದ ಚಾಂದ್ ಮತ್ತು ತಾಜ್ ಬಾವಡಿಗಳು ಬಿಜಾಪುರ ವಾಸ್ತುಶೈಲಿಯ ಇತರ ಉದಾಹರಣೆಗಳು.

ಸೌಂದರ್ಯ ಹಾಗೂ ಶ್ರೀಮಂತಿಕೆಯ ಆಗರವಾಗಿದ್ದ ಈ ರಾಜಧಾನಿಯನ್ನು 1604ರಲ್ಲಿ ಸಂದರ್ಶಿಸಿದ ಅಕ್ಬರ್ ಚಕ್ರವರ್ತಿಯ ರಾಯಭಾರಿ ಅಸದ್‌ಬೇಗ್ ವಿಶ್ವದ ಯಾವುದೇ ನಗರ ಪ್ರವಾಸಿಗಳಿಗೆ ಇದಕ್ಕೂ ಹೆಚ್ಚಿನ ನಯನಾನಂದಕರ ನೋಟವನ್ನು ನೀಡಲಾರದು ಎಂದಿದ್ದಾನೆ.

**ಬಿಜಾಪುರದ ರಕ್ಷಣಾ ವ್ಯವಸ್ಥೆಯ ಕಟ್ಟಡಗಳು ಕೋಟೆ, ಅರ್ಕಿಲ್ಲಾ ಮತ್ತು ಬುರುಜುಗಳು:** ಬಹಮನಿ ಅರಸರ ಅಧೀನದಲ್ಲಿದ್ದ ಯೂಸುಫ್ ಆದಿಲ್ ಖಾನ್ ಸ್ವತಂತ್ರ ಅರಸನಾದ ಮೇಲೆ ಮೊಟ್ಟ ಮೊದಲ ಆವಶ್ಯಕತೆಯಾಗಿ ರಾಜಧಾನಿಯ ಸುತ್ತ ಅಭೇದ್ಯವಾದ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದ. ಮೊದಲು ಈ ಪ್ರದೇಶದ ಸುತ್ತ ಇದ್ದ ಮಣ್ಣಿನ ಕೋಟೆಯನ್ನು ವಿಸ್ತರಿಸಿ, ಕಲ್ಲಿನ ಹೊದಿಕೆ ನೀಡಿ, ಸುಭದ್ರವಾಗಿಸಿ ಈ ಹೊಸ ದುರ್ಗಮ ಕೋಟೆ ರೂಪಿತ ವಾಗಿದೆ. ಈ ಕಾರ್ಯ ಮೊದಲನೆಯ ಅಲಿಯ ಕಾಲದವರೆಗೆ ಮುಂದುವರೆದು ಬಹುಶಃ 1565ರಲ್ಲಿ–ಅಂದರೆ ಸಂಘಟಿತ ದಖನಿ ಸುಲ್ತಾನರು ವಿಜಯನಗರದ ಮೇಲೆ ಯುದ್ಧ ಸಾರುವ ವೇಳೆಗೆ–ಪೂರ್ಣವಾಯಿತು. ಕೋಟೆಯಲ್ಲಿ ಬಹುತೇಕ ದೀರ್ಘವೃತ್ತಾಕಾರದ, ಏಕಕೇಂದ್ರಿತವಾದ ಎರಡು ವಿಶಿಷ್ಟ ಭಾಗಗಳಿವೆ. ಮೊದಲನೆಯದು ಕಡೆಗಾಪಿನ ಒಳಕೋಟೆ (ಅರ್ಕಿಲ್ಲಾ). ಇದು ಹೊರಕೋಟೆಯ ಮಧ್ಯದಲ್ಲಿದ್ದು, ಅರಮನೆ, ಅಂತಃಪುರ, ರಾಜಪ್ರಮುಖರ

ಉಪಲಿ ಬುರುಜ್, ಬಿಜಾಪುರ

ನಿವಾಸಿಗಳು, ಜಾಮೀಮಸೀದಿ, ನ್ಯಾಯಾಲಯ, ಆಡಳಿತ ವಿಭಾಗ ಮುಂತಾದ ಪ್ರಭುತ್ವ ಕೇಂದ್ರವನ್ನು ಸುತ್ತುವರೆದು ಸು.400 ಮೀ ಪರಿಧಿ ಹೊಂದಿದೆ. ಇದನ್ನು ಪ್ರವೇಶಿಸಲು ದಕ್ಷಿಣ ದಿಕ್ಕಿನಲ್ಲಿ ಸುಭದ್ರ ರಕ್ಷಣಾ ವ್ಯವಸ್ಥೆಯಿದ್ದ ಏಕೈಕ ಮುಖ್ಯ ಪ್ರವೇಶದ್ವಾರವಿದೆ. ಇದರ ಸುತ್ತಲೂ ಆಳ, ಅಗಲವಾದ ಕಂದಕವಿದೆ. ಹೊರಗೋಡೆಯು ಸು. 10ಕಿಮೀ ಪರಿಧಿ ಹೊಂದಿದ್ದು, ಸುತ್ತಣ ಕಂದಕ 12 ರಿಂದ 15ಮೀ ಅಗಲ ಹಾಗೂ 5ಮೀ ಆಳವಾಗಿದೆ. ಪೂರ್ವಪಶ್ಚಿಮವಾಗಿ ಈ ಹೊರಕೋಟೆಯ ಅಗಲ 3ಕಿಮೀ ಹೆಚ್ಚಾಗಿದೆ. ಇಳಿಜಾರಾದ ಕೋಟೆಯ ಹೊರಮೇಲ್ಮೈ ಆಳದಲ್ಲಿರುವ ಸ್ವಾಭಾವಿಕ ಶಿಲಾಸ್ತರದ ಮೇಲೆ ಎರಡು ಸಮಾನಾಂತರ ಗೋಡೆಗಳನ್ನು ಕಟ್ಟಿ, ಒಳಗೆ ಕಲ್ಲುಗುಂಡು, ಮಣ್ಣು ತುಂಬಿ, ಕಲ್ಲುಚಪ್ಪಡಿ ಹಾಸಿ ಕೋಟೆ ಕಟ್ಟಲಾಗಿದೆ. ಬಹುತೇಕ ಕಂದಕ ತೋಡಿದಾಗ ದೊರೆತ ಸಾಮಗ್ರಿಗಳು ಸ್ಥಳೀಯ ಹಿಂದು, ಜೈನ ದೇವಾಲಯಗಳ ವಸ್ತುಗಳಾಗಿವೆ.

ಅಭೇದ್ಯ ಗೋಡೆಯ ಹೊರಪರಿಧಿಗೆ ಹೊಂದಿಕೊಂಡಂತೆ ಅರ್ಧವೃತ್ತಾಕಾರದ 106 ಬುರುಜುಗಳು, 5 ಮುಖ್ಯ ಮಹಾದ್ವಾರಗಳು ಮತ್ತು ಹಲವಾರು ದಿಡ್ಡಿ ಬಾಗಿಲುಗಳಿವೆ. ಆಯಕಟ್ಟಿನ ಸ್ಥಳದಲ್ಲಿನ ಕೆಲವು ಪ್ರಮುಖ ಬುರುಜುಗಳ ಮೇಲೆ ಆ ಕಾಲದ ರಕ್ಷಣಾ ವಾಸ್ತುವಿನ ವೈಶಿಷ್ಟ್ಯವೆನಿಸಿದ ಶಕ್ತಿಶಾಲಿ ಫಿರಂಗಿಗಳನ್ನಿರಿಸಿದೆ. ಕೋಟೆ, ಬುರುಜುಗಳ ಮೇಲಣ ಹೊರಪರಿಧಿಯಲ್ಲಿ ಕೋವಿಕಿಂಡಿ ಸಹಿತವಾದ ತೆನೆಗಳಿವೆ. ಪಶ್ಚಿಮದಲ್ಲಿ ಮೆಕ್ಕದ್ವಾರ, ವಾಯವ್ಯದಲ್ಲಿ ಶಹಾಪುರದ್ವಾರ, ಉತ್ತರದಲ್ಲಿ ಬಹಮನಿದ್ವಾರ, ಪೂರ್ವದಲ್ಲಿ ಅಲ್ಲಾಪುರ ಮತ್ತು ಎತ್ತರದ ಮಹಾದ್ವಾರ, ಮತ್ತು ನೈರುತ್ಯದಲ್ಲಿ ಫತೇ ಅಥವಾ ಮನಗೂಳಿ ದ್ವಾರಗಳು ಮುಖ್ಯ ಪ್ರವೇಶದ್ವಾರಗಳು. ಇವಲ್ಲದೆ ಜೊಹ್ರಾಪುರ ಮತ್ತು ಬಾದಶಾಹಪುರ ದ್ವಾರಗಳಿವೆ. ಮುಖ್ಯದ್ವಾರಗಳು ಬೃಹದಾಕಾರದ ಬಿರುಜು,ಆಕರ್ಷಕ ಕಮಾನು, ಕಾವಲು ಪಡೆಯವರಿಗಾಗಿ ಚೌಕಿ, ಕೊಠಡಿ, ಮದ್ದು ಗುಂಡುಗಳ ದಾಸ್ತಾನಿನ ಕಿರು ಉಗ್ರಾಣ ಮುಂತಾದ ರಕ್ಷಣಾ ವಸ್ತು ವಿನ ಎಲ್ಲ ಮುಖ್ಯಾಂಶಗಳನ್ನು ಅಳವಡಿಸಿಕೊಂಡು ಸಶಕ್ತವೂ ಅಭೇದ್ಯವೂ ಆಗಿವೆ. ಪ್ರತಿ ಮುಖ್ಯದ್ವಾರದಲ್ಲಿಯೂ ಒಂದರೊಳಗೊಂದರಂತೆ ಎರಡು ಬಾಗಿಲುಗಳಿವೆ. ದಪ್ಪ ಕಬ್ಬಿಣದ ಅಡ್ಡಪಟ್ಟಿ, ಚೌಕಟ್ಟುಗಳಲ್ಲಿ ಜೋಡಿಸಲಾದ 6 ಅಂಗುಲಕ್ಕೂ ಹೆಚ್ಚು ದಪ್ಪವಿರುವ ಉತ್ತಮ ದರ್ಜೆಯ ಮರದ ತೊಲೆಗಳಿಂದ ಮಾಡಿದ ಬಾಗಿಲಿಗೆ ಕಬ್ಬಿಣದ 12 ಮೊನಚುಮೊಳೆ ಹೊಡೆಸಿ ದುರ್ಭೇದ್ಯವಾಗಿಸಿದೆ. ಈ ದ್ವಾರಗಳಲ್ಲೆಲ್ಲ ಸಂಕೀರ್ಣ ವಿನ್ಯಾಸದಿಂದ ಸಶಕ್ತವಾದದ್ದು ಪಶ್ಚಿಮದಲ್ಲಿರುವ ಮೆಕ್ಕಾಗೇಟ್. ನಿರಂತರ ಯುದ್ಧಗಳಿಂದಾಗಿ–ಮುಖ್ಯವಾಗಿ 1686ರಲ್ಲಿ ಔರಂಗಜೇಬ್‌ನ ದಾಳಿಯಿಂದ–ಬಹಳಷ್ಟು ಹಾನಿಗೊಳಗಾದ ಕೋಟೆ, ಬುರುಜುಗಳನ್ನು ಮತ್ತೆ ಸುಭದ್ರಪಡಿಸಲಾಯಿತು. ನಗರದ ಪಶ್ಚಿಮ ಭಾಗದಲ್ಲಿ ಜೊಹ್ರಾಪುರದ್ವಾರದ ಸ್ವಲ್ಪ ಉತ್ತರಕ್ಕೆ, ಹೊರಕೋಟೆಗೆ ಹೊಂದಿಕೊಂಡಂತೆ, ಸಿಂಹದ ಬುರುಜಿನ ಮೇಲೆ (ಬುರ್ಜ್–ಇ– ಶೇರ್ಜಾ) ಪ್ರಸಿದ್ಧ ಮಾಲಿಕ್–ಇ–ಮೈದಾನ್ ಫಿರಂಗಿಯಿದೆ. ಈ ಬತೇರಿ 1671ರಲ್ಲಿ ಕೇವಲ 5 ತಿಂಗಳಿನಲ್ಲಿ ನಿರ್ಮಿತವಾಯಿತೆಂದು ಇಲ್ಲಿನ ಪರ್ಷಿಯನ್ ಶಾಸನ ತಿಳಿಸುತ್ತದೆ. 1549ರಲ್ಲಿ ಮುಹಮ್ಮದ್ ಹಸನ್ ಬಿನ್ ರೂಮಿ ಎಂಬಾತ ಅಹಮದ್ ನಗರದಲ್ಲಿ ಕಂಚನ್ನು ಎರಕ ಹೊಯ್ದು ಕಲಾತ್ಮಕವಾಗಿ ರೂಪಿಸಿದ ಈ ರಣರಂಗದ ರಾಜ 1565ರ ತಾಳೀಕೋಟೆಯ ಯುದ್ಧದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು, ಅನಂತರ 1632ರಲ್ಲಿ ಇದಕ್ಕಾಗಿಯೇ ಕಟ್ಟಿದ ಬುರುಜಿನಲ್ಲಿ ಈ ತೋಪನ್ನು ಸ್ಥಾಪಿಸಿದೆ. ಆನೆಗಳನ್ನು ನುಂಗುತ್ತಿರುವ ಸಿಂಹಮುಖದಂತೆ ಬಾಯನ್ನು ರೂಪಿಸಲಾಗಿರುವ ಈ ತೋಪಿನ ಉದ್ದ 4.2ಮೀ, ಗರಿಷ್ಠ ಹೊರವ್ಯಾಸ 1.2ಮೀ ಹಾಗೂ ಕೊಳವೆಯ ಒಳವ್ಯಾಸ 0.70ಮೀ ಇದ್ದು ಸು. 55ಟನ್ ತೂಗುತ್ತದೆ.

ಸಿಂಹ ಬುರುಜಿನ ಪೂರ್ವಕ್ಕೆ ಉಪಲಿ(ಹೈದರಿ) ಬುರ್ಜು ಇದೆ. ದೀರ್ಘವೃತ್ತಾಕಾರದ ಎತ್ತರದ ಈ ಬುರುಜಿಗೆ ಮೇಲೆ ಹೋಗಲು ಹೊರ ಪರಿಧಿಯಲ್ಲಿ ಮೆಟ್ಟಿಲುಗಳಿವೆ. ಇಲ್ಲಿರುವ ಪರ್ಷಿಯನ್ ಶಾಸನದಂತೆ 1563ರಲ್ಲಿ ಕಟ್ಟಲಾದ ಈ ಬುರುಜಿನ ಮೇಲೆ ಎರಡು ಫಿರಂಗಿಗಳಿವೆ. ಇವುಗಳಲ್ಲಿ ದೊಡ್ಡದಾದ ಲಾಂಚೆರ್ರಿ (ದೂರ ಚಿಮ್ಮುವ ಫಿರಂಗಿ) ಸು.10ಮೀ ಉದ್ದವಿದ್ದು, ಮುಂಭಾಗದಲ್ಲಿ 1.0ಮೀ ಗರಿಷ್ಠ ವ್ಯಾಸ ಹೊಂದಿದ್ದು ಸು.22 ಟನ್ ತೂಗುತ್ತದೆ. ಅದರಂತೆ ನಗರದ ದಕ್ಷಿಣ ಭಾಗದ ಕೋಟೆಯ ಮಧ್ಯದಲ್ಲಿರುವ ಬುರುಜಿನ ಮೇಲೆ ಬಿಜಾಪುರದ ಅತ್ಯಂತ ದೊಡ್ಡದಾದ ಲಂಡಾಕಸಾಬ್ ಫಿರಂಗಿಯಿದೆ. ಸು. 6.55ಮೀ ಉದ್ದ, 1.5ಮೀ ಗರಿಷ್ಠ ವ್ಯಾಸದ ಈ ಫಿರಂಗಿ ಸು. 47ಟನ್ ತೂಕವಿದೆ. ಇದೇ ಬುರುಜಿನ ಮೇಲೆ ಇನ್ನೊಂದು ಸಣ್ಣ ಫಿರಂಗಿಯೂ ಇದೆ. ಇವಲ್ಲದೆ ಅಲ್ಲಾಪುರದ್ವಾರದ ದಕ್ಷಿಣಕ್ಕಿರುವ ಫಿರಂಗಿ ಬುರುಜು, ಗೋಳಗುಮ್ಮಟದ ಉತ್ತರಕ್ಕಿರುವ ಅಲ್ಲಾಪುರ ಬುರುಜುಗಳ ಮೇಲೂ ವಿವಿಧ ಗಾತ್ರದ ಫಿರಂಗಿಗಳಿವೆ. ಇನ್ನುಳಿದ ಬತೇರಿಗಳ ಮೇಲಿದ್ದು ಕಾಲಕ್ರಮೇಣ ಉರುಳಿ ಬಿದ್ದ ಫಿರಂಗಿಗಳಲ್ಲಿ ಆಯ್ದ ಆರನ್ನು ಮತ್ತು ಇಂತಹ ಫಿರಂಗಿಗಳಲ್ಲಿ ಹಾರಿಸುತ್ತಿದ್ದ ವಿವಿಧ ಗಾತ್ರದ ಕಲ್ಲಿನ ಹಾಗೂ ಕಬ್ಬಿಣದ ಗೋಲಾಕಾರದ ಗುಂಡುಗಳನ್ನು ಗೋಳಗುಮ್ಮಟ ಸಮುಚ್ಚಯದಲ್ಲಿರುವ ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಿದೆ. ಆ ಕಾಲದ ಎಲ್ಲ ಮುಖ್ಯ ಫಿರಂಗಿಗಳಂತೆ, ಬಿಜಾಪುರದ ಅನೇಕ ಫಿರಂಗಿಗಳನ್ನು ಕಬ್ಬಿಣದ ಪಟ್ಟಿಗಳನ್ನು ಪಕ್ಕ ಪಕ್ಕಗಳಲ್ಲಿ ಜೋಡಿಸಿ, ಬಳೆಗಳನ್ನು ತೂರಿಸಿ, ಬೆಸುಗೆ ಹಾಕಿ ತಯಾರಿಸಲಾಗಿದೆ.

**ಅರಮನೆ ಹಾಗೂ ವಿಹಾರ ತಾಣಗಳು:** ಮೊಗಲ್ ಕಾಲದ ನಾಗರಿಕ ವಾಸ್ತುವಿನ ಅಧ್ಯಯನಕ್ಕೆ ಫತೇಪುರ್ ಸಿಕ್ರಿ, ಆಗ್ರಾ ಹಾಗೂ ದೆಹಲಿಯ ಕೆಂಪು ಕೋಟೆಗಳು ಸಾಕಷ್ಟು ಪುರಾತತ್ತ್ವೀಯ ಆಕರಗಳನ್ನು ಒದಗಿಸುವಂತೆ, ಇಡೀ ದಕ್ಷಿಣ ಭಾರತದಲ್ಲಿ ಇಂಡೋ–ಇಸ್ಲಾಮಿಕ್ ಶೈಲಿಯ ಕಟ್ಟಡಗಳ ಅಧ್ಯಯನಕ್ಕೆ ಆಧಾರ ಸಾಮಗ್ರಿ ಒದಗಿಸುವುದು ಬೀದರ್ ಹಾಗೂ ಬಿಜಾಪುರದ ಕಟ್ಟಡಗಳು. ಬ್ರಿಟಿಷರು ತಮ್ಮ ಕಾರ್ಯಾಲಯ, ವಾಸಗೃಹಗಳಾಗಿ ಮಾರ್ಪಡಿಸಿಕೊಂಡು, ಬಹುಕಾಲ ಬಳಸಿರುವುದರಿಂದ ಮತ್ತು ಧಾರ್ಮಿಕ ಉಪಯೋಗ ದಲ್ಲಿದ್ದುದರಿಂದ ಆದಿಲ್‌ಶಾಹಿ ಕಾಲದ ಅರಮನೆ ಸಮುಚ್ಚಯಗಳು ಸಾಕಷ್ಟು ಮೂಲರೂಪದಲ್ಲಿ, ಸುಸ್ಥಿತಿಯಲ್ಲಿಯೇ ಉಳಿದು ಬಂದಿವೆ. ಆರಂಭಿಕ ಕಾಲದ ಅರಮನೆಗಳಾದ ಗಗನ್ ಮಹಲ್, ಅಸಾರ್ ಮಹಲ್‌ಗಳು ಪ್ರಾದೇಶಿಕ ಶೈಲಿಯ ಮುಂದುವರಿಕೆಯಾಗಿದ್ದು, ಆ ಬಳಿಕ ರಾಜಧಾನಿಯಲ್ಲಿ ಕಟ್ಟಲಾದವು ಕ್ರಮೇಣ ತಲವಿನ್ಯಾಸ, ಊರ್ಧ್ವವಿನ್ಯಾಸ ಮತ್ತು ಅಲಂಕರಣ ವೈವಿಧ್ಯಗಳಿಂದ ಕೂಡಿವೆ. ಮುಂಭಾಗದಲ್ಲಿ ಸಮತೋಲನ ಮತ್ತು ಅಕ್ಷಸಮತೆಯನ್ನು ಸಾಧಿಸಲು 3, 5, 7 ಅಥವಾ 9 ಸಮಾನ ಎತ್ತರದ ಕಮಾನುಗಳ ವಿನ್ಯಾಸವಿದ್ದು, ಅವುಗಳಲ್ಲಿ ಮಧ್ಯದ ಕಮಾನು ಸಾಧಾರಣವಾಗಿ ಉಳಿದವುಗಳಿಗಿಂತ ಅಗಲವಾಗಿರುತ್ತದೆ. ಕಮಾನುಗಳ ಹೊರಪರಿಧಿಯಲ್ಲಿ ಮತ್ತು ಮೂಲೆಗಳಲ್ಲಿ ಕೊರೆದ ಗಾರೆಯ ನಾಜೂಕಾದ ಹೂಬಳ್ಳಿಗಳ, ವೃತ್ತಫಲಕಗಳ ವಿನ್ಯಾಸ ಮತ್ತು ಅಪರೂಪವಾಗಿ ವಿವಿಧ ವರ್ಣಗಳ ಹೆಂಚುಗಳ ಅಲಂಕರಣವಿರುತ್ತದೆ. ಸಾಧಾರಣವಾಗಿ ದಪ್ಪಗೋಡೆಯ ಒಳಾವರಣ ಮತ್ತು ಮುಂಭಾಗದಲ್ಲಿ ಮಾತ್ರ ನಯಗೊಳಿಸಿದ ಗಾರೆಯ ಹೊದಿಕೆಯಿದ್ದು, ಉಳಿದ ಹೊರಭಿತ್ತಿ ನಯವಾದ ಕಲ್ಲಿನ ರಾಚನಿಕ ವಿಧಾನವನ್ನೇ ಪ್ರದರ್ಶಿಸುವಂತಿರುತ್ತದೆ. ಕೆಲವೊಮ್ಮೆ ವೃತ್ತ, ಷಡ್ಭುಜ, ಅಷ್ಟಭುಜಾಕಾರದ ದೊಡ್ಡ ತೇಗದ ಮರದ ಕಂಬಗಳು ಮುಂದಣ ಮಕ್ತ ಹಜಾರಕ್ಕೆ ಆಸರೆ ಒದಗಿಸಿದ್ದರೆ, ಬೃಹದ್ಗಾತ್ರದ ಕಟ್ಟಡಗಳಲ್ಲಿ ರಾಚನಿಕ ಕಮಾನುಗಂಬಗಳನ್ನೇ ಬಳಸಿದೆ.

ಬಳಕೆಯಾದ ನೀರು ಮತ್ತಿತರ ತ್ಯಾಜ್ಯವಸ್ತುಗಳನ್ನು ದೂರ ಸಾಗಿಸಲು, ಬೇಸಗೆಯಲ್ಲಿ ತುರ್ತು ಸಂದರ್ಭಗಳಲ್ಲಿ ದಿನಬಳಕೆಗೆ ನೀರು ಪೂರೈಸಿಕೊಳ್ಳಲು ಮತ್ತು ಕಂದಕದ ನೀರಿನ ಮೇಲಿಂದ ಹಾದು ಬರುವ ತಂಗಾಳಿಯ ಅನುಕೂಲತೆ ಹಾಗೂ ಆಪತ್ಕಾಲದಲ್ಲಿ ಸುಲಭವಾಗಿ ಪಾರಾಗಲು ಎಲ್ಲ ಅರಮನೆಗಳನ್ನು ಕಂದಕಕ್ಕೆ ಹೊಂದಿಕೊಂಡಂತೆ, ಅರ್ಕಿಲ್ಲಾದ ಗೋಡೆಯ ಸಮೀಪದಲ್ಲಿ ಕಟ್ಟಲಾಗಿರುವುದು ಗಮನಾರ್ಹ ಅಂಶ.

ಪ್ರತಿ ಸಮುಚ್ಚಯದಲ್ಲಿ ಹಾಗೂ ಅದರ ಪರಿಸರದಲ್ಲಿ ಕಂಡುಬರುವ ಕೆಲವು ಅವಶೇಷಗಳು, ಆ ಕಾಲದ ಸಾಹಿತ್ಯ ಮತ್ತು ವರ್ಣಚಿತ್ರಗಳಿಂದ ತಿಳಿದುಬರುವಂತೆ ಪ್ರತಿ ಅರಮನೆಯ ಆವರಣದಲ್ಲಿ ಸುಂದರವಾದ ಉದ್ಯಾನವಿದ್ದಂತೆ ಕಂಡುಬರುತ್ತದೆ. ಮುಖ್ಯ ಕಟ್ಟಡಕ್ಕೆ ಎದುರಾಗಿ ವಿಧವಿಧವಾದ ಕಾರಂಜಿಸಹಿತವಾದ ವಿಶಾಲ ಕೊಳಗಳು, ಅದರ ಪರಿಸರದಲ್ಲಿ ಕಲ್ಲು ಅಥವಾ ಗಾರೆಯಲ್ಲಿ ರೂಪಿಸಿದ, ಜ್ಯಾಮಿತೀಯ ಹಾಗೂ ಹೂಬಳ್ಳಿಗಳ ಆಳವಾದ ವಿನ್ಯಾಸ ಗಳ ಮೂಲಕ ರಭಸವಾಗಿ ನೀರು ಹರಿಯುವಂತೆ ಮಾಡಿ ಕೃತಕವಾಗಿ ಹರಿಯುವ, ಅಪ್ಪಳಿ

ಸುವ ನೀರಿನ ಚಿತ್ರವಿಚಿತ್ರವಾದ ಶಬ್ದವನ್ನು ಮಾಡುವ ರಮ್ಯ ವಾತಾವರಣದಿಂದ ಕೂಡಿದ ತೋಟಗಳಿದ್ದವು. ಅರಮನೆಯ ಹೊರಗೋಡೆ ಮತ್ತು ಉದ್ಯಾನದಲ್ಲಿನ ಮಂಟಪಗಳಲ್ಲಿ ಸಣ್ಣ ಸಣ್ಣ ಗೂಡುಗಳಿದ್ದವು. ರಾಜ, ಆತನ ಕುಟುಂಬವರ್ಗ ಹಾಗೂ ವಿಶೇಷ ಆಹ್ವಾನಿತರು ಉದ್ಯಾನಗಳಲ್ಲಿ ವಿಹರಿಸುತ್ತಿದ್ದಾಗ, ಈ ಗೂಡುಗಳಲ್ಲಿ ದೀಪಗಳನ್ನು ಉರಿಸಲಾಗುತ್ತಿತ್ತು.

ಬಿಜಾಪುರದಲ್ಲಿ ಕಟ್ಟಲಾದ ಅನೇಕ ಅರಮನೆಗಳಲ್ಲಿ ಅತ್ಯಂತ ಭವ್ಯವಾದ ಕಟ್ಟಡ ಬಹುಶಃ ಇಮ್ಮಡಿ ಇಬ್ರಾಹಿಂ ಕಾಲದಲ್ಲಿ ಆರಂಭವಾದ ಸಾತ್ ಮಂಜಿಲ್ (1583). ಏಳಂತಸ್ತಿನ ಈ ಭವನದಲ್ಲಿ ಈಗ ಐದು ಅಂತಸ್ತುಗಳು ಮಾತ್ರ ಉಳಿದಿವೆ. ಈ ಐದು ಅಂತಸ್ತುಗಳೂ ಬಹುಶಃ, ಚೀನಿ ಮಹಲ್ ಅಥವಾ ಫರೂಖ್ ಮಹಲ್ ಅರಮನೆಯ ಆಯತಾಕಾರದ ಬೃಹತ್ ಕಟ್ಟಡದ ಭಾಗವಾಗಿದ್ದು, ಈ ಸಮುಚ್ಚಯದ ವಾಯವ್ಯ ಮೂಲೆಯಲ್ಲಿ ಅರ್ಕಿಲ್ಲಾದ ಕೋಟೆಯಾಚೆ ಪಶ್ಚಿಮ ತುದಿಗೆ ಹೊಂದಿಕೊಂಡಂತೆ ಇರುವ ನರಸಿಂಹ



ಕೋಟೆದ್ವಾರ

ದೇವಾಲಯ ಹಾಗೂ ಕಂದಕಗಳಿಗೆ ಎದುರಾಗಿರುವಂತೆ ಕಟ್ಟಲಾಗಿದೆ. ಇದರ ಗೋಡೆಗಳಲ್ಲಿ ಅನೇಕ ಜಲವಾಹಕ ಕೊಳವೆಗಳ ಮತ್ತು ಕಾರಂಜಿಗಳ ವ್ಯವಸ್ಥೆಯಿದ್ದು, ಗೋಡೆ ಚಾವಣಿಯ ಮೇಲೆಲ್ಲ ವರ್ಣಚಿತ್ರಗಳಿದ್ದ ಕುರುಹುಗಳಿವೆ. ಇದರ ಅತ್ಯುತ್ತಮ ವರ್ಣಾಲಂಕಾರ, ಸ್ವರ್ಣಲೇಪನ ಮತ್ತು ಅತ್ಯಂತ ನಾಜೂಕಿನ ಕೊರೆದ ಗಾರೆಯ ಕುಸುರಿ ವಿನ್ಯಾಸಗಳು ಮಹಮ್ಮದನ ಕಾಲದವು. ಈ ಬೆಡಗಿನ ವಿಲಾಸ ಭವನವನ್ನು ಆತ ತನ್ನ ಪ್ರೇಯಸಿ ರಂಭಾಳಿಗಾಗಿ ಸಜ್ಜುಗೊಳಿಸಿದ್ದ. ಇದಕ್ಕೆದುರಾಗಿ ಜಲಾಶಯವೊಂದಿದ್ದು, ಅದರ ಮಧ್ಯದಲ್ಲಿನ ಜಲಮಂದಿರ ಚಿಕ್ಕದಾದ ಅಲಂಕೃತ ಮಂಟಪದಂತೆ ಕಣ್ಸೆಳೆಯುತ್ತದೆ.

ಮೊದಲನೆಯ ಅಲಿಯ ಕಾಲದ, ಉತ್ತರಾಭಿಮುಖವಾದ ಗಗನ್ ಮಹಲನ್ನು (1561) ಅರ್ಕಿಲ್ಲಾದ ಪಶ್ಚಿಮ ಭಾಗದಲ್ಲಿ, ಕಂದಕಕ್ಕೆ ಸಮೀಪವಾಗಿ ಕಟ್ಟಲಾಗಿದೆ. ಸಾರ್ವಜನಿಕರ ಭೇಟಿಗಾಗಿ ನಿರ್ಮಿತವಾಗಿದ್ದ ರಾಜಸಭಾಂಗಣದಂತೆ (ದರ್ಬಾರ್) ಉಪಯುಕ್ತವಾಗಿದ್ದ ಈ ಕಟ್ಟಡದಲ್ಲಿ ಮೂರು ಕಮಾನುಗಳಿವೆ. ಪೂರ್ವಪಶ್ಚಿಮಗಳಲ್ಲಿ ತೆರೆದಿರುವ ದೊಡ್ಡ ಹಜಾರ, ದಕ್ಷಿಣ ಭಾಗದಲ್ಲಿ ಮುಖ್ಯ ಕಟ್ಟಡದ ಎತ್ತರದ ವೇದಿಕೆ, ಉಳಿದಂತೆ ಮೂರೂ ಕಡೆ ಗೋಡೆಗಳಿವೆ. ತೊರವಿಯಲ್ಲಿರುವ ಸಂಗೀತ ಮಹಲ್ ಅರಮನೆ ಗಗನ್ ಮಹಲ್‌ನ ಬಹುತೇಕ ಪ್ರತಿಕೃತಿಯಂತಿದ್ದರೆ, ಬಳಿಯಲ್ಲೇ ಇರುವ ಆನಂದ್ ಮಹಲ್ ಇದರ ಪರಿಷ್ಕೃತ ರಚನೆಯಾಗಿದೆ. ಇಮ್ಮಡಿ ಇಬ್ರಾಹಿಂನ ಇನ್ನೊಂದು ಭಾಗಶಃ ಅಪೂರ್ಣ ಅರಮನೆ ಆನಂದ್ ಮಹಲ್ (1589). ಇದು ಬಹುಶಃ ಅಂತಃಪುರದವರಿಗಾಗಿ ನಿರ್ಮಿತವಾದುದು. ರಾಜಧಾನಿಯ ಅತ್ಯಂತ ಪ್ರಮುಖ ವಾಸಭವನಗಳಲ್ಲಿ ಒಂದಾಗಿದ್ದ ಈ ಉತ್ತರಾಭಿಮುಖವಾದ ಭವನದಲ್ಲಿ ವಿಶಾಲ ಮುಕ್ತ ಹಜಾರವಿದ್ದು, ಅದರ ಮೂರೂ ಬದಿಗೆ ಅನೇಕ ಕೊಠಡಿಗಳಿವೆ. ಬದಿಯ ಇನ್ನೊಂದು ಮುಖ್ಯಭವನ ಚೀನೀ ಮಹಲ್. ಇದರ ಕಮಾನುಗಳ ಅಲಂಕಾರಕ್ಕಾಗಿ ಹೊದಿಸಿದ್ದ ನೀಲಿ, ಹಳದಿ ಮುಂತಾದ ಹೊಳಪಿನ ಬಣ್ಣಗಳ ಹೆಂಚುಗಳಿಂದಾಗಿ ಈ ಹೆಸರು ಬಂದಿರಬೇಕು. ಸಾರ್ವಜನಿಕರನ್ನು ಸಂದರ್ಶಿಸಲು ಕಟ್ಟಲಾಗಿದ್ದ ಈ ಭವನದಲ್ಲಿ ಸು.39ಮೀ ಉದ್ದ ಮತ್ತು ಅತ್ಯಂತ ಎತ್ತರವಾದ ಸಭಾಂಗಣವಿದ್ದು, ಅದಕ್ಕೆ ತೆರೆದುಕೊಳ್ಳುವಂತೆ ಎರಡು ಅಂತಸ್ತುಗಳಲ್ಲಿ ಸಣ್ಣ, ದೊಡ್ಡ ಹಲವು ಕೊಠಡಿಗಳಿವೆ. ಇದರ ಮುಂಭಾಗದಲ್ಲಿಯೂ ವಿಶಾಲವಾದ ಮುಕ್ತವರಾಂಡವಿದೆ.

ಗಗನ್ ಮಹಲಿನ ಪೂರ್ವಕ್ಕಿರುವ ಅದಾಲತ್ ಮಹಲ್ (ನ್ಯಾಯಾಲಯ) ಕಾಲಕಾಲಕ್ಕೆ ಸೂಕ್ತಮಾರ್ಪಾಡುಗಳೊಂದಿಗೆ ಹಲವು ಅರಸರ ಕಾಲದಲ್ಲಿ ಮುಖ್ಯ ಕಟ್ಟಡವಾಗಿ ಉಪಯೋಗದಲ್ಲಿತ್ತು. ಹೀಗೆ ಆದ ಮಾರ್ಪಾಡುಗಳಲ್ಲಿ ಕಟ್ಟಡದ ಉತ್ತರದ ಭಾಗದಲ್ಲಿ ಸೇರಿಸಲಾದ ಸಣ್ಣ ಮಸೀದಿ ಮತ್ತು ಪೂರ್ವಭಾಗದಲ್ಲಿರುವ ಸುಂದರ ವಿಹಾರತಾಣದಂತೆ ಉಪಯೋಗಿಸಬಹುದಾದ ಮಂಟಪ ಮುಖ್ಯವಾದವು. ಉಳಿದಂತೆ, ಎರಡಂತಸ್ತಿನ ಈ ಕಟ್ಟಡದಲ್ಲಿಯೂ ನ್ಯಾಯಸಂಭಾಗಣವಾಗಿ ಬಳಸಬಹುದಾದ ದೊಡ್ಡ ಹಜಾರ ಮತ್ತು ಅದಕ್ಕೆ ತೆರೆದುಕೊಳ್ಳುವಂತೆ ಅನೇಕ ಸಣ್ಣ ದೊಡ್ಡ ಹಲವು ಕೊಠಡಿಗಳಿವೆ (ಈ ಕಟ್ಟಡ ಈಗ ಅನೇಕ ಪರಿವರ್ತನೆಗಳೊಂದಿಗೆ ಜಿಲ್ಲಾಧಿಕಾರಿಗಳ ನಿವಾಸವಾಗಿದೆ).

ಕಂದಕ ಹಾಗೂ ಅರ್ಕಿಲ್ಲಾದ ಗೋಡೆಗೆ ಆತುಕೊಂಡಂತೆ ಪಶ್ಚಿಮಾಭಿಮುಖವಾಗಿ ಕಟ್ಟಿರುವ ಅಸಾರ್ ಮಹಲ್ (1646) ಬಿಜಾಪುರದ ಮುಖ್ಯ ಭವನಗಳಲ್ಲೊಂದು. ನ್ಯಾಯ ತೀರ್ಮಾನಗಳಿಗಾಗಿ ಕಟ್ಟಿದ ಈ ಕಟ್ಟಡವನ್ನು (ದಾದ್ ಮಹಲ್) ಅನಂತರ ಭಾರತಕ್ಕೆ ತರಲಾದ, ಪ್ರವಾದಿ ಮೊಹಮ್ಮದರ ಗಡ್ಡದ ಎರಡು ಕೂದಲುಗಳನ್ನು ಸಂರಕ್ಷಿಸುವ ಕರಂಡಕ ವನ್ನಿಡಲು ಬಳಸಲಾಗಿದೆ. ಕಂದಕದ ಹೊರಗಿರುವ ಈ ಕಟ್ಟಡಕ್ಕೆ ಪೂರ್ವಕ್ಕಿರುವ ಅರಮನೆಯಿಂದ ರಾಜರು ಬಂದು ಹೋಗಲು ಎರಡಂತಸ್ತಿನ ಕಮಾನುಸೇತುವೆ ಇದ್ದು, ಕಂದಕದೊಳಗೆ ಈಗ ಬೃಹತ್ ಕಮಾನುಗಂಬಗಳು ಮಾತ್ರ ಉಳಿದಿವೆ. ನ್ಯಾಯಾಲಯವಾಗಿ ಬಳಸಲು ಅನುಕೂಲವಾಗುವಂತೆ ಈ ಭವನದ ಪೂರ್ವಭಾಗದಲ್ಲಿ ಎತ್ತರವಾದ ಹಾಗೂ ವಿಶಾಲವಾದ ಹಜಾರವಿದೆ. ಎತ್ತರದ ಅಷ್ಟಕೋನಾಕೃತಿಯ ನಾಲ್ಕು ತೇಗದ ಮರದ ಕಂಬಗಳನ್ನು ಆಧರಿಸಿದ ಛಾವಣಿಯಿರುವ ಈ ಹಜಾರದ ಪಶ್ಚಿಮಕ್ಕೆ ಹೊಂದಿಕೊಂಡಂತೆ ಎರಡನೆಯ ಅಂತಸ್ತಿನಲ್ಲಿ ಅನೇಕ ಕೊಠಡಿಗಳಿದ್ದು, ಮಧ್ಯದಲ್ಲಿ ಮುಂಚಾಚಿದ ಬಾಲ್ಕನಿಯಂತಹ ವೇದಿಕೆಯಲ್ಲಿ ರಾಜ ಕುಳಿತು ನ್ಯಾಯ ತೀರ್ಮಾನಿಸಲು ಅನುಕೂಲವಾಗುವಂತಿದೆ. ಇದರ ಛಾವಣಿಗೆ ಮರದ ಪಟ್ಟಿಗಳನ್ನು ಹಾಸಿದ್ದು ವರ್ಣಚಿತ್ರಗಳಿಂದ ಅಲಂಕರಿಸಲಾಗಿತ್ತು. ಕಟ್ಟಡದ ದಕ್ಷಿಣ ಗೋಡೆಗಳಿಗೆ ಹೊಂದಿಕೊಂಡಂತೆ ಇರುವ ಅಗಲವಾದ ಪಾವಟಿಗೆಗಳ ಮೂಲಕ ಮೇಲಂತಸ್ತಿನ ಕೊಠಡಿ, ಹಜಾರಗಳಿಗೆ ತಲುಪಬಹುದು. ಇವುಗಳಲ್ಲಿರುವ ತೇಗದ ಮರದ ಪಟ್ಟಿಗಳಿಂದ ಮಾಡಿದ ವೈವಿಧ್ಯಮಯ ವಿನ್ಯಾಸಗಳ ಜಾಲಂಧ್ರ ಚಿತ್ತಾಕರ್ಷಕವಾಗಿದೆ. ದಕ್ಷಿಣದ ಎರಡು ಕೊಠಡಿಗಳಲ್ಲಿ ಪ್ರವಾದಿಯ ಪವಿತ್ರ ಕೇಶವಿದೆ. ಉಳಿದಂತೆ ಉತ್ತರಕ್ಕಿರುವ ಕೊಠಡಿಗಳ ಗೋಡೆ, ಬಾಗಿಲು, ಗೂಡು, ಛಾವಣಿಗಳನ್ನೆಲ್ಲ ಸುಂದರ ವರ್ಣಚಿತ್ರಗಳಿಂದ ಅಲಂಕರಿಸಿದೆ. ವಿವಿಧ ಹೂಬಳ್ಳಿಗಳು, ಹೂದಾನಿ, ಹಣ್ಣಿನ ಹರಿವಾಣ, ಸಿಪ್ರಸ್ ಮರ ಮುಂತಾದವುಗಳ ಚಿತ್ರಣದ ಜೊತೆಗೆ ಗೋಡೆಯ ಕೆಳಭಾಗದಲ್ಲಿ ಬಹುಶಃ ಭಾಗವತದ ಕೃಷ್ಣಲೀಲೆಯ ಸುಂದರ ಭಿತ್ತಿ ಚಿತ್ರಗಳಿದ್ದು, ಔರಂಗಜೇಬನ ಕಾಲದಲ್ಲಿ ಅವುಗಳ ಮುಖಗಳನ್ನು ಉದ್ದೇಶಪೂರ್ವಕವಾಗಿ ಅಂದಗೆಡಿಸಲಾಗಿದೆ. ದಕ್ಷಿಣ ಪಾವಟಿಗೆಗಳ ಬಳಿಯಿರುವ ಕೊಠಡಿಯಲ್ಲಿ ಗ್ರಂಥಾಲಯವಿದ್ದಿತು (ಕಿತಾಬ್ ಖಾನಾ). ಅಸಾರ್ ಮಹಲಿನ ಪೂರ್ವದ ಹಜಾರಕ್ಕೆದುರಾಗಿ ಪರಿಧಿಯಲ್ಲಿ ಮೆಟ್ಟಿಲುಗಳಿರುವ ದೊಡ್ಡ ಜಲಾಶಯವಿದೆ. ಅದರಂತೆಯೇ ಉತ್ತರದಲ್ಲಿ ಜಹಾಜ್ ಮಹಲ್ ಎಂದು ಕರೆಯಲಾಗುವ ಕಟ್ಟಡದ ಭಗ್ನಾವಶೇಷಗಳಿವೆ. ಈ ಕಟ್ಟಡದಲ್ಲಿ ಬಹುಶಃ ಆದಿಲ್‌ಶಾಹಿ ಅರಸರ ಬಲಿಷ್ಠ ನೌಕಾಸೇನೆ ಮತ್ತು ವಾಣಿಜ್ಯ ನೌಕೆಗಳಿಗೆ ಸಂಬಂಧಿಸಿದ ಆಡಳಿತ ವಿಭಾಗ ನೆಲೆಗೊಂಡಿತ್ತು.

ಈ ಅರಮನೆಗಳಲ್ಲದೆ ಆದಿಲ್‌ಶಾಹಿ ಅರಸರ ವೈಭವದ ದಿನಗಳಲ್ಲಿ ಯೂಸುಫ್ ಆದಿಲ್‌ಷಾನ ಕುಟುಂಬದವರ ವಾಸಕ್ಕಾಗಿ ಕಟ್ಟಿಸಿದ ಫರೂಖ್ ಮಹಲ್ (ಪ್ರಸ್ತುತ ಜಿಲ್ಲಾಧಿಕಾರಿಗಳ ಕಾರ್ಯಾಲಯ), ಪಾನಿಮಹಲ್, ಅದಾಲತ್ ಮಹಲ್, ಅರಸ್ ಮಹಲ್, ಜನ್ನತ್ ಮಹಲ್, ಮುಬಾರಕ್ ಖಾನ್ ಮಹಲ್, ನಗರದ ಹೊರವಲಯದ್ದಲ್ಲಿರುವ ಐನಾಪುರದ ರಾಣೀ ಮಹಲ್, ಕುಮಟಗಿಯ ವಿಹಾರತಾಣ, ನವರಸಪುರದ ಸಂಗೀತ್ (ನೌರಸ್) ಮಹಲ್ ಹಾಗೂ ನಾರೀ ಮಹಲ್ ಮುಖ್ಯವಾದವು.

**ಜಲಪೂರೈಕೆ ಹಾಗೂ ಒಳಚರಂಡಿ ವ್ಯವಸ್ಥೆ:** ಬಿಜಾಪುರದ ವಾಸ್ತುಶಿಲ್ಪದ ಒಂದು ಗಮನಾರ್ಹ ವೈಶಿಷ್ಟ್ಯವಾಗಿದೆ. ದೈನಂದಿನ ಹಾಗೂ ತುರ್ತು ಪರಿಸ್ಥಿತಿಗಳಲ್ಲಿ ಅತ್ಯವಶ್ಯಕವಾದ ಸಾಕಷ್ಟು ನೀರಿನ ಸಂಗ್ರಹಣೆ, ಸಮರ್ಥ ನಿರ್ವಹಣೆ ಮತ್ತು ವಿತರಣೆಯ ವ್ಯವಸ್ಥೆ ರಾಜಧಾನಿಯ ವಾಸ್ತುವಿನ್ಯಾಸದ ಒಂದು ಅತಿ ಮುಖ್ಯ ಅಂಗ. ಇದಕ್ಕಾಗಿ ಆ ಕಾಲದ ಜಲತಂತ್ರ ನಿಪುಣರು ಯೋಜಿಸಿ, ಕಾರ್ಯರೂಪಕ್ಕೆ ತಂದಿದ್ದ ಹಲವು ಬೃಹತ್ ಕಾಮಗಾರಿಗಳ ಕೆಲಸ ಒಂದನೆಯ ಅಲಿ ಕಾಲದಲ್ಲಿ ಪ್ರಾರಂಭವಾಗಿ, ಇಮ್ಮಡಿ ಇಬ್ರಾಹೀಮನ ಕಾಲದಲ್ಲಿ ಮುಂದುವರೆದು, ಮೊಹಮ್ಮದನ ಆಳ್ವಿಕೆಯಲ್ಲಿ ಪೂರ್ಣವಾಗಿ ಅತ್ಯುತ್ತಮ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ರಾಜಧಾನಿಯಲ್ಲಿ ಕಾಲಕಾಲಕ್ಕೆ ಹೆಚ್ಚಾಗುತ್ತಿದ್ದ ಜನದಟ್ಟಣೆ, ವಸತಿ ಪ್ರದೇಶ, ಅರಮನೆಗಳು, ಕಾರಂಜಿಸಹಿತ ಸಮಾಧಿ, ಉದ್ಯಾನವನ, ವಿವಿಧ ರೀತಿಯ ವೈಭವಪೂರ್ಣ ವಿಲಾಸಭವನಗಳಲ್ಲಿನ ಸತತೋಪಯೋಗಕ್ಕಾಗಿ ಅನೇಕ ಹೊಸಹೊಸ ಜಲಪೂರೈಕೆ ಯೋಜನೆಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸಲಾಯಿತು. ಬಹುತೇಕ ಈ ಎಲ್ಲ ಯೋಜನೆಗಳು ಇರಾನ್ ಮತ್ತಿತರ ಮಧ್ಯಪ್ರಾಚ್ಯ ದೇಶಗಳಲ್ಲಿ ಆಕಾಲಕ್ಕಾಗಲೇ ಸಾಕಷ್ಟು ಅಭಿವೃದ್ಧಿ ಹೊಂದಿ ಪರಿಪಕ್ವ ಹಂತವನ್ನು ಮುಟ್ಟಿದ್ದ ಜಲನಿರ್ವಹಣಾ ವ್ಯವಸ್ಥೆಯ ಮೂಲತತ್ತ್ವಗಳನ್ನು ಆಧರಿಸಿದವೆನ್ನಲಾಗಿದೆ. ಆದುದರಿಂದಲೇ ದೌಲತಾಬಾದ್, ಔರಂಗಾಬಾದಗಳಲ್ಲಿನಂತೆ ಇಂದಿಗೂ ಬಳಕೆಯಲ್ಲಿರುವ ಅಥವಾ ಕೆಲವೇ ಮಾರ್ಪಾಡುಗಳೊಂದಿಗೆ ಪುನರುಜ್ಜೀವಿಸಬಲ್ಲವಾಗಿವೆ.

ಇಂತಹ ಜನಪರ ಯೋಜನೆಗಳಲ್ಲಿ ಬಿಜಾಪುರದ ದಕ್ಷಿಣಕ್ಕೆ 8ಕಿಮೀ ದೂರದ ತೊರವಿಯ ಕಲ್ಲಿನ ಭಾರಿ ಅಣೆಕಟ್ಟಿನ ಜಲಾಶಯ ಮುಖ್ಯವಾದುದು. ಈ ಮಹದ್ಯೋಜನೆ ಬಹುಶಃ ಒಂದನೆಯ ಅಲಿಯ ಗಂಭೀರ ಚಿಂತನೆಯ ಫಲ. ಈ ಜಲಾಶಯದ ಸು.20 ಮೀ ಎತ್ತರವಿರುವ ಏರಿಯಲ್ಲಿ ವಿಶಿಷ್ಟ ರೀತಿಯ ಕಮಾನುಗೂಡುಗಳ ವಿನ್ಯಾಸವಿದ್ದು ಆಕರ್ಷಕ

ವಾಗಿದೆ. ಇಲ್ಲಿಂದ ಇಬ್ರಾಹಿಂ ರೋಜಾದವರೆಗೆ ಮೇಲ್ಮಟ್ಟದಲ್ಲಿ ನೀರು ಹರಿಸುವ ಕಾಲುವೆ, ಅಣೆಕಟ್ಟಿನ ಮಧ್ಯಭಾಗದಿಂದ ಸು.2.5×2 ಮೀ ಅಳತೆಯ, 2.75 ಮೀ ಎತ್ತರದ ಕೆಲವಡೆ ಸು.19ಮೀ ಆಳದಲ್ಲಿ ಸುರಂಗಗಳ ಮೂಲಕ ಸಾಗುವ ನೀರ್ಗಾಲುವೆ, ಮಧ್ಯೆ ನೀರಿನ ಒತ್ತಡ ತಡೆಯಲು ಒದಗಿಸಿರುವ ಎತ್ತರದ ಜಲಗೋಪುರ (ಪಾನಿಗಂಜ್) ಮುಂತಾದವು ಅಂದಿನ ಜಲತಂತ್ರ ನಿಪುಣರ ಅದ್ಭುತ ತಾಂತ್ರಿಕ ನೈಪುಣ್ಯಕ್ಕೆ ಸಾಕ್ಷಿಯಾಗಿವೆ.

ಬಿಜಾಪುರದ ಪಶ್ಚಿಮಕ್ಕೆ ದರ್ಗಾಹಳ್ಳಿಯಿಂದಾಚೆಗೆ ಇರುವ ಅಗಾಧ ಜಲಸಂಗ್ರಹಕ್ಷಮತೆಯ ರಾಮಲಿಂಗ ಕೆರೆ ಬಹುಶಃ ನಗರದ ಹೊರವಲಯಕ್ಕೆ ಸಮೀಪವಿದ್ದ ಕೃಷಿಭೂಮಿಗೆ ಮತ್ತು ಕುಡಿಯುವ ಶುದ್ಧ ನೀರು ಸರಬರಾಜು ಮಾಡಲು ಇದ್ದ ಇನ್ನೊಂದು ಮುಖ್ಯ ಜಲಾಶಯ. ಕೆರೆಯ ಉತ್ತರ ದಂಡೆಯುದ್ದಕ್ಕೂ ಸು. 432.51ಮೀ ಉದ್ದಕ್ಕೆ ಕಟ್ಟಿರುವ ಎರಡಂತಸ್ತಿನ ಕಲ್ಲಿನ ಕಟ್ಟೆ ಮೇಲ್ತುದಿಯಲ್ಲಿ 4.57ಮೀ ಅಗಲವಿದೆ. ಅಣೆಕಟ್ಟಿನಿಂದ ಉತ್ತರದ ಕಡೆಗೆ ಲಂಬವಾಗಿ ಹರಿಯುವ ಕಲ್ಗಾಲುವೆಯುದ್ದಕ್ಕೂ ವಿವಿಧಗಾತ್ರ, ಆಕಾರದ ಸಂಗ್ರಾಹಕಗಳು; ಅಲ್ಲಿಂದ ಕವಲೊಡೆಯುವ ಕಿರುನಾಲೆ, ನಿಯಂತ್ರಕಗಳ ಒಂದು ವಿಶಿಷ್ಟ ಜಲಪೂರೈಕೆಯ ಜಾಲ ವಿಸ್ಮಯ ತರುವಂತಹುದು. ಆಪತ್ಕಾಲೀನ ಉಪಯೋಗಕ್ಕೆಂದು ಅಣೆಕಟ್ಟಿನ ಈಶಾನ್ಯಕ್ಕೆ ಮೂರು ದೊಡ್ಡ ಬಾವಿಗಳೂ ಇದ್ದು, ಇದರಿಂದ ತೊಗಲುಚೀಲಗಳಿದ್ದ ಪರ್ಷಿಯನ್ ಚಕ್ರದಿಂದ ನೀರೆತ್ತಿ ಕಾಲುವೆಗಳಿಗೆ ಹರಿಸಲಾಗುತ್ತಿತ್ತೆಂದು ಕಾಣುತ್ತದೆ.

ಬಿಜಾಪುರದ ದಕ್ಷಿಣಕ್ಕೆ ಸು. 4ಕಿಮೀ ದೂರದಲ್ಲಿ, ಎತ್ತರವಾಗಿರುವ ಪ್ರದೇಶದಲ್ಲಿ ಮೊಹಮ್ಮದ್ ಆದಿಲ್‌ಷಾ ತನ್ನ ರಾಣಿ ಜಹಾನ್ ಬೇಗಮಳ ಹೆಸರಿನಲ್ಲಿ ಬೇಗಮ್ ತಾಲಾಬ್ ಜಲಾಶಯವನ್ನು ನಿರ್ಮಿಸಿದ. ಅಫ್ಜಲ್‌ಖಾನನ ಮೇಲ್ವಿಚಾರಣೆಯಲ್ಲಿ 1651–53ರ ಅವಧಿಯಲ್ಲಿ ಕಟ್ಟಿದ ಈ ಕೆರೆಯಿಂದ 40–45 ಸೆಂಮೀ ಗಳಿಗಿಂತ ಹೆಚ್ಚಿನ ವ್ಯಾಸದ, ಸುಟ್ಟಮಣ್ಣಿನ ಕೊಳವೆಗಳ ಮೂಲಕ ನೀರುಹಾಯಿಸುವ ವ್ಯವಸ್ಥೆಯಿತ್ತು. ನೆಲದೊಳಗೆ 5ರಿಂದ 15 ಮೀ ಆಳದಲ್ಲಿ ಹಾಯುವ ಕೊಳವೆಗಳು ನೀರಿನ ಒತ್ತಡದಿಂದ ಒಡೆಯದಂತೆ ಅದರ ಸುತ್ತ ಸುಣ್ಣದ ಕಾಂಕ್ರೀಟಿನ 20×15 ಸೆಂಮೀ ಗಾತ್ರದ ಪದರಗಳನ್ನು ನೀಡಿರುವುದಲ್ಲದೆ, ದಾರಿಯುದ್ದಕ್ಕೂ ಅಲ್ಲಲ್ಲಿ ಚೌಕಾಕಾರದ ಒತ್ತಡನಿವಾರಕ ಹಾಗೂ ನಿಯಂತ್ರಕ ಗೋಪುರಗಳನ್ನು ಕಟ್ಟಿಸಿದೆ. ಹೀಗೆ ದೂರದ ಜಲಾಶಯಗಳಿಂದ ಕೋಟೆಯೊಳಕ್ಕೆ ತಂದ ನೀರನ್ನು ಸಂಗ್ರಾಹಕ–ನಿಯಂತ್ರಕ ಗೋಪುರಗಳ ಮೂಲಕ ಬೇಕಾದ ಮಟ್ಟಕ್ಕೆ ಏರಿಸಿ, ಇಲ್ಲವೇ ಇಳಿಸಿಕೊಂಡು ಪ್ರತಿ ಅರಮನೆ, ವಿಹಾರ ತಾಣ, ಮಸೀದಿ, ಸಮಾಧಿ ಸಮುಚ್ಚಯಗಳಿಗೆ ಕಿರುಕಲ್ಗಾಲುವೆ ಅಥವಾ ಮಣ್ಣಿನ ಕೊಳವೆಗಳ ಮೂಲಕ ಹಾಯಿಸಲಾಗುತ್ತಿತ್ತು. ನೆಲದ ಸ್ವಾಭಾವಿಕ ಏರಿಳಿತ, ಕಟ್ಟಡಗಳಲ್ಲಿ ನೀರು ತಲುಪಬೇಕಾದ ಅತಿ ಎತ್ತರದ ಸ್ಥಳ ಇವುಗಳನ್ನು ಆಧರಿಸಿ ಭೂಮಟ್ಟವನ್ನು ವರ್ಗೀಕರಿಸಿ ಇಳಿಜಾರು, ಗುರುತ್ವಾಕರ್ಷಣ ಶಕ್ತಿಯಿಂದಲೇ ಇಡೀ ಸರಬರಾಜು ವ್ಯವಸ್ಥೆಯ ವಿನ್ಯಾಸವಾಗಿತ್ತು. ಒಂದೆರಡು ಸ್ಥಳಗಳಲ್ಲಿ ಮಾತ್ರ ಗುರುತ್ವಾಕರ್ಷಣ ಶಕ್ತಿಯ ಜೊತೆಗೆ ಚರ್ಮ ಅಥವಾ ಲೋಹದ ನೀರಿನಮೊಗೆಗಳಿದ್ದ ಪರ್ಷಿಯನ್ ಚಕ್ರದಿಂದ ಬೇಕಾದ ಎತ್ತರಕ್ಕೆ ನೀರೆತ್ತಿ, ಸಂಗ್ರಹಿಸಿ, ಕಾರಂಜಿ ಮುಂತಾದವುಗಳಿಗೆ ಹರಿಸಲಾಗಿದ್ದ ಕುರುಹುಗಳಿವೆ. ಅರ್ಕಿಲ್ಲಾದ ಸಾತ್ ಮಂಜಿಲ್ ಅರಮನೆ ಬಹುಶಃ ಇಂತಹ ವ್ಯವಸ್ಥೆಯ ಅಪೂರ್ವ ಉದಾಹರಣೆ. ಇಂತಹ ಜಲವಾಹಕಗಳನ್ನು ಸುರಕ್ಷತೆಯ ದೃಷ್ಟಿಯಿಂದ ಕೋಟೆ, ಪ್ರಾಕಾರದ ಅಥವಾ ಕಟ್ಟಡದ ಗೋಡೆಗಳೊಳಗೆ ಹುದುಗಿಸಿದೆ, ಇಲ್ಲವೇ ನೆಲದೊಳಗೆ ಅಡಗಿಸಿದೆ. ಬಳಕೆಯಾಗದ ಹೆಚ್ಚುವರಿ ನೀರನ್ನು ಮತ್ತು ಅರಮನೆ ಹಾಗೂ ವಿಹಾರ ತಾಣಗಳ ಕಾರಂಜಿ, ಸ್ನಾನಗೃಹಗಳಲ್ಲಿ ಬಳಕೆಯಾದ ನೀರನ್ನು ಸಹ ಆಯಾ ಸಮುಚ್ಚಯದಲ್ಲಿನ ಉದ್ಯಾನಕ್ಕೆ ಹಾಯಿಸಿ, ಇನ್ನೂ ಅಳಿದುಳಿದು ನೀರನ್ನು ಅಲ್ಲಿನ ಜಲಮೂಲಕ್ಕೆ ಜಾಣ್ಮೆಯಿಂದ ಹರಿಸುವ ವ್ಯವಸ್ಥೆಯೂ ಇತ್ತು. ತುರ್ತು ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ಹೊರಗಿನಿಂದ ಬರುವ ನೀರು ಬಾರದಾದರೆ ತಾತ್ಕಾಲಿಕ ಆಂತರಿಕವ್ಯವಸ್ಥೆಯಾಗಿ ಸಂಗ್ರಾಹಕ ಗೋಪುರಗಳಿಗೆ ಈ ಜಲಮೂಲದ ನೀರನ್ನು ಮಾನವ ಅಥವಾ ಪ್ರಾಣಿಶಕ್ತಿಯಿಂದ ಏತಗಳ ಮೂಲಕ ಎತ್ತಿ ತುಂಬಿದರೆ ಹಂಚಿಕೆ ಸುಗಮವಾಗುವಂತಹ ಸ್ವಯಂಪೂರ್ಣ ಸ್ವಾವಲಂಬಿತ ವ್ಯವಸ್ಥೆ ಈ ಜಲಸರಬರಾಜುವ್ಯವಸ್ಥೆಯ ಇನ್ನೊಂದು ವೈಶಿಷ್ಟ್ಯ.

ಇವಲ್ಲದೆ ಸಾರ್ವಜನಿಕರ ಉಪಯೋಗಕ್ಕಾಗಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ಮುಖ್ಯಸ್ಥಳಗಳಲ್ಲಿ ವೃತ್ತ, ಚೌಕ, ಆಯತ ಹಾಗೂ ಅಷ್ಟಕೋನಾಕಾರದ ಅನೇಕ ಬಾವಡಿಗಳನ್ನು ರಾಜಧಾನಿಯ ಒಳಗೆ ಮತ್ತು ಹೊರಗೆ ಕಟ್ಟಲಾಗಿದೆ. ಇವುಗಳಿಗೆ ಒಂದು ಅಥವಾ ಹೆಚ್ಚು ಬದಿಗಳಲ್ಲಿ ಪಾವಟಿಗೆಗಳು, ಭವ್ಯ ಕಮಾನುದ್ವಾರ, ಸುತ್ತಲೂ ಅಥವಾ ಮಿತವಾಗಿ ಕಮಾನು ಮಂಟಪಗಳಿವೆ. ಇವೆಲ್ಲವನ್ನೂ ಶುದ್ಧ ನೀರಿನ ಸ್ವಾಭಾವಿಕ ಒರತೆ ಅಥವಾ ಊಟೆಗಳಿರುವ ಕಡೆ, ನೆಲದೊಳಗೆ ಕಲ್ಲು ಕಡಿದು ರೂಪಿಸಲಾಗಿದೆ. ಒರತೆಯ ನೀರಿನ ಜೊತೆಗೆ, ಮಳೆ ನೀರಿನ ಸಂರಕ್ಷಣೆಯ ಮೂಲಕ ಜಲ ಸಂಗ್ರಹಣಾ ಕ್ಷಮತೆಯನ್ನು ಹೆಚ್ಚಿಸಲಾಗಿದೆ. ರಾಜಧಾನಿಯೊಳಗಣ ಅಲಂಕೃತ ಬಾವಿಗಳಲ್ಲಿ ಶಾಹಪೂರ ಹೆಬ್ಬಾಗಿಲಿನ ದಕ್ಷಿಣಕ್ಕಿರುವ, ಮೊದಲನೆಯ ಅಲಿ ತನ್ನ ಪತ್ನಿ ಚಾಂದ್ ಬೇಬಿಯ ಹೆಸರಿನಲ್ಲಿ (1579) ಕಟ್ಟಿಸಿದ. ಚಾಂದ್ ಬಾವಡಿ ಆಯತಾಕಾರದ (ದಕ್ಷಿಣೋತ್ತರ 47.7 ಮೀ × ಪೂರ್ವಪಶ್ಚಿಮ 43.9 ಮೀ) ವಿಸ್ತಾರವಾದ ಕೊಳ. ಇದರ ಭವ್ಯ ಕಮಾನಿನ ಪ್ರವೇಶ ದ್ವಾರದಿಂದ ನೀರಿನ ಮಟ್ಟದವರೆಗೆ ಪಾವಟಿಗೆ, ಉಳಿದ ಮೂರು ಬದಿಗೆ ನೀರಿಗಭಿಮುಖವಾಗಿ ಕಮಾನು ಆಧಾರಿತ ಚಾವಡಿ ಕೊಠಡಿಗಳಿವೆ.

ಇದೇ ತಲವಿನ್ಯಾಸದ, ಆದರೆ ಕಮಾನುದ್ವಾರವಿಲ್ಲದ, ತಾಜ್‌ಬಾವಡಿ ಬಿಜಾಪುರದ ಅತಿದೊಡ್ಡ ಸಿಹಿನೀರಿನ ಕೊಳ. ಇದನ್ನು ಬಹುಶಃ 1620ರಲ್ಲಿ ಇಮ್ಮಡಿ ಇಬ್ರಾಹಿಂ ತನ್ನ ಪ್ರಿಯ ಪತ್ನಿ ತಾಜ್‌ಸುಲ್ತಾನಳ ಹೆಸರಿನಲ್ಲಿ ಕಟ್ಟಿಸಿದ. ಚಚ್ಚೌಕಾಕಾರದ (67.98 ಚಮೀ) ಈ ಕೊಳ ಸು. 15.85ಮೀ ಆಳವಿದೆ. ಮುಂಭಾಗದಲ್ಲಿ 10ಮೀ ಅಗಲದ ಭವ್ಯಾಕಾರದ ಕಮಾನುದ್ವಾರ ಮತ್ತು ಅದರ ಇಕ್ಕೆಲಗಳಲ್ಲಿ ಗುಮ್ಮಟಸಹಿತ ಅಷ್ಟಭುಜಾಕಾರದ ಮಿನಾರುಗಳನ್ನು ಹೊಂದಿದೆ.

ಈ ಪ್ರಸಿದ್ಧ ಬಾವಡಿಗಳಲ್ಲದೆ ಫಾತಿಮಾ ಸಲ್ತಾನ್ ಚಿಸ್ತಿ(1652) ಪೀರ್ ಷೇಕ್ ಹಮೀದ್ ಖಾದ್ರಿಯ ಗೋರಿಯ ಬಳಿ ಕಟ್ಟಿಸಿದ ಬಾವಿ, ಜೋಡುಗುಮ್ಮಟದ ಆವರಣದಲ್ಲಿನ ಎರಡು ಬಾವಿಗಳು, ತಿಕೋಟಾದಲ್ಲಿನ ತಾಜ ಖಾನನ ಬಾವಡಿ, ಇಬ್ರಾಹಿಮ್ ರೋಜಾದ ಪೂರ್ವಕ್ಕೆ ಇರುವ ಬಾವಿ, ಅಫ್ಜಲ್‌ಖಾನನ ಪತ್ನಿಯರ ರುದ್ರಭೂಮಿಯ ಬಳಿಯ ಎರಡಂತಸ್ತಿನ ಕಮಾನು ಬಾವಿ, ಬಾರಾಕಮಾನ್ ಆವರಣದ ಅಷ್ಟಕೋನಾಕಾರದ ಬಾವಿ, ಮಾಹಿಸಾ ಬಾ ಬಾವಡಿ ಮುಂತಾದ ಇತರ ಅನೇಕ ಬಾವಡಿಗಳು ವಿವಿಧ ಕಾರಣಗಳಿಗಾಗಿ ಪ್ರಸಿದ್ಧವಾಗಿವೆ.



ಗಗನ ಮಹಲ್

**ಈದ್ಗಾ ಮತ್ತು ಮಸೀದಿಗಳು:** ಸಾಮೂಹಿಕ ಪ್ರಾರ್ಥನೆಯ ಅವಶ್ಯಕತೆಗಳಿಗನುಗುಣವಾಗಿ ನಿರ್ಮಾಣವಾದ ಮಸೀದಿಗಳು ಇಸ್ಲಾಂಧರ್ಮದ ಭವ್ಯ ಕಟ್ಟಡಗಳಾಗಿವೆ. ಇಸ್ಲಾಂ ಧರ್ಮ, ಸಂಸ್ಕೃತಿ, ಆಧ್ಯಾತ್ಮದರ್ಶನಗಳ ಮೂಲನೆಲೆಯಾದ ಮದೀನಾಪಟ್ಟಣದಲ್ಲಿ ಪ್ರಪಂಚದ ಪ್ರಥಮ ಪ್ರಾರ್ಥನಾ ಮಂದಿರ 650ರ ಸುಮಾರಿಗೆ ನಿರ್ಮಿತವಾಯಿತು. ಭಾರತದಲ್ಲಿ ದೆಹಲಿಯ ಹೊರವಲಯದಲ್ಲಿರುವ ಮೆಹರೌಲಿಯ ಕುತುಬ್ ಸಮುಚ್ಚಯದಲ್ಲಿನ ಖುವ್ವತುಲ್ ಇಸ್ಲಾಂ (ಇಸ್ಲಾಂ ದಿಗ್ವಿಜಯ ಘೋಷಕ) ಮಸೀದಿಯನ್ನು 1191–96ರಲ್ಲಿ ಕಟ್ಟಲಾಯಿತು. ಆಕಾಲಕ್ಕೆ ಆಯಾ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಹಿಂದು, ಜೈನ ದೇವಾಲಯಸಮೂಹಗಳನ್ನು ಕೆಡವಿ, ಅದರ ವಾಸ್ತು, ಶಿಲ್ಪಭಾಗಗಳನ್ನೇ ಪುನಃ ಉಪಯೋಗಿಸಿ ಅದೇ ಸ್ಥಳದಲ್ಲಿ ಮಸೀದಿಯನ್ನು ಕಟ್ಟಿರುವುದರಿಂದ ಈ ಆರಂಭಿಕ ಕಟ್ಟಡದಲ್ಲಿ ಇಸ್ಲಾಂಶೈಲಿಯ ಮುಖ್ಯ ಲಕ್ಷಣಗಳು ಹೆಚ್ಚಿಲ್ಲ. ಮೊದಲಿದ್ದ ಧಾರ್ಮಿಕ ಕಟ್ಟಡಗಳನ್ನು ಬಲಾತ್ಕಾರದಿಂದ ಹಾಳುಗೆಡವಿ, ಅವೇ ವಸ್ತುಗಳಿಂದ, ಅದೇ ಸ್ಥಳದಲ್ಲಿ ಸ್ಥಳೀಯ ಕಲಾವಿದರನ್ನು ಬಳಸಿ ಮಸೀದಿ ಕಟ್ಟಿರುವುದು ಕಂಡುಬರುತ್ತದೆ. ಸ್ಥಳೀಯ ಜನರ ಮೂಲಕ ಧಾರ್ಮಿಕ ಭಾವನೆ, ನಂಬಿಕೆ, ಅಂತಸ್ಸತ್ವ, ಶ್ರದ್ಧೆ ಮತ್ತು ನೈತಿಕ ಶಕ್ತಿಸಾಮರ್ಥ್ಯಗಳ ಮೂಲಸೆಲೆಯನ್ನು ತೀವ್ರ ಆಘಾತಕ್ಕೆ ಒಳಪಡಿಸಿ ಬತ್ತಿಸಿ ಬಿಡುವುದು ವಿಗ್ರಹಭಂಜಕವೃತ್ತಿಯ ಹಿನ್ನಲೆಯಾಗಿದೆ.

ಅದರಂತೆಯೇ ಬಹಮನಿ–ಪೂರ್ವಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ದಖ್ಖನಿನಲ್ಲಿ ಬಿಜಾಪುರದ ಕರೀಮುದ್ದೀನನ ಮಸೀದಿ ಮೊಟ್ಟಮೊದಲ ಇಸ್ಲಾಂ ಧಾರ್ಮಿಕ ಕಟ್ಟಡಗಳಲ್ಲಿ ಒಂದು. 1318ರ ವೇಳೆಗೆ ದೌಲತಾಬಾದಿನ ಮಸೀದಿಯನ್ನು ಕಟ್ಟಿದ ಎರಡನೇ ವರ್ಷಗಳಲ್ಲಿ (ಅಂದರೆ 1320ರಲ್ಲಿ) ಮಲ್ಲಿಕಾಫರನ ಸಂಬಂಧಿಯೂ ಅವನ ದಂಡನಾಯಕನೂ ಆಗಿದ್ದ ಕರೀಮುದ್ದೀನ್ ಈ ಮಸೀದಿಯನ್ನು ಕಟ್ಟಿಸಿದ. ಆ ಕಾಲದಲ್ಲಿ, ಇಲ್ಲಿದ್ದ ಕಲ್ಯಾಣ ಚಾಳುಕ್ಯ ವಾರಂಗಲ್‌ನ ಯಾದವ ಶೈಲಿಯ ಅನೇಕ ಹಿಂದು, ಜೈನ ದೇವಾಲಯಗಳನ್ನು ಹಾಳುಗೆಡವಿ ಸಂಗ್ರಹಿಸಿದ ಕಂಬ, ತೊಲೆ, ಶಿಲ್ಪ ಮುಂತಾದ ಸಾಮಗ್ರಿಗಳಿಂದಲೇ ನಿರ್ಮಿತವಾದ್ದು ಈ ಕಟ್ಟಡ. ಹೀಗೆ ನಾಶಮಾಡಿದ ದೇವಾಲಯಗಳಲ್ಲಿ ಅಭಿನವ ಪಂಪನೆಂದು ಪ್ರಸಿದ್ಧನಾದ ಕವಿ ನಾಗಚಂದ್ರ ತನ್ನ ಪ್ರಸಿದ್ಧ ಕೃತಿಗಳನ್ನು ರಚಿಸಿದ ಮೂಲ ತ್ರಿಕೂಟಾಚಲ ಜೈನ ದೇವಾಲಯವೂ ಒಂದು. ಈ ದೇವಾಲಯದ ಉತ್ತರ, ದಕ್ಷಿಣ, ಪಶ್ಚಿಮ ದಿಕ್ಕುಗಳಲ್ಲಿ ದ್ವಾರವಿರುವ, ಮಾರ್ಪಡಿಸಿದ ತಲ ವಿನ್ಯಾಸದಲ್ಲಿ ಈಗ ಪ್ರಾಕಾರದಿಂದಾವೃತವಾದ ಕಂಬಗಳ ವಿಶಾಲ ಹಜಾರವಿದೆ. ಆಯತಕಾರ(26×15.6ಮೀ)ಪ್ರಾರ್ಥನಾಕೊಠಡಿಯಲ್ಲಿನ ಮಿಹ್ರಾಬ್, ಗರ್ಭಗುಡಿಯ ದಾರಬಂಧವನ್ನೇ ಕಮಾನಾಗಿಸಿರುವಂತಹುದು. ಇದರ ಮುಂದಣ ಹಜಾರವೂ 66 ಅಂಕಣಗಳಷ್ಟು ವಿಶಾಲಾವಾದುದು. ಮಧ್ಯದ ಅಂಕಣವನ್ನು ಒಂದರ ಮೇಲೊಂದು ಕಂಬವನ್ನು ನಿಲ್ಲಿಸಿ ಉಳಿದ ಭಾಗಗಳಿಗಿಂತ ಎತ್ತರವಾಗಿರುವಂತೆ ರೂಪಿಸಿ

ರುವುದು ಬಹುಶಃ ಗುಮ್ಮಟ ರಚನೆಯ ಉದ್ದೇಶದಿಂದ. ಈ ಮಸೀದಿಯನ್ನು ಕಟ್ಟಲು ಮುಖ್ಯ ಸ್ಥಪತಿಯಾಗಿ ಕೆಲಸಮಾಡಿದ ಸಾಲೋಟಗಿಯ ಬಡಗಿ ರೇವೋಜನಿಗೆ ಕರಿಮುದ್ದೀನನು ದಾನ ಮಾಡಿದ ಶಾಸನ ಮಸೀದಿಯ ಕಂಬವೊಂದರ ಮೇಲಿದೆ. ಈ ರೀತಿಯ ಏರ್ಪಾಡುಗಳು ರಾಜಸ್ತಾನ, ಗುಜರಾತ್ ಮುಂತಾದ ಪ್ರದೇಶಗಳಲ್ಲಿ ಇಸ್ಲಾಂನ ಪ್ರಾರಂಭ ಕಾಲದ ಕಟ್ಟಡಗಳು ಕಟ್ಟಲ್ಪಟ್ಟಿವೆ.

ಕ್ರಮೇಣ ಮಸೀದಿ ಕಟ್ಟಡಗಳಲ್ಲಿರಬೇಕಾದ ಪ್ರಾರ್ಥನೆಯಗೂಡು (ಮಿಹ್ರಾಬ್), ಅದರ ಬಲಪಕ್ಕಗಳಲ್ಲಿ ಕಟ್ಟಿರುವ ಎತ್ತರದ ಮೀನಾರ್, ಬಂದ ಭಕ್ತರು ಶುದ್ಧರಾಗಲು ನೀರಿನಕೊಳ (ಹೌದ್) ಮತ್ತು ಹೆಚ್ಚುವರಿ ಜನರಿಗಾಗಿ ಒಳ ಪರಿಧಿಯಲ್ಲಿನ ಕಮಾನು ಸಾಲಿನ ಮಂಟಪ (ಲಿವಾನ್)– ಈ ಪಂಚಾಂಗಗಳಿಂದ ಕೂಡಿದ ಮಸೀದಿಗಳು ನಿರ್ಮಾಣವಾದವು. ಕೆಲವು ಮಸೀದಿಗಳಲ್ಲಿ ಮಿಹ್ರಾಬ್‌ನ ಮುಂದೆ ಭಕ್ತರು ಬಿಡಿಬಿಡಿಯಾಗಿ ಕುಳಿತು ಪ್ರಾರ್ಥಿಸಲು ಅಂಗಳದೊಳಗೆ ಮೂಡಿಸಿದ ಮುಸಲ್ಲಾ ಎಂಬ ಗುರುತುಗಳೂ ಇರುತ್ತವೆ. ಧಾರ್ಮಿಕವಾಗಿ ಆವಶ್ಯಕವಾದ ಈ ಅಂಶಗಳ ಜೊತೆಗೆ ಆಕ್ರಮಣಕಾರರು ಸ್ಥಳೀಯರಾಗಿ ನೆಲೆಗೊಂಡು ಪ್ರಬಲರಾದಂತೆ, ವೈಭವೋಪೇತ ಕಲ್ಪನೆ, ನಿರ್ಮಾಣ ತತ್ತ್ವ, ಸಾಮಗ್ರಿಗಳ ಮೇಲಿನ ಹಿಡಿತ, ಕೆಲವು ವಿಶಿಷ್ಟ ಲಕ್ಷಣಗಳ ಆವಿಷ್ಕಾರ, ಸ್ಥಳೀಯ ಶೈಲೀಯಾಂಶಗಳ ಹದವರಿತ ಅಳವಡಿಕೆಗಳಿಂದ ಈ ಪ್ರಾದೇಶಿಕ ಶೈಲಿಯ ಮಸೀದಿಗಳು ಅದ್ಭೂರಿಯ ಅಲಂಕರಣಪ್ರಧಾನ ಕಟ್ಟಡಗಳಾಗಿ ಅರಳಿದವು. ಬಿಜಾಪುರ ರಾಜಧಾನಿಯೊಳಗೇ ಇಂತಹ ಕನಿಷ್ಠ 40 ಮಸೀದಿಗಳಿದ್ದು ಒಂದೊಂದೂ ತನ್ನದೇ ಆದ ವಿಶಿಷ್ಟ ವಿವರಗಳಿಗಾಗಿ ಮಹತ್ತ್ವದ್ದಾಗಿವೆ.

ಫಸಾರಿ ಕಮಾನು

ಮಸೀದಿಗಳ ಜೊತೆಗೆ ನಗರದ ಎಲ್ಲ ಮುಸ್ಲಿಮರು ರಂಜಾನ್, ಬಕ್ರೀದ್‌ನಂತಹ ಪರ್ವದಿನಗಳಲ್ಲಿ ಒಂದೇ ಕಡೆ ಸೇರಿ ಪ್ರಾರ್ಥಿಸಲು ಈದ್ಗಾಗಳೂ ನಿರ್ಮಾಣವಾದವು. ಲಕ್ಷಾಂತರ ಜನರು ಒಂದೆಡೆ ಸೇರಲು ಬೇಕಾದ ವಿಶಾಲ ಬಯಲು, ಎಲ್ಲರಿಗೂ ಮಿಹ್ರಾಬ್ ಕಾಣುವಂತೆ, ಊರಿನ ಅತ್ಯಂತ ಎತ್ತರದ ಭೂಪ್ರದೇಶದಲ್ಲಿರುವ ಈ ಈದ್ಗಾಗಳು ಸಾಧಾರಣ ವಾಗಿ ಮೂರು ಕಮಾನು ಕೊರೆದ, ದಕ್ಷಿಣೋತ್ತರವಾದ ಒಂದೇ ಗೋಡೆ ಅಥವಾ ಮೂರು ಗುಮ್ಮಟಗಳಿರುವ ಸರಳ, ಆದರೂ ಗಮನಾರ್ಹ ಗಾತ್ರದ ಕಟ್ಟಡವಾಗಿರುತ್ತವೆ.

ಕೋಟೆಯ ಪಶ್ಚಿಮ ಭಾಗದಲ್ಲಿ ಅತ್ಯಂತ ಎತ್ತರವಾದ ಸ್ಥಳದಲ್ಲಿ ದಕ್ಷಿಣೋತ್ತರವಾಗಿ ಕಟ್ಟಲಾದ ದಖನಿ ಈದ್ಗಾವನ್ನು ಕ್ವಾಜಾನಜರ್ ಗಫ಼ಲತ್ ಎಂಬುವವನು ಸು.1538ರಲ್ಲಿ ಕಟ್ಟಿಸಿದನೆಂದು ಅಲ್ಲಿನ ಶಾಸನವೊಂದು ತಿಳಿಸುತ್ತದೆ. ಸಾಮೂಹಿಕ ಪ್ರಾರ್ಥನೆ, ವಿಶ್ವಭ್ರಾತೃತ್ವಗಳನ್ನು ಒತ್ತಿ ಹೇಳುವ ಇಸ್ಲಾಮ್‌ನ ಧಾರ್ಮಿಕ ಆವಶ್ಯಕತೆಗಳಲ್ಲಿ ಈದ್ಗಾ ಅತ್ಯಂತ ಮಹತ್ತ್ವದ ನಿರ್ಮಿತಿಯಾಗಿದೆ. ನಗರದಲ್ಲಿ ಹೆಚ್ಚುವ ಜನಸಂಖ್ಯೆಯ ಅಗತ್ಯಗಳನ್ನು ಪೂರೈಸುವ ಸಲುವಾಗಿ ಎತ್ತರವಾದ ಸ್ಥಳದಲ್ಲಿ ವಿಶಾಲ ಮೈದಾನ ಪ್ರದೇಶದಲ್ಲಿ ನಿರ್ಮಾಣವಾದ ಇದು ಆದಿಲ್‌ಶಾಹಿ ಕಾಲದ ಪ್ರಾರಂಭಿಕ ಕಟ್ಟಡಗಳಲ್ಲಿ ಒಂದು ವಿಶಿಷ್ಟ ಕೋನದಲ್ಲಿ ಬಾಗಿರುವ, ಅಸಾಮಾನ್ಯವೆನಿಸುವ ದಪ್ಪಗೋಡೆಗಳಿರುವ ಈದ್ಗಾ ದೊಡ್ಡ ಗಾತ್ರದ್ದು. ಸ್ವಲ್ಪ ಎತ್ತರವಾದ, ಸಿಲಿಂಡರಿನಾಕಾರದ ವೇದಿಕೆಯ ಮೇಲೆ, ಚಪ್ಪಟೆಯೆನಿಸುವ ಮೂರು ಗುಮ್ಮಟಗಳನ್ನು ಸುತ್ತುವರೆದ, ಬುರುಜಿನಂತಹ ತೆನೆಗಳಿರುವ ಮೇಲ್ಮಾಳಿಗೆ ಕೆಳಗಿನ ಎಲ್ಲ ಕೊಠಡಿಗಳನ್ನು ಆವರಿಸುವಂತಿದೆ. ಜಗುಲಿಯಿಂದ ಆರಂಭವಾಗಿ ಗೋಡೆಗಳ ನಡುವಿನಲ್ಲೇ ಮೂಡಿಸಿರುವ ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋಗಬೇಕು. ರಾಜಧಾನಿ ಸತತ ಆಕ್ರಮಣಗಳಿಗೀಡಾಗುತ್ತಿದ್ದ ಕಾಲದಲ್ಲಿ ರಂಜಾನ್, ಮೊಹರಂ, ಬಕ್ರೀದ್ ಮುಂತಾದ ಮಹತ್ತ್ವದ ದಿನಗಳಲ್ಲಿ ಇಲ್ಲಿ ಪ್ರಾರ್ಥನೆಗಾಗಿ ಸೇರುತ್ತಿದ್ದ ಲಕ್ಷಾಂತರ ಜನರು ಮತ್ತು ಅವರೊಡನೆ ಇರುತ್ತಿದ್ದ ರಾಜಪ್ರಮುಖರು, ಮಂತ್ರಿ, ಸೇನಾಪತಿ ಮೊದಲಾದವರ ರಕ್ಷಣೆಗಾಗಿ ಭದ್ರತಾದೃಷ್ಟಿಯಿಂದ ಬಹುಶಃ ಈ ಈದ್ಗಾವನ್ನು ವಿಶಿಷ್ಟ ರೀತಿಯಲ್ಲಿ ವಿನ್ಯಾಸ ಮಾಡಿರಬೇಕು.

ಪುರಸಭೆಯ ದೊಡ್ಡ ಜಲಾಶಯದ ಹತ್ತಿರವಿರುವ ಆಲಂಗೀರ (ಔರಂಗಜೇಬ್) ಈದ್ಗಾವನ್ನು 1687ರಲ್ಲಿ ಔರಂಗಜೇಬ್ ಕಟ್ಟಿಸಿದ. ಬಿಜಾಪುರವನ್ನು ಆಕ್ರಮಿಸಿದ ಹೊಸದರಲ್ಲಿ ಬಕ್ರೀದ್ ಮುಂತಾದ ಹಬ್ಬಗಳ ದಿನ ನಗರದಲ್ಲಿ ಹೆಚ್ಚಾಗುತ್ತಿದ್ದ ಜನರ ಆವಶ್ಯಕತೆಗಳನ್ನು ಪೂರೈಸಲು ಈ ಸಾಮೂಹಿಕ ಪ್ರಾರ್ಥನಾ ಮಂದಿರವನ್ನು ಕಟ್ಟಲಾಯಿತು. ಸು.120ಮೀ ಚಚ್ಚೌಕಾಕಾರದ ಆವರಣವಿರುವ ಈ ಕಟ್ಟಡ ಆಡಂಬರ ರಹಿತ ಸರಳ ಕಟ್ಟಡ. ನಾಲ್ಕೂ ಮೂಲೆಗಳಲ್ಲಿ ಸರಳ ವಿನ್ಯಾಸದ ಮೀನಾರ್‌ಗಳಿದ್ದು ಅದಕ್ಕೆ ಒಳಗಿನಿಂದ ಮೆಟ್ಟಿಲುಗಳನ್ನು ನೀಡಿದೆ.

ಎತ್ತರದ ಪ್ರಾಕಾರದೊಳಗೆ ಕಟ್ಟಿರುವ ಮೆಕ್ಕ (ಬುಖಾರ) ಮಸೀದಿ (1669) ಸರಳ ವಾದರೂ ಅತ್ಯಂತ ಸುಂದರವಾದ, ದಟ್ಟ ಅಲಂಕರಣವಿರುವ ಮಸೀದಿ. ಒರಟು ಕಲ್ಲುಗಳಿಂದ ರೂಪಿಸಿರುವ ಇದರ ಬೃಹತ್ ಮೀನಾರುಗಳ ಕೆಲವಂಶ ಮಾತ್ರ ಈಗ ಉಳಿದಿದೆ. ಶ್ರೀಮಂತ ಕೆತ್ತನೆಯ ಮುಂಚಾಚಿದ ಛಜ್ಜಾ, ಅಲಂಕೃತ ಲಿಪಿಯ ಅನೇಕ ಶಾಸನಗಳಿರುವ, ಹೊಳಪು ಹಸಿರುಗಲ್ಲಿನ ಮೋಹಕ ದ್ವಾರಬಂಧ ಮತ್ತು ಒಳಾಂಗಣದ ಕೊರೆದ ಗಾರೆಯ ಲಾವಣ್ಯಮಯ ಸೂಕ್ಷ್ಮ ಅಲಂಕರಣಗಳಿಗಾಗಿ ಬುಖಾರ ಮಸೀದಿ ಪ್ರಸಿದ್ಧವಾಗಿದೆ. ಇದರಿಂದ ಸ್ವಲ್ಪ ಉತ್ತರಕ್ಕೆ ಆದಿಲ್‌ಶಾಹಿ ಕಾಲದ ವಾಸ್ತುಶಿಲ್ಪ ಮಲ್ಲಿಕ ಸಂದಲನ ಮಸೀದಿಯಿದೆ. ಸಮೀಪದ ಝುಮ್ರುದ್ ಮಸೀದಿ ಇಡೀ ಬಿಜಾಪುರದಲ್ಲಿನ ಅತಿ ಚಿಕ್ಕ (ಕೇವಲ 3.6ಚಮೀ), ಆದರೆ ನಾಜೂಕಿನ ಅಲಂಕರಣವಿರುವ ಮಸೀದಿ.

ಇದಕ್ಕೆ ವ್ಯತಿರಿಕ್ತವಾಗಿ ಅರ್ಕಿಲ್ಲಾದ ನೇರ ಪೂರ್ವಕ್ಕೆ ಹಾಗೂ ಗೋಳಗುಮ್ಮಟದ ನೈರುತ್ಯಕ್ಕಿರುವ ಜಾಮೀ ಮಸೀದಿ ರಾಜಧಾನಿಯ ಅತಿದೊಡ್ಡ (137.2×76.2ಮೀ) ಹಾಗೂ ಅತ್ಯಲಂಕೃತ ರಾಜಮಸೀದಿ. ಸಮಾನ ಗಾತ್ರದ ಏಳು ಭವ್ಯ ಕಮಾನುಗಳಿರುವ, 28 ಅಂಕಣ ವಿಸ್ತಾರದ ಮುಖ್ಯ ಕಟ್ಟಡ ಪೂರ್ವ ತುದಿಯಲ್ಲಿದ್ದು, ಪಶ್ಚಿಮ ಹಾಗೂ ದಕ್ಷಿಣಗಳಲ್ಲಿ ಪ್ರವೇಶದ್ವಾರಗಳು, ಸುತ್ತುವರೆದಂತೆ ಎರಡಂತಸ್ತಿನ ಕಮಾನು ಮಂಟಪ ಹಾಗೂ ದಕ್ಷಿಣದ್ವಾರದ ಮುಂದೆ ಛತ್ರಿಗಳಿಂದ ಕೂಡಿದ ಮಂಟಪದ ಸಾಲುಗಳಿವೆ. ಒಳಾಂಗಣದ ಮುಕ್ತ ಪ್ರದೇಶದಲ್ಲಿ ಕಾರಂಜಿಗಳಿಂದ ಕೂಡಿದ ಕೊಳವಿದೆ. ಮಿಹ್ರಾಬಿನ ಮುಂದಣ ಮುಖ್ಯ ಅಂಕಣದ ಮೇಲೆ ಬೃಹದ್‌ಗಾತ್ರದ, ಅತ್ಯಂತ ಪ್ರಾಂಗಾಣಬದ್ಧವಾದ, ಚೌಕಾಕಾರದ (22.86ಮೀ ಚೌಕ) ವೇದಿಕೆಯಿಂದ ಮೇಲೇರುವ ಮನಮೋಹಕ ಗುಮ್ಮಟವಿದೆ. ಕೆಳಗಿನ ಅಂಗಳದಲ್ಲಿ ಪರಸ್ಪರ ಛೇದಿಸುವ ಎಂಟು ಕಮಾನುಗಳು, ಗುಮ್ಮಟ ಹಾಗೂ ಅದರ ವೇದಿಕೆಯ ಭಾರವನ್ನು ಹೊತ್ತಿವೆ. ಕಮಾನುಗಳ ಪರಿಧಿಯಲ್ಲಿ ನೀಲಿ ಮತ್ತು ಹಳದಿ ಬಣ್ಣದ ಹೊಳಪಿನ ಹಂಚುಗಳಿಂದ ಅಲಂಕರಿಸಲಾಗಿದೆ. ಈ ಕಮಾನುಗಳಲ್ಲಿ ಪೂರ್ವಾಭಿ ಮುಖವಾದ ಮುಖ್ಯಕಮಾನಿನಲ್ಲಿ ಕೊರೆದ ಗಾರೆಯಲ್ಲಿ ಮೂಡಿಸಿದ ಪತ್ರಾಲಂಕಾರ ಫಲಕಗಳಿ ದ್ದರೆ ಉಳಿದವು ಸಾಧಾರಣವಾಗಿವೆ. ಇವಲ್ಲದೆ ಮುಖ್ಯ ಕಟ್ಟಡದ ಮುಂಚಾಚಿದ ಕಾರ್ನಿಸಿನಲ್ಲಿ ನಾಜೂಕಾದ ಬೋದಿಗೆಗಳಿಗೆ ಪದಕ ಸಹಿತ ಏಕಶಿಲಾಸರಪಳಿಗಳನ್ನು ಹೊಂದಿಸಲಾಗಿತ್ತು. ವಿಜಯನಗರದ ಮೇಲೆ ಸಾಧಿಸಿದ ವಿಜಯದ ದ್ಯೋತಕವಾಗಿ ಅಲಿ ಆದಿಲ್‌ಶಾಹ(1558–80) ಇದನ್ನು ಕಟ್ಟಿಸಲು ಪ್ರಾರಂಭಿಸಿದನಾದರೂ 1686ರ ವರೆಗೆ ಇದರ ಅಲಂಕರಣಗಳು ಮುಂದುವರೆದೇ ಇತ್ತು. ಉದಾ: ಕಮಾನುಗಂಬ ಹಾಗೂ ಕಟ್ಟಡದ ಬದಿಯಲ್ಲಿ ನಿರ್ಮಾಣವಾಗಬೇಕಿದ್ದ ಮನೋಹರ ಮೀನಾರುಗಳು ಕಡೆಯವರೆಗೂ ಮುಗಿಯಲಿಲ್ಲ.

ಜಾಮಿ ಮಸೀದಿಯ ಮಿಹ್ರಾಬ್ ದಕ್ಷಿಣ ಭಾರತದ ಅತ್ಯಂತ ಕಲಾತ್ಮಕ, ಸೂಕ್ಷ್ಮ ಕೆತ್ತನೆ, ವಿವಿಧ ಲಿಪಿ ಶೈಲಿಯ ಪರ್ಷಿಯನ್ ಶಾಸನ ಹಾಗೂ ಗೋಪುರ, ಮೀನಾರ್, ಪದಕಸಹಿತ ಸರಪಳಿ, ಪುಷ್ಪ ಕರಂಡಕ, ಧೂಪಪಾತಿ ಮುಂತಾದವುಗಳ ಕೆಂಪು, ಕಡುಗಪ್ಪು, ಹಸುರು ಮತ್ತು ನೀಲಿಬಣ್ಣಗಳ ವಿವಿಧ ಛಾಯೆಗಳಲ್ಲಿ ರೂಪಿಸಿದ ವರ್ಣಚಿತ್ರಗಳಿವೆ. ಕುರಾನಿನ ಹಾಗೂ ಇನ್ನಿತರ ಸೂಕ್ತಿಗಳನ್ನು ಹಸಿರುಗಲ್ಲಿನ ವಾಸ್ತುಭಾಗಗಳ ಮೇಲೆ ಉಬ್ಬು ರೂಪದಲ್ಲಿ ಬಿಡಿಸಿ, ಅವು ಎದ್ದು ಕಾಣುವಂತೆ ಸ್ವರ್ಣಲೇಪ ಮಾಡಿದೆ. ಜೀವನದಲ್ಲಿ ಆಸಕ್ತಿ ಬೇಡ, ಅದು ತೀರ ಕ್ಷಣಿಕವಾದ್ದು, 'ಅಸ್ಥಿರವಾದ ಈ ಜಗತ್ತಿನಲ್ಲಿ ಶಾಂತಿ ಎಂಬುದಿಲ್ಲ', 'ಇಂದ್ರಿಯಗಳಿಗೆ ಮಾತ್ರವೇ ಈ ಪ್ರಪಂಚ ಬಲು ಸೊಗಸು', '(ದೇವರ) ಕಾಣಿಕೆಗಳಲ್ಲೆಲ್ಲ ಅಮೂಲ್ಯವಾದ್ದು ಈ ಜೀವನ ಆದರಿಂದ ನಶ್ವರ'– ಇಂತಹ ಹಲವಾರು ಸೂಕ್ತಿಗಳಿವೆ. ಈ ಅಲಂಕರಣಗಳು ಸಹಜವಾಗಿದ್ದು ಕುರಾನಿನ ಸೂಕ್ತಿಗಳ ಸೊಬಗು, ಸಂದೇಶಗಳೆರಡನ್ನೂ ಭಕ್ತರ ಮನಮುಟ್ಟುವಂತೆ ಸಂವಹಿಸುವ ಸಾಮರ್ಥ್ಯವನ್ನು ಹೊಂದಿವೆ. ಮೊಹಮ್ಮದ್ ಆದಿಲ್‌ಷಾನ ಕಾಲದಲ್ಲಿ (ಸು.1636) ಕಾಬೂಲ್‌ನಿಂದ ಬಂದ ಕಲಾವಿದ ಮಲ್ಲಿಕ್ ಯಾಕೂತ್ ಈ ಮಿಹ್ರಾಬಿನ ಅಲಂಕರಣಗಳನ್ನು ಮಾಡಿದ. ಮಸೀದಿಯ ಪ್ರಾರ್ಥನಾ ಸಭಾಂಗಣದಲ್ಲಿ ನಮಾಜು ಮಾಡುವಾಗ ಕುಳಿತುಕೊಳ್ಳುವ ಸಲುವಾಗಿ ಔರಂಗಜೇಬ (1686) ನೆಲದ ಮೇಲೆ 2250 ಆಯತಾಕಾರದ ಪ್ರಾರ್ಥನಾಸ್ಥಳ (ಮುಸಲ್ಲಾ)ಗಳನ್ನು ಮಾಡಿಸಿದನಲ್ಲದೆ, ಪೂರ್ವದಿಕ್ಕಿನ ಗೋಡೆ ಮತ್ತು ಹಸುರುಗಲ್ಲಿನಲ್ಲಿ ಉತ್ತರ ದ್ವಾರಬಂಧವನ್ನು ಅಳವಡಿಸಿದ. ಮುಖ್ಯ ಕಟ್ಟಡ ಮತ್ತು ದ್ವಾರಗಳನ್ನು ಸೇರಿಸುವ ಗೋಡೆಗಳನ್ನು ಸತಾರೆಯ ಹಿಂದು ಅರಸ ಕಟ್ಟಿಸಿದ ಜಾಮೀ ಮಸೀದಿಯ ದಕ್ಷಿಣಕ್ಕಿರುವ (ಸು.1620ರಲ್ಲಿ ಕಟ್ಟಲಾದ) ಮೆಹತರ್ ಮಸೀದಿ ಮತ್ತು ಅದರ ಅಲಂಕೃತ ಪ್ರವೇಶದ್ವಾರ– ಮೆಹತರ್ ಮಹಲ್– ಇಮ್ಮಡಿ ಇಬ್ರಾಹಿಮ್‌ನ ಕಾಲದ ಸರ್ವಾಲಂಕೃತ ವಾಸ್ತಿಶೈಲಿಯ ಒಂದು ರಮಣೀಯ ಮಾದರಿಯಾಗಿದ್ದು, ಬಿಜಾಪುರದ ಅತಿ ಸುಂದರ ಕಟ್ಟಡಗಳಲ್ಲಿ ಒಂದಾಗಿದೆ. ಮೆಹತರ್ ಮಹಲಿನ ಆಗ್ನೇಯಕ್ಕಿರುವ ಅಲಿ ಶಹೀದ್ ಪೀರನ ಮಸೀದಿ ವಿಶಿಷ್ಟ ರಚನೆಯದು. ಚೌಕಾಕಾರದ ಮಸೀದಿಯ ಮೇಲ್ಛಾವಣಿ ನಿರಂತರ ಕಮಾನಿನಂತೆ ಅಥವಾ ಎತ್ತಿನಗಾಡಿಯ ಕಮಾನಿನಂತಹ ಆಕಾರ ಹೊಂದಿದ್ದು ಉಳಿದ ಕಟ್ಟಡಗಳಿಗಿಂತ ಭಿನ್ನವಾಗಿದೆ. ಇಲ್ಲಿನ

ಮಿಹ್ರಾಬ್ ಸಹ ನವಭುಜಾಕೃತಿಯ ಅರ್ಧವೃತ್ತದಂತಿದ್ದು, ಮಧ್ಯದಲ್ಲಿ ಬಾಗಿಲಿರುವುದು ಮತ್ತು ಪರಿಧಿಯಲ್ಲಿ ಮುಖ್ಯ ಬಾಗಿಲಿನ ದ್ವಾರಬಂಧದಂತೆ ವಿನ್ಯಾಸ ಮಾಡಿರುವುದು ವಿಶಿಷ್ಟವಾಗಿದೆ. ಮಿಹ್ರಾಬಿನ ಮೇಲಣ ಕಮಾನಿನಲ್ಲಿ ಅಲಂಕೃತ ಲಿಪಿಯಲ್ಲಿ ಕುರಾನಿನ ಸೂಕ್ತಿಗಳಿದ್ದು, ಪರಿಧಿಯಲ್ಲಿ ಬಣ್ಣದ ಹೆಂಚುಗಳ ಅಲಂಕರಣದ ಕುರುಹುಗಳಿವೆ. ಈ ಮಸೀದಿಯ ಬಳಿಯಲ್ಲಿಯೇ ಮೊದಲನೆಯ ಅಲಿ ಆದಿಲ್‌ಶಾಹನ ಸಮಕಾಲೀನ ಸಂತ ಹಜರತ್ ಅಲೀ ಸಯ್ಯದ್ ಪೀರ್ ಶಹೀದನ ಸಮಾಧಿಯೂ ಇದೆ.

ಎರಡನೆಯ ಇಬ್ರಾಹಿಮ್ ತನ್ನ ಮಗಳಾದ ಮಲ್ಲಿಕಾ ಜಹಾನ್‌ಳ ಗೌರವಾರ್ಥ ಕಟ್ಟಿಸಿದ (ಸು. 1586–1600) ಮಲ್ಲಕಾಜಹಾನ್ ಮಸೀದಿ ಸಣ್ಣಗಾತ್ರದ್ದಾದರೂ ಸಮತೋಲಿತ ಪ್ರಮಾಣಬದ್ಧ ವಿನ್ಯಾಸ, ಶ್ರೀಮಂತ ಕೆತ್ತನೆಗಳಿಂದ ಮನಸೆಳೆಯುತ್ತದೆ. ಸು.1 ಮೀ ಎತ್ತರದ ಆಯತಾಕಾರದ ವೇದಿಕೆಯ ಪಶ್ಚಿಮ ತುದಿಯಲ್ಲಿ ಮಸೀದಿಯ ಮುಖ್ಯ ಕಟ್ಟಡ, ಅದರ ಮುಂದೆ ಚೌಕಾಕಾರದ ಕಲ್ಲುಕಟ್ಟೆದ, ಕಾರಂಜಿ ಸಹಿತ ಕೊಳಗಳಿವೆ. ಈ ಕಟ್ಟಡ ಪರಿಷ್ಕೃತ ಆದಿಲ್‌ಶಾಹಿ ವಾಸ್ತುಶಿಲ್ಪಕ್ಕೆ ಒಂದು ಅನನ್ಯ ಉದಾಹರಣೆಯಾಗಿದೆ.

ನಗರದ ನೈರುತ್ಯಕ್ಕಿರುವ ಅಂಡುಮಸೀದಿಯೂ ಹಲವು ವೈಶಿಷ್ಟ್ಯಗಳಿರುವ ಎರಡಂತಸ್ತಿನ ಕಲಾತ್ಮಕ ಕಟ್ಟಡ. ಕಿರುಗಾತ್ರದ ಈ ನಿರ್ಮಾಣದ ನೆಲ ಅಂತಸ್ತು ಕೈಸಾಲೆ ಅಥವಾ ವಿಶ್ರಾಂತಿ ಕೋಣೆಯಾಗಿದ್ದರೆ, ಗೋಡೆಗಳೊಳಗೆ ಇರುವ ಸೋಪಾನಗಳನ್ನೇರಿ ಮೇಲೆ ಹೋದರೆ ಇರುವ ಮೇಲ್ಮಾಳಿಗೆ ಮಹಿಳೆಯರಿಗಾಗಿ ಇರುವ ಪ್ರತ್ಯೇಕ ಪ್ರಾರ್ಥನಾಮಂದಿರವಾಗಿದೆ. ಈ ಮಸೀದಿಯಲ್ಲಿ ಮುಖ್ಯವಾದುದು ಪಟ್ಟಿಗಳಾಗಿ ವಿಭಜಿಸಿದ ನೆಲ್ಲಿಕಾಯಿಯಂತಹ ಕಟ್ಟಡ. ಇದೇ ರೀತಿಯ ವಿನ್ಯಾಸವನ್ನು ಮುಖ್ಯ ಗುಮ್ಮಟಕ್ಕೆ ಸ್ವಲ್ಪವೇ ಕೆಳಗಿರುವಂತೆ ರೂಪಿಸಿರುವ ಮೀನಾರುಗಳ ಗುಮ್ಮಟಗಳಿಗೂ ಯೋಜಿಸಿರುವುದು ಒಟ್ಟಾರೆ ಊರ್ಧ್ವವಿನ್ಯಾಸಕ್ಕೆ ವಿಶಿಷ್ಟ ಸೊಬಗು ನೀಡಿದೆ. ಮುಂಬಾಗಿಲಿನ ಪರಿಧಿಯಲ್ಲಿ ಬರೆದಿರುವ ಕಾಲಲೇಖವಿರುವ ಪರ್ಷಿಯನ್ ಶಾಸನದಂತೆ, ಈ ಮಸೀದಿಯನ್ನು ಎರಡನೆಯ ಇಬ್ರಾಹಿಮ್ ಮತ್ತು ಸುಲ್ತಾನ್ ಮೊಹಮ್ಮದರ ಮಂತ್ರಿಯಾಗಿದ್ದ ಇತ್ಬಾರ್ ಖಾನನು 1608ರಲ್ಲಿ ಕಟ್ಟಿಸಿದ.

ಔರಂಗಜೇಬನ ಪತ್ನಿ ಬೇಗಮ್ ಸಾಹಿಬಾಳ ಗೋರಿಯ ಬಳಿ ಇರುವ, ಮೊದಲನೆ ಇಬ್ರಾಹಿಮ್‌ನ ಕಾಲದ (ಸು.1551) ಮಧ್ಯಮ ಗಾತ್ರದ ಮಸೀದಿ. ಬಿಜಾಪುರದ ಪ್ರಾರಂಭಕಾಲದ ಕಟ್ಟಡಗಳಲ್ಲಿ ಒಂದು. ಕಾರ್ನೀಸಿನ ಮುಂಚಾಚಿದ ಛಜ್ಜಾ, ಇಟ್ಟಿಗೆ ಗಾರೆಯಿಂದ ಕಟ್ಟಲಾದ ಮೀನಾರುಗಳ ಕೆಲಭಾಗಗಳು ಮಾತ್ರ ಈಗ ಉಳಿದಿವೆ.

**ಸಮಾಧಿ ಕಟ್ಟಡಗಳು:** ಇಸ್ಲಾಂಧರ್ಮ ಶವಸಂಸ್ಕಾರ, ಸಮಾಧಿ ನಿರ್ಮಾಣಗಳಲ್ಲಿ ಸರಳತೆಯನ್ನು ವಿಧಿಸಿದೆ. ಖಲೀಫರು, ಇಮಾಮರು, ಅವರ ಕುಟುಂಬ, ಶಿಷ್ಯವರ್ಗದವರ ಸಮಾಧಿಗಳೂ ಈ ವಿಧಿವಿಧಾನಗಳಿಗನುಗುಣವಾಗಿ ಸರಳವಾಗಿಯೇ ಇವೆ. ಆದರೆ ಕ್ರಮೇಣ 9–10ನೆಯ ಶತಮಾನದ ವೇಳೆಗೆ ಸ್ವರ್ಗ, ಸಮಾಧಿ ಕಟ್ಟಡಗಳ ಕಲ್ಪನೆ ವಿಪರೀತವಾಗಿ ಎನ್ನುವಂತೆ ಬೆಳೆದು ವಿವಿಧ ವಿನ್ಯಾಸ, ಗಾತ್ರ, ಅಲಂಕರಣಗಳ ಭವ್ಯ ಕಟ್ಟಡಗಳು ನಿರ್ಮಾಣವಾದವು.

ರಾಜಮನೆತನದವರ ಸಮಾಧಿಯಲ್ಲಿ ಅನಿವಾರ್ಯವಾಗಿ ಎನ್ನುವಂತೆ, ಅವರವರ ವೈಭವ, ಉಪಭೋಗ ವಿಲಾಸ ಲಾಲಸೆಗಳಿಗೆ ತಕ್ಕಂತೆ, ಕುಟುಂಬ ವರ್ಗ, ಪ್ರೇಯಸಿ, ರಾಣಿ, ಪರಿಚಾರಕರಿಗೂ ಸ್ಥಾನ ಕಲ್ಪಿಸಿಕೊಡುವುದಕ್ಕಾಗಿಯೂ ಕಟ್ಟಡಗಳು ಭವ್ಯಗಾತ್ರದ್ದಾದವು. ಈ ರಾಜವಂಶದ ಒಟ್ಟಾರೆ ಒಂಬತ್ತು ಅರಸರಲ್ಲಿ ಮೊದಲ ಮೂವರ (ಯೂಸುಫ್, ಇಸ್ಮಾಯಿಲ್ ಮತ್ತು ಮೊದಲನೆಯ ಇಬ್ರಾಹಿಂ) ಗೋರಿಗಳು ಇಸ್ಲಾಂನ ವಿಧಾನಗಳಿ ಗೊಪ್ಪುವಂತೆ ಇರುವ ಸರಳ ನಿರ್ಮಾಣಗಳು. ಈ ಸಮಾಧಿಗಳೆಲ್ಲ ಉಸ್ತಾದಾಬಾದ್‌ನಲ್ಲಿರುವ (ಗುಲ್ಬರ್ಗ ಜಿಲ್ಲೆಯ ಗೋಗಿ) ಸಂತ ಷೇಖ್ ಜಲಾಲುದ್ದೀನ್ ಮೊಹಮ್ಮದ್ ಚಂದಾ ಹುಸ್ಸೈನಿಯ ಸಮಾಧಿಯ ಬುಡದಲ್ಲಿವೆ. ಉಳಿದವರಲ್ಲಿ ಮೊದಲನೆಯ ಅಲಿ, ಇಮ್ಮಡಿ ಇಬ್ರಾಹಿಂ, ಮೊಹಮ್ಮದ್, ಇಮ್ಮಡಿ ಅಲಿ ಮತ್ತು ಕೊನೆಯ ಅರಸ ಸಿಕಂದರ್ – ಇವರ ಸಮಾಧಿಗಳು ರಾಜಧಾನಿಯಲ್ಲಿಯೇ ಇವೆ. ಮೊದಲನೆಯ ಸಲಿಯ ಸಮಾಧಿ ಸರಳ ವಿನ್ಯಾಸದ್ದಾದರೂ ಪ್ರವಾದಿ ಮೊಹಮ್ಮದರ ಅಳಿಯ ಹಜರತ್ ಅಲಿಯ ಹೆಸರಿನಲ್ಲಿ ರೂಪಿಸಿದ ಹಚ್ಚಹಸುರಿನ ಗಿಡಮರಗಳಿಂದ ತುಂಬಿದ ವಿಶಾಲ ಅಲೀಬಾಗ್ ಉದ್ಯಾನದ ನಡುವೆ ಕಟ್ಟಿದೆ. ಇಮ್ಮಡಿ ಇಬ್ರಾಹೀಮ್ ಮತ್ತು ಮೊಹಮ್ಮದರ ಸಮಾಧಿಗಳು ಮಾತ್ರವೇ ಅಲಂಕೃತ ಕಟ್ಟಡ ಸಮುಚ್ಚಯಗಳಾಗಿ ಬೆಳೆದು ಅನೇಕ ವೈಶಿಷ್ಟ್ಯಗಳಿಂದ ಕೂಡಿರುವುದು. ಇವು ಆದಿಲ್‌ಶಾಹಿ ಶೈಲಿಯ ಅಪ್ರತಿಮ ಮಾದರಿಗಳಾಗಿ ರೂಪುಗೊಂಡವು. ಎರಡನೆಯ ಅಲಿಯ ಸಮಾಧಿ ಮಹತ್ವಾಕಾಂಕ್ಷೆಯ ಕಟ್ಟಡವಾದರೂ ಅಪೂರ್ಣ ಸ್ಥಿತಿಯಲ್ಲಿ ಉಳಿದಿದೆ. ಕಡೆಯ ಅರಸ ಸಿಕಂದರನು ಕಾರಣಾಂತರಗಳಿಂದ ಆಧ್ಯಾತ್ಮದತ್ತ ಒಲಿದವನಾಗಿದ್ದ. ಆತನ ಸಮಾಧಿ ಅವನ ಧಾರ್ಮಿಕ ಗುರು ಶಾಹ್ ನಯೀಮುಲ್ಲಾ ಖಾದರಿಯ ಸಮಾಧಿಯ ಪದತಲದಲ್ಲಿ, ಯಾವುದೇ ಛಾವಣಿಯೂ ಇಲ್ಲದೇ ತೀರ ಸಾಧಾರಣ ಗೋರಿಯಾಗಿದೆ.

ರಾಜಧಾನಿ ಬಿಜಾಪುರದಲ್ಲಿ ಹಾಗೂ ಅದರ ಪರಿಸರದಲ್ಲಿ ಈ ರಾಜರದ್ದೇ ಅಲ್ಲದೆ ರಾಜಕುಟುಂಬದವರು, ಹಲವಾರು ಸೂಫಿಸಂತರು, ಸೇನಾಪತಿ, ಮಂತ್ರಿ, ರಾಜಪ್ರಮುಖರು, ಮತ್ತಿತರರು ತಮಗಾಗಿ ಕಟ್ಟಿಕೊಂಡ 40ಕ್ಕೂ ಹೆಚ್ಚು ಸಮಾಧಿ ಕಟ್ಟಡಗಳಿದ್ದು, ಪ್ರತಿ ಕಟ್ಟಡವೂ ತನ್ನದೇ ಆದ ವೈಶಿಷ್ಟ್ಯದಿಂದ ಕಂಗೊಳಿಸುತ್ತದೆ. ಈ ಹಿನೆಲೆಯಲ್ಲಿ 'ಗುಮ್ಮಟಗಳ ನಗರ'ವೆಂದೇ ಬಿಜಾಪುರ ಪ್ರಸಿದ್ಧವಾಗಿದೆ.

ಇಮ್ಮಡಿ ಇಬ್ರಾಹಿಂನ ಕಾಲದಲ್ಲಿ ಮೊಗಲರೊಡನೆ ಸಾಂಸ್ಕೃತಿಕ–ರಾಜಕೀಯ ಸಂಪರ್ಕಗಳು ಹೆಚ್ಚಾದವು. ಇದರಿಂದ ಸಮಾಧಿಯ ಪರಿಸರದಲ್ಲಿ ವಿಶೇಷ ದಿನಗಳಲ್ಲಿ ಸಮಾಧಿಗೆ ಬರುವ ರಾಜಮನೆತನದವರು, ಅವರ ಪರಿಚಾರಕರು ಉಳಿದುಕೊಳ್ಳಲು, ದಲಾನು, ಕುದುರೆ ಲಾಯ, ರಾಜರ ಉಪಸ್ಥಿತಿಯನ್ನು ಸಾರಲು ನಗಾರ್ ಖಾನಾ ಮುಂತಾದವೂ ಈ ಸಮುಚ್ಚಯದಲ್ಲಿ ಸೇರಿಕೊಂಡವು. ಹೀಗೆ ಇಬ್ರಾಹಿಂ ರೋಜಾ ಮತ್ತು ಗೋಳಗುಮ್ಮಟ ಸಮುಚ್ಚಯಗಳು ರೂಪುಗೊಂಡವು. ಇವುಗಳ ಜತೆಗೆ ಮೊಗಲ್ ಶೈಲಿಯಲ್ಲಿ ಇತರೆಡೆ ಕಾಣುವ ಮುಖ್ಯ ಕಟ್ಟಡದ ಅಕ್ಷದಲ್ಲಿ ವೀಕ್ಷಕರಿಗೆ ಉಂಟುಮಾಡುವ ಭ್ರಾಂತಿ, ಮುಸುಕಿನ ಕಣ್ಣು ಮುಚ್ಚಾಲೆಯಾಟ, ಒಮ್ಮೆಲೆ ಎದುರಾಗಿ ದಿಗ್ಭ್ರಾಂತಿಗೊಳಿಸುವ ಚಾಮತ್ಕಾರಿಕ ಅಂಶಗಳು ಹಾಗೂ ವಿಶೇಷ ಧ್ವನಿಪರಿಣಾಮಗಳು ಸೇರಿಕೊಂಡವು.

ಜಾಮಿ ಮಸೀದಿಯಂತಹ ಅದ್ಭುತ ಕಟ್ಟಡವನ್ನು ನಿರ್ಮಿಸಿದ ಅಪ್ರತಿಮ ಯೋಧ ಒಂದನೆಯ ಅಲಿ ಆದಿಲ್‌ಷಾನ ಗೋರಿ ಆಡಂಬರರಹಿತ, ಸರಳ ವಿನ್ಯಾಸದ ಸಾಧಾರಣ ಕಟ್ಟಡವಾದರೂ (ಸು.1580) ಆರಂಭ ಹಂತದ ಪ್ರಯತ್ನಗಳಲ್ಲಿ ಒಂದಾಗಿ ಗಮನ ಸೆಳೆಯುತ್ತದೆ. ಪ್ರತಿ ಮಗ್ಗುಲಲ್ಲಿ 5 ಕಮಾನುಗಳಿರುವ ಹೊರಾವರಣದ ಮಧ್ಯೆ ಸಶಕ್ತ 3 ಕಮಾನಿನ ಸಮಾಧಿ ಕೋಣೆ ಇದ್ದು, ಅದರ ಮಧ್ಯದ ಕಮಾನುಗಳಲ್ಲಿ ದ್ವಾರಗಳಿವೆ. ಛತ್ತಿನ ಮೇಲೆ ಸಾಮಾನ್ಯರೀತಿಯ ವೇದಿಕೆಯಿದ್ದರೂ ಗುಮ್ಮಟವಿಲ್ಲ. ಕಲ್ಲಿನ ಶವಸಂಪುಟವಿಲ್ಲದ ಸಾದಾ ಗೋರಿಯ ಮೇಲೆ ಮರದ ಆವರಣವಿದ್ದ ಕುರುಹುಗಳಿವೆ. ಸಮಾಧಿ ಕೋಣೆಯಲ್ಲಿ ಅಲಿಯ ಗೋರಿಯಲ್ಲದೆ ಇನ್ನೂ 3 ಗೋರಿಗಳಿವೆ. ಈ ಕಟ್ಟಡದ ನೈರುತ್ಯಕ್ಕೆ ಇರುವ ಎತ್ತರದ ವೇದಿಕೆಯ ಮಧ್ಯದಲ್ಲಿ ಕಡು ಹಸುರುಗಲ್ಲಿನ ಅಲಂಕೃತ ಶವಸಂಪುಟವಿದೆ. ಇದರ ಅಲಂಕರಣ ವಿನ್ಯಾಸ ವಿಶೇಷದಿಂದ ಮುಖ್ಯವ್ಯಕ್ತಿಗೆ ಸಂಬಂಧಪಟ್ಟದ್ದೆಂದು ಸ್ಪಷ್ಟವಾದರೂ ಯಾರದೆಂದು ಖಚಿತವಾಗಿ ತಿಳಿದುಬಂದಿಲ್ಲ. ವೇದಿಕೆಯ ನೆಲ ಅಂತಸ್ತಿನ ದ್ವಾರಗಳೂ ಸುಂದರವಾಗಿ ರೂಪಿತವಾಗಿವೆ.

ಜಾಮಿ ಮಸೀದಿಯ ಆಗ್ನೇಯದಲ್ಲಿರುವ ಶಾಹ್‌ಕರೀಮುದ್ದೀನ್ ಖಾದರಿ(1741) ಮತ್ತು ಸಯ್ಯದ್ ಅಬ್ದುಲ್ ಖಾದರಿ ಸೋದರರ ಸಮಾಧಿಗಳು ಅವುಗಳ ಆಕರ್ಷಕ ತಲ ಹಾಗೂ ಊರ್ಧ್ವ ವಿನ್ಯಾಸಗಳಿಗಾಗಿ ಪ್ರಸಿದ್ಧವಾಗಿವೆ. ಅರ್ಕಿಲ್ಲಾದ ಪೂರ್ವಕ್ಕಿರುವ ಮುಸ್ತಾಫಾ ಖಾನನ ಮಹಲ್ ಮತ್ತು ಮಸೀದಿಯ ಪ್ರದೇಶ ಅರಮನೆ, ಹಜಾರ, ಮಹಾದ್ವಾರ, ಕೊಳ, ವಿಹಾರತಾಣ ಮುಂತಾದ ಹಲವು ಕಟ್ಟಡಾವಶೇಷಗಳಿರುವ, ವಿಸ್ತಾರವೂ ಭವ್ಯವೂ ಆದ ಭವನಗಳ ಸಮುಚ್ಚಯವಾಗಿತ್ತೆಂದು ಕಾಣುತ್ತದೆ. ಮೊದಲನೆಯ ಅಲಿ ಆದಿಲ್‌ಷಾನ ಕಾಲದಲ್ಲಿ (1557–80) ಸೇನಾಪ್ರಮುಖನಾಗಿದ್ದ ಮುಸ್ತಾಫಾಖಾನ್ ವಿಜಯನಗರ ಸಾಮ್ರಾಜ್ಯದ ವಿರುದ್ಧ ದಖ್ಖನ್ನಿನ ಸುಲ್ತಾನರನ್ನು ಒಗ್ಗೂಡಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದನಲ್ಲದೆ, ತಾಳಿಕೋಟೆಯಲ್ಲಿ ನಡೆದ ನಿರ್ಣಾಯಕ ಯುದ್ಧದ ರೂವಾರಿಯಾಗಿದ್ದ.

ಇದರಂತೆಯೇ ಅಫ್ಜಲ್‌ಪುರದಲ್ಲಿರುವ ಚಿಂದಗಿ ಶಾಹನ ಸಮಾಧಿ, ಅಫ್ಜಲ್‌ಖಾನನ ಅರಮನೆ, ಮಸೀದಿ ಮತ್ತು ಗೋರಿಗಳ ಸಮುಚ್ಚಯಗಳೂ ಆಕರ್ಷಕ ನಿರ್ಮಿತಿಗಳು. ಮೊಹಮ್ಮದ್ ಆದಿಲ್‌ಷಾನ ಸೇನಾಪತಿಯಾಗಿದ್ದ ಅಫ್ಜಲ್‌ಖಾನ್, ಸಂಧಿಯ ಮಾತುಕತೆಗಳಿಗಾಗಿ ಪ್ರತಾಪಗಢದಲ್ಲಿ ಚಾಣಾಕ್ಷ ಶಿವಾಜಿಯನ್ನು ಭೇಟಿ ಮಾಡಲು ಹೋಗಿ, ಆತನ ತಂತ್ರಗಾರಿಕೆಗೆ ಬಲಿಯಾಗಿ ಕೊಲೆಯಾದ. ಆ ಮೊದಲೇ ತನ್ನ ಅರಮನೆಯ ಬಳಿಯಲ್ಲಿ ತನಗಾಗಿ ಸಮಾಧಿ ಕಟ್ಟಡವನ್ನು ಪ್ರಾರಂಭಿಸಿ, ತಾನು ಬದುಕಿ ಬರಲಾರೆನೆಂದು ಊಹಿಸಿ, 1658ರಲ್ಲಿ ತಾನು ಮೃತನಾದಂತೆ ಶಾಸನವನ್ನೂ ಬರೆಸಿದ. ಬಳಿಯ ಮಸೀದಿ 1653ರ ಸುಮಾರಿಗೆ ಪೂರ್ಣವಾದರೂ ಸಮಾಧಿ ಅರೆಬರೆಯಾಗಿಯೇ ಉಳಿಯಿತಲ್ಲದೆ ಆತನ ಶರೀರಾವಶೇಷಗಳು ಪ್ರತಾಪಗಢದ ಪ್ರಪಾತದಲ್ಲಿ ಪಶು ಪಕ್ಷಿಗಳ ಪಾಲಾಯಿತು. ಆತ ಶಿವಾಜಿಯನ್ನು ಭೇಟಿ ಮಾಡಲು ಹೊರಡುವ ಮುಂಚೆ ತನ್ನ 64 ಮಂದಿ ಪತ್ನಿಯರನ್ನು ಒಬ್ಬೊಬ್ಬರನ್ನಾಗಿ ಬಾವಿಯಲ್ಲಿ ಮುಳುಗಿಸಿ ಕೊಂದು ಒಂದೇ ಕಡೆ ಸಮಾಧಿ ಮಾಡಿಸಿದ. ಈತನ ಸಮಾಧಿಯ ಹಿಂದೆ ವಿಶಿಷ್ಟ ವಿನ್ಯಾಸದ ಎರಡಂತಸ್ತಿನ ಮಸೀದಿಯಿದ್ದು, ಕೆಳ ಅಂತಸ್ತು ಪುರುಷರಿಗಾಗಿದ್ದರೆ, ಮೇಲಣ ಮಸೀದಿ ಮಹಿಳೆಯರಿಗಾಗಿಯೇ ಇದ್ದ ಪ್ರತ್ಯೇಕ ವ್ಯವಸ್ಥೆ. ಸಮುಚ್ಚಯದ ದಕ್ಷಿಣಕ್ಕೆ ಅರಮನೆ ಆವರಣದ ಅವಶೇಷಗಳು ಮಾತ್ರ ಉಳಿದಿವೆ.

ಬಿಜಾಪುರದ ಪಶ್ಚಿಮಕ್ಕೆ, ಶಾಹಪುರ ದ್ವಾರದಿಂದಾಚೆಗೆ, ಸು. 1.6 ಕಿಮೀ ದೂರದ ದರ್ಗಾಹಳ್ಳಿಯಲ್ಲಿರುವ ಅಮೀನ್ ದರ್ಗಾ, ಅಷ್ಟಭುಜಾಕಾರದ ವಿನ್ಯಾಸ, ಛಜ್ಜಾ, ಪ್ರಸ್ತರಗಳ ಮೇಲಿನ ಗುಲದಸ್ತಾ ಮತ್ತು ಮೋಹಕ ಆಕೃತಿಯ ಗುಮ್ಮಟಗಳಿಂದಾಗಿ ರಾಜಧಾನಿಯ ಕಲಾತ್ಮಕ ಕಟ್ಟಡಗಳಲ್ಲೊಂದಾಗಿದೆ. ಎತ್ತರವಾದ ಸ್ಥಳದಲ್ಲಿ ಕಟ್ಟಿ ಪೂರ್ತಿ ಬಿಳಿಯ ಬಣ್ಣದಿಂದ ಕಂಗೊಳಿಸುವ ಈ ದರ್ಗಾ ಅಫ್ಜಲ್‌ಖಾನ್ 1664ರಲ್ಲಿ ಸ್ವರ್ಗಸ್ಥನಾದ ಬುರ್ಹಾನುದ್ದೀನನ ಮಗ ಸಂತ ಹಜರತ್ ಖ್ವಾಜಾ ಅಮೀನುದ್ದೀನನಿಗಾಗಿ ಕಟ್ಟಿಸಿದ ಸಮಾಧಿ. ಬಿಜಾಪುರದಲ್ಲಿ ಇಂದಿಗೂ ಸಹಸ್ರಾರು ಹಿಂದು–ಮುಸ್ಲಿಂ ಭಕ್ತರನ್ನು ಆಕರ್ಷಿಸುವ ಸ್ಥಳಗಳಲ್ಲಿ ಇದೂ ಒಂದು. ಈ ದರ್ಗಾದ ಸುತ್ತ ಮುತ್ತ ಅನೇಕ ಪ್ರಾಚೀನಾವಶೇಷಗಳು ಕಾಣುತ್ತಿದ್ದು, ಆದಿಲ್‌ಶಾಹಿ ಕಾಲದ ಪ್ರಮುಖ ರತ್ನಾಭರಣ ಹಾಗೂ ಮುತ್ತಿನ ಮಾರುಕಟ್ಟೆಯಾಗಿತ್ತೆಂದು ಪ್ರತೀತಿ.

ಈದ್ಗಾದಿಂದ ಸ್ವಲ್ಪ ಪೂರ್ವಕ್ಕಿರುವ ಛೋಟಾ ಅಸರ್ ಗಾತ್ರದಲ್ಲಿ ಚಿಕ್ಕದಾದರೂ ಗೋಡೆ, ಕಮಾನು ಮೂಲೆ, ಒಳಛಾವಣಿಗಳಲ್ಲಿ ನಯವಾದ ಕುಸುರಿ ಕೆಲಸದ ಕೊರೆದ ಗಾರೆಯ ಚಿತ್ತಾರ, ಫಲಕಗಳಿಂದ ಸಿಂಗರಿಸಿದ ಸರಳ ಸುಂದರ ಮಸೀದಿ. ಅರ್ಕಿಲ್ಲಾದ ಉತ್ತರಕ್ಕೆ ವಿಶಾಲ

ಪ್ರಾಕಾರದಲ್ಲಿರುವ ಬಾರಾಕಮಾನ್ ಎಂದು ಪ್ರಸಿದ್ಧವಾದ ಎರಡನೆಯ ಅಲಿಯ (1670) ಅಪೂರ್ಣ ಸಮಾಧಿ ಬಿಜಾಪುರದ ಉಳಿದೆಲ್ಲ ಕಟ್ಟಡಗಳನ್ನು ಮೀರಿಸುವ ಮಹದುದ್ದೇಶದಿಂದ ನಿರ್ಮಾಣವಾದುದು. 65.5ಚಮೀ ವಿಸ್ತಾರವಾದ ಭವ್ಯ ವೇದಿಕೆಯ ಮೇಲೆ ಗೋಳಗುಮ್ಮಟಕ್ಕಿಂತ ಬೃಹದ್ಗಾತ್ರದ ಗುಮ್ಮಟವನ್ನು ರೂಪಿಸಲು ಉದ್ದೇಶಿಸಲಾಗಿದ್ದರೂ ಅತ್ಯಾಕರ್ಷಕ ವಿನ್ಯಾಸದ ಏಳು ಭವ್ಯ ಕಮಾನುಗಳ ಮಟ್ಟದಲ್ಲಿಯೇ ಅದು ಉಳಿದುಹೋಗಿದೆ. ಕಮಾನುಗಳಿಂದ ಸುತ್ತುವರೆದ ಎತ್ತರವಾದ ವೇದಿಕೆಯ ಮೇಲೆ ಇಮ್ಮಡಿ ಅಲಿಯ ಸರಳ ಸಮಾಧಿಯಿದ್ದು, ಅದರ ನೈರುತ್ಯಕ್ಕೆ ಸಿಕಂದರನ ತಾಯಿ ಖುರ್ಷೀಖಾನಮಳ ಸಮಾಧಿಯಿದೆ. ವೇದಿಕೆಯ ಪರಿಸರದಲ್ಲಿ ಇನ್ನೂ 13 ಸಮಾಧಿಗಳಿವೆ. ಅಭೂತಪೂರ್ವ ಕಲ್ಪನೆ, ಸಾಕಾರವಾಗದ ಮಹತ್ವಾಕಾಂಕ್ಷೆ ಹಾಗೂ ಜೀವನದ ನಶ್ವರತೆಗಳನ್ನು ಸಂಕೇತಿಸುವ ಈ ಕಟ್ಟಡ ಇಲ್ಲಿಯ ಬೆರಗುಗೊಳಿಸುವ ಬೃಹತ್ ಕಟ್ಟಡಗಳಲ್ಲಿ ಒಂದು.

ಈ ಕಟ್ಟಡದ ಸಮೀಪದಲ್ಲಿಯೇ ಇರುವ ಮಧ್ಯಯುಗದ ಮಹಾನ್ ವಾಸ್ತುಶಿಲ್ಪಿಗಳಲ್ಲಿ ಒಬ್ಬನಾದ ಮಲ್ಲಿಕ್ ಸಂದಲನ ಸಮಾಧಿ ಮತ್ತು ಮಸೀದಿಗಳಿರುವ ಸಮುಚ್ಚಯ ಗಾತ್ರದಲ್ಲಿ ಕಿರಿದಾಗಿದ್ದರೂ ಅತ್ಯಾಕರ್ಷಕ ಅಲಂಕರಣವಿರುವ ಮೋಹಕ ಕಮಾನುಗಳಿಂದ ರಚಿತವಾಗಿದೆ. ಎತ್ತರವಾದ ಪ್ರಾಕಾರದಿಂದ ಆವೃತವಾದ ಪ್ರದೇಶದಲ್ಲಿ ವೇದಿಕೆಯ ಮೇಲಿರುವ ಮುಕ್ತಸಮಾಧಿ ವಾಸ್ತುಶಿಲ್ಪಿ ಮಲ್ಲಿಕ್ ಸಂದಲನದು. ಬಿಜಾಪುರದ ಹಲವಾರು ಅತ್ಯುತ್ತಮ ಕಟ್ಟಡಗಳನ್ನು ವಿನ್ಯಾಸ ಮಾಡಿ ಅಲಂಕೃತ ಆದಿಲ್‌ಶಾಹಿ ವಾಸ್ತುಶೈಲಿಯನ್ನು ರೂಪಿಸಿದ ಈತನ ಸಮಾಧಿ ಮಾತ್ರ ನಿರಾಡಂಬರವಾಗಿದೆ. ಇದೇ ಪರಿಸರದಲ್ಲಿರುವ ಕಮಾನು ಮಂಟಪದಲ್ಲಿ ಆತನ ತಾಯಿಯದೆಂದು ಭಾವಿಸಲಾದ ಗೋರಿಯಿದೆ. ಈ ಸಮುಚ್ಚಯದಲ್ಲಿ ಇತರ ಅನೇಕ ಸಮಾಧಿ, ಮಂಟಪಗಳು ಮತ್ತು ಪ್ರಾಚೀನ ಶೈಲಿಯ ಒಂದು ಮಸೀದಿಯೂ ಇದೆ. ಇದರ ಸ್ವಲ್ಪ ಉತ್ತರಕ್ಕಿರುವ ಕಮ್ರುಕ್ ಕೀ ಗುಂಬಜ್, ನೆಲ್ಲಿಕಾಯಿಯಂತೆ ಉಬ್ಬುಗೆರೆಗಳ ವಿನ್ಯಾಸವಿರುವ ಗುಮ್ಮಟದಿಂದಾಗಿ ಪ್ರಸಿದ್ಧವಾಗಿದೆ. ಹೈದರ್ ಬುರುಜಿನ ಬಳಿ ಸಿಕಂದರ್ ಉದ್ಯಾನವನದೊಳಗೆ ಈ ರಾಜವಂಶದ ಕೊನೆಯ ನತದೃಷ್ಟ ಅರಸ ಸಿಕಂದರ (1672–86)ನ ಸರಳ ಸಮಾಧಿಯಿದೆ. ರಾಜನ ಕೋರಿಕೆಯಂತೆ ಒಂದೇ ವೇದಿಕೆಯ ಮೇಲೆ, ಆತನ ಆಧ್ಯಾತ್ಮಿಕ ಮಾರ್ಗದರ್ಶಿ ಸಂತ ನಸರುಲ್ಲಾನ ಸಮಾಧಿಗಿಂತ ಸ್ವಲ್ಪ ಕೆಳಮಟ್ಟದಲ್ಲಿ ಅವನ ಗೋರಿಯನ್ನು ಕಟ್ಟಲಾಗಿದೆ.

ನಗರದ ಪಶ್ಚಿಮ ಭಾಗದಲ್ಲಿರುವ ಇಬ್ರಾಹಿಮ್ ರೋಜಾ (1626) ಶ್ರೀಮಂತ ಅಲಂಕರಣವಿರುವ ಆದಿಲ್‌ಶಾಹಿ ವಾಸ್ತುಶಿಲ್ಪದ ಒಂದು ಅನನ್ಯ ಉದಾಹರಣೆ. ಪ್ರಮಾಣ ಬದ್ಧತೆ, ಸೂಕ್ಷ್ಮ ಕಾವ್ಯಮಯ ಕಲಾತ್ಮಕ ಕುಸುರಿ ಕೆಲಸದ ಅಲಂಕರಣ, ಸದೃಢಗಾರೆಯಿಂದ ಆಧಾರರಹಿತವಾಗಿ ನಿರ್ಮಿಸಿದ ಸಮತಲ ಮೇಲ್ಛಾವಣಿ ಇವುಗಳಿಂದಾಗಿ ರೋಜಾ ಬಿಜಾಪುರದ ಆಲಂಕಾರಿಕ ವಾಸ್ತುಶೈಲಿಯ ಮಹೋನ್ನತ ಮಾದರಿಯಾಗಿದೆ. ಸಮಾಧಿ ಕಟ್ಟಡದಲ್ಲಿ ಇಬ್ರಾಹಿಮ್, ತಾಜ್‌ಸುಲ್ತಾನಾ, ಆತನ ತಾಯಿ ಹಾಜಿ ಬಡಾಸಾಹಿಬಾ, ಮಗಳು ಜೊಹ್ರಾ ಸುಲ್ತಾನಾ, ಇಬ್ಬರು ಗಂಡು ಮಕ್ಕಳಾದ ದರ್ವೇಶ್ ಬಾದಶಾಹ ಮತ್ತು ಸುಲ್ತಾನ್ ಸುಲೈಮಾನ್ ಇವರ ಗೋರಿಗಳನ್ನು ಕೊಠಡಿಯ ಒಂದೇ ವೇದಿಕೆಯಲ್ಲಿ ಕಟ್ಟಲಾಗಿದೆ. ಚೌಕಾಕಾರದ ಸಮಾಧಿ ಕೋಣೆಯ ನಾಲ್ಕು ಗೋಡೆಗಳಲ್ಲಿ ಅಲಂಕೃತ ಮರದ ಬಾಗಿಲಿರುವ ದ್ವಾರಬಂಧ, ಅದರ ಪಕ್ಕಗಳಲ್ಲಿ ಆಕರ್ಷಕ ವಿನ್ಯಾಸದ ವಿಶಾಲವಾದ ಕಿಟಕಿಗಳಿವೆ. ಗೋಡೆಗಳ ಮೇಲೆಲ್ಲ ಫೈನ್ ವೃಕ್ಷ ಹಾಗೂ ವೈವಿಧ್ಯಮಯ ಅರಾಬಿಕ್ ಅಲಂಕರಣ ಲಿಪಿಗಳಲ್ಲಿ ಕಟ್ಟಡ ನಿರ್ಮಾಣವನ್ನು ಕುರಿತು ಶಾಸನಗಳು ಮತ್ತು ಕುರಾನಿನ ಸೂಕ್ತಿಗಳನ್ನು ಕೊರೆಯಲಾಗಿದೆ. ಉತ್ತರ ದ್ವಾರದ ಮೇಲಿನ ಪರ್ಷಿಯನ್ ಶಾಸನ 1626ನೆಯ ವರ್ಷಕ್ಕೆ ಸರಿಹೊಂದುವುದು. ದಕ್ಷಿಣ ದ್ವಾರದ ಮೇಲಿನ 1633ರ ಶಾಸನ ದೊರೆ ಇಬ್ರಾಹಿಂನನ್ನು ಪ್ರಂಶಸಿಸುತ್ತದೆ. ಇದೇ ತುದಿಯ ಇನ್ನೊಂದು ಶಾಸನ ಈ ಕಟ್ಟಡದ ಸೊಬಗು, ಸೌಂದರ್ಯ, ವೈಭವಗಳನ್ನು ವರ್ಣಿಸುತ್ತದೆ. ಸಮಾಧಿ ಕೋಣೆ ಮತ್ತು ಹೊರಗಣ ಎರಡು ಸುತ್ತಿನ ಕಮನೀಯ ಕಮಾನು ವರಾಂಡಗಳ ಸಮತಲ ಛಾವಣಿ ಆಕರ್ಷಕ ವಿನ್ಯಾಸಗಳಿಂದ ಅಲಂಕೃತವಾಗಿದೆ. ಸಮಾಧಿ ಕೋಣೆಯ ಹಲವು ಫಲಕಗಳನ್ನು ಜೋಡಿಸಿದ ವಿಸ್ತಾರವಾದ ಸಮತಲ ಛಾವಣಿ ಯಾವುದೇ ರೀತಿಯ ಆಧಾರವಿಲ್ಲದೆ ರೂಪಿತವಾಗಿದೆ. ಈ ಕಟ್ಟಡದ ರಹಸ್ಯ ವಿರುವುದು ಆ ಕಾಲದ ವಾಸ್ತುತಜ್ಞರು ತಯಾರಿಸಿ ಬಳಸಿರುವ ಗಾರೆಯ ಅತ್ಯುತ್ತಮ ಬಂಧಕ ಶಕ್ತಿಯಲ್ಲಿ. ವರಾಂಡದ ಛಾವಣಿಯ ಚೌಕ, ಆಯತಾಕಾರದ ಫಲಕಗಳಲ್ಲಿ ಅರಳಿದ ಕಮಲ, ಜ್ಯಾಮಿತೀಯ ಬಂಧ ಮತ್ತು ವಿವಿಧ ರೀತಿಯ ವಿನ್ಯಾಸಗಳನ್ನು ಮೂಡಿಸಿದೆ. ಗೋಡೆ ಮತ್ತು ಛಾವಣಿಗೆ ಚಿನ್ನದ ಪುಡಿ, ನೀಲಿ ಮುಂತಾದ ಗಾಢವರ್ಣಗಳ ಅಲಂಕರಣಗಳಿವೆ. ಪ್ರಮಾಣಬದ್ಧವಾಗಿ ಸಂಯೋಜಿಸಿದ ವೇದಿಕೆಯ ಕಮಲದಳಗಳ ನಡುವೆ ಮೇಲೇಳುವ ವಿಶಿಷ್ಟ ವಿನ್ಯಾಸದ ಈರುಳ್ಳಿಯಾಕೃತಿಯ ಗುಮ್ಮಟ ಇಡೀ ಕಟ್ಟಡದ ಶೋಭೆಯನ್ನು ಹೆಚ್ಚಿಸಿದೆ. ಈ ಎಲ್ಲ ರೀತಿಯ ಕಲಾತ್ಮಕ ಅಲಂಕರಣಗಳಿಂದಾಗಿ ಇಬ್ರಾಹಿಂ ರೋಜಾ ಭಾರತದ ಭಾರತೀಯ– ಇಸ್ಲಾಮಿಕ್ ಶೈಲಿಯ ಕಟ್ಟಡಗಳಲ್ಲಿಯೇ ಒಂದು ವಿಶಿಷ್ಟ ಸ್ಥಾನ ಪಡೆದಿದೆ.

ಈ ಸಮಾಧಿ ಕೋಣೆಯಿರುವ ಮುಖ್ಯ ಕಟ್ಟಡದ ಪಶ್ಚಿಮಕ್ಕೆ ಕಾರಂಜಿಯುಕ್ತ ಚೌಕಾಕಾರದ ಕೊಳವಿದ್ದು, ಅದರಾಚೆಗೆ ಪ್ರಮಾಣಬದ್ಧವಾಗಿ ವಿನ್ಯಾಸಮಾಡಿದ ಮಸೀದಿಯಿದೆ. 5 ಕಮಾನುಗಳಿರುವ ಮಸೀದಿಯ ಕಾರ್ನಿಸುಗಳಿಗೆ ಜೋಡಿಸಿದ ಪದಕಸಹಿತ ಕಲ್ಲಿನ ಸರಪಳಿ, ಕಮಾನು ಮೂಲೆಗಳಲ್ಲಿ ಮೂಡಿಸಿರುವ ಕೊರೆದ ಗಾರೆಯ ಫಲಕಗಳು, ವೇದಿಕೆಯ ಮೇಲಿನ ಗುಮ್ಮಟ, ಮೂಲೆಗಳ ಮೇಲಿರುವ ನೀಳ ಮೀನಾರುಗಳಿಂದಾಗಿ ಮಸೀದಿ ಇಡೀ ಸಮುಚ್ಚಯದ ಒಟ್ಟಂದವನ್ನು ಇಮ್ಮಡಿಗೊಳಿಸಿರುವುದಲ್ಲದೆ, ಅಂದಿನ ವಾಸ್ತುಶಿಲ್ಪಿಗಳ ಅಮೋಘ ಕಲ್ಪನೆ, ಸಂಯೋಜನಾ ಸಾಮರ್ಥ್ಯ, ಧಾರ್ಮಿಕ ಸಾಮರಸ್ಯ, ತಾಂತ್ರಿಕ ಪರಿಣತಿ ಹಾಗೂ ನಿರ್ಮಾಣ ಕೌಶಲ್ಯಗಳ ಅಸಾಮಾನ್ಯ ಪ್ರತೀಕವಾಗಿದೆ.

ಮೊಹಮ್ಮದ್ ಆದಿಲ್‌ಷಾ (1627–57)ನ ಸಮಾಧಿ ನಿರ್ಮಿತಿಯಾದ ಗೋಳಗುಮ್ಮಟ ಬಿಜಾಪುರದ ಕಟ್ಟಡಗಳಲ್ಲೆಲ್ಲ ಬೃಹದ್ಗಾತ್ರದ್ದು. ಮೊದಲ ನೋಟಕ್ಕೇ ಮನಸೆಳೆಯುವ ಹಲವು ವೈಶಿಷ್ಟ್ಯಗಳಿಂದ ಕೂಡಿರುವ ಈ ನಿರ್ಮಿತಿ ಇಡೀ ಭಾರತದ ಇಸ್ಲಾಮಿಕ್ ಕಟ್ಟಡ ಗಳಲ್ಲಿಯೇ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ.

ಮಲ್ಲಿಕ್ ಸಂದಲ್ ವಿನ್ಯಾಸ ಮಾಡಿದ ಅನನ್ಯ ಸೌಂದರ್ಯದ ವಾಸ್ತುಕೃತಿ ಇಬ್ರಾಹಿಂ ರೋಜಾವನ್ನು ಸಂಪೂರ್ಣವಾಗಿ ಮರೆಸಬಲ್ಲಂತಹ ಈ ಕಟ್ಟಡದ ವಿನ್ಯಾಸ, ಸಂಯೋಜನೆ, ನಿರ್ವಹಣೆಯನ್ನು ಪರ್ಷಿಯಾದ ದಾಬುಲ್‌ನಿಂದ ಬಂದ ಯಾಕೂತ್ ಎಂಬ ವಾಸ್ತುಶಿಲ್ಪಿ ರಚಿಸಿದನೆಂದು ಪ್ರತೀತಿ. 183ಮೀ ಚೌಕಾಕಾರದ, 2ಮೀ ಎತ್ತರವಿರುವ ವೇದಿಕೆಯ ಮಧ್ಯದಲ್ಲಿರುವ ಮುಖ್ಯ ಕಟ್ಟಡ ಭವ್ಯ ಗಾತ್ರದ ಘನಾಕೃತಿಯ ನಾಲ್ಕು ಮೂಲೆಗಳಲ್ಲಿ ಅಷ್ಟಕೋನಾಕಾರದ ಏಳಂತಸ್ತಿನ ಮೀನಾರುಗಳಿದ್ದು ಅವುಗಳ ಮೇಲೂ ಕಿರು ಗಾತ್ರದ ಗುಮ್ಮಟಗಳಿವೆ. ವೇದಿಕೆಯ ಮೇಲೆ ಪೂರ್ವ, ದಕ್ಷಿಣ, ಪಶ್ಚಿಮಗಳಲ್ಲಿ ಮೆಟ್ಟಲುಗಳಿರುವ ಮುಖ್ಯ ಕಟ್ಟಡಕ್ಕೆ ಪ್ರವೇಶ ದ್ವಾರಗಳಿದ್ದು, ಅವುಗಳ ಮುಂದೆ ವಿವಿಧ ಗಾತ್ರದ ಚೌಕಾಕಾರದ, ಕಾರಂಜಿಸಹಿತ ಕೊಳಗಳಿವೆ. ಪಶ್ಚಿಮದಲ್ಲಿ ಮಾತ್ರ ಭವ್ಯತೆಯಲ್ಲಿ ಹಾಗೂ ಶೈಲೀಯವಾಗಿ ಮುಖ್ಯ ಕಟ್ಟಡಕ್ಕೆ ಹೊಂದುವಂತಹ ಮಸೀದಿಯಿದೆ. ಕಟ್ಟಡದ ಪ್ರತಿಬದಿಯ ಊರ್ಧ್ವವಿನ್ಯಾಸ ದಲ್ಲಿ ಸಮಾನ ಎತ್ತರದ ಮೂರು ಕಮಾನುಗಳಿದ್ದು, ಮಧ್ಯದ ಹಸುರುಕಲ್ಲಿನ ವಿಶಾಲ ಕಮಾನಿ ನಲ್ಲಿ ಸಣ್ಣ ಬಾಗಿಲು, ಅದರ ಪಕ್ಕಗಳಲ್ಲಿ ಜಾಲಂಧ್ರಗಳಿವೆ. ಅಂದು ಬಳಸಿದ ಮರದ ಬಾಗಿಲು, ಕಿಟಕಿ ಇಂದಿಗೂ ಉಳಿದಿವೆ. ಉತ್ತರ ದಿಕ್ಕಿನ ಗೋಡೆಯ ಹೊರಬದಿಗೆ ಅರ್ಧ ಅಷ್ಟಕೋನಾಕೃತಿಯ ಕಟ್ಟಡವನ್ನು ಜೋಡಿಸಲಾಗಿದೆ. ಗುಮ್ಮಟ ಪರಸ್ಪರ ಛೇದಿಸುವ ಎಂಟು ಕಮಾನುಗಳು, ಮತ್ತೆ ಕಮಾನು ಮೂಲೆಗಳಲ್ಲಿ ಆಧರಿಸಿದ ಕಡಿಮೆ ಎತ್ತರದ ದುಂಡನೆಯ ವೇದಿಕೆಯ ಪರಿಧಿಯಲ್ಲಿರುವ ಕಮಲದಳಗಳ ನಡುವಿನಿಂದ ಮೇಲೇರುತ್ತದೆ. ಈ ಗುಮ್ಮಟದ ಗೋಡೆ ಅಡಿಯಲ್ಲಿ 3.05 ಮೀ ಅಗಲವಿದ್ದು ಕ್ರಮೇಣ ಮೇಲೆ ಹೋಗುತ್ತಾ ಕಡಿಮೆಯಾಗಿ 2.74ಮೀ ಮುಟ್ಟುತ್ತದೆ. ಇದರ ಒಳವಿನ್ಯಾಸ 37.9ಮೀ ಇದ್ದು, ಪ್ರಪಂಚದ ಎರಡನೆಯ ಅತಿ ದೊಡ್ಡ ಗುಮ್ಮಟವಾಗಿದೆ. 42.4 ಮೀ ವ್ಯಾಸವಿರುವ ರೋಮ್‌ನಲ್ಲಿನ ಸಂತಪೀಟರ್‌ನ ಚರ್ಚ್ ಅತಿ ದೊಡ್ಡ ಗುಮ್ಮಟ ಹೊಂದಿದ್ದರೆ, ಲಂಡನ್ನಿನ ಸಂತ ಪಾಲ್‌ನ ಕತೀಡ್ರಲ್ 32.9 ಮೀ ವ್ಯಾಸದ ಗುಮ್ಮಟವಿದ್ದು ಮೂರನೆಯ ಸ್ಥಾನದಲ್ಲಿದೆ. ಹಾಗಿದ್ದರೂ ಒಂದೇ ಗುಮ್ಮಟ ಆವರಿಸುವ ಒಟ್ಟಾರೆ ಸ್ಥಳದ ದೃಷ್ಟಿಯಿಂದ ಗೋಳಗುಮ್ಮಟ ಮೊದಲಸ್ಥಾನದಲ್ಲಿದೆ. ಇಡೀ ಪ್ರಪಂಚದಲ್ಲಿ ಕಂಬ ಅಥವಾ ಇನ್ನಾವುದೇ ಆಧಾರವಿಲ್ಲದೆ ಇಷ್ಟು ವಿಸ್ತಾರವಾದ ಪ್ರದೇಶವನ್ನು ಆವರಿಸಿರುವ ಗೋಲ ಇನ್ನೊಂದಿಲ್ಲ. ಕಲ್ಲುಗುಂಡುಗಳು ಮತ್ತು ವಿಶಿಷ್ಟ ಗಾತ್ರದ ಸುಟ್ಟ ಇಟ್ಟಿಗೆಯಿಂದ ಕಟ್ಟಿದ ಈ ಗುಮ್ಮಟದ ಒಳ ಹೊರಗೆ ಗಾರೆಯ ದಪ್ಪ ಕವಚವಿದ್ದು, ಒಳಗಿನ ಮೇಲ್ಮೈಯನ್ನು ನುಣುಪಾಗಿ ನಯಗೊಳಿಸಿದೆ. ಪ್ರತಿಯೊಂದು ಗೋಡೆಯ ಮಧ್ಯದಲ್ಲಿ ಅಗಲವಾದ ಮತ್ತು ಪಕ್ಕಗಳಲ್ಲಿ ಕಿರು ಅಗಲದ ಮೂರು ಕಮಾನು ಗಳಿದ್ದು, ಮಧ್ಯದ ಕಮಾನಿನಲ್ಲಿ ಬಾಗಿಲುವಾಡ, ಮೇಲೆ 1.8 ಎತ್ತರದ ಬೂದು ಬಣ್ಣದ ಬಸಾಲ್ಟ್ ಕಲ್ಲಿನ ಕಾರ್ನೀಸು, ಅದರ ಮೇಲೆ ಕಿರು ಕಮಾನುಗಳ ಸಾಲು, ಅದರ ಮೇಲೆ ಸು. 1.8ಮೀ ಎತ್ತರದ ಮುಂಚಾಚಿದ ಅಲಂಕೃತ ಚಜ್ಜಾ ಇವೆ. S ಆಕೃತಿಯ ತೆನೆಗಳ ಪ್ರಸ್ತರದ ಸಾಲಿನ ನಡುನಡುವೆ ಸುಂದರವಾಗಿ ರೂಪಿಸಿದ ಗುಲ್‌ದಸ್ತಾಗಳಿವೆ. ಉತ್ತರ ದಿಕ್ಕಿನಲ್ಲಿ ಮಾತ್ರ ಮಧ್ಯದ ಕಮಾನಿನ ಸ್ಥಳದಲ್ಲಿ ಅಷ್ಟಭುಜಾಕೃತಿಯ ದೊಡ್ಡ ಕೊಠಡಿಯನ್ನು ರೂಪಿಸಿರುವುದು ವಿಶೇಷ. ನಾಲ್ಕೂ ಮೀನಾರುಗಳಲ್ಲಿರುವ 108–109 ಮೆಟ್ಟಿಲುಗಳ ಮೂಲಕ ಮೇಲೆ ಹತ್ತಿ ಗುಮ್ಮಟದೊಳಕ್ಕೆ ಹೋಗಬಹುದು.

ನೆಲದಿಂದ 33.22 ಮೀ ಎತ್ತರದಲ್ಲಿ 3.25 ಮೀ ಅಗಲವಾದ ಹಜಾರವೊಂದು ಗುಮ್ಮಟದ ಗೋಡೆಯ ಒಳಮಗ್ಗುಲಿಗೆ ಮುಂಚಾಚಿದೆ. ಈ ಹಜಾರ ಪಿಸುಗುಟ್ಟುವ ಗ್ಯಾಲರಿ ಎಂದೇ ಪ್ರಸಿದ್ಧವಾಗಿದೆ. ಇದರ ಒಂದು ತುದಿಯಲ್ಲಿ ಆಡಿದ ಒಂದು ಪಿಸುಮಾತು ಮರು ಕ್ಷಣದಲ್ಲಿ ಇನ್ನೊಂದು ತುದಿಯಲ್ಲಿ ಕೇಳಿಸುತ್ತದೆ. ಒಂದು ಸಲ ಜೋರಾಗಿ ಬಾರಿಸಿದ ಚಪ್ಪಾಳೆ ಹತ್ತಕ್ಕೂ ಹೆಚ್ಚುಸಲ ಸ್ಪಷ್ಟವಾಗಿ ಪ್ರತಿಧ್ವನಿಗೊಳ್ಳುತ್ತದೆ. ಅಲ್ಲದೆ ಈ ಹಜಾರದಲ್ಲಿ ಉತ್ಪತ್ತಿಯಾದ ಯಾವುದೇ ನಾದ 26–28 ಸೆಕೆಂಡುಗಳಷ್ಟು ದೀರ್ಘಕಾಲ ಅನುರಣನಗೊಳ್ಳು ತ್ತಿರುತ್ತದೆ. ಇವು ಈ ಕಟ್ಟಡದ ಅತ್ಯಂತ ವಿಸ್ಮಯಕಾರಿ ಅಂಶಗಳು.

ಸು. 60 ವರ್ಷಗಳಿಗೂ ಹಿಂದೆ ಈ ಬೃಹದ್ಗಾತ್ರದ ಗುಮ್ಮಟದ ಹೊರ ಹಾಗೂ ಒಳ ಪದರಗಳ ಗಾರೆಯ ಬಂಧಕ ಸಾಮರ್ಥ್ಯ ಕಡಿಮೆಯಾಗಿ ಗಾರೆಯ ದಪ್ಪ ದಪ್ಪ ತುಂಡುಗಳು ಕೆಳಗೆ ಬೀಳುತ್ತಿದ್ದವು. ಇದರಿಂದ ಗುಮ್ಮಟ ಶಿಥಿಲವಾಗಿ ಧ್ವನಿಪರಿಣಾಮಗಳು ಕ್ಷೀಣವಾಗುವ ಇಲ್ಲವೇ ಪೂರ್ಣನಾಶವಾಗುವ ಭಯವಿತ್ತು. ಆಗ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಅನೇಕ ದೇಶವಿದೇಶಗಳ ತಜ್ಞರ ಸಲಹೆಯ ಮೇರೆಗೆ 1955–57ರಲ್ಲಿ ಗುಮ್ಮಟದ

ಗಾರೆಯ ಪದರಗಳ್ನು ಪೂರ್ತಿತೆಗೆದು, ಸಿಮೆಂಟ್ ಗಾರೆಯ ಹೊಸಲೇಪನ ನೀಡಿ ವೈಜ್ಞಾನಿಕವಾಗಿ ಈ ಗುಮ್ಮಟ ಹಾಗೂ ಅದರ ಪರಿಣಾಮಗಳನ್ನು ಉಳಿಸಿಕೊಟ್ಟಿದೆ. ಇದು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತದಲ್ಲಿ ನಡೆದ ಮಹತ್ತ್ವದ ಸಂರಕ್ಷಣಾ ಕಾರ್ಯಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆ. ಇತ್ತೀಚೆಗೆ ಈ ಗುಮ್ಮಟದ ಧ್ವನಿ ಪರಿಣಾಮಗಳನ್ನು ಗಣಕ ಯಂತ್ರ ಮತ್ತು ಅತಿ ಸೂಕ್ಷ್ಮ ಧ್ವನಿಮಾಪಕಗಳನ್ನು ಉಪಯೋಗಿಸಿ ದಾಖಲಿಸುವ ಮತ್ತು ವೈಜ್ಞಾನಿಕವಾಗಿ ಅರ್ಥಯಿಸುವ ಅಧ್ಯಯನವೂ ನಡೆದಿದೆ.

**ಪ್ರಾಚ್ಯ ವಸ್ತು ಸಂಗ್ರಹಾಲಯ:** ಬಿಜಾಪುರ ಜಿಲ್ಲೆಯಲ್ಲಿ ಸಿಕ್ಕಿದ ವಾಸ್ತುಶಿಲ್ಪ ಮತ್ತಿತರ ಅವಶೇಷಗಳನ್ನು ಇಲ್ಲಿ ಸಂರಕ್ಷಿಸಿ ಪ್ರದರ್ಶನಕ್ಕಿಡಲಾಗಿದೆ. ಈ ಸಂಗ್ರಹಾಲಯ ವಿಧ್ಯುಕ್ತವಾಗಿ ಪ್ರಾರಂಭವಾಗುವುದಕ್ಕೆ ಮೊದಲು ಜೇಮ್ಸ್ ಬರ್ಜೆಸ್, ಹೆನ್ರಿ ಕಸಿನ್ಸ್ ಅವರು ವಿಜಾಪುರ ಜಿಲ್ಲೆಯಲ್ಲಿ ದೊರೆತ ಹಲವಾರು ಪ್ರಾಚ್ಯ ಅವಶೇಷಗಳನ್ನು ಅಧ್ಯಯನ ಮಾಡಿದ್ದು, ಅವುಗಳನ್ನು 1892ರಲ್ಲಿಯೇ ಅಂದಿನ ಆನಂದ ಮಹಲ್ ಕಟ್ಟಡದ ಹಿಂದೆ ಇದ್ದ ಚಿಕ್ಕ ಹೊರಮನೆಯಲ್ಲಿ ಸಂಗ್ರಹಿಸಲಾರಂಭಿಸಿದ್ದರು. ಅದನ್ನೇ ಕೇಂದ್ರ ಸಂಗ್ರಹವಾಗಿಸಿಕೊಂಡು, ಈ ಪ್ರಾಚ್ಯವಸ್ತು ಸಂಗ್ರಹಾಲಯ ಜನ್ಮ ತಾಳಿತು. ಅನಂತರ ಪ್ರದರ್ಶಿತ ಪ್ರಾಚ್ಯಅವಶೇಷಗಳ ಸಂಖ್ಯೆ ಅಧಿಕಗೊಂಡ ಕಾರಣ, ಗೋಲಗುಮ್ಮಟ ಸಮುಚ್ಚಯದಲ್ಲಿರುವ ನಖ್ಖಾರ್ ಖಾನಾ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಕೇಂದ್ರ ಸರಕಾರದ ಆಡಳಿತಕ್ಕೊಳಪಟ್ಟಿರುವ ಭಾರತೀಯ ಪ್ರಾಚ್ಯವಸ್ತು ಸಂಗ್ರಹಾಲಯ ವಿಜಾಪುರದಲ್ಲಿ 1962ರಲ್ಲಿ ವಿಧ್ಯುಕ್ತವಾಗಿ ಸ್ಥಾಪನೆಗೊಂಡಿತು. ಭಾರತದ 100 ವರ್ಷ ತುಂಬಿರುವ ಕೆಲವೇ ಅಪೂರ್ವ ವಸ್ತುಸಂಗ್ರಹಾಲಯಗಳಲ್ಲಿ ಇದು ಒಂದು. ಗೋಲಗುಮ್ಮಟ ಸಮುಚ್ಚಯದಲ್ಲಿರುವ ಈ ಪ್ರಾಚ್ಯವಸ್ತು ಸಂಗ್ರಹಾಲಯವಿರುವ ಕಟ್ಟಡವನ್ನು ಆದಿಲ್‌ಶಾಹಿ ಅರಸರ ಕಾಲದಿಂದ ನಖ್ಖರ್‌ಖಾನ/ನಗರಖಾನ ಎಂದು ಕರೆಯಲಾಗುತ್ತಿದ್ದು, ನೆಲಮಾಳಿಗೆಯನ್ನು ಹೊಂದಿರುವುದು ಇದರ ವೈಶಿಷ್ಟ್ಯ. ನೆಲಮಾಳಿಗೆಯೂ ಸೇರಿ ಮೂರು ಅಂತಸ್ತನ್ನು ಹೊಂದಿರುವ ಈ ಕಲ್ಲಿನ ಕಟ್ಟಡ ನಸುಕಂದು ಬಣ್ಣದ ಕಲ್ಲಿನಲ್ಲಿ (ಟ್ರಾಪ್) ನಿರ್ಮಿತವಾಗಿದೆ. ಈ ಕಟ್ಟಡವನ್ನು ಬ್ರಿಟಿಷ್ ಸರಕಾರದ ಆಡಳಿತದಲ್ಲಿ ದುರಸ್ತಿಗೊಳಿಸಲಾಗಿದೆ. ಆರು ವ್ಯವಸ್ಥಿತ ಗ್ಯಾಲರಿಗಳಲ್ಲಿ ಪ್ರದರ್ಶಿಸಲಾಗಿರುವ ಪ್ರಾಚ್ಯ ಅವಶೇಷಗಳಲ್ಲಿ 11ನೆಯ ಶತಮಾನದ ಅಷ್ಟಭುಜಾಕಾರದ ನಟರಾಜನ ಆಕರ್ಷಕ ಭಗ್ನ ಪ್ರತಿಮೆ, ಶಿವ ತನ್ನ ಗಣಗಳ ಜೊತೆಯಲ್ಲಿ ನರ್ತಿಸುವ ಕಲ್ಲಿನ ಘನದ್ವಾರ, ಕಹಳೆ ಊದುವ, ಮದ್ದಲೆ ಬಾರಿಸುತ್ತಿರುವ ಉಬ್ಬುಶಿಲ್ಪಗಳು, 7–8ನೆಯ ಶತಮಾನದ ಪಾರ್ಶ್ವನಾಥ, ತಾಳಿಕೋಟೆಯ ಯುದ್ಧದಲ್ಲಿ ಹತ್ಯೆಗೀಡಾದ ವಿಜಯನಗರದ ಕೊನೆಯ ಅರಸ ರಾಮರಾಯನೆಂದು ಹೇಳಲಾದ ಕಲ್ಲಿನ ತಲೆಯ ಶಿಲ್ಪ ಮುಂತಾದವು ಮುಖ್ಯವಾದವು. ಮಧ್ಯದಲ್ಲಿ ಮಹಾಕೂಟದಲ್ಲಿ ದೊರೆತ 6ನೆಯ ಶತಮಾನದ ಮಂಗಳೇಶನ ಅಪರೂಪದ ಎತ್ತರವಾದ ಧರ್ಮ ವಿಜಯ ಸ್ತಂಭವಿದೆ.

ಈ ಸಂಗ್ರಹಾಲಯದಲ್ಲಿ ಅಗ್ರಹಾರ ಸಾಲೋಟಗಿ ವಿದ್ಯಾಲಯಕ್ಕೆ ದಾನ ಕೊಟ್ಟ ಸ್ತಂಭ ಶಾಸನವಿದ್ದು, ಅದರ 3 ದಿಕ್ಕುಗಳಲ್ಲಿ ಸಂಸ್ಕೃತ ಲಿಪಿಯಿದ್ದು ಕೆಳಭಾಗದಲ್ಲಿ ಕನ್ನಡ ಲಿಪಿಯಿದೆ. 17ನೆಯ ಶತಮಾನದ ಆಕರ್ಷಕ ಕಲಾತ್ಮಕ ಬರೆಹಗಳನ್ನು ಹೊಂದಿರುವ ಅರೆಬಿಕ್–ಪರ್ಷಿಯನ್ ಲಿಪಿಗಳ ಶಾಸನ ಶಿಲೆಗಳನ್ನು ಪ್ರದರ್ಶಿಸಲಾಗಿದೆ. ಇಲ್ಲಿ ಕಂಡು ಬರುವ ಪುಷ್ಪಗಳ ವಿನ್ಯಾಸ ಹೊಂದಿರುವ ಕಲ್ಲಿನ ಜಾಲಂಧ್ರ, ಸರಪಳಿ ಮುಂತಾದ ವಸ್ತುಗಳು ನೋಡುವವರ ಗಮನ ಸೆಳೆಯುತ್ತವೆ. ಮೂವತ್ತೆರಡು ಮೆಟ್ಟಲುಗಳನ್ನು ಹತ್ತಿ ಮೇಲಕ್ಕೆ ಹೋದರೆ ಆದಿಲ್‌ಶಾಹಿ ಕಾಲದ ಪ್ರಾಚ್ಯ ಅವಶೇಷಗಳ ದರ್ಶನವಾಗುತ್ತದೆ. ಅನೇಕ ದೈನಂದಿನ ಉಪಯೋಗದ ಉಪಕರಣಗಳು, ಯುದ್ಧಕಾಲದಲ್ಲಿ ಸುಲ್ತಾನರು ತೊಡುತ್ತಿದ್ದ ಲೋಹದ ನಿಲುವಂಗಿ, ಕವಚ, ಕಠಾರಿಗಳು, ಭರ್ಜಿಗಳು, ರಾಜರುಗಳ ಭಾವಚಿತ್ರಗಳು, ವಿಜಾಪುರದ ಸುಲ್ತಾನರು ಉಪಯೋಗಿಸುತ್ತಿದ್ದ ಚೀನೀ ಪಿಂಗಾಣಿಯ ತಟ್ಟೆ, ಬಟ್ಟಲು, ಹೂಜಿಗಳು, ಚಿನ್ನದ ಲೇಪವಿರುವ 17ನೆಯ ಶತಮಾನದ ವರ್ಣಚಿತ್ರಗಳು, ಮುಖ್ಯವಾಗಿ ದಖ್ಖನಿಶೈಲಿಯ ಉತ್ತಮ ಚಿಕಣಿ ಚಿತ್ರಗಳು, ಚಾಂದಬೇಬಿ ಮೊದಲಾದವರ ಚಿತ್ರಗಳಿವೆ. ಹಳದಿ, ಕೆಂಪು, ನೀಲಿ ವರ್ಣಗಳಿರುವ ಚಿತ್ರಸಹಿತವಾದ ಕೆಲವು ಕುರಾನ್ ಹಸ್ತಪ್ರತಿಗಳು 1604ರ ಕಾಲಕ್ಕೆ ಸೇರುತ್ತವೆ. ಐತಿಹಾಸಿಕ ಮಹತ್ತ್ವವುಳ್ಳ ಗದ್ಯ–ಪದ್ಯಗಳ ಗ್ರಂಥಗಳು, ಶೃಂಗಾರ ಕಾವ್ಯಗಳು, ರಾಜಮುದ್ರೆಯಿರುವ ಸನ್ನದ್ ಮತ್ತು ಫರ್ಮಾನ್ ಮುಂತಾದವುಗಳನ್ನು ಭದ್ರವಾದ ಗಾಜಿನ ಕಪಾಟುಗಳಲ್ಲಿ ಪ್ರದರ್ಶಿಸಲಾಗಿದೆ. ಪಿಂಗಾಣಿಯ ಹಂಡೆಗಳು ಎಣ್ಣೆ, ಉಪ್ಪಿನಕಾಯಿ ಇತ್ಯಾದಿಗಳನ್ನು ಸಂಗ್ರಹಿಸಲು ಉಪಯೋಗಿಸಿರಬಹುದಾಗಿದೆ. ವಿಶಾಲವಾದ ಗಾಜಿನ ಕಪಾಟುಗಳಲ್ಲಿ ಪರ್ಷಿಯ ದೇಶದ ರತ್ನಗಂಬಳಿಗಳನ್ನು ಸಂರಕ್ಷಿಸಿ ಪ್ರದರ್ಶಿಸಲಾಗಿದೆ. ಹೊರ ಭಾಗದಲ್ಲಿ ದೊಡ್ಡ ದೊಡ್ಡ ಉಕ್ಕಿನ ಫಿರಂಗಿಗಳು ಹಾಗೂ ಅನೇಕ ಪ್ರಾಚ್ಯಾವಶೇಷಗಳನ್ನು ಕ್ರಮಬದ್ಧವಾಗಿ ಪ್ರದರ್ಶಿಸಿದೆ.

ಕರ್ನಾಟಕದಲ್ಲಿ ಇಂಡೊ–ಇಸ್ಲಾಮಿಕ್ ವಾಸ್ತುಶೈಲಿಯ ಅಧ್ಯಯನಕ್ಕೆ ಅಮೂಲ್ಯ ಪುರಾತತ್ತ್ವೀಯ ಆಕರಗಳನ್ನೊದಗಿಸುವುದು ಬೀದರ್, ಗುಲ್ಬರ್ಗ ಮತ್ತು ಬಿಜಾಪುರದ ಪರಿಸರದಲ್ಲಿ 14–17ನೆಯ ಶತಮಾನದವರೆಗೆ ನಿರ್ಮಾಣವಾದ ಸ್ಮಾರಕಗಳು. ದಕ್ಷಿಣ ಕರ್ನಾಟಕದ ಒಳನಾಡಿನವರೆಗೂ ಆಕ್ರಮಣಕಾರರ ದಾಳಿ ಹಾವಳಿಗಳು ಈ ಮೊದಲೇ ಪ್ರಾರಂಭವಾಗಿದ್ದವು. ಆದರೆ ಆರಂಭಕಾಲದಲ್ಲಿ ಧಾಳಿಕಾರರ ಉದ್ದೇಶ ಇಲ್ಲಿನ ಸಂಪತ್ತನ್ನು ಲೂಟಿ ಮಾಡುವುದಕ್ಕೆ ಸೀಮಿತವಾಗಿದ್ದುದರಿಂದ ಯಾವುದೇ ವಾಸ್ತು ಚಟುವಟಿಕೆ ಒಡಮೂಡಲಿಲ್ಲ. ಗುಲ್ಬರ್ಗ ಪ್ರಾಂತದಲ್ಲಿ ಬಹಮನಿ ಆಡಳಿತ ತೊಡಗಿ, ಮುಂದೆ ಆ ರಾಜ್ಯ ಹೋಳುಗಳಾಗಿ ದಖನ್ನಿನ ಸುಲ್ತಾನರ ಆಳಿಕೆ ಪ್ರಾರಂಭವಾದಾಗಿನಿಂದ ವಾಸ್ತು ಚಟುವಟಿಕೆಗಳು ಹೆಚ್ಚಾದವು. ಗುಲ್ಬರ್ಗ ಬೀದರ್‌ಗಳಲ್ಲಿ ಹೆಚ್ಚಾಗಿ ಇಸ್ಲಾಂ ಶೈಲಿಯ ಅಂಶಗಳೇ ಪ್ರಧಾನವಾದವು. ಕ್ರಮೇಣ ಹಲವಾರು ಕಾರಣಗಳಿಂದ ಪ್ರಾದೇಶಿಕ ಶೈಲಿಯಾಂಶಗಳೂ ಬೆರೆತುಕೊಂಡವು.

ಕಲ್ಯಾಣ ಚಾಳುಕ್ಯ–ಹೊಯ್ಸಳ ಕಾಲದ ಅಲಂಕೃತ ವಾಸ್ತುವಿನಲ್ಲಿ ಪಳಗಿದ್ದ ಕಲಾವಿದರು ವಿಜಯನಗರ ವಾಸ್ತು ಚಟುವಟಿಕೆಗಳಲ್ಲಿ ತೊಡಗಿದ್ದರು. ವಿಜಯನಗರ ಸಾಮ್ರಾಜ್ಯ ನಾಶವಾದ ಮೇಲೆ ಅವರೂ ರಾಜಾಶ್ರಯ ಬಯಸಿ ಬಿಜಾಪುರದತ್ತ ಬಂದುದು, ಶಾಂತಿಸಮೃದ್ಧಿಗಳ ನೆಲೆವೀಡಾದ ಬಿಜಾಪುರದ ಸುಲ್ತಾನರ ಧಾರ್ಮಿಕ ಒಲವು ನಿಲುವುಗಳಲ್ಲಾದ ಬದಲಾವಣೆ, ದಾಸಪಂಥ, ಸೂಫೀಪಂಥಗಳ ಬೆಳೆವಣಿಗೆಯಿಂದಾದ ಪ್ರಭಾವ– ಇವೆಲ್ಲದರ ಒಟ್ಟಾರೆ ಪರಿಣಾಮವಾಗಿ ಸಾಂಸ್ಕೃತಿಕ ಸಾಮಾಜಿಕ ವಾತಾವರಣವೇ ಬದಲಾಯಿತು. ಈ ಪ್ರಭಾವಗಳ ಫಲವಾಗಿ ಅನೇಕ ದೃಶ್ಯಪ್ರತೀಕಗಳು ರೂಪುಗೊಂಡವು. ವರ್ಣಚಿತ್ರಗಳಲ್ಲಿ ಪದೇ ಪದೇ ಕಾಣುವ ಯೋಗಿನಿಯರು, ರಾಗರಾಗಿಣಿಯರು, ಅನುಭಾವಿಕ ವಾತಾವರಣ; ವಾಸ್ತು ಅಲಂಕರಣದಲ್ಲಿ ಕಮಲ, ಕಮಲದಳ, ಸ್ವಸ್ತಿಕಾದಿ ಜ್ಯಾಮಿತೀಯ ಬಂಧಗಳು, ಕುರಾನಿನವೇ ಆದರೂ ಸಾರ್ವಕಾಲಿಕ, ಸಾಮನ್ವಯಿಕ ಸತ್ಯ, ಸಂದೇಶಗಳಿರುವ ಸೂಕ್ತಿಗಳು ಮುಂತಾದವುಗಳನ್ನು ಮತ್ತೆ ಮತ್ತೆ ಹಲವು ಹತ್ತು ರೀತಿಯಲ್ಲಿ ಸಂಯೋಜಿಸಿ ರೂಪಿಸಿದ ಒಂದು ರೀತಿಯ ಸಾಮನ್ವಯಿಕ ಕಲೆ ಉಗಮಿಸಿತು. ಇದು ಆ ಕಾಲದ ಚಿತ್ರಕಲೆ, ಸಂಗೀತ, ವಾಸ್ತು ಮುಂತಾದ ಎಲ್ಲ ಪ್ರಕಾರಗಳಲ್ಲಿ ಪ್ರತಿಫಲಿತವಾಗಿದೆ. ಆದಿಲ್ ಶಾಹಿ ಸಂಸ್ಕೃತಿಯ ಈ ಆಯಾಮವನ್ನು ಕುರಿತ ತೌಲನಿಕ, ಸಮಗ್ರ ವಿಶ್ಲೇಷಣಾತ್ಮಕ ಅಧ್ಯಯನ ಈ ವಿಷಯವಾದ ಹಲವು ಸೂಕ್ಷ್ಮ ಒಳನೋಟಗಳನ್ನು ಒದಗಿಸಬಹುದು. ಇದೇ ಶೈಲಿಯ ಪ್ರಭಾವ ಬೆಳೆವಣಿಗೆಗಳನ್ನು ಮುಂದಿನ ಕಾಲದ ಸಿರಾದ ಮಲ್ಲಿಕ್‌ರಹಾನ್ ದರ್ಗಾ, ಶ್ರೀರಂಗಪಟ್ಟಣದ ಟಿಪ್ಪು ಸುಲ್ತಾನನ ಗುಂಬಜ್ ಮತ್ತು ಮಸೀದಿಗಳಲ್ಲಿಯೂ ಗುರುತಿಸಬಹುದು.

**ಆಲಂಕಾರಿಕ ಲಿಪಿ ಶೈಲಿಗಳು:** ಮುಸ್ಲಿಂ ಸಂಸ್ಕೃತಿ, ಪ್ರಪಂಚಕ್ಕೆ ನೀಡಿದ ಅಮೂಲ್ಯ ಕಾಣಿಕೆ–ಪರಿಷ್ಕೃತ ಅಲಂಕರಣ ಲಿಪಿ. ಈ ಕಲೆಯನ್ನು ಅರಬ್ಬರು ರೂಢಿಸಿಕೊಂಡು ರೂಪಿಸಿದಂತೆ ಇನ್ನಾವ ಸಮುದಾಯವೂ ಮಾಡಲಿಲ್ಲ. ಪ್ರಪಂಚದ ಯಾವುದೇ ಪ್ರದೇಶ, ಹೀಗೆ ಬರೆವಣಿಗೆಯ ಶೈಲಿಯನ್ನು ತನ್ನ ಸಂಸ್ಕೃತಿಯ ಒಂದು ಲಕ್ಷಣವಾಗಿಸಿಕೊಂಡು ವೈವಿಧ್ಯಮಯವಾಗಿ ಅರಳಿಸಲಿಲ್ಲ. ಶ್ರದ್ಧಾ ಭಕ್ತಿಯಿಂದ ಗೌರವಿಸಿ ಆದರಿಸಲಿಲ್ಲ. ಅಂದವಾದ ಬರೆವಣಿಗೆಯ ವ್ಯಾಮೋಹ ಅರಬರನ್ನು ಒಂದು ಗೀಳಾಗಿ, ವ್ಯಸನವಾಗಿ ದೊರೆಯಿಂದ, ಫಕೀರ, ಕಡುಬಡವನವರೆಗೆ ಏಕ ಪ್ರಕಾರವಾಗಿ ಕಾಡಿತ್ತು. ವಿವಿಧ ಶೈಲಿಗಳಲ್ಲಿ ಪರಿಣತನಾದ ಕಲಾವಿದ ಯಾವುದೇ ರಾಜಾಸ್ಥಾನಕ್ಕೆ ಭೂಷಣ ಪ್ರಾಯನಾಗಿದ್ದ, ಇದನ್ನು ಎಲ್ಲ ಕಲೆಗಳ ಸಾರ ಸರ್ವಸ್ವವೆಂದು ಆ ಜನ ಭಾವಿಸಿದ್ದರು ಅಂದವಾದ ಬರೆವಣಿಗೆ ಸತ್ಯವನ್ನು ಶಾಶ್ವತವಾಗಿಸುತ್ತದೆ, ಸುಂದರ ಲಿಪಿಯ ಸೂಕ್ತಿ ಬಡವರಿಗೆ ಜೀವನೋಪಾಯ, ಧನವಂತರು ಆಸೆಪಟ್ಟು, ಕೊಂಡು ಹೆಮ್ಮೆ ಪಡಬಹುದಾದ ಆಭರಣ, ಅಭಿಜಾತ ಪರಮಪದ ಸೋಪಾನ ಎಂಬರ್ಥದ ನಾಣ್ಣುಡಿಗಳೂ ಪ್ರಚಲಿತವಿದ್ದವು.

ಇಸ್ಲಾಂ ಪೂರ್ವಕಾಲದ ಅರಬ್ ದೇಶದಲ್ಲಿ ಎರಡು ರೀತಿಯ ಬರೆವಣಿಗೆ ಬಳಕೆಯಲ್ಲಿದ್ದವು. ಮೊದಲನೆಯದು, ಮೆದುವಾದ ಕುರಿಮರಿಯ ಹದಮಾಡಿದ ಚರ್ಮ, ಪಪ್ಯೆರಸ್, ತಾಳೆಗರಿ ಮುಂತಾದವುಗಳ ಮೇಲೆ ಬರೆಯಲಾಗುತ್ತಿದ್ದ ಉರುಟುರುಟಾದ ಲಿಪಿ. ಎರಡನೆಯದು ಒರಟು ಅಥವಾ ಮೃದು ಸಾಂದ್ರ ಕಣಗಳ ಕಲ್ಲಿನ ಫಲಕ, ಒಂಟೆಯ ಪಕ್ಕೆಲುಬು, ಬೆನ್ನುಮೂಳೆಗಳಂತಹ ಗಟ್ಟಿ ಪದಾರ್ಥಗಳ ಮೇಲೆ ನೀಟಾದ ಲಂಬ, ಅಡ್ಡ ಮತ್ತು ಕೋನದ ಗೀಟು ಗೆರೆಗಳಾಗಿ ಬರೆಯಬಹುದಾಗಿದ್ದ ಲಿಪಿ.

ಮೊದಲನೆಯದು ವೃತ್ತ ಮತ್ತು ವೃತ್ತ ಭಾಗಗಳನ್ನು ಹೊಂದಿದ್ದು ಅಷ್ಟೇನೂ ಆಕರ್ಷಕವಾಗಿರಲಿಲ್ಲ. ಆದರೆ ಎರಡನೆಯ ಬರೆವಣಿಗೆ ವಿವಿಧ ಜ್ಯಾಮಿತೀಯ ಆಕಾರಗಳಲ್ಲಿದ್ದು ಲಯಬದ್ಧ ರೇಖೆಗಳ ವಿನ್ಯಾಸವಾಗಿ ನಯನಮನೋಹರವಾಗಿತ್ತು. ಮೊದಲಿನಿಂದಲೂ ಗಣಿತ ಮತ್ತು ಜ್ಯಾಮಿತೀಯ ಬಗೆಗೆ ಒಲವು ತೋರಿದ್ದ ಅರಬ್ಬರು ಈ ಎರಡೂ ಲಿಪಿಗಳನ್ನು ವಿವಿಧ ಆಕರ್ಷಕ ಪ್ರಮಾಣದಲ್ಲಿ ಸಂಯೋಜಿಸಿ ತಮ್ಮ ಲಿಪಿಯನ್ನು ರೂಪಿಸಿದರು. ಯೆಮನ್‌ನಲ್ಲಿ ದೊರೆತಿರುವ ಅತಿಪ್ರಾಚೀನ ಶಾಸನವೊಂದರಲ್ಲಿರುವ ಇಂತಹ ಲಿಪಿ ತತ್ಸಮಕಾಲೀನ ಲಿಪಿಗಳಲ್ಲೆಲ್ಲ ಅತ್ಯಂತ ಸುಂದರವಾದುದೆಂಬ ಹೆಗ್ಗಳಿಕೆ ಹೊಂದಿದೆ. ಅರಬ್ಬರು ರೂಪಿಸಿದ ಈ ಅಕ್ಷರಗಳನ್ನು ವಿವಿಧ ಗಾತ್ರ, ಪ್ರಮಾಣ ಮತ್ತು ರೀತಿಗಳಲ್ಲಿ ಪುನಃ ಪುನಃ ಸಂಯೋಜಿಸಿ ಪರ್ಷಿಯನ್ನರು ಮತ್ತು ಆಟ್ಟೋಮನ್ ತುರ್ಕರು ಹದಿನೆಂಟು ಮುಖ್ಯ ಶೈಲಿಗಳನ್ನೂ ಕೆಲವು ಉಪಶೈಲಿಗಳನ್ನೂ ಸೃಜಿಸಿದರು. ಇವುಗಳಲ್ಲಿ ಕಂಡುಬರುವಂತೆ ಲಂಬ, ಅಡ್ಡ ಅಥವಾ ಕೋನಗಳಲ್ಲಿ ಬಾಗಿರುವ ಸರಳ ರೇಖೆ ಮತ್ತು ಅನೇಕ ರೀತಿಯ ಬಾಗು, ಬಳುಕು ಹೊಂದಿರುವ ವೃತ್ತದ ಭಾಗಗಳಿರುವ ಅಕ್ಷರ ಸಂಯೋಜನೆಯಿಂದ ಚೌಕ, ಆಯತ, ವಜ್ರ, ವೃತ್ತ, ಅರೆವೃತ್ತ, ವೃತ್ತಾಯತ, ಬಿಂದು, ಕಂಸ ಮುಂತಾದ ಜ್ಯಾಮಿತೀಯ ಆಕೃತಿಗಳು ನಾನಾ ರೀತಿಯಲ್ಲಿ ಕಲಾತ್ಮವಾಗಿ ಕಲೆತಾಗ ಉಂಟುಮಾಡುವ ಪರಿಣಾಮ ಮುದನೀಡುವಂತಹದು.

**1. ಕೂಫೀ (ಕೂಫಿಕ್):** ಲಂಬ ಹಾಗೂ ಇತರ ಕೋನಗಳು ಪ್ರಧಾನವಾಗಿರುವ ದಪ್ಪಗೆರೆಯ ಅಕ್ಷರವುಳ್ಳ ಲಿಪಿ ಪ್ರಾಚೀನ ಮೆಸಪೊಟೇಮಿಯದ ಕೂಫಿಯ ಪ್ರಾಂತದಲ್ಲಿ ಉಗಮಿಸಿದುದರಿಂದ ಈ ಹೆಸರು ಬಂದಿದೆ. ತ್ರಿಭುಜ, ಆಯತ, ಚೌಕಾಕಾರದ ಸಂಕೀರ್ಣ,

ಜಟಿಲ ಜ್ಯಾಮಿತೀಯ ಬಂಧಗಳಿಂದ ಕೂಡಿದ ಕಸೂತಿಯನ್ನು ಹೋಲುವ, ಬರವಣಿಗೆ ಪ್ರಾರಂಭ ಕಾಲದ ಈ ಶೈಲಿಯಲ್ಲಿ ಎದ್ದು ಕಾಣುವ ಲಕ್ಷಣ. ಖುರಾನಿನ ಪ್ರತಿಗಳಲ್ಲಿ ಇದನ್ನು ಹೆಚ್ಚಾಗಿ ಉಪಯೋಗಿಸಿದೆ. ಭಾರತದಲ್ಲಿ ಕುತುಬ್ ಮಿನಾರ್, ಖುವ್ವತುಲ್ ಇಸ್ಲಾಂ ಮಸೀದಿಯ ಬರೆಹಗಳಲ್ಲಿ ಈ ಶೈಲಿ ಮೊದಲಬಾರಿಗೆ ಹೆಚ್ಚಾಗಿ ಕಂಡುಬರುತ್ತದೆ. ಬಹಮನಿ ಕಾಲದಲ್ಲಿ ಕರ್ನಾಟಕದಲ್ಲಿ ಪರಿಚಿತವಾದರೂ ಇದರ ಉದಾಹರಣೆಗಳು ಕಡಿಮೆಯೇ. ಬಿಜಾಪುರದ ನಾಭಿಪ್ರದೇಶವಾದ ಅರಸ್ ಮಹಲಿನ ಭಾಗ ವಾಗಿದ್ದ ಪಾನಿ ಮಹಲ್‌ನಲ್ಲಿ ಈ ಶೈಲಿಯ ಒಂದು ವೃತ್ತ ಫಲಕ ಶಾಸನವಿದೆ.

**2. ಮುಹಕ್ಕಕ್:** ಬಲಿಷ್ಠ ರೇಖೆಗಳ ಸಂಯೋಜನೆಯಿರುವ ದಟ್ಟವಾಗಿ ಹೆಣೆದ ಅಕ್ಷರ ಗಳಿರುವ ಶೈಲಿ. ಅಕ್ಷರಗಳು ಎಡತುದಿಯಲ್ಲಿ ಒಂದಕ್ಕೊಂದು ಕೂಡಿರುತ್ತವೆ. ಉದ್ದನೆಯ ಹಾಳೆಯಲ್ಲಿ ತಯಾರಿಸಿದ ಖುರಾನ್ ಹಸ್ತಪ್ರತಿಗಳಲ್ಲಿ ಇದರ ಬಳಕೆಯಾಗಿದೆ.

3. **ರಿಹಾನ್** (ರಿಹಾನಿ/ ರಹ್ಯಾನಿ/ ರಿಹ್ಯಾನಿ) ಲತೆ, ಹೂ ಬಳ್ಳಿಗಳಂತೆ ಬಾಗು ಬಳುಕುಗಳಿರುವ ಶೈಲಿ. ವಕ್ರರೇಖಾ ಪ್ರಧಾನವಾದ ಮುಹಕ್ಕಕ್ ಶೈಲಿಯ ಅಕ್ಷರಗಳನ್ನು ನಸ್ಖ್‌ನ ಗಾತ್ರದಲ್ಲಿ ಬರೆದಾಗ ಈ ಶೈಲಿಯಾಗುತ್ತದೆ.

4. **ಥುಲ್ಥ್ (ಸುಲುಸ್) ತ್ರಯಾಂಶ:** ನೇರಗೀಟಿನ ಮುಖ್ಯ ಅಕ್ಷರಗಳ ಒಟ್ಟು ಎತ್ತರದ ಮೂರನೆಯ ಒಂದು ಭಾಗ ಉಳಿದೆಲ್ಲ ಅಕ್ಷರಗಳನ್ನು ಸಂಯೋಜಿಸಿದ ಶೈಲಿ. ಇಸ್ಲಾಂ ಪ್ರಪಂಚ ದಾದ್ಯಂತ ಸಾರ್ವಕಾಲಿಕ ಮನ್ನಣೆಗಳಿಸಿರುವ ಅಪೂರ್ವಶೈಲಿ.

**5. ನಸ್ಖ್:** ಸ್ಥಳ ಸಂಕೋಚನ, ಪೋಣಿಸುವಿಕೆ, ಅಕ್ಷರದ ತುದಿಗಳನ್ನು ಒಂದಕ್ಕೊಂದು ಜೋಡಿಸಿ ಬರೆಯುವ ಶೈಲಿ.

**6. ತಾವಕೀ:** ಒತ್ತಿ ದುಂಡಾಗಿಸಿದ ಅಕ್ಷರಗಳಿರುವ ಶೈಲಿ. ಕೂಫೀಶೈಲಿಯಲ್ಲಿನ ಒಂದು ಉಪಭೇದವಾಗಿಯೂ ಸುಲುಸ್‌ನಂತೆ ತ್ರಯಾಂಶದಲ್ಲಿಯೂ ಸಂಯೋಜಿಸಿ ಬರೆದುದು.

**7. ರಿಖಾ:** ಸುಲುಸ್ ಮತ್ತು ತಾವಕೀ ಶೈಲಿಗಳನ್ನು ಇನ್ನಷ್ಟು ಸಂಕ್ಷಿಪ್ತಗೊಳಿಸಿದ ಅವ ತರಣಿಕೆ. ಸಾಹಿತ್ಯಕ ಹಸ್ತ ಪ್ರತಿಯಲ್ಲಿ, ಪಟ್ಟಿಕೆಗಳ ಪರಿಧಿಯಲ್ಲಿನ ಚೌಕಟ್ಟಿನ ಅಲಂಕರಣದಲ್ಲಿ ಹೆಚ್ಚಿನ ಬಳಕೆ. ಎದ್ದು ಕಾಣುವ ಉದ್ದ ಹಾಗೂ ಅಡ್ಡಗೀಟು ಪ್ರಧಾನವಾಗಿರುತ್ತವೆ.

**8. ದ್ವಾಲೀ:** ಯಾವುದೇ ಶೈಲಿಯ ಅತಿ ದೊಡ್ಡ ಗಾತ್ರದ ಅಕ್ಷರಗಳಿರುವ ಉಪಶೈಲಿ. ಸುಲುಸ್ ಶೈಲಿಯಲ್ಲಿ ಹೆಚ್ಚು ಬಳಸಲಾಗುತ್ತದೆ.

**9. ಘುಬಾರ್ (ಘುಬಾರೀ):** ಬರಿಗಣ್ಣಿಗೆ ಓದಲು ಕಷ್ಟವಾಗುವ ಧೂಳಿನ ಕಣಗಳಂತಹ ಅತಿಸಣ್ಣ ಅಕ್ಷರಗಳ ಶೈಲಿ. ಇಸ್ಲಾಂ ಧರ್ಮಾವಲಂಬಿ ಸೈನಿಕರು ಯುದ್ಧಕ್ಕೆ ಹೊರಡುವಾಗ ತಮ್ಮ ಧ್ವಜದ ಅಂಚಿಗೆ ಕಟ್ಟುವುದಕ್ಕಾಗಿ ಅತಿ ಸಣ್ಣಗಾತ್ರದ ಖುರಾನಿನ ಪ್ರತಿ ತಯಾರಿಸುತ್ತಿದ್ದರು. ಅಂತಹ ಖುರಾನಿನಲ್ಲಿ ಈ ಶೈಲಿಯ ಉದಾಹರಣೆಗಳಿವೆ. ರಹಸ್ಯ ಸಂದೇಶ ಸಂವಹನೆಗೂ ಇದು ಉಪಯುಕ್ತವಾದುದ್ದು.

**10. ಮುಸಲ್ ಸಾಲ್:** ಪೋಣಿಸಿದ ಹೂಮಾಲೆಯಂತಹ ಶೈಲಿ. ಸುಲುಸ್ ಶೈಲಿಯ ಅಕ್ಷರಗಳನ್ನು ತುದಿಯಲ್ಲಿ ಒಂದಕ್ಕೊಂದು ಜೋಡಿಸಿ ಕಲ್ಪಿಸಿದ ಸಂಯುಕ್ತಾಕ್ಷರ ಶೈಲಿ. ಕಲಾವಿದರ ಕುಶಲತೆಗೆ ಸವಾಲೆಸೆಯುವಂತಹದು, ಶ್ರೇಷ್ಠ ಕಲಾವಿದರು ಮಾತ್ರವೆ ಒಲಿಸಿಕೊಳ್ಳಬಹುದಾದದ್ದು.

**11. ಸಿಯಾಕತ್( ಸಿಯಾಕ್):** ಯಾವುದೇ ಶೈಲಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಬೇಗ ಬೇಗ ಬರೆದಾಗ ರೂಪುಗೊಳ್ಳುವ ಅಲಂಕಾರರಹಿತ ಶೈಲಿ. ಆಡಳಿತ ವ್ಯವಹಾರದ ದಾಖಲೆ, ಕಡತ, ಫರ್ಮಾನ್, ಸನ್ನದುಗಳಲ್ಲಿ ಬಳಸಲಾಗುವುದು.

**12. ತಾಲೀಖ್ (ಇಳಿಬಿಡು, ಜೋತುಬೀಳು, ಜೊತೆಜೊತೆಯಾಗಿ ಇಳಿಬಿಟ್ಟಿದ್ದು):** ಅಕ್ಷರಗಳನ್ನು ಪರಸ್ಪರ ತುದಿಗಳಲ್ಲಿ ಸೇರಿಸಿರುವ ಸಂಯೋಜಿತಾಕ್ಷರ ಶೈಲಿ. ತಾವಕೀ, ರಿಖಾ, ನಸ್ಖ್ ಶೈಲಿಗಳ ಹದವರಿತ ಮಿಶ್ರಣ. ಶಿಕಸ್ತಾಲೀಖ್‌ಗಿಂತ ಸುಲಭವಾಗಿ ಬರೆಯ ಬಹುದಾದ್ದು.

**13. ಶಿಕಸ್ತಾಲೀಖ್ (ಶಿಕಸ್ತಾ):** ತುಂಡು ತುಂಡಾದ ತಾಲೀಖ್ ಶೈಲಿಯಲ್ಲಿ ಶೀಘ್ರವಾಗಿ ಬರೆದಾಗ ರೂಪುಗೊಳ್ಳುತ್ತದೆ. ಸಾಕಷ್ಟು ಅಭ್ಯಾಸ ಪರಿಣತಿಯಿಲ್ಲದೆ ಇದನ್ನು ಓದಲಾಗದು. ಸಾಹಿತ್ಯ ಕೃತಿ, ಆಡಳಿತ ವ್ಯವಹಾರದ ದಾಖಲೆಗಳಲ್ಲಿ ಇದರ ಬಳಕೆ ಹೆಚ್ಚು. ಕ್ರಮೇಣ ನಸ್ತಾಲೀಖ್ ಶೈಲಿ ಇದರ ಸ್ಥಾನವನ್ನು ಆಕ್ರಮಿಸಿತು.

**14. ತರಸ್ಸುಲ್(ವ್ಯಾವಹಾರಿಕ):** ದೀವಾನ್-ಇ-ಆಮ್ ಮತ್ತು ದೀವಾನ್-ಇ-ಖಾಸ್‌ಗಳಲ್ಲಿ ನಡೆಯುವ ದೈನಂದಿನ ಕಲಾಪಗಳನ್ನು ದಾಖಲಿಸುವ ಹಾಗೂ ಉಕ್ತಲೇಖನಕ್ಕಾಗಿ ಅಲ್ಲಿನ ಅಧಿಕಾರಿಗಳು ಶಿಕಸ್ತಾ ಮತ್ತು ತಾಲೀಖ್ ಶೈಲಿಯ ಲಿಪಿಯನ್ನು ಇನ್ನಷ್ಟು ಪರಿಷ್ಕರಿಸಿ, ಸಂಕ್ಷೇಪಿಸಿ ರೂಪಿಸಿದ ಶೈಲಿ. ಒಂದು ರೀತಿಯ ಶೀಘ್ರಲಿಪಿ.

**15. ನ್‌ಸ್ಖ್-ಇ-ತಾಲೀಖ್(ನಸ್ತಾಲಿಖ್):** ನಸ್ಖ್ ಮತ್ತು ತಾಲೀಖ್ ಎರಡರ ಸಂಯೋಜನೆಯಿಂದ ಕಲ್ಪಿಸಿದ ಹೊಸ ಶೈಲಿ. ಇದರಲ್ಲಿ ಎರಡು ಮುಖ್ಯ ಉಪಶೈಲಿಗಳಿವೆ.

ಅ) ಮಿರ್ಜಾ ಜಾಫರ್ ತಾಬ್ರಿಜೀ ಮತ್ತು ಅಝುರ್ ತಾಬ್ರಿಜೀ ಎಂಬ ಲಿಪಿ ತಜ್ಞರು 15ನೆಯ ಶತಮಾನದಲ್ಲಿ ಖುರಾಸಾನ್ ಪ್ರದೇಶದಲ್ಲಿ ರೂಪಿಸಿ ರೂಢಿಗೆ ತಂದದ್ದು

ಆ) ಅಬ್ದುಲ್ ರೆಹಮಾನ್ ಬರ್ಜಾಮೀ ಸುಮಾರು ಅದೇ ಕಾಲದಲ್ಲಿ ಪಶ್ಚಿಮ ಪರ್ಷಿಯ ಪ್ರದೇಶದಲ್ಲಿ ರೂಪಿಸಿದ್ದು. ಮೊದಲನೆಯದು ಪರ್ಷಿಯನ್ನರ ವಿಶೇಷ ಮನ್ನಣೆಗೆ ಪಾತ್ರವಾಗಿ ಖುರಾಸಾನೀ ಶೈಲಿಯೆಂದೇ ಪ್ರಸಿದ್ಧವಾಗಿ ಎಲ್ಲೆಡೆ ಹರಡಿತು. ಭಾರತದಲ್ಲೂ ಬಹುಪ್ರಚಲಿತ ಶೈಲಿ.

**16. ಶಿಕಸ್ತಾ-ನಸ್ತಾಲಿಖ್(ಖತ್-ಇ-ಶಿಕಸ್ತಾ):** 17ನೆಯ ಶತಮಾನದಲ್ಲಿ ಸಫಾವಿದರ ಆಳಿಕೆಯಲ್ಲಿ ನಸ್ತಾಲೀಖ್ ಅನ್ನು ಶೀಘ್ರವಾಗಿ ಬರೆಯಲು ರೂಪುಗೊಂಡ ಶೈಲಿ. ಕವಿತೆ, ಸಾಹಿತ್ಯ ಕೃತಿ, ಖುರಾನ್ ಮುಂತಾದ ಹಸ್ತಪ್ರತಿಗಳಲ್ಲಿ ಹಾಗೂ ಮುಖ್ಯ ಆಡಳಿತ ಪತ್ರ ವ್ಯವಹಾರಾತ್ಮಕ ದಾಖಲೆಗಳ ರಚನೆಯಲ್ಲಿ ಹೆಚ್ಚು ಬಳಕೆಗೊಂಡಿದೆ. ಆದಿಲ್ ಶಾಹೀ ಕಾಲದಲ್ಲಿಯೂ ಹಸ್ತಪ್ರತಿ ಶಾಸನಗಳ ರಚನೆಯಲ್ಲಿ ನಸ್ತಾಲೀಖ್, ಆಡಳಿತ ದಾಖಲೆ, ಪತ್ರಲೇಖನ, ಫರ್ಮಾನ್, ಸನ್ನದುಗಳ ರಚನೆಯಲ್ಲಿ ಶಿಕಸ್ತಾ ನಸ್ತಾಲೀಖ್ ಬಳಕೆಯಾಗಿದೆ.

**17. ತಾಹ್ರೀರೀ( ಪತ್ರ ಲೇಖನ ಲಿಪಿ):** ಶಿಕಸ್ತಾ-ನಸ್ತಾಲೀಖ್‌ನ ಇನ್ನಷ್ಟು ಸರಳವಾದ ಅವತರಣಿಕೆ. ಪತ್ರ, ವ್ಯವಹಾರ ದಾಖಲೆಗಳಲ್ಲಿ ಹೆಚ್ಚು ಬಳಕೆ, ಓದಲು ಸಾಕಷ್ಟು ಪರಿಣತಿಯ ಆವಶ್ಯಕತೆಯಿದ್ದುದರಿಂದ ರಹಸ್ಯ ಸಂದೇಶಗಳ ರವಾನೆಗೆ ಸೂಕ್ತವಾದುದ್ದು.

**18. ಮುಥನ್ನಾ, ಖತ್-ಇ-ಮುಥನ್ನಾ(ಪರಸ್ಪರ ಎದುರಾಗಿರುವ):** ಯಾವುದೇ ಶೈಲಿ ಅಕ್ಷರ,ಪದಪುಂಜಗಳನ್ನು ವಿವಿಧ ಅಕ್ಷರಗಳಲ್ಲಿ, ಪರಸ್ಪರ ಬಿಂಬ ಪ್ರತಿಬಿಂಬದಂತೆ ಸಂಯೋಜಿಸಿ ಆಕರ್ಷಕ ಚಿತ್ರಣಗಳನ್ನು ರೂಪಿಸುವುದು. ವಿಶೇಷವಾಗಿ ಸುಲುಸ್ ಮತ್ತು ಕೂಫೀ ಶೈಲಿಯನ್ನು ಈ ಪ್ರಕಾರದಲ್ಲಿ ಬರೆಯಲಾಗುತ್ತದೆ. ನಸ್ತಾಲೀಖ್‌ನಲ್ಲಿಯೂ ಕೆಲವು ಉದಾಹರಣೆಗಳಿವೆ.

ಮೇಲೆ ಹೇಳಿರುವ ಮುಖ್ಯ ಶೈಲಿಗಳಲ್ಲದೆ, ಇವೇ ಲಿಪಿಗಳನ್ನು ರೂಪಾಂತರಿಸಿ ಕಲ್ಪಿಸಿದ ಐದು ಉಪಶೈಲಿಗಳು ಹೀಗಿವೆ:

**1. ರೇಸಿಂ ಯಾಜೀ:** ಅಕ್ಷರಗಳ ವಿಶೇಷ ಸಂಯೋಜನೆಯಿಂದ ಮನುಷ್ಯ, ಪಶು, ಪಕ್ಷಿ, ಜ್ಯಾಮಿತೀಯ ಬಂಧ, ಹೂವು ಮುಂತಾದ ಆಕೃತಿಗಳನ್ನು ರೂಪಿಸುವ ಶೈಲಿ.

**2. ಖತ್-ಇ-ಮುಅಮ್ಮಾಇ:** ಯಾವುದೇ ಆಲಂಕಾರಿಕ ಲಿಪಿ ಶೈಲಿಯಲ್ಲಿ ಬರೆದ ಪದಪುಂಜಗಳನ್ನು- ವಿಶೇಷವಾಗಿ ಹಡಿತ್, ಖುರಾನಿನ ಸೂಕ್ತಿ, ಕಾವ್ಯಮಯವಾದ ದ್ವಿಪದಿಗಳನ್ನು ಚಿತ್ರ ವಿಚಿತ್ರವಾದ ಬಂಧಗಳಲ್ಲಿ ಸಂಯೋಜಿಸಿ ಬರೆದುದು.

**3. ಖತ್-ಇ-ಷದ್ಜಾರೀ(ವೃಕ್ಷರೂಪಲೇಖ):** ಸಂಯೋಜಿತಾಕ್ಷರಗಳನ್ನು ಮರದ ಕಾಂಡ, ಕೊಂಬೆ, ಎಲೆ, ಹೂ ಹಣ್ಣುಗಳಾಗಿ ಮಾರ್ಪಡಿಸಿ ಹೆಣೆದಿರುವ ಶೈಲಿ. ಸುಲುಸ್ ಅಕ್ಷರ ಈ ಶೈಲಿಗೆ ಸೂಕ್ತವಾದದ್ದು. ಹಸ್ತಪ್ರತಿಗಳ ಉನ್ವಾನ್‌ಅನ್ನು (ಪುಟ) ಸಿಂಗರಿಸಲು ಈ ಶೈಲಿಯನ್ನು ಬಳಸಲಾಗುತ್ತದೆ.

**4. ಖತ್-ಇ-ಸುನ್‌ಬುಲೀ:** ತುರ್ಕಿಸ್ತಾನದ ಸುಪ್ರಸಿದ್ಧ ಆಲಂಕಾರಿಕ ಲಿಪಿತಜ್ಞ ಆರಿಫ್ ಹಿಕ್ಮೆತ್ ತೀರ ಇತ್ತೀಚೆಗೆ (1918)ರೂಪಿಸಿದ ಈ ಶೈಲಿಯಲ್ಲಿ ಸಂಯೋಜಿತಾಕ್ಷರಗಳು ಬಣ್ಣ ಬಣ್ಣದ ಗಂಟೆಯಾಕಾರದ ಹೂಬಿಡುವ(ಹಯಾಸಿಂಥ್) ಸಸ್ಯದಂತೆ ರೂಪಿತವಾಗಿರುತ್ತವೆ. ದಿವಾನೀ ಶೈಲಿಯ ಅಕ್ಷರಗಳನ್ನು ಮಾರ್ಪಡಿಸಿ ಈ ಶೈಲಿಯಲ್ಲಿ ಬಳಸಲಾಗುತ್ತದೆ.

**5. ಆಲೆವ್-ಯಾಜೀಸೀ (ಅಗ್ನಿ ಜ್ವಾಲಾಲೇಖ):** ಇನ್ನೂ ಈಚಿನ ದಶಕಗಳಲ್ಲಿ ತುರ್ಕಿಸ್ತಾನದ ಇನ್ನೊಬ್ಬ ಖ್ಯಾತ ಲಿಪಿತಜ್ಞ ಇಸ್ಮಾಯಿಲ್ ಹಕ್ಕೀ ಬಲ್ತಡಿಯೋಘ್ಲು ರೂಪಿಸಿದ ಈ ಶೈಲಿಯಲ್ಲಿ ಅಕ್ಷರ ಹಾಗೂ ಅದರ ಭಾಗಗಳು ಮೇಲ್ಮುಖವಾದ ಕೆನ್ನಾಲಗೆಗಳಂತೆ ಕಾಣುತ್ತವೆ.

ಪ್ರತಿ ಶೈಲಿಯಲ್ಲಿಯೂ ಎದ್ದುಕಾಣುವ ಮುಖ್ಯ ಲಕ್ಷಣವನ್ನು ಆಧರಿಸಿ ಮೇಲೆ ಹೇಳಿರುವ ಶೈಲಿ, ಉಪಶೈಲಿಗಳನ್ನು ಕೆಳಕಾಣಿಸಿದಂತೆ ಆರು ಗುಂಪುಗಳಾಗಿ ವಿಂಗಡಿಸಬಹುದು:

ಅ) ದಪ್ಪಗೆರೆಯ ಜ್ಯಾಮಿತೀಯ ಬಂಧವೇ ಪ್ರಧಾನವಾಗಿ ಉಳ್ಳವು-ಕೂಫೀಕ್ ಇತ್ಯಾದಿ

ಆ) ಲಂಬ ಹಾಗೂ ಅಡ್ಡ ಗೆರೆಗಳು ಪ್ರಧಾನವಾಗಿರುವುವು-ರಿಖಾ ಇತ್ಯಾದಿ

ಇ) ಕೋಮಲ ಬಾಗುಬಳುಕುಗಳಿರುವ ವೃತ್ತ ಭಾಗಗಳು ಪ್ರಧಾನವಾಗಿರುವುವು- ನಸ್ಖ್, ಶಿಕಸ್ತಾ ಇತ್ಯಾದಿ

ಈ) 1, 2 ಮತ್ತು 3ರ ಲಕ್ಷಣಗಳನ್ನು ವಿವಿಧ ಪ್ರಮಾಣದಲ್ಲಿ ಸಂಯೋಜಿಸಿ ರೂಪಿಸಿದ ಸಂಯುಕ್ತ ಶೈಲಿಯವು-ನಸ್ತಾಲಿಖ್, ತಾಲೀಖ್ ಇತ್ಯಾದಿ

ಉ) ಶೈಲೀಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ವೇಗವಾಗಿ ಬರೆಯಲು ಅನುವಾಗುವಂತೆ ಅಕ್ಷರಗಳನ್ನು ರೂಪಾಂತರಿಸಿ ಕಲ್ಪಿಸಿದ ಶೀಘ್ರ ಲಿಪಿಗಳು ಘುಬಾರ್, ತರೆಸ್ಸುಲ್, ಶಿಕಸ್ತಾ ಇತ್ಯಾದಿ

ಊ) ಚಿತ್ರಲಿಪಿ ಪ್ರಕಾರಗಳು-ತುಘ್ರಾ, ಖತ್-ಇ-ಮುಥನ್ನಾ ಇತ್ಯಾದಿ.

ಪ್ರತಿ ಅಕ್ಷರದ ರೇಖೆಯ ಉದ್ದ, ಅಗಲ, ತುದಿಗಳು ಬಾಗುವ ದಿಕ್ಕು, ಬಾಗು, ಬಳುಕು, ತಿರುವು, ಒಳತಿರುವು, ಸರಳ ರೇಖೆಗಳು ಉಂಟು ಮಾಡುವ ಕೋನ, ಅಕ್ಷರ, ಪದಗಳ ನಡುವಣ ಅಂತರ-ಇವೆಲ್ಲ ಸೇರಿ ಒಂದು ಆಲಂಕಾರಿಕ ಲಿಪಿ ಶೈಲಿಯನ್ನು ರೂಪಿಸುತ್ತವೆ. ಈ ಎಲ್ಲ ಅಂಶಗಳ ಬಗೆಗೆ ಸಾಕಷ್ಟು ಸಲ ಪ್ರಯೋಗ ಮಾಡಿ, ಅಳೆದು, ಸುರಿದು, ಉದ್ದೇಶಿತ ಸಂದೇಶದ ಸಂವಹನ ಸಮರ್ಥವಾಗಿ, ಪರಿಣಾಮಕಾರಿಯಾಗಿ, ಅಷ್ಟೇ ಕಲಾತ್ಮಕವಾಗಿ ಆಗುವಂತೆ ಅನೇಕ ಲಿಪಿತಜ್ಞರು ಅನವರತ ದುಡಿದು ನಿರ್ದಿಷ್ಟ ನಿಯಮಗಳನ್ನು ರೂಪಿಸಿದ್ದಾರೆ. ಅಂತರಂಗದಲ್ಲಿ ಗುಪ್ತಗಾಮಿನಿಯಾಗಿ ಹರಿಯುವ ಶ್ರದ್ಧಾವಂತ ಧಾರ್ಮಿಕ ಪ್ರಜ್ಞೆ, ಸೌಂದರ್ಯೋಪಾಸನಾ ಪ್ರವೃತ್ತಿ ಪರಿಪೂರ್ಣತಾವಾದಿ ಸ್ವಭಾವ ಇದರ ಹಿನ್ನಲೆಯಲ್ಲಿ ಕೆಲಸ ಮಾಡಿದೆ. ಹೀಗಾಗಿ ಇಡೀ ಇಸ್ಲಾಂ ಜಗತ್ತಿನಲ್ಲಿ, ಖುರಾನಿನ ಪಾಠದಂತೆಯೇ, ಪ್ರತಿ ಲಿಪಿ ಶೈಲಿಯೂ ಅತ್ಯಲ್ಪ ಬದಲಾವಣೆಯೂ ಇಲ್ಲದೆ ಏಕಪ್ರಕಾರವಾಗಿ ಬಳಕೆಯಾಗುತ್ತಿದೆ.

ಶಾಸ್ತ್ರೀಯವಾಗಿ ಲಿಪಿ ಶೈಲಿಯ ಆಧ್ಯಯನವಿಲ್ಲದೆ, ಸಾಕಷ್ಟು ಉದಾಹರಣೆ, ಮಾದರಿಗಳ ತುಲನಾತ್ಮಕ ಪರಿಶೀಲನೆ ಮಾಡದೇ ಈ ಕಲೆಯನ್ನು ಅರಿಯುವುದು, ಒಲಿಸಿಕೊಳ್ಳುವುದು ತೀರಕಷ್ಟ.

ಭಾರತಕ್ಕೆ ಇಸ್ಲಾಂ ಧರ್ಮ ಮತ್ತು ಆಡಳಿತ ಬಂದು ವಿವಿಧ ಪ್ರಾಂತ್ಯಗಳಲ್ಲಿ ನೆಲೆಗೊಂಡುದುದರ ಜೊತೆ ಜೊತೆಗೆ ಈ ಶೈಲಿಗಳಲ್ಲಿ ಮುಖ್ಯವಾದವು ಇಲ್ಲಿಯೂ ಹರಡಿದವು. ಬಿಜಾಪುರದ ಆದಿಲ್ ಶಾಹಿಗಳು ಆಟ್ಟೋಮನ್ ತುರ್ಕರ ಸಂತತಿಯವರಾದುದರಿಂದ ಅಲ್ಲಿ ಪ್ರಚಲಿತವಿದ್ದ ಕೆಲವು ಶೈಲಿಗಳು ನೇರವಾಗಿ ಬಿಜಾಪುರವನ್ನು ತಲುಪಿದವು.

ಭಾರತದ ಮೊಟ್ಟಮೊದಲ ಅರಾಬಿಕ್ ಶಾಸನ ತಮಿಳುನಾಡಿನ ತಿರುವನಂತಪುರದ ಬಳಿಯಿರುವ ಕೋಯಲಮ್ ಗ್ರಾಮದಲ್ಲಿರುವ ಹಳೆಯ ಮಸೀದಿಯಲ್ಲಿದೆ. ಮೂರು ಸಾಲಿನ ಪ್ರಾಚೀನ ಒರಟು ರೀತಿಯ ನಸ್ಖೀಶೈಲಿಯಲ್ಲಿ ಬರೆದಿರುವ ಈ ಬರೆಹ ಹಿ.ಶ.109 (727)ರದ್ದು. ಬರೆದಾತ ಮಲಿಕ್ ದೀನಾರನ ಮಗ ಇಸ್ಮಾಯಿಲ್. ಅಂದಿನಿಂದ ಇಂದಿನವರೆಗೆ ಹೊಸ ಹೊಸ ಶಾಸನಗಳ ಶೋಧ, ಅನುಶೀಲನೆ, ಪುನಃ ಪರಿಶೀಲನೆ ಮುಂತಾದ ಸಂಶೋಧನ ಕಾರ್ಯ ನಡೆಯುತ್ತಿದೆ. ಆದರೆ ಶೈಲೀಯ ಅಧ್ಯಯನ,ಆಲಂಕಾರಿಕ ಲಿಪಿಗಳ ವಿಶೇಷ ಅಧ್ಯಯನ ಅಷ್ಟಾಗಿ ನಡೆದಿಲ್ಲ.

ನಸ್ಖ್, ನಸ್ತಾಲೀಖ್, ರಿಖಾ, ಶಿಕಸ್ತಾ, ಸುಲುಸ್(ಥುಲ್ಥ್) ಮತ್ತು ತುಘ್ರಾ ಶೈಲಿಗಳು ಆದಿಲ್‌ಶಾಹೀ ಕಾಲದಲ್ಲಿ ಬಳಕೆಯಲ್ಲಿದ್ದರೂ ನಸ್ತಾಲೀಖ್ ಹಾಗೂ ಶಿಕಸ್ತಾ ಅಂದಿನ ಪ್ರಧಾನ ಶೈಲಿಗಳು. ಆದಿಲ್ ಶಾಹಿ ರಾಜಮನೆತನದ ಸದಸ್ಯರು ಸ್ವತಃ ತಾವೇ ಅಲಂಕರಣಲಿಪಿ ಶೈಲಿಯಲ್ಲಿ ಪರಿಣತರಾಗಿದ್ದರು. ಉದಾ: ಯೂಸುಫ್ ಆದಿಲ್‌ಖಾನ್ ನಸ್ತಾಲಿಖ್‌ನಲ್ಲಿ ಸಾಕಷ್ಟು ನೈಪುಣ್ಯ ಪಡೆದಿದ್ದ. ಒಂದನೆಯ ಅಲಿ ಹಾಗೂ ಇಮ್ಮಡಿ ಇಬ್ರಾಹಿಂ ಥುಲ್ಥ(ದಪ್ಪ ರೇಖೆಯ ನಸ್ಖ್), ನಸ್ಖ್, ನಸ್ತಾಲೀಖ್, ಶಿಕಸ್ತಾ ಮತ್ತು ರಿಖಾ ಬರೆವಣಿಗೆಯ ಶೈಲಿಗಳಲ್ಲಿ ಅಸದೃಶ ಪ್ರಾವೀಣ್ಯ ಗಳಿಸಿದ್ದರು.

ತಮ್ಮ ಆಸ್ಥಾನದಲ್ಲಿದ್ದ ಪರಿಣತ ಅಲಂಕರಣ ಲಿಪಿಕಾರರು ಮತ್ತು ಪ್ರತಿಕಾರರ ಕೆಲಸದಲ್ಲಿ ತಪ್ಪು ಕಂಡುಹಿಡಿಯುವಷ್ಟು ಅವರು ಪಾಂಡಿತ್ಯ ಗಳಿಸಿದ್ದರು. ಇಮ್ಮಡಿ ಇಬ್ರಾಹಿಂನ ಕಾಲದಲ್ಲಿ ಅವನ ಆಶ್ರಯ ಬಯಸಿ ಇರಾನ್ ಮುಂತಾದ ದೂರ ದೇಶಗಳಿಂದ ಅನೇಕ ಅಲಂಕರಣ ಲಿಪಿಕಾರರು ಬಿಜಾಪುರಕ್ಕೆ ಬಂದಿದ್ದರು. ಅವನ ಆಸ್ಥಾನದಲ್ಲಿದ್ದ ಸಿದ್ಧಹಸ್ತರಲ್ಲಿ ಷಾಹ್ ಖಲೀಲುಲ್ಲಾಹ್, ಇಸ್ಮತುಲ್ಲಾಹ್, ಮುಸ್ತಾಫಾ ಅಬ್ದುಲ್ ಲತೀಫ್, ಮುಲ್ಲಾಜಹುರಿ ಮತ್ತು ಬಖೀರ್ ಖುರ್ದ್ ಕಾಶೀ ಪ್ರಮುಖರು. ಇವರಲ್ಲಿ ಷಾಹ್ ಖಲೀಲುಲ್ಲಾಹ್ ಮತ್ತು ಇಸ್ಮತುಲ್ಲಾಹ್ ಇಬ್ಬರೂ ಸೇರಿ ಎರಡನೆಯ ಇಬ್ರಾಹಿಂನ ಸುಪ್ರಸಿದ್ಧ. ಕಿತಾಬ್–ಇ–ನೌರಸ್ ಕೃತಿಯ ಪ್ರತಿಗಳನ್ನು ಬರೆದರು. ಅನೇಕ ಕಲಾವಿದರು ಬರೆದ ಈ ಕಾಲದ ಹಸ್ತಪ್ರತಿಗಳು ಇರಾನ್, ಇಂಗ್ಲೆಂಡ್ ಹಾಗೂ ಭಾರತದ ವಿವಿಧ ವಸ್ತುಸಂಗ್ರಹಾಲಯಗಳಲ್ಲಿವೆ. ಷಾಹ್ ಖಲೀಲುಲ್ಲಾಹ್ ನಸ್ತಾಲಿಖ್ ಶೈಲಿಯ ಬರೆವಣಿಗೆಯಲ್ಲಿ ಸಾಧಿಸಿದ್ದ ಮಹತ್ಪರಿಣತಿ ಯನ್ನು ಅವನ ಸಮಕಾಲೀನ ಕವಿ ಮುಲ್ಲಾನ್ ಜುಹುರಿ ತನ್ನ ಸೆಹ್ರ್ ನಸ್ರ್ ಕೃತಿಯಲ್ಲಿ ಪ್ರಶಂಸಿಸಿದ್ದಾನೆ. ಸುಲ್ತಾನ್ ಮಹಮ್ಮದ್ ಆದಿಲ್ ಷಾನ ಆಸ್ಥಾನದಲ್ಲಿದ್ದ ಪ್ರಸಿದ್ಧ ಅಲಂಕರಣ ಲಿಪಿಕಾರರಲ್ಲಿ ಮಿರ್ಜಾ ಮಹಮ್ಮದ್ ಮುಖಿಂ ಮತ್ತು ಕಮಾಲ್ ಖಾನ್ ರುಸ್ತುಮಿಗೆ ಮುಂತಾದ ವರು ಪ್ರಸಿದ್ಧರು. ದೊರೆ ಮಹಮ್ಮದನು ಕಮಾಲ್‌ಖಾನ್ ರುಸ್ತುವಿಗೆ ಖಾತುತ್ ಖಾನ್ (ಅಲಂಕರಣ ಲಿಪಿ ಕಲಾ ಸಾಗರ) ಎಂಬ ಬಿರುದು ನೀಡಿ ಗೌರವಿಸಿದ್ದ. ಎರಡನೆಯ ಅಲಿ ಉತ್ತಮ ಅಲಂಕರಣಲಿಪಿ ಕಲಾಭಿಜ್ಞನು ಉಚ್ಚಮಟ್ಟದ ಕಲಾವಿದನಾಗಿದ್ದ. ಶಾಹ್‌ದವಾಲ್ ಮತ್ತು ಅವನ ಮಗ ಫತೇ ಮಹಮ್ಮದ್ ಅಲಿ ಆಸ್ಥಾನಕಲಾವಿದರಾಗಿದ್ದರು. ಆದಿಲ್ ಶಾಹಿ ವಾಸ್ತು ಶೈಲಿಯನ್ನು ಉತ್ತುಂಗಕ್ಕೇರಿಸಿದ ಎರಡನೆಯ ಇಬ್ರಾಹಿಂನ ಕಾಲದ ವಾಸ್ತುತಜ್ಞ, ಮಲ್ಲಿಕ್‌ಸಂದಲ್‌ನೂ ಶ್ರೇಷ್ಠ ಅಲಂಕರಣ ಲಿಪಿ ಕಲಾವಿದನೇ. ಆದಿಲ್‌ಶಾಹಿ ಕಾಲದ ವಾಸ್ತು, ಸಂಗೀತ ಸಾಹಿತ್ಯ, ಚಿತ್ರಕಲೆಗಳಂತೆಯೇ ಅಲಂಕರಣಲಿಪಿ ಕಲೆಯೂ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದೆ.

ಆದಿಲ್ ಶಾಹಿ ಆಡಳಿತದಲ್ಲಿ ಈ ಕಲೆ ಅಭೂತಪೂರ್ವವಾಗಿ ಬೆಳೆಯಿತು. ಅಪ್ರತಿಮ ಉದಾಹರಣೆಗಳು–ಕಲ್ಲು, ಮರ, ಕೊರೆದ ಗಾರೆ, ಲೋಹದ ಫಿರಂಗಿ, ಅಂಕುಶ ಮುಂತಾದ ಆಯುಧ, ಗೃಹಬಳಕೆಯ ಬೀದರಿ ಮತ್ತಿತರ ಪಾತ್ರೆ, ಕಾಗದದ ಫರ್ಮಾನು, ಸನ್ನದು, ಹಸ್ತಪ್ರತಿಗಳು, ಕೆಲವು ವರ್ಣಚಿತ್ರ ಹಾಗೂ ನಾಣ್ಯಗಳ ಮೇಲೆ ಕಂಡುಬರುತ್ತವೆ. ಬಿಜಾಪುರದ ಗೋಳಗುಮ್ಮಟ ಸಮುಚ್ಚಯದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ವಿವಿಧ ಶೈಲಿಗಳ ಅಲಂಕೃತ ಬರೆಹವಿರುವ ಆಯುಧ, ಪಾತ್ರೆ, ನಾಣ್ಯ, ವರ್ಣಚಿತ್ರ ಮತ್ತು ರೂಮಿ, ಸಾದಿ, ಉಮರ್ ಖಯ್ಯಾಮ್ ಮುಂತಾದ ಪರ್ಷಿಯನ್ ಕವಿಗಳ ಸುಪ್ರಸಿದ್ಧ ದ್ವಿಪದಿ, ಚತುಷ್ಪದಿ ಕವಿತೆಯ ಸಾಲುಗಳಿರುವ ಫಲಕ, ನಾಣ್ಯ, ಮುದ್ರೆ, ಶಿಲಾಲೇಖಗಳ ಅಪೂರ್ವ ಸಂಗ್ರಹವಿದೆ. ಕೆಲವು ಅಮೂಲ್ಯ ಉದಾಹರಣೆಗಳು ಪ್ರದರ್ಶಿತವಾಗಿವೆ. ಕೆಲವೊಮ್ಮೆ ಪಶು, ಪಕ್ಷಿ, ಹೂ ಬಳ್ಳಿ, ಮಾನವಾಕೃತಿಯೊಳಗೆ ಮೂಡುವಂತೆ ಅಕ್ಷರಗಳನ್ನು ಸಂಯೋಜಿಸಿರುತ್ತಾರಾದರೂ ಇಂತಹ ಉದಾಹರಣೆ ಕಡಿಮೆಯೇ.

**ವಾಸ್ತುವಿನಲ್ಲಿ ಆಲಂಕಾರಿಕ ಲಿಪಿಗಳು:** ಜಾಮೀ ಮಸೀದಿಯ ಮುಖ್ಯ ಗುಮ್ಮಟದ ತಳಭಾಗದಲ್ಲಿ ಪಶ್ಚಿಮದ ಕಮಾನಿನ ಮೇಲಿರುವ ಮೂರು ಮರದ ಫಲಕಗಳಲ್ಲಿ ಶ್ರೇಷ್ಠ ಮಟ್ಟದ ನಸ್ತಾಲೀಖ್ ಲಿಪಿಯಲ್ಲಿ ಖುರಾನಿನ ಸೂಕ್ತಿ, ನಾಲ್ವರು ಖಲೀಫರ ಹೆಸರು ಬಂದಿದೆ. ಅಕ್ಷರದ ಪರಿಧಿಯಲ್ಲಿನ ಅನವಶ್ಯಕ ಭಾಗವನ್ನು ಕೆತ್ತಿ ಹಾಕಿ, ಶಾಸನ ಭಾಗವಷ್ಟೇ ಉಬ್ಬು ಚಿತ್ರರೂಪದಲ್ಲಿರುವಂತೆ ಕೊರೆದಿದೆ. ಇಂತಹ ಇನ್ನಿತರ ಉದಾಹರಣೆಗಳು ಗೋಳ ಗುಮ್ಮಟ, ಇಬ್ರಾಹಿಂ ರೋಜಾ ಮತ್ತಿತರ ಕಟ್ಟಡಗಳ ಮರದ ಬಾಗಿಲಿನಲ್ಲಿಯೂ ಕಂಡು ಬರುತ್ತವೆ. ಇದು ಮರದ ಮೇಲೆ ಬರೆದ ಅಲಂಕೃತ ಲಿಪಿ ಶೈಲಿಯ ಉತ್ತಮ ಉದಾಹರಣೆ.

ಈ ಮಸೀದಿಯ ಮಿಹ್ರಾಬ್ ದಕ್ಷಿಣ ಭಾರತದ ಅತ್ಯಂತ ಕಲಾತ್ಮಕ, ಸೂಕ್ಷ್ಮ ಕೆತ್ತನೆ, ವಿವಿಧ ಲಿಪಿ ಶೈಲಿಯ ಪರ್ಷಿಯನ್ ಶಾಸನ ಹಾಗೂ ವರ್ಣ ಚಿತ್ರಗಳಿಂದ ಬಹುಪ್ರಸಿದ್ಧವಾಗಿದೆ. ಹೊಳೆಯುವ ಚಿನ್ನದ ಗಿಲೀಟು ಮಾಡಿದ ಕಮಾನು, ಗೋಪುರ, ಮಿನಾರ್, ಪದಕಸಹಿತ ಸರಪಳಿ, ಪುಷ್ಪ ಕರಂಡಕ, ಧೂಪಾರತಿ ಮುಂತಾದವುಗಳ ಕೆಂಪು, ಕಡುಗಪ್ಪು, ಹಸುರು ಮತ್ತು ನೀಲಿಬಣ್ಣಗಳ ವಿವಿಧ ಛಾಯೆಗಳಲ್ಲಿ ರೂಪಿಸಿದ ವರ್ಣಶಾಸನ ಚಿತ್ರಗಳಿವೆ. ಪವಿತ್ರ ಕುರಾನಿನ ಹಾಗೂ ಇನ್ನಿತರ ಸೂಕ್ತಿಗಳನ್ನು ಹಸುರುಗಲ್ಲಿನ ವಾಸ್ತುಭಾಗಗಳ ಮೇಲೆ ನಸ್ತಾಲೀಖ್ ಲಿಪಿಯ ಉಬ್ಬು ರೂಪದಲ್ಲಿ ಬಿಡಿಸಿ ಅವು ಎದ್ದು ಕಾಣುವಂತೆ ಸ್ವರ್ಣಲೇಪ ಮಾಡಿದೆ. ಜೀವನದಲ್ಲಿ ಆಸಕ್ತಿ ಬೇಡ, ಅದು ತೀರ ಕ್ಷಣಿಕವಾದದ್ದು, ಅಸ್ಥಿರವಾದ ಜಗತ್ತಿನಲ್ಲಿ ಶಾಂತಿ ಎಂಬುದಿಲ್ಲ, ಇಂದ್ರಿಯಗಳಿಗೆ ಮಾತ್ರವೇ ಈ ಪ್ರಪಂಚ ಬಲು ಸೊಗಸು, (ದೇವರ) ಕಾಣಿಕೆಗಳಲ್ಲೆಲ್ಲ ಅಮೂಲ್ಯವಾದದ್ದು ಈ ಜೀವನ, ಆದರಿದು ನಶ್ವರ ಇಂತಹ ಹಲವಾರು ಸೂಕ್ತಿಗಳಿವೆ. ಈ ಲಿಪಿ ಅಲಂಕರಣಗಳು ಸಹಜವಾಗಿದ್ದು ಪವಿತ್ರ ಕುರಾನಿನ ಸೂಕ್ತಿಗಳ ಸೊಬಗು, ಸಂದೇಶಗಳೆರಡನ್ನೂ ಭಕ್ತರ ಮನಮುಟ್ಟುವಂತೆ ಸಂವಹಿಸುವ ಸಾಮರ್ಥ್ಯವನ್ನು ಹೊಂದಿವೆ. ಮಹಮ್ಮದ್ ಆದಿಲ್‌ಷಾನ ಕಾಲದಲ್ಲಿ ದಾಬೂಲ್‌ನಿಂದ ಬಂದ ಕಲಾವಿದ ಮಲ್ಲಿಕ್ ಯಾಕೂತ್ ಈ ಮಿಹ್ರಾಬಿನ ಅಲಂಕರಣಗಳನ್ನು ಮಾಡಿದ.

ವಾಸ್ತು, ಅಲಂಕರಣ ಮುಂತಾದ ಅಂಶಗಳಂತೆಯೇ ಅಲಂಕರಣ, ಲಿಪಿ ಶೈಲಿಯ ದೃಷ್ಟಿಯಿಂದಲೂ ಇಬ್ರಾಹಿಮ್ ರೋಜಾ, ಆದಿಲ್ ಶಾಹಿ ಕಲೆಯ ಸರ್ವೋತ್ಕೃಷ್ಟ ಮಾದರಿ, ಇಡೀ ಗೋಡೆ, ಕಮಾನುಗಳ ಪರಿಧಿಯಲ್ಲಿನ ಆಯತಾಕಾರದ ಚೌಕಟ್ಟು, ಕಮಾನು ಮೂಲೆ, ಬಾಗಿಲುವಾಡ, ಮರದ ಬಾಗಿಲುಗಳ ಮೇಲೆ ಉಬ್ಬು ಶಿಲ್ಪದ ರೂಪದಲ್ಲಿರುವ ಶಾಸನಗಳ ಜೊತೆಗೆ ಇಲ್ಲಿನ ಕಮಾನಾಕಾರದ ಕಿಟಕಿಯ ಮೇಲಿನ, ಕಲ್ಲಿನಲ್ಲಿ ಪೂರ್ತಿ ಕೊರೆದ ಜಾಲಂಧ್ರಗಳಲ್ಲಿ ಅಸಂಖ್ಯಾತ ನಸ್ತಾಲಿಖ್ ಶಾಸನಗಳಿವೆ. ವಸ್ತುವಿನ ದೃಷ್ಟಿಯಿಂದ ಸ್ವರ್ಗದ ಬಗೆಗಿನ ಕುರಾನಿನ ಆಯ್ದ ಸೂಕ್ತಿಗಳು ಹೆಚ್ಚು ಸಂಖ್ಯೆಯಲ್ಲಿವೆ. ಕಟ್ಟಡದ ನಿರ್ಮಾಣ, ಅದರ ವೈಭವ ಸೌಂದರ್ಯ ವರ್ಣನೆ, ಅಲ್ಲಿ ಸಮಾಧಿಸ್ಥರಾದವರ ಬಗೆಗಿನ ಪರ್ಷಿಯನ್ ದ್ವಿಪದಿ ಮತ್ತು ಕಾಲ ಲೇಖಗಳು ಈ ಕಟ್ಟಡಕ್ಕಾಗಿಯೇ ವಿಶೇಷವಾಗಿ ಬರೆದವು. ಗೋಡೆಯ ಸಮತಲದ ಮೇಲೆ ನವಿರಾದ, ಅಷ್ಟು ಆಳವಿಲ್ಲದಂತೆ ತಿದ್ದಿದ ಸುರುಳಿಗಳ ಹೆಣಿಗೆಯಂತಿರುವ ಶಾಸನಗಳ ಪರಿಧಿಯಲ್ಲಿ ಆಕಾಶ ನೀಲಿ ವರ್ಣವನ್ನು ತುಂಬಿ ಅದರ ಹಿನ್ನೆಲೆಯಲ್ಲಿ ಮೂಡಿಸಿರುವ ಅಕ್ಷರಗಳಿಗೆ ಬಂಗಾರದ ಲೇಪನ ಕೊಟ್ಟಿದ್ದರು. ಇಂತಹ ವರ್ಣಸಂಯೋಜನೆ ಬಹುಶಃ ಕುರಾನಿನ ಸೂಕ್ತಿಗಳು ಆಕಾಶದಲ್ಲಿ ಮೋಡಗಳ ನಡುವಣ ಮಿಂಚಿನಂತೆ, ಪ್ರವಾದಿ ಮಹಮ್ಮದರ ಒಳಗಣ್ಣುಗಳಿಗೆ ಗೋಚರವಾದ್ದನ್ನು ಸಂಕೇತಿಸುತ್ತದೇನೋ! ಅಂದಿನ ದಿನಗಳಲ್ಲಿ ಇದೊಂದು ನಯನ ಮನೋಹರ ದೃಶ್ಯವಾಗಿರಬೇಕು. ಹಳೆಯದಾದ ಈ ವರ್ಣಲೇಪನ ಈಗ ಬಹಳಷ್ಟು ಮಾಸಿದೆ. ಪೂರ್ತಿ ಕೊರೆದ ಜಾಲಂಧ್ರಗಳ ಸೊಬಗಂತೂ ಅನ್ಯಾದೃಶ. ಈ ಶಾಸನಾಕ್ಷರಗಳೂ ಚಿನ್ನದ ಲೇಪನಪಡೆದಿದ್ದವು. ಅಲ್ಲದೆ ಈ ಜಾಲಂಧ್ರದ ಮೂಲಕ ಒಳಗೆ ಬೀಳುವ ಸೂರ್ಯನ ಬೆಳಕಿನಲ್ಲಿಯೂ ಈ ಅಕ್ಷರಗಳು ಮೂಡಿ, ಶಾಸನಾಕ್ಷರ ಆಡುವ ಬೆಳಕು ನೆರಳಿನಾಟ ಮೋಹಕ ಅನುಭವ ನೀಡುತ್ತದೆ.

ಇಂತಹ ಶಾಸನಗಳಲ್ಲಿ ದಕ್ಷಿಣಕ್ಕಿರುವ ಬಾಗಿಲಿನ ಮೇಲಿನ ತೆಳುಉಬ್ಬು ಬರೆಹ, ತಾಜ್‌ಸುಲ್ತಾನ ತನ್ನ ಪತಿ ಇಬ್ರಾಹಿಂ ಗತಿಸಿದ 8 ವರ್ಷಗಳ ಅನಂತರ 1634ರಲ್ಲಿ ಮೃತಳಾದಂತೆ ದಾಖಲಿಸಿದೆ. ಅಲ್ಲದೆ ಇದರ ವಾಸ್ತು ಶಿಲ್ಪಿ ಮಲ್ಲಿಕ್ ಸಂದಲ್ ಮತ್ತು ಈ ಕಟ್ಟಡದ ನಿರ್ಮಾಣಕ್ಕೆ ಆದ ವೆಚ್ಚ ಆಕಾಶದಷ್ಟೆತ್ತರ, ಅಗಣಿತವೆಂದೂ ತಿಳಿಸುತ್ತದೆ. ಇಲ್ಲಿಯ ತೋಟದ ಸೊಬಗು ಸ್ವರ್ಗದ ನಂದನವನಕ್ಕೆ ಸ್ಫೂರ್ತಿಯಾಯಿತೆಂದೂ, ಭೂಮಿಗೆ ಭೂಷಣಪ್ರಾಯವಾಗಿತ್ತೆಂದೂ ಬರೆದಿದೆ. ಇದರ ನಿರ್ಮಾಣ ಕಾಲದ ಬಗೆಗಿನ ಸ್ವರ್ಗದಿಂದಿಳಿದ ದೇವದೂತನೊಬ್ಬ ಉಸುರಿದಂತೆ ಈ ಮನೋಲ್ಲಾಸಕರವಾದ ಭವನ ತಾಜ್‌ಸುಲ್ತಾನಾಳ ಸ್ಮಾರಕ. ಈ ಕಾಲಲೇಖ ವಾಕ್ಯದ ಅಕ್ಷರಗಳನ್ನು ಸಂಖ್ಯೆಗೆ ಪರಿವರ್ತಿಸಿದಾಗ ಬರುವ ಕಾಲ ಹಿ.ಶ. 1626.

ಇಸ್ಲಾಂ ಸಂಸ್ಕೃತಿಯಲ್ಲಿ ಅಲಂಕೃತ ಶೈಲಿಯ ಬರೆಹವನ್ನು ಎರಡು ಮುಖ್ಯ ಉದ್ದೇಶದಿಂದ ಬಳಸಿರುವುದು ಕಂಡುಬರುತ್ತದೆ. ದೈವಿಕ ಅನುಭೂತಿಯ ಸಂದೇಶಗಳ ಪ್ರಸರಣ ಸಂವಹನ ಮತ್ತು ವಾಸ್ತುವಿನ ಅಲಂಕರಣ. ಬಿಜಾಪುರದ ಉಳಿದೆಲ್ಲ ಕಟ್ಟಡಗಳಿಗಿಂತ ಇಬ್ರಾಹಿಂ ರೋಜಾದಲ್ಲಿ ಈ ಎರಡು ತತ್ತ್ವ, ಉದ್ದೇಶಗಳನ್ನು ಅತ್ಯುತ್ತಮವಾಗಿ ಸಾಧಿಸಿದೆ. ಈ ಬರೆಹಗಳು ಕಟ್ಟಡದ ನಿರ್ಮಾಣ ಸಮಾಧಿಯಾಗಿರುವ ವ್ಯಕ್ತಿ ಮುಂತಾದ ವಿವರ ನೀಡುವುದರ ಜೊತೆಗೆ ನಿಷ್ಠಾವಂತರಿಗೆ ಕಾದಿರುವ ಸ್ವರ್ಗದ ಸುಖ ಸಾಂತ್ವನದ ಬಗೆಗೂ ಆಶ್ವಾಸನೆ ನೀಡುತ್ತವೆ. ಬರೆಹಗಳು ಕಟ್ಟಡದ ಪ್ರತಿ ಅಂಗುಲವನ್ನು ಆವರಿಸಿರುವುದರಿಂದ ಇಡೀ ಕಟ್ಟಡದ ಒಟ್ಟಾರೆ ಸೌಂದರ್ಯ ಇಮ್ಮಡಿಗೊಂಡಿದೆ. ಅಲ್ಲದೆ ವಾಸ್ತು, ಅಲಂಕರಣ ವಿನ್ಯಾಸ, ಸಂದೇಶ ಸಂವಹನ ಕ್ರಿಯೆಗಳೆಲ್ಲ ಒಂದಕ್ಕೊಂದು ಪೂರಕವಾಗಿದ್ದು ಉದ್ದೇಶ ಸಾಧನೆಗೆ ಸಹಾಯಕ

ವಾಗಿವೆ. ಇದಕ್ಕಾಗಿ ನಸ್ಖ್ ನಸ್ತಾಲೀಖ್ ಹಾಗೂ ರಿಖಾ ಶೈಲಿಯ ಲಿಪಿಗಳಲ್ಲಿ, ತೆಳು ಉಬ್ಬು, ಪೂರ್ತಿ ದುಂಡಾಗಿ ಕೊರೆಯುವ ವಿಧಾನಗಳನ್ನು ಅವಶ್ಯವಿದ್ದೆಡೆ ಅರ್ಥಪೂರ್ಣವಾಗಿ ಬಳಸಿದೆ. ಜೊತೆಗೆ ಸೂಕ್ಷ್ಮ ವರ್ಣ ಸಂಯೋಜನೆಯಿಂದ ಎಲ್ಲ ವಿವರಗಳನ್ನು ಎತ್ತಿ ಕಾಣಿಸುವ ಪ್ರಯತ್ನಮಾಡಿದೆ.

**ವರ್ಣಚಿತ್ರಗಳಲ್ಲಿ ಆಲಂಕಾರಿಕ ಲಿಪಿ:** ಬಿಜಾಪುರದ ವರ್ಣಚಿತ್ರಕಲೆಯಲ್ಲಿ ಇದುವರೆಗೆ ಒಟ್ಟು ಆರು ಯೋಗಿನಿಯರ ಚಿತ್ರಗಳು ಬೆಳಕಿಗೆ ಬಂದಿದ್ದು, ಅದರಲ್ಲಿ ಲಂಡನ್ನಿನ ಬ್ರಿಟಿಷ್ ಮ್ಯೂಜಿಯಂನಲ್ಲಿರುವ, 1590ರ ಕಾಲಮಾನದ ಯೋಗಿನೀ ವರ್ಣಚಿತ್ರ ಹಲವು ಕಾರಣದಿಂದಾಗಿ ಬಹು ಪ್ರಸಿದ್ಧವಾದುದು. ಈ ಚಿತ್ರದ ಪರಿಧಿಯಲ್ಲಿನ ಆಯತಾಕಾರದ ಎರಡು ಚೌಕಟ್ಟುಗಳಲ್ಲಿ ಉತ್ತಮ ರೀತಿಯ ನಸ್ತಾಲೀಖ್ ಶೈಲಿಯ ಬರೆಹಗಳಿವೆ. ಇವು ಸೂಫಿಪಂಥದ ದೈವಿಕ ಅನುಭೂತಿಯ ವಿರಹ, ಮಿಲನಗಳನ್ನು ಕುರಿತ ನಿಗೂಢ ಸಂಕೇತಾರ್ಥದ ಪ್ರತೀಕಗಳಿಂದ ತುಂಬಿದ ಕಾವ್ಯಮಯ ದ್ವಿಪದಿಯ ಸಾಲುಗಳು. ಕ್ಷಣಭಂಗುರತೆಯನ್ನು ಸಂಕೇತಿಸುವ ಮಾಯಾಸ್ವರೂಪದ ಮೋಡಗಳಲ್ಲಿ ಈ ಕವಿತೆಗಳನ್ನು ಬರೆಯಲಾಗಿದೆ.

ಎರಡನೆಯ ಇಬ್ರಾಹಿಂ ಆದಿಲ್‌ಷಾನ ಅನೇಕ ವರ್ಣ ಭಾವಚಿತ್ರಗಳಲ್ಲಿ ಜುಹೂರಿ ರಚಿಸಿದ ಎದೆಮಟ್ಟದ ಭಾವಚಿತ್ರ ಪ್ರಸಿದ್ಧವಾದುದ್ದು, ಇದರಲ್ಲಿ ಸುಲ್ತಾನನು ಬಿಜಾಪುರ ಶೈಲಿಯ ವಿಶೇಷ ರೀತಿಯ ರುಮಾಲು ಧರಿಸಿದ್ದಾನೆ. ಇದರ ಅಂಚಿನಲ್ಲಿ ಉತ್ತಮ ನಸ್ತಾಲೀಖ್ ಲಿಪಿಯಲ್ಲಿರುವ ಪರ್ಷಿಯನ್ ಬರೆಹ ಕವಿತೆಯ ಸಾಲುಗಳ ರೂಪದ್ದು. ದೊರೆ ಇಬ್ರಾಹಿಂನನ್ನು ಖುರಾನಿನಲ್ಲಿ ಹೆಸರಿಸಲಾದ ಸಂತ ಇಬ್ರಾಹಿಂನ ಬಿರುದಾದ ಖಲೀಲ್ (ದೇವಾನಾಂಪ್ರಿಯ) ಎಂದು ಕರೆದಿದೆ. ಜುಹೂರಿಯೇ ಬರೆದ ಸೇಹ್ರ ನಸ್ರ್ ಕೃತಿಯಲ್ಲಿರುವ, ಇಬ್ರಾಹಿಂನ ಪ್ರಶಂಸೆಯ ರೂಪದ ಕವಿತೆಯ ಹೆಸರೂ ಖಾನ್–ಇ–ಖಲೀಲ್ (ದೇವಮಿತ್ರನ ಮೇಜಿನ ಮೇಲೆ).

ಸೂಫಿ ಅನುಭೂತಿಯ ಚಿತ್ರಣ–ಮಹಮ್ಮದ್, ಅಲ್ಲಾ ಮತ್ತು ಅಲೀ ಎಂಬ ಮೂರು ಹೆಸರುಗಳನ್ನು ಎರಡೆರಡು ಸಲ ಬಳಸಿ ರೂಪಿಸಿದ ಮನುಷ್ಯರೂಪದ ಚಿತ್ರಣ, ನಸ್ತಾಲೀಖ್ ಶೈಲಿಯ ಬರೆಹ, ಭಯಭೀತಿಗಳನ್ನು ದೂರಮಾಡುವ ಉದ್ದೇಶದಿಂದ ಇಂತಹ ಚಿತ್ರಣವನ್ನು ಸೂಫೀ ಅನುಯಾಯಿಗಳು ತಾಮ್ರದ ತಗಡಿನಲ್ಲಿ ಬರೆಯಿಸಿ ತಾಯತದಂತೆ (ಬಾಲರಕ್ಷಾ) ಉಪಯೋಗಿಸುತ್ತಿದ್ದರು. ಈ ಆಲಂಕಾರಿಕ ಲಿಪಿ ಶೈಲಿಯನ್ನು ಖತ್–ಇ–ಮುಥನ್ನಾ ಎಂದೂ ಕರೆಯಲಾಗುತ್ತದೆ. ಇದರ ಇನ್ನೊಂದು ಹೆಸರು ಐನಾಲಿ–ಯಾಜಿ (ಪ್ರತಿಬಿಂಬಿತ ಶೈಲಿ). ಈ ಚಿತ್ರಣವೂ ಮನುಷ್ಯ ರೂಪದಲ್ಲಿರುವುದರಿಂದ ಇದು ರೇಸಿಮ್ ಯಾಜಿ ಪ್ರಕಾರಕ್ಕೂ ಉದಾಹರಣೆಯಾಗುತ್ತದೆ. ಇದನ್ನು ಶೈಲೀಯವಾಗಿ ಬೇರೆ ಎಂದು ಪರಿಗಣಿಸುವುದಿಲ್ಲ. ಯಾವುದೇ ಶೈಲಿಯ ಲಿಪಿಯನ್ನೂ ಹೀಗೆ ಸಂಯೋಜಿಸಬಹುದಾದರೂ ಸಾಮಾನ್ಯವಾಗಿ ಸುಲುಸ್ ಮತ್ತು ಕೂಫೀ ಶೈಲಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಭಾರತದ ಸಂಸ್ಕೃತ ಸಾಹಿತ್ಯ ಮತ್ತು ಶಾಸನ ಪ್ರಪಂಚದಲ್ಲಿ ಚಿತ್ರಕಾವ್ಯ / ಚಿತ್ರಶಾಸನ ಪ್ರಕಾರವಿದ್ದಂತೆ ಇದೂ ಅಷ್ಟೇನೂ ಉತ್ತಮ ಮಟ್ಟದ ಕಲೆಯಲ್ಲವೆಂದು ಅವಗಣನೆಗೊಳಗಾಗಿತ್ತು. ಆದರೂ ಸಾಕಷ್ಟು ಮಾದರಿಗಳು ದೊರೆಯುತ್ತವೆ.

**ಹಸ್ತಪ್ರತಿಗಳು:** ಆದಿಲ್‌ಶಾಹಿ ಅರಸರು ಸಾಹಿತ್ಯಪ್ರೇಮಿಗಳಾಗಿದ್ದು ಸಾಹಿತ್ಯಕ ಚಟುವಟಿಕೆಗಳನ್ನು ಉದಾರವಾಗಿ ಪ್ರೋತ್ಸಾಹಿಸಿದರು. ಎರಡನೆಯ ಇಬ್ರಾಹಿಂ, ಮಹಮ್ಮದ್ ಮೊದಲಾದ ರಾಜರು ಸ್ವತಃ ಉತ್ತಮ ವಿದ್ವಾಂಸರೆಂದು ಪ್ರಸಿದ್ಧರಾಗಿದ್ದಾರೆ. ಅವರ ಸಾಹಿತ್ಯಾಸಕ್ತಿಯ ಫಲವಾಗಿ ಆ ಕಾಲದ ಶಾಸ್ತ್ರ ಹಾಗೂ ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ರಚಿತವಾದ ಅನೇಕ ಕೃತಿಗಳ ಹಸ್ತಪ್ರತಿಗಳು ದೊರೆತಿವೆ. ಇವು ದೊರೆಗಳ ಆಸ್ಥಾನದಲ್ಲಿದ್ದ ಇತಿಹಾಸಕಾರರು, ಶ್ರೇಷ್ಠಕವಿಗಳು, ಸೂಫೀಸಂತರು ಹಾಗೂ ವಿವಿಧ ವಿಷಯಗಳ ವಿದ್ವಾಂಸರು ರಚಿಸಿದ ಕೃತಿಗಳು ಪರ್ಷಿಯನ್ ಮತ್ತು ಅರಬ್ಬೀ ಭಾಷೆಗಳಲ್ಲಿ ವಿವಿಧ ಸುಂದರ ಲಿಪಿಗಳಲ್ಲಿ ಕಾಗದದ ಮೇಲೆ ಕೈಯಲ್ಲಿ ಬರೆದವು. ವಿಷಯದ ದೃಷ್ಟಿಯಿಂದ ಈ ಹಸ್ತಪ್ರತಿಗಳನ್ನು ಹೀಗೆ ವರ್ಗೀಕರಿಸಬಹುದು:

1)ಕುರಾನ್ ಕುರಿತ ವ್ಯಾಖ್ಯಾನ, ಟೀಕೆ, ವಿವರಣೆಗಳು; 2) ಇಸ್ಲಾಂ ಧರ್ಮದ ಇತಿಹಾಸ, ಪ್ರವಾದಿ ಮಹಮ್ಮದರನ್ನು ಕುರಿತ ಪ್ರಾರ್ಥನೆ ಹಾಗೂ ಆಶೀರ್ವಾದಗಳು; 3) ಮುಸ್ಲಿಂ ಧಾರ್ಮಿಕ ನ್ಯಾಯಸಂಹಿತೆ, ತರ್ಕಶಾಸ್ತ್ರ, ಧರ್ಮ; 4) ಸೂಫೀಸಂತರ ಜೀವನ ಚರಿತ್ರೆ, ಸೂಫೀಪಂಥದ ಮೌಲ್ಯ, ನೀತಿ ಹಾಗೂ ಅನುಭಾವದ ರಚನೆಗಳು: 5) ಆದಿಲ್‌ಶಾಹಿ ರಾಜವಂಶದ ಇತಿಹಾಸ; 6) ಪತ್ರಸಾಹಿತ್ಯ (ಶಾಹಜಹಾನ್ ಹಾಗೂ ರಾಜಪ್ರಮುಖರೊಡನೆ ನಡೆದ ಪತ್ರವ್ಯವಹಾರಗಳ ಸಂಗ್ರಹ); 7) ವೈದ್ಯಕೀಯ, ಪ್ರವಾಸ, ಧನುರ್ವಿದ್ಯೆ ಮತ್ತು ಕೋಶಗಳು; 8) ರಮ್ಯಕಾವ್ಯ, ಕವನ ಹಾಗೂ ಕಥೆಗಳ ಸಂಗ್ರಹ (ವಿಕ್ರಮಾದಿತ್ಯ–ಬೇತಾಳ ಕಥೆಗಳ ಪರ್ಷಿಯನ್ ಅನುವಾದ); 9) ಧಾರ್ಮಿಕ ಕ್ರಿಯೆ ಹಾಗೂ ಶವಸಂಸ್ಕಾರ ಪದ್ಧತಿಯ ತತ್ತ್ವ ಮತ್ತು ಆಚರಣೆಗಳಿಗೆ ಸಂಬಂಧಪಟ್ಟವು. 13–18ನೆಯ ಶತಮಾನದವರೆಗಿನ ಕಾಲಾವಧಿಯಲ್ಲಿ ಈ ಗ್ರಂಥಗಳನ್ನು ಪ್ರತಿಮಾಡಲಾಯಿತು.

ಅತ್ಯಂತ ಆಲಂಕೃತ ನಸ್ತಾಲೀಖ್, ನಸ್ಖ್ ಮತ್ತು ರಿಬಾ ಶೈಲಿಗಳು ಹಸ್ತಪ್ರತಿಗಳಲ್ಲಿ ಹೆಚ್ಚಾಗಿ ಬಳಸಲಾಗಿದೆ. ಕೆಲವು ಶ್ರೇಷ್ಠ ಲಿಪಿಕಾರರು ಹಸ್ತಪ್ರತಿಯ ಒಂದೇ ಪುಟದಲ್ಲಿ ಒಂದಕ್ಕಿಂತ ಹೆಚ್ಚು ಶೈಲಿಗಳನ್ನು ಬಳಸಿ ತಮ್ಮ ಪರಿಣತಿ ಪ್ರದರ್ಶಿಸಿದ್ದಾರೆ. ಮುಖ್ಯ ಕೃತಿಗಳ ಮುಖಪುಟ (ಉನ್ವಾನ್) ಹಾಗೂ ಕೊನೆಯ ಪುಟಗಳಂತೂ ಅತ್ಯಂತ ಕಲಾತ್ಮಕವಾಗಿ ಸಿಂಗರಿಸಲಾಗಿವೆ. ಕುರಾನಿನ ಕೆಲವು ಮುಖ್ಯ ದ್ವಿಲಿಪಿ ಶೈಲಿಯ ಹಸ್ತಪ್ರತಿಯ ಪ್ರತಿ ಪುಟದಲ್ಲಿ ಬರೆಹವಿರುವ ಸ್ಥಳದ ಮೊದಲ, ಕಡೆಯ ಹಾಗೂ ನಟ್ಟನಡುವಣ ಸಾಲನ್ನು ಮೋಹಕ ಶ್ರೇಷ್ಠ ಮಾದರಿಯ ನಸ್ತಾಲೀಖ್‌ನಲ್ಲಿ ಮತ್ತು ನಡುವೆ ಐದೈದು ಸಾಲುಗಳನ್ನು ಶಿಕಸ್ತಾದಲ್ಲಿ ಬರೆದು ಆಕರ್ಷಕ ವಾಗಿಸಿದೆ.

**ಶಿಲಾಶಾಸನಗಳು: ಪರ್ಷಿಯನ್ ಶಾಸನ:** ಆಸಾರ್‌ಮಹಲ್ ಪರಿಸರದಲ್ಲಿ ದೊರೆತ ಷೆಲ್ಲಿಗಿರಿಶಿಲೆಯ ಆಲಂಕೃತ ಫಲಕದಲ್ಲಿ ಖುರಾನಿನ ಸೂಕ್ತಿಯೊಂದನ್ನು ಕೆತ್ತಲಾಗಿದೆ. ತೆಳು ಉಬ್ಬುಶಿಲ್ಪ ರೂಪದಲ್ಲಿರುವ ಹೂ ಬಳ್ಳಿಗಳ ಮನೋಹರ ಹಿನ್ನೆಲೆಯಲ್ಲಿ ಈ ಸೂಕ್ತಿಯನ್ನು ಅಳವಡಿಸಿದೆ. ಹಿಶ 984 (1672)ರಲ್ಲಿ ಬರೆಯಲಾದ ಈ ಶಾಸನದ ಸಾರಾಂಶ ಮೊದಲ ದಿನದಿಂದಲೂ ಈ ಮಸೀದಿಗೆ ದೈವನಿಷ್ಠೆ / ಧರ್ಮಶ್ರದ್ಧೆಯೇ ಆಧಾರವಾಗಿದೆ ಎಂದು. ಈ ಬರೆಹ ಅಲಂಕರಣ ಲಿಪಿ ಶೈಲಿಯ ಒಂದು ವಿಶಿಷ್ಟ ಪ್ರಕಾರವಾದ ಖತ್–ಇ–ಗುಲ್ಜಾರ್ (ಉದ್ಯಾನಕಾವ್ಯ) ಅತ್ಯುತ್ತಮ ಉದಾಹರಣೆಯಾಗಿದೆ. (ಎಂ.ಎ.ಎ.)

**ಆದಿವಾಸಿಗಳ ಹೋರಾಟ (ಭಾರತ):** ತಮ್ಮ ನೆಲೆಯ ಉಳಿವಿಗಾಗಿ ಮತ್ತು ಶೋಷಣೆಯ ವಿರುದ್ಧವಾಗಿ ಬ್ರಿಟಿಷ್‌ರ, ಜಮೀನ್ದಾರರ ವಿರುದ್ಧ ಭಾರತದ ಆದಿವಾಸಿಗಳ ಹೋರಾಟ. ಸು. 1800–1924. ಊಳಿಗಮಾನ್ಯ ಪದ್ಧತಿಯ ವಿರುದ್ಧ ರೈತರಂತೆ ಆದಿವಾಸಿಗಳೂ ಶಕ್ತಿಮೀರಿ ಹೋರಾಟ ನಡೆಸಿದ್ದಾರೆ. ಈ ಹೋರಾಟಗಳು ಆದಿವಾಸಿಗಳ ಕುರಿತ ಬ್ರಿಟಿಷರ ಆಲೋಚನೆಯ ದಿಕ್ಕನ್ನೇ ಬದಲಿಸಿದವು. ಬೇರೆ ಯಾವುದೇ ಸಮುದಾಯಗಳಿಗಿಂತಲೂ ಹೆಚ್ಚು ಆಕ್ರೋಶದಿಂದ ಆದಿವಾಸಿಗಳು ಹೋರಾಡಿದರು. ಆದಿವಾಸಿಗಳನ್ನು ಕಾಡಿನಿಂದ ಹೊರಗೆ ಅಟ್ಟುವಲ್ಲಿ ಬ್ರಿಟಿಷರ ಪಾತ್ರ ದೊಡ್ಡದು. ಆದರೆ ಬ್ರಿಟಿಷರ ಜೊತೆಗೆ ಜಮೀನ್ದಾರರು, ಭೂಕಬಳಿಕೆದಾರರು, ಲೇವಾದೇವಿದಾರರು ಮತ್ತು ಆದಿವಾಸಿಗಳನ್ನು ಸದಾ ದ್ವೇಷಿಸುತ್ತಿದ್ದ ದಲ್ಲಾಳಿಗಳ ಪಾತ್ರವೂ ಇದೆ.

ಬಂಗಾಲ, ಬಿಹಾರ ಮತ್ತು ಒರಿಸ್ಸ ಗಡಿಭಾಗದ ಸಂತಾಲ ಪ್ರದೇಶದ ಆದಿವಾಸಿ ರೈತರು ಒಟ್ಟಾಗಿಯೇ ಇವರೆಲ್ಲರ ವಿರುದ್ಧ ಹೋರಾಡಿದರು. ಶಾಶ್ವತ ಜಮೀನ್ದಾರಿ ಪದ್ಧತಿ ಜಾರಿಯಾದ ಆರಂಭಕಾಲದಿಂದಲೂ ಆದಿವಾಸಿಗಳ ಜಮೀನುಗಳು ಅನ್ಯಾಕ್ರಮಣಕ್ಕೆ ಒಳಗಾದವು. ಭೂ ಅತಿಕ್ರಮಣ ಮತ್ತು ಶೋಷಣೆ ನಿರಂತರವಾಗಿ ನಡೆಯಿತು (1800–55). ಆದಿವಾಸಿಗಳಿಗೆ ಕೃಷಿ ನಡೆಸಲು ನೆಲವೇ ಉಳಿಯಲಿಲ್ಲ. ಇದೆಲ್ಲ ಕಾರಣದಿಂದ ಅವರು ಒಟ್ಟಾಗಿ ಹೋರಾಟಕ್ಕಿಳಿದರು. ಈ ಹೋರಾಟವೇ 1855ರ ಸಂತಾಲ ಹೋರಾಟ ಎಂದು ಹೆಸರಾಯಿತು.

ಧರ್ಮರಾಜ್ಯವನ್ನು ಸ್ಥಾಪಿಸುವ ಕಾರಣದಿಂದ ಗುಜರಾತಿನ ನಿಕ್ಷ ಕಾಡಿನ ಆದಿವಾಸಿಗಳು 1886ರಲ್ಲಿ ಪೊಲೀಸ್ ಠಾಣೆಗಳಿಗೆ ಮುತ್ತಿಗೆ ಹಾಕಿದರು. ಬ್ರಿಟಿಷರ ಜೊತೆ ಕೈ ಜೋಡಿಸಿದ್ದಾನೆ ಎಂದು ಆರೋಪಿಸಿ ಗೋದಾವರಿ ತೀರದ ಕೊಯಾ ಮತ್ತು ಕೊಂಡದೊರ ಬೆಟ್ಟಗಳ ಆದಿವಾಸಿಗಳು ತಮ್ಮ ಯಜಮಾನನ ವಿರುದ್ಧ ಪ್ರತಿಭಟನೆಗೆ ನಿಂತರು. 1840, 1845, 1858, 1879ರಲ್ಲೂ ಈ ಪ್ರತಿಭಟನೆ ಮುಂದುವರೆಯಿತು. ಆದರೆ ಕೊನೆಯ ಪ್ರತಿಭಟನೆ ಮಾತ್ರ ಪ್ರಮುಖವಾಯಿತು. 1899–1900ರ ಅವಧಿಯಲ್ಲಿ ನಡೆದ ಈ ಹೋರಾಟ ಬಿರ್ಸಾಮುಂಡಾ ಹೋರಾಟ ಎಂದೇ ಪ್ರಸಿದ್ಧ.

ಮುಂಡಾಗಳು ಖುಂಟ್‌ಕಟ್ಟಿ ಎಂಬ ತಮ್ಮದೇ ಸಾಂಪ್ರದಾಯಿಕ ಆದಿವಾಸಿ ಕೃಷಿ ಪದ್ಧತಿಯನ್ನು ಹೊಂದಿದ್ದರು. ಈ ವ್ಯವಸ್ಥೆಯಲ್ಲಿ ಭೂಮಿಯನ್ನು ಉತ್ತರ ಬೆಟ್ಟಗಳಿಂದ ಬಂದ ಜೋಡಿದಾರರು, ವ್ಯಾಪಾರಿಗಳು ಮತ್ತು ಲೇವಾದೇವಿದಾರರು ಹಂಚಿಕೊಳ್ಳುತ್ತಿದ್ದರು. ಆದಿವಾಸಿ ಮುಖ್ಯಸ್ಥರಾದ ಸರ್ದಾರರು ಕೆಲವು ಕ್ರೈಸ್ತ ಮಿಶನರಿಗಳ ಜೊತೆ ಸೇರಿ ಈ ಭೂಮಾಲೀಕರ ವಿರುದ್ಧ ಹೋರಾಡಲು ಯತ್ನಿಸಿದರು. ಆದರೆ ಅದು ಯಶಸ್ವಿಯಾಗಲಿಲ್ಲ. ಭೂಮಾಲಿಕರು ಇಂಗ್ಲಿಷ್ ಲಾಯರುಗಳ ಸಹಾಯದಿಂದ ಅದನ್ನು ಮಟ್ಟಹಾಕಿ, ಬಲವಂತದ ಕೆಲಸ ಮಾಡಿಸಿಕೊಂಡರು. ಆದರೆ ಅದೃಷ್ಟವಶಾತ್ ಆದಿವಾಸಿಗಳಲ್ಲೇ ಬಿರ್ಸಾ ಎಂಬ ನಾಯಕ ಮುಂದಾಳುವಾದ. ಬಿರ್ಸಾ ಕೊಂಚ ಇಂಗ್ಲಿಷ್ ಕಲಿತಿದ್ದ. ಹಳ್ಳಿಗಳ ತ್ಯಾಜ್ಯಭೂಮಿಯನ್ನು ವಶಪಡಿಸಿಕೊಂಡ ಅರಣ್ಯ ಇಲಾಖೆ ವಿರುದ್ಧ ಚಳವಳಿಯಲ್ಲಿ ಭಾಗವಹಿಸಿದ್ದ. ತನಗೆ ದೇವರು ಪ್ರತ್ಯಕ್ಷವಾಗಿರುವುದಾಗಿಯೂ ತಾನೇ ಎಲ್ಲರ ರಕ್ಷಕನೆಂದೂ ಕರೆದುಕೊಂಡ. ಸಹಜವಾಗಿಯೇ ಇದರಿಂದ ರಾಜಕೀಯ ಮತ್ತು ಆರ್ಥಿಕ ಹೋರಾಟಕ್ಕೆ ಧಾರ್ಮಿಕ ಆಯಾಮ ಒದಗಿತು. 1899ರಲ್ಲಿ ಬಿರ್ಸಾ ಜೈಲಿಗೆ ಹೋಗಬೇಕಾದ ಪರಿಸ್ಥಿತಿಯಲ್ಲಿ ಆದಿವಾಸಿಗಳು ಕೆರಳಿದರು. ಅನಂತರದ ದಿನಗಳಲ್ಲಿ ತನ್ನ ಸಂಗಡಿಗರ ಜೊತೆ ಸೇರಿ ಆತ ರಾಂಚಿ ಮತ್ತು ಸಿಂಗಭೂಮ್ ಬಳಿಯ ಕೆಲವು ಚರ್ಚ್‌ಗಳನ್ನು ಸುಟ್ಟುಹಾಕಿ, ತದನಂತರ 1900ರಲ್ಲಿ ಮತ್ತೆ ಬಂಧಿತನಾಗಿ ಜೈಲಿನಲ್ಲೆ ನಿಧನ ಹೊಂದಿದ. 350 ಮುಂಡಾಗಳನ್ನು ಜೈಲಿನಲ್ಲಿಡಲಾಯಿತು. ಮೂವರನ್ನು ಗಲ್ಲಿಗೇರಿಸಲಾಯಿತು. 44 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು.

20ನೆಯ ಶತಮಾನದಲ್ಲೂ ಆದಿವಾಸಿಗಳ ಹಿಂಸಾತ್ಮಕ ಹೋರಾಟ ಮುಂದುವರಿಯಿತು. ಕಡಪ ಬಳಿಯ ನಲ್ಲಮಲ್ಲೈ ಬೆಟ್ಟಗಳಲ್ಲಿ ಮತ್ತು ಆಂಧ್ರಪ್ರದೇಶದ ನೆಲ್ಲೂರಿನಲ್ಲಿ ಚೆಂಚು ಹೆಸರಿನ ಆದಿವಾಸಿಗಳಿದ್ದರು. ಅರಣ್ಯ ಉತ್ಪನ್ನಗಳ ಮೇಲೆ ಅವರಿಗೆ ತಲೆ ತಲಾಂತರದಿಂದಲೂ

ಹಕ್ಕಿತ್ತು. ಆದರೆ 1898ರಲ್ಲಿ ಸರ್ಕಾರ ಈ ಹಕ್ಕಿನ ಮೇಲೆ ನಿಷೇಧ ಹೇರಿತು. ಅರಣ್ಯ ಇಲಾಖೆಯ ಈ ಅರಣ್ಯ ಮೀಸಲು ಮತ್ತು ಸಂರಕ್ಷಣೆಯ ನಿಯಮ ಕಡಪದಲ್ಲಿ ಅಸಹಕಾರ ಚಳವಳಿ ನಡೆದ ಸಂದರ್ಭದಲ್ಲಿ ಅರಣ್ಯ ಸತ್ಯಾಗ್ರಹಕ್ಕೆ ದಾರಿ ಮಾಡಿತು.

ಅರಣ್ಯ ಉತ್ಪನ್ನಗಳ ಬಳಕೆ ಮತ್ತು ಸರದಿ ಕೃಷಿ ಪದ್ಧತಿಯನ್ನು ಅರಣ್ಯ ಇಲಾಖೆ ನಿಷೇಧಿಸಿದ ಪರಿಣಾಮವಾಗಿ 1910ರಲ್ಲಿ ಜಗದಳಪುರ ಎಂಬಲ್ಲಿ ರಾಜಾ ಬೀರರ್‌ನ ವಿರುದ್ಧ ಆದಿವಾಸಿಗಳು ದಂಗೆ ಎದ್ದರು. ಬ್ರಿಟಿಷರಿಗೆ ಆದಿವಾಸಿಗಳ ಹೋರಾಟವನ್ನು ದಮನ ಮಾಡುವುದೇ ಒಂದು ಸಾಹಸವಾಯಿತು. ಇದರಿಂದ ಹೋರಾಟ ತೀವ್ರಗೊಂಡು ಆದಿವಾಸಿಗಳ ಆಕ್ರೋಶ ಹೆಚ್ಚಾಯಿತು. ಅವರು ಶಾಲೆಗಳನ್ನು ಸುಟ್ಟರು. ಪೊಲೀಸ್ ಠಾಣೆಗಳಿಗೆ ಮತ್ತು ಅರಣ್ಯ ಹೊರಠಾಣೆಗಳಿಗೆ ಮುತ್ತಿಗೆ ಹಾಕಿದರು. 1914ರಲ್ಲಿ ಒರಿಸ್ಸದ ದಾಸಪಲ್ಲ ಎಂಬಲ್ಲಿ ಖೊಂಡ್ ದಂಗೆ ಎದ್ದಿತು. ಆ ವೇಳೆಯಲ್ಲಿ ಖೊಂಡರು ಬ್ರಿಟಿಷರೊಂದಿಗೆ ಹೋರಾಡಿ ಅವರನ್ನು ಹೊರಗಟ್ಟಿ ಆಡಳಿತ ನಡೆಸಲಿದ್ದಾರೆ ಎಂಬ ವದಂತಿಗಳು ಹಬ್ಬಿ ಖೊಂಡರು ಗೆಲ್ಲುವ ಭಯ ಬ್ರಿಟಿಷರನ್ನು ಕಂಗೆಡಿಸಿತು. ಕಲಹಂಡಿ ಮತ್ತು ಬಸ್ತರ್ ವ್ಯಾಪ್ತಿಯ ಪೂರ್ವಭಾಗದ ಬೆಟ್ಟ ಪ್ರದೇಶಕ್ಕೆ ಏಕಾಏಕಿ ಬೆಂಕಿ ಹಚ್ಚಿದರು.

ಗಾಂಧೀಜಿಯ ಅಸಹಕಾರ ಚಳವಳಿಯ ಜೊತೆ ಸೇರಿ ಆದಿವಾಸಿಗಳ ಹೋರಾಟ ಮುಂದುವರಿಯಿತು. ಇತರೆ ಹೋರಾಟಗಳಲ್ಲಿಯೂ ಆದಿವಾಸಿಗಳು ಭಾಗವಹಿಸಿದರು. ಲೇವಾದೇವಿದಾರ ಶೋಷಣೆ ಮತ್ತು ಅರಣ್ಯಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸುವುದಕ್ಕೆ ಬ್ರಿಟಿಷರು ಅಡ್ಡಿಪಡಿಸಿದ್ದನ್ನು ವಿರೋಧಿಸಿ ಗೋದಾವರಿ ತೀರದ ರಂಪ ಪ್ರದೇಶದಲ್ಲಿ ಆಗಸ್ಟ್ 1920ರಿಂದ ಮೇ 1924ರವರೆಗೆ ಅಲ್ಲೂರಿ ಸೀತಾರಾಮರಾಜು ನೇತೃತ್ವದಲ್ಲಿ ಗೆರಿಲ್ಲಾ ಯುದ್ಧವೂ ನಡೆಯಿತು. ಕನಿಷ್ಠ ಕೂಲಿಯನ್ನೂ ನೀಡದೆ ಆದಿವಾಸಿಗಳನ್ನು ದುಡಿಸಿ ಕೊಳ್ಳಲಾಗು ತ್ತಿತ್ತು. ಇಂಥ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಆದಿವಾಸಿಗಳ ಹೋರಾಟಕ್ಕೆ ಧಾರ್ಮಿಕ ಆಯಾಮವೂ ದೊರಕಿತ್ತು. ಹೋರಾಟದ ನೇತೃತ್ವ ವಹಿಸುತ್ತಿದ್ದ ನಾಯಕರು ತಮಗೆ ಅತಿಮಾನುಷ ಶಕ್ತಿ ಇದೆ ಎಂದು ಹೇಳಿಕೊಳ್ಳುತ್ತಿದ್ದರು. ಗಾಂಧೀಜಿ ಶಕ್ತಿಯ ಬಗ್ಗೆ ಸೀತಾರಾಮರಾಜು ಆದಿವಾಸಿಗಳಿಗೆ ಹೆಚ್ಚು ಮನದಟ್ಟು ಮಾಡುತ್ತಿದ್ದರು.

ಸಾಮಾಜಿಕ ಚಳವಳಿಗಳು, ರೈತ ಹೋರಾಟಗಳು ಇವುಗಳ ಜೊತೆ ಜೊತೆಯಲ್ಲಿ ಮೂಡಿಬಂದ ಆದಿವಾಸಿ ಹೋರಾಟದಲ್ಲಿ ಸಾಮ್ರಾಜ್ಯಶಾಹಿ ಶಕ್ತಿ ಮತ್ತು ಬ್ರಿಟಿಷರ ವಿರುದ್ಧ ಮಾತ್ರವಲ್ಲದೆ ಅವರಿಗೆ ಬೆಂಬಲ ನೀಡುತ್ತಿದ್ದ ಭೂಮಾಲೀಕರು, ಲೇವಾದೇವಿದಾರರು, ಮಧ್ಯವರ್ತಿಗಳು ಮತ್ತು ವ್ಯಾಪಾರಿಗಳ ವಿರುದ್ಧ ಹೋರಾಟ ಶುರುಮಾಡಿದ ಭಾರತದ ಸ್ವಾತಂತ್ರ್ಯ ಚಳವಳಿಯೂ ಅನಂತರದ ದಿನಗಳಲ್ಲಿ ಆದಿವಾಸಿಗಳ ಹೋರಾಟಕ್ಕೆ ಶಕ್ತಿ ತುಂಬಿತು. (ಎಂ.ಎಸ್.)

**ಆದಿ ಹಳೆಶಿಲಾಯುಗ:** 2.5 ದಶಲಕ್ಷ ವರ್ಷದಿಂದ 2.5 ಲಕ್ಷವರ್ಷ ಹಿಂದಿನ ಸುದೀರ್ಘ ಅವಧಿ. ಈ ಯುಗದ ಆರಂಭದಲ್ಲಿ ಕಲ್ಲಿನ ಉಪಕರಣಗಳು ಪ್ರಪ್ರಥಮ ಬಾರಿಗೆ ಕಂಡುಬರುತ್ತವೆ. ಉಪಕರಣ ತಯಾರಿಕೆಯನ್ನು ಪ್ರಾರಂಭಿಸಿದ್ದು ಹೋಮೋ ಕುಲಕ್ಕೆ ಸೇರುವ ಆದಿಮಾನವನೇ ಅಥವಾ ಇವನಿಗಿಂತ ಮೊದಲಿದ್ದ ಆಸ್ಟ್ರೇಲೋಪಿಥೆಸೈನ್ ಕುಲದ ಮಂಗಮಾನವರೇ ಎಂಬ ಬಗ್ಗೆ ಈಗ ಜಿಜ್ಞಾಸೆಯಿದೆ. ಈ ಮುಂಚೆ ಹೋಮೋ ಹ್ಯಾಬಿಲಿಸ್ ವಂಶದ ಆದಿಮಾನವನೇ ಉಪಕರಣ ತಯಾರಿಕೆಯ ಜನಕ ಎಂದು ತಿಳಿಯ ಲಾಗಿತ್ತು. ಆದರೆ ಆಫ್ರಿಕದ ಹಲವಾರು ನೆಲೆಗಳಲ್ಲಿ 2.5 ದಶಲಕ್ಷ ವರ್ಷಗಳಷ್ಟು ಹಳೆಯದಾದ ಉಪಕರಣಗಳು ಇತ್ತೀಚೆಗೆ ಸಿಕ್ಕಿದ್ದು, ಈ ಅವಧಿಯಲ್ಲಿ ಎರಡು ಕಾಲಮೇಲೆ ನಡೆಯುತ್ತಿದ್ದ ಮಂಗಮಾನವರ ವಂಶಗಳಷ್ಟೇ ಆಫ್ರಿಕದಲ್ಲಿ ಇದ್ದವು. ಹೀಗಾಗಿ ಇವರೇ ಉಪಕರಣ ತಯಾರಿಸುವ ತಂತ್ರವನ್ನು ಮೊದಲಿಗೆ ಕಂಡುಹಿಡಿದುಕೊಂಡಿರುವ ಸಾಧ್ಯತೆಯಿದೆ.

**ಪ್ರಪಂಚ:** ಆದಿ ಹಳೆಶಿಲಾಯುಗದಲ್ಲಿ ಎರಡು ಪ್ರಕಾರದ ಉಪಕರಣ ಸಮುಚ್ಚಯಗಳು ಕಂಡು ಬರುತ್ತವೆ. ಇವು ಕೈಗೊಡಲಿ ರಹಿತ ಮತ್ತು ಕೈಗೊಡಲಿ ಸಹಿತ ಸಮುಚ್ಚಯಗಳು. ಕ್ಲ್ಯಾಕ್ಟೋನಿಯನ್ (ಯುರೋಪ್) ಮತ್ತು ಓಲ್ಡೊವಾನ್ (ಆಫ್ರಿಕ) ಉಪಕರಣ ಸಮುಚ್ಚಯಗಳು ಕೈಗೊಡಲಿ ರಹಿತ ವರ್ಗಕ್ಕೆ ಸೇರುತ್ತವೆ. ಅಶೂಲಿಯನ್ ಮತ್ತು ಅಬೆವಿಲಿಯನ್ (ಪ್ರಾಚ್ಯವಿಶ್ವ) ಸಮುಚ್ಚಯ ಗಳು ಕೈಗೊಡಲಿ ಸಹಿತ ವರ್ಗಕ್ಕೆ ಸೇರುತ್ತವೆ. ಈ ನಾಲ್ಕೂ ಉಪಕರಣ ತಂತ್ರಜ್ಞಾನಗಳು ಮೊಟ್ಟಮೊದಲು ಕಂಡುಬಂದ ನೆಲೆಗಳಿಂದ ತಮ್ಮ ಹೆಸರನ್ನು ಪಡೆದಿವೆ.

**ಆಫ್ರಿಕ ಖಂಡ:** ಇಲ್ಲಿ ಓಲ್ಡೊವಾನ್ ಮತ್ತು ಅಶೂಲಿಯನ್ ಉಪಕರಣ ಸಮುಚ್ಚಯ ಗಳಿರುವ ನೆಲೆಗಳಿವೆ. ಹೆಚ್ಚಿನ ನೆಲೆಗಳು ಅಶೂಲಿಯನ್ ವರ್ಗಕ್ಕೆ ಸೇರುತ್ತವೆ. ಓಲ್ಡೊವಾನ್ ಮಾದರಿಯ ಉಪಕರಣಗಳು ಮೊದಲು ಬೆಳಕಿಗೆ ಬಂದದ್ದು ಟಾಂಜಾನಿಯದ ಓಲ್ಡುವಾಯ್ ಕಣಿವೆಯಲ್ಲಿ ನಡೆದ ಉತ್ಖನನಗಳಲ್ಲಿ. ಈ ನೆಲೆಗಳು 2–1 ದಶಲಕ್ಷ ವರ್ಷಗಳಷ್ಟು ಹಳೆಯವು. ಅನಂತರ ಪೂರ್ವ ಆಫ್ರಿಕದ ಇತರ ಭಾಗಗಳಲ್ಲಿ ಹಾಗೂ ದಕ್ಷಿಣ ಆಫ್ರಿಕದಲ್ಲಿ ಈ ಸಂಪ್ರ ದಾಯದ ಹಲವಾರು ನೆಲೆಗಳು ಪತ್ತೆಯಾದವು. ಉತ್ಖನನಕ್ಕೆ ಒಳಗಾದ ನೆಲೆಗಳೆಂದರೆ ಕೂಬಿಫೋರ (ಕೀನ್ಯ), ಪೆನಿಂಜ್ (ಟಾಂಜಾನಿಯ), ಕೊನ್ಸೊ ಗಾರ್ಡುಲಾ, ಮೆಲ್ಕ ಕುಂಟೂರೆ ಮತ್ತು ಫೆಜೆಜ್ (ಇಥಿಯೋಪಿಯ). ಇಥಿಯೋಪಿಯದ ಹಡಾರ್ ಪ್ರದೇಶದಲ್ಲಿರುವ ಗೋನ, ಓಮೋ ಪ್ರದೇಶದಲ್ಲಿರುವ ಶುಂಗರ ಪದರ, ಕೀನ್ಯದ ತುರ್ಕಾನ ಪ್ರದೇಶದಲ್ಲಿರುವ ಲೊಕಲಲೆಯ್ ಮತ್ತು ಟಾಂಜಾನಿಯದ ಪಶ್ಚಿಮ ಕಂಜೆರಾದಲ್ಲಿರುವ ಉಪಕರಣಗಳು 2.5–2 ದಶಲಕ್ಷ ವರ್ಷಗಳಷ್ಟು ಹಳೆಯವು. ಇವುಗಳ ಪೈಕಿ ಸದ್ಯಕ್ಕೆ ಗೋನವು ಅತ್ಯಂತ ಪ್ರಾಚೀನ ನೆಲೆಯಾಗಿದೆ. ದಕ್ಷಿಣ ಆಫ್ರಿಕದ ಸ್ಟೆರ್ಕ್‌ಫೊಂಟೇನ್ ಮತ್ತು ಆಲ್ಜೀರಿಯದ ಏಯಿನ್ ಹನೆಚ್ ನೆಲೆಗಳಲ್ಲಿ ದೊರಕಿರುವ ಓಲ್ಡೊವಾನ್ ಮಾದರಿಯ ಉಪಕರಣಗಳು 1.8 ದಶಲಕ್ಷ ವರ್ಷಗಳಷ್ಟು ಹಳೆಯವು.

ಓಲ್ಡೊವಾನ್ ಸಮುಚ್ಚಯಗಳ ಮುಖ್ಯ ಲಕ್ಷಣಗಳೆಂದರೆ ಟೆನಿಸ್ ಚೆಂಡಿನ ಗಾತ್ರದ ಕಲ್ಲಿನಿಂದ (ಕಾಬಲ್) ತೆಗೆದ ಹರಿತ ಅಂಚಿನ ಸಣ್ಣಸಣ್ಣ ಚಕ್ಕೆಗಳು. ಇಂತಹ ಕಲ್ಲುಗಳಿಂದ ಕೊಚ್ಚುವ ಉಪಕರಣಗಳನ್ನೂ ಮಾಡಲಾಗಿದೆ; ಈ ಉಪಕರಣಗಳಲ್ಲಿ ಕಲ್ಲಿನ ಯಾವುದಾದ ರೊಂದು ಮೈಯಂಚಿನಲ್ಲಿ ಮಾತ್ರ ಚಕ್ಕೆಗಳನ್ನು ತೆಗೆಯಲಾಗಿರುತ್ತದೆ. ಕೆಲವೊಮ್ಮೆ ಈ ಗಾತ್ರದ ಕಲ್ಲುಗಳನ್ನು ಉಪಕರಣ ತಯಾರಿಕೆಯಲ್ಲಿ ಸುತ್ತಿಗೆಕಲ್ಲಿನಂತೆ ಬಳಸಲಾಗಿದೆ. ಓಲ್ಡೊವಾನ್ ಸಮುಚ್ಚಯಗಳಲ್ಲಿ ತ್ಯಾಜ್ಯಚಕ್ಕೆಗಳೂ ಅಧಿಕ ಸಂಖ್ಯೆಯಲ್ಲಿರುತ್ತವೆ. ಹೀಗಾಗಿ ಉಪಕರಣ ತಯಾರಿಕೆ ಮತ್ತು ಬಳಕೆಗಳೆರಡೂ ಒಂದೇ ಸ್ಥಳದಲ್ಲಿ ನಡೆಯುತ್ತಿದ್ದವು ಎಂಬುದು ಸ್ಪಷ್ಟ. ಓಲ್ಡೊವಾನ್ ತಂತ್ರಜ್ಞಾನದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇದು ಕ್ರಮೇಣ ಬೆಳೆದ ತಂತ್ರ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಈಗ ಗೋನ, ಪಶ್ಚಿಮ ಕಂಜೆರಾ, ಲೊಕಲಲೆಯ್ ಮುಂತಾದ ಅತಿ ಪ್ರಾಚೀನ ನೆಲೆಗಳಲ್ಲಿ ಸಿಕ್ಕ ಉಪಕರಣಗಳ ಅಧ್ಯಯನ ನಡೆಸುತ್ತಿರುವ ತಜ್ಞರ ಪ್ರಕಾರ ಈ ತಂತ್ರ ಆರಂಭದಿಂದಲೇ ಸುಸಜ್ಜಿತವಾಗಿತ್ತು. ಏಕೆಂದರೆ ಈ ನೆಲೆಗಳಲ್ಲಿಯ ಉಪಕರಣಗಳಿಗೂ ಓಲ್ಡೊವಾಯ್ ಕಣಿವೆಯಲ್ಲಿ ಸಿಕ್ಕಿರುವ ಬಹಳ ಅನಂತರ ಕಾಲದ ಉಪಕರಣಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ. ಈ ಅಧ್ಯಯನದಿಂದ ತಿಳಿದು ಬಂದಿರುವ ವಿಷಯಗಳು ಹೀಗಿವೆ. ಓಲ್ಡೊವಾಯ್ ಉಪಕರಣಗಳ ತಯಾರಕರು ಯಾವ ಪ್ರಕಾರದ ಕಲ್ಲುಗಳು ಉಪಕರಣಗಳಿಗೆ ಸೂಕ್ತ ಎಂಬ ತಿಳಿವಳಿಕೆಯನ್ನು ಪಡೆದಿದ್ದರು. ತಮ್ಮ ನೆಲೆಯಿಂದ 5 ಕಿಮೀ ಪರಿಧಿಯೊಳಗೆ ಸಿಗುವ ಕಲ್ಲುಗಳನ್ನು ಇವರು ಉಪಕರಣಗಳಿಗಾಗಿ ಆಯ್ದು ತರುತ್ತಿದ್ದರು. ಕೆಲವೊಮ್ಮೆ ಕಲ್ಲು ಲಭ್ಯವಿರುವ ಸ್ಥಳದಲ್ಲಿಯೇ ಉಪಕರಣಗಳನ್ನು ತಯಾರಿಸುತ್ತಿದ್ದರು. ಒಂದೇ ಕೈಯಲ್ಲಿ ಹಿಡಿಯಬಹುದಾದ ಮತ್ತು ಸಾಗಿಸಲು ಸುಲಭವಾಗಿರುವ ಗಾತ್ರದ ಶಿಲೆಯನ್ನೇ ಇವರು ಹೆಚ್ಚಾಗಿ ಆಯುತ್ತಿದ್ದರು. ಇಂತಹ ಶಿಲಾಗಟ್ಟಿಯಿಂದ ಸಣ್ಣಸಣ್ಣ ಚಕ್ಕೆಗಳನ್ನು ತೆಗೆಯುತ್ತಿದ್ದರು. ಒಂದು ಶಿಲಾಗಟ್ಟಿಯಿಂದ ಗರಿಷ್ಠ 80 ಚಕ್ಕೆಗಳನ್ನು ತೆಗೆಯಬಲ್ಲ ನಿಪುಣತೆ ಇವರಿಗಿತ್ತು. ಹೀಗಾಗಿ ಓಲ್ಡೊವಾನ್ ಸಮುಚ್ಚಯಗಳಲ್ಲಿ ಚಕ್ಕೆ ಮತ್ತು ಚಕ್ಕೆಯ ಚೂರುಗಳು ಅಧಿಕ ಪ್ರಮಾಣದಲ್ಲಿರುತ್ತವೆ. ಈ ಚಕ್ಕೆಗಳನ್ನು ಉಪಕರಣಗಳಂತೆ ಇವರು ಉಪಯೋಗಿಸುತ್ತಿದ್ದಿರಬೇಕು. ಕೆಲವು ಚಕ್ಕೆಗಳಿಂದ ಪುನಃ ಮರುಚಕ್ಕೆಗಳನ್ನು ತೆಗೆಯಲಾಗಿದೆ. ಕೆಲವೊಂದರ ಅಂಚಿನಲ್ಲಿ ಸಣ್ಣಸಣ್ಣ ಚಕ್ಕೆಗಳನ್ನು ತೆಗೆಯಲಾಗಿದೆ. ಕೂಬಿಫೋರ ನೆಲೆಯಲ್ಲಿ ಸಿಕ್ಕ ಕೆಲವು ಉಪಕರಣಗಳು ಸಸ್ಯ ಮತ್ತು ಪ್ರಾಣಿ ಚರ್ಮ/ಮಾಂಸ ಸಂಬಂಧಿತ ಕಾರ್ಯಗಳಲ್ಲಿ ಬಳಕೆಯಾಗಿರುವುದು ಅವುಗಳ ಸೂಕ್ಷ್ಮ ಅಧ್ಯಯನದಿಂದ ತಿಳಿದುಬಂದಿದೆ. ಪೆನಿಂಜ್ ನೆಲೆಯಲ್ಲಿ ಸಿಕ್ಕ ದ್ವಿಮುಖ ಉಪಕರಣವೊಂದಕ್ಕೆ ಅಕೇಶಿಯ ಮರದ ಅಂಗಾಶಗಳು ಅಂಟಿ ಉಳಿದದ್ದು ಕಂಡುಬಂದಿದೆ. ಸುತ್ತಿಗೆಯಂತೆ ಬಳಕೆಯಾದ ಕಲ್ಲುಗಳ ಮೇಲೆ ಜಜ್ಜಿದ ಅಥವಾ ಕುಟ್ಟಿದ ಗುರುತುಗಳು ನಿಚ್ಚಳವಾಗಿವೆ.

ಓಲ್ಡೊವಾನ್ ತಂತ್ರಜ್ಞಾನ ಬಳಕೆಯಲ್ಲಿದ್ದ ಅವಧಿಯಲ್ಲಿ ಆಫ್ರಿಕದಲ್ಲಿ ಎರಡು ಘಟನೆಗಳಾದವು. ಅವು ಹೋಮೋ ಎರೆಕ್ಟಸ್‌ನ ವಿಕಾಸ ಮತ್ತು ಅಶೂಲಿಯನ್ ತಂತ್ರಜ್ಞಾನದ ಹುಟ್ಟು. ಆಫ್ರಿಕ ಖಂಡದಿಂದ ಹೊರಬಂದ ಮೊಟ್ಟಮೊದಲ ಮಾನವ ವಂಶವೇ ಹೋಮೋ ಎರೆಕ್ಟಸ್. ಯುರೋಪಿನ ಜಾರ್ಜಿಯದಲ್ಲಿರುವ ಮನಿಸಿ ಮತ್ತು ಜಾವದ ಮೊಜೊಕೆರ್ಟೊನಲ್ಲಿ ದೊರೆತ ಈ ಆದಿಮಾನವನ ಪಳೆಯುಳಿಕೆಗಳು 1.8 ದಶಲಕ್ಷ ವರ್ಷ ಹಳೆಯವು. ಇವುಗಳೊಂದಿಗೆ ಓಲ್ಡೊವಾನ್ ಮಾದರಿಯ ಉಪಕರಣಗಳು ದೊರೆತಿವೆ. ಓಲ್ಡೊವಾನ್‌ಗಿಂತ ಅತ್ಯಂತ ಭಿನ್ನವಾಗಿರುವ ಅಶೂಲಿಯನ್ ತಂತ್ರಜ್ಞಾನ 1.4 ದಶಲಕ್ಷ ವರ್ಷಗಳ ಹಿಂದೆ ಪೂರ್ವ ಆಫ್ರಿಕದಲ್ಲಿ ರೂಪ ತಾಳಿತು. 1.4–1 ದಶಲಕ್ಷ ವರ್ಷಗಳ ನಡುವಿನ ಅವಧಿಯಲ್ಲಿ ಓಲ್ಡೊವಾನ್ ಮತ್ತು ಅಶೂಲಿಯನ್ ತಂತ್ರಜ್ಞಾನಗಳು ಜೊತೆಜೊತೆಯಾಗಿದ್ದವು. ಕಾಲಕಾಲಕ್ಕೆ ಹೊಸತನಗಳನ್ನು ಮೈಗೂಡಿಸಿಕೊಂಡ ಅಶೂಲಿಯನ್ ತಂತ್ರಜ್ಞಾನದಲ್ಲಿ ಆದಿ ಮತ್ತು ಅಂತ್ಯ ಹಂತಗಳನ್ನು ಗುರುತಿಸಲಾಗಿದೆ.

ಅಶೂಲಿಯನ್ ಸಮುಚ್ಚಯಗಳು ಆಫ್ರಿಕದಾದ್ಯಂತ ಕಂಡುಬರುತ್ತವೆ. ಪೂರ್ವ ಆಫ್ರಿಕದಲ್ಲಿ 1.4 ದಶಲಕ್ಷ ವರ್ಷ ಹಳೆಯ ಆದಿ ಅಶೂಲಿಯನ್ ಸಮುಚ್ಚಯಗಳು ಓಲ್ಡುವಾಯ್ ಕಣಿವೆ, ಕೂಬಿಫೋರ, ಪೆನಿಂಜ್, ಕೊನ್ಸೊ, ಮೆಲ್ಕ ಕುಂಟೂರೆ, ಪಶ್ಚಿಮ ತುರ್ಕಾನಾ ಮತ್ತು ಫೆಜೆಜ್‌ಗಳಲ್ಲಿವೆ. ದಕ್ಷಿಣ ಆಫ್ರಿಕದ ಸ್ಟೆರ್ಕ್‌ಫೊಂಟೇನ್‌ನಲ್ಲೂ 1.4 ದಶಲಕ್ಷ ವರ್ಷ ಹಳೆಯ ಭೂಪದರದಲ್ಲಿ ಆದಿ ಅಶೂಲಿಯನ್ ಉಪಕರಣಗಳು ಸಿಕ್ಕಿವೆ. 1.8 ದಶಲಕ್ಷ ಕಾಲಮಾನದ ಉತ್ತರ ಆಫ್ರಿಕದ ಏಯಿನ್ ಹನೆಚ್ ನೆಲೆ ಈವರೆಗೆ ಅತ್ಯಂತ ಪ್ರಾಚೀನ ಅಶೂಲಿಯನ್ ನೆಲೆಯೆನಿಸಿಕೊಂಡಿದೆ. ಅಟ್ಲಾಂಟಿಕ್ ಸಮುದ್ರ ತೀರದಲ್ಲಿರುವ ಕಾಸಬ್ಲಾಂಕ ಪ್ರದೇಶದಲ್ಲಿರುವ ಸಿದಿ ಅಬ್ದೆರ್‍ರಹಮನೆ ಮತ್ತು ಥಾಮಸ್ ಕ್ವಾರಿ ನೆಲೆಗಳಲ್ಲಿ ನಡೆದಿರುವ ಉತ್ಖನನಗಳಲ್ಲೂ ಅಶೂಲಿಯನ್ ಸಮುಚ್ಚಯಗಳು ಬೆಳಕಿಗೆ ಬಂದಿವೆ.

ಆದಿ ಅಶೂಲಿಯನ್ ಉಪಕರಣಗಳನ್ನು ಭಾರೀ ಗಾತ್ರದ ಕಲ್ಲುಗಳಿಂದ (20–50 ಸೆಂಮೀ) ತೆಗೆದ ದೊಡ್ಡದೊಡ್ಡ ಚಕ್ಕೆಗಳಿಂದ (12–16 ಸೆಂಮೀ) ತಯಾರಿಸಲಾಗುತ್ತಿತ್ತು. ಈ ಕಾಲದ ಕೈಗೊಡಲಿಗಳು ಒರಟಾಗಿರುತ್ತವೆ. ಇವುಗಳ ಒಂದು ಅಂಚಿನಲ್ಲಿ ಮಾತ್ರ ಸಣ್ಣ

ಚಕ್ಕೆಗಳನ್ನು ತೆಗೆದು ಪಿಕಾಸಿಯಲ್ಲಿರುವಂತೆ ಮೂರು ಮುಖವುಳ್ಳ ಮೊನೆಯನ್ನು ಮಾಡಲಾಗಿರುತ್ತದೆ. ಇವಲ್ಲದೆ ಕೈಗಾತ್ರದ ಕಡಿಕತ್ತಿಗಳು, ಚಕ್ಕೆಗಳು ಆದಿ ಅಶೂಲಿಯನ್ ಸಮುಚ್ಚಯಗಳಲ್ಲಿ ಕಂಡುಬರುತ್ತವೆ. ಸಣ್ಣ ಗಾತ್ರದ ಉಪಕರಣಗಳು ವಿರಳವೆಂದೇ ಹೇಳಬಹುದು. ಆದರೆ ಆಯ್ದು ತಂದ ಕಲ್ಲುತುಂಡುಗಳು ಗಮನೀಯ ಸಂಖ್ಯೆಯಲ್ಲಿವೆ. ಅಂದರೆ ಓಲ್ಡೊವಾನ್ ರೀತಿಯ ಸಣ್ಣ ಚಕ್ಕೆಗಳನ್ನು ಇವರೂ ಉಪಯೋಗಿಸುತ್ತಿದ್ದಿರಬೇಕು. ಓಲ್ಡೊವಾನ್ ಸಮುಚ್ಚಯಗಳಲ್ಲಿ ಅಧಿಕವಾಗಿರುವ ಜಜ್ಜಿದ ಚಿಹ್ನೆಗಳುಳ್ಳ ಸುತ್ತಿಗೆಕಲ್ಲುಗಳು ಆದಿ ಅಶೂಲಿಯನ್ ಸಮುಚ್ಚಯಗಳಲ್ಲಿದ್ದರೂ ಅವುಗಳ ಸಂಖ್ಯೆ ಅತಿ ಕಡಿಮೆ. ಆದಿ ಅಶೂಲಿಯನ್ ಹಂತದಲ್ಲಿ ಪೂರ್ವ–ನಿರ್ಧರಿತ ಆಕಾರದಲ್ಲಿ ಉಪಕರಣಗಳನ್ನು ರೂಪುಗೊಳಿಸುವ ತಂತ್ರಗಾರಿಕೆಯಿದ್ದಂತೆ ಕಾಣುವುದಿಲ್ಲ.



ಕೈಗೊಡಲಿಗಳು

ಕಾಲಕ್ರಮೇಣ ಅಶೂಲಿಯನ್ ತಂತ್ರಜ್ಞಾನ ಸಂಕೀರ್ಣಗೊಂಡಿತಾದರೂ ಅದರ ಬೆಳವಣಿಗೆಯ ಹಂತಗಳನ್ನು ಕರಾರುವಾಕ್ಕಾಗಿ ಗುರುತಿಸುವುದು ಸಾಧ್ಯವಾಗಿಲ್ಲ. ಕೋಂಬೆವ, ವಿಕ್ಟೋರಿಯ ವೆಸ್ಟ್ ಮೊದಲಾದ ಸಿದ್ಧ ಶಿಲೆಯ (ಪ್ರಿಪೇರ್ಡ್‌ಕೋರ್) ತಂತ್ರಗಳನ್ನು ಬಳಸಿ ಕೈಗೊಡಲಿ–ಕಡಿಕತ್ತಿಗಳಿಗೆ ಬೇಕಾಗುವ ದೊಡ್ಡದೊಡ್ಡ ಚಕ್ಕೆಗಳನ್ನು ತೆಗೆಯುವ ಕ್ರಮ ಅಂತ್ಯ ಹಂತದಲ್ಲಿ ರೂಢಿಗೆ ಬಂದಿತು. ಪೂರ್ವ ಆಫ್ರಿಕದ ಕಥುರಿನ್ ಭೂಪದರದಲ್ಲಿ ದೊರೆತ ವಿಕ್ಟೋರಿಯ ವೆಸ್ಟ್ ತಂತ್ರದಿಂದ ತಯಾರಾದ ಉಪಕರಣಗಳು 2,58,000–5,00,000 ವರ್ಷಗಳಷ್ಟು ಹಳೆಯವು. ಈ ಕಾಲಾವಧಿಯಲ್ಲಿದ್ದ ಇತರ ಸಿದ್ಧ ಶಿಲಾತಂತ್ರಗಳೆಂದರೆ ತಾಚೆಂಗಿಟ್ ಮತ್ತು ತಾಬೆಲ್‌ಬಾಲ. ಇವು ಕಡಿಕತ್ತಿಗೆ ಬೇಕಾದಂತಹ ಚಕ್ಕೆಗಳನ್ನು ಪಡೆಯುವಲ್ಲಿ ಉಪಯುಕ್ತವಾಗಿದ್ದವು. ಈ ಎಲ್ಲ ತಂತ್ರಗಳು ಆಫ್ರಿಕಕ್ಕೆ ಮಾತ್ರ ಸೀಮಿತವಾಗಿದ್ದವು ಎಂಬುದು ಗಮನಿಸಬೇಕಾದ ಅಂಶ. ಅಶೂಲಿಯನ್ ಹಂತ ಆಫ್ರಿಕದಲ್ಲಿ ಯಾವಾಗ ಕೊನೆಗೊಂಡಿತೆಂಬುದು ಇನ್ನೂ ಸರಿಯಾಗಿ ತಿಳಿದಿಲ್ಲ. ದಕ್ಷಿಣ ಮತ್ತು ಪೂರ್ವ ಆಫ್ರಿಕದ ಕೆಲವು ಅಂತ್ಯ ಅಶೂಲಿಯನ್ ನೆಲೆಗಳಿಗೆ 2,50,000 ವರ್ಷಗಳ ಕಾಲಮಾನ ದೊರಕಿದೆ. ಇದರ ಅನಂತರದಲ್ಲೂ ಅಶೂಲಿಯನ್ ಜನರಿದ್ದರೆಂಬುದಕ್ಕೆ ಇಥಿಯೋಪಿಯದ ಹೆರ್ಟೋ ಪ್ರದೇಶದಲ್ಲಿ ಇತ್ತೀಚೆಗೆ ಪ್ರಾಚ್ಯಾಧಾರಗಳು ದೊರೆತಿವೆ. ಇಲ್ಲಿ ಹೋಮೋ ಸೇಪಿಯೆನ್ಸ್ ವಂಶದ ಆರಂಭಿಕ ಹಂತಕ್ಕೆ ಸೇರುವ ಮಾನವನ ಪಳೆಯುಳಿಕೆಗಳೊಂದಿಗೆ ಕೈಗೊಡಲಿಗಳು ಕಂಡುಬಂದಿದ್ದು ಈ ಅವಶೇಷಗಳು ಸು.1,60,000 ವರ್ಷ ಹಿಂದಿನವೆಂಬುದು ನಿರ್ಣಯಗೊಂಡಿದೆ.

**ಯುರೋಪ್:** ಶಿಲಾಯುಗಕ್ಕೆ ಸಂಬಂಧಿಸಿದಂತೆ ಇದುವರೆವಿಗೆ ಅತಿ ಹೆಚ್ಚಿನ ಸಂಶೋಧನೆ ನಡೆದಿರುವುದು ಯುರೋಪ್ ಖಂಡದಲ್ಲಿ. ಯುರೋಪಿನ ಪ್ರಾಗಿತಿಹಾಸ 5 ಲಕ್ಷ ವರ್ಷ ಪ್ರಾಚೀನವಾದುದು. ಇದಕ್ಕಿಂತ ಹಿಂದಿನದು ಎಂದು ಹೇಳಲಾಗುತ್ತಿದ್ದ ಅವಶೇಷಗಳೆಲ್ಲವೂ ನಂಬಲರ್ಹವಲ್ಲದ್ದು ಎಂದು ಈ ಮೊದಲು ತಿಳಿಯಲಾಗಿತ್ತು. ಸ್ಪೇನಿನ ಅತಪುಯೆರ್ಕ ಪ್ರದೇಶದಲ್ಲಿರುವ ಸುಣ್ಣಕಲ್ಲು ಕಂದರಗಳಲ್ಲಿ ನಡೆದ (1995) ಉತ್ಖನನದಲ್ಲಿ 8 ಲಕ್ಷ ವರ್ಷಗಳಷ್ಟು ಹಳೆಯ ಭೂಪದರದಲ್ಲಿ ಆದಿಮಾನವನ ಪಳೆಯುಳಿಕೆಗಳು ಮತ್ತು ಶಿಲೋಪಕರಣಗಳು ಬೆಳಕಿಗೆ ಬಂದಾಗ ಯುರೋಪಿನ ಮೆಡಿಟರೇನಿಯನ್ ತೀರದ ಪ್ರದೇಶದಲ್ಲಿ 5 ಲಕ್ಷ ವರ್ಷಗಳ ಹಿಂದೆಯೇ ಮಾನವರಿದ್ದರು ಎಂಬುದು ದೃಢಪಟ್ಟಿತು. ಆದರೆ ಈ ಮಾತು ಯುರೋಪಿನ ಸಮಶೀತೋಷ್ಣ ಪ್ರದೇಶಕ್ಕೆ ಅನ್ವಯಿಸುವುದಿಲ್ಲ. ಈ ಭಾಗದಲ್ಲಿ ಇಷ್ಟು ಪ್ರಾಚೀನ ಕುರುಹುಗಳು ಇನ್ನೂ ಪತ್ತೆಯಾಗಬೇಕಷ್ಟೆ. ಏನೇ ಆದರೂ ಯುರೋಪಿನ ಅಶೂಲಿಯನ್ ಸಮುಚ್ಚಯಗಳು ಆಫ್ರಿಕದ ಅಶೂಲಿಯನ್ ಸಮುಚ್ಚಯಗಳಷ್ಟು ಪ್ರಾಚೀನವಲ್ಲ.

ಸ್ಪೇನ್ ಮತ್ತು ಇಟಲಿಯಲ್ಲಿ 1 ದಶಲಕ್ಷ ವರ್ಷಗಳಷ್ಟು ಹಳೆಯದಾದ ಉಪಕರಣಗಳು ಇತ್ತೀಚಿನ ಉತ್ಖನನಗಳಲ್ಲಿ ಪತ್ತೆಯಾಗಿವೆ. ಇಟಲಿಯ ಮೋಂತೆ ಪೊಗ್ಗಿಯೊಲೊ, ಇಸೆರ್ನಿಯ ಮತ್ತು ನೊಟರ್ಚಿರಿಕೊ ಇವು ಆಳ ಅಧ್ಯಯನಕ್ಕೆ ಒಳಪಟ್ಟಿರುವ ನೆಲೆಗಳು. ಮೋಂತೆ ಪೊಗ್ಗಿಯೊಲೊ ಸಮುಚ್ಚಯ 8 ಲಕ್ಷದಿಂದ 1 ದಶಲಕ್ಷ ವರ್ಷದ ಕಾಲಾವಧಿಯದೆಂದು ಎಲೆಕ್ಟ್ರಾನ್ ಸ್ಪಿನ್ ರೆಸೊನೆನ್ಸ್ ಮತ್ತು ಪುರಾಕಾಂತೀಯತೆಯ ತಂತ್ರಗಳಿಂದ ಸಾಬೀತಾಗಿದೆ. ಇಸೆರ್ನಿಯದ ನಾಲ್ಕು ಸಮುಚ್ಚಯಗಳ ಕಾಲಮಾನ 7 ಲಕ್ಷ ವರ್ಷಗಳು (ಮಾತುಯಾಮ–ಬ್ರುಹ್ನೆಸ್ ಕಾಲಾವಧಿಗಳ ಸಂಧಿಕಾಲ). ಎರಡೂ ನೆಲೆಗಳಲ್ಲಿ ನದಿಯ ಉರುಟುಗಲ್ಲುಗಳು ಮತ್ತು ಅವುಗಳಿಂದ ತೆಗೆದ ಚಕ್ಕೆಗಳು ಸಾವಿರಾರು ಸಂಖ್ಯೆಯಲ್ಲಿವೆ. ಯಾವುದೇ ಮಾರ್ಪಾಡನ್ನು ಮಾಡದೆ ಸಾಧಾರಣ ಚಕ್ಕೆಗಳನ್ನೇ ಉಪಕರಣದಂತೆ ಇಲ್ಲಿ ಬಳಸಿರುವಂತೆ ಕಾಣುತ್ತದೆ. ನೊಟರ್ಚಿರಿಕೊ ಮತ್ತು ಇದರ ಸಮೀಪದಲ್ಲಿರುವ ಲೊರೆಟೊಗಳಲ್ಲಿ ಅಶೂಲಿಯನ್ ಮಾದರಿಯ ಸಮುಚ್ಚಯಗಳು ಮತ್ತು ಅಶೂಲಿಯನ್ ಅಲ್ಲದ ಸಮುಚ್ಚಯಗಳು ವಿವಿಧ ಸ್ತರಗಳಲ್ಲಿ ಉತ್ಖನನದಲ್ಲಿ ಕಂಡುಬಂದಿವೆ. ಈ ಎಲ್ಲ ಸಮುಚ್ಚಯಗಳ ಕಾಲಾವಧಿ 6,50,000–4,50,000 ವರ್ಷಗಳು. ಸ್ಪೇನಿನ ಫುಯೆಂಟ್ ನೋವೆ–3, ಬಲ್ರಂಕೊ ಲಿಯೊನ್–5 ಮತ್ತು ಅತಪುಯೆರ್ಕ ಸಮುಚ್ಚಯಗಳು ಮಾತುಯಾಮ ಕಾಲಾವಧಿಗೆ ಸೇರುತ್ತವೆ; ಅಂದರೆ ಇವು 8 ಲಕ್ಷ ವರ್ಷಗಳಿಗೂ ಮುಂಚಿನವು. ಬ್ರಿಟನ್ನಿನ ಪಾಕ್‌ಫೀಲ್ಡ್‌ನಲ್ಲಿರುವ ಸಣ್ಣ ಚಕ್ಕೆ–ಶಿಲಾಗಟ್ಟಿಗಳಿರುವ ಸಮುಚ್ಚಯಗಳು ಬ್ರುಹ್ನೆಸ್ ಕಾಲಾವಧಿಗೆ ಸೇರುತ್ತವೆ (ಸು.7–6,00,000 ವರ್ಷಗಳು). ಒಟ್ಟಿನಲ್ಲಿ ಈ ಕಾಲಾವಧಿಯ ಪ್ರಾರಂಭದಲ್ಲಿ ಯುರೋಪಿನ ಎಲ್ಲ ಭಾಗಗಳಲ್ಲೂ ಆದಿಮಾನವನ ಸಮುದಾಯಗಳು ಹರಡಿದ್ದವೆಂಬುದು ಈ ಆಧಾರಗಳಿಂದ ಸ್ಪಷ್ಟವಾಗುತ್ತದೆ. ಈ ಸಮಯದಲ್ಲಿ ಮೆಡಿಟರೇನಿಯನ್ ಹವಾಮಾನವಿದ್ದು ಚಳಿಗಾಲದಲ್ಲಿಯೂ ಮಳೆಯಾಗುತ್ತಿತ್ತೇ ವಿನಹ ಹಿಮ ಬೀಳುತ್ತಿರಲಿಲ್ಲವೆಂದು ಪಾಕ್‌ಫೀಲ್ಡ್‌ನಲ್ಲಿ ನಡೆದ ಪುರಾ–ವಾತಾವರಣದ ಅಧ್ಯಯನದಿಂದ ತಿಳಿದುಬಂದಿದೆ.

ಯುರೋಪಿನಲ್ಲಿ 1990ರ ದಶಕದಲ್ಲಾದ ಮಹತ್ತ್ವಪೂರ್ಣ ಅನ್ವೇಷಣೆಯೆಂದರೆ ಜಾರ್ಜಿಯದ ಬಳಿಯ ಮನಿಸಿಯಲ್ಲಿ ಸಿಕ್ಕ 1.8 ದಶಲಕ್ಷ ವರ್ಷಗಳ ಹಿಂದಿನ ಆದಿಮಾನವನ ಪಳೆಯುಳಿಕೆಗಳು ಹಾಗೂ ಜೊತೆಯಲ್ಲಿದ್ದ ಉಪಕರಣ ಸಮುಚ್ಚಯಗಳು. ಮನಿಸಿಯು ಯುರೋಪಿನ ಪ್ರವೇಶ ದ್ವಾರದಲ್ಲಿದೆ. ಆದಿಮಾನವನು ಈ ಪ್ರದೇಶದ ಮೂಲಕ ಯುರೋಪನ್ನು ಹೊಕ್ಕಿರಬಹುದು. ಇಲ್ಲಿ ಸಿಕ್ಕ 4 ತಲೆಬುರುಡೆ, ದವಡೆಯ ಭಾಗ ಮತ್ತು ದೇಹದ ಮೂಳೆಗಳನ್ನು ಮೊದಲಿಗೆ ಹೋಮೋ ಎರ್ಗಾಸ್ಟರ್ ಮಾನವರದ್ದೆಂದು ತಿಳಿಯಲಾಗಿತ್ತು. ಅವು ಹೋಮೋ ಜಾರ್ಜಿಕಸ್ ಮಾನವರದ್ದೆಂದು ಈಗ ದೃಢಪಟ್ಟಿದೆ. ಇವುಗಳ ಜೊತೆಯಲ್ಲಿ ಸಿಕ್ಕಿರುವ ಉಪಕರಣಗಳು ನದಿಯ ಉರುಟುಗಲ್ಲಿನಿಂದ ಮಾಡಿದವು. ಇವುಗಳ ಒಂದು ಬದಿಯಲ್ಲಿ ಕೆಲವೇ ಕೆಲವು ಚಕ್ಕೆಗಳನ್ನು ತೆಗೆದು ಅದನ್ನು ಚೂರಿಯ ಅಂಚಿನಂತೆ ಮಾರ್ಪಡಿಸಲಾಗಿದೆ. ಇವುಗಳಿಂದ ಉತ್ಪತ್ತಿಯಾದ ಚಕ್ಕೆಗಳನ್ನೂ ಯಾವುದೇ ಮಾರ್ಪಾಡು ಮಾಡದೆ ಉಪಕರಣದಂತೆ ಬಳಸಲಾಗಿದೆ. ಈ ಸಮುಚ್ಚಯದಲ್ಲಿದ್ದ ಅರ್ಧದಷ್ಟು ಉರುಟುಗಲ್ಲುಗಳು ಸುತ್ತಿಗೆಕಲ್ಲು ಅಥವ ಬಡಿಗಲ್ಲುಗಳಾಗಿ ಬಳಕೆಯಾಗಿದ್ದಿರಬೇಕು. ಈ ಎಲ್ಲ ಉಪಕರಣಗಳು ಓಲ್ಡೊವಾನ್‌ಗಿಂತ ಹಳೆಯದಾದ ತಂತ್ರಜ್ಞಾನದಿಂದ ತಯಾರಾದವೆಂಬ ಅಭಿಪ್ರಾಯವಿದೆ.

ಯುರೋಪಿನ ಸಮಶೀತೋಷ್ಣ ವಲಯದಲ್ಲಿ (ಪೈರಿನೀಸ್–ಆಲ್ಪ್ಸ್ ಪರ್ವತಶ್ರೇಣಿಯ ಉತ್ತರಭಾಗ) ಅಶೂಲಿಯನ್ ಮಾದರಿಯ ಸಮುಚ್ಚಯಗಳು 5,00,000 ವರ್ಷಗಳ ಸುಮಾರಿಗೆ ಪ್ರಥಮ ಬಾರಿಗೆ ಕಾಣಿಸಿಕೊಳ್ಳುತ್ತವೆ. ಇವು ಹೆಚ್ಚಾಗಿ ಬ್ರಿಟನ್ ಮತ್ತು ಫ್ರಾನ್ಸ್ ಪ್ರದೇಶದಲ್ಲಿವೆ. ಬ್ರಿಟನ್ನಿನ ಬಾಕ್ಸ್‌ಗ್ರೋವ್ ಮುಖ್ಯ ಅಶೂಲಿಯನ್ ನೆಲೆಗಳಲ್ಲೊಂದಾಗಿದೆ. ಇಲ್ಲಿ ಅಂದವಾದ ಅಂಡಾಕಾರದ ಪುಟ್ಟ ಕೈಗೊಡಲಿಗಳು ದೊರೆತಿವೆ.

ದಕ್ಷಿಣ ಮತ್ತು ಈಶಾನ್ಯ ಯುರೋಪಿನಲ್ಲಿ ಆದಿ ಹಳೆಶಿಲಾಯುಗದಾದ್ಯಂತ ಅಶೂಲಿಯನ್ ಸಮುಚ್ಚಯಗಳು ಕಾಣ ಸಿಕ್ಕರೆ, ಪೂರ್ವ ಮತ್ತು ಮಧ್ಯ ಯುರೋಪಿನಲ್ಲಿ ಇದೇ ಕಾಲದಲ್ಲಿ ಅಶೂಲಿಯನ್‌ಗಿಂತ ಭಿನ್ನವಾದ ಸಮುಚ್ಚಯಗಳು ಕಂಡುಬರುತ್ತವೆ. ಇವನ್ನು ಆದಿ ಹಳೆ ಶಿಲಾಯುಗ ಸೂಕ್ಷ್ಮ ಶಿಲೋಪಕರಣ ಸಂಪ್ರದಾಯ (ಲೋಯರ್ ಪೇಲಿಯೋಲಿಥಿಕ್ ಮೈಕ್ರೋಲಿಥಿಕ್ ಟ್ರೆಡಿಷನ್–ಎಲ್.ಪಿ.ಎಮ್.ಟಿ.) ಎಂದು ಇತ್ತೀಚೆಗೆ ಹೆಸರಿಸಲಾಗಿದೆ. ಇಂತಹ ಸಮುಚ್ಚಯಗಳು ಜರ್ಮನಿಯ ವಿಪ್ಪರ್, ಇಲ್ಮ್ ಮತ್ತು ನೆಕರ್ ನದಿಗಳ ಸ್ತರಗಳಲ್ಲಿ ಸಂರಕ್ಷಿತವಾಗಿವೆ. ಈ ಉಪಕರಣಗಳು ಒರಟಾಗಿವೆ. ಶೋನಿಂಗನ್ ನೆಲೆಯಲ್ಲಿ ಈ ಮಾದರಿಯ ಉಪಕರಣಗಳೊಂದಿಗಿದ್ದ ಮರದ ಭರ್ಜಿಗಳು ಸಂಪೂರ್ಣ ಕರಗಿಹೋಗಿ ಅವುಗಳ ಪಡಿಯಚ್ಚುಗಳು ಮಾತ್ರ ಕಂಡುಬಂದವು. ಈ ಪ್ರದೇಶದಲ್ಲಿ ಉಪಕರಣಕ್ಕೆ ಸೂಕ್ತವಾದ ಗಾತ್ರದಲ್ಲಿ ಶಿಲೆಗಳು ಸಿಕ್ಕುವುದು ವಿರಳವಾದ್ದರಿಂದ ಆದಿಮಾನವರು ಮರ ಮತ್ತು ಮೂಳೆಗಳಿಂದಲೂ ಉಪಕರಣಗಳನ್ನು ತಯಾರಿಸುತ್ತಿದ್ದಿರಬೇಕು. ಏಷ್ಯ ಮತ್ತು ಚೀನದಲ್ಲೂ ಆದಿ ಹಳೆಶಿಲಾಯುಗ ಕಾಲದಲ್ಲಿ ಎಲ್.ಪಿ.ಎಮ್.ಟಿ. ಮಾದರಿಯ ಉಪಕರಣಗಳು ಬಳಕೆಯಲ್ಲಿದ್ದವು.

**ಮಧ್ಯಪ್ರಾಚ್ಯ ದೇಶಗಳು:** ಮಾನವನ ಉಗಮ ಸ್ಥಾನವೆಂದು ಭಾವಿಸಲಾಗಿರುವ ಆಫ್ರಿಕ ಖಂಡವನ್ನು ಯುರೋಪ್ ಮತ್ತು ಏಷ್ಯ ಖಂಡಗಳೊಂದಿಗೆ ಜೋಡಿಸುವ ಭೂಭಾಗವಿದು. ಎರಡು ಮಾರ್ಗವಾಗಿ ಆದಿಮಾನವನು ಈ ಭೂಭಾಗವನ್ನು ಹಾದು ಹೋಗಿರುವ ಸಾಧ್ಯತೆಯಿದೆ. ಒಂದನೆಯ ಮಾರ್ಗ ನೈಲ್ ನದಿ ಬಯಲು ಮತ್ತು ಲೆವಂಟ್ ಪ್ರದೇಶದ ಮೂಲಕ ಮೆಡಿಟರೇನಿಯನ್ ತೀರದಲ್ಲಿ ಸಾಗಿದರೆ ಮತ್ತೊಂದು ಕೆಂಪು ಸಮುದ್ರ ಮತ್ತು ಅರೇಬಿಯದ ಮೂಲಕ ಹಾದುಹೋಗಿರಬೇಕು. ಇಸ್ರೇಲ್‌ನಲ್ಲಿರುವ ಉಬೇದಿಯ ಮಧ್ಯಪ್ರಾಚ್ಯದ ಅತಿ ಪ್ರಾಚೀನ ಆದಿ ಹಳೆಶಿಲಾಯುಗದ ನೆಲೆಯಾಗಿದೆ. ಸರೋವರ ತೀರದ ಸ್ತರೀಕೃತ ನಿಕ್ಷೇಪದಲ್ಲಿರುವ ಇಲ್ಲಿಯ ಸಮುಚ್ಚಯ ಓಲ್ಡೊವಾಯ್ ಕಣಿವೆಯ ಅಶೂಲಿಯನ್ ಮಾದರಿಯ ಸಮುಚ್ಚಯಗಳನ್ನು ಹೋಲುತ್ತದೆ. ಇದರ ಕಾಲಮಾನ ಸು.1.4 ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ಜೋರ್ಡಾನಿನ ರಿಫ್ಟ್ ಕಣಿವೆಯಲ್ಲಿರುವ ಗೆಶೆರ್ ಬೆನೊಟ್ ಯಾಕೊವ್ ಮತ್ತೊಂದು ಮುಖ್ಯ ಅಶೂಲಿಯನ್ ನೆಲೆ. ಪುರಾಕಾಂತೀಯ ಕಾಲತಂತ್ರದ ಪ್ರಕಾರ ಈ ಸಮುಚ್ಚಯ 7,80,000 ವರ್ಷ ಹಳೆಯದು. ಇಲ್ಲಿ ಕಡಿಕತ್ತಿಗಳೇ ಪ್ರಧಾನವಾಗಿವೆ. ಸುಸ್ಥಿತಿಯಲ್ಲಿರುವ ಜೈವಿಕ ಅವಶೇಷಗಳು ಇಲ್ಲಿ ಕಂಡುಬಂದಿದ್ದು ವಿವಿಧ ಬಗೆಯ ಕಾಯಿಗಳನ್ನು ಆದಿಮಾನವರು ಸಂಗ್ರಹಿಸಿ ತಿನ್ನುತ್ತಿದ್ದರೆನ್ನಲಾಗಿದೆ. ಮತ್ತೊಂದು ಮಹತ್ತರ ಅನ್ವೇಷಣೆಯೆಂದರೆ ಸುಟ್ಟ ಚಿಹ್ನೆಗಳಿರುವ ಚಕಮಕಿ ಕಲ್ಲಿನ ತ್ಯಾಜ್ಯ ಚಕ್ಕೆಗಳು. ಬೆಂಕಿಯ ಬಳಕೆಯನ್ನು ಇವು ಸೂಚಿಸುತ್ತವೆ. ಓಲ್ಡೊವಾನ್ ಮತ್ತು ಅಂತ್ಯ ಅಶೂಲಿಯನ್ ಎಂದು ತಿಳಿಯಲಾದ ಅನೇಕ ಸಮುಚ್ಚಯಗಳು ಅರಬ್ ಪ್ರಾಂತದಲ್ಲಿ ಬೆಳಕಿಗೆ ಬಂದಿವೆ.

**ದಕ್ಷಿಣ ಏಷ್ಯ:** ಆದಿ ಹಳೆಶಿಲಾಯುಗದ ಸಮುಚ್ಚಯಗಳು ಭಾರತ ಉಪಖಂಡದಲ್ಲಿ ಹೇರಳವಾಗಿವೆ. ಪಾಕಿಸ್ತಾನದಲ್ಲಿರುವ ರಿವತ್ ಅತ್ಯಂತ ಪ್ರಾಚೀನ ನೆಲೆಯಾಗಿದೆ. ಒಂದು ಶಿಲಾಗಟ್ಟಿ ಮತ್ತು ಒಂದೆರಡು ಚಕ್ಕೆಗಳಷ್ಟೇ ಇರುವ ರಿವತ್ ಸಮುಚ್ಚಯ 2 ದಶಲಕ್ಷ ವರ್ಷ ಹಿಂದಿನದೆಂಬುದನ್ನು ಪುರಾಕಾಂತೀಯ ತಂತ್ರದಿಂದ ಮೊದಲು ನಿರ್ಧರಿಸಲಾಗಿತ್ತು. ಈಗ ಇದರ ಕಾಲಮಾನ 2.5 ದಶಲಕ್ಷ ವರ್ಷಗಳೆಂದು ನಿಗದಿಯಾಗಿದೆ. ಇದೇ ಪ್ರದೇಶದಲ್ಲಿರುವ ಪಬ್ಬಿ ಪರ್ವತಗಳಲ್ಲಿರುವ 2.2–1.2 ದಶಲಕ್ಷ ವರ್ಷಗಳಷ್ಟು ಹಳೆಯದಾದ ಭೂಪದರಗಳಲ್ಲಿ ಅಸ್ಫುಟ ಶಿಲೋಪಕರಣ ಸಮುಚ್ಚಯಗಳು ಕಂಡುಬಂದಿವೆ.

1980ರ ದಶಕದಲ್ಲಿ ಪಾಕಿಸ್ತಾನ, ಭಾರತ ಮತ್ತು ನೇಪಾಲಗಳಲ್ಲಿರುವ ಶಿವಾಲಿಕ್ಸ್ ನಿಕ್ಷೇಪಗಳಲ್ಲಿ ಅಶೂಲಿಯನ್ ಮಾದರಿಯ ಉಪಕರಣಗಳು ದೊರೆಯುವ ತನಕವೂ ವಾಯವ್ಯ ಭಾರತದಲ್ಲಿ ಅಶೂಲಿಯನ್ ಸಮುಚ್ಚಯಗಳು ಇಲ್ಲವೆಂದೇ ಭಾವಿಸಲಾಗಿತ್ತು. ಅಂತ್ಯ ಅಶೂಲಿಯನ್ ಲಕ್ಷಣಗಳನ್ನು ತೋರುವ ಈ ಸಮುಚ್ಚಯಗಳ ಸ್ವರೂಪವನ್ನು ಆಮೂಲಾಗ್ರವಾಗಿ ಇನ್ನೂ ತಿಳಿಯಲಾಗಿಲ್ಲ. ಈ ಪ್ರದೇಶದಲ್ಲಿ ನದಿಯ ಉರುಟುಗಲ್ಲಿನಿಂದ ಮಾಡಿದ ಕೊಚ್ಚುವ ಉಪಕರಣಗಳ ಸಮುಚ್ಚಯಗಳೇ ಹೇರಳವಾಗಿವೆ. ಸೋಅನ್ ಅಥವಾ ಸೋಹನ್ ಎಂಬ ಹೆಸರಿನಿಂದ ಕರೆಯಲ್ಪಡುವ ಇಂತಹ ಸಮುಚ್ಚಯಗಳು ಈವರೆಗೆ ತಿಳಿದಂತೆ ಆದಿ ಹಳೆಶಿಲಾಯುಗದವಲ್ಲವೆಂದೂ ಇವುಗಳ ಕಾಲಮಾನ ಅಂತ್ಯ ಹಿಮಯುಗವೆಂದೂ ಇವು ಅಶೂಲಿಯನ್‌ಗಿಂತ ಬಹಳ ಅನಂತರದವೆಂದೂ ಪ್ರಸ್ತುತ ಅಧ್ಯಯನದಿಂದ ಗೊತ್ತಾಗಿದೆ. ಈ ಉಪಕರಣಗಳು ಮಧ್ಯ ಹಳೆಶಿಲಾಯುಗದ ತಂತ್ರಜ್ಞಾನದಿಂದ ತಯಾರಾದುದಾಗಿವೆ. ಭಾರತದ ಪರ್ಯಾಯ ಪ್ರದೇಶದಲ್ಲಿ ಕೈಗೊಡಲಿಗಳಿಲ್ಲದ ಸಮುಚ್ಚಯಗಳು ಅತಿ ವಿರಳವಾಗಿವೆ. ಇದಕ್ಕೆ ಅಪವಾದವೆಂದರೆ ನರ್ಮದಾ ನದಿಯ ತೀರದಲ್ಲಿರುವ ದುರ್ಕಾಡಿ, ಮಹಾದೇವ್ ಪಿಪರಿಯಾ ಮತ್ತು ಸಾಮ್ನಾಪುರ್ ಹಾಗೂ ಬೇತ್ವ ನದಿಯ ದಂಡೆಯ ಮೇಲಿರುವ ಲಹ್‌ಚೂರ ನೆಲೆಗಳು. ಕೈಗೊಡಲಿಗಳಿಲ್ಲದ ಈ ಸಮುಚ್ಚಯಗಳೂ ಅಶೂಲಿಯನ್ ಅನಂತರದಲ್ಲಿಯೇ ಇದ್ದಂತಹವು ಎಂಬ ಅಭಿಪ್ರಾಯವಿದೆ. ಅಂದರೆ ಭಾರತದ ಪರ್ಯಾಯ ಪ್ರದೇಶದಲ್ಲಿ ಮಾತ್ರ ಆದಿ ಹಳೆಶಿಲಾಯುಗದಲ್ಲಿ ಮಾನವರಿದ್ದರು; ಇವರು ಅಶೂಲಿಯನ್ ತಂತ್ರಜ್ಞಾನವನ್ನು ರೂಢಿಸಿಕೊಂಡವರಾಗಿದ್ದರು.

ಭಾರತದ ಅಶೂಲಿಯನ್ ಸಂಪ್ರದಾಯದಲ್ಲಿ ಆದಿ ಮತ್ತು ಅಂತ್ಯ ಹಂತಗಳನ್ನು ಗುರುತಿಸಲಾಗಿದೆ. ಆದಿ ಅಶೂಲಿಯನ್ ಸಮುಚ್ಚಯಗಳು ಹೆಚ್ಚಾಗಿ ನದಿ ಸ್ತರಗಳಲ್ಲಿವೆ. ಮಹಾರಾಷ್ಟ್ರದ ಚಿರ್ಕಿ ಒಂದು ಮುಖ್ಯ ನೆಲೆ. ಇಲ್ಲಿ ಕೊರ್ವಿನಸ್ ಅವರು 80ರ ದಶಕದಲ್ಲಿ ಉತ್ಖನನವನ್ನು ನಡೆಸಿದರು. ಭೀಮ ಮತ್ತು ಕೃಷ್ಣ ನದಿಗಳ ನಡುವಿರುವ ಶೋರಾಪುರ ದೋಅಬ್ ಪ್ರದೇಶದಲ್ಲಿ ಪದ್ದಯ್ಯನವರು ಈ ಹಂತದ ಅನೇಕ ನೆಲೆಗಳನ್ನು ಕಂಡುಹಿಡಿದಿದ್ದಾರೆ. ಈ ಹಂತದ ಉಪಕರಣಗಳು ಆಫ್ರಿಕದ ಆದಿ ಅಶೂಲಿಯನ್ ಉಪಕರಣಗಳನ್ನು ಹೋಲುತ್ತವೆ. ಇ.ಎಸ್.ಆರ್. ಕಾಲನಿರ್ಣಯದ ಪ್ರಕಾರ 1.2 ದಶಲಕ್ಷ ವರ್ಷಗಳಷ್ಟು ಹಳೆಯದಾದ ಇಸಾಂಪುರ (**ನೋಡಿ**) ಭಾರತದ ಅತಿ ಪ್ರಾಚೀನ ನೆಲೆಯಾಗಿದೆ. ಆರ್ಗನ್ ಮತ್ತು ಆರ್ಗನ್ ಕಾಲತಂತ್ರದ ಪ್ರಕಾರ ಬೋರಿ ಮತ್ತು ಮೋರ್‌ಗಾಂವ್‌ಗಳಲ್ಲಿನ ಸಮುಚ್ಚಯಗಳ ಕಾಲಮಾನ ಸು.8,00,000–6,70,000 ವರ್ಷಗಳು. ರಾಜಸ್ತಾನದ ದಿದ್ವಾನ ನೆಲೆಯೂ ಸು.8 ಲಕ್ಷ ವರ್ಷಗಳಷ್ಟು ಹಿಂದಿನದೆಂದು ಇ.ಎಸ್.ಆರ್.ತಂತ್ರದಿಂದ ನಿಗದಿಯಾಗಿದೆ. ಈ ಕಾಲಮಾನಗಳಿಂದ ತಿಳಿಯುವುದೇನೆಂದರೆ ಅಶೂಲಿಯನ್ ಸಂಪ್ರದಾಯ ಆದಿ ಹಿಮಯುಗ ಕಾಲದಲ್ಲಿಯೇ ಭಾರತದ ಪರ್ಯಾಯ ಪ್ರದೇಶದಲ್ಲಿ ಪಸರಿಸಿತ್ತು. ಅಂತ್ಯ ಅಶೂಲಿಯನ್ ಸಂಪ್ರದಾಯಕ್ಕೆ ಸೇರುವ ನೆಲೆಗಳಲ್ಲಿ ಪ್ರಸಿದ್ಧವಾದುದು ಭೀಂಬೇಟ್ಕ (**ನೋಡಿ**). ಇಲ್ಲಿನ ಸಮುಚ್ಚಯದಲ್ಲಿ ದ್ವಿಮುಖ ಉಪಕರಣಗಳಿಗಿಂತ ಚಕ್ಕೆ ಉಪಕರಣಗಳೇ ಹೆಚ್ಚಿನ ಪ್ರಮಾಣದಲ್ಲಿವೆ.



ಆದಿ ಹಳೆಶಿಲಾಯುಗ, ಶಿಲೋಪಕರಣಗಳು

**ಚೀನ ಮತ್ತು ಆಗ್ನೇಯ ಏಷ್ಯ:** ಇಲ್ಲಿಯ ಆದಿ ಹಳೆಶಿಲಾಯುಗ ಸಮುಚ್ಚಯಗಳನ್ನು ಮೋವಿಯಸ್ಸನು 1948ರಲ್ಲಿ ಕೊಚ್ಚುಗತ್ತಿ–ಕೊಚ್ಚುವ ಉಪಕರಣ ಸಂಪ್ರದಾಯದವೆಂದು ಗುರುತಿಸಿದ್ದಾನೆ. ಆದರೆ ಇವುಗಳಲ್ಲಿ ಕೆಲವೊಂದು ಅಂತ್ಯ ಹಿಮಯುಗ–ಈಗಿನ ಯುಗದ ಸಂಧಿಕಾಲದಲ್ಲಿ ಆಗ್ನೇಯ ಏಷ್ಯದಲ್ಲಿದ್ದ ಉರುಟುಗಲ್ಲಿನ ಉಪಕರಣಗಳಿಂದ ಕೂಡಿದ 'ಹೊಬಿನಿಯನ್' ಹಂತಕ್ಕೆ ಸೇರಿರುವ ಸಾಧ್ಯತೆಯಿದೆ.

ಚೀನ ಮತ್ತು ಆಗ್ನೇಯ ಏಷ್ಯದ ಆದಿ ಹಳೆಶಿಲಾಯುಗದಲ್ಲಿ ಮಾನವನ ಇರುವಿಕೆಯನ್ನು ದೃಢಪಡಿಸುವ ಅವಶೇಷಗಳೆಂದರೆ ಆತನ ಅಸ್ಥಿ ಪಳೆಯುಳಿಕೆಗಳು. ಹೋಮೋ ಎರೆಕ್ಟಸ್ ವಂಶದ ಆದಿಮಾನವನ ಪಳೆಯುಳಿಕೆಗಳು ಜಾವದಲ್ಲಿ ಹಲವಾರು ಕಡೆಗಳಲ್ಲಿ ಪತ್ತೆಯಾಗಿವೆ. ಚೀನದಲ್ಲಿ ಇವು ಹನ್ನೆರಡಕ್ಕೂ ಹೆಚ್ಚಿನ ಸ್ಥಳಗಳಲ್ಲಿ ಕಂಡುಬಂದಿವೆ. ಆದರೆ ಈ ಕಾಲದ ಶಿಲೋಪಕರಣಗಳಿರುವ ನೆಲೆಗಳು ಮಾತ್ರ ವಿರಳ. ಜಾವದಲ್ಲಿ ಪಳೆಯುಳಿಕೆಗಳ ಜೊತೆ ಶಿಲೋಪಕರಣಗಳು ಇಲ್ಲದಿರುವುದರಿಂದ ಆದಿಮಾನವರು ಜೀವನೋಪಾಯಕ್ಕೆ ಯಾವ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದರೆಂಬುದು ಇಂದಿಗೂ ಚರ್ಚಾಸ್ಪದವಾಗಿದೆ. ಈ ಸಮಸ್ಯೆಯ ಜಾಡನ್ನು ಹಿಡಿದು ನೇಬಂಗ್‌ನಲ್ಲಿ ನಡೆಸಿದ ದೊಡ್ಡ ಪ್ರಮಾಣದ ಉತ್ಖನನದಲ್ಲಿ ದೊರೆತದ್ದು ಕೇವಲ ಒಂದು ದೊಡ್ಡ ಚಕ್ಕೆ ಮಾತ್ರ ! ಇತ್ತೀಚೆಗೆ ಜಾವದಲ್ಲಿ ದೊರೆತ ಹಿಮಯುಗದ ಹಲವಾರು ಪ್ರಾಣಿ ಪಳೆಯುಳಿಕೆಗಳ ಮೇಲೆ ಶಂಖದ ಉಪಕರಣಗಳಿಂದಾದ ಕಚ್ಚುಗುರುತುಗಳು ಗಮನಕ್ಕೆ ಬಂದಿವೆ. ಪ್ರಾಯಶಃ ಶಿಲೆಗಿಂತ ಹೆಚ್ಚು ಬೊಂಬು, ಶಂಖ ಮುಂತಾದ ವಸ್ತುಗಳಿಂದ ತಯಾರಿಸಿದ ಉಪಕರಣಗಳನ್ನು ಆದಿಮಾನವ ಬಳಸುತ್ತಿದ್ದ ಕಾರಣ ಶಿಲೋಪಕರಣಗಳು ಇಲ್ಲಿ ವಿರಳವಾಗಿ ದೊರೆಯುತ್ತವೆ.

ಜಾವದ ಸಮೀಪದಲ್ಲಿರುವ ಫ್ಲೋರ್ಸ್ ಐಲೆಂಡ್‍ನಲ್ಲಿಯೂ ಶಿಲೋಪಕರಣಗಳಿವೆ. ಹಿಮಯುಗದಲ್ಲಿ ಸಮುದ್ರ ಅತ್ಯಂತ ಕೆಳಮಟ್ಟವನ್ನು ತಲುಪಿದ ಸಂದರ್ಭದಲ್ಲಿಯೂ ಫ್ಲೋರ್ಸ್‍ಐಲೆಂಡ್ ಖಂಡಭಾಗಕ್ಕೆ ಸೇರದೆ ದ್ವೀಪವಾಗಿಯೇ ಇದ್ದಿತ್ತು. ಇಲ್ಲಿ ಸಣ್ಣಚಕ್ಕೆಯ ಉಪಕರಣಗಳು ಸು.8–7,00,000 ವರ್ಷಗಳಷ್ಟು ಹಿಂದೆ ಶೇಖರವಾದ ಅಗ್ನಿಪರ್ವತ ಮೂಲದ ಬೂದಿಯ ಪದರದ ಕೆಳಗಿವೆ. ಜಾವದಿಂದ ಹೊರಟ ಹೋಮೋ ಎರೆಕ್ಟಸ್‍ನು ಸಮುದ್ರದ ಮೂಲಕ ಈ ದ್ವೀಪವನ್ನು ಪ್ರವೇಶಿಸಿದನೆಂದು ಈ ಆಧಾರಗಳಿಂದ ಹೇಳಬಹುದು. ಭೂಭಾಗದೊಂದಿಗೆ ಸಂಪರ್ಕ ಕಡಿದುಹೋದ ಕಾರಣ ಈ ಮಾನವರು ಕಾಲಕ್ರಮೇಣ ಕುಬ್ಜರಾದರು. ಇಂತಹ ಕುಬ್ಜ ಜನರ ಪಳೆಯುಳಿಕೆಗಳು ಗುಹೆಯೊಂದರಲ್ಲಿ ಅಂತ್ಯ ಹಿಮಯುಗಕ್ಕೆ ಸೇರುವ ಪದರದಲ್ಲಿ ಕಂಡುಬಂದಿವೆ.



ಕೈಗೊಡಲಿಯ ಅತ್ಯುತ್ತಮ ಮಾದರಿ, ಕರ್ಗಾ

ಇತ್ತೀಚೆಗೆ ಚೀನದಲ್ಲಿ ಎರಡು ಶಿಲೋಪಕರಣ ಸಂಪ್ರದಾಯಗಳನ್ನು ಗುರುತಿಸಲಾಗಿದೆ–ಮಧ್ಯ–ದಕ್ಷಿಣ ಮತ್ತು ಆಗ್ನೇಯ ಚೀನದಲ್ಲಿರುವ ನದಿಯ ಉರುಟುಗಲ್ಲು–ಶಿಲಾಗಟ್ಟಿ (ಪೆಬಲ್‍ಕೋರ್) ಸಂಪ್ರದಾಯ ಮತ್ತು ಉತ್ತರ ಹಾಗೂ ನೈರುತ್ಯ ಚೀನದ ಚಕ್ಕೆ ಉಪಕರಣ ಸಂಪ್ರದಾಯ. ಎರಡನೆಯ ಸಂಪ್ರದಾಯ ಮಧ್ಯ ಏಷ್ಯ ಮತ್ತು ಮಧ್ಯ–ಪೂರ್ವ ಯುರೋಪ್‍ಗಳಲ್ಲಿರುವ, ಈಗಾಗಲೇ ಪ್ರಸ್ತಾಪಿಸಿರುವ ಎಲ್.ಪಿ.ಎಮ್.ಟಿ. ವರ್ಗಕ್ಕೆ ಸೇರುತ್ತದೆ. ಇಂತಹ ನೆಲೆಗಳು ಒಂದು ದಶಲಕ್ಷ ವರ್ಷಗಳಿಗಿಂತಲೂ ಹಿಂದಿನವೆಂಬುದು ವೈಜ್ಞಾನಿಕ ತಂತ್ರಗಳಿಂದ ದೃಢಪಟ್ಟಿದೆ. ಉದಾಹರಣೆಗೆ ನಿಹೆವಾನ್ ಪ್ರಾಂತದಲ್ಲಿರುವ ಚಕ್ಕೆ ಉಪಕರಣಗಳು ಪುರಾಕಾಂತೀಯತೆಯ ಪ್ರಕಾರ 1.2 ದಶಲಕ್ಷ ವರ್ಷ ಹಳೆಯವು. ದಕ್ಷಿಣ ಚೀನದಲ್ಲಿ ಕೈಗೊಡಲಿ ಸಹಿತವಾದ ಆದಿ ಹಳೆಶಿಲಾಯುಗ ಸಮುಚ್ಚಯಗಳು ಇತ್ತೀಚೆಗೆ ಬೆಳಕಿಗೆ ಬಂದಿವೆ. ಬೋಸ್ ಪಾತ್ರ (ಬೇಸಿನ್), ಶಾಂಕ್ಸಿ ಪಾತ್ರದಲ್ಲಿರುವ ಡಿಂಗ್‍ಕನ್ ಮತ್ತು ಲಾಂಟಿಯನ್ ಪ್ರಮುಖ ನೆಲೆಗಳಾಗಿವೆ. ಕೈಗೊಡಲಿಗಳನ್ನು ನದಿಯ ಉರುಟುಗಲ್ಲಿನ ಎರಡೂ ಬದಿಯಲ್ಲಿ ಚಕ್ಕೆಗಳನ್ನು ಕೆತ್ತಿ ರೂಪಿಸಲಾಗಿದೆ. ಇವುಗಳೊಂದಿಗೆ ಕಡಿಕತ್ತಿಗಳಾಗಲೀ ಚಕ್ಕೆಗಳಾಗಲೀ ಇಲ್ಲದಿರುವುದರಿಂದ ಇವು ಭಾರತ ಮತ್ತು ಆಫ್ರಿಕದ ಅಶೂಲಿಯನ್ ಸಮುಚ್ಚಯಗಳಿಂದ ಭಿನ್ನವಾಗಿವೆ. ಇದೇ ಕಾರಣಕ್ಕಾಗಿ ಕೊರ್ವಿನಸ್ ಮತ್ತಿತ್ತರರು ದಕ್ಷಿಣ ಚೀನದ ಸಮುಚ್ಚಯಗಳನ್ನು ಅಶೂಲಿಯನ್ ಎಂದು ಪರಿಗಣಿಸಿಲ್ಲ. ಯುರೋಪಿನ ಅಶೂಲಿಯನ್ ಸಮುಚ್ಚಯಗಳಲ್ಲೂ ಕಡಿಕತ್ತಿ–ಚಕ್ಕೆಗಳು ಇರುವುದಿಲ್ಲವೆಂಬುದು ಗಮನಾರ್ಹ. ವಿಶೇಷವೆಂದರೆ ದಕ್ಷಿಣ ಚೀನದ ಅನೇಕ ನೆಲೆಗಳಲ್ಲಿ ಕೈಗೊಡಲಿ ಸಹಿತವಾದ ಸಮುಚ್ಚಯ ಗಳೊಂದಿಗೆ ಟೆಕ್ಟೈಟ್‍ನ ಪದರವಿದೆ. ಸು.8,00,000 ವರ್ಷಗಳ ಹಿಂದೆ ಉಲ್ಕೆಯೊಂದು ಭೂಮಿಗೆ ಅಪ್ಪಳಿಸಿದಾಗ ಅದರಿಂದ ಉತ್ಪತ್ತಿಯಾದ ಟೆಕ್ಟೈಟ್ (ಗಾಜಿನಂತಹ ವಸ್ತುವಿನ ಪುಟ್ಟಪುಟ್ಟ ಗೋಲಿಗಳು) ಆಸ್ಟ್ರೇಲಿಯ ಮತ್ತು ಆಗ್ನೇಯ ಏಷ್ಯಗಳಲ್ಲಿ ಹರಡಿತು. ಕೊರಿಯದಲ್ಲಿ ಇಮ್ಜಿನ್ ಹಾಗೂ ಹಾಂತನ್ ನದಿ ಪಾತ್ರಗಳಲ್ಲಿ ಚೊಂಗೊಕ್ಸಿ, ಕುಂಪರಿ, ಚುವೊಲಿ, ಕವೊಲಿ ಮುಂತಾದ ಸ್ಥಳಗಳಲ್ಲಿ ಕೈಗೊಡಲಿಗಳಿರುವ ಸಮುಚ್ಚಯಗಳಿವೆ. ಇವುಗಳ ಕಾಲಮಾನ ಸು.3,50,000 ವರ್ಷಗಳು.

**ಭಾರತ:** ಭಾರತದಲ್ಲಿ ಆದಿ ಹಳೆಶಿಲಾಯುಗದ ಅಧ್ಯಯನ ಆರಂಭವಾಗಿ ಸು.150 ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಶಿಲೋಪಕರಣಗಳಿರುವ ನೂರಾರು ನೆಲೆಗಳು ಭಾರತದಾದ್ಯಂತ ಪತ್ತೆಯಾಗಿವೆ. ಆದರೆ ಈ ಉಪಕರಣಗಳನ್ನು ತಯಾರಿಸಿದ ಆದಿಮಾನವರ ಅವಶೇಷಗಳು ಮಾತ್ರ ಪೂರ್ಣವಾಗಿ ಸಂರಕ್ಷಿತವಾಗಿಲ್ಲ. ಈವರೆಗೆ ಮಧ್ಯಪ್ರದೇಶದ ಹತ್ನೋರ **(ನೋಡಿ)** ಎಂಬಲ್ಲಿ ಮಾತ್ರ ಆದಿಮಾನವನದೆಂದು ತಿಳಿಯಲಾದ ಶಿರಭಾಗದ ಪಳೆಯುಳಿಕೆಯೊಂದು ನರ್ಮದಾ ನದಿಯ ಪದರದಲ್ಲಿ ಸಿಕ್ಕಿದೆ. 2003ರಲ್ಲಿ ಓಡ್ಶೈನಲ್ಲಿ ಸು.1.65 ಲಕ್ಷ ವರ್ಷಗಳ ಹಿಂದಿನ 1 ತಿಂಗಳು ಮಗುವಿನ ತಲೆಬುರುಡೆಯ ಪಳೆಯುಳಿಕೆ ಶೋಧನೆ ಎರಡನೆಯದು.

ಹಿಮಯುಗದ ವೈಪರೀತ್ಯಗಳ ಪ್ರಭಾವಕ್ಕೊಳಗಾಗಿಯೂ ಭಾರತದಲ್ಲಿಯ ಭೂ–ಪರಿಸರ ಹಾಗೂ ಹವಾಮಾನ ಆದಿಮಾನವನ ನೆಲೆಸುವಿಕೆಗೆ ಅನುಕೂಲಕರವಾಗಿದ್ದವು. ಭಾರತೀಯ ಉಪಖಂಡದಲ್ಲಿ ಸಮಶೀತೋಷ್ಣವಲಯದ ಹುಲ್ಲುಗಾವಲುಗಳು ವ್ಯಾಪಕವಾಗಿದ್ದು ಇವು ಮಾನವ ವಸತಿಗೆ ಅನುಗುಣವಾಗಿದ್ದಂತಹ ಪ್ರದೇಶಗಳು. ಹಿಮಾಲಯ ಪ್ರದೇಶವನ್ನು ಹೊರತುಪಡಿಸಿದರೆ ಭಾರತದ ಉಳಿದ ಭಾಗಗಳು ಹಿಮರಹಿತವಾಗಿದ್ದು ಯುರೋಪಿನಂತೆ ಕೊರೆವ ಚಳಿಯಾಗಲೀ ಮಂಜು ಬೀಳುವ ಋತುವಾಗಲೀ ಇಲ್ಲಿರಲಿಲ್ಲ. ಮುಂಗಾರು ಮಳೆಯಾಧಾರಿತ ಹವಾಮಾನ ಮತ್ತು ಹದವಾದ ಉಷ್ಣತೆ ಈ ಭೂಭಾಗದ ಇತರ ಅನುಕೂಲಕಾರಿ ಅಂಶಗಳು.

ಆದಿ ಹಳೆಶಿಲಾಯುಗದ ನೆಲೆಗಳ ಸಾಂದ್ರತೆ ಪರ್ಯಾಯ ಭಾರತದಲ್ಲಿ ಹೆಚ್ಚು. ಗಂಗಾನದಿ ಬಯಲಿನಲ್ಲಿ ಇವು ಈವರೆಗೆ ಕಂಡುಬಂದಿಲ್ಲ. ಕಾರಣ ಆದಿ ಹಳೆಶಿಲಾಯುಗದಲ್ಲಿದ್ದ ಭೂಮೇಲ್ಮೈ ಈಗ ಹಿಮಾಲಯದ ನದಿಗಳು ತಂದುಹಾಕುವ ಮೆಕ್ಕಲುಮಣ್ಣಿನ ರಾಶಿಯಡಿಯಲ್ಲಿ ಮುಚ್ಚಿಹೋಗಿದೆ. ಅಲ್ಲದೆ, ನದಿಯ ಹೂಳುಮಣ್ಣಿನಿಂದ ತುಂಬಿದಂತಹ ಪ್ರದೇಶದಲ್ಲಿ ಉಪಕರಣಗಳಿಗೆ ಶಿಲೆ ದೊರೆಯುವುದು ಕಷ್ಟಸಾಧ್ಯ. ಸದ್ಯಕ್ಕೆ ಸು.80,000 ವರ್ಷಗಳಷ್ಟು ಮುಂಚಿನ ನದಿ ಪದರಗಳನ್ನು ಗಂಗಾಬಯಲಿನಲ್ಲಿ ಗುರುತಿಸಲಾಗಿದೆ. ಲಕ್ಷಾವಧಿ ವರ್ಷಗಳಷ್ಟು ಹಿಂದಿನ ಆದಿ ಹಳೆಶಿಲಾಯುಗದ ಅವಶೇಷಗಳು ಇಂಥ ಈಚಿನ ಪದರದಲ್ಲಿ ಬೆರೆಯುವ ಸಂಭವವೇ ಇಲ್ಲ.

**ಶಿವಾಲಿಕ್ ಪ್ರದೇಶ (ಉತ್ತರ ಭಾರತ):** ಹಿಮಾಲಯ ಮತ್ತು ಸಿಂಧೂ–ಗಂಗಾ ನದಿ ಬಯಲುಗಳನ್ನು ಪ್ರತ್ಯೇಕಿಸುವ ಬೆಟ್ಟಶ್ರೇಣಿಗಳು ಶಿವಾಲಿಕ್ ಎಂಬ ಹೆಸರಿನಿಂದ ಕರೆಯಲ್ಪಡುತ್ತವೆ. ಇವು ಮೂಲತಃ ಹಿಮಾಲಯದ ನದಿಗಳಿಂದ ಶೇಖರಗೊಂಡ ಮೆಕ್ಕಲುಮಣ್ಣಿನ ಪದರಗಳಾಗಿದ್ದು ಕಾಲಕ್ರಮೇಣ ಶಿಲೆಯ ರೂಪ ತಾಳಿವೆ. ಮಯೋಸೀನ್‍ನಿಂದ ಹಿಮಯುಗದ (ಪ್ಲೀಸ್ಟೊಸೀನ್) ಅವಧಿಯವರೆಗಿನ ಪದರಗಳು ಈ ಬೆಟ್ಟಗಳಲ್ಲಿ ಸಂಚಯನಗೊಂಡಿವೆ. ಈ ಪೈಕಿ ಪಿಂಜೋರ್ ಎಂಬ ಹೆಸರಿನ ಪದರ 2.5 ದಶಲಕ್ಷವರ್ಷಗಳ ಹಿಂದಿನದಾಗಿದ್ದು ಪುರಾತತ್ತ್ವ ದೃಷ್ಟಿಯಿಂದ ಮಹತ್ತ್ವದ್ದು. ಆದರೆ ಈ ಪದರದಲ್ಲಿ ಪಳೆಯುಳಿಕೆಗಳು ಮತ್ತು ಉಪಕರಣಗಳು ವಿರಳ.

1938ರಲ್ಲಿ ಶಿವಾಲಿಕ್–ಪೋತ್ವಾರ್ ಪ್ರಾಂತದಲ್ಲಿ ಡಿಟೆರ್ರ ಮತ್ತು ಪ್ಯಾಟರ್‍ಸನ್‍ರು ಸರ್ವೇಕ್ಷಣೆ ನಡೆಸಿ ಕಡಿಗತ್ತಿ ಉಪಕರಣಗಳೇ ಪ್ರಧಾನವಾಗಿರುವಂತಹ (ಕೈಗೊಡಲಿ–ರಹಿತ) ಸಮುಚ್ಚಯಗಳನ್ನು ಹಲವು ಕಡೆಗಳಲ್ಲಿ ಪತ್ತೆಹಚ್ಚಿದರು. ಅಂತಹ ಸಮುಚ್ಚಯಗಳನ್ನು ಇವರು ಸೋಅನ್ ಎಂದು ಕರೆದರು. ಈ ಅನ್ವೇಷಣೆಯು ಮೋವಿಯಸ್‍ನ ಸಿದ್ಧಾಂತಕ್ಕೆ ಪುಷ್ಟಿಯೊದಗಿಸಿತು. ಅದೇನೆಂದರೆ, ಪೂರ್ವ ಮತ್ತು ಆಗ್ನೇಯ ಏಷ್ಯದಲ್ಲಿ (ಜಮ್ಮು–ಕಾಶ್ಮೀರವೂ ಸೇರಿದಂತೆ) ಕೈಗೊಡಲಿ–ರಹಿತ ಸಮುಚ್ಚಯಗಳೂ ಭಾರತದ ಪರ್ಯಾಯ ಭಾಗ, ಪಶ್ಚಿಮ–ದಕ್ಷಿಣ ಯುರೋಪ್ ಮತ್ತು ಆಫ್ರಿಕದಲ್ಲಿ ಕೈಗೊಡಲಿ–ಸಹಿತ ಸಮುಚ್ಚಯಗಳೂ ಸಮಕಾಲೀನವಾಗಿ ಕಂಡುಬರುವವು; ಇವೆರಡು ಸಮುಚ್ಚಯಗಳು ಭಿನ್ನ ತಂತ್ರಜ್ಞಾನಗಳನ್ನು ಪ್ರತಿನಿಧಿಸುತ್ತವೆ. ಈ ಎರಡೂ ವಲಯಗಳನ್ನು ಪ್ರತ್ಯೇಕಿಸುವುದೇ ಮೋವಿಯಸ್ ರೇಖೆ; ಈ ರೇಖೆ ಉತ್ತರ ಭಾರತದಲ್ಲಿ ವಾಯವ್ಯ–ಆಗ್ನೇಯಾಭಿಮುಖವಾಗಿ ಓರೆಯಾಗಿ ಹಾಯ್ದು ಹೋಗುತ್ತದೆ.

ಡಿಟೆರ್ರ ಮತ್ತು ಪ್ಯಾಟರ್ಸನ್ ಅವರ ಸಂಶೋಧನೆ ಭಾರತೀಯ ಹಳೆಶಿಲಾಯುಗ ಅಧ್ಯಯನಕ್ಕೆ ಒಂದು ಹೊಸ ತಳಹದಿಯನ್ನು ಒದಗಿಸಿಕೊಟ್ಟಿತು. ಆದರೆ 1970ರ ಈಚೆಗೆ ಈ ಪ್ರದೇಶದಲ್ಲಿ ಆರಂಭಗೊಂಡ ಭೂ–ಪುರಾತತ್ತ್ವ ಶೋಧನೆಗಳ ಬೆಳಕಿನಲ್ಲಿ ಇವರ ಬಹುತೇಕ ತರ್ಕಗಳು ಮಾನ್ಯತೆಯನ್ನು ಕಳೆದುಕೊಂಡಿವೆ. ಈ ನಿಟ್ಟಿನಲ್ಲಿ ಮೊಹಪಾತ್ರರವರ ಸಂಶೋಧನೆ ಗಮನಾರ್ಹವಾಗಿದೆ. 1970ರ ಕೊನೆಯಲ್ಲಿ ಇವರು ಹಿಮಾಲಯ ಪ್ರದೇಶದಲ್ಲಿ 22 ಅಶೂಲಿಯನ್ (ಕೈಗೊಡಲಿ–ಸಹಿತ) ನೆಲೆಗಳನ್ನು ಕಂಡುಹಿಡಿದಾಗ ಮೋವಿಯಸ್‍ನ ಸಿದ್ಧಾಂತಕ್ಕೆ ಒಂದು ಪ್ರಶ್ನೆ ಮೂಡಿತು. ಐತ್‍ಬಾರ್‍ಪುರ್ ಒಂದರಲ್ಲೇ ಇವರಿಗೆ ಸು.50 ಉಪಕರಣಗಳು ದೊರೆತವು. ಮೊಹಪಾತ್ರರವರ ಪ್ರಕಾರ ಅಶೂಲಿಯನ್ ನೆಲೆಗಳು ಸೋಅನ್ ನೆಲೆಗಳಿಗಿಂತ ಬಹಳ ಅನಂತರದವು. ಗೈಲರ್ಡ್ ಮತ್ತು ಶೀಲ ಮಿಶ್ರರವರು ಇದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಇತ್ತೀಚೆಗೆ ವ್ಯಕ್ತಪಡಿಸಿದ್ದಾರೆ. ಇವರ ಪ್ರಕಾರ ಅಶೂಲಿಯನ್ ಜನರೇ ಇಲ್ಲಿ ಮೊದಲು ನೆಲೆಸಿದ್ದವರು. ಇವರ ಪ್ರಕಾರ ಸೋಅನ್ ನೆಲೆಗಳು ಆದಿ ಹಳೆಶಿಲಾಯುಗದವೇ ಅಲ್ಲ. ಸೋಅನ್ ಉಪಕರಣಗಳ ನಮೂನೆ ಮತ್ತು

ಭೂ-ಸನ್ನಿವೇಶವನ್ನು ಗಮನಿಸಿದಾಗ ಇವು ಅಂತ್ಯ ಹಿಮಯುಗದ ಅವಶೇಷಗಳಾಗಿರುವ ಸಾಧ್ಯತೆ ಎದ್ದು ತೋರುತ್ತದೆ. ಬ್ರಿಟಿಷ್ ಆರ್ಕಿಯಲಾಜಿಕಲ್ ಮಿಷನ್ ತಂಡ 1980ರ ದಶಕದಲ್ಲಿ ಶಿವಾಲಿಕ್ ಪ್ರಾಂತದಲ್ಲಿ, ಝೀಲಮ್ ನದಿಯ ಪದರಗಳಲ್ಲಿ ಅಶೂಲಿಯನ್ ಉಪಕರಣಗಳನ್ನು ಕಂಡುಹಿಡಿಯಿತು. ದೀನ ಮತ್ತು ಜಲಾಲ್‌ಪುರ್ ಎಂಬಲ್ಲಿ ಸಿಕ್ಕ ಉಪಕರಣಗಳು ಪುರಾ ಕಾಂತೀಯ ಗಣನೆಯಂತೆ 7–4 ಲಕ್ಷ ವರ್ಷಗಳ ಅವಧಿಯವು. ನೇಪಾಲದ ಸತ್ಪತಿ ನದಿ ಬಯಲಿನಲ್ಲಿ ಕೊರ್ವಿನಸ್‌ರವರು ಹಲವಾರು ಅಶೂಲಿಯನ್ ನೆಲೆಗಳನ್ನು 1990ರ ದಶಕದಲ್ಲಿ ಮೊದಲ ಬಾರಿಗೆ ಬೆಳಕಿಗೆ ತಂದರು; ಇವು ತಮ್ಮ ಮೂಲಸ್ಥಾನದಲ್ಲಿಯೇ ಇರುವಂತಹ ಉಪಕರಣಗಳು. ಅರ್ಜುನ್ ಮತ್ತು ಗದಾರಿ ನೇಪಾಲದ ಮುಖ್ಯ ಅಶೂಲಿಯನ್ ನೆಲೆಗಳು. ಇತ್ತೀಚಿನ ಅಧ್ಯಯನಗಳಿಂದ ಚೌಹಾಣ್‌ರವರು ಶಿವಾಲಿಕ್ಸ್ ಪ್ರದೇಶದಿಂದ ಲಭ್ಯವಾಗಿರುವ ಎಲ್ಲ ಅಶೂಲಿಯನ್ ಉಪಕರಣಗಳು ಮಧ್ಯ-ಅಂತ್ಯ ಅಶೂಲಿಯನ್ ಕಾಲಾವಧಿಯದೆಂಬ ಅಭಿಪ್ರಾಯವನ್ನು ತಳೆದಿರುವರು. ಆದರೆ ಕೊರ್ವಿನಸ್ ಮತ್ತು ಗೈಲರ್ಡ್‌ರವರ ಪ್ರಕಾರ ಐತ್‌ಬಾರ್‌ಪುರ ಮತ್ತು ಸತ್ಪತಿ ಉಪಕರಣಗಳು ಅಂತ್ಯ ಅಶೂಲಿಯನ್ ಕಾಲಾವಧಿಯವಲ್ಲ.

**ಪರ್ಯಾಯ ಭಾರತ:** ಮಿಶ್ರ ಮತ್ತು ಪದ್ದಯ್ಯನವರು ಅಶೂಲಿಯನ್ ಸಂಸ್ಕೃತಿಯಲ್ಲಿ ಆದಿ ಮತ್ತು ಅಂತ್ಯ ಹಂತಗಳನ್ನು ಗುರುತಿಸಿದ್ದಾರೆ. ಚಿರ್ಕಿ-ನೆವಾಸ, ಬೋರಿ, ಮೋರ್‌ಗಾಂವ್, ಲಲಿತ್‌ಪುರ್, ಸಿಂಗಿ ತಲಾಬ್, ಅನಗವಾಡಿ, ಹುಣಸಗಿ, ಇಸಾಂಪುರ, ಯಡಿಯಾಪುರ ಮುಂತಾದ ನೆಲೆಗಳಲ್ಲಿ ನಡೆಸಿದ ಸಂಶೋಧನೆಯ ಆಧಾರದ ಮೇಲೆ 3 ಉಪಕರಣ ವರ್ಗಗಳನ್ನು ಆದಿ ಅಶೂಲಿಯನ್ ಹಂತದಲ್ಲಿ ಗುರುತಿಸಲಾಗಿದೆ. ಅವು ಕೊಚ್ಚುವ ಉಪಕರಣಗಳು, ಕೈಗೊಡಲಿ, ಕಡಿಕತ್ತಿ, ಚೂರಿಯ ಅಂಚಿನ ಉಪಕರಣ ಮುಂತಾದ ಕೈಯಲ್ಲಿ ಹಿಡಿಯುವಷ್ಟು ದೊಡ್ಡದಾದ ಉಪಕರಣಗಳು ಹಾಗೂ ಬೆರಳಿನಲ್ಲಿ ಹಿಡಿಯಬಹುದಾದ ಚಕ್ಕೆಗಳು ಹಾಗೂ ಉಪಕರಣ ತಯಾರಿಕೆಯಲ್ಲಿ ಬಳಸಲಾಗುತ್ತಿದ್ದ ಸುತ್ತಿಗೆ ಕಲ್ಲುಗಳು. ಚಕ್ಕೆ ಉಪಕರಣಗಳು ಯಾವುದೇ ನಿರ್ದಿಷ್ಟ ಆಕಾರದಲ್ಲಿರುವುದಿಲ್ಲ ಹಾಗೂ ಹರಿತ ಮಾಡಲು ಇವುಗಳ ಅಂಚಿನಲ್ಲಿ ಪುಡಿಗೆಲಸವು ಕಂಡುಬರುವುದಿಲ್ಲ. ಕೈಯಲ್ಲಿ ಹಿಡಿಯಬಹುದಾದ ಉಪಕರಣಗಳ ಎರಡೂ ಅಂಚು ಸಾಮಾನ್ಯವಾಗಿ ಹರಿತವಾಗಿರುತ್ತವೆ; ಈ ಉಪಕರಣಗಳಲ್ಲಿ ಮರುಚಕ್ಕೆಯನ್ನು ತೆಗೆದಿರುವುದಿಲ್ಲ. ಕೈಗೊಡಲಿಗಳಲ್ಲಿ ಮಾತ್ರ ಒಂದು ತುದಿಯು ಮೂರು-ಮುಖವಾಗಿದ್ದು ಇದನ್ನು ಮರುಚಕ್ಕೆ ತೆಗೆದು ಮಾಡಲಾಗಿರುತ್ತದೆ. ಅಂತ್ಯ ಅಶೂಲಿಯನ್ ಹಂತದ ಕೈಗೊಡಲಿಗಳಲ್ಲಿ ಎರಡೂ ಮುಖಗಳ ಮೇಲೆ ಮರುಚಕ್ಕೆ ತೆಗೆದು ಅಂಚನ್ನು ಹರಿತಗೊಳಿಸಲಾಗಿರುತ್ತಿತ್ತು. ಇವು ಸಾಮಾನ್ಯವಾಗಿ ತಿಳಿದಿರುವಂತೆ ಆದಿ ಅಶೂಲಿಯನ್ ಹಂತದ ಕೈಗೊಡಲಿಗಳ ಸುಧಾರಿತ ರೂಪವಲ್ಲ. ಈ ಎರಡೂ ಕೈಗೊಡಲಿಗಳ ಆಕಾರ-ತಯಾರಿಕೆ ಪ್ರತ್ಯೇಕ ಕಾರ್ಯೋದ್ದೇಶವನ್ನು ಆಧರಿಸಿದ್ದಾಗಿತ್ತು. ಅಂತ್ಯ ಅಶೂಲಿಯನ್ ಹಂತದ ಕೈಗೊಡಲಿಗಳ ಅಂಚು ಕಡಿಕತ್ತಿ ಅಥವಾ ಚೂರಿಯ ಅಂಚನ್ನು ಹೋಲುವಂತದ್ದು; ಆದರೆ ಆದಿ ಅಶೂಲಿಯನ್ ಹಂತದ ಕೈಗೊಡಲಿಗಳು ಚೂಪು ತುದಿಯುಳ್ಳ ಅಗೆಯುವ ಸಾಧನಗಳಾಗಿದ್ದಿರಬೇಕು. ಮೋರ್‌ಗಾಂವ್ ಮತ್ತು ಇಸಾಂಪುರಗಳಲ್ಲಿ ಈ ಉಪಕರಣಗಳೊಂದಿಗೆ ದೊಡ್ಡದೊಡ್ಡ ಚಕ್ಕೆಗಳನ್ನು ತೆಗೆದಿರುವಂತಹ ದೊಡ್ಡ ದೊಡ್ಡ ಮೂಲಶಿಲೆಗಳೂ ಕಂಡುಬಂದಿವೆ. ಇತರ ನೆಲೆಗಳಲ್ಲಿ ಈ ಗಾತ್ರದ ಮೂಲಶಿಲೆಗಳಿಲ್ಲ. ಪ್ರಾಯಶಃ ತಳಬಂಡೆಯಿರುವ ಸ್ಥಳದಲ್ಲಿಯೇ ಅವನ್ನು ತ್ಯಜಿಸಲಾಗಿರಬೇಕು. ಉದಾ: ಚಿರ್ಕಿಯ ಉಪಕರಣಗಳಲ್ಲಿ ಬಳಸಲಾದ ಡಾಲರೈಟ್ ಶಿಲೆಯ ಪದರ ಇಲ್ಲಿಂದ ಕೆಲವು ಕಿಮೀ ದೂರದಲ್ಲಿದೆ. ಸಾಸ್‌ವಡ್, ಗುಣೋರ್ ಮುಂತಾದ ನೆಲೆಗಳಲ್ಲಿಯೂ ಸಿದ್ಧ ಉಪಕರಣಗಳಷ್ಟೇ ದೊರೆತಿದ್ದು ಮೂಲಶಿಲೆಯಾಗಲೀ ತ್ಯಾಜ್ಯವಸ್ತುಗಳಾಗಲೀ ದೊರೆತಿಲ್ಲ. ಸಣ್ಣಸಣ್ಣ ಚಕ್ಕೆಗಳನ್ನು ಮಾತ್ರ ಮೂಲ ನಿವೇಶನದಲ್ಲಿಯೇ ತಯಾರುಮಾಡುತ್ತಿದ್ದಿರಬೇಕು.

ಭಾರತದ ಆದಿ ಅಶೂಲಿಯನ್ ತಂತ್ರಜ್ಞಾನ ಅನಂತರದಲ್ಲಿ ಬಂದ ಯುರೋಪಿನ ಅಶೂಲಿಯನ್ ತಂತ್ರಜ್ಞಾನಕ್ಕಿಂತ ಭಿನ್ನವಾದುದು. ಯುರೋಪಿನ ಅಶೂಲಿಯನ್ ಸಮುಚ್ಚಯಗಳಲ್ಲಿ ಕೈಗೊಡಲಿಗಳೇ ಪ್ರಧಾನವಾಗಿದ್ದು ಕಡಿಕತ್ತಿಗಳು ವಿರಳ. ಆಫ್ರಿಕದ ಆದಿ ಅಶೂಲಿಯನ್ 1.4 ಮಿಲಿಯ ವರ್ಷಗಳಷ್ಟು ಹಳೆಯದಾದರೆ ಭಾರತದಲ್ಲಿ ಈ ಹಂತ 1.2 ಮಿಲಿಯ ವರ್ಷಗಳಷ್ಟು ಪುರಾತನವಾದುದು.

ಭಾರತದಲ್ಲಿ ಆದಿ ಅಶೂಲಿಯನ್ ಹಂತದ ವ್ಯಾಪ್ತಿ ಸೀಮಿತವಾಗಿದೆ. ಇದರ ಮುಂದಿನ ಅಂತ್ಯ ಅಶೂಲಿಯನ್ ಹಂತದಲ್ಲಿ ಎರಡೂ ಮುಖಗಳಲ್ಲಿ ಚಕ್ಕೆಯನ್ನು ತೆಗೆದು ಒರೆಯಂಚನ್ನು ಪಡೆಯುವ ತಂತ್ರ ಸಾಮಾನ್ಯವಾಯಿತು. ಅಲ್ಲದೆ ಸಣ್ಣ ಚಕ್ಕೆಯ ಉಪಕರಣಗಳ ಅಂಚಿನಲ್ಲಿ ಸೂಕ್ಷ್ಮ ಚಕ್ಕೆಗಳನ್ನು ತೆಗೆದಿರುವುದನ್ನೂ ಕಾಣಬಹುದು. ದ್ವಿಮುಖ ಉಪಕರಣಗಳಿಗಿಂತ ಸಣ್ಣಸಣ್ಣ ಚಕ್ಕೆಯ ಉಪಕರಣಗಳೇ ಈ ಹಂತದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಮಧ್ಯ ಹಳೆಶಿಲಾಯುಗದ ಮುಖ್ಯ ತಂತ್ರವಾದ ಲೆವಾಲ್ವ ಬಳಕೆಗೆ ಬಂದದ್ದೂ ಈ ಹಂತದಲ್ಲಿಯೇ. ಈ ಎಲ್ಲ ಅಂಶಗಳು ಅಂತ್ಯ ಅಶೂಲಿಯನ್ ಹಂತದ ಮುಖ್ಯ ಲಕ್ಷಣಗಳಾಗಿವೆ.

**ಅರಾವಳಿ ಪ್ರದೇಶ:** ಪ್ರಾಚೀನ ಬೆಟ್ಟಶ್ರೇಣಿಗಳಲ್ಲೊಂದಾದ ಅರಾವಳಿಯು ರಾಜಸ್ತಾನದಲ್ಲಿ ನೈರುತ್ಯ-ಈಶಾನ್ಯ ದಿಕ್ಕಿನಲ್ಲಿ ಚಾಚಿದೆ. ಇಲ್ಲಿಯ ಲೂಣಿ ನದಿಬಯಲಿನಲ್ಲಿ ವಿ.ಎನ್.ಮಿಶ್ರರವರು ಸಣ್ಣ ಕೈಗೊಡಲಿ ಮತ್ತು ಕಡಿಕತ್ತಿಗಳಿರುವ ಅಂತ್ಯ ಅಶೂಲಿಯನ್ ಸಮುಚ್ಚಯಗಳನ್ನು ತಳಬಂಡೆಯ ಮೇಲೆ ಸಂಚಯನಗೊಂಡ ಜೇಡಿಮಣ್ಣಿನ ಪದರದಲ್ಲಿ ಗುರುತಿಸಿದ್ದಾರೆ. ಇದೇ ಪ್ರಕಾರದ ಸಮುಚ್ಚಯಗಳು ಥಾರ್ ಮರುಭೂಮಿಯ ಇತರ ಭಾಗಗಳಿಂದಲೂ ವರದಿಯಾಗಿವೆ. ಅರಾವಳಿಯ ಉತ್ತರ ಅಂಚಿನಲ್ಲಿರುವ ದೆಹಲಿಯ ಸುತ್ತಮುತ್ತಲಿನ ಸ್ಥಳಗಳಲ್ಲಿ ಅಶೂಲಿಯನ್ ನೆಲೆಗಳು ಬೆಳಕಿಗೆ ಬಂದಿವೆ.

ಅರಾವಳಿ ಶ್ರೇಣಿಯಲ್ಲಿರುವ ದಿದ್ವಾನದ ಬಳಿಯ ಸಿಂಗಿ ತಾಲಾಬ್ ಮುಖ್ಯ ಅಶೂಲಿಯನ್ ನೆಲೆಗಳಲ್ಲೊಂದು. ಇಲ್ಲಿ ಪುರಾತನ ಉಪ್ಪು ನೀರಿನ ಕೆರೆದಂಡೆಯ ಮೇಲೆ ಆದಿ ಅಶೂಲಿಯನ್ ಸಮುಚ್ಚಯಗಳನ್ನು ಉತ್ಖನನದಿಂದ ಹೊರತೆಗೆಯಲಾಗಿದೆ. ದಿದ್ವಾನ ಪ್ರದೇಶದಲ್ಲಿರುವ ಇಂಡೋಲಿ-ಕಿ-ಧಾನಿ, ಜಾಮ್ಕಿಪುರ, ಅಮರ್‌ಪುರ ಮತ್ತು ಮಂಗಳ್‌ಪುರಗಳಲ್ಲಿ ಅಂತ್ಯ ಅಶೂಲಿಯನ್ ನೆಲೆಗಳಿವೆ. ತಳಬಂಡೆಯ ಮೇಲಿದ್ದು ಅನಂತರದಲ್ಲಿ ಮರಳುದಿಬ್ಬದ ಅಡಿಯಲ್ಲಿ ಮುಚ್ಚಿಹೋದ ಸುಣ್ಣದುಂಡೆಗಳ ಪದರದಲ್ಲಿ (ಕ್ಯಾಲ್ಕ್ರೀಟ್) ಇಂತಹ ಸಮುಚ್ಚಯಗಳಿವೆ.

ಅರಾವಳಿ ಪ್ರಾಂತದಲ್ಲಿ ಗಂಭೀರ ಅಧ್ಯಯನಕ್ಕೆ ಒಳಗಾಗಿರುವ ಮತ್ತೊಂದು ಪ್ರದೇಶವೆಂದರೆ ಓರ್ಸಂಗ್ ನದಿಬಯಲು. ಅಂತ್ಯ ಅಶೂಲಿಯನ್ ಸಮುಚ್ಚಯಗಳಲ್ಲದೆ ಆದಿ-ಮಧ್ಯ ಹಾಗೂ ಮಧ್ಯ-ಅಂತ್ಯ ಹಳೆಶಿಲಾಯುಗದ ಸ್ಥಿತ್ಯಂತರ ಹಂತಗಳನ್ನು ಅಜಿತ್‌ಪ್ರಸಾದ್ ಅವರು ಇಲ್ಲಿ ಗುರುತಿಸಿದ್ದಾರೆ. ಈ ನೆಲೆಗಳು ಬೆಟ್ಟದ ಬುಡದಲ್ಲಿ, ನದಿಪದರಗಳಲ್ಲಿ ಹಾಗೂ ಬೆಟ್ಟದ ನೆತ್ತಿ ಭಾಗಗಳಲ್ಲಿವೆ.

ಗುಜರಾತಿನ ಸಾಬರಮತಿಯ ನದಿ ಪದರಗಳಲ್ಲಿ 1890ರ ದಶಕದಲ್ಲಿ ರಾಬರ್ಟ್ ಬ್ರೂಸ್ ಫೂಟ್ ಅಶೂಲಿಯನ್ ಉಪಕರಣಗಳನ್ನು ಪತ್ತೆಹಚ್ಚಿದ. 1950ರ ದಶಕದಲ್ಲಿ ಸಾಂಕಳಿಯ ಹಾಗೂ ಜ್ಯೋಯ್‌ನರ್ ಅವರು ಇಲ್ಲಿ ಅಧ್ಯಯನವನ್ನು ಮುಂದುವರೆಸಿದರು. ಒಟ್ಟಾರೆ, ಅರಾವಳಿ ಪ್ರದೇಶದಲ್ಲಿ ಅಂತ್ಯ ಅಶೂಲಿಯನ್ ಹಾಗೂ ಅಂತ್ಯ ಅಶೂಲಿಯನ್-ಮಧ್ಯ ಹಳೆಶಿಲಾಯುಗದ ಸ್ಥಿತ್ಯಂತರ ಹಂತದ ನೆಲೆಗಳೇ ಅಧಿಕವಾಗಿವೆ.

**ಸೌರಾಷ್ಟ್ರ:** ಗಿರ್ನಾರ್ ಬೆಟ್ಟಶ್ರೇಣಿಯ ಬುಡದಲ್ಲಿಯೂ ಸಮುದ್ರತೀರದುದ್ದಕ್ಕೂ ಇರುವ, ಹಿಮಯುಗದಲ್ಲಿ ಸಂಚಯನಗೊಂಡ ಮಿಲಿಯೊಲೈಟ್ ಸುಣ್ಣಕಲ್ಲಿನ ಪದರಗಳು ಸೌರಾಷ್ಟ್ರದ ಹಳೆಶಿಲಾಯುಗದ ಅವಶೇಷಗಳಿಗೆ ಒಂದು ವಿಶಿಷ್ಟ ಸನ್ನಿವೇಶವನ್ನೊದಗಿಸಿವೆ. ಸಮುದ್ರದ ಸೂಕ್ಷ್ಮಜೀವಿಗಳಿಂದಾದ ಈ ಶಿಲಾಪದರಗಳು ಸಮಕಾಲೀನ ಸಮುದ್ರಮಟ್ಟದ ಸೂಚಕವಾಗಿವೆ. ವಾತಾವರಣದ ಅಧ್ಯಯನದಲ್ಲಿ ಈ ಪದರಗಳ ಕೊಡುಗೆ ಅಪಾರ. ಮಿಲಿಯೊಲೈಟ್ ಸುಣ್ಣಕಲ್ಲಿನ ವಿವಿಧ ಪದರಗಳ ನಡುವೆ ನದಿಪದರಗಳಿವೆ. ಭಾವನಗರದ ಉಮ್ರೇಠಿ ಮತ್ತು ಅಡಿಚಡಿವಾವ್‌ಗಳಲ್ಲಿ ಇಂತಹ ಒಂದು ನದಿಪದರದಲ್ಲಿ ಒರಟಾದ ಆದಿ ಅಶೂಲಿಯನ್ ಉಪಕರಣಗಳಿವೆ. ಮಧುಬನ್‌ನಲ್ಲಿ ಇಂತಹದೇ ಒಂದು ಭೂಸನ್ನಿವೇಶದಲ್ಲಿ ಅಂತ್ಯ ಅಶೂಲಿಯನ್ ನೆಲೆಯಿದೆ. ಈ ಅಶೂಲಿಯನ್ ಸಮುಚ್ಚಯಗಳ ಮೇಲಿರುವ ಮಿಲಿಯೊಲೈಟ್ ಸುಣ್ಣಕಲ್ಲಿನ ಥೋರಿಯಂ-ಯುರೇನಿಯಂ ಕಾಲಮಾನ ಸು. 60,000 ವರ್ಷಗಳು. ಇವು ಭಾರತದ ಅತ್ಯಂತ ಕಿರಿಯ ಅಶೂಲಿಯನ್ ನೆಲೆಗಳಾಗಿವೆ. ಸೌರಾಷ್ಟ್ರದ ಮತ್ತೊಂದು ಶ್ರೀಮಂತ ನೆಲೆ ಸಮದಿಯಾಲ. ಕಲುಭರ್ ನದಿಯ ದಂಡೆಯ ಮೇಲಿರುವ ಈ ಅಂತ್ಯ ಅಶೂಲಿಯನ್ ನೆಲೆಯಲ್ಲಿ ಚಕ್ರವರ್ತಿಯವರು ಸಣ್ಣ ಪ್ರಮಾಣದ ಉತ್ಖನನ ನಡೆಸಿದ್ದಾರೆ.

**ವಿಂಧ್ಯಶ್ರೇಣಿ:** ವಿಂಧ್ಯಶ್ರೇಣಿಯ ಸೆರಗಿನಲ್ಲಿರುವ ಸೋನ್ ಮತ್ತು ಬೇಲನ್ ನದಿ ಬಯಲುಗಳಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯ ಸತತ ಸಂಶೋಧನೆಯನ್ನು ನಡೆಸಿದ್ದು ಬೇಲನ್ ನದಿಯ ಸ್ತರ-ಕಾಲಾನುಕ್ರಮ ಭಾರತೀಯ ಶಿಲಾಯುಗ ಅಧ್ಯಯನಕ್ಕೆ ಒಂದು ಮಾದರಿಯಾಗಿದೆ. ಅಶೂಲಿಯನ್‌ನಿಂದ ನವಶಿಲಾಯುಗದವರೆಗಿನ ಅವಶೇಷಗಳು ಈ ನದಿಯ ಪದರಗಳಲ್ಲಿವೆ. ಬೇಲನ್ ಕಣಿವೆಯಲ್ಲಿ ಒಟ್ಟು 44 ನೆಲೆಗಳನ್ನು ಈವರೆಗೆ ಗುರುತಿಸಲಾಗಿದ್ದು ಅದರಲ್ಲಿ 17 ತಳಬಂಡೆಯ ಮೇಲೆಯೂ ಉಳಿದವು; ನದಿಯ ಪದರಗಳಲ್ಲಿಯೂ ಶೇಖರಗೊಂಡಿವೆ. ಸೋನ್‌ನದಿಯ ಬಯಲಿನಲ್ಲಿ 47 ನೆಲೆಗಳು ಪತ್ತೆಯಾಗಿವೆ. ಎರಡೂ ನದಿಬಯಲುಗಳಲ್ಲಿ ಹೆರೆಚಕ್ಕೆಗಳು ಪ್ರಧಾನವಾಗಿರುವುದರಿಂದ ಹಾಗೂ ಕೈಗೊಡಲಿ-ಕಡಿಕತ್ತಿಗಳು ಪುಟ್ಟದಾಗಿ ನಯವಾಗಿರುವುದರಿಂದ ಈ ನೆಲೆಗಳು ಅಂತ್ಯ ಅಶೂಲಿಯನ್ ಹಂತದವೆಂದು ಹೇಳಬಹುದು. ಬೇಲನ್ ಸಮುಚ್ಚಯಗಳಲ್ಲಿ ದುಂಡುಗಲ್ಲಿನಿಂದ ತಯಾರಿಸಿದ ಕೊಚ್ಚುವ ಉಪಕರಣಗಳೂ ಇವೆ; ಕಡಿಕತ್ತಿಗಳಿಗಿಂತ ಕೈಗೊಡಲಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಹೀಗಾಗಿ ಸೋನ್ ನದಿಗಿಂತ ಬೇಲನ್ ನದಿಯ ಅಶೂಲಿಯನ್ ನೆಲೆಗಳೇ ಹೆಚ್ಚು ಪ್ರಾಚೀನವೆಂಬ ಅಭಿಪ್ರಾಯವಿದೆ. ಸೋನ್ ಬಯಲಿನಲ್ಲಿರುವ ಸಿಹವಲ್ ಮತ್ತು ನಖ್‌ಜರ್ ಖುರ್ದ್ ನೆಲೆಗಳಲ್ಲಿ ಸಣ್ಣ ಪ್ರಮಾಣದ ಉತ್ಖನನವನ್ನು ನಡೆಸಿದ್ದು ಅಂತ್ಯ ಅಶೂಲಿಯನ್ ಹಂತದ ಉಪಕರಣಗಳು ದೊರೆತಿವೆ. ವೈಜ್ಞಾನಿಕ ಕಾಲನಿರ್ಣಯದಂತೆ ಈ ನೆಲೆಗಳು ಸು.75,000 ವರ್ಷ ಹಳೆಯವು.

ವಿಂಧ್ಯಪ್ರದೇಶದ ವ್ಯಾಪ್ತಿಯಲ್ಲಿರುವ ರಾಯ್‌ಸೇನ್ ಜಿಲ್ಲೆಯಲ್ಲಿ ಜ್ಯಾಕಬ್‌ಸನ್‌ರವರು ಅಶೂಲಿಯನ್ ಹಂತದ ಹಲವಾರು ಮೇಲ್ಮೈನೆಲೆಗಳನ್ನು ಕಂಡುಹಿಡಿದಿದ್ದಾರೆ. ಮಹಾನದಿ ಹಾಗೂ ಸೋನ್ ನದಿಗಳ ಉಗಮ ಪ್ರದೇಶದಲ್ಲೂ ಪಾರ್ವತಿ ನದಿಬಯಲು, ದಾಮೋಹ್ ಹಾಗೂ ಸಿಂಗ್ರೌಲಿ ಪ್ರದೇಶಗಳಲ್ಲೂ ಅನೇಕ ನೆಲೆಗಳು ಬೆಳಕಿಗೆ ಬಂದಿವೆ.

ವಿಂಧ್ಯಪ್ರದೇಶದಲ್ಲಿ ಉತ್ಖನನಕ್ಕೊಳಗಾದ ಅಶೂಲಿಯನ್ ನೆಲೆಗಳಲ್ಲಿ ಮುಖ್ಯವಾದುವು ಭೀಂಬೆಟ್ಕ, ಪೈಸ್ರ ಮತ್ತು ಲಲಿತ್‌ಪುರ. ವಾಕಣಕರ್ ಹಾಗೂ ಮಿಶ್ರರವರು ಭೀಂಬೆಟ್ಕದ ಗುಹೆಯೊಂದರಲ್ಲಿ ಉತ್ಖನನ ನಡೆಸಿ ಅಶೂಲಿಯನ್ ಸ್ತರಗಳನ್ನು ಅನಾವರಣಗೊಳಿಸಿದ್ದಾರೆ.

ಕೆಲವೊಂದು ಸ್ತರಗಳಲ್ಲಿ ಮರಳುಗಲ್ಲಿನ ಚಪ್ಪಡಿಗಳನ್ನು ಉದ್ದೇಶಪೂರ್ವಕವಾಗಿ ಹಾಸಿ ನೆಲಗಟ್ಟುಗಳನ್ನು ಅಶೂಲಿಯನ್ ಜನರು ಮಾಡಿಕೊಂಡಿದ್ದನ್ನು ಮಿಶ್ರರವರು ವರದಿ ಮಾಡಿದ್ದಾರೆ. ಕೆಲವೊಂದು ಚಪ್ಪಡಿಕಲ್ಲುಗಳ ಮೇಲೆ ಸಣ್ಣಸಣ್ಣ ಗುಳಿಗಳಿದ್ದುದನ್ನು ವಾಕಣಕರ್‌ರವರು ಗುರುತಿಸಿದ್ದು ಇವುಗಳ ಕಾಲಸಂದರ್ಭವು ಇನ್ನೂ ಖಚಿತವಾಗಬೇಕಿದೆ. ಬಿಹಾರಿನ ಖರಗ್‌ಪುರ ಬೆಟ್ಟ ಪ್ರದೇಶದಲ್ಲಿರುವ ಪೈಸ್ರದಲ್ಲಿ 2 ಕಿಮೀಗೂ ಮಿಗಿಲಾದ ಪ್ರದೇಶದಲ್ಲಿ ಅಶೂಲಿಯನ್ ಉಪಕರಣಗಳು ಹರಡಿವೆ. ಲೆವಾಲ್ವ ತಿರುಳುಗಳೂ ಕ್ವಾರ್ಟ್ಜೈಟ್ ಚಕ್ಕೆ ಉಪಕರಣಗಳೂ ಇಲ್ಲಿರುವುದರಿಂದ ಇದು ಅಂತ್ಯ ಅಶೂಲಿಯನ್ ನೆಲೆ. ಉಪಕರಣ ತಯಾರಿಕೆಯಲ್ಲಿ ಬಳಸಲಾದ ಬಡಿಗಲ್ಲುಗಳು ಇವುಗಳ ಸುತ್ತಲೂ ತ್ಯಾಜ್ಯಚಕ್ಕೆಗಳೂ ಇಲ್ಲಿ ಯಥಾಸ್ಥಿತಿಯಲ್ಲಿ ಕಂಡುಬಂದವು. ಸಮುಚ್ಚಯದ ನಡುವೆ ಕಂಬಗಳನ್ನು ಹುಗಿಯಲು ಮಾಡಿರಬಹುದಾದ ಗುಳಿಗಳಿದ್ದು ನೆರಳಿಗಾಗಿ ಜನ ವ್ಯವಸ್ಥೆಯನ್ನು ಮಾಡಿಕೊಂಡಿದ್ದಿರ ಬಹುದೆಂದು ಊಹಿಸಲಾಗಿದೆ. ಬೇತ್ವ ನದಿಯ ಉಪನದಿಯೊಂದರ ದಂಡೆಯ ಮೇಲಿರುವ ಲಲಿತ್‌ಪುರ್‌ನಲ್ಲಿ ರಾಮೇಶ್ವರ ಸಿಂಗ್‌ರವರು ಉತ್ಖನನ ನಡೆಸಿ ಆದಿ ಅಶೂಲಿಯನ್ ಹಂತದ ಗ್ರಾನೈಟ್ ಉಪಕರಣಗಳನ್ನು ಸಂಗ್ರಹಿಸಿದ್ದಾರೆ. ಇವು ನದಿಯ ಹೂಳುಮಣ್ಣಿನಲ್ಲಿ ಬಹುಸಂಖ್ಯೆಯಲ್ಲಿವೆ.

**ಮಧ್ಯಭಾರತ:** ನರ್ಮದ, ತಾಪಿ, ವರ್ಧ ಹಾಗೂ ಪೂರ್ಣ ನದಿಗಳು ಹರಿಯುವ ಪ್ರದೇಶವಿದು. ಪೂರ್ಣ ನದಿಬಯಲಿನಲ್ಲಿ ಅಶೂಲಿಯನ್ ಕುರುಹುಗಳಿಲ್ಲ. ವರ್ಧ ಬಯಲಿನಲ್ಲಿ ಧನೋರ ಎಂಬಲ್ಲಿ 4 ಕಡಿಕತ್ತಿಗಳೂ ಬಿಶ್ನೂರ್ ಗ್ರಾಮದಲ್ಲಿ 1 ಕೋಬೇವ ಚಕ್ಕೆಯೂ ಸಿಕ್ಕಿವೆ.

ಪರ್ಯಾಯ ಭಾರತದಲ್ಲಿ ಮಹತ್ತ್ವಪೂರ್ಣವಾದ ಹಿಮಯುಗ ದಾಖಲೆಗಳಿರುವುದು ನರ್ಮದ ನದಿಬಯಲಿನಲ್ಲಿ. 1830ರಷ್ಟು ಹಿಂದೆಯೇ ಇಲ್ಲಿ ಪಳೆಯುಳಿಕೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿತ್ತು. ಹತ್ನೋರದ ಆದಿಮಾನವನ ತಲೆಬುರುಡೆ ನರ್ಮದೆಯ ಹಿಮಯುಗ ಅಧ್ಯಯನಕ್ಕೆ ಮತ್ತಷ್ಟು ಪುಷ್ಟಿಯೊದಗಿಸಿತು. ಈ ತಲೆಬುರುಡೆಯೊಡನೆ ಅಶೂಲಿಯನ್ ಉಪಕರಣಗಳಿದ್ದುದಾಗಿ ವರದಿಯಾಗಿದ್ದರೂ ಅವುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಜಬಲ್‌ಪುರ್‌ನಿಂದ ಹರ್ದಾವರೆಗಿನ ಪದರಗಳಲ್ಲಿ ಹಿಮಯುಗದ ಪ್ರಾಣಿಪಳೆಯುಳಿಕೆ ಗಳಿದ್ದರೆ ಓಂಕಾರೇಶ್ವರ-ಬರ್ವಾನಿಯ ನಡುವಿರುವ ಗಂಗತ್‌ಕೇರಿ ಮತ್ತು ಮನವರಗಳಲ್ಲಿ ಅಶೂಲಿಯನ್ ಸಮುಚ್ಚಯಗಳಿವೆ. ಇವು ಅಂತ್ಯ ಹಿಮಯುಗದವು. ಇದೇ ನದಿಬಯಲಿ ನಲ್ಲಿರುವ ಆದಮ್‌ಗಡ್‌ನಲ್ಲಿ (ಹೊಷಂಗಾಬಾದ್ ಜಿಲ್ಲೆ) ನಡೆದ ಉತ್ಖನನದಲ್ಲಿ ಅಂತ್ಯ ಅಶೂಲಿಯನ್ ಉಪಕರಣಗಳು ಲಭಿಸಿವೆ. ಹೆಚ್ಚಿನ ಉಪಕರಣಗಳು ನದಿಯಿಂದ ಆರಿಸಿತಂದ ದುಂಡುಗಲ್ಲಿನಿಂದ ತಯಾರಾದುವು.

ನರ್ಮದೆಯ ಪದರಗಳಲ್ಲಿ ಅಶೂಲಿಯನ್-ಪೂರ್ವದ ಉಪಕರಣಗಳೂ ಇವೆ ಎಂಬುದು ಖತ್ರೆ, ಆರ್ಮಂಡ್ ಮೊದಲಾದ ವಿದ್ವಾಂಸರ ಅಭಿಪ್ರಾಯ. ಇದನ್ನು ಖಚಿತ ಪಡಿಸಿಕೊಳ್ಳಲು ಸುಪೇಕರ್‌ರವರು ಮಹದೇವ್ ಪಿಪರಿಯದಲ್ಲಿ ನಡೆಸಿದ ಉತ್ಖನನದಲ್ಲಿ ಅಶೂಲಿಯನ್-ಪೂರ್ವದ ಉಪಕರಣಗಳು ದೊರೆಯಲಿಲ್ಲ. ಆದರೆ ಆದಿ ಮತ್ತು ಮಧ್ಯ ಹಳೆಶಿಲಾಯುಗದ ಸಮುಚ್ಚಯಗಳೆರಡೂ ಒಂದೇ ಭೂಸನ್ನಿವೇಶದ ಕಂಡುಬಂದವು. ಇಲ್ಲಿಂದ 5 ಕಿಮೀ ದೂರದಲ್ಲಿರುವ ಸಾಮ್ನಾಪುರದಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣ ಗಳು ಇಂತಹದೇ ಸನ್ನಿವೇಶದ ಉತ್ಖನನದಲ್ಲಿ ಸಿಕ್ಕವು. ಹೀಗಾಗಿ ಪಿಪರಿಯದ ಉಪಕರಣ ಗಳೆಲ್ಲವೂ ಮಧ್ಯ ಹಳೆಶಿಲಾಯುಗದವು. ಅಂತೆಯೇ ದುರ್ಕಾಡಿಯಲ್ಲಿ ಆರ್ಮಂಡ್‌ರವರು ಅಶೂಲಿಯನ್-ಪೂರ್ವದ್ದೆಂದು ನಿರ್ಧರಿಸಿದ ಕೈಗೊಡಲಿ-ರಹಿತ ಸಮುಚ್ಚಯಗಳೂ ಅಶೂಲಿಯನ್ ಅನಂತರದ ಕಾಲದವೆಂಬುದು ಶೀಲ ಮಿಶ್ರರವರು ಸಮೀಪದ ಬಡ್ವ ನೆಲೆಯಲ್ಲಿ ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

**ಪೂರ್ವ ಘಟ್ಟ:** ಭಾರತದ ಪೂರ್ವ ಕರಾವಳಿ ಪ್ರದೇಶದಲ್ಲಿ ನೆಲೆಗಳು ಸಮೃದ್ಧವಾಗಿವೆ. ಭಾರತದಲ್ಲಿ ಅಶೂಲಿಯನ್ ನೆಲೆಗಳು ಮೊಟ್ಟಮೊದಲಿಗೆ ಬೆಳಕಿಗೆ ಬಂದಿದ್ದು ತಮಿಳುನಾಡಿನಲ್ಲಿ. ಜೊತೆಗೆ ಭಾರತದಲ್ಲಿ ಉತ್ಖನನಕ್ಕೊಳಗಾದ ಪ್ರಥಮ ಅಶೂಲಿಯನ್ ನೆಲೆಯಾದ ಕುಲಿಯಾನವೂ ಇದೇ ಭೂಪಟ್ಟಿಯಲ್ಲಿದೆ. ಒರಿಸ್ಸದಲ್ಲಿರುವ ಈ ನೆಲೆಯಲ್ಲಿ 1939-42ರವರೆಗೆ ಬೋಸ್ ಮತ್ತು ಸೇನ್ ಅವರು ಉತ್ಖನನ ನಡೆಸಿದರು. ಹಳೆ ಶಿಲಾಯುಗದ ಅನುಕ್ರಮಣಿಕೆಯನ್ನು ಕಮಿಯಡೆ ಹಾಗೂ ಬರ್ಕಿಟ್‌ರು ಗುರುತಿಸಿದ್ದೂ ಪೂರ್ವ ಕರಾವಳಿಯಲ್ಲಿಯೇ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಸಂಸ್ಥೆ ನಾಗಾರ್ಜುನಕೊಂಡದಲ್ಲಿ 2 ನೆಲೆಗಳನ್ನು ಉತ್ಖನನಕ್ಕೆ ಒಳಪಡಿಸಿದೆ. ಚೆನ್ನೈನ ಸುತ್ತಮುತ್ತಲಿರುವ ಅತ್ತಿರಂಪಾಕ್ಕಂ, ವಡ ಮದುರೈ ಮತ್ತು ಗುಡಿಯಂ ನೆಲೆಗಳಲ್ಲಿ ಮರು ಅಧ್ಯಯನ ಉತ್ಖನನ ನಡೆಸಲಾಗಿದೆ.

**ಸಹ್ಯಾದ್ರಿ:** ಸಹ್ಯಾದ್ರಿಯ ಉತ್ತರಾರ್ಧದಲ್ಲಿ ಡೆಕನ್‌ಟ್ರ್ಯಾಪ್ ಶಿಲಾರಚನೆಯೂ ದಕ್ಷಿಣಾರ್ಧದಲ್ಲಿ ಗ್ರಾನೈಟ್-ಕ್ವಾರ್ಟ್ಜೈಟ್-ಸುಣ್ಣಕಲ್ಲಿನ ಸ್ತರಗಳೂ ಇವೆ. ಡೆಕನ್‌ಟ್ರ್ಯಾಪ್ ಪ್ರದೇಶದ ಮುಖ್ಯ ಶಿಲೆಯಾದ ಬಸಾಲ್ಟ್ ಬಹುಬೇಗ ಸವೆಯುವುದರಿಂದ ಇಲ್ಲಿ ಅಶೂಲಿಯನ್ ನೆಲೆಗಳು ವಿರಳವಾಗಿವೆ. ಪ್ರವರೆಯ ದಂಡೆಯಲ್ಲಿರುವ ಚಿರ್ಕಿ ಮತ್ತು ನೆವಾಸ, ಕುಕ್ಡಿ ಹಳ್ಳದಲ್ಲಿರುವ ಬೋರಿ, ಕರ್ಹ ಹಳ್ಳದಲ್ಲಿರುವ ಮೋರ್‌ಗಾಂವ್ ಮತ್ತು ಕೃಷ್ಣೆಯ ದಂಡೆಯಲ್ಲಿರುವ ಯದುರ್‌ವಾಡಿ ಈ ಪ್ರದೇಶದ ಹೆಸರಿಸಬಹುದಾದ ಆದಿ ಅಶೂಲಿಯನ್ ನೆಲೆಗಳು. ಅಂತ್ಯ ಅಶೂಲಿಯನ್ ನೆಲೆಗಳೆಂದರೆ ನಾಸಿಕ್ ಬಳಿಯಿರುವ ಗಂಗಾಪುರ್ ಹಾಗೂ ಕಣ್ ಹಳ್ಳದಲ್ಲಿರುವ ಯೆಸರ್/ಬಡ್ನೆ. ಕೃಷ್ಣ-ಭೀಮ ಬಯಲುಗಳ ನಡುವಿರುವ ಶೋರಾಪುರ ದೋಆಬ್ ಪ್ರದೇಶದಲ್ಲಿರುವ ಹುಣಸಗಿ-ಬೈಚಬಾಳು ಬಯಲು ನೆಲೆಗಳಲ್ಲಿ ಬಹಳಷ್ಟು ಅಧ್ಯಯನ ನಡೆಸಲಾಗಿದೆ. ಮಲಪ್ರಭ-ಘಟಪ್ರಭ ಬಯಲುಗಳಲ್ಲಿಯೂ ಅಶೂಲಿಯನ್ ನೆಲೆಗಳು ಅನೇಕ ಸಂಖ್ಯೆಯಲ್ಲಿದ್ದು ಜೋಷಿ, ಪಪ್ಪು, ಕೋರಿಸೆಟ್ಟರ್ ಹಾಗೂ ಪೆಟ್ರಾಗ್ಲಿಯರವರು ಇಲ್ಲಿ ಸರ್ವೇಕ್ಷಣೆ-ಉತ್ಖನನ ಕೈಗೊಂಡಿದ್ದಾರೆ. ಉತ್ಖನನಗೊಂಡಿರುವ ಮುಖ್ಯ ನೆಲೆ ಅನಗವಾಡಿ (**ನೋಡಿ**).

**ಕಾಲಮಾನ:** ಆದಿ ಅಶೂಲಿಯನ್ ಹಂತಕ್ಕೆ ನಿರ್ದಿಷ್ಟ ಕಾಲಮಾನ ಲಭ್ಯವಿಲ್ಲ. ಬೋರಿಯಲ್ಲಿರುವ ಇಂಡೋನೇಷ್ಯದ ಅಗ್ನಿಪರ್ವತ ಮೂಲದ ಬೂದಿ 67,000 ವರ್ಷಗಳ ಹಿಂದಿನದೆಂಬುದು ಆರ್ಗನ್ ಕಾಲನಿರ್ಣಯ ತಂತ್ರದಿಂದ ತಿಳಿದಿದೆ. ಇಸಾಂಪುರದ ಕಾಲಮಾನ 1.2 ಮಿಲಿಯ ವರ್ಷಗಳು. (ಎಸ್.ಎಮ್.ಐ.)

**ಆನಂದ ದೇವಾಲಯ:** ಮಯನ್ಮಾರ್ ದೇಶದ ಅತ್ಯಂತ ಮಹತ್ತರವಾದ ಪ್ರಾಚೀನ ವಾಸ್ತುಶಿಲ್ಪ ಕಲಾಕೃತಿ. ಈ ಭವ್ಯ ದೇವಾಲಯವನ್ನು ನಿರ್ಮಿಸಿದ ಕೀರ್ತಿ ಅನೋರಥನ ಮಗನಾದ ಕ್ಯಾನ್‌ಜಿತ್ಥ (1086-1122) ಮಹಾರಾಜನಿಗೆ ಸಲ್ಲುತ್ತದೆ. ಆನಂದ ದೇವಾಲಯ ಭಾರತಕ್ಕೂ ಬರ್ಮಾದೇಶಕ್ಕೂ ಇದ್ದ ಸಂಸ್ಕೃತಿ ವಿನಿಮಯದ ಪ್ರತೀಕವಾಗಿದೆ. ಶೈಲಿಯ ಆಧಾರದ ಮೇಲೆ ಇದು ಬಹುಶಃ ಭಾರತೀಯ ಶಿಲ್ಪಿಗಳಿಂದಲೇ ನಿರ್ಮಿಸಲಾದ ಕಟ್ಟಡವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ದೇವಾಲಯ ಸು.170 ಚ.ಮೀ ವಿಸ್ತಾರವಾದ ಹೂದೋಟದಲ್ಲಿ ನಿರ್ಮಿತವಾಗಿದೆ. ಕಟ್ಟಡ ಇಟ್ಟಿಗೆಯದು. ಚಚ್ಚೌಕವಾಗಿದ್ದರೂ ನಾಲ್ಕು ದಿಕ್ಕಿಗೂ ಹೊರಚಾಚಿರುವ ಕಮಾನಿನ ಆಕಾರದ ಹಜಾರಗಳು ಇದಕ್ಕೆ ನಕ್ಷತ್ರದ ಆಕಾರವನ್ನು ಕೊಟ್ಟಿವೆ. ಮಧ್ಯದಲ್ಲಿ 31 ಮೀ ಎತ್ತರದ ಬುದ್ಧನ ವಿಗ್ರಹವಿದೆ. ಮುಂಭಾಗದಲ್ಲಿ ಬುದ್ಧನಿಗೆ ನಮಸ್ಕಾರ ಮಾಡುವ ಭಂಗಿಯಲ್ಲಿ ಕ್ಯಾನ್‌ಜಿತ್ಥನ ವಿಗ್ರಹವಿದೆ. ಗೋಡೆಗಳ ಮೇಲೆ ಸು.1000 ಶಿಲ್ಪ ಫಲಕಗಳಿದ್ದು, ಅವುಗಳಲ್ಲಿ ಬುದ್ಧನ ಜೀವನಕಥೆಗಳು ಚಿತ್ರಿತವಾಗಿವೆ. ಸುಪ್ರಸಿದ್ಧ ಪಾಶ್ಚಾತ್ಯ ವಿದ್ವಾಂಸರು ಅಭಿಪ್ರಾಯಪಟ್ಟಿರುವಂತೆ ಬರ್ಮಾ ದೇಶದಲ್ಲಿದ್ದರೂ ಇದೊಂದು ಭಾರತೀಯ ದೇವಾಲಯವಾಗಿದೆ. (ಎ.ವಿ.ಎನ್.)

**ಆನಂದರು:** ಆಂಧ್ರಪ್ರದೇಶ ರಾಜ್ಯದ ಗುಂಟೂರು ಪ್ರದೇಶವನ್ನು ಸು.4-5ನೆಯ ಶತಮಾನಗಳಲ್ಲಿ ಆಳಿದ ರಾಜವಂಶ. ಈ ವಂಶದ ಅರಸರು ತಮ್ಮನ್ನು ಆನಂದ ಗೋತ್ರ, ಎಂದರೆ ಆನಂದ ಎಂಬ ಋಷಿಯ ವಂಶಜರೆಂದು ಹೇಳಿಕೊಂಡಿದ್ದಾರೆ. ಈ ವಂಶದ ಮೂವರು ಅರಸರ ಬಗೆಗೆ ಮಾತ್ರ ಶಾಸನಗಳಿಂದ ತಿಳಿಯುತ್ತದೆ. ಅವರೆಂದರೆ ಕಂದರ, ಅತ್ತಿವರ್ಮ ಹಾಗೂ ದಾಮೋದರ ವರ್ಮ. ಇವರ ಕಾಲದ ಬಗೆಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ.

ದಾಮೋದರವರ್ಮನ ಮಟಿಪಾಡ್ ಶಾಸನ ಭಾಗಶಃ ಸಂಸ್ಕೃತ ಮತ್ತು ಭಾಗಶಃ ಪ್ರಾಕೃತ ಭಾಷೆಯಲ್ಲಿ ರಚಿತವಾಗಿರುವುದರಿಂದ ಅದು 4ನೆಯ ಶತಮಾನದ ಉತ್ತರಾರ್ಧಕ್ಕಿಂತ ಮುಂದಿನದಾಗಿರಲಾರದೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಕಂದರ ಎಂಬುದು ಕೃಷ್ಣ ಶಬ್ದದಿಂದ ಬಂದ ರೂಪ. ಆನಂದ ರಾಜರ ರಾಜಧಾನಿಯಾದ ಕಂದರಪುರವನ್ನು ಈತ ಸ್ಥಾಪಿಸಿರಬೇಕು. ಈ ಊರು ಗುಂಟೂರು ಜಿಲ್ಲೆಯ ಚೆಜರ್ಲದ ಬಳಿ ಇದ್ದಿರಬೇಕೆಂದು ಊಹಿಸಿದೆ. ಕಂದರನು ಕೃಷ್ಣವೇಣ್ಣಾ ನದಿಯ ತ್ರಿಕೂಟ ಪರ್ವತದ ಕಂದರಪುರ ನಗರ ಹಾಗೂ ಎರಡೂ ಜನಗಳ ಅಧಿಪತಿಯಾಗಿದ್ದ ಪೃಥಿವೀವಯುವರಾಟ್ ಎಂಬ ಬಿರುದು ಈತನಿಗಿತ್ತು. ಪಲ್ಲವರನ್ನು ಧಾನ್ಯಕಟಕದಿಂದ ಈತ ಹೊರದೂಡಿರಬೇಕು. ಧಾನ್ಯಕಟಕದಲ್ಲಿ ನಡೆದ ಕೆಲವು ಯುದ್ಧಗಳಲ್ಲಿ ಈತ ಜಯಗಳಿಸಿದನೆಂದು ತೋರುತ್ತದೆ. ಇವನು ಬುದ್ಧನ ಭಕ್ತ, ಬೌದ್ಧ ಧರ್ಮ ಪೋಷಕ. ಆದರೂ ಗೋಸಹಸ್ರ ಮತ್ತು ಹಿರಣ್ಯಗರ್ಭ ದಾನಗಳನ್ನು ಮತ್ತು ತಂಗೂರು ಎಂಬ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಮಾಡಿದ. ಈ ವಂಶದ ರಾಜರ ಧ್ವಜಲಾಂಛನದಲ್ಲಿ ಕಪಿಯ ತಳಿಗೆ ಸೇರಿದ ಗೋಲಾಂಗೂಲ ಚಿತ್ರವಿದೆ ಎಂದು ಭಾವಿಸಿದೆ. ಆದರೆ ಇವರ ತಾಮ್ರಶಾಸನಗಳಲ್ಲಿನ ಮುದ್ರೆಗಳು ರೂಪಗೆಟ್ಟಿರುವುದರಿಂದ ಪ್ರಾಣಿರೂಪ ಸ್ಪಷ್ಟವಾಗಿಲ್ಲ.

ಅತ್ತಿವರ್ಮ ಹಸ್ತಿವರ್ಮದಿಂದ ಬಂದ ರೂಪ. ಈತ ಗೋರಂಟ್ಲದ ಶಾಸನವನ್ನು ಹೊರಡಿಸಿದ. ಇದರಿಂದ ರಾಜ ಶಂಭುವಿನ ಆರಾಧಕನೆಂದೂ ಹಿರಣ್ಯಗರ್ಭದಾನ ಮಾಡಿದವನೆಂದೂ ತಿಳಿದುಬರುತ್ತದೆ. ಚೆಜರ್ಲದ ಕಪೋತೇಶ್ವರ ದೇವಾಲಯ ಮೂಲತಃ ಬೌದ್ಧ ಚೈತ್ಯಾಲಯವಾಗಿದ್ದು, ಇದರೊಡನೆ ಈ ವಂಶದ ರಾಜರ ಸಂಬಂಧವನ್ನು ಸೂಚಿಸುತ್ತದೆ.

ಪಲ್ಲವರೊಡನೆ ನಿರಂತರ ಹೋರಾಡಿದ ಈ ರಾಜರು ಕೆಲವೇ ವರ್ಷಗಳಲ್ಲಿ ಅವನತಿ ಹೊಂದಿದರು. (ಸಿ.ಎಸ್.ವಿ.)

**ಆನಿಬೆಸೆಂಟ್:** 1847-1933. ಅಸಾಧಾರಣ ಪ್ರತಿಭೆ, ತೀಕ್ಷ್ಣಬುದ್ಧಿ, ತಾನು ಸರಿಯೆಂದು ತಿಳಿದಿದ್ದನ್ನು ಎಂಥ ಪರಿಸ್ಥಿತಿಯಲ್ಲೂ ಬಿಟ್ಟುಕೊಡದ ದಿಟ್ಟತನ, ಸಂಘಟನಾ ಶಕ್ತಿ, ಬೆರಗುಗೊಳಿಸುವ ವಾಕ್ಪಟುತ್ವ ಇವೆಲ್ಲವನ್ನೂ ಹೊಂದಿ, ಭಾರತವನ್ನು ತನ್ನ ಮಾತೃಭೂಮಿಯನ್ನಾಗಿ ಮಾಡಿಕೊಂಡು, ಅದರ ಭವ್ಯಸಂಸ್ಕೃತಿಯ ಪುನರುಜ್ಜೀವನಕ್ಕೆ, ಭಾರತೀಯರ ದಾಸ್ಯವಿಮೋಚನೆಗೆ, 40 ವರ್ಷಕಾಲ ಅವಿಶ್ರಾಂತವಾಗಿ ದುಡಿದ ಐರಿಷ್ ಮಹಿಳೆ. ಹುಟ್ಟಿದ್ದು ಲಂಡನ್ನಿನಲ್ಲಿ. ಮನೆಯಲ್ಲೇ ವಿದ್ಯಾಶಿಕ್ಷಣವಾಯಿತು. ಫ್ರೆಂಚ್, ಜರ್ಮನ್ ಮುಂತಾದ ಭಾಷೆಗಳನ್ನೂ ಕಲಿತು, ತನ್ನ 20ನೆಯ ವಯಸ್ಸಿನಲ್ಲೇ ಪಾಂಡಿತ್ಯವನ್ನೂ ಅಸಾಧಾರಣ

ಬುದ್ಧಿಶಕ್ತಿಯನ್ನೂ ಪಡೆದಿದ್ದಳು. ಫ್ರಾಂಕ್ ಬೆಸೆಂಟನೊಡನೆ ವಿವಾಹವಾಯಿತು. ಆತನೊಬ್ಬ ಆಂಗ್ಲಿಕನ್ ಕ್ರೈಸ್ತಪಾದ್ರಿ. ಮತವಿಷಯಗಳಲ್ಲೂ ಅಂಧ ಶ್ರದ್ಧೆಯನ್ನೊಪ್ಪದ ಅವಳಿಗೆ ಗಂಡನ ಅಂಧಾಭಿಮಾನ ಬೇಸರ ತಂದಿತು. ಇವಳ ಮತಶ್ರದ್ಧೆಯೂ ಬದಲಾವಣೆ ಹೊಂದಿತು. ದೇವಾಸ್ತಿಕ್ಯವನ್ನೇ ನಂಬದೆ ನಿರೀಶ್ವರವಾದಿಯಾದಳು. ಇದು ದಾಂಪತ್ಯ ವಿಚ್ಛೇದನದಲ್ಲಿ ಕೊನೆಗಂಡಿತು (1873).

ಮತಧರ್ಮಗಳ ವಿಷಯದಲ್ಲಿ ಸ್ವತಂತ್ರ ವಿಚಾರಿಯಾಗಿದ್ದ ಚಾರ್ಲ್ಸ್‌ಬ್ರಾಡ್‌ಲ ಎಂಬುವನೊಂದಿಗೆ ಕೆಲಸಮಾಡಿ ಸಂತಾನನಿಯಂತ್ರಣ ಚಳವಳಿಯಲ್ಲಿ ಭಾಗವಹಿಸಿದಳು. ಸಂತಾನ ದೈವದತ್ತವಾದದ್ದು, ಅದರ ನಿಯಂತ್ರಣ ದೈವದ್ರೋಹ ಎಂದು ನಂಬಿದ್ದ ಕ್ರೈಸ್ತ ಸನಾತನಿಗಳಿಗೆ ಇವಳ ಚಟುವಟಿಕೆಗಳು ಅಸಹನೀಯವಾದುವು. ಈಕೆಗೆ ತುಂಬ ಕಿರುಕುಳ ಕೊಟ್ಟರು. ಇವಳ ಮೇಲೆ ಕಾನೂನು ಕ್ರಮವೂ ಜರುಗಿ ತಪ್ಪಿತಸ್ಥಳಲ್ಲವೆಂದು ತೀರ್ಮಾನವಾಯಿತು. ಈ ಕಾಲ ಕ್ಕಾಗಲೇ ತನ್ನ ಅಸಾಧಾರಣ ಬುದ್ಧಿಶಕ್ತಿ, ನಿರ್ವಾಜ ಮನೋಭಾವ, ಮನಸೆಳೆ ಯುವ ವಾಕ್ಪಟುತ್ವ, ಸಂಘಟನಾ ಸಾಮರ್ಥ್ಯ–ಇವುಗಳಿಂದ ಜನಾನು ರಾಗವನ್ನು ಸಂಪಾದಿಸಿದ್ದಳು. ಇವಳ ತೀವ್ರ ಸುಧಾರಣಾ (ರ‍್ಯಾಡಿಕಲ್) ಧೋರಣೆ ಕೆಲಕಾಲ ಬರ್ನಾರ್ಡ್‌ಷಾ ರವರ ಸಂಪರ್ಕದಿಂದಾದ ಪರಿಣಾಮ ವಾಗಿ, ಯಾವ ಸುಧಾರಣೆಯಾಗಲೀ ಮಂದಗತಿಯಿಂದ ಸಾಗಬೇಕೆಂಬ ಫೇಬಿಯನ್ ಸಮಾಜವಾದದ ಕಡೆ ಒಲಿಯಿತು.

ಅಂತಿಮವಾಗಿ ಇವಳ ಅಭಿಪ್ರಾಯಗಳನ್ನು ರೂಪಿಸಿ, ಆಜನ್ಮಪರ್ಯಂತ ಅವುಗಳನ್ನು ಕಾರ್ಯಗತಗೊಳಿಸುವುದಕ್ಕೆ ಪ್ರೇರೇಪಿಸಿದ್ದು, 1889ರಲ್ಲಿ ಥಿಯಾಸಫಿಯ ಮೊದಲನೆಯ ಪ್ರವರ್ತಕಳಾದ ಮೇಡಾಂ ಬ್ಲಾವಟ್ಸ್ಕಿಯೊಂದಿಗೆ ಅವಳಿಗೊದಗಿದ ಸಂಪರ್ಕ. ಅತೀಂದ್ರಿಯ ಸಿದ್ಧಾಂತವನ್ನೊಳಗೊಂಡ ಬ್ಲಾವಟ್ಸ್ಕಿಯ ದಿ ಸೀಕ್ರೆಟ್ ಡಾಕ್ಟ್ರಿನ್ ಎಂಬ ಗ್ರಂಥದ ವಿಚಾರಸರಣಿಗೆ ಮನಸೋತು, ನಾಸ್ತಿಕಳಾಗಿದ್ದ ಹೊಂಟ್ ಗಾಢಾನುರಕ್ತ ಆಸ್ತಿಕಳಾದಳು. 1891ರಲ್ಲಿ ಬ್ಲಾವಟ್ಸ್ಕಿ ಕಾಲವಾದ ಮೇಲೆ ಬೆಸೆಂಟ್ ಥಿಯಾಸಾಫಿಕಲ್ ಸೊಸೈಟಿಯ ಮುಖಂಡತ್ವವನ್ನು ವಹಿಸಿ ಕೊಂಡು, ಆಧ್ಯಾತ್ಮಿಕತೆಯ ಜನ್ಮಭೂಮಿಯೆಂದು ತಿಳಿದಿದ್ದ ಭಾರತಕ್ಕೆ 1893ರಲ್ಲಿ ಬಂದಳು.

ಪೂರ್ವಜನ್ಮಗಳಲ್ಲಿ ತಾನು ಹಿಂದು ಆಗಿದ್ದೆನೆಂಬ ಭಾವನೆ ಬಂದು, ಹಿಂದು ಧಾರ್ಮಿಕ ತತ್ತ್ವಗಳಲ್ಲಿ ಅಚಲವಿಶ್ವಾಸ, ನಂಬಿಕೆಗಳನ್ನು ಹೊಂದಿ, ಬೆಸೆಂಟ್ ಅವಕ್ಕೆ ಅನುಸಾರವಾಗಿ ಜೀವಿಸತೊಡಗಿದಳು. ಪರದಾಸ್ಯ, ಅದರಿಂದ ಉಂಟಾಗಿದ್ದ ದಟ್ಟ ದಾರಿದ್ರ್ಯಗಳ ಪರಿಣಾಮವಾಗಿ ಭಾರತೀಯರಲ್ಲಿ ಬೆಳೆದುಬಂದಿದ್ದ ವಿಷಣ್ಣತೆ, ನಿರುತ್ಸಾಹಗಳನ್ನು ಹೋಗಲಾಡಿಸಿ, ಅವರು ತಮ್ಮ ಭವ್ಯಸಂಸ್ಕೃತಿಯ ಹಿರಿಮೆಯನ್ನರಿತು ಅದಕ್ಕನುಸಾರವಾದ ಹೊಸಹುಟ್ಟನ್ನು ರೂಪಿಸಿಕೊಂಡು, ಪ್ರಪಂಚಕ್ಕೆ ಮಾರ್ಗದರ್ಶಿಗಳಾಗುವಂತೆ ಮಾಡಬೇಕೆಂಬ ಉದ್ದೇಶದಿಂದ, ವಿದ್ವತ್‌ಪೂರ್ಣ ಗ್ರಂಥಗಳನ್ನು ಬರೆದು, ದೇಶದ ನಾನಾ ಕಡೆ ಸಂಚರಿಸಿ ಭಾಷಣ ಮಾಡಿದಳು. ಮದರಾಸಿನ ಅಡ್ಯಾರಿನಲ್ಲಿ ತಾನೇ ಸ್ಥಾಪಿಸಿದ ಥಿಯಾಸಫಿಕಲ್ ಕೇಂದ್ರವನ್ನು ವಿದ್ವಾಂಸರ ವಿಚಾರವಿನಿಮಯ ಕೇಂದ್ರವನ್ನಾಗಿ ಮಾಡಿದಳು. ವಾರಾಣಸಿಯಲ್ಲಿ ಸೆಂಟ್ರಲ್ ಹಿಂದೂ ಕಾಲೇಜ್ ಎಂಬ ಉಚ್ಚಶಿಕ್ಷಣ ವಿದ್ಯಾಶಾಲೆಯನ್ನು ಸ್ಥಾಪಿಸಿದಳು. ರಾಜಕೀಯ ಸ್ವಾತಂತ್ರ್ಯವಿಲ್ಲದೆ ಭಾರತೀಯರ ಏಳಿಗೆ ಸಾಧ್ಯವಿಲ್ಲವೆಂಬುದನ್ನರಿತು, ಯಂಗ್ ಇಂಡಿಯಾ ಎಂಬ ಪತ್ರಿಕೆಯನ್ನು ಹೊರಡಿಸಿ ಅದರಲ್ಲಿ ಪ್ರಚಾರ ನಡೆಸಿದಳು. ಹೋಂ ರೂಲ್ ಚಳವಳಿ ಪ್ರಾರಂಭವಾಯಿತು. 1917ರಲ್ಲಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಳಾಗಿ ಚುನಾಯಿತಳಾದಳು. ಮುಂದೆ ಗಾಂಧೀಜಿ ಪ್ರಾರಂಭಿಸಿದ ಸತ್ಯಾಗ್ರಹ ಮತ್ತು ಅಸಹಕಾರ ಚಳವಳಿಗಳನ್ನು ಇವಳು ಒಪ್ಪಲಿಲ್ಲ. ಅಶಿಕ್ಷಿತ ಜನರ ಕೈಯ್ಯಲ್ಲಿ ಆ ಚಳವಳಿಗಳಿಂದ ರಾಷ್ಟ್ರಘಾತಕ ಕೃತ್ಯಗಳು ನಡೆಯ ಬಹುದೆಂದು ವಾದಿಸಿದಳು. ಇದರಿಂದ ರಾಜಕೀಯ ರಂಗದಲ್ಲಿ ಇವಳ ಪ್ರಭಾವ ಕುಗ್ಗಿದರೂ ಪರಕೀಯಳಾಗಿದ್ದು ಭಾರತದ ಏಳಿಗೆಗೆ ದುಡಿದ ಈಕೆ ಸದಾಸ್ಮರಣೀಯಳಾದಳು. *

**ಆನೆಗುಂದಿ:** ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಇರುವ ಚಾರಿತ್ರಿಕ ಸ್ಥಳ. ಇಲ್ಲಿ ವಿಜಯನಗರದ ಅರಸರು ತಮ್ಮ ಸೈನ್ಯದ ಆನೆಗಳನ್ನು ಇರಿಸುತ್ತಿದ್ದರಿಂದ ಆ ಹೆಸರು ಬಂದಿತೆಂದು ಪ್ರತೀತಿ. ಇಲ್ಲಿಯ 1349ರ ಶಾಸನದಲ್ಲಿ ಭಾಸ್ಕರ ಕ್ಷೇತ್ರ ದಕ್ಷಿಣ ವಾರಣಾಸಿ ಹಸ್ತಿನಾಪುರ ಎಂದು ಈ ಸ್ಥಳ ವನ್ನು ಕರೆಯಲಾಗಿದೆ. ವಿಜಯನಗರ ಕಾಲದಲ್ಲಿ ಬಂದಿದ್ದ ವಿದೇಶಿ ಯಾತ್ರಿಕರಾದ ನ್ಯೂನಿಜ್ ಮತ್ತು ಡೊಮಿಂಗೊಪೆಯಿಸನು ನಾಗುಂದಿಯಮ್, ಸೇನಾಗುಂದಿಯಮ್ ಎಂದು ಕರೆದಿದ್ದಾನೆ.

ಆನೆಗುಂದಿಯಲ್ಲಿ ಶಿಲಾ–ತಾಮ್ರಯುಗದ, ಬೃಹತ್ ಶಿಲಾ–ಕಬ್ಬಿಣ ಯುಗದ ವಸತಿ ನೆಲೆಗಳನ್ನೂ ಗುರುತಿಸಲಾಗಿದೆ. ಇವುಗಳಲ್ಲಿ ಮಡಕೆ ಚೂರುಗಳು, ಶಿಲಾಯುಧಗಳು ದೊರೆತಿವೆ. ಜೊತೆಗೆ ಹಲವಾರು ಎಡೆಗಳಲ್ಲಿ ಗವಿವರ್ಣಚಿತ್ರಗಳು ಇವೆ. ಆನೆಗೊಂದಿಯು ಹಂಪಿ ರಾಮಾಯಣ ಕಾಲದ ವಾನರ ರಾಜ್ಯ ಕಿಷ್ಕಿಂದೆ ಎಂದು ಬಹುಕಾಲದಿಂದಲೂ ನಂಬಲಾಗಿದೆ. ರಾಮಾಯಣದಲ್ಲಿ ಉಲ್ಲೇಖಿತವಾಗಿರುವ ಪಂಪಾ (ಸರೋವರ), ಅಂಜನಾದ್ರಿ, ಸುಗ್ರೀವಗುಹಾ, ವಾಲಿಖಿಲ್ಲಾ, ವಾಲಿಭಂಡಾರ, ಚಿಂಚಲಕೋಟೆ ಮುಂತಾದ ಸ್ಥಳಗಳನ್ನು ಇಲ್ಲಿ ಗುರುತಿಸಲಾಗುತ್ತಿದ್ದು ಇಂದಿಗೂ ಅದೇ ಹೆಸರಿನಿಂದ ಕರೆಯುತ್ತಾರೆ.

ಚಾರಿತ್ರಿಕ ಕಾಲಘಟ್ಟಗಳಲ್ಲಿ ಆನೆಗುಂದಿ ಚಾಳುಕ್ಯರ, ಹೊಯ್ಸಳರ, ಕಾಕತೀಯರ, ಕುಮ್ಮಟದರಸರ ಮತ್ತು ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿಯ ಪಂಪಾ ಸರೋವರದಲ್ಲಿರುವ ಶಾಸನವು ಚಾಳುಕ್ಯಾಭರಣ ಶ್ರೀಮದಾಹವಮಲ್ಲದೇವನು ತುಂಗಭದ್ರಾ ತಡಿಯ ಬೀಡಿನಲ್ಲಿದ್ದಂತೆ ತಿಳಿಸುತ್ತದೆ (988). ಹೊಯ್ಸಳ ಅರಸ ಮೂರನೆಯ ಬಲ್ಲಾಳನು ವಿರೂಪಾಕ್ಷ ಹೊಸದುರ್ಗ ಅಥವಾ ಹೊಸಪಟ್ಟಣದಿಂದ ಆಳುತ್ತಿದ್ದ. ವಿರೂಪಾಕ್ಷ ಹೊಸ ದುರ್ಗವೇ ಆನೆಗುಂದಿಯೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಕೆಲಕಾಲ ವಾರಂಗಲ್ಲಿನ ಕಾಕತಿಯರ ಅಧೀನಕ್ಕೂ ಒಳಗಾದ ಆನೆಗುಂದಿಯಲ್ಲಿ ಮೊದಲಬಾರಿಗೆ ಕೋಟೆ ನಿರ್ಮಾಣ ವಾಯಿತು (13ನೆಯ ಶತಮಾನ). ಕಂಪಿಲರಾಯನ ಕಾಲದಲ್ಲಿ ಆನೆಗುಂದಿ ಪ್ರಮುಖ ಪಟ್ಟಣವಾಗಿತ್ತು. ಅವನು ಹೊಯ್ಸಳ ಬಲ್ಲಾಳನ ಮೇಲೆ ಯುದ್ಧಕ್ಕೆ ಹೊರಟಾಗ ಅವನ ಸೈನ್ಯ ಆನೆಗುಂದಿಯಲ್ಲಿ ಬೀಡುಬಿಟ್ಟು ಮುಂದೆ ಸಾಗಿತ್ತು. ಮಹಮ್ಮದ್ ಬಿನ್ ತುಗಲಕ್‌ನ ಧಾಳಿಯಲ್ಲಿ ಕುಮ್ಮಟ ಸಹಿತ ಎಲ್ಲ ಹಿಂದು ರಾಜ್ಯಗಳು ಪತನವಾಗಲು ಸುಲ್ತಾನನು ಈ ಪ್ರದೇಶಕ್ಕೆ ಆನೆಗುಂದಿಯನ್ನು ಆಡಳಿತ ಕೇಂದ್ರವನ್ನಾಗಿಸಿ ಮಲಿಕ್‌ಮಹಮದ್ ಎಂಬ ಅಧಿಕಾರಿಯನ್ನು ನೇಮಿಸಿದ (1332). ಆದರೆ ಸ್ಥಳೀಯರ ಅಸಹಕಾರ ಮತ್ತು ದೆಹಲಿಯ ರಾಜಕೀಯ ಅಸ್ಥಿರತೆಯಿಂದಾಗಿ ಅವನು ಇಲ್ಲಿಂದ ನಿರ್ಗಮಿಸಿದ (1334).

ವಿಜಯನಗರ ಸ್ಥಾಪನೆಯಾದಾಗ ಆನೆಗುಂದಿ ಅದರ ಮೊದಲ ರಾಜಧಾನಿಯಾಯಿತು (1336). ನ್ಯೂನಿಜ್ ಮತ್ತು ಡೊಮಿಂಗೊ ಪೆಯಿಸರು ಆನೆಗುಂದಿಯನ್ನು ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ ಎಂದೇ ಕರೆದಿದ್ದಾರೆ. ಸಂಗಮ ವಂಶದ ಮೊದಲ ದೊರೆಗಳಾದ ಹರಿಹರ, ಬುಕ್ಕರು ಆನೆಗುಂದಿಯಿಂದಲೇ ಆಡಳಿತ ನಡೆಸಿದರು. ಆದರೆ ಬಹಮನಿ ರಾಜ್ಯಸ್ಥಾಪನೆಗಾಗಿ ಆನೆಗುಂದಿಯ ಮೇಲೆ ಆಕ್ರಮಣಗಳು ಪ್ರಾರಂಭವಾಗಿದ್ದರಿಂದ ದೊರೆ ಬುಕ್ಕ ಆನೆಗುಂದಿಯನ್ನು ಬಿಟ್ಟು ಹಂಪಿಯಲ್ಲಿ ವಿಜಯನಗರ ಎನ್ನುವ ಹೊಸರಾಜಧಾನಿ ಕಟ್ಟಿ ಅಲ್ಲಿಗೆ ತೆರಳಿದ (1347). ರಾಜಧಾನಿ ಸ್ಥಾನವನ್ನು ಕಳೆದುಕೊಂಡ ಅನಂತರ ಆನೆಗುಂದಿ ವಿಜಯನಗರದ ಉತ್ತರದಿಕ್ಕಿನ ಹೊರ ಸೇನಾಠಾಣ್ಯವಾಗಿತ್ತು. ಇಲ್ಲಿ ಅರಸನ ಪರವಾಗಿ ಒಬ್ಬ ದಳವಾಯಿ ಇದ್ದನೆಂದು ಡೊಮಿಂಗೊ ಪೆಯಿಸ್ ಬರೆದಿದ್ದಾನೆ. ಸೇನಾ ಠಾಣೆಯ ಜೊತೆಗೆ ಆನೆಗುಂದಿಯಲ್ಲಿ ಸುಭದ್ರವಾದ ಸೆರೆಮನೆಯನ್ನು ಕೂಡಾ ಸ್ಥಾಪಿಸಲಾಗಿತ್ತು. ಈ ಸೆರೆಮನೆಯಲ್ಲಿಯೇ ಕೃಷ್ಣದೇವರಾಯನ ಮಗ ತಿರುಮಲನ ಹತ್ಯೆಯ ಆರೋಪಿಗಳಾದ

ಕೋಟೆ ದ್ವಾರ

ಮಂತ್ರಿ ಸಾಳ್ವತಿಮ್ಮ ಹಾಗೂ ಅವನ ಮಕ್ಕಳಾದ ತಿಮ್ಮದಂಡನಾಯಕ ಮತ್ತು ಗೋವಿಂದರಾಜರ ಕಣ್ಣು ಕೀಳಿಸಿ ಬಂಧಿಸಿಡಲಾಗಿತ್ತು. ಅವರು ಈ ಸೆರೆಮನೆಯಲ್ಲಿಯೇ ಮರಣ ಹೊಂದಿದರು. ವಿಜಯನಗರದ ಸಾಮಂತನಾಗಿದ್ದ ಯಲಹಂಕದ ನಾಡಪ್ರಭು, ಕೆಂಪೇಗೌಡ ಸಾಮ್ರಾಟನಿಗೆ ಅವಿಧೇಯನಾಗಿ ಸ್ವಂತದ ನಾಣ್ಯಗಳನ್ನು ಹೊರಡಿಸಿದಾಗ, ಅವನನ್ನು ಅಳಿಯರಾಮರಾಯ ಬಂಧಿಸಿ ಆನೆಗುಂದಿ ಸೆರೆಮನೆಗೆ ತಳ್ಳಿದ. ಕೆಂಪೇಗೌಡ 5 ವರ್ಷಕಾಲ ಸೆರೆಮನೆಯಲ್ಲಿದ್ದು, ಅನಂತರ ದಂಡ ತೆತ್ತು ಅಲ್ಲಿಂದ ಬಿಡುಗಡೆ ಹೊಂದಿದ (1559–65).

ವಿಜಯನಗರ ಪತನವಾಗಿ ಅರವೀಡು ವಂಶಸ್ಥರು ಪೆನುಗೊಂಡ ಮತ್ತು ಚಂದ್ರಗಿರಿಯಿಂದ ಆಡಳಿತ ನಡೆಸಿದರು (1565–1646). ಅಲ್ಲಿಗೆ ವಿಜಯನಗರ ಸಾಮ್ರಾಜ್ಯ ಅಸ್ತಂಗತವಾಯಿತು. ಆದರೆ ಅರವೀಡು ಮನೆತನದ ಶ್ರೀರಂಗರಾಯ ಪುನಃ ಆನೆಗುಂದಿಗೆ

ಬಂದು ಆಡಳಿತ ಪ್ರಾರಂಭಿಸಿದ. ಈ ಪ್ರಭುತ್ವಕ್ಕೆ ಶ್ರೀ ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ವೀರತಿರುಮಲ ವಿದ್ಯಾ ವಿಜಯನಗರ ನರಪತಿ ಸಂಸ್ಥಾನ ಆನಾಗುಂದಿ ಎಂದು ಹೆಸರಿತ್ತು. ಈ ಸಂಸ್ಥಾನದಲ್ಲಿ ಶ್ರೀರಂಗರಾಯ ಸೇರಿ ಒಟ್ಟು 17 ಅರಸರು ಆಡಳಿತ ನಡೆ ಸಿದರು (1644–72). ಇವರಲ್ಲಿ ಇಬ್ಬರು ರಾಣಿಯರು. ಅನೇಕ ರಾಜಕೀಯ ಸ್ಥಿತ್ಯಂತರಗಳನ್ನು ಕಂಡ ಆನೆಗುಂದಿ ಸಂಸ್ಥಾನದ ಮೇಲೆ ಪೇಶ್ವೆಗಳು (1770), ಹೈದರ್ ಅಲಿ (1775), ಟಿಪ್ಪುಸುಲ್ತಾನ್ (1786) ಧಾಳಿ ಮಾಡಿದ್ದರು. ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಮಡಿದ ಅನಂತರ ಆನೆಗುಂದಿ ಬ್ರಿಟಿಷರ ಪಾಲಾಯಿತು (1799). ಅವರು ಆನೆಗುಂದಿ ಅರಸರಿಗೆ ಮಾಸಾಶನ ಗೊತ್ತುಪಡಿಸಿದರು. ಭಾರತ ಸ್ವಾತಂತ್ರ್ಯದವರೆಗೂ ಮಾಸಾಶನ ಹಾಗೂ ಆನೆಗುಂದಿ ಸಹಿತ ಸುತ್ತಲಿನ ಪ್ರದೇಶದ ಮೇಲೆ ಅರಸರು ಹಕ್ಕು ಹೊಂದಿದ್ದರು (1947). ನಿಜಾಮನ ವಿರುದ್ಧ ಭಾರತ ಸರ್ಕಾರ ನಡೆಸಿದ ಕಾರ್ಯಾಚರಣೆ ಯಿಂದಾಗಿ ಹೈದರಾಬಾದ್ ರಾಜ್ಯದೊಂದಿಗೆ ಆನೆಗುಂದಿ ಸಹ ಭಾರತ ಒಕ್ಕೂಟದಲ್ಲಿ ವಿಲೀನವಾಯಿತು. ಅಲ್ಲಿಗೆ ಆನೆಗುಂದಿ ಸಂಸ್ಥಾನ ಕೊನೆಗೊಂಡಿತು (1948).

ಆನೆಗುಂದಿ ಸ್ಮಾರಕಗಳ ದೃಷ್ಟಿಯಿಂದಲೂ ಮಹತ್ತ್ವದ ಸ್ಥಳವಾಗಿದೆ. ಇಲ್ಲಿಯ ಸ್ಮಾರಕಗಳಲ್ಲಿ ಕೋಟೆ, 63 ಕಂಬಗಳ ಮಂಟಪ, ಗಗನಮಹಲ, ಕಮಲಮಹಲ, ರಂಗನಾಥ, ಲಕ್ಷ್ಮೀನರಸಿಂಹ, ಗಣೇಶ, ಪಂಪಾಪತಿ ದೇವಾಲಯಗಳು, ಚಿಂತಾಮಣಿಮಠ, ಹುಚ್ಚಪ್ಪಯ್ಯ ಮಠ, ಸರಸ್ವತಿ ಮಠಗಳು ಮತ್ತು ಜೈನಬಸದಿಗಳು ಪ್ರಮುಖ. ಕೋಟೆಯಲ್ಲಿ ಮೂರು ಭಾಗಗಳಿದ್ದು, ಅವುಗಳಲ್ಲಿ ಮ್ಯಾಗೋಟೆ ಪ್ರಮುಖ. ಗಗನ ಮಹಲ ಅರವೀಡು ಕಾಲದ ಸುಂದರ ಕಟ್ಟಡವಾಗಿದ್ದು, ಚಂದ್ರಗಿರಿಯ ಅರಮನೆಯನ್ನು ಹೋಲುತ್ತದೆ. ಸರಸ್ವತಿ ಮಠ ವಿಶಾಲ ಕಟ್ಟಡವಾಗಿದ್ದು, ವಿಶ್ವಕರ್ಮರ ಮೂಲಪೀಠವಾಗಿದೆ. ಜೈನಬಸದಿ ತ್ರಿಕೂಟ ಶೈಲಿಯಲ್ಲಿದ್ದು ಶಿಥಿಲವಾಗಿದೆ. ತುಂಗಭದ್ರಾ ನದಿಗೆ ಕಟ್ಟಲಾಗಿರುವ ಹನುಮಾನ ಸೇತುವೆಯ ವಿಜಯನಗರ ಕಾಲದ ಸೇತುವೆ ನಿರ್ಮಾಣ ತಾಂತ್ರಿಕ ಕೌಶಲ್ಯಕ್ಕೆ ಸಾಕ್ಷಿ. (ಎಸ್.ಬಿ.ಕೆ.)

**ಆಫ್ಘಾನಿಸ್ತಾನ:** ಪೂರ್ವದಲ್ಲಿ ಭಾರತ, ಪಶ್ಚಿಮದಲ್ಲಿ ಪರ್ಷಿಯ ಮತ್ತು ಇತರ ಪಶ್ಚಿಮ ಏಷ್ಯ ದೇಶಗಳು, ಉತ್ತರಕ್ಕೆ ಚೀನ ಮತ್ತು ಮಧ್ಯ ಏಷ್ಯ, ಇವುಗಳ ನಡುವೆ ಇರುವುದರಿಂದ ಪ್ರಾಚೀನಕಾಲದಿಂದಲೂ ಈ ಪ್ರದೇಶ ಚಾರಿತ್ರಿಕ ಪ್ರಾಮುಖ್ಯ ಪಡೆದಿದೆ. ಭಾರತದಿಂದ ಪರ್ಷಿಯಕ್ಕೆ ಅಥವಾ ಚೀನಕ್ಕೆ ಹೋಗಬೇಕಾದರೆ, ಈ ಪರ್ವತಮಯ ದೇಶದ ಕಣಿವೆಗಳ ಮುಖಾಂತರ ಹೋಗಬೇಕು. ಪರ್ಷಿಯದ ಪ್ರಸ್ಥಭೂಮಿಯ ಪೂರ್ವಭಾಗವನ್ನು ಆಫ್ಘಾನಿಸ್ತಾನ ಆಕ್ರಮಿಸಿರುವುದರಿಂದ ಇವೆರಡು ದೇಶಗಳ ಸಂಪರ್ಕ ಸುಲಭ. ಆದ್ದರಿಂದ ಇರಾನಿನ ಸಂಸ್ಕೃತಿ ಆಫ್ಘನ್ನರ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಭಾರತ, ಚೀನ ಸಂಸ್ಕೃತಿಗಳೂ ಗಮನಾರ್ಹವಾದ ಪ್ರಭಾವ ಬೀರಿವೆ.

**ಪುರಾತತ್ತ್ವ:** ಉತ್ತರ ಆಫ್ಘಾನಿಸ್ತಾನದ ಓಕ್ಸಸ್ ಪ್ರಾಂತ್ಯದಲ್ಲಿ 1953–54ರಲ್ಲಿ ಮೌಸ್ಟೀರಿಯನ್ ಮಾದರಿಯ ಕಲ್ಲುಚಕ್ಕೆಯೊಂದನ್ನು ಕಂಡುಹಿಡಿಯುವ ಮೂಲಕ ಎಫ್.ಆರ್.ಅಲ್ಚಿನ್ ಆಫ್ಘಾನಿಸ್ತಾನದಲ್ಲಿ ಪ್ರಾಗೈತಿಹಾಸಿಕ ಅಧ್ಯಯನಕ್ಕೆ ನಾಂದಿ ಹಾಡಿದ. ಇದೇ ಪ್ರಾಂತದಲ್ಲಿರುವ ಸಮಂಗನ್ ಪ್ರದೇಶದ ಕರ್‌ಕಮರ್ ಕಲ್ಲಾಸರೆಯಲ್ಲಿ ಸಿ.ಎಸ್.ಕೂನ್ 1954ರಲ್ಲಿ ಉತ್ಖನನ ನಡೆಸಿದ. ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಅವಶೇಷಗಳು 4 ಹಂತಗಳಲ್ಲಿ ಕಂಡುಬಂದವು. ಲೂಯಿ ಡುಪ್ರಿ ಮತ್ತು ಅಬ್ದುಲ್ ರೌಫ್ ವಾರ್ಡಕ್‌ರವರು ಬದಕ್ಷನ್‌ನಿಂದ ಮೈಮನದವರೆಗೆ (ಉತ್ತರ ಆಫ್ಘಾನಿಸ್ತಾನ) ವಿಸ್ತರಿಸಿರುವ ಸುಣ್ಣಕಲ್ಲು ಪರ್ವತ ತಪ್ಪಲುಗಳಲ್ಲಿ 1959ರಲ್ಲಿ ಸರ್ವೇಕ್ಷಣೆ ನಡೆಸಿ 5 ಪ್ರಮುಖ ಪುರಾತತ್ತ್ವ ನೆಲೆಗಳನ್ನು ಕಂಡುಹಿಡಿದರು. ಇವು ದರ್‍ರಾ–ಇ–ಕರ್ ಮತ್ತು ಹಜ್ಜರ್ ಗುಸ್‌ಫಂದ್ ಗುಹೆಗಳು (ಮೌಸ್ಟೀರಿಯನ್ ಮಾದರಿಯ ಚಕ್ಕೆಗಳು), ತಾಶ್ ಖುರ್ಘಾನ್ (ಸೂಕ್ಷ್ಮ ಶಿಲೋಪಕರಣಗಳು), ಅಕ್‌ಕುಪ್ರುಕ್ (ಕಲ್ಲಾಸರೆಗಳು), ಮೈಮನ (ನೀರಿನ ಹಳ್ಳದ ತಳದಲ್ಲಿಯ ಉಪಕರಣಗಳು), ದರ್‍ರಾ–ಇ–ದಾದಿಲ್–ದರ್‍ರಾ–ಇ–ಚಕ್‌ಮಕ್ (ಕಲ್ಲಿನ ಉಪಕರಣಗಳು). ಈ ಪೈಕಿ, ಅಕ್‌ಕುಪ್ರುಕ್ ಮತ್ತು ದರ್‍ರಾ–ಇ–ಕರ್‌ನಲ್ಲಿ ಉತ್ಖನನ ನಡೆಸಲಾಯಿತು. ಅನಂತರ ಇಟಲಿಯ ಒಂದು ತಂಡ ಸಾಲ್ವತೋರ್ ಪುಗ್ಲಿಸಿಯವರ ನೇತೃತ್ವದಲ್ಲಿ ಹಜ್ಜರ್‌ಸುಮ್‌ನಲ್ಲಿ (ಸಮಂಗನ್ ಪ್ರದೇಶ) 1961–62ರಲ್ಲಿ ಉತ್ಖನನ ನಡೆಸಿತು. ಕ್ಲ್ಯಾಕ್ಟೋನಿಯನ್, ಲೆವಾಲ್ವ ಮತ್ತು ಮೌಸ್ಟೀರಿಯನ್ ತಂತ್ರಗಳಿಂದ ತಯಾರಿಸಿದ ಉಪಕರಣಗಳು ಹಾಗೂ ನವಶಿಲಾಯುಗದ ಅಲಗು ಸಮುಚ್ಚಯಗಳು ಈ ಉತ್ಖನನದಲ್ಲಿ ದೊರೆತವು. ಹಜ್ಜರ್‌ಸುಮ್ ಬಳಿಯಿರುವ ದರ್‍ರಾ–ಇ–ಕಲೋನ್‌ನಲ್ಲಿ ಸಾಲ್ವತೋರ್ 1965ರಲ್ಲಿ ಅಂತ್ಯ ಹಳೆಶಿಲಾಯುಗದ ಸಮುಚ್ಚಯವನ್ನು ಪತ್ತೆಹಚ್ಚಿದ. ಅಕ್‌ಕುಪ್ರುಕ್ ಸಮುಚ್ಚಯವನ್ನು ಹೋಲುವ ಈ ಸಮುಚ್ಚಯ ಇಂಗಾಲ–14 ಕಾಲನಿರ್ಣಯದಂತೆ 9475±100 ವರ್ಷಗಳಷ್ಟು ಹಳೆಯದು. ಲೂಯಿ ಡುಪ್ರಿಯ ನಿರ್ದೇಶನದಲ್ಲಿ 1962 ಮತ್ತು 1965ರಲ್ಲಿ ಅಕ್‌ಕುಪ್ರುಕ್‌ನಲ್ಲಿರುವ ನಾಲ್ಕು ನೆಲೆಗಳಲ್ಲಿ ಉತ್ಖನನ ನಡೆಸಲಾಯಿತು. ಅಂತ್ಯ ಹಳೆಶಿಲಾಯುಗದಿಂದ ಕಬ್ಬಿಣಯುಗದ ಅಲೆಮಾರಿ ಸಂಸ್ಕೃತಿಯವರೆಗಿನ ಹಂತಗಳು ಈ ಉತ್ಖನನದಲ್ಲಿ ತೋರಿಬಂದವು. ಎರಡು ನೆಲೆಗಳಲ್ಲಿ ಮಾತ್ರ ಮಣ್ಪಾತ್ರೆರಹಿತ ಮತ್ತು ಮಣ್ಪಾತ್ರೆಸಹಿತವಾದ ನವಶಿಲಾಯುಗ ಹಂತಗಳಿದ್ದವು. ದರ್‍ರಾ–ಇ–ಕರ್‌ನಲ್ಲಿ 1966ರಲ್ಲಿ ಡುಪ್ರಿ ನಡೆಸಿದ ಉತ್ಖನನದಲ್ಲಿ ನಾಲ್ಕು ಸಾಂಸ್ಕೃತಿಕ ಹಂತಗಳು ಪ್ರಕಟವಾದವು. ಮಧ್ಯ ಹಳೆಶಿಲಾಯುಗಕ್ಕೆ ಸೇರುವ ಮೊದಲ ಹಂತದಲ್ಲಿ ಲೆವಾಲ್ವ ಮತ್ತು ಮೌಸ್ಟೀರಿಯನ್ ಸಂಪ್ರದಾಯದ 800 ಕಲ್ಲಿನ ಉಪಕರಣಗಳು, ಮನುಷ್ಯನ ಕೆನ್ನೆಭಾಗದ ಒಂದು ಮೂಳೆ, ಕಾಡುಕುರಿ, ಮೇಕೆ ಮತ್ತು ದನದ ಜಾತಿಯ ಪ್ರಾಣಿಯ ಮೂಳೆಗಳು ಸಿಕ್ಕವು. ಈ ಹಂತ 30,300+1200–1900 (ಇಂಗಾಲ–14) ವರ್ಷಗಳಷ್ಟು ಹಿಂದಿನದು. ಕಾಶ್ಮೀರದ ಬುರ್ಜ್‌ಹೋಮ್‌ನಲ್ಲಿ ಕಂಡುಬಂದ ನವಶಿಲಾಯುಗ ಸಂಸ್ಕೃತಿಗೆ ಸದೃಶವಾದ ಚಿತ್ರಣ 2ನೆಯ ಹಂತದ ಅವಶೇಷಗಳಿಂದ ದೊರೆಯಿತು. ಚಕಮಕಿ ಕಲ್ಲು ಮತ್ತು ಮೂಳೆಯ ಉಪಕರಣಗಳು, ಶಂಖದ ಆಭರಣಗಳು, ಅರೆಯುವ ಕಲ್ಲು, ಮಕ್ಕಳ ಸಮಾಧಿಗಳು ಈ ಹಂತದ ಪ್ರಧಾನ ಅವಶೇಷಗಳು. ಈ ಜನರು ಬೆಟ್ಟದ ಹೋತಗಳನ್ನು ಸಾಕಿಕೊಂಡಿದ್ದರಿಂದ ಈ ಸಂಸ್ಕೃತಿಯನ್ನು ಬೆಟ್ಟದ ಹೋತ–ಪಂಥದ ನವಶಿಲಾಯುಗ ಸಂಸ್ಕೃತಿಯೆನ್ನುವರು. 3ನೆಯ ಹಂತ ಕಬ್ಬಿಣಯುಗ ಕಾಲದ್ದಾದರೆ 4ನೆಯದು ಇಸ್ಲಾಮ್ ಆಳಿಕೆಯ ಕಾಲದ್ದು.

1968ರಲ್ಲಿ ಫ್ರೆಂಚ್ ತಂಡವೊಂದು ಗುವೆನ್‌ನ ನೇತೃತ್ವದಲ್ಲಿ ಸಮಂಗನ್ ಪ್ರದೇಶದ ಖುಲ್ಮ್‌ನ ಉತ್ತರದಲ್ಲಿ ಹರಡಿರುವ ಮರಳುದಿಣ್ಣೆಗಳಲ್ಲಿ ಸೂಕ್ಷ್ಮಶಿಲಾಯುಗ ಉಪಕರಣಗಳನ್ನು ಪತ್ತೆಹಚ್ಚಿತು. ತಾಶ್ ಖುರ್ಘನ್–40 ಎಂದು ಹೆಸರಿಸಲಾದ ಈ ನೆಲೆಯಲ್ಲಿ ಚಕಮಕಿ ಕಲ್ಲಿನ ಹೆರೆಚಕ್ಕೆಗಳು, ಕಿರು ಕೊರಗಗಳು ಹಾಗೂ ಜ್ಯಾಮಿತೀಯ ಉಪಕರಣಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ರಷ್ಯದ ವಿನೊಗ್ರಡಾವ್ ಮತ್ತು ಅನಂತರದಲ್ಲಿ ಸರಿಯನಿದಿ ಇವರು 1969ರಲ್ಲಿ ಅಂದ್‌ಖೋಯಿಯಿಂದ ತಾಶ್ ಖುರ್ಘನ್‌ವರೆಗೆ ಕಲಿಫ್ತ ನದಿತೀರದ ಪ್ರದೇಶವನ್ನು ಶೋಧಿಸಿದರು. ಅಲಗು, ಮೊನೆ, ಹೆರೆಚಕ್ಕೆಗಳನ್ನೊಳಗೊಂಡ ಅಂತ್ಯ ಸೂಕ್ಷ್ಮಶಿಲಾಯುಗದ ಸಮುಚ್ಚಯಗಳು ಮತ್ತು ಇದೇ ಕಾಲದ ಒಂದು ಬಿಡಾರ ನೆಲೆ ಇವರ ಸರ್ವೇಕ್ಷಣೆಯಲ್ಲಿ



ಜೋಡಿ ಸಮಾಧಿ; ಶವಪೆಟ್ಟಿಗೆ

ಬೆಳಕಿಗೆ ಬಂದವು. ಡುಪ್ರಿ ಮತ್ತು ಡೇವಿಸ್ 1969ರಲ್ಲಿ ಆಫ್ಘಾನಿಸ್ತಾನದ ಹೈಬಕ್ ಪ್ರದೇಶವನ್ನು ಸಮೀಕ್ಷಿಸಿದಾಗ ಕೋಕ್‌ಜಾರ್ ಎಂಬಲ್ಲಿ ಚಕಮಕಿ ಕಲ್ಲಿನ ಚಕ್ಕೆ ಉಪಕರಣಗಳು, ಚಿಕ್ಕಚಿಕ್ಕ ಶಿಲಾಗಟ್ಟಿಗಳು ಮತ್ತು ಕಿರುಅಲಗುಗಳು ಪತ್ತೆಯಾದವು. ಫರ್ಯಬ್ ಪ್ರಾಂತದಲ್ಲಿರುವ ಘರ್–ಇ–ಮೊರ್ದೆ ಗುಸ್‌ಫಂದ್ ಬಳಿಯ ಕಲ್ಲಾಸರೆಯಲ್ಲಿ ಡುಪ್ರಿ ಉತ್ಖನನ ನಡೆಸಿ ಮಧ್ಯ ಹಳೆಶಿಲಾಯುಗದ ಮೌಸ್ಟೀರಿಯನ್ ಸಂಪ್ರದಾಯದ ಸುಣ್ಣಕಲ್ಲಿನ ಶಿಲಾಗಟ್ಟಿ, ಚಕ್ಕೆ ಮತ್ತು ಚಕ್ಕೆಯ ಉಪಕರಣಗಳು ಹಾಗೂ ಎಲುಬಿನ ತುಂಡುಗಳನ್ನು ಸಂಗ್ರಹಿಸಿದ. ಮೈಮನದ ಹತ್ತಿರವಿರುವ ಘರ್ಲೂಲಿ ಮತ್ತು ಫರ್ಯಬ್ ಪ್ರಾಂತದ ಗುರ್ಜಿವಾನ್‌ನಲ್ಲಿ ನವಶಿಲಾಯುಗ ನೆಲೆಗಳು ಇದೇ ಅವಧಿಯಲ್ಲಿ ಬೆಳಕಿಗೆ ಬಂದವು. ಹಿಂದುಕುಷ್ ಪರ್ವತ ತಪ್ಪಲಿನಲ್ಲಿ ಅಂತ್ಯ ಹಳೆಶಿಲಾಯುಗ ಮತ್ತು ಮಧ್ಯ ಹಳೆಶಿಲಾಯುಗದ ಕೆಲವು ನೆಲೆಗಳನ್ನು ಬ್ರಿಟಿಷ್ ಅಕಾಡೆಮಿ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯದ ಮ್ಯಾಕ್‌ಬರ್ನಿ ಮತ್ತು ಗೌಲೆಟ್ 1971ರಲ್ಲಿ ಕಂಡುಹಿಡಿದರು. 1974ರಲ್ಲಿ ಡುಪ್ರಿ ದಕ್ಷಿಣ ಆಫ್ಘಾನಿಸ್ತಾನದಲ್ಲಿ ನಡೆಸಿದ ಸರ್ವೇಕ್ಷಣೆಯಲ್ಲಿ ಘಜ್ನಿ ಪ್ರಾಂತದಲ್ಲಿರುವ ದಶ್ತ್–ಇ–ನವೂರ್‌ನಲ್ಲಿ ಆದಿ ಮತ್ತು ಮಧ್ಯ ಹಳೆಶಿಲಾಯುಗದ ಸಮುಚ್ಚಯಗಳು ಪತ್ತೆಯಾದವು. ಕ್ವಾರ್ಟ್ಸೈಟ್ ಕಲ್ಲಿನಲ್ಲಿ ಮಾಡಿದ ಕೈಗೊಡಲಿ, ಕಡಿಕತ್ತಿ ಮತ್ತು ಹೆರೆಚಕ್ಕೆಗಳು ಇಲ್ಲಿ ಸಿಕ್ಕ ಆದಿ ಹಳೆಶಿಲಾಯುಗದ ಉಪಕರಣಗಳು. 1976ರಲ್ಲಿ ಇದೇ ಸ್ಥಳದಲ್ಲಿ ಅಂತ್ಯ ಹಳೆಶಿಲಾಯುಗೋತ್ತರ ಹಂತದ ಎರಡು ಸಮುಚ್ಚಯಗಳನ್ನು ಕಂಡುಹಿಡಿಯಲಾಯಿತು. ಒಟ್ಟಿನಲ್ಲಿ ಆಫ್ಘಾನಿಸ್ತಾನ ಪ್ರದೇಶದಲ್ಲಿ ಶಿಲಾಯುಗ ಮಾನವನ ಚಟುವಟಿಕೆಗಳ ಕುರುಹುಗಳಿರುವುದು ಈ ಎಲ್ಲ ಸಂಶೋಧನೆಗಳಿಂದ ಸ್ಪಷ್ಟವಾಗಿದೆ. (ಬಿ.ಆರ್.ಎಂ.)

**ಇತಿಹಾಸ:** ವೇದಕಾಲದ ಆರ್ಯರು ಈ ಪ್ರದೇಶದಲ್ಲಿ ಇದ್ದರೆಂಬುದಕ್ಕೆ ಸಾಹಿತ್ಯಕ ಆಧಾರಗಳು ಸಾಕಷ್ಟು ದೊರಕಿದ್ದರೂ ಈ ಸಮುದಾಯಗಳ ನೆಲೆಗಳಾವುವೂ ಬೆಳಕಿಗೆ ಬಂದಿಲ್ಲದಿರುವುದು ಆಶ್ಚರ್ಯದ ವಿಷಯ. ಹಾಗೆಯೇ ಪರ್ಷಿಯದ ದೊರೆ ಡೇರಿಯಸ್‌ನ

ಬೆಹಿಸ್ತನ್ ಶಾಸನಗಳಲ್ಲೂ ಗ್ರೀಕ್ ಚರಿತ್ರಕಾರ ಹಿರೋಡಾಟಸ್‌ನ ಬರೆಹಗಳಲ್ಲೂ ಆಫ್ಘಾನಿಸ್ತಾನ ಅಖಮೇನಿಯ ಸಾಮ್ರಾಜ್ಯದ ಭಾಗವಾಗಿದ್ದಿತೆಂಬುದೂ ಮತ್ತು ಅಲೆಕ್ಸಾಂಡರ್ ತನ್ನ ದಂಡ ಯಾತ್ರೆಯಲ್ಲಿ ಈ ಪ್ರದೇಶದ ಮೂಲಕ ಹಾದುಹೋದನೆಂಬ ವಿಷಯ ನಿಶ್ಚಿತವಾಗಿದ್ದರೂ ಅಖಮೇನಿಯನ್ನರ ಅಥವಾ ಅಲೆಕ್ಸಾಂಡರನ ಕಾಲದ ಖಚಿತ ಅವಶೇಷಗಳೇನೂ ಇಲ್ಲಿ ಇನ್ನೂ ಕಂಡುಬಂದಿಲ್ಲ. ಆದರೆ ಕಾಬೂಲಿನ ಬಳಿಯ ಚಮನ್–ಇ–ಹಜೂರಿಯಲ್ಲಿ ಸಿಕ್ಕಿದ ನಾಣ್ಯಗಳು ಅಲೆಕ್ಸಾಂಡರನ ಕಾಲಕ್ಕಿಂತ ಹಿಂದಿನದೆಂದು ಮಾತ್ರ ತಿಳಿದುಬಂದಿದೆ. ಅಲೆಕ್ಸಾಂಡರನ ಅನಂತರ ಈ ದೇಶ ಮೌರ್ಯ ಸಾಮ್ರಾಜ್ಯಕ್ಕೆ ಒಳಪಟ್ಟಿತು. ಇದೇ ಕಾಲದಲ್ಲಿ ಬೌದ್ಧಧರ್ಮ ಇಲ್ಲಿ ಕಾಲಿಟ್ಟಿತು. ಈ ಕಾಲದ ಕುರುಹಾಗಿ ಗ್ರೀಕ್ ಮತ್ತು ಅರಾಮೇಯಿಕ್ ಭಾಷೆಗಳಲ್ಲಿ



ಮಣ್ಪಾತ್ರೆ ಸಮಾಧಿ

ಬರೆದಿರುವ ಅಶೋಕನ ಒಂದು ಶಾಸನ ಕಂದಹಾರ್ ಬಳಿಯೂ ದೊರಕಿವೆ. ಈ ಪ್ರದೇಶದಲ್ಲಿ ಮೌರ್ಯರ ಅನಂತರ ರಾಜ್ಯವಾಳಿದ ಬ್ಯಾಕ್ಟ್ರೀಯನ್ನರು ಮತ್ತು ಪಾರ್ಥಿಯನ್ನರ ಕಾಲದ ಅವಶೇಷಗಳು ಬಾಲ್ಕ್–ಖುಲ್ಮ್ ಮುಂತಾದ ಪುರಾತನ ದಿಬ್ಬಗಳಲ್ಲಿ ಕಂಡುಬಂದಿವೆ. ಅದೇ ಪ್ರದೇಶದ ಬೆಗ್ರಾಮ್‌ನಲ್ಲಿ ಸಿಕ್ಕಿರುವ ನಾಣ್ಯಗಳು, ಮಡಕೆಗಳು, ಭಗ್ನ ವಾಸ್ತು ಕೃತಿಗಳು, ರೋಮ್ ಮತ್ತು ಈಜಿಪ್ಟಿನಲ್ಲಿ ತಯಾರಾದ ಗಾಜಿನ ವಸ್ತುಗಳು, ಚೀನದ ಜಾಡಿಗಳು ಮತ್ತು ಹಲವು ದಂತದ ಕೆತ್ತನೆಗಳು ಸಹ ಬ್ಯಾಕ್ಟ್ರೀಯನ್ ಮತ್ತು ಪಾರ್ಥಿಯನ್ನರ ಕಾಲಕ್ಕೆ ಸೇರಿದುವುಗಳು.

ಪ್ರಸಕ್ತ ಶಕದ ಆರಂಭಕಾಲದಲ್ಲಿ ಈ ಪ್ರದೇಶ ಕುಷಾಣ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಈ ಕಾಲದ ಬಹುಮುಖ ಸಾಂಸ್ಕೃತಿಕ ಬೆಳವಣಿಗೆಯ ಪ್ರತೀಕವಾಗಿ ಹಲವಾರು ವಾಸ್ತುಶಿಲ್ಪದ ಅವಶೇಷಗಳು ಆಫ್ಘಾನಿಸ್ತಾನದ ಬೇರೆ ಬೇರೆ ಭಾಗಗಳಲ್ಲಿ ಬೆಳಕಿಗೆ ಬಂದಿವೆ. ಬೌದ್ಧಧರ್ಮದಲ್ಲಿ ಮಹಾಯಾನ ಪಂಥದ ಆವಿಷ್ಕಾರವೂ ಭಾರತೀಯ ಮತ್ತು ಗ್ರೀಕ್ ಸಂಪ್ರದಾಯಗಳ ಸಮ್ಮಿಲನದಿಂದಾದ ಗಾಂಧಾರ ಸಂಪ್ರದಾಯವೆಂಬ ಒಂದು ವಿನೂತನ ಕಲಾಪದ್ಧತಿಯ ವಿಕಾಸವೂ ಆದದ್ದು ಈ ಕಾಲದಲ್ಲಿಯೇ. ಹಿಂದೂಕುಷ್ ಪರ್ವತ ಪ್ರಾಂತದಲ್ಲಿನ ಸುರ್ಖ ಕೋತಲ್ ಎಂಬಲ್ಲಿ ಕಾನಿಷ್ಕನ ಶಾಸನವಿರುವ ದೇವಾಲಯವೊಂದನ್ನು ಅಗೆದು ತೆಗೆದಿದ್ದಾರೆ. ಇದು ಜರತುಷ್ಟ್ರ ಧರ್ಮಕ್ಕೆ ಸಂಬಂಧಿಸಿದ ಅಗ್ನಿ ದೇವಾಲಯ. ಇದರ ರಚನೆಯಲ್ಲಿ ಗ್ರೀಕ್ ಮತ್ತು ಪರ್ಷಿಯದ ವಾಸ್ತುಸಂಪ್ರದಾಯಗಳ ಪ್ರಭಾವ ಬಹುವಾಗಿದೆ. ಇದೇ ಸ್ಥಳದಲ್ಲಿ ಸಿಕ್ಕಿರುವ ಹದ್ದಿನ ಶಿಲ್ಪಗಳಿರುವ ದೇವಪೀಠ, ಮಥುರದ ಕಾನಿಷ್ಕನ ಶಿಲ್ಪಕ್ಕೆ ಹೋಲುವ ಭಗ್ನಶಿಲ್ಪಗಳು ಮತ್ತು ಒಂದು ಅಪೂರ್ವ ಶಿವವಿಗ್ರಹ, ಕುಷಾಣ ಸಂಪ್ರದಾಯದ ಒಳ್ಳೆಯ ಉದಾಹರಣೆಗಳು. ಫೂಚೆ ಬಾಲ್ಕ್‌ನಲ್ಲಿ ನಡೆಸಿರುವ ಸಂಶೋಧನೆಯಲ್ಲಿ ಕೆಲವು ಬೌದ್ಧ ಸ್ತೂಪದ ಅವಶೇಷಗಳನ್ನು ಗುರುತಿಸಿದ್ದಾನೆ. ಈ ಸ್ತೂಪಗಳು ಹೊರನೋಟಕ್ಕೆ ಇಟ್ಟಿಗೆಯಲ್ಲಿ ಕಟ್ಟಿದಂತೆ ಕಂಡರೂ ಒಳಭಾಗ ಜೇಡಿಮಣ್ಣಿನ ದೊಡ್ಡ ಗುಡ್ಡೆಯಾಗಿದ್ದು ಮೇಲ್ಪದರ ಮಾತ್ರ ಹಸಿ ಇಟ್ಟಿಗೆಯದಾಗಿರುತ್ತದೆ. ತೇಪೆ–ಇ–ರುಸ್ತುಮ್ ಎಂಬಲ್ಲಿ ಇವುಗಳಿಗಿಂತಲೂ ಚೆನ್ನಾಗಿ ಸಂರಕ್ಷಿಸಲ್ಪಟ್ಟಿರುವ ಸ್ತೂಪವೊಂದಿದೆ. ಇದು ಯುವಾನ್‌ಚಾಂಗ್ ಸಂದರ್ಶಿಸಿದ ಪ್ರಸಿದ್ಧ ನವವಿಹಾರದ ಭಾಗವಾಗಿತ್ತು. ಈ ಸ್ತೂಪ 52 ಮೀ ಚಚ್ಚೌಕದ ಜಗಲಿಯ ಮೇಲೆ ಇದೆ. ಜಗಲಿಯ ನಾಲ್ಕು ಕಡೆಯೂ ಪಾವಟಿಗೆಗಳಿದ್ದು, ಜಗುಲಿಯ ಇತರ ಭಾಗಗಳು ಅರ್ಧ ಕಂಬಗಳಿಂದ ಅಲಂಕೃತವಾಗಿದೆ.

ಆಫ್ಘಾನಿಸ್ತಾನದ ಇತಿಹಾಸ ಇರಾನಿನ ಅಕೇಮೆನಿಡೇ ದೊರೆಗಳ (ಪ್ರ.ಶ.ಪೂ.550–330) ಕಾಲದಿಂದ ಪ್ರಾರಂಭವಾಗುತ್ತದೆ. ಕೈರಸ್ ಆಫ್ಘಾನಿಸ್ತಾನದ ಅನೇಕ ಪ್ರದೇಶಗಳನ್ನು ಗೆದ್ದ. ಮೊದಲನೆಯ ಡೇರಿಯಸ್ ಆಡಳಿತವನ್ನು ಭದ್ರಪಡಿಸಿದ. ಅಲೆಕ್ಸಾಂಡರ್ ಬಂದು ಪರ್ಷಿಯವನ್ನು ಗೆಲ್ಲುವವರೆಗೂ ಅದು ಅಕೇಮೆನಿಡೇ ದೊರೆಗಳ ಆಳಿಕೆಗೆ ಸೇರಿತ್ತು. ಅಲೆಕ್ಸಾಂಡರನ ಮರಣಾನಂತರ ಅದು ಸೆಲ್ಯೂಕಸ್ ದೊರೆಯ ಅಧೀನಕ್ಕೆ ಬಂದಿತು. ಮೌರ್ಯ ದೊರೆಯಾದ ಚಂದ್ರಗುಪ್ತ ಪ್ರ.ಶ.ಪೂ.ಸು.305ರಲ್ಲಿ ಸೆಲ್ಯೂಕಸ್‌ನನ್ನು ಸೋಲಿಸಿದ ಮೇಲೆ, ಆಫ್ಘಾನಿಸ್ತಾನದ ಪರೋಪಮೀಸಡೆ ಮತ್ತು ಅರಕೋಸಿಯ ಪ್ರಾಂತ್ಯಗಳು ಮೌರ್ಯ ಸಾಮ್ರಾಜ್ಯಕ್ಕೆ ಸೇರಿಹೋದುವು. ಅಶೋಕನ ಕಾಲದಲ್ಲೂ ಈ ಪ್ರದೇಶಗಳು ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದುವೆನ್ನುವುದಕ್ಕೆ ಶಾಸನಗಳ ಆಧಾರವಿದೆ. ಬೌದ್ಧಧರ್ಮ ಅಲ್ಲಿಗೂ ಹರಡಿತ್ತು. ಆದರೆ ಕೊಂಚ ಕಾಲದಲ್ಲೆ ಅದು ಕ್ಷೀಣಿಸಿತು. ಅನಂತರ ಸಿಥಿಯನ್ನರು, ಪಾರ್ಥಿಯನ್ನರು, ಯೂಚಿ, ಕುಷಾಣರು ಮುಂತಾದ ನಾನಾ ಜನರ ಧಾಳಿಗೆ ಸಿಕ್ಕಿ ದೇಶ ಶಾಂತಿಯನ್ನು ಕಾಣಲೇ ಇಲ್ಲ. ಒಂದೇ ದೇಶವಾಗಿ ಉಳಿಯಲೂ ಇಲ್ಲ. 7ನೆಯ ಶತಮಾನದಲ್ಲಿ ಮುಸ್ಲಿಮರು ಪಶ್ಚಿಮದ ಪ್ರಾಂತಗಳನ್ನಾವರಿಸಿಕೊಂಡಾಗಲೇ ಕೊಂಚ ಸ್ಥಿರವಾದ ಧರ್ಮ ಜನರಲ್ಲಿ ಹರಡಿತೆನ್ನಬಹುದು. ಆಗ ಸಣ್ಣ ಸಣ್ಣ ಮುಸ್ಲಿಂ ರಾಜ್ಯಗಳು ಸ್ಥಾಪಿತವಾದುವು. ಮುಸ್ಲಿಂ ಧರ್ಮ ಕೊಂಚ ಕೊಂಚವಾಗಿ ಹರಡತೊಡಗಿತು. ಈ ಮುಸ್ಲಿಂ ರಾಜ್ಯಗಳಲ್ಲಿ ಅತ್ಯಂತ ಪ್ರಖ್ಯಾತ ರಾಜ್ಯ ಘಜ್ನಿ. ಇದರ ರಾಜ ಸುಲ್ತಾನ್ ಮಹಮೂದ್ (11ನೆಯ ಶತಮಾನ). ಇವನು ಪಶ್ಚಿಮದ ಖುರಾಸಾನ್‌ನಿಂದ ಪೂರ್ವದಲ್ಲಿ ಪಂಜಾಬಿನವರೆಗೂ ರಾಜ್ಯವನ್ನು ವಿಸ್ತರಿಸಿದ. 1152ರಲ್ಲಿ ಘೋರ್ ಸುಲ್ತಾನ ಘಜ್ನಿ ರಾಜ್ಯವನ್ನು ವಶಪಡಿಸಿಕೊಂಡ. ಮುಂದೆ ಆಫ್ಘಾನಿಸ್ತಾನ್ ಚಂಘೇಸ್‌ಖಾನನ ಧಾಳಿಗೆ ತುತ್ತಾಯಿತು. ಅವನನ್ನು ಪ್ರತಿಭಟಿಸಿದವರೆಲ್ಲ, ಹೆಂಗಸರು ಮಕ್ಕಳೆನ್ನದೆ, ಮಂಗೋಲರ ಖಡ್ಗಕ್ಕೆ ತುತ್ತಾದರು. ನಗರಗಳು ನೆಲಸಮವಾದುವು. ಇವನ ವಂಶಜನಾದ ಬಾಬರ್, ಉತ್ತರ ಹಿಂದೂಸ್ತಾನವನ್ನು ಗೆಲ್ಲುವ ಪ್ರಯತ್ನಕ್ಕೆ ಕಾಬೂಲನ್ನು ಆಧಾರನೆಲೆಯನ್ನಾಗಿ ಮಾಡಿಕೊಂಡ (16ನೆಯ ಶತಮಾನ). ಈ ಕಾಲದಲ್ಲಿ ಆಫ್ಘಾನಿಸ್ತಾನದ ಎಲ್ಲ ತಂಡಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದವು. ಹೊಸದಾಗಿ ಇಲ್ಲಿ ಬಂದು ನೆಲೆಸಿದವರೂ ಮುಸಲ್ಮಾನರಾಗಿದ್ದರು.

ಅಹಮ್ಮದ್‌ಷಾ ಹಿಂದುಸ್ಥಾನದ ದಂಡಯಾತ್ರೆಯನ್ನು ಕೈಗೊಂಡು 3ನೆಯ ಪಾಣಿಪತ್ ಯುದ್ಧದಲ್ಲಿ ಮರಾಠರನ್ನು ಸಂಪೂರ್ಣವಾಗಿ ಸೋಲಿಸಿದ. ಆದರೆ ಹಿಂದುಸ್ಥಾನದಲ್ಲಿ ನೆಲಸಲು ಇಷ್ಟವಿಲ್ಲದೆ ಹಿಂತಿರುಗಿದ. ಆದರೂ ಪಂಜಾಬಿನಲ್ಲಿ ನೆಲೆಸಿದ ದುರಾನಿಯವರನ್ನು ರಣಜಿತ್‌ಸಿಂಗ್ ಓಡಿಸಿ ಸಿಖ್ ರಾಜ್ಯವನ್ನು ಸ್ಥಾಪಿಸಬೇಕಾಯಿತು. 1801ರಲ್ಲಿ ಝಾಮನ್‌ಷಾ ಪದಚ್ಯುತನಾಗಿ ಷಾಷೂಜ ಅಮೀರನಾದ. ಬರಕ್ಸೆ ಕುಲದವರು ರಾಜಕೀಯದಲ್ಲಿ ಮುಂದೆ ಬಂದರು. ಬ್ರಿಟಿಷ್ ಸರ್ಕಾರ ಷಾ ಷೂಜನ ಸ್ನೇಹ ಬಯಸಿತು. ಆದರೆ 1810ರಲ್ಲಿ ಷಾ ಷೂಜ ಪದಚ್ಯುತನಾಗಿ ಬ್ರಿಟಿಷರ ರಕ್ಷಣೆಯಲ್ಲಿದ್ದ. ಮತ್ತೆ ಸಿಂಹಾಸನವನ್ನು ಪಡೆಯಲು ಗುಟ್ಟಾಗಿ ಯತ್ನಿಸುತ್ತಿದ್ದ. 30 ವರ್ಷಗಳ ಕಾಲ ಆಫ್ಘಾನಿಸ್ತಾನದ ಬರಕ್ಸೆ ಕುಲದವರೂ ರಣಜಿತ್‌ಸಿಂಗ್‌ನೂ ದ್ವೇಷದಿಂದ ಪರಸ್ಪರ ಯುದ್ಧ ಮಾಡುತ್ತಿದ್ದು ರಣಜಿತ್‌ಸಿಂಗ್ ಮುಲ್ತಾನ್, ಪೆಷಾವರ್ ಮತ್ತು ಕಾಶ್ಮೀರ್ ಪ್ರದೇಶಗಳನ್ನು ವಶಮಾಡಿಕೊಂಡ. ಆಫ್ಘಾನಿಸ್ತಾನದ ಪರಸ್ಪರ ವೈಷಮ್ಯಗಳೇ ರಣಜಿತ್‌ಸಿಂಗನಿಗೆ ಅನುಕೂಲವಾಯಿತು. ಬರಕ್ಸೆ ಕುಲದ ಪ್ರಭಾವವನ್ನು ಅನೇಕ ಪಾಳೆಯಗಾರರು ಸಹಿಸಲಿಲ್ಲ. ಅಂತರ್ಯುದ್ಧಕ್ಕೆ ಅವಕಾಶವಾಯಿತು. ಬರಕ್ಸೆ



ವರ್ಣಚಿತ್ರಿತ ಮಣ್ಪಾತ್ರೆ

ಕುಲದ ದೋಸ್ತ್ ಮಹಮ್ಮದ್ ಪ್ರಬಲನಾದ. ಪರ್ಷಿಯ ದೇಶ ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನೀತಿಯನ್ನು ಅನುಸರಿಸುತ್ತಿರುವುದು ರಷ್ಯನ್ನರ ಬೆಂಬಲದಿಂದ ಎಂಬುದು ವ್ಯಕ್ತವಾಯಿತು. ದೋಸ್ತ್ ಮಹಮ್ಮದ್ ಬ್ರಿಟಿಷರನ್ನು ನಂಬದೆ ಇದ್ದರೂ ಅವರ ಸಹಾಯವನ್ನು ಅಪೇಕ್ಷಿಸಿ ಸಂಧಿ ಪ್ರಸ್ತಾಪ ಮಾಡಿದ. ಆದರೆ ಲಾರ್ಡ್ ಆಕ್ಲೆಂಡ್ ಕಾಬೂಲಿನಲ್ಲಿ ತನ್ನ ಕೈಗೊಂಬೆಯ ರಾಜನನ್ನು ನೇಮಿಸಿದರೆ ಬ್ರಿಟಿಷರ ಪ್ರಾಬಲ್ಯ ಹೆಚ್ಚುವುದೆಂದು ಯೋಚಿಸಿ ಷಾ ಷೂಜನನ್ನು ಮತ್ತೊಮ್ಮೆ ಅಮೀರನನ್ನಾಗಿ ಘೋಷಿಸಿದ. ದೋಸ್ತ್ ಮಹಮ್ಮದ್ ತನ್ನ ನಡತೆಯಿಂದ ಶೂರನೆಂಬುವುದನ್ನು ಸ್ಪಷ್ಟಪಡಿಸಿ ಬ್ರಿಟಿಷರಿಗೆ ಶರಣಾಗತನಾದ. ಈ ಹೊಸ ಆಡಳಿತವನ್ನು ರಕ್ಷಿಸಲು ಕಾಬೂಲಿನಲ್ಲಿ ಒಂದು ಬ್ರಿಟಿಷ್ ಸೈನ್ಯ ನೆಲೆಸಿತು. ಲಾರ್ಡ್ ಆಕ್ಲೆಂಡ್‌ನ ಆಫ್ಘನ್ ನೀತಿ ಎಲ್ಲರಿಂದಲೂ ಖಂಡಿಸಲ್ಪಟ್ಟಿದೆ. ರಾಜಕೀಯ ದೃಷ್ಟಿಯಿಂದ

ಅಫ್ಘನ್ ಯುದ್ಧ ದುರ್ದೈವವೆಂದೂ ನೈತಿಕ ದೃಷ್ಟಿಯಿಂದ ಅನ್ಯಾಯವೆಂದೂ ಒಪ್ಪಿಕೊಳ್ಳಬೇಕು. ಆದರೆ 1837ರಲ್ಲಿ ಲಾರ್ಡ್ ಆಕ್ಲಂಡ್‌ನಿಗಿದ್ದ ಕ್ಲಿಷ್ಟ ಸಮಸ್ಯೆಗಳನ್ನು ವಿಮರ್ಶಿಸಿದರೆ ಅವನ ಆ ನೀತಿ ಹೇಗೆ ಅನಿವಾರ್ಯವಾಗಿತ್ತೆಂಬುದು ಗೋಚರವಾಗುತ್ತದೆ. ಮುಖ್ಯವಾಗಿ ಏಷ್ಯದಲ್ಲಿ ರಷ್ಯನ್ನರ ಪ್ರಭಾವವೇ ಈ ನೀತಿಗೆ ಹಿನ್ನೆಲೆ. 1809 ಮತ್ತು 1814ರಲ್ಲಿ ಮಾಡಿಕೊಂಡಿದ್ದ ಟೆಹರಾನ್ ಒಪ್ಪಂದದಂತೆ ಬ್ರಿಟಿಷರು ಪರ್ಷಿಯ ದೇಶಕ್ಕೆ ಯಾವ ಯುರೋಪಿಯನ್ನರ ಆಕ್ರಮಣ ವಿರುದ್ಧವಾಗಿಯಾದರೂ ಸಹಾಯ ಮಾಡಬೇಕಾಗಿತ್ತು. 1826ರಲ್ಲಿ ರಷ್ಯನ್ನರು ಪರ್ಷಿಯನ್ನರ ಮೇಲೆ ಯುದ್ಧ ಮಾಡಿದಾಗ ಪರ್ಷಿಯನ್ನರು ಬ್ರಿಟಿಷರ ಸಹಾಯವನ್ನು ಅಪೇಕ್ಷಿಸಿದರು. ಆದರೆ ಬ್ರಿಟಿಷರು ಸಹಾಯ ಮಾಡದೆ ಪರ್ಷಿಯನ್ನರೇ ಆಕ್ರಮಣ ನೀತಿಯನ್ನು ಅನುಸರಿಸಿದರೆಂದು ಹೇಳಿದ್ದು ಸತ್ಯಕ್ಕೆ ವಿರುದ್ಧವಾಗಿತ್ತು. ಪರ್ಷಿಯನ್ನರಿಗೆ ಸಹಾಯ ಮಾಡುವ ಷರತ್ತನ್ನೂ ಒಪ್ಪಂದದಿಂದ ರದ್ದು ಮಾಡಿದರು. ಏಷ್ಯದಲ್ಲಿ ರಷ್ಯನ್ನರ ಬೆದರಿಕೆ ನಿಜವಾಗಿದ್ದರೂ ಭಾರತದ ವಾಯವ್ಯಗಡಿಗೆ ಇದರಿಂದ ವಿಪತ್ತು ಎಂಬುದು ಕೇವಲ ಭ್ರಮೆಯೆಂದು ಹೇಳಬೇಕು. ರಷ್ಯನ್ನರು ಭಾರತದ ವಾಯವ್ಯಗಡಿಗೆ ಬರಬೇಕಾದರೆ ಸುಲಭ ಸಾಧ್ಯವಲ್ಲ. ಅದರಲ್ಲೂ ಮಾಸ್ಕೋದಿಂದ ಸಿಂಧೂ ನದಿಯ ತೀರಕ್ಕೆ ಬರಬೇಕಾದರೆ ಬಹು ದೂರ. ರಷ್ಯನ್ನರ ಕೊನೆಯ ಠಾಣೆಗಳು 1600 ಕಿಮೀ ದೂರದಲ್ಲಿದ್ದುವು. ಅವರ ಬೆದರಿಕೆಯನ್ನು ಆ ಕಾಲದ ಬ್ರಿಟಿಷ್ ರಾಜಕಾರಣಿಗಳು ಉತ್ಪ್ರೇಕ್ಷಿಸಿದರೆಂದು ಹೇಳಬೇಕು. ಆದರೂ ರಷ್ಯನ್ನರು ಅಫ್ಘಾನಿಸ್ತಾನದ ಆಕ್ರಮಣಕ್ಕೆ ಪರ್ಷಿಯನ್ನರಿಗೆ ಗುಟ್ಟಾಗಿ ಪ್ರೋತ್ಸಾಹ ಕೊಟ್ಟಿದ್ದರು. ದೋಸ್ತ್ ಮಹಮ್ಮದ್ ರಣಜಿತ್‌ಸಿಂಗ್‌ನಿಂದ ಪೆಷಾವರ್‌ಅನ್ನು ತನಗೆ ಹಿಂದಕ್ಕೆ ಕೊಡಿಸಿದರೆ ಬ್ರಿಟಿಷರ ಸ್ನೇಹ ಮಾಡಿಕೊಳ್ಳುವುದಾಗಿ ಹೇಳಿದ್ದು ಅವರಿಗೆ ಒಪ್ಪಿಗೆಯಾಗಲಿಲ್ಲ. ರಣಜಿತ್‌ಸಿಂಗ್ ಒಪ್ಪಂದದ ಪ್ರಕಾರ ಬ್ರಿಟಿಷರ ಸ್ನೇಹಿತನಾಗಿ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದ. ಆದ್ದರಿಂದ ದೋಸ್ತ್ ಮಹಮ್ಮದ್‌ನ ಷರತ್ತು ಒಪ್ಪಿಗೆಯಾಗಲಿಲ್ಲ. ಆದರೂ ಆಕ್ಲಂಡ್ ಸ್ವಲ್ಪ ಚಾತುರ್ಯ ತೋರಿಸಿದ್ದರೆ ಮುಂದೆ ನಡೆದ ಘೋರ ಘಟನೆಗಳಿಗೆ ಅವಕಾಶವಿರುತ್ತಿರಲಿಲ್ಲ.

1838ರಲ್ಲಿ ಲಾರ್ಡ್ ಆಕ್ಲಂಡ್ ರಣಜಿತ್‌ಸಿಂಗ್ ಮತ್ತು ಷಾ ಷೂಜರೊಡನೆ ಒಂದು ತ್ರಿಗುಣಾತ್ಮಕ ಒಪ್ಪಂದ ಮಾಡಿಕೊಂಡ. ಅದರ ಪ್ರಕಾರ ಸಿಖ್ಖರ ಮತ್ತು ಬ್ರಿಟಿಷರ ಸೈನ್ಯಗಳ ಸಹಾಯದಿಂದ ಷಾ ಷೂಜನನ್ನು ಕಾಬೂಲಿಗೆ ರಾಜನಾಗಿ ಮಾಡಬೇಕಾಗಿತ್ತು. ಬ್ರಿಟಿಷರ ಸೈನ್ಯ ಫೆರೋಜ್‌ಪುರದಲ್ಲಿ ಗುಂಪು ಕೂಡಿತು. ಪಂಜಾಬಿನ ಮೂಲಕ ಹೋಗಲು ರಣಜಿತ್‌ಸಿಂಗ್ ಅದಕ್ಕೆ ಅನುಮತಿ ಕೊಡಲಿಲ್ಲ. ಆದ್ದರಿಂದ ಸಿಂಧ್ ಮತ್ತು ಬಲೂಚಿಸ್ತಾನದ ಮೂಲಕ ಅದು ಹೋಗಬೇಕಾಯಿತು. ಸಿಂಧ್ ಮೂಲಕ ಹೋಗಿದ್ದು 1832ರಲ್ಲಿ, ಇದರಿಂದ ಸಿಂಧ್‌ನ ಅಮೀರರೊಡನೆ ಮಾಡಿಕೊಂಡ ಕೌಲಿನ ಉಲ್ಲಂಘನೆಯಾಯಿತು. ಬ್ರಿಟಿಷ್ ಸೈನಿಕರು ಕಂದಹಾರ್ ಮತ್ತು ಘಜ್ನಿಗಳನ್ನು ಸ್ವಾಧೀನ ಮಾಡಿಕೊಂಡರು. ದೋಸ್ತ್ ಮಹಮ್ಮದ್ ಕಾಬೂಲನ್ನು ಬಿಟ್ಟ. ಷಾ ಷೂಜ ಕಾಬೂಲಿಗೆ ಬಂದ. ಅವನ ಬಗ್ಗೆ ಜನ ಯಾವ ಉತ್ಸಾಹವನ್ನೂ ತೋರಿಸಲಿಲ್ಲ. ಅದು ಒಂದು ಪ್ರೇತಯಾತ್ರೆಯ ಮೆರವಣಿಗೆಯ ಹಾಗೆ ಇತ್ತು. ಏನೂ ತೋಚದೆ ದೋಸ್ತ್ ಮಹಮ್ಮದ್ ಬ್ರಿಟಿಷರಿಗೆ ಅಧೀನನಾಗಿ ಕಲ್ಕತ್ತದಲ್ಲಿ ಖೈದಿಯಾದ. ಈ ಸಂದಿಗ್ಧಸ್ಥಿತಿಯಲ್ಲಿ ಲಾರ್ಡ್ ಆಕ್ಲಂಡ್ ಅನೇಕ ತಪ್ಪುಗಳನ್ನು ಮಾಡಿದ. ಕಾಬೂಲಿನಲ್ಲಿ ಬ್ರಿಟಿಷರ ಸೈನ್ಯಕ್ಕೆ ಮುಖ್ಯಸ್ಥನನ್ನಾಗಿ ನಾಟ್ಟನನ್ನು ಮುಖ್ಯ ಸೈನ್ಯಾಧಿಪತಿ ನೇಮಿಸಿದ್ದರೂ ಆಕ್ಲಂಡ್ ಜನರಲ್ ಎಲ್‌ಫಿನ್‌ಸ್ಟನ್‌ನನ್ನು ನೇಮಿಸಿದ. ಬ್ರಿಟಿಷರು ಷಾ ಷೂಜನ ಇಚ್ಛೆಯಂತೆ ಬಾಲಾ ಹಿಸ್ಸಾರ್ ಎಂಬ ಪ್ರಬಲವಾದ ಕೋಟೆಯನ್ನು ಖಾಲಿ ಮಾಡಬೇಕಾಯಿತು. ಇದರಿಂದ ಬ್ರಿಟಿಷರ ಸೈನ್ಯ ಅಫ್ಘನ್ನರ ಆಕ್ರಮಣಕ್ಕೆ ತುತ್ತಾಯಿತು. ಷಾ ಷೂಜ ತನ್ನ ಸ್ವಂತ ಜನರ ವಿಶ್ವಾಸವನ್ನು ಕಳೆದುಕೊಂಡು, ಬ್ರಿಟಿಷರ ಕೈಗೊಂಬೆಯೆಂಬ ಉಪೇಕ್ಷೆಗೊಳಗಾದ. ಈ ಸಂದರ್ಭದಲ್ಲಿ ಬ್ರಿಟಿಷರ ಸೈನ್ಯವನ್ನೂ ಷಾ ಷೂಜನನ್ನೂ ಹಿಂದಕ್ಕೆ ಕರೆದುಕೊಂಡಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಆದರೆ ಲಾರ್ಡ್ ಆಕ್ಲಂಡ್ ಈ ರೀತಿ ಮಾಡಿದರೆ ತನ್ನ ಗೌರವಕ್ಕೆ ಚ್ಯುತಿ ಎಂದು ಯೋಚಿಸಿ ತನ್ನ ಕಾರ್ಯವನ್ನು ಮುಂದುವರಿಸಿದ. ಅಫ್ಘಾನಿಸ್ತಾನದಲ್ಲಿ ಎಲ್ಲೆಲ್ಲೂ ಅಶಾಂತಿ ಅತೃಪ್ತಿ ಹರಡಿತು.

**ದೊಡ್ಡ ದಂಗೆ (1841):** ಕಾಬೂಲಿನಲ್ಲಿ ದೊಡ್ಡದಂಗೆ ಎದ್ದಿತು. ಕಾನೂನನ್ನು ಉಲ್ಲಂಘಿಸಿ ಬ್ರಿಟಿಷ್ ಅಧಿಕಾರಿಯಾದ ಬರ್ನ್ಸ್‌ನನ್ನು ಕೊಲ್ಲಲಾಯಿತು. ಇಂಥ ಪರಿಸ್ಥಿತಿಯಲ್ಲೂ ಅಫ್ಘಾನಿಸ್ತಾನದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳು ತತ್‌ಕ್ಷಣವೇ ಮಧ್ಯಸ್ಥಿಕೆ ವಹಿಸದೆ ಇದ್ದರು. ದೋಸ್ತ್ ಮಹಮ್ಮದ್‌ನ ಮಗನಾದ ಮಹಮ್ಮದ್ ಅಕ್ಬರ್‌ಖಾನ್ ಅಫ್ಘನ್ನರ ನಾಯಕನಾಗಿದ್ದ. ಬ್ರಿಟಿಷ್ ಅಧಿಕಾರಿಗಳು ಅವನ ಹತ್ತಿರ ಮಾತುಕತೆ ನಡೆಸಲು ಪ್ರಯತ್ನಿಸಿದರು. ಆದರೆ ಯಾವ ಷರತ್ತೂ ಇಲ್ಲದೆ ಬ್ರಿಟಿಷರು ತಮಗೆ ಶರಣಾಗತರಾಗಬೇಕೆಂದು ಅಫ್ಘನ್ನರು ಕೇಳಿದರು. ಬ್ರಿಟಿಷರು ಒಪ್ಪಲಿಲ್ಲ. ಇದರಿಂದ ಸಂಧಿಗ್ಧಸ್ಥಿತಿ ಉಂಟಾಯಿತು. ಬ್ರಿಟಿಷ್ ಅಧಿಕಾರಿ ಮ್ಯಾಕ್‌ನಾಟನ್ ತನ್ನ ವಕ್ರನೀತಿಯಿಂದಾಗಿ ಅಕ್ಬರ್‌ಖಾನ್‌ನೊಡನೆ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ದಂಗೆಕೋರರು ಮ್ಯಾಕ್‌ನಾಟನ್‌ನನ್ನು ಕೊಂದು ಹಾಕಿದರು. ಪರಿಣಾಮವಾಗಿ ಅಫ್ಘಾನಿಸ್ತಾನದಲ್ಲಿದ್ದ 16,000 ಬ್ರಿಟಿಷರು ಅಲ್ಲಿಂದ ಹಿಮ್ಮೆಟ್ಟಲು ಸಂಕಲ್ಪಿಸಿದರು. ಸಾಧ್ಯವಾಗದ ಅನೇಕರು ಕೊಲ್ಲಲ್ಪಟ್ಟರು. ಬ್ರಿಟಿಷ್ ಸೈನಿಕರ ಪೈಕಿ 120 ಜನರನ್ನು ಅಕ್ಬರ್‌ಖಾನ್ ಸೆರೆಹಿಡಿದ. ಡಾಕ್ಟರ್ ಬ್ರೈಡನ್ ಮಾತ್ರ ಜಲಾಲ್‌ಬಾದನ್ನು ಸುರಕ್ಷಿತವಾಗಿ ಸೇರಿದ. ಅಫ್ಘಾನಿಸ್ತಾನದಲ್ಲಿ ನಡೆದ ಈ ವಿಪತ್ತಿನ ಸುದ್ದಿ ಭಾರತ ಮತ್ತು ಇಂಗ್ಲೆಂಡಿನಲ್ಲಿ ಕೋಲಾಹಲ ಎಬ್ಬಿಸಿತು. ಬ್ರಿಟಿಷ್ ಸರ್ಕಾರ ಲಾರ್ಡ್ ಆಕ್ಲಂಡ್‌ನನ್ನು ಹಿಂದಕ್ಕೆ ಕರೆಸಿ ಲಾರ್ಡ್ ಎಲ್ಲೆನ್‌ಬರೋನನ್ನು ಗವರ್ನರ್ ಜನರಲ್‌ನನ್ನಾಗಿ ನೇಮಿಸಿತು (1842). ಈತ ಹಿಂದಿನ ಕರಾರನ್ನು ರದ್ದುಗೊಳಿಸಿ ಸೈನಿಕ ದೃಷ್ಟಿಯಿಂದ ಏನು ಅಗತ್ಯವೋ ಹಾಗೆ ನಡೆದುಕೊಳ್ಳಲು ಸಂಕಲ್ಪಿಸಿದ. ಆದರೆ ಘಜ್ನಿಯಲ್ಲಿ ಪಾಮರ್ ಎಂಬೊಬ್ಬ ಶತ್ರುಗಳಿಗೆ ಶರಣಾಗತನಾದನೆಂಬ ಸುದ್ದಿಯನ್ನು ತಿಳಿದು, ಕಾಬೂಲ್ ಮತ್ತು ಕಂದಹಾರ್‌ಗಳಿಂದ ಬ್ರಿಟಿಷರು ಹಿಂದಿರುಗಲು ಆಜ್ಞೆ ಮಾಡಿದ. ಈ ಆಜ್ಞೆಗೆ ಸೈನ್ಯದ ಉನ್ನತಾಧಿಕಾರಿಗಳು ವಿರುದ್ಧಾಭಿಪ್ರಾಯವನ್ನು ಸೂಚಿಸಿದರು. ಖುರ್ದ್ ಕಾಬೂಲ್ ಕಣಿವೆಯ ಹತ್ತಿರ ಪೊಲಾಕ್ ಅಕ್ಬರ್‌ಖಾನ್‌ನನ್ನು ಸಂಪೂರ್ಣವಾಗಿ ಸೋಲಿಸಿದ. ಆತ ಕಾಬೂಲನ್ನು ಪ್ರವೇಶಿಸಿ ಬಾಲಾಹಿಸ್ಸರ್ ಕೋಟೆಯ ಮೇಲೆ ಬ್ರಿಟಿಷ್ ಧ್ವಜವನ್ನು ಏರಿಸಿದ. ನಾಟ್ಟನೂ ಅವನನ್ನು ಸೇರಿದ. ತಮ್ಮ ಮೇಲೆ ಮಾಡಿದ ಕ್ರೌರ್ಯಗಳ ಸೇಡನ್ನು ತೀರಿಸಿಕೊಳ್ಳಲು ಬ್ರಿಟಿಷರ ಸೈನ್ಯ ಮದ್ದುಗುಂಡಿನಿಂದ ಕಾಬೂಲಿನ ದೊಡ್ಡಪೇಟೆಯನ್ನು ಭಸ್ಮ ಮಾಡಿತು. ಅದಾದ ಮೇಲೆ ಬ್ರಿಟಿಷ್ ಸೈನ್ಯಗಳು ಅಫ್ಘಾನಿಸ್ತಾನವನ್ನು ಬಿಟ್ಟು ಬಿಟ್ಟವು. ಲಾರ್ಡ್ ಎಲ್ಲೆನ್‌ಬರೊ ಅಕ್ಟೋಬರ್ 1842ರಲ್ಲಿ ಒಂದು ಬಹಿರಂಗ ಪ್ರಕಟಣೆಯನ್ನು ಹೊರಡಿಸಿದ. ಬ್ರಿಟಿಷ್ ಸರ್ಕಾರ ಅಫ್ಘಾನಿಸ್ತಾನದಲ್ಲಿ ಜನರು ಒಪ್ಪಿದ ಯಾವ ಸರ್ಕಾರವನ್ನೇ ಆಗಲಿ ಮಾನ್ಯ ಮಾಡುವುದಾಗಿಯೂ ಆ ಸರ್ಕಾರ ನೆರೆಹೊರೆಯ ದೇಶಗಳೊಡನೆ ಸ್ನೇಹದಿಂದ ವರ್ತಿಸಬೇಕೆಂದೂ ಹಾಗೆ ಮಾಡಿದ್ದೇ ಆದರೆ ಬ್ರಿಟಿಷ್ ಸರ್ಕಾರ ಶಾಂತಿ ಸ್ಥಾಪನೆಗೆ ಸಹಾಯ ಮಾಡುವುದಾಗಿಯೂ ಈ ಪ್ರಕಟಣೆಯ ಮುಖ್ಯ ಸಾರಾಂಶ. ದೋಸ್ತ್ ಮಹಮ್ಮದ್‌ನನ್ನು ಕಲ್ಕತ್ತದ ಜೈಲಿನಿಂದ ಬಿಡುಗಡೆ ಮಾಡಿ ಕಾಬೂಲಿಗೆ ಹೋಗಲು ಅನುಮತಿ ಕೊಡಲಾಯಿತು. ಆತ 1863ರವರೆಗೆ ಕಾಬೂಲಿನಲ್ಲಿ ರಾಜ್ಯವಾಳಿದ.

**ಮೊದಲನೆಯ ಅಫ್ಘನ್ ಯುದ್ಧ:** ಬ್ರಿಟಿಷರಿಗೆ ದೊಡ್ಡ ಅಪಜಯ ತಂದಿತು. ಹೆಚ್ಚು ನಷ್ಟವೂ ಆಯಿತು. 20,000 ಜನ ಕೊಲ್ಲಲ್ಪಟ್ಟರು. 15 ದಶಲಕ್ಷ ಪೌಂಡುಗಳು ಖರ್ಚಾದುವು. ಯುದ್ಧವಾದ ಮೇಲೂ ದೋಸ್ತ್ ಮಹಮ್ಮದನೇ ಕಾಬೂಲಿಗೆ ಅಮೀರನಾದ. ಬ್ರಿಟಿಷ್ ಸರ್ಕಾರ ಅಫ್ಘಾನಿಸ್ತಾನದ ಮೇಲೆ ಯಾವ ರೀತಿಯಾದ ಹತೋಟಿಯನ್ನು ಹೊಂದಲೂ ಸಾಧ್ಯವಾಗಲಿಲ್ಲ. ಲಾರ್ಡ್ ಎಲ್ಲೆನ್‌ಬರೊ ಘಜ್ನಿಯಿಂದ ಸೋಮನಾಥ ದೇವಸ್ಥಾನದ ಬಾಗಿಲುಗಳನ್ನು ಹಿಂದಕ್ಕೆ ತಂದದ್ದೇ ದೊಡ್ಡ ಸಾಧನೆ ಎಂದು ಬಡಾಯಿ ಕೊಚ್ಚಿಕೊಂಡ. ಇವು ನಿಜವಾದ ಬಾಗಿಲುಗಳಲ್ಲವೆಂದು ಹಿಂದುಗಳು ಲಕ್ಷ್ಯಮಾಡದೆ ಇದ್ದರು. ಹಿಂದುದೇಶದ ಮುಸ್ಲಿಮರ ಮನಸ್ಸಿಗೆ ನೋವಾಯಿತು. ಪ್ರಪಂಚದ ಇತಿಹಾಸದಲ್ಲಿ ಇಷ್ಟು ನಷ್ಟಕರವಾದ ಯುದ್ಧ ಇನ್ನು ಯಾವುದೂ ಇಲ್ಲವೆಂದು ಇತಿಹಾಸಕಾರ ಕಾಯೆ ಬರೆದಿದ್ದಾನೆ. ಹೀರಟ್‌ನಿಂದ ಪರ್ಷಿಯನರ ಸೈನ್ಯ ಹಿಂದಕ್ಕೆ ಹೋದಮೇಲೆ ಬ್ರಿಟಿಷರು ಅಫ್ಘಾನಿಸ್ತಾನದಲ್ಲಿ ಮಧ್ಯಸ್ಥಿಕೆ ವಹಿಸಲು ಯಾವ ನ್ಯಾಯವೂ ಇರಲಿಲ್ಲ. ದೋಸ್ತ್ ಮಹಮ್ಮದ್ ಸ್ವತಂತ್ರ ರಾಜನಾಗಿ ರಷ್ಯ ದೇಶದೊಡನೆ ಒಪ್ಪಂದ ಮಾಡಿಕೊಳ್ಳಲು ಯಾವ ಅಡ್ಡಿಯೂ ಇರಲಿಲ್ಲ. ಆದರೂ ಬ್ರಿಟಿಷರ ಒತ್ತಾಯದಿಂದ ರಷ್ಯನರ ಪ್ರತಿನಿಧಿಯನ್ನು ಕಾಬೂಲಿನಿಂದ ವಾಪಸ್ಸು ಕಳುಹಿಸಿದ. ದೋಸ್ತ್ ಮಹಮ್ಮದ್ ಷಾ ಷೂಜನಿಗಿಂತ ಆಡಳಿತದಲ್ಲಿ ಹೆಚ್ಚು ದಕ್ಷತೆ ಮತ್ತು ಸಾಮರ್ಥ್ಯವನ್ನು ಹೊಂದಿದ್ದ. ಲಾರ್ಡ್ ಆಕ್ಲಂಡ್, ಷಾ ಷೂಜನನ್ನು ಅಮೀರನನ್ನಾಗಿ ಮಾಡಲು ಯತ್ನಿಸಿದ್ದು ದೊಡ್ಡ ತಪ್ಪು. ರಾಜಕೀಯ ಮತ್ತು ಸೈನಿಕ ಉಪಯುಕ್ತತೆಗೆ ವಿರೋಧವಾಗಿ ಈ ಯುದ್ಧ ನಡೆಯಿತೆಂದು ಒಪ್ಪಿಕೊಳ್ಳಬೇಕು.

ದೋಸ್ತ್ ಮಹಮ್ಮದ್ 1863ರವರೆಗೂ ರಾಜ್ಯವಾಳಿದ. ಬ್ರಿಟಿಷರ ಸ್ನೇಹವನ್ನು ಕಾಪಾಡಿಕೊಂಡ, ಆದರೆ ಆತ ಸತ್ತಮೇಲೆ (1863) ಸಿಂಹಾಸನದ ಬಾಧ್ಯಸ್ತಿಕೆಗೆ ಅವನ 16 ಮಕ್ಕಳಲ್ಲಿ ಜಗಳವುಂಟಾಯಿತು. ದೋಸ್ತ್ ಮಹಮ್ಮದ್ ಷೇರ್ ಅಲಿ ತನ್ನ ಉತ್ತರಾಧಿಕಾರಿಯೆಂದು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿದ್ದ. ಆದರೆ ಮಹಮ್ಮದ್ ಅಫ್ಜಲ್ ಮತ್ತು ಮಹಮ್ಮದ್ ಅಸ್ಲಿಮ್‌ಖಾನ್‌ರು ರಾಜ್ಯಕ್ಕೆ ವಾರಸುದಾರರಾಗಿ ಯುದ್ಧ ಮಾಡಲು ಸಿದ್ಧತೆ ಮಾಡಿಕೊಂಡರು. ವೈಸರಾಯ್ ಲಾರ್ಡ್ ಲಾರೆನ್ಸ್ ಷೇರ್ ಅಲಿಯನ್ನು ಕಾಬೂಲಿನ ರಾಜನಾಗಿ ಮಾನ್ಯ ಮಾಡಿದ್ದರೂ ಅಫ್ಘಾನಿಸ್ತಾನದ ಒಳ ವಿಚಾರಗಳಲ್ಲಿ ಮಧ್ಯಸ್ಥಿಕೆ ವಹಿಸುವುದಿಲ್ಲವೆಂದು ಖಂಡಿತವಾಗಿ ತಿಳಿಸಿದ. ಅಫ್ಘಾನಿಸ್ತಾನದ ವಿಚಾರದಲ್ಲಿ ತಾಟಸ್ಥ್ಯ ನೀತಿಯೇ ಸರಿಯೆಂದೂ ಅದರಿಂದ ಅಫ್ಘನರ ಪ್ರೀತಿಯನ್ನು ಪಡೆಯಬಹುದೆಂದೂ ಆತ ನಂಬಿದ್ದ. 1868ರಲ್ಲಿ ಷೇರ್ ಅಲಿ ಅಫ್ಘಾನಿಸ್ತಾನದಲ್ಲಿ ಭದ್ರವಾದ ಆಡಳಿತವನ್ನು ಸ್ಥಾಪಿಸಿ ಬ್ರಿಟಿಷರ ಸ್ನೇಹವನ್ನು ಹೊಂದಿದ್ದ. ಲಾರ್ಡ್ ಮೇಯೋ ಮತ್ತು ಲಾರ್ಡ್ ನಾರ್ತ್‌ಬ್ರೂಕ್‌ರ್ ಲಾರೆನ್ಸ್‌ರ ನೀತಿಯನ್ನೇ ಅನುಸರಿಸಿದರು. ಆದರೆ ಲಾರ್ಡ್ ಲಿಟ್ಟನ್ ತಾಟಸ್ಥ್ಯನೀತಿಯನ್ನು ರದ್ದುಮಾಡಿದ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಮತ್ತೊಮ್ಮೆ ವಿಪತ್ತನ್ನು ಅನುಭವಿಸಬೇಕಾಯಿತು.

ಷೇರ್‌ಅಲಿಯೊಡನೆ ಕಟ್ಟುನಿಟ್ಟಾದ ವ್ಯಾವಹಾರಿಕ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಲಾರ್ಡ್ ಲಿಟ್ಟನ್ ನಿಶ್ಚಯಿಸಿದ. ಅಮೀರ್‌ನ ಷರತ್ತುಗಳನ್ನು ಒಪ್ಪಿ, ಹೊರಗಿನಿಂದ ಆಕ್ರಮಣ ನಡೆದರೆ ಸಹಾಯ ಮಾಡುವುದಾಗಿ ಲಿಖಿತ ಭರವಸೆಯನ್ನು ಕೊಟ್ಟ. ಆದರೆ ಷೇರ್‌ಅಲಿ ಹೀರಟ್‌ನಲ್ಲಿ ಬ್ರಿಟಿಷ್ ರೆಸಿಡೆಂಟ್‌ನ ನೇಮಕಕ್ಕೆ ಒಪ್ಪಬೇಕಾಯಿತು. ರಾಣಿ ಭಾರತದ ಚಕ್ರವರ್ತಿನಿ ಎಂಬ ಬಿರುದನ್ನು ಒಪ್ಪಲು ಷೇರ್‌ಅಲಿ ಬ್ರಿಟಿಷ್ ನಿಯೋಗ ಮಂಡಳಿಯೊಂದನ್ನು ಅಫ್ಘಾನಿಸ್ತಾನದಲ್ಲಿ ಸ್ವಾಗತಿಸಬೇಕಾಯಿತು. ಷೇರ್‌ಅಲಿ ಇದಕ್ಕೆ ಒಪ್ಪಲಿಲ್ಲ. ಯಾವ ರೀತಿಯಾದ

ಭರವಸೆಯನ್ನೂ ಕೊಡಲು ನಿರಾಕರಿಸಿದ. ಬ್ರಿಟಿಷ್ ರೆಸಿಡೆಂಟ್‍ನ ನೇಮಕಕ್ಕೂ ಒಪ್ಪಿಗೆ ಕೊಡಲಿಲ್ಲ. ಇವೇ ಎರಡನೆಯ ಆಫ್ಘನ್ ಯುದ್ಧಕ್ಕೆ ಕಾರಣಗಳು. ರಷ್ಯ ಮತ್ತು ಬ್ರಿಟನ್ ಎಂಬ ಎರಡು ಕಬ್ಬಿಣದ ಮಡಕೆಗಳ ಮಧ್ಯೆ ಆಫ್ಘಾನಿಸ್ತಾನ ಒಂದು ಮಣ್ಣಿನ ಸಣ್ಣ ಮಡಕೆ ಎಂದು ಲಿಟ್ಟನ್ ತಿಳಿದಿದ್ದ. ಆಫ್ಘಾನಿಸ್ತಾನ ಬಲವಾದ ರಾಷ್ಟ್ರವಾಗದೇ ಇರಲು ಅದನ್ನು ಪ್ರತ್ಯೇಕ ಭಾಗಗಳಾಗಿ ಒಡೆದರೆ ಅನುಕೂಲವೆಂದು ಆತ ಭಾವಿಸಿದ, ಡಿಸ್ರೇಲಿಯ ಸಾಮ್ರಾಜ್ಯಶಾಹಿ ನೀತಿಯನ್ನು ಲಾರ್ಡ್ ಲಿಟ್ಟನ್ ಆಫ್ಘಾನಿಸ್ತಾನದಲ್ಲಿ ಪ್ರಯೋಗಿಸಿದ.

**ಎರಡನೆಯ ಆಫ್ಘನ್ ಯುದ್ಧ (1878–80):** ರಷ್ಯನ್ನರ ಬೆದರಿಕೆಯಿಂದ ಷೇರ್‍ಅಲಿ ರಷ್ಯ ದೇಶದೊಡನೆ ಶಾಶ್ವತವಾದ ಸ್ನೇಹಕ್ಕೆ ಒಪ್ಪಬೇಕಾಯಿತು. ಕಾಬೂಲಿನಲ್ಲಿ ರಷ್ಯನ್ನರ ಮಂಡಳಿ ಬಂದಿದ್ದನ್ನು ತಿಳಿದು ಲಾರ್ಡ್ ಲಿಟ್ಟನ್ ಬ್ರಿಟಿಷ್ ರಾಯಭಾರಿಯ ನೇಮಕಕ್ಕೆ ಒಪ್ಪಬೇಕೆಂದು ಷೇರ್‍ಅಲಿಗೆ ತಿಳಿಸಿದ. ಷೇರ್‍ಅಲಿ ಒಪ್ಪಲಿಲ್ಲ. ರಷ್ಯನ್ನರ ನಿಯೋಗ ಕಾಬೂಲನ್ನು ಬಿಟ್ಟರೂ ಲಾರ್ಡ್ ಲಿಟ್ಟನ್ ಬ್ರಿಟಿಷ್ ರೆಸಿಡೆಂಟನ ನೇಮಕಕ್ಕೆ ಒತ್ತಾಯಪಡಿಸಿದ. ಷೇರ್‍ಅಲಿ ರಷ್ಯದ ಕೈಗೊಂಬೆಯಾಗಲು ಅವಕಾಶಕೊಡಬಾರದೆಂದು ಲಿಟ್ಟನ್ನನ ಆಶೆ. ಸ್ವತಂತ್ರ ಪ್ರಭುವಾಗಿ ಬ್ರಿಟಿಷ್ ರೆಸಿಡೆಂಟ್‍ನ ನೇಮಕಕ್ಕೆ ಷೇರ್‍ಅಲಿ ಒಪ್ಪದೇ ಇದ್ದದ್ದು ಸರಿ. ಬಲವಂತದಿಂದ ನೇಮಿಸುವುದಕ್ಕೆ ಬ್ರಿಟಿಷ್ ಸರ್ಕಾರಕ್ಕೆ ಯಾವ ಹಕ್ಕೂ ಇರಲಿಲ್ಲ. ಹೀಗಿದ್ದರೂ ಲಿಟ್ಟನ್ ಬಲವಂತದಿಂದ ಬ್ರಿಟಿಷ್ ರಾಯಭಾರಿಯನ್ನು ಹೇರಿದ. ಷೇರ್‍ಅಲಿ ಕಾಬೂಲಿನಲ್ಲಿದ್ದ ರಷ್ಯನ್ನರ ರಾಯಭಾರಿಯ ಸಲಹೆಯನ್ನು ಕೇಳಿದ್ದು ಲಿಟ್ಟನ್‍ನಿಗೆ ಉದ್ರೇಕ ಉಂಟುಮಾಡಿತು. ಲಿಟ್ಟನ್ ಸರ್ ನೆವಿಲ್ ಛೇಂಬರ್‍ಲಿನ್‍ನನ್ನು ಪೆಷಾವರ್‍ಗೆ ನಿಯೋಗಿಯಾಗಿ ಕಳುಹಿಸಿದ. ನಿಯೋಗಕ್ಕೆ ಮಸೀದಿಯಿಂದ ಮುಂದಕ್ಕೆ ಹೋಗಲು ಅಲಿ ಅವಕಾಶ ಕೊಡಲಿಲ್ಲ. ಲಿಟ್ಟನ್‍ನಿಗೆ ಕೋಪ ಬಂದು 1878 ನವೆಂಬರ್ ತಿಂಗಳಿನಲ್ಲಿ ಅಂತ್ಯ ನಿರ್ಧಾರ ಕೈಗೊಂಡ. ಅಮೀರ್ ಯಾವ ಷರತ್ತೂ ಇಲ್ಲದೆ ಕ್ಷಮಾಪಣೆ ಕೇಳಬೇಕೆಂದೂ ಬ್ರಿಟಿಷ್ ರಾಯಭಾರಿಯ ನೇಮಕಕ್ಕೆ ಒಪ್ಪಬೇಕೆಂದೂ ತಿಳಿಸಲಾಯಿತು. ಜವಾಬು ಬರದೇ ಇದ್ದುದರಿಂದ ಬ್ರಿಟಿಷ್ ಸೈನ್ಯಗಳು ಆಫ್ಘಾನಿಸ್ತಾನಕ್ಕೆ ನುಗ್ಗಲು ಆಜ್ಞೆ ಮಾಡಲಾಯಿತು. ತನ್ನ ದೇಶದ ಮೇಲೆ ಆಕ್ರಮಣ ಮಾಡಿದ ಬ್ರಿಟಿಷರ ವಿರುದ್ಧ ಸಹಾಯ ಮಾಡಲು ಷೇರ್ ಅಲಿ ರಷ್ಯ ದೇಶಕ್ಕೆ ಮನವಿಮಾಡಿದ. ಆದರೆ ರಷ್ಯ ಯಾವ ಸಹಾಯವನ್ನೂ ಮಾಡಲಿಲ್ಲ. ಷೇರ್ ಅಲಿ ದಿಕ್ಕಿಲ್ಲದೆ ಓಡಿಹೋಗಿ 1879 ಫೆಬ್ರವರಿಯಲ್ಲಿ ಸತ್ತುಹೋದ. ಅವನ ಮಗ ಯಾಕೂಬ್ ಖಾನ್ ಬ್ರಿಟಿಷರಿಗೆ ಶರಣಾಗತನಾಗಿ ಗಂಡಮಕ್ ಒಪ್ಪಂದ ಮಾಡಿಕೊಂಡ. ಯಾಕೂಬ್ ಖಾನ್ ತನ್ನ ವಿದೇಶ ನೀತಿಯನ್ನು ಬ್ರಿಟಿಷ್ ಸರ್ಕಾರದ ಸೂಚನೆಯಂತೆ ರೂಪಿಸುವುದಾಗಿ ಒಪ್ಪಿದ. ಕಾಬೂಲಿನಲ್ಲಿ ಕಾಯಂ ಆಗಿ ಬ್ರಿಟಿಷ್ ರೆಸಿಡೆಂಟ್‍ನನ್ನು ಇಟ್ಟುಕೊಳ್ಳುವುದಕ್ಕೆ ಸಮ್ಮತಿಸಿದ. ಕುರಂ ಕಣಿವೆಯನ್ನು ಬ್ರಿಟಿಷ್ ಸರ್ಕಾರಕ್ಕೆ ಕೊಡಲು ಒಪ್ಪಿದ. ಪ್ರತಿಯಾಗಿ ಬ್ರಿಟಿಷ್ ಸರ್ಕಾರ ಸೈನ್ಯ, ಧನ ಮತ್ತು ಇತರ ಯುದ್ಧ ಸಾಮಗ್ರಿಗಳ ಸಹಾಯವನ್ನು ಮಾಡುವುದಾಗಿಯೂ ಅಮೀರನನ್ನು ಸಿಂಹಾಸನದ ಮೇಲೆ ಸ್ಥಿರವಾಗಿರಿಸಲು ಸಕಲ ಪ್ರಯತ್ನ ಮಾಡುವುದಾಗಿಯೂ ಭರವಸೆ ಕೊಟ್ಟಿತು. ಬ್ರಿಟಿಷರು ತಮ್ಮ ಸೈನ್ಯ ಪಡೆಗಳನ್ನು ಆಫ್ಘಾನಿಸ್ತಾನದಿಂದ ಹಿಂದಕ್ಕೆ ಕರೆದುಕೊಳ್ಳಲು ಒಪ್ಪಿದರು. ರಾಬರ್ಟ್ಸ್ ಎಂಬ ಇತಿಹಾಸಕಾರನ ಅಭಿಪ್ರಾಯದಂತೆ ಈ ಒಪ್ಪಂದ ಲಿಟ್ಟನ್ನನ ಆಫ್ಘನ್ ನೀತಿಯ ಪರಮಾವಧಿ ಎಂದು ಹೇಳಬಹುದು. ಈ ಒಪ್ಪಂದ ಡಿಸ್ರೇಲಿಯ ದೃಷ್ಟಿಯಲ್ಲಿ ಭಾರತ ಸರ್ಕಾರಕ್ಕೆ ಒಂದು ಶಾಸ್ತ್ರೀಯ ಗಡಿಯನ್ನು ಸ್ಥಾಪಿಸಿತು. ಆದರೆ ಈ ಒಪ್ಪಂದ ಕೇವಲ ಕ್ಷಣಿಕವಾದದ್ದು. ಆಫ್ಘನ್ನರು ಕಾಬೂಲಿನಲ್ಲಿ ಬ್ರಿಟಿಷ್ ರೆಸಿಡೆಂಟ್‍ನ ನೇಮಕಕ್ಕೆ ವಿರೋಧ ತೋರಿಸಿದರು. ಬ್ರಿಟಿಷ್ ಸರ್ಕಾರದ ಅಧೀನನಾದ ಯಾಕೂಬ್‍ನನ್ನು ನಿಕೃಷ್ಟವಾಗಿ ಕಂಡರು. ಸ್ಥಿರತೆ, ಶೀಲಗಳಿಲ್ಲದ ಹೊಸನವಾಬನ ನುಣಚಿಕೊಳ್ಳುವ ಗುಣ ಹೊರಬಿತ್ತು. ಕಾಬೂಲಿಗೆ ಬಂದ ಬ್ರಿಟಿಷ್ ರೆಸಿಡೆಂಡ್ ಕಾವಗ್ನರಿಯನ್ನು ಕೇವಲ ಒಂದೂವರೆ ತಿಂಗಳಲ್ಲಿ ಆಫ್ಘನ್ ಸೈನಿಕರು ಕೊಂದು ಹಾಕಿದರು. ಈ ಕೊಲೆ ಗಂಡಮಕ್ ಒಪ್ಪಂದಕ್ಕೆ ತಿಲಾಂಜಲಿಯಾಯಿತು. ಬ್ರಿಟಿಷ್ ಸೈನ್ಯಗಳನ್ನು ಆಫ್ಘಾನಿಸ್ತಾನಕ್ಕೆ ತತ್‍ಕ್ಷಣವೇ ರವಾನಿಸಲಾಯಿತು. 1879 ಅಕ್ಟೋಬರ್‍ನಲ್ಲಿ ಬ್ರಿಟಿಷರು ಛರಸಿಯಾಬ್ ಕದನದಲ್ಲಿ ಆಫ್ಘನರನ್ನು ಸೋಲಿಸಿದರು. ಯಾಕೂಬನನ್ನು ಕೈದಿಯಂತೆ ಭಾರತಕ್ಕೆ ಕಳುಹಿಸಿದರು. ಬ್ರಿಟಿಷ್ ಸರ್ಕಾರ ಆಫ್ಘಾನಿಸ್ತಾನವನ್ನು ಪ್ರತ್ಯೇಕ ಭಾಗಗಳಾಗಿ ಒಡೆಯಲು ಸಂಕಲ್ಪಿಸಿತು. ಈ ಸಮಯದಲ್ಲಿ ದೋಸ್ತ್ ಮಹಮ್ಮದನ ಮೊಮ್ಮಗನಾದ ಅಬ್ದುಲ್ ರಹಮಾನ್ ರಂಗಭೂಮಿಗೆ ಪ್ರವೇಶಿಸಿದ. ಇದುವರೆಗೂ ರಷ್ಯ ಸರ್ಕಾರದ ಆಶ್ರಯದಲ್ಲಿದ್ದ ಅಬ್ದುಲ್ ರಹಮಾನ್ ಆಫ್ಘಾನಿಸ್ತಾನಕ್ಕೆ ಹಿಂತಿರುಗಿ ಬಂದು ತನ್ನ ಅದೃಷ್ಟವನ್ನು ಪರೀಕ್ಷೆ ಮಾಡಿದ. ಕಾಲ ವಿಳಂಬ ಮಾಡದೆ ಲಿಟ್ಟನ್ ಅಬ್ದುಲ್ ರಹಮಾನ್‍ನನ್ನು ಆಫ್ಘಾನಿಸ್ತಾನದ ಅಮೀರನಾಗಿ ಮಾನ್ಯ ಮಾಡಬೇಕೆಂದಿರುವಾಗ ಇಂಗ್ಲೆಂಡಿನಲ್ಲಿ 1880ರಲ್ಲಿ ಬೇರೆ ಸರ್ಕಾರ ಆಡಳಿತಕ್ಕೆ ಬಂದಿದ್ದರಿಂದ ಲಿಟ್ಟನ್ ಹಿಂದಕ್ಕೆ ಹೋಗಬೇಕಾಯಿತು. ಲಾರ್ಡ್ ಲಿಟ್ಟನ್ ಅಬ್ದುಲ್ ರಹಮಾನ್‍ನನ್ನು ಆಫ್ಘಾನಿಸ್ತಾನದ ಅಮೀರನಾಗಿ ಅಂಗೀಕರಿಸಿ ಇಂಗ್ಲೆಂಡ್ ವಿನಾ ಬೇರೆ ದೇಶಗಳೊಡನೆ ಯಾವ ರಾಜಕೀಯ ಸಂಪರ್ಕವನ್ನೂ ಇಟ್ಟುಕೊಳ್ಳಕೂಡದೆಂದೂ ಪಿಷಿನ್ ಮತ್ತು ಸಿಬಿ ಜಿಲ್ಲೆಗಳು ಬ್ರಿಟಿಷ್ ಸರ್ಕಾರದ ಆಡಳಿತದಲ್ಲಿರಬೇಕೆಂದೂ ಷರತ್ತು ಹಾಕಿದ. ಅಮೀರನಿಗೆ ಭಾರತ ಸರ್ಕಾರ ಪ್ರತಿ ವರ್ಷವೂ ಸಹಾಯ ಧನವನ್ನು ಕೊಡಲು ಒಪ್ಪಿತು. ಆಫ್ಘಾನಿಸ್ತಾನದ ವಿದೇಶ ನೀತಿ ಬ್ರಿಟಿಷರ ಆಧೀನದಲ್ಲಿದ್ದುದರಿಂದ ಕಾಬೂಲ್‍ನಲ್ಲಿ ಬ್ರಿಟಿಷ್ ರೆಸಿಡೆಂಟ್‍ನ ನೇಮಕದ ಆವಶ್ಯಕತೆ ಇರಲಿಲ್ಲ. ಈ ತೀರ್ಮಾನ ಬಹುಕಾಲದವರೆಗೂ ಆಚರಣೆಯಲ್ಲಿತ್ತು. ಅಬ್ದುಲ್ ರಹಮಾನ್ ಅಮೀರನಾಗಿರುವವರೆಗೂ ಬ್ರಿಟಿಷ್ ಸರ್ಕಾರ ಆಫ್ಘಾನಿಸ್ತಾನದೊಡನೆ ವಿರಸವಿಲ್ಲದ ಸಂಬಂಧವನ್ನು ಹೊಂದಿತ್ತು. ಅಯೂಬ್ ಖಾನ್, ಅಬ್ದುಲ್ ರಹಮಾನ್‍ನ ಅಧಿಕಾರವನ್ನು ಆಕ್ಷೇಪಿಸಲು ಮೈವಾಂಡ ಮತ್ತು ಕಂದಹಾರ್‍ಗಳಲ್ಲಿ ಅವನನ್ನು ಸೋಲಿಸಲಾಯಿತು. ಲಾರ್ಡ್ ಲಿಟ್ಟನ್ ಆಫ್ಘಾನಿಸ್ತಾನದಿಂದ ಬ್ರಿಟಿಷ್ ಸೈನ್ಯಪಡೆಗಳನ್ನು ಹಿಂದಕ್ಕೆ ಕರೆಸಿಕೊಂಡ. ಎರಡನೆಯ ಆಫ್ಘಾನ್ ಯುದ್ಧ ಬ್ರಿಟಿಷರಿಗೆ ದೊಡ್ಡ ಅನರ್ಥವಾಗಿ ಪರಿಣಮಿಸಿತು. ಲಾರ್ಡ್ ಲಿಟ್ಟನ್ ಆಕ್ರಮಣ ನೀತಿಯನ್ನು ಅನುಸರಿಸಿದನೆಂದೂ ಮೊದಲನೆಯ ಆಫ್ಘನ್ ಯುದ್ಧದಿಂದ ಪಾಠ ಕಲಿಯಲಿಲ್ಲವೆಂದೂ ಖಂಡಿಸುವವರಿದ್ದಾರೆ. ಆದರೂ ಈ ಯುದ್ಧದ ಪರಿಣಾಮವಾಗಿ ರಷ್ಯದ ಪರ ಇದ್ದ ಷೇರ್ ಅಲಿಯನ್ನು ತೆಗೆದುಹಾಕಿ ಬ್ರಿಟಿಷ್ ಸರ್ಕಾರದೊಡನೆ ಸ್ನೇಹ ಸೂಚಿಸಿದ ಅಬ್ದುಲ್ ರಹಮಾನ್‍ನನ್ನು ಅಮೀರನನ್ನಾಗಿ ಮಾಡಿದ್ದು ಒಂದು ದೊಡ್ಡ ಸಾಧನೆಯೆಂದು ಹೇಳಬೇಕು. ಕಾಬೂಲಿನಲ್ಲಿ ರಷ್ಯನ್ನರ ಪ್ರಭಾವವನ್ನು ತಡೆಗಟ್ಟಲಾಯಿತು. ಕೇಲತ್‍ನ ಖಾನ್ ಬ್ರಿಟಿಷ್ ಸರ್ಕಾರದ ಹತೋಟಿಯಲ್ಲಿದ್ದ ಬಲೂಚಿಸ್ತಾನ ಪ್ರಾಂತವಾಯಿತು. ಕ್ವೆಟ್ಟವೂ ಬ್ರಿಟಿಷರ ಹತೋಟಿಗೆ ಬಂತು.

1884ರಲ್ಲಿ ಮೆವವನ್ನು ಆಕ್ರಮಿಸಿದರು. ಇದು ಬ್ರಿಟಿಷ್ ಸರ್ಕಾರಕ್ಕೆ ಕಳವಳವನ್ನುಂಟು ಮಾಡಿತು. 1885 ಮಾರ್ಚ್‍ನಲ್ಲಿ ಪ್ರಸಿದ್ಧ ಪಂಜದೇ ಘಟನೆ ನಡೆಯಿತು. ಈ ಸ್ಥಳದಲ್ಲಿ ರಷ್ಯ ಮತ್ತು ಆಫ್ಘನ್ ಸೈನಿಕರಿಗೆ ಹೋರಾಟ ನಡೆದು ಪರಿಸ್ಥಿತಿ ಅಪಾಯಕರವಾಗಿ ಕಂಡುಬಂತು. ಆದರೆ ವೈಸರಾಯ್ ಲಾರ್ಡ್ ಡಫರಿನ್ನನ ಪ್ರಯತ್ನದಿಂದಲೂ ಅಬ್ದುಲ್ ರಹಮಾನ್ ತೋರಿಸಿದ ಆತ್ಮಸಂಯಮದಿಂದಲೂ ವಿಷಮಸ್ಥಿತಿಗೆ ಅವಕಾಶವಾಗಲಿಲ್ಲ. ಅಬ್ದುಲ್ ರಹಮಾನ್ ಈ ಘಟನೆಯನ್ನು ಉಪೇಕ್ಷಿಸಿದ. ಕೊನೆಗೆ ಪಂಜದೇ ತನಗೆ ಸೇರಿದ್ದೇ ಎಂದು ಸಂಶಯಪಟ್ಟ. ಯುದ್ಧದ ಹೆದರಿಕೆ ಮಾಯವಾಯಿತು. ಆಕ್ಸಸ್ (ಆಮಾ ದಾರ್ಯ) ನದಿಯನ್ನು ರಷ್ಯದ ಗಡಿಯಾಗಿ ಅಂಗೀಕರಿಸಲಾಯಿತು. ಲಾರ್ಡ್ ಡಫರಿನ್ನನ ಚಾತುರ್ಯ ಮತ್ತು ವಾತ್ಸಲ್ಯದಿಂದ ಈ ಸಮಸ್ಯೆ ಶಾಂತರೀತಿಯಾಗಿ ಕೊನೆಗೊಂಡಿತು. ಆಫ್ಘಾನಿಸ್ತಾನ ಎರಡು ಬೀಸುವ ಕಲ್ಲಿನಮಧ್ಯೆ ಸಿಕ್ಕಿಕೊಂಡು ಪುಡಿಯಾಗಿದೆ. ದೇವರ ರಕ್ಷಣೆಯಿಲ್ಲದಿದ್ದರೆ ದೇಶ ಸಿಂಹ ಮತ್ತು ಕರಡಿಗಳ ವಕ್ರದೃಷ್ಟಿಗೆ ಬಿದ್ದಿರುವ ಬಡಮೇಕೆಯಂತೆ ಯಾವಾಗಲೋ ಆಹುತಿ ಆಗುತ್ತಿತ್ತು. ಇದು ಅಬ್ದುಲ್ ರಹಮಾನ್ ಸಂಕಟದಿಂದ ನುಡಿದ ಮಾತು.

1991ಲ್ಲಿ ಅಬ್ದುಲ್ ರಹಮಾನ್ ಸತ್ತ. ಹಬೀಬ್‍ಉಲ್ಲ ಸಿಂಹಾಸನಕ್ಕೆ ಬಂದ. ಸ್ವಲ್ಪಕಾಲ ಹೊಸ ಅಮೀರ ಭಾರತ ಸರ್ಕಾರದೊಡನೆ ಸ್ನೇಹ ತೋರಿಸಲಿಲ್ಲ. 1905ರಲ್ಲಿ ಈ ಮನಸ್ತಾಪದ ಬದಲು ಮತ್ತೊಮ್ಮೆ ಸ್ನೇಹ ಉಂಟಾಗಿ ಅಮೀರ್ ಬ್ರಿಟಿಷರಿಂದ ಧನಸಹಾಯ ಪಡೆದ. ಆದರೂ ಅಮೀರ ರಷ್ಯದ ಪರ ಎಂದು ಸಂಶಯಪಡಲಾಯಿತು. ಆಫ್ಘಾನಿಸ್ತಾನ ತನ್ನ ಪ್ರಭಾವಕ್ಕೆ ಒಳಗಾಗಿಲ್ಲವೆಂಬುದನ್ನು ರಷ್ಯ ಒಪ್ಪಿಕೊಂಡಿತು. ಇನ್ನು ಮುಂದೆ ರಷ್ಯ ಆಫ್ಘಾನಿಸ್ತಾನದ ವಿಷಯದಲ್ಲಿ ಭಾರತ ಸರ್ಕಾರದ ಸಲಹೆಯನ್ನು ಪಡೆಯಲು ಸಮ್ಮತಿಸಿತು. ಆದರೆ ಅಮೀರ ಈ ಷರತ್ತುಗಳನ್ನು ಅನುಮೋದಿಸಲಿಲ್ಲ. 1919ರಲ್ಲಿ ಹಬೀಬ್‍ಉಲ್ಲ ಕೊಲ್ಲಲ್ಪಟ್ಟ. ಪ್ರಜೆಗಳು ಅವನ ಪಾಶ್ಚಾತ್ಯ ರೀತಿಯ ಸುಧಾರಣೆಗಳನ್ನು ವಿರೋಧಿಸಿದರು. ಹಬೀಬ್‍ಉಲ್ಲನ ಮಗನಾದ ಅಮಾನುಲ್ಲ ಬ್ರಿಟಿಷ್ ಸರ್ಕಾರಕ್ಕೆ ವಿರೋಧ ವ್ಯಕ್ತಪಡಿಸಿದ. ಇದೇ ಮೂರನೆಯ ಆಫ್ಘಾನ್ ಯುದ್ಧಕ್ಕೆ ಕಾರಣವಾಯಿತು. ರಷ್ಯನ್ನರ ಪ್ರೇರಣೆಯಿಂದ ಅಮಾನುಲ್ಲ ತನ್ನ ಸ್ವಾತಂತ್ರ್ಯವನ್ನು ಘೋಷಿಸಿ ಭಾರತದ ಗಡಿಯಮೇಲೆ ಆಕ್ರಮಣ ಮಾಡಿದ. ಕೊನೆಗೆ 1919ರಲ್ಲಿ ರಾವಲ್ಪಿಂಡಿ ಒಪ್ಪಂದವಾಯಿತು. ಅದರಂತೆ ಬ್ರಿಟಿಷ್ ಸರ್ಕಾರ ಆಫ್ಘಾನಿಸ್ತಾನಕ್ಕೆ ಇನ್ನು ಮುಂದೆ ಧನಸಹಾಯವನ್ನೂ ಮಾಡಬೇಕಾಗಿಲ್ಲ. 1922ರಲ್ಲಿ ಲಂಡನ್‍ನಲ್ಲಿ ಆಫ್ಘಾನಿಸ್ತಾನದ ಪ್ರತಿನಿಧಿಯಾಗಿ ಒಬ್ಬ ಆಫ್ಘನ್ ಮಂತ್ರಿಯನ್ನು, ಕಾಬೂಲಿನಲ್ಲಿ ಬ್ರಿಟಿಷರ ಪರವಾಗಿ ಒಬ್ಬ ಮಂತ್ರಿಯನ್ನು ನೇಮಿಸಲಾಯಿತು. ಆದರೆ ಆಫ್ಘನ್ನರು ಅಮಾನುಲ್ಲನ ಸುಧಾರಣೆಗಳನ್ನು ವಿರೋಧಿಸಿ 1928ರಲ್ಲಿ ಅವನನ್ನು ಪದಚ್ಯುತನನ್ನಾಗಿ ಮಾಡಿದರು. ಕೊನೆಗೆ ನಾದಿರ್‍ಷಹ ಅಮೀರನಾಗಿ ಬ್ರಿಟಿಷರೊಡನೆ ಸ್ನೇಹದಿಂದ ವರ್ತಿಸಿದ. ಈಗ ಆಫ್ಘಾನಿಸ್ತಾನ ಸ್ವತಂತ್ರ ರಾಷ್ಟ್ರವಾಗಿದೆ. ಈಚೆಗೆ ದೇಶದ ಬೆಳವಣಿಗೆಯ ಯೋಜನೆಗಳು ಕಾರ್ಯಗತವಾಗುತ್ತಿವೆ. ಗುಲಾಮಗಿರಿ ರದ್ದಾಗಿದೆ. ಕಡ್ಡಾಯಶಿಕ್ಷಣ ಜಾರಿಗೆ ಬಂದಿದೆ. ಕೈಗಾರಿಕೆಗಳು ಬೆಳೆಯುತ್ತಿವೆ. 1947 ರಿಂದೀಚೆಗೆ ಫಕ್ತೂನಿಗಳು ತಮಗೇ ಪ್ರತ್ಯೇಕ ರಾಷ್ಟ್ರ ಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ತರವಾಯದಲ್ಲಿನ ಆಫ್ಘಾನಿಸ್ತಾನದಲ್ಲಿನ ಬೆಳವಣಿಗೆ ಹಮಿದ್ ಕರ್ಜಾಯ್‍ವರೆಗಿನ ಅವಧಿಯವರೆಗೆ ವಿಸ್ತರಿಸಬಹುದೆಂದು ಅಭಿಪ್ರಾಯ. (ಬಿ.ಎಸ್.ಕೆ.)

1930–70ರ ತನಕ ಇಲ್ಲಿ ಸ್ಥಿರವಾದ ರಾಜಪ್ರಭುತ್ವವಿತ್ತು. ಅನಂತರ ರಷ್ಯ ಬೆಂಬಲಿತ ಕಮ್ಯುನಿಷ್ಟರು ಹಿಡಿತ ಸಾಧಿಸಿದರು. 1989ರಲ್ಲಿ ಕ್ರಾಂತಿಕಾರರು ಹೋರಾಟ ನಡೆಸಿ ರಷ್ಯ ಸೈನ್ಯವನ್ನು ಹೊರಹಾಕಿದಾಗ ಇಸ್ಲಾಮಿಕ್ ಮೂಲಭೂತವಾದಿಗಳು ಇಲ್ಲಿ ಆಡಳಿತ ಸ್ಥಾಪಿಸಿದರು. 1996ರಲ್ಲಿ ತಾಲಿಬಾನ್‍ರು ಆಡಳಿತಕ್ಕೆ ಬಂದರು. ಒಸಮಾ ಬಿನ್ ಲಾಡನ್‍ನ ಸಹಚರರು 2001 ಸೆಪ್ಟೆಂಬರ್ 11 ರಂದು ಅಮೆರಿಕದ ವಿಶ್ವವ್ಯಾಪಾರ ಕೇಂದ್ರದ (ಡಬ್ಲ್ಯೂಟಿಸಿ) ಮೇಲೆ ನಡೆಸಿದ ಬಾಂಬ್ ಧಾಳಿಯಿಂದಾಗಿ ಈ ದೇಶದ ಮೇಲೆ ಅಮೆರಿಕ ಬೆಂಬಲಿತ ಮಿತ್ರ ಸೈನ್ಯ ಧಾಳಿ ನಡೆಸಿದ ಪರಿಣಾಮ ಅಪಾರ ಪ್ರಮಾಣದ ಸಾವು–ನೋವುಗಳಿಗೆ ಈಡಾಗಬೇಕಾಯಿತು. ಈಗ ಹಮೀದ್ ಬರ್ಜಾಯಿ ನೇತೃತ್ವದ ಪ್ರಜಾಸರ್ಕಾರ ಆಡಳಿತದಲ್ಲಿದೆ.(ಸಿ.ಜಿ.ಎಸ್.)

**ಆಫ್ರಿಕ:** ಪೂರ್ವ ಮತ್ತು ಪಶ್ಚಿಮ ಭೂಖಂಡಗಳ ನಡುವಿನ ಒಂದು ವಿಶಾಲವಾದ ಭೂಖಂಡ. ಪ್ರಾಕೃತಿಕ ಅಥವಾ ಭೌಗೋಳಿಕ ತಡೆಗಳಿಲ್ಲದ ಒಂದು ವಿಸ್ತಾರ ಪ್ರದೇಶ. ಪ್ರಾದೇಶಿಕ ವೈವಿಧ್ಯಕ್ಕೆ ಇಲ್ಲಿಯ ಹವೆ ಕಾರಣ. ಉತ್ತರ ಆಫ್ರಿಕದ ಹಿತಕರವಾದ ಹವಾಗುಣ ಕ್ರಮೇಣ ಭೂಮಧ್ಯರೇಖೆಯ ಪ್ರದೇಶದಲ್ಲಿ ರೂಕ್ಷವಾಗುತ್ತದೆ. ದಕ್ಷಿಣಕ್ಕೆ ಹೋದಂತೆಲ್ಲ ಹೆಚ್ಚು ಹೆಚ್ಚು ಸಹನೀಯವಾಗುತ್ತದೆ. ದಕ್ಷಿಣ ಮತ್ತು ಆಗ್ನೇಯ ಆಫ್ರಿಕದಲ್ಲಿ ಹೆಚ್ಚು ಮಳೆ ಆಗುತ್ತದೆ. ನೈಲ್ ನದಿ ಉತ್ತರದ ಮರಳುಗಾಡಿನ ಮಧ್ಯೆ ಒಂದು ಫಲವತ್ತಾದ ಪ್ರದೇಶವನ್ನು ನಿರ್ಮಿಸಿದೆ. ಬಹುಶಃ ಇಲ್ಲಿಯ ಸ್ಥಿತಿ ಸು.10,00,000 ವರ್ಷಗಳಿಂದಲೂ ಬದಲಾಯಿಸಿದಂತೆ ಕಾಣುವುದಿಲ್ಲ. ಈ ಹವಾಗುಣದ ಹಿನ್ನೆಲೆ ಅಲ್ಲಿಯ ಪುರಾತತ್ತ್ವ ಮತ್ತು ಆದಿಮಾನವನ ಉಗಮ ಮತ್ತು ವಿಕಾಸಗಳನ್ನರಿಯಲು ಅತ್ಯಾವಶ್ಯಕ.

ಪೂರ್ವ ಮತ್ತು ಮಧ್ಯ ಆಫ್ರಿಕ ಆದಿಮಾನವನ ಉಗಮ ಮತ್ತು ವಿಕಾಸ ಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಮಾನವನ ಉಗಮವನ್ನು ಅವನಿಂದ ತಯಾರಿಸಲ್ಪಟ್ಟ ಉಪಕರಣಗಳ ಪರಿಶೋಧನೆಯಿಂದ ನಿರ್ಧರಿಸುತ್ತಾರೆ. ಏಕೆಂದರೆ ಇವು ಇವನ ದೈಹಿಕ ಮತ್ತು ಮಾನಸಿಕ ವಿಕಾಸದ ಹೆಗ್ಗುರುತುಗಳು.ಇಲ್ಲಿ ಮಾನವ ವಿಕಸನದ ಮೊದಲ ಹಂತವಾದ ಹೋಮೊ ಹ್ಯಾಬಿಲಿಸ್ ಅಸ್ಥಿ ಪಳೆಯುಳಿಕೆಗಳು ಪತ್ತೆಯಾಗಿವೆ. ಹೋಮೊ ಎರೆಕ್ಟಸ್, ಮತ್ತು ಹೋಮೊ ಸೇಪಿಯನ್ಸ್ ಎಂದು ಕರೆಯಲಾದ ಮಧ್ಯ ಮತ್ತು ಕೊನೆಯ ವಿಕಸನ ಹಂತಗಳ ಅಸ್ಥಿ ಅವಶೇಷಗಳು ಯುರೋಪ್, ಭಾರತ, ಆಗ್ನೇಯ ಏಷ್ಯ ಮತ್ತು ಚೀನದಲ್ಲಿ ದೊರೆತಿವೆ. ಆಫ್ರಿಕದ ಇಥಿಯೋಪಿಯ, ಕೀನ್ಯ, ಟಾಂಜ಼ನಿಯ ಪ್ರದೇಶಗಳಲ್ಲಿ ಸು.40 ಲಕ್ಷ ವರ್ಷ



ಜಿರಾಫೆ, ಶಿಲಾಚಿತ್ರ

ಹಿಂದಿನ ಪಳೆಯುಳಿಕೆಗಳು ಕೆಲವು ನೆಲೆಗಳಲ್ಲಿ ಬೆಳಕಿಗೆ ಬಂದಿವೆ. ಸು.25 ಲಕ್ಷ ವರ್ಷಗಳ ಹಿಂದಿನ ಮನುಷ್ಯನ ಪೂರ್ವಜರ ಪಳೆಯುಳಿಕೆಗಳೊಂದಿಗೆ ಕಲ್ಲಿನ ಉಪಕರಣಗಳು ಉತ್ತರ ಕೆನ್ಯದ ಕೂಬಿಫೋರದಲ್ಲಿಯ ತರ್ಕಾನ ಸರೋವರದ ಪೂರ್ವದಂಚಿನಲ್ಲಿ ದೊರಕಿದೆ. ಇದುವರೆಗೆ ದೊರೆತಿರುವ ಅತ್ಯಂತ ಪ್ರಾಚೀನ ಕಲ್ಲಿನ ಉಪಕರಣಗಳು ಇವು. ಟಾಂಗನಿಕ ಸರೋವರದ ಬಳಿಯಿರುವ ಓಲ್ಡುವಾಯ್ ಕಣಿವೆಯಲ್ಲಿ ಸು.17 ಲಕ್ಷ 50 ಸಾವಿರ ವರ್ಷ ಹಿಂದಿನ ಅಸ್ಥಿ ಪಳೆಯುಳಿಕೆಗಳು ಮತ್ತು ಕಲ್ಲಿನ ಉಪಕರಣಗಳನ್ನು ಲೀಕಿ ದಂಪತಿಗಳು ಶೋಧಿಸಿ ಕೂಲಂಕಷವಾಗಿ ಅಧ್ಯಯನ ಮಾಡಿದ್ದಾರೆ. ಸು.70 ಲಕ್ಷ ವರ್ಷಗಳ ಹಿಂದಿನ ಮನುಷ್ಯನ ತಲೆಬುರುಡೆಯೊಂದು ಇತ್ತೀಚೆಗೆ ಚಾಡ್ ಸರೋವರದ ಹತ್ತಿರ ಸಿಕ್ಕಿದ್ದು ಇದನ್ನು ಪ್ರಪಂಚದ ನಾನಾ ಭಾಗಗಳ ಪುರಾತತ್ತ್ವಜ್ಞರು, ಭೂವಿಜ್ಞಾನಿಗಳು, ಮಾನವಶಾಸ್ತ್ರಜ್ಞರು ಗಂಭೀರವಾಗಿ ಅಧ್ಯಯನ ಮಾಡುತ್ತಿದ್ದಾರೆ. ಇದರ ಕಾಲವನ್ನು ಪೊಟ್ಯಾಷಿಯಂ ಆರ್ಗನ್ ಟೆಸ್ಟ್ ಎಂಬ ತಂತ್ರದಿಂದ ಗೊತ್ತುಮಾಡಲಾಗಿದೆ.

ಅತ್ಯಂತ ಪುರಾತನವಾದ ಮಾನವ ನಿರ್ಮಿತ ಉಪಕರಣ ಉತ್ಪಾದನಕಲೆ ಆಫ್ರಿಕದಲ್ಲಿ ಜನಿಸಿ, ಬೆಳೆದು ಅಲ್ಲಿಂದ ಯುರೋಪ್ ಮತ್ತು ಏಷ್ಯ ಖಂಡಗಳಿಗೆ ಹರಡಿತೆಂಬ ವಾದ ಸರಿಯೆಂದು ತಿಳಿದುಬರುತ್ತದೆ. ಈ ವಾದವನ್ನು ಪುಷ್ಟೀಕರಿಸಲು ಆಸ್ಟ್ರಲೋಪಿಥೆಕಸ್ ಎಂಬ ಮಾನವನ ಮತ್ತು ಅವನಿಗಿಂತಲೂ ಹಿಂದಿನದಾದ ಪ್ರೋಕಾನ್ಸಲ್ ಆಫ್ರಿಕಾನಸ್ ಬಗೆಯ ಚತುಷ್ಪಾದಿ ಕಿರು ಮಂಗಗಳ ಅವಶೇಷಗಳೂ ಇಲ್ಲಿ ದೊರಕಿವೆ. ಆಫ್ರಿಕದಲ್ಲಿ ಕನಮ್, ಕಂಜೆರ, ಫ್ಲಾರಿಸ್‍ಬದ್‍ಗಳೋ ಮಾನವನ ಅವಶೇಷಗಳು ಆದಿ ಶಿಲಾಯುಗಕ್ಕೂ ಬಾಸ್ಕಾಪ್ ಮತ್ತು ಸಿಂಗ ತಲೆಬುರುಡೆಗಳು ಮಧ್ಯ ಮತ್ತು ಅಂತ್ಯ ಶಿಲಾಯುಗಕ್ಕೂ ಸೇರುತ್ತವೆ. ಆದಿಯಲ್ಲಿ ಪ್ರಬಲವಾಗಿದ್ದ ಪ್ರೋಟೊ-ಆಸ್ಟ್ರಲಾಯಿಡ್ ಗುಂಪಿನಿಂದ ಕ್ರಮೇಣ ವೈಶಿಷ್ಟ್ಯಪೂರ್ಣ ಬಾಸ್ಕಾಪ್ ಮತ್ತು ಬುಷ್ಮನಾಯಿಡ್ ಗುಂಪುಗಳ ವಿಕಾಸವಾಯಿತು.

**ಆದಿಶಿಲಾಯುಗ:** ಆಫ್ರಿಕದ ಶಿಲಾಯುಗ ಸಂಸ್ಕೃತಿಯ ಪರಿಶೀಲನೆ ಪೂರ್ವಮಧ್ಯ ಪ್ರದೇಶಗಳಲ್ಲಿ ಆರಂಭವಾಗುತ್ತದೆ. ಅತಿ ಪುರಾತನವಾದ ನದಿ-ಕಣಿವೆಗಳಲ್ಲಿ ದೊರಕುವ ಉರುಟು ಬೆಣಚು ಕಲ್ಲುಗಳ ಅಂಚಿನಿಂದ ಒಮ್ಮುಖ ಅಥವಾ ದ್ವಿಮುಖವಾಗಿ ಚಕ್ಕೆಗಳನ್ನು ಎಬ್ಬಿಸಿ ಮೊನೆಯುಳ್ಳ ಉಪಕರಣಗಳನ್ನು ಮಾಡುತ್ತಿದ್ದರು. ಇವುಗಳನ್ನು ಕಫೂವನ್ (ಕಫೂನದಿ ಕಣಿವೆಯಲ್ಲಿ ಮೊದಲು ಕಂಡುಬಂದಿದ್ದು) ಮತ್ತು ಓಲ್ಡೊವಾನ್ (ಓಲ್ಡುವಾಯ್ ಕಮರಿಯಲ್ಲಿ ಮೊದಲು ಕಂಡುಬಂದದ್ದು) ಎಂದು ವಿಭಾಗಿಸಿದ್ದಾರೆ. ಕಫೂವನ್ ಆಯುಧಗಳು ಬಹುಶಃ ಮಾನವನಿರ್ಮಿತವಲ್ಲ. ಪ್ರಕೃತಿಯ ಆಕಸ್ಮಿಕಗಳೆಂದು ಹಲವು ವಿದ್ವಾಂಸರು ನಿರಾಕರಿಸುತ್ತಾರೆ. ಆದರೆ ಓಲ್ಡೊವಾನ್ ಉಪಕರಣಗಳು ಮಾನವನಿರ್ಮಿತವೆಂದು ಖಚಿತವಾಗಿದೆ. ಈ ಉಪಕರಣಗಳು ಟಾಂಗನೀಕ ಪ್ರದೇಶದ ಓಲ್ಡುವಾಯ್ ಕಮರಿಯಲ್ಲಿರುವ ಬಹು ಪುರಾತನ ಭೂಪದರಗಳಲ್ಲೂ ಅಷ್ಟೇ ಪುರಾತನವಾದ ಪ್ರದೇಶಗಳಲ್ಲೂ ಕಂಡುಬಂದಿದೆ. ಆದಿ ಶಿಲಾಯುಗ ಸಂಶೋಧನೆಗೆ ಓಲ್ಡುವಾಯ್ ಕಮರಿಯ ಶೋಧನೆ ಬಹಳ ನೆರವಾಗಿದೆ. ಇಲ್ಲಿಯ ಕ್ರಮಾಗತ ಪದರಗಳಲ್ಲಿ ಉರುಟು ಕಲ್ಲಿನಿಂದ ಮಾಡಿದ ಉಪಕರಣಗಳು ಅನಂತರ ಕೈ ಕೊಡಲಿಗಳ ಹಂತ ಹಂತವಾದ ಬೆಳವಣಿಗೆಯನ್ನು ಸೂಚಿಸುವ ಉಪಕರಣಗಳು ದೊರಕುವುದು ಮಾತ್ರವಲ್ಲದೆ ಸಮಕಾಲೀನ ಮಾನವ ಮತ್ತು ಪ್ರಾಣಿಗಳ ಅವಶೇಷಗಳೂ ಕಂಡುಬಂದು ಮಾನವನ ಕ್ರಮಬದ್ಧ ಬೆಳವಣಿಗೆಗೆ ಬೇಕಾದ ಖಚಿತ ಆಧಾರಗಳು ದೊರಕುತ್ತವೆ. ಉಗಾಂಡ, ಕೆನ್ಯಾ, ಆಲ್ಜೀರಿಯ, ರೊಡೇಷಿಯ, ಅಂಗೋಲ ಮತ್ತು ಟ್ರಾನ್ಸ್‍ವಾಲ್ ಪ್ರಾಂತಗಳಲ್ಲೂ ಈ ಹಂತದ ಉಪಕರಣಗಳೂ ಮಾನವಾವಶೇಷಗಳೂ ದೊರಕಿವೆ.

ಅಶೂಲಿಯನ್ ಹಂತದ ಕೈಕೊಡಲಿ ಮತ್ತಿತರ ಉಪಕರಣಗಳ ಬೆಳವಣಿಗೆ ಓಲ್ಡುವಾಯ್ ಕಮರಿ ಮತ್ತು ಇತರ ಪ್ರದೇಶಗಳಲ್ಲೂ ಕಂಡುಬರುತ್ತವೆ. ಉಪಯೋಗದ ದೃಷ್ಟಿಯಿಂದ ಉಪಕರಣಗಳ ಆಕೃತಿ ಉತ್ತಮಗೊಂಡಿವೆ. ಯುರೋಪಿನ ಲೆವಾಲ್ವ ಎಂಬ ಹೆಸರಿನ ಕಲ್ಲುಚೆಕ್ಕೆಗಳ ಉಪಕರಣಗಳನ್ನು ತಯಾರಿಸುವ ವಿಧಾನ ಆ ಕಾಲದಲ್ಲೇ ಈ ಸಂಸ್ಕೃತಿಯ ಅಂಗವಾಗಿ ಬೆಳೆದು ಬಂದಿತ್ತು. ಈ ಸಂಸ್ಕೃತಿಯ ಮುಖ್ಯಕೇಂದ್ರಗಳು ಓಲ್ಡುವಾಯ್ ಕಮರಿ, ವಾಲ್‍ನದೀ ಕಣಿವೆ, ರೊಡೇಷಿಯ, ಕಾಂಗೊ, ಕೆನ್ಯ, ಉಗಾಂಡ, ಮೊರಾಕೊ, ಟ್ಯುನೀಷಿಯ ಮತ್ತು ನೈಲ್‍ನದಿ ಕಣಿವೆ-ಮುಂತಾದುವು. ಕಲ್ಲಿನ ಉಪಕರಣಗಳೇ ಅಲ್ಲದೆ ಮರದ ಆಯುಧಗಳು, ಸಸ್ಯಗಳ ಅವಶೇಷಗಳು ಮಧ್ಯ ಪಶ್ಚಿಮ ಆಫ್ರಿಕಗಳಲ್ಲಿ ದೊರಕಿವೆ.

**ಮಧ್ಯಶಿಲಾಯುಗ:** ದಕ್ಷಿಣದಲ್ಲಿ ಫೌರೆಸ್ಮಿತ್ ಮತ್ತು ಸ್ಯಾಂಗೋವನ್, ಪಶ್ಚಿಮ ಮತ್ತು ಮಧ್ಯಪ್ರದೇಶಗಳಲ್ಲಿ ಸ್ಟಿಲ್‍ಬೇ, ಪೂರ್ವ ಆಫ್ರಿಕದಲ್ಲಿ ಕ್ಯಾಪ್ಸಿಯನ್, ಇಷಂಗಿಯನ್, ಲುಪೆಂಬಾನ್ ಮತ್ತು ಪಿಟೋಲಿಯನ್ ಮತ್ತು ಉತ್ತರದಲ್ಲಿ ಅಟೀರಿಯನ್ ಸಂಸ್ಕೃತಿಗಳು ಹರಡಿಕೊಂಡಿದ್ದುವು. ಈ ಕಾಲದಲ್ಲಿ ಕೈಕೊಡಲಿ, ಬಾಚಿಗಳ (ಕ್ಲೀವರ್ಸ್) ಜೊತೆಗೆ ಕ್ರಮೇಣ ತೆಳುವಾದ ಕಲ್ಲಿನ ಚೆಕ್ಕೆಗಳಿಂದ ಮಾಡಿದ ಹೆರೆಯುವ ಸಾಧನಗಳಾಗಿ ಮತ್ತು ಈಟಿ, ಭರ್ಜಿಗಳ ಚೂಪು ಮೊನೆಗಳಾಗಿ ಉಪಯೋಗಿಸಲ್ಪಡುತ್ತಿದ್ದ ಉಪಕರಣಗಳೂ ಬಳಕೆಗೆ ಬಂದವು. ಕೈಕೊಡಲಿಗಳು ಸಣ್ಣವಾಗಿ ಹೆಚ್ಚು ಕೌಶಲದಿಂದ ಮಾಡಲ್ಪಟ್ಟಿವೆ. ಇದೇ ಕಾಲದಲ್ಲಿ ಉಪಕರಣಗಳನ್ನು ಬಿಡಿಬಿಡಿಯಾಗಿ ಉಪಯೋಗಿಸುವ ಬದಲು ಸಂಯುಕ್ತ ಉಪಕರಣಗಳಾಗಿ ಉಪಯೋಗಿಸುತ್ತಿದ್ದ. ಆಫ್ರಿಕದ ವಿವಿಧ ಪ್ರದೇಶಗಳಿಂದ ಈ ಸಂಸ್ಕೃತಿಯ ಅವಶೇಷಗಳು (ಪ್ರ.ಶ.ಪೂ.80,000 ವರ್ಷಗಳ ಈಚಿನವು) ದೊರೆತಿವೆ.

**ಅಂತ್ಯಶಿಲಾಯುಗ:** ಅಂತ್ಯಶಿಲಾಯುಗದಲ್ಲಿ ಸೂಕ್ಷ್ಮಶಿಲೋಪಕರಣಗಳು ಬಳಕೆಗೆ ಬರಲಾರಂಭಿಸಿದುವು. ಈ ಸೂಕ್ಷ್ಮ ಶಿಲೋಪಕರಣಗಳು ಯುರೋಪಿನಲ್ಲಿ ಪ್ರ.ಶ.ಪೂ.ಸು. 10,000 ವರ್ಷಗಳ ಹಿಂದಿನವು. ಆದರೆ ಆಫ್ರಿಕದಲ್ಲಿ ಇನ್ನೂ ಹಳೆಯವಾಗಿದ್ದು 15-16 ನೆಯ ಶತಮಾನಗಳವರೆಗೂ ಕೆಲವು ಪ್ರಾಂತಗಳಲ್ಲಿ ಮುಂದುವರಿದುವು. ಆಫ್ರಿಕದಲ್ಲಿ ಈ ಸಂಸ್ಕೃತಿ ಆದಿ ಶಿಲಾಯುಗದ ಅಂಗವಾಗಿ ಬೆಳೆದುಬಂದು ಕಾಲಕ್ರಮೇಣ ಪ್ರಬಲವಾಯಿತು. ಈ ಸಂಸ್ಕೃತಿಯ ಉಪಕರಣಗಳಲ್ಲಿ ಹೆರೆಯುವ ಆಯುಧಗಳು, ಮೊನಚಾದ ಉಪಕರಣಗಳು, ಮುಕ್ಕೋಣಗಳು, ಸುಧಾರಿತ ವಿಧಾನಗಳಿಂದ ಮಾಡಲ್ಪಡುತ್ತಿದ್ದವು. ಇದೇ ಕಾಲದಲ್ಲಿ ಆಫ್ರಿಕದ ಮಾನವ ಮೊತ್ತಮೊದಲಿಗೆ ಪ್ರಾಣಿ ಬೇಟೆಯಾಡಲು ಬಿಲ್ಲು ಬಾಣಗಳನ್ನು ರಚಿಸಿಕೊಂಡ. ಈ ಹೊಸ ವಿಧಾನದಿಂದ ಇವನ ಆಹಾರ ಸಂಗ್ರಹಣಕ್ಕೆ ಹೆಚ್ಚು ಸುಲಭವಾಗಿ ಇವನ ಜೀವನಮಟ್ಟ ಸ್ವಲ್ಪ ಸುಧಾರಿಸಿತೆಂದು ಹೇಳಬಹುದು. ಇದಕ್ಕೆ ಸಾಕ್ಷಿಯಾಗಿ ಈ ಕಾಲದಲ್ಲಿ ಆಫ್ರಿಕದ ವಿವಿಧ ಭಾಗಗಳಲ್ಲಿ ಕಲ್ಲಿನ ಮೇಲೆ ವರ್ಣಿಸಿರುವ, ಮೂಡಿಸಿರುವ ಮಾನವ ಮತ್ತು ಪ್ರಾಣಿಗಳ ಚಿತ್ರಗಳು ಕಂಡುಬರುತ್ತವೆ. ಇದುವರೆಗೆ ಆಹಾರ ಸಂಪಾದನೆಯಲ್ಲೇ ಬಹಳ ಶ್ರಮಿಸಬೇಕಾಗಿದ್ದ ಕಾಲ ಈ ಸುಧಾರಿತ ವಿಧಾನಗಳಿಂದ ಉಳಿದು ಇದನ್ನು ಇವರು ಮಾನಸಿಕ ಮತ್ತು ಬೌದ್ಧಿಕ ಚಟುವಟಿಕೆಗಳಿಗೆ ನಿಯೋಜಿಸಲು ಸಾಧ್ಯವಾಯಿತು. ಅಂತ್ಯಶಿಲಾಯುಗದಲ್ಲಿ ದಕ್ಷಿಣದಲ್ಲಿ ಸ್ಮಿತ್‍ಫೀಲ್ಡ್ ಮತ್ತು ವಿಲ್ಟನ್, ಪಶ್ಚಿಮ, ಮಧ್ಯ ಆಫ್ರಿಕಗಳಲ್ಲಿ ಷಿಟೋಲಿಯನ್ ಮತ್ತು ನಚಿಕುಫಾನ್, ಪೂರ್ವ ಮತ್ತು ಉತ್ತರ ಆಫ್ರಿಕಗಳಲ್ಲಿ ಕ್ಯಾಪ್ಸಿಯನ್ ಮತ್ತು ಓರಾನಿಯನ್ ಸಂಸ್ಕೃತಿಗಳು ಬೆಳಕಿಗೆ ಬಂದಿವೆ. ಕೆಲವು ಪ್ರದೇಶಗಳಲ್ಲಿ ಈ ಸಂಸ್ಕೃತಿಗಳು ಪ್ರ.ಶ.ಪೂ.5,000ದಲ್ಲೇ ಪ್ರಬಲವಾಗಿದ್ದವೆಂದು ತಿಳಿದುಬರುತ್ತದೆ.

**ನವಶಿಲಾಯುಗ:** ಸುಮಾರು ಈ ವೇಳೆಯಲ್ಲಿ ಪಶ್ಚಿಮ ಏಷ್ಯ ಮತ್ತು ಮೆಡಿಟರೇನಿಯನ್ ಪ್ರದೇಶಗಳಲ್ಲಿ ನವಶಿಲಾಯುಗ ಸಂಸ್ಕೃತಿ ಬೆಳೆಯುತ್ತಿತ್ತು. ಮೊದಲು ಈಜಿಪ್ಟಿಗೂ ಅಲ್ಲಿಂದ ಉತ್ತರ ಮತ್ತು ಪೂರ್ವ ಆಫ್ರಿಕ ಪ್ರದೇಶಗಳಿಗೂ ಕ್ರಮೇಣ ಹರಡಲಾರಂಭಿಸಿತು. ಆದರೆ

ನಾಗರಿಕತೆಯ ಲಕ್ಷಣಗಳಿಂದೊಡಗೂಡಿದ ಇಂಥ ನವ ಶಿಲಾಯುಗದ ಅವಶೇಷಗಳು ಆಫ್ರಿಕದ ಒಳಪ್ರದೇಶಗಳಲ್ಲಿ ಕಂಡುಬರುವುದಿಲ್ಲ. ಮುಂದುವರಿದ ಪ್ರದೇಶಗಳೊಂದಿಗೆ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದುದರಿಂದ ಈ ಹಿಂದುಳಿದ ಜನ ಕೂಡ ಹಲವಾರು ಅಂಶಗಳನ್ನು ಪಡೆದರು. ಈ ಕಾರಣಗಳಿಂದ ನಯ ಮಾಡಿದ ಕಲ್ಲಿನ ಕೊಡಲಿಗಳೂ ಕೈಬಾಚಿಗಳೂ ಸುತ್ತಿಗೆಗಳೂ ನೆಲ ಕೊಚ್ಚುವ ಮರದ ಕೋಲಿಗೆ ಭಾರವಾಗಿ ಉಪಯೋಗಿಸುತ್ತಿದ್ದ ರಂಧ್ರ ಮಾಡಿದ ಕಲ್ಲುಗಳೂ ಕಂಡುಬಂದಿವೆ. ಸ್ವಲ್ಪ



ಜಿಂಜಾಂತ್ರೊಪಸ್

ಕಾಲಾನಂತರ ಕೈಯಿಂದ ಮಾಡಿದ ಒರಟಾದ ಮಡಕೆಗಳ ಬಳಕೆಯೂ ಕಂಡುಬರುತ್ತದೆ. ಇದೇ ಸಮಯದಲ್ಲಿ ಪೂರ್ವ ಆಫ್ರಿಕದ ಸುಧಾರಿತ ನೂತನ ಶಿಲಾಯುಗದ ಎಲಿಮೆಂಟಿಯನ್ ಸಂಸ್ಕೃತಿಯಲ್ಲಿ ಉದ್ಭವವಾದ ಚೂಪಲಗುಳ್ಳ ಉಪಕರಣಗಳೂ ಉತ್ತಮ ಮಡಕೆಗಳೂ ಈಜಿಪ್ಟಿನ ತರಹದ ಕಲ್ಲಿನ ಪಾತ್ರೆಗಳೂ ಉಪಯೋಗಿಸಲ್ಪಟ್ಟವು. ಗುಂಬನ್ ಎ ಮತ್ತು ಬಿ ಹಾಗೂ ಝೋರೋ ನದಿಗುಹೆಯ ಸಂಸ್ಕೃತಿಗಳು ಈ ಗುಂಪಿಗೆ ಸೇರಿದುವು. ಝೋರೋನದೀ ಸಂಸ್ಕೃತಿ ಇಂಗಾಲ-14ರ ವಿಧಾನದಿಂದ ಪ್ರ.ಶ.ಪೂ.960ರದ್ದೆಂದು ತಿಳಿದುಬಂದಿದೆ. ಈ ಕಾಲದಲ್ಲಿ ಇಲ್ಲಿಯ ಜನ ಕಾಕಸಾಡ್ ಬುಡಕಟ್ಟಿಗೆ ಸೇರಿದ್ದವರೆಂದೂ ಇವರಲ್ಲಿ ನೀಗ್ರಾಯಿಡ್ ಚಿಹ್ನೆಗಳು ಸ್ವಲ್ಪವೂ ಇರಲ್ಲಿಲ್ಲವೆಂದೂ ತಿಳಿದುಬರುತ್ತದೆ. ಈ ನಿವೇಶನದಲ್ಲಿ ಕಲ್ಲಿನ ಮಣಿಗಳೂ ಕೊರೆದ ಮರದ ಪಾತ್ರೆಗಳೂ ಅರೆಯುವ ಕಲ್ಲುಗಳೂ ಮೂಳೆಯ ಪದಕಗಳೂ ಸೂಜಿಗಳೂ ಹೆಣಿಗೆಬುಟ್ಟಿ ಮುಂತಾದ ಕುಶಲಕಲಾ ಸಾಮಗ್ರಿಗಳೂ ಕಂಡುಬಂದಿವೆ. ಉತ್ತರ ಆಫ್ರಿಕದ ಸೈರನೈಕ ಪ್ರಾಂತ್ಯದಲ್ಲಿ ಪ್ರ.ಶ.ಪೂ. 4000ರಲ್ಲಿ ಈಜಿಪ್ಟಿನ ಫಯೂಂ ಸಂಸ್ಕೃತಿಯಿಂದ ಪ್ರಭಾವಿತವಾದ ನವಶಿಲಾಯುಗ ಸಂಸ್ಕೃತಿಯಲ್ಲಿ ಸೂಕ್ಷ್ಮ ಶಿಲೋಪಕರಣಗಳೂ ಹೊಳೆಯುವ ಯಾವುದೇ ಅಲಂಕರಣವಿಲ್ಲದ ಮಡಕೆಗಳೂ ಬಳಕೆಯಲ್ಲಿದ್ದುವು. ಆಡುಕುರಿಗಳನ್ನು ಪಳಗಿಸಿ ಸಾಕತೊಡಗಿದ್ದರು. ನವ ಶಿಲಾಯುಗದ ಕಾಲದಲ್ಲೂ ಬಂಡೆಗಳ ಮೇಲೆ ಮೂಡಿಸಿದ ಚಿತ್ರಗಳು ಬಹಳ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ್ದುವು. ಇವುಗಳಲ್ಲಿ ಗುಹೆ ಮತ್ತು ಗುಹಾಮುಖ ಗಳಲ್ಲಿ ಪ್ರಾಣಿಗಳ ಮತ್ತು ಮನುಷ್ಯರ ಗುಂಪು ದೃಶ್ಯಗಳಲ್ಲದೆ ಸೂಚ್ಯರೂಪೀಕರಣವೂ ಕಂಡುಬರುತ್ತದೆ. ಈ ಚಿತ್ರಣಗಳು ಉತ್ತರ ಮತ್ತು ಈಶಾನ್ಯ ಆಫ್ರಿಕಗಳಲ್ಲೂ ನೈಲ್ ನದಿ ದಂಡೆಗಳಲ್ಲೂ ಪೂರ್ವದ ಉಗಾಂಡ, ಟಾಂಗನೀಕ, ರೊಡೇಷಿಯ ಪ್ರಾಂತಗಳಲ್ಲೂ ದಕ್ಷಿಣದ ಅನೇಕ ಪ್ರದೇಶಗಳಲ್ಲೂ ಕಂಡುಬಂದಿವೆ. ದಕ್ಷಿಣದಲ್ಲಿ ಈ ವರ್ಣ ಚಿತ್ರಣಗಳು ಏಕವರ್ಣ, ದ್ವಿವರ್ಣ ಮತ್ತು ಬಹುವರ್ಣ ಚಿತ್ರಣಗಳ ಹಂತಗಳ ಮೂಲಕ ಉನ್ನತ ಮಟ್ಟವನ್ನು ಮುಟ್ಟಿದ್ದವೆಂದು ಹೇಳಬಹುದು.

**ಆದಿ ಕಬ್ಬಿಣಯುಗ:** ದಕ್ಷಿಣ ಆಫ್ರಿಕದಲ್ಲಿ ಈ ಕಾಲದ ಸಂಸ್ಕೃತಿಯ ಅಧ್ಯಯನ ಬಹು ತೊಡಕಿನ ಸಮಸ್ಯೆ. ಕೆಲವು ಪ್ರದೇಶಗಳಲ್ಲಿ ಪ್ರ.ಶ.ಪೂ.ಒಂದನೆಯ ಸಹಸ್ರಾಬ್ದ ಮಧ್ಯದಲ್ಲಿ ಕಬ್ಬಿಣದ ಉಪಯೋಗ ಈಜಿಪ್ಟಿನ ಮಾರ್ಗವಾಗಿ ಬಂದಿರಬಹುದಾದರೂ ಬಹುಮಟ್ಟಿಗೆ ಆಫ್ರಿಕ ಜನ ಯುರೋಪಿಯನ್ನರು 17ನೆಯ ಶತಮಾನದಲ್ಲಿ ಅಲ್ಲಿಗೆ ಪ್ರವೇಶಿಸುವವರೆಗೂ ಶಿಲಾಯುಗ ಸಂಸ್ಕೃತಿ ಮಟ್ಟದಲ್ಲಿ ಇಲ್ಲವೆ ಹಿಂದುಳಿದ ಕಬ್ಬಿಣಯುಗೀನ ಸಂಸ್ಕೃತಿ ಮಟ್ಟದಲ್ಲಿ ಇದ್ದುದಾಗಿ ಕಂಡುಬರುತ್ತದೆ.

ಉತ್ತರದ ಸೈರನೈಕ ಪ್ರದೇಶಕ್ಕೆ ಪ್ರ.ಶ.ಪೂ.6ನೆಯ ಶತಮಾನದಲ್ಲಿ ಕಾರ್ತೇಜಿನವರು ಕಬ್ಬಿಣವನ್ನು ತಂದರು. ಈ ಕಾಲದಲ್ಲೇ ಗ್ರೀಕರೂ ಈಜಿಪ್ಟಿಗೆ ಇದನ್ನು ತಂದರು. ಇಲ್ಲಿಂದ ನ್ಯೂಬಿಯ ಇಥಿಯೋಪಿಯಗಳಿಗೆ ಹಬ್ಬಿರಬಹುದು. ಪಶ್ಚಿಮ, ದಕ್ಷಿಣ ಪ್ರದೇಶಗಳಿಗೆ ಬಹಳ ತಡವಾಗಿ ಅಂದರೆ 16-17ನೆಯ ಶತಮಾನದಲ್ಲಿ ಕಬ್ಬಿಣ ಪ್ರವೇಶಿಸಿತು. ಆ ಕಾಲ ದಲ್ಲಿ ಆಫ್ರಿಕದ ಜನ ಸಾಮಾನ್ಯವಾಗಿ ಬೇಟೆಯಿಂದಲೇ ಜೀವಿಸುತ್ತಿದ್ದರು. ಹಲವು ಮುಂದು ವರಿದ ಪಂಗಡಗಳವರು ಆಡು, ಕುರಿ, ದನಗಳ ಸಾಕಾಣಿಕೆ, ಖನಿಜಗಳ ಅಗೆತ, ವ್ಯಾಪಾರ, ವನಜನ್ಯ ವಸ್ತುಗಳಾದ ಜೇನು, ದಂತ-ಇವುಗಳ ವ್ಯಾಪಾರಗಳನ್ನು ಮಾಡುತ್ತಿದ್ದರು. ಕೆಲವು ಗುಂಪುಗಳು ತೀರ ಸಾಮಾನ್ಯಮಟ್ಟದ ವ್ಯವಸಾಯವನ್ನೂ ಮಾಡುತ್ತಿದ್ದರು. 16ನೆಯ ಶತಮಾನ ದಲ್ಲಿ ಪೋರ್ಚುಗೀಸರಾದಿಯಾಗಿ ಯುರೋಪ್ ಜನಾಂಗಗಳು ಬರುವವರೆಗೂ ಅರಬ್ಬೀಯರ ಕೈವಶವಾಗಿದ್ದ ಈ ವ್ಯಾಪಾರೋದ್ಯಮ ಅನಂತರ ಯುರೋಪಿಯನ್ನರ ವಶವಾಗಿ ಅವರ ಸಂಪರ್ಕ ಮತ್ತು ಇತರ ಕಾರಣಗಳಿಂದ ಆಫ್ರಿಕ ಸುಧಾರಣೆ ಕಂಡಿತು. (ಬಿ.ಕೆ.ಜಿ.)

**ಆಭೀರರು:** ಪ್ರಾಚೀನ ಭಾರತದಲ್ಲಿ ಬಂದು ನೆಲೆಸಿದ್ದ ಅನ್ಯದೇಶೀಯರು. ಕಾಂದಹಾರ ಸಮೀಪದ ಅಭಿರವನ್ ಎಂಬ ಸ್ಥಳದಿಂದ ವಲಸೆ ಬಂದವರೆಂದು ಊಹಿಸಲಾಗಿದೆ. ಈ ಜನ ಮುಖ್ಯವಾಗಿ ಅಪರಾಂತ ಎಂಬ ಪಶ್ಚಿಮ ಭಾರತ ಪ್ರದೇಶದಲ್ಲಿ ನೆಲೆಸಿದ್ದರು. ಪುರಾಣಗಳಲ್ಲಿ ಆಭೀರರು ಸಾತವಾಹನರ ಅನಂತರ ಆಳಿದರೆಂದು ಹೇಳಿದೆ. ಪತಂಜಲಿಯ ಮಹಾಭಾಷ್ಯದಲ್ಲಿ ಆಭೀರರ ನಿರ್ದೇಶನವಿದೆ. ಈ ಕುಲದ ಕೆಲವು ನಾಯಕರು ಶಕ ಮಹಾಕ್ಷತ್ರಪರ ಸೇನಾಪತಿ ಗಳಾಗಿದ್ದರು. ಆಭೀರ ಮಾಠರಿಪುತ್ರ ಈಶ್ವರಸೇನ 3ನೆಯ ಶತಮಾನದಲ್ಲಿ ನಾಸಿಕದ ಪ್ರದೇಶದಲ್ಲಿ ಆಳಿದಂತೆ ಶಾಸನದಿಂದ ತಿಳಿಯುತ್ತದೆ. ಈತನ ಆಳಿಕೆಯ ವರ್ಷದಿಂದ (ಸು.248) ಕಳಚುರಿ ಸಂವತ್ ಪ್ರಾರಂಭವಾಯಿತೆಂದು ಅಭಿಪ್ರಾಯ ಎದೆ. ಮಯೂರವರ್ಮನ ಚಂದ್ರವಳ್ಳಿ ಶಾಸನದಲ್ಲಿ ಕದಂಬ ರಾಜ ಆಭೀರರನ್ನು ಜಯಿಸಿದ ನೆಂದು ಹೇಳಿದೆ. ಸಮುದ್ರಗುಪ್ತನಿಂದ ಪರಾಜಯ ಹೊಂದಿದ ನಾಯಕರಲ್ಲಿ ಆಭೀರರ ಹೆಸರಿದೆ. (ಪಿ.ಬಿ.ಡಿ.)

**ಆಮಿಯನ್ಸ್ ಒಪ್ಪಂದ:** ನೆಪೋಲಿಯನ್ನನ ಮಹಾದಂಡಯಾತ್ರೆಯ ಮಧ್ಯದಲ್ಲಿನ ಒಂದು ಶಾಂತಿ ಒಪ್ಪಂದ. ಬ್ರಿಟನ್ನಿಗೂ ಫ್ರಾನ್ಸಿಗೂ ನಡುವೆ 1802 ಮಾರ್ಚ್ 27ರಂದು ಉತ್ತರ ಫ್ರಾನ್ಸಿನ ಆಮಿಯನ್ಸ್ ನಗರದಲ್ಲಿ ನಡೆಯಿತು. ಇದರ ಪ್ರಕಾರ ಫ್ರೆಂಚರಿಗೆ ಅವನ ವಸಾಹತುಗಳೆಲ್ಲ ದಕ್ಕಿದವು. ಬ್ರಿಟನ್ ಮಾತ್ರ ಸಿಲೋನ್ ಮತ್ತು ಟ್ರಿನಿಡ್ಯಾಡ್‌ಗಳನ್ನು ಇಟ್ಟುಕೊಂಡು ಉಳಿದಂತೆ ಸ್ಪೇನಿಗೆ ಮೈನಾರ್ಕವನ್ನೂ ಹಾಲೆಂಡಿಗೆ ಕೊಚಿನ್, ಕೇಪ್ ಆಫ್ ಗುಡ್‌ಹೋಪ್, ಸ್ಪೇನ್ ದ್ವೀಪಗಳನ್ನೂ ಬಿಟ್ಟು ಕೊಟ್ಟಿತು. ಈ ಒಪ್ಪಂದದಿಂದ ತಾತ್ಕಾಲಿಕವಾಗಿ ಮಾತ್ರ ಯುರೋಪಿನಲ್ಲಿ ಶಾಂತಿ ನೆಲೆಸಿತು. ಏಕೆಂದರೆ 1803ರಲ್ಲಿ ಮತ್ತೆ ಇಂಗ್ಲೆಂಡ್ ನೆಪೋಲಿಯನ್ನನ ಮೇಲೆ ಯುದ್ಧ ಘೋಷಿಸಿತು (**ನೋಡಿ- ನೆಪೋಲಿಯನ್1**). (ಜ.ವ.)

**ಆಮ್ರಿ:** ಪಶ್ಚಿಮ ಪಾಕಿಸ್ತಾನದ ಸಿಂಧ್ ಬಳಿ, ಮೊಹೆಂಜೋದಾರೊವಿನಿಂದ ದಕ್ಷಿಣ ಕ್ಕಿರುವ ಪುರಾತತ್ತ್ವ ನೆಲೆ. ಇವುಗಳ ಉತ್ಖನನದಲ್ಲಿ ದಿಬ್ಬದ ಮೇಲ್ಭಾಗದ ಪದರಗಳಲ್ಲಿ ಹರಪ್ಪ ಸಂಸ್ಕೃತಿಯ ಅವಶೇಷಗಳೂ ಕೆಳಗಿನ ಪದರಗಳಲ್ಲಿ ಅದಕ್ಕೂ ಹಿಂದಿನ ಬೇರೊಂದು ಸಂಸ್ಕೃತಿಯ ಕುರುಹುಗಳೂ ಕಂಡುಬಂದಿವೆ. ಇದನ್ನು ಆಮ್ರಿ ಸಂಸ್ಕೃತಿ ಎಂದು ಪುರಾತತ್ತ್ವಜ್ಞರು ಹೆಸರಿಸಿದ್ದಾರೆ. ಕಾಲ ಪ್ರ.ಶ.ಪೂ.ಸು.2,500ಕ್ಕೂ ಹಿಂದೆ. ಈ ಸಂಸ್ಕೃತಿಗೆ ಸಂಬಂಧಪಟ್ಟಂತೆ ಕೇವಲ ಗಡಿಗೆ-ಮಡಕೆಗಳ ಅವಶೇಷಗಳು ಮಾತ್ರ ಇದುವರೆಗೆ ದೊರಕಿವೆ. ಇವುಗಳಲ್ಲಿ ಹೆಚ್ಚಿನವು ಕಂದುಬಣ್ಣದ ಪಾನೀಯಗಳ ಲೋಟಗಳು. ಇವುಗಳ ಮೇಲೆ ಕಪ್ಪು ಮತ್ತು ಕೆಂಪುಬಣ್ಣದಿಂದ ಸಾಲು ಸಾಲಾಗಿ ತಿದ್ದಿದ ಆಯಾಕೃತಿ, ವಜ್ರಾಕೃತಿ, ಚೌಕಳಿ ಮೊದಲಾದ ಜ್ಯಾಮಿತಿಯ ನಮೂನೆಗಳ ಚಿತ್ರಣವಿದೆ. ಆಮ್ರಿ ಸಂಸ್ಕೃತಿ ವಿಶೇಷವಾಗಿ ಸಿಂಧೂನದಿಯ ಪಶ್ಚಿಮಕ್ಕೆ ಸಿಂಧ್‌ನ ಬಯಲುಪ್ರದೇಶದಲ್ಲಿ ಹರಡಿತ್ತು. (ಎಸ್.ಎನ್.)

**ಆರ್ಕಾಟ್ ಮುತ್ತಿಗೆ:** ಆರ್ಕಾಟಿನ ಚಂದಾಸಾಹೇಬನ ಪರ ಫ್ರೆಂಚರು, ಹೈದರಾ ಬಾದಿನ ನಾಸಿರ್‌ಜಂಗ್‌ನ ಪರ ಇಂಗ್ಲಿಷರು 1751ರಲ್ಲಿ ನಡೆಸಿದ ಕದನ. ಪರಿಣಾಮದ ದೃಷ್ಟಿ ಯಿಂದ ಇದು ಕೇವಲ ಒಂದೇ ಘಟನೆಯಾಗಿರದೆ ಘಟನಾವಳಿಗಳ ಪರಂಪರೆಯಾಗಿದೆ. ಇದಕ್ಕೆ ಮೊದಲ ಕಾರಣ ದೇಶೀಯ ರಾಜರಲ್ಲಿ ಇದ್ದ ಅನೈಕ್ಯಮತ್ಯ ಮತ್ತು ಅಸಹನೆ. ತಮ್ಮ ಅಧಿಕಾರವನ್ನೂ ಸ್ವಾಸ್ಥ್ಯಗಳನ್ನೂ ಬದಲಾವಣೆ ಮಾಡಲು ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಗಳಲ್ಲಿದ್ದ ಆತುರ ಎರಡನೆಯ ಕಾರಣ. ಮೊಗಲರ ಆಳಿಕೆಯ ಕೊನೆಗಾಲದಲ್ಲಿ ಮರಾಠರು ಪ್ರಬಲರಾಗಿ ದಕ್ಷಿಣಭಾರತ ಮೊಗಲ್ ಆಡಳಿತದಿಂದ ಸ್ವತಂತ್ರವಾಯಿತು. ಹೈದರಾಬಾದಿನ ನಿಜಾಮನೂ ಆರ್ಕಾಟಿನ ನವಾಬನೂ ಸ್ವತಂತ್ರರಾದರು. 1710ರಲ್ಲಿ ಸಾದತ್ತುಲ್ಲಾಖಾನ್ ಸ್ವತಂತ್ರನಾಗಿ ಆರ್ಕಾಟ್ ಮತ್ತು ತಂಜಾವೂರು ಪ್ರದೇಶಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿ ಆರ್ಕಾಟ್ ನವಾಬೀ ಮನೆತನವನ್ನು ಸ್ಥಾಪಿಸಿದ. ಈತ 1742ರಲ್ಲಿ ಮರಣಹೊಂದಿದ. ಆ ಕಾಲದಲ್ಲೇ ಮರಾಠರ ಪ್ರಾಬಲ್ಯ ವಿಶೇಷವಾಗಿತ್ತು. 1743-49ರ ವರೆಗೆ ಅನ್ವರುದ್ದೀನ್ ನವಾಬನಾಗಿದ್ದ. ಈತನ ಅನಂತರ ಆರ್ಕಾಟ್ ಮುತ್ತಿಗೆ 1751ರಲ್ಲಿ ನಡೆಯಿತು.

ಇದೇ ಕಾಲದಲ್ಲಿ ಹೈದರಾಬಾದಿನ ನಿಜಾಮ ಮರಣಹೊಂದಿದ. ಅಧಿಕಾರಕ್ಕಾಗಿ ಇವನ ಮಗನಾದ ನಾಸಿರ್‌ಜಂಗನಿಗೂ ಮೊಮ್ಮಗನಾದ ಮುಸಾಫರ್‌ಜಂಗನಿಗೂ ಕದನ ವೇರ್ಪಟ್ಟಿತು. ಚಂದಾಸಾಹೇಬ ಫ್ರೆಂಚರ ಸಹಾಯದಿಂದ ಆರ್ಕಾಟಿನ ನವಾಬನಾದ

ಅನ್ವರುದ್ದೀನನನ್ನು ಕೊಂದುಹಾಕಿದ. ಮುಸಾಫರ್‌ಜಂಗ್, ಚಂದಾಸಾಹೇಬ ಮತ್ತು ಫ್ರೆಂಚರು ಒಂದಾದರು. ಅನ್ವರುದ್ದೀನನ ಮಗನಾದ ಮಹಮ್ಮದಾಲಿ, ನಾಸಿರ್‌ಜಂಗ್ ಹಾಗೂ ಇಂಗ್ಲಿಷರು ಪ್ರತಿಪಕ್ಷವನ್ನು ಹೂಡಿದರು. ಫ್ರೆಂಚರು ಮತ್ತು ಚಂದಾಸಾಹೇಬ ಒಂದಾಗಿ ಮಹಮ್ಮದಾಲಿಯನ್ನು ನಿರ್ನಾಮಮಾಡಲು ತಿರುಚಿರಾಪಳ್ಳಿಯನ್ನು ಮುತ್ತಿದರು. ಆ ಸಮಯದಲ್ಲಿ ಶತ್ರುಪಕ್ಷದವರ ಗಮನ ಸೆಳೆದು ಅವರ ಬಲವನ್ನು ಕುಗ್ಗಿಸಲು ಕ್ಲೈವ್‌ನ ನೇತೃತ್ವದಲ್ಲಿ ಸೈನ್ಯ ಆರ್ಕಾಟಿಗೆ ಮುತ್ತಿಗೆ ಹಾಕಿತು. ಅವರ ಸಹಾಯಕ್ಕಾಗಿ ಮರಾಠರ ಮುರಾರಿರಾವ್ ಹೋಳ್ಕರ್ ಆರ್ಕಾಟಿಗೆ ಧಾವಿಸಿದ. ಇಂಗ್ಲಿಷರು ಆರ್ಕಾಟನ್ನು ವಶಪಡಿಸಿಕೊಂಡ ಸುದ್ದಿ ತಿಳಿದ ಚಂದಾಸಾಹೇಬ ತಿರುಚಿರಾಪಳ್ಳಿಯಿಂದ ಅರ್ಧಭಾಗ ಸೈನ್ಯವನ್ನು ಆರ್ಕಾಟಿನತ್ತ ಕಳುಹಿಸಿದ. ಸೈನ್ಯ ಸೋತು ಹೋಯಿತಲ್ಲದೆ ಚಂದಾಸಾಹೇಬ ಕೊಲೆಯಾದ. ಹೈದರಾಬಾದಿನ ಸಿಂಹಾಸನ ಕ್ಕಾಗಿ ಕಾದಾಡುತ್ತಿದ್ದ ನಾಸಿರ್‌ಜಂಗ್ ಹಾಗೂ ಮುಸಾಫರ್‌ಜಂಗರೂ ಕ್ರಮೇಣ ಕೊಲೆ ಯಾದರು. ಬ್ರಿಟಿಷರ ನೆರವಿನಿಂದ ಮಹಮ್ಮದಾಲಿ ಆರ್ಕಾಟಿನ ನವಾಬನಾದ. ಇಂಗ್ಲಿಷ್ ಮತ್ತು ಫ್ರೆಂಚರ ಪರಸ್ಪರ ಒಪ್ಪಂದದಲ್ಲಿ ಯುದ್ಧ 1754ರಲ್ಲಿ ಕೊನೆಯಾಯಿತು. ಆರ್ಕಾಟ್ ಮುತ್ತಿಗೆಯೆಂದು ಕರೆಯುವ ಘಟನೆಯ ಪರಿಣಾಮಗಳು ಬಹಳ ಮಹತ್ತರವಾದುವು. ಮೊದಲನೆಯದಾಗಿ ದೇಶೀಯ ರಾಜರು ದುರ್ಬಲಗೊಂಡು ಕ್ರಮೇಣ ಇಂಗ್ಲಿಷರ ಆಜ್ಞಾನು ವರ್ತಿಗಳಾಗುತ್ತ ಬಂದರು. ಎರಡನೆಯದಾಗಿ ಡೂಪ್ಲೆಯ ಪತನವೂ ಕ್ಲೈವನ ಏಳ್ಗೆಯೂ ಪ್ರಾರಂಭವಾದುವು. ಕೊನೆಯದಾಗಿ ಫ್ರೆಂಚರ ಪ್ರಾಬಲ್ಯ ಕುಂದಿ ಇಂಗ್ಲಿಷರ ಬಲ ಸಂವರ್ಧನೆ ಯಾಯಿತು.

(ಜಿ.ಆರ್.ಆರ್.)

**ಆರ್ಕಿಮಿಡೀಸ್:** ಪ್ರ.ಶ.ಪೂ.287–212. ಸಿಸಿಲಿಯ ವಿಜ್ಞಾನಿ, ಗಣಿತಜ್ಞ, ಪರಮಮೇಧಾವಿ. ಪ್ರಪಂಚದ ಮೂವರು ಸಾರ್ವಕಾಲಿಕ ಅತಿಶ್ರೇಷ್ಠ ಗಣಿತ ವಿದ್ವಾಂಸರ ಯಾದಿಯನ್ನು ಯಾವ ತರಹದಲ್ಲಿ ಸಿದ್ಧಪಡಿಸಿದರೂ ಅದರಲ್ಲಿ ಒಂದು ಅನಿವಾರ್ಯ ಹೆಸರು ಆರ್ಕಿಮಿಡೀಸ್‌ನದು ಎಂದು ಈ.ಟಿ.ಬೆಲ್ ಹೇಳಿದ್ದಾನೆ. ಅವನ ಮಾತಿನಲ್ಲಿ ಶ್ರೇಷ್ಠ ಗಣಿತವಿದ್ವಾಂಸರ ಶ್ರೇಣಿಯಲ್ಲಿ ಆರ್ಕಿಮಿಡೀಸ್, ನ್ಯೂಟನ್ ಮತ್ತು ಗಾಸ್ ಇವರ ಸ್ಥಾನ ವಿಶಿಷ್ಟವಾದದ್ದು. ಶುದ್ಧ ಮತ್ತು ಅನ್ವಯ ಗಣಿತಗಳೆರಡರಲ್ಲೂ ಈ ಮೂವರು ಪ್ರಚಂಡ ತರಂಗಗಳನ್ನೇ ಎಬ್ಬಿಸಿದರು. ಆರ್ಕಿಮಿಡೀಸ್ ಅನ್ವಯ ಗಣಿತಕ್ಕಿಂತ ಶುದ್ಧ ಗಣಿತಕ್ಕೆ ಅಧಿಕ ಮೌಲ್ಯವಿತ್ತ ಪ್ರಾಚೀನಕಾಲದ ಪರಮ ಜ್ಞಾನಿ.

ಆರ್ಕಿಮಿಡೀಸ್ ಪ್ರ.ಶ.ಪೂ.287ರಲ್ಲಿ ಸಿಸಿಲಿಯ ಸಿರಕ್ಯೂಸ್‌ನಲ್ಲಿ ಜನಿಸಿದ. ಇವನ ತಂದೆ ಫೈಡಿಯಾ ಗ್ರೀಸ್ ದೇಶದ ಒಬ್ಬ ಖಗೋಳಶಾಸ್ತ್ರಜ್ಞ. ಆರ್ಕಿಮಿಡೀಸನ ವಿದ್ಯಾಭ್ಯಾಸ ಆಗಿನ ಕಾಲದಲ್ಲಿ ಗಣಿತಶಾಸ್ತ್ರ ಕೇಂದ್ರವೆನಿಸಿದ್ದ ಅಲೆಕ್ಸಾಂಡ್ರಿಯದ ಶಾಲೆಯಲ್ಲಿ ನಡೆಯಿತು. ಯೂಕ್ಲಿಡ್ ಎಂಬ ಸುಪ್ರಸಿದ್ಧ ರೇಖಾಗಣಿತಜ್ಞನ ಶಿಷ್ಯನಾಗಿದ್ದ ಸೆನಾನ್ ಎಂಬ ಗಣಿತಶಾಸ್ತ್ರಜ್ಞ ಆರ್ಕಿಮಿಡೀಸ್‌ನ ಅಧ್ಯಾಪಕ. ಎರಾಟಾಸ್ಥನೀಸ್ (ಪ್ರ.ಶ.ಪೂ.274–194) ಎಂಬ ಮೇಧಾವಿ ಆರ್ಕಿಮಿಡೀಸ್‌ನ ಸ್ನೇಹಿತ. ಆರ್ಕಿಮಿಡೀಸ್ ತನ್ನ ಇಡೀ ಜೀವಿತ ಕಾಲವನ್ನು ಗಣಿತ ಮತ್ತು ವೈಜ್ಞಾನಿಕ ಶೋಧನೆಗೆ ವಿನಿಯೋಗಿಸಿದ. ಗಣಿತಶಾಸ್ತ್ರವನ್ನು ಯಂತ್ರನಿರ್ಮಾಣಕ್ಕೆ ಪ್ರಯೋಗಿಸುವುದರಲ್ಲಿ ಅವನು ಆ ಕಾಲದಲ್ಲಿ ಅದ್ವಿತೀಯನಾಗಿದ್ದ. ಗಣಿತಶಾಸ್ತ್ರದಲ್ಲಿ ಆರ್ಕಿಮಿಡೀಸ್ ಬರೆದ ಏಳು ಕೃತಿಗಳು ದೊರೆತಿವೆ. ಸಂಖ್ಯಾರೂಪಣೆ (ನೋಟೇಷನ್), ವರ್ತುಗಳ ಪ್ರಮಾಣ, ಪ್ಯಾರಾಬೋಲದ ಕ್ಷೇತ್ರಫಲ ನಿರ್ಣಯ, ಗೋಳ ಮತ್ತು ಸಿಲಿಂಡರ್, ಗೋಳಕಲ್ಪಗಳು, ಪರಿಭ್ರಮಿಗಳು, ಶಾಂಕೇಯಗಳು (ಕೊನಾಯ್ಡ್ಸ್). ಆರ್ಕಿಮಿಡೀಸ್ ಖಗೋಳಶಾಸ್ತ್ರದಲ್ಲೂ ಆಸಕ್ತನಾಗಿದ್ದಂತೆ ಕಾಣುತ್ತದೆ; ಆದರೆ ಇವನ ಖಗೋಳವಿಜ್ಞಾನ ಲೇಖನವಾವುದೂ ದೊರೆತಿಲ್ಲ.

ಜಲಸ್ಥಿತಿವಿಜ್ಞಾನದಲ್ಲಿ (ಹೈಡ್ರೊಸ್ಟಾಟಿಕ್ಸ್) ಸುಪ್ರಸಿದ್ಧವಾಗಿರುವ ಆರ್ಕಿಮಿಡೀಸನ ಮೂಲತತ್ತ್ವವನ್ನು ಕಂಡುಹಿಡಿಯಲು ಒಂದು ವಿಶೇಷ ಸಂದರ್ಭ ಕಾರಣವಾಯಿತು. 2ನೆಯ ಹೀರೋ ಎಂಬ ದೊರೆ ಚಿನ್ನದ ಹೊಸಕಿರೀಟವೊಂದನ್ನು ಮಾಡಿಸಿದ. ಆದರೆ ಅದನ್ನು ತಯಾರಿಸಿದ ಅಕ್ಕಸಾಲಿಗ ಚಿನ್ನದ ಜೊತೆಗೆ ಬೆಳ್ಳಿಯನ್ನು ಮಿಶ್ರ ಮಾಡಿರಬಹುದೆಂದು ದೊರೆಗೆ ಸಂಶಯವುಂಟಾಯಿತು. ಕಿರೀಟ ಸುಂದರವಾಗಿದ್ದುದರಿಂದ ಅದನ್ನು ಕರಗಿಸುವುದಕ್ಕೆ ದೊರೆಗೆ ಇಷ್ಟವಿರಲಿಲ್ಲ. ಅದನ್ನು ಕರಗಿಸದೆಯೇ ಅದರ ಚಿನ್ನದ ಪರಿಶುದ್ಧತೆಯನ್ನು ಕಂಡುಹಿಡಿಯುವ ಸಮಸ್ಯೆಯನ್ನು ದೊರೆ ಆರ್ಕಿಮಿಡೀಸನಿಗೆ ಒಡ್ಡಿದ. ಆರ್ಕಿಮಿಡೀಸ್ ಆ ದೊರೆಯ ಒಬ್ಬ ಸಂಬಂಧಿಯೆಂದು ಪ್ಲೂಟಾರ್ಕ್ ಹೇಳಿದ್ದಾನೆ. ಒಂದು ದಿನ ಆರ್ಕಿಮಿಡೀಸ್ ಸ್ನಾನದ ಮನೆಯಲ್ಲಿ ನೀರಿನ ತೊಟ್ಟಿಯಲ್ಲಿಳಿದಾಗ ನೀರಿನ ಮಟ್ಟ ಏರಿದ್ದನ್ನು ಗಮನಿಸಿದ. ಕಿರೀಟವನ್ನು ಕರಗಿಸದೆಯೇ ಅದರ ಘನ ಗಾತ್ರವನ್ನು ಕಂಡುಹಿಡಿಯುವ ಸುಲಭೋಪಾಯ ಅವನಿಗೆ ಕೂಡಲೇ ಹೊಳೆಯಿತು. ಗೊತ್ತಾಯಿತು! ಗೊತ್ತಾಯಿತು! (ಯುರೇಕಾ,ಯುರೇಕಾ) ಎಂದು ಕೂಗುತ್ತ ಸ್ನಾನದ ಮನೆಯಿಂದ ಹೊರಗೆ ಬಂದು ಆರ್ಕಿಮಿಡೀಸ್ ನೇರವಾಗಿ ಅರಮನೆಗೆ ಧಾವಿಸಿದ. ಅಲ್ಲಿ ಒಂದು ಪಾತ್ರೆಯ ತುಂಬ ನೀರು ತುಂಬಿ ಕಿರೀಟವನ್ನು ಅದರೊಳಕ್ಕೆ ಇಳಿಯಬಿಟ್ಟು ಪಾತ್ರೆಯಿಂದ ಹೊರಕ್ಕೆ ಹರಿದ ನೀರನ್ನು ಸಂಗ್ರಹಿಸಿದ. ಆ ನೀರಿನಷ್ಟು ಘನ ಗಾತ್ರವುಳ್ಳ ಶುದ್ಧವಾದ ಚಿನ್ನವನ್ನು ತರಿಸಿ ಕಿರೀಟ ಆ ಚಿನ್ನದಷ್ಟು ತೂಕವಿದ್ದರೆ ಅದರ ಚಿನ್ನ ಶುದ್ಧವಾದುದು ಎಂದು ಹೇಳಿದ. ತೂಕಮಾಡಿ ನೋಡಲಾಗಿ ವ್ಯತ್ಯಾಸ ಕಂಡುಬಂದು ಅಕ್ಕಸಾಲಿಗನ ಮೋಸ ಸ್ಪಷ್ಟವಾಯಿತು. ಅಕ್ಕಸಾಲಿಗನಿಗೆ ಮರಣ ದಂಡನೆಯಾಯಿತು. ಆರ್ಕಿಮಿಡೀಸ್ ತನ್ನ ಯೋಚನೆಯನ್ನು ಮುಂದುವರಿಸಿ ಪದಾರ್ಥಗಳ ಸಾಪೇಕ್ಷ ಸಾಂದ್ರತೆಯ ವಿಚಾರವಾಗಿ ಶೋಧನೆಗಳನ್ನು ನಡೆಸಿ ಆತನ ಹೆಸರಿನಿಂದ ಸುಪ್ರಸಿದ್ಧವಾಗಿರುವ ತತ್ತ್ವವನ್ನು ನಿರೂಪಿಸಿದ.

ಸನ್ನೆಗಳಿಗೆ (ಲೀವರ್ಸ್) ಸಂಬಂಧಿಸಿದ ಗಣಿತವನ್ನು ಕಂಡುಹಿಡಿದು ಸೂಕ್ತವಾದ ಸನ್ನೆಗಳಿಂದ ಎಷ್ಟುದೊಡ್ಡ ಭಾರವನ್ನಾದರೂ ಎತ್ತಬಹುದೆಂದು ತೋರಿಸಿದ. ಮತ್ತೆ ಆರ್ಕಿಮಿಡೀಸ್ ಇವನ ಹೆಸರಿನಿಂದಲೇ ಪ್ರಸಿದ್ಧವಾಗಿರುವ ತಿರುಪನ್ನು ರಚಿಸಿದ. ಅಲ್ಲದೆ



ರಣರಂಗದಲ್ಲಿ ಶತ್ರುನಾಶಕರವಾದ ಕೆಲವು ಯಂತ್ರಗಳನ್ನು ತಯಾರಿಸಿದ. ಪ್ರ.ಶ.ಪೂ.215ರ ಸಿರಕ್ಯೂಸ್ ಮುತ್ತಿಗೆಯಲ್ಲಿ ಆರ್ಕಿಮಿಡೀಸ್ ಭೂತಗನ್ನಡಿಗಳನ್ನು ಬಳಸಿ ಶತ್ರುಗಳ ಹಡಗುಗಳನ್ನು ಸುಟ್ಟ ಮತ್ತು ಮೀಟಕಗಳನ್ನುಳ್ಳ (ಸನ್ನೆ) ಯಂತ್ರಗಳ ಸಹಾಯದಿಂದ ಅವರನ್ನು ಹಿಮ್ಮೆಟ್ಟಿಸಿದ. ಪಾಲಿಬಸ್ ಎಂಬ ಚರಿತ್ರಕಾರ ಹೇಳುವಂತೆ ಆರ್ಕಿಮಿಡೀಸನ ಬುದ್ಧಿಶಕ್ತಿಯೇ ಒಂದು ಸೈನ್ಯವಾಗಿತ್ತು. ಮೂರುವರ್ಷಗಳ ತರುವಾಯ ಪ್ರ.ಶ.ಪೂ.212ರಲ್ಲಿ ಮಾರ್ಸೆಲಸ್ ಎಂಬ ರೋಮನ್ ಸೇನಾಧಿಪತಿ ಸಿರಕ್ಯೂಸನ್ನು ಸ್ವಾಧೀನಪಡಿಸಿಕೊಂಡ. ಇವನಿಗೆ ಆರ್ಕಿಮಿಡೀಸ್‌ನ ಮೇಲೆ ವಿಶೇಷವಾದ ಗೌರವವಿದ್ದುದರಿಂದ ಈತನ ಮೇಲೆ ಯಾರೂ ಕೈಮಾಡ ಕೂಡದೆಂದು ತನ್ನ ಸೈನಿಕರಿಗೆ ಆಜ್ಞಾಪಿಸಿದ. ಅಂದು ಆರ್ಕಿಮಿಡೀಸ್ ತನ್ನ ಮನೆಯಲ್ಲಿ ಗಣಿತ ಸಮಸ್ಯೆಯೊಂದಕ್ಕೆ ಸಂಬಂಧಿಸಿದ ಒಂದು ಆಕೃತಿಯನ್ನು ಪರಿಶೀಲಿಸುತ್ತ ತದೇಕಚಿತ್ತನಾಗಿ ಕುಳಿತಿದ್ದ. ಆ ದಿನ ರೋಮನ್ ಯೋಧರು ಪಟ್ಟಣವನ್ನು ಪ್ರವೇಶಿಸಿದ ಸುದ್ದಿ ಸಹ ಇವನಿಗೆ ಗೊತ್ತಿರಲಿಲ್ಲ. ಆಗ ರೋಮನ್ ಸಿಪಾಯಿಯೊಬ್ಬ ಹಠಾತ್ತಾಗಿ ಇವನ ಮನೆಗೆ ನುಗ್ಗಿ ಇವನ ಎದುರಿಗೆ ನಿಂತುಕೊಂಡ. ಗಣಿತದ ಆಕೃತಿಯನ್ನು ವೀಕ್ಷಿಸುತ್ತಿದ್ದ ಆರ್ಕಿಮಿಡೀಸ್ ತಲೆಯನ್ನು ಸಹ ಎತ್ತದೆ, ನನ್ನ ಯೋಚನೆಗೆ ಅಡ್ಡಿಯಾಗಬೇಡ, ತೊಲಗಾಚೆ ಎಂದ. ಸಿಪಾಯಿ ನೀನು ಈ ಕೂಡಲೇ ಮಾರ್ಸೆಲಸ್ ಸೇನಾಧಿಪತಿಯ ಬಳಿಗೆ ಹೋಗು ಎಂದ. ಆರ್ಕಿಮಿಡೀಸ್ ಅದಕ್ಕೆ ಒಪ್ಪಲಿಲ್ಲ. ಕೂಡಲೆ ಆ ಸಿಪಾಯಿ ಆರ್ಕಿಮಿಡೀಸನನ್ನು ಕತ್ತಿಯಿಂದ ಹೊಡೆದು ಕೊಂದುಬಿಟ್ಟ. ಈ ದುರಂತವನ್ನು ಕೇಳಿ ಮಾರ್ಸೆಲಸ್ ಸೇನಾಧಿಪತಿಗೆ ಬಹಳ ಖೇದವುಂಟಾಯಿತು. ಅವನು ಆರ್ಕಿಮಿಡೀಸನ ಶವವನ್ನು ವಿಶೇಷ ಮರ್ಯಾದೆಗಳೊಡನೆ ಸಮಾಧಿ ಮಾಡಿಸಿ, ಅದರ ಮೇಲೆ ಆರ್ಕಿಮಿಡೀಸನಿಗೆ ಅತ್ಯಂತ ಪ್ರಿಯವಾಗಿದ್ದ ಗೋಳ ಮತ್ತು ಸಿಲಿಂಡರ್‌ಗಳನ್ನು ಸ್ಥಾಪಿಸಿದ. ಅಲ್ಲದೆ ಆರ್ಕಿಮಿಡೀಸನ ಸಂಬಂಧಿಯನ್ನು ಬಹುಮಾನಗಳಿಂದ ಆದರಿಸಿದ.

ಚರಿತ್ರೆಕಾರರು ಆರ್ಕಿಮಿಡೀಸನ ಬುದ್ಧಿಶಕ್ತಿಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಬಾಲ್ಡ ಎಂಬ ಇಟಲಿಯ ಚರಿತ್ರೆಕಾರ ಆರ್ಕಿಮಿಡೀಸನ ಪ್ರತಿಭೆಯಲ್ಲಿ ಮಾನವಾಂಶಕ್ಕಿಂತ ಹೆಚ್ಚಾಗಿ ದೈವಾಂಶವಿತ್ತು ಎಂದು ಹೇಳಿದ್ದಾನೆ. ಪ್ಲಿನಿ ಎಂಬ ಚರಿತ್ರಕಾರ ಆರ್ಕಿಮಿಡೀಸನನ್ನು ಗಣಿತಶಾಸ್ತ್ರದ ದೇವರು ಎಂದು ಕರೆದಿದ್ದಾನೆ. ಫ್ರೆಂಚ್ ಭಾಷಾಂತರಕಾರನೊಬ್ಬ ಈ ವಾಕ್ಯವನ್ನು ರೇಖಾಗಣಿತದ ಹೋಮರ್ ಎಂದು ಭಾಷಾಂತರಿಸಿದ್ದಾನೆ. ತಾನು ಉದ್ದಾಮ ವ್ಯಕ್ತಿಗಳ ಹೆಗಲ ಮೇಲೆ ಕುಳಿತಿರುವುದಾಗಿ ನ್ಯೂಟನ್ ಹೇಳಿದಾಗ, ಆತ ಸ್ಮರಿಸಿದ್ದ ವ್ಯಕ್ತಿಗಳಲ್ಲಿ ಆರ್ಕಿಮಿಡೀಸ್ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದಿರಬೇಕು. ಶಾಸ್ತ್ರದ ಪ್ರಗತಿಯಲ್ಲಿ ಆರ್ಕಿಮಿಡೀಸ್ ಒಬ್ಬ ಉದ್ದಾಮ ವ್ಯಕ್ತಿ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. (ಬಿ.ಎಸ್.ಎಸ್.; ಎಚ್.ಸಿ.ಕೆ.)

**ಆರ್ಯಭಟ:** ಸು. 5ನೆಯ ಶತಮಾನ. ಭಾರತದ ಪ್ರಸಿದ್ಧ ಗಣಿತಜ್ಞ; ಖಗೋಳವಿಜ್ಞಾನಿ. ಇವನನ್ನು ಕುಸುಮಪುರದ ಆರ್ಯಭಟನೆಂದು ಕರೆಯುತ್ತಾರೆ. ಕುಸುಮಪುರ ಈಗಿನ ಬಿಹಾರ ರಾಜ್ಯದ ಪಟನದ ಬಳಿ ಇತ್ತು. 476ರಲ್ಲಿ ಜನಿಸಿದ. ಕೊಡುಗೆಗಳು: ಆರ್ಯಭಟೀಯಂ (499) ಇವನ ಮೇರುಕೃತಿ. ಅದರಲ್ಲಿ 108 ಶ್ಲೋಕಗಳಿವೆ. ಈ ಕೃತಿಯಲ್ಲಿ ನಾಲ್ಕು ವಿಭಾಗಗಳಿವೆ – ದಶಗೀತಿಕಾ, ಗಣಿತ, ಕಾಲಕ್ರಿಯಾ ಹಾಗೂ ಗೋಶಪಾದ. ಮೊದಲನೆಯ ಭಾಗವಾದ ದಶಗೀತಿಕಾ ಒಟ್ಟು 18 ಶ್ಲೋಕಗಳನ್ನೊಳಗೊಂಡಿದ್ದು ಬಹುಮುಖ್ಯವಾದ ಗ್ರಹಗಣಿತ ಸಂಬಂಧವಾದ ಅಂಕಿಅಂಶಗಳನ್ನೊಳಗೊಂಡಿದೆ. ಅಧಿಕಕಾಲಮಾನಗಳಾದ ಕಲ್ಪ, ಮನುಯುಗಗಳ ಉಲ್ಲೇಖಗಳುಂಟು. ಕೋನವನ್ನು ಅಳೆಯಲು ಇಂದು ಬಳಸಲಾಗುತ್ತಿರುವ ಡಿಗ್ರಿ ಮಿನಿಟ್ ಹಾಗೂ ಸೆಕೆಂಡುಗಳನ್ನು ಕ್ರಮವಾಗಿ ಅಂಶ, ಕಲೆ ಹಾಗೂ ವಿಕಲೆಗಳೆಂದು ಕರೆದು ಅವನ್ನು 1 ಅಂಶ = 60 ಕಲೆಗಳು, 1 ಕಲೆ = 60 ವಿಕಲೆಗಳು ಎಂದು ವಿಭಜಿಸಿದ್ದು. ತ್ರಿಕೋನಮಿತಿಶಾಸ್ತ್ರ ಮೂಲಭೂತವಾದ ಲಂಬಕೋನ ತ್ರಿಕೋನದ

ಲಂಬಮಾನಗಳಾದ ಯೋಜನ, ಹಸ್ತ ಹಾಗೂ ಅಂಗುಲಗಳ ಪರಿಕಲ್ಪನೆ. ಇನ್ನು ಖಗೋಳ ವಿಜ್ಞಾನದ ಅತಿಮುಖ್ಯವಾದ ಗ್ರಹಗಳ ವ್ಯಾಸ, ಅವುಗಳಲ್ಲಿ ಕಕ್ಷೆಗಳು, ಅವುಗಳು ಕ್ರಾಂತಿ ವೃತ್ತದೊಂದಿಗೆ ವಾಲಿರುವ ಕೋನಗಳು, ಗ್ರಹಗಳ ಅನುವೃತ್ತಗಳ ಪರಿಧಿ ಎಲ್ಲದರ ಅಂಕಿ ಅಂಶಗಳನ್ನು ನಿಖರವಾಗಿ ನೀಡಿರುವುದು. ತ್ರಿಕೋನ ಮಿತಿ ಶಾಸ್ತ್ರದ ಅತಿ ಮುಖ್ಯವಾಗಿ ಇಂದಿಗೂ ಬಳಸುತ್ತಿರುವ ಜ್ಯಾಪಟ್ಟ ಮತ್ತು ಅದನ್ನು ತಯಾರಿಸುವ ವಿಧಾನ ಸೂಚಿಸಿದ್ದು. ಗಣಿತಾಧ್ಯಾಯವು ಆರ್ಯಭಟೀಯಂನ ಎರಡನೆಯ ಭಾಗ. 33 ಶ್ಲೋಕಗಳನ್ನೊಳಗೊಂಡಿದೆ. ಇದು ರೇಖಾಗಣಿತದ ಆಕೃತಿಗಳು, ಶ್ರೇಢೀಗಣಿತ, ಸರಳ ಬಡ್ಡಿ ಲೆಕ್ಕಗಳು, ಸರಳ ಸಮೀಕರಣಗಳು, ಸಮಕಾಲೀನ ಸಮೀಕರಣಗಳು, ವರ್ಗ ಸಮೀಕರಣಗಳು, ವರ್ಗ, ವರ್ಗಮೂಲ, ಘನ ಘನಮೂಲ, ತ್ರೈರಾಶಿ ಇತ್ಯಾದಿಗಳನ್ನೊಳಗೊಂಡಿದೆ. ಮೊದಲ ದರ್ಜೆಯ ಅನಿರ್ದಿಷ್ಟ ಸಮೀಕರಣವಾದ $ax+by=c$ ಯ ಸಾರ್ವತ್ರಿಕ ಪರಿಹಾರ ವಿಧಾನ ಪ್ರಪಂಚಮಾನ್ಯವಾಗಿದೆ. ಕುಟ್ಟಕಗಳನ್ನು ಬಿಡಿಸುವ ವಿಧಾನವೂ ಇದರಲ್ಲಿದೆ. ಮೂರನೆಯ ಭಾಗವಾದ ಕಾಲಕ್ರಿಯಾದಲ್ಲಿ 25 ಶ್ಲೋಕಗಳಿವೆ. ಇದರಲ್ಲಿ ಯಾವುದೇ ದಿನದ ಗ್ರಹಗಳ ಸ್ಥಾನಗಳನ್ನು ಕಂಡುಹಿಡಿಯುವ ವಿಧಾನವನ್ನು ಕೊಟ್ಟಿದೆ, ಇದಲ್ಲದೇ ಅಧಿಕಮಾಸ, ಕ್ಷಯತಿಥಿ, ಗ್ರಹಗಳ ದೈನಿಕ ಗತಿ, ವಾರಗಳ ವಿವರಣೆಗಳನ್ನು ಕೊಡಲಾಗಿದೆ. ನಾಲ್ಕನೆಯ ಭಾಗವಾದ ಗೋಲಾಧ್ಯಯದಲ್ಲಿ 50 ಶ್ಲೋಕಗಳಿವೆ. ಇದು ಖಗೋಳಶಾಸ್ತ್ರಕ್ಕೆ ಸಂಬಂಧಿಸಿದ ರೇಖಾಗಣಿತ ಹಾಗೂ ತ್ರಿಕೋಣಸಮಿತಿ ಶಾಸ್ತ್ರಗಳ ಫಲಿತಾಂಶಗಳು ವಿಶ್ಲೇಷಿಸುತ್ತದೆ. ಗಣಿತ ವಿಜ್ಞಾನಕ್ಕೆ ಇವನ ಮಹತ್ತ್ವದ ಕೊಡುಗೆ ಎಂದರೆ ಅಕ್ಷರ ಸಂಖ್ಯಾಕ್ರಮ. ಖಗೋಳವಿಜ್ಞಾನದಲ್ಲಿ ಬರುವ ದೊಡ್ಡ ಸಂಖ್ಯೆಗಳನ್ನು ಅಕ್ಷರ ಮಾಲೆಯ ವರ್ಣಗಳನ್ನು, ದಾಶಮಿಕ ಸಂಖ್ಯಾ ಪದ್ಧತಿಯನ್ನು ಅನುಸರಿಸಿ ಬಳಸಿರುವುದು ಆರ್ಯಭಟನ ಅನೇಕ ವಿಶೇಷ ಸಾಧನೆಗಳಲ್ಲೊಂದು. .....25 ಕ್, ಖ್, .......ಮಿ ಗಳನ್ನು ಸೂಚಿಸಿದರೆ, 30, 40, 50,...... ಯ್, ರ್, ...... ಗಳನ್ನು ಸೂಚಿಸಿ ಅ, ಆ, ಇ, ಈ,........... ಗಳು. ಏಕ, ದಶಕ, ಶತಕಗಳನ್ನು ಸೂಚಿಸುವ ವ್ಯವಸ್ಥೆ ಕಂಡುಹಿಡಿದವನೇ ಆರ್ಯಭಟ.

ಪೈ ವೈಶಿಷ್ಟ್ಯ: ಯಾವುದೇ ವೃತ್ತದ ಪರಿಧಿಯನ್ನು ಅದರ ವ್ಯಾಸದಿಂದ ಭಾಗಿಸಿದಾಗ ಬರುವ ಸ್ಥಿರಸಂಖ್ಯೆಯೇ ಪೈ. ಇದು ಯಾವುದೇ ವಿಧವಾದ ವೃತ್ತವನ್ನು ತೆಗೆದುಕೊಂಡರೂ ಅದೇ ಸ್ಥಿರಸಂಖ್ಯೆಯಾಗಿ ಉಳಿಯುವುದೇ ಇದರ ವೈಶಿಷ್ಟ್ಯ. ಆರ್ಯಭಟ ಇದಕ್ಕೆ ಮೊತ್ತ ಮೊದಲ ಬಾರಿಗೆ 4 ದಶಮಾಂಶಸ್ಥಾನದವರೆಗೆ ನಿಖರತೆಯನ್ನು ಕೊಟ್ಟಿದ್ದು $T\pi=3.1416$.

ಇವಲ್ಲದೇ ದಿನ ಬಳಕೆಯ ಶ್ರೇಢಿಗಣಿತ, ವ್ಯತ್ಯಾಸ ಮತ್ತು ಗುಣಲಬ್ಧಗಳಿಂದ ಎರಡು ಸಂಖ್ಯೆಗಳನ್ನು ಕಂಡುಹಿಡಿಯುವುದು, ಅಸಲಿನ ಮೇಲೆ ಬಡ್ಡಿ ಲೆಕ್ಕಾಚಾರ, ಭೂಮಿಯ ಆಕಾರ ಮತ್ತು ಭ್ರಮಣ, ವಿವಿಧ ಪ್ರದೇಶಗಳ ಸೂರ್ಯೋದಯ, ಸೂರ್ಯಾಸ್ತಗಳು ನಿಖರ ಸಮಯ, ಧ್ರುವ ಪ್ರದೇಶಗಳಲ್ಲಿ ದೀರ್ಘವಾದ ಹಗಲು ರಾತ್ರಿಗಳು, ನಾಲ್ಕುಯುಗಗಳಲ್ಲಿರುವ ವರ್ಷಗಳು ಹಾಗೂ ಗ್ರಹಗಳ ಸಾಪೇಕ್ಷ ಗತಿ, ಮಹಾಯುಗದಲ್ಲಿ ಪರಿಭ್ರಮಣೆಗಳು, ಗ್ರಹಣಗಳು ಇನ್ನೂ ಅನೇಕಾನೇಕ.

5ನೆಯ ಶತಮಾನದಲ್ಲಿ ಭಾರತದಲ್ಲಷ್ಟೇ ಅಲ್ಲದೇ ಎಲ್ಲ ಕಡೆಯೂ ಖಗೋಳ ವಿಜ್ಞಾನವನ್ನು ಅದಕ್ಕೆ ಸಂಬಂಧಿಸಿದ ಗಣಿತವನ್ನು ಅತ್ಯುನ್ನತ ಸ್ಥಾಯಿಗೇರಿಸಿದ ಕೀರ್ತಿ ಈತನದು. (ಜ.ಡಿ.)

**ಆರ್ಯರು:** ಇತಿಹಾಸ ಪೂರ್ವ ಮಧ್ಯ ಯುರೋಪಿನ ಮಾನವ ನೆಲೆಯಿಂದ ಯುರೋಪ್ ಮತ್ತು ಏಷ್ಯ ಖಂಡಗಳಲ್ಲಿ ಹರಡಿಕೊಂಡ ಜನಾಂಗ. ಮ್ಯಾಕ್ಸ್‌ಮುಲ್ಲರ್ ಮತ್ತು ಇನ್ನೂ ಅನೇಕ ವಿದ್ವಾಂಸರ ಪ್ರಕಾರ ಆರ್ಯರು ಮೂಲತಃ ಆಸ್ಟ್ರಿಯ, ಹಂಗೇರಿ ಮತ್ತು ಬೊಹಿಮಿಯ ಪ್ರದೇಶಗಳಲ್ಲಿ ವಾಸವಾಗಿದ್ದು ಕ್ರಮೇಣ ವಲಸೆ ಹೊರಟು, ಅವರಲ್ಲಿ ಒಂದು ಗುಂಪು ಜರ್ಮನಿ, ಇಟಲಿ ಮತ್ತು ಗ್ರೀಸ್ ದೇಶಗಳಲ್ಲಿ ಪಸರಿಸಿತು. ಮತ್ತೊಂದು ಗುಂಪು ಪೂರ್ವಾಭಿಮುಖವಾಗಿ ಬಂದು ತುರ್ಕಿ, ಇರಾನ್ ಮತ್ತು ಭಾರತ ದೇಶಗಳಲ್ಲಿ ನೆಲೆಸಿತು. ಏಷ್ಯಮೈನರ್ ಪ್ರದೇಶದಲ್ಲಿ ಸಿಕ್ಕಿರುವ ಅತಿ ಪ್ರಾಚೀನವಾದ ಬೋಗಸ್‌ಕಾಯ್ ಶಾಸನದ ವಿವರಗಳು ಆರ್ಯರು ವಲಸೆ ಬಂದುದಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನೊದಗಿಸುತ್ತವೆ ಎಂದು ನಂಬಲಾಗಿದೆ. ಆರ್ಯರ ಮೂಲನಿವಾಸ ಕಪ್ಪುಸಮುದ್ರ ತೀರಪ್ರದೇಶ ಮತ್ತು ಉಕ್ರೇನ್ ಪರ್ಯಾಯ ದ್ವೀಪವಾಗಿರಬೇಕೆಂದು ಹಲವು ವಿದ್ವಾಂಸರ ಅಭಿಪ್ರಾಯ. ಆರ್ಯ ಎಂಬ ಪದ ಉರ್ ಎಂಬ ಮೂಲದಿಂದ ಬಂದುದೆಂಬ ಅಭಿಪ್ರಾಯವಿದೆ. 16ನೆಯ ಶತಮಾನದ ಕೊನೆಯಲ್ಲಿ ಭಾರತಕ್ಕೆ ಬಂದು ಗೋವದಲ್ಲಿ ಹಲವು ವರ್ಷಗಳ ಕಾಲ ತಂಗಿದ್ದ ಫಿಲಿಪೋ ಸಸೆಟ್ಟಿ ಎಂಬ ಫ್ಲಾರೆಂಟೈನಿನ ವ್ಯಾಪಾರಿ ಸಂಸ್ಕೃತ ಮತ್ತು ಯುರೋಪಿನ ಕೆಲವು ಭಾಷೆಗಳಿಗೆ ನಿಕಟವಾದ ಸಂಬಂಧವಿದೆಯೆಂದು ಅಭಿಪ್ರಾಯಪಟ್ಟ. 1784ರಲ್ಲಿ ವಿಲಿಯಂಜೋನ್ಸ್ ಗ್ರೀಕ್ ಮತ್ತು ಲ್ಯಾಟಿನ್, ಗಾಥಿಕ್ ಮತ್ತು ಕೆಲ್ಟಿಕ್, ಸಂಸ್ಕೃತ ಮತ್ತು ಪುರಾತನ ಪಾರಸಿ ಭಾಷೆಗಳು ಒಂದೇ ಮೂಲದಿಂದ ಉತ್ಪನ್ನವಾದವುಗಳೆಂದು ಪ್ರತಿಪಾದಿಸಿದ. ಈ ತತ್ತ್ವದ ಆಧಾರದಮೇಲೆ ಒಂದೇ ಮೂಲಪ್ರದೇಶದಲ್ಲಿ ವಾಸವಾಗಿದ್ದು, ಕಾಲಕ್ರಮೇಣ ಯುರೋಪು ಮತ್ತು ಏಷ್ಯ ಖಂಡಗಳಲ್ಲಿ ಪಸರಿಸಿಕೊಂಡ ಕೆಲವು ಪಂಗಡಗಳಲ್ಲಿ ಒಂದರ ಭಾಷೆ ಇಂಡೊ-ಯುರೋಪಿಯನ್ ಭಾಷೆಯೆಂದೂ ಆ ಪಂಗಡದವರು ನೆಲೆ ನಿಂತ ಭಾಗಗಳಿಗನುಗುಣವಾಗಿ ಅವರ ಜೀವನ ಮತ್ತು ಭಾಷೆಯಲ್ಲಿ ವ್ಯತ್ಯಾಸಗಳಾದುವೆಂದೂ ವಿದ್ವಾಂಸರ ಅಭಿಪ್ರಾಯ.

ಲೋಕಮಾನ್ಯ ಬಾಲಗಂಗಾಧರ ಟಿಳಕ್ ಮತ್ತು ಜಾಕೊಬಿ ಇವರು ಖಗೋಳವಿಜ್ಞಾನ ಅಧ್ಯಯನದ ಆಧಾರದ ಮೇಲೆ ಆರ್ಯರು ಆರ್ಕ್‌ಟಿಕ್ ಪ್ರದೇಶದಲ್ಲಿ ವಾಸವಾಗಿದ್ದರೆನ್ನುವರು. ಆದರೆ ಅನೇಕ ವಿದ್ವಾಂಸರು ಖಗೋಳವಿಜ್ಞಾನ ಆಧಾರ ಮತ್ತು ಅದಕ್ಕೆ ಸಂಬಂಧಿಸಿದ ಹೇಳಿಕೆಯನ್ನು ಒಪ್ಪುವುದಿಲ್ಲ. ಆರ್ಯರು ಹೊರಗಿನಿಂದ ಬಂದವರಲ್ಲ. ಅವರು ಭಾರತದ ಮೂಲನಿವಾಸಿಗಳು, ಪ್ರಾರಂಭದಲ್ಲಿ ಸರಸ್ವತಿ ಮತ್ತು ದೃಷದ್ವತೀ ನದಿಗಳ ಮಧ್ಯಪ್ರದೇಶವಾದ ಆರ್ಯಾವರ್ತದಲ್ಲಿ ವಾಸವಾಗಿದ್ದು ಕ್ರಮೇಣ ಭಾರತದ ಎಲ್ಲ ಭಾಗಗಳಲ್ಲೂ ಪಸರಿಸಿದುದಲ್ಲದೆ ಪಶ್ಚಿಮ ದೇಶಗಳಿಗೂ ಹೋಗಿ ನೆಲೆಸಿದರು ಎಂಬುದಾಗಿ ಹಲವು ವಿದ್ವಾಂಸರು ವಾದಿಸಿದ್ದಾರೆ. ವೇದ ವಾಙ್ಮಯದಲ್ಲಿ ಒಂದು ಸಾರಿಯಾದರೂ ಆರ್ಯರು ತಮ್ಮ ಪರಕೀಯ ಮೂಲವನ್ನು ಹೇಳಿಲ್ಲವೆಂಬುದು ಈ ವಿದ್ವಾಂಸರ ವಾದದ ಮುಖ್ಯ ಆಧಾರ. ಆದರೆ ಈ ವಾದವನ್ನು ಕೆಲವು ವಿದ್ವಾಂಸರು ಒಪ್ಪುವುದಿಲ್ಲ. ವೇದಗಳ ರಚನೆಯ ಕಾಲವನ್ನು ಪ್ರ.ಶ.ಪೂ. 2000 ವರ್ಷಗಳ ಹಿಂದಕ್ಕೆ ಹಾಕಲು ಆಧಾರಗಳಿಲ್ಲ. ಅಲ್ಲದೆ ಸಿಂಧೂ ಕಣಿವೆಯ ನಾಗರಿಕತೆ ಪ್ರ.ಶ.ಪೂ.2500 ವರ್ಷಗಳಿಗಿಂತ ಹಿಂದೆಯೇ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬ ಅಂಶಗಳು ಹೆಚ್ಚು ಪ್ರಚಲಿತ. ಸೈಂಧವ ಮತ್ತು ಆರ್ಯರ ನಾಗರಿಕತೆಗಳು ಭಿನ್ನ ಎಂಬುದು ಕೆಲವು ವಿದ್ವಾಂಸರ ಅಭಿಮತ. ಇವುಗಳಲ್ಲಿ ಹೋಲಿಕೆಗಳಿಗಿಂತಲೂ ವ್ಯತ್ಯಾಸಗಳೇ ಹೆಚ್ಚು. ಮೂರ್ತಿಪೂಜೆ, ಬರೆವಣಿಗೆ, ನಗರೀಕರಣ, ವೈವಿಧ್ಯಮಯ ಮಾತೃದೇವತೆ ಮತ್ತು ಪಶುಪತಿಯ ಆರಾಧನೆ, ಪರದೇಶಗಳೊಡನಿದ್ದ ನಿಕಟ ವಾಣಿಜ್ಯಸಂಪರ್ಕ, ಕೈಗಾರಿಕೆ ಮತ್ತು ಕಲಾಸಂಪನ್ನತೆ-ಇವುಗಳು ಸಿಂಧೂನದಿ ಬಯಲಿನ ಸಂಸ್ಕೃತಿಯ ಮುಖ್ಯ ಲಕ್ಷಣಗಳು. ವೈದಿಕ ನಾಗರಿಕತೆಯಲ್ಲಿ ಈ ಅಂಶಗಳು ಕಾಣಬರುವುದಿಲ್ಲ. ಅಲ್ಲದೆ ಇಲ್ಲಿನ ಮೂಲನಿವಾಸಿಗಳು ಚಪ್ಪಟೆಯಾದ ಮೂಗುಳ್ಳ ಕಪ್ಪುಬಣ್ಣದ ದಸ್ಯುಗಳೆಂದೂ (ದ್ರಾವಿಡ) ಅವರನ್ನು ಸೋಲಿಸಿ ದಕ್ಷಿಣಾಪಥದ ಕಡೆಗೆ ಓಡಿಸಿದುದಾಗಿಯೂ ವೇದಗಳಲ್ಲಿಯ ಕೆಲವು ಉಲ್ಲೇಖಗಳನ್ನೂ ಅರ್ಥೈಸಿದ್ದಾರೆ. (ಜಿ.ಆರ್.ಆರ್.)

ಆದರೆ ಕಳೆದ ಮೂರು ದಶಕಗಳಲ್ಲಿ ಋಗ್ವೇದ ಕಾಲದ ಸರಸ್ವತಿಯೆಂದು ಶಂಕಿಸಲಾದ ಗಂಗ ಮತ್ತು ದೃಶದ್ವತಿ ನದಿಗಳ ನಡುವೆ ಪ್ರ.ಶ.ಪೂ.ಸು. 2000-1800 ಅವಧಿಯಲ್ಲಿ ಬತ್ತಿಹೋದ ಅತಿ ದೊಡ್ಡ ನದಿಪಾತ್ರದ ಶೋಧನೆ, ಈ ವೇದದಲ್ಲಿ ವಿಶೇಷವಾಗಿ ಸ್ತುತಿಸಲ್ಪಟ್ಟ ಅತ್ಯಂತ ಬೃಹತ್ ಸರಸ್ವತಿ ನದಿ ವರ್ಣನೆ ಹಾಗೂ ಈ ಪ್ರದೇಶದಲ್ಲಿ ನೂರಾರು ಆದಿ, ಪ್ರಬುದ್ಧ ಮತ್ತು ಉತ್ತರಕಾಲೀನ ಹರಪ್ಪ ನೆಲೆಗಳ ಶೋಧನೆ ಮೊದಲಾದವುಗಳ ಆಧಾರದ ಮೇಲೆ ಆರ್ಯರು ಭಾರತದ ಮೂಲನಿವಾಸಿಗಳೆಂಬ ವಿಷಯದಲ್ಲಿ ಪರ ಮತ್ತು ವಿರೋಧ ಅಭಿಪ್ರಾಯಗಳುಳ್ಳ ಮತ್ತಷ್ಟು ಗ್ರಂಥಗಳು ಬಂದಿವೆ. ಹೀಗೆ ಈ ವಿಷಯದಲ್ಲಿ ಇನ್ನೂ ಗಂಭೀರವಾದ ವಾದ ವಿವಾದಗಳು ನಡೆಯುತ್ತಲೇ ಇವೆ. (ಗೌ.ಸಂ.)

ಆರ್ಯರ ನಾಗರಿಕತೆಯನ್ನು ಋಗ್ವೇದ ಅಥವಾ ವೈದಿಕಯುಗದ ಪೂರ್ವಾರ್ಧ ಕಾಲ (ಪ್ರ.ಶ.ಪೂ.2000-1500ರವರೆಗೆ) ಮತ್ತು ವೈದಿಕಯುಗದ ಉತ್ತರಾರ್ಧ ಅಥವಾ ಇತರೆ ಮೂರು ವೇದಗಳ (ಸಾಮ, ಯಜುರ್, ಅಥರ್ವಣ) ಕಾಲ (ಪ್ರ.ಶ.ಪೂ.1500-600ರವರೆಗೆ) ಎಂದು ವಿಂಗಡಿಸಬಹುದು. ಅವರು ಸಣ್ಣ ಪುಟ್ಟ ಹಳ್ಳಿಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ಕುಟುಂಬವ್ಯವಸ್ಥೆ ಆರ್ಯರ ರಾಜಕೀಯ ಮತ್ತು ಸಾಮಾಜಿಕ ಜೀವನದ ಅಡಿಗಲ್ಲು. ರಕ್ತಸಂಬಂಧವನ್ನು ಹೊಂದಿದ್ದ ಅನೇಕ ಕುಟುಂಬಗಳ ಗುಂಪಿಗೆ ಒಬ್ಬ ಯಜಮಾನನಿರುತ್ತಿದ್ದ. ಅವರು ದಸ್ಯುಗಳೊಡನೆ ಹೋರಾಡಬೇಕಾಗಿತ್ತು. ಅನೇಕ ಸಲ ಅವರವರಲ್ಲೇ ಕಲಹಗಳಾಗುತ್ತಿದ್ದವು. ಯುದ್ಧದಲ್ಲಿ ಮುಖಂಡನ ಆವಶ್ಯಕತೆಯಿತ್ತು. ಆದ್ದರಿಂದ ಕೆಲವು ಹಳ್ಳಿಗಳ ಗುಂಪಿಗೆ ಒಬ್ಬೊಬ್ಬ ಮುಖಂಡನಿರುತ್ತಿದ್ದ. ಕಾಲಕ್ರಮೇಣ ಮುಖಂಡರ ಪ್ರಭಾವ ಬೆಳೆದು ಅವರು ರಾಜರಾದರು. ಪ್ರಾರಂಭದಲ್ಲಿ ರಾಜ ಅಥವಾ ಮುಖಂಡನನ್ನು ಚುನಾಯಿಸುತ್ತಿದ್ದರು. ಈ ಪದ್ಧತಿ ಕೊನೆಗೊಂಡ ಮೇಲೆ ರಾಜತ್ವ ವಂಶಪಾರಂಪರ್ಯ ಪದ್ಧತಿಯಾಯಿತು. ಸಿಂಧೂ ಮತ್ತು ಗಂಗಾನದಿಗಳ ಫಲವತ್ತಾದ ಬಯಲಿನಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳುದಯಿಸಿದವು. ರಾಜ್ಯದಲ್ಲಿ ಶಾಂತಿ ಸ್ಥಾಪಿಸುವುದು ಮತ್ತು ಹೊರಗಿನವರ ಧಾಳಿಗಳಿಂದ ರಾಜ್ಯವನ್ನು ರಕ್ಷಿಸುವುದು ರಾಜನ ಮುಖ್ಯಕರ್ತವ್ಯಗಳಾದುವು. ಆಡಳಿತದಲ್ಲಿ ರಾಜನ ಸಹಾಯಕ್ಕೆ ಪುರೋಹಿತ, ಸೇನಾನಿ ಮತ್ತು ಗ್ರಾಮವೃದ್ಧರಿರುತ್ತಿದ್ದರು. ಪ್ರಜೆಗಳು ತಮ್ಮ ಉತ್ಪತ್ತಿಯ ಒಂದು ಭಾಗವನ್ನು ರಾಜನಿಗೆ ಸಲ್ಲಿಸುತ್ತಿದ್ದರು. ರಾಜ ನಿರಂಕುಶ ಪ್ರಭುವಾಗಿರಲಿಲ್ಲ. ಸಭಾ ಮತ್ತು ಸಮಿತಿ ಎಂಬ ಪ್ರಜಾಮುಖ್ಯರ ಎರಡು ಸಭೆಗಳಿರುತ್ತಿದ್ದುವು. ರಾಜ್ಯದ ಮುಖ್ಯ ಸಮಸ್ಯೆಗಳನ್ನು ಈ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುತ್ತಿತ್ತು. ಪ್ರ.ಶ.ಪೂ.1500ರ ಅನಂತರ ರಾಜರು ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳುತ್ತ ಬಂದರು. ಸಣ್ಣ ಪುಟ್ಟ ರಾಜ್ಯಗಳಿಗೆ ಬದಲಾಗಿ ಕ್ರಮೇಣ ಸಾಮ್ರಾಜ್ಯಗಳು ತಲೆಯೆತ್ತತೊಡಗಿದ್ದುವು. ರಾಜರು ಅಶ್ವಮೇಧ, ರಾಜಸೂಯ ಮುಂತಾದ ಯಾಗಗಳನ್ನು ಆಚರಿಸುತ್ತಿದ್ದರು.

ತಂದೆಗೆ ಕುಟುಂಬದ ಯಜಮಾನ ಸ್ಥಾನವೂ ತಾಯಿಗೆ ಗೌರವದ ಆದರೆ ಗೌಣಸ್ಥಾನವೂ ಇದ್ದುವು. ಆರ್ಯರ ಆರ್ಥಿಕ ಜೀವನ ಸರಳವಾಗಿತ್ತು. ವ್ಯವಸಾಯ ಮತ್ತು ಪಶುಪಾಲನೆ ಮುಖ್ಯ ಕಸಬಾಗಿತ್ತು. ಅವರಿಗೆ ನೇಗಿಲಿನ ಉಪಯೋಗ ತಿಳಿದಿತ್ತು, ಗೋಧಿ, ಬಾರ್ಲಿ, ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುತ್ತಿದ್ದರು. ದನಕರುಗಳೇ

ಅವರ ಅತಿ ಮಹತ್ತ್ವದ ಪ್ರಾಣಿಗಳು. ಅವುಗಳೇ ಅವರ ಸಂಪತ್ತು. ಎಮ್ಮೆ, ಕುರಿ, ಮೇಕೆ, ಕುದುರೆ ಮತ್ತು ನಾಯಿ–ಇವುಗಳು ಅವರ ಇತರ ಸಾಕುಪ್ರಾಣಿಗಳು. ಸಸ್ಯಾಹಾರ ಹಾಗೂ ಮಾಂಸಾಹಾರ ರೂಢಿಯಲ್ಲಿದ್ದುವು. ಅವರು ಹತ್ತಿ ಮತ್ತು ಉಣ್ಣೆಯ ಬಟ್ಟೆಗಳನ್ನೂ ನಯ ಮಾಡಿದ ಚರ್ಮಗಳನ್ನೂ ತೊಡುತ್ತಿದ್ದರೆಂದು ತಿಳಿಯುತ್ತದೆ. ಚಿನ್ನ ಬೆಳ್ಳಿಯ ಒಡವೆಗಳನ್ನೂ ಧರಿಸುತ್ತಿದ್ದರು. ವಿಶೇಷ ದಿನಗಳಲ್ಲಿ ಸುರೆ ಹಾಗೂ ಸೋಮ ಎಂಬ ಮಾದಕ ಪಾನೀಯಗಳನ್ನು ಸೇವಿಸುತ್ತಿದ್ದರು. ನೂಲುವುದು, ನೇಯುವುದು, ನಗನಾಣ್ಯ ತಯಾರಿಕೆ, ಮನೆಕಟ್ಟುವುದು ಮತ್ತು ಲೋಹಗಳ ಕೆಲಸ–ಇವು ಇತರ ಉಪಕಸಬುಗಳಾಗಿದ್ದುವು. ಕ್ರಮೇಣ ವ್ಯಾಪಾರ ಬೆಳೆಯಿತು. ಪ್ರಾರಂಭದಲ್ಲಿ ಹಸು ವಸ್ತುವಿನಿಮಯದ ಮಾನದಂಡವಾಗಿತ್ತು. ಅನಂತರ ನಿಷ್ಕ, ಕಾರ್ಷಪಣ ಮುಂತಾದ ಚಿನ್ನ ಬೆಳ್ಳಿಯ ನಾಣ್ಯಗಳು ಬಳಕೆಗೆ ಬಂದುವು. ಕುದುರೆ ಜೂಜು, ರಥ ಪಂದ್ಯ ಮತ್ತು ಬೇಟೆಯಾಡುವುದು–ಇವು ಆರ್ಯರ ಮುಖ್ಯ ವಿನೋದ ಮತ್ತು ಜೂಜಾಟದ ಮಾರ್ಗಗಳಾಗಿದ್ದುವು.

ವೈದಿಕಯುಗದ ಅಂತ್ಯದ ವೇಳೆಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಾದುವು. ಕಸಬು ಜಾತಿಗೆ ಆಧಾರವಾಗಿ ಕ್ರಮೇಣ ಜಾತಿಪದ್ಧತಿ ವಂಶಪರಂಪರಾನುಗತವಾಗುತ್ತ ಬಂತು.

ಆರ್ಯರು ಸಚೇತನವೆಂದೆಣಿಸಿದ್ದ ಪ್ರಕೃತಿಯ ಅದ್ಭುತ ಶಕ್ತಿಗಳಾದ ಆಕಾಶ, ಸೂರ್ಯ, ಸಿಡಿಲು, ಮಿಂಚು, ಅಗ್ನಿ ಮುಂತಾದ ದೇವತೆಗಳನ್ನು ಆರಾಧಿಸುತ್ತಿದ್ದರು. ಆ ದೇವತೆಗಳು ದಯಾಪೂರ್ಣರೆಂಬ ಭಾವನೆಯಿದ್ದು, ಯಜ್ಞಯಾಗಾದಿಗಳಿಂದ ಅವರ ಕೃಪೆಯನ್ನು ಗಳಿಸಬಹುದೆಂಬ ನಂಬಿಕೆಯಿತ್ತು. ಮೂರ್ತಿಪೂಜೆ ಆಚರಣೆಯಲ್ಲಿರಲಿಲ್ಲ. ದೇವತೆಗಳಿಗೆ ಅಗ್ನಿಯ ಮುಖಾಂತರ ಬಲಿಯನ್ನು ಅರ್ಪಿಸುತ್ತಿದ್ದರು. ಯಜ್ಞಯಾಗಾದಿಗಳಿಗೆ ಸಂಬಂಧಿಸಿದ ವಿಧಿಗಳು ವಿಶದವಾಗಿ ರೂಪಿತವಾಗಿದ್ದುವು. ಕಾಲಕ್ರಮೇಣ ಅನೇಕ ದೇವ ದೇವತೆಗಳನ್ನು ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ಆದರೂ ಸರ್ವಾಂತರ್ಯಾಮಿಯೂ ಸರ್ವಶಕ್ತನೂ ಆದ ಜಗನ್ನಿಯಾಮಕನೊಬ್ಬನೇ ಎಂಬ ಭಾವನೆ ಅವರಲ್ಲಿತ್ತು. ಶವಗಳನ್ನು ಹೂಳುವ ಹೆಚ್ಚಾಗಿ ಸುಡುವ ಪದ್ಧತಿಯಿತ್ತು. ಸ್ವರ್ಗ ನರಕಗಳ ಕಲ್ಪನೆಯಿತ್ತು.

ವೇದಯುಗ ಇತಿಹಾಸಯುಗಕ್ಕೆ ಮುಂದುವರಿದಂತೆ ಅನೇಕ ಮಾರ್ಪಾಟುಗಳಾದುವು. ಆರ್ಯರು ದಕ್ಷಿಣದಲ್ಲೂ ನೆಲೆಸಿದರು. ವರ್ಣಾಶ್ರಮ ಧರ್ಮಪದ್ಧತಿ ಅನೂಚಾನವಾಗಿ ಬೇರೂರಿತು. ಜನಸಂಖ್ಯೆ ವೃದ್ಧಿಸಿತು. ಸಂಪದ್ಭರಿತವಾದ ಪಟ್ಟಣಗಳೂ ಸಾಮ್ರಾಜ್ಯಗಳೂ ಬೆಳೆದುವು. ಸಾಹಿತ್ಯ, ವಿಜ್ಞಾನ ಮತ್ತು ಧಾರ್ಮಿಕ ಗ್ರಂಥಗಳ ನಿರ್ಮಾಣ ಮುಂದುವರಿಯಿತು. ಮೂರ್ತಿಪೂಜೆ ಆಚರಣೆಗೆ ಬಂತು. ಆರ್ಯ ದ್ರಾವಿಡ ಪದ್ಧತಿಗಳ ಸಮ್ಮಿಳನದಿಂದ ಹಿಂದು ಸಂಸ್ಕೃತಿ ಅಖಂಡವಾಗಿ ಬೆಳೆಯಿತು. (ಜಿ.ಆರ್.ಆರ್.)

ಆರ್ಯರ ಧರ್ಮ ಪ್ರಪಂಚದ ಅತಿ ಪ್ರಾಚೀನ ಧರ್ಮಗಳ ಪೈಕಿ ಮುಖ್ಯವೆನಿಸಿದೆ. ಆರ್ಯರ ಧರ್ಮವನ್ನು ತಿಳಿಯಲು ಋಗ್ವೇದ, ಝಂಡವೆಸ್ತ, ಜನಪದ ಸಾಹಿತ್ಯ, ಪೌರಾಣಿಕ ಪರಂಪರೆ, ಪ್ರಾಚೀನ ಸಂಪ್ರದಾಯಗಳು, ಪ್ರಾಚೀನ ಭಾಷೆಗಳು–ಇತ್ಯಾದಿ ಮುಖ್ಯ ಸಾಧನಗಳಾಗಿವೆ. ಆರ್ಯರು ನಾಗರಿಕರೂ ಸುಸಂಸ್ಕೃತರೂ ಆದ ಜನಾಂಗವಾಗಿದ್ದರು. ಅವರಿಗೆ ಜೀವ–ಆತ್ಮ, ಜನ್ಮಾಂತರ, ಸ್ವರ್ಗ–ನರಕ, ಪುಣ್ಯ–ಪಾಪ, ಅದೃಷ್ಟ–ವಿಧಿ – ಇವುಗಳ ಬಗೆಗೆ ನಿರ್ದಿಷ್ಟವಾದ ಕಲ್ಪನೆ ಮತ್ತು ನಂಬಿಕೆಗಳಿದ್ದುವು. ಸತ್ತವರನ್ನು ಹೂಳುವ ಇಲ್ಲವೇ ಸುಡುವ ಪದ್ಧತಿ ಇತ್ತು. ಆತ್ಮ ಅವಿನಾಶಿ ಎಂದು ನಂಬಿದ್ದರಿಂದ ಆತ್ಮನ ಮುಂದಿನ ಜೀವನಕ್ಕೆ ಸಹಾಯಕವಾಗಲಿ ಎಂಬ ನಂಬಿಕೆ ಅವರಿಗಿದ್ದಿರಬೇಕು. ಆದ್ದರಿಂದ ಸತ್ತವನನ್ನು ಹೂಳುವಾಗ ಆತನೊಂದಿಗೆ ಆತನಿಗೆ ಪ್ರಿಯವಾಗಿದ್ದ ವಸ್ತುಗಳನ್ನು ಇಡುತ್ತಿದ್ದರು. ದಹನ ಮಾಡಿದರೆ ಚಿತೆಯೊಂದಿಗೆ ಅವನ್ನು ಸೇರಿಸುತ್ತಿದ್ದರು. ಅಥವಾ ಚಿತಾಭಸ್ಮದೊಂದಿಗೆ ಇರಿಸುತ್ತಿದ್ದರು. ಅನೇಕ ಬಗೆಯ ವ್ರತ, ಹಬ್ಬಗಳನ್ನು ಆಚರಿಸುತ್ತಿದ್ದರು. ಸೂರ್ಯಚಂದ್ರರ ಆಧಾರದ ಮೇಲೆ ಕಾಲಗಣನೆ ಮಾಡುತ್ತಿದ್ದರು. ಅಗ್ನಿ ಮತ್ತು ವರುಣ ದೇವನ ಆರಾಧನೆಯನ್ನು ಮದುವೆ, ಅಗ್ನಿಷ್ಟೋಮಯಾಗ ಇತ್ಯಾದಿ ಅನೇಕ ಸಂದರ್ಭಗಳಲ್ಲಿ ಕಾಣಬಹುದಿತ್ತು. ಯಾವುದೇ ವ್ಯಕ್ತಿ ಅಪರಾಧಕ್ಕೆ ಸಮಾಜ ಹೊಣೆ ಹೊರುತ್ತಿರಲಿಲ್ಲ. ಅಕೃತ್ಯಕ್ಕೆ ಒಳಗಾದವನ ಕುಟುಂಬವೇ ಸೇಡು ತೀರಿಸುತ್ತಿತ್ತು. ಪಾಪಕೃತ್ಯ ಮಾಡಿದವರನ್ನು ಕಲ್ಲೇಟಿನಿಂದ ಶಿಕ್ಷಿಸುತ್ತಿದ್ದುದೂ ಉಂಟು. ಹಂದಿ, ಮೇಕೆ, ಹಸು, ಕುದುರೆ ಮುಂತಾದ ಪ್ರಾಣಿಗಳ ಬಲಿಪೂಜೆ ಬಳಕೆಯಲ್ಲಿತ್ತು. ಪ್ರಾಣಿಬಲಿ ಜೊತೆಗೆ ನರಬಲಿಯೂ ನಡೆಯುತ್ತಿದ್ದುದು ಉಂಟು. ಆಣೆ ಇಡುವ, ಶಪಥ ಮಾಡುವ, ಕಣಿ ಕೇಳುವ, ಕನಸು, ಶುಭಶಕುನ–ಅಪಶಕುನಗಳ ಬಗ್ಗೆ ಅವರದೇ ಆದ ಪದ್ಧತಿ–ಪರಂಪರೆಗಳಿದ್ದುವು. ಆರ್ಯರು ಪಿತೃವರ್ಗದ ಆರಾಧಕರೂ ಪ್ರಕೃತಿಯ ಆರಾಧಕರೂ ಆಗಿದ್ದರು. ಮಾಟ–ಮಂತ್ರ, ಆರಾಧನೆ–ಪೂಜೆ, ಜಪ–ತಪ ಮುಂತಾದ ಕಾರ್ಯಗಳಿಗೆ ಪ್ರತ್ಯೇಕ ಪುರೋಹಿತವರ್ಗವಿತ್ತು. ಮದ್ಯ, ಮಧುಸೇವನೆ, ಮಾಂಸಾಹಾರ ಮುಂತಾದ ಆಹಾರ ಪದ್ಧತಿಗಳೂ ಬಳಕೆಯಲ್ಲಿದ್ದುವು. ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳ ಬಗ್ಗೆ ಪುರಾಣ ಕಲ್ಪನೆಗಳು ಬೆಳೆದಿದ್ದುವು. ಸಾಕಷ್ಟು ಲೈಂಗಿಕ ಸ್ವಾತಂತ್ರ್ಯ ಇರುತ್ತಿತ್ತು. ಸರ್ಪಪೂಜೆ, ಅಗ್ನಿಪೂಜೆ, ಆಕಾಶಪೂಜೆ, ವೃಕ್ಷಪೂಜೆಗಳೂ ಕಲ್ಲು, ಮರ, ಮಣ್ಣುಗಳಲ್ಲಿ ನಿರ್ಮಿಸಿದ ಮೂರ್ತಿಪೂಜೆಯೂ ಆರ್ಯರಲ್ಲಿತ್ತು. ಪೂಜಾಕಾಲದಲ್ಲಿ ನೃತ್ಯ ಸಂಗೀತಗಳು ಜರುಗುತ್ತಿದ್ದುವು. ಜಗತ್ತಿನ ಅತಿ ಪ್ರಾಚೀನತಮ ಧರ್ಮಗಳಲ್ಲಿ ಒಂದಾದ ಆರ್ಯಧರ್ಮ ಇಂದು ಮಿಶ್ರರೂಪದಲ್ಲಿ ಉಳಿದು ಬಂದಿದೆ. ಆರ್ಯಧರ್ಮವನ್ನು ವಿಶೇಷವಾಗಿ ಹಿಂದು ಧರ್ಮದಲ್ಲಿ ಕಾಣಬಹುದು. (ಜಿ.ವಿ.)

**ಆರ್ಯಸಮಾಜ:** ಭಾರತದ ಧಾರ್ಮಿಕ ಪುನರುಜ್ಜೀವನ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದ ಸಂಸ್ಥೆಗಳಲ್ಲಿ ಒಂದು. ಇದರ ಸಂಸ್ಥಾಪಕರು ಪಂಜಾಬಿನ ಉಜ್ವಲ, ಪ್ರತಿಭಾವಂತ ಯತಿ ಸ್ವಾಮಿ ದಯಾನಂದ ಸರಸ್ವತಿ (1824–83). ವೈದಿಕಧರ್ಮವೇ ನಿಜವಾದ ನಿಷ್ಠೆಯೆಂದು ಅವರು ಗ್ರಹಿಸಿ ಅದರ ಪುನರುಜ್ಜೀವನಕ್ಕೆಂದು ಆರ್ಯಸಮಾಜದಲ್ಲಿ 1875 ಏಪ್ರಿಲ್ 10ರಂದು ಮುಂಬಯಿ ನಗರದಲ್ಲಿ ವ್ಯವಸ್ಥೆ ಮಾಡಿದರು. ಎರಡು ವರ್ಷಗಳ ಅನಂತರ ಲಾಹೋರ್‌ನಲ್ಲಿ ಒಂದು ಶಾಖೆ ಪ್ರವರ್ತಿತವಾಯಿತು. ಕಾಲಕ್ರಮದಲ್ಲಿ ಭಾರತದ ಎಲ್ಲ ನಗರಗಳಲ್ಲೂ ಆರ್ಯಸಮಾಜದ ಚಳವಳಿ ಬಲಗೊಂಡಿತು. ಆದರೆ ಪಂಜಾಬ್ ಅದರ ಕೇಂದ್ರ ಸ್ವರೂಪವಾಗಿ ಉಳಿದು ಕಾಂಗಡಿ, ಬೃಂದಾವನ, ಜ್ವಾಲಾಪುರಗಳಲ್ಲಿನ ಗುರುಕುಲಗಳಿಂದ ಅದರ ಪ್ರಶಸ್ತಿ ಹೆಚ್ಚಿತು. ಮಹರ್ಷಿ ದಯಾನಂದ ಸರಸ್ವತಿ ತಮ್ಮ ಜೀವನಪರ್ಯಂತ ಅದರ ಪ್ರಾಣವಾಗಿ ಉಳಿದರು. ಮುಂದೆ ಶ್ರದ್ಧಾನಂದ, ಲಾಲಾ ಲಜಪತರಾಯ್, ಗಂಗಾಪ್ರಸಾದ ಉಪಾಧ್ಯಾಯ, ಲಾಲಾ ಹಂಸರಾಜ, ಗುರುದತ್ತ ಮೊದಲಾದವರ ಬೆಂಬಲದಿಂದ ಈ ಸಂಸ್ಥೆ ಬೆಳೆಯಿತು.

ಸರ್ವಜನರ ಪ್ರಯೋಜನಕ್ಕೆಂದೇ ಈ ಸಮಾಜ ವ್ಯವಸ್ಥಾಪಿತವಾಯಿತು. ಮನುಷ್ಯ ಜೀವನದಲ್ಲಿ ಶೀಲ, ಧರ್ಮ, ಉದ್ಯಮ– ಇವುಗಳಿಗೆ ಸಂಬಂಧಿಸಿದ ಎಲ್ಲ ವಿವರಗಳಲ್ಲಿಯೂ ವೇದವೇ ಮುಖ್ಯ ಪ್ರಮಾಣ. ಶತಪಥಾದಿ ಬ್ರಾಹ್ಮಣಗಳೂ ಶಿಕ್ಷಾದಿ ಷಡಂಗಗಳೂ ನಾಲ್ಕು ಉಪವೇದಗಳೂ ಷಡ್ದರ್ಶನಗಳೂ ವೈದಿಕ ಶಾಖೆಗಳೂ ವೇದಪ್ರಾಮಾಣ್ಯದ ಪರಿಧಿಯಲ್ಲೇ ಸೇರುತ್ತವೆ. ಪ್ರಪಂಚದ ಪ್ರತಿ ರಾಷ್ಟ್ರದ ಮುಖ್ಯನಗರದಲ್ಲೂ ಒಂದೊಂದು ಶಾಖೆಯನ್ನು ವ್ಯವಸ್ಥೆ ಮಾಡಬೇಕು. ಶೀಲವಂತನಾದ ಯಾವ ಮನುಷ್ಯನಾದರೂ ಸಮಾಜದ ಸದಸ್ಯನಾಗಬಹುದು. ಸಮಾಜದ ಸಂನ್ಯಾಸಿ ಸದಸ್ಯರು ತಂತಮ್ಮ ಸಂಸಾರ ನಿರ್ವಹಣೆಗೆ ವ್ಯವಸ್ಥೆಮಾಡಿ ಉಳಿದ ಕಾಲವನ್ನೂ ಶಕ್ತಿಯನ್ನೂ ಸಮಾಜಕ್ಕೆ ಉತ್ಸಾಹದಿಂದ ಸಮರ್ಪಿಸಬೇಕು. ಸಮಾಜ ವಾರಕ್ಕೊಮ್ಮೆ ಸಭೆ ಸೇರತಕ್ಕದ್ದು. ಪ್ರತಿಯೊಬ್ಬ ಸದಸ್ಯನೂ ತನ್ನ ಮಾಸಿಕ ಉತ್ಪಾದನೆಯಲ್ಲಿ ಕನಿಷ್ಠಪಕ್ಷ ನೂರಕ್ಕೆ ಒಂದರಂತೆ ಸಮಾಜಕ್ಕೆ ಕೊಡಬೇಕು. ಹೀಗೆ ಬಂದ ಹಣದಿಂದ ಸಮಾಜ ತನ್ನ ಪ್ರಮುಖಪತ್ರಿಕೆಯನ್ನೂ ಶಾಲೆಯನ್ನೂ (ಆರ್ಯವಿದ್ಯಾಲಯ) ನಡೆಸತಕ್ಕದ್ದು. ಸದಸ್ಯರು ಏಕದೇವವಾದಿಗಳು, ದೇವರು ನಿರಾಕಾರ, ಸರ್ವಶಕ್ತ, ಅಜಾತ, ಅನಂತ, ಅವಿನಾಶಿ, ಅದ್ವಿತೀಯ, ದಯಾಳು, ಜಗನ್ನಿಯಾಮಕ, ಸ್ವತಂತ್ರ ಪರಿಶುದ್ಧ, ಚತುರ್ವರ್ಗ ಫಲದಾಯಕ, ಮಾತಾಪಿತೃಸ್ವರೂಪ, ಅವನೊಬ್ಬನೇ ಪೂಜಾರ್ಹ. ಸ್ತುತಿಯಿಂದ, ಪ್ರಾರ್ಥನೆಯಿಂದ, ಭಕ್ತಿಯಿಂದ ಅವನನ್ನು ಆರಾಧಿಸಬೇಕು. ಆರ್ಯಸಮಾಜದವರು ವಿಗ್ರಹಾರಾಧನೆಯನ್ನು ಅನುಮೋದಿಸುವುದಿಲ್ಲ. ನಿರಾಕಾರನಾದ ಭಗವಂತನನ್ನೇ ಅಮರು ನ ಸತ್ಯ ಪ್ರತಿಮಾಭವತಿ–ಎನ್ನುವ ವೇದವಾಕ್ಯಕ್ಕೆ ವಿಷಯವನ್ನಾಗಿ ಗ್ರಹಿಸುತ್ತಾರೆ. ವೈದಿಕಸಂಸ್ಕಾರಗಳಲ್ಲಿ ಇವರಿಗೆ ಅಚಲವಾದ ಶ್ರದ್ಧೆ. ಗರ್ಭದಾನದಿಂದ ಹಿಡಿದು ಅತ್ಯೇಷ್ಟಿಯವರೆಗೆ ಎಲ್ಲ ಸಂಸ್ಕಾರಗಳನ್ನೂ ವೈದಿಕಮಂತ್ರಗಳಿಂದಲೇ ನಡೆಸಬೇಕೆಂದು ಇವರ ಆಗ್ರಹ. ವೇದಗಳಲ್ಲಿ ಮತ್ತು ಇತರ ಆರ್ಷಗ್ರಂಥಗಳಲ್ಲಿ ಅಡಗಿರುವ ತತ್ತ್ವವನ್ನು ಎಲ್ಲ ಶಾಲೆಗಳಲ್ಲೂ ಬಾಲಕ–ಬಾಲಕಿಯರಿಗೆ ಕಲಿಸಬೇಕೆಂದು ಇವರ ಕಾತರ. ಪ್ರಾಪಂಚಿಕ ವ್ಯವಹಾರದಲ್ಲೂ ಪಾರಮಾರ್ಥಿಕ ವಿಚಾರಗಳಲ್ಲೂ ಅಭ್ಯುದಯವನ್ನು ಸಾಧಿಸುವುದು ಆರ್ಯಸಮಾಜದ ಉದ್ದೇಶ. ಈ ದೃಷ್ಟಿಯಿಂದ ಎಲ್ಲ ಕೆಲಸಗಳನ್ನು ಮಾಡುವಾಗಲೂ ಧಾರ್ಮಿಕ ಅಥವಾ ಆಧ್ಯಾತ್ಮಿಕ ಮನೋವೃತ್ತಿಯಿಂದಲೇ ಮಾಡಬೇಕೆಂದು ಆರ್ಯಸಮಾಜದ ವಿಧಿ. ಮೌಢ್ಯವನ್ನು ತೊಲಗಿಸಿ ಜನಕ್ಕೆ ಜ್ಞಾನದಾನ ಮಾಡಬೇಕೆಂಬ ಹಂಬಲದೊಂದಿಗೆ ಜನ ಸತ್ಯವನ್ನೇ ನಿಷ್ಠುರವಾಗಿ ಅನ್ವೇಷಣೆ ಮಾಡಬೇಕೆಂದೂ ಅಸತ್ಯವನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕೆಂದೂ ದಯಾನಂದರು ಸಾರಿ ಅದನ್ನು ಆರ್ಯಸಮಾಜದ ವಿಧಿಗಳಲ್ಲಿ ಸೇರಿಸಿದರು. ಈ ನೆಲೆಯಲ್ಲಿ ಇವರು ಸಂಪ್ರದಾಯದಿಂದ ಬಂದ ಪುರಾಣಗಳನ್ನೂ ತಂತ್ರಗಳನ್ನೂ ಅಸಾಧುವೆಂದು ತಿರಸ್ಕರಿಸಿದರು. ಪುರಾಣಗಳೆಲ್ಲವೂ ಕಟ್ಟುಕಥೆ, ಪುರಾಣಕಾರರು ಧೂರ್ತರು ಎಂದು ಇವರ ವಿಶ್ವಾಸ. ಇವರ ದೃಷ್ಟಿಯಲ್ಲಿ ಶುದ್ಧವೈದಿಕ ಸಿದ್ಧಾಂತವೇ ಪ್ರಮಾಣ, ಉಳಿದುದೆಲ್ಲ ಅನರ್ಹ.

ಯಾವ ವ್ಯಕ್ತಿಯೂ ತನ್ನ ವೈಯಕ್ತಿಕ ಪ್ರಗತಿಯನ್ನೇ ಪುರುಷಾರ್ಥವೆಂದು ಬಗೆಯದೆ, ಎಲ್ಲರ ಅಭ್ಯುದಯದ ಸಾಧನೆಯಿಂದ ತನ್ನ ಸಮಾಧಾನವನ್ನು ಪಡೆದುಕೊಳ್ಳಬೇಕು ಎನ್ನುವ ವಿಧಿಯಿದೆ. ಸರ್ವರ ಹಿತ ಸುಖಕ್ಕೆ ನೆರವಾಗುವಂಥ ಸಾಂಘಿಕ ಕಟ್ಟಳೆಗಳನ್ನು ಅವಶ್ಯವಾಗಿ ಅನುಸರಿಸಬೇಕು. ಆರ್ಯಸಮಾಜ ಇಡೀ ಮಾನವ ಸಮಾಜದ ಭೌತಿಕ, ಸಾಮಾಜಿಕ, ಆಧ್ಯಾತ್ಮಿಕ ಪ್ರಗತಿಗೆ ಸಾಧನವಾಗಬೇಕು. ಆರ್ಯಸಮಾಜದ ಸದಸ್ಯ ಆರ್ಯನೆನಿಸಿಕೊಳ್ಳುತ್ತಾನೆ. ಆರ್ಯರೆಲ್ಲರೂ ಸಮಾನರು. ದಯಾನಂದರು ಸಮಾಜದ ಸಾಮಾನ್ಯ ಸದಸ್ಯರಾಗಿಯೇ ಉಳಿದರಲ್ಲದೆ ಅದರ ಅಧ್ಯಕ್ಷರಾಗಲು ಒಪ್ಪಲಿಲ್ಲ. ಅವರ ಭಾವಚಿತ್ರವನ್ನು ಯಾವ ಆರ್ಯಸಮಾಜದ ಭವನದಲ್ಲೂ ಹಾಕಬಾರದೆಂದು ಅವರು ಸೂಚನೆಯಿತ್ತರು. ತಾವು ಸಭಾಭವನಕ್ಕೆ ಬಂದಾಗ ನೆರೆದಿದ್ದ ಜನ ಎದ್ದುನಿಲ್ಲುವುದನ್ನೂ ನಿಷೇಧಿಸಿದರು. ಭಗವಂತ ನೊಬ್ಬನೇ ಸರ್ವೋತ್ತಮ. ಉಳಿದ ಯಾವುದೂ ಅವನಿಗೆ ಸಮನಾಗಲಾರದು. ಎಲ್ಲ ಜನರೂ ಸಮಾನರು ಎಂಬುದು ಅವರ ಉಪದೇಶ.

ಮೂಢನಂಬಿಕೆಗಳನ್ನು ಖಂಡಿಸುವುದರಲ್ಲಿ ಆರ್ಯಸಮಾಜ ಸಿದ್ಧವಾಯಿತು. ಸಮಾಜ ಸುಧಾರಣೆಯೂ ಇದರಿಂದ ಆಯಿತು. ಆ ಕಾಲಕ್ಕೆ ಬಲಗೊಳ್ಳುತ್ತಿದ್ದ ಕ್ರೈಸ್ತ ಪ್ರಚಾರಕರಿಗೆ ಆರ್ಯಸಮಾಜದ ಸ್ಥಾಪನೆಯಿಂದ ಆತಂಕವುಂಟಾಯಿತು. ಕ್ರೈಸ್ತರು ಪುರಾಣಗಳಿಂದ

ಬಲಗೊಂಡ ನಂಬಿಕೆಗಳನ್ನೂ ಕಲ್ಪನೆಗಳನ್ನೂ ಹಿಂದುಧರ್ಮದ ಹುಳುಕೆಂದು ಎತ್ತಿ ತೋರಿಸುತ್ತಿದ್ದರು. ಆದ್ದರಿಂದ ಅವರ ಪ್ರಚಾರಕ್ಕೆ ನೆರವಾಗುತ್ತಿತ್ತು. ಆದರೆ ದಯಾನಂದರು ಇವು ನಿಜವಾದ ಹಿಂದುಧರ್ಮವಲ್ಲವೆಂದೂ ವೈದಿಕನಿಷ್ಠೆಯಲ್ಲಿ ಪುರಾಣಗಳು ಅಸಂಬದ್ಧವೆಂದೂ ತಾವೇ ಎತ್ತಿ ತೋರಿಸಿದುದರಿಂದ ಅವರ ಬಾಯಿಕಟ್ಟಿತು. ಮಹಮ್ಮದೀಯರ ಪ್ರಚಾರವೂ ಹೀಗೆಯೇ ಬಲಗೊಂಡಿತ್ತು. ಹಿಂದುಗಳಾಗಿದ್ದವರು ಬಲವಂತದಿಂದ ಮುಸಲ್ಮಾನರಾಗಿ ಪರಿವರ್ತಿತರಾಗಿದ್ದು ಅಂಥವರನ್ನು ಮತ್ತೆ ಹಿಂದು ಸಮಾಜಕ್ಕೆ ಸೇರಿಸಿಕೊಳ್ಳಲು ಯಾವ ಕ್ರಮವೂ ಇರದಿದ್ದಾಗ, ಆರ್ಯಸಮಾಜ ಶುದ್ಧೀಕರಣದ ವಿಧಿಯನ್ನು ಏರ್ಪಡಿಸಿತು. ಇದರಿಂದ ಉತ್ತರ ಭಾರತದಲ್ಲಿ ಮಹಮ್ಮದೀಯರ ಮತ್ತು ಕ್ರೈಸ್ತರ ಮತಾಂತರ ಕಾರ್ಯಗಳು ಸಾಕಷ್ಟು ಕುಂಠಿತವಾದವು. ಈ ಸಮಾಜದಿಂದ ದೇಶದಲ್ಲಿ ರಾಷ್ಟ್ರಭಾವನೆಯೂ ಬಲಗೊಂಡಿತು.

ಗುರುಕುಲಗಳಲ್ಲಿ ಆರ್ಯಸಮಾಜ ಏರ್ಪಡಿಸಿದ ವಿದ್ಯಾಭ್ಯಾಸಕ್ರಮ ಮಾದರಿಯಾಗಿತ್ತು. ಹರಿಜನೋದ್ಧಾರಕಾರ್ಯ ಹೊಸತಾಗಿದ್ದ ಆ ಕಾಲದಲ್ಲಿ ಹರಿಜನ ಬಾಲಕರು ಗುರುಕುಲಗಳಲ್ಲಿ ವ್ಯಾಸಂಗಮಾಡುತ್ತಿದ್ದರು. ಪ್ರಾಥಮಿಕ ಶಾಲೆಯಿಂದ ಕಾಲೇಜಿನವರೆಗಿನ ವಿವಿಧಬಗೆಯ ಶಾಲೆಗಳು ಈ ಸಮಾಜದ ಹೆಸರಿನಲ್ಲಿ ನಡೆಯುತ್ತಿವೆ. ಅನಾಥಾಲಯಗಳು, ವನಿತಾಶ್ರಮಗಳು, ಚಿಕಿತ್ಸಾಲಯಗಳು, ಅತಿಥಿಭವನಗಳು, ವ್ಯಾಯಾಮಶಾಲೆಗಳು, ಮುದ್ರಣಾಲಯಗಳು, ಪುಸ್ತಕ ಭಂಡಾರಗಳು, ಪತ್ರಿಕೆಗಳು–ಬಹು ಸಂಖ್ಯೆಯಲ್ಲಿ ಸಮಾಜದ ವತಿಯಿಂದ ಯಶಸ್ವಿಯಾಗಿ ನಡೆಯುತ್ತಿವೆ. ಆರ್ಯಸಮಾಜದ ಸಾಹಿತ್ಯವೂ ವಿಸ್ತಾರವಾಗಿ ಬೆಳೆದಿದೆ. ವೇದ ವೇದಾಂಗಗಳನ್ನು ಭಾರತೀಯ ದೇಶಭಾಷೆಯಲ್ಲಿ ತಂದ ಮೊದಲ ಕೀರ್ತಿ ಸಮಾಜಕ್ಕೆ ಸೇರುತ್ತದೆ. ಇತಿಹಾಸ, ಗಣಿತ, ವಿಜ್ಞಾನ ಮುಂತಾದವನ್ನೂ ಸಮಾಜ ಕಡೆಗಣಿಸಿಲ್ಲ. ಸ್ವಾತಂತ್ರ್ಯ ಸಮರದಲ್ಲಿ ಭಾರತದ ಇತರರೊಂದಿಗೆ ಈ ಸಮಾಜ ಕೈ ಜೋಡಿಸಿ ಹೋರಾಡಿದೆ. ಭಾರತದಲ್ಲಿ ಸಮಾಜಗಳೂ ಸು.400 ಪ್ರತಿನಿಧಿಸಭೆಗಳೂ ಇವೆ. ಹೊರದೇಶಗಳಲ್ಲೂ ನೆಟಾಲ್, ನೈರೋಬಿ, ಮಾರಿಷಸ್, ಫಿಜಿ, ಸುರಿನಾಮ್ ಮುಂತಾದ ಸ್ಥಳಗಳಲ್ಲಿ ಆರ್ಯಸಮಾಜದ ಶಾಖೆಗಳಿವೆ. ಅಂತಾರಾಷ್ಟ್ರೀಯ ಪ್ರತಿನಿಧಿಗಳನ್ನೊಳಗೊಂಡ ಸಭೆ ದೆಹಲಿಯಲ್ಲಿದೆ.

(ಎಸ್.ಕೆ.ಆರ್.;ಬಿ.ಎಸ್.ಪಿ.;ಎಸ್.ಎಂ.ಎಚ್.)

**ಆಲಂಗೀರ್‌ಪುರ:** ದೆಹಲಿಯಿಂದ 45ಕಿಮೀ ದೂರದಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. 1958–59ರಲ್ಲಿ ನಡೆಸಿದ ಉತ್ಖನನದಲ್ಲಿ ಹರಪ್ಪ ಸಂಸ್ಕೃತಿಯ ಪದರಗಳ ಮೇಲೆ ಅನುಕ್ರಮವಾಗಿ ಚಿತ್ರಿತ ಬೂದುಬಣ್ಣದ ಮಡಕೆಗಳ ಪದರಗಳೂ ಔತ್ತರೇಯ ಮೆರುಗಿನ ಕಪ್ಪುಪಾತ್ರೆಯ ಪದರಗಳೂ ಶುಂಗರ ಕಾಲದ ಅವಶೇಷಗಳೂ ಕಂಡುಬಂದಿವೆ. ಇವು 4000 ವರ್ಷಗಳ ಹಿಂದಿನಿಂದ ಗಂಗಾ ಬಯಲಿನಲ್ಲಿ ಪಸರಿಸಿದ್ದ ವಿವಿಧ ಸಂಸ್ಕೃತಿಗಳ ಬಗ್ಗೆ ಮಾಹಿತಿ ದೊರಕಿಸಿಕೊಡುತ್ತವೆ. (ಎಸ್.ಎನ್.)

**ಆಲ್ಪ್ಸ್ ಪರ್ವತದಲ್ಲಿ 5000 ವರ್ಷದ ಮಾನವ:** 1991 ಸೆಪ್ಟೆಂಬರ್‌ನಲ್ಲಿ ಐರಕ್ ಮತ್ತು ಎಲ್ಮಟ್ ಸೈಮನ್ ಎಂಬುವರು ಇಟಲಿ ಮತ್ತು ಆಸ್ಟ್ರಿಯ ಸರಹದ್ದಿನಲ್ಲಿರುವ ಹಿಮಾಚ್ಛಾದಿತ ಆಲ್ಪ್ಸ್ ಪರ್ವತದಲ್ಲಿ ತಿರುಗಾಡುತ್ತಿರುವಾಗ ಸತ್ತ ಪರ್ವತಾರೋಹಿಯೊಬ್ಬನ ತಲೆ ಕಾಣಿಸಿತು. ಕೊನಾನ್ ಸ್ಪಿರ್, ಆ ವ್ಯಕ್ತಿಯು ಪರ್ವತಾರೋಹಣಕ್ಕೆ ಉಪಯೋಗಿಸಿದ ಕೈಗುದ್ದಲಿಯನ್ನು, ಶವವನ್ನು ಮತ್ತು ಇತರ ಉಪಕರಣಗಳನ್ನು ಪರೀಕ್ಷಿಸಿ ಇವೆಲ್ಲವೂ ಆದಿ ಕಂಚಿನಯುಗದ ಇಲ್ಲವೆ ಉತ್ತರ ಕಾಲೀನ ನವ ಶಿಲಾಯುಗದ ಕಾಲದವೆಂದು ಗುರುತಿಸಿದ್ದಾನೆ. ಕುತೂಹಲದ ಸಂಗತಿ ಎಂದರೆ ಆ ವ್ಯಕ್ತಿ ಹಾಕಿದ್ದ ತುಪ್ಪಳದ ಟೋಪಿ, ಧರಿಸಿದ್ದ ಉಡುಪು ಹಾಗೂ ಮರದ ಕಾವಿಗೆ ಸಿಕ್ಕಿಸಿದ ತಾಮ್ರದ ಕೊಡಲಿ, ಬಾಣಗಳಿಂದ ತುಂಬಿದ ಬತ್ತಳಿಕೆ, ಸೊಂಟದಲ್ಲಿ ಕಠಾರಿ ಮತ್ತು ಒರೆ ಮೊದಲಾದವು ಕೂಡ ದೊರೆತಿವೆ. ಉಡುಪನ್ನು ಸೂಜಿಯಿಂದ ಹೊಲಿಯಲಾಗಿತ್ತು. ಚರ್ಮದ ಚಪ್ಪಲಿ, ಸೊಂಟದ ಚರ್ಮದ ಪಟ್ಟಿ ಇವೆಲ್ಲಾ ಸುಸ್ಥಿತಿಯಲ್ಲಿದ್ದವು. ಧರಿಸಿದ ವಸ್ತ್ರದೊಳಗೆ ಜವೆ ಮತ್ತು ಗೋದಿ ಕಾಳುಗಳಿದ್ದವು. ಈ ಎಲ್ಲ ಕಾರಣಗಳಿಂದ ಸ್ಪಿಡ್ಲರ್ ಈ ವ್ಯಕ್ತಿ ಕುರುಬನಾಗಿದ್ದಿರಬೇಕೆಂದು ಮತ್ತು ಅವನ ನಾಲ್ಕು ಪಕ್ಕೆಲುಬುಗಳು ಮುರಿದಿರುವುದರಿಂದ ಇವನು ಹೊಡೆದಾಟದಲ್ಲಿ ಸಿಲುಕಿ ತಪ್ಪಿಸಿಕೊಂಡು ಓಡಿ ಹೋಗುತ್ತಿರುವ ಸಂದರ್ಭದಲ್ಲಿ ಬಳಲಿ ತನ್ನ ಎಲ್ಲ ವಸ್ತುಗಳೊಂದಿಗೆ ಅಲ್ಲಿಯೇ ಅಸುನೀಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಶೋಧನೆಯಿಂದ ಆ ಕಾಲದ ಒಂದು ಸಮುದಾಯದ ವ್ಯಕ್ತಿಯ ವೇಷಭೂಷಣ, ಉಪಯೋಗಿಸುತ್ತಿದ್ದ ಉಪಕರಣಗಳು ಮುಂತಾದವುಗಳ ಬಗೆಗೆ ನೈಜ ಮಾಹಿತಿ ಪಡೆಯಲು ಸಾಧ್ಯವಾಗಿದೆ. (ಎ.ಎಸ್.; ಎನ್.ಎಲ್.)

**ಆಲ್ಬುಕರ್ಕ್, ಆಫೊನ್ಸೊ ಡಿ:** 1453–1515. ಭಾರತದಲ್ಲಿ ಪೋರ್ಚುಗಲ್ ವಸಾಹತಿನ ಆಡಳಿತಗಾರ. ಶ್ರೇಷ್ಠ ನೌಕಾನಾಯಕ. ಜನನ ಲಿಸ್ಬನ್‌ನಲ್ಲಿ. 5ನೆಯ ಆಫೊನ್ಸೊ ಡಿ ನ ಆಸ್ಥಾನದಲ್ಲಿ ಶಿಕ್ಷಣ ಪಡೆದ. ಆಫೊನ್ಸೊ ಡಿ ಸ್ಪೇನಿನ ಮೇಲೆ ಧಾಳಿ ಮಾಡಿದಾಗ (1476) ಅದರಲ್ಲಿ ಭಾಗವಹಿಸಿದ. ಕೊಚ್ಚಿಯ ರಾಜನೊಂದಿಗೆ ಸ್ನೇಹ ಸಂಪಾದಿಸಲು ಮತ್ತು ಅಲ್ಲಿ ಕೋಟೆ ಕಟ್ಟಲು ಪೋರ್ಚುಗಲ್ಲಿನ ರಾಜ ಇವನನ್ನು ಭಾರತಕ್ಕೆ ಕಳಿಸಿಕೊಟ್ಟ (1503). 1504ರಲ್ಲಿ ಲಿಸ್ಬನ್ನಿಗೆ ಮರಳಿದ. ಆದರೆ ಪುನಃ 1506ರಲ್ಲಿ ಇವನನ್ನು ಕೆಂಪುಸಮುದ್ರಕ್ಕೆ ಬರುವ ಇಲ್ಲವೇ ಹೊರಡುವ ಹಡಗುಗಳ ಮೇಲೆ ಧಾಳಿಮಾಡಬೇಕೆಂಬ ಆದೇಶ ನೀಡಿ, ಪೂರ್ವದ ದಂಡಯಾತ್ರೆಗೆ ಕಳುಹಲಾಯಿತು. 1506–08ರಲ್ಲಿ ಮೆಡಗಾಸ್ಕರ್ ಮತ್ತು ಮೋಜಾಂಬಿಕ್‌ಗಳಲ್ಲಿ ಶೋಧನೆ ನಡೆಸಿದ. ಸೊಕೊಟ್ರಾದಲ್ಲಿ ಕೋಟೆ ಕಟ್ಟಿಸಿದ. ಪರ್ಷಿಯನ್ ಕೊಲ್ಲಿಯ ಪ್ರವೇಶದ್ವಾರದಲ್ಲಿ, ಓರ್ಮಜ್ ಮೇಲೆ ಧಾಳಿಮಾಡಿ ವಶಪಡಿಸಿಕೊಂಡ. ಆದರೆ ದಂಡೆಗೆ ಬರುವ ಹಡಗುಗಳನ್ನು ದೋಚುವುದರಲ್ಲಿಯೇ ಆಸಕ್ತಿಯಿದ್ದ ಇವನ ಸಹಚರರ ಬಲವಂತದಿಂದ ಓರ್ಮಜನ್ನು ಕೆಲಕಾಲ ಬಿಡಬೇಕಾಯಿತು. 1508 ಡಿಸೆಂಬರಿನಲ್ಲಿ ಭಾರತಕ್ಕೆ ಬಂದ. 1509ರಲ್ಲಿ ಅಲ್ಮೆಡಾನ ಉತ್ತರಾಧಿಕಾರಿಯಾಗಿ ಗವರ್ನರ್ ಹುದ್ದೆ ಸ್ವೀಕರಿಸಿ ಗೋವೆಯ ಮೇಲೆ ಧಾಳಿಮಾಡಿದ (ಮಾರ್ಚ್ 1510). ವಿಜಯನಗರದರಸ ಶ್ರೀ ಕೃಷ್ಣದೇವರಾಯನ ಸಹಾಯದಿಂದ ನವೆಂಬರ್‌ನಲ್ಲಿ ಅದನ್ನು ಸಂಪೂರ್ಣವಾಗಿ ವಶಪಡಿಸಿಕೊಂಡ. ಲಿಸ್ಬನ್ನಿನ ಮಾದರಿಯಲ್ಲಿ ಗೋವದಲ್ಲೊಂದು ಸೆನೆಟ್ ಸ್ಥಾಪಿಸಿದ. ಪೌರಸ್ತ್ಯ ರಾಷ್ಟ್ರಗಳಲ್ಲಿಯೇ ಇದೊಂದು ಹೊಸ ಪ್ರಯೋಗ. ಆರ್ಥಿಕ ಮತ್ತು ನ್ಯಾಯಾಡಳಿತಗಳನ್ನು ಸ್ಥಳೀಯ ಅಧಿಕಾರಿಗಳಿಗೆ ವಹಿಸಿಕೊಟ್ಟ. ಮಲಬಾರ್ ದಂಡೆಗುಂಟ ವ್ಯಾಪಾರದ ಹತೋಟಿ ಪೋರ್ಚುಗೀಸರ ಕೈಗೆ ಬಂತು. 6 ತಿಂಗಳ ಅನಂತರ ಮಲಾಕ್ಕಾ ಮೇಲೆ ಧಾಳಿ ಮಾಡಿ, ಕೈವಶಪಡಿಸಿಕೊಂಡ. ಅಲ್ಲೊಂದು ಕೋಟೆಯನ್ನು ನಿರ್ಮಿಸಿದನಲ್ಲದೆ ಸ್ಥಳೀಯರ ಆಡಳಿತವನ್ನು ಸಂಘಟಿಸಿದ. ಪೆಗು, ಕೊಚ್ಚಿ, ಚೀನ, ಸಯಾಮ್ ಮತ್ತು ಜಾವಗಳೊಂದಿಗೆ ಮೈತ್ರಿಯುತ ಸಂಬಂಧ ಸ್ಥಾಪಿಸಿದ. ಗೋವ, ಕೊಚ್ಚಿ, ಕಣ್ಣಾನೂರುಗಳಲ್ಲಿ ಆಸ್ಪತ್ರೆ ಪ್ರಾರಂಭಿಸಿದ. ಕೆಲಕಾಲದ ಅನಂತರ ಓರ್ಮಜ್‌ಗೆ ಹಿಂತಿರುಗಿದ. ಈ ಪಟ್ಟಣವನ್ನು ಅಂಕಿತದಲ್ಲಿಟ್ಟುಕೊಂಡಿದ್ದುದರಿಂದ ಪರ್ಷಿಯನ್ ಕೊಲ್ಲಿಯ ಸಮೃದ್ಧ ವ್ಯಾಪಾರದಮೇಲೆ ಪ್ರಭುತ್ವ ಸ್ಥಾಪಿಸುವುದು ಪೋರ್ಚುಗೀಸರಿಗೆ ಸಾಧ್ಯವಾಯಿತು. ಏಡನ್‌ಮೇಲೆ ಈತ ಮಾಡಿದ ಧಾಳಿ (1513) ಯಶಸ್ವಿಯಾಗಲಿಲ್ಲ. ವಸಾಹತು ವಿಸ್ತರಿಸುದದಲ್ಲದೇ ನೈಲ್ ನದಿಯನ್ನು ಕೆಂಪು ಸಮುದ್ರಕ್ಕೆ ತಿರುಗಿಸಿ ಈಜಿಪ್ಟನ್ನು ಒಂಟಿಯಾಗಿ ಮಾಡುವುದು, ಮದೀನದಿಂದ ಮಹಮ್ಮದ್ ಪೈಗಂಬರರ ಉಳಿದ ಅವಶೇಷಗಳನ್ನು ಸ್ಥಳಾಂತರಿಸುವುದು ಮುಂತಾದ ಯೋಜನೆಗಳನ್ನು ಪುರಸ್ಕರಿಸಿದ. ಇವನಿಂದಲೇ ಪೂರ್ವದಲ್ಲಿ ಪೋರ್ಚುಗೀಸರ ವಸಾಹತು ಸ್ಥಾಪನೆ ಸಾಧ್ಯವಾಯಿತು. ಮುಸ್ಲಿಮರಿಗೆ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಈ ಮೊದಲಿದ್ದ ಏಕಸ್ವಾಮ್ಯ ಕೊನೆಗೊಂಡಿತು. ಆಸ್ಥಾನದಲ್ಲಿನ ಒಳಸಂಚು, ವೈಯಕ್ತಿಕ ವಿರೋಧಿಗಳು ಮೇಲಧಿಕಾರದಲ್ಲಿದ್ದುದು ಇವನ ಅವನತಿಗೆ ಕಾರಣಗಳಾದುವು. ಓರ್ಮಜ್‌ನಿಂದ ಭಾರತಕ್ಕೆ ಮರಳುವಾಗ ಇವನ ಆರೋಗ್ಯ ಕ್ಷೀಣಿಸಿತು. ಗೋವದಲ್ಲಿ ನಿಧನಹೊಂದಿದ. 1566ರಲ್ಲಿ ಇವನ ಮೂಳೆಗಳನ್ನು ಪೋರ್ಚುಗಲ್‌ಗೆ ಒಯ್ಯಲಾಯಿತು. ಈತನ ಮೂಳೆಗಳು ಗೋವದಲ್ಲಿರುವವರೆಗೂ ಪೋರ್ಚುಗೀಸ್ ಸಾಮ್ರಾಜ್ಯ ಗೋವದಲ್ಲಿ ಸುಭದ್ರವಾಗಿತ್ತೆಂಬ ನಂಬಿಕೆಯೂ ರೂಢಿಯಲ್ಲಿತ್ತು. (ಎಸ್.ಎಸ್.ಐ.)

**ಆಲ್ಬೆರೂನಿ:** ಹತ್ತನೆಯ ಶತಮಾನದಲ್ಲಿ ಭಾರತಕ್ಕೆ ಬಂದ ಪ್ರಸಿದ್ಧ ಅರಬ್ಬೀ ಪಂಡಿತ, ತತ್ತ್ವಶಾಸ್ತ್ರಜ್ಞ. ಸಿಂಧ್ ಪ್ರಾಂತದ ಬಿರೊನ್‌ನಲ್ಲಿ ಬೆಳೆದುದರಿಂದ ಬೆರೂನಿ ಎಂಬ ಹೆಸರು ಬಂತು. ಘಜ್ನಿ ಮಹಮದ್ ಕೀವ್ ಪ್ರಾಂತವನ್ನು ವಶಪಡಿಸಿಕೊಂಡಾಗ, ಸೆರೆಯಾದವರಲ್ಲಿ ಇವನೂ ಒಬ್ಬ. ಸೆರೆಯಿಂದ ಪಾರಾಗಿ ತನ್ನ ಮೇಧಾಶಕ್ತಿಯಿಂದ ಆಸ್ಥಾನದಲ್ಲಿ ಜ್ಯೋತಿಷಿಯಾಗಿದ್ದಿರಬಹುದೆಂದು ವಿದ್ವಾಂಸರ ಊಹೆ. ಇವನ ಗ್ರಂಥಗಳಲ್ಲಿ ಘಜ್ನಿ ಮಹಮ್ಮದನ ಮಗನೂ ಉತ್ತರಾಧಿಕಾರಿಯೂ ಆದ ಮಸೂದನ ಪ್ರಶಂಸೆಯಿದೆ. ಭಾರತದ ನಾನಾ ಪ್ರಾಂತಗಳಲ್ಲಿ 1010–44 ನಡುವೆ ಪ್ರವಾಸ ಕೈಗೊಂಡು ಅನೇಕ ಜನರ ಸಂಪರ್ಕ ಹೊಂದಿದ್ದ. ಸಂಸ್ಕೃತ ಭಾಷೆ ಅಭ್ಯಾಸಿಸಿ, ಪ್ರಾಚೀನ ಗ್ರಂಥಗಳನ್ನು ವ್ಯಾಸಂಗಮಾಡಿ ಇಂಡಿಯ ಎಂಬ ಗ್ರಂಥ ರಚಿಸಿದ. ಇದರಲ್ಲಿ ಕಪಿಲಮಹರ್ಷಿಯ ಸಾಂಖ್ಯ, ಪತಂಜಲಿ ಯೋಗಸೂತ್ರ, ವ್ಯಾಸರ ಭಗವದ್ಗೀತೆ, ವಿಷ್ಣು, ವಾಯು, ಮತ್ಸ್ಯ ಮುಂತಾದ ಪುರಾಣಗಳು, ಪುಲಿಷ ಸಿದ್ಧಾಂತ, ಧರ್ಮಸಿದ್ಧಾಂತ ಮುಂತಾದ ಜ್ಯೋತಿಷ್ಯ ಗ್ರಂಥಗಳು, ಮತ್ತು ರಾಮಾಯಣ–ಮಹಾಭಾರತಗಳಿಂದ ಆಯ್ದ ಹೇಳಿಕೆಗಳನ್ನು ಉದ್ಧರಿಸಲಾಗಿದೆ. ಈ ಗ್ರಂಥದಲ್ಲಿ ಭಾರತದ ಮತ, ತತ್ತ್ವ, ಸಾಹಿತ್ಯ, ಜ್ಯೋತಿಷ್ಯ, ನ್ಯಾಯ, ಧರ್ಮ ಮತ್ತು ಸಾಮಾಜಿಕ ನಡೆನುಡಿಗಳ ಜ್ವಲಂತ ಚಿತ್ರಣವಿದೆ. ಹೊರನಾಡಿನಿಂದ ಬಂದು ನಮ್ಮ ದೇಶದ ಮತ, ತತ್ತ್ವ, ವಿಜ್ಞಾನಗಳನ್ನು ಅಭ್ಯಸಿಸಲು ಈತ ಮಾಡಿದ ಪ್ರಯತ್ನ ಸ್ತುತ್ಯವಾದುದು. ಚೀನದ ಯಾತ್ರಿಕರನ್ನು ಬಿಟ್ಟರೆ ಇಂಥ ಪ್ರಯತ್ನ ಮಾಡಿದವರಲ್ಲಿ ಈತನೇ ಮೊದಲಿಗ. ಹೇರಳ ಹಣಸುರಿದು, ದೊರೆಯಬಹುದಾದ ಸಂಸ್ಕೃತ ಗ್ರಂಥಗಳನ್ನೆಲ್ಲ ಸಂಗ್ರಹಿಸಿದ. ತನ್ನ ಗ್ರಂಥವನ್ನು ನಿರ್ದಿಷ್ಟವಾಗಿ ರಚಿಸಲು ಪಂಡಿತರನ್ನು ಕರೆಸಿಕೊಂಡು, ಅವರ ನೆರವಿನಿಂದ ಅವನ್ನು ಅಭ್ಯಾಸ ಮಾಡಿದ. ಹಿಂದುಗಳ ತತ್ತ್ವಜ್ಞಾನ, ಗಣಿತಶಾಸ್ತ್ರಗಳ ತಜ್ಞತೆಯನ್ನು ಈತ ಪ್ರಶಂಸಿಸಿದನಾದರೂ ಅವರ ಅತಿ ಚಾತುರ್ಯ, ಸಂಕುಚಿತ ಮನೋಭಾವ, ಬಳಸುಮಾತಿನಲ್ಲಿ ಹೇಳುವ ವಿಧಾನಗಳನ್ನು ಖಂಡಿಸಿದ. ಹಿಂದುಗಳು ಐತಿಹಾಸಿಕ ಘಟನೆಗಳನ್ನು ಕ್ರಮದಲ್ಲಿ ಬರೆಯಲು ಹೆಚ್ಚು ಆಸಕ್ತಿ ವಹಿಸುವುದಿಲ್ಲ. ಒತ್ತಾಯಪಡಿಸಿದರೆ ಮಾತ್ರ ಕಥೆ ಹೇಳಲು ಪ್ರಾರಂಭಿಸುತ್ತಾರೆ–ಎಂಬುದು ಇವನ ಅಭಿಪ್ರಾಯ.

ಹಿಂದೂಸ್ತಾನದ ಮೇಲೆ ಬರೆಯುವಾಗ ಮುಖ್ಯ ನದಿಗಳು, ಪಟ್ಟಣಗಳು, ಬೆಳೆ, ಪ್ರಾಣಿ, ಜನರ ಆಚಾರ, ನಡವಳಿಕೆಗಳನ್ನು ಕುರಿತು ಕೂಡ ಈತ ಬರೆದಿದ್ದಾನೆ. ಇವನ ಗ್ರಂಥದಲ್ಲಿ ವರ್ಣಧರ್ಮ, ಆಶ್ರಮಧರ್ಮ, ವಿದ್ಯಾಭ್ಯಾಸ, ವಿವಾಹಪದ್ಧತಿಗಳ ಚಿತ್ರಣವೂ ಇದೆ. ಹಿಂದುಗಳ ತತ್ತ್ವ ಮತ್ತು ಗ್ರಂಥಗಳ ವಿಷಯವಾಗಿ ಆಳವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದ. ವೇದಗಳೂ ಸ್ಮೃತಿಗಳೂ ಪುರಾಣಗಳೂ ಆದಿಯಾಗಿ ಪ್ರಚಲಿತವಾಗಿದ್ದ

ಗ್ರಂಥಗಳ ತಿರುಳನ್ನು ಅರಿಯುವ ಅಭಿರುಚಿಯನ್ನು ವ್ಯಕ್ತಪಡಿಸಿದ. ಇಲ್ಲಿಯ ಜನರ ದೇವ ದೇವತೆಗಳ ಕಲ್ಪನೆ, ಮೂರ್ತಿಪೂಜೆ, ಸ್ವರ್ಗ ನರಕಗಳ ಭಾವನೆಯ ಬಗ್ಗೆಯೂ ಬರೆದ. ವಿದ್ವಾಂಸರ ನಂಬಿಕೆಗಳು ಅವಿದ್ಯಾವಂತರ ನಂಬಿಕೆಗಳಿಂದ ಹೇಗೆ ಭಿನ್ನವಾಗಿದ್ದುವೆಂಬುದನ್ನು ವಿವರಿಸಿ, ತನಗೆ ಸರಿಕಾಣದ ಹಲವು ಕಂದಾಚಾರ ಪದ್ಧತಿಗಳನ್ನು ಖಂಡಿಸಿದ. ಇವನ ಟೀಕೆಗಳಲ್ಲಿ ನಿದರ್ಶನಗಳಿವೆ. ಮಾನವೀಯತೆಯ ಸ್ಪರ್ಶವಿದೆ. ಈತನ ಬರೆವಣಿಗೆಯಲ್ಲಿ ದೇಶ, ಕಾಲ ಮತ್ತು ಭಾಷೆಗಳ ಭಿನ್ನತೆಯಿದೆ. ಅಲ್ಪ ಸ್ವಲ್ಪ ದೋಷ ಕಂಡುಬಂದರೂ ಪ್ರಾಚೀನ ಭಾರತದ ಚರಿತ್ರೆಗೆ ಇವನ ಕಾಣಿಕೆ ಮಹತ್ತರವಾದುದು. ಈತ ಭಾರತದ ಬಗ್ಗೆ 6 ಅರೇಬಿಯದ ಬಗ್ಗೆ 11 ಪ್ರಮುಖ ಕೃತಿಗಳನ್ನು ರಚಿಸಿದ್ದಾನೆ. ಬ್ರಹ್ಮಗುಪ್ತನ ಬ್ರಹ್ಮ ಸಿದ್ಧಾಂತವನ್ನು ಸಂಸ್ಕೃತ ಭಾಷೆಯಿಂದ ಅರೇಬಿಕ್ ಭಾಷೆಗೆ ಭಾಷಾಂತರಿಸಿದ್ದಾನೆ. ಈತ ಭಾರತದ ವಿದ್ವಾಂಸರ ಬಗ್ಗೆ ಕಟುವಾಗಿ ಬರೆದಿದ್ದರೂ ಭಾರತದ ಸಾಹಿತ್ಯದ ಬಗೆಗಿನ ಒಲವು ಅಪ್ರತಿಮವಾದದ್ದಾಗಿತ್ತು. (ಬಿ.ಎಸ್.ಎ.)

**ಆಶ್ರಿತ ರಾಜ್ಯಗಳು:** ಸಂಪೂರ್ಣವಾಗಿ ಸ್ವಂತ ಆಡಳಿತಾಧಿಕಾರವಿಲ್ಲದ ಪ್ರದೇಶಗಳು (ಡಿಪೆಂಡೆನ್ಸೀಸ್). ಸಾಮಾನ್ಯವಾಗಿ ಆಳುವ ರಾಷ್ಟ್ರದ ಪ್ರದೇಶವೂ ಆಶ್ರಿತರಾಜ್ಯದ ಪ್ರದೇಶವೂ ಪರಸ್ಪರ ಭಿನ್ನವಾಗಿಯೂ ದೂರದೂರದಲ್ಲೂ ಇದ್ದು, ಈ ಎರಡು ಪ್ರದೇಶಗಳಲ್ಲಿ ವಾಸಿಸುವ ಜನರು ಭಿನ್ನ ಸಮುದಾಯಗಳಿಗೆ ಸೇರಿದವರಾಗಿರುತ್ತಾರೆ.

ಆಶ್ರಿತ ಪ್ರದೇಶಗಳ ಮೇಲೆ ಆಳುವ ರಾಷ್ಟ್ರಗಳು ಹೊಂದಿರುವ ಹತೋಟಿ ಒಂದೇ ಸಮನಾಗಿರುವುದಿಲ್ಲ. ಕೆಲವು ಆಶ್ರಿತರಾಜ್ಯಗಳ ಆಡಳಿತದ ಸಂಪೂರ್ಣ ಹೊಣೆಯನ್ನೆಲ್ಲ ಆಳುವ ರಾಷ್ಟ್ರವೇ ವಹಿಸಬಹುದು; ಆಳುವ ರಾಷ್ಟ್ರದ ಸರ್ಕಾರದಿಂದ ನಿಯೋಜಿತರಾಗಿ ಬಂದ ಅಧಿಕಾರಿಗಳೇ ಆ ಪ್ರದೇಶಗಳ ಆಡಳಿತ ನಿರ್ವಹಿಸಬಹುದು. ಇನ್ನೂ ಕೆಲವು ಪ್ರದೇಶಗಳಲ್ಲಿ ಅಲ್ಲಿಯ ಜನರು ಸ್ಥಳೀಯ ನಾಯಕರ ಮೂಲಕವಾಗಿ ಪ್ರಭುತ್ವ ನಡೆಸಬಹುದು. ಇಂಥ ಆಳಿಕೆ ಪರೋಕ್ಷ. ಇನ್ನೂ ಕೆಲವು ಪ್ರದೇಶಗಳಲ್ಲಿ ಜನರ ಪ್ರಾತಿನಿಧ್ಯ ಹೊಂದಿದ ಆಡಳಿತ ವ್ಯವಸ್ಥೆ ಏರ್ಪಟ್ಟಿರಬಹುದು. ಇಂಥ ಪ್ರದೇಶಗಳಲ್ಲಿ ಆಡಳಿತ ನಡೆಸುವ ಸರ್ಕಾರಗಳಿಗೆ ಅಲ್ಲಿಯ ಆಂತರಿಕ ವ್ಯವಹಾರಗಳಲ್ಲಿ ಬಹಳಮಟ್ಟಿಗೆ ಸ್ವಯಂ ಆಡಳಿತಾಧಿಕಾರವಿರುತ್ತದೆ. ಆಶ್ರಿತರಾಜ್ಯವನ್ನು ವಸಾಹತು ಎಂಬ ಅರ್ಥದಲ್ಲೂ ಬಳಸುವುದುಂಟು. ಆದರೆ ಎರಡಕ್ಕೂ ಸೂಕ್ಷ್ಮ ವ್ಯತ್ಯಾಸಗಳುಂಟು. (ವಿ.ಎಸ್.ಪಿ.)

**ಆಸಫ್‌ಜಾಹಿ ಆಳ್ವಿಕೆ:** ಹೈದರಾಬಾದನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ರಾಜವಂಶ 1724-1948. ಉತ್ತರ ಕರ್ನಾಟಕ ಪೂರ್ವಾರ್ಧದ ಭಾಗದ ಮೇಲೆ ಎರಡು ಶತಮಾನಗಳಿಗೂ ಹೆಚ್ಚುಕಾಲ ಈ ಮನೆತನ ಒಡೆತನ ಹೊಂದಿತು. ಈ ವಂಶದ ಸ್ಥಾಪಕನಿಗೆ ಆಸಫ್‌ಜಾ ಎಂಬ ಬಿರುದಿದ್ದುದರಿಂದ ಇವನ ಮನೆತನ ಆಸಫ್‌ಜಾಹೀ ಎಂದೇ ಪ್ರಸಿದ್ಧವಾಯಿತು. ಈ ವಂಶದವರು ನಿಜಾಮ್-ಉಲ್-ಮುಲ್ಕ್ ಎಂಬ ಬಿರುದನ್ನೂ ಧರಿಸಿದ್ದರಿಂದ ಹೈದರಾಬಾದಿನ ನಿಜಾಮರೂ ಎಂಬ ಹೆಸರು ಪ್ರಚಲಿತವಾಗಿದೆ. ಆಸಫ್‌ಜಾಹೀಗಳು ಕನ್ನಡನಾಡಿನಲ್ಲಿ ನೇರ ಆಳ್ವಿಕೆ ನಡೆಸದಿದ್ದರೂ 18ನೆಯ ಶತಮಾನದ ಕರ್ನಾಟಕದ ರಾಜಕೀಯ ದಲ್ಲಿ ಗಣನೀಯ ಪಾತ್ರವಹಿಸಿದ್ದರು. ಬಹುಕಾಲ ಇವರ ಆಳ್ವಿಕೆಗೆ ಒಳಪಟ್ಟಿದ್ದ ರಾಯಚೂರು, ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳಲ್ಲಿ (ಹೈದರಾಬಾದು ಕರ್ನಾಟಕ) ವಿಶಿಷ್ಟ ರೀತಿಯ ಆಡಳಿತ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸ್ಥಿತಿ ಮೂಡಲು ಕಾರಣರಾದರು.

**ರಾಜಕೀಯ ಇತಿಹಾಸ:** 1686ರಲ್ಲಿ ಬಿಜಾಪುರದ ಆದಿಲ್‌ಶಾಹಿಗಳ ಆಳ್ವಿಕೆ ಕೊನೆ ಗೊಂಡು ಅವರ ವಶದಲ್ಲಿದ್ದ ಕರ್ನಾಟಕದ ಭಾಗವೆಲ್ಲ ಮೊಗಲರ ಕೈಸೇರಿತು. ಮೊಗಲರು ರೂಢಿಗೆ ತಂದ ರಾಜ್ಯವ್ಯವಸ್ಥೆಯಲ್ಲಿ ರಾಜ್ಯ ಹಲವು ಸುಭಾಗಳಾಗಿ (ಪ್ರಾಂತ) ವಿಭಾಗ ವಾಗಿರುತ್ತಿತ್ತು. ಪ್ರತಿಯೊಂದು ಸುಭಾಗಕ್ಕೂ ಒಬ್ಬ ಸುಭೇದಾರ (ಪ್ರಾಂತಾಧಿಕಾರಿ) ಮುಖ್ಯಸ್ಥ ನಾಗಿರುತ್ತಿದ್ದ. ಮೊಗಲರ ವಶವಾದ ಕರ್ನಾಟಕ ಭಾಗ ದಖನ್ ಸುಭಾಗಕ್ಕೆ ಸೇರಿತ್ತು. ಔರಂಗಜೇಬನ ಮರಣಾನಂತರ ಮೊಗಲ ಸಾಮ್ರಾಜ್ಯದಲ್ಲಿ ಉದಯಿಸಿದ್ದ ಅಸ್ತವ್ಯಸ್ತ ಪರಿಸ್ಥಿತಿಯ ಲಾಭ ಪಡೆದು ದಖ್ಖನ್ನಿನ ಸುಭೇದಾರನಾಗಿ ಹೈದರಾಬಾದಿನಲ್ಲಿದ್ದ ಮೀರ್ ಕಮ್ರುದ್ದಿನ್ ಚಿನ್ ಕುಲಿಕ್ ಖಾನ್ ಆಸಫ್ ಜಾ ಎಂಬುವನು 1724ರಲ್ಲಿ ಸ್ವಾತಂತ್ರ್ಯ ಸಾರಿಕೊಂಡು ಈ ಭಾಗದಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದ.

ಮೊದಲನೆಯ ಆಸಫ್ ಜಾ (1724-48) ದಖ್ಖನ್ನಿನ ಸುಭೇದಾರನಾಗಿ ನಿಜಾಂ ಉಲ್ ಮುಲ್ಕ್ 1713ರಲ್ಲಿ ನಿಯುಕ್ತಿಗೊಂಡ. ಅನಂತರ ಇವನಿಗೆ ಆಸಫ್ ಜಾ ಎಂಬ ಬಿರುದು ಪ್ರಾಪ್ತವಾಯಿತು. ಚತುರ ರಾಜಕಾರಣಿ, ಸಮರ್ಥ ಸೇನಾನಾಯಕ. ಇವನ ರಾಜ್ಯ ಒಂದು ಕಾಲದಲ್ಲಿ ಒರಿಸ್ಸದಿಂದ ಹಿಡಿದು ತಂಜಾವೂರಿನವರೆಗಿನ ಇಡೀ ಕಡಲತೀರ ಹಾಗೂ ಗುಲ್ಬರ್ಗ, ಬಿದರೆ, ಬಿಜಾಪುರ, ಧಾರವಾಡ, ರಾಯಚೂರು ಜಿಲ್ಲೆಗಳ ಪ್ರದೇಶಗಳನ್ನೂ ಒಳಗೊಂಡಿತ್ತು. ಇವನ ಕಾಲದಲ್ಲಿ ಉತ್ತರ ಕರ್ನಾಟಕದ ಪಶ್ಚಿಮ ಭಾಗದಲ್ಲಿ ಮರಾಠರು ಪ್ರಬಲರಾದರು. ಆದರೆ ಪೂರ್ವದಲ್ಲಿ ತುಂಗಭದ್ರಾನದಿಯ ಉತ್ತರ ಭಾಗವೆಲ್ಲ ಇವನ ವಶದಲ್ಲಿದ್ದುದಲ್ಲದೆ ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾನದಿಯ ಉತ್ತರಕ್ಕಿದ್ದ ಪ್ರದೇಶವೂ ಇವನಿಗೆ ಸೇರಿತ್ತು. ಆ ಭಾಗಕ್ಕೆ ತನ್ನ ಮಗ ನಾಸಿರ್‌ಜಂಗ್‌ನನ್ನು ಪ್ರಾಂತಾಧಿಕಾರಿಯಾಗಿ ನೇಮಿಸಿದ್ದ. ಅನಂತರ ಈತ ದಂಗೆಯೆದ್ದುದರಿಂದ ಆ ಭಾಗಕ್ಕೆ ಮೊಮ್ಮಗ ಮುಜಫರ್‌ಜಂಗ್ ಅಧಿಕಾರಿ ಯಾದ. ಕೃಷ್ಣಾನದಿಯ ದಕ್ಷಿಣಕ್ಕಿದ್ದ ಬಿಜಾಪುರ ಜಿಲ್ಲೆಯ ಆ ಭಾಗಗಳು ಮತ್ತು ಧಾರವಾಡ ಜಿಲ್ಲೆಯ ಬಹುತೇಕ ಪ್ರದೇಶವನ್ನು ಸವಣೂರು ನವಾಬರು ಆಸಫ್‌ಜಾನನ ಅಧೀನರಾಗಿ ಆಳುತ್ತಿದ್ದರು. 1746ರ ಸುಮಾರಿನಲ್ಲಿ ಆದ ಒಪ್ಪಂದದ ಪ್ರಕಾರ ಬಾದಾಮಿ ಮತ್ತು ಬಾಗಲಕೋಟೆಯ ಭಾಗಗಳನ್ನು ನಿಜಾಮ ಮರಾಠರಿಗೆ ಒಪ್ಪಿಸಿದ. ಆದರೆ ಉತ್ತರ ಕರ್ನಾಟಕದ ಬಹುಭಾಗದಲ್ಲಿ ಸ್ಥಳೀಯ ಆಡಳಿತಗಾರರು, ಮರಾಠರು ಹಾಗೂ ನಿಜಾಮ ಎಲ್ಲರೂ ಸಮಯ ಬಂದಂತೆ ತೆರಿಗೆಗಳನ್ನು ವಸೂಲಿಮಾಡುವ ವಿಚಿತ್ರ ಪರಿಸ್ಥಿತಿಯಿತ್ತು.*

1748ರಲ್ಲಿ ಮೊದಲನೆಯ ಆಸಫ್ ಜಾ ನಿಧನನಾದಾಗ ಇವನ ಎರಡನೆಯ ಮಗ ನಾಸಿರ್‌ಜಂಗ್‌ನಿಗೂ ಮಗಳ ಮಗ ಮುಜಫರ್‌ಜಂಗ್‌ನಿಗೂ ಅಧಿಕಾರಕ್ಕಾಗಿ ಕಚ್ಚಾಟ ನಡೆಯಿತು. ಫ್ರೆಂಚರೂ ಬ್ರಿಟಿಷರೂ ಇವರ ಪಕ್ಷಗಳನ್ನು ವಹಿಸಿದರು. ಫ್ರೆಂಚರು ಬೆಂಬಲಿಸಿದ ಮುಜಫರ್‌ಜಂಗ್ ನಿಜಾಮನಾದನಾದರೂ 1751ರಲ್ಲಿ ಕೊಲೆಯಾದ. ಅನಂತರ ನಾಸಿರ್‌ಜಂಗ್‌ನ ತಮ್ಮ ಸಲಾಬತ್‌ಜಂಗ್ ನಿಜಾಮನಾದ. ಇವನ ಕಾಲದಲ್ಲಿ ರಾಜ್ಯದಲ್ಲಿ ಫ್ರೆಂಚರ ಪ್ರಾಬಲ್ಯ ಹೆಚ್ಚಿತು. ಇದೇ ಕಾರಣದಿಂದ ಇಂಗ್ಲಿಷರೊಡನೆಯೂ ಯುದ್ಧಗಳನ್ನು ಮಾಡಬೇಕಾಯಿತು. ಜನವರಿ 1755ರಲ್ಲಿ ಬುಸ್ಸಿಯ ನೆರವಿನಿಂದ ಈತ ಮೈಸೂರಿಗೆ ದಂಡೆತ್ತಿಬಂದು ನಂಜರಾಜನಿಂದ 52ಲಕ್ಷ ರೂಪಾಯಿಗಳಷ್ಟು ಅಪಾರ ಹಣವನ್ನು ಪರಿಹಾರವಾಗಿ ಪಡೆದುಕೊಂಡ. ಒಂದೇ ಸಮನೆ ದೂರದ ಯುದ್ಧಗಳಲ್ಲಿ ನಿರತನಾಗಿದ್ದ ಸಂದರ್ಭವನ್ನು ಉಪಯೋಗಿಸಿ ಸವಣೂರು ನವಾಬರು ಸ್ವತಂತ್ರರಾದರು. 1759ರ ಸುಮಾರಿನಲ್ಲಿ ಸಲಾಬತ್‌ನ ಸೈನಿಕರಲ್ಲೇ ಅತೃಪ್ತಿಮೂಡಿತು. ಆಗ ಬಿಜಾಪುರದ ಜಮೀನ್ದಾರರಿಂದ ಹಣ ಸೆಳೆದು ಸೈನಿಕರನ್ನು ನಿಭಾಯಿಸುವ ಪ್ರಯತ್ನ ನಡೆಯಿತು. ಪೇಶ್ವೆ ಬಾಲಾಜಿ ಈ ಸಂದರ್ಭದಲ್ಲಿ ಸಲಾಬತ್ ಜಂಗನನ್ನು ಸೋಲಿಸಿ ಹುನಗುಂದ ಭಾಗವನ್ನು ಬಿಟ್ಟು ಬಿಜಾಪುರ ಜಿಲ್ಲೆಯ ಮಿಕ್ಕೆಲ್ಲಾ ಪ್ರದೇಶವನ್ನೂ ವಶಪಡಿಸಿಕೊಂಡ. ಆ ಹೊತ್ತಿಗೆ ಇಂಗ್ಲಿಷರ ನೆರವು ಪಡೆದಿದ್ದ ಸಲಾಬತನ ತಮ್ಮ ನಿಜಾಮ್ ಅಲಿ ಖಾನ್ ಪ್ರಬಲನಾಗಿದ್ದ. ಆದ್ದರಿಂದ ಸಲಾಬತ್ ಅವನೊಡನೆ ಒಪ್ಪಂದ ಮಾಡಿಕೊಂಡು ಅವನನ್ನು ಪ್ರಧಾನಿಯಾಗಿ ನೇಮಿಸಿದ. ಇವನು 1762ರಲ್ಲಿ ತನ್ನ ಸಹೋದರನನ್ನು ಕೊಲೆಮಾಡಿ ತಾನೇ ನಿಜಾಮನಾದ (1762-1803). ಹೈದರನ ರಾಜಕೀಯ ಪ್ರಾಬಲ್ಯ ಬೆಳೆಯುತ್ತಿದ್ದುದನ್ನು ಸಹಿಸದ ನಿಜಾಮ್ ಅಲಿ ಕರ್ನಾಟಕದತ್ತ ಹೆಚ್ಚು ಗಮನ ಹರಿಸಿದ. ಹೈದರನಿಗೆ ಮೈಸೂರು ರಾಜಕೀಯದಲ್ಲಿ ಸ್ವತಂತ್ರನಾಗಿ ವರ್ತಿಸಲು ಅಧಿಕಾರವಿಲ್ಲವೆಂಬುದು ನಿಜಾಮನ ವಾದ. ತಾನು ದಖನ್ನಿನ ಮೊಗಲ್ ಪ್ರತಿನಿಧಿಯಾದ ಕಾರಣ ಹೈದರ ತನ್ನ ಸಾಮಂತನಾಗಿರಬೇಕೆಂಬುದು ಅವನ ನಿರೀಕ್ಷೆಯಾಗಿತ್ತು. ಆದರೆ ಹೈದರನನ್ನು ಅಂಥ ಸ್ಥಾನಕ್ಕೆ ಇಳಿಸುವಷ್ಟು ಶಕ್ತನಾಗಿರಲಿಲ್ಲ. ಆದ್ದರಿಂದ ತಾನು ನಿಜಾಮ ಪದವಿಗೆ ಬಂದ ಕಾಲದಿಂದ (1761) ಟಿಪ್ಪುಸುಲ್ತಾನನ ಮರಣದವರೆಗೆ(1799) ಮೈಸೂರಿನ ಬಗ್ಗೆ ನಿರಂತರ ಹಗೆತನ ಸಾಧಿಸುವುದು ಅವನ ನೀತಿಯಾಯಿತು. ತನ್ನ ಸೇಡಿನ ಸಾಧನೆಗೆ ಇಂಗ್ಲಿಷರು ಇಲ್ಲವೆ ಮರಾಠರು ಮೈಸೂರಿನಮೇಲೆ ಮಾಡಿರುವ ಯುದ್ಧಗಳಲ್ಲಿ ತಾನೂ ಅವಕಾಶ ಪಡೆದುಕೊಂಡ. ಆದರೆ ಹೈದರ್‌ಅಲಿ ಮತ್ತು ಟಿಪ್ಪು ಅವನ ಬಗ್ಗೆ ಜಾಗರೂಕತೆಯಿಂದ ವರ್ತಿಸಿ, ಅವನೊಂದಿಗೆ ಹೊಂದಿಕೊಳ್ಳುವ ನೀತಿಯನ್ನು ಅನುಸರಿಸಿದರು. ಅವನ ಮೇಲೆ ಯುದ್ಧ ಮಾಡುವ ಬಗ್ಗೆ ಅವರು ಇತರ ಬಲಯುತ ಪಕ್ಷಗಳಿಗೆ ಬೆಂಬಲ ನೀಡಲಿಲ್ಲ. 1761ರಲ್ಲಿ ನಿಜಾಮನ ಸಹೋದರ ಸಲಾಬತ್ ಜಂಗ್ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬಂದು ಶಿರಾ ಪ್ರಾಂತವನ್ನು ಆಕ್ರಮಿಸಿಕೊಳುವಲ್ಲಿ ವಿಫಲನಾದಾಗ ಹೈದರ್ ಅವನಿಗೆ ಅಪಮಾನ ಮಾಡದೆ, ಅವನಿಗೆ 3 ಲಕ್ಷ ರೂಪಾಯಿ ಒಪ್ಪಿಸಿ ಅವನಿಂದ ಶಿರಾ ನವಾಬರಿಗೆ ತನ್ನ ಹೆಸರಿಗೆ ಬರುವಂತೆ ಪ್ರಯತ್ನಿಸಿದರೂ ಮೈಸೂರು ರಾಜ್ಯ ಸ್ವತಂತ್ರವಾಗಿರುವುದನ್ನು ನಿಜಾಮ ಸಹಿಸಲಿಲ್ಲ.

1765ರಲ್ಲಿ ಮೊಗಲ ಸಾಮ್ರಾಟನ ಫರ್ಮಾನ್(ಸನ್ನದು) ಮೂಲಕ ಇಂಗ್ಲಿಷರು ಉತ್ತರ ಸರ್ಕಾರ್ ಪ್ರದೇಶಗಳನ್ನು ಗಳಿಸಿದಾಗ ನಿಜಾಮ ಉದ್ರಿಕ್ತನಾಗಿ, ಇಂಗ್ಲಿಷರನ್ನು ಮಟ್ಟಹಾಕಲು ಹೈದರನೊಂದಿಗೆ ಸೇರಿಕೊಳ್ಳಲು ಬಯಸಿದ. ಈ ಉದ್ದೇಶಕ್ಕಾಗಿ ಅವನು ಕರ್ನಾಟಕ (ಆರ್ಕಾಟಿನ) ನವಾಬ ಮಹಮ್ಮದಾಲಿಯ ಸಹೋದರ ಮಹಾಫಿಜ್ ಖಾನನನ್ನು ಹೈದರನ ಬಳಿ ಕಳುಹಿಸಿ, ಮದರಾಸು ಸರ್ಕಾರದ ವಿರುದ್ಧ ಹೈದರನ ನೆರವನ್ನು ಬಯಸಿದ ಹಾಗೂ ಹೈದರನಿಗೆ ಕರ್ನಾಟಕ್ ಪ್ರದೇಶದ ಬಗ್ಗೆ ಸನ್ನದುಗಳನ್ನು ನೀಡುವುದಾಗಿ ಸಹ ತಿಳಿಸಿದ. ನಿಜಾಮ ಮತ್ತು ಹೈದರ್ ನಡುವಣ ಮೈತ್ರಿಯಿಂದ ಸಂಭವಿಸಬಹುದಾದ ಅಪಾಯವನ್ನು ಗ್ರಹಿಸಿದ ಇಂಗ್ಲಿಷರು ನಿಜಾಮನಿಗೆ ಆಗಿದ್ದ ನಷ್ಟಕ್ಕೆ ಪರಿಹಾರವಾಗಿ ಕರ್ನಾಟಕ ಪ್ರದೇಶದ ಭಾಗಗಳನ್ನು ಗೆದ್ದುಕೊಡುವುದಾಗಿ ಭರವಸೆ ನೀಡಿದರು. ನಿಜಾಮ ಕೂಡಲೆ ಇಂಗ್ಲಿಷರ ಸಲಹೆಗೆ ಒಪ್ಪಿದ. ಅದಕ್ಕೆ ಮತ್ತೊಂದು ಕಾರಣವು ಇತ್ತು. ಮರಾಠರ ಪೇಶ್ವೆ ಮಾಧವರಾವ್ ಮೈಸೂರು ರಾಜ್ಯದ ಮೇಲೆ ದಾಳಿ ನಡೆಸಲು ನಿರ್ಧರಿಸಿದ್ದ; ತನ್ನ ರಾಜ್ಯವನ್ನು ವಿಸ್ತರಿಸಿಕೊಳ್ಳಲು ಈ ಅವಕಾಶವನ್ನು ಕಳೆದುಕೊಳ್ಳಲು ನಿಜಾಮನಿಗೆ ಇಷ್ಟವಿರಲಿಲ್ಲ. ಹೈದರ್ ಈ ಮಧ್ಯೆ ಹೈದರಾಬಾದಿನ ಅಂಚಿನ ಕಡಪ ಪ್ರದೇಶದ ಒಂದಿಷ್ಟು ಭಾಗವನ್ನು ಆಕ್ರಮಿಸಿ ಕೊಂಡಿದ್ದ. ಈ ಕಾರಣಗಳಿಂದ ಹೈದರ್ ವಿರುದ್ಧ 1766ರಲ್ಲಿ ನಿಜಾಮ, ಮರಾಠರು ಹಾಗೂ ಇಂಗ್ಲಿಷರ ನಡುವೆ ಬಲಯುತವಾದ ಒಕ್ಕೂಟವೇರ್ಪಟ್ಟಿತು. ಯುದ್ಧ ಪ್ರಾರಂಭವಾದಾಗ ಮೈಸೂರಿನತ್ತ ನಿಜಾಮ ತನ್ನ ಸೈನ್ಯಗಳನ್ನು ತರಲು ತಡವಾಯಿತು. ಅಷ್ಟರಲ್ಲಿ ಹೈದರ್

ನಿಜಾಮನನ್ನು ಒಲಿಸಿಕೊಂಡ. ಕ್ಷಣಮಾತ್ರದಲ್ಲಿ ಆಕ್ರಮಣಕಾರನಾಗಿ ಬಂದ ನಿಜಾಮ ಮಿತ್ರನಾದ. ಆದರೆ ಮುಂದೆ ಒಂದೆರಡು ಯುದ್ಧಗಳಲ್ಲಿ ಅವನು ಇಂಗ್ಲಿಷರಿಗೆ ಸೋತು ಅವರೊಡನೆ ಒಪ್ಪಂದಮಾಡಿಕೊಂಡು ಹೈದರಾಬಾದಿಗೆ ಹಿಂತಿರುಗಿದ. ಇಂಗ್ಲಿಷರ ಮೇಲೆ ಸಾಮೂಹಿಕ ಧಾಳಿ ನಡೆಸಬೇಕೆಂದು ಹೈದರ್, ಮರಾಠರು ಮತ್ತು ನಿಜಾಮ ಪ್ರಮಾಣ ವಚನದೊಂದಿಗೆ ಮಾಡಿಕೊಂಡ ಒಪ್ಪಂದವನ್ನೂ ನಿಜಾಮ ಉಲ್ಲಂಘಿಸಿದ.

ಹೈದರನ ಮರಣಾನಂತರ ಟಿಪ್ಪು ಅಧಿಕಾರಕ್ಕೆ ಬಂದಾಗ ಸಹ ಮೈಸೂರಿನೊಂದಿಗೆ ನಿಜಾಮನ ಸಂಬಂಧ ಉತ್ತಮಗೊಳ್ಳಲಿಲ್ಲ. ಹೈದರನ ವಿರುದ್ಧ ನಿಜಾಮ ಒಂದೇ ಯುದ್ಧ ಮಾಡಿದ್ದ; ಆ ಯುದ್ಧ ಸಹ ಅರ್ಧಮನಸ್ಸಿನಿಂದ ಮಾಡಿದ್ದಾಗಿತ್ತು. ಟಿಪ್ಪುವಿನ ಕಾಲದಲ್ಲಿ ನಿಜಾಮನ ನಿಲುವು ಪೂರ್ಣವಾಗಿ ಮಾರ್ಪಟ್ಟಿತ್ತು. 1785ರಿಂದ 1799ರ ವರೆಗೆ ನಿಜಾಮ ಟಿಪ್ಪುವಿನ ವಿರುದ್ಧ ಮೂರು ಬಾರಿ ಯುದ್ಧಮಾಡಿದ. ಟಿಪ್ಪುವಿನ ಪತನವಾದದ್ದು (1799) ವಾಸ್ತವಿಕವಾಗಿ ನಿಜಾಮ ಇಂಗ್ಲಿಷರ ಪಕ್ಷ ಸೇರಿದ ಕಾರಣದಿಂದ. ಮರಾಠರಾಗಲಿ, ಇಂಗ್ಲಿಷರಾಗಲಿ ಕರ್ನಾಟಕದ ಮೇಲೆ ಆಸೆಯ ನೋಟವನ್ನು ಬೀರಿದಾಗ, ತನ್ನ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಲು ನಿಜಾಮ ಅವರಿಗೆ ಸ್ನೇಹ ಹಸ್ತವನ್ನು ನೀಡುತ್ತಿದ್ದ. 1786ರಲ್ಲಿ ನಿಜಾಮ ಮತ್ತು ನಾನಾಸಾಹೇಬ ಒಟ್ಟುಗೂಡಿ ಮೈಸೂರಿನ ಮೇಲೆ ಯುದ್ಧ ಸಾರಿದರು. ಯುದ್ಧ ಒಂದು ವರ್ಷ ಕಾಲ(1786–87) ನಡೆದು ಗಜೇಂದ್ರಗಡದ ಕೌಲನಿಂದ ಕೊನೆಗೊಂಡಿತು. ಈ ಯುದ್ಧದಲ್ಲಿ ಟಿಪ್ಪು ಜಯ ಹೊಂದಿದರೂ ಇಂಗ್ಲಿಷರ ವಿರುದ್ಧ ಭಾರತದ ಇತರ ರಾಷ್ಟ್ರಗಳ ನೆರವನ್ನು ಪಡೆದುಕೊಳ್ಳುವ ತನ್ನ ನೀತಿಯನ್ನನುಸರಿಸಿ, ಅವನು ತನ್ನ ಗಡಿಯ ಸಮೀಪದ ಕೆಲವು ಸಣ್ಣಪುಟ್ಟ ಕೋಟೆಗಳನ್ನು ಕೊಟ್ಟು ಮರಾಠರನ್ನು ಮತ್ತು ನಿಜಾಮನನ್ನು ಸಮಾಧಾನಗೊಳಿಸಿದ. ಆದರೆ ಹಿಂದೆ ಹೈದರಾಬಾದಿಗೆ ಸೇರಿದ್ದ ಪ್ರದೇಶಗಳನ್ನು ಗೆದ್ದುಕೊಡುವ ಹೊಣೆಹೊತ್ತು ತಮ್ಮೊಂದಿಗೆ ಸೇರುವಂತೆ ನಿಜಾಮನಿಗೆ 1787 ರಿಂದಲೂ ಇಂಗ್ಲಿಷರು ಆಸೆ ತೋರಿಸುತ್ತಿದ್ದರು. ಟಿಪ್ಪು ಸಹ ನಿಜಾಮನನ್ನು ತನ್ನ ಕಡೆ ಸಳೆಯಲು ಪ್ರಯತ್ನಿಸಿದ. ಗುಂಟೂರು ಭಾಗವನ್ನು ಕೊಡಬೇಕೆಂದು ಕಾರ್ನ್‌ವಾಲಿಸ್ ನಿಜಾಮನನ್ನು ಒತ್ತಾಯ ಮಾಡಿದಾಗ ಇಂಗ್ಲಿಷರಿಗೂ ನಿಜಾಮನಿಗೂ ಇದ್ದ ಸಾಮರಸ್ಯ ತಪ್ಪಿತು. ಸ್ವಲ್ಪಕಾಲ ಟಿಪ್ಪುವಿಗೂ ನಿಜಾಮನಿಗೂ ನಡುವೆ ಎಂದು ಇಲ್ಲದ ಸಹೃದಯತೆ ಮೂಡಿತು. 1786ರ ಯುದ್ಧದಲ್ಲಿ ಧಾರಾಳ ಷರತ್ತುಗಳ ಮೇಲೆ ಟಿಪ್ಪು ಮಾಡಿಕೊಂಡ ಒಪ್ಪಂದ ನಿಜಾಮ ಟಿಪ್ಪುವಿನೊಡನೆ ಸೇರಿಕೊಳ್ಳಲು ಉತ್ತೇಜಕವಾಯಿತು. ಆಗಸ್ಟ್ 1787ರಲ್ಲಿ ನಿಜಾಮನ ಆಸ್ಥಾನಿಕರಾದ ಇಂತಿಯಾಜ್–ಉದ್–ದೌಲ ಹಾಗೂ ಷಮ್ಸ್–ಉಲ್–ಉಮ್ರ ಟಿಪ್ಪುವಿನೊಡನೆ ಸಂಬಂಧ ಬೆಳೆಯಲು ನಿಜಾಮನಿಗಿದ್ದ ಇಷ್ಟವನ್ನು ಟಿಪ್ಪುವಿಗೆ ತಿಳಿಸಿದರು. ಟಿಪ್ಪು ಒಪ್ಪಿದ ಕಾರಣ ಹಾಫೀಜ್–ಫರೀದ್–ಉದ್–ದೀನ್ ಮತ್ತು ಬಹಾದ್ದೂರ್ ಖಾನ್ ಎಂಬಿಬ್ಬರು ರಾಯಭಾರಿಗಳು ಹೈದರಾಬಾದಿನಿಂದ ಶ್ರೀರಂಗಪಟ್ಟಣಕ್ಕೆ ಬಂದರು (ನವಂಬರ್ 1787). ನಿಜಾಮನನ್ನು ತಾನೇ ಕಂಡು ಪರಸ್ಪರ ಮೈತ್ರಿಯ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ನಿರ್ಧರಿಸಬೇಕೆಂದು ಟಿಪ್ಪು ಕಾತರನಾಗಿದ್ದ. ತನ್ನ ಮೈತ್ರಿ ಬಲವಾದ ತಳಹದಿಯ ಮೇಲಿರಬೇಕೆಂದು ನಿಜಾಮನ ಮಗಳನ್ನು ತನ್ನ ಮಗನಿಗೆ ತಂದುಕೊಳ್ಳಲು ಸಹ ಅಪೇಕ್ಷಿಸಿದ. ಆದರೆ ನಿಜಾಮ ಈ ವಿವಾಹದ ಬಗ್ಗೆ ಅಷ್ಟು ಆಸಕ್ತನಾಗಿರಲಿಲ್ಲ. ಅಲ್ಲದೆ ಅವನ ಆಸ್ಥಾನದಲ್ಲಿ ಇಂಗ್ಲಿಷರ ಬೆಂಬಲ ಪಡೆದುಕೊಳ್ಳಬೇಕೆಂಬ ಪಕ್ಷವೇ ಬಲವಾಗಿತ್ತು. ಈ ಸಂದರ್ಭದಲ್ಲಿ ಟಿಪ್ಪುವಿನ ವಿರುದ್ಧ ಭಾರತದ ರಾಜ್ಯಗಳನ್ನು ಸಂಘಟಿಸಲು ಕಾರ್ನ್‌ವಾಲಿಸ್ ತೀವ್ರ ಕಾರ್ಯಚರಣೆಗಳನ್ನು ಕೈಗೊಂಡಿದ್ದ. ಆದ್ದರಿಂದ ಟಿಪ್ಪುವಿಗೆ ನಿಜಾಮನ ಉತ್ತರ ಅಸ್ಪಷ್ಟವಾಗಿತ್ತು ಹಾಗೂ ಸಂಬಂಧ ಕಲ್ಪನೆಯ ಬಗ್ಗೆ ನಡೆಸಿದ ವ್ಯವಹಾರ ಹಠಾತ್ತನೆ ನಿಂತುಹೋಯಿತು.

ಕಾರ್ನ್‌ವಾಲಿಸ್ ಹೈದರಾಬಾದಿನ ಭಾಗವಾದ ಗುಂಟೂರನ್ನು ಆಕ್ರಮಿಸಿಕೊಂಡಾಗ ನಿಜಾಮ ಟಿಪ್ಪುವಿನೊಡನೆ ಮತ್ತೆ ಬಾಂಧವ್ಯ ಬೆಳೆಸುವ ಬಗ್ಗೆ ಮಾತುಕತೆ ಮುಂದುವರಿಸಲು ನವೆಂಬರ್ 1788ರಲ್ಲಿ ಹಾಫೀಜ್ ಫರೀದ್–ಉದ್–ದೀನ್ ಹಾಗೂ ರಾಮಚಂದ್ರ ಇವರಿಬ್ಬರನ್ನು ಟಿಪ್ಪುವಿನ ಬಳಿ ಅಟ್ಟಿದ. ಆಗ ಟಿಪ್ಪು ಮತ್ತೆ ಕೊಯ್ಮತ್ತೂರಿನ ಬಳಿ ಬಿಡಾರ ಹಾಕಿದ್ದ. ಟಿಪ್ಪುವಿನ ಉತ್ತರ ಮತ್ತೆ ಆಹ್ವಾನಾರ್ಹವಾಗಿತ್ತು. ಅವನು ವಿವಾಹ ಸಂಬಂಧವನ್ನು ಬಯಸಿ ಹೈದರಾಬಾದಿನ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದ. ಈ ಸಮಾಲೋಚನೆಯಲ್ಲಿ ಮರಾಠರ ಪ್ರತಿನಿಧಿ ಶಿವಾಜಿರಾವ್ ಸಹ ಹಾಜರಿದ್ದ. ರಾಜಕೀಯ ಮೈತ್ರಿ ಹಾಗೂ ವಿವಾಹ ಸಂಬಂಧವನ್ನು ನಿರ್ಧರಿಸಿಕೊಂಡು ಬರಲು ಟಿಪ್ಪು ತನ್ನ ರಾಯಭಾರಿಯಾದ ಕುತ್ಬುದೀನ್ ಖಾನ್ ಮತ್ತು ಅಲಿ ರಾಜ ಇವರನ್ನು ಹೈದರಾಬಾದಿಗೆ ಕಳುಹಿಸಿದ. ಈ ಪ್ರಯತ್ನ ಸಹ ವಿಫಲವಾಯಿತು. ಈ ಹೊತ್ತಿಗೆ ಇಂಗ್ಲಿಷರ ಕುತಂತ್ರ ಬಲವಾಗಿ ಬೇರೂರಿತ್ತು. ಮೈಸೂರಿನ ಬಹು ಭಾಗವನ್ನು ಗೆದ್ದುಕೊಳ್ಳಲು ಇದ್ದ ಅವಕಾಶಗಳನ್ನು ತಿಳಿಸಿ ಕಾರ್ನ್‌ವಾಲಿಸ್ ನಿಜಾಮನ ಮನಸ್ಸನ್ನು ಸೆಳೆದುಕೊಂಡ. ಟಿಪ್ಪುವಿನ ರಾಯಭಾರಿಗಳು ನಿಜಾಮನ ಸಂಶಯಕ್ಕೊಳಗಾಗಿ ಹೈದರಾಬಾದಿನಲ್ಲಿ ಸೆರೆಯಾದರು. ಟಿಪ್ಪು ಕೇವಲ ಫೌಜಿನ ನಾಯಕ್ ಹುದ್ದೆಯಲ್ಲಿದ್ದವರ ಪೀಳಿಗೆಯವನು ಅವನೊಂದಿಗೆ ವಿವಾಹ ಸಂಬಂಧ ಬೆಳೆಸುವುದು ನಿಜಾಮನ ಮನೆತನಕ್ಕೆ ಅಪಮಾನ, ಘನತೆಗೆ ಕುಂದು ಎಂದು ಬಗೆದ ನಿಜಾಮ ವಿವಾಹದ ವಿಷಯವನ್ನು ತಳ್ಳಿಹಾಕಿದ. ನಿಜಾಮ ಮೂರನೆಯ ಮೈಸೂರು ಯುದ್ಧದಲ್ಲಿ ಇಂಗ್ಲಿಷರೊಡನೆ ಸೇರಿಕೊಳ್ಳಲು ನಿರ್ಧರಿಸಿದ. ಟಿಪ್ಪುವಿನ ಮೇಲೆ ದಾಳಿ ನಡೆಸುವ ಬಗ್ಗೆ ನಡೆದ ಒಪ್ಪಂದದಲ್ಲಿ ಇಂಗ್ಲಿಷರು ಹಾಗೂ ಮರಾಠರೊಡನೆ ಸೇರಿಕೊಂಡ. ಈ ಯುದ್ಧದಲ್ಲಿ ಟಿಪ್ಪು ಸೋತು ಅವನ ರಾಜ್ಯದಲ್ಲಿ ಅರ್ಧಭಾಗ ಧಾಳಿಕಾರರ ಪಾಲಾಯಿತು. ಅದರಲ್ಲಿ ಕೃಷ್ಣಾನದಿಯಿಂದ ಪೆನ್ನಾರ್ ನದಿಯವರೆಗಿನ ವಿಶಾಲ ಪ್ರದೇಶ ನಿಜಾಮನಿಗೆ ಸೇರಿತು. ಅದರಿಂದ ನಿಜಾಮನ ಆಸೆ ಮುಗಿಲಿಗೇರಿ 1799ರಲ್ಲಿ ನಡೆದ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಸಹ ಅವನು ಮತ್ತೆ ಇಂಗ್ಲಿಷರ ಪಕ್ಷವನ್ನು ಸೇರಿದ. ಈ ಯುದ್ಧದಲ್ಲಿ ಟಿಪ್ಪು ಮೃತನಾದ(4 ಮೇ 1799). ನಿಜಾಮನಿಗೆ ಯುದ್ಧದ ಫಲವಾಗಿ ಗುತ್ತಿ, ಗುರ್ರಮಕೊಂಡ ಹಾಗೂ ಚಿತ್ರದುರ್ಗ ಕೋಟೆಯ ವಿನಾ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳು ಸೇರಿದವು. ಯುದ್ಧ ದೃಷ್ಟಿಯಿಂದ ಉಪಯುಕ್ತವಾಗಿದ್ದ ಇಂಥ ಸ್ಥಳಗಳನ್ನು ಕಳೆದುಕೊಳ್ಳಲು ಇಂಗ್ಲಿಷರು ಸಿದ್ಧರಾಗಿರಲಿಲ್ಲ. 1792ರಲ್ಲಿ ಹಾಗೂ 1799 ರ ಯುದ್ಧಗಳಲ್ಲಿ ಕೊಟ್ಟಿದ್ದ ಈ ಪ್ರದೇಶಗಳನ್ನು ಒಪ್ಪಿಸುವಂತೆ ನಿಜಾಮನನ್ನು ಅವರು ಒತ್ತಾಯ ಪಡಿಸಿದರು (1800). ಈ ಮಧ್ಯದಲ್ಲಿ ಬಿಜಾಪುರದ ಹುನಗುಂದ ಭಾಗವನ್ನು ನಿಜಾಮ ಮರಾಠರಿಗೆ ಒಪ್ಪಿಸಿದ್ದ. ಅಂದರೆ ಕರ್ನಾಟಕದಲ್ಲಿ ಮುಂದೆ ಹೈದರಾಬಾದು ಕರ್ನಾಟಕ ಜಿಲ್ಲೆಗಳೆಂದು ಪ್ರಸಿದ್ಧವಾದ ಪ್ರದೇಶವಷ್ಟೇ ನಿಜಾಮನ ವಶದಲ್ಲಿ ಉಳಿಯಿತು.

1803ರಲ್ಲಿ ನಿಜಾಮ್ ಅಲಿ ಖಾನ್ ಮೃತನಾಗಿ ಅವನ ಮಗ ಸಿಕಂದರ್ ಜಾ (1803–29) ಹೈದರಾಬಾದಿನ ಗದ್ದುಗೆಯನ್ನೇರಿದ. ಈ ಕಾಲದಲ್ಲಿ ಬ್ರಿಟಿಷರ ಕೈಮೇಲಾಗಿ ಹಲವು ಪ್ರದೇಶಗಳನ್ನು ಅವರಿಗೊಪ್ಪಿಸಬೇಕಾಯಿತು. ವಿಷಯಾಕಾಂಕ್ಷಿಯಾದ ಈತ ಆಡಳಿತಕ್ಕೆ ಹೆಚ್ಚು ಗಮನ ನೀಡಲಿಲ್ಲ. ರಾಜ ಚಂದುಲಾಲ್ ಈ ಕಾಲದಲ್ಲಿ ದಿವಾನನಾಗಿದ್ದ. ಆಡಳಿತ ಸಾಕಷ್ಟು ಹದಗೆಟ್ಟಿತ್ತು.

ಈತನ ಅಧಿಕಾರದಲ್ಲಿ ಉನ್ನತ ಹುದ್ದೆಗಳು ಅರಬ್ ಶ್ರೀಮಂತರು ಹಾಗೂ ಮಾರವಾಡಿ ಹಣವಂತರ ಪಾಲಾದವು. ಇವರು ತಾವು ಅಧಿಕಾರ ಪಡೆದ ಪ್ರದೇಶದ ರೈತರನ್ನು ಸುಲಿಗೆ ಮಾಡಲಾರಂಭಿಸಿದರು. ಹೀಗಾಗಿ ಈತನು ದಿವಾನನಾಗಿದ್ದ ಕಾಲವನ್ನು ಆಡಳಿತ ಹಾಗೂ ಹಣಕಾಸಿನ ದುರಾವಸ್ಥೆಯ ಕಾಲವೆನ್ನಬಹುದು. ಅವನ ತರುವಾಯ ನಿಜಾಮ್ ಪದವಿಗೆ ಬಂದ ನಾಸಿರುದ್ದೌಲ(1829–57) ಇಂಗ್ಲಿಷರಿಗೆ ನಿಷ್ಠಾವಂತನಾಗಿದ್ದ. ಅವರು ಒದಗಿಸಿದ್ದ ಸೈನ್ಯಸಹಾಯದ ಖರ್ಚಿಗಾಗಿ ರಾಯಚೂರು ಪ್ರದೇಶವನ್ನು ಅವರಿಗೆ ಒಪ್ಪಿಸಿದ. ಇಂಗ್ಲಿಷರ ಆದೇಶದಂತೆ ಚಂದುಲಾಲನನ್ನು ದಿವಾನಗಿರಿಯಿಂದ ತೆಗೆದ. 1843ರಲ್ಲಿ ಸರ್ ಒಂದನೆಯ ಸಾಲಾರ್ ಜಂಗ್ ದಿವಾನನಾದ. ಬ್ರಿಟಿಷರು ಹಿಂದಿನಿಂದ ನಿಜಾಮರ ಸ್ನೇಹಿತರಾಗಿದ್ದಾರೆ, ಎಂದೆಂದಿಗೂ ಅವರಿಗೆ ಕೃತಜ್ಞತೆಯಿಂದ ನಡೆದುಕೊಳ್ಳಬೇಕು ಎಂದು ನಾಸಿರುದ್ದೌಲ ಸಾಯುವಾಗ ತನ್ನ ಮಗ ಅಫ್ಜಲುದ್ದೌಲನಿಗೆ ಹೇಳಿದ್ದನಂತೆ. ತಂದೆಯ ಮರಣಾನಂತರ ಪಟ್ಟಕ್ಕೆ ಬಂದ ಅಫ್ಜಲುದ್ದೌಲ (1857–69) ಪಿತೃವಾಕ್ಯವನ್ನು ಪೂರ್ಣವಾಗಿ ಪಾಲಿಸಿದ. 1857–58ರಲ್ಲಿ ನಡೆದ ಸ್ವತಂತ್ರ್ಯ ಸಂಗ್ರಾಮದೆದುರು ಬ್ರಿಟಿಷರು ತಲ್ಲಣಿಸುತ್ತಿದ್ದಾಗಲೂ ನಿಜಾಮ ಮತ್ತು ಅವನ ಪ್ರಧಾನಿ ಸಾಲಾರ್ ಜಂಗ್ ಅವರಿಗೆ ಬೆಂಬಲವಾಗಿ ನಿಂತಿದ್ದರು. ಈ ಉಪಕಾರಕ್ಕಾಗಿ ಬ್ರಿಟಿಷ್ ಸರ್ಕಾರ ಇವನೊಡನೆ ಹೊಸ ಒಪ್ಪಂದವೊಂದನ್ನು ಮಾಡಿಕೊಂಡು ನಿಜಾಮರಿಂದ ತೆಗೆದುಕೊಂಡಿದ್ದ ಉಸ್ಮಾನಾಬಾದ್ ಮತ್ತು ರಾಯಚೂರು ಪ್ರದೇಶವನ್ನು ಹಿಂತಿರುಗಿಸಿತು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಿದರೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳು ಅಂದಿನಿಂದ ನಿಜಾಮನ ಆಳ್ವಿಕೆಯಲ್ಲೇ ಉಳಿದವು. ಸುರಪುರದ ದಂಗೆ ಈ ಕಾಲದಲ್ಲಿ ನಡೆದ ಮುಖ್ಯ ಘಟನೆ. ಅಫ್ಜಲುದ್ದೌಲ 1869ರಲ್ಲಿ ಮೃತನಾದ.

ಅನಂತರ ನಿಜಾಮ ಮೀರ್ ಮಹಬೂಬ್ ಅಲಿ ಖಾನ್ (1869–1911) ಪಟ್ಟಕ್ಕೆ ಬಂದಾಗ ಈತ ಇನ್ನೂ ಮೂರುವರ್ಷದ ಬಾಲಕನಾಗಿದ್ದರಿಂದ ಸರ್ ಸಾಲಾರ್‌ಜಂಗ್ I ಮತ್ತು ನವಾಬ್ ಶಮ್ಸುಲಾ ಉಮ್ರಾ ಇವರು ಆಡಳಿತಗಾರರಾಗಿ ನೇಮಿತರಾಗಿದ್ದರು. ಆಡಳಿತದಲ್ಲಿ ಬ್ರಿಟಿಷ್ ರೆಸಿಡೆಂಟನ ಸಲಹೆಯನ್ನು ತೆಗೆದುಕೊಳ್ಳುತ್ತಿತ್ತು. ಈ ವ್ಯವಸ್ಥೆ 1884ರ ವರೆಗೂ ಮುಂದುವರಿದು, ಆ ವರ್ಷ ನಿಜಾಮರೇ ಆಡಳಿತ ವಹಿಸಿಕೊಂಡರು. ಇವರ ಕಾಲದ ಆಡಳಿತದಲ್ಲಿ ಹಲವು ಬದಲಾವಣೆಗಳಾದವು. 1893ರಲ್ಲಿ ಒಂದು ಮಂತ್ರಿಮಂಡಲ ಮತ್ತು ನ್ಯಾಯಾಂಗ ಸಭೆ ವ್ಯವಸ್ಥಿತವಾಯಿತು. ಅಧಿಕಾರಿಗಳಲ್ಲದವರೂ ರಾಜ್ಯದ ಆಗುಹೋಗುಗಳಲ್ಲಿ ಧ್ವನಿಗೂಡಿಸುವ ಅವಕಾಶ ಉಂಟಾಯಿತು.

ಮಹಬೂಬ್ ಅಲಿ ಖಾನ್‌ನ ಮರಣಾನಂತರ (1911) ಅವನ ಮಗ ಮೀರ್ ಉಸ್ಮಾನ್ ಅಲಿ ಖಾನ್ ನಿಜಾಮನಾದ(1911–48). ಪ್ರಧಾನಿ ಸಾಲಾರ್‌ಜಂಗ್ III 1914ರಲ್ಲಿ ರಾಜೀನಾಮೆಯಿತ್ತಾಗ ಆಡಳಿತವನ್ನು ನಿಜಾಮ ನೇರವಾಗಿ ನಿರ್ವಹಿಸತೊಡಗಿದರು. ಪ್ರಥಮ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷರಿಗೆ ಧನ–ಸೈನ್ಯವನ್ನು ನೀಡಿದರು. ಹೈದರಾಬಾದು ಸಂಸ್ಥಾನದ ಸಿಬ್ಬಂದಿಯನ್ನು ಪೂರ್ಣವಾಗಿ ಭಾರತೀಕರಣ ಮಾಡಿದ್ದು ಇವರ ಸಾಧನೆ. ಎಲ್ಲಾ ಹುದ್ದೆಗಳಲ್ಲೂ ಭಾರತೀಯರೇ ಅದರಲ್ಲೂ ಹೆಚ್ಚುಮಟ್ಟಿಗೆ ಹೈದರಾಬಾದಿನವರೇ ನಿರ್ವಹಿಸುವ ವ್ಯವಸ್ಥೆಮಾಡಿದರು. ಮುಂದಿನ ದಿನಗಳಲ್ಲಿ ಭಾರತ ಸ್ವಾತಂತ್ರ್ಯ ಚಳವಳಿ ಹೈದರಾಬಾದು ಸಂಸ್ಥಾನದಲ್ಲಿ ಹರಡಿತು. ಆದರೆ ಅದನ್ನು ವ್ಯಗ್ರದೃಷ್ಟಿಯಿಂದ ನೋಡುವುದು ಅಂದಿನ ರಾಜನೀತಿಯಾಗಿತ್ತು.

1947ರಲ್ಲಿ ಭಾರತ ಸ್ವತಂತ್ರವಾದಾಗ ಇತರ ರಾಜ್ಯಗಳನ್ನು ಅನುಸರಿಸಿ ಭಾರತ ಒಕ್ಕೂಟಕ್ಕೆ ಸೇರಿದ ನಿಜಾಮರು 1947 ಆಗಸ್ಟ್ 27ರಂದು ಹೈದರಾಬಾದನ್ನು ಸ್ವತಂತ್ರ ರಾಷ್ಟ್ರವೆಂದು ಸಾರಿದರು. ಸ್ವಾತಂತ್ರ್ಯ ಸಂಗ್ರಾಮದ ಬಿರುಸು ಮತ್ತಷ್ಟು ಏರಿತು. ಈ ಮಧ್ಯದಲ್ಲಿ

ರಜಾಕರರ ಸಂಸ್ಥೆಯೂ ತಲೆಯೆತ್ತಿ ಜನರನ್ನು ಕ್ರೂರವಾಗಿ ನಡೆಸಿಕೊಳ್ಳಲಾರಂಭಿಸಿತು. ಕೊಲೆ, ಸುಲಿಗೆಗಳು ಅವರ ಕಾರ್ಯಾಚರಣೆಯ ಭಾಗವಾಗಿದ್ದುವು. ಅದಕ್ಕೆ ವಿರುದ್ಧವಾಗಿ ಜನರೂ ಸಂಘಟಿತರಾಗತೊಡಗಿ ರಾಜ್ಯದಲ್ಲಿ ಕರಾಳ ವಾತಾವರಣ ಒದಗಿಬಂತು. ರಜಾಕರರ ಸಂಸ್ಥೆಯನ್ನು ಬಹಿಷ್ಕರಿಸಬೇಕೆಂದು ಅನೇಕರು ಪ್ರಾರ್ಥಿಸಿದರೂ ನಿಜಾಮರು ಕ್ರಮ ಕೈಗೊಳ್ಳಲಿಲ್ಲ. ಭಾರತ ಸರ್ಕಾರದವರು ನಿಜಾಮರೊಡನೆ ಸಂಧಾನ ನಡೆಸಿದರೂ ಸಫಲವಾಗಲಿಲ್ಲ. ನಿಜಾಮರು ಭಾರತ ಸರ್ಕಾರದ ವಿರುದ್ಧ ಕತ್ತಿ ಮಸೆಯುತ್ತಿದ್ದುದು 1948ರ ಆದಿಭಾಗದ ಹೊತ್ತಿಗೇ ಸ್ಪಷ್ಟವಾಯಿತು. ಕೊನೆಗೆ 1948 ಸೆಪ್ಟಂಬರ್ 13ರಂದು ಭಾರತ ಸರ್ಕಾರ ನಿಜಾಮರ ದುರಾಡಳಿತದ ವಿರುದ್ಧ ಪೊಲೀಸ್ ಕಾರ್ಯಚರಣೆ ಆರಂಭಿಸಿತು. ನಿಜಾಮರು ಮೊದಲು ವಿರೋಧಿಸಿ ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿದರು. ಆದರೆ ಬೆಂಬಲ ಸಿಕ್ಕಲಿಲ್ಲ. ಕೊನೆಗೆ ಭಾರತ ಸರ್ಕಾರದೊಡನೆ ಒಪ್ಪಂದಕ್ಕೆ ಸಮ್ಮತಿಸಿ ಆಸಫ್‌ಜಾಹೀ ರಾಜತ್ವ ಕೊನೆಗೊಂಡಿತು. 1948 ಸೆಪ್ಟಂಬರ್ 18ರಂದು ಭಾರತ ಒಕ್ಕೂಟಕ್ಕೆ ಸೇರಿದ ಹೈದರಾಬಾದು ರಾಜ್ಯ ಉದಯವಾಯಿತು.

*

**ಆಡಳಿತ ವ್ಯವಸ್ಥೆ:** ಆಸಫ್‌ಜಾಹಿ ಆಡಳಿತ ಮೊಗಲ್ ಪದ್ಧತಿಯನ್ನು ಕೂಡಿಸಿಕೊಂಡಿತ್ತು. ಹೈದರಾಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಖ್ಖನ್ನಿನಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸಿದಾಗ ಈ ಸಂತತಿಯವರಿಗೆ ಸರ್ಕಾರ ಆಡಳಿತ ನಿರ್ವಹಣೆಯಲ್ಲಿ ಒಳ್ಳೆಯ ಅನುಭವ ವಿತ್ತು. 1ನೆಯ ಆಸಫ್‌ಜಾ ತನ್ನ ಮನೆತನಕ್ಕೆ ಬಿಟ್ಟುಹೋದ ಶಾಸನ ಅವರ ಸರ್ಕಾರ ರಚನೆ ಮತ್ತು ನೀತಿಯನ್ನು ಸೂಚಿಸುತ್ತದೆ. ಅವರ ಆಡಳಿತ ವ್ಯವಸ್ಥೆ, ಕಂದಾಯ, ಪೊಲೀಸು, ನ್ಯಾಯ ಮತ್ತು ಇತರ ಸಂಕೀರ್ಣ ಇಲಾಖೆಗಳು ಎಂದು ನಾಲ್ಕು ಸಾದರ್–ಉಲ್ ಮಹಮ್‌ಗಳಾಗಿ ವಿಭಾಗಿಸಲಾಗಿತ್ತು, ಒಬ್ಬ ವಜೀರನ (ಮಂತ್ರಿಯ) ನಿರ್ದೇಶನದಲ್ಲಿ ಅವುಗಳು ಕಾರ್ಯನಿರ್ವಹಿಸುತ್ತಿದ್ದುವು. ಇಡೀ ರಾಜ್ಯ ನಾಲ್ಕು ಸುಭಾ (ಪ್ರಾಂತ)ಗಳಾಗಿ ವಿಭಜಿತವಾಗಿದ್ದಿತು. ನಿಜಾಮರ ಆಳ್ವಿಕೆಗೆ ಒಳಪಟ್ಟ ಕರ್ನಾಟಕ ಭಾಗವು ಮರಾಠವಾಡ ಸುಭಾ ಎಂಬ ಎರಡನೆಯ ಸುಭಾಗೆ ಸೇರಿತ್ತು. ನಿಜಾಮರ ಕೆಲವು ಆಡಳಿತ ಸಂಸ್ಥೆಗಳನ್ನು ಸ್ಥಾಪಿಸಿದರಲ್ಲದೆ ಹಳೆಯ ಆಡಳಿತ ರೀತಿಗಳನ್ನೂ ಉಳಿಸಿಕೊಂಡರು. 1892ರಲ್ಲಿ ಕಾನೂನ್ ಚೆ–ಇ–ಮುಬಾರಕ್ (ಪವಿತ್ರ ಕಾಯಿದೆ) ಎಂಬ ಆಡಳಿತವರ್ಗದ ಕೈಪಿಡಿ ಜಾರಿಗೆ ಬಂತು. ಅದರಿಂದ ವಿವಿಧ ಇಲಾಖೆಗಳು ಕಾರ್ಯಚರಣೆಗಳಲ್ಲಿ ಕೆಲವು ಬದಲಾವಣೆಗಳಾದವು. ಮರಾಠವಾಡ ಸುಭಾದಲ್ಲಿದ್ದ ಗುಲ್ಬರ್ಗ, ರಾಯಚೂರು, ಲಿಂಗಸುಗೂರು ಮತ್ತು ಉಸ್ಮಾನಾಬಾದ್– ಈ ನಾಲ್ಕು ಜಿಲ್ಲೆಗಳಿದ್ದುವು. ತರುವಾಯ ಲಿಂಗಸುಗೂರು ಜಿಲ್ಲೆಯನ್ನು ವಿಭಜಿಸಿ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಸೇರಿಸಲಾಯಿತು. ಬಿದರೆ ಜಿಲ್ಲೆಯನ್ನು ಗುಲ್ಬರ್ಗ ವಿಭಾಗಕ್ಕೆ ಸೇರಿಸಲಾಯಿತು. ಪ್ರತಿ ವಿಭಾಗವೂ ಒಬ್ಬ ಸುಭೇದಾರನ (ಕಮಿಷನರ್) ಅಧೀನದಲ್ಲಿತ್ತು. ಪ್ರತಿ ಜಿಲ್ಲೆಗೊಬ್ಬ ಜೇಷ್ಠ ತಾಲ್ಲೂಕುದಾರನ (ಕಲೆಕ್ಟರನ) ಆಡಳಿತದಲ್ಲಿತ್ತು. ದ್ವಿತೀಯ ಅಥವಾ ತೃತೀಯ ತಾಲ್ಲೂಕುದಾರರೆಂಬ ಹೆಸರಿನ ಇಬ್ಬರು ಅಥವಾ ಹೆಚ್ಚು ಅಧಿಕಾರಿಗಳು ಜೇಷ್ಠ ತಾಲ್ಲೂಕುದಾರನ ಸಹಾಯಕರಾಗಿರುತ್ತಿದ್ದರು. ಪ್ರತಿ ತಾಲ್ಲೂಕಿಗೆ (ತಹಸೀಲ್) ಒಬ್ಬ ತಹಸೀಲ್‌ದಾರ ಮುಖ್ಯಸ್ಥನಾಗಿರುತ್ತಿದ್ದ. ತಾಲ್ಲೂಕಿನ ಕಂದಾಯ ಹಾಗೂ ನ್ಯಾಯಾಡಳಿತ ಅವನಿಗೆ ಸೇರಿತ್ತು. ಒಬ್ಬ ಪೇಷ್ಕಾರ್(ಸಹಾಯಕ) ಮತ್ತು ಗಿರ್ದಾವರ್ (ರೆವಿನ್ಯೂ ಇನ್ಸ್‌ಪೆಕ್ಟರ್) ಈ ಕೆಲಸಗಳಲ್ಲಿ ಅವನಿಗೆ ನೆರವು ನೀಡುತ್ತಿದ್ದರು. ಪಾಟೀಲ ಗ್ರಾಮದ ಪ್ರಮುಖ. ಗ್ರಾಮಲೆಕ್ಕಿಗನ ಹೆಸರು ಪಟವಾರಿ, ಕರ್ಣಂ ಅಥವಾ ಕುಲಕರ್ಣಿ, ಪಾಟೀಲರಲ್ಲಿ ರೆವಿನ್ಯೂ ಪಾಟೀಲ (ಮಾಲಿ ಪಾಟೀಲ), ಪೊಲೀಸು ಪಾಟೀಲ ಎಂಬ ಎರಡು ವರ್ಗ. 1870ರ ವರಗೆ ಪಾಟೀಲರಿಗೂ ಪಟವಾರಿಗಳಿಗೂ ಅವರ ಸೇವೆ ಗಾಗಿ ಇನಾಂಗ್ರಾಮಗಳನ್ನು ಕೊಡಲಾಗಿತ್ತು. ಆ ತರುವಾಯ ಸರ್ಕಾರ ಅವರ ಇನಾಂಗ್ರಾಮಗಳನ್ನು ಹಿಂದಕ್ಕೆ ಪಡೆದುಕೊಂಡು ಅದಕ್ಕೆ ಪ್ರತಿಯಾಗಿ ಅವರಿಗೆ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತಂದಿತು. ತಹಸೀಲ್ದಾರ್, ಮುನ್ಸೀಫ್, ನಾಜಿಮಾ–ಇ–ಸುಭಾ–ಇವರು ವಿವಿಧ ಹಂತಗಳಲ್ಲಿ ನ್ಯಾಯಡಳಿತವನ್ನು ನಿರ್ವಹಿಸುತ್ತಿದ್ದರು. ಎಲ್ಲಕ್ಕೂ ಮೇಲೆ ಉಚ್ಚ ನ್ಯಾಯಾಲಯ ವಿತ್ತು. ತಾಲೂಕು ಹಂತದಿಂದ ರಾಜ್ಯದ ಪ್ರಮುಖ ಹಂತದವರೆಗೆ ಪ್ರತಿಯೊಂದು ನ್ಯಾಯಾಲಯವೂ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಿತ್ತು.

**ಆರ್ಥಿಕ ಸಾಮಾಜಿಕಸ್ಥಿತಿ:** ನಿಜಾಮರ ಆಳ್ವಿಕೆಯಲ್ಲಿ ಗುಲ್ಬರ್ಗ ವಿಭಾಗದ ಆರ್ಥಿಕ ಪರಿಸ್ಥಿತಿ ಅವರ ರಾಜ್ಯದ ಇತರ ಪ್ರದೇಶಗಳಿಗಿಂತ ಭಿನ್ನವಾಗಿರಲಿಲ್ಲ. ಬಿಜಾಪುರ ಭಾಗದ ಬಗ್ಗೆ ನಿಜಾಮರಿಗೆ ಶಂಕೆಯಿತು. ಫಲವತ್ತಾದ ಪ್ರದೇಶಗಳನ್ನೂ ಬ್ರಿಟಿಷರಿಗೆ ಖಾಯಂ ಆಗಿ ಬಿಟ್ಟು ಕೊಟ್ಟು ಹೆಚ್ಚು ಫಲವತ್ತಾಗಿಲ್ಲದಿದ್ದ ಗುಲ್ಬರ್ಗ ಹಾಗೂ ಬಿದರೆ ಭಾಗಗಳು ನಿಜಾಮರಿಗೆ ಉಳಿದವು. ಈ ಪ್ರದೇಶಗಳು ಸಾಮಾನ್ಯವಾಗಿ ಮಳೆಯ ಅಭಾವ ಹಾಗೂ ಕೆಲವು ವೇಳೆ ಕ್ಷಾಮಪರಿಸ್ಥಿತಿಗೆ ಒಳಗಾಗುವಂಥವು. 18 ಮತ್ತು 19ನೆಯ ಶತಮಾನಗಳಲ್ಲಿ ಸು.18 ಸಲ ಈ ಭಾಗಗಳಲ್ಲಿ ದುರ್ಭಿಕ್ಷ ಪರಿಸ್ಥಿತಿ ತಲೆದೋರಿತ್ತು. ಫಲವತ್ತಾದ ರಾಯಚೂರು ಪ್ರದೇಶದಲ್ಲಿ ಸಹ ಕ್ಷಾಮದ ಬೇಗೆ ಉಂಟಾಗುತ್ತಿತ್ತು. ನಿಜಾಮರ ಸರ್ಕಾರ ಅಂಥ ಕ್ಷಾಮ ಮತ್ತು ಅಭಾವ ಕಾಲದಲ್ಲಿ ತೆರಿಗೆ ವಸೂಲಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯುತ್ತಿತ್ತು. ಅನಾವೃಷ್ಟಿ ತೀವ್ರವಾಗಿದ್ದರೆ ಕಂದಾಯವನ್ನು ಮಾಫಿ ಮಾಡುತ್ತಿತ್ತು. ಮಳೆಯಾಗದ ಪ್ರದೇಶಗಳಲ್ಲಿ ಪರಿಹಾರ ಕ್ರಮಗಳನ್ನೂ ಕೈಗೊಳ್ಳುತ್ತಿತ್ತು.

ಭೂಮಿಗೆ ಸಂಬಂಧಿಸಿದಂತೆ ಪದ್ಧತಿ ಸಾಮಾನ್ಯವಾಗಿತ್ತು. ಗುಲ್ಬರ್ಗ, ಬಿದರೆ, ರಾಯಚೂರು ಜಿಲ್ಲೆಗಳಲ್ಲಿ ಸರ್ವೇಕ್ಷಣೆ ನಡೆಸಿ ಹಿಡುವಳಿಗಳನ್ನು ನಿಗದಿ ಮಾಡಲಾಗಿತ್ತು. ಸರ್ಕಾರಕ್ಕೆ ಸಲ್ಲಬೇಕಾಗಿದ್ದ ಕಂದಾಯವನ್ನು ಪಾವತಿ ಮಾಡುವವರೆಗೂ ವ್ಯವಸಾಯ ಮಾಡುತ್ತಿದ್ದ ಭೂಮಿಯ ಮೇಲೆ ಸ್ವಾಮ್ಯ ಹೊಂದಿರಬಹುದಾಗಿತ್ತು. ಭೂಮಿಯಲ್ಲಿ ಬಿಜ ಬಿತ್ತಿದ ಪ್ರಮಾಣ ಇಲ್ಲವೆ ಉತ್ಪನ್ನವಾದ ಫಸಲಿನ ಆದಾರದ ಮೇಲೆ ಕಂದಾಯ ನಿಗದಿ ಯಾಗುತ್ತಿತ್ತು. ಖುಷ್ಕಿ ಭೂಮಿಯಾದರೆ ರಾಜ್ಯದ ಪಾಲು ಭೂಮಿಯ ಉತ್ಪನ್ನದಲ್ಲಿ ¼ ಭಾಗ, ತರಿ ಭೂಮಿಯಾದರೆ ಅದರ ಉತ್ಪನ್ನದಲ್ಲಿ ½ ಭಾಗದವರೆಗೆ ಇರುತ್ತಿತ್ತು.

18ನೆಯ ಶತಮಾನದಲ್ಲಿ ಈ ಪ್ರದೇಶ ಮರಾಠರ ದಾಳಿಗೆ ತುತ್ತಾಗಿ ಮತ್ತೆ ಶಾಂತಿ ನೆಲೆಸಿದ ಮೇಲೆ ಕಂದಾಯ ವಸೂಲಿಯನ್ನು ಬ್ಯಾಂಕರುಗಳಿಗೆ ಹಾಗೂ ಪಠಾಣ ಸೈನಿಕರಿಗೆ ಗೇಣಿಗೆ ವಹಿಸಿಕೊಡುವ ಪದ್ಧತಿ ರೂಢಿಗೆ ಬಂತು. 19ನೆಯ ಶತಮಾನದಲ್ಲಿ ಈ ಪದ್ಧತಿಯನ್ನು ಸರ್ ಸಾಲಾರ್ ಜಂಗ್ ರದ್ದು ಮಾಡಿದ. ಅದು ಜನರ ಏಳಿಗೆಗೆ ಕಾರಣವಾಗಬಲ್ಲ ಜನಪ್ರಿಯ ಕ್ರಮವಾಗಿತ್ತು.

ಆಸಫ್‌ಜಾಹಿ ಆಳ್ವಿಕೆಯಲ್ಲಿ ಕಲೆ, ಕುಶಲತೆ, ಕಲಾತ್ಮಕ ವಸ್ತುಗಳ ತಯಾರಿಕೆ, ಹತ್ತಿ ಮತ್ತು ರೇಷ್ಮೆ ಉದ್ಯಮ, ಲೋಹ ಮತ್ತು ಬಿದ್ರಿ ವಸ್ತುಗಳು ಸೇರಿದಂತೆ ಮೊದಲಾದವು ಸುಸ್ಥಿತಿಯಲ್ಲಿದ್ದುವು. ರಾಯಚೂರು ಹಾಗೂ ಲಿಂಗಸುಗೂರು ರೇಷ್ಮೆಸೀರೆಗಳ ನೇಯ್ಗೆಗೆ, ಗುಲ್ಬರ್ಗ ಟಸಾರ್ ಮತ್ತು ಮಷ್ರೂ ರೇಷ್ಮೆ ಬಟ್ಟೆ ಮತ್ತು ಶತ್ರಂಗಿ ತಯಾರಿಕೆಗೆ, ಬಿದರೆ ಬಿದ್ರಿ ಕೆಲಸಕ್ಕೆ ಪ್ರಸಿದ್ಧವಾಗಿದ್ದುವು. ಬಿದ್ರಿ ಬಲು ನಾಜೂಕಾದ ಸೂಕ್ಷ್ಮ ಹಾಗೂ ಕಲಾತ್ಮಕವಾದ ಕೆಲಸವಾಗಿತ್ತು.

ನಿಜಾಮರ ಇಡೀ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಕನ್ನಡಿಗರು ಶೇ. 14 ರಷ್ಟಿದ್ದರು. ಅವರಲ್ಲಿ ಹೆಚ್ಚುಮಂದಿ ಗುಲ್ಬರ್ಗ, ಬಿದರೆ ಹಾಗೂ ರಾಯಚೂರು ಜಿಲ್ಲೆಗಳಲ್ಲಿದ್ದರು. ದೇಶದ ಇತರ ಕಡೆಗಳಲ್ಲಿರುವಂತೆ ಈ ಭಾಗದಲ್ಲೂ ಹಿಂದು ಸಮಾಜ ಸಾಂಪ್ರದಾಯಿಕವಾಗಿ ವಿಭಜಿತವಾಗಿತ್ತು. ಚತುರ್ವರ್ಣಗಳ ಜೊತೆಗೆ ಈ ವ್ಯವಸ್ಥೆಯ ಹೊರಗಿದ್ದು ಅನೇಕ ಉಪಯುಕ್ತ ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿದ್ದವರೂ ಇದ್ದರು. ಮಾಲ, ಢೇರ, ಬಂಜಾರ ಅಥವಾ ಲಂಬಾಣಿ, ವಡ್ಡ, ಗಂಡಾಲ(ಈಡಿಗ), ಕೋರವ(ನೇಕಾರ) ಮೊದಲಾದ ಜನ ಇಲ್ಲಿದ್ದು ಗ್ರಾಮದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖಪಾತ್ರ ವಹಿಸಿದ್ದರು. ಕಾಪು ಅಥವಾ ಕುಣ್ಬಿ (ರೈತವರ್ಗ) ಹಾಗೂ ಗುಲ್ಲಜನ ಸಹ ಅಧಿಕವಾಗಿದ್ದರು. ಹಿಂದು ಹಾಗೂ ಮುಸಲ್ಮಾನ ಸ್ತ್ರೀಯರಲ್ಲಿ ಸೀರೆ ಮತ್ತು ಚೋಳಿ ಸಾಮಾನ್ಯ. ಮುಸಲ್ಮಾನ ಹೆಂಗಸರು ಲಂಗ ಹಾಗೂ ಚೋಳಿ ಧರಿಸಿ ಭುಜದ ಮೇಲೆ ದುಪ್ಪಟ ಹೊದೆಯುವುದೂ ರೂಢಿ. ಲಂಬಾಣಿ ಸ್ತ್ರೀಯರ ಉಡುಪು ಸೊಂಟದಿಂದ ಇಳಿಬಿಟ್ಟ ಘಾಗ್ರ (ಲಂಗ) ಮತ್ತು ಮೇಲೆ ಕುಪ್ಪಸ.

ಈ ಭಾಗದಲ್ಲಿ ಕರ್ನಾಟಕದ ಜನ ಇತರ ಭಾಗಗಳಲ್ಲಿರುವಂತೆ ಭಕ್ತಿ ಹಾಗೂ ಮನರಂಜನೆಗಾಗಿ ದೀಪಾವಳಿ, ಕಾಮನ ಹಬ್ಬ, ದಸರ, ನಾಗಪಂಚಮಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಿದ್ದರು. ಈದ್ ಉಜ್ಜುಹ್, ಈದ್–ಉಲ್–ಫಿತರ್, ಮೊಹರಂ ಹಾಗೂ ಪೈಗಂಬರರ ಜನ್ಮದಿನ ಮಹಮ್ಮದೀಯರ ಮುಖ್ಯ ಹಬ್ಬಗಳಾಗಿದ್ದವು. ರಾಜಧಾನಿ ಹೈದರಾಬಾದಿನಲ್ಲಿ ಆಚರಿಸುತ್ತಿದ್ದ ನವರೋಜ್ ಪಾರಸಿ ಹಬ್ಬದ ವೈಭವವನ್ನು ನೋಡಲು ಜನ ಹೋಗುತ್ತಿದ್ದರು.

ಜನರ ಮುಖ್ಯ ಆಹಾರ ಜೋಳದಿಂದ ತಯಾರಿಸಿದ ರೊಟ್ಟಿ. ನಂಜಿಕೊಳ್ಳುವುದಕ್ಕೆ ಬೇಳೆ ತರಕಾರಿ ಉಳ್ಳಾಗಡ್ಡೆ ಹಾಗೂ ಸಾಂಬಾರ ದಿನಸಿಗಳನ್ನು ಹಾಕಿ ಮಾಡಿದ ಸಾರು ಅಥವಾ ಪಲ್ಯ. ಕೆಲವು ವರ್ಗದ ಹಿಂದುಗಳು ಹಾಗೂ ಮುಸಲ್ಮಾನರು ಮಾಂಸಾಹಾರಿಗಳಾಗಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿದ್ದ ಮುಸಲ್ಮಾನರು ತಮ್ಮ ನೆರೆಹೊರೆಯವರಾದ ಹಿಂದುಗಳಿಗೆ ಅಸಮಾಧಾನವಾಗಬಾರದೆಂದು ಗೋಮಾಂಸವನ್ನು ನಿಷೇಧಿಸಿದ್ದರು. ನಗರವಾಸಿಗಳದ್ದು ವಿಶಾಲದೃಷ್ಟಿ, ಸಂಪ್ರದಾಯಗಳಿಗೆ ಕಟ್ಟು ಬಿದ್ದವರಲ್ಲ.

ಹಿಂದು ಹಾಗೂ ಮುಸಲ್ಮಾನರಲ್ಲಿ ಬಹುಪತ್ನಿತ್ವಕ್ಕೆ ಅವಕಾಶವಿತ್ತು. ಆದಾಗ್ಯೂ ವಿವಾಹಿತ ಸ್ತ್ರೀ–ಪುರುಷರ ಸಂಖ್ಯೆ ಸಮವಾಗಿದ್ದ ಕಾರಣ ಈ ಪದ್ಧತಿ ಹೆಚ್ಚಾಗಿ ಆಚರಣೆಯಲ್ಲಿರಲ್ಲವೆಂದು ತೋರುತ್ತದೆ. ವಿಧವೆಯರು ಸಾಕಷ್ಟು ಸಂಖ್ಯೆಯಲ್ಲಿದ್ದುದನ್ನು ನೋಡಿದರೆ ವಿಧವಾ ವಿವಾಹ ಸಮಾಜಗ್ರಾಹ್ಯವಾಗಿರಲಿಲ್ಲವೆಂದೆನಿಸುತ್ತದೆ. ಆದರೆ ರೈತವರ್ಗದಲ್ಲಿ ವಿಧವೆಯರ ಪುನರ್ವಿವಾಹಕ್ಕೆ ಅಡ್ಡಿಯಿರಲಿಲ್ಲ. ಅಂಥ ವಿವಾಹವನ್ನು ಮೊಹತುರಾತ್ ಅಥವಾ ಮರ್ಮನು ಎಂದು ಕರೆಯಲಾಗುತ್ತದೆ.

**ವಾಸ್ತು–ಶಿಲ್ಪ:** ಆಸಫ್‌ಜಾಹಿ ಅರಸರು ಹಾಗೂ ಅವರ ವಜೀರರು (ಮಂತ್ರಿಗಳು) ಕಲೆ ಮತ್ತು ಶಿಲ್ಪಕ್ಕೆ ಉತ್ತೇಜನವಿತ್ತು ಸುಂದರವಾದ ಅರಮನೆ, ಮಸೀದಿ, ಉದ್ಯಾನ ಮುಂತಾದ ವನ್ನು ನಿರ್ಮಿಸಿದ್ದಾರೆ. ಆದರೆ ರಾಜಧಾನಿ ಹೈದರಾಬಾದಿನಿಂದ ಹೊರಗಡೆ ಇವರು ನಿರ್ಮಿಸಿದ ಕಟ್ಟಡಗಳು ಕಡಿಮೆ. ಗುಲ್ಬರ್ಗದ ಐವಾನ್–ಎ–ಶಾಹಿ ಕಟ್ಟಡದಲ್ಲಿ ಗುಲ್ಬರ್ಗ ವಿಭಾಗದ ಮುಖ್ಯ ಕಚೇರಿಗಳಿದ್ದವು. ಆದರೆ ಹೈದರಾಬಾದಿನ ಬೃಹತ್ ಕಟ್ಟಡಗಳಿಗೆ ಹೋಲಿಸಿದರೆ ಅದೊಂದು ಸಾಮಾನ್ಯ ಕೃತಿ. ಆದರೆ ಕರ್ನಾಟಕ ಭಾಗದ ಐತಿಹಾಸಿಕ ಹಾಗೂ ಪುರಾತನವಸ್ತು ಸಂಬಂಧವಾದ ಕಟ್ಟಡಗಳನ್ನು ರಕ್ಷಿಸುವುದರಲ್ಲಿ ನಿಜಾಮರ ಸರ್ಕಾರ ಶ್ರಮವಹಿಸುತ್ತಿತ್ತು.

ಗುಲ್ಬರ್ಗ, ರಾಯಚೂರು, ಮುದ್ಗಲ್ ಮೊದಲಾದೆಡೆಯ ಕೋಟೆಗಳು, ಹಲವಾರು ಮಸೀದಿಗಳು ನಾಗಾಯಿ ಮೊದಲಾದೆಡೆಯ ಕೋಟೆಗಳು, ಹಲವಾರು ದೇವಾಲಯಗಳು ನಿಜಾಮ ಸರ್ಕಾರದಿಂದ ರಕ್ಷಿತವಾಗಿದ್ದುವು.

**ನಾಣ್ಯಗಳು:** ನಿಜಾಮರ ರಾಜ್ಯದಲ್ಲಿ ವಿವಿಧ ಮಾದರಿಯ ನಾಣ್ಯಗಳು ಚಲಾವಣೆಯಲ್ಲಿದ್ದವು. 1854ರಲ್ಲಿ ರೂಢಿಗೆ ತಂದ ಹಾಲಿ ಸಿಕ್ಕ ಮತ್ತು 1904ರಲ್ಲಿ ಚಲಾವಣೆಗೆ ಬಂದ ಮಹಬೂಬಿಯ ರೂಪಾಯಿ ನಿಜಾಮರು ಟಂಕಿಸುತ್ತಿದ್ದ ನಾಣ್ಯಗಳು. ಮಹಬೂಬಿಯ ರೂಪಾಯಿಯ ಒಂದು ಮುಖದಲ್ಲಿ ಒಂದು ಚಾರ್‌ಮಿನಾರ್ ಕಟ್ಟಡದ ಚಿತ್ರವಿರುತ್ತದೆ. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಬೆಳ್ಳಿಯ ಅಭಾವದಿಂದ ಹಾಲಿ ಸಿಕ್ಕ ನಾಣ್ಯಗಳ ಟಂಕಣೆಯನ್ನು ನಿಲ್ಲಿಸಲಾಯಿತು. ಮಹಬೂಬ್ ಆಲಿಖಾನ್ ನಿಜಾಮರಾದಾಗ ನಾಣ್ಯ ಪದ್ಧತಿಯಲ್ಲಿ ಮತ್ತೆ ಸ್ಥಿರತೆ ಬಂತು. ನಿಜಾಮರು ಬೆಳ್ಳಿಯ ನಾಣ್ಯಗಳೊಡನೆ ವಿವಿಧ ಮೌಲ್ಯಗಳ ತಾಮ್ರದ ನಾಣ್ಯಗಳನ್ನು ಸಹ ಚಲಾವಣೆಗೆ ತಂದಿದ್ದರು. (ಬಿ.ಎಸ್.ಎ.)

**ಆಸ್ಟರ್‌ಲಿಟ್ಸ್ ಕದನ:** ನೆಪೋಲಿಯನ್ನನ ಪ್ರಮುಖ ಕದನಗಳಲ್ಲೊಂದು. ಈ ಕದನದಲ್ಲಿ ನೆಪೋಲಿಯನ್ 1805 ಡಿಸೆಂಬರ್ 2ರಂದು ಆಸ್ಟ್ರಿಯ ಮತ್ತು ರಷ್ಯ ರಾಜ್ಯಗಳ ಸಂಯುಕ್ತ ಸೈನ್ಯವನ್ನೆದುರಿಸಿ ಪ್ರಚಂಡ ವಿಜಯ ಗಳಿಸಿದ. ಆಸ್ಟ್ರಿಯ ಮತ್ತು ರಷ್ಯದ ಚಕ್ರವರ್ತಿಗಳೇ ಈ ಕದನದಲ್ಲಿ ಭಾಗವಹಿಸಿದ್ದರಿಂದ ಇದನ್ನು ಮೂವರು ಸಾಮ್ರಾಟರ ಕದನ ಎಂದೂ ಕರೆಯಲಾಗುತ್ತದೆ. ಇದರಲ್ಲಿ ನೆಪೋಲಿಯನ್ ತೋರಿಸಿದ ವ್ಯೂಹನಿರ್ಮಾಣ ವಿವೇಕ, ಸೈನ್ಯಸಂಚಾಲನೋಪಾಯ ಇಡೀ ಯುರೋಪನ್ನೇ ದಿಗ್ಭ್ರಮೆಗೊಳಿಸಿತು. ಇದರಿಂದ ಕೆಲವು ವರ್ಷಕಾಲ ನೆಪೋಲಿಯನ್ನನ ಸೈನ್ಯವನ್ನೆದುರಿಸಲು ಯುರೋಪಿನ ಇತರ ರಾಷ್ಟ್ರಗಳು ಹೆದರಿದವು. ಈ ವಿಜಯ ಪ್ರಾಪ್ತವಾದದ್ದು ನೆಪೋಲಿಯನ್ ಚಕ್ರವರ್ತಿ ಪದವಿ ಪಡೆದ ಮೊದಲ ವಾರ್ಷಿಕೋತ್ಸವದ ದಿನ. ಲಿಯೊ ಟಾಲ್‌ಸ್ಟಾಯ್ ತನ್ನ ವಾರ್ ಅಂಡ್ ಪೀಸ್ ಎಂಬ ಮಹಾಕಾದಂಬರಿಯಲ್ಲಿ ಈ ಕದನವನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ. (ಎಚ್.ಆರ್.ಡಿ.)

**ಆಸ್ಟ್ರೇಲಿಯ:** ಕಾಮನ್‌ವೆಲ್ತ್ ಒಕ್ಕೂಟದ ಸ್ವತಂತ್ರ ದೇಶ, ಆಸ್ಟ್ರೇಲಿಯ ಖಂಡದ ಒಂದು ರಾಜ್ಯ. ಆಸ್ಟ್ರೇಲಿಯದ ಮಧ್ಯದಲ್ಲಿ ದಕ್ಷಿಣಭಾಗದಲ್ಲಿದೆ. ಹಬ್ಬಗಳ ಮತ್ತು ವೈನ್(ದ್ರಾಕ್ಷಾರಸ) ರಾಜ್ಯವೆಂದು ಹೆಸರಾಗಿರುವ ಇದನ್ನು ಉತ್ತರದಲ್ಲಿ ಆಸ್ಟ್ರೇಲಿಯದ ಉತ್ತರ ಪ್ರಾಂತ್ಯ, ಈಶಾನ್ಯದಲ್ಲಿ ಕ್ವೀನ್ಸ್‌ಲೆಂಡ್, ಪಶ್ಚಿಮದಲ್ಲಿ ಪಶ್ಚಿಮ ಆಸ್ಟ್ರೇಲಿಯ, ಪೂರ್ವದಲ್ಲಿ ವಿಕ್ಟೋರಿಯ ಮತ್ತು ನ್ಯೂಸೌತ್ ವೇಲ್ಸ್, ದಕ್ಷಿಣದಲ್ಲಿ ಗ್ರೇಟ್ ಆಸ್ಟ್ರೇಲಿಯನ್ ಬೈಟ್ ಮತ್ತು ಹಿಂದೂಸಾಗರ ಸುತ್ತುವರೆದಿದೆ.

**ಇತಿಹಾಸ:** 1627ರ ಸುಮಾರಿಗೆ ಡಚ್ ನಾವಿಕರು ಈಗಿನ ದಕ್ಷಿಣ ಆಸ್ಟ್ರೇಲಿಯ ಪ್ರದೇಶವನ್ನು ಕಂಡುಹಿಡಿದರು. 1644ರಲ್ಲಿ ಅಬೆಲ್ ಟಾಸ್ಮನ್ ಈ ಪ್ರದೇಶದ ಸರ್ವೇಕ್ಷಣೆ ನಡೆಸಿದ. 1802ರಲ್ಲಿ ಮ್ಯಾತ್ಯೂಫ್ಲಿಂಡರ್ಸ್ ದಕ್ಷಿಣ ತೀರವನ್ನು ಸುತ್ತಿ ಭೂಪಟವನ್ನು ತಯಾರಿಸಿದ. ಸ್ಟೂಯರ್ಟ್ 1828ರಲ್ಲಿ ಮರೀ ನದಿಯ ಮುಖದವರೆಗೆ ಸಂಚರಿಸಿದ. 1834ರಲ್ಲಿ ಮೊದಲಿನ ನೆಲಸಿಗರು ಕಾಂಗರೂ ದ್ವೀಪದಲ್ಲಿ ಬಂದಿಳಿದರು. ಆದರೆ ಶೀಘ್ರದಲ್ಲೇ ವಿಸ್ತಾರ ಭೂಭಾಗದಲ್ಲಿ ಜನ ನೆಲಸಲಾರಂಭಿಸಿದರು. ದಕ್ಷಿಣ ಆಸ್ಟ್ರೇಲಿಯ ಕಂಪನಿ ಎಂಬ ಸಂಸ್ಥೆ ವ್ಯವಸಾಯದಲ್ಲಿ ನೆಲಸಿಗರಿಗೆ ಸಹಾಯ ನೀಡಿತು. 1836 ಡಿಸೆಂಬರ್ 28 ರಂದು ದಕ್ಷಿಣ ಆಸ್ಟ್ರೇಲಿಯವನ್ನು ಬ್ರಿಟಿಷ್ ಪ್ರಾಂತವೆಂದು ಘೋಷಿಸಲಾಯಿತು. ಅಡಿಲೇಡ್ ನಗರದ ಸ್ಥಾಪನೆಯಾದ್ದು 1842ರಲ್ಲಿ. 1856ರಲ್ಲಿ ಹೊಸ ಸಂವಿಧಾನ ಅಸ್ತಿತ್ವಕ್ಕೆ ಬಂತು. ಬಂಗಾರದ ಗಣಿಗಳ ಅಭಾವ, ಕೈದಿಗಳನ್ನು ವಸಾಹತಿಗೆ ಕಳಿಸಬಾರದೆಂಬ ನಿರ್ಣಯ–ಇವು ಹೆಚ್ಚು ಸ್ಥಿರವಾದ ಆರ್ಥಿಕ ಜೀವನಕ್ಕೆ ಸಹಕಾರಿಯಾದವು. ವಿಕ್ಟೋರಿಯ ಪ್ರಾಂತದಲ್ಲಿ ಹೊಸ ಚಿನ್ನದ ಗಣಿಗೆ ಆದ ನುಗ್ಗಾಟದಿಂದ ಇಲ್ಲಿ ಕೃಷಿಗೆ ಪ್ರೋತ್ಸಾಹ ದೊರಕಿತು. 1870ರ ಸುಮಾರಿಗೆ ದಕ್ಷಿಣ ಆಸ್ಟ್ರೇಲಿಯದ ಗೋದಿ ಆಸ್ಟ್ರೇಲಿಯದ ಮಾರುಕಟ್ಟೆಗಳಲ್ಲಿ ಅಮೆರಿಕದ ಗೋದಿಯ ಸ್ಥಾನವನ್ನು ಆಕ್ರಮಿಸಿತ್ತು. ಲೌಕಿಕ ಶಿಕ್ಷಣ ಕ್ರಮ ಜನರ ಪ್ರಗತಿಗೆ ಸಹಕಾರಿಯಾಯಿತು. ಕೃಷಿಯೊಂದಿಗೆ ಕುರಿಗಳ ಸಾಕಣೆಯೂ ಬೆಳೆಯಿತು. 1860–1900ರ ಅವಧಿಯಲ್ಲಿ ಇಡೀ ರಾಜ್ಯದ ಸರ್ವೇಕ್ಷಣೆ ನಡೆಯಿತು. ಇದು ಆಸ್ಟ್ರೇಲಿಯ ಸಮಧಿರಾಜ್ಯದ ಒಂದು ರಾಜ್ಯವಾದದ್ದು 1901ರಲ್ಲಿ. ದಕ್ಷಿಣ ಆಸ್ಟ್ರೇಲಿಯದ ಭಾಗವಾಗಿದ್ದ ಉತ್ತರಪ್ರದೇಶ 1911ರಲ್ಲಿ ಪ್ರತ್ಯೇಕವಾಯಿತು. (ಕೆ.ವಿ.ಎಸ್‌ಯು.)

ಆಸ್ಟ್ರೇಲಿಯ ಒಂದನೆಯ ಹಾಗೂ ಎರಡನೆಯ ಮಹಾಯುದ್ಧಗಳಲ್ಲಿ ಬ್ರಿಟನ್ ಪಡೆಯನ್ನು ಬೆಂಬಲಿಸುವುದರ ಮೂಲಕ ಜಪಾನ್ ಆಕ್ರಮಣದಿಂದ ಪಾರಾಯಿತು. 1960ರ ಅನಂತರ ಇಲ್ಲಿ ಮೂಲ ನಿವಾಸಿಗಳು ಹಾಗೂ ವಲಸೆಗಾರರ ನಡುವೆ ಸೌಹಾರ್ದಯುತ ವಾತವರಣ ಕಂಡುಬರುತ್ತಿದೆ. 1990ರ ಅನಂತರದಲ್ಲಿ ಬ್ರಿಟಿಷ್ ರಾಜಪ್ರಭುತ್ವದೊಂದಿಗಿನ ಸಂಬಂಧಗಳನ್ನು ತ್ಯಜಿಸಿ ಪ್ರಜಾಪ್ರಭುತ್ವ ಗಣರಾಜ್ಯವಾಗಿದ್ದು ಏಷ್ಯ–ಪೆಸಿಫಿಕ್ ವಲಯದ ನೀತಿ ನಿರೂಪಣೆಯಲ್ಲಿ ಪ್ರಮುಖ ರಾಷ್ಟ್ರವೆನಿಸಿದೆ.

**ಆಸ್ಟ್ರೇಲಿಯ ಶೋಧನೆ:** ಲಾಸ್ ಎಂಜಲಿಸ್ ಲೈಬ್ರರಿಯ ತಿಜೋರಿಯಲ್ಲಿ ದೊರೆತ 16ನೆಯ ಶತಮಾನದ ಸಮುದ್ರಸಂಬಂಧಿ ನಕ್ಷೆಯ ಪ್ರಕಾರ ಆಸ್ಟ್ರೇಲಿಯ ಭೂಖಂಡವನ್ನು ಶೋಧಿಸಿದವರು ಡಚ್ ಅಥವಾ ಬ್ರಿಟಿಷರಲ್ಲ, ಪೋರ್ಚುಗೀಸರು ಎಂದು ಬಿಯಾಂಡ್ ಕೇಪ್ರಿಕಾರ್ನ್ ಎಂಬ ಹೊಸ ಪುಸ್ತಕದ ಲೇಖಕ ಪೀಟರ್ ಟ್ರಿಕೆಟ್ ಹೇಳಿದ್ದಾನೆ. ಪೋರ್ಚುಗೀಸ್ ಸಮುದ್ರಯಾನಿ ಕ್ರಿಸ್ಟೋಫರ್ ದ ಮೆಂಡೋನ್ಸ ತನ್ನ ನಾಲ್ಕು ನೌಕೆಗಳೊಂದಿಗೆ 1522ರಲ್ಲೇ ಸಿಡ್ನಿಯ ಬಾಟನಿ ಬೇ ತಲುಪಿದ್ದನೆಂಬುದಕ್ಕೆ ಪೋರ್ಚುಗೀಸ್ ಭಾಷೆಯಲ್ಲಿರುವ ಆಸ್ಟ್ರೇಲಿಯದ ಪೂರ್ವತೀರದ ಈ ಭೂಪಟವೇ ಸಾಕ್ಷಿ ಎಂಬುದು ಇವರ ಅಭಿಪ್ರಾಯ. ಇದು ನಿಜವಾಗಿದ್ದಲ್ಲಿ ಬ್ರಿಟನ್ನಿನ ಕ್ಯಾಪ್ಟನ್ ಕುಕ್‌ಗಿಂತ 250 ವರ್ಷಗಳ ಮುಂಚೆಯೇ ಆಸ್ಟ್ರೇಲಿಯವನ್ನು ಕಂಡು ಹಿಡಿದಾಗಿತ್ತು. ಸಣ್ಣ ನಕ್ಷೆಯನ್ನು ದೊಡ್ಡದಾಗಿಸಿ ನೋಡಿದಾಗ ಬಾಟನಿ ಬೇಯ ಎಲ್ಲ ಪ್ರಾಕೃತಿಕ ಲಕ್ಷಣಗಳೂ ಅದರಲ್ಲಿ ಕಂಡುಬಂದವು. ಈ ನಕ್ಷೆಯು ವ್ಯಾಲರ್ಡ್ ನಕ್ಷೆಯೆಂಬ, ಕೈಯಿಂದ ಬರೆದ 15 ಭೂಪಟಗಳ ಸಂಗ್ರಹಕ್ಕೆ ಸೇರಿದೆ. 1545ರ ಮುಂಚೆಯೇ ಇವು ಫ್ರಾನ್ಸಿನಲ್ಲಿ ತಯಾರಾದವು. ಟೆರ್ರಾ ಜಾವ ಎಂದು ಕರೆಯಲಾಗುವ ಎರಡು ನಕ್ಷೆಗಳಿಗೂ ಆಸ್ಟ್ರೇಲಿಯದ ಪೂರ್ವತೀರಕ್ಕೂ ತೀರ ಎದ್ದುಕಾಣುವ ಹೋಲಿಕೆಗಳು ಕಂಡುಬಂದವು. ಆದರೆ ಒಂದು ಕಡೆ ಮಾತ್ರ ಸು. 1500 ಕಿಮೀ ಉದ್ದದ ಕಡಲ ತೀರ ಲಂಬಕೋನದಲ್ಲಿ ಹೊರಚಾಚಿಕೊಂಡಿತ್ತು; ಮತ್ತು ಆ ಜಾಗಗಳಿಗೆಲ್ಲ ಪೋರ್ಚುಗೀಸ್ ಹೆಸರಿರುವುದೂ ಬಿಡಿಸಲಾಗದ ಒಗಟಾಗಿತ್ತು. ಸೆರೆಹಿಡಿದ ಪೋರ್ಚುಗೀಸ್ ನೌಕೆಗಳಿಂದ ಮತ್ತು ಪೋರ್ಚುಗಲ್ಲಿನಿಂದ ಕಾನೂನುಬಾಹಿರವಾಗಿ ಫ್ರೆಂಚ್ ನಕಾಶೆಕಾರರು ನಕ್ಷೆಗಳನ್ನೂ ಪೋರ್ಟೊಲಾನ್ ರೇಖಾಚಿತ್ರಗಳನ್ನೂ ವಶಪಡಿಸಿಕೊಳ್ಳುತ್ತಿದ್ದರು ಎಂಬುದನ್ನು ಸಾಮಾನ್ಯವಾಗಿ ಒಪ್ಪಲಾಗುತ್ತದೆ. ಆ ಕಾಲದಲ್ಲಿ ನಕ್ಷೆಗಳನ್ನು ಕುರಿ ಅಥವಾ ಮೇಕೆಯ ತೊಗಲಿನ ಮೇಲೆ ಬಿಡಿಸುತ್ತಿದ್ದರು. ಹೀಗಾಗಿ ಅದರ ವಿಸ್ತೀರ್ಣ ಸಣ್ಣದಾಗಿರುತ್ತಿತ್ತು. ಸು. 3500 ಕಿಮೀ ಉದ್ದವಿರುವ ಪೂರ್ವ ತೀರದ ನಕ್ಷೆಯನ್ನು ಬಿಡಿಸಲು 3–4 ತೊಗಲಿನ ತುಂಡುಗಳು ಬೇಕಾಗಿರುವ ಸಾಧ್ಯತೆ ಇದೆ. ಈ ಸನ್ನಿವೇಶದಲ್ಲಿ, ನಕ್ಷೆ ಬಿಡಿಸುವವರು ನಕಲು ಮಾಡುವಾಗ ಎರಡು ಭಾಗಗಳನ್ನು ತಪ್ಪಾಗಿ ಜೋಡಿಸಿರಬೇಕು. ಕಂಪ್ಯೂಟರನ್ನು ಬಳಸಿ ವ್ಯಾಲರ್ಡ್ ನಕ್ಷೆಯ ದಕ್ಷಿಣ ಭಾಗವನ್ನು $90^0$ ತಿರುಗಿಸಿದಾಗ ಆಸ್ಟ್ರೇಲಿಯದ ಪೂರ್ವತೀರವನ್ನು ಕರಾರುವಕ್ಕಾಗಿ ತೋರಿಸುವ ಭೂಪಟ ದೊರೆಯಿತು! ಪೋರ್ಚುಗೀಸ್ ನೌಕೆಗಳು 1520ರ ಸುಮಾರಿಗೇ ಆಸ್ಟ್ರೇಲಿಯದ ಈಶಾನ್ಯ ತೀರದಲ್ಲಿರುವ ಸಾಂಬಾರ ದ್ವೀಪ ಮಲಕ್ಕಾ ತಲುಪಿದ್ದವೆಂಬುದು ಇದರಿಂದ ಸಾಬೀತಾಗುತ್ತದೆ. ಮಾರ್ಕೊ ಪೋಲೋನ ಚಿನ್ನದ ದ್ವೀಪದ ಹುಡುಕಾಟದಲ್ಲಿ ಮೆಂಡೋನ್ಸ ಹೊರಟಿದ್ದ. ಇವನ ನಕ್ಷೆಯ ಪ್ರಕಾರ ಮಲಕ್ಕಾದ ನೆಲೆಯಿಂದ ನಾಲ್ಕು ನೌಕೆಗಳೊಂದಿಗೆ ಇವನು ಈಶಾನ್ಯ ತೀರದ ಫ್ರೇಸರ್ ದ್ವೀಪ ದಾಟಿ, ಸಿಡ್ನಿಯ ಬಾಟನಿ ಬೇ ಹಾದು, ದಕ್ಷಿಣದಲ್ಲಿರುವ ಕಾಂಗರೂ ದ್ವೀಪವನ್ನು ಬಳಸಿ, ನ್ಯೂಜಿಲೆಂಡಿನ ಉತ್ತರ ದ್ವೀಪದ ಮೂಲಕ ವಾಪಸು ಮಲಕ್ಕಾಕ್ಕೆ ಸಾಗಿದ. ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡಿನ ತೀರಗಳಲ್ಲಿ 16ನೆಯ ಶತಮಾನದ ಪೋರ್ಚುಗೀಸ್ ವಸ್ತುಗಳು ದೊರೆತಿರುವುದು ಈ ಮಾತಿಗೆ ಪುಷ್ಟಿ ನೀಡುತ್ತವೆ. ಮೆಂಡೋನ್ಸನ ಶೋಧವನ್ನು ಉಳಿದ ಯುರೋಪಿಯನ್ ಬಲಗಳಿಗೆ ತಿಳಿಯದಂತೆ ರಹಸ್ಯವಾಗಿಡಲಾಗಿತ್ತೆಂಬುದು ಟ್ರಿಕೆಟ್‌ರ ಅಭಿಪ್ರಾಯ. (ಎಸ್.ಎಚ್.ಆರ್.)

**ಆಳುಪ ವಂಶ:** ಕರ್ನಾಟಕದ ಪ್ರಾಚೀನ ಸಾಮಂತ ಮನೆತನ. ಇವರನ್ನು ಆಳುಕ ಎಂದೂ ಉಲ್ಲೇಖಿಸಿದೆ. ಇವರದು ನಾಗವಂಶವೆಂಬ ಊಹೆ ಇದೆ. ಇವರ ಮೂಲದ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಿಲ್ಲ. ಟಾಲಮಿಯ ಭೂಗೋಳ ಕೈಪಿಡಿಯಲ್ಲಿ ಒಲ್ಯೆ ಖೋರಾ ಎಂಬ ಪದ ಆಳುಪರಿಗೆ ಸಂಬಂಧಿಸಿದ್ದೆಂದು ತರ್ಕವಿದೆ. ಇದೇ ಇವರ ಬಗ್ಗೆ ಮೊಟ್ಟಮೊದಲು ಉಲ್ಲೇಖ ಎಂದು ಹೇಳಬಹುದು. ಹಲ್ಮಿಡಿಯ ಕನ್ನಡದ ಪ್ರಥಮ ಶಾಸನ (ಸು. 430) ದಲ್ಲಿ ಇದರ ಪ್ರಥಮ ಉಲ್ಲೇಖ ಇದೆ. ಆಳುಪ ಪಶುಪತಿ ಇಲ್ಲಿ ಉಕ್ತವಾಗಿರುವ ಆಳುಪರ ಪ್ರಥಮ ರಾಜ. ತಾಳಗುಂದ ಮತ್ತು ಗುಡ್ನಾಪುರ ಶಾಸನಗಳಲ್ಲಿ ಆಳುಪರ ಉಲ್ಲೇಖವಿದೆ. ಇವೆಲ್ಲ ಬನವಾಸಿಯ ಆದಿಕದಂಬರ ಶಾಸನಗಳು. ಆಳುಪರು ಕದಂಬರ ಸಾಮಂತರಾಗಿದ್ದಿರಬೇಕು. ತನ್ನ ಪುತ್ರಿಯರಲ್ಲೊರ್ವಳಾದ ಲಕ್ಷ್ಮಿಯನ್ನು ಆಳುಪ ಪಶುಪತಿಗೆ ವಿವಾಹಮಾಡಿಕೊಟ್ಟಿದ್ದ ಈತನ ಮಗ ಕಕುಸ್ಥಭಟಾರಿ. ಆಳುಪ ಪಶುಪತಿಯ ಆಣತಿಯ ಮೇರೆಗೆ ಇವನ ಸೇನಾನಿ ಅರಕೆಲ್ಲನ ಮಗನಾದ ವಿಜ ಅರಸನು ಕೇಕಯ ಮತ್ತು ಪಲ್ಲವರ ಸಂಯುಕ್ತ ಸೈನ್ಯವನ್ನು ಧೂಳಿಪಟಮಾಡಿ ಕದಂಬ ಕಾಕುಸ್ಥವರ್ಮನಿಗೆ ಜಯತಂದುಕೊಟ್ಟ ಎಂದು ಹಲ್ಮಿಡಿಶಾಸನ ತಿಳಿಸುತ್ತದೆ. ತಾಳಗುಂದದ ಇದೇ ಕಾಕುಸ್ಥವರ್ಮನ ಕಾಲದ ಒಂದು ಶಾಸನದಲ್ಲಿ ಆಳುಪ ಪಶುಪತಿಯ ಮಗನಾದ ಕಕುಸ್ಥಭಟಾರಿಯ ಗುಣವಿಶೇಷಣಗಳ ವರ್ಣನೆ ಇದೆ. ಈತ ದಶಮಂಡಲೀಕರ ನಾಯಕನಾಗಿದ್ದ. ಗುಡ್ನಾಪುರದ ಕದಂಬ ರವಿವರ್ಮನ ಶಾಸನ ಆಳುಪರನ್ನು ಸಾಮಂತರಾಜರೆಂದು ಹೆಸರಿಸಿದೆ. ಹೀಗೆ 5ನೆಯ ಶತಕದ ಪ್ರಾರಂಭಕ್ಕೆ ಒಂದು ಪ್ರಮುಖ ಸಾಮಂತ ಮನೆತನವಾಗಿ ಕಾಣಿಸಿಕೊಂಡು, ತಮ್ಮ ತಮ್ಮ ಅಧಿರಾಜರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿ ನಿಷ್ಠ ಸಾಮಂತರಾಗಿ ಕದಂಬರ ಕೊನೆಗಾಲದವರೆಗೂ ಆಳುಪರು ಇದ್ದರು.

ಚಳುಕ್ಯ ಮಂಗಲೇಶನ ಮಹಾಕೂಟ ಶಾಸನದ (602) ಪ್ರಕಾರ 1ನೆಯ ಕೀರ್ತಿವರ್ಮ (566–598) ಕದಂಬ ಮತ್ತು ಆಳುಪರೀರ್ವರನ್ನೂ ತನ್ನ ವಶಮಾಡಿಕೊಂಡ. 2ನೆಯ ಪುಲಕೇಶಿಯ ಐಹೊಳೆ ಶಾಸನದ (634) ಪ್ರಕಾರ ಆಳುಪರು ಚಳುಕ್ಯ ಅರಸರ ಅಧೀನರಾಗಿದ್ದರು. ಶಾಸನದಲ್ಲಿ ಆಳುಪೇಂದ್ರಾ ಎಂದು ಇವರನ್ನು ಗೌರವಯುತವಾಗಿ (ಪದ್ಯ13) ಸಂಬೋಧಿಸಲಾಗಿದೆ. ಆಳುಪರ ಕುರಿತು ತುಳುನಾಡಿನಲ್ಲಿ ಪ್ರಪ್ರಥಮ ಮಾಹಿತಿ

ದೊರೆಯುವುದು ಸು. 650 ಕ್ಕೆ ಸೇರುವ ವಡ್ಡರ್ಸೆ ಶಾಸನದಲ್ಲಿ. ಒಂದನೆಯ ಆಳುಪರಸನ ಶಾಸನ ಇದು. ಚಳುಕ್ಯವಂಶಕ್ಕೆ ಕಂಚಿಯ ಪಲ್ಲವರಿಂದ ಹಿಡಿದಿದ್ದ ಗ್ರಹಣ ವಿಮೋಚನೆಯಲ್ಲಿ ಈತ ಪ್ರಮುಖ ಪಾತ್ರವಹಿಸಿದ್ದ. ಇದರ ಫಲವಾಗಿ ಚಳುಕ್ಯ ಚಕ್ರವರ್ತಿಯಿಂದ ಕದಂಬ ಮಂಡಲದ ಆಧಿಪತ್ಯವನ್ನು ಆಳುಪರು ಪಡೆದರು. ಈತನ ಮಗ 1ನೆಯ ಚಿತ್ರವಾಹನನು ಚಕ್ರವರ್ತಿ ವಿಯಾದಿತ್ಯನ ಮಗಳಾದ ಕುಂಕುಮದೇವಿಯನ್ನು ವಿವಾಹವಾಗಿದ್ದ. ಆಳುಪ ಚಳುಕ್ಯ ಸಂಬಂಧ ಆಗ ಉತ್ತುಂಗಕ್ಕೇರಿತ್ತು. ಚಿತ್ರವಾಹನನ ಮಗ 3ನೆಯ ಆಳುಪರಸನ ಕನ್ನಡದ ಪ್ರಪ್ರಥಮ ತಾಮ್ರಶಾಸನವಾದ ಬೆಳ್ಮಣ್ಣು ತಾಮ್ರ ಶಾಸನ ಇವನ ಕಾಲದ್ದು ಆ ವೇಳೆಗೆ ಪವಿತ್ರ ಅಗ್ರಹಾರವಾಗಿ ಬೆಳೆದಿದ್ದ ಶಿವಳ್ಳಿಯ ಮರ್ಯಾದೆಗಳನ್ನು ಬೆಳ್ಮಣ್ಣು ಸಭೆಗೂ ವಿಸ್ತರಿಸಿದುದನ್ನು ಇದು ಉಲ್ಲೇಖಿಸಿದೆ. ಉದಿಯಾವರದಲ್ಲೂ ಈತನ ಕಾಲದಲ್ಲಿ ಪಲ್ಲವ ನಂದಿವರ್ಮ ಸ್ವಲ್ಪ ಕಾಲ ಆಳುಪರ ಮೇಲೆ ಅಧಿಕಾರ ಚಲಾಯಿಸಿದ್ದನೆಂಬ ಅನುಮಾನ 2ನೆಯ ನಂದಿವರ್ಮನ ಮಲ್ಲಂ ಶಾಸನದಿಂದ (745–746) ಬರುತ್ತದೆ.

ಅನಂತರ ಕರ್ನಾಟಕದ ಸಾರ್ವಭೌಮಾಧಿಕಾರ ಪಡೆದ ರಾಷ್ಟ್ರಕೂಟರಿಗೂ ಆಳುಪರಿಗೂ ಎಂದಿನ ಸುಲಲಿತ ಸಂಬಂಧವಿದ್ದಂತೆ ಕಾಣುವುದಿಲ್ಲ. ಹೀಗಾಗಿ ಇವರು ಕದಂಬ ಮಂಡಲದ ಮೇಲಿದ್ದ ಅಧಿಕಾರವನ್ನು ಕಳೆದುಕೊಂಡರು. ಇದು ಆಳುಪರ ಮೂಲಸ್ಥಾನದಲ್ಲಿ ಯಾದವೀ ಕಲಹಕ್ಕೆ ಎಡೆಮಾಡಿಕೊಟ್ಟಿತು. ಉದಯಾವರದಲ್ಲಿ ದೊರೆಯುವ ಬಹುಸಂಖ್ಯೆಯ ವೀರ ಗಲ್ಲುಗಳು ಈ ಯಾದವೀ ಕಲಹದ ಮೂಕ ಸಾಕ್ಷಿಗಳು.

2ನೆಯ ಆಳುಪರಸನ ಅನಂತರ ಆಳಿದ ಅರಸರುಗಳು–2ನೆಯ ಚಿತ್ರವಾಹನ, ರಣಸಾಗರ, ಶ್ವೇತವಾಹನ, ಪೃಥ್ವೀಸಾಗರ, ಮಾರಮ್ಮ ಆಳುಪರಸ, ವಿಮಲಾದಿತ್ಯ, ಆಳ್ವ ರಣಂಜಯ ಮತ್ತು ದತ್ತಾಳುಪ. 8ನೆಯ ಶತಮಾನದ ಮಧ್ಯಭಾಗದಿಂದ 10ನೆಯ ಶತ ಮಾನದ ಮಧ್ಯಭಾಗದ ವರೆಗೆ ಇವರ ಆಳ್ವಿಕೆ ಕಾಲ ಹರಡಿತ್ತು.

ಈ ಹಂತದಲ್ಲಿ ಮಂಗಳೂರಿನ ಕದಿರೆಯ (ಕದ್ರಿ) 2ನೆಯ ಕುಂದವರ್ಮನ ಲೋಕೇಶ್ವರ ಪ್ರತಿಮೆಯ ಪೀಠದಲ್ಲಿರುವ ಶಾಸನ ಬಹಳ ಮುಖ್ಯವಾದ ಸಂಗತಿಯನ್ನು ನೀಡುತ್ತದೆ. 968ರ (ಜನವರಿ 13, ಸೋಮವಾರ) ಈ ಶಾಸನ ಅಧಿಕಾರವನ್ನು ಹಸ್ತಾಂತರಿಸಲು ನಿರಾಕರಿಸಿದ ದತ್ತಾಳುಪನನ್ನು ತನ್ನ ಸ್ವಭುಜ ಬಲದಿಂದ ಸೋಲಿಸಿ ರಾಜ್ಯವನ್ನು ಪಡೆದುಕೊಂಡ ತನ್ನ ಚಿಕ್ಕಪ್ಪನನ್ನು ಸೋಲಿಸಿ ರಾಜ್ಯಾಧಿಕಾರವನ್ನು ಪಡೆದುಕೊಂಡಿರುವುದು ಇದರಿಂದ ವ್ಯಕ್ತವಾಗುತ್ತದೆ. ಇಲ್ಲದಿದ್ದಲ್ಲಿ ಸಿಂಹಾಸನ ಅವನಿಂದ ದೂರವೇ ಉಳಿಯುತ್ತಿತ್ತು. ಕುಂದವರ್ಮನ ಅನಂತರ 1ನೆಯ ಜಯಸಿಂಹ ಆಳುಪರಾಜನಾದ ಎಂದು ಕೆ. ವಿ. ರಮೇಶ್ ಅವರ ಅಭಿಪ್ರಾಯ. ಆದರೆ ಇದು ಸರಿ ಎಂದು ಕಾಣುವುದಿಲ್ಲ. ಕಾರಣ ಈತನ ಬಗ್ಗೆ ದೊರೆತಿರುವ ಏಕೈಕ ಶಾಸನದಲ್ಲಿ ಈವರೆಗೆ ದೊರೆತಿರುವ ಆಳುಪ ಶಾಸನಗಳಲ್ಲಿ ಯಾವ ರೀತಿಯ ಭಾವ ವಿಚಾರವನ್ನೂ ಕಾಣುವುದಿಲ್ಲ. ಪ್ರಾಯಶಃ ಈತನೋರ್ವ ಆಳುಪ ಅಧೀನರಾಜನಾಗಿದ್ದರ ಬಹುದು. ಮಾಯಿಪ್ಪಾಡಿ ಅರಸು ಮನೆತನಕ್ಕೆ ಸೇರಿದ ಈತ ಕುಂಬಳೆ ರಾಜ್ಯವನ್ನಾಳುತ್ತಿದ್ದ. ಸ್ವತಂತ್ರನಲ್ಲದಿದ್ದರೂ ಆ ಪರಿಯಲ್ಲಿ ಆಳಿಕೆ ನಡೆಸಿದ್ದನ್ನು ನೋಡಿದರೆ ಆ ಸಮಯದಲ್ಲಿ ಆಳುಪರ ಶಕ್ತಿ ಸ್ವಲ್ಪ ಕಳೆಗುದಿದ್ದಂತೆ ಕಾಣುತ್ತದೆ. ಮುಂದೆ ಕೆಲಕಾಲ ಆಳುಪ ರಾಜ್ಯ ಚೋಳರ ಧಾಳಿಗೆ ಸಿಲುಕಿತ್ತು.

ಆಳುಪರ ಸಹಕಾರದಿಂದ ಸಾಂತರರು ರಾಜಕೀಯವಾಗಿ ಏಳಿಗೆ ಹೊಂದುತ್ತಿದ್ದರು. ಈರ್ವರೊಳಗೆ ವೈವಾಹಿಕ ಸಂಬಂಧಗಳು ಬೆಳೆದಿತ್ತು. ತಮ್ಮ ಪ್ರಾಚೀನ ರಾಜಧಾನಿಗಳಲ್ಲೊಂದಾದ ಪಟ್ಟಿಯನಗರವನ್ನು (ಇಂದಿನ ಕುಂದಾಪುರ ತಾಲ್ಲೂಕಿನ ಹಟ್ಟಿಯಂಗಡಿ) ಆಳುವುದು ಸಾಂತರರಿಗೆ ನೀಡಿದ್ದರು. ಮುಂದೆ ಇವರ ಸಹಕಾರದಿಂದ ಪೊಂಬುಚ್ಚವನ್ನು (ಇಂದಿನ) ಸಾಂತರರು ಪಡೆದರು. ಈ ಬಲಿತ ಸಂಬಂಧ ಕಷ್ಟಕಾಲದಲ್ಲಿ ಆಳುಪರ ರಕ್ಷಣೆಗೆ ಸಾಂತರರು ಬರುವಂತೆ ಮಾಡಿತು. ಚೋಳರ ದಂಡನ್ನು ಧೂಳಿಪಟಮಾಡಿ ಸಾಂತರ ಅಮ್ಮಣ ಆಳುಪ ಬಂಕಿದೇವನನ್ನು ಪುನಃ ಸಿಂಹಾಸನದಲ್ಲಿ ಕೂರಿಸಿದ. ಸಾಂತರ. ತನ್ನ ಮಗಳಾದ ಬೀರಲ ದೇವಿಯನ್ನು ಈತನಿಗೆ ಮದುವೆಮಾಡಿಕೊಟ್ಟ. ಈ ಸಂಬಂಧವನ್ನು ಬಲವರ್ಧನೆ ಮಾಡುವ ಸಲುವಾಗಿ ಬಂಕಿದೇವ ತನ್ನ ತಂಗಿ ಮಂಕಬ್ಬರಸಿಯನ್ನು ಅಮ್ಮಣನ ಮಗನಾದ ತೈಲಪ ದೇವನಿಗೆ ಮದುವೆ ಮಾಡಿಕೊಟ್ಟ. ಈ ತೈಲಪದೇವನಿಗೆ ಇನ್ನೋರ್ವ ಪತ್ನಿಯಿಂದ ಹುಟ್ಟಿದ ಮಗ ವೀರ ಸಾಂತರನಿಗೆ ಆಳುಪ ಪಟ್ಟಿಯೊಡೆಯನ ಮಗಳಾದ ಅಚಲದೇವಿಯನ್ನು ಮದುವೆಮಾಡಿಕೊಡಲಾಯಿತು. ಹೀಗೆ ಆಳುಪ ಸಾಂತರ ಸಂಬಂಧ ಗಟ್ಟಿಯಾಗಿ ಮುಂದುವರೆಯಿತು.

ಬಂಕಿದೇವನ ಅನಂತರ ಆಳುಪ ಸಿಂಹಾಸನವನ್ನೇರಿದವರು ಕ್ರಮವಾಗಿ ಪಟ್ಟಿಯೊಡೆಯ, ಪಾಂಡ್ಯಪಟ್ಟಿಯೊಡೆಯ, ಕವಿ ಆಳುಪ ಮತ್ತು ಪಟ್ಟಿಯೊಡೆಯ ಕುಲಶೇಖರ ಆಳುಪ. ಇಲ್ಲಿ ವಿಶೇಷವಾಗಿ ಉಕ್ತವಾಗಿರುವ ಹೆಸರು ಪಟ್ಟಿಯೊಡೆಯ. ಈ ಕಾಲದ ಆಳುಪರಾಜರು ಪಟ್ಟಿಯನಗರದಿಂದ ಆಳುತ್ತಿದ್ದುದರ ಸಂಕೇತ ಇದಾಗಿರಬಹುದು. ಆಳುಪರಾಜ್ಯ ಬಲಹೀನ ವಾಗಿತ್ತು. ರಾಷ್ಟ್ರಕೂಟರ ಕಾಲದಿಂದ ಈ ರಾಜ್ಯ ಆಳ್ವಖೇಡ ಎಂದು ಗುರುತಿಸಲ್ಪಟ್ಟಿತು.

1ನೆಯ ಕುಲಶೇಖರನ ಅನಂತರ ಸ್ವಲ್ಪಕಾಲ ಸಾಂತರ ಕುಂಡಣ ಆಳುಪ ರಾಜ್ಯವನ್ನಾಳಿದ ವಿಚಾರ ವರಾಂಗ ಶಾಸನದಿಂದ ತಿಳಿಯುತ್ತದೆ. ಅನಂತರ ಕುಲಶೇಖರನ ಮಗನಾದ ವಲ್ಲಭದೇವ 2ನೆಯ ದತ್ತಾಳುಪ ಪಟ್ಟಕ್ಕೆ ಬಂದ. ಈತನಿಗೆ ವೀರಪಾಂಡ್ಯದೇವ ಎಂಬ ಮಗನೂ ಒಬ್ಬಳು ಮಗಳೂ ಇದ್ದರು. ಈಕೆಯ ಮಗ 2ನೆಯ ಬಂಕಿದೇವ. ಈತ ಪ್ರಪ್ರಥಮಬಾರಿ ಅಳಿಯ ಸಂತಾನ ಕಟ್ಟಿನ ಪ್ರಕಾರ ಹಕ್ಕನ್ನು ಪ್ರತಿಪಾದಿಸಿ ವೀರಪಾಂಡ್ಯನ ಮರಣಾನಂತರ ಆಳುಪರಾಜ್ಯದ ಒಂದು ಭಾಗವನ್ನು ಪಡೆದ. ವೀರಪಾಂಡ್ಯದೇವನ ರಾಣಿ ಬಲ್ಲಮಹಾದೇವಿ ತನ್ನ ಮಗ ನಾಗದೇವರಸನ ಪರವಾಗಿ ಸ್ವಲ್ಪಕಾಲ ರಾಜ್ಯವಾಳಿದಳು. ನಾಗದೇವರಸ ಸು.10 ವರ್ಷಗಳ ಕಾಲ ಆಳಿದ. ಅನಂತರ ಆಳುಪ ರಾಜ್ಯವನ್ನಾಳಿದ್ದು 2ನೆಯ ಬಂಕಿದೇವನ ಸಂತಾನ (1285–1400): ಸೋಯಿದೇವ (1315–35), 2ನೆಯ ಕುಲಶೇಖರ (1335–46), 3ನೆಯ ಬಂಕಿದೇವ (1346–55), 3ನೆಯ ಕುಲಶೇಖರ (1355–90), 2ನೆಯ ವೀರಪಾಂಡ್ಯದೇವ (1390–1400) ಸೋಮಿದೇವನ ಕಾಲದಲ್ಲಿ ಹೊಯ್ಸಳರು ಆಳುಪರನ್ನು ಸಂಪೂರ್ಣ ಸೋಲಿಸಿದರೆಂದು ಕಾಣುತ್ತದೆ. ಈ ಸಂಕಟದಿಂದ ಪಾರಾಗಲು ಪ್ರಾಯಶಃ ತನ್ನ ಮಗಳು ಇಲ್ಲವೇ ಸೋದರಿಯನ್ನು ಹೊಯ್ಸಳ ರಾಜ 3ನೆಯ ಬಲ್ಲಾಳನಿಗೆ ಮದುವೆಮಾಡಿಕೊಟ್ಟ. ಶಾಸನಗಳು ಈಕೆಯನ್ನು ಚಿಕ್ಕಾಯಿತಾಯಿ – ಕಿಕ್ಕಾಯಿ ತಾಯಿ ಎಂದು ಹೆಸರಿಸಿವೆ. ಈಕೆ ಹಾಗು ಈಕೆಯಮಗನಾದ ಕುಲಶೇಖರ ತುಳುನಾಡಿನ ಮೇಲೆ ಹೊಯ್ಸಳರ ನೇರ ಪ್ರಭುತ್ವವನ್ನು ಅತ್ಯಲ್ಪ ಕಾಲದ ವರೆಗೆ (1333–48) ಸ್ಥಾಪಿಸಿದ. 1345ರ ವೇಳೆಗೆ ಇಡೀ ಕರಾವಳಿ ವಿಜಯನಗರದ ಪ್ರಭುತ್ವಕ್ಕೆ ಸೇರಿತು.

ಆಳುಪರಿಗೆ ಹಲವು ರಾಜಧಾನಿಗಳಿದ್ದವು. ಉದಿಯಾವರ, ಹಟ್ಟಿಯಂಗಡಿ, ಮಂಗಳಾಪುರ (ಮಂಗಳೂರು), ಬಾರಕೂರು (ಬಾರಹಕನ್ಯಾಪುರ) ಮತ್ತು ಮೂಡಬಿದರೆ. ತಮ್ಮ ಜೀವಿತದ ಅಂತ್ಯಕಾಲದ ಸ್ವಲ್ಪ ಸಮಯ ಆಳುಪರು ಮೂಡಬಿದಿರೆಯಿಂದ ಆಳಿದಂತೆ ಕಂಡುಬರುತ್ತದೆ. ಅದಕ್ಕೆ ಮೊದಲಿನ ರಾಜಧಾನಿಗಳೆಲ್ಲಾ ಬಂದರು ನಗರಗಳು. ಆಳುಪರು ತಮ್ಮ ಆಡಳಿತ ಕಾರ್ಯವನ್ನು ಹಲವಾರು ಸಾಮಂತರು, ಅಧಿಕಾರಿಗಳು ಇತ್ಯಾದಿ ವರ್ಗಗಳ ಸಹಕಾರದಿಂದ ನಡೆಸಿದರು. ಇವರಲ್ಲಿ ಪ್ರಮುಖವಾಗಿ ಹೆಸರಿಸಬಹುದಾದವರು – ಕೆಲ್ಲ ಪುತ್ತಿಗೆಯ ಕೆಲ್ಲರು, ಸುರಾಲಿನ ತೊಳಹರು ಮತ್ತು ಹೊಂಬುಚದ ಸಾಂತರರು.

ಆಳುಪರು ಸಾಮಂತ ಅರಸರು. ಬೇರೆ ಸಾಮಂತ ಅರಸರಿಗೆ ಹೋಲಿಸಿದರಲ್ಲಿ ಇವರು ಮಹಾಸಾಮಂತರು. ಸಮಸ್ತ ಭುವನ ವಿಖ್ಯಾತ ಸೋಮಕುಳ ತಿಳಕ ಪಾಂಡ್ಯ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಶ್ರೀಮತ್ಪಾಂಡ್ಯ ಚಕ್ರವರ್ತಿ ಎಂಬಿತ್ಯಾದಿ ಸಾರ್ವಭೌಮ ಬಿರುದಾಂಕಿತರು. ಮೀನ ಲಾಂಛನೋಪೇತರು. ಸಂಪೂರ್ಣ ಸ್ವತಂತ್ರ ಆಳಿಕೆ ನಡೆಸಿದವರು. ಚಿನ್ನದ ನಾಣ್ಯಗಳನ್ನು ಮುದ್ರಿಸಿ ಸ್ವತಂತ್ರವಾಗಿ ಚಲಾವಣೆಗೆ ತಂದ ಗೌರವ, ಪ್ರತಿಷ್ಠೆಯಿತ್ತು. ಚಕ್ರವರ್ತಿ ವಂಶಗಳೊಂದಿಗಿನ ಅವಿನಾಸಂಬಂಧದಿಂದಾಗಿ ಹೆಚ್ಚಿನ ರಾಜಕೀಯ ಮಾನ್ಯತೆ ಮತ್ತು ಗೌರವ ಇತ್ತು. ಸ್ವತಂತ್ರ ನಾಣ್ಯ ಚಲಾವಣೆ ಇಲ್ಲಿಯ ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಕೃಷಿ ಇತ್ಯಾದಿ ಕಾರ್ಯಗಳು ಸುಲಲಿತವಾಗಿ ನಡೆಯಲು ಸಹಕಾರಿಯಾಯಿತು. ಇವುಗಳಿಂದ ಬರುತ್ತಿದ್ದ ವರಮಾನ ಇಲ್ಲಿಯ ಸಂಪತ್ತನ್ನು ಹೆಚ್ಚಿಸಿತ್ತು. ತೆರಿಗೆಯಲ್ಲಿ ಸಾರ್ವಭೌಮರ ಪಾಲು ಹೋದರೂ ಬಹು ಅಂಶ ಇವರಿಗೆ ಉಳಿಯುತ್ತಿತ್ತು. ಇದು ಇವರ ಶಕ್ತಿ ವರ್ಧನೆಗೆ ಸಹಕಾರಿಯಾಯಿತು.

ಕರಾವಳಿ ಪ್ರದೇಶವಾದ ಇಲ್ಲಿಯ ಬಂದರು ನಗರಗಳು ಅತ್ಯಂತ ಪ್ರಾಚೀನ ಕಾಲದಿಂದಲೇ ವಿದೇಶಿ ವ್ಯಾಪಾರ, ವಾಣಿಜ್ಯ ಚಟುವಟಿಕೆಗಳ ಕೇಂದ್ರ ಸ್ಥಾನಗಳಾಗಿದ್ದವು. ಬೇರೆ ಬೇರೆ ಭಾಗಗಳಿಂದ ಜನ ಇಲ್ಲಿಗೆ ಬರುತ್ತಿದ್ದರು. ಹೀಗೆ ಬಂದವರಲ್ಲಿ ಎಷ್ಟೋ ಜನರು ಇಲ್ಲೇ ಉಳಿದರು. ಮೂಲಜನರೊಂದಿಗೆ ಬೆರತರು. ಹೊಸ ಸಮಾಜದ ಸೃಷ್ಟಿಗೆ ಇವರು ಕಾರಣವಾದರು. ಇದು ಇಲ್ಲಿಯ ಬಹುಮುಖ ಬೆಳವಣಿಗೆಗೆ ನಾಂದಿಯಾಯಿತು. ನಾನಾ ರೀತಿಯ ಕಟ್ಟುಪಾಡುಗಳು, ಆಚರಣೆಗಳು, ರೀತಿ–ನೀತಿಗಳು ಇದರಿಂದ ಬೆಳೆಯಿತು. ಅಳಿಯ ಸಂತಾನ ಎಂಬ ಕಟ್ಟು ಹುಟ್ಟಿ ಬೆಳೆದದ್ದು ಈ ಕಾಲದಲ್ಲೆ. ಶೈವ, ಶಾಕ್ತ, ಗಾಣಾಪತ್ಯ, ಸೌರ, ಸ್ಕಂದ–ನಾಗ ಮತ್ತು ಭಾಗವತ ಧಾರ್ಮಿಕ ಸಂಪ್ರದಾಯಗಳು ಇಲ್ಲಿ ಬಹಳ ಪ್ರಾಚೀನ ಕಾಲದಿಂದಲೇ ಸಮಾಜದಲ್ಲಿ ಹಾಸುಹೊಕ್ಕಾಗಿ ಬೆಳೆದವು. ಆಳುಪರು ಶೈವರು. ಶಾಸನಗಳು ಇವರನ್ನು ಪಾಶುಪತರ ದೊರೆ ಎಂದು ವರ್ಣಿಸಿವೆ. ಇವರ ಪ್ರಭಾವದಿಂದ ತುಳುನಾಡಿನಾದ್ಯಂತ ಹಲವಾರು ದೇವಾಲಯಗಳು ಹುಟ್ಟಿಕೊಂಡವು. ಆದಿನಾಥೇಶ್ವರ, ಲೋಕೇಶ್ವರ, ನಖರೇಶ್ವರ, ಕುಂದೇಶ್ವರ, ಕೋಟೀಶ್ವರ, ಅಗಸ್ತ್ಯೇಶ್ವರ, ಕಾಂತೇಶ್ವರ, ಮಹಾಲಿಂಗೇಶ್ವರ, ಬಂಕೇಶ್ವರ ಎಂಬಿತ್ಯಾದಿ ಎಲ್ಲ ಪ್ರಾಚೀನ ಶಿವಾಲಯಗಳು ಹಟ್ಟಿಯಂಗಡಿ, ಕಿರಿಮಂಜೇಶ್ವರ, ಅತ್ತಾವರ ಮುಂತಾದ ಕಡೆಗಳ ವಿನಾಯಕ ದೇವಸ್ಥಾನಗಳು ಇವಲ್ಲದೆ, ಅನೇಕ ಸೂರ್ಯ, ಸ್ಕಂದ, ಮಹಿಷಮರ್ದಿನಿ, ದುರ್ಗಾ ಇತ್ಯಾದಿ ದೇವಾಲಯಗಳು ಇವರ ಕಾಲದ ಕೊಡುಗೆ. ಪೊಳಲಿಯ ರಾಜರಾಜೇಶ್ವರಿ, ಉದಿಯಾವರದ ವೀರಭದ್ರ ದುರ್ಗಾಪರಮೇಶ್ವರಿ, ಕೊಲ್ಲೂರಿನ ಮೂಕಾಂಬಿಕಾ ಈ ಕಾಲದ ಅಪೂರ್ವ ದೇವಾಲಯಗಳು. ಕರಾವಳಿಯ ಸಪ್ತ ಮೋಕ್ಷಪ್ರದ ಕ್ಷೇತ್ರಗಳಲ್ಲಿ ಆರು–ಕೊಲ್ಲೂರು, ಕ್ರೋಢಶಂಕರನಾರಾಯಣ, ಕೋಟೇಶ್ವರ, ಕುಂಭಾಶಿ, ಉಡುಪಿ ಮತ್ತು ಕುಕ್ಕೆ ಸುಬ್ರಹ್ಮಣ್ಯ–ಇವರ ಕಾಲದ ಸೃಷ್ಟಿ. ಇದರಿಂದ ದೇವಾಲಯ ಸಂಸ್ಕೃತಿ ಬೆಳೆದುದೇ ಅಲ್ಲದೆ ಕಲಾ ಪ್ರಕಾರಕ್ಕೆ ಅದ್ಭುತ ಕೊಡುಗೆಯಾದ ಶಿಲ್ಪಗಳ ಸೃಷ್ಟಿಯಾಯಿತು. ದೇವಾಲಯ ಗಳನ್ನು ಕಟ್ಟುವುದಲ್ಲದೆ ಇವುಗಳ ನಿರ್ವಹಣೆಗೆ ದಾನ ಧರ್ಮಗಳನ್ನು ಮಾಡುವ ಪರಂಪರೆ ಯನ್ನು ಆಳುಪರು ಪ್ರಾರಂಭಿಸಿದರು.

ಆಳುಪರು ಶೈವ ಮತಾವಲಂಬಿಗಳು. ಪರಮತ ಸಹಿಷ್ಣುಗಳು. ಇವರ ರಾಜಕೀಯ ಅವತರಣಿಕೆ ಕಾಲದಿಂದಲೂ ಇವರ ಸಹವರ್ತಿ ಅಧಿಕಾರಿಗಳಾಗಿದ್ದವರು ಪುತ್ತಿಗೆಯ ಕೆಲ್ಲರು. ಅವರೂ ಜೈನರು. ಇವರಲ್ಲದೇ ತೊಳಹರು ಮತ್ತು ಸಾಂತರರೂ ಜೈನರು.

ಆಳುಪ ಚಿತ್ರವಾಹನನ ರಾಣಿ ಕುಂಕುಮದೇವಿ ಗುಡಿಗೇರಿಯಲ್ಲಿ ಕಟ್ಟಿಸಿದ ಬಸದಿಗೆ ರಾಜದಾನ ಧರ್ಮಗಳನ್ನು ಮಾಡಿದ. ಬೌದ್ಧಧರ್ಮ ಇಲ್ಲಿ ಯಾವ ರೀತಿಯಲ್ಲಿತ್ತು ಎಂಬುದು ತಿಳಿಯುವುದಿಲ್ಲ. ಆದರೆ ಇದರ ಪ್ರಭಾವದಿಂದ ನಾಥಪಂಥ ಇಲ್ಲಿ ಹುಟ್ಟಿ ಬೆಳೆದುದು ಇತಿಹಾಸ. ಮಂಗಳೂರಿನ ಕದಿರೆ (ಕದ್ರಿ) ಇದರ ಪ್ರಮುಖ ಕೇಂದ್ರವಾಯಿತು. ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿ ಬೌದ್ಧಧರ್ಮ ಬನವಾಸಿ ನಾಡಿಗೆ ಬಂತು. ಈ ನಾಡಿನ ಭಾಗವೇ ಆಗಿದ್ದ ಕರಾವಳಿಯ ಈ ಭಾಗಕ್ಕೂ ಕ್ರಮೇಣ ಬೌದ್ಧಧರ್ಮದ ಹರಡುವಿಕೆ ಅಸಂಭವವೇನಲ್ಲ. ಆದರೆ ಇದರ ಪಳೆಯುಳಿಕೆಯ ಆಧಾರ ಮಾತ್ರ ತೀರ ಕಡಿಮೆ. ಕದಿರೆಯಲ್ಲಿ ಬುದ್ಧನ ವಿಗ್ರಹಗಳನ್ನು ವಿದ್ವಾಂಸರ ಗುರುರಾಜಭಟ್ಟರು ಬೆಳಕಿಗೆ ತಂದಿದ್ದಾರೆ. ಆಳುಪ ಸಾಂತರ ಸಂಬಂಧ ಜೈನಧರ್ಮದ ಪ್ರಸಾರಕ್ಕೆ ಅವಕಾಶ ಮಾಡಿಕೊಟ್ಟಿತು. ಕುಂಕುಮದೇವಿಯ ಕಾರ್ಯವನ್ನು ಈಗಾಗಲೇ ಗಮನಿಸಲಾಗಿದೆ. ಅಂತೆಯೇ ಇನ್ನೋರ್ವ ಆಳುಪರಾಣಿ – ಜಾಕಳ ಮಹಾದೇವಿಯು ಆದಿತೀರ್ಥ ಎಂದು ಪ್ರಸಿದ್ಧ ಪಡೆದಿದ್ದ ವರಾಂಗ ಜೈನಕ್ಷೇತ್ರದ ನೇಮೀಶ್ವರ ಬಸದಿಯ ಜೀರ್ಣೋದ್ಧಾರ ಮಾಡಿ ಇಲ್ಲಿ ಒಂದು ಸುಂದರ ಮತ್ತು ಬೃಹತ್ತಾದ ತಟಾಕವನ್ನು ನಿರ್ಮಿಸಿದಳು. ವರಾಂಗದ ಜೈನಮಠ ದೀರ್ಘವೂ ಪ್ರಾಚೀನವೂ ಶ್ರೇಷ್ಠವೂ ಆದ ಒಂದು ಮುನಿ ಪರಂಪರೆಯನ್ನು ಹೊಂದಿತ್ತು. ಇಲ್ಲಿಯ ಶಾಸನಗಳಿಂದ ಇದು ವಿದಿತವಾಗುತ್ತದೆ. ಇದು ಕೋಪ್ಪಣಕ್ಕೆ ಸಮಾನವಾದ ಆದಿ ಜೈನತೀರ್ಥವಾಗಿತ್ತು. ಇದು ಹುಟ್ಟಿಬೆಳೆದದ್ದು ಆಳುಪರ ರಾಜ್ಯದಲ್ಲಿ ಮತ್ತು ಅವರ ರಕ್ಷಣೆಯಲ್ಲಿ. ಈ ರಾಜ ಮನೆತನ ತನ್ನ ಕೊನೆಯ ದಿನಗಳನ್ನು ಕಳೆದದ್ದು ಮೂಡಬಿದಿರೆಯ ಚಾರುಕೀರ್ತಿ ಮುನಿಗಳ ಪದತಲದಲ್ಲಿ.

ಅರಬ್ ದೇಶಕ್ಕೂ ತುಳುನಾಡಿಗೂ ನಿಕಟವಾದ ವಾಣಿಜ್ಯ ಸಂಬಂಧ ಅತ್ಯಂತ ಪ್ರಾಚೀನ ಕಾಲದಿಂದಲೂ ಇತ್ತು. ಅಲ್ಲಿ ಇಸ್ಲಾಂಧರ್ಮ ಹುಟ್ಟಿ ಅದು ಆ ಜನರೊಂದಿಗೆ ಇಲ್ಲಿಗೆ ಬಂದಾಗ ಅದಕ್ಕೂ ಆಳುಪ ರಾಜರ ಮನ್ನಣೆ, ರಕ್ಷೆ ದೊರೆತವು. ಇದರ ನೆಲೆಗಳಾಗಿ ಹಂಜಮಾನ ಪಳ್ಳಿಗಳು ಇಲ್ಲಿ ಬಹಳಷ್ಟು ಹುಟ್ಟಿ ಬೆಳೆದವು. ಹಂಜಮಾನರು ಇಲ್ಲಿಯ ಆರ್ಥಿಕ ವಿಚಾರಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಪ್ರಮುಖ ತೀರ್ಮಾನಗಳಿಗಾಗಿ ರಾಜಸಭೆಯಲ್ಲಿ ಇವರಿಗೆ ಮನ್ನಣೆ ಗೌರವಗಳಿದ್ದುವು. ಸಾವಿರವರ್ಷಗಳ ಕಾಲ ಆಳಿದ ಆಳುಪರು ತುಳುನಾಡಿನಲ್ಲಿಯ ಭವ್ಯ ಸಂಸ್ಕೃತಿ ಮತ್ತು ವಿಶಿಷ್ಟ ರೀತಿಯ ಧರ್ಮಸಾಮರಸ್ಯಕ್ಕೆ ಭದ್ರಬುನಾದಿ ಹಾಕಿದರು. (ಪಿ.ಎನ್.ಎನ್.)

# ಇ

**ಇಂಕ:** ಪ್ರಾಚೀನ ಕಾಲದಲ್ಲಿ ದಕ್ಷಿಣ ಅಮೆರಿಕದ ಪೆರು ಪ್ರಾಂತ್ಯವನ್ನೊಳಗೊಂಡು ಬೆಳೆದು ಬಾಳಿದ ಸಾಮ್ರಾಜ್ಯ. ಇಂಕ ಎಂಬುದು ಸಾಮ್ರಾಟನ ಹೆಸರಾದರೂ ಈಗ ಆ ಜನರನ್ನೂ ನಿರ್ದೇಶಿಸುತ್ತದೆ. ಇವರು ಕೆಚ್ವಾಭಾಷೆಯನ್ನಾಡುತ್ತಿದ್ದ ಒಂದು ಬುಡಕಟ್ಟಿಗೆ ಸೇರಿದವರು.

ಕೊಲಂಬಸ್ ಅಮೆರಿಕವನ್ನು ಕಂಡುಹಿಡಿಯುವುದಕ್ಕೆ ಬಹಳ ಹಿಂದೆಯೇ ಅಲ್ಲಿ ಅನೇಕ ಸಾಮ್ರಾಜ್ಯಗಳು ಹುಟ್ಟಿ ಬೆಳೆದು ಲಯಹೊಂದಿದುವು. ಇಂದಿನವರೆಗೆ ತಿಳಿದು ಬಂದಿರುವಂತೆ ಈ ಸಂಸ್ಕೃತಿಗಳಲ್ಲಿ ಸಂಪತ್ತು, ಕಲಾಪ್ರೌಢಿಮೆ ಮತ್ತು ನಾಗರಿಕತೆಯ ದೃಷ್ಟಿಯಿಂದ, ಅತ್ಯಂತ ಭವ್ಯವಾದುವು–ಮಾಯಾ, ಆಜ್ಟೆಕ್ ಮತ್ತು ಇಂಕ ಸಂಸ್ಕೃತಿಗಳು. ಮಾಯಾ ನಾಗರಿಕತೆ ಬೆಳೆದದ್ದು ಮಧ್ಯ ಅಮೆರಿಕದ ಅರಣ್ಯಗಳಲ್ಲಿ; ಆಜ್ಟೆಕ್, ಮೆಕ್ಸಿಕೋದಲ್ಲಿ; ಇಂಕ ನಾಗರಿಕತೆ ಪೆರು ರಾಜ್ಯದಲ್ಲಿ. ಅಂತ್ಯದ ವೈಭವದ ಕಾಲದಲ್ಲಿ ಇಂಕ ನಾಗರಿಕತೆ ಉತ್ತರದ ಎಕ್ವಡಾರ್‌ನಿಂದ ದಕ್ಷಿಣದ ಚಿಲಿವರೆಗೂ ಉತ್ತರ ದಕ್ಷಿಣವಾಗಿ 4.000ಕಿಮೀ ದೂರ ವ್ಯಾಪಿಸಿತ್ತು; 4,66,000 ಪ್ರದೇಶವನ್ನೊಳಗೊಂಡಿತ್ತು. ಈ ಜನಾಂಗದಲ್ಲಿ ಬರೆವಣಿಗೆ ಇರಲಿಲ್ಲವಾದ್ದರಿಂದ ಇವರ ಬಗ್ಗೆ ಆ ಕಾಲದವೇ ಆದ ಯಾವ ಲಿಖಿತ ಆಧಾರಗಳೂ ದೊರೆತಿಲ್ಲ. 16ನೆಯ ಶತಮಾನದಲ್ಲಿ ಇವರ ಮೇಲೆ ಧಾಳಿ ನಡೆಸಿದ ಸ್ಪೇನಿನ ಯೋಧರ ಬರೆಹಗಳು ಇಂದಿಗೂ ಉಳಿದಿರುವ ಈ ಬುಡಕಟ್ಟಿನ ಜನರ ವ್ಯವಹಾರ ಸಂಪ್ರದಾಯಗಳ ಪರಿಶೀಲನೆ, ಸಂಬಂಧಪಟ್ಟ ಸ್ಥಳಗಳಲ್ಲಿ ನಡೆಸಿರುವ ಉತ್ಖನನಾದಿ ಪುರಾತತ್ತ್ವ ಶೋಧನೆಗಳು– ಈ ಆಧಾರಗಳಿಂದ ಇಂಕ ಸಂಸ್ಕೃತಿಯ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ.

**ಚರಿತ್ರೆ:** ಸ್ಪೇನ್ ದೇಶದವರು ಪೆರು ರಾಜ್ಯವನ್ನು ಗೆದ್ದು ಸ್ವಾಧೀನಪಡಿಸಿಕೊಂಡು ಅಲ್ಲಿನ ಚರಿತ್ರೆಯನ್ನು ಬರೆದಿಡುವವರೆಗೂ ಆ ದೇಶದ ಇತಿಹಾಸ ಪರಂಪರಾಗತವಾಗಿ ಬಂದ ಕಥೆಗಳ ರೂಪದಲ್ಲಿತ್ತು. ಹೀಗಾಗಿ ವಾಸ್ತವಾಂಶಗಳನ್ನು ತಿಳಿಯಲು ಬಹಳ ಕಷ್ಟ ವಾಗಿತ್ತು. ಇತ್ತೀಚೆಗೆ ಚಾರಿತ್ರಿಕ ಘಟನೆಗಳನ್ನು ಇನ್ನಷ್ಟು ಖಚಿತವಾಗಿ ತಿಳಿಯಲು ಸಾಧ್ಯ ವಾಗಿದೆ. ಇವೆರಡರ ಮಧ್ಯಕಾಲದ ಚರಿತ್ರೆ ಸ್ವಲ್ಪ ಅನಿರ್ದಿಷ್ಟ. ಯುರೋಪಿನ ದೇಶ ಗಳಲ್ಲಿದ್ದಂತೆಯೇ ಇತಿಹಾಸವನ್ನು ರಾಜರ ಆಳ್ವಿಕೆಯ ಕ್ರಮದಲ್ಲಿ ನಿರೂಪಿಸುವ ವಿಧಾನ ಅಮೆರಿಕದ ಪೆರು ದೇಶದಲ್ಲಿ ಮಾತ್ರ ಕಂಡುಬರುತ್ತದೆ; ಈ ದೊರೆಗಳು ಪೆರು ದೇಶವನ್ನಾಳುತ್ತಿದ್ದರೆಂದು ನಿಷ್ಕೃಷ್ಟವಾಗಿ ತಿಳಿದುಬಂದಿದೆ: 1. ಮ್ಯಾಂಕೊ ಕೃಪಾಕ್ (1200); 2. ಸಿಂಕಿ ರೋಕ; 3. ಲಾಳ ಉಪಾಂಕಿ; 4. ಮೆಯ್ಟ ಕೃಪಾಕ್; 5. ಕೃಪಾಕ್ ಯುಪ್ಯಾಂಕಿ; 6. ಇಂಕ ರೋಕ; 7. ಯಹ್ವಾರ್ ಹುವಾಕ್ಯಾಕ್; 8. ವಿಶಾಕೋ ಜಾ ಇಂಕ; 9. ಪಚಕೂಟಿ ಇಂಕಾ ಯುಆನ್‌ಕಿ (1438–71); 10. ಟೋಪ್ ಇಂಕ ಯುಪ್ಯಾಂಕಿ (1471–93); 11. ಹುಆಯ್ನ ಕೃಪಾಕ್ (1493–1525); 12. ಹುಆಸ್ಕರ್ (1525–32); 13. ಅಟಾಹುಅಲ್ಪ (1532–33).

ಮ್ಯಾಂಕೊ ಕೃಪಾಕ್‌ನ ವಿಷಯದಲ್ಲಿ ತಿಳಿದುಬಂದಿರುವುದರಲ್ಲಿ ಅರ್ಧ ಕಾಲ್ಪನಿಕ. ಅರ್ಧದೇವನೆಂದು ಪರಿಗಣಿತನಾಗಿದ್ದ ಇವನ ವಿಷಯದಲ್ಲಿ ಸ್ಪೇನಿನ ಚರಿತ್ರಕಾರರು ಬರೆದಿರುವುದು ಅನೇಕ ಕಡೆ ಅಸಂಬದ್ಧವಾಗಿದೆ; ಇವನಿಗೆ ದೈವತ್ವವನ್ನು ಆರೋಪಿಸಲಾಗಿದೆ. ಸಿಂಕಿ ರೋಕ ದೊರೆಯಾದಮೇಲೆ ಇವನ ರಾಜವಂಶಕ್ಕೆ ದೈವಿಕಮೂಲ, ಪಾವಿತ್ರ್ಯ ಮತ್ತು ಘನತೆಗಳನ್ನು ಕಲ್ಪಿಸಲಾಯಿತೆಂದು ಕೆಲವರ ಅಭಿಪ್ರಾಯ. ಪೆರು ದೇಶದ ವಾಸ್ತವಿಕ ಇತಿಹಾಸ ಪ್ರಾರಂಭವಾಗುವುದು ಪಚಕೂಟಿಇಂಕನ ಆಳಿಕೆಯಿಂದ ಎಂದು ಹೇಳಬಹುದು. ಅವನ ಕಾಲದಲ್ಲೇ ಪೆರುರಾಜ್ಯದ ವಿಸ್ತರಣಾ ಕಾರ್ಯ ಪ್ರಾರಂಭವಾದದ್ದು; ಈ ಕಾರ್ಯ ವಿಸ್ಮಯಕರವಾದ ರೀತಿಯಲ್ಲಿ ನಡೆಯಿತು. ಸಾಮ್ರಾಜ್ಯ ಅತ್ಯಂತ ಉಚ್ಛ್ರಾಯಸ್ಥಿತಿಯನ್ನೇರಿದ್ದು ಅವನ ಮಗನ ಕಾಲದಲ್ಲಿ, ಮುಂದೆ ಅವನತಿ ಪ್ರಾರಂಭವಾಗಿ 1532ರಲ್ಲಿ ಸ್ಪೇನ್ ದೇಶದವರು ದೇಶವನ್ನೇ ವಶಪಡಿಸಿಕೊಂಡಾಗ ಅದರ ಅಸ್ತಿತ್ವ ಅಳಿಯಿತು. ಸುಮಾರು ಒಂದು ಶತಮಾನಕಾಲ ಮಾತ್ರ ಪೆರು ಸಾಮ್ರಾಜ್ಯ ಸ್ವತಂತ್ರವಾಗಿ ಬಾಳಿದ್ದು. ಪಚಕೂಟಿ, ಟೋಪ್ ಇಂಕ ಇವರಿಬ್ಬರನ್ನೂ ಸಾಮ್ರಾಜ್ಯ ನಿರ್ಮಾಪಕರಲ್ಲಿ ಅಲೆಕ್ಸಾಂಡರ್, ಚಂಗಿಸ್‌ಖಾನ್, ನೆಪೋಲಿಯನ್ನರೊಂದಿಗೆ ಹೋಲಿಸಬಹುದು. ಇಂಕ ಜನರೇ ಅಲ್ಪಸಂಖ್ಯಾತರು; ಆದ್ದರಿಂದ ಗೆದ್ದರಾಜ್ಯಗಳ ಸೈನಿಕರನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡು ಹೊಸರಾಜ್ಯಗಳನ್ನು ಗೆಲ್ಲುತ್ತಿದ್ದರು. ಸಾಮ್ರಾಜ್ಯದಾಹವೇ ಈ ವಿಸ್ತರಣ ಕಾರ್ಯಕ್ಕೆ ಮುಖ್ಯಕಾರಣ. ಪಚಕೂಟ ಪ್ರಸಿದ್ಧಿಪಡೆದಿರುವುದು ರಾಜ್ಯವಿಸ್ತರಣ ಕಾರ್ಯದಲ್ಲಿ ಮಾತ್ರ ಅಲ್ಲ; ನಗರನಿರ್ಮಾಣದಲ್ಲೂ ಅವರು ಪ್ರಖ್ಯಾತನಾಗಿದ್ದಾರೆ. ಸಾಮ್ರಾಜ್ಯದ ರಾಜಧಾನಿಯಾದ ಕುಜ್ಕೋನಗರ ವಿಶಾಲವಾಗಿ ಬೆಳೆದು ರಮ್ಯಸೌಧಗಳನ್ನು ಹೊಂದಿದ್ದು ಇವನ ಶ್ರಮದ ಫಲವಾಗಿ, ಸೂರ್ಯನಿಗೆ ಮೀಸಲಾದ ಪ್ರಸಿದ್ಧ ದೇವಮಂದಿರದ ನಿರ್ಮಾಣ ಇವನ ಕಾಲದಲ್ಲಾಯಿತು. ಹಿಂದಿನ ಚಕ್ರವರ್ತಿಗಳ ಮೃತದೇಹಗಳನ್ನು ಸುವಾಸನಾ ದ್ರವ್ಯಗಳಿಂದ ಪರಿಷ್ಕರಿಸಿ ಈತ ಈ ದೇವಾಲಯದಲ್ಲಿಡಿಸಿದ; ಮೂಲಪುರಷನಾದ ಮ್ಯಾಂಕೊ ಕೃಪಾಕ್‌ನ ದೇಹ ಮಾತ್ರ ಕಲ್ಲಾಗಿ ಪರಿವರ್ತಿತವಾಯಿತಂತೆ. ನಗರವನ್ನು ವಿಸ್ತರಿಸಿ ಅದರ ಪ್ರಜೆಗಳಿಗೆ ಹೆಚ್ಚು ಜಾಗವನ್ನು ಕೊಡುವುದಕ್ಕೆಂದು ಅದರ ಸುತ್ತ ಆರುಮೈಲಿ ಫಾಸಲೆಯ ಗ್ರಾಮವನ್ನೆಲ್ಲ ಸಾಮ್ರಾಜ್ಯ ವಿಶಾಲವಾಗಿತ್ತು, ಇವನ ಅನುಮತಿಯಿಲ್ಲದೆ ಏನೂ ನಡೆಯು ವಂತಿರಲಿಲ್ಲ. ಸಿಂಹಾಸನಕ್ಕೆ ಉತ್ತರಾಧಿಕಾರದ ವಿಷಯದಲ್ಲೂ ಸ್ಪರ್ಧೆ, ಜಗಳಗಳು ಪ್ರಾರಂಭ ವಾದುವು. ಇವನ ಮಗನ ಕಾಲದಲ್ಲಿ ಇದು ಉಗ್ರರೂಪ ತಾಳಿತು.

ಹುಆಯ್ನ ಕೃಪಾಕ್ ತನ್ನ ಆಳ್ವಿಕೆಯ ಕೊನೆಗಾಲವನ್ನು ಎಕ್ವಡಾರ್‌ನ ಕ್ವಿಟೊ ಪ್ರಾಂತ್ಯದಲ್ಲೇ ಕಳೆದ, ಇವನಿಗೆ ರಾಜಧಾನಿಯಾದ ಕುಜ್ಕೊ ನಗರಕ್ಕಿಂತ ಕ್ವಿಟೋನೇ ಹೆಚ್ಚು ಹಿತಕರವಾಗಿ ಕಂಡಿತು. ಇವನ ಮಕ್ಕಳಲ್ಲಿ ರಾಜಕೀಯ ಪ್ರಾಮುಖ್ಯ ಪಡೆದಿದ್ದವರು ಇಬ್ಬರು : ಒಬ್ಬ ಹುಆಸ್ಕರ್, ರಾಣಿಯಾಗಿದ್ದ ರಾಜನ ತಂಗಿಗೆ ಜನಿಸಿದವನು (ಈ ಪದ್ಧತಿ ಕೆಲವುಕಾಲ ರೂಢಿಯಲ್ಲಿತ್ತು); ಇನ್ನೊಬ್ಬ ಅಟಾಹುಅಲ್ಪ, ಕಿರಿಯ ರಾಣಿಯೊಬ್ಬಳ ಮಗ. ನ್ಯಾಯವಾಗಿ ಸಿಂಹಾಸನಕ್ಕೆ ಉತ್ತರಾಧಿಕಾರಿ ಹುಆಸ್ಕರ್; ಅದರೆ ಅಟಾಹುಅಲ್ಪನ ಮೇಲೆ ಇವನಿಗೆ ಹೆಚ್ಚು ಪ್ರೀತಿ. ಅಟಾಹುಅಲ್ಪ ತಂದೆಯೊಂದಿಗೆ ಕ್ವಿಟೋದಲ್ಲಿದ್ದ; ಹುಆಸ್ಕರ್ ಕುಜ್ಕೊದಲ್ಲಿದ್ದ. ಕ್ವಿಟೋ ರಾಜ್ಯವನ್ನೇ ಪ್ರತ್ಯೇಕಿಸಿ ಅದನ್ನು ಅಟಾಹುಅಲ್ಪನಿಗೂ ಉಳಿದ ಭಾಗವನ್ನು ಹುಆಸ್ಕರನಿಗೂ ಹಂಚಬೇಕೆಂದು ಹುಆಯ್ನನ ಯೋಚನೆಯಾಗಿತ್ತೆಂದು ಒಂದು ಕಡೆ ಹೇಳಿದೆ; ಆದರೆ ಇದು ನೆರವೇರಲಿಲ್ಲ. ಇದೇ ಕಾಲದಲ್ಲಿ ಸ್ಪೇನಿನವರು ಯುರೋಪಿನಿಂದ ತಂದ ಅಂಟು ಜಾಡ್ಯವೊಂದು ಸಾಮ್ರಾಜ್ಯದ ಎಲ್ಲ ಕಡೆ ಹರಡಿ ಅಸಂಖ್ಯಾತ ಜನರನ್ನು ಆಹುತಿ ತೆಗೆದುಕೊಂಡಿತು: ಹುಆಯ್ನನೂ ಈ ಉಪದ್ರವಕ್ಕೆ ತುತ್ತಾದ. ಕುಜ್ಕೊದ ಪುರೋಹಿತ ಹುಆಸ್ಕರ್‌ನನ್ನು ಸಿಂಹಾಸನಕ್ಕೇರಿಸಿದ. ಆದರೆ ಎಕ್ವಡಾರ್‌ನ ಪ್ರಜೆಗಳು ಮತ್ತು ಸೈನಿಕರು ಅಟಾಹುಅಲ್ಪನೇ ತಮಗೆ ದೊರೆಯೆಂದು ಘೋಷಿಸಿದರು. ಯಾದವೀಕಲಹ ಪ್ರಾರಂಭ ವಾಯಿತು. ಸ್ವಲ್ಪಕಾಲ ಯುದ್ಧ ನಡೆದು ಕೊನೆಗೆ ಅಟಾಹುಅಲ್ಪನೇ ಸಾಮ್ರಾಟನಾದ. ತಾವು ಈ ಸಾಮ್ರಾಜ್ಯವನ್ನು ಗೆದ್ದು ವಶಪಡಿಸಿಕೊಳ್ಳಬೇಕೆಂದಿದ್ದ ಕಾಲದಲ್ಲೇ ಅಲ್ಲಿ ಭಯಂಕರ ಯಾದವೀಕಲಹವೆದ್ದು ತಮಗೆ ಅನುಕೂಲವಾದದ್ದು ದೈವೇಚ್ಛೆಯೆಂದೇ ಸ್ಪೇನಿನವರು ನಂಬಿದರು. ಜೆ.ಎ.ಮೇಸನ್ ಎಂಬ ಪ್ರಾಕ್ತನ ಸಂಶೋಧಕ ಹೀಗೆ ಹೇಳಿದ್ದಾನೆ: ಈ ಸ್ಪೇನಿ ನವರು ಹತ್ತುವರ್ಷ ಮುಂಚೆ ಅಥವಾ ಹತ್ತು ವರ್ಷ ತರುವಾಯ ಬಂದಿದ್ದರೆ, ಪಿಜ್ಹಾರೊ ದಳಪತಿಯ ಜೊತೆ ಬಂದ ಕೆಲವೇ ಸ್ಪೇನರಿಗೆ ಅವರು ಸೋಲುತ್ತಿರಲಿಲ್ಲ.

ಸಾಮ್ರಾಜ್ಯದ ಅಳಿವು: ಪ್ರಬಲವಾಗಿದ್ದ ಇಂಕ ಸಾಮ್ರಾಜ್ಯವನ್ನೇ ಕೇವಲ 180 ಜನ ಸ್ಪೇನಿನ ಸಾಹಸಿಗ ಯೋಧರು ಗೆದ್ದರು. ನಂಬಲೂ ಕಷ್ಟವಾದ ಈ ಕಥೆ ವಿವಿಧ ಚರಿತ್ರಕಾರ ರಿಂದ ನಾನಾರೀತಿಯಲ್ಲಿ ವರ್ಣಿತವಾಗಿದೆ. ಪ್ರೆಸ್ಕಾಟ್ ಎಂಬ ಚರಿತ್ರಕಾರ ಬರೆದ ಕಾನ್‌ಕ್ವೆಸ್ಟ್ ಆಫ್ ಪೆರು ಎಂಬ ಪುಸ್ತಕದ ಕೆಲವು ಅಂಶಗಳನ್ನು ಇಲ್ಲಿ ಕೊಟ್ಟಿದೆ: ಹುಆಸ್ಕರನನ್ನು

ಯುದ್ಧದಲ್ಲಿ ಸೋಲಿಸಿದ ಮೇಲೆ, ಸಿಂಹಾಸನವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಅಟಾಹುಅಲ್ಪ ತನ್ನ ಪಾಳೆಯವಿದ್ದ ಕಜಾಮಾರ್ಕದಿಂದ ರಾಜಧಾನಿಯಾದ ಕುಜ್ಕೊಗೆ ಹೊರಡುವುದರಲ್ಲಿದ್ದ. ಆಗತಾನೆ ತುಂಬೆಸ್ ಎಂಬಲ್ಲೇ ಸ್ಪೇನಿನವರು ಬಂದಿಳಿದ ವರ್ತಮಾನ ಅವನಿಗೆ ತಿಳಿಯಿತು (1532). ಈ ಹೊರದೇಶದವರು ಬಂದ ಉದ್ದೇಶವನ್ನು ಖಚಿತಪಡಿಸಿಕೊಂಡೇ ಪ್ರಯಾಣ ಮಾಡೋಣವೆಂದು ನಿಶ್ಚಯಿಸಿ ಇದ್ದಲ್ಲಿಯೇ ನಿಂತ. ಅವರು ಕಜಾಮಾರ್ಕಕ್ಕೆ ಬಂದರು. ಅವನೂ ಸೌಜನ್ಯದಿಂದ ಕೊಂಚದೂರಹೋಗಿ ಅವರಿಗೆ ಸ್ವಾಗತ ನೀಡಿದ. ಅವನು ತೋರಿಸಿದ ಸೌಜನ್ಯಕ್ಕೆ ಪ್ರತಿಫಲವಾಗಿ ಸ್ಪೇನರು ಅವನನ್ನು ಕೈಸೆರೆ ಹಿಡಿದು ಅವನ ಪರಿವಾರದವರನ್ನೆಲ್ಲ ಕೊಂದುಹಾಕಿದರು. ತನ್ನನ್ನು ಬಿಡುಗಡೆ ಮಾಡುವಂತಿದ್ದರೆ, ಒಬ್ಬ ಮನುಷ್ಯನಿಗೂ ಎಟುಕದಿದ್ದಷ್ಟು ಎತ್ತರದ ರಾಶಿ ಪ್ರಶಸ್ತಲೋಹಗಳನ್ನು ಕೊಡುವೆನೆಂದು ಇಂಕರಾಜ ಅವರಿಗೆ ಹೇಳಿದ. ಅವರು ಒಪ್ಪಿಕೊಂಡರು. ಕೂಡಲೆ ದೂತರಮೂಲಕ ರಾಜ್ಯದ ಧನವನ್ನು ಸಂಗ್ರಹಿಸಿ ತರಬೇಕೆಂದು ಎಲ್ಲ ಭಾಗಗಳಿಗೂ ಹೇಳಿಕಳುಹಿಸಿದ. ನಾಡಿನ ಎಲ್ಲ ಭಾಗ ಗಳಿಂದಲೂ ಚಿನ್ನದ ರಾಶಿ ಬಂದು ಬಿತ್ತು. ಕುಜ್ಕೊ ನಗರದ ಸೂರ್ಯ ದೇವಾಲಯದಿಂದಲೇ ಇದರ ಬಹುಭಾಗವೆಲ್ಲ ಬಂದಿತ್ತು. 25ಮೀ ಉದ್ದ 15ಮೀ ಅಗಲದ ಕೋಣೆಯಲ್ಲಿ ದ್ರವ್ಯ ಅವನು ಹೇಳಿದ ಎತ್ತರಕ್ಕೂ ನಿಂತಿತು. ಈ ರಾಶಿ ಪಿಜಾರೊಗೆ ತೃಪ್ತಿ ತಂದಿತು. ಬಿಡುಗಡೆ ದ್ರವ್ಯವೆಷ್ಟು ಬಂದಿದೆಯೆಂದು ಪಾವತಿ ರಸೀತಿಯನ್ನು ಬರೆಸಿಕೊಟ್ಟ. ಅವನ ಜೀವಮಾನದಲ್ಲೇ ಆತ ಸೆರೆಸಿಕ್ಕಿದವರ ವಿಷಯದಲ್ಲಿ ಇಷ್ಟು ಕೃಪೆ ತೋರಿಸಿದವನಲ್ಲ. ಚಕ್ರವರ್ತಿ ಸ್ವತಂತ್ರನೆಂದು ಘೋಷಣೆ ಮಾಡಿದರೂ ಆತ ಹಿಂತಿರುಗಿದರೆ ದೇಶದಲ್ಲಿ ಕ್ಷೋಭೆಯುಂಟಾಗುವುದೆಂಬ ನೆಪದಿಂದ ಅವನನ್ನು ಸ್ಪೇನ್ ಅಂಗರಕ್ಷಕರ ಕಾವಲಿನಲ್ಲಿಡಲಾಯಿತು. ದೊರೆ ಅಲ್ಲಿದ್ದರೆ ತಮ್ಮ

ಬೃಹತ್ ಕೋಟೆ ಗೋಡೆ

ಚಲನವಲನಗಳಿಗೆ ಅಡ್ಡಿಯಾಗಬಹುದೆಂಬ ಕಾರಣದಿಂದ ಸ್ಪೇನ್ ಯೋಧರೆಲ್ಲ ಅವನನ್ನು ಕೊಂದುಬಿಡಬೇಕೆಂದು ಸಲಹೆಕೊಟ್ಟರು. ಪಿಜ಼ಾರೊ ಒಪ್ಪಿದ. ಅನೇಕ ಕಲ್ಪಿತ ಆಪಾದನೆಗಳನ್ನು ಅವನ ಮೇಲೆ ಹೊರಿಸಲಾಯಿತು. ಹುಆಸ್ಕರನನ್ನು ಕೊಂದದ್ದು, ಅನ್ಯಾಯವಾಗಿ ಸಿಂಹಾಸನ ವನ್ನು ಆಕ್ರಮಿಸಲೆತ್ನಿಸಿದ್ದು, ವಿಗ್ರಹಾರಾಧನೆ, ವ್ಯಭಿಚಾರ, ಸ್ವಗೋತ್ರ ಸಂಭೋಗ ಮುಂತಾದವು ಅವುಗಳಲ್ಲಿ ಕೆಲವು. ತಪ್ಪಿತಸ್ಥನೆಂದು ತೀರ್ಮಾನವಾಗಲಾಗಿ ಅವನಿಗೆ ಮರಣದಂಡನೆಯನ್ನು ವಿಧಿಸಿದರು. ಕಜಾಮಾರ್ಕ ನಗರದ ದೊಡ್ಡ ಚೌಕದಲ್ಲಿ ಅವನನ್ನು ಬಹಿರಂಗವಾಗಿ ಸುಡ ತಕ್ಕದೆಂದು ತೀರ್ಮಾನಿಸಲಾಯಿತು. ಸುಡಲು ಎಲ್ಲವೂ ಸಿದ್ಧವಾದಮೇಲೆ ಆತ ಕ್ರೈಸ್ತಧರ್ಮ ವನ್ನು ಸ್ವೀಕರಿಸಿದರೆ ಸುಡುವುದಿಲ್ಲವೆಂದೂ ಗಲ್ಲಿಗೇರಿಸುತ್ತೇವೆಂದೂ ಪಿಜ಼ಾರೊ ತಿಳಿಸಿದ. ಅಟಾಹುಅಲ್ಪ ಅದಕ್ಕೊಪ್ಪಿದ. ಅನಂತರ ಅವನನ್ನು ಕತ್ತುಹಿಚುಕಿ ಕೊಂದರು. ಒಬ್ಬ ದೊಡ್ಡ ಸಾಮ್ರಾಟನನ್ನು ಈ ರೀತಿ ಸುಲಿಗೆಮಾಡಿ ಅನಂತರ ಹೀಗೆ ಕೊಂದ ಈ ರಾಕ್ಷಸೀಕೃತ್ಯ ಸ್ಪೇನ್ ಜನಾಂಗಕ್ಕೆ ಎಂದಿಗೂ ಅಳಿಸಲಾಗದ ಕಳಂಕವಾಯಿತು ಎಂದು ಪ್ರೆಸ್ಕಾಟ್ ಹೇಳಿದ್ದಾನೆ.

ಪೆರು ದೇಶವನ್ನು ಲೂಟಿಹೊಡೆದು ಸ್ಪೇನಿನವರು ತಮ್ಮ ದೇಶಕ್ಕೆ ಸಾಗಿಸಿದ ಸಂಪತ್ತಿನ ಬೆಲೆ ಎಷ್ಟಿರಬಹುದೆಂಬುದನ್ನು ಲೆಕ್ಕಮಾಡಲು ಅನೇಕರು ಯತ್ನಿಸಿದ್ದಾರೆ. ಅತ್ಯಂತ ಜಾಗರೂಕತೆ ಯಿಂದ ಎಣಿಕೆಮಾಡಿದ ಲಾತ್ರಾಪ್ ಎಂಬಾತ ಒಂದು ಔನ್ಸಿಗೆ 35–02 ಡಾಲರುಗಳಂತೆ ಅಟಾಹುಅಲ್ಪನ ಬಿಡುಗಡೆಗಾಗಿ ಕೊಟ್ಟ ಚಿನ್ನದ ಬೆಲೆಯೇ 83,44,307 ಡಾಲರುಗಳಾಗುತ್ತ ವೆಂದು ಹೇಳಿದ್ದಾನೆ. ಚಿನ್ನದ ಈಗಿನ ಬೆಲೆಯ ಪ್ರಕಾರ ಅದು ಇನ್ನೂ ಹೆಚ್ಚಾಗುತ್ತದೆ. ಇದೊಂದೇ ಸಂದರ್ಭದಲ್ಲಲ್ಲ, ಸ್ಪೇನಿನವರು ಈ ರೀತಿ ಲೂಟಿ ಹೊಡೆದದ್ದು, ಸ್ಪೇನಿನಿಂದ ಇನ್ನೂ ಹೆಚ್ಚು ಜನರು ವಲಸೆ ಬಂದ ಮೇಲಂತೂ ಇಂಥ ಸುಲಿಗೆ ಅನೇಕವೇಳೆ ನಡೆಯಿತು. ಹೀಗೆ ನಾನಾಕಡೆಗಳಿಂದ ಸುಲಿಗೆ ಮಾಡಿ ಸ್ಪೇನಿಗೆ ಸಾಗಿಸಿದ ಚಿನ್ನದ ಬೆಲೆ 2 ಕೋಟಿ ಡಾಲರುಗಳಿಗಿಂತ ಹೆಚ್ಚಾಗುತ್ತದೆ ಎಂದು ಲಾತ್ರಾಪ್‍ನ ಅಭಿಪ್ರಾಯ. ಇವುಗಳಲ್ಲಿ ಆಭರಣಗಳೇ ಹೆಚ್ಚಾಗಿದ್ದುವು. ಎಲ್ಲವೂ ಚತುರ ಕಲಾಶಿಲ್ಪಿಗಳು ತಯಾರಿಸಿದ ಅತ್ಯಂತ ಸುಂದರ ಆಭರಣಗಳು. ಅವುಗಳ ಕಲಾವೈಶಿಷ್ಟ್ಯದ ಕಡೆ ಗಮನವೇ ಇಲ್ಲದೆ ಎಲ್ಲವನ್ನೂ ಕರಗಿಸಿ ಗಟ್ಟಿ ಮಾಡಲಾಯಿತು. ಹಿಂದಿನ ಆಭರಣಗಳಲ್ಲೊಂದೂ ಈಗ ಉಳಿದಿಲ್ಲ.

ನಾಗರಿಕತೆ: ಇಂಕ ಜನರು ಹರಡಿದ್ದ ದೇಶ ಭೂ ವ್ಯವಸಾಯಕ್ಕೆ ಅನುಕೂಲವಾದ ಪ್ರದೇಶವಾಗಿರಲಿಲ್ಲ. ಆದರೂ ಚತುರರಾದ ಅವರು ಪ್ರಕೃತಿಯೊಡ್ಡಿದ್ದ ಅಡಚಣೆಗಳನ್ನು ನಿವಾರಿಸಿ ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡಿಕೊಂಡರು. ಏರುತಗ್ಗುಗಳಿದ್ದ ಭೂಮಿಯನ್ನು ಕಡಿದು ಪೈರು ಬೆಳೆಯಲು ಯೋಗ್ಯವಾಗುವಂತೆ ಮಾಡಿದರು: ಅಣೆಕಟ್ಟುಗಳನ್ನು ನಿರ್ಮಿಸಿ ಮೇಲು ಕಾಲುವೆಗಳನ್ನು ತೋಡಿ ಅವುಗಳಿಂದ ನೀರುಹಾಯಿಸುವ ಏರ್ಪಾಡು ಮಾಡಿ ಕೊಂಡರು. ಈ ಪರ್ವತಶ್ರೇಣಿ ಕೆಲವುಕಡೆ 4,200ಮೀ ಎತ್ತರವಾಗಿದೆ. ಈ ಎತ್ತರಕ್ಕನು ಸಾರವಾಗಿ ಉಷ್ಣ ಮತ್ತು ಸಮಶೀತೋಷ್ಣವಲಯದ ಬೆಳೆಗಳನ್ನು ತೆಗೆಯಲು ಇದರಿಂದ ಅನುಕೂಲವಾಯಿತು. ಬಹಳ ಹಿಂದಿನ ಕಾಲದಲ್ಲೇ ಇಂಕ ಜನ ಕಾಡು ಸಸ್ಯಗಳನ್ನು ಆಹಾರ ಯೋಗ್ಯವನ್ನಾಗಿ ಮಾಡುವ ವಿಧಾನವನ್ನರಿತಿದ್ದರು. ಅನೇಕ ಆಹಾರಸಸ್ಯಗಳನ್ನು ಇತರ ದೇಶಗಳ ಜನರು ಇವರಿಂದ ತಿಳಿದರು. ವಿದ್ಯಾಭ್ಯಾಸ ಕೇವಲ ಶ್ರೀಮಂತ ಕುಲೀನ ಮಕ್ಕಳಿಗೆ ಮಾತ್ರ ಮೀಸಲಾಗಿತ್ತು. ಬಹುಪತ್ನೀತ್ವ ಶ್ರೀಮಂತರ ಸ್ವತ್ತಾಗಿತ್ತು. ಆದರೆ ಮೊದಲ ಹೆಂಡತಿಮಾತ್ರ ಗಂಡನ ಸಮಾನ ಸ್ಥಾನದಲ್ಲಿರುತ್ತಿದ್ದಳು. ಉಳಿದವರು ಕೇವಲ ಉಪಪತ್ನಿಯರು. ಅವರ ಮಕ್ಕಳಿಗೂ ತಂದೆಯ ಸ್ಥಾನ ಲಭಿಸುತ್ತಿರಲಿಲ್ಲ. ರಾಜ ತನ್ನ ದೇವಾಂಶವನ್ನು ಶುದ್ಧವಾಗಿ ಉಳಿಸಲೋ ಏನೋ, ಸಾಮಾನ್ಯವಾಗಿ ತನ್ನ ಸಹೋದರಿಯನ್ನೇ ಮದುವೆಯಾಗುತ್ತಿದ್ದ.

ಒಡೆತನದ ಕಾನೂನುಗಳು: ಪೆರು ರಾಜ್ಯದ ಸಮಾಜವ್ಯವಸ್ಥೆಯಲ್ಲಿ ಗಮನಾರ್ಹವಾದ ಎರಡು ಅಂಶಗಳೆಂದರೆ ಅದರ ಹಣಕಾಸಿನ ಕಟ್ಟುಪಾಡು ಮತ್ತು ಆಸ್ತಿಗೆ ಸಂಬಂಧಿಸಿದ ನಿಯಮಗಳು. ಸಾಮ್ರಾಜ್ಯದ ಭೂಮಿಯನ್ನೆಲ್ಲ ಮೂರು ಭಾಗಗಳಾಗಿ ವಿಂಗಡಿಸಿದ್ದರು. ಒಂದು ಭಾಗ ಸೂರ್ಯದೇವನಿಗೆ ಇನ್ನೊಂದು ಭಾಗ ರಾಜನಿಗೆ, ಮೂರನೆಯ ಭಾಗ ಸಾಮಾನ್ಯ ಜನತೆಗೆ. ಈ ವಿಭಜನೆ ಎಲ್ಲ ಪ್ರಾಂತ್ಯಗಳಲ್ಲೂ ಒಂದೇ ಸಮನಾಗಿರಲಿಲ್ಲ. ಸೂರ್ಯನಿಗಾಗಿ ಮೀಸಲಾಗಿದ್ದ ಭಾಗದ ಉತ್ಪನ್ನವೆಲ್ಲ ದೇವಸ್ಥಾನಗಳನ್ನು ನಡೆಸಿಕೊಂಡು ಹೋಗುವುದಕ್ಕೆ, ಹೆಚ್ಚು ಖರ್ಚು ತಗಲುತ್ತಿದ್ದ ಅಲ್ಲಿನ ಶಾಸ್ತ್ರೋಕ್ತ ಕರ್ಮಾಚರಣೆಗಳಿಗೆ ಮತ್ತು ಅಲ್ಲಿನ ಅಸಂಖ್ಯಾತ ಪುರೋಹಿತವರ್ಗಕ್ಕೆ ವಿನಿಯೋಗವಾಗುತ್ತಿತ್ತು. ರಾಜನಿಗೆಂದು ಕಾಯ್ದಿಟ್ಟ ಭಾಗ ಅವನ ಮತ್ತು ಅವನ ಪರಿವಾರ, ಸಿಬ್ಬಂದಿಗಾಗಿ, ಆವಶ್ಯಕವಾದಾಗ ಅನಿರೀಕ್ಷಿತ ಆಡಳಿತ ವೆಚ್ಚಕ್ಕಾಗಿ ಮೀಸಲಾಗಿತ್ತು. ಮೂರನೆಯ ಭಾಗವನ್ನು ಜನರಲ್ಲಿ ಕೆಲವು ನಿಯಮಗಳಿಗನುಸಾರವಾಗಿ ಹಂಚಲಾಗುತ್ತಿತ್ತು. ಪ್ರತಿಯೊಬ್ಬನೂ ಪ್ರಾಪ್ತ ವಯಸ್ಕ ನಾದಾಗ ಮದುವೆಯಾಗಲೇಬೇಕೆಂಬ ನಿಯಮವಿತ್ತು. ಮದುವೆಯ ಕಾಲಕ್ಕೆ ಅವನ ವಾಸಕ್ಕೆ ಮನೆಯನ್ನೊದಗಿಸುವುದು ಸ್ಥಳೀಯ ಸಮಾಜದ ಜವಾಬ್ದಾರಿ. ಅವನ ಮತ್ತು ಅವನ ಪತ್ನಿಯ ಜೀವನ ನಿರ್ವಹಣಕ್ಕೆ ಸಾಕಾಗುವಷ್ಟು ಜಮೀನು ಕೊಡುತ್ತಿದ್ದರು. ಒಂದೊಂದು ಮಗು ಹುಟ್ಟಿದಾಗಲೂ ಕೊಂಚ ಹೆಚ್ಚು ಭೂಮಿಯನ್ನು ಕೊಡುತ್ತಿದ್ದರು. ಗಂಡುಮಗುವಾದಾಗ ಕೊಡುತ್ತಿದ್ದ ಜಮೀನಿನ ಅರ್ಧದಷ್ಟನ್ನು ಹೆಣ್ಣು ಹುಟ್ಟಿದಾಗ ಕೊಡ ಲಾಗುತ್ತಿತ್ತು. ಇದಕ್ಕಿಂತ ಹೆಚ್ಚು ಪರಿಷ್ಕಾರವಾದ ಫಲಕಾರಿಯಾದ ಭೂಸ್ವತ್ತಿನ ವ್ಯವಸ್ಥೆ ಕಲ್ಪನೆಗೂ ಮೀರಿದ್ದು. ಆಯಾ ಸ್ಥಳೀಯರೇ ಅಲ್ಲಿನ ಭೂಮಿಯ ಕೃಷಿ ನಡೆಸುತ್ತಿದ್ದರು. ಅವರ ಪ್ರಥಮ ಕರ್ತವ್ಯ ಸೂರ್ಯದೇವನ ಜಮೀನು ಸಾಗುವಳಿ; ಅನಂತರ ವೃದ್ಧರು, ರೋಗಿಗಳು, ವಿಧವೆಯರು, ಯುದ್ಧರಂಗಕ್ಕೆ ಹೋಗಿದ್ದವರು ಮತ್ತು ದಿಕ್ಕಿಲ್ಲದವರ ಭೂಮಿಯ ಕೃಷಿ; ಇದು ಮುಗಿದಮೇಲೆ ಸ್ವಂತ ಜಮೀನಿನ ವ್ಯವಸಾಯಕ್ಕೆ ಅವಕಾಶ. ಆವಶ್ಯಕತೆಯಿದ್ದಾಗ ಪರಸ್ಪರ ಸಹಾಯಕ್ಕೆ ಹೋಗಲೇಬೇಕೆಂಬ ನಿಯಮವಿತ್ತು. ರಾಜನ ಜಮೀನುಗಳ ಬೇಸಾಯ ಮಾಡುತ್ತಿದ್ದವರೂ ಅವರೇ. ಇದೊಂದು ಶಿಷ್ಟಾಚಾರದ, ಸಂಭ್ರಮದ ಸಂದರ್ಭವಾಗಿತ್ತು. ಮೊದಲ ದಿನ ಎಲ್ಲರೂ ಒಂದೆಡೆ ಕಲೆತು, ಸಂತೋಷದಿಂದ ಲಾವಣಿಗಳನ್ನು ಹಾಡುತ್ತ ಕೆಲಸವನ್ನು ಪ್ರಾರಂಭಿಸುತ್ತಿದ್ದರು; ಉಡುಗದ ಉತ್ಸಾಹದಿಂದ ಅವರ ಕೆಲಸ ಮುಂದುವರಿ ಯುತ್ತಿತ್ತು. ಯಾವುದಾದರೂ ಕೈಗಾರಿಕೋದ್ಯಮವನ್ನು ಪ್ರಾರಂಭಿಸುವಾಗಲೂ ಹೀಗೆಯೇ.

ಅಧಿಕಾರಿಗಳು ಕಾಲಕಾಲಕ್ಕೆ ಜನರನ್ನು ಸಂದರ್ಶಿಸಿ, ಸುಂದರ ಯುವಕ ಯುವತಿ ಯರನ್ನು ಆರಿಸಿ, ಯುವಕರನ್ನು ರಾಜನ ಅಥವಾ ದೇವಾಲಯಗಳ ಸೇವೆಗಾಗಿ, ಯುವತಿ ಯರನ್ನು ದೇವಾಲಯ ಮತ್ತು ಅರಮನೆಯ ದಾಸಿಯರನ್ನಾಗಿ ಮತ್ತು ನೇಯ್ಗೆ ಮೊದಲಾದ ಕುಶಲಕರ್ಮಗಳಿಗಾಗಿ ನಿಯೋಜಿಸುತ್ತಿದ್ದರು. ಯಾವುದೇ ಕಾರಣದಿಂದ ಈ ವ್ಯವಸ್ಥೆಯನ್ನು ಒಪ್ಪದ ಜನರನ್ನು ದೂರದೇಶಗಳಿಗೆ ಸಾಗಿಸುವುದು ಪದ್ಧತಿಯಾಗಿತ್ತು. ಒಟ್ಟಿನಲ್ಲಿ ಇಂಕ ಸಾಮ್ರಾಜ್ಯದ ಸಾಮಾನ್ಯ ಜನರ ಜೀವನರೀತಿಯೆಲ್ಲ ರಾಜ್ಯದಿಂದಲೇ ನಿರ್ದೇಶಿಸಲ್ಪಡು ತ್ತಿದ್ದುದರಿಂದ ವ್ಯಕ್ತಿಸ್ವಾತಂತ್ರ್ಯ ಮೊಟಕುಗೊಂಡಿತು. ಹಾಗೆಯೇ ಎಲ್ಲ ಜನರಿಗೂ ಜೀವನೋ ಪಾಯವನ್ನು ಒದಗಿಸುವುದಕ್ಕೂ ರಾಜ್ಯ ಬದ್ಧವಾಗಿತ್ತು. ಇಂಥ ವ್ಯವಸ್ಥೆಯ ಸುಲಭ ನಿರ್ವಹಣೆಗಾಗಿ ಆಗಿಂದಾಗ್ಗೆ ಜನಗಣತಿ ನಡೆಯುತ್ತಿತ್ತು. ರಾಜ್ಯದ ಎಲ್ಲ ಭಾಗಗಳಲ್ಲೂ ಉತ್ತಮ ರಸ್ತೆಗಳಿದ್ದುವು. ಶಿಸ್ತಿನ ಸೈನ್ಯ, ಉತ್ತಮ ವಸ್ತುಸಾಗಾಣಿಕೆ ವ್ಯವಸ್ಥೆ, ವೇಗದಿಂದ ಸಮಾಚಾರಗಳನ್ನು ಒಯ್ಯುತ್ತಿದ್ದ ಹರಿಕಾರಗಣ–ಇವು ರಾಜ್ಯದ ದಕ್ಷತೆಯನ್ನು ಹೆಚ್ಚಿಸಿದ್ದುವು. ಆದರೆ ಚಕ್ರದ ಗಾಡಿಗಳು ಜನರಿಗೆ ಗೊತ್ತಿರಲಿಲ್ಲ. ಭಾರವನ್ನು ಒಯ್ಯಲು ಸಾಮಾನ್ಯವಾಗಿ ಲಾಮಾ ಎಂಬ ಪ್ರಾಣಿಗಳನ್ನು ಉಪಯೋಗಿಸಲಾಗುತ್ತಿತ್ತು.

ವೈಜ್ಞಾನಿಕ ಕ್ರಮದ ಕೃಷಿ: ಭೂವ್ಯವಸಾಯದಲ್ಲಿ ಇವರು ಅನುಸರಿಸುತ್ತಿದ್ದ ಕ್ರಮ ವೈಜ್ಞಾನಿಕವಾಗಿತ್ತೆಂದೇ ಹೇಳಬೇಕು. ಅವರು ಗುಳಗಳನ್ನು ಪ್ರಯೋಗಿಸುತ್ತಿರಲಿಲ್ಲ. ಭಾರ ವನ್ನೆಳೆಯುವ ಪ್ರಾಣಿಗಳನ್ನೂ ಕಾಣರು. ಆದರೂ ಬೆಳೆ ತೆಗೆಯುವುದರಲ್ಲಿ ಸಮರ್ಥರಾಗಿದ್ದರು. ತುದಿಯಲ್ಲಿ ಚೂಪಾಗಿರುವ ಗಟ್ಟಿಮರದ ಒಂದು ಗೂಟದ ತುದಿಗೆ 30 ಸೆಂ ಮೀ ಮೇಲೆ ಅಡ್ಡವಾದ ಒಂದು ತುಂಡನ್ನು ಭದ್ರವಾಗಿ ಬಿಗಿಯುತ್ತಿದ್ದರು. ಇದೇ ಅವರ ನೇಗಿಲು. ಉಳುವಾತ ಆ ಅಡ್ಡತುಂಡಿನ ಮೇಲೆ ಕಾಲನ್ನೂರಿ ಚೂಪುತುದಿ ನೆಲದೊಳಕ್ಕೆ ಹೋಗುವಂತೆ

ಮಾಡುತ್ತಿದ್ದ. ದೊಡ್ಡ ಗೂಟಕ್ಕೆ ಹಗ್ಗಕಟ್ಟಿ ಅದನ್ನು ಆರು ಅಥವಾ ಎಂಟು ಜನ ಎಳೆಯುತ್ತಿದ್ದರು. ಆಯಾಸದ ಪರಿವೆಯೇ ಇಲ್ಲದವರಂತೆ ಗೀತೆಗಳನ್ನು ಹಾಡುತ್ತ ದಿನವಿಡೀ ಕೆಲಸ ಮಾಡುತ್ತಿದ್ದರು. ಹೆಂಗಸರೂ ಅವರೊಂದಿಗಿದ್ದು ಹೆಂಟೆ ಒಡೆಯುವುದು, ಕಳೆ ತೆಗೆಯುವುದು ಮುಂತಾದ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ನೆಲ ಮೃದುವಾಗಿದ್ದುದರಿಂದ ಈ ಉಳುವ ಕೆಲಸ ಸುಲಭವಾಗಿತ್ತು. ಅಭ್ಯಾಸಬಲದಿಂದ, ಎಷ್ಟು ಮಣ್ಣನ್ನು ಬುಡಮೇಲು ಮಾಡಬೇಕೋ ಅಷ್ಟನ್ನೇ ಮಾಡಿಕೊಂಡು ಸರಾಗವಾಗಿ ಕೆಲಸ ನಡೆಸುತ್ತಿದ್ದರು.

ಯಾಂತ್ರಿಕ ಕೌಶಲ: ಬಟ್ಟೆ ತಯಾರಿಕೆಯಲ್ಲಿ ಮತ್ತು ಇತರ ಉಪಯುಕ್ತ ಕಲೆಗಳಲ್ಲಿ ಇವರು ತುಂಬ ಜಾಣ್ಮೆಯನ್ನು ಹೊಂದಿದ್ದರು. ಅರಮನೆಯ ಉಗ್ರಾಣ ಮತ್ತು ಕೋಠಿಗಳಲ್ಲಿ, ದೊರೆಗಳ ಗೋರಿಗಳಲ್ಲಿ, ತುಂಬ ನಯಗೆಲಸದ ವಸ್ತುಗಳು ದೊರೆತಿವೆ. ಚಿನ್ನದ ಕಲಶಗಳು, ಬೆಳ್ಳಿಯ ಕಡಗಗಳು, ಕಂಠಾಭರಣಗಳು ಮತ್ತು ಇತರ ಒಡವೆಗಳು, ಗೃಹೋಪಕರಣಗಳು (ಕೆಲವು ನಯವಾದ ಮಣ್ಣಿನಿಂದ ಮಾಡಿದವು, ಕೆಲವು ತಾಮ್ರದವು). ಗಟ್ಟಿಯಾದ ಪಟ್ಟಿಯಲ್ಲಿ ಸಹ ಈ ಜನ ಉತ್ಕೃಷ್ಟವಾದ ನಯಗೆಲಸ ಮಾಡುತ್ತಿದ್ದರು. ಒಂದು ಜನತೆಯ ಸಂಸ್ಕೃತಿಯ ಮಟ್ಟ ಗೋಚರವಾಗುವುದು ಅವರ ವಾಸ್ತುಶಿಲ್ಪದಲ್ಲಿ, ಸರಳತೆ, ಭಾಗಗಳ ಸಮಸೂತ್ರತೆ, ಭದ್ರತೆ–ಇವು ಅವರು ನಿರ್ಮಿಸಿದ ಕಟ್ಟಡಗಳ ವಿಶಿಷ್ಟ ಗುಣಗಳು–ಎಂದು ಹಂಬೋಲ್ಟ್ ಎಂಬ ಪ್ರಸಿದ್ಧ ಪ್ರವಾಸಿ ಬರೆದಿದ್ದಾನೆ. ಅಲ್ಲಿನ ಅಪಾರ ಸಂಪತ್ತನ್ನು ದೋಚುವುದಕ್ಕೋಸ್ಕರ ಸ್ಪೇನರು ಇವರ ಅನೇಕ ಕಲಾಕೃತಿಗಳನ್ನು ನಾಶಗೊಳಿಸಿದರು; ಭೂಕಂಪ ಮುಂತಾದುವುಗಳಿಂದಲೂ ಇಂಥ ವಿಧ್ವಂಸಕ ಕೃತ್ಯ ನಡೆದಿಲ್ಲವೆನ್ನಬಹುದು. ಆದರೂ ಅಳಿದುಳಿದಿರುವ ಕೆಲವು ಸ್ಮಾರಕಗಳೇ ಪ್ರಾಚೀನಾನ್ವೇಷಕರ ಆಸಕ್ತಿಯನ್ನು ಕೆರಳಿಸುತ್ತಿವೆ–ಎಂದು ಪ್ರೆಸ್ಕಾಟ್ ಹೇಳಿದ್ದಾನೆ.

ರಹಸ್ಯಗರ್ಭಿತ ಕೀಪೂ: ಇಂಕ ಜನರು ಬರೆವಣಿಗೆಯನ್ನರಿತಿರಲಿಲ್ಲ. ದೊರೆತ ಧಾನ್ಯಗಳ ಪ್ರಮಾಣ, ಕೆಲಸಗಾರರಿಗೆ ಹಂಚಿದ ಕಚ್ಚಾ ಪದಾರ್ಥಗಳ ವಿವರ ಮತ್ತು ಅಳತೆ, ತಯಾರಾದ ಬಟ್ಟೆ ಮತ್ತು ಇತರ ಪದಾರ್ಥಗಳ ಲೆಕ್ಕ, ದೊರೆಯ ಉಗ್ರಾಣಗಳಿಗೊದಗಿಸಿದ ವಸ್ತುಗಳ ವಿವರ–ಇವುಗಳನ್ನೆಲ್ಲ ವಿಶಿಷ್ಟರೀತಿಯಲ್ಲಿ ಗುರುತಿಟ್ಟುಕೊಳ್ಳುತ್ತಿದ್ದರು. ನಾನಾ ಬಣ್ಣಗಳ ದಾರಗಳನ್ನು ಸೇರಿಸಿ ಭದ್ರವಾಗಿ ಹೊಸೆದಿದ್ದ ಒಂದು ಹುರಿಯ ಸಹಾಯದಿಂದ ಅವರಿಗೆ ಇಂಥ ಲೆಕ್ಕಾಚಾರ ಸಾಧ್ಯವಾಗಿತ್ತೆಂದರೆ ಆಶ್ಚರ್ಯವಾಗದಿರದು. ಇದರ ಹೆಸರು ಕೀಪೂ ಎಂದು. ಈ ಹುರಿಯಲ್ಲಿ ಗಂಟುಗಳಿದ್ದುವು. ಅಂಚುಕಟ್ಟಿನಂತೆ ಈ ಹುರಿಯಿಂದ ಅನೇಕ ಸಣ್ಣ ದಾರಗಳು ನೇತಾಡುತ್ತಿದ್ದವು. ಕೀಪೂ ಪದದ ಅರ್ಥ ಗಂಟು ಎಂದು. ಬಣ್ಣಗಳು ಇಂದ್ರಿಯಗೋಚರವಾದ ವಸ್ತುಗಳನ್ನು ಸೂಚಿಸುತ್ತಿದ್ದುವು. ಬಿಳುಪು ಬೆಳ್ಳಿಯನ್ನು, ಹಳದಿ ಚಿನ್ನವನ್ನು ಹೀಗೆ ಕೆಲವು ಸಂದರ್ಭಗಳಲ್ಲಿ ಅವು ಭಾವಗಳನ್ನೂ ಸೂಚಿಸುತ್ತಿದ್ದುವು. ಬಿಳುಪು ಶಾಂತಿ, ಕೆಂಪು ಯುದ್ಧ–ಹೀಗೆ. ಕೀಪೂಗಳನ್ನು ಹೆಚ್ಚಾಗಿ ಬಳಸುತ್ತಿದ್ದದ್ದು ಲೆಕ್ಕಾಚಾರಕ್ಕೆ. ಗಂಟು ಸೊನ್ನೆಯ ಚಿಹ್ನೆ. ಗಂಟುಗಳ ಗುಂಪುಗಳು ಅಂಕಿಗಳನ್ನು ಸೂಚಿಸುತ್ತಿದ್ದುವು. ಕೀಪೂ ಲೆಕ್ಕಚಾರದಲ್ಲಿ ಪರಿಣತಿ ಪಡೆದಿದ್ದವರು ಎಲ್ಲ ಎಣಿಕೆಗಳೂ ತಪ್ಪಿಲ್ಲದಂತೆ ಬಲು ಬೇಗ ಮಾಡುತ್ತಿದ್ದರು. ಇವರಿಗೆ ಕೀಪೋಕಾಮಾಯೂ ಎಂದು ಹೆಸರು. ಪ್ರತಿ ಜಿಲ್ಲೆಯಲ್ಲೂ ಇಂಥ ಅಧಿಕಾರಿಗಳಿದ್ದರು. ಆಡಳಿತಕ್ಕೆ ಆವಶ್ಯಕವಾದ ನಾನಾ ವಿಷಯಗಳು ಮತ್ತು ಅಂಕಿಅಂಶಗಳನ್ನು ಸರ್ಕಾರಕ್ಕೊದಗಿಸುವುದು ಅವರ ಕರ್ತವ್ಯ. ಈ ಕೀಪೂಗಳನ್ನು ಬಹು ಎಚ್ಚರದಿಂದ ಜೋಡಿಸಿ ಶೇಖರಿಸುತ್ತಿದ್ದರು. ಇದು ಆಗಿನ ರಾಷ್ಟ್ರೀಯ ಪತ್ರಾಗಾರವಾಗಿತ್ತು (ನ್ಯಾಷನಲ್ ಆರ್ಕೈವ್ಸ್).

ಪೆರು ಸಂಸ್ಕೃತಿಯ ಇನ್ನೊಂದು ವಿಚಿತ್ರ ವೈಲಕ್ಷಣ್ಯವೆಂದರೆ ಆ ಜನರಿಗೆ ಹಣದ ಜ್ಞಾನವೇ ಇಲ್ಲದಿದ್ದದ್ದು. ಹಣವೇ ಮಾನವನ ಎಲ್ಲ ಅನಿಷ್ಟಗಳ ಮೂಲ ಎಂಬ ಭಾವನೆ ಇವರಿಗಿದ್ದಿರಬಹುದು. ಇವರದು ಅತ್ಯಂತ ದರ್ಪ ವೈಭವಗಳಿಂದ ಮೆರೆದ ವಿಶಾಲಸಾಮ್ರಾಜ್ಯ: ಅಲ್ಲಿದ್ದ ಚಿನ್ನ ಬೆಳ್ಳಿಗಳಿಂದಲೇ ಮುಂದೆ ಯುರೋಪ್ ದೇಶಗಳ ನಾಣ್ಯವ್ಯವಸ್ಥೆ ಸಾಧ್ಯವಾದದ್ದು. ಆದರೂ ಅಲ್ಲಿ ನಾಣ್ಯಗಳೇ ಇರಲಿಲ್ಲ. ಈ ಪ್ರಶಸ್ತ ಲೋಹಗಳಿಗಾಗಿಯೇ ಸ್ಪೇನಿನ ಮತ್ತು ಇತರ ದೇಶಗಳ ಸಾಹಸಿಗರು ಇಲ್ಲಿಗೆ ಬರುವಂತಾದದ್ದು. ಈ ಲೋಹ ಪೆರು ದೇಶದಲ್ಲಿ ಈಗಿಲ್ಲ; ಹಿಂದಿನ ವೈಭವವೂ ಈಗ ಮಾಯವಾಗಿದೆ. ಆದರೆ ಆ ಕಾಲದ ಪೆರು ದೇಶದ ನೆನಪು ತರುವ ಚಾರಿತ್ರಿಕ ಅವಶೇಷಗಳು ಇಂದಿಗೂ ಪ್ರವಾಸಿಗರನ್ನು, ಪ್ರಾಚೀನ ಶೋಧಕರನ್ನು ಸೆಳೆಯುತ್ತಿವೆ.

ಇಂಕ ವಾಸ್ತುಕಲೆ ಅಚ್ಚರಿಗೊಳಿಸುವಂಥದು. ಕಲ್ಲಿನ ಬೃಹತ್‌ಕಟ್ಟಡಗಳು ರಾಜ್ಯದ ಹಲವೆಡೆಗಳಲ್ಲಿ ಕಂಡುಬಂದಿವೆ. ಈ ಜನ ಕಲ್ಲನ್ನು ಮಟ್ಟಸವಾಗಿ ಕೆತ್ತಿ, ಗಾರೆಯನ್ನು ಉಪಯೋಗಿಸದೆ ಸ್ವಲ್ಪವೂ ಸಂದುಕಾಣದಂತೆ ಒಂದಕ್ಕೊಂದು ಜೋಡಿಸುತ್ತಿದ್ದರು. ಈ ಮಾದರಿಯಲ್ಲಿ ಕಟ್ಟಿದ್ದ ಕುಜ್ಕೋ ಕೋಟೆಯ ಕಲ್ಲುಗಳಲ್ಲಿ ಹಲವು 100 ಟನ್‌ಗಿಂತಲೂ ಭಾರವಾಗಿವೆ. ಮಳೆ ಬಹಳ ಕಡಿಮೆ ಇರುವ ಕರಾವಳಿಯ ಪ್ರದೇಶಗಳಲ್ಲಿ ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳಿಂದ ಕಟ್ಟಡಗಳನ್ನು ಕಟ್ಟುತ್ತಿದ್ದರು. ಆದರೆ ರಚನಾವಿನ್ಯಾಸ ಮತ್ತು ಬೃಹತ್ ಪ್ರಮಾಣದಲ್ಲಿ ಇವು ಪರ್ವತ ಪ್ರದೇಶದ ಕಲ್ಲು ಕಟ್ಟಡಗಳನ್ನೇ ಹೋಲುತ್ತಿದ್ದುವು. ಕೆಲವು ಗೋಡೆಗಳ ಮೇಲೆ ವರ್ಣಚಿತ್ರಗಳ ಅಲಂಕರಣ ಸಹ ಇರುತ್ತಿತ್ತು.

ಈ ಜನರಲ್ಲಿ ಬಳಕೆಯಲ್ಲಿದ್ದ ಶಿಲ್ಪಕಲೆ ಸಾಧಾರಣಮಟ್ಟದ್ದು. ಹೆಚ್ಚಿನವೆಲ್ಲ ಅಲಂಕರಣಕ್ಕಾಗಿ ಮಾಡಿದ ಗೀಚು ಚಿತ್ರಗಳು ಅಥವಾ ಅಲ್ಪ ಉಬ್ಬಿನ ಶಿಲ್ಪಗಳು. ಈ ಜನಗಳಿಗೆ ಕಬ್ಬಿಣದ ಉಪಯೋಗ ತಿಳಿದಿರಲಿಲ್ಲ. ಚಿನ್ನ, ಬೆಳ್ಳಿ ಮತ್ತು ತವರವನ್ನು ಗಣಿಗಳಿಂದ ತೆಗೆಯುತ್ತಿದ್ದರಲ್ಲದೆ ಅವುಗಳಿಂದ ಉತ್ತಮವಾದ ಬಳಕೆಯ ವಸ್ತುಗಳನ್ನು, ಕಲಾತ್ಮಕವಾದ ಆಭರಣಗಳನ್ನು ಮಾಡುತ್ತಿದ್ದರು. ಬೆರಕೆ ಲೋಹಗಳ ಬಳಕೆ ರೂಢಿಯಲ್ಲಿತ್ತು. ಇಂಕ ಜನ ಲೋಹ ವಿದ್ಯೆಯಲ್ಲಿ ಕುಶಲತೆಯನ್ನು ಸಾಧಿಸಿದ್ದರು. ಕಾಲಕಾಲಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಅವು ವ್ಯತ್ಯಾಸಗೊಳ್ಳುತ್ತಿದ್ದವು. ಕೆಲವೆಡೆ ಸಾಮಾನ್ಯವಾದ ಕೆಂಪು ಮಡಕೆಗಳೂ ಬಿಳಿಯ ಬಣ್ಣದ ಮೇಲೆ ಕೆಂಪು ಚಿತ್ರಗಳುಳ್ಳ ಮಡಕೆಗಳೂ ಇನ್ನೂ ಕೆಲವು ಭಾಗಗಳಲ್ಲಿ ನಾನಾ ಪ್ರಾಣಿಯಾಕೃತಿಯಲ್ಲಿ ಮಾಡಿದ ಅಥವಾ ಪ್ರಾಣಿಯ ಅಥವಾ ಮನುಷ್ಯರ ಚಿತ್ರಗಳನ್ನೊಳಗೊಂಡ ಮಡಕೆಗಳೂ ಬಳಕೆಯಲ್ಲಿದ್ದುವು. ಕೆಲವಂತೂ ಅಂದಿನ ಕುಂಬಾರನ ಉನ್ನತಕಲೆಯ ದ್ಯೋತಕಗಳಾಗಿವೆ. ಇಂಕ ಜನರ ಬಟ್ಟೆಗಳಲ್ಲಿ ಕಂಡುಬರುವ ದಾರದ ನಯ, ನೇಯ್ಗೆಯ ತಂತ್ರ ಮತ್ತು ಆಕರ್ಷಕ ರಂಗಿನ ಮಾಟಗಳು ಉಚ್ಚಮಟ್ಟದ್ದಾಗಿದ್ದು, ನೇಯ್ಗೆಯ ಕೆಲಸಕ್ಕೆ ಕಲೆಯ ಸ್ಥಾನವನ್ನು ದೊರಕಿಸಿಕೊಟ್ಟಿವೆ.

ಪಿತೃಪೂಜೆ ಇಂಕ ಜನರ ಧಾರ್ಮಿಕ ನಡವಳಿಕೆಗಳಲ್ಲಿ ಮುಖ್ಯವಾದುದು. ಸತ್ತವರ ದೇಹಗಳನ್ನು ಒಣಗಿಸಿ ಜೋಪಾನವಾಗಿ ಬಟ್ಟೆ ಮುಂತಾದುವುಗಳಲ್ಲಿ ಸಂರಕ್ಷಿಸಿ ಕಾಲಕಾಲಕ್ಕೆ ಪೂಜೆ ಪುನಸ್ಕಾರಗಳನ್ನು ಮಾಡುತ್ತಿದ್ದರು. ಹಲವು ಇಂಕ ದೊರೆಗಳ ಒಣಗಿಸಿದ ದೇಹಗಳು ಕುಜ್ಕೊದ ಸೂರ್ಯ ದೇವಾಲಯದಲ್ಲಿದ್ದುವಂತೆ. ಧಾರ್ಮಿಕ ವಿಧಿಗಳಲ್ಲಿ ಪುರೋಹಿತರು ಮುಖ್ಯಪಾತ್ರವಹಿಸುತ್ತಿದ್ದರು. ಜೋತಿಷ್ಯ, ಶಕುನ, ಯಜ್ಞ, ಪಂಚಾಂಗದ ಪ್ರಕಾರ ಹಬ್ಬಗಳ ನಿಷ್ಕರ್ಷೆ ಮತ್ತು ರೋಗಗಳನ್ನು ಗುಣಪಡಿಸುವುದು–ಪುರೋಹಿತರ ಮುಖ್ಯ ಕೆಲಸವಾಗಿತ್ತು. ದೇಶದ ಮುಖ್ಯ ದೇವತೆ ಸೂರ್ಯ. ವೀರಕೋಚ ಮುಂತಾದ ಹಲವು ದೇವರುಗಳನ್ನು ಪೂಜಿಸುತ್ತಿದ್ದರು. ಪ್ರಮುಖ ನಗರಗಳಲ್ಲಿ ಸೂರ್ಯ ದೇವಾಲಯಗಳು ಇದ್ದುವು. ಹುಯಕ ಎಂದು ಕರೆಯಲ್ಪಡುತ್ತಿದ್ದ ಪುಣ್ಯಸ್ಥಾನಗಳಲ್ಲೂ ಜನ ಪೂಜೆ ಸಲ್ಲಿಸುತ್ತಿದ್ದರು. (ಎಸ್.ಎನ್.;ಟಿ.ಎಲ್.ಕೆ.)

**ಇಂಗಳದಾಳು:** ಚಿತ್ರದುರ್ಗ ಜಿಲ್ಲೆ ಮತ್ತು ಅದೇ ತಾಲ್ಲೂಕಿನ ಒಂದು ಗ್ರಾಮ. ಬೆಂಗಳೂರು– ಪುಣೆ ರಾಷ್ಟ್ರೀಯ ಹೆದ್ದಾರಿಯ ಬಳಿ, ಚಿತ್ರದುರ್ಗದಿಂದ ಸು. 5 ಕಿಮೀ ದಕ್ಷಿಣದಲ್ಲಿದೆ. ಇಂಗಳದಾಳು ಎಂದರೆ ಕೆಂಡದೂರು, ಬೂದಿ ಮುಂತಾದ ಅವಶೇಷಗಳಿರುವ ಊರು ಎಂದರ್ಥ. ಖನಿಜಶಾಸ್ತ್ರೀಯವಾಗಿ ಚಿತ್ರದುರ್ಗ ವಲಯವೆಂದು ವರ್ಗೀಕರಿಸಲಾದ ವಿಸ್ತಾರವಾದ ಪ್ರದೇಶದಲ್ಲಿ ಕಬ್ಬಿಣದ ಅಂಶ ಹೆಚ್ಚಾಗಿರುವ ಪಟ್ಟೆಯಾಕಾರದ ಗಡುಸಾದ ಶಿಲೆಗಳ ಪದರವಿರುವುದು ಕಂಡುಬರುತ್ತದೆ. ಕಬ್ಬಿಣ ಮತ್ತು ಗಂಧಕಗಳು ವಿವಿಧ ಪ್ರಮಾಣಗಳಲ್ಲಿ ಬೆರೆತಿರುವ ಖನಿಜ ಪೈರೈಟ್. ಈ ಖನಿಜ ಇಂಗಳದಾಳಿನ ಬಳಿ ಪತ್ತೆಯಾಗಿದೆ. ಈ ಶಿಲಾಪದರ, ಸಿರಗಳಲ್ಲಿಯೇ ಗಂಧಕ ಸಂಬಂಧಿ ಖನಿಜದೊಂದಿಗೆ ತಾಮ್ರ ಹಾಗೂ ಚಿನ್ನ ದೊರೆಯುತ್ತವೆ. ಇಂತಹ ಶಿಲೆಯ ಹರವು ಚಿಕ್ಕಣ್ಣನಹಳ್ಳಿಯಿಂದ ಹಿಡಿದು ಕಡ್ಲೆಹಡ್ಲು ಗ್ರಾಮದವರೆಗೆ ಮತ್ತು ಉತ್ತರದಲ್ಲಿ ಕುಂಚಿಗನಾಳಿನಿಂದ ಹಿಡಿದು ದಕ್ಷಿಣದಲ್ಲಿ ಅಜ್ಜನ ಹಳ್ಳಿಯವರೆಗೆ ಸು.50 ಕಿಮೀ ದೂರದವರೆಗೆ 8–12 ಕಿಮೀ ಅಗಲವಾಗಿ ಹರಡಿದೆ. ಈ ಪದರ ಹೆಚ್ಚಾಗಿರುವ ಕೇಂದ್ರ ಪ್ರದೇಶದಲ್ಲಿ ಇಂಗಳದಾಳು, ಗುಡ್ಡದ ರಂಗವ್ವನಹಳ್ಳಿ, ಮದರಕರಿಪುರ ಮತ್ತು ಕುಂಚಿಗನಾಳು ಗ್ರಾಮಗಳಿವೆ. ಈ ಗ್ರಾಮಗಳ ಬಳಿ ಅಲ್ಲಲ್ಲಿ ಪೂರ್ವಜರು ತೋಡಿ ಕೈಬಿಟ್ಟಿರುವ ಆಳವಾದ ಗುಂಡಿಗಳಿವೆ. ಇಂಗಳದಾಳು ಗ್ರಾಮದ ದಕ್ಷಿಣಕ್ಕಿರುವ ಬೆಳ್ಳಿಗುಡ್ಡದಲ್ಲಿ ತಾಮ್ರದ ಅದಿರು ಸಂಗ್ರಹಿಸಲು ತೋಡಿದ್ದ ಗಣಿಯ ಅವಶೇಷಗಳಿವೆ. ಹಳೆಯಕಾಲದ ಕುಲುಮೆಗಳಿದ್ದ ಸ್ಥಳವನ್ನು ಸೂಚಿಸುವ ಕಿಟ್ಟದ ರಾಶಿಯನ್ನೂ ಅಲ್ಲಲ್ಲಿ ಕಾಣಬಹುದು. ಅದಿರು ಸಂಗ್ರಹಿಸಿ, ಕುಟ್ಟಿ ಪುಡಿಮಾಡಿ, ಸಣ್ಣ ಕುಲುಮೆಗಳಲ್ಲಿ ಕರಗಿಸಿ ಲೋಹ ಪಡೆದಿರುವುದಕ್ಕೆ ಸಾಕ್ಷಿ ಹೇಳುವ ಕಿಟ್ಟದ ರಾಶಿಗಳನ್ನು ನೋಡಿದರೆ ಲೋಹಗಾರಿಕೆಯ ಕೆಲಸ ಈ ಪ್ರದೇಶದಲ್ಲಿ ಬಹುಕಾಲದಿಂದ ಸಾಕಷ್ಟು ವ್ಯವಸ್ಥಿತವಾಗಿ ದೊಡ್ಡ ಪ್ರಮಾಣದಲ್ಲಿಯೇ ನಡೆದಿರಬೇಕೆಂಬ ಊಹೆಗೆ ಎಡೆ ಮಾಡಿಕೊಡುತ್ತದೆ. ಇಂಗಳದಾಳಿನ ಬಳಿ ಇರುವಂತೆಯೇ ಸುತ್ತಮುತ್ತಲಿನ ಕುಂಚಿಗನಾಳು, ಗೋಣೂರು, ಗೊಲ್ಲರಹಟ್ಟಿ, ಗುಡ್ಡದ ರಂಗವ್ವನಹಳ್ಳಿ, ಚಿಕ್ಕಣ್ಣನ ಹಳ್ಳಿ ಮುಂತಾದ ಗ್ರಾಮಗಳ ಬಳಿಯೂ ಇಂತಹ ಪ್ರಾಚೀನ ಗಣಿಗಾರಿಕೆಯ ಅವಶೇಷಗಳಿವೆ. ಇಂಗಳದಾಳಿನ ಬಳಿ ವಿಶೇಷವಾಗಿ ಗಣಿಕೆಲಸ ನಡೆದಿರುವ ಸೂಚನೆಗಳಿದ್ದು ತಾಮ್ರದೊಂದಿಗೆ ಚಿನ್ನ ಮತ್ತು ಬೆಳ್ಳಿಯನ್ನು ಸಂಗ್ರಹಿಸಿರುವುದು ಕಂಡುಬರುತ್ತದೆ.

ಈ ಪ್ರದೇಶದಲ್ಲಿ ದೊರೆಯುವ ಇತರ ಲೋಹಗಳಲ್ಲಿ ಸೀಸ ಮತ್ತು ಸತು ಮುಖ್ಯವಾದವು. ಭಾರತದಲ್ಲಿ ಸಾಧಾರಣವಾಗಿ ಒಟ್ಟಿಗೆ ದೊರೆಯುವ ಈ ಲೋಹಗಳನ್ನು ಬಹು ಪುರಾತನ ಕಾಲದಿಂದಲೂ ಪಡೆಯುತ್ತಾ ಬರಲಾಗಿದೆ. ಸೀಸದ ಮುಖ್ಯ ಖನಿಜ ಗೆಲೀನಾ (ಸೀಸದ ಸಾಮಾನ್ಯ ಅದಿರು), ಸತುವಿನ ಖನಿಜ ಸ್ಫಾಲರೈಟ್. ಸಾಧಾರಣವಾಗಿ ಸೀಸದ ಜೊತೆ ಬೆಳ್ಳಿ, ಸತುವಿನೊಡನೆ ಕ್ಯಾಡ್ಮಿಯಮ್ ಲೋಹಗಳೂ ಬೆರೆತಿರುತ್ತವೆ. ಇಂಗಳದಾಳಿನ ದಕ್ಷಿಣಕ್ಕಿರುವ ಬೆಳ್ಳಿಗುಡ್ಡದಲ್ಲಿ ಗೆಲೀನಾ ಹರಡಿರುವ ಬೆಣಚುಕಲ್ಲಿನ ಸಿರಗಳು ಕಾಣಿಸುತ್ತವೆ. ಕುಂಚಿಗನಾಳು, ಮದಕರಿಪುರಗಳ ಬಳಿ ತಾಮ್ರದ ಮುಖ್ಯ ಅದಿರಾದ ಚಾಲ್ಕೋ ಪೈರೈಟಸ್ ಜೊತೆಗೆ ಸಾಕಷ್ಟು ಪ್ರಮಾಣದಲ್ಲಿ ಗೆಲೀನಾ ಸಹ ಬೆರೆತಿದೆ. ಕುರುಬರಮರಡಿ ಕೆರೆ ಗ್ರಾಮದ ಬಳಿಯ ಗುಡ್ಡಗಳಲ್ಲಿಯೂ ಸೀಸ ಮತ್ತು ಬೆಳ್ಳಿ ಇರುವ ಬೆಣಚಿನ ಸಿರಗಳಿವೆ. ಈ ಲೋಹಗಳನ್ನು ಸಂಗ್ರಹಿಸಲು ಪ್ರಾಚೀನರು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಈ ಖನಿಜಶಾಸ್ತ್ರೀಯ ಹಿನ್ನೆಲೆಯಲ್ಲಿ ಇಂಗಳದಾಳಿನ ಹತ್ತಿರವಿರುವ ಬೆಳ್ಳಿಗುಡ್ಡದ ದಕ್ಷಿಣ ತಪ್ಪಲಿನಲ್ಲಿ ಕಂಡುಬಂದಿರುವ ಪುರಾತತ್ತ್ವ ಅವಶೇಷಗಳು ಗಮನಾರ್ಹ. ಈ ಗುಡ್ಡದ ತಪ್ಪಲಿನಲ್ಲಿ ಬೃಹತ್ ಶಿಲಾಯುಗದ ಕಲ್ಗೋರಿಗಳ ಭಗ್ನ ಅವಶೇಷಗಳಿವೆ. ತೀರ

ಹಾಳಾದ ಒಂದೆರಡು ಕಲ್ಗೋರಿಗಳನ್ನು ಉತ್ಖನನ ಮಾಡಲಾಗಿದೆ. ಈ ಪ್ರದೇಶಕ್ಕೆ ಸಾಮಾನ್ಯವಾದ ಕೆಮ್ಮಣ್ಣಿನ ಗಡುಸಾದ ನೆಲದಲ್ಲಿ 2 ಮೀ ಉದ್ದ, 1.2 ಮೀ ಅಗಲ ಮತ್ತು 1.5 ಮೀ ಆಳವಾದ ಕುಳಿಯನ್ನು ತೋಡಿ ಇದರಲ್ಲಿ ಅಸ್ಥಿಪಂಜರದ ಮೂಳೆಗಳು, ಬೃಹತ್ ಶಿಲಾಯುಗದ ಹೊಳಪಿನ ಕಪ್ಪು–ಕೆಂಪು ಬಣ್ಣದ ಮಣ್ಪಾತ್ರೆಗಳು ಮತ್ತು ಕೆಲವು ಕಬ್ಬಿಣದ ಉಪಕರಣಗಳನ್ನಿಟ್ಟು ಮಣ್ಣು ಮುಚ್ಚಿ ಮೇಲೆ ಕಲ್ಲುಗುಂಡುಗಳನ್ನು ರಾಶಿಮಾಡಿ, ಸುತ್ತಲೂ ವೃತ್ತಾಕಾರದಲ್ಲಿ ಮಧ್ಯಮ ಗಾತ್ರದ ಕಲ್ಗುಂಡುಗಳನ್ನು ಜೋಡಿಸಿದೆ. ಇದರಲ್ಲಿ ಇಡಲಾಗಿದ್ದ ಕಬ್ಬಿಣದ ಉಪಕರಣಗಳಲ್ಲಿ ಹಿಡಿಯಿರುವ ಕಿರುಗತ್ತಿ, ಚಾಕು, ಮೊಳೆಗಳು ಮತ್ತು ಇಕ್ಕುಳ ಅಥವಾ ಚಿಮಟ ಮುಖ್ಯವಾದವು. ಈ ಕಲ್ಗೋರಿಗಳನ್ನು ಕಟ್ಟಿರುವ ರೀತಿ ಮತ್ತು ಅದರೊಳಗಿನ ಶವಸಂಸ್ಕಾರ ಪದಾರ್ಥಗಳನ್ನು ಆಧರಿಸಿ ಇವು ಪ್ರ.ಶ.ಪೂ. 6–5ನೆಯ ಶತಮಾನಕ್ಕೆ ಸೇರಿದವೆಂದು ಹೇಳಲಾಗಿದೆ. ಬೆಳ್ಳಿಗುಡ್ಡದ ಸಮೀಪವಿರುವ ಪ್ರಾಚೀನ ವಸತಿ ನಿವೇಶನದಲ್ಲಿಯೂ ಸಾತವಾಹನ ಕಾಲದ ಮಣ್ಣಿನ ಪಾತ್ರೆ ಮತ್ತಿತರ ಅವಶೇಷಗಳು ಬೆಳಕಿಗೆ ಬಂದಿವೆ.

ಇಂಗಳದಾಳಿಗೆ ತೀರ ಸಮೀಪವಾಗಿರುವ ಈ ಕಲ್ಗೋರಿಗಳಲ್ಲದೆ ಸುತ್ತಮುತ್ತಲಿನ ಸು.15–20 ಕಿಮೀ ಪರಿಸರದಲ್ಲಿ ನವಶಿಲಾಯುಗದ ಆರಂಭದಿಂದ ಕಬ್ಬಿಣಯುಗ ಹಾಗೂ ಇತಿಹಾಸಯುಗದವರೆಗೆ ಸತತ ಜನವಸತಿ ಇದ್ದುದರ ಬಗೆಗೆ ಇಲ್ಲಿ ನಡೆದಿರುವ ಭೂ ಶೋಧನೆಗಳು ಆಧಾರ ಒದಗಿಸಿವೆ. ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳು ಈ ಪರಿಸರದಲ್ಲಿಯೇ ಇವೆ. ಗಣಿಗಾರಿಕೆ ಹಾಗೂ ಖನಿಜಸಂಪನ್ಮೂಲಗಳ ಕಾರಣದಿಂದಲೇ ಮೌರ್ಯ, ಸಾತವಾಹನ ಮತ್ತು ಅದರ ಮಾಂಡಲಿಕರ ಪ್ರಭಾವ ಈ ಪ್ರದೇಶದಲ್ಲಿ ಬೆಳೆದಂತೆ ಕಂಡುಬರುತ್ತದೆ.(ಎಂ.ವಿ.ಎ.)

**ಇಂಗ್ಲೆಂಡ್:** ಗ್ರೇಟ್‌ಬ್ರಿಟನ್‌ನ ಒಂದು ದೊಡ್ಡ ರಾಜಕೀಯ ಆಡಳಿತವಿಭಾಗ; ದೇಶ. ಬ್ರಿಟನ್‌ನ ಪ್ರಮುಖ ಕೈಗಾರಿಕಾ ಮತ್ತು ವ್ಯಾಪಾರ ಕೇಂದ್ರ. ರಾಜಧಾನಿ ಲಂಡನ್.

**ಪ್ರಾಗೈತಿಹಾಸಿಕ ಕಾಲ:** ಪ್ಲಿಸ್ಟೊಸೀನ್ ಯುಗದ ಪ್ರಾರಂಭದಲ್ಲಿ ಇಂಗ್ಲೆಂಡಿನ ಬಹು ಭಾಗವನ್ನು ಹಿಮ ಆವರಿಸಿತ್ತು. ಮಧ್ಯ ಪ್ಲಿಸ್ಟೊಸೀನ್ ಯುಗಕ್ಕೆ ಸೇರಿದ ಭೂ ಪದರಗಳಲ್ಲಿ ಪಳೆಯುಳಿಕೆಗಳು ಕೆಂಟಿನ ಸ್ವಾನ್ಸ್‌ಕೂಂಬ್ ಎಂಬಲ್ಲಿ ದೊರಕಿವೆ. ಈ ದೇಶದ ಅತ್ಯಂತ ಹಳೆಯ ಮಾನವನಿಗೆ ಸೇರಿದ ಆದರೆ ಇದಕ್ಕೂ ಹಿಂದೆ ಇಂಗ್ಲೆಂಡಿನಲ್ಲಿ ಆದಿಮಾನವ ವಾಸಿಸುತ್ತಿದ್ದನೆಂಬುದಕ್ಕೆ ಅಲ್ಲಿ ದೊರಕಿರುವ ಶಿಲೋಪಕರಣಗಳು ಸಾಕ್ಷಿಯಾಗಿವೆ.

ಈಸ್ಟ್ ಆಂಗ್ಲಿಯದ ಕ್ರೋಮರ್, ನಾರ್‍ವಿಜ್, ಇಪ್ಸ್‌ವಿಚ್ ಮುಂತಾದೆಡೆಗಳಲ್ಲಿ ದೊರಕಿರುವ ಶಿಲೋಪಕರಣ ಅಥವಾ ಅತ್ಯಂತ ಹಳೆಯ ಕಾಲದ ಮತ್ತು ಬಹಳ ಒರಟಾದ ಶಿಲೋಪಕರಣಗಳನ್ನು ಮಾನವ ನಿರ್ಮಿತವಲ್ಲವೆಂದು ಇತ್ತೀಚೆಗೆ ತಿರಸ್ಕರಿಸಲಾಗಿದೆ. ಕ್ರೋಮರ್ ಪ್ರದೇಶಗಳಲ್ಲಿ ಸ್ವಲ್ಪ ಮುಂದಿನ ಕಾಲಕ್ಕೆ ನಿರ್ದೇಶಿತವಾಗಿರುವ ಭೂಪದರಗಳಲ್ಲಿ ದೊಡ್ಡದಾದ ಒರಟು ಚಕ್ಕೆಕಲ್ಲಿನ ಉಪಕರಣಗಳು ದೊರಕಿ ಇವು ಇಂಗ್ಲೆಂಡಿನ ಅತ್ಯಂತ ಹಳೆಯ ಮಾನವ ನಿರ್ಮಿತ ಉಪಕರಣಗಳೆಂದು ಪರಿಗಣಿತವಾಗಿವೆ. ಅನಂತರ ಹಲವಾರು ಪ್ರದೇಶಗಳಲ್ಲಿ ಅಬೆವಿಲಿಯನ್ ರೀತಿಯ ಕೈಗೊಡಲಿಗಳು ದೊರಕಿ ಆಫ್ರಿಕ, ಯುರೋಪ್ ಸಂಸ್ಕೃತಿಗಳ ಪ್ರಭಾವವನ್ನು ತೋರುತ್ತವೆ.

**ಮಧ್ಯ ಪ್ಲಿಸ್ಟೊಸೀನ್ ಯುಗ:** ಮಧ್ಯ ಪ್ಲಿಸ್ಟೊಸೀನ್ ಯುಗದಲ್ಲಿ ಇಂಗ್ಲೆಂಡಿನ ಅನೇಕ ಪ್ರದೇಶಗಳಲ್ಲಿ ಕೈಗೊಡಲಿ ಸಂಸ್ಕೃತಿಯ ಉಪಕರಣಗಳು ಬಳಕೆಯಲ್ಲಿದ್ದುವು. ಸ್ವಾನ್ಸ್‌ಕೂಂಬಿನ ಮಾನವಪಳೆಯುಳಿಕೆಗಳ ಜೊತೆಯಲ್ಲಿ ಕೈಗೊಡಲಿಗಳು ದೊರಕಿವೆ. ಈ ಕೈಗೊಡಲಿಗಳು ಅಶೂಲಿಯನ್ ಹಂತಕ್ಕೆ ಸೇರಿದವು. ಬಹುಶಃ ಈ ಕಾಲದಲ್ಲೇ ಥೇಮ್ಸ್ ನದಿ ದಡದಲ್ಲಿ ಕ್ಲಾಕ್ಟನ್ ಆನ್ ಸೀ ಎಂಬಲ್ಲೂ ಮತ್ತಿತರ ಪ್ರದೇಶಗಳಲ್ಲೂ ಕ್ಲಾಕ್ಟೋನಿಯನ್ ರೀತಿಯ ಚಕ್ಕೆಕಲ್ಲಿನ ಉಪಕರಣಗಳು ದೊರಕುತ್ತವೆ. ಹಿಮಾಚ್ಛಾದಿತ ಕಾಲದಲ್ಲಿ ಶೀತ ಹವಾಗುಣ ಪ್ರಬಲವಾಗಿದ್ದಾಗ ಬೆಚ್ಚನೆಯ ಹವೆಗೆ ಹೊಂದಿಕೊಂಡಿದ್ದ ಕೈಗೊಡಲಿ ನಿರ್ಮಾಪಕ ಮಾನವರು ಯುರೋಪ್, ಆಫ್ರಿಕಗಳ ದಿಕ್ಕಿನಲ್ಲಿ ಹಿಂತಿರುಗಿದಾಗ ಆ ಪ್ರದೇಶಗಳಲ್ಲಿ ಈ ಚಕ್ಕೆ ಕಲ್ಲಿನಾಯುಧಗಳ ಸಂಸ್ಕೃತಿ ಹರಡಿ ಪ್ರಬಲವಾಯಿತು. ಈ ಮೇಲಿನ ಸಂಸ್ಕೃತಿಗಳು ಪ್ರ.ಶ.ಪೂ.ಸು.5–2 ಲಕ್ಷ ವರ್ಷಗಳವರೆಗೂ ರೂಢಿಯಲ್ಲಿದ್ದವೆಂಬುದು ವಿದ್ವಾಂಸರ ಅಭಿಪ್ರಾಯ.

ಮಧ್ಯ ಪ್ಲಿಸ್ಟೊಸೀನ್ ಯುಗದ ಅಂತ್ಯಭಾಗದಲ್ಲಿ ಇಂಗ್ಲೆಂಡಿನ ಸಫೋಕ್ ಪ್ರದೇಶದ ಹೈಲಾಡ್ಜ್ ಮುಂತಾದೆಡೆಗಳಲ್ಲಿ ಕೈಗೊಡಲಿ ಮತ್ತು ಕ್ಲಾಕ್ಟೋನಿಯನ್ ಎರಡರ ಮಿಶ್ರಸಂಸ್ಕೃತಿಗಳು ಬಳಕೆಯಲ್ಲಿದ್ದುವು. ಮಾನವ ನಾಗರಿಕತೆಯ ಮುಂದಿನ ಹಂತಗಳಲ್ಲಿ ಕಂಡುಬರುವ ಮತ್ತು ಅದರ ಅಭಿವೃದ್ಧಿಗೆ ಬಹುಮಟ್ಟಿಗೆ ಕಾರಣವಾಗಿರುವ ಈ ಬೇರೆ ಬೇರೆ ಸಂಸ್ಕೃತಿಗಳ ಮಿಶ್ರಣಕಾರ್ಯ ಈ ಯುಗದಲ್ಲಿ ಪ್ರಾರಂಭವಾಗಿರುವುದು ಗಮನಾರ್ಹ. ಬಹುಶಃ ಈ ರೀತಿಯ ಮಿಶ್ರಸಂಸ್ಕೃತಿಗಳು ಸು. 1,00,000 ವರ್ಷಕಾಲ ಇಂಗ್ಲೆಂಡಿನಲ್ಲಿ ಬಳಕೆಯಲ್ಲಿದ್ದಂತೆ ತಿಳಿದುಬರುತ್ತವೆ.

**ಹಳೆ ಶಿಲಾಯುಗ:** ಹಳೆಶಿಲಾಯುಗದ ಮಧ್ಯಹಂತವೆಂದು ಯುರೋಪಿನಲ್ಲಿ ಹೆಸರಾಗಿರುವ ಮೌಸ್ಟೀರಿಯನ್ ಸಂಸ್ಕೃತಿಯನ್ನು ಹೋಲುವ ಸಮಕಾಲೀನ ಸಂಸ್ಕೃತಿಯೊಂದು ಡರ್ಬಿಷೈರಿನ ಕ್ರೆಸ್‌ವಿಲ್ ಕ್ರಾಗ್ಸ್ ಎಂಬಲ್ಲಿ ಕಂಡುಬಂದಿದೆ. ಡೆವಾನ್‌ಷೈರಿನ ಕೆಂಟ್ಸ್ ಗುಹೆಗಳಲ್ಲಿ ಅಶೂಲಿಯನ್ ಮತ್ತು ಲೆವಾಲ್ವ ಸಂಸ್ಕೃತಿಗಳಿಂದ ಪ್ರಭಾವಿತವಾದ ಮೌಸ್ಟೀರಿಯನ್ ಸಂಸ್ಕೃತಿಯ ಅವಶೇಷಗಳು ನಿಯಾಂಡರ್ತಲ್ ಮಾನವನ ಅವಶೇಷಗಳೊಂದಿಗೆ ದೊರೆತಿವೆ.

ಹಳೆಶಿಲಾಯುಗದ ಅಂತ್ಯಕಾಲದಲ್ಲಿ ನೈರುತ್ಯ ಯುರೋಪಿನ ಬಹಳ ಉನ್ನತಮಟ್ಟದ ಕಲೆ, ಮೂಳೆಯ ಮತ್ತು ವಿಲಂಬಿತ ಚಕ್ಕೆಕಲ್ಲಿನ ಉಪಕರಣಗಳ ಉಪಯೋಗದಿಂದ ಕೂಡಿದ್ದ ಸಂಸ್ಕೃತಿ ಬೆಳೆಯಿತು. ಇದರ ಪ್ರತಿಧ್ವನಿ ಇಂಗ್ಲೆಂಡಿನ ಕ್ರೆಸ್‌ವಿಲ್ ಕ್ರಾಗ್ಸ್‌ನಲ್ಲಿ ಕಂಡುಬಂದು, ಕ್ರೆಸ್‌ವಿಲಿಯನ್ ಸಂಸ್ಕೃತಿಯೆಂದು ಹೆಸರಾಯಿತು.

**ಸೂಕ್ಷ್ಮಶಿಲಾಯುಗ:** ಪ್ಲಿಸ್ಟೊಸೀನ್ ಯುಗದ ಅನಂತರ ಪ್ರಾರಂಭವಾದ ಸೂಕ್ಷ್ಮಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಇಂಗ್ಲೆಂಡಿನಲ್ಲಿ ಕಂಡುಬಂದು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಸ್ಕಾಂಡಿನೇವಿಯದ ಪ್ರಭಾವಕ್ಕೊಳಗಾದ ಆಗ್ನೇಯ ಭಾಗಗಳಲ್ಲಿ ಚಕಮಕಿ ಕಲ್ಲಿನ ಕೊಡಲಿ, ಪಕ್ಕಗಳಲ್ಲಿ ಕಲ್ಲಿನ ಹಲ್ಲುಗಳಿಂದ ಸಜ್ಜಿತವಾದ ಮೂಳೆಯ ಮೀನುಭರ್ಜಿಗಳು ಮತ್ತಿತರ ಬೇಟೆಯ ಆಯುಧಗಳನ್ನೊಳಗೊಂಡಿದ್ದ ಸಂಸ್ಕೃತಿ ನಾರ್ತಂಬರ್‌ಲೆಂಡ್‌ನಿಂದ ಈಸ್ಟ್ ಆಂಗ್ಲಿಯದವರೆಗೂ ಹಬ್ಬಿದ್ದಿತು. ಫ್ರಾನ್ಸ್ ಮತ್ತು ಬೆಲ್ಜಿಯಂ ಸಂಸ್ಕೃತಿಗಳಿಂದ ಪ್ರಭಾವಿತವಾಗಿದ್ದ ಎರಡನೆಯ ಗುಂಪಿನ ಸಂಸ್ಕೃತಿಗಳು ಆಗ್ನೇಯ ಇಂಗ್ಲೆಂಡಿನಿಂದ ವೇಲ್ಸ್‌ವರೆಗೂ ಹಬ್ಬಿದ್ದುವು. ಇವರ ಸಂಸ್ಕೃತಿಗೆ ಟಾರ್ಡೆನಾಸಿಯನ್ ಸಂಸ್ಕೃತಿಯೆಂದು ಹೆಸರಿಸಲಾಗಿದೆ. ಮೂರನೆಯ ಗುಂಪಿನ ಓಬಾನಿಯನ್ ಸಂಸ್ಕೃತಿ ಫ್ರಾನ್ಸಿನ ಅಜಿಲಿಯನ್ ಸಂಸ್ಕೃತಿಯ ಗುಂಪಿಗೆ ಸೇರಿದ್ದು ಸ್ಕಾಟ್ಲೆಂಡ್ ಮುಖಾಂತರ ಬ್ರಿಟನ್ನಿಗೆ ಬಂದು ಅದರ ಪ್ರಭಾವಗಳು ಉತ್ತರ ಭಾಗಗಳಲ್ಲಿ ಕಂಡುಬರುತ್ತವೆ.

ಈ ಸಂಸ್ಕೃತಿಯ ಜನ ಬೇಟೆ ಮತ್ತು ಆಹಾರ ಸಂಗ್ರಹಣೆಯಿಂದ ಜೀವನ ನಡೆಸುತ್ತಿದ್ದರು. ಹಳೆಶಿಲಾಯುಗಕಾಲದ ಇಲ್ಲಿನ ಜನರು ಹೊರಗಿನಿಂದ ಬಂದ ಜನ ಮತ್ತು ಸಂಸ್ಕೃತಿಗಳನ್ನು ಅಳವಡಿಸಿಕೊಂಡರು. ಸೂಕ್ಷ್ಮಶಿಲಾಯುಗದ ಉತ್ತರಾರ್ಧದಲ್ಲಿ ಡೆನ್ಮಾರ್ಕ್ ಮುಂತಾದ ಕಾಡುಪ್ರದೇಶಗಳಿಂದ ಬಂದ ಜನ ನಯ ಮಾಡಿದ ಅಂಚುಗಳುಳ್ಳ ಕಲ್ಲಿನ ಕೊಡಲಿಗಳನ್ನು ಮೂಳೆ ಅಥವಾ ಕೊಂಬಿನ ಹಿಡಿಗಳಲ್ಲಿ ಸಿಕ್ಕಿಸಿ ಕಾಡುಗಳನ್ನು ಕಡಿಯಲು ಉಪಯೋಗಿಸಲಾರಂಭಿಸಿದರು. ಈ ಜನ ಸಸೆಕ್ಸ್, ಯಾರ್ಕ್‌ಷೈರ್ ಪ್ರದೇಶಗಳಲ್ಲಿ ನೆಲೆಸಿದರು.

**ನವಶಿಲಾಯುಗ:** ಇಂಗ್ಲೆಂಡಿನ ನವಶಿಲಾಯುಗದಲ್ಲಿ ಕಂಡುಬರುವ ಸಂಸ್ಕೃತಿಗಳಲ್ಲಿ ಮೊದಲನೆಯದು ವಿಂಡ್ಮಿಲ್ ಸಂಸ್ಕೃತಿ. ಪ್ರ.ಶ.ಪೂ.ಸು.3500 ರಲ್ಲಿ ಪೂರ್ವ ಮತ್ತು ದಕ್ಷಿಣದಿಕ್ಕುಗಳಲ್ಲಿ ಬಳಕೆಗೆ ಬಂದ ಈ ಸಂಸ್ಕೃತಿ ಕಾಲದಲ್ಲಿ ಆಹಾರೋತ್ಪಾದನೆ ಪ್ರಾರಂಭವಾಗಿ ವ್ಯವಸಾಯ ಮುಖ್ಯ ವೃತ್ತಿಯಾಯಿತು. ದಕ್ಷಿಣಭಾಗದಲ್ಲಿ ವಿರಳವಾಗಿದ್ದ ಕಾಡುಪ್ರದೇಶಗಳಲ್ಲಿ ಗೋದಿ ಮತ್ತು ಬಾರ್ಲಿ ಬೆಳೆಗಳನ್ನು ರೂಢಿಸುವುದಲ್ಲದೆ ಆಡು, ಕುರಿ, ಹಂದಿಗಳನ್ನು ಸಾಕುತ್ತಿದ್ದರು. ಮಣ್ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಬಿಲ್ಲುಬಾಣಗಳ ಸಹಾಯದಿಂದ ಬೇಟೆಯಾಡುತ್ತಿದ್ದರು. ಬಯಲು ಪ್ರದೇಶದಲ್ಲಿ ಆಯಾತಾಕಾರದ ಮನೆಗಳಲ್ಲಿ, ಸರೋವರ ತೀರಗಳಲ್ಲಿ ವಾಸಿಸುತ್ತಿದ್ದರು. ತಮ್ಮ ದನಗಳಿಗೆ ದೊಡ್ಡಿಗಳನ್ನು ನಿರ್ಮಿಸುತ್ತಿದ್ದರು. ಇವರ ಸಮಾಧಿ ಮತ್ತು ವಾಸಸ್ಥಳಗಳಲ್ಲಿ ಒರಟಾದ ಹೆಣ್ಣುದೇವತೆಗಳ ಗೊಂಬೆಗಳು ದೊರೆತಿದ್ದು, ಇವರು ಮಾತೃದೇವತೆಯನ್ನು ಪೂಜಿಸುತ್ತಿದ್ದರೆಂಬುದನ್ನು ತಿಳಿಸುತ್ತದೆ. ಸ್ವಲ್ಪಕಾಲಾನಂತರ ಪಶ್ಚಿಮ ದಿಕ್ಕಿನಿಂದ ಬೃಹತ್ ಶಿಲಾಸಮಾಧಿಗಳ ಉಪಯೋಗ ಪ್ರಮುಖವಾಗಿದ್ದ ನೂತನ ಶಿಲಾಯುಗ ಸಂಸ್ಕೃತಿ ವೇಲ್ಸ್, ಸ್ಕಾಟ್ಲೆಂಡ್ ಮತ್ತು ಪಶ್ಚಿಮ ಇಂಗ್ಲೆಂಡ್ ಪ್ರದೇಶಗಳಲ್ಲಿ ಪ್ರಬಲವಾಯಿತು. ಕಾಟ್ಸ್‌ವೆಲ್ಡ್, ವಿಲ್ಟ್‌ಷೈರ್, ಆವ್ಬರಿ, ಸಾಮರ್‌ಸೆಟ್ ಮೊದಲಾದ ಪ್ರದೇಶಗಳಲ್ಲಿ ಹರಡಿದ ಈ ಸಂಸ್ಕೃತಿಯಲ್ಲಿ ಸಾಮುದಾಯಿಕವಾದ ದೊಡ್ಡಕಲ್ಲುಗಳಿಂದ ನಿರ್ಮಿತವಾದ ಸಮಾಧಿಗಳು ರೂಪಾಂತರಗಳಲ್ಲಿ ಉಪಯೋಗಕ್ಕೆ ಬಂದುವು. ವ್ಯವಸಾಯ, ಪಶುಪಾಲನೆ, ಕಾಡುಗಳನ್ನು ಕಡಿಯುವುದು, ಮಣ್ಪಾತ್ರೆಗಳ ನಿರ್ಮಾಣ ಈ ಬಗೆಯ ನವಶಿಲಾಯುಗ ಸಂಸ್ಕೃತಿ ಅಲ್ಲಲ್ಲಿ ಕಂಡುಬರುತ್ತವೆ. ಪೀಟರ್ ಬರೋ ಸಂಸ್ಕೃತಿಯೆಂದು ಹೆಸರಾದ ಈ ಸಂಸ್ಕೃತಿಯಲ್ಲಿ ಬೇಟೆಗಾರಿಕೆ, ಮೀನು ಹಿಡಿಯುವಿಕೆ ಮುಂತಾದ ಆಹಾರ ಸಂಗ್ರಹಣ ಪದ್ಧತಿಗಳು ಆಹಾರೋತ್ಪಾದನಾ ಪದ್ಧತಿಯೊಂದಿಗೆ ಮುಂದುವರಿದವು. ಥೇಮ್ಸ್ ನದಿ ಕಣಿವೆ, ಈಸ್ಟ್ ಆಂಗ್ಲಿಯ ಸಸೆಕ್ಸ, ಬ್ರೈಟನ್ ಮತ್ತು ವೆಸೆಕ್ಸ್ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಇದೇ ಗುಂಪಿಗೆ ಸೇರಿದ ಮತ್ತೊಂದು ಸಂಸ್ಕೃತಿಯನ್ನು ಸ್ಕರಬ್ರೇ ಸಂಸ್ಕೃತಿಯೆಂದು ಕರೆಯುತ್ತಾರೆ. ಈ ಸಂಸ್ಕೃತಿಗಳ ಕಾಲ ಪ್ರ.ಶ.ಪೂ. ಸು. 3000 ಎಂದು ಹೇಳಲಾಗಿದೆ.

**ಕಂಚಿನ ಯುಗ:** ಪ್ರ.ಶ.ಪೂ. 2000 ಹೊತ್ತಿಗೆ ಲೋಹಗಳು ಉಪಯೋಗಕ್ಕೆ ಬರಲಾರಂಭಿಸಿದ್ದರಿಂದ ಕಂಚಿನ ಯುಗ ಪ್ರಾರಂಭವಾಯಿತೆನ್ನಬಹುದು. ಕಂಚಿನಯುಗದ ಪ್ರಾರಂಭ ಉತ್ತರ ಯುರೋಪಿನಿಂದ ಇಂಗ್ಲೆಂಡಿಗೆ ವಲಸೆ ಬರಲಾರಂಭಿಸಿದ ಬೆಲ್ ಬೀಕರ್ ಎಂದು ಹೆಸರಾಗಿರುವ ವಿಶಿಷ್ಟ ಸಂಸ್ಕೃತಿಯೊಂದರಿಂದ ಗುರುತಿಸಲ್ಪಡುತ್ತದೆ. ಕಂಟ್, ಸಸೆಕ್ಸ್, ವೆಸೆಕ್ಸ್, ಯಾರ್ಕ್‌ಷೈರ್, ಡಾರ್ಸೆಟ್ ಮುಂತಾದೆಡೆಗಳಲ್ಲಿ ಈ ಬೀಕರ್ ಎಂಬ ವಿಶಿಷ್ಟ ರೀತಿಯ ಜಾಡಿಗಳು ಈ ಜನರ ಸಮಾಧಿಗಳಲ್ಲಿ ಕಂಡುಬಂದಿವೆ. ಈ ಜನ ಬಿಲ್ಲು, ಹಿಡಿಯಿದ್ದ ಬಾಕು, ಈಟಿ ಮುಂತಾದ ತಾಮ್ರದ ಆಯುಧಗಳಲ್ಲದೆ, ಚಿನ್ನ, ತಾಮ್ರ ಮುಂತಾದ ಲೋಹಗಳ ಆಭರಣಗಳನ್ನು ಬಳಸುತ್ತಿದ್ದರು. ಇವರು ಯುರೋಪಿನ ಹಲವಾರು ಪ್ರದೇಶಗಳಲ್ಲಿ ದೊರಕುತ್ತಿರಬಹುದಾಗಿದ್ದ ಚಿನ್ನ, ತಾಮ್ರ, ಶಿಲಾರಾಳ (ಅಂಬರ್), ಜೈಟ್ (ಒಂದು ಬಗೆಯ ಕಲ್ಲಿದ್ದಲಿನಂತಹ ಖನಿಜ) ಮುಂತಾದುವುಗಳನ್ನು ಹುಡುಕುತ್ತಾ ಬಂದವರು. ಇವರು ಇಂಗ್ಲೆಂಡ್, ಯುರೋಪ್ ಮತ್ತಿತರ ಪ್ರದೇಶಗಳೊಂದಿಗೆ ವ್ಯಾಪಾರ ಸಂಪರ್ಕ

ಬೆಳೆಸಿಕೊಂಡರು. ಆದ್ದರಿಂದ ಇತರ ಸಂಸ್ಕೃತಿಗಳ ಸಂಪರ್ಕವೂ ಹೆಚ್ಚಿತು. ಈ ಕಾರಣಗಳ ದೆಸೆಯಿಂದ ಪ್ರ.ಶ.ಪೂ. 1600–1400 ವರ್ಷಗಳ ಮಧ್ಯಕಾಲದಲ್ಲಿ ಸುಪ್ರಸಿದ್ಧವಾದ ಸ್ಟೋನ್ ಹೆಂಜ್ **(ನೋಡಿ)**, ವೆಸೆಕ್ಸಿನಲ್ಲಿ ನಿರ್ಮಿತವಾಯಿತು. ಕಂಚಿನ ಯುಗದ ಮಧ್ಯಹಂತದಲ್ಲಿ (ಪ್ರ.ಶ.ಪೂ. 1400–500) ಶಾಂತಿಯುತವಾದ ಸಂಸ್ಕೃತಿ ಕ್ರಮೇಣ ಬೆಳೆಯಿತು. ವಿಲ್ಟ್‌ಷೈರ್ ಪ್ರದೇಶದಲ್ಲಿ ಉದ್ದವಾದ ಮಣ್ಣಿನ ದಿಬ್ಬಗಳ ಕೆಳಗೆ ಶವಸಂಸ್ಕಾರ ಮಾಡುತ್ತಿದ್ದ ಆ ಕಾಲದ ಜನ ಕಂಚಿನ ಆಯುಧಗಳನ್ನು ಉಪಯೋಗಿಸುತ್ತ, ಪಶುಪಾಲನೆಗೆ ಹೆಚ್ಚು ಪ್ರಾಧಾನ್ಯ ಕೊಟ್ಟಿದ್ದರು. ಡೆವೆರೆಲ್ ರಿಂಬುರಿಯೆಂದು ಹೆಸರಾಗಿರುವ ಈ ಸಂಸ್ಕೃತಿಯಲ್ಲಿ ಚಪ್ಪಟೆಯಾದ ಸಮಾಧಿಗಳ, ಶವಜಾಡಿಗಳ ಸ್ಮಶಾನಗಳ ಜೊತೆಗೆ ಕಲ್ಲಿನ ವರ್ತುಲಸಮಾಧಿಗಳೂ ಬಳಕೆಗೆ ಬಂದುವು. ಕಂಚಿನ ಯುಗದ ಸಂಸ್ಕೃತಿಯ ಕಡೆಯ ಹಂತದಲ್ಲಿ (ಪ್ರ.ಶ.ಪೂ. 900–500) ಯುರೋಪಿನೊಡನೆ ವ್ಯಾಪಾರ ಪುನರಾರಂಭವಾಯಿತು ಮತ್ತು ಮುಂದಿನ ಹಂತದಲ್ಲಿ ವ್ಯವಸಾಯ ಮತ್ತು ಗ್ರಾಮೀಣ ಕೈಗಾರಿಕೆಗಳು ಬೆಳೆಯಲು ಕಾರಣವಾಯಿತು. ಈ ಹಂತದ ಕೊನೆಗಾಲದಲ್ಲಿ ವಿಲ್ಟ್‌ಷೈರಿನಲ್ಲಿ ಕಬ್ಬಿಣದ ಉಪಯೋಗ ಕಂಡುಬಂದಿದೆ. ಇದೇ ಸಮಯದಲ್ಲಿ ಕೆಲ್ಟ್ ಸಮುದಾಯದವರು ಇಂಗ್ಲೆಂಡಿಗೆ ಬರಲಾರಂಭಿಸಿದರು.

**ಕಬ್ಬಿಣ ಯುಗ:** ಇಂಗ್ಲೆಂಡಿನಲ್ಲಿ ಮೂರು ಸಂಸ್ಕೃತಿಯ ಅವಶೇಷಗಳನ್ನು ಈ ಕಾಲದಲ್ಲಿ ಗುರುತಿಸಿದ್ದರೂ ಅವು ಪರಸ್ಪರ ಸಮಕಾಲೀನವೆಂಬುದು ತಿಳಿದುಬರುತ್ತದೆ. ಅವು ಫ್ರಾನ್ಸಿನ ಗಾಲ್ ಮತ್ತು ಆಗ್ನೇಯ ದಿಕ್ಕುಗಳಿಂದ ಬಂದವು. ಪ್ರ.ಶ.ಪೂ. 450ರ ವೇಳೆಗೆ ಹಾಲ್‌ಸ್ಟಾಟ್ ಕಬ್ಬಿಣಯುಗ ಸಂಸ್ಕೃತಿಯ ಅವಶೇಷಗಳು ವೆಸೆಕ್ಸ್, ಸ್ಯಾಲಿಸ್ ಬರಿ, ನಾರ್ತ್‌ಹ್ಯಾಂಪ್ಟನ್ ಷೈರ್ ಮತ್ತು ಥೇಮ್ಸ್ ನದಿ ಬಯಲಿನಲ್ಲಿ ಕಂಡುಬರುತ್ತದೆ. ಚಚೌಕ ಹೊಲಪದ್ಧತಿ, ವ್ಯವಸಾಯ ರಂಗದಲ್ಲಿ ಈ ಜನರ ಮುಖ್ಯ ಕಾಣಿಕೆ. ಗೋದಿ, ಬಾರ್ಲಿಗಳನ್ನು ಬೆಳೆಯುತ್ತಿದ್ದರು. ನೇಯ್ಗೆ ಕಲೆ ಪ್ರಾರಂಭವಾಯಿತು. ಕೋಟೆಗಳು ಬಳಕೆಗೆ ಬಂದುವು. ಮಧ್ಯಕಾಲೀನ ಸಂಸ್ಕೃತಿಯಾದ ಲ್ಯಾಟಿನ್ ಸಂಸ್ಕೃತಿ ಪೂರ್ವಪ್ರದೇಶಗಳಲ್ಲಿ ಪ್ರ.ಶ.ಪೂ.300ರ ವೇಳೆಗೆ ಬಳಕೆಗೆ ಬಂತು. ಯಾರ್ಕ್‌ಷೈರ್, ಕೆಂಟ್, ಸಸೆಕ್ಸ್ ಮುಂತಾದೆಡೆಗಳಲ್ಲಿ ಪ್ರಬಲವಾಗಿದ್ದ ಈ ಸಂಸ್ಕೃತಿಯಲ್ಲಿ ಕತ್ತಿ, ಗುರಾಣಿ, ಕುದುರೆ ಜೀನು, ಯುದ್ಧರಥಗಳ ಬಳಕೆ ಹೆಚ್ಚಾಯಿತು. ಈ ಜನ ಯುದ್ಧಪ್ರಿಯರಾಗಿದ್ದರು. ಪ್ರ.ಶ.ಪೂ. 50ರ ಸುಮಾರಿಗೆ ಅಂತ್ಯಕಾಲೀನ ಕಬ್ಬಿಣಯುಗದ ಸಂಸ್ಕೃತಿಯ ಪ್ರವೇಶವಾಯಿತು. ಈ ಕಾಲದಲ್ಲಿ ಕೆಲ್ಟಿಕ್, ಟ್ಯುಟಾನಿಕ್ ಪಂಗಡಗಳ ಮಿಶ್ರಜನಾಂಗ ಹುಟ್ಟಿಕೊಂಡಿತು. ಇವರು ಕೆಂಟ್ ಎಸೆಕ್ಸ್ ಪ್ರಾಂತಗಳಲ್ಲಿ ಪ್ರಬಲರಾಗಿದ್ದರು. ಕೆಂಟ್, ಎಸೆಕ್ಸ್, ಹರ್ಟ್‌ಫರ್ಡ್‌ಷೈರ್, ಮಿಡ್ಲೆಸೆಕ್ಸ್ ಮುಂತಾದ ಪ್ರದೇಶಗಳಲ್ಲಿ ಕ್ರಮೇಣ ಪ್ರಸರಿಸಿ, ಸುವ್ಯವಸ್ಥಿತ ರಾಜ್ಯಗಳನ್ನು ಸ್ಥಾಪಿಸಿ ಇತಿಹಾಸಯುಗವನ್ನು ಪ್ರಾರಂಭಿಸಿದರು. ಪ್ರ.ಶ. 43ರಲ್ಲಿ ರೋಮನ್ನರು ಇಂಗ್ಲೆಂಡಿನ ಮೇಲೆ ಧಾಳಿ ಮಾಡುವವರೆಗೂ ಇವರು ಪ್ರಬಲವಾಗಿದ್ದು ಹಂತಹಂತವಾಗಿ ರೋಮನ್ ಮತ್ತು ಬೆಲ್ಜಿಕ್ ಮಿಶ್ರಸಂಸ್ಕೃತಿಗಳನ್ನು ಇಲ್ಲಿ ಹರಡಿದರು.

ಇಂಗ್ಲೆಂಡಿನ ಮೂಲ ನಿವಾಸಿಗಳು ಐಬೀರಿಯನ್ನರು. ಇವರು ಕಪ್ಪುಬಣ್ಣದ ಕುಳ್ಳರು. ಕಲ್ಲು ಮತ್ತು ಲೋಹದ ಆಯುಧಗಳನ್ನು ಬಳಸುತ್ತಿದ್ದರು. ಯುದ್ಧ ಇವರ ಆಸಕ್ತಿಯ ವಿಷಯ. ಇವರು ಬಟ್ಟೆ, ಬುಟ್ಟಿ, ಲೋಹದ ಸಾಮಾನು ಮುಂತಾದುವನ್ನು ತಯಾರಿಸುತ್ತಿದ್ದರು. ವ್ಯವಸಾಯವೂ ಪಶುಪಾಲನೆಯೂ ಇವರ ಕಸಬು. ಕೆಲ್ಟ್ ಬುಡಕಟ್ಟಿನವರು ಮೇಲೆರಗಿ ಬಂದಾಗ ಇವರು ಸೋತರು. ಕೆಲ್ಟರು ಕೆಲವು ಐಬೀರಿಯನ್ನರನ್ನು ಕೊಂದು, ಕೆಲವರನ್ನು ಗುಲಾಮರನ್ನಾಗಿ ಮಾಡಿಕೊಂಡರು.

ಕೆಲ್ಟರು ಎತ್ತರದ ಬಲಶಾಲಿಗಳು. ಗುಂಪುಗುಳಿತನ ಅವರ ಸ್ವಭಾವ. ಆಗಾಗ್ಗೆ ಅವರವರಲ್ಲೆ ಕಾದಾಟ ನಡೆಯುತ್ತಿತ್ತು. ಅವರು ಪ್ರಕೃತಿಯ ಆರಾಧಕರಾಗಿದ್ದರು. ಐಬೀರಿಯನ್ನರಿಗಿಂತ ಸ್ವಲ್ಪ ಮುಂದುವರಿದಿದ್ದರು. ಪ್ರ.ಶ.ಪೂ.1,000 ವರ್ಷಗಳ ಮುನ್ನ ಬ್ರಿಟಿಷ್ ದ್ವೀಪಗಳಿಗೆ ಕೆಲ್ಟರೇ ಅಲ್ಲದೇ ಇನ್ನೂ ಅನೇಕ ಜನಾಂಗದವರು ಬಂದರು; ಇಂಗ್ಲೆಂಡಿನ ನಿರ್ಮಾಣಕ್ಕೆ ಕಾರಣರಾದರು. ಇವರಲ್ಲಿ ಮುಖ್ಯರೆಂದರೆ – ಆಂಗ್ಲೋಸ್ಯಾಕ್ಸನರು, ಸ್ಕಾಂಡಿನೇವಿಯನ್ನರು, ನಾರ್ಮನ್ನರು ಹಾಗೂ ರೋಮನ್ನರು. (ಬಿ.ಕೆ.ಜಿ.)

**ರೋಮನ್ನರ ಆಕ್ರಮಣ:** ಜೂಲಿಯಸ್ ಸೀಸರ್ ಇಲ್ಲಿಗೆ ಬಂದ ಮೊದಲ ಮುಖ್ಯ ಆಕ್ರಮಣಕಾರ. ರೋಮನ್ ಆಕ್ರಮಣಕಾರಿಗಳು ತಮ್ಮ ಧರ್ಮ ಮತ್ತು ನಾಗರಿಕತೆಯನ್ನು ಇಲ್ಲಿ ಹರಡಿದರು; ಆದರೆ ಅಪೇಕ್ಷಿತ ಪ್ರಭಾವ ಉಂಟುಮಾಡಲಾಗಲಿಲ್ಲ. ಸೀಸರ್‌ನ ಅನಂತರದ ಚಕ್ರವರ್ತಿ ಕ್ಲಾಡಿಯಸ್ 6,000 ಸೈನಿಕರನ್ನು ಬ್ರಿಟನ್ನಿನ ಮೇಲೆ ಕಳುಹಿಸಿದ. ಕೆಲಭಾಗ ಆತನ ವಶವಾಯಿತು. ಕ್ಯಾರಕ್ಟಕಸ್ ಎಂಬುವನ ನೇತೃತ್ವದಲ್ಲಿ ಬ್ರಿಟನ್ ರೋಮನರನ್ನು ಎದುರಿಸಿತು. ಕ್ಯಾರಕ್ಟಕಸ್ ಸೆರೆ ಸಿಕ್ಕಿದ. ಪ್ರ.ಶ.ಪೂ.78–85ರಲ್ಲಿ ಬ್ರಿಟನ್ ರೋಮ್ ಆಡಳಿತವನ್ನೊಪ್ಪಿತು. ಇಲ್ಲಿನ ಜನ ಲ್ಯಾಟಿನ್ ಭಾಷೆಗೆ ಮಾರುಹೋದರು. ಇದು ರೋಮ್ ದೇಶದ ಒಂದು ಪ್ರಾಂತವಾಯಿತು. ಕೆಲವರು ರೋಮಿನೊಂದಿಗೆ ವ್ಯಾಪಾರ ಪ್ರಾರಂಭಿಸಿ ಎರಡು ದೇಶಗಳ ನಡುವೆ ಬೆಸುಗೆ ಹಾಕಿದರು.

ಆಂಗ್ಲೊ–ಸ್ಯಾಕ್ಸನರು; ರೋಮ್ ಸಾಮ್ರಾಜ್ಯದೊಳಗಿನ ಜನರು ದೇಶದ ಭದ್ರತೆಗೆ ಧಕ್ಕೆ ತರಲು ಪ್ರಯತ್ನಿಸಿದರು. ಆಂಗಲ್ ಮತ್ತು ಸ್ಯಾಕ್ಸನ್ ಬುಡಕಟ್ಟಿನವರು ಆಗಾಗ್ಗೆ ಬ್ರಿಟಿಷ್ ದ್ವೀಪಗಳ ಮೇಲೆ ನುಗ್ಗಿ ಲೂಟಿಮಾಡಲು ಬರುತ್ತಿದ್ದವರು ಕೊನೆಗೆ ಅಲ್ಲಿಯೇ ನೆಲೆಸಿದರು. ಇಂದಿನ ಬ್ರಿಟನ್ ಸಂಸ್ಕೃತಿ ಮತ್ತು ಆಂಗ್ಲಭಾಷೆ ಆಂಗ್ಲೊ–ಸ್ಯಾಕ್ಸನರ ಕೊಡುಗೆ. 9ನೆಯ ಶತಮಾನದಲ್ಲಿ ಎಗ್‌ಬರ್ಟ್ ರಾಜನಾದ. ಆತ ಬ್ರಿಟನ್ನಿನ ಮೊದಲ ದೊರೆ. ಕೆಂಟ್, ಮರ್ಸಿಯ, ನಾರ್ತಂಬ್ರಿಯ, ವಿಸೆಕ್– ಈ ಪ್ರಸಿದ್ಧ ನಗರಗಳ ಮೇಲೆ ಡೇನರು ಸತತ ಧಾಳಿ ಮಾಡುತ್ತಿದ್ದರು. ಇಂಗ್ಲೆಂಡನ್ನು ರಕ್ಷಿಸುವ ಕಾರ್ಯವನ್ನು ಎಗ್ಬರ್ಟ್ ಮಾಡಿದ. ಎಥೆಲ್ ಬರ್ಟ್ ರಾಜನ ಕಾಲದಲ್ಲಿ ರೋಮಿನಿಂದ ಪಾದ್ರಿಗಳ ಗುಂಪೊಂದು ಪೋಪ್ ಗೆಗರಿಯ ಆದೇಶಾನುಸಾರವಾಗಿ ಇಂಗ್ಲೆಂಡಿಗೆ ಬಂತು. ಆಗಸ್ಟೈನ್ ಎಂಬ ಪಾದ್ರಿ ಈ ಗುಂಪಿನ ನಾಯಕ. ಮೊದಲ ಬಾರಿಗೆ ಇಂಗ್ಲೆಂಡ್ ಜನರು ಹೆಚ್ಚು ಸಂಖ್ಯೆಯಲ್ಲಿ ಕ್ರೈಸ್ತಧರ್ಮವನ್ನು ಅವಲಂಬಿಸಿದರು.

ಬಿಗ್‌ಬೆನ್, ಲಂಡನ್

ಆಂಗ್ಲೊ–ಸ್ಯಾಕ್ಸನರ ಸಾಧನೆಯೆಂದರೆ ಅವರ ಗ್ರಾಮಜೀವನ. ಗ್ರಾಮಗಳ ಸ್ವಯಂ ಆಡಳಿತ ಅವರ ವೈಶಿಷ್ಟ್ಯ. ಹಂಡ್ರೆಡ್ ಮೂಟ್, ಷೈರ್ ಮೂಟ್, ವಿಲೇಜ್ ಮೂಟ್ ಮುಂತಾದ ಸಭೆಗಳು ಜಾರಿಯಲ್ಲಿದ್ದುವು.

**ಡೇನರು:** ಎಗ್‌ಬರ್ಟ್‌ನ ಮರಣಾನಂತರ ಡೇನರು ಇಂಗ್ಲೆಂಡಿನ ಮೇಲೆ ಧಾಳಿ ಮಾಡಿದರು. ಇವರು ಸ್ಕಾಂಡಿನೇವಿಯದವರು. ಥೇಮ್ಸ್ ನದಿಯನ್ನು ದಾಟಿ ಇಂಗ್ಲೆಂಡನ್ನು ಕೊಳ್ಳೆ ಹೊಡೆದರು. ಆಲ್‌ಫ್ರೆಡ್ ಡೇನರನ್ನು ಸೋಲಿಸಿದ. ಈತನ ಕಾಲದಲ್ಲಿ ಲ್ಯಾಟಿನ್ ಭಾಷೆಯಿಂದ ಆಂಗ್ಲ ಭಾಷೆಗೆ ಅನೇಕ ಪುಸ್ತಕಗಳು ಭಾಷಾಂತರವಾದುವು. ಈತನ ಕಾಲದಲ್ಲಿದ್ದ ಬೇಡ್ ಎಂಬ ಪಾದ್ರಿ ಮೊದಲ ಬಾರಿಗೆ ಇಂಗ್ಲೆಂಡಿನ ಚರಿತ್ರೆ ರಚಿಸಿದ. ಇವನ ದೂರದರ್ಶಿತ್ವಕ್ಕೆ ಒಂದು ನಿದರ್ಶನವೆಂದರೆ ಆಂಗ್ಲೊ–ಸ್ಯಾಕ್ಸನ್ ಕ್ರಾನಿಕಲ್. ಇತಿಹಾಸ ರಚನೆಗೆ ಆಧಾರ ದೃಷ್ಟಿಯಿಂದ ಇದು ಮೊದಲ ಮೈಲಿಗಲ್ಲಾಗಿದೆ.

ಆಲ್‌ಫ್ರೆಡ್ ಮಗನಾದ ಎಡ್ವರ್ಡನ ಕಾಲದಲ್ಲಿ ಡೇನರ ರಾಜ್ಯ ಚದುರಿಹೋಯಿತು. ವಿಸೆಕ್ಸ್ ರಾಜ್ಯಕ್ಕೆ ಡೇನರು ಸಾಮಂತರಾದರು. ಈತನ ಕಾಲದ ಮಹತ್ತ್ವದ ಘಟನೆಯೆಂದರೆ ಹೇಸ್ಟಿಂಗ್ಸ್ ಕದನ. ಎಡ್ವರ್ಡ್ ಬಲಹೀನನಾಗಿದ್ದರಿಂದ ಅದರ ಲಾಭವನ್ನು ಶ್ರೀಮಂತರು ಪಡೆಯಲು ಯತ್ನಿಸಿದರು. ನಾರ್ಮಂಡಿಯ ವಿಲಿಯಮ್ ಸುಸಜ್ಜಿತ ಸೇನೆಯೊಂದಿಗೆ ಸ್ಯಾಕ್ಸನರ ಮೇಲೆ ಧಾಳಿ ಮಾಡಿದ. ಸ್ಯಾಕ್ಸನರ ದೊರೆ ಹೆರಾಲ್ಡ್ ರಣರಂಗದಲ್ಲಿ ಸತ್ತ. 1066ರಲ್ಲಿ ನಾರ್ಮನ್ ದೊರೆ ವಿಲಿಯಮ್ ಎಂಬುವನು ದಿ ಕಾಂಕರರ್ ಎಂಬ ಬಿರುದು ಧರಿಸಿ ಪಟ್ಟವೇರಿದ.

**ನಾರ್ಮನ್ನರು:** ಇಂಗ್ಲೆಂಡಿನಲ್ಲಿ ಊಳಿಗಮಾನ್ಯ ಪದ್ಧತಿ ಜಾರಿಗೆ ತಂದವನು ವಿಲಿಯಮನೇ. ಅಂದಿನಿಂದ ಸಮಾಜಕ್ಕೆ ಭೂಮಿಯೇ ಬುನಾದಿಯಾಗಿದೆ. ತನ್ನ ಕಾಲದ ಭೂಪದ್ಧತಿಯನ್ನು ಈತ ಒಂದು ಪುಸ್ತಕದಲ್ಲಿ ಬರೆಸಿಟ್ಟ. ದೇಶದಲ್ಲಿರುವ ಒಟ್ಟು ಜಮೀನು

ತೆರಿಗೆ, ಶ್ರೀಮಂತರ ಮನೆಗಳು–ಇವುಗಳೆಲ್ಲದರ ಲೆಕ್ಕಾಚಾರವನ್ನು ಅದರಲ್ಲಿ ಬರೆಸಿದ. 1085ರಲ್ಲಿ ಬರೆಸಿದ ಈ ಪುಸ್ತಕ ಡೂಮ್ಸ್ ಡೇ ಬುಕ್ ಎಂದು ಹೆಸರಾಗಿದೆ. ಸ್ಯಾಲಿಸ್‌ಬರಿ ಎಂಬಲ್ಲಿ ಜಮೀನುದಾರರನ್ನು ವಿಲಿಯಮ್ ಬರಮಾಡಿಕೊಂಡು ಅವರಿಂದ ಸ್ವಾಮಿಭಕ್ತಿ ಪ್ರತಿಜ್ಞೆ ಪಡೆದ. ಇದೇ ಸ್ಯಾಲಿಸ್‌ಬರಿಯ ಪ್ರಮಾಣ. ಇವನ ಕಾಲದಲ್ಲಿ ಚರ್ಚ್‌ನಿಂದ ಹಿಡಿದು ನ್ಯಾಯಾಲಯದವರೆಗೆ ಸುಧಾರಣೆಯಾಯಿತು. ದಕ್ಷ ಆಡಳಿತ ಈತನ ಕೊಡುಗೆ.

ಒಂದನೆಯ ಹೆನ್ರಿ ಎರಡನೆಯ ವಿಲಿಯಮ್‌ನ ಸೋದರ. ಈತನ ಕಾಲದಲ್ಲಿ ಕ್ಯೂರಿಯ ರೀಜಿಸ್ ಎಂಬ ಆಡಳಿತ ಸಭೆ ಅಭಿವೃದ್ಧಿ ಹೊಂದಿತು. ಒಬ್ಬ ಮಠಾಧಿಪತಿಯ ನೇಮಕದ ಪ್ರಶ್ನೆಯಿಂದ ಹೆನ್ರಿಗೂ ಚರ್ಚಿಗೂ ಕಾದಾಟವಾಯಿತು. ಇವನನ್ನು ನ್ಯಾಯಸಿಂಹ ಎಂದು ಕರೆಯುತ್ತಿದ್ದರು.

ಎರಡನೆಯ ಹೆನ್ರಿಯ ಕಾಲದಲ್ಲಿ ಸರ್ಕಾರದ ನ್ಯಾಯಾಲಯಗಳು, ಮತೀಯ ನ್ಯಾಯಾಲಯಗಳು ಎಂಬ ಎರಡು ರೀತಿಯ ನ್ಯಾಯಾಲಯಗಳಿದ್ದುವು. ಇವುಗಳ ನಡುವೆ ಬಿಕ್ಕಟ್ಟು ಉಂಟಾಯಿತು. ಚರ್ಚಿನ ನ್ಯಾಯಾಲಯಗಳು ಬೇರೆ ಇದ್ದದ್ದನ್ನು ರಾಜ ಸಹಿಸಲಿಲ್ಲ. ಕ್ಯಾಂಟರ್‌ಬರಿಯ ಮಹಾ ಮಠಾಧಿಪತಿ ಥಾಮಸ್ ಬೆಕೆಟ್ ಈ ರಾಜನ ಆತ್ಮೀಯ ಗೆಳೆಯ. ಅಂಥವನ ಜೊತೆ ಇವನು ಕಾದಾಡಿ 1164ರಲ್ಲಿ ಕ್ಲಾರೆನ್ ಡನ್ ಕಾನೂನನ್ನು ಹೊರಡಿಸಿದ. ಮತೀಯ ನ್ಯಾಯಾಲಯದಲ್ಲಿ ನಡೆದ ಮೊಕದ್ದಮೆಗಳು ಅಂತಿಮವಾಗಿ ರಾಜನ ನ್ಯಾಯಾಲಯಕ್ಕೆ ಬರಬೇಕೆಂಬುದು ಈತನ ಆಜ್ಞೆಯಾಗಿತ್ತು. ಇದಕ್ಕೆ ಒಪ್ಪದ ಥಾಮಸ್ ಬೆಕೆಟ್ ತನ್ನ ಜೀವವನ್ನೇ ತೆತ್ತ. ನ್ಯಾಯದರ್ಶಿ (ಜ್ಯೂರಿ) ಪದ್ಧತಿ ಜಾರಿಗೆ ತಂದು ಅದನ್ನು ಆರ್ಥಿಕ ವ್ಯವಹಾರ ಮತ್ತು ಆಡಳಿತಕ್ಕೆ ಉಪಯೋಗಿಸಿಕೊಂಡ.

ಇಂಗ್ಲೆಂಡಿನ ಹೆನ್ರಿಯ ನ್ಯಾಯಾಲಯ ಸಂಪ್ರದಾಯ ನ್ಯಾಯಕ್ಕೆ ಭದ್ರ ನೆಲಗಟ್ಟಾಗಿತ್ತು. ಈತನ ಅನಂತರ ಬಂದ ಒಂದನೆಯ ರಿಚರ್ಡ್ ಮುಸಲ್ಮಾನರ ವಿರುದ್ಧ ಧರ್ಮಯುದ್ಧದಲ್ಲಿ ಭಾಗವಹಿಸಿದ್ದ. ರಿಚರ್ಡ್‌ನ ಅನಂತರ ಜಾನ್ ಪಟ್ಟಕ್ಕೆ ಬಂದ. ಈತ ಕ್ರೂರಿಯೂ ಅಸಮರ್ಥನೂ ಆಗಿದ್ದ. ಧರ್ಮಗುರುಗಳು ಹಾಗೂ ಶ್ರೀಮಂತರುಗಳ ಜೊತೆ ಈತ ಸತತವಾಗಿ ಹೋರಾಡಿದ. ಪರಿಣಾಮವಾಗಿ ಈ ಜನ ತಮ್ಮ ಹಕ್ಕುಗಳಿಗಾಗಿ ಚಳವಳಿ ಹೂಡಿದರು. ಮ್ಯಾಗ್ನಕಾರ್ಟ ಅಥವಾ ಮಹಾಸನ್ನದಿಗೆ ದೊರೆ ಸಹಿ ಹಾಕಬೇಕಾಯಿತು. ಮ್ಯಾಗ್ನಕಾರ್ಟ ಪ್ರಜಾಪ್ರಭುತ್ವದ ತಳಹದಿ, ಸ್ವಾತಂತ್ರ್ಯದ ಸಾಕ್ಷಾತ್ಕಾರ, ವಿಚಾರಣೆ ಇಲ್ಲದೆ ಸೆರೆ, ಅನ್ಯಾಯದ ತೆರಿಗೆ–ಇವುಗಳ ವಿರುದ್ಧ ರಾಜರಿಂದ ಬರೆಸಿಕೊಂಡ ಈ ಸನ್ನದು ಇಂಗ್ಲೆಂಡಿನ ಸಂವಿಧಾನದ ಮೊದಲ ಮಹಾ ದಾಖಲೆಯಾಗಿದೆ.

ಮೊದಲ ಎಡ್ವರ್ಡ್‌ನ ಕಾಲದಲ್ಲಿ ವಿವಿಧ ಕಾಯಿದೆಗಳ ಜಾರಿಯಾಯಿತು. ಪಾರ್ಲಿಮೆಂಟ್ ಇವನ ಕಾಲದಲ್ಲಿ ಪ್ರಾರಂಭವಾಯಿತು. ಪಾರ್ಲಿಮೆಂಟಿನ ಒಪ್ಪಿಗೆಯಿಲ್ಲದೆ ಯಾವುದೇ ಮಸೂದೆಯನ್ನೂ ಜಾರಿಗೆ ತರುವುದು ಕಷ್ಟವಾಗುತ್ತ ಬಂತು. ಅತ್ತ ಪಾರ್ಲಿಮೆಂಟ್ ಶಕ್ತವಾಗುತ್ತ ಬಂತು. ರಾಜನ ಮಂತ್ರಿಗಳನ್ನು ಮಹಾಭಿಯೋಗಕ್ಕೆ ಗುರಿಮಾಡುವ ಅಧಿಕಾರ ಪಾರ್ಲಿಮೆಂಟಿಗೆ ಲಭಿಸಿತು. ಮೂರನೆಯ ಎಡ್ವರ್ಡ್‌ನ ಕಾಲಕ್ಕೆ ಪಾರ್ಲಿಮೆಂಟಿನ ಬೆಳವಣಿಗೆ ಚೆನ್ನಾಗಿ ಆಯಿತು. ಹೌಸ್ ಆಫ್ ಕಾಮನ್ಸ್, ಹೌಸ್ ಆಫ್ ಲಾರ್ಡ್ಸ್‌ಗಳ ರಚನೆ ಈ ಕಾಲದಲ್ಲಿ ಆಯಿತು.

ಮೂರನೆಯ ಎಡ್ವರ್ಡ್‌ನ ಕಾಲದಲ್ಲಿ ಫ್ರಾನ್ಸಿನೊಡನೆ 100 ವರ್ಷಗಳ ಯುದ್ಧ ಆರಂಭವಾಯಿತು. ಇದು ಅವ್ಯಾಹತ ಹೋರಾಟವಲ್ಲ; ಆಗೊಮ್ಮೆ ಈಗೊಮ್ಮೆ 100 ವರ್ಷಗಳ ತನಕ ನಡೆಯಿತು. ಇಂಗ್ಲೆಂಡಿನ ರಾಜರು ಫ್ರೆಂಚ್ ರಾಜರಿಗೆ ಮರ್ಯಾದೆ ತೋರಿಸಬೇಕು ಎಂಬ ಹೇಳಿಕೆ ಈ ಯುದ್ಧಕ್ಕೆ ಪ್ರೇರಣೆಯಾಯಿತು. ಇಂಗ್ಲೆಂಡ್ ದೇಶಕ್ಕೆ ಸ್ಕಾಟ್ಲೆಂಡು ವಿರೋಧವಾಗಿತ್ತು. ಅದಕ್ಕೆ ಫ್ರಾನ್ಸ್ ಸಹಾಯ ನೀಡಿತು. ಇಂಗ್ಲೆಂಡ್ ಇದಕ್ಕಾಗಿ ಸಿಡಿದೆದ್ದಿತು. ಪರಿಣಾಮವಾಗಿ 100 ವರ್ಷಗಳ ಯುದ್ಧ ನಡೆಯಿತು. ಮೂರನೆಯ ಎಡ್ವರ್ಡ್, ಐದನೆಯ ಹೆನ್ರಿ ಮತ್ತು ಆರನೆಯ ಹೆನ್ರಿ ಈ ಯುದ್ಧದ ಚಾಲಕರಾದರು.

ಆರನೆಯ ಹೆನ್ರಿಯ ಆಸ್ಥಾನದಲ್ಲಿದ್ದ ಎರಡು ಬಣಗಳ ನಡುವೆ ಯುದ್ಧದ ಬಗ್ಗೆ ನಿಶ್ಚಿತ ನಿಲುವು ಇರಲಿಲ್ಲ. ಒಂದು ಗುಂಪಿಗೆ ಯುದ್ಧ ಬೇಕಿತ್ತು. ಮತ್ತೊಂದು ಶಾಂತಿಗಾಗಿ ಹಂಬಲಿಸುತ್ತಿತ್ತು. ಹೆನ್ರಿಯ ಹೆಂಡತಿ ಮಾರ್ಗರೇಟ್ ಫ್ರಾನ್ಸಿನವಳು. ಆದ್ದರಿಂದ ಅವಳಿಗೆ ಯುದ್ಧ ಬೇಡವಾಗಿತ್ತು ಲಂಕಾಸ್ಟ್ರಿಯನ್ ಪಂಗಡಕ್ಕೆ ಯುದ್ಧ ಬೇಕಿತ್ತು. ಒಟ್ಟಿನಲ್ಲಿ ಇಂಗ್ಲಿಷರಿಗೆ 100 ವರ್ಷಗಳ ಯುದ್ಧದಲ್ಲಿ ಅಪಜಯವಾಯಿತು.

ಲಂಕಾಸ್ಟ್ರಿಯನ್ನರನ್ನು ರಾಜ್ಯ ಗದ್ದುಗೆಯಿಂದ ಇಳಿಸುವುದು ಯಾರ್ಕರ ಗುರಿಯಾಗಿತ್ತು. ಜೊತೆಗೆ ಫ್ರಾನ್ಸಿನೊಡನೆ ದೀರ್ಘ ಹೋರಾಟ ಮಾಡಿ ಇಂಗ್ಲಿಷರಿಗೆ ಬೇಸರ ಬಂದಿತ್ತು. ಆರನೆಯ ಹೆನ್ರಿಗೆ ಇದ್ದ ಒಬ್ಬ ಮಗ ಪಟ್ಟಕ್ಕೆ ಬರಬೇಕಾದರೆ ಲಂಕಾಸ್ಟ್ರಿಯನ್ನರು ಕೆಂಪು ಗುಲಾಬಿಯನ್ನೂ ತಮ್ಮ ಚಿಹ್ನೆಗಳಾಗಿ ಉಪಯೋಗಿಸಿದ್ದರಿಂದ ಇವರ ನಡುವೆ ನಡೆದ ಯುದ್ಧಕ್ಕೆ ಗುಲಾಬಿ ಯುದ್ಧವೆಂದು ಹೆಸರಾಯಿತು. ಈ ಯುದ್ಧ ಇಂಗ್ಲೆಂಡಿನ ಶ್ರೀಮಂತರ ಪ್ರಾಬಲ್ಯವನ್ನು ಮುರಿಯಿತು. ನಾರ್ತಾಂಪ್ಟನ್ನಿನಲ್ಲಿ ನಡೆದ ಹೋರಾಟ ಲಂಕಾಸ್ಟ್ರಿಯನ್ನರನ್ನು ಪುಡಿಪುಡಿ ಮಾಡಿತು. ಯಾರ್ಕ್ ಮತ್ತು ಅವರ ಅನುಯಾಯಿಗಳು ಸಾವಿಗೆ ಈಡಾದರು.

ಈ ವೇಳೆಗೆ ಇಟಲಿಯಲ್ಲಿ ಪ್ರಾರಂಭವಾಗಿದ್ದ ಜ್ಞಾನ ಪುನರುಜ್ಜೀವನ ಚಳವಳಿ ಇಂಗ್ಲೆಂಡಿಗೂ ಹಬ್ಬಿತ್ತು. ಮಾನವರಲ್ಲಿ ಬದುಕನ್ನು ಪ್ರೀತಿಸುವಂತೆ, ಸೌಂದರ್ಯವನ್ನು ಆರಾಧಿಸುವಂತೆ, ಮಾನವೀಯತೆಯನ್ನು ಹುಡುಕುವಂತೆ ಇದು ಪ್ರೇರಣೆ ನೀಡಿತು. 4ನೆಯ ಎಡ್ವರ್ಡ್‌ನ ಕಾಲದಲ್ಲಿ ವಿಲಿಯಂ ಕ್ಯಾಕ್ಸ್‌ಟನ್ ಒಂದು ಮುದ್ರಣಾಲಯವನ್ನು ಸ್ಥಾಪಿಸಿದ. ಅನೇಕ ಗ್ರಂಥಗಳು ಹೊರಬಂದುವು. ಈ ನವೋದಯದ ಕಾಲದಲ್ಲಿ ನವೀನ ಶೈಲಿಯ ಕಲೆ, ಹೊಸ ಮತಧರ್ಮ, ಸಾಹಿತ್ಯ ವಿಜ್ಞಾನ, ಹೊಸ ಭೂಸಂಶೋಧನೆ ಇವೆಲ್ಲ ಸಂಭವಿಸಿದುವು.

**ಟ್ಯೂಡರ್ ದೊರೆಗಳು:** 15ನೆಯ ಶತಮಾನದ ಕೊನೆಯ ಭಾಗದಲ್ಲಿ ಯುರೋಪಿನಲ್ಲಿ ಅನೇಕ ರಾಜಕೀಯ ಬದಲಾವಣೆಗಳಾದುವು. ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿವಾಹ ಸಂಬಂಧಗಳು ಬೆಳೆದವು. ಇಂಗ್ಲೆಂಡಿನಲ್ಲಿ ಈ ಕಾಲದಲ್ಲಿ ಅಧಿಕಾರಕ್ಕೆ ಬಂದ ಟ್ಯೂಡರ್ ದೊರೆಗಳು ನಿರಂಕುಶ ಅಧಿಕಾರ ನಡೆಸಿದರೂ ಕ್ರಮೇಣ ರಾಷ್ಟ್ರೀಯ ಭಾವನೆ ಮೂಡುತ್ತ ಬಂತು. ಟ್ಯೂಡರ್ ದೊರೆಗಳ ಪೈಕಿ ಏಳನೆಯ ಮತ್ತು ಎಂಟನೆಯ ಹೆನ್ರಿ ಮುಖ್ಯರು. ಏಳನೆಯ ಹೆನ್ರಿಯ ಕಾಲದಲ್ಲಿ ಯಾರ್ಕರು ನಡೆಸಿದ ಪಿತೂರಿಯನ್ನು ಆತ ಸದೆಬಡಿದ, ಶ್ರೀಮಂತರನ್ನು ನಿಯಂತ್ರಿಸಿದ. ಪಾರ್ಲಿಮೆಂಟಿನ ಅನುಮತಿ ಪಡೆದು ಸ್ಟಾರ್ ಚೇಂಬರ್ ಕೋರ್ಟನ್ನು ಸ್ಥಾಪಿಸಿ ಶ್ರೀಮಂತರನ್ನು ತುಳಿದ. ವೆಸ್ಟ್ ಮಿನ್ಸ್ಟರ್‌ನಲ್ಲಿ ಸೇರುತ್ತಿದ್ದ ಈ ಕೋರ್ಟಿನ ಪ್ರಾಂಗಣದ ಒಳ ಚಾವಣಿ ನಕ್ಷತ್ರಗಳಿಂದ ಅಲಂಕೃತವಾಗಿತ್ತು. ಆದ್ದರಿಂದ ಇದಕ್ಕೆ ಸ್ಟಾರ್ ಚೇಂಬರ್ ಕೋರ್ಟ್ ಎಂದು ಹೆಸರು ಬಂತು. ದೇಶದ ಶಿಸ್ತನ್ನು ಕಾಪಾಡುವುದರಲ್ಲಿ ಇದು ಸಹಾಯ ಮಾಡಿತು. ಗುಲಾಬಿ ಯುದ್ಧದಿಂದ ಸುಸ್ತಾಗಿದ್ದ ಇಂಗ್ಲೆಂಡಿಗೆ ಹೆನ್ರಿಯ ಆಡಳಿತ ತಂಪನ್ನೆರಚಿತು. ಇಂಗ್ಲೆಂಡ್ ಪ್ರಗತಿಪರವಾಗಿ ಸರ್ಕಾರ ಜನಪ್ರಿಯವಾಯಿತು, ಶಾಂತಿ ಲಭಿಸಿತು. ಟ್ಯೂಡರ್ ರಾಜರು ಜನತೆಯ ಬೆಂಬಲ ಗಳಿಸಿದರು.

ಎಂಟನೆಯ ಹೆನ್ರಿ ಕಾಲದಲ್ಲಿ ಹೊಸಮತಧರ್ಮ ಇಂಗ್ಲೆಂಡನ್ನು ಪ್ರವೇಶಿಸಿತು. ಇವನಿಗೆ ಸಹಾಯಕನಾದವನು ಥಾಮಸ್ ವುಲ್ಸಿ. ಈತ ರಾಜಕಾರ್ಯ ಪ್ರವೀಣ. ಪೋಪನಿಂದ ಮಹಾ ಮಠಾಧಿಪತಿ ಸ್ಥಾನ ಈತನಿಗೆ ಲಭಿಸಿತು. ಇಂಗ್ಲೆಂಡಿನ ವಿದೇಶಾಂಗನೀತಿಯನ್ನು ಮೊದಲ ಬಾರಿಗೆ ರೂಪಿಸಿದವನು ಇವನು. ಶಕ್ತಿಗಳ ಸಮತೋಲನ ಈತನ ಗುರಿಯಾಗಿತ್ತು. ಎಂಟನೆಯ ಹೆನ್ರಿ ತನ್ನ ಮೊದಲ ಹೆಂಡತಿ ಕ್ಯಾಥರೀನ್ ಆಫ್ ಅರಗಾನಳೊಂದಿಗೆ ವಿವಾಹವಿಚ್ಛೇದ ಮಾಡಿಕೊಂಡು ಆಸ್ಥಾನದ ಆನ್ ಬೋಲಿನ್‌ಳನ್ನು ಮದುವೆಯಾಗಲು ಬಯಸಿದ. ಆದರೆ ಇದಕ್ಕೆ ಪೋಪ್ ಆಶೀರ್ವಾದ ನೀಡಲಿಲ್ಲ. ಆದ್ದರಿಂದ ಈತ ಪೋಪನನ್ನೇ ಧಿಕ್ಕರಿಸಿ ಚರ್ಚಿನ ಸ್ವಾತಂತ್ರ್ಯವನ್ನು ಸಾರಿದ. ಮೊದಲನೆಯ ವಿವಾಹವನ್ನು ಕೊನೆಗೊಳಿಸಲು ಚರ್ಚಿನಿಂದ ಅನುಮತಿಯೂ ಬಂತು. ಆಗ ಈತ ಆನ್ ಬೋಲಿನಳನ್ನು ಮದುವೆಯಾದ. ಇಂಗ್ಲೆಂಡಿನಲ್ಲಿ ಆದ ಮತಸುಧಾರಣೆ ವೈಯಕ್ತಿಕ ಕಾರಣಕ್ಕಾಯಿತು. ಎಂಟನೆಯ ಹೆನ್ರಿ ಪಾರ್ಲಿಮೆಂಟಿನ ಅನುಮತಿಯನ್ನು ಪಡೆಯದೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಟ್ಯೂಡರರ ಕಾಲದಲ್ಲಿ ಪಾರ್ಲಿಮೆಂಟಿನ ಬೆಳವಣಿಗೆ ವ್ಯವಸ್ಥಿತವಾಗಿ ಆಯಿತು. ಎಂಟನೆಯ ಹೆನ್ರಿಯ ಕಾಲದಲ್ಲಿ ಇಂಗ್ಲೆಂಡಿನ ಸಶಸ್ತ್ರ ನೌಕಾ ಪಡೆಯ ನಿರ್ಮಾಣವಾಯಿತು.

ಆರನೆಯ ಎಡ್ವರ್ಡ್ ಚಿಕ್ಕವನಾಗಿದ್ದಾಗಲೇ ಪಟ್ಟಕ್ಕೆ ಬಂದ. ಈತನ ಕಾಲದಲ್ಲಿ ಪ್ರಾಟೆಸ್ಟೆಂಟ್ ಮತ ಪ್ರಾಬಲ್ಯಕ್ಕೆ ಬಂತು. ಇವನ ಅನಂತರ ಬಂದ ಮೇರಿ ಎಂಟನೆಯ ಹೆನ್ರಿಯ ಮಗಳು. ಆಕೆ ಜಾರಿಯಲ್ಲಿದ್ದ ಎಲ್ಲ ಮತೀಯ ಬದಲಾವಣೆಗಳನ್ನೂ ರದ್ದು ಮಾಡಿದಳು. ಪೋಪನ ಸಾರ್ವಭೌಮತ್ವವನ್ನು ಇಂಗ್ಲೆಂಡ್ ಒಪ್ಪಿತು. ರೋಮನ್ ಕೆಥೊಲಿಕ್ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಲು ಪ್ರತಿ ಸುಧಾರಣೆ ಚಳವಳಿ ಪ್ರಾರಂಭವಾಯಿತು. ಇದರ ನಾಯಕ ಲಯೋಲದ ಇಗ್ನೇಷಿಯಸ್. ಮೇರಿಯ ಆಳಿಕೆಯಲ್ಲಿ ಪ್ರಾಟೆಸ್ಟೆಂಟ್ ಮತ ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿತು.

1558–1603ರ ವರೆಗೆ ಆಳಿದ ಎಲಿಜಬೆತ್ ರಾಣಿ ಇಂಗ್ಲೆಂಡ್ ದೇಶದ ಚರಿತ್ರೆಯಲ್ಲಿ ಅದ್ವಿತೀಯಳು. 25ನೆಯ ವಯಸ್ಸಿನಲ್ಲಿ ಈಕೆ ಪಟ್ಟಕ್ಕೆ ಬಂದಾಗ ಇದ್ದ ಮತೀಯ ಅಶಾಂತಿಯನ್ನು ಕಡಿಮೆ ಮಾಡುವುದಕ್ಕಾಗಿ ಚಾಣಾಕ್ಷತನದಿಂದ ಆಡಳಿತ ನಡೆಸಿ ಪೋಪನ ಅಧಿಕಾರವನ್ನು ಅಳಿದಳು. ಈಕೆ ಯಾವ ಬಣಕ್ಕೂ ಸೇರಿರಲಿಲ್ಲ. ಇಂಗ್ಲಿಷ್ ಚರ್ಚಿನ ಮೇಲೆ ಇದ್ದ ಪೋಪನ ಅಧಿಕಾರವನ್ನು ಈಕೆ ಕಿತ್ತೆಸೆದಳು. ಈಕೆಯ ಮತೀಯನೀತಿ ನಿಷ್ಪಕ್ಷದ್ದಾಗಿತ್ತು. ಕೆಥೊಲಿಕ್, ಪ್ರಾಟೆಸ್ಟೆಂಟ್ ಮತ್ತು ಪ್ಯೂರಿಟನ್ ಎಂಬ ಮೂರು ಪಂಗಡಗಳು ಈಕೆಯ ಕಾಲದಲ್ಲಿದ್ದವು. ಇಂಗ್ಲೆಂಡಿನ ಚರ್ಚಿಗೆ ತಾನೇ ಮುಖ್ಯ ಗೌವರ್ನರಳೆಂದು ಈಕೆ ಘೋಷಿಸಿಕೊಂಡಳು. ಕೆಥೊಲಿಕರು ಕೋಪಗೊಂಡು ಈಕೆಯ ವಿರುದ್ಧ ಪಿತೂರಿ ನಡೆಸಿದರು. ಪ್ಯೂರಿಟನ್ನರೂ ವಿರುದ್ಧವಾಗಿ ನಿಂತರು. ಪ್ರಾಟೆಸ್ಟಂಟರಿಗೆ ಇವಳ ಅಭಯ ಹಸ್ತವಿದ್ದಿತು. ಎಲಿಜಬೆತ್ ಮತ್ತು ಸ್ಕಾಟ್ಲೆಂಡಿನ ಸಂಬಂಧ ವಿಚಿತ್ರವಾದದ್ದು. ಸ್ನೇಹ ಸಂಪಾದನೆಗಾಗಿ ಹೆನ್ರಿಯ ಮಗಳಾದ ಮಾರ್ಗರೆಟಳನ್ನು ಸ್ಕಾಟ್ಲೆಂಡಿನ ನಾಲ್ಕನೆಯ ಜೇಮ್ಸಿಗೆ ವಿವಾಹ ಮಾಡಿಕೊಡಲಾಗಿತ್ತು. ಎಂಟನೆಯ ಹೆನ್ರಿಯ ಕಾಲದಲ್ಲಿ ಸ್ಕಾಟ್ಲೆಂಡಿನೊಡನೆ ಯುದ್ಧವಾದಾಗ ಜೇಮ್ಸ್ ಮಡಿದಿದ್ದ. ಆತನ ಮಗ 5ನೆಯ ಜೇಮ್ಸ್ ಮತ್ತೊಂದು ಕದನದಲ್ಲಿ ಸತ್ತ. ಸ್ಕಾಟ್ಲೆಂಡಿನ ರಾಜಕುಮಾರಿ ಮೇರಿ ಚಿಕ್ಕ ವಯಸ್ಸಿನವಳು. ಆಕೆಯನ್ನು ಆರನೆಯ ಎಡ್ವರ್ಡ್‌ನಿಗೆ ವಿವಾಹ ಮಾಡಬೇಕೆಂದು ಪ್ರಯತ್ನಿಸಿ ವಿಫಲರಾದರು. ಸ್ಕಾಟರು ಫ್ರೆಂಚ್ ರಾಜಕುಮಾರನಿಗೆ ಮೇರಿಯನ್ನು ಕೊಟ್ಟು ಮದುವೆ ಮಾಡಿದರು. ಸ್ಕಾಟ್ಲೆಂಡಿನಲ್ಲಿ ಫ್ರೆಂಚರಿಗೂ ಪ್ಯೂರಿಟನರಿಗೂ ಯುದ್ಧವಾಯಿತು. ಎಲಿಜಬೆತ್ ರಾಣಿ ಸ್ಕಾಟರಿಗೆ ಸಹಾಯಮಾಡಿ ಅವರ ಸ್ನೇಹ ಸಂಪಾದಿಸಿದಳು.

1561ರಲ್ಲಿ ವಿಧವೆ ಮೇರಿ ಏಳನೆಯ ಹೆನ್ರಿಯ ಮರಿಮಗನಾದ ಲಾರ್ಡ್ ಡಾರ್ನ್ಲೆಯನ್ನು ಮದುವೆಯಾದಳು. ಇಂಗ್ಲೆಂಡಿನ ಸಿಂಹಾಸನಕ್ಕೆ ಅವಳ ಹಕ್ಕು ಸ್ಥಾಪಿತವಾಯಿತು. ಎರಡನೆಯ ಫಿಲಿಪ್ ನಾಯಕತ್ವದಲ್ಲಿ ಸ್ಪೇನ್ ಇಂಗ್ಲೆಂಡಿನ ಮೇಲೆ ಧಾಳಿ ಮಾಡಲು ಯೋಚಿಸಿತು. ಹಾಲೆಂಡ್ ದೇಶಕ್ಕೆ ಎಲಿಜಬೆತ್ ರಾಣಿ ಸಹಾಯ ಮಾಡಿದ್ದಳೆಂಬುದು ಇದಕ್ಕೆ ಕಾರಣ. ಫಿಲಿಪ್ ಒಂದು ದೊಡ್ಡ ನೌಕಾಬಲವನ್ನು ತಯಾರಿಸಿದ. 130 ಹಡಗುಗಳಿದ್ದ ಸ್ಪ್ಯಾನಿಷ್ ಆರ್ಮೆಡ ಯುದ್ಧಕ್ಕೆ ಸಜ್ಜಾಯಿತು. 1588ರಲ್ಲಿ ಇದು ಇಂಗ್ಲಿಷ್ ಕಡಲ್ಗಾಲುವೆಯನ್ನು ಪ್ರವೇಶಿಸಿದಾಗ ಯಾರೊಬ್ಬರೂ ಅದನ್ನು ವಿರೋಧಿಸಲಿಲ್ಲ. ಆದರೆ ಇಂಗ್ಲಿಷರು ಹಠಾತ್ತಾಗಿ ಅದರ ಮೇಲೆ ಎರಗಿ ಪುಡಿ ಮಾಡಿದರು. ಸ್ಪೇನ್ ಸೋತಿತು. ಪ್ರಾಟೆಸ್ಟೆಂಟ್ ಮತಕ್ಕೆ ಒದಗಿದ್ದ ಕಂಟಕ ನಿವಾರಣೆಯಾಯಿತು. ಈಕೆಯ ಕಾಲ ವಾಣಿಜ್ಯ ಮತ್ತು ವಸಾಹತುಗಳ ದೃಷ್ಟಿಯಿಂದ ಬಹು ಮಹತ್ತ್ವದ್ದು. 1600ರಲ್ಲಿ ಈಸ್ಟ್ ಇಂಡಿಯ ಕಂಪನಿ ಸ್ಥಾಪನೆಯಾಯಿತು. ಇಂಗ್ಲೆಂಡ್ ಮತ್ತು ರಷ್ಯಗಳ ನಡುವೆ ವ್ಯಾಪಾರ ಸಂಬಂಧ ಕುದುರಿತು. ಈಕೆಯ ಚಾಣಾಕ್ಷತನ, ಶಾಂತ ಸ್ವಭಾವ ಈಕೆಯನ್ನು ರಾಜಕೀಯವಾಗಿ ಬದುಕಿಸಿದುವು. ಈಕೆ ಪಾರ್ಲಿಮೆಂಟನ್ನು ಎಂದೂ ಎದುರು ಹಾಕಿಕೊಳ್ಳಲಿಲ್ಲ.

**ಸ್ಟೂವರ್ಟ್ ರಾಜರು:** ಮುಂದೆ ಆಳಿದ ಸ್ಟೂವರ್ಟ್ ರಾಜರ ಕಾಲದಲ್ಲಿ ಇಂಗ್ಲೆಂಡ್ ಸ್ವತಂತ್ರವಾಗಿ ಬೆಳೆಯಿತು. ಪಾರ್ಲಿಮೆಂಟಿನ ಅಧಿಕಾರ ಹೆಚ್ಚುತ್ತ ಬಂತು. ಇವರ ಕಾಲದಲ್ಲಿ ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡ್ ಒಂದಾದವು.

ಸ್ಕಾಟ್ಲೆಂಡಿನ ಮೇರಿಯ ಮಗನಾದ ಆರನೆಯ ಜೇಮ್ಸ್ ಎಲಿಜಬೆತ್ ನಿಧನನಾದ ಅನಂತರ ಒಂದನೆಯ ಜೇಮ್ಸ್ ಆಗಿ ಆಳಿದ. ಇವನ ಕಾಲದಲ್ಲಿ ಪಾರ್ಲಿಮೆಂಟಿನೊಡನೆ ತಿಕ್ಕಾಟ ಹೆಚ್ಚಿತು. ಪಾರ್ಲಿಮೆಂಟ್ ಹೆಚ್ಚು ಹೆಚ್ಚಾಗಿ ಈತನ ಆಡಳಿತವನ್ನು ವಿಮರ್ಶೆ ಮಾಡತೊಡಗಿತು. ಮಧ್ಯಮವರ್ಗದ ಜನ ಪಾರ್ಲಿಮೆಂಟಿನ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರು. ತನ್ನನ್ನು ಪ್ರಶ್ನಿಸುವ ಹಕ್ಕು ಪಾರ್ಲಿಮೆಂಟಿಗೆ ಇಲ್ಲವೆಂದು ಈತ 1610ರಲ್ಲಿ ಪಾರ್ಲಿಮೆಂಟನ್ನು ರದ್ದು ಮಾಡಿದ. 11 ವರ್ಷಕಾಲ ತಾನೇ ತಾನಾಗಿ ಆಳಿದ. 1614ರಲ್ಲಿ ಸೇರಿದ್ದ ಪಾರ್ಲಿಮೆಂಟ್ ಏನನ್ನೂ ಸಾಧಿಸಲಿಲ್ಲ. 1621ರಲ್ಲಿ ಜೇಮ್ಸ್ ಪಾರ್ಲಿಮೆಂಟನ್ನು ಸೇರಿಸಿದಾಗ ಅದು ಈತನನ್ನು ಬಹುವಾಗಿ ಟೀಕಿಸಿತು. ಒಂದನೆಯ ಚಾರ್ಲ್ಸನ ವಿವಾಹದ ಪ್ರಶ್ನೆ ಬಂದಾಗ ಪಾರ್ಲಿಮೆಂಟ್ ತನ್ನ ವಾಕ್‌ಸ್ವಾತಂತ್ರ್ಯವನ್ನು ಬಿಟ್ಟುಕೊಡದೆ ಪ್ರತಿಭಟನೆಯನ್ನು ಸೂಚಿಸಿ ಅದನ್ನು ಪಾರ್ಲಿಮೆಂಟಿನ ಪುಸ್ತಕದಲ್ಲಿ ದಾಖಲೆ ಮಾಡಿಸಿತು. ಕೆರಳಿದ ರಾಜ ಆ ಹಾಳೆಯನ್ನೇ ಹರಿದ.

ಒಂದನೆಯ ಜೇಮ್ಸ್‌ನ ಮಗನಾದ ಮೊದಲನೆಯ ಚಾರ್ಲ್ಸ್ ದೈವದತ್ತ ರಾಜತ್ವದಲ್ಲಿ ನಂಬಿಕೆ ಇಟ್ಟಿದ್ದ. ಈತ ಎಂದೂ ಸ್ವತಂತ್ರ ನಿರ್ಧಾರ ಕೈಗೊಳ್ಳಲಿಲ್ಲ. ಈತ 1625ರಲ್ಲಿ ಪಾರ್ಲಿಮೆಂಟನ್ನು ಕರೆದು ಸ್ಪೇನಿನೊಂದಿಗೆ ಯುದ್ಧಕ್ಕಾಗಿ ಹಣ ಬೇಡಿದ. ಹಣಕಾಸಿನ ಹತೋಟಿ ಪಾರ್ಲಿಮೆಂಟಿನ ಹಿಡಿತದಲ್ಲಿದ್ದರೆ ರಾಜ ಸರಿಹೋಗುತ್ತಾನೆಂದು ನಂಬಲಾಗಿತ್ತು. ಸ್ಪೇನಿನ ಜೊತೆ ಕಾದಾಟದಲ್ಲಿ ಇಂಗ್ಲೆಂಡ್ ಸೋತಿತು. ಸೋಲಿಗೆ ಕಾರಣನಾದವ ದೊರೆಯ ಗೆಳೆಯನಾದ ಬಕಿಂಗ್‌ಹ್ಯಾಮ್ ಎಂದು ಪಾರ್ಲಿಮೆಂಟ್ ಕೆರಳಿತು. ರಾಜ ತನ್ನ ಗೆಳೆಯನಿಗಾಗಿ ಪಾರ್ಲಿಮೆಂಟನ್ನೇ ರದ್ದುಪಡಿಸಿದ. ಪಾರ್ಲಿಮೆಂಟ್ ಪೆಟಿಷನ್ ಆಫ್ ರೈಟ್ಸ್ ಎಂಬ ಪತ್ರವೊಂದನ್ನು ತಯಾರಿಸಿ ಬಲತ್ಕಾರದ ತೆರಿಗೆ, ಸಾಲ, ಬಲತ್ಕಾರದ ಸೆರೆ ಇವನ್ನು ಮಾಡಬಾರದೆಂದು ವಿಧಿಸಿತು. ರಾಜ ಇದಕ್ಕೆ ಒಪ್ಪಿಗೆ ಕೊಟ್ಟರೂ ಇದನ್ನು ಪಾಲಿಸಲಿಲ್ಲ. ಹಣದ ಪರಿಸ್ಥಿತಿ ಬಿಕ್ಕಟ್ಟಿಗೆ ಬಂದಾಗ 1640ರಲ್ಲಿ ಮತ್ತೆ ಪಾರ್ಲಿಮೆಂಟ್ ಕರೆದ. ಇದನ್ನು ಲಾಂಗ್ ಪಾರ್ಲಿಮೆಂಟ್ ಎಂದು ಕರೆಯುತ್ತಾರೆ. ಈ ಅಧಿವೇಶನದಲ್ಲಿ ಕೆವಿಲಿಯರ್ಸ್ ಮತ್ತು ರೌಂಡ್ ಹೆಡ್ಸ್ ಎಂಬ ಬಣಗಳು ಪಾರ್ಲಿಮೆಂಟಿನಲ್ಲಿ ತಲೆಯೆತ್ತಿದವು. ಪಾರ್ಲಿಮೆಂಟ್ 9 ತಿಂಗಳ ಕಾಲವಿತ್ತು. ಚಾರ್ಲ್ಸನ ಗೆಳೆಯರಿಗೆ ಗಲ್ಲಾಯಿತು. ಚರ್ಚಿನ ಆಡಳಿತವನ್ನು ಮತಾಧಿಪತಿಗಳ ಹಿಡಿತದಿಂದ ತಪ್ಪಿಸುವ ರೂಟ್ ಅಂಡ್ ಬ್ರಾಂಚ್ ಬಿಲ್ ಎಂಬುದನ್ನು ಜಾರಿಗೆ ತಂದರು. 1641ರಲ್ಲಿ ಪಾರ್ಲಿಮೆಂಟ್ ಮತ್ತೆ ಸೇರಿದಾಗ ಸೈನಿಕ ಮಸೂದೆಯನ್ನು ಜಾರಿಗೆ ತಂದು ಸೈನ್ಯವನ್ನು ಪಾರ್ಲಿಮೆಂಟಿನ ಹತೋಟಿಗೆ ಒಳಪಡಿಸಲಾಯಿತು. ರಾಜನ ಹಕ್ಕನ್ನೆಲ್ಲ ಕಿತ್ತುಕೊಳ್ಳುವ ಗ್ರಾಂಡ್ ರೆಮಾನ್ ಸ್ಟ್ರೆನ್ಸ್ ಕಾಯಿದೆಯಾಯಿತು. ಕೋಪಗೊಂಡ ಚಾರ್ಲ್ಸ್ ಸಿಕ್ಕಿದವರನ್ನೆಲ್ಲ ಸೆರೆಯಲ್ಲಿಟ್ಟ.

ಆಲಿವರ್ ಕ್ರಾಮ್‌ವೆಲ್ ಸೈನ್ಯದಲ್ಲಿ ಸುಧಾರಣೆ ಮಾಡಿದ ಚಾರ್ಲ್ಸ್ ದೊರೆ ಸ್ಕಾಟ್ಲೆಂಡಿನ ಯುದ್ಧದಲ್ಲಿ ಸೋತು ಕೊನೆಗೆ ಶರಣಾಗತನಾದ. ಪಾರ್ಲಿಮೆಂಟ್ ಮತ್ತು ಸೈನ್ಯದ ನಡುವೆ ಮತೀಯ ಸಂಘರ್ಷ ಏರ್ಪಟ್ಟಿತು. ಪಾರ್ಲಿಮೆಂಟಿನ ಅಧೀನದಲ್ಲಿ ಚಾರ್ಲ್ಸ್ ಆಳಿಕೆ ನಡೆಸುವ ಹಾಗೆ ಮಾತುಕತೆಯಾಡಿ ಅವನನ್ನು ಬಿಡಿಸಲಾಯಿತು. ಪಾರ್ಲಿಮೆಂಟ್ ಆತನನ್ನು ಹಿಡಿದು ವಿಚಾರಣೆ ನಡೆಸಿ 1649ರಲ್ಲಿ ಶಿರಚ್ಛೇದ ಮಾಡಿತು. ಗಣರಾಜ್ಯ ಸ್ಥಾಪಿತವಾದರೂ ಸೈನ್ಯಕ್ಕೆ ಹೆಚ್ಚು ಅಧಿಕಾರವಿತ್ತು. ಆ ಪಾರ್ಲಿಮೆಂಟಿಗೆ ರಂಪ್ ಪಾರ್ಲಿಮೆಂಟ್ ಎಂದು ಕರೆಯುತ್ತಾರೆ. ಕ್ರಾಮ್‌ವೆಲ್ಲನ ನೇತೃತ್ವದಲ್ಲಿ ಸೈನಿಕ ಸರ್ಕಾರದ ಸ್ಥಾಪನೆಯಾಯಿತು.

ಆಲಿವರ್ ಕ್ರಾಮ್ ವೆಲ್ ಮೇಧಾವಿ, ಆದರ್ಶವಾದಿ, ದಕ್ಷ ಆಡಳಿತಗಾರ. ವ್ಯವಹಾರಜ್ಞಾನ ಹೊಂದಿದ್ದು ಸರಿಯಾದ ನಿರ್ಧಾರ ಕೈಗೊಳ್ಳುವ ಎದೆಗಾರಿಕೆ ಈತನಿಗಿತ್ತು. 1653–58ರ ವರೆಗೆ ಈತ ರಾಜ್ಯವಾಳಿದ. ಪಾರ್ಲಿಮೆಂಟಿನ ಸಹಕಾರ ದೊರೆಯದಿದ್ದಾಗ ಈತ ಸೈನ್ಯದ ಸಹಾಯದಿಂದ ಆಡಳಿತ ನಡೆಸುವುದರ ಮೂಲಕ ಇಂಗ್ಲೆಂಡಿನ ಕೀರ್ತಿಯನ್ನು ಯುರೋಪಿನ ರಾಜ್ಯಗಳಲ್ಲಿ ಹರಡಿದ. ವಿದೇಶಾಂಗ ನೀತಿಯಲ್ಲಿ ಈತನಿಗೆ ಎಲಿಜಬೆತ್ ಆದರ್ಶಪ್ರಾಯಳಾಗಿದ್ದಳು. 1658ರಲ್ಲಿ ಕ್ರಾಮ್‌ವೆಲ್ ಕಾಲವಾದ.

ಅನಂತರ ಅವನ ಮಗ ರಿಚರ್ಡ್ ಪಟ್ಟಕ್ಕೆ ಬಂದನಾದರೂ ಸೈನ್ಯಾಧಿಕಾರಿಗಳೊಂದಿಗೆ ಜಗಳವಾಡಿ ಅಧಿಕಾರ ಕಳೆದುಕೊಂಡ. ಪಾರ್ಲಿಮೆಂಟ್ ಒಂದನೆಯ ಚಾರ್ಲ್ಸನ ಮಗನಾದ ಎರಡನೆಯ ಚಾರ್ಲ್ಸನನ್ನು ಅಧಿಕಾರಕ್ಕೆ ತಂದಿತು. ಆತ ಒಳ್ಳೆಯ ಆಡಳಿತ ನಡೆಸುವುದಾಗಿ ಘೋಷಣೆ ಮಾಡಿದ. ಕ್ಲಾರೆನ್ಡನ್ ಈತನ ಮಂತ್ರಿಯಾಗಿದ್ದ. ಕ್ಲಾರೆನ್ಡನ್ ಕೋಡ್ ಎಂಬ ನ್ಯಾಯಸಂಹಿತೆ ಈತನ ಕೊಡುಗೆ. ಇಂಗ್ಲೆಂಡಿನ ಚರ್ಚುಗಳು ಒಂದೇ ಪ್ರಾರ್ಥನಾ ಪುಸ್ತಕವನ್ನು ಬಳಸುವಂತೆ ಈತ ನಿಯಮ ಮಾಡಿದಾಗ ನಡೆದ ಡಚ್ಚರ ಜೊತೆಯ ಯುದ್ಧದಲ್ಲಿ ಇಂಗ್ಲೆಂಡಿಗೆ ಪರಾಭವವಾಯಿತು. ಪರಿಣಾಮವಾಗಿ ಕ್ಲಾರೆನ್ಡನ್ ಕೆಲಸ ಕಳೆದುಕೊಂಡ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಈತ ಮಾಡಿದ ಉಪಕಾರ ಸ್ಮರಣೀಯವಾದದ್ದು. ವಿಶ್ವವಿದ್ಯಾಲಯದ ಮುದ್ರಣ ಶಾಲೆಗೆ ಇಂದಿಗೂ ಇವನ ಹೆಸರು ಇದೆ.

ಎರಡನೆಯ ಚಾರ್ಲ್ಸ್ ಕಾಲದಲ್ಲಿ ಕೆಬಾಲ್ ಪ್ರಸಿದ್ಧವಾಯಿತು. ಇದು 5 ಜನರ ಸಮಿತಿ. ಮಂತ್ರಿತ್ವ ಇದರ ಕೆಲಸ, ದೇಶದ ಆಡಳಿತದ ನಿರ್ವಹಣೆ ಇದರ ಹೊಣೆ. ಆಧುನಿಕ ಕ್ಯಾಬಿನೆಟ್ ಇದರ ಮೇಲೆ ರೂಪಿತವಾಗಿದೆ. ಈ ಕಾಲದಲ್ಲಿ ಷ್ಯಾಫ್ಟ್ ಬರಿ ಎಂಬುವವನು ವಿಗ್ ಪಾರ್ಟಿಯನ್ನೂ ಡಾನ್‌ಬೀ ಎಂಬುವನು ಟೋರಿ ಪಕ್ಷವನ್ನೂ ಕಟ್ಟಿದರು.

1679–81ರ ವರೆಗೆ ವಿಗ್ಗರು ಬಲಶಾಲಿಗಳಾಗಿದ್ದರು. ಹ್ಯಾಬ್ಸ್ ಬರ್ಗ್ ವಂಶದ ಎರಡನೆಯ ಚಾರ್ಲ್ಸ್‌ಗೆ ಮಕ್ಕಳಿರಲಿಲ್ಲ. ಯುರೋಪಿನಲ್ಲಿ ರಾಜಕೀಯ ಕಳವಳ ಉಂಟಾಯಿತು. ಆಗ ಸ್ಪೇನಿನ ಸಿಂಹಾಸನಕ್ಕೆ ಹಲವು ಮಂದಿ ಉಮೇದುವಾರರಿದ್ದರು. ಇವರಲ್ಲಿ 14ನೆಯ ಲೂಯಿಯ ಮೊಮ್ಮಗ 5ನೆಯ ಫಿಲಿಪ್ ಮತ್ತು ಆಸ್ಟ್ರಿಯದ ಆರ್ಚ್ ಡ್ಯೂಕ್ ಚಾರ್ಲ್ಸ್ ಮುಖ್ಯರಾಗಿದ್ದರು. ಹ್ಯಾಬ್ಸ ಬರ್ಗ್ ದೊರೆ ತನ್ನ ಮರಣ ಶಾಸನದಲ್ಲಿ 5ನೆಯ ಫಿಲಿಪ್‌ಗೆ ಸ್ಪೇನಿನ ಸಿಂಹಾಸನ ನೀಡಬೇಕೆಂದು ಬರೆದಿಟ್ಟದ್ದರಿಂದ ಯುದ್ಧಕ್ಕೆ ಕಾರಣವಾಯಿತು. ಇಂಗ್ಲೆಂಡೂ ಈ ಯುದ್ಧದಲ್ಲಿ ಸೇರಿತು. ಸ್ಪೇನ್, ಡ್ಯಾನ್ಯೂಬ್ ನದಿಯ ಮೇಲ್ದಂಡೆ – ಇವುಗಳು ಹೋರಾಟದ ಕ್ಷೇತ್ರಗಳು. 1704ರಲ್ಲಿ ಇಂಗ್ಲೆಂಡ್ ಮೈನಾರ್ಕ್ ಮತ್ತು ಜಿಬ್ರಾಲ್ಟರುಗಳನ್ನು ವಶಮಾಡಿಕೊಂಡಿತು. ಫ್ರೆಂಚರಿಗೆ ಸೋಲಾಯಿತು. ಇಂಗ್ಲೆಂಡಿನಲ್ಲಿ ಟೋರಿಗಳು ಯುದ್ಧಕ್ಕೆ ವಿರುದ್ಧವಾಗಿದ್ದರು. 1713ರಲ್ಲಿ ಯುಟ್ರೆಕ್ಟ್ ಒಪ್ಪಂದದಿಂದ ಶಾಂತಿ ಸ್ಥಾಪನೆಯಾಯಿತು. 5ನೆಯ ಫಿಲಿಪ್ ಸ್ಪೇನಿನ ರಾಜನಾದ. ಸ್ಪೇನಿನ ವಸಾಹತುಗಳಿಗೆ ವರ್ಷಕ್ಕೊಂದು ಹಡಗನ್ನೂ ನೀಗ್ರೊ ಗುಲಾಮರುಗಳನ್ನೂ ಮಾರುವ ಹಕ್ಕು ಇಂಗ್ಲೆಂಡಿಗೆ ದೊರಕಿತು. ಆನ್ ರಾಣಿಯ ಕಾಲದಲ್ಲಿ ಇಂಗ್ಲೆಂಡಿನೊಂದಿಗೆ ಸ್ಕಾಟ್ಲೆಂಡಿನ ಐಕ್ಯವಾಗಿತ್ತು. ಆಗಿನ ಒಂದು ಒಪ್ಪಂದದ ಪ್ರಕಾರ ಹ್ಯಾನೋವರ್ ರಾಜರು ಸ್ಕಾಟ್ಲೆಂಡಿಗೆ ರಾಜರಾದರು. ಒಂದನೆಯ ಜಾರ್ಜ್ ಇಂಗ್ಲೆಂಡಿನ ರಾಜನಾದ.

**ಹ್ಯಾನೋವರ್ ರಾಜರು:** ವಿಗ್ ಪಕ್ಷ ಒಂದನೆಯ ಜಾರ್ಜನನ್ನು ಇಂಗ್ಲೆಂಡಿನ ಸಿಂಹಾಸನದ ಮೇಲೆ ಕೂಡಿಸಿತು. ಇವನಿಗೆ ಇಂಗ್ಲಿಷ್ ಜ್ಞಾನವಿದ್ದುದರಿಂದ ಪಾರ್ಲಿಮೆಂಟಿಗೆ ರಾಜನ ಅಧಿಕಾರ ಮೊಟಕುಗೊಳಿಸಲು ಅವಕಾಶವಾಯಿತು. ಕ್ಯಾಬಿನೆಟ್ ಪದ್ಧತಿ ಈ ಕಾಲದಲ್ಲಿ ಜಾರಿಗೆ ಬಂತು. ಪ್ರಬಲ ಮಂತ್ರಿಮಂಡಲ ಆಡಳಿತ ನಿರ್ವಹಿಸಿತು. ಪಾರ್ಲಿಮೆಂಟ್ ಬಲವಾಗುತ್ತ ಬಂತು.

ವಾಲ್ಪೋಲ್ ಇಂಗ್ಲೆಂಡಿನ ಮೊದಲ ಶಾಂತಿಪ್ರಿಯ ಪ್ರಧಾನಮಂತ್ರಿ. ಅವನ ಕಾಲದಲ್ಲಿ ವಿಲಿಯಂ ಪಿಟ್ ಎಂಬ ಪ್ರಸಿದ್ಧ ವಾಗ್ಮಿಯಿದ್ದ. ವಾಲ್ ಪೋಲ್ ಯುಟ್ರೆಕ್ಟ್ ಕರಾರಿನ ಪ್ರಕಾರ ಇಂಗ್ಲೆಂಡು ವಸಾಹತುಗಳಿಗೆ ನೀಗ್ರೊಗಳನ್ನು ಸಾಗಿಸುತ್ತಿತ್ತು. ಆ ಸಂದರ್ಭದಲ್ಲಿ ಸ್ಪೇನಿನವರು ಇಂಗ್ಲೆಂಡಿನ ಕ್ಯಾಪ್ಟನ್ ಜೆಂಕಿನ್ಸ್‌ನ ಕಿವಿಯನ್ನು ಕತ್ತರಿಸಿದ್ದರಿಂದ 1739 ಜೆಂಕಿನ್ಸ್ ಕಿವಿಯ ಯುದ್ಧವಾಯಿತು. ವಾಲ್‌ಪೋಲ್ 1742ರಲ್ಲಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ. ಇಂಗ್ಲೆಂಡ್ ಇವನ ಕಾಲದಲ್ಲಿ ಆರ್ಥಿಕವಾಗಿ ಸುಧಾರಿಸಿತು.

ಅಮೆರಿಕ ಮತ್ತು ಭಾರತಗಳೊಂದಿಗೆ ನಡೆಸುತ್ತಿದ್ದ ವ್ಯಾಪಾರದಲ್ಲಿ ಫ್ರಾನ್ಸ್ ಇಂಗ್ಲೆಂಡಿನೊಂದಿಗೆ ಸ್ಪರ್ಧಿಸಿತು. ಹದಿಮೂರು ವಸಾಹತುಗಳನ್ನು ನಿರ್ಮಿಸಿತ್ತು. ಇಂಗ್ಲೆಂಡಿನ ಈ ಮೇಲ್ಮೆಯಿಂದಾಗಿ ಫ್ರೆಂಚರಿಗೂ ಇಂಗ್ಲಿಷರಿಗೂ ನಡುವೆ ಕಾದಾಟವಾಗಿ ಇದು ಏಳು ವರ್ಷಗಳ ಯುದ್ಧವೆಂದು ಹೆಸರಾಗಿದೆ. ಭಾರತದಲ್ಲಿ ಕ್ಲೈವ್ ಮತ್ತು ಫ್ರೆಂಚ್ ಗೌರ್ವನರ್ ಡೂಪ್ಲೆ ರಾಜಕೀಯ ಕಣಕ್ಕಿಳಿದರು. ಫ್ರೆಂಚರ ವಸಾಹತುಗಳೆಲ್ಲ ನಾಶವಾದವು. ಇಂಗ್ಲೆಂಡ್ ಗೌರ್ವನರ್ 1763ರಲ್ಲಿ ಪ್ಯಾರಿಸ್ ಕೌಲಿನಿಂದ, ಏಳು ವರ್ಷಗಳ ಯುದ್ಧ ಕೊನೆಗೊಂಡು ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆಗೆ ಅನುವಾಯಿತು. ವಿಲಿಯಂ ಪಿಟ್ ಕ್ರಮಕ್ರಮವಾಗಿ ತನ್ನ ಪ್ರಾಮಾಣಿಕತೆಯಿಂದ ಇಂಗ್ಲೆಂಡನ್ನು ರಕ್ಷಿಸಿದ. ಇಂದಿಗೂ ಉತ್ತರ ಅಮೆರಿಕದಲ್ಲಿ ಇವನ ಹೆಸರಿನಲ್ಲಿ ನಿರ್ಮಾಣವಾದ ಪಿಟ್ಸ್‌ಬರ್ಗ್ ಇದೆ.

1775ರಲ್ಲಿ ಅಮೆರಿಕದಲ್ಲಿದ್ದ 13 ಬ್ರಿಟಿಷ್ ವಸಾಹತುಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಅದನ್ನು ಗಳಿಸಿದುವು. ಅಮೆರಿಕದ ಸ್ವಾತಂತ್ರ್ಯದಿಂದ ಮೂರನೆಯ ಜಾರ್ಜ್ ತನ್ನ ಪ್ರಾಬಲ್ಯ ಕಳೆದುಕೊಂಡ. ಇವನ ಕಾಲದಲ್ಲಿ ಪ್ರಧಾನಿಯಾಗಿ ಬಂದ ಕಿರಿಯ ಪಿಟ್ ಇಂಗ್ಲೆಂಡ್‌ನ್ನು 18ವರ್ಷಗಳ ಕಾಲ ರಕ್ಷಿಸಿದ. ಹಣಕಾಸಿನ ವಿಚಾರದಲ್ಲಿ ಇವನು ನಿಷ್ಣಾತ. 18ನೆಯ ಶತಮಾನದಲ್ಲಿ

ಫ್ರಾನ್ಸಿನಲ್ಲಿ ಮಹಾಕ್ರಾಂತಿ ನಡೆದು ಇಂಗ್ಲೆಂಡಿಗೆ ಒಂದು ರೀತಿಯ ಪಾಠ ಕಲಿಸಿತು. ಅಮೆರಿಕದ ಸ್ವಾತಂತ್ರ್ಯ ಯುದ್ಧದಲ್ಲಿ ಫ್ರೆಂಚರ ಪಾತ್ರ ಬಲು ಮಹತ್ತ್ವದ್ದಾಗಿತ್ತು. ಮಹಾಕ್ರಾಂತಿಯ ಕಾಲದಲ್ಲಿ ಪಿಟ್ ಯುದ್ಧಮಂತ್ರಿಯಾಗಿ ಕೆಲಸ ಮಾಡಿದ. ಇಂಗ್ಲೆಂಡನ್ನು ಫ್ರೆಂಚರ ಆಕ್ರಮಣದಿಂದ ಕಾಪಾಡುವುದೇ ಇವನ ಮುಖ್ಯ ಕೆಲಸವಾಯಿತು. ಫ್ರಾನ್ಸಿನ ಸರ್ವಾಧಿಕಾರಿಯಾಗಿದ್ದ ನೆಪೋಲಿಯನ್ನನೊಂದಿಗೆ ಇಂಗ್ಲೆಂಡು ಅನಿವಾರ್ಯವಾಗಿ ಯುದ್ಧ ಮಾಡಬೇಕಾಗಿ ಬಂತು. ಇಂಗ್ಲೆಂಡ್ ನೌಕಾಪಡೆ ನೆಪೋಲಿಯನ್ ಸೇನೆಯನ್ನು ಸೋಲಿಸಿತು. ಪಿಟ್ ಯುರೋಪಿನಲ್ಲಿ ಮಿತ್ರರಾಷ್ಟ್ರಗಳ ಗುಂಪೊಂದನ್ನು ಕಟ್ಟಿ, ಅವುಗಳ ಸಹಾಯದಿಂದ ಇಂಗ್ಲೆಂಡನ್ನು ರಕ್ಷಿಸಲು ಯತ್ನಿಸಿದ. ನೆಪೋಲಿಯನ್ ಕೈಗೊಂಡ ಖಂಡಾಂತರ ಆರ್ಥಿಕ ದಿಗ್ಬಂಧನ ಇಂಗ್ಲೆಂಡಿನ ಮುಂದೆ ನಿಲ್ಲಲಾರದೆ ಮಿತ್ರರಾಷ್ಟ್ರಗಳ ಎದುರಿಗೆ ಸೋಲೊಪ್ಪಿಕೊಂಡ.

**ಕೈಗಾರಿಕಾ ಕ್ರಾಂತಿ:** ಇಂಗ್ಲೆಂಡಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿ ಅದ್ವಿತೀಯವಾದುದು. ಯಾಂತ್ರೀಕರಣದಿಂದ ಆರ್ಥಿಕ ಸ್ಥಿತಿ ಉತ್ತಮಗೊಂಡಿತು. ಸ್ಪಿನ್ನಿಂಗ್ ಜೆನ್ನಿ, ನೀರಿನ ಶಕ್ತಿಯಿಂದ ಚಲಿಸುವ ಯಂತ್ರ ಉಪಕಾರ ಮಾಡಿತು. ವಿಜ್ಞಾನದಿಂದ ಕೈಗಾರಿಕೆಗಳಷ್ಟೇ ಅಲ್ಲದೆ ವ್ಯವಸಾಯಕ್ಕೂ ಹೊಸ ಹೊಸ ರಸ್ತೆಯ ನಿರ್ಮಾಣದಿಂದ ಸರಕು ಸಾಗಾಣಿಗೂ ಅನುಕೂಲವಾಯಿತಲ್ಲದೆ, ಹಡಗು ನಿರ್ಮಾಣವಾಯಿತು. ಸ್ಟೀಫನ್ ಸನ್ ರೈಲು ಮಾಂಚೆಸ್ಟರಿನಿಂದ ಲಿವರ್ ಪೂಲಿಗೆ ಓಡಿತು. ಕಬ್ಬಿಣದ ಉತ್ಪಾದನೆ, ಕಲ್ಲಿದ್ದಲು ಗಣಿಗಳು ಹೆಚ್ಚಿದುವು. ಸೇಫ್ಟಿ ಲ್ಯಾಂಪನ್ನು ಹಂಫ್ರಿಡೇವಿ ಕಂಡುಹಿಡಿದ. ಕೈಗಾರಿಕಾ ಕ್ರಾಂತಿ ಇಂಗ್ಲೆಂಡಿಗೆ ಫಲದಾಯಕವಾಯಿತು. ಇನ್ನೊಂದು ದಿಕ್ಕಿನಲ್ಲಿ ಕೈಗಾರಿಕಾಕ್ರಾಂತಿ ಮನುಷ್ಯರನ್ನು ಕಡೆಗಣಿಸಿತು. ಭಾರತದಲ್ಲಿ ಕಾಲಾನುಕಾಲದಿಂದ ನಡೆದು ಬಂದಿದ್ದ ಮಸ್ಲಿನ್ ಕೈಗಾರಿಕೆಯನ್ನು ಹಾಳು ಮಾಡಲು ಇದೂ ಕಾರಣವಾಯಿತು. ಕಾರ್ಖಾನೆಗಳು ಹೆಚ್ಚಿ ಕಾರ್ಮಿಕರ ಸಮಸ್ಯೆ ಹೆಚ್ಚಿತು. ಕಾರ್ಮಿಕರ ಹಿತರಕ್ಷಣೆಗಾಗಿ ಅನೇಕ ಕಾಯಿದೆಗಳನ್ನು ಜಾರಿಗೊಳಿಸಬೇಕಾಯಿತು. ಕಾರ್ಮಿಕರು ತಮ್ಮ ದುಃಸ್ಥಿತಿಯನ್ನು ನೆನೆದು ಕೋಪಿಸಿಕೊಳ್ಳುವುದರಲ್ಲಿ ಉಪಯೋಗವಿಲ್ಲವೆಂದೂ ಪಾರ್ಲಿಮೆಂಟಿನಲ್ಲಿ ಅವರು ಭಾಗವಹಿಸಿ ಸುಧಾರಣೆ ತರಬೇಕೆಂದೂ ಹಲವರು ಯೋಚಿಸಿದರು. 3ನೆಯ ಜಾರ್ಜನ ಅಂತಿಮ ಕಾಲದಲ್ಲಿ ಸರ್ಕಾರ ಟೋರಿ ಗುಂಪಿನವರ ಕೈಯಲ್ಲಿತ್ತು. ಲಾರ್ಡ್ ಕ್ಯಾಸಲ್‌ರೇ ಇಂಗ್ಲೆಂಡಿನಲ್ಲಿ ರಾಜ್ಯಾಂಗಬದ್ಧ ಸರ್ಕಾರ ಸ್ಥಾಪಿಸಲು ಪ್ರಯತ್ನಿಸಿದ ಕಾರ್ಮಿಕರ ವಿರುದ್ಧ ಅನೇಕ ಕಾನೂನುಗಳನ್ನು ಜಾರಿಗೆ ತರಲಾಯಿತು. ಲಾರ್ಡ್ ಕ್ಯಾಸಲ್‌ರೇಯ ಮರಣಾನಂತರ ಜಾರ್ಜ್ ಕ್ಯಾನಿಂಗ್ ಪ್ರಧಾನಮಂತ್ರಿಯಾದ ಭಾರತದ ಗೌರ್ನರ್ ಜನರಲ್ಲೂ ಆಗಿದ್ದ. ತನ್ನ ವಿದೇಶಾಂಗ ನೀತಿಯ ವೈಶಿಷ್ಟ್ಯದ ಮೂಲಕ ಈತ ಪ್ರಸಿದ್ಧನಾದ.

ಟೋರಿ ಪಕ್ಷ ಕ್ರಮೇಣ ಕನ್ಸರ್ವೇಟಿವ್ ಪಕ್ಷವಾಗಿ, ಪೀಲ್ ಅದರ ನಾಯಕನಾದ. ಇವನ ಕಾಲದಲ್ಲಿ ಗೋದಿಗೆ ಕಾನೂನು ರಕ್ಷಣೆ ನೀಡಿದ್ದು ಬಹು ಮುಖ್ಯವಾದ ಘಟ್ಟ. 1844ರಲ್ಲಿ ಬ್ಯಾಂಕ್ ಕಾಯಿದೆ ಜಾರಿಗೊಳಿಸಿ, ನೋಟು ಚಲಾವಣೆಯನ್ನು ಕ್ರಮಬದ್ಧಗೊಳಿಸಲಾಯಿತು. 1850ರವರೆಗೆ ಪೀಲ್ ಪಾರ್ಲಿಮೆಂಟಿನ ಸದಸ್ಯನಾಗಿದ್ದ. ಇವನ ಅನಂತರ ಬಂದ ಪಾಮರ್ಸ್ಟನ್ ಸಂಪ್ರದಾಯವಾದಿ. 1833ರಲ್ಲಿ ಪೋರ್ಚುಗಲ್ಲಿನ ರಾಣಿ ಇಸಬೆಲಳಿಗೂ ಮತ್ತು ಅವಳ ಚಿಕ್ಕಪ್ಪನಿಗೂ ರಾಜ್ಯಕ್ಕಾಗಿ ಜಗಳ ನಡೆದಾಗ ಪಾಮರ್ಸ್ಟನ್ ಅದನ್ನು ಬಗೆಹರಿಸಿ ಅವರು ತಮ್ಮ ದೇಶಗಳನ್ನೇ ಆಳುವಂತೆ ಮಾಡಿದ. ಬಾಲ್ಕನ್ ದ್ವೀಪ ತುರ್ಕಿಯ ಕೈಯಲ್ಲಿತ್ತು. ಅಲ್ಲಿದ್ದ ಕ್ರೈಸ್ತ ಪ್ರಜೆಗಳು ಸ್ವಾತಂತ್ರ್ಯ ಬಯಸಿದರು. ಇಂಗ್ಲೆಂಡ್ ಈ ವಿಷಯದಲ್ಲಿ ಏನೂ ಮಾಡಲಾರದಾಗಿತ್ತು. ತುರ್ಕಿ ಆಗ ಯುರೋಪಿನ ಕಾಯಿಲೆ ಮನುಷ್ಯನೆನಿಸಿದ್ದು ರಷ್ಯ ಅದನ್ನು ಹಂಚಿಕೊಳ್ಳಲು ಹವಣಿಸಿತ್ತು. ರಷ್ಯದ ಸ್ನೇಹ ಬಯಸಿದರೆ ಬಾಲ್ಕನ್ ರಾಜ್ಯಗಳಲ್ಲಿ ಅದರ ಕೈವಾಡ ಜಾಸ್ತಿಯಾಗುತ್ತದೆಂದು ಹೆದರಿ ಇಂಗ್ಲೆಂಡ್ ತುರ್ಕಿಯ ಕಡೆ ಸೇರಿತು. ರಷ್ಯ ತುರ್ಕಿಯೊಂದಿಗೆ ಫ್ರಾನ್ಸ್ ಸೇರಿತು. ಬಾಲಕ್ಲಾವ, ಇಂಕರ್‌ಮನ್ ಮುಂತಾದ ಕಡೆ ಯುದ್ಧ ನಡೆದು, ಇಂಗ್ಲಿಷರು ರಷ್ಯನ್ನರನ್ನು ಸೋಲಿಸಿದರಾದರು ಇಂಗ್ಲಿಷರ ಸ್ಥಿತಿ ಚಿಂತಾಜನಕವಾಯಿತು. ಇದಕ್ಕೆ ಕ್ರಿಮಿಯನ್ ಯುದ್ಧದಿಂದ ಪಾಮರ್ಸ್ಟನ್ ತನ್ನ ಜೀವನಪರ್ಯಂತ ಪ್ರಧಾನಿಯಾಗುವ ಅವಕಾಶ ಪಡೆದುಕೊಂಡ. ಆದರೆ ಅವನು ಕಾಮನ್ಸ್ ಸಭೆಯ ಮುಂದೆ ಕಾನ್ಸ್‌ಪಿರೆಸಿ ಟು ಮರ್ಡರ್ ಬಿಲ್ ಎಂಬ ವಿಧೇಯಕ ತಂದಾಗ ಸೋತು ರಾಜೀನಾಮೆ ಕೊಟ್ಟ. ಸ್ವಲ್ಪಕಾಲ ಪಾಮರ್ಸ್ಟನ್ ಮತ್ತು ಗ್ಲಾಡ್‌ಸ್ಟನ್ ಇಂಗ್ಲೆಂಡಿಗೆ ಮಾರ್ಗದರ್ಶನ ನೀಡಿದರು. ಫ್ರಾನ್ಸಿಗೆ ಮುಕ್ತ ವ್ಯಾಪಾರದಲ್ಲಿ ಇಚ್ಛೆ ಇದ್ದುದರಿಂದ ಇಂಗ್ಲೆಂಡ್ ಅದರೊಂದಿಗೆ ಒಪ್ಪಂದ ಮಾಡಿಕೊಂಡಿತು. ಫ್ರಾನ್ಸಿಗೆ ಕಬ್ಬಿಣ, ಇಂಗ್ಲೆಂಡಿಗೆ ರೇಷ್ಮೆ ದೊರಕುವಂತಾಯಿತು. ಪಾಮರ್ಸ್ಟನ್ 60 ವರ್ಷ ಪಾರ್ಲಿಮೆಂಟ್ ಸದಸ್ಯನಾಗಿ 1865ರಲ್ಲಿ ಕಾಲವಾದ.

1874ರಲ್ಲಿ ಬ್ರಿಟನ್ನಿನ ಪ್ರಧಾನಿಯಾದ ಡಿಸ್ರೇಲಿಯ ಸರ್ಕಾರದಲ್ಲಿ ಜನಸಾಮಾನ್ಯರಿಗೆ ಉಪಯುಕ್ತವಾದ ಅನೇಕ ಕಾನೂನುಗಳು ಜಾರಿಗೆ ಬಂದುವು. ಡಿಸ್ರೇಲಿಯ ವಿದೇಶಾಂಗ ನೀತಿ ಅತ್ಯಂತ ಸ್ಪಷ್ಟವಾಗಿದ್ದರಿಂದ ಹೊರದೇಶಗಳಲ್ಲಿ ಪ್ರತಿಷ್ಠೆ ದೊರಕಿಸಿಕೊಟ್ಟ. ಈ ವೇಳೆಗೆ ಭಾರತ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಅಂಗವಾಗಿತ್ತು. ಪೂರ್ವದೇಶಗಳೊಂದಿಗೆ ವ್ಯಾಪಾರಕ್ಕಾಗಿಯೂ ಸಾಮ್ರಾಜ್ಯದ ನಿರ್ವಹಣೆಗಾಗಿಯೂ ಸೂಯೆಜ್ ಕಾಲುವೆಯ ಮೇಲೆ ಹತೋಟಿ ಹೊಂದುವುದು ಅವಶ್ಯವಾಗಿತ್ತು. ಅದಕ್ಕಾಗಿ ಈತ 1875ರಲ್ಲಿ ಈಜಿಪ್ಟಿನ ದೊರೆಯಿಂದ ಸೂಯೆಜ್ ಕಾಲುವೆಯ ಷೇರುಗಳನ್ನು ಕೊಂಡ. ರಷ್ಯದ ಬಗ್ಗೆ ಇವನಿಗೆ ರಷ್ಯ ಪ್ರಬಲವಾಗುತ್ತದೆಂಬ ಭೀತಿಯಿತ್ತು. ಇವನ ಕಾಲದಲ್ಲೇ (1877) ವಿಕ್ಟೋರಿಯಾ ರಾಣಿ ಭಾರತದ ಚಕ್ರವರ್ತಿನಿಯೆನಿಸಿಕೊಂಡಳು. 1876ರಲ್ಲಿ ತುರ್ಕಿಯ ವಿರುದ್ಧ ನಡೆದ ಬಾಲ್ಕನ್ ದಂಗೆಯಿಂದಾಗಿ ರಷ್ಯಕ್ಕೂ ತುರ್ಕಿಗೂ ಯುದ್ಧವಾಯಿತು.

ಡಿಸ್ರೇಲಿಯ ಅನಂತರ ಪ್ರಧಾನಮಂತ್ರಿಯಾದ ಗ್ಲಾಡ್‌ಸ್ಟನ್ ಐಶ್ವರ್ಯವಂತ, ಸುಶಿಕ್ಷಿತ. ಟೋರಿ ರಾಬರ್ಟ್ ಪೀಲ್ ಗೋದಿಯ ಕಾನೂನನ್ನು ರದ್ದುಮಾಡಲು ಹೋರಾಡಿದಾಗ ಗ್ಲಾಡ್‌ಸ್ಟನ್ ಆತನಿಗೆ ಸಹಾಯಕವಾಗಿದ್ದ. ಪೀಲ್ ಸರ್ಕಾರದಲ್ಲಿ ಈತ ವಾಣಿಜ್ಯ ಸಮಿತಿಯ ಅಧ್ಯಕ್ಷನಾಗಿದ್ದು ಪಾಮರ್ಸ್ಟನನ ಜೊತೆಯಲ್ಲಿ ಅರ್ಥಸಚಿವನಾದ. ಈತ ಕಾರ್ಮಿಕರ ಪುರೋಭಿವೃದ್ಧಿಗಾಗಿ ಹೊಡೆದಾಡಿದ. ಇಂಗ್ಲೆಂಡಿನ ರಕ್ಷಣೆಯೇ ಈತನ ಆಸಕ್ತಿಯಾಗಿತ್ತು. ಈತ 1906ರಲ್ಲಿ ಬೋಯರ್ ಜನಾಂಗಕ್ಕೆ ಸ್ವಯಮಾಡಳಿತ ದೊರಕಿಸಿಕೊಟ್ಟ. 1901ರಲ್ಲಿ ವಿಕ್ಟೋರಿಯ ರಾಣಿ ನಿಧನಳಾದಾಗ 7ನೆಯ ಎಡ್ವರ್ಡ್ ಚಕ್ರವರ್ತಿಯಾದ. ಸೌಮ್ಯವಾದ ಇಂಗ್ಲೆಂಡಿನಲ್ಲಿ ಇಣುಕಿತು. ಕಾರ್ಲ್‌ಮಾರ್ಕ್ಸ್‌ನ ದಾಸ್ ಕ್ಯಾಪಿಟಲ್ ಪ್ರಚಾರವಾಯಿತು. ಸುಪ್ರಸಿದ್ಧ ನಾಟಕಕಾರ ಬರ್ನಾರ್ಡ್‌ಷಾ ಮೊದಲಾದವರು ಅದಕ್ಕೆ ಇಂಬು ಕೊಟ್ಟರು. ಕೇರ್ ಹಾರ್ಡಿ ಎಂಬುವನಿಂದ 1906ರಲ್ಲಿ ಲೇಬರ್ ಪಕ್ಷ ಜನ್ಮ ತಾಳಿ, 1906ರ ವೇಳೆಗೆ ಸಾಕಷ್ಟು ಪ್ರತಿಷ್ಠೆ ಗಳಿಸಿತು. ಕಾರ್ಮಿಕ ಪರಿಹಾರದ ಕಾಯಿದೆ, ಔದ್ಯೋಗಿಕ ಸಂಘಗಳ ಕಾಯಿದೆ, ಶಾಲಾ ಮಕ್ಕಳಿಗೆ ನಡುಹಗಲ ಆಹಾರ ಒದಗಿಸುವ ಕಾಯಿದೆ, ವೃದ್ಧಾಪ್ಯ ವೇತನದ ಕಾಯಿದೆ ಮುಂತಾದುವು 7ನೆಯ ಎಡ್ವರ್ಡನ ಕಾಲದಲ್ಲಿ ಜಾರಿಗೆ ಬಂದುವು.

ಹೀಗೆ ಸು. 1000 ವರ್ಷಗಳ ದೀರ್ಘಕಾಲದಲ್ಲಿ ಇಂಗ್ಲೆಂಡಿನ ಇತಿಹಾಸ ಕ್ರಮಕ್ರಮವಾಗಿ ಬೆಳೆಯಿತು. ವೇಲ್ಸ್, ಸ್ಕಾಟ್ಲೆಂಡ್, ಉತ್ತರ ಐರ್ಲೆಂಡ್ ಇವುಗಳಿಂದ ಕೂಡಿದ ಸಂಯುಕ್ತ ಪ್ರಭುತ್ವದ ಆವಿಷ್ಕಾರವಾಯಿತು. (ಎನ್.ವಿ.ಆರ್.)

**ಇಂಡಿಯನ್ ನ್ಯಾಷನಲ್ ಆರ್ಮಿ:** ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ವಿದೇಶಿ ನೆಲೆಯ ಭಾರತೀಯ ದಳ (ಆಜಾದ್ ಹಿಂದ್ ಫೌಜ್). ಕ್ಯಾಪ್ಟನ್ ಮೋಹನ್ ಸಿಂಗ್ ಮತ್ತು ಭಾರತೀಯ ಯುದ್ಧಕೈದಿಗಳು ಇದನ್ನು ಸ್ಥಾಪಿಸಿದರೆನ್ನಲಾಗುತ್ತಿದೆ. ಒಂದನೆಯ ಮಹಾಯುದ್ಧವಾದ ಮೇಲೆ ಭಾರತದ ರಾಷ್ಟ್ರೀಯ ಚಳವಳಿಯನ್ನು ದೂರ ಪ್ರಾಚ್ಯದಲ್ಲೂ ಹರಡಲು ಮೊತ್ತಮೊದಲನೆಯದಾಗಿ ಪ್ರಯತ್ನ ಮಾಡಿದವರು ರಾಶ್‌ಬಿಹಾರಿ ಬೋಸ್. ಈ ಪ್ರಯತ್ನದ ಫಲವಾಗಿ ಜಪಾನಿನಲ್ಲಿ ಭಾರತೀಯ ಸ್ವಾತಂತ್ರ್ಯ ಮಂಡಲಿ ಸ್ಥಾಪಿತವಾಯಿತು. ಜಪಾನೀಯರ ಸಹಾಯ, ಸಹಕಾರದಿಂದ ಕೆಲಸವನ್ನು ಆರಂಭಿಸಿದ ರಾಶ್‌ಬಿಹಾರಿ ಬೋಸ್ ಎರಡನೆಯ ಮಹಾಯುದ್ಧ ಪ್ರಾರಂಭವಾಗುವವರೆಗೆ ಅಹೋರಾತ್ರಿ ದುಡಿದರು. ಜಪಾನ್ 1941ರಲ್ಲಿ ಬ್ರಿಟನ್ ಮತ್ತು ಅಮೆರಿಕದ ವಿರುದ್ಧ ಯುದ್ಧವನ್ನು ಘೋಷಿಸಿದಾಗ ಜಪಾನಿನ ಭಾರತೀಯ ಸ್ವಾತಂತ್ರ್ಯದ ಮಂಡಲಿಯ ಆಶ್ರಯದಲ್ಲಿ ಭಾರತವನ್ನು ಬ್ರಿಟನ್ನಿನ ಹಿಡಿತದಿಂದ ವಿಮುಕ್ತಿಗೊಳಿಸಲು ಶಸ್ತ್ರಾಸ್ತ್ರಗಳ ಚಳವಳಿಯನ್ನು ಆರಂಭಿಸಲು ತಮಗೆ ಎಲ್ಲ ನೆರವನ್ನು ನೀಡಬೇಕೆಂದು ಬೋಸರು ಮತ್ತು ಮಿತ್ರರು ಜಪಾನ್ ಸರ್ಕಾರವನ್ನು ಪ್ರಾರ್ಥಿಸಿದರು. ಬೋಸರ ಯೋಜನೆಯನ್ನು ಜಪಾನಿನ ಪ್ರಧಾನಿ ಟೋಜೊ ಮೆಚ್ಚಿಕೊಂಡು, ಎಲ್ಲ ಸಹಾಯವನ್ನು ಒದಗಿಸಿಕೊಟ್ಟರು. ದೂರಪ್ರಾಚ್ಯದಲ್ಲಿ ನೆಲೆಸಿದ್ದ ಎಲ್ಲ ಭಾರತೀಯರ ಅಭಿಪ್ರಾಯವನ್ನು ಪಡೆದು ಬ್ಯಾಂಕಾಕ್‌ನಲ್ಲಿ ಭಾರತೀಯ ಸ್ವಾತಂತ್ರ್ಯ ಮಂಡಲಿಯ ಆಶ್ರಯದಲ್ಲಿ ಪೂರ್ವ ಏಷ್ಯದಲ್ಲಿ ನೆಲಸಿದ್ದ ಭಾರತೀಯರ ಪ್ರತಿನಿಧಿಗಳ ಸಭೆ ಕರೆದು, ರಾಶ್‌ಬಿಹಾರಿ ಬೋಸರನ್ನು ಅದರ ನಾಯಕನನ್ನಾಗಿ ಆರಿಸಲಾಯಿತು. ಸಭೆ ಮುಕ್ತಾಯಗೊಂಡ ಮೇಲೆ ಮಂಡಲಿಯ ಶಾಖೆಗಳನ್ನು ಪ್ರಮುಖ ನಗರಗಳಲ್ಲಿ ಸ್ಥಾಪಿಸಲಾಯಿತು. ಸಿಂಗಪುರದಲ್ಲಿ ಶಸ್ತ್ರಸಜ್ಜಿತ ಸೇವಕರುಗಳಿಗೆ ತರಬೇತು ಕೊಡಲಾಯಿತು. ಯುದ್ಧ ಕೈದಿಗಳೇ ಅಧಿಕ ಸಂಖ್ಯೆಯಲ್ಲಿದ್ದ ಆ ಪಡೆಯಲ್ಲಿ ಒಗ್ಗಟ್ಟು, ಶಿಸ್ತು, ಸಂಯಮ ಮಾಯವಾದವು. ಸುಭಾಸ್ ಚಂದ್ರಬೋಸರೇ ಸ್ವಾತಂತ್ರ್ಯ ಚಳವಳಿಯನ್ನು ಹರಡಲು ತಕ್ಕವರೆಂದು ಭಾವಿಸಿ, ರಾಶ್ ಬಿಹಾರಿ ಬೋಸ್ ಜಪಾನಿನ ಸರ್ಕಾರದ ಅನುಮತಿ ಪಡೆದು ಅವರನ್ನು ಪೂರ್ವ ಏಷ್ಯಕ್ಕೆ ಬರುವಂತೆ ಆಹ್ವಾನಿಸಿದರು. ಸುಭಾಸ್‌ಚಂದ್ರಬೋಸ್ 1943ರ ಜೂನ್ 13ರಂದು ಟೋಕಿಯೋಗೆ ಆಗಮಿಸಿದರು. ಭಾರತೀಯ ಸ್ವಾತಂತ್ರ್ಯ ಮಂಡಲಿಯ ಅಧ್ಯಕ್ಷರಾಗಿ ಅವರು 1943 ಅಕ್ಟೋಬರ್ 21ರಂದು ಆಜ್ಹಾದ್ ಹಿಂದ್ ತಾತ್ಕಾಲಿಕ ಸರ್ಕಾರವನ್ನು ಘೋಷಿಸಿದರು. ಚಳವಳಿಯನ್ನು ತೀವ್ರಗೊಳಿಸುವುದಕ್ಕಾಗಿ ಭಾರತ ರಾಷ್ಟ್ರೀಯ ಸೇನೆಯನ್ನು ಕಟ್ಟಿದರು.

ಜಪಾನೀಯರು ಶಸ್ತ್ರಾಸ್ತ್ರಗಳನ್ನು ಒದಗಿಸಿಕೊಟ್ಟು ಬೋಸರ ಸೇನೆಗೆ ಹೊಸ ಚೇತನವನ್ನು ತುಂಬಿದರು. ಜೈಹಿಂದ್, ಚಲೋ-ದಿಲ್ಲಿ ಎಂಬ ವೀರ ಘೋಷಣೆಗಳನ್ನು ಬೋಸ್ ಬಳಕೆಗೆ ತಂದರು. ಯುದ್ಧದಿಂದಲ್ಲದೆ ಬೇರಾವ ಸಾಧನದಿಂದಲೂ ಭಾರತದ ಸ್ವಾತಂತ್ರ್ಯ ಸಾಧ್ಯವಿಲ್ಲವೆಂದು ಘೋಷಿಸಿ, ಚಳವಳಿಯನ್ನು ಸಮರದ ತಳಹದಿಯ ಮೇಲೆ ರೂಪಿಸಿ ತೀವ್ರಗೊಳಿಸಿದರು. ಮುಖ್ಯ ಸೇನಾಧಿಪತ್ಯವನ್ನು ತಾವೇ ವಹಿಸಿಕೊಂಡು, ದಂಡೆತ್ತಿ ಹೋಗಿ ಬ್ರಿಟಿಷ್ ಸೈನ್ಯದ ಮೇಲೆ ಬಿದ್ದು, ಅವರನ್ನೂ ಅವರ ನೆಲೆಗಳನ್ನೂ ಧ್ವಂಸ ಮಾಡತೊಡಗಿದರು. ಚಳವಳಿಯನ್ನು ಕ್ರಮಬದ್ಧವಾಗಿಯೂ ದಕ್ಷತೆಯಿಂದಲೂ ನಡೆಸುವ ಉದ್ದೇಶದಿಂದ ಅವರು ಆಜ್ಹಾದ್ ಹಿಂದ್ ತಾತ್ಕಾಲಿಕ ಸರ್ಕಾರದ ಮೂಲ ಕೇಂದ್ರವನ್ನು ಸಿಂಗಪುರದಿಂದ ರಂಗೂನಿಗೆ ವರ್ಗಾಯಿಸಿದರು.

1944ರ ಸೆಪ್ಟೆಂಬರ್‌ನಲ್ಲಿ ಇಟಲಿ ಸೋತು ಶರಣಾದುದು ಆಜ಼ಾದ್ ಹಿಂದ್ ಚಳವಳಿಗೆ ಭಾರಿ ಪೆಟ್ಟು ಬಿದ್ದಂತಾಯಿತು. ಅಮೆರಿಕ ಪೆಸಿಫಿಕ್ ಸಾಗರದಲ್ಲಿ ತನ್ನ ನೆಲೆಗಳನ್ನು ಮತ್ತೆ ಪಡೆದುಕೊಂಡದ್ದರಿಂದ ಜಪಾನ್ ಹೆಚ್ಚಿನ ಗಮನವನ್ನು ತನ್ನ ನಗರ ರಕ್ಷಣೆಯ ಕಡೆ ಹರಿಸಬೇಕಾಯಿತು. ತತ್ಪರಿಣಾಮವಾಗಿ ಆಜ಼ಾದ್ ಹಿಂದ್ ಸೈನ್ಯಕ್ಕೆ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ನೆರವನ್ನು ಜಪಾನ್ ಕೊಡಲಾರದೆ ಹೋಯಿತು. ಇಂಡೋ-ಬರ್ಮ ಗಡಿಯಲ್ಲಿ ಆಜ಼ಾದ್ ಹಿಂದ್ ಸೈನ್ಯ ನಡೆಸಿದ ಹೋರಾಟ ಸಾರ್ಥಕವಾಗಲಿಲ್ಲ. ವೀರಾವೇಶದಿಂದ ಯುದ್ಧ ಮಾಡಿದರೂ ಇಂಫಾಲ್ ಮತ್ತು ಕೊಹಿಮ ಆಕ್ರಮಣಗಳಲ್ಲಿ ಸೋತುಹೋಯಿತು. ಮಣಿಪುರವನ್ನು ರಕ್ಷಿಸುವುದಕ್ಕಾಗಿ ಬ್ರಿಟನ್ ಶಕ್ತಿಮೀರಿ ಹೋರಾಡಿತು. ಅದರ ಶಸ್ತ್ರಾಸ್ತ್ರಗಳು ಉತ್ತಮ ದರ್ಜೆಯವಾಗಿದ್ದವು. ಸ್ವಲ್ಪಕಾಲದ ಮೇಲೆ ಗಡಿಯ ಸಮರಗಳಲ್ಲಿ ಬ್ರಿಟಿಷ್ ಯುದ್ಧ ಯಂತ್ರಗಳ ಬಳಕೆಯನ್ನು ಕಡಿಮೆ ಮಾಡಲು ಸಾಧ್ಯವಾಗಲೇ ಇಲ್ಲ. 1944ರ ಹೊತ್ತಿಗೆ ಆಜ಼ಾದ್ ಹಿಂದ್ ಸೈನ್ಯ ಯುದ್ಧವನ್ನು ಪೂರ್ಣವಾಗಿ ಕಳೆದುಕೊಂಡಿತು. 1945ರ ಆದಿಭಾಗದಲ್ಲಿ ಬರ್ಮದ ಉತ್ತರ ಮತ್ತು ದಕ್ಷಿಣ ಭಾಗಗಳಿಗೆ ಬ್ರಿಟಿಷ್ ಸೈನ್ಯ ತಂಡೋಪತಂಡವಾಗಿ ಧಾವಿಸಿ ಮಾಂಡಲೆಯನ್ನು ವಶಪಡಿಸಿಕೊಂಡಿತು. ಐ.ಎನ್.ಎ. ವಶದಲ್ಲಿದ್ದ ಕೊಹಿಮವನ್ನು 1945 ಮೇ ಆದಿಯಲ್ಲಿ ಬ್ರಿಟಿಷರು ಸ್ವಾಧೀನಪಡಿಸಿಕೊಂಡು. ಐ.ಎನ್.ಎ. ಸೈನ್ಯವನ್ನು ನಿಶ್ಶಸ್ತ್ರಗೊಳಿಸಿ, ಯುದ್ಧ ಕೈದಿಗಳನ್ನು ಸೆರೆಹಿಡಿದರು.

ಗಾಂಧಿ, ಆಜ಼ಾದ್ ಮತ್ತು ನೆಹರು ಎಂಬ ಮೂರು ಸೇನಾ ತುಕಡಿಗಳಿಂದ ಅತ್ಯುತ್ತಮ ಯೋಧರನ್ನು ಆಯ್ಕೆ ಮಾಡಲಾಯಿತು. 1943 ಸೆಪ್ಟೆಂಬರ್‌ನಲ್ಲಿ ಮಲಯದ ತಾಯಪಿಂಗನಲ್ಲಿ ಈ ಹೊಸ ರೆಜಿಮೆಂಟನ ಆಯ್ಕೆ ನಡೆಸಲಾಯಿತು. ಜಪಾನಿನ ಅಧಿಕಾರಿಗಳು ಐ.ಎನ್.ಎ. ಯುದ್ಧ ಕೌಶಲ ಮತ್ತು ದಕ್ಷತೆಯಿಂದ ಸಂತುಷ್ಟರಾಗಿದ್ದರು. ಸೇನೆಯ ಮುಖ್ಯ ಭಾಗ ಕೊಹಿಮಕ್ಕೆ ಮುನ್ನಡೆಯಬೇಕು, ಇಂಪಾಲನ್ನು ವಶಪಡಿಸಿಕೊಂಡಾಕ್ಷಣ ಅತಿ ವೇಗವಾಗಿ ಸಾಗಿ ಬ್ರಹ್ಮಪುತ್ರಾ ನದಿಯನ್ನು ದಾಟಿ ಬಂಗಾಲದ ಹೃದಯ ಭಾಗವನ್ನು ಪ್ರವೇಶಿಸಬೇಕೆಂಬ ಆಜ್ಞೆಗನುಸಾರವಾಗಿ ಢಾಕ ಮತ್ತು ಫಾಲಂಗಳ ರಕ್ಷಣೆಗೆ ಅನುಕ್ರಮವಾಗಿ 150–300 ಜನ ಐ.ಎನ್.ಎ. ಸೇನಾಯೋಧರನ್ನು ನಿಯುಕ್ತಿಗೊಳಿಸಿ ಮಿಕ್ಕ ಸುಭಾಷ್ ಬ್ರಿಗೇಡಿನವರೆಲ್ಲ ಕೊಹಿಮದಲ್ಲಿ ಮುನ್ನಡೆದರು. ಅದಕ್ಕೂ ಮೊದಲೇ ಗಾಚ ಪ್ರದೇಶದ ಮುಖ್ಯ ಪಟ್ಟಣ ಕೊಹಿಮವನ್ನು ಜಪಾನೀ ಸೈನಿಕರು ಮತ್ತು ಕೆಲವು ಐ.ಎನ್.ಎ. ಸೈನಿಕರು ಒಟ್ಟಾಗಿ ಸೇರಿ ವಶಪಡಿಸಿಕೊಂಡು ಧ್ವಜವನ್ನು ಹಾರಿಸಿದರು. ಅನಂತರ ರಂಗೂನನ್ನು ತಮ್ಮ ಅಧೀನಪಡಿಸಿಕೊಂಡರು. 1945ರ ಆಗಸ್ಟ್‌ನಲ್ಲಿ ಜಪಾನ್ ಶರಣಾಗತವಾಯಿತು. ಈ ಚಳವಳಿ ಜಪಾನೀಯರ ಯುದ್ಧದೊಂದಿಗೆ ಬೆರೆತುಹೋದ್ದರಿಂದ ಜಪಾನ್ ಸೋತಾಗ ಆಜ಼ಾದ್ ಹಿಂದ್ ಚಳವಳಿಯೂ ಕೊನೆಗೊಂಡಿತು.

ಭಾರತ ರಾಷ್ಟ್ರೀಯ ಸೇನಾ ಅಧಿಕಾರಿಗಳನ್ನು ಭಾರತದಲ್ಲಿ ವಿಚಾರಣೆಗೆ ಗುರಿಪಡಿಸಿದಾಗ ಆ ಸೇನೆಯ ಮಹತ್ತ್ವವೇನೆಂಬುದು ಎಲ್ಲರಿಗೂ ಗೊತ್ತಾಯಿತು. ಭಾರತದ ರಾಜಕೀಯ ಪಕ್ಷಗಳೂ ಜನತೆಯೂ ಅವರನ್ನು ಸ್ವಾತಂತ್ರ್ಯ ಯೋಧರೆಂದು ಹೊಗಳಿದವು. ಯೋಧರನ್ನು ಸೆರೆಮನೆಗಳಿಂದ ಬಿಡುಗಡೆ ಮಾಡಬೇಕೆಂದು ಭಾರತದಲ್ಲಿ ಗಲಭೆಗಳು, ಚಳವಳಿಗಳು ನಡೆದವು. ಭಾರತದ ಜನರ ಮನಸ್ಸಿನಲ್ಲಿ ಭಾರತ ರಾಷ್ಟ್ರೀಯ ಸೈನ್ಯ ಶಾಶ್ವತ ಗೌರವಸ್ಥಾನ ಪಡೆಯಿತು. ಅದು ಪ್ರಪಂಚದ ವಿವಿಧ ಭಾಗಗಳಲ್ಲಿ ಜರುಗಿದ ಸಮರಗಳಲ್ಲಿ ಭಾಗವಹಿಸಿ, ತನ್ನ ಧೈರ್ಯೋತ್ಸಾಹಗಳನ್ನು ಪ್ರದರ್ಶಿಸಿ ಭಾರತೀಯರಿಗೆ ಕೀರ್ತಿಯನ್ನು ತಂದುಕೊಟ್ಟಿತು. ಪ್ರಪಂಚದ ದೃಷ್ಟಿಯಲ್ಲಿ ಅದರ ಗೌರವ ಘನತೆಗಳು ಮೇಲೇರಿದವು. ಭಾರತದ ಸ್ವಾತಂತ್ರ್ಯ ಸಾಧನೆಗೆ ಸುಭಾಷ್‌ಚಂದ್ರಬೋಸ್‌ರ ಭಾರತ ರಾಷ್ಟ್ರೀಯ ಸೇನೆಯ ಕೊಡುಗೆ ಗಮನಾರ್ಹವಾದದ್ದು. (ಬಿ.ಎಂ.)

**ಇಂಡಿಯನ್ ಸಿವಿಲ್ ಸರ್ವಿಸ್:** ಭಾರತವನ್ನು ಬ್ರಿಟಿಷರು ಆಳುತ್ತಿದ್ದಾಗ ದೇಶದ ಸುಸ್ಥಿತಿಯ ಆಡಳಿತಗಳನ್ನು ನೋಡಿಕೊಳ್ಳಲು ಸರ್ಕಾರದವರು ಏರ್ಪಡಿಸಿದ್ದ ಇಲಾಖೆ, ಅದರ ಲೋಕಸೇವಾ ಅಧಿಕಾರಿವರ್ಗ (ಐಸಿಎಸ್). ಸ್ವತಂತ್ರ ಭಾರತದಲ್ಲಿ ಈ ಹಳೆಯ ವ್ಯವಸ್ಥೆ ಕೊನೆಗೊಂಡಿದ್ದು ಈಗ ಅದರ ಸ್ಥಾನದಲ್ಲಿ ಹೊಸದೊಂದು ವ್ಯವಸ್ಥೆ ರೂಪುಗೊಂಡಿದೆ. ಭಾರತದಲ್ಲಿ ಲೋಕಸೇವೆಯ ಇತಿಹಾಸವನ್ನು ತಿಳಿಯಬೇಕಾದರೆ ಈಸ್ಟ್ ಇಂಡಿಯ ಕಂಪನಿಯ ಆಡಳಿತ ಚರಿತ್ರೆಯನ್ನು ತಿಳಿದುಕೊಳ್ಳಬೇಕು. ರಾಜಕೀಯ ಅಧಿಕಾರ ಕಂಪನಿಯ ಕೈಗೆ ಸಿಕ್ಕಿದರೂ ಸರ್ಕಾರದ ಆಡಳಿತದ ಕೆಳದರ್ಜೆಯ ಅಧಿಕಾರಿಗಳು ಭಾರತೀಯರೇ ಆಗಿದ್ದರು. ಕಂಪನಿ ನೇಮಿಸಿಕೊಂಡಿದ್ದ ಕೆಲವು ನೌಕರರಿಗೆ ತಮ್ಮ ಕೆಲಸಗಳಲ್ಲಿ ಯಾವ ತರಬೇತೂ ಇರಲಿಲ್ಲ. ಇವರಿಗೆ ತುಂಬ ಕಡಿಮೆ ಸಂಬಳ ಕೊಡಲಾಗುತ್ತಿತ್ತು. ತಮಗೆ ಆಗುತ್ತಿದ್ದ ಖೋತಾವನ್ನು ಅವರು ಖಾಸಗಿ ವ್ಯಾಪಾರದಿಂದಲೂ ಇನಾಮುಗಳನ್ನು ಸ್ವೀಕರಿಸಿಯೂ ಭರ್ತಿಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಇವರು ಕಡಿಮೆ ಸಂಬಳ ಪಡೆಯುತ್ತಿದ್ದರೂ ಬಹುಬೇಗ ಶ್ರೀಮಂತರಾಗುತ್ತಿದ್ದರು. ಇದನ್ನು ತಡೆಯಲು ನೌಕರರು ಕಂಪನಿಯೊಂದಿಗೆ ಒಂದು ಹೊಸ ಒಪ್ಪಂದ ಮಾಡಿಕೊಳ್ಳಬೇಕೆಂದು ಲಾರ್ಡ್ ರಾಬರ್ಟ್ ಕ್ಲೈವ್ ಬಲಾತ್ಕರಿಸಿದ. ಇದರ ಪ್ರಕಾರ ಅವರು ಖಾಸಗಿ ವ್ಯಾಪಾರ ಮಾಡುವಂತಿರಲಿಲ್ಲ; ಬೇರೆಯವರಿಂದ ಸಂಭಾವನೆಗಳನ್ನೂ ಸ್ವೀಕರಿಸಬಾರದೆಂದಿತ್ತು. ಈ ಕಾರಣದಿಂದಲೇ ಲೋಕಸೇವೆಯನ್ನು ಕರಾರುಬದ್ಧ ಲೋಕಸೇವೆಯೆಂದು (ಕೆವಿನೆಂಟೆಡ್ ಸಿವಿಲ್ ಸರ್ವಿಸ್) ಕರೆಯಲಾಯಿತು. ನಷ್ಟವನ್ನು ಭರ್ತಿಮಾಡಿಕೊಡುವ ಉದ್ದೇಶದಿಂದ ಲಾರ್ಡ್ ಕ್ಲೈವ್ ಒಂದು ಹೊಸ ಯೋಜನೆಯನ್ನು ರೂಪಿಸಿ ಇಂಗ್ಲೆಂಡಿಗೆ ಕಳುಹಿಸಿಕೊಟ್ಟನಾದರೂ ಅದನ್ನು ಕಂಪನಿಯ ನಿರ್ದೇಶಕರು ನಿರಾಕರಿಸಿದರು.

ಕಾರ್ನ್‌ವಾಲಿಸನ ಸುಧಾರಣೆಗಳು: ಈಸ್ಟ್ ಇಂಡಿಯ ಕಂಪನಿಯ ಲೋಕಸೇವೆಯಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತಂದ ಕೀರ್ತಿ ಕಾರ್ನ್‌ವಾಲಿಸನಿಗೆ ಸಲ್ಲುತ್ತದೆ. ಈತ ಎಲ್ಲ ಉನ್ನತ ಹುದ್ದೆಗಳನ್ನೂ ಇಂಗ್ಲಿಷರಿಗೂ ಐರೋಪ್ಯರಿಗೂ ಕಾದಿರಿಸಿದ. ತಮ್ಮ ಹುಟ್ಟಿನ ಬಲದಿಂದಲೂ ತಾವು ಪಡೆದ ತರಬೇತಿಯಿಂದಲೂ ರಾಜ್ಯಾಡಳಿತಕ್ಕೆ ಇಂಗ್ಲಿಷರು ಮತ್ತು ಐರೋಪ್ಯರು ಮಾತ್ರ ಅರ್ಹರೆಂದು ಆತ ಭಾವಿಸಿದ್ದ. ಆದಾಗ್ಯೂ ಆಡಳಿತದ ಕೆಳದರ್ಜೆಯ ಅಧಿಕಾರದಲ್ಲಿದ್ದವರು ಭಾರತೀಯರೇ. ಕಂಪನಿಯ ನೌಕರರು ಖಾಸಗಿ ವ್ಯಾಪಾರದಲ್ಲಿ ನಿರತರಾಗಿರಕೂಡದೆಂದೂ ಕಾಯಿದೆಯನ್ನು ಉಲ್ಲಂಘಿಸಿದವರಿಗೆ ಕಠಿಣಶಿಕ್ಷೆ ವಿಧಿಸಲಾಗುವುದೆಂದೂ ಪ್ರಚುರಪಡಿಸಿದ. ಕಂಪನಿಯ ನೌಕರರು ಅಚ್ಚುಕಟ್ಟಾದ ಜೀವನ ನಡೆಸಿ, ಬಂದ ಸಂಬಳದಲ್ಲಿ ಅಲ್ಪಸ್ವಲ್ಪ ಉಳಿಸಿ ತಮ್ಮ ಸ್ವದೇಶಕ್ಕೂ ತೆಗೆದುಕೊಂಡು ಹೋಗುವಂತೆ ಮಾಡಲು ಅವರ ಸಂಬಳ ಹೆಚ್ಚಿಸಿದ. ನೌಕರರಲ್ಲಿ ಪ್ರಾಮಾಣಿಕತೆಯನ್ನೂ ದಕ್ಷತೆಯನ್ನೂ ಹೆಚ್ಚಿಸುವುದೇ ಸುಧಾರಣೆಗಳ ಮುಖ್ಯೋದ್ದೇಶವಾಗಿತ್ತು. 1793ರ ಕಾಯಿದೆಯಲ್ಲಿ ಕಾರ್ನ್‌ವಾಲಿಸನ ಸುಧಾರಣೆಗಳು ಕಟ್ಟುನಿಟ್ಟಾಗಿ ಜಾರಿಗೆ ಬಂದುವು. ಕರಾರುಬದ್ಧ ಸೇವೆಯಲ್ಲಿ ಕೊನೆಯ ಪಕ್ಷ ಮೂರು ವರ್ಷಗಳವರೆಗೂ ಇರದ ಯಾವ ನೌಕರನನ್ನೂ ಐನೂರು ಪೌಂಡು ವಾರ್ಷಿಕ ವೇತನವಿರುವ ಹುದ್ದೆಗಳಿಗೆ ನೇಮಿಸಕೂಡದೆಂದು ಅವನು ನಿರ್ಣಯಿಸಿದ. ಹಿರಿಯರಿಗೆ ಮಾತ್ರ ಬಡ್ತಿ ದೊರೆಯುತ್ತಿತ್ತು.

ಲಾರ್ಡ್ ವೆಲ್ಲೆಸ್ಲಿ: ತರುಣ ನೌಕರರ ತರಬೇತಿಗಾಗಿ ಈತ ಕಲ್ಕತ್ತದಲ್ಲಿ ಒಂದು ಕಾಲೇಜು ಸ್ಥಾಪಿಸಿದ. ಕಂಪನಿಯ ನೌಕರರಾಗಿ ನೇಮಕಗೊಂಡು ಬಂದ ಎಲ್ಲ ಇಂಗ್ಲಿಷರು ಈ ತರಬೇತಿ ಕಾಲೇಜಿನಲ್ಲಿ ಮೂರು ವರ್ಷಗಳ ಕಾಲ ಇದ್ದು ಭಾರತೀಯ ಚರಿತ್ರೆ, ನ್ಯಾಯ ಮತ್ತು ಭಾಷೆಗಳ ಬಗ್ಗೆ ಶಿಕ್ಷಣ ಪಡೆಯಬೇಕಾಗಿತ್ತು. ನಿರ್ದೇಶಕರು ಅದನ್ನು ಒಪ್ಪದಿದ್ದರಿಂದ ಆ ಕಾಲೇಜನ್ನು ಮುಚ್ಚಬೇಕಾಯಿತು. ಆದರೂ ಆ ನಿರ್ದೇಶಕರೇ ಸ್ವಯಂ ಪ್ರೇರಣೆಯಿಂದ 1806ರಲ್ಲಿ ಹೈಲ್ ಬರಿ ಎಂಬಲ್ಲಿ ಒಂದು ಕಾಲೇಜು ಸ್ಥಾಪಿಸಿದರು. ಹೈಲ್‌ಬರಿಯಲ್ಲಿ ನಾಲ್ಕು ಕಾಲಾವಧಿಯವರೆಗೆ ಇರದ ಯಾರನ್ನೂ ಭಾರತದಲ್ಲಿ ಗುಮಾಸ್ತೆಯಾಗಿ ನೇಮಕ ಮಾಡಿಕೊಳ್ಳಕೂಡದೆಂಬುದು 1813ರಲ್ಲಿ ಜಾರಿಗೆ ಬಂದ ಸನ್ನದು ಕಾಯಿದೆ ವಿಶದಪಡಿಸಿತು. ಅಲ್ಲದೆ ನೌಕರಿಗಾಗಿ ಬರುವ ಅಭ್ಯರ್ಥಿ ನೀತಿನಿಯಮಗಳನ್ನು ತಿಳಿದುಕೊಂಡಿದ್ದಾನೆಂದೂ ನೌಕರನಾಗಲು ಅರ್ಹತೆ ಪಡೆದಿರುವನೆಂದೂ ಆ ಕಾಲೇಜಿನ ಪ್ರಾಂಶುಪಾಲರಿಂದ ಬರೆಸಿಕೊಂಡು ಬರಬೇಕಾಗಿತ್ತು. ಆ ಕಾಲೇಜಿಗೆ ಸೇರಿಕೊಳ್ಳುತ್ತಿದ್ದ ತರುಣ ಇಂಗ್ಲಿಷರನ್ನು ನಿರ್ದೇಶಕರು ನಾಮಕರಣ ಮಾಡುತ್ತಿದ್ದರು. ಹೈಲ್‌ಬರಿ ಕಾಲೇಜು 1858ರ ವರೆಗೆ ಸಮರ್ಪಕವಾಗಿ ತನ್ನ ಜವಾಬ್ದಾರಿ ನಿರ್ವಹಿಸಿತು. ಕಂಪನಿಯ ನಿರ್ದೇಶಕರು ಅನುಭವಿಸಿಕೊಂಡು ಬರುತ್ತಿದ್ದ ವಿಶೇಷವಾದ ಹಕ್ಕನ್ನು 1853ರಲ್ಲಿ ಜಾರಿಗೆ ಬಂದ ಕಾಯಿದೆ ಕಿತ್ತುಕೊಂಡಿತು. ಕರಾರುಬದ್ಧ ಲೋಕಸೇವೆಯ ಕಡ್ಡಾಯ ವಿಧಿಗಳನ್ನು ಸಡಿಲಿಸಿತು. ಇಂಗ್ಲೆಂಡಿನಲ್ಲಿ ಹುಟ್ಟಿದ ಪ್ರತಿಯೊಬ್ಬ ಪ್ರಜೆಯೂ ಆ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿತ್ತು. ಭಾರತದ ಆಡಳಿತವರ್ಗಕ್ಕೆ ಅತ್ಯುತ್ತಮ ಹಾಗೂ ಉದಾರ ಶಿಕ್ಷಣ ಪಡೆದ ಯುವಕರನ್ನು ಒದಗಿಸಿಕೊಡುವುದೇ ಸ್ಪರ್ಧೆಯ ಮುಖ್ಯ ಗುರಿಯಾಗಿತ್ತು ಎಂಬುದು ಸರ್ ಜಾನ್ ಸ್ಟ್ರಾಚಿಯ ಅಭಿಪ್ರಾಯ. ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ವಿಶ್ವವಿದ್ಯಾಲಯಗಳಲ್ಲಿದ್ದ ಆನರ್ಸ್ ವಿಷಯಗಳನ್ನು ಈ ಪರೀಕ್ಷೆಯ ಯೋಜನೆ ಒಳಗೊಂಡಿತ್ತು.

ಸುಧಾರಣೆಗಳ ವಿಷಯದಲ್ಲಿ ಕಾರ್ನ್‌ವಾಲಿಸ್ ಪ್ರಾಮಾಣಿಕತೆಯಿಂದಲೇ ನಡೆದುಕೊಂಡಿದ್ದನೋ ನಿಜ, ಆದರೆ ಇವುಗಳ ಪರಿಣಾಮ ಭಾರತೀಯರ ಮೇಲೆ ವಿಪತ್ಕಾರಕವಾಗಿತ್ತು. ಕಂಪನಿ ಉನ್ನತ ಹುದ್ದೆಗಳಿಗೆ ಭಾರತೀಯರನ್ನು ಪೂರ್ಣವಾಗಿ ಕೈಬಿಡಲಾಗಿದ್ದದ್ದು ಇವುಗಳ ಒಂದು ದೊಡ್ಡ ದೋಷ. ಬ್ರಿಟಿಷ್ ಭಾರತದಲ್ಲಿರುವಂತೆ ಇನ್ನಾವ ದೇಶದಲ್ಲೂ ದೇಶೀಯರನ್ನು ತಮ್ಮ ದೇಶದ ಸರ್ಕಾರದ ಕೆಲಸಗಳಿಂದ ಪೂರ್ಣವಾಗಿ ಪ್ರತ್ಯೇಕಿಸಿರುವ ಉದಾಹರಣೆ ದೊರೆಯಲಾರದು ಎಂಬುದಾಗಿ ಸರ್ ಥಾಮಸ್ ಮನ್ರೊ ಬರೆದಿದ್ದಾನೆ. ದೇಶೀಯರಿಗೆ ಅವಕಾಶವಿಲ್ಲದ್ದನ್ನು ನೋಡಿ ಆತ ಮರುಗಿದ. ನಮ್ಮ ಅಧಿಕಾರ ವಿಸ್ತರಿಸುತ್ತಿರುವಂತೆ ಈ ದಿಶೆಯಲ್ಲಿ ತಗ್ಗು ಜಾಸ್ತಿಯಾಗುತ್ತಿದೆ. ಆಡಳಿತಾಧಿಕಾರದಲ್ಲಿ ಭಾರತೀಯರನ್ನು ನಾವು ಸೇರಿಸಿಕೊಳ್ಳಲೇಬೇಕು ಎಂಬುದು ಇನ್ನೊಬ್ಬ ಆಂಗ್ಲ ಅಧಿಕಾರಿಯ ಅಭಿಪ್ರಾಯ. 1833ರ ಸನ್ನದು ಕಾಯಿದೆ ಕೊರತೆಯನ್ನು ತೆಗೆದುಹಾಕಿತು. ಯಾವ ಪ್ರದೇಶಗಳ ನಿವಾಸಿಗಳನ್ನಾಗಲೀ ಚಕ್ರವರ್ತಿಯ ಪ್ರಜೆಗಳನ್ನಾಗಲೀ ಅವರ ಮತ, ಹುಟ್ಟಿದ ಸ್ಥಳ, ವಂಶ, ವರ್ಣ ಅಥವಾ ಇಂಥ ಇನ್ನಾವ ಕಾರಣದಿಂದಲಾದರೂ ಕಂಪನಿಯಲ್ಲಿರುವ ಸ್ಥಾನಗಳಿಗೂ ಉದ್ಯೋಗಗಳಿಗೂ ಅನರ್ಹರೆಂದು ಹೇಳಕೂಡದು ಎಂಬುದಾಗಿ 1833ರ ಕಾಯಿದೆ ಶ್ರುತಪಡಿಸಿತು. ಆದರೂ ಆ ಕಾಯಿದೆಯೂ ಸತ್ತ ಕಾಗದವಾಗಿ ಉಳಿಯಿತು. ಭಾರತೀಯರ ಕುಂದುಕೊರತೆಗಳನ್ನು ನೀಗಿಸುವ ದೃಷ್ಟಿಯಿಂದ 1858ರಲ್ಲಿ ರಾಣಿ ವಿಕ್ಟೋರಿಯ ಇನ್ನೊಂದು ಘೋಷಣೆ ಹೊರಡಿಸಿದಳು. ನಮ್ಮ ಪ್ರಜೆಗಳು ಯಾವ ವರ್ಣದವರಾಗಲೀ ಅಥವಾ ಮತೀಯರಾಗಿರಲೀ ಅವರನ್ನು ಸ್ವತಂತ್ರವಾಗಿಯೂ ನಿಷ್ಪಕ್ಷಪಾತವಾಗಿಯೂ ನಮ್ಮ ಲೋಕಸೇವೆಯ ಸ್ಥಾನಗಳಿಗೆ ಸೇರಿಸಿಕೊಳ್ಳುವುದು ನಮ್ಮ ಅಭಿಲಾಷೆ. ಅಂಥವರು ತಮ್ಮ ಜವಾಬ್ದಾರಿಯ ನಿರ್ವಹಣೆಗೆ

ತಕ್ಕ ಶಿಕ್ಷಣ, ದಕ್ಷತೆ ಮತ್ತು ಪ್ರಾಮಾಣಿಕತೆ ಪಡೆದಿರಬೇಕು ಎಂಬುದಾಗಿ ಆ ಘೋಷಣೆ ವಿಶದಪಡಿಸಿತು. ಹೀಗೆ ಕೊಟ್ಟ ಮಾತನ್ನು ಕಾರ್ಯಕ್ಕಿಳಿಸುವುದಕ್ಕಾಗಿ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ 1860ರಲ್ಲಿ ಒಂದು ಸಮಿತಿ ನೇಮಿಸಿದ. ಭಾರತೀಯರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸುವುದಕ್ಕಾಗಿ ಏಕಕಾಲದಲ್ಲಿ ಇಂಗ್ಲೆಂಡ್ ಭಾರತಗಳೆರಡರಲ್ಲೂ ಪರೀಕ್ಷೆಗಳನ್ನು ಇಟ್ಟುಕೊಳ್ಳಬೇಕೆಂದು ಆ ಸಮಿತಿ ಸೂಚಿಸಿತು. ಆದರೆ ಮಾಡಿದ ಶಿಫಾರಸುಗಳನ್ನು ಅದು ಕಾರ್ಯಗತ ಮಾಡಲಿಲ್ಲ.

**ಇಂಡಿಯನ್ ಸಿವಿಲ್ ಸರ್ವಿಸ್ ಕಾಯಿದೆ:** 1861ರಲ್ಲಿ ಈ ಕಾಯಿದೆ ಜಾರಿಗೆ ಬಂತು. 1793ರ ಕಾಯಿದೆಯ ಷರತ್ತುಗಳ ವಿರುದ್ಧವಾಗಿ ಮಾಡಿದ ಕೆಲವು ನೇಮಕಗಳನ್ನು ಊರ್ಜಿತಗೊಳಿಸುವುದು ಮತ್ತು ಉನ್ನತ ಹುದ್ದೆಗಳನ್ನು ಕರಾರುಬದ್ಧ ಲೋಕಸೇವಾ ನೌಕರರಿಗೆ ಮೀಸಲಾಗಿಸುವುದು ಅದರ ಮುಖ್ಯ ಉದ್ದೇಶಗಳು. ವಿಶೇಷ ಸಂದರ್ಭಗಳಲ್ಲಿ ಭಾರತ ಸರ್ಕಾರವೇ ಲೋಕಸೇವಾ ಕ್ಷೇತ್ರದಲ್ಲಿ ಬೇರೆಯವರನ್ನೂ ನೇಮಿಸಬಹುದಾಗಿತ್ತು. ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಗೆ ಕಾಗದ ಬರೆದು ಆ ರೀತಿ ನೇಮಕಮಾಡಿಕೊಳ್ಳುವುದಕ್ಕೆ ಕಾರಣಗಳನ್ನು ತಿಳಿಸಿ, ಅವರಿಂದ 12 ತಿಂಗಳೊಳಗಾಗಿ ಅನುಮತಿ ಪಡೆಯಬೇಕಾಗಿತ್ತು. ಕರಾರುಬದ್ಧ ಲೋಕಸೇವೆಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಳ್ಳುವಾಗ ಲೋಕಸೇವಾ ಕಮಿಷನರರ ಮೇಲ್ವಿಚಾರಣೆಯಲ್ಲಿ ಪ್ರತಿ ವರ್ಷವೂ ಲಂಡನ್ನಿನಲ್ಲಿ ಸ್ಪರ್ಧಾ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. 1860ರಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುವಾಗ ಅಭ್ಯರ್ಥಿಗಳ ಕನಿಷ್ಠ ವಯಸ್ಸು 22 ಆಗಿರಬೇಕಾಗಿತ್ತು. 1866ರಲ್ಲಿ ವಯಸ್ಸಿನ ಮಿತಿಯನ್ನು 21ಕ್ಕೂ 1878ರಲ್ಲಿ 19ಕ್ಕೂ ಇಳಿಸಲಾಯಿತು. ತತ್ಪರಿಣಾಮವಾಗಿ ಭಾರತೀಯರು ಈ ಪರೀಕ್ಷೆಗಳಲ್ಲಿ ಸ್ಪರ್ಧಿಸುವುದು ಅಸಾಧ್ಯವಾಯಿತು. 1870ರವರೆಗೆ ಒಬ್ಬ ಭಾರತೀಯ ಮಾತ್ರ ಈ ಪರೀಕ್ಷೆಯಲ್ಲಿ ಉತ್ತೀರ್ಣನಾದ, ವಯಸ್ಸು, ಸಾಮಾಜಿಕ, ಮತೀಯ, ಆರ್ಥಿಕವೇ ಮುಂತಾದ ಕಾರಣಗಳೂ ಭಾರತೀಯರು ಮುಂದೆ ನುಗ್ಗಿ ಇಂಗ್ಲೆಂಡಿಗೆ ಹೋಗಿ ಪರೀಕ್ಷೆಗಳಲ್ಲಿ ಇಂಗ್ಲಿಷರಂತೆ ಸ್ಪರ್ಧಿಸಲು ತಡೆಯೊಡ್ಡಿದುವು. ಲಾರ್ಡ್ ಲಾರೆನ್ಸ್ ಬುದ್ಧಿವಂತರಾದ ಬಡ ಭಾರತೀಯರು ಮುಂದೆ ನುಗ್ಗಿ ಇಂಗ್ಲೆಂಡಿಗೆ ಹೋಗಿ ಭಾರತದ ವಿವಿಧ ಆಡಳಿತ ವರ್ಗಗಳಿಗೆ ಅರ್ಹತೆ ಹೊಂದಲು ಶಿಕ್ಷಣ ಪಡೆಯುವುದು ಸಾಧ್ಯವಾಗುವಂತೆ ವರ್ಷಕ್ಕೆ 200 ಪೌಂಡು ವಿದ್ಯಾರ್ಥಿ ವೇತನ ನಿಗದಿಮಾಡಿ, ಆಯ್ಕೆಯಾದ ವಿದ್ಯಾರ್ಥಿ ಅಲ್ಲಿ 3 ವರ್ಷಗಳ ಕಾಲ ಇರುವುದಕ್ಕಾಗಿ ಅವಕಾಶ ಮಾಡಿಕೊಟ್ಟ. ಈ ರೀತಿಯಾಗಿ ಹನ್ನೊಂದು ವಿದ್ಯಾರ್ಥಿವೇತನಗಳನ್ನು ಕೊಡಬೇಕೆಂದು ಅವನ ಶಿಫಾರಸ್ಸನ್ನು ಆಗ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಡ್ಯೂಕ್ ಆಫ್ ಆರ್ಗಿಲ್ ತಳ್ಳಿಹಾಕಿದ. 1870ರ ಕಾಯಿದೆ ಲೋಕಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದ ಭಾರತೀಯರನ್ನು ಕರಾರು ಬದ್ಧ ನೌಕರಿಗಳಲ್ಲಿ ಮೀಸಲಾದ ಸ್ಥಾನಗಳಿಗೆ ನೇಮಿಸಬಹುದೆಂದು ಅವಕಾಶ ಮಾಡಿಕೊಟ್ಟಿತು. ಆದರೆ ಇವುಗಳ ಬಗ್ಗೆ ಸೂತ್ರಗಳನ್ನು ರೂಪಿಸಿಕೊಳ್ಳಲು 11 ವರ್ಷ ಹಿಡಿಯಿತು. ಭಾರತೀಯರು ಕರಾರುಬದ್ಧ ಲೋಕಸೇವೆಗಳಿಗೆ ಕಾಲಿಡದಂತೆ ಮಾಡಿ, ಅವರಿಗೆ ಪ್ರತ್ಯೇಕವಾಗಿ ಒಂದು ದೇಶೀಯ ಸೇವೆಯನ್ನು (ನೇಟಿವ್ ಸರ್ವಿಸ್) ನಿರ್ಮಿಸುವ ಲಾರ್ಡ್ ಲಿಟ್ಟನ್ನನ ಹೊಸ ಯೋಜನೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಒಪ್ಪಲಿಲ್ಲ. 1870ರ ಕಾಯಿದೆಗೆ ಸೂತ್ರಗಳನ್ನು ರೂಪಿಸಿದ ಮೇಲೆ ಗವರ್ನರ್ ಜನರಲ್ ಕರಾರುಬದ್ಧ ಲೋಕ ಸೇವೆಗಳಲ್ಲಿ ಮೀಸಲಾಗಿದ್ದ ಸ್ಥಾನಗಳಿಗೆ ಒಳ್ಳೆಯ ಮನೆತನಕ್ಕೆ ಸೇರಿದ ಹಾಗೂ ಸಾಮಾಜಿಕ ಸ್ಥಾನಮಾನಗಳಿರುವ ಭಾರತೀಯರನ್ನು ನೇಮಿಸಬೇಕೆಂದು ವಿವರಿಸಲಾಯಿತು. ಈ ನೇಮಕಗಳು ಸೆಕ್ರೆಟರಿ ಆಫ್ ಸ್ಟೇಟ್ ಪ್ರತಿವರ್ಷವೂ ಮಾಡುವ ನೇಮಕಗಳ ಆರನೆಯ ಒಂದು ಭಾಗಕ್ಕಿಂತ ಹೆಚ್ಚಾಗಿರಕೂಡದಾಗಿತ್ತು. ಕಾಯಿದೆಬದ್ಧ ಲೋಕಸೇವೆ (ಸ್ಟಾಟ್ಯುಟರಿ ಸಿವಿಲ್ ಸರ್ವಿಸ್) ಹೊಸದಾಗಿ ಸ್ಥಾಪಿತವಾದರೂ ಅದು ಕಾರ್ಯರೂಪಕ್ಕೆ ಬರಲಿಲ್ಲ. 1885ರಲ್ಲಿ ಸ್ಥಾಪಿತವಾದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಈ ವಿಚಾರವನ್ನು ಪರಿಶೀಲಿಸಿತು. ಕರಾರುಬದ್ಧ ಲೋಕಸೇವೆಗಳಿಗೆ ಆಯ್ಕೆ ಮಾಡುವುದಾದರೆ ಭಾರತ ಮತ್ತು ಇಂಗ್ಲೆಂಡು ಇವೆರಡರಲ್ಲೂ ಪ್ರತಿವರ್ಷವೂ ಏಕಕಾಲದಲ್ಲಿ ಪರೀಕ್ಷೆಗಳನ್ನು ನಡೆಸಬೇಕೆಂದು ಅದು ನಿರ್ಣಯಿಸಿತು.

**ಐಚಿಸನ್ ಆಯೋಗ:** ಈ ಪರಿಸ್ಥಿತಿಯನ್ನು ಪರಿಶೀಲಿಸುವ ದೃಷ್ಟಿಯಿಂದ ಲಾರ್ಡ್ ಡಫರಿನ್ 1886ರಲ್ಲಿ ಸರ್ ಚಾರಲ್ಸ್ ಐಚಿಸನ್ನನ ಅಧ್ಯಕ್ಷತೆಯಲ್ಲಿ ಒಂದು ಆಯೋಗ ನೇಮಿಸಿದ. ಲೋಕಸೇವೆಯಲ್ಲಿ ತಮಗೆ ಹೆಚ್ಚಿನ ಉದ್ಯೋಗವಕಾಶ ದೊರೆತು ಉನ್ನತಸ್ಥಾನಗಳನ್ನು ಅಲಂಕರಿಸುವ ಹಕ್ಕು ತಮಗೆ ಬರಬೇಕೆಂಬ ಭಾರತೀಯ ಕೇಳಿಕೆಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುವುದೇ ಅದರ ಮುಖ್ಯ ಕೆಲಸ. ಭಾರತ ಮತ್ತು ಇಂಗ್ಲೆಂಡುಗಳಲ್ಲಿ ಏಕಕಾಲದಲ್ಲಿ ಪರೀಕ್ಷೆ ನಡೆಸಬೇಕೆಂಬುದರ ವಿರುದ್ಧವಾಗಿ ಅದು ವರದಿ ಮಾಡಿತು. ಈ ರೀತಿಯಾಗಿ ನಡೆಸುವ ಸ್ಪರ್ಧಾ ಪರೀಕ್ಷೆಗಳಿಂದ ಕೇವಲ ಕೆಲವು ವರ್ಗಗಳು ಮಾತ್ರ ಲಾಭ ಪಡೆಯುತ್ತವೆಂದು ಅದು ತಿಳಿಸಿತು. ಖಾಲಿ ಜಾಗಗಳು ಕೆಲವೇ ಇದ್ದು ಅಭ್ಯರ್ಥಿಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಎಲ್ಲರಿಗೂ ಉದ್ಯೋಗ ಒದಗಿಸಿಕೊಡಲು ಸಾಧ್ಯವಿಲ್ಲವೆಂದೂ ನೌಕರಿ ದೊರಕದ ಅಭ್ಯರ್ಥಿಗಳು ಮುಂದೆ ದೇಶದಲ್ಲಿ ಅತೃಪ್ತಿ ಹರಡುವರೆಂದೂ ಅದು ವಾದಿಸಿತು. ಕರಾರುಬದ್ಧ ಹಾಗೂ ಕರಾರುಬದ್ಧವಲ್ಲದ ಲೋಕಸೇವೆಗಳೆಂಬ ತಾರತಮ್ಯವನ್ನು ರದ್ದುಗೊಳಿಸಬೇಕೆಂದು ಅದು ಶಿಫಾರಸು ಮಾಡಿತು. ಆಡಳಿತ ವರ್ಗವನ್ನು ಸಾಮ್ರಾಜ್ಯ ಸೇವಾವರ್ಗ (ಇಂಪೀರಿಯಲ್ ಸರ್ವಿಸಸ್), ಪ್ರಾಂತೀಯ ಸೇವಾವರ್ಗ (ಪ್ರೊವಿನ್ಷಿಯಲ್ ಸರ್ವಿಸಸ್) ಮತ್ತು ಕೆಳದರ್ಜೆಯ ಸೇವಾವರ್ಗ (ಸಬಾರ್ಡಿನೇಟ್ ಸರ್ವಿಸಸ್) ಎಂಬುದಾಗಿ ಮೂರು ಭಾಗಗಳಾಗಿ ವಿಂಗಡಿಸಿ, ಪ್ರಮುಖ ಹುದ್ದೆಗಳನ್ನು ಮೊದಲಿನ ಎರಡು ವರ್ಗದವರು ಅನುಭವಿಸಿಕೊಂಡು ಬರಬೇಕೆಂದು ಅದು ವಿವರಿಸಿತು. ಅಲ್ಲದೆ ಕಾಯಿದೆಬದ್ಧ ಲೋಕಸೇವೆಯನ್ನು ರದ್ದುಪಡಿಸಬೇಕೆಂದು ಶಿಫಾರಸು ಮಾಡಿತು. 1893ರಲ್ಲಿ ಕಾಮನ್ಸ್ ಸಭೆ ಒಂದು ನಿರ್ಣಯ ಮಾಡಿ, ಭಾರತದ ಲೋಕಸೇವೆಗಳಿಗಾಗಿ ನೇಮಕ ಮಾಡಲು ಇಂಗ್ಲೆಂಡ್ ಒಂದರಲ್ಲೇ ನಡೆಸುತ್ತಿದ್ದ ಸ್ಪರ್ಧಾ ಪರೀಕ್ಷೆಗಳನ್ನು ಇನ್ನು ಮುಂದೆ ಇಂಗ್ಲೆಂಡ್ ಮತ್ತು ಭಾರತಗಳೆರಡರಲ್ಲೂ ನಡೆಸಬೇಕೆಂದು ವಿಶದಪಡಿಸಿತು. ಅದು ಅಪಾಯಕಾರಿಯಾದ ಕೆಲಸವೆಂದು ಭಾವಿಸಿದ ಭಾರತ ಸರ್ಕಾರ ಅದರ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

**ಇಸ್ಲಿಂಗ್‌ಟನ್ ಆಯೋಗ:** ಭಾರತದ ಲೋಕಸೇವೆಗಳ ಸ್ಥಿತಿಗತಿಗಳನ್ನು ಪರೀಕ್ಷಿಸಲು 1912ರಲ್ಲಿ ಲಾರ್ಡ್ ಇಸ್ಲಿಂಗ್‌ಟನ್ನನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲಾಯಿತು. ಅದರ ವರದಿ 1915ರಲ್ಲಿಯೇ ಸಿದ್ಧವಾದರೂ ಅದರ ಪ್ರಕಟಣೆಯ ಕೆಲಸ ನಡೆದದ್ದು ಜೂನ್ 1917ರಲ್ಲಿ. ಅದರ ಶಿಫಾರಸುಗಳು ಜಾರಿಗೆ ಬರುವುದಕ್ಕೆ ಮೊದಲೇ 1917ರ ಆಗಸ್ಟ್ ಘೋಷಣೆ ಹೊರಬಿದ್ದಿತು. ಪ್ರತಿಯೊಂದು ಆಡಳಿತ ಶಾಖೆಯಲ್ಲೂ ಭಾರತೀಯರನ್ನು ಹೆಚ್ಚಿಸುವುದೇ ಸರ್ಕಾರದ ನೀತಿಯಾಗಿದೆ ಎಂದು ಸೆಕ್ರೆಟರಿ ಆಫ್ ಸ್ಟೇಟ್ ಮಾಂಡೆಗೊ ಕಾಮನ್ಸ್ ಸಭೆಯಲ್ಲಿ ಘೋಷಿಸಿದ.

**1918ರ ವರದಿಯ ಶಿಫಾರಸುಗಳು:** ಆಡಳಿತ ಸಮಸ್ಯೆಗಳ ನಿಜವಾದ ಅನುಭವ ಪಡೆಯಲು ಕೆಲವೇ ಜನ ಅವಕಾಶ ಹೊಂದಿರುವುದು ಭಾರತೀಯ ಲೋಕಸೇವೆಯಲ್ಲಿ ಒಂದು ದೊಡ್ಡ ದೌರ್ಬಲ್ಯವೆಂದೂ, ದೇಶದ ಆಡಳಿತ ಯಂತ್ರದಲ್ಲಿ ಹೆಚ್ಚು ಹೆಚ್ಚು ಮಂದಿ ಭಾರತೀಯರನ್ನು ಸೇರಿಸಿಕೊಳ್ಳಬೇಕೆಂದೂ, ವರ್ಣದ ಮೇಲೆ ರೂಪಿತವಾದ ತಾರತಮ್ಯವನ್ನು ತೆಗೆದು ಹಾಕಬೇಕೆಂದೂ, ಇಂಗ್ಲೆಂಡ್ ಮತ್ತು ಭಾರತಗಳೆರಡರಲ್ಲೂ ಏಕಕಾಲದಲ್ಲಿ ಸ್ಪರ್ಧಾ ಪರೀಕ್ಷೆಗಳನ್ನು ನಡೆಸಬೇಕೆಂದೂ, ಭಾರತೀಯ ಲೋಕಸೇವೆಯ ಶ್ರೇಷ್ಠ ಹುದ್ದೆಗಳಲ್ಲಿ ಶೇ. 33ರಷ್ಟು ನೇಮಕವನ್ನು ಭಾರತದಲ್ಲೇ ಮಾಡಬೇಕೆಂದೂ, ಈ ಪ್ರಮಾಣವನ್ನು ಪ್ರತಿವರ್ಷವೂ ಶೇ. 11/2 ರಂತೆ ಹೆಚ್ಚು ಮಾಡುತ್ತ ಹೋಗಬೇಕೆಂದೂ, ಇತರ ಆಡಳಿತ ವರ್ಗಗಳಲ್ಲಿಯೂ ಇದೇ ಪ್ರಮಾಣವನ್ನು ಇಟ್ಟುಕೊಳ್ಳಬೇಕೆಂದೂ, ಅತ್ಯುತ್ತಮ ಐರೋಪ್ಯ ಮತ್ತು ಇಂಗ್ಲಿಷ್ ಅಧಿಕಾರಿಗಳನ್ನು ಭಾರತಕ್ಕೆ ಆಕರ್ಷಿಸುವ ದೃಷ್ಟಿಯಿಂದ ಹೆಚ್ಚಿನ ಸಂಬಳ, ವಿಶ್ರಾಂತಿವೇತನ, ರಜಾ ಮತ್ತು ಸಮುದ್ರದಾಚೆಯ ಭತ್ಯೆಗಳನ್ನು ಕೊಡಬೇಕೆಂದೂ, ಪ್ರತಿಯೊಬ್ಬ ನೌಕರನೂ ಅವನು ಎಲ್ಲೇ ಇರಲಿ, ತನ್ನ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುವಾಗ ಆತನಿಗೆ ರಕ್ಷಣೆ ಮತ್ತು ಬೆಂಬಲ ಕೊಡುವುದು ಸರ್ಕಾರದ ಆದ್ಯ ಕರ್ತವ್ಯವೆಂದೂ 1918ರ ವರದಿ ಹೇಳಿತು.

ಭಾರತದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದಾಗಿ ಬ್ರಿಟಿಷ್ ಸರ್ಕಾರ ಘೋಷಣೆ ಹೊರಡಿಸಿದ ಮೇಲೆ ಲೋಕಸಭೆಯ ಸದಸ್ಯರು ಬಹಳ ಪೇಚಿಗೆ ಸಿಕ್ಕಿಕೊಂಡರು. ಮೊದಲು ಅವರೇ ರಾಜ್ಯಾಡಳಿತ ನಡೆಸುತ್ತಿದ್ದರು. ಹೊಸದಾಗಿ ಸ್ಥಾಪಿಸಿದ ಸರ್ಕಾರದಲ್ಲಿ ತಮ್ಮನ್ನು ಭಾರತೀಯ ಮಂತ್ರಿಗಳು ಹತೋಟಿಯಲ್ಲಿಟ್ಟುಕೊಂಡು, ತಮ್ಮ ಮೇಲೆ ದಬ್ಬಾಳಿಕೆ ನಡೆಸುವರೆಂದು ಅವರು ಹೆದರಿದರು. ತಾವು ಅವಮಾನಿತರಾಗುವ ಸಂಭವವೂ ಉಂಟೆಂದು ಭಾವಿಸಿ ಅವರು ತಮಗೆ ರಕ್ಷಣೆ ಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಿದರು. ವಿಶ್ರಾಂತಿ ವೇತನವನ್ನು ಪಡೆಯುವುದಕ್ಕೆ ಎಷ್ಟು ಕಾಲಪರಿಮಿತಿ ಬೇಕೋ ಅದಕ್ಕಿಂತ ಮೊದಲೇ ಇಚ್ಛೆಪಟ್ಟಲ್ಲಿ ಭಾರತದ ಸೇವಾವರ್ಗದಿಂದ ನಿವೃತ್ತಿ ಹೊಂದಬಹುದೆಂದೂ ಅಂಥವರಿಗೆ ಅವರ ಸೇವೆಗನುಗುಣವಾಗಿ ವಿಶ್ರಾಂತಿ ವೇತನ ದೊರಕಿಸಿಕೊಡುವುದಾಗಿಯೂ ಸರ್ಕಾರ ಭರವಸೆ ಕೊಟ್ಟಿತು. ಇಷ್ಟಾದರೂ ಆಡಳಿತವರ್ಗದವರಿಗೂ ಭಾರತೀಯ ಜನತೆಗೂ ಇದ್ದ ಬಾಂಧವ್ಯ ಕೆಟ್ಟಿತು. ಶಾಸನ ಸಭೆಗಳಲ್ಲಿ ಅವರನ್ನು ಟೀಕಿಸಲಾಯಿತು. ಅಸಹಕಾರ ಚಳವಳಿಯ ಕಾಲದಲ್ಲಿ ಈ ನೌಕರರೂ ಇವರ ಸಂಸಾರದವರೂ ಜನರ ಸಂಶಯಕ್ಕೆ ಗುರಿಯಾದರು. ಪದಾರ್ಥಗಳ ಬೆಲೆ ದುಬಾರಿಯಾದ್ದರಿಂದ ಇವರ ಸ್ಥಿತಿ ಸ್ವಲ್ಪ ಕೆಟ್ಟಿತು. 1924ರಲ್ಲಿ ಸು. 345 ಉನ್ನತ ಅಧಿಕಾರಿಗಳು ನಿವೃತ್ತಿ ಪಡೆದರು. ಅಧಿಕ ಸಂಖ್ಯೆಯಲ್ಲಿ ಐರೋಪ್ಯರು ಮತ್ತು ಇಂಗ್ಲಿಷರು ಭಾರತೀಯ ಆಡಳಿತ ವರ್ಗಕ್ಕೆ ಸೇರದಿದ್ದದ್ದು ಸರ್ಕಾರಕ್ಕೆ ಒಂದು ಕಠಿಣ ಸಮಸ್ಯೆಯನ್ನು ತಂದೊಡ್ಡಿತು. ಆಡಳಿತ ವರ್ಗದ ಭಾರತೀಕರಣವಾಗುತ್ತಿಲ್ಲವೆಂದು ಭಾರತೀಯರು ಟೀಕಿಸುತ್ತಲೇ ಇದ್ದರು. ಆಡಳಿತವರ್ಗದ ಆಯ್ಕೆ ಹಾಗೂ ಹತೋಟಿಯ ಬಗ್ಗೆ ಸೆಕ್ರೆಟರಿ ಆಫ್ ಸ್ಟೇಟ್ ಯಾವ ಅಧಿಕಾರವನ್ನೂ ಹೊಂದಿರಕೂಡದೆಂದು ಅವರು ವಾದಿಸಿದರು.

ಬ್ರಿಟಿಷರ ಆಡಳಿತಭದ್ರತೆಗೆ ಭಾರತೀಕರಣ ಬಹಳ ಸಹಾಯಕವಾಯಿತು. ಪ್ರತಿಯೊಂದು ಕಡೆಯೂ ಆಡಳಿತ ವರ್ಗದ ಒಂದು ಪಡೆಯ, ಪಾಳೆಯದ ನಿರ್ಮಾಣವಾಯಿತು. ಯುದ್ಧ ಮಾಡುವ ಸೈನ್ಯಕ್ಕಿಂತ ಈ ಅಧಿಕಾರಿಗಳ ತಂಡ ಹೆಚ್ಚು ಪ್ರಯೋಜನಕಾರಿಯಾಯಿತು. ಈ ಪಡೆಯಲ್ಲಿ ದೇಶಾಭಿಮಾನಿಗಳೂ ರಾಷ್ಟ್ರೀಯ ಭಾವನೆಯುಳ್ಳವರೂ ಅನೇಕರಿದ್ದರು. ಆದರೆ ವೈಯಕ್ತಿಕವಾಗಿ ದೇಶಾಭಿಮಾನವಿದ್ದರೂ ಸೈನಿಕರಂತೆ ಅವರಿಗೂ ಒಂದು ಆಡಳಿತ ನಿಯಮವಿತ್ತು. ಅವಿಧೇಯತೆ, ದ್ರೋಹ ಅಥವಾ ಪ್ರತಿಭಟನೆಗಳಿಗೆ ಕ್ರೂರ ಶಿಕ್ಷೆ ಕಾದಿರುತ್ತಿತ್ತು. ಹೀಗೆ ಈ ಒಂದು ಆಡಳಿತವರ್ಗದ ನಿರ್ಮಾಣವಾಯಿತಲ್ಲದೆ ಇದರಲ್ಲಿನ ಅಧಿಕಾರದ ಆಸೆಯಿಂದ ಇತರರಲ್ಲೂ ಹೆಚ್ಚಾಗಿ ಅನೀತಿ ಬೆಳೆಯಿತು. ಈ ಆಡಳಿತ ವರ್ಗದವರು ಬ್ರಿಟಿಷ್ ಅಧಿಕಾರಿಗಳಿಗೂ ಜನರಿಗೂ ಮಧ್ಯಸ್ಥರಾದರು.

ದೇಶದಲ್ಲಿ ಇತರ ಉದ್ಯಮಗಳಿಗೆ ಅವಕಾಶವಿಲ್ಲದೆ ಜೀವನಕ್ಕೆ ಬೇರೆ ಮಾರ್ಗವಿಲ್ಲದ್ದರಿಂದ ಸರಕಾರಿ ನೌಕರಿಗೆ ಒಂದು ವಿಶೇಷ ಪ್ರಾಮುಖ್ಯ ದೊರೆಯಿತು. ನ್ಯಾಯವಾದಿಗಳೂ ವೈದ್ಯರೂ ಆಗಲು ಕೆಲವರಿಗೆ ಅವಕಾಶವಿದ್ದರೂ ಹೆಚ್ಚು ಸಂಪಾದನೆಯ ಭರವಸೆ ಇರಲಿಲ್ಲ, ಕೈಗಾರಿಕೆಗಳಿರಲಿಲ್ಲ. ವ್ಯಾಪಾರವೆಲ್ಲ ಅನೇಕ ತಲೆಮಾರುಗಳಿಂದ ಒಂದೇ ವರ್ಗದವರ ಕೈಯಲ್ಲಿತ್ತು. ಹೊಸ ವಿದ್ಯಾಭ್ಯಾಸದಿಂದ ವ್ಯಾಪಾರ ಅಥವಾ ಕೈಗಾರಿಕೆಗೆ ಪುರಸ್ಕಾರ ದೊರೆಯಲಿಲ್ಲ. ಅದರ ಮುಖ್ಯ ಉದ್ದೇಶವೇ ಸರ್ಕಾರಿ ನೌಕರಿ. ವಿದ್ಯಾಭ್ಯಾಸದ ಪದ್ಧತಿಯೇ ಸಂಕುಚಿತವಾಗಿದ್ದರಿಂದ ಉದ್ಯೋಗಶಿಕ್ಷಣ ಪಡೆಯಲು ಅವಕಾಶವೂ ಬಹಳ ಕಡಿಮೆ ಇತ್ತು. ಕಾಲೇಜುಗಳ ಪದವೀಧರರು ಅಧಿಕ ಸಂಖ್ಯೆಯಲ್ಲಿ ಹೊರಬರಲಾರಂಭಿಸಿದ್ದರಿಂದ ಸರ್ಕಾರದ ಆಡಳಿತ ಶಾಖೆ ಬೆಳೆಯುತ್ತಿದ್ದರೂ ಅವರೆಲ್ಲರಿಗೂ ಸ್ಥಾನ ಕಲ್ಪಿಸಲು ಸಾಧ್ಯವಾಗದೆ ಪೈಪೋಟಿ ಆರಂಭವಾಯಿತು. ಒಟ್ಟಿನಲ್ಲಿ ಬ್ರಿಟಿಷ್ ಸರ್ಕಾರ ಭಾರತದಲ್ಲಿ ನೌಕರಿ ಕೊಡುವ ಒಂದು ದೊಡ್ಡ ಸಂಸ್ಥೆಯಾಯಿತು. ಈ ಅಧಿಕಾರ ವರ್ಗ ಒಂದು ದೊಡ್ಡ ಯಂತ್ರವಾಯಿತು. ಯಂತ್ರ ಸೂತ್ರಗಳೆಲ್ಲ ಮೇಲಾಧಿಕಾರಿಗಳ ಕೈಯಲ್ಲಿದ್ದು ಬಿಗಿಯಿಂದ ನಡೆಯುತ್ತಿತ್ತು. ಅಧಿಕಾರ ಹಂಚಲು ಇದ್ದ ದೊಡ್ಡಅವಕಾಶವನ್ನು ಬ್ರಿಟಿಷರು ದೇಶದಲ್ಲಿ ಅಧಿಕಾರವನ್ನು ಭದ್ರಗೊಳಿಸುವುದಕ್ಕೂ ಅಸಮಾಧಾನಗೊಂಡ ವಿರೋಧಿಗಳನ್ನು ತುಳಿಯುವುದಕ್ಕೂ ಸರ್ಕಾರದ ನೌಕರಿಯಲ್ಲಿ ಸೇರಿಕೊಳ್ಳಲು ಕಾತರರಾಗಿದ್ದ ಬೇರೆ ಬೇರೆ ಪಂಗಡಗಳಲ್ಲಿ ಪೈಪೋಟಿಯನ್ನೂ ವೈಷಮ್ಯವನ್ನೂ ಹೆಚ್ಚಿಸುವುದಕ್ಕೂ ದುರುಪಯೋಗಪಡಿಸಿಕೊಂಡರು.

**ಲೀ ಆಯೋಗ (1923):** ಉನ್ನತ ಹುದ್ದೆಗಳನ್ನು ಭಾರತೀಯರಿಗೆ ಕೊಡುವ ಬಗ್ಗೆ 1923ರಲ್ಲಿ ಒಂದು ಸಮಿತಿ ಅಸ್ತಿತ್ವಕ್ಕೆ ಬಂತು. ಅದರ ಅಧ್ಯಕ್ಷ ಲೀ ಆಗಿದ್ದುದರಿಂದ ಅದಕ್ಕೇ ಲೀ ಆಯೋಗವೆಂದು ಹೆಸರಾಯಿತು. ಅದು ಅನೇಕ ಶಿಫಾರಸುಗಳನ್ನು ಮಾಡಿತು. ಭಾರತೀಯ ಲೋಕಸೇವೆಯ ಬಗ್ಗೆ ಇಂಡಿಯನ್ ಪೊಲೀಸ್ ಸರ್ವಿಸ್, ಇಂಡಿಯನ್ ಫಾರೆಸ್ಟ್ ಸರ್ವಿಸ್ ಮತ್ತು ನೀರಾವರಿ ಕೆಲಸಗಳಿಗಾಗಿ ನೇಮಕಗೊಂಡ ಎಂಜಿನಿಯರ್ಸ್ ಸರ್ವಿಸ್ ಇವುಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ಸ್ವತಃ ನೋಡಿಕೊಳ್ಳಬೇಕೆಂದು ಸೂಚಿಸಲಾಯಿತು. ಇಂಡಿಯನ್ ಎಜುಕೇಷನಲ್ ಸರ್ವಿಸ್, ಇಂಡಿಯನ್ ವೆಟರ್ನರಿ ಸರ್ವಿಸ್ ಮತ್ತು ಇಂಡಿಯನ್ ಮೆಡಿಕಲ್ ಸರ್ವಿಸ್ (ಅಸೈನಿಕ) ಪೂರ್ಣವಾಗಿ ಪ್ರಾಂತದ ಮಂತ್ರಿಗಳ ಹತೋಟಿಯಲ್ಲಿಯೇ ಇರಬೇಕೆಂದೂ ಸಮಗ್ರ ಭಾರತದ ಆಧಾರದ ಮೇಲೆ ಮಾಡಲಾಗುತ್ತಿದ್ದ ನೇಮಕಗಳನ್ನು ಕೂಡಲೇ ನಿಲ್ಲಿಸಬೇಕೆಂದೂ ವಿಧೇಯಕವಾಯಿತು. ಅಷ್ಟರೊಳಗೆ ಯಾರು ಯಾರು ನೇಮಕಗೊಂಡಿದ್ದರೋ ಅವರೆಲ್ಲರೂ ಸಮಗ್ರ ಭಾರತದ ಸ್ಥಾನಮಾನಗಳೆಲ್ಲವನ್ನೂ ಉಳಿಸಿಕೊಳ್ಳತಕ್ಕದ್ದೆಂದು ತಿಳಿಸಲಾಯಿತು. ಆದಾಗ್ಯೂ ಆಡಳಿತವರ್ಗಗಳಿಗೆ ಹೊಸದಾಗಿ ಮಾಡುವ ನೇಮಕಗಳ ಪೂರ್ಣ ಜವಾಬ್ದಾರಿ ಪ್ರಾಂತ ಸರ್ಕಾರಗಳಿಗಿರುತ್ತದೆಂದೂ ವಿವರಿಸಲಾಯಿತು. ಆದರೆ ಈ ಬದಲಾವಣೆ ಇಂಡಿಯನ್ ಮೆಡಿಕಲ್ ಸರ್ವಿಸಿಗೆ ಅನ್ವಯಿಸುವಂತಿರಲಿಲ್ಲ. ಪ್ರತಿಯೊಂದು ಸಂಸ್ಥಾನವೂ ತನ್ನ ವೈದ್ಯ ವಿಭಾಗಕ್ಕೆ ಎಷ್ಟು ಮಂದಿ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ಮಂದಿಯನ್ನು ಭಾರತದ ಮೆಡಿಕಲ್ ಡಿಪಾರ್ಟ್‌ಮೆಂಟ್ ಆಫ್ ದಿ ಆರ್ಮಿ ಎಂಬುದರಿಂದ ಎರವಲು ಪಡೆಯಬೇಕಾಗಿತ್ತು. ಭಾರತೀಕರಣ ಅತಿವೇಗದಿಂದ ಸಾಗಬೇಕೆಂದು ಲೀ ಆಯೋಗ ಶಿಫಾರಸು ಮಾಡಿತು. ಭಾರತೀಯ ಲೋಕಸೇವೆಯಲ್ಲಿ ಶೇ.19ರಷ್ಟು ಉನ್ನತ ಹುದ್ದೆಗಳಲ್ಲಿ ಐರೋಪ್ಯರನ್ನೂ ಭಾರತೀಯರನ್ನೂ ಸಮಾನ ಸಂಖ್ಯೆಯಲ್ಲಿ ಆರಿಸಿಕೊಳ್ಳಬೇಕೆಂದೂ ವಿವರಿಸಲಾಯಿತು. 15 ವರ್ಷದೊಳಗಾಗಿ ಭಾರತೀಯ ಲೋಕಸೇವೆಯಲ್ಲಿ ಅರ್ಧ ಭಾರತೀಯರೂ ಉಳಿದರ್ಧ ಐರೋಪ್ಯರೂ ಇರುವರೆಂದು ಲೆಕ್ಕ ಹಾಕಲಾಯಿತು. ಇಂಡಿಯನ್ ಪೊಲೀಸ್ ಸರ್ವಿಸ್‌ನಲ್ಲಿ ಐದು ಮಂದಿ ಐರೋಪ್ಯರಿಗೆ ಮೂರು ಮಂದಿ ಭಾರತೀಯರಂತೆ ಆಯ್ಕೆ ನಡೆಸಬೇಕಾಯಿತು. 1949ರ ಹೊತ್ತಿಗೆ ಪೊಲೀಸ್ ಇಲಾಖೆಯಲ್ಲಿ ಅರ್ಧದಷ್ಟು ಮಂದಿ ಐರೋಪ್ಯರೂ ಇನ್ನರ್ಧ ಭಾರತೀಯರೂ ಇರುವರೆಂದು ಅಂದಾಜು ಹಾಕಲಾಯಿತು. ಅರಣ್ಯ ಇಲಾಖೆಗೆ 100ಕ್ಕೆ 75 ಭಾರತೀಯರನ್ನೂ 25 ಐರೋಪ್ಯರನ್ನೂ ಆಯ್ಕೆ ಮಾಡಬೇಕಾಗಿತ್ತು. ನೀರಾವರಿ ಶಾಖೆಗೆ ಎಂಜಿನಿಯರನ್ನು ನೇಮಕ ಮಾಡಿಕೊಳ್ಳುವಾಗ ಸಮಾನ ಸಂಖ್ಯೆಯಲ್ಲಿ ನೇರವಾಗಿ ಭಾರತೀಯರನ್ನೂ ಐರೋಪ್ಯರನ್ನೂ ಆಯ್ಕೆ ಮಾಡಬಹುದಾಗಿತ್ತು.

ಕೇಂದ್ರ ಇಲಾಖೆಗಳ ಬಗ್ಗೆ ಲೀ ಕಮಿಷನ್ ಕೆಲವು ಶಿಫಾರಸುಗಳನ್ನು ಮಾಡಿತು: 1. ರಾಜಕೀಯ ಇಲಾಖೆಗೆ ಪ್ರತಿವರ್ಷವೂ ಆಯ್ಕೆಯಾಗುವ ಒಟ್ಟು ಸಂಖ್ಯೆಯಲ್ಲಿ 25 ಸ್ಥಾನಗಳನ್ನು ಭಾರತೀಯರಿಗೆ ಕೊಡಬೇಕು. 2. ಇಂಪೀರಿಯಲ್ ಕಸ್ಟಮ್ಸ್‌ಗೆ ಅರ್ಧಕ್ಕಿಂತ ಕಡಿಮೆ ಇಲ್ಲದಂತೆ ಭಾರತೀಯರನ್ನು ತೆಗೆದುಕೊಳ್ಳಬೇಕು. 3. ಉನ್ನತ ಟೆಲಿಗ್ರಾಫ್ ಮತ್ತು ವೈರ್‌ಲೆಸ್ ವಿಭಾಗಕ್ಕೆ ಶೇ.25 ಜನರನ್ನು ಇಂಗ್ಲೆಂಡಿನಲ್ಲೂ ಶೇ. 75ರಷ್ಟು ಜನರನ್ನು ಭಾರತದಲ್ಲೂ ನೇಮಿಸಿಕೊಳ್ಳಬೇಕು. 4 ರೈಲ್ವೆಗಳಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ಭಾರತೀಯರನ್ನು ಶೇ.75ರಷ್ಟಕ್ಕೆ ಏರಿಸಿ, ಉಳಿದ ಶೇ.25ರಷ್ಟು ಅಧಿಕಾರಿಗಳನ್ನು ಇಂಗ್ಲೆಂಡಿನಲ್ಲಿ ಆರಿಸಬೇಕು. ಅಲ್ಲದೆ ನೌಕರರಿಗೆ ಹೆಚ್ಚು ಸಂಬಳವನ್ನೂ ಇತರ ಅನುಕೂಲಗಳನ್ನೂ ಒದಗಿಸಬೇಕೆಂದೂ ಈ ಸಮಿತಿ ಸರಕಾರಕ್ಕೆ ತಿಳಿಸಿತು. ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಐರೋಪ್ಯರೂ ಅವರ ಪತ್ನಿಯರೂ ಸ್ವದೇಶಕ್ಕೆ ನಾಲ್ಕು ಬಾರಿ ಹೋಗಿ ಬರುವುದಕ್ಕೂ ಅವಕಾಶವಿತ್ತು. ಅವರಿಗೆ ಐರೋಪ್ಯ ವೈದ್ಯರ ಸೌಲಭ್ಯ ದೊರೆಯುವಂತೆ ಆಯಿತು. ಭಾರತದಲ್ಲಿರುವಾಗ ಸಿವಿಲ್ ಸದಸ್ಯ ಸತ್ತರೆ ಅವನ ಪತ್ನಿಯನ್ನು ಸರಕಾರವೇ ತನ್ನ ಖರ್ಚಿನಿಂದ ಸ್ವದೇಶಕ್ಕೆ ಕಳುಹಿಸಬೇಕಾಯಿತು. ಭಾರತೀಯ ಲೋಕಸೇವೆಯ ಅಧಿಕಾರಿ ಉನ್ನತ ದರ್ಜೆ ಮುಟ್ಟಿದರೆ ಆತನ ವಿಶ್ರಾಂತಿ ವೇತನ ಜಾಸ್ತಿಯಾಗುತ್ತಿತ್ತು. ಕುಟುಂಬ ಪಿಂಚಣಿ ನಿಧಿ ಯೋಜನೆ ಜಾರಿಗೆ ಬಂತು. ಭಾರತದಲ್ಲಿ ಒಂದು ಲೋಕಸೇವಾ ಆಯೋಗ ವಿರಬೇಕೆಂದು 1919ರ ಕಾಯಿದೆ ಸೂಚಿಸಿತು. ಆದರೆ ಅದು ಅಸ್ತಿತ್ವಕ್ಕೆ ಬರಲಿಲ್ಲ. ಲೀ ಆಯೋಗವೂ ಕೂಡಲೇ ಒಂದು ಲೋಕಸೇವಾ ಆಯೋಗ ರಚಿತವಾಗಬೇಕೆಂದು ಶಿಫಾರಸು ಮಾಡಿತು.

**ಭಾರತ ಸರ್ಕಾರದ ಕಾಯಿದೆ (1935):** 1935ರ ಮಸೂದೆ ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಬಂದಾಗ, ಅದು ಕಾಯಿದೆಯಾಗುವ ಸೂಚನೆಗಳನ್ನು ಕಂಡ ಭಾರತೀಯ ನೌಕರರು ಹೊಸದಾಗಿ ನಿರ್ಮಾಣಗೊಳ್ಳಲಿದ್ದ ಸರ್ಕಾರದಲ್ಲಿ ತಮ್ಮ ಸ್ಥಾನಮಾನಗಳಿಗೆ ಎಲ್ಲಿ ಧಕ್ಕೆ ಬರುವುದೋ ಎಂದು ಹೆದರಿ ತಮಗೆ ಸರಿಯಾದ ರಕ್ಷಣೆಗಳನ್ನು ಕೊಡಬೇಕೆಂದು ಮನವಿ ಸಲ್ಲಿಸಿದರು. ತತ್ಪರಿಣಾಮವಾಗಿ 1935ರ ಕಾಯಿದೆಯಲ್ಲಿ ಭಾರತೀಯ ಲೋಕ ಸೇವೆಯ ಬಗ್ಗೆ ಕೆಲವು ನಿಯಮಗಳನ್ನು ಮಾಡಲಾಯಿತು. ಮುಂದೆ ನಡೆಯುವ ಎಲ್ಲ ನೇಮಕಗಳಿಗೂ ಒಂದು ರೀತಿಯಾದ ಹೊಸ ರೂಪ ಕೊಡಲಾಯಿತು. ನೌಕರರು ಅನುಭವಿಸುತ್ತಿದ್ದ ಎಲ್ಲ ರಿಯಾಯಿತಿಗಳನ್ನೂ ಮಾನ್ಯ ಮಾಡಲಾಯಿತು. ಸಂವಿಧಾನ ಕಾಯಿದೆಯಲ್ಲಿ ನಮೂದಿಸಲಾಗಿರುವ ಭಾರತೀಯ ಲೋಕಸೇವಾ ಸದಸ್ಯರ ಹಕ್ಕು ಬಾಧ್ಯತೆಗಳನ್ನೂ ಅವರ ನ್ಯಾಯಬದ್ಧವಾದ ಅಭಿರುಚಿಗಳನ್ನೂ ರಕ್ಷಿಸುವುದಕ್ಕಾಗಿ ಗವರ್ನರ್ ಜನರಲ್ಲನಿಗೂ ಪ್ರಾಂತದ ಗವರ್ನರುಗಳಿಗೂ ವಿಶೇಷವಾದ ಅಧಿಕಾರ ಕೊಡಲಾಯಿತು. ಭಾರತದಲ್ಲಿರುವ ಪ್ರತಿಯೊಬ್ಬ ನೌಕರನೂ ಚಕ್ರವರ್ತಿಯ ಇಚ್ಛೆಗನುಗುಣವಾಗಿ ತನ್ನ ನೌಕರಿ ಹೊಂದಿರಬಲ್ಲನೆಂದು ವಿವರಿಸಲಾಯಿತು. ನೌಕರನ ಹುದ್ದೆಯನ್ನು ರದ್ದುಗೊಳಿಸಿದ್ದಾದರೆ ಅವನಿಗೆ ಪರಿಹಾರ ಕೊಡಬೇಕಾಗಿತ್ತು. ಚಕ್ರವರ್ತಿ ಅನ್ಯಾಯವಾಗಿ ಯಾರನ್ನಾದರೂ ನೌಕರಿಯಿಂದ ತೆಗೆದು ಹಾಕಿದರೆ ಆ ಆಜ್ಞೆಯ ಕ್ರಮಬದ್ಧತೆಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗಬಹುದಿತ್ತು. ನೇಮಕ ಮಾಡಿಕೊಳ್ಳುವ ಅಧಿಕಾರಿಗಿಂತ ಕಡಿಮೆ ಅಧಿಕಾರವುಳ್ಳವನು ಯಾವ ನೌಕರನನ್ನು ಕೆಲಸದಿಂದ ತೆಗೆದುಹಾಕುವ ಹಕ್ಕು ಪಡೆದಿರುತ್ತಿರಲಿಲ್ಲ. ತನ್ನ ಕೃತ್ಯದ ಬಗ್ಗೆ ಆತನಿಂದ ಸಮಜಾಯಿಷಿ ಕೇಳಿ ಪಡೆಯುವವರೆಗೆ ಯಾವ ನೌಕರನನ್ನು ತೆಗೆಯುವಂತೆಯೂ ಇರಲಿಲ್ಲ. ಅವನನ್ನು ಕೆಳದರ್ಜೆಗೆ ಇಳಿಸುವಂತೆಯೂ ಇರಲಿಲ್ಲ. ಫೆಡರಲ್ ಕ್ಷೇತ್ರದಲ್ಲಿ ಲೋಕಸೇವೆಗೆ ನೌಕರರನ್ನು ನೇಮಕಮಾಡುವ ಅಧಿಕಾರವನ್ನು ಗವರ್ನರ್ ಜನರಲ್ಲನಿಗೆ ಕೊಡಲಾಯಿತು. ಆದರೆ ಆತನು ಭಾರತೀಯ ಲೋಕಸೇವೆ, ಪೊಲೀಸ್ ಇಲಾಖೆ ಮತ್ತು ವೈದ್ಯ ಇಲಾಖೆಗಳಿಗೆ (ಅಸೈನಿಕ) ನೇಮಕ ಮಾಡುವಂತಿರಲಿಲ್ಲ. ರೈಲ್ವೆ ಇಲಾಖೆಗೆ ಅಧಿಕಾರಿಗಳನ್ನು ನೇಮಿಸುವಾಗ ಗವರ್ನರ್ ಜನರಲ್ ತನ್ನ ಅಧಿಕಾರವನ್ನು ಫೆಡರಲ್ ರೈಲ್ವೆಗೆ ವಹಿಸುತ್ತಿದ್ದ. ರೈಲ್ವೆಯಲ್ಲಿ ಉನ್ನತ ಹುದ್ದೆಗಳಿಗೆ ನೇಮಕ ಮಾಡುವಾಗ ಫೆಡರಲ್ ರೈಲ್ವೆ ಲೋಕಸೇವಾ ಆಯೋಗದ ಸಲಹೆ ಪಡೆಯಬೇಕಾಗಿತ್ತು. ಯಾವ ಅಧಿಕಾರಿಯೊಂದಿಗಾಗಲಿ ವ್ಯವಹರಿಸುವಾಗ ಸೆಕ್ರೆಟರಿ ಆಫ್ ಸ್ಟೇಟ್, ಗವರ್ನರ್-ಜನರಲ್ ಮತ್ತು ಗವರ್ನರುಗಳು ಸಮಾನವಾದ ಅಧಿಕಾರ ಹೊಂದಿರುತ್ತಿದ್ದರು. ನೊಂದ ನೌಕರರು ತಮ್ಮ ಅಹವಾಲುಗಳನ್ನು ಗವರ್ನರ್, ಗವರ್ನರ್-ಜನರಲ್ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಇವರಿಗೆ ಸಲ್ಲಿಸಬಹುದಾಗಿತ್ತು. ಯಾರಿಗಾದರೂ ಅನ್ಯಾಯವಾಗಿದ್ದರೆ ಅವರಿಗೆ ಸೆಕ್ರೆಟರಿ ಪರಿಹಾರ ಕೊಡಬಹುದಾಗಿತ್ತು. ನೌಕರರ ಸಂಬಳ ಸಾರಿಗೆ ಮತ್ತು ವಿಶ್ರಾಂತಿ ವೇತನ-ಇವುಗಳಾವುವೂ ಶಾಸನ ಸಭೆಗಳ ಮತಕ್ಕೆ ಒಳಪಟ್ಟಿರುತ್ತಿರಲಿಲ್ಲ. ನಿವೃತ್ತಿ ವೇತನವನ್ನು ಭಾರತದ ಬೊಕ್ಕಸದಿಂದ ಕೊಡುತ್ತಿರಲಿಲ್ಲ. ಭಾರತೀಯ ಸೈನಿಕನ ವಿಧವೆ ಹಾಗೂ ಅನಾಥರ ಸಂಚಿತನಿಧಿ, ಉನ್ನತಸೇವಾ (ಭಾರತೀಯ) ಸಂಸಾರದ ನಿವೃತ್ತಿವೇತನದ ನಿಧಿ ಮತ್ತಿತರ ಸಂಚಿತ ನಿಧಿಗಳನ್ನು ಚಕ್ರವರ್ತಿಯಿಂದ ನೇಮಕವಾದ ಕಮಿಷನರುಗಳ ಕೈಯಲ್ಲಿ ಇಡಲಾಗುತ್ತಿತ್ತು. ಇಷ್ಟಲ್ಲದೆ 1935ರ ಕಾಯಿದೆ ಕೇಂದ್ರದಲ್ಲಿ ಫೆಡರಲ್ ಲೋಕಸೇವಾ ಆಯೋಗವಿರಬೇಕೆಂದೂ ಸೂಚಿಸಿತು. ಎರಡು-ಮೂರು ಪ್ರಾಂತಗಳ ಉಪಯೋಗಕ್ಕಾಗಿ ಸಂಯುಕ್ತ ಲೋಕಸೇವಾ ಆಯೋಗವಿರಬೇಕೆಂದೂ ಅದು ಅವಕಾಶ ಮಾಡಿಕೊಟ್ಟಿತು. ಫೆಡರಲ್ ಲೋಕಸೇವಾ ಆಯೋಗದಲ್ಲಿರಬೇಕಾದ ಸದಸ್ಯ ಸಂಖ್ಯೆಯನ್ನು ಗವರ್ನರ್-ಜನರಲ್ಲನೂ ಪ್ರಾಂತಗಳ ಲೋಕಸೇವಾ ಆಯೋಗಗಳ ಸಂಖ್ಯೆಯನ್ನು ಪ್ರಾಂತ ಗವರ್ನರುಗಳೂ ನಿರ್ಣಯಿಸಬೇಕಾಗಿತ್ತು. ಅವುಗಳಲ್ಲಿದ್ದ ಅರ್ಧದಷ್ಟು ಸದಸ್ಯರು ಭಾರತದಲ್ಲಿ ಕೊನೆಯ ಪಕ್ಷ ಹತ್ತು ವರ್ಷಗಳವರೆಗಾದರೂ ನೌಕರಿಯಲ್ಲಿರಬೇಕಾಗಿತ್ತು.

**ಸ್ವತಂತ್ರ ಭಾರತದಲ್ಲಿ:** ಭಾರತ ಸ್ವಾತಂತ್ರ್ಯ ಕಾಯಿದೆಯ ಹತ್ತನೆಯ ಪ್ರಕರಣದ ಪ್ರಕಾರ ಇಂಡಿಯನ್ ಸಿವಿಲ್ ರದ್ದಾಯಿತು. ಈ ವ್ಯವಸ್ಥೆಯಲ್ಲಿದ್ದ ಅಧಿಕಾರಿಗಳಿಗೆ ಪರಿಹಾರ ಕೊಡಬೇಕೆಂದು ವಾದವನ್ನು ಸರ್ದಾರ್ ಪಟೇಲರು ಒಪ್ಪಲಿಲ್ಲ. ಕೊನೆಗೆ ಐರೋಪ್ಯ ಅಧಿಕಾರಿಗಳನ್ನು ನಿವೃತ್ತಿಗೊಳಿಸಿ ಅವರಿಗೆ ಪರಿಹಾರ ಕೊಡತಕ್ಕದ್ದೆಂದೂ ಭಾರತೀಯ ಅಧಿಕಾರಿಗಳು ತಮ್ಮ ಸೇವಾವಧಿ ಮುಗಿಯುವವರೆಗೂ ಮುಂದುವರಿಯತಕ್ಕದ್ದೆಂದೂ ತೀರ್ಮಾನವಾಗಿ ಇವರಿಗೆ ಕೆಲವು ವಿನಾಯಿತಿಗಳನ್ನು ಕೊಡಲಾಯಿತು. ರದ್ದಾದ ಈ ವ್ಯವಸ್ಥೆಯ ಸ್ಥಾನದಲ್ಲಿ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ (ಐಎಎಸ್) ಎಂಬ ಹೊಸ ವ್ಯವಸ್ಥೆಯ ರಚನೆಯಾಯಿತು.

**ಭಾರತದ ಹೊಸ ರಾಜ್ಯಾಂಗದಲ್ಲಿ ಲೋಕಸೇವಾ ಆಯೋಗಗಳು:** ಭಾರತದ ಹೊಸ ಸಂವಿಧಾನ ಲೋಕಸೇವೆಗಳ ಬಗ್ಗೆ ಪ್ರತ್ಯೇಕ ಕಾನೂನುಗಳನ್ನು ರಚಿಸಿದೆ. ರಾಜ್ಯಾಂಗದ 309ನೆಯ ಅನುಚ್ಛೇದದ ಪ್ರಕಾರ ಶಾಸಕಾಂಗ ಆಡಳಿತ ವರ್ಗಗಳಿಗೆ ನೌಕರರನ್ನು ಆರಿಸಿ ಕೊಳ್ಳುವ ವಿಧಾನವನ್ನು ಸುಧಾರಿಸಿ, ಕೇಂದ್ರ ಮತ್ತು ಸಂಸ್ಥಾನಗಳ ಸಹಾಯ ಸಹಕಾರಗಳಿಂದ ಲೋಕಸೇವೆಗಳಿಗೆ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಅವರ ಸೇವಾನಿಯಮಾವಳಿ ಮತ್ತಿತರ ಪ್ರಶ್ನೆಗಳನ್ನು ಕೂಲಂಕಷವಾಗಿ ವಿಮರ್ಶಿಸಿ, ನಿರ್ಣಯ ಮಾಡಬೇಕಾಗಿದೆ. ಶಾಸಕಾಂಗ ಇನ್ನಷ್ಟು ಮಾಡುವುದಕ್ಕೆ ಮೊದಲು ರಾಷ್ಟ್ರಾಧ್ಯಕ್ಷರಾಗಲೀ ಗವರ್ನರ್ ಆಗಲೀ ನೌಕರರ ಕ್ಷೇಮಾಭ್ಯುದಯಕ್ಕೆ ಮತ್ತು ಅವರ ಆಯ್ಕೆಗೆ ಸಂಬಂಧಪಟ್ಟ ನಿಯಮವನ್ನು ರಚಿಸುವುದು ಅವರ ಅಧಿಕಾರಕ್ಕೆ ಬಿಟ್ಟದ್ದಾಗಿದೆ. 310ನೆಯ ಅನುಚ್ಛೇದದ ಪ್ರಕಾರ, ರಕ್ಷಣಾ ಇಲಾಖೆಯಾಗಲೀ ಭಾರತದ ಇನ್ನಾವ ಇಲಾಖೆಯಲ್ಲಾಗಲೀ ಕೆಲಸಮಾಡುವ ವ್ಯಕ್ತಿ ರಾಷ್ಟ್ರಾಧ್ಯಕ್ಷರ ಇಚ್ಛೆಗನು ಸಾರವಾಗಿ ಸೇವೆ ಸಲ್ಲಿಸಬೇಕು. ಸಂಸ್ಥಾನದ ಲೋಕ ಸೇವೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಸಂಸ್ಥಾನದ ಗವರ್ನರ್ ಸುಪ್ರೀತನಾಗುವಂತೆ ತನ್ನ ಜವಾಬ್ದಾರಿ ನಿರ್ವಹಿಸಬೇಕು. 311ನೆಯ ಅನುಚ್ಛೇದದ ಪ್ರಕಾರ ಕೇಂದ್ರದ ಲೋಕಸೇವೆಯಲ್ಲಿರುವ ಅಥವಾ ಸಮಗ್ರ ಭಾರತದ ಸೇವೆಯಲ್ಲಿರುವ ಅಥವಾ ಸಂಸ್ಥಾನದ ಆಡಳಿತ ವರ್ಗದಲ್ಲಿರುವ ಯಾವ ಅಧಿಕಾರಿಯನ್ನಾಗಲೀ ಸರಿಯಾದ ಕಾರಣವಿಲ್ಲದೆ ಕೆಲಸದಿಂದ ತೆಗೆಯುವಂತಿಲ್ಲ. ಕಾರಣ ಗಳನ್ನು ಕೊಡಲು ಸಾಕಷ್ಟು ಅವಕಾಶ ಕೊಡದೆಯೂ ಯಾವ ಅಧಿಕಾರಿಯನ್ನಾಗಲೀ ಕೆಲಸದಿಂದ ತೆಗೆಯುವಂತಿಲ್ಲ. ಅವನನ್ನು ಆಗಿನ ಸ್ಥಾನಮಾನದಿಂದ ಕೆಳದರ್ಜೆಗೆ ಇಳಿಸು ವಂತೆಯೂ ಇಲ್ಲ. ಆದರೆ ಕಳ್ಳರಿಗೂ ರಾಷ್ಟ್ರದ್ರೋಹಿಗಳಿಗೂ ಇದು ಅನ್ವಯಿಸುವುದಿಲ್ಲ.

**ಲೋಕಸೇವಾ ಆಯೋಗಗಳು:** 315ನೆಯ ಅನುಚ್ಛೇದದ ಪ್ರಕಾರ ಭಾರತದ ಒಕ್ಕೂಟಕ್ಕೆ ಒಂದು ಲೋಕಸೇವಾ ಆಯೋಗವೂ ಪ್ರತಿ ರಾಜ್ಯಕ್ಕೂ ಒಂದು ಲೋಕಸೇವಾ ಆಯೋಗವೂ ಇರುತ್ತವೆ. ಎರಡು ಅಥವಾ ಹೆಚ್ಚಿನ ಸಂಖ್ಯೆಯ ರಾಜ್ಯಗಳು ಒಟ್ಟಿಗೆ ಸೇರಿ ತಮಗೆ ಒಂದೇ ಲೋಕಸೇವಾ ಆಯೋಗ ಸಾಕೆಂದು ಹೇಳಿ, ಆ ರಾಜ್ಯಗಳ ಶಾಸನಾಂಗಗಳು ಒಂದು ನಿರ್ಣಯಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟರೆ, ಸಂಸತ್ತು ಆ ನಿರ್ಣಯದ ಆಧಾರದ ಮೇಲೆ ಒಂದು ಆಜ್ಞೆಹೊರಡಿಸಿ, ಸಂಯುಕ್ತ ರಾಜ್ಯ ಲೋಕಸೇವಾ ಆಯೋಗ ಸ್ಥಾಪಿಸಬಹುದು. ರಾಜ್ಯಪಾಲರ ಮನವಿಯ ಮೇಲೆ ಕೇಂದ್ರ ಲೋಕಸೇವಾ ಆಯೋಗವೇ ರಾಷ್ಟ್ರಾಧ್ಯಕ್ಷರ ಅಪ್ಪಣೆ ಪಡೆದು, ರಾಜ್ಯದ ಕೆಲಸವನ್ನೂ ನಿರ್ವಹಿಸಬಹುದು. 316ನೆಯ ಅನುಚ್ಛೇದದ ಪ್ರಕಾರ ಒಕ್ಕೂಟದ ಆಯೋಗದ ಅಥವಾ ಸಂಯುಕ್ತ ಆಯೋಗದ ಅಧ್ಯಕ್ಷನನ್ನು ರಾಷ್ಟ್ರಾಧ್ಯಕ್ಷರೂ ರಾಜ್ಯದ ಆಯೋಗದ ಅಧ್ಯಕ್ಷನನ್ನು ರಾಜ್ಯಪಾಲರೂ ನೇಮಿಸಬಹುದಾಗಿದೆ. ಪ್ರತಿ ಆಯೋಗದ ಅರ್ಧದಷ್ಟು ಸದಸ್ಯರೂ ತಾವು ಅದರ ಸದಸ್ಯರಾಗುವುದಕ್ಕೆ ಮುನ್ನ 10 ವರ್ಷಗಳ ಕಾಲ ಕೇಂದ್ರ ಸರಕಾರದಲ್ಲೂ ಸಂಸ್ಥಾನದಲ್ಲೂ ಸೇವೆ ಸಲ್ಲಿಸಿರಬೇಕು. ಪ್ರತಿಯೊಬ್ಬ ಸದಸ್ಯನೂ ಸಾಮಾನ್ಯವಾಗಿ 6 ವರ್ಷ ಕಾಲ ಆ ಪದವಿಯಲ್ಲಿರಬಹುದು. (ಬಿ.ಎಂ.)

**ಇಂಡೊ–ಚೀನದ ಇತಿಹಾಸ:** ಇಂಡೊ–ಚೀನದ ಮೇಲ್ಮೈ ಲಕ್ಷಣಕ್ಕೂ ಈ ಪ್ರದೇಶದ ಇತಿಹಾಸಕ್ಕೂ ನೇರ ಸಂಬಂಧವಿದೆ. ಇದರ ಪರ್ವತ ಶ್ರೇಣಿಗಳು ಉತ್ತರ–ದಕ್ಷಿಣವಾಗಿ ಹಬ್ಬಿರುವುದರಿಂದ ಇಲ್ಲಿ ಜನಪ್ರವಾಹವೂ ಇದೇ ದಿಕ್ಕಿನಲ್ಲೇ ಹರಿದಿದೆ. ಸಯಾಮೀ ಜನ ಮೆನಾಂಗ್ ಕಣಿವೆಯಲ್ಲೂ ಲಾವೋಸ್ ಜನ ಮೆಕಾಂಗ್ ಕಣಿವೆಯಲ್ಲೂ ಅನ್ನಾಮಿಗಳು ಚೀನ ಕಡಲ ಕರೆಯಲ್ಲೂ ಹರಡಿಕೊಂಡರು. ಇವರು ದಕ್ಷಿಣದಲ್ಲಿದ್ದ ಖ್ಮೇರ್ ಚಕ್ರಾಧಿಪತ್ಯವನ್ನೂ ಚಾಮ್ ಆಡಳಿತವನ್ನೂ ಉರುಳಿಸಿದರು. ಪೂರ್ವ ಇಂಡೊ–ಚೀನದಲ್ಲಿ ಪರ್ವತಗಳು ಹಿಂದುಳಿದ ಜನಾಂಗಗಳ ತೊಟ್ಟಿಲುಗಳಾಗಿವೆ. ಬಯಲುಪ್ರದೇಶಗಳ ಜನರೇ ಹೆಚ್ಚು ಮುಂದುವರಿದಿದ್ದಾರೆ. ಅಧಿಕಾರ ಪ್ರಭಾವಗಳೆಲ್ಲ ಉದ್ದಕ್ಕೂ ಅವರ ಕೈಯಲ್ಲೇ ಇವೆ. ಈಗಿನ ಇಂಡೊ–ಚೀನದ ಜನಜೀವನದ ಮೇಲೆ ಇಂಡೊನೇಷ್ಯನ್, ಭಾರತೀಯ ಹಾಗೂ ಚೀನಿ ನಾಗರಿಕತೆಗಳು ಪ್ರಭಾವ ಬೀರಿವೆ. ಪೂರ್ವಪರ್ವತದ ಮಾಯ್ ಜನದ ಮೇಲೆ ಇಂಡೊನೇಷ್ಯದ ಪ್ರಭಾವವೂ ದಕ್ಷಿಣದ ಚಾಂ ಮತ್ತು ಖ್ಮೇರ್‌ಗಳ ಮೇಲೆ ಭಾರತದ ಪ್ರಭಾವವೂ ಅನ್ನಾಮಿ ಜನರ ಮೇಲೆ ಚೀನಿ ಪ್ರಭಾವವೂ ಬಿದ್ದಿವೆ.

ಮೊತ್ತಮೊದಲು ಆಗ್ನೇಯ ಏಷ್ಯದಲ್ಲಿ ನೆಲೆಸಿದ ಜನಾಂಗಗಳಲ್ಲಿ ಆಸ್ಟ್ರಲಾಯಿಡ್, ನೆಗ್ರಿಟೋ, ಮೆಲನೇಸಿಯಡ್ ಮತ್ತು ಇಂಡೊನೇಷ್ಯನ್ ಇವು ಮುಖ್ಯವಾದುವು. ಮೊದಲಿನ ಮೂರು ಜನಾಂಗಗಳೂ ಹಳೆ ಶಿಲಾಯುಗ ಮತ್ತು ನವ ಶಿಲಾಯುಗದ ನಡುವಣ ಸಂಸ್ಕೃತಿಗೆ ಸೇರಿದವು. ಕೊನೆಯ ಇಂಡೊನೇಷ್ಯನ್ ಜನಾಂಗ ಪ್ರ.ಶ.ಪೂ. ಸು. 2500 – 1500 ವರ್ಷಗಳ ಹಿಂದೆ ಆಗ್ನೇಯ ಏಷ್ಯದಲ್ಲಿ ತಳವೂರಿದಂತೆ ಕಾಣುತ್ತದೆ. ಇವರಿಂದಲೇ ನವ ಶಿಲಾಯುಗ ಪ್ರಾರಂಭವಾಯಿತು. ಈ ಸ್ಥಿತಿ ಕೆಲ ಶತಮಾನ ಕಳೆದ ಅನಂತರ ಇಲ್ಲಿ ಕಬ್ಬಿಣಯುಗ ಪ್ರಾರಂಭವಾಯಿತು.

ಈ ಪ್ರದೇಶಗಳೊಂದಿಗೆ ಬಹು ಹಿಂದಿನಿಂದಲೂ ಚೀನೀಯರು ಸಂಪರ್ಕ ಹೊಂದಿದ್ದರು. ಪ್ರ.ಶ.ಪೂ.ಸು.300ರಷ್ಟು ಹಿಂದೆಯೇ ಇಲ್ಲಿ ಚೀನೀಯರು ವ್ಯಾಪಾರ ಮಾಡುವುದರ ಜೊತೆಗೆ ಅನೇಕ ವ್ಯಾಪಾರ ಸಂಸ್ಥೆಗಳನ್ನು ಸ್ಥಾಪಿಸಿದ್ದರೆಂಬ ಐತಿಹ್ಯವಿದೆ. ಪಶ್ಚಿಮ ಹಾನ್ ರಾಜವಂಶದ ಕಾಲಕ್ಕೆ (ಪ್ರ.ಶ.ಪೂ. 206–209)ಚೀನಿಯರು ಭಾರತಕ್ಕೆ ಹೋಗಲು ಕಷ್ಟ ಸಾಧ್ಯವಾಗಿದ್ದ ಮಧ್ಯ ಏಷ್ಯದ ಮಾರ್ಗದ ಬದಲು ಸಮುದ್ರ ಮಾರ್ಗವನ್ನು ಕಂಡುಹಿಡಿದರು. ಈಗಿನ ಇಂಡೊ–ಚೀನದ ರಾಷ್ಟ್ರಗಳು ಈ ಮಾರ್ಗದ ಮಧ್ಯದಲ್ಲೇ ಇದ್ದುದ್ದರಿಂದ ಸಹಜವಾಗಿಯೇ ಚೀನದೊಡನೆ ಇವುಗಳ ಸಾಂಸ್ಕೃತಿಕ ಸಂಬಂಧ ಬೆಳೆಯಿತು. ಪೂರ್ವದ ಹಾನ್ ವಂಶಜರು (ಪ್ರ.ಶ.26–221) ಟಾಂಕಿನ್ ಅಥವಾ ಈಗಿನ ಉತ್ತರ ವಿಯೆಟ್ನಾಂ ಪ್ರಾಂತವನ್ನು ಪ್ರತ್ಯಕ್ಷ ಚೀನೀ ಆಡಳಿತಕ್ಕೆ ಒಳಪಡಿಸಿದರು.

ಮುಂದಿನ ಪ್ರಬಲ ಸಾಂಸ್ಕೃತಿಕ ಸಂಬಂಧ ಭಾರತದ್ದು. ಭಾರತೀಯರು ನೆಲ ಮತ್ತು ಜಲಮಾರ್ಗದಿಂದ ಇಂಡೊ–ಚೀನ ತಲಪಿದ್ದು ಪ್ರ.ಶ.ಪೂ. 1–2ನೆಯ ಶತಮಾನಗಳಲ್ಲಿ. ಬ್ರಹ್ಮಪುತ್ರ ಕೊಳ್ಳದಿಂದ ಟಾಂಕಿನ್‌ವರೆಗಿನ ಭೂಮಾರ್ಗ ತೀರ ಪ್ರಾಚೀನ ಕಾಲದಿಂದ ಬಳಕೆಯಲ್ಲಿತ್ತು. ಪುರಾತನ ಕಾಲದಿಂದಲೂ ಅನ್ನಾಂ ಚೀನಗಳೊಡನೆ ಪೂರ್ವಭಾರತದ ವ್ಯಾಪಾರ ಸಂಬಂಧವಿತ್ತು. ಉತ್ತರ ಬರ್ಮಾದ ಯುನ್ನಾನ್ ಪ್ರಾಂತ ಗಾಂಧಾರವೆಂಬ ಹಿಂದೂ ಹೆಸರಿನಿಂದ ಸಾಕಷ್ಟು ಪರಿಚಿತವಿತ್ತು. ಪ್ರಸಕ್ತದ ಆರಂಭ ಕಾಲದಿಂದ ಇಂಡೊ–ಚೀನದ ಕರಾವಳಿಯ ನಾಡುಗಳಲ್ಲಿ ಆಳಿದ ಹಿಂದು ರಾಜಮನೆತನಗಳ ಇತಿಹಾಸ ಸಾಕಷ್ಟು ದೊರೆತಿವೆ.

**ಫೂನಾನ್:** ಕಾಂಬೋಡಿಯದ ತೀರ ಪ್ರಾಚೀನ ರಾಜ್ಯವನ್ನು ಚೀನಿಯರು ಫೂನಾನ್ ಎಂದು ಕರೆದಿದ್ದಾರೆ. ಮೊದಲಿನ ಹಿಂದು ಅರಸನ (ಹ್ಯೂನ್ ಟಿಯನ್) ಹೆಸರು ಕೌಂಡಿನ್ಯ. ಚೀನೀ ರಾಜವಂಶ ಚರಿತ್ರೆಯಿಂದ ಫೂನಾನ್ ರಾಜ್ಯ ಚಂಪಾರಾಜ್ಯದ ಪಶ್ಚಿಮಕ್ಕೆ ಇದೆ. ಕೋಟೆಗಳಿಂದ ಕೂಡಿದ ಅನೇಕ ಪಟ್ಟಣಗಳು ಈ ರಾಜ್ಯದಲ್ಲಿದ್ದು ಇಲ್ಲಿ ಭದ್ರ ಮನೆಗಳೂ ಅರಮನೆಗಳೂ ಇವೆ. ಜನ ಕಪ್ಪು ಬಣ್ಣದವರು, ಕುರೂಪಿಗಳು, ತೀರ ಸಾಧುಗಳು. ತುಡುಗು ಕಳವುಗಳು ಇವರಿಗೆ ಗೊತ್ತಿಲ್ಲ. ಇವರು ಮುಖ್ಯವಾಗಿ ಬೇಸಾಯಗಾರರು. ಆಭರಣ ಮಾಡುವುದರಲ್ಲಿ ತುಂಬ ಆಸಕ್ತಿಯುಳ್ಳವರು. ಬೆಳ್ಳಿಯ ಪಾತ್ರೆಗಳನ್ನು ಊಟಕ್ಕೆ ಬಳಸುವವರು. ಬೆಳ್ಳಿ, ಬಂಗಾರ, ಮುತ್ತುಗಳು ಮತ್ತು ಸುಗಂಧ ದ್ರವ್ಯಗಳ ರೂಪದಲ್ಲಿ ಕರಗಳನ್ನು ಕೊಡುವವರು. ಇವರ ಹತ್ತಿರ ಬಹಳ ಗ್ರಂಥಗಳಿದ್ದು ವಾಚನಾಲಯಗಳೂ ಇವೆ. ತಮ್ಮ ಭಾಷೆಗೆ ಭಾರತದ ಲಿಪಿಯೊಂದನ್ನು ಅಳವಡಿಸಿಕೊಂಡಿದ್ದಾರೆ. ಇವರ ಲಗ್ನ, ಶ್ರಾದ್ಧ ಮುಂತಾದ ಸಂಸ್ಕಾರಗಳು ಚಂಪಾದೇಶದ ಜನರ ಸಂಸ್ಕಾರಗಳಂತೆಯೇ ಇವೆ.

ಅನೇಕ ಚೀನಿ ವರದಿಗಳಿಂದಲೂ ಅಲ್ಲಿ ದೊರೆತ ಸಂಸ್ಕೃತ ಶಿಲಾಶಾಸನಗಳಿಂದಲೂ ಫೂನಾನ್ ಮೇಲೆ ಭಾರತೀಯ ಸಂಸ್ಕೃತಿಯ ಪ್ರಭಾವ ಎಷ್ಟರಮಟ್ಟಿಗೆ ಇತ್ತೆಂಬುದು ಗೊತ್ತಾಗುತ್ತದೆ. ಇಲ್ಲಿಯ ಅರಸರು ಕೌಂಡಿನ್ಯ, ಜಯವರ್ಮ, ಗುಣವರ್ಮ ಮೊದಲಾದ ಹಿಂದು ಹೆಸರುಗಳನ್ನು ಧರಿಸುತ್ತಿದ್ದರು. ಈ ಅರಸರು ಚೀನದೊಡನೆ ನಿಕಟ ರಾಜಕೀಯ ಸಂಬಂಧವನ್ನಿಟ್ಟುಕೊಂಡಿದ್ದರು. ಇವರ ಹೆಸರುಗಳ ಚೀನೀ ರೂಪಾಂತರಗಳು ಚೀನೀ ಇತಿಹಾಸದಲ್ಲಿ ದೊರಕುತ್ತವೆ. ಭಾರತದ ಶೈವ, ವೈಷ್ಣವ ಮತ್ತು ಬೌದ್ಧ ಧರ್ಮಗಳು ಫೂನಾನ್‌ನಲ್ಲಿಯೂ ವರ್ಧಿಸಿದವು. ಭಾರತೀಯ ತತ್ತ್ವಜ್ಞಾನಗಳೂ ಪೌರಾಣಿಕ, ಧಾರ್ಮಿಕ ಪರಂಪರೆಗಳೂ ಇಲ್ಲೂ ವ್ಯಾಪಿಸಿದ್ದವು. ಸಂಸ್ಕೃತ, ಸಾಹಿತ್ಯ, ಶಿಲ್ಪಕಲೆ, ವರ್ಣಾಶ್ರಮ ಧರ್ಮವ್ಯವಸ್ಥೆ ಇವು ತಮ್ಮ ವಿಶಾಲರೂಪದಲ್ಲಿ ಇಲ್ಲೂ ಊರ್ಜಿತವಾದವು. 6ನೆಯ ಶತಮಾನದ ಹೊತ್ತಿಗೆ ಭಾರತೀಯ ಸಂಸ್ಕೃತಿ ನಿಚ್ಚಳವಾಗಿ ಈ ಪ್ರದೇಶದಲ್ಲಿ ಒಡಮೂಡಿತು.

**ಕಂಬುಜ:** ಅನಂತರ ಬೆಳೆದ ಕಂಬುಜ ರಾಜ್ಯ ಈ ಸಂಸ್ಕೃತಿಯನ್ನು ಅತ್ಯುಚ್ಚ ಶಿಖರಕ್ಕೆ ಮುಟ್ಟಿಸಿತು. ರಾಜ್ಯ ವಿಸ್ತರಣೆ ಪ್ರಾರಂಭವಾಗಿ ಪೂರ್ವ ಪಶ್ಚಿಮಕ್ಕೆ ಬೆಳೆದದ್ದಲ್ಲದೆ ಈಗಿನ ಸಯಾಂ ಅಥವಾ ಥೈಲೆಂಡನ್ನು ಒಳಗೊಂಡಿತ್ತು. ಈ ಪ್ರದೇಶದಲ್ಲಿ ದೊರೆತ ನೂರಾರು ಶಿಲಾಶಾಸನಗಳು 8–15ನೆಯ ಶತಮಾನದವರೆಗೆ ಆಳಿದ ಹಿಂದು ಅರಸರ ವೈಭವವನ್ನು ಸಾರುತ್ತವೆ. ಮೊದಲನೆಯ ಅರಸನಾದ ಶ್ರುತವರ್ಮನಿಂದ (4ನೆಯ ಶತಮಾನ) ಇಲ್ಲಿನ ಇತಿಹಾಸ ಲಭ್ಯವಾಗುತ್ತದೆ. ಶ್ರುತವರ್ಮನ ಮಗ ಶ್ರೇಷ್ಠವರ್ಮ ಶ್ರೇಷ್ಠಪುರವೆಂಬ ನಗರವನ್ನು ಕಟ್ಟಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಪಕ್ಕದ ಲಿಂಗಪರ್ವತದಲ್ಲಿ (ಈಗಿನ ವಾಟ್ ಪೂ ಬೆಟ್ಟ) ಈ ಅರಸರ ಕುಲದೇವತೆಯಾದ ಭದ್ರೇಶ್ವರ ಶಿವನ ದೇವಾಲಯವಿತ್ತು.

637–74ರ ತನಕ ಆಳುತ್ತಿದ್ದ ಒಂದನೆಯ ಜಯವರ್ಮನವರೆಗೆ ಇಲ್ಲಿನ ಇತಿಹಾಸ ವನ್ನರಿಯುವುದಕ್ಕೆ ಸಾಕಷ್ಟು ದಾಖಲೆಗಳಿವೆ. ಮುಂದೆ ಒಂದು ಶತಮಾನದವರೆಗೆ ನಿರ್ದಿಷ್ಟ ಪುರಾವೆಗಳಿಲ್ಲ. ಆದರೆ ಈ ಕಾಲದಲ್ಲಿ ರಾಜ್ಯ ಭದ್ರವಾಗಿಯೇ ಉಳಿಯಿತೆನ್ನಬಹುದು. ಚೀನ ಭಾರತಗಳೊಡನೆ ಈ ದೇಶ ರಾಜಕೀಯ ಸಂಬಂಧ ಇಟ್ಟುಕೊಂಡಿತ್ತು. 9ನೆಯ ಶತಮಾನದ ಪ್ರಾರಂಭದಲ್ಲಿ ಪಟ್ಟವೇರಿದ ಎರಡನೆಯ ಜಯವರ್ಮನಿಂದ ಮುಂದಕ್ಕೆ ಪುನಃ ಕಂಬುಜರ ಇತಿಹಾಸ ತಿಳಿಯುತ್ತದೆ. ಈ ಅರಸ ತುಂಬ ಜನಪ್ರಿಯನಾಗಿದ್ದ. ಈತನ ಆಳಿಕೆಯಲ್ಲಿ ಅನೇಕ ರಾಜಧಾನಿಗಳಿದ್ದುವು. ಕಂಬುಜದ ಪ್ರಮುಖ ದೇವಾಲಯಗಳನ್ನೂ ಇತರ ಕಟ್ಟಡಗಳನ್ನೂ ಈತ ಕಟ್ಟಿಸಿದ. ಕಾಂಬೋಡಿಯದ ಜನಪದ ಸಾಹಿತ್ಯದಲ್ಲಿ ಈತನಿಗೆ ಭಾರತದಲ್ಲಿ ವಿಕ್ರಮನಿಗಿರುವಂಥದೇ ಸ್ಥಾನವಿದೆ. ಪ್ರಸಿದ್ಧ ಆಂಕೋರ್‌ವಾಟ್ ಕಟ್ಟಡ ಈತನದೇ ಎಂಬ ಊಹೆಯಿದೆ. ಈತ ಕಂಬುಜ ರಾಜೇಂದ್ರನೆಂಬ ಬಿರುದು ಧರಿಸಿದ. ಕಂಬು ಎಂಬ ಸೂರ್ಯವಂಶದ ಅರಸನಿಂದ ಈತನ ವಂಶ ಪ್ರಾರಂಭವಾಯಿತೆಂದು ಈತನ ಶಾಸನಗಳು ತಿಳಿಸುತ್ತವೆ. ಇವನಿಂದ ಮುಂದಿನ ಅರಸರೆಲ್ಲ ಕಂಬುಜೇಶ್ವರರೆಂದೇ ಪ್ರಸಿದ್ಧರಾದರು.

ಭಾರತೀಯ ಸಂಸ್ಕೃತಿಯೊಂದಿಗೆ ಶಿಲ್ಪಕಲೆಯನ್ನು ಕಂಬುಜದ ಜನ ತಮಗೆ ಬೇಕಾದಂತೆ ಅಳವಡಿಸಿಕೊಂಡರು. ಸ್ಥಾನಿಕ ಸಂಪ್ರದಾಯದೊಂದಿಗೆ ಭಾರತೀಯ ಕಲೆ ಸುಂದರವಾಗಿ ಮೇಳಗೊಂಡಿತು. ಆಂಗ್ಕೋರದ ಕಟ್ಟಡ ಪರಂಪರೆಗೆ ಸೇರಿದ್ದಾದರೂ

ಭಾರತೀಯತೆಯೇ ಅದರ ಜೀವಾಳ. ಈ ಸಂಸ್ಕೃತಿಯ ಹಬ್ಬುಗೆಯೊಂದಿಗೆ ರಾಜ್ಯವೂ ವಿಸ್ತಾರವಾಯಿತು. 863ರ ಚೀನಿ ಬರೆಹಗಳಿಂದ ಖ್ಮೇರ್ ರಾಜ್ಯ ಇಡೀ ಇಂಡೊ–ಚೀನವನ್ನಲ್ಲದೆ ದಕ್ಷಿಣ ಯೂನಾನ್‌ವರೆಗೂ ಮುಟ್ಟಿತೆಂದು ತಿಳಿದುಬರುತ್ತದೆ. ಖ್ಮೇರರು ಬಲಾಢ್ಯರಿದ್ದು ಇತರ ಅರಸರಿಂದ ಕಪ್ಪವನ್ನೆತ್ತುತ್ತಿದ್ದರು ಎನ್ನುವುದು ಅರಬರ ಬರೆಹಗಳಿಂದ ಗೊತ್ತಾಗುವ ಸಂಗತಿ.

ಕಂಬುಜದ ರಾಜ್ಯ ವ್ಯವಸ್ಥೆಗೆ ಭಾರತೀಯ ಪರಂಪರೆಯಂತೆ ಧರ್ಮಶಾಸ್ತ್ರಗಳು ಆಧಾರವಾಗಿದ್ದುವು. ಅರಸರಿಗೆ ಸಚಿವರೂ ಮಂತ್ರಿಗಳೂ ಆಚಾರ್ಯರೂ ಸಲಹೆ ನೀಡುತ್ತಿದ್ದರು. ರಾಜ್ಯವನ್ನು ಅನೇಕ ಜಿಲ್ಲೆಗಳಾಗಿ ವಿಭಾಗಿಸಲಾಗಿತ್ತು. ಇವುಗಳ ಆಡಳಿತ ಸುಬೇದಾರರಿಗೆ ಒಳಪಟ್ಟಿತ್ತು. ತಾಮ್ರಪುರ, ಧ್ರುವಪುರ, ವಿಕ್ರಮಪುರ, ಶ್ರೇಷ್ಠಪುರ ಮುಂತಾದುವು ಇಲ್ಲಿನ ಊರುಗಳ ಹೆಸರುಗಳಾಗಿದ್ದುವು. ಸಾಮಾನ್ಯವಾಗಿ ಊರುಗಳ ಸುತ್ತಲೂ ಕೋಟೆಗಳಿದ್ದುವು. ವಿಪ್ರಶಾಲೆ (ವಿದ್ವಜ್ಜನರ ಸಮಿತಿ), ಸರಸ್ವತಿ (ಸಾರ್ವಜನಿಕರ ಶಾಲೆ), ಪುಸ್ತಕಾಶ್ರಮ (ವಾಚನಾಲಯ), ಸತ್ರಗಳು ಮತ್ತು ಆರೋಗ್ಯಶಾಲೆಗಳೇ ಮುಂತಾದ ಸಾರ್ವಜನಿಕ ಸಂಸ್ಥೆಗಳು ಪ್ರತಿ ಊರಿನಲ್ಲೂ ಇದ್ದುವು. ಮುಖ್ಯ ಮಾರ್ಗಗಳಲ್ಲೂ ಕೂಟಗಳಲ್ಲೂ ವಸತಿ ಗೃಹಗಳು (ಧರ್ಮಶಾಲೆ) ಇದ್ದವು.

ಸಂಸ್ಕೃತಿ ಸಾಹಿತ್ಯಗಳಲ್ಲೂ ಕಂಬುಜ ಪರಿಪೂರ್ಣತೆ ಪಡೆಯಿತು. ಶಿಲ್ಪಕಲೆಯಂತೂ ಶಿಖರಕ್ಕೆ ಏರಿದ್ದನ್ನು ಆಂಕೋರ್‌ವಾಟ್ ಮತ್ತು ಆಂಕೋರ್‌ಥಾಮ್ ಸಾರುತ್ತವೆ. ಹೀಗೆ ಸುಮಾರು ಆರು ಶತಮಾನಗಳ ಕಾಲ ವೈಭವದಿಂದಿದ್ದ ಮೇಲೆ ಈ ರಾಜ್ಯಕ್ಕೆ ಪೂರ್ವದಿಂದ ಅನ್ನಾಂ ಧಾಳಿಗಾರರೂ ಪಶ್ಚಿಮದಿಂದ ಥಾಯ್ ಆಕ್ರಮಣಕಾರರೂ ನುಗ್ಗಿ ಇದನ್ನು ಹಾಳುಗೆಡವಿದರು. ಹೀಗೆ ಅರಸರ ಬಲ ಕುಗ್ಗುತ್ತ ನಡೆದು 18ನೆಯ ಶತಮಾನದಲ್ಲಿ ಫ್ರೆಂಚರು ಇಲ್ಲಿಯ ರಾಜ್ಯದ ಸೂತ್ರಧಾರರಾದರು. ಆದರೆ ಮೊದಲಿನ ಅರಸರ ಯುದ್ಧ ವಿಜಯಗಳ ಸ್ಮಾರಕಗಳೂ ಧಾರ್ಮಿಕ ದಾನ ದತ್ತಿಗಳೂ ಎಲ್ಲಕ್ಕೂ ಹೆಚ್ಚಾಗಿ ಭಯ ಕಟ್ಟಡಗಳೂ ಈ ಜನ ಅರಗಿಸಿಕೊಂಡ ಭಾರತೀಯ ಸಂಸ್ಕೃತಿಯ ಕಥೆಯನ್ನೇ ಸಾರುತ್ತವೆ.

**ಚಂಪ:** ಕಾಂಬೋಡಿಯದ ಪೂರ್ವಕ್ಕೆ ಚಂಪ (ಅನಂತರ ಇದು ಅನ್ನಾಂನ ಒಂದು ಭಾಗವಾಯಿತು) ಎಂಬ ಇನ್ನೊಂದು ಹಿಂದು ರಾಜ್ಯ ಅನೇಕ ಶತಕಗಳ ಕಾಲ ಘನತೆಯಿಂದ ಮೆರೆಯಿತು. ಚೀನಿಯರು ಈ ನಾಡನ್ನು ಲಿನ್‌ಯಿ ಎಂದು ಕರೆಯುತ್ತಿದ್ದರು. ಚಿನ್ ವಂಶದ ಮೊದಲನೆಯ ಅರಸನ ಕಾಲಕ್ಕೆ ಲಿನ್‌ಯಿ ಜನ ಫೂನಾನದ ಬೆಂಬಲದೊಂದಿಗೆ ಚೀನಿ ಪ್ರದೇಶದ ಮೇಲೆ ಆಗಿಂದಾಗ್ಗೆ ಧಾಳಿ ಮಾಡುತ್ತಿದ್ದರೆಂದು ಉಲ್ಲೇಖವಿದೆ. ಮೂರನೆಯ ಶತಮಾನದಲ್ಲಿ ಶ್ರೀಮಾರನಿಂದ ಸ್ಥಾಪಿಸಲ್ಪಟ್ಟ ಈ ರಾಜ್ಯ 15ನೆಯ ಶತಮಾನದವರೆಗೆ ಬಾಳಿತು. ಚಂಪ ದೇಶದವರನ್ನು ಚೀನಿಯರು ಚಾಮ್ ಎಂದು ಕರೆಯುತ್ತಿದ್ದರು. ಈ ದೇಶದ ಜನರ ನಡೆನುಡಿಗಳು ಚೀನಿ ವೃತ್ತಗಳಲ್ಲಿ ಉಲ್ಲೇಖಿತವಾಗಿವೆ. ಭದ್ರವರ್ಮನೆಂಬ ಅರಸರ ಬಗ್ಗೆ ಅನೇಕ ಶಾಸನಗಳಿವೆ. ಈತ ಕಟ್ಟಿಸಿದ ಭದ್ರೇಶ್ವರ ದೇವಸ್ಥಾನವೊಂದಿದೆ. ಒಂದು ಶಾಸನದಲ್ಲಿ ನಾಗದೇವತೆಯ ಬಗ್ಗೆ ವರ್ಣನೆಯಿದೆ. ನಾಗಶಿವ ಸಂಪ್ರದಾಯ ಚಂಪಾದಲ್ಲಿ ನೆಲೆಯೂರಿತೆನ್ನುವುದಕ್ಕೆ ಇದೊಂದು ಉದಾಹರಣೆ. 13ನೆಯ ಶತಮಾನದ ಚೀನಿ ಪ್ರವಾಸಿಗ ಮಾ–ತ್ವಾನ್–ಲಿನ್ ಈ ದೇಶವನ್ನು ಸಂದರ್ಶಿಸಿ ಇಲ್ಲಿನ ನಡೆನುಡಿಗಳು ಫೂನಾನ್‌ನಲ್ಲಿರುವಂತೆಯೆ ಇವೆಯೆಂದು ಬಣ್ಣಿಸಿದ್ದಾನೆ. ಇಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ಥಾನಮಾನಗಳಿದ್ದುವು. ಇವರಿಗೆ ತಮ್ಮ ಪತಿಗಳನ್ನು ತಾವೇ ಆರಿಸುವ ಅಧಿಕಾರವಿತ್ತು. ಅನೇಕ ವಂಶಗಳ ಅರಸರು ಅಮರಾವತಿ, ಪಾಂಡುರಂಗ, ಶ್ರೀವಿಜಯ, ಕೌಠಾರ ಮುಂತಾದ ಬೇರೆ ಬೇರೆ ರಾಜಧಾನಿಗಳಿಂದ ಈ ದೇಶವನ್ನಾಳಿದರು. ಉತ್ತರದಲ್ಲಿ ಚೀನದೊಂದಿಗೆ ಚಕಮಕಿಗಳು ನಡೆಯುತ್ತಿದ್ದುವು. ಮಂಗೋಲರು, ಕಂಬುಜರು, ಥಾಯ್ ಜನ ಆಗಾಗ್ಗೆ ಧಾಳಿ ನಡೆಸುತ್ತಿದ್ದರು. ಈ ಧಾಳಿಗಳಿಂದ ಕೊನೆಗೊಮ್ಮೆ ಈ ರಾಜ್ಯ ಬಲಹೀನವಾಯಿತು. ಅನ್ನಾಂನ ಜನ ಬಂದು ಇಲ್ಲಿನ ಪಟ್ಟಣಗಳನ್ನೂ ಫಲವತ್ತಾದ ಕೊಳ್ಳಗಳನ್ನೂ ವಿಧ್ವಂಸಗೊಳಿಸಿದರು. ಹೀಗಾಗಿ ಭಾರತೀಯ ಸಂಸ್ಕೃತಿಯ ಕೀರ್ತಿಸ್ತಂಭಗಳಂತಿದ್ದ ಎಷ್ಟೋ ಸ್ಥಳಗಳು ನಿರ್ನಾಮವಾದವು. ದಂಡೆತ್ತಿ ಬಂದ ಅನೇಕ ತಂಡಗಳು ಅಲ್ಲಲ್ಲಿ ನೆಲೆಸಿ ಹೊಸ ನಾಗರಿಕತೆಯನ್ನು ಕಟ್ಟಿದುವು. ಈಗ ಅಳಿದುಳಿದ ಪಾಳು ಕಟ್ಟಡಗಳು ಘನತೆವೆತ್ತ ಹಿಂದು ಸಂಸ್ಕೃತಿಯ ಗತವೈಭವದ ಮೂಕ ಸಾಕ್ಷಿಗಳಾಗಿ ನಿಂತಿವೆ.

ಮಲಯ ದ್ವೀಪಕಲ್ಪದಲ್ಲಿ 775ರಲ್ಲಿ ರಾಜ್ಯ ಸ್ಥಾಪಿಸಿದ ಶೈಲೇಂದ್ರ ವಂಶದ ಅರಸರು ಸಾಮ್ರಾಜ್ಯ ವಿಸ್ತಾರದ ಮಹತ್ತ್ವಾಕಾಂಕ್ಷೆಯುಳ್ಳವರಾಗಿದ್ದರು. ಆಗ್ನೇಯ ಏಷ್ಯದ ಅನೇಕ ದ್ವೀಪಗಳಲ್ಲಿ ತಮ್ಮ ಸತ್ತೆಯನ್ನು ಸ್ಥಾಪಿಸಿದ್ದಲ್ಲದೆ ಅನ್ನಾಂ, ಕಾಂಬೋಡಿಯಗಳ ಮೇಲೂ ಪ್ರಭಾವ ಬೀರಿದರು. ಅನಂತರ ಬಂದ ಮಜಪಹಿತ್ ಮತ್ತು ಪೂರ್ವ ಜಾವಾ ಅರಸು ಮನೆತನಗಳೂ ಈ ರಾಜ್ಯ ಹವ್ಯಾಸದ ಪರಂಪರೆಯನ್ನು ಬೆಳೆಸಿ ಇಂಡೊ–ಚೀನದಲ್ಲಿಯ ರಾಜ್ಯಗಳ ಮೇಲೆ ತಮ್ಮ ಪ್ರಭಾವ ಬೀರಿದುವು. ಈ ಪ್ರದೇಶದಲ್ಲಿ ಪ್ರತ್ಯಕ್ಷ ಚೀನಿ ಸಂಪರ್ಕ ಬೆಳೆದದ್ದು 13ನೆಯ ಶತಮಾನದಲ್ಲಿ, ಮಂಗೋಲರು ಅಧಿಕಾರಕ್ಕೆ ಬಂದ ಮೇಲೆ. 1257–58ರಲ್ಲಿ ಇವರು ಅನ್ನಾಂ ಪ್ರಾಂತವನ್ನು ಆಕ್ರಮಿಸಿದರು. ಮುಂದೆ ಬಂದ ಮಿಂಗ್ ವಂಶದವರೂ ಇದೇ ಧೋರಣೆ ಮುಂದುವರಿಸಿ ಅನ್ನಾಂ ಮತ್ತು ಇತರ ಪ್ರದೇಶಗಳನ್ನು ಗೆದ್ದುಕೊಂಡರು. ಆದರೆ 1421ರಲ್ಲಿ ರಾಜಧಾನಿಯನ್ನು ನ್ಯಾನ್ ಕಿಂಗ್‌ನಿಂದ ಪೀಕಿಂಗ್‌ಗೆ ಬದಲಾಯಿಸಿದ ಮೇಲೆ ದಕ್ಷಿಣದ ಈ ರಾಜ್ಯಾಕಾಂಕ್ಷೆ ಕಡಿಮೆಯಾಯಿತು. ಮಂಗೋಲ್ ಚಕ್ರವರ್ತಿ ಕುಬ್ಲೈಖಾನನ ಕಾಲಕ್ಕೆ ವೆನಿಸ್‌ನ ಪ್ರವಾಸಿ ಮಾರ್ಕೊ ಪೋಲೊ ಚೀನವನ್ನು ಸಂದರ್ಶಿಸಿದ. ಮಾತೃಭೂಮಿಗೆ ಹಿಂತಿರುಗುವಾಗ ಈತ ಆಗ್ನೇಯ ಏಷ್ಯದ ಅನೇಕ ಸ್ಥಳಗಳನ್ನೂ ಕಂಡ. ಇವನು ಚಂಪ ಮತ್ತು ಜಾವಗಳನ್ನು ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸಿದ್ದಾನೆ.

ಈ ಕಾಲದಲ್ಲಿಯೇ ಮಲಯ ದ್ವೀಪಗಳಲ್ಲೂ ಸುಮಾತ್ರ, ಜಾವಗಳಲ್ಲೂ ಇಸ್ಲಾಂ ಧರ್ಮ ಹಬ್ಬತೊಡಗಿತ್ತು. ಆದರೆ ಬರ್ಮಾ ದೇಶದಿಂದ ಟಾಂಕಿನ್‌ನವರೆಗಿನ ಪ್ರದೇಶ ಈ ಪ್ರಭಾವಕ್ಕೆ ಒಳಗಾಗಲಿಲ್ಲ. ಮುಸ್ಲಿಂ ಸಂಸ್ಕೃತಿಗೆ ಇಲ್ಲಿ ಅವಕಾಶವೇ ಕೊಡದಷ್ಟುಮಟ್ಟಿಗೆ ಬೌದ್ಧಧರ್ಮ ಆಳವಾಗಿ ತಳವೂರಿತ್ತು ಅಥವಾ ವ್ಯಾಪಾರಕ್ಕೆ ಬಂದ ಮುಸ್ಲಿಮರು ಇಂಡೊ–ಚೀನಕ್ಕೆ ವಿಶೇಷವಾಗಿ ಹೋಗಲಿಲ್ಲ. ಚೀನಿಯರ ಒಡೆತನದ ಅನಂತರ ಒಮ್ಮೆಲೇ ಪಾಶ್ಚಾತ್ಯರ ಪ್ರವೇಶವಾಗಿ ಹದಿನೈದನೆಯ ಶತಮಾನದ ಅನಂತರ ಅವರ ಪ್ರಭಾವ ಹೆಚ್ಚು ಹೆಚ್ಚಾಗಿ ಹರಡತೊಡಗಿತು (**ನೋಡಿ–ಆಗ್ನೇಯ ಏಷ್ಯ**).

**ಫ್ರೆಂಚರ ಪ್ರಭಾವ:** ಇಂಡೊ–ಚೀನದಲ್ಲಿ ಫ್ರೆಂಚರ ಚಟುವಟಿಕೆಗಳು 1787ರಿಂದಲೂ ನಡೆದೇ ಇದ್ದುವು. ಫ್ರೆಂಚ್ ಪಾದ್ರಿಯೊಬ್ಬನ ಪ್ರಯತ್ನದಿಂದ ಕೊಚಿನ್–ಚೀನದ ಅರಸು ಮತ್ತು 15ನೆಯ ಲೂಯಿಯ ನಡುವೆ ಒಪ್ಪಂದವಾಗಿ ಫ್ರೆಂಚರು ಹೆಚ್ಚು ಹೆಚ್ಚಾಗಿ ಇಂಡೊ–ಚೀನಕ್ಕೆ ಬರತೊಡಗಿದರು. ಅನ್ನಾಂನ ರಾಜಪುತ್ರನೊಬ್ಬನಿಗೆ ಪಟ್ಟವೇರಲು ಸಹಾಯ ಮಾಡಿ ಇವರೂ ಈ ಯಾದವೀ ಕಲಹದಲ್ಲಿ ಸೇರಿದರು. ಆದರೆ 19ನೆಯ ಶತಮಾನದಲ್ಲಿ ಕ್ರೈಸ್ತ ಪಾದ್ರಿಗಳ ಬಗ್ಗೆ ಜನರಿಗೆ ಅಸಹನೆ ಉಂಟಾಯಿತು. ಮತಾಂತರ ಹೊಂದಿದ ಜನರೂ ಪಾದ್ರಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಕೊಲೆಗೀಡಾದರು. ಫ್ರಾನ್ಸ್ ಮತ್ತು ಸ್ಪೇನ್‌ಗಳ ಸರ್ಕಾರಗಳು ಮಧ್ಯಸ್ಥಿಕೆ ವಹಿಸಿ ಈ ರಕ್ತಪಾತವನ್ನು ನಿಲ್ಲಿಸಿದುವು. 1858ರಲ್ಲಿ ಟೂರಿನ್ ಎಂಬ ಮಹತ್ತ್ವದ ಬಂದರನ್ನೂ 1862ರಲ್ಲಿ ಸೈಗಾನನ್ನೂ ಗೆದ್ದ ಮೇಲೆ ಕೊಚಿನ್–ಚೀನದ ಪೂರ್ವದ ಮೂರು ಪ್ರಾಂತಗಳೂ ಪ್ರತ್ಯಕ್ಷವಾಗಿ ಫ್ರೆಂಚರ ಅಧೀನಕ್ಕೆ ಬಂದವು.

1873ರಲ್ಲಿ ಸೈಗಾನಿನಲ್ಲಿ ಸೈನಿಕ ಕಾಲೇಜೊಂದನ್ನು ಸ್ಥಾಪಿಸಲಾಯಿತು. ಅದೇ ವರ್ಷ ಟಾಂಕಿನ್ ಪ್ರಾಂತವೂ ಫ್ರೆಂಚರ ವಶವಾಯಿತು. 1887ರಲ್ಲಿ ಇಂಡೊ–ಚೀನ ಒಕ್ಕೂಟದ ನಿರ್ಮಾಣವಾಯಿತು. ಫ್ರೆಂಚ್ ವಸಾಹತಾದ ಕೊಚಿನ್–ಚೀನವೂ ಸಂರಕ್ಷಿತ ದೇಶಗಳಾದ ಅನ್ನಾಂ, ಟಾಂಕಿನ್ ಮತ್ತು ಕಾಂಬೋಡಿಯಗಳೂ ಇದಕ್ಕೆ ಒಳಪಟ್ಟುವು. ಇಲ್ಲಿಗೆ ಶತಮಾನ ಗಟ್ಟಲೇ ನಡೆದುಬಂದ ಚೀನಿಯರ ಅಧಿಪತ್ಯ ಮುಕ್ತಾಯವಾಯಿತು. ಚೀನಿ ಫ್ರೆಂಚ್ ಗಡಿಗಳನ್ನು ನಿರ್ಧರಿಸಲಾಯಿತು. ಅದೇ ವರ್ಷ ಫ್ರೆಂಚ್ ಗವರ್ನರ್–ಜನರಲ್‌ನೊಬ್ಬನ ನೇಮಕವಾಯಿತು. ಫ್ರೆಂಚ್ ಆಳರಸರ ಮತ್ತು ಪ್ರಜೆಗಳ ಮಧ್ಯೆ ವಿರಸ ಬೆಳೆಯಿತು. ಆಗಾಗ ಏಳುತ್ತಿದ್ದ ದಂಗೆಗಳನ್ನು ಫ್ರೆಂಚರು ಹತ್ತಿಕ್ಕಿದ್ದರು. 1893ರಲ್ಲಿ ಲಾವೋಸನ್ನೂ ಇಂಡೊ–ಚೀನದಲ್ಲಿ ವಿಲೀನಗೊಳಿಸಲಾಯಿತು.

ಎರಡನೆಯ ಮಹಾಯುದ್ಧದ ಕಾಲಕ್ಕೆ ಈ ಪ್ರದೇಶದಲ್ಲಿ ಫ್ರೆಂಚರ ಪ್ರಾಬಲ್ಯ ಬಹಳ ಕುಗ್ಗಿತು. 1940ರಲ್ಲಿ ಫ್ರಾನ್ಸ್ ಜರ್ಮನಿಗೆ ಶರಣಾದಾಗ ಜಪಾನು ಇಂಡೊ–ಚೀನವನ್ನಾಕ್ರಮಿಸಿಕೊಂಡಿತು. 1945ರಲ್ಲಿ ಜಪಾನ್ ಸೋತು ಹಿನ್ನಡೆದಾಗ ಫ್ರಾನ್ಸ್ ಮತ್ತೆ ಇಂಡೊ–ಚೀನಕ್ಕೆ ಬಂತು. ಆದರೆ ಅದು ರಾಷ್ಟ್ರೀಯ ಚಳವಳಿಯ ಪ್ರಬಲ ವಿರೋಧವನ್ನೆದುರಿಸಬೇಕಾಯಿತು. ಕಮ್ಯೂನಿಸ್ಟರ ಪ್ರೋತ್ಸಾಹ ಬೆಂಬಲಗಳಿಂದ ಹೊ ಚಿ ಮಿನ್ಹನ ಪಡೆಯನ್ನೆದುರಿಸಲಾರದ ಫ್ರೆಂಚರು ಬಾವೊದಾಯವನ್ನು ಚಕ್ರವರ್ತಿಯಾಗಿ ಮಾಡಿ ಆತನಿಗೆ ವಿಧೇಯರಾದ ಜನರನ್ನೆಲ್ಲ ಸಂಘಟಿಸಿ ಹೊ ಚಿ ಮಿನ್ಹ್ ಪಡೆಯನ್ನು ಹತ್ತಿಕ್ಕಲೆತ್ನಿಸಿ ವಿಫಲರಾದರು. 1954 ರಲ್ಲಿ ಜಿನೀವದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನವೊಂದು ನಡೆದು ಶಾಂತಿ ಏರ್ಪಟ್ಟಿತು. ವಿಯೆಟ್ನಾಮನ್ನು ಹದಿನೇಳನೆಯ ಅಕ್ಷಾಂಶಕ್ಕೆ ವಿಭಾಗಿಸಿದುದ್ದರಿಂದ ಎರಡು ರಾಜ್ಯಗಳು ಸೃಷ್ಟಿಯಾದವು. ಆ ಪ್ರದೇಶದ ಇನ್ನೆರಡು ರಾಜ್ಯಗಳಾದ ಲಾವೋಸ್ ಕಾಂಬೋಡಿಯಗಳಲ್ಲಿ ತಕ್ಕಮಟ್ಟಿನ ಶಾಂತಿಯೇರ್ಪಟ್ಟಿತಾದರೂ ಉತ್ತರ–ದಕ್ಷಿಣ ವಿಯೆಟ್ನಾಮುಗಳ ನಡುವೆ ಯುದ್ಧ ಮುಂದುವರಿದಿದೆ. ದಕ್ಷಿಣ ವಿಯೆಟ್ನಾಮಿನಲ್ಲಿ ಸರ್ಕಾರವಿರೋಧಿ ಚಳವಳಿಗಾರರಿಗೆ ಉತ್ತರ ವಿಯೆಟ್ನಾಮಿನ ಪ್ರೋತ್ಸಾಹವಿದೆಯೆಂಬ ಕಾರಣದಿಂದ ಅಮೆರಿಕ ಮೊದಲ್ಗೊಂಡು ಅನೇಕ ರಾಜ್ಯಗಳು ಇಲ್ಲಿನ ಯುದ್ಧದ ಸುಳಿಯೊಳಕ್ಕೆ ಸಿಕ್ಕಿವೆ.

1954ರ ಮೇ ಮತ್ತು ಜುಲೈ ತನಕ ಫ್ರೆಂಚ್ ಮತ್ತು ವಿಯೆಟ್ನಾಂ ಅಧಿಕಾರಿಗಳ ಸಭೆ ಉತ್ತರ ಅಮೆರಿಕ, ಬ್ರಿಟನ್, ಚೀನ, ಸೋವಿಯತ್ ಒಕ್ಕೂಟದ ಪ್ರತಿನಿಧಿಗಳ ಸಮ್ಮುಖದಲ್ಲಿ ಜಿನೀವದಲ್ಲಿ ಸಭೆ ಸೇರಿ ಇಂಡೊ ಚೀನದ ಬಗ್ಗೆ ಚರ್ಚೆ ನಡೆಸಿ ಒಂದು ಒಪ್ಪಂದಕ್ಕೆ ಬಂದಿತು. ಅದನ್ನೆ ಇಂಡೊಚೀನ ಒಪ್ಪಂದವೆಂದು ಕರೆಯಲಾಯಿತು. ಇದರಿಂದಾಗಿ ಮೊದಲ ಇಂಡೊ–ಚೀನ ಯುದ್ಧದ ನಿಲುಗಡೆಗೆ ಕಾರಣ. ಈ ಒಪ್ಪಂದದಿಂದಾಗಿ ವಿಯಾಟ್ನಾಂ, ಲಾವೋಸ್, ಕಾಂಬೋಡಿಯ ಸ್ವತಂತ್ರ ರಾಷ್ಟ್ರಗಳೆನಿಸಿ, ಫ್ರೆಂಚ್ ಇಂಡೊ ಚೀನ ತನ್ನ ಅಸ್ತಿತ್ವ ಕಳೆದುಕೊಂಡಿತು. ಇದೇ ವೇಳೆ ಈ ಒಪ್ಪಂದದಿಂದಾಗಿ ವಿಯಾಟ್ನಾಂ ಎರಡು ಹೋಳಾಗಿ ಮುಂದೆ ವಿಯಾಟ್ನಾಂ ಯುದ್ಧಕ್ಕೆ ಕಾರಣವಾಯಿತು (1957–75). ಈ ಯುದ್ಧವೇ ದ್ವಿತೀಯ ಇಂಡೊ–ಚೀನ ಯುದ್ಧವೆಂದು ಪರಿಗಣಿತವಾಗಿದೆ. (ಜಿ.ಎಸ್.ಡಿ.)

**ಇಂದಿರಾ ಗಾಂಧಿ:** 1917-1984. ಭಾರತದ ಪ್ರಧಾನಮಂತ್ರಿ (1966-77 ಮತ್ತು 1980-84). ಮೋತಿಲಾಲ್ ನೆಹರು ಅವರ ಮೊಮ್ಮಗಳು. ಜವಾಹರಲಾಲ್ ನೆಹರು ಹಾಗೂ ಕಮಲ ನೆಹರು ಅವರ ಪುತ್ರಿ. 1917 ನವೆಂಬರ್ 19ರಂದು ಅಲಹಾಬಾದಿನಲ್ಲಿ ಜನಿಸಿದರು. ತಾತ ಮೋತಿಲಾಲ್ ನೆಹರು ಅಲಹಾಬಾದಿನ ಶ್ರೀಮಂತ, ಪ್ರಖ್ಯಾತ ನ್ಯಾಯವಾದಿ. ತಂದೆ ಜವಾಹರ್‌ಲಾಲ್ ನೆಹರು ಕೂಡ ವಿಖ್ಯಾತರು. ಇಬ್ಬರೂ ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ತಮ್ಮ ಶ್ರೀಮಂತ ವಿಲಾಸದ ಜೀವನವನ್ನು ಸರಳಗೊಳಿಸಿ ಸೇವೆಗೆ ಮುಡಿಪಾಗಿಟ್ಟರು. ಅವರ ಅಲಹಾಬಾದಿನ ಶ್ರೀಮಂತ ಗೃಹ ರಾಜಕೀಯ ಚಟುವಟಿಕೆಯ ಕೇಂದ್ರವಾಯಿತು; ಸ್ವಾತಂತ್ರ್ಯ ಹೋರಾಟಗಾರರ ಸ್ಫೂರ್ತಿಯ ನೆಲೆಯಾಯಿತು. ರಾಜಕೀಯಾ ವೇಶಗಳ ಆ ಸನ್ನಿವೇಶದಲ್ಲಿ ಇವರು ಬೆಳೆದರು. ಇವರ ತಂದೆಯೂ ತಾತನೂ ಸ್ವೀಕರಿಸಿದ್ದ ಸ್ವಾತಂತ್ರ್ಯ ಹೋರಾಟ ದೀಕ್ಷೆ ದಲಿತರ ಸೇವೆಯ ವ್ರತ ಎಳೆಯಮನಸ್ಸಿನ ಮೇಲೆ ವಿಶಿಷ್ಟ ಮುದ್ರೆಯನ್ನೊತ್ತಿದುವು. ತಂದೆಯಿಂದ ದೇಶಪ್ರೇಮವನ್ನೂ ಅಂತಾರಾಷ್ಟ್ರೀಯ ದೃಷ್ಟಿಯನ್ನೂ ಪಡೆದುಕೊಂಡರು. ನೆಹರು ಅವರು ಕಾರಾಗೃಹದಿಂದ ಮಗಳಿಗೆ ಬರೆದ ಕೆಲವು ಪತ್ರಗಳು ಪುಸ್ತಕರೂಪದಲ್ಲಿ ಪ್ರಕಟವಾಗಿವೆ. ತಂದೆಯೇ ಇವರಿಗೆ ಆದರ್ಶ, ಗುರು, ದಾರ್ಶನಿಕ. ಬಾಲ್ಯದಲ್ಲೆ ಇವರೂ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ರೀತಿಯಲ್ಲಿ ಭಾಗವಹಿಸಿದರು.

ವಾನರ ಸೇನಾ ಮತ್ತು ಚರಖಾ ಸಂಘಗಳನ್ನು ಇವರು ಸಂಘಟಿಸಿದರು. ಆಗ ಇವರಿಗೆ ಕೇವಲ 12 ವರ್ಷ. ಅಲಹಾಬಾದ್, ಸ್ವಿಟ್ಜರ್ಲೆಂಡ್, ಆಕ್ಸ್‌ಫರ್ಡ್, ಶಾಂತಿನಿಕೇತನಗಳಲ್ಲಿ ವ್ಯಾಸಂಗಮಾಡಿದರು. ಆ ಕಾಲದಲ್ಲೂ ಇವರು ಅನೇಕ ವಿದ್ಯಾರ್ಥಿ ಚಳವಳಿಗಳಲ್ಲಿ ಭಾಗ ವಹಿಸುತ್ತಿದ್ದರು. ಲಂಡನ್ನಿನ ಇಂಡಿಯ ಲೀಗಿನ ಚಟುವಟಿಕೆಗಳಲ್ಲಿ ಇವರು ವಹಿಸಿದ ಪಾತ್ರ ಪ್ರಧಾನವಾದುದ್ದು. 1938ರಲ್ಲಿ ಇವರು ಕಾಂಗ್ರೆಸಿನ ಸದಸ್ಯೆಯಾದರು. ಅಂದಿನಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಇವರು ನೇರವಾಗಿ ಭಾಗವಹಿಸಲಾರಂಭಿಸಿದರು. 1942ರಲ್ಲಿ ಫಿರೋಜ್ ಗಾಂಧಿಯವರನ್ನು ಇವರು ವಿವಾಹವಾದರು. 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಪತಿಯೊಡನೆ ಇವರಿಗೂ ಕಾರಾಗೃಹವಾಸ ಪ್ರಾಪ್ತವಾಯಿತು (1942). ಬಂಧನದಿಂದ ಬಿಡುಗಡೆ ಹೊಂದಿದ ಮೇಲೆ ಇವರು ದೇಶಸೇವಾಕಾರ್ಯವನ್ನು ಮುಂದುವರಿಸಿದರು. ಇವರಿಗೆ 1944ರಲ್ಲಿ ರಾಜೀವ್ ಗಾಂಧಿ ಹಾಗೂ 1946ರಲ್ಲಿ ಸಂಜಯ ಗಾಂಧಿ ಎಂಬ ಇಬ್ಬರು ಮಕ್ಕಳು ಜನಿಸಿದರು. 1947ರಲ್ಲಿ ಇವರು ದೆಹಲಿಯಲ್ಲಿ ಮತೀಯ ಗಲಭೆಗಳಿಗೆ ತುತ್ತಾದ ಪ್ರದೇಶದಲ್ಲಿ ಗಾಂಧಿಯವರ ನೇತೃತ್ವದಲ್ಲಿ ಪರಿಹಾರಕಾರ್ಯ ಕೈಗೊಂಡರು. ಜವಾಹರಲಾಲ್ ನೆಹರು ಅವರು ಪ್ರಧಾನಿಯಾದ ಮೇಲೆ ಇಂದಿರಾ ಗಾಂಧಿಯವರು ರಾಜಕೀಯದಲ್ಲಿ ಅವರಿಗೆ ಸಹಾಯಕಿಯಾದರು, ಹಲವು ಆಫ್ರಿಕನ್ ದೇಶಗಳಲ್ಲಿ ಪ್ರವಾಸ ಮಾಡಿದರು. ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ನೇಮಕಗೊಂಡು (1955) ಇಂದಿರಾ ಗಾಂಧಿಯವರು ರಾಜಕೀಯವನ್ನು ನೇರವಾಗಿ ಪ್ರವೇಶಿಸಿ ಅದೇ ವರ್ಷ ಇವರು ಕಾಂಗ್ರೆಸಿನ ಕೇಂದ್ರ ಚುನಾವಣಾ ಸಮಿತಿಯ ಸದಸ್ಯೆಯೂ ಆದರು. ಮರುವರ್ಷ ಅಲಹಾಬಾದ್ ನಗರ ಕಾಂಗ್ರೆಸಿನ ಅಧ್ಯಕ್ಷೆಯಾದರು. ಸ್ವಲ್ಪ ಕಾಲದಲ್ಲೇ ಕೇಂದ್ರ ಸಂಸದೀಯ ಮಂಡಲಿಯ ಸದಸ್ಯತ್ವ ಪಡೆದರು. 1959ರಲ್ಲಿ ಇವರು ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷೆಯಾಗಿ ಆಯ್ಕೆಯಾಗಿ ಯು. ಎನ್. ಢೇಬರರಿಂದ ಅಧಿಕಾರ ವಹಿಸಿಕೊಂಡರು. ಕಾಂಗ್ರೆಸಿನ ಅಧ್ಯಕ್ಷತೆ ವಹಿಸಿದ ನೆಹರು ವಂಶದವರ ಪೈಕಿ ಇವರು ಮೂರನೆಯವರು. ಆಗ ಇವರಿಗೆ ಇನ್ನೂ 42 ವರ್ಷ. ರಾಷ್ಟ್ರದ ಉನ್ನತ ವಿದ್ಯಮಾನಗಳಲ್ಲಿ ಯುವಜನದ ಪ್ರತೀಕವಾಗಿ ಇವರು ಆಗಮಿಸಿದರೆನ್ನಬಹುದು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಇವರು ಕಿರಿ ವಯಸ್ಸಿನವರನ್ನು ಆರಿಸಿಕೊಂಡರು.

ಇವರು ಕಾಂಗ್ರೆಸಿನ ಅಧ್ಯಕ್ಷೆಯಾಗಿದ್ದಾಗ ಕೇರಳ ಹೊರತು ಪಡಿಸಿ ಎಲ್ಲ ರಾಜ್ಯಗಳಲ್ಲೂ ಕಾಂಗ್ರೆಸ್ ಮಂತ್ರಿಮಂಡಲಗಳಿದ್ದುವು. ಕೇರಳದಲ್ಲಿ ಇ.ಎಂ.ಎಸ್. ನಂಬೂದಿರಿಪಾಡರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಸರ್ಕಾರವಿತ್ತು. ಈ ಸರ್ಕಾರ ಜಾರಿಗೆ ತರಲು ಆಲೋಚಿಸಿದ್ದ ಶಿಕ್ಷಣ ಸುಧಾರಣಾ ವಿಧೇಯಕದ ವಿರುದ್ಧ ತೀವ್ರ ಚಳವಳಿ ನಡೆಯುತ್ತಿದ್ದ ಕಾರಣ ಆ ಮಂತ್ರಿಮಂಡಲ ವಜಾ ಆದದ್ದು ಇವರು ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದಾಗ. ಕೇರಳದಲ್ಲಿ ಕಾಂಗ್ರೆಸ್ ನಾಯಕತ್ವ ಮುನ್ನುಗ್ಗುವ ಧೋರಣೆ ಅನುಸರಿಸುವಂತೆ ಮಾಡಿದರು. ಇತರ ಪಕ್ಷಗಳೊಂದಿಗೆ ಕಾಂಗ್ರೆಸ್ ಏರ್ಪಡಿಸಿಕೊಂಡ ಸಂಯುಕ್ತ ರಂಗ ಕೇರಳದ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂತು. ದ್ವಿಭಾಷಾ ರಾಜ್ಯವಾಗಿದ್ದ ಬೊಂಬಾಯಿಯನ್ನು ಒಡೆದು ಮಹಾರಾಷ್ಟ್ರ, ಗುಜರಾತ್ ರಾಜ್ಯಗಳನ್ನು ರಚಿಸಲಾಯಿತು. ಇದರಿಂದ ಮರಾಠಿ ಮತ್ತು ಗುಜರಾತಿ ಭಾಷೆಗಳನ್ನಾಡುವವರ ಆಶೋತ್ತರಗಳು ಈಡೇರಿದಂತಾಯಿತು. ಮರುವರ್ಷ ಎನ್.ಸಂಜೀವರೆಡ್ಡಿಯವರಿಗೆ ಇವರು ಕಾಂಗ್ರೆಸ್ ಅಧ್ಯಕ್ಷತೆಯನ್ನು ವಹಿಸಿಕೊಟ್ಟರು. ಆ ವರ್ಷ ಪತಿ ಫಿರೋಜ್ ಗಾಂಧಿಯವರು ನಿಧನ ಹೊಂದಿದರು (1960).

ಪ್ಯಾರಿಸಿನಲ್ಲಿ ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಸಾಂಸ್ಕೃತಿಕ ಸಂಸ್ಥೆಗೆ (ಯುನೆಸ್ಕೊ) ಭಾರತ ನಿಯೋಗದ ಸದಸ್ಯೆಯಾಗಿ ಇವರು 1960ರಲ್ಲಿ ನೇಮಕಗೊಂಡರು. ನಾಲ್ಕು ವರ್ಷ ಆ ಸಂಸ್ಥೆಗಾಗಿ ಕೆಲಸ ಮಾಡಿದರು; ಅನಂತರ ಅದರ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯತ್ವವನ್ನೂ ಪಡೆದಿದ್ದರು. 1964ರ ಮೇ ತಿಂಗಳಲ್ಲಿ ನೆಹರು ನಿಧನ ಹೊಂದಿದಾಗ ಲಾಲ್ ಬಹಾದ್ದೂರ್‌ಶಾಸ್ತ್ರಿ ಭಾರತದ ಪ್ರಧಾನಿಯಾದರು. ಶಾಸ್ತ್ರಿಯವರ ಸಂಪುಟದಲ್ಲಿ ಇವರು ಸಮಾಚಾರ ಮತ್ತು ಪ್ರಸಾರ ಖಾತೆ ಮಂತ್ರಿಯಾಗಿದ್ದರು. ಉತ್ತರ ಪ್ರದೇಶದ ವಿಧಾನಸಭೆಯಿಂದ ರಾಜ್ಯಸಭೆಗೆ ಇವರು ಅವಿರೋಧವಾಗಿ ಆಯ್ಕೆಯಾದ್ದು 1964ರ ಆಗಸ್ಟ್ ತಿಂಗಳಿನಲ್ಲಿ. 1966ರ ಜನವರಿಯಲ್ಲಿ ಪ್ರಧಾನಿ ಲಾಲ್‌ಬಹಾದ್ದೂರ್‌ಶಾಸ್ತ್ರಿ ಯವರು ತಾಷ್ಕೆಂಟಿನಲ್ಲಿ ನಿಧನರಾದಾಗ ಇವರು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಯಾಗುವುದರ ಮೂಲಕ ಭಾರತದ ಪ್ರಧಾನಿಯಾಗಿ ಆಯ್ಕೆಗೊಂಡರು 1966ರ ಜನವರಿ 24ರಂದು ಆಗ ಇವರ ಪ್ರತಿಸ್ಪರ್ಧಿಯಾಗಿದ್ದವರು ಮೊರಾರ್ಜಿ ದೇಸಾಯಿ.

ಆಗ ದೇಶ ತುಂಬ ಕಷ್ಟದ ದಿನಗಳನ್ನು ಎದುರಿಸಬೇಕಾಗಿತ್ತು. ಹಿಂದಿನ ವರ್ಷದ ಪಾಕಿಸ್ತಾನಿ ಆಕ್ರಮಣದಿಂದ ಆರ್ಥಿಕವಾಗಿ ಬಹಳ ನಷ್ಟ ಸಂಭವಿಸಿ ಕೃಷಿ ಕೈಗಾರಿಕೆಗಳ ಯೋಜನಾಬದ್ಧ ಪ್ರಗತಿಗೆ ಅಡಚಣೆ ಉಂಟಾಗಿತ್ತು. ವಿದೇಶೀ ನೆರವು ನಿಂತಿತ್ತು. ಮುಂಗಾರು ಮಳೆ ಬಾರದೆ ಕೇರಳ, ಪಶ್ಚಿಮ ಬಂಗಾಲಗಳಲ್ಲಿ ಆಹಾರಾಭಾವ ತಲೆದೋರಿ ಬೆಲೆಗಳು ಏರಿದ್ದುವು. ಪೂರ್ವ ಭಾರತದ ಗಿರಿಜನರು ಬಂಡಾಯ ಎಬ್ಬಿಸಿದ್ದರಿಂದ. ಅಸ್ಸಾಮಿನಲ್ಲಿ ಪ್ರಕ್ಷುಬ್ಧತೆ ಉಂಟಾಗಿತ್ತು. ಇವರು ಮಿಜೋ ಬೆಟ್ಟಗಳ ಪ್ರದೇಶಕ್ಕೆ ಹೋಗಿ ಅಲ್ಲಿಯ ಪರಿಸ್ಥಿತಿಯ ಪರಿಶೀಲನೆ ನಡೆಸಿದರು. ಅನಂತರ ಆ ಜನರಿಗಾಗಿ ಮಿಜೋರಾಂ ಎಂಬ ಪ್ರತ್ಯೇಕ ರಾಜ್ಯ ರಚಿತವಾಯಿತು. ಪಶ್ಚಿಮದಲ್ಲಿ ಪಂಜಾಬ್ ಹರಿಯಾಣ ರಾಜ್ಯಗಳು ರಚನೆ ಗೊಂಡುವು.

1966ರಲ್ಲಿ ಅಮೆರಿಕ, ಬ್ರಿಟನ್, ಲಂಡನ್, ಮಾಸ್ಕೊ, ಯೂಗೋಸ್ಲಾವಿಯ, ಸೋವಿ ಯೆತ್ ಒಕ್ಕೂಟ, ಅರಬ್ ಸಂಯುಕ್ತ ಗಣರಾಜ್ಯ, ನೇಪಾಲ-ಈ ದೇಶಗಳಿಗೆ ಭೇಟಿಯಿತ್ತರು. ಇವರ ನೇತೃತ್ವದಲ್ಲಿ 1966ರ ಅಕ್ಟೋಬರಿನಲ್ಲಿ ಯೂಗೋಸ್ಲಾವಿಯದ ಅಧ್ಯಕ್ಷ ಟಿಟೋ, ಅರಬ್ ಅಧ್ಯಕ್ಷ ನಾಸೆರ್ ಇವರ ಸಭೆಯೊಂದು ದೆಹಲಿಯಲ್ಲಿ ನಡೆಯಿತು. 1967ರಲ್ಲಿ ದೇಶದ 4ನೆಯ ಮಹಾ ಚುನಾವಣೆಗಳು ನಡೆದಾಗ ಇವರು ದೇಶಾದ್ಯಂತ ಸಂಚರಿಸಿ ತಮ್ಮ ಪಕ್ಷದ ಪ್ರಚಾರಕಾರ್ಯದಲ್ಲಿ ನಿರತರಾದರು. ಸಂಸತ್ತಿನಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂತಾದರೂ ರಾಜ್ಯಗಳಲ್ಲಿ ಅದರ ಗಳಿಕೆ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಅರ್ಧದಷ್ಟು ರಾಜ್ಯಗಳಲ್ಲಿ ಕಾಂಗ್ರೆಸೇತರ ಸರ್ಕಾರಗಳು ಸ್ಥಾಪಿತವಾದುವು. ಇವರು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿಯಾಗಿ ಮತ್ತೆ ಆಯ್ಕೆಗೊಂಡು ಮತ್ತೆ ಸರ್ಕಾರ ರಚಿಸಿದರು. ಇವರು ತಮ್ಮ ಸಂಪುಟಕ್ಕೆ ಅನುಭವಿಗಳನ್ನೂ ಯುವಕರನ್ನೂ ಆರಿಸಿಕೊಂಡರು.

1967ರ ಮೇ ತಿಂಗಳಿನಲ್ಲಿ ಜ಼ಾಕಿರ್ ಹುಸೇನರು ರಾಷ್ಟ್ರಪತಿಯಾಗಿಯೂ ವಿ. ವಿ. ಗಿರಿಯವರು ಉಪರಾಷ್ಟ್ರಪತಿಯಾಗಿಯೂ ಆಯ್ಕೆಯಾದರು. ಎರಡು ವರ್ಷಗಳ ಅನಂತರ (1969) ಜ಼ಾಕಿರ್ ಹುಸೇನರು ನಿಧನ ಹೊಂದಿದಾಗ ಕಾಂಗ್ರೆಸಿನ ಎನ್. ಸಂಜೀವರೆಡ್ಡಿಯವರಿಗೆ ಬೆಂಬಲ ನೀಡಿದರು. ಇವರು ಹಾಗೂ ಬೆಂಬಲಿಗರೂ ಉಪರಾಷ್ಟ್ರಪತಿಗಳಾಗಿದ್ದ ವಿ.ವಿ.ಗಿರಿ ಯವರಿಗೆ ಬೆಂಬಲ ನೀಡಿ ಗಿರಿಯವರು ರಾಷ್ಟ್ರಪತಿಯಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಆದ ಒಡಕು ದೊಡ್ಡದಾಗಿ ಹಳೆಯ ಕಾಂಗ್ರೆಸಿಗರೂ ಇಂದಿರಾಗಾಂಧಿಯವರ ಪರವಾಗಿದ್ದವರೂ ಇಂಡಿಕೇಟ್-ಸಿಂಡಿಕೇಟ್ ಎಂದು ಎರಡು ಪ್ರತ್ಯೇಕ ಕಾಂಗ್ರೆಸ್‌ಗಳ ಅಡಿಯಲ್ಲಿ ಬಂದರು. ಹಳೆಯ ನಾಯಕರ ಕಾಂಗ್ರೆಸ್ (ಸಂಸ್ಥಾ ಕಾಂಗ್ರೆಸ್) ಸಂಸತ್ತಿನಲ್ಲಿ ವಿರೋಧ ಪಕ್ಷವಾಯಿತು.

1970ರ ಡಿಸೆಂಬರಿನಲ್ಲಿ ಇವರು ಸಂಸತ್ತನ್ನು ವಿಸರ್ಜಿಸಿ, ನಡುಗಾಲದ ಚುನಾವಣೆಯಲ್ಲಿ ತಮ್ಮ ಪಕ್ಷದ ಬಲಪರೀಕ್ಷೆ ಮಾಡಬೇಕೆಂದು ತೀರ್ಮಾನಿಸಿದರು. 1971ರಲ್ಲಿ ನಡೆದ ಚುನಾವಣೆ ಯಲ್ಲಿ ಇವರ ಪಕ್ಷಕ್ಕೆ ಪ್ರಚಂಡ ವಿಜಯ ಪ್ರಾಪ್ತವಾಯಿತು. ಕಾಂಗ್ರೆಸೇತರ ಸರ್ಕಾರಗಳಿದ್ದ ರಾಜ್ಯಗಳೂ ಕಾಂಗ್ರೆಸಿಗೆ ಬಹುಮತ ನೀಡಿದ್ದರಿಂದ ಇವರು ಮತ್ತೆ ಅಧಿಕಾರಕ್ಕೆ ಬಂದರು.

ವಿಜಯಸಮಯದಲ್ಲೇ ಹೊಸ ಆತಂಕಗಳು ಹುಟ್ಟಿಕೊಂಡವು. ಆಗ ಪೂರ್ವ ಪಾಕಿಸ್ತಾನವೆನಿಸಿದ್ದ ಬಾಂಗ್ಲಾದೇಶದಲ್ಲಿ ಚುನಾಯಿತ ಅವಾಮಿ ಲೀಗಿನ ಸದಸ್ಯರಿಗೆ ಸರ್ಕಾರ ರಚಿಸಲು ಅವಕಾಶ ಲಭಿಸಿರಲಿಲ್ಲ. ಪಾಕಿಸ್ತಾನದ ಅಧ್ಯಕ್ಷ ಯಹ್ಯಾಖಾನ್ ಬಾಂಗ್ಲಾ ಜನರ ಮೇಲೆ ಹೊಸ ದಬ್ಬಾಳಿಕೆ ಕ್ರಮ ಕೈಗೊಂಡ. ಅನೇಕರು ಗಡಿ ದಾಟಿ ಭಾರತಕ್ಕೆ ಬಂದು ರಕ್ಷಣೆ ಪಡೆದರು. ಗಾಂಧಿಯವರು ಆ ಸಂದರ್ಭದಲ್ಲಿ ಧೈರ್ಯ ಚಾತುರ್ಯ ಸಹಾನು ಭೂತಿಗಳಿಂದ ವರ್ತಿಸಿ, ನಿರಾಶ್ರಿತರಿಗಾಗಿ ನೆರವನ್ನು ಸಂಘಟಿಸಿದರು. ನಿರಾಶ್ರಿತರು ಗೌರವದಿಂದ ತಮ್ಮ ದೇಶಕ್ಕೆ ಹಿಂದಿರುಗುವಂತೆ ಮಾಡುವುದಾಗಿ ವಾಗ್ದಾನ ಮಾಡಿದರು. ಬಾಂಗ್ಲಾ ವಿಮೋಚನಾ ಹೋರಾಟಗಾರರು ಸ್ವಾತಂತ್ರ್ಯ ಘೋಷಿಸಿಕೊಂಡು ಪಾಕಿಸ್ತಾನದ ಸಶಸ್ತ್ರ ಪಡೆಯನ್ನು ಎದುರಿಸಿದರು. ಸ್ವಾತಂತ್ರ್ಯ ಯೋಧರಿಗೆ ಭಾರತ ಬೆಂಬಲ ನೀಡು ತ್ತಿದ್ದುದನ್ನು ಕಂಡು ಪಾಕಿಸ್ತಾನ. ಭಾರತದ ಮೇಲೆ ಯುದ್ಧ ಹೂಡಿತು. 14ದಿನ ನಡೆದ

ಯುದ್ಧದಲ್ಲಿ ಪೂರ್ವ ಪಶ್ಚಿಮ ರಂಗಗಳೆರಡರಲ್ಲೂ ಪಾಕಿಸ್ತಾನಕ್ಕೆ ಭಾರಿ ಪೆಟ್ಟು ಬಿತ್ತು. ಪೂರ್ವ ಭಾಗ ಸಂಪೂರ್ಣ ಸ್ವತಂತ್ರವಾಯಿತು; ಬಾಂಗ್ಲಾದೇಶದ ಉದಯದಿಂದ ಇವರ ವಾಗ್ದಾನ ನೆರವೇರಿದಂತಾಯಿತು. ನಿರಾಶ್ರಿತರು ಗೌರವದಿಂದ ತಮ್ಮ ದೇಶಕ್ಕೆ ಹಿಂದಿರುಗಿದರು. ಪ್ರಪಂಚದಲ್ಲಿ ಭಾರತದ ಗೌರವ ಅಧಿಕವಾಗಿ ಇವರ ಕೀರ್ತಿಯೂ ಹೆಚ್ಚಿತು. ರಾಷ್ಟ್ರಪತಿಗಳು ಇವರಿಗೆ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿದರು (1971).

ಇವರ ಪ್ರಧಾನಿತ್ವದ ಅಧಿಕಾರಕಾಲದಲ್ಲಿ ವಾದಗ್ರಸ್ತವೂ ಕ್ರಾಂತಿಕಾರಿಯೂ ಆದ ಅನೇಕ ವಿಧೇಯಕಗಳು ಜಾರಿಗೆ ಬಂದಿವೆ. 14 ಪ್ರಧಾನ ಬ್ಯಾಂಕುಗಳ ರಾಷ್ಟ್ರೀಕರಣ, ರಾಜಧನ ರದ್ದು, ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಗಳ ಸವಲತ್ತುಗಳ ವಜ, ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣ–ಇವು ಇಂಥ ವಿಧೇಯಕಗಳಲ್ಲಿ ಮುಖ್ಯವಾದುವು. ಬಡತನವನ್ನು ನಿವಾರಿಸುವುದು ಇವರ ಚುನಾವಣಾ ಕಾಲದ ಘೋಷಣೆ.

ಪಾಕಿಸ್ತಾನದ ವಿರುದ್ಧ ನಡೆದ ಯುದ್ಧದಲ್ಲಿ ಭಾರತ ಜಯಗಳಿಸಿ ಬಾಂಗ್ಲಾ ದೇಶವನ್ನು ವಿಮೋಚನೆಗೊಳಿಸಿತಾದರೂ ಪಾಕಿಸ್ತಾನದೊಂದಿಗೆ ಶಾಂತಿಯುತವಾಗಿ ಬಾಳಬೇಕೆಂಬುದೇ ಇವರ ಆಕಾಂಕ್ಷೆ. ಇದಕ್ಕಾಗಿ ಇವರು 1972ರ ಜೂನ್ ತಿಂಗಳಲ್ಲಿ ಪಾಕಿಸ್ತಾನದ ಅಧ್ಯಕ್ಷ ಜೆಡ್.ಎ.ಭುಟ್ಟೋ ಅವರೊಂದಿಗೆ ಸಿಮ್ಲಾದಲ್ಲಿ ಸಭೆ ನಡೆಸಿ ಜುಲೈ 2ರಂದು ಪರಸ್ಪರ ಅನಾಕ್ರಮಣ ಒಪ್ಪಂದವೊಂದಕ್ಕೆ ಸಹಿಯಾಯಿತು. ಕಾಶ್ಮೀರದಲ್ಲಿ ವಾಸ್ತವ ಹತೋಟಿ ರೇಖೆಯ ನಿರ್ಧಾರವಾಗಿದೆ. ಅಂತಾರಾಷ್ಟ್ರೀಯ ಗಡಿಗೆ ಭಾರತ–ಪಾಕ್ ಸೇನೆಗಳು ವಾಪಸ್ಸಾಗಿವೆ. ಭಾರತ–ಪಾಕಿಸ್ತಾನಗಳ ನಡುವಣ ಇತರ ಸಮಸ್ಯೆಗಳೂ ಇತ್ಯರ್ಥವಾಗಿ ಭಾರತ ಉಪಖಂಡದ ಇತಿಹಾಸದಲ್ಲಿ ಶಾಂತಿಯ ಹೊಸ ಅಧ್ಯಾಯವೊಂದು ಆರಂಭ ವಾಗಬೇಕೆಂದು ಇವರು ಶ್ರಮಿಸಿದರು. ಆದರೆ 1975ರ ಜೂನ್‌ನಲ್ಲಿ ಇವರು ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿದ್ದು ಒಂದು ಕಪ್ಪುಚುಕ್ಕೆಯಾಯಿತು. ಅಲಹಾಬಾದ್ ಹೈಕೋರ್ಟ್, ಲೋಕಸಭೆಗೆ ಇವರ ಆಯ್ಕೆಯನ್ನು ಅಸಿಂಧುಗೊಳಿಸಿದ್ದೇ ಇದಕ್ಕೆ ಮೂಲ ಕಾರಣವಾಯಿತು. ಲೋಕನಾಯಕ ಜಯಪ್ರಕಾಶ್‌ನಾರಾಯಣ್ ಸೇರಿದಂತೆ ಅಸಂಖ್ಯ ಪ್ರತಿಪಕ್ಷ ನಾಯಕರು, ರಾಜಕೀಯ ಕಾರ್ಯಕರ್ತರನ್ನು ಜೈಲಿಗೆ ಅಟ್ಟಿದರು. ಪತ್ರಿಕಾಸ್ವಾತಂತ್ರ್ಯ ಮೊಟಕುಗೊಂಡಿತು. ಆದರೆ ಮಾರ್ಚ್ 1977ರಲ್ಲಿ ಚುನಾವಣೆ ಘೋಷಿಸಿದರು. ಇವರು ಹಾಗೂ ಇವರ ಕಾಂಗ್ರೆಸ್ ಘೋರ ಪರಾಭವ ಅನುಭವಿಸಿತು. ಪ್ರತಿಪಕ್ಷಗಳು ಒಂದಾಗಿ ಜನತಾಪಕ್ಷ ಹುಟ್ಟಿಕೊಂಡು ಅಧಿಕಾರ ಹಿಡಿಯಿತು. ಆದರೆ ಆಂತರಿಕ ಕಚ್ಚಾಟದಿಂದಾಗಿ ಮತ್ತೆ ಮಧ್ಯಂತರ ಚುನಾವಣೆ ನಡೆದು 1980 ಜನವರಿ 14 ರಂದು, ಇವರು ಮತ್ತೆ ಪ್ರಧಾನಿಯಾದರು. ಇದಕ್ಕೂ ಮುಂಚೆ ಇವರು ಕರ್ನಾಟಕದ ಚಿಕ್ಕಮಗಳೂರಿನಿಂದ ಲೋಕಸಭೆಗೆ ನಡೆದ ಮರುಚುನಾವಣೆಯಲ್ಲಿ ವೀರೇಂದ್ರ ಪಾಟೀಲ್ ವಿರುದ್ಧ ಜಯಗಳಿಸಿ ರಾಜಕೀಯ ಮರುಜೀವಪಡೆದರು. 1984ರ ಅಕ್ಟೋಬರ್ 31ರಂದು ಇವರ ಅಂಗರಕ್ಷಕರೇ ಇವರನ್ನು ಬರ್ಬರ ಹತ್ಯೆಮಾಡಿದರು. ಪಂಜಾಬಿನಲ್ಲಿ ಸಿಖ್ ಭಯೋತ್ಪಾದಕತೆ ನಿಗ್ರಹಿಸುವ ಅಂಗವಾಗಿ ಸ್ವರ್ಣಮಂದಿರಕ್ಕೆ ಸೇನೆಪ್ರವೇಶ (ಆಪರೇಷನ್ ಬ್ಲೂ ಸ್ಟಾರ್) ಇವರು ಕೈಗೊಂಡ ದುಸ್ಸಾಹಸ ಸಿಖ್ ಭಾವನೆಗಳನ್ನು ಕೆರಳಿಸಿತು. ಇವರ ಹತ್ಯೆ ಅನಂತರ ದೆಹಲಿ, ಇತರೆಡೆ ಸಂಭವಿಸಿದ ವ್ಯಾಪಕ ಸಿಖ್ ವಿರೋಧಿ ಹಿಂಸಾಚಾರ, ಸ್ವತಂತ್ರಭಾರತದ ಇತಿಹಾಸದಲ್ಲಿ ಮತ್ತೊಂದು ಕರಾಳ ಅಧ್ಯಾಯವಾಯಿತು. ಹೀಗೆ ಇವರ ಸೇವೆ–ಸಾಧನೆ ಅತ್ಯಂತ ವಿವಾದಾಸ್ಪದ ಹಾಗೆಯೇ ಅತಿವಿಶಿಷ್ಟ. ಸಂಜಯ್‌ಗಾಂಧಿ, ರಾಜೀವ್ ಗಾಂಧಿ – ಇವರ ಇಬ್ಬರು ಪುತ್ರರು. (ಎಸ್.ಎಂ.ಎ.;ಕೆ.ಎಸ್.ಎ.)

**ಇಂಫಾಲ್ ಕದನ:** ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನೀಯರು ಏಷ್ಯದ ಆಗ್ನೇಯ ಭಾಗವನ್ನೆಲ್ಲ ವಶಪಡಿಸಿಕೊಂಡು ಬರ್ಮಾದ (ಮಯನ್ಮಾರ್) ಉತ್ತರಗಡಿ ದಾಟಿ ಭಾರತಕ್ಕೆ ನುಗ್ಗಲೆತ್ನಿಸಿದ್ದಾಗ 1945ರ ಮೇ ತಿಂಗಳಲ್ಲಿ ಅವರನ್ನು ತಡೆಗಟ್ಟಿದ ಕದನ. ಭಾರತೀಯರು ಮತ್ತು ಘೂರ್ಕ ಸೈನಿಕರನ್ನೊಳಗೊಂಡ 14ನೆಯ ಬ್ರಿಟಿಷ್ ಪಡೆ, ಸಮರ್ಥ ಜಪಾನಿ ದಳಪತಿ ಲೆಫ್ಟಿನೆಂಟ್ ಜನರಲ್ ಎಂ. ಕವಾಬೆಯ ಸೇನಾಧಿಪತ್ಯದಲ್ಲಿ ಮುನ್ನುಗ್ಗಿ ಬರುತ್ತಿದ್ದ ದೊಡ್ಡ ಸೈನ್ಯವನ್ನು ಹಿಮ್ಮೆಟ್ಟುವಂತೆ ಮಾಡಿದ್ದರಿಂದ ಜಪಾನೀಯರು ಭಾರತಕ್ಕೂ ನುಗ್ಗಬಹುದೆಂಬ ಭಯ ನಿವಾರಣೆಯಾಯಿತು. ಅಲ್ಲದೆ ಬ್ರಿಟಿಷ್ ಪಡೆ ಬರ್ಮಾ ದೇಶದೊಳಗೆ ನುಗ್ಗಿ ಅಲ್ಲಿದ್ದ ಜಪಾನೀಯರನ್ನು ಹೊಡೆದಟ್ಟುವುದಕ್ಕೆ ಅನುಕೂಲವಾಯಿತು. ಭೂ ಮತ್ತು ವಾಯುಪಡೆಗಳನ್ನು ಅತ್ಯಂತ ಕೌಶಲದಿಂದಲೂ ಪರಿಣಾಮಕಾರಿಯಾಗಿಯೂ ಇಲ್ಲಿ ಬಳಸಲಾಯಿತು. ಇದು ಹೆಚ್ಚು ಪ್ರತಿಭಟನೆಯೇ ಇಲ್ಲದೆ ನುಗ್ಗಿಬರುತ್ತಿದ್ದ ಜಪಾನೀಯರಿಗೆ ಆದ ಮೊದಲ ದೊಡ್ಡ ಪರಾಭವ. *

**ಇಕ್ಷ್ವಾಕು ವಂಶ:** ಉತ್ತರಭಾರತದಿಂದ ದಕ್ಷಿಣದೇಶಕ್ಕೆ ವಲಸೆ ಬಂದು ಇಲ್ಲಿ ರಾಜ್ಯಗಳನ್ನು ಕಟ್ಟಿದ ಮತ್ಸ್ಯ, ಕೇಕೆಯ ಮುಂತಾದ ಅರಸುಮನೆತನಗಳಲ್ಲಿ ಒಂದು. ಮನುವಿನ ಮಗ ಇಕ್ಷ್ವಾಕು ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯ ಕಟ್ಟಿದ. ಪುರಾಣಗಳಲ್ಲಿ ಮಾತ್ರವಲ್ಲದೆ ಪಾಳಿವಾಙ್ಮಯದಲ್ಲಿ ಮತ್ತು ಜಾತಕ ಕಥೆಗಳಲ್ಲಿ ಇಕ್ಷ್ವಾಕುವಿನ (ಒಕ್ಕಾಕ) ಉಲ್ಲೇಖ ಬರುತ್ತದೆ. ಈತ ಐತಿಹಾಸಿಕ ವ್ಯಕ್ತಿಯೆಂಬುದು ನಿಜ. ಆದರೆ ಇವನಿಗೆ ನೂರು ಮಕ್ಕಳಿದ್ದರೆಂದೂ ವಿಕುಕ್ಷಿಯೆಂಬ ಔರಸಪುತ್ರ ತಂದೆಯ ಅನಂತರ ಅಯೋಧ್ಯಾಪತಿಯಾದನೆಂದೂ ಉಳಿದವರು ನೆರೆಪ್ರಾಂತ್ಯಗಳಿಗೆ ತೆರಳಿ ಅಲ್ಲಲ್ಲಿ ಸಣ್ಣ ರಾಜ್ಯಗಳನ್ನು ಸ್ಥಾಪಿಸಿದರೆಂದೂ ಉಲ್ಲೇಖವಿದೆ. ಅದರಲ್ಲಿ ಹಲವರು ದಕ್ಷಿಣಾಪಥಕ್ಕೂ ಬಂದರಂತೆ. ಕುಶನೆಂಬ ಇಕ್ಷ್ವಾಕು ಪುತ್ರ ದಕ್ಷಿಣ ಕೋಸಲವೆಂಬ ಹೆಸರಿನ ರಾಜ್ಯವೊಂದನ್ನು ಕಟ್ಟಿದನೆಂದೂ ಅದಕ್ಕೆ ಕುಶಸ್ಥಲಿಯೆಂಬ ಹೆಸರು ಬಂತೆಂದೂ ವಿಷ್ಣುಪುರಾಣ ಹೇಳುತ್ತದೆ. ಇವರಲ್ಲಿ ಹಲವಾರು ಮಂದಿ ದಕ್ಷಿಣಪ್ರಾಂತ್ಯಗಳಲ್ಲಿ ನೆಲೆಯೂರಿ ಪ್ರಸಿದ್ಧರಾಗಿದ್ದಾರೆ. ಗೋದಾವರಿ ತೀರದಲ್ಲಿ ರಾಜ್ಯಗಳನ್ನು ಕಟ್ಟಿದ ಅಶ್ಮಕ, ಮುಲಕ ಮುಂತಾದವರೆಲ್ಲ ಈ ವಂಶದವರು. ಅಂಗದೇಶದ ಕಡೆಯಿಂದ ವೆಂಗಿನಾಡಿಗೆ ಬಂದು ನೆಲೆಸಿದ ಯಶೋಧರನೂ ಈ ವಂಶದವ. ಈತ ಜೈನತೀರ್ಥಂಕರ ವಾಸುಪೂಜ್ಯನ ಕಾಲದಲ್ಲಿದ್ದವನೆಂದು ಪ್ರತೀತಿ. ಈತ ಅಲ್ಲಿ ಕಟ್ಟಿದ ಪ್ರತಿಪಾಲಪುರವೆಂಬುದು ಈಗ ಭಟ್ಟಿಪ್ರೋಲು ಎಂಬ ಆಂಧ್ರನಗರಿಯಾಗಿದೆ. ಇವನ ವಿಚಾರ ಕನ್ನಡಕವಿ ನಯಸೇನನ ಧರ್ಮಾಮೃತದಲ್ಲಿ ಬರುತ್ತದೆ. ಅಂತೂ ಇಕ್ಷ್ವಾಕುಗಳಿಗೂ ದಕ್ಷಿಣ ದೇಶಕ್ಕೂ ತುಂಬ ಪ್ರಾಚೀನ ಸಂಬಂಧವಿರುವುದು ವ್ಯಕ್ತವಾಗುತ್ತದೆ.

ಈಗಿನ ನಾಗಾರ್ಜುನಕೊಂಡವನ್ನೊಳಗೊಂಡು ಕೃಷ್ಣಾನದೀತೀರದಲ್ಲಿ ಕರ್ನೂಲು ಜಿಲ್ಲೆಯವರೆಗೆ ವ್ಯಾಪಿಸಿರುವ ಶ್ರೀಪರ್ವತ ಇವರ ಕೇಂದ್ರ ಸ್ಥಳ. ಇದರಿಂದಾಗಿ ಈ ರಾಜರಿಗೆ ಶ್ರೀಪರ್ವತೀಯಾಂಧ್ರರೆಂಬ ಹೆಸರೂ ಇತ್ತು. ಚಾರಿತ್ರಿಕವಾಗಿ ಇವರು ಪ್ರಬಲರಾಗುವ ಮುಂಚೆ ಸಾತವಾಹನರು ಈ ಪ್ರದೇಶದ ಅಧಿಪತಿಗಳಾಗಿದ್ದರು. ರಾಯಸೀಮುಕ (ಸಿಂಧುಕ) ಸಾತವಾಹನನ ಕಾಲದಿಂದ ನಾಲ್ಕನೆಯ ಪುಳಮಾವಿಯವರೆಗೆ ಈ ವಂಶದಲ್ಲಿ ಬಂದ ಅರಸರ ಉಲ್ಲೇಖ ವಾಯುಪುರಾಣ, ಮತ್ಸ್ಯಪುರಾಣಗಳಲ್ಲಿ ಕಂಡುಬರುತ್ತದೆ. 128ರ ಸುಮಾರಿಗೆ ಪ್ರಸಿದ್ಧನಾಗಿದ್ದ ಗೌತಮೀಪುತ್ರ–ಯಜ್ಞಶ್ರೀ–ಸಾತಕರ್ಣಿಯ ಅನಂತರ ಸಾತವಾಹನರ ಬಲ ಕುಗ್ಗಿತು. ಅವರ ಸಾಮಂತರಾಗಿದ್ದ ಅಭೀರರೂ ಇಕ್ಷ್ವಾಕುಗಳೂ ಪ್ರಬಲರಾದರು. ಸಾತವಾಹನ ಸಾಮ್ರಾಜ್ಯ ಶಿಥಿಲವಾಯಿತು. ಇಕ್ಷ್ವಾಕುಗಳು ಅವರ ಸಾಮಂತ ರಾಗಿದ್ದರೆಂದೂ ದಂಡನಾಯಕರಾಗಿದ್ದರೆಂದೂ ಮತಭೇದವಿದೆ. ಸಾತವಾಹನರಾಜರು ದುರ್ಬಲರೆಂದು ತೋರಿದೊಡನೆ ಇವರು ಧಾನ್ಯಕಟಕವೆಂಬ ಪ್ರದೇಶವನ್ನು ಆಕ್ರಮಿಸಿಕೊಂಡು ತಮ್ಮದೇ ರಾಜ್ಯವನ್ನು ಕಟ್ಟಿದರು. ಇದು ಎರಡನೆಯ ಶತಮಾನದ ಪರಾರ್ಧದ ಮಾತು.

ಇವರ ವಿಚಾರ ಜಗ್ಗಯ್ಯಪೇಟೆಯಲ್ಲಿ ದೊರೆತಿರುವ ಶಾಸನವೊಂದರಿಂದ ತಿಳಿಯುತ್ತದೆ. ಇದರ ಭಾಷೆ ಪ್ರಾಕೃತ, ಲಿಪಿ ಬ್ರಾಹ್ಮೀ. ಈ ಶಾಸನದಲ್ಲಿ ಮೂವರು ರಾಜರ ಉಲ್ಲೇಖವಿದೆ; ಕ್ಷಾಂತಮೂಲ (ಚಾಂತಮೂಲ), ವೀರಪುರುಷದತ್ತ (ವೀರಪುರಿಸದತ) ಮತ್ತು ಎಹುವಲ ಕ್ಷಾಂತಮೂಲ. ಕ್ಷಾಂತಮೂಲ ಎನ್ನುವುದು ಪ್ರಾಕೃತದಲ್ಲಿ ಚಾಂತಮೂಲವಾಗುತ್ತದೆ. ಇವರ ರಾಜಧಾನಿಯಾಗಿದ್ದ ವಿಜಯಪುರಿ ಶ್ರೀಪರ್ವತಪ್ರದೇಶದಲ್ಲೇ ಇತ್ತು. ಸಾತವಾಹನರಂತೆ ಇವರೂ ಅಶ್ವಮೇಧಯಾಗ ಮಾಡಿ ವಿಖ್ಯಾತರಾದರು. ಕ್ಷಾಂತಮೂಲನೇ ಶ್ರೀಪರ್ವತದಲ್ಲಿ ಇಕ್ಷ್ವಾಕುವಂಶದ ರಾಜ್ಯ ಕಟ್ಟಿದವ. ಈತ ಮೊದಲಿಗೆ ಆಂಧ್ರ ಸಾತವಾಹನರ ಬಳಿ ಊಳಿಗದಲ್ಲಿದ್ದುದರಿಂದ ಈ ಮನೆತನದವರಿಗೆ ಆಂಧ್ರಭೃತ್ಯರೆಂಬ (ಆಂಧ್ರಸಾತವಾಹನಭೃತ್ಯ) ಹೆಸರೂ ಕೂಡ ಬಳಕೆಯಲ್ಲಿತ್ತು. ಕ್ಷಾಂತಮೂಲ ಸ್ವತಂತ್ರನಾಗಿ ರಾಜ್ಯವಾಳಲು ಮೊದಲಿಟ್ಟ ಅನಂತರ ವಾಸಿಷ್ಠೀಪುತ್ತ ಶ್ರೀಕ್ಷಾಂತಮೂಲನೆಂದು ತನ್ನನ್ನು ಕರೆದುಕೊಂಡ. ಮೇಲಿನ ಶಾಸನದಲ್ಲಿ ವಾಸಿಷ್ಠೀಸುತ ಸಿರಿ ಚಾಂತಮೂಲನೆಂದು ಪ್ರಸ್ತಾಪವಿದೆ. ಆತನ ತಾಯಿ ವಾಸಿಷ್ಠಿ. ತಾಯಿಯ ಮಗನೆಂದು ವ್ಯವಹರಿಸಿಕೊಳ್ಳುವ ಪದ್ಧತಿ ಆ ಕಾಲಕ್ಕೆ ಪ್ರಚುರವಾಗಿತ್ತು. ತಂದೆಯ ಹೆಸರು ಉಪಲಬ್ಧವಿಲ್ಲ.

ಇವನ ಮನೆದೇವರು ಸ್ಕಂದ (ಮಹಾಸೇನ). ಈತ ವೈದಿಕ ಸಂಪ್ರದಾಯದಲ್ಲಿ ಶ್ರದ್ಧೆಯಿದ್ದವ. ಆದ್ದರಿಂದಲೇ ಅಶ್ವಮೇಧ, ವಾಜಪೇಯ, ಅಗ್ನಿಷ್ಟೋಮ ಯಾಗಗಳನ್ನು ಮಾಡಿದ. ಈ ಯಾಗಗಳನ್ನು ಮಾಡಿದುದು ಈತ ಮಹಾಬಲಿಷ್ಠನಾಗಿದ್ದನೆಂದೂ ರಾಜ್ಯ ವೈಭವಸಂಪನ್ನವಾಗಿದ್ದಿತೆಂದೂ ಸೂಚಿಸುತ್ತದೆ. ಅಧಿಕವಾದ ಸಂಪತ್ತನ್ನು ಮುಕ್ತಹಸ್ತದಿಂದ ದಾನ ಮಾಡಿದನೆಂದು ಪ್ರತೀತಿ. ಇವನಿಗೆ ಮಾಢರಿಯೆಂಬ ಹೆಂಡತಿ ಇದ್ದಳು. ಮಗ ವೀರಪುರುಷದತ್ತ (ವೀರಪುಸದತ–ಮಾಡರೀಪುತ್ರ) ಮುಂದೆ ಉತ್ತರಾಧಿಕಾರಿಯಾದ. ಮಗಳು ಅಟವಿ ಶಾಂತಿಶ್ರೀ; ಆಕೆಯ ಗಂಡ ಸ್ಕಂದವಿಶಾಖ (ಖಂಡವಿಸಾಖಣಕ) ಕ್ಷಾಂತಮೂಲನ ದಂಡನಾಯಕನಾಗಿದ್ದ. ಕ್ಷಾಂತಮೂಲನ ತಂಗಿ ಹರ್ಮ್ಯಶ್ರೀಯ (ಹಮ್ಮಸಿರಿ) ಇಬ್ಬರು ಮಕ್ಕಳನ್ನೂ (ವಾಪಿಶ್ರೀ–ಬಾಪಿಸಿರಿ, ಷಷ್ಠಿಶ್ರೀ–ಚಡಿಸಿರಿ) ಮಗ ವೀರ ಪುರುಷನಿಗೇ ತಂದುಕೊಂಡು ವಿವಾಹಮಾಡಿದ. ಸೋದರಿಕೆಯಲ್ಲಿ ವಿವಾಹ ಮಾಡಿಕೊಳ್ಳುವ ಸಂಪ್ರದಾಯ ಆಗಲೇ ಪ್ರಚಲಿತವಾಗಿದ್ದಂತೆ ತೋರುತ್ತದೆ. ಸೋದರಮಾವನ ಮಗಳನ್ನು ಮದುವೆಯಾಗುವುದು ಕನ್ನಡನಾಡಿನಲ್ಲೂ ತೆಲುಗು ದೇಶದಲ್ಲೂ ಪ್ರಚಲಿತವಾಗಿದೆ. ಇವನ ಇನ್ನೊಬ್ಬ ತಂಗಿ ಶಾಂತಿಶ್ರೀಯ (ಚಾಂತಿಸಿರಿ) ಗಂಡ ವಾಸಿಷ್ಠೀಪುತ್ರಸ್ಕಂದಶ್ರೀ ಈವಾಸಿಠೀಪುತಖಂದಸಿರಿ ಅದೇ ರಾಜ್ಯದ ಮಹಾ ಸಾಮಂತನಾಗಿದ್ದ.

ಎರಡನೆಯ ಇಕ್ಷ್ವಾಕು ರಾಜನಾದ ವೀರಪುರುಷದತ್ತ ಏನಿಲ್ಲವೆಂದರೂ ಇಪ್ಪತ್ತು ವರ್ಷಗಳ ಕಾಲ ರಾಜ್ಯವಾಳಿದ. ಈ ಅವಧಿಯಲ್ಲಿ ಸಿದ್ಧವಾದ ಪ್ರಾಕೃತ ಶಾಸನಗಳು ದೊರೆತಿವೆ. ವೀರಪುರುಷದತ್ತ ನೆರೆರಾಜ್ಯಗಳ ಸ್ನೇಹಗಳಿಸಿ ಉಳಿಸಿಕೊಳ್ಳಲು ಆ ರಾಜ್ಯಗಳ ರಾಜಪುತ್ರಿಯರನ್ನು ಮದುವೆಯಾದ. ಅವನ ರಾಣಿಯರಲ್ಲಿ ಒಬ್ಬಳಾದ ರುದ್ರಧರ ಭಟ್ಟಾರಿಕೆ ಉಜ್ಜಯಿನಿಯ ಅರಸುಕುವರಿ, ಚಷ್ಟನನೆಂಬ ಶಕರಾಜನ ಮಗಳು. ಈ ಚಷ್ಟನವಂಶದವರೇ ಆದ ಶಕಕ್ಷತ್ರಪರು ಪಶ್ಚಿಮ ಭಾರತದ ಅರಸರಾಗಿದ್ದರು. ಇವರು ಮೊದಲು ಸಾತವಾಹನರಾಜರ ಸಾಮಂತರಾಗಿದ್ದರು. ಅವರ ಅನಂತರ ಸ್ವತಂತ್ರರಾದರು.

ವೀರಪುರುಷದತ್ತನ ಮಗ ಎಹುವುಲ ಕ್ಷಾಂತಮೂಲ, ಮಗಳು ಕೊಡಬಲಿಸಿರಿ. ಎಹುವುಲ ಸು.11ವರ್ಷಗಳ ಕಾಲ ರಾಜ್ಯವಾಳಿದಂತೆ ತೋರುತ್ತದೆ. ಅವನ ತಂಗಿ ಕೊಡಬಲಿಸಿರಿಯನ್ನು ಕನ್ನಡದ ಬನವಾಸಿಯ (ವೈಜಯಂತಿ) ರಾಜ ಕೈಹಿಡಿದ. ಬನವಾಸಿಯ ರಾಜರೂ ಚುಟ್ಟರಂತೆ ಇಕ್ಷ್ವಾಕುಗಳಂತೆ ಸಾತವಾಹನರಾಜರ ಸಾಮಂತರಾಗಿದ್ದು ಸಾತವಾಹನರ ಸಾಮ್ರಾಜ್ಯ ಶಿಥಿಲವಾದ ಅನಂತರ ಸ್ವತಂತ್ರರಾಜ್ಯ ಕಟ್ಟಿದರು. ಆಂಧ್ರದ ಇಕ್ಷ್ವಾಕುರಾಜರಿಗೂ ಕನ್ನಡನಾಡಿನ ಬನವಾಸಿರಾಜರಿಗೂ ಬಾಂಧವ್ಯವಿತ್ತು.

ಎಹುವುಲ ಕ್ಷಾಂತಮೂಲನ ಮಗ ಪುರುಷದತ್ತ. ಇವನ ಕಾಲದ ಶಾಸನ ಗುಂಟೂರು ಜಿಲ್ಲೆಯ ಗುರುಜಾಲದಲ್ಲಿ ದೊರಕಿದೆ. ಇದರಲ್ಲಿ ರಾಜನನ್ನು ಪ್ರಾಕೃತದ ರುಖುಪುರಿಸದ ಎಂಬ ಹೆಸರಿನಿಂದ ಸಂಬೋಧಿಸಿದ್ದಾರೆ. ಇವನಿಗೆ ರುದ್ರಪುರುಷದತ್ತನೆಂಬ ಹೆಸರು ಇದ್ದಿತೆಂದು ತಿಳಿದುಬರುತ್ತದೆ. ಬಹುಶಃ ಉಜ್ಜಯಿನಿಯ ರುದ್ರಧರಭಟ್ಟಾರಿಕೆಯ ಮಗನಿದ್ದಿರ ಬಹುದು. ಇವನಿಗೆ ಬೌದ್ಧಧರ್ಮದಲ್ಲಿ ಅನುರಕ್ತಿಯಿದ್ದಿತೆಂದು ತಿಳಿದುಬರುತ್ತದೆ. ಹಲಂಪುರದ ನೊದುಕಸಿರಿಯೆಂಬ ದೇವರಿಗೆ ಭೂಮಿಯನ್ನು ಉಂಬಳಿಯಾಗಿ ಕೊಟ್ಟಿದ್ದ. ಹಲಂಪುರ ವೆಂಬುದು ಈಗ ರಾಯಚೂರು ಜಿಲ್ಲೆಯಲ್ಲಿರುವ ಅಲಂಪೂರವೆಂಬ ಊರೆಂದೂ ನಾಗಾರ್ಜುನಕೊಂಡದ ಬಳಿಯಿರುವ ನಾಗುಲವರವೇ ಇದೆಂದೂ ಎರಡು ಅಭಿಪ್ರಾಯಗಳಿವೆ (ಹಲ ಎಂದರೆ ನೇಗಿಲು, ತೆಲುಗಿನಲ್ಲಿ ನಾಗುಲ). ಇವನ ಆಸಕ್ತಿಯಿಂದಲೇ ನಾಗಾರ್ಜುನ ಕೊಂಡದ ಸ್ತೂಪ ವಿಸ್ತರಿಸಿ ಇಡೀ ದೇಶದಲ್ಲಿ ಪ್ರಸಿದ್ಧವಾಯಿತು. ಈ ವಂಶದ ರಾಜರು ವೈದಿಕ ಸಂಪ್ರದಾಯದವರಾದರೂ ಬೌದ್ಧಧರ್ಮವನ್ನು ಪುರಸ್ಕರಿಸಿದ್ದರು. ಇವರ ಆಡಳಿತದ ಅವಧಿಯಲ್ಲೇ ಧಾನ್ಯಕಟಕ ಮತ್ತು ನಾಗಾರ್ಜುನಕೊಂಡ ವಿದ್ಯಾಪೀಠಗಳು ಪ್ರಸಿದ್ಧ ಬೌದ್ಧಕ್ಷೇತ್ರ ಗಳಾದುವು. ಇಲ್ಲಿಂದ ವಿದ್ಯಾರ್ಥಿಗಳು ನಾಡಿನಾದ್ಯಂತ ಹರಡಿದರು. ಇಲ್ಲಿಂದಲೇ ಬೌದ್ಧಧರ್ಮ ಬನವಾಸಿಗೆ ಹರಡಿತು; ಕನ್ನಡನಾಡಿನಲ್ಲಿ ಬೌದ್ಧಮತದ ಏಳಿಗೆಗೆ ಈ ಮನೆತನದ ಅರಸರ, ಅದೂ ಪುರುಷದತ್ತನ ಬೆಂಬಲವೇ ಕಾರಣ. ನಾಗಾರ್ಜುನಕೊಂಡದ ಸ್ತೂಪ–ವಿಹಾರಗಳನ್ನು ಬಿಟ್ಟು ಈ ಪ್ರದೇಶದಲ್ಲಿರುವ ಉಳಿದ ಹಲವಾರು ಬೌದ್ಧವಾಸ್ತುಶಿಲ್ಪಗಳೂ ಇವರ ಕಾಲದ್ದೇ. ಈ ಕಾಲದ ಶಾಸನವೆಲ್ಲ ಬೌದ್ಧವಿಹಾರಸ್ತೂಪಗಳ ನಿರ್ಮಾಣ, ದಾನಗಳಿಗೇ ಸಂಬಂಧಿಸಿದ್ದು.

ಪುರುಷದತ್ತನ ಅನಂತರ ಬಂದ ರಾಜರು ಯಾರೋ ತಿಳಿಯದು. ಪ್ರಾಯಶಃ ಇವನೇ ಕಡೆಯವನಿರಬಹುದು. ಮೂರು–ನಾಲ್ಕನೆಯ ಶತಮಾನದ ಸುಮಾರಿಗೆ ಇವರ ವಂಶ ಕೊನೆಗೊಂಡಂತೆ ತೋರುತ್ತದೆ. ಆಗಲೇ ಪಲ್ಲವರು ಪ್ರಬಲರಾಗುತ್ತಿದ್ದರು. ಅವರ ಪ್ರಾಬಲ್ಯವೂ ಇಕ್ಷ್ವಾಕುಗಳ ಅವನತಿಗೆ ಕಾರಣವಿದ್ದಿರಬಹುದು. ಪಲ್ಲವಸಿಂಹವರ್ಮನ ಅನಂತರ ಆಳಿದ ಯುವಮಹಾರಾಜ ಸ್ಕಂದವರ್ಮನ ಕಾಲಕ್ಕೆ ಇಕ್ಷ್ವಾಕು ಅರಸರ ಕೇಂದ್ರವಾಗಿದ್ದ ಗುಂಟೂರು ಜಿಲ್ಲೆ ಪಲ್ಲವರ ಅಧೀನದಲ್ಲಿತ್ತೆಂದು ಮೈದವೋಲುಶಾಸನ ತಿಳಿಸುತ್ತದೆ. ಕೃಷ್ಣಾನದಿಯ ಉತ್ತರದಲ್ಲಿ ಇಕ್ಷ್ವಾಕುಗಳ ಅನಂತರ ಬೃಹತ್ಫಲಾಯನಸ ಗೋತ್ರದ ಅರಸರು ತಲೆಯೆತ್ತಿ ನಿಂತರು. ಇಕ್ಷ್ವಾಕುಗಳ ಸಾಮಂತರಾಗಿದ್ದ ಪೂಗಿಯರು, ಧನಕರು, ಕುಲಹಕರು ಹಿರಣ್ಯಕರು ಎಲ್ಲರೂ ತಮ್ಮ ತಮ್ಮ ಪ್ರದೇಶಗಳಲ್ಲಿ ಸ್ವತಂತ್ರ ರಾಜ್ಯಗಳನ್ನು ಕಟ್ಟಿದರು. (ಎಸ್.ಕೆ.ಆರ್.)

**ಇಖ್ತಾಪದ್ಧತಿ:** ದೆಹಲಿ ಸಾಮ್ರಾಜ್ಯದ ಗುಲಾಮಿ ಅರಸ ಇಲ್ತಮಷ್‌ನ ಕಾಲದಲ್ಲಿ ಜಾರಿಗೆ ತಂದ ಆಡಳಿತಕ್ರಮ. ತನ್ನ ರಾಜ್ಯವನ್ನು ಅನೇಕ ಇಖ್ತಾ (ಪ್ರಾಂತ)ಗಳಾಗಿ ವಿಭಜಿಸಿ, ಪ್ರತಿ ಇಖ್ತಾವನ್ನು ಒಬ್ಬ ತುರ್ಕಿ ಸೇನಾಧಿಕಾರಿಯ ಇಖ್ತಾದಾರ ಆಡಳಿತಕ್ಕೆ ಒಳಪಡಿಸಿದ. ಈ ಇಖ್ತಾದಾರರು ತಮ್ಮ ಅಧಿಕಾರವ್ಯಾಪ್ತಿಯ ಪ್ರದೇಶದಲ್ಲಿ ಶಾಂತಿಸುವ್ಯವಸ್ಥೆ, ಕಾನೂನು ಪರಿಪಾಲನೆ, ಸೈನ್ಯ ಸಂಘಟನೆ ಮತ್ತು ಕಂದಾಯವನ್ನು ಸಂಗ್ರಹಿಸುವುದು ಮುಖ್ಯ ಕರ್ತವ್ಯಗಳಾಗಿದ್ದವು. ಇಖ್ತಾದಾರರು ತಾವು ಸಂಗ್ರಹಿಸಿದ ಕಂದಾಯದ ಹಣದಲ್ಲಿ ತಮ್ಮ ಮತ್ತು ಸೈನ್ಯ ಹಾಗೂ ಆಡಳಿತ ನಿರ್ವಹಣೆಯ ವೆಚ್ಚಕ್ಕೆ ಬೇಕಾಗುವ ಹಣವನ್ನು ಇಟ್ಟುಕೊಂಡು ಉಳಿದ ಹಣವನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿ ಕೊಡುತ್ತಿದ್ದರು. ದೆಹಲಿ ಸುಲ್ತಾನರು ಈ ಇಖ್ತಾದಾರರನ್ನು ಕಾಲಕಾಲಕ್ಕೆ ಬೇರೆ ಬೇರೆ ಪ್ರಾಂತಗಳಿಗೆ ವರ್ಗಾವಣೆ ಮಾಡುವುದರ ಮೂಲಕ ಅವರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುತ್ತಿದ್ದರು. ಕಾರಣ ಇಖ್ತಾದಾರರು ದುರ್ಬಲ ಸುಲ್ತಾನರ ಕಾಲದಲ್ಲಿ ಬಂಡಾಯವೆದ್ದು ಸ್ವತಂತ್ರ ಆಡಳಿತಗಾರರಾಗಲು ಹವಣಿಸು ತ್ತಿದ್ದರು. ಸುಲ್ತಾನರ ವಿಶ್ವಾಸವನ್ನು ಕಳೆದುಕೊಂಡವರು ಇಖ್ತಾದಾರಿಕೆಯನ್ನು ಕಳೆದು ಕೊಳ್ಳುತ್ತಿದ್ದರು.

ಇಖ್ತಾಗಳನ್ನು ಕೆಲವು ಸಂದರ್ಭದಲ್ಲಿ ತರಫ್‌ಗಳೆಂದೂ ತರಫ್‌ಗಳ ಮುಖ್ಯಸ್ಥರನ್ನು ತರಫ್‌ದಾರರೆಂದೂ ಕರೆಯುವ ಪದ್ಧತಿ ರೂಢಿಯಲ್ಲಿತ್ತು. ದೆಹಲಿ ಸುಲ್ತಾನರ ರಾಜ್ಯವಿಸ್ತರಣೆ, ಸಂರಕ್ಷಣೆ, ಸುಗಮ ಆಡಳಿತ, ತೆರಿಗೆ ಸಂಗ್ರಹಣೆ ಮುಂತಾದ ಕಾರ್ಯಗಳಲ್ಲಿ ಈ ಇಖ್ತಾಪದ್ಧತಿ ಬಹಳ ಸಹಕಾರಿಯಾಗಿತ್ತು. ಆದರೆ ಮುಂದೆ ಇಖ್ತಾದಾರರ ಸ್ವತಂತ್ರ ಪ್ರವೃತ್ತಿ, ಬಂಡಾಯ, ಅವಿಧೇಯತೆ, ಆಂತರಿಕ ಗಲಭೆ, ಅಧಿಕಾರ ವ್ಯಾಮೋಹ ದೆಹಲಿ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು. (ಎನ್‌ಆರ್.)

**ಇತಿಹಾಸ:** ಮನುಕುಲದ ಹುಟ್ಟು ಮತ್ತು ಹಲವು ಕಾಲಘಟ್ಟಗಳ ವಿಕಾಸ ಕುರಿತ ವ್ಯವಸ್ಥಿತ ನಿರೂಪಣೆ (ಹಿಸ್ಟರಿ). ಈ ಪದ ಗ್ರೀಕ್‌ನ ಹಿಸ್ಟೋರಿಯಾ ಎಂಬ ಪದದಿಂದ ನಿಷ್ಪತ್ತಿಗೊಂಡಿದೆ. ಈ ಪದಕ್ಕೆ ತನಿಖೆ, ಸಂಶೋಧನೆ, ಮಾಹಿತಿ, ಉತ್ಖನನ–ಮುಂತಾದ ಅರ್ಥಗಳಿವೆ. ವಿಶಾಲವಾದ ಅರ್ಥದಲ್ಲಿ ಇತಿಹಾಸ ಮನುಷ್ಯ ಕುಲದ ಗತಕಾಲದ ಚಟುವಟಿಕೆಗಳನ್ನು ಕುರಿತು ಹೇಳುತ್ತದೆ. ಇದು ಮನುಷ್ಯ ಜೀವನದ ಹಲವು ಅನನ್ಯ ಘಟನೆಗಳು ಮತ್ತು ಸಂಚಲನೆಗಳ ಒಂದು ವಿಶ್ವಾಸಾರ್ಹ ದಾಖಲೆ. ರಾಜಕೀಯ – ಆರ್ಥಿಕ ವ್ಯವಸ್ಥೆ, ಸಮಾಜ, ಸಂಸ್ಕೃತಿ, ಪರಿಸರ ಮತ್ತು ಚಿಂತನೆಗಳ ಹಿನ್ನೆಲೆಯಲ್ಲಿ ಮನುಷ್ಯನ ಗತಕಾಲದ ಚಟುವಟಿಕೆಗಳನ್ನು ಸಾಧ್ಯವಾದಷ್ಟು ವಸ್ತುನಿಷ್ಠವಾಗಿ ದಾಖಲಿಸುವ, ಮರು ನಿರೂಪಿಸುವ ಶಿಸ್ತಿನ ಕಾರ್ಯ. ಇತಿಹಾಸವನ್ನು ಕುರಿತು ಹಲವು ವಿದ್ವಾಂಸರು, ಇತಿಹಾಸಜ್ಞರು ತಮ್ಮದೇ ರೀತಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಹೀಗಾಗಿ ಇತಿಹಾಸ ಕುರಿತು ಇದೇ ಅಂತಿಮ ಎನ್ನುವಂಥ ಯಾವುದೇ ವ್ಯಾಖ್ಯಾನ ಇಲ್ಲ. ನಿರ್ದಿಷ್ಟ ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಿರುವ ಇತಿಹಾಸದ ಅರ್ಥ–ವ್ಯಾಖ್ಯಾನ ನಿರಂತರವಾಗಿ ಬದಲಾಗುತ್ತಲೇ ಇದೆ. ಇತಿಹಾಸದ ಅರ್ಥ ಮತ್ತು ಮಹತ್ತ್ವ ಸತ್ತ್ವ ಪರಸ್ಪರ ಪೂರಕವಾಗಿಯೇ ಸಾಗುತ್ತವೆ.

ಇತಿಹಾಸವನ್ನು ಕುರಿತು ಮೊಟ್ಟಮೊದಲು ವಿವೇಚಿಸಿದವರು ಗ್ರೀಕರು. ಹಾಲಿಕಾರ್ನಾಸಸನ್‌ನ ಡೈಯನೀಶಿಯಸ್ ನಿದರ್ಶನಗಳೊಂದಿಗೆ ತತ್ತ್ವಶಾಸ್ತ್ರವನ್ನು ಬೋಧಿಸುವುದೇ ಇತಿಹಾಸ' ಎಂದು ಮೊದಲಿಗೆ ಹೇಳಿದ. ಅಂದರೆ ಮನುಷ್ಯನ ಅಮೂಲ್ಯವಾದ ಬದುಕು–ಅನುಭವ ಕುರಿತ ಉತ್ಕೃಷ್ಟ ನಿದರ್ಶನಗಳನ್ನು ಇತಿಹಾಸದಲ್ಲಿ ಕಾಣಬಹುದು. ಸಂಶೋಧನೆಯಿಂದ ತಿಳಿದುಬಂದದ್ದನ್ನು ತರ್ಕಬದ್ಧವಾಗಿ ವಿವರಿಸುವ ಸವಾಲು ಇತಿಹಾಸದ್ದು ಎಂಬುದು ಅರಿಸ್ಟಾಟಲನ ಮಾತು. ಗತಕಾಲದ ವಸ್ತುಸ್ಥಿತಿ ಅಥವಾ ಸತ್ಯದ ತರ್ಕಬದ್ಧ ವಿಶ್ಲೇಷಣೆ ಇತಿಹಾಸದ ಮಹತ್ತ್ವದ ಸಂಗತಿ. ಪಾಲಿಬಿಯಸ್ ಮತ್ತು ತುಸಿಡಿಡೆಸ್ ಪ್ರಕಾರ ಸ್ಮರಣೆ ಮಾಡಲೇಬೇಕಾದ ಸಂಗತಿಗಳ ಕತೆಯೇ ಇತಿಹಾಸ. ಗತಕಾಲದಲ್ಲಿ ನಡೆದ ಎಲ್ಲವೂ ಇತಿಹಾಸವಾಗುವುದಿಲ್ಲ ಎಂಬುದರ ಕಡೆಗೂ ಈ ಮಾತು ಗಮನ ಸೆಳೆಯುತ್ತದೆ. ಪ್ರಾಚೀನ ಪಾಶ್ಚಿಮಾತ್ಯ ದೇಶಗಳಷ್ಟೆ ಅಲ್ಲ, ಪೌರಾತ್ಯ ದೇಶಗಳಲ್ಲೂ ಇತಿಹಾಸ ಎಂದರೆ ವರ್ತಮಾನ ಎಂದೇ ಪರಿಗಣಿಸಲಾಗಿತ್ತು. ಈ ಪದವನ್ನು ಭಾರತದ ವೇದಗಳಲ್ಲಿ ಬಳಸಲಾಗಿದೆ. 'ಹೀಗೆ, ಈ ರೀತಿ ಇದು ನಡೆಯಿತು' ಎಂಬುದು ಇತಿಹಾಸ ಪದದ ಅರ್ಥ. ಅಥರ್ವಣವೇದ ಮತ್ತು ಇತಿಹಾಸ ವೇದ ಸೇರಿ ನಾಲ್ಕನೆಯ ವೇದ ಸೃಷ್ಟಿಯಾಯಿತು. ಇಂಗ್ಲಿಷ್‌ನ ರಮ್ಯವಾದಿ ಇತಿಹಾಸಜ್ಞ ತಾಮಸ್ ಕಾರ್ಲೈಲ್ ಪ್ರಕಾರ 'ಇತಿಹಾಸ ಎಂದರೆ ಇನ್ನೇನೂ ಅಲ್ಲ; ಅದು ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ. ಮನುಕುಲದ ಮಹಾ ಚೇತನಗಳ ಸಾಧನೆಗಳ ದಾಖಲೆ, ಕಾರ್ಲೈಲ್ ಅನಂತರದ ಕಾಲಘಟ್ಟದಲ್ಲಿ ಐತಿಹಾಸಿಕ ಸಂಶೋಧನೆಯಲ್ಲಿ ಗಮನಾರ್ಹ ಬದಲಾವಣೆ ನಡೆಯಿತು. ಇದರಿಂದ ಇತಿಹಾಸದ ಮಹತ್ತ್ವ ಮತ್ತು ಅರ್ಥಗಳನ್ನೂ ಬದಲಿಸಿತು. ಈಗ ಮಹಾನ್ ವ್ಯಕ್ತಿಗಳಷ್ಟೇ ಅಲ್ಲದೆ, ಜನ ಸಮುದಾಯಗಳ ಸಮಾಜ ಮತ್ತು ಸಂಸ್ಕೃತಿಯನ್ನು ಅವರ ಗತಕಾಲವನ್ನೂ ಇತಿಹಾಸ ಒಳಗೊಳ್ಳುತ್ತದೆ. 1980ರಲ್ಲಿ ಮೂಡಿಬಂದ ದಮನಿತರ ಚರಿತ್ರೆಯ ವಿಚಾರ ಕೆಳವರ್ಗದವರ ಚರಿತ್ರೆಯ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿತು. ಪಾಸಿಟಿವಿಸ್ಟ್ ಚಿಂತಕ ಲಿಯೊಪಾಲ್ಡ್ ವಾನ್ ರಾಂಕೆ ಹೇಳುವುದು ಹೀಗೆ: ಗತಕಾಲ ನಿಜಕ್ಕೂ ಹೀಗಿತ್ತು ಎಂದು ತೋರಿಸುವುದೇ ಇತಿಹಾಸಜ್ಞ ಎದುರಿಸುವ ಸವಾಲು. ಇತಿಹಾಸವನ್ನು ವಿಜ್ಞಾನ ಎಂದು ಸಾಧಿಸುವಲ್ಲಿ ಹೆಚ್ಚು ಉತ್ಸಾಹಿಗಳಾದ ಪಾಸಿಟಿವಿಸ್ಟ್‌ಗಳು ವಸ್ತುಸ್ಥಿತಿಗೆ ವಾಸ್ತವಾಂಶಗಳಿಗೆ ಹೆಚ್ಚಿನ ಮಹತ್ತ್ವ ನೀಡಿದರು.

ಸರ್ ಜಾನ್ ಸೀಲೆ ಪ್ರಕಾರ ಇತಿಹಾಸ ಗತಕಾಲದ ರಾಜಕಾರಣ ಮತ್ತು ವರ್ತಮಾನದ ರಾಜಕಾರಣವೇ ಭವಿಷ್ಯತ್ತಿನ ಇತಿಹಾಸ. ಇತಿಹಾಸದಿಂದ ಪರಿಶುದ್ಧಗೊಳ್ಳದ ರಾಜಕಾರಣ ಅಸಭ್ಯ. ಹಾಗೇ ಪ್ರಾಯೋಗಿಕ/ಸಮಕಾಲೀನ ರಾಜಕಾರಣದ ಜೊತೆಗೆ ತನ್ನ ಸಂಬಂಧವನ್ನು ಸ್ಪಷ್ಟಪಡಿಸಿಕೊಳ್ಳದ ಇತಿಹಾಸ ವ್ಯರ್ಥವಾಗಿ ಉಳಿಯುತ್ತದೆ. ಆದರೆ ಈ ವಾದಕ್ಕೆ ಈಗ ಬೆಲೆ ಇಲ್ಲ. ಈಗ ಇತಿಹಾಸದ ಭಿತ್ತಿ ತುಂಬ ದೊಡ್ಡದಾಗಿದೆ. ರಾಜಕಾರಣ ಈಗ ಐತಿಹಾಸಿಕ ಅಧ್ಯಯನದ ಹಲವು ಆಯಾಮಗಳಲ್ಲಿ ಒಂದು ಅಷ್ಟೆ.

ಎ. ಎಲ್. ರೋಷ್ ಹೇಳುವಂತೆ ಇತಿಹಾಸ ನಿರ್ದಿಷ್ಟ ಭೂಪ್ರದೇಶ ಮತ್ತು ಪರಿಸರದಲ್ಲಿ ಬದುಕುವ ಮನುಷ್ಯ ಸಮಾಜ–ಸಮುದಾಯದ ಒಂದು ದಾಖಲೆ. ಚಾರ್ಲ್ಸ್ ಸಿನ್‌ಬೋಸ್ ಹೇಳುವುದು ಹೀಗೆ: ಐತಿಹಾಸಿಕವಾದ ಎಲ್ಲ ಜ್ಞಾನವೂ ಅಪ್ರತ್ಯಕ್ಷವಾಗಿರುವುದರಿಂದ ಇತಿಹಾಸ ಕಾರ್ಯಕಾರಣ ವಿವೇಚನೆಯ ಒಂದು ವಿಜ್ಞಾನ. ವೈಚಾರಿಕ ಮತ್ತು ವೈಜ್ಞಾನಿಕ ತತ್ತ್ವಗಳನ್ನು ಆಧರಿಸಿ ಐತಿಹಾಸಿಕ ಸಾಕ್ಷ್ಯಗಳನ್ನು ಆಯ್ಕೆ ಮಾಡುವುದು, ವಿಶ್ಲೇಷಿಸುವುದು ಇತಿಹಾಸಜ್ಞನ ಮುಂದಿರುವ ದೊಡ್ಡ ಸವಾಲು.

ಜೆ.ಬಿ.ಬರಿ ಪ್ರಕಾರ ಇತಿಹಾಸ ಒಂದು ವಿಜ್ಞಾನ : ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ. ತನಿಖೆ, ಪರಿಶೀಲನೆ, ವಿಶ್ಲೇಷಣೆ ಮತ್ತು ಸತ್ಯದ ಅನಾವರಣದಂಥ ವೈಜ್ಞಾನಿಕ ತಂತ್ರಗಳನ್ನು ಅನುಸರಿಸಿದರೂ ಇತಿಹಾಸಜ್ಞನ ನಿರೂಪಣೆಯ ಪರಿಮಿತಿಯೊಳಗೇ ಇತಿಹಾಸ ಸುತ್ತ ಬೇಕಾಗುತ್ತದೆ. ಅದೇ ಕಾರಣಕ್ಕೆ ವ್ಯಕ್ತಿನಿಷ್ಠ ನಿಲುವುಗಳೂ ಪ್ರಕಟವಾಗುತ್ತವೆ. ಹೀಗಾಗಿ ಇದನ್ನು ವಿಜ್ಞಾನ ಎಂದು ಕರೆಯಲಾಗುವುದಿಲ್ಲ. ಅಷ್ಟೇ ಅಲ್ಲ, ವಿಜ್ಞಾನದಲ್ಲಿ ಎಲ್ಲ ಕಾಲಕ್ಕೂ ಪ್ರದೇಶಕ್ಕೂ ಸಲ್ಲುವ ಕೆಲವು ಸಾಮಾನ್ಯ ನೀತಿ–ನಿಯಮಗಳಿರುತ್ತವೆ. ಆದರೆ ಇತಿಹಾಸದಲ್ಲಿ ಹಾಗೆ ಯಾವುದೇ ಸಾಮಾನ್ಯ ನೀತಿ–ನಿಯಮಗಳಿರುವುದಿಲ್ಲ. ವಿಜ್ಞಾನ ಕೆಲವು ನಿದರ್ಶನಗಳಿಂದ ಸಾಮಾನ್ಯ ಸೂತ್ರವನ್ನು ಕಟ್ಟುವ ಅನುಗಮನ ತರ್ಕವನ್ನು ಅಳವಡಿಸಿಕೊಂಡರೆ, ಇತಿಹಾಸ ಬಹುತೇಕ ನಿಗಮನ ತರ್ಕವನ್ನು ಅಳವಡಿಸಿಕೊಳ್ಳುತ್ತವೆ. ಅಂತಿಮವಾಗಿ ಇತಿಹಾಸದಲ್ಲಿ ವಿಜ್ಞಾನದ ಅಂಶಗಳು ಇದ್ದರೂ ನಿರೂಪಣೆ ಕಲಾತ್ಮಕವಾಗಿರುತ್ತದೆ ಎಂಬುದನ್ನು ಗಮನಿಸಬೇಕು.

ಆಕ್ಸ್‌ಫರ್ಡ್ ತತ್ತ್ವಶಾಸ್ತ್ರಜ್ಞ ಮತ್ತು ಇತಿಹಾಸಜ್ಞ ಆರ್.ಜಿ.ಕಾಲಿಂಗ್‌ವುಡ್ ಪ್ರಕಾರ ಇತಿಹಾಸ ಒಂದು ಬಗೆಯ ತನಿಖೆ ಅಥವಾ ಸಂಶೋಧನೆ. ಎಲ್ಲ ಇತಿಹಾಸವೂ ಇತಿಹಾಸದ ಕುರಿತ ಚಿಂತನೆಯೇ ಆಗಿದೆ. ಯಾವುದರ ಕುರಿತು ಇತಿಹಾಸಜ್ಞ ಚಿಂತಿಸುತ್ತಿದ್ದಾನೆಯೋ ಆ ಗತಕಾಲದ ಪ್ರತಿಬಿಂಬವೇ ಇತಿಹಾಸ. ಭಾರತದ ಸುಪ್ರಸಿದ್ಧ ಮಾರ್ಕ್ಸ್‌ವಾದಿ ಇತಿಹಾಸಜ್ಞ ಡಿ.ಡಿ.ಕೊಸಾಂಬಿ ಪ್ರಕಾರ ಉತ್ಪಾದನೆಗೆ ಸಂಬಂಧಿಸಿ ನಡೆದ ಪ್ರಗತಿಯ ಬಗೆಗಿನ ಸರಳ ರೇಖಾತ್ಮಕವಾದ ವಿವರಣೆಯೇ ಇತಿಹಾಸ. ಇತಿಹಾಸದ ಭೌತಿಕ ನಿರೂಪಣೆಗೆ ಕೊಸಾಂಬಿ ಯವರು ಹೆಚ್ಚಿನ ಮಹತ್ತ್ವ ನೀಡಿರುವುದನ್ನು ಕಾಣಬಹುದು.

ಇತಿಹಾಸ ಎಂದರೇನು ಎಂಬ ಪ್ರಶ್ನೆಗೆ ಇ.ಎಚ್.ಕಾರ್ ಉತ್ತರ ಹೀಗಿದೆ: ಅದು ಇತಿಹಾಸಜ್ಞ ಮತ್ತು ಆತ ಸಂಗ್ರಹಿಸಿದ ವಸ್ತುಸಂಗತಿಗಳ ನಡುವಿನ ನಿರಂತರ ಸಂವಾದ. ಭೂತಕಾಲ ಮತ್ತು ವರ್ತಮಾನಕಾಲದ ನಡುವಿನ ಕೊನೆ ಇಲ್ಲದ ಚರ್ಚೆ. ತನ್ನ ಪರಿಸರದ ಜೊತೆ ವ್ಯಕ್ತಿ ಸಂಬಂಧ ಹೇಗೋ, ಹಾಗೆಯೇ ತನ್ನ ತತ್ತ್ವದ ಜೊತೆಗೆ ಇತಿಹಾಸಜ್ಞನ ಸಂಬಂಧ ಕೂಡ. ನೇವಿನ್ಸ್ ಪ್ರಕಾರ ಇತಿಹಾಸ ಎಂಬ ಪದವನ್ನು ನಾವು ಗತಕಾಲದ ಜೊತೆ ಸೇರಿಸಿಯೇ ಮಾತನಾಡುತ್ತೇವೆ. ಇದು ತಪ್ಪು. ಏಕೆಂದರೆ ಇತಿಹಾಸ ಭೂತ ಮತ್ತು ವರ್ತಮಾನ ಕಾಲದ ನಡುವೆ ಸೇತುವೆ ಕಟ್ಟುತ್ತದೆ. ಹಾಗೇ ಭವಿಷ್ಯತ್ತಿನ ಕಡೆಗೊಂದು ಕಣ್ಣು ಹಾಯಿಸುತ್ತದೆ.

20ನೆಯ ಐತಿಹಾಸಿಕ ಸಂಶೋಧನೆಯಲ್ಲಿ ಮಹತ್ತ್ವದ ಬೆಳವಣಿಗೆ ಕಂಡ ಕಾಲಘಟ್ಟ, ಹೊಸ ವಿಚಾರಧಾರೆಗಳು ಹುಟ್ಟಿಕೊಂಡವು. ಈ ಹಿನ್ನೆಲೆಯಲ್ಲಿ ಇತಿಹಾಸದ ಅರ್ಥ, ಸತ್ತ್ವ ಮತ್ತು ನಿಲುವು ಕೂಡ ಬದಲಾದವು.

**ಇತಿಹಾಸ ವಿಧಾನ ಶಾಸ್ತ್ರ:** ಇತಿಹಾಸದ ಸಂಶೋಧನ ಕ್ರಮಗಳನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರವೇ ಇತಿಹಾಸ ವಿಧಾನ ಶಾಸ್ತ್ರ. ಯಾವುದೇ ತತ್ತ್ವಶಾಸ್ತ್ರ ಅಥವಾ ತನಿಖಾ ಪ್ರಕ್ರಿಯೆಗೆ ಅಗತ್ಯವಿರುವ ತತ್ತ್ವಗಳು ಮತ್ತು ನಿಯಮಗಳ ಒಟ್ಟು ಮೊತ್ತವೇ ಇತಿಹಾಸದ ವಿಧಾನ ಶಾಸ್ತ್ರ ಐತಿಹಾಸಿಕ ಸಂಶೋಧನೆಗೆ ತತ್ತ್ವ ಮತ್ತು ರೀತಿಗಳನ್ನು ಒಳಗೊಳ್ಳುತ್ತದೆ. ಇತಿಹಾಸವನ್ನು ಸಮರ್ಪಕವಾದ ಐತಿಹಾಸಿಕ ದೃಷ್ಟಿಕೋನದಲ್ಲಿ ಮಂಡಿಸಲು ರೂಪಿತವಾದ ತಂತ್ರಗಳನ್ನು ಒಳಗೊಳ್ಳುತ್ತದೆ. ಸಂಶೋಧಕನ ಗುಣಮಟ್ಟ, ವಸ್ತುವಿನ ಆಯ್ಕೆ, ಪ್ರಸ್ತಾವನೆ ಸಿದ್ಧಪಡಿಸುವಿಕೆ, ಟಿಪ್ಪಣಿ ತಯಾರಿಕೆ, ಅನುಕ್ರಮಣಿಕೆ, ಆಕರಗಳ ವಿಶ್ಲೇಷಣೆ. ಸಂಸ್ಕರಣೆ ಮತ್ತು ಸಂಶೋಧನೆಯಿಂದ ಕಂಡುಕೊಂಡದ್ದರ ಮಂಡನೆ–ಇವೆಲ್ಲವನ್ನೂ ವಿಧಾನ ಶಾಸ್ತ್ರ ಒಳಗೊಳ್ಳುತ್ತದೆ. ಇತಿಹಾಸದ ವಿಧಾನ ಶಾಸ್ತ್ರದಲ್ಲಿ ಪ್ರಾಥಮಿಕ, ವಿಶ್ಲೇಷಣಾ, ಸಂಸ್ಕರಣ ಮತ್ತು ನಿರ್ಣಾಯಕ ವೆಂಬ ನಾಲ್ಕು ಹಂತಗಳಿವೆ.

ಹುಡುಕಾಟ ಮತ್ತು ವಿಮರ್ಶೆಯಲ್ಲಿ ಸಂಶೋಧಕನ ಉತ್ಸಾಹ, ವಿಷಯದ ಮೇಲಿನ ಪ್ರೀತಿ, ಕಠಿಣ ಶ್ರಮಪಡುವ ಸಾಮರ್ಥ್ಯ. ಧೀರೋದಾತ್ತತೆ, ನೈತಿಕ ಸ್ಥೈರ್ಯ ಮತ್ತು ಗತಕಾಲವನ್ನು ಎಷ್ಟು ಸಾಧ್ಯವೋ ಅಷ್ಟು ವಸ್ತುನಿಷ್ಠವಾಗಿ ಮಂಡಿಸುವ ಆಕಾಂಕ್ಷೆಯೇ ಮುಖ್ಯ. ಸಂಶೋಧನೆಗೆ ವಸ್ತುವನ್ನು ಆಯ್ಕೆ ಮಾಡುವ ಜೊತೆಗೆ ಪ್ರಸ್ತಾವನೆ ರಚನೆ, ಟಿಪ್ಪಣಿ ತಯಾರಿಕೆ, ಅಂಕಿ–ಅಂಶಗಳನ್ನು ಸಮರ್ಪಕಗೊಳಿಸುವುದು, ಅನುಕ್ರಮಣಿಕೆಯ ರಚನೆ – ಇವೆಲ್ಲವನ್ನೂ ಪ್ರಾಥಮಿಕ ಹಂತ ಒಳಗೊಳ್ಳುತ್ತದೆ. ವಿಶ್ಲೇಷಣೆಯ ಹಂತದಲ್ಲಿ ಸತ್ಯದ ಜೊತೆಗಿನ ಸಂಘರ್ಷವನ್ನು ಪ್ರಮುಖ ಸವಾಲು ಎಂದು ಪರಿಗಣಿಸಲಾಗುತ್ತದೆ. ಸಂಶೋಧಕ ಸಂಗ್ರಹಿಸಿದ ಆಕರಗಳ ವಿಮರ್ಶಾತ್ಮಕ ವಿಶ್ಲೇಷಣೆಯ ಹಂತ ಇದು. ಐತಿಹಾಸಿಕ ವಿಮರ್ಶೆ ಎಂದು ಕರೆಯಲಾಗುವ ಈ ಹಂತದಲ್ಲಿ, ಬಾಹ್ಯ ವಿಮರ್ಶೆ ಮತ್ತು ಆಂತರಿಕ ವಿಮರ್ಶೆ ಎಂಬ ಎರಡು ಧಾರೆಗಳಿವೆ. ಈ ಹಂತದಲ್ಲಿ ಪ್ರಮುಖ ಸ್ಫೂರ್ತಿಮೂಲ ಎಂದರೆ ಆರೋಗ್ಯ ಕರವಾದ ಅನುಮಾನ. ವಸ್ತುಸಂಗತಿಗಳನ್ನು ಬೇಕಾಬಿಟ್ಟಿ ಪರಿಗಣಿಸುವಂತಿಲ್ಲ. ಸಂಶೋಧನಾತ್ಮ ಕವಾದ ಮತ್ತು ಅತ್ಯಂತ ಎಚ್ಚರಿಕೆಯಿಂದ ನಡೆಸಿದ ಹುಡುಕಾಟದ ಬಳಿಕವೇ ನಿರ್ಣಯ ಕೈಗೊಳ್ಳಬೇಕು. ಬಾಹ್ಯ ವಿಮರ್ಶೆ ಆಕರಗಳನ್ನು ಅಥವಾ ಲಭ್ಯ ದಾಖಲೆಯ ಅಧಿಕೃತತೆಯನ್ನು ಪರೀಕ್ಷೆಗೊಡ್ಡುವ ಪ್ರಯತ್ನ ಮಾಡುತ್ತದೆ. ಸಂಶೋಧಕ ನಕಲಿ ಅಥವಾ ತಪ್ಪು ದಾಖಲೆಗಳನ್ನು ಆಶ್ರಯಿಸಲೇಬಾರದು. ಅನುಮಾನಿತ ದಾಖಲೆಗಳನ್ನು ಹಲವು ರೀತಿ ಪರೀಕ್ಷಿಸಬೇಕು. ಕಾಗದದ ಸ್ವರೂಪ ಅಥವಾ ಬಳಸಲ್ಪಟ್ಟ ಇಂಕಿನ ರಾಸಾಯನಿಕ ಪರೀಕ್ಷೆಯೇ ಸತ್ಯವನ್ನು ನುಡಿದುಬಿಡುತ್ತದೆ. ಕಾರ್ಬನ್ ಪೇಂಟಿಂಗ್‌ನ ವೈಜ್ಞಾನಿಕ ತಂತ್ರ ಇಂಥ ನಕಲಿ ದಾಖಲೆಗಳನ್ನು ಗುರುತಿಸುವಲ್ಲಿ ಸಂಶೋಧಕನ ನೆರವಿಗೆ ಬರುತ್ತವೆ. ಪೇಲಿಯೋಗ್ರಫಿಯಿಂದಲೂ ಹಲವು ಸಮಸ್ಯೆಗಳು ಇತ್ಯರ್ಥವಾಗುತ್ತವೆ.

ನಿರ್ಣಾಯಕ ಹಂತ ಸಂಶೋಧನೆಯ ಕೊನೆಯ ಹಂತ. ಸಂಶೋಧನೆಯ ಸಾರ ವೆಲ್ಲ ಬರೆಹ ರೂಪಕ್ಕಿಳಿಯುವ ಹಂತ. ಇತಿಹಾಸದ ಕಲಾತ್ಮಕ ಸ್ವರೂಪ ಹೆಚ್ಚು ನಿಖರವಾಗುವ ಹಂತ. ಅಧಿಕೃತವಾಗಿ ಸಂಶೋಧನೆ ಬಹಿರಂಗಗೊಳ್ಳುವುದು, ಅಡಿ ಟಿಪ್ಪಣಿ ರಚನೆ, ಪರಿವಿಡಿ ರೂಪಿಸುವುದು–ಇದೇ ಹಂತದಲ್ಲಿ. ಇ.ಎಚ್.ಕಾರ್ ಒಮ್ಮೆ ಹೇಳಿದಂತೆ ಇತಿಹಾಸದ ಅಧ್ಯಯನ ಕ್ಲಾಸಿಕ್‌ಗಳ ಅಧ್ಯಯನಕ್ಕಿಂತಲೂ ಕಷ್ಟಕರ: ಯಾವುದೇ ವಿಜ್ಞಾನದ ಹಾಗೆಯೇ ಗಂಭೀರ. ಇತಿಹಾಸದ ಬರೆವಣಿಗೆ ಮತ್ತು ಅಧ್ಯಯನದಲ್ಲಿ ಐತಿಹಾಸಿಕ ಸಂಶೋಧನೆಯ ಕುರಿತು ಈ ಮಾತು ಸೂಚ್ಯವಾಗಿ ಎಲ್ಲವನ್ನೂ ಹೇಳುತ್ತದೆ ಎನ್ನಬಹುದು.

(ಎಸ್‌ಬಿಎಚ್‌ಎ.;ಎಂ.ವಿ.;ಎಸ್‌ಆರ್.)

ಈಚಿನ ಎರಡು ಶತಮಾನಗಳಲ್ಲಿ ಇತಿಹಾಸ ಪುನರ್ರಚನೆಯಲ್ಲಿ ವಸ್ತುವಿನ ವ್ಯಾಪ್ತಿ, ಸ್ವರೂಪ, ವಿಧಾನಗಳಲ್ಲಿ ಹಲವಾರು ಮಾರ್ಪಾಡುಗಳು ಆಗುತ್ತಾ ಸಾಂಪ್ರದಾಯಿಕ ಇತಿಹಾಸ, ಆ್ಯನಲ್ ಪಂಥ, ನವ ಇತಿಹಾಸ, ಪಾರಂಪರಿಕ ಚರಿತ್ರೆ, ಸಬಾಲ್ಟರ್ನ್ ಚರಿತ್ರೆ, ಮೌಖಿಕ ಚರಿತ್ರೆ ಸ್ಥಳೀಯ ಚರಿತ್ರೆ ಮುಂತಾದವುಗಳು ಹುಟ್ಟಿಕೊಂಡು ಇವುಗಳಲ್ಲಿ ಕೊನೆಯ ನಾಲ್ಕೈದು ಪಂಥಗಳು ವೃದ್ಧಿಯಾಗುತ್ತಾ ಬಂದಿವೆ. ಇವಲ್ಲದೆ ಇತಿಹಾಸವನ್ನು ಅರ್ಥೈಸುವಲ್ಲಿ ವಿವಿಧ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲಾಯಿತು. ಇವುಗಳನ್ನು ಸಾಮಾನ್ಯವಾಗಿ ಸಾಮ್ರಾಜ್ಯ ಶಾಹಿ ಇತಿಹಾಸ, ರಾಷ್ಟ್ರೀಯವಾದ ಇತಿಹಾಸ, ಮಾರ್ಕ್ಸಿಸ್ಟ್ ಇತಿಹಾಸ ಎಂದು ಮುಂತಾಗಿ ವಿಂಗಡಿಸಲಾಗಿದೆ.

(ಎ.ಎಸ್.)

**ಇನಾಂಗಾಂವ್:** ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯಲ್ಲಿರುವ ತಾಮ್ರ–ಶಿಲಾ ಯುಗದ ವಸತಿ ನೆಲೆ. ಇದು ಭೀಮಾ ನದಿಯ ಉಪನದಿಯಾದ ಘೋಡ್ ನದಿಯ ಬಲದಂಡೆ ಮೇಲಿದೆ. 5 ಹೆಕ್ಟೇರ್ ಪ್ರದೇಶದಲ್ಲಿ ವ್ಯಾಪಿಸಿರುವ ಈ ನೆಲೆಯಲ್ಲಿ ಡೆಕ್ಕನ್ ಕಾಲೇಜಿನ ತಂಡ 1968 – 82 ರವರೆಗೆ ವಿಸ್ತೃತ ಉತ್ಖನನ ನಡೆಸಿ 3 ಸಾಂಸ್ಕೃತಿಕ ಹಂತ ಗಳನ್ನು ಗುರುತಿಸಲಾಯಿತು. ಮಾಳ್ವ (ಪ್ರಶ.ಪೂ.1800–1500), ಆದಿ ಜೋರ್ವೆ (ಪ್ರಶ.ಪೂ. 1500–1400) ಮತ್ತು ಅಂತ್ಯ ಜೋರ್ವೆ (ಪ್ರಶ.ಪೂ.1400–1000). ವಸತಿ ಅವಶೇಷಗಳಲ್ಲದೆ ಇಲ್ಲಿ ಬುರುಜು ಸಹಿತವಾದ ಮಣ್ಣಿನ ಗೋಡೆ, ಏರಿ ಮತ್ತು ನೀರಾವರಿ ಕಾಲುವೆಯ ಕುರುಹುಗಳೂ ದೊರೆತಿವೆ.

ಮೊತ್ತಮೊದಲು ಮಾಳ್ವ ಸಂಸ್ಕೃತಿಯ ಜನರು ಇಲ್ಲಿ ವಾಸ್ತವ್ಯ ಹೂಡಿದ್ದರು. ಇವರು ನೆಲೆಸಿದ್ದ 23 ಗುಡಿಸಲುಗಳ ಅಳಿದುಳಿದ ಭಾಗಗಳು ಉತ್ಖನನದಲ್ಲಿ ಕಂಡುಬಂದವು. ಈ ಪೈಕಿ 28 ಗುಡಿಸಲುಗಳ ತಳವಿನ್ಯಾಸ ಆಯತಾಕಾರವಾಗಿದ್ದರೆ, ಮೂರು ವೃತ್ತಾಕಾರದ ಗುಂಡಿ ಮನೆಗಳು, ಗುಡಿಸಲುಗಳ ನಡುವೆ ಓಣಿಗಳಿದ್ದವು. ಆಯತಾಕಾರದಲ್ಲಿದ್ದ ಗುಡಿಸಲಿನ ಗೋಡೆಗಳು ಮಣ್ಣು ಮೆತ್ತಿದ ಬೊಂಬಿನಿಂದ ನಿರ್ಮಿಸಿದಂತವು. ಛಾವಣಿ ಪ್ರಾಯಶಃ ಹುಲ್ಲಿನದಾಗಿದ್ದು ಶಂಕುವಿನಾಕಾರದಲ್ಲಿತ್ತು. ಕೆಲವು ಗುಡಿಸಲುಗಳಲ್ಲಿ 8×5 ಮೀ ವಿಸ್ತೀರ್ಣದ ಒಂದೇ ಕೋಣೆಯಿದ್ದರೆ ಇನ್ನು ಕೆಲವರಲ್ಲಿ ಇಂಥ ಕೋಣೆಯನ್ನು ಎರಡು ಭಾಗಗಳಾಗಿ ವಿಭಜಿಸಲಾಗಿತ್ತು. ನೆಲವನ್ನು ಆಗಾಗ್ಗೆ ಮಣ್ಣು, ಸುಣ್ಣ ಮತ್ತು ಸಗಣಿಯಿಂದ ಸಾರಿಸುವ ರೂಢಿಯಿದ್ದಿತು. ಪ್ರತಿ ಗುಡಿಸಲಿನಲ್ಲಿ ಧಾನ್ಯ ಕಣಜ, ಒಲೆ, ಅಗ್ಗಿಷ್ಟಿಕೆಗಳಿದ್ದವು. ಈ ವಸತಿಯ ಅತಿದೊಡ್ಡ ಮನೆ 9.75×5.5 ವಿಸ್ತೀರ್ಣದ, 2 ಕೋಣೆಗಳುಳ್ಳ ಮನೆ. ಹಲವು ಧಾನ್ಯ ಕಣಜಗಳೂ ಸುಟ್ಟ ಧಾನ್ಯದ ರಾಶಿಯೂ ಈ ಮನೆಯೊಳಗೆ ಕಂಡುಬಂದಿದ್ದು, ಇದು ಶ್ರೀಮಂತ ವರ್ಗಕ್ಕೆ ಸೇರುವ ವ್ಯಕ್ತಿಯ ನಿವಾಸವಾಗಿದ್ದಿರಬೇಕು. ಮತ್ತೊಂದು ಗುಡಿಸಲಿನಲ್ಲಿ ಮಣಿಯನ್ನು ನಯಗೊಳಿಸುವ ಸಾಧನವೂ ಮಗದೊಂದರಲ್ಲಿ ಕುಂಬಾರನ ಭಟ್ಟಿಯೂ ಇದ್ದವು. ಈ ಹಂತದಲ್ಲಿ ಮಾತ್ರ ಅಪರೂಪವಾದ 3 ಗುಂಡಿ ಮನೆಗಳು ಕಂಡುಬಂದವು. ಇಂತಹ ಒಂದು ಗುಂಡಿಯು 1.23 ಮೀ ಆಳವಿದ್ದು ಇದರೊಳಗೆ ಇಳಿಯಲು 2 ಮೆಟ್ಟಿಲುಗಳನ್ನು ಮಾಡಲಾಗಿತ್ತು. ಗುಂಡಿಯ ಗೋಡೆ ನುಣುಪಾಗಿದ್ದುದಲ್ಲದೆ ಸುಣ್ಣದ

ತಾಮ್ರ–ಶಿಲಾಯುಗ ಸಂಸ್ಕೃತಿಯ ಶವಕುಣಿಗಳು

ಗಿಲಾವನ್ನು ಹೊಂದಿತ್ತು. ಮಾಳ್ವ ಜನ ಧಾನ್ಯಗಳನ್ನು ಕಣಜಗಳಲ್ಲಿ ಮತ್ತು ನೆಲದಡಿಯ ಗುಳಿಗಳಲ್ಲಿ ಶೇಖರಿಸಿಡುತ್ತಿದ್ದರು. ಕಣಜಗಳನ್ನು ವೃತ್ತಾಕಾರದ ಮಣ್ಣಿನ ಕಟ್ಟೆಗಳ ಮೇಲೆ ನಿಲ್ಲಿಸಲಾಗುತ್ತಿತ್ತು. ಇಂತಹ ಕಟ್ಟೆಗಳು ಮಾತ್ರ ಕೀಟಗಳಿಂದ ರಕ್ಷಿಸಲು ಗುಂಡಿಗಳ ಗೋಡೆಗೆ ಸುಣ್ಣದ ಲೇಪನವನ್ನು ಹಚ್ಚಲಾಗುತ್ತಿತ್ತು. ಇಂತಹ ಕಟ್ಟೆಗಳು ಮಾತ್ರ ಉತ್ಖನನದಲ್ಲಿ ದೊರೆತವು. ಕಣಜಗಳು ಮನೆಯ ಒಳ ಅಥವಾ ಹೊರಭಾಗದಲ್ಲಿರುತ್ತಿದ್ದವು. ಧಾನ್ಯವನ್ನು ಕೀಟಗಳಿಂದ ರಕ್ಷಿಸಲು ಗುಂಡಿಗಳ ಗೋಡೆಗೆ ಸುಣ್ಣದ ಲೇಪನವನ್ನು ಹಚ್ಚಲಾಗುತ್ತಿತ್ತು. ಒಮ್ಮೊಮ್ಮೆ 4

ಕಾಲಿನ ದೊಡ್ಡ ಜಾಡಿಗಳಲ್ಲೂ ಧಾನ್ಯವನ್ನು ತುಂಬಿಡಲಾಗುತ್ತಿತ್ತು. ಇಂತಹ ಜಾಡಿಗಳ ಕಾಲಿಗೆ ಆಧಾರವಾಗಿ ಇಟ್ಟಿದ್ದ 4 ಕಲ್ಲುಗಳು ಉತ್ಖನನದಲ್ಲಿ ಕಂಡುಬಂದವು. ಇಂತಹ ಧಾನ್ಯ ಸಂಗ್ರಹಣಾ ಪದ್ಧತಿಗಳನ್ನು ಇಂದಿಗೂ ಹಳ್ಳಿಮನೆಗಳಲ್ಲಿ ಕಾಣಬಹುದಾಗಿದೆ. ಈ ಹಂತದ ಪಾತ್ರೆಗಳಲ್ಲಿ 3 ಪ್ರಕಾರಗಳಿವೆ– ಮಾಳ್ವ ಮಾದರಿಯ ಪಾತ್ರೆಗಳು ನುಣುಪಾದ ಮಣ್ಣಿನಿಂದ ಮಾಡಿದ್ದು ಚೆನ್ನಾಗಿ ಬೇಯಿಸಿದ ತೆಳು ಪಾತ್ರೆಗಳಾಗಿದ್ದವು. ಇವನ್ನು ತಿಗುರಿಯ ಮೇಲೆ ಮಾಡಲಾಗಿತ್ತು. ಪಾತ್ರೆಗಳ ಎರಡೂ ಮೈಮೇಲೆ ಪೇಲಗೆಂಪು ಬಣ್ಣದ ಅತಿ ತೆಳುವಾದ ಲೇಪನವಿದೆ. ಹೊರಮೈ ಮೇಲೆ ರೇಖಾಕೃತಿಯ ವಿನ್ಯಾಸ, ಗೂಳಿ–ನಾಯಿ ಮುಂತಾದ

ಮಾತೃದೇವತೆ ಮಣ್‌ಗೊಂಬೆಗಳು

ಪ್ರಾಣಿಗಳ ಚಿತ್ರಗಳನ್ನು ಕಪ್ಪುಬಣ್ಣದಲ್ಲಿ ಬಿಡಿಸಲಾಗಿದೆ. ಈ ಮಾದರಿಯಲ್ಲಿ ಗಿಂಡಿಯಾಕಾರದ ಪಾತ್ರೆಗಳೇ ಹೆಚ್ಚು. ಬೋಗುಣಿ, ಬಟ್ಟಲು, ಗೋಲ ಮಡಕೆಗಳು ಇತರ ಆಕಾರಗಳು. ಬೂದು ಹಾಗೂ ಕೆಂಪುಬಣ್ಣದ ಪ್ರಕಾರಗಳಲ್ಲಿ ದೊರಕು ಮಣ್ಣಿನಿಂದ ಮಾಡಿದ ಮಂದ ಜಾಡಿಗಳು ಮಾತ್ರ ಇವೆ. ಕೈಯಿಂದಲೇ ಮಾಡಿದ ಈ ಜಾಡಿಗಳು ಧಾನ್ಯ ಸಂಗ್ರಹಣೆಗೆ ಮತ್ತು ಅಸ್ಥಿ ಮಡಕೆಗಳಾಗಿ ಬಳಕೆಯಾಗುತ್ತಿದ್ದವು. ಇವುಗಳ ಹೊರಮೈ ಮೇಲೆ ಮಣ್ಣಿನ ಪಟ್ಟಿಯನ್ನು ಅಂಟಿಸಿ ಮಾಡಿದಂತಹ ಅಲಂಕರಣವಿದೆ. ಈ ಹಂತದಲ್ಲಿ ಸಿಕ್ಕ ಸಮಾಧಿಗಳಲ್ಲಿ ಎಳೆ ಮಕ್ಕಳ ಅಸ್ಥಿ ಅವಶೇಷಗಳನ್ನು ಇಡಲಾದ ಮಡಕೆಗಳು ಅಧಿಕವಾಗಿವೆ. ಒಂದು ಅಥವಾ ಜೋಡಿ ಮಡಕೆಗಳಲ್ಲಿ ಅವಶೇಷಗಳನ್ನಿಟ್ಟು ಹೂಳಲಾಗಿದೆ. ವಯಸ್ಕರ ಸಮಾಧಿಗಳು ಕೆಲವೊಂದು ಮಾತ್ರ ಇದ್ದು ಇವುಗಳಲ್ಲಿ ಶವವನ್ನು ಕುಣಿಯೊಳಗೆ ನೇರಭಂಗಿಯಲ್ಲಿ ಹೂಳಲಾಗಿದೆ. 3 ಹಂತಗಳಲ್ಲೂ ಹೂಳುವ ಮುನ್ನ ಶವದ ಪಾದಗಳನ್ನು ತುಂಡರಿಸುವ ಸಂಪ್ರದಾಯವಿತ್ತು. ಆದ್ದರಿಂದ ಅಸ್ಥಿಪಂಜರಗಳ ಪಾದ ಮೂಳೆಗಳು ಸಮಾಧಿಗಳಲ್ಲಿ ಕಂಡುಬರಲಿಲ್ಲ. ಎಲ್ಲ ಹಂತಗಳಲ್ಲೂ ಮನೆಯೊಳಗೇ ಶವವನ್ನು ಹೂಳುವ ಪದ್ಧತಿಯಿತ್ತು.

ಆದಿ ಜೋರ್ವೆ ಹಂತದಲ್ಲಿ ವಸತಿ ಸಮೃದ್ಧವಾಯಿತು. ಗುಡಿಸಲುಗಳ ರಚನೆಯಲ್ಲಿ ಅಂತಹ ವ್ಯತ್ಯಾಸಗಳೇನೂ ಆಗಲಿಲ್ಲ. 33 ಗುಡಿಸಲುಗಳಲ್ಲಿ 30 ಆಯತಾಕಾರದವೂ 3 ವೃತ್ತಾಕಾರದವೂ ಆಗಿದ್ದವು. ವಸತಿಯ ಮಧ್ಯದಲ್ಲಿ 5 ಕೋಣೆಗಳುಳ್ಳ ಒಂದು ದೊಡ್ಡ ಮನೆಯಿದ್ದಿತು.ಇದರೊಳಗೆ ಒಲೆಗಳು, ಕೆಲವು ಕಣಜಗಳು ಇದ್ದವು. ಅಲ್ಲದೆ ಒಂದು ಕೋಣೆಯ ನೆಲದಡಿಯಲ್ಲಿ ಆ ಕಾಲಕ್ಕೆ ಅಪೂರ್ವವಾದ ಒಂದು ಸಮಾಧಿ ಕಂಡುಬಂದಿತು. ಇದರಲ್ಲಿ 4 ಕಾಲಿನ ಜಾಡಿಯೊಳಗೆ ಪುರುಷನ ಶವವನ್ನು ಕೈಕಾಲು ಮಡಚಿ ಕುಳ್ಳಿರಿಸಲಾಗಿತ್ತು. ಆಶ್ಚರ್ಯವೆಂದರೆ ಈ ವ್ಯಕ್ತಿಯ ಪಾದಗಳನ್ನು ತುಂಡರಿಸಲಾಗಿರಲಿಲ್ಲ. ಈ ಮನೆ ಗ್ರಾಮದ ಮುಖ್ಯಸ್ಥನದಾಗಿತ್ತು ಎಂಬುದಕ್ಕೆ ಈ ಎಲ್ಲ ಅಂಶಗಳೂ ಇಂಬು ಕೊಡುತ್ತವೆ. ಈ ಮನೆಯ ನೈರುತ್ಯದಲ್ಲಿ ಕಣಜ–ಧಾನ್ಯದ ಗುಳಿಗಳಿಂದ ತುಂಬಿದ ಎರಡು ಕೋಣೆಯಲ್ಲಿ ಮಗುವೊಂದರ ಶವವನ್ನು 4 ಕಾಲಿನ ಹಸಿ ಮಣ್ಣಿನ ಜಾಡಿಯಲ್ಲಿ ಹೂಳಲಾಗಿತ್ತು; ಇಲ್ಲಿಯೂ ಪಾದಗಳನ್ನು ಕತ್ತರಿಸಿರಲಿಲ್ಲ. ಹಾಗಾಗಿ ಮಗು ಮುಖ್ಯಸ್ಥನ ಸಂಬಂಧಿಯಾಗಿದ್ದಿರಬಹುದು. ಇದೇ ಕೋಣೆಯೊಳಗೆ ಕೃಷಿಯ ಸಾಧನದಂತೆ (ಪಿಕಾಸಿ) ಕಾಣುವ ಜಿಂಕೆ ಕೊಂಬಿನಿಂದ ಮಾಡಿದ ಉಪಕರಣವು ದೊರೆಯಿತು. ಮಾಳ್ವ ಹಂತದಲ್ಲಿದ್ದ ಧಾನ್ಯ ಶೇಖರಣೆಯ ಪದ್ಧತಿಗಳು ಯಾವ ಬದಲಾವಣೆಗಳೂ ಇಲ್ಲದೆ ಮುಂದುವರೆದವು. ಮಾಳ್ವ ಮಾದರಿಯ ಪಾತ್ರೆಗಳು ಮರೆಯಾಗಿ ಅವನ್ನೇ ಹೋಲುವ ಜೋರ್ವೆ ಮಾದರಿಯ ಪಾತ್ರೆಗಳು ಬಳಕೆಗೆ ಬಂದವು. ಇವು ಸಹ ಕಪ್ಪುವರ್ಣ ಚಿತ್ರಿತ ಕೆಂಪು ಪಾತ್ರೆಗಳು. ನಳಿಕೆಯುಳ್ಳ ಬಟ್ಟಲು ಇದರ ವಿಶಿಷ್ಟ ಪ್ರಕಾರ. ಬಟ್ಟಲು, ಬೋಗುಣಿ, ಸಣ್ಣ ಮಡಕೆ, ಗೋಲ ಜಾಡಿ ಮತ್ತು ಹಿಡಿಕೆಯಿರುವ ಮುಚ್ಚಳಗಳು ಈ ಮಾದರಿಯಲ್ಲಿರುವ ಇತರ ಪಾತ್ರೆಗಳು. ಬೂದುಬಣ್ಣದ ಪಾತ್ರೆಗಳ ರೂಪ, ಆಕಾರ ಮತ್ತು ಬಳಕೆಯಲ್ಲಿ ಯಾವುದೇ ಬದಲಾವಣೆಗಳಾಗಿರಲಿಲ್ಲ. ಈ ಹಂತದಲ್ಲಿ 72 ಸಮಾಧಿಗಳಿದ್ದು, ಈ ಪೈಕಿ 47 ಮಕ್ಕಳದ್ದು, ಉಳಿದವು ವಯಸ್ಕರದ್ದೂ ಆಗಿದ್ದವು. ಮೂರನ್ನು ಹೊರತುಪಡಿಸಿ ವಯಸ್ಕರ ಉಳಿದೆಲ್ಲ ಸಮಾಧಿಗಳೂ ನೇರ ಅಥವಾ ಕೈಕಾಲು ಮಡಸಿದ ಭಂಗಿಗಳಲ್ಲಿದ್ದವು. 3 ವಿಶಿಷ್ಟ ಸಮಾಧಿಗಳಲ್ಲಿ ಒಂದು ಮುಖ್ಯಸ್ಥನದೂ ಮತ್ತೊಂದು ಅವನ ಸಂಬಂಧಿಯಾಗಿದ್ದಿರಬಹುದಾದ ಮಗುವಿನದೂ ಆಗಿದ್ದವು. ಮತ್ತೊಂದು ಸಾಂಕೇತಿಕವಾಗಿ ತೋರುವ ಸಮಾಧಿಯಲ್ಲಿ 4 ಕಾಲಿನ ಜಾಡಿಯಿದ್ದು ಅಸ್ಥಿ ಅವಶೇಷಗಳಿರಲಿಲ್ಲ. ಎಲ್ಲ ಸಮಾಧಿಗಳಲ್ಲೂ ಚಿತ್ರವಿರುವ ನಳಿಕೆಯುಳ್ಳ ಬಟ್ಟಲುಗಳಿದ್ದವು. ಅಪರೂಪವಾಗಿ ತಾಮ್ರದ ವಸ್ತುಗಳನ್ನು ಕಾಣಿಕೆಯಾಗಿ ಶವದೊಂದಿಗೆ ಇಡಲಾಗಿತ್ತು.

ಅಂತ್ಯ ಜೋರ್ವೆ ಹಂತದಲ್ಲಿ ಸಾಂಸ್ಕೃತಿಕ ಪಲ್ಲಟವಾದಂತೆ ಕಾಣುತ್ತದೆ. ಈ ಅವಧಿಯಲ್ಲಿ ಆಯತಾಕಾರದ ಬದಲಿಗೆ ವೃತ್ತಾಕಾರದವು ತಲೆಯೆತ್ತಿದ್ದವು. ಕಣಜಗಳ ಸಂಖ್ಯೆಯೂ ಗಣನೀಯವಾಗಿ ಇಳಿಯಿತು. ಆರ್ಥಿಕ ಪರಿಸ್ಥಿತಿ ಕುಸಿದುದ್ದರ ಸಂಕೇತ ಇದು ಎಂಬುದು ಉತ್ಖನನಕಾರರ ಅಭಿಪ್ರಾಯ. ವಸತಿ ರಚನೆಯಲ್ಲಿ  ಆಂತರಿಕ ಬದಲಾವಣೆಗಳಾದವು. ಆರ್ಥಿಕವಾಗಿ ಬಲವಾಗಿದ್ದವರು ವಸತಿಯ ಕೇಂದ್ರ ಭಾಗದಲ್ಲಿ ಮನೆಗಳನ್ನು ಕಟ್ಟಿಕೊಂಡರು. ಕುಂಬಾರ, ಸುಣ್ಣಗಾರ, ಮಣಿಗಾರ ಮುಂತಾದ ಕಸುಬುದಾರರ ಪಂಗಡಗಳಿಗೆ ನೆಲೆಯ ಪಶ್ಚಿಮ ಭಾಗದಲ್ಲಿ ವಸತಿ ಅವಕಾಶ ಕಲ್ಪಿಸಲಾಯಿತು. ಆದಿ ಜೋರ್ವೆ ವಸತಿಯಲ್ಲಿ ಹೀಗೆ ಎರಡು ಭಾಗಗಳಿರಲಿಲ್ಲ. ಮಣ್ಪಾತ್ರೆಗಳೂ ಈ ಹಂತದಲ್ಲಿ ತಮ್ಮ ಮಟ್ಟವನ್ನು ಕಳೆದುಕೊಂಡವು. ಆದಿ ಜೋರ್ವೆಯ ಪ್ರಕಾರಗಳೇ ಮುಂದುವರೆದರೂ ಈ ಹಂತದಲ್ಲಿ ಸಾಮಾನ್ಯ ದರ್ಜೆಯ ಪಾತ್ರೆಗಳೇ ಹೆಚ್ಚಾಗಿ ತಯಾರಾಗತೊಡಗಿದವು. ಜೊತೆಗೆ ಪಾತ್ರೆಗಳನ್ನು ಚಿತ್ರಗಳಿಂದ ಅಲಂಕರಿಸುವುದು ವಿರಳವಾಯಿತು. ನಳಿಕೆಯುಳ್ಳ ಬಟ್ಟಲು ಸಂಪೂರ್ಣ ಕಣ್ಮರೆಯಾಗಿ ಸರಳ ಬಟ್ಟಲುಗಳು, ಮಟ್ಟಸ ತಳದ ತಟ್ಟೆ ಮತ್ತು ಬೋಗುಣಿಗಳು ಜನಪ್ರಿಯವಾದವು. ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಹೊಸ ಪ್ರಕಾರವಾಗಿ ಸೇರ್ಪಡೆಯಾಯಿತು. ಸಮಾಧಿ ಪದ್ಧತಿಯಲ್ಲಿ ಬದಲಾವಣೆಗಳಾಗಲಿಲ್ಲ. ಆದರೆ ಈ ಹಂತದ ಅವಶೇಷಗಳು ವಸ್ತು ಸಂಸ್ಕೃತಿಯಲ್ಲಿ ಗಮನಾರ್ಹ ಬದಲಾವಣೆಯಾದುದನ್ನು ಸೂಚಿಸುತ್ತವೆ. ಈ ಹಂತದ ಹೊತ್ತಿಗೆ ಹವಾಮಾನವು ಶುಷ್ಕವಾಗತೊಡಗಿದ್ದರಿಂದ ಕೃಷಿ ಸೊರಗಿ ಈ ಪರಿಸ್ಥಿತಿ ಉಂಟಾಗಿರಬೇಕೆಂದು ತರ್ಕಿಸಲಾಗಿದೆ.

ಆಹಾರ ಪದ್ಧತಿ: ಮಾಳ್ವ ಮತ್ತು ಆದಿ ಜೋರ್ವೆ ಹಂತಗಳಲ್ಲಿ ವ್ಯವಸಾಯ, ಬೇಟೆ, ಮೀನುಗಾರಿಕೆ ಮತ್ತು ಪಶುಪಾಲನೆ ಆಹಾರ ಸಂಪಾದನ ಮಾರ್ಗವಾಗಿದ್ದವು. ಈ ಅವಧಿಯಲ್ಲಿ ಕೃಷಿ ಸಮೃದ್ಧವಾಗಿತ್ತು. ಮುಖ್ಯವಾಗಿ ಬೆಳೆಯಲಾಗುತ್ತಿದ್ದ ಧಾನ್ಯವೆಂದರೆ ಜವೆ. ಜೊತೆಗೆ ಬತ್ತ, ಜೋಳ, ಹುರುಳಿ, ಕೆಂಪು ತೊಗರಿ, ಬಟಾಣಿ, ಹೆಸರುಕಾಳು ಮುಂತಾದವು ಧಾನ್ಯ–ಕಾಳುಗಳ ಕೃಷಿಯೂ ಆಗುತ್ತಿತ್ತು. ಕಾಡುಹಣ್ಣುಗಳಾದ ಬಾರಿ ಮತ್ತು ನೇರಳೆಗಳನ್ನು ಇವರು ಸಂಗ್ರಹಿಸಿ ತಿನ್ನುತ್ತಿದ್ದರು. ಆದಿ ಜೋರ್ವೆ ಹಂತದಲ್ಲಿ ಮಾತ್ರ ಚಳಿಗಾಲದ ಬೆಳೆಯಾದ ಗೋದಿಯ ಕರಕಲಾದ ಧಾನ್ಯಗಳು ದೊರೆತಿರುವುದು ಕುತೂಹಲಕಾರಿ. ಚಳಿಗಾಲದಲ್ಲಿ ಮಳೆಯೇ ಆಗದಿರುವ ಈ ಪ್ರದೇಶದಲ್ಲಿ ನೀರನ್ನು ಮುಖ್ಯವಾಗಿ ಅವಲಂಬಿಸಿರುವ ಗೋದಿಯ ಬೆಳೆ ಹೇಗೆ ಸಾಧ್ಯವಾಯಿತು ಎಂಬುದಕ್ಕೆ ಉತ್ತರವಾಗಿ 6 ಮೀ ಅಗಲದ ನೀರಿನ ಕಾಲುವೆ ಹಾಗೂ ಕೆರೆ ಏರಿಯ ಅವಶೇಷಗಳು ಇಲ್ಲಿ ಪತ್ತೆಯಾಗಿವೆ. ಅಂದರೆ ಕಾಲುವೆಯ ಮೂಲಕ ಕೆರೆಯ ನೀರನ್ನು ಗೋದಿಯ ಹೊಲ–ಗದ್ದೆಗಳಿಗೆ ಹಾಯಿಸಲಾಗುತ್ತಿತ್ತು.

ಮೂರು ಹಂತಗಳಲ್ಲಿಯ ಜನರು ಜಾನುವಾರು, ಕೃಷ್ಣಮೃಗ, ನೀಲಗಾಯ್ ಮುಂತಾದ ಪ್ರಾಣಿಗಳ ಮಾಂಸವನ್ನು ಸೇವಿಸುತ್ತಿದ್ದರು. ಮೀನು ಹಾಗೂ ಪಕ್ಷಿಗಳನ್ನೂ ಆಹಾರಕ್ಕಾಗಿ ಹಿಡಿಯಲಾಗುತ್ತಿತ್ತು. ಅಂತಿಮ ಜೋರ್ವೆ ಹಂತದಲ್ಲಿ ಬೇಟೆ ಮತ್ತು ವನ್ಯಸಸ್ಯ ಸಂಗ್ರಹಣೆಯನ್ನೇ ಹೆಚ್ಚು ಅವಲಂಬಿಸಬೇಕಾದ ಸನ್ನಿವೇಶ ಒದಗಿಬಂತು ಎಂಬುದು ಪ್ರಾಣಿಮೂಳೆಗಳ (ಮುಖ್ಯವಾಗಿ ಜಿಂಕೆ) ಸಂಖ್ಯೆಯಿಂದ ತಿಳಿಯುತ್ತದೆ. ಈ ಹಂತದ ಜನ ಮೇವಿಗಾಗಿ ಊರೂರು ಸುತ್ತುವ ಅರೆ–ಅಲೆಮಾರಿಗಳಾಗಿದ್ದಿರಬೇಕು. ಎಲ್ಲ ಹಂತಗಳಲ್ಲೂ ಮಂದಗೆಂಪಿನ ಕಲ್ಲು ಮತ್ತು ಕ್ಯಾಲ್ಸೆಡನಿಯಲ್ಲಿ ಮಾಡಿದ ಸಮಾನಾಂತರ ಅಲಗುಗಳೂ ಸೇರಿದಂತೆ ವಿವಿಧ ನಮೂನೆಯ ಅಲಗುಗಳು ದೊರೆತವು. ಇವನ್ನು ಮಚ್ಚಿನಲ್ಲಿ ಸಿಕ್ಕಿಸಿ–ಹುಲ್ಲಿನ ಕಟಾವಿನಲ್ಲಿ ಬಳಸುತ್ತಿದ್ದಂತೆ ಕಾಣುತ್ತದೆ. ಅರ್ಧಚಂದ್ರಾಕೃತಿ, ಟ್ರಪೀಜ್ ಮುಂತಾದ ನಮೂನೆಗಳು ವಿರಳವಾಗಿದ್ದವು.

ಸುಡಾವೆ ಮಣ್ಣಿನ ಆಕೃತಿಗಳು: ಮೂರೂ ಹಂತಗಳಲ್ಲಿ ಸ್ತ್ರೀ–ಪುರುಷ ಹಾಗೂ ಪ್ರಾಣಿಗಳ ಸರಳ ಆಕೃತಿಗಳಿದ್ದವು. ಕೆಲವು ಬೇಯಿಸಿದವಾದರೆ ಇನ್ನು ಕೆಲವು ಹಸಿಮಣ್ಣಿನಿಂದ ಮಾಡಿದವು. ಕೆಲವೊಂದು ಆಕೃತಿಗಳ ದೈಹಿಕ ಲಕ್ಷಣಗಳನ್ನು ಚಿವುಟಿ ಆಕಾರಕ್ಕೆ ತರಲಾಗಿದೆ. ಆದರೆ ಹೆಚ್ಚಿನ ಆಕೃತಿಗಳು ಬೋಳಾಗಿವೆ. 3 ಸ್ತ್ರೀ ಆಕೃತಿಗಳು ಸ್ವಾರಸ್ಯಕರ ಸನ್ನಿವೇಶದಲ್ಲಿ ದೊರೆತವು. 2ನ್ನು ಸುಡಾವೆ ಮಣ್ಣಿನ ಪೆಟ್ಟಿಗೆ, ಉಂಗುರ ಮತ್ತು ಗೂಳಿಯಾಕೃತಿಗಳೊಂದಿಗೆ ಗುಡಿಸಲಿನ ಮೂಲೆ ಕಂಬದ ಗುಳಿಯೊಳಗೆ ಹೂಳಲಾಗಿತ್ತು. ಒಂದು ಆಕೃತಿ ಪೆಟ್ಟಿಗೆಯೊಳಗಿದ್ದರೆ ಮತ್ತೊಂದು ಹೊರಗೆ ಮುಚ್ಚಳದ ಮೇಲಿತ್ತು. ಇವೆಲ್ಲ ವಸ್ತುಗಳು ಯಾವುದೋ ವಿಧಿಗೆ ಸಂಬಂಧಿಸಿದ್ದಿರಬೇಕು. ಆಭರಣಗಳಿಂದ ಅಲಂಕೃತವಾದ ಮತ್ತೊಂದು ಸ್ತ್ರೀ ಆಕೃತಿಯನ್ನು ಮೂರು ಧಾನ್ಯ ಶೇಖರಣೆ ಗುಳಿಗಳ ಮಧ್ಯದಲ್ಲಿ ಹೂಳಿದ್ದುದು ಕಂಡುಬಂತು. ಇಂದಿಗೂ ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಕಣಜದಲ್ಲಿ ಧಾನ್ಯ ತುಂಬುವ ಮೊದಲು ಸ್ತ್ರೀ ಆಕೃತಿಗಳನ್ನು ಭೂಮಿಯೊಳಗೆ ಹುಗಿಯುವ ಸಂಪ್ರದಾಯವಿದೆ. ಇಲ್ಲಿ ಸಿಕ್ಕ ಪುರುಷರ ಆಕೃತಿಗಳಿಗೆ ವಿಜಯದ ಆಚರಣೆಯ ಸಂದರ್ಭದಲ್ಲಿ ಪೂಜಿಸುತ್ತಿದ್ದರೆನ್ನಬಹುದು. ಗೂಳಿಯ ಆಕೃತಿಗಳು ಸಹಜ ಭಂಗಿಯಲ್ಲಿವೆ. ಇನಾಂಗಾಂವ್ ಹಳ್ಳಿಯಲ್ಲಿ ಇಂದಿಗೂ ಕೆಲವು ವಿಶೇಷ ಸಂದರ್ಭಗಳಲ್ಲಿ ಇಂತಹ ಆಕೃತಿಗಳನ್ನು ಗ್ರಾಮದೇವತೆಗೆ ಅರ್ಪಿಸುವ ವಾಡಿಕೆಯಿದೆ. ಅಂತ್ಯ ಜೋರ್ವೆಯ ಶೇಖರಣೆ ಜಾಡಿಯೊಂದರ ಮೇಲೆ ಅಂಟಿಸಿದ್ದ ಮನುಷ್ಯನ ತಲೆಯಿರುವ ಚಿರತೆಯ ಆಕೃತಿಯನ್ನು ಇಲ್ಲಿ ಉಲ್ಲೇಖಿಸಬಹುದು. ತಾಮ್ರ ವಸ್ತುಗಳು ಬೆರಳೆಣಿಕೆಯಲ್ಲಿ ದೊರೆತವು. ಆದಿ ಜೋರ್ವೆ ಹಂತದಲ್ಲಿ ಸಿಕ್ಕ ತಾಮ್ರದ ಕುಲುಮೆ ಮತ್ತು ಅಂತ್ಯ ಜೋರ್ವೆಯ ತಾಮ್ರದ ಅದಿರಿನ ಉಂಡೆಗಳು ಸ್ಥಳೀಯವಾಗಿ ಈ ಲೋಹದ ವಸ್ತುಗಳು ತಯಾರಾಗುತ್ತಿದ್ದು, ಬಳೆ, ಮಣಿ, ಸೂಜಿ ಮತ್ತು ತಾಯತಗಳಲ್ಲದೆ ಮೀನುಗಾಳದ ಕೊಕ್ಕೆ, ಉಳಿ, ಉಂಗುರ, ಬಾಣದ ಮೊನೆಗಳು ಇಲ್ಲಿ ಸಿಕ್ಕಿವೆ.

ಮೇಲಿನ ಎಲ್ಲ ಆಧಾರಗಳನ್ನು ಪರಿಶೀಲಿಸಿದಾಗ ಇನಾಂಗಾಂವ್ ವಸತಿ ಶ್ರೇಣೀಕೃತ ಹಳ್ಳಿಯಾಗಿತ್ತೆಂದು ತಿಳಿಯುತ್ತದೆ. ಕಂಚುಗಾರ, ಕುಂಬಾರ, ಮಣಿಗಾರ, ಸುಣ್ಣಗಾರ ಮುಂತಾದ ವೃತ್ತಿಪಂಗಡದ ಜನ, ಕೃಷಿಕರು. ವಸತಿಗೆ ಯಜಮಾನನಾಗಿ ಮುಖ್ಯಸ್ಥನಿದ್ದನು. ಒಟ್ಟಿನಲ್ಲಿ ತಾಮ್ರ–ಶಿಲಾಯುಗ ಕಾಲದ, ಅದರಲ್ಲೂ ಜೋರ್ವೆ ಹಂತದ ರೈತಾಪಿ ಜನರ ಶೈಲಿ ಮತ್ತು ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳ ಚಿತ್ರಣವನ್ನು ಕೊಟ್ಟ ಮೊತ್ತಮೊದಲ ನೆಲೆ ಇನಾಂಗಾಂವ್ ಎನ್ನಬಹುದು. (ಆರ್.ಎಮ್.ಎಸ್.)

**ಇಪ್ಸಸ್ ಕದನ:** ಪ್ರ.ಶ.ಪೂ.301ರಲ್ಲಿ ನಡೆದ ಐತಿಹಾಸಿಕ ಕದನ. ಅಲೆಕ್ಸಾಂಡರನ ಮರಣಾನಂತರ (ಪ್ರ.ಶ.ಪೂ.323) ಅವನು ಜಯಿಸಿದ್ದ ವಿಶಾಲ ಚಕ್ರಾಧಿಪತ್ಯದ ನಾನಾಭಾಗಗಳನ್ನು ಅವನ ಸೇನಾಪತಿಗಳು ಸ್ವಾಧೀನಪಡಿಸಿಕೊಂಡು ಸ್ವತಂತ್ರವಾಗಿ ಆಳ ತೊಡಗಿದರು. ಒಂದು ಸಾಮ್ರಾಜ್ಯಕ್ಕೆ ಪ್ರತಿಯಾಗಿ ಅನೇಕ ಸಣ್ಣ ಸಣ್ಣ ರಾಜ್ಯಗಳಾದವು. ಇವರಲ್ಲಿ ವೈಮನಸ್ಯ ಕ್ರಮೇಣ ಬೆಳೆದು, ಕೊನೆಗೆ ಪ್ರ.ಶ.ಪೂ. 302ರಲ್ಲಿ ಪೂರ್ವ ಏಷ್ಯದಲ್ಲಿ ದೊರೆಯಾಗಿದ್ದ ಆಂಟಿಗೋನಸ್‌ನ ಮಗ ಡೆಮಟ್ರಿಯಸ್ ಮ್ಯಾಸಿಡೋನಿಯದ ದೊರೆ ಕೆಸಾಂಡರನ ರಾಜ್ಯದ ಮೇಲೆ ನುಗ್ಗಿದಾಗ ದೊಡ್ಡ ಯುದ್ಧವೇ ಪ್ರಾರಂಭವಾಯಿತು. ಶತ್ರುವಿನ ಬಲವನ್ನರಿತ ಕೆಸಾಂಡರ್ ಮೊದಲು ಸಂಧಿ ಮಾಡಿಕೊಳ್ಳಲೊಪ್ಪಿದ. ಯಾವ ಷರತ್ತೂ ಇಲ್ಲದೆ ಶರಣಾಗತನಾಗಬೇಕೆಂದು ಆಂಟಿಗೋನಸ್ ತಿಳಿಸಿದ. ಯುದ್ಧವನ್ನು ನಡೆಸುವುದೇ ಮೇಲೆಂದು ನಿಶ್ಚಯಿಸಿ ಕೆಸಾಂಡರ್ ಪೂರ್ವ ಏಷ್ಯದಲ್ಲಿದ್ದ ತನ್ನ ಮಿತ್ರರಾಜರನ್ನು ಆಂಟಿಗೋನಸ್‌ನ ರಾಜ್ಯದ ಮೇಲೆ ಧಾಳಿಯಿಡಲು ಕೇಳಿಕೊಂಡ. ಅವರು ಒಪ್ಪಿ ನಾನಾ ಕಡೆಯಿಂದ ನುಗ್ಗಿದರು. ತಂದೆಯ ನೆರವಿಗಾಗಿ ಡೆಮೆಟ್ರಿಯಸ್ ಮ್ಯಾಸಿಡೋನಿಯವನ್ನು ಬಿಟ್ಟು ಹಿಂತಿರುಗಬೇಕಾಯಿತು. ಫ್ರಿಜಿಯ ದೇಶದ ಇಪ್ಸಸ್ ಎಂಬಲ್ಲಿ ಭಾರಿ ಕದನ ನಡೆಯಿತು. ಆಂಟಿಗೋನಸ್ ಸೋತು ರಣರಂಗದಲ್ಲಿ ಮಡಿದ. ಅಲೆಕ್ಸಾಂಡರ್ ನಿರ್ಮಿಸಿದ ಸಾಮ್ರಾಜ್ಯ ವ್ಯವಸ್ಥೆ ಮುಂದೆಂದೂ ತಲೆಯೆತ್ತದಂತೆ ಈ ಒಂದು ಕದನದಿಂದ ಮುರಿದು ಬಿತ್ತು. *

**ಇರ್ಫಾನ್ ಹಬೀಬ್:** 1931– . ಭಾರತೀಯ ಇತಿಹಾಸಕಾರ. ಸ್ವಾತಂತ್ರ್ಯ ಹೋರಾಟಗಾರರೂ ಪ್ರಸಿದ್ಧ ಇತಿಹಾಸಕಾರರೂ ಆದ ಮೊಹಮ್ಮದ್ ಹಬೀಬ್ ಹಾಗೂ ತಾಯಿ ಸೊಹೈಲ ದಂಪತಿಗಳ ಮಗನಾಗಿ 1931ರಲ್ಲಿ ಜನಿಸಿದರು. ಅಲಿಗಡ್ ಮುಸ್ಲಿಮ್ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಯನ್ನು, ಆಕ್ಸ್‌ಫರ್ಡ್‌ನ ನ್ಯೂ ಕಾಲೇಜಿನಲ್ಲಿ ಡಿ.ಫಿಲ್ ಪದವಿಯನ್ನು ಪಡೆದರು. 1969–91ರ ವರೆಗೆ ಅಲಿಗಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಇದೇ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಅಡ್ವಾನ್ಸ್ಡ್ ಸ್ಟಡಿ ಇನ್ ಹಿಸ್ಟರಿ ಇದರ ಅಧ್ಯಕ್ಷರಾಗಿದ್ದರು (1975–77 ಮತ್ತು 1984–94). 1987–93ರ ವರೆಗೆ ಭಾರತೀಯ ಇತಿಹಾಸ ಸಂಶೋಧನ ಪರಿಷತ್ತಿನ ಅಧ್ಯಕ್ಷರಾಗಿದ್ದರು 1981ರಲ್ಲಿ ಭಾರತೀಯ ಇತಿಹಾಸ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷಸ್ಥಾನ ವಹಿಸಿದ್ದರು. 1991ರಲ್ಲಿ ಆಕ್ಸ್‌ಫರ್ಡ್‌ನಲ್ಲಿ ರಾಧಾಕೃಷ್ಣನ್ ಉಪನ್ಯಾಸಕ ಪೀಠವನ್ನು ಅಲಂಕರಿಸಿದ್ದ ಇವರು 1997ರಲ್ಲಿ ಬ್ರಿಟಿಷ್ ರಾಯಲ್ ಹಿಸ್ಟಾರಿಕಲ್ ಸೊಸೈಟಿಯ ಕರೆಸ್ಪಾಂಡಿಂಗ್ ಫೆಲೋ ಆಗಿದ್ದರು. ಅಲಿಗಡ್ ಮುಸ್ಲಿಮ್ ವಿಶ್ವವಿದ್ಯಾಲಯ 2007ರಲ್ಲಿ ಇವರಿಗೆ ಪ್ರೊಫೆಸರ್ ಎಮಿರಿಟಸ್ ಗೌರವವನ್ನು ನೀಡಿತು. ಅಮೆರಿಕನ್ ಹಿಸ್ಟಾರಿಕಲ್ ಅಸೋಸಿಯೇಷನ್‌ನಿಂದ ವಟುಮುಲ್ (1982), ಭಾರತ ಸರ್ಕಾರದ ಪದ್ಮಭೂಷಣ (2005) ಪ್ರಶಸ್ತಿಗಳು ಹಾಗೂ ಮುಝಫರ್ ಅಹ್ಮದ್ ಸ್ಮಾರಕ ಬಹುಮಾನ (2006) ಇವರಿಗೆ ಸಂದಿವೆ. 2008ರಲ್ಲಿ ಬನಾರಸ್ ಹಿಂದು ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಲೆಟರ್ಸ್ ಗೌರವಕ್ಕೆ ಇವರು ಪಾತ್ರರಾದರು. ಕಾರ್ಲ್‌ಮಾರ್ಕ್ಸ್‌ನ ವಿಚಾರಗಳಿಂದ ಪ್ರಭಾವಿತರಾದುದಾಗಿ ಹೇಳಿಕೊಳ್ಳುವ ಇರ್ಫಾನ್ ಹಬೀಬ್ ಅವರ ಆಸಕ್ತಿಯ ವಿಷಯಗಳೆಂದರೆ ಪ್ರಾಚೀನ ಭಾರತದ ಚಾರಿತ್ರಿಕ ಭೂಗೋಳ, ಭಾರತೀಯ ತಂತ್ರಜ್ಞಾನದ ಇತಿಹಾಸ, ಮಧ್ಯಯುಗೀನ ಕಾಲದ ಆಡಳಿತ ಹಾಗೂ ಆರ್ಥಿಕ ಇತಿಹಾಸ, ವಸಾಹತುಶಾಹಿ ಸಂಸ್ಕೃತಿ ಹಾಗೂ ಇತಿಹಾಸ ಬರವಣಿಗೆ. ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಮೊಗಲ್ ಇಂಡಿಯ (1999), ಎನ್ ಅಟ್ಲಾಸ್ ಆಫ್ ದಿ ಮೊಗಲ್ ಎಂಪೈರ್ (1982), ದಿ ಎಕನಾಮಿಕ್ ಹಿಸ್ಟರಿ ಆಫ್ ಮಿಡೀವಲ್ ಇಂಡಿಯ: ಎ ಸರ್ವೆ (2001), ಎ ಪೀಪಲ್ಸ್ ಹಿಸ್ಟರಿ ಆಫ್ ಇಂಡಿಯ (4 ಸಂಪುಟಗಳು; 2001–2004) – ಇವು ಇವರ ಕೆಲವು ಮುಖ್ಯ ಕೃತಿಗಳು. ಸಂಪಾದಿತ ಕೃತಿಗಳ ಪೈಕಿ ದಿ ಕೇಂಬ್ರಿಡ್ಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯ: 1200–1750, ದಿ ಗ್ರೋಥ್ ಆಫ್ ಸಿವಿಲೈಜೇಷನ್ ಇನ್ ಇಂಡಿಯ ಆ್ಯಂಡ್ ಇರಾನ್, ಸ್ಟೇಟ್ ಆ್ಯಂಡ್ ಡಿಪ್ಲೊಮಸಿ ಅಂಡರ್ ಟಿಪ್ಪುಸುಲ್ತಾನ್, ಮಿಡೀವಲ್ ಇಂಡಿಯ – ಇವುಗಳನ್ನು ಹೆಸರಿಸಬಹುದು. (ವಿ.ಎಸ್.)

**ಇರಾಕ್:** ಪಶ್ಚಿಮ ಏಷ್ಯದ ಒಂದು ಪುರಾತನ ಪ್ರದೇಶ. ಇದಕ್ಕೆ ಮೆಸಪೊಟೇಮಿಯ ಅಂದರೆ ನದಿಗಳ ನಡುವಣ ನಾಡು ಎಂಬುದು ಅನ್ವರ್ಥನಾಮ. ಸುಮಾರು ನೂರು ವರ್ಷಗಳಿಂದ ಇಲ್ಲಿ ನಡೆದ ಭೂಶೋಧನೆಗಳಿಂದ ಈ ಪ್ರದೇಶ ಅತ್ಯಂತ ಪ್ರಾಚೀನ ನಾಗರಿಕತೆಗಳ ತೌರು ಮಾತ್ರವಲ್ಲದೆ ಇತಿಹಾಸಪೂರ್ವ ಯುಗದಲ್ಲೂ ಆದಿಮಾನವನ ಕಾರ್ಯರಂಗವಾಗಿದ್ದು ನಾಗರಿಕತೆಯ ತೊಟ್ಟಿಲು ಎನಿಸಿದೆ.

**ಪುರಾತತ್ತ್ವ:** ಇರಾಕ್ ದೇಶದಲ್ಲಿ ನಡೆದಿರುವ 6,400 ಕ್ಕಿಂತಲೂ ಹೆಚ್ಚಿನ ಭೂಶೋಧನೆಗಳಿಂದ ದೇಶದ ಪುರಾತನ ನಾಗರಿಕತೆ ತಿಳಿದುಬರುತ್ತದೆ. ನವಶಿಲಾಯುಗದಲ್ಲಿ ಕೊರೆದ ಮತ್ತು ಬಣ್ಣಗಳಿಂದ ಚಿತ್ರಿತವಾದ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತ ಒಂದೇ ಸ್ಥಳದಲ್ಲಿ ಸ್ಥಿರಜೀವನ ನಡೆಸುತ್ತಿದ್ದ ಜನರ ಸಂಸ್ಕೃತಿಯ ಚಿತ್ರ ಟೆಲ್‌ಹಸೂನಾದ ಭೂಶೋಧನೆಗಳಿಂದ ಕಂಡು ಬರುತ್ತದೆ. ಟೆಲ್ ಹಲಾಫ್ ಭೂಶೋಧನೆಗಳು ವಿವಿಧ ಬಣ್ಣಬಳಿದ ರಮ್ಯವಾಗಿ ಅಲಂಕೃತವಾದ ಮಣ್ಣಿನ ಪಾತ್ರೆಗಳನ್ನೂ ಕಲ್ಲಿನ ಆಯುಧಗಳನ್ನೂ ಬಳಸುತ್ತಿದ್ದ ಜನರ ಜೀವನವನ್ನು ನಿರೂಪಿಸುತ್ತವೆ.

ತಾಮ್ರ–ಶಿಲಾಯುಗದವರಿಗೆ ಅಂದವಾದ ಬಣ್ಣದ ಮಡಕೆಗಳು, ತಾಮ್ರ, ಮೊದಲಾದ ಲೋಹಗಳ ಉಪಯೋಗ ತಿಳಿದಿತ್ತು. ಮೊತ್ತ ಮೊದಲನೆಯ ದೇವಸ್ಥಾನ ಕಟ್ಟಿದ್ದ ಆ ಜನರ ಜೀವನಚಿತ್ರ ಅಲ್ ಉಬೈದ್ ಭೂಶೋಧನೆಗಳಿಂದ ದೊರಕುತ್ತದೆ. ದಕ್ಷಿಣ ಇರಾಕಿನಲ್ಲಿ ಉರುಕ್ ಸಂಸ್ಕೃತಿ ಕಾಲದಲ್ಲಿ ದೊಡ್ಡ ದೊಡ್ಡ ದೇವಾಲಯಗಳೂ ಹೊಸನಗರಗಳೂ ಉರುಳೆಯಾಕಾರದ ಮುದ್ರೆಗಳೂ ಚಿತ್ರಲಿಪಿಯೂ ಇದ್ದುದಕ್ಕೆ ಸಾಕ್ಷಿ ಒದಗಿಸಿವೆ. ಖಫಾಜೆ ಮತ್ತು ಟೆಲ್ ಅಸಮಾರ್ ಭೂಶೋಧನೆಗಳಿಂದ ತಿಳಿದುಬರುವಂತೆ ಪ್ರಾಚೀನರಾಜ್ಯವಂಶದ ಕಾಲದಲ್ಲಿ ದೇಶ ನೀರಾವರಿ ವ್ಯವಸಾಯದಿಂದ ಸಂಪದ್ಯುಕ್ತವಾಗಿದ್ದು, ಇರಾಕ್ ಅಂದಿನ ಪ್ರಪಂಚದ ಧಾನ್ಯ ಕಣಜದಂತಿತ್ತು. ಉರ್ ನಗರದ ಆಳರಸರ ಸ್ಮಶಾನ ಶೋಧನೆಗಳಿಂದ ಆ ಕಾಲದ ಐಶ್ವರ್ಯ ಮತ್ತು ಸಂಸ್ಕೃತಿಯ ಮಟ್ಟ ತಿಳಿದು ಬರುತ್ತದೆ **(ನೋಡಿ–ಉರ್)**. ಮಾರಿ, ನೂಜಿ, ದುರ್ ಕುರಿಕಾಲ್ಜುಗಳ ಭೂಶೋಧನೆಗಳಲ್ಲಿ ದೊರೆತ ಜೇಡಿಮಣ್ಣಿನ ಲಿಖಿತ ಫಲಕಗಳಿಂದ ಪ್ರ.ಶ.ಪೂ. 3ನೆಯ ಸಹಸ್ರಾಬ್ದದ ಇತಿಹಾಸ ತಿಳಿದುಬರುತ್ತದೆ. ಅಸ್ಸೂರ್, ನಿನೆವೆ, ನಿಮ್ರುಸ್, ನಿಪ್ಪೂರ್ ಮುಂತಾದ ಸ್ಥಳಗಳ ಭೂಶೋಧನೆಗಳಿಂದ ಪ್ರ.ಶ.ಪೂ.3 ರಿಂದ 1ನೆಯ ಸಹಸ್ರಾಬ್ದಗಳ ಇರಾಕಿ ಸಂಸ್ಕೃತಿಯ ಅನೇಕ ವಿಷಯಗಳು ಗೊತ್ತಾಗಿವೆ. ಇವುಗಳ ಕೆಲವು ವಿವರಗಳನ್ನಿಲ್ಲಿ ಸಂಗ್ರಹಿಸಲಾಗಿದೆ.

ಉತ್ತರ ಇರಾಕಿನ ಬಾರ್ಡಾಬಲ್ಕಾ ಎಂಬಲ್ಲಿ ದೊರಕಿರುವ ನಾಜೂಕಿಲ್ಲದ ಕೈ ಕೊಡಲಿ ಮತ್ತು ಕಲ್ಲಿನ ಚಕ್ಕೆಗಳಿಂದ ಮಾಡಲ್ಪಟ್ಟ ಉಪಕರಣಗಳು ಅತ್ಯಂತ ಪುರಾತನವಾದವು. ಇವನ್ನು ಆದಿಹಳೆಶಿಲಾಯುಗದ ಉಪಕರಣಗಳನ್ನು ಹಜರ್‌ಮರ್ದ್ ಮತ್ತು ಷನಿದಾರ್ ಗುಹೆಗಳಲ್ಲಿ ಕಂಡುಬಂದಿವೆ. ಈ ಪದರಗಳಲ್ಲಿ ಹಳೆಯ ಕೈಕೊಡಲಿಗಳು ಹೊಸರೀತಿಯ ಚಕ್ಕೆ ಉಪಕರಣಗಳ ಜೊತೆಯಲ್ಲಿ ಕಂಡುಬರುವುದರಿಂದ ಇದು ಆದಿ ಮಾನ್ ಸಂಸ್ಕೃತಿಯ ಅವಿಚ್ಛಿನ್ನ ಬೆಳವಣಿಗೆಯನ್ನು ಸಾಕ್ಷೀಕರಿಸುತ್ತದೆ. ಹಜರ್‌ಮರ್ದ್, ನಿದಾರ್, ಜರ್ಜಿ ಮತ್ತು ಪಲೇಗಾವ್ರಾ ಎಂಬೆಡೆಗಳಲ್ಲಿ ಅಂತ್ಯ ಹಳೆಶಿಲಾಯುಗದ ಕೂಲಗುಳ್ಳ ಚಕ್ಕೆಗಳೂ ಸೂಕ್ಷ್ಮ ಶಿಲಾಯುಗದ ಉಪಕರಣಗಳ ಬೆರಕೆಯಿದ್ದು ಕಾಲಗಣನೆಯಲ್ಲಿ ಇವು ಯುರೋಪಿನ ಸೂಕ್ಷ್ಮ ಶಿಲಾಯುಧಗಳಿಗಿಂತಲೂ ಹಳೆಯವಾಗಿರುವುವೆಂದೂ ಪಶ್ಚಿಮದ ಏಷ್ಯದಲ್ಲಿ ಈ ಕಾಲದ ಮಾನವ ಹೆಚ್ಚು ಪ್ರಗತಿಪರನಾಗಿದ್ದನೆಂದೂ ಅಂತ್ಯಹಳೆಶಿಲಾಯುಗದ ಯುರೋಪಿನ ಸಂಸ್ಕೃತಿಗಳು ಕೂಡ ಇಲ್ಲಿಂದ ಆವಿರ್ಭವಿಸಿ ಅನಂತರ ಯುರೋಪಿಗೆ ಹರಡಿದುವೆಂದೂ ಪಂಡಿತರ ಅಭಿಪ್ರಾಯ.

ಇದರ ಮುಂದಿನ ಸಂಸ್ಕೃತಿಗಳ ಅವಶೇಷಗಳು ಇರಾಕಿನಲ್ಲಿ ಹೆಚ್ಚಾಗಿ ದೊರೆತಿಲ್ಲ. ಕೇವಲ ಷನಿದಾರ್ ಗುಹೆಗಳಲ್ಲಿ ಮಾತ್ರ ನಾಗರಿಕತೆಯ ಉಗಮಕಾಲದವರೆಗೂ ಮಾನವ ಅವಿಚ್ಛಿನ್ನವಾಗಿ ವಾಸಿಸಿದ ಮಾಹಿತಿಗಳು ದೊರಕಿವೆ. ಇಲ್ಲಿನ ತಳಮಟ್ಟದ ಪದರಗಳಲ್ಲಿ ಮೊದಮೊದಲು ನವಶಿಲಾಯುಗದ ಅವಶೇಷಗಳೂ ಮೇಲ್ಭಾಗದಲ್ಲಿ ಚರಿತ್ರ ಪೂರ್ವ ಅಕ್ಷರಸ್ಥನಾಗರಿಕತೆಯ ಕುರುಹುಗಳೂ ದೊರಕಿವೆ.

ಇರಾಕಿನ ಹೆಚ್ಚಿನ ಅಭಿವೃದ್ಧಿಯ ಮಾಹಿತಿಗಳು ನವ ಶಿಲಾಯುಗದಲ್ಲಿ ದೊರಕುತ್ತವೆ. ಪಶ್ಚಿಮ ಏಷ್ಯ ಪ್ರದೇಶಗಳಲ್ಲಿ ಮಾನವನ ಪುರೋಗಾಮಿತ್ವ ಮತ್ತು ನಾಗರಿಕತೆಯ ಬೆಳವಣಿಗೆಯ ಮೂಲಾಧಾರವಾದ ಆಹಾರೋತ್ಪತ್ತಿಯ ಉದ್ಘಾಟನೆ ನಡೆದದ್ದು ನಿರ್ವಿವಾದ ಸಂಗತಿ. ಇರಾಕಿನ ಜಾವಿ ಷಮಿ, ಷನಿದಾರ್, ಕರೀಮ್ ಷಾಹಿರ್, ಮ್ಲೆಫಾತ್ ಮುಂತಾದ ನೆಲೆಗಳಲ್ಲಿ ಈ ಸಂಸ್ಕೃತಿಯ ಅತ್ಯಂತ ಪ್ರಾಚೀನ ಅವಶೇಷಗಳು ದೊರಕಿವೆ. ಇವು ಪ್ರ.ಶ.ಪೂ.ಸು. 9000 ವರ್ಷಗಳಷ್ಟು ಹಳೆಯವೆಂದು ನಿರ್ಣಯಿಸಲಾಗಿದೆ. ಈ ಸಂಸ್ಕೃತಿಯಲ್ಲಿ ನಯಮಾಡಿದ ಕಲ್ಲಿನ ಕೊಡಲಿಗಳೂ ಅಗೆಯುವ ಕೋಲಿನ ಭಾರದಗುಂಡುಗಳೂ ಅರೆಯುವ ಕಲ್ಲುಗಳೂ ಒರಟಾಗಿ ಕಟ್ಟಿದ ಗುಡಿಸಲ ಅವಶೇಷಗಳೂ ಸಾಕುಪ್ರಾಣಿಯಾದ ಆಡು, ಕುರಿ, ಹಂದಿ ಮತ್ತು ದನಗಳ ಅವಶೇಷಗಳೂ ಸಿಕ್ಕಿವೆಯಾದರೂ ಬೇಟೆಯೇ ಆಹಾರೋತ್ಪತ್ತಿಯ ಮುಖ್ಯ ವಿಧಾನವಾಗಿತ್ತೆಂದು ಹೇಳಲಾಗಿದೆ.



ಟೇಸಿಫಾನನ ಸಭಾಂಗಣದ ಮಹಾದ್ವಾರ

ವ್ಯವಸಾಯವನ್ನೇ ಮುಖ್ಯ ಆಹಾರೋತ್ಪತ್ತಿಮಾರ್ಗವಾಗುಳ್ಳ ಜನ ಗ್ರಾಮಗಳಲ್ಲಿ ನೆಲೆನಿಂತು ಉತ್ತರದ ಕುರ್ದಿಸ್ತಾನ್ ಬೆಟ್ಟಗಳ ಬುಡದಲ್ಲಿರುವ ಕಾಲಾತ್ ಜಾರ್ಮೋ ಎಂಬಲ್ಲಿ ದೊರಕಿವೆ. ಇಲ್ಲಿನ ಕ್ರಮಾಗತ 12 ಪದರಗಳಲ್ಲಿ ದೊರಕುವ ಸಾಕ್ಷ್ಯಗಳಲ್ಲೂ ನೂತನ ಶಿಲಾಯುಗಕ್ಕೆ ಸೇರಿದ್ದುವಾದರೂ ಆ ಜನಗಳಿಗೆ ಇನ್ನೂ ಮಣ್ಣಿನ ಪಾತ್ರೆಗಳನ್ನು ಮಾಡುವ ಕಲೆ ಗೊತ್ತಿರಲಿಲ್ಲ. ಕಲ್ಲಿನ ಆಸ್ತಿಭಾರದ ಮೇಲೆ ಮಣ್ಣಿನಿಂದ ಕಟ್ಟಿದ ಅನೇಕ ಆಯತಾಕಾರದ ಕೊಠಡಿಗಳಿಂದ ಕೂಡಿದ ಮನೆಗಳು, ಗಾರ್ಕಿ ಗೋದಿಗಳ ವ್ಯವಸಾಯ ಇವು ಮೊದಲಿನ ಹಂತದಲ್ಲೂ ಸಾಕುಆಡು, ಕುರಿ, ಹಂದಿಗಳು ಮೇಲಿನ ಪದರಗಳಲ್ಲೂ ದೊರಕಿರುವುದು ಈ ಸಂಸ್ಕೃತಿಯ ಮುನ್ನಡೆಗೆ ಸಾಕ್ಷಿ. ಚಕಮಕಿ ಕಲ್ಲಿನಿಂದ ಮತ್ತು ಜ್ವಾಲಾಮುಖಿಯಿಂದ ಉತ್ಪನ್ನವಾದ ಅಬ್ಸಿಡಿಯನ್ ಗಾಜಿನಿಂದ ಮಾಡಿದ ಸೂಕ್ಷ್ಮ ಶಿಲಾಯುಧಗಳು, ನಯಮಾಡಿದ ಕಲ್ಲಿನ ಕೊಡಲಿಗಳು, ಬಾಚಿಗಳು, ಮಣಿಯ ಕೈಗಡಗಳು ಮತ್ತು ಅತಿ ಕೌಶಲದಿಂದ ಮಾಡಲಾದ ಕಲ್ಲಿನ ಪಾತ್ರೆಗಳು ಆಗ ಬಳಕೆಯಲ್ಲಿದ್ದವು. ಮಣ್ಣಿನಲ್ಲಿ ಮಾಡಿದ ಬೆತ್ತಲೆ ಗರ್ಭಿಣಿ ಗೊಂಬೆಗಳು ಪೂರ್ವ ಶಿಲಾಯುಗದಿಂದಲೂ ಈ ಜನಗಳಲ್ಲಿ ಬೆಳೆದುಬಂದ ಮಾಂತ್ರಿಕ ಹಾಗೂ ಬಹುಸಂತಾನ ಪಂಥದ ಕುರುಹುಗಳಾಗಿವೆ. ಕಡೆಕಡೆಗೆ ಕೈಯಲ್ಲಿ ಮಾಡಿದ ಮಣ್ಣಿನ ಮಡಕೆಗಳೂ ಬಳಕೆಗೆ ಬಂದಿದ್ದವು. ಈ ಸಂಸ್ಕೃತಿ ಪ್ರ.ಶ.ಪೂ. 6750ರಷ್ಟು ಹಳೆಯದೆಂದು ಇಂಗಾಲ–14ರ ಪ್ರಯೋಗದಿಂದ ಗುರುತಿಸಲಾಗಿದೆ. ಇವರು ಹೊರಗಿನಿಂದ ಬಂದಿರಬಹುದೆಂಬುದಕ್ಕೆ ಅನೇಕ ಸೂಚ್ಯ ಆಧಾರಗಳಿವೆ.

ಇದರ ಮುಂದಿನ ಹಂತವೂ ಉತ್ತರ ಇರಾಕಿನ ಟೈಗ್ರಿಸ್ ನದೀತೀರದಲ್ಲಿರುವ ಹಸ್ಸುನಾ ಎಂಬೆಡೆಯಲ್ಲಿ ದೊರಕಿದೆ. ಇದೇ ರೀತಿಯ ಮಾಹಿತಿಗಳು ಮಟಾರ್ರಾನಿನೆವ್ಹೇ, ಅರ್ಪಾಚಿಯಾ ಹಾಗೂ ಗಾವ್ರಾ ಎಂಬ ಎಡೆಗಳಲ್ಲಿ ದೊರಕಿವೆ. ಚಕಮಕಿ ಕಲ್ಲಿನ ಉಪಕರಣಗಳ ಜೊತೆಗೆ ಅಗೆಯುವ ಗುದ್ದಲಿ ಮತ್ತು ಅರೆಯುವ ಕಲ್ಲಿನ ಉಪಕರಣಗಳನ್ನು ಈ ಬೇಟೆಗಾರ ಜನ ಉಪಯೋಗಿಸುತ್ತಿದ್ದರು. ಅವರ ಹಿಂದುಳಿದ ವ್ಯವಸಾಯದ ರೀತಿಗಳು, ವ್ಯವಸಾಯಾತ್ಮಕ ಸಂಸ್ಕೃತಿಯ ಕಡೆಗೆ ಕ್ರಮಕ್ರಮವಾಗಿ ಅವರ ಮುನ್ನಡೆ, ಸ್ವಲ್ಪಮಟ್ಟಿನ ಅಲೆಮಾರಿತನ–ಇವು ಈ ಸಂಸ್ಕೃತಿಯ ಲಕ್ಷಣಗಳೆಂದು ಹೇಳಬಹುದು. ಅವರ ಮಡಕೆ ಕುಡಿಕೆಗಳು ಸಾಮಾನ್ಯವಾಗಿ ಅಲಂಕಾರ ರಹಿತವಾಗಿದ್ದವು. ಕೆಂಪು, ಕಂದು, ಕಪ್ಪು; ಬಣ್ಣಗಳ ಒರಟು ಚಿತ್ರಗಳಿರುವ ಮಡಕೆಗಳೂ ಕೆಲವು ಸಿಕ್ಕಿವೆ. ಇವಲ್ಲದೆ ಮೂಲವಸ್ತು ಒರಟಾದ ಕಪ್ಪು ಮಣ್ಣು. ಶಿಲಾಜಿತು (ಬಿಟ್ಯೂಮೆನ್) ಮತ್ತು ಸುಣ್ಣದಿಂದ ಪಕ್ಕಗಳನ್ನೂ ತಳಭಾಗವನ್ನೂ ಹದಮಾಡಿದ್ದ ಹಳ್ಳಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಕಟ್ಟಡಗಳನ್ನು ಕಟ್ಟಲು ಹಸಿ ಇಟ್ಟಿಗೆಗಳನ್ನು ಬಳಸುತ್ತಿದ್ದರು. ಬಿದಿರು ಹೆಣಿಗೆ ಮತ್ತು ಬಟ್ಟೆ ನೇಯ್ಗೆ ಕ್ರಮಗಳು ಇವರಿಗೆ ತಿಳಿದಿದ್ದಿರಬಹುದು. ಮಕ್ಕಳ ಶವಗಳನ್ನು ಜಾಡಿಗಳಲ್ಲೂ ವಯಸ್ಕರ ಶವಗಳನ್ನು ಹಳ್ಳಗಳಲ್ಲೂ ಹೂಳುತ್ತಿದ್ದರು. ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ. 5000–4000.

ಇದರ ಮುಂದಿನ ಹಲಾಫ್ ಸಂಸ್ಕೃತಿಯ ಜನ ಕೈಯಲ್ಲಿ ಮಾಡಿದ, ವಿವಿಧ ಆಕಾರದ, ವರ್ಣಚಿತ್ರಗಳಿಂದ ಕೂಡಿದ ಮಡಕೆಗಳನ್ನು ಬಳಸುತ್ತಿದ್ದರು. ಇವರಿಗೆ ತಾಮ್ರದ ಕೆಲವು ಅಲಂಕರಣ ಸಾಮಗ್ರಿಗಳ ಪರಿಚಯವಿದ್ದರೂ ಇವರ ಆಯುಧೋಪಕರಣಗಳು ಕಲ್ಲಿನವೇ ಆಗಿದ್ದವು. ಕಲ್ಲಿನ ಗುಂಡಿ ಮುದ್ರೆಗಳೂ (ಬಟನ್ ಸೀಲ್ಸ್) ಮಣಿಗಳೂ ಯಂತ್ರಗಳೂ (ಆಮ್ಯುಲೆಟ್ಸ್) ಮತ್ತು ಸಣ್ಣ ಪಾತ್ರೆಗಳೂ ಬಳಕೆಯಲ್ಲಿದ್ದವು. ಇತರ ವಿಷಯಗಳಲ್ಲಿ ಹಳೆಯ ಸಂಸ್ಕೃತಿಯ ಚಿಹ್ನೆಗಳೇ ಕಂಡು ಬಂದರೂ ಅವು ಹೆಚ್ಚು ಮುಂದುವರಿದಿದ್ದವು.

ಮೇಲೆ ಹೇಳಿದ ಸಂಸ್ಕೃತಿಗಳೆಲ್ಲವೂ ಉತ್ತರ, ಮಧ್ಯ ಇರಾಕಿನಲ್ಲಿ ಮಾತ್ರ ನೆಲೆಸಿದ್ದವು. ದಕ್ಷಿಣ ಪ್ರದೇಶ ಜೌಗುಪ್ರದೇಶವಾಗಿದ್ದು ಜನವಸತಿಗೆ ಅನುಕೂಲವಾಗಿರಲಿಲ್ಲ. ಸುಮಾರು ಆ ಕಾಲಕ್ಕೆ ಯೂಫ್ರೆಟೀಸ್ ಟೈಗ್ರಿಸ್ ನದಿಗಳು ಒತ್ತಳಿದ ಮೆಕ್ಕಲುಮಣ್ಣಿನ ಹರಡುವಿಕೆಯಿಂದ ನೆಲ ವಾಸಯೋಗ್ಯವಾದದ್ದಲ್ಲದೆ ಬಹಳ ಫಲವತ್ತಾದ ಭೂಮಿಯಾಗಿ ಹೆಚ್ಚು ಬೆಳೆ ಕೊಡುವಂತಾಯಿತು.

ಈ ಸುಮಾರಿಗೆ ಪ್ರಾರಂಭವಾದ ತಾಮ್ರ–ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಇರಾಕಿನ ಎಲ್ಲೆಡೆಗಳಲ್ಲೂ ದೊರಕಿವೆ. ಉಬೈದ್ ಸಂಸ್ಕೃತಿಯ ಮೊದಲ ಹಂತದಲ್ಲಿ ವ್ಯವಸಾಯ ಸುಧಾರಿತವಾಯಿತು. ನೀರಾವರಿ ಕಾಲುವೆಗಳಿಂದ ಉತ್ತಮ ಬೆಳೆಗಳನ್ನು ತೆಗೆಯುತ್ತಿದ್ದರು. ಲೋಹಗಳ ಕೆಲಸ ಉತ್ತಮಮಟ್ಟದ್ದಾಗಿ ತಾಮ್ರದ ಆಯುಧೋಪಕರಣಗಳು ಮಾತ್ರವಲ್ಲದೆ ಮನೆಬಳಕೆ ಪಾತ್ರೆಗಳೂ ರೂಢಿಗೆ ಬಂದಿದ್ದವು. ತಮಗೆ ಅವಶ್ಯಕವಾದ ಕಚ್ಚಾಪದಾರ್ಥಗಳನ್ನು ದೂರ ದೇಶಗಳಿಂದ ವ್ಯಾಪಾರಮುಖೇನ ತರಿಸಿಕೊಳ್ಳುತ್ತಿದ್ದರು. ತಮ್ಮ ಬೆಳೆಗಳನ್ನು ಚಕಮಕಿಕಲ್ಲಿನ ಹಲ್ಲುಗಳಿಂದ ಸಜ್ಜಾದ ಕುಡುಗೋಲುಗಳಿಂದ ಕುಯ್ಯುತ್ತಿದ್ದರು. ಹುಲ್ಲು ಮತ್ತು ಮಣ್ಣಿನ ಗೋಡೆಗಳನ್ನೂ ನೆಲವನ್ನೂ ಸಗಣಿಯಿಂದ ಹದಗೊಳಿಸುತ್ತಿದ್ದರು. ಕೈಯಲ್ಲಿ ಮಾಡಿದ ಮಡಕೆಗಳನ್ನು ವಿವಿಧ ಬಣ್ಣಗಳ ಜ್ಯಾಮಿತಿಕ ಆಕಾರಗಳಿಂದ ಚಿತ್ರಿಸುತ್ತಿದ್ದರು. ವ್ಯವಸಾಯೋತ್ಪನ್ನವೇ ಮುಖ್ಯ ಆಹಾರವಾದರೂ ಬೇಟೆ ಮೀನುಗಾರಿಕೆಗಳೂ ರೂಢಿಯಲ್ಲಿದ್ದವು. ಗ್ರಾಮಜೀವನದ ಜೊತೆಗೆ ನಗರ ಜೀವನವೂ ಈ ಕಾಲದಲ್ಲೇ ಪ್ರಾರಂಭವಾದ ಚಿಹ್ನೆಗಳು ಕಂಡುಬರುತ್ತವೆ. ಈ ಜನ ಮೊತ್ತಮೊದಲಿಗೆ ಸಾಮಾಜಿಕ ಜೀವನದ ಅಂಗವಾಗಿ ದೇವಾಲಯಗಳನ್ನು ನಿರ್ಮಿಸಿದರು. ಅಬು ಷಹರೇನ್ ಎಂಬಲ್ಲಿ 13 ಸಲ ಪುನರ್ನಿರ್ಮಿತವಾದ ದೇವಾಲಯ ವೊಂದರ ಅವಶೇಷಗಳು ದೊರಕಿವೆ. ಮೊದಲಿಗೆ ಈ ದೇವಾಲಯದಲ್ಲಿ ಆಯತಾಕಾರದ ಒಂದು ಕೊಠಡಿ, ಅದರ ಒಂದು ಮೂಲೆಯಲ್ಲಿ ಬಾಗಿಲು ವೇದಿಕೆ ಮತ್ತು ಬಲಿಪೀಠಗಳಿದ್ದು ಕ್ರಮೇಣ ಮಧ್ಯಕೋಣೆಯ ಎರಡು ಪಾರ್ಶ್ವಗಳಲ್ಲಿ ಮತ್ತೆರಡು ಕೋಣೆಗಳು ನಿರ್ಮಿತವಾದವು. ಈ ಕಾರಣಗಳಿಂದ ಉಬೈದ್ ಜನ ಇರಾಕಿನ ನಾಗರಿಕತೆಯ ಆದ್ಯಪ್ರವರ್ತಕರೆನ್ನಬಹುದು.

ಈ ಉಬೈದ್ ಸಂಸ್ಕೃತಿಯ ಅಸ್ತಿಭಾರದ ಮೇಲೆ ಮುಂದಿನ ಹಂತವಾದ ಉರಕ್ ಸಂಸ್ಕೃತಿ ಬೆಳೆಯಿತು. ಪ್ರಾಯಶಃ ಅನಟೋಲಿಯ ಪ್ರಾಂತದಿಂದ ಆಮದಾದ, ಗಟ್ಟಿಮುಟ್ಟಾದ, ವರ್ಣಚಿತ್ರಗಳಿಂದ ಹೊಸರೀತಿಯ ಮಡಕೆಗಳು ಬಳಕೆಗೆ ಬಂದವು. ಇವು ಚಕ್ರಯಂತ್ರದಿಂದ ತಯಾರಾದವು. ವಾಸ್ತುಶಿಲ್ಪಕಲೆ ಆಗ ಚೆನ್ನಾಗಿ ಬೆಳೆಯಿತು. ಆ ಕಾಲದ ಅತ್ಯುತ್ತಮವಾದ ಶ್ವೇತದೇವಾಲಯ ಎರಡು ಪಟ್ಟಣದಲ್ಲಿ ನಿರ್ಮಿತವಾಯಿತು. 70 ಮೀ ಉದ್ದ 66 ಮೀ ಅಗಲ ಮತ್ತು 13 ಮೀ ಎತ್ತರದ ಜಗತಿಯ ಮೇಲಿದ್ದ ಈ ದೇವಾಲಯದ ವಿಸ್ತೀರ್ಣ 22.3×17.5 ಮೀ. ಇರಾಕೀ ಸಂಸ್ಕೃತಿಯ ವಿಶಿಷ್ಟಲಕ್ಷಣಗಳಲ್ಲೊಂದಾದ ಜಿಗ್ಗುರಾಟ್ ಅಥವಾ ಪವಿತ್ರ ಶಿಖರ ಈ ರೀತಿ ಹುಟ್ಟಿಕೊಂಡಿತು. ಇತರ ವಿಶಿಷ್ಟ ಕುರುಹುಗಳಾದ ಉರುಳೆಯಾಕಾರದ ಮುದ್ರೆ ಮತ್ತು ಲೇಖನಕಲೆಗಳೂ ಈ ಕಾಲದಲ್ಲೇ ಪ್ರಾರಂಭವಾದಂತೆ ಕಂಡುಬರುತ್ತದೆ.

ಮುಂದಿನ ಹಂತವಾದ ಜೆಮ್‌ಡೆಟ್ ನಾಸ್ರ್ ಸಂಸ್ಕೃತಿಗೆ ಲೇಖನಪೂರ್ವ ಸಂಸ್ಕೃತಿಯೆಂದೂ ಹೆಸರಿಟ್ಟಿದ್ದಾರೆ. ದೇವಾಲಯಕ್ಕೆ ಅಭಿವೃದ್ಧಿಹೊಂದಿ ಹಂತ ಹಂತವಾದ ಜಗತಿ ಅಥವಾ ತಾಜಾ ಜಿಗ್ಗುರಾಟ್ ಬೆಳೆದು ಬಂದು ದೊಡ್ಡ ಸ್ತಂಭಗಳಿಂದೊಡಗೂಡಿದ ಮೂರು ಕೋಣೆಗಳುಳ್ಳ ದೇವಾಲಯಗಳು ರೂಢಿಗೆ ಬಂದವು. ಗೋಡೆಗಳಿಗೆ ಸುಟ್ಟ ಮಣ್ಣಿನ, ಬಣ್ಣಬಣ್ಣದ ಶಂಕುವಿನಾಕಾರದ ಕೊಳವೆಗಳ ಅಲಂಕಾರ ಬಳಕೆಗೆ ಬಂತು. ಇವು ಅಲಂಕರಣದ ಜೊತೆಗೆ ಭದ್ರತೆಯನ್ನೂ ಹೆಚ್ಚಿಸಿದವು. ತಾಮ್ರ ಮತ್ತು ಬೆಳ್ಳಿಯ ಪಾತ್ರೆಗಳು, ಭವ್ಯ ಶಿಲ್ಪಕೃತಿಗಳು ಮತ್ತು ಚಿತ್ರಲಿಪಿ, ದಶಮಾಂಶ ಮತ್ತು ಷಷ್ಟ್ಯಂಶ ಗಣಪದ್ಧತಿಗಳು ಬಳಕೆಗೆ ಬಂದವು. ಈ ಶಿಲ್ಪಗಳಿಗೆ ಶಂಖದ ಕಣ್ಣುಗುಡ್ಡೆಗಳನ್ನಿಡುತ್ತಿದ್ದರು. ಭೂ ಸಾರಿಗೆ ರೂಢಿಗೆ ಬಂತು. ದೇವಾಲಯ ಕೇಂದ್ರಸ್ಥವಾದ ನಾಗರಿಕತೆ ಸರ್ವತೋಮುಖವಾಗಿ ಬೆಳೆದು ಪ್ರ.ಶ.ಪೂ. 3ನೆಯ ಸಹಸ್ರಮಾನದ ಆದಿಯಲ್ಲಿ ಅದು ಇನ್ನೂ ಹೆಚ್ಚಿನ ಮಟ್ಟ ಮುಟ್ಟಿತು.

(ಬಿ.ಕೆ.ಜಿ.)

ಪ್ರ.ಶ.ಪೂ.3000 ದಿಂದ ಪ್ರ.ಶ. 600 ರವರೆಗೆ: ಪ್ರ.ಶ.ಪೂ. 3ನೆಯ ಸಹಸ್ರಮಾನದ ಕೆಲವು ಲಿಖಿತ ದಾಖಲೆಗಳು ಇರಾಕಿನ ಚರಿತ್ರೆಯ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತವೆ. ಇವುಗಳ ಪ್ರಕಾರ ಇರಾಕಿನಲ್ಲಿ ಯಾವುದೋ ಕಾಲದಲ್ಲಿ ಬಂದ ಒಂದು ಮಹಾಪೂರ ಹಿಂದಿನ ರಾಜವಂಶಗಳ ಬಗ್ಗೆ ಈ ದಾಖಲೆಗಳಲ್ಲಿ ದೊರಕುವ ವಿಷಯ ನಂಬಲರ್ಹವಲ್ಲ. ಆದರೆ ಆ ಪ್ರವಾಹಾನಂತರದ ವಿಷಯಗಳ ಬಗ್ಗೆ ಸಿಗುವ ಹೇಳಿಕೆಗಳಲ್ಲು ಪೂರ್ಣವಾಗಿ ನಿರ್ದಿಷ್ಟವಾಗಿಲ್ಲವಾದರೂ ಹೆಚ್ಚು ಕಡಿಮೆ ಸರಿಯಾಗಿದ್ದು, ಭೂಶೋಧನೆಗಳಲ್ಲಿ ದೊರಕಿರುವ ಅನೇಕ ಸಾಮಗ್ರಿಗಳ ಸಹಾಯದಿಂದ ಒಂದು ಸ್ಪಷ್ಟಚಿತ್ರವನ್ನು ಕಲ್ಪಿಸಿಕೊಳ್ಳಲು ಸಹಾಯಮಾಡುತ್ತವೆ.

ಪ್ರವಾಹದ ಅನಂತರ ಅನೇಕ ನಗರರಾಜ್ಯಗಳು ದಕ್ಷಿಣ ಇರಾಕಿನಲ್ಲಿ (ಸುಮೇರಿಯ) ಸ್ಥಾಪಿತವಾದವು. ಅವುಗಳಲ್ಲಿ ಎರೆಕ್ ಮತ್ತು ಉರ್ ಮುಖ್ಯವಾದವು. ಈ ನಗರರಾಜ್ಯಗಳ ಪ್ರಭಾವ ಬಹುಮಟ್ಟಿಗೆ ಆಯಾ ನಗರಗಳಿಗೆ ಮಾತ್ರ ಸೀಮಿತವಾಗಿರುತ್ತಿದ್ದರೂ ಕೆಲವು

ಸಂದರ್ಭಗಳಲ್ಲಿ ಒಂದೆರೆಡು ನಗರರಾಜ್ಯಗಳು ಮಿಕ್ಕವುಗಳ ಮೇಲೆ ಮೇಲ್ಗೈಯನ್ನು ಸಾಧಿಸಿಕೊಂಡಿದ್ದುದೂ ಕಂಡುಬರುತ್ತದೆ. ಪ್ರ.ಶ.ಪೂ.2350ರ ಸುಮಾರಿನಲ್ಲಿ ಅಕ್ಕಾಡಿನ ಸಾರಗಾನ್ ಈ ನಗರರಾಜ್ಯಗಳನ್ನೆಲ್ಲ ಮೂಲೆಗೊತ್ತಿ ದೊಡ್ಡ ಸಾಮ್ರಾಜ್ಯವೊಂದನ್ನು ಸ್ಥಾಪಿಸಿದ. ಈ ಸಾಮ್ರಾಜ್ಯ ಅನತಿಕಾಲದಲ್ಲಿ ಅನೇಕ ಜನರ ಧಾಳಿಗಳಿಂದಾಗಿ ಶಿಥಿಲಗೊಂಡು, ಇರಾಕ್ ಪುನಃ ಸಣ್ಣ ರಾಜ್ಯಘಟಕಗಳಾಗಿ ಹಂಚಿಹೋಯಿತು. ಈ ಸಂದರ್ಭದಲ್ಲಿ ಇಸಿನ್ ಮತ್ತು ಲಾಸ ಎಂಬ ಎರಡು ನಗರಗಳಲ್ಲಿದ್ದ ರಾಜ್ಯಪಾಲ ಕುಲಗಳು ಬಹಳ ಪ್ರಭಾವ ಬೆಳೆಸಿಕೊಂಡಿದ್ದವು.

ಪ್ರ.ಶ.ಪೂ.18ನೆಯ ಶತಮಾನದಿಂದ ಇರಾಕಿನ ಬ್ಯಾಬಿಲೋನಿಯ ಒಂದು ಮುಖ್ಯ ಸ್ಥಾನವನ್ನಾಕ್ರಮಿಸಿತು. ಇಲ್ಲಿ ಆಳಿದವರಲ್ಲಿ ಪ್ರಸಿದ್ಧ ನ್ಯಾಯವಾದಿ ಹಮ್ಮುರಬಿ (ಪ್ರಶ.ಪೂ.1728–1686) ಮತ್ತು ಅವನ ಮಗ ಶಂಸುಲಿನ್ ಮುಖ್ಯರು. ಆದರೆ ಬ್ಯಾಬಿಲೋನಿಯ ಸಾಮ್ರಾಜ್ಯ ಪ್ರ.ಶ.ಪೂ. 16ನೆಯ ಶತಮಾನದಲ್ಲಿ ಹೆವೈಟ್ ಜನರ ಧಾಳಿಯಿಂದ ನಾಶವಾಗಿ, ಈ ಪ್ರದೇಶ ಇಂಡೊ–ಯೂರೋಪಿಯನ್ ಜನಾಂಗಕ್ಕೆ ಸೇರಿದ ಕ್ಯಾಸ್ಸೈಟ್ ಕುಲದ ಅರಸರ ಕೈಸೇರಿತು.

ಇದೇ ಸುಮಾರಿನಲ್ಲಿ ಉತ್ತರ ಇರಾಕಿನ ಅಶುರ್ ಎಂಬಲ್ಲಿ ಒಂದು ರಾಜವಂಶದವರು ಪ್ರವರ್ಧಮಾನಕ್ಕೆ ಬರುತ್ತಿದ್ದರು. ಈ ರಾಜವಂಶ ಮೊದಮೊದಲು ಅಷ್ಟೇನು ಪ್ರಭಾವಶಾಲಿ ಯಾಗಿರದಿದ್ದರೂ ಮುಂದೆ ಆ ಕುಲದ ಅದದ್ ನಿಕರಿ (ಪ್ರ.ಶ.ಪೂ.14ನೆಯ ಶತಮಾನ) ಮುಂತಾದ ಶೂರರ ಸಾಹಸಗಳಿಂದಾಗಿ ಒಂದು ದೊಡ್ಡ ಸಾಮ್ರಾಜ್ಯವನ್ನು ಕಟ್ಟಿತು. ಇದೇ ಪ್ರಸಿದ್ಧವಾದ ಅಸ್ಸೀರಿಯನ್ ಸಾಮ್ರಾಜ್ಯ. ತಿಗಲತ್ ಪಲೆಸರ್, ಶಲ್ಮನೆಸ್ಸರ್, ಅಶುರ್ ಬನಿಪಾಲ್ ಮುಂತಾದವರು ಈ ವಂಶದ ಪ್ರಖ್ಯಾತ ದೊರೆಗಳು. ಸುಮಾರು ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಪ್ರಭಾವಶಾಲಿಯಾಗಿದ್ದ ಈ ಸಾಮ್ರಾಜ್ಯ ಪ್ರ.ಶ.ಪೂ. 606ರಲ್ಲಿ ಮೀಡರ ಧಾಳಿಯಿಂದ ಅಳಿಸಿಹೋಯಿತು. ಅನಂತರ ಪುನಃ ಬ್ಯಾಬಿಲಾನನ್ನು ರಾಜ್ಯ ಕೇಂದ್ರವಾಗಿ ಹೊಂದಿದ್ದ ಕಾಲ್ಡೀಯ ಸಾಮ್ರಾಜ್ಯ ಹುಟ್ಟಿ ಪ್ರ.ಶ.ಪೂ.539ರಲ್ಲಿ ಪರ್ಷಿಯದ ಅಖಮೇನಿಯನ್ ವಂಶದ ಸೈರಸ್ನ ಕೈವಶವಾಗುವವರೆಗೆ ಮುಂದುವರೆಯಿತು.

ಪ್ರ.ಶ.ಪೂ.539ರಂದು ಸುಮಾರು ಹನ್ನೊಂದು ಶತಮಾನಗಳ ಕಾಲ ಇರಾಕ್ ಪರಕೀಯರ ಆಳಿಕೆಗೆ ಒಳಪಟ್ಟಿತ್ತು. ಪ್ರಶ.ಪೂ. 330ರಲ್ಲಿ ಅಖಮೇನಿಯನ್ನರಿಂದ ಮ್ಯಾಸಿಡೋನಿಯದ ಅಲೆಕ್ಸಾಂಡರ್ ಇರಾಕನ್ನು ಸ್ವಾಧೀನಪಡಿಸಿಕೊಂಡ. ಅನಂತರ ಪ್ರ.ಶ.ಪೂ.ಸು.2ನೆಯ ಶತಮಾನದ ಕೊನೆಯವರೆಗೆ ಸೆಲ್ಯೂಕೀ ಗ್ರೀಕರ, ಅನಂತರ ಪ್ರ.ಶ.3ನೆಯ ಶತಮಾನದ ಆದಿಭಾಗದವರೆಗೆ ಪಾರ್ಥಿಯನ್ ಪರ್ಷಿಯನ್ನರ, ಆಮೇಲೆ ಸಸ್ಸಾನೀಯ ಪರ್ಷಿಯನ್ನರ ವಶದಲ್ಲಿದ್ದ ಇರಾಕ್ 637ರ ಸುಮಾರಿನಲ್ಲಿ ದೇಶೀಯ ಇಸಾಮೀ ಸಾಮ್ರಾಜ್ಯದ ಸ್ಥಾಪನೆಯಿಂದಾಗಿ ಸ್ವತಂತ್ರವಾಯಿತು. (ಬಿ.ಕೆ.ಜಿ.)

**ಏಳನೆಯ ಶತಮಾನದಿಂದ:** ಬೈಜಾಂಟೀಯನ್ ಮತ್ತು ಪರ್ಷಿಯ ಸಾಮ್ರಾಜ್ಯಗಳ ಘರ್ಷಣೆಗಳ ಪರಿಣಾಮವಾಗಿ ಉಂಟಾದ ಕಲಹಗಳನ್ನು ನಿಲ್ಲಿಸಿ ಎಲ್ಲ ಇರಾಕಿಗಳು ಮತ್ತು ಅರಬರು ಒಂದುಗೂಡಲು ಮಹಮ್ಮದ್ ಪೈಗಂಬರ್ ಮತಪ್ರಚಾರ ಸಹಾಯಮಾಡಿತು.

ಮಹಮ್ಮದನ ಮರಣಾನಂತರ ಅವನ ಸ್ಥಾನಕ್ಕೆ ಯಾರು ಬರಬೇಕೆಂಬ ವಿಷಯದಲ್ಲಿ ವಿವಾದ ಬಂತು. ಅಳಿಯನಾದ ಅಲಿಯ ಪರವಾಗಿ ವಾದಿಸಿದವರು ಷಿಯ ಪಂಥದವರಾದರು. ವಿರೋಧಿಸಿದವರು ಸುನ್ನಿ ಪಂಥದವರಾದರು. ಇವರ ಕಲಹ ಐಕ್ಯಮತ್ಯಕ್ಕೆ ಭಂಗ ತರುವ ಹಾಗಾಯಿತು. ಷಿಯಗಳು ಗೆದ್ದು ಅಬುಬೇಕರನ್ನು ಕಲೀಫನನ್ನಾಗಿ ಆರಿಸಿದರು. ಪರ್ಷಿಯದ ಜನರೂ ಷಿಯಗಳಾಗಿ, ಐರೋಪ್ಯ ರಾಷ್ಟ್ರಗಳಾದ ಗಾಲ್ ಸ್ಪೇನಗಳನ್ನು ಜಯಿಸಿ, ಅನೇಕ ರಾಷ್ಟ್ರಗಳ ಆಕ್ರಮಣ ಮಾಡಿ, ಆಫ್ರಿಕದ ಬಹುಭಾಗವನ್ನು ಸ್ವಾಧೀನಪಡಿಸಿಕೊಂಡು ಇಸ್ಲಾಂ ಮತಕ್ಕಾಗಿ ದೊಡ್ಡ ಸಾಮ್ರಾಜ್ಯವನ್ನು ಗಳಿಸಿದರು. ಅತ್ಯಲ್ಪ ಕಾಲದಲ್ಲಿ ಅಷ್ಟು ದೊಡ್ಡ ರಾಜ್ಯವನ್ನು ಕಟ್ಟಲು ಅವರಿಗೆ ಸಾಧ್ಯವಾದದ್ದಕ್ಕೆ ಎರಡು ಕಾರಣಗಳನ್ನು ಹೇಳಬಹುದು. ಒಂದು–ತಾವು ಅವಲಂಬಿಸಿದ ಹೊಸ ಮತಧರ್ಮದ ಬಗ್ಗೆ ಅವರಿಗಿದ್ದ ಆಸಕ್ತಿ. ಎರಡು–ಅನ್ಯ ರಾಷ್ಟ್ರಗಳ ದೌರ್ಬಲ್ಯ.

ಬಾಗ್‌ದಾದ್ ನಗರ ಮುಸ್ಲಿಂ ಸಾಮ್ರಾಜ್ಯದ ರಾಜಧಾನಿಯಾಯಿತು. ಆಳಿದ ಅತಿ ಮುಖ್ಯ ಕಲೀಫರಲ್ಲಿ ಮೂವರು ಮೂರು ಖಂಡಗಳನ್ನಾವರಿಸಿಕೊಂಡ ಸಾಮ್ರಾಜ್ಯವನ್ನೂ ಅಖಂಡ ಸಂಪತ್ತನ್ನೂ ಗಳಿಸಿದರು. ಅವರಲ್ಲಿ ಅತ್ಯಂತ ಪ್ರಸಿದ್ಧನೆಂದರೆ ಹರೂನ್ ಅಲ್ ರಷೀದ್ (ಪ್ರಶ.786–809) ಹಾಗೂ ಇವನ ಮಗ ಮಮೂನ್ ಅಲ್ ರಷೀದ್ (ಪ್ರಶ.813–833). ಇವನ ಸಾಮರ್ಥ್ಯ ಸದ್ಗುಣಗಳನ್ನು ಅರೇಬಿಯನ್ ನೈಟ್ಸ್ ಗ್ರಂಥ ಮನೋರಂಜಕವಾಗಿ ವಿವರಿಸಿದೆ.

ಇಸ್ಲಾಂ ಧರ್ಮ ಮೊದಲು ಹರಡಿ ಇಡೀ ರಾಷ್ಟ್ರದ ಜನರನ್ನೇ ತನ್ನ ಕಡೆಗೆಳೆದದ್ದು ಇರಾಕ್ ರಾಜ್ಯದಲ್ಲಿ. ಮತ ತತ್ತ್ವದ ಜೊತೆಗೆ ಅರಬ್ಬೀ ಭಾಷೆಯೂ ಅಲ್ಲಿ ಮೊದಲು ಪ್ರಚಾರಕ್ಕೆ ಬಂತು. ಉಮಾಯದ್ ಕಲೀಫರ ಕಾಲದಲ್ಲಿ ಗರೀಕ್ ಮತ್ತು ಪಾರಸಿ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿ ಸಮನ್ವಯದ ಒಂದು ನೂತನ ದರ್ಶನವನ್ನೂ ಇರಾಕ್ ಜನ ಪಡೆದರು. ಅಬ್ಬಾಸಿದ್ದರ ಪರವಾಗಿ ಇರಾಕ್ ಮತ್ತು ಖುರೇಸಾನ್ ಜನ ಹೋರಾಟ ನಡೆಸಿ ಉಮಾಯದ್ದರನ್ನು ಸೋಲಿಸಿ ಅಬ್ಬಾಸಿದ್ ರಾಜ್ಯ ಭಾರವನ್ನು ಬಾಗ್‌ದಾದ್‌ನಲ್ಲಿ ಸ್ಥಾಪಿಸಿದರು. ಇರಾಕಿನ ದಕ್ಷಿಣ ಪ್ರಾಂತಗಳ ಸುನ್ನಿಪಂಥದವರ ಅಸಹ್ಯ ದೌರ್ಜನ್ಯಗಳನ್ನು ತಡೆಯಲಾರದೆ ಪ್ರಬಲರಾಗಿದ್ದ ಷಿಯ ಜನ ವಲಸೆ ಹೋದರು. 1945ರಲ್ಲಿ ಅಬ್ಬಾಸಿದ್ ಕಲೀಫರು ಷಿಯಪಂಗಡದ ಬುವೇಹಿದ್ ಜನರ ಆಕ್ರಮಣಕ್ಕೆ ಒಳಗಾದರು. 1258ರಂದು ಮಂಗೋಲರ ನಾಯಕ ಹುಲ್ಲುಗುಖಾನ್ ಬಾಗ್ದಾದ್‌ನ ಮೇಲೆ ಧಾಳಿ ನಡೆಸಿ ಅಬ್ಬಾಸಿದ್ದರ ಖಲೀಫ ಮುತ್ತಾಸಿಂನನ್ನು ಹತ್ಯೆಗೈದು ಬಾಗ್ದಾದ್ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡನು. ನಂತರ ಸು.150 ವರ್ಷಗಳ ಕಾಲ ಕ್ಷೋಭೆಗೆ ಒಳಗಾಗಿ ಕೊನೆಗೆ ಎರಡನೆಯ ಮಹಾಯುದ್ಧದ ವೇಳೆ ಕ್ಷಿಪ್ರಕ್ರಾಂತಿಯಿಂದಾಗಿ ಅರಬ್ಬರು ಬ್ರಿಟಿಷರನ್ನು ಇರಾಕ್ ಪ್ರಾಂತದಿಂದ ಹೊರಹಾಕಲು ಪ್ರಯತ್ನ ನಡೆಸಿದರು. ರಷೀದ್ ಆಲ್ ಅರಬ್ಬರಲ್ಲಿ ರಾಷ್ಟ್ರೀಯ ಪ್ರಜ್ಞೆ ತರಲು ಪ್ರಯತ್ನಿಸಿದರು. ಹೊಸಜೀವನ ನಿಯಮದಡಿಯಲ್ಲಿ ಅನೇಕ ಶಿಕ್ಷಣಸಂಸ್ಥೆ ಹಾಗೂ ಸಾಂಸ್ಕೃತಿಕ ಸಂಘಟನೆಗಳು ಇರಾಕಿನ ಜೀವನ ವ್ಯವಸ್ಥೆಯಲ್ಲಿ ಹೊಸ ರೂಪ ತರಲು ಪ್ರಯತ್ನಿಸಿತು. ಆದರೆ ಬ್ರಿಟಿಷರು ತಮ್ಮ ಸೈನ್ಯಬಲ ಬಳಸಿ ತಮ್ಮ ಬೆಂಬಲಿಗನಾಗಿದ್ದ ನೂರಿ ಅಸ್ ಸೈಯದ್‌ನನ್ನು ಅಧಿಕಾರಕ್ಕೆ ತಂದರು. ಅರಬ್‌ಲೀಗ್ ಸ್ಥಾಪನೆಯಾಯಿತು. ಮಾಸಲಲ್‌ನಲ್ಲಿ ಮೊದಲ ಬಾರಿಗೆ ತೈಲ ಪತ್ತೆಹಚ್ಚಲಾಯಿತು. ಯುದ್ಧನಂತರದಲ್ಲಿ ಬ್ರಿಟಿಷರು ಮತ್ತೆ ಈ ಪ್ರದೇಶದ ಮೇಲೆ ಹತೋಟಿ ಸಾಧಿಸಿ ಹಸೀಮಾ ಮನೆತನದ ಫೈಸಲ್‌ನನ್ನು ರಾಜನಾಗಿ ನೇಮಿಸಿದರು. ಆದರೆ ಅಸಮರ್ಥರಾದ ಕಾರಣ ಈತ ಹಾಗೂ ಇತನ ಮಗ ಗಾಜಿ ಬಹಳಕಾಲ ಅಧಿಕಾರ ನಡೆಸಲಾಗಲಿಲ್ಲ. ಮೆಸಪೊಟೇಮಿಯಾ ಪ್ರದೇಶದ ಅಸ್ಸೀರಿಯನ್ನರು ಉತ್ತರದ ಕುರ್ದರು ಘರ್ಷಣೆಗೆ ಧುಮುಕಿದರು.



ಅಶರ್‌ನಲ್ಲಿರುವ ಚಿಕ್ಕಮೀನಾರ್

1944–46ರ ತನಕ ಆಡಳಿತ ನಡೆಸಿದ ಹಸಿಮಮನೆತನದವರು ಹಾಗೂ ಹಮಾದಿ ಅಲ್ ಪಚಾಚಿ ಸರ್ಕಾರವನ್ನು ನೂರಿ ಅಲ್ ಸೈಯದ್‌ನ ಬೆಂಬಲಿಗ ಸೈನಿಕರು ಕ್ಷಿಪ್ರಕ್ರಾಂತಿಯ ಮೂಲಕ ಅಧಿಕಾರಕ್ಕೆ ಬಂದರು. ಇರಾಕಿನಲ್ಲಿ ಬ್ರಿಟಿಷ್ ವಿರೋಧಿ ಭಾವನೆಯಿಂದಾಗಿ ಬ್ರಿಟಿಷರು ಒಲ್ಲದ ಮನಸ್ಸಿನಿಂದ ಇರಾಕ್ ರಾಜಕೀಯ ವ್ಯವಸ್ಥೆಯಿಂದ ಹಿಂದೆ ಸರಿದರು. 1948ರಲ್ಲಿ ಜನ್ಮತಳೆದ ಬಾತ್ ಪಕ್ಷ ಇರಾಕಿನಲ್ಲಿ ರಾಷ್ಟ್ರೀಯ ಪ್ರಜ್ಞೆಯ ಕಿಡಿ ಹೊತ್ತಿಸಿತು. ಜಾತ್ಯಾತೀತ ಧೋರಣೆಯಿಂದಾಗಿ ಬಹುಬೇಗ ಅರಬ್ಬರ ಮನಸಳೆಯಿತು. 1955 ಜನವರಿಯಲ್ಲಿ ಬಾಗ್ದಾದ್ ಒಪ್ಪಂದವಾಗಿ ಸೋವಿಯತ್ ಒಕ್ಕೂಟದ ವಿರೋಧಿ ಬಣಕ್ಕೆ ಇರಾಕ್ ವೇದಿಕೆಯಾದರೂ ಸಹ ಹೆಚ್ಚಿನದೇನೂ ಸಾಧಿಸಲಾಗಲಿಲ್ಲ.

1958 ಜುಲೈ 14ರಂದು ಸೈನ್ಯಾಧಿಕಾರಿ ಅಬ್ದುಲ್ ಕರೀಮ್‌ಖಾಸಿಂ ಕ್ಷಿಪ್ರಕ್ರಾಂತಿಯ ಮೂಲಕ ಅಧಿಕಾರ ಕಸಿದುಕೊಂಡನು. ಎರಡನೆಯ ಫೈಸಲ್ ಹಾಗೂ ಕುಟುಂಬ ಮತ್ತು ವಯಸ್ಸಾಗಿದ್ದ ನೂರಿ ಅಲ್ ಸೈಯದ್‌ನನ್ನು ಹತ್ಯೆಗಯ್ಯಲಾಯಿತು. ಇರಾಕ್ ಆಡಳಿತ ಈಜಿಪ್ಟಿನ ಮಾದರಿಯಂತೆ ರೆವಲ್ಯೂಷನರಿ ಕಮ್ಯಾಂಡ್ ಕೌನ್ಸಿಲ್ ಸ್ಥಾಪಿಸಿಕೊಂಡು ತನ್ನ ವಿರೋಧಿಗಳನ್ನು ಮಟ್ಟಹಾಕಿತು. 1958–63ರ ನಡುವೆ ಖಾಸಿಂ ತನ್ನ ಆಡಳಿತ ಚಾಕಚಕ್ಯತೆಯಿಂದ ಬ್ರಿಟಿಷರನ್ನು ಇರಾಕ್ ಆಡಳಿತದಿಂದ ದೂರವಿರಿಸಿದ. ಬಾತ್ ಪಕ್ಷ ಸಮರ್ಥವಾಗಿ ಕೆಲಸ ಮಾಡುವುದರ ಮೂಲಕ ವ್ಯಕ್ತಿಗಿಂತ ಪಕ್ಷ ಮುಖ್ಯವೆಂಬುದನ್ನು ಎತ್ತಿಹಿಡಿಯಿತು. 1961ರಲ್ಲಿ ಖಾಸಿಂ ಕುವೈತ್ ಮೇಲೆ ಧಾಳಿ ನಡೆಸಲು ಮುಂದಾದರೂ ಸಹ ಬ್ರಿಟಿಷರ ಪ್ರಬಲ ವಿರೋಧದಿಂದಾಗಿ ಸಫಲತೆ ಕಾಣಲಿಲ್ಲ. ಇರಾಕ್ ತನ್ನ ಬೆಳೆವಣಿಗೆಯ ಜೊತೆಯಲ್ಲಿ (ಸಫಲ್ ಅರಬ್) ಗಡಿ ಸಮಸ್ಯೆಯನ್ನು ಬೆಳೆಸುವಂತಾಯಿತು.

ಇರಾಕಿನ ಉತ್ತರ ಭಾಗದಲ್ಲಿ ಕುರ್ದರು ಖಾಸಿಂ ಆಡಳಿತದ ವಿರುದ್ಧ ದಂಗೆಯೆದ್ದರು. ಮುಸ್ತಾಫ ಅಲ್ ಬರ್ಜಾನಿ ಗಡಿಪಾರಾದನು. ಕುರ್ದರ ದಂಗೆಯನ್ನು ಇರಾನ್ ಹಾಗೂ ಟರ್ಕಿ ಸೈನ್ಯದ ನೆರವಿನೊಂದಿಗೆ ಇರಾಕ್ ತಾತ್ಕಾಲಿಕವಾಗಿ ಶಮನಗೊಳಿಸಿಕೊಂಡಿತು.

1963ರಲ್ಲಿ ಕ್ಷಿಪ್ರಕ್ರಾಂತಿ ನಡೆಸುವುದರ ಮೂಲಕ ಕರ್ನಲ್ ಅಬ್ದುಲ್ ಸಲೀಮ್ ಹರೀಫ್ ಅಧಿಕಾರಕ್ಕೆ ಬಂದನು. ಅಧ್ಯಕ್ಷರಾಗಿದ್ದ ಖಾಸಿಂನನ್ನು ಗಲ್ಲಿಗೇರಿಸಲಾಯಿತು. ಇರಾಕಿನಲ್ಲಿ ಅರಬ್ ಸೋಷಿಯಲಿಸ್ಟ್ ಪಕ್ಷವು ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸತತವಾಗಿ ನಡೆದ ಕುರ್ದರ ಘರ್ಷಣೆ, ಸಿರಿಯಾ, ಈಜಿಪ್ಟಗಳ ಹಳಸಿದ ಸಂಬಂಧಗಳಿಂದಾಗಿ ಇರಾಕ್ ತನ್ನ ಅಮೂಲ್ಯವಾದ ಅಪಾರ ಪ್ರಮಾಣದ ಸಂಪತ್ತಿನ ನಾಶಕ್ಕೆ ಈಡಾಯಿತು.

1966ರಲ್ಲಿ ಅಧ್ಯಕ್ಷರಾಗಿದ್ದ ಸಲೀಮ್ ಹರೀಫ್ ಅಪಘಾತ ಒಂದರಲ್ಲಿ ಸಾವನ್ನಪ್ಪಿದ. ಅವರ ಸ್ಥಾನಕ್ಕೆ ಅವರ ಸಹೋದರ ಅಬ್ದುಲ್ ರಹಮಾನ ಹರೀಫ್ ಅಧಿಕಾರಕ್ಕೆ ಬಂದ. 1967ರಲ್ಲಿ ಸಂಭವಿಸಿದ ಅರಬ್–ಇಸ್ರೇಲಿ ಯುದ್ಧದಲ್ಲಿ ಇರಾಕ್ ತಟಸ್ಥವಾಗಿದ್ದರೂ ಸಹ

ಇಸ್ರೇಲಿನ ನೀತಿಯನ್ನು ಖಂಡಿಸಿತು. ಅರಬ್ ಸೋಷಿಯಲಿಸ್ಟ್ ಪಕ್ಷ ಈ ಘಟನೆಯಿಂದ ತನ್ನ ಜನಪ್ರಿಯತೆ ಕಳೆದುಕೊಂಡಿತು. ಬಾತಿಷ್ಟ್ ಪಕ್ಷ ತನ್ನ ಸೈದ್ಧಾಂತಿಕ ನಿಲುವುಗಳಿಂದಾಗಿ ಮತ್ತೆ ಜನಮನ್ನಣೆ ಗಳಿಸಿಕೊಂಡಿತು.

1968 ಜುಲೈ 17ರಂದು ಬಾತ್ ಪಕ್ಷದ ನಾಯಕ ಜನರಲ್ ಅಹಮದ್ ಅಲ್ ಬಕರ್ ಹಾಗೂ ಯುವ ನಾಯಕ ಸದ್ದಾಂಹುಸೇನ್ ಕ್ಷಿಪ್ರಕ್ರಾಂತಿಯ ಮೂಲಕ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕ್ರಮವಾಗಿ ಅಧಿಕಾರಕ್ಕೆ ಬಂದರು.

1979 ಜುಲೈ 11ರಂದು ಬಾತ್ ಪಕ್ಷದ ಅಧ್ಯಕ್ಷರಾಗಿದ್ದ ಅಲ್-ಬಕರ್ ಅನಾರೋಗ್ಯದ ಕಾರಣ ಅಧಿಕಾರ ತ್ಯಜಿಸಿದಾಗ ಉಪಾಧ್ಯಕ್ಷರಾಗಿದ್ದ ಸದ್ದಾಂಹುಸೇನ್ ಇರಾಕಿನ ಅಧ್ಯಕ್ಷರು ಹಾಗೂ ಆರ್.ಸಿ.ಸಿಯ ಮುಖ್ಯಸ್ಥರಾಗಿ ಅಧಿಕಾರಕ್ಕೆ ಬಂದ. ಅರಬ್ ಜಗತ್ತಿನಲ್ಲಿ ಗಟ್ಟಿ ಮನುಷ್ಯ ಎಂದು ಹೆಸರು ಪಡೆದಿದ್ದ ಸದ್ದಾಂಹುಸೇನ್ ತನ್ನ ಖಚಿತ ನಿಲುವುಗಳ ಮೂಲಕ ಬಾತ್ ಪಕ್ಷದ ನೇತೃತ್ವದಲ್ಲಿ ಇರಾಕಿನ ಬೆಳವಣಿಗೆಗಾಗಿ ಶ್ರಮಿಸಿದ. ಅನೇಕ ಜನಪದ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು. ಕಿರ್ಕುಕ್, ಮಾಸುಲ್‌ನಲ್ಲಿ ದೊರೆತ ತೈಲ ಸಂಪತ್ತಿನಿಂದಾಗಿ ಇರಾಕಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತು. ಹಲವಾರು ಕೈಗಾರಿಕೆಗಳು ಸ್ಥಾಪಿತವಾದವು. ಪರ್ಷಿಯನ್‌ಖಾರಿ ಒಡೆತನದ ವಿವಾದದಿಂದಾಗಿ 1980-88ರ ತನಕ ಸತತವಾಗಿ ಇರಾಕ್ ಮತ್ತು ಇರಾನ್ ನಡುವೆ ಯುದ್ಧ ಸಂಭವಿಸಿತು. ಈ ವೇಳೆಯಲ್ಲಿ ಉತ್ತರದಲ್ಲಿ ಕುರ್ದ್ ಸಮುದಾಯದವರು ದಂಗೆಯೆದ್ದರು, ದಂಗೆಯ ನಿಗ್ರಹಕ್ಕೆ ಸದ್ದಾಂಸೇನೆ ವಿನಾಶಕಾರಿ ಬಾಂಬ್‌ಗಳನ್ನು ಬಳಸಿ ಸಾವಿರಾರು ಕುರ್ದರನ್ನು ಹತ್ಯೆಗೈಯ್ಯಲಾಯಿತು. ಇರಾಕಿನ ಆಧುನಿಕ ಇತಿಹಾಸದಲ್ಲಿ ಕುರ್ದರು ಅಪಾರ ಪ್ರಮಾಣದಲ್ಲಿ ಸಾವನ್ನಪ್ಪಬೇಕಾಯಿತು. ಆಗಸ್ಟ್ 1988ರಂದು ಇರಾನ್-ಇರಾಕ್ ಯುದ್ಧಕ್ಕೆ ತೆರೆ ಎಳೆಯಲಾಯಿತು. ಯುದ್ಧ



ಟೇಸಿಫಾನನ ಔತಣಕೂಟದ ಸಭಾಂಗಣ

ಹಾಗೂ ಕುರ್ದರ ದಂಗೆಯಿಂದ ತೀರಾ ಹದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿ ಹಾಗೂ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸದ್ದಾಂಹುಸೇನ್ ತೈಲ ವ್ಯಾಪಾರದಲ್ಲಿ ಇರಾಕಿನ ಹೆಚ್ಚಿನ ಪಾಲು ಕೇಳಿ ಒಪೆಕ್ ಸಭೆಯಲ್ಲಿ ಒತ್ತಾಯ ತಂದಾಗ ಕುವೈತ್ ವಿರೋಧ ವ್ಯಕ್ತಪಡಿಸಿತು. ಅನಿವಾರ್ಯತೆ ಹಾಗೂ ಅಸಹಾಯಕತೆಯಿಂದಾಗಿ ಸದ್ದಾಂಹುಸೇನ್ ಕುವೈತ್ ಇರಾಕ್ ಗಡಿಭಾಗದ ತಟಸ್ಥವಲಯದಲ್ಲಿನ ತೈಲವನ್ನು ಹೊರತೆಗೆಯಲು ಮುಂದಾದನು. ಇದು ಕುವೈತ್ ಮೇಲಿನ ಧಾಳಿಗೆ ಇರಾಕನ್ನು ಪ್ರಚೋದಿಸಿತು. 1990 ಸೆಪ್ಟೆಂಬರ್ 10ರಂದು ಇರಾನ್-ಇರಾಕ್ ನಡುವೆ ರಾಯಭಾರಿ ಸಂಬಂಧಗಳು ಮತ್ತೆ ಪ್ರಾರಂಭವಾದವು. ಸ್ವಲ್ಪದಿನಗಳ ಕಾಲ ಇರಾಕ್ ಮತ್ತೆ ಆರ್ಥಿಕವಾಗಿ ಚೇತರಿಸಿಕೊಂಡು ಪ್ರತಿಯಿತ್ತ ಹೆಜ್ಜೆಯನ್ನಿಡುತ್ತಿರುವಾಗಲೇ ಸದ್ದಾಂಹುಸೇನ್ ಕುವೈತ್ ಮೇಲೆ ಆಗಸ್ಟ್ 2 1990ರಂದು ಧಾಳಿ ನಡೆಸಿದರು. ಅಮೇರಿಕ ಹಾಗೂ ಬ್ರಿಟಿಷ್ ಪಡೆಗಳು ಕುವೈತ್ ಸಹಾಯಕ್ಕೆ ಬಂದು ಇರಾಕನ್ನು ಕುವೈತ್‌ನಿಂದ ಕಾಲ್ತೆಗೆಯುವಂತೆ ಮಾಡಿದವು.

ಅಮೇರಿಕ ಹಾಗೂ ವಿಶ್ವಸಂಸ್ಥೆಯ ಒತ್ತಾಯಕ್ಕೆ ಮಣಿದು ಭದ್ರತಾ ಮಂಡಲಿ ಇರಾಕ್ ದೇಶದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿತು. 1993ರಿಂದ ಜರ್ಜರಿತಗೊಂಡಿದ್ದ ಯುದ್ಧನಂತರದ ಇರಾಕ್‌ನ ಜನಜೀವನ 1994ರ ವಿಶ್ವಸಂಸ್ಥೆಯ ಆರ್ಥಿಕ ದಿಗ್ಬಂಧನದಿಂದ ತೀರಾ ಕುಸಿದು ಹೋಯಿತು. ಜನ ಆಹಾರ, ಔಷಧಿ ಹಾಗೂ ಜೀವನ ಅವಶ್ಯಕ ವಸ್ತುಗಳ ಕೊರತೆಯಿಂದ ನರಳುವಂತಾಯಿತು. ವಿದೇಶಿ ಸಾಲ ಆಂತರಿಕ ಒತ್ತಡಕ್ಕೆ ಸಿಲುಕಿದ ಇರಾಕಿನ ಮೇಲೆ ಅಮೇರಿಕ ಹಾಗೂ ಬ್ರಿಟನ್ ಸುಳ್ಳು ಅಣ್ವಸ್ತ್ರ ನೆಪದಲ್ಲಿ 2002ರಲ್ಲಿ ಧಾಳಿ ನಡೆಸಿ ಸದ್ದಾಂ ಸರ್ಕಾರ ಹಾಗೂ ಬಾತ್‌ಪಕ್ಷದ ಆಡಳಿತವನ್ನು ಕಿತ್ತೊಗೆದು ತಾತ್ಕಾಲಿಕ ಸರ್ಕಾರ ನೇಮಿಸಿದವು. ಇರಾಕಿನ ಮೇಲೆ ಅಮೇರಿಕ ಹಾಗೂ ಮಿತ್ರ ಪಡೆಯ ಸೈನ್ಯ ಅಧಿಕಾರ ಹೊಂದಿದವು. ಸದ್ದಾಂ ಹುಸೇನ್‌ರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಯಿತು. ಕುರ್ದರ ಮೇಲಿನ ಹತ್ಯೆಯ ಆರೋಪದ ಮೇರೆಗೆ ಸದ್ದಾಂಹುಸೇನ್ ಹಾಗೂ ಅವನ ಸರ್ಕಾರದ ಹಿರಿಯ ಅಧಿಕಾರಿಗಳನ್ನು 2006ರ ಡಿಸೆಂಬರ್ 30ರಂದು ಗಲ್ಲಿಗೇರಿಸಲಾಯಿತು.

ಇತಿಹಾಸದುದ್ದಕ್ಕೂ ಆಕ್ರಮಣ, ಕದನ, ದಂಗೆ ಹಾಗೂ ಕ್ಷಿಪ್ರಕ್ರಾಂತಿಗಳ ಮೂಲಕ ರಾಜಕೀಯ ವಲಯದಲ್ಲಿ ಸಂಚಲನೆ ಮೂಡಿಸುತ್ತಿದ್ದ ಇರಾಕ್ ದೇಶ ತನ್ನ ಅಭದ್ರವಾದ ಗಡಿಗಳು ಜನಾಂಗೀಯವಾದ ಹಾಗೂ ಇಸ್ಲಾಂಧರ್ಮದ ಷಿಯಾ-ಸುನ್ನಿ ಸಂಘರ್ಷದಲ್ಲಿ ನಲುಗಿಹೋಗಿದೆ. ಯೂಫ್ರಟೀಸ್ ಹಾಗೂ ಟೈಗ್ರೀಸ್ ನದಿಗಳ ಸಮೃದ್ಧ ನೀರು, ಫಲವತ್ತಾದ ಮೆಸಪೊಟೇಮಿಯ ಪ್ರದೇಶ ವಿಶ್ವದಲ್ಲೇ ತೈಲ ಸಂಪತ್ತಿನ ದೃಷ್ಟಿಯಿಂದ ದ್ವಿತೀಯ ಸ್ಥಾನದಲ್ಲಿದ್ದರೂ ಸಹ ರಾಜಕೀಯ ದೂರಾಲೋಚನೆ, ಸಮರ್ಥ ನಾಯಕತ್ವದ ಕೊರತೆಯಿಂದಾಗಿ ಇಂದಿಗೂ ಸಹ ವಸಾಹತುಶಾಹಿಯ ಶೋಷಣೆಗೆ ಒಳಗಾಗುತ್ತಿರುವ ರಾಷ್ಟ್ರವೆನಿಸಿದೆ.

(ಸಿ.ಜಿ.ಎಸ್.)

1400ರಲ್ಲಿ ತೈಮೂರ್‌ಲೇನನ ಯುದ್ಧಗಳ ಮತ್ತು ದೌರ್ಜನ್ಯಕೃತ್ಯಗಳ ಪರಿಣಾಮವಾಗಿ ಸುಸಂಸ್ಕೃತರೂ ಶಾಂತಿ ಮತಧರ್ಮ ಪೋಷಕರೂ ಆದ ಇರಾಕಿನ ಬಹು ಮಂದಿ ಹತರಾದರು. ಬಾಗ್‌ದಾದ್ ನಾಶಹೊಂದಿತು.

ಮ್ಯಾಮಲೂಕರ ರಾಜ್ಯಭಾರ ಕ್ಷೀಣವಾಯಿತು. ನೂರ ಇಪ್ಪತ್ತೆಂಟು ವರ್ಷಗಳಲ್ಲಿ ಇಪ್ಪತ್ತೊಂಬತ್ತು ರಾಜರು ಆಳಿದರು. 1480ರಲ್ಲಿ ಟರ್ಕೊಮನ್ ಮತ್ತು ಕುರ್ದ್ ಪರ್ವತವಾಸಿಗಳು ಧಾಳಿ ನಡೆಸಿ ರಾಜ್ಯದ ಬಹುಭಾಗವನ್ನು ನಾಶ ಮಾಡಿದರು. ನಾಗರಿಕತೆಯ ಪರಾಕಾಷ್ಠೆಯನ್ನು ಮುಟ್ಟಿದ್ದ ಇರಾಕಿನ ಜನ ದಿಕ್ಕೆಟ್ಟು ಹೋದರು. ಪಾಶ್ಚಾತ್ಯ ರಾಷ್ಟ್ರಗಳ ಸ್ವಾಧೀನಕ್ಕಾಗಿ ಆಟೋಮನ್ ಮತ್ತು ಪರ್ಷಿಯ ರಾಷ್ಟ್ರಗಳ ಭಯಂಕರ ಸ್ಪರ್ಧೆ, ಅಂತರ್ಯುದ್ಧಗಳಲ್ಲೂ-ಇವು ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಇರಾಕ್ ಜನರ ಇಡೀ ಇತಿಹಾಸವನ್ನೇ ರೂಪಾಂತರಗೊಳಿಸಿದವು.

ಆಟೋಮನ್ನರು ಇರಾಕನ್ನು ಗೆದ್ದು ರಾಜ್ಯಾಡಳಿತವನ್ನು ಸರಿಪಡಿಸಿ ಇರಾಕೀ ಶ್ರೀಮಂತರಿಗೂ ಪರ್ವತವಾಸಿಗಳಾದ ಕುರ್ದ್‌ನಾಯಕರಿಗೂ ರಾಜ್ಯಭಾರವನ್ನು ಒಪ್ಪಿಸಿದ ಪರಿಣಾಮವಾಗಿ ಕೆಲವು ಕಾಲ ಶಾಂತಿ ಸೌಹಾರ್ದಗಳು ನೆಲೆಗೊಂಡವು. ಆದರೆ ಕೆಲವು ಕಾಲದಲ್ಲಿಯೇ ಅನಾಯಕತ್ವ ಮತ್ತೆ ತಲೆದೋರಿತು. ಈ ಮಧ್ಯ ವಾಣಿಜ್ಯ, ವ್ಯಾಪಾರ ಬೆಳವಣಿಗೆಗಳನ್ನೇ ಪರಮ ಧ್ಯೇಯವಾಗಿಟ್ಟಿಕೊಂಡ ಫ್ರೆಂಚ್ ಮತ್ತು ಇಂಗ್ಲೆಂಡಿನ ವ್ಯಾಪಾರ ಸಂಸ್ಥೆ ಪ್ರಬಲವಾಗಿ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಪ್ರಭಾವ ಕ್ಷೇತ್ರಗಳನ್ನು ಸ್ಥಾಪಿಸಿ, ಅಂತರ ರಾಜಕೀಯದಲ್ಲಿ ಪ್ರವೇಶಿಸಿ, ರಾಜಮನೆತನಗಳನ್ನು ಒಡೆದು ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿಕೊಂಡಿತು. ಫ್ರೆಂಚ್ ಸಮ್ರಾಟನಾದ ಲೂಯಿಯ ಲಿವಾಂಟ್ ಕಂಪನಿ, ಈಸ್ಟ್ ಇಂಡಿಯ ಕಂಪನಿಗಳು ಇವುಗಳಲ್ಲಿ ಬಹು ಮುಖ್ಯ. ಪರ್ಷಿಯ ಕೊಲ್ಲಿ ವ್ಯಾಪಾರ ಸ್ಪರ್ಧೆಗೆ ಮುಖ್ಯ ಕೇಂದ್ರವಾಯಿತು. ಬಾಬಲ್ ಮಂಡಬ್, ಬಸ್ರ, ಬಾಗ್‌ದಾದ್ ಮತ್ತು ಇತರ ಪಟ್ಟಣಗಳು ಐರೋಪ್ಯ ಜನರ ಧನಾರ್ಜನೆಯ ದಾಹಕ್ಕೆ ಬಲಿಯಾದವು.

19ನೆಯ ಶತಮಾನದ ಆದಿಯಲ್ಲಿ ಇತರ ರಾಷ್ಟ್ರಗಳಲ್ಲಿ ಉಂಟಾದ ಹಾಗೆ ಇಲ್ಲೂ ರಾಷ್ಟ್ರೀಯ ಭಾವನೆ ಮೂಡಿತು. ಐರೋಪ್ಯ ವ್ಯಾಪಾರಸ್ಥರು ಪ್ರತಿಭಾವಂತರು, ಪ್ರಗಲ್ಭರು, ಸಾಹಸಿಗಳು. ಅವರು ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ತಿರುಗಿ ಆಧುನಿಕ ಭಾವನೆಗಳನ್ನು ಹರಡಿದರು. ವೃತ್ತಪತ್ರಿಕೆಗಳು ಹೊಸ ಸ್ಫೂರ್ತಿಯನ್ನು ಕೊಟ್ಟವು. 1853ರಲ್ಲಿ ಪ್ರಗತಿಪರ ಭಾವನೆಗಳಿಂದ ಕೂಡಿದ ಮಹಮ್ಮದ್ ರಷೀದ್ ಪಾಷಾ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿ, ಜನಗಳಿಗೆ ಅಂತರಾಷ್ಟ್ರೀಯ ಉದ್ಯಮ ವ್ಯಾಪಾರ ಮತ್ತು ಸಂಸ್ಕೃತಿಯ ವೈವಿಧ್ಯಗಳ ಪರಿಚಯವನ್ನು ಮಾಡಿಸಿದ. ನಿರಂಕುಶ ಆಳ್ವಿಕೆಗೆ ಮನಸೋತ ಪಾಷಗಳನ್ನು ಪದಚ್ಯುತರನ್ನಾಗಿ ಮಾಡಿ, ನೌಕರಿ ದರ್ಜೆಯ ಜನರನ್ನು ಹದಗೊಳಿಸಿ, ಈಫೆಂಡಿ ಎಂಬ ಹೆಸರಿನ ಉನ್ನತ ಅಧಿಕಾರಿಗಳನ್ನು ನಾನಾ ಕ್ಷೇತ್ರಗಳಲ್ಲಿ ನೇಮಿಸಿ, ಉಡುಪು ನೀತಿನಡೆಗಳನ್ನು ತಿದ್ದಿ, ಇರಾಕ್ ರಾಷ್ಟ್ರಜೀವನದ ಮಾರ್ಪಾಟಿಗಾಗಿ ಬಹಳ ಶ್ರಮ ವಹಿಸಿದ. ಪರಿಣಾಮವಾಗಿ ಹೊರ ಜನಾಂಗಗಳ ಪ್ರಭಾವ ಕ್ಷೇತ್ರಗಳನ್ನೂ ಅವುಗಳ ಅಧಿಕಾರಿಗಳನ್ನೂ ಹೊರದೂಡುವ ಪ್ರಯತ್ನಗಳು ನಡೆದವು. ಆಟೊಮನ್ ಸೇನೆಯಲ್ಲಿ ಅಧಿಕಾರಿಯಾಗಿದ್ದ ಅಜೀಜ್ ಆಲಿ ಅಲ್ ಅಹದ್ ಸಾಲೆಂ ಲೀಗ್ ಮತ್ತು ಕಾವನೆಂಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಬ್ರಿಟಿಷ್ ಜನರನ್ನೂ ಹೊರದೂಡುವಂತೆ ಪ್ರೇರೇಪಿಸಿದ.

ಅರಬ್ಬಿ ಕ್ರಾಂತಿಗಳು ಜರುಗಿದವು. ಬ್ರಿಟಿಷ್ ಸೇನಾನಾಯಕ ಕಿಚನ್, ರೊನಾಲ್ಡ್ ಸ್ಟ್ರಾಟ್ ಮತ್ತು ಇತರ ಪ್ರತಿಭಾವಂತರು ಗೊಂದಲಕ್ಕೆ ಸಿಕ್ಕರು. ಅನೇಕ ಕಾರಣಗಳಿಂದ ಹೋರಾಟ ಯಶಸ್ವಿಯಾಗಲಿಲ್ಲ. 1918ರಲ್ಲಿ ಆಂಗ್ಲೊ-ಫ್ರೆಂಚ್ ಒಪ್ಪಂದ ಅರಬ್ಬರ ರಾಷ್ಟ್ರಪ್ರೇಮವನ್ನು ಲಾಲಿಸಿ ಅವರ ಸ್ವಾತಂತ್ರ್ಯದ ಹಾದಿಯನ್ನು ತೆರೆಯಿತು. ಜಿಲ್ಲಾ ಸಮಿತಿಗಳಾದವು. ಸೆವರಸ್ ಒಪ್ಪಂದದ ಪ್ರಕಾರ ಸಮಿತಿಗಳ ಮೂಲಕ ಏಕರಾಷ್ಟ್ರ ಸಿದ್ಧಿಗಾಗಿ ವಿಲ್ಸನ್ ಉತ್ತಮ ಸಲಹೆಗಳನ್ನು ಮಾಡಿದ. ಬ್ರಿಟಿಷರ ಪ್ರತಿನಿಧಿಗಳೇ ಅರಬ್ಬರ ಪ್ರತಿನಿಧಿಗಳಿಗಿಂತ ಹೆಚ್ಚು ಅಧಿಕಾರವನ್ನು ಗಳಿಸಿದರು. ಸಮಿತಿಗಳು ಬ್ರಿಟಿಷರ ಕೈವಾಡಕ್ಕೆ ಸಿಕ್ಕಿದವು. ಸರ್ ಪರ್ಸಿ ಕಾಕ್ಸ್ ಮುಖ್ಯಾಧಿಕಾರಿಯಾಗಿ ಇರಾಕ್ ಸ್ವಾತಂತ್ರ ರಾಷ್ಟ್ರವಾಗುವುದಕ್ಕೆ ಬೇಕಾದ ಸಲಹೆಗಳನ್ನು ಸೂಚಿಸಿದ. ಉಜ್ವಲ ರಾಷ್ಟ್ರ ಪ್ರೇಮಿಗಳು ಸಣ್ಣ ಸಣ್ಣ ಸುಧಾರಣೆಗಳನ್ನು ಒಪ್ಪದೆ ಮತ್ತೆ ಉಗ್ರ ವಿಪ್ಲವಗಳನ್ನು ಎಬ್ಬಿಸಿದರು. ಭಾರತ ಸರ್ಕಾರದ ಸೇನಾದಳ ಪ್ರಭಾವಯುತವಾಗಿ ಹೋರಾಡಿ, ಬ್ರಿಟಿಷ್ ಸರ್ಕಾರಕ್ಕೆ ಯಶಸ್ಸು ತಂದಿತು. 1924ರಲ್ಲಿ ಮತ್ತೆ ಒಪ್ಪಂದವಾಯಿತು. ಸರ್ ಜಾರ್ಜ್ ಕ್ಲೆಟನ್ ಎಂಬ ಅಧಿಕಾರಿ ಬ್ರಿಟಿಷ್ ಮತ್ತು ಇರಾಕ್ ಜನರ ಪರಸ್ಪರ ಸಹಕಾರ ಸದ್ಭಾವನೆಗಳಿಗಾಗಿ ಮತ್ತೆ ಒಪ್ಪಂದ ಮಾಡಿ ಯುದ್ಧ ಸಮಯಗಳಲ್ಲಿ ಇರಾಕ್ ಜನ ಸಹಕಾರ ನೀಡಬೇಕೆಂದು ಸಲಹೆ ಮಾಡಿದ. ಲೀಗ್ ಆಫ್ ನೇಷನ್ಸ್‌ನಲ್ಲಿ ಇರಾಕಿಗೆ ಪ್ರಾತಿನಿಧ್ಯ ಕೊಡಲು ಬ್ರಿಟಿಷ್ ಸರ್ಕಾರಕ್ಕೆ ಸಲಹೆಮಾಡಿದ.

ಆದರೂ ಅಸ್ಸೀರಿಯ ಮಧ್ಯ ಯೂಫ್ರಟೀಸ್ ಪ್ರದೇಶಗಳಲ್ಲಿ ಅಶಾಂತಿ ಇದ್ದೇ ಇತ್ತು. ಕ್ರಾಂತಿಗಳು, ರಕ್ತಪಾತ, ದೌರ್ಜನ್ಯ ಕೃತ್ಯಗಳು 1940ರಲ್ಲೂ ಜರುಗುತ್ತಲೇ ಇದ್ದವು. ಫೈಸಲ್ ದೊರೆಯ ಮರಣಾನಂತರ 1933ರಲ್ಲಿ ಪಟ್ಟಕ್ಕೆ ಬಂದ ಘಾಸಿಯೊ ಶಾಂತಿ ಪ್ರಯತ್ನದಲ್ಲಿ

ವಿಫಲನಾದ. ಎರಡನೆಯ ಮಹಾಯುದ್ಧದಲ್ಲಿ ಅನೇಕ ಉತ್ಪಾದಕರ ಘಟನೆಗಳು ಜರುಗಿದವು. ಅಬ್ದುಲ್ಲನ ಉತ್ಕಟಾಕಾಂಕ್ಷೆ ಸಿರಿಯ ರಾಷ್ಟ್ರವನ್ನು ಅರಬ್ಬರ ಧರ್ಮಸಾಮ್ರಾಜ್ಯವನ್ನಾಗಿ ಮಾಡಬೇಕೆಂಬುದಾಗಿತ್ತು. ಆ ಪ್ರಯತ್ನಕ್ಕೆ ಅನೇಕ ವಿರೋಧಿಗಳು ಹುಟ್ಟಿಕೊಂಡರು. ಯುದ್ಧದ ತರುವಾಯ ಕಮ್ಯೂನಿಸ್ಟ ಸಾಮ್ರಾಜ್ಯದ ನಾಯಕನಾದ ಸ್ಟಾಲಿನ್ನನ ಪ್ರಭಾವ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಬಲವಾಯಿತು. ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಅಧಿಕಾರ ವ್ಯಾಪ್ತಿ ಕುಂಠಿತವಾಯಿತು. (ಎಂ.ವಿ.ಕೆ.)

ಎರಡನೆಯ ಮಹಾಯುದ್ಧದ ವೇಳೆ ಕ್ಷಿಪ್ರಕ್ರಾಂತಿಯಿಂದಾಗಿ ಅರಬ್ಬರು ಬ್ರಿಟಿಷರನ್ನು ಇರಾಕ್ ಪ್ರಾಂತ್ಯದಿಂದ ಹೊರಹಾಕಲು ಪ್ರಯತ್ನ ನಡೆಸಿದರು. ರಷೀದ್ ಅಲಿಯು ಅರಬ್ಬರಲ್ಲಿ ರಾಷ್ಟ್ರೀಯ ಪ್ರಜ್ಞೆ ತರಲು ಪ್ರಯತ್ನಸಿದ. ಹೊಸಜೀವನ ನಿಯಮದಡಿಯಲ್ಲಿ ಅನೇಕ ಶಿಕ್ಷಣ ಸಂಸ್ಥೆ ಹಾಗೂ ಸಾಂಸ್ಕೃತಿಕ ಸಂಘಟನೆಗಳೊಡನೆ ಇರಾಕಿನ ಜೀವನ ವ್ಯವಸ್ಥೆಯಲ್ಲಿ ಹೊಸ ರೂಪತರಲು ಪ್ರಯತ್ನಿಸಿತು. ಆದರೆ ಬ್ರಿಟಿಷರು ತಮ್ಮ ಸೈನ್ಯಬಲ ಬಳಸಿ ತಮ್ಮ ಬೆಂಬಲಿಗನಾಗಿದ್ದ ನೂರಿ ಅಸ್ ಸೈಯದ್‌ನನ್ನು ಅಧಿಕಾರಕ್ಕೆ ತಂದರು. ಅರಬ್ ಲೀಗ್ ಸ್ಥಾಪನೆಯಾಯಿತು. ಮಾಸುಲ್‌ನಲ್ಲಿ ಮೊದಲಬಾರಿಗೆ ತೈಲ ಪತ್ತೆ ಹಚ್ಚಲಾಯಿತು. ಯುದ್ಧಾನಂತರದಲ್ಲಿ ಬ್ರಿಟಿಷರು ಮತ್ತೆ ಈ ಪ್ರದೇಶದ ಮೇಲೆ ಹತೋಟಿ ಸಾಧಿಸಿ ಹಸೀಮಾ ಮನೆತನದ ಫೈಸಲ್‌ನನ್ನು ರಾಜನಾಗಿ ನೇಮಿಸಿತು. ಆದರೆ ಅಸಮರ್ಥರಾದ ಕಾರಣ ಈತ ಹಾಗೂ ಈತನ ಮಗ ಗಾಜಿ ಬಹಳ ಕಾಲ ಅಧಿಕಾರ ನಡೆಸಲಾಗಲಿಲ್ಲ. ಮೆಸಪೊಟೇಮಿಯ ಪ್ರದೇಶದ ಅಸ್ಸೀರಿಯನ್ನರು ಉತ್ತರದ ಕುರ್ದರು ಪ್ರತ್ಯೇಕತೆಗಾಗಿ ಘರ್ಷಣೆಗೆ ದುಮುಕಿದರು.

1944-46ರ ತನಕ ಆಡಳಿತ ನಡೆಸಿದ ಹಸೀಮಾ ಮನೆತನದವರು ಹಾಗೂ ಹಮಾದಿ ಅಲ್ ಪಚಾಚಿ ಸರ್ಕಾರವನ್ನುರುಳಿಸಿ ನೂರಿ ಅಲ್ ಸೈಯದ್‌ನ ಬೆಂಬಲಿಗ ಸೈನಿಕರು ಕ್ಷಿಪ್ರ ಕ್ರಾಂತಿಯ ಮೂಲಕ ಅಧಿಕಾರಕ್ಕೆ ಬಂದರು. ಇರಾಕಿನಲ್ಲಿ ಬ್ರಿಟಿಷ್ ವಿರೋಧಿ ಭಾವನೆಯಿಂದ ಬ್ರಿಟಿಷರು ಒಲ್ಲದ ಮನಸ್ಸಿನಿಂದ ಇರಾಕ್ ರಾಜಕೀಯ ವ್ಯವಸ್ಥೆಯಿಂದ ಹಿಂದೆ ಸರಿದರು. 1948ರಲ್ಲಿ ಜನ್ಮತಳೆದ ಬಾತ್ ಪಕ್ಷ ಇರಾಕಿನಲ್ಲಿ ರಾಷ್ಟ್ರೀಯ ಪ್ರಜ್ಞೆಯ ಕಿಡಿಹೊತ್ತಿಸಿತು. ಜಾತ್ಯತೀತ ಧೋರಣೆಯಿಂದಾಗಿ ಬಹುಬೇಗ ಅರಬ್ಬರ ಮನ ಸೆಳೆಯಿತು. 1955 ಜನವರಿಯಲ್ಲಿ ಬಾಗ್ದಾದ್ ಒಪ್ಪಂದವಾಗಿ ಸೋವಿಯತ್ ಒಕ್ಕೂಟದ ವಿರೋಧಿ ಬಣಕ್ಕೆ ಇರಾಕ್ ವೇದಿಕೆ ಯಾದರು ಸಹ ಹೆಚ್ಚಿನದೇನೂ ಸಾಧಿಸಲಾಗಲಿಲ್ಲ.

1958 ಜುಲೈ 14ರಂದು ಸೈನ್ಯಾಧಿಕಾರಿ ಅಬ್ದುಲ್ ಕರೀಮ್ ಖಾಸಿಂ ಕ್ಷಿಪ್ರಕ್ರಾಂತಿಯ ಮೂಲಕ ಅಧಿಕಾರ ಕಸಿದುಕೊಂಡ. ಎರಡನೆಯ ಫೈಸಲ್ ಹಾಗೂ ಕುಟುಂಬ ಮತ್ತು ವಯಸ್ಸಾಗಿದ್ದ ನೂರಿ ಅಲ್ ಸೈಯದ್‌ನನ್ನು ಹತ್ಯೆಗಯ್ಯಲಾಯಿತು. ಇರಾಕ್ ಆಡಳಿತ ಈಜಿಪ್ಟಿನ ಮಾದರಿಯಂತೆ ರೆವಲ್ಯೂಷನರಿ ಕಮ್ಯಾಂಡ್ ಕೌನ್ಸಿಲ್ ಸ್ಥಾಪಿಸಿಕೊಂಡು ತನ್ನ ವಿರೋಧಿಗಳನ್ನು ಮಟ್ಟಹಾಕಿತು. 1958-63ರ ನಡುವೆ ಖಾಸಿಂ ತನ್ನ ಆಡಳಿತ ಚಾಕಚಕ್ಯತೆ ಯಿಂದ ಬ್ರಿಟಿಷ್‌ರನ್ನು ಇರಾಕ್ ಆಡಳಿತದಿಂದ ದೂರವಿರಿಸಿದ. ಬಾತ್ ಪಕ್ಷ ಸಮರ್ಥವಾಗಿ ಕೆಲಸ ಮಾಡುವುದರ ಮೂಲಕ ವ್ಯಕ್ತಿಗಿಂತ ಪಕ್ಷ ಮುಖ್ಯವೆಂಬುದನ್ನು ಎತ್ತಿಹಿಡಿಯಿತು. 1961ರಲ್ಲಿ ಖಾಸಿಂ ಕುವೈತ್ ಮೇಲೆ ಧಾಳಿ ನಡೆಸಲು ಮುಂದಾದರು ಸಹ ಬ್ರಿಟಿಷರ ಪ್ರಬಲ ವಿರೋಧದಿಂದಾಗಿ ಸಫಲತೆ ಕಾಣಲಿಲ್ಲ. ಇರಾಕ್ ತನ್ನ ಬೆಳವಣಿಗೆಯ ಜೊತೆಯಲ್ಲಿ (ಸಫಲ್ ಅರಬ್) ಗಡಿ ಸಮಸ್ಯೆಯನ್ನು ಬೆಳೆಸುವಂತಾಯಿತು.

ಇರಾಕಿನ ಉತ್ತರ ಭಾಗದಲ್ಲಿ ಕುರ್ದರು ಖಾಸಿಂ ಆಡಳಿತದ ವಿರುದ್ಧ ದಂಗೆಯೆದ್ದರು. ಮುಸ್ತಾಫ್ ಅಲ್ ಬರ್ಜಾನಿ ಗಡಿಪಾರಾದ. ಕುರ್ದರ ದಂಗೆಯನ್ನು ಇರಾನ್ ಹಾಗೂ ಟರ್ಕಿ ಸೈನ್ಯದ ನೆರವಿನೊಂದಿಗೆ ಇರಾಕ್ ತಾತ್ಕಾಲಿಕವಾಗಿ ಶಮನಗೊಳಿಸಿಕೊಂಡಿತು.

1963ರಲ್ಲಿ ಕ್ಷಿಪ್ರಕ್ರಾಂತಿ ನಡೆಸುವುದರ ಮೂಲಕ ಕರ್ನಲ್ ಅಬ್ದುಲ್ ಸಲೀಮ್ ಹರೀಫ್ ಅಧಿಕಾರಕ್ಕೆ ಬಂದ. ಅಧ್ಯಕ್ಷರಾಗಿದ್ದ ಖಾಸಿಂನನ್ನು ಗಲ್ಲಿಗೇರಿಸಲಾಯಿತು. ಇರಾಕಿನಲ್ಲಿ ಅರಬ್ ಸೋಷಲಿಸ್ಟ್ ಪಕ್ಷ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸತತವಾಗಿ ನಡೆದ ಕುರ್ದರ ಘರ್ಷಣೆ, ಸಿರಿಯ, ಈಜಿಪ್ಟ್‌ಗಳ ಹಳಸಿದ ಸಂಬಂಧಗಳಿಂದಾಗಿ ಇರಾಕ್ ತನ್ನ ಅಮೂಲ್ಯವಾದ ಅಪಾರ ಪ್ರಮಾಣದ ಸಂಪತ್ತಿನ ನಾಶಕ್ಕೆ ಈಡಾಯಿತು.

1966ರಲ್ಲಿ ಅಧ್ಯಕ್ಷರಾಗಿದ್ದ ಸಲೀಮ್ ಹರೀಫ್ ಅಪಘಾತ ಒಂದರಲ್ಲಿ ಸಾವನ್ನಪ್ಪಿದರು. ಅವರ ಸ್ಥಾನಕ್ಕೆ ಅವರ ಸಹೋದರ ಅಬ್ದುಲ್ ರಹಮಾನ್ ಹರೀಫ್ ಅಧಿಕಾರಕ್ಕೆ ಬಂದರು. 1967ರಲ್ಲಿ ಸಂಭವಿಸಿದ ಅರಬ್ ಇಸ್ರೇಲಿ ಯುದ್ಧದಲ್ಲಿ ಇರಾಕ್ ತಟಸ್ಥವಾಗಿದ್ದರು ಸಹ ಇಸ್ರೇಲಿನ ನೀತಿಯನ್ನು ಖಂಡಿಸಿತು. ಅರಬ್ ಸೋಷಿಯಲಿಸ್ಟ್ ಪಕ್ಷ ಈ ಘಟನೆಯಿಂದ ತನ್ನ ಜನಪ್ರಿಯತೆ ಕಳೆದುಕೊಂಡಿತು. ಬಾತಿಷ್ಟ ಪಕ್ಷ ತನ್ನ ಸೈದ್ಧಾಂತಿಕ ನಿಲುವುಗಳಿಂದಾಗಿ ಮತ್ತೆ ಜನಮನ್ನಣೆ ಗಳಿಸಿಕೊಂಡಿತು.

1968 ಜುಲೈ 17ರಂದು ಬಾತ್ ಪಕ್ಷದ ನಾಯಕ ಜನರಲ್ ಅಹಮದ್ ಅಲ್ ಬಕರ್ ಹಾಗೂ ಯುವ ನಾಯಕ ಸದ್ದಾಂಹುಸೇನ್ ಕ್ಷಿಪ್ರಕ್ರಾಂತಿಯ ಮೂಲಕ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕ್ರಮವಾಗಿ ಅಧಿಕಾರಕ್ಕೆ ಬಂದರು.

1979 ಜುಲೈ 11 ರಂದು ಬಾತ್ ಪಕ್ಷದ ಅಧ್ಯಕ್ಷರಾಗಿದ್ದ ಅಲ್-ಬಕರ್ ಅನಾರೋಗ್ಯದ ಕಾರಣ ಅಧಿಕಾರ ತ್ಯಜಿಸಿದಾಗ ಉಪಾಧ್ಯಕ್ಷರಾಗಿ ಸದ್ದಾಂ ಹುಸೇನ್ ಇರಾಕಿನ ಅಧ್ಯಕ್ಷ ಹಾಗೂ ಆರ್.ಸಿ.ಸಿ.ಯ ಮುಖ್ಯಸ್ಥರಾಗಿ ಅಧಿಕಾರಕ್ಕೆ ಬಂದ. ಅರಬ್ ಪ್ರಪಂಚದ ಗಟ್ಟಿ ಮನುಷ್ಯ ಎಂದು ಹೆಸರು ಪಡೆದಿದ್ದ ಸದ್ದಾಂ ಹುಸೇನ್ ತನ್ನ ಖಚಿತ ನಿಲುವುಗಳ ಮೂಲಕ ಬಾತ್ ಪಕ್ಷದ ನೇತೃತ್ವದಲ್ಲಿ ಇರಾಕಿನ ಬೆಳವಣಿಗೆಗಾಗಿ ಶ್ರಮಿಸಿದರು. ಅನೇಕ ಜನಪರ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು. ಕಿರ್ಕುಕ್, ಮಾಸುಲ್‌ನಲ್ಲಿ ದೊರೆತ ತೈಲ ಸಂಪತ್ತಿನಿಂದಾಗಿ ಇರಾಕಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತು. ಹಲವಾರು ಕೈಗಾರಿಕೆಗಳು ಸ್ಥಾಪಿತವಾದವು. ಪರ್ಷಿಯನ್ ಖಾರಿ ಒಡೆತನದ ವಿವಾದದಿಂದಾಗಿ 1980-88ರ ತನಕ ಸತತವಾಗಿ ಇರಾಕ್ ಮತ್ತು ಇರಾನ್ ನಡುವೆ ಯುದ್ಧ ಸಂಭವಿಸಿತು. ಈ ವೇಳೆಯಲ್ಲೆ ಉತ್ತರದಲ್ಲಿ ಕುರ್ದ ಸಮುದಾಯದವರು ದಂಗೆಯೆದ್ದರು, ದಂಗೆಯ ನಿಗ್ರಹಕ್ಕೆ ಸದ್ದಾಂ ಸೇನೆ ವಿನಾಶಕಾರಿ ಬಾಂಬ್‌ಗಳನ್ನು ಬಳಸಿ ಸಾವಿರಾರು ಕುರ್ದರನ್ನು ಹತ್ಯೆಗೈಯಿತು. ಇರಾಕಿನ ಆಧುನಿಕ ಇತಿಹಾಸದಲ್ಲಿ ಕುರ್ದರು ಅಪಾರ ಪ್ರಮಾಣದಲ್ಲಿ ಸಾವನ್ನಪ್ಪಬೇಕಾಯಿತು. 1988 ಆಗಸ್ಟ್‌ರಲ್ಲಿ ಇರಾನ್-ಇರಾಕ್ ಯುದ್ಧಕ್ಕೆ ತೆರೆ ಎಳೆಯಲಾಯಿತು. ಯುದ್ಧ ಹಾಗೂ ಕುರ್ದರ ದಂಗೆಯಿಂದ ತೀರಾ ಹದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿ ಹಾಗೂ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸದ್ದಾಂ ಹುಸೇನ್ ತೈಲ ವ್ಯಾಪಾರದಲ್ಲಿ ಇರಾಕಿಗೆ ಹೆಚ್ಚಿನ ಪಾಲು ಕೇಳಿ ಒಪೆಕ್ ಸಭೆಯಲ್ಲಿ ಒತ್ತಾಯ ತಂದಾಗ ಕುವೈತ್ ವಿರೋಧ ವ್ಯಕ್ತಪಡಿಸಿತು. ಅನಿವಾರ್ಯತೆ ಹಾಗೂ ಅಸಹಾಯಕತೆಯಿಂದ ಸದ್ದಾಂ ಹುಸೇನ್ ಕುವೈತ್ ಇರಾಕ್ ಗಡಿಭಾಗದ ತಟಸ್ಥವಲಯದಲ್ಲಿನ ತೈಲವನ್ನು ಹೊರತೆಗೆಯಲು ಮುಂದಾದ. ಇದು ಕುವೈತ್ ಮೇಲಿನ ಧಾಳಿಗೆ ಇರಾಕನ್ನು ಪ್ರಚೋದಿಸಿತು.

1990 ಸೆಪ್ಟೆಂಬರ್ 10 ರಂದು ಇರಾನ್-ಇರಾಕ್ ನಡುವೆ ರಾಯಭಾರಿ ಸಂಬಂಧಗಳು ಮತ್ತೆ ಪ್ರಾರಂಭವಾದವು. ಸ್ವಲ್ಪ ದಿನಗಳ ಕಾಲ ಇರಾಕ್ ಮತ್ತೆ ಆರ್ಥಿಕವಾಗಿ ಚೇತರಿಸಿಕೊಂಡು ಪ್ರಗತಿಯತ್ತ ಹೆಜ್ಜೆಯನ್ನಿಡುತ್ತಿರುವಾಗಲೇ ಸದ್ದಾಂ ಹುಸೇನ್ ಕುವೈತ್ ಮೇಲೆ 1990 ಆಗಸ್ಟ್ 2ರಂದು ಧಾಳಿ ನಡೆಸಿದ. ಅಮೆರಿಕ ಹಾಗೂ ಬ್ರಿಟಿಷ್ ಪಡೆಗಳು ಕುವೈತ್ ಸಹಾಯಕ್ಕೆ ಬಂದು ಇರಾಕನ್ನು ಕುವೈತ್‌ನಿಂದ ಕಾಲ್ತೆಗೆಯುವಂತೆ ಮಾಡಿದವು.

ಅಮೆರಿಕ ಹಾಗೂ ವಿಶ್ವಸಂಸ್ಥೆಯ ಒತ್ತಾಯಕ್ಕೆ ಮಣಿದು ಭದ್ರತಾ ಮಂಡಲಿ ಇರಾಕ್ ದೇಶದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿತು. 1993ರಿಂದ ಜಜ್ಜರಿತಗೊಂಡಿದ್ದ ಯುದ್ಧಾನಂತರದ ಇರಾಕ್‌ನ ಜನಜೀವನ 1994ರ ವಿಶ್ವಸಂಸ್ಥೆಯ ಆರ್ಥಿಕ ದಿಗ್ಬಂಧನದಿಂದ ತೀರಾ ಕುಸಿದು ಹೋಯಿತು. ಜನ ಆಹಾರ, ಔಷಧಿ ಹಾಗೂ ಜೀವನ ಅವಶ್ಯಕ ವಸ್ತುಗಳ ಕೊರತೆಯಿಂದ ನರಳುವಂತಾಯಿತು. ವಿದೇಶಿ ಸಾಲ ಆಂತರಿಕ ಒತ್ತಡಕ್ಕೆ ಸಿಲುಕಿದ ಇರಾಕಿನ ಮೇಲೆ ಅಮೆರಿಕ ಹಾಗೂ ಬ್ರಿಟನ್ ಸುಳ್ಳು ಅಣ್ವಸ್ತ್ರ ನೆಪದಲ್ಲಿ 2002ರಲ್ಲಿ ಧಾಳಿ ನಡೆಸಿ ಸದ್ದಾಂ ಸರ್ಕಾರ ಹಾಗೂ ಬಾತ್ ಪಕ್ಷದ ಆಡಳಿತವನ್ನು ಕಿತ್ತೊಗೆದು ತಾತ್ಕಾಲಿಕ ಸರ್ಕಾರ ನೇಮಿಸಿತು. ಇರಾಕಿನ ಮೇಲೆ ಅಮೆರಿಕ ಹಾಗೂ ಮಿತ್ರ ಪಡೆಯ ಸೈನ್ಯ ಅಧಿಕಾರ ಹೊಂದಿದವು. ಸದ್ದಾಂ ಹುಸೇನ್‌ರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಯಿತು. ಕುರ್ದರ ಮೇಲಿನ ಹತ್ಯೆಯ ಆರೋಪದ ಮೇರೆಗೆ ಸದ್ದಾಂಹುಸೇನ್ ಹಾಗೂ ಅವರ ಸರ್ಕಾರದ ಹಿರಿಯ ಅಧಿಕಾರಿಗಳನ್ನು 2006 ಡಿಸೆಂಬರ್ 30 ರಂದು ಗಲ್ಲಿಗೇರಿಸಲಾಯಿತು.

ಇತಿಹಾಸದುದ್ದಕ್ಕೂ ಆಕ್ರಮಣ, ಕದನ, ದಂಗೆ ಹಾಗೂ ಕ್ಷಿಪ್ರಕ್ರಾಂತಿಗಳ ಮೂಲಕ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸುತ್ತಿದ್ದ ಇರಾಕ್ ದೇಶ ತನ್ನ ಅಭದ್ರವಾದ ಗಡಿಗಳು, ಜಾನಾಂಗೀಯವಾದ ಹಾಗೂ ಇಸ್ಲಾಂ ಧರ್ಮದ ಷಿಯ-ಸುನ್ನಿ ಸಂಘರ್ಷದಲ್ಲಿ ನಲುಗಿಹೋಗಿದೆ. ಯೂಫ್ರಟೀಸ್ ಹಾಗೂ ಟೈಗ್ರೀಸ್ ನದಿಗಳ ಸಮೃದ್ಧ ನೀರು, ಫಲವತ್ತಾದ ಮೆಸಪೊಟೇಮಿಯ ಪ್ರದೇಶ, ಪ್ರಪಂಚದಲ್ಲೇ ತೈಲ ಸಂಪತ್ತಿನ ದೃಷ್ಟಿಯಿಂದ ದ್ವಿತೀಯ ಸ್ಥಾನದಲ್ಲಿದ್ದರೂ ರಾಜಕೀಯ ದೂರಾಲೋಚನೆ ಹಾಗೂ ಸಮರ್ಥ ನಾಯಕತ್ವದ ಕೊರತೆಯಿಂದಾಗಿ ಇಂದಿಗೂ ವಸಾಹತುಶಾಹಿಯ ಶೋಷಣೆಗೆ ಒಳಗಾಗುತ್ತಿರುವ ರಾಷ್ಟ್ರವೆನಿಸಿದೆ. (ಸಿ.ಜಿ.ಎಸ್.)

**ಇರಾನ್:** ಪಶ್ಚಿಮ ಏಷ್ಯದ ಪ್ರಮುಖ ದೇಶಗಳಲ್ಲೊಂದು. ಕ್ಯಾಸ್ಪಿಯನ್ ಸಮುದ್ರದ ಬಳಿ ಇರುವ ಕೆಮೆನ್ ಶಾ ಎಂಬ ಗುಹೆಯಲ್ಲಿನ ಉತ್ಖನನಗಳಿಂದಲೂ ಇರಾನಿನ ಹಲವು ಸ್ಥಳಗಳಲ್ಲಿ ದೊರಕಿರುವ ಶಿಲಾಯುಧಗಳಿಂದಲೂ ಹಳೆಶಿಲಾಯುಗದ ಸಂಸ್ಕೃತಿಗಳು ಇರಾನಿನಲ್ಲಿ ಹರಡಿದ್ದ ವಿಷಯ ತಿಳಿದುಬಂದಿದೆ. ಭಕ್ತಿಯಾರಿ ಪರ್ವತ ಪ್ರದೇಶದಲ್ಲಿನ ತಂಗ್-ಇ-ಪಬ್ಬ ಎಂಬ ಗುಹೆಯಲ್ಲಿನ ಅಗೆತದಿಂದ, ಇರಾನಿನ ಜಾರ್ಮೊ, ಹಸ್ಸುನಾ ಮುಂತಾದೆಡೆಗಳಲ್ಲಿ ಬೇಟೆಗಾರ ಜನ ಅಲ್ಲಲ್ಲಿ ನೆಲೆಗೊಂಡು ನವಶಿಲಾಯುಗದ ಜೀವನ ವಿಧಾನದತ್ತ ಪರಿವರ್ತನೆ ಹೊಂದುತ್ತಿದ್ದ ಕಾಲದ ಸಂಸ್ಕೃತಿಗಳು ಬೆಳಕಿಗೆ ಬಂದಿವೆ. ಈ ಜನ ಕಲ್ಲಿನ ಕೊಡಲಿ ಸುತ್ತಿಗೆ ಮುಂತಾದ ಉಪಕರಣಗಳನ್ನು ಉಪಯೋಗಿಸುತ್ತಿದ್ದರಲ್ಲದೆ, ಕೈಯಲ್ಲಿ ಮಾಡಿದ ಮಡಕೆಗಳನ್ನೂ ಬಳಸುತ್ತಿದ್ದರು.

ಟೆಹರಾನಿನ ದಕ್ಷಿಣಕ್ಕಿರುವ ಸಿಯಾಲ್ಕಿನಲ್ಲಿ ಇರಾನಿನ ಅತ್ಯಂತ ಪ್ರಾಚೀನ ಗ್ರಾಮದ ಅವಶೇಷಗಳಿವೆ. ಇಲ್ಲಿ ಮೊದಲು ಪ್ರ.ಶ.ಪೂ. ಸು. 5ನೆಯ ಶತಮಾನದಲ್ಲಿ ತಂಗಿದ ಜನ (ಸಿಯಾಲ್ಕ್ 1) ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಕ್ರಮೇಣ ಮಣ್ಣಿನ ಗೋಡೆಗಳನ್ನೂ ಕಟ್ಟಲಾರಂಭಿಸಿದರು. ವ್ಯವಸಾಯ ಮತ್ತು ಪಶುಪಾಲನೆ ರೂಢಿಯಲ್ಲಿದ್ದರೂ ಬೇಟೆ ಇನ್ನೂ ಜನರ ಒಂದು ಮುಖ್ಯ ಕಸುಬಾಗಿತ್ತು. ಈ ಕಾಲದಲ್ಲಿ ಹಳೆಯ ರೀತಿಯ ಕಪ್ಪುಬಣ್ಣದ ಮಡಕೆಗಳ ಜೊತೆಯಲ್ಲಿಯೇ ಒಂದು ಹೊಸ ರೀತಿಯ ಚಿತ್ರಿತ ಮಡಕೆಗಳೂ ಬಳಕೆಗೆ ಬಂದವು. ಚಿತ್ರಣದಲ್ಲಿ ಬುಟ್ಟಿಗಳ ಮೇಲ್ಮೈ ಮಾದರಿಯ ನಮೂನೆಗಳು ಸಾಮಾನ್ಯವಾಗಿ

ಕಂಡುಬರುತ್ತವೆ. ಈ ಕಾಲದ ಉಪಕರಣಗಳೆಲ್ಲವೂ ಕಲ್ಲಿನವು. ಕತ್ತರಿಸುವ ಮತ್ತು ಒರೆಯುವ ಸಾಧನಗಳು, ನಯ ಮಾಡಿದ ಕೊಡಲಿ ಇತ್ಯಾದಿಗಳು ಉಪಯೋಗದಲ್ಲಿದ್ದವು. ಬಟ್ಟೆಯ ನೇಯ್ಗೆ ಸಹ ಆಗಲೇ ರೂಢಿಗೆ ಬಂದಿತ್ತು. ಈ ಕಾಲದ ಕೊನೆಯ ಭಾಗದ ಹೊತ್ತಿಗೆ ತಾಮ್ರವೂ ಬೆಳಕಿಗೆ ಬಂತು. ಆದರೆ ಈ ಕಾಲದ ತಾಮ್ರದ ವಸ್ತುಗಳೆಲ್ಲವೂ ಅದುರನ್ನು ಜಜ್ಜಿ ರೂಪಿಸಿದವು ಮಾತ್ರ; ಅದುರನ್ನು ಕರಗಿಸಿ ಎರಕ ಹುಯ್ಯುವ ವಿಧಾನ ಇನ್ನೂ ಪ್ರಚಲಿತ ವಾಗಿರಲಿಲ್ಲ. ಬಣ್ಣಹಾಕಿದ ಕಲ್ಲಿನ ಮತ್ತು ಚಿಪ್ಪಿನ ಉಂಗುರಗಳು, ಆಭರಣಗಳೂ ಉಪಯೋಗದಲ್ಲಿದ್ದವು. ಈ ಕಾಲದಲ್ಲಾಗಲೇ ಕಲಾಸೃಷ್ಟಿಯೂ ಪ್ರಾರಂಭವಾಯಿತೆಂಬುದಕ್ಕೆ ಎಲುಬಿನಲ್ಲಿ ಕೆತ್ತಿದ ಬೊಂಬೆಗಳು ಸಾಕ್ಷಿಗಳಾಗಿವೆ. ಈ ಕಾಲದಲ್ಲಿ ಮೃತರನ್ನು ಮನೆಯ ಒಳಗೆ ಹೂಳುವ ಪದ್ಧತಿಯಿತ್ತು.

ಪ್ರ.ಶ.ಪೂ.4ನೆಯ ಸಹಸ್ರಮಾನದಲ್ಲಿ ತಾಮ್ರ–ಶಿಲಾಯುಗದ ಹಾಗೂ ಕೆಂಪುಬಣ್ಣದ ಮಡಕೆಗಳು ಪ್ರಚಲಿತವಾಗಿದ್ದ ಸಂಸ್ಕೃತಿಗಳು, ಪಶ್ಚಿಮ ಮತ್ತು ನೈರುತ್ಯ ಇರಾನಿನಲ್ಲಿ ಕಂದುಬಣ್ಣದ ಮಡಕೆಗಳು ಪ್ರಚಲಿತವಾಗಿದ್ದ ಸಂಸ್ಕೃತಿಗಳು ಎಂಬ ಎರಡು ಮುಖ್ಯ ವಿಧಗಳನ್ನು ಗುರುತಿಸಲಾಗಿದೆ. ನಾಗರಿಕತೆಯ ಬೆಳವಣಿಗೆಗೆ ಅವಶ್ಯಕವಾದ ಸಾಧನಗಳೆಲ್ಲ ಈ ಕಾಲದಲ್ಲಿಯೇ ರೂಢಿಗೆ ಬಂದವು. ಹಲವು ಉದ್ದೇಶಗಳಿಗಾಗಿ ಉಪಯೋಗಿಸಬಹುದಾದ ನಾನಾ ರೀತಿಯ ಎರಕ ಹೊಯ್ದ ತಾಮ್ರದ ವಸ್ತುಗಳು, ಮಡಕೆಗಳನ್ನು ಮಾಡಲು ಚಕ್ರ, ಅವುಗಳನ್ನು ಸುಡಲು ಆವೆ, ಮನೆ ಕಟ್ಟಲು ಅಚ್ಚಿನಿಂದ ತಯಾರಿಸಿದ ಹಸಿಇಟ್ಟಿಗೆ ಮುಂತಾದವು ಬಳಕೆಗೆ ಬಂದವು. ಈ ಸಂಸ್ಕೃತಿಗಳಿಗೆ ಸಂಬಂಧಿಸಿದ ಮಣ್ಣಿನ ನಗ್ನ ಸ್ತ್ರೀ ಬೊಂಬೆಗಳು ಆ ಕಾಲದ ಧಾರ್ಮಿಕ ನಡೆವಳಿಕೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಮೃತರನ್ನು ಮನೆಯ ಒಳಗೆ ಒಲೆಯ ಬಳಿಯಲ್ಲಿ ಹೂಳುವ ಪದ್ಧತಿ ರೂಢಿಯಲ್ಲಿತ್ತು. ಮಡಕೆಗಳ ಮೇಲೆ ಕಂಡುಬರುವ ಬಣ್ಣದ ಚಿತ್ರಗಳು ಆ ಕಾಲದ ಕಲಾಭಿರುಚಿಯನ್ನು ಪ್ರತಿಬಿಂಬಿಸುತ್ತವೆ. ಮೊದಮೊದಲು ಜ್ಯಾಮಿತಿಕ ನಮೂನೆಗಳು ಉಪಯೋಗದಲ್ಲಿದ್ದರೆ, ಕ್ರಮೇಣ ಪ್ರಾಣಿ ಮತ್ತು ಮನುಷ್ಯನ

ವರ್ಣಚಿತ್ರಿತ ಮಣ್ಪಾತ್ರೆಗಳು

ಸ್ವಾಭಾವಿಕ ಚಿತ್ರಗಳೂ ಅನಂತರ ಅವುಗಳನ್ನೇ ಸೂಚ್ಯಚಿಹ್ನೆಗಳಿಂದ ವ್ಯಕ್ತಪಡಿಸುವ ವಿಧಾನವೂ ಪ್ರಚಲಿತವಾದವು. ಈ ಮಡಕೆಗಳ ಮೇಲಿನ ಚಿತ್ರಗಳಲ್ಲಿ ಕಂಡುಬರುವ ವಸ್ತುಗಳನ್ನು ಅವುಗಳ ಆಕಾರಕ್ಕೆ ಸಮೀಪದ ಸೂಕ್ತ ಚಿಹ್ನೆಗಳಿಂದ ವ್ಯಕ್ತಪಡಿಸುವ ವಿಧಾನದಿಂದ ಮುಂದೆ ಲಿಪಿಯ ಬೆಳವಣಿಗೆಗೆ ಹಾದಿಯಾಯಿತೆಂದು ಕೆಲವರು ಊಹಿಸುತ್ತಾರೆ. ಈ ಕಾಲಕ್ಕೆ ಸಂಬಂಧಿಸಿದ ಅವಶೇಷಗಳನ್ನು ಸಿಯಾಲ್ಕ್, ಸೂಸ, ಸವಾ, ಖೂಮ್, ಗಿಯಾನ್, ಬಕುನ್ ಮುಂತಾದೆಡೆಗಳಲ್ಲಿ ಗುರುತಿಸಲಾಗಿದೆ. ಇದೆಲ್ಲ ಗ್ರಾಮೀಣ ಸಂಸ್ಕೃತಿಗಳು.

ಆದರೆ 4ನೆಯ ಸಹಸ್ರಮಾನದ ಕೊನೆಯ ಭಾಗದಲ್ಲಿಯೇ ಪಕ್ಕದ ಇರಾಕ್ ಪ್ರದೇಶದಲ್ಲಿ ನಗರೀಕರಣದ ಪ್ರಾರಂಭದ ಸೂಚನೆಗಳು ಕಂಡುಬಂದವು. ಇರಾಕಿಗೆ ಸೇರಿದಂತೆಯೇ ಇರುವ ವಾಯವ್ಯ, ಇರಾನ್ ಪ್ರಾಂತದಲ್ಲೂ ಅದೇ ರೀತಿಯ ನಾಗರಿಕತೆ ಅನತಿಕಾಲದಲ್ಲೇ ಬೆಳೆಯಿತು. ಈ ಸಹಸ್ರಮಾನದ ಕೊನೆಯಭಾಗದಲ್ಲಿ ಇರಾನ್ ದೇಶಕ್ಕೆ ಹಲವು ಹೊಸ ಸಂಸ್ಕೃತಿಗಳೂ ಕಾಲಿಟ್ಟವು. ಇವೆಲ್ಲವೂ ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಸ್ಥಳೀಯ ಸಂಸ್ಕೃತಿಗಳೊಡನೆ ಬೆರೆತು ಪ್ರವರ್ಧಮಾನ ಹೊಂದಿದವು. 3ನೆಯ ಸಹಸ್ರಮಾನದ ಇರಾನಿ ಸಂಸ್ಕೃತಿಗಳು ಬಹುಮಟ್ಟಿಗೆ ಸುಮೇರಿಯ ಸಂಸ್ಕೃತಿಗಳಿಂದ ಪ್ರಭಾವಿತವಾಗಿದ್ದಂತೆ ಕಂಡುಬರುತ್ತವೆ. ಈ ಕಾಲದಲ್ಲಿ ಬೆಳೆದ ಈ ಎರಡು ದೇಶಗಳ ವ್ಯಾಪಾರಸಂಬಂಧ ಇದಕ್ಕೆ ಕಾರಣವಿರಬಹುದು. ಇರಾನಿನ ಪಶ್ಚಿಮಭಾಗದ ಎಲಾಮ್ ವಿಭಾಗ ಕೆಲಕಾಲ ಸುಮೇರಿಯದ ರಾಜ್ಯಾಡಳಿತಕ್ಕೆ ಒಳಪಟ್ಟಿತ್ತು. ಈ ಕಾಲದ ಅವಶೇಷಗಳು ಗಿಯಾನ್, ಹಿಸ್ಸಾರ ಮುಂತಾದೆಡೆಗಳಲ್ಲಿ ಸಿಕ್ಕಿವೆ.

ಪ್ರ.ಶ.ಪೂ.2ನೆಯ ಸಹಸ್ರಮಾನದ ವೇಳೆಗೆ ಇರಾನಿನಲ್ಲಿ, ಅದರಲ್ಲೂ ಎಲಾಮ್ ಪ್ರಾಂತದಲ್ಲಿ ನಾಗರಿಕತೆಯೊಂದು ಉಚ್ಛ್ರಾಯಸ್ಥಿತಿಯಲ್ಲಿತ್ತು. ಎಲಾಮ್ ಪ್ರಾಂತದ ಅರಸರು ಸ್ವಲ್ಪ ಕಾಲ ಪಶ್ಚಿಮ ಏಷ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದ ಬ್ಯಾಬಿಲಾನನ್ನೇ ವಶಪಡಿಸಿಕೊಂಡಿದ್ದರು, ಎಲಾಮಿನ ಈ ವೈಭವ ಕಾಲದ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಅವಶೇಷಗಳು ಅಲ್ಲಿನ ರಾಜಧಾನಿಯಾದ ಸೂಸದ ಉತ್ಖನನಗಳಲ್ಲಿ ಬೆಳಕಿಗೆ ಬಂದಿವೆ. ಅಲ್ಲಿ ಸಿಕ್ಕಿರುವ ಎಲಾಮೈಟ್ ಮತ್ತು ಅಕ್ಕೇಡಿಯನ್ ಭಾಷೆ ಮತ್ತು ಲಿಪಿಯ ಶಾಸನಗಳೇ ಇರಾನಿನ ಅತ್ಯಂತ ಪ್ರಾಚೀನ ಲಿಖಿತ ದಾಖಲೆಗಳು. ಪ್ರ.ಶ.ಪೂ. 2ನೆಯ ಸಹಸ್ರಮಾನ ಪಶ್ಚಿಮ ಏಷ್ಯದ ಚರಿತ್ರೆಯಲ್ಲಿ ಆಂದೋಲನದ ಕಾಲ. ಬಹು ಕಾಲದಿಂದ ಬಂದ ರಾಜಕೀಯ ವ್ಯವಸ್ಥೆಗಳ ಕುಸಿತ, ಅನಾಗರಿಕ ಗುಡ್ಡಗಾಡು ಜನಾಂಗಗಳಿಂದ ನಾಗರಿಕ ಪ್ರದೇಶಗಳತ್ತ ವಲಸೆ, ಆಕ್ರಮಣ, ನಾಗರಿಕತೆಗಳ ವಿನಾಶ ಮುಂತಾದುವನ್ನು ಈ ಕಾಲದಲ್ಲಿ ಕಾಣುತ್ತೇವೆ. ಬಹುಶಃ ಈ ಕಾರಣದಿಂದಲೇ ತಿಯಾನ್, ಸಿಯಾಲ್ಕ್ ಮುಂತಾದ ಇರಾನಿನ ಪುರಾತನ ನೆಲೆಗಳಲ್ಲೂ ಹಲವಾರು ವಿನೂತನ ಸಾಂಸ್ಕೃತಿಕ ಅಂಶಗಳು ಇದ್ದಕ್ಕಿದ್ದಂತೆಯೇ ಕಾಣಿಸಿ ಕೊಳ್ಳುತ್ತವೆ. ಇಂಡೋ ಯೂರೋಪಿಯನ್ ಭಾಷೆಯನ್ನಾಡುತ್ತಿದ್ದ ಜನರ ಮೊದಲ ವಲಸೆ ಈ ಕಾಲದಲ್ಲೆ ಆಗಿರಬೇಕು.

ಪ್ರ.ಶ.ಪೂ.2ನೆಯ ಶತಮಾನದ ಕೊನೆಯಲ್ಲಿ ಅಥವಾ 1ನೆಯ ಸಹಸ್ರಮಾನದ ಮೊದಲಲ್ಲಿ ಇರಾನಿನ ಇತಿಹಾಸದಲ್ಲಿ ಎರಡು ಗಮನಾರ್ಹ ಘಟನೆಗಳು ಜರುಗಿದವು. ಇಂಡೊ–ಯುರೋಪಿಯನ್ ಅದರಲ್ಲೂ ಇರಾನೀ ಭಾಷೆಯನ್ನಾಡುತ್ತಿದ್ದ ಜನರ ಪ್ರಭಾವ ಬೆಳೆದುದ್ದು ಒಂದು ಘಟನೆ. ಕಬ್ಬಿಣವನ್ನು ಬಳಸಲಾರಂಭಿಸಿದ್ದು ಇನ್ನೊಂದು ಘಟನೆ. ಕಬ್ಬಿಣದ ಉಪಯೋಗದಲ್ಲಿ ಇವರೇ ಮೊದಲಿಗರೆಂದು ನಿಷ್ಕರ್ಷೆಯಾಗಿ ಹೇಳಲು ಸಾಕಷ್ಟು ಆಧಾರಗಳು ದೊರೆತಿಲ್ಲ. ಪೂರ್ವ ಇರಾನಿನ ಸಿಮಾಲ್ ಪ್ರದೇಶದಲ್ಲಿ ಪ್ರ.ಶ.ಪೂ. 1ನೆಯ ಸಹಸ್ರಮಾನಕ್ಕೆ ಸೇರಿದ ಸ್ಮಶಾನವೊಂದನ್ನು ಅಗೆಯಲಾಗಿದೆ. ಪಶ್ಚಿಮ ಇರಾನಿನ ಗಿಯಾನ್ ನಲ್ಲೂ ಲೂರಿಸ್ಥಾನ್ ಪ್ರದೇಶದಲ್ಲೂ ಈ ಕಾಲದ ನೆಲೆಗಳು ಕಂಡುಬಂದಿವೆ. ಲೂರಿಸ್ಥಾನ್ ಪ್ರದೇಶದ ಹಲವು ಗೋರಿಗಳಲ್ಲಿ ಎರಕಹೊಯ್ದು ನಯ ಮಾಡಿದ ಅನೇಕ ಕಂಚಿನ ಉಪಕರಣಗಳೂ ಕಲಾಕೃತಿಗಳೂ ಸಿಕ್ಕಿವೆ. ಕುಶಿದಷ್ಟ್ ಎಂಬಲ್ಲಿ ಹಲವು ದೊಡ್ಡತಲೆಯ ಗುಂಡುಸೂಜಿಗಳೂ ಧಾರ್ಮಿಕ ಕ್ರಿಯೆಗಳಾಗಿ ಉಪಯೋಗಿಸಲಾಗುತ್ತಿದ್ದ ವಸ್ತುಗಳೂ ದೊರಕಿವೆ. ಅಜರ್‌ಬೈಜಾನ್ ಪ್ರದೇಶದಲ್ಲಿ ಮಿಡಿಯ ಸಾಮ್ರಾಜ್ಯ ಕಾಲದ ಅವಶೇಷಗಳಿವೆ.*

**ಇತಿಹಾಸ:** ಆರ್ಯರ ಭಾಷೆಯನ್ನಾಡುತ್ತಿದ್ದ ಶ್ವೇತವರ್ಣದ ಜನರ ಒಂದು ಪಂಗಡ ಪ್ರ.ಶ.ಪೂ.2500ರ ಸುಮಾರಿಗೆ ಮಧ್ಯ ಏಷ್ಯದಿಂದ ಹೊರಟು ಪರ್ಷಿಯನ್ ಕೊಲ್ಲಿಯ ಹತ್ತಿರ ನೆಲೆಸಿತು ಎಂದು ನಂಬಲಾಗಿದೆ. ಇರಾನ್ ಎಂಬುದು ಆರ್ಯ ಶಬ್ದದ ಪರ್ಯಾಯ ರೂಪ. ಆರ್ಯಭಾಷಿಗಳಾದ ಈ ಪರ್ಷಿಯನ್ನರು, ಅಸ್ಸೀರಿಯ ಸಾಮ್ರಾಜ್ಯ ನಾಶವಾದ ಮೇಲೆ ಪ್ರಶ.ಪೂ.6ನೆಯ ಶತಮಾನದಲ್ಲಿ ಕೈರಸನ ನಾಯಕತ್ವದಲ್ಲಿ ಅಕೆಮೆನಿಡ್ ಸಾಮ್ರಾಜ್ಯವನ್ನು ಕಟ್ಟಿದರು. ಇಲ್ಲಿಂದ ಮುಂದೆ ಒಂದಾದ ಮೇಲೊಂದರಂತೆ ಅನೇಕ ಸಾಮ್ರಾಜ್ಯಗಳು ಇಲ್ಲಿ ಬೆಳೆದು ಆಳಿದವು.

ಏಳನೆಯ ಶತಮಾನದಲ್ಲಾದ ಅರಬ್ ಮುಸ್ಲಿಮರ ಆಕ್ರಮಣ ಇರಾನಿನ ಸ್ವರೂಪವನ್ನೇ ಬದಲಾಯಿಸಿತು. ಅರಬ್ ಸಾಮ್ರಾಜ್ಯತನ್ನೊಂದಿಗೆ ಶಕ್ತಿ ಹಾಗು ಧಾರ್ಮಿಕ ಭಾವನೆ ತಂದಿತು. ಅರಬ್ಬೀ ರಾಜ್ಯಭಾಷೆಯಾಯಿತು. ಅನೇಕ ಪರ್ಷಿಯನ್ನರು ಅಬು ಮುಸ್ಲಿಮರಾದರು. ಇದೇ ಕಾಲಕ್ಕೆ ಎಷ್ಟೋ ಜನ ಇರಾನಿಯನ್ನರು ಜರತುಷ್ಟ್ರ ಧರ್ಮ ಉಳಿಸಿಕೊಳ್ಳಲು ದೇಶವನ್ನು ತ್ಯಜಿಸಬೇಕಾಯಿತು. ಅವರಲ್ಲಿ ಕೆಲವರು ಸೂರತ್, ಮುಂಬಯಿಗೆ ಬಂದು ನೆಲೆಸಿದರು. ಅವರ ವಂಶದವರನ್ನು ನಾವು ಭಾರತದಲ್ಲಿ ಇಂದಿಗೂ ಕಾಣಬಹುದು. ಅವರೇ ಪಾರ್ಸಿಗಳು. ಕೆಲವರು ಅಲ್ಲಿಯೇ ಇದ್ದುಕೊಂಡು ಗುಪ್ತರೂಪದಿಂದ ಜರತುಷ್ಟ್ರ ಧರ್ಮ ಅನುಸರಿಸುತ್ತಿದ್ದರು. ಅವರ ವಂಶಜರು ಇರಾನಿನ ಯಜ್ದ್ ಹಾಗೂ ಕಿರ್ಮಾನ ಪ್ರದೇಶದಲ್ಲಿ ಇಂದಿಗೂ ಇದ್ದಾರೆ. ಅರಬ್ಬರು ಇರಾನನ್ನು ಗೆದ್ದು ಕಲೀಫನ ವಶಕ್ಕೆ ಕೊಟ್ಟರು.

1614ರಿಂದ ಬ್ರಿಟಿಷರು ಇರಾನಿನೊಂದಿಗೆ ವ್ಯಾಪಾರ ಆರಂಭಿಸಿದರು. ಹಾಲೆಂಡ್ ಹಾಗೂ ರಷ್ಯದೊಂದಿಗೆ ವ್ಯಾಪಾರ ಸಂಬಂಧಗಳು ಸ್ಥಾಪಿಸಲ್ಪಟ್ಟವು. ಈ ವ್ಯಾಪಾರದಿಂದಾಗಿ ಇರಾನ್ ಅಭಿವೃದ್ಧಿ ಹೊಂದಿತು. ಆದರೆ ದೇಶ ಕೂಟನೀತಿಯ ಕೇಂದ್ರವಾಯಿತು. ಪದೇ ಪದೇ ಆಫ್ಘನ್ನರ ಹಾಗೂ ರಷ್ಯನರ ಆಕ್ರಮಣಕ್ಕೊಳಗಾಯಿತು. ಇರಾನ್ ಬ್ರಿಟಿಷರ ಹಾಗೂ ರಷ್ಯನರ ನೆಲೆಯಾಯಿತು. ನಿರಂಕುಶ ಶಾಸನದ ವಿರುದ್ಧ ಅತೃಪ್ತಿ ಹೆಚ್ಚಾಗಿ ವಿದ್ರೋಹ ಚಟುವಟಿಕೆಗಳು ಆರಂಭವಾದವು. ಶಫವಿದ್ ಮನೆತನದ ಕೊನೆಯ ಅರಸ ಕರೀಮಖಾನ್ ಝೆಂಡ್ 1750ರಿಂದ 1779ರವರೆಗೆ ಆಳಿದ. ಅನಂತರ ತುರ್ಕಿ ಜಾತಿಯ ಕ್ವಾಜರ ಆಡಳಿತ 1834ರವರೆಗೆ ನಡೆಯಿತು. ಈ ಕಾಲದಲ್ಲಿ ರಷ್ಯನರು ಇರಾನಿನಲ್ಲಿ ತಮ್ಮ ಬಲವನ್ನು ಹೆಚ್ಚಿಸಿ ಕೊಂಡರು. ರಷ್ಯ ಪರ ಮೊಹಮ್ಮದ್ ಷಾ 1834ರಲ್ಲಿ ಪಟ್ಟಕ್ಕೆ ಬಂದ. ಅನಂತರ ಬ್ರಿಟಿಷರು ತಮ್ಮ ಶಕ್ತಿಯನ್ನು ಬೆಳೆಸಿಕೊಂಡರು. ಷಾನ್ ನಿರುಂಕುಶ ಪ್ರಭುತ್ವ 1896ರಲ್ಲಿ ಕೊನೆಗೊಂಡಿತು. 1905ರಲ್ಲಿ ಅಶಾಂತಿ ತಲೆದೋರಿ ಮಧ್ಯಮ ವರ್ಗದವರು ದಂಗೆಯೆದ್ದರು.

1906ರಲ್ಲಿ ಷಾ ಮಜಲಿಸ್ (ಸಂಸತ್ತು) ರಚಿಸಲು ಸಮ್ಮತಿಸಿ, ಅದರಿಂದ ರಚಿತವಾದ ಸಂವಿಧಾನಕ್ಕೆ ಅಂಕಿತ ಹಾಕಿದ. 1908ರಲ್ಲಿ ತೈಲ ಶೋಧವಾದಂದಿನಿಂದ, ಒಡೆತನಕ್ಕಾಗಿ ಆಂಗ್ಲೋ ರಷ್ಯನರ ಕಚ್ಚಾಟ ಹೆಚ್ಚಿತು. ಆರ್ಥಿಕ ಬಿಕ್ಕಟ್ಟೂ ತಲೆದೋರಿತು. ಒಂದನೆಯ ಮಹಾಯುದ್ಧದ ಕಾಲಕ್ಕೆ ಪರ್ಷಿಯ ತಟಸ್ಥವಾಗಿ ಕಂಡರೂ ದೇಶದಲ್ಲಿ ಗುಪ್ತ ಚಟುವಟಿಕೆಗಳು ನಡೆದವು. ದೇಶದಲ್ಲಿ ಅಸ್ಥಿರ ಪರಿಸ್ಥಿತಿ ಏರ್ಪಟ್ಟಿತು. ಬ್ರಿಟನ್ ಸುಧಾರಣೆ ಕೈಗೊಳ್ಳಲು

ಪ್ರಯತ್ನಿಸಿ ವಿಫಲಗೊಂಡಿತು. 1921ರಲ್ಲಿ ರೇಜ಼್ಹಾನನ ನೇತೃತ್ವದಲ್ಲಿ ನಡೆದ ದಂಗೆಯಿಂದ ಸೈನ್ಯ ಪ್ರಭುತ್ವ ಸ್ಥಾಪಿತವಾಯಿತು. 1923ರಲ್ಲಿ ಆತ ಪ್ರಧಾನ ಮಂತ್ರಿಯಾದ. 1925ರಲ್ಲಿ ಷಾನನ್ನು ಉರುಳಿಸಿ ತಾನೇ ರೇಜ಼ಾಪಹ್ಲವಿ ಎಂಬ ಹೆಸರಿನಲ್ಲಿ ಅರಸನೆಂದು ಘೋಷಿಸಿಕೊಂಡ. ದೇಶದಲ್ಲಿ ಅನೇಕ ಸುಧಾರಣೆಗಳನ್ನು ಕೈಕೊಂಡು ಸುಭದ್ರ ಕೇಂದ್ರ ಸರ್ಕಾರವನ್ನು ಸ್ಥಾಪಿಸಿದ. ಆತ ದೇಶವನ್ನು ಆಧುನಿಕಗೊಳಿಸಲು ಪ್ರಯತ್ನಿಸಿದ. 1935ರಲ್ಲಿ ದೇಶದ ಹೆಸರನ್ನು ಪರ್ಷಿಯದ ಬದಲಾಗಿ ಇರಾನ್ ಎಂದು ನಾಮಕರಣ ಮಾಡಿದ. ಅದೇ ವರ್ಷ ತೆಹರಾನ್ ವಿಶ್ವವಿದ್ಯಾಲಯ ವನ್ನೂ ತೆರೆಯಲಾಯಿತು. 1937ರಲ್ಲಿ ಮಹಿಳೆಯರಿಗೆ ಬುರ್ಖಾ ಇಲ್ಲದೆ ಓಡಾಡುವ ಅವಕಾಶ ಕಲ್ಪಿಸಲಾಯಿತು ಹಾಗೂ 1938ರಲ್ಲಿ ಪ್ರಥಮವಾಗಿ ರೈಲು ಮಾರ್ಗ ರಚಿಸಲಾಯಿತು.

ಎರಡನೆಯ ಮಹಾಯುದ್ಧದ ಕಾಲಕ್ಕೆ ಇರಾನ್ ಜರ್ಮನಿಯೊಂದಿಗೆ ಹೊಂದಿದ್ದ ಮಿತ್ರತ್ವದಿಂದಾಗಿ ಬ್ರಿಟಿಷರು ಹಾಗೂ ಸೋವಿಯತರು ಅದನ್ನು ಆಕ್ರಮಿಸಿದರು. ಅರಸ ರಾಜ್ಯವನ್ನು ಮಗ ಮೊಹಮದ್ ರೇಜ಼ಾ ಷಾಗೆ ಬಿಟ್ಟು ಕೊಟ್ಟ; ಅದಕ್ಕೆ ಬ್ರಿಟಿಷರ ಹಾಗೂ ರಷ್ಯನ್ನರ ಒತ್ತಾಯವೇ ಕಾರಣ. ಯುದ್ಧ ಮುಗಿದ ಮೇಲೆ ರಷ್ಯ ಇರಾನಿನ ಉತ್ತರ ಭಾಗದ ಮೇಲೆ ತನ್ನ ಅಧಿಕಾರ ಬೆಳೆಸಿತು. ಅನಂತರ ವಿಶ್ವಸಂಸ್ಥೆಯ ಒತ್ತಾಯದಿಂದ ಸೋವಿಯತ್ ಒಕ್ಕೂಟ ತನ್ನ ಸೈನ್ಯವನ್ನು ಹಿಂತೆಗೆದುಕೊಂಡಿತು. ಈ ಮಧ್ಯೆ ದೇಶದಲ್ಲಿ ರಾಷ್ಟ್ರೀಯ ಭಾವನೆ ಬಲಗೊಂಡಿತು. ಜನ ಸರ್ಕಾರದಲ್ಲಿ ಅತೃಪ್ತಿ ವ್ಯಕ್ತಪಡಿಸಿದರು. ಇದರಿಂದಾಗಿ 1949ರಲ್ಲಿ ಇರಾನಿನ ಮಜಲಿಸ್ ಪುನಃ ಸ್ಥಾಪಿತವಾಗಿ ಚುನಾವಣೆಯ ಅನಂತರ ತನ್ನ ಕಾರ್ಯಾರಂಭಗೊಳಿಸಿತು. ಮುಸಾದಿಕ್ ಪ್ರಧಾನ ಮಂತ್ರಿಯಾದ. 1952ರಲ್ಲಿ ಆಂಗ್ಲೋ–ಇರಾನಿಯನ್ ಆಯಿಲ್ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಿದ. ಅದೊಂದು ಅಂತಾರಾಷ್ಟ್ರೀಯ

ಶವಕುಣಿ, ಅಬ್ಬೈಕ್

ಸಮಸ್ಯೆಯಾಗಿ ಪರಿಣಮಿಸಿತು. ಸಂಯುಕ್ತ ರಾಷ್ಟ್ರ ಸಂಘದಲ್ಲೂ ಈ ಸಮಸ್ಯೆ ಬಗೆಹರಿಯಲಿಲ್ಲ. ಇದರಿಂದ ಇರಾನಿನ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು. ಮುಸಾದಿಕ್‌ನ ಬದಲಾಗಿ ಫಜಲುಲ್ಲಾ ಜಾಹೆದಿಯನ್ನು ಪ್ರಧಾನ ಮಂತ್ರಿಯನ್ನಾಗಿ ಷಾ ನೇಮಿಸಿದ. ಅದೇ ವರ್ಷ ಎಂಟು ಯುರೋಪಿಯನ್ ಕಂಪನಿಗಳೊಂದಿಗೆ ಒಪ್ಪಂದವೊಂದರ ಮೂಲಕ ತೈಲ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಯಿತು. ಅನಂತರ ಷಾ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸ ಲಾರಂಭಿಸಿದರು. ಷಾರ ಇಚ್ಛೆಯ ಮೇರೆಗೆ ದ್ವಿಪಕ್ಷ ಪ್ರಜಾಪ್ರಭುತ್ವ ಸರ್ಕಾರ ರಚಿಸಲು ನಿರ್ಧರಿಸಲಾಯಿತು. ಜನತಾ ಪಕ್ಷ ಹಾಗೂ ರಾಷ್ಟ್ರೀಯ ಪಕ್ಷಗಳು ರಚಿತವಾದವು. 1960ರಲ್ಲಿ ಚುನಾವಣೆ ನಡೆಯಿತು. ಆದರೆ ಈ ಸರ್ಕಾರ ಪದ್ಧತಿ ಅಷ್ಟೊಂದು ಯಶಸ್ಸು ಪಡೆಯಲಿಲ್ಲ. ಆರ್ಥಿಕ ಪ್ರಗತಿ ಹಿನ್ನಡೆ ಕಾಣಲಾರಂಭಿಸಿತು. 1963 ಜನವರಿಯಲ್ಲಿ ಷಾ ಇರಾನಿನ ಆರ್ಥಿಕ ರಂಗದಲ್ಲಿ ಚೇತರಿಕೆ ತರಲು ಅನುವಾಗುವಂತೆ ಆರು ಅಂಶಗಳುಳ್ಳ ಒಂದು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ. ಭೂಸುಧಾರಣೆ, ಜಂಟಿ ಸಹಭಾಗಿತ್ವದ ಕೈಗಾರಿಕೆಗಳು, ಹುಲ್ಲುಗಾವಲು ಹಾಗೂ ಅರಣ್ಯದ ರಾಷ್ಟ್ರೀಕರಣ ಹಾಗೂ ಚುನಾವಣೆ ಸುಧಾರಣೆಯ ಮೂಲಕ ಮಜ್ಲಿಸ್ ಸಂಸತ್ತಿನಲ್ಲಿ ಜನಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ನೀಡುವುದಾಗಿತ್ತು. ಆದರೆ ಈ ಸುಧಾರಣೆಗಳು ಭೂಮಾಲೀಕರು ಹಾಗೂ ಧಾರ್ಮಿಕ ಪ್ರಮುಖರ ಆರ್ಥಿಕ ಹಿತಾಸಕ್ತಿಗೆ ಕುಂದುತರುವಂತಹವುಗಳಾಗಿದ್ದವು. ಅರಣ್ಯ ಹಾಗೂ ಹುಲ್ಲುಗಾವಲುಗಳ ರಾಷ್ಟ್ರೀಕರಣದಿಂದ ಬಖ್ತಿಯಾರಿ ಹಾಗೂ ಇತರೆ ಅಲೆಮಾರಿ ಸಮುದಾಯಗಳು ಮಹಮ್ಮದ್ ರೇಜಾಷಾನ ಆಡಳಿತದ ವಿರುದ್ಧ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು. 1963ರಲ್ಲಿ ಮಹಮ್ಮದ್ ರೇಜಾಷಾ ಜಾರಿಗೆ ತಂದ ಸುಧಾರಣೆಗಳು ದೇಶದ ಪ್ರಗತಿಯ ದೃಷ್ಟಿಯಿಂದ ಪ್ರಾಮುಖ್ಯತೆ ಹೊಂದಿದ್ದರು ಸಹ ಇರಾನಿನ ಅಂದಿನ ಸಮಾಜ ಧಾರ್ಮಿಕತೆಗೆ ಹೆಚ್ಚು ಒತ್ತು ನೀಡಿತ್ತು. ಈಗಾಗಲೇ ಇರಾನಿನಲ್ಲಿ ಜಾರಿಗೊಂಡಿದ್ದ ಕಾರ್ಯಕ್ರಮಗಳನ್ನು ಧಾರ್ಮಿಕ ನಾಯಕರು ತಿರಸ್ಕರಿಸಿದ್ದರು. ಮಹಿಳೆಯರು ಹಾಗೂ ರೈತರ ಪರ ತೆಗೆದುಕೊಂಡ ನಿರ್ಣಯಗಳಿಂದಾಗಿ ಧಾರ್ಮಿಕ ನಾಯಕರು ಹಾಗೂ ಶ್ರೀಮಂತ ಭೂಮಾಲೀಕರು ಒಂದಾಗಿ ಈ ಸುಧಾರಣೆಗಳು ಬಿಳಿಯರನ್ನು (ಪಾಶ್ಚಿಮಾತ್ಯ) ತೃಪ್ತಿಪಡಿಸಲು ತೆಗೆದುಕೊಂಡ ನಿರ್ಣಯಗಳು ಎಂದು ಕರೆದು, ಇದನ್ನು ಶ್ವೇತಾಕ್ರಾಂತಿ ಅಂದರೆ ಪಾಶ್ಚಿಮಾತ್ಯ ವಿರೋಧಿ ಚಳವಳಿ ಎಂಬಂತೆ ಜನತೆಯನ್ನು ಆಡಳಿತದ ವಿರುದ್ಧ ಎತ್ತಿಕಟ್ಟಿದರು.

ಅಯಾತುಲ್ಲಾ ಅಲ್ ಖೋಮೇನಿಯ ಮುಂದಾಳತ್ವದಲ್ಲಿ ಧಾರ್ಮಿಕ ನಾಯಕರು, ಭೂಮಾಲೀಕರು, ಶ್ರೀಮಂತ ವ್ಯಾಪಾರಿವರ್ಗ ಹಾಗೂ ವಿದ್ಯಾರ್ಥಿಗಳು ಬೀದಿಗಿಳಿದು ತಮ್ಮ ಪ್ರತಿಭಟನೆ ವ್ಯಕ್ತಪಡಿಸಲಾರಂಭಿಸಿದರು. ಚಳವಳಿ ದಿನದಿಂದ ದಿನಕ್ಕೆ ಹೆಚ್ಚು ಕಾವು ಪಡೆದುಕೊಂಡಿತು. ರೇಜಾಷಾ ಸವಕ್ ಎಂಬ ಸರ್ಕಾರಿ ಪೋಲಿಸರನ್ನು ಬಳಸಿ ಚಳವಳಿ ಯನ್ನು ಹತ್ತಿಕ್ಕಲು ಪ್ರಯತ್ನ ನಡೆಸಿದರು. ಆದರೆ ಇದು ಸಾವಿರಾರು ಜನರ ಸಾವಿಗೆ ಕಾರಣವಾಯಿತು. ದಿನದಿಂದ ದಿನಕ್ಕೆ ಚಳವಳಿ ಉಗ್ರರೂಪ ಪಡೆದುಕೊಂಡಿತು. 1964ರಲ್ಲಿ ಧಾರ್ಮಿಕ ಮುಂದಾಳು ದೇಶಭ್ರಷ್ಟನಾಗಿ ಫ್ರಾನ್ಸ್‌ಗೆ ಗಡಿಪಾರಾದರೂ ಸಹ ಅಲ್ಲಿಂದಲೇ ಚಳವಳಿಗಾರರಿಗೆ ಕುಮ್ಮಕ್ಕು ನೀಡಿದ. ಇದು 1979ರ ಪ್ರಾರಂಭದ ತನಕ ಉಗ್ರರೂಪ ತಳೆಯಿತು. ಜನತೆಯ ಪ್ರತಿಭಟನೆಯನ್ನು ಎದುರಿಸಲಾರದೆ 1979ರ ಜನವರಿಯಲ್ಲಿ ದೊರೆ ಮಹಮ್ಮದ್ ರೇಜಾಷಾ ದೇಶಪರಿತ್ಯಾಗ ಮಾಡಿ ಈಜಿಪ್ಟ್‌ಗೆ ಹೋದ. ಇರಾನಿಗೆ ವಾಪಸಾದ ಚಳವಳಿಯ ನೇತಾರ ಆಯಾತುಲ್ಲಾ ಅಲ್ ಖೋಮೇನಿ ಇರಾನಿನಲ್ಲಿ ರಾಜಪ್ರಭುತ್ವವನ್ನು ರದ್ದುಗೊಳಿಸಿ ಧಾರ್ಮಿಕ ಪ್ರಭುತ್ವಕ್ಕೆ ನಾಂದಿ ಹಾಡಿದ.

1979ರಿಂದೀಚೆಗೆ ಇರಾನಿನ ರಾಜಕೀಯ ವ್ಯವಸ್ಥೆ ಇಸ್ಲಾಂ ಧಾರ್ಮಿಕ ವ್ಯವಸ್ಥೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಸ್ಲಾಮಿಕ್ ಧಾರ್ಮಿಕ ಮಂಡಳಿ ಷೆರಿಯತ್ ರಾಷ್ಟ್ರದ ಉನ್ನತ ಸ್ಥಾನಮಾನ ಹೊಂದಿದೆ. 1980–88ರ ನಡುವೆ ಇರಾನ್–ಇರಾಕ್ ಯುದ್ಧ ಸಂಭವಿಸಿದ್ದು ಇರಾನಿನ ಆರ್ಥಿಕ ಹಿನ್ನಡೆಗೆ ಕಾರಣವಾಗಿತ್ತು. ದಕ್ಷನಾಯಕತ್ವ ನಿರ್ದಿಷ್ಟ ಗುರಿಯನ್ನು ಹೊಂದಿರುವ ಕ್ರಾಂತಿ ಅನಂತರದ ಸರ್ಕಾರ ಆರ್ಥಿಕ ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ. ಅಬೋಲ್ಹಾಸ್ ಬಾಷಿಸದರ್, ಅಲಿ ಖಮೇನಿ, ಹಸ್ಮಿ ರಫ್ಸಾಂಜಾನಿ, ಅಲಿ ಕಟಾಮಿ ಅನಂತರದಲ್ಲಿ ಆಡಳಿತಕ್ಕೆ ಬಂದಿರುವ ಮುಹಮುದ್ ಅಹ್ಮದಿನಿಜದ್ (2005 ರಿಂದ) ಇರಾನಿನ ಆರ್ಥಿಕ ಪ್ರಗತಿ ಹಾಗೂ ರಾಜಕೀಯ ಬೆಳವಣಿಗೆಯಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದ್ದಾರೆ.

ಇರಾನ್ ದೇಶದ ಪ್ರಮುಖ ಸಂಪನ್ಮೂಲ ಪೆಟ್ರೋಲಿಯಂ ತೈಲ ಹಾಗೂ ನೈಸರ್ಗಿಕ ಅನಿಲ. ಪ್ರಪಂಚದಲ್ಲೆ ಅನಿಲ ದಾಸ್ತಾನಿನಲ್ಲಿ ದ್ವೀತಿಯ ಸ್ಥಾನದಲ್ಲಿದೆ. ಚಾರಿತ್ರಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಇರಾನ್ ಪ್ರಪಂಚದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಪರ್ಸೆಪೊಲೀಸ್, ನಜ್ಜ, ಸೂಸ, ಹಮಾದನ್, ನೀಷಾಪೂರ್‌ನಲ್ಲಿರುವ ಪ್ರಾಚೀನ ಸ್ಮಾರಕಗಳಿಂದಾಗಿ ಹೆಸರುವಾಸಿಯಾಗಿದೆ. (ಎಸ್.ಎನ್.;ಎ.ಎಂ.ಆರ್.;ಸಿ.ಜಿ.ಎಸ್.)

**ಇರ್ವಿನ್ ನಾಲೆ ಚಳವಳಿ:** 1930ರ ದಶಕದಲ್ಲಿ ಮೈಸೂರು ಸರ್ಕಾರದ ವಿರುದ್ಧ ನಡೆದ ರೈತರ ಧರಣಿ. ಮೈಸೂರು ಪ್ರಾಂತದ ಮಂಡ್ಯ ಜಿಲ್ಲೆಯಲ್ಲಿ ನೀರಿನ ಸಮಸ್ಯೆಯನ್ನು ಪರಿಹರಿಸಬೇಕೆಂದು ನಡೆದ ಗಮನಾರ್ಹ ಘಟನೆ. ವಿದ್ಯುತ್ ಉತ್ಪಾದನೆ ಸಲುವಾಗಿ 1902ರಲ್ಲಿ ಮೊದಲ ಬಾರಿಗೆ ಶಿವಸಮುದ್ರದ ನೀರನ್ನು ಬಳಸಲು ಯತ್ನಿಸಲಾಯಿತ್ತಾದರೂ ಬೇಸಗೆಯಲ್ಲಿ ನೀರು ಹೆಚ್ಚು ಸಿಗದ ಕಾರಣ ವಿದ್ಯುತ್ ದೊರೆಯುವುದು ಕಷ್ಟವಾಗಿತ್ತು. ಹೀಗಾಗಿ ಕಾವೇರಿ ನದಿಗೆ ಅಣೆಕಟ್ಟು ಕಟ್ಟುವ ಆಲೋಚನೆ ಮೂಡಿಬಂತು. ಅಂದಿನ ಜಿಲ್ಲಾಧಿಕಾರಿ ಕ್ಯಾಪ್ಟನ್ ಡೆವ್ಸ್ ಕನ್ನಂಬಾಡಿ ಬಳಿ ಅಣೆಕಟ್ಟು ನಿರ್ಮಿಸುವ ಸಂಬಂಧ ನೀಲಿ ನಕಾಶೆ ಸಿದ್ಧಪಡಿಸಿದರೂ ಅದನ್ನು ಕುರಿತ ಪ್ರಸ್ತಾಪಗಳು ನಡೆವ ಮುನ್ನವೇ ಅವನು ಅಪಘಾತವೊಂದರಲ್ಲಿ ಮೃತಪಟ್ಟ.

ಅಣೆಕಟ್ಟಿನ ಪ್ರಯತ್ನ ಅಲ್ಲಿಗೇ ನಿಲ್ಲದೆ ಮುಖ್ಯ ಎಂಜಿನಿಯರ್ ಆಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರ (1912–18) ಮೂಲಕ ಮುಂದುವರಿದು (1909), ಈ ಯೋಜನೆಯ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿದರು. ವಿದ್ಯುತ್ ಪಡೆಯುವ ಸಲುವಾಗಿ ಮೊದಲ ಹಂತದಲ್ಲಿ ನದಿಯಿಂದ ಸು.24 ಮೀ ಎತ್ತರಕ್ಕೆ ಅಣೆಕಟ್ಟು ನಿರ್ಮಿಸಲಾಯಿತು. ಅನಂತರ ಕೃಷಿ ಮತ್ತು ವಿದ್ಯುತ್ ಎರಡೂ ಉದ್ದೇಶಗಳಿಗಾಗಿ ಅಣೆಕಟ್ಟನ್ನು ಸು.36 ಮೀಗೆ ಎತ್ತರಿಸಲಾಯಿತು. ಶಿವಸಮುದ್ರ ವಿದ್ಯುತ್ ಕೇಂದ್ರಕ್ಕೆ ನಿರಂತರವಾಗಿ ನೀರನ್ನು ಪಡೆಯುವುದೇ ಜಲಾಶಯ ನಿರ್ಮಾಣದ ಪ್ರಮುಖ ಉದ್ದೇಶವಾಗಿತ್ತಾದರೂ ಜೊತೆಗೆ ಕೈಗಾರಿಕೆ ಮತ್ತು ಕೃಷಿ ಉದ್ದೇಶಗಳಿಗೆ ಹೆಚ್ಚುವರಿ ನೀರನ್ನು ಪಡೆಯುವ ಆಕಾಂಕ್ಷೆಯೂ ಇತ್ತು.

ಮೊದಲ ಹಂತದ ಕೆಲಸ 1911ರಲ್ಲಿ ಪ್ರಾರಂಭಗೊಂಡು 1915ರಲ್ಲಿ ಪೂರ್ಣಗೊಂಡಿತು. ಮದರಾಸು ಮತ್ತು ಮೈಸೂರು ಸರ್ಕಾರದ ನಡುವಿನ ವಿವಾದದ ಕಾರಣದಿಂದ ಎರಡನೆಯ ಹಂತದ ಕೆಲಸ ನನೆಗುದಿಗೆ ಬಿತ್ತು. 1924ರ ಹೊತ್ತಿಗೆ ಎರಡೂ ಸರ್ಕಾರಗಳ ನಡುವೆ ಒಪ್ಪಂದವೊಂದು ಏರ್ಪಟ್ಟಿತು. ದಿವಾನರಾಗಿದ್ದ ಮಿರ್ಜಾ ಎಂ. ಇಸ್ಮಾಯಿಲ್ (1927–41) 2580ಮೀ ಉದ್ದ ಮತ್ತು 39ಮೀ ಎತ್ತರದ ಅಣೆಕಟ್ಟು 1931ರ ಹೊತ್ತಿಗೆ ನಿರ್ಮಾಣ ಗೊಂಡಿತು. 6835ಚ.ಕಿಮೀ ವರೆಗೂ ಜಲಾಶಯ ಹರಡಿ, 85 ಚ.ಕಿಮೀ ವರೆಗೂ ನೀರು ಮುಳುಗಡೆ ಸಾಧ್ಯತೆಯನ್ನು ಸೃಷ್ಟಿಸಿತ್ತು. 210ಕಿಮೀ ವ್ಯಾಪ್ತಿಯಲ್ಲಿ ನೀರಿನ ಸಂಗ್ರಹ ಪ್ರಮಾಣ 44,827 ಕ್ಯೂಸೆಕ್ಸ್.

ಸರ್ಕಾರಕ್ಕೆ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ ನೀಡುವ ಸಲುವಾಗಿ 1921ರಲ್ಲಿ ಮುಖ್ಯ ಎಂಜಿನಿಯರ್ ಕದಂಬಿ ನೇತೃತ್ವದ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಈ ಯೋಜನೆಯಿಂದ ರೈತರಿಗಷ್ಟೆ ಅಲ್ಲದೆ ರಾಜ್ಯದ ಆರ್ಥಿಕ ಅಭಿವೃದ್ಧಿಗೂ

ಸಹಾಯವಾಗಲಿದೆ ಎಂದು ಸಲಹೆ ನೀಡಿತು. ಅಲ್ಲದೆ ಎತ್ತರದ ಕಾಲುವೆ ನಿರ್ಮಾಣ ಆಗಬೇಕು ಎಂಬುದೂ ಸಮಿತಿಯ ಆಶಯವಾಗಿತ್ತು. ಕೃಷಿ ಉತ್ಪತ್ತಿಯನ್ನು ಉತ್ತಮಗೊಳಿಸಲು ಆವರ್ತನ ಬೆಳೆ ಪದ್ಧತಿಯನ್ನು ಪ್ರಾರಂಭಿಸಲಾಯಿತು.

ಈಗ ವಿಶ್ವೇಶ್ವರಯ್ಯ ನಾಲೆ ಎಂದು ಪ್ರಸಿದ್ಧವಾಗಿರುವ ಇರ್ವಿನ್ ನಾಲೆ ನಿರ್ಮಾಣ ಎಂ.ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ (ಹುಲಿಕೆರೆ ಟನಲ್ – ಮದ್ದೂರು) ಪೂರ್ಣಗೊಂಡಿತು (1931). ಮಂಡ್ಯ ಜಿಲ್ಲೆಯ ಸು.60,000 ಹೆಕ್ಟೇರ್ ವ್ಯಾಪ್ತಿಯಲ್ಲಿ ಕೃಷಿ ಕಾರ್ಯ ಹೆಚ್ಚಿಸುವ ಯೋಜನೆಯೊಂದನ್ನು ರೂಪಿಸಲಾಯಿತು. ಇಂಥ ದೊಡ್ಡ ಸಾಹಸ ಈ ಉಪಖಂಡದಲ್ಲಿಯೇ ಆಗ ಪ್ರಥಮ ಎನ್ನಬಹುದು.

ಸು.5 ಕೋಟಿ ವೆಚ್ಚದ ಹೈಡ್ರೋ ಎಲೆಕ್ಟ್ರಿಕಲ್ ಮತ್ತು ಕೃಷಿ ಸಂಬಂಧಿಯಾದ ಯೋಜನೆಗೆ ಕೃಷ್ಣರಾಜಸಾಗರ ಜಲಾಶಯ ಮೂಲಮಾತೃಕೆಯಾಯಿತು. ಇರ್ವಿನ್ ನಾಲೆ ನಿರ್ಮಾಣದ ವೆಚ್ಚ 2 ಕೋಟಿ. ಈ ವೆಚ್ಚವನ್ನು ಸರಿದೂಗಿಸಲು ಜಲಾನಯನ ಪ್ರದೇಶಗಳ ಫಲಾನುಭವಿ ರೈತರಿಂದ ತೆರಿಗೆ ವಸೂಲು ಮಾಡಲು ಸರ್ಕಾರ ನಿರ್ಧರಿಸಿತು.

ಎಂ.ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಕೃಷ್ಣರಾಜಸಾಗರ ಕಾಮಗಾರಿ ಸಮಿತಿಯು ಪ್ರತಿ ಅರ್ಧ ಹೆಕ್ಟೇರಿಗೆ 90–100 ರೂಪಾಯಿ ವಸೂಲು ಮಾಡಲು ಸಲಹೆ ನೀಡಿತು. ಆದರೆ ರೈತರು 75 ರೂಪಾಯಿ ಮಾತ್ರ ಪಾವತಿಸಲು ಒಪ್ಪಿದರು. ಆದರೆ ಇದನ್ನು ಸರ್ಕಾರ ಒಪ್ಪದೆ ಮಣ್ಣಿನ ಫಲವತ್ತತೆಯನ್ನು ಆಧರಿಸಿ ಪ್ರತಿ ಅರ್ಧ ಹೆಕ್ಟೇರಿಗೆ 100–150 ರೂಪಾಯಿ ಶುಲ್ಕವನ್ನು ವಿಧಿಸಿ, ಪ್ರತಿ ಅರ್ಧ ಹೆಕ್ಟೇರಿಗೆ 10 ರೂಪಾಯಿಯಂತೆ ನೀರಿನ ಶುಲ್ಕವನ್ನು ನಿಗಧಿಗೊಳಿಸಿತು.

ಇರ್ವಿನ್ ನಾಲೆ ವ್ಯಾಪ್ತಿಯ ರೈತರು ಈ ಸಂಗತಿಯನ್ನು ಶಾಸನ ಸಭೆಯ ಗಮನಕ್ಕೆ ತಂದರಾದರೂ ಪರಿಹಾರ ದೊರೆಯದೆ ಶಾಸನ ಸಭೆಯ ಸದಸ್ಯರ ಬಗ್ಗೆ ಅಸಮಾಧಾನ ಗೊಂಡರು. ರೈತ ಮುಖಂಡರಾದ ಇಂಡವಾಳು ಎಚ್.ಹೊನ್ನಯ್ಯ, ಹೊನಗಾನಹಳ್ಳಿಯ ಕೆ.ಪುಟ್ಟಣ್ಣಯ್ಯ ಮತ್ತು ಎಚ್.ಕೆ.ವೀರಣ್ಣಗೌಡರ ನೇತೃತ್ವದಲ್ಲಿ ಸಂಘವೊಂದನ್ನು ರಚಿಸಿಕೊಂಡ ರೈತರು ಬೆಂಗಳೂರಿನಲ್ಲಿ ದಿವಾನರನ್ನು ಭೇಟಿ ಮಾಡಿದರು (1931). ಆದರೆ ಪ್ರಯೋಜನ ದೊರೆಯದ ಪರಿಣಾಮವಾಗಿ ಸು. ನಾಲ್ಕು ಸಾವಿರಕ್ಕೂ ಹೆಚ್ಚು ರೈತರು ಬೆಂಗಳೂರಿನಲ್ಲಿ 1931 ಡಿಸೆಂಬರ್ 31ರಂದು ವೀರಣ್ಣಗೌಡರ ನೇತೃತ್ವದಲ್ಲಿ ಜಾಥಾ ನಡೆಸಿ 2½ ಕಿಮೀ ಉದ್ದಕ್ಕೂ ಮಾನವ ಸರಪಳಿಯನ್ನು ನಿರ್ಮಿಸಿದರು. ಕೊನೆಗೆ ಅಠಾರ ಕಚೇರಿಯಲ್ಲಿ ರೈತರು ನೆರೆದರು. 1932 ಜನವರಿ 4ರಂದು ವೀರಣ್ಣಗೌಡರ ಮನವಿ ಮೇರೆಗೆ ದಿವಾನರು ಧರಣಿ ನಿರತರ ಭೇಟಿಗೆ ಒಪ್ಪಿದರು. ರೈತರು 14 ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಿದರೂ ಅದರಲ್ಲಿ ಕೆಲವನ್ನು ಮಾತ್ರ ಈಡೇರಿಸಲು ದಿವಾನರು ಒಪ್ಪಿದರು. ರೈತರಿಗೆ ನೀರಿನ ಪೂರೈಕೆ ಅಷ್ಟೇನೂ ಸಮಾಧಾನಕಾರಿಯಾಗಿಲ್ಲ ಎಂಬುದು ಸರ್ಕಾರಕ್ಕೆ ಮನವರಿಕೆಯಾಯಿತು. ಈ ನಡುವೆಯೂ ರೈತರು ತಮ್ಮ ಪಾಲಿನ ಕೊಡುಗೆಯನ್ನು ಸಲ್ಲಿಸಲು ನಿಗದಿ ಮಾಡಲಾಗಿದ್ದ 10 ವರ್ಷದ ಗಡುವನ್ನು 12 ವರ್ಷಕ್ಕೆ ಏರಿಸಲಾಯಿತು. ಮೊದಲ ನಾಲ್ಕು ವರ್ಷ ಅವರು 1/10 ಭಾಗದಷ್ಟನ್ನು ಮಾತ್ರ ಸಲ್ಲಿಸಬೇಕಾಗಿತ್ತು. ಉಳಿದದ್ದನ್ನು 8 ವರ್ಷಗಳ ಅವಧಿಯಲ್ಲಿ ಬಡ್ಡಿರಹಿತವಾಗಿ ಸಲ್ಲಿಸಬಹುದಾಗಿತ್ತು.

ಸಮಾಧಾನವಾಗದ ರೈತರು ಹಲವು ಸಭೆ ನಡೆಸಿ ಸಮಸ್ಯೆಗಳ ಬಗ್ಗೆ ಚರ್ಚಿಸಿದರು. 1932ರಲ್ಲಿ ವೀರಣ್ಣಗೌಡರು ರೈತರ ಸಭೆ ನಡೆಸಿದ್ದನ್ನು ಮನಗಂಡ ಸರ್ಕಾರ 1 ತಿಂಗಳ ಕಾಲ ಯಾವುದೇ ಸಭೆಗಳನ್ನು ನಡೆಸಬಾರದೆಂದು ಜಿಲ್ಲಾ ದಂಡಾಧಿಕಾರಿಗಳ ಮೂಲಕ ಆದೇಶ ಹೊರಡಿಸಿತು. 1932ರ ಜುಲೈನಲ್ಲಿ ದಿವಾನರು ರೈತರನ್ನು ಭೇಟಿ ಮಾಡಿದರು. ಸರ್ಕಾರ ಭೂಮಿಯನ್ನು ಮೂರು ರೀತಿಯಲ್ಲಿ ವಿಂಗಡಿಸಿತ್ತು. ಆದರೆ ಕೃಷಿ ಕೈಗೊಳ್ಳಲು ರೈತರು ನಿರಾಕರಿಸಿ ಎರಡೇ ರೀತಿ ವಿಂಗಡಿಸಿ ಒಂದರಲ್ಲಿ ನೀರಾವರಿ ಬೆಳೆ, ಇನ್ನೊಂದರಲ್ಲಿ ತೋಟಗಾರಿಕೆ ಬೆಳೆಗೆ ಅವಕಾಶ ಕಲ್ಪಿಸಬೇಕೆಂದೂ ಆಗ್ರಹಿಸಿದರು. ಆದರೆ ರೈತರ ಬೇಡಿಕೆಗೆ ದಿವಾನರು ಒಪ್ಪಲಿಲ್ಲ.

ರೈತರು ತಮ್ಮ ಬೇಡಿಕೆ ಈಡೇರಿಕೆಗಾಗಿ ಚಳವಳಿಯನ್ನು ಮುಂದುವರೆಸಿದರಲ್ಲದೆ ಕೃಷಿಗೆ ನೀರನ್ನು ಬಳಸಿಕೊಳ್ಳಲಿಲ್ಲ. ಕ್ರಮೇಣ ಸರ್ಕಾರ ನಿಯಮಗಳನ್ನು ಸಡಿಲಿಸಿದರಿಂದ ರೈತರು ಜಮೀನಿಗಿಳಿದರು. ಪ್ರತಿಭಟನೆ ನಿಧಾನಕ್ಕೆ ಕೊನೆಗೊಂಡಿತು. ತಮ್ಮ ಸಮಸ್ಯೆಗಳನ್ನು ದಿವಾನರು ಮತ್ತು ಅಧಿಕಾರಿಗಳು ಅರ್ಥ ಮಾಡಿಕೊಳ್ಳದೇ ಇದ್ದುದು ರೈತರಿಗೆ ತೀವ್ರ ಅಸಮಾಧಾನ ತಂದಿತ್ತು. ಸರ್ಕಾರದ ವಿರುದ್ಧ ರೈತರೆಲ್ಲ ಒಟ್ಟಾಗಿ ನಿಂತದ್ದು ಆ ದಿನಗಳಲ್ಲಿ ವಿಶೇಷವಾಗಿತ್ತು. ಈ ಚಳವಳಿಯು ಮುಂದಿನ ಹೋರಾಟಕ್ಕೆ ಪ್ರೇರಣೆ ಒದಗಿಸಿತೆನ್ನಬಹುದು.

(ಎಂ.ಎಸ್.)

**ಇಸಾಂಪುರ:** ಗುಲ್ಬರ್ಗ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಹುಣಸಗಿ–ಬೈಚಬಾಳು ಬಯಲುಗಳಲ್ಲಿ ಇರುವ ಆದಿಹಳೆಶಿಲಾಯುಗದ ಅಶೂಲಿಯನ್ ಸಂಸ್ಕೃತಿಯ 200 ವಸತಿ ನೆಲೆಗಳ ಪೈಕಿ ಒಂದು. ಹುಣಸಗಿ ಬಯಲಿನ ವಾಯವ್ಯ ಮೂಲೆಯಲ್ಲಿರುವ ಈ ವಸತಿನೆಲೆಯಲ್ಲಿ ಕೆ.ಪದ್ದಯ್ಯನವರು 1997–2000ದವರೆಗೆ ವ್ಯವಸ್ಥಿತ ಭೂಸರ್ವೇಕ್ಷಣೆ ಮತ್ತು ಸತತ ಉತ್ಖನನ ನಡೆಸಿದರು. ಇದು ಪ್ರಾಚ್ಯವಿಶ್ವದ ಅತಿದೊಡ್ಡ ಮತ್ತು ಉತ್ತಮ ಸ್ಥಿತಿಯಲ್ಲಿರುವ ಆದಿಹಳೆಶಿಲಾಯುಗದ ವಸತಿನೆಲೆಗಳಲ್ಲೊಂದು ಎಂಬ ಸಂಗತಿ ಈ ಸಂಶೋಧನೆಯಿಂದ ಹೊರಬಂದಿದೆ.

ಇಲ್ಲಿನ ಭೂಪರಿಸರ ನೈಸರ್ಗಿಕವಾಗಿ ಸವೆದ ಸುಣ್ಣಕಲ್ಲಿನ ವಿವಿಧಾಕಾರದ ಚಪ್ಪಡಿಕಲ್ಲು ಮತ್ತು ಬಂಡೆಗಲ್ಲುಗಳಿಂದ ಕೂಡಿರುವುದು ಪರೀಕ್ಷೆ ಗುಂಡಿಗಳಲ್ಲಿ ಕಂಡುಬಂದಿದೆ. ತಮ್ಮ ದೈನಂದಿನ ಕೆಲಸಗಳಿಗೆ ಬೇಕಾಗುವ ಉಪಕರಣಗಳಿಗೆ ಉಪಯೋಗವಾಗುವಂತಹ ಈ ಚಪ್ಪಡಿಕಲ್ಲುಗಳು ಆದಿಮಾನವರನ್ನು ಆಕರ್ಷಿಸಿರುವುದರಲ್ಲಿ ಸಂದೇಹವೇ ಇಲ್ಲ. ಈ ಜಾಗವನ್ನು ನೆಲೆಯಾಗಿ ಆಯ್ದುಕೊಂಡ ಮತ್ತೊಂದು ಕಾರಣವೆಂದರೆ ಇದರ ಹತ್ತಿರದಲ್ಲಿಯೇ ಹರಿಯುತ್ತಿದ್ದ ಸಣ್ಣ ಹಳ್ಳ. ಈ ಹಳ್ಳ ಎಂದೋ ಬತ್ತಿಹೋಗಿದ್ದು ಈಗ ಪುರಾತನ ಹರಿವಿನ ರೂಪದಲ್ಲಿ ಮಾತ್ರ ಉಳಿದಿದೆ. ಈ ಸ್ಥಳದಿಂದ ಇಡಿಯ ಬಯಲು ಪರಿಸರವನ್ನು ಒಂದೇ ನೋಟದಲ್ಲಿ ಕಾಣಬಹುದು. ಹೀಗಾಗಿ ಗುಂಪಿನ ಸದಸ್ಯರ ಮತ್ತು ಕಾಡುಪ್ರಾಣಿಗಳ ಚಲನವಲನಗಳ ಮೇಲೆ ನಿಗವಿಡಲು ಇದು ಪ್ರಶಸ್ತ ಸ್ಥಳ.

ವಿಸ್ತಾರವಾದ ಈ ವಸತಿನೆಲೆಯಲ್ಲಿ ಒಟ್ಟು 159 ಚ.ಮೀ ಜಾಗದಲ್ಲಿ 5 ಗುಂಡಿಗಳನ್ನು ಅಗೆಯಲಾಯಿತು. ಈ ಮೂಲಕ 20–30 ಸೆಂಮೀ ದಪ್ಪದ, ಸುಸ್ಥಿತಿಯಲ್ಲಿರುವ ಅಶೂಲಿಯನ್ ಸಾಂಸ್ಕೃತಿಕ ಪದರವನ್ನು ಹೊರತೆಗೆಯಲಾಯಿತು. ಕಂದುಬಣ್ಣದ ಸುಣ್ಣಮಿಶ್ರಿತ ಹೂಳು ಮಣ್ಣಿನಲ್ಲಿ ಅಶೂಲಿಯನ್ ಶಿಲಾವಶೇಷಗಳು ಬೆರೆತು ಈ ಪದರ ಉಂಟಾಗಿ ಕಾಲಕ್ರಮೇಣ ಗಟ್ಟಿಗೊಂಡಿದೆ. ಈ ಪದರ 10–50 ಸೆಂಮೀ ದಪ್ಪದ ಕರಿಹೂಳುಮಣ್ಣಿನಿಂದ ಮುಚ್ಚಲ್ಪಟ್ಟಿದೆ. ವಸತಿನೆಲೆಯ ಬಗ್ಗೆ ಉತ್ಖನನದಿಂದ ಒದಗಿಬಂದ ಮಾಹಿತಿ ಹೀಗಿದೆ:

1. ಈ ವಸತಿನೆಲೆಯ ಒಟ್ಟು ವಿಸ್ತೀರ್ಣ 0.75 ಹೆ. ಇದನ್ನು 4 ಉಪ–ನೆಲೆಗಳನ್ನಾಗಿ ವಿಂಗಡಿಸಬಹುದು. ಪ್ರತಿ ಉಪನೆಲೆ 500–700 ಚ.ಮೀ ಜಾಗದಲ್ಲಿ ವ್ಯಾಪಿಸಿದೆ. ಎಲ್ಲ ಉಪ–ನೆಲೆಗಳಲ್ಲಿ ಮೂಲಶಿಲೆ, ತ್ಯಾಜ್ಯವಸ್ತು, ಸಿದ್ಧಉಪಕರಣಗಳು ಮತ್ತು ಚರ್ಟ್, ಬಸಾಲ್ಟ್ ಹಾಗೂ ಕ್ವಾರ್ಟ್ಜೈಟ್‌ಗಳ ಸುತ್ತಿಗೆಕಲ್ಲುಗಳು ಹೇರಳವಾಗಿವೆ.

2. ಈ ನೆಲೆ ಪ್ರಮುಖವಾದ ಕಲ್ಲಿನ ಆಕರವಾಗಿತ್ತು. ಇಲ್ಲಿ ನೈಸರ್ಗಿಕವಾಗಿ ಸವೆದ ಸುಣ್ಣಕಲ್ಲಿನ ಚಪ್ಪಡಿಗಳನ್ನು ಉಪಕರಣಗಳಿಗೆ ತಕ್ಕ ಆಕಾರ ಅಳತೆಯಲ್ಲಿ ಒಡೆದು ತೆಗೆಯಲಾಗುತ್ತಿತ್ತು. ಅಷ್ಟೇ ಅಲ್ಲದೆ ಇಲ್ಲಿ ಉಪಕರಣಗಳ ತಯಾರಿಕೆಯೂ ಭಾರಿ ಪ್ರಮಾಣದಲ್ಲಿ ನಡೆಯುತ್ತಿತ್ತು.

ಆದಿ ಹಳೆಶಿಲಾಯುಗ ಸಂಸ್ಕೃತಿಯ ನೆಲೆಯ ಉತ್ಖನನ

3. ಒಂದೆರಡು ಗುಂಡಿಗಳಲ್ಲಿ ದನ ಮತ್ತು ಜಿಂಕೆ ಜಾತಿಯ ಪ್ರಾಣಿಗಳ ಹಲ್ಲು ಮತ್ತು ಮೂಳೆಯ ತುಣುಕುಗಳು ಹಾಗೂ ಆಮೆಯ ಚಿಪ್ಪಿನ ಚೂರುಗಳು ಅಶೂಲಿಯನ್ ಅವಶೇಷಗಳೊಂದಿಗೆ ಸಿಕ್ಕಿವೆ. ಇವು ಆಹಾರ ಸಂಸ್ಕರಣೆ ಮತ್ತು ಬಳಕೆಯ ಕುರುಹುಗಳು.

4. ಒಂದನೆಯ ಉಪನೆಲೆಯಲ್ಲಿನ ಗುಂಡಿಯೊಂದರಲ್ಲಿ ಮೂಲಶಿಲೆ, ದೊಡ್ಡಗಾತ್ರದ ಚಕ್ಕೆ, ಸಿದ್ಧಉಪಕರಣ, ಸುತ್ತಿಗೆಕಲ್ಲು ಮತ್ತು ತ್ಯಾಜ್ಯ ಚಕ್ಕೆಚೂರುಗಳಿಂದ ಕೂಡಿದ 7 ಪ್ರತ್ಯೇಕ ಸಂಗ್ರಹಗಳನ್ನು ಗುರುತಿಸಲಾಯಿತು. ಪ್ರತಿಯೊಂದು ಸಮುಚ್ಚಯದಲ್ಲಿ ಸುಣ್ಣಕಲ್ಲಿನ ಅಗಲವಾದ ಚಪ್ಪಡಿಗಳ ಹಾಸು ಇರುವುದು ಆಶ್ಚರ್ಯಕರ. ಉಪಕರಣಗಳ ತಯಾರಕರು ಇವನ್ನು ಕೂರುವ ಮಣೆಗಳಾಗಿ ಉಪಯೋಗಿಸಿದ್ದಿರಬೇಕು.

ಉತ್ಖನನದಲ್ಲಿ 15,000ಕ್ಕೆ ಮಿಗಿಲಾಗಿ ಕಲ್ಲಿನ ಉಪಕರಣಗಳು ಸಂಗ್ರಹಿಸಲ್ಪಟ್ಟಿವೆ. ಉಪಕರಣ ತಯಾರಿಕೆಗೆ ಸಂಬಂಧಿಸಿದ ಅನೇಕ ಹೊಸ ವಿಷಯಗಳು ಇದರಿಂದ ತಿಳಿದು ಬಂದಿವೆ. ಸುಣ್ಣಕಲ್ಲಿನ ಯುಕ್ತ ಚಪ್ಪಡಿಗಳನ್ನು ಆಯ್ದು ಬಳಿಕ ಅವುಗಳ ಮೊನಚಾದ ತುದಿ ಮತ್ತು ಓರೆಕೋರೆಯಾದ ಮೇಲ್ಮೈಯನ್ನು ತರಿದು ಒಂದು ರೂಪಕ್ಕೆ ಮೊದಲಿಗೆ ತರಲಾಗುತ್ತಿತ್ತು. 2ನೆಯ ಹಂತದಲ್ಲಿ ಈ ಚಪ್ಪಡಿಗಳಿಂದ ದೊಡ್ಡದಾದ (20–25 ಸೆಂಮೀ) ಚಕ್ಕೆ ಅಥವ ಹಲ್ಲೆಗಳನ್ನು ತೆಗೆಯಲಾಗುತ್ತಿತ್ತು. ತರುವಾಯ ಅಲ್ಲೊಂದು ಇಲ್ಲೊಂದು ಸಣ್ಣಚಕ್ಕೆಗಳನ್ನು ತೆಗೆಯುವ ಮೂಲಕ ಈ ದೊಡ್ಡಚಕ್ಕೆಗಳನ್ನು ಚೂರಿಯಾಕಾರದ ಮತ್ತು ಕೊಚ್ಚುವ ಉಪಕರಣಗಳಾಗಿ ಪರಿವರ್ತಿಸಲಾಗುತ್ತಿತ್ತು. ಕೆಲವೊಮ್ಮೆ ದೊಡ್ಡ ಚಕ್ಕೆಗಳಿಂದ ಕ್ರಮಬದ್ಧವಾಗಿ ಅನೇಕ ಸಣ್ಣಚಕ್ಕೆಗಳನ್ನು ತೆಗೆದು ಕೈಗೊಡಲಿ, ಕಡುಗತ್ತಿ ಮತ್ತು ದ್ವಿಮುಖ ಉಪಕರಣಗಳನ್ನು ತಯಾರುಮಾಡಲಾಗಿದೆ. ತೆಳುವಾದ ಚಪ್ಪಡಿಗಳಿಂದ ನೇರವಾಗಿ ದ್ವಿಮುಖ ಉಪಕರಣಗಳನ್ನು ತಯಾರಿಸಿದ ನಿದರ್ಶನಗಳೂ ಇವೆ.

ಇಸಾಂಪುರದ 5-6 ಕಿಮೀ ಪರಿಧಿಯೊಳಗೆ ಇದೇ ಸಂಸ್ಕೃತಿಗೆ ಸೇರುವ 10 ಅತಿ ಸಣ್ಣ ವಸತಿ ಅಥವಾ ಉಪಕರಣ ನೆಲೆಗಳಿವೆ. ಈ ದೃಷ್ಟಿಯಿಂದ ಇಸಾಂಪುರದ ನೆಲೆ ಆದಿಮಾನವನ ಕೇಂದ್ರ ವಸತಿನೆಲೆಯೂ ಶಿಲೋಪಕರಣ ಕಾರ್ಯಾಗಾರವೂ ಆಗಿರುವ ಸಾಧ್ಯತೆ ಇದೆ. ಈ ನೆಲೆಯನ್ನು ಕೇಂದ್ರವಾಗಿಟ್ಟುಕೊಂಡು ಆದಿಮಾನವರು ಸುತ್ತಮುತ್ತಲಿನ ಪ್ರದೇಶದಲ್ಲಿ ಚಿಕ್ಕಗುಂಪುಗಳಲ್ಲಿ ಆಹಾರಾದಿಗಳಿಗಾಗಿ ದಿನನಿತ್ಯ ಅಲೆದಾಡಿಕೊಂಡು ಬದುಕು ನಡೆಸಿದ್ದಿರಬಹುದು. ಇಲ್ಲಿಯ ಅವಶೇಷಗಳಿಂದ ನಿರ್ಣಯಿಸಲ್ಪಟ್ಟ ಕಾಲಮಾನ ಇಸಾಂಪುರದ ಮಹತ್ತ್ವವನ್ನು ಮತ್ತಷ್ಟು ಹೆಚ್ಚಿಸಿದೆ. ಬೋಸ್ಟನ್ನಿನ ವಿಲಿಯಮ್ಸ್ ಕಾಲೇಜಿನಲ್ಲಿ ಕಾಡುದನದ ಹಲ್ಲಿನ 3 ತುಣುಕುಗಳನ್ನು ಇ.ಎಸ್.ಆರ್ (ಎಲೆಕ್ಟ್ರಾನ್ ಸ್ಪಿನ್ ರೆಸೊನೆನ್ಸ್) ಕಾಲನಿರ್ಣಯ ವಿಧಾನಕ್ಕೆ ಒಳಪಡಿಸಿದಾಗ ಇವು ಸು.1.2 ದಶಲಕ್ಷ ವರ್ಷಗಳ ಕಾಲಮಾನದವು ಎಂಬ ಸಂಗತಿ ಖಚಿತವಾಯಿತು. ಇದರೊಂದಿಗೆ ಇಸಾಂಪುರ ಭಾರತದ ಅತ್ಯಂತ ಪ್ರಾಚೀನ ವಸತಿನೆಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. (ಪಿ.ಕೆ.)

**ಇಸಿಲ:** ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿಯ ಅಶೋಕನ ಶಾಸನಗಳಲ್ಲಿ ಉಲ್ಲೇಖಿಸಿರುವ ಒಂದು ನಗರ. ಇದರ ಪೂರ್ವಕ್ಕೆ ಚೌಡೇಶ್ವರಿ ಕೆರೆ ಮತ್ತು ಕೊಪ್ಪ ಗುಡ್ಡ, ಉತ್ತರಕ್ಕೆ ಹಗರಿ ಹೊಳೆ, ಪಶ್ಚಿಮಕ್ಕೆ ಎಮ್ಮೆತಮ್ಮನ ಗುಂಡು ಮತ್ತು ಅಕ್ಕತಂಗಿ ಕೆರೆ, ದಕ್ಷಿಣಕ್ಕೆ ಬ್ರಹ್ಮಗಿರಿ ಬೆಟ್ಟ (ಈ ಬೆಟ್ಟದಲ್ಲಿರುವ ಗುಹೆಗಳಲ್ಲಿ ಪ್ರಾಗಿತಿಹಾಸ ಪೂರ್ವಕಾಲದ ಮಾನವನಿದ್ದುದರ ಕುರುಹುಗಳಿವೆ). ಮೌರ್ಯ ಸಾಮ್ರಾಜ್ಯದ ದಕ್ಷಿಣದ ರಾಜಧಾನಿಯಾಗಿದ್ದ ಸುವರ್ಣಗಿರಿಯಿಂದ ಈ ನಗರಕ್ಕೆ ರಾಜಶಾಸನವನ್ನು ಇಸಿಲ ಮಹಾಮಾತ್ರರಿಗೆ ತರಲಾಯಿತೆಂದು ಇವುಗಳಲ್ಲಿ ಹೇಳಿರುವುದರಿಂದ ಈ ಪ್ರದೇಶದಲ್ಲೆ ಇಸಿಲವಿದ್ದಿರಬೇಕೆಂದು ಊಹೆ. ಇಲ್ಲಿ ಉತ್ಖನನವನ್ನು 1942 ಮತ್ತು 1947ರಲ್ಲಿ ನಡೆಸಲಾಯಿತು. ಇದರಿಂದ ಕನಿಷ್ಠ ನವ ಶಿಲಾಯುಗದಿಂದ ಆದಿ ಇತಿಹಾಸಕಾಲದ ಅಂತ್ಯದವರೆಗೆ ಜನವಸತಿ ಇದ್ದುದು ಮತ್ತು ನವ ಶಿಲಾಯುಗದ ಹಂತದಿಂದ ಆದಿ ಇತಿಹಾಸಕಾಲದ ನಗರವಾಗಿ ಬೆಳೆದದ್ದು ತಿಳಿದುಬಂದಿದೆ. ಹಿಂದೆ ಒಂದು ಸಾಮಾನ್ಯ ಗ್ರಾಮವಾಗಿದ್ದ ಇಸಿಲ ಅಶೋಕನ ಕಾಲಕ್ಕಾಗಲೆ ಪ್ರಾಂತೀಯ ಮುಖ್ಯ ಪಟ್ಟಣವಾಗಿ ಬೆಳೆದಿರಬೇಕು; ಅನಂತರವೂ ಸಾತವಾಹನರ ಕಾಲದಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದಿರಬೇಕು. ಆದರೆ ಬ್ರಹ್ಮಗಿರಿಯ ಮೇಲಿದ್ದ ಸಾತವಾಹನ ಕಾಲದ ಗಜಪೃಷ್ಠಾಕೃತಿಯ ಇಟ್ಟಿಗೆಯ ತಳಪಾಯವೊಂದನ್ನು ಮತ್ತು ಸಮಕಾಲೀನ ಜನಜೀವನದ ನಿತ್ಯೋಪಯೋಗಿ ವಸ್ತು ಅವಶೇಷಗಳನ್ನು ಬಿಟ್ಟರೆ ಆ ಕಾಲದ ಬೇರೆ ಯಾವ ಅವಶೇಷಗಳೂ ದೊರೆತಿಲ್ಲ. (ಎಂ.ಎಚ್.)

ಈ ಪ್ರದೇಶದ ಇತಿಹಾಸದಲ್ಲಿ ಏಳುಬೀಳುಗಳಿದ್ದಿರಬೇಕು. 1190ರ ಸುಮಾರಿನಲ್ಲಿ ಈ ಬೆಟ್ಟದ ಪಶ್ಚಿಮಕ್ಕೆ ಹನೆಯವೆಂಬ ನಗರ ಉಚ್ಛ್ರಾಯ ಸ್ಥಿತಿಯಲ್ಲಿತ್ತು.

ಇಸಿಲ ಎಂಬ ಪದ ದ್ರಾವಿಡ ಜನ್ಯ ಇಸಿಲ್ ಎಂಬ ಪದದಿಂದ ಬಂದಿದೆಯೆಂದು, ಇಸಿಲ್ ಎಂದರೆ ಕೋಟೆ ಎಂದರ್ಥವೆಂದು, ಕನ್ನಡ ಪದವೆಂದು ಇದರಿಂದ ಕನ್ನಡ ನುಡಿಗಟ್ಟಿನ ಪ್ರಾಚೀನತೆಯನ್ನೂ ತಿಳಿಯಬಹುದಾಗಿದೆಯೆಂದು ಕೆಲವು ಕನ್ನಡ ಭಾಷಾ ವಿದ್ವಾಂಸರ ಅಭಿಪ್ರಾಯ. (ಎ.ಎಸ್.)

**ಇಸ್ರೇಲ್:** ಇಸ್ರೇಲಿನ ಪ್ರಾಕ್ತನ ಶಾಸ್ತ್ರದ ಶಾಸ್ತ್ರೀಯ ಅಭ್ಯಾಸ ಆರಂಭವಾದದ್ದು 19ನೆಯ ಶತಮಾನದ ಮಧ್ಯಭಾಗದಲ್ಲಿ. ಇಲ್ಲಿಯವರೆಗೆ ಹಲವಾರು ಉತ್ಖನನಗಳೂ ಸಂಶೋಧನೆಗಳೂ ನಡೆದು ಇಲ್ಲಿನ ಪ್ರಾಚೀನ ಚರಿತ್ರೆಯ ಅನೇಕ ವಿವರಗಳು ತಿಳಿದುಬಂದಿವೆ.

ಆದಿ ಹಳೆಶಿಲಾಯುಗಕ್ಕೆ ಸೇರಿದ ಅಬೆವಿಲಿಯನ್ ಮತ್ತು ಅಶೂಲಿಯನ್ ಹಂತದ ಕೈಗೊಡಲಿಗಳು ಇಲ್ಲಿ ದೊರಕಿರುವ ಅವಶೇಷಗಳಲ್ಲಿ ಅತ್ಯಂತ ಪ್ರಾಚೀನ. ಇವು ಸು.2,50,000 ವರ್ಷಗಳಿಗೂ ಮೊದಲಿನವೆಂಬುದು ಅಭಿಪ್ರಾಯ. ಚಕ್ಕೆಕಲ್ಲಿನ ಉಪಕರಣಗಳ ತಯೇಷಿಯನ್ ಮತ್ತು ಮೌಸ್ಟೀರಿಯನ್ ಸಂಸ್ಕೃತಿಗಳ ಅವಶೇಷಗಳನ್ನು ಮೌಂಟ್ ಕಾರ್ಮೆಲ್ ಪರ್ವತದ ಗುಹೆಗಳಲ್ಲಿ ಡರೊಥಿ ಗ್ಯಾರಡ್ ಎಂಬ ವಿದ್ವಾಂಸೆ ಕಂಡುಹಿಡಿದಳು. ಪಶ್ಚಾದುಷೋ ಮಾದರಿಯ (ನಿಯಾಂಡರ್ತಲಾಯಿಡ್) ಮತ್ತು ಆಧುನಿಕ ಮಾನವ ವರ್ಗದ ಮಿಶ್ರಸಂತತಿಯ ಜನ ಈ ಸಂಸ್ಕೃತಿಯ ಕರ್ತೃಗಳಾಗಿದ್ದರೆಂಬುದು ಅವರ ಅಸ್ಥಿ ಅವಶೇಷಗಳಿಂದ ಗೊತ್ತಾಗಿದೆ. ಅಂತ್ಯ ಹಳೆಶಿಲಾಯುಗಕ್ಕೆ ಸು.50,000 ವರ್ಷಗಳ ಹಿಂದಿನ ಆರಿಗ್ನೇಷಿಯನ್ ಸಂಸ್ಕೃತಿಯ ಅವಶೇಷಗಳೂ ಅನಂತರ ಸು.20,000 ವರ್ಷಗಳ ಆಟ್ಲಿಟಿಯನ್ ಸಂಸ್ಕೃತಿಯ ಅವಶೇಷಗಳೂ ಇಲ್ಲಿ ದೊರಕಿವೆ.

ಸೂಕ್ಷ್ಮಶಿಲಾಯುಗದ ಅವಶೇಷಗಳು ಮೊದಲು ವಾಡಿಎಲ್ ನಟೂಫ್ ಎಂಬಲ್ಲಿ ದೊರಕಿದುದರಿಂದ ಆ ಸಂಸ್ಕೃತಿಗೆ ನಟೂಫಿಯನ್ ಎಂದು ಹೆಸರಾಯಿತು. ಇಸ್ರೇಲಿನ ಅನೇಕ ಪ್ರದೇಶಗಳಲ್ಲಿ ದೊರಕಿರುವ, ಪ್ರ.ಶ.ಪೂ.ಸು. 10,000-6,000 ಅವಧಿಗೆ ಸೇರಿರುವ ಈ ಸಂಸ್ಕೃತಿಯ ಜನ ಆಹಾರ ಸಂಗ್ರಹಣ ದೆಸೆಯಿಂದ ಮುನ್ನಡೆದು ಆಹಾರೋತ್ಪಾದನೆಯನ್ನು ಮೊತ್ತಮೊದಲಿಗೆ ಪ್ರಾರಂಭಿಸಿದರು. ವ್ಯವಸಾಯ ಮಾಡಿ ಬೆಳೆಸಿದ ಪೈರುಗಳನ್ನು ಚಕಮಕಿಕಲ್ಲಿನ ಹಲ್ಲುಗಳಿದ್ದ ಕುಡುಗೋಲುಗಳಿಂದ ಕೊಯ್ಯುತ್ತಿದ್ದುದೂ ದುಷ್ಟಪ್ರಾಣಿಗಳನ್ನು ಪಳಗಿಸಿ ಸಾಕುತ್ತಿದ್ದುದೂ ಈ ಜನರ ವಿಶಿಷ್ಟ ಸಾಧನೆಗಳು.

ನವಶಿಲಾಯುಗದ ಅತ್ಯಂತ ಪ್ರಾಚೀನವಾದ ಮತ್ತು ವಿಶದವಾಗಿ ಸಂಶೋಧಿಸಲ್ಪಟ್ಟಿರುವ ನೆಲೆಗಳಲ್ಲಿ ಮುಖ್ಯವಾದ ಜೆರಿಕೊ ಈ ದೇಶದಲ್ಲಿದೆ. ಮೊತ್ತ ಮೊದಲಿಗೆ ಅಂಚುಗಳನ್ನು ನಯವಾಗಿಸಿದ ಕಲ್ಲಿನ ಉಪಕರಣಗಳನ್ನು ಉಪಯೋಗಿಸುತ್ತಿದ್ದ ಈ ಜನ ಪ್ರ.ಶ.ಪೂ.6-5ನೆಯ ಸಹಸ್ರಮಾನಗಳಲ್ಲಿ ಬೃಹತ್ತಾದ ವರ್ತುಲಾಕಾರದ ಶಿಲಾ ಸಮಾಧಿಗಳಲ್ಲಿ ಸತ್ತವರನ್ನು ಹೂಳುತ್ತಿದ್ದರು. ಪ್ರ.ಶ.ಪೂ.5000ದ ಸುಮಾರಿನಲ್ಲಿ ಮಡಕೆಗಳ ಉಪಯೋಗವೂ ಕಲ್ಲಿನ ಗೋಡೆ ಕಂದಕಗಳಿಂದ ರಕ್ಷಿತವಾದ ಗ್ರಾಮೀಣ ಜೀವನವೂ ರೂಢಿಗೆ ಬಂದುವು. ಆಹಾರೋತ್ಪಾದನೆ, ಕೈಗಾರಿಕೆ, ವಾಣಿಜ್ಯ ಇವರ ಮುಖ್ಯ ಸಾಧನೆಗಳು.

ತಾಮ್ರ-ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಘಸ್ಸೂಲ್ ಎಂಬಲ್ಲಿ ಮೊದಲಿಗೆ ದೊರಕಿದವು ಅನಂತರ ಇತರ ಅನೇಕ ನೆಲೆಗಳಲ್ಲೂ ದೊರಕಿವೆ. ವಿವಿಧ ಹಂತಗಳಲ್ಲಿ ಬೆಳೆದು ಬಂದ ಈ ಸಂಸ್ಕೃತಿ ಈಜಿಪ್ಟಿನಲ್ಲೂ ಕಂಡುಬಂದಿದೆ. ಇದು ಪ್ರ.ಶ.ಪೂ.3100ರ ಹೊತ್ತಿಗೆ ಕೊನೆಗೊಂಡಿತೆಂದು ಹೇಳಬಹುದು. ತಾಮ್ರದ ಉಪಯೋಗ ರೂಢಿಗೆ ಬಂದದ್ದರ ಗುರುತಾಗಿ ಈ ಲೋಹದ ಎರಡು ಕೊಡಲಿಗಳೂ ಮತ್ತೆ ಕೆಲವು ಅವಶೇಷಗಳೂ ದೊರಕಿವೆ. ಮಡಕೆಗಳ ಮೇಲೆ ವರ್ಣಚಿತ್ರ ಬಿಡಿಸುವ ರೂಢಿ ಈ ಕಾಲದಲ್ಲೇ ಆರಂಭವಾಯಿತು.

ಇಸ್ರೇಲಿನ ಕಂಚಿನಯುಗ ಪ್ರ.ಶ.ಪೂ.3000-1200ರಲ್ಲಿ ರೂಢಿಯಲ್ಲಿತ್ತು. ಆ ಕಾಲವನ್ನು ಕಂಚಿನಯುಗ ಆದಿ, ಮಧ್ಯ ಮತ್ತು ಅಂತ್ಯಕಾಲಗಳೆಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಘಸ್ಸೂಲ್ ಮೈದಾನಪ್ರದೇಶದಲ್ಲಿರುವ ನೆಲೆ. ಪ್ಯಾಲಸ್ತೀನಿನ ಈ ಕಾಲದ ಬಹು ಸಂಖ್ಯಾತ ನೆಲೆಗಳು ಬೆಟ್ಟಗಳ ಶಿಖರಗಳ ಮೇಲೂ ತಪ್ಪಲುಗಳಲ್ಲೂ ಇವೆ. ಮೆಗಿಡ್ಡೋ ಖಿರ್ಬೆಟ್-ಕೆರಕ್, ಲಚಿಷ್ ಮುಂತಾದ ಈ ಕಾಲದ ನೆಲೆಗಳಲ್ಲಿ ಚಕಮುಕಿ ಕಲ್ಲಿನಾಯುಧಗಳ ಬಳಕೆಯೂ ಇತ್ತು. ಕೆಂಪು ಮತ್ತು ಕಪ್ಪು ಬಣ್ಣದ ಹೊಸ ಬಗೆಯ ಮಡಕೆಗಳು ಪ್ರ.ಶ.ಪೂ.2500 ಸುಮಾರಿಗೆ ಬಳಕೆಗೆ ಬಂದುವು. ಅದರ ನೆಲೆಗಳ ರಕ್ಷಣೆಗೆ ಕೋಟೆ ಕೊತ್ತಲಗಳು ನಿರ್ಮಿತವಾದುವು.


ಇಸ್ರೇಲ್‌ನ ಉಲ್ಲೇಖವಿರುವ ಮೆರೆಸ್ಪತಹ್ ಶಾಸನ

ಈ ಕಾಲದಲ್ಲಿ ನೆರೆಹೊರೆಯ ರಾಜ್ಯಗಳೊಂದಿಗೆ ಮುಖ್ಯವಾಗಿ ಈಜಿಪ್ಟ್, ಸಿರಿಯ, ಮೆಸಪೊಟೇಮಿಯಗಳೊಂದಿಗೆ, ಬಿರುಸಿನ ವ್ಯಾಪಾರ ಸಾಗಿತ್ತು. ಬ್ಯಾಬಿಲೋನಿಯನ್ನರ ಬೆಣೆಯಾಕಾರ (ಕ್ಯೂನಿಫಾರಂ) ಬರೆಹ ರೂಢಿಗೆ ಬಂತು. ಮೆಗಿಡ್ಡೊ ನೆಲೆಯಲ್ಲಿ ದೊರಕಿರುವ ಚಿನ್ನದ ಮತ್ತು ದಂತದ ವಸ್ತುಗಳು ಈ ಯುಗದ ಅಂತ್ಯದಲ್ಲಿ ನೆಲೆಸಿದ್ದ ಉನ್ನತ ಮಟ್ಟದ ಸಂಸ್ಕೃತಿಯ ಪ್ರತೀಕಗಳು. ದಂತದ ವಸ್ತುಗಳ ಮೇಲೆ ಸಿಂಹವೇ ಮುಂತಾದ ಪ್ರಾಣಿಗಳ ಚಿತ್ರಗಳನ್ನು ಕೊರೆದಿದೆ. ಉತ್ಸವ ದೃಶ್ಯಗಳೂ ಹಲವು ಕಂಡುಬಂದಿವೆ. ಗೆಜೆರ್, ಜೆರುಸಲೇಂ, ಲಚಿಷ್ ಮುಂತಾದೆಡೆಗಳಲ್ಲಿದ್ದಂತೆ ಮೆಗಿಡ್ಡೊದಲ್ಲಿ ಸಹ ಈ ಕಾಲದ ಒಂದು ಬೃಹತ್ತಾದ ನೀರಿನ ಕಾಲುವೆಯನ್ನು ಮನೆಗಳ ತಳಭಾಗದಲ್ಲಿ ನಿರ್ಮಿಸಿ ಬೆಟ್ಟದಿಂದ ಕುಡಿಯುವ ನೀರನ್ನು ಪೂರೈಸುತ್ತಿದ್ದರು. ಇದು ಕಂದಕದಂತೆ ನಗರವನ್ನು ಬಳಸಿದ್ದರಿಂದ ರಕ್ಷಣೆಯೂ ಒದಗಿತ್ತು. ಈಜಿಪ್ಟಿನಲ್ಲಿರುವ ಅಮರ್ನ ಪತ್ರಗಳಿಂದ ತಿಳಿದುಬರುವಂತೆ ಅನೇಕ ಸಣ್ಣಪುಟ್ಟ ರಾಜರು ಅಧಿಕಾರದಲ್ಲಿದ್ದುಕೊಂಡು ತಮ್ಮತಮ್ಮಲ್ಲೇ ಕಚ್ಚಾಡುತ್ತಿದ್ದುದಲ್ಲದೆ ಈಜಿಪ್ಟ್ ಮೆಸೊಪೊಟೇಮಿಯ [illegible] 1200ರ ಸುಮಾರಿಗೆ ಈ ಪ್ರದೇಶದಲ್ಲಿ ಕಬ್ಬಿಣದ ಬಳಕೆ ಹಬ್ಬಿತು. ಸ್ವಲ್ಪ ಕಾಲಾನಂತರ ಇಸ್ರೇಲಿನ ಹೆಸರಿಗೆ ಕಾರಣರಾದ ಇಸ್ರೇಲಿಗಳು ಅಥವಾ ಹೀಬ್ರೂಗಳು ಈ ದೇಶಕ್ಕೆ ಪ್ರವೇಶಿಸಿದರು. ಇವರ ಕಾಲದಲ್ಲಿ ಜೀವನರೀತಿ ಹೆಚ್ಚೇನೂ ಬದಲಾಗದಿದ್ದರೂ ಮುಖ್ಯವಾಗಿ ಹಿಟೈಟ್ ಸಾಮ್ರಾಜ್ಯದ ಪತನಾನಂತರ ಕಬ್ಬಿಣ ಲೋಹಗಾರಿಕೆ ಎಲ್ಲೆಡೆಯಲ್ಲೂ ಪಸರಿಸ ಲಾರಂಭಿಸಿತು. ಟೆಲ್-ಎಲ್-ಫುಲ್ ಎಂಬಲ್ಲಿನ ಭೂಉತ್ಖನನದಿಂದ ಗೊತ್ತಾಗಿರುವಂತೆ ಈ ಕಾಲದವರದು ಸರಳ ಗ್ರಾಮೀಣ ಸಂಸ್ಕೃತಿ. ಇವರು ಹೊಸರೀತಿಯ ಮತ್ತು ಆಕಾರದ ಮಡಕೆ ಕುಡಿಕೆಗಳನ್ನೂ ನೂಲುವ ತಕಲಿಗಳನ್ನೂ ಉಪಯೋಗಿಸುತ್ತಿದ್ದರು. ಈ ಕಾಲದಲ್ಲಿ ರಾಜಕೀಯ ಸಾಮಾಜಿಕ ಹಾಗೂ ಬೌದ್ಧಿಕ ಚಟುವಟಿಕೆಗಳು ನೆರೆಹೊರೆಯ ಜನಾಂಗಗಳಿಂದ ಪ್ರಭಾವಿತವಾಗಿ ಮುಂದುವರಿದವು. ಈ ಕಾಲದ ಬಹು ಮುಖ್ಯ ಸಾಧನೆಗಳೆಂದರೆ ನೆರೆಯ ಫಿಲಿಸ್ಟೈನರ ಪ್ರಭಾವದಿಂದ ಬಂದ ಅಕ್ಷರಪದ್ಧತಿಯ ಬರೆವಣಿಗೆಗೆ, ಮಸಿ ಮತ್ತು ಲೇಖನಿಯ ಉಪಯೋಗ. ಪ್ರ.ಶ.ಪೂ. 8ನೆಯ ಶತಮಾನದ ಅಂತ್ಯದಲ್ಲಿ ಅಸ್ಸೀರಿಯನ್ನರಿಂದಲೂ 6ನೆಯ ಶತಮಾನದಲ್ಲಿ ಬ್ಯಾಬಿಲೋನಿಯನ್ನರಿಂದಲೂ ಪರ್ಷಿಯನ್ನರಿಂದಲೂ 4ನೆಯ ಶತಮಾನದಲ್ಲಿ ಗ್ರೀಕರಿಂದಲೂ ಇಸ್ರೇಲು ಪರಾಜಯಹೊಂದಿತು.

**ಈಚಿನ ಚರಿತ್ರೆ:** ಈಗಿನ ಇಸ್ರೇಲ್ ಪ್ರದೇಶಕ್ಕೆ ಪ್ರಾಚೀನ ಕಾಲದಲ್ಲಿ ಕೇನನ್ ಎಂಬ ಹೆಸರಿತ್ತು; ಅನಂತರ ಇದು ಪ್ಯಾಲಸ್ತೀನ್ ಆಯಿತು. ಯೆಹೂದ್ಯರು ಈಜಿಪ್ಟನ್ನು ಬಿಟ್ಟು, ಸಿನಾಯ್ ಮರಳುಗಾಡುಗಳಲ್ಲಿ ಅಲೆದು, ಪ್ಯಾಲಸ್ತೀನಿಗೆ ಬಂದು, ಅಲ್ಲಿ ಮೊದಲ ಬಾರಿಗೆ

ಸ್ವತಂತ್ರ ಜನಾಂಗವಾಗಿ ಬಾಳಿದರು; ಪ್ರಂಪಚದಲ್ಲೆ ಹೆಸರಾದ ಸಂಸ್ಕೃತಿ ಬೆಳೆಸಿದರು. ಯೆಹೂದ್ಯ ಪ್ರವಾದಿಗಳು, ಪುರೋಹಿತರು, ಕವಿಗಳು, ದಾರ್ಶನಿಕರು ಬದುಕಿ ಗ್ರಂಥರಚನೆ ಮಾಡಿದ್ದು ಇಲ್ಲಿ (**ನೋಡಿ–ಪ್ಯಾಲಸ್ತೀನ್**).

ಪ್ರಾಚೀನ ಪ್ಯಾಲಿಸ್ತೀನ್‍ನಲ್ಲಿ ಮೊದಲು ರಾಜ್ಯ ಸ್ಥಾಪಿಸಿದವನು ಸಾಲೊಮನ್. ಇವನ ತರುವಾಯ ರಾಜ್ಯವಾಳಿದ ಡೇವಿಡ್ ಈ ರಾಷ್ಟ್ರವನ್ನು ಬಲಪಡಿಸಿದ; ಜೆರೂಸಲೆಂ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ. ಮುಂದೆ ರಾಜ್ಯವಾಳಿದ ಸಾಲೊಮನ್ ತಾಮ್ರದ ಸ್ತಂಭಗಳಿದ್ದ ದೇವಸ್ಥಾನವನ್ನು ರಾಜಧಾನಿಯಲ್ಲಿ ಕಟ್ಟಿಸಿದ. ಆದರೆ ಮೇಲಿಂದ ಮೇಲೆ ನುಗ್ಗಿ ಬರುತ್ತಿದ್ದ ಧಾಳಿಕಾರರು ಅನೇಕ ಸಲ ಈ ದೇಶವನ್ನು ಗೆದ್ದು ಆಳಿದರು. ಇಸ್ರೇಲ್ ಪಶ್ಚಿಮದ ಫಲವತ್ತಾದ ನೈಲ್ ನದೀ ಬಯಲಿನಲ್ಲೂ ಪೂರ್ವದಲ್ಲಿನ ಅಷ್ಟೇ ಫಲವತ್ತಾದ ಯೂಫ್ರೆಟಿಸ್‍ನದೀ ಪ್ರದೇಶದಲ್ಲೂ ಇದ್ದ ಬಲಿಷ್ಠ ರಾಜ್ಯಗಳ ನಡುವಣ ಕಾಲ್ಚೆಂಡಾಯಿತು. ಅಸ್ಸೀರಿಯನ್ನರು, ಬ್ಯಾಬಿಲೋನಿಯನ್ನರು ಪರ್ಷಿಯನ್ನರು, ಗ್ರೀಕರು, ರೋಮನರು–ಹೀಗೆ ಒಬ್ಬರಾದ ಮೇಲೊಬ್ಬರು ಇಸ್ರೇಲನ್ನು ಗೆದ್ದು ಆಕ್ರಮಿಸಿದರು. ಮುಂದೆ ಇದು

ಅಬ್ರಹಾಂ, ವರ್ಣಚಿತ್ರ

ಆಟೋಮನ್ ಸಾಮ್ರಾಜ್ಯದ ಭಾಗವಾಗಿದ್ದು, ಕೊನೆಗೆ ತುರ್ಕಿ ರಾಜ್ಯಕ್ಕೆ ಸೇರಿಹೋಯಿತು. ಈ ಆಕ್ರಮಣಗಳ ನಡುವೆ ಇಸ್ರೇಲ್ ಕೊಂಚ ಕಾಲ ಮಾತ್ರ ಸ್ವಾತಂತ್ರ್ಯ ಪಡೆದಿತ್ತು; ಉಳಿದ ಕಾಲಗಳಲ್ಲಿ, ಶತ್ರುಗಳು ದೇಶವನ್ನು ನಾಶಗೊಳಿಸುತ್ತಿದ್ದಾಗಲೂ ಯೆಹೂದ್ಯರ ತಾಯ್ನಾಡಿನ ಮಮತೆ ಕುಗ್ಗಲಿಲ್ಲ; ಗೋಳುಗೋಡೆಯ (ವೇಲಿಂಗ್ ವಾಲ್) ಎದುರು ನಿಂತು ಪರದಾಸ್ಯಕ್ಕಾಗಿ ಪ್ರಲಾಪಿಸಿ, ವಿಮೋಚನೆಗಾಗಿ ದೇವರಿಗೆ ಮೊರೆಯಿಡುತ್ತಿದ್ದರು.

ಈ ಚಾರಿತ್ರಿಕ ಪರಿಸ್ಥಿತಿಗಳಿಂದಾಗಿ ಯೆಹೂದ್ಯರು ತಮ್ಮ ತಾಯ್ನಾಡನ್ನು ತೊರೆದು, ತಮ್ಮದೆಂದು ಹೇಳಿಕೊಳ್ಳುವ ದೇಶವಿಲ್ಲದೆ, ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲೂ ಹರಡಿ ಹೋಗಬೇಕಾಯಿತು. ಶತಮಾನಗಳ ಕಾಲ ಇವರ ಈ ಸ್ಥಿತಿ ಮುಂದುವರೆಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಯೆಹೂದ್ಯರು ತಮ್ಮದೇ ಆದ ಸ್ವಾಸ್ಥ್ಯವೊಂದರ ರಚನೆಗಾಗಿ ಚಳವಳಿ ಹೂಡಿದರು. ಆ ಚಳವಳಿಯ ಪ್ರವರ್ತಕ ಥಿಯೋಡೆಡರಿರ್ ಹೆರ್ಟ್ಸಲ್. ಕ್ರೌರ್ಯಕ್ಕೆ ಗುರಿಯಾಗಿ ಹರಡಿ ಹಂಚಿಹೋಗಿದ್ದ ಯೆಹೂದ್ಯರಿಗೆ ಪ್ಯಾಲಸ್ತೀನಿನಲ್ಲಿ ಒಂದು ನೆಲೆಯ ನಿರ್ಮಾಣವೇ ಈ ಚಳವಳಿಯ ಗುರಿ. ಸ್ವಪ್ರೇರಣೆಯಿಂದ ಹಿತೈಷಿಗಳು ಕೊಟ್ಟ ಹಣ, ರಾತ್‍ಚೈಲ್ಡ್ ನೀಡಿದ ಉದಾರ ಧನಸಹಾಯ ಇವುಗಳಿಂದ ಯೆಹೂದ್ಯ ರಾಷ್ಟ್ರೀಯ ಸಹಾಯನಿಧಿಯೊಂದು ನಿರ್ಮಿತವಾಯಿತು. ಇದರಿಂದ ಪ್ಯಾಲಸ್ತೀನಿನಲ್ಲಿ ನೆಲೆಸಬಯಸಲಿಚ್ಛಿಸಿದವರಿಗೋಸ್ಕರ ಭೂಮಿಯನ್ನು ಕೊಳ್ಳಲನುಕೂಲ ವಾಯಿತು. ಈ ಅನುಕೂಲವನ್ನೊದಗಿಸುವುದಕ್ಕಾಗಿ 1908ರಲ್ಲಿ ಜಾಫದಲ್ಲಿ ಒಂದು ಯೆಹೂದ್ಯ ಸ್ವಾಸ್ಥ್ಯವಾದಿ ನಿಯೋಗ ರಚಿಸಲಾಯಿತು.

**ಎರಡು ಮಹಾಯುದ್ಧಗಳ ಪರಿಣಾಮ:** 1914ರಲ್ಲಿ ಪ್ರಾರಂಭವಾದ ಒಂದನೆಯ ಮಹಾಯುದ್ಧದ ಕಾಲದಲ್ಲಿ ಅನುಕೂಲ ಸಂದರ್ಭ ಒದಗಿತು. ಜರ್ಮನರ ಪಕ್ಷ ವಹಿಸಿದ್ದ ತುರ್ಕರು ಪ್ಯಾಲಸ್ತೀನ್ ಆಕ್ರಮಿಸಿದರು. ಯೆಹೂದ್ಯರ ನೈತಿಕ ಬೆಂಬಲ ಗಳಿಸುವುದಕ್ಕಾಗಿ ಬ್ರಿಟಿಷ್ ಸರ್ಕಾರ ಯೆಹೂದ್ಯ ಸ್ವಾಸ್ಥ್ಯನೀತಿಗೆ ಮನ್ನಣೆ ಕೊಡುವುದಾಗಿ ತಿಳಿಯಪಡಿಸಿತು. ಈ ವಿಷಯವಾಗಿ ಮಿತ್ರರಾಷ್ಟ್ರಗಳೊಡನೆ ವಿಚಾರ ವಿನಿಮಯ ನಡೆಸಿದ ಮೇಲೆ 1917ರಲ್ಲಿ ಬ್ಯಾಲ್ಫರ್ ಘೋಷಣೆ ಹೊರಬಂತು; ಅದರಲ್ಲಿ ಗ್ರೇಟ್ ಬ್ರಿಟನ್ ಮತ್ತು ಇತರ ಕೆಲವು ಮಿತ್ರರಾಷ್ಟ್ರಗಳು ಯೆಹೂದ್ಯರಿಗಾಗಿ ಪ್ಯಾಲಸ್ತೀನಿನಲ್ಲಿ ಒಂದು ನೆಲೆಸುನಾಡನ್ನು ರಚಿಸುವ ಯೋಜನೆಗೆ ತಮ್ಮ ಬೆಂಬಲ ವ್ಯಕ್ತಪಡಿಸಿದವು. ಅರಬ್ ರಾಷ್ಟ್ರೀಯ ಮುಖಂಡರೂ ಇದನ್ನು ಸ್ವಾಗತಿಸಿದರು. 1919ರ ಜನವರಿ 3ರಂದು, ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಅರಬ್ ರಾಷ್ಟ್ರಗಳ ಪ್ರಧಾನ ನಿಯೋಗಿಯೂ ಇದನ್ನು ಒಪ್ಪಿದ. ಪ್ಯಾಲಸ್ತೀನ್ ಬ್ರಿಟನ್ನಿನ ರಕ್ಷಿತ ಪ್ರದೇಶವಾಗಿರಬೇಕೆಂದು ಈ ಘೋಷಣೆಯಲ್ಲಿ ಸೂಚಿಸಲಾಗಿತ್ತು. ಇಲ್ಲಿ ಯೆಹೂದ್ಯರಿಗಾಗಿ ಒಂದು ಹೊಸ ರಾಜ್ಯ ನಿರ್ಮಿಸುವ ಜವಾಬ್ದಾರಿಯನ್ನು ಇಂಗ್ಲೆಂಡಿಗೆ ವಹಿಸಿಕೊಡಲಾಯಿತು. ಆಗಿನ ರಾಷ್ಟ್ರಸಂಘದ (ಲೀಗ್ ಆಫ್ ನೇಷನ್ಸ್) ನಿರ್ಣಯದಂತೆ ಇದನ್ನು ಬ್ರಿಟನ್ನಿಗೆ ವಹಿಸಿಕೊಟ್ಟದ್ದು 1922ರಲ್ಲಿ.

ಅರಬ್ಬರ ಮತ್ತು ಯೆಹೂದ್ಯರ ಹಕ್ಕುಬಾಧ್ಯತೆಗಳನ್ನು ಪರಿಗಣಿಸಿ ಅವುಗಳಿಗೆ ಅನುಸಾರವಾದ ರೀತಿಯಲ್ಲಿ ಇಬ್ಬರಿಗೂ ಸ್ವಾತಂತ್ರ್ಯ ಕೊಡುವ ವಿಷಯದಲ್ಲಿ ಅನುಸರಿಸಬೇಕಾದ ಮಾರ್ಗವನ್ನು ಬ್ರಿಟಿಷ್ ಸರ್ಕಾರ ಹುಡುಕುತ್ತಿತ್ತು. ಅರಬ್ ಪ್ಯಾಲಸ್ತೀನ್, ಯೆಹೂದ್ಯ ಪ್ಯಾಲಸ್ತೀನ್ ಎಂಬುದಾಗಿ ಆ ಸಣ್ಣ ರಾಜ್ಯವನ್ನು ಇಬ್ಭಾಗ ಮಾಡುವ ಯೋಚನೆಯೂ ಇತ್ತು. ಆದರೆ ಇದಕ್ಕೆ ತೊಡಕುಗಳಿದ್ದುವು. ಅರಬ್ಬರ ಹಾಗೂ ಯೆಹೂದ್ಯರ ಎರಡು ಪ್ರಬಲ ಗುಂಪುಗಳು ಮೊದಲೇ ಯೋಚಿಸಿದಂತೆ ಸ್ಪಷ್ಟವಾಗಿ ಬೇರ್ಪಟ್ಟಿರಲಿಲ್ಲ. ಯೆಹೂದ್ಯರಿಗೆ ಅತ್ಯಂತ ಪವಿತ್ರಕ್ಷೇತ್ರವಾದ ಜೆರೂಸಲೆಂನಲ್ಲೇ ಬಹುಸಂಖ್ಯಾತ ಅರಬ್ಬರಿದ್ದರು. ಇದು ತಮ್ಮ ರಾಜ್ಯದಲ್ಲಿ ಸೇರಲೇಬೇಕೆಂದು ಯೆಹೂದ್ಯರ ಆಗ್ರಹ. ಅರಬ್ಬರು ಮಂಡಿಸಿದ ವಾದವೂ ನ್ಯಾಯವಾಗಿತ್ತು. ಪ್ರತ್ಯೇಕ ಇಸ್ರೇಲ್ ರಾಜ್ಯ ರಚನೆಗೆ ಅವರು ಅನೇಕ ಆಕ್ಷೇಪಣೆ ಗಳನ್ನೆತ್ತಿದರು. ಹೊಸ ರಾಜ್ಯ ರಚನೆಯ ಹಂಚಿಕೆಯಾದದ್ದು ರಾಜಕೀಯ ಒತ್ತಾಯದಿಂದ. ಅದು ಅರಬ್ ರಾಜ್ಯಗಳ ಕ್ಷೇಮ ಮುನ್ನಡೆಗಳನ್ನು ತಡೆಗಟ್ಟುವ ಕುಟಿಲ ಪ್ರಯತ್ನ. ಪ್ಯಾಲಸ್ತೀನಿನ ಜನಸಂಖ್ಯೆಯಲ್ಲಿ ಶೇ.90ರಷ್ಟು (ಹೊರದೇಶಗಳಿಂದ ಯೆಹೂದ್ಯರು ವಲಸೆ ಬರುವ ಮುನ್ನ) ಜನ ಅರಬ್ಬರೇ ಇದ್ದರು. ಏಳನೆಯ ಶತಮಾನದಲ್ಲಿ ಅದನ್ನು ರೋಮನ್ನರಿಂದ ವಶಪಡಿಸಿಕೊಂಡಾಗಿನಿಂದಲೂ ಅಲ್ಲಿ ಅರಬ್ಬರೇ ವಾಸಿಸುತ್ತಿದ್ದರು: ಈ ಅಸ್ವಾಭಾವಿಕ ಹಂಚಿಕೆಯಿಂದ ಅರಬ್ ಜನಾಂಗವನ್ನು ಇಬ್ಭಾಗಮಾಡಿದಂತಾಗುತ್ತದೆ; ಭಿನ್ನ ಭಿನ್ನ ರಾಷ್ಟ್ರಗಳಲ್ಲಿದ್ದ ಲಕ್ಷಾಂತರ ಯೆಹೂದ್ಯರು ವಲಸೆ ಬಂದದ್ದರಿಂದ ಎಷ್ಟೋ ಅರಬ್ಬರು ಮನೆಮಠಗಳನ್ನು ಕಳೆದುಕೊಂಡು ನಿರಾಶ್ರಿತರಾದರು; ಮಧ್ಯ ಏಷ್ಯಕ್ಕೇ ಯೆಹೂದ್ಯರು ಅನ್ಯಜನರು. ಇದು ಅರಬ್ಬರ ವಾದ.

ಆದರೆ ಈ ಮಧ್ಯೆ ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. ಅರಬ್–ಯೆಹೂದ್ಯರ ಪ್ರಶ್ನೆ ಮುಂದಕ್ಕೆ ಹೋಯಿತು. 1940ರ ಮುಂದಿನ ವರ್ಷಗಳಲ್ಲಿ ಹಿಟ್ಲರನ ಉನ್ಮಾದಕ್ಕೆ ಅರವತ್ತು ಲಕ್ಷ ಯೆಹೂದ್ಯರು ಬಲಿಯಾದರು. ಆಧುನಿಕ ಮಾನವನ ಸಂಸ್ಕೃತಿಗೆ ಬೆಲೆಯೇನಾದರೂ ಇದೆಯೆ ಎಂದು ಪ್ರಪಂಚದಾದ್ಯಂತ ಜನ ಶಂಕಿಸುವಂತಾಯಿತು. ಯೆಹೂದ್ಯರನ್ನು ನಾಶಗೊಳಿಸಿ ಅವರ ಪ್ರಶ್ನೆಯನ್ನು ಬಗೆಹರಿಸುವುದು ಹಿಟ್ಲರನ ರೀತಿ (**ನೋಡಿ–ಹಿಟ್ಲರ್, ಅಡಾಲ್ಫ್**).

ಪ್ಯಾಲಸ್ತೀನಿನಲ್ಲಿ ತಮ್ಮ ರಾಷ್ಟ್ರೀಯ ನೆಲೆಯನ್ನೂರಿಸಬೇಕೆಂದು ಬಹುಕಾಲದಿಂದ ಆಸೆ ಹೊಂದಿದ್ದು, ಯುರೋಪಿನಿಂದ ಅಧಿಕ ಸಂಖ್ಯೆಯಲ್ಲಿ ಇಲ್ಲಿ ಬಂದು ತುಂಬಿದ್ದ ಯೆಹೂದ್ಯರಿಗೂ ಅರಬ್ಬರಿಗೂ 1947ರಲ್ಲಿ ಯುದ್ಧವಾಯಿತು. ವಿಶ್ವಸಂಸ್ಥೆಯ ನಿರ್ಣಯಕ್ಕನುಸಾರವಾಗಿ ಅಲ್ಲಿ 1948ರ ಮೇ 14ರಂದು ಬ್ರಿಟಿಷರ ರಕ್ಷಣೆ ಕೊನೆಗೊಂಡು, ಮೇ 15ರಂದು ಪ್ಯಾಲಸ್ತೀನಿನ ಉದಯವಾಯಿತು. ಅದು ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಿತು. 1949ರ ಜನವರಿಯವರೆಗೂ ಯುದ್ಧ ಮುಂದುವರೆಯಿತು. ಅರಬ್ ರಾಷ್ಟ್ರಗಳಿಗೂ ಇಸ್ರೇಲಿಗೂ ನಡುವೆ ಶಾಂತಿ ಕೌಲಿನ ಸಹಿಯಾಗಿಲ್ಲ; ರಾಜತಾಂತ್ರಿಕ ಸಂಬಂಧವಿಲ್ಲ. ವಿಶ್ವಸಂಸ್ಥೆ ನೇಮಿಸಿರುವ ಯುದ್ಧ ವಿರಾಮ ಮೇಲ್ವಿಚಾರಣಾ ವ್ಯವಸ್ಥೆ ಮುಂದುವರಿಯುತ್ತಿದೆ. 1967ರಲ್ಲಿ ಇಸ್ರೇಲಿಗೂ ನೆರೆಯ ಅರಬ್ ರಾಜ್ಯಗಳಿಗೂ  ನಡೆದ ಆರು ದಿನಗಳ ಯುದ್ಧದ ಫಲವಾಗಿ ಇಡೀ ಜೆರೂಸಲೆಂ, ಜಾರ್ಡನ್ ನದಿಯ ಪಶ್ಚಿಮ ದಂಡೆಯ ಪ್ರದೇಶ, ಸಿನಾಯ್ ಪರ್ಯಾಯದ್ವೀಪ ಮತ್ತು ಗೋಲನ್ ದಿಬ್ಬಗಳು ಇಸ್ರೇಲಿನ ವಶವಾದುವು. ಜೆರೂಸಲೆಂ ಅನ್ನು ಇಸ್ರೇಲ್ ರಾಜ್ಯದಲ್ಲಿ ತಕ್ಷಣವೇ ವಿಲೀನಗೊಳಿಸಲಾಯಿತು.  ಆದರೆ ಅಂತಾರಾಷ್ಟ್ರೀಯ ಒಪ್ಪಿಗೆ ಸಿಕ್ಕಿಲ್ಲ.  1973ರಲ್ಲಿ ಮತ್ತೊಮ್ಮೆ ಸಂಭವಿಸಿದ ಅರಬ್–ಇಸ್ರೇಲಿ ಯುದ್ಧದಿಂದಾಗಿ ಇಸ್ರೇಲ್ ಅಪಾರ ಪ್ರಮಾಣದ ನಷ್ಟ ಅನುಭವಿಸುವಂತಾಯಿತು. 1979ರಲ್ಲಿ ಅಮೆರಿಕದ ಮಧ್ಯಸ್ಥಿಕೆಯಲ್ಲಿ ಜರುಗಿದ ಕ್ಯಾಂಪ್ ಡೇವಿಡ್ ಒಪ್ಪಂದದಿಂದಾಗಿ ಇಸ್ರೇಲ್ ಹಾಗೂ ಈಜಿಪ್ಟಿನ ನಡುವೆ ಶಾಂತಿ ಒಪ್ಪಂದವೇರ್ಪಟ್ಟು 1967ರಲ್ಲಿ ಇಸ್ರೇಲ್ ವಶಪಡಿಸಿಕೊಂಡಿದ್ದ ಸಿನಾಯ್ ಮರುಭೂಮಿಯನ್ನು ಈಜಿಪ್ಟ್‍ಗೆ ವರ್ಗಾಯಿಸಿತು.  1982 ಇಸ್ರೇಲ್ ಲೆಬನಾನ್ ದೇಶದ ಮೇಲೆ ಧಾಳಿ ನಡೆಸಿ ಪ್ಯಾಲಸ್ತೀನ್ ವಿಮೋಚನಾ ಹೋರಾಟಗಾರರ ಶಿಬಿರಗಳ ಧಾಳಿ ನಡೆಸಿತು.  1987ರಲ್ಲಿ ಇಸ್ರೇಲ್ ಆಕ್ರಮಿತ ಅರಬ್ ಪ್ರದೇಶಗಳಾದ ಗಾಜಾಪಟ್ಟಿ, ಪಶ್ಚಿಮದಂಡೆ ಹಾಗೂ ಸಿರಿಯಕ್ಕೆ ಸೇರಿದ ಗೋಲನ್ ದಿಬ್ಬದಲ್ಲಿದ್ದ ಅರಬ್ಬರು ಧಂಗೆಯೆದ್ದರು.  1992ರಲ್ಲಿ ಇಸ್ರೇಲ್ ಹಾಗೂ ಅರಬ್ಬರ ನಡುವೆ ಸಂಧಾನವೇರ್ಪಟ್ಟಿತು. 1993ರಲ್ಲಿ ಇಸ್ರೇಲ್ ಹಾಗೂ ಪ್ಯಾಲಸ್ತೀನ್ ಲಿಬರೇಷನ್ ಆರ್ಗನೈಜೇಷನ್ ನಡುವೆ ಶಾಂತಿ ಒಪ್ಪಂದವೇರ್ಪಟ್ಟಿತು.  1998ರಲ್ಲಿ ಸ್ವಾಯತ್ತ ಪ್ಯಾಲಸ್ತೀನ್ ಅರಬ್ಬರ ಆಳಿಕೆ ಪ್ರಾರಂಭವಾಗಿದೆ.  ಆದರೆ ಅರಬ್ಬರ ಪ್ರದೇಶಗಳು ಇಂದಿಗೂ ಸಹ ಇಸ್ರೇಲ್ ಸೈನಿಕರ ವಶದಲ್ಲಿವೆ.

2002ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್ ಹಾಗೂ ಇಸ್ರೇಲ್ ಹಾಗೂ ಪ್ಯಾಲಸ್ತೀನ್ ಅರಬ್ಬರ ಪ್ರತಿನಿಧಿ ಯಾಸರ್–ಅರಾಫತ್‍ರ ನಡುವೆ ವೈ ನದಿಯ ಒಪ್ಪಂದವಾಗಿದೆ. ಇಸ್ರೇಲ್ ತಾನು ಆಕ್ರಮಿಸಿಕೊಂಡಿರುವ ಅರಬ್ಬರ ಪ್ರದೇಶಗಳಿಂದ ತನ್ನ ಸೈನ್ಯವನ್ನು ಹಿಂತೆಗೆದು

ಕೊಳ್ಳಬೇಕಾಗಿದೆ. ಪ್ಯಾಲಸ್ತೀನಿನ ಹಿಜಾಬುಲ್ಲಾ ಹಾಗೂ ಹಮಾಸ್ ಕಾರ್ಯಕರ್ತರು ನಡೆಸುತ್ತಿರುವ ದೊಂಬಿ, ಗಲಭೆಗಳು ಹಾಗೂ ಇಸ್ರೇಲಿನ ಸಂಪ್ರದಾಯ ಯಹೂದಿಯರ ಗಲಭೆಯಿಂದಾಗಿ ಪ್ರಸ್ತುತ ಅಶಾಂತಿಯ ನೆಲೆಯಾಗಿದೆ. ಯಹೂದಿಯರು ಹಾಗೂ ಅರಬ್ಬರ ನಡುವೆ ಪೂರ್ಣಪ್ರಮಾಣದ ಶಾಂತಿಯ ಹೊರತಾಗಿ ಇಸ್ರೇಲ್‌ನಲ್ಲಿನ ಜನತೆಯು ನೆಮ್ಮದಿಯ ಜೀವನ ಕಾಣುವುದು ಮರೀಚಿಕೆಯೆನಿಸಿದೆ. (ಆರ್.ಐ.ಟಿ.ಎಸ್.;ಕೆ.ಜಿ.;ಸಿ.ಜಿ.ಎಸ್.)

**ಇಸ್ಲಾಂ ಧರ್ಮ:** ಇಸ್ಲಾಂ ಎಂಬುದು ಅರಬ್ಬಿ ಭಾಷೆಯ ಸಲಾಮ್ ಪದದಿಂದ ಬಂದಿದೆ. ಶರಣಾಗು ಅಥವಾ ಒಳಪಡು ಎಂಬುದು ಇದರರ್ಥ. ಪ್ರವಾದಿ ಮಹಮ್ಮದ್‌ನು ಬೋಧಿಸಿದ ಧರ್ಮಕ್ಕೆ ಶರಣಾದವರನ್ನು ಮುಸ್ಲಿಮರು ಅಥವಾ ಇಸ್ಲಾಮಿಯರು ಎಂದು ಪರಿಗಣಿಸಲಾಗುತ್ತದೆ. ಪಶ್ಚಿಮ ಏಷ್ಯದಲ್ಲಿ ಉದಯಿಸಿದ ಪ್ರಮುಖ ಧರ್ಮಗಳ ಪೈಕಿ ಇಸ್ಲಾಂ ಧರ್ಮವೂ ಒಂದು. ಇಸ್ಲಾಂ ಧರ್ಮದ ಮೂಲ ನೆಲೆ ಇಂದಿನ ಸೌದಿ ಅರೇಬಿಯದ ಪಶ್ಚಿಮ ಭಾಗದಲ್ಲಿರುವ ಹೆಜಾಜ್ ಪ್ರಾಂತ್ಯದ ಮೆಕ್ಕಾ ನಗರ. ಮೆಕ್ಕಾ ಮತ್ತು ಮೆದೀನಾ ಇಸ್ಲಾಂ ಧರ್ಮದ ಪ್ರಮುಖ ಕೇಂದ್ರಗಳು.

ಮೆಕ್ಕಾ, ಕಾಬ

ಇಸ್ಲಾಂ ಧರ್ಮ ಏಕದೇವತಾರಾಧನೆಯನ್ನು ಪ್ರತಿಪಾದಿಸುತ್ತದೆ. ಇಸ್ಲಾಂ ಧರ್ಮದ ಪ್ರಕಾರ ದೇವರು ಒಬ್ಬನೇ ಅವನೇ ಅಲ್ಲಾ. ಅವನನ್ನು ಹೊರತುಪಡಿಸಿ ಬೇರಾವ ದೇವರಿಲ್ಲ. ಅಲ್ಲಾಹ್ ಸಕಲ ಜೀವಿಗಳ ಸೃಷ್ಟಿ ಕರ್ತ. ಮಹಮ್ಮದರು ಪ್ರವಾದಿ ಮಾತ್ರ ಎಂಬುದಾಗಿ ಈ ಧರ್ಮ ಸಾರುತ್ತದೆ. ಇಸ್ಲಾಂ ಧರ್ಮ ಮನುಷ್ಯ ದಯಾಳುವಿನಂತೆ ಬದುಕಬೇಕೆಂದು ಸಾರುತ್ತದೆ. ಬಡವರು, ಅನಾಥರು, ನಿರ್ಗತಿಕರು ಹಾಗೂ ಹಿರಿಯರ ಬಗ್ಗೆ ದಯೆ, ಅನುಕಂಪವಿರಬೇಕೆಂದು ಹೇಳುತ್ತದೆ. ಸಂಪತ್ತಿನ ಕ್ರೋಢೀಕರಣವನ್ನು ಅಲ್ಲಗಳೆದು ಅದು ಸರ್ವರಲ್ಲೂ ಹಂಚಿಕೆಯಾಗ ಬೇಕೆಂದು ಬಯಸುತ್ತದೆ.

ಇಸ್ಲಾಂ ಧರ್ಮದ ಪೂರ್ಣ ತಿರುಳು ಅದರ ಧರ್ಮಗ್ರಂಥ ಕುರಾನ್‌ನಲ್ಲಿ ಬಿಂಬಿತವಾಗಿದೆ. ಕುರಾನ್ ಎಂದರೆ ಓದಲು ಅರ್ಹವಾದುದು ಎಂಬುದಾಗಿದೆ. ಕುರಾನ್ ಕೇವಲ ಧರ್ಮಗ್ರಂಥ ವಲ್ಲ, ಇದು ಸಕಲ ಮುಸ್ಲಿಂ ಸಮುದಾಯದವರ ಜೀವನದ ಮಾರ್ಗದರ್ಶಿಯೂ ಆಗಿದೆ. ಮಹಮ್ಮದಿಯರ ನಂಬಿಕೆಯಂತೆ ಕುರಾನ್‌ನಲ್ಲಿ ಅಡಕವಾಗಿರುವ ಬಹುತೇಕ ಅಂಶಗಳು ದೇವರಿಂದ ಗೇಬ್ರಿಯಲ್ ಮೂಲಕ ಮಹಮ್ಮದರಿಗೆ ಬೋಧಿಸಿದ ಜೀವನ ತತ್ವಗಳಾಗಿವೆ. ಇದರ ಜೊತೆಗೆ ಪ್ರವಾದಿ ಮಹಮ್ಮದ್ ಅನುಸರಿಸುತ್ತಿದ್ದ ಸಂಪ್ರದಾಯಗಳನ್ನು ಸುನ್ನಾ ಎಂದು ಕರೆಯಲಾಗುತ್ತದೆ. ಸುನ್ನಾಗಳೆಂದರೆ ಧಾರ್ಮಿಕ ಸಂಪ್ರದಾಯಗಳೆಂದು ಅರ್ಥ.

ಇಸ್ಲಾಂ ಧರ್ಮಗ್ರಂಥವಾದ ಕುರಾನ್ ಪ್ರಪಂಚದ ಹಲವಾರು ಭಾಷೆಗಳಿಗೆ ಭಾಷಾಂತರ ಗೊಂಡಿದ್ದರೂ ಅರಬ್ಬಿ ಭಾಷೆಯನ್ನು ಕಲಿತು ಓದುವುದು ಸೂಕ್ತವೆಂಬುದು ಅನೇಕ ಮುಸ್ಲಿಂ ವಿದ್ವಾಂಸರ ಅಭಿಪ್ರಾಯ. ಈ ಗ್ರಂಥವು ಸುರಾ ಎಂದು ಕರೆಯುವ 114 ಅಧ್ಯಾಯಗಳು 6,236 ಶ್ಲೋಕ ಅಥವಾ ಚರಣಗಳು, 77,924 ಪದಗಳು, 3,23,621 ಅಕ್ಷರಗಳನ್ನು ಒಳಗೊಂಡಿದೆ.

ಇಸ್ಲಾಂ ಧರ್ಮ ಬೋಧಿಸುವ ತತ್ತ್ವಗಳ ಬಗ್ಗೆ ಪೂರ್ಣ ತಿಳುವಳಿಕೆಗೆ ಅನುಕೂಲ ವಾಗುವಂತೆ ಕುರಾನ್ ಗ್ರಂಥದ ವಿಮರ್ಶೆಯನ್ನು ಪ್ರಖ್ಯಾತ ಮುಸ್ಲಿಂ ವಿದ್ವಾಂಸರಾದ ಅಲ್–ತಬರಿ (ದಿ. 923), ಅಲ್ ಜಮಾಕ್ ಸಾರಿ (1075–1143), ಅಲ್ ರಾಜಿ (1149–1208) ಮತ್ತು ಅಲ್ ಬೈದಾವಿ (1246)ರಲ್ಲಿ ವಿಶ್ಲೇಷಿಸುವುದರ ಮೂಲಕ ಅರ್ಥವಿವರಣೆ ನೀಡಲು ಪ್ರಯತ್ನಿಸಿದ್ದಾರೆ. ಇಸ್ಲಾಂ ಧರ್ಮ ಅತ್ಯಂತ ಪ್ರಮುಖವಾದ ಪಂಚಸೂತ್ರಗಳ ಮೇಲೆ ನಿಂತಿದೆ. ಇವುಗಳನ್ನು ಇಸ್ಲಾಂ ಧರ್ಮದ ಆಧಾರ ಸ್ತಂಭಗಳೆನ್ನುತ್ತಾರೆ. ಅವುಗಳು 1. ನಂಬಿಕೆ, 2. ಸಲಾತ್, 3. ಜಕಾತ್, 4. ಉಪವಾಸ ಮತ್ತು 5. ಯಾತ್ರೆ. ಪ್ರತಿಯೊಬ್ಬ ಮುಸ್ಲಿಮನೂ ಈ ಸೂತ್ರಗಳನ್ನು ತಪ್ಪದೇ ಆಚರಿಸಬೇಕೆಂಬುದು ನಿಯಮವಾಗಿದೆ.

ಇಸ್ಲಾಂ ಧರ್ಮ 7ನೆಯ ಶತಮಾನದ ಪೂರ್ವಾರ್ಧದಲ್ಲಿ ಉದಯವಾದರೂ ಅತ್ಯಲ್ಪ ಕಾಲದಲ್ಲೇ ಅತಿ ಶೀಘ್ರವಾಗಿ ವಿಶ್ವದ ನಾನಾ ಕಡೆ ಹರಡಿತು. ಈ ಧರ್ಮ ಮೂಲತಃ ಅರೇಬಿಯದ ಅಲೆಮಾರಿ ಬುಡಕಟ್ಟು ಜೀವನ ಕ್ರಮಕ್ಕೆ ಒಂದು ಧಾರ್ಮಿಕ ಆಯಾಮ ತರಲು ಪ್ರವಾದಿ ಮಹಮ್ಮದ್‌ರಿಂದ ಸ್ಥಾಪಿತವಾಯಿತು. ಈ ಧರ್ಮದ ಸರಳತೆ, ಭ್ರಾತೃತ್ವ ಭಾವನೆ ಹಾಗೂ ಸಮಾನತೆಯ ತತ್ತ್ವಗಳಿಂದಾಗಿ ವಿಶ್ವವ್ಯಾಪಿ ಮನ್ನಣೆ ಗಳಿಸಿಕೊಂಡಿತು. ಅರೇಬಿಯದಿಂದ ಏಷ್ಯದ ಪೂರ್ವಭಾಗದ ತನಕ, ದಕ್ಷಿಣದ ಯಮನ್ ಪ್ರಾಂತದಿಂದ ಉತ್ತರದ ಕ್ಯಾಸ್ಪಿಯನ್ ಸಮುದ್ರದ ತನಕ, ಉತ್ತರ ಆಫ್ರಿಕದಿಂದ ಯುರೋಪಿನ ಡಾನ್ಯುಬ್ ನದಿಯ ತನಕ ವಿಸ್ತರಿಸಿದ ಈ ಧರ್ಮ, ಇಂದು ವಿಶ್ವದ ಅತಿ ದೊಡ್ಡ ಧರ್ಮವೆನಿಸಿದೆ.

ಇಸ್ಲಾಂ ಧರ್ಮದ ಏಳಿಗೆ ಹಾಗೂ ವಿಸ್ತರಣೆಗೆ ಪ್ರಮುಖವಾಗಿ ಕಾರಣಕರ್ತರೆಂದರೆ ಪ್ರವಾದಿ ಮಹಮ್ಮದ್‌ರ ಅನಂತರ ಅಧಿಕಾರಕ್ಕೆ ಬಂದ ಸಂಪ್ರದಾಯಸ್ಥ ಖಲೀಫರು, ಉಮಾಯಿದ್ದ್, ಅಬ್ಬಾಸಿದ್ ಹಾಗೂ ತುರ್ಕರು ರಾಜ್ಯವಿಸ್ತರಣೆಯ ಜೊತೆ ಜೊತೆಯಲ್ಲಿಯೇ ಸಾಗಿದ ಈ ಧರ್ಮ, ಅರಬ್ಬಿ ಭಾಷೆ ಎಲ್ಲ ಕಡೆ ಹರಡುವಲ್ಲಿ ಸಹಕಾರಿಯಾಯಿತು. ಧರ್ಮದ ವಿಸ್ತರಣೆಯಲ್ಲಿ ಖಡ್ಗ ಸಹ ತನ್ನ ಪಾತ್ರ ವಹಿಸಿತೆಂದರೆ ತಪ್ಪಾಗಲಾರದು. ಮುಂದೆ ಸೂಫಿ ಪಂಥ, ಷಿಯಾ ಪಂಥ, ಬಹಾಯಿ ಪಂಥ ಜನ್ಮ ತಳೆದು ಮುಸ್ಲಿಮ್ ಧರ್ಮದ ದೋಷಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾದವು. ಸೂಫಿ ಪಂಥ ವಿಶ್ವದಲ್ಲೇ ತನ್ನ ಧಾರ್ಮಿಕ ಸ್ವರೂಪವನ್ನು ಎತ್ತಿಹಿಡಿದಿದೆ. ಸಂಪ್ರದಾಯಬದ್ಧ ಆಚರಣೆಗಳನ್ನು ಸುನ್ನಾಗಳೆಂದೂ ಅದನ್ನು ಪಾಲಿಸುವವರು ಸುನ್ನಿಗಳೆಂದು ಕರೆಯಲಾಗುತ್ತದೆ. 4ನೆಯ ಸಂಪ್ರದಾಯ ಖಲೀಫರಾದ ಹಜರತ್ ಅಲಿ ಯವರನ್ನು ಬೆಂಬಲಿಸಿ ಅವರಿಗೋಸ್ಕರ ತಮ್ಮ ಪ್ರಾಣವನ್ನು ತ್ಯಜಿಸಿದ ಅನುಯಾಯಿಗಳ ಪಂಥವನ್ನು ಸಯ್ಯದ್ಸ್ ಅಥವಾ ಷಿಯಾಗಳೆಂದು ಕರೆಯುತ್ತಾರೆ.

ಇಸ್ಲಾಂ ಧರ್ಮದ ಆಚರಣೆಗಳಲ್ಲಿ ಮೊಹರಂ, ರಂಜಾನ್, ಬಕ್ರೀದ್ ಹಬ್ಬಗಳು ಪ್ರಮುಖವಾದವುಗಳಾಗಿದ್ದು, ಮೊಹರಂ ಷಿಯಾಗಳ ಪವಿತ್ರ ಹಬ್ಬ, ರಂಜಾನ್ ಹಾಗೂ ಬಕ್ರೀದ್ ಆಚರಣೆಗೆ ಇಸ್ಲಾಂ ಪೂರ್ವದಿಂದಲೂ ಮನ್ನಣೆಯಿದೆ. ಸರಳವಾದ ಆಚರಣೆಯಿಂದ ರಚಿತವಾದ ಧರ್ಮವೊಂದು ಸರಿಯಾದ ಧಾರ್ಮಿಕ ಮುಖಂಡರ ಮಾರ್ಗದರ್ಶನದಲ್ಲಿ ಹೇಗೆ ಅಭಿವೃದ್ಧಿ ಕಾಣಬಹುದು ಎಂಬುದಕ್ಕೆ ಸು. 1400 ವರ್ಷಗಳ ಇತಿಹಾಸವಿರುವ ಇಸ್ಲಾಂ ಧರ್ಮ ಒಂದು ನಿದರ್ಶನ. (ಎಸ್.ಜಿ.ಎಂ.)

**ಇಸ್ಲಾಮೀ ವಾಸ್ತುಶಿಲ್ಪ, ಕಲೆ:** ಪ್ರ.ಶ. 7ನೆಯ ಶತಮಾನದಲ್ಲಿ ಈ ಕಲೆ ಹುಟ್ಟುವುದಕ್ಕೆ ಮುಂಚೆ, ಅಕ್ಕಪಕ್ಕದಲ್ಲಿದ್ದ, ಸಿರಿಯ, ಮೆಸೊಪೊಟೇಮಿಯ ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲಿ ವಾಸ್ತುಶಿಲ್ಪ, ಚಿತ್ರರಚನೆ, ಮುಂತಾದ ಕಲೆಗಳು ಒಂದು ರೀತಿಯ ಮೇಲ್ಮಟ್ಟವನ್ನು ಆಗಲೇ ಸಾಧಿಸಿದ್ದುವು. ಇಸ್ಲಾಂ ಧರ್ಮದಲ್ಲಿ ವಿಗ್ರಹರಚನೆ, ಅದರ ಆರಾಧನೆ ಮತ್ತು ಚಿತ್ರಕಲೆಯಲ್ಲಿ ಮನುಷ್ಯ, ಪಶು, ಪಕ್ಷಿ ಮುಂತಾದ ಜೀವಿಗಳ ನಿರೂಪಣೆ ನಿಷಿದ್ಧ. ದೇವರ ವಿನಾ ಮತ್ತೊಬ್ಬರಿಗೆ ಆಕೃತಿಗಳನ್ನು ಸೃಷ್ಟಿಸುವ ಅಧಿಕಾರವಿಲ್ಲವೆಂದು ಅವರು ಭಾವಿಸಿದ್ದರು. ಷಟ್ ದಿಕ್ಕುಗಳನ್ನು ಸೂಚಿಸುವುದು, ಪಂಚೇಂದ್ರಿಯಗಳಿಗೆ ಪರಿಣಾಮವನ್ನುಂಟುಮಾಡುವಂತೆ ಚಿತ್ರರಚನೆ ಮಾಡುವುದು–ಅಂದರೆ ಮುಖ್ಯವಾಗಿ ಉದ್ದ, ಅಗಲ, ಎತ್ತರ ಮತ್ತು ಜೀವಂತವಾದ ಆಕೃತಿಗಳ ರಚನೆ–ಘೋರ ಪಾಪವೆಂದು ಹನಾಫೀಯರು ಭಾವಿಸಿದ್ದರು. ಆದ್ದರಿಂದ ಇಸ್ಲಾಮೀ ಕಲೆಯ ಪ್ರಾರಂಭದಲ್ಲಿ ಮಾನವ ಪಶು ಪ್ರಾಣಿಗಳ ಆಕೃತಿಗಳು ಕಾಣವು. ರೇಖಾಗಣಿತದ ಚತುರಶ್ರ, ಮತ್ತು ವಿವಿಧ ಭಂಗಿಗಳ ಸುರಳೀ ರೂಪಗಳು ಕುರಾನ್ ವಚನಗಳನ್ನೊಳಗೊಂಡಂತೆ ಮಾತ್ರ ರಚಿತವಾದವು. ಈ ನಿರೂಪಣೆಯಲ್ಲಿನ ಪುಷ್ಪಲತಾ ವಿನ್ಯಾಸದ ಕಲ್ಪನಾಶಕ್ತಿ ಗಮನೀಯ. ಉದಾರ ಮನಸ್ಸಿನವರಾದ ಷಿಯ ಪಂಗಡದವರು ಈ ನಿಯಮವನ್ನು ಪಾಲಿಸಲಿಲ್ಲ.

ರಮ್ಯವಾದ ಇಸ್ಲಾಂ ಶಿಲ್ಪಾಕೃತಿಗಳು ಮತ್ತು ಚಿತ್ರಗಳು ಮುಖ್ಯವಾಗಿ ಸ್ಪೇನ್, ಸಿಸಿಲಿ, ಪರ್ಷಿಯ, ತುರ್ಕಿ, ಈಜಿಪ್ಟ್, ಭಾರತ, ಪಾಕಿಸ್ತಾನ ಮುಂತಾದ ದೇಶಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಭಾರತ, ಚೀನ, ಬೈಜಾಂಟಿಯನ್‌ಗಳ ಪ್ರಾಚೀನ ಧರ್ಮ ಮತ್ತು ಸಂಸ್ಕೃತಿಗಳ ಪ್ರಭಾವಗಳು ಕಂಡುಬಂದರೂ ಇಸ್ಲಾಮೀ ಕಲೆಯ ಪ್ರತ್ಯೇಕತೆ ಗಮನಾರ್ಹವಾಗಿ ಉಳಿದುಬಂದಿದೆ. ದಂತದ ಕೆತ್ತನೆ ಮತ್ತು ಕುಂದಣದ ಕೆಲಸ, ನೇಯ್ಗೆಯ ಕೆಲಸ, ಲೋಹ, ಗಾಜು, ಮಡಕೆ, ವಾಸ್ತುಶಿಲ್ಪ ಮುಂತಾದವುಗಳ ಅಲಂಕಾರವಿಧಾನದಲ್ಲಿ ಮುಸಲ್ಮಾನರ ಶೈಲಿ ಪಾಶ್ಚಾತ್ಯ ಕಲೆಗಳ ಮೇಲೆ ಪರಿಣಾಮವನ್ನುಂಟುಮಾಡಿತು. ಮಿನಾಯಿ (ಎನಾಮ್ಲು) ಹಾಕುವುದರಲ್ಲಿ ಇಸ್ಲಾಮೀ ಕಲೆ ಮೇಲ್ಮಟ್ಟವನ್ನು ಸಾಧಿಸಲಿಲ್ಲ. ಆದರೆ ಮಡಕೆಗಳಿಗೆ ಬಣ್ಣ ಬಣ್ಣದ ಹೊಳಪು ಕೊಡುವುದರಲ್ಲಿ ನೈಪುಣ್ಯವನ್ನು ಮಾತ್ರ ಸಾಧಿಸಿತ್ತು. ಇದಕ್ಕೆ ವೆಲೆನ್‌ಷಿಯ ಕೇಂದ್ರವಾಗಿತ್ತು. ಇಲ್ಲಿಂದ ಆಮದು ಮಾಡಿದ ಮಡಕೆಗಳು ಪಾಯಿಷರ್ಸ್ ಮಡಕೆ ಕಲೆಗೆ ತಳಹದಿ ಹಾಕಿದುವು. ಸ್ಪೇನ್ ದೇಶದಿಂದ ಇಟಲಿಗೂ ಹಾಲೆಂಡಿಗೂ ಇಸ್ಲಾಮೀ ಕಲೆಯ ಪ್ರಭಾವ ಹಬ್ಬಿತು. ಸ್ಪೇನ್, ಸಿರಿಯ ದೇಶಗಳಿಂದ ಗಾಜಿಗೆ ಬಣ್ಣ ಹಾಕುವ ಶೈಲಿ ಬಂತು. ಮಡಕೆ ನಿರ್ಮಾಣದಲ್ಲಿ, ನಾನಾ ವರ್ಣಪ್ರಸ್ತರಗಳನ್ನು ಅಳವಡಿಸುವಲ್ಲಿ, ಹೊಳಪು ಕೊಡುವುದರಲ್ಲಿ ಸ್ಪೇನ್ ಮತ್ತು ಪೋರ್ಚುಗಲ್ಲಿನವರು ಇಸ್ಲಾಮಿಯರಿಗೆ ಚಿರಋಣಿಗಳು. ಆದರೆ ಹೊಳೆಯುವ ಮುಡೇಗಾರ್ ಕಲಾತ್ಮಕ ಮಡಕೆಗಳು ಚೀನೀಯರ ಮಡಕೆಗಳನ್ನು ಮೀರಿಸಲಾರವು. ಮಧ್ಯಯುಗದ ರತ್ನಗಂಬಳಿ ಮುಂತಾದವುಗಳ ನೇಯ್ಗೆಯ ಕೆಲಸದಲ್ಲಿ ಅರಬ್ಬರು ಪ್ರಖ್ಯಾತಿ

ಹೊಂದಿದ್ದರೂ ಅವರು ಅಲಂಕಾರ ರಚನೆಯಲ್ಲಿ ಪರ್ಷಿಯನ್ನರಿಗಿಂತ ಮಿಗಿಲೆನಿಸಲಾರರು. ಅಲ್–ಮೌಸಿಲ್ ಪ್ರದೇಶದಿಂದ ಇಟಲಿಗೆ ಆಮದು ಮಾಡಿದ ನಿರ್ಮಲವಾದ ಅತಿ ಪಾರದರ್ಶಕ ಬಟ್ಟೆ, ರೇಶ್ಮೆಯ ಚಪ್ಪರ ಇವು ಮತ್ತೆರಡು ಉದಾಹರಣೆಗಳಾಗಿವೆ. ಅರ್ಥವಿಲ್ಲದ ಬರಹದ ಅಲಂಕಾರ ಮತ್ತು ಅರಬೆಸ್ಕುಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ 12ನೆಯ ಶತಮಾನದಿಂದ (ಲೋಹ, ಗಾಜು, ಮಡಕೆ, ವಾಸ್ತುಶಿಲ್ಪ, ಅಲಂಕಾರರಚನೆ, ಚಿತ್ರಣ ಮುಂತಾದವುಗಳಲ್ಲಿ) ಇಸ್ಲಾಮೀ ಕಲೆಯನ್ನು ಅನುಕರಿಸಲಾಯಿತು. ಇಂದಿಗೂ ಸ್ಪೇನ್, ಸಿಸಿಲಿ ಮುಂತಾದ ದೇಶಗಳಲ್ಲಿ ಪೂರ್ವ ಪ್ರದೇಶದ ಕಸಬುಗಾರರು ಅಲ್ಲಿಯೇ ಉಳಿದುಕೊಂಡು ತಮ್ಮ ಕಲಾಕೃತಿಗಳಿಗೆ ಇಸ್ಲಾಮೀ ಪಾರಿಭಾಷಿಕ ಪದಗಳನ್ನು ಉಪಯೋಗಿಸುತ್ತಾರೆ.



ಹುಮಾಯುನನ ಗೋರಿ

ಸ್ಪೇನ್ ದೇಶದಲ್ಲಿ ಇಸ್ಲಾಂ ಸಂಪ್ರದಾಯದ ವಾಸ್ತುಶಿಲ್ಪದ ಅವಶೇಷಗಳು ಕಾರ್ಡೋವದಲ್ಲಿ ಗ್ರಾನಡ ಪ್ರಾಂತ್ಯದ ಅಲ್–ಹಮ್–ಬ್ರಾನಲ್ಲಿ ನೋಡಬಹುದು. ಜೆರೂಸಲೆಂ ಮತ್ತು ಮೆಕ್ಕಗಳಲ್ಲಿಯ ಮಸೀದಿಗಳಿಗೆ ಅವು ಪ್ರಕೃತಿಗಳಾಗಿವೆ. ಅಲ್–ಹಮ್–ಬ್ರಾ ಕಟ್ಟಡ ಪ್ರ.ಶ. 786ರಲ್ಲಿ ಅಬ್–ಅಲ್ ರಾಜನಿಂದ ಪ್ರಾರಂಭಗೊಂಡು ಅವನ ವಂಶಿಕರಿಂದ ಪೂರ್ಣಗೊಂಡಿತು. ಇದು ಪಾಶ್ಚಾತ್ಯ ಕಬಾಷ್ ಎಂದು ಪ್ರಖ್ಯಾತಿ ಪಡೆಯಿತು. ಘನವಾದ 1,203 ಸ್ತಂಭಗಳನ್ನೊಳಗೊಂಡ ಅರಣ್ಯದಂತೆ ಕಾಣುವ ಈ ಮಸೀದಿಯಲ್ಲಿ ಕ್ರೈಸ್ತರ ಹಿತ್ತಾಳೆ ಗಂಟೆಗಳಿಂದ ರಚಿಸಲಾದ, ಒಂದು ಸಾವಿರ ಜ್ಯೋತಿಗಳನ್ನೊಳಗೊಂಡ ಒಂದು ಗುಚ್ಛವಿದೆ. ಉಮಾಯದ್ ಮಸೀದಿಗಳನ್ನು ಕಟ್ಟಿದ ಬೈಜಾಂಟೀಯನ್ ಕಲೆಗಾರರು ಇದನ್ನು ಅಲಂಕರಿಸಿದ್ದಾರೆ. ಗ್ರೀಕರ ಕಲೆ ಸಂಸ್ಕೃತಿಗಳ ಪ್ರಭಾವ ಇದರ ಗುಂಡಾದ ಕಂಬಗಳ ಮೇಲಿನ ಅಕ್ಯಾಂತಸ್ ಶೃಂಗಾರವ ನ್ನೊಳಗೊಂಡ ಚತುರರ್ಶರ ಬೋದಿಗೆಗಳಿಂದ ಸ್ಪಷ್ಟವಾಗುತ್ತದೆ. ಬಿಳಿ ಮತ್ತು ಕಪ್ಪು ಬಣ್ಣದ ಕಲ್ಲುಗಳಿಂದ ರೂಪಿಸಿದ ಅರ್ಧಚಂದ್ರಾಕಾರದ ಕಮಾನುಗಳನ್ನು ಈ ಬೋಧಿಗೆಗಳು ಧರಿಸಿವೆ. ಕಂಬಗಳಿಗೆ ಪಾದಗಳಿಲ್ಲ.

ಮಧುರವಾದ ಇಸ್‌ಫಾನೋ ಶೈಲಿಯ ಶೃಂಗಾರದ ವೈಶಿಷ್ಟ್ಯ ಅಲ್–ಹಮ್–ಬ್ರಾ ವಾಸ್ತುಶಿಲ್ಪದಲ್ಲಿ ಹೇರಳವಾಗಿ ಕಂಡು ಬರುತ್ತದೆ. ಇಲ್ಲಿಯ ಮೊಸಾಯಿಕ್ಸ್, ಸ್ಟ್ವಾ–ಲಕ್–ಟೈಟ್ಸ್ ಬರೆಹದ ಅಲಂಕಾರ ಪಕ್ಷಿ ಮೃಗಗಳನ್ನೊಳಗೊಂಡ ಲತಾ ವಿಧಾನದ ಸುರಳೀ ಶೃಂಗಾರವುಳ್ಳ ಸ್ತಂಭಗಳು ವಿವಿಧ ರೂಪಗಳನ್ನೊಳಗೊಂಡ ಬೋಧಿಗೆಗಳು–ಮುಂತಾದುವು ಅತ್ಯದ್ಭುತವಾಗಿವೆ. ಇದರ ಒಳಗಿನ ಅಲಂಕಾರ ಅಬ್–ಅಲ್–ಹಾಜ್ಜಾಜ್ ಕಾಲದಲ್ಲಿ (1333–34) ಪೂರ್ಣಗೊಂಡಿತೆಂದು ಗೋಡೆಗಳ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ. ಸಿಂಹಗಳ ಪ್ರಾಂಗಣದಲ್ಲಿ ಅಲ್ಲಿಯ ಅತ್ಯುತ್ತಮ ಸೌಂದರ್ಯ ಕಂಡುಬರುತ್ತದೆ. ಅಲ್ಲಿ ಹನ್ನೆರಡು ಅಮೃತಶಿಲೆಯ ಸಿಂಹಗಳು ಗುಂಡಾಗಿ ನಿಂತು ಬಾಯಿಂದ ನೀರನ್ನು ಹೊರಸೂಸುತ್ತವೆ. ಈ ಪ್ರಾಂಗಣ ದೀರ್ಘ ಚತುರಸ್ರವಾಗಿದ್ದು (38.4 x 20.2 ಮೀ) 124 ಅಮೃತಶಿಲೆಯ ಕಂಬಗಳುಳ್ಳ ಭವನವಾಗಿದೆ. ಕಂಬಗಳ ಮೇಲೆ ತಗ್ಗಾದ ಕೈಸಾಲೆ ಇದೆ. ಇದರ ಮುಂಭಾಗ ದಲ್ಲಿಯ ಭದ್ರಮಂಟಪ ಪ್ರಾಂಗಣದಲ್ಲಿ ಹೊರಟುಇದರ ಎರಡು ಪಾರ್ಶ್ವಗಳ ಕೊನೆಗಳಲ್ಲಿ ಅಲಂಕೃತ ಗೋಪುರಗಳಿವೆ. ಪ್ರಾಂಗಣದ ನೆಲಕ್ಕೆ ಬಣ್ಣಬಣ್ಣದ ಹೆಂಚುಗಳನ್ನು ಹಾಸಲಾಗಿದೆ. ಗೋಡೆಗಳ ಮೇಲೆ 1.5 ಮೀ ಎತ್ತರದ ವರೆಗೂ ಮೇಲೆ ಕೆಳಗೆ ನೀಲಿ ಮತ್ತು ಚಿನ್ನದ ಬಣ್ಣದ ವಜ್ರಾಗಾರೆಯ ರೇಖಾ ಚೌಕಟ್ಟಿನಲ್ಲಿ ಕೂಡಿಸಿದ ನೀಲಿ ಮತ್ತು ಹಳದಿ ಬಣ್ಣಗಳ ಹೆಂಚುಗಳನ್ನು ಅಂಟಿಸಲಾಗಿದೆ. ಸ್ತಂಭಗಳ ಮೇಲಿನ ಕಮಾನುಗಳೂ ಅವುಗಳ ಮೇಲಿನ ಲತಾವಿಧಾನದ ಅಲಂಕಾರವೂ ಅತಿ ಕೋಮಲವಾಗಿವೆ. ಕಮಾನುಗಳು ಮಧ್ಯಭಾಗದಲ್ಲಿ ಜರತಾರಿ ಕಸೂತಿಯಂತೆ ಕಾಣುವ ಚತುರಶ್ರ ಬಿಲ್ಲೆಯ ಕೆಳಗೆ ಮತ್ತೊಂದು ಅರಬೆಸ್ಕ್ ಮಾದರಿಯ ಚಿತ್ತಾರ ಕೂಡ ಇದೆ.

ನ್ಯಾಯಸ್ಥಾನದ ಪಡಸಾಲೆಯ ಒಳಮಾಳಿಗೆಯ ಚಿತ್ರಗಳು ತೊಗಲಿನ ಮೇಲೆ ರಚಿತವಾಗಿ ಮುಸಲ್ಮಾನರ ಶೌರ್ಯಸೂಚಕವಾದ ವಿವಿಧ ಬೇಟೆಯ ದೃಶ್ಯಗಳನ್ನು ಒಳಗೊಂಡಿವೆ. ಇಲ್ಲಿಯ ಚಿತ್ರರಚನೆಯಲ್ಲಿ ಮೇಲ್ಮಟ್ಟದ ಬೈಜಾನ್ಟೀಯನ್ ಕಲೆಯ ಮುಖ್ಯಾಂಶಗಳು ವಿಶೇಷವಾಗಿ ಕಂಡುಬರುವುವು. ದೇಶವನ್ನಾಳಿದ ಹತ್ತು ರಾಜರು ವರ್ತುಲಾಕಾರದ ಪೀಠದಲ್ಲಿ ಕುಳಿತಿರುವ ಚಿತ್ರವಿದೆ. ಸ್ತಂಭಗಳು ಸುಂದರವಾದ ಲತಾವಿನ್ಯಾಸದಿಂದ ಶೋಭಿಸುತ್ತಿವೆ. ಇವುಗಳ ಮೇಲಿನ ಲಾಳದಾಕಾರವುಳ್ಳ ಕಮಾನುಗಳು ಇಸ್ಲಾಂ ಮತ ಹುಟ್ಟುವುದಕ್ಕೆ ಮುಂಚೆಯೇ ಭಾರತದಲ್ಲಿ (ಕನ್ಹೇರಿ, ಅಜಂತ, ಬಾಜಾ ಗುಹೆಗಳು) ಹೇರಳವಾಗಿದ್ದುವು. ರಾಯಭಾರಿಗಳ ಪಡಸಾಲೆ ಚಚ್ಚೌಕವಾಗಿದೆ (11.27 x 11.27 ಮೀ). ಇದು ಇಸ್ಲಾಂ ಸುಲ್ತಾನ ಸಿಂಹಾಸನಾರೂಢನಾಗಿ ದೇಶೀಯ ರಾಯಭಾರಿಗಳಿಗೆ ದರ್ಶನ ಕೊಡುವ ಸ್ಥಳ. 30.47ಸೆಂಮೀ ಎತ್ತರದ ವರ್ಣರಂಜಿತ ಹೆಂಚುಗಳನ್ನು ಗೋಡೆಗಳ ಸುತ್ತಲೂ ಹಾಸಿ ಇವುಗಳ ಮೇಲೆ ಹೂವು ಮತ್ತು ಎಲೆಗಳ ಮಧ್ಯದಲ್ಲಿ ಶೋಭಿಸುವ ಶಾಸನಗಳನ್ನೊಳಗೊಂಡ ವರ್ತುಲಾಕಾರದ ಪದಕಗಳನ್ನಿಟ್ಟಿದ್ದಾರೆ. 22.85ಮೀ ಎತ್ತರ ಇರುವ ಪಡಸಾಲೆಯ ಗೋಪುರದ ಒಳಮಾಳಿಗೆ ನಕ್ಷತ್ರಗಳಿಂದ ತುಂಬಿ ತುಳುಕಾಡುವ ಆಕಾಶದಂತೆ ವಿನ್ಯಾಸಗೊಂಡಿದೆ. ರಾಯಭಾರಿಗಳ ಪಡಸಾಲೆಯಲ್ಲಿಯ ಮೊಸಾಯಿಕ್, ಅರಬೆಸ್ಕ್ ಅಲಂಕಾರ ಭಾರತದಲ್ಲಿ ಅಕ್ಬರ್ ನಿರ್ಮಿಸಿದ ಫತೆಪುರ್ ಸಿಕ್ರಿ ಮುಂತಾದಕಡೆ ಮಾತ್ರ ಕಂಡು ಬರುತ್ತದೆ. ಸುಂದರವಾದ ಜೋಡಿಸಿದ ಮೊಸಾಯಿಕ್ ಹೆಂಚುಗಳ ವಿಧಾನ ಪಾಕಿಸ್ತಾನದ ಲಾಹೋರ್ ಕೋಟೆಯ ಸೌಂದರ್ಯವನ್ನು ಹೋಲುತ್ತದೆ. ಅಲ್–ಹಮ್ರಾದ ಗಾಂಭೀರ್ಯ, ಇದರ ಒಳಮಾಳಿಗೆಯ ಕೆತ್ತನೆ, ಪಾರದರ್ಶಕ ಪರದೆಯಂತೆ ಕೋಮಲವಾಗಿ ಗಾರೆಯಿಂದ ಕೊರೆದ ಜರತಾರಿ, ಕಸೂತಿ ಕೆಲಸ, ಅತಿ ಉತ್ತಮವಾದ ಅಲಂಕಾರ ಮುಂತಾದವು ಇಲ್ಲಿಯ ತಂಪುಗಾಳಿಯಷ್ಟು ನವುರಾಗಿದೆ.

ಸಿಸಿಲಿ ದ್ವೀಪದಲ್ಲಿ ಇಸ್ಲಾಂ ಕಲಾ ಅವಶೇಷಗಳು ಹೆಚ್ಚಾಗಿ ಇಲ್ಲ. ಆದರೆ ಇದು ನಾರ್ಮನ್ನರ ಆಡಳಿತಕ್ಕೆ ಬಂದ ಅನಂತರ ಅಲ್–ಹಮ್–ಬ್ರಾ ವೈಶಿಷ್ಟ್ಯವನ್ನು ನೆನಪಿಗೆ ತರುವ ಕಲಾಕೃತಿಗಳೂ ಕ್ರೈಸ್ತರ, ಗ್ರೀಕರ ಮತ್ತು ಚೀನಿಯರ ಸಂಸ್ಕೃತಿಗಳ ಮಿಶ್ರಣದವು ಕೆಲವೂ ಉಳಿದುಕೊಂಡಿವೆ. ಅವುಗಳ ಪೈಕಿ ಅತಿ ಮುಖ್ಯವಾದವು ಸುಲ್ತಾನ್ ಮತ್ತು ಅಮೀರ್‌ಗಳ ಅಂತಃಪುರಗಳಾದ ಲಾ–ಕ್ಯೂಬಾ ಮತ್ತು ಲಾ–ಬೀಜಾ. ಮೀನುಗಳು ಕ್ರೀಡಿಸುವ ಅಮೃತಶಿಲೆಯ ಕೊಳಗಳು, ಇವುಗಳ ಸುತ್ತಿನ ಕೋಮಲವಾದ ಅರಬೆಸ್ಕ್ ಕೆತ್ತನೆ, ಸ್ತಂಭಗಳ ಮೇಲಿನ ಅಡ್ಡಪಟ್ಟಿಗಳ ಶೃಂಗಾರ, ವಿಧವಿಧವಾದ ಗ್ರೀಕರ ಶೈಲಿಯಲ್ಲಿ ಅಲಂಕರಿಸಲಾದ ಬೋದಿಗೆಗಳು, ಹೊಳೆಯುವ ಅಮೃತಶಿಲೆಯ ಕಂಬಗಳು, ಜರತಾರಿ ಕಸೂತಿಯನ್ನು ಮೀರಿಸುವ, ಒಳಮಾಳಿಗೆಯಿಂದ ನೇತಾಡುವ, ನಯಗಾರೆಯಲ್ಲಿ ಕೊರೆದ ಜೇನುಗೂಡುಗಳು–ಮುಂತಾದವು ಹೇರಳವಾಗಿರುವುದಲ್ಲದೆ ವಿಸ್ಮಯಕರವಾಗಿವೆ. ಮಾರ್ಟ್ರೋಲ್ಸ್ ಎಂಬ ಸಿಹಿನೀರಿನ



ಹುಮಾಯುನನ ಗೋರಿ ಸಂಕೀರ್ಣದ ಒಂದು ಭಾಗ

ಸರೋವರ ನಾರ್ಮನ್ ರಾಜರಿಗೆ ವಿಶ್ರಾಂತಿಸ್ಥಾನವಾಗಿತ್ತು. ಮುಸಲ್ಮಾನರ ವಾಸ್ತುಶಿಲ್ಪಕ್ಕೆ ಬೆರಗಾಗಿ ಅವರು ಪೆಲೆರ್ಮೊವನ್ನು ತಮ್ಮ ಮುಖ್ಯ ಪಟ್ಟಣವನ್ನಾಗಿ ಮಾಡಿಕೊಂಡರು. ಕ್ರೈಸ್ತರ, ಗ್ರೀಕರ, ಮುಸಲ್ಮಾನರ ಮತ್ತು ಇತರ ವರ್ಣೀಯರ ಸಂಕಟ ಅಲ್ಲಿ ಹೆಚ್ಚಾಗಿತ್ತು. ಈ ಪರಿಸ್ಥಿತಿಯಲ್ಲಿ ರಾಜ ರೋಜರ್ಸ್‌ನಿಂದ ನಿರ್ಮಿತವಾದ (ಪ್ರ.ಶ.1132) ಚಾಪೆಲ್–ರಿಯಲ್ ಹೆಸರಿನ ಸಣ್ಣ ದೇವಾಲಯ ಇಸ್ಲಾಮೀ ಕಲಾದೃಷ್ಟಿಯಲ್ಲಿ ಹೆಸರಾಗಿತ್ತು. ಇದರಲ್ಲಿಯ ಸಂಕೀರ್ಣ ಜಾತಿಯ ಬೋದಿಗೆಗಳನ್ನೊಳಗೊಂಡ ಪ್ರಾಚೀನ ಸಂಸ್ಕೃತಿಯ ಕಂಬಗಳು, ಅಲ್–ಹಮ್–ಬ್ರಾ ರೀತಿಯ ಒಳಮಾಳಿಗೆ, ಮುಸಲ್ಮಾನರ ಶೈಲಿಯಲ್ಲಿ ಅಲಂಕರಿಸಿದ

ಮೊನೆಯುಳ್ಳ ಅರ್ಧಚಂದ್ರಾಕಾರದ ಕಮಾನುಗಳು, ಚಿನ್ನದಿಂದ ಬಳಿದ ಗೋಡೆಗಳಲ್ಲಿ ಅಮೃತಶಿಲೆಯ ಫಲಕಗಳು. ಚಿನ್ನದ ನೀರೆರೆದ ಗೋಪುರಗಳು ಮುಂತಾದವು ರಮಣೀಯವಾಗಿವೆ. ಗೋಡೆಗಳ ಮೇಲೆ, ಗೋಪುರಗಳೊಳಗೆ ಕ್ರೈಸ್ತಧರ್ಮವನ್ನು ಸಾರುವ ಬೈಬಲ್ ದೃಶ್ಯಗಳು ಮೊಸಾಯಿಕ್ ಶ್ಲಾಘನೀಯವಾಗಿ ಚಿತ್ರಿತವಾಗಿವೆ. ಇದೇ ಉತ್ತಮವರ್ಗಕ್ಕೆ ಸೇರಿದ ಮತ್ತಿತರ ಕ್ರೈಸ್ತ ದೇವಾಲಯಗಳೆಂದರೆ ಲಾ–ಮೊರ್ರೋರನ, ಪೆಲೆರ್ಮೊ ಕಥೀಡ್ರಲ್ (1300–1426) ಮತ್ತು ಮ್ಯಾನ್‌ರಿಯಲ್ ಕಥೀಡ್ರಲ್ (1186).

ಸತ್ತವರನ್ನು ಪೆಲೆರ್ಮೊ ದೇವಾಲಯದ ನೆಲಮಾಳಿಗೆಯಲ್ಲಿ ಸಮಾಧಿ ಮಾಡುತ್ತಿದ್ದರು. ಇದು ಗ್ರೀಕರ ಅಲಂಕಾರಯುತವಾದ ಸ್ಥೂಲ ಸ್ತಂಭಗಳ ಮೇಲೆ ನಡುನಡುವೆ ಹಾಯುವ ಕಮಾನುಗಳನ್ನೊಳಗೊಂಡ ಗಂಭೀರವಾದ ಕಟ್ಟಡ. ಒಳಗೆ ಹೋದಲ್ಲಿ ಇಲ್ಲಿಯ ಚಿನ್ನ ಮತ್ತುಮೊಸಾಯಿಕ್ ಕಲೆಗಳಿಂದ ಅಲಂಕರಿಸಿದ ಗೋಡೆ ಮುಂತಾದುವು ವಿಸ್ಮಯಕಾರಕವಾಗಿವೆ. ಇಲ್ಲಿ ಕೂಡ ಮೇಲ್ಕಂಡ ಸಂಕೀರ್ಣ ಜಾತಿಯ ಕಲೆ ಕಂಡುಬರುತ್ತದೆ. ಇದರ ಮಠದಲ್ಲಿ (ಕ್ಲಾಯಿಸ್ಟರ್) ಕೂಡ ಸಂಕೀರ್ಣ ಜಾತಿಯ ವಾಸ್ತುಶಿಲ್ಪವಿದೆ. ಇಲ್ಲಿಯ ಸ್ತಂಭಗಳು ಒಂದನ್ನು ಮತ್ತೊಂದು ರೂಪದಲ್ಲಾಗಲಿ ಅಥವಾ ಶೃಂಗಾರದಲ್ಲಾಗಲಿ ಹೋಲುವುದಿಲ್ಲ. ಅತ್ಯಂತ ಕುಶಲತೆಯಿಂದ ಸಾಧಿಸಿದ ಇಲ್ಲಿಯ ಲಲಿತಾಲಂಕಾರ ಆಶ್ಚರ್ಯವನ್ನುಂಟುಮಾಡುತ್ತದೆ. ಒಂದು ಕಡೆ ಭಾರತ ಸಂಪ್ರದಾಯದ, ಅಮೃತಶಿಲೆಯಲ್ಲಿ ಕೊರೆದ, ಅರಳುವ ಪದ್ಮ, ಅದರ ಮಧ್ಯದಲ್ಲಿ ನಾರ್ಮನ್ ಶೈಲಿಯಲ್ಲಿ ಕೆತ್ತಿರುವ ವಕ್ರಾಲಂಕಾರ ಸ್ತಂಭೀಯುತ ಗರ್ಭ ಕೇಸರ, ಅದರ ಮೇಲಿನ ಇಸ್ಲಾಂ ರೀತಿಯ ಗುಂಡಾಕಾರದ ತುದಿ, ಮತ್ತೊಂದು ಕಡೆ ಚಿತ್ರವಿಚಿತ್ರವಾದ ಶೃಂಗಾರದಲ್ಲಿ ಒಂದನ್ನು ಮತ್ತೊಂದು ಹೋಲದೇ ಇರುವ ಬೋದಿಗೆಗಳು–ಇವೆಲ್ಲವೂ ಇಸ್ಲಾಂ ಸಂಕೀರ್ಣ ಜಾತಿಯ ಕಲಾ ವೈಶಿಷ್ಟ್ಯಕ್ಕೆ ಕೌಶಲಕ್ಕೆ ಉನ್ನತಮಟ್ಟದ ನಿದರ್ಶನಗಳು.

ಪೆಲೆರ್ಮೊ ಪ್ರಾಂತ್ಯದಲ್ಲಿ ಮನೋರಂಜನೆಯ ಅಥವಾ ವಿಶ್ರಾಂತಿಗಾಗಿ ನಿರ್ಮಿಸಿದ ಭವನಗಳು ಸಹ ಇಸ್ಲಾಮೀ ಕಲೆಯನ್ನು ದರ್ಶಿಸುತ್ತವೆ. ಪೆಲಗೋನಿಯ ಯುವರಾಜ ನಿರ್ಮಿಸಿದವುಗಳಲ್ಲಿ ಮನುಷ್ಯ, ಪಶು ಮತ್ತು ಇತರ ಸಂಕೀರ್ಣ ರೂಪಗಳ ಉತ್ಕೃಷ್ಟ ವಿವರಣೆ ಕಂಡುಬರುತ್ತದೆ. ಗೋಡೆಗಳೆಲ್ಲ ಕನ್ನಡಿಗಳಿಂದ ಕೂಡಿದ್ದು ಮಹಾಭಾರತದಲ್ಲಿಯ ರಾಜಸೂಯಯಾಗದ ಮಯನಿರ್ಮಿತ ಮಂಟಪವನ್ನು ನೆನಪಿಗೆ ತರುತ್ತದೆ. ಇದರಲ್ಲಿಯ ಕಳ್ಳ ಬಾಗಿಲುಗಳು, ವನವಾಸಿಗಳ ಮತ್ತು ಕ್ರೈಸ್ತರ ಪ್ರತಿಮೆಗಳು ಅದ್ಭುತವಾಗಿವೆ. ಈ ಭವನಗಳು ಬಾಬರ್, ಮತ್ತು ಜಹಾಂಗೀರ್ ಭಾರತದಲ್ಲಿ ನಿರ್ಮಿಸಿದ ಉದ್ಯಾನವನಗಳ ರೀತಿಯ ಉಪವನಗಳ ಮಧ್ಯೆ ಇದ್ದವೆಂದು ಸಿಸಿಲಿ ದೇಶದ ಚರಿತ್ರಕಾರರು ತಿಳಿಸುತ್ತಾರೆ.

ವಾಸ್ತು ಶಿಲ್ಪದಲ್ಲಿ ಪರ್ಷಿಯ ಅಂಥ ಘನತೆಯನ್ನು ಸಾಧಿಸಲಿಲ್ಲವಾದರೂ ಚಿತ್ರ ಕಲೆಯಲ್ಲಿ ಮಾತ್ರ ಉನ್ನತಮಟ್ಟದ ಸೊಬಗನ್ನು ಗಳಿಸಿತು. ಪಾರಸಿಕರಲ್ಲಿ ಅಸ್ಸೀರಿಯ ಮತ್ತು ಬ್ಯಾಬಿಲೋನಿಯ ಸಂಸ್ಕೃತಿಗಳ ಸಂಯೋಗ ಕಾಣುತ್ತದೆ. ಇಲ್ಲಿಯ ಇಸ್ಲಾಮೀ ಕಲೆಯ ಚರಿತ್ರೆ ಎರಡನೆಯ ಸಸೇನಿಯನ್ನರ ಆಡಳಿತದಿಂದ (226–652) ಪ್ರಾರಂಭವಾಯಿತು. ಇದು ವೀರರ ಯುಗ. ಆದಕಾರಣ ಅರ್ತಷೀರ್, ಪಾಪೂರ್, ಬಹ್ರಾಮ್‌ಗೂರ್ ಮುಂತಾದ ವೀರರ ಚರಿತ್ರೆಗಳನ್ನೊಳಗೊಂಡ ಚಿತ್ರರಂಜನೆ ಇದೆ. ಯುದ್ಧದ ಸಂಘಟನೆಗಳು, ಬೇಟೆಯ ದೃಶ್ಯಗಳು, ಮತ್ತು ವನ ನಿರ್ಮಾಣಗಳು ಇಲ್ಲಿ ವರ್ಣಿತವಾಗಿವೆ. ಸಸ್ಸಾನಿಯನ್ನರ ಆಡಳಿತದಲ್ಲಿ ರೂಪರಚನೆ ಕಟುವಾಗಿಯೂ ಬಲಯುತವಾಗಿಯೂ ಇತ್ತು; ಮುಖ ಚಿತ್ರಣ ಸುಧಾರಿಸಿದ್ದರೂ ಶೈಲಿ ಪ್ರಾಚೀನವೇ. ಸಸೇನಿಯನ್ನರ ಕಾಲದಲ್ಲಿ ಮೆನಿಕಿಯನ್ಸ್ ಎಂಬ ಹೆಸರಿನ ಒಂದು ಮತ ಹುಟ್ಟಿತು. ಇದು ಕ್ರೈಸ್ತ ಬೌದ್ಧ ಪಾರಸಿಕ ಧರ್ಮಗಳ ಸಂಯೋಗ. ಈ ಮತ ಪರ್ಷಿಯದ ಚಿತ್ರ ಕಲೆಯ ಮೇಲೆ ಗಮನಾರ್ಹವಾದ ಪರಿಣಾಮವನ್ನುಂಟುಮಾಡಿತು. ಫಿರ್ದೌಸಿ ನುಡಿದಂತೆ ಮಣಿ ಉತ್ತಮ ದರ್ಜೆಯ ಚಿತ್ರಕಾರ. ಇವನ ಪಂಥದವರ ಪ್ರಖ್ಯಾತ ಕಲಾ ಸೂತ್ರಗಳು ಮುಂದಿನ ಇಸ್ಲಾಮೀ ಕಲೆಯ ಮೇಲೆ ಹೆಚ್ಚಿನ ಪ್ರಭಾವ ಬೀರಿದುವು. ಸಸೇನಿಯನ್ನರ ಹಿಂಸೆಯಿಂದ ಚೀನಕ್ಕೆ ವಲಸೆ ಹೋದ ಕೆಲವರು 271ರಲ್ಲಿ ಪ್ರಸಿದ್ಧವಾದ ಹಸ್ತಲಿಖಿತ ಪುಸ್ತಕದ ಸೂಕ್ಷ್ಮ ಚಿತ್ರಗಳನ್ನು ರಚಿಸಿದರು.

ಪರ್ಷಿಯದ ಇಸ್ಲಾಮೀ ಕಲೆಯ ಚರಿತ್ರೆಯಲ್ಲಿ ಎರಡು ಮುಖ್ಯ ಯುಗಗಳನ್ನು ಗುರುತಿಸಬಹುದು: 1 ಉಮಾಯದ್ ಸುಲ್ತಾನರ ಯುಗ (661–750), ಅಬ್ಬಾಸಿದ್ ಸುಲ್ತಾನರ ಯುಗ (750–1258). ಮೊದಲ ಯುಗದಲ್ಲಿ ಮಹಮ್ಮದ್ ಪ್ರಚಾರ ಮಾಡಿದ ನಿರ್ಬಂಧಗಳನ್ನು ಕಲೆಯಲ್ಲಿ ಅನುಸರಿಸಲಾಯಿತು. ಆದಕಾರಣ ಕೇವಲ ಕಲ್ಪನಾರೂಪದ (ಅಬ್‌ಸ್ಟ್ರಾಕ್ಟ್) ಅಲಂಕಾರ ಶೈಲಿ ಮಾತ್ರ ಕಂಡುಬರುತ್ತದೆ. ಸೂಕ್ಷ್ಮ ಚಿತ್ರಗಳನ್ನೊಳಗೊಂಡ ಹಸ್ತಲಿಖಿತ ಪುಸ್ತಕಾಲಂಕಾರಕ್ಕೆ ಹೆಚ್ಚು ಮನ್ನಣೆ ಇತ್ತು. ಪ್ರಾರಂಭದಲ್ಲಿ ಲಿಪಿ ಸಂಬಂಧವಾದ ವಿಧಾನದಲ್ಲಿ ರೂಪ ರಚನೆ ಸಾಗಿತು. ಕೆಲವು ಕಾಲಾನಂತರ ಮನುಷ್ಯ ಪಶು ಪಕ್ಷಿ ರೂಪಗಳನ್ನೂ ಸೇರಿಸಲಾಯಿತು. ರೆಕ್ಕೆಗಳುಳ್ಳ ಕುದುರೆಯ ಮೇಲೆ ಮಹಮ್ಮದ್ ಸ್ವರ್ಗಕ್ಕೆ ಹಾರುತ್ತಿರುವ ಚಿತ್ರ ರಚಿತವಾಯಿತು. ನಯಗಾರೆಯ ಮೇಲಿನ ಚಿತ್ರಣ (ಫ್ರೆಸ್ಕೋ), ಮೊಸಾಯಿಕ್ ರಚನೆಗಳು ಉಮಾಯದ್ ಆಡಳಿತದಲ್ಲಿ (8ನೆಯ ಶತಮಾನ) ಟ್ರಾನ್ಸ್–ಜೋರ್ಡನ್, ಜೆರುಸಲೇಮ್, ಪ್ಯಾಲಸ್ತೀನ್ ಪ್ರದೇಶಗಳಲ್ಲಿ ವಿಪುಲವಾಗಿ ಹುಟ್ಟಿದುವು. ಆದರೆ ಚಿತ್ರಕಲೆ ಷಿಯ ಪಂಗಡಕ್ಕೆ ಸೇರಿದ ಅಬ್ಬಾಸಿದ್ ರಾಜರ ಕಾಲದಲ್ಲಿ ಮಾತ್ರ ಔನ್ನತ್ಯ ಪಡೆಯಿತು. ಈ ಶೈಲಿಯನ್ನು ಮೆಸಪೊಟೇಮಿಯ ಸಂಪ್ರದಾಯವೆಂದು ಕರೆಯುತ್ತಾರೆ. ಹಾರೂನ್–ಅಲ್–ರಷೀದನ ಕಾಲದಲ್ಲಿ (786–809) ಹಸ್ತಪ್ರತಿಗಳ ಅಲಂಕಾರ ಅತ್ಯುತ್ತಮ ಮಟ್ಟಕ್ಕೆ ಏರಿತು. ಸುಲ್ತಾನ್ ಮಹಮ್ಮದನ ಕಾಲದಲ್ಲಿ ಫಿರ್ದೌಸಿಯಿಂದ (1310) ರಚಿತವಾದ ಷಹ ನಾಮ ಹಸ್ತಲಿಖಿತ ಪುಸ್ತಕದಲ್ಲಿ ಚಿತ್ರರಚನೆ ಮತ್ತಷ್ಟು ರಮ್ಯತೆ ಪಡೆಯಿತು. ಇದೇ ರೀತಿಯ ಚಿತ್ರಣ ಸಂಸ್ಕೃತ ಹಿತೋಪದೇಶದ ಅನುವಾದ ಮತ್ತು ಇಬ್ನುಲ್–ಮುಖಫ ರಚಿಸಿದ ಕಲಿಲ–ವ–ದಿಮ್ನ ಗಳಲ್ಲೂ (760) ಫಣ್ಣವೀಡ್ರು, ಶಮನೀಡ್ರು (900–1229) ಮತ್ತು ಸೆಲ್‌ಜೂಕರ ಕಾಲದ ಅನೇಕ ಕೃತಿಗಳಲ್ಲೂ ದೊರೆಯುತ್ತವೆ. ಮಂಗೋಲ್ ವಂಶದ ಇಲ್–ಖಾನ್ ಮನೆತನದವರು (1220–1335) ಪರ್ಷಿಯವನ್ನು ಗೆದ್ದ ಅನಂತರ ಚಿತ್ರರಚನೆಯಲ್ಲಿ ಮಂಗೊಲಾಯಿಡ್ ಮುಖವನ್ನು ಉಡುಪುಗಳನ್ನು ಹೊಸ ಜಾತಿಯ ಕುದುರೆಗಳ ರೂಪಗಳನ್ನು ಮತ್ತು ಮುಖ್ಯವಾಗಿ ಚೀನಿಯರ ಕಲಾಸಂಸ್ಕೃತಿಯನ್ನು ಪರ್ಷಿಯದ ಕಲೆಗೆ ಕಾಣಿಕೆಯಾಗಿ ನೀಡಿದರು. ಸೂಕ್ಷ್ಮ ಚಿತ್ರಗಳು ಮತ್ತೊಮ್ಮೆ ಕಲ್ಪನಾಶೈಲಿಯೊಡನೆ ತಲೆದೋರಿದುವು. ಅದಲ್ಲದೆ ಸೂಕ್ಷ್ಮಾಕೃತಿಗಳ ಶೈಲಿ ಪರಿಪೂರ್ಣತೆ ಪಡೆಯಿತು. ಉದಾಹರಣೆ: ಇಬಲ್–ಭಕ್ತಿಷು (1205) ಬರೆದ ನೈಸರ್ಗಿಕ ಚರಿತ್ರೆಯಲ್ಲಿಯ ಚಿತ್ರಗಳು ಮತ್ತು ರಶೀದ್–ಅದ್–ದೀನ್ ರಚಿಸಿದ ಪ್ರಪಂಚ ಚರಿತ್ರೆಯ (1247–1318) ಚಿತ್ರಗಳು. ಮೊದಲನೆಯದು ಬಿದ್–ಪೈನ್ ಜಾನವಾರದ ಕಥನವನ್ನು ಹೋಲುತ್ತ ಕ್ರೈಸ್ತರ, ಬೌದ್ಧರ, ಮುಸಲ್ಮಾನರ ಆಧ್ಯಾತ್ಮತತ್ತ್ವವನ್ನು ಸಾರುತ್ತದೆ. ಉತ್ತಮದರ್ಜೆಯ ಚೀನಿ ಕಲೆಯೇ ಶ್ರೇಷ್ಠವಾದುದೆಂದು ಭಾವಿಸಿ, ಎರಡನೆಯದರಲ್ಲಿಯ ಚಿತ್ರಗಳಿಗೆ, ಹೆಚ್ಚಾದ ಸನ್ಮಾನವನ್ನು ನೀಡುತ್ತಿದ್ದರು ಈ ಸೂಕ್ಷ್ಮ ಚಿತ್ರಗಳಲ್ಲಿ ವಿಷಯಾಂಶ ಮುಖ್ಯ. ಆದರೆ ರೇಖಾ ವಿನ್ಯಾಸದಲ್ಲಿ ಕೋಮಲತೆಯಿದ್ದರೂ ಆಕೃತಿರೇಖೆಯಲ್ಲಿ ಬೈಜಾನ್‌ಟಿಯನ್‌ನಿಂದ ಅಬ್ಬಾಸಿದ್‌ರು



ಘಿಯಾಸುದ್ದೀನ್ ತುಗಲಕ್‌ನ ಸಮಾಧಿ, ದೆಹಲಿ

ಅನುಕರಿಸಿದ ಶೈಲಿಯ ಕಟುತ್ವ ಬಿಕ್ಕಟ್ಟು ಇದ್ದುವು. ಭಾವಪ್ರದರ್ಶನದಲ್ಲಿ ಮಾತ್ರ ಮೇಲ್ಮಟ್ಟವನ್ನು ಸಾಧಿಸಲಾಗಿತ್ತು. ಮುಖಗಳು, ಮುಖವಾಡಗಳಂತೆ, ನಿರ್ಜೀವವಾಗಿದ್ದರೂ ಅವುಗಳ ಅಭಿನಯದ ಭಂಗಿಗಳು ಜೀವಕಳೆಯನ್ನು ಹೊಂದಿದ್ದುವು. ಲಿಪಿಸಂಬಂಧವಾದ ಅಲಂಕಾರದ ಮಧ್ಯದಲ್ಲಿ ಇಡಲಾದ ಈ ರೂಪಗಳ ಸೌಂದರ್ಯ ಮನೋಹರವಾಗಿತ್ತು. ಫಿರ್ದೌಸಿಯ ಷಹ ನಾಮ ಇದೇ ಕಾಲದ್ದು.

ಅನಂತರ ಬಂದ ತೈಮೂರ್‌ರ ಕಾಲದಲ್ಲಿ (1309–1509) ಈ ರೂಪಚಿತ್ರಣ ಲಿಪಿ ಸಂಬಂಧವಾದ ಅಲಂಕಾರದ ಹಿನ್ನಲೆಯಿಂದ ಪ್ರತ್ಯೇಕಿಸಲ್ಪಟ್ಟು ಎರಡನೆಯ ಮಂಗೋಲರ ದಾಳಿಯ (1381–1392) ಕಾಲದಲ್ಲಿ ಹೊಸ ಮಾಧುರ್ಯ ಪಡೆಯಿತು. ಬರಹದ ಹಿನ್ನೆಲೆ ಕೊನೆಗಂಡು ಪ್ರಕೃತಿ ಚಿತ್ರಣದ ಹಿನ್ನೆಲೆಯಲ್ಲಿ ರೂಪಚಿತ್ರಣ ಹೊಸ ಸೂಕ್ಷ್ಮತೆಯನ್ನೂ ರಮ್ಯತೆಯನ್ನೂ ಹೊಂದಿ ಬೆಳೆಯಿತು. ಪ್ರಕೃತಿ ಸೌಂದರ್ಯ ಚಿತ್ರಣಕ್ಕೆ ಮಾನ್ಯತೆ ದೊರೆತದ್ದು ಈಗಲೇ. ಈ ಚಿತ್ರಗಳಲ್ಲಿ ವೈವಿಧ್ಯವಿತ್ತು. ಸೂಕ್ಷ್ಮ ವಿವರಣೆಯಿತ್ತು. ಲಾಲಿತ್ಯವಿತ್ತು. ಚೀನೀಯರ ಮಿಂಗ್ ಕಾಲದ ನಕ್ಕೆಗಳು. ಪುಷ್ಪಭರಿತವಾದ ಗಿಡಗಳು–ಪ್ರತಿ ಚಿತ್ರದಲ್ಲಿಯೂ ಕಂಡುಬಂದುವು. ಆದರೆ ಸ್ವಲ್ಪ ಕಾಲಾನಂತರ ಪರ್ಷಿಯನ್ನರು ತಮ್ಮ ಸಹಜ ಸೌಂದರ್ಯ ಪ್ರಜ್ಞೆಯನ್ನು ಮತ್ತೊಮ್ಮೆ ಪಡೆದು ತಮ್ಮ ಉದ್ದೇಶಗಳಿಗೆ ಅನುಗುಣವಾದ ಮೇಲ್ಮಟ್ಟದ ಅಲಂಕಾರಕ್ಕೆ ಮರಳಿ, ಚೀನಿ ಕಲೆಯ ಆಧ್ಯಾತ್ಮಿಕ ದೃಷ್ಟಿಯಿಂದ ಪಾರಾದರು. ತೈಮೂರ್ ಒಂದು ಅಚ್ಚು ಕಟ್ಟಿನಲ್ಲಿ ಮಾತ್ರ ಸ್ವೇಚ್ಛೆಯನ್ನು ಪ್ರೋತ್ಸಾಹಿಸಿದರೆ, ಅವನ ಮಗನಾದ ಷಾ–ರುಖ್ (1404–47) ತಂದೆಯ ನಿರ್ಬಂಧಗಳನ್ನು ಸಡಿಲಿಸಿದ, ಇವನ ಕಾಲದಲ್ಲಿಯ ಅತ್ಯುತ್ತಮವಾದ ಹಸ್ತಲಿಖಿತ ಸೂಕ್ಷ್ಮಚಿತ್ರಗಳ ಪುಸ್ತಕಗಳು ಎಂದರೆ ಚೆಂಗೀಷ್ ಖಾನನ ದಿಗ್ವಿಜಯವನ್ನು (1167–1227) ಚಿತ್ರಿಸುವ ಕಾವ್ಯಸಂಗ್ರಹ, ಕಾರ್ಮಾನ್–ಖಾಜು ಕವಿಯ 43 ಕವನಗಳ ಸಂಗ್ರಹ (1281–1350). ಈ ಎರಡರಲ್ಲಿ ವಿನಿಯೋಗಿಸಿದ ಬಣ್ಣಗಳಲ್ಲಿ ಚಿನ್ನದ ನೀರು ಮತ್ತು ಟರ್ಕ್ವಾಯಿಸ್ ಪ್ರಾಧಾನ್ಯ ಹೊಂದಿದೆ. ತೈಮೂರ್ ಸುಲ್ತಾನನ ಮೊಮ್ಮಗನಾದ ಸುಲ್ತಾನ್ ಇಸ್ಕಾನ್ ಸಂಗ್ರಹಿಸಿದ ಕವನಗಳ ಹಸ್ತಲಿಪಿಗಳಲ್ಲಿ ಲೈಲಾ–ಮಜನೂ ಪ್ರೇಮದ ಘಟ್ಟವೂ ಮಂಗೋಲರ ಚರಿತ್ರೆಯೂ ಇವೆ. ಸುಲ್ತಾನ್ ಷಾ–ರುಖ್ ಆಡಳಿತದಲ್ಲಿ ರಾಜಧಾನಿ ಹೀರತ್‌ಗೆ

ಬದಲಾವಣೆಯಾದುದರಿಂದ ಈ ಕಲಾ ಸಂಪ್ರದಾಯಕ್ಕೆ ಹೀರತ್ ಶೈಲಿ ಎಂದು ಹೆಸರಾಯಿತು. ಈ ಕಾಲದಲ್ಲಿ (1404–47) ಸೂಕ್ಷ್ಮ ರೂಪರಚನೆ ಔನ್ನತ್ಯ ಹೊಂದಿತು. ವಿಶ್ವವಿಖ್ಯಾತ ಕಲೆಗಾರನಾದ ಬಿಜ್ಜದ್ ಈ ಯುಗಕ್ಕೆ ಸೇರಿದವ. ಅಲಂಕಾರವನ್ನು ವಿರಳ ವಾಗಿಸಿದ್ದೇ ಇವರ ವೈಶಿಷ್ಟ್ಯ.

ಸಫವಿದ್ ಯುಗದಲ್ಲಿ (1502–1756) ಸೂಕ್ಷ್ಮಚಿತ್ರರಚನೆ ಮತ್ತಷ್ಟು ಮೇಲ್ಮಟ್ಟಕ್ಕೇರಿತು. ಬಿಜ್ಜದ್ ಶೈಲಿ ಹರಡಿತು. ಮೂಲಪುರುಷನಾದ ಇಸ್ಮಾಯೀಲ್‌ನ ರಾಜಧಾನಿಯಾದ ಟೈಬ್ರಿಜ಼್‌ನಲ್ಲಿ ಅಸಂಖ್ಯಾತ ಬರೆಹಗಾರರೂ, ಕಲೆಗಾರರೂ, ರಾಜ ಪೋಷಣೆಯಲ್ಲಿ ಪಾಲ್ಗೊಂಡರು. ಇವರಲ್ಲಿ ಮಿರಾಕ್, ಕಾಸಿಂಅಲಿ, ಸುಲ್ತಾನ್ ಮಹಮ್ಮದ್ ಮುಂತಾದವರಿದ್ದರು. ಇವರಲ್ಲಿ ಅಗ್ರಸ್ಥಾನ ಪಡೆದಿದ್ದ ಸುಲ್ತಾನ್ ಮಹಮ್ಮದ್ ಸೂಕ್ಷ್ಮಚಿತ್ರರಚನೆಯಲ್ಲೂ ಹಸ್ತಲಿಖಿತ ಪುಸ್ತಕಾಲಂಕಾರದಲ್ಲೂ ಹಳೆಯ ಸಂಪ್ರದಾಯವನ್ನೇ ಅನುಸರಿಸಿದ. ಆತ ಮೀರ್ ಸೈಯದ್ ಅಲಿ ನೈಜಾಮಿಯ ಕವನಗಳನ್ನು ಸುಂದರವಾಗಿ ಚಿತ್ರಿಸಿದ್ದಾನೆ. ಸಹ–ಇದ್ರ ಕಾಲದಲ್ಲಿ ಭಾವಚಿತ್ರಗಳಿಗೆ



ಜಾಮಿ ಮಸೀದಿ, ದೆಹಲಿ

ಹೆಚ್ಚಾದ ಪ್ರಾಧಾನ್ಯ ದೊರಕಿತು. ಸ್ಪಷ್ಟವಾದ ರೇಖಾ ವಿನ್ಯಾಸದ ಆವರಣದಲ್ಲಿ ಬಣ್ಣ ತುಂಬಿದ ರೂಪಗಳು ಪ್ರಚಾರಕ್ಕೆ ಬಂದುವು. ಈ ಯುಗದಲ್ಲಿ ಅಸಂಪೂರ್ಣ ಸೂಕ್ಷ್ಮಚಿತ್ರ, ಮುಖ್ಯಾಂಶಗಳನ್ನು ಮಾತ್ರ ಎತ್ತಿ ತೋರುವ ಉದ್ದೇಶದಿಂದ ಮೊದಲನೆಯ ಬಾರಿ ಚಿತ್ರಿತವಾದವು. ರಿಜ಼ಾ–ಅಬ್ಬಾಸಿ ಉತ್ತಮ ದರ್ಜೆಯ ಭಾವಚಿತ್ರಗಳನ್ನೂ ಸಾಮಾನ್ಯ ಜೀವನದ ದೃಶ್ಯಗಳನ್ನೂ ಚಿತ್ರಿಸಿದ. ಖುಸ್ರಾ ಮತ್ತು ಷಿರಿನ ಹಸ್ತಲಿಖಿತ ಪ್ರತಿಯನ್ನು ಕೂಡ (16–17) ಬಣ್ಣಿಸಿರುತ್ತಾನೆ. ಇವನ ಅನಂತರ ಸೂಕ್ಷ್ಮ ಚಿತ್ರ ಯೂರೋಪಿಯನ್ನರ ಪ್ರಭಾವದಿಂದ ಕ್ಷೀಣಿಸಿತು. ಆದರೆ, ಸುಸಂಸ್ಕೃತಿ ಹೊಂದಿದ ಪಾರಸೀ ಕಲಾವಿದರು ಪಾಶ್ಚಾತ್ಯ ಆವರಣವನ್ನು ಮಾತ್ರ ಅನುಕರಿಸಿಕೊಂಡು ತಮ್ಮ ರೂಪಚಿತ್ರಣದಲ್ಲಿ ಹಿಂದಿನ ಸಂಪ್ರದಾಯವನ್ನೇ ಮುಂದೂ ಹರಡಿದರು. ಸಾಮಾನ್ಯರು ಕಾಂಚನಕಾಂಕ್ಷೆಯಿಂದ ಅಧಮ ದರ್ಜೆಯ ಕಲಾಕೃತಿಗಳ ರಚನೆಯಲ್ಲಿ ಲೀನವಾದರು. ಇದಕ್ಕೆ ಮೀರ್–ಅಫ್ಜಲ್‌ನ ಚಿತ್ರಗಳು ಉದಾಹರಣೆಗಳಾಗಿವೆ. 19ನೆಯ ಶತಮಾನದಲ್ಲಿ ಮೆರುಗೆಣ್ಣೆ (ಲ್ಯಾಕರ್) ಚಿತ್ರಗಳು ಮುಂದುವರಿದುವು. ಪರಿಣಾಮವಾಗಿ ಪುಸ್ತಕಗಳ ಹೊದಿಕೆಯ ಅಲಂಕಾರ, ಪೆಟ್ಟಿಗೆ, ಸಂಪುಟ ಮತ್ತು ಗೃಹೋಪಕರಣಗಳ ಶೃಂಗಾರ ಹೆಚ್ಚಿತು. ಭಾರತ ಕಲಾ ಸಂಸ್ಕೃತಿಯ ಸಂಪರ್ಕದಿಂದ ಪರಿಣಮಿಸಿದ ಇಸ್ಲಾಂ ಕಲೆ ಮತ್ತಷ್ಟು ವೈಶಿಷ್ಟ್ಯಗಳಿಸಿತು.

ಈಜಿಪ್ಟ್ ಕಲಾಚರಿತ್ರೆಯಲ್ಲಿ ಇಸ್ಲಾಮಿನ ಕಾಣಿಕೆ ಪ್ರಶಂಸನೀಯವಾಗಿದೆ. 1200ರಲ್ಲಿ ಐಬಾಕಿನಿಂದ ಸ್ಥಾಪಿತವಾದ ಮಾಲೂಕ್ ಸುಲ್ತಾನರ ಆಡಳಿತದಲ್ಲಿ ನಿರ್ಮಿತವಾದ ವಾಸ್ತುಶಿಲ್ಪ ಉನ್ನತಮಟ್ಟದ್ದು. ತುರ್ಕರ ಮತ್ತು ಮಂಗೋಲರ ಸಮ್ಮಿಳಿತದ ಮೊದಲ ಬಾಹ್ರೀ ವಂಶ 1250–1390ರ ವರೆಗೂ ಆಡಳಿತ ನಡೆಸಿತು. ಸುಲ್ತಾನ್–ಅಲ್–ಹಸನ್ ಮಸೀದಿ (1362) 19ನೆಯ ಕಲೀಫ್ ಅಲ್–ಹಸನ್ ಕಾಲದಲ್ಲಿ (1347–61) ನಿರ್ಮಾಣ ಗೊಂಡಿತು. ಇದರ ರಮ್ಯ, ಭವ್ಯ, ಅಲಂಕರಣಗಳು ಕಲಾಪ್ರಪಂಚಕ್ಕೆ ಇದು ನೀಡಿದ ಕಾಣಿಕೆಯಾಗಿವೆ. ಇದು ಶಿಲುಬೆಯಾಕಾರದ ಮದ್ರಸಾ ಮಿಳಿತವಾದ ಮಸೀದಿ. ಸರ್ಕೇಷಿಯ ಪರಂಪರೆ (1382–1517) ನಿರ್ಮಿಸಿದ ಮಸೀದಿಗಳನ್ನು ಎರಡನೆಯ ಬುರ್ಜೀ ವಂಶದ ಸುಲ್ತಾನರು ಪರಿಪೂರ್ಣತೆಗೆ ತಂದರು. ಹಿಂದಿನ ಗೋಪುರಗಳಂತೆ ಇವರ ಗೋಪುರಗಳು ಸಹ ಹಗುರವಾಗಿಯೂ ಅವುಗಳ ಹೊರಮೇರೆ ಲಘುವಾಗಿಯೂ ಅಲಂಕಾರ ಮತ್ತಷ್ಟು ಸೌಂದರ್ಯದಿಂದ ಕೂಡಿಯೂ ಮುಂದುವರಿಯಿತು. ಕಲ್ಲುಕಟ್ಟಡದ ವಿಧಾನದಲ್ಲಿ, ಮುಖ್ಯವಾಗಿ ಕಮಾನುಗಳ ರಚನೆಯಲ್ಲಿ, ಬಿಳಿ ಕಪ್ಪು ಪಟ್ಟಿಗಳ ಪ್ರಾಧಾನ್ಯ ಹೆಚ್ಚಿತು. ರೇಖಾಗಣಿತ ನಕ್ಷೆಗಳ ಅಲಂಕಾರ, ಕೂಫಿಕ್ ಬರಹದ ಶೃಂಗಾರ, ಜೇನುಗೂಡುಗಳಂತೆ ಒಳಮಾಳಿಗೆಯಿಂದ ಜೋಲಾಡುವ ನಯಗಾರೆಯ ಕೆಲಸ ಇಲ್ಲಿ ಹೆಚ್ಚು ಪ್ರಶಂಸನೀಯವಾಗಿವೆ. ಆದರೆ ಈ ಅಲಂಕಾರದಲ್ಲಿ ಸ್ಪೇನ್, ಪರ್ಷಿಯಗಳ ಕಲೆಗಳಲ್ಲಿ ಹೇರಳವಾಗಿರುವಂತೆ ಪ್ರಾಣಿರೂಪಗಳು ಇಲ್ಲ. ಮಾಮಲೂಕ್‌ರ ಕಾಲದ ಕುಂದಣ ಕೌಶಲ, ಕುರಾನ್ ಹೊದ್ದಿಕೆಗಳ ಮೇಲಿನ ಶೃಂಗಾರಗಳು ಮಧುರವಾಗಿದ್ದು ಇಸ್ಲಾಮೀ ಕಲೆಗೆ ಮೆರಗುಕೊಟ್ಟಿವೆ. ಕ್ವಾ–ಇಟ್–ಬೇ ನಿರ್ಮಿಸಿದ ಮದ್ರಸಾ ಸುಂದರವಾಗಿದೆ. ಸೂಕ್ಷ್ಮಾಕೃತಿಗಳ ರಚನೆಯಲ್ಲಿ ಪ್ರಗತಿ ಸಾಧನೆಯಷ್ಟು ಆಗಿಲ್ಲ. ಆಟೋಮನ್ ಆಡಳಿತ ಈಜಿಪ್ಟ್ ಮತ್ತು ಸಿರಿಯ ಪ್ರದೇಶಗಳಲ್ಲಿ ಹರಡಿದ ಅನಂತರ ಹೊಳೆಯುವ ಹೆಂಚುಗಳ ತಯಾರಿಕೆಯಲ್ಲಿ ವಿನಾ ಉಳಿದಂತೆ ಇಸ್ಲಾಂ ಕಲೆ ಅವನತಿ ಹೊಂದಿತೆಂದೇ ಹೇಳಬಹುದು.

ಸೆಲ್ಯೂಕರು ಬೈಜಾನ್‌ಟಿಯನ್ ಆಡಳಿತದಿಂದ ರೋಮನ್ನರ ಪ್ರದೇಶಗಳನ್ನು ಕೈಕೊಂಡ ಅನಂತರ ಇಕೋನಿಯಂ ನಗರ ಕೋನಿಯ ಆಗಿ ಬದಲಾವಣೆ ಹೊಂದಿ ಅನಂತರ ರಾಜಧಾನಿಯಾಯಿತು. ಸೆಲ್ಯೂಕರು ನಿರ್ಮಿಸಿದ ಭವ್ಯವಾದ ಅಂತಃಪುರ ಹಾಗೂ ಮಸೀದಿಗಳೂ ಪ್ರಖ್ಯಾತವಾದುವು; ಪ್ರಪಂಚವನ್ನು ನೋಡದೇ ಇದ್ದರೂ ಸರಿ, ಕೋನಿಯ ನೋಡಬೇಕು ಎನ್ನುವ ಲೋಕೋಕ್ತಿ ಜಾರಿಗೆ ಬಂತು. ಮ್ಯಾಕ್ ವಂಶದವರ ಪೈಕಿ ಅರೇಬಿಯನ್ ನೈಟ್ಸ್ ಖ್ಯಾತಿಯ ಅಲಾ–ಯನ್–ದೀನ್ (1219–1236) ಕಾಲದಲ್ಲಿ ಕೋನಿಯ ಅಂತಾರಾಷ್ಟ್ರೀಯ ಸಂಸ್ಕೃತಿಗಳ ಕೇಂದ್ರವಾಗಿ ಪರಿಣಮಿಸಿತು. ಮೆಹ್ಲಾವಿ–ಸೂಫೀ ಎಂಬ ಉದಾರ ಧೋರಣೆಯ ಪಂಥ, ಉದ್ದೀನ್ ರೂಮಿನಿಂದ ಸ್ಥಾಪಿತವಾಯಿತು. ಈ ಪಂಗಡದ ಮುಸಲ್ಮಾನರು ವಿವಿಧ ಮತಗಳ ಆದೇಶಗಳನ್ನು ಖಂಡಿಸುತ್ತ, ದೇವತಾರಾಧನೆಯಲ್ಲಿ ಸಂಗೀತಕ್ಕೂ ತಾಳಮೇಳಕ್ಕೂ ತಕ್ಕಂಥ ಪ್ರಾಧಾನ್ಯ ಕೊಡುತ್ತ ಕವಿತೆಗೆ, ಚಿತ್ರರಚನೆಗೆ, ನಾಟ್ಯಕಲೆಗೆ ಪ್ರೋತ್ಸಾಹವನ್ನು ನೀಡಿದರು. ಒಟ್ಟಿನಲ್ಲಿ ಇವರು ಕಲೆಯ ಮೂಲಕ ದೇವರನ್ನು ಪಡೆಯಲು ಯತ್ನಿಸಿದರು. ಸೌಂದರ್ಯ ನಿಧಿಯಾದ ದೇವರು ಸೌಂದರ್ಯವನ್ನು ಪ್ರೀತಿಸುತ್ತಾನೆ ಎಂಬ ಮಹಮ್ಮದನ ನುಡಿ ಈ ಮತಕ್ಕೆ ತಳಹದಿಯಾಗಿತ್ತು. ಈ ಪಂಗಡದ ಚಿತ್ರಕಾರರಲ್ಲಿ ಬೆದ್ರ–ದೀನ್–ಬೆಬ್ರಜಿ, ಬೆದ್ರ–ದೀನ್–ಯವಸಿ ಅದ್ವಿತೀಯರಾಗಿರುತ್ತಾರೆ. ಆದರೆ ಆಟೋಮನರು 1326ರಲ್ಲಿ ಆಡಳಿತಕ್ಕೆ ಬಂದ ಅನಂತರ 1453ರಲ್ಲಿ ಬೈಜಾಂಟೀಯನ್ ಗೆದ್ದ ಮೇಲೆ ಕಾನ್‌ಸ್ಟಾಂಟಿನೋಪಲ್ (ಇಸ್ತಾನ್ ಬುಲ್) ರಾಜಧಾನಿ ಆದಮೇಲೆ ಸೇಂಟ್ ಸೂಫಿಯ ದೇವಾಲಯ ಮಸೀದಿಯಾಯಿತು. ಅಲ್ಲಿಯ ಕ್ರೈಸ್ತರ ಚಿತ್ರಗಳನ್ನು ಸುಣ್ಣದಿಂದ ಮುಚ್ಚಿ, ಅವುಗಳ ಮೇಲೆ ಮುಸಲ್ಮಾನರ ಗೂಢ ಸಾರಾಂಶದ ಚಿತ್ರಾಲಂಕಾರವನ್ನು ರಚಿಸಲಾಯಿತು. ಕೂಫಿ ಕೈಬರೆಹದ ಶೃಂಗಾರ ಚಿಕ್ಕ ದೊಡ್ಡ ಗೋಪುರಗಳ ಮೇಲೆ, ಮಸೀದಿಗಳಲ್ಲಿ ಕಂಡು ಬಂತು.

ಆಟೋಮನ್ ಸುಲ್ತಾನರ ಉತ್ಕರ್ಷ ಕಾಲದಲ್ಲಿ ಅಂದರೆ 15, 16ನೆಯ ಶತಮಾನಗಳಲ್ಲಿ ಅಲಂಕಾರ, ಸೌಲಭ್ಯ ಮತ್ತು ಮನರಂಜನ ಪ್ರವೃತ್ತಿ ಇಸ್ಲಾಮೀ ಕಲೆಯಲ್ಲಿ ಕಂಡುಬಂದುವು. ಇದರ ಸಾರಾಂಶದ ಶೈಲಿಯಲ್ಲಿ ಕ್ಷೇತ್ರಗಣಿತ ನಕ್ಷೆಗಳೂ ಸೇರಿವೆ. ಆದರೆ ಇದರಲ್ಲಿ ವಾಸ್ತವಿಕತೆ ಇಲ್ಲ. ಸೆಲ್ಯೂಕರ ಅಲಂಕಾರ ವಿನ್ಯಾಸದಲ್ಲಿ ಪ್ರದರ್ಶಿತವಾದ ಮನುಷ್ಯ ಮತ್ತು ಪ್ರಾಣಿಗಳ ರೂಪಗಳು ಇಲ್ಲಿಲ್ಲ. ಪರಿಣಾಮವಾಗಿ ಅಲಂಕಾರದ ಸ್ಥೂಲತೆಯನ್ನು ಕಳೆದುಕೊಂಡು ಹಗುರವಾಗಿದೆ. ಕಾಲಕ್ರಮೇಣ ಮುಸ್ಸವ್ವಿರ್ ಪಂಗಡದ ಕಲಾವಿದರು ಸಾಮಾನ್ಯ ಜೀವನದ ಅವಶ್ಯಗಳನ್ನೂ ಭಾವಚಿತ್ರಗಳನ್ನೂ ರಚಿಸಿದ ಮೇಲೆ ಬರಹದ ಅಲಂಕಾರ ಕ್ಷೀಣಿಸಿತು. ಜೊತೆಯಲ್ಲಿ ಪುಸ್ತಕಾಲಂಕಾರದ ಸೂಕ್ಷ್ಮ ಚಿತ್ರಗಳು ಹೆಚ್ಚಿದುವು. ಬೇಟೆ, ಅಂತಃಪುರದ ಉತ್ಸವಗಳು ಮತ್ತು ಸಾಮಾನ್ಯ ಜೀವನದ ದೃಶ್ಯಗಳನ್ನೊಳಗೊಂಡ ಘ್ಯೂನರ್–ನಾಮ ಮುಂತಾದ ಹಸ್ತಲಿಖಿತ ಪ್ರತಿಗಳು ತಲೆದೋರಿದವು.

ಆದರೆ 15ನೆಯ ಶತಮಾನದ ಉತ್ತರಾರ್ಧದಲ್ಲಿ 2ನೆಯ ಮಹಮ್ಮದನ ಆಡಳಿತದಲ್ಲಿ (1451–81) ಪಾಶ್ಚಾತ್ಯ ಕಲೆಗಾರರ ಸಂಪರ್ಕದ ಪರಿಣಾಮವಾಗಿ ಶಾಸ್ತ್ರೀಯ ಇಸ್ಲಾಂ ಕಲೆ ಅಧೋಮುಖವಾಯಿತು. ಭಾವಚಿತ್ರ, ಬರೆಹ, ಅಲಂಕಾರ ಮುಂತಾದವು ಕ್ಷೀಣಿಸಿದುವು. ಹಿಂದೀಬೇ ಸ್ಥಾಪಿಸಿದ ಅಕಾಡೆಮಿ ಆಫ್ ಆರ್ಟ್ಸ್ (1883). ಬುರಾನ್–ಟ್ರೋಪಕ್ ಸ್ಥಾಪಿಸಿದ ಯೂನಿಯನ್ ಆಫ್ ಆರ್ಟ್ಸ್ (1908), ಆಲಿ, ಜಕೀ, ನೂರುಲ್ಲ ಮುಂತಾದವರು ಸ್ಥಾಪಿಸಿದ ಯೂನಿಯನ್ ಸೊಸೈಟಿ ಆಫ್ ಇಂಡಿಪೆಂಡೆಂಟ್ಸ್ ಮೊದಲಾದ ಸಂಸ್ಥೆಗಳ ಮೇಲೆ ಫ್ರಾನ್ಸಿನ ಪರಿಣಾಮ ವಿಧಾನ (ಇಂಪ್ರೆಷನಿಸಂ) ಮತ್ತು ಅತಿ ವಾಸ್ತವ್ಯ ವಾದಗಳ (ಸರ್‍ರಿಯಲಿಸಂ) ಪ್ರಭಾವ ಹೆಚ್ಚಾದಂತೆಲ್ಲ ಇಸ್ಲಾಂ ಕಲೆ ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡಿತು.

ಭಾರತ ಇಸ್ಲಾಮೀ ಕಲೆಯಲ್ಲಿ ವಾಸ್ತುಶಿಲ್ಪಕ್ಕೂ ಚಿತ್ರಲೇಖನಕ್ಕೂ ಪ್ರಾಧಾನ್ಯ ದೊರಕಿತು. ಪ್ರಾರಂಭದಲ್ಲಿ ಪರ್ಷಿಯನ್ನರ ಕಲೆಯ ಅಭಾವ ಹೆಚ್ಚಾಗಿ ತೋರಿಬಂದರೂ ಭಾರತೀಯ ಕಲಾ ಸಂಪ್ರದಾಯಗಳು, ಮುಖ್ಯವಾಗಿ ಅಕ್ಬರನ ಕಾಲದಲ್ಲಿ ಕಂಡುಬರುತ್ತದೆ. ಸಂಪ್ರದಾಯದ ಗಿಡ, ಹೂವು, ಕಲಶ ಮುಂತಾದುವುಗಳಿಂದ ರಚಿಸಿದ ಚಿತ್ರಾಲಂಕಾರವನ್ನು ಭಾರತೀಯರಿಂದ ಬೌದ್ಧರೂ ಬೌದ್ಧರಿಂದ ಚೀನೀಯರೂ ಅನುಕರಿಸಿದ್ದನ್ನು ಮೆಚ್ಚಿದ ಪರ್ಷಿಯನ್ನರು ತಮ್ಮ ಕಲೆಯಲ್ಲಿ ಅದನ್ನು ತಂದಿದ್ದಾರೆ. ವಾಸ್ತುಶಿಲ್ಪದಲ್ಲಿ ಅರ್ಧಚಂದ್ರಾಕಾರದ ಗೋಪುರಗಳು, ಕಮಾನುಗಳು, ಕುದುರೆಲಾಳದ ರೂಪವನ್ನು ತಾಳಿದ ಕಮಾನುಗಳು ಕೊಠಡಿಗಳಾಗಿ ಕೊರೆದ ಪರದೆ ಮಾದರಿಯ ಕಿಟಕಿಗಳು, ಮರೆ ಮಾಡುವ ಅಡ್ಡ ಪಟ್ಟಿಗಳು, ನೀಪ, ಮಲ್ಲಿಕಾ, ಕಮಲ, ಕಲ್ಪಪುಷ್ಪಗಳನ್ನೊಳಗೊಂಡ ಲತಾ ಸುರುಳಿಗಳು, ಕಮಲದಳಪಾದಗಳ ಮೇಲೆ ಕುಂಭಾಕೃತಿಗಳಲ್ಲಿ ಕಡೆದ ಸ್ತಂಭಗಳು, ಅವುಗಳ ಮೇಲೆ ಕಲಶರೂಪದಲ್ಲಿ ರಚಿಸಿದ ಬೋದಿಗೆಗಳಿಂದ ನೇತಾಡುವ ಬಾಳೆ ಅಥವಾ ಕಮಲ ಮೊಗ್ಗುಗಳ ಪದಕಗಳು. ಕಟ್ಟಡದ ಮುಂಭಾಗದಲ್ಲಿಯ ಕಮಾನಿನ ಉಭಯ ಪಾರ್ಶ್ವಗಳಲ್ಲಿ ಕಮಲಾಕಾರದಂತೆ ಕೆತ್ತಿದ ಅಥವಾ ಕೊರೆದ ಪದಕಗಳು–ಮುಂತಾದವು ಭಾರತ ಸಂಪ್ರದಾಯದವು.

ಮೊಗಲರ ವಾಸ್ತುಕಲೆಯ ಚರಿತ್ರೆಯನ್ನು 3 ಯುಗಗಳಾಗಿ ವಿಭಜಿಸಬಹುದು. ಮೊದಲನೆಯದು ಪ್ರಾಚೀನವಾದದ್ದು. 1199–1411ರ ವರೆಗಿನದು. ಮಧ್ಯಮ ಕಾಲದ್ದು 1414–1510ರ ವರೆಗಿನದು, ಈಚಿನದು 1560–1658ರ ವರೆಗಿನದು. ಕುನಾಕ್–ಉಲ್–ಇಸ್ಲಾಂ ಮಸೀದಿ,

ಅದಕ್ಕೆ ಪೂರ್ವದಲ್ಲಿದ್ದ ಭಾರತೀಯರ ದೇವಾಲಯದ ರೂಪಾಂತರ (1199). ಇದರ ಮುಂದಿನ ಹೆಬ್ಬಾಗಿಲ ದಾರಿ ಆಮಲಕ ಆಕಾರವುಳ್ಳ ಕಮಾನುಗಳಿಂದ ಕಟ್ಟಲಾಗಿ, ಪುಷ್ಕಳವಾದ ಸುರುಳಿಗಳಿಂದ ಅಲಂಕೃತವಾಗಿದೆ. ಮಸೀದಿಯಲ್ಲಿಯ ಪ್ರಾರ್ಥನೆ ಗೂಡು ಮತ್ತು ಅದರ ಸುತ್ತ ಇರುವ ಗೋಡೆಗಳು ಅತಿ ನಾಜೂಕಾದ ಸುರುಳಿ, ನಕ್ಷತ್ರಗಳಿಂದ ತುಂಬಿದೆ, ಕುಂಭಪೀಠಗಳ ಮೇಲಿನ ಅರ್ಧಸ್ತಂಭ ಚಿತ್ರಣ ಭಾರತೀಯ ಮಾದರಿಯಲ್ಲಿದ್ದು ಅತ್ಯಂತ ರಮಣೀಯವಾಗಿದೆ. ಇದೇ ಕಾಲದ ಕುತುಬ್ ಮಿನಾರಿನ (1200) ಶೃಂಗಾರದಲ್ಲಿ ಕೂಡ ಭಾರತ ಸಂಪ್ರದಾಯಗಳು ಕಂಡುಬರುತ್ತವೆ. ಇಲ್ಲಿ ರೇಖಾಗಣಿತ ನಕ್ಷೆಗಳ ಅಲಂಕಾರ, ಬರೆಹಾಲಂಕಾರದ ಸುತ್ತ ಹೆಚ್ಚಾಗಿದೆ. ಇಲ್-ಕಾತ್‍ಮಿರ್ (1235) ಗೋರಿಯ ಅಂತರದಲ್ಲಿ ಇರುವ ಗೋಡೆಗಳು, ಕಮಾನುಗಳು, ಕುಂಭಾಕೃತಿಯ ಕಂಬಗಳು ಮುಂತಾದವುಗಳ ಮೇಲೆ ಬರಹಾಲಂಕಾರ, ಪುಷ್ಪಭರಿತ ಲತಾವಿಧಾನ, ಮೂಲೆ ಮೂಲೆಗಳಿಂದ ನೇತಾಡುವ ಕಮಲ ಮೊಗ್ಗುಗಳು, ಕೊರಡಿಗಳಾಗಿ ಕೊರೆದ ಅಡ್ಡಪಟ್ಟಿಗಳ ನಮೂನೆಗಳು-ಇವೆಲ್ಲವೂ ಇನ್ನೂ ಮುಂದೆ ಬರುವ ಅಲಂಕಾರ ವಿಧಾನವನ್ನು ಸೂಚಿಸುತ್ತವೆ. ಇಲ್ಲಿ ಭಾರತ, ಇಸ್ಲಾಂ ಅಲಂಕಾರ ಶೈಲಿಗಳ ಸಂಯೋಗವನ್ನು ಕಾಣಬಹುದು. (ಷೇಕ್ ಯೂಸುಫ್ ಕಾಟಿಲ್‍ನ ಗೋರಿ, ಫತೇಪುರ್ ಸಿಕ್ರಿ, ಕಿಲಾಕುನ್ಹ ಮಸೀದಿಯ ಪ್ರಾರ್ಥನೆ ಗೂಡು, ಷೇಕ್ ಇಮಾಮ್ ಸಲೀಮ್ ಛಿಸಿಟಯ ಗೋರಿ, ತುರ್ಕಿ ಸುಲ್ತಾನನ ಅಂತಃಪುರ, ದಿವಾನ್-ಇ-ಖಾಸಿಗೆ ಸೇರಿದ ಸಿಂಹಾಸನದ ಗೌಸಣಿಕೆ; ಸಿಕಂದರದಲ್ಲಿಯ ಅಕ್ಬರನ ಗೋರಿ; ಶೀಷ್‍ಮಹಲ್).

ನವಾಬಿ ಮಸೀದಿ, ಮದೀನ

ಹುಮಾಯೂನನ ಅಜ್ಞಾತವಾಸದಲ್ಲಿ ಷೇರ್‌ಷಾ ತನ್ನ ಉಪಯೋಗಕ್ಕೆ ಕಟ್ಟಿಸಿದ ಖಿಲಾ-ಈ-ಕುನ್ಹಾ ಮಸೀದಿಯ ಅಲಂಕಾರ (1545) ಮತ್ತಷ್ಟು ಕಲಾಕೌಶಲ್ಯವನ್ನು ಪಡೆದು ಮುಂದಿನ ಅಲಂಕಾರದ ಪಕ್ವತೆಗೆ ದಾರಿ ಮಾಡಿತು. ಷೇರ್‌ಷಾನ ಗೋರಿಯಲ್ಲಿ ಬಣ್ಣ ಬಣ್ಣದ ಕಲ್ಲುಗಳಿಂದಲೂ ಅಮೃತಶಿಲೆಯಿಂದಲೂ ಗೋಡೆಗಳ ಮೇಲೆ ಭಾರತದಲ್ಲಿ ಮೊದಲನೆಯ ಬಾರಿ ಮಾಡಿದ ಕುಂದಣದ ಕೆಲಸ ಸುಂದರವಾಗಿದೆ. ಅಕ್ಬರ್ ಕಾಲದ ವಾಸ್ತುಶಿಲ್ಪದ ಪ್ರಾರಂಭದಿಂದ (1560) ಷಾಹಜಹಾನ್ ಮರಣದವರೆಗೂ (1658) ಮೊಗಲರ ಕಟ್ಟಡದ ಚಟುವಟಿಕೆಗಳು ಅಸಂಖ್ಯಾತವಾಗಿದ್ದು, ವರ್ಣನಾತೀತವಾಗಿವೆ. ಈ ಕಾಲದ ಕಟ್ಟಡಗಳ ಕಲಾಪ್ರೌಢಿಮೆಯನ್ನೂ ಇವುಗಳಲ್ಲಿಯ ಅಲಂಕಾರ ವೈಶಿಷ್ಟ್ಯವನ್ನೂ ಕುಶಲತೆಯನ್ನೂ ತೋರಲು ಇಂದಿಗೂ ದೆಹಲಿ, ಲಾಹೋರ್ ಪ್ರಾಂತಗಳಲ್ಲಿ ಉಳಿದುಕೊಂಡಿರುವ ಕಲಾಕೃತಿಗಳನ್ನು ಮಾತ್ರ ಇಲ್ಲಿ ವರ್ಣಿಸಲಾಗಿದೆ. ಅಕ್ಬರ್ ತನ್ನ ಕಾಲದಲ್ಲಿ ಸಾಧಿಸಿದ ಮತಸಂಯೋಗವನ್ನು ವಾಸ್ತುಶಿಲ್ಪದಲ್ಲೂ ಚಿತ್ರರಚನೆಯಲ್ಲೂ ಸ್ಪಷ್ಟವಾಗಿ ಕಾಣಬಹುದು. ಇದು ಜಹಾಂಗೀರನ ಕಾಲದಲ್ಲಿ ಇನ್ನೂ ಮುಂದುವರಿಯಿತು. ಆದರೆ ಷಾಹಜಹಾನನ ಕಾಲದಲ್ಲಿ ಪರ್ಷಿಯನ್ ಶೈಲಿಯ ಪ್ರಭಾವ ಹೆಚ್ಚಿತೆನ್ನಬಹುದು. ಇದಲ್ಲದೆ ಅಲಂಕಾರದ ಉಪಕರಣಗಳು ಕೂಡ ಬದಲಾದುವು. ಇವುಗಳ ಶೇಖರಣೆ ಕಷ್ಟವಾಗಿರಬಹುದು. ಆದಕಾರಣ ಗುರ್ಜರ ಪ್ರದೇಶಗಳಲ್ಲಿ ಮುಸಲ್ಮಾನರ ಆಡಳಿತ ಕಾಲದಲ್ಲಿ ಪ್ರಚುರವಾಗಿದ್ದ ಮರದ ಮದನಕೈಗಳು, ತೋರಣಗಳು ಮುಂತಾದವನ್ನು ಅಕ್ಬರ್ ತನ್ನ ಕಟ್ಟಡಗಳಲ್ಲಿ ಅಷ್ಟಾಗಿ ಬಳಸಲಿಲ್ಲ. ಇದರಿಂದ ಹೈಂದವ ಶಿಲ್ಪದ ಸಂಪ್ರದಾಯದ ಅಂಶ ಇಸ್ಲಾಂ ಕಲೆಯಲ್ಲಿ ಹೆಚ್ಚಾಗಿ ಬೆರೆಸಬೇಕಾಗಿ ಬಂತು. ಇದು ಊರ್ಜಿತಕ್ಕೆ ಬಂತು. ದೆಹಲಿಯ ಉತ್ತರದಲ್ಲಿ ಹೇರಳವಾಗಿರುವ ಕೆಂಪು ಬಣ್ಣದ ಪದರಕಲ್ಲು (ಸ್ಯಾಂಡ್ ಸ್ಟೋನ್) ದೊಡ್ಡ ದೊಡ್ಡ ಮೂಲಗಳಿಗೂ ಹಾಸಿಗೆಯ ಕಲ್ಲುಗಳಿಗೂ ಅನುಕೂಲವಾದದ್ದು. ಇವುಗಳ ಮೇಲಿನ ಕೆತ್ತನೆಯ ಅಲಂಕಾರ ವಿಸ್ತಾರ ವಾಯಿತು. ಅಕ್ಬರನ ಕಾಲದಲ್ಲಿ ಅಮೃತಶಿಲೆಯನ್ನು ಹೆಚ್ಚಾಗಿ ಉಪಯೋಗಿಸಲಿಲ್ಲ. ಬಾಹ್ಯಾ ಲಂಕಾರದಲ್ಲಿ, ಮುಖ್ಯ ಸ್ಥಳಗಳಲ್ಲಿ ಮಾತ್ರ, ಅದನ್ನು ಉಪಯೋಗಿಸಿದರು. ಆದರೆ ಜಹಾಂಗೀರನ ಕಾಲದಲ್ಲಿ ಕುಂದಣದ ಅಲಂಕಾರವನ್ನು ಹೊರಗಿನ ಗೋಡೆಗಳ ಮೇಲೆ ಶೋಭಾಯಮಾನವಾಗಿ ಮಾಡಲಾಯಿತು. ಆದರೂ ಗೋರಿಗಳ ನಕ್ಷೆಗಳು, ಅವುಗಳ ವಿಧಾನಗಳು ಇಸ್ಲಾಂ ತೈಮೂರ್‌ರ ಕಾಲದವಾಗಿಯೇ ಉಳಿದುಕೊಂಡವು. ಅಕ್ಬರ್, ಇತ್ಮ-ಉದ್-ದೌಲಾ, ಹುಮಾಯೂನ್ ಇವರ ಕಾಲದ ಶಿಲ್ಪ ತೈಮೂರ್‌ರ ಮಾದರಿಯವು ಎನ್ನಬಹುದು.

ತಾಜ್‌ಮಹಲ್ (1635) ಸ್ಥೂಲವಾಗಿ ಹುಮಾಯೂನನ ಗೋರಿ ನಕ್ಷೆಯನ್ನು ಹೋಲುತ್ತದೆ. ಇದರ ಗುಮ್ಮಟ ಅರ್ಧಗೋಲಾಕೃತಿಯಲ್ಲಿದ್ದರೆ ಹುಮಾಯುನ್ ಗೋರಿಯ ಗುಮ್ಮಟ ಮೊನಚಾಗಿ ಆಮಲಕದಂತಿದೆ. ತಾಜಮಹಲಿನ ಅಮೃತಶಿಲೆಯ ತೇಜಸ್ಸು ಅತ್ಯಂತ ಆಕರ್ಷಣೀಯವಾಗಿದ್ದು, ಈ ಭವನಕ್ಕೆ ಅಮೃತಶಿಲೆಯಲ್ಲಿಯ ಕನಸು ಎಂಬ ಪ್ರಶಸ್ತಿಯನ್ನು ತಂದಿದೆ. ಇಲ್ಲಿಯ ಕುಂದಣಗೆಲಸ, ಅಮೃತಶಿಲೆಯಲ್ಲಿ ಕುಶಲತೆಯಿಂದ ಕೊರೆದ ವಿವಿಧಾಲಂಕಾರ-ಇವು ಅದ್ಭುತದಾಗಿವೆ. ವಾಸ್ತುಶಿಲ್ಪದ ಬಿಡಿ ಬಿಡಿ ಭಾಗಗಳ ಮಧುರ ಸಂಯೋಜನೆ ಇಲ್ಲಿ ವಿಸ್ಮಯಗೊಳಿಸುತ್ತದೆ. ಅಕ್ಬರನ ಔದಾರ್ಯದಲ್ಲಿ, ಸಂಪತ್ತಿನಲ್ಲಿ, ಸಂಮಿಲನದ ದೃಷ್ಟಿಯಲ್ಲಿ, ಹಿಂದೂ ಮುಸಲ್ಮಾನ್ ವಾಸ್ತುಶಿಲ್ಪ ಔನ್ನತ್ಯವನ್ನು ಹೊಂದಿತೋ ಅಥವಾ ಷಾಹಜಹಾನ್ ಕಾಲದ ವಿಶಿಷ್ಟಾಲಂಕಾರ ಸೊಂಪಿನಿಂದ ಮೇಲ್ಮಟ್ಟವನ್ನು ಗಳಿಸಿತೋ ಹೇಳುವುದು ಕಷ್ಟ. ನಿಜವಾಗಿ, ಅಲಂಕಾರ ರಚನೆಯಲ್ಲಿ ಇವೆರಡೂ ಸಮನಾಗಿವೆ ಆದರೆ ಷಾಹಜಹಾನನ ಕಾಲದಲ್ಲಿ ಅಮೃತಶಿಲೆಯ ಚಪ್ಪಡಿಗಳಲ್ಲಿ ಯಥೋಚಿತವಾಗಿ ಕೂಡಿಸಿದ ಬಣ್ಣಬಣ್ಣದ ನವರತ್ನಗಳ ಕುಂದಣದ ಕೆಲಸ ಮಾತ್ರ ಅಸದೃಶ. ಇದೇ ಮಾದರಿಯಲ್ಲಿ ಇತ್ಮ-ಉದ್-ದೌಲಾನ ಗೋರಿ ಅಲಂಕೃತವಾಗಿದೆ. ತುರ್ಕಿ ಸುಲ್ತಾನ್ ಮನೆಯ ಅಲಂಕಾರ ಹೂವು ಹಣ್ಣುಗಳಿಂದ ಕೂಡಿದ ಗಿಡಗಳ ವಿವಿಧ ರೂಪವನ್ನೊಳಗೊಂಡ ಅಕ್ಬರ್ ಗೋರಿಯ ಅಲಂಕರಣವನ್ನು ಹೋಲುತ್ತದೆ.

ಇದೇ ಕಾಲದ ಹೆಂಚುಗಳಿಂದ ನಾನಾ ರೂಪಗಳಲ್ಲಿ ಅಲಂಕೃತವಾದ, ಲಾಹೋರಿನ ವಜೀರ್‌ಖಾನ್ ಗೋರಿ, ಆಗ್ರದ ಚೀನೀತಾಜ್, ಲಾಹೋರ್ ಕೋಟೆಗಳ ಅಲಂಕಾರ ಹೆಚ್ಚಿನ ಮನ್ನಣೆ ಪಡೆದಿವೆ. ಇವುಗಳ ಸೌಂದರ್ಯ ಅದ್ವಿತೀಯವಾದ್ದು. ಇಲ್ಲಿಯ ಮೊಸಾಯಿಕ್ ಚಿತ್ರಗಳು ಸಾಧಾರಣ ಜೀವನಕ್ಕೂ ರಾಜರ ಆಡಂಬರಕ್ಕೂ ಸಾದೃಶ್ಯವಾಗಿವೆ. ಚೀನೀ ಕಾತಾಂಜಾದಲ್ಲಿ ರಾಜರ ಮತ್ತು ಶ್ರೀಮಂತರ ಭಾವಚಿತ್ರಗಳು ಮಿಶ್ರಿತವಾಗಿವೆ. ಇಲ್ಲಿಯ ಚಿತ್ರಗಳಲ್ಲಿ ರಾಜರು ಪೋಲೋ ಆಡುವುದು; ಸವಾರರು ಆನೆ, ಒಂಟೆ, ಕುದುರೆಗಳನ್ನು ಮುಂದೆ ಒಯ್ಯುತ್ತಿರುವುದು; ಆನೆ, ಒಂಟೆ, ಕುದುರೆಗಳ ಮೇಲೆ ಕುಳಿತು ಯುದ್ಧಮಾಡುವುದು; ಹೋರಿ, ಆನೆ, ಒಂಟೆಗಳ ಗುದ್ದಾಟಗಳು; ಅಂತಃಪುರದ ಮಧುಪಾನ ಮತ್ತು ನೃತ್ಯ ಮುಂತಾದ ಕ್ರೀಡೆಗಳು; ಚಿರತೆಗಳ ಸಹಿತ ರಾಜರು ಬೇಟೆ ಆಡುವುದು; ಭೂಮಿಯನ್ನು ಉಳುವುದು; ಬಾತು, ಕೊಕ್ಕರೆ, ಗಿಡುಗ, ಹಮ್ಮಿಂಗ್ ಪಕ್ಷಿಗಳ ಹಾರಾಟ ಮುಂತಾದವು ರಮಣೀಯವಾಗಿವೆ. ಆಡುಗಳನ್ನು ಕೊಂದ ಅನಂತರ ಕೈತೊಳೆಯುವ ಮತ್ತು ಮಧುವನ್ನು ಹಂಚುವ ರೀತಿ ಶ್ರೀಮಂತರ ಉದ್ಯಾನವನದ ಕ್ರೀಡೆಗಳು ಆಕರ್ಷಣೀಯವಾಗಿವೆ. ಈ ನಿರ್ಮಿತಿಗಳಲ್ಲಿ ಹೆಂಚುಗಳ ಶೃಂಗಾರ ಜಹಾಂಗೀರ್ ಕಾಲದಲ್ಲಿ ಪ್ರಾರಂಭವಾಗಿ ಷಾಹಜಹಾನ್ ಕಾಲದಲ್ಲಿ ಉನ್ನತ ಮಟ್ಟಕ್ಕೇರಿತು. ಈ ಶೃಂಗಾರದಲ್ಲಿ ಅಸಂಖ್ಯಾತ ಬಣ್ಣಬಣ್ಣದ ಕಲ್ಲಿನ ಫಲಕಗಳನ್ನೂ ಉಪಯೋಗಿಸಲಾಗಿದೆ. ಹೆಂಚಿನ ಅಲಂಕಾರ ಲಾಹೋರ್ ಕೋಟೆಯಲ್ಲಿ ಕೇಂದ್ರೀಕೃತವಾಯಿತು. ಅದು ಷಾಹಜಹಾನ್ ಆಡಳಿತದಲ್ಲಿ ವೈಭವದ ಶ್ರೇಷ್ಠತೆಯನ್ನು (1628-58) ಸಾಧಿಸಿತು. ಲಾಹೋರಿನ ಅಲಂಕಾರ ಚತುರಶ್ರದಲ್ಲಿ ನಿರ್ಮಿತವಾದ ಮೊಸಾಯಿಕ್‍ಗಳಿಂದ ಕೂಡಿದೆ. ಒಂದೊಂದು ಸಲ ಚತುರಶ್ರ ಬಿಲ್ಲೆಗಳ ಮಧ್ಯಭಾಗ ಕೆಂಪು ಗಾರೆಯಿಂದ ತುಂಬಿಸಲ್ಪಟ್ಟು ಇಟ್ಟಿಗೆಗಳಿಂದ ಕಟ್ಟಲಾಗಿದೆಯೋ ಎನ್ನುವ ಭಾವನೆಯನ್ನು ಕೊಡುತ್ತದೆ (ಉದಾ: ವಜೀರ್‌ಖಾನನ ಮಸೀದಿ). ಹೆಂಚುಗಳಿಂದ ಹೊದ್ದಿಸಿದ ಬಿಲ್ಲೆಗಳ ಮೇಲೆ ರೇಖಾಗಣಿತದ ನಕ್ಷೆಗಳ ಮಧ್ಯೆ ಪುಷ್ಪಭರಿತ ಲತಾ ಸುರುಳಿಗಳ ಅಲಂಕಾರ ಮಾಡಲಾಗಿದೆ. ಫಲಭರಿತ ತಟ್ಟೆಗಳಲ್ಲಿ ಕರಬೂಜ, ಕಲ್ಲಂಗಡಿ, ದಾಳಿಂಬೆ ಹಣ್ಣುಗಳು ನೈಜ ಬಣ್ಣಗಳಿಂದ ಚಿತ್ರಿತವಾಗಿವೆ. ಹಣ್ಣುಗಳ ಪೈಕಿ ದಾಳಿಂಬೆ ಹಣ್ಣುಗಳು ನೈಜ ಬಣ್ಣಗಳಿಂದ ಚಿತ್ರಿತವಾಗಿವೆ. ಪುಷ್ಪಗಳ ಪೈಕಿ ಟ್ಯೂಲಿಪ್, ನಾರ್ಸಿಸಸ್ ಮುಂತಾದವು ತಟ್ಟೆಗಳಲ್ಲಿ ಹೊಳೆಯುತ್ತಿವೆ. ಕೆಲವು ಬಳ್ಳಿಗಳ ಮೇಲೆ ಪರ್ಷಿಯನ್ನರ ಪುಸ್ತಕಗಳಿಂದ ಸಂಗ್ರಹಿಸಿದ ವಾಕ್ಯಗಳ ಶಾಸನಗಳಿವೆ. ಒಳಗಿನ ಗಾರೆಯ ಮೇಲಿನ ಚಿತ್ರಗಳಿಗೂ ಈ ನಕಾಶೆಗಳಿಗೂ ಪರಸ್ಪರ ಸಂಬಂಧವಿದೆ. ಕಮಾನುಗಳ ಎರಡು ಪಾರ್ಶ್ವಗಳಲ್ಲಿಯ ಪುಷ್ಪಲತಾ ಸುರುಳಿಗಳ ಅಲಂಕಾರ, ಜೀರಂಗಡಿಗಳ ಉದ್ದಕ್ಕೂ ಅವುಗಳ ಸುತ್ತಲೂ ಇರುವ ರೇಖಾವಿಲಾಸ, ಮಸೀದಿ ಮತ್ತು ಗೋಡೆಗಳ ಮೇಲೆ ಹೊಳೆಯುವ ಬಣ್ಣಬಣ್ಣದ ಹೆಂಚುಗಳ ಹೊದ್ದಿಗೆ, ಇವೆಲ್ಲವೂ ರಮಣೀಯವಾಗಿವೆ. (ಉದಾ: ಶಾಹೀ ಮಸೀದಿಯ ಷಾ-ಬುರಾನಿನ ಗೋರಿ, ಆಲಿ-ಮರ್ದಾನ್-ಖಾನನ ಧಕ್ಕೈಶರಾಯ್ 1640, ಚೀನೀವಾಲೇ ಮಸೀದಿ 1565-66, ಅಬ್ದುಲ್ ವಾಹಬ್ ಮಸೀದಿ.)

ಮುಸಲ್ಮಾನರು ಭಾರತಕ್ಕೆ ಬಂದ ಪ್ರಾರಂಭದಲ್ಲಿ ಮಿತವಾಗಿ ಉಪಯೋಗಿಸಿದ ಹೆಂಚಿನ ಅಲಂಕಾರ ಮೊಗಲರ ಕಾಲದಲ್ಲಿ ಪ್ರಾಮುಖ್ಯತೆ ಪಡೆಯಿತು. ರುಕ್ನುದ್ದೀನ್ (1320-24) ಗೋರಿಯ ಹೊರಭಾಗ ಹೊಳೆಯುವ ನೀಲಿ, ಊದಾ ಮತ್ತು ಬಿಳಿ ಹೆಂಚುಗಳಿಂದ ಬಿಲ್ಲೆ ಬಿಲ್ಲೆಗಳಾಗಿ ವಿಭಾಗಗೊಂಡಿದೆ. ಪಂಜಾಬಿನಲ್ಲಿ ಲೋದಿ ಸುಲ್ತಾನರ ಕಾಲದಲ್ಲಿ ಈ ಬಣ್ಣಗಳಿಗೆ ಹಳದಿ ಬಣ್ಣದ ಹೆಂಚುಗಳು ಸೇರಿದುವು. ಸಿಕಂದರ್ ಲೋದಿ (1517) ಗೋರಿಯ ಉಭಯ ಪಾರ್ಶ್ವಗಳಲ್ಲಿಯ ಅಲಂಕಾರದಲ್ಲಿ ರೋಜಾ ರೂಪದ ಆಕಾಶ ಬಣ್ಣದ ಪದಕಗಳನ್ನು ರೇಖಾಗಣಿತ ನಮೂನೆಗಳ ಅಂತರದಲ್ಲಿ ಲತಾವಿನ್ಯಾಸ ಸಹಿತ ಸೇರಿಸಲಾಗಿದೆ.

ರೇಖಾಗಣಿತ ನಕ್ಷೆಗಳನ್ನೊಳಗೊಂಡ ಪುಷ್ಪಲತಾಲಂಕಾರದ ಮಧ್ಯೆ ರಚಿಸಲಾದ ನೀಲಿಚ್ಛಾತ್ರಿ ಹೆಸರಿನ ಗೋರಿ ಮತ್ತು ನೀಲಿಗುಂಬಸ್ (1567) ರಮಣೀಯವಾಗಿವೆ. ಈ ಗೋರಿಗಳಲ್ಲಿ ಅತ್ಯಾಕರ್ಷಣೀಯವಾದದ್ದು ಅಕ್ಬರನ ಸಾಕು ತಂದೆಯಾದ ಶಂಶುದ್ದೀನ್ ಅತ್ಗಖಾನನ (1567) ಗೋರಿ. ಇದು ಎನಾಮಲ್, ಮೊಸಾಯಿಕ್‍ಗಳಿಂದ ಅಲಂಕೃತವಾಗಿದೆ. ಇದರಲ್ಲಿ ಹೊಳೆಯುವ ಆಕಾಶನೀಲಿ ಮತ್ತು ಹಳದಿ ಬಣ್ಣಗಳ ಹೆಂಚುಗಳು ಬಿಳೀ ಅಮೃತಶಿಲೆಗಳೊಡನೆ ರೇಖಾನಕ್ಷತ್ರಗಳ ಅಲಂಕಾರದಲ್ಲಿ ಬೆರೆತಿವೆ. ಅಕ್ಬರನ ಕಾಲದಲ್ಲಿ ಅಲಂಕಾರಕ್ಕೆ ನೀಲಿ, ಆಕಾಶ ನೀಲಿ, ಹಳದಿ ಮತ್ತು ಹಸುರು ಬಣ್ಣಗಳ ಹೆಂಚುಗಳನ್ನು ಮುಖ್ಯವಾಗಿ ಉಪಯೋಗಿಸಿದರು. ಮೊಗಲ್ ಕಾಲದ ಅಲಂಕಾರ ಭಾರತದ ಪ್ರಭಾವ ವನ್ನಲ್ಲದಿದ್ದರೂ ಸಮಕಾಲೀನವಾದ ಪರ್ಷಿಯ ದೇಶದ ಸಫಾವಿದ್ ರಾಜರ ಅಲಂಕಾರದ ಧೋರಣೆಗಳನ್ನು ದೊಡ್ಡ ಪ್ರಮಾಣದಲ್ಲಿ ಹೋಲುತ್ತದೆ.

ಮೊಗಲ್ ಕಾಲದ ಚಿತ್ರಣದಲ್ಲಿ ಭಾವಚಿತ್ರಗಳು ಪುಷ್ಕಳವಾಗಿವೆ. ಪ್ರಸ್ತುತ ವಿಷಯವನ್ನು ವಿವರಿಸುವುದಕ್ಕಾಗಿ ಈ ಕಲೆಯನ್ನು ಸಂಕ್ಷಿಪ್ತವಾಗಿ ತಿಳಿಸಬೇಕಾಗಿದೆ. ಈ ಸಂಪ್ರದಾಯ ಪರ್ಷಿಯ ದೇಶದ ಪರಂಪರೆಯನ್ನು ಮುಂದುವರಿಸುತ್ತದೆ. ಇದು ಸೆಫಾವಿದ ಕಲಾ ವಿಧಾನದಲ್ಲಿದ್ದರೂ ರೇಖಾವಿನ್ಯಾಸದಲ್ಲೂ, ಬಣ್ಣಗಳ ವಿನಿಯೋಗದಲ್ಲೂ, ಹೈಂದವ, ಅಜಂತ ಶೈಲಿಗಳಲ್ಲಿದೆ. ಯಥಾದೃಷ್ಟ ರೂಪಣ (ಪರ್‍ಸ್ಪೆಕ್ಟಿವ್), ಬೆಳಕು ನೆರಳುಗಳ ವಿನ್ಯಾಸ ಇವು ಉತ್ತಮ ಚಿತ್ರಗಳಲ್ಲಿ ಕಂಡುಬರುತ್ತದೆ (ಉದಾ: ಚಕ್ರವರ್ತಿ ಷಹಜಹಾನನ ಭಾವಚಿತ್ರ, ಜಯಂತ್ಯುತ್ಸವ, ಹಕಿಮ್‍ತಾಯ್‍ನ ಯುದ್ಧ ಚಿತ್ರಣ. ಅಕ್ಬರ್‍ನಾಮದ ಬೇಟೆ ದೃಶ್ಯಗಳು–ಮುಂತಾದವು). ಪರ್ಷಿಯದ ಇಸ್ಲಾಮೀ ಕಲೆಯಲ್ಲಿ ಪಾರ್ಶ್ವದೃಷ್ಟಿಯ ಭಾವಚಿತ್ರಗಳು ಹೆಚ್ಚಾಗಿಲ್ಲ; ಸಂಪೂರ್ಣ ಅಥವಾ ಮುಕ್ಕಾಲು ವದನವನ್ನು ಅವು ಚಿತ್ರಿಸುತ್ತವೆ. ಮೊಗಲರ ಕಾಲದ ಭಾವಚಿತ್ರಗಳ ಅಂಚಿನಲ್ಲಿ ಚಿನ್ನ ಅಥವಾ ನೀಲಿ ಹಿನ್ನೆಲೆಯಲ್ಲಿ ಮನೋಹರವಾದ ಪುಷ್ಪಲತಾ ಸುರಳಿಗಳ ಮಧ್ಯೆ ಕ್ರೀಡಿಸುವ, ಹಾಡುತ್ತಿರುವ ಅಥವಾ ಹಾರಿ ಹೋಗುತ್ತಿರುವ ವಿವಿಧ ಹಕ್ಕಿಗಳು ಚಿತ್ರಿತವಾಗಿವೆ. ಇವೆಲ್ಲವೂ ಖಗ, ಮೃಗ, ವನಸ್ಪತಿಗಳ ಸಂಯೋಗವನ್ನು ಸಾರುತ್ತವೆ. ಈ ಅಲಂಕಾರ ಲಾಹೋರ್ ಗೋಡೆಯ ಹೆಂಚಿನ ಜೋಡಣೆಯಂತೆ, ಮಾದರಿಗಳ ವೈಶಿಷ್ಟ್ಯವನ್ನಲ್ಲದೆ ಘನತರವಾದ ಲಾಲಿತ್ಯವನ್ನೂ ಪಡೆದಿರುತ್ತವೆ. ಲಾವಣ್ಯದಲ್ಲಿ ಈ ಶೃಂಗಾರ ಅದ್ವಿತೀಯ. ಇದರಲ್ಲಿ ಭಾವಚಿತ್ರದ ರಸಭಾವವಿದೆ. ಇವುಗಳಲ್ಲಿಯ ಚರಿತ್ರಾಂಶ, ಪುರುಷರ ಚಿತ್ರಣ ಪರ್ಷಿಯನ್ನರ ಸಂಪ್ರದಾಯ ಭಂಗಿಗಳಲ್ಲಿ, ವ್ಯವಸ್ಥೆಯಲ್ಲಿ, ಆಡಂಬರದಲ್ಲಿ ಅಸಹಜವಾಗಿದ್ದರೂ ಆಕರ್ಷಣೀಯವಾಗಿವೆ. ಆದರೆ, ಸಾಮಾನ್ಯ ಜೀವನದ ದೃಶ್ಯಗಳಲ್ಲಿ ಬೇಟೆ, ಯುದ್ಧ, ವ್ಯವಸಾಯ ಹೆಚ್ಚಿನ ನೈಜತೆ, ಭಾವ ನಿರೂಪಣೆ, ಜೀವಕಳೆ ಕಂಡುಬರುತ್ತವೆ. ಅಂತಃಪುರದಲ್ಲಿಯ ಮನರಂಜನೆಯ ದೃಶ್ಯಗಳು, ಸ್ತ್ರೀಸಹಿತವಾದವು ಇಸ್ಲಾಮೀ ಕಲೆಯಲ್ಲಿ ಎಲ್ಲಿಯೂ ಚಿತ್ರಿತವಾಗಿಲ್ಲ.

ಉದ್ಯಾನವನಗಳ ನಿರ್ಮಾಣ, ಅಪೂರ್ವ ಬಣ್ಣದ ಹಕ್ಕಿಗಳ ಶೇಖರಣೆ, ಲಾಲನೆ, ಪಾಲನೆ ಮತ್ತು ಅವುಗಳ ಆಟ ಕಾದಾಟಗಳ ವೀಕ್ಷಣೆ ಈ ಕ್ರಿಯೆಗಳಲ್ಲಿ ತನ್ನ ಮುತ್ತಾತನಾದ ಬಾಬರನಂತೆಯೂ ಕಟ್ಟಡಗಳ ನಿರ್ಮಾಣ ಮತ್ತು ಶೃಂಗಾರ ವಿಧಾನಗಳಲ್ಲಿ ತನ್ನ ತಂದೆಯಾದ ಅಕ್ಬರನಂತೆಯೂ ಜಹಾಂಗೀರ್ ಉತ್ಸುಕನಾಗಿದ್ದ. ಔರಂಗಜೇಬ್ ವಿನಾ ಮೊಗಲ್ ಚಕ್ರವರ್ತಿಗಳೆಲ್ಲರೂ ಕೇಸರವಿಲ್ಲದ ಸಿಂಹಗಳ, ಕಾಡುಕತ್ತೆಗಳ, ಜಿಂಕೆಗಳ, ಆನೆಗಳ, ಹುಲಿಗಳ ಬೇಟೆಯಲ್ಲಿ ಆಸಕ್ತಿ ಹೊಂದಿದ್ದರು. ಅದೂ ಅಲ್ಲದೆ ಜಹಾಂಗೀರ್ ಕಾಲದ ಭಾವಚಿತ್ರಗಳ ಅಂಚುಗಳಲ್ಲಿ ಆತ ಶೇಖರಿಸಿದ ಪಕ್ಷಿಗಳ ರೂಪಗಳು ಮಧುರವಾಗಿ ಚಿತ್ರತವಾಗಿವೆ. ಅಂತಃಪುರದಲ್ಲಿ ಏರ್ಪಡಿಸಿದ ಕ್ರೀಡೆಗಳಲ್ಲಿ, ಆನೆಗಳ, ಒಂಟೆಗಳ, ಕೋಳಿಗಳ ಜಗಳಗಳನ್ನು, ಕುಸ್ತಿ ನೋಡುವುದರಲ್ಲಿ, ಅವರಿಗೆ ತುಂಬ ಅಭಿಲಾಷೆ ಇತ್ತೆಂದು ತೋರುತ್ತದೆ. ಮುಖ್ಯವಾಗಿ ಭಾರತ ಚಿತ್ರಕಾರರೆ ಜೀವಕಳೆ ತುಂಬಿ ಮಧುರವಾಗಿ ಚಿತ್ರಿಸಿದ ಹಸ್ತ ಲಿಖಿತ ಪುಸ್ತಕಗಳಲ್ಲಿಯ ಚಿತ್ರಗಳು (ವಾಕಿಯತ್–ಈ–ಬಾಬರಿ 1528, ಅಕ್ಬರ್ ನಾಮಾ) ಇದನ್ನು ಉದಾಹರಿಸುತ್ತವೆ. ಜೈನಕವಿ ನಯಚಂದ್ರ ಸೂರಿ ಸಂಸ್ಕೃತದಲ್ಲಿ ರಚಿಸಿದ ಹಮ್ಮೀರ ಮಹಾಕಾವ್ಯದ ವೀರ ಚರಿತೆಯ ವರ್ಣನೆ (1496) 18ನೆಯ ಶತಮಾನದ ಕಾಂಗ್ರಾ ಚಿತ್ರಕಾರರಿಂದ ಶಕ್ತಿಯುತವಾಗಿಯೂ ಜೀವಯುತವಾಗಿಯೂ ಚಿತ್ರಿತವಾಗಿದೆ. ಹಮ್ಮೀರ್ ರಾಜ್ಯದ ಮೇಲೆ ಅಲ್ಲಾಉದ್ದೀನ್ ಖಿಲ್ಜಿ ನಡೆಸಿದ ರಣಥಂಭೂರ್ ದಾಳಿಯನ್ನು (1096) ಅಲ್ಲಾಉದ್ದೀನನ ಪರಾಭವವನ್ನೂ ತಪ್ಪು ತಿಳಿವಳಿಕೆಯಿಂದ ಅಂತಃಪುರ ಸ್ತ್ರೀಯರ ಸಹಗಮನವನ್ನೂ ಕಡೆಗೆ ಹಮ್ಮೀರ್ ವೀರನ ಆತ್ಮಹತ್ಯವನ್ನೂ ಈ ಹಸ್ತಲಿಖಿತ ಪುಸ್ತಕ ಶ್ರೇಷ್ಠ ಚಿತ್ರಗಳೊಡನೆ ಘನತೆಯಿಂದ ವರ್ಣಿಸುತ್ತದೆ.

ಇಸ್ಲಾಂ ಚರಿತ್ರೆಗೆ ಇವರ ಕಲೆ ಹೊಂದಿಕೊಂಡಿದೆ. ಶಿಲ್ಪವಾಗಲೀ ಉಬ್ಬಿರುವ ಕೆತ್ತನೆಯ ಕೆಲಸವಾಗಲೀ ವಾಸ್ತುಶಿಲ್ಪ ಸೌಂದರ್ಯಕ್ಕೆ ಅತ್ಯವಸರವಾದುದೆನ್ನುವ ಭಾವನೆ ಇಸ್ಲಾಮೀ ಕಲೆಯಲ್ಲಿ ಎಲ್ಲೂ ತೋರುವುದಿಲ್ಲ.

ಭಾರತ ಇಸ್ಲಾಮೀ ಚಿತ್ರಕಲೆಯಲ್ಲಿ ಪಾಲ್ಗೊಂಡವರು ಮಧು, ಮಹೇಶ, ಬಸವಾನ್, ಮನೋಹರ್, ಸರ್ವಾನ್, ಧರ್ಮದಾಸ್, ಮುಕುಂದ್, ಛಾತ್ರಮುನಿ ಮುಂತಾದ ಹೈಂದವರೇ. ಇಸ್ಲಾಮೀ ಚಿತ್ರಕಲೆಗೂ ಭಾರತ ಚಿತ್ರಕಲೆಗೂ ವಿಷಯಾಂಶದಲ್ಲಿ ಮಾತ್ರ ಭೇದವಿದೆ. ಶೈಲಿಗಳು ಒಂದೇ. ಅತ್ಯಂತ ಪ್ರಾಚೀನವಾದ ಭಾರತೀಯ ಸಂಪ್ರದಾಯವನ್ನು ಅನುಸರಿಸಿದ ಅಜಂತಾ ಚಿತ್ರಗಳು ಇವೆಲ್ಲಕ್ಕೂ ಸ್ಫೂರ್ತಿದಾಯಕವಾಗಿವೆ. (ಪಿ.ಎಸ್.)

ಭಾರತದಲ್ಲಿ ನಿರ್ಮಿತವಾದ ಇಸ್ಲಾಂ ಶೈಲಿ ಭಾರತೀಯ ಸಂಸ್ಕೃತಿ ಮತ್ತು ಕಲೆಗಳ ಪ್ರಭಾವದಿಂದಾಗಿ ಒಂದು ವಿಶೇಷ ರೀತಿಯ ಶೈಲಿಯಾಗಿ ಬೆಳೆಯಿತು. ದೆಹಲಿ ಮತ್ತು ಆಗ್ರ ನಗರಗಳಲ್ಲಿ ನಿರ್ಮಿತವಾಗಿರುವ ಭವನಗಳನ್ನು ನೋಡಿದರೆ ಇದು ಚೆನ್ನಾಗಿ ವೇದ್ಯ ವಾಗುತ್ತದೆ.

ಭಾರತೀಯ ಇಸ್ಲಾಂ ಕಟ್ಟಡಗಳು ಹೆಚ್ಚು ಚತುರತೆಯಿಂದ ನಿರ್ಮಿತವಾಗಿವೆಯಲ್ಲದೆ, ನಿರ್ಮಾಣ ಕಲೆಯ ಅನೇಕ ಸಮಸ್ಯೆಗಳನ್ನು ಇವುಗಳಲ್ಲಿ ಪರಿಹರಿಸಲಾಗಿದೆ. ಮೊದಮೊದಲು ಇಸ್ಲಾಂ ದಂಡನಾಯಕರು ಭಾರತದ ಜೈನ ದೇವಾಲಯಗಳ ಗರ್ಭಗೃಹವನ್ನು ಒಡೆದುಹಾಕಿ, ಪಶ್ಚಿಮ ಭಾಗದಲ್ಲಿ ಮೆಕ್ಕ ಕಡೆಗೆ ಮಿಹ್ರಾಬ್ ಅನ್ನು (ಪೀಠ) ನಿರ್ಮಿಸಿದರು. ಇಸ್ಲಾಂ ಶೈಲಿಯ ಕಮಾನುಗಳನ್ನು ಉಪಯೋಗಿಸಿ ಬಳಕೆಗೆ ತಂದರು. ಅಮೃತಶಿಲೆ ಮತ್ತು ಬಳಪದ ಕಲ್ಲಿನಲ್ಲಿ ಕಟ್ಟಲ್ಪಟ್ಟು ಬಹು ಅಂದವಾದ ಶೈಲಿಯಲ್ಲಿ ಇವರ ವಾಸ್ತುಶಿಲ್ಪ ಬೆಳೆಯಿತು.

ದೆಹಲಿಯ ಕುತುಬ್ ಮಿನಾರ್, ಜುಮ್ಮಾ ಮಸೀದಿ, ಕೆಂಪುಕೋಟೆಯೊಳಗಿನ ಅರಮನೆಗಳು, ಆಗ್ರಾದ ಕೆಂಪುಕೋಟೆ, ಫತೇಪುರ್ ಸಿಕ್ರಿ ನಗರ, ಅಕ್ಬರ್, ಹುಮಾಯೂನ್ ಮೊದಲಾದ ಚಕ್ರವರ್ತಿಗಳ ಗೋರಿಗಳು, ಎಲ್ಲಕ್ಕೂ ಮಿಗಿಲಾಗಿ ಪ್ರಪಂಚದ ಅದ್ಭುತಗಳ ಲ್ಲೊಂದಾದ ವಿಶ್ವವಿಖ್ಯಾತ ತಾಜ್‍ಮಹಲ್–ಇವು ಭಾರತೀಯ ಇಸ್ಲಾಂ ಶೈಲಿಯ ಪ್ರತೀಕವಾಗಿ ಇಂದೂ ಆಕರ್ಷಣೀಯವಾಗಿವೆ.

ಮುಸ್ಲಿಮರ ಅನಂತರ ಬಂದ ಆಂಗ್ಲರೂ ಇತರ ಸಾಮಂತ ರಾಜರೂ ಇಸ್ಲಾಂ ಶೈಲಿಯ ಕೆಲವು ರೂಪರೇಷೆಗಳನ್ನು ತಾವು ನಿರ್ಮಿಸಿದ್ದ ಕೆಲವು ಕಟ್ಟಡಗಳಲ್ಲೂ ಉಪಯೋಗಿಸಿದರು. ಮೈಸೂರಿನ ಅರಮನೆ ಇಂಥ ನಿರ್ಮಾಣ ಕಲೆಗೆ ಉತ್ತಮ ನಿದರ್ಶನವಾಗಿದೆ. (ಕೆ.ಎಸ್.ಆರ್.ಜಿ.)

# ಈ

**ಈಜಿಪ್ಟ್:** ಮಧ್ಯಪ್ರಾಚ್ಯದ ಒಂದು ಗಣತಂತ್ರ ರಾಷ್ಟ್ರ. ಉತ್ತರ ಆಫ್ರಿಕದ ಈಶಾನ್ಯ ಭಾಗದಲ್ಲಿರುವ ಈ ರಾಷ್ಟ್ರ 1,001,449 ಚ.ಕಿಮೀ ವಿಸ್ತೀರ್ಣ ಹೊಂದಿದೆ. ಉತ್ತರದಿಂದ ದಕ್ಷಿಣಕ್ಕೆ ಸು.1086 ಕಿಮೀ. ಪೂರ್ವದಿಂದ ಪಶ್ಚಿಮಕ್ಕೆ 1240 ಕಿಮೀ ವ್ಯಾಪ್ತಿಯ ಈ ದೇಶವನ್ನು ದಕ್ಷಿಣದಲ್ಲಿ ಸುಡಾನ್, ಪಶ್ಚಿಮಕ್ಕೆ ಲಿಬಿಯಾ ದೇಶಗಳೂ, ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರ, ಪೂರ್ವದಲ್ಲಿ ಕೆಂಪುಸಮುದ್ರಗಳಿಂದ ಸುತ್ತುವರೆದಿದೆ. ಈಶಾನ್ಯ ಭಾಗದಲ್ಲಿ ಸಿನಾಯ್ ಮರುಭೂಮಿ ಇಸ್ರೇಲ್ ರಾಷ್ಟ್ರದೊಂದಿಗೆ ಗಡಿಯಾಗಿದ್ದು ಕೇವಲ ಅಲ್ಪಭಾಗ ಮಾತ್ರ ಏಷ್ಯಖಂಡದ ಜೊತೆ ಸಂಪರ್ಕ ಹೊಂದಿದೆ. ಈ ದೇಶ ಬಹುತೇಕ ಮರಳುಗಾಡಿನಿಂದ ಆವೃತವಾಗಿದ್ದು ಶೇ.4ರಷ್ಟು ಮಾತ್ರ ಜನವಸತಿ ಹಾಗೂ ಕೃಷಿಗೆ ಯೋಗ್ಯವಾದ ಪ್ರದೇಶವಿದೆ. ಅರೇಬಿಕ್ ಭಾಷೆ ಇಲ್ಲಿಯ ಅಧಿಕೃತ ಆಡಳಿತ ಭಾಷೆ. ಇಸ್ಲಾಂ ಈ ದೇಶದ ಅಧಿಕೃತ ಧರ್ಮ. ಆದರೂ ಕ್ರಿಶ್ಚಿಯನ್ನರು ಇಲ್ಲಿ ವಾಸವಾಗಿದ್ದಾರೆ. ಇಲ್ಲಿ ಜನತೆ ಹಲವು ಜನಾಂಗಗಳ ಮಿಶ್ರಣವಾಗಿದ್ದು ಈಜಿಪ್ಟ್, ಆಫ್ರಿಕ, ಏಷ್ಯ ಹಾಗೂ ಯುರೋಪ್ ಖಂಡಗಳ ನಡುವಿನ ಕವಲು ದಾರಿಯೆನಿಸಿದೆ. ಇಡೀ ದೇಶದ ಜೀವಾಳವೆಂದರೆ ಇಲ್ಲಿ ಹರಿಯುವ ನೈಲ್‍ನದಿ. ಇದು ಈ ದೇಶದ ವರಪ್ರಸಾದವೆನಿಸಿದೆ. ರಾಜಧಾನಿ ಕೈರೋ.

ಐತಿಹಾಸಿಕವಾಗಿ ಈಜಿಪ್ಟ್ ಅತ್ಯಂತ ಪುರಾತನ ನಾಗರಿಕತೆಯ ರಾಷ್ಟ್ರ. ಪ್ರ.ಶ.ಪೂ. 3,000 ವರ್ಷಗಳಿಂದೀಚೆಗೆ ಇಲ್ಲಿಯ ಇತಿಹಾಸದ ಬಗ್ಗೆ ನಮಗೆ ನಿಖರವಾದ ಪುರಾವೆಗಳು ದೊರೆಯುತ್ತವೆ. ಪುರಾತನ ಕಾಲದ ರಾಜಮನೆತನದವರು ಪಿರಮಿಡ್ಡುಗಳನ್ನು ನಿರ್ಮಿಸಿ ಪ್ರಸಿದ್ಧರಾದರೆ, ಮಧ್ಯಕಾಲದವರು ಪಾತಾಳ ಲೋಕದ ದೇವತೆ ಒಸಿರೀಸ್ ಮತ್ತು ಶಿಲ್ಪಕೌಶಲ್ಯದಿಂದ ಹಾಗೂ ಅನಂತರದ ಕಾಲದವರು ತಮ್ಮ ಸಾಮ್ರಾಜ್ಯ ವಿಸ್ತರಣೆಗೂ ಯಹೂದಿಯರನ್ನು ಈಜಿಪ್ಟ್‍ನಿಂದ ಹೊರಗಟ್ಟಿದುದಕ್ಕೂ ಪ್ರಸಿದ್ಧಿ ಪಡೆದಿದ್ದಾರೆ.

ಈಜಿಪ್ಟಿಯನ್ನರ ಆಳಿಕೆಯ ಬಗ್ಗೆ ನಿಖರವಾದ ಕಾಲಾನುಕ್ರಮವನ್ನು ಗ್ರೀಕ್ ಇತಿಹಾಸಕಾರ ಸೆಬನೀತೋಸ್‍ನ ಮನೆತೋ ಎಂಬುವವನು ಪ್ರ.ಶ.ಪೂ.3ನೆಯ ಶತಮಾನದಲ್ಲಿ ದಾಖಲಿಸಿದ್ದಾನೆ. ಈತನ ಬರೆಹಗಳಿಂದ ನಾವು ಈಜಿಪ್ಟ್‍ನ್ನು ಆಳಿದ ರಾಜಮನೆತನಗಳನ್ನು ಮೂರು ಅನುಕ್ರಮ ಸರಣಿಗಳಲ್ಲಿ ಗುರುತಿಸಬಹುದು: ಒಟ್ಟಾರೆ ಆಳಿಕೆಯ ಇತಿಹಾಸದಲ್ಲಿ ನಾಲ್ಕು ಅನುಕ್ರಮ ಘಟ್ಟಗಳಿವೆ. (1) ರಾಜವಂಶ ಪೂರ್ವ ಘಟ್ಟ–ಪ್ರ.ಶ.ಪೂ.5000–3000; (2) ರಾಜವಂಶ ಆದಿಘಟ್ಟ (1 ರಿಂದ 11ನೆಯ ಸಂತತಿ)–ಪ್ರ.ಶ.ಪೂ.3100–2100; ರಾಜವಂಶ ಮಧ್ಯಘಟ್ಟ (12 ರಿಂದ 17ನೆಯ ಸಂತತಿ)–ಪ್ರ.ಶ.ಪೂ.2100–1480; ಮತ್ತು ರಾಜವಂಶದ ಕೊನೆಯ ಘಟ್ಟ (18–31ನೆಯ ಸಂತತಿ)–ಪ್ರ.ಶ.ಪೂ.1480–332. ಕೊನೆಯ ಘಟ್ಟದ ರಾಜವಂಶದ ಆಳಿಕೆಯಲ್ಲಿ ಈಜಿಪ್ಟ್ ಇತಿಹಾಸ ಅತ್ಯಂತ ವಿಶಿಷ್ಟ ಆಡಳಿತ ವ್ಯವಸ್ಥೆಯನ್ನು ಹೊಂದಿತ್ತು. ತದನಂತರದಲ್ಲಿ ಈಜಿಪ್ಟ್ ರಾಜಕೀಯ ಇತಿಹಾಸದಲ್ಲಿ ಪರಕೀಯರದೆ ಮೇಲುಗೈಯಾಯಿತು.

ನೈಲ್ ನದಿಯ ಮೇಲ್ಭಾಗದ ಪ್ರದೇಶ ಮತ್ತು ಕೆಳಭಾಗದ ಫಲವತ್ತಾದ ಪ್ರದೇಶಗಳನ್ನು ಪ್ರ.ಶ.ಪೂ.ಸು.3000ರಲ್ಲಿ ಒಗ್ಗೂಡಿಸಿ ಮೊದಲ ಬಾರಿಗೆ ಸಮಗ್ರ ಈಜಿಪ್ಟನ್ನು ಆಳಿದ ದೊರೆಯೆಂದರೆ ಮೆನೆಸ್. ಈತನು ತಿನಿ ಪ್ರಾಂತದ ಮಾಂಡ್ರಿನ್ ಗೀರ್‌ಗೇ ಎಂಬಲ್ಲಿ ತನ್ನ ಆಡಳಿತ ಕೇಂದ್ರವನ್ನು ಮಾಡಿಕೊಂಡಿದ್ದ. ಇವನ ವಾರಸುದಾರರ 8 ಗೋರಿಗಳು ಈ ಪ್ರದೇಶದಲ್ಲಿ ಪತ್ತೆಯಾಗಿದ್ದು ಉಳಿದ ರಾಜರ ಸಮಾಧಿಗಳ ಬಗ್ಗೆ ಮಾಹಿತಿ ದೊರತಿದೆ. 1897ರಲ್ಲಿ ಡಿ.ಮಾರ್ಗನ್ ಎಂಬ ಪುರಾತತ್ತ್ವ ಸಂಶೋಧಕ ನಕಾದೇ ಪ್ರಾಂತದಲ್ಲಿ ಪತ್ತೆ ಹಚ್ಚಲಾಗಿರುವ ಈ ಸಂತತಿಯವರ ನಾಗರಿಕತೆಯ ಬಗ್ಗೆ ಹೇಳುತ್ತಾ ಈ ವೇಳೆಯಲ್ಲಿಯ ಕ್ರೌರ್ಯದ ಬಗ್ಗೆ ಮಾಹಿತಿ ನೀಡಿದ್ದಾರೆ. ಮೆನೆಸ್ ಆಡಳಿತಾವಧಿಯಲ್ಲೇ ಮೆಂಫಿಸ್ ರಚನೆ ಯಾಯಿತೆಂದು ತಿಳಿದುಬರುತ್ತದೆ.


ಶಾಸನಸ್ತಂಭ, ಲುಕ್ಸರ್

ಜೋಸೆರ್ ಸ್ಥಾಪಿಸಿದ್ದು ಈಜಿಪ್ಟಿನ 3ನೆಯ ರಾಜಮನೆತನ. ಇವನ ಆಡಳಿತ ಕಾಲದಲ್ಲಿ ಸರ್ಕಾರದಲ್ಲಿ ಪಾವಟಿಗೆ ಯಿಂದಾದ ಪಿರಮಿಡ್ಡುಗಳನ್ನು ನಿರ್ಮಿಸಲಾಗಿದೆ. ಪ್ರ.ಶ.ಪೂ. 3000 ವೇಳೆಯಲ್ಲಿ ಆಳಿಕೆ ನಡೆಸಿದ 4ನೆಯ ಸಂತತಿಯ ಸ್ಥಾಪಕ ಸ್ನೊಫ್ರಿ ಎಂಬು ವನು. ಈ ಮನೆತನದವರ ಆಳಿಕೆಯಲ್ಲಿ ಈಜಿಪ್ಟಿನ ಮೇಲೆ ಏಷ್ಯ ಮೂಲದ ಹಿಟೈಟರು ಧಾಳಿ ನಡೆಸಿದರು. ಈ ಸಂತತಿಯವರು ಗೀಜಾದಲ್ಲಿಯ ಮೆಯಿಡೆಮ್, ಹೂಪು, ಆಪ್ರೆ ಮತ್ತು ಮೆನ್ಕರೇ ಪಿರಮಿಡ್ಡುಗಳ ನಿರ್ಮಾಪಕರು.

ಪ್ರಾಚೀನ ಈಜಿಪ್ಟನ್ನು ಆಳಿದ 5ನೆಯ ಸಂತತಿಯವರೆಂದರೆ ಚಕ್ರ ವರ್ತಿ ಅಟೀಟೈ ಅಥವಾ ಟೇಟೈ, ಪೆಪೂ ಅಥವಾ ಅಪೊಪೇ, ಪೆಪಿI. ಮೆಂಫಿಸ್‌ನ ನಿಜವಾದ ಸ್ಥಾಪಕನಿರ ಬಹುದೆಂದು ನಂಬಲಾಗಿದೆ. ಕೊನೆಯವನು ಯುದ್ಧಪ್ರಿಯ ಎರಡನೆಯ ಪೆಪಿ. ಈತನು ಪ್ಯಾಲಸ್ತೀನಿನ ಮೇಲೆ ಧಾಳಿ ನಡೆಸಿ ವಿಜಯ ಸಾಧಿಸಿದ. ಈ ಧಾಳಿಯ ಅನಂತರ ಅಧಿಕಾರ ನಡೆಸಿದ 6–11ನೆಯ ಸಂತತಿಯವರ ಕಾಲದಲ್ಲಿ (ಪ್ರ.ಶ.ಪೂ.2160–2040) ಈಜಿಪ್ಟಿನ ಆಡಳಿತ ವಿಕೇಂದ್ರಿಕರಣಗೊಂಡು ಕೇಂದ್ರ ಆಡಳಿತ ದುರ್ಬಲಗೊಂಡಿತು. ಈ ವೇಳೆಯಲ್ಲಿ ಪ್ರಾಂತೀಯ ಅಧಿಕಾರಿಗಳು ರಾಜಪ್ರಮುಖರೆನಿಸಿ ಆಡಳಿತವನ್ನು ದುರ್ಬಲಗೊಳಿಸಿದರು. ಇದರಿಂದಾಗಿ ಈಜಿಪ್ಟಿನ ಆಳಿಕೆಯ ಮೇಲೆ ಪರಕೀಯರ ಧಾಳಿಗಳು ನಡೆದವು. 11ನೆಯ ಸಂತತಿಯ ಚಕ್ರವರ್ತಿ ತೀಬ್ಸಾನ ಕಾಲದಲ್ಲಿ ಈ ಸಂತತಿ ಆಡಳಿತ ಅಂತ್ಯ ಕಂಡಿತು. ಇಲ್ಲಿಗೆ ಈಜಿಪ್ಟಿನ ಪುರಾತನ ಆಳಿಕೆಯು ಕೊನೆಗೊಂಡಿತು. ಮಧ್ಯಕಾಲೀನ ಆಡಳಿತ 12ನೆಯ ಸಂತತಿಯ ಸ್ಥಾಪಕ ಎರಡನೆಯ ಮೆನ್‌ತೂಹಪ್ ಎಂಬುವವನಿಂದ ಪ್ರಾರಂಭ ವಾಯಿತು (ಪ್ರ.ಶ.ಪೂ.2060–2010). ಈತನು ಹಂಚಿಹೋಗಿದ್ದ ಈಜಿಪ್ಟಿನ ಪ್ರಾಂತಗಳನ್ನು ಒಗ್ಗೂಡಿಸಿ ಐಕ್ಯತೆಯನ್ನು ಸಾಧಿಸಿದ. ಅನಂತರದ ಚಕ್ರವರ್ತಿಗಳಾದ ಪ್ರಖ್ಯಾತ ಸೆಸೋತ್ರಿಸ್–III ಮತ್ತು ತೃತೀಯ ಅಮ್ನೇಹೊತೆ (ಪ್ರ.ಶ.ಪೂ.1870) ಆಡಳಿತದ ಬಗ್ಗೆ ಗ್ರೀಕರ ಹಿರೋಡಾಟಸ್ ದಾಖಲಿಸಿದ್ದಾನೆ. ಈ ಸಂತತಿಯ ಚಕ್ರವರ್ತಿಗಳು ಹವಾರದಲ್ಲಿ ಪಿರಮಿಡ್ಡುಗಳನ್ನು ನಿರ್ಮಿಸಿದ್ದರು. ನಾಲ್ಕನೆಯ ಅಮ್ನೆಯತುಪ್ ಆಳಿಕೆಯ ಅನಂತರದಲ್ಲಿ ಸೆಬ್ಕ ನೋಫ್ರು ಎಂಬ ರಾಣಿ ಆಳಿಕೆ ನಡೆಸಿದಳು ಎಂದು ತಿಳಿದುಬರುತ್ತದೆ. ಅನಂತರ ಆಡಳಿತ ನಡೆಸಿದ 13 ಮತ್ತು 14ನೆಯ ಸಂತತಿಯವರ ಕಾಲದಲ್ಲಿ ಈಜಿಪ್ಟಿನಲ್ಲಿ ರಾಜಕೀಯ ಕ್ಷೋಭೆ ಉಂಟಾಯಿತು. ಅಂಧಕಾರದಲ್ಲಿ ಮುಳುಗಿದ ಈಜಿಪ್ಟಿನ ಸಮಾಜದಲ್ಲಿ ಅನೇಕ ರಾಜರುಗಳು ಆಡಳಿತ ನಡೆಸಿದ ಬಗ್ಗೆ ಮಾಹಿತಿಯಿದ್ದರೂ ಈ ವೇಳೆಯಲ್ಲಿ ಯಾವುದೇ ಮಹತ್ತರವಾದ ಸಾಧನೆ ಕಂಡುಬಂದಿಲ್ಲ. ಪ್ರ.ಶ.ಪೂ. 1680ರಲ್ಲಿ ಈಜಿಪ್ಟಿನ ಮೇಲೆ ಧಾಳಿ ನಡೆಸಿದ ಹೈಕಸೂಸ್ ಎಂಬ ಏಷ್ಯಮೈನರ್ ಪ್ರದೇಶದ ಗುಡ್ಡಗಾಡು ನಾಯಕ ಈಜಿಪ್ಟಿನಲ್ಲಿ ಆಳಿಕೆ ನಡೆಸುತ್ತಿದ್ದ ಅಸಮರ್ಥ ರಾಜರನ್ನು ಸೋಲಿಸಿ, ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ. ಇವನ ಪ್ರಾಂತಾಧಿಕಾರಿಗಳು ಈಜಿಪ್ಟಿನ ಪ್ರಾಂತೀಯ ಅಧಿಕಾರಿಗಳೆನಿಸಿ ತಮ್ಮ ಆಳಿಕೆ ನಡೆಸಿದರು. ಇವರು ಈಜಿಪ್ಟಿನಲ್ಲಿ 15 ಮತ್ತು 16ನೆಯ ಸಂತತಿಯವರು.

17ನೆಯ ಸಂತತಿಯ ಸ್ಥಾಪಕ ಒಂದನೆಯ ಅಮೋಸಿಸ್ ಅಸ್ಸೀರಿಯನ್ನರನ್ನು ಸೋಲಿಸಿ ಈಜಿಪ್ಟಿನ ಚಕ್ರವರ್ತಿಯೆನಿಸಿದ. ಈ ವಂಶದ ಪ್ರಮುಖ ಚಕ್ರವರ್ತಿಯೆಂದರೆ ಹನರೀಸ್ (ಹನಾರಿಸ್ ಆರ್ ಹೊವ್ನೇಟ್ ಪ್ರ.ಶ.ಪೂ.1583). ಇವರು ನಿರ್ಮಿಸಿದ ಪೆಲ್ಯುಸಿಯಂ ಕೋಟೆ ಬಹಳ ಪ್ರಮುಖವಾಗಿದೆ. ಅಮೋಸಿಸ್–II, 18ನೆಯ ಸಂತತಿಯ ಈಜಿಪ್ಟಿನ ದೊರೆ. ಈತ ಹೈಕೋಸಿಸ್‌ಗಳನ್ನು ಸೋಲಿಸಿದ. ಈಜಿಪ್ಟಿನ ಎಲ್ಲ ಪ್ರಾಂತಗಳಿಂದ ತನ್ನ ಆಳಿಕೆಗೆ ಮಾನ್ಯತೆ ದೊರಕಿಸಿಕೊಂಡಿದ್ದನು. ಇದರಿಂದಾಗಿ ಈಜಿಪ್ಟಿನ ಸೈನಿಕರು. ನೆರೆಯ ಪೆನ್ಸಿಲ್ವೇನಿಯ, ಪ್ಯಾಲಸ್ತೀನ್ ಮೇಲೆ ಧಾಳಿ ನಡೆಸಿದರು. ಅಮೇನೋಪಿಸ್–I (ಪ್ರ.ಶ.ಪೂ.1570) ನುಬಿಯಾ ಮೇಲೆ ಯುದ್ಧ ನಡೆಸಿದ. ಸಿರಿಯ ಸಹ ಈತನ ಆಳಿಕೆಗೆ ಒಳಗಾಯಿತು. ಈತನ ರಾಣಿ ಹಟ್‌ಷೆಪ್‌ಸು ಮತ್ತು ಎರಡನೆಯ ತುತ್‌ಮೋಸಿಸ್ ಜೊತೆಯಾಗಿ ಅಧಿಕಾರ ನಡೆಸಿದ್ದರು. ಮುಮ್ಮಡಿ ತುತ್‌ಮೋಸಿಸ್ ಆಡಳಿತಾವಧಿಯಲ್ಲಿ ಈಜಿಪ್ಟಿನ ಗಡಿಗಳನ್ನು ವಿಸ್ತರಿಸಲಾಯಿತು. ಹೊಸದಾಗಿ ಕೆಲವು ಪ್ರಾಂತ್ಯಗಳು ಈಜಿಪ್ಟಿನ ಆಡಳಿತಕ್ಕೆ ಸೇರ್ಪಡೆಗೊಂಡವು. ಲುಕ್ಸರ್ ಮತ್ತು ಕಾರ್ನಾಕ್‌ಗಳಲ್ಲಿ ಪಿರಮಿಡ್ಡು ಹಾಗೂ ದೇವಾಲಯಗಳ ನಿರ್ಮಾಣವಾಯಿತು. ಈತನ ಮಗ ನಾಸ್ತಿಕ ದೊರೆಯೆನಿಸಿದ್ದ ಅಕೆನಟೆನ್ ಸಂಪ್ರದಾಯಗಳನ್ನು ಧಿಕ್ಕರಿಸಿದ್ದ. ಆದರೆ ಎರಡನೆಯ ತೂತ್‌ಖೇಮೆನ್ ಅಥವಾ ರ್‍ಯಾಮ್ಸೆಸ್ ಆಡಳಿತದಲ್ಲಿ ಹಿಂದಿನ ಸಂಪ್ರದಾಯ ಗಳು ಮುಂದುವರಿಯಿತು.

ಪ್ರ.ಶ.ಪೂ.1485ರಲ್ಲಿ ಎರಡನೆಯ ಅಮೇನೋಪಿಸ್ ಅನಂತರ ನಾಲ್ಕನೆಯ ತುತ್‌ಮೋಸ್, ಮೂರನೆಯ ಅಮೇನೋಪಿಸ್ (ಪ್ರ.ಶ.ಪೂ.1450) ಅಧಿಕಾರಕ್ಕೆ ಬಂದರು. ಸಿರಿಯ, ಬ್ಯಾಬಿಲೋನಿಯ, ಅಸ್ಸೀರಿಯ, ಜೆರುಸಲೇಂ ಜೊತೆ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿದ್ದರು ಎಂಬುದರ ಬಗ್ಗೆ ಟೆಲ್–ಎಲ್–ಅಮಾರ್ನಗಳಲ್ಲಿ ದೊರಕಿರುವ ಶಾಸನಗಳಿಂದ ತಿಳಿದುಬರುತ್ತದೆ. ನಾಲ್ಕನೆಯ ಅಮೇನೋಡಿಸ್ (ಪ್ರ.ಶ.ಪೂ.1455) ತನ್ನ ಧಾರ್ಮಿಕ ಕ್ರಾಂತಿಯಿಂದಾಗಿ ಪ್ರಸಿದ್ಧಿಯಾಗಿದ್ದಾನೆ. ಈತ ಈಜಿಪ್ಟಿನ ಆಚರಣೆಯಲ್ಲಿದ್ದ ಸೂರ್ಯ ಆರಾಧನೆ, ಸ್ಥಳೀಯ ನಂಬಿಕೆ ಹಾಗೂ ಅಮೋನ್ ಆರಾಧನೆಯನ್ನು ನಿಷೇಧಿಸಿ, ಅರ್ಚಕರನ್ನು ಹಿಂಸೆಗೆ ಗುರಿಪಡಿಸಿದ. ಇವನು ತನ್ನ ರಾಜಧಾನಿಯನ್ನು ತೀಬ್ಸ್‌ನಿಂದ ಟೆಲ್–ಎಲ್–ಅಮಾರ್ನಕ್ಕೆ ಸ್ಥಳಾಂತರಿಸಿದ್ದ. ಇವನ ಸಾವಿನ ಅನಂತರ ಮತ್ತೆ ಹಿಂದಿನ ಪದ್ಧತಿಗಳು ಊರ್ಜಿತಗೊಂಡವು.

**ರ್‍ಯಾಮ್ಸೆಸ್‌ಗಳ ಆಡಳಿತ:** ಪ್ರ.ಶ.ಪೂ.1355 ರಲ್ಲಿ 19ನೆಯ ಸಂತತಿಯ ಆಡಳಿತ ಈಜಿಪ್ಟಿನಲ್ಲಿ ಪ್ರಾರಂಭವಾಯಿತು. ಈ ಸಂತತಿಯ ಸ್ಥಾಪಕ ಒಂದನೆಯ ರ್‍ಯಾಮ್ಸೆಸ್. ಈತನು ಅನೇಕ ದೇವಾಲಯಗಳನ್ನು ನಿರ್ಮಿಸಿದ. ಎರಡನೆಯ ರ್‍ಯಾಮ್ಸೆಸ್ ಆಡಳಿತಕ್ಕೆ ಹಿಟೈಟರು ಅಡ್ಡಿಯುಂಟುಮಾಡಿದರು. ಈತ (ಸಸುತ್ರಿ ಅಥವಾ ಎರಡನೆಯ ರ್‍ಯಾಮ್ಸೆಸ್) ತನ್ನ 21 ವರ್ಷಗಳ ಸುದೀರ್ಘ ಆಳಿಕೆಯಲ್ಲಿ ಈಜಿಪ್ಟಿಯನ್ನರನ್ನು ಒಗ್ಗೂಡಿಸಿ, ಪ್ಯಾಲೀಸ್ತೀನಿ ಯರ ಜೊತೆ ಶಾಂತಿ ಒಪ್ಪಂದಕ್ಕೆ ಸಹಿಹಾಕಿದ. ಲುಕ್ಸರ್, ಕಾರ್ನಾಕ್, ಅಬೈಡೊಸ್‌ಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದ. ಗೋಸೆನ್‌ನಲ್ಲಿ ಬಂಡೆಗಳನ್ನು ತುಂಡರಿಸಿ ಕಾಲುವೆ ನಿರ್ಮಿಸಿದ. ಸಿರಿಯವನ್ನು ಈಜಿಪ್ಟಿನ ವಶಮಾಡಿಕೊಂಡು ಅನೇಕ ನಗರಗಳನ್ನು ನಿರ್ಮಿಸಿದ. ಎರಡನೆಯ ರ್‍ಯಾಮ್ಸೆಸ್ ಫೆರೋಗಳ ದಬ್ಬಾಳಿಕೆಯ ಪ್ರತೀಕವೆನಿಸಿದ್ದಾನೆ.

ಪ್ರ.ಶ.ಪೂ.1200 ರಲ್ಲಿ 20ನೆಯ ಸಂತತಿಯವರು ಈಜಿಪ್ಟಿನಲ್ಲಿ ಅಧಿಕಾರಕ್ಕೆ ಬಂದರು. ಈ ಸಂತತಿಯ ಸ್ಥಾಪಕ ಸೆತ್‌ನಂತ್. ಮೂರನೆಯ ರ್‍ಯಾಮ್ಸೆಸ್ ಲಿಬಿಯನ್ನರನ್ನು ಈಜಿಪ್ಟಿನಿಂದ ಓಡಿಸಿ, ಪ್ಯಾಲಸ್ತೀನಿಯನ್ನರ ಜೊತೆ ಸ್ನೇಹ ಬೆಳೆಸಿದ. ಮೆದಿನತ್‌ನಲ್ಲಿಯ ಹಬುವಿನಲ್ಲಿ ದೇವಾಲಯ ನಿರ್ಮಿಸಿದ. ಈತ ದೈವ ಭಕ್ತನಾಗಿದ್ದು ಅಮೋನ್ ದೇವರಿಗೆ ಅಪಾರ ಪ್ರಮಾಣದ ಕಾಣಿಕೆಯನ್ನು ಅರ್ಪಿಸಿದ್ದ. ಈತನ ಆಳಿಕೆಯಲ್ಲಿ ಅರ್ಚಕರು ರಾಜನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಉನ್ನತ ಸ್ಥಾನ ಪಡೆದಿದ್ದರು. ಮೂರನೆಯ ರ್‍ಯಾಮ್ಸೆಸ್ ಮತ್ತು ನಾಲ್ಕನೆಯ ರ್‍ಯಾಮ್ಸೆಸ್ ಇವರ ಕಾಲದಿಂದ ಹನ್ನೆರಡನೆಯ ರಾಮ್ಸೆಸ್ ಕಾಲದವರೆಗೂ ಅರ್ಚಕರು ರಾಜನ ಮೇಲೆ ನಿಯಂತ್ರಣ ಹೊಂದಿದ್ದರು. ಪ್ರ.ಶ.ಪೂ. 1100ರಲ್ಲಿ ಈಜಿಪ್ಟಿನ ಪ್ರಧಾನ ಅರ್ಚಕತಾನೇ ಸ್ವತಃ ಸಿಂಹಾಸನವೇರಿದ.


ರ್‍ಯಾಮೆಸ್ಸನ ವಿಗ್ರಹ

21ನೆಯ ಸಂತತಿಯ ಸ್ಥಾಪಕ ಸೆಮ್ಮೆಂಡ್ಸ್ ಪ್ರಧಾನ ಅರ್ಚಕನನ್ನು ಸಿಂಹಾಸನದಿಂದಿಳಿಸಿ ಥಾಂಟಿಕ್ ಸಂತತಿಯನ್ನು ಸ್ಥಾಪಿಸಿದ. 21–25ನೆಯ ಸಂತತಿಯವರ ಆಳಿಕೆಯಲ್ಲಿ ಈಜಿಪ್ಟಿನ ಆಡಳಿತ (ಪ್ರ.ಶ.ಪೂ.1085–664) ಅತ್ಯಂತ ದುರ್ಬಲವಾಗಿತ್ತು. ಈಜಿಪ್ಟಿನ ಮೇಲೆ ಅಸ್ಸೀರಿಯನ್ನರು ಧಾಳಿ ನಡೆಸಿ, ನುಬಿಯ ಹಾಗೂ ಪ್ಯಾಲಸ್ತೀನ್‌ಗಳು ಸ್ವತಂತ್ರವಾದವು. 22ನೆಯ ಸಂತತಿಯ (ಪ್ರ.ಶ.ಪೂ.950 ರಲ್ಲಿ) ಲಿಬಿಯಾದ ಕೂಲಿಸಿಪಾಯಿ ಸಿಸಾಂಖ್ ಆಡಳಿತಕ್ಕೆ ಬಂದು ಬುಬಾಸ್ತಿಸ್‌ನಲ್ಲಿ ಒಂದು ಅರಮನೆ ನಿರ್ಮಿಸಿದ. ಈತ ಜೆರುಸಲೇಂನಲ್ಲಿ ಅಧಿಕಾರದಲ್ಲಿದ್ದ ಸಾಲೋಮನ್‌ನ ಸಮಕಾಲೀನ. 23ನೆಯ ಸಂತತಿಯವರಾಗಿ ಈಜಿಪ್ಟಿನಲ್ಲಿ ಇಥಿಯೋಪಿ

ಯನ್ನರು ಆಡಳಿತಕ್ಕೆ ಬಂದರು. ಈ ಸಂತತಿಯ ಸ್ಥಾಪಕ ಪಿಯನ್ನ ಸೀಸಾದ ರಾಜ ತೆಫ್‌ನಾತ್‌ನನ್ನು ಸೋಲಿಸಿ ಅಧಿಕಾರಕ್ಕೆ ಬಂದ. 24ನೆಯ ಸಂತತಿಯವರ ಆಳಿಕೆಯಲ್ಲೆ ಕಲಹ ಉಂಟಾಯಿತು. 2ನೆಯ ಸಂತತಿಯ ಇಥಿಯೋಪಿಯದ ರಾಜ ಸಬಕೋ (ಪ್ರ.ಶ.ಪೂ.706) ಅನಂತರ ಇವನ ವಾರಸುದಾರರು ಅಸ್ಸೀರಿಯನ್ನರ ವಿರುದ್ಧ ಧಾಳಿ ನಡೆಸಿ ಈಜಿಪ್ಟಿನ ಆಡಳಿತದ ಮೇಲೆ ಹತೋಟಿ ಸಾಧಿಸಿದರು. ಪ್ರ.ಶ.ಪೂ. 67ರಲ್ಲಿ ಅಸ್ಸೀರಿಯದ ರಾಜ ಇಸ್ಸಾರ್ಡ್ಡನ ಈಜಿಪ್ಟಿನ ಮೇಲೆ ಧಾಳಿ ನಡೆಸಿ ಇಥಿಯೋಪಿಯನ್ನರನ್ನು ಸೋಲಿಸಿ ಈಜಿಪ್ಟಿನಲ್ಲಿ ಅಧಿಕಾರ ಸ್ಥಾಪಿಸಿದ.



ಹಟ್‌ಷೆಪ್‌ಸು ದೇವಾಲಯ

ಪ್ರ.ಶಪೂ.663ರಲ್ಲಿ ನೆಕೋನ ಮಗ ಒಂದನೆಯ ಪ್ಸಾಮೇಟಿಕ್ ಗ್ರೀಕರ ಸಹಾಯ ಪಡೆದು ಅಸ್ಸೀರಿಯನ್ನರನ್ನು ಸೋಲಿಸಿ ಈಜಿಪ್ಟಿನ ಚಕ್ರವರ್ತಿಯೆನಿಸಿದ. ಈತ 26ನೆಯ ಸಂತತಿಯವನು. ಪ್ರ.ಶ.ಪೂ.660ರಲ್ಲಿ ಈತ ಈಜಿಪ್ಟಿನ ಅನೇಕ ಪ್ರಾಂತ್ಯಗಳ ಮೇಲೆ ತನ್ನ ಆಡಳಿತ ಸ್ಥಾಪಿಸಿದ. ಈತನ ಆಳಿಕೆಯಲ್ಲಿ ಈಜಿಪ್ಟ್ ಸಮೃದ್ಧಿಯಾಗಿತ್ತು. ಕಲೆ, ಸಾಹಿತ್ಯ ಈಜಿಪ್ಟಿನಲ್ಲಿ ಮತ್ತೆ ಜೀವ ತಳೆದು, ಪ್ರಾಚೀನ ಕಾಲದ ಈಜಿಪ್ಟಿನ ಕಲೆ, ಶಿಲ್ಪಗಳು ಪುನರ್ಜನ್ಮ ಪಡೆದವು. ಎರಡನೆಯ ನಿಕೋ ಅಧಿಕಾರಕ್ಕೆ ಬಂದು ನೈಲ್‌ನದಿಯಿಂದ ಕೆಂಪುಸಮುದ್ರದ ನಡುವೆ ಕಾಲುವೆ ನಿರ್ಮಿಸಿ ವ್ಯಾಪಾರ ಅಭಿವೃದ್ಧಿಗೆ ಕಾರಣವಾದನು. ಕ್ರಮೇಣ ಗ್ರೀಕ್ ಸೈನಿಕರು ಈಜಿಪ್ಟಿನ ಸೈನ್ಯದಲ್ಲಿ ಪ್ರಾಬಲ್ಯ ಸಾಧಿಸಿದಾಗ ಮಿಲಿಟರಿ ದಂಗೆಗಳು ಉಂಟಾದವು. ಮೂರನೆಯ ಪ್ಸಾಮೇಟಿಕ್ (ಪ್ರ.ಶ.ಪೂ.526–25) ಆಳಿಕೆ ಕಾಲದಲ್ಲಿ ಪರ್ಷಿಯಾದ ರಾಜ ಕ್ಯಾಂಬೆಸ್ ಪೆಲ್ಸಿಯಮ್ ಯುದ್ಧದಲ್ಲಿ ಜಯಗಳಿಸಿ ಈಜಿಪ್ಟನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡ. ಪರ್ಷಿಯದ ರಾಜ ಡೇರಿಯಸ್–1 (ಪ್ರ.ಶ.ಪೂ.521–486) ಎರಡನೆಯ ನಿಕೋಲಸ್ ನಿರ್ಮಿಸಿದ್ದ ಕಾಲುವೆಯನ್ನು ದುರಸ್ತಿ ಮಾಡಿಸಿ, ಅನೇಕ ದೇವಾಲಯಗಳನ್ನು ನಿರ್ಮಿಸಿದ್ದ. ಪ್ರ.ಶ.ಪೂ.425ರಲ್ಲಿ ಈಜಿಪ್ಟಿಯನ್ನರು ಪರ್ಷಿಯದ ಆಡಳಿತದ ವಿರುದ್ಧ ದಂಗೆಯೆದ್ದು ಪ್ರ.ಶ.ಪೂ.343ರ ತನಕ ಸ್ವತಂತ್ರ ಆಡಳಿತ ನಡೆಸಿದರು.

30ನೆಯ ಸಂತತಿಯ ಒಂದನೆಯ ನೆಕ್ಟನೇಬುಲ್ (ಪ್ರ.ಶ.ಪೂ.382–64) ಅನಂತರ ಎರಡನೆಯ ನೆಕ್ಟನೇಬುಲ್ ಪರ್ಷಿಯನ್ನರ ಜೊತೆ ಯುದ್ಧಮಾಡಿದರು. ಪ್ರ.ಶ.ಪೂ.332 ರಲ್ಲಿ ಮೆಸಡೋನಿಯದ ದೊರೆ ಅಲೆಕ್ಸಾಂಡರ್ ಈಜಿಪ್ಟಿನ ಮೇಲೆ ಧಾಳಿ ನಡೆಸಿ ತನ್ನ ಅಧಿಕಾರ ಸ್ಥಾಪಿಸಿದ. ಅಲೆಕ್ಸಾಂಡರ್ ಈಜಿಪ್ಟಿನಲ್ಲಿ ಅಲೆಕ್ಸಾಂಡ್ರಿಯ ನಗರವನ್ನು ಸ್ಥಾಪಿಸಿ ವ್ಯಾಪಾರಕ್ಕೆ ಉತ್ತೇಜನ ನೀಡಿದ. ಈಜಿಪ್ಟ್ ಈ ವೇಳೆಯಲ್ಲಿ ಪ್ರಮುಖ ಅಂತಾರಾಷ್ಟ್ರೀಯ ವ್ಯಾಪಾರ ಕೇಂದ್ರವಾಗಿ ಮಾರ್ಪಟ್ಟಿತ್ತು. ಅಲೆಕ್ಸಾಂಡರ್‌ನ ಮರಣಾನಂತರ ಅವನ ಸೈನ್ಯಾಧಿಕಾರಿ ಪ್ಟೋಲೆಮಿಕ್ ಈಜಿಪ್ಟಿನ ಮೇಲೆ ಅಧಿಕಾರ ಹೊಂದಿ, ರಾಜನೆಂದು ಘೋಷಿಸಿಕೊಂಡನು. ಈಜಿಪ್ಟಿನಲ್ಲಿ ಪ್ರ.ಶ.ಪೂ.330–30 ರ ತನಕ ಅಂದರೆ ಇತಿಹಾಸ ಪ್ರಸಿದ್ಧ ಚೆಲುವಿನ ರಾಣಿ ಏಳನೆಯ ಕ್ಲಿಯೋಪಾತ್ರಳ ಸಾವಿನತನಕ ಪ್ಟೋಲೆಮಿಯ ಸಂತತಿಯವರು ಆಳಿಕೆ ನಡೆಸಿದರು.

ಪ್ರ.ಶ.ಪೂ.395ರಲ್ಲಿ ಈಜಿಪ್ಟನ್ನು ಪೂರ್ವರೋಮನ್ ಅಥವಾ ಬೈಜಾಂಟೀಯನ್ ಆಡಳಿತಗಾರರು ತಮ್ಮ ಆಡಳಿತಕ್ಕೆ ಸೇರ್ಪಡೆಗೊಳಿಸಿದರು. ಈ ವೇಳೆಯಲ್ಲಿ ಈಜಿಪ್ಟಿನ ಮೇಲೆ ಕ್ರೈಸ್ತ ಧರ್ಮದ ಪ್ರಭಾವ ಬೀರಿತ್ತು. ಅಲೆಗ್ಸಾಂಡ್ರಿಯ ಧಾರ್ಮಿಕ ಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದಿತು. ಪ್ರ.ಶ.642ರಲ್ಲಿ ಅರಬ್ಬರು ಈಜಿಪ್ಟಿನ ಮೇಲೆ ಧಾಳಿ ನಡೆಸಿ ತಮ್ಮ ಆಡಳಿತ ಸ್ಥಾಪಿಸುವುದರೊಂದಿಗೆ ಬೈಜಾಂಟಿಯನ್ ಆಡಳಿತಕ್ಕೆ ತೆರೆಬಿತ್ತು.

ಇಸ್ಲಾಂ ಧರ್ಮದ ಸಂಪ್ರದಾಯಸ್ಥ ಖಲೀಫ್ ಉಮರ್ ಈಜಿಪ್ಟಿನ ಮೇಲೆ ತನ್ನ ಆಡಳಿತ ಸ್ಥಾಪಿಸಿದ. ಈಜಿಪ್ಟ್ 648ರ ವೇಳೆಗೆ ಇಸ್ಲಾಮೀಕರಣಗೊಂಡಿತು. ಅನಂತರ ಈಜಿಪ್ಟ್ ಅಬ್ಬಾಸಿದ್ ಖಲೀಫರ ಆಳಿಕೆಗೆ ಒಳಗಾಯಿತು. 868ರ ಅನಂತರ ಈಜಿಪ್ಟ್ ಒಂದು ಸ್ವಾಯತ್ತ ರಾಷ್ಟ್ರವಾಗಿ ಪರಿಗಣಿತವಾಯಿತು. 969–1171ರ ತನಕ ಈಜಿಪ್ಟ್‌ನಲ್ಲಿ ಆಡಳಿತ ನಡೆಸಿದ ಫಾತಿಮ ಸಂತತಿಯ ಖಲೀಫರು ಇಲ್ಲಿ ಷಿಯ ಪಂಥಕ್ಕೆ ಪ್ರಾಮುಖ್ಯತೆ ನೀಡಿದರು. ಈ ಸಂತತಿಯವರ ಆಳಿಕೆಯನ್ನು ಈಜಿಪ್ಟ್‌ನ ಸುವರ್ಣ ಕಾಲವೆಂದು ಕರೆಯಲಾಗಿದೆ. ಪೂರ್ಣ ಪ್ರಮಾಣದ ರಾಜ ಪ್ರಭುತ್ವ ಆಡಳಿತವಿತ್ತು. ಸಿಸಿಲಿ, ಉತ್ತರ ಆಫ್ರಿಕ ಹಾಗೂ ಪಶ್ಚಿಮ ಅರೇಬಿಯಗಳು ಈಜಿಪ್ಟಿನ ಆಡಳಿತಕ್ಕೆ ಒಳಗಾಗಿದ್ದವು. ಇವರ ಆಡಳಿತ ಕಾಲದಲ್ಲಿ ಪ್ರಪಂಚಪ್ರಸಿದ್ಧ ಇಸ್ಲಾಂ ಅಧ್ಯಯನ ಕೇಂದ್ರದ ಮೂಲ ಅಲ್‌ಅಜರ್ ಮಸೀದಿ ನಿರ್ಮಾಣವಾಯಿತು. 1035–94ರ ನಡುವೆ ಆಳಿಕೆ ನಡೆಸಿದ ಅಲ್–ಮುಸ್ತಾನ್ಸಿರ್ ಆಡಳಿತ ದುರ್ಬಲವಾಗಿತ್ತು. ಕುರ್ದಿಶ್ ಸುನ್ನಿ ಸಂಜಾತ ಸಲಾ ಅಲ್–ದಿನ್ ಇಬಾನ್ ಅಯ್ಯುಬಿ ಅಥವಾ ಸಾಲಲ್‌ಉದ್‌ದಿನ್ ಷಿಯ ಪಂಥದ ಫಾತಿಮಾ ಖಲೀಫರ ಆಡಳಿತ ಕಿತ್ತೊಗೆದು ತಾನೇ ಈಜಪ್ಟಿನ ದೊರೆಯೆಂದು ಅಧಿಕಾರಕ್ಕೆ ಬಂದ (1164–93). ಈತ ಅಯ್ಯುಬಿ ಸಂತತಿಯ ಮೊದಲ ಸುಲ್ತಾನ.

ಈ ವೇಳೆಯಲ್ಲಿ ಈಜಿಪ್ಟ್‌ನಲ್ಲಿ ಧರ್ಮಯುದ್ಧಗಳು ಆರಂಭಗೊಂಡಾಗ ಸುಲ್ತಾನನು ಕ್ರಿಶ್ಚಿಯನ್ ಪಡೆಗಳನ್ನು ಧೈರ್ಯವಾಗಿ ಎದುರಿಸಿದ. ಇವನ ಸಾವಿನ ಅನಂತರ ಅಧಿಕಾರಕ್ಕೆ ಬಂದ ಅಯ್ಯುಬಿ ಮನೆತನದವರು ಕೈರೋ ನಗರವನ್ನು ರಾಜಧಾನಿಯನ್ನಾಗಿಸಿಕೊಂಡು 1250ರ ತನಕ ತಮ್ಮ ಆಡಳಿತ ನಡೆಸಿದರು. 1255–1517ರ ತನಕ ಮಾಮ್‌ಲುಕ್‌ರು ಈಜಿಪ್ಟಿನ ಮೇಲೆ ಅಧಿಕಾರ ಸ್ಥಾಪಿಸಿದರು. 1517ರಲ್ಲಿ ಈಜಿಪ್ಟ್ ಆಟೋಮನ್ ಸುಲ್ತಾನರ ಆಳಿಕೆಗೆ ಒಳಗಾದರೂ 18ನೆಯ ಶತಮಾನದ ತನಕ ಈಜಿಪ್ಟ್ ಆಡಳಿತದಲ್ಲಿ ಮಾಮ್‌ಲುಕ್‌ರ ಆಡಳಿತವೇ ಪ್ರಮುಖವಾಗಿತ್ತು. 1798ರಲ್ಲಿ ನೆಪೋಲಿಯನ್ ಬೋನಪಾರ್ಟೆ ಈಜಿಪ್ಟಿನ ಮೇಲೆ ಅಧಿಕಾರ ಸ್ಥಾಪಿಸಿದ. 1801ರಲ್ಲಿ ಫ್ರೆಂಚರ ಅಧಿಕಾರವನ್ನು ಬ್ರಿಟಿಷರು ಹಾಗೂ ಆಟೋಮನ್ ಸುಲ್ತಾನರು ಒಂದಾಗಿ ಕಿತ್ತೊಗೆದು ಈಜಿಪ್ಟಿಗೆ ಸ್ವಾಯತ್ತತೆಯನ್ನು ನೀಡಿದರು. 1805ರಲ್ಲಿ ಟರ್ಕಿಯ ಸುಲ್ತಾನನ ಸೈನ್ಯದಲ್ಲಿದ್ದ ಅಲ್ಬೇನಿಯನ್ ಸೈನಿಕರು ಸುಲ್ತಾನನ ಆಡಳಿತದ ವಿರುದ್ಧ ದಂಗೆಯೆದ್ದ ಪರಿಣಾಮವಾಗಿ ದಂಗೆಯ ಮುಂದಾಳತ್ವ ವಹಿಸಿದ್ದ ಮಹಮದ್ ಅಲಿ ಈಜಿಪ್ಟಿನ ಪ್ರಾಂತ್ಯಾಧಿಕಾರಿಯಾಗಿ ನೇಮಕಗೊಂಡ ಅನಂತರದ ವರ್ಷಗಳಲ್ಲಿ ಇವನ ಸಂತತಿಯವರ ವಂಶಪಾರಂಪರಾನುಗತವಾದ ಆಡಳಿತ ಇಲ್ಲಿ ಜಾರಿಗೆ ಬಂದಿತು. 1840ರಲ್ಲಿ ಟರ್ಕಿಯ ಸುಲ್ತಾನ ಈಜಿಪ್ಟಿನಲ್ಲಿ ಕೆಡ್ಯೆವ್‌ಗಳ ಸ್ವಾಯತ್ತ ಅಧಿಕಾರಕ್ಕೆ ತನ್ನ ಒಪ್ಪಿಗೆ ನೀಡಿದ.

19ನೆಯ ಶತಮಾನದ ಉತ್ತಾರಾರ್ಧದಲ್ಲಿ ಈಜಿಪ್ಟಿನ ಆಡಳಿತದ ಮೇಲೆ ಬ್ರಿಟಿಷರು ಹಾಗೂ ಫ್ರೆಂಚರು ತಮ್ಮ ಪಾರುಪತ್ಯ ನಡೆಸಲು ಪ್ರಯತ್ನಿಸಿದರು. 1869ರಲ್ಲಿ ಸೂಯೆಜ್ ಕಾಲುವೆಯ ನಿರ್ಮಾಣದಿಂದಾಗಿ ಈಜಿಪ್ಟ್ ಅಂತಾರಾಷ್ಟ್ರೀಯ ಪ್ರಾಮುಖ್ಯತೆ ಗಳಿಸಿಕೊಂಡಿತು. 1882ರಲ್ಲಿ ಜರುಗಿದ ಅರಬ್ಬರ ದಂಗೆಯ ಪರಿಣಾಮವಾಗಿ ಈಜಿಪ್ಟಿನ ರಾಜಕೀಯದಲ್ಲಿ ಬ್ರಿಟಿಷರು ಪ್ರವೇಶ ಪಡೆದರು. ಸತತವಾದ ಹೋರಾಟ ಹಾಗೂ ಒಗ್ಗಟ್ಟಿನ ಫಲವಾಗಿ 1922ರಲ್ಲಿ ಈಜಿಪ್ಟ್ ಬ್ರಿಟಿಷರ ಆಡಳಿತದಿಂದ ಮುಕ್ತಿ ಪಡೆಯಿತು. 1948–49ರಲ್ಲಿ ಜರುಗಿದ ಅರಬ್ ಇಸ್ರೇಲ್ ಯುದ್ಧ ಹಾಗೂ 1952ರಲ್ಲಿ ನಡೆದ ಸೈನಿಕ ಕ್ಷಿಪ್ರ ಕ್ರಾಂತಿಯ ಮೂಲಕ 1953ರಲ್ಲಿ ರಾಜಪ್ರಭುತ್ವವನ್ನು ಕಿತ್ತೊಗೆದ ಅಬ್ದುಲ್ ಗಮಾಲ್ ನಾಸರ್ 1954ರಲ್ಲಿ ಈಜಿಪ್ಟ್‌ನಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೆ ತಂದು ಅಧ್ಯಕ್ಷನಾಗಿ ಆಯ್ಕೆಯಾದ.

ಟುಟಂಕಮನ್ ಚಿನ್ನದ ಮುಖವಾಡ

1954ರಲ್ಲಿ ಗಣತಂತ್ರ ರಾಷ್ಟ್ರವಾಗಿ ರೂಪುಗೊಂಡ ಈಜಿಪ್ಟ್ ತನ್ನ ವಿಶಿಷ್ಟ ರಾಜಕೀಯ ನಿಲುವುಗಳಿಂದಾಗಿ ಮಧ್ಯಪ್ರಾಚ್ಯ ವಲಯದಲ್ಲೆ ಪ್ರಮುಖ ರಾಷ್ಟ್ರವೆನಿಸಿದೆ.

1956ರಲ್ಲಿ ಸೂಯೆಜ್‌ಕಾಲುವೆ ರಾಷ್ಟ್ರೀಕರಣದ ವೇಳೆಯಲ್ಲಿ ಈಜಿಪ್ಟಿನ ಮೇಲೆ ಬ್ರಿಟನ್, ಫ್ರಾನ್ಸ್ ಹಾಗೂ ಇಸ್ರೇಲ್ ರಾಷ್ಟ್ರಗಳು ಧಾಳಿ ನಡೆಸಿದಾಗ ಅಂತಾರಾಷ್ಟ್ರೀಯ ಸಹಾನುಭೂತಿಯಿಂದಾಗಿ ಪ್ರಬುದ್ಧ ರಾಷ್ಟ್ರವಾಗಿ ಹೊರಹೊಮ್ಮಿತು. ಆನಂತರದ ವರ್ಷಗಳಲ್ಲಿ ಸಾಮಾಜಿಕ ಆರ್ಥಿಕ ಸಿದ್ಧಾಂತಗಳು, ಅನಂತರ 80ರ ದಶಕದಿಂದ ಮುಕ್ತ ಆರ್ಥಿಕ ವ್ಯವಸ್ಥೆಯನ್ನು ಅಳವಡಿಸಿಕೊಂಡು ಮುಂದುವರೆಯುತ್ತಿರುವ ಈಜಿಪ್ಟ್ ಅರಬ್ ರಾಷ್ಟ್ರಗಳಲ್ಲೆಲ್ಲ ಯಶಸ್ವಿ ಪ್ರಜಾಪ್ರಭುತ್ವ ಗಣತಂತ್ರ ರಾಷ್ಟವಾಗಿದೆ.

ವಾಸ್ತುರಚನೆಯ ದೃಷ್ಟಿಯಿಂದ ಈಜಿಪ್ಟ್ ಪ್ರಪಂಚದಲ್ಲೆ ಹೆಸರುವಾಸಿಯಾಗಿದೆ. ಇಲ್ಲಿಯ ಪಿರಮಿಡ್ಡುಗಳು ಸ್ಫಿಂಕ್ಸ್, ಪ್ರಾಚೀನ ಅಮೋನ್ ದೇವಾಲಯಗಳು ಪ್ರವಾಸಿಗರ ನೆಚ್ಚಿನ ತಾಣವೆನಿಸಿವೆ. ಕೆಂಪುಸಮುದ್ರ ಹಾಗೂ ಮೆಡಿಟರೇನಿಯನ್ ತೀರದಲ್ಲಿ ಸುಂದರವಾದ ಪ್ರವಾಸಿತಾಣ, ಅಂತಾರಾಷ್ಟ್ರೀಯ ಹೋಟೆಲ್‌ಗಳಿವೆ. ಪ್ರವಾಸೋದ್ಯಮದಿಂದ ತನ್ನ ಆರ್ಥಿಕ ಪ್ರಗತಿ ಸಾಧಿಸಿರುವ ರಾಷ್ಟ್ರಗಳಲ್ಲಿ ಈಜಿಪ್ಟ್ ಪ್ರಮುಖ ರಾಷ್ಟ್ರವಾಗಿದೆ. (ಎಸ್.ಎನ್.;ಬಿ.ಕೆ.ಜಿ.;ಎಂ.ಎಂ.ಪಿ.ಆರ್.ಎ.)

**ಈಜಿಯನ್ ನಾಗರಿಕತೆ:** ಈಜಿಯನ್, ಮೆಡಿಟರೇನಿಯನ್ ಸಮುದ್ರದ ಒಂದು ಪ್ರಮುಖ ಕವಲು. ಇದು ಸಮುದ್ರದ ಸುತ್ತಣ ಪ್ರದೇಶದಲ್ಲಿ ಇತಿಹಾಸ ಪೂರ್ವಕಾಲ ಈಚಿನ ಯುಗದ ನಾಗರಿಕತೆಗಳೆಲ್ಲಕ್ಕೂ ಅನ್ವಯವಾಗುವ ಹೆಸರು. ಪ್ರ.ಶ.ಪೂ. 2500–1100ರ ವರೆಗೆ, ಅಂದರೆ ಈ ಪ್ರದೇಶದಲ್ಲೆಲ್ಲ ಕಬ್ಬಿಣದ ಬಳಕೆ ಸಾಮಾನ್ಯವಾಗುವವರೆಗೆ ಈ ನಾಗರಿಕತೆ ಪ್ರಬಲವಾಗಿತ್ತು. ಈ ನಾಗರಿಕತೆಯನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯಲಾಗುತ್ತದೆ. ಕ್ರೀಟ್ ದ್ವೀಪದ ನಾಗರಿಕತೆಯ ಮಿನೋವನ್ ಎಂದೂ ಗ್ರೀಸಿನ ಭೂ ಪ್ರದೇಶದ್ದಕ್ಕೆ ಹೆಲ್ಲಾಡಿಕ್ ಎಂದೂ ಈಜಿಯನ್ ಸಮುದ್ರದಲ್ಲಿರುವ ಡೆಲಾಸ್ ದ್ವೀಪ ಮತ್ತು ಅದರ ಸುತ್ತಮುತ್ತಲಿರುವ ಇತರ ದ್ವೀಪಗಳಿಗೆ ಸೈಕ್ಲಾಡಿಕ್ ಎಂದೂ ಹೇಳುವುದುಂಟು.

ಗ್ರೀಸಿನ ಪ್ರಖ್ಯಾತ ಕವಿ ಹೋಮರ್ (ಪ್ರ.ಶ.ಪೂ.800–700) ಕ್ರೀಟ್ ದ್ವೀಪದ ಹಿರಿಮೆಯನ್ನು ತನ್ನ ಕಾವ್ಯದಲ್ಲಿ ಕೊಂಡಾಡಿ ಅದರ ಉನ್ನತಿಯ ಕಾಲವನ್ನು ಸುವರ್ಣ ಯುಗವೆಂದು ಕರೆದಿದ್ದಾನೆ. ಈಜಿಯನ್ ನಾಗರಿಕತೆ ಪ್ರಾಚೀನ ಈಜಿಪ್ಟ್ ಮತ್ತು ಮೆಸಪೊಟೇಮಿಯ ನಾಗರಿಕತೆಗಳ ಸಮಕಾಲೀನವೂ ಮೈಸೀನಿಯನ್ನಿನ ಉನ್ನತಿ ಕಾಲ ಕ್ಕಿಂತಲೂ ಪ್ರಾಚೀನವೂ ಆಗಿತ್ತೆಂದು ಹೇಳಬಹುದು.

ಪ್ರ.ಶ.ಪೂ.ಸು.3000ದಲ್ಲಿ ಕ್ರೀಟಿನ ಜನ ನವಶಿಲಾಯುಗದಿಂದ ಲೋಹದ ಬಳಕೆಯ ಮಟ್ಟಕ್ಕೆ ಬಂದಿದ್ದರು ಕ್ರಮೇಣ ಜನಸಂಖ್ಯೆಯೂ ಹೆಚ್ಚಿತು. ಇವರು ಮುಖ್ಯವಾಗಿ ಕಂಚನ್ನು ಬಳಸಲು ಆರಂಭಿಸಿದರು ಹಾಗೂ ಬಹುಶಃ ಬರೆವಣಿಗೆಯೂ ತಿಳಿದಿತ್ತು. ಈ ಸಂಸ್ಕೃತಿಗಳ ಬೆಳವಣಿಗೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೆಳೆದವು. ಪ್ರ.ಶ.ಪೂ.ಸು. 1800ರಲ್ಲಿ ನಾಸಾಸ್ ಮತ್ತು ಫೇಸ್ಟಾಸ್ ಎಂಬ ನಗರಗಳು ಪ್ರಮುಖವಾಗಿದ್ದುವು. ಆಗ ಈ ನಾಗರಿಕತೆ ತನ್ನ ಔನ್ನತ್ಯದ ಶಿಖರ ಮುಟ್ಟಿತ್ತು. ಅಲ್ಲಿಂದ ಮುಂದೆ 100 ವರ್ಷಗಳ ಅವಧಿಯಲ್ಲಿ ಅವನತಿ ಹೊಂದಿ ನಾಸಾಸ್‌ನ ಪ್ರಖ್ಯಾತ ಅರಮನೆ, ಇತರ ನಗರಗಳಲ್ಲಿದ್ದ ಅರಮನೆಗಳೂ ಕಟ್ಟಡಗಳೂ ನಾಶ ಹೊಂದಿದುವು.

ಸು.50 ವರ್ಷಗಳ ಅನಂತರ ಟ್ರಾಯ್ ಮತ್ತು ಕ್ರೀಟ್ ನಗರಗಳು ಪುನಃ ನಿರ್ಮಾಣ ವಾದುವು. ಆಗ ಈಜಿಯನ್ ನಾಗರಿಕತೆ ಮತ್ತೆ ಉಜ್ವಲವೂ ಪ್ರಭಾವ ಶಾಲಿಯೂ ಆಗಿ ಪ್ರದೇಶದ ಎಲ್ಲ ಭಾಗಗಳಿಗೂ ಹಬ್ಬಿತು. ಆದರೆ ಈ ವೈಭವ ಕೇವಲ ಸ್ವಲ್ಪ ಕಾಲದವರೆಗೆ ಉಳಿದಿದ್ದು ಅನಂತರ ಅಳಿಯಿತು. ಅಕೇಯನ್ನರೆಂಬ ಧಾಳಿಕಾರರು ಪ್ರ.ಶ.ಪೂ.ಸು. 1400ರಲ್ಲಿ ಕ್ರೀಟ್ ದ್ವೀಪವನ್ನು ವಶಪಡಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಅಲ್ಲಿಯೂ ಹರಡಿದರು.

ಪೂರ್ವ ಮೆಡಿಟರೇನಿಯನ್ ಸಮುದ್ರದ ದ್ವೀಪಗಳನ್ನೊಳಗೊಂಡು ಅದರ ಕರಾವಳಿ ಪ್ರದೇಶ, ಗ್ರೀಕ್ ಭೂಪ್ರದೇಶ, ಏಷ್ಯ ಮೈನರಿನ ಕರಾವಳಿ ಪ್ರದೇಶ ಮತ್ತು ಸೈಪ್ರಸ್‌ನಲ್ಲೂ ಈಜಿಯನ್ ನಾಗರಿಕತೆಯ ಪ್ರಭಾವವಿತ್ತು. ಏಷ್ಯ ಮೈನರಿನ ಸಮುದ್ರ ತೀರಪ್ರದೇಶ, ಸಿರಿಯ, ಪ್ಯಾಲಸ್ತೀನ್, ಈಜಿಪ್ಟ್ ಪ್ರದೇಶಗಳಲ್ಲಿನ ಕಂಚಿನ ಯುಗದ ನಾಗರಿಕತೆ ಕ್ರೀಟ್ ದ್ವೀಪದಲ್ಲಿ ಉದಯಿಸಿ ಅನಂತರ ಗ್ರೀಸಿನ ಭೂಪ್ರದೇಶ ಮತ್ತು ಈಜಿಯನ್ ಪ್ರದೇಶದ ಇತರ ದ್ವೀಪಗಳಿಗೂ ಹರಡಿತು.

ಟ್ರಾಯ್ ಪಟ್ಟಣ: ಗ್ರೀಕರ ವಶವಾಗುವುದಕ್ಕೂ ಸಾವಿರ ವರ್ಷ ಹಿಂದೆಯೇ ಈ ನಾಗರಿಕತೆ ಉನ್ನತ ಶಿಖರವನ್ನೇರಿ ಕಲಾಕೌಶಲದಲ್ಲಿ ಪ್ರಪಂಚದಲ್ಲಿಯೇ ಒಂದು ಉನ್ನತ ಸ್ಥಾನ ಪಡೆಯಿತು. ಈಜಿಪ್ಟಿನ ನಿಕಟ ಸಂಪರ್ಕ ಇದರ ಅಭಿವೃದ್ಧಿಗೆ ಚೈತನ್ಯದಾಯಕವಾಗಿತ್ತು. ಅಲ್ಲಿಯ ವಸಾಹತು ಜನ ಇಲ್ಲಿ ಬಂದು ನೆಲೆಸಿದ್ದರಿಂದ ಅವರ ರೀತಿ ನೀತಿ ಭಾವನೆಗಳು ಇವರಲ್ಲಿ ಹಾಸುಹೊಕ್ಕಿದವು. ಹೀಗೆಯೇ ಏಷ್ಯ ಮೈನರ್ ಹಾಗೂ ಟೈಗ್ರಿಸ್–ಯೂಫ್ರಟೀಸ್ ಕಣಿವೆಯ ಸಂಪರ್ಕವೂ ಸ್ಫೂರ್ತಿದಾಯಕವಾಗಿತ್ತು. ಕ್ರೀಟ್ ದ್ವೀಪದ ನಾಗರಿಕತೆಗೆ ಮಿನೋವನ್ ನಾಗರಿಕತೆ ಎಂದು ಹೆಸರು ಬರಲು ಮಿನಾಸ್ ಎಂಬ ದೊರೆ ಕಾರಣ. ಇವನು ವಾಸ್ತವವಾಗಿ ಇದ್ದನೆಂಬ ಬಗ್ಗೆ ಖಚಿತವಾಗಿ ಮಾಹಿತಿಯೇನೂ ದೊರಕಿಲ್ಲ.

**ಮಿನೋವನ್ ನಾಗರಿಕತೆಯ ಮುಖ್ಯ ಲಕ್ಷಣಗಳು:** ಸು.2000 ವರ್ಷಗಳ ದೀರ್ಘ ಅವಧಿಯ ಮಿನೋವನ್ ನಾಗರಿಕತೆಯನ್ನು ಪೂರ್ವ ಮಿನೋವನ್ (ಪ್ರ.ಶ.ಪೂ.3400–2100) ಮಧ್ಯ ಮಿನೋವನ್ (ಪ್ರ.ಶ.ಪೂ.2100–1600) ಮತ್ತು ಅಂತ್ಯ ಮಿನೋವನ್ (ಪ್ರ.ಶ.ಪೂ.1600–1150) ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಇವನ್ನು ಮತ್ತೆ ತಲಾ ಮೂರು ಭಾಗಗಳಾಗಿ ಮಾಡುವುದು ಸಾಧ್ಯ. ಮಿನೋವನ್ ಕಾಲ ಆರಂಭ ವಾಗುವುದಕ್ಕೂ ಮುಂಚೆ ಕ್ರೀಟಿನಲ್ಲಿ ವಾಸಿಸುತ್ತಿದ್ದ ಮೂಲನಿವಾಸಿಗಳು ಮೆಡಿಟರೇನಿಯನ್ ಜನಾಂಗದ ಬೇರೆ ಬೇರೆ ವಂಶಗಳಿಗೆ ಸೇರಿದವರಾಗಿದ್ದರು. ಇವರ ಪೂರ್ವಿಕರು ಬಹುಶಃ ಸಿರಿಯ ಮತ್ತು ಅನಟೋಲಿಯಗಳಿಂದ ಬಂದವರು. ಇವರಿಗೂ ಹಿಟ್ಟೈಟರು ಮತ್ತು ದ್ರೈದಿರ ಧರ್ಮದ ಜನರಿಗೂ ಸಂಬಂಧ ಇದ್ದಿರಬಹುದು. ಉದ್ದ ತಲೆ, ಕುಳ್ಳನೆಯ ತೆಳು ದೇಹ, ಅಲೆಯಲೆಯ ಕಪ್ಪು ಕೂದಲು–ಈ ಲಕ್ಷಣವಿರುವ ಇವರು ಈಜಿಪ್ಟಿನವರನ್ನು ಹೋಲುತ್ತಿದ್ದರು. ಮಿನೋವನ್ ಕಾಲದ ಆರಂಭದಲ್ಲಿ ಕ್ರೀಟಿಗೆ ಏಷ್ಯ ಮೈನರಿನಿಂದ ಜನ ವಲಸೆ ಹೋದದ್ದರಿಂದ ಅಲ್ಲಿಯ ಜನಸಂಖ್ಯೆ ಹೆಚ್ಚಿತು. ಆದ್ದರಿಂದ ಕ್ರೀಟಿನ ಪೂರ್ವ, ದಕ್ಷಿಣ ಮತ್ತು ಮಧ್ಯಭಾಗಗಳಲ್ಲಿನ ಸಂಸ್ಕೃತಿಗಳು ಪರಸ್ಪರ ಭಿನ್ನವಾದುವು.

ಈಜಿಯನ್ ಸಮುದ್ರ ತೀರಗಳಲ್ಲಿ ಮತ್ತು ದ್ವೀಪಗಳಲ್ಲಿ ಪ್ರ.ಶ.ಪೂ. 3000 ದಿಂದ 1200 ವರೆಗಿನ ನಾಲ್ಕು ಸಂಸ್ಕೃತಿಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಪಶ್ಚಿಮ ಮತ್ತು ಉತ್ತರದಲ್ಲಿ ಗ್ರೀಸ್, ಪೂರ್ವದಲ್ಲಿ ಟರ್ಕಿ, ದಕ್ಷಿಣದಲ್ಲಿ ಕ್ರೀಟ್ ದ್ವೀಪವಿದೆ. ಒಟ್ಟಿನಲ್ಲಿ ಈಜಿಯನ್ ಕಾಲದಲ್ಲಿ ಹಲವು ನಗರಗಳು ಸಮುದ್ರತೀರದಲ್ಲಿ ಹುಟ್ಟಿ ಕ್ರಮೇಣ ಉನ್ನತ ಸ್ಥಿತಿಗೇರಿದುವು. ಕೃಷಿ, ಪಶುಪಾಲನೆ, ಬೇಟೆ, ವಿದೇಶೀ ವ್ಯಾಪಾರ–ಇವು ಜನರ ಮುಖ್ಯ ಕಸುಬು. ಸೈಕ್ಲಡೀಸ್, ಏಷ್ಯಮೈನರ್, ಲಿಬಿಯ, ಈಜಿಪ್ಟ್, ಲವಾಂಟ್, ಗ್ರೀಕ್ ಭೂಪ್ರದೇಶ ಹಾಗೂ ಮೆಸಪೊಟೇಮಿಯಗಳೊಡನೆ ವ್ಯಾಪಾರ ಸಂಪರ್ಕವಿತ್ತು. ಈ ಪ್ರದೇಶಗಳ ಪ್ರಭಾವ ಕ್ರೀಟಿನ ಕಲೆಯ ಮೇಲೆ ಸ್ವಲ್ಪ ಮಟ್ಟಿಗೆ ಇದ್ದರೂ ಒಟ್ಟಿನಲ್ಲಿ ಅದು ವೈಶಿಷ್ಟ್ಯಪೂರ್ಣವಾದ ಪ್ರಗತಿ ಸಾಧಿಸಿತ್ತು. ಇಲ್ಲಿಯ ಕಲಾವಿದರು ಈಜಿಪ್ಟಿನವರನ್ನು ಅನುಕರಿಸಿದರು ತಮ್ಮ ವೈಶಿಷ್ಟ್ಯವನ್ನೂ ಉಳಿಸಿಕೊಂಡು, ತಮ್ಮ ಪ್ರಭಾವವನ್ನು ಇತರ ದೇಶಗಳ ಮೇಲೂ ಬೀರಿದ್ದರು. ಸೈಕ್ಲಡೀಸ್‌ನಲ್ಲಿ ಈ ಕಲೆ ಪ್ರಮುಖವಾಗಿತ್ತು. ಫೈಲಾಕೋಪಿಯಲ್ಲಿ ಜನ ಅಬ್‌ಸಿಡಿಯನ್ ಎಂಬ ಒಂದು ಬಗೆಯ ಕಾಚಶಿಲೆ ಮಾರಾಟದಿಂದ ಅತ್ಯಧಿಕ ಸಂಪತ್ತುಗಳಿಸಿದ್ದರು. ಅಮರ್‌ಗೋಸ್‌ನ ಶಿಲಾಪ್ರತಿಮೆಗಳು ಪ್ರಖ್ಯಾತವಾಗಿದ್ದುವು.

ವಸಿಲಿಕಿಯಲ್ಲಿದ್ದ ಮನೆಗಳು ಅಗಲ, ತಗ್ಗು. ಅವುಗಳದು ಚೌಕಟ್ಟಿನ ಆಕಾರ. ಸಮತಲವಾದ ಮೇಲ್ಛಾವಣಿ. ಕೆಲವು ಮಹಡಿ ಮನೆಗಳೂ ನಿರ್ಮಾಣಗೊಂಡಿವೆ. ಗೋಡೆಗಳ ಕೆಳಭಾಗವನ್ನು ಮಣ್ಣಿನಿಂದಲೂ ಮೇಲ್ಭಾಗವನ್ನು ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳಿಂದಲೂ ಕಟ್ಟಿ ಕಿಟಕಿ ಬಾಗಿಲುಗಳಿಗೆ ಮರದ ಚೌಕಟ್ಟು ಹಾಕಿ, ಗೋಡೆಗೆ ಗಾರೆ ಬಳಿಯುತ್ತಿದ್ದರು. ಕೋಣೆಗಳನ್ನು ಹೆಚ್ಚಿಸಿದಾಗ ಅಂಗಳಗಳನ್ನೂ ನಿರ್ಮಿಸುತ್ತಿದ್ದರು. ಕೈಗಾರಿಕೆಗಳೂ ಬೆಳೆದಂತೆ ನಗರಗಳು ಬೆಳೆದುವು. ಕುಂಬಾರರ, ಕೆತ್ತನೆ ಕೆಲಸಗಾರರ ಉತ್ಪಾದನೆ ಹೆಚ್ಚಿತು. ಅಮೃತಶಿಲೆ ಮತ್ತು ದಂತದ ಬಿಲ್ಲೆಗಳ ಮೇಲೆ ಚಿತ್ರರೂಪದಲ್ಲಿ (ಸಾಂಕೇತಿಕವಾಗಿ) ಅಕ್ಷರಗಳನ್ನು ಬರೆಯುವುದು ರೂಢಿಗೆ ಬಂತು.

ಪ್ರ.ಶ.ಪೂ.2000ದ ಅನಂತರ ಕ್ರೀಟನ್ನರ ನಾಗರಿಕತೆ ಉಚ್ಛ್ರಾಯಸ್ಥಿತಿ ಮುಟ್ಟಿತು. ಮಧ್ಯಕಾಲದ ಆರಂಭದಿಂದಲೇ ನಾಸಾಸ್ ರಾಜಕೀಯ ಹಾಗೂ ವಾಣಿಜ್ಯ ಚಟುವಟಿಕೆಯ ಮುಖ್ಯ ಕೇಂದ್ರವಾಯಿತು. ಮೊದಲಿನಿಂದಲೂ ಸಮುದ್ರಯಾನ ಪ್ರಿಯರಾಗಿದ್ದ ಕ್ರೀಟನ್ನರು ಈಜಿಪ್ಟ್, ಬ್ಯಾಬಿಲೋನಿಯಗಳೊಡನೆ ವಿಶೇಷವಾಗಿ ವ್ಯಾಪಾರ ನಡೆಸುತ್ತಿದ್ದರು. ಮಿನೋವನ್ ಕಾಲದ ಅಂತ್ಯಭಾಗದಲ್ಲಿ ಕೆಲವು ವರ್ಷಗಳವರೆಗೆ ಈಜಿಯನ್ ಪ್ರದೇಶದಲ್ಲೆಲ್ಲ ನಾಸಾಸ್ ಮುಖ್ಯ ನಗರವಾಗಿತ್ತು. ಹಿಂದೆಂದೂ ಕಾಣದ ವಾಸ್ತವಿಕ ಯುಗವೊಂದು ಆಗ ಪ್ರಾರಂಭ ವಾಯಿತು. ಅಲ್ಲಿಯ ಅರಮನೆ ಸುಧಾರಿಸಿದ ಎಲ್ಲ ಅನುಕೂಲಗಳನ್ನು ಹೊಂದಿ ಭವ್ಯವಾಗಿತ್ತು. ಅರಮನೆಗೆ ಸೇರಿದಂತೆ ದೊಡ್ಡ ದೊಡ್ಡ ಉಗ್ರಾಣಶಾಲೆ, ಯುದ್ಧಸಾಮಗ್ರಿ ತಯಾರಿಸುವ ಕಾರ್ಯಾಗಾರ, ಹಿಪ್ಪೆ ಎಣ್ಣೆಯ ಗಾಣ, ಹಾಗೂ ನಾನಾ ಪದಾರ್ಥ ತಯಾರಿಸುವ ಕಾರ್ಯಾಗಾರಗಳು ಇದ್ದು ಅದೇ ಒಂದು ಸ್ವಸಂಪೂರ್ಣ ಪಟ್ಟಣವಾಗಿತ್ತು.

**ರಾಜಕೀಯ ವ್ಯವಸ್ಥೆ:** ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಇದ್ದಂತೆ ಕ್ರೀಟಿನಲ್ಲೂ ಆರಂಭದಲ್ಲಿ ಒಂದೇ ವಂಶದ ಆಡಳಿತ ಒಂದೊಂದು ಸ್ಥಳದಲ್ಲೂ ಪ್ರತ್ಯೇಕವಾಗಿ ವ್ಯವಸ್ಥಿತ ವಾಗಿತ್ತು. ಮಧ್ಯ ಮಿನೋವನ್ ಕಾಲದಲ್ಲಿ ಅಥವಾ ಅಂತ್ಯದ ಮಿನೋವನ್ ಕಾಲದ ಆರಂಭದಲ್ಲಿ ಕ್ರೀಟ್ ಏಕತೆ ಸಾಧಿಸಿತ್ತು. ಆಗ ಅದನ್ನು ನಾಸಾಸ್ ದೊರೆಗಳು ಆಳುತ್ತಿದ್ದರು. ಮುಂದೆ ಗ್ರೀಸ್ ಭೂಪ್ರದೇಶಕ್ಕೂ ಇವರ ಅಧಿಕಾರ ವ್ಯಾಪಿಸಿತು. ಆಗಿನ ದೊರೆಗಳು ಅರ್ಚಕ–ದೊರೆಗಳಾಗಿದ್ದು ಅವರದು ಧಾರ್ಮಿಕ ವೃತ್ತಿ. ಆ ಕಾರಣದಿಂದಾಗಿ ಅವರಿಗೆ ರಾಜ್ಯವಾಳುವುದಕ್ಕೆ ಅಧಿಕಾರ ಪ್ರಾಪ್ತವಾಗುತ್ತಿತ್ತು.

**ಆರ್ಥಿಕ ಜೀವನ:** ಆರಂಭದಲ್ಲಿ ಕ್ರೀಟಿನ ನಿವಾಸಿಗಳು ಕೃಷಿ, ಮೀನುಗಾರಿಕೆ ಮತ್ತು ಕುರಿ ಸಾಕಣೆಯಿಂದ ಜೀವನ ಸಾಗಿಸುತ್ತಿದ್ದರು. ಭೂಮಿ ಫಲವತ್ತಾಗಿದ್ದರೂ ದೇಶದ ವಿಸ್ತಾರ ಕಡಿಮೆ ಇದ್ದುದರಿಂದ ಜನಸಂಖ್ಯೆ ಹೆಚ್ಚಿದ ಹಾಗೆಲ್ಲ ಕೃಷಿಯ ಜೊತೆಗೆ ಇತರ ಉದ್ಯೋಗ ಕೈಗೊಳ್ಳುವುದು ಅನಿವಾರ್ಯವಾಯಿತು. ಕೆಲವರು ಬೇರೆ ದೇಶಗಳಿಗೆ ವಲಸೆ ಹೋದರು. ಮತ್ತೆ ಕೆಲವರು ಸಮುದ್ರಯಾನದಲ್ಲಿ ನಿರತರಾದರು. ಆದರೆ ಹೆಚ್ಚು ಜನ ಸ್ವದೇಶದಲ್ಲೇ ಉಳಿದು ದ್ರಾಕ್ಷಾರಸ, ಹಿಪ್ಪೆ ಎಣ್ಣೆ, ಮಡಕೆ, ಜಾಡಿ, ಹೂದಾನಿ ಮುಂತಾದ ಗೃಹಬಳಕೆಯ ಸಾಮಾನುಗಳನ್ನು ತಯಾರಿಸುತ್ತಿದ್ದರು. ರತ್ನ, ಮುದ್ರಿಕೆ, ಕಠಾರಿ, ಬಾಕು ಮತ್ತು ಕುಶಲಕಲೆಯ ವಸ್ತುಗಳು ತಯಾರಾಗಿ ಪರದೇಶಗಳಿಗೂ ರಫ್ತಾಗುತ್ತಿದ್ದುವು. ಆಮದು ಪದಾರ್ಥಗಳಲ್ಲಿ ಆಹಾರ ಮತ್ತು ಲೋಹ ಪದಾರ್ಥಗಳು ಪ್ರಮುಖವಾದವು. ವ್ಯಾಪಾರ ಮತ್ತು ಕೈಗಾರಿಕೆ ಅತ್ಯಂತ ಬಿರುಸಿನಿಂದ ನಡೆದು ಕ್ರೀಟ್ ಕೆಲವು ಕಾಲದವರೆಗೆ ಸಂಪದ್ಭರಿತವಾಗಿತ್ತು.

**ಸಾಮಾಜಿಕ ಜೀವನ:** ಕ್ರೀಟನ್ನರು ಸ್ವಾತಂತ್ರ್ಯ ಪ್ರೇಮಿಗಳೂ ಕಲಾಪ್ರೇಮಿಗಳೂ ಶಾಂತಿಪ್ರಿಯರೂ ಸ್ತ್ರೀಪುರುಷ ಸಮಾನತೆಯ ಭಾವನೆಯುಳ್ಳವರೂ ಆದ್ದರಿಂದ ಅವರ ಸಾಮಾಜಿಕ ಜೀವನ ಸ್ವಾರಸ್ಯಕರವೂ ಉಲ್ಲಾಸಭರಿತವೂ ಹಾಗೂ ಕ್ರಿಯಾಶೀಲತೆಯಿಂದ ಕೂಡಿತ್ತು. ಕೃಷಿ, ಕೈಗಾರಿಕೆ, ವ್ಯಾಪಾರಗಳಲ್ಲಿ ತೊಡಗಿದ್ದ ಜನಸಂಖ್ಯೆಯೇ ಹೆಚ್ಚಾಗಿದ್ದರೂ ಕುಶಲಕಲೆಗಳಲ್ಲಿ ಆಸಕ್ತಿಯುಳ್ಳ ಜನರೂ ಹೆಚ್ಚು ಸಂಖ್ಯೆಯಲ್ಲಿದ್ದರು. ಶ್ರೀಮಂತರೂ ದೊಡ್ಡ ಜಮೀನುದಾರರೂ ಕೆಲವರಿದ್ದರು. ಮಹಿಳೆಯರು ಸಮಾನ ಹಕ್ಕುಬಾಧ್ಯತೆ ಪಡೆದು ಧಾರ್ಮಿಕ ಮತ್ತು ನಿತ್ಯ ಜೀವನದಲ್ಲಿ ಉಚ್ಚಸ್ಥಾನದಲ್ಲಿದ್ದರು. ಸಂಗೀತ, ನಾಟ್ಯ, ಕ್ರೀಡೆ ಮುಂತಾದ ಮನರಂಜನೆಯ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿ ವಹಿಸಿ, ಪುರುಷರೊಡನೆ ವಿರಾಮದ ಕಾಲವನ್ನು ಆನಂದ, ವಿನೋದಗಳಿಂದ ಕಳೆಯುತ್ತಿದ್ದರು. ಅಂತಃಪುರದ ಏಕಾಂತ ಜೀವನ ರೂಢಿಯಲ್ಲಿರಲಿಲ್ಲ. ಜನಪ್ರಿಯ ಕ್ರೀಡೆಗಳಲ್ಲಿ ಮಲ್ಲಯುದ್ಧ, ಗೂಳಿಯ ಕಾಳಗ ಮುಖ್ಯವಾದುವು. ಗೂಳಿಯ ಕಾಳಗ ಒಂದು ಧಾರ್ಮಿಕ ಕಟ್ಟಳೆ ಆಚರಣೆಯೂ ಆಗಿದ್ದಿರಬಹುದು. ಈ

ಕ್ರೀಡೆಯಲ್ಲಿ ತೆಳ್ಳನೆಯ ಯುವಕರು ತಮ್ಮ ಮೇಲೆ ಧಾವಿಸಿ ನುಗ್ಗಿ ಬರುತ್ತಿದ್ದ ಗೂಳಿಯ ಕೋಡುಗಳನ್ನು ಹಿಡಿದು ತಲೆಯನ್ನು ಮೇಲೆ ಎತ್ತಿದಾಗ ಅದರ ಬೆನ್ನಿನ ಮೇಲೆ ಉರುಳಿ ಬೀಳುತ್ತಿದ್ದರು. ಈ ಕ್ರೀಡೆಯಲ್ಲಿ ಶಕ್ತಿ, ಕೈ ಚಳಕ, ಧೈರ್ಯಗಳ ಪ್ರದರ್ಶನ ನಡೆಯುತ್ತಿತ್ತು. ಮುಂದೆ ಗೂಳಿಕಾಳಗ ಗ್ರೀಕರಲ್ಲೂ ರೂಢಿಗೆ ಬಂದು ಕಾಲಾನಂತರ ಅವರ ರಾಷ್ಟ್ರೀಯ ಕ್ರೀಡೆಯಾಯಿತು.

ಪುರುಷರು ಸಾಧಾರಣವಾದ ಬಟ್ಟೆಯ ಎರಡು ತುಂಡುಗಳಲ್ಲಿ ಒಂದನ್ನು ಸೊಂಟದ ವರೆಗೂ ಮುಚ್ಚುವುದಕ್ಕೆ, ಇನ್ನೊಂದನ್ನು ದೇಹದ ಮೇಲ್ಭಾಗವನ್ನು ಮುಚ್ಚಲು ಉಪಯೋಗಿಸುತ್ತಿದ್ದರು. ಸ್ತ್ರೀಯರು ಹೆಚ್ಚು ನೆರಿಗೆಗಟ್ಟಿದ ಲಂಗಧರಿಸುತ್ತಿದ್ದರು ದೇಹದ ಮೇಲ್ಭಾಗವನ್ನು ಮುಚ್ಚಲು ಒಂದು ಕವಚವನ್ನು ಧರಿಸುತ್ತಿದ್ದರು. ಈ ಕವಚ ಮುಂಭಾಗದಲ್ಲಿ ತೆರೆದಂತಿದ್ದು ಹಿಂಭಾಗದಲ್ಲಿ ಮಾತ್ರ ಎತ್ತರವಾದ ಕತ್ತುಪಟ್ಟಿ ಉಳ್ಳದಾಗಿತ್ತು. ಉಂಗುರವನ್ನು ಅಪರೂಪವಾಗಿ ಧರಿಸುತ್ತಿದ್ದರು. ಸ್ತ್ರೀಪುರುಷರು ಕೊರಳು ಮತ್ತು ಮುಂಗೈಗಳನ್ನು ಮುದ್ರಿಕೆ ಯಿಂದ ಚಿನ್ನದ ಕೊರಳಹಾರ, ಕೈಕಾಪು, ಮುಕುಟ, ಪಿನ್ನುಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು. ಮಕ್ಕಳ ಜೀವನ ಎಲ್ಲ ಕಡೆಯೂ ಸರಳವಾಗಿತ್ತು.

**ಧಾರ್ಮಿಕ ಜೀವನ:** ಆರಾಧನೆಗಾಗಿ ಪ್ರತ್ಯೇಕವಾಗಿ ಕಟ್ಟಲಾಗಿದ್ದ ದೇವಾಲಯಗಳು ಎಲ್ಲೂ ಕಂಡುಬಂದಿಲ್ಲ. ಬೆಟ್ಟದ ತುದಿ, ತೋಪು, ಗುಹೆಗಳು ಪವಿತ್ರ ಸ್ಥಳಗಳಾಗಿದ್ದುವು. ಕಂಬಗಳಲ್ಲಿ ಹಾಗೂ ಶಿಲೆಗಳಲ್ಲಿ ಪ್ರಕೃತಿ ದೇವತೆಗಳು ನೆಲಸಿರುವುವೆಂದು ಭಾವಿಸಿ ನರ್ತನ ಪೂಜೆ ಪುನಸ್ಕಾರಗಳಿಂದ ಒಲಿಸಿಕೊಳ್ಳಬಹುದೆಂದೇ ಈ ಜನ ನಂಬಿದ್ದರು. ಖಾಸಗಿ ಗೃಹಗಳಲ್ಲೂ ಕಂಬಗಳನ್ನೊಳಗೊಂಡ ಕೋಣೆಗಳಿದ್ದವು. ಅರಮನೆಗಳ ನಿರ್ಮಾಣವಾದ ಅನಂತರ ಕಂಬಗಳ ಕೋಣೆಯ ನಿರ್ಮಾಣ ನಿಂತು ಸಣ್ಣ ಗುಡಿಗಳ ರಚನೆ ಪ್ರಾರಂಭ ವಾಯಿತು.

ಮಹಾಮಾತೆಯೇ ಇವರ ಅಧಿದೇವತೆಯಾಗಿದ್ದು, ದ್ವಿಮುಖಪರಶು ಈಕೆಯ ಚಿಹ್ನೆಯಾಗಿತ್ತು. ಈ ದೇವತೆಯ ಜೊತೆಗೆ ಒಂದು ಚಿಕ್ಕ ವಯಸ್ಸಿನ ಪುರುಷ ದೇವತೆಯೂ ಇರುತ್ತಿತ್ತು. ಮನೆಗಳಲ್ಲಿನ ಸಣ್ಣ ಗುಡಿಗಳಲ್ಲಿ ಗುಂಡಾದ ಮುಕ್ಕಾಲು ಮೇಜನ್ನು ಮಧ್ಯ ಭಾಗದಲ್ಲಿರಿಸಿ, ಪೂಜಾ ಸಾಮಗ್ರಿಗಳನ್ನು ಅದರ ಮೇಲಿಡುತ್ತಿದ್ದರು. ಹಾಗೆಯೇ ಗೋಡೆಗೆ ಒರಗಿದ ಹಾಗೆ ಒಂದು ಮೇಜಿಟ್ಟು ಗಂಟೆಯಾಕಾರದ ವಿಗ್ರಹವನ್ನು ಅದರ ಮೇಲಿರಿಸಿ, ಜೊತೆಗೆ ಎರಡು ಕೊಂಬುಗಳ ಮಧ್ಯ ದ್ವಿಮುಖ ಪರಶುವನ್ನು ಇಟ್ಟು ಪೂಜಿಸುತ್ತಿದ್ದರು.

ನಾಸಾಸ್ ಅರಮನೆಯ ಗುಡಿಯಲ್ಲಿ ನಾಗದೇವತೆಯ ಪೂಜೆ ನಡೆಯುತ್ತಿತ್ತು. ಪೂಜಾರಿಣಿ ತನ್ನ ಕೈಗಳಲ್ಲಿ ಸರ್ಪಗಳನ್ನು ಹಿಡಿದುಕೊಂಡಿರುವುದೂ ಅವಳ ಉಡುಪಿನಲ್ಲಿ ಸಮುದ್ರದ ಚಿಪ್ಪುಗಳನ್ನು ಚಿತ್ರಿಸಿರುವುದೂ ಅವಳ ಸುತ್ತ ಪಾರಿವಾಳ, ಹಸು ಕರು, ಆಡು ಕುರಿಗಳು ಮೇಲೆ ನಕ್ಷತ್ರ ಚಿಹ್ನೆಗಳು ಇರುವುದೂ ಚಿತ್ರದಲ್ಲಿ ಮುದ್ರಿಸಲಾಗಿದೆ. ಸರ್ಪ ಮನೆಯನ್ನು ಕಾಯುವುದೆಂದೂ ಶುಭಕರವೆಂದೂ ಆಗಿನ ಜನರ ಭಾವನೆ.

**ಕಲೆ:** ಚಕ್ರದ ಉಪಯೋಗ ಬಳಕೆಗೆ ಬಂದ ಅನಂತರ ಮಡಕೆಯ ತಯಾರಿಕೆ ಸುಲಭವಾಯಿತು. ಕಲ್ಲಿನ, ನೇಯ್ಗೆಯ, ಲೋಹದ, ಚರ್ಮದ ವರ್ಣರಂಜಿತವಾದ ವಿವಿಧಾಕಾರದ ಸಾಮಗ್ರಿಗಳ ತಯಾರಿಕೆಯಾಗುತ್ತಿತ್ತು. ಕಪ್ಪು ಬಣ್ಣದ ಹಿನ್ನೆಲೆಯ ಮೇಲೆ ಬಿಳಿಯ ಬಣ್ಣದಲ್ಲೂ ಇತರ ಬಣ್ಣಗಳ ಹಿನ್ನೆಲೆಯ ಮೇಲೆ ಕಪ್ಪು ಬಣ್ಣದಲ್ಲೂ ತಿದ್ದುತ್ತಿದ್ದರು. ನಾಸಾಸ್ ಅರಮನೆಯಲ್ಲಿ ಚಿತ್ರಿತವಾಗಿರುವ ವರ್ಣರಂಜಿತ ದೃಶ್ಯಗಳಿಂದಲೂ ಅಲ್ಲಿ ದೊರಕಿರುವ ಇತರ ಸಾಮಗ್ರಿಗಳಿಂದಲೂ ಕ್ರೀಟನ್ ಕಲೆಯ ವೈಶಿಷ್ಟ್ಯ ಬೆಳಕಿಗೆ ಬರುತ್ತದೆ. ಕೊನೆಯ ಮಿನೋವನ್ ಕಾಲ ಕಲೆಯ ಉತ್ಕೃಷ್ಟ ಕಾಲ. ಊರಿನ ನೈರ್ಮಲ್ಯ ವ್ಯವಸ್ಥೆ, ಕೊಳಾಯಿ ವ್ಯವಸ್ಥೆ, ಕಾಲುವೆಗಳ ನಿರ್ಮಾಣ, ಕಟ್ಟಡ–ಇವುಗಳ ವಿಚಾರದಲ್ಲಿ ಇದು ಈಜಿಪ್ಟ್, ಬ್ಯಾಬಿಲೋನಿಯಗಳಿಗೆ ಸಮಾನವಾಗಿತ್ತು. ಗ್ರೀಕರ ಕಲಾಕೃತಿಗಳು ವಿಶೇಷವಾಗಿ ಕ್ರೀಟನ್ನರ ಕಲೆಯ ವಿಧಾನವನ್ನೇ ಅನುಸರಿಸಿದ್ದುವು. ದಂತದ ಸಾಮಾನುಗಳು ಬಳಕೆ ಯಲ್ಲಿದ್ದುವು. 16.25ಸೆಂಮೀ ಎತ್ತರದ ಒಂದು ದಂತದ ಸರ್ಪದೇವತೆಯ ಮೂರ್ತಿಶಿಲ್ಪ ಸಿಕ್ಕಿದೆ. ಈ ದೇವತೆಯ ಕೈಯನ್ನು ಚಿನ್ನದ ಸರ್ಪಗಳೂ ದೇಹದ ಮೇಲೆ ಚಿನ್ನದಿಂದ ಮಾಡಿದ ಉಡುಪೂ ಇವೆ. ಹೀಗೆಯೇ ದಂತದಿಂದ ಕೆತ್ತಿರುವ ಅನೇಕ ಮೂರ್ತಿಗಳು ಸಿಕ್ಕಿವೆ. ಆಗಿನ ಶಿಲ್ಪಕಲೆ ಎಷ್ಟು ಉನ್ನತ ಮಟ್ಟದ್ದಾಗಿತ್ತೆಂಬುದಕ್ಕೆ ಇವು ಸಾಕ್ಷಿಗಳಾಗಿವೆ.

**ಶವಸಂಸ್ಕಾರ:** ಮರಣಾನಂತರದ ಅವಸ್ಥೆಯ ಬಗ್ಗೆ ಈಜಿಯನ್ ಜನರಲ್ಲೂ ಭಯವಿತ್ತು. ಆದ್ದರಿಂದ ಶವಸಂಸ್ಕಾರವನ್ನು ಎಚ್ಚರಿಕೆಯಿಂದ ನಡೆಸುತ್ತಿದ್ದರು. ಸಮಾಧಿಗಳನ್ನು ಸರಿಯಾದ ರೀತಿಯಲ್ಲಿ ಕಟ್ಟಿ ಶವದ ಜೊತೆಗೆ ಆಹಾರ, ಆಯುಧಗಳನ್ನೂ ಸಣ್ಣ ವಿಗ್ರಹಗಳನ್ನೂ ಇಡುತ್ತಿದ್ದರು. ಈ ವಿಗ್ರಹಗಳು ಆ ಮನುಷ್ಯನ ಅನುಯಾಯಿಗಳು, ಸೇವಕರೆಂದು ಭಾವಿಸಲಾಗುತ್ತಿತ್ತು. ಹೀಗೆ ನಾನಾ ಬಗೆಯಲ್ಲಿ ವಿಶಿಷ್ಟವಾಗಿದ್ದ ಈಜಿಯನ್ ನಾಗರಿಕತೆಯು ಬಹುಕಾಲ ಬಾಳಿ ನೆರೆಹೊರೆಯ ದೇಶಗಳ ಮೇಲೆ ಪ್ರಭಾವ ಬೀರಿ ಗ್ರೀಕ್ ಸಂಸ್ಕೃತಿಗೆ ನಾಂದಿಯಾಗಿ ಪರಿಣಮಿಸಿತು. (ಜಿ.ಎಂ.)

**ಸಂಸ್ಕೃತಿ:** ಮೈಸಿನಿ, ಟ್ರಾಯ್‌ಗಳಲ್ಲಿ ಶ್ಲೀಮನ್ ಮಾಡಿದ ಭೂಶೋಧನೆಗಳಿಂದಲೂ ಕ್ರೀಟ್, ನಾಸಾಸ್‌ಗಳಲ್ಲಿ ಇವಾನ್ಸ್ ಮಾಡಿದ ಉತ್ಖನನಗಳಿಂದಲೂ ಚರಿತ್ರಪೂರ್ವ ಕಾಲದಲ್ಲಿ ಯುರೋಪಿನಾದ್ಯಂತ ಬಹಳ ಉಚ್ಛ್ರಾಯಸ್ಥಿತಿಯಲ್ಲಿದ್ದ ಕಂಚಿನ ಯುಗದ ಸಂಸ್ಕೃತಿಯೊಂದು ಬೆಳಕಿಗೆ ಬಂತು. ಇದಕ್ಕೆ ಸೇರಿದಂತೆ ಈಜಿಯನ್ ಸಮುದ್ರದ ಅಕ್ಕಪಕ್ಕಗಳಲ್ಲಿರುವ ಏಜಿಯ, ಟ್ರಿಯಾಂಡ, ಟೈಲಿಸಸ್, ಟೈರಿನ್ಸ್, ಹಿಸಾರ್ ಲಿಕ್, ಫೇಸ್ಟಸ್, ಗೌರ್ನಿಯ, ಮಲ್ಲಿಯ, ಥೀಬ್ಸ್ ಮುಂತಾದ ಕಡೆಗಳಲ್ಲೂ ಇದೇ ರೀತಿಯ ಅವಶೇಷಗಳು ದೊರಕಿದ್ದರಿಂದ ಈ ಸಂಸ್ಕೃತಿಗೆ ಈಜಿಯನ್ ಸಂಸ್ಕೃತಿ ಎಂದು ಕರೆಯಲಾಯಿತು.

ಈ ಪ್ರದೇಶ ಹೊಸ ಶಿಲಾಯುಗದ ಕಾಲದಿಂದಲೂ ಜನಗಳ ವಾಸಸ್ಥಾನವಾಗಿದ್ದಿತೆಂದೂ ಶಿಲಾಯುಗದ ಅವಶೇಷಗಳಿಂದ ತಿಳಿಯುತ್ತದೆ. ಹೊಸ ಶಿಲಾಯುಗದ ಅನಂತರ ಕಂಚಿನ ಯುಗದಲ್ಲಿ ಈ ಸಂಸ್ಕೃತಿ ಉಚ್ಛ್ರಾಯಸ್ಥಿತಿಯಲ್ಲಿದ್ದು ಬ್ಯಾಬಿಲಾನ್ ಮತ್ತು ಈಜಿಪ್ಟ್ ದೇಶಗಳೊಡನೆ ಸಂಪರ್ಕವನ್ನು ಹೊಂದಿತ್ತು. ಇಲ್ಲಿ ದೊಡ್ಡ ಅರಮನೆಗಳೂ ಕೋಟೆಗಳೂ ಮನೆಗಳೂ ಕೆತ್ತನೆಯ ಕಂಬಗಳೂ ಬಣ್ಣದ ಚಿತ್ರಗಳೂ, ಕೆತ್ತನೆಯ ಕೆಲಸ ಮಾಡಿದ ಗೋಡೆಗಳೂ ದೊರೆತಿವೆ. ನಾಯಕರ ವಾಸಸ್ಥಾನಗಳಾಗಿದ್ದ ಅರಮನೆಗಳಲ್ಲಿ ನೀರು ಸರಬರಾಜು, ಚರಂಡಿ ವ್ಯವಸ್ಥೆ, ಪ್ರತ್ಯೇಕ ಕೊಠಡಿಗಳು, ಅಂತಃಪುರಗಳು ಇದ್ದುವು. ದೇವಾಲಯಗಳು ಅರಮನೆಯೊಳಗೆ ಮಾತ್ರ ದೊರಕಿರುವುದರಿಂದ ನಾಯಕರೇ ಧರ್ಮದ ಮೇಲ್ವಿಚಾರಕರಾಗಿದ್ದರೆಂದು ತೋರುತ್ತದೆ. ಇವರು ಕುಶಲಕಲೆಗಳಲ್ಲಿ ಬಹಳ ಮುಂದುವರಿದಿದ್ದರೆಂದೂ ಗೊತ್ತಾಗುತ್ತದೆ. ಕಲ್ಲು, ತಾಮ್ರ, ಚಿನ್ನ, ಬೆಳ್ಳಿ–ಇವುಗಳಿಂದ ಮಾಡಿದ ಪದಾರ್ಥಗಳ ಮೇಲೆ ಅನೇಕ ವಿಧವಾದ ಕೆತ್ತನೆಯ ಕೆಲಸಗಳಿರುತ್ತಿದ್ದವು. ಕಂಚಿನ ಕತ್ತಿ, ಕೊಡಲಿ, ಚಾಕು ಮುಂತಾದ ಆಯುಧಗಳೂ ಬಣ್ಣ ಹಚ್ಚಿದ ಮಡಕೆಗಳೂ ಆಭರಣಗಳೂ ಕೆತ್ತನೆಯ ಕೆಲಸ ಮಾಡಿದ ಮಣಿಗಳೂ ಇವರ ಕರಕುಶಲಕಲೆಗಳು ಎಷ್ಟರಮಟ್ಟಿಗೆ ಅಭಿವೃದ್ಧಿ ಹೊಂದಿತ್ತೆಂಬುದನ್ನು ತೋರಿಸುತ್ತದೆ.

ಇವರು ವ್ಯಾಪಾರದಲ್ಲಿ ಬಹಳ ಮುಂದುವರಿದಿದ್ದರು. ಕ್ರೀಟನ್ ನಾಗರಿಕತೆಯ ಮಡಕೆಗಳು ಈಜಿಪ್ಟ್, ಬ್ಯಾಬಿಲಾನ್ ಮತ್ತು ಏಷ್ಯ ಮೈನರ್ ದೇಶಗಳೊಡನೆ ಇದ್ದ ವಾಣಿಜ್ಯ ಸಂಬಂಧ ಸೂಚಿಸುತ್ತದೆ. ಇವರು ಸೂರ್ಯ, ನಕ್ಷತ್ರ, ಬೆಟ್ಟ, ಮರ, ಪ್ರಾಣಿ–ಇವನ್ನು ಪೂಜಿಸುತ್ತಿದ್ದರು. ಸತ್ತವರನ್ನು ಹೂಳುತ್ತಿದ್ದರು. ಮೊದಮೊದಲು ಇವರ ಗೋರಿಗಳು ಚಿಕ್ಕವಾಗಿದ್ದು, ನೆಲದಲ್ಲಿ ಕಲ್ಲುಗಳನ್ನು ಜೋಡಿಸಿ ನಿರ್ಮಿಸಲಾಗಿತ್ತು. ಕ್ರಮೇಣ ಅವು ದೊಡ್ಡವಾಗುತ್ತ ಬಂದುವು. ಅನಂತರ ವೃತ್ತಾಕಾರದ ಗೋರಿಗಳು ಬಂದುವು. ಮೈಸಿನಿ ಎಂಬಲ್ಲಿ ಈ ಸಂಸ್ಕೃತಿಯ ಅಂತ್ಯಕಾಲಕ್ಕೆ ಸಂಬಂಧಿಸಿದ ಜೇನುಗೂಡಿನ ಆಕಾರದ ಗೋರಿಗಳಲ್ಲಿ ಆಹಾರ, ಪಾನೀಯಗಳನ್ನು ಮಡಕೆಗಳಲ್ಲಿ ಇಡುತ್ತಿದ್ದರು.

ಇಲ್ಲಿ ಸಿಕ್ಕಿರುವ ಬರವಣಿಗೆ ಇರುವ ಮಣ್ಣಿನ ಫಲಕಗಳಿಂದ ಇವರು ತಮ್ಮದೇ ಆದ ಬರವಣಿಗೆಯನ್ನು ಉಪಯೋಗಿಸುತ್ತಿದ್ದರೆಂದು ಹೇಳಬಹುದು. ಈ ಸಂಸ್ಕೃತಿಯ ಆದಿಯಲ್ಲಿ ಅಕ್ಷರಗಳ ಬದಲು ಚಿತ್ರಗಳನ್ನು ಉಪಯೋಗಿಸುತ್ತಿದ್ದರೆಂಬುದು ಚಿತ್ರಲೇಖನಗಳಿಂದ ವ್ಯಕ್ತವಾಗುತ್ತದೆ. ಈ ಚಿತ್ರಲೇಖನ ಇಲ್ಲಿ ಪ್ರಾರಂಭವಾಯಿತೇ ಅಥವಾ ಈಜಿಪ್ಟ್ ದೇಶದಿಂದ ಇಲ್ಲಿಗೆ ಬಂತೇ ಎಂದು ಹೇಳುವುದು ಕಷ್ಟವಾದರೂ ಈ ಎರಡು ಲಿಪಿಗಳಿಗೂ ಸಂಬಂಧವಿದೆ. ಸ್ವಲ್ಪ ಕಾಲಾನಂತರ ಈ ಚಿತ್ರದ ಲೋಪದೋಷಗಳನ್ನು ಸರಿಪಡಿಸಿ ರೇಖಾ (ಲೀನಿಯರ್) ಬರವಣಿಗೆ ಪ್ರಾರಂಭವಾಯಿತು. ಇದು ಬಹಳವಾಗಿ ಕ್ರೀಟ್ ದ್ವೀಪದಲ್ಲಿ ಬಳಕೆಯಲ್ಲಿ ಇದ್ದಿತೆಂದು ಕಾಣುತ್ತದೆ. ಈ ಸಂಸ್ಕೃತಿಗೆ ಕಾರಣರಾದ ಜನ ಯಾವ ಜನಾಂಗದವರು ಎಂದು ಹೇಳುವುದು ಕಷ್ಟ. ಇವರು ಕಪ್ಪುಬಣ್ಣದ ಉದ್ದ ತಲೆಯುಳ್ಳ ಪೇಲಿಯೋ ಮೆಡಿಟರೇನಿಯನ್ ಎಂಬ ಗುಂಪಿನವರೆಂದು ಕೆಲವರ ಅಭಿಪ್ರಾಯ.

ಕಂಚಿನ ಯುಗ ಕ್ರೀಟ್‌ನಲ್ಲಿ ಪ್ರ.ಶ.ಪೂ.4000ದರಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಪ್ರ.ಶ.ಪೂ.12ನೆಯ ಶತಮಾನದ ಕೊನೆಯಲ್ಲಿ ಇಲ್ಲಿನ ಸಂಸ್ಕೃತಿ ನಾಶವಾಯಿತು. ಮೈಸಿನಿ, ಟೈರಿನ್ಸ್ ಮುಂತಾದ ಪಟ್ಟಣಗಳು ನಾಶವಾದುವು. ಕಬ್ಬಿಣದ ಆಯುಧಗಳನ್ನು ಹೊಂದಿದ್ದ ಉತ್ತರದಿಂದ ವಲಸೆ ಬಂದ ಜನಾಂಗವೇ ಇದಕ್ಕೆ ಕಾರಣವಿರಬಹುದು. ಇದರಿಂದ ಈಜಿಯನ್ ಪ್ರದೇಶಗಳಲ್ಲಿ ಕಂಚಿನ ಯುಗ ಕೊನೆಗೊಂಡಿತು ಮತ್ತು ಕಬ್ಬಿಣದ ಯುಗ ಪ್ರಾರಂಭವಾಯಿತು. (ಎ.ವಿ.ಎನ್.)

**ಈಶ್ವರಚಂದ್ರ ವಿದ್ಯಾಸಾಗರ:** 1820–1891. ಬಂಗಾಲದ ಪ್ರಸಿದ್ಧ ಲೇಖಕರು ಹಾಗೂ ಸಮಾಜ ಸುಧಾರಕರು. ಮಿಡ್ನಾಪುರ ಜಿಲ್ಲೆಯ ಹಳ್ಳಿಯೊಂದರಲ್ಲಿ ಜನಿಸಿದರು. ಒಂಬತ್ತನೆಯ ವಯಸ್ಸಿನಲ್ಲಿ ಇವರನ್ನು ಕೋಲ್ಕೊತಕ್ಕೆ ಕರೆತಂದು ಅಲ್ಲಿನ ಸಂಸ್ಕೃತ ಮಹಾಪಾಠಶಾಲೆಗೆ ಸೇರಿಸಲಾಯಿತು. 19ನೆಯ ವಯಸ್ಸಿನಲ್ಲಿ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ವಿದ್ಯಾಸಾಗರ ಎಂಬ ಪ್ರಶಸ್ತಿ ಗಳಿಸಿದರು. ಮೂವತ್ತನೆಯ ವಯಸ್ಸಿನಲ್ಲಿ ಫೋರ್ಟ್ ವಿಲಿಯಂ ಕಾಲೇಜಿನ ಮುಖ್ಯ ಪಂಡಿತರಾದರು. ಇಂಗ್ಲಿಷ್ ಭಾಷೆಯಲ್ಲಿಯೂ ಪಾಂಡಿತ್ಯಗಳಿಸಿದ್ದರು. ಬೇತಾಳ ಪಂಚವಿಂಶತಿ ಎಂಬ ಇವರ ಬಂಗಾಲಿ ಗದ್ಯಕೃತಿ 1846ರಲ್ಲಿ ಪ್ರಕಟವಾಯಿತು. ಶಾಕುಂತಲ 1855ರಲ್ಲೂ ಸೀತಾಪರಿತ್ಯಾಗ 1862ರಲ್ಲೂ ಬೆಳಕು ಕಂಡವು. ಕೊನೆಯದು ಇವರ ಅತ್ಯುತ್ಕೃಷ್ಟ ಕೃತಿಯೆಂದು ಪರಿಗಣಿತವಾಗಿದೆ.

ಇವರು ಫೋರ್ಟ್ ವಿಲಿಯಮ್ ಕಾಲೇಜಿನ ಪ್ರಿನ್ಸಿಪಾಲರಾದಾಗ, ಅಲ್ಲಿ ಬ್ರಾಹ್ಮಣೇತರರಿಗೆ ಸಂಸ್ಕೃತ ವಿದ್ಯಾಭ್ಯಾಸದ ಅವಕಾಶವಿರಲಿಲ್ಲ. ಅಲ್ಲಿ ನೆಲೆಸಿದ್ದ ಕೆಲವು ಐರೋಪ್ಯರಿಗೆ ಸಂಸ್ಕೃತ ಪಂಡಿತರು ಖಾಸಗಿಯಾಗಿ ಸಂಸ್ಕೃತ ಪಾಠ ಹೇಳುವ ಪದ್ಧತಿ ಇತ್ತು ಮತ್ತು ಬಂಗಾಲದ ವೈದ್ಯ (ವೈಶ್ಯ) ಜಾತಿಯವರಿಗೂ ಸಂಸ್ಕೃತ ಕಲಿಯುವ ಅವಕಾಶವಿತ್ತು. ಸರ್ಕಾರ ಸ್ಥಾಪಿಸಿದ ಈ ಕಾಲೇಜಿನಲ್ಲಿ ಬ್ರಾಹ್ಮಣೇತರರಿಗೆ ಸಂಸ್ಕೃತ ಕಲಿಯಲು ಯಾವ ನಿಷೇಧವೂ ಇರಬಾರದೆಂದು ಈಶ್ವರಚಂದ್ರರು ತೀವ್ರವಾಗಿ ವಾದಿಸಿದರು. ತಮ್ಮ ನಿಲುವನ್ನು ಒಪ್ಪದಿದ್ದರೆ ತಮ್ಮ ಹುದ್ದೆಗೆ

ರಾಜೀನಾಮೆ ನೀಡುವುದಾಗಿ ಹೇಳಿದರು. ಹಳೆಯ ಕಾಲದ ಸಂಪ್ರದಾಯ ಶರಣರಿಂದ ಇದಕ್ಕೆ ವಿರೋಧವಿದ್ದರೂ ಈಶ್ವರಚಂದ್ರರ ಈ ದಿಟ್ಟ ನಿಲುವಿಗೆ ಜಯ ದೊರಕಿತು. ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣ ಪ್ರಾಧ್ಯಾಪಕರ ಜಾಗ ತೆರವಾದಾಗ ಅದಕ್ಕೆ ತಾವೇ ಅರ್ಹರಿದ್ದರೂ ತಮಗಿಂತಲೂ ತಾರಾನಾಥ ತರ್ಕವಾಚಸ್ಪತಿಯವರೇ ಹೆಚ್ಚು ಅರ್ಹರೆಂದು ಬಗೆದರು. ತಮಗೆ ಬಂದ ಆಮಂತ್ರಣವನ್ನು ನಮ್ರತೆಯಿಂದ ನಿರಾಕರಿಸಿದರು. ತಾರಾನಾಥರು ವಾಸಿಸುತ್ತಿದ್ದ, ನೂರು ಮೈಲಿ ದೂರದಲ್ಲಿದ್ದ ಸ್ಥಳಕ್ಕೆ ತಾವೇ ಕಾಲುನಡಿಗೆಯಿಂದ ಹೋಗಿ ಅವರನ್ನು ಈ ಹುದ್ದೆಗೆ ಒಪ್ಪಿಸಿದರು. ಈಶ್ವರಚಂದ್ರರ ನಿಸ್ಪೃಹತೆಗೂ ದೈಹಿಕ ಶ್ರಮಕ್ಕೆ ಹಿಂಜರಿಯದ ಸ್ವಭಾವಕ್ಕೂ ಇದೊಂದು ಉತ್ತಮ ನಿದರ್ಶನವಾಗಿದೆ.

ಭಾರತೀಯ ಮಹಿಳೆಯರ ಉದ್ಧಾರಕ್ಕಾಗಿ ಈಶ್ವರಚಂದ್ರರು ಕೈಗೊಂಡ ಕಾರ್ಯಕ್ರಮಗಳು ಇವರನ್ನು ಚಿರಸ್ಮರಣೀಯರನ್ನಾಗಿ ಮಾಡಿವೆ. ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಚಳವಳಿ ನಡೆಸುತ್ತಿದ್ದ ಡ್ರಿಂಕ್ ವಾಟರ್ ಬೆಥೂನ್ ಎಂಬುವರೊಂದಿಗೆ ಇವರೂ ಸೇರಿದ್ದರು. ಬೆಥೂನರ ಹೆಸರಿನಲ್ಲಿ ನಡೆಯುತ್ತಿದ್ದ ಬಾಲಿಕಾಶಾಲೆಯ ವ್ಯವಸ್ಥೆಯ ಹೊಣೆ 1851ರಲ್ಲಿ ಇವರ ಮೇಲೆ ಬಿತ್ತು. ರೊಸೊಮೊಯ್‌ದತ್ತರು ಕೋಲ್ಕೊತದ ಸಂಸ್ಕೃತ ಮಹಾಪಾಠಶಾಲೆಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆಯಿತ್ತಾಗ ಪ್ರಿನ್ಸಿಪಾಲರ ಹುದ್ದೆಯೊಂದು ನಿರ್ಮಿತವಾಗಿ, ಅದಕ್ಕೆ ಇವರ ನೇಮಕವಾಯಿತು. 1854ರ ಕಾಯಿದೆಯನ್ವಯ ಇವರು ಬಂಗಾಲದಲ್ಲಿ ಖಾಸಗಿ ಶಾಲೆಗಳನ್ನು ಸ್ಥಾಪಿಸಿದರು. 1858ರಲ್ಲಿ ಸರ್ಕಾರದ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಕೋಲ್ಕೊತದ ಖಾಸಗಿ ಕಾಲೇಜೊಂದರ ವ್ಯವಸ್ಥಾಪಕರಾದರು.

ಬಾಲ್ಯವಿವಾಹ ಪದ್ಧತಿ ಇವರನ್ನು ಅಪಾರವಾಗಿ ಬಾಧಿಸಿತು. ಹಿಂದು ಜಾತಿಗಳಲ್ಲಿ ಅನೇಕರು ಎಳೆ ವಯಸ್ಸಿನಲ್ಲಿಯೇ ವಿಧವೆಯರಾಗುವ ಸಂಭವವಿತ್ತು. ಇವರು ವಿಧವಾ ವಿವಾಹದ ಪರವಾಗಿ ತೀವ್ರವಾಗಿ ಪ್ರಚಾರಾಂದೋಲನ ಕೈಗೊಂಡರು. ಹಿಂದು ಧರ್ಮಶಾಸ್ತ್ರಗಳಲ್ಲಿ ಅಗಾಧ ಪಾಂಡಿತ್ಯ ಪಡೆದಿದ್ದ ಇವರು ಇಂಥ ಪುನರ್ವಿವಾಹಕ್ಕೆ ಧರ್ಮಶಾಸ್ತ್ರಗಳಿಂದ ಯಾವ ಅಡ್ಡಿಯೂ ಇಲ್ಲವೆಂದು ಸಾರಿದರು. ಈ ವಿಚಾರವನ್ನು ಪ್ರಚುರಪಡಿಸಲು ಬಂಗಾಲಿ ಭಾಷೆಯಲ್ಲಿ ಸಣ್ಣ ಪುಸ್ತಕಗಳನ್ನು ಬರೆದರು. ಉಪನ್ಯಾಸಗಳನ್ನು ನೀಡಿದರು. ಮಹರ್ಷಿ ದೇವೇಂದ್ರನಾಥ ಠಾಕೂರರು ಸ್ಥಾಪಿಸಿದ ತತ್ತ್ವಬೋಧಿನಿ ಪತ್ರಿಕೆಯಲ್ಲಿ ಇವರು 1854ರಲ್ಲಿ ಈ ಸುಧಾರಣೆಯನ್ನು ಸಮರ್ಥಿಸಿ ಒಂದು ಲೇಖನ ಬರೆದರು. 1855ರ ಜನವರಿಯಲ್ಲಿ ಈ ವಿಷಯವಾಗಿ ಒಂದು ಸಣ್ಣ ಕೃತಿಯನ್ನೇ ಪ್ರಕಟಿಸಿದರು. ಇದೊಂದು ವಿವಾದಗ್ರಸ್ಥ ವಿಷಯವೇ ಆಯಿತು. ಅನೇಕ ಪಂಡಿತರು ಇವರ ನಿಲುವನ್ನು ವಿರೋಧಿಸಿ ಲೇಖನ ಬರೆದರು. 1855ರ ಅಕ್ಟೋಬರ್ ತಿಂಗಳಲ್ಲಿ ಈಶ್ವರಚಂದ್ರರು ಈ ಆಕ್ಷೇಪಣೆಗಳಿಗೆಲ್ಲ ಉತ್ತರ ಕೊಟ್ಟು ವಿದ್ವತ್ಪೂರ್ಣವೂ ಗಂಭೀರವೂ ಆದ ಮತ್ತೊಂದು ಸಣ್ಣ ಪುಸ್ತಕವನ್ನು ಪ್ರಕಟಪಡಿಸಿದರು. ಆ ತಿಂಗಳ 4ನೆಯ ದಿನಾಂಕದಂದು ಸು. 1,000 ಜನರ ಸಹಿಯಿದ್ದ ಮನವಿಯೊಂದನ್ನು ಸರ್ಕಾರದ ಶಾಸನ ಸಭೆಯ ಕಾರ್ಯದರ್ಶಿಗಳಿಗೆ ಕಳುಹಿಸಿದರು. ಹಿಂದು ವಿಧವೆಯ ವಿವಾಹಕ್ಕೆ ಯಾವ ಅಡಚಣೆಯೂ ಇಲ್ಲದಂತೆ ಹಾಗೂ ವಿವಾಹಿತರ ಸಂತಾನದ ಹಕ್ಕುಬಾಧ್ಯತೆಗೆ ಧಕ್ಕೆ ಒದಗದಂತೆ ಸೂಕ್ತ ಕಾಯಿದೆ ರಚಿಸಬೇಕೆಂದು ಮನವಿಯಲ್ಲಿ ಪ್ರಾರ್ಥಿಸಲಾಗಿತ್ತು. 1855ರ ನವೆಂಬರ್ 17ರಂದು ಕೋಲ್ಕೊತದ ಶಾಸನಸಭೆಯಲ್ಲಿ ಈ ವಿಷಯವಾಗಿ ಜೆ.ಪಿ.ಗ್ರ್ಯಾಂಟ್ ಒಂದು ವಿಧೇಯಕ ಮಂಡಿಸಿದರು. ಇದು ಇತರ ಪ್ರಾಂತ್ಯಗಳ ಮುಖಂಡರ ಗಮನ ಸೆಳೆಯಿತು. ಪುಣೆ, ಸಿಕಂದರಾಬಾದ್, ಸತಾರಾ, ಧಾರವಾಡ, ಮುಂಬಯಿ, ಅಹಮದಾಬಾದ್, ಸೂರತ್ ಮತ್ತು ಬಂಗಾಲದ ಅನೇಕ ನಗರಗಳಿಂದ ಈ ಮಸೂದೆಯ ಪರವಾಗಿಯೂ ವಿರುದ್ಧವಾಗಿಯೂ ಸರ್ಕಾರಕ್ಕೆ ಪತ್ರಗಳು ಬಂದುವು. ವಿರುದ್ಧವಾದುವೇ ಹೆಚ್ಚು ಸಂಖ್ಯೆಯಲ್ಲಿದ್ದವೆನ್ನಬಹುದು. 1856ರ ಜುಲೈ 26 ರಂದು ಗೌರ್ನರ್ ಜನರಲ್‌ನ ಅನುಮತಿ ಪಡೆದು ಇದು ಅಧಿನಿಯಮವಾಯಿತು. ಇದಕ್ಕನುಸಾರವಾಗಿ ಮೊದಲನೆಯ ಪುನರ್ವಿವಾಹ ಕೋಲ್ಕೊತದಲ್ಲಿ ಅದೇ ಡಿಸೆಂಬರ್ 7ರಂದು ಜರುಗಿತು. ವಿದ್ಯಾಸಾಗರರೂ ಇತರ ಸುಧಾರಕರೂ ಈ ವಿವಾಹದಲ್ಲಿ ಬಹಳ ಆಸಕ್ತಿ ವಹಿಸಿದರು. ಈ ಸುಧಾರಣೆಯಲ್ಲಿ ನಿರ್ಭೀತರಾಗಿ ಮುಂದುವರಿದವರೆಂದರೆ ಬ್ರಹ್ಮ ಸಮಾಜದವರು. ಹಿಂದು ಸಮಾಜದಲ್ಲಿ ಈ ವಿವಾಹಗಳು ಕೋಲಾಹಲವನ್ನೇ ಎಬ್ಬಿಸಿದುವು. ಸುಧಾರಣಾವಾದಿಗಳೂ ವಿರೋಧಿಗಳೂ ಲೇಖನ ಬರೆದು ತೀವ್ರವಾದ ವಾದವಿವಾದಗಳಲ್ಲಿ ತೊಡಗಿದರು. ವಿರೋಧಿಗಳು ಸುಧಾರಕರನ್ನು ಹೆದರಿಸಿ, ಅವರ ಮೇಲೆ ಹಿಂಸಾಕೃತ್ಯ ನಡೆಸುವುದಕ್ಕೂ ಹಿಂಜರಿಯಲಿಲ್ಲ, ಈಶ್ವರಚಂದ್ರರು ಕೋಲ್ಕೊತದಲ್ಲಿ ಸುರಕ್ಷಿತವಾಗಿ ಓಡಾಡುವುದೂ ಕಷ್ಟವಾಗಿತ್ತು. ಆದರೆ ಇದರಿಂದ ಇವರು ಭೀತರಾಗಲಿಲ್ಲ. ತಮ್ಮ ಆಯುಷ್ಯದಲ್ಲಿ ತಾವು ನಡೆಸಿದ ಕಾರ್ಯಗಳಲ್ಲಿ ಇದೇ ಮಹತ್ತರವಾದದ್ದೆಂಬುದು ಅವರ ಅಭಿಪ್ರಾಯ. ಈ ಸುಧಾರಣೆಯ ಪ್ರಭಾವ ಬಂಗಾಲದಾಚೆಗೂ ಹಬ್ಬಿತು. ಮಹಾರಾಷ್ಟ್ರದಲ್ಲಿ ರಾನಡೆ, ಮಲಬಾರಿ, ವಿಷ್ಣುಶಾಸ್ತ್ರಿ, ಕರ್ವೆ ಮುಂತಾದವರು ಇದಕ್ಕೆ ಬೆಂಬಲ ಕೊಟ್ಟರು. ವಿಧವಾ ವಿವಾಹದ ಪ್ರಚಾರಕ್ಕಾಗಿಯೇ 1861ರಲ್ಲಿ ಒಂದು ಸಂಸ್ಥೆ ಸ್ಥಾಪಿತವಾಯಿತು. 1899ರಲ್ಲಿ ಕರ್ವೆಯವರು ಹಿಂದು ವಿಧವೆಯರ ವಸತಿ ಗೃಹವೊಂದನ್ನು ಸ್ಥಾಪಿಸಿದರು. ಆಂಧ್ರದಲ್ಲಿ ಈ ಸುಧಾರಣೆಗಾಗಿ ಬಹಳ ಶ್ರಮಿಸಿದವ ರೆಂದರೆ ವೀರೇಶಲಿಂಗಂ ಪಂತುಲು. ಇವರೆಲ್ಲರಿಗೂ ಈಶ್ವರಚಂದ್ರರೇ ಸ್ಫೂರ್ತಿ ಕೇಂದ್ರ. ಇಂಥ ವಿವಾಹ ಏರ್ಪಡಿಸುವ ಸಲುವಾಗಿ ಈಶ್ವರಚಂದ್ರರು ಬಹಳ ಕಷ್ಟನಷ್ಟ ಅನುಭವಿಸಿದರು. ತಮ್ಮ ಸ್ವಂತ ಹಣವನ್ನು ಇವುಗಳಿಗಾಗಿ ವಿನಿಯೋಗಿಸಿ ಕೊನೆಗೆ ಸಾಲದ ಭಾರವನ್ನೂ ಹೊತ್ತರು.

ಬಂಗಾಲದ ಕುಲೀನರೆನ್ನಿಸಿಕೊಂಡವರಲ್ಲಿದ್ದ ಬಹುಪತ್ನಿತ್ವವನ್ನು ತೊಡೆದುಹಾಕುವುದಕ್ಕೂ ಇವರು ಅಪಾರವಾಗಿ ಶ್ರಮಿಸಿದರು. ಸಾಮಾನ್ಯ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರು ತಮ್ಮ ಹೆಣ್ಣುಮಕ್ಕಳನ್ನು ಶ್ರೇಷ್ಠ ಕುಲದವರಿಗೆ ಕೊಡಬೇಕೆಂಬ ಹಂಬಲವೂ ಕನ್ಯಾವಿವಾಹ ನಿರ್ಬಂಧವೂ ಇದಕ್ಕೆ ಕಾರಣ. ಕುಲೀನರೆನಿಸಿಕೊಂಡ ಗಂಡಸರು ಎಷ್ಟು ಮದುವೆ ಮಾಡಿ ಕೊಳ್ಳುವುದಕ್ಕೂ ನಿರ್ಬಂಧವಿರಲಿಲ್ಲ. ಅವಷ್ಟೇ ಅಲ್ಲ, ಅದೊಂದು ಲಾಭದಾಯಕ ವ್ಯಾಪಾರವೂ ಆಗಿತ್ತು. ಈ ವ್ಯಾಪಾರದಲ್ಲಿ ನಿರತರಾಗಿದ್ದ ದಳ್ಳಾಳಿಗಳಿಗೂ ಹೇರಳ ಲಾಭ ಸಿಗುತ್ತಿತ್ತು. ಈ ಕುಲೀನ ಗಂಡಸರು ಸತ್ತರೆ ಏಕಕಾಲಕ್ಕೆ ಅನೇಕರು ವಿಧವೆಯರಾಗುತ್ತಿದ್ದರು. ಇಂಥವರಲ್ಲಿ ಬಾಲವಿಧವೆಯರೂ ಅನೇಕ. ಆದ್ದರಿಂದ ವಿಧವಾ ವಿವಾಹದ ಸುಧಾರಣೆಗೂ ಈ ಬಹುಪತ್ನಿತ್ವ ವಿರೋಧಕ್ಕೂ ನಿಕಟ ಸಂಬಂಧವಿತ್ತು.

ಈಶ್ವರಚಂದ್ರರು 25,000 ಜನರ ಸಹಿಯಿದ್ದ ಮನವಿಯೊಂದನ್ನು 1855ರ ಡಿಸೆಂಬರ್ 27ರಂದು ಸರ್ಕಾರಕ್ಕೆ ಸಮರ್ಪಿಸಿದರು. ಇದರ ಬಗೆಗೆ ಸರ್ಕಾರದವರು ಸಹಾನುಭೂತಿಯುಳ್ಳವರಾಗಿದ್ದರು. ಆದರೆ 1857ರಲ್ಲಿ ದೇಶದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಸಂಭವಿಸಿದ್ದರಿಂದ ಸರ್ಕಾರ ಈ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಲಿಲ್ಲ. 1863ರಲ್ಲಿ ಮತ್ತು 1866ರಲ್ಲಿ ಇದೇ ಬಗೆಯಲ್ಲಿ ಮನವಿಯನ್ನು ಸರ್ಕಾರಕ್ಕೆ ಒಪ್ಪಿಸಿದರು. 1866 ಮಾರ್ಚ್ 19ರಂದು ಈಶ್ವರಚಂದ್ರರು ಕೆಲವು ಪ್ರಮುಖರೊಂದಿಗೆ ಸರ್ಕಾರಕ್ಕೆ ನಿಯೋಗ ಹೋದರು. ಆಗ ಸರ್ಕಾರ ಈ ಬಗ್ಗೆ ಅಭಿಪ್ರಾಯ ಸಂಗ್ರಹಣೆಗಾಗಿ ಒಂದು ಸಮಿತಿ ನೇಮಿಸಿತು. ಬಹುಪತ್ನಿ ವಿವಾಹವನ್ನು ಕಾಯಿದೆಯ ಮೂಲಕ ನಿಷೇಧಿಸುವ ಬಗೆಗೆ ಭಿನ್ನಾಭಿಪ್ರಾಯವಿತ್ತು. ಈ ವಿಚಾರವಾಗಿ ಕಾಯಿದೆ ಮಾಡುವುದು ಉಚಿತವಲ್ಲವೆಂದು ಇಂಗ್ಲೆಂಡ್ ಸರ್ಕಾರದ ಇಂಡಿಯ ಕಾರ್ಯದರ್ಶಿಯ ಅಭಿಪ್ರಾಯವಾಗಿತ್ತು. ಜನರಲ್ಲಿ ವಿದ್ಯಾಪ್ರಸಾರವಾದಂತೆಲ್ಲ ಈ ದುಷ್ಪದ್ಧತಿ ತಾನಾಗಿಯೇ ಮಾಯವಾಗುವುದೆಂಬ ವಿಶ್ವಾಸ ಅನೇಕರಲ್ಲಿತ್ತು. ಅಂತೂ ಈ ವಿಷಯದಲ್ಲಿ ಯಾವ ಕಾಯಿದೆ ರಚಿಸಲೂ ಕಾಲ ಒದಗಿಬರಲಿಲ್ಲ. ಇವರು 1891 ಜುಲೈ 29ರಂದು ನಿಧನರಾದರು.

(ಕೆ.ಎಸ್.ಜಿ.ಆರ್.)

**ಈಸೂರು ಚಳವಳಿ:** 1942ರ ಕ್ವಿಟ್ ಇಂಡಿಯ ಚಳವಳಿ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಮಹತ್ತ್ವದ ಚಳವಳಿ. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮ ಜನಸಾಂದ್ರತೆಯಿಂದ ಕೂಡಿದ್ದು ಸಮೃದ್ಧವಾಗಿತ್ತು. ಗಾಂಧೀಜಿಯ ಕರೆಗೆ ಈ ಗ್ರಾಮದ ಜನತೆ ಸ್ಪಂದಿಸಿದ ರೀತಿ ಅನನ್ಯವಾದುದು. ಸ್ವಾತಂತ್ರ್ಯ ಚಳವಳಿ ತೀವ್ರವಾಗಿ ನಡೆಯುತ್ತಿದ್ದ ಹುಬ್ಬಳ್ಳಿ, ದಕ್ಷಿಣ ಧಾರವಾಡ, ಬ್ಯಾಡಗಿ ಮತ್ತು ಹಿರೇಕೆರೂರುಗಳಿಗೆ ಈ ಗ್ರಾಮ ಸಮೀಪದಲ್ಲಿದ್ದು, ಅದರ ಪ್ರಭಾವ ಇಲ್ಲಿ ಆಗಿತ್ತು.

ಕ್ವಿಟ್ ಇಂಡಿಯ ಚಳವಳಿಯ ಆರಂಭಕ್ಕೆ ಮುನ್ನವೇ ಸರ್ಕಾರ ಗಾಂಧೀಜಿಯನ್ನು ಬಂಧಿಸಿದ್ದು ದೇಶವ್ಯಾಪಿ ಪ್ರತಿಭಟನೆಗಳಿಗೆ ಕಾರಣವಾದಂತೆ ಶಿವಮೊಗ್ಗದಲ್ಲೂ ಚಳವಳಿಗೆ ನಾಂದಿ ಹಾಡಿತ್ತು. ಕಾಂಗ್ರೆಸ್ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು ಸರ್ಕಾರಿ ಕಟ್ಟಡಗಳ ಮತ್ತು ಶಾಲೆಗಳ ಪಿಕೆಟಿಂಗ್ ಆರಂಭಿಸಿದರು. ಕಾಂಗ್ರೆಸ್ ಕಂದಾಯವನ್ನು ನಿರಾಕರಿಸಲು ಕರೆ ನೀಡಿತು. ಶಾನುಭೋಗರು ಮತ್ತು ಪಟೇಲರು ತಮ್ಮ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡುವಂತೆ ಕಾಂಗ್ರೆಸ್ ಬಯಸಿತು. ಕಾರ್ಯಕರ್ತರು ನಡೆಸಿದ ರೈಲ್ವೆ ಹಳಿ ನಾಶ, ಟೆಲಿಗ್ರಾಫ್ ತಂತಿ ಕತ್ತರಿಸುವುದು ಮುಂತಾದ ಕಾರ್ಯಗಳಿಂದ ಶಿವಮೊಗ್ಗ ಕೆಲದಿನಗಳ ಕಾಲ ಹೊರಗಿನ ಸಂಪರ್ಕದಿಂದ ಕಡಿತಗೊಂಡಿತ್ತು.

ಆಗಸ್ಟ್ ಎರಡನೆಯ ವಾರದಲ್ಲಿ ಶಾಂತವೀರಯ್ಯ, ಮಲ್ಲೇಶಪ್ಪ ಮತ್ತು ರುದ್ರಪ್ಪ ಎಂಬುವರ ನೇತೃತ್ವದಲ್ಲಿ ಕಾಂಗ್ರೆಸ್ ತನ್ನ ಚಟುವಟಿಕೆಗಳನ್ನು ಆರಂಭಿಸಿತು. ಶಿವಮೊಗ್ಗದಲ್ಲಿ ಓದುತ್ತಿದ್ದ ಈಸೂರಿನ ವಿದ್ಯಾರ್ಥಿಗಳೂ ಈ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಭೆಯೊಂದು ನಡೆದು ಅದರಲ್ಲಿ ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಲೂ ಸರ್ಕಾರಿ ಅಧಿಕಾರಿಗಳಿಗೆ ಯಾವುದೇ ಸಹಕಾರ ನೀಡದಿರಲೂ ಮತ್ತು ಕಂದಾಯವನ್ನು ನಿರಾಕರಿಸಲೂ ತೀರ್ಮಾನಿಸಲಾಗಿತ್ತು. ನಾಗವಾರದ ಭೀಮಪ್ಪ, ರಟ್ಟಿಹಳ್ಳಿಯ ಶಿವರಾಮ ಮೈಲಾರಿ ಜೋಯಿಸ್ ಮತ್ತು ಈಸೂರಿನ ಶಂಕರಪ್ಪ ಮೊದಲಾದ ನಾಯಕರು ಕರ ನಿರಾಕರಣೆಯನ್ನು ಜಾರಿಗೊಳಿಸುವ ಹೊಣೆ ಹೊತ್ತರು.

ಹಳ್ಳಿಗರು ತಮ್ಮ ಹಳ್ಳಿಗಳನ್ನು ಸ್ವತಂತ್ರ ಎಂದು ಘೋಷಿಸಿಕೊಂಡು, ಬೇಜವಾಬ್ದಾರಿ ಸರ್ಕಾರಕ್ಕೆ ಪ್ರತಿಯಾಗಿ ಸಮಾನಾಂತರ ಸರ್ಕಾರಗಳನ್ನು ಸ್ಥಾಪಿಸಿಕೊಂಡರು. ಅವರು 8 ವರ್ಷದ ಹುಡುಗನೊಬ್ಬನನ್ನು ಅಮುಲ್ದಾರ್ ಎಂದು ನೇಮಕ ಮಾಡಿದ್ದಲ್ಲದೆ, ತಮ್ಮ ನಿರ್ಧಾರಗಳನ್ನು ಜಾರಿಗೆ ತರಲು ಸ್ವಯಂಸೇವಕರ ಸಮಿತಿಯೊಂದನ್ನು ರಚಿಸಿದರು.

ಶಾನುಭೋಗರು ಮತ್ತು ಪಟೇಲರನ್ನು ರಾಜೀನಾಮೆ ನೀಡುವಂತೆ ಒತ್ತಾಯಿಸಿದರು. ಅವರು ನಿರಾಕರಿಸಿದಾಗ ಅವರ ದಫ್ತರ್‍ಗಳನ್ನು ಸುಟ್ಟು, ಶಿಕ್ಷೆಯರೂಪವಾಗಿ ಅವರಿಬ್ಬರನ್ನು ಸುಡುಬಿಸಿಲಿನಲ್ಲಿ ಒಂಟಿಕಾಲಿನಲ್ಲಿ ನಿಲ್ಲಿಸಿದರು. ಅಂಚೆಕಛೇರಿಯನ್ನು ಸುಟ್ಟಿದ್ದಲ್ಲದೆ ಸರ್ಕಾರಿ ಅಧಿಕಾರಿಗಳನ್ನು ಹತ್ಯೆಮಾಡಲಾಯಿತು. ಹಳ್ಳಿಗೆ ಪೋಲೀಸ್ ಪೇದೆ ಬಂದಾಗ ಆತನ ರುಮಾಲನ್ನು ಕಿತ್ತು ಗಾಂಧಿ ಟೋಪಿಯನ್ನು ಹಾಕಿದರು. ಅಲಕ್ಷ್ಯ ಸರ್ಕಾರಿ ಅಧಿಕಾರಿಗಳು ಊರಿಗೆ ಬಂದರೆ? ಎಂಬ ವಿಚಾರಿಕೆಯನ್ನು ಹಲಗೆಯ ಮೇಲೆ ಬರೆದು ಹೆಬ್ಬಾಗಿಲಿಗೆ ತೂಗು ಹಾಕಲಾಯಿತು. ಮತ್ತೊಮ್ಮೆ ಹಳ್ಳಿಗೆ ಬರದಂತೆ ಎಚ್ಚರಿಕೆ ನೀಡಿ ಕಳುಹಿಸಲಾಯಿತು.

ಸೆಪ್ಟೆಂಬರ್ 27ರಂದು ಪಟೇಲ ಮತ್ತು ಶಾನುಭೋಗರ ಕಛೇರಿಗಳನ್ನು ಸುಡಲಾಯಿತು. ಈ ಹಂತದಲ್ಲಿ ಶಂಕರ ಬಸವಪ್ಪನವರ ಪತ್ನಿ ಹಾಲಮ್ಮನವರ ನೇತೃತ್ವದಲ್ಲಿ ಮಹಿಳೆಯರೂ ಚಳವಳಿಯನ್ನು ಸೇರಿದರು. ಕಾಂಗ್ರೆಸ್ಸಿನ ಎಚ್ಚರಿಕೆಯ ನಡುವೆಯೂ ಸರ್ಕಾರ ಅಧಿಕಾರಿಗಳನ್ನು ಕಳುಹಿಸಿ ಈಸೂರಿನ ಪರಿಸ್ಥಿತಿಯನ್ನು ಅರಿಯುವ ಪ್ರಯತ್ನ ಮಾಡಿತು. ಸೆಪ್ಟೆಂಬರ್ 27ರಂದು ಪೋಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ರೆವಿನ್ಯೂ ಇನ್ಸ್‌ಪೆಕ್ಟರ್‌ರೊಂದಿಗೆ ಮೂರು ಜನ ಪೇದೆಗಳು ಈಸೂರಿಗೆ ಬಂದರು. ಸರ್ಕಾರಿ ಅಧಿಕಾರಿಗಳನ್ನು ಊರಿನ ಬೃಹತ್ ಗುಂಪು ಸುತ್ತುವರೆಯಿತು. ಹತೋಟಿಗೆ ತರಲಾಗದ ಉದ್ವಿಗ್ನ ಜನ ಸಮುದಾಯವನ್ನು ನೋಡಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ತನ್ನ ರಿವಾಲ್ವರ್‌ನಿಂದ ಗುಂಡು ಹಾರಿಸಲಾಗಿ ಗುರುಶಾಂತಪ್ಪ ಮತ್ತು ಪರಪ್ಪಾಚಾರಿಯವರು ಗಾಯಗೊಂಡರು. ಇದರಿಂದ ರೊಚ್ಚಿಗೆದ್ದ ಹಳ್ಳಿಗರು ಸರ್ಕಾರಿ ಅಧಿಕಾರಿಗಳನ್ನು ಥಳಿಸಿದರು. ಇದರಿಂದ ಸಬ್ ಇನ್ಸ್‌ಪೆಕ್ಟರ್ ಕೆಂಚನಗೌಡ ಸ್ಥಳದಲ್ಲೇ ನಿಧನನಾದರೆ, ಪೋಲೀಸ್ ಇನ್ಸ್‌ಪೆಕ್ಟರ್, ರೆವಿನ್ಯೂ ಇನ್ಸ್‌ಪೆಕ್ಟರ್ ತೀವ್ರವಾಗಿ ಗಾಯಗೊಂಡರು. ಈ ಗಲಭೆಯಲ್ಲಿ ಮಹಿಳೆಯರು ಮತ್ತು ಮಕ್ಕಳೂ ಪಾಲ್ಗೊಂಡಿದ್ದರು. ಸರ್ಕಾರಿ ಅಧಿಕಾರಿಗಳ ಮೇಲಿನ ಈ ತೆರನಾದ ಹಲ್ಲೆ ಸಂಸ್ಥಾನದಲ್ಲಿ ನಡೆದಿದ್ದು ಇದೇ ಮೊದಲಾಗಿತ್ತು. ಅನಂತರ ಮೆರವಣಿಗೆ ಹೊರಟು, ನಿಷೇದಾಜ್ಞೆಯನ್ನು ಧಿಕ್ಕರಿಸಿ ಅಲ್ಲಿನ ವೀರಭದ್ರೇಶ್ವರ ದೇವಾಲಯದ ಮೇಲೆ ಸ್ವತಂತ್ರ್ಯ ಪತಾಕೆಯನ್ನೇ ಹಾರಿಸಿ ಸ್ವತಂತ್ರ್ಯ ಘೋಷಿಸಿಕೊಂಡರು. 1942ರಲ್ಲಿ ಸೆಪ್ಟೆಂಬರ್ 28ರಂದು ಈಸೂರು ಸ್ವಾತಂತ್ರ್ಯ ಘೋಷಿಸಿ ಕೊಂಡ ಕರ್ನಾಟಕದ ಪ್ರಥಮ ಹಳ್ಳಿ ಎನಿಸಿಕೊಂಡಿತು.

ಶಿಕಾರಿಪುರದಲ್ಲಿದ್ದ ಡೆಪ್ಯುಟಿ ಕಮೀಷನರ್‌ಗೆ ಸುದ್ದಿ ಮುಟ್ಟಿತು. ಗಲಭೆಯಲ್ಲಿ ಗಾಯ ಗೊಂಡಿದ್ದ ಪೋಲೀಸ್ ಪೇದೆ ಗ್ರಾಮಕ್ಕೆ ಹೋಗಬಾರದೆಂದೂ ಗ್ರಾಮಸ್ಥರೂ ಆಕ್ರೋಶ ಗೊಂಡಿದ್ದಾರೆಂದೂ ಹೇಳಿದ. ಆದರೆ ಹೆಚ್ಚಿನ ಪೋಲೀಸ್ ಪಡೆಯೊಂದಿಗೆ ಈಸೂರನ್ನು ಪ್ರವೇಶಿಸಿದ ಅಧಿಕಾರಿಗಳು ಇಡೀ ಹಳ್ಳಿಯನ್ನು ಸುತ್ತುವರೆದು, ಜನತೆಯನ್ನು ನಿರ್ದಾಕ್ಷಿಣ್ಯವಾಗಿ ಥಳಿಸಿದ್ದಲ್ಲದೆ, ಇಡೀ ಹಳ್ಳಿಯನ್ನು ಲೂಟಿ ಮಾಡಿದರು. ಹಳ್ಳಿಯ ಮಹಿಳೆಯರ ಮೇಲೆ ಅತ್ಯಾಚಾರವೂ ನಡೆಯಿತು.

ಸು.50 ಜನರ ಮೇಲೆ ಪಟೇಲ ಮತ್ತು ಶಾನುಭೋಗರನ್ನು ಹಿಂಸಿಸಿದರೆಂದೂ ಸರ್ಕಾರಿ ಕಡತಗಳನ್ನು ನಾಶಪಡಿಸಿದರೆಂದೂ ಮತ್ತು ಸರ್ಕಾರಿ ಅಧಿಕಾರಿಗಳನ್ನು ಹತ್ಯೆ ಮಾಡಿದರೆಂದೂ ಆರೋಪಪಟ್ಟಿ ದಾಖಲಿಸಲಾಯಿತು. ನ್ಯಾಯಾಧೀಶರು ಕೆಲವರಿಗೆ ಗಲ್ಲು ಶಿಕ್ಷೆಯನ್ನೂ, ಜೀವಾವಧಿ ಶಿಕ್ಷೆಯನ್ನೂ ವಿಧಿಸಲಾಯಿತು.ಈ ಸಂದರ್ಭದಲ್ಲಿ ಈಸೂರಿನ ಜತೆ ಮೆರೆದ ಎದೆಗಾರಿಕೆ, ದಿಟ್ಟತನ, ತ್ಯಾಗ, ಬಲಿದಾನಗಳು ಪ್ರಶಂಸನೀಯವಾದುದ್ದಾಗಿವೆ. ಈ ಬಗ್ಗೆ ಜಯಪ್ರಕಾಶ ನಾರಾಯಣ ಅವರು ಕರ್ನಾಟಕದ ಮಾದರಿಯನ್ನು ಭಾರತದ ಇತರ ಭಾಗಗಳ ಜನರು ಅನುಸರಿಸಿದ್ದರೆ ಇನ್ನೂ ಉತ್ತಮ ಪರಿಣಾಮಗಳನ್ನು ಗಳಿಸಬಹುದಿತ್ತು ಎಂದಿದ್ದಾರೆ. (ಎಮ್.ಎಸ್.)

**ಈಸ್ಟ್ ಇಂಡಿಯ ಕಂಪನಿ:** ಇಂಡಿಯ ಮತ್ತು ಇತರ ಪೌರ್ವಾತ್ಯ ರಾಷ್ಟ್ರಗಳೊಂದಿಗೆ ವ್ಯಾಪಾರ ಬೆಳೆಸುವ ಉದ್ದೇಶದಿಂದ ಸ್ಥಾಪಿತವಾದ ಇಂಗ್ಲೆಂಡಿನ ವರ್ತಕರ ಸಂಸ್ಥೆ. ಇಂಗ್ಲೆಂಡ್, ಹಾಲೆಂಡ್ (ಡಚ್), ಫ್ರಾನ್ಸ್, ಡೆನ್ಮಾರ್ಕ್, ಸ್ಕಾಟ್ಲೆಂಡ್, ಸ್ಪೇನ್, ಆಸ್ಟ್ರಿಯ, ಮತ್ತು ಸ್ವೀಡನ್ ದೇಶಗಳು 17–18ನೆಯ ಶತಮಾನಗಳಲ್ಲಿ ಈಸ್ಟ್ ಇಂಡಿಯ ಕಂಪನಿಗಳನ್ನು ರಚಿಸಿದುವಾದರೂ ಅವುಗಳ ಪೈಕಿ ಇಂಗ್ಲಿಷ್ ಕಂಪನಿಯೇ ಅತ್ಯಂತ ಪ್ರಮುಖವಾದದ್ದು. ಡಚ್ ಹಾಗೂ ಫ್ರೆಂಚ್ ಕಂಪನಿಗಳೂ ಸ್ವಲ್ಪಕಾಲ ಬಹಳ ಪ್ರಬಲವಾಗಿದ್ದವು.

ಪೋರ್ಚುಗೀಸ್ ನಾವಿಕನಾದ ವಾಸ್ಕೋಡಗಾಮ ಆಫ್ರಿಕದ ಗುಡ್‌ಹೋಪ್ ಭೂಶಿರವನ್ನು ಬಳಸಿ ಭಾರತಕ್ಕೆ ಬಂದು 1498ರ ಮೇ 20 ರಂದು ಕಲ್ಲಿಕೋಟೆಯಲ್ಲಿ ಇಳಿದಾಗಲೇ ಯುರೋಪಿಯನ್ನರ ಇಂಡಿಯದಲ್ಲಿನ ವ್ಯಾಪಾರದ ಆರಂಭವಾಯಿತು. ಪೋರ್ಚುಗೀಸರು ಗೋವವನ್ನು ಬಹಮನಿಸುಲ್ತಾನರಿಂದ ಗೆದ್ದುಕೊಂಡು ಅದನ್ನು ತಮ್ಮ ಆಡಳಿತ ಹಾಗು ವ್ಯಾಪಾರ ಕೇಂದ್ರವನ್ನಾಗಿ ಮಾಡಿಕೊಂಡು, ಪಶ್ಚಿಮ ಕರಾವಳಿಯಾದ್ಯಂತ ಮಾತ್ರವಲ್ಲದೆ ಮಲಕ್ಕಾ, ಆರ್ಮಜ್, ಸಿಲೋನ್ ಮೊದಲಾದ ಕಡೆಗಳಲ್ಲಿ ವ್ಯಾಪಾರ ಸಂಬಂಧವನ್ನು ವೃದ್ಧಿಸಿಕೊಂಡರು. ಮುಂದೆ ಡಚ್ಚರ ಪ್ರಾಮುಖ್ಯ ಹೆಚ್ಚಿತು. ಅವರ ನೌಕೆ ಪ್ರಥಮ ಬಾರಿಗೆ 1596ರಲ್ಲಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಬಂತು. ಅವರು 1602ರಲ್ಲಿ ಈಸ್ಟ್ ಇಂಡಿಯ ಕಂಪನಿ ಸ್ಥಾಪಿಸಿದರು.

ಪ್ರಥಮ ಸ್ಥಾಪಿತ ಕಂಪನಿಯೆಂದರೆ ಇಂಗ್ಲಿಷರದು. 1600ರ ಕೊನೆಯ ದಿನದಂದು ಎಲಿಜಬೆತ್ ರಾಣಿ ಲಂಡನ್ನಿನ ಈ ಕಂಪನಿಗೆ ಸನ್ನದು ನೀಡಿದಳು. ಅನಂತರ ಇನ್ನೆರಡು ಕಂಪನಿಗಳು ಹುಟ್ಟಿಕೊಂಡವು. ಮೊದಲ ಕಂಪನಿಯೊಂದಿಗೆ ಪೈಪೋಟಿ ನಡೆಸಿದ ಅವುಗಳು ಕೊನೆಗೆ ಅದರಲ್ಲಿ ವಿಲೀನ ಹೊಂದಿದವು. ಅದರೊಂದಿಗೆ ತೀವ್ರ ಸ್ಪರ್ಧೆ ಹೂಡಿದ ಇನ್ನೊಂದು ಕಂಪನಿ 1698 ರಿಂದ 1709 ವರೆಗೆ ಬಾಳಿ ಅದೂ ಮೊದಲನೆಯ ಕಂಪನಿಯಲ್ಲಿ ಸೇರಿಹೋಯಿತು.

1601ರಿಂದ 1618ರವರೆಗೆ ಈ ಕಂಪನಿ 12 ಬಿಡಿ ಯಾನ ಏರ್ಪಡಿಸಿತ್ತು. ಇವು ಬಹು ಯಶಸ್ವಿಯಾದವು. ಇದಕ್ಕೆಂದೇ ಹಣ ಹೂಡಿದ್ದ ಚಂದಾದಾರರಿಗೆ ಲಾಭದ ಕೊಳ್ಳೆ ಸಿಕ್ಕಿತು. ಈ ಯಾನಗಳು ಜಪಾನಿನವರೆಗೂ ಏರ್ಪಟ್ಟಿದ್ದವು. ಜಾವದ ಬಾಂಟಮಿನಲ್ಲೂ ಭಾರತದ ಸೂರತ್, ಮಚಲಿಪಟ್ಟಣ, ಪೆಟ್ಟಪೋಲಿಗಳಲ್ಲೂ (ಬಂಗಾಲ ಕೊಲ್ಲಿ) ಕೋಠಿಗಳು ಸ್ಥಾಪಿತವಾದವು. ಒಂದನೆಯ ಜೇಮ್ಸ್ ದೊರೆ ಈ ಕಂಪನಿಗೆ ಬಹಳ ಪ್ರೋತ್ಸಾಹ ನೀಡಿದ. ಹದಿನೈದು ವರ್ಷಗಳ ಅವಧಿಗೆ ನೀಡಿದ್ದ ಸನ್ನದಿಗೆ ಶಾಶ್ವತ ರಹದಾರಿ ಮಾಡಿದ.

ಭಾರತದೊಂದಿಗೆ ವ್ಯಾಪಾರೋದ್ದೇಶದಿಂದ ಹೊರಟ ಮೊದಲನೆಯ ಹಡಗು 1608ರಲ್ಲಿ ಭಾರತದ ಪಶ್ಚಿಮ ತೀರಪಟ್ಟಣವಾದ ಸೂರತ್ ತಲುಪಿತು. ವ್ಯಾಪಾರ ಸೌಲಭ್ಯಗಳನ್ನು ಸಂಪಾದಿಸಲು ಕೆಲವು ಪ್ರಮುಖರು ಮೊಗಲ್ ಚಕ್ರವರ್ತಿ ಜಹಾಂಗೀರನ ಆಸ್ಥಾನಕ್ಕೆ ಹೋದರು. ಭಾರತ ಮತ್ತು ಈಸ್ಟ್ ಇಂಡೀಸ್ ದ್ವೀಪಗಳೊಡನೆ ವ್ಯಾಪಾರ ಸಂಪರ್ಕ ಬೆಳೆಸಲು ಇಂಗ್ಲೀಷರಿಗೆ ಬಹಳ ಆಸೆಯಿದ್ದರೂ ಈ ಭೂಭಾಗದಲ್ಲಿ ಆಗಲೇ ವ್ಯಾಪಾರ ನಡೆಸುತ್ತಿದ್ದ ಡಚ್ಚರಿಗೆ ಇದು ಸರಿಬೀಳಲಿಲ್ಲ. ಈಸ್ಟ್ ಇಂಡೀಸಿನಲ್ಲಿ ವ್ಯಾಪಾರ ಸಂಪರ್ಕ ಬೆಳೆಸಲು ಬಂದ ಇಂಗ್ಲಿಷರಿಗೆ ಅವರಿಂದ ಪ್ರಬಲ ಪ್ರತಿಭಟನೆಯುಂಟಾಯಿತು. ಆಂಬಾಯ್ನ ದ್ವೀಪದಲ್ಲಿ ನೆಲಸಿದ್ದ ಇಂಗ್ಲಿಷರನ್ನು ಡಚ್ಚರು 1623ರಲ್ಲಿ ಕೊಲೆ ಮಾಡಿದರು. ಇದರ ಪರಿಣಾಮವಾಗಿ ಇಂಗ್ಲಿಷರು ಈಸ್ಟ್ ಇಂಡೀಸಿನೊಂದಿಗೆ ವ್ಯಾಪಾರ ಬೆಳೆಸುವುದನ್ನು ಬಿಟ್ಟು, ಭಾರತದೊಂದಿಗೆ ವ್ಯಾಪಾರವನ್ನಿಟ್ಟುಕೊಳ್ಳಬೇಕಾಯಿತು. ಇದರಿಂದಾಗಿ ಕೇವಲ ಸಾಂಬಾರ ಪದಾರ್ಥಗಳ ವ್ಯಾಪಾರಕ್ಕೆ ಹೆಚ್ಚು ಗಮನ ನೀಡಲಾಗಲಿಲ್ಲ. ನೀಲಿ, ಹತ್ತಿಯ ಬಟ್ಟೆ, ಬಂದೂಕದ ಮದ್ದಿಗೆ ಬೇಕಾಗುವ ಪೆಟ್ಲುಪ್ಪು, ಸಕ್ಕರೆ, ದಾರ ಇತ್ಯಾದಿ ವಸ್ತುಗಳ ವ್ಯಾಪಾರವೂ ಬೆಳೆಯಿತು. ಇಂಗ್ಲಿಷರು ವ್ಯಾಪಾರ ನಿಮಿತ್ತವಾಗಿ ಇಲ್ಲಿನ ಅಧಿಕಾರಿಗಳೊಂದಿಗೂ ವರ್ತಕರೊಂದಿಗೂ ಸಂಪರ್ಕ ಹೊಂದಿದರು. ಹದಿನೆಂಟನೆಯ ಶತಮಾನದಲ್ಲಿ ಸ್ಥಳೀಯ ರಾಜಕೀಯದಲ್ಲೂ ಕೈಹಾಕಿದರು. ಪೋರ್ಚುಗೀಸರಿಂದ ಇಂಗ್ಲಿಷರಿಗೆ ತೊಂದರೆಯುಂಟಾ ಯಿತು. ಸೂರತ್‌ನ ತೀರದಲ್ಲೂ ಪರ್ಷಿಯ ಕೊಲ್ಲಿಯಲ್ಲಿಯೂ ಇಂಗ್ಲಿಷರಿಗೂ ಪೋರ್ಚುಗೀಸರಿಗೂ ನಡೆದ ನೌಕಾಯುದ್ಧದಲ್ಲಿ ಇಂಗ್ಲಿಷರು ಗೆದ್ದರು. ಇದರಿಂದ ಪೋರ್ಚುಗೀಸರಿಗಿಂತ ಇಂಗ್ಲಿಷರು ನೌಕಾಬಲದಲ್ಲಿ ಪ್ರಬಲರೆಂಬ ವಿಚಾರ ಚಕ್ರವರ್ತಿ ಜಹಾಂಗೀರನಿಗೆ ಮನವರಿಕೆಯಾಯಿತು. ಆತ ವ್ಯಾಪಾರ ಸೌಲಭ್ಯಗಳನ್ನೂ ಒದಗಿಸಿದ. ಸೂರತ್ತನ್ನು ಮುಖ್ಯ ಕೋಠಿಯಾಗಿ ಇಟ್ಟುಕೊಂಡು ಅನಂತರ ಮಚಲೀಪಟ್ಟಣ ಮತ್ತು ಮದರಾಸಿನಲ್ಲಿ (1641) ಕಾರ್ಖಾನೆಗಳನ್ನೂ ಕೋಠಿಗಳನ್ನೂ ಅವರು ಸ್ಥಾಪಿಸಿದರು. ಬಂಗಾಲ ಪ್ರಾಂತದೊಂದಿಗೂ ವ್ಯಾಪಾರ ಪ್ರಾರಂಭಿಸಿದರು. 1691ರಲ್ಲಿ ಕೋಲ್ಕೊತ ಪಟ್ಟಣದ ನಿರ್ಮಾಣವಾಯಿತು. ಪೋರ್ಚುಗೀಸರ ಸ್ವಾಧೀನದಲ್ಲಿದ್ದ ಮುಂಬಯಿ ಇಂಗ್ಲೆಂಡಿನ ದೊರೆ ಎರಡನೆಯ ಚಾರ್ಲ್ಸ್‌ನ ರಾಣಿಗೆ ಬಳುವಳಿಯಾಗಿ ದೊರೆಯಿತು. ಮೊಗಲ್ ಚಕ್ರವರ್ತಿ ಔರಂಗಜೇಬನಿಗೂ ಇಂಗ್ಲಿಷರಿಗೂ ಕೆಲವು ವಿಷಯಗಳಲ್ಲಿ ವೈಮನಸ್ಯ ಉಂಟಾದರೂ ಅದರಿಂದಾಗಿ ಇಂಗ್ಲಿಷರ ವ್ಯಾಪಾರಕ್ಕೇನೂ ಚ್ಯುತಿ ಬರಲಿಲ್ಲ. ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ವ್ಯಾಪಾರ ಅಭಿವೃದ್ಧಿಯಾದದ್ದನ್ನು ಕಂಡು ಇತರ ಐರೋಪ್ಯ ದೇಶಗಳವರೂ ತಮ್ಮ ವ್ಯಾಪಾರೋದ್ಯಮಗಳನ್ನು ಇಂಡಿಯ ದೇಶದೊಂದಿಗೆ ಬೆಳೆಸಲು ಮನಸ್ಸು ಮಾಡಿದರು. ಮುಖ್ಯವಾಗಿ ಫ್ರೆಂಚರು ಈ ಕೆಲಸಕ್ಕೆ ಹೆಚ್ಚಾಗಿ ಕೈಹಾಕಿದರು. ಈ ಕಂಪನಿಯ ವಸಾಹತುಗಳು ಕೇವಲ ವ್ಯಾಪಾರದ ಕೋಠಿಗಳಾಗಿದ್ದವು. ಕಂಪನಿಯ ವರ್ತಕರು ತಮ್ಮ ಸಂಸ್ಥೆಯ ವ್ಯಾಪಾರದೊಂದಿಗೆ ವೈಯಕ್ತಿಕವಾಗಿಯೂ ವ್ಯಾಪಾರ ನಡೆಸುತ್ತಿದ್ದರು. ಇಂಗ್ಲೆಂಡಿನಲ್ಲೇ 1691ರಲ್ಲಿ ಈ ಕಂಪನಿಯ ಪ್ರತಿಸ್ಪರ್ಧಿಗಳು ಒಂದು ಹೊಸ ಸಂಘ ಸ್ಥಾಪಿಸಿಕೊಂಡು ಅದಕ್ಕೆ ಸನ್ನದು ಪಡೆದರು. ಈ ಸ್ಪರ್ಧೆ ಕೆಲವರ್ಷ ಸಾಗಿದ ಮೇಲೆ ಇವೆರಡನ್ನೂ ಕೂಡಿಸಿ ಒಂದೇ ಕಂಪನಿಯ ರಚನೆಯಾಯಿತು.

ಕಾಲಕ್ರಮೇಣ ಕಂಪನಿಯ ಸರಕುಗಳನ್ನೂ ವ್ಯಾಪಾರವನ್ನೂ ಸುಭದ್ರವಾಗಿಡಲು ವಸಾಹತುಗಳ ಸುತ್ತಲೂ ಕೋಟೆ ಕೊತ್ತಲಗಳನ್ನು ಕಟ್ಟಬೇಕಾಯಿತು. ಈ ಕಾರಣದಿಂದ ಪಶ್ಚಿಮ ತೀರದಲ್ಲಿದ್ದ ಕೋಠಿಯನ್ನು ಸೂರತ್ತಿನಿಂದ ಮುಂಬಯಿಗೆ ವರ್ಗಾಯಿಸಲಾಯಿತು. ಕೋಲ್ಕೊತದ ಕಾರ್ಖಾನೆ ಮತ್ತು ಕೋಠಿಗಳನ್ನು ಪೋರ್ಟ್ ವಿಲಿಯಂ ಕೋಟೆಯಲ್ಲಿ ಸ್ಥಾಪಿಸಲಾಯಿತು. ಚೆನ್ನೈನ ಕೋಟೆಗೆ ಪೋರ್ಟ್‌ಸೆಂಟ್ ಜಾರ್ಜ್ ಎಂದೂ ಕಡಲೂರಿನ ಬಳಿ ಇದ್ದ ಕೋಟೆಗೆ ಪೋರ್ಟ್‌ಸೆಂಟ್ ಡೇವಿಡ್ ಎಂದೂ ಹೆಸರಾಯಿತು. ವ್ಯಾಪಾರ ಬೆಳೆದ ಹಾಗೆ ಭಾರತದ ಪಟ್ಟಣಗಳು ವೃದ್ಧಿಯಾದವು. ಯುರೋಪಿನಲ್ಲಿ ಇಂಗ್ಲೆಂಡ್ ಫ್ರಾನ್ಸ್‌ಗಳಿಗೆ ವೈಮನಸ್ಯ ಉಂಟಾದಾಗಲೆಲ್ಲ ಭಾರತದಲ್ಲೂ ಇಂಗ್ಲಿಷ್ ಫ್ರೆಂಚ್ ಕಂಪನಿಗಳಿಗೆ ಘರ್ಷಣೆಯುಂಟಾಗುತ್ತಿತ್ತು. 1746ರಲ್ಲಿ ಫ್ರೆಂಚ್ ನೌಕಾಪಡೆ ಮದರಾಸನ್ನು ಆಕ್ರಮಿಸಿತು. ಎರಡು ವರ್ಷಗಳ ಅನಂತರ ಬ್ರಿಟಿಷ್ ನೌಕಾಪಡೆ ಫ್ರೆಂಚ್ ಈಸ್ಟ್ ಇಂಡಿಯ ಕಂಪನಿಯ ಮುಖ್ಯ ಠಾಣ್ಯವಾದ ಪುದುಚೇರಿಯನ್ನು ಮುತ್ತಿತು. ಯುರೋಪಿನಲ್ಲಿ ಎರಡು ದೇಶಗಳಿಗೂ ಶಾಂತಿಯುಂಟಾದ ಮೇಲೆ ಮದರಾಸು ಇಂಗ್ಲಿಷರ ವಶಕ್ಕೆ ಬಂತು. ಮುಂದೆ ಫ್ರೆಂಚ್ ಈಸ್ಟ್ ಇಂಡಿಯ ಕಂಪನಿಯ ಅಧಿಪತಿಯಾದ ಡೂಪ್ಲೆ ಪ್ರಬಲನಾದ. ಒಂದು ಸ್ಥಳೀಯ

ರಾಜ್ಯದೊಡನೆ ಆತ ಸ್ನೇಹ ಬೆಳೆಸಿ ಇಂಗ್ಲಿಷರನ್ನು ಭಾರತದಿಂದ ಓಡಿಸಬೇಕೆಂದು ಹವಣಿಸುತ್ತಿದ್ದ. ಕರ್ನಾಟಕದ ನವಾಬರಿಗೆ ಇಂಗ್ಲಿಷರೂ ಫ್ರೆಂಚರೂ ತಮ್ಮ ತಮ್ಮ ಅನುಯಾಯಿ ಗಳನ್ನು ನೇಮಿಸಲು ಹವಣಿಸುತ್ತಿದ್ದರು. ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯನ್ನು ಹಾಳುಮಾಡುವ ಉದ್ದೇಶದಿಂದ ಡೂಪ್ಲೆ ಹೈದರಾಬಾದಿನ ನಿಜಾಮನಿಗೆ ಬೆಂಬಲವಾಗಿ ನಿಂತ. ಅಲ್ಲಿ ತನ್ನ ಕಡೆಯ ಅಧಿಕಾರಿಯನ್ನು ನೇಮಿಸಿ ನಿಜಾಮನ ಪದವಿಗೆ ನೆರವಾದ. ಆದರೆ ಈ ಉದ್ಯಮಗಳೆಲ್ಲ ಕೇವಲ ರಾಜಕೀಯವಾದದ್ದರಿಂದ ಅವನ್ನು ನಡೆಸಿ ಕೊಂಡು ಬರಲು ಬಹಳ ಹಣ ಬೇಕಾಯಿತು. ಆರ್ಥಿಕದೃಷ್ಟಿಯಿಂದ ಯಾವ ಪ್ರಯೋಜನವೂ ಇಲ್ಲದೆ ಕೊನೆಯಲ್ಲಿ ಈ ಪ್ರಯತ್ನಗಳೆಲ್ಲ ವ್ಯರ್ಥವಾದವು. ಡೂಪ್ಲೆಯ ಪ್ರಯತ್ನಗಳನ್ನೆಲ್ಲ ನಿಷ್ಫಲಗೊಳಿಸಿದ ಇಂಗ್ಲಿಷ್ ಅಧಿಕಾರಿ ರಾಬರ್ಟ್ ಕ್ಲೈವ್ ತನ್ನ ರಾಜತಂತ್ರದಿಂದ ಕರ್ನಾಟಕದ ನವಾಬನನ್ನು ತನ್ನ ಕಡೆಗೆ ಒಲಿಸಿಕೊಂಡ. ಕೊನೆಯದಾಗಿ ಇಂಗ್ಲಿಷರು ಪುದುಚೇರಿಯನ್ನೂ ವಶಪಡಿಸಿಕೊಂಡು, ಫ್ರೆಂಚರು ಭಾರತದಲ್ಲಿ ಚಕ್ರಾಧಿಪತ್ಯ ನಿರ್ಮಿಸಬೇಕೆಂದಿದ್ದ ಆಸೆಯನ್ನು ಭಗ್ನಗೊಳಿಸಿದರು.

ದಕ್ಷಿಣ ಭಾರತದಲ್ಲಿ ನಡೆದ ಈ ಇಂಗ್ಲಿಷ್–ಫ್ರೆಂಚ್ ಘರ್ಷಣೆಗಳಿಂದ ಮುಂದೆ ಇಂಗ್ಲಿಷರು ಬಂಗಾಲ ಪ್ರಾಂತದ ರಾಜಕೀಯ ವ್ಯವಹಾರದಲ್ಲಿ ಕೈಹಾಕಲು ಬಹಳ ಅನುಕೂಲವಾಯಿತು. ಚೆನ್ನೈನಲ್ಲಿ ದೊರೆತ ಅನುಭವದಿಂದ ಇಂಗ್ಲಿಷರಿಗೆ ಬಂಗಾಲದಲ್ಲಿ ಇದೇ ರೀತಿಯ ಕಾರ್ಯಾಚರಣೆ ನಡೆಸಲು ಸಹಾಯವಾಯಿತು. ಬಂಗಾಲ ಮದರಾಸಿಗಿಂತ ಫಲವತ್ತಾದ ಪ್ರದೇಶವಾಗಿದ್ದು ನೀರಾವರಿ, ಸಂಚಾರ ಮತ್ತು ವ್ಯಾಪಾರಕ್ಕೆ ಅನುಕೂಲ ಇದ್ದದ್ದರಿಂದ, ಕ್ಲೈವನಿಗೆ ಕಂಪನಿಯ ಪರವಾಗಿ ಹೇರಳ ಲಾಭ ಸಂಪಾದಿಸಲು ಸಾಧ್ಯವಾಯಿತು. ಈಸ್ಟ್ ಇಂಡಿಯ ಕಂಪನಿಗೆ ಬಂಗಾಲದಲ್ಲಿ ವ್ಯಾಪಾರಕ್ಕೆ ಯಾವ ವಿಧವಾದ ಅಡಚಣೆಯೂ ಇರಲಿಲ್ಲ. ಸ್ಥಳೀಯ ಸರ್ಕಾರಕ್ಕೆ ವರ್ಷಕ್ಕೆ ಒಂದು ಸಲ ಸ್ವಲ್ಪ ಹಣ ಮಾತ್ರ ಕೊಡುತ್ತಿದ್ದರು. ಸಿರಾಜುದ್ದೌಲ ಬಂಗಾಳದ ನವಾಬನಾದ ಮೇಲೆ ಇಂಗ್ಲಿಷರ ವ್ಯಾಪಾರಕ್ಕೆ ಅಡ್ಡಿಯಾಯಿತು. ತನ್ನ ಅಪ್ಪಣೆಯಿಲ್ಲದೆ ಇಂಗ್ಲಿಷರು ತಮ್ಮ ಕೋಠಿಗಳ ಸುತ್ತಲೂ ಕೊತ್ತಲ ನಿರ್ಮಿಸಕೂಡದೆಂದು ಆತ ಆಜ್ಞಾಪಿಸಿದ. ಈ ಆಜ್ಞೆಯನ್ನು ಪಾಲಿಸದ ಇಂಗ್ಲಿಷರ ವಸಾಹತುವಾದ ಕೋಲ್ಕೊತವನ್ನು ನವಾಬ ವಶಪಡಿಸಿಕೊಂಡ. ಇದೇ ಸಮಯದಲ್ಲಿ ನವಾಬನ ಸೈನ್ಯಕ್ಕೂ ಬ್ರಿಟಿಷರಿಗೂ ಪ್ಲಾಸಿ ಎಂಬಲ್ಲಿ ಯುದ್ಧ ನಡೆದು ಸಿರಾಜುದ್ದೌಲ ಕೊಲ್ಲಲ್ಪಟ್ಟ. ಹಿಂದೆಯೇ ಒಪ್ಪಂದಕ್ಕೆ ಬಂದ ಹಾಗೆ ನವಾಬನ ಸೇನಾಧಿಪತಿಯಾಗಿದ್ದ ಮೀರ್ ಜಾಫರನನ್ನು ಇಂಗ್ಲಿಷರು ನವಾಬಗಿರಿಗೆ ಏರಿಸಿದರು. ಈಸ್ಟ್ ಇಂಡಿಯ ಕಂಪನಿ ಮತ್ತು ಅದರ ನೌಕರರಿಗೆ ಹೊಸ ನವಾಬ ಬಹಳ ರಿಯಾಯಿತಿಗಳನ್ನೂ ಹಣವನ್ನೂ ಕೊಟ್ಟ. ಮೀರ್ ಜಾಫರ್ ಇಂಗ್ಲಿಷರ ಕೈಗೊಂಬೆಯಾಗಿದ್ದುದರಿಂದ ಕಂಪನಿಯ ನೌಕರರ ವೈಯಕ್ತಿಕ ವ್ಯಾಪಾರ ವೃದ್ಧಿಯಾಗಿ ಲಂಚಕೋರತನ ತಾಂಡವವಾಡಿತು. ಕೊನೆಗೆ ನವಾಬ ಆಡಳಿತಕ್ಕೆ ಅರ್ಹನಲ್ಲವೆಂದು ಮೀರ್ ಖಾಸಿಂ ಎಂಬುವವನನ್ನು ನವಾಬನನ್ನಾಗಿ ನಿಯಮಿಸಿದರು. ಹೊಸ ನವಾಬ ವ್ಯಾಪಾರ ತೆರಿಗೆಯ ವಿಚಾರದಲ್ಲಿ ಇಂಗ್ಲಿಷರಿಗೆ ನೀಡಿದ್ದ ವಿನಾಯಿತಿಯನ್ನು ಇತರ ವರ್ತಕರಿಗೂ ಅನ್ವಯಿಸಿದ. ಈತನ ವರ್ತನೆ ಇಂಗ್ಲಿಷರಿಗೆ ಸರಿಬೀಳಲಿಲ್ಲ. ಅವರು ಬಕ್ಸಾರ್ ಯುದ್ಧದಲ್ಲಿ ಇವನನ್ನು ಸೋಲಿಸಿ, ಮೀರ್ ಜಾಫರನನ್ನು ಪುನಃ ನವಾಬಗಿರಿಗೆ ಏರಿಸಿದರು. ಆಗ ಇಂಗ್ಲಿಷರು ಬಂಗಾಲದ ನಿಜವಾದ ಅಧಿಕಾರಿಗಳಾದರು. ಕಂದಾಯ ಮತ್ತು ತೆರಿಗೆ ವಸೂಲು ಮಾಡುವ ಅಧಿಕಾರವನ್ನು ಇಂಗ್ಲಿಷರೇ ಇಟ್ಟುಕೊಂಡು ರಾಜ್ಯರಕ್ಷಣೆ ಮತ್ತು ನ್ಯಾಯಪರಿಪಾಲನೆಯ ಕಾರ್ಯವನ್ನು ನವಾಬನಿಗೆ ವಹಿಸಿಕೊಟ್ಟರು. ಈ ಏರ್ಪಾಡಿಗೆ ಬಂಗಾಲದ ದ್ವಿಮುಖ ಸರ್ಕಾರವೆಂದು ಹೆಸರಾಯಿತು. ಕ್ಲೈವನ ಕಾರ್ಯಕ್ರಮಗಳಿಂದ ಕಂಪನಿಯ ಆಡಳಿತಕ್ಕೆ ಒಂದು ನ್ಯಾಯಬದ್ಧವಾದ ರೂಪ ಬಂತು. ಮುಂದೆ ಇಂಗ್ಲಿಷ್ ಗೌರ್ನರ್–ಜನ್‌ರಲ್ ವಾರನ್ ಹೇಸ್ಟಿಂಗ್ಸನ ಅಧಿಕಾರಾವಧಿಯಲ್ಲಿ ಭೂಕಂದಾಯ ಮತ್ತು ತೆರಿಗೆಗಳನ್ನು ಕಂಪನಿಯ ಅಧಿಕಾರಿಗಳೇ ವಸೂಲಿ ಮಾಡುತ್ತಿದ್ದರು. ಮೊಗಲ್ ಚಕ್ರವರ್ತಿಗೆ ಕೊಡುತ್ತಿದ್ದ ಕಪ್ಪದ ಹಣವೂ ನಿಂತುಹೋಯಿತು.

ಕಂಪನಿ ರಾಜ್ಯಾಡಳಿತ ವಹಿಸಿಕೊಂಡ ಮೇಲೆ ಹಣದ ಅಭಾವದಿಂದ ಸಾಲ ಮಾಡಬೇಕಾಯಿತು. ಈ ಸಾಲ ತೀರಿಸಲು ಇಂಗ್ಲೆಂಡಿನ ಸರ್ಕಾರಕ್ಕೆ ಸಹಾಯಕ್ಕಾಗಿ ಮನವಿ ಮಾಡಿಕೊಳ್ಳಬೇಕಾಯಿತು. ಈ ಸಂದರ್ಭದಲ್ಲಿ ಆ ಸರ್ಕಾರ ಕಂಪನಿಯ ಆಡಳಿತ ಸೂತ್ರಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳುವ ಉದ್ದೇಶದಿಂದ ರೆಗ್ಯುಲೇಟಿಂಗ್ ಆಕ್ಟ್ ಎಂಬ ಅಧಿನಿಯಮವನ್ನು ಜಾರಿಗೆ ತಂದಿತು (1773). ಕಂಪನಿಯ ಎಲ್ಲ ಅಧಿಪತ್ಯಗಳ ಮೇಲೂ ಮೇಲ್ವಿಚಾರಣೆಯ ಅಧಿಕಾರವುಳ್ಳ ಗೌರ್ನರ್ ಜನ್‌ರಲ್ ಎಂಬ ಅಧಿಕಾರಿಯನ್ನು ಕೋಲ್ಕೊತದಲ್ಲಿ ನೇಮಿಸಲಾಯಿತು. ಈ ಅಧಿಕಾರಿಯ ಸಹಾಯಕ್ಕಾಗಿ ನಾಲ್ಕು ಸದಸ್ಯರನ್ನುಳ್ಳ ಒಂದು ಸಮಿತಿಯೂ ಏರ್ಪಾಡಾಯಿತು. ಕೋಲ್ಕೊತದಲ್ಲಿ ಒಂದು ಪರಮಾಧಿಕಾರವುಳ್ಳ ನ್ಯಾಯಸ್ಥಾನ ರೂಪಗೊಂಡಿತು. ಈ ಏರ್ಪಾಡುಗಳಿಂದ ಕಂಪನಿಯ ಆಡಳಿತ ಬ್ರಿಟಿಷ್ ಪಾರ್ಲಿಮೆಂಟಿನ ಹತೋಟಿಗೆ ಒಳಪಟ್ಟಂತಾಯಿತು. ಆದರೆ ಗೌರ್ನರ್–ಜನ್‌ರಲ್‌ನಿಗೆ ಇತರ ಆಧಿಪತ್ಯಗಳ ಆಡಳಿತದ ಮೇಲೆ ತನ್ನ ಅಧಿಕಾರವನ್ನು ಒತ್ತಾಯಪಡಿಸುವ ಅನುಕೂಲತೆಗಳಿಲ್ಲದುದರಿಂದ, ಮದರಾಸು ಮತ್ತು ಬೊಂಬಾಯಿಯಲ್ಲಿದ್ದ ಕಂಪನಿಯ ಆಧಿಪತ್ಯಗಳು ಸ್ವತಂತ್ರವಾಗಿ ವ್ಯವಹಾರಗಳಲ್ಲಿ ತೊಡಗಲು ಸಾಧ್ಯವಾಯಿತು. ಗೌರ್ನರ್–ಜನರಲ್‌ನ ಸಹಾಯ ಸಮಿತಿಯ ಸದಸ್ಯರುಗಳು ಕೂಡ ಐಕಮತ್ಯದಿಂದ ಕೆಲಸ ನಿರ್ವಹಿಸದೆ ಇದ್ದುದರಿಂದ ಅನೇಕ ಬಾರಿ ರಾಜಕೀಯ ವ್ಯವಹಾರದಲ್ಲಿ ಕಾರ್ಯನಿರ್ವಾಹಕರಿಗೆ ತೊಂದರೆಯಾಯಿತು. ಆದ್ದರಿಂದ ರೆಗ್ಯುಲೇಟಿಂಗ್ ಆಕ್ಟ್‌ನಲ್ಲಿದ್ದ ಲೋಪದೋಷಗಳನ್ನು ಸರಿಪಡಿಸುವುದಕ್ಕಾಗಿ ಪಿಟ್ಸ್ ಇಂಡಿಯ ಆಕ್ಟ್ ಎಂಬ ಅಧಿನಿಯಮವನ್ನು ಇಂಗ್ಲೆಂಡಿನ ಪಾರ್ಲಿಮೆಂಟ್ ಅನುಮೋದಿಸಿತು. 1857ರವರೆಗೂ ಇದಕ್ಕೆ ಅನುಸಾರವಾಗಿಯೆ ಭಾರತದ ಆಡಳಿತ ನಡೆಯುತ್ತಿದ್ದು ಬ್ರಿಟಿಷ್ ಮಂತ್ರಿಮಂಡಲದ ಒಬ್ಬ ಸದಸ್ಯನನ್ನು ಅಧ್ಯಕ್ಷನಾಗಿ ಉಳ್ಳ ಬೋರ್ಡ್ ಆಫ್ ಕಂಟ್ರೋಲ್ ಎಂಬ ಆಲೋಚನಾ ಸಭೆಯ ನೇಮಕವಾಯಿತು. ಕಂಪನಿಯ ಎಲ್ಲ ಬಗೆಯ ರಾಜಕೀಯ ವ್ಯವಹಾರಗಳು, ಕಾಯಿದೆಗಳು ಮತ್ತು ಆಜ್ಞೆಗಳ ವಿಮರ್ಶೆಯ ತಿದ್ದುಪಡಿ ಮುಂತಾದ ಅಧಿಕಾರಗಳೆಲ್ಲ ಈ ಸಭೆಗೆ ಸಂಬಂಧಪಟ್ಟಿತ್ತು. ಕಂಪನಿಯ ಸರ್ಕಾರದ ನೀತಿಯ ವಿಚಾರದಲ್ಲಿ ಪರಮಾಧಿಕಾರಿ ಸಮಿತಿಯೆಂದೆನಿಸಿತು. ಗೌರ್ನರ್–ಜನ್‌ರಲ್ಲನ ಅಧಿಕಾರವನ್ನು ವಿಸ್ತರಿಸಲಾಯಿತು. 19ನೆಯ ಶತಮಾನದ ವೇಳೆಗೆ ಈಸ್ಟ್ ಇಂಡಿಯ ಕಂಪನಿಯಿಂದ ಭಾರತದಲ್ಲಿ ಚಕ್ರಾಧಿಪತ್ಯ ನಿರ್ಮಾಣ ಕಾರ್ಯ ಪೂರೈಸುವುದರಲ್ಲಿತ್ತು. ದೇಶೀಯ ರಾಜರೂ ಇದರ ಅಧೀನಕ್ಕೊಳಪಟ್ಟಿದ್ದರು. ಕಂಪನಿಯ ಇಂಡಿಯ ರಾಜ್ಯಾಂಗ ಲಂಡನ್ನಿನ ಬ್ರಿಟಿಷ್ ಸರ್ಕಾರಕ್ಕೆ ಅಧೀನವಾಯಿತು. ಭಾರತದ ಆಡಳಿತ ಏಕರೀತಿಯಾಗಬೇಕೆಂಬುದು ಗೌರ್ನರ್–ಜನ್‌ರಲ್ ಲಾರ್ಡ್ ಡಾಲ್‌ಹೌಸಿಯ ಇಚ್ಛೆಯಾಗಿತ್ತು. ಆಶ್ರಿತ ಸಂಸ್ಥಾನಗಳ ರಾಜರಿಗೆ ಸ್ವಂತ ಸಂತತಿ ಇಲ್ಲದಾಗ ಅಥವಾ ರಾಜ್ಯಗಳಲ್ಲಿ ಆಡಳಿತ ಕೆಟ್ಟುಹೋದಾಗ ಅಂಥ ರಾಜ್ಯಗಳನ್ನು ಕಂಪನಿಯ ನೇರ ಆಳಿಕೆಗೆ ಸೇರಿಸುವ ನೀತಿಯನ್ನು ಈತ ಅನುಸರಿಸಿದ. ಮುಂದೆ ಸಂಭವಿಸಿದ 1857ರ ಸ್ವಾತಂತ್ರ್ಯ ಸಂಗ್ರಾಮಕ್ಕೆ ಈ ನೀತಿಯೂ ಒಂದು ಕಾರಣವಾಯಿತು. ಭಾರತ ದೇಶದ ಪುರಾತನ ಸಂಪ್ರದಾಯಗಳಿಗೂ ಆಧುನಿಕ ತತ್ತ್ವಗಳಿಗೂ ಘರ್ಷಣೆಯುಂಟಾಗಿ ನವಯುಗದ ಪ್ರಾರಂಭವಾಯಿತು. ಬ್ರಿಟಿಷ್ ಚಕ್ರವರ್ತಿನಿ ವಿಕ್ಟೋರಿಯ ರಾಣಿಯ ಪ್ರಭುತ್ವದ ಆಜ್ಞೆಯ ಪ್ರಕಾರ, ಭಾರತ ದೇಶದ ಆಡಳಿತ ಈಸ್ಟ್ ಇಂಡಿಯ ಕಂಪನಿಯ ಕೈತಪ್ಪಿ ಬ್ರಿಟಿಷ್ ಸಾರ್ವಭೌಮರ ಅಧಿಕಾರಕ್ಕೆ ಸೇರಿತು (1858). ಅದುವರೆಗೆ ಕಂಪನಿಯ ನೌಕರರಾಗಿದ್ದವರನೇಕರು ಬ್ರಿಟಿಷ್ ಚಕ್ರವರ್ತಿಯ ಅಧಿಕಾರದಲ್ಲಿ ಮುಂದುವರಿದರು. ಭಾರತದ ವ್ಯವಹಾರಗಳನ್ನು ನಿರ್ವಹಿಸಲು ಲಂಡನ್ನಿನಲ್ಲಿ ಇಂಡಿಯ ಕಾರ್ಯದರ್ಶಿ (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ) ಎಂಬ ಹುದ್ದೆಯ ನಿರ್ಮಾಣವಾಯಿತು. (ಕೆ.ಎಸ್.ಐ.)

ಕರ್ನಾಟಕದ ಕರಾವಳಿಯ ಇತಿಹಾಸವನ್ನು ರೂಪಿಸುವುದರಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಅಂಶಗಳು ಮಹತ್ತರ ಪಾತ್ರ ವಹಿಸಿವೆ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಿಂದಲೂ ಪಶ್ಚಿಮ ಕಡಲತೀರಗಳ ಮತ್ತು ಪಾಶ್ಚಿಮಾತ್ಯ, ಪೌರ್ವಾತ್ಯ ದೇಶಗಳ ನಡುವೆ ವ್ಯಾಪಾರ ಸಂಬಂಧಗಳಿದ್ದ ಬಗ್ಗೆ ಸಾಹಿತ್ಯಕ ಮತ್ತು ನಾಣ್ಯಾಧಾರಗಳಿವೆ. ಗ್ರೀಕ್ ಮತ್ತು ರೋಮನ್ ದಾಖಲೆಗಳಲ್ಲಿ ಕರಾವಳಿ ಹಾಗೂ ಗ್ರೀಸ್, ರೋಮ್, ಈಜಿಪ್ಟ್ ನಡುವೆ ವ್ಯಾಪಾರ ಸಂಪರ್ಕವಿದ್ದುದರ ಪ್ರಸ್ತಾಪವಿದೆ. 4 ಮತ್ತು 5ನೆಯ ಶತಮಾನಗಳಲ್ಲೂ ಕರಾವಳಿ ಪ್ರದೇಶ ಮತ್ತು ಅರೇಬಿಯಾ ನಡುವೆ ವ್ಯಾಪಾರ ಸಂಪರ್ಕವಿತ್ತು. ಪರ್ಷಿಯ ಮತ್ತು ಸಿಂಹಳದ ಜತೆಗಿದ್ದ ವ್ಯಾಪಾರದಲ್ಲಿ, ಪ್ರಮುಖವಾಗಿ ಕುದುರೆ ವ್ಯಾಪಾರದಲ್ಲಿ 9ನೆಯ ಶತಮಾನದ ಸಿಂದ್‌ಬಾದ್ ದ ಸೈಲರ್ ಮತ್ತು ವಾಯೇಜ್ ಆಫ್ ಟು ಮೊಹಮಡನ್ಸ್‌ಗಳಲ್ಲಿ ಮಲಬಾರ್ ಕರಾವಳಿಯ ಉಲ್ಲೇಖವಿದೆ. 14–17ನೆಯ ಶತಮಾನದವರೆಗಿನ ಕರ್ನಾಟಕದ ಕರಾವಳಿಯಲ್ಲಿಯ ಐರೋಪ್ಯ ವ್ಯಾಪಾರ ಚಟುವಟಿಕೆಗಳ ಕುರಿತು ಇಬ್ನ್‌ಬತೂತ, ಬರ್ಬೋಸ, ವರ್ಥೇಮಾ, ಸೀಝರ್ ಫ್ರೆಡ್ರಿಕ್ ಮತ್ತು ಪಿಯತ್ರೊ ಡೆಲ್ಲ ವಲ್ಲೆ ಮೊದಲಾದ ವಿದೇಶಿ ಯಾತ್ರಿಕರ ಬರೆವಣಿಗೆಗಳಲ್ಲಿ ವಿಪುಲ ಮಾಹಿತಿ ದೊರೆಯುತ್ತದೆ. 15ನೆಯ ಶತಮಾನದ ಅಂತ್ಯದಲ್ಲಿ ಕಾರವಾರ ಸಮೀಪದ ಅಂಜದೀವ ದ್ವೀಪಕ್ಕೆ ಪೋರ್ಚುಗೀಸರ ಆಗಮನದೊಂದಿಗೆ ಇಲ್ಲಿಯ ಕಡಲತೀರದ ಪ್ರದೇಶದಲ್ಲಿ ಐರೋಪ್ಯ ವ್ಯಾಪಾರ ಚಟುವಟಿಕೆಗಳು ಬಿರುಸುಗೊಂಡವು. ವಿಜಯನಗರದ ಅರಸರ ಅನುಮತಿ ಪಡೆದು ಇಲ್ಲಿ ವ್ಯಾಪಾರ ಆರಂಭಿಸಿದ ಪೋರ್ಚುಗೀಸರು ಅರಸರ ಜತೆ ಒಪ್ಪಂದಗಳನ್ನು ಮಾಡಿಕೊಂಡು, ತಮಗೆ ಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳುತ್ತಿದ್ದರಲ್ಲದೆ, ಕರಾವಳಿ ಕಲ್ಲಿಕೋಟೆಯ ಮಾಪಿಳ್ಳೆ ಮತ್ತು ಅರಬ್ ವ್ಯಾಪಾರಿಗಳ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸುತ್ತಿದ್ದರು. ಸ್ಥಳೀಯ ಸಂಪತ್ತಾಗಿದ್ದ ಅಕ್ಕಿ ಮತ್ತು ಕಾಳುಮೆಣಸಿನ ವ್ಯಾಪಾರದ ಏಕಸ್ವಾಮ್ಯಕ್ಕಾಗಿ ಅವರು ನಡೆಸಿದ ಹುನ್ನಾರಗಳು ಇಲ್ಲಿಯ ರಾಜಕೀಯ ಇತಿಹಾಸಕ್ಕೆ ಹೊಸ ತಿರುವು ನೀಡಿತು. ಸ್ಥಳೀಯ ಅರಸರ ಜತೆಗಿನ ವ್ಯಾಪಾರದ ಒಪ್ಪಂದಗಳನ್ನು ಪೋರ್ಚುಗೀಸರು ಬಲ ಪ್ರಯೋಗದ ಮೂಲಕ ಅನುಷ್ಠಾನಿಸಹೊರಟಾಗೆಲ್ಲ ಇಲ್ಲಿ ಸಂಘರ್ಷಗಳು ಘಟಿಸಿದವು. ಉದಾ: ಪೋರ್ಚುಗೀಸರ ಉದ್ಧಟತನದ ವಿರುದ್ಧ ಸೆಟೆದುನಿಂತ ಉಳ್ಳಾಲದ ರಾಣಿ ಅಬ್ಬಕ್ಕಳ ಸಾಹಸಗಾಥೆ (1567–68) ಇತಿಹಾಸದಲ್ಲಿ ಮರೆಯಲಾಗದ ಅಧ್ಯಾಯ.

**ಪೋರ್ಚುಗೀಸರು:** ವಿಜಯನಗರ ಹಾಗೂ ಕೆಳದಿಯ ಅರಸರ ಕಾಲದಲ್ಲಿ ಪೋರ್ಚುಗೀಸರ ಅಕ್ಕಿ ವ್ಯಾಪಾರ ಪ್ರಧಾನವಾಗಿತ್ತು. ಕಾರವಾರ, ಅಂಕೋಲಾ, ಮಿರ್ಜಾನ್, ಹೊನ್ನಾವರ, ಭಟ್ಕಳ, ಬೈಂದೂರು, ಬಸ್ರೂರು, ಬಾರ್ಕೂರು, ಮೂಲ್ಕಿ, ಮಂಗಳೂರು ಮತ್ತು ಕುಂಬಳೆಗಳು ಆ ಕಾಲದ ಪ್ರಮುಖ ಬಂದರುಗಳಾಗಿದ್ದವು. ಭಟ್ಕಳ, ಬಸ್ರೂರು ಮತ್ತು ಬಾರಕೂರು ಬಂದರುಗಳಿಂದ ಶ್ರೇಷ್ಠ ಮಟ್ಟದ ಬಿಳಿಅಕ್ಕಿ, ತೆಂಗಿನಕಾಯಿ, ಕಾಳುಮೆಣಸು ಮತ್ತು ಮಂಗಳೂರು ಹಾಗೂ ಕುಂಬಳೆ ಬಂದರುಗಳಿಂದ ಕೆಂಪು ಮತ್ತು ನುಚ್ಚಕ್ಕಿಯನ್ನು (ಬ್ರೋಕನ್ ರೈಸ್) ಮಲಬಾರ್, ಕೊಂಕಣ, ಗೋವ, ಪರ್ಷಿಯನ್ ಕೊಲ್ಲಿ ಮತ್ತು ಕೆಂಪು ಸಮುದ್ರದ ಬಂದರುಗಳ

ಮೂಲಕ ಸಿಂಹಳ, ಮೊಜಾಂಬಿಕ್ ಮತ್ತು ಮಲಕ್ಕಾಗಳಿಗೆ ರಫ್ತುಮಾಡಲಾಗುತ್ತಿತ್ತು. ಭಟ್ಕಳ, ಗೇರುಸೊಪ್ಪೆ, ಹೊನ್ನಾವರ, ಬಸರೂರು, ಉಳ್ಳಾಲಗಳ ಅರಸರುಗಳ ಜತೆ ಒಪ್ಪಂದ ಮಾಡಿಕೊಂಡ ಪೋರ್ಚುಗೀಸರು ವಾರ್ಷಿಕ ಅಕ್ಕಿ ಹಾಗೂ ಕಾಳುಮೆಣಸಿನ ಪೂರೈಕೆಯನ್ನು ನಿಗದಿಪಡಿಸುತ್ತಿದ್ದರು. ಆದರೆ ಶಿವಪ್ಪ ನಾಯಕ, ವೆಂಕಟಪ್ಪ ನಾಯಕರೇ ಮೊದಲಾದ ಕೆಳದಿಯ ಪ್ರಬಲ ನಾಯಕರು ಇಂಥ ಒಪ್ಪಂದಗಳಿಗೆ ಸಹಿ ಹಾಕುತ್ತಿರಲಿಲ್ಲ. ಕಾಳುಮೆಣಸಿನ ಕಾರಣದಿಂದಲೇ ಕೆಳದಿಯ ನಾಯಕರ ಹಾಗೂ ಪೋರ್ಚುಗೀಸರ ಸಂಬಂಧಗಳಲ್ಲಿ ಏರುಪೇರುಗಳಾಗಿ ಯುದ್ಧಗಳು ನಡೆದು ಹೊನ್ನಾವರ ಮತ್ತು ಬಸ್ರೂರು ಬಂದರುಗಳಲ್ಲಿ ವ್ಯಾಪಾರದ ಏಕಸ್ವಾಮ್ಯ ಪೋರ್ಚುಗೀಸರ ಕೈತಪ್ಪಿತು.

ಕರಾವಳಿಯ ಬಂದರುಗಳಲ್ಲಿ ವ್ಯಾಪಾರ ನಡೆಸುತ್ತಿದ್ದ ಪೋರ್ಚುಗೀಸರ ವ್ಯಾಪಾರ ಸರಕುಗಳಲ್ಲಿ ಸಕ್ಕರೆ, ಶುಂಠಿ, ಸಾಲ್ಟ್ ಪಿಟರ್ (ಪೊಟಾಶಿಯಂ ನೈಟ್ರೇಟ್ ಸಿಡಿಮದ್ದುಗಳ ತಯಾರಿಯಲ್ಲಿ ಬಳಸುವ ವಸ್ತು), ಕಬ್ಬಿಣ ಕೂಡಾ ಸೇರಿದ್ದವು. ಇವುಗಳಿಗೆ ಬದಲಾಗಿ ಕುದುರೆ, ತಾಮ್ರ, ಪಾದರಸ, ಸೀಸ, ಹವಳ ಇತ್ಯಾದಿಗಳನ್ನು ಪೋರ್ಚುಗಲ್ ಮತ್ತಿತರ ದೇಶಗಳಿಂದ ಇಲ್ಲಿ ಮಾರಾಟ ಮಾಡುತ್ತಿದ್ದರು. ಆದರೆ 18ನೆಯ ಶತಮಾನದ ಆದಿಭಾಗದಿಂದ ಕನ್ನಡ ಕರಾವಳಿ ಪ್ರದೇಶದಲ್ಲಿ ಪೋರ್ಚುಗೀಸರ ವ್ಯಾಪಾರೀ ಚಟುವಟಿಕೆಗಳಿಗೆ ಹಿನ್ನಡೆಯಾಯಿತು. ಕೆಳದಿ ನಾಯಕರೊಂದಿಗಿನ ಸಂಘರ್ಷ, ಡಚ್ ಮತ್ತು ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಗಳ ಪ್ರಬಲ ಸ್ಪರ್ಧೆ ಮತ್ತು ಕಾರವಾರ, ಹೊನ್ನಾವರ ಹಾಗೂ ಬಸ್ರೂರು ಬಂದರುಗಳಲ್ಲಿ ವ್ಯಾಪಾರದ ಕುಸಿತ ಈ ಎಲ್ಲ ಕಾರಣಗಳಿಂದಾಗಿ ಕಡಲತೀರ ಪ್ರದೇಶದಲ್ಲಿ ಪೋರ್ಚುಗೀಸರ ಪ್ರಾಬಲ್ಯ ಕುಂದಿತು.

**ಡಚ್ಚರು:** ಸು.17ನೆಯ ಶತಮಾನದ ಪೂರ್ವಾರ್ಧದಲ್ಲೇ ಡಚ್ ಈಸ್ಟ್ ಇಂಡಿಯ ಕಂಪೆನಿ ಕೆಳದಿ ರಾಜ್ಯದ ಬಂದರುಗಳಲ್ಲಿ ತನ್ನ ವ್ಯಾಪಾರದ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿತ್ತು. ಕಾಳುಮೆಣಸಿನ ರಫ್ತಿನಲ್ಲಿ ಡಚ್ಚರು ಮಂಗಳೂರು, ಬಸ್ರೂರು ಮತ್ತು ಹೊನ್ನಾವರದ ಏಕಸ್ವಾಮ್ಯವನ್ನೂ ಸಾಧಿಸಿದರು. ಕಾರವಾರದಲ್ಲಿ ಕಾಳುಮೆಣಸಿನ ವ್ಯಾಪಾರದ ಏಕಸ್ವಾಮ್ಯಕ್ಕೆ ಅವರು ನಡೆಸಿದ ಹುನ್ನಾರಗಳಿಗೆ ಇಂಗ್ಲಿಷ್‍ರಿಂದ ತೀವ್ರ ವಿರೋಧವಿತ್ತು. ತಮ್ಮ ವ್ಯಾಪಾರಾಸಕ್ತಿಗಳ ರಕ್ಷಣೆಗಾಗಿ ಅವರು ಬಿಜಾಪುರದ ಅದಿಲ್‍ಶಾಹಿ ರಾಜರು, ಕೆಳದಿಯ ಮತ್ತು ಸೋದೆ ನಾಯಕರೊಂದಿಗೆ ಆಗಾಗ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದ್ದರು. ಆದರೂ ಬ್ರಿಟಿಷರ ವ್ಯಾಪಾರ ಚಟುವಟಿಕೆಗಳು ಬಿರುಸುಗೊಂಡಾಗ, ಡಚ್ಚರು ಇಲ್ಲಿಯ ವ್ಯಾಪಾರ ಸ್ಪರ್ಧೆಯಿಂದ ಹಿಮ್ಮೆಟ್ಟಬೇಕಾಯಿತು. 18ನೆಯ ಶತಮಾನದ ಮಧ್ಯಭಾಗದಲ್ಲಿ ಕರಾವಳಿಯಲ್ಲಿಯ ವ್ಯಾಪಾರದ ಸವಲತ್ತುಗಳಿಗಾಗಿ ಫ್ರೆಂಚರೂ ಕೆಳದಿಯ ನಾಯಕರೊಂದಿಗೆ ಸಂಘರ್ಷಕ್ಕಿಳಿದರು. ಶ್ರೀಗಂಧಕ್ಕಾಗಿ ಮಂಗಳೂರಿಗೆ ಬರುತ್ತಿದ್ದ ಫ್ರೆಂಚರು ಪೋರ್ಚುಗೀಸರೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿದ್ದರು. ಆದರೂ ಮಲಬಾರಿನಲ್ಲಿದ್ದಷ್ಟು ವ್ಯಾಪಾರದ ಅವಕಾಶ ಮತ್ತು ಆಸಕ್ತಿಗಳು ಫ್ರೆಂಚರಿಗೆ ಕನ್ನಡ ಕರಾವಳಿಯಲ್ಲಿರಲಿಲ್ಲ. ಅಲ್ಲದೆ ಐರೋಪ್ಯ ಸ್ಪರ್ಧಿಗಳ ಪೈಪೋಟಿಯೂ ಇಲ್ಲಿ ಬಿರುಸಾಗಿತ್ತು. ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ವ್ಯಾಪಾರ ಹಾಗೂ ರಾಜಕೀಯ ಚಟುವಟಿಕೆಗಳು ಇಲ್ಲಿ ತೀವ್ರಗೊಂಡಂತೆ, ಫ್ರೆಂಚರ ಚಟುವಟಿಕೆಗಳು ಕಡಿಮೆಯಾದವು.

**ಇಂಗ್ಲಿಷರು:** ಕರ್ನಾಟಕ ಕರಾವಳಿಯ ಅನೇಕ ಬಂದರುಗಳು ಹಾಗೂ ಅಪಾರ ರಫ್ತು ಮೌಲ್ಯದ ಸರಕುಗಳನ್ನು ಒದಗಿಸುವ ಹಿನ್ನಾಡುಗಳು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಗೆ ಸಹಜ ಆಕರ್ಷಣೆಗಳಾಗಿದ್ದವು. 1737ರಲ್ಲಿ ಬಿದನೂರಿನ ಜತೆ ಒಪ್ಪಂದ ಮಾಡಿಕೊಂಡ ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿ ಏಲಕ್ಕಿ ಮತ್ತು ಕಾಳುಮೆಣಸಿನ ವ್ಯಾಪಾರದ ಹಕ್ಕುಗಳನ್ನು ಪಡೆದುಕೊಂಡಿತು. ಹೊನ್ನಾವರದಲ್ಲಿ ವ್ಯಾಪಾರ ಕೋಠಿಯನ್ನು ಸ್ಥಾಪಿಸಿತು. 1763ರಲ್ಲಿ ಬಿದನೂರನ್ನು ವಶಪಡಿಸಿಕೊಂಡ ಹೈದರಾಲಿ ಜತೆಗೆ ಮಾಡಿಕೊಂಡ ಒಪ್ಪಂದದನ್ವಯ ತಲಚೇರಿಯಿಂದ ಅಕ್ಕಿ ರಫ್ತಿನ ಪರವಾನಗಿ ಪಡೆದು, ಆತನಿಗೆ ಶಸ್ತ್ರಾಸ್ತ್ರ ಪೂರೈಸಲು ಒಪ್ಪಿಕೊಂಡು, ತನ್ನ ಹಿತಾಸಕ್ತಿಗಳನ್ನು ಕಾಯ್ದುಕೊಂಡಿತು. ಆದರೆ ಮೈಸೂರು ರಾಜ್ಯದ ವಿಸ್ತರಣೆ ಮತ್ತು ಆಂತರಿಕ ಹಾಗೂ ವಿದೇಶೀ ವ್ಯಾಪಾರವನ್ನು ಹೆಚ್ಚಿಸಲು ಹೈದರಾಲಿ ಕೈಗೊಂಡ ಕ್ರಮಗಳು ಬ್ರಿಟಿಷರನ್ನು ಕೆರಳಿಸಿದವು. 1765ರ ಪ್ರಥಮ ಆಂಗ್ಲೊ–ಮೈಸೂರು ಯುದ್ಧಕಾಲದಲ್ಲಿ ಟಿಪ್ಪುಸುಲ್ತಾನನ ಮಿಂಚಿನ ಧಾಳಿಯಿಂದ ಬ್ರಿಟಿಷರು ಹಿಮ್ಮೆಟ್ಟಿದರೂ ಅವರ ವ್ಯಾಪಾರದ ಹಕ್ಕುಗಳಿಗೆ ವಿಶೇಷ ಧಕ್ಕೆಯಾಗಲಿಲ್ಲ. ಎರಡನೆಯ ಆಂಗ್ಲೊ–ಮೈಸೂರು ಯುದ್ಧಕ್ಕೆ ಕಾರಣವಾದ ಅನೇಕ ಅಂಶಗಳ ಜೊತೆ ಕರಾವಳಿ ವ್ಯಾಪಾರದ ಹಕ್ಕುಗಳ ರಕ್ಷಣೆಯೂ ತಳಕು ಹಾಕಿಕೊಂಡಿತು. ಯುದ್ಧಾನಂತರ ಟಿಪ್ಪುಸುಲ್ತಾನ ಏಲಕ್ಕಿ, ಶ್ರೀಗಂಧ ಮತ್ತು ಕಾಳುಮೆಣಸಿನ ರಫ್ತಿನ ಮೇಲೆ ಹೇರಿದ ನಿರ್ಬಂಧಗಳು ಮತ್ತು ಪರ್ಷಿಯನ್ ಕೊಲ್ಲಿ ರಾಷ್ಟ್ರಗಳೊಡನೆ ವ್ಯಾಪಾರ ಹೆಚ್ಚಿಸಲು ಕೈಗೊಂಡ ಕ್ರಮಗಳು 3ನೆಯ ಆಂಗ್ಲೊ–ಮೈಸೂರು ಯುದ್ಧಕ್ಕೆ ಕಾರಣವಾದವು. ಯುದ್ಧದಲ್ಲಿ ಸೋತ ಟಿಪ್ಪು ಶ್ರೀರಂಗಪಟ್ಟಣದ ಒಪ್ಪಂದಕ್ಕನುಗುಣವಾಗಿ ತನ್ನ ತಂದೆಯ ಕಾಲದಲ್ಲಿ ನೀಡಲಾಗಿದ್ದ ವ್ಯಾಪಾರದ ಹಕ್ಕುಗಳನ್ನೆಲ್ಲ ಬ್ರಿಟಿಷರಿಗೆ ಮರಳಿಸಬೇಕಾಯಿತು. ಟಿಪ್ಪುಸುಲ್ತಾನನ ಮರಣಾನಂತರ ಕರ್ನಾಟಕದ ಕರಾವಳಿ ಜಿಲ್ಲೆಗಳು ಮತ್ತು ಮಲಬಾರ್ ಪ್ರದೇಶ ಬ್ರಿಟಿಷರ ಆಡಳಿತಕ್ಕೊಳಪಟ್ಟವು.

ಕರಾವಳಿಯ ಬಂದರುಗಳಲ್ಲಿ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿದ್ದ ಯುರೋಪಿನ ವ್ಯಾಪಾರಿಗಳಲ್ಲಿ ಪೋರ್ಚುಗೀಸ್ ಹಾಗೂ ಡಚ್, ಫ್ರೆಂಚ್ ಮತ್ತು ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಗಳ ವ್ಯಾಪಾರಿಗಳಲ್ಲದೆ ಇಂಗ್ಲೆಂಡಿನ ಖಾಸಗಿ ವ್ಯಾಪಾರಿಗಳೂ ಇದ್ದರು. ಇಲ್ಲಿದ್ದ ಅವರ ದಲ್ಲಾಳಿಗಳು, ತಮ್ಮ ಪ್ರತಿನಿಧಿಗಳ ಮೂಲಕ ವ್ಯಾಪಾರ ನಡೆಸುತ್ತಿದ್ದರು. ಕರಾವಳಿ ಪ್ರದೇಶಗಳಲ್ಲಿ ಅಕ್ಕಿ ಮತ್ತು ಕಾಳುಮೆಣಸಿನ ವ್ಯಾಪಾರ ದಲ್ಲಾಳಿಗಳ ಮೂಲಕ ನಡೆಯುತ್ತಿತ್ತು. ಅಕ್ಕಿ, ತೆಂಗಿನಕಾಯಿ, ಕೊಬ್ಬರಿ, ಅಡಿಕೆ, ಏಲಕ್ಕಿ, ಕಾಳುಮೆಣಸು, ಹತ್ತಿ, ಹತ್ತಿ ವಸ್ತ್ರಗಳು, ಶ್ರೀಗಂಧ, ಗಂಧದೆಣ್ಣೆ, ತೆಂಗಿನೆಣ್ಣೆ, ಕಾಫಿ, ಒಣಮೀನು, ಮರಮುಟ್ಟುಗಳು ಮುಂತಾದವು ರಫ್ತಿನ ಪ್ರಮುಖ ಸರಕುಗಳಾಗಿದ್ದವು. ಖರ್ಜೂರ, ಗಸಗಸೆ, ಕರ್ಪೂರ, ತಾಮ್ರ, ಸಕ್ಕರೆ, ಚಹಾ, ವಿವಿಧ ರೀತಿಯ ಕಾಗದಗಳು (ಪೋರ್ಚುಗೀಸ್ ಪೇಪರ್, ಚೀನಾ ಪೇಪರ್ ಇತ್ಯಾದಿ), ಬಣ್ಣದ ಗಾಜು, ಮದ್ಯ, ಪಿಂಗಾಣಿ ವಸ್ತುಗಳು, ಉಪ್ಪು ಮುಂತಾದವುಗಳು ಆಮದಿನ ಪ್ರಮುಖ ಸರಕುಗಳಾಗಿದ್ದವು.

1799ರಲ್ಲಿ ಕರಾವಳಿ ಜಿಲ್ಲೆಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿ ಸರ್ಕಾರ ಇಲ್ಲಿಯ ಒಳನಾಡು ಮತ್ತು ಸಮುದ್ರ ವ್ಯಾಪಾರವನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸಿತು. ಒಳನಾಡು ಸುಂಕ, ಬಂದರು ಸುಂಕ ಮತ್ತು ಆಮದು ರಫ್ತು ಸುಂಕಗಳನ್ನು ನಿಯಂತ್ರಿಸಲು ಹೊಸ ಕಾನೂನುಗಳನ್ನು ಸೃಷ್ಟಿಸಿತು. ವ್ಯಾಪಾರದ ಏರುಪೇರುಗಳನ್ನು ಮತ್ತು ಸರಕುಗಳ ಲಭ್ಯತೆ ಮತ್ತು ಲಾಭವನ್ನು ಗಮನಿಸಿ, ಆಹಾರ ಧಾನ್ಯಗಳಿಂದ ವಾಣಿಜ್ಯ ಬೆಳೆಗಳಿಗೆ – ಅಕ್ಕಿಯಿಂದ ಕಾಫಿ ಮತ್ತು ಹತ್ತಿ ರಫ್ತಿಗೆ ತನ್ನ ಆಯ್ಕೆಗಳನ್ನು ಬದಲಿಸಿಕೊಂಡು, ಅಧಿಕಾರ ಮತ್ತು ವ್ಯಾಪಾರದ ಸಮತೋಲನವನ್ನು ಕಾಯ್ದುಕೊಂಡಿತು. ನೈಸರ್ಗಿಕವಾಗಿ ಸುಸಜ್ಜಿತವಾಗಿದ್ದ ಬಂದರುಗಳನ್ನೇ ಸಮುದ್ರ ವ್ಯಾಪಾರಕ್ಕೆ ಬಳಸಿಕೊಂಡಿತು. ಆಡಳಿತ ನೀತಿಯಲ್ಲೂ ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿ ಬದಲಾವಣೆ ಯನ್ನು ಮಾಡಿಕೊಂಡಿತು. ಆದರೆ ಕಂಪನಿ ಸರಕಾರದ ವಸಾಹತುಶಾಹಿ ಆಡಳಿತದಲ್ಲಿ ಅಭಿವೃದ್ಧಿಗೆ ಎಡೆಯಿರಲಿಲ್ಲ. ಹೀಗಾಗಿ ಸೀಮಿತ ಒಳನಾಡ ವ್ಯಾಪಾರ ಮತ್ತು ವ್ಯಾಪಕ ಆಡಳಿತದ ಆವಶ್ಯಕತೆಗಳಿಗೋಸ್ಕರ ಆಯ್ದ ಕೆಲವೇ ರಸ್ತೆಗಳ ದುರಸ್ತಿ ನಡೆಯಿತು. ಉಳಿದಂತೆ ಒಳನಾಡ ಸಂಪರ್ಕ–ಸಾರಿಗೆಗಳು ನಿರ್ಲಕ್ಷಿಸಲ್ಪಟ್ಟವು. ಮಂಗಳೂರು ಬಂದರನ್ನು ಹೊರತುಪಡಿಸಿ ಕರಾವಳಿಯ ಉಳಿದೆಲ್ಲ ಬಂದರುಗಳು ಅಲಕ್ಷಿಸಲ್ಪಟ್ಟವು. ಹಿನ್ನಾಡುಗಳೂ ಅವಜ್ಞೆಗೊಳಗಾದವು. ಇದರಿಂದಾಗಿ ಕರಾವಳಿ ಪ್ರದೇಶಗಳ ಅಭಿವೃದ್ಧಿಯಲ್ಲಿ ಅಸಮತೋಲನ ಉಂಟಾಯಿತು. (ಎಂ.ಕೆ.ಎಂ.)

**ಈಳಂ:** ಪ್ರ.ಶ.ಪೂ.2700–539 ಅವಧಿಯಲ್ಲಿದ್ದ ಪ್ರಾಚೀನ ನಾಗರಿಕತೆ. ಇದು ಇಂದಿನ ಇರಾನಿನ ಪಶ್ಚಿಮಕ್ಕೆ ಮತ್ತು ನೈರುತ್ಯ ಭಾಗದಲ್ಲಿ (ಖುಜ಼ೆಸ್ತಾನ್ ಮತ್ತು ಎಲಂ ಪ್ರಾಂತ) ದಕ್ಷಿಣ ಇರಾಕ್ ಪ್ರದೇಶದಲ್ಲಿ (ಸುಮೇರ್ ಮತ್ತು ಅಕ್ಕಡ್) ಬೆಳೆಯಿತು. ಇದರ ಬಗ್ಗೆ ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖವಿರುವುದು ಗಮನಾರ್ಹ. ಈ ಸಂಸ್ಕೃತಿಯ ಹಿಂದಿನ ಹಂತವನ್ನು ಪೂರ್ವಭಾವಿ ಎಲಮೈಟ್ ಎಂದು ಕರೆಯಲಾಗಿದೆ. ಇದು ಪ್ರ.ಶ.ಪೂ.ಸು. 3200ರಲ್ಲಿ ಆರಂಭವಾಯಿತು. ಸೂಸನಗರದ ಮೇಲೆ ಇರಾನ್ ಪ್ರಸ್ಥಭೂಮಿಯ ಪೂರ್ವ ಬದಿಯ ಸಂಸ್ಕೃತಿ ಪ್ರಭಾವ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ.

ಎಲಮೈಟ್ ಜನಸಮುದಾಯ ತಮ್ಮ ದೇಶವನ್ನು ಹಲ್ತಂತಿ (ಅಂತ್ಯಕಾಲೀನ ಎಲಮೈಟ್ ಭಾಷೆಯಲ್ಲಿ, ಅತಂತಿ) ಎಂದು ಕರೆಯುತ್ತಿದ್ದರು. ನೆರೆ ರಾಜ್ಯವಾದ ಅಕ್ಕಡಿಯನ್ನರ ಮಾತಿನಲ್ಲಿ ಈಳಂ (ಎತ್ತರವಾದ ಭೂಮಿ) ಆಯಿತು. ಹೀಬ್ರೂ ಭಾಷೆಯ ಹಳೆ ಒಡಂಬಡಿಕೆಯಲ್ಲೂ ಈಳಂ ಎಂದು ಉಲ್ಲೇಖಿಸಲಾಗಿದೆ. ಇದರ ರಾಜಧಾನಿ ಸೂಸ. ಟಾಲಮಿಯ ಅನಂತರದ ಭೂಗೋಳ ಶಾಸ್ತ್ರಜ್ಞರು ಇದನ್ನು ಸೂಸಿಯನ ಎಂದು ಕರೆದರು. ಈ ನಾಗರಿಕತೆಯ ಕೇಂದ್ರ ಪ್ರದೇಶ ಇಂದಿನ ಖುಜ಼ೆಸ್ತಾನ್. ಇದನ್ನು ಪ್ರಾಚೀನ ಪರ್ಷಿಯದಲ್ಲಿ ಊವ್ವ ಎಂದು ಕರೆಯಲಾಗಿದೆ. ಇದರ ಅರ್ಥ ಈಳಂ.

ಎಲಮೈಟ್ ಇತಿಹಾಸ ಅಪೂರ್ಣ, ಮೆಸಪೊಟೇಮಿಯದ ಬರೆವಣಿಗೆಗಳ ಆಧಾರಗಳಿಂದ ಇತಿಹಾಸವನ್ನು ಪುನರ್ರಚಿಸಿರಬಹುದು. ಸೂಸ ನಗರವನ್ನು ಪ್ರ.ಶ.ಪೂ.4000ದಲ್ಲಿ ಸ್ಥಾಪಿಸಲಾಯಿತು. ಈ ನೆಲೆಯ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಹಂತ ಸುಮೇರ್ ಸಂಸ್ಕೃತಿಯ ಉರುಕ್ ಹಂತಕ್ಕೆ ಸಮಾನವಾಗಿದೆ. ಇಲ್ಲಿ ಪ್ರ.ಶ.ಪೂ.ಸು.3200ರಿಂದ ಪೂರ್ವ ಪರ್ಷಿಯ ಪ್ರಸ್ಥಭೂಮಿಯ ಪೂರ್ವಭಾವಿ ಎಲಮೈಟ್ ಪ್ರಭಾವವನ್ನು ಕಾಣಬಹುದು. ಪ್ರ.ಶ.ಪೂ. ಸು.2700ರ ತನಕ ಪೂರ್ವಭಾವಿ ಎಲಮೈಟ್ ಲಿಪಿ ಬಳಕೆಯಲ್ಲಿತ್ತು. ಆದರೆ ಈ ಲಿಪಿಯನ್ನು ಓದಲಾಗುತ್ತಿಲ್ಲ. ಇದುವರೆಗೂ ತಿಳಿದಮಟ್ಟಿಗೆ ಪೂರ್ವಭಾವಿ ಎಲಮೈಟ್‍ನ ಅಂತಿಮ ಹಂತದಲ್ಲಿ ಕಾಣಿಸಿಕೊಂಡ ಅವನ್ ವಂಶದ ಕಿಷ್‍ನ ದೊರೆ ಎನ್ಮೆಬರಗೆಸಿ ಮೊದಲನೆಯ ಅರಸ.

ಎಲಮೈಟ್ ನಾಗರಿಕತೆ ಟೈಗ್ರಿಸ್ ಮತ್ತು ಯೂಫ್ರೆಟಿಸ್ ನದಿಗಳ ಪೂರ್ವಕ್ಕೆ ಕರುನ್ ನದಿಯ ಜಲಾನಯನ ಪ್ರದೇಶದಲ್ಲಿ ಬೆಳೆಯಿತು. ಈ ರಾಜ್ಯ ತನ್ನ ಸುತ್ತಮುತ್ತಲಿನ ಪ್ರದೇಶಗಳೊಡನೆ ಆಡಳಿತಾತ್ಮಕವಾಗಿ ಸಮನ್ವಯತೆ ಮಾಡಿಕೊಂಡು ಆಯಾಯ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದುದು ಒಂದು ವಿಶೇಷ ಎನ್ನಬಹುದು. ಇಲ್ಲಿ ಒಂದು ರೀತಿಯ ಸಂಯುಕ್ತ ಆಡಳಿತ ರಚನೆಯನ್ನು ಕಾಣಬಹುದು. ಇದರ ಇತಿಹಾಸವನ್ನು ಅನುಕ್ರಮವಾಗಿ 4 ಹಂತಗಳಾಗಿ ವಿಂಗಡಿಸಬಹುದು: ಪೂರ್ವಭಾವಿ ಎಲಮೈಟ್: ಪ್ರ.ಶ.ಪೂ.ಸು.3200–2700 (ಸೂಸದಲ್ಲಿ ಲಿಪಿ ಬಳಕೆ); ಪ್ರಾಚೀನ ಎಲಮೈಟ್: ಪ್ರ.ಶ.ಪೂ. ಸು.2700–1600 (ಎಪರ್ತಿ ಅರಸು ಮನೆತನದವರೆಗಿನ ಲಿಖಿತ ದಾಖಲೆಗಳು); ಮಧ್ಯ ಎಲಮೈಟ್: ಪ್ರ.ಶ.ಪೂ.ಸು.1500–1100 (ಅಂಜ಼ನೈಟ್ ವಂಶ, ಬ್ಯಾಬಿಲೋನಿಯನ್ನರು ಸೂಸವನ್ನು ಆಕ್ರಮಿಸುವವರೆಗೆ); ನೂತನ ಎಲಮೈಟ್: ಪ್ರ.ಶ.ಪೂ.ಸು.1100–539 (ಇರಾನ್ ಮತ್ತು ಸಿರಿಯದ ಪ್ರಭಾವ, ಪ್ರ.ಶ.ಪೂ. 539ರಿಂದ ಅಕೇಮಿನಿಡ್‍ರ ಆಳಿಕೆ ಪ್ರಾರಂಭವಾಯಿತು).

ಪ್ರಾಚೀನ ಎಲಮೈಟ್ ಅವಧಿ (ಪ್ರ.ಶ.ಪೂ.ಸು.2700–1600): ಲಿಖಿತ ದಾಖಲೆಗಳಲ್ಲಿ ಉಲ್ಲೇಖಿಸಿರುವಂತೆ ಕಿಷ್‌ನ ಎನ್ಮೆಬರಗೆಸಿಯು ಈಳಂ ಪ್ರದೇಶವನ್ನು ಜಯಿಸಿದ. ಈ ಅವಧಿಯಲ್ಲಿ ಮೂರು ವಂಶಗಳು ಆಡಳಿತ ನಡೆಸಿವೆ. ಮೊದಲು ಎರಡು ಮನೆತನಗಳಲ್ಲಿ ಒಟ್ಟು 12 ಅರಸರು ಆಳಿದರು. ಅವಾನ್ ಅಥವಾ ಅವ್ಹಾನ್ (ಸು.2400–2100) ಮತ್ತು ಸಿಮಷ್ (ಸು.2100–1970), ಸೂಸ ಪಟ್ಟಿಯಿಂದ ಪ್ರಾಚೀನ ಬ್ಯಾಬಿಲೋನಿಯ ಅವಧಿಯಲ್ಲಿ ಎಲಮೈಟ್‌ನ ಎರಡು ಅರಸು ಮನೆತನಗಳು ಅಲ್ಪಕಾಲ ಸುಮೇರು ಮೇಲೆ ಆಳಿಕೆ ನಡೆಸಿದರೆಂದು ಕಾಣುತ್ತದೆ. ಸುಮೇರ್ ಮತ್ತು ಈಳಂ ರಾಜ್ಯಗಳ ನಡುವೆ ಆಗಾಗ ಘರ್ಷಣೆ ಉಂಟಾಗುತ್ತಿತ್ತು. ಒಂದನ್ನೊಂದು ತಾತ್ಕಾಲಿಕವಾಗಿ ಗೆದ್ದುಕೊಳ್ಳುತ್ತಿದ್ದವು. ಈಳಂ ರಾಜ್ಯದ ಅವಾನ್ ಮತ್ತು ಹಮಜ್ಹಿ; ಅದೇ ರೀತಿ ಸುಮೇರಿಯದ ಲಗಷ್‌ನ ಎನ್ನತುಮ್ ಮತ್ತು ಅದಬ್‌ನ ಲುಗಲ್–ಅನ್ನೆ–ಮುಂಡು ಒಂದನ್ನೊಂದು ಆಕ್ರಮಿಸುತ್ತಿದ್ದರು. ಅಕ್ಕಡ್‌ನಸರ್ಗೋನ್, ಈಳಂನ ಅವಾನ್ ವಂಶದ ಅರಸ ಲುಹಿ–ಇಷನ್‌ನನ್ನು ಸೋಲಿಸಿದ. ಮುಂದೆ ಈ ಪ್ರದೇಶದ ಅಳಿದುಳಿದ ವಸ್ತುಗಳನ್ನು ಪಡೆಯಲು ಮೆಸಪೊಟೇಮಿಯನ್ನರು ಪದೇ ಪದೇ ಧಾಳಿ ಮಾಡುತ್ತಿದ್ದರು. ಆದರೆ ಸರ್ಗೋನ್‌ನ ಮರಿಮೊಮ್ಮಗ ಷರ್–ಕಲಿ–ಷರ್ರಿ ಕಾಲದಲ್ಲಿ ಅಕ್ಕಡ್ ರಾಜ್ಯ ಕುಸಿಯಿತು. ಈಳಂ ರಾಜ್ಯದ ಅವಾನ್ ಅರಸ ಕುತಿಕ್–ಇನ್‌ಷುಶಿನಕ್ (ಸು.2240–2220) ಕಾಲದಲ್ಲಿ ಸ್ವತಂತ್ರವಾಗಿ ರಾಜಕೀಯ ಸಂಘಟನೆ ಉತ್ತಮವಾಯಿತು. ಅವಾನ್ ಅರಸರ ಆಳಿಕೆಯ ಅನಂತರ ಈಳಂ ಹಲವಾರು ಧಾಳಿಗಳನ್ನು ಕಂಡಿತು. ತರುವಾಯ ಬಂದ ಒಂದನೆಯ ಎಪರ್ತಿಯ (ಪ್ರ.ಶ.ಪೂ.ಸು.1970–1770) ಅವಧಿಯಲ್ಲಿ ಆಳಿಕೆ ಆರಂಭವಾಯಿತು. ಈ ಸಮಯದಲ್ಲಿ ಸೂಸ ಎಲಮೈಟ್‌ರ ಹತೋಟಿಯಲ್ಲಿತ್ತು. ಈ ವಂಶದ ಪ್ರಮುಖ ಅರಸ ಸಿರುಕ್‌ದುಖ್ (ಪ್ರ.ಶ.ಪೂ.ಸು.1850), ಇವನು ನೆರೆಹೊರೆಯವ ರೊಡನೆ ಸೈನಿಕ ಒಪ್ಪಂದ ಮಾಡಿಕೊಂಡು, ಬ್ಯಾಬಿಲೋನ್ ಧಾಳಿ ಮಾಡದಂತೆ ನೋಡಿಕೊಳ್ಳು ವುದರ ಜೊತೆಗೆ ಸಾಮ್ರಾಜ್ಯವನ್ನು ಪ್ರವರ್ಧಮಾನಕ್ಕೇರಿಸಿದ. ಸಿವೆ–ಪಲರ್–ಖುಪ್ಪಕ್ ಶಕ್ತಿಶಾಲಿ ಗೌರವಾನ್ವಿತ ರಾಜ. ಮೆಸಪೊಟೇಮಿಯ ರಾಜರು ಜ಼ಿಮ್‌ರಿಲಿಮ್ ಮತ್ತು ಹಮುರಬಿ ಇವನನ್ನು ಗೌರವದಿಂದ ಕಾಣುತ್ತಿದ್ದರು. ಕುದುರ್–ನಹ್ಹುಂತೆ ಅಕ್ಕಡ್ ದೇವಾಲಯಗಳನ್ನು ಕೊಳ್ಳೆ ಹೊಡೆದ. ಆದರೆ ಪ್ರ.ಶ.ಪೂ.1760ರಲ್ಲಿ ಹಮುರಬಿ ಎಲಮೈಟ್‌ರನ್ನು ಹೊರ ಓಡಿಸಿ ಮೆಸಪೊಟೇಮಿಯ ಪ್ರದೇಶದಲ್ಲಿ ಬ್ಯಾಬಿಲೋನಿಯದ ಅಧಿಕಾರ ಸ್ಥಾಪಿಸಿದ. ಬ್ಯಾಬಿಲೋನಿಯದ ಕಸ್ಸಿಟೆ ಆಳಿಕೆಯ ಕಾಲದಿಂದ ಎಲಮೈಟ್ ರಾಜವಂಶಾವಳಿಯ ಬಗ್ಗೆ ದಾಖಲೆಗಳು ಅಷ್ಟಾಗಿ ಕಂಡುಬರುವುದಿಲ್ಲ.

ಮಧ್ಯ ಎಲಮೈಟ್ ಅವಧಿ (ಪ್ರ.ಶ.ಪೂ.ಸು.1500–1100): ಪ್ರ.ಶ.ಪೂ.ಸು.1500ರ ಹೊತ್ತಿಗೆ ಅನ್‌ಶನೈಟ್ ಅರಸು ಮನೆತನದವರು ಪ್ರಬಲರಾಗಿ ತಮ್ಮ ಆಳಿಕೆ ಆರಂಭಿಸಿದರು. ಇವರ ಕಾಲದಲ್ಲಿ ಸೂಸ ಪ್ರದೇಶವನ್ನು ಎಲಮೈಟ್ ಸಂಸ್ಕೃತಿಮಯವಾಗಿ ಮಾಡಿದುದು ಒಂದು ವೈಶಿಷ್ಟ್ಯ. ತಮ್ಮನ್ನು ಅನ್‌ಶನ್ ಮತ್ತು ಸೂಸ ರಾಜರೆಂದು ಕರೆದುಕೊಂಡಿದ್ದಾರೆ. ಈ ಪ್ರದೇಶವನ್ನಾಳಿದ ಮೊದಲನೆಯ ಅರಸು ಮನೆತನ ಕಿದಿನುಯಿಡ್. ಇವರು ಅಕ್ಕಡ್ ಭಾಷೆಯಲ್ಲಿ ತಮ್ಮ ಶಾಸನಗಳನ್ನು ಬರೆಸಿಕೊಂಡಿದ್ದಾರೆ. ಅನಂತರ ಬಂದ ಇಗಿಹಲ್‌ಕಿಡ್ ಮತ್ತು ಶುತ್ರುಕಿಡ್‌ರು ಎಲಮೈಟ್ ಭಾಷೆಯನ್ನು ಬಳಸಿದರು. ಎಲಮೈಟ್ ಭಾಷೆ ಮತ್ತು ಸಂಸ್ಕೃತಿ ಸೂಸಿಯಾನದಲ್ಲಿ ಬೆಳೆಯಲಾರಂಭಿಸಿತು.

ಕಿದಿನುಯಿಡ್‌ರು (ಪ್ರ.ಶ.ಪೂ.ಸು.1500–1400) ಅರಸು ಮನೆತನದಲ್ಲಿ ಐವರು ಅರಸರು ಆಗಿಹೋದರು. ಇವರ ಪರಸ್ಪರ ಸಂಬಂಧ ಅಸ್ಪಷ್ಟ. ಆದರೆ ತಮ್ಮನ್ನು ಸೂಸ ಮತ್ತು ಅನ್‌ಶನ್ ಪ್ರದೇಶದ ರಾಜರೆಂದು, ಕಿರ್‌ವಶಿರ್ ದೇವರ ಸೇವಕರೆಂದು ಕರೆದುಕೊಂಡಿದ್ದಾರೆ. ಕಿರ್‌ವಶಿರ್ ಎಲಮೈಟ್ ಸಂಸ್ಕೃತಿಯ ಎತ್ತರ ಪ್ರದೇಶದ ಒಂದು ದೇವತೆ. ಇಗಿಹಲ್‌ಕಿಡರ (ಪ್ರ.ಶ.ಪೂ.1400–1210) ಅರಸು ಮನೆತನದ ಹತ್ತು ರಾಜರ ಬಗ್ಗೆ ತಿಳಿದುಬಂದಿದೆ. ಇವರಲ್ಲಿ ಕೆಲವರು ಕಸ್ಸಿಟೆ ರಾಜಕುಮಾರಿಯರನ್ನು ವಿವಾಹವಾಗಿದ್ದರು. ಕಸ್ಸಿಟೆ ರಾಜ ಎರಡನೆಯ ಕುರಿಗಲ್‌ಜ಼ು ಪ್ರ.ಶ.ಪೂ.ಸು.1320ರಲ್ಲಿ ಈಳಂ ಪ್ರದೇಶವನ್ನು ಅಲ್ಪಕಾಲ ಸ್ವಾಧೀನಪಡಿಸಿಕೊಂಡಿದ್ದ. ಅನಂತರ (ಪ್ರ.ಶ.ಪೂ.ಸು.1230) ನಾಲ್ಕನೆಯ ಕಶ್ಟಿಲಿಯಶ್ ಈಳಂ ವಿರುದ್ಧ ಯುದ್ಧಮಾಡಿ ಸೋತ. ಹೀಗೆ ಇವರ ನಡುವೆ ಆಗಾಗ್ಗೆ ಯುದ್ಧಗಳಾಗುತ್ತಿದ್ದವು. ಇವರ ಕಾಲದಲ್ಲಿ ಅಕ್ಕಡ್ ಭಾಷೆಯ ಶಾಸನಗಳು ತೀರ ಅಪರೂಪವಾದುವು. ಸೂಸದಲ್ಲಿ ಎಲಮೈಟ್‌ನ ಎತ್ತರ ಪ್ರದೇಶದ ದೇವತೆಗಳನ್ನು ಶಾಶ್ವತವಾಗಿ ಸ್ಥಾಪಿಸಿದರು. ಶುತ್ರುಕಿಡ್‌ರ (ಪ್ರ.ಶ.ಪೂ.ಸು.1210–1100) ಆಡಳಿತದಲ್ಲಿ ಎಲಮೈಟ್ ರಾಜ್ಯ ಉತ್ತುಂಗಕ್ಕೇರಿತು. ಶುತ್ರುಕ್–ನಖ್ಖುಂತೆ ಮತ್ತು ಅವನ ಮೂವರು ಮಕ್ಕಳಾದ ಎರಡನೆಯ ಕುತಿರ್–ನಖ್ಖುಂತೆ, ಶಿಲ್ಹಕ್–ಇನ್–ಶುಶಿನಕ್ ಮತ್ತು ಖುತೆಲುತುಶ್–ಇನ್–ಶುಶಿನಕ್, ಕಸ್ಸಿಟೆ ಮೇಲೆ ಸಮರ್ಥವಾಗಿ ದಂಡಯಾತ್ರೆ ನಡೆಸಿದರು. ತಮ್ಮ ರಾಜ್ಯದ ಅನೇಕ ಕಡೆ ಭವ್ಯವಾದ ದೇವಾಲಯಗಳನ್ನು ಕಟ್ಟಿಸಿದರು. ಶುತ್ರುಕ್–ನಖ್ಖುಂತೆಯು ಅಕ್ಕಡ್, ಬ್ಯಾಬಿಲೋನಿಯ ಮತ್ತು ಇಶ್‌ನುನ್ನ ಮೇಲೆ ಧಾಳಿಮಾಡಿ ಆ ಪ್ರದೇಶಗಳಿಂದ ವಿಜಯದ ಸಂಕೇತವಾಗಿ ಸೂಸದಿಂದ ಮರ್ದುಕ್, ಮನಿಶ್‌ಟುಶು ವಿಗ್ರಹಗಳನ್ನು, ಹಮುರಬಿಯ ಕಾನೂನು ಪ್ರತಿ ಮತ್ತು ನರಂಸಿನ್ ಶಾಸನವಿರುವ ಸ್ಮಾರಕ ಸ್ತಂಭವನ್ನು ತಮ್ಮ ರಾಜ್ಯಕ್ಕೆ ಸಾಗಿಸಿದರು. ಪ್ರ.ಶ.ಪೂ.1158ರಲ್ಲಿ ಇವನು ಕಸ್ಸಿಟರನ್ನು ಸಂಪೂರ್ಣವಾಗಿ ಸೋಲಿಸಿ ಬ್ಯಾಬಿಲೋನಿಯ ರಾಜನಾದ ಜ಼ಬಬ–ಶುಮ–ಇದ್ದಿನನನ್ನು ಕೊಂದು, ತನ್ನ ಹಿರಿಯ ಮಗ ಕುತಿರ್–ನಖ್ಖುಂತೆಯನ್ನು ರಾಜನಾಗಿ ಮಾಡಿದ. ಈ ರಾಜನ ಮಗ ಖುತೆಲುತುಶ್–ಇನ್–ಶುಶಿನಕ್. ಇವನು ಬ್ಯಾಬಿಲೋನಿಯದ ಒಂದನೆಯ ನೆಬೂಚಡ್ನೆಸರ್‌ನಿಗೆ ಅಲ್ಪಕಾಲ ಶರಣಾಗಿ ಮರ್ದುಕ್ ವಿಗ್ರಹ ಹಿಂತಿರುಗಿಸಿ ಅನ್‌ಶನ್‌ಗೆ ಓಡಿಹೋದ. ಆದರೆ ಅನಂತರ ಸೂಸಕ್ಕೆ ಹಿಂತಿರುಗಿದ. ಇವನ ಸಹೋದರ ಶಿಲ್ಹನ–ಹಂರು–ಲಗಮರ್‌ನು ಶುತ್ರುಕಿಡ್ ಮನೆತನದ ಕೊನೆಯರಾಜ. ಇಲ್ಲಿಂದ ಮುಂದೆ 3 ಶತಮಾನಗಳ ಕಾಲ ಇದು ಅಜ್ಞಾತವಾಯಿತು.

ನೂತನ ಎಲಮೈಟ್ ಅವಧಿ (ಪ್ರ.ಶ.ಪೂ.ಸು.1100–539): ಪ್ರ.ಶ.ಪೂ.ಸು.1100–770. ಅನ್‌ಶನ್ ಪ್ರದೇಶ ಎಲಮೈಟ್ ರಾಜ್ಯದ ಭಾಗವಾಗಿ ಉಳಿದುಕೊಂಡಿತ್ತು. ಬ್ಯಾಬಿಲೋನಿಯಾದ ರಾಜ ಮರ್–ಬಿತಿ–ಅಪ್ಲ–ಉಶುರ್ (ಪ್ರ.ಶ.ಪೂ.984–979) ಎಲಮೈಟ್ ಮೂಲದವನು. ಈಳಂ ಮತ್ತು ಬ್ಯಾಬಿಲೋನಿಯ ನಡುವೆ ಸ್ನೇಹ ಏರ್ಪಟ್ಟು, ಬ್ಯಾಬಿಲೋನಿಯ ರಾಜ ಮರ್ದುಕ್–ಬಲಸ್ಸು–ಐಕ್ವಿಬಿ ಸೇರಿ ಅಸ್ಸೀರಿಯದ ರಾಜ ಐದನೆಯ ಶಂಶಿ–ಅದದ್ (ಪ್ರ.ಶ.ಪೂ. 823–11)ನ ವಿರುದ್ಧವಾಗಿ ಯುದ್ಧ ಮಾಡಿದರು.

ಪ್ರ.ಶ.ಪೂ.ಸು.770–646 ಅಸ್ಸೀರಿಯದ ರಾಜ ಸುರಬಿನ್‌ಪಾಲ್ ಸೂಸವನ್ನು ಪ್ರ.ಶ.ಪೂ.ಸು.647ರಲ್ಲಿ ಗೆದ್ದು ಲೂಟಿ ಮಾಡಿ ನಗರವನ್ನು ಸುಟ್ಟ. ಇವನ ಸೈನಿಕರು ಹಾರೆ, ಪಿಕಾಸಿಗಳಿಂದ ಕಟ್ಟಡಗಳನ್ನು ಧ್ವಂಸ ಮಾಡಿ ಐಶ್ವರ್ಯವನ್ನು ದೋಚಿದರು. ಅನಂತರ ಇರಾನಿಯನರು ಇರಾನ್ ಪ್ರಸ್ಥಭೂಮಿಗೆ ವಲಸೆ ಹೋದರು. ಪ್ರ.ಶ.ಪೂ.800ರಿಂದ ಅಸ್ಸೀರಿಯ ಮೂಲಗಳು ಸ್ಪಷ್ಟವಾಗಿ ಬಲಿಷ್ಠ ಮೆಡೆಸ್‌ರನ್ನು ಉಲ್ಲೇಖಿಸುತ್ತದೆ. ತರುವಾಯ ಇವರನ್ನು ಪಾರ್ಥಿಯನ್ನರು, ಸಗರ್ತಿಯನ್ನರು, ಮರ್ಗಿಯನ್ನರು, ಬ್ಯಾಕ್ಟ್ರಿಯನ್ನರು, ಸೊಗ್‌ಡಿಯನ್ನರು ಎಂಬ ಅನ್ವರ್ಥ ನಾಮಗಳಿಂದ ಗುರುತಿಸಲಾಗಿದೆ. ಇವರುಗಳಲ್ಲಿ ಪರ್ಷ ಬುಡಕಟ್ಟಿನವರೆಂದು ಉರ್‌ಮಿಯಹ್ ಸರೋವರದ ಆಗ್ನೇಯ ದಂಡೆಯ ಮೇಲೆ ವಾಸಿಸುತ್ತಿದ್ದರು. ಇವರೇ ಎಲಿಮೈಟ್ ಜನರ ಮೂಲ ಪ್ರದೇಶವನ್ನು ಪರ್ಷಿಯ ಎಂದು ಕರೆದರು.

ಎಲಮೈಟ್‌ರ ರಾಜ ಖುಂಬನಿಗಶ್ (ಪ್ರ.ಶ.ಪೂ.743–717) ಬ್ಯಾಬಿಲೋನಿಯದ ಮೆರೊದಚ್–ಬಲದನ್‌ಗೆ ಅಸ್ಸೀರಿಯ ವಿರುದ್ಧ ಯುದ್ಧ ಮಾಡಲು ಸಹಾಯ ಮಾಡಿದ. ಇವನ ಅನಂತರ ಎರಡನೆಯ ಶುತ್ರುಕ್–ನಖ್ಖುಂತೆ (ಪ್ರ.ಶ.ಪೂ.716–699). 710ರಲ್ಲಿ ಅಸ್ಸೀರಿಯದ ರಾಜ ಸರ್‌ಗೊನ್ ಸೈನ್ಯದಿಂದಲೂ 708ರಲ್ಲಿ ಎಲಮೈಟ್ ಸರ್ಗೋನ್ ಸೈನ್ಯದಿಂದಲೂ ಸೋಲಿಸಲ್ಪಟ್ಟ. ಅಸ್ಸೀರಿಯದ ಸರ್ಗೋನ್ ಮಗ ಸೆನ್ನಚೆರಿಬ್ ಬ್ಯಾಬಿಲೋನಿಯ ಮೇಲೆ ವಿಜಯವನ್ನು ಪೂರ್ಣವಾಗಿ ಸಾಧಿಸಿದ. ಇವನು ಮೆರೊದಚ್–ಬಲದನ್‌ನನ್ನು ಎರಡನೆಯ ಬಾರಿ ಸಿಂಹಾಸನದಿಂದ ಉರುಳಿಸಿ, ತನ್ನ ಮಗ ಅಸುರ್–ನದಿನ್–ಶುಮಿಯನ್ನು ಪ್ರ.ಶ.ಪೂ.700ರಲ್ಲಿ ಬ್ಯಾಬಿಲೋನಿಯ ಸಿಂಹಾಸನದ ಮೇಲೆ ಕೂರಿಸಿದ. ಎಲಮೈಟ್‌ರ ಶುತ್ತಿರ್–ನಖ್ಖುಂತೆಯನ್ನು ಅವನ ಸಹೋದರ ಖಲ್ಲುಶು ಕೊಂದ. ಇವನು ಪ್ರ.ಶ.ಪೂ. 694ರಲ್ಲಿ ಬ್ಯಾಬಿಲೋನ್‌ನನ್ನು ವಶಪಡಿಸಿ ಕೊಂಡು ಅಶುರ್–ನದಿನ್–ಶುಮಿಯನ್ನು ಸೆರೆಹಿಡಿದ. ಇವನನ್ನು ಕುತಿರ್–ನಖ್ಖುಂತೆಕೊಂದು ಉತ್ತರಾಧಿಕಾರಿಯಾದ. ಆದರೆ ಮೂರನೆಯ ಖುಮ್ಮ–ಮೆನನ್‌ಗೋಸ್ಕರ (ಪ್ರ.ಶ.ಪೂ.692–89) ಸಿಂಹಾಸನ ತ್ಯಜಿಸಿದ. ಖುಮ್ಮ–ಮೆನನ್ ಹೊಸದೊಂದು ಸೈನ್ಯವನ್ನು ಕಟ್ಟಿ ಅಸ್ಸೀರಿಯ ವಿರುದ್ಧ ಹಲುಲೆಯಲ್ಲಿ ಪ್ರ.ಶ.ಪೂ.691ರಲ್ಲಿ ಯುದ್ಧಮಾಡಲು ಬ್ಯಾಬಿಲೋನಿಯರಿಗೆ ಸಹಾಯ ಮಾಡಿದ. ಈ ಯುದ್ಧದಲ್ಲಿ ಏನೂ ನಿರ್ಧಾರವಾಗಲಿಲ್ಲ. ಆದರೆ ಎರಡು ವರ್ಷದ ಅನಂತರ ಅಸ್ಸೀರಿಯದ ರಾಜ ಸೆನ್ನಚೆರಿಬ್ ಬ್ಯಾಬಿಲೋನಿಯವನ್ನು ನಾಶ ಮಾಡಿದ. ಮುಂದೆ ಬಂದ ಇಬ್ಬರು ಎಲಮೈಟ್ ರಾಜರ ಕಾಲದಲ್ಲಿ ಬ್ಯಾಬಿಲೋನಿಯರೊಡನೆ ಸಂಬಂಧ ಕುಸಿಯಿತು. ಎಲಮೈಟ್‌ರ ಕೊನೆಯ ರಾಜ ಮೂರನೆಯ ಖುಮ್ಮ–ಖಲ್‌ದಶ್ ಇವನನ್ನು ಅಸ್ಸೀರಿಯ ರಾಜ ಅಸುರ ಬಿನಿಪಾಲ್ ಪ್ರ.ಶ.ಪೂ.640ರಲ್ಲಿ ಸೆರೆಹಿಡಿದು ದೇಶವನ್ನು ಧೂಳಿಪಟ ಮಾಡಿದ. ಇವನು ತನ್ನ ಶಾಸನದಲ್ಲಿ ಸೂಸವನ್ನು ಘನಘೋರವಾಗಿ ನಾಶಮಾಡಿದೆ ನೆಂದು ಹೇಳಿಕೊಂಡಿದ್ದಾನೆ.

ಅಸುರ ಬಿನಿಪಾಲ್ (ಪ್ರ.ಶ.ಪೂ.646–539) ಹೇಳಿಕೊಂಡಷ್ಟು ಸೂಸ ನಾಶವಾಗಿರಲಿಲ್ಲ. ಮೂರನೆಯ ಖುಮ್ಮ–ಖಲ್‌ದಶ್ ಮಗ ಶುತ್ತಿರ್–ನಖ್ಖುಂತೆ ಸ್ವಲ್ಪಮಟ್ಟಿಗೆ ಸೂಸವನ್ನು ಪುನರುಜ್ಜೀವನಗೊಳಿಸಿದನಾದರೂ ಈ ಅರಸು ಮನೆತನ ಛಿದ್ರಗೊಂಡು ಸಣ್ಣ ರಾಜ್ಯಗಳಾದವು. ಆದರೂ 7ನೆಯ ಶತಮಾನದ ಕೊನೆಯಲ್ಲಿ ಶುತ್ತಿರ್–ನಖ್ಖುಂತೆ, ಖಲ್ಲುತುಶ್–ಇನ್–ಶುಶಿನಕ್ ಮತ್ತು ಅತ್ತ–ಖುಮ್ಮ–ಇನ್ನ–ಶುಶಿನಕ್– ಈ ಮೂವರು ರಾಜರು ತಮ್ಮನ್ನು ಸೂಸ ಮತ್ತು ಅಂಜ಼ನ್ ರಾಜರೆಂದು ಕರೆದುಕೊಳ್ಳುತ್ತಿದ್ದರು. ಆದರೆ ಅಷ್ಟೊತ್ತಿಗಾಗಲೇ ಅಕೆಮೆನಿಡರು ಅಂಶನ್ ಆಳಲು ಪ್ರಾರಂಭಿಸಿದ್ದರು. ಎಲಮೈಟ್‌ರ ಕೊನೆಯ ರಾಜ ತೆಂಪ್ತಿ–ಖುಮ್ಮ–ಇನ್–ಶುಶಿನಕ್ ಯಾವುದೇ ರಾಜಬಿರುದಾವಳಿಯನ್ನು ಧರಿಸಿರಲಿಲ್ಲ. ಪ್ರ.ಶ.ಪೂ.539ರಲ್ಲಿ ಸೂಸದಲ್ಲಿ ಅಕೇಮೆನಿಡ್‌ರ ಆಳಿಕೆ ಆರಂಭವಾಗಿತ್ತು. ಆದರೂ ಪಾರ್ಥಿಯನರ ಕಾಲದಲ್ಲಿ ಎಲೆಮೈಸ್ ರಾಜ್ಯ ಉಳಿದುಕೊಂಡಿತ್ತು. ಇದು 3ನೆಯ ಶತಮಾನದಲ್ಲಿ ಸಸ್ಸಾನಿಯರ ಧಾಳಿಯಲ್ಲಿ ಕೊನೆಗೊಂಡಿತು. ಎಲಮೈಸ್ ಈಳಂ ಕೇಂದ್ರ ಭಾಗವಾಗಿದ್ದರಿಂದ ಇದನ್ನು ಆಳುತ್ತಿದ್ದವರು ಎಲಮೈಟ್ ವಂಶದವರು ಆಗಿರಬೇಕು.

ಎಲಮೈಟ್‌ರು ವಿಗ್ರಹಾರಾಧಕರು ಹಾಗೂ ಬಹುದೇವತಾರಾಧಕರೂ ಆಗಿದ್ದರು. ಕಿರಿರಿಶ ಎಂಬ ಸ್ತ್ರೀ ದೇವತೆಯನ್ನು ಆ ಪ್ರದೇಶದಲ್ಲಿ ಬಹಳಷ್ಟು ಜನಸಮುದಾಯಗಳು ಪೂಜಿಸುತ್ತಿದ್ದವು. ಇವರ ಭಾಷೆ ಸೆಮಿಟಿಕ್, ಸುಮೇರಿಯನ್ ಮತ್ತು ಇಂಡೊ–

ಯುರೋಪಿಯನ್ ಭಾಷೆಗಳಿಗೆ ಸಂಬಂಧಿಸಿಲ್ಲ. ಅಕ್ಕಡಿಯನ್ನರ ಬೆಣೆಯಾಕಾರದ ಲಿಪಿಯನ್ನು ತಮ್ಮ ಭಾಷೆಗೆ ಬಳಸುತ್ತಿದ್ದರು. ಆದರೆ ಇವರ ಆದಿಹಂತದ ಬರವಣಿಗೆ ಲೀನಿಯರ್ ಎಲಮೈಟ್ ಲಿಪಿಗಿಂತಲೂ ಪೂರ್ವದ ಸ್ವಲ್ಪ ಹೆಚ್ಚು ಕಡಿಮೆ ಇದೇ ಮಾದರಿಯಲ್ಲಿ ಬರೆದ 2 ಶಾಸನಗಳು 2006ರಲ್ಲಿ ಜಿರಾಫ್ಟ್‌ನಲ್ಲಿ ದೊರೆತಿವೆ. ಕೆಲವು ಭಾಷಾವಿದ್ವಾಂಸರು ಈ ಭಾಷೆ ದಕ್ಷಿಣ ಭಾರತದ ದ್ರಾವಿಡ ಭಾಷೆಗಳು ಮತ್ತು ಪಾಕಿಸ್ತಾನದ ಬ್ರಾಹೂ ಈ ಭಾಷೆಗೆ ಸಂಬಂಧಿಸಿದ್ದೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಎಲಮೊ-ದ್ರಾವಿಡ ಭಾಷೆಗಳೆಂಬ ಪ್ರಭೇದ ಸಿಂಧು ಕಣಿವೆ ನಾಗರಿಕತೆ ಭಾಷೆಗೂ ಸಂಬಂಧಿಸಿದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ. ಸಿಂಧೂ-ಸರಸ್ವತಿ ಭಾಷೆಯನ್ನು ಸುಮೇರಿಯನರ ಭಾಷೆಯಲ್ಲಿ ಮೆಲುಹ್ಹ ಎಂದು ಕರೆಯಲಾಗಿದೆ. ಎಲಮೈಟ್ ಜನರ ಭಾಷೆಯಲ್ಲಿ ಹಲವಾರು ಹಂತಗಳನ್ನು ಗುರುತಿಸಲಾಗಿದೆ. ಕೊನೆಯ ಹಂತವೇ ಅಕೀಮೆನಿಡ್ ಸಾಮ್ರಾಜ್ಯದಲ್ಲಿ ಬಳಕೆಯಲ್ಲಿತ್ತು. ಪ್ರಾಯಶಃ ಇದು ಇಸ್ಲಾಂ ಧರ್ಮ ಹರಡುವವರೆಗೂ ಉಳಿದುಕೊಂಡಿರಬಹುದು. ಮಧ್ಯಕಾಲೀನ ಅರಬ್ ಇತಿಹಾಸಕಾರನಾದ ಇಬನ್-ಅಲ್-ನದಿಮ್ ಇರಾನಿನ ಫಹ್ಲವಿ (ಪಹ್ಲವಿ), ದರಿ, ಕುಜ಼ಿ, ಪರ್ಷಿಯ ಮತ್ತು ಸುರ್ಯನಿ ಮುಂತಾದವು ಇರಾನಿನ ಭಾಷೆಗಳಾಗಿದ್ದವು ಎಂದಿದ್ದಾನೆ. ಇಬನ್ ಮೊಕ್ಕಫ್ಫನು ಪರ್ಷಿಯ ದೇಶದ ಅರಸರ ಖಾಸಗೀ ಭಾಷೆ ಖುಜ಼್ ಆಗಿತ್ತೆಂದು ಉಲ್ಲೇಖಿಸಿದ್ದಾನೆ. ಖುಜ಼್ ಈಳಂ ಪದದ ತದ್ಭವ ಆಗಿದೆ.

ಈ ಸಂಸ್ಕೃತಿ ನೆಲೆಗಳ ವಿಸ್ತಾರವನ್ನು ನೋಡಿದರೆ ಇವುಗಳ ಜನಸಮುದಾಯಗಳು ಭೌಗೋಳಿಕವಾಗಿ ಇರಾನಿನ ಪ್ರಥಮ ಸಾಮ್ರಾಜ್ಯದ ಮೂಲ ಪುರುಷರೆನ್ನಬಹುದೆಂದು ಆಧುನಿಕ ಇತಿಹಾಸಕಾರರ ಅಭಿಪ್ರಾಯ. ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳಲ್ಲಿ ಎಲಮೈಟ್‌ನ ಉಲ್ಲೇಖವಿದೆ. ಡಾನಿಯಲ್ ಪಾಟ್ಸ್ ಪ್ರಕಾರ ಹೊಸ ಒಡಂಬಡಿಕೆಯಲ್ಲಿ ಎಲಮೈಟ್ ಭಾಷೆ ಪೆಂಟಿಕೊಸ್ಟ್‌ನಲ್ಲಿ ಮಾತನಾಡುತ್ತಿದ್ದ ಭಾಷೆಗಳಲ್ಲಿ ಒಂದಾಗಿತ್ತು ಮತ್ತು ನೆಸ್ಟೋರಿಯನ್ ಕ್ರೈಸ್ತರ ದಾಖಲೆಗಳಲ್ಲಿ ಈಳಂ ಹೆಸರು 1300ರಲ್ಲಿ ಇದ್ದುದ್ದನ್ನು ಉಲ್ಲೇಖಿಸಿದೆ.

(ಎ.ಎಸ್.;ಎನ್.ಎಲ್.)

# ಉ

**ಉಗ್ರರಾಷ್ಟ್ರಾಭಿಮಾನ:** ಅತಿಯೂ ವಿವೇಚನಾರಹಿತವೂ ಅನ್ಯಾಕ್ರಮಣ ಶೀಲವೂ ಆದ ಸ್ವದೇಶಪ್ರೇಮ (ಷೋವಿನಿಸಂ). ಫ್ರೆಂಚ್ ಯೋಧ ನಿಕೊಲಸ್ ಷೋವಿನ್ ಎಂಬುವನ ಹೆಸರಿನಿಂದ ಷೋವಿನಿಸಂ ಎಂಬ ಆಂಗ್ಲ ಪದ ಬಂದಿತು. ಫ್ರೆಂಚ್ ಮಹಾಕ್ರಾಂತಿಯ ಕದನಗಳಲ್ಲೂ ನೆಪೋಲಿಯನ್ನನ ಯುದ್ಧಗಳಲ್ಲೂ ಈತ ಭಾಗವಹಿಸಿ ಪದೇ ಪದೇ ಗಾಯಗೊಂಡು ಕೊನೆಗೆ ನಿವೃತ್ತನಾದ. ಈತನಿಗೆ ನೆಪೋಲಿಯನ್ನನಲ್ಲಿ ತೀವ್ರ ಭಕ್ತಿ. 1815ರ ಅನಂತರ ಫ್ರಾನ್ಸಿನಲ್ಲಿ ಅನೇಕರಿಗೆ ಸೈನ್ಯಶಕ್ತಿಯಲ್ಲಿ ಅಗಾಧವಾದ ವಿಶ್ವಾಸ ಬೆಳೆದಿತ್ತು. ನೆಪೋಲಿಯನ್ನನ ನಾಯಕತ್ವದಲ್ಲಿ ಆ ದೇಶ ಸಾಧಿಸಿದ ವಿಜಯಗಳಿಂದ ಸೈನಿಕ ನಾಯಕರನೇಕರು ಉನ್ನತ್ತರಾಗಿದ್ದರು. ದೇಶೋನ್ನತಿಗಾಗಿ ಏನು ಬೇಕಾದರೂ ಮಾಡಬಹುದು, ತಪ್ಪಿನ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂಬ ಧೋರಣೆ ಇವರಲ್ಲಿ ಬೆಳೆಯಿತು. ಇಂಥ ಪಂಥಕ್ಕೆ ಆದರ್ಶ ಪುರುಷನಾದ ಷೋವಿನ್ನನ ಹೆಸರೇ ಈ ಪಂಥಕ್ಕೂ ಬಂತು.

ಮುಂದೆ 1830ರ ದಶಕದಲ್ಲಿ ಈ ಬಗೆಯ ಆಕ್ರಮಣಶೀಲ ಸೈನಿಕರಶೌರ್ಯ ಫ್ರಾನ್ಸಿನಲ್ಲಿ ಬಹಳ ಲೇವಡಿಗೆ ಗುರಿಯಾಯಿತು. ಇದರ ಬಗ್ಗೆ ಟೀಕೆ, ವಿಡಂಬನೆ, ವ್ಯಂಗ್ಯಚಿತ್ರಗಳು ಮುಂಖಾನುಮುಂಖವಾಗಿ ಬಂದುವು. ಸೈನಿಕರು ಇಡೀ ದೇಶವನ್ನೆ ಸೈನಿಕ ಪಾಳೆಯವನ್ನಾಗಿ ಪರಿವರ್ತಿಸುತ್ತಿದ್ದಾರೆಂದು ನಾಗರಿಕ ನಾಯಕರನೇಕರು ಈ ಮನೋಭಾವವನ್ನು ಪ್ರತಿಭಟಿಸಿದರು. ಮುಂದೆ ಇತರ ದೇಶಗಳಲ್ಲೂ ಈ ಪದ ಬಳಕೆಗೆ ಬಂದು ಸ್ವಜನಾಭಿಮಾನ, ವಂಶಾಭಿಮಾನ ಮುಂತಾದವು ಅತಿಯಾದಾಗ ಅವನ್ನೂ ಷೋವಿನಿಸಂ ಎಂದು ಕರೆಯುವುದು ರೂಢಿಗೆ ಬಂದಿದೆ. ಜಿಂಗೊಯಿಸಂ (ಉದ್ಧತವಾದ) ಎಂಬುದನ್ನು ಅನೇಕ ವೇಳೆ ಷೋವಿನಿಸಂಗೆ ಸಮಾನಪದವಾಗಿ ಬಳಸಲಾಗುತ್ತದೆ. (ಎಸ್.ಎಆರ್.)

**ಉಚ್ಚಂಗಿ ಪಾಂಡ್ಯರು: ನೋಡಿ-ಕರ್ನಾಟಕದ ಕಿರು ಅರಸು ಮನೆತನಗಳು**

**ಉಜ್ಜಯಿನಿ[1]:** ಮಧ್ಯಪ್ರದೇಶ ರಾಜ್ಯದ ಪುರಾಣ ಪ್ರಸಿದ್ಧ ಐತಿಹಾಸಿಕ ನಗರ. ಚಂಬಲ್ ನದಿಯ ಉಪನದಿಯಾದ ಶಿಪ್ರ ನದಿಯ (ಉತ್ತರ ವಾಹಿನಿ) ದಂಡೆಯಲ್ಲಿದೆ. ಇಂದೋರಿನಿಂದ ಸು.55 ಕಿಮೀ ಮತ್ತು ಭೂಪಾಲಿನಿಂದ 180 ಕಿಮೀ ದೂರದಲ್ಲಿದೆ.

ಉಜ್ಜಯಿನಿಗೆ ಪ್ರತಿ ಕಲ್ಪದಲ್ಲೂ ಸ್ವರ್ಣಶೃಂಗಾ (ಕನಕಶೃಂಗಾ), ಕುಶಸ್ಥಲೀ, ಅವಂತಿಕಾ, ಅಮರಾವತೀ, ಚೂಡಾಮಣಿ, ಪದ್ಮಾವತೀ ಎಂಬ ಬೇರೆ ಬೇರೆ ಹೆಸರುಗಳಿದ್ದವೆಂದು ತಿಳಿದುಬರುತ್ತದೆ. ಸೋಮದೇವ ತನ್ನ ಕಥಾಸರಿತ್ಸಾಗರದಲ್ಲಿ ಈ ನಗರವನ್ನು ಭೋಗವತಿ, ಹಿರಣ್ಯಾವತಿ ಎಂದು ಕರೆದಿದ್ದಾನೆ. ಕವಿ ಕಾಳಿದಾಸನಂತೂ ಉಜ್ಜಯಿನಿಯನ್ನು ವಿಶಾಲಾ ಎಂದೇ ಕರೆದು ಇದರ ಸಮೃದ್ಧಿಯನ್ನು ಸೂಚಿಸಿದ್ದಾನೆ. ಪ್ರತಿಕಲ್ಪ, ಕುಮುದ್ವತಿ ಮತ್ತು ಶಿವಪುರಿ ಇವು ಉಜ್ಜಯಿನಿಯ ಇತರ ಹೆಸರುಗಳು.

ಪ್ರಸಿದ್ಧವಾದ ಪುರಾತನ ಸಪ್ತಪುರಿಗಳಲ್ಲಿ ಉಜ್ಜಯಿನಿ ಒಂದು ಮುಖ್ಯ ನಗರವಾಗಿದ್ದು ಇಂದಿಗೂ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದೆ. ಇದಕ್ಕೆ ಹಲವು ಧಾರ್ಮಿಕ ಹಾಗೂ ಪೌರಾಣಿಕ ಹಿನ್ನೆಲೆಗಳಿವೆ. ಸ್ಕಂದಪುರಾಣದ ಪ್ರಕಾರ ಅವಂತಿ ರಾಜ್ಯದ ರಾಜಧಾನಿ ಅವಂತೀಪುರವಾಗಿತ್ತು. ಇಲ್ಲಿ ತ್ರಿಪುರಾಸುರನ ಸಂಹಾರವಾದ ಮೇಲೆ ಶಿವನ ವಿಜಯದಿಂದ ಇದಕ್ಕೆ ಉಜ್ಜಯಿನಿ (ಉತ್+ಜಯಿನಿ, ಶ್ರೇಷ್ಠ ರೀತಿಯಲ್ಲಿ ಜಯ ಗಳಿಸುವ) ಎಂಬ ಹೆಸರು ಬಂದಿತು. ಅನಂತರ ಶಿವನು ಇಲ್ಲಿ ವಾಸಿಸುತ್ತಿದ್ದನೆಂದು ಕಥೆ. ಮತ್ಸ್ಯಪುರಾಣದಲ್ಲಿ ಶಿವ ಮತ್ತು ಅಂಧಕನ (ಪಾರ್ವತಿಯಲ್ಲಿ ಆಸಕ್ತನಾಗಿ ಅಂಧಕಾರದಲ್ಲಿ ಮುಳುಗಿದ್ದ ದಾನವನ) ನಡುವೆ ಇಲ್ಲಿಯೇ ಯುದ್ಧವಾಯಿತೆಂದಿದೆ. ಪ್ರಹ್ಲಾದನೂ ಇಲ್ಲಿಯೇ ವಿಷ್ಣು ಮತ್ತು ಮಹಾಕಾಲೇಶ್ವರನ ದರ್ಶನ ಪಡೆದನೆಂದು ವಾಮನ ಪುರಾಣ ತಿಳಿಸುತ್ತದೆ. ಅವಂತೀಪುರಿ ಪಾಪಗಳನ್ನು ನಾಶಮಾಡಿ ಮುಕ್ತಿಯನ್ನು ಕೊಡುತ್ತದೆಂದು ಗರುಡ, ಅಗ್ನಿ ಮತ್ತು ಸೌರ ಪುರಾಣಗಳು ತಿಳಿಸುತ್ತವೆ. ಇಲ್ಲಿಯ ಮಹರ್ಷಿ ಸಾಂದೀಪನಿ ಆಶ್ರಮದಲ್ಲಿ ಕೃಷ್ಣ ಮತ್ತು ಬಲರಾಮರು 14 ವಿದ್ಯೆ ಮತ್ತು 64 ಕಲೆಗಳನ್ನು ಅಭ್ಯಾಸ ಮಾಡಿದರೆಂದು ವಿಷ್ಣು, ಪದ್ಮ, ಆದಿ, ಬ್ರಹ್ಮಾಂಡ, ಬ್ರಹ್ಮವೈವರ್ತ ಪುರಾಣಗಳು ಹಾಗೂ ಭಾಗವತ ತಿಳಿಸುತ್ತವೆ. ಶಿವಪುರಾಣ ಅವಂತಿಕಾ ನಗರ ಹಾಗೂ ಮಹಾಕಾಲೇಶ್ವರನ ಮಹಾತ್ಮೆಯನ್ನು ವರ್ಣಿಸಿದೆ. ಇಲ್ಲಿಯ ಮಹಾಕಾಲೇಶ್ವರ ಲಿಂಗ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಪರಿಗಣಿಸಿರುವುದ ರಿಂದಲೂ ದಕ್ಷಿಣಾಮೂರ್ತಿಯೂ ಆದ್ದರಿಂದಲೂ ಉಜ್ಜಯಿನಿ ಪುಣ್ಯ ಕ್ಷೇತ್ರವಾಗಿದೆ.

ಋಗ್ವೇದ ಸಂಹಿತೆಯಲ್ಲಿ ಐದು ಸಲ ಅವಂತಿ ಎಂಬ ಹೆಸರು ಬಂದಿದ್ದರೂ ಇದು ಅವಂತಿ ನಗರ ಅಥವಾ ಅವಂತಿ ಪ್ರದೇಶವನ್ನು ಸೂಚಿಸುವುದಿಲ್ಲ. ಇದೇ ರೀತಿ ಯಜುರ್ವೇದ ಸಂಹಿತೆಗಳಲ್ಲೂ ಪ್ರಮುಖ ಬ್ರಾಹ್ಮಣ ಹಾಗೂ ಉಪನಿಷತ್ತುಗಳಲ್ಲೂ ಈ ಪದ ಅನೇಕ ಬಾರಿ ಬಂದರೂ ಇದರ ಅರ್ಥ ನಗರ/ಪ್ರದೇಶವನ್ನು ಸೂಚಿಸುವುದಿಲ್ಲ. ರಾಮಾಯಣದ ಕಿಷ್ಕಿಂಧಾ ಕಾಂಡದಲ್ಲಿ ರಾಮ ದೂತರನ್ನು (ಸೀತೆಯನ್ನು ಹುಡುಕಲು) ಅವಂತಿಗೂ ಕಳಿಸಿದನೆಂದು ಹೇಳಿದೆ. ಭಾರತದ ವನಪರ್ವದಲ್ಲಿ ಉಜ್ಜಯಿನಿಯ ಮಹಾಕಾಲ ತೀರ್ಥ ಹಾಗೂ ಕೋಟಿ ತೀರ್ಥದ ಉಲ್ಲೇಖವಿದೆ. ಉದ್ಯೋಗ ಪರ್ವದಲ್ಲಿ ಅವಂತಿಯ ರಾಜರಾದ ವಿಂದ ಮತ್ತು ಅನುವಿಂದರ ತಂಗಿ ಮಿತ್ರಾವಿಂದಾ ಕೃಷ್ಣನೊಡನೆ ವಿವಾಹವಾಗಿದ್ದ ಹಾಗೂ ಇಬ್ಬರೂ ಕೌರವರ ಪರವಾಗಿ ಯುದ್ಧದಲ್ಲಿ ಕಾದಿದ್ದ ವಿಷಯವಿದೆ. ಮಹಾಭಾರತದ ಯುದ್ಧಾನಂತರ ಹೈಹಯ ವಂಶದ ಶಾಖೆಗಳಲ್ಲಿ ಒಂದಾದ ವೀರಹೋತ್ರ ಮನೆತನದ 20 ರಾಜರು ಉಜ್ಜಯಿನಿಯಲ್ಲಿ ಆಳಿದರೆಂದು ಹೇಳುತ್ತಾರೆ.

ಸಂಸ್ಕೃತದ ಕವಿಗಳಾದ ಭಾಸ, ಶೂದ್ರಕ, ಭವಭೂತಿ, ಬಿಲ್ಹಣ, ಕಲ್ಹಣ, ಅಮರಸಿಂಹ, ಪದ್ಮಗುಪ್ತ, ಸೋಮದತ್ತ, ಕಾಳಿದಾಸ, ಬಾಣ ಮೊದಲಾದವರು ತಮ್ಮ ಕೃತಿಗಳಲ್ಲಿ ಅವಂತಿಯ ವರ್ಣನೆಯನ್ನು ವಿಪುಲವಾಗಿ ಮಾಡಿದ್ದಾರೆ. ಕಾಳಿದಾಸನಂತೂ ತನ್ನ ಮೇಘ ಸಂದೇಶದಲ್ಲಿ ಉಜ್ಜಯಿನಿಯ ಬಹಳ ಸುಂದರ ವರ್ಣನೆಯನ್ನು ಕೊಟ್ಟಿದ್ದಾನೆ. ಸ್ವರ್ಗವಾಸದಲ್ಲಿ ಪುಣ್ಯ ಪೂರ್ತಿಕ್ಷಯವಾದ ಅನಂತರ ಭೂಮಿಯಲ್ಲಿ ಹುಟ್ಟಲೇಬೇಕಲ್ಲವೇ? ಅದಕ್ಕಾಗಿ ಸ್ವರ್ಗವಾಸಿಗಳು ತಮ್ಮ ಉಳಿದ ಪುಣ್ಯವನ್ನೆಲ್ಲಾ ಒಟ್ಟುಗೂಡಿಸಿ ಭೂಮಿಯ ಮೇಲೊಂದು ಸ್ವರ್ಗವಿರಲೆಂದು ನಿರ್ಧರಿಸಿ ಉಜ್ಜಯಿನಿಯನ್ನು ಸ್ಥಾಪಿಸಿದರೆನ್ನುತ್ತಾನೆ. ಕಾಳಿದಾಸ, ವಿದೇಶೀಪ್ರವಾಸಿಗಳಾದ ಯುವಾನ್‌ಚಾಂಗ್, ಟಾಲಮಿ, ಪೆರಿಪ್ಲಸ್, ಬರ್ನಿಯರ್, ಆಲ್ಬೆರೂನಿ ಮತ್ತು ವಿದೇಶಿ ಲೇಖಕರು ಉಜ್ಜಯಿನಿಯ ಬಗ್ಗೆ ಬರೆದಿದ್ದಾರೆ.

ಭಾರತೀಯ ಜ್ಯೋತಿಶ್ಶಾಸ್ತ್ರದ ಪ್ರಕಾರವೂ ಉಜ್ಜಯಿನಿಗೆ ಮಹತ್ತ್ವವಿದೆ. ಭೂಮಧ್ಯ ರೇಖೆ ಉಜ್ಜಯಿನಿಯ ಮೂಲಕವೇ ಹಾದು ಹೋಗುತ್ತದೆ, ಇದು ಕರ್ಕಾಟಕ ವೃತ್ತದ ಮೇಲೆಯೇ ಇದೆ. ಇದರ ಉತ್ತರ ಅಕ್ಷಾಂಶ $23.11^{0}$ ಇದ್ದು ಪೂರ್ವ ರೇಖಾಂಶ $75.45^{0}$ ಇದೆ. ಅಂದರೆ ಯಾಮ್ಯೋತ್ತರ ರೇಖೆ (ವಿಷುವತ್ ರೇಖಾ) ಲಂಕ, ಉಜ್ಜಯಿನಿಯಿಂದ ಮೇಲೆ ಹಾದು ಕುರುಕ್ಷೇತ್ರ ಮತ್ತು ಮೇರು ಪರ್ವತಕ್ಕೆ ಹೋಗುತ್ತದೆ. ಉಜ್ಜಯಿನಿ ಚಂದ್ರ ಮತ್ತು ಅಂಗಾರಕರ ಜನ್ಮಭೂಮಿ ಎಂಬ ನಂಬಿಕೆ ಇರುವುದರಿಂದ ಭಾರತದ ತೀರ್ಥ ಯಾತ್ರೆಯೂ ಇಲ್ಲಿಂದಲೇ ಆರಂಭ. ಜಯಪುರದ ಜಯಸಿಂಹ (1728-34) ಇಲ್ಲಿ ಜಂತರ್ ಮಂತರ್ ಅಥವಾ ವೇದಶಾಲಾ ಎಂಬ ಖಗೋಳ ವೀಕ್ಷಣಾಲಯ ಕಟ್ಟಿಸಿದ.

ಉಜ್ಜಯಿನಿಯಲ್ಲಿ ಅನೇಕ ವಂಶೀಯರು ರಾಜ್ಯಭಾರ ಮಾಡಿದ್ದಾರೆ. ಬುದ್ಧನ ಕಾಲದಲ್ಲಿ (ಪ್ರ.ಶ.ಪೂ.ಸು.6-5ನೆಯ ಶತಮಾನ) ಉಜ್ಜಯಿನಿಯನ್ನು ಚಂಡ ಪ್ರದ್ಯೋತನೆಂಬ ಪ್ರತಾಪಿ ರಾಜ ಆಳುತ್ತಿದ್ದ. ಪ್ರ.ಶ.ಪೂ.273ರಲ್ಲಿ ಮಗಧರಾಜ ಬಿಂದುಸಾರನ ಆಳಿಕೆಗೆ ಉಜ್ಜಯಿನಿ ಸೇರಿತು. ಆಗ ಇವನ ಮಗ ಅಶೋಕ ಇಲ್ಲಿಯ ಪ್ರಶಾಸಕನಾಗಿದ್ದ. ಮೌರ್ಯರ ಅನಂತರ ಉಜ್ಜಯಿನಿ ಪ್ರ.ಶ.ಪೂ.63ರ ವರೆಗೆ ಶುಂಗರ ಅಧೀನದಲ್ಲಿತ್ತು. ಅನಂತರ ಕಣ್ವರು (ಪ್ರ.ಶ.ಪೂ.63-27), ಆಂಧ್ರ ಸಾತವಾಹನರು (ಪ್ರ.ಶ.ಪೂ.27-19), ಶಕ-ಕ್ಷತ್ರಪರು (ಪ್ರ.ಶ.ಪೂ.19-ಪ್ರ.ಶ.119), ಗುಪ್ತರು (ಸು.400-477), ಹೂಣರ ಆಕ್ರಮಣ (5ನೆಯ ಶತಮಾನ), ಹೂಣರ ಮಿಹಿರಕುಲನ ಸೋಲು (528), ಉಪಗುಪ್ತರು (603-),

ಥಾಣೇಶ್ವರ ಹರ್ಷವರ್ಧನನ ಅಧೀನದಲ್ಲಿ (648ರ ವರೆಗೆ), ಅನಂತರ ಪ್ರತೀಹಾರರು, ಗಹಡವಾಲರು, ರಾಷ್ಟ್ರಕೂಟರು, ಪರಮಾರರು (825–1235) ಉಜ್ಜಯಿನಿಯನ್ನು ಆಳಿದರು. ಇನ್ನೊಬ್ಬ ಪ್ರಸಿದ್ಧ ರಾಜನೆಂದರೆ ಪರಮಾರ ವಂಶದ ಭೋಜರಾಜ (1010–55). ಇವನು ಮಹಾಕಾಲೇಶ್ವರ ಮಂದಿರದ ಜೀರ್ಣೋದ್ಧಾರ ಮಾಡಿದ ಹಾಗೂ ರಾಜಧಾನಿಯನ್ನು ಉಜ್ಜಯಿನಿಯಿಂದ ಧಾರ್‌ಗೆ ಸ್ಥಳಾಂತರಿಸಿದ.

ಮುಂದಿನ ಐದು ಶತಕಗಳಲ್ಲಿ, ಅಂದರೆ 1235–1741ರ ವರೆಗೆ, ಉಜ್ಜಯಿನಿ ಅರಾಜಕತೆ ಮತ್ತು ಅಂಧಕಾರದಲ್ಲಿ ಮುಳುಗಿತ್ತು ಎನ್ನಬಹುದು. ಈ ಕಾಲ ಶುರುವಾದದ್ದು 1235ರಲ್ಲಿ ಶಮ್‌ಸುದ್ದೀನ್ ಅಲ್ತಮಷ್‌ನ ಧಾಳಿ, ಲೂಟಿ ಮತ್ತು ಮಹಾಕಾಲ ಮಂದಿರವನ್ನು ಧ್ವಂಸ ಮಾಡಿದಂದಿನಿಂದ. ಅನಂತರ ಮುಸ್ಲಿಮರ ಧಾಳಿ ಮತ್ತು ದಬ್ಬಾಳಿಕೆ ಒಂದಲ್ಲಾ ಒಂದು ರೀತಿ ನಡೆದೇ ಇತ್ತು. ಮುಸ್ಲಿಮರ ಧಾಳಿಗಳಿಂದ ಪ್ರಾರಂಭವಾದ ಈ ಗೊಂದಲಮಯ ವಾತಾವರಣ ಕೊನೆಯಾಗಿ, ಮಾಲ್ವಾದಲ್ಲಿ ರಾಜಕತೆಯ ನೆಮ್ಮದಿ ನೆಲೆಸಿದ್ದು 1741ರ ಅನಂತರವೇ. ಜಯಸಿಂಹ ಮತ್ತು ಮರಾಠರೊಂದಿಗೆ ಸಂಧಿಯಾಗಿ ಮಾಲ್ವವನ್ನು ಸಿಂಧಿಯಾಗೆ ಒಪ್ಪಿಸಿದ ಮೇಲೆಯೇ. ಸಿಂಧಿಯ ರಾಜ್ಯದ ಪ್ರಥಮ ಸಂಸ್ಥಾಪಕ ರಾಣೋಜಿ ಸಿಂಧಿ ಆಳಿದಾಗ ಅವನ ಮಂತ್ರಿ ರಾಮಚಂದ್ರರಾವ್ ಸುಕ್ತಂಕರ್ ಉಜ್ಜಯಿನಿಯ ಮಂದಿರಗಳ ಜೀರ್ಣೋದ್ಧಾರ ಮಾಡಿದ. 1810ರಲ್ಲಿ, ದೌಲತ್‌ರಾವ್ ಸಿಂಧಿಯನ ಕಾಲದಲ್ಲಿ, ರಾಜಧಾನಿಯನ್ನು ಉಜ್ಜಯಿನಿಯಿಂದ ಗ್ವಾಲಿಯರ್‌ಗೆ ವರ್ಗಾಯಿಸಲಾಯಿತು.

ವ್ಯಾಪಾರೋದ್ದಿಮೆಗಳಲ್ಲೂ ಉಜ್ಜಯಿನಿ ಹಿಂದಿನಿಂದಲೂ ಪ್ರಸಿದ್ಧಿಯಾಗಿತ್ತು. ಬೌದ್ಧ ಕಾಲದಲ್ಲಿ ಮಗಧದ ರಾಜಗೃಹದಿಂದ ಗೋದಾವರಿ ಹತ್ತಿರವಿರುವ ಪ್ರತಿಷ್ಠಾನದ (ಪೈಠಣ) ವರೆಗೂ ಇದ್ದ ದಕ್ಷಿಣಾಪಥವೆಂಬ ವ್ಯಾಪಾರ ಮಾರ್ಗದಲ್ಲಿ ಉಜ್ಜಯಿನಿ ಒಂದು ಪ್ರಮುಖ ತಂಗುದಾಣವಾಗಿತ್ತು. ಇಲ್ಲಿಂದ ಗೋಮೇದಿಕ ಕಲ್ಲು, ಚೀನದ ಪಾತ್ರೆ, ನಾಜೂಕಾದ ಮಕಮಲ್, ಒಳ್ಳೆಯ ಹತ್ತಿ ಮುಂತಾದ ಅನೇಕ ವಸ್ತುಗಳನ್ನು ರಫ್ತು ಮಾಡಲು ಬೇರಿಗಾಜ್‌ಗೆ (ಭರುಕಚ್ಛ) ಸಾಗಿಸಲಾಗುತ್ತಿತ್ತು. ಇಲ್ಲಿ ಗೋಮೇದಿಕದ ಗಣಿಗಳಿದ್ದುವು. ಎರಡನೆಯ ಶತಮಾನದಿಂದ ನಾಲ್ಕನೆಯ ಶತಮಾನದವರೆಗೆ ಶಕ ರಾಜ್ಯಭಾರದಲ್ಲಿ, ಅದರಲ್ಲೂ ಚಷ್ಟನ ಮತ್ತು ರುದ್ರದಾಮರ ಆಳಿಕೆಯ ಕಾಲದಲ್ಲಿ ಉಜ್ಜಯಿನಿ ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿದ್ದರಿಂದಲೇ ಇದನ್ನು ಸಾರ್ವಭೌಮ ಎಂದೂ ಕರೆಯಲಾಗಿದೆ.

ಉಜ್ಜಯಿನಿಯಲ್ಲಿ ಹಿಂದು, ಬೌದ್ಧ, ಜೈನ ಹಾಗೂ ಮುಸ್ಲಿಂ ಧರ್ಮಗಳು ಸಾಕಷ್ಟು ಮಾರ್ಪಾಡಾಗುತ್ತ ಬೆಳೆದು ಬಂದವು. ಉಜ್ಜಯಿನಿಯನ್ನು ಚಂಡ ಪ್ರದ್ಯೋತನೆಂಬ ಪ್ರತಾಪಿ ರಾಜ (ಪ್ರ.ಶ.ಪೂ.ಸು.6–5ನೆಯ ಶತಮಾನ) ಆಳುತ್ತಿದ್ದಾಗಲೇ ಬುದ್ಧನ ಪ್ರಸಿದ್ಧಿ ಇಲ್ಲಿಯ ವರೆಗೂ ಹರಡಿತ್ತು. ಬುದ್ಧನನ್ನು ತನ್ನ ರಾಜ್ಯಕ್ಕೆ ಕರೆತರಲು ರಾಜ ತನ್ನ ಪುರೋಹಿತನಾಗಿದ್ದ ಮಹಾಕಾತ್ಯಾಯನನನ್ನು ಕಳಿಸಿದ. ಮಹಾಕಾತ್ಯಾಯನನೇನೋ ಮೂರು ವೇದಗಳಲ್ಲಿ ಪಾರಂಗತ, ಮಹಾ ಪಂಡಿತ. ಅವನು ಬುದ್ಧನಿಂದ ಪ್ರಭಾವಿತನಾಗಿ, ತನ್ನ ಏಳು ಸಂಗಾತಿಗಳೊಂದಿಗೆ ಬೌದ್ಧಧರ್ಮಾವಲಂಬಿಯಾದ. ವಾಪಸ್ಸು ಬರುವಾಗ ಶ್ರೇಷ್ಠಿಯ ಮಗಳೊಬ್ಬಳು ತನ್ನ ನೀಳವಾದ ಕೂದಲನ್ನೇ ಮಾರಿ ಈ ಭಿಕ್ಷುಗಳಿಗೆ ಊಟ ನೀಡಿದ್ದಳು. ಈ ಕಥೆಯನ್ನು ಕೇಳಿ ರಾಜ ಅವಳನ್ನು ಮದುವೆಯಾದಾಗಿ ತಾನೂ ಬೌದ್ಧನಾದ. ಅವರ ಮಗಳೆ ಮುಂದೆ ಕಾವ್ಯಗಳಲ್ಲಿ ಪ್ರಸಿದ್ಧಿಯಾದ ವಾಸವದತ್ತಾ. ಮಹಾಕಾತ್ಯಾಯನ ಬುದ್ಧನ ನೆಚ್ಚಿನ ಶಿಷ್ಯನಾಗಿ, ಬೌದ್ಧಗ್ರಂಥಗಳ ಪ್ರಸಿದ್ಧ ಭಾಷ್ಯಕಾರನಾದ. ಅಶೋಕ ಉಜ್ಜಯಿನಿಯ ಪ್ರಶಾಸಕನಾಗಿದ್ದಾಗ ವಿದಿಶೆಯ ಕನ್ಯೆಯೊಬ್ಬಳನ್ನು ಮದುವೆಯಾಗಿ ಅವಳಿಂದ ಮಹೇಂದ್ರ ಮತ್ತು ಸಂಘಮಿತ್ರ ಎಂಬ ಮಕ್ಕಳನ್ನು ಪಡೆದ. ಕಾಲಾಂತರದಲ್ಲಿ ಬೌದ್ಧಮತ ಪ್ರಚಾರಕ್ಕೆ ಇವರನ್ನೇ ಶ್ರೀಲಂಕಕ್ಕೆ ಕಳಿಸಲಾಯಿತು. ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಪರಮಾರ್ಥ (499–569) ಬೌದ್ಧಧರ್ಮ ಪಾರಂಗತನಾಗಿ ಮತ ಪ್ರಚಾರಕ್ಕಾಗಿ ಚೀನ ದೇಶದ ಕ್ಯಾಂಟನ್‌ನಲ್ಲಿ 23 ವರ್ಷಗಳ ಕಾಲವಿದ್ದ. ಇವನು ಅನೇಕ ಸಂಸ್ಕೃತ ಗ್ರಂಥಗಳನ್ನು ಚೀನಿ ಭಾಷೆಗೆ ಅನುವಾದ ಮಾಡಿದನಲ್ಲದೆ ಬೌದ್ಧ ದಾರ್ಶನಿಕ ವಸುಬಂಧನ ಚರಿತ್ರೆಯನ್ನು ಚೀನಿ ಭಾಷೆಯಲ್ಲಿ ಬರೆದ. ಉಜ್ಜಯಿನಿಯ ಬೌದ್ಧ ಭಿಕ್ಷುಗಳು ಮಧ್ಯ ಏಷ್ಯಕ್ಕೆ ಪ್ರಚಾರಕ್ಕಾಗಿ ಹೋಗಿದ್ದರು. ಭಿಕ್ಷುಗಳಾದ ಲುಯಿಪ, ಜಂಟುಪ ಮೊದಲಾದವರು ಉಜ್ಜಯಿನಿಯಲ್ಲಿ ನೆಲೆಸಿದ್ದರು. ಉಜ್ಜಯಿನಿಯ ಸೇಠ್‌ನ ಮಗಳು ಈಸಿದಾಸಿಗೆ (ರಿಸೀದಾಸಿ) ತಂದೆ ಮಾಡಿದ ಮೂರು ಮದುವೆಯೂ ಸಫಲವಾಗಲಿಲ್ಲ. ಕೊನೆಗೆ ಈಕೆ ಸಂನ್ಯಾಸಿನಿಯಾಗಿ (ಥೇರಿಯಾಗಿ), ಸಕಲ ವಿದ್ಯಾ ಪಾರಂಗತಳಾಗಿ, ಬೌದ್ಧರಲ್ಲಿ ಒಬ್ಬ ಗಣನೀಯ ಥೇರಿಯಾಗಿ ಉಳಿದಳು. ಉಜ್ಜಯಿನಿಯ ವೇಶ್ಯೆ ಅಭಯಮಾತಾ, ತನ್ನ ಸಖಿ ಅಭಯಥೇರಿಯ ಜೊತೆ ಮಗ ಅಭಯನನ್ನು ಅನುಸರಿಸಿ ಬೌದ್ಧ ಸಂನ್ಯಾಸಿಯಾದ ಪ್ರಸಂಗವೂ ಬರುತ್ತದೆ. 7ನೆಯ ಶತಮಾನದಲ್ಲಿ ಭಿಕ್ಷು ಧರ್ಮರಕ್ಷಿತ ಇಲ್ಲಿಂದ ಚೀನಕ್ಕೆ ಬುದ್ಧನ ಸಂದೇಶ ತಲುಪಿಸಲು ಹೋಗಿದ್ದ. ಹೀಗಾಗಿ ಬೌದ್ಧಧರ್ಮದ ಮೊದಲ ನೆಲಗಟ್ಟು, ತಿಳಿವಳಿಕೆ ಹಾಗೂ ಪ್ರಚಾರ ಕಾರ್ಯಗಳಲ್ಲಿ ಉಜ್ಜಯಿನಿಯ ಪಾತ್ರ ಮಹತ್ತ್ವದ್ದಾಗಿದೆ. 24ನೆಯ ತೀರ್ಥಂಕರ ಮಹಾವೀರ ಉಜ್ಜಯಿನಿಯಲ್ಲಿ ಕೆಲ ಸಮಯ ತಪಸ್ಸು ಮಾಡಿದ್ದ. ಬಟ್ಟೆಯನ್ನೇ ಉಡದ ನಿರ್ಗ್ರಂಥ ಜೈನಮುನಿಗಳು ಕ್ರಮೇಣ ಒಂದು ತುಂಡು ಬಟ್ಟೆ ಉಟ್ಟು ಅರ್ಧ ಫಲಕರೆನಿಸಿಕೊಂಡುದು ಉಜ್ಜಯಿನಿಯಲ್ಲಿ.

ಇಲ್ಲಿಯ ಜ್ಯೋತಿರ್ಲಿಂಗ ಮಹಾಕಾಲೇಶ್ವರ, ಮಹಾಕಾಳೀ, ಶಿವನ ಅಂಬುಮಯಿ ಮೂರ್ತಿ ಅಥವಾ ಪಂಚ ಗಂಗೆಗಳಲ್ಲಿ ಒಂದೆನಿಸಿದ ಶಿಪ್ರಾ ನದಿ, ಕಾಲ ಭೈರವ ಇವುಗಳಿಂದಾಗಿ ಅತ್ಯಂತ ಪ್ರಾಚೀನ ಕಾಲದಿಂದಲೂ ಉಜ್ಜಯಿನಿ ಹಿಂದುಗಳ ಒಂದು ಪುಣ್ಯ ಕ್ಷೇತ್ರವೆನಿಸಿದೆ. ಶಂಕರಾಚಾರ್ಯರು (788–820) ಉಜ್ಜಯಿನಿಗೆ ಬಂದಿದ್ದರೆಂದೂ ಇಲ್ಲಿಯ ದತ್ತ ಅಖಾಡಾದಲ್ಲಿರುವ ಲಿಂಗವನ್ನು ಅವರೇ ಪ್ರತಿಷ್ಠಾಪಿಸಿದರೆಂದೂ ಹೇಳುತ್ತಾರೆ. ಇಲ್ಲಿಯ ಪಾಶುಪತಾಚಾರ್ಯರನ್ನು ಸೋಲಿಸಿ ಆ ಮತದಲ್ಲಿಯ ಬದಲಾವಣೆಗಳಿಗೆ ಆಚಾರ್ಯರೇ ಕಾರಣರಾದರೆಂದು ತಿಳಿದುಬರುತ್ತದೆ. ಮಾಧವಾಚಾರ್ಯನ (ವಿಜಯನಗರದ ಸಾಯಣಾಚಾರ್ಯನ ಸಹೋದರ) ಶಂಕರ ದಿಗ್ವಿಜಯದಲ್ಲಿ ಶಂಕರಾಚಾರ್ಯರು ಅವಂತಿ ದೇಶದಲ್ಲಿ ಭಟ್ಟಭಾಸ್ಕರನ ಅನಂತರ ಬಾಣ, ಮಯೂರ ಮತ್ತು ದಂಡಿಯನ್ನು ಶಾಸ್ತ್ರಾರ್ಥದಲ್ಲಿ ಸೋಲಿಸಿದ್ದರೆಂದು ನಿರೂಪಿಸಲಾಗಿದೆ. ಈಚೆಗಿನ ಆರ್ಯ ಸಮಾಜ, ರಾಧಾಸ್ವಾಮಿ ಸತ್ಸಂಗ, ರಾಮಕೃಷ್ಣ ಮಿಷನ್, ಥಿಯೊಸಾಫಿಕಲ್ ಸೊಸೈಟಿ, ಅರವಿಂದ ಸೊಸೈಟಿ, ಮುಕ್ತಾನಂದ ಮಿಷನ್ ಮುಂತಾದ ಅನೇಕ ಧರ್ಮ ಸಂಸ್ಥೆಗಳು ಉಜ್ಜಯಿನಿಯಲ್ಲಿ ಕಾರ್ಯಗತವಾಗಿವೆ. ಆದರೂ ಇಲ್ಲಿಯ ಮಹಾಕಾಲ, ಚೌರಾಸೀ (84) ಸಿದ್ಧ ಅಥವಾ ಯೋಗ ಲಿಂಗಗಳು, ಪಂಚಕ್ರೋಶಿ ಯಾತ್ರಾ, ನಾಗ ಪಂಚಮಿಯಲ್ಲಿ ಮಹಾಕಾಲ ಮಂದಿರದ ಎರಡನೆಯ ಮಹಡಿಯ ಮೇಲಿರುವ ನಾಗ ಸಂಧ್ಯೇಶ್ವರನ (ಕೇವಲ ವರ್ಷಕ್ಕೊಮ್ಮೆ) ದರ್ಶನ, ಕುಂಭಮೇಳ, ಹರಸಿದ್ಧಿ ಮಾತಾ ಎಲ್ಲವೂ ಉಜ್ಜಯಿನಿಯನ್ನು ಒಂದು ಮುಖ್ಯ ಶೈವ ಕ್ಷೇತ್ರವಾಗಿಸಿವೆ.

ಉಜ್ಜಯಿನಿಯಲ್ಲಿ ಮುಸ್ಲಿಮ್ ಧರ್ಮವೂ ಬೆಳೆದಿದೆ. ಬೋಹ್ರಾಗಳು ಮೊಗಲರ ಕಾಲದಿಂದಲೂ ಇಲ್ಲಿ ನೆಲಸತೊಡಗಿದರು. ಸಂಗಮವರಿ ಕಲ್ಲಿನ ರೋಜಾ ಮಸೀದಿ ಇವರ ಕೇಂದ್ರವಾಗಿದೆ. ಹಿಂದುಗಳ ಅನಂತರ ಮುಸ್ಲಿಮರದೇ (ಶಿಯ ಮತ್ತು ಸುನ್ನಿ) ಜನಸಂಖ್ಯೆಯಲ್ಲಿ ಅತಿ ದೊಡ್ಡ ಗುಂಪು.

ಭಾಸ, ಶೂದ್ರಕ, ಕಾಳಿದಾಸ, ರಾಜಶೇಖರ, ಭಾರವಿ, ಸುಬಂಧು, ದಂಡಿ, ಬಾಣ, ಭವಭೂತಿ, ಭರ್ತೃಹರಿ, ರಾಜ ಭೋಜ, ಪದ್ಮಗುಪ್ತ–ಪರಿಮಲ್ ಮುಂತಾದ ದೇಶದ ಅತ್ಯಂತ ಪ್ರಮುಖ ಸಂಸ್ಕೃತ ಕವಿ, ನಾಟಕಕಾರರುಗಳೆಲ್ಲಾ ಉಜ್ಜಯಿನಿಯವರೇ.

ಉಜ್ಜಯಿನಿಯಲ್ಲಿ ನೋಡಬೇಕಾದ ಅನೇಕ ಸ್ಥಳಗಳಿವೆ. ಇವುಗಳಲ್ಲಿ ಮುಖ್ಯವಾದವು: ಮಹಾಕಾಲೇಶ್ವರ, ಅದರ ಮೇಲಿನ ಅಂತಸ್ತಿನಲ್ಲಿರುವ ಓಂಕಾರೇಶ್ವರ, ಅದಕ್ಕೂ ಮೇಲಿರುವ ನಾಗ ಸಂಧ್ಯೇಶ್ವರ (ವರ್ಷಕ್ಕೊಮ್ಮೆ ಮಾತ್ರ), ಜೂನಾ ಮಹಾಕಾಲ, ಹರಸಿದ್ಧಿ ಮಾತಾ, ಬಡೇ ಗಣೇಶ್, ಶಿಪ್ರಾ ತಟ, ದತ್ತ ಅಖಾಡಾ, ಗೋಪಾಲ ಮಂದಿರ, ಗಢಕಾಳಿಕಾ, ಭರ್ತೃಹರಿ ಗುಹೆ, ಕಾಲಭೈರವ, ಸಿದ್ಧವಟ್, ಮಂಗಲನಾಥ್, ಚೌಬೀಸ್‌ಖಂಬಾ ದ್ವಾರ್, ಕಾಲಿಯಾದಹ್, ಅಂಕಪಾತ್ ಮತ್ತು ವೇದಶಾಲಾ. ವಿಕ್ರಮ ವಿಶ್ವವಿದ್ಯಾಲಯ, ಸಿಂಧಿಯ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಕಾಳಿದಾಸ ಅಕಾಡೆಮಿ, ರಾಷ್ಟ್ರೀಯ ವೇದವಿದ್ಯಾ ಪ್ರತಿಷ್ಠಾನ, ಕಾವೇರಿ ಶೋಧ ಸಂಸ್ಥಾನ್ ಮುಂತಾದವು ಇಲ್ಲಿಯ ಕೆಲವು ಪ್ರಮುಖ ಸಾಂಸ್ಕೃತಿಕ ವಿದ್ಯಾಸಂಸ್ಥೆಗಳಾಗಿವೆ. (ಜಿ.ಆರ್.ಆರ್.)

ಶಿಪ್ರ ನದಿಯ ತಿರುವಿನಲ್ಲಿ ಪುರಾತನ ದಿಬ್ಬವಿದೆ. ಇದರ ವಿಸ್ತೀರ್ಣ 1 ಕಿಮೀ×900ಮೀ; ಎತ್ತರ 10.7ಮೀ. ಎಮ್.ಬಿ.ಗರ್ದೆ ಇಲ್ಲಿ 1938–39ರಲ್ಲಿ ಉತ್ಖನನ ಮಾಡಿದರು. ಅನಂತರ ಎನ್.ಆರ್.ಬ್ಯಾನರ್ಜಿ (1955–58) ಹಾಗೂ ಕೆ.ಎಮ್.ಶ್ರೀವಾಸ್ತವ (1964) ವಿಸ್ತೃತ ಉತ್ಖನನ ನಡೆಸಿದರು. ಪ್ರಶ.ಪೂ.700 ರಿಂದ ಮಧ್ಯಯುಗೀನ ಕಾಲದವರೆಗಿನ 4 ಸಾಂಸ್ಕೃತಿಕ ಹಂತಗಳು ಇಲ್ಲಿ ದಾಖಲಾಗಿವೆ. ಆರಂಭದಿಂದಲೇ (1ನೆಯ ಹಂತ: ಪ್ರ.ಶ.ಪೂ.750–500) ವಸತಿ ಪಂಚಭುಜಾಕೃತಿಯ ಮಣ್ಣಿನ ಗೋಡೆ ಹಾಗೂ ಕಂದಕದಿಂದ ರಕ್ಷಣೆ ಪಡೆದಿತ್ತು. ನದಿಯ ನೀರು ಕಂದಕಕ್ಕೆ ಹರಿಯುವಂತೆ ವ್ಯವಸ್ಥೆ ಮಾಡಲಾಗಿತ್ತು. ರಕ್ಷಣಾ ಗೋಡೆಯನ್ನು ಪ್ರವಾಹದಿಂದ ರಕ್ಷಿಸಲು ಗೋಡೆ ಹಾಗೂ ನದಿಯ ನಡುವೆ ಸು. 116 ಮೀ ವರೆಗೆ ಮರದ ದಿಮ್ಮಿಗಳಿಂದ ಆಯತಾಕಾರದ ಕೋಣೆಗಳನ್ನು ನಿರ್ಮಿಸಲಾಗಿತ್ತು. ವಸತಿಯಿಂದ ರಕ್ಷಣಾಗೋಡೆಯ ಒಂದು ದ್ವಾರದವರೆಗೆ ನಿರ್ಮಿಸಿದ್ದ ಮಣ್ಣು–ಕಲ್ಲಿನ ರಸ್ತೆಯ ಅಳಿದುಳಿದ ಭಾಗಗಳು ಉತ್ಖನನದಲ್ಲಿ ಕಂಡುಬಂದವು. ಸುಟ್ಟ ಇಟ್ಟಿಗೆಯ ಚೂರುಗಳು ದೊರೆತರೂ ಕಟ್ಟಡ ಅವಶೇಷಗಳು ಇಲ್ಲಿ ಕಾಣಸಿಗಲಿಲ್ಲ. ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕೆಂಪುಪಾತ್ರೆ ಹಾಗೂ ವರ್ಣಚಿತ್ರಿತ ಬೂದುಬಣ್ಣದ ಪಾತ್ರೆಯ ಒಂದೆರಡು ಚೂರುಗಳು, ಸುಡಾವೆಮಣ್ಣಿನ ತಕಲಿ, ಮೂಳೆಯ ಬಾಣದ ಮೊನೆ, ಕಬ್ಬಿಣದ ಗರಗಸ, ಹಾರೆ, ಗುದ್ದಲಿ–ಇವು ಈ ಹಂತದ ಮುಖ್ಯ ಅವಶೇಷಗಳು.

ಎರಡನೆಯ ಹಂತದಲ್ಲಿ (ಪ್ರ.ಶ.ಪೂ. 500–200) ಮಣ್ಣು, ಹಸಿ ಮತ್ತು ಸುಟ್ಟ ಇಟ್ಟಿಗೆಯಿಂದ ಕಟ್ಟಿದ ಮನೆಗಳ ಭಾಗಗಳಿವೆ. ಮನೆಗೆ ಹೊಂದಿ ಉಂಗುರಗಳಿರುವ ಬಾವಿಗಳು ಹಾಗೂ ಇಂಗುಗುಣಿಗಳಿವೆ. ಗಜಪೃಷ್ಠಾಕೃತಿಯಲ್ಲಿ ರಚಿಸಿದ ಮಣ್ಣಿನ ವೇದಿಕೆ, ನೀರಿನ ಸಂಗ್ರಹಣೆಗಾಗಿ ಇಟ್ಟಿಗೆಯಿಂದ ಕಟ್ಟಿದ ಕೆರೆ, ನೀರಿನ ನಾಲೆ ಮುಂತಾದುವು ಗಮನಾರ್ಹ. ಕಬ್ಬಿಣ ಬಳಕೆ ಈ ಹಂತದಲ್ಲಿ ವ್ಯಾಪಕವಾಯಿತು. ಬಾಣ–ಭರ್ಜಿಯ ಮೊನೆ, ಗುದ್ದಲಿ, ಉಳಿ, ಕುದುರೆಯ ಕಡಿವಾಣ, ಸರಳು, ಕೊಕ್ಕೆ, ಹಲಗೆ, ಗಂಟೆ, ಬಾಣಲೆ, ಸರಪಳಿ, ಚೂರಿ ಮುಂತಾದ ಉಪಕರಣಗಳು ಗಣನೀಯ ಸಂಖ್ಯೆಯಲ್ಲಿವೆ. ಕಬ್ಬಿಣ ಕೈಗಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದುದನ್ನು ಕಬ್ಬಿಣದ ಅದಿರು, ಕಿಟ್ಟ, ಕುಲುಮೆ ಮುಂತಾದ ಅವಶೇಷಗಳು

ಸೂಚಿಸುತ್ತವೆ. ಮಣಿ ಹಾಗೂ ಮೂಳೆಯ ಬಾಣದ ಮೊನೆಗಳ ತಯಾರಿಕೆಯ ಕುರುಹುಗಳೂ ಈ ಹಂತದಲ್ಲಿವೆ. ಕಪ್ಪು-ಕೆಂಪು ದ್ವಿವರ್ಣ ಪಾತ್ರೆ ಹಾಗೂ ಕಪ್ಪು ಬಣ್ಣದ ಪಾತ್ರೆಗಳಲ್ಲದೆ ಔತ್ತರೇಯ ಕಪ್ಪು ಮೆರುಗಿನ ಪಾತ್ರೆಗಳು ಬಳಕೆಗೆ ಬಂದವು. ಇತರ ಅವಶೇಷಗಳೆಂದರೆ ತಾಮ್ರ ಹಾಗೂ ದಂತದ ಕಾಡಿಗೆಕಡ್ಡಿ, ದಂತದ ಕೇಶಸೂಜಿ ಮತ್ತು ಬಾಚಣಿಗೆ, ಮೂಳೆಯ ಲೇಖನಿಯಂತಹ ವಸ್ತು ಮತ್ತು ದಂತದ ದಾಳ. ಪ್ರ.ಶ.ಪೂ. 2ನೆಯ ಶತಮಾನದ ತಾಮ್ರ ಹಾಗೂ ದಂತದ ಮುದ್ರಾಂಕಿತ ನಾಣ್ಯಗಳೂ ಇಲ್ಲಿ ಸಿಕ್ಕಿವೆ. ಇವುಗಳ ಮೇಲೆ ಗೋಥಜಸ ತಿಸಕಸ, ಪಟ್ಟಿಯಾಲಸ, ತಿಸಕಸ ಎಂಬ ಬ್ರಾಹ್ಮಿ ಲಿಪಿಯ ಬರೆಹವಿದೆ.

ಮೂರನೆಯ ಹಂತದಲ್ಲಿ 3 ಉಪಹಂತಗಳಿವೆ. ಇವು ಶುಂಗ-ಸಾತವಾಹನ-ಕುಷಾಣ-ಗುಪ್ತ (ಪ್ರ.ಶ.ಪೂ.200-ಪ್ರ.ಶ. 500); ಗುಪ್ತರ ಅಂತ್ಯ ಕಾಲ-ಆದಿ ಪರಮಾರ (500-900), ಪರಮಾರ-ಮುಸಲ್ಮಾನ (900-1300). ಅರೆಪ್ರಶಸ್ತ ಶಿಲೆಗಳಿಂದ ಮಾಡಿದ ವಿವಿಧ ಆಕಾರದ ಮಣಿ ಹಾಗೂ ಬಳೆಗಳು, ಸುಡಾವೆಮಣ್ಣಿನ ಮನುಷ್ಯ ಹಾಗೂ ಪ್ರಾಣಿ-ಪಕ್ಷಿ ಗೊಂಬೆಗಳು, ತಾಮ್ರದ ಪಾತ್ರೆಗಳು, ಕ್ಷತ್ರಪ-ಕುಷಾಣ-ಪರಮಾರರ ನಾಣ್ಯಗಳು, ರೋಮಿನ ರಾಜನಾದ ಅಗಸ್ಟಸ್ ಹಡ್ರಿಯಾನಸ್ (117-34) ನಾಣ್ಯದ ಅಚ್ಚು, ಗ್ರೀಕ್-ರೋಮನ್ ರಾಜರ ನಾಣ್ಯಗಳ ಮಣ್ಣಿನ ಪಡಿಯಚ್ಚು ಇವು ಈ ಹಂತದಿಂದ ಸಂಗ್ರಹಿಸಲಾದ ಅವಶೇಷಗಳು. ಗಣೇಶ, ಮಹಿಷಾಸುರ ಮರ್ದಿನಿ, ಶಿವ ಹಾಗೂ ವಿಷ್ಣುವಿನ ಉಬ್ಬುಚಿತ್ರಗಳುಳ್ಳ ಹರಕೆ ತಟ್ಟೆಗಳೂ ದೊರೆತಿವೆ. ಮಣ್ಣಿನ ಕರಡಿಕೆಯ ಹಿಡಿಕೆಯೊಂದರ ಮೇಲೆ ಬ್ರಾಹ್ಮಿ ಲಿಪಿಯಲ್ಲಿ ನಾಗಬುಧಿಸ ಪವಜಿತಸ ಎಂದು ಕೊರೆಯಲಾಗಿದೆ. ಇದರ ಕಾಲಮಾನ 1ನೆಯ ಶತಮಾನ.

ನಾಲ್ಕನೆಯ ಹಂತದಲ್ಲಿ (1300-1500) ವಸತಿಯನ್ನು ಸ್ಥಳಾಂತರಿಸಲಾಯಿತು. ಇದರಿಂದ ರಕ್ಷಣಾಗೋಡೆ ಹಾಗೂ ಕಂದಕ ಪಾಳುಬಿದ್ದವು. ಚಿನ್ನದ ಕೆಲವು ಆಭರಣ, ಕಬ್ಬಿಣದ ಉಪಕರಣಗಳು, ಮಂದಗೆಂಪು ಬಣ್ಣದ ಪಾತ್ರೆಗಳನ್ನು ಬಿಟ್ಟರೆ ಗಮನಾರ್ಹ ಅವಶೇಷಗಳು ಇಲ್ಲಿಲ್ಲ. ಔರಂಗಜ಼ೇಬ್, ಶಾಹ್ ಆಲಮ್, ದೌಲತ್‌ರಾವ್ ಸಿಂಧಿಯ ಹಾಗೂ ಜಂಕೋಜಿರಾವ್ ಸಿಂಧಿಯ ಮುಂತಾದವರ ಕೆಲವು ನಾಣ್ಯಗಳು ಸಿಕ್ಕಿವೆ. (ಎಸ್.ಕೆ.ಜಿ.)

**ಉಜ್ಜಯಿನಿ²**:ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿರುವ ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠ ಇರುವ ಸ್ಥಳ. ಇಲ್ಲಿಯ ಮರುಳಸಿದ್ಧ ದೇವಾಲಯದ ವಿಶಾಲ ಸಂಕೀರ್ಣದಲ್ಲಿ ಗೌರಮ್ಮ, ವೀರಭದ್ರ, ಚೌಡೇಶ್ವರಿ, ಅರಕೆ ಬಸವಣ್ಣ, ಬಂಗಾರ ಬಸವಣ್ಣ, ಮುದ್ದಿರಾಮ, ಗುಂಡ ಬ್ರಹ್ಮಯ್ಯರ ಕಿರು ದೇವಾಲಯಗಳಿವೆ ಮತ್ತು ಸಿದ್ಧಲಿಂಗ ಶಿವಚಾರ್ಯರ ಗದ್ದುಗೆ ಇದೆ. ಮರುಳಸಿದ್ಧ ದೇವಾಲಯದ ಶಿಖರದಲ್ಲಿ ಶ್ರೀಪೀಠದ ಮೂಲಗೋತ್ರ ಪುರುಷನಾದ ನಿಂತ ನಂದಿ ವಿಗ್ರಹವಿದೆ. ಪೀಠದ ಮಠ ಮತ್ತು ದೇವಾಲಯ ಗಳು ಗೋಡೆಗಳಿಂದ ಆವೃತಗೊಂಡಿವೆ. ಪೀಠದ ವಿಶಾಲ ವಾಸ್ತು-ಶಿಲ್ಪಕಲೆ ಹಾಗೂ ಅದರ ಸಾಂಸ್ಕೃತಿಕ ವೈವಿಧ್ಯತೆಯನ್ನು ನೋಡಿ ಹಂಪಿಯನ್ನು ಹೊರನೋಡು, ಉಜ್ಜಯಿನಿಯನ್ನು ಒಳನೋಡು ಎಂಬ ನಾಣ್ನುಡಿ ಹುಟ್ಟಿಕೊಂಡಿದೆ.

ಮಹಾದ್ವಾರಗಳು: ಉಜ್ಜಯಿನಿ ಸದ್ಧರ್ಮ ಪೀಠಸ್ಥಳದ ಸುತ್ತಲೂ ಪ್ರಾಕಾರವಿದ್ದು ಉತ್ತರ ದಕ್ಷಿಣ ದಿಕ್ಕಿನ ಗೋಡೆಗಳಲ್ಲಿ ಗೋಪುರ ಸಹಿತ ಮಹಾದ್ವಾರಗಳಿವೆ. ತಂಗಾಳಿ ಗೋಪುರವೆಂದು ಕರೆಯುವ ಉತ್ತರ ದ್ವಾರ, ದಕ್ಷಿಣ ದ್ವಾರ-ಕೈಲಾಸ ದ್ವಾರವೆಂದು ಕರೆಯುವ ಈ ಎರಡು ಮಹಾದ್ವಾರಗಳು ಇತ್ತೀಚಿನ ವರ್ಷಗಳಲ್ಲಿ ಜೀರ್ಣೋದ್ಧಾರಗೊಂಡಿವೆ. ದಕ್ಷಿಣ ಮಹಾದ್ವಾರದ ಮೇಲೆ ವರ್ಣಮಯ ಶಿವಪಾರ್ವತಿಯರ ವಿಗ್ರಹವನ್ನು ಪ್ರತಿಷ್ಠಾಪಿಸಿದೆ. ಬದಿಗಳಲ್ಲಿ ಶ್ರೀಪೀಠದ ಲಿಂಗೈಕ್ಯ ಜಗದ್ಗುರುಗಳಾದ ಸಿದ್ದಲಿಂಗಶಿವಚಾರ್ಯರ ಮತ್ತು ಸಿದ್ದೇಶ್ವರ ಶಿವಾಚಾರ್ಯರ ಗಾರೆ ವಿಗ್ರಹಗಳಿವೆ. ಅಧಿಷ್ಠಾನದಲ್ಲಿ ಭಕ್ತರ ಹಾಗೂ ಇನ್ನಿತರ ಶಿಲ್ಪಗಳಿವೆ.

ಉತ್ತರದ ಮಹಾದ್ವಾರಕ್ಕೆ ಎತ್ತರವಾದ ಗೋಪುರವಿದ್ದು ಅದರಲ್ಲಿ ನಾಲ್ಕು ಅಂತಸ್ತುಗಳಿವೆ. ದ್ವಾರ ಬಂಧದಲ್ಲಿ ನಾಲ್ಕು ಶಾಖೆಗಳಿವೆ. ಇವುಗಳ ಪಕ್ಕದಲ್ಲಿ ಶೈವದ್ವಾರಪಾಲಿಕರ ಮತ್ತು ದ್ವಾರ ಕಂಬದ ಬದಿಗಳಲ್ಲಿ ಪುಷ್ಪಧಾರಣಿಯ ಶಿಲ್ಪಗಳಿವೆ. ಲಲಾಟ ಬಿಂಬದಲ್ಲಿ ನಂದಿ ಸಮೇತ ಶಿವಪಾರ್ವತಿಯರ ಬಿಂಬವಿದೆ. ಅದರ ಬದಿಗಿನ ಒಳಮುಖ ಪಟ್ಟಿಕೆಯಲ್ಲಿ ಶೈವ ದ್ವಾರಪಾಲಕ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಉತ್ತರದ ಮಹಾದ್ವಾರದ ಒಳಗಡೆ ಪ್ರವೇಶದ ಪಾರ್ಶ್ವಗಳಲ್ಲಿನ ಎತ್ತರದ ಅಧಿಷ್ಠಾನದಲ್ಲಿ ಸಿಂಹ, ಆಂಜನೇಯ ಮತ್ತು ನಾಗರಹಾವಿನ ಉಬ್ಬುಶಿಲ್ಪಗಳಿದ್ದು ಭಿತ್ತಿನಲ್ಲಿ ಕಮಲದ ಅಲಂಕರಣವಿದೆ. ಉತ್ತರದ ಮಹಾದ್ವಾರದ ಎದುರಿಗೆ ಭವ್ಯವಾದ ಸ್ತಂಭಗಳುಳ್ಳ ಒಂದು ಉಯ್ಯಾಲೆ ಮಂಟಪವಿದೆ. ಈ ಮಂಟಪದ ಕಂಬಗಳ ಮೇಲೆ ಅಲ್ಲಲ್ಲಿ ಉಬ್ಬು ಶಿಲ್ಪಗಳಿದ್ದು ಅವು ಆನೆ, ದ್ವಾರಪಾಲಕ, ಹಂಸ, ಬಾಳೆಯ ಗಿಡ, ಶಿವಲಿಂಗವನ್ನು ಪೂಜಿಸುವ ಕಿನ್ನರ, ಬೇಡರ ಕಣ್ಣಪ್ಪ, ನೃತ್ಯಗಾರರು, ನಟರಾಜ, ನೃತ್ಯಗಾರ್ತಿ, ಕೈಮುಗಿದು ಕುಳಿತ ಟಗರು ತಲೆಯುಳ್ಳ ದಕ್ಷಬ್ರಹ್ಮ ಮುಂತಾದ ಉಬ್ಬುಶಿಲ್ಪಗಳಿವೆ.

ಮರುಳಸಿದ್ಧ ದೇವರ ದೊಡ್ಡ ದೇವಾಲಯ ಉತ್ತರಾಭಿಮುಖವಾಗಿದೆ. ಇದರಲ್ಲಿ ಐದು ಗರ್ಭಗೃಹಗಳು, ಒಂದು ಅಂತರಾಳ ಮಹಾಮಂಟಪ ಮತ್ತು ಮೂರು ಮುಖಮಂಟಪ ಗಳಿವೆ. ಗರ್ಭಗೃಹದಲ್ಲೂ ಸಿದ್ದೇಶ್ವರ ಅಥವಾ ಜಗದ್ಗುರು ಮರುಳಸಿದ್ಧಸ್ವಾಮಿ ಶಿವಲಿಂಗವಿದೆ. ಶಿವಲಿಂಗಕ್ಕೆ ಸ್ವಾಮಿಯ ಮುಖವಾಡವನ್ನು ಧರಿಸುವರು. ಸಭಾಮಂಟಪದಲ್ಲಿ ನಾಲ್ಕು ಕೇಂದ್ರ ಸ್ತಂಭಗಳುಳ್ಳ ರಂಗಮಂಟಪವಿದೆ. ಇದರ ಮಧ್ಯ ಭಿತ್ತಿನಲ್ಲಿ ಗೋಲಾಕಾರದ ಸಹಸ್ರದಳವುಳ್ಳ ಕಮಲದ ಭುವನೇಶ್ವರಿ ಕೆತ್ತನೆ ವೈಶಿಷ್ಟ್ಯಪೂರ್ಣವಾಗಿದೆ. ಕಂಬಗಳ ಬೋದುಗೆಯ ಮೇಲೆ ಭಿತ್ತಿನಲ್ಲಿ ಚೌಕಾದ ಪಟ್ಟಿಕೆಗಳಿದ್ದು ಅವುಗಳಲ್ಲಿ ಪತ್ನಿಯರ ಸಮೇತ ವಾಹನರೂಢರಾದ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಭುವನೇಶ್ವರಿಯ ಮೂರನೆಯ ಮತ್ತು ಆರನೆಯ ಸುತ್ತುಗಳಲ್ಲಿ ಕ್ರಮವಾಗಿ 126 ಮತ್ತು 32 ಚೆಲುವಿನ ಸ್ತ್ರೀ ವಿಗ್ರಹಗಳಿವೆ. ಇದರ ಮಧ್ಯಭಾಗದಲ್ಲಿ ನಕ್ಷತ್ರಾಕಾರದ ಮೂರು ವೃತ್ತಾಕಾರ ಪಟ್ಟಿಕೆಗಳಿವೆ. ಈ ಪಟ್ಟಿಕೆಗಳ ಒಳಮುಖದಲ್ಲಿ ಕಿರು ಕಮಲಗಳಿವೆ. ಈ ಕಮಲ ಪೀಠಗಳ ಮೇಲೆ ಸುತ್ತಲೂ 174 ಯತಿವರ್ಯರ ಶಿಲ್ಪಗಳಿರುವುದು ಒಂದು ಅಪರೂಪದ ವಿಶಿಷ್ಟ ಲಕ್ಷಣ. ಸಭಾಮಂಟಪವೂ 15 ಅಂಕಣಗಳಷ್ಟು ವಿಸ್ತಾರವಾಗಿದ್ದು ಮಧ್ಯದಲ್ಲಿ ಐದೈದು ಕಂಬಗಳ ಎರಡು ಸಾಲುಗಳಿವೆ. ಇದರ ಒಂದೊಂದು ಬದಿಯಲ್ಲಿ ಎರಡೆರಡು ಗರ್ಭಗೃಹಗಳಿವೆ. ಅಂತರಾಳದ ಹೊರಗಿನ ಎರಡು ಬದಿಗಳಲ್ಲಿ ಮತ್ತು ಸಭಾ ಮಂಟಪದ ಎರಡು ಬದಿಗಳಲ್ಲಿ ಎರಡೆರಡು, ಒಟ್ಟು ಹತ್ತು ದೇವಕೋಷ್ಠಗಳಿವೆ. ಅಂತರಾಳದ ಬದಿಗಳಲ್ಲಿಯ ದೇವಕೋಷ್ಠಗಳಲ್ಲಿ ಗಣೇಶ ಮತ್ತು ವಸ್ತ್ರಾಭರಣಗಳಿಂದ ಅಲಂಕೃತನಾಗಿ ಪದ್ಮಾಸನದಲ್ಲಿರುವ ಒಬ್ಬ ಯತಿಯ ಶಿಲ್ಪವಿದೆ. ಹಸ್ತಗಳ ಯೋಗಮುದ್ರೆಯಲ್ಲಿವೆ. ಇದು ಪಂಚಾಚಾರ್ಯರಲ್ಲಿ ಒಬ್ಬರಾದ ಪಂಡಿತಾರಾಧ್ಯರನ್ನೂ ಪ್ರತಿನಿಧಿಸುತ್ತದೆಯೆಂದು ಹೇಳಿಕೆ.

ಯತೀಶ್ವರ, ಉಜ್ಜಯಿನಿ

ಸಭಾಮಂಟಪ ಮತ್ತು ಉತ್ಸವ ಮಂಟಪಗಳ ಬದಿಗೆ ನಂದಿಯ ವಿಗ್ರಹವಿದೆ. ನಂದಿಯನ್ನು ಮರುಳಸಿದ್ಧ ಸ್ವಾಮಿಯ ಕಡೆಗೆ ಮುಖಮಾಡಿ ಕೂಡಿಸಲಾಗಿದೆ. ಸಭಾಮಂಟಪದ ಬಲಗಡೆ ಎರಡನೆಯ ಗರ್ಭಗೃಹದಲ್ಲಿ ಭವ್ಯವಾದ ಗೋಪಾಲಕೃಷ್ಣನ ವಿಗ್ರಹವನ್ನು ಅಲಂಕೃತ ಆಯತಾಕಾರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದ ಎಡಬದಿಯ ಎರಡನೆಯ ಗರ್ಭಗೃಹ ಚಚ್ಚೌಕಾಗಿದ್ದು ಅದರ ಮಧ್ಯದಲ್ಲಿ ಎತ್ತರ ಆಯತಾಕಾರ ಪೀಠದ ಮೇಲೆ ದ್ವಿಭುಜ ವೀರಭದ್ರನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ವೀರಭದ್ರನಿಗೆ ವಸ್ತ್ರಾಭರಣದ ಜೊತೆ ರುಂಡಮಾಲೆಯನ್ನು ಧರಿಸಲಾಗಿದೆ. ಬಾಗಿಲು ಚೌಕಟ್ಟಿನಲ್ಲಿರುವ ಶೈವ ದ್ವಾರಪಾಲಕರ ಕೈಗಳಲ್ಲಿ ಕತ್ತಿ, ಡಮರು, ತ್ರಿಶೂಲ ಮತ್ತು ನಾಗಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ವೀರಭದ್ರನ ಗರ್ಭಗೃಹದ ಉತ್ತರ ಮುಖದ ಹೊರಗೋಡೆಯ ಗೂಡಿನಲ್ಲಿ ಯೋಗಮುದ್ರೆಯಲ್ಲಿ ಕುಳಿತ ಯತಿಯ ವಿಗ್ರಹವಿದೆ. ಬದಿಗಳಲ್ಲಿ ಹಣ್ಣಿನ ತಾಟುಹಿಡಿದ ಸೇವಕಿಯರು, ಇಬ್ಬರು ವಾದ್ಯಮೇಳದವರೂ ಇದ್ದಾರೆ. ಸಭಾಮಂಟಪದ ಎಡಗಡೆ ಮತ್ತು ಗೋಪಾಲಕೃಷ್ಣನ ಗರ್ಭಗುಡಿಯ ಮುಂದೆ ಇರುವ ಮಂಟಪದಲ್ಲಿ ಶ್ರೀಮರುಳಸಿದ್ಧಸ್ವಾಮಿಯ ಮತ್ತು ಗೌರಮ್ಮರುಳ್ಳ ವಿಗ್ರಹಗಳಿವೆ. ಶಿವ-ಪಾರ್ವತಿಯರ ಪ್ರತಿರೂಪದಲ್ಲಿ ಬೆಳ್ಳಿ ಲೋಹದ ಈ ವಿಗ್ರಹವನ್ನು ಉತ್ಸವಮೂರ್ತಿಯನ್ನಾಗಿ ಬಳಸುವರು. ಈ ಸಭಾಮಂಟಪದ ಮುಂದಿನ ಕಂಬದಲ್ಲಿ ಸೇವುಣರ ಕಾಲದ (1268) ಒಂದು ಶಾಸನವೂ ಸಭಾಮಂಟಪದ ಮುಂದಿನ

ಅಂಕಣದ ತೊಲೆಯಲ್ಲಿ ಒಂದು ಶಾಸನವೂ ಇದೆ. ಇಲ್ಲಿರುವ ಎರಡು ಲೋಹದ ಗಂಟೆಗಳ ಮೇಲೂ ಶಾಸನಗಳಿವೆ. ಹಾಗೇ ಸಭಾಮಂಟಪದ ಪೂರ್ವ–ಪಶ್ಚಿಮದಲ್ಲಿ ಇರುವ ಎರಡು ಮುಖಮಂಟಪಗಳಿವೆ. ಪಶ್ಚಿಮ ಮುಖಮಂಟಪದ ಎಡಭಾಗದ ಕಟ್ಟೆಯ ಮೇಲೆ ಕತ್ತಿಯನ್ನು ಕೆಳಗಡೆ ಇಟ್ಟು ನಿಂತಿರುವ ಭಕ್ತನೊಬ್ಬನ ಶಿಲ್ಪವಿದೆ. ಆತನ ಬಲಗಡೆಯ ಕಟ್ಟೆಯ ಮೇಲೆ ವಿಜಯನಗರ ಅರಸ ಸದಾಶಿವರಾಯನ ಕಾಲದ ಶಾಸನವಿದೆ.

ಮಹಾಮಂಟಪದಲ್ಲಿ ಬೃಹದಾಕಾರದ ವೀರಭದ್ರನ ವಿಗ್ರಹವಿದೆ. ವೀರಭದ್ರ ಚತುರ್ಭುಜಧಾರಿ, ಕೈಗಳಲ್ಲಿ ಕತ್ತಿ, ಬಾಣ, ಬಿಲ್ಲು ಮತ್ತು ಗುರಾಣಿಗಳಿವೆ. ಕಿರೀಟದಲ್ಲಿ ಚಿಕ್ಕ ಶಿವಲಿಂಗವಿದೆ. ಹಣೆಯ ಮಧ್ಯ ಮೂರನೆಯ ಕಣ್ಣಿದೆ. ಆತನು ಕಿರೀಟಮುಕುಟ, ಕುಂಡಲ,



**ಶಾಲಿಮರಳಸಿದ್ಧ ದೇವಾಲಯದ ಗರ್ಭಗೃಹ**

ಹಾರ ರುಂಡಮಾಲ, ಪಟ್ಟಿ, ಕಡಗ, ಬಳೆ ಇತ್ಯಾದಿ ಆಭರಣಗಳನ್ನು ಧರಿಸಿದ್ದಾನೆ. ಸೊಂಟಪಟ್ಟಿಯಲ್ಲಿ ಕಠಾರಿಯನ್ನು ಕಟ್ಟಿದ್ದಾನೆ. ಕೆಳಗಡೆ ಬಲಕ್ಕೆ ದಕನು ಕೈಮುಗಿದು ನಿಂತಿದ್ದಾನೆ.

ಅರಿಕೆಗುಡಿ: ಮರುಳಸಿದ್ಧ ದೇವಾಲಯದ ಮಹಾಮಂಟಪಕ್ಕೆ ಹೊಂದಿದ ನಂದಿ ದೇವಾಲಯದ ಹಿಂದುಗಡೆ ಇರುವ ದೇವಾಲಯವನ್ನು ಅರಿಕೆಗುಡಿ ಎಂದು ಕರೆಯುವರು. ಭಿತ್ತಿಯ ಮೂರು ಮುಖಗಳ ಮಧ್ಯಭಾಗದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಶಿವನ ವಿಗ್ರಹವಿದ್ದು ಪೀಠದಲ್ಲಿ ನಂದಿಯಿದೆ. ನೃತ್ಯ ಗಣೇಶ, ಗೋಪಾಲಕೃಷ್ಣ, ವೀರಭದ್ರ ಮುಂತಾದ ವಿಗ್ರಹಗಳಿವೆ. ಮರಳಸಿದ್ಧ ದೇವಾಲಯದ ಗರ್ಭಗೃಹದ ಪಶ್ಚಿಮ ಗೋಡೆಯ ಪ್ರನಾಳ ಪಟ್ಟಿಕೆಯನ್ನು ಬದಿಯ ಮಜ್ಜನ ಕುಂಡ ತೀರ್ಥಕ್ಕೆ ಸೇರಿಸಲಾಗಿದ್ದು ದೇವರ ಅಭಿಷೇಕದ ನೀರು ಪೀಠದ ಜಲಹರಿಯ ಮೂಲಕ ಮಜ್ಜನ ಕುಂಡವನ್ನು ಸೇರುವುದು. ಈ ಕುಂಡಕ್ಕೆ ಒಂದು ತೆರೆದ ಸ್ತಂಭ ಮಂಟಪವಿದ್ದು ಅದಕ್ಕೆ ಎತ್ತರದ ಅಧಿಷ್ಠಾನ ಮತ್ತು ದ್ರಾವಿಡ ಮಾದರಿಯ ಶಿಖರವಿದೆ. ಈ ದೇವಾಲಯದ ಸಭಾಮಂಟಪ ಮತ್ತು ಮಹಾಮಂಟಪಗಳ ಮಾಳಿಗೆ ಅಂಚಿನ ಸುತ್ತಲೂ ಇಟ್ಟಿಗೆ–ಗಾರೆಯ ಗೋಡೆಯಿದ್ದು ಅದರಲ್ಲಿ ಸಾಲಾಗಿ ಗೂಡುಗಳಿವೆ. ಈ ಗೂಡುಗಳಲ್ಲಿ ಗಾರೆಯ ದೇವತೆಗಳ ಬಣ್ಣದ ವಿಗ್ರಹಗಳಿವೆ. ಈ ದೇವಾಲಯದ ಎಡಬದಿಯಲ್ಲಿ ಅದಕ್ಕೆ ಸಮಾನಾಂತರವಾಗಿ ಪೂರ್ವಾಭಿಮುಖವಾದ ಗೌರಮ್ಮ ದೇವಾಲಯವಿದೆ. ಇಲ್ಲಿರುವ ಪಾರ್ವತಿಯ ವಿಗ್ರಹವನ್ನೆ ಗೌರಮ್ಮನೆಂದು ಕರೆಯುವರು. ಈ ದೇವಿಯು ದ್ವಿಭುಜಳಾಗಿ, ಕೈಗಳಲ್ಲಿ ಕಮಲಗಳನ್ನು ಎತ್ತಿ ಹಿಡಿದಿದ್ದು, ವಸ್ತ್ರಾಭರಣಭೂಷಿತಳಾಗಿದ್ದಾಳೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಶಿಖರವಿದ್ದು ಅದರ ಮುಂದೆ ದೇವಕೋಷ್ಠವುಳ್ಳ ಅರ್ಧವೃತ್ತಾಕಾರದ ಶುಕನಾಸಿಯಿದೆ.

ಮರುಳಸಿದ್ಧ ದೇವಾಲಯದ ಹಿಂಭಾಗದಲ್ಲಿ ಒಂದು ಶಿಲಾಸ್ತಂಭ ಮತ್ತೆರಡು ಕಬ್ಬಿಣದ ದೀಪಸ್ತಂಭಗಳು ಇದರ ಮುಂಭಾಗದಲ್ಲಿವೆ. ಒಂದು ದೀಪಸ್ತಂಭದಲ್ಲಿ ಕೈಮುಗಿದು ಕುಳಿತ ಭಕ್ತ, ನಂದಿ, ಗಣೇಶ ಹಾಗೂ ನಟರಾಜನ ಚಿತ್ರಗಳಿವೆ. ನಟರಾಜನು ನಾಗರ ಹಾವಿನ ಮೇಲೆ ನೃತ್ಯ ಮಾಡುತ್ತಿದ್ದು ಬಲಗೈಯಲ್ಲಿ ಫಲ ಮತ್ತು ಎಡಗೈಯಲ್ಲಿ ನಾಗರಹಾವಿನ ಬಾಲವನ್ನು ಹಿಡಿದಿರುವ ಚಿತ್ರವಿದೆ. ಇವುಗಳ ಜೊತೆಗೆ ಈ ದೇವಾಲಯ ಬದಿಗಳಲ್ಲಿ ಏಕಶಿಲೆಯ ಎರಡು ನಂದಿಕಂಬಗಳನ್ನು ನಿಲ್ಲಿಸಲಾಗಿದೆ. ಈ ದೇವಾಲಯದ ಎದುರಿಗೆ ನಂದಿ ಮಂಟಪವಿದೆ. ಇಲ್ಲಿ ಯತಿಗಳುಳ್ಳ ತೋರಣದ ಮಧ್ಯಭಾಗದಲ್ಲಿ ನವಗ್ರಹ ಪೀಠವಿದ್ದು ಅದನ್ನು ಎತ್ತರದ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲಾಗಿದೆ. ಮಧ್ಯದಲ್ಲಿ ಜೋಡುಪಾದಗಳ ಉಬ್ಬುಶಿಲ್ಪವಿದೆ. ಈ ಪಾದಗಳ ಸುತ್ತಲೂ ಕಮಲಗಳ ಅಲಂಕರಣವಿದೆ.

ಬಸವಣ್ಣನ ದೇವಾಲಯ ಬಂಗಾರ ಬಸವಣ್ಣನ (ನಂದಿ) ದೇವಾಲಯದ ಪೂರ್ವಕ್ಕಿದ್ದು ದಕ್ಷಿಣಕ್ಕೆ ಮುಖಮಾಡಿದೆ. ಇದನ್ನು ಬಂಗಾರದ ಕಾಳಮ್ಮ ದೇವಾಲಯವೆಂದೂ ಕರೆಯುವರು. ಇದು ಏಕಕೂಟ ಮಾದರಿಯ ದೇವಾಲಯವಾಗಿದ್ದು ಇದರ ನಾಲ್ಕು ಮೂಲೆಗಳಲ್ಲಿ ನಾಲ್ಕು ಅರ್ಧಗಂಭಗಳಿವೆ. ಇದರ ಮಧ್ಯದಲ್ಲಿ ನಂದಿಯ ವಿಗ್ರಹವಿದೆ. ಬದಿಗಳಲ್ಲಿ ಶ್ರವಣಕುಮಾರ ಮತ್ತು ಗುಂಡ ಬ್ರಹ್ಮಯ್ಯರ ವಿಗ್ರಹಗಳಿವೆ. ಇಲ್ಲಿ ಶ್ರವಣಕುಮಾರ ತನ್ನ ತಂದೆ–ತಾಯಿಗಳನ್ನು ಕಾವಡಿಯಲ್ಲಿ ಹೊತ್ತುಕೊಂಡು ನಡೆಯುವ ದೃಶ್ಯವಿದೆ. ಹಾಗೂ ಇಲ್ಲಿ ಗುಂಡಬ್ರಹ್ಮಯ್ಯರಿಬ್ಬರು ಶಿವಲಿಂಗವನ್ನು ತಮ್ಮ ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯನ್ನು ಅದರ ಮೇಲಿಟ್ಟು ನಿಂತಿರುವರು. ಈರ್ವರ ಮಧ್ಯ ಎರಡು ಈಟಿಗಳನ್ನು ಸಮಾಂತರದಲ್ಲಿ ಮೇಲಕ್ಕೆ ಮುಖಮಾಡಿ ನಿಲ್ಲಿಸಲಾಗಿದೆ. ಇಬ್ಬರ ಮೇಲಿರುವ ಮಕರ ತೋರಣದ ಮಧ್ಯದಲ್ಲಿ ಕೀರ್ತಿಮುಖವನ್ನು ಚಿತ್ರಿಸಲಾಗಿದೆ.

ಗೌರಮ್ಮ ದೇವಾಲಯ, ಅದರ ಮಜ್ಜನ ಕುಂಡದ ಮಂಟಪ, ಬಂಗಾರ ಬಸವಣ್ಣನ ದೇವಾಲಯ, ದೀಪಸ್ತಂಭಗಳು, ನಂದಿಸ್ತಂಭಗಳು, ನವಗ್ರಹ ಪೀಠ, ನಂದಿ ದೇವಾಲಯ ಪ್ರಾಕಾರ ಗೋಡೆ–ಮಹಾದ್ವಾರ–ಗೋಪುರ, ಉಯ್ಯಾಲೆ ಕಂಬ, ಶ್ರವಣಕುಮಾರನ ಶಿಲ್ಪ ಇವುಗಳು ವಿಜಯನಗರ ಕಾಲದ ಶೈಲಿಯಲ್ಲಿವೆ. ಕಾಲ ಸು. 15–18ನೆಯ ಶತಮಾನ. ಉಳಿದವುಗಳು ಸು. 12–13ನೆಯ ಶತಮಾನ.

ಮರುಳಸಿದ್ಧ ದೇವಾಲಯದ ಎಡಬದಿಗೆ ಪಶ್ಚಿಮದ ಪ್ರಾಕಾರ ಗೋಡೆಗೆ ಹೊಂದಿಕೊಂಡು ಉಜ್ಜಯಿನಿ ಸದ್ಧರ್ಮ ಸಿಂಹಾಸನ ಪೀಠದ ಭವ್ಯ ಮಠವಿದೆ. ಈ ಮಠವನ್ನು ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಿದ್ದು ಇದರ ಮೇಲೆ ಮಂಟಪ ಮತ್ತು ಬದಿಗಳಲ್ಲಿ ಕೋಣೆಗಳನ್ನು ನಿರ್ಮಿಸಲಾಗಿದೆ. ಪ್ರವೇಶದ್ವಾರದ ಮೇಲೆ ಶಿವ–ಪಾರ್ವತಿಯರು ನಂದಿಯ ಮೇಲೆ ಆಸೀನರಾಗಿರುವ ಬೃಹತ್ ವರ್ಣಮಯ ಗೊಂಬೆಗಳಿವೆ. ಪ್ರವೇಶದ್ವಾರದ ಮುಖಮಂಟಪದ ಮೊದಲ ಕಂಬದ ಮೇಲೆ ಕಮಲವಿಡಿದ ಆನೆಗಳ ಸಾಲು, ಹಾರ–ಹೂ ಬಳ್ಳಿಗಳ ಅಲಂಕರಣಗಳಿವೆ. ಈ ಕಂಬದ ದಕ್ಷಿಣ ಮುಖದ ಒಂದನೆಯ ಪಟ್ಟಿಕೆಯಲ್ಲಿ ಶಿವನು ಪಾರ್ವತಿಯ ಗಲ್ಲವನ್ನು ಹಿಡಿದಿರುವ ಚಿತ್ರವಿದೆ. ಬದಿಗಳಲ್ಲಿ ಸೇವಕಿಯರು ಕಮಲಗಳನ್ನು ಹಿಡಿದು ನಿಂತಿರುವರು. ಎರಡನೆಯ ಪಟ್ಟಿಕೆಯಲ್ಲಿ ನೃತ್ಯಗಾರ್ತಿಯರಿದ್ದಾರೆ. ಮೂರರಲ್ಲಿ ಹಾರ ಮತ್ತು ಗಿಳಿಗಳ ಚಿತ್ರಗಳಿವೆ. ಎರಡನೆಯ ಕಂಬದ ಪಶ್ಚಿಮ ಮುಖದ ಮೊದಲನೆಯ ಪಟ್ಟಿಕೆಯಲ್ಲಿ ಷಣ್ಮುಖನು ನವಿಲನ್ನೇರಿ ಕುಳಿತಿದ್ದಾನೆ. ಎರಡನೆಯ ಫಲಕದಲ್ಲಿ ಭಕ್ತರು ನಂದಿ ಮುಖವುಳ್ಳ ಮಾನವನನ್ನು ತಮ್ಮ ಮೇಲೆ ಕೂಡಿಸಿಕೊಂಡಿರುವ ಇನ್ನೂ ಕೆಲವು ಚಿತ್ರಗಳಿವೆ. ಈ ಕಂಬದ ಉತ್ತರ ಮುಖದ ಪಟ್ಟಿಕೆಯಲ್ಲಿ ಯತಿವರ್ಯರ ಮಧ್ಯ ಲಕ್ಷ್ಮಿಯಿರುವಳು. ನಾಲ್ಕನೆಯ ಪಟ್ಟಿಕೆಯಲ್ಲಿ ಹಂಸ, ನವಿಲು, ಸೇವಕಿಯರಿದ್ದಾರೆ. ಅವರ ಮೇಲೆ ರೆಕ್ಕೆಯುಳ್ಳ ಅಪ್ಸರೆಯರು ಯತಿಯನ್ನು ಒಯ್ಯುತ್ತಿರುವ ದೃಶ್ಯವಿದೆ. ಮಠದ ಮಹಾದ್ವಾರದ ಬಾಗಿಲಲ್ಲಿರುವ ಕುಸುರಿ ಕೆತ್ತನೆಯ ಅಲಂಕರಣ ಹೊಯ್ಸಳ ಮಾದರಿಯನ್ನು ನೆನಪು ಮಾಡುತ್ತದೆ. ಇತರೆ ತೋರಣಗಳ ಮಧ್ಯೆ ದೇವತೆಗಳ ತೋರಣದಲ್ಲಿ ಒಂದೇ ಸಾಲಿನಲ್ಲಿ ಅಷ್ಟದಿಕ್ಪಾಲರನ್ನು ತೋರಿಸಲಾಗಿದೆ. ಮಠದ ಕಟ್ಟಿಗೆಯ ಕಂಬಗಳು, ಬಾಗಿಲ ಚೌಕಟ್ಟು ಇತ್ಯಾದಿಗಳ ಕಾಲ 19ನೆಯ ಶತಮಾನದ ಅಂತ್ಯಭಾಗದ್ದೆನ್ನುವರು. ಈ ಮಠದ ಒಳಗಡೆ ಒಂದು ವಿಶಾಲವಾದ ಕಟ್ಟಿಗೆಯ ಸ್ತಂಭ ಮಂಟಪವಿದ್ದು ಅದನ್ನು ದಾರುಕ ಮಂಟಪವೆಂದು ಕರೆಯುವರು. ಅಲ್ಲಿ ಧಾರ್ಮಿಕ ಕ್ರಿಯೆಗಳು ಜರುಗುತ್ತವೆ. ಅವು ವಟುಗಳಿಗೆ ಅಯ್ಯಾಚಾರ, ಅಶುದ್ಧರಾದವರನ್ನು ಶುದ್ಧಗೊಳಿಸುವುದು ಇತ್ಯಾದಿಗಳಾಗಿವೆ. ದಾರುಕ ಮಂಟಪ ಪಕ್ಕದಲ್ಲಿ ಪಶ್ಚಿಮಕ್ಕೆ ಪೀಠದ ಪೂರ್ವ ಜಗದ್ಗುರುಗಳ ಶಿವಪೂಜಾ ಮಂದಿರವಿದೆ ಹಾಗೂ ಶಿಲೆಯ ಗಣೇಶ ಮತ್ತು ನಾಗ ವಿಗ್ರಹಗಳಿವೆ. ದಾರುಕ ಮಂಟಪಕ್ಕೆ ಹೊಂದಿ ಉತ್ತರಕ್ಕೆ ನ್ಯಾಯಾಲಯದ ಕೊಠಡಿಯಿದೆ. ಅಲ್ಲಿ ಪೀಠದ ಜಗದ್ಗುರುಗಳ ನ್ಯಾಯ ಕಟ್ಟೆಯಿದೆ. ಅಲ್ಲಿ ಮಠದಯ್ಯಗಳ ಮತ್ತು ಇನ್ನಿತರರ ಜಗಳ, ವ್ಯಾಜ್ಯಗಳನ್ನು ಇತ್ಯರ್ಥ ಮಾಡಲಾಗುತ್ತಿತ್ತು. ಈ ಕೊಠಡಿಯ ಒಂದು ಕಂಬದಲ್ಲಿ ಮಲೆನಾಡಿನ ದುರ್ಗಮ್ಮನ ಲೋಹದ ವಿಗ್ರಹವಿರುವುದು ವಿಶಿಷ್ಟ. ಈ ಕೋಣೆಯ ಹಿಂಬದಿಯಲ್ಲಿ ಖಜಾನೆ ಮತ್ತು ಸ್ನಾನದ ಕೊಠಡಿಗಳಿವೆ. ದಾರುಕ ಮಂಟಪ, ಶಿವಪೂಜಾ ಮಂದಿರ, ನ್ಯಾಯಾಲಯ ಈ ಭಾಗಗಳೆಲ್ಲ ಸುಮಾರು ಇನ್ನೂರು ವರ್ಷ ಪ್ರಾಚೀನದ್ದಾಗಿವೆ. ಇಲ್ಲಿ ವಿಶಾಲವಾದ ಶಿಲಾಸ್ತಂಭಗಳುಳ್ಳ ಪಂಚಾಚಾರ್ಯರ ಮಂಟಪವಿದ್ದು ಏಕಸಾಲಿನಲ್ಲಿ ಐದು ಎತ್ತರದ ಆಸನ ಕಟ್ಟೆಗಳಿವೆ. ಪಂಚಾಚಾರ್ಯರು ಈ ಪೀಠಗಳಲ್ಲಿ ಕುಳಿತು ಭಕ್ತರಿಗೆ ಧರ್ಮೋಪದೇಶ ಮಾಡುತ್ತಿದ್ದರೆನ್ನುವರು.

ಪಂಚಾಚಾರ್ಯರ ಮಂಟಪಕ್ಕೆ ಹೊಂದಿ ಉತ್ತರಕ್ಕೆ ಒಂದು ವಿಶಾಲವಾದ ಗೋಶಾಲೆಯಿದೆ. ಹಿಂದೆ ಇಲ್ಲಿ 108 ಗೋವುಗಳನ್ನು ಕಟ್ಟಿ ಅವುಗಳ ಸಗಣಿಯಿಂದ ಬೆರಣಿ ಮಾಡಿ ಸುಟ್ಟು ವಿಭೂತಿ ಮಾಡಿಕೊಳ್ಳುತ್ತಿದ್ದರು. ಈಗ ಇವೆಲ್ಲ ಸ್ಥಗಿತಗೊಂಡಿದೆ. ಗೋಶಾಲೆಯ ಪೂರ್ವಕ್ಕೆ ದಾಸೋಹ ಮಂದಿರವಿದೆ.

ಪೀಠದ ಪೂರ್ವ ಗೋಡೆಯ ಒಳಭಾಗದಲ್ಲಿ ಹಲವಾರು ಉಬ್ಬು ಶಿಲ್ಪಗಳಿದ್ದು ಅವುಗಳಲ್ಲಿ ಹಾವು-ಸೂರ್ಯನನ್ನು ನುಂಗಲು ಹೊರಟಿರುವ, ಜೋಡು ಮೀನುಗಳು ಒಂದನ್ನೊಂದು ಮುದ್ದು ಮಾಡುತ್ತಿರುವ, ಬೇಡರ ಕಣ್ಣಪ್ಪ ಮತ್ತು ಬತ್ತಲೆಯಲ್ಲಿ ಕುಳಿತ ಮಹಿಳೆ ಮುಖ್ಯವೆನಿಸಿವೆ. ಇವು ವಿಜಯನಗರ ಕಾಲದ್ದಾಗಿವೆ.

ಉಜ್ಜಯನಿ ಸದ್ಧರ್ಮ ಪೀಠದ ದಕ್ಷಿಣ ಪ್ರವೇಶ ದ್ವಾರಕ್ಕೆ ಹೊಂದಿ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಯ ಗದ್ದುಗೆಯನ್ನು ನಿರ್ಮಿಸಲಾಗಿದೆ. ಈ ಗದ್ದುಗೆಯ ತಳಪಾಯ ಆಯತಾಕಾರದ ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸಿದ್ಧಲಿಂಗಶಿವಾಚಾರ್ಯರ ಅಮೃತ ಶಿಲಾವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹದ ಗದ್ದುಗೆಯ ಮೇಲೆ ಸಿದ್ಧಲಿಂಗಶಿವಚಾರ್ಯರು ಲಿಂಗೈಕ್ಯರಾದ ದಿನಾಂಕ ಗುರುತಿಸಿದೆ.

ಇಲ್ಲಿರುವ ಇನ್ನಿತರ ಮುಖ್ಯ ದೇವಾಲಯಗಳಲ್ಲಿ ರಾಮಲಿಂಗ ದೇವಾಲಯ ಒಂದು. ಇದನ್ನು ರಾಮಿ ತಂದೆಯ ದೇವಸ್ಥಾನ ಎನ್ನುವರು. ಇಲ್ಲಿನ ನವರಂಗದಲ್ಲಿ ಆರು ವೀರ ಗಲ್ಲುಗಳಿವೆ. ತಲೆಬೋಳು ಸಿದ್ಧಪ್ಪನ ದೇವಾಲಯ, ಹರಿಜನಕೇರಿಯ ಮರುಳಸಿದ್ಧ ದೇವಾಲಯ ಮತ್ತು ಜಟ್ಟಪ್ಪನ ದೇವಾಲಯಗಳು ಮುಖ್ಯವಾದವು.

ನಂದಿಕಂಬ: ವಿವಿಧ ಎತ್ತರದ ಕಂಬಗಳ ತುದಿಯಲ್ಲಿ ಕುಳಿತ ನಂದಿಗಳುಳ್ಳ ನಂದಿ ಕಂಬಗಳು ಸಾಮಾನ್ಯವಾಗಿ ವೀರಶೈವ ಧಾರ್ಮಿಕ ಸ್ಥಳಗಳಲ್ಲಿ ಕಂಡುಬರುತ್ತವೆ. ಈ ಕಂಬಗಳಲ್ಲಿ ಭಕ್ತರ ಚಿತ್ರಗಳೂ ಇರುತ್ತವೆ. ಈ ರೀತಿಯ ನಂದಿ ಕಂಬಗಳು ಉಜ್ಜಯಿನಿ ಸದ್ಧರ್ಮ ಪೀಠದ ಸಂಕಿರಣದಲ್ಲಿ ಈ ಗ್ರಾಮದ ಸಾಂತನಳ್ಳಿ ಕೊಡದಪ್ಪನ ಮನೆಯ ಮುಂದೆ, ಸಿದ್ಧಲಿಂಗಯ್ಯನವರ ಮನೆಯ ಮುಂದೆ ಮತ್ತು ಜಟ್ಟಪ್ಪನ ಗುಡಿಯ ಮುಂದೆ ಇರುತ್ತವೆ. ಹನುಮಂತನ ಗುಡಿಗೆ ಹೋಗುವ ದಾರಿಯ ಬದಿಗಿರುವ ಸಿದ್ಧಲಿಂಗಯ್ಯನವರ ಮನೆ ಮುಂದೆ ಒಂದು ನಂದಿ ಕಂಬ ವಿದೆ. ಅದರ ಮೇಲೆ ಕುಳಿತ ಭಂಗಿಯ ನಂದಿಯಿದ್ದು ಅದರ ಒಂದು ಮುಖದಲ್ಲಿ ಭಕ್ತನೊಬ್ಬ ಕೈಮುಗಿದು ನಿಂತಿದ್ದಾನೆ. ಇನ್ನೊಂದು ಮುಖದಲ್ಲಿ ವೀರನೊಬ್ಬ ಕುದುರೆ ಸವಾರಿ ಮಾಡುತ್ತಿರುವನು. ಈ ಕಾಲದ ಒಂದು ನಂದಿಕಂಬ ಮತ್ತು ಅದರ ಮುಂದೆ ಒಂದು ಕಿರು ಶಾಸನಫಲಕ ಸಾಂತನಳ್ಳಿ ಕೊಡದಪ್ಪನ ಮನೆ ಮುಂದಿದೆ. ಇಲ್ಲಿಯ ನಂದಿಕಂಬದ ಶಾಸನದಲ್ಲಿ ಉಜ್ಜಯಿನಿ ಸಿದ್ದೇಶ್ವರಸ್ವಾಮಿಯ ಪೂಜಾರಿಯ ಹೆಂಡತಿ ಸಮಾಧಿ ಕೂತಳೆಂಬ ವಿವರವಿದೆ.

ಉಜ್ಜಯನಿಯಿಂದ ಸು.2ಕಿಮೀ ಅಂತರದಲ್ಲಿ ಭೈರವ ದೇವರ ಗುಡ್ಡವಿದೆ. ಆ ಗುಡ್ಡದಲ್ಲಿ ಕೋಟೆ ಗೋಡೆಗಳು ಇತ್ಯಾದಿ ಸಾಂಸ್ಕೃತಿಕ ಅವಶೇಷಗಳಿವೆ. ಅವುಗಳಲ್ಲಿ ಭೈರಸಿದ್ಧನ ವಿಗ್ರಹ ಮಹತ್ತದ್ದು. ಆ ವಿಗ್ರಹ ಮೂಲತಃ ಭೈರವನದು. ಅದರಲ್ಲಿ ಭೈರವನಿಗೆ ನಾಲ್ಕು ಕೈಗಳಿದ್ದು ಅವುಗಳಲ್ಲಿ ಕತ್ತಿ, ತ್ರಿಶೂಲ, ಡಮರು ಮತ್ತು ಕಪಾಲಗಳಿವೆ. ದೇಹದ ವಿವಿಧ ಭಾಗಗಳಲ್ಲಿ ನಾಗಗಳನ್ನು ಆಭರಣಗಳನ್ನಾಗಿ ಧರಿಸಿದ್ದು ಬತ್ತಲೆಯಾಗಿ ತ್ರಿಭಂಗಿಯಲ್ಲಿ ನಿಂತಿರುವನು. ಬದಿಗಳಲ್ಲಿ ಪ್ರೇತಗಳಿವೆ. ಈ ಶಿಲ್ಪದ ಕಾಲ ಸು.13ನೆಯ ಶತಮಾನ. ಚೌಕಿಮಠ, ಹಂಚಿನಮಠ, ಮಸ್ಲಟ್ಟಿ ಬಸಪ್ಪನ ಗುಡಿ, ಮಾಗಣ್ಣನ ಗುಡಿ, ಮಾರುತಿ ಗುಡಿ, ವನಿತಾದೇವಿ ಗುಡಿ, ಮಾರೆವ್ವನ ಗುಡಿ, ಬೀರೇಶ್ವರ ದೇವರ ಗುಡಿ, ಬ್ರಹ್ಮದೇವರ ಗುಡಿ, ಹುಣ್ಣಿ ಬಸಪ್ಪನ ಕಟ್ಟೆ ಮತ್ತು ಮೈಲಾರಲಿಂಗ-ಉಜ್ಜಯಿನಿ ಗ್ರಾಮದ ಇನ್ನಿತರ ವೀರಶೈವ ಮಠಗಳು ಮತ್ತು ಗ್ರಾಮದೇವತೆಗಳ ದೇಗುಲಗಳು. ಇವು ಸು.100 ವರ್ಷ ಪ್ರಾಚೀನವಾದವು. ಶ್ರೀ ಪೀಠದ ಮಠದ ಕಣದಲ್ಲಿ ಕೇದಾರಸ್ವಾಮಿ ಗದ್ದುಗೆ, ಮಳೆಸ್ವಾಮಿ ಗದ್ದುಗೆ, ಚಿನ್ನಬಸವಸ್ವಾಮಿ ಗದ್ದುಗೆ ಇವೆ.

ಇಲ್ಲಿಯ 1268ರ ಶಾಸನದಲ್ಲಿ ಮರುಳಸಿದ್ಧ ದೇವಾಲಯದ ದೇವರಿಗೆ ಮಲ್ಲಿಕಾರ್ಜುನ ನೆಂದು ಹೇಳಲಾಗಿದೆ. 1600ರ ವರೆಗಿನ ಎರಡು ಶಾಸನಗಳಲ್ಲಿ ಇದೇ ಹೆಸರಿದೆ. ತದನಂತರದ ಶಾಸನಗಳಲ್ಲಿ ಈ ದೇವಾಲಯದ ಹೆಸರು ಸಿದ್ದೇಶ್ವರ ಎಂದು ಉಲ್ಲೇಖವಾಗಿರುವುದು ಗಮನೀಯ. (ಆರ್.ಎಂ.ಎಸ್.)

**ಉತ್ತರಭಾರತ ಶಿಲಾಚಿತ್ರಕಲೆ:** ***ನೋಡಿ-ಶಿಲಾಚಿತ್ರಗಳು***

**ಉತ್ತರ ಭಾರತದ ಬೃಹತ್ ಶಿಲಾಸಂಸ್ಕೃತಿ:** ಉತ್ತರ ಪ್ರದೇಶದ ಪೂರ್ವಭಾಗ, ರಾಜಸ್ತಾನ ಪ್ರದೇಶಗಳಲ್ಲಿ ಹಲವಾರು ಕಡೆಗಳಲ್ಲಿ ಕಲ್ಲುಗುಪ್ಪೆ ಮಾದರಿಯ ಕಲ್ಗೋರಿಗಳಿವೆ. ಉತ್ತರ ಪ್ರದೇಶದ ವಾರಾಣಸಿ, ಮಿರ್ಜಾಪುರ, ಅಲಹಾಬಾದ್, ಬಾಂದಾ, ಆಗ್ರ, ರಾಜಸ್ತಾನದ ದೌಸ (ಜೈಪುರ ಜಿಲ್ಲೆ) ಈ ಪ್ರದೇಶಗಳಲ್ಲಿ ನೂರಾರು ತುಂಡುಕಲ್ಲುಗಳ ಗುಪ್ಪೆ ಮಾದರಿಯ ಕಲ್ಗೋರಿ ನೆಲೆಗಳಿವೆ. ಉತ್ತರಾಂಚಲದ ಆಲ್ಮೋರದ ದೇವದೂರದಲ್ಲಿ ನೆಲಕೋಣೆ ಗೋರಿಗಳನ್ನು ಹಿಂದೆಯೆ ಕಾಕ್‌ಬರ್ನ್, ಕಾರ್ಲೈಲ್ ಮೊದಲಾದವರು ಪತ್ತೆ ಮಾಡಿದ್ದರು. ಕಾಶ್ಮೀರ ಕಣಿವೆಯಲ್ಲಿಯ ಬೂರ್ಜಹೋಮ್, ಗುಫ್‌ಕ್ರಾಲ್, ಲಡಾಕ್‌ದಲ್ಲಿಯ ಲೆಹ್, ಪಾಕಿಸ್ತಾನದ ವಾಯವ್ಯ ಸರಹದ್ದು, ಸಿಂಧದಲ್ಲಿಯ ಕರಾಚಿ ಸಮೀಪ ಬೃಹತ್ ಶಿಲಾಗೋರಿಗಳು ಕಂಡುಬಂದಿವೆ. ಬೂರ್ಜಹಾಮ್ ಮತ್ತು ಪಾಕಿಸ್ತಾನದ ವಾಯವ್ಯ ಸರಹದ್ದಿನ ಅಸೋಟದಲ್ಲಿ ನಿಲಸುಕಲ್ಲುಗಳಿದ್ದರೆ ಲೆಹ್ ಕರಾಚಿ ಸಮೀಪ ನೆಲದಡಿಯ ಚಪ್ಪಡಿ ಕಲ್ಲಿನ ಗೋರಿಗಳಿವೆ. ಇವುಗಳಲ್ಲಿ ಜಿ.ಆರ್.ಶರ್ಮ ವಾರಾಣಸಿ ಜಿಲ್ಲೆಯ ಕಕೋರಿಯ, ಅಲಹಾಬಾದ್ ಜಿಲ್ಲೆಯ ಕೋಟಿಯ, ಎ.ಕೆ.ನಾರಾಯಣ್ ಮಿರ್ಜಾಪುರದಲ್ಲಿಯ ಬನಿಮಿಲಿಯ-ಬಹೆರದಲ್ಲಿ ಕಲ್ಗೋರಿ ನೆಲೆಗಳನ್ನು ಉತ್ಖನನ ಮಾಡಿದರು. ಕಕೋರಿಯದಲ್ಲಿ ಒಂದು ಜನ ವಾಸ್ತವ್ಯದ ನೆಲೆಯನ್ನು ಮತ್ತು 12 ಕಲ್ಗೋರಿಗಳನ್ನು ಉತ್ಖನನ ಮಾಡಲಾಗಿದೆ. ಕಬ್ಬಿಣದ ಯಾವುದೇ ಅವಶೇಷಗಳಿಲ್ಲದೆ, ಸೂಕ್ಷ್ಮ ಶಿಲಾ ಉಪಕರಣಗಳು ಮಾಳವ, ಸೋನ್‌ಪುರ-ಚಿರಂದ್, ತಾಮ್ರ-ಶಿಲಾ ಸಂಸ್ಕೃತಿಯ ಪಾತ್ರೆಗಳಿಗೆ ಹೋಲುವ ಕೆಂಪು, ಕಪ್ಪು ಮತ್ತು ಕಪ್ಪು-ಕೆಂಪು ವರ್ಣದ ಮಣ್ಪಾತ್ರೆಗಳು, ಮಣ್ಣಿನ ಮನೆಯ ಭಾಗಗಳು ಅಂತ್ಯ ಹಂತದಲ್ಲಿ ತಾಮ್ರದ ಚೂರುಗಳು ಸಿಕ್ಕಿವೆ. ಆದ್ದರಿಂದ ಇದನ್ನು ನವ-ತಾಮ್ರ-ಶಿಲಾ ಸಂಸ್ಕೃತಿಯೆಂದು ಗುರುತಿಸಲಾಗಿದೆ. ಇದರ ಕಾಲಮಾನ ಪ್ರ.ಶ.ಪೂ.ಸು.1500-700 ಆಗಿದ್ದಿರಬಹುದೆಂದು ತರ್ಕಿಸಲಾಗಿದೆ.

ಸಮೀಪದಲ್ಲಿಯ ಶವ-ಸಂಸ್ಕಾರದ ನೆಲೆಯಲ್ಲಿ 12 ಕಲ್ಲುಗುಪ್ಪೆಗಳನ್ನು ಉತ್ಖನನ ಮಾಡಲಾಯಿತು. ಇವುಗಳಲ್ಲಿ ಎರಡು ಪ್ರಕಾರಗಳಿದ್ದುವು; ಶವಕುಣಿ ಮತ್ತು ನೆಲದಡಿಯ ಕುಣಿಯಲ್ಲಿ ಕಲ್ಲುಚಪ್ಪಡಿಗಳ ಕೋಣೆ. ಮೊದಲನೆಯ ಪ್ರಕಾರದಲ್ಲಿ ಸು.1-2 ಮೀ ಆಳದ ಆಯತಾಕಾರದ ಗುಂಡಿಯಲ್ಲಿ ಹೊರಗಿಟ್ಟ ಶವದ ಕೆಲವೇ ಅಸ್ಥಿ ಚೂರುಗಳು, ಸೂಕ್ಷ್ಮ ಶಿಲಾ ಉಪಕರಣಗಳು ಒಂದೆರಡು ಚಿನ್ನದ ಚೂರುಗಳು, ಅರೆ ಪ್ರಶಸ್ತ ಕಲ್ಲಿನ ಮಣಿಗಳು ಮತ್ತು ಮಣ್ಪಾತ್ರೆಗಳು. ಎರಡನೆಯ ಪ್ರಕಾರದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಮಣ್ಪಾತ್ರೆ ಚೂರುಗಳು, ಅಸ್ಥಿ ಅವಶೇಷಗಳು ತೀರ ಅಪರೂಪವಾಗಿ ಚಿನ್ನದುಂಗುರ, ಸೂಕ್ಷ್ಮ ಶಿಲಾ ಉಪಕರಣಗಳಿದ್ದುವು. ಪ್ರತಿಯೊಂದು ಬದಿಯಲ್ಲಿ ನಿಸರ್ಗ ಲಭ್ಯ ಒಂದಕ್ಕಿಂತ ಹೆಚ್ಚು ಕಲ್ಲುಚಪ್ಪಡಿಗಳನ್ನು ನಿಲ್ಲಿಸಲಾಗಿತ್ತು.

ಅರೆಯುವ ಕಲ್ಲು, ಅದ್ವ

ಬನಿಮಿಲಿಯ-ಬಹೆರದ ಜನವಾಸ್ತವ್ಯದ ನೆಲೆಯ ಉತ್ಖನನದಲ್ಲಿ ಎರಡು ಉಪ ಹಂತಗಳನ್ನು ಗುರುತಿಸಿದ್ದು ಆದಿ ಉಪಹಂತದಲ್ಲಿ ಅಷ್ಟಾಗಿ ಸರಿಯಾಗಿ ಸುಡದ ಕೆಂಪುಬಣ್ಣದ ಮಣ್ಪಾತ್ರೆ ಚೂರುಗಳು, ಅಂತಿಮ ಉಪಹಂತದಲ್ಲಿ ಕಪ್ಪು ಹಾಗೂ ಕಪ್ಪು-ಕೆಂಪು ದ್ವಿವರ್ಣ ಪಾತ್ರೆ ಚೂರುಗಳಿದ್ದವು. ಈ ನೆಲೆಯಲ್ಲಿಯೂ ಕೂಡ ಶವಕುಣಿ ಮತ್ತು ನೆಲ ಕೋಣೆಯಿದ್ದು ಇದನ್ನು ಒಂದಕ್ಕಿಂತ ಹೆಚ್ಚು ಚಪ್ಪಡಿಗಳಿಂದ ಮುಚ್ಚಲಾಗುತ್ತಿತ್ತು. ಒಟ್ಟು 5 ಕಲ್ಲುಗುಪ್ಪೆಗಳನ್ನು ಉತ್ಖನನ ಮಾಡಲಾಯಿತು. ಕಲ್ಲುಕೋಣೆಗಳು ಪೂರ್ವ-ಪಶ್ಚಿಮಾಭಿಮುಖವಾಗಿದ್ದು ಇದರ ಪಶ್ಚಿಮ ಭಾಗ ಸ್ವಲ್ಪ ಹೆಚ್ಚು ಅಗಲ-ಎತ್ತರವಾಗಿರುತ್ತದೆ. ಇವುಗಳಲ್ಲಿ ಒಂದನ್ನು ಬಿಟ್ಟು ಯಾವುದ ರಲ್ಲೂ ಅಸ್ಥಿ ಅವಶೇಷಗಳಿರದೆ ಕೆಲವು ಮಣ್ಪಾತ್ರೆ ಚೂರುಗಳಿದ್ದುವು. 5ನೆಯ ಕಲ್ಲಿನ ಕೋಣೆ ಬಂಡೆಯ ಮೇಲೆ ಇದೆ. ಇದರ ಸುತ್ತಲೂ ಕಲ್ಲುತುಂಡುಗಳ ರಾಶಿ ಇದ್ದಿತ್ತು. ಚುನಾರ್ ಮತ್ತು ಕೋಟಿಯದಲ್ಲಿ ಕಲ್ಲುಗುಪ್ಪೆ ನೆಲೆಗಳು ಇದ್ದು ಇವುಗಳಲ್ಲಿಯೂ ಸ್ವಲ್ಪ ಹೆಚ್ಚು-ಕಡಿಮೆ ಇದೇ ಪ್ರಕಾರದ ಅವಶೇಷಗಳು ತೀರ ಕಡಿಮೆ ಪ್ರಮಾಣದಲ್ಲಿದ್ದುವು. ಆದರೆ ಹಂದಿ, ಹೋತ, ಎತ್ತು-ದನಗಳ ಎಲುಬುಗಳಿದ್ದುದು ಕುತೂಹಲಕಾರಿಯಾಗಿದೆ. ಇಲ್ಲಿಯ ಮಣ್ಪಾತ್ರೆ ಪ್ರಕಾರಗಳು ಬನಿಮಿಲಿಯ-ಬಹೆರ ಕಕೋರಿಯದಲ್ಲಿ ಕಂಡುಬಂದಿಲ್ಲ. ವಿಶಿಷ್ಟವಾಗಿದ್ದ 1ನೆಯ ನೆಲ ಕೋಣೆಯನ್ನು ಇದರ ಮಧ್ಯದಲ್ಲಿ ಒಂದು ಕಲ್ಲುಚಪ್ಪಡಿಯಿಂದ ಎರಡು ಭಾಗಗಳನ್ನಾಗಿ ಮಾಡಿದೆ. ಒಂದು ಭಾಗದಲ್ಲಿ ಬಹಳ ಪ್ರಾಣಿಗಳ ಎಲುಬುಗಳು ಮತ್ತು ಕಬ್ಬಿಣದ ಉಪಕರಣಗಳಿದ್ದುವು. ಇನ್ನೊಂದು ಭಾಗದಲ್ಲಿ ಮನುಷ್ಯನ ಅಸ್ಥಿ ಚೂರು ಗಳಿದ್ದುವು. 5ನೆಯದು ಒಂದು ಶವಕುಣಿ ಕಲ್ಲುಗುಪ್ಪೆಯಾಗಿದ್ದು ಇದರಲ್ಲಿ 38 ಸೆಂಮೀ ದಪ್ಪದಷ್ಟು ಬೂದಿಯಿದ್ದಿತ್ತು. ಇದರೊಳಗೆ ಕಬ್ಬಿಣದ ಬಾಣದ ಮೊನೆ, ಮಡಕೆಗಳು ಮತ್ತು ಕೆಲವು ಅಸ್ಥಿ ಚೂರುಗಳಿದ್ದುವು. ಇಲ್ಲಿಯ ಕಲ್ಗೋರಿಗಳು ಮತ್ತು ಅಲಹಾಬಾದ್ ಜಿಲ್ಲೆಯ ಸಿಯೋತಿ (ಕೋರೆಗಾಂವ್ ತಾಲ್ಲೂಕು) ಮೊದಲಾದೆಡೆಗಳಲ್ಲಿ ಆದಿ ಕಬ್ಬಿಣಯುಗದ ಕಲ್ಲುಗುಪ್ಪೆಗಳಿವೆ.

ಖೇಡ (ಆಗ್ರ)ದಲ್ಲಿ ಅರ್ಧಗೋಲಾಕೃತಿಯ ಹಾಗೂ ಮೇಲ್ಭಾಗ ಸಮತಟ್ಟಾದ ಕಲ್ಲುಗುಪ್ಪೆಗ ಳಿವೆ. ಪರೀಕ್ಷಿಸಿದ ಇವುಗಳಡಿಯಲ್ಲಿ ಬಂಡೆಕಲ್ಲಿನಲ್ಲಿ ಕೊರೆದ ಆಯತಾಕಾರದ ಮೊಟ್ಟೆಯಾಕಾರದ ತಗ್ಗುಗಳಿದ್ದು ಇವುಗಳಲ್ಲಿ ಸುಟ್ಟ ಅಸ್ಥಿ ಚೂರುಗಳು ಮತ್ತು ಬೂದಿ ಇದ್ದುವು. ಆದರೆ ಈಚಿನ ಅಧ್ಯಯನದಲ್ಲಿ ಇವುಗಳ ಪ್ರಾಚೀನತೆ ಬಗ್ಗೆ ಅನುಮಾನಪಡಲಾಗಿದೆ. ಮೇಲ್ಭಾಗ ಸಮತಟ್ಟಿನ ಕಲ್ಲುಗುಪ್ಪೆಗಳಡಿಯಲ್ಲಿ ತುಂಡು ಚಪ್ಪಡಿಕಲ್ಲುಗಳಿಂದ ಮಾಡಿದ ಸಣ್ಣ ಕೋಣೆಯಿದ್ದಿತು. ಈ ಪ್ರಕಾರದ ಕಲ್ಲುಗುಪ್ಪೆಗಳು ಇದೇ ಪ್ರದೇಶದ ಸತ್ಮಸ್‌ನಲ್ಲಿಯೂ ಇವೆ.

ಜೈಪುರ-ಆಗ್ರ ಹಾದಿಯಲ್ಲಿರುವ ದೌಸದಲ್ಲಿ ಖೇಡ, ಸತ್ಮಸ್ ತರಹದ ಕಲ್ಲುಗುಪ್ಪೆಗಳಲ್ಲದೆ ನಿಲಸುಗಲ್ಲು ಮತ್ತು ಕಲ್ಲುಗುಪ್ಪೆ ಮಧ್ಯದಲ್ಲಿ ನಿಲಸುಗಲ್ಲುಗಳೂ ಇವೆ. ಲೆಹ್‌ಕೊಳ್ಳ (ಲಡಾಕ್)ದಲ್ಲಿ ನೆಲದಡಿಯ ಕಲ್ಲು ಕೋಣೆಗಳಿದ್ದು ಇವುಗಳ ಕೆಲವೊಂದರಲ್ಲಿ ಹಲವಾರು ತಲೆಬುರುಡೆಗಳು,

ಕೆಂಪು ಬಣ್ಣ ಹಚ್ಚಿದ ಮಣ್ಪಾತ್ರೆ ಕಂಚಿನ ಪಾತ್ರೆ, ಉಪಕರಣಗಳು, ಉದ್ದನೆ ಮಣಿ, ಕಬ್ಬಿಣದ ಉಪಕರಣಗಳಿದ್ದುವು. 1857ರಲ್ಲಿ ಕ್ಯಾಪ್ಟನ್ ಪ್ರೀಡಿ ಕರಾಚಿ ಹತ್ತಿರ ವಘೂದರ್‌ನಲ್ಲಿ ನೆಲದಡಿಯ ಕಂಡಿಯಿಲ್ಲದ ಚಪ್ಪಡಿ ನೆಲ, ಕೋಣೆಗೋರಿಗಳನ್ನು ಪ್ರೆರ್ ಅವರು ಕರಾಚಿ ಕೊಕ್ರಿ ರಸ್ತೆ ಮತ್ತು ಕೊಕ್ರಿ-ಶಹಬಲವಲ್ ರಸ್ತೆ ಪ್ರದೇಶದಲ್ಲಿ ಇಂಥ ಕಲ್ಮನೆಗಳನ್ನು ಶೋಧಿಸಿದ್ದರು. ಕರಾಚಿಯಲ್ಲಿಯ ಕಲ್ಮನೆಗಳ ಒಂದರಲ್ಲಿ ಕಂಡಿಯಿದೆಯೆಂದು ಫೇರ್ ಸರ್ವಿಸ್ ಅವರು ವರದಿ ಮಾಡಿದ್ದಾರೆ. ಇವುಗಳಿಗೂ ದಕ್ಷಿಣ ಭಾರತದ ಕಂಡಿಕೋಣೆಗೋರಿಗಳಿಗೂ ಸಂಬಂಧವಿದ್ದಿರಬಹುದೆಂಬ ಅನುಮಾನವಿದೆ. (ಎ.ಎಸ್.)

ಮನೆಯ ನೆಲಗಟ್ಟು, ಅದ್ವ

**ಅದ್ವ ಬಯಲು:** ಮಧ್ಯಪ್ರದೇಶದ ರೇವ ಮತ್ತು ಉತ್ತರಪ್ರದೇಶದ ಮಿರ್ಜಾಪುರ ಜಿಲ್ಲೆಗಳಲ್ಲಿ ಹರಿಯುವ ಬೇಲನ್ ನದಿಯ ಉಪನದಿಯಾದ ಅದ್ವ ನದಿ ಬಯಲಿನಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯ 1979–81ರಲ್ಲಿ ನಡೆಸಿದ ಕ್ರಮಬದ್ಧ ಸರ್ವೇಕ್ಷಣೆಯಲ್ಲಿ 67 ಬೃಹತ್ ಶಿಲಾಯುಗ ಗೋರಿನೆಲೆಗಳೂ 41 ಸಮಕಾಲೀನ ವಸತಿನೆಲೆಗಳೂ ಬೆಳಕಿಗೆ ಬಂದವು. ಈ ಸಂಶೋಧನೆಯಿಂದ ಉತ್ತರ–ಮಧ್ಯ ವಿಂಧ್ಯ ಪ್ರಾಂತಕ್ಕೆ ಸೇರುವ ಅದ್ವ ಬಯಲಿನ ಬೃಹತ್ ಶಿಲಾ ಸಂಸ್ಕೃತಿಯ ಗುಣಲಕ್ಷಣಗಳನ್ನು ತಿಳಿಯುವುದು ಸಾಧ್ಯವಾಗಿದೆ.

ಅದ್ವ ಬಯಲಿನಲ್ಲಿ ಮುಖ್ಯವಾಗಿ 3 ನಮೂನೆಯ ಬೃಹತ್‌ಶಿಲಾ ಸಮಾಧಿಗಳಿವೆ. ಇವು ಕಲ್ಗುಪ್ಪೆ ವೃತ್ತ (ಕೇರ್ನ್ ಸರ್ಕಲ್), ನೆಲಕೋಣೆ ಸಹಿತವಾದ ಕಲ್ಗುಪ್ಪೆ (ಸಿಸ್ಟ್ ವಿತ್ ಇನ್ ಕೇರ್ನ್) ಮತ್ತು ಕಲ್ಲುವೃತ್ತ (ಸ್ಟೋನ್ ಸರ್ಕಲ್). 51 ಸಮಾಧಿನೆಲೆಗಳಲ್ಲಿ ಮೊದಲೆರಡು ಪ್ರಕಾರಗಳ ಗೋರಿಗಳಿದ್ದರೆ ಉಳಿದ 12 ನೆಲೆಗಳಲ್ಲಿ ಕಲ್ಗುಪ್ಪೆ ವೃತ್ತಗಳು ಮಾತ್ರ ಇದ್ದವು. ಕವಲಿಝುರ್‌ನಲ್ಲಿ ಮಾತ್ರ ಕಲ್ಲುವೃತ್ತಗಳು ಕಂಡುಬಂದವು. ಈ 3 ಪ್ರಕಾರಗಳಲ್ಲಿ ಕಲ್ಗುಪ್ಪೆ ವೃತ್ತಗಳ ಸಂಖ್ಯೆ ಅತ್ಯಧಿಕ; ಈ ಪ್ರಕಾರದ ಸಮಾಧಿಗಳಲ್ಲಿ ವೃತ್ತದ ವ್ಯಾಸ 3.55ಮೀ–14.15ಮೀ ಇದೆ. ಇದರ ಕೇಂದ್ರದಲ್ಲಿ ನೆಲದಡಿಯಲ್ಲಿ ಪೂರ್ವ–ಪಶ್ಚಿಮಾಭಿಮುಖವಾಗಿರುವ ಕಲ್ಲುಚಪ್ಪಡಿಯ ಕೋಣೆಯಿದ್ದು ಇದರ ಮೇಲ್ಭಾಗ ಮತ್ತೊಂದು ಕಲ್ಲುಚಪ್ಪಡಿಯಿಂದ ಮುಚ್ಚಲ್ಪಟ್ಟಿರುತ್ತದೆ. ಭೂಮಟ್ಟದಲ್ಲಿ ವೃತ್ತದ ಒಳಗಿನ ಭಾಗವನ್ನು ವಿವಿಧ ಗಾತ್ರ–ಆಕಾರದ ಕಲ್ಲುಗಳ ಗುಪ್ಪೆಯಿಂದ ತುಂಬಲಾಗಿರುತ್ತದೆ.

ಅದ್ವ ಮತ್ತು ಅದರ ಉಪನದಿಗಳ ದಂಡೆಯ ಮೇಲೆ ಸು.45 ವಸತಿನೆಲೆಗಳಿವೆ. ಹೆಚ್ಚಾಗಿ ಇವು ಸಮಾಧಿನೆಲೆಗಳ ಸಮೀಪದಲ್ಲಿಯೇ ಇವೆ. ಕೆಲವೊಂದು ವಸತಿನೆಲೆಗಳು ವಿಸ್ತಾರವಾಗಿದ್ದರೂ ದಿಬ್ಬದ ರೂಪದಲ್ಲಿಲ್ಲ. ಹೀಗಾಗಿ ಈ ಜನರು ಹೆಚ್ಚು ಸಮಯ ಒಂದೇ ಕಡೆ ನೆಲೆನಿಂತಂತೆ ತೋರುವುದಿಲ್ಲ. ಮಣ್ಪಾತ್ರೆ ಹಾಗೂ ಇತರ ಅವಶೇಷಗಳ ಆಧಾರಗಳ ಮೇಲೆ ವಸತಿನೆಲೆಗಳನ್ನು 2 ಗುಂಪುಗಳಾಗಿ ವಿಂಗಡಿಸಲಾಗಿದೆ. ಇವೆಂದರೆ ಕಕೋರಿಯ (ತಾಮ್ರ–ಶಿಲಾಯುಗ) ಮತ್ತು ಕೋಟಿಯ (ಕಬ್ಬಿಣಯುಗ). ಕೆಲವು ನೆಲೆಗಳಲ್ಲಿ ಈ ಎರಡೂ ಪ್ರಾದೇಶಿಕ ಸಂಸ್ಕೃತಿಗಳ ಮಿಶ್ರ ಲಕ್ಷಣಗಳಿವೆ. ಕಕೋರಿಯ (ಚಂದೌಲಿ ಜಿಲ್ಲೆ) ಹಾಗೂ ಕೋಟಿಯ (ಅಲಹಾಬಾದ್ ಜಿಲ್ಲೆ) ಉತ್ತರಪ್ರದೇಶದ ಮಾದರಿ ನೆಲೆಗಳು.

ಕಕೋರಿಯ ವರ್ಗಕ್ಕೆ ಸೇರುವ 17 ವಸತಿನೆಲೆಗಳಲ್ಲಿ ಮುಖ್ಯವಾದುವು ಮಾಘ, ಇಂದಾರಿ ಮತ್ತು ಬರೌನ್ಧ. ಅಂಡಾಕಾರದ ನೆಲಗಟ್ಟುಗಳು, ಅರೆಯುವ ಕಲ್ಲು, ತ್ರಪೀಜ್, ಅರ್ಧಚಂದ್ರಾಕೃತಿ, ಅಲಗು ಮುಂತಾದ ಸೂಕ್ಷ್ಮಶಿಲೋಪಕರಣಗಳು ಹಾಗೂ ತಿರುಳುಗಲ್ಲು, ಉಂಗುರಕಲ್ಲು, ಮಣಿಗಳು, ಕವಣೆಕಲ್ಲು, ಬೊಂಬಿನ ಗುರುತುಳ್ಳ ಸುಟ್ಟಮಣ್ಣಿನುಂಡೆಗಳು ಇವು ಈ ನೆಲೆಗಳಲ್ಲಿ ಸಿಕ್ಕಿರುವ ಸಾಂಸ್ಕೃತಿಕ ಅವಶೇಷಗಳು. ಈ ಜನರು ಉಪಯೋಗಿಸುತ್ತಿದ್ದ ಪಾತ್ರೆಗಳು ಕಪ್ಪು–ಕೆಂಪು ದ್ವಿವರ್ಣ, ಕೆಂಪು ಹಾಗೂ ಕಪ್ಪುಬಣ್ಣದ್ದಾಗಿವೆ. ಸಾಮಾನ್ಯ ಆಕಾರಗಳೆಂದರೆ ಬಟ್ಟಲು, ರಂಧ್ರವಿರುವ ಬೋಗುಣಿಗಳು, ಪುಟ್ಟ ತಳದ ದಾನಿ, ಶೇಖರಣಾ ಜಾಡಿ, ಪುಟ್ಟ ದಾನಿಗಳು ಇತ್ಯಾದಿ. ಕೋಟಿಯ ಮಾದರಿಯ ಪಾತ್ರೆಗಳಾದ ದಪ್ಪ ಬೂದುಬಣ್ಣದ ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಹಾಗೂ ಕೆಂಪು ಪಾತ್ರೆಗಳು 35 ವಸತಿನೆಲೆಗಳಲ್ಲಿ ದೊರೆತಿವೆ. ಅದ್ಯೆಪುರ್, ಸರ್ದಮನ್, ಜೋಗಿಬೀರ್, ಬೀರದೇಯಿ (ರೇವ ಜಿಲ್ಲೆ), ಪಿಪರಹಿ, ಕವಲಿಝುರ್, ಸೋನಗರ, ಬೈದ, ಮಧೋರ್, ದೇವ್ರಿ ಮತ್ತು ಚೌರ (ಮಿರ್ಜಾಪುರ ಜಿಲ್ಲೆ) ಇವು ಉಲ್ಲೇಖಾರ್ಹ ನೆಲೆಗಳು. ಅರೆಪ್ರಶಸ್ತ ಶಿಲೆಗಳ ಮಣಿಗಳು, ಸುಡಾವೆ ಮಣ್ಣು–ಶಂಖ–ಗಾಜಿನ ಬಳೆಗಳು, ಕದಿರಣಿಗೆ ಗುಂಡಿ, ಕಬ್ಬಿಣದ ಉಪಕರಣಗಳು ಮತ್ತು ಕಿಟ್ಟ, ಬೊಂಬಿನ ಗುರುತುಳ್ಳ ಸುಟ್ಟಮಣ್ಣಿನುಂಡೆ ಇವೇ ಮೊದಲಾದ ಅವಶೇಷಗಳನ್ನು ಈ ನೆಲೆಗಳಿಂದ ಸಂಗ್ರಹಿಸಲಾಗಿದೆ. ಅಮಹತ, ಮುನ್ನೈ, ನಕ್ವಲ್ (ರೇವ ಜಿಲ್ಲೆ), ಪರ್ಸಿಯ, ರಾಮ್‌ಪುರ್, ಗೌರ್ವ (ಮಿರ್ಜಾಪುರ ಜಿಲ್ಲೆ) ಮೊದಲಾದ 20 ನೆಲೆಗಳಲ್ಲಿ ಕೋಟಿಯ ಹಾಗೂ ಕಕೋರಿಯ ಮಾದರಿಯ ಪಾತ್ರೆಗಳು ಮಿಶ್ರವಾಗಿದ್ದು ಈ ನೆಲೆಗಳು ಸ್ಥಿತ್ಯಂತರ ಹಂತಕ್ಕೆ ಸೇರುತ್ತವೆ.

ಸಮಾಧಿಯ ರಚನೆ ಹಾಗೂ ವಸತಿನೆಲೆಗಳ ವಿಶೇಷ ಲಕ್ಷಣಗಳನ್ನು ತಿಳಿಯುವ ಉದ್ದೇಶದಿಂದ ಅಮಹತ, ಮುನ್ನೈ ಮತ್ತು ಮಾಘ– ಈ 3 ನೆಲೆಗಳಲ್ಲಿ ಉತ್ಖನನವನ್ನು ನಡೆಸಲಾಯಿತು. ಸುಮಾರು 200 ಸಮಾಧಿಗಳಿರುವ ಅಮಹತದಲ್ಲಿ (ರೇವ ಜಿಲ್ಲೆ) ಕಲ್ಗುಪ್ಪೆವೃತ್ತವೊಂದನ್ನು ಅನಾವರಣಗೊಳಿಸಲಾಯಿತು. ಈ ಸಮಾಧಿಯಲ್ಲಿ ತಳಬಂಡೆಯ ವರೆಗೆ ಗೋಲ ಗುಂಡಿಯನ್ನು ಅಗೆದು ಅದರೊಳಗೆ 4–ಚಪ್ಪಡಿಗಳಿಂದ ಆಯತಾಕಾರದ ನೆಲಕೋಣೆಯನ್ನು ನಿರ್ಮಿಸಲಾಗಿತ್ತು. ನೆಲಕೋಣೆ ಪೂರ್ವ–ಪಶ್ಚಿಮಾಭಿಮುಖವಾಗಿತ್ತು. ಕೋಣೆಯ ಹೊರಗಿನ ಭಾಗವನ್ನು (ಚಪ್ಪಡಿ ಹಾಗೂ ಗುಂಡಿಯ ಗೋಡೆಯ ನಡುವಿನ ಭಾಗ) ಮಣ್ಣು ಹಾಗೂ ವಿವಿಧ ಗಾತ್ರದ ಕಲ್ಲುಗಳಿಂದ ಒತ್ತಿ ತುಂಬಲಾಗಿತ್ತು. ಕೋಣೆಯೊಳಗಿನ ಭಾಗವನ್ನು ಪೂರ್ಣವಾಗಿ ಮಣ್ಣಿನಿಂದ ತುಂಬಿ ಮೇಲೆ ಮತ್ತೊಂದು ಚಪ್ಪಡಿಕಲ್ಲನ್ನು ಹಾಸಲಾಗಿತ್ತು. ಈ ಸಮಾಧಿಯೊಳಗೆ ಮಣ್ಪಾತ್ರೆಯ ಚೂರುಗಳು, ಸೂಕ್ಷ್ಮಶಿಲೋಪಕರಣಗಳು ಮತ್ತು ಕಾವಿಕಲ್ಲಿನ 1 ಚೂರು ದೊರೆತವು.

ಅದ್ವ ನದಿಯ ಎಡದಂಡೆಯ ಮೇಲಿರುವ 2 ನೆಲೆಗಳಲ್ಲೊಂದಾದ ಮುನ್ನೈನಲ್ಲಿ ಒಟ್ಟು 35 ಕಲ್ಗುಪ್ಪೆವೃತ್ತಗಳಿದ್ದು ಇವುಗಳಲ್ಲಿ ಎರಡನ್ನು ಉತ್ಖನನಕ್ಕೆ ಒಳಪಡಿಸಲಾಯಿತು. ಎರಡೂ ಗೋರಿಗಳಲ್ಲಿ ಪೂರ್ವ–ಪಶ್ಚಿಮವಾಗಿ ಅಂಡಾಕಾರದ ಗುಳಿಯನ್ನು ತಳಬಂಡೆಯವರೆಗೆ ತೋಡಿ ಅದರೊಳಗೆ ಶವಸಂಸ್ಕಾರ ಮಾಡಲಾಗಿತ್ತು. ಏರುಪೇರಾಗಿದ್ದ ಗುಳಿಗಳ ತಳವನ್ನು ಕೆಮ್ಮಣ್ಣಿನ ಹಾಸಿನಿಂದ ಮಟ್ಟ ಮಾಡಿದ್ದುದು ಗಮನಕ್ಕೆ ಬಂದಿತು. ಗುಳಿಗಳಿಂದ ಅಗೆದು ತೆಗೆದ ಮಣ್ಣಿನಿಂದಲೇ ಮತ್ತೆ ಅವನ್ನು ಮುಚ್ಚಿದ್ದರು. ಪ್ರಾಣಿಮೂಳೆಗಳು, ಬೂದು ಹಾಗೂ ಕೆಂಪುಪಾತ್ರೆಗಳ ಚೂರುಗಳು, ಸೂಕ್ಷ್ಮಶಿಲೋಪಕರಣಗಳು ಗುಳಿಯ ತಳದಲ್ಲಿ ಕಂಡುಬಂದವು. ಇವು ಕಕೋರಿಯ ಹಾಗೂ ಕೋಟಿಯ ಸಂಸ್ಕೃತಿಗಳ ನಡುವಿನ ಸ್ಥಿತ್ಯಂತರ ಹಂತವನ್ನು ಸೂಚಿಸುತ್ತವೆ. ಸಮೀಪದ ವಸತಿನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ಕಕೋರಿಯ ಸಂಸ್ಕೃತಿ ಕೋಟಿಯ ಸಂಸ್ಕೃತಿಗಿಂತ ಮುಂಚಿನದು ಎಂಬ ಅಂಶ ಸ್ತರಕ್ರಮದಿಂದ ಸಾಬೀತಾಯಿತು.

ಮಿರ್ಜಾಪುರ ಜಿಲ್ಲೆಯಲ್ಲಿರುವ ಮಾಘ ನೆಲೆಯಲ್ಲಿ ಒಟ್ಟು 159 ಗೋರಿಗಳಿವೆ. ಇವುಗಳಲ್ಲಿ 2 ಕಲ್ಗುಪ್ಪೆವೃತ್ತ ಹಾಗೂ 3 ನೆಲಕೋಣೆ ಸಹಿತ ಕಲ್ಗುಪ್ಪೆಗಳಲ್ಲಿ ಉತ್ಖನನ ನಡೆಸಲಾಯಿತು. ಈ ಎಲ್ಲ ಗೋರಿಗಳು ರಚನೆಯಲ್ಲಿ ಮುನ್ನೈ–ಅಮಹತದ ಗೋರಿಗಳನ್ನು ಹೋಲುತ್ತವೆ. ಕಲ್ಗುಪ್ಪೆ ವೃತ್ತಗಳಲ್ಲಿ ಮಣ್ಪಾತ್ರೆಗಳೊಂದಿಗೆ ಅಲಗು, ಅರ್ಧಚಂದ್ರಾಕೃತಿ, ತ್ರಿಕೋಣ ಮುಂತಾದ ಕ್ಯಾಲ್ಸೆಡನಿಯಿಂದ ತಯಾರಿಸಿದ ಸೂಕ್ಷ್ಮಶಿಲೋಪಕರಣಗಳಿದ್ದವು.



ಬೃಹತ್ ಶಿಲಾಗೋರಿಯ ಉತ್ಖನನ, ಅದ್ವ

ನೆಲಕೋಣೆ ಸಹಿತ ಕಲ್ಗುಪ್ಪೆಗಳಲ್ಲಿ ತಾಮ್ರದ ಚೂರುಗಳು, ಸೂಕ್ಷ್ಮಶಿಲೋಪಕರಣಗಳು, ಪ್ರಾಣಿಗಳ ಮೂಳೆಯ ತುಣುಕುಗಳು ಮತ್ತು ಮಣ್ಪಾತ್ರೆಯ ಚೂರುಗಳು ಸಿಕ್ಕವು. ಒಂದು ಸಮಾಧಿಯಲ್ಲಿ ಮಾತ್ರ ಅವಶೇಷಗಳು 2 ಸ್ತರಗಳಲ್ಲಿದ್ದವು. ತಳದಲ್ಲಿ ಸುಟ್ಟಮಣ್ಣಿನುಂಡೆಗಳು, ಪ್ರಾಣಿಮೂಳೆ ಹಾಗೂ ಮಣ್ಪಾತ್ರೆಗಳನ್ನು ಇಟ್ಟು ಇವುಗಳ ಸುತ್ತಲೂ ಚಿಕ್ಕ ಕಲ್ಲುಗಳನ್ನು ಅಂಡಾಕಾರದಲ್ಲಿ ಇಡಲಾಗಿತ್ತು. ಇದಕ್ಕೆ 30 ಸೆಂಮೀ ಮೇಲೆ ಉಂಗುರಕಲ್ಲು, ಮಣ್ಪಾತ್ರೆ ಹಾಗೂ ಸಣ್ಣಸಣ್ಣ ಕಲ್ಲುಗಳನ್ನು ಇಟ್ಟು ಇವುಗಳ ಸುತ್ತಲೂ ಮತ್ತೆ ಚಿಕ್ಕ ಕಲ್ಲಿನ ಅಂಡಾಕಾರದ ವೃತ್ತ ರಚಿಸಲಾಗಿತ್ತು. ಈ ಪ್ರಕಾರದ ಮತ್ತೊಂದು ಸಮಾಧಿಯಲ್ಲಿ ಕರ್ನಾಟಕದ ಬ್ರಹ್ಮಗಿರಿ

ಯಲ್ಲಿರುವಂತೆ ನೆಲಕೋಣೆಯ ಸುತ್ತ ಸೈಜುಗಲ್ಲಿನ ಗೋಡೆಯನ್ನು ಕೋಣೆಗೆ ಆಧಾರವಾಗಿ ಕಟ್ಟಲಾಗಿತ್ತು. ಇಲ್ಲಿನ ವಸತಿನೆಲೆಯಲ್ಲಿ ಕೈಗೊಂಡ ಉತ್ಖನನದಲ್ಲಿ ವೃತ್ತ–ಗೋಲಾಕಾರದ ಮಣ್ಣಿನ ನೆಲಗಟ್ಟುಗಳು–ಅವುಗಳ ಸುತ್ತ ಆಧಾರಕಂಬದ ಗುಳಿಗಳು, ಉಂಗುರಕಲ್ಲು, ಸುತ್ತಿಗೆಕಲ್ಲು, ಅರೆಯುವ ಕಲ್ಲು, ಅರೆಪ್ರಶಸ್ತ ಕಲ್ಲಿನ ಮಣಿಗಳು, ಪ್ರಾಣಿಮೂಳೆಗಳು, ಕ್ಯಾಲ್ಸೆಡನಿ–ಅಗೇಟ್ ಮತ್ತು ಚರ್ಟ್ ಶಿಲೆಯ ಸೂಕ್ಷ್ಮಶಿಲೋಪಕರಣಗಳು, ಸುಟ್ಟಮಣ್ಣಿನ ಉಂಡೆಗಳು ಕಂಡುಬಂದವು. ಒಂದು ನೆಲಗಟ್ಟಿನ ಮೇಲೆ ಮಣ್ಣಿನ ಒಲೆಯ ಅವಶೇಷಗಳಿದ್ದವು. ಮಣ್ಪಾತ್ರೆಗಳಲ್ಲಿ ಹೆಚ್ಚಿನವು ಚಕ್ರದ ಮೇಲೆ ತಯಾರಾದುವು. ಕೆಲವೇ ಕೆಲವನ್ನು ಕೈಯಿಂದ ಮಾಡಲಾಗಿದೆ. ಇಲ್ಲಿಯ ಕೆಂಪು, ಕಪ್ಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಈ ವಸತಿ ಒಂದೇ ಸಂಸ್ಕೃತಿಗೆ ಸೇರಿದ್ದೆಂಬುದನ್ನು ತಿಳಿಸುತ್ತವೆ.

ಸರ್ವೇಕ್ಷಣೆ ಹಾಗೂ ಉತ್ಖನನಗಳಿಂದ ತಿಳಿದುಬಂದ ಮುಖ್ಯ ಅಂಶಗಳೆಂದರೆ ದಕ್ಷಿಣ ಭಾರತದಲ್ಲಿರುವಂತೆ ಅದ್ವ ಬಯಲಿನ ನೆಲಕೋಣೆಗಳಲ್ಲಿ ಕಂಡಿಗಳಿಲ್ಲ. ಅಲ್ಲದೆ ಇವುಗಳನ್ನು 'ಸ್ವಸ್ತಿಕ' ವಿನ್ಯಾಸದಲ್ಲಿ ನಿರ್ಮಿಸಿಲ್ಲ. ನೆಲಕೋಣೆಯ ತಳದಲ್ಲಿ ಚಪ್ಪಡಿಕಲ್ಲನ್ನು ಹಾಸದಿರುವುದು ಮತ್ತೊಂದು ಗಮನಾರ್ಹ ವ್ಯತ್ಯಾಸ. ಪರೀಕ್ಷಿಸಲಾದ ಯಾವ ಸಮಾಧಿಯಲ್ಲಿಯೂ ಮಾನವನ ಅಸ್ಥಿ ಅವಶೇಷಗಳಿರಲಿಲ್ಲ. ದಕ್ಷಿಣ ಭಾರತದ ಬೃಹತ್ ಶಿಲಾಯುಗ ಸಮಾಧಿಗಳು ಕಬ್ಬಿಣ ಯುಗಕ್ಕೆ ಮಾತ್ರ ಸೇರಿದವಾದರೆ ಅದ್ವ ಬಯಲಿನ ಗೋರಿಗಳು ತಾಮ್ರ–ಶಿಲಾಯುಗದಿಂದ ಕಬ್ಬಿಣಯುಗದ ಅವಧಿಗೆ ಸೇರಿದವು.

ವಿಂಧ್ಯ ಪ್ರದೇಶದ ಇತರ ನೆಲೆಗಳಲ್ಲಿ ದೊರೆತಿರುವ ಕಾಲಮಾನಗಳ ಆಧಾರದ ಮೇಲೆ ಅದ್ವ ಬಯಲಿನ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಮಾನವನ್ನು ಪ್ರ.ಶ.ಪೂ. 2ನೆಯ ಸಹಸ್ರಮಾನದ ಪೂರ್ವಾರ್ಧದಿಂದ ಪ್ರ.ಶ.ಪೂ. 3ನೆಯ ಶತಮಾನ ಎಂದು ನಿರ್ಧರಿಸಲಾಗಿದೆ. (ವಿ.ಡಿ.ಎಂ.)

**ಉತ್ನೂರು:** ಆಂಧ್ರಪ್ರದೇಶ ರಾಜ್ಯದ ಮೆಹಬೂಬ್‌ನಗರ ಜಿಲ್ಲೆಯಲ್ಲಿರುವ ನವಶಿಲಾಯುಗದ ಬೂದಿದಿಬ್ಬ. ಧಾರವಾಡ ಶಿಲಾಶ್ರೇಣಿಯ ಕೊನೆಯ ಭಾಗದಲ್ಲಿರುವ ಈ ಗ್ರಾಮದ ವಾಯವ್ಯದಲ್ಲಿ 60 ಚ.ಮೀ ಮತ್ತು 1–3 ಮೀ ಎತ್ತರವಿರುವ ಒಂದು ಬೂದಿ ದಿಬ್ಬವಿದೆ. ಹೈದರಾಬಾದಿನ ಭೂವಿಜ್ಞಾನ ಸರ್ವೇಕ್ಷಣ ಇಲಾಖೆ ಮೊದಲ ಬಾರಿಗೆ ತನ್ನ ನಿಯತಕಾಲಿಕೆಯಲ್ಲಿ ಇದನ್ನು ಪ್ರಕಟಿಸಿತು. ಬೂದಿದಿಬ್ಬದ ಹಲವು ಭಾಗಗಳು ನಾಶವಾಗಿದ್ದು, ಆ ಭಾಗಗಳಲ್ಲಿ ಕಪ್ಪು ಮತ್ತು ಕೆಂಪು, ಆದಿಚಾರಿತ್ರಿಕ ಕಾಲದ ಚಿತ್ರಿತ ಹಾಗೂ ಇತರ ಮಣ್ಪಾತ್ರೆಗಳು ದೊರಕಿದ್ದವು. ಬೂದಿದಿಬ್ಬದ ಸೃಷ್ಟಿ, ಕಾಲ, ಸೃಷ್ಟಿಯಾದ ಬಗೆ, ಬೂದಿಕಟ್ಟೆ ಮತ್ತು ದಿಬ್ಬದಲ್ಲಿಯ ವಸ್ತು ಅವಶೇಷಗಳ ಸಾಂಸ್ಕೃತಿಕ ಮಹತ್ತ್ವವನ್ನು ತಿಳಿಯಲು ಅಲ್ಚಿನ್ 1957ರಲ್ಲಿ ದಿಬ್ಬದ ಕೆಲವು ಭಾಗಗಳಲ್ಲಿ ಉತ್ಖನನ ಕೈಗೊಂಡ. 12 ಪದರಗಳನ್ನು ಗುರುತಿಸಲಾಯಿತು. ಸುಟ್ಟ ಸಗಣಿಯ ಬೂದಿ ಮತ್ತು ಕಂದುಬಣ್ಣದ ಜೇಡಿಮಣ್ಣಿನ ಪದರುಗಳು ಒಂದರ ತರುವಾಯ ಇನ್ನೊಂದರಂತೆ ಅನುಕ್ರಮವಾಗಿ ಕಂಡುಬಂದವು. ಜಾನುವಾರುಗಳ ಕೊಟ್ಟಿಗೆಯ ಅವಶೇಷ ಮತ್ತು ಗೊರಸಿನ ಪಡಿಯಚ್ಚು ಸಹ ದೊರಕಿವೆ.

1ನೆಯ ಹಂತದಲ್ಲಿ ಕೊಟ್ಟಿಗೆಯ ಸುತ್ತಲೂ ಮುಳ್ಳುಬೇಲಿಯ ಕುರುಹುಗಳೊಡನೆ ನೆಲದಲ್ಲಿ ಮೂಡಿದ ಎತ್ತಿನ ಕಾಲಿನ ಗೊರಸಿನ ಪಡಿಯಚ್ಚು ಒಂದು ಉತ್ಖನನದ ಗುಂಡಿಯಲ್ಲಿ ಕಂಡುಬಂದಿತು. ಎತ್ತಿನ ಎಲುಬುಗಳು ಮತ್ತು ಮಣ್ಣಿನ ಪಾತ್ರೆಯ ಚೂರುಗಳು ಕಂಡುಬಂದಿವೆ. ಈ ಹಂತದಲ್ಲಿ ಇದ್ದ ಜಾಗದಲ್ಲಿಯೇ ಸಗಣಿಯನ್ನು ಸುಟ್ಟಿರುವುದು ಕಂಡುಬಂದಿದೆ. ಒಂದು ಗುಂಡಿಯಲ್ಲಿ ಶಿಶುವಿನ ಒಂದು ಶವಕುಣಿ ದೊರಕಿದೆ. 2ನೆಯ ಹಂತದಲ್ಲಿ ಮತ್ತೊಂದು ಕೊಟ್ಟಿಗೆ, ಬೂದಿಯ ಗುಪ್ಪೆ, ಮಣ್ಪಾತ್ರೆಯ ಚೂರುಗಳು, ಕಲ್ಲಿನ ಉಪಕರಣಗಳು, ಎತ್ತಿನ ಎಲುಬುಗಳು ಹಾಗೂ ಇನ್ನಿತರ ಅವಶೇಷಗಳು ದೊರಕಿವೆ. 3ನೆಯ ಹಂತದಲ್ಲಿ ಮೇಲೆ ಉಲ್ಲೇಖಿಸಿದ ಮಾದರಿಯ ದನದ ಕೊಟ್ಟಿಗೆಗಳು, ಕಲ್ಲಿನಿಂದ ನಿರ್ಮಿಸಿದ ಬೇಲಿಗಳು ಮತ್ತು ಮಾನವರ ವಾಸ್ತವ್ಯದ ಕುರುಹುಗಳು ಹಾಗೂ ಆಗಾಗ್ಗೆ ಸಗಣಿಯನ್ನು ಸುಟ್ಟಿರುವ ಲಕ್ಷಣಗಳಿವೆ. 4ನೆಯ ಹಂತದಲ್ಲಿ ಇಂತಹ ಬೂದಿಕಿಟ್ಟಗಳನ್ನು ಗೋಡೆಯ ಬದಿಗೆ ಸಮನಾಗಿ ಹರಡಿರುವಂತೆಯೂ ಮತ್ತು ಗುಪ್ಪೆಯಲ್ಲಿರುವಂತೆಯೂ ಕಂಡುಬಂದಿದೆ. 5ನೆಯ ಹಂತದಲ್ಲಿ ಈ ನೆಲೆಯನ್ನು ಕಬ್ಬಿಣಯುಗದ ಮತ್ತು ಆದಿಚಾರಿತ್ರಿಕ ಕಾಲದ ಜನರು ತ್ಯಜಿಸಿ ಮತ್ತೆ ಬಂದು ನೆಲೆಸಿರುವುದನ್ನು ಇವರ ಕಾಲದ ಮಣ್ಣಿನ ಪಾತ್ರೆಗಳಿಂದ ಕಂಡುಕೊಳ್ಳಲಾಗಿದೆ. ಒಟ್ಟಾರೆಯಾಗಿ ಇಲ್ಲಿ 5 ಬಾರಿ ವ್ಯವಸ್ಥಿತವಾಗಿ ಸಗಣಿಯ ದಿಬ್ಬವನ್ನು ಸುಡಲಾಗಿದೆ.

ಮಾನವ ವಾಸ್ತವ್ಯದ ಅವಶೇಷಗಳು ಬೂದಿ ಪದರಗಳಲ್ಲಿ ದೊರಕಿಲ್ಲವಾದರೂ ನವಶಿಲಾಯುಗದ ಬೂದು ಬಣ್ಣದ ಮಡಕೆ ಚೂರುಗಳು, ಇದ್ದಿಲು ಮತ್ತು ಎತ್ತಿನ ಎಲುಬುಗಳು ದಿಬ್ಬದ ಹೊರಭಾಗಗಳಲ್ಲಿ ಕಂಡುಬಂದಿವೆ. ಒಟ್ಟಾರೆ ಇವು 1–4ನೆಯ ಹಂತಗಳಿಗೆ ಸೇರಿದವು.

ನವಶಿಲಾಯುಗ ಕಾಲದ ಬಹುತೇಕ ಮಣ್ಪಾತ್ರೆಗಳನ್ನು ಹೆಚ್ಚಾಗಿ ಕೈಯಿಂದ ತಯಾರಿಸಲಾಗಿದೆ. ಇವು ಬೂದು, ಕಪ್ಪು, ಬಿಸ್ಕತ್, ಕಂದು, ಚಾಕೊಲೇಟ್ ಮುಂತಾದ ವಿವಿಧ ಬಣ್ಣಗಳ ಮಣ್ಪಾತ್ರೆಗಳಾಗಿವೆ. ಕೆಲವು ಮಣ್ಪಾತ್ರೆಗಳನ್ನು ಸುಟ್ಟ ಅನಂತರ ಕಾವಿವರ್ಣವನ್ನು ಪಾತ್ರೆಯ ಅಂಚಿನಲ್ಲಿ ಎಳೆಯಾಗಿ ಹಚ್ಚಿರುವುದು ಕಂಡುಬಂದಿದೆ. ಗೀರುಚಿತ್ರ ಅಲಂಕರಣೆಗಳು ಕೆಲವು ಪಾತ್ರೆಗಳಲ್ಲಿವೆ. ಮಣ್ಪಾತ್ರೆ ಪ್ರಕಾರಗಳು ಸೀಮಿತವಾಗಿವೆ. ಹೊರಚಾಚಿದ ಅಂಚಿನ ಹೂಜಿಗಳು, ಬೋಗುಣಿಗಳು, ಚಕಮಕಿ ಕಲ್ಲಿನ ಅಲಗುಗಳು, ಅರ್ಧಚಂದ್ರಾಕೃತಿ, ಉಂಟೆಗಲ್ಲು ಮತ್ತು ಚಕ್ಕೆಗಳು ದೊರಕಿವೆ. ಬೂದುಬಣ್ಣದ ನೀಸ್ ಶಿಲೆಯ ಕೊಡಲಿ ಮತ್ತು ಹಸುರು ಶಿಸ್ತ್‌ಶಿಲೆಯ ಕೆತ್ತಿದ ಮತ್ತು ನಯಗೊಳಿಸಿದ ಶಿಲೋಪಕರಣ ಸಹ ಪತ್ತೆಯಾಗಿವೆ.

ಆದಿಕಬ್ಬಿಣ ಮತ್ತು ಆದಿಚಾರಿತ್ರಿಕ ಹಂತದಲ್ಲಿ ದೊರಕಿರುವ ಬಹುತೇಕ ಮಣ್ಪಾತ್ರೆಗಳು ಚಕ್ರದಿಂದ ತಯಾರಿಸಿದ ಕಡುಕೆಂಪು ಅಥವಾ ಮಾಸಿದ ಕೆಂಪು ವರ್ಣದ್ದಾಗಿವೆ. ಆಳ ಬೋಗುಣಿಗಳು, ತಟ್ಟೆಗಳು, ಕಪ್ಪು ಮತ್ತು ಕೆಂಪು ಬಣ್ಣದ ಟ್ಯೂಲಿಪ್ ಹೂವಿನಾಕಾರದ ಬೋಗುಣಿ, ಅಂಚಿರುವ ಬೋಗುಣಿ ಮತ್ತು ಮುಚ್ಚಳಗಳು ಮುಂತಾದ ಪ್ರಕಾರಗಳಿವೆ.

ಉತ್ಖನನ ಗುಂಡಿಯ 9ನೆಯ ಪದರದಲ್ಲಿ ಶಿಶುವಿನ ಒಂದು ಸಮಾಧಿ ದೊರೆತಿದೆ. ಪಕ್ಕೆಲುಬುಗಳು, ಕಾಲಿನ ಮೂಳೆ ಮತ್ತು ತಲೆಬುರುಡೆಯ ಭಾಗಗಳು ಸಂಪೂರ್ಣವಾಗಿ ನುಜ್ಜುಗುಜ್ಜಾಗಿರುವುದರಿಂದ ಇದು ನವಜಾತ ಶಿಶುವಿನ ಅಸ್ಥಿಭಾಗಗಳೆಂದು ಊಹಿಸಲಾಗಿದೆ. ಪ್ರಾಣಿ ಅವಶೇಷಗಳು ಬಹುಮಟ್ಟಿಗೆ ಎತ್ತು, ಜಿಂಕೆ ಮತ್ತು ಮೇಕೆಗಳದ್ದಾಗಿವೆ. 5ನೆಯ ಹಂತ ಇಂಗಾಲ–14 ತಂತ್ರದಿಂದ ಪ್ರ.ಶ.ಪೂ. 2295±155 ಅವಧಿಯದೆಂದು ಪರಿಗಣಿಸಲಾಗಿದೆ. ಸಾಪೇಕ್ಷವಾಗಿ 4ನೆಯ ಹಂತವನ್ನು ಪ್ರ.ಶ.ಪೂ. 1250 ಎಂದು ತೀರ್ಮಾನಿಸಲಾಗಿದೆ. ರಾಯಚೂರು ಜಿಲ್ಲೆಯ ದೋಆಬ್ ಪ್ರದೇಶದಲ್ಲಿ ಕಂಡುಬರುವ ಆದಿ ನವಶಿಲಾಯುಗದ ಕಾಲದ ಜನರು ಸಗಣಿ ದಿಬ್ಬಗಳನ್ನು ನಿಗದಿತ ಕಾಲಾವಧಿಗಳಲ್ಲಿ ಸುಡುತ್ತಿದ್ದರು. ಇದರಿಂದ ಬೂದಿದಿಬ್ಬಗಳ ರಚನೆಯಾಗುತ್ತಿತ್ತು. ಇದು ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ್ದು ಹೊಸ ಬೂದಿದಿಬ್ಬಗಳಿಗೆ ಎಡೆ ಮಾಡಿಕೊಡುತ್ತಿತ್ತು. ಹೋಳಿ ಮತ್ತು ದೀಪಾವಳಿ ಹಬ್ಬಗಳ ಆಚರಣೆಯ ಸಂದರ್ಭಗಳಲ್ಲಿ ಸಗಣಿಯನ್ನು ಸಾಂಕೇತಿಕವಾಗಿ ಸುಡುವ ಧಾರ್ಮಿಕ ಪದ್ಧತಿ ಇಂದಿಗೂ ಈ ಭಾಗದಲ್ಲಿ ಉಳಿದುಬಂದಿದೆ. (ಸಿ.ಎಸ್.ವಿ.)

**ಉದಯ್‌ಪೂರ್ವ:** ಉತ್ತರ ಪ್ರದೇಶ ರಾಜ್ಯದ ಔರೆಯ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಇತ್ತೀಚೆಗೆ ಇಲ್ಲಿ ಸು.4000 ವರ್ಷಗಳ ಹಿಂದಿನ ತಾಮ್ರ ಉಪಕರಣಗಳ ಗುಡ್ಡೆ ಆಕಸ್ಮಿಕವಾಗಿ ಬೆಳಕಿಗೆ ಬಂದಿದೆ. ರೈತನೊಬ್ಬ ಅಗೆಯುತ್ತಿದ್ದಾಗ ಇದು ಕಂಡುಬಂತು. ಈ ನೆಲೆಯಲ್ಲಿ ಎರಡೂಕಡೆಯ ಅಂಚಿನಲ್ಲಿ ಮುಳ್ಳುಗಳುಳ್ಳ ಉದ್ದನೆಯ ಗಾಳ, ಚಪ್ಪಟೆ



ತಾಮ್ರ ವಸ್ತು ನಿಕ್ಷೇಪದ ವಿವಿಧ ವಸ್ತುಗಳು

ದ್ವಿಭುಜ ಕೊಡಲಿ, ಉಳಿ, ಮಾನವಾಕೃತಿ ಗಟ್ಟಿ ಬೊಂಬೆ ಮುಂತಾದವುಗಳು ದೊರಕಿವೆ. ಉತ್ತರ ಪ್ರದೇಶ ಸರ್ಕಾರದ ಪುರಾತತ್ತ್ವ ವಿಭಾಗ ಈ ನೆಲೆಯ ಹೆಚ್ಚಿನ ಉತ್ಖನನಕ್ಕೆ ಯೋಜನೆ ಹಾಕಿಕೊಂಡಿದೆ. ಉತ್ತರ ಭಾರತದಲ್ಲಿ ಸು. 100 ವರ್ಷಗಳಲ್ಲಿ ಇಂಥ 100ಕ್ಕೂ ಹೆಚ್ಚು ನೆಲೆಗಳು ಶೋಧವಾಗಿರುವುದು, ಇನ್ನೂ ಹೊಸ ಹೊಸ ನೆಲೆಗಳು ಬೆಳಕಿಗೆ ಬರುತ್ತಿರುವುದು ಗಮನಾರ್ಹ. (ಎ.ಎಸ್.;ಎನ್.ಎಲ್.)

**ಉದಾಮ್ ಸಿಂಗ್:** 1899–1940. ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ. ಪಂಜಾಬ್‌ನ ಅಮೃತಸರದಲ್ಲಿ ಜನಿಸಿದ. ಚಿಕ್ಕಂದಿನಲ್ಲಿ ಜನರಲ್ ಡೈಯರ್ ನೇತೃತ್ವದಲ್ಲಿ ನಡೆದ ಜಲಿಯನ್ ವಾಲಾಬಾಗ್ ದುರಂತದ ಮಾರಣ ಹೋಮದಿಂದ ಬ್ರಿಟಿಷ್ ವಿರೋಧಿ ಭಾವನೆ ಬೆಳೆಸಿಕೊಂಡ. ಇಂಗ್ಲೆಂಡ್‌ಗೆ ತೆರಳಿ ಲಂಡನ್‌ನಲ್ಲಿ ಎಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಸೇರಿದ. ಅಲ್ಲಿ ಕ್ರಾಂತಿಕಾರಿಗಳ ಸಂಪರ್ಕದೊಂದಿಗೆ 6 ಗುಂಡುಗಳ ರಿವಾಲ್ವರನ್ನು ಸಂಪಾದಿಸಿಕೊಂಡ. ಹಿಂದೆ ಜಲಿಯನ್ ವಾಲಾಬಾಗ್ ದುರಂತದ ವೇಳೆಯಲ್ಲಿ ಪಂಜಾಬಿನ ಗವರ್ನರ್ ಆಗಿ, ಪರೋಕ್ಷವಾಗಿ ದುರಂತಕ್ಕೆ ಕಾರಣನಾಗಿದ್ದ ಸರ್ ಮೈಕಲ್ ಓಡ್ವೈಯರ್‌ನನ್ನು 1940 ಮಾರ್ಚ್ 13ರಂದು ಲಂಡನ್ನಿನ ಕ್ಯಾಕ್ಸ್‌ಟೌನ್ ಹಾಲ್ ಸಭೆಯೊಂದರಲ್ಲಿ ಗುಂಡಿಟ್ಟುಕೊಂದ. ಆಗ ಇವನನ್ನು ಬಂಧಿಸಿ ವಿಚಾರಣೆ ನಡೆಸಿ 1940 ಜೂನ್ 12ರಂದು ಗಲ್ಲಿಗೇರಿಸಲಾಯಿತು. (ಕೆ.ಎಸ್‌ಡಿ.)

**ಉದ್ಧರೆಯ ಅರಸರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಉದ್ಯಾವರ:** ಉಡುಪಿ ಜಿಲ್ಲೆಯ ಒಂದು ಸ್ಥಳ. ಶಾಸನಗಳಲ್ಲಿ ಉದಯಪುರ, ಉದ್ಯಾವರ, ವೇವೂರ ಎಂದು ಹೆಸರಿಸಲಾಗಿದೆ. ಇದು ಆಳುಪರ (8–10ನೆಯ ಶತಮಾನ) ರಾಜಧಾನಿಯಾಗಿತ್ತು. ಆ ಕಾಲದ ಅರಮನೆ ಅವಶೇಷಗಳಿವೆ. ಪ್ರಾಯಶಃ ಈ ಪ್ರದೇಶ ಉತ್ಖನನಕ್ಕೊಳಗಾದಲ್ಲಿ ಇನ್ನೂ ಹೆಚ್ಚಾಗಿ ಪ್ರಾಚೀನ ಅವಶೇಷಗಳು ದೊರೆಯಬಹುದು.

ಇಲ್ಲಿ 8,9, 10ನೆಯ ಶತಮಾನಗಳಿಗೆ ಸಂಬಂಧಿಸಿದ 17 ಶಾಸನಗಳು ದೊರಕಿವೆ. ಇವುಗಳಲ್ಲಿ ವೀರಗಲ್ಲುಗಳೂ ಇವೆ. ಇಲ್ಲಿರುವ ಶಂಭುಕಲ್ಲು ಗುಡಿ ಅಖಂಡ ಶಿಲಾಬಂಡೆಯ ಮೇಲೆ ಕಟ್ಟಲ್ಪಟ್ಟಿದೆ. ಸ್ಕಂದ, ಬೊಮ್ಮೇಶ್ವರ ಇಲ್ಲಿರುವ ಇನ್ನೆರಡು ಪ್ರಾಚೀನ ದೇವಾಲಯಗಳು. ಬೊಮ್ಮೇಶ್ವರ ಈ ಜಿಲ್ಲೆಯ ಅತ್ಯಂತ ಪ್ರಾಚೀನ ಗುಡಿ ಎಂದು ವಿದ್ವಾಂಸರ ಅಭಿಪ್ರಾಯ. ಈ ಸ್ಥಳ ಪ್ರಾಚೀನ ಕರ್ನಾಟಕದಲ್ಲಿ ದೊಡ್ಡ ನಗರವಾಗಿದ್ದು ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಸಾಮಾಜಿಕ ಹಾಗೂ ರಾಜಕೀಯ ಪ್ರಕ್ರಿಯೆಗಳಲ್ಲಿ ಕ್ರಿಯಾಶೀಲವಾದ ತಾಣವಾಗಿತ್ತು. ಭಾರತದ ಪಶ್ಚಿಮ ಕರಾವಳಿಯ ದೊಡ್ಡ ಬಂದರುಗಳಲ್ಲಿ ಇದೂ ಒಂದಾಗಿತ್ತು.

ಇಲ್ಲಿರುವ ಕೋಟೆ (ಮೇಲ್ ಕೋಟೆ–ಬಾಳೇರಗುಡ್ಡ) ಎತ್ತರದ ದಿಬ್ಬದ ಮೇಲಿದೆ. ಕೆಳಕೋಟೆ ಸಮತಟ್ಟಾದ ಪ್ರದೇಶದಲ್ಲಿ ಹುದುಗಿಕೊಂಡಿದೆ. ಈ ಕೆಳಕೋಟೆಯಿಂದ ಬೃಹತ್ ಶಿಲಾಯುಗದ್ದೆನ್ನಬಹುದಾದ ಕಪ್ಪು–ಕೆಂಪು ಬಣ್ಣದ ಮಡಕೆ ಚೂರುಗಳು, ಹೊಳೆವ ಕಪ್ಪು ಮಡಕೆಗಳು, ಕೆಂಪು ಕೆನೆಯಂತೆ ಹೊಳೆವ ಮಡಕೆ ಚೂರುಗಳನ್ನು ಶೋಧಿಸಲಾಗಿದೆ.(ಎಸ್.ಕೆ.ಜಿ.)

**ಉರ್:** ದಕ್ಷಿಣ ಮೆಸಪೊಟೇಮಿಯದ ಸುಮೇರಿಯನ್ ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚೀನ ನಗರ. ಯೂಫ್ರಟೀಸ್ ನದಿಯ ದಡದಲ್ಲಿ ಈಗಿನ ಬಾಗ್ದಾದಿಗೆ ಸಮೀಪದಲ್ಲಿದೆ. ಇಲ್ಲಿ ನಡೆದ ಪುರಾತತ್ತ್ವ ಶೋಧನೆಗಳಿಂದ ಸುಮೇರಿಯ ಸಂಸ್ಕೃತಿಯ ವೈಶಿಷ್ಟ್ಯ ಬೆಳಕಿಗೆ ಬಂದಿದೆ. ಈಗಿನ ಟೆಲ್ ಮುಕಾಯರ್ ಪ್ರದೇಶವೇ ಪ್ರಾಚೀನ ಉರ್ ಪಟ್ಟಣ. ಇಲ್ಲಿ ಪರಿಶೋಧನೆ ಪ್ರಾರಂಭವಾದದ್ದು 1854ರಿಂದ. ಈ ಸ್ಥಳವನ್ನು ಮೊದಲಬಾರಿಗೆ ಉತ್ಖನನ ಮಾಡಿ ಅವಶೇಷಗಳನ್ನು ಬೆಳಕಿಗೆ ತಂದ ಕೀರ್ತಿ ಜೆ. ಇ. ಟೇಲರ್ ಎಂಬ ಪುರಾತತ್ತ್ವ ಶೋಧಕನದು. ಅನಂತರ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ಅಧಿಕಾರಿಗಳೂ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಅಧಿಕಾರಿಗಳೂ ಉರ್‌ನಲ್ಲಿ ಶೋಧ ನಡೆಸಿದರು. 1922ರಿಂದ 12 ವರ್ಷಗಳ ಕಾಲ ಸತತವಾಗಿ ಉತ್ಖನನ ಕಾರ್ಯ ಕೈಗೊಂಡು ಈ ನಗರದ ಅವಶೇಷಗಳನ್ನು ಬಹುವಾಗಿ ಹೊರತೆಗೆದ ಕೀರ್ತಿ ಸರ್ ಲಿಯೋನಾರ್ಡ್ ವೂಲಿ ಎಂಬ ಪ್ರಾಕ್ತನಶಾಸ್ತ್ರಜ್ಞನಿಗೆ ಸಲ್ಲುತ್ತದೆ. ಈತ ನಡೆಸಿದ ಉತ್ಖನನಗಳಿಂದ ಉರ್ ನಗರದ ಸಂಪೂರ್ಣ ಚರಿತ್ರೆ ಬೆಳಕಿಗೆ ಬಂತು.

ಚಿತ್ರಿತ ಮಣ್ಣಿನ ಬಟ್ಟಲು

ಈ ನಗರಕ್ಕೆ ಸಮೀಪದಲ್ಲಿರುವ ಉಬಾಯ್ದ್‌ನಲ್ಲಿ ದೊರಕಿರುವ ಅವಶೇಷಗಳೇ ಇಲ್ಲಿನ ಪ್ರಾಚೀನತಮ ನಾಗರಿಕತೆಯ ಕುರುಹುಗಳು. ಮಣ್ಣಿನ ಮಡಕೆಯ ಹೋಲಿಕೆಗಳಿಂದ ಇಲ್ಲಿಯ ನಾಗರಿಕತೆ ಇರಾನಿಗೆ ಸಂಬಂಧಿಸಿದ್ದೆಂದು ಹೇಳಬಹುದು. ಉಬಾಯ್ಡ್ ಸಂಸ್ಕೃತಿಯ ಅನಂತರ ಸುಮೇರಿಯ ಸಂಸ್ಕೃತಿ ಬೇರೂರುವುದಕ್ಕೆ ಮೊದಲು ಈ ಎರಡು ವಿಭಿನ್ನ ಸಂಸ್ಕೃತಿಯ ಜನರು ಅಲ್ಲಿ ವಾಸವಾಗಿದ್ದರೆಂದು ಉರುಕ್‌ನಲ್ಲಿ ದೊರಕಿರುವ ಅವಶೇಷಗಳಿಂದಲೂ ಜಂಡೆಟ್‌ನಾಸ್ರ್ ಎಂಬಲ್ಲಿ ದೊರಕಿರುವ ಅವಶೇಷಗಳಿಂದಲೂ ತಿಳಿದುಬರುತ್ತದೆ. ಈ ಸಂಸ್ಕೃತಿಯ ಕಾಲವನ್ನು ಪ್ರ.ಶ.ಪೂ.4400–3000 ಎಂದು ನಿರ್ಧರಿಸಲಾಗಿದೆ. ಅನಂತರ ಈ ನಗರದ ರಾಜವಂಶಗಳ ಸಂಸ್ಕೃತಿಯ ಕಾಲವನ್ನು ಕಾಣುತ್ತೇವೆ. ಈ ರಾಜವಂಶದ ಸ್ಥಾಪಕ ಮೆಸ್–ಅನ್ನಿ ಪದ್ದನೆಂದು ತಿಳಿಯುತ್ತದೆ. ಈ ವಂಶದ ಅನೇಕ ರಾಜರುಗಳ ನೇತೃತ್ವದಲ್ಲಿ ಈ ನಗರ ಸರ್ವತೋಮುಖ ಪ್ರಗತಿ ಸಾಧಿಸಿ ಸುಮೇರಿಯ ಸಂಸ್ಕೃತಿ ಪ್ರಸಿದ್ಧವಾಗಲು ನೆರವಾಯಿತು. ಈ ಕಾಲದಲ್ಲಿ ರಾಜವಂಶ ಬೇರೂರಿದಂತೆ ನ್ಯಾಯಾಂಗ ವಿಶೇಷವಾಗಿ ಬೆಳೆಯಿತು. ರಾಜತ್ವದ ಜೊತೆಯಲ್ಲೇ ಧರ್ಮಗಳೂ ಬೆಳೆದವು. ಇದರಿಂದ ದೇವತೆಗಳ ಸಮೂಹವೊಂದು ರಚಿತವಾಯಿತು. ದೇವತೆಗಳಿಗೆ ದೇವಾಲಯವನ್ನು ಕಟ್ಟುವ ಕಾರ್ಯಕ್ಕೆ ಹೆಚ್ಚಾಗಿ ಪ್ರೋತ್ಸಾಹ ಸಿಕ್ಕಿ, ವಾಸ್ತು ಮತ್ತು ಶಿಲ್ಪಕಲೆಗಳು ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದುವು. ಇವುಗಳನ್ನು ಕಾಪಾಡಿಕೊಂಡು ಬರಲು ಮತ್ತು ಶತ್ರುಗಳನ್ನು ಸೋಲಿಸಲು ಸುಭದ್ರ ಸೈನ್ಯದ ವ್ಯವಸ್ಥೆ ರೂಢಿಗೆ ಬಂದಿತು. ಈ ಎಲ್ಲ ಪ್ರಗತಿಗಳಿಂದ ಸಾಮಾನ್ಯ ಜನಗಳ ಜೀವನ ಸುಖಮಯವಾಗುವಂತೆ ಆಯಿತು. ಇದಕ್ಕೆ ಉದಾಹರಣೆಯಾಗಿ ಮೊದಲನೆಯ ರಾಜವಂಶದ ಗೋರಿಗಳನ್ನು ನೋಡಬಹುದು. ಈ ಗೋರಿಗಳು ವಿಶಾಲವಾಗಿದ್ದು ಬೆಲೆಬಾಳುವ ಆಭರಣಗಳು, ಮಂಚ, ಕುರ್ಚಿ, ಮಡಕೆ ಮುಂತಾದವುಗಳನ್ನೊಳಗೊಂಡಿವೆ. ಜೊತೆಗೆ ರಾಜನ ಸೇವೆಯಲ್ಲಿ ನಿರತರಾಗಿದ್ದ ಎಲ್ಲ ಆಳುಕಾಳುಗಳ ಗೋರಿಗಳನ್ನೂ ಕಾಣಬಹುದು. ಸ್ವಲ್ಪ ಕಾಲಾನಂತರ ಈ ನಗರ ಇತರ ನಗರಗಳ ಆಳ್ವಿಕೆಗೆ ಒಳಪಟ್ಟಿತು. ಮೂರನೆಯ ರಾಜವಂಶದ ಸ್ಥಾಪಕನಾದ ಅರ್‌ನಮ್ಮು ಎಂಬ ರಾಜನ ಕಾಲದಲ್ಲಿ ಮತ್ತೆ ಪ್ರಾಮುಖ್ಯತೆಗೆ ಬಂತು. ಈತ ನಿರ್ಮಿಸಿದ (2100) ಕಟ್ಟಡಗಳಲ್ಲಿ ಜಿಗ್ಗುರಾಟ್ ಮುಖ್ಯವಾದುದು. ಇದು ಸು.70ಮೀ ಉದ್ದ, ಸು.42ಮೀ ಅಗಲ ಮತ್ತು ಸು.17ಮೀ ಎತ್ತರವಿರುವ ಇಟ್ಟಿಗೆಗಳಿಂದ ಕಟ್ಟಿದ ಭವ್ಯಸೌಧ. ಎಲ್ಲ ಜಿಗ್ಗುರಾಟ್‌ಗಳಂತೆ ಇದೂ ಚೌಕ ಪ್ರಾಕಾರಗಳನ್ನುಳ್ಳ ಕಟ್ಟಡ. ಹೊರಗಿನ ಪ್ರಾಕಾರಕ್ಕಿಂತ ಒಳಗಿನ ಪ್ರಾಕಾರ ಕಿರಿದಾಗಿರುತ್ತ ಬಂದು ಕೊನೆಗೆ ಎತ್ತರದ ಜಗಲಿಯಲ್ಲಿ ಕೊನೆಗೊಳ್ಳುತ್ತದೆ. ಇದೇ ದೇವರ ವಾಸಸ್ಥಾನ. ಅರ್‌ನಮ್ಮುವಿನಿಂದ ರಚಿತವಾದ ಜಿಗ್ಗುರಾಟ್ ದೇವಾಲಯಕ್ಕೆ ಮುಂಭಾಗದಲ್ಲಿ ಮೂರು ದಿಕ್ಕಿನಲ್ಲೂ ಮೆಟ್ಟಲುಗಳಿವೆ. ಇವುಗಳನ್ನು ಹತ್ತಿ ಒಳಗಿನ ಪ್ರಾಕಾರಕ್ಕೆ ಹೋಗಬೇಕು. ಈ ಪ್ರಾಕಾರಗಳ ಗೋಡೆಯ ಒಳಭಾಗಗಳು ಶಿಲ್ಪಫಲಕಗಳಿಂದ ಅಲಂಕೃತವಾಗಿವೆ. ಈ ಫಲಕಗಳು ಉರ್ ನಗರದ ಚರಿತ್ರೆಯನ್ನು ತಿಳಿಸುತ್ತವೆ.

ಪ್ರ.ಶ.ಪೂ.1800ರಲ್ಲಿ ಉಂಟಾದ ಕ್ಷೋಭೆಯಲ್ಲಿ ಉರ್ ನಗರ ನಾಶವಾಗಿ ಕಟ್ಟಡಗಳೆಲ್ಲ ಒಡೆಯಲ್ಪಟ್ಟು, ಅವುಗಳ ಭವ್ಯತೆ ನಾಶವಾಯಿತು. 300 ವರ್ಷಗಳ ಅನಂತರ ಆಳಿದ ರಾಜರು ನಗರದ ಪುನರ್ನಿರ್ಮಾಣ ಕಾರ್ಯವನ್ನು ಕೈಗೊಂಡರು. ಪ್ರ.ಶ.ಪೂ.7ನೆಯ ಶತಮಾನದಿಂದ ಮತ್ತೆ ಈ ನಗರ ಪ್ರಾಮುಖ್ಯ ಪಡೆಯಿತು. ನೆಬುಚೆಡ್ನಸರ್ ಎಂಬ ರಾಜ ಇಲ್ಲಿನ ದೇವಾಲಯಗಳನ್ನು ಪುನರ್ನಿರ್ಮಿಸಿ ನಗರದ ಸೌಂದರ್ಯವನ್ನು ಹೆಚ್ಚಿಸಿದ. ಆದರೆ ಪರ್ಷಿಯನ್ನರ ದಂಡಯಾತ್ರೆಗಳ ಅನಂತರ ಸುಮೇರಿಯ ಮತಧರ್ಮಗಳು ಅವನತಿ ಹೊಂದಿದುವು. ಅವುಗಳ ಜೊತೆಯಲ್ಲಿಯೇ ಜಿಗ್ಗುರಾಟ್‌ಗಳೂ ನಾಶವಾದುವು. ಪ್ರ.ಶ.ಪೂ. 4ನೆಯ ಶತಮಾನದಿಂದ ಈ ನಗರ ಪೂರ್ಣ ನಾಶವಾಗಿ ಮತ್ತೆ ಉಚ್ಛ್ರಾಯ ಸ್ಥಿತಿಯನ್ನು ಕಾಣಲಿಲ್ಲ. (ಎ.ವಿ.ಎನ್.)

**ಉರೈಯೂರ್:** ಸಂಗಮ್ ಯುಗದ ಆದಿ ಚೋಳರ ರಾಜಧಾನಿ. ತಮಿಳುನಾಡು ರಾಜ್ಯದ ತಿರುಚ್ಚಿರಾಪಳ್ಳಿ ಜಿಲ್ಲೆಯ ತಿರುಚ್ಚಿರಾಪಳ್ಳಿ ಊರಿನ ಒಂದು ಉಪನಗರ. ಕಾವೇರಿ ನದಿಯ ದಕ್ಷಿಣ ದಂಡೆಯ ಮೇಲಿದೆ. ಉರೈಯೂರ್, ಉರಂದೈ, ಕೋಳಿ ಅಥವಾ ಕೋಳಿಯಾರ್ ಎಂಬ ಹೆಸರುಗಳಿಂದ ಕರೆಯಲಾಗಿದೆ. ಇದು ಚೋಳರ ಒಳನಾಡಿನ ರಾಜಧಾನಿಯಾಗಿತ್ತೆಂದು ಪೆರಿಪ್ಲಸ್ ಆಫ್ ಎರಿತ್ರಿಯನ್ ಸೀ ಗ್ರಂಥ ಉಲ್ಲೇಖಿಸುತ್ತದೆ. ಟಾಲೆಮಿ ಉಲ್ಲೇಖಿಸಿರುವ ಒರ್‌ತುರ ರೆಜಿಯ ಸೊರ್ನಾತಿ ಎಂಬ ಸ್ಥಳವನ್ನು ಉರೈಯೂರ್ ಎಂದು ಗುರುತಿಸಲಾಗಿದೆ. ಸುಭದ್ರವಾದ ಕೋಟೆಯೊಳಗೆ ವ್ಯವಸ್ಥಿತವಾದ ನಾಗರಿಕ ಜೀವನಶೈಲಿಯಿಂದ ಕೂಡಿದ್ದ ಈ ಪಟ್ಟಣ ರಾಜಕೀಯ, ಧಾರ್ಮಿಕ ಮತ್ತು ವಾಣಿಜ್ಯ ಚಟುವಟಿಕೆಗಳಿಂದ ಕೂಡಿತ್ತೆಂದು ಸಂಗಮ್ ಸಾಹಿತ್ಯ ಕೃತಿಗಳಾದ ಅಹನಾನೂರು ಮತ್ತು ಪುರನಾನೂರುಗಳು ಉಲ್ಲೇಖಿಸುತ್ತವೆ. ಪ್ರಾಚೀನ ಕಾಲದಿಂದಲೂ ಈ ಪಟ್ಟಣ ಹತ್ತಿ ಮತ್ತು ಪ್ರಾಯಶಃ ರೇಷ್ಮೆ ಬಟ್ಟೆಗಳ ನೇಯ್ಗೆಯ ಪ್ರಮುಖ ಕೇಂದ್ರವಾಗಿತ್ತು. ಇದು ಉತ್ತಮ ದರ್ಜೆಯ ಹತ್ತಿ ಬಟ್ಟೆಯ ಪ್ರಮುಖ ಕೇಂದ್ರವೆಂದು ಪೆರಿಪ್ಲಸ್‌ನಲ್ಲಿ ಉಲ್ಲೇಖವಿದೆ. ಪ್ರಸಿದ್ಧ ಉರಂದೈ ಹಬ್ಬವನ್ನು ವೈಭವಯುತವಾಗಿ ಇಲ್ಲಿ ಆಚರಿಸುತ್ತಿದ್ದ ವಿಷಯವನ್ನೂ ನ್ಯಾಯ ತೀರ್ಮಾನ ಕಾರ್ಯಗಳನ್ನು ನೆರವೇರಿಸುತ್ತಿದ್ದ ಪ್ರಮುಖ ಸಭಾಸ್ಥಾನವಾಗಿ ಪ್ರಸಿದ್ಧಿಹೊಂದಿದ್ದುದನ್ನೂ ಅಹನಾನೂರಲ್ಲಿ ವರ್ಣಿಸಲಾಗಿದೆ. 7 ಮತ್ತು 8 ನೆಯ ಶತಮಾನಗಳಲ್ಲಿ ಪಲ್ಲವ ಮತ್ತು ಪಾಂಡ್ಯರ ನಡುವಿನ ಕಾದಾಟಗಳಿಗೆ ಈ ಪಟ್ಟಣ ಪ್ರಮುಖ ಕಾರಣವಾಗಿತ್ತು. 10 ನೆಯ ಶತಮಾನದ ಆದಿಭಾಗದಿಂದ ಈ ಊರು ಚೋಳ ಸಾಮ್ರಾಜ್ಯದ ಭಾಗವಾಯಿತು. ಒಂದನೆಯ ಮಾರವರ್ಮ ಸುಂದರ ಪಾಂಡ್ಯ (1216–39) ಚೋಳರ ಮೇಲೆ ದಂಡೆತ್ತಿ ಈ ಊರನ್ನು ಸಾಕಷ್ಟು ಧ್ವಂಸ ಮಾಡಿದ. ಚೋಳರ ಪತನಾನಂತರ ಉರೈಯೂರ್ ತನ್ನ ರಾಜಕೀಯ ಶಕ್ತಿಯನ್ನು ಕಳೆದುಕೊಂಡಿತು.

ಇಲ್ಲಿ ಮದರಾಸು ವಿಶ್ವವಿದ್ಯಾಲಯ 1964–68 ರಲ್ಲಿ ನಾಲ್ಕು ಪ್ರದೇಶಗಳಲ್ಲಿ ಉತ್ಖನನ ನಡೆಸಿತು. ಆ ನಿವೇಶನಗಳು ಇಂತಿವೆ: ಪೊಲೀಸ್ ಠಾಣೆ ಸಮೀಪದ ಮೈದಾನ, ಸೆಲ್ಲೆಚ್ಚಿ ಅಮ್ಮನ್ ದೇವಾಲಯದ ಸಮೀಪ, ಉರೈಯೂರ್ ಕೆರೆಯ ಆಗ್ನೇಯ ಭಾಗ, ಹಳೇ ಛತ್ರದ ಸಮೀಪ ಮತ್ತು ನಾದ ಕೈಗಾರಿಕಾ ನಿವೇಶನ.

ಪ್ರಮುಖವಾಗಿ ಎರಡು ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು. ಮೊದಲನೆಯ ಹಂತ ಪ್ರ.ಶ. ಪ್ರಾರಂಭಿಕ ಮೊದಲ 3 ಅಥವಾ 4ನೆಯ ಶತಮಾನಗಳಿಗೆ ಸೇರಿದ್ದರೆ, ಎರಡನೆಯ ಹಂತ ಅದರ ಅನಂತರದ ಕಾಲಕ್ಕೆ ಸೇರಿದೆ. ಈ ಹಂತವನ್ನು ಎರಡು ಉಪಹಂತಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೆಯ ಉಪಹಂತದ ಕಾಲವನ್ನು ಸು.5–10ನೆಯ ಶತಮಾನದ್ದೆಂದೂ ಎರಡನೆಯ ಉಪಹಂತವನ್ನು ಅದರ ಅನಂತರದ ಮಧ್ಯ ಯುಗೀನ ಕಾಲವೆಂದೂ ದೊರಕಿರುವ ಮಣ್ಪಾತ್ರೆಗಳನ್ನು ಆಧರಿಸಿ ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆ, ಕಪ್ಪುಪಾತ್ರೆ, ರೌಲೆಟ್ ಮಣ್ಪಾತ್ರೆಗಳು ದೊರಕಿವೆ. ಕಪ್ಪುವರ್ಣದ ಪಾತ್ರೆಗಳು ಮತ್ತು ಚಿತ್ರಿತ ಮಣ್ಪಾತ್ರೆಗಳು 1ನೆಯ ಶತಮಾನದ ಆಸುಪಾಸಿನ ಕಾಲವನ್ನು ಸೂಚಿಸುತ್ತವೆ. ಇದಕ್ಕೆ ಪೂರಕವಾಗಿ ಇಲ್ಲಿಯೇ ದೊರಕಿರುವ ಬ್ರಾಹ್ಮಿ ಲಿಪಿ ಬರೆವಣಿಗೆಯುಳ್ಳ ಮಡಕೆ ಚೂರುಗಳು ಸಹ ಅಧಿಕಾಂಶವಾಗಿ ಈ ಕಾಲವನ್ನು ಪುಷ್ಟೀಕರಿಸುತ್ತವೆ. ಅವುಗಳಲ್ಲಿ ಒಂದು ಮುಲಾನ್ ಪೇಡುವಿನ ಅಂತಾನನ್ ಎಂದು ಉಲ್ಲೇಖಿಸುತ್ತದೆ. ಇದನ್ನು ಮುಲಾನ್ ಪೇಡುವಿನ ಬ್ರಾಹ್ಮಣ ಎಂದು ಅರ್ಥೈಸಲಾಗಿದೆ. ಇದರೊಂದಿಗೆ ಕಿರು ಹಾಗೂ ತ್ರುಟಿತ ಶಾಸನಗಳು ದೊರಕಿವೆ. ಇವುಗಳ ಕಾಲಮಾನವನ್ನು 1–3 ನೆಯ ಶತಮಾನದ್ದೆಂದು ಊಹಿಸಲಾಗಿದೆ.

ಪ್ರದೇಶ 2ರ ಒಂದು ಗುಳಿಯ 2.39 ಮೀ ಆಳದಲ್ಲಿ ಮೊದಲ ಹಂತಕ್ಕೆ ಸೇರಿದ ಇಟ್ಟಿಗೆಯಿಂದ ನಿರ್ಮಿಸಿದ ಬಣ್ಣ ಹಾಕುವ ತೊಟ್ಟಿ ದೊರಕಿದೆ. ಒಂದು ಚೌಕಾಕಾರ ಮತ್ತು ಇನ್ನೊಂದು ಆಯತಾಕಾರವಾಗಿದ್ದು ಎದುರು ಬದುರು ಇರುವಂತೆ ರೂಪಿಸಲಾಗಿದೆ. ಚೌಕಾಕಾರದ ತೊಟ್ಟಿಯ ಒಳ ಅಳತೆ 68ಸೆಂಮೀ ಇದ್ದರೆ ಆಯತಾಕಾರವಾಗಿರುವ ತೊಟ್ಟಿ 48×35 ಸೆಂಮೀ ಇದೆ. ಇವೆರಡರ ನೆಲಗಟ್ಟಿನಲ್ಲಿ ಹಾಸನ್ನು ಹೊದಿಸಲಾಗಿದೆ. ಇಟ್ಟಿಗೆಯ ಅಳತೆ 43×23×76 ಸೆಂಮೀ. ಈ ಇಟ್ಟಿಗೆ ರಚನೆ ಅರಿಕಮೇಡು ಉತ್ಖನನದಲ್ಲಿ ದೊರಕಿರುವ ಬಣ್ಣ ಹಾಕುವ ತೊಟ್ಟಿಯನ್ನು ಹೋಲುವುದು ಗಮನಾರ್ಹ. ಪ್ರಾಚೀನ ಕಾಲದಿಂದ ಇಂದಿನವರೆಗೂ ಉರೈಯೂರು ದಕ್ಷಿಣ ಭಾರತದ ಮುಖ್ಯ ನೇಯ್ಗೆಯ ಕೈಗಾರಿಕ ಕೇಂದ್ರವೆಂದು ಪ್ರಸಿದ್ಧವಾಗಿದೆ. ಪ್ರದೇಶ–1 ರ ಗುಂಡಿಯಲ್ಲಿ ವಿಶಿಷ್ಟ ವಿನ್ಯಾಸದಿಂದ ಕೂಡಿದ ಅನೇಕ ಕುಳಿಗಳು ಪತ್ತೆಯಾಗಿವೆ. ಪ್ರಾಯಶಃ ಇವುಗಳು ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸುವ ಯಾಗಕುಂಡಗಳಾಗಿರಬಹುದು. ಇದೇ ಪ್ರದೇಶದ ಮತ್ತೊಂದು ಗುಂಡಿಯಲ್ಲಿ ಹಲವಾರು ಪದರಗಳುಳ್ಳ, ಗಟ್ಟಿಗೊಳಿಸಿದ ಮಣ್ಣಿನ ನೆಲಗಟ್ಟು ಮತ್ತು ಕಟ್ಟಡ ತಳಪಾಯ ಬೆಳಕಿಗೆ ಬಂದಿವೆ. ಈ ಹಂತದ ಪದರಿನಲ್ಲಿ ಕಟ್ಟಡದ ತಳಪಾಯ ಮಟ್ಟದಲ್ಲಿ ಇಟ್ಟಿಗೆ ಚೂರು, ಉರುಟುಕಲ್ಲು ಮತ್ತು ಮಣ್ಪಾತ್ರೆಯ ಚೂರುಗಳು ದೊರಕಿವೆ. ಗಾಜು, ಶಂಖ, ಸುಡಾವೆಮಣ್ಣು ಮತ್ತು ಅರೆಪ್ರಶಸ್ತ ಕಲ್ಲುಗಳಿಂದ ತಯಾರಿಸಿದ ಅನೇಕ ಮಣಿಗಳು ಈ ಹಂತದಲ್ಲಿ ದೊರಕಿವೆ. ಅವುಗಳಲ್ಲಿ ಬಳಪದಕಲ್ಲಿನ ಒಂದು ಮಣಿ ಗಮನಾರ್ಹ. ಎಲುಬಿನಿಂದ ತಯಾರಿಸಿದ ಮೊನೆಗಳು ಅಥವಾ ಸೂಜಿಯಂತಹ ಉಪಕರಣಗಳು, ನೇಕಾರರು ನೇಯ್ಗೆಯಲ್ಲಿ ಬಳಸುವಂತಹ ಸಾಧನಗಳಾಗಿರಬಹುದೆಂದು ಅಥವಾ ಇವುಗಳನ್ನು ಲೇಖನಿ ಕಂಠದಂತೆ (ಸ್ಟೈಲಿ) ಬಳಸಿರಬಹುದೆಂದು ತರ್ಕಿಸಲಾಗಿದೆ.

2ಎ ಹಂತದಲ್ಲಿ ದೈನಂದಿನ ಬಳಕೆಯ ಗಾಢ ಕೆಂಪು ಲೇಪನದ ಮಣ್ಪಾತ್ರೆಗಳು ದೊರಕಿದ್ದರೆ ಅನಂತರದ ಬಿ ಹಂತದಲ್ಲಿ ಒರಟಾದ ಕೆಂಪು ಮಣ್ಪಾತ್ರೆಗಳು ಹಾಗೂ ಅವುಗಳೊಂದಿಗೆ ಸೆಲೆಡಾನ್ ಮಣ್ಪಾತ್ರೆಯ ಚೂರುಗಳು ಸಹ ದೊರಕಿವೆ. ಗಾಜಿನ ಮಣಿಗಳು, ಕೆಂಪುಬಣ್ಣದ ಗಾಜಿನ ಬಳೆಗಳು ಮತ್ತು ಅರೆಪ್ರಶಸ್ತ ಕಲ್ಲುಗಳು ಹಾಗೂ ಸುಡಾವೆ ಮಣ್ಣಿನಿಂದ ತಯಾರಿಸಿದ ಮಾನವಾಕೃತಿಯ ಗೊಂಬೆಗಳು, ಆಟಿಕೆಗಳು, ದಾಳಗಳು ಮತ್ತು ಕಿವಿಯ ಆಭರಣಗಳು ಸಹ ಪತ್ತೆಯಾಗಿವೆ. ಪ್ರಚಲಿತ ಶಕೆಯ ಆರಂಭ ಕಾಲಕ್ಕೆ ಸೇರಿದ ಕಾವೇರಿಪಟ್ಟಣಮ್, ಅರಿಕ ಮೇಡು, ಕಂಚಿ ಮುಂತಾದ ಆದಿಚಾರಿತ್ರಿಕ ನೆಲೆಗಳಲ್ಲಿ ದೊರಕಿರುವ ಮನೆಗಳ ಅವಶೇಷಗಳು, ದೈನಂದಿನ ಬಳಕೆಯ ಗೃಹೋಪಯೋಗಿ ವಸ್ತುಗಳು ಮೃಣ್ಪಾತ್ರೆಗಳು, ಬಳೆಗಳು, ಕಬ್ಬಿಣದ ಉಪಕರಣಗಳಾದ ಕತ್ತಿ, ಕೊಂಡಿ ಮುಂತಾದ ಹಲವಾರು ಪ್ರಾಕ್ತನ ಅವಶೇಷಗಳು ಈ ನೆಲೆಯಲ್ಲಿ ದೊರಕಿವೆ. ಇಲ್ಲಿ ದೊರಕಿರುವ ಮಣ್ಪಾತ್ರೆಯ ಚೂರುಗಳ ಮೇಲೆ ಕಂಡುಬಂದಿರುವ ಬ್ರಾಹ್ಮಿ ಲಿಪಿಯ ಶಾಸನಗಳು ತಮಿಳು ಭಾಷೆಯಲ್ಲಿರುವುದು ಗಮನಾರ್ಹ. (ಪಿ.ಎಸ್.ವಿ.)

# ಊ

**ಊಳಿಗಮಾನ್ಯ ಪದ್ಧತಿ:** ಸಾಮಾನ್ಯ ಅರ್ಥದಲ್ಲಿ ಒಬ್ಬ ಮನುಷ್ಯ ಇನ್ನೊಬ್ಬನಿಗೆ ಅಧೀನನಾಗಿರುವಂಥ ವೈಯಕ್ತಿಕ ಸಂಬಂಧಗಳಿರುವ ಮತ್ತು ಭೂಸ್ವಾಮ್ಯ ಹಕ್ಕುಗಳನ್ನು ಅನುಕ್ರಮವಾಗಿ ಪಡೆದಿರುವ ವ್ಯವಸ್ಥೆ. ಪಾಲನೆ ಪೋಷಣೆ ಮಾಡುವ ಒಂದು ಪಕ್ಷಕ್ಕೂ ಸೇವೆ ವಿಧೇಯತೆ ತೋರುವ ಇನ್ನೊಂದು ಪಕ್ಷಕ್ಕೂ ನಡುವಣ ವೈಯಕ್ತಿಕ ಸಂಬಂಧ ಸೂಚಕವಾದ ಮಧ್ಯಯುಗೀನ ನ್ಯಾಯವ್ಯವಸ್ಥೆ ಎಂಬುದು ಈ ಪದದ ವಿಶಿಷ್ಟಾರ್ಥ (ಫ್ಯೂಡಲಿಸಂ). ಈ ಸಂಬಂಧಗಳು ಆ ಕಾಲದಲ್ಲಿದ್ದ ಸ್ವತ್ತನ್ನು ಕುರಿತಾದ ನ್ಯಾಯವನ್ನೇ ಅಲ್ಲದೆ ಮಧ್ಯಯುಗದ ದೇಶಗಳ ಇಡೀ ರಾಜ್ಯರಚನೆಯ ಮೇಲೆಯೇ ತೀವ್ರ ಪರಿಣಾಮ ವನ್ನುಂಟುಮಾಡಿದ್ದುವು.

ಊಳಿಗಮಾನ್ಯ ಸಮಾಜವೆಂದಾಗ ಇಂದಿನದಕ್ಕಿಂತ ಭಿನ್ನವಾದ ಒಂದು ವಿಶಿಷ್ಟ ನಾಗರಿ ಕತೆಯೇ ಕಣ್ಣಮುಂದೆ ಬಂದು ನಿಲ್ಲುತ್ತದೆ. ಆ ಕಾಲದಲ್ಲಿದ್ದ ಪ್ರಭುಗಳ, ಜೀತಗಾರರ ಮತ್ತು ಉಂಬಳಿಗಳ ಚಿತ್ರ ಮೂಡುವುದು. ಇಂಥ ಸಮಾಜ ವ್ಯವಸ್ಥೆಯಲ್ಲಿ ಅಧಿಕಾರ ನಿರತವಾದ ಆಡಳಿತಗಾರರೂ ಸೈನಿಕರೂ ರಾಷ್ಟ್ರವೆಂಬ ಅಮೂರ್ತಕಲ್ಪನೆಗೆ ಸೇವೆ ಸಲ್ಲಿಸುವವರಲ್ಲ; ಇವರಿಗೂ ಇವರ ಮೇಲ್ಪಟ್ಟ ಪ್ರಭುವಿಗೂ ಇರುವ ವೈಯಕ್ತಿಕ ಹಾಗೂ ವಿಶಿಷ್ಟ ಸಂಬಂಧಗಳಿಗಾಗಿ ಇವರು ಈ ಬಗೆಯ ಕರ್ತವ್ಯ ನಿರತರಾಗಿರುತ್ತಾರೆ. ಇವರಿಗೆ ಪ್ರತಿಫಲ ಸಲ್ಲುವುದು ವಂಶಪಾರಂ ಪರ್ಯವಾಗಿ ಇವರು ಅನುಭವಿಸಿಕೊಂಡು ಬರುವ ಭೂಮಾನ್ಯಗಳಿಂದ. ಇಂತಿಂಥ ಭೂಮಾನ್ಯ ಪಡೆದಿರುವವರು ಇಂತಿಂಥ ಸೇವೆ ಸಲ್ಲಿಸ ಬೇಕೆಂಬುದು ನಿಗದಿಯಾಗಿರುವುದರಿಂದ ಆಯಾ ಕರ್ತವ್ಯ ನಿರ್ವಹಿಸುವವರು ಆಯಾ ಸ್ಥಾನಗಳಲ್ಲಿರುವುದು ಒಂದು ದೃಷ್ಟಿಯಲ್ಲಿ ಆಕಸ್ಮಿಕ. ಸೇವೆಗೂ ವ್ಯಕ್ತಿಗೂ ಸಂಬಂಧವೆನ್ನುವುದಕ್ಕಿಂತ ಸೇವೆಗೂ ಹಿಡುವಳಿಗೂ ಸಂಬಂಧವೆನ್ನುವುದು ಹೆಚ್ಚು ಸೂಕ್ತ. ಸಾರ್ವಜನಿಕಾಧಿಕಾರವೇ ಒಡೆದು ವಿಕೇಂದ್ರೀಕೃತವಾಗಿ ರುವುದು ಈ ವ್ಯವಸ್ಥೆಯ ಮುಖ್ಯ ಲಕ್ಷಣ.

ನೆಲದೊಡೆಯರು ರೈತರನ್ನು ಅಸ್ವತಂತ್ರಗೊಳಿಸಿ ಅವರ ಮೇಲೆ ರಕ್ಷಣೆ, ನ್ಯಾಯವಿತರಣೆ, ಸುಂಕ ತೆರಿಗೆ ವಸೂಲಿ ಮುಂತಾದ ನಾನಾ ಅಧಿಕಾರಗಳನ್ನು ಚಲಾಯಿಸುವ ಮೆನೋರಿಯಲ್ ಪದ್ಧತಿಗೂ ಊಳಿಗಮಾನ್ಯ ವ್ಯವಸ್ಥೆಗೂ ಐತಿಹಾಸಿಕ ಸಂಬಂಧವಿದೆ. ಈ ವ್ಯವಸ್ಥೆಯಲ್ಲಿ ದೇಶಕ್ಕೆಲ್ಲ ರಾಜನೇ ಒಡೆಯ, ಅವನ ಕೆಳಗೆ ದೊಡ್ಡ ಪಾಳೆಯಗಾರರು, ಅವರ ಅಧೀನದಲ್ಲಿ ಚಿಕ್ಕ ಪಾಳೆಯಗಾರರು, ಕೊನೆಯ ಹಂತದಲ್ಲಿ ಜೀತಗಾರರು. ಇವರಲ್ಲಿ ಪರಸ್ಪರ ಮುಖ್ಯ ಸಂಬಂಧ ಭೂಮಾನ್ಯಕ್ಕೆ ಪ್ರತಿಯಾಗಿ ಊಳಿಗವೃತ್ತಿ ಮಾಡುವುದು, ಸೈನ್ಯಸೇವೆಸಲ್ಲಿಸುವುದು, ಈ ಅನುಕ್ರಮದ ಹೊರಗಿದ್ದ ಕ್ರೈಸ್ತ ಮಠಾಧಿಕಾರಿಗಳೂ ಜೀತಗಾರರಲ್ಲದ ಸ್ವತಂತ್ರ ಜನರೂ ಈ ವ್ಯವಸ್ಥೆಯ ಪ್ರಭಾವಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಒಳಗಾದರು. ಇದರ ವ್ಯಾಪ್ತಿ ಸರ್ವತೋಮುಖವಾಗಿ, ಸಾಮಾಜಿಕ, ನೈತಿಕ, ಧಾರ್ಮಿಕ ಭಾವನೆಗಳನ್ನೂ ಒಳಗೊಂಡ ಹೊಸದೊಂದು ಸಂಸ್ಕೃತಿಯೇ ಉದ್ಭವಿಸಿರುವುದನ್ನು ಕಾಣಬಹುದು. ಸ್ಥೂಲವಾಗಿ 9–13ನೆಯ ಶತಮಾನದ ವರೆಗಿನ ಕಾಲ ಊಳಿಗಮಾನ್ಯದ್ದೆನ್ನಬಹುದು. ಮೇನರ್ ಅಥವಾ ಜಹಗೀರು ವ್ಯವಸ್ಥೆಯ ಕೇಂದ್ರವಾಗಿ ಮೇನರಿನ ಒಡೆಯನ–ಪ್ರಭುವಿನ–ಭವನ, ಅದರ ಸುತ್ತ ಅವನಿಗೆ ಸೇರಿದ ಗ್ರಾಮಸಮೂಹ. ಕೆಲವು ಜಮೀನುಗಳು ಮಾತ್ರ ಅವನಿಗೆ ಸ್ವಂತ, ಉಳಿದವು ಜೀತದಾರರಿಗೆ ಊಳಿಗಮಾನ್ಯವಾಗಿ ಸೇರಿದ್ದು. ಭೂಮಿ ಇವರಿಗೆ ಅನುಭವ ಬಾಧ್ಯಸ್ಥವೇ ಹೊರತು ಸ್ವಂತವಲ್ಲ. ಇವರ ಕಾಲಾನಂತರ ಚಾಲ್ತಿಯಲ್ಲಿ ಇದು ಇವರ ವಾರಸುದಾರರಿಗೆ ಸೇರುತ್ತಿತ್ತು. ಜೀತಗಾರರು ಗುಲಾಮರಲ್ಲದಿದ್ದರೆ ಅವರಿಗೆ ಭೂಮಿಯನ್ನು ಬಿಟ್ಟು ಹೋಗುವ ಹಕ್ಕಿರಲಿಲ್ಲ. ಜಮೀನನ್ನು ಸಾಗುವಳಿಗೆ ಪಡೆದದ್ದಕ್ಕೆ ಮಾಡಬೇಕಾದ ಪ್ರತಿಸೇವೆಯೆಂದರೆ ಬೆಳೆ ಪಶುಧನಗಳ ಒಂದಂಶ ಸಲ್ಲಿಕೆ, ನಿರ್ದಿಷ್ಟ ಕಾಲಗಳಲ್ಲಿ ಪ್ರಭುವಿನ ಸ್ವಂತ ಜಮೀನಿನ ವ್ಯವಸಾಯಕ್ಕೆ ಉಚಿತಸೇವೆ, ಸೈನ್ಯ ಸೇವೆ ಮೊದಲಾದವು. ಪ್ರಭುಗಳ ಕರ್ತವ್ಯಗಳೆಂದರೆ ಜಹಗೀರನ ರಕ್ಷಣೆ, ವ್ಯಾಜ್ಯಗಳ ತೀರ್ಪು, ಜನರ ಸೌಖ್ಯಕ್ಕೆ ಅಗತ್ಯವಾದ ಸಾಮಾಜಿಕ ಆರ್ಥಿಕ ವ್ಯವಸ್ಥೆಗಳ ನಿರ್ವಹಣೆ, ಸಮಾಜ ಸಂಪ್ರದಾಯಬದ್ಧವಾದ್ದರಿಂದ ಪ್ರಭುಗಳು ಸ್ವಚ್ಛಂದವರ್ತಿಗಳಾಗಲೂ ಜೀತಗಾರರು ತೀವ್ರಗಾಮಿಗಳಾಗಲೂ ಅವಕಾಶ ಕಡಿಮೆಯಿತ್ತು.

ತಾತ್ತ್ವಿಕವಾಗಿ ರಾಜನೇ ದೇಶಕ್ಕೆಲ್ಲಾ ಒಡೆಯನಾಗಿದ್ದು ಜನರೆಲ್ಲ ಅವನ ಅಧೀನರಾದರೂ ವಾಸ್ತವವಾಗಿ ಪ್ರಭುಗಳ ಸಮೂಹದಲ್ಲಿ ಆತ ಅಗ್ರ. ಸ್ವಂತಕ್ಕೆ ಸೇರಿದ ಮೇನರುಗಳಿಂದ ಆತ ವರಮಾನ ಪಡೆಯುತ್ತಿದ್ದ. ಊಳಿಗಮಾನ್ಯ ಕರಾರಿನ ಪ್ರಕಾರ ಪ್ರಭುಗಳು ಸುಸಜ್ಜಿತ ಯೋಧರೊಡನೆ ರಾಜನಿಗೆ ಸೈನ್ಯಸೇವೆ ಸಲ್ಲಿಸಬೇಕಿತ್ತು. ನಿರ್ದಿಷ್ಟ ವೇಳೆಗಳಲ್ಲಿ ಹಣಕಾಸು ಕೊಡಬೇಕಿತ್ತು. ಆದರೆ ಇವುಗಳ ಸಂಗ್ರಹಣ ರಾಜನ ಪ್ರಭಾವಕ್ಕೆ ತಕ್ಕಂತಿತ್ತು. ಹಲವು ವೇಳೆ ರಾಜನಿಗಿಂತ ಅವನ ಅಧೀನದಲ್ಲಿದ್ದ ಪ್ರಭುಗಳೇ ಹೆಚ್ಚು ಶ್ರೀಮಂತರಾಗಿಯೂ ಪ್ರಭಾವಶಾಲಿ ಯಾಗಿಯೂ ಇರುತ್ತಿದ್ದರು. ಆ ಕಾಲದಲ್ಲಿ ರಾಜನಿಷ್ಠೆಗೆ ಪ್ರಧಾನ ಸ್ಥಾನವಿರಲಿಲ್ಲ. ಪ್ರತಿಯೊಬ್ಬರೂ ಯಾರಿಗೆ "ನಿನ್ನವನು" ಎಂದು ಮಾತಿತ್ತರೂ ಅವರಿಗೆ ಅನುಕೂಲವಾಗಿ ನಡೆಯುವುದೇ ಆಗಿನ ನೀತಿಸೂತ್ರವಾಗಿತ್ತು. (ಎಸ್.ವಿ.ಡಿ.)

ಪ್ರಭುಗಳ ವರ್ಗದ ಅನಂತರದ ವರ್ಗವೇ ಆಶ್ರಿತ ವರ್ಗ. ಇವರು ನೇರವಾಗಿ ಪ್ರಭುಗಳ ಅಧೀನಕ್ಕೆ ಒಳಪಟ್ಟಿದ್ದರು; ಅವರಿಂದ ದೊರೆತ ಭೂಮಿಯ ಮೇಲ್ವಿಚಾರಣೆಯ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಭೂಮಿಯಿಂದ ಬರುತ್ತಿದ್ದ ಗೇಣಿಯೇ ಈ ವರ್ಗದ ಮುಖ್ಯ ಆದಾಯ. ಪ್ರಭುಗಳಿಂದ ದೊರಕಿದ ಭೂಮಿಗೆ ಪ್ರತಿಯಾಗಿ ಆಶ್ರಿತರು ಅವರಿಗೆ ಅನೇಕ ಬಗೆಯ ಕೈಂಕರ್ಯ ಸಲ್ಲಿಸುತ್ತಿದ್ದರು. ಸೈನಿಕ ಸೇವೆಗೆ ಇವರು ಸದಾ ಸಿದ್ಧರಾಗಿರ ಬೇಕಾದ್ದದ್ದು ಅವಶ್ಯ. ಇಂಥ ಸೈನಿಕ ಸೇವೆ ಸಾಮಾನ್ಯವಾಗಿ ನಲವತ್ತು ದಿನಗಳ ಮಿತಿಗೆ ಒಳಗಾಗಿತ್ತು. ಪ್ರವಾಸಕ್ಕಾಗಲಿ ಅಥವಾ ಬೇಟೆಗಾಗಲಿ ಪ್ರಭು ಹೊರಟಾಗ ಅವನಿಗೆ ಸಹಾಯ ಮತ್ತು ಸತ್ಕಾರ ನೀಡುವುದೂ ಯುದ್ಧದಲ್ಲಿ ಕೈಸೆರೆಯಾದಲ್ಲಿ ಅವರ ಬಿಡುಗಡೆಗೆ ಹಣ ತೆರುವುದೂ ಪ್ರಭುವಿನ ಮಗಳ ಮದುವೆಯಾದಾಗ, ಅವನ ಮಗ ಸೈನಿಕ ಶಿಕ್ಷಣ ಮುಗಿಸಿ ಯೋಧ ಪದವಿಗಳಿಸಿದಾಗ, ಅಪಾರ ಕಾಣಿಕೆ ಸಲ್ಲಿಸಬೇಕಾಗಿತ್ತು. ತನ್ನ ಧಣಿಗೆ ಸಹಾಯ ನೀಡುವುದಷ್ಟೇ ಆಶ್ರಿತನ ಕರ್ತವ್ಯವಲ್ಲ; ಯಥೋಚಿತ ಸಲಹೆ ನೀಡುವುದೂ ಅವನ ಒಂದು ಕರ್ತವ್ಯವಾಗಿತ್ತು. (ಎಚ್.ಆರ್.)

# ಋ

**ಋಗ್ವೇದ:** ಇಂಡೊ–ಯುರೋಪಿಯನ್ ಭಾಷೆಗಳಲ್ಲೆಲ್ಲ ಪ್ರಾಚೀನತಮವಾದ ಜ್ಞಾನರಾಶಿ. ಛಂದೋಬದ್ಧವಾಗಿದ್ದರೂ ಐತಿಹಾಸಿಕ ಕವಿತೆಯಲ್ಲ; ಮಹಾಕಾವ್ಯವೂ ಅಲ್ಲ. ಋಷಿಗಳೂ ಋಷಿವಂಶದವರೂ ತಮ್ಮ ಮನೆತನಗಳಲ್ಲಿ ಅನೂಚಾನವಾಗಿ ಬಂದ ಮಂತ್ರಸೂಕ್ತಗಳನ್ನು ಒಟ್ಟುಗೂಡಿಸಿರುವ ಒಂದು ಸಂಕಲನ ಅಥವಾ ಸಂಹಿತೆ. ದೇವತೆಗಳ ತೃಪ್ತ್ಯರ್ಥವಾಗಿ ಯಜ್ಞಕಾಲದಲ್ಲಿ ಉಚ್ಚರಿಸಲಾಗುತ್ತಿದ್ದ ಪ್ರಾರ್ಥನೆಗಳೇ ಮಂತ್ರಗಳು. ಋಕ್ ಎಂದರೆ ದೇವತಾ ಸ್ತುತಿರೂಪವಾದ ಪದ್ಯ; ವೇದವೆಂದರೆ ಶ್ರುತಿ, ಛಂದಸ್ಸು, ಜ್ಞಾನ. ಆದ್ದರಿಂದ ಪ್ರಧಾನವಾಗಿ ಋಗ್ವೇದ ದೇವತಾಸ್ತುತಿರೂಪವಾದ ಜ್ಞಾನ. ಭಾರತದ ಧಾರ್ಮಿಕ ಸಂಸ್ಕೃತಿಗೆಲ್ಲ ಋಗ್ವೇದವೇ ಬುನಾದಿ.

ಕಾಲ: ಋಗ್ವೇದ ಅನಾದಿನಿತ್ಯ ಮತ್ತು ಅಪೌರುಷೇಯವೆಂದು ಭಾವಿಸುವುದು ವೈದಿಕ ಸಂಪ್ರದಾಯ. ಆದರೆ ಆಧುನಿಕ ವಿದ್ವಾಂಸರೂ ಸಂಶೋಧಕರೂ ಒಂದೂವರೆ ಶತಮಾನಗಳ ಕಾಲ ಋಗ್ವೇದ ಸಂಸ್ಕೃತಿಯ ಅಧ್ಯಯನ ಮಾಡಿ ಮಾನವನ ಇತಿಹಾಸದಲ್ಲಿ ಋಗ್ವೇದದ ಸ್ಥಾನವನ್ನೂ ಕಾಲವನ್ನೂ ನಿರ್ದೇಶಿಸಲು ಯತ್ನಿಸಿದ್ದಾರೆ. ಇವರಲ್ಲಿ ರೋಟ್, ಮ್ಯಾಕ್ಸ್‌ಮುಲ್ಲರ್, ಓಲ್ಡೆನ್‌ಬರ್ಗ್, ಲುಡ್ವಿಗ್, ಗ್ರಾಸ್‌ಮಾನ್, ಗೆಲ್ಡನರ್, ಪಿಷೆಲ್ ಮೊದಲಾದ ಜರ್ಮನ್ ವಿದ್ವಾಂಸರು ಅಗ್ರಗಣ್ಯರೆನ್ನಬಹುದು. ತೌಲನಿಕ ಭಾಷಾಶಾಸ್ತ್ರದ ಆಧಾರದ ಮೇಲೆ ಇವರು ಋಗ್ವೇದ ಭಾಷೆಗೂ ಪ್ರಾಚೀನ ಇರಾನ್ ದೇಶದ ಅವೆಸ್ತ ಎಂಬ ಧರ್ಮಗ್ರಂಥದ ಭಾಷೆಗೂ ಇನ್ನೂ ಆಚೆಗೆ ಗ್ರೀಕ್, ಲ್ಯಾಟಿನ್ ಮತ್ತು ತಜ್ಜನ್ಯ ಐರೋಪ್ಯ ಭಾಷೆಗಳಿಗೂ ಇರುವ ಗಾಢವಾದ ಶಬ್ದಾರ್ಥಸಾಮ್ಯಗಳನ್ನು ಅನುಲಕ್ಷಿಸಿ, ವೇದರಚನೆ ಮಾಡಿದವರು ಇವೆಲ್ಲ ಭಾಷೆಗಳಿಗೂ ಮೂಲವಾದ ಭಾಷೆಯೊಂದನ್ನಾಡುತ್ತಿದ್ದಿರಬೇಕೆಂದೂ ಅದನ್ನು ಇಂಡೋ-ಯುರೋಪಿಯನ್ ಭಾಷೆಯೆನ್ನಬಹುದೆಂದೂ ಊಹಿಸಿದ್ದಾರೆ. ಆರ್ಯರ ಮೂಲನಿವಾಸ ಮಧ್ಯ ಏಷ್ಯ ಇಲ್ಲವೇ ಮಧ್ಯ ಯುರೋಪ್ ಇದ್ದಿರಬೇಕೆಂದೂ ಅವರು ಕ್ರಮಕ್ರಮವಾಗಿ ದಿಕ್ಕುದಿಕ್ಕಿಗೆ ವಲಸೆ ಹೋಗುತ್ತ ಒಂದು ಕವಲಾಗಿ ಇರಾನಿನಲ್ಲೂ ಇನ್ನೊಂದು ಕವಲಾಗಿ ಭಾರತದ ಪಂಜಾಬ್ ಪ್ರಾಂತದಲ್ಲೂ ಮೊದಲು ನೆಲೆಸಿರಬೇಕೆಂದು ತೀರ್ಮಾನಿಸಿದ್ದಾರೆ. ಹೀಗೆ ಅವರು ಕವಲೊಡೆದ ಕಾಲ ಪ್ರ.ಶ.ಪೂ.1300 ಕ್ಕಿಂತ ಈಚಿನದಾಗಿರ ಲಾರದೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಎಷ್ಟು ಪ್ರಾಚೀನವಿದ್ದಿರಬಹುದೆನ್ನುವ ಬಗೆಗೆ ಮತಭೇದಗಳಿವೆ. ಯಾಕೊಬಿ, ತಿಲಕ್ ಮೊದಲಾದವರು ಪ್ರ.ಶ.ಪೂ.4500ಕ್ಕಿಂತ ಹಿಂದೆ ಆಗಿರಬೇಕೆನ್ನಲು ಜ್ಯೋತಿಶ್ಶಾಸ್ತ್ರದ ಆಧಾರವನ್ನು ಕೊಡುತ್ತಾರೆ. ಆದರೆ ಇರಾನಿ ಭಾಷೆಯೂ ಋಗ್ವೇದ ಭಾಷೆಯೂ ಮೂರು ನಾಲ್ಕು ಸಾವಿರಗಳಷ್ಟು ದೀರ್ಘಾವಧಿಯವರೆಗೆ ಹಾಗೆಯೇ ಬೆಳೆಯದೆ ಉಳಿದು ಶಬ್ದಾರ್ಥಸಾಮ್ಯಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆಂದು ನಂಬಲು ಭಾಷಾಶಾಸ್ತ್ರಜ್ಞರು ಸಿದ್ಧರಿಲ್ಲ.

ಹೀಗೆ ಋಗ್ವೇದಮಂತ್ರಗಳನ್ನು ಭಾರತದಲ್ಲಿ ಸಂಹಿತೆಯಾಗಿ ಒಟ್ಟುಮಾಡಿದ ಕಾಲ ಪ್ರ.ಶ.ಪೂ.700ಕ್ಕಿಂತ ಈಚೆಗಲ್ಲವೆಂದೂ ಆದರೆ ಮಂತ್ರಗಳ ರಚನಾ ಕಾಲ ಅದಕ್ಕೂ ಕನಿಷ್ಠ ಪಕ್ಷ 800 ವರ್ಷಗಳ ಮುಂಚೆ ಎಂದರೆ ಪ್ರ.ಶ.ಪೂ.1500 ಎಂದೂ ಪ್ರಾಯೋಗಿಕವಾಗಿ ಒಪ್ಪುತ್ತಾರೆ. ವಿಂಟರ್‌ನಿಟ್ಸ್ ಮೊದಲಾದವರು ಇದನ್ನು ಧಾರಾಳವಾಗಿ ಪ್ರ.ಶ.ಪೂ.2000 ಅಥವಾ 2500ರ ವರೆಗೂ ಒಯ್ಯಬಹುದೆನ್ನುತ್ತಾರೆ. ಏನೇ ಇರಲಿ, ಈ ಸಂಶೋಧನೆಗಳ ಪ್ರಕಾರ ಋಗ್ವೇದ ಮಂತ್ರಗಳಲ್ಲಿ ಕೆಲವಾದರೂ ಭಾರತದ ಹೊರಗೆ, ಎಂದರೆ, ಆರ್ಯರು ಭಾರತವರ್ಷದಲ್ಲಿ ಕಾಲಿಡುವ ಮುನ್ನವೇ ರಚಿತವಾಗಿದ್ದಿರಬೇಕೆಂದು ಸ್ಪಷ್ಟವಾಗುತ್ತದೆ. ಮುಂದೆ ವಿಕಾಸಗೊಂಡ ಮಿಕ್ಕ ವೇದಸಂಹಿತೆಗಳು, ಬ್ರಾಹ್ಮಣಗಳು, ಉಪನಿಷತ್ತುಗಳು- ಇವೆಲ್ಲ ಒಂದು ವಿಸ್ತಾರ ಭಂಡಾರವೇ ಸರಿ- ಎಲ್ಲವೂ ಪ್ರಶ.ಪೂ.500ರಲ್ಲಿ ಪ್ರಚಾರಕ್ಕೆ ಬಂದ ಬೌದ್ಧಧರ್ಮಕ್ಕಿಂತ ಪ್ರಾಚೀನವೆಂಬುದು ನಿರ್ವಿವಾದ. ಆದ್ದರಿಂದ ವೇದ ಸಾಹಿತ್ಯದ ಈ ವಿಪುಲ ವಿಕಾಸವನ್ನು ಸಮರ್ಥಿಸಲು ಒಂದೆರಡು ಸಾವಿರ ವರ್ಷಗಳ ಅವಧಿಯೇನೂ ಹೆಚ್ಚಲ್ಲವೆಂದು ತಿಳಿದು ಬರುತ್ತದೆ. ಇವು ಋಗ್ವೇದದ ಕಾಲದ ಇತಿಮಿತಿಗಳ ಬಗೆಗೆ ವಿದ್ವಾಂಸರು ಮಾಡಿರುವ ಊಹೆಗಳೇ ಹೊರತು ಆ ಪ್ರಾಚೀನಯುಗದಲ್ಲಿ ನಿರ್ಣಾಯಕವೆನಿಸಬಲ್ಲ ಪ್ರಬಲತರ ಪ್ರಮಾಣಗಳು ಇನ್ನೂ ದುರ್ಲಭವೆನಿಸಿವೆ. ಹರಪ್ಪ, ಮೊಹೆಂಜೊದಾರೊ ಮುಂತಾದೆಡೆಗಳಲ್ಲಿ ಮಾಡಿದ ಉತ್ಖನನಗಳು ಸಿಂಧು ಸಂಸ್ಕೃತಿ ವೇದಪೂರ್ವವೆಂಬ ಅಭಿಪ್ರಾಯಕ್ಕೇ ಪುಷ್ಟಿಯಿತ್ತಿದೆ. ಇಷ್ಟಾದರೂ ಭಾರತೀಯ ಸಂಪ್ರದಾಯನಿಷ್ಠರು ಈ ಊಹೆಗಳೆಲ್ಲ ನಿರಾಧಾರವೆಂದೂ ಭಾರತವೇ ಆರ್ಯ ಸಂಸ್ಕೃತಿಯ ಉದ್ಗಮ ಸ್ಥಾನವೆಂದೂ ಇಲ್ಲಿಂದಲೇ ಆರ್ಯರು ದೇಶಾಂತರಗಳಿಗೆ ವಲಸೆ ಹೋಗಿರಬಹುದೆಂದೂ ವೇದಕಾಲ ಸೃಷ್ಟಿಯಷ್ಟೇ ಪ್ರಾಚೀನವೆಂದೂ ವಾದಿಸುವುದುಂಟು.

**ಋಗ್ವೇದ ಸಂಹಿತೆಯ ಉದಯ ಮತ್ತು ವಿಕಾಸ:** ಆರ್ಯರು ಭಾರತದಲ್ಲಿ ಕಾಲಿಟ್ಟಾಗ ಅವರು ತಮ್ಮೊಡನೆ ತಂದ ಧರ್ಮದಲ್ಲಿ ಅನೇಕ ದೇವತೆಗಳಿದ್ದರು. ದೇವತೆಗಳೆಲ್ಲ ಪ್ರಾಯೋಗಿಕವಾಗಿ ಮನುಷ್ಯ ತನ್ನಂತೆ ಕಲ್ಪಿಸಿದ ನಿಸರ್ಗ ಶಕ್ತಿಗಳು. ಅವರಲ್ಲಿ ದ್ಯೌಸ್ ಎಂಬ ದೇವತೆ ತನ್ನಂತೆ ಪ್ರಾಚೀನವಾದ ಇಂಡೊ-ಯುರೋಪಿಯನ್ ಕಾಲಕ್ಕೆ ಸೇರಿದವನಾದರೆ; ಮಿತ್ರ, ವರುಣ, ಇಂದ್ರ ಮುಂತಾದ ದೇವತೆಗಳೂ ಇಂಡೋ-ಇರಾನಿಯನ್ ಕಾಲಕ್ಕೆ ಸೇರಿದವರು. ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸುವುದೂ ಸೋಮರಸಗಳನ್ನು ಬಳಸಿ ಯಜ್ಞ ಮಾಡುವುದೂ ಆರ್ಯರ ಧರ್ಮ ವಿಧಿಗಳಾಗಿದ್ದುವು. ದೇವತೆಗಳ ಸ್ತೋತ್ರಗಳನ್ನು ಛಂದೋಬದ್ಧವಾಗಿ ರಚಿಸುವ ಕಲೆಯೂ ಅವರಿಗಾಗಲೇ ಸಿದ್ಧಿಸಿತ್ತು; ಏಕೆಂದರೆ ಅವೆಸ್ತದಲ್ಲೂ ಋಗ್ವೇದಕ್ಕೆ ಸಂವಾದಿಯಾದ ಸೂಕ್ತಗಳು ಕಾಣಸಿಗುತ್ತವೆ. ಅಗ್ನಿಯಲ್ಲಿ ಆಹುತಿಗೈದ ಆಜ್ಯಾದಿ ಹವಿಸ್ಸು, ಅರ್ಪಿಸಿದ ಸೋಮರಸ-ಇವುಗಳ ನಿವೇದನಕಾಲದಲ್ಲಿ ಅಂಗವಾಗಿ ದೇವತಾಸೂಕ್ತಗಳಿಗೆ ಸ್ಥಾನವಿತ್ತು. ಋಗ್ವೇದದಲ್ಲಿ ಉಳಿದು ಬಂದಿರುವ ಅತಿ ಪ್ರಾಚೀನ ಸೂಕ್ತಗಳೆಲ್ಲ ಕೆಲವೇ ಋಷಿ ಕುಲಗಳ ರಚನೆಗಳೆನ್ನಬಹುದು. ಇವು ಪುರೋಹಿತ ಮನೆತನಗಳಲ್ಲಿ ಪರಂಪರೆಯಿಂದ ಪ್ರಾಪ್ತವಾಗುತ್ತಿದ್ದವು. ಬೇರೆ ಬೇರೆ ಪುರೋಹಿತ ಮನೆಗಳು ತಂತಮ್ಮ ರೀತಿಯಿಂದ ಸೂಕ್ತ ಪಾಠದ ಪರಂಪರೆಯನ್ನು ಬಾಯಿಂದಲೇ ಬಾಯಿಗೆ ನಡೆಸಿಕೊಂಡು ಬರುತ್ತಿದ್ದ ಕಾರಣ ಎಷ್ಟೋ ಪಾಠಭೇದಗಳಿಗೂ ಶಾಖಾಂತರಗಳಿಗೂ ಅವಕಾಶವಾಯಿತು. ಬೇರೆ ಬೇರೆ ಋಷಿ ಕುಲಗಳ ಆಸ್ತಿಯಾಗಿದ್ದ ಸೂಕ್ತಗಳನ್ನೆಲ್ಲ ಒಂದೆಡೆ ಸಂಗ್ರಹಿಸಿದಾಗ ಋಗ್ವೇದ ಸಂಹಿತೆಯ ಮೂಲ ಸಿದ್ಧವಾಯಿತೆನ್ನಬಹುದು. ಈ ಮೂಲಕ್ಕೆ ಹಿಂದೂ ಮುಂದೂ ಮತ್ತಷ್ಟು ಸಂಗ್ರಹಗಳು ಸೇರಿಕೊಂಡಮೇಲೆ ನಮಗಿಂದು ಉಪಲಬ್ಧವಿರುವ ಋಗ್ವೇದ ಸಂಹಿತೆಯ ಆಕಾರ ಬಂದಿದೆ. ಈ ಸಂಹಿತೆಯ ಕಾಲ ಬ್ರಾಹ್ಮಣಗಳ ರಚನಾಕಾಲದ ಅನಂತರ ಮತ್ತು ಉಪನಿಷತ್ತು ಗಳ ಕಾಲಕ್ಕೆ ಮುಂಚೆ ಎಂದು ವಿದ್ವಾಂಸರ ತರ್ಕ. ಆದ್ದರಿಂದ ಪ್ರಶ.ಪೂ.ಸು.700 ಎಂದು ಮೆಕ್ಡೊನೆಲ್ ಅವರು ನಿರ್ಣಯಿಸುತ್ತಾರೆ.

ಸಂಹಿತಾಕಾರರು ಮೌಖಿಕ ಪರಂಪರೆಯಿಂದ ಬಂದ ವೇದಸೂಕ್ತಗಳನ್ನು ಅಳವಡಿಸುವಾಗ ಕೆಲವೊಂದು ಉತ್ತರಕಾಲೀನ ಸಂಧಿನಿಯಮಗಳನ್ನು ಅನುಸರಿಸಿದ್ದು ಕಾಣುತ್ತದೆ. ಉದಾ: ಏ ಓ ಕಾರಗಳ ಮುಂದೆ ಬರುವ ಅಕಾರಕ್ಕೆ ಲೋಪ ಬರುತ್ತದೆ. ಒಮ್ಮೊಮ್ಮೆ ಈ ಹೊಸ ಸಂಧಿಗಳ ಒತ್ತಾಯದಿಂದ ಮೂಲದ ಛಂದಸ್ಸಿನ ಓಟಕ್ಕೆ ಹಾನಿಬರುವುದೂ ಉಂಟು. ಹೀಗೆ ಒಮ್ಮೆ ಸಂಹಿತಾ ಪಾಠವನ್ನು ಗೊತ್ತುಪಡಿಸಿದ ಮೇಲೆ, ಆ ಪಾಠದ ಸಂರಕ್ಷಣೆಗಾಗಿ ಹಲವಾರು ಯೋಜನೆಗಳನ್ನು ಕೈಗೊಂಡರು. ಇಡೀ ಋಗ್ವೇದ ಸಂಹಿತೆಯನ್ನೆಲ್ಲ ಪದಚ್ಛೇದ ಮಾಡಿ, ಸಂಧಿ ಪೂರ್ವದಲ್ಲಿದ್ದ ರೂಪಗಳನ್ನು ಮಾತ್ರ ತೋರಿಸುವ ಹಾಗೂ ಸಮಾಸ, ಪ್ರತ್ಯಯಾದಿಗಳನ್ನು ವಿಂಗಡಿಸುವ ಪಾಠವೇ ಪದಪಾಠ. ಇದನ್ನು ಶಾಕಲ್ಯ ರಚಿಸಿದ. ಒಂದು ದೃಷ್ಟಿಯಿಂದ ಇದನ್ನು ಋಗ್ವೇದದ ಮೇಲಿನ ಮೊದಲ ಭಾಷ್ಯವೆನ್ನಬಹುದು. ಇದರಂತೆ ಹಿಂದಕ್ಕೂ ಮುಂದಕ್ಕೂ ನಿಯತವಾಗಿ ಪುನರಾವೃತ್ತಿ ಮಾಡುವ ಕ್ರಮ, ಜಟಾ, ಘನ ಮುಂತಾದ ಪಾಠಗಳೂ ಅಧ್ಯಯನಕ್ರಮದಲ್ಲಿ ಉಂಟು. ಈ ವಿವರಗಳೆಲ್ಲ ಅನು ಕ್ರಮಣಿಯೆಂಬ ವೇದಾಂತ ಗ್ರಂಥಗಳಲ್ಲಿ ಬರುತ್ತವೆ. ಋಗ್ವೇದದ ಪ್ರತಿ ಸೂಕ್ತದಲ್ಲಿ ಇಂತಿಷ್ಟೇ ಋಕ್ಕುಗಳಿವೆಯೆಂಬ ನಿರ್ಣಯ ಕೂಡ ಅಲ್ಲಿಯೇ ಇದೆ. ಈ ರಕ್ಷಣೋಪಾಯಗಳ ಫಲವಾಗಿ ಋಗ್ವೇದಪಾಠ ಇಂದಿನವರೆಗೆ ಅಸ್ಖಲಿತವಾಗಿ ಮೂರು ಸಾವಿರ ವರ್ಷಗಳ ಕಾಲವಾದರೂ ಹಾಗೆಯೇ ಅಧ್ಯಯನ ಪರಂಪರೆಯಲ್ಲಿ ಉಳಿದು ಬಂದಿದೆ. ವಿಶ್ವದ ಇತಿಹಾಸದಲ್ಲಿಯೇ ಇದೊಂದು ಅದ್ಭುತವೆನ್ನಬಹುದು.

**ಭಾಷೆ:** ಋಗ್ವೇದಸೂಕ್ತಗಳ ಭಾಷೆ ಸಂಸ್ಕೃತ ಭಾಷೆಯ ಅತ್ಯಂತ ಪ್ರಾಚೀನ ರೂಪವೆನ್ನಬಹುದು. ಈ ಭಾಷೆಯ ಉತ್ತರಕಾಲೀನ ಸ್ವರೂಪವನ್ನೇ ಪರಿಷ್ಕೃತ ಸಂಸ್ಕೃತವೆನ್ನುತ್ತಾರೆ. ಪ್ರ.ಶ.ಪೂ.4ನೆಯ ಶತಮಾನದ ಕಡೆಗೆ ಪಾಣಿನಿಯ ವ್ಯಾಕರಣ ಪರಿಷ್ಕರಿಸಿದ ಅನಂತರ ಬಂದ ಸ್ವರೂಪ ಅದು. ಪಾಣಿನಿಯ ಸಂಸ್ಕೃತಕ್ಕೂ ಋಗ್ವೇದದ ಸಂಸ್ಕೃತಕ್ಕೂ ಇರುವ ವ್ಯತ್ಯಾಸವನ್ನು ಪ್ರಾಕೃತ ಹಾಗೂ ಸಂಸ್ಕೃತ ಭಾಷೆಗಳ ವ್ಯತ್ಯಾಸದೊಡನೆ ಹೋಲಿಸಬಹುದು. ಮುಂದಿನ ಸಂಸ್ಕೃತದಲ್ಲಿ ಇಲ್ಲದ ಎಷ್ಟೊ ಶಬ್ದರೂಪಗಳು ವೈದಿಕ ಭಾಷೆಯಲ್ಲಿವೆ. ನಾಮ ಹಾಗೂ ಸರ್ವನಾಮಗಳ ವಿಭಕ್ತಿಪ್ರತ್ಯಯಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿವೆ. ಧಾತುಸಾಧಿತ ಅವ್ಯಯಗಳ ಸಂಖ್ಯೆಯೂ ಅಧಿಕತರ. ಧಾತುರೂಪಗಳಲ್ಲಂತೂ ಸಂಸ್ಕೃತಕ್ಕಿಂತ ಹೆಚ್ಚಿನ ಸಮೃದ್ಧಿಯನ್ನು ಕಾಣುತ್ತೇವೆ. ಉದಾ:-ಸಂಸ್ಕೃತದಲ್ಲಿ ಅದೃಶ್ಯವಾದ ಲೇಟ್ ಲಕಾರವು (ಭವಾತಿ ಇತ್ಯಾದಿ) ವೇದಭಾಷೆಯಲ್ಲಿ ಹೇರಳವಾಗಿ ಪ್ರಯುಕ್ತವಾಗಿದೆ. ಸಂಸ್ಕೃತದಲ್ಲಿ ತುಮ್ ಎಂಬ ಒಂದು ಪ್ರತ್ಯಯದ ಬದಲು ವೇದದಲ್ಲಿ ಹನ್ನೆರಡು ರೀತಿಯ ಪ್ರತ್ಯಯಗಳಿವೆ. ಸಂಸ್ಕೃತ ಭಾಷೆಯಲ್ಲಿ ಊರ್ಜಿತವಿಲ್ಲದ ಉದಾತ್ತ, ಅನುದಾತ್ತ, ಸ್ವರಿತ ಎಂಬ ಸ್ವರೋಚ್ಚಾರ ವೈಶಿಷ್ಟ್ಯಗಳು ವೇದಭಾಷೆಯ ವೈಚಿತ್ರ್ಯವಾಗಿವೆ. ವೇದದ ಸಂಧಿನಿಯಮಗಳು ಕೂಡ ಸಂಸ್ಕೃತಕ್ಕಿಂತ ಕೆಲವೊಮ್ಮೆ ಭಿನ್ನವಾಗಿವೆ. ಋಗ್ವೇದದಲ್ಲಿ ಏ,ಓ ಕಾರಗಳಿಗೆ ಪರವಾಗುವ ಅಕಾರ ಉಚ್ಚರಿಸಲ್ಪಡುತ್ತದೆ; ಸಂಸ್ಕೃತದಲ್ಲಿ ಲುಪ್ತವಾಗುತ್ತದೆ. ಆದ್ದರಿಂದ ಸಂಸ್ಕೃತಭಾಷೆಯ ಐತಿಹಾಸಿಕ ಅಧ್ಯಯನಕ್ಕೆ ಋಗ್ವೇದ ಭಾಷೆಯ ಅಭ್ಯಾಸ ಅಗತ್ಯವೆನ್ನಬೇಕು.

**ವಿಷಯ ಸಂಗ್ರಹ:** ಋಗ್ವೇದದಲ್ಲಿ 1,017 ಸೂಕ್ತಗಳಿವೆ; ಸಂಕ್ಷಿಪ್ತವೆನ್ನಲಾದ 11 ವಾಲಖಿಲ್ಯ ಸೂಕ್ತಗಳನ್ನೂ ಹಿಡಿದರೆ 1,028. ಒಟ್ಟು ಎಲ್ಲ ಸೂಕ್ತಗಳಲ್ಲಿ ಬರುವ ಋಕ್ಕುಗಳ ಸಂಖ್ಯೆ 10,600 ಎಂದರೆ ಒಂದು ಸೂಕ್ತಕ್ಕೆ ಸರಾಸರಿ ಹತ್ತು ಋಕ್ಕುಗಳೆನ್ನಬಹುದು. ಎಲ್ಲಕ್ಕಿಂತ ಚಿಕ್ಕ ಸೂಕ್ತದಲ್ಲಿ ಒಂದೇ ಋಕ್ಕಿದ್ದರೆ, ಎಲ್ಲಕ್ಕಿಂತ ದೊಡ್ಡ ಸೂಕ್ತದಲ್ಲಿ 58 ಋಕ್ಕುಗಳಿವೆ. ಗ್ರೀಕ್‌ನ ಹೋಮರನ ಎರಡೂ ಮಹಾಕಾವ್ಯಗಳಷ್ಟು ಋಗ್ವೇದದ ಗಾತ್ರವೆಂದು ಲೆಕ್ಕಮಾಡಿದ್ದಾರೆ.

ಋಗ್ವೇದವನ್ನು ಎರಡು ಕ್ರಮಗಳಿಂದ ವಿಭಾಗಿಸುವುದುಂಟು. ಒಂದು ಅಷ್ಟಕ ಅಧ್ಯಾಯ, ವರ್ಗವೆಂಬ ವಿಂಗಡಣೆ. ಇಡಿಯ ಋಗ್ವೇದದ ಅಷ್ಟಮಾಂಶ ಒಂದಷ್ಟಕ. ಪ್ರತಿ ಅಷ್ಟಕದಲ್ಲೂ ಎಂಟು ಅಧ್ಯಾಯಗಳು. ಒಂದೊಂದು ಅಧ್ಯಾಯದಲ್ಲೂ ಐದಾರು ಋಕ್ಕುಗಳು ಸೇರಿ ಆದ ವರ್ಗಗಳಿರುತ್ತವೆ. ಈ ಯಾಂತ್ರಿಕ ಕ್ರಮಕ್ಕಿಂತ ವಿದ್ವಾಂಸರು ಹೆಚ್ಚಾಗಿ ಬಳಸುವ ವಿಭಾಗಕ್ರಮವೆಂದರೆ ಮಂಡಲ ಮತ್ತು ಸೂಕ್ತವೆಂಬುದು. ಋಗ್ವೇದದಲ್ಲಿ ಒಟ್ಟು ಹತ್ತು ಮಂಡಲಗಳಿವೆ. ಈ ಹತ್ತು ಮಂಡಲಗಳಲ್ಲಿ 2 ರಿಂದ 7 ಎಂದರೆ ಒಟ್ಟು ಆರು ಮಂಡಲಗಳು ಒಂದು ನಿಯಮಕ್ಕೆ ಅನುಗುಣವಾಗಿವೆ. ಒಂದೇ ಋಷಿಕುಲದವರ ಪರಂಪರೆಯಲ್ಲಿ ಬಂದ ಸೂಕ್ತಗಳು ಸೇರಿ ಒಂದು ಮಂಡಲವೆನಿಸಿವೆ. ಆದ್ದರಿಂದ ಇವಕ್ಕೆ ಮನೆತನದ ಮಂಡಲವೆನ್ನುವರು (ಫ್ಯಾಮಿಲಿ ಬುಕ್). ಉದಾಹರಣೆಗೆ ಮೂರನೆಯ ಮಂಡಲ ವಿಶ್ವಾಮಿತ್ರ ಋಷಿಯ ಮತ್ತು ಅವನ ವಂಶೀಯರದು. ಇವುಗಳಲ್ಲಿ ಸೂಕ್ತಗಳನ್ನು ಒಂದೇ ಅನುಕ್ರಮದಲ್ಲಿ ಜೋಡಿಸಿದೆ. ಮೊದಲು ಅಗ್ನಿಸೂಕ್ತಗಳು, ಆಮೇಲೆ ಇಂದ್ರಸೂಕ್ತಗಳು, ಬಳಿಕ ಮಿಕ್ಕ ದೇವತಾಸೂಕ್ತಗಳು- ಎಂಬುದೇ ಈ ಅನುಕ್ರಮ. ಈ ದೇವತಾ ಸೂಕ್ತಗಳಲ್ಲಿ ಕೂಡ ಋಕ್ಸಂಖ್ಯೆಯ ಇಳಿಕೆಯ ಕ್ರಮಾನುಸಾರ ಅವನ್ನು ಜೋಡಿಸಿರುವುದು ಕಾಣುತ್ತದೆ. ಎರಡನೆಯ ಮಂಡಲ ಆರಂಭವಾಗುವುದು ಹತ್ತು ಅಗ್ನಿಸೂಕ್ತಗಳಿಂದ. ಮೊದಲ ಅಗ್ನಿಸೂಕ್ತದಲ್ಲಿ 16 ಋಕ್ಕುಗಳಾದರೆ

ಕಡೆಯದರಲ್ಲಿ 6 ಋಕ್ಕುಗಳು. ಅಲ್ಲದೆ ಮಂಡಲದಿಂದ ಮಂಡಲಕ್ಕೆ ಒಟ್ಟು ಸೂಕ್ತಸಂಖ್ಯೆ ಏರಿಕೆಯ ಕ್ರಮದಲ್ಲಿದೆ. 2ನೆಯ ಮಂಡಲದಲ್ಲಿ 43 ಸೂಕ್ತಗಳು, 3ರಲ್ಲಿ 62, 6ರಲ್ಲಿ 75, 7ರಲ್ಲಿ 104. ಈ 6 ಮಂಡಲಗಳೇ ಋಗ್ವೇದ ಸಂಹಿತೆಯ ಮೂಲಕೇಂದ್ರವೆನ್ನಬಹುದು.

ಈ ಮನೆತನದ ಮಂಡಲಗಳ ಹಿಂದಕ್ಕೆ ಮೊದಲನೆಯ ಮಂಡಲವನ್ನೂ ಮುಂದಕ್ಕೆ ಕಣ್ವವಂಶದವರ ಮಂಡಲವಾದರೂ ಅಗ್ನಿ, ಇಂದ್ರಾದಿ ಸೂಕ್ತಾನುಕ್ರಮವಿಲ್ಲದ 8ನೆಯ ಮಂಡಲವನ್ನೂ ಕೇವಲ ಸೋಮ ಅಥವಾ ಪವಮಾನ ಸೂಕ್ತಗಳನ್ನುಳ್ಳ 9ನೆಯ ಮಂಡಲವನ್ನು ಅದರ ಅನಂತರವೂ ಎಲ್ಲಕ್ಕಿಂತ ಕಡೆಗೆ 10ನೆಯ ಮಂಡಲವನ್ನೂ ಸೇರಿಸಿ ಇಂದಿನ ಋಗ್ವೇದಸಂಹಿತೆಯ ಸ್ವರೂಪ ಬಂದಿದೆಯೆಂಬುದು ಸಂಶೋಧಕರ ಸಿದ್ಧಾಂತ.

ಋಗ್ವೇದ ಸೂಕ್ತಗಳಿಗೆಲ್ಲ ಮುಖ್ಯವಾದ ವಿಷಯವೆಂದರೆ ದೇವತಾಸ್ತುತಿ. ಅಗ್ನಿ, ಇಂದ್ರ, ವರುಣ, ಸವಿತೃ, ರುದ್ರ, ಸೂರ್ಯ, ವಿಶ್ವೇದೇವತೆಗಳು–ಮುಂತಾದ ಪ್ರಸಿದ್ಧ ದೇವತೆಗಳಲ್ಲದೆ ದ್ಯಾವಾಪೃಥಿವೀ, ಮಿತ್ರಾವರುಣಾ, ಉಷಾಸಾನಕ್ತಾ ಮುಂತಾದ ದ್ವಂದ್ವದೇವತೆಗಳೂ ಇಲ್ಲಿ ಸ್ತುತರಾಗಿದ್ದಾರೆ. ಅದಿತಿ, ವಾಕ್, ರಾತ್ರಿ, ಅರಣ್ಯಾನೀ ಮುಂತಾದ ಸ್ತ್ರೀದೇವತೆಯರೂ ಇದ್ದಾರೆ; ಶ್ರದ್ಧಾ, ಮನ್ಯು ಮುಂತಾದ ಅಮೂರ್ತ ದೇವತೆಗಳೂ ಇದ್ದಾರೆ. ದೇವತಾಸ್ತೋತ್ರಕ್ಕೆ ಋಗ್ವೇದ ಮೀಸಲಾಗಿದ್ದರೂ ಅಲ್ಲಲ್ಲಿ ಲೌಕಿಕಜೀವನಕ್ಕೆ ಸಂಬಂಧಿಸಿದ ಸೂಕ್ತಗಳೂ ಒಂದೊಂದು ಕಾಣಬರುತ್ತವೆ. ದ್ಯೂತಕರನ ಪ್ರಲಾಪಸೂತ್ರ ಇದಕ್ಕೆ ಉತ್ತಮ ನಿದರ್ಶನ. ಅಶ್ವಮೇಧೀಯ ಮುಂತಾದ ಸಮಸ್ಯಾತ್ಮಕ ಸೂಕ್ತಗಳೂ ಉಂಟು. ದೇವತೆಗಳು ಬಂದು ಮಾತಾಡುವ ಸಂವಾದಸೂಕ್ತಗಳೂ ಉಂಟು. ಪಿತೃಕರ್ಮವನ್ನು ಕುರಿತ ಸೂಕ್ತಗಳೂ ಉಂಟು. ವಿಶ್ವದ ಸೃಷ್ಟಿಯನ್ನು ಕುರಿತ ಸೂಕ್ತಗಳೂ ಉಂಟು. ವೈಯಕ್ತಿಕ ದಾನಶೂರರನ್ನು ಹೊಗಳುವ ದಾನಸ್ತುತಿಗಳುಂಟು. ಪ್ರತಿಯೊಂದು ಮಂಡಲದಲ್ಲೂ ವಿಶಿಷ್ಟ ಯಜ್ಞಾಂಗವಾದ ಅಪ್ರೀಸೂಕ್ತವೂ ಉಂಟು.

**ಛಂದಸ್ಸು:** ಒಂದೂ ಅಪವಾದವಿಲ್ಲದೆ ಋಗ್ವೇದಸೂಕ್ತಗಳೆಲ್ಲ ಛಂದೋಬದ್ಧವಾಗಿವೆ. ಒಂದು ಸೂಕ್ತದಲ್ಲಿ ಸಾಮಾನ್ಯವಾಗಿ ನಾಲ್ಕು ಪಾದಗಳಿರುವ ಹತ್ತು ಋಕ್ಕುಗಳು ಅಥವಾ ಮಂತ್ರಗಳಿರುತ್ತವೆ. ಒಮ್ಮೊಮ್ಮೆ ಒಂದು ಋಕ್ಕಿನಲ್ಲಿ ಮೂರು ಪಾದಗಳಿರಬಹುದು; ಅಥವಾ ಐದು ಪಾದಗಳಿರಬಹುದು. ಋಕ್ಕಿನ ಒಂದು ಪಾದದಲ್ಲಿ ಎಂಟು ಇಲ್ಲವೆ ಹನ್ನೊಂದು ಇಲ್ಲವೆ ಹನ್ನೆರಡು ಅಕ್ಷರಗಳಿರುವುದು ಹೆಚ್ಚು. ಸಮಾನ ಅಕ್ಷರ ಸಂಖ್ಯೆಯ ಪಾದಗಳಿಂದಲೇ ಒಂದು ಋಕ್ಕು ಬದ್ಧವಾಗಿರುವುದು ವಾಡಿಕೆ. ಕೆಲವೊಂದು ಅಪ್ರಸಿದ್ಧ ಛಂದಸ್ಸುಗಳಲ್ಲಿ ಮಾತ್ರ ಅನಿಯತ ಅಕ್ಷರಸಂಖ್ಯೆಯ ಪಾದಗಳು ಇರಬಹುದು. ಒಟ್ಟು ಋಗ್ವೇದದಲ್ಲಿ ಬಳಕೆಯಾಗಿರುವ ಛಂದಸ್ಸುಗಳ ಸಂಖ್ಯೆ 15. ಆದರೂ ಇವುಗಳಲ್ಲಿ ಏಳು ಮಾತ್ರ ಪ್ರಚುರವೆನ್ನಬಹುದು. ಎಲ್ಲಕ್ಕಿಂತ ಹೆಚ್ಚು ಪ್ರಯುಕ್ತವಾಗಿರುವ ಛಂದಸ್ಸುಗಳೆಂದರೆ ತ್ರಿಷ್ಟುಭ್ (4 x 11 ಅಕ್ಷರಗಳು), ಗಾಯತ್ರೀ (3 x 8) ಮತ್ತು ಜಗತೀ (4 x 12). ಋಗ್ವೇದದ ಮೂರನೆಯ ಎರಡು ಭಾಗ ಇವುಗಳಿಂದಲೇ ಆಗಿದೆ. ಮುಂದಿನ ಸಂಸ್ಕೃತ ಛಂದಸ್ಸುಗಳಿಗೂ ವೈದಿಕ ಛಂದಸ್ಸುಗಳೇ ಮೂಲ. ಆದರೆ ವೈದಿಕ ಛಂದಸ್ಸಿನಲ್ಲಿ ಪಾದದ ಕಡೆಯ ನಾಲ್ಕೈದು ಅಕ್ಷರಗಳಿಗೆ ಮಾತ್ರ ಗುರುಲಘುನಿಯಮವಿದೆಯೇ ವಿನಾ ಮಿಕ್ಕ ಅಕ್ಷರಗಳಿಗೆ ಇಲ್ಲ. ಮೂರು ಋಕ್ಕುಗಳು ಸೇರಿದ್ದಕ್ಕೆ ತೃಚವೆನ್ನುವರು. ಸಂಮಿಶ್ರ ಛಂದೋಬಂಧಗಳಿಗೆ ಪ್ರಗಾಥವೆಂದು ಹೆಸರು.

**ಕಾವ್ಯಗುಣ:** ಸೂಕ್ತಗಳ ಪದಶಯ್ಯೆ ಲಾಲಿತ್ಯ ಹಾಗು ಸರಳ ಸೌಕುಮಾರ್ಯಗಳಿಂದ ತುಂಬಿದೆ. ಎರಡಕ್ಕಿಂತ ಹೆಚ್ಚು ಪದಗಳು ಕೂಡಿ ಆಗುವ ಸಮಾಸಗಳಿಲ್ಲ. ಈ ಕೃತಿಗಳ ಪ್ರಾಚೀನತೆಯನ್ನು ಲಕ್ಷ್ಯದಲ್ಲಿಟ್ಟಾಗ ಅಲ್ಲಿ ಕಾಣಬರುವ ಛಂದೋ ನೈಪುಣ್ಯ ಹಾಗೂ ಭಾಷಾಪ್ರಭುತ್ವ ನಮ್ಮನ್ನು ಅಚ್ಚರಿಗೊಳಿಸುತ್ತವೆ. ಆದರೆ ವಿಶೇಷತಃ ಇವು ಪುರೋಹಿತ ವರ್ಗದವರ ರಚನೆಗಳಾಗಿದ್ದು, ಆಗಲೇ ಪರಿಷ್ಕೃತವಾಗಿದ್ದ ಯಾಗವಿಧಿಗೆ ಅಂಗವಾಗಿ ಉದ್ದಿಷ್ಟವಾಗಿರುವುದರಿಂದ, ಇಲ್ಲಿಯ ಕಾವ್ಯ ನೈರ್ಮಲ್ಯಕ್ಕೆ ಚ್ಯುತಿಬರುವಷ್ಟು ಮಟ್ಟಿಗೆ ಯಜ್ಞ ವಿವರಗಳ ಉಲ್ಲೇಖ ಬಂದುಬಿಡುತ್ತದೆ. ಮುಖ್ಯವಾಗಿ ಯಜ್ಞದ ದೇವತೆಗಳಾದ ಅಗ್ನಿ ಹಾಗೂ ಸೋಮರನ್ನು ಕುರಿತ ಸೂಕ್ತಗಳಲ್ಲಿ ಈ ಮಾತು ಒಡೆದು ಕಾಣುತ್ತದೆ. ಇಲ್ಲೆಲ್ಲ ಕಾವ್ಯಧಾರೆ ಯಜ್ಞಕಲ್ಪನೆಗಳ ಮರೆಯಲ್ಲಿ ಹಿಂಜರಿಯುತ್ತದೆ, ಧಾರ್ಮಿಕ ಭಾವನೆಯೇ ಮುಂದಾಗುತ್ತದೆ.

ಇಷ್ಟಾದರೂ ದೇವತೆಗಳೇ ಸಾಧಾರಣವಾಗಿ ನಿಸರ್ಗ ಶಕ್ತಿಗಳ ಸಾಕ್ಷಾತ್ ಸಂಪರ್ಕವುಳ್ಳವರಾಗಿರುವುದರಿಂದ, ದೇವತಾಸ್ತೋತ್ರಗಳು ಸಹಜವಾಗಿಯೇ ಬಹು ಮನೋಹರ ಹಾಗೂ ಭವ್ಯೋಜ್ವಲ ಚಿತ್ರಗಳಿಂದ ಸುಂದರವಾಗಿ ಕಂಗೊಳಿಸುತ್ತವೆ. ಎಲ್ಲ ಸೂಕ್ತಗಳಲ್ಲೂ ಒಂದೇ ರೀತಿಯ ಕಾವ್ಯಗುಣವೆನ್ನುವಂತಿಲ್ಲವಾದರೂ ವಿಶಿಷ್ಟ ಸೂಕ್ತಗಳಲ್ಲಿಯ ಕಾವ್ಯಗುಣ ಮಾತ್ರ ಉಚ್ಚ ಶ್ರೇಣಿಯದಾಗಿದ್ದು ಎಂಥವರನ್ನಾದರೂ ತಲೆದೂಗಿಸುವಂತಿದೆ. ಋಗ್ವೇದದಲ್ಲೆಲ್ಲ ಕಾವ್ಯಗುಣದಲ್ಲಿ ಉತ್ಕೃಷ್ಟವಾದ ಸೂಕ್ತಗಳೆಂದರೆ ಉಷಸ್ ದೇವತೆಯ ಸೂಕ್ತಗಳೆನ್ನಬಹುದು. ವಿಶ್ವದ ಯಾವುದೇ ಸಾಹಿತ್ಯದಲ್ಲಿ ಇದಕ್ಕಿಂತ ಉನ್ನತದರ್ಜೆಯ ಭಾವಲಹರಿಗಳು ದುರ್ಲಭವೆಂದು ಬಲ್ಲವರು ಉದ್ಗರಿಸಿದ್ದಾರೆ. ಹಾಗೆಯೇ, ಇಂದ್ರವೃತರ ಕಾಳಗದ ವರ್ಣನೆಗೆ ಹೊರಟ ಕೆಲವು ಸೂಕ್ತಗಳು ವೀರರಸ ಪ್ರತಿಪಾದನೆಯಲ್ಲಿ ಗಣನೀಯವಾದ ಯಶಸ್ಸನ್ನು ಸಾಧಿಸಿವೆ. ಮರುದ್ದೇವತೆಗಳನ್ನು ಕುರಿತ ಸೂಕ್ತಗಳಲ್ಲಿ ಗುಡುಗು ಸಿಡಿಲುಗಳ ಆರ್ಭಟವನ್ನು ಶಬ್ದಚಿತ್ರಗಳಲ್ಲಿ ಅಮರವಾಗಿ ಸೆರೆಹಿಡಿಯುವ ಕಲೆಯಿದೆ. ಪರ್ಜನ್ಯ ಸೂಕ್ತದಲ್ಲಿ ಜಲಪ್ರಳಯದ ರಮ್ಯ ಆವಿಷ್ಕಾರವಿದೆ. ಋತುಧರ್ಮಗಳ ಪ್ರವರ್ತಕನೂ ನಿಯಾಮಕನೂ ಆದ ವರುಣದೇವನ ಸ್ತೋತ್ರಗಳಲ್ಲಿ ಉನ್ನತಮಟ್ಟದ ಕಾವ್ಯಧಾರೆ ನೀತಿವ್ಯವಸ್ಥೆಯ ಯಶೋಗಾನಕ್ಕೆ ಮೀಸಲಾಗಿದೆ. ಅದರಂತೆ ದೇವತಾಕಥೆಗಳ ಅಂಗವಾಗಿ ಬರುವ ಸಂವಾದಸೂಕ್ತಗಳು ನಾಟಕೀಯ ಸ್ವಾರಸ್ಯವನ್ನೂ ಭಾಷಾ ಚಮತ್ಕಾರವನ್ನೂ ಹೊರಸೂಸುತ್ತವೆ. ಮುಂದಿನ ನಾಟಕಗಳ ಉಗಮವನ್ನು ಇಲ್ಲಿಯೇ ವಿದ್ವಾಂಸರು ಸೂಚಿಸುತ್ತಾರೆ. ಗೋವುಗಳನ್ನು ಅಪಹರಿಸಿದ ಪಣಿಗಳಿಗೂ ಸರಮೆಗೂ ನಡೆಯುವ ಸಂವಾದ ಹಾಗೂ ಯಮ–ಯಮಿಯರ ಸಂವಾದಗಳನ್ನು ಉದಾಹರಣೆಯಾಗಿ ಹೇಳಬಹುದು. ಜೂಜುಗಾರನ ಪ್ರಲಾಪವಂತೂ ಕರುಣಾಜನಕವಾದ ಲೌಕಿಕಕಾವ್ಯದ ಕಕ್ಷೆಯಲ್ಲಿಯೇ ಸೇರುವಂತಿದೆ. ಮೃತ್ಯುವನ್ನು ಕುರಿತ ವಿಚಾರಗಳು ರುದ್ರಗಂಭೀರ ವಾತಾವರಣವನ್ನು ಹೇಗೆ ನಿರ್ಮಿಸಬಲ್ಲವೆನ್ನಲು ಪಿತೃಸೂಕ್ತವನ್ನು ಉದಾಹರಿಸಬಹುದು. ಸೃಷ್ಟಿವಿಚಾರವನ್ನು ಕುರಿತ ಸೂಕ್ತ ಗಂಭೀರ ತಾತ್ತ್ವಿಕ ಚಿಂತನೆಗಳು ಹೇಗೆ ರಮಣೀಯ ಕಾವ್ಯರೂಪದಲ್ಲಿ ಮೈದಾಳಬಹುದೆಂಬುದನ್ನು ನಿದರ್ಶಿಸಲು ಸಾಕ್ಷಿಯಾಗಿವೆ.

**ಅರ್ಥನಿರ್ಣಯ:** ಇಷ್ಟೊಂದು ಪ್ರಾಚೀನ ಕಾಲದ ರಚನೆಯಾದ ಋಗ್ವೇದಕ್ಕೆ ಅರ್ಥ ಮಾಡುವುದರಲ್ಲಿ ಸಮಸ್ಯೆ ಎಷ್ಟೇ ಜಟಿಲವಾಗಿ ಕಂಡರೂ ಈ ವೇದದ ಬಹಳಷ್ಟು ಅಂಶ ಇಂದು ಸಮರ್ಪಕವಾಗಿ ಅರ್ಥವಿಸಲ್ಪಟ್ಟಿದೆಯೆನ್ನಬಹುದು. ಇದಕ್ಕೆ ಪ್ರಪಂಚದ ಅನೇಕ ವಿದ್ವಾಂಸರ ಅವಿಶ್ರಾಂತ ಸಂಶೋಧನ ಪ್ರಯತ್ನಗಳೇ ಕಾರಣ. ಇಂದು ಕೂಡ ಇನ್ನೂ ತೃಪ್ತಿಕರವಾಗಿ ಅರ್ಥ ಬಗೆಹರಿಯದ ಕೆಲವೊಂದು ಅಂಶಗಳಿರುವುದು ನಿಜವೇ. ಆದರೆ ಪ್ರಥಮ ವೇದಾರ್ಥಯತ್ನವಾದ ನಿರುಕ್ತವನ್ನು ಬರೆದ ಯಾಸ್ಕನ ಕಾಲಕ್ಕೇ (ಪ್ರ.ಶ.ಪೂ.500) ಈ ರೀತಿಯ ಸಂಶಯ ತಪ್ಪಿರಲಿಲ್ಲ. ನಿರರ್ಥಕಾ ಹಿ ಮಂತ್ರಾಃ – ಎಂದು ವಾದಿಸಿದ ಕಾತ್ಸನ ಅಭಿಪ್ರಾಯವನ್ನು ಯಾಸ್ಕನೇ ಪೂರ್ವಪಕ್ಷವಾಗಿ ಉಲ್ಲೇಖಿಸಿದ್ದಾನೆ.

19ನೆಯ ಶತಮಾನದವರೆಗೆ ಋಗ್ವೇದದ ಅರ್ಥಗ್ರಹಣೆಗೆ 14ನೆಯ ಶತಮಾನದಲ್ಲಿ ಸಾಯಣಾಚಾರ್ಯರು ಬರೆದ ವೇದಭಾಷ್ಯವೊಂದೇ ಸಮರ್ಪಕ ಆಧಾರವೆಂದು ಸಂಪ್ರದಾಯವಾದಿಗಳೂ ವಿದ್ವಾಂಸರೂ ತಿಳಿಯುತ್ತಿದ್ದರು. ಆದರೆ ಸಾಯಣರು ಎಷ್ಟೋ ವೇಳೆ ತಮ್ಮ ಕಾಲದ ಯಜ್ಞಪ್ರಕ್ರಿಯೆಯ ಅರ್ಥಗಳನ್ನು ಆ ವಿವರಗಳೇ ಅಸ್ತಿತ್ವದಲ್ಲಿಲ್ಲದ ಕಾಲದ ಮಂತ್ರಗಳಿಗೂ ಅನ್ವಯಿಸಿರುವರೆಂಬುದನ್ನು ಜರ್ಮನ್ ಸಂಶೋಧಕರು ಎತ್ತಿ ತೋರಿಸಿದ್ದಾರೆ. ಅಸುರ ಶಬ್ದಕ್ಕೆ ಸಾಯಣರು ಒಮ್ಮೆ ಅಸುರರಕ್ಷಕನಾದ ದೇವ ಎಂದರೆ ಇನ್ನೊಮ್ಮೆ ಅಸುನಾಶಕನಾದ ರಾಕ್ಷಸನೆನ್ನುತ್ತಾರೆ. ಒಮ್ಮೆ ಪರ್ಜನ್ಯನೆನ್ನುತ್ತಾರೆ. ಇನ್ನೊಮ್ಮೆ ಹೋತೃವೆನ್ನುತ್ತಾರೆ. ಮತ್ತೊಮ್ಮೆ ಮಳೆ ನೀರೆನ್ನುತ್ತಾರೆ. ಹೀಗೆ ಒಂದೇ ಶಬ್ದಕ್ಕೆ ಮನಬಂದಂತೆ ನಾನಾರ್ಥಗಳನ್ನು ಬರೆಯುತ್ತ ಹೋಗುವ ಸಾಯಣರಿಗೆ ವೇದಾರ್ಥಸಂಪ್ರದಾಯದ ಖಚಿತ ಜ್ಞಾನವಿರಲಿಲ್ಲವೆಂದೇ ಅನುಮಾನಿಸುವವರಿದ್ದಾರೆ. ಮೂಲಸಂಪ್ರದಾಯ ಯಾಸ್ಕನಿಗೂ ಹಿಂದೆಯೇ ಭಾರತದಲ್ಲಿ ಲುಪ್ತವಾಗಿದ್ದಿರಬೇಕೆಂಬುದು ಆಧುನಿಕ ವಿದ್ವಾಂಸರ ತರ್ಕ. ಅದು ಎರಡು ಸಾವಿರ ವರ್ಷಗಳ ಬಳಿಕ ಬಂದ ಸಾಯಣರಿಗೆ ಪರಿಚಿತವಾಗಿರುವುದು ಅಸಂಭವ. ಆದ್ದರಿಂದ ಆಧುನಿಕ ವಿದ್ವಾಂಸರು ಋಗ್ವೇದದಿಂದಲೇ ಋಗ್ವೇದವನ್ನು ಅರ್ಥೈಸಬೇಕೆಂಬ ಹೊಸ ದೃಷ್ಟಿಕೋನದಿಂದ ಹೊರಟು ಋಗ್ವೇದದ ಪದಸೂಚಿಗಳನ್ನೂ ಅನುಕ್ರಮಣಿಗಳನ್ನೂ ನಿರ್ಮಿಸಿದ್ದಾರೆ. ಹೊಸದಾಗಿ ತೌಲನಿಕ ಭಾಷಾವ್ಯಾಕರಣಗಳನ್ನೂ ಬರೆದಿದ್ದಾರೆ. ತಾವೇ ಅರ್ಥವನ್ನು ಸಮೀಚೀನವೆಂದು ಊಹಿಸಿ ಶಬ್ದಕೋಶಗಳನ್ನು ರಚಿಸಿದ್ದಾರೆ. ತುಲನಾತ್ಮಕ ದೇವತಾಕಥೆಗಳ ಅಭ್ಯಾಸ. ತುಲನಾತ್ಮಕ ಧರ್ಮಗಳ ಅಭ್ಯಾಸ ಮುಂತಾದವುಗಳ ನೆರವಿನಿಂದ ಎಷ್ಟೋ ಅಜ್ಞಾತ ವಿವರಗಳ ಮೇಲೆ ಹೊಸ ಸಂಶೋಧನೆಯ ಬೆಳಕು ಬೀರಿ ಕತ್ತಲೆಯನ್ನು ಕಳೆದಿದ್ದಾರೆ. ವಿದ್ವಾಂಸರ ಲೇಖನಗಳ ಪಟ್ಟಿಯೇ ಮೂರು ಸಂಪುಟಗಳನ್ನು ಮೀರುವಷ್ಟು ಇಂದು ಬೆಳೆದಿದೆ. ಇನ್ನೂ ಬೆಳೆಯುತ್ತಿದೆ.

(ಕೆ.ಕೆ.)

**ಋಗ್ವೇದದಲ್ಲಿ ಧಾರ್ಮಿಕ ಭಾವನೆ:** ಋಗ್ವೇದೀಯ ಆರ್ಯರು ಪ್ರಕೃತಿಯ ಅದ್ಭುತಗಳ ಹಿಂದೆ ಪ್ರಚ್ಛನ್ನ ಶಕ್ತಿಯೊಂದಿದೆ ಎಂದು ಅರಿತು ಇಂಥ ಪ್ರಾಕೃತಿಕ ಶಕ್ತಿಗಳ ಅಭಿಮಾನಿ ದೇವತೆಗಳನ್ನು ಕೃತಜ್ಞತೆಯಿಂದ ಸ್ತುತಿಗೈದರು. ಕತ್ತಲನ್ನು ಹೋಗಲಾಡಿಸಿ ಬೆಳಕನ್ನು ಗೆದ್ದುಕೊಡುವ, ಮೋಡಗಳಲ್ಲಿ ಸ್ಥಗಿತವಾಗಿರುವ ಮಳೆಯನ್ನು ಬಿಡಿಸಿ ವರ್ಷಿಸುವಂತೆ ಮಾಡುವ ಶಕ್ತಿಗೆ ಇಂದ್ರನೆಂದರು. ತಮಗೆ ಅತ್ಯುಪಯುಕ್ತವಾದ ಅಂತೆಯೇ ತಾವು ಅರ್ಪಿಸಿದ ತುಪ್ಪ ಇತ್ಯಾದಿ ಆಹುತ ವಸ್ತುಗಳನ್ನು ದೇವತೆಗಳಿಗೆ ಮುಟ್ಟಿಸುವ ಶಕ್ತಿಗೆ ಅಗ್ನಿಯೆಂದೂ ಗಾಳಿಗೆ ವಾಯುವೆಂದೂ ಇದೇ ರೀತಿ ಮಿತ್ರ, ಬೃಹಸ್ಪತಿ, ಸವಿತೃ, ಪರ್ಜನ್ಯ ಮುಂತಾಗಿ ಅನೇಕ ಶಕ್ತಿಗಳನ್ನು ಭಾವಿಸಿಕೊಂಡು, ಕೆಲವು ವೇಳೆ ಅವುಗಳಿಗೆ ಮಾನವತ್ವಾರೋಪಣೆಯನ್ನೂ ಮಾಡಿ, ಅರ್ಚಿಸಿ ಸ್ತುತಿಸಿದರು. ಹೀಗೆ ಋಗ್ವೇದವೆಲ್ಲವೂ ಇಂಥ ಅಭಿಮಾನಿ ದೇವತೆಗಳ ಸ್ತೋತ್ರ ಸಮುಚ್ಚಯ.

ಇಂಥ ದೇವತೆಗಳ ಸಮೂಹವನ್ನು ಸ್ವರ್ಗ, ಅಂತರಿಕ್ಷ ಮತ್ತು ಭೂಮಿ– ಇವುಗಳಿಗೆ ತಕ್ಕಂತೆ ಸ್ವರ್ಗೀಯ ದೇವತೆಗಳು, ಅಂತರಿಕ್ಷ ದೇವತೆಗಳು ಮತ್ತು ಭೂಮಿ ದೇವತೆಗಳೆಂದು ವಿಂಗಡಿಸಬಹುದು. ದ್ಯೌಃ, ವರುಣ, ಮಿತ್ರ, ಸೂರ್ಯ, ಸವಿತೃ, ಪೂಷನ್, ಅಶ್ವಿನಿಗಳು, ಉಷಸ್, ರಾತ್ರಿ–ಇವು ಸ್ವರ್ಗೀಯ ದೇವತೆಗಳು. ಇಂದ್ರ, ಅಪಾಂನಪಾತ್, ರುದ್ರ, ಮರುತ್ತುಗಳು, ವಾಯು, ಪರ್ಜನ್ಯ ಮತ್ತು ಅಪಃ (ಜಲಾಭಿಮಾನಿ ದೇವತೆ)– ಇವು ಅಂತರಿಕ್ಷ ದೇವತೆಗಳು. ಪೃಥಿವಿ, ಅಗ್ನಿ ಮತ್ತು ಸೋಮ ಇವು ಭೌಮದೇವತೆಗಳು. ಕೆಲವು ಸತ್ವಭಿಮಾನಿ ದೇವತೆಗಳೂ ಈ ಕೊನೆಯ ಗುಂಪಿಗೆ ಸೇರಿರುತ್ತಾರೆ.

ಮುಖ್ಯವಾದ ದೇವತೆಗಳು 33; ಮೇಲೆ ಹೇಳಿದ ಒಂದೊಂದು ಗುಂಪಿಗೆ 11. ಮೂಲತಃ ಇವೆಲ್ಲವೂ ಪ್ರಕೃತಿಯ ನಾನಾ ಶಕ್ತಿಗಳ ಅಭಿಮಾನಿ ದೇವತೆಗಳು ಎಂದು ಮೇಲೆಯೇ ಹೇಳಿದೆ. ಆದ್ದರಿಂದ ಈ ದೇವತಾಭಾವನೆ ಕೇವಲ ಸಾಂಕೇತಿಕವಾದುದು. ಉದಾಹರಣೆಗೆ, ಅಗ್ನಿಯ ಜ್ವಾಲೆಗಳು ಅಗ್ನಿದೇವತೆಯ ನಾಲಗೆಗಳು ಅಥವಾ ಜಟೆಗಳು. ಸೂರ್ಯಕಿರಣಗಳು ಆತನ ಕರಗಳು. ದೇವತೆಗಳಲ್ಲಿ ಕೆಲವರು ಮೊದಲು ಉತ್ಪತ್ತಿಯಾದವರು. ಕೆಲವರು ಆಮೇಲೆ. ಅವರಲ್ಲಿ ಕೆಲವರು ಮಕ್ಕಳು. ಅವರೂ ಮೊದಲು ಮರರೇ. ಅನಂತರ ಸೋಮರಸವನ್ನು ಕುಡಿದು ಅಮರರಾದರು. ಅವರ ಸ್ಥಾನ ಸ್ವರ್ಗ. ತ್ರಿದಿವ ವಿಷ್ಣುವಿನ ಅತ್ಯುಚ್ಚಪದ(ಪರಮಪದ).

ಯಜ್ಞದಲ್ಲಿ ದೇವತೆಗಳಿಗೆ, ಹಾಲು, ಬೆಣ್ಣೆ ಅಥವಾ ತುಪ್ಪ, ಧಾನ್ಯಗಳು, ಮಾಂಸ ಇತ್ಯಾದಿಗಳನ್ನು ಆರ್ಯರು ಅರ್ಪಿಸುತ್ತಿದ್ದರು. ದೇವತೆಗಳು ಅಶ್ವಗಳನ್ನು ಹೂಡಿದ ರಥಾರೂಢರಾಗಿ ಬಂದು ಅಗ್ನಿಯ ಮೂಲಕ ಅದನ್ನು ಸ್ವೀಕರಿಸುವರೆಂಬ ನಂಬಿಕೆ ಬೆಳೆದಿತ್ತು. ಸೋಮರಸ ದೇವತೆಗಳ ಅಚ್ಚುಮೆಚ್ಚಿನ ಪಾನೀಯ. ಅದನ್ನು ಕುಡಿದು ಅವರು ತೃಪ್ತರಾಗಿ ಯಜ್ಞ ಮಾಡಿದವರಿಗೆ ಅಶ್ವಗಳು, ಗೋವುಗಳು, ವೀರರಾದ ಪುತ್ರರು, ದೀರ್ಘಾಯಸ್ಸು–ಇತ್ಯಾದಿಗಳನ್ನು ಹರಸುತ್ತಿದ್ದರು. ಅನಾರ್ಯರ ಮೇಲೆ ಆರ್ಯರು ಮಾಡುತ್ತಿದ್ದ ಯುದ್ಧದಲ್ಲಿ ದೇವತೆಗಳ, ಅದರಲ್ಲೂ ಅತಿ ಮುಖ್ಯನಾದ ಇಂದ್ರನ ಸಹಾಯ ಅಪಾರವಾದುದು.

ದೇವತೆಗಳಿಗೆ ಕೆಲವು ವಿಶಿಷ್ಟ ಗುಣಗಳಿವೆ. ಅವರ ಶಕ್ತಿ (ಕ್ರತು) ಮಹತ್ತರವಾದುದು. ಪ್ರಕೃತಿಯ ಕ್ರಿಯೆಗಳು ನಿಯಮಬದ್ಧವಾಗಿ ನಡೆಯುವಂತೆ ಮಾಡುವವರು ಅವರು. ವಿಶ್ವದ ಆಗುಹೋಗುಗಳ, ಚಲನವಲನಗಳ ಹಿನ್ನೆಲೆಯಲ್ಲಿ, ಮೂಲದಲ್ಲಿ, ಋತವೆಂಬ ಶಕ್ತಿಯಿದೆ. ಆ ಋತಶಕ್ತಿಯನ್ನು ಪಾಲಿಸಿ ಪೋಷಿಸಿ ನಡೆಸಿಕೊಂಡು ಬರುವವರು ಋತ–ಗೋಪ್ತರಾದ ದೇವತೆಗಳು. ದೇವತೆಗಳಿಗೂ ಋತಕ್ಕೂ ಇರುವ ಸಂಬಂಧ ತುಂಬ ಮುಖ್ಯವಾದದ್ದು. ಋತವನ್ನು 3 ರೀತಿಯಲ್ಲಿ ಭಾವಿಸಲಾಗಿದೆ. ವಿಶ್ವದಲ್ಲಿ ಕಾಣುವ ಕ್ರಮ, ನಿಯಮವೆಂಬುದು ಋತದ ಒಂದು ಮುಖ. ಸರಿಯಾದ ನಿಯಮಬದ್ಧವಾದ ನಡೆವಳಿಕೆ ಎಂಬುದು ಋತದ ಇನ್ನೊಂದು ಮುಖ. ದೇವತೆಗಳು ಈ ಎರಡೂ ಬಗೆಯ ನಿಯಮ ಪಾಲಕರು. ವಿಶ್ವದ ಕ್ರಿಯೆಯೂ ಮಾನವನ ನಡೆವಳಿಕೆಯೂ ತಪ್ಪದಂತೆ ಅದನ್ನೂ ಕಾಯುತ್ತಾರೆ. ಋತ ಎಂದರೆ ಧರ್ಮ ಎಂಬುದು ಅದರ ಮೂರನೆಯ ಮುಖ. ಇದು ವೇದದ ಆಚಿನ ಕಾಲದ್ದಾದರೂ ತುಂಬ ಪ್ರಾಮುಖ್ಯ ಪಡೆಯಿತು. ದುಷ್ಟಶಕ್ತಿಗಳನ್ನು ದಮನ ಮಾಡಿ, ಸಕಲ ಚರಾಚರವಸ್ತುಗಳನ್ನೂ ತಮ್ಮ ಅಧೀನಪಡಿಸಿಕೊಂಡು ವಿಶ್ವಕಲ್ಯಾಣವನ್ನು ಆಗಮಾಡುವುದು ದೇವತೆಗಳ ವೈಶಿಷ್ಟ್ಯ. ಅನೃತ, ಪಾಪ, ಅವರ ಶಿಕ್ಷೆಗೊಳಗಾಗುತ್ತವೆ.

**ಏಕದೇವತಾ ಭಾವನ:** ಶಕ್ತಿ, ಜ್ಞಾನ, ಕಾಂತಿ, ದಯೆ ಮುಂತಾದ ಸುಗುಣಗಳು ಎಲ್ಲ ದೇವತೆಗಳಿಗೂ ಸಮಾನವಾಗಿರುವುದರಿಂದ ಇಬ್ಬಿಬ್ಬರು ದೇವತೆಗಳು ಒಟ್ಟಿಗೆ ಸ್ತುತರಾಗುತ್ತಾರೆ. ಮಿತ್ರಾವರುಣ, ಇಂದ್ರಾಗ್ನಿ, ದ್ಯಾವಾಪೃಥಿವೀ–ಹೀಗೆ. ಕ್ರಮೇಣ ಎಲ್ಲ ಗುಣಗಳು ಎಲ್ಲ ದೇವತೆಗಳಲ್ಲೂ ಇರುವುದರಿಂದ ಎಲ್ಲ ಒಂದೇ ಎಂದು ಭಾವಿಸುವುದೂ ಸಹಜ. ಹೀಗೆ ಅದಿತಿ, ಪ್ರಜಾಪತಿಗಳಲ್ಲಿ ಎಲ್ಲ ದೇವತೆಗಳೂ ಅಡಗಿದ್ದಾರೆ ಎಂಬುದರಿಂದ ದೇವರು ಒಬ್ಬನೇ, ನಾಮ ಹಲವು ಎಂಬ ಭಾವನೆ ಮೂಡಿಬರುತ್ತದೆ. ಋಗ್ವೇದದ ಮಂತ್ರವೊಂದು ಒಬ್ಬನೇ ಆದ ಆದಿತ್ಯನನ್ನು ಇಂದ್ರನೆಂದೂ ಮಿತ್ರನೆಂದೂ ವರುಣನೆಂದೂ ಅಗ್ನಿಯೆಂದೂ ಕರೆಯುತ್ತದೆ. ಇವನೇ ದಿವ್ಯಾತ್ಮನೂ ಶ್ರೇಷ್ಠವಾದ ಪತನವುಳ್ಳವನೂ ಆದ ಗುರುತ್ಮಂತನಾಗಿದ್ದಾನೆ. ಮೇಧಾವಿಗಳಾದ ವಿಪ್ರರು ಏಕಾತ್ಮನಾದ ಒಬ್ಬ ಪರಮಾತ್ಮನನ್ನೇ ಅಗ್ನಿಯೆಂದೂ ಯಮನೆಂದೂ ಮಾತರಿಶ್ವನೆಂದೂ ನಾನಾ ವಿಧವಾಗಿ ಕರೆಯುತ್ತಾರೆ ಎಂದು ವೇದ ಘೋಷಿಸುತ್ತದೆ. ಹೀಗೆ ಒಬ್ಬನೇ ಪರದೇವತೆ ಎಂಬ ಭಾವದಿಂದ ಪ್ರಕೃತಿಯೇ ವಿಶ್ವವೇ ದೇವರು ಎಂಬ ಭಾವನೆ ಉತ್ಪನ್ನವಾಗಿ, ಮುಂದೆ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗುವ ಪರಬ್ರಹ್ಮತತ್ತ್ವದ ಆರಂಭ ಇಲ್ಲಿಯೇ ಕಂಡುಬರುತ್ತದೆ. ಅನೇಕ ದೇವತಾತತ್ತ್ವದಿಂದ ಏಕದೇವತ್ವಭಾವ ತಾನಾಗಿಯೇ ಬೆಳೆದು ಕೊನೆಗೆ ವಿಶ್ವದೇವತ್ವತತ್ತ್ವದಲ್ಲಿ ಅಂತರ್ಗತವಾಗುತ್ತದೆ.

**ಲೌಕಿಕ ವಿಚಾರಗಳು:** ಋಗ್ವೇದ ದೇವತಾಸ್ತುತಿ ರೂಪದ ಮಂತ್ರಗಳನ್ನು ಬಹುಮಟ್ಟಿಗೆ ಒಳಗೊಂಡಿದ್ದರೂ ಅದರಲ್ಲಿ ಆರ್ಯರ ಸಂಸ್ಕೃತಿಯನ್ನು ಪರೋಕ್ಷವಾಗಿ ಸೂಚಿಸುವ ಅನೇಕ ಸೂಕ್ತಗಳಿವೆ. ಒಂದು ಮತ್ತು ಹತ್ತನೆಯ ಮಂಡಲಗಳಲ್ಲಿ ಇಂಥ ಸೂಕ್ತಗಳು ಹೆಚ್ಚು. ಈ ಮಂಡಲಗಳು ಆಮೇಲೆ ಋಗ್ವೇದ ಸಂಹಿತೆಗೆ ಸೇರಿಸಲ್ಪಟ್ಟುವೆಂಬುದಕ್ಕೆ ಇದೂ ಒಂದು ಕಾರಣ.

10ನೆಯ ಮಂಡಲದ 85ನೆಯ ಸೂಕ್ತ ವೈವಾಹಿಕ ವಿಧಿಗೆ ಸಂಬಂಧಿಸಿದ್ದು. 14–18ನೆಯ ಸೂಕ್ತ ಪೂರ್ತಾ ಐದು ಸೂಕ್ತಗಳು ಉತ್ತರಕ್ರಿಯೆಗೆ ಸಂಬಂಧಿಸಿದವು. ಕಡೆಯದಂತೂ ವೈದಿಕ ಆರ್ಯರ ಉತ್ತರಕ್ರಿಯೆಗೆ ಸಂಬಂಧಿಸಿದ ಕಟ್ಟುಪಾಡುಗಳ ವಿಚಾರದಲ್ಲಿ ಸಾಕಷ್ಟು ವಿಷಯಗಳನ್ನು ತಿಳಿಸುತ್ತದೆ.

ಭಾರತೀಯ ಸಂಸ್ಕೃತ ನಾಟಕದ ಹುಟ್ಟನ್ನೂ ಸಹ ಋಗ್ವೇದದಲ್ಲಿ ಗುರುತಿಸಬಹುದು. ಮರ್ತ್ಯಲೋಕದ ಪ್ರೇಮಿ ಪುರೂರವನಿಗೂ ಅಮರ್ತ್ಯ ಲೋಕದ ಸುಂದರಿ ಅಪ್ಸರೆ ಊರ್ವಶಿಗೂ ಪ್ರೇಮ ಅಂಕುರವಾಗಿ ಫಲಿಸಿತೆನ್ನುವಾಗ ಆಕೆ ಆತನನ್ನು ಕೈಬಿಡುವ ಸಂದರ್ಭವನ್ನೂ ಸೂಚಿಸುವ ಸಂವಾದ ಸೂಕ್ತವೊಂದು ಮುಂದೆ–ಸಹಸ್ರ ವರ್ಷಗಳಿಗಿಂತಲೂ ಮುಂದೆ–ಮಹಾಕವಿ ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ ವಸ್ತುಬೀಜ. ಹೀಗೆಯೇ ತಂಗಿ ಯಮಿ ಋತವನ್ನು (ಧರ್ಮ) ತಿಳಿದ ತನ್ನ ಅಣ್ಣ ಯಮನಲ್ಲಿ ಕಾಮಾತುರಳಾಗಿ, ಬೇಡಿ ತಿರಸ್ಕೃತಳಾಗುವ ಯಮ–ಯಮೀ ಸಂವಾದ ಸೂಕ್ತ ಮತ್ತೊಂದು.

ನಾಲ್ಕು ಸೂಕ್ತಗಳು ನೀತಿಬೋಧಕವಾದವು. ಇವುಗಳಲ್ಲಿ ಜೂಜುಗಾರನ ಅಳಲು ಕಾವ್ಯದೃಷ್ಟಿಯಿಂದಲೂ ಸ್ವಾರಸ್ಯವಾಗಿದೆ. ಸತ್ಕಾರ್ಯ ಮಾಡಿದರೆ ಸಿಗುವ ಸತ್ಫಲ, ಸುಸಂಸ್ಕೃತ ಪ್ರಜ್ಞಾಯುಕ್ತ ವಾಕ್ ತತ್ತ್ವದ ಮಹತ್ತ್ವ, ಮಾನವರು ಸಂಪದನ್ವೇಷಣೆ ಮಾಡುವ ವಿವಿಧ ಮಾರ್ಗಗಳು– ಮುಂತಾದವನ್ನು ಹೇಳುವ ಸೂಕ್ತಗಳು ಉಳಿದ ಮೂರು.

ಒಗಟುಗಳು, ಸಮಸ್ಯೆಗಳನ್ನೊಡ್ಡುವ ಸೂಕ್ತಗಳು ಎರಡು. ಹೆಸರು ಹೇಳದೆ ಕೃತಿಗಳನ್ನು ಇಲ್ಲವೇ ಮಹಿಮೆಯನ್ನು ವರ್ಣಿಸಿ ಹೆಸರನ್ನು ಊಹಿಸಲು ಬಿಡುವ ಸೂಕ್ತ ಒಂದು. ಸಾಂಕೇತಿಕವಾದ ಮತ್ತು ಗೂಢವಾದ ಭಾಷೆಯಲ್ಲಿ ಆದಿತ್ಯ ಕಾಲ ಮುಂತಾದ ದೇವತಾ ವಿಶೇಷಗಳಿಗೆ ಸಂಬಂಧಿಸಿದ ಒಗಟುಗಳನ್ನೊಳಗೊಂಡ ಐವತ್ತೆರಡು ಮಂತ್ರಗಳ ದೀರ್ಘಸೂಕ್ತ ಮತ್ತೊಂದು. ಎರಡೂ ಮನೋರಂಜಕವಾಗಿವೆ.

ವಿಶ್ವಸೃಷ್ಟಿಗೆ ಸಂಬಂಧಿಸಿದಂತೆ ಬಹು ವಿಧವಾಗಿ ಚರ್ಚೆ ನಡೆದು ವಿಧವಿಧವಾದ ಉತ್ತರಗಳು ಅನೇಕ ಸೂಕ್ತಗಳಲ್ಲಿ ಕಂಡುಬರುತ್ತವೆ. ಮೊದಲು ಈ ಎಲ್ಲ ಏನಾಗಿತ್ತು? ಮೊದಲು ಇದ್ದುದೇನು? ಎಂಬ ಪ್ರಶ್ನೆ ಆ ಪುರಾತನ ಕಾಲದಲ್ಲೇ ಹುಟ್ಟಿ, ಋಷಿ ಕವಿಗಳು ಮನೀಷೆಯಿಂದ ಹೃದಯದಲ್ಲಿ ಹುಡುಕಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ದಾನಸ್ತುತಿಗಳೆಂಬ ಕೆಲವು ಸೂಕ್ತಗಳು ಹಲವು ಋಷಿಕುಲಗಳ, ಯಜ್ಞಗಳನ್ನು ಮಾಡಿಸಿ ಉದಾರಬುದ್ಧಿಯಿಂದ ಭೂದಾನಗಳನ್ನಿತ್ತ ರಾಜರುಗಳ ಕುಲಗೋತ್ರಗಳು, ವೈದಿಕ ಆರ್ಯಕುಲ ನೆಲೆಸಿದ್ದ ಸ್ಥಳವಿಶೇಷಗಳು ಮುಂತಾದ ಚಾರಿತ್ರಿಕ ಅಂಶಗಳನ್ನೊಳಗೊಂಡಿದೆ.

ಇಷ್ಟೇ ಅಲ್ಲದೆ ಋಗ್ವೇದದ ಸೂಕ್ತಗಳಿಂದ ಆರ್ಯರು ನೆಲೆಸಿದ್ದ ಪ್ರದೇಶಗಳ ನದಿಗಳು ಸಸ್ಯ ಮತ್ತು ಪ್ರಾಣಿವರ್ಗ, ಮೂಲ ನಿವಾಸಿಗಳಿಗೂ ಅವರಿಗೂ ನಡೆಯುತ್ತಿದ್ದ ನಿರಂತರ ಯುದ್ಧಗಳು, ಆರ್ಯರ ಸಾಮಾಜಿಕ ಜೀವನ, ಸ್ತ್ರೀಯರ ಸ್ಥಿತಿಗತಿಗಳು, ಅವರ ಉಡುಗೆ ತೊಡಿಗೆ, ಆಭರಣಗಳು, ಆಹಾರ ಪಾನೀಯಗಳು ಅವರ ಕಸಬುಗಳು, ದ್ಯೂತ, ನೃತ್ಯ ಸಂಗೀತ ಇತ್ಯಾದಿ ವಿನೋದಗಳು– ಮುಂತಾದ ಅನೇಕ ವಿಷಯಗಳು ಗೊತ್ತಾಗುತ್ತವೆ.

**ವೇದಭಾಷ್ಯ ಮತ್ತು ವೇದ ಸಂರಕ್ಷಣೆ:** ಮಹತ್ತರವೂ ಕಾಲದ ದೃಷ್ಟಿಯಿಂದ ಅತಿ ಪುರಾತನವೂ ಆದ ವೇದವನ್ನು ಇಂದಿನವರು ಅರ್ಥ ಮಾಡಿಕೊಳ್ಳುವುದಾದರೂ ಹೇಗೆ. ವೇದದ ಮಂತ್ರಗಳು ಅನರ್ಥಕ, ಅನುಪಪನ್ನಾರ್ಥಕ, ವಿಪ್ರತಿಷಿದ್ಧಾರ್ಥಕ, ಅವಿಸ್ಪಷ್ಟಾರ್ಥಕ ಎಂಬುದಾಗಿ ತನಗಿಂತ ಹಿಂದಿನವನಾದ ಕಾಶ್ಯನೆಂಬುವನ ಅಭಿಪ್ರಾಯವೆಂದು ನಿರುಕ್ತಕಾರ ಯಾಸ್ಕ ಪ್ರಸಕ್ತಶಕ ಪೂರ್ವ ಐದಾರು ಶತಮಾನಗಳ ಹಿಂದೆಯೇ ಹೇಳುತ್ತಾನೆ.

ಆದ್ದರಿಂದ ವೇದಾರ್ಥವನ್ನು ಸುಸ್ಪಷ್ಟ ಮಾಡಿಕೊಳ್ಳುವ ಪ್ರಯತ್ನ ಮೊಟ್ಟಮೊದಲು ಬ್ರಾಹ್ಮಣಗಳಲ್ಲಿ ಪ್ರಾರಂಭವಾಗಿ ಆಯಾ ವೇದದ ಪ್ರಾತಿಶಾಖ್ಯಗಳು ಮೇಲೆ ಹೇಳಿದ ಯಾಸ್ಕನ ನಿಘಂಟು ಮತ್ತು ನಿರುಕ್ತ, ಕಾತ್ಯಾಯನ ಎಂಬುವನಿಂದ ರಚಿತವಾದ ಸರ್ವಾನುಕ್ರಮಣಿ ಮತ್ತು ಬೃಹದ್ದೇವತಾ ಗ್ರಂಥಗಳು, ಪ್ರಸಕ್ತಶಕದಿಂದೀಚೆಗೆ ಬಂದ ಪೂರ್ವ ಮೀಮಾಂಸಾ ಮತ್ತು ವೇದಾಂತದರ್ಶನಕಾರರು, ಸ್ಕಂದಸ್ವಾಮಿ, ವೆಂಕಟಮಾಧವ– ಇವರ ಭಾಷ್ಯ ಮತ್ತು ಈ ಎಲ್ಲ ಪ್ರಯತ್ನಗಳಿಗೂ ಕಿರೀಟಪ್ರಾಯವಾಗಿ 14ನೆಯ ಶತಮಾನದಲ್ಲಿ ವಿಜಯನಗರ ಸಂಸ್ಥಾನ ಸ್ಥಾಪನೆಯಾದ ತರುವಾಯ ಶ್ರೀವಿದ್ಯಾರಣ್ಯರ ಸಹೋದರನೂ ಅಚ್ಚ ಕನ್ನಡಿಗನೂ ಆದ ಸಾಯಣಾಚಾರ್ಯನ ವೇದಾರ್ಥ ಪ್ರಕಾಶವೆಂಬ ಪ್ರಪಂಚವಿಖ್ಯಾತ ಪ್ರಯತ್ನ–ಮೊದಲಾದವುಗಳಲ್ಲಿ ಮೈತುಂಬಿಕೊಂಡು ಪರಿಪೂರ್ಣವಾಗಿದೆ. ಸಂಪ್ರದಾಯ ಬದ್ಧವಾದ ಈ ಪೌರಸ್ತ್ಯ ಪ್ರಯತ್ನಕ್ಕೆ ಜರ್ಮನಿಯ ಪ್ರಸಿದ್ಧ ಸಂಸ್ಕೃತಜ್ಞರಾದ ರಡಾಲ್ಫ್ ರಾಥ್, ಆಟೋ ಬೋಟ್ಲಿಂಗ್, ಆಲ್ಬರ್ಟ್ ವೀಬರ್, ಮ್ಯಾಕ್ಸ್‌ಮುಲರ್, ಥಿಯೋಡರ್ ಔಫ್ರೆಕ್ಟ್ ಅವರೂ ಮೂಯಿರ್ ಪಿಷೆಲ್ ಗೆಲ್ಡ್‌ನರ್ ಹಾಗೂ ಮಾರಿಸ್ ಬ್ಲೂಮ್ ಫೀಲ್ಡ್, ಗ್ರಾಸ್‌ಮನ್, ಬ್ಯೂಲರ್, ಬೆನ್ಫೆ, ಯಾಕೋಬಿ– ಮೊದಲಾದವರೂ ಭಾರತೀಯರೇ ಆದ ಸ್ವಾಮಿ ದಯಾನಂದ ಮಹರ್ಷಿ, ಲೋಕಮಾನ್ಯ ಬಾಲಗಂಗಾಧರ ಟಿಳಕ್, ರಾಮಕೃಷ್ಣ ಗೋಪಾಲ ಭಂಡಾರಕರ್, ಕನ್ನಡಿಗರಾದ ಎ.ವೆಂಕಟಸುಬ್ಬಯ್ಯ, ಆರ್.ಶಾಮಶಾಸ್ತ್ರಿ ಮೊದಲಾದವರೂ ನವೀನವೂ ವೈಜ್ಞಾನಿಕವೂ ಆದ ದೃಷ್ಟಿಯಲ್ಲಿ ವೇದಾರ್ಥ ಪರಿಶೀಲನೆಗೆ ತೊಡಗಿ ಬಹಳ ಉಪಯುಕ್ತವಾದ ಸಂಶೋಧನೆಗಳನ್ನು ನಡೆಸಿದ್ದಾರೆ.

ಅನಾದಿಕಾಲದಿಂದ ಗುರುವಿನಿಂದ ಶಿಷ್ಯನಿಗೆ ಬಾಯಿಪಾಠದ ಮೂಲಕ ಶ್ರುತವಾಗಿ ಬಂದ ವೇದದಲ್ಲಿ ಇದ್ದದ್ದು ಬಿಟ್ಟುಹೋಗಿ, ಇಲ್ಲದ್ದು ಬಂದು ಸೇರಿಕೊಳ್ಳಬಹುದಾಗಿತ್ತು. ಆದರೆ ಋಗ್ವೇದ–ಬಹುಮಟ್ಟಿಗೆ ಇತರ ವೇದಗಳು ಕೂಡ–ಪ್ರಾಯಶಃ ಮೊದಲು ಹೇಗಿತ್ತೋ ಇಂದಿಗೂ ಹಾಗೆಯೇಶುದ್ಧ ರೂಪದಲ್ಲಿ ಉಳಿಯಲು ಸಾಧ್ಯವಾಗಿರುವುದಕ್ಕೆ, ವೇದದ ಪದ, ಅಕ್ಷರ, ಮಾತ್ರೆ, ಸ್ವರ–ಇವುಗಳಾವುದರಲ್ಲೂ ಎಳ್ಳಷ್ಟು ವ್ಯತ್ಯಾಸವಾದರೂ ಕಗ್ಗತ್ತಲೆಯ ನರಕವಾಸ ಸಿದ್ಧ ಎಂಬ ನಂಬಿಕೆಯೇ ಕಾರಣ. ಮಂತ್ರವನ್ನು ಅಪಸ್ವರದಲ್ಲಿ ಹಾಡಿದರೆ ಹಾಗೆ ಹಾಡಿದವನ ಪಿತೃಗಳಿಗೆಲ್ಲರಿಗೂ ದುರ್ಗತಿ ಎಂಬ ಭಯ, ಪವಿತ್ರವೂ ಋಷಿ ಕುಲ ಪ್ರದತ್ತವೂ ಆದ ವೇದ ಐಹಿಕಾಮುಷ್ಮಿಕ ಸೌಖ್ಯವೆರಡಕ್ಕೂ ವರಪ್ರಾಯವಾದುದೆಂಬ ಸಾತ್ತ್ವಿಕ ಭಾವನೆ–ಮುಂತಾದವು ಕಾರಣ.

ಇಷ್ಟಲ್ಲದೆ ಋಗ್ವೇದದಲ್ಲಿ ಇರುವ ಮಂತ್ರಗಳ, ಪಾದಗಳ, ಪದಗಳ, ಅಕ್ಷರಗಳ, ಋಷಿಗಳ, ದೇವತೆಗಳ, ಛಂದಸ್ಸುಗಳ ಸಂಖ್ಯೆ, ಹೆಸರು ಇತ್ಯಾದಿಗಳನ್ನು ಸೂಚಿಸುವ ಅನುಕ್ರಮಣಿಗಳೆಂಬ ಅತ್ಯಮೂಲ್ಯ ಗ್ರಂಥಗಳು ಮತ್ತು ಪಠನ ಕ್ರಮದಲ್ಲಿಯ ಪದಪಾಠ, ಕ್ರಮಪಾಠ, ಜಟಾಪಾಠ ಮತ್ತು ಘನಪಾಠ ವಿಧಾನಗಳು ವೇದರಕ್ಷಣೆಗಾಗಿ ನಿರ್ಮಾಣವಾದವು. (ಸಿ.ಜಿ.ಪಿ.)

**ಸಾಮಾಜಿಕ ಅಂಶಗಳು:** ವೇದದಲ್ಲಿ ಹೇರಳವಾಗಿ ಕಾಣುವುದು ಮತ ಮತ್ತು ರಾಜಕೀಯಕ್ಕೆ ಸಂಬಂಧಪಟ್ಟ ವಿಷಯಗಳು. ಆದರೂ ಅವರ ಸಾಮಾಜಿಕ ಸ್ಥಿತಿಗತಿಗಳನ್ನು ರೀತಿನೀತಿಗಳನ್ನು ಕುಟುಂಬ ಜೀವನದ ವಿವರಗಳನ್ನು ತಿಳಿಯಲು ಸಾಕಷ್ಟು ಆಧಾರಗಳು ಅಲ್ಲಿ ದೊರೆಯುತ್ತವೆ. ಮತೀಯ ಭಾವನೆಗಳು ಆರ್ಯರ ಬೆನ್ನಲ್ಲಿ ಬಂದುವಾದ್ದರಿಂದ ಅವು ಪ್ರಮುಖವಾಗಿರುವುದು ಸಹಜವೇ. ವೇದಕಾಲದ ಆರ್ಯರು ಸಿಂಧೂ ಮತ್ತು ಗಂಗಾನದಿಗಳ ಬಯಲಿನಲ್ಲಿ ಸುರಕ್ಷಿತವಾಗಿ ನೆಲೆಸುತ್ತಿದ್ದ ಕಾಲವಾದ್ದರಿಂದ ರಾಜಕೀಯಕ್ಕೂ ಯುದ್ಧಕ್ಕೂ ಪ್ರಮುಖತೆ ದೊರೆತಿರುವುದು ಸಹಜವೇ. ಆ ಕಾರ್ಯದಲ್ಲಿ ಯುದ್ಧದ ದೇವತೆಯಾದ ಇಂದ್ರನಿಗೆ ಪ್ರಾಶಸ್ತ್ಯ ಬಂದಿರುವುದೂ ಸಹಜವೇ. ಆದರೆ ಎಲ್ಲರೂ ಯುದ್ಧದೇವತೆಗಳಲ್ಲ. ಅನೇಕ ದೇವತೆಗಳು ಜನರ ಧರ್ಮ, ಕುಶಲವಿದ್ಯೆಗಳು, ಗೃಹಜೀವನ, ಕಲೆಗಳು, ವಿನೋದಗಳು ಇತ್ಯಾದಿಗಳಿಗೆ ಹೆಚ್ಚು ಸಂಬಂಧಪಟ್ಟವರು. ಈ ವಿಷಯಗಳಿಗೆ ಮೀಸಲಾದ ಮಂತ್ರಗಳಿಲ್ಲವಾದ್ದರಿಂದ ಈ ದೇವತೆಗಳನ್ನು ಕುರಿತ ಸೂಕ್ತಗಳಿಂದ ಈ ವಿಚಾರಗಳನ್ನು ಕುರಿತು ಬರುವ ಒಂದೊಂದು ಮಾತಿನಿಂದ ಆ ಕಾಲದ ಜೀವನದ ಅಂಶಗಳನ್ನು ಊಹಿಸಬೇಕಾಗಿದೆ.

ವೇದಕಾಲದಲ್ಲಿ ಕುಟುಂಬ ಜೀವನಕ್ಕೆ ತುಂಬ ಮನ್ನಣೆ ಇತ್ತು. ಅಗ್ನಿಯನ್ನು ಪೂಜಿಸುವುದು ಪ್ರತಿಯೊಂದು ಕುಟುಂಬದ ಆದ್ಯ ಕರ್ತವ್ಯವಾಗಿತ್ತು. ಇದಲ್ಲದೆ ಪಕ್ಷಗಳಲ್ಲಿ, ಮಾಸಗಳಲ್ಲಿ, ವರ್ಷದ ಆರಂಭದಲ್ಲಿ ಮಾಡುವ ಕರ್ಮಗಳೂ ಉಂಟು. ಅತಿಥಿ ಸತ್ಕಾರ ಒಂದು ಮುಖ್ಯ ಕರ್ಮ. ಅತಿಥಿ ಮನೆಗೆ ಬಂದಾಗ ಅವನಿಗೆ ಅರ್ಘ್ಯವನ್ನು ಕೊಡಬೇಕು. ಅತಿಥಿಯ ಕಾಲು ತೊಳೆದು ಕೈಗೆ ಅರ್ಘ್ಯವನ್ನರ್ಪಿಸಿದ ತರುವಾಯ ಅವನಿಗೆ ಹಾಲು, ಮೊಸರು, ಹಣ್ಣು, ಜೇನುತುಪ್ಪ ಮತ್ತು ತುಪ್ಪ ಬೆರೆಸಿದ ಮಧುಪರ್ಕವನ್ನು ಅರ್ಪಿಸಬೇಕು. ಅನಂತರ ಅವನಿಗಾಗಿ ಒಂದು ಹಸುವಿನ ಕರುವನ್ನು ಕೊಂದು ಅದರಿಂದ ಮಾಡಿದ ಭಕ್ಷ್ಯವನ್ನು ಬಡಿಸುತ್ತಿದ್ದರು. ಅತಿಥಿ ಕರುವನ್ನು ಕೊಲ್ಲುವುದು ಬೇಡವೆಂದರೆ ಬೇರೆಯ ಮಾಂಸದಿಂದ ಮಾಡಿದ ಭಕ್ಷ್ಯಗಳನ್ನು ಬಡಿಸುತ್ತಿದ್ದರು.

ಕುಟುಂಬದವರು ಆಚರಿಸುವ ಕರ್ಮಗಳಲ್ಲಿ ಮನೆ ಕಟ್ಟುವ ಮೊದಲಲ್ಲಿ ಮತ್ತು ಗೃಹಪ್ರವೇಶದ ಕಾಲದಲ್ಲಿ ಮಾಡುವ ಕರ್ಮಗಳು ಬಹುಮುಖ್ಯವಾದುವು. ಮನೆಕಟ್ಟುವ ಸ್ಥಳದ ಸುತ್ತಿನಲ್ಲಿ ಅಶ್ವತ್ಥ, ಬೇವು ಮುಂತಾದ ಗಿಡಗಳಿರಕೂಡದು. ಮನೆಯ ಸುತ್ತ ನೀರು ಹರಿಸಲು ಅನುಕೂಲವಿರಬೇಕು. ಪಾಯವನ್ನು ತೆಗೆಯುವಾಗ ಭೂ ದೇವತೆಗೆ ಪೂಜೆ ಸಲ್ಲಿಸಬೇಕು. ಗೋಡೆಗಳನ್ನು ಕಟ್ಟುವ ಮುಂಚೆ ಒಂದು ಕಲ್ಲಿಗೆ ಅಭಿಷೇಕ ಮಾಡಿ, ಅದನ್ನು ಪಾಯದಲ್ಲಿ ಹುದುಗಿಸಬೇಕು. ಮನೆಯ ಭಾಗಗಳನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಬೇಕು. ಅಡುಗೆಯ ಮನೆಯಿಂದ, ನೀರುಮನೆಯಿಂದ ನೀರು ಹೊರಕ್ಕೆ ಹೋಗಲು ಅನುಕೂಲವಿರಬೇಕು. ನಡುಮನೆ ಉತ್ತರ ದಿಕ್ಕಿಗಿರಬೇಕು. ತಲೆ ಬಾಗಿಲು ಪಶ್ಚಿಮಕ್ಕಿರಬೇಕು. ಅಗ್ನಿಹೋತ್ರ ಮುಂತಾದ ಕರ್ಮಗಳನ್ನು ಮಾಡಲು, ಊಟ ಮಾಡಲು ಒಂದು ಮರೆಯಾದ ಕೋಣೆ ಇರಬೇಕು.

ಮನೆಯನ್ನು ಕಟ್ಟಿ ಮುಗಿಸಿದ ಮೇಲೆ ದೇವತೆಯಾದ ವಾಸ್ತೋಷ್ಪತಿಗೂ ಹತ್ತು ದಿಕ್ಕುಗಳಿಗೂ ಬಲಿ ಅರ್ಪಿಸಬೇಕು. ಗೃಹಪ್ರವೇಶ ಮಾಡಿದ ಮೇಲೆ ಪ್ರತಿವರ್ಷವೂ ಆ ದೇವತೆಗೆ ಬಲಿ ಕೊಡುವುದುಂಟು. ಗೃಹ ಪ್ರವೇಶದ ಕಾಲದಲ್ಲಿ ಸಂತರ್ಪಣೆ ನಡೆಸುವುದು ಅತ್ಯಗತ್ಯ. ಮನೆ ಕಟ್ಟಿದಾಗ ನಡೆಸಿದಂತೆಯೇ ಒಂದು ತೋಪನ್ನು ನಿರ್ಮಿಸಿದಾಗಲೂ ಬಾವಿ, ಕೊಳ, ಕಟ್ಟೆ, ಕೆರೆಗಳನ್ನು ಕಟ್ಟಿದಾಗಲೂ ವರುಣ ದೇವತೆಗೆ ಬಲಿಯನ್ನು ಅರ್ಪಿಸಬೇಕು.

ಉಳುಮೆಯ ಕಾಲದಲ್ಲೂ ಬಿತ್ತನೆಯ ಕಾಲದಲ್ಲೂ ಫಸಲನ್ನು ಕಣ ಮಾಡುವ ಕಾಲದಲ್ಲೂ ಬಲಿ ಅರ್ಪಿಸುತ್ತಿದ್ದುದು ಸಾಮಾನ್ಯ. ಇಲಿಗಳ ದೇವತೆಗಳಿಗೂ ತಪ್ಪದೆ ಬಲಿ ಅರ್ಪಿಸುತ್ತಿದ್ದರು. ದನಗಳಿಗೆ ರಕ್ಷಣೆ ದೊರೆಯಲೆಂದು ಅವುಗಳ ಸಂತಾನ ವರ್ಧಿಸಲೆಂದು ವರ್ಷವರ್ಷವೂ ದೇವತೆಗಳಿಗೆ ಬಲಿ ಅರ್ಪಿಸುತ್ತಿದ್ದರು. ಕಾರ್ತೀಕ ಮಾಸದಲ್ಲಿ ಊರಿಗೊಂದು ಗೂಳಿಯನ್ನು ಬಿಡುವ ಸಂಪ್ರದಾಯವಿತ್ತು. ಪ್ರಸಿದ್ಧರಾದ ಗುರುಗಳಿಗೆ ಮತ್ತು ಹಿರಿಯರಿಗಾಗಿ ಏರ್ಪಡಿಸಿದ್ದ ಸ್ಮಾರಕ ಪ್ರದೇಶಗಳಲ್ಲಿ ವರ್ಷವರ್ಷವೂ ಬಲಿಯನ್ನರ್ಪಿಸುವುದು ರೂಢಿಯಲ್ಲಿತ್ತು.

ಗೃಹಸ್ಥರು ನಡೆಸಬೇಕಾದ ಕರ್ಮಗಳಲ್ಲಿ ಜಾತಕರ್ಮ, ನಾಮಕರಣ, ಚೌಲ, ಉಪನಯನ, ವಿವಾಹ ಮತ್ತು ಅಂತ್ಯಕ್ರಿಯೆಗಳು ಮುಖ್ಯವಾದುವು. ನಾಮಕರಣದ ಕಾಲದಲ್ಲಿ ಪ್ರತಿಯೊಂದು ಮಗುವಿಗೂ ಎರಡು ಹೆಸರುಗಳನ್ನು ಕೊಡುತ್ತಿದ್ದರು. ಒಂದು ಹೆಸರು ತಂದೆ ತಾಯಿಗೆ ಮಾತ್ರ ತಿಳಿದ ಹೆಸರು. ಇದನ್ನು ಬಹುಗೋಪ್ಯವಾಗಿ ಕಾದಿಟ್ಟುಕೊಂಡಿರುತ್ತಿದ್ದರು. ಇದೇ ಮಗುವಿನ ನಿಜವಾದ ಹೆಸರು. ಈ ಹೆಸರಿನಲ್ಲಿ ಮಾಟ ಮುಂತಾದವುಗಳನ್ನು ಮಾಡಿದಾಗಲೇ ಆ ಮಗುವಿಗೆ ಅಪಾಯ ಉಂಟಾಗುತ್ತಿತ್ತಾದ ಕಾರಣ ಅವರು ಅದನ್ನು ಬಹಿರಂಗಪಡಿಸುತ್ತಿರಲಿಲ್ಲ. ಎರಡನೆಯ ಹೆಸರು ವ್ಯಾವಹಾರಿಕವಾದದ್ದು.

ಚೌಲವನ್ನು ಬ್ರಾಹ್ಮಣರು ಮಗುವಿನ ಮೂರನೆಯ ವರ್ಷದಲ್ಲೂ ಕ್ಷತ್ರಿಯರು ಐದನೆಯ ವಯಸ್ಸಿನಲ್ಲೂ ವೈಶ್ಯರು ಏಳನೆಯ ವಯಸ್ಸಿನಲ್ಲೂ ನಡೆಸುತ್ತಿದ್ದರು. ಅವರವರ ಮನೆತನದ ಸಂಪ್ರದಾಯಕ್ಕನುಗುಣವಾಗಿ ಕೂದಲನ್ನು ಬಿಡಿಸುತ್ತಿದ್ದರು. ತಮ್ಮ ಪ್ರವರದಲ್ಲಿ ಎಷ್ಟು ಋಷಿಗಳನ್ನು ಸೇರಿಸಿಕೊಂಡಿದ್ದಾರೋ ಆ ಸಂಖ್ಯೆಗೆ ಅನುಗುಣವಾಗಿ ಕೂದಲನ್ನು ಬಿಡಿಸಿ ಗಂಟು ಹಾಕುತ್ತಿದ್ದರು. ಬ್ರಾಹ್ಮಣರು ಬಾಲಕನ ಎಂಟನೆಯ ವಯಸ್ಸಿನಲ್ಲೂ ಕ್ಷತ್ರಿಯರು ಹನ್ನೊಂದನೆಯ ವಯಸ್ಸಿನಲ್ಲೂ ವೈಶ್ಯರು ಹನ್ನೆರಡನೆಯ ವಯಸ್ಸಿನಲ್ಲೂ ಉಪನಯನವನ್ನು ನಡೆಸುತ್ತಿದ್ದರು. ಬ್ರಾಹ್ಮಣರು ಹದಿನಾರು ವರ್ಷಗಳೊಳಗೆ, ಕ್ಷತ್ರಿಯರು ಇಪ್ಪತ್ತೈದು ವರ್ಷಗಳೊಳಗೆ, ವೈಶ್ಯರು 24ನೆಯ ವರ್ಷಗಳೊಳಗೆ ಉಪನಯನ ಮಾಡಬೇಕು. ಹಾಗೆ ಉಪನಯನವಾಗದವ ಕರ್ಮಭ್ರಷ್ಟನಾಗಿ ಕುಲದಲ್ಲಿನ ತನ್ನ ದರ್ಜೆಯನ್ನು ಕಳೆದುಕೊಳ್ಳುತ್ತಿದ್ದ. ಉಪನಯನ ಪ್ರತಿಯೊಬ್ಬನ ಹೊಸ ಹುಟ್ಟಿಗೆ ದಾರಿ. ಒಬ್ಬೊಬ್ಬನೂ ವಿದ್ಯೆಯ ಮೂಲಕ ರೂಪಿಸಿಕೊಂಡ ಆತ್ಮನೇ ಅವನ ನಿಜವಾದ ಆತ್ಮ. ವಿದ್ಯಾಭ್ಯಾಸ ಮುಗಿಸಿದ ಮೇಲೆ ಸ್ನಾತಕನಾಗಿ ಹೊಸ ರೀತಿಯ ಉಡುಪನ್ನು ತೊಡುತ್ತಿದ್ದ. ದೇಹವನ್ನು ಅಲಂಕರಿಸಿಕೊಳ್ಳುತ್ತಿದ್ದ. ದೇಹಕಾಂತಿ ಕೆಡದಂತೆ ಅದನ್ನು ಮಳೆಬಿಸಿಲುಗಳಿಂದ ರಕ್ಷಿಸಿಕೊಳ್ಳುತ್ತಿದ್ದ. ಕಾಲಿಗೆ ಅಪಾಯವಾಗದಂತೆ ಪಾದರಕ್ಷೆಯನ್ನು ಮೆಟ್ಟುತ್ತಿದ್ದ.

ಇಂಥವ ಗೃಹಸ್ಥನಾಗಲು ತನ್ನ ಗುರುಹಿರಿಯರು, ಮಾತಾಪಿತೃಗಳ ಒಪ್ಪಿಗೆ ಪಡೆದು ಅವರ ನೆರವಿನಿಂದ ಕನ್ಯೆಯನ್ನು ಪಡೆಯಬಹುದಾಗಿತ್ತು. ಕ್ಷತ್ರಿಯನಿಗೆ ಗಂಧರ್ವ ಅಥವಾ ಸ್ವಯಂವರ ರೀತಿಯ ವಿವಾಹ ಶ್ರೇಷ್ಠ. ವೈಶ್ಯ ತನ್ನ ಐಶ್ವರ್ಯದಿಂದ ಕನ್ಯೆಯನ್ನು ಪಡೆಯಬಹುದು. ಇದು ಎಲ್ಲಕ್ಕಿಂತಲೂ ಕೆಳದರ್ಜೆಯ ವಿವಾಹ ಕ್ರಮ. ಬ್ರಾಹ್ಮಣ ತನ್ನ ವರ್ಣದ ಕನ್ಯೆಯನ್ನಲ್ಲದೆ ಕ್ಷತ್ರಿಯ, ವೈಶ್ಯ ಅಥವಾ ಶೂದ್ರ ಕನ್ಯೆಯೊಬ್ಬಳನ್ನು ಮದುವೆಯಾಗಲೂ ಅವಕಾಶವಿತ್ತು. ಕ್ಷತ್ರಿಯ ತನ್ನ ವರ್ಣದವಳ ಜೊತೆಗೆ, ವೈಶ್ಯ ಅಥವಾ ಶೂದ್ರ ವರ್ಣದ ಕನ್ಯೆಯನ್ನು ಪಡೆಯಬಹುದಾಗಿತ್ತು. ವೈಶ್ಯ ತನ್ನ ವರ್ಣದ ಕನ್ಯೆಯನ್ನಲ್ಲದೆ ಶೂದ್ರ ಕನ್ಯೆಯೊಬ್ಬಳನ್ನು ಪಡೆಯಬಹುದಾಗಿತ್ತು. ವಿವಾಹ ಹೆಣ್ಣಿನ ಮನೆಯಲ್ಲಿ ನಡೆಯುವ ಸಂಪ್ರದಾಯವಿತ್ತು. ಈ ಸಂದರ್ಭದಲ್ಲಿ ಹೆಣ್ಣಿನ ಮನೆಯ ನಾಲ್ಕು ಅಥವಾ ಎಂಟು ಸುಮಂಗಲಿಯರು ಹೆಣ್ಣು ಗಂಡುಗಳ ಸುತ್ತ ನರ್ತನ ಮಾಡುತ್ತಿದ್ದುದು ಗಮನಾರ್ಹ ವಿಷಯ. ಅವರಿಗೆ ವರನ ಕಡೆಯವರು ಉಡುಗೊರೆ ಅಥವಾ ಸುವರ್ಣವನ್ನು ಕೊಡುತ್ತಿದ್ದರು. ಮದುವೆಯಾದ ಅನಂತರ ಹೆಣ್ಣನ್ನು ಗಂಡನ ಮನೆಗೆ ಕರೆದುಕೊಂಡು ಬಂದು ಮದುವೆಯಾದ ನಾಲ್ಕನೆಯ ದಿನ ನಿಷೇಕವನ್ನು ಏರ್ಪಡಿಸುತ್ತಿದ್ದರು.

ಮದುವೆಯಾದ ಹೆಣ್ಣು ತನ್ನ ಮಾವನ ಮತ್ತು ಗಂಡನ ಮನೆಯನ್ನು ಸೇರಿದಾಗ ಆ ಮನೆಯ ಯಜಮಾನಿಯಾಗುತ್ತಿದ್ದಳು; ಮಾವನಿಗೂ ನಾದಿನಿಗೂ ಮೈದುನನಿಗೂ ಒಡತಿಯಾಗುತ್ತಿದ್ದಳು. ಮುದಿತನದವರೆಗೂ ಗಂಡನೊಡನೆ ಬಾಳಬೇಕೆಂಬುದು ಅವಳ ಮಹದಾಶಯ. ಹತ್ತು ಗಂಡುಮಕ್ಕಳನ್ನು ಪಡೆದ ಮೇಲೆ ಅವಳು ತನ್ನ ಗಂಡನನ್ನು ಹನ್ನೊಂದನೆಯ ಮಗುವಿನಂತೆ ಪಾಲಿಸಿ ಪೋಷಿಸುವಂತಾಗಲೆಂದು ಇಂದ್ರನನ್ನು ಪ್ರಾರ್ಥಿಸುವ ಒಂದು ಮಂತ್ರವಿದೆ. ಒಟ್ಟಿನಲ್ಲಿ ಋಗ್ವೇದ ಕಾಲದ ಕುಟುಂಬ ಜೀವನ ಆಶಾಪೂರ್ಣವಾದದ್ದು. ಒಂದು ರೀತಿಯಲ್ಲಿ ಅದು ತುಂಬುಜೀವನ; ಹಾಡು, ನೃತ್ಯದಿಂದ ತುಂಬಿದ ಜೀವನ. ಮದುವೆಯ ಕಾಲದಲ್ಲಿ ನೃತ್ಯ ಅದರ ಒಂದು ಮುಖ್ಯ ಅಂಗವಾಗಿತ್ತೆಂಬುದನ್ನು ಗಮನಿಸಿದ್ದೇವೆ. ಈ ಕಲೆಗಳು ಕುಟುಂಬದ ಹೆಣ್ಣುಮಕ್ಕಳ ದಿನಚರಿಯ ವಿನೋದಗಳಾಗಿದ್ದವು. ಕವನಗಳನ್ನು ಕಟ್ಟುವುದು, ಹಾಡುಗಳನ್ನು ಹಾಡುವುದು ತನ್ನ ಮನೆಯ ಒಂದು ಕಸಬೆಂದು ಋಗ್ವೇದದ ಒಂದು ಸೂಕ್ತದಲ್ಲಿ ಒಬ್ಬ ಹೇಳಿಕೊಂಡಿದ್ದಾನೆ. ನೃತ್ಯ ಕೇವಲ ಹೆಣ್ಣುಮಕ್ಕಳ ವಿನೋದ ಮಾತ್ರವಾಗಿರಲಿಲ್ಲ. ಗಂಡಸರೂ ಕೋಲಿನ ನೃತ್ಯದಲ್ಲಿ ಭಾಗವಹಿಸುತ್ತಿದ್ದರು. ನಾಟ್ಯಮಾಡುವ ಗಂಡಸನ್ನು ನೃತನೆಂದೂ ಹೆಣ್ಣನ್ನೂ ನೃತುವೆಂದೂ ಕರೆಯುತ್ತಿದ್ದರು. ಹೆಂಗಸರು ಜರಿಯ ಸೀರೆಯನ್ನುಟ್ಟು ಕಂಚುಕವನ್ನು ಧರಿಸದೆ ನರ್ತಿಸುತ್ತಿದ್ದರು. ಹಾಸ್ಯರೂಪವಾದ ನೃತ್ಯವೂ ರೂಢಿಯಲ್ಲಿತ್ತು.

ಋಗ್ವೇದ ಪದ್ಯಗಳು ಬಹುತೇಕ ದೇವತೆಗಳ ಸ್ತೋತ್ರಕ್ಕೆ ಮೀಸಲಾಗಿದ್ದರೂ ಕೆಲವು ಸ್ತೋತ್ರಗಳು ಕೇವಲ ವಿವರಣೆಗಳಾಗಿರದೆ, ಭಾವಪ್ರದವಾಗಿಯೂ ವರ್ಣಯುಕ್ತವಾಗಿಯೂ ಇವೆ. ಉಷಸ್ಸನ್ನು ವರ್ಣಿಸುವ ಸ್ತೋತ್ರಗಳು ಕಾವ್ಯದಂತೆ ರಮ್ಯವಾಗಿವೆ. ಜೂಜುಗಾರನ ಅಳಲು ಎಂಬ ಒಂದು ಮಂತ್ರ ಇಂದಿನ ಭಾವಗೀತೆಯನ್ನು ಹೋಲುತ್ತದೆ. ಇವುಗಳ ಛಂದಸ್ಸಿನಲ್ಲಿ ಇರುವ ಕಾವ್ಯಬಲ ಅದ್ಭುತವಾದದ್ದು. ಕೇವಲ ಶಬ್ದದಿಂದಲೇ ಅತಿಶಯ ಭಾವಪ್ರಕಾಶನ ಮಾಡುವ ಶಕ್ತಿ ಬಹುಶಃ ಅನೇಕ ಕಾವ್ಯಗಳಲ್ಲಿ ಕೂಡ ಇರುವುದಿಲ್ಲ. ಇವುಗಳಲ್ಲದೆ ಲೋಕಾನುಭವಗರ್ಭಿತವಾದ ಪದ್ಯಗಳೂ ಹಾಡುಗಳೂ ವೇದದ ಕಾಲದಲ್ಲಿ ಯಥೇಚ್ಛವಾಗಿ ಇವೆ. ವಿವಾಹ ಕಾಲದಲ್ಲಿ ಹೆಂಗಸರು ಹಾಡುಗಳನ್ನು ಹೇಳುತ್ತಿದ್ದರು. ಅಶ್ವಮೇಧದ ಕಾಲದಲ್ಲಿ ಪುರೋಹಿತರು ನಾಲ್ಕು ದಿವಸಗಳ ಕಾಲ ಕೆಲವು ವೇಳೆ ಒಂದು ವರ್ಷದ ಪರ್ಯಂತ ಹಿಂದಿನ ರಾಜರ ಕಥೆಗಳನ್ನು ಹೇಳುತ್ತಿದ್ದರು. ಇವಕ್ಕೆ ಪರಿಪಾಲ್ಯ ಆಖ್ಯಾಯನಗಳೆಂದು ಹೆಸರು. ರಾಜವಂಶದವನೊಬ್ಬ ತಾನೇ ಕಟ್ಟಿದ ಮೂರು ಗಾಥೆಗಳನ್ನು ತಂತಿ ವಾದ್ಯದ ಶ್ರುತಿಗೆ ಸೇರಿದಂತೆ ಹಾಡುತ್ತಿದ್ದ. ಅಂಥ ಸಾಹಿತ್ಯ ಜನರ ಬಾಯಿಯಲ್ಲಿ ಮಾತ್ರ ಜೀವಂತವಾಗಿದ್ದ

ಸಾಹಿತ್ಯ. ಅವುಗಳ ಆಯಸ್ಸು ಒಂದೆರಡು ತಲೆಮಾರುಗಳಿಗೆ ನಿಗದಿಯಾದದ್ದು. ಬರೆವಣಿಗೆ ಮತ್ತು ಅಚ್ಚಿನ ಸೌಕರ್ಯವಿರುವ ಈಗಿನ ಕಾಲದಲ್ಲೂ ಜನ ಕಟ್ಟಿದ ಕಥೆಗಳಲ್ಲಿ ಹಾಡುಗಳಲ್ಲಿ ಮತ್ತು ಕವನಗಳಲ್ಲಿ ಉಳಿಯುವವು ಬಹು ಸ್ವಲ್ಪ.

ಋಗ್ವೇದದಲ್ಲಿ ಕೆಲವು ಸಂಭಾಷಣಾ ರೂಪದ ಸೂಕ್ತಗಳಿವೆ. ಅವುಗಳಲ್ಲಿ ಪ್ರಸಿದ್ಧವಾದುದು ಊರ್ವಶಿ-ಪುರೂರವರದು. ಇದೇ ನಾಟಕಪ್ರಕಾರದ ಮೂಲವಾಗಿ ತೋರುತ್ತದೆ. ಯಜುರ್ವೇದದ ಕಾಲಕ್ಕಾಗಲೆ ನಾಟಕ, ನಾಟ್ಯಗಳನ್ನು ವೃತ್ತಿಯಾಗುಳ್ಳ ನಟರ ವರ್ಗವೊಂದು ಸೃಷ್ಟಿಯಾಗಿತ್ತು.

ಋಗ್ವೇದದಲ್ಲಿ ಹೆಸರಿಸಿರುವ ಮೂವತ್ತು ಕಲೆಗಳಲ್ಲಿ ಹಾಡು, ಕವಿತೆ, ನೃತ್ಯ, ಗೀತ, ವೇಣುವಾದನ, ಶಂಖನಾದ, ಕೊಂಬನ್ನು ಊದುವುದು, ನಗಾರಿ ಬಾರಿಸುವುದು, ಕೋಲಾಟ, ವಾಸ್ತುಶಿಲ್ಪ-ಇವು ಮುಖ್ಯವಾದುವು. ಇವುಗಳಲ್ಲದೆ ರತ್ನ ಮತ್ತು ಚಿನ್ನದ ಒಡವೆಗಳನ್ನು ಮಾಡುವುದು, ಜರತಾರಿ ಬಟ್ಟೆಗಳನ್ನು ನೇಯುವುದು, ಕಸೂತಿ ಕೆಲಸ, ಹೂ ಕಟ್ಟುವುದು, ಕಾಡಿಗೆ ಮಾಡುವುದು, ರಥಗಳ ನಿರ್ಮಾಣ, ಹಗ್ಗ ಹೊಸೆಯುವುದು, ಚರ್ಮವನ್ನು ಹದ ಮಾಡಿ ಹೊಲೆಯುವುದು, ಕಮ್ಮಾರನ ಮತ್ತು ಕುಂಬಾರನ ಕಲೆ, ಬಿಲ್ಲನ್ನು ತಯಾರಿಸುವುದು, ಕುದುರೆಯನ್ನು ಪಳಗಿಸುವುದು ಮುಂತಾದ ಉಪಯುಕ್ತ ಕಲೆಗಳು ವಿಶೇಷವಾಗಿ ಪ್ರಚಾರದಲ್ಲಿದ್ದವು. ಸಂಗೀತಕ್ಕಾಗಿ ಉಪಯೋಗಿಸುತ್ತಿದ್ದ ವಾದ್ಯಗಳು ಮೂರು-ಮೃದಂಗ, ಕೊಳಲು, ಕರ್ಕರಿ ಎಂಬ ತಂತಿ ವಾದ್ಯ. ಆಗಿನ ಕಾಲದವರಿಗೆ ಏಳು ಸ್ವರಗಳೂ ಮತ್ತು ಅವುಗಳ ಆರೋಹಣ ಅವರೋಹಣ ವಿಧಾನವೂ ತಿಳಿದಿತ್ತೆಂದು ಹೇಳಬಹುದು.

**ರಾಜ, ರಾಜ್ಯವ್ಯವಸ್ಥೆ:** ವೇದಕಾಲದಲ್ಲಿ ರಾಜಕೀಯ ಪರಿಸ್ಥಿತಿ ಹೇಗಿತ್ತು ಎಂಬುದನ್ನು ನಿರ್ದಿಷ್ಟವಾಗಿ ತಿಳಿಯುವುದು ಕಷ್ಟ ಏಕೆಂದರೆ ಇದನ್ನು ಉಲ್ಲೇಖಿಸಬೇಕೆಂಬುದು ವೇದಕರ್ತೃಗಳ ಉದ್ದೇಶವಾಗಿರಲಿಲ್ಲ. ಆದ್ದರಿಂದ ಅಲ್ಲಲ್ಲಿ ಪ್ರಾಸಂಗಿಕವಾಗಿ ಬರುವ ಕೆಲವು ಸೂಚನೆಗಳಿಂದ ಈ ವಿಷಯಗಳನ್ನು ತಿಳಿಯಬಹುದಾಗಿದೆ. ಜನ, ವಿಶಃ, ಗ್ರಾಮ- ಈ ಮೂರು ಅಂದಿನ ರಾಜ್ಯದ ಮುಖ್ಯ ವಿಭಾಗಗಳಾಗಿದ್ದುವು. ಜನ ಎಂದರೆ ಇಡೀ ರಾಜ್ಯದ ಪ್ರಜೆಗಳು. ಬೇರೆ ಬೇರೆ ಸಜಾತರ ಗುಂಪಿಗೆ ವಿಶಃ ಎಂಬ ಹೆಸರಿದ್ದಿರಬಹುದು. ವಿಶರು ಎಂದರೆ ಯೋಧಪತಿಗಳು, ವಿಶಃಪತಿ ಎಂದರೆ ಸೈನ್ಯಾಧಿಪತಿ ಎಂದು ಅರ್ಥೈಸುವವರೂ ಇದ್ದಾರೆ. ವಿಶರ ಗುಂಪಿಗಿಂತ ಸಣ್ಣದು ಗ್ರಾಮ, ಹಲವು ಸಂಸಾರಗಳಿಂದ ಕೂಡಿದ್ದು. ಇವರೆಲ್ಲರೂ ಸಜಾತರೋ ಅಲ್ಲವೋ ಎಂಬುದು ಖಚಿತವಾಗಿ ತಿಳಿಯದು. ಗ್ರಾಮಣಿಗಳು ಎಂದರೆ ಗ್ರಾಮನಾಯಕರ ಸಜಾತರು. ಸಮಾನದ ಒಪ್ಪಿಗೆಯಿಂದ ಆಯ್ದು ಬಂದವರು ಎಂದು ಕೆಲವು ಕಡೆ ಹೇಳಿದೆ. ಸಂಸಾರದ ಮುಖ್ಯಸ್ಥನೇ ಕುಲಪ. ಜನರನ್ನು ಉಲ್ಲೇಖಿಸುವಾಗ ಅನು, ಪುರು, ದ್ರುಹ್ಯು, ಯದು, ತುರ್ವಶ, ಭರತರು, ಮದ್ರರು, ಯಾದವರು- ಮುಂತಾದ ಪುರಾಣ ಪ್ರಸಿದ್ಧರ ಹೆಸರುಗಳು ಬರುತ್ತವೆ. ಸಾಮಾನ್ಯವಾಗಿ ಒಂದೊಂದೂ ಜನಕ್ಕೂ ಒಬ್ಬೊಬ್ಬ ರಾಜನಿದ್ದ. ಅಲ್ಲಲ್ಲಿ ಅನೇಕ ರಾಜಮನೆತನಗಳನ್ನು ಹೆಸರಿಸಲಾಗಿದೆ. ರಾಜರಲ್ಲಿ ಮೊದಲನೆಯವ ಮನು. ಅನಂತರ ಇಕ್ಷ್ವಾಕು, ಪುರೂರವ, ಇಲಾ, ಪುರು-ಹೀಗೆ ಮನುವಂಶಪರಂಪರೆ ಬೆಳೆದಿದೆ. ರಾಜತ್ವ ಹೇಗೆ ಹುಟ್ಟಿತು ಎಂಬ ಪ್ರಶ್ನೆಗಳಿಗೆ ಸೂಕ್ತಗಳಲ್ಲಿ ಸ್ಪಷ್ಟ ಉತ್ತರ ದೊರೆಯುತ್ತದೆ. ದೇವತೆಗಳು ನಾಯಕನಿಲ್ಲದೆ ತಮಗೆ ಮತ್ತೆ ಮತ್ತೆ ಸೋಲಾಗುತ್ತಿದೆಯೆಂದು ತಿಳಿದಮೇಲೆ ಇಂದ್ರನನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡು ವಿಜಯಿಗಳಾದರು. ಆರ್ಯರು ಮನುವನ್ನು ತಮ್ಮ ರಾಜನನ್ನಾಗಿ ಪಡೆದಾಗ ಅವರಿಗೆ ಯುದ್ಧದಲ್ಲಿ ಜಯ ಲಭಿಸಿತು. ಹೀಗೆ ಯುದ್ಧದ ಫಲವಾಗಿ ರಾಜತ್ವ ಹುಟ್ಟಿತೆಂದು ತೋರುತ್ತದೆ. ರಾಜತ್ವ ವಂಶಪಾರಂಪರ್ಯವೇ ಎಂಬ ವಿಷಯದಲ್ಲಿ ಎರಡು ಅಭಿಪ್ರಾಯಗಳಿವೆ. ಅವನು ಜನರಿಂದ ಆಯ್ಕೆಯಾಗಿ ರಾಜನಾಗುತ್ತಿದ್ದನೆಂದೂ ವಂಶಪಾರಂಪರ್ಯವಾಗಿ ಅವನಿಗೆ ಪಟ್ಟ ಲಭಿಸುತ್ತಿತ್ತೆಂದೂ ಹೇಳಲಾಗಿದೆ. ಋಗ್ವೇದ ಕಾಲದಲ್ಲಿ ರಾಜನ ಆಯ್ಕೆ ಬಳಕೆಯಲ್ಲಿತ್ತೆಂದು ಕಾಣುತ್ತದೆ. ರಾಜನಾದ ಮೇಲೆ ಆತ ತನ್ನ ಕೆಲಸವನ್ನು ನೆರವೇರಿಸಲು ಸಭೆ ಮತ್ತು ಸಮಿತಿಗಳ ನೆರವನ್ನು ಪಡೆಯುತ್ತಿದ್ದಂತೆ ಕೆಲವು ಸೂಕ್ತಗಳಲ್ಲಿ ಸೂಚನೆಯಿದೆ. ಇಲ್ಲಿ ಸಭೆಯೆಂದರೆ ಹಳ್ಳಿಯ ಜನರ ಸಭೆಯೆಂದು ಜಿಮ್ಮರ್ ಎಂಬ ಪಂಡಿತ ಅಭಿಪ್ರಾಯಪಡುತ್ತಾನಾದರೂ ಲಡ್ವಿಗ್ ಎಂಬ ಇನ್ನೊಬ್ಬ ಪಂಡಿತ ಅದು ಶ್ರೀಮಂತರ ಸಭೆ ಎಂದು ಹೇಳಿರುವ ಅಭಿಪ್ರಾಯ ಗ್ರಾಹ್ಯವಾಗಿದೆ. ಅದು ಋಗ್ವೇದ ಕಾಲದಲ್ಲಿ ಗೌರವಸ್ಥರ, ಪ್ರಮುಖರ ಸಭೆಯಾಗಿದ್ದಿರಬೇಕು. ಬಹುಶಃ ರಾಜ್ಯಾಭಿಷೇಕ ಕಾಲದಲ್ಲಿ, ದೇಶಕ್ಕೆ ವಿಪತ್ತು ಉಂಟಾದ ಕಾಲದಲ್ಲಿ ಇಡೀ ಜನರ ಯೋಗಕ್ಷೇಮವನ್ನು ಕುರಿತು ಮಂತ್ರಾಲೋಚನೆ ನಡೆಸಬೇಕಾದ ಸಮಯದಲ್ಲಿ ಸಮಿತಿ ಸೇರುತ್ತಿತ್ತೆಂದು ತೋರುತ್ತದೆ. ಯುದ್ಧ ಕಾಲದಲ್ಲಂತೂ ಇದು ಅತಿ ಮುಖ್ಯವಾಗುತ್ತಿತ್ತು. ರಾಜನ ಪ್ರಾಬಲ್ಯ ಹೆಚ್ಚಿದಂತೆಲ್ಲ ಸಮಿತಿಯ ಪ್ರಾಮುಖ್ಯ ಕಡಿಮೆಯಾಗಿರಬೇಕು. ಮೊದಮೊದಲು ದಸ್ಯುಗಳೊಡನೆ ಹೋರಾಟ ತೀವ್ರವಾಗಿದ್ದ ಕಾಲದಲ್ಲಿ ಆರ್ಯರಲ್ಲಿ ಅಂತಃಕಲಹವಿರಲಿಲ್ಲವೆಂದು ತೋರುತ್ತದೆ. ಶತ್ರುದಮನ ಪೂರ್ಣವಾಗಿ, ಶಾಂತಿ ಏರ್ಪಟ್ಟಾಗ ಮುಖಂಡತ್ವದ ವಿಚಾರದಲ್ಲಿ ಒಳಜಗಳಗಳು ಪ್ರಾರಂಭವಾಗಿರಬೇಕು. ಆಗ ರಾಜನನ್ನು ಆಯ್ಕೆ ಮಾಡುವ ವಿಧಾನವನ್ನು ಕೈಬಿಟ್ಟು ವಂಶಪಾರಂಪರ್ಯವಾಗಿ ಅದನ್ನು ನಡೆಸಿಕೊಂಡು ಬರುವ ಕ್ರಮ ಏರ್ಪಟ್ಟಿರಬೇಕು. ಹಾಗಾದಾಗ ರಾಜನ ಮಹಿಮೆಗೆ ಮತ್ತು ಅಧಿಕಾರಕ್ಕೆ ಜನರ ಬೆಂಬಲಕ್ಕಿಂತಲೂ ದೇವತೆಗಳ ಆಶೀರ್ವಾದ ಮುಖ್ಯವಾಗುತ್ತ ಬಂದಿರಬೇಕು. ಆಗ ಪುರೋಹಿತ ವರ್ಗ ಪ್ರಾಮುಖ್ಯವನ್ನು ಪಡೆಯಿತೆಂದು ಕಾಣುತ್ತದೆ. ಪುರೋಹಿತ ರಾಜರಲ್ಲಿ ಅಗ್ನಿ, ಸೋಮ, ವನಸ್ಪತಿ, ಬೃಹಸ್ಪತಿ, ರುದ್ರ, ವರುಣ, ಮಿತ್ರಾವರುಣ ಮುಂತಾದ ದೇವತೆಗಳ ಶಕ್ತಿಗಳನ್ನೆಲ್ಲ ಆವಾಹನೆ ಮಾಡುತ್ತಾನೆ. ಆಗ ರಾಜ ಇಂದ್ರ ಸಮಾನನಾಗುತ್ತಾನೆ. ಮುಂದೆ ಪುರೋಹಿತನ ಬೆಂಬಲದಿಂದಲೂ ಯಜ್ಞಯಾಗಾದಿಗಳಿಂದಲೂ ಪೂತನಾಗಿ ದೇವತೆಯೇ ಆಗುತ್ತಾನೆ. ಸಾಮ್ರಾಜ್ಯದಾಹ ಮತ್ತು ನಿರಂಕುಶ ಪ್ರಭುತ್ವದ ಪ್ರತಿಷ್ಠೆಗಳು ಅವನಲ್ಲಿ ಹುಟ್ಟಿಕೊಳ್ಳುತ್ತವೆ. ಹಾಗಾದರೂ ಬ್ರಾಹ್ಮಣರು ರಾಜನ ಅಧೀನರಾಗದೆ ಸೋಮದೇವತೆಯನ್ನು ತಮ್ಮ ಪ್ರಭುವನ್ನಾಗಿ ಮಾಡಿಕೊಳ್ಳುತ್ತಾರೆ. ಈ ಪರಿಸ್ಥಿತಿ ಬಹುಕಾಲ ಮುಂದುವರಿಯಿತೆಂದು ಕಾಣುತ್ತದೆ. ಹೀಗೆ ವೇದಗಳಲ್ಲಿ ಅಲ್ಲಲ್ಲಿ ಬರುವ ಸೂಚನೆಗಳಿಂದ ಅಂದಿನ ರಾಜಕೀಯ ಜೀವನ ಹೇಗಿತ್ತೆಂಬುದನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದು. (ಜಿ.ಎಚ್.)

# ಏ

**ಎಂಟುಹಿಟ್ಟು:** ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಶಾಸನಗಳಲ್ಲಿ ಸಂಘಕ್ಕೆ ಪರ್ಯಾಯವಾಗಿ ಕೊತ್ತಳಿ, ಒಕ್ಕಲು, ಸಮಯ, ಹಿಟ್ಟು, ಸಂಖ್ಯೆಗಳು (30, 40, 50, 60, 500, 1000 ಇತ್ಯಾದಿ) ಬಳಕೆಯಾಗಿವೆ. ಇವುಗಳಲ್ಲಿ ಸಂಘಸೂಚಿಯಾಗಿ ಸಂಖ್ಯೆಗಳನ್ನೇ ಅಧಿಕವಾಗಿ ಉಪಯೋಗಿಸಲಾಗಿದೆ. ಅರುವತ್ತೊಕ್ಕಲು, ಐಯ್ವತ್ತೊಕ್ಕಲು, ಅಯ್ಯಾವೊಳೆ ಐನೂರ್ವರು, ಸಾಲಿಗಸಮಯ, ಎಂಟುಹಿಟ್ಟು, ಪಂಚಮಠ ಇವೇ ಮೊದಲಾದವು ಈ ಸಂಘ ಸಂಸ್ಥೆಗಳು. ಈ ಸಂಘ ಸೂಚಿ ಪದಗಳ ಪೂರ್ವಸ್ಥಾನದಲ್ಲಿ ಹೆಚ್ಚಾಗಿ ವೃತ್ತಿಸೂಚಿ ಪದಗಳಿರುತ್ತವೆ. ಉದಾ: ತಂಬುಲಿಗ ಸಾಸಿರ್ವರು, ತೆಲ್ಲಿಗರೈವತ್ತೊಕ್ಕಲು, ಸಾಲಿಗ ಸಮಯ ಇತ್ಯಾದಿ.

ಎಂಟುಹಿಟ್ಟು ಗ್ರಾಮದಲ್ಲಿಯ ಒಂದು ಪ್ರಮುಖ ಸಂಸ್ಥೆ. ಹೆಸರೇ ಸೂಚಿಸುವಂತೆ ಇದರಲ್ಲಿ ಎಂಟು ಜನ ಸದಸ್ಯರಿರುತ್ತಿದ್ದರು. ಇವರಲ್ಲಿ ಮೂವರು ಗ್ರಾಮಾಧಿಕಾರಿಗಳು ಮತ್ತು ಐವರು ಗ್ರಾಮದ ಪಂಚಕಾರುಕರ ಪ್ರತಿನಿಧಿಗಳು. ಮೂವರು ಗ್ರಾಮಾಧಿಕಾರಿಗಳೆಂದರೆ ಪ್ರಭು ಇಲ್ಲವೆ ಊರೊಡೆಯ, ಗೌಡ ಇಲ್ಲವೆ ಹೆಗ್ಗಡೆ-ಇವರಲ್ಲಿ ಒಬ್ಬ, ಸೇನಬೋವ ಮತ್ತು ತಳಾರ. ಪಂಚಕಾರುಕರೆಂದರೆ ಬಡಗಿ, ಕಮ್ಮಾರ, ಅಕ್ಕಸಾಲೆ, ಅಗಸ ಮತ್ತು ಅಂಬಿಗ. ಆದರೆ ಯಾವ ಗ್ರಾಮಗಳಲ್ಲಿ ಅಂಬಿಗನಿರುವುದಿಲ್ಲವೋ ಅಲ್ಲಿ ಅಂಬಿಗನ ಬದಲು ಕುಂಬಾರ, ಕಂಚಗಾರ ಇಲ್ಲವೆ ತತ್ಸಮ ಕರ್ಮಕಾರ ಎಂಟುಹಿಟ್ಟು ಸಮಿತಿಯಲ್ಲಿ ಸಮಾವೇಶವಾಗುತ್ತಿರಬಹುದೆಂದು ಆರ್.ಎನ್.ಗುರವರವರ ಅಭಿಪ್ರಾಯ.

ಫ್ಲೀಟರು ಎಂಟುಹಿಟ್ಟುಎಂಟು ಸಂಸ್ಥೆಗಳಾಗಿರಬೇಕೆಂದು ಊಹಿಸಿದರೆ,ಜಿ.ಎಸ್.ದೀಕ್ಷಿತರು ಇದು ಸ್ಥಾನಿಕ ಆಡಳಿತದ ಅಂಗವಾಗಿದ್ದಿತೆಂದು ಸೂಚಿಸಿದ್ದಾರೆ. ಸಂಸ್ಕೃತದಲ್ಲಿ ಈ ಸಮಿತಿಗೆ ಅಷ್ಟಪಿಷ್ಟ ಎಂದು ಹೆಸರು. ಅಷ್ಟಪಿಷ್ಟಾನ್ ಪಂಚಮಠಾನ್ ಸಂಪೂಜ್ಯ ಪುರಮಧ್ಯತಃ ಎಂದು ಬಿಜಾಪುರ ಶಾಸನವೊಂದರಲ್ಲಿ ಅಷ್ಟಪಿಷ್ಟವನ್ನು ಕುರಿತು ಗೌರವಯುಕ್ತ ಉಲ್ಲೇಖ ಬರುತ್ತದೆ. ಎಂಟುಹಿಟ್ಟು, ಮೂಲಿಗ, ಅಯ್ದುಹುರಿ, ಪರಿಗ್ರಹ ಮುಂತಾದ ಪಾರಿಭಾಷಿಕ ಪದಗಳು ದಾನದತ್ತಿ ಬಿಡುವ ಮತ್ತು ಪ್ರತಿಪಾದಿಸುವ ಸಂದರ್ಭಗಳಲ್ಲಿ ಸ್ಥಾನಮಾನ್ಯರೊಂದಿಗೆ ಉಕ್ತವಾಗಿವೆ. ಎಂಟುಹಿಟ್ಟು ಕೆಲವು ಶಾಸನಗಳಲ್ಲಿ ಹನ್ನಿಹಿಟ್ಟು, ಹಿಟ್ಟು, ಹಿಟ್ಟುದೆರೆ ಎಂದು ಬಳಕೆಯಾದರೆ ಇನ್ನು ಕೆಲವು ಶಾಸನಗಳಲ್ಲಿ ಹಿಟ್ಟುಕಾರ, ಹಿಟ್ಟಿನ ಎಂಬ ವಿಶೇಷ ರೂಪಗಳು ಬಳಸಲ್ಪಟ್ಟಿವೆ. ಈ ಎಲ್ಲ ಉಲ್ಲೇಖಗಳಿಂದ ಹಿಟ್ಟು ಸ್ಥಾನಿಕ ಆಡಳಿತದಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದ ಪ್ರಾತಿನಿಧಿಕ ಸಂಸ್ಥೆಯಾಗಿರಬೇಕೆನಿಸುತ್ತದೆ. ಬಡಗಿ, ಕಮ್ಮಾರ, ಅಕ್ಕಸಾಲಿ, ಸೇನಬೋವ, ತಳವಾರ ಮುಂತಾದವರಿಗೆ ಹಿಟ್ಟಿನ ಹಾಗೂ ಹಿಟ್ಟುಕಾರ ಎಂಬ ವಿಶೇಷಣ ಬಳಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ತರ್ದವಾಡಿ ನಾಡಿನ ಮನಗೂಳಿ ಶಾಸನದಲ್ಲಿ ಹಿಟ್ಟಿನ ಗಳಿಯ ಬಾರಿಕನ ಉಲ್ಲೇಖವಿದೆ. ಕಿಟ್ಟೆಲ್‌ರ ಕನ್ನಡ-ಇಂಗ್ಲಿಷ್ ನಿಘಂಟುವಿನಲ್ಲಿ ಹಿಟ್ಟು ಎಂಬ ಪದಕ್ಕೆ ಆಹಾರ (ಜೀವನಾಧಾರ) ಎಂಬರ್ಥವಿದೆ. ಹಳ್ಳಿಯ ವಿವಿಧ ವೃತ್ತಿಕಾರರಿಗೆ ಅವರ ಸೇವೆಯ ಪ್ರತಿಫಲವಾಗಿ ಆಹಾರಧಾನ್ಯ ಅಂದರೆ ಹಿಟ್ಟನ್ನು ಕೊಡುತ್ತಿರಬೇಕು. ಅದರ ಸೂಚನೆ ಹಿಟ್ಟಿನ, ಹಿಟ್ಟುಕಾರ ಎಂಬ ವಿಶೇಷಣದಲ್ಲಿದೆ. ಈ ವ್ಯವಸ್ಥೆ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಇಂದಿನ ಆಯಗಾರ ಪದ್ಧತಿಯನ್ನು ಹೋಲುತ್ತದೆ.

ವಿದೇಶಿ ಪ್ರವಾಸಿ ಅಲ್ಬೆರೂನಿ ಶೂದ್ರರಿಂದ ಕೆಳಗೆ ಅಂತ್ಯಜರೆಂಬ ಜನರಿದ್ದರು. ಇವರು ಯಾವ ಜಾತಿಗೂ ಸೇರಿದವರಲ್ಲ. ಒಂದು ಕಸಬಿಗೆ ಅಥವಾ ವೃತ್ತಿಗೆ ಅಂಟಿಕೊಂಡಿರುವ ಇವರಲ್ಲಿ ಅಗಸ, ಚಮ್ಮಾರ, ಗಾರುಡಿಗ, ಕೊರಮ (ಬುಟ್ಟಿ ಹೆಣೆಯುವವ), ನಾವಿಕ, ಬೆಸ್ತ, ಬೇಡ ಮತ್ತು ನೇಯ್ಗೆಯವ ಎಂದು ಎಂಟು ವೃತ್ತಿ ಸಂಘಗಳು ಎಂದು ಹೇಳಿದ್ದಾನೆ. ಇಲ್ಲಿ ಎಂಟುಹಿಟ್ಟಿನ ಸೂಚನೆಯಿರುವಂತಿದೆ. ಅನಂತರದಲ್ಲಿ ಮೇಲಿನ ಪಂಗಡಗಳಲ್ಲಿ ಪ್ರಾದೇಶಿಕವಾಗಿ ಬದಲಾವಣೆಯಾಗಿರಲು ಸಾಧ್ಯ. ಶಾಸನಗಳಲ್ಲಿ ಎಂಟುಹಿಟ್ಟು, ಹನ್ನಿಹಿಟ್ಟುಗಳೆಂಬ ಉಲ್ಲೇಖ

ಗಳಿವೆ. ಊರ ಗೌಡ ಇಲ್ಲವೆ ಹೆಗ್ಗಡೆ ಎಂಟುಹಿಟ್ಟು ಸಮಿತಿಯ ಮುಖ್ಯಸ್ಥನಿರುತ್ತಿದ್ದ. ಯಾವ ಗ್ರಾಮಗಳಿಗೆ ಊರೊಡೆಯ ಅಥವಾ ಪ್ರಭು ಇರುತ್ತಿದ್ದನೋ ಅಂಥ ಹಳ್ಳಿಗಳಲ್ಲಿ ಆತನೆ ಈ ಸಮಿತಿಗೆ ಮುಖ್ಯಸ್ಥನಾಗಿರುತ್ತಿದ್ದ. ಒಂದು ಗ್ರಾಮದ ಬಡಗಿ ಅಥವಾ ಅಕ್ಕಸಾಲೆ ಅಂದರೆ ಆ ಸಮಾಜದ ಯಾವನಾದರೂ ಬಡಗಿ ಅಥವಾ ಅಕ್ಕಸಾಲೆ ಆಗಬಹುದು. ಆದರೆ ಹಿಟ್ಟಿನ ಬಡಗಿ ಅಥವಾ ಹಿಟ್ಟಿನ ಅಕ್ಕಸಾಲೆ ಎಂದರೆ ಎಂಟುಹಿಟ್ಟಿನ ಸದಸ್ಯನಾದ ಬಡಗಿ ಇಲ್ಲವೆ ಅಕ್ಕಸಾಲೆ ಎಂದು ಅರ್ಥವಾಗುವುದು. ಅದೇ ಪ್ರಕಾರ ಎಲ್ಲ ಸೇನಬೋವರು ಅಥವಾ ತಳಾರರು ಹಿಟ್ಟಿನ ಸೇನಬೋವರು ಇಲ್ಲವೆ ಹಿಟ್ಟುಕಾರ ತಳಾರರು ಆಗಲಾರರು. ಎಂಟುಹಿಟ್ಟು ಸಮಿತಿಯ ಸದಸ್ಯನಾದ ಸೇನಬೋವ ಇಲ್ಲವೆ ತಳಾರನಷ್ಟೇ ಹಿಟ್ಟಿನ ಸೇನಬೋವ, ಹಿಟ್ಟಿನ ತಳಾರನೆಂದು ಕರೆದುಕೊಳ್ಳಲು ಅರ್ಹನಾಗುತ್ತಿದ್ದ. ಬಡಗಿ ಊರ ಜನರ ಬಡಗಿತನ ಮಾಡಿದಲ್ಲಿ ಆತನಿಗೆ ಅವರಿಂದ ಆಯ ರೂಪದಲ್ಲಿ ಇಲ್ಲವೆ ಹಣದ ರೂಪದಲ್ಲಿ ಉತ್ಪನ್ನ ಬರುತ್ತಿತ್ತು. ಈ ಆದಾಯದ ಮೇಲೆ ಆತನಿಗೆ ಕಾರುವಣ ಅಥವಾ ಪಂಚಕಾರುಕದೆರೆ ಎಂಬ ತೆರಿಗೆಯನ್ನೂ ಕೊಡಬೇಕಾಗುತ್ತಿತ್ತು. ಆದರೆ ಆ ಬಡಗಿ ಹಿಟ್ಟುಕಾರನೂ ಆಗಿದ್ದ ಪಕ್ಷದಲ್ಲಿ ಎಂಟುಹಿಟ್ಟು ಸಮಿತಿಯ ಸಾರ್ವಜನಿಕ ಕಾರ್ಯ ಮಾಡಿದಾಗ ಆತನಿಗೆ ಸಲ್ಲುವ ಸಂಭಾವನೆಯ ಮೇಲೆ ಯಾವ ತೆರಿಗೆಯನ್ನು ಕೊಡಬೇಕಾಗುತ್ತಿದ್ದಿಲ್ಲ. ಇನ್ನು ಎಂಟುಹಿಟ್ಟಿನ ಸದಸ್ಯರಾಗಿ ಸಲ್ಲಿಸುವ ಸಾರ್ವಜನಿಕ ಸೇವೆಗಾಗಿ ಹಿಟ್ಟುಕಾರರಿಗೆ ಭೂಮಿಯನ್ನು ದಾನ ಬಿಡಲಾಗುತ್ತಿತ್ತು. (ಬಿ.ಜಿ.ಎಸ್.)

**ಎಟ್ರಸ್ಕನ್:** ಇಟಲಿಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂಸ್ಕೃತಿ. ಇದು ರೋಮ್ ಸಂಸ್ಕೃತಿಗಿಂತ ಮೊದಲಿನದು. ಎಟ್ರಸ್ಕನರ ರಾಜ್ಯಕ್ಕೆ ಎಟ್ರೂರಿಯವೆಂದು ಹೆಸರು. ಹಿರೋಡಾಟಸ್‌ನ ಪ್ರಕಾರ ಈ ಜನ ಪ್ರ.ಶ.ಪೂ.ಸು.800ರಲ್ಲಿ ಏಷ್ಯ ಮೈನರ್ ಪ್ರದೇಶದಿಂದ, ಬಹುತೇಕ ಲಿಡಿಯದಿಂದ ಇಟಲಿಯ ಖನಿಜ ಸಂಪತ್ತಿನಿಂದ ಆಕರ್ಷಿತರಾಗಿ ಬಂದವರು. ಇವರ ಭಾಷೆ ಇಂಡೊ–ಯುರೋಪಿಯನ್ ಭಾಷೆಗಿಂತ ಭಿನ್ನವಾದುದು. ಇಟಲಿಯ ಈಗಿನ ಟಸ್ಕನಿ ಪ್ರದೇಶದಲ್ಲಿ ಬಾಳಿದ ಇವರ ಪ್ರಾಚೀನ ನಗರರಾಜ್ಯಗಳು ಪ್ರ.ಶ.ಪೂ. 600ರ ಹೊತ್ತಿಗೆ ಉನ್ನತ ನಾಗರಿಕತೆಯನ್ನು ಹೊಂದಿದ್ದವು. ಇವರು ಚತುರ ನಾವಿಕರಾಗಿದ್ದರು. ಕಡಲುಗಳ್ಳತನ, ವ್ಯಾಪಾರ ಮತ್ತು ಯುದ್ಧಗಳಿಂದಾಗಿ ಉನ್ನತ ಐಶ್ವರ್ಯವನ್ನು ಸಂಪಾದಿಸಿದುದಂದು ಮತ್ತು ವಿಲಾಸಪೂರ್ಣ ಜೀವನವನ್ನು ನಡೆಸುತ್ತಿದ್ದರು. ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿತ್ತು. ಯುದ್ಧಬಂದಿಗಳ ಕೊಲ ಮತ್ತು ಗ್ಲೇಡಿಯೇಟರ್ ಕಾಳಗಗಳನ್ನು

ಕೋಟೆ ನಗರ, ಸಿವಿತ ದ ಬಗ್ನೊರೆಜಿಯೊ

ಏರ್ಪಡಿಸುವುದು ರೂಢಿಯಲ್ಲಿತ್ತು. ಮತೀಯ ಸಂಬಂಧವಾದ ಆಚರಣೆಗಳು, ಹೆಚ್ಚಾಗಿ ಮರಣೋತ್ತರ ಕ್ರಿಯೆಗಳಿಗೆ ಸಂಬಂಧಪಟ್ಟವಾಗಿದ್ದುವು. ಮತೀಯ ಗುರುಗಳು ಭವಿಷ್ಯ ನಿರೂಪಣೆಯಲ್ಲಿ ನಿರತರಾಗಿರುತ್ತಿದ್ದರು. ಇವರ ಇಹಜೀವನ ಎಷ್ಟು ಭೋಗಮಯವೋ ಅದಕ್ಕೆ ವ್ಯತಿರಿಕ್ತವಾಗಿ ಅವರ ಮರಣೋತ್ತರ ಜೀವನ ಭೂತಪ್ರೇತಗಳಿಂದ ಕೂಡಿದ್ದು ಭಯಂಕರವಾಗಿತ್ತು. ಕುದುರೆ ಮತ್ತು ರಥಗಳ ಬಳಕೆ ಹೆಚ್ಚು. ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿದ್ದರು. ಲೋಹದ ಕೆಲಸದಲ್ಲಿ ಔನ್ನತ್ಯ ಸಂಪಾದಿಸಿದ್ದರು. ವಾಸ್ತುಶಿಲ್ಪ ಮತ್ತು ಯಂತ್ರೋದ್ಯೋಗಗಳಲ್ಲಿ ಪ್ರಾವೀಣ್ಯ ಪಡೆದು ಕೃಷಿಗೂ ಪ್ರೋತ್ಸಾಹಿಸುತ್ತಿದ್ದರು. ಇವರು ಕಾರ್ತೇಜಿನೊಂದಿಗೆ ಸ್ನೇಹ ಸಂಬಂಧ ಬೆಳೆಸಿದ್ದರೆಂದೂ ಪ್ರ.ಶ.ಪೂ.474ರಲ್ಲಿ ಇವರ ನೌಕಾಪಡೆ ಸೈರಕ್ಯೂಸ್ ರಾಷ್ಟ್ರದ ನೌಕಾಪಡೆಯಿಂದ ನಾಶಹೊಂದಿತೆಂದೂ ತಿಳಿದುಬರುತ್ತದೆ. ಪ್ರ.ಶ.ಪೂ. 423ರಿಂದ ಮೊದಲುಗೊಂಡು ರೋಮನರ ಹಾಗೂ ಇತರ ಪಂಗಡಗಳ ಧಾಳಿಯಿಂದ ಇವರ ಸಂಸ್ಕೃತಿ ನಶಿಸಲಾರಂಭಿಸಿ ಪ್ರ.ಶ.ಪೂ.396ರಲ್ಲಿ ಇವರ ನಗರರಾಜ್ಯಗಳು ಕ್ರಮೇಣ ರೋಮನರ ಅಧೀನವಾದುವು. ಪ್ರ.ಶ.ಪೂ.309ರಲ್ಲಿ ನಡೆದ ವಡಿಮೋನಿಯ ಸರೋವರದ ಯುದ್ಧದಲ್ಲಿ ರೋಮನರು ಇವರನ್ನು ಸೋಲಿಸಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ ಮೇಲೆ ಇವರ ಸಂಸ್ಕೃತಿ ಅಧಃಪತನ ಹೊಂದಿತು. (ಬಿ.ಕೆ.ಜಿ.)

ಕಲೆ: ಇಟಲಿಯಲ್ಲಿ ರೋಮನ್ ಜನಾಂಗ ಪ್ರಬಲಿಸುವುದಕ್ಕಿಂತ 5 ಶತಮಾನಗಳಿಗಿಂತ ಮುಂಚೆಯೇ ಎಟ್ರಸ್ಕನರ ಕಲೆ ಶ್ರೇಷ್ಠವಾದದ್ದೂ ಸತ್ತ್ವಪೂರ್ಣವಾದದ್ದೂ ಆಗಿದ್ದು ಪರಿಪೂರ್ಣತೆಯನ್ನು ಪಡೆದಿತ್ತಲ್ಲದೆ ಮುಂದೆ ರೋಮನ್ ಸಂಸ್ಕೃತಿಗೂ ಕಲೆಗೂ ಪ್ರಚೋದಕವಾಯಿತು. ನೆಲದಡಿಯಲ್ಲಿರುವ ಇದರ ಶವಾಗಾರಗಳಲ್ಲಿ ಇವರ ನಾಗರಿಕತೆಯನ್ನು ಪ್ರತಿಬಿಂಬಿಸುವ ಸುಂದರ ವರ್ಣಚಿತ್ರಗಳು, ಮನೆಗಳ ಆಕಾರದ ಚಿತಾಭಸ್ಮ ಪೆಟ್ಟಿಗೆಗಳು, ಚಿತ್ತಾರದಿಂದಕೂಡಿದ ಕಂಚಿನ ಕಲಶಪಾತ್ರೆಗಳು, ಕಂಚಿನ ರಥ, ಯುದ್ಧ ಕವಚಗಳು, ಯೋಧರ, ದೇವತೆಗಳ, ಭವಿಷ್ಯವಾದಿಗಳ ಚಿಕ್ಕ ಪ್ರತಿಮೆಗಳು, ಮಣ್ಣಿನ ಪ್ರತಿಮೆಗಳು, ಚಿತ್ರಗಳಿಂದ ಅಲಂಕರಣಗೊಂಡ ಮಣ್ಣಿನ ಕಲಶ ಪಾತ್ರೆಗಳು, ಚಂದ್ರಕಾಂತಶಿಲೆ, ಬೆಳ್ಳಿ ಮತ್ತು ಕಂಚಿನ ಪಾತ್ರೆಗಳು, ನಾಜೂಕು ಕೆತ್ತನೆ ಕೆಲಸದ ಚಿನ್ನದ ಒಡವೆಗಳು, ಮುಖ ಕನ್ನಡಿಗಳು, ಪಾತ್ರೆ ಬಟ್ಟಲುಗಳು ಸಿಕ್ಕಿವೆ. ಚಿತ್ರಗಳಲ್ಲಿ ಹೆಂಗಸರನ್ನು ಗಂಡಸರಿಗಿಂತ ಬಿಳುಪಾಗಿಯೂ ಎಲ್ಲರನ್ನೂ ಪಾರ್ಶ್ವಮುಖವಾಗಿಯೂ ಚಿತ್ರಿಸಲಾಗಿದೆ. ತಮಗೆ ಪ್ರಿಯವಾದ ಔತಣ, ಭೋಜನಗಳಲ್ಲಿ, ಆಟೋಟ ಸ್ಪರ್ಧೆಗಳಲ್ಲಿ, ಕುದುರೆಯ ಓಟ, ಮೂರು ಕುದುರೆಗಳನ್ನು ಹೂಡಿದ ರಥಗಳ ಓಟ ಮುಂತಾದವುಗಳಲ್ಲಿ ಜನ ನಿರತರಾಗಿರುವಂತೆಯೂ ವಿವಿಧ ವಾದ್ಯಗಳನ್ನು ಹಿಡಿದ ಸಂಗೀತಗಾರರಿಂದಲೂ ತಟ್ಟೆ ಬಟ್ಟಲುಗಳನ್ನು ಹಿಡಿದು ತರುತ್ತಿರುವ ದಾಸ ದಾಸಿಯರಿಂದ ಆವೃತವಾಗಿರುವಂತೆಯೂ ಇಲ್ಲಿನ ಚಿತ್ರಗಳು ವೈಶಿಷ್ಟ್ಯಪೂರ್ಣವಾಗಿವೆ. ಟಾರ್ಕ್ವಿನಿಯದ ಚಿರತೆಗಳ, ಶವಾಗಾರದ, ಔತಣದ, ಓಟದ, ಮಲ್ಲಯುದ್ಧದ ಚಿತ್ರಗಳು, ಕಂಚಿನ ಎರಕದಲ್ಲಿ ನೇಗಿಲಿಗೆ ಎತ್ತುಗಳನ್ನು ಹೂಡಿದ ರೈತ (ಪ್ರ.ಶ.ಪೂ.4ನೆಯ ಶತಮಾನ), ಈಟಿಯನ್ನು ಹಿಡಿದು ನಿಂತಿರುವ ಯೋಧ (ಪ್ರಶ.ಪೂ.5ನೆಯ ಶತಮಾನ), ಪೆರೂಗಿಯದಲ್ಲಿ ಸಿಕ್ಕಿದ ಮುಳುಗುಗಾರ ಚಿತ್ತಾರದ ಕೆಲಸವಿರುವ ಕಂಚಿನ ರಥ, ಭವಿಷ್ಯವಾದಿಗಳ ಪ್ರತಿಮೆಗಳು, ಮಣ್ಣಿನಲ್ಲಿ ಚಿತ್ರಿಸಿರುವ ಯೋಧನ ತಲೆ, ಭರಣಿಗಳ ಮುಚ್ಚಳಗಳ ಮೇಲೆ ಚಿತ್ರಿಸಿರುವ ದಂಪತಿಗಳ ಕೆತ್ತನೆಗಳು, ಬಣ್ಣ ಬಳಿಯಲ್ಪಟ್ಟ ಮಣ್ಣಿನ ಅಪೋಲೊ ಪ್ರತಿಮೆಗಳು; ಸೂಕ್ಷ್ಮವಾದ ಕೆತ್ತನೆಯ, ವಿಚಿತ್ರ ಮೃಗಗಳ ಚಿತ್ರವುಳ್ಳ ಚಿನ್ನದ ಒಡವೆಗಳು–ಇವೇ ಮೊದಲಾದವು ಇವರ ಕಲೆಯ ಉತ್ತಮ ನಿದರ್ಶನಗಳಾಗಿವೆ. ಪಿಟುಲೋನಿಯದ ಮಂಡುಗೋರಿಯಲ್ಲಿ ದೊರೆತ ಮಣ್ಪಾತ್ರೆ ಗಳಲ್ಲಿ ರೇಖಾಕೃತಿಗಳಿದ್ದು 46 ಅಕ್ಷರಗಳನ್ನು ಬಿಡಿಸಲಾಗಿದೆ. ಚಿತ್ರಾತ್ಮಕವಾದ ಮಣ್ಣಿನ ಕಲಶಗಳಲ್ಲಿ ಗ್ರೀಕ್ ಪ್ರಭಾವವನ್ನು ಗುರುತಿಸಬಹುದು. (ಎಂ.ಎಂ.ಪಿಆರ್‌ಎ.)

**ಎಡಕಲ್ಲು: ನೋಡಿ–ಶಿಲಾಚಿತ್ರಗಳು**

**ಎಲ್‌ಟಿಟಿಇ:** ಪ್ರಪಂಚದ ಎರಡನೆಯ ಅತಿದೊಡ್ಡ ಹಾಗೂ ಶ್ರೀಮಂತ ಗೆರಿಲ್ಲಾ ಸಂಘಟನೆ. ಲಿಬರೇಷನ್ ಟೈಗರ್ಸ್ ಆಫ್ ತಮಿಳ್ ಈಳಮ್ (ತಮಿಳ್ ಟೈಗರ್ಸ್). 1972ರಲ್ಲಿ ಅಸ್ತಿತ್ವಕ್ಕೆ ಬಂದ ಈ ಭಯೋತ್ಪಾದಕ ಸಂಘಟನೆಯ ಮೂಲ ಉದ್ದೇಶ ಅಧಿಕ ತಮಿಳು ವಲಸೆಗಾರರಿಂದ ಕೂಡಿರುವ ಪೂರ್ವ ಮತ್ತು ಉತ್ತರ ಶ್ರೀಲಂಕದ ಪ್ರದೇಶಗಳನ್ನೊಳಗೊಂಡ ಸ್ವತಂತ್ರ ತಮಿಳು ರಾಷ್ಟ್ರದ ಸ್ಥಾಪನೆಯಾಗಿದೆ. 1985ರ ವೇಳೆಗೆ ಜಾಫ್ನಾ ಬಂದರು ಪ್ರದೇಶ ಹಾಗೂ ಉತ್ತರ ಶ್ರೀಲಂಕ ಪರ್ಯಾಯ ದ್ವೀಪದ ಮೇಲೆ ತನ್ನ ಅಧಿಕಾರವನ್ನು ಹೊಂದಿತ್ತು. ಆದರೆ 1987ರಲ್ಲಿ ಜಾಫ್ನಾದ ಮೇಲಿನ ಹಿಡಿತವನ್ನು ಕಳೆದುಕೊಂಡು ಹತಾಶರಾದ ತಮಿಳ್ ಟೈಗರ್ಸ್ ಅನೇಕ ಭಯೋತ್ಪಾದಕ ಕೃತ್ಯಗಳನ್ನು ವಿಶೇಷವಾಗಿ ಅತಿಹೆಚ್ಚು ಆತ್ಮಹತ್ಯಾ ಆಕ್ರಮಣ ನಡೆಸಿ, ನೂರಾರು ಅಮಾಯಕ ನಾಗರಿಕರನ್ನು ಹತ್ಯೆಗೈದಿತು. ಎಲ್ಲಕ್ಕಿಂತ ಮುಖ್ಯವಾಗಿ ಶ್ರೀಲಂಕದ ಅಧ್ಯಕ್ಷರಾಗಿದ್ದ ರಣಸಿಂಘ ಪ್ರೇಮದಾಸ, ಪ್ರಧಾನ ಮಂತ್ರಿ ವಿಕ್ರಮಸಿಂಘೆ ಮೊದಲಾದವರ ಹತ್ಯೆಯಿಂದ ಈ ಸಂಘಟನೆ ದಿನೇ ದಿನೇ ಭಯಾನಕ ಕೃತ್ಯಗಳನ್ನು ಯೋಜಿಸುವ ಅಂತಾರಾಷ್ಟ್ರೀಯ ಸಂಸ್ಥೆಯಾಯಿತು. ನೆರೆಯ ಶ್ರೀಲಂಕದಲ್ಲಿ ಶಾಂತಿ ಸ್ಥಾಪಿಸುವ ದೃಷ್ಟಿಯಿಂದ ಶಾಂತಿ ಪಾಲನ ಪಡೆಯನ್ನು ಕಳುಹಿಸಿಕೊಟ್ಟ ಅಂದಿನ ಭಾರತದ ಪ್ರಧಾನಿ ರಾಜೀವ್ ಗಾಂಧೀಯವರ ಏಕಪಕ್ಷೀಯ ನಿರ್ಧಾರದಿಂದ ಸಾವಿರಾರು ನಾಗರಿಕರು ಹಾಗೂ ನೂರಾರು ಮಂದಿ ಭಾರತೀಯ ಸೈನಿಕರು ಕೊಲ್ಲಲ್ಪಟ್ಟು ಅಂತಿಮವಾಗಿ ತಾವೇ ಬಲಿಯಾದರು. ರಾಜೀವ್ ಗಾಂಧೀಯವರ ಬಗ್ಗೆ ದ್ವೇಷಭಾವ ತಾಳಿದ್ದ ತಮಿಳ್ ಟೈಗರ್ಸ್ 1991 ಮೇ 21 ರಂದು ತಮಿಳುನಾಡಿನ ಪೆರಂಬದೂರಿನಲ್ಲಿ ಧನು ಎಂಬ ಮಾನವಬಾಂಬ್ ಬಳಸುವುದರ ಮೂಲಕ ಅವರನ್ನು ಹತ್ಯೆಗೈದಿತು. ಈ ಗೆರಿಲ್ಲಾ ಸಂಘಟನೆಯ ಬಗೆಗೆ ಪ್ರಪಂಚದಾದ್ಯಂತ ಇರುವ ತಮಿಳು ಜನಾಂಗದವರ ಸಂಪೂರ್ಣ ಬೆಂಬಲವಿದೆಯಲ್ಲದೆ ಡಿ.ಎಂ.ಕೆ., ಪಿ.ಎಂ.ಕೆ. ಮುಂತಾದ ರಾಜಕೀಯ ಪಕ್ಷಗಳ ಬೆಂಬಲವಿದೆ. ಟೈಗರ್ ಪ್ರಭಾಕರನ್, ದಿವಂಗತರಾದ ಬಾಲ ಸಿಂಘಮ್ ಮತ್ತು ಶಿವಾರಸನ್ ಮೊದಲಾದ ನಾಯಕರ ನೇತೃತ್ವದಲ್ಲಿ ಪ್ರಬಲಗೊಂಡ ಈ ಸಂಘಟನೆಯಲ್ಲಿ ಸಾವಿರಾರು ಮಂದಿ ಯುವಕ ಯುವತಿಯರು ತೊಡಗಿಸಿಕೊಂಡಿದ್ದಾರೆ. ಇತ್ತೀಚೆಗೆ ನಾರ್ವೆ ದೇಶದವರು, ರೆಡ್‌ಕ್ರಾಸ್ ಸಂಸ್ಥೆ ಹಾಗೂ ವಿಶ್ವಸಂಸ್ಥೆಗಳ ಮಾರ್ಗದರ್ಶನದ ಮೂಲಕ ತಮಿಳ್ ಟೈಗರ್ಸ್ ಹಾಗೂ ಶ್ರೀಲಂಕ ಸರ್ಕಾರದ ನಡುವೆ ಶಾಂತಿ ಒಪ್ಪಂದವೇರ್ಪಡಿಸಲು ಪ್ರಯತ್ನಿಸಿದರು. ಆದರೆ ತಮಿಳು ಟೈಗರ್ಸ್ ಮತ್ತು ಶ್ರೀಲಂಕ ಸರಕಾರಗಳೆರಡೂ ತಮ್ಮ ಬಿಗಿಪಟ್ಟನ್ನು ಸಡಿಲಿಸದಿರುವುದರಿಂದ ಅಲ್ಲಿ ಶಾಂತಿ ಸ್ಥಾಪನೆ ಮರೀಚಿಕೆಯಾಗಿದೆ. ಶಸ್ತ್ರಾಸ್ತ್ರ, ಮಾದಕವಸ್ತು ಮುಂತಾದ ಅಂತಾರಾಷ್ಟ್ರೀಯ ಕಳ್ಳವ್ಯಾಪಾರ ಮತ್ತು ಸಾಗಾಣಿಕೆಯಲ್ಲಿ ತೊಡಗಿಸಿಕೊಂಡಿರುವ ತಮಿಳ್ ಟೈಗರ್ಸ್ ಶ್ರೀಲಂಕ ಮಾತ್ರವಲ್ಲ ಇಡೀ ಪ್ರಪಂಚಕ್ಕೆ ಕುಠಾರಪ್ರಾಯವಾಗಿ ಪರಿಣಮಿಸಿದೆ. (ಎನ್‌ಆರ್.)

**ಎಲಿಫೆಂಟ:** ಮುಂಬಯಿಯ ಅಪೋಲೊ ಬಂದರಿನಿಂದ ಈಶಾನ್ಯಕ್ಕೆ ಸು.11 ಕಿಮೀ ದೂರದಲ್ಲಿ ಗುಡ್ಡಗಳಿಂದ ಕೂಡಿದ, ಸು.6 ಕಿಮೀ ಸುತ್ತಳತೆಯುಳ್ಳ ಒಂದು ದ್ವೀಪ. ಇಲ್ಲಿದ್ದ ಒಂದು ದೊಡ್ಡ ಆನೆಯಾಕಾರದ ಬಂಡೆಯನ್ನು ಕಂಡು ಪೋರ್ಚುಗೀಸರು ಅದನ್ನು

ಎಲಿಫೆಂಟ ಎಂದು ಕರೆದರು. ಕೆಲವು ವರ್ಷಗಳ ಹಿಂದೆ ಈ ಶಿಲ್ಪವನ್ನು ಮುಂಬೈಗೆ ಸಾಗಿಸಲಾಗಿದೆ. ಈ ದ್ವೀಪದ ಮೊದಲಿನ ಹೆಸರು ಶ್ರೀಪುರಿ ಅಥವಾ ಗೋವಕಪುರಿ. ಘಾರಾಪುರಿ ಎಂಬುದು ಮತ್ತೊಂದು ಹೆಸರು. ಈ ದ್ವೀಪ 8ನೆಯ ಶತಮಾನದವರೆಗೆ ಕೊಂಕಣ ಪ್ರದೇಶ ಮತ್ತು ಪಶ್ಚಿಮ ಭಾರತವನ್ನು ಆಳುತ್ತಿದ್ದ ಮೌರ್ಯ ಸಂತತಿಯ ಒಂದು ಶಾಖೆಯ ದೊರೆಗಳ ಅಧೀನದಲ್ಲಿತ್ತು. ಅನಂತರ ಚಾಳುಕ್ಯ ಪುಲಕೇಶಿಯ ಅಧೀನಕ್ಕೆ ಬಂದು, ಕ್ರಮವಾಗಿ ರಾಷ್ಟ್ರಕೂಟರು, ಕಲ್ಯಾಣಿಯ ಚಾಳುಕ್ಯರು, ದೇವಗಿರಿಯ ಯಾದವರು ಮತ್ತು ಅಹಮದಾಬಾದಿನ ಮುಸ್ಲಿಂ ದೊರೆಗಳ ಅಧೀನದಲ್ಲಿದ್ದು 1534ರಲ್ಲಿ ಪೋರ್ಚುಗೀಸರ ಕೈ ಸೇರಿತು. ಎಲಿಫೆಂಟ ದ್ವೀಪದಲ್ಲಿ ಅನೇಕ ಗುಹಾಲಯಗಳಿವೆ. ಅವುಗಳಲ್ಲಿ 7 ರಾಷ್ಟ್ರಕೂಟರ ಕಾಲದವು.

**ಮಹಾದೇವ ಗುಹಾಲಯ**

1673ರಲ್ಲಿ ಪೋರ್ಚುಗೀಸರು ಈ ಗುಹಾಲಯಗಳನ್ನು ದನದ ದೊಡ್ಡಿಗಳನ್ನಾಗಿ ಮಾಡಿಕೊಂಡಿದ್ದರು. 1682ರಲ್ಲಿ ಮರಾಠರು ಈ ದ್ವೀಪವನ್ನು ವಶಪಡಿಸಿಕೊಂಡರು. 1774ರಲ್ಲಿ ಇದು ಬ್ರಿಟಿಷರ ವಶವಾಯಿತು. 1890ರಲ್ಲಿ ಬೊಂಬಾಯಿಯ ಲೋಕೋಪಯೋಗಿ ಇಲಾಖೆ ಇದರ ಮೇಲ್ವಿಚಾರಣೆಯನ್ನು ವಹಿಸಿಕೊಂಡಿತು. 1909ರಲ್ಲಿ ಇಲ್ಲಿಯ ಗುಹಾಲಯಗಳು ರಕ್ಷಿಸಲ್ಪಟ್ಟ ಪುರಾತನ ಅವಶೇಷಗಳೆಂದು ಪರಿಗಣಿಸಲ್ಪಟ್ಟು ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಗೆ ಒಳಪಟ್ಟವು.

ಪ್ರಾಚೀನ ಅವಶೇಷಗಳು–ವಾಸ್ತುಶಿಲ್ಪ: ಸು.3ರಿಂದ 10–11ನೆಯ ಶತಮಾನದವರೆಗೆ ಪ್ರಸಿದ್ಧವೆನಿಸಿ ಮೆರೆದ ಈ ದ್ವೀಪದ ಅನೇಕ ಕಡೆಗಳಲ್ಲಿ ಕಲ್ಲು ಮತ್ತು ಇಟ್ಟಿಗೆಯ ಅಡಿಪಾಯಗಳೂ ಶಿಲ್ಪಗಳೂ ಕಂಡುಬಂದಿವೆ. ಇಲ್ಲಿಯ ಒಂದು ಗುಡ್ಡದ ಮೇಲೆ ಬೌದ್ಧಸ್ತೂಪವೊಂದರ ಅವಶೇಷಗಳಿವೆ. ಆದರೆ ಇವೆಲ್ಲಕ್ಕೂ ಹೆಚ್ಚು ಪ್ರಸಿದ್ಧವಾಗಿರುವುದು ಇಲ್ಲಿಯ ಗುಹಾ ದೇವಾಲಯಗಳು. ಎಲಿಫೆಂಟ ಬಂಡೆಯಲ್ಲಿ ಕೊರೆದು ಸೃಷ್ಟಿಸಿದ ಒಟ್ಟು ಆರು ಗುಹೆಗಳಿವೆ. ಇವೆಲ್ಲವೂ ಶೈವಮತಕ್ಕೆ ಸಂಬಂಧಿಸಿದುವು. ಅವುಗಳಲ್ಲಿ ದೊಡ್ಡ ಗುಹೆಯೇ ಅತಿಮುಖ್ಯ ವಾದುದು. ಉತ್ತರಕ್ಕೆ ಮುಖ ಮಾಡಿರುವ ಈ ಗುಹೆ 4.80ಮೀ–5.10ಮೀ ಎತ್ತರವಿದೆ. ಒಟ್ಟು ಉದ್ದ 39ಮೀ. ಅಗಲವೂ ಸುಮಾರು ಅಷ್ಟೇ. ಆದರೆ ತಳವಿನ್ಯಾಸದಲ್ಲಿ ಇದು ಪೂರ್ಣ ಚಚ್ಚೌಕವಾಗಿಲ್ಲ. ಪಶ್ಚಿಮ, ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ 19.20ಮೀ ಅಗಲ ಮತ್ತು 5ಮೀ ಉದ್ದದ ಮುಖಮಂಟಪಗಳೂ ದಕ್ಷಿಣದಲ್ಲಿ ಸುಮಾರು ಇಷ್ಟೇ ವಿಸ್ತಾರದ ಹಜಾರವಿದೆ. ಮಧ್ಯದ ಹಜಾರವನ್ನು ಆರು ಕಂಬಗಳ ಆರು ಸಾಲುಗಳಿಂದ ಅಂಕಣಗಳಾಗಿ ವಿಭಾಗಿಸಲಾಗಿದೆ. ಆದರೆ ಕೆಲವೆಡೆ ಹೊರಗೋಡೆಯ ಅಂಚನ್ನನುಸರಿಸಿ ಕಂಬಗಳ ಬದಲು ಅರೆಗಂಬಗಳಿವೆಯಲ್ಲದೆ ಹಜಾರದ ಪಶ್ಚಿಮಕ್ಕೆ ನಾಲ್ಕುಕಡೆ ದ್ವಾರಗಳಿರುವ ಒಂದು ಗರ್ಭಗೃಹವಿದೆ. ಗರ್ಭಗೃಹದ ಮಧ್ಯದಲ್ಲಿ ಲಿಂಗವೂ ಅದರ ದ್ವಾರಗಳ ಎರಡೂ ಪಕ್ಕಗಳಲ್ಲಿ ದ್ವಾರಪಾಲಕ ವಿಗ್ರಹಗಳು ಇವೆ. ವಿಶಾಲವಾದ ಗೋಡೆಗಳ ಮೇಲೂ ಶಿಲ್ಪಗಳಿವೆ. ಈ ಗುಹೆಯಲ್ಲಿ ಯಾವ ಶಾಸನಗಳೂ ಸಿಕ್ಕಿಲ್ಲವಾದ್ದರಿಂದ, ಇದರ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಚಚ್ಚೌಕದ ತಳ, ಅಷ್ಟ ಅಥವಾ ಷೋಡಶ ಕೋನಗಳ ಮಧ್ಯಭಾಗ ಮತ್ತು ದುಂಡು ಮೆತ್ತೆಯಂತೆ ಕಾಣುವ ಭಾಗವಿರುವ ದಪ್ಪಕಂಬಗಳು, ಎಲ್ಲೋರದ ಕೆಲವು ಗುಹೆಗಳನ್ನು ಹೋಲುವ ತಳ ವಿನ್ಯಾಸ, ಶಿಲ್ಪಗಳ ಅಲಂಕರಣ ಶೈಲಿ ಮುಂತಾದುವು ಗಳಿಂದ ಈ ಗುಹೆ 6–8ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾಗಿರಬೇಕೆಂದು ಊಹಿಸಬಹುದು. ಇತರ ಗುಹೆಗಳೂ ಇದೇ ಕಾಲದವೇ, ಆದರೆ ವಿನ್ಯಾಸದಲ್ಲಾಗಲೀ ಶಿಲ್ಪಗಳಲ್ಲಾಗಲೀ ದೊಡ್ಡಗುಹೆಗೆ ಇವು ಸರಿಸಮವಲ್ಲ.

ಮೂರ್ತಿಶಿಲ್ಪ: ಇಲ್ಲಿಯ ದೊಡ್ಡ ಗುಹೆಯ ಶಿಲ್ಪಗಳು ದಖನ್ನಿನ ಗುಹಾಶಿಲ್ಪ ಶ್ರೇಣಿಯಲ್ಲಿಯೇ ಅತ್ಯುಚ್ಚಮಟ್ಟದ ಶಿಲ್ಪಗಳೆಂದು ಪ್ರಸಿದ್ಧವಾಗಿವೆ. ಸಮಕಾಲೀನ ಶಿಲ್ಪದಂತೆ ಇಲ್ಲಿಯವೂ ಬೃಹತ್ ಶಿಲ್ಪಗಳೇ. ಶಿಲ್ಪಗಳು ನೆಲದಿಂದ ಮೇಲಿನವರೆಗೆ 2.6ಕಿಮೀ ನಿಂದ 5.4 ಕಿಮೀ ಎತ್ತರವಿದ್ದರೂ ಗಂಭೀರ ಮುಖಭಾವ, ಅಂಗಾಂಗಗಳ ಸಹಜ ಪ್ರಮಾಣ ಮತ್ತು ನೈಜತೆಯ ಸುಂದರ ಕೃತಿಗಳಾಗಿವೆ. ಈ ಶಿಲ್ಪಗಳಿಗೆ ಬೀಳುವಂತೆ ಮಾಡಿರುವ ಬೆಳಕು–ನೆರಳಿನ ಸಂಯೋಜನೆ ಇಲ್ಲಿಯ ವೈಶಿಷ್ಟ್ಯ.

ಎಲಿಫೆಂಟದ ಶಿಲ್ಪಗಳೆಲ್ಲವೂ ಶೈವಮತ ಸಂಬಂಧವಾದುವು. ದೊಡ್ಡ ಗುಹೆಯಲ್ಲಿ ಮುಂಬಾಗಿಲಿಗೆ ನೇರ ಎದುರಿನಲ್ಲಿರುವ ಮಹೇಶಮೂರ್ತಿಯೇ ಇಲ್ಲಿಯ ಪ್ರಧಾನಶಿಲ್ಪ. ಗುಹೆಯ ಹಿಂಗೋಡೆಯ ಮೇಲೆ ಮುಂಬಾಗಿಲಿಗೆ ನೇರ ಎದುರಾಗಿ ಕೆತ್ತಲಾಗಿರುವ ಈ ಶಿಲ್ಪ 6.20 ಮೀ ಅಗಲವೂ 5.40 ಮೀ ಎತ್ತರವೂ ಇದೆ. ಎದೆಯಿಂದ ಮೇಲ್ಭಾಗ ಮಾತ್ರವೇ ಇರುವ ಈ ಶಿಲ್ಪದಲ್ಲಿ ಮಹೇಶ ತ್ರಿವದನನಾಗಿದ್ದು ಸೃಷ್ಟಿ, ಸ್ಥಿತಿ, ಲಯಗಳ ಸಮನ್ವಯದ ದ್ಯೋತಕನಾಗಿದ್ದಾನೆ. ದೇವನ ಮೂರು ಮುಖಗಳಲ್ಲಿ ನೇರ ಎದುರಿನಲ್ಲಿರುವುದು ಶಿವನ ತತ್ಪುರುಷ ಅಥವಾ ಮಹಾದೇವತತ್ತ್ವದ ರೂಪ. ದೇವನ ದುಂಡುಮುಖ, ತುಂಬುಗಲ್ಲ, ಅಕೃಷ್ಟ ಚಿಬುಕ ಮತ್ತು ನಿಮೀಲಿತ ನೇತ್ರಗಳು ಅವನ ಶಾಂತ, ಗಂಭೀರ ನಿರ್ವಿಕಾರ, ನಿರಾಮಯ ಸ್ವರೂಪವನ್ನು ವ್ಯಕ್ತಪಡಿಸುತ್ತವೆ. ಆದರೆ ವಿಶಾಲವಾದ ಸ್ಕಂಧ, ಸ್ವಲ್ಪವೇ ಉಬ್ಬಿದ ನಯವಾದ ಎದೆ ಮತ್ತು ದಪ್ಪಕಂಠದಿಂದಾಗಿ ಇದೇ ದೇವ ಮಹಾಶಕ್ತಿಯನ್ನೇ ತನ್ನಲ್ಲಿ ಹುದುಗಿಸಿಕೊಂಡಿರುವಂತೆ ಕಾಣಿಸುತ್ತದೆ. ಎಡಗೈಯಲ್ಲಿ ಹಿಡಿದಿರುವ ಬೀಜಪೂರಕ ಸಾಂಕೇತಿಕವಾಗಿ ಇದಕ್ಕೆ ಹೊಂದಿಕೊಳ್ಳುವಂತಿದೆ. ಮೂರ್ತಿಯ ಮುಖದ ಎರಡು ಕಡೆಗಳಲ್ಲೂ ಇರುವ ದೀರ್ಘ ಕರ್ಣಗಳು, ಮೇಲಿನ ಮಕುಟದ ತಳ ಮತ್ತು ಎದೆಯ ಮೇಲಿನ ಆಭರಣ ಈ ದೈವಿಕ ಮುಖಕ್ಕೊಂದು ಚೌಕಟ್ಟನ್ನು ಒದಗಿಸಿದಂತಿದ್ದು ಆಕರ್ಷಣೆಯನ್ನು ವೃದ್ಧಿಸಿದೆ. ತಲೆಯ ಮೇಲಿರುವುದು ಜಟಾಮಕುಟವಾದರೂ ಕೀರ್ತಿಮುಖ ಮತ್ತು ವಿವಿಧ ಆಭರಣಗಳಿಂದ ಅಲಂಕೃತವಾಗಿದ್ದು, ಅಲ್ಲಿಯ ಪ್ರತಿ ಅಂಗುಲದಲ್ಲೂ ಕುಸುರಿಯ ಕೌಶಲವನ್ನು ಕಾಣಬಹುದಾಗಿದೆ. ಈ ಅಲಂಕರಣ ನಯವಾದ ಮುಖದ ಸಹಜತೆಯನ್ನು ಎಳ್ಳಷ್ಟೂ ಕುಂದಿಸದೆ, ಮುಖದಲ್ಲಿ ವ್ಯಕ್ತವಾಗಿರುವ ತೇಜಸ್ಸು ಕ್ರೋಡೀಕರಿಸಿ ಮೇಲೆದ್ದು ಸುತ್ತಲೂ ಪ್ರಸರಿಸುತ್ತದೆಯೇನೋ ಎಂಬ ಭಾವವನ್ನು ಹುಟ್ಟಿಸುತ್ತದೆ. ಎಡ–ಬಲಗಡೆಯ ಮುಖಗಳು ಒಂದು ಪಕ್ಕಕ್ಕೆ ತಿರುಗಿಕೊಂಡಿರುವಂತೆ ಇವೆ. ಬಲಗಡೆಯ ಮುಖ ಶಿವನ ಅಘೋರ ಅಥವಾ ಭೈರವ ತತ್ತ್ವದ ಪ್ರತಿರೂಪ. ದಪ್ಪ ತುಟಿಗಳು, ತಿರುವಿದ ಮೀಸೆ, ಕೋಪದಿಂದ ಊದಿದಂತಿರುವ ಕಣ್ಣುಗಳು, ಮುಂಚಾಚಿದ ಗಡ್ಡವುಳ್ಳ ಚಿಬುಕ ಇವು ಶಿವನ ರೌದ್ರಭಾವವನ್ನು ತೋರಿಸಿವೆ. ಇವಕ್ಕೆ ಪೂರಕವಾಗಿ ಸರ್ಪ ಮತ್ತು ರುಂಡದಿಂದ ಅಲಂಕೃತವಾದ ದಪ್ಪ ಜಟೆಗಳಿಂದ ಹೆಣೆಯಲಾಗಿರುವ ಮಕುಟ, ಇಳಿಬಿದ್ದ ಜಟೆಗಳು ಇವೆ. ಧರಿಸಿರುವ ಸರ್ಪಾಭರಣ ಮತ್ತು ಬಲಗೈಯಲ್ಲಿ ಹಿಡಿದೆತ್ತಿರುವ ದಪ್ಪ ಸರ್ಪ ಭೀಕರತೆಯನ್ನು ಮತ್ತಷ್ಟು ವರ್ಧಿಸಿವೆ. ಇದಕ್ಕೆ ತದ್ವಿರುದ್ಧವಾಗಿ ಎಡಭಾಗದಲ್ಲಿರುವ ಮುಖ. ಇದು ವಾಮದೇವ ಅಥವಾ ಉಮಾ ತತ್ತ್ವದ ಪ್ರತೀಕ. ನಯವಾದ ಸ್ವಲ್ಪವೇ ಉಬ್ಬಿದ ಕೆನ್ನೆ, ನೇರ ಎಸಳುಮೂಗು, ದಪ್ಪ ರಾಗಪೂರಿತ ತುಟಿ ಮತ್ತು ನಿಮೀಲಿತ ನೇತ್ರ–ಇವು ಅಪೂರ್ವ ಶೋಭೆಯನ್ನಿತ್ತಿವೆ. ಕಿವಿಯಲ್ಲಿನ ಪತ್ರಾಭರಣ, ಕೆನ್ನೆಯಮೇಲೆ ಇಳಿಬೀಳುತ್ತಿರುವ ಗುಂಗುರು ಕೂದಲು, ಮಣಿಹಾರ, ಪದಕ, ಪುಷ್ಪಗಳಿಂದಲಂಕೃತವಾದ ಮಕುಟ ಮತ್ತು ಕೈಯಲ್ಲಿ ಹಿಡಿದಿರುವ ಕಮಲಗಳು ಇದರ ಕೋಮಲ ಸೌಂದರ್ಯ ಭಾವವನ್ನು ಮತ್ತಷ್ಟು ಎದ್ದು ಕಾಣುವಂತೆ ಮಾಡಿವೆ. ಒಂದೇ ಮೂರ್ತಿಯಲ್ಲಿ ವಿವಿಧ ರಸಭಾವಗಳನ್ನು ಒಂದಕ್ಕೊಂದು ಪೋಷಕವಾಗುವಂತೆ ಸೆರೆಹಿಡಿದಿರುವ ಜಾಣ್ಮೆ, ಶಿಲ್ಪದ ಸ್ಫುಟ ಪ್ರಮಾಣ ಮತ್ತು ಚತುರ ಅಲಂಕರಣದಿಂದಾಗಿ ಈ ಮಹೇಶಮೂರ್ತಿಶಿಲ್ಪ ಲೋಕ ಪ್ರಸಿದ್ಧವಾಗಿದೆ.

**ಮಹಾದೇವ ಗುಹಾ ದೇವಾಲಯದ ಇನ್ನೊಂದು ನೋಟ**

ಇಂಥ ಒಂದು ಅಪೂರ್ವ ಶಿಲ್ಪವನ್ನು ಕಡೆಯಲು ಆರಿಸಿರುವ ಸ್ಥಳ ಮತ್ತು ಕೆತ್ತಿರುವ ರೀತಿಯೂ ಗಮನಾರ್ಹವಾದುದು. ಹಿಂಭಾಗದ ಗೋಡೆಯಲ್ಲಿ ಸು.2 ಮೀ ಗಳಷ್ಟು ಒಳ ಸರಿದಂತಿರುವ 6.30 ಮೀ ಅಗಲದ ಕೋಷ್ಠದಲ್ಲಿ ನೆಲದಿಂದ ಮೇಲಿನವರೆಗೂ ಹಬ್ಬಿದಂತೆ ಉಬ್ಬುಶಿಲ್ಪವಾಗಿ ಇದನ್ನು ಕೆತ್ತಲಾಗಿದೆ. ಉಬ್ಬುಶಿಲ್ಪವಾದರೂ ಪೂರ್ಣಶಿಲ್ಪದಂತೆಯೇ ಒಡೆದೆದ್ದು ಕಾಣುತ್ತದೆ. ಯಾವ ಕೆತ್ತನೆಯೂ ಇಲ್ಲದ ಹಿಂಭಾಗದ ಗೋಡೆ ಶಿಲ್ಪಕ್ಕೆ ಒಂದು ವಿಶಾಲವಾದ ಹಿನ್ನೆಲೆಯನ್ನು ಒದಗಿಸುತ್ತದೆ. ಶಿಲ್ಪ ಗೋಡೆಯಿಂದ ಸ್ವಲ್ಪ ಒಳಸರಿದಂತಿರುವುದರಿಂದ ಇದರ ಮೇಲೆ ಹೆಚ್ಚು ಬೆಳಕು ಬೀಳುವುದಿಲ್ಲ. ಪಕ್ಕದಿಂದ ಕಂಬಗಳ ಮಧ್ಯೆ ತೂರಿ

ಬರುವ ಅಲ್ಪಸ್ವಲ್ಪ ಬೆಳಕು ಸಹ ಶಿಲ್ಪಕ್ಕೆ ಪೂರ್ಣವಾಗಿ ಹರಡದೆ ಮಧ್ಯ ಮುಖದ ಮೇಲಷ್ಟೇ ಬೀಳುವಂತೆ ಆಗಿದ್ದು ಅದರ ಸೌಂದರ್ಯವನ್ನೂ ಪ್ರಭಾವವನ್ನೂ ಆಕರ್ಷಣೆಯನ್ನೂ ಮತ್ತಷ್ಟು ಹೆಚ್ಚಿಸುತ್ತದೆ. ಈ ಶಿಲ್ಪ ಮುಂಬಾಗಿಲಿಗೆ ನೇರ ಎದುರಿಗಿದ್ದರೂ ಅಲ್ಲಿಂದ ಸು. 36 ಮೀ ಗಳು ಒಳಗಿರುವುದರಿಂದ ಬಿಸಿಲಿನ ಕಾಲದಲ್ಲೂ ಇಲ್ಲಿ ಬೀಳುವ ಬೆಳಕು ಅಷ್ಟು ಪ್ರಖರವಾಗೇನೂ ಇರುವುದಿಲ್ಲ. ಆದರೆ ಈ ಅರೆ ಬೆಳಕಿನ ಸ್ಥಿತಿಯೇ ಈ ಶಿಲ್ಪವನ್ನು ನೋಡುವವರ ಮೇಲೆ ಒಂದು ಅಸಾಧಾರಣ ಪರಿಣಾಮವನ್ನು ಉಂಟು ಮಾಡುತ್ತದೆ. ಹೊರ ಬಿಸಿಲಿನಿಂದ ಬಂದು ಬಾಗಿಲ ಬಳಿ ನಿಂತರೆ ಒಳಗೆ ಕಾಣುವುದು ಗಾಢಾಂಧಕಾರ ಅಷ್ಟೇ. ಆದರೆ ದೃಷ್ಟಿಯನ್ನು ಈ ಶಿಲ್ಪದ ದಿಶೆಯಲ್ಲಿ ಸ್ವಲ್ಪಕಾಲ ಕೇಂದ್ರೀಕರಿಸಿದರೆ ಮಸಕು ಮಸಕಾಗಿ ರೂಪಗೊಳ್ಳುವ ಮೂರ್ತಿ ಆಗತಾನೇ ಪೃಥ್ವೀಗರ್ಭದಿಂದ ಎದ್ದುಬರುತ್ತಿರುವುದೋ ಎಂದು ಭಾಸವಾಗುತ್ತದೆ. ಕೆಲವು ಕ್ಷಣದಲ್ಲೇ ಮಹಾದೇವನ ಹಸನ್ಮುಖ ಸ್ಪಷ್ಟವಾಗುತ್ತ ಬರುತ್ತದೆ. ನಿಧಾನವಾಗಿ ದೇವನ ಅಘೋರ, ವಾಮದೇವ ಮುಖಗಳು ಸ್ಫುಟವಾಗಿ ಕಾಣತೊಡಗಿ ಮಹಾದೇವನ ವಿರಾಟಸ್ವರೂಪದ ದರ್ಶನವಾಗುತ್ತದೆ.

ಈ ಮಹಾದೇವನನ್ನು ಸೃಷ್ಟಿಸಿದ ಶಿಲ್ಪಿಯ ಕೌಶಲ ಮತ್ತು ತಪಸ್ಸಿದ್ಧಿ ಇಲ್ಲಿಯ ಇತರ ಶಿಲ್ಪಗಳಲ್ಲೂ ಕಂಡುಬರುತ್ತದೆ. ದ್ವಾರಪಾಲಕ ವಿಗ್ರಹಗಳನ್ನು ಬಿಟ್ಟರೆ ಇಲ್ಲಿಯ ಮುಖ್ಯ ಶಿಲ್ಪ ಗಳು ಎಂಟು ಮಾತ್ರ. ಇವೆಲ್ಲ ಶಿವಲೀಲಾಮೂರ್ತಿಗಳು. ಗೋಡೆಯ ಮೇಲೆ ವಿಶಾಲವಾದ ಸ್ಥಳ ದೊರೆಕಿದೆಡೆಗಳಲ್ಲಿ ಅರೆಗಂಬಗಳಿಂದಲಂಕರಿಸಿ ಮಧ್ಯೆ ಗೂಡಿನಂತೆ ಮಾಡಿ ಇವನ್ನು ಕೆತ್ತಲಾಗಿದೆ. ಇವೂ ಸುಮಾರು ನೆಲದಿಂದ ಮೇಲಿನವರೆಗೆ ಹಬ್ಬಿರುವ ಬೃಹತ್ ಶಿಲ್ಪಗಳೇ. ಇವುಗಳಲ್ಲಿ ಯಾವುದೋ ಕಾರ್ಯನಿರತನಾದ, ತತ್ಕಾರ್ಯ ಪೋಷಕವಾದ ಭಾವವನ್ನು ಬಹು ಚೆನ್ನಾಗಿ ವ್ಯಕ್ತಪಡಿಸುತ್ತಿರುವ ಶಿವನ ವಿಗ್ರಹವೇ ಪ್ರಧಾನ. ಇದರ ಸುತ್ತಲೂ ಇರುವ ಉಪದೇವತೆಗಳು ಮತ್ತು ಗಣಗಳೂ ಶಿವನಿಗಿಂತ ಗಾತ್ರದಲ್ಲಿ ಚಿಕ್ಕವಾಗಿ ತೋರಿಸಲ್ಪಟ್ಟಿದ್ದರೂ ಅವೂ ತಮ್ಮ ಸಹಜ ಭಾವಗಳೊಡನೆ ಚಿತ್ರಿತವಾಗಿವೆ. ಇಂಥ ಒಂದೊಂದು ಶಿಲ್ಪವನ್ನು ನೋಡಿದಾಗಲೂ ನಾಟಕದ ಸ್ತಬ್ಧದೃಶ್ಯವನ್ನು ನೋಡಿದಂತೆನಿಸುತ್ತದೆ. ವಸ್ತು ಮತ್ತು ಭಾವ ನಿರೂಪಣೆಯಲ್ಲಲ್ಲದೆ ಬೆಳಕು–ನೆರಳಿನ ಸಂಯೋಜನೆಗೂ ವಿವಿಧ ಶಿಲ್ಪಗಳ ಸ್ಥಳ ವಿನ್ಯಾಸಕ್ಕೂ ಶಿಲ್ಪಿ ವಿಶೇಷ ಗಮನವನ್ನಿತ್ತಿದ್ದಾನೆ. ಉದಾಹರಣೆಗೆ ಮುಂಬಾಗಿಲಿನ ಒಳಗೆ ಎದುರುಬದುರಾಗಿ ಎರಡು ಶಿಲ್ಪಗಳಿವೆ. ಬಲಗಡೆ ಇರುವುದು ನಟರಾಜ ವಿಗ್ರಹ, ಶಿವ ತನ್ನ ಅಷ್ಟಭುಜಗಳನ್ನೂ ಒಂದು ಕಾಲನ್ನೂ ಎತ್ತಿ ಅಪಸ್ಮಾರವನ್ನು ತುಳಿಯುತ್ತಾ ಧ್ವಂಸಮಾಡುತ್ತ ತನ್ನ ವಿರಾಟ್ ಶಕ್ತಿಯನ್ನು ಹೊರಚೆಲ್ಲುತ್ತಿರುವಂತಿದೆ. ಅದಕ್ಕೆ ನೇರ ಎದುರಿಗಿರುವುದು ಶಿವಲಕುಲೀಶನ ಶಿಲ್ಪ. ಅದೇ ಸರ್ವಶಕ್ತನಾದ ಮಹಾದೇವ. ಯಾವ ಅಬ್ಬರ, ಆವೇಶಗಳೂ ಇಲ್ಲದೆ ನಿರ್ವಿಕಾರ ನಾಗಿ ಮಹಾಯೋಗಿಯಾಗಿ ಅಂತರ್ಮುಖಿಯಾಗಿ ತಪೋಮಗ್ನನಾಗಿದ್ದಾನೆ. ಹಾಗೆಯೇ ಒಂದು ಶಿಲ್ಪದಲ್ಲಿ, ಪಾರ್ವತಿ ಯಾವುದೋ ಕಾರಣಕ್ಕಾಗಿ ಶಿವನ ಮೇಲೆ ಮುನಿಸಿಕೊಂಡು ಅವನಿಂದ ದೂರ ಕುಳಿತಿದ್ದರೆ, ಅದರ ಎದುರಿರುವ ರಾವಣ ಕೈಲಾಸ ವನ್ನೆತ್ತುತ್ತಿರುವ ಶಿಲ್ಪದಲ್ಲಿ ಅದೇ ಪಾರ್ವತಿ ರಾವಣನ ಕಾರ್ಯದಿಂದ ಬೆದರಿ ಶಿವನನ್ನು ಬಾಚಿ ತಬ್ಬಿಕೊಂಡಿದ್ದಾಳೆ. ಇನ್ನೊಂದು ಕಡೆ ಶಿವ ಅಂಧಕಾಸುರ ಸಂಹಾರಮೂರ್ತಿಯಾಗಿ ಭಯಂಕರನಾಗಿ ವ್ಯಕ್ತವಾಗಿದ್ದರೆ, ಅದರ ಎದುರಿನಲ್ಲಿ ಕಲ್ಯಾಣ ಸುಂದರಮೂರ್ತಿಯಾಗಿದ್ದಾನೆ. ಮಹೇಶ ಮೂರ್ತಿಯ ಇಕ್ಕೆಲಗಳಲ್ಲೂ ಇನ್ನೆರಡೂ ಶಿಲ್ಪಗಳಿದ್ದು ಪರಶಿವ ಪ್ರಕೃತಿ ಪುರುಷಾತ್ಮಕನೆಂಬ ಭಾವವನ್ನು ವ್ಯಕ್ತಪಡಿಸುವ ಅರ್ಧನಾರೀಶ್ವರ ಮತ್ತು ಗಂಗಾಧರ ಶಿವನ ರೂಪವನ್ನು ಸಾಕ್ಷಾತ್ಕರಿಸಿವೆ. ಈ ಒಂದೊಂದು ಶಿಲ್ಪವೂ ಎಲಿಫೆಂಟದ ಅನಾಮಿಕ ಶಿಲ್ಪಿಯ ತಪಸ್ಸಿದ್ಧಿಯ ಕುರುಹಾಗಿ, ಭಾರತೀಯ ಶಿಲ್ಪದ ಶ್ರೇಷ್ಠ ಸಾಧನೆಯಾಗಿ ಮೆರೆಯಬಲ್ಲುದು.

(ವಿ.ಎಸ್.ಎಸ್.;ಎಸ್.ಎನ್.)

**ಎಲಿಯಟ್, ಎಚ್. ಎಂ. ಮತ್ತು ಡೌಸನ್, ಜಾನ್:** 1808–53. ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ಎಂಟು ಸಂಪುಟಗಳ ಆಧಾರ ಗ್ರಂಥವನ್ನು ರಚಿಸಿರುವ ಪ್ರಸಿದ್ಧ ವಿದ್ವಾಂಸರು. ಎಲಿಯಟ್ 1808ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದ. ವಿಂಚೆಸ್ಟರ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ನೌಕರನಾಗಿ ಬಂಗಾಲಕ್ಕೆ ಬಂದ. ಎರಡು ಬಾರಿ ವಿದೇಶೀವ್ಯವಹಾರಗಳ ಖಾತೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ. 1849ರಲ್ಲಿ ಭಾರತ ಮುಸ್ಲಿಂ ಇತಿಹಾಸಕಾರರ ವಿವರವಾದ ಒಂದು ಪಟ್ಟಿಯನ್ನೂ ವಿಷಯ ಸೂಚಿಯೊಂದನ್ನೂ ಪ್ರಕಟಿಸಿದ. ಈತನ ಪ್ರಸಿದ್ಧಗ್ರಂಥವೆಂದರೆ ಹಿಸ್ಟರಿ ಆಫ್ ಇಂಡಿಯ ಆಸ್ ಟೋಲ್ಡ್ ಬೈ ಇಟ್ಸ್ ಓನ್ ಹಿಸ್ಟೋರಿಯನ್ಸ್. ಇದು ಅಮೂಲ್ಯ ಆಧಾರ ಗ್ರಂಥವೆನಿಸಿದೆ. ಈ ಗ್ರಂಥಕ್ಕಾಗಿ ಎಲಿಯಟ್ ಅನೇಕಾನೇಕ ಉರ್ದು, ಪಾರಸಿ ಮತ್ತು ಅರಬ್ಬೀ ಮೂಲ ಪ್ರತಿಗಳನ್ನು ಶೇಖರಿಸಿದ್ದಲ್ಲದೆ ಅವುಗಳ ಅಗತ್ಯ ಭಾಗಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದಾನೆ. ಈ ಮಹಾ ಸಂಪುಟದ ಮೊದಲ ಭಾಗ ಪ್ರಕಟವಾಗುವ ವೇಳೆಗೆ ಎಲಿಯಟ್ ಆಫ್ರಿಕದ ಗುಡ್‌ಹೋಪ್ ಭೂಶಿರದಲ್ಲಿ ತನ್ನ 45ನೆಯ ವಯಸ್ಸಿನಲ್ಲಿ ನಿಧನನಾದ (1853). ಗ್ರಂಥದ ಉಳಿದ ಕೆಲಸವನ್ನು ಪೂರೈಸುವ ಜವಾಬ್ದಾರಿಯನ್ನು ಎಲಿಯಟ್ಟನ ಪತ್ನಿಯು ಜಾನ್ ಡೌಸನ್ನನಿಗೆ ವಹಿಸಿದಳು. ಡೌಸನ್ ಆಗ ಸ್ಯಾಂಡ್‌ಹರ್ಸ್ಟಿನ ಸೈನಿಕ ಶಾಲೆಯೊಂದರ ಪ್ರಾಧ್ಯಾಪಕನಾಗಿದ್ದ. ಈ ಮಹಾಪಂಡಿತ 1867–77ರ ಅವಧಿಯಲ್ಲಿ ಉಳಿದ ಸಂಪುಟಗಳನ್ನು ಪರಿಶೀಲಿಸಿ ಪ್ರಕಟಿಸಿದ. ಇದರ ರಚನೆಗೆ 200 ಚರಿತ್ರಕಾರರನ್ನು ಆರಿಸಲಾಗಿದೆ. ಸು. 143 ಐತಿಹಾಸಿಕ ಗ್ರಂಥಗಳಿಂದ ವಿವರಣೆಗಳನ್ನು ಆರಿಸಲಾಗಿದೆ. ಇದರ ಪರಿಷ್ಕರಣೆ ಮಾಡುವಾಗ ಡೌಸನ್ ಅನೇಕ ಪ್ರಾಂತೀಯ ದಾಖಲೆಗಳು, ಜೀವನಚರಿತ್ರೆಗಳು, ಕಾಗದ ಪತ್ರಗಳು, ಐತಿಹಾಸಿಕ ಪ್ರಾಮುಖ್ಯವುಳ್ಳ ಭೌಗೋಳಿಕ ವಿಷಯಗಳು ಮುಂತಾದುವನ್ನು ಸಂಗ್ರಹಿಸಿ ಸೇರಿಸಿದ್ದಾನೆ. ಹೀಗೆ ಶೇಖರಗೊಂಡ ಹಸ್ತಪ್ರತಿಗಳ ಸಂಖ್ಯೆ ಸು.421. ಇವುಗಳಲ್ಲಿ ಹೆಚ್ಚಿನವು ಪಾರಸಿ ಭಾಷೆಯಲ್ಲಿವೆ. ಡೌಸನ್ ಈ ಗ್ರಂಥವನ್ನಲ್ಲದೆ ಕ್ಲ್ಯಾಸಿಕಲ್ ಡಿಕ್ಷನರಿ ಆಫ್ ಹಿಂದು ಮೈಥಾಲಜಿ ಅಂಡ್ ರಿಲಿಜನ್, ಜಿಯಾಗ್ರಫಿ, ಹಿಸ್ಟರಿ ಅಂಡ್ ಲಿಟರೇಚರ್ ಎಂಬ ಭಾರತದ ಪುರಾಣೇತಿಹಾಸ ಸಂಬಂಧವಾದ ನಿಘಂಟೊಂದನ್ನೂ ಬರೆದಿದ್ದಾನೆ.

(ಎಸ್.ಎಂ.ಎಚ್.;ಎಸ್.ಕೆ.ಎಸ್.)

**ಎಲಿಯಟ್, ವಾಲ್ಟರ್ ಸರ್:** 1803–87. ಭಾರತೀಯ ಸಂಸ್ಕೃತಿಶಾಸ್ತ್ರಜ್ಞನಾದ ಈತ ಪ್ರಾರಂಭದಲ್ಲಿ ಐ.ಸಿ.ಎಸ್. ಅಧಿಕಾರಿಯಾಗಿ ಭಾರತಕ್ಕೆ ಬಂದ (1821). ಮದರಾಸಿನ ಗವರ್ನರ್ ಲಾರ್ಡ್ ಎಲ್‌ಫಿನ್‌ಸ್ಟನ್‌ಗೆ ಕಾರ್ಯದರ್ಶಿಯಾಗಿ ಕೆಲಸಮಾಡಿದ. ಈತನಿಗೆ ಭಾರತದ ಪ್ರಾಚೀನ ಸಂಸ್ಕೃತಿಯ ಬಗ್ಗೆ ಅಮಿತವಾದ ಆಸಕ್ತಿ. ತನ್ನ ಕಚೇರಿಯ ಗುಮಾಸ್ತನ ಸಹಾಯದಿಂದ ಪ್ರಾಚೀನ ಲಿಪಿಗಳ ಅಧ್ಯಯನ ನಡೆಸಿ ಪುರಾತನ ಶಾಸನಗಳನ್ನು ಓದತೊಡಗಿದ. ಅನಂತರ ಭಾರತದ ಪ್ರಾಚೀನ ನಾಣ್ಯಗಳ ವಿಚಾರವಾಗಿ ಪರಿಶೋಧನೆ ಪ್ರಾರಂಭಿಸಿ, ಕಾಯಿನ್ಸ್ ಆಫ್ ಸೌತ್ ಇಂಡಿಯ ಎಂಬ ಗ್ರಂಥ ರಚಿಸಿದ. ಈ ಗ್ರಂಥ ಇಂಟರ್‌ನ್ಯಾಷನಲ್ ನ್ಯುಮಿಸ್‌ಮ್ಯಾಟಾ ಓರಿಯಂಟ್ಯಾಲಿಯ ಗ್ರಂಥದ ಒಂದು ಭಾಗವಾಗಿದೆ. 1877ರಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ. ಇವನ ಪರಿಶೋಧನ ಲೇಖನಗಳನ್ನು ಇಂಡಿಯನ್ ಆಂಟಿಕ್ವರಿ, ಜರ್ನಲ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ, ಜರ್ನಲ್ ಆಫ್ ದಿ ಎತ್ನಲಾಜಿಕಲ್ ಸೊಸೈಟಿ ಮುಂತಾದ ನಿಯತಕಾಲಿಕೆಗಳಲ್ಲಿ ಕಾಣಬಹುದು. (ಎ.ವಿ.ಎನ್.)

**ಎಲ್ಲೋರ:** ಮಹಾರಾಷ್ಟ್ರದಲ್ಲಿ ಗೋದಾವರಿಯ ಉಪನದಿಯೊಂದರ ದಂಡೆಯ ಮೇಲೆ, ಅಜಂತದಿಂದ ನೈರುತ್ಯದಲ್ಲಿ 46ಕಿಮೀ ದೂರದಲ್ಲೂ ಔರಂಗಾಬಾದಿನಿಂದ ವಾಯವ್ಯ ದಲ್ಲಿ ಸು.26ಕಿಮೀ ದೂರದಲ್ಲೂ ಇರುವ ಪ್ರಸಿದ್ಧ ಸ್ಥಳ. ಬೌದ್ಧ, ಹಿಂದು ಮತ್ತು ಜೈನ ಧರ್ಮಗಳಿಗೆ ಸೇರಿದ 34 ಗುಹೆಗಳೂ ಒಂದೇ ಕಲ್ಲಿನಲ್ಲಿ ಕಡೆಯಲಾಗಿರುವ ದ್ರಾವಿಡ ಶೈಲಿಯ ಸುಪ್ರಸಿದ್ಧ ಕೈಲಾಸ ದೇವಾಲಯವೂ ಇರುವ ಈ ಊರು ಭಾರತೀಯ ಕಲೆಯ ಮುಖ್ಯ ಕೇಂದ್ರಗಳಲ್ಲೊಂದಾಗಿದೆ. ಇಲ್ಲಿನ ಇಳಿಜಾರಾದ ಬೆಟ್ಟದ ಪಶ್ಚಿಮದ ಅಂಚಿನಲ್ಲಿ ಕಡೆದಿರುವ ಗುಹಾಂತರ ದೇವಾಲಯಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ದಕ್ಷಿಣದಲ್ಲಿರುವ 12 ಗುಹೆಗಳು ಬೌದ್ಧಧರ್ಮಕ್ಕೂ ಮಧ್ಯದ 17 ಗುಹೆಗಳು ಹಿಂದು ಧರ್ಮಕ್ಕೂ ಉತ್ತರದ ಅಂಚಿನ 5 ಗುಹೆಗಳು ಜೈನಧರ್ಮಕ್ಕೂ ಸೇರುತ್ತವೆ.

350–650ರ ಮಧ್ಯದಲ್ಲಿ ನಿರ್ಮಿತವಾದ ಬೌದ್ಧ ಚೈತ್ಯವಿಹಾರಗಳಲ್ಲಿ ಎರಡು ಗುಂಪು ಗಳಿದ್ದು ಮೊದಲ 5 ಗುಹೆಗಳು ದೇರ್ವ್ವಾರ ಗುಂಪಿಗೂ ಉಳಿದ 7 ಎರಡನೆಯ ಗುಂಪಿಗೂ ಸೇರುತ್ತವೆ. ಮೊದಲ ಗುಂಪಿನ ಗುಹೆಗಳಲ್ಲಿ ಮಹಾನ್ ವಾಡ ಎಂಬ ಕಂಬಗಳಿಂದ ಕೂಡಿದ್ದ ವಿಶಾಲ ಹಜಾರವನ್ನು ಪ್ರಾರ್ಥನಾ ಮಂದಿರವಾಗಿ ಬಳಸುತ್ತಿದ್ದರು. ಎರಡನೆಯ ಗುಂಪಿನ ಚೈತ್ಯ ಮಂದಿರದಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಈ ಎಲ್ಲ ಗುಹೆಗಳು ಒಂದಂತಸ್ತಿನವುಗಳಾಗಿದ್ದು



ತೀನ್‌ತಲ್ ಗುಹಾಲಯ

ಕೈಸಾಲೆ, ಕಂಬಗಳಿಂದ ಕೂಡಿದ್ದ ಹಜಾರ ಮತ್ತು ಚೈತ್ಯ ಅಥವಾ ಗರ್ಭಗುಡಿಯ ನ್ನೊಳಗೊಂಡಿ ರುತ್ತಿದ್ದವು. ಎರಡನೆಯ ಗುಂಪಿನ ಬೌದ್ಧ ಗುಹೆಗಳಲ್ಲಿ ವಿಶಾಲವಾದ ವಿಹಾರಗಳಿದ್ದು ಸುಂದರ ಚೈತ್ಯಗಳೂ ಇರುತ್ತಿದ್ದುವು. ಮುಂಭಾಗದಲ್ಲಿ ದೊಡ್ಡ ಪ್ರಾಂಗಣಗಳಿರುತ್ತಿದ್ದವು. ಅವುಗಳಲ್ಲಿ 3 ಗುಹೆಗಳು ಮೂರಂತಸ್ತಿನ ನಿರ್ಮಾಣಗಳಾಗಿವೆ. ತೀನ್ ತಲ್ ಅಥವಾ ಮೂರಂತಸ್ತಿನ ಭವನವೆಂದು ಹೆಸರಾದ 12ನೆಯ ಗುಹೆ ಗಮನಾರ್ಹವಾಗಿದೆ. ಸು. 40 ಭಿಕ್ಷುಗಳ ವಸತಿಗೆ ಅನುಕೂಲವಿರುವ ಈ ಗುಹೆಯ ಹಜಾರ ಇನ್ನೂ ಅಧಿಕ ಸಂಖ್ಯೆಯ ಭಿಕ್ಷುಗಳು ಪ್ರಾರ್ಥನೆ

ಧರ್ಮೋಪದೇಶಗಳಿಗಾಗಿ ಸೇರಲನುಕೂಲವಾಗಿತ್ತು. ಚೈತ್ಯಗೃಹದಲ್ಲಿ ಕುಳಿತಿರುವ ಬುದ್ಧ ಮತ್ತು ಇತರ ಮೂರ್ತಿಗಳಿವೆ. ಬೌದ್ಧ ಗುಹೆಗಳಲ್ಲೊಂದಾದ ವಿಶ್ವಕರ್ಮ (10ನೆಯದು) ಗುಹೆ ಸಮಕಾಲೀನ ಅಜಂತದ ಚೈತ್ಯವಿಹಾರಗಳನ್ನು ಹೋಲುತ್ತದೆ.

7ನೆಯ ಶತಮಾನದ ಅಂತ್ಯ ಮತ್ತು 8ನೆಯ ಶತಮಾನಗಳಲ್ಲಿ ಬೌದ್ಧ ಧರ್ಮ ಕ್ಷೀಣಿಸುತ್ತಿದ್ದಾಗ ಹಿಂದುಗಳ ಕಾರ್ಯರಂಗ ಇಲ್ಲಿ ಬೆಳೆಯಲಾರಂಭಿಸಿತು. ಬೌದ್ಧ ವಾಸ್ತುಶಿಲ್ಪಗಳ

ಏಕಶಿಲಾ ಕೈಲಾಸ ದೇವಾಲಯ

ಮಾದರಿಯಲ್ಲೇ ಆದರೂ ತಮ್ಮ ಸಂಪ್ರದಾಯಕ್ಕನುಸಾರವಾಗಿ ಮಾರ್ಪಡಿಸಿಕೊಂಡ ಈ ಗುಹೆಗಳಲ್ಲಿ 14ನೆಯ ರಾವಣ್–ಕಾ–ಖಾಇ, 15ನೆಯ ದಶಾವತಾರ, 16ನೆಯ ಕೈಲಾಸ, 21ನೆಯ ರಾಮೇಶ್ವರ ಮತ್ತು 29ನೆಯ ದುಮಾರ್ ಲೇನಾ ಅಥವಾ ಸೀತೆಯ ಸ್ನಾನದ ಗುಹೆಗಳು ಮುಖ್ಯವಾದುವು. ಕ್ರಮಾಗತವಾಗಿ ಬದಲಾವಣೆ ಹೊಂದುತ್ತಿದ್ದ ಈ ಗುಹಾಶೈಲಿಗಳಲ್ಲಿ ಮೊದಲನೆಯ ಗುಂಪಿಗೆ ಸೇರುವ ದಶಾವತಾರ ಗುಹೆ ಬೌದ್ಧ ಗುಹೆಗಳನ್ನು ಹೋಲುತ್ತದೆ. ಪ್ರದಕ್ಷಿಣ ಪಥವಿರುವ ರಾಮೇಶ್ವರ ಮತ್ತು ರಾವಣ್–ಕಾ–ಖಾಇ ಎರಡನೆಯ ಹಂತವನ್ನೂ ಶಿಲುಬೆಯಾಕೃತಿಯ ತಳಕಟ್ಟಿನ ಮಧ್ಯದಲ್ಲಿ ಗರ್ಭಗುಡಿಯಿರುವ ಮತ್ತು ಒಂದಕ್ಕಿಂತಲೂ ಹೆಚ್ಚು ಪ್ರವೇಶದ್ವಾರಗಳಿರುವ ದುಮಾರ್‌ಲೇನಾ ಗುಹೆ ಮೂರನೆಯ ಹಂತವನ್ನೂ ಕೊನೆಯದಾಗಿ ಗುಹೆಯ ಬದಲು ಕಟ್ಟಿದ ಭವನವನ್ನು ಹೋಲುವ, ಒಂದೇ ಕಲ್ಲಿನಲ್ಲಿ ಕೊರೆಯಲಾದ ಕೈಲಾಸ ದೇವಾಲಯ ನಾಲ್ಕನೆಯ ಹಂತವನ್ನೂ ಸೂಚಿಸುತ್ತವೆ. ರಾವಣ್–ಕಾ–ಖಾಇ ಗುಹೆಯ ದಕ್ಷಿಣದ ಗೋಡೆಯ ಮೇಲೆ ಮಹಿಷಾಸುರಮರ್ದಿನಿ, ತಾಂಡವನೃತ್ಯ ಮಗ್ನಶಿವ, ಕೈಲಾಸಪರ್ವತವನ್ನೆತ್ತುತ್ತಿರುವ ರಾವಣ, ಪಗಡೆಯಾಟದಲ್ಲಿ ತೊಡಗಿರುವ ಶಿವ ಪಾರ್ವತಿ ಮುಂತಾದ ಸುಂದರ ಶೈವಶಿಲ್ಪಗಳೂ ಉತ್ತರದ ಗೋಡೆಯ ಮೇಲೆ ದುರ್ಗೆ, ಲಕ್ಷ್ಮಿ, ವರಾಹ, ಲಕ್ಷ್ಮೀನಾರಾಯಣ ಮುಂತಾದ ವೈಷ್ಣವಶಿಲ್ಪಗಳೂ ಇವೆ. ಹೊರ ಭಾಗದಲ್ಲಿ ಗಣಪತಿ, ಸಪ್ತಮಾತೃಕೆಯರ ಶಿಲ್ಪಗಳಿವೆ. ದಶಾವತಾರ ಗುಹೆಯಲ್ಲೂ ಅನೇಕ ಉತ್ತಮ ದೇವತಾ ಮೂರ್ತಿಗಳನ್ನು ಕಡೆಯಲಾಗಿದೆ.

ಇಲ್ಲಿನ ಹಿಂದು ದೇವಾಲಯಗಳಲ್ಲೆಲ್ಲ ಅಮೋಘವಾದುದು ರಾಷ್ಟ್ರಕೂಟ ದೊರೆ ಒಂದನೆಯ ಕೃಷ್ಣನ (756–75) ಆಶ್ರಯದಲ್ಲಿ ನಿರ್ಮಿಸಲ್ಪಟ್ಟ ಶಿವನ ವಾಸಸ್ಥಾನವಾದ ಕೈಲಾಸಪರ್ವತದ ಪ್ರತೀಕವಾಗಿ ಒಂದೇ ಶಿಲೆಯಲ್ಲಿ ಕಡೆಯಲಾಗಿರುವ ಕೈಲಾಸ ದೇವಾಲಯ. ಇದನ್ನು ಅತ್ಯಮೋಘವಾದ ಧಾರ್ಮಿಕ ಸಾಧನೆಯೆಂದೂ ಮಾನವನ ಮನಸ್ಸು ಹೃದಯ ಮತ್ತು ಕರಗಳು ಒಂದು ಉದಾತ್ತ ಧ್ಯೇಯ ಸಾಧನೆಗೆ ಒಮ್ಮುಖವಾಗಿ ಶ್ರಮಿಸಿರುವುದರ ನಿದರ್ಶನವೆಂದೂ ಪರ್ಸಿಬ್ರೌನ್ ಶ್ಲಾಘಿಸಿದ್ದಾನೆ. 7.5ಮೀ ಎತ್ತರದ ಜಗತಿಯ ಮೇಲೆ ಇರುವ 45×30ಮೀ ವಿಶಾಲವಾದ ಈ ಮಂದಿರ ಆನೆ ಮತ್ತು ಸಿಂಹಗಳ ಸಾಲುಗಳಿಂದ ಲಂಕೃತವಾಗಿದೆ. ಎರಡಂತಸ್ತಿನ ಗುಡಿಗೆ ಸೇರಿದಂತೆ ಸಣ್ಣ ದೇವತಾ ಗೃಹಗಳೂ ವಿಹಾರಗಳೂ ಇದ್ದು ಹೊರಭಾಗದ ಮಹಾದ್ವಾರದೊಂದಿಗೆ ಕಲ್ಲಿನ ಸೇತುವೆಯ ಮೂಲಕ ಸಂಪರ್ಕ ಪಡೆದಿದೆ. 95 ಅಡಿಗಳೆತ್ತರದ ಈ ದೇವಾಲಯದ ವಿಮಾನದಲ್ಲಿ ಮೂರಂತಸ್ತುಗಳಿವೆ. ಗೋಡೆಗಳ ಮೇಲೆ ರಾಮಾಯಣದ ದೃಶ್ಯಗಳನ್ನು ಕೆತ್ತಲಾಗಿದೆ. ಮುಂಭಾಗದಲ್ಲಿ 15ಮೀ ಎತ್ತರದಲ್ಲಿ ನಂದಿ ಮಂಟಪವೂ ಅದರ ಇಕ್ಕೆಲಗಳಲ್ಲಿ ಧ್ವಜಸ್ತಂಭಗಳೂ ನಿರ್ಮಿತವಾಗಿವೆ. ಕೈಲಾಸ ದೇವಾಲಯದಿಂದ ಉತ್ತರಕ್ಕೆ 2.4ಕಿಮೀ ದೂರದಲ್ಲಿರುವ, ಪ್ರಾಯಶಃ 9ನೆಯ ಶತಮಾನದಲ್ಲಿ ನಿರ್ಮಾಣವಾದ 5 ಜೈನಗುಹೆಗಳಲ್ಲಿ ಮುಖ್ಯವಾದುವು ಇಂದ್ರ ಸಭಾ ಮತ್ತು ಜಗನ್ನಾಥ ಗುಹೆಗಳು. (ಬಿ.ಕೆ.ಜಿ.;ಕೆ.ಎಸ್.ಎಸ್.)

# ಏ

**ಏರಣ್:** ಮಧ್ಯಪ್ರದೇಶ ರಾಜ್ಯದ ಸಾಗರ ಜಿಲ್ಲೆಯ ಬೀನ ನದಿದಂಡೆಯಲ್ಲಿರುವ ಪುರಾತತ್ತ್ವ ನೆಲೆ. ಕನ್ನಿಂಗ್‌ಹ್ಯಾಮ್ ಇಲ್ಲಿ ವಾಸ್ತುಶಿಲ್ಪ, ಶಾಸನ ಮತ್ತು ನಾಣ್ಯಗಳನ್ನು ಶೋಧಿಸಿದ. ಇಲ್ಲಿ ಏರಾಕನ್ಯ ಎಂದು ಬ್ರಾಹ್ಮಿಲಿಪಿಯಲ್ಲಿ ಬರೆದಿರುವ ನಾಣ್ಯಗಳು ದೊರೆತಿವೆ. ಇದಲ್ಲದೆ ಸಮುದ್ರಗುಪ್ತ, ಹೂಣರ ತೋರಮಾನ, ಭಾನುಗುಪ್ತನ ಶಾಸನಗಳು ದೊರೆತಿವೆ. 2ನೆಯ ಚಂದ್ರಗುಪ್ತ ಇಲ್ಲಿ ಒಂದು ವಿಷ್ಣು ದೇವಾಲಯವನ್ನು ನಿರ್ಮಿಸಿದ. ಭಾನುಗುಪ್ತ ಈ ನಗರವನ್ನು (ಮಾಳ್ವದ) ಆಡಳಿತ ಘಟಕವಾಗಿ ಐರಣಿಕ ಎಂಬ ಹೆಸರಿನಲ್ಲಿ ಸ್ಥಾಪಿಸಿದ. ಇಲ್ಲಿಯ ವಿಶ್ವರೂಪ ದರ್ಶನದ ಬೃಹತ್ ಏಕಶಿಲಾ ವರಾಹ ಶಿಲ್ಪವೂ ಸುಪ್ರಸಿದ್ಧ.

ನೃ–ಭೂವರಾಹ

1960–65ರಲ್ಲಿ ಸಾಗರ್ ವಿಶ್ವವಿದ್ಯಾಲಯದ ಕೆ.ಡಿ.ವಾಜಪೇಯಿ ಅವರು ಕೈಗೊಂಡ ಉತ್ಖನನದಿಂದ ಇಲ್ಲಿ ತಾಮ್ರ–ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳು ದೊರೆತಿವೆ. ಈ ನೆಲೆಯಲ್ಲಿ ಮೂರು ಸಾಂಸ್ಕೃತಿಕ ಹಂತಗಳನ್ನು ವಿಂಗಡಿಸಲಾಗಿದೆ.

ಹಂತ 1ರಲ್ಲಿ ಕಲ್ಲಿನ ಉಪಕರಣಗಳು, ವಿವಿಧ ಬಗೆಯ ಮಣ್ಪಾತ್ರೆಗಳು ಹಾಗೂ ತಾಮ್ರದ ವಿವಿಧ ಆಕೃತಿಗಳು ದೊರೆತಿವೆ. ಕೆಂಪು, ಕಪ್ಪು, ಬೂದು ಹಾಗೂ ಕೆಂಪು–ಕಪ್ಪು ದ್ವಿವರ್ಣ ಮಡಕೆಗಳ ಮೇಲೆ ವಿವಿಧ ರೇಖಾ ಚಿತ್ರಗಳಿವೆ. ಸುಡಾವೆಮಣ್ಣಿನ ಚಿತ್ರಗಳು, ಕಲ್ಲಿನಿಂದ ಮಾಡಿದ ಬಳೆ, ಚೆಂಡು, ಬೀಸುವಕಲ್ಲು ಹಾಗೂ ಮೂಳೆಯ ಕೆಲವು ಅವಶೇಷಗಳು ದೊರೆತಿವೆ. ಇಂಗಾಲ–14ರ ಆಧಾರದ ಮೇಲೆ ತಾಮ್ರ–ಶಿಲಾಯುಗ ಸಂಸ್ಕೃತಿಯನ್ನು ಪ್ರ.ಶ.ಪೂ.2100–700ರ ಕಾಲಾವಧಿಯದೆಂದು ನಿಗದಿಪಡಿಸಲಾಗಿದೆ. ಹಂತ 2ರಲ್ಲಿ (ಪ್ರ.ಶ.ಪೂ.00–ಪ್ರ.ಶ.100) ಆದಿ ಕಬ್ಬಿಣಯುಗ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳಿದ್ದವು. ಇದಲ್ಲದೆ ಸುಡಾವೆಮಣ್ಣಿನ ಗೊಂಬೆಗಳು, ಮುದ್ರಾಂಕಿತ ನಾಣ್ಯಗಳು, ಸುಟ್ಟ ಇಟ್ಟಿಗೆಗಳು, ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆಗಳಿದ್ದವು. ಹಂತ 3ರಲ್ಲಿ ಹೊಳಪಿನ ಕೆಂಪು ಮಣ್ಪಾತ್ರೆಗಳು, ಕಲ್ಲು ಮತ್ತು ಇಟ್ಟಿಗೆ ಕಟ್ಟಡ ಅವಶೇಷಗಳು, ಪಶ್ಚಿಮ ಕ್ಷತ್ರಪ, ನಾಗಾ, ಗುಪ್ತದೊರೆ ರಾಮಗುಪ್ತ ಮತ್ತು ಹೂಣರ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರೆತಿವೆ. ಕೆಲವು ಮಣ್ಣಿನ ಮುದ್ರೆಗಳಲ್ಲಿ ಮಹಾದಂಡ ನಾಯಕ ಸಿಂಹನಂದಿ ಎಂಬ ಬರೆಹ, ಗಜಲಕ್ಷ್ಮಿಯ ಚಿಹ್ನೆಗಳಿವೆ. ವಿವಿಧ ಚಿತ್ರಗಳುಳ್ಳ ಸುಡಾವೆ ಮಣ್ಣಿನ ಫಲಕಗಳು, ಮಹಿಷಾಸುರ ಮರ್ದಿನಿ ಶಿಲಾವಿಗ್ರಹ ಹಾಗೂ ಕಲ್ಲು, ಮೂಳೆ, ತಾಮ್ರ ಮತ್ತು ಕಬ್ಬಿಣದ ವಿವಿಧ ವಸ್ತುಗಳು ದೊರೆತಿವೆ. ಈ ಹಂತ 6ನೆಯ ಶತಮಾನದವರೆಗೂ ಮುಂದುವರೆಯಿತು. ಅನಂತರ ಮಧ್ಯಯುಗೀನ ಹಂತದಿಂದ ಆಧುನಿಕ ಕಾಲದವರೆಗೂ ಇಲ್ಲಿ ಜನವಾಸ್ತವ್ಯ ಮುಂದುವರೆಯಿತು. (ಡಿ.ಎಂ.ಎಸ್.)

**ಏಷ್ಯ:** ಪ್ರಪಂಚದ ಅತ್ಯಂತ ದೊಡ್ಡ ಖಂಡ. ಇದು ಭೂಪ್ರದೇಶದ ಮೂರನೆಯ ಒಂದು ಭಾಗವನ್ನಾವರಿಸಿದೆ.

**ಇತಿಹಾಸ:** ಐದಾರು ಸಾವಿರ ವರ್ಷಗಳಷ್ಟು ದೀರ್ಘವಾದದ್ದು. ಸಂಕುಚಿತಾರ್ಥದಲ್ಲಿ ಏಷ್ಯವೆಂದರೆ ಏಜಿಯನ್‌ಗೆ ಪೂರ್ವಕ್ಕಿದ್ದ ರೋಮನರ ಪ್ರಾಂತ್ಯ. ಆಗ ಇದರಲ್ಲಿ ಮಿಸಿಯ, ಲಿಡಿಯ, ಕೇರಿಯ ಮತ್ತು ಫ್ರಿಜಿಯಗಳು ಅಡಕವಾಗಿದ್ದುವು. ಕಾಲಕ್ರಮೇಣ ಏಷ್ಯ ಪ್ರಾಂತ್ಯದಲ್ಲಿ ರೋಮನ್ನರು ಅನೇಕ ಬದಲಾವಣೆಗಳನ್ನು ಮಾಡಿದರು. ಈಗ ಇಡೀ ಖಂಡಕ್ಕೇ ಏಷ್ಯ ಎಂಬ ಹೆಸರಿದೆ.

ಏಷ್ಯದ ಜನಾಂಗಗಳಲ್ಲಿ ಏಕರೂಪತೆ ಇಲ್ಲ. ಉದಾಹರಣೆಗೆ ತುರ್ಕರು, ಭಾರತೀಯರು, ಚೀನಿಯರು ಮತ್ತು ಜಪಾನೀಯರ ನಡುವೆ ಅನೇಕ ವ್ಯತ್ಯಾಸಗಳಿವೆ. ಏಷ್ಯದಲ್ಲಿನ ಸಂಸ್ಕೃತಿಗಳ ಹಿನ್ನೆಲೆಯನ್ನು ಅಭ್ಯಾಸ ಮಾಡಿದಾಗ ವ್ಯಕ್ತಿಗಳು ಪ್ರಧಾನವಲ್ಲ. ಸಮಾಜದಲ್ಲಿನ ಕುಟುಂಬ ಜೀವನವೂ ರಾಜಕೀಯ ಜೀವನವೂ ವಿಶಿಷ್ಟವಾಗಿ ಎದ್ದು ಕಾಣುತ್ತವೆ. ಆದ್ದರಿಂದ ಏಷ್ಯದ ಇತಿಹಾಸವೂ ಸರಳವಾದ ಹಾಗೂ ವಿಶಾಲವಾದ ರೂಪರೇಷೆಗಳನ್ನು ಪಡೆದಿದೆ. ಯುರೋಪಿನ ಇತಿಹಾಸಕ್ಕಿಂತಲೂ ಏಷ್ಯದ ಇತಿಹಾಸ ಬಹಳ ದೊಡ್ಡದು. ಆದರೆ ಏಷ್ಯದ ಇತಿಹಾಸವನ್ನು ಸಮಗ್ರವಾಗಿ ನೋಡಿದಾಗ ಯುರೋಪಿಯನ್ನರ ಇತಿಹಾಸದಲ್ಲಿ ಕಂಡುಬರುವಂಥ ಕುತೂಹಲ ಪೂರ್ಣ, ವಿಶಿಷ್ಟ ಘಟನಾವಳಿಗಳೂ ವ್ಯಕ್ತಿಗಳೂ ಕಂಡುಬರುವುದಿಲ್ಲವೆನ್ನಬಹುದು. ಆದರೂ ಏಷ್ಯದ ಇತಿಹಾಸದಲ್ಲಿ ಬರುವ ಚೆಂಗೇಷ್‌ಖಾನ್ ಮತ್ತು ತೈಮೂರರು ನೆಪೋಲಿಯನ್ ಮತ್ತು ಹಿಟ್ಲರರನ್ನೂ ಮೀರಿಸಿದವರೆನ್ನಬಹುದು. ಅಷ್ಟೇ ಅಲ್ಲ, ಪ್ರಪಂಚದ ಇತಿಹಾಸದ ಮೇಲೆ ಪ್ರಭಾವ ಬೀರಿದ ಯೇಸು, ಬುದ್ಧ, ಮಹಮ್ಮದರಂಥವರು ಹುಟ್ಟಿ ಬಾಳಿದ್ದು ಏಷ್ಯದಲ್ಲಿ.

ಹಿಂದು, ಜೈನ, ಬೌದ್ಧ, ಕ್ರಿಸ್ತ, ಇಸ್ಲಾಂ, ಜುಡಾಯಿಸಮ್, ಪಾರ್ಸಿ, ತಾವೊ ಮುಂತಾದ ಧರ್ಮಗಳು ಹುಟ್ಟಿದ್ದೂ ಏಷ್ಯದಲ್ಲೆ. ಬ್ಯಾಬಿಲೋನಿಯ ನಾಗರಿಕತೆಯನ್ನು ಬಿಟ್ಟರೆ, ಪ್ರ.ಶ.ಪೂ. 1500ಕ್ಕಿಂತ ಹಿಂದಿನ ಏಷ್ಯದ ಇತಿಹಾಸವನ್ನು ಸಮಗ್ರವಾಗಿ ಅಭ್ಯಾಸ ಮಾಡುವುದು ಕಷ್ಟ. ಏಕೆಂದರೆ ಆ ಕಾಲಕ್ಕೆ ಸಂಬಂಧಿಸಿದಂತೆ ದೊರೆತಿರುವ ಆಧಾರಗಳು ಕಡಿಮೆ. ಹೆಚ್ಚಾಗಿ ಊಹೆಯಿಂದಲೇ ಮುಂಚಿನ ಇತಿಹಾಸವನ್ನು ಚಿತ್ರಿಸಿಕೊಳ್ಳಬೇಕಾಗಿದೆ. ಭಾರತದಲ್ಲಿ 5000 ವರ್ಷಗಳಷ್ಟು ಹಿಂದೆ ಇದ್ದ ಹರಪ್ಪ ನಾಗರಿಕತೆ ಬೆಳಕಿಗೆ ಬಂದಿದೆ. ಪ್ರ.ಶ.ಪೂ.ಸು.1500ರ ವೇಳೆಗೆ ಚೀನಿಯರು ಹ್ವಾಂಗ್ ಹೊ ನದಿಯ ತೀರದಲ್ಲಿ ಬಂದು ನೆಲೆಸುತ್ತಿದ್ದರು; ಆರ್ಯರು ಭಾರತದವರೆಂದು ಒಂದು ಅಭಿಪ್ರಾಯ. ಆಫ್ಘಾನಿಸ್ತಾನ ಪ್ರದೇಶದಲ್ಲಿದ್ದ ಇವರು ಸಿಂಧೂ ಬಯಲಿನ ಕಡೆಗೆ ವಲಸೆ ಬಂದರೆಂದು ಇನ್ನೊಂದು ಅಭಿಪ್ರಾಯವಿದೆ. ಬ್ಯಾಬಿಲೋನಿಯದ ಕೀರ್ತಿ ಮತ್ತು ಪ್ರಭಾವ ಅತಿ ಹೆಚ್ಚಿನದಾಗಿತ್ತು.

ಏಷ್ಯದ ರಾಷ್ಟ್ರಗಳು ಪಾಶ್ಚಾತ್ಯರ ಹತೋಟಿಗೆ ಬಂದ ವಿಷಯವನ್ನು ಬಿಟ್ಟು, ಸು.2000 ವರ್ಷಗಳ ಏಷ್ಯದ ಇತಿಹಾಸದಲ್ಲಿ ಪ್ರಮುಖವಾಗಿ ಚೀನಿ, ಭಾರತೀಯ, ಮುಸ್ಲಿಂ ಮತ್ತು ಮಧ್ಯ ಏಷ್ಯ-ಹೀಗೆ ನಾಲ್ಕು ಪ್ರಭಾವಗಳನ್ನು ಕಾಣಬಹುದು. ಇವುಗಳಲ್ಲಿ ಮೊದಲ ಮೂರು ಪ್ರಭಾವಗಳು ಭಿನ್ನ ಸಂಸ್ಕೃತಿಗಳ ಪ್ರತೀಕಗಳಾಗಿವೆ. ನಾಲ್ಕನೆಯದು ನವೀನವಲ್ಲದಿದ್ದರೂ ವಿವಿಧ ಜನಾಂಗಗಳನ್ನು ಒಂದು ಕಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯುವುದರಲ್ಲೂ ರಾಜಕೀಯ ಬಲವನ್ನು ಹಂಚುವುದರಲ್ಲೂ ಹೆಚ್ಚಿನ ಪಾತ್ರ ವಹಿಸಿದೆ.

ಪೂರ್ವ ಏಷ್ಯದ ನಾಗರಿಕತೆಗಳ ಮೇಲೆ ಚೀನ ತನ್ನದೇ ಆದ ಮುದ್ರೆಯನ್ನೊತ್ತಿದೆ. ಕೊರಿಯ, ಜಪಾನ್ ಮತ್ತು ವಿಯೆಟ್ನಾಂಗಳು ಚೀನದ ನೇರ ಪ್ರಭಾವಕ್ಕೆ ಒಳಗಾದ ಪ್ರದೇಶಗಳು. ಹೊರವಲಯದಲ್ಲಿ ಮಂಗೋಲಿಯ, ಟಿಬೆಟ್, ಸಯಾಂ, ಕಾಂಬೋಡಿಯ ಮತ್ತು ಬರ್ಮ ಗಳಿವೆ. ಈ ಪ್ರದೇಶಗಳಲ್ಲಿ ಭಾರತೀಯ ಹಾಗೂ ಚೀನಿ ನಾಗರಿಕತೆಗಳ ಪ್ರಭಾವಗಳು ಸಮ್ಮಿಶ್ರ ಗೊಂಡಿವೆ. ಭಾರತೀಯರ ಪ್ರಭಾವ ಸ್ವಲ್ಪ ಹೆಚ್ಚಿನದು ಎಂದೇ ಹೇಳಬಹುದು. ಚೀನೀಯರ ಪ್ರಭಾವ ಹೆಚ್ಚಾಗಿದ್ದ ಪ್ರದೇಶಗಳಲ್ಲಿ ಕನ್‌ಫ್ಯೂಷಿಯನ್ ಮತ ಪ್ರಮುಖವಾಯಿತು. ಇದರ ಜೊತೆಗೆ ವಿಶಿಷ್ಟ ಚೀನಿ ಕಲೆಯೂ ಬರೆವಣಿಗೆಯ ಕ್ರಮವೂ ಹಬ್ಬಿದವು.

ಭಾರತೀಯ ಪ್ರಭಾವ ಮುಖ್ಯವಾಗಿ ಬೌದ್ಧಧರ್ಮದ ಪ್ರಸಾರದಿಂದ ಬಂದದ್ದು ಎನ್ನ ಬಹುದು. ಇಂಡೊಚೀನ, ಮಲೆಯ ಪರ್ಯಾಯದ್ವೀಪ, ಟಿಬೆಟ್ ಮತ್ತು ಮಂಗೋಲಿಯ ಗಳು ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟ ಪ್ರದೇಶಗಳು. ಚೀನ ಮತ್ತು ಜಪಾನ್ ದೇಶಗಳು ಹೆಚ್ಚಾಗಿ ಬೌದ್ಧಧರ್ಮವನ್ನು ಅವಲಂಬಿಸಿದ್ದರಿಂದ, ಆ ದೇಶಗಳೂ ಭಾರತದ ಸಂಸ್ಕೃತಿಯ ಪ್ರಭಾವ ವಲಯಕ್ಕೊಳಗಾದ ಪ್ರದೇಶಗಳೆಂದು ಹೇಳಬಹುದು. ಆದರೆ ಈ ಪ್ರಭಾವ ಪರಸ್ಪರವಲ್ಲ. ಏಕೆಂದರೆ ಚೀನಿಯರ ಕಲೆ, ಸಾಹಿತ್ಯ ಅಥವಾ ಧರ್ಮನೀತಿ ಯಾವುದೂ ಭಾರತದ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿಲ್ಲ. ಆದರೆ ಬೌದ್ಧಧರ್ಮ ಪ್ರಭಾವ ಮತಕ್ಕೆ ಮಾತ್ರವೇ ಸೀಮಿತಗೊಳ್ಳದೆ, ಅದರ ಜೊತೆಗೆ ಭಾರತೀಯ ಕಲೆ ಮತ್ತು ಸಾಹಿತ್ಯವೂ ಜಾವ, ಕಾಂಬೋಡಿಯಗಳಲ್ಲಿ ಅವರ ವರ್ಣಮಾಲೆಯೂ ಪ್ರಭಾವ ಬೀರಿದುವು.

ಇಸ್ಲಾಂಧರ್ಮ ಪಶ್ಚಿಮ ಏಷ್ಯದಲ್ಲಿ ಹೆಚ್ಚು ಪ್ರಭಾವಯುತವಾಯಿತು. ಇಂದಿಗೂ ಅದು ಆ ಪ್ರದೇಶದಲ್ಲಿ ವಾಸಮಾಡುತ್ತಿರುವ ಜನಾಂಗದ ಮುಖ್ಯ ಧರ್ಮ. ಉತ್ತರ ಮತ್ತು ಮಧ್ಯ ಭಾರತದಲ್ಲಿ ಇಸ್ಲಾಂ ಪ್ರಬಲಗೊಂಡಿತು. ಇಂದಿಗೆ ಒಟ್ಟು ಜನಸಂಖ್ಯೆಯ 1/5ರಷ್ಟು ಜನ ಆ ಧರ್ಮದ ಅನುಯಾಯಿಗಳಾಗಿದ್ದಾರೆ. ಭಾರತದಿಂದ ಪೂರ್ವಕ್ಕೆ ಮಲೆಯ ಮತ್ತು ಇಂಡೊನೇಷ್ಯಗಳಿಗೆ ಈ ಮತ ಹಬ್ಬಿ ಅಲ್ಲಿದ್ದ ಹಿಂದುಧರ್ಮದ ಪ್ರಭಾವವನ್ನು ಮೀರಿ ತನ್ನ ಪ್ರಾಬಲ್ಯ ಸ್ಥಾಪಿಸಿತು. ಇಂಡೊ-ಚೀನದಲ್ಲಾಗಲಿ, ಜಪಾನಿನಲ್ಲಾಗಲಿ, ಇಸ್ಲಾಂ ಹೆಚ್ಚಿನ ಪ್ರಗತಿ ಸಾಧಿಸಲಿಲ್ಲ. ಚೀನದ ಸಿಂಕಿಯಾಂಗ್ ಪ್ರಾಂತ್ಯದಲ್ಲಿ ಮುಸ್ಲಿಮರಿದ್ದಾರೆ. ಇಸ್ಲಾಂ ತನ್ನದೇ ಆದ ಕಲೆ ಮತ್ತು ನಾಗರಿಕತೆಗಳನ್ನು ಈ ಪ್ರದೇಶಗಳಿಗೆ ಕೊಂಡೊಯ್ದಿದೆ. ಅರಬ್ಬೀ ಅಕ್ಷರ ಮಾಲೆ ಮತ್ತು ಅರಬ್ಬೀ ಭಾಷೆ, ಪದಸಂಪತ್ತು ಎಲ್ಲವೂ ಇಸ್ಲಾಂ ಧರ್ಮದೊಡನೆ ಈ ಪ್ರದೇಶಕ್ಕೆ ಬಂದವು.

ಮಧ್ಯ ಏಷ್ಯದ ಅನೇಕ ಜನಾಂಗಗಳು ಏಷ್ಯದ ಇತಿಹಾಸದಲ್ಲಿ ಹೆಚ್ಚಿನ ಪಾತ್ರ ವಹಿಸಿದ್ದರೂ ಅವಕ್ಕೆ ಸಾಮಾನ್ಯವಾದ ಒಂದೇ ಹೆಸರಿಲ್ಲದೆ ಇರುವುದರಿಂದ ಅವುಗಳ ಪಾತ್ರವನ್ನು ಇತಿಹಾಸದಲ್ಲಿ ಗುರುತಿಸುವುದು ಕಷ್ಟದ ಕೆಲಸ. ತುರ್ಕರು, ಮಂಗೋಲರು ಮತ್ತು ಹೂಣರು ಎಂದು ಈ ಜನಾಂಗಗಳನ್ನು ಗುರುತಿಸಬಹುದು. ಪ್ರಚಲಿತ ಶಕದ ಆರಂಭದಲ್ಲಿ ಮಧ್ಯ ಏಷ್ಯ ಕುದಿದೆದ್ದು, ಇಲ್ಲಿನ ಜನ ಹಲವಾರು ಧಾಳಿಗಳಿಗೆ ಕಾರಣರಾದರೂ ಆವರ್‌ಗಳೂ (ಪ್ರಶ.ಸು. 600-900) ಹೂಣರೂ (ಪ್ರ.ಶ.ಸು.400-500) ಬಲ್ಗೇರಿಯನ್ನರೂ (ಪ್ರ.ಶ.ಸು.7ನೆಯ ಶತಮಾನ) ಯುರೋಪಿನ ಮೇಲೆ ಮಾಡಿದ ಆರಂಭದ ಧಾಳಿಗಳೂ ಮಂಗೋಲರು ರಷ್ಯದ ಮೇಲೆ ನಡೆಸಿದ ಧಾಳಿಯೂ ತೈಮೂರನ ದಂಡಯಾತ್ರೆಯೂ ತುರ್ಕರ ಪಶ್ಚಿಮ ಏಷ್ಯನ್ ಮತ್ತು ಪೂರ್ವ ಯುರೋಪಿಯನ್ ಆಕ್ರಮಣವೂ ಮೊಗಲರ ಭಾರತದ ಆಕ್ರಮಣವೂ ಕುಬ್ಲೈಖಾನನ ನೇತೃತ್ವದಲ್ಲಿ ಮಂಗೋಲರು ಚೀನದ ಮೇಲೆ ನಡೆಸಿದ ಆಕ್ರಮಣವೂ ಅನಂತರ ಮಂಚುಗಳ ಚೀನದೇಶದ ಆಕ್ರಮಣವೂ ಉದಾಹರಣೆಗಳು. ಇವುಗಳ ಜೊತೆಗೆ ಭಾರತ, ಚೀನ ಮತ್ತು ಪರ್ಷಿಯಗಳ ಮೇಲೆ ಮಧ್ಯ ಏಷ್ಯದ ಬುಡಕಟ್ಟಿನವರು ನಡೆಸಿದ ಸಣ್ಣಪುಟ್ಟ ದಂಡಯಾತ್ರೆಗಳನ್ನೂ ಸೇರಿಸಬಹುದು. ಆಡಳಿತಕ್ಕಿಂತ ಹೆಚ್ಚಾಗಿ ಯುದ್ಧಪ್ರೇಮಿ ಗಳಾಗಿದ್ದ ಈ ಜನ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸತತವಾಗಿ ಹೋಗುತ್ತಿದ್ದುದರಿಂದ ಇವರು ಮತೀಯ ಹಾಗೂ ಸಾಂಸ್ಕೃತಿಕ ಭಾವನೆಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೊಂಡೊಯ್ಯುವ ಮಧ್ಯವರ್ತಿಗಳಾದರು. ಭಾರತದಲ್ಲಿ ಇಸ್ಲಾಂ ಧರ್ಮವೂ ಯುರೋಪಿನಲ್ಲಿ ಗ್ರೀಕ್-ಬ್ಯಾಕ್ಟ್ರಿಯನ್ ನಾಗರಿಕತೆಯೂ ಹಬ್ಬಲು ಇವರೇ ಕಾರಣರೆನ್ನ ಬಹುದು. ಮಧ್ಯ ಏಷ್ಯದಲ್ಲಿ ಚೀನ, ಭಾರತ, ಇರಾನ್ ಮತ್ತು ಗ್ರೀಕ್ ಸಂಸ್ಕೃತಿಗಳ ಮಿಶ್ರಣ ದಿಂದುಂಟಾದ ಒಂದು ಸಂಸ್ಕೃತಿ ಇದ್ದ ವಿಷಯ ಈಚಿನ ಸಂಶೋಧನೆಗಳಿಂದ ಬೆಳಕಿಗೆ ಬಂದಿದೆ.

ಅತ್ಯಂತ ಪೂರ್ವಕಾಲದಲ್ಲಿ ಬ್ಯಾಬಿಲೋನಿಯ ಮತ್ತು ಅಸ್ಸೀರಿಯಗಳು ಸಂಸ್ಕೃತಿಯ ಕೇಂದ್ರಗಳಾಗಿದ್ದುವು. ಪ್ರ.ಶ.ಪೂ.7ನೆಯ ಶತಮಾನದ ವೇಳೆಗೆ ಈ ರಾಜ್ಯಗಳು ಕ್ಷೀಣಸ್ಥಿತಿಗೆ ಬಂದವು. ಅವುಗಳ ಸ್ಥಾನವನ್ನು ಪರ್ಷಿಯನ್ ಸಾಮ್ರಾಜ್ಯ ಆಕ್ರಮಿಸಿಕೊಂಡಿತು. ಸುಮೇರಿಯನ್ ನಾಗರಿತೆಯೂ ವೈಶಿಷ್ಟ್ಯಪೂರ್ಣವಾದದ್ದು. ಪ್ರ.ಶ.ಪೂ.4000 ದಷ್ಟು ಹಿಂದಿನ ಬರೆವಣಿಗೆ ಗಳನ್ನು ಸುಮೇರಿಯನ್ನರು ಬಿಟ್ಟುಹೋಗಿದ್ದಾರೆ. ಯೂಫ್ರೆಟೀಸ್ ಮತ್ತು ಟೈಗ್ರಿಸ್ ನದಿಗಳ ನಡುವಣ ಫಲವತ್ತಾದ ಪ್ರದೇಶ (ಮೆಸಪೊಟೇಮಿಯ) ಅನೇಕ ನಾಗರಿಕತೆಗಳ ತೊಟ್ಟಿಲಾಗಿತ್ತು. ಬ್ಯಾಬಿಲೋನಿನ ಹಮುರಬಿ (ಪ್ರ.ಶ.ಪೂ.1792-50) ನ್ಯಾಯವಾದಿ ಎಂದು ಹೆಸರಾಗಿದ್ದಾನೆ. ಪ್ರ.ಶ.ಪೂ.1200ರ ವೇಳೆಗೆ ಹಿಟೈಟರು ಸಿರಿಯ, ಪಶ್ಚಿಮ ಏಷ್ಯಗಳನ್ನೊಳಗೊಂಡ ಒಂದು ಸಾಮ್ರಾಜ್ಯವನ್ನೇ ಕಟ್ಟಿದ್ದರು. ಅವರ ಬರೆವಣಿಗೆಯನ್ನು ಸಂಪೂರ್ಣವಾಗಿ ಇನ್ನೂ ಓದಲು ಸಾಧ್ಯವಾಗಿಲ್ಲ. ಪ್ರ.ಶ.ಪೂ.10 ಮತ್ತು 9ನೆಯ ಶತಮಾನಗಳ ವೇಳೆಗೆ ಅಸ್ಸೀರಿಯನ್ನರು ಪ್ರಬಲರಾದರು. ಇವರು ಬ್ಯಾಬಿಲೋನಿಯರ ಬುಡಕಟ್ಟಿಗೆ ಸೇರಿದವರಾಗಿದ್ದರೂ ವಿಶಿಷ್ಟವಾದ ಕಲೆ ಮತ್ತು ಧರ್ಮ ಹೊಂದಿದ್ದರು. ಪರ್ಷಿಯನರು ಅಸ್ಸೀರಿಯನ್ನರನ್ನು ಪ್ರ.ಶ.ಪೂ. 606ರಲ್ಲಿ ಸೋಲಿಸಿದರು. ಪರ್ಷಿಯನ್ ಚಕ್ರವರ್ತಿ ಸೈರಸ್ ಪ್ರ.ಶ.ಪೂ.539ರಲ್ಲಿ ಬ್ಯಾಬಿಲೋನ್ ಪಟ್ಟಣವನ್ನು ತನ್ನ ಕೈವಶಮಾಡಿಕೊಂಡ. ಅಸ್ಸೀರಿಯ ಪ್ರಮುಖವಾಗಿ ಬಲದ ಮೇಲೆ ನಿಂತಿದ್ದರಿಂದ, ಪರ್ಷಿಯನರ ಧಾಳಿಗೆ ತುತ್ತಾದಾಗ ಅದು ಸಂಪೂರ್ಣ ನಾಶವಾಯಿತು.

**ಚೀನ:** ಏಷ್ಯದಲ್ಲಿ ಚೀನ ಅತ್ಯಂತ ಪ್ರಾಚೀನ ದೇಶ. ಚೀನದ ಇತಿಹಾಸ ಪ್ರಶ.ಪೂ.12ನೆಯ ಶತಮಾನಕ್ಕೂ ಹಿಂದಿನದು. ಚೀನೀಯರ ಉಗಮದ ಬಗ್ಗೆ ಹೆಚ್ಚಿಗೆ ತಿಳಿದಿಲ್ಲ. ಆದರೆ ಅವರು ಪಶ್ಚಿಮದಿಂದ ಬಂದರೆಂದು, ಹ್ವಾಂಗ್ ಹೋ ನದಿಯ ತೀರದಲ್ಲಿ ಪ್ರ.ಶ.ಪೂ.ಸು. 3000ದಲ್ಲಿ ಬಂದು ನೆಲೆಸಿದರೆಂದು ಖಚಿತವಾಗಿ ಹೇಳಬಹುದು. ಇತಿಹಾಸದ ಪ್ರಾರಂಭದಲ್ಲಿ ಚೀನದಲ್ಲಿ ಚಿಕ್ಕಪುಟ್ಟ ಪಾಳೆಯಪಟ್ಟುಗಳಿದ್ದವು. ಪ್ರ.ಶ.ಪೂ.ಸು.220ರಲ್ಲಿ ಟ್ಸಿನ್ ಅಥವಾ ಚಿನ್ (ಚೀನ ಎಂಬ ಹೆಸರು ಬಂದದ್ದು ಇದರಿಂದ) ಎಂಬ ರಾಜ್ಯ ಉದಯವಾಗಿ ಸಣ್ಣ ಪುಟ್ಟ ಪಾಳೆಯಪಟ್ಟುಗಳನ್ನು ಅದು ತನ್ನ ಹತೋಟಿಯಲ್ಲಿಟ್ಟುಕೊಂಡಿತು. ಹ್ಯಾನ್ ಸಾಮ್ರಾಜ್ಯ (ಪ್ರ.ಶ.206-220) ಉದಯವಾಗುವವರೆಗೂ ಚೀನದಲ್ಲಿ ಆಂತರಿಕ ಕಲಹ ಸಾಮಾನ್ಯವಾಗಿತ್ತು. ಹ್ಯಾನ್ ಮತ್ತು ಟಾಂಗ್ (618-907) ರಾಜರುಗಳ ಕಾಲದಲ್ಲಿ ಚೀನದ ಸ್ಥಿತಿ ಉತ್ತಮಗೊಂಡಿ ದ್ದಲ್ಲದೆ ಇದು ಏಷ್ಯದಲ್ಲೆ ಒಂದು ಪ್ರಬಲ ದೇಶವಾಯಿತು. 13ನೆಯ ಶತಮಾನದಲ್ಲಿ ಕುಬ್ಲೈ ಖಾನನ ಸಾಮ್ರಾಜ್ಯ ಒಂದು ಶತಮಾನದಷ್ಟು ಕಾಲ ಬಾಳಿತು. ಚೀನಿ ಮಿಂಗ್ ವಂಶೀಯರು ಅನಂತರ 300 ವರ್ಷ ಆಳಿದರು. 1644ರಲ್ಲಿ ಉತ್ತರದ ಸಮುದಾಯದವರಾದ ಮಂಚುಗಳು ರಾಜಧಾನಿ ಬೀಜಿಂಗ್(ಪೀಕಿಂಗ್)ಅನ್ನು ಆಕ್ರಮಿಸಿ, 1912ರ ವರೆಗೆ ಚೀನವನ್ನಾಳಿದರು. ಆ ವರ್ಷ ಕ್ರಾಂತಿಯ ಪರಿಣಾಮವಾಗಿ ರಾಜಾಧಿಕಾರ ಕೊನೆಗೊಂಡು ಗಣರಾಜ್ಯ ಸ್ಥಾಪಿತ ವಾಯಿತು. ದೇಶವನ್ನು ಆಳುವ ಹಕ್ಕು ಒಂದೇ ರಾಜವಂಶಕ್ಕೆ ಸೀಮಿತವಾಗಿರಲಿಲ್ಲ. ಪ್ರ.ಶ.ದ ಆದಿಯಿಂದ ಚೀನವನ್ನಾಳಿದ ರಾಜವಂಶಗಳ ಸಂಖ್ಯೆ ಸು.20. ಇವು ಅನೇಕ ವೇಳೆ ಸುತ್ತುಮುತ್ತಲಿನ ಪ್ರದೇಶಗಳನ್ನು ತಮ್ಮ ರಾಜಕೀಯ ಹತೋಟಿಗೆ ಒಳಪಡಿಸಿಕೊಂಡಿದ್ದುವು. ಚೀನ ತತ್ತ್ವಜ್ಞರಲ್ಲಿ ಕನ್‌ಫ್ಯೂಷಿಯಸ್ (ಪ್ರ.ಶ.ಪೂ.551-478) ಬಹಳ ಪ್ರಖ್ಯಾತ. ಚೀನಿ ಯರ ಕುಟುಂಬಜೀವನ, ರಾಜಕೀಯ ಹಾಗೂ ಸಾಮಾಜಿಕ ಪದ್ಧತಿಗಳ ಮೇಲೆ ಆತನ ಪ್ರಭಾವ ಬಹಳ ಹೆಚ್ಚಿನದು. ಮಾನವಾನುಕಂಪಿ, ಶಾಂತಿದೂತ ಎಂದು ಕನ್‌ಫ್ಯೂಷಿಯಸ್ ಹೆಸರಾಗಿದ್ದಾನೆ.

ಮುಖ್ಯವಾಗಿ ಭಾರತದಿಂದ ಸಂಸ್ಕೃತಿಯನ್ನು ಪಡೆದ ಟಿಬೆಟ್ 8ನೆಯ ಶತಮಾನದಲ್ಲಿ ಮಧ್ಯ ಏಷ್ಯದ ಸಾಮ್ರಾಜ್ಯವೆಂದು ಹೆಸರುಗಳಿಸಿ, ಅನಂತರ ಚೀನದ ರಾಜಕೀಯದ ಪ್ರಭಾವಕ್ಕೆ ಒಳಪಟ್ಟು ತನ್ನ ಸ್ವಾತಂತ್ರ್ಯ ಕಳೆದುಕೊಂಡಿತು. ಭಾರತದಿಂದ ಬೌದ್ಧಮತ ಟಿಬೆಟಿಗೆ ಹೋಯಿತು. ಪೋಪನಂತೆ ಮಠಾಧಿಪತಿಗಳಾದ ಲಾಮಗಳು ಲೌಕಿಕ ಪ್ರಪಂಚದಲ್ಲೂ ಮುಖ್ಯರಾಗಿ ಅಧಿಕಾರ ನಡೆಸಿದರು.

ಮಂಗೋಲರು ಚೀನವನ್ನು ಮತ್ತು ಯುರೋಪಿನ ಅನೇಕ ಭಾಗಗಳನ್ನು ಆಕ್ರಮಣ ಮಾಡಿದ್ದರು. ಅನೇಕ ಮಂಗೋಲರು ರಷ್ಯದಲ್ಲಿ ವಾಸಿಸುತ್ತಿದ್ದಾರೆ. ಅವರ ಮೂಲ ಸಂಸ್ಕೃತಿ ಭಾರತೀಯ ಮತ್ತು ಚೀನಿ ಸಂಸ್ಕೃತಿಗಳ ಸಂಮಿಶ್ರಣವಾಗಿತ್ತು. ಅವರು ಉಪಯೋಗಿ ಸುತ್ತಿದ್ದ ಅಕ್ಷರಮಾಲೆ ಸಿರಿಯ ಅಕ್ಷರಮಾಲೆಯಿಂದ ಬಂದದ್ದು. ಇದನ್ನು ನೆಸ್ಟೋರಿಯನ್ ಪಾದ್ರಿಗಳು ಮಂಗೋಲಿಯಕ್ಕೆ ತಂದಿದ್ದರು.

**ಜಪಾನ್:** ಜಪಾನ್ ಏಷ್ಯಖಂಡದ ಒಂದು ಮುಖ್ಯ ದೇಶ. ಐನಸ್ ಜನಾಂಗದವರು ಜಪಾನಿನ ಮೂಲನಿವಾಸಿಗಳು. ಕಾಲಕ್ರಮೇಣ ಈ ಜನಾಂಗದವರನ್ನು ಉತ್ತರದ ದ್ವೀಪಗಳಿಗೆ ಒತ್ತರಿಸಲಾಯಿತು. ಅವರು ಜಪಾನೀಯರೊಡನೆ ನಡೆಸಿದ ಯುದ್ಧಗಳು ಐತಿಹಾಸಿಕವಾದರೂ

ಅವುಗಳ ಬಗ್ಗೆ ಸಾಕಷ್ಟು ಆಧಾರಗಳು ದೊರೆತಿಲ್ಲ. ಜಪಾನೀಯರು ಎಲ್ಲಿಂದ ಬಂದರೆಂದು, ಯಾವಾಗ ಬಂದರೆಂದು ಹೇಳುವುದು ಕಷ್ಟ, ಜಪಾನೀಯರದು ಒಂದು ಮಿಶ್ರ ಜನಾಂಗ. ಮಧ್ಯ ಏಷ್ಯ ಮತ್ತು ಮಲಯ ಅಥವಾ ಪಾಲಿನೇಷ್ಯದ ಜನಾಂಗದವರ ಸಂಮಿಶ್ರಣದಿಂದ ಜಪಾನೀಯರು ಬಂದಿರಬಹುದು. 6ನೆಯ ಶತಮಾನದಲ್ಲಿ ಚೀನ ನಾಗರಿಕತೆ ಮತ್ತು ಬೌದ್ಧಧರ್ಮ ಜಪಾನಿಗೆ ಬಂದ ಕಾಲದಿಂದ ಜಪಾನೀಯರ ಇತಿಹಾಸ ನಿರ್ದಿಷ್ಟವಾಗಿ ಪ್ರಾರಂಭವಾಗುತ್ತದೆ. ಕೊರಿಯದ ಮೂಲಕ ಚೀನ ನಾಗರಿಕತೆ ಜಪಾನಿಗೆ ಹಬ್ಬಿತು. ಕೆಲವೇ ಪಾಳೆಯಗಾರರ ಮನೆತನದವರು ಚಕ್ರವರ್ತಿಯನ್ನು ಬದಿಗೊತ್ತಿ, ಪ್ರ.ಶ. 645ರಲ್ಲಿ ಚೀನಿ ಸರ್ಕಾರಕ್ಕೆ ಅನುವರ್ತಿಯಾದ ರಾಜ್ಯವೊಂದನ್ನು ಕಟ್ಟಿದರು. ಫೂಜಿವಾರ ಮನೆತನದವರು ಮೊದಲಿಗೆ ಅಧಿಕಾರಕ್ಕೆ ಬಂದರು. ಅನಂತರ ತೈರಾ ಮತ್ತು ಮಿನಮೋಟೊ ಮನೆತನಗಳ ನಡುವೆ ಪೈಪೋಟಿ ನಡೆಯಿತು. 1192ರಲ್ಲಿ ಮಿನಮೋಟೊ ಮನೆತನದವರು ಗೆದ್ದು ಒಂದು ದ್ವಂದ್ವ ಆಡಳಿತ ಸ್ಥಾಪನೆ ಮಾಡಿದರು. ಈ ಸರ್ಕಾರದ ರಚನೆಯಲ್ಲಿ ಹೆಸರಿಗೆ ಚಕ್ರವರ್ತಿ ಸಾರ್ವಭೌಮನಾದರೂ ನಿಜವಾದ ಅಧಿಕಾರ ಈ ಪಾಳೆಯಗಾರರ ಮನೆತನದವರ ಕೈಯಲ್ಲಿತ್ತು. ಈ ರೀತಿಯಲ್ಲಿ ಕಾಮಾಕುರಾ ನಗರದ ಹೋಜೋ ಉತ್ತರಾಧಿಕಾರಿಗಳು 1205ರಿಂದ 1333ರ ವರೆಗೆ ಆಡಳಿತ ನಡೆಸಿದರು. ಕುಬ್ಲೈಖಾನ್ ದಂಡೆತ್ತಿ ಬಂದಾಗ ಅವನನ್ನು ತಡೆಗಟ್ಟಿ ಓಡಿಸಿದರು. ಅನಂತರ ಅಧಿಕಾರ ಆಷಿಕಾಗಾ ಮನೆತನಕ್ಕೆ ಹೋಯಿತು. 1338 ರಿಂದ 1565ರವರೆಗೆ ಆಳಿದ ಆಷಿಕಾಗಾ ಮನೆತನದವರು ಕಲೆ, ಸಂಸ್ಕೃತಿಗಳಿಗೆ ಬಹಳ ಪ್ರೋತ್ಸಾಹ ಕೊಟ್ಟು ಪ್ರಖ್ಯಾತರಾದರು. 16ನೆಯ ಶತಮಾನದ ಮಧ್ಯಭಾಗದಲ್ಲಿ ಪೋರ್ಚುಗೀಸರು ಜಪಾನಿಗೆ ಬಂದಾಗ ಅಲ್ಲಿ ಅನಾಯಕತ್ವ ತಲೆದೋರಿತ್ತು. ಪೋರ್ಚುಗೀಸರು ಜಪಾನಿನಲ್ಲಿ ಕ್ರೈಸ್ತಮತ ಹರಡಲು ಯತ್ನಿಸಿದರು. ಹಿದೆಯೊಷಿ ಈ ಕಾಲದಲ್ಲಿ ಕೊರಿಯ ದೇಶದ ಮೇಲೆ ದಂಡಯಾತ್ರೆ ಕೈಗೊಂಡ. ಆದರೆ ಅಕಾಲ ಮರಣದಿಂದಾಗಿ ಅವನ ಯೋಜನೆ ಪೂರ್ಣವಾಗಲಿಲ್ಲ. ಉತ್ತರಾಧಿಕಾರಿಯಾದ ಇಯೆಯಾಸು ಹೊರದೇಶಗಳ ಸಂಪರ್ಕವನ್ನು ಪೂರ್ತಿ ಕಡಿದುಹಾಕಿದ. ಪರದೇಶಗಳನ್ನು ಗೆಲ್ಲುವ ಯೋಜನೆಯನ್ನು ತಳ್ಳಿಹಾಕಿ, ಕ್ರೈಸ್ತಧರ್ಮಕ್ಕೆ ಬಹಿಷ್ಕಾರ ಹಾಕಿ, ಪರಕೀಯರು ಜಪಾನಿಗೆ ಬರದಂತೆ ಮಾಡಿದ. ಮುಂದೆ ಸು.216 ವರ್ಷಗಳ ಕಾಲ ಕೆಲವು ಡಚ್ಚರ ಮತ್ತು ಚೀನಿ ಯರ ವಿನಾ ಎಲ್ಲ ವಿದೇಶೀಯರಿಗೂ ಜಪಾನ್ ತನ್ನ ದ್ವಾರವನ್ನು ವ್ಯಾಪಾರಕ್ಕೆ ಮುಚ್ಚಿತ್ತು. 1845ರಲ್ಲಿ ಅಮೆರಿಕ ಜಪಾನನ್ನು ಬಗ್ಗಿಸಿತು. ಪರದೇಶೀಯರ ಆಗಮನಕ್ಕೆ ಎಡೆಕೊಡುವುದೇ ಮುಂತಾದ ವ್ಯಾಪಕ ಒಪ್ಪಂದಕ್ಕೆ ಒಡಂಬಡಿಸಿತು. ಐರೋಪ್ಯರೊಡನೆ ಹೋರಾಡಬೇಕಾದರೆ ಅವರಂತೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಪಡೆಯಬೇಕೆಂಬ ವಿಚಾರ ಜಪಾನಿಗೆ ಬಂದದ್ದು ಆಗ. ಐರೋಪ್ಯರ ಅನುಭವ ದಿಂದ ಅದು ಪಾಠ ಕಲಿತು, 1868ರಲ್ಲಿ ಏಷ್ಯದ ಇತಿಹಾಸದಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭಮಾಡಿತು. 1867ರಲ್ಲಿ ಮೇಜಿ ದೊರೆಯ ವಂಶದ ಆಗಮನದಿಂದ ಪ್ರಾರಂಭವಾದ ಕ್ರಾಂತಿ ಜಪಾನನ್ನು ಒಂದು ಬಲಯುತ ಆಧುನಿಕ ರಾಷ್ಟ್ರವನ್ನಾಗಿ ಮಾಡಿತು. ಅಲ್ಲಿಂದ 1945ರ ವರೆಗೆ ಜಪಾನ್ ಏಷ್ಯದಲ್ಲಿ ತನ್ನದೇ ಆದ ಸಾಮ್ರಾಜ್ಯವನ್ನು ಕಟ್ಟಲು ಹವಣಿಸಿ, ಅದರಲ್ಲಿ ಜಯಗಳಿಸಿ, ಎರಡನೆಯ ಮಹಾಯುದ್ಧದಲ್ಲಿ ಸಂಪೂರ್ಣ ಸೋತು ಅನಂತರ ಹೊಸ ಹಾದಿ ಹಿಡಿಯಿತು.

**ಕೊರಿಯ:** ವರ್ಣ ಮತ್ತು ಭಾಷೆಗಳಲ್ಲಿ ಕೊರಿಯ ಉಳಿದ ರಾಷ್ಟ್ರಗಳಿಂದ ಭಿನ್ನವಾದ ರಾಷ್ಟ್ರವಾದರೂ ನಾಗರಿಕತೆಯ ಅಂಶಗಳನ್ನು ಚೀನದಿಂದ ಪಡೆಯಿತು. ಇತಿಹಾಸದ ಅನೇಕ ಘಟ್ಟಗಳಲ್ಲಿ ಅದು ಚೀನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿತ್ತು. ಚೀನದ ಚಕ್ರವರ್ತಿಗಳಿಗೆ ಕಪ್ಪಕಾಣಿಕೆಗಳನ್ನು ಸಹ ಕೊಡುತ್ತಿತ್ತು. 16ನೆಯ ಶತಮಾನದಲ್ಲಿ ಸ್ವಲ್ಪ ಕಾಲದವರೆಗೆ ಜಪಾನೀಯರು ಕೊರಿಯವನ್ನು ಆಕ್ರಮಿಸಿಕೊಂಡಿದ್ದರು. 1894ರಲ್ಲಿ ಅದು ಸಂಪೂರ್ಣ ಸ್ವಾತಂತ್ರ್ಯ ಪಡೆಯಿತು. ಆದರೆ ಆ ಸ್ವಾತಂತ್ರ್ಯ ಬಹು ಕಾಲ ಉಳಿಯಲಿಲ್ಲ. 1904–05ರಲ್ಲಿ ನಡೆದ ರಷ್ಯ–ಜಪಾನ್ ಯುದ್ಧದ ತರುವಾಯ ಜಪಾನೀಯರು 1910ರಲ್ಲಿ ಕೊರಿಯವನ್ನು ತಮ್ಮ ಸಂಪೂರ್ಣ ಹತೋಟಿಗೆ ತಂದುಕೊಂಡು, ಆ ದೇಶವನ್ನು ಒಂದು ವಸಾಹತಿನಂತೆ ಆಳಿದರು.

**ಭಾರತ:** ಏಷ್ಯದ ಮುಖ್ಯ ದೇಶಗಳಲ್ಲಿ ಒಂದಾದ ಭಾರತಕ್ಕೆ ಸು.5000 ವರ್ಷಗಳಿಗಿಂತ ಮಿಗಿಲಾದ ಭವ್ಯ ಇತಿಹಾಸವಿದೆ. ಭಾರತದ ಇತಿಹಾಸ ಪ್ರ.ಶ.ಪೂ.ಸು.5000ಕ್ಕೂ ಹಿಂದೆ ಇದ್ದ ಸಿಂಧೂ ನಾಗರಿಕತೆಯಿಂದ ಪ್ರಾರಂಭವಾಗುತ್ತದೆ. ಪ್ರ.ಶ.ಪೂ.ಸು.1500ರಲ್ಲಿ ಆರ್ಯರು ಭಾರತಕ್ಕೆ ವಲಸೆ ಬಂದು, ಗಂಗಾ ಬ್ರಹ್ಮಪುತ್ರಾ ನದಿಗಳ ತೀರಗಳಲ್ಲಿ ನೆಲಸಿ ಭವ್ಯ ವೈದಿಕ ಸಂಸ್ಕೃತಿಯನ್ನು ಸೃಷ್ಟಿಸಿ ಬೆಳೆಸಿದರು. ಹಿಂದೆ ಇದ್ದ ಸಿಂಧೂ ನಾಗರಿಕತೆಯನ್ನೂ ದ್ರಾವಿಡ ಸಂಸ್ಕೃತಿಯ ಕೆಲವು ಅಂಶಗಳನ್ನೂ ಆರ್ಯರು ತಮ್ಮ ಸಂಸ್ಕೃತಿಯಲ್ಲೂ ಅಳವಡಿಸಿಕೊಂಡು ಸಮಗ್ರ ಹಿಂದು ಸಂಸ್ಕೃತಿಗೆ ಬುನಾದಿ ಹಾಕಿದರು. ಮುಂದೆ 2,000 ವರ್ಷಗಳ ಕಾಲ ಭಾರತಕ್ಕೆ ಅನೇಕ ಜನಾಂಗಗಳವರು ವಲಸೆ ಬಂದರು. ಇದರಿಂದ ಬೇರೆ ಬೇರೆ ಸಂಸ್ಕೃತಿಗಳ ಕ್ರಿಯೆ ಪ್ರತಿಕ್ರಿಯೆ ನಡೆದು ಒಂದು ವಿಶಿಷ್ಟವಾದ ಸಂಸ್ಕೃತಿ ಬೆಳೆಯಲು ಅವಕಾಶವಾಯಿತು. ವೇದಗಳ ಕಾಲದಲ್ಲಿ ಜಾತಿ ಪದ್ಧತಿ, ಗ್ರಾಮಜೀವನ ವ್ಯವಸ್ಥೆ ಮತ್ತು ರಾಜಕೀಯ ಪದ್ಧತಿಗಳು ರೂಪುಗೊಂಡವು. ಪ್ರಖ್ಯಾತವಾದ, ವಿಪುಲವಾದ ದಾರ್ಶನಿಕ ಸಾಹಿತ್ಯ ನಿರ್ಮಾಣವಾಯಿತು. ಉಪನಿಷತ್ತುಗಳು, ವೇದ ವೇದಾಂಗಗಳು ಮತ್ತು ಪುರಾಣಗಳು ರಚಿತವಾದುವು.

ಅಲೆಕ್ಸಾಂಡರ್ ಭಾರತದ ಮೇಲೆ ದಂಡಯಾತ್ರೆ ನಡೆಸಿದ್ದು ಪ್ರ.ಶ.ಪೂ.327ರಲ್ಲಿ. ಆದರೆ ಅದರಿಂದ ಹೆಚ್ಚಿನ ಪರಿಣಾಮವೇನೂ ಆಗಲಿಲ್ಲ. ಚಂದ್ರಗುಪ್ತಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿ ಭಾರತದ ಇತಿಹಾಸದಲ್ಲೆ ಮೊದಲನೆಯ ಚಕ್ರವರ್ತಿ ಎಂಬ ಕೀರ್ತಿ ಪಡೆದ. ಈ ವಂಶದವನಾದ ಅಶೋಕ (ಪ್ರ.ಶ.ಪೂ.273–232) ಪ್ರಾಚೀನ ಭಾರತದ ಇತಿಹಾಸದಲ್ಲಿ ಶ್ರೇಷ್ಠ ರಾಜನೆಂದು ಗೌರವಗಳಿಸಿ, ಬೌದ್ಧಧರ್ಮ ದೇಶ ವಿದೇಶಗಳಲ್ಲಿ ಹರಡಲು ಪ್ರೋತ್ಸಾಹಿಸಿದ. ಇವನ ಕಾಲಾನಂತರ ಚಿಕ್ಕಪುಟ್ಟ ರಾಜ್ಯಗಳು ತಲೆ ಎತ್ತಿದುವು. ಪ್ರ.ಶ.4 ಮತ್ತು 5ನೆಯ ಶತಮಾನಗಳಲ್ಲಿ ಉತ್ತರಭಾಗದಲ್ಲಿ ಗುಪ್ತ ಸಾಮ್ರಾಜ್ಯ ಪ್ರಸಿದ್ಧಿಗೆ ಬಂತು. ಈ ಕಾಲವನ್ನು ಭಾರತದ ಇತಿಹಾಸದಲ್ಲಿ ಸುವರ್ಣಯುಗವೆಂದು ಕರೆಯಲಾಗುತ್ತದೆ. ಈ ಯುಗದಲ್ಲಿ ಸಾಹಿತ್ಯ, ಕಲೆ, ವಿಜ್ಞಾನಗಳು ಹೆಚ್ಚಿನ ಪ್ರಗತಿ ಸಾಧಿಸಿದುವಲ್ಲದೆ, ಭಾರತೀಯ ಸಂಸ್ಕೃತಿ ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಹರಡಿತು. 7ನೆಯ ಶತಮಾನದಲ್ಲಿ ಹರ್ಷ ಚಕ್ರವರ್ತಿ ಸ್ವಲ್ಪ ಕಾಲ ಐಕ್ಯ ಸಾಧಿಸಿದ ತರುವಾಯ ಮತ್ತೆ ದೇಶದಲ್ಲೆಲ್ಲ ಚಿಕ್ಕಪುಟ್ಟ ರಾಜ್ಯಗಳು ತಲೆ ಎತ್ತಿಕೊಂಡುವು, ದಕ್ಷಿಣದಲ್ಲಿ ಚೋಳ, ಪಲ್ಲವ, ಚಾಳುಕ್ಯ, ಕದಂಬ, ಹೊಯ್ಸಳ, ರಾಷ್ಟ್ರಕೂಟ ಮೊದಲಾದ ಸಾಮ್ರಾಜ್ಯಗಳು ಹೊಮ್ಮಿ ಭಾರತೀಯ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಿಕೊಂಡು ಬಂದುವಲ್ಲದೆ, ಅದಕ್ಕೆ ವಿಶಿಷ್ಟ ರೀತಿಯ ಕಾಣಿಕೆಗಳನ್ನು ಸಲ್ಲಿಸಿದುವು.

ಉತ್ತರದಲ್ಲಿ ರಜಪೂತರು 700–1000ವರೆಗೆ ಪ್ರಬಲರಾಗಿದ್ದರು. ಅವರ ತರುವಾಯ ಮುಸ್ಲಿಮರು ಭಾರತಕ್ಕೆ ದಂಡೆತ್ತಿ ಬಂದು 12ನೆಯ ಶತಮಾನದಲ್ಲಿ ದೆಹಲಿಯಲ್ಲಿ ಸಾಮ್ರಾಜ್ಯ ಸ್ಥಾಪಿಸಿದರು. 1526ರಲ್ಲಿ ಮೊಗಲ್ ಸಾಮ್ರಾಜ್ಯ ಬಾಬರನ ನೇತೃತ್ವದಲ್ಲಿ ಸ್ಥಾಪಿತವಾಯಿತು. ಈ ಕಾಲದಲ್ಲಿ ಹೊಸ ಹೊಸ ವಿಷಯಗಳು ಭಾರತಕ್ಕೆ ಬಂದುವು, ಕಲೆ, ಸಾಹಿತ್ಯ, ಸಾಮಾಜಿಕ ಜೀವನ, ರಾಜಕೀಯ ಜೀವನ, ಮತೀಯ ಜೀವನ–ಈ ಎಲ್ಲ ಕ್ಷೇತ್ರಗಳಲ್ಲೂ ಹಿಂದು ಮುಸ್ಲಿಂ ನಾಗರಿಕತೆಗಳ ಪರಸ್ಪರ ಮಿಲನದಿಂದ ಒಂದು ನವೀನ ನಾಗರಿಕತೆಯ ಪರಂಪರೆಯ ಹುಟ್ಟಿಕೊಂಡು. ಸಮಗ್ರ ಭಾರತೀಯ ಸಂಸ್ಕೃತಿ ಮತ್ತಷ್ಟು ಶ್ರೀಮಂತವಾಯಿತು. ಮೊಗಲ್ ಸಾಮ್ರಾಜ್ಯ ಔರಂಗಜೇಬನ ಕಾಲಕ್ಕೆ ಉನ್ನತ ಮಟ್ಟಕ್ಕೇರಿ ಅನಂತರ ಅವನತಿಯ ಹಾದಿ ಹಿಡಿಯಿತು. ತಾಜ್‌ಮಹಲಿನಂಥ ಪ್ರಪಂಚವಿಖ್ಯಾತ ಶಿಲ್ಪಕಲಾಕೌಶಲಗಳು ಭಾರತದಲ್ಲಿ ನಿರ್ಮಿತವಾದದ್ದು ಮೊಗಲರ ಕಾಲದಲ್ಲಿ. 18ನೆಯ ಶತಮಾನದಲ್ಲಿ ಭಾರತದಲ್ಲಿ ದೇಶಿಯ ಗುಂಪುಗಳಾದ ಮರಾಠಿ, ರಜಪೂತ, ಸಿಖ್ ಮತ್ತು ಆಫ್ಘನರಿಗೂ ವಿದೇಶೀ ಗುಂಪುಗಳಾದ ಬ್ರಿಟಿಷ್ ಮತ್ತು ಫ್ರೆಂಚರಿಗೂ ನಡುವೆ ಅಧಿಕಾರಕ್ಕಾಗಿ ಹೋರಾಟಗಳಾಗಿ ಕಡೆಗೆ ಫ್ರೆಂಚರನ್ನು ಓಡಿಸಿದ ಬ್ರಿಟಿಷರು 19ನೆಯ ಶತಮಾನದ ವೇಳೆಗೆ ಇಡೀ ಭಾರತದಲ್ಲೇ ಪ್ರಬಲರಾದರು. 19ನೆಯ ಶತಮಾನದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಜಾಗೃತಿಯುಂಟಾಗಿ, 20ನೆಯ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಭಾರತೀಯರು 1947ರಲ್ಲಿ ಮಹಾತ್ಮಾ ಗಾಂಧಿಯ ನೇತೃತ್ವದಲ್ಲಿ ಸ್ವಾತಂತ್ರ್ಯ ಪಡೆದರು.

**ಶ್ರೀಲಂಕ(ಸಿಂಹಳ):** ಪ್ರ.ಶ.ಪೂ.6ನೆಯ ಶತಮಾನದಲ್ಲಿ ಆರ್ಯರು ಸಿಂಹಳದ ಮೇಲೆ ಆಕ್ರಮಣ ನಡೆಸಿದರೆಂಬುದು ಐತಿಹ್ಯ. ಅಶೋಕನ ಕಾಲದಲ್ಲಿ ಸಿಂಹಳ ಬೌದ್ಧಮತದ ಕೇಂದ್ರವಾಗಿ ಬರ್ಮ ಮತ್ತು ಥೈಲೆಂಡ್‌ಗಳಲ್ಲಿ ಪ್ರಭಾವ ಬೀರಿತು. ತಮಿಳರಿಗೂ ಸಿಂಹಳೀಯರಿಗೂ ನಡೆದ ಹೋರಾಟದ ಕಥೆಯೇ ಸಿಂಹಳದ ಮಧ್ಯಯುಗದ ಚರಿತ್ರೆ. 12ನೆಯ ಶತಮಾನದಲ್ಲಿ ಸಿಂಹಳೀ ರಾಜಮನೆತನವೊಂದು ಪ್ರಬಲವಾಗಿ ಆಡಳಿತ ನಡೆಸಿದ ಮೇಲೆ ಪೋರ್ಚುಗೀಸರು ಮತ್ತು ಅನಂತರ ಡಚ್ಚರು ಸಿಂಹಳದ ಮೇಲೆ ತಮ್ಮ ಹತೋಟಿ ಸ್ಥಾಪಿಸಿದರು. 1796ರಲ್ಲಿ ಬ್ರಿಟಿಷರು ಡಚ್ಚರನ್ನು ಓಡಿಸಿದರು. ಸ್ವಾತಂತ್ರ್ಯಗಳಿಸುವವರೆಗೂ (1948) ಸಿಂಹಳ ಬ್ರಿಟಿಷರ ಅಧೀನದಲ್ಲಿತ್ತು.

**ಇರಾನ್(ಪರ್ಷಿಯ):** ಪರ್ಷಿಯ ಅಥವಾ ಆಧುನಿಕ ಇರಾನ್ ಏಷ್ಯದ ಇತಿಹಾಸದಲ್ಲಿ ಮಹತ್ತ್ವದ ಪಾತ್ರವಹಿಸಿದೆ. ಮೂಲತಃ ಆರ್ಯರಾಗಿದ್ದ ಪರ್ಷಿಯನ್ನರು (ಹಿಂದುಗಳಂತೆ) ಮಧ್ಯ ಏಷ್ಯದಿಂದ ಬಂದಿರಬಹುದು. ಪರ್ಷಿಯನ್ನರ ಮತಕ್ಕೂ ಪ್ರಾಚೀನ ಭಾರತೀಯ ವೈದಿಕ ಮತಕ್ಕೂ ಅನೇಕ ಸಾಮ್ಯಗಳಿವೆ. ಪ್ರ.ಶ.ಪೂ.7ನೆಯ ಶತಮಾನದಲ್ಲಿದ್ದ ಜರತೂಷ್ಟ್ರ ಪರ್ಷಿಯನ್ನರ ಮತವನ್ನು ಕ್ರೋಡೀಕರಿಸಿದ. ಸೈರಸ್, ಡೇರಿಯಸ್, ಸರಕ್ಸಿಸ್ ಮೊದಲಾದ ಪರ್ಷಿಯನ್ ಚಕ್ರವರ್ತಿಗಳ ಕೈಕೆಳಗೆ ಪರ್ಷಿಯನ್ ಸಾಮ್ರಾಜ್ಯ ಏಷ್ಯ ಮೈನರಿನಿಂದ ಭಾರತದ ಗಡಿಯವರೆಗೆ ಹಬ್ಬಿತ್ತು. ಗ್ರೀಕರಿಂದ ಪರಾಜಿತರಾದ ಮೇಲೆ ಅವರ ಪ್ರಭಾವ ಕಡಿಮೆಯಾಯಿತು. 7ನೆಯ ಶತಮಾನದಲ್ಲಿ ಪರ್ಷಿಯ ಮುಸ್ಲಿಮರ ಆಕ್ರಮಣಕ್ಕೆ ತುತ್ತಾಗಿ ಇಸ್ಲಾಂಧರ್ಮವನ್ನು ಪ್ರಧಾನ ಧರ್ಮವಾಗಿ ಅಂಗೀಕರಿಸಿತು. ಮುಸ್ಲಿಮರ ಕಾಲದಲ್ಲಿ ಸಣ್ಣ ಪುಟ್ಟ ರಾಜವಂಶಗಳು ಉಳಿದುವು. ಹೆಚ್ಚಾಗಿ ಅರಾಜಕತೆ ನೆಲೆಸಿತ್ತು. 1585ರಿಂದ 1628ರ ವರೆಗೆ ಆಳಿದ ಅಬ್ಬಾಸ್‌ಷಾ ಚಕ್ರವರ್ತಿಯ ನೇತೃತ್ವದಲ್ಲಿ ಪರ್ಷಿಯ ಹೆಚ್ಚಿನ ಕೀರ್ತಿ ಮತ್ತು ವೈಭವ ಗಳಿಸಿತು. ಅನಂತರ ಕಾಲದಲ್ಲಿ ಆಫ್ಘನ್ನರ ಆಕ್ರಮಣದಿಂದಾಗಿ ಅನಾಯಕತ್ವ ಉಂಟಾಯಿತು. 1907ರ ಆಂಗ್ಲೊ–ರಷ್ಯನ್ ಒಪ್ಪಂದದ ಪ್ರಕಾರ ಪರ್ಷಿಯ ಸ್ವತಂತ್ರವಾಗಿರಬೇಕೆಂದು ತೀರ್ಮಾನಿಸಲಾಯಿತು. 1941ರಲ್ಲಿ ರಷ್ಯ–ಬ್ರಿಟಿಷ್ ಒಪ್ಪಂದ ಕೊನೆಗೊಂಡಿತು. ಅದರೊಡನೆ ಪರ್ಷಿಯದ ಮೇಲಿದ್ದ ದ್ವಂದ್ವ ರೀತಿಯ ನಿಯಂತ್ರಣವೂ ಕೊನೆಗೊಂಡಿತು.

**ತುರ್ಕಿ:** ಪ್ರ.ಶ.545ರಲ್ಲಿ ಮೊಟ್ಟಮೊದಲ ಬಾರಿಗೆ ಜೀವನ ಗಡಿಪ್ರದೇಶಗಳಲ್ಲಿ ಕಾಣಿಸಿಕೊಂಡ ತುರ್ಕಿ ಜನಾಂಗದವರು ಅನಂತರ ಏಷ್ಯ ಯುರೋಪ್ ಖಂಡಗಳಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದರು. ವೀಗುರ್ ಜನರೂ ಸೆಲ್ಜೂಕರೂ ಉಸ್ಮಾನ್‌ಲಿಗಳೂ ತುರ್ಕಿ

ಜನಾಂಗದ ಮುಖ್ಯ ಆಕ್ರಮಣಕಾರಿ ಮತ್ತು ಯುದ್ಧ ಪ್ರೇಮಿ ಗುಂಪುಗಳು. 1453ರಲ್ಲಿ ಉಸ್ಮಾನ್‌ಲಿಗಳು ಕಾನ್‌ಸ್ಟ್ಯಾಂಟಿನೋಪಲ್ ನಗರವನ್ನು ಹಿಡಿದು ಆಟೋಮನ್ ಸಾಮ್ರಾಜ್ಯ ಸ್ಥಾಪಿಸಿದರು. 1922ರಲ್ಲಿ ಇದು ಗಣರಾಜ್ಯವಾಗಿ ಅಂಕಾರವನ್ನು ರಾಜಧಾನಿಯಾಗಿ ಮಾಡಿಕೊಂಡು, ಐರೋಪ್ಯ ಸಂಸ್ಕೃತಿಯ ಆಚಾರ ವ್ಯವಹಾರಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿತು. ಎರಡನೆಯ ಮಹಾಯುದ್ಧದಲ್ಲಿ ಫೆಬ್ರುವರಿ 1945ರವರೆಗೆ ತಟಸ್ಥವಾಗಿದ್ದು ಅನಂತರ ಜರ್ಮನಿ ಮತ್ತು ಜಪಾನ್‌ಗಳ ಮೇಲೆ ಯುದ್ಧ ಘೋಷಿಸಿತು.

**ಇಸ್ರೇಲ್:** ಯಹೂದಿಗಳ ಮೂಲಸ್ಥಾನವಾದ ಇಸ್ರೇಲ್ ಅಥವಾ ಪ್ಯಾಲಸ್ಟೀನ್ ಏಷ್ಯದಲ್ಲಿದ್ದರೂ ಇತಿಹಾಸದ ಉದ್ದಕ್ಕೂ ಈ ಜನ ಬೇರೆ ದೇಶಗಳಲ್ಲಿ ಹಂಚಿಹೋಗಿದ್ದು, ವ್ಯಾಪಾರ ವಾಣಿಜ್ಯಗಳಲ್ಲಿ ಪ್ರಮುಖರಾಗಿದ್ದು, 1948ರಿಂದೀಚೆಗೆ ತಮ್ಮದೇ ಆದ ದೇಶ ರಚಿಸಿಕೊಂಡಿದ್ದಾರೆ.

**ಅರಬರು:** ಪ್ರ.ಶ.ಪೂ.9ನೆಯ ಶತಮಾನದ ತರುವಾಯದ ಕಾಲದಲ್ಲಿ ಅರಬ್ಬರ ಹೆಸರು ಅಕ್ಕಪಕ್ಕದ ರಾಷ್ಟ್ರಗಳಲ್ಲಿ ಕೇಳಿಬಂದಿತು. ಇಸ್ಲಾಂ ಧರ್ಮದ ಸ್ಥಾಪಕನಾದ ಮಹಮದನಿಗಿಂತ ಮುಂಚೆ ಅರಬರಿಗೆ ತಮ್ಮದೇ ಆದಂಥ ಇತಿಹಾಸವಿದ್ದಿರಲಿಲ್ಲ. ಇಸ್ಲಾಂ ಪ್ರಬಲವಾದ ತರುವಾಯ ಅರಬರು ಆ ಮತವನ್ನು ಆಗಿನ ಪ್ರಪಂಚದಲ್ಲೆಲ್ಲ ಹರಡುವ ಪ್ರಯತ್ನ ನಡೆಸಿ ದರು. ಪೂರ್ವದಲ್ಲಿ ಭಾರತ, ಪರ್ಷಿಯ ಮತ್ತು ಮಧ್ಯ ಏಷ್ಯಗಳನ್ನೂ ಪಶ್ಚಿಮದಲ್ಲಿ ಸ್ಪೇನ್ ಮತ್ತು ಮೊರಾಕೊಗಳನ್ನೂ ಆಕ್ರಮಿಸಿದರು. ಡಮಾಸ್ಕಸಿನ ಓಮಯಾದ್ ಖಲೀಫರು ಮತ್ತು ಬಾಗ್ದಾದಿನ ಅಬ್ಬಾಸಿದ್ ಖಲೀಫರು ಪಶ್ಚಿಮ ಏಷ್ಯದಲ್ಲಿ ರಾಜಕೀಯ ಪ್ರಭಾವವನ್ನು ವಿಸ್ತರಿಸಿ ಪ್ರಖ್ಯಾತರಾದರು. ಐಕಮತ್ಯದ ಕೊರತೆಯಿಂದಾಗಿ ಚಕ್ರಾಧಿಪತ್ಯದ ಅನೇಕ ಭಾಗಗಳು ಸ್ವಾತಂತ್ರ್ಯ ಘೋಷಿಸಿದವು. ಉಳಿದಷ್ಟು ಭಾಗಗಳನ್ನು ತುರ್ಕಿಯವರು ವಶಪಡಿಸಿಕೊಂಡರು. ಅರಬರು ಸ್ಪೇನಿನಲ್ಲೂ ಸ್ವಲ್ಪ ಕಾಲ ಆಳಿದರಲ್ಲದೆ ಯುರೋಪನ್ನು ಸಂಪೂರ್ಣವಾಗಿ ತಮ್ಮ ಹತೋಟಿಗೆ ತಂದುಕೊಳ್ಳುವ ಯತ್ನ ನಡೆಸಿದರು. 15ನೆಯ ಶತಮಾನದವರೆಗೆ ಈ ಪ್ರಯತ್ನಗಳು ನಡೆದುವು. ಅನಂತರ ಅರಬರ ರಾಜಕೀಯ ಪ್ರಾಬಲ್ಯ ಕುಸಿಯಿತು. ಆದಾಗ್ಯೂ ಅರಬರ ಮತೀಯ ಭಾವನೆಗಳು ಮತ್ತು ಸಾಹಿತ್ಯ ಪಶ್ಚಿಮ ಏಷ್ಯ ಮತ್ತು ಉತ್ತರ ಆಫ್ರಿಕಗಳಲ್ಲಿ ಪ್ರಬಲವಾದ ಮತ್ತು ಪ್ರಭಾವಯುತವಾದ ಶಕ್ತಿಗಳಾಗಿವೆ.

ಒಂದನೆಯ ಮಹಾಯುದ್ಧದ ತರುವಾಯ ಸವೂದಿ ಅರೇಬಿಯ ಪ್ರಾಮುಖ್ಯ ಗಳಿಸಿತು. ಅರಬರಲ್ಲಿ ರಾಷ್ಟ್ರೀಯತೆಯ ಮನೋಭಾವ ಬೆಳೆಯಿತು. 1945ರಲ್ಲಿ ನಡೆದ ಮಾಲ್ಟ ಸಮ್ಮೇಳನದಲ್ಲಿ ಐರೋಪ್ಯ ಹಾಗೂ ಅಮೆರಿಕನ್ ನಾಯಕರು ಅರಬರ ರಾಷ್ಟ್ರೀಯತೆಯ ಮನೋಭಾವಗಳನ್ನು ಗುರುತಿಸಿ ಸೂಕ್ತರೀತಿಯಲ್ಲಿ ನಡೆದುಕೊಳ್ಳುವ ಭರವಸೆ ಇತ್ತರು.

**ಆಗ್ನೇಯ ಏಷ್ಯ:** ಏಷ್ಯದ ಮತ್ತೊಂದು ಬುಡಕಟ್ಟಿನವರಾದ ಮಲೆಯರು ಮಲೆಯ ಪರ್ಯಾಯದ್ವೀಪ. ಜಾವ, ಸುಮಾತ್ರ ಮತ್ತು ಫಿಲಿಪೀನ್ಸ್‌ನಲ್ಲೂ ಅನೇಕ ಚಿಕ್ಕಪುಟ್ಟ ದ್ವೀಪಗಳಲ್ಲೂ ಫಾರ್ಮೋಸ ಮತ್ತು ಮಡಗಾಸ್ಕರ್‌ಗಳಲ್ಲೂ ಹರಡಿ ಹೋಗಿದ್ದಾರೆ. ಇಷ್ಟು ವಿಶಾಲವಾಗಿ ಹರಡಿರುವ ಈ ಜನರಿಗೆ ತಮ್ಮದೇ ಆದ ಏಕರೀತಿಯ ರಾಜ್ಯಾಂಗವಿಲ್ಲ. ಏಷ್ಯದ ಮಲೆಯರು ಸಮುದ್ರಯಾನ ಮಾಡುವುದರಲ್ಲಿ ಗಟ್ಟಿಗರು. ಈ ಜನಾಂಗದ ಇತಿಹಾಸದಲ್ಲಿ ಮುಖ್ಯವಾಗಿ ಮೂರು ಘಟ್ಟಗಳನ್ನು ಗುರುತಿಸಬಹುದು. ಮೊದಲನೆಯದು ಹಿಂದುಳಿದ ಸಂಸ್ಕೃತಿಯ ಪರಿಸ್ಥಿತಿ. ಈಗಿನ ಬೋರ್ನಿಯೊ ದ್ವೀಪಗಳಲ್ಲಿ ವಾಸಿಸುವ ದೇಶೀಯರಂತೆ ಇದ್ದದ್ದು. ಎರಡನೆಯ ಘಟ್ಟದಲ್ಲಿ ಈ ಜನಾಂಗದವರು ಜಾವ, ಸುಮಾತ್ರ ಮತ್ತು ಮಲೆಯಗಳಲ್ಲಿ ಹಿಂದೂ ಸಂಸ್ಕೃತಿಯಿಂದ ಪ್ರಭಾವಿತರಾದರು. ಸುಮಾತ್ರದಲ್ಲಿ ಉದಯವಾದ ಶ್ರೀ ವಿಜಯ ಸಾಮ್ರಾಜ್ಯ 7–14ನೆಯ ಶತಮಾನದವರೆಗೆ ಬಹಳ ಪ್ರಸಿದ್ಧವಾಗಿತ್ತು. ಮೂರನೆಯ ಘಟ್ಟದಲ್ಲಿ ಬಲಿದ್ವೀಪವನ್ನು ಬಿಟ್ಟು ಉಳಿದ ಎಲ್ಲ ಪ್ರದೇಶಗಳಲ್ಲೂ ಹಿಂದೂ ಧರ್ಮವನ್ನು ಹಿಂದಕ್ಕೆ ತಳ್ಳಿ ಇಸ್ಲಾಂ ಪ್ರಬಲಗೊಂಡಿತು. ಒಟ್ಟಿನಲ್ಲಿ ಮಲೆಯ ಜನಾಂಗದವರು ಆಗ್ನೇಯ ಏಷ್ಯದ ಆಧುನಿಕ ಇತಿಹಾಸದಲ್ಲಿ ಅಂಥ ಹೆಚ್ಚಿನ ಪಾತ್ರ ವಹಿಸಲಿಲ್ಲವೆನ್ನಬಹುದು.

ಆಗ್ನೇಯ ಏಷ್ಯದ ಉಳಿದ ಭಾಗಗಳಾದ ಬರ್ಮ, ಥೈಲೆಂಡ್ (ಸಯಾಂ), ಕಾಂಬೋಡಿಯ, ಉತ್ತರ ಮತ್ತು ದಕ್ಷಿಣ ವಿಯೆಟ್ನಾಂ ಮತ್ತು ಲಾವೋಸ್‌ಗಳು ಹಿಂದಿನಿಂದಲೂ ಭಾರತೀಯ ಮತ್ತು ಚೀನೀ ಸಂಸ್ಕೃತಿಗಳಿಂದ ಪ್ರಭಾವಿತವಾಗಿವೆ. ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಾಂಗದವರು ಹತ್ತಾರು ಗುಂಪುಗಳಿಗೆ ಸೇರಿದವರಾಗಿದ್ದಾರೆ. ಇತಿಹಾಸದಲ್ಲಿ ಮೊದಲು ಪ್ರಾಮುಖ್ಯ ಗಳಿಸಿದವರೆಂದರೆ ಖ್ಮೆರ್ ಜನಾಂಗದವರು. ಪ್ರ.ಶ.800–1200ರಲ್ಲಿ ಖ್ಮೆರ್ ಸಾಮ್ರಾಜ್ಯ ಉನ್ನತ ಸ್ಥಿತಿಯಲ್ಲಿತ್ತೆನ್ನಬಹುದು. ಪ್ರ.ಶ.2ನೆಯ ಶತಮಾನದಲ್ಲಿ ಸ್ಥಾಪಿತವಾದ ಈಗಿನ ವಿಯಟ್ನಾಂ ಪ್ರದೇಶದಲ್ಲಿದ್ದ ಚಂಪ ಸಾಮ್ರಾಜ್ಯ ಇಂಡೋಚೀನದಲ್ಲೆಲ್ಲ ಪ್ರಸಿದ್ಧವಾಗಿ ಹಿಂದು ಸಂಸ್ಕೃತಿಯಿಂದ ಪ್ರಭಾವಿತವಾಗಿ ಅನೇಕ ಕಲಾಕೌಶಲಗಳನ್ನು ರಚಿಸಲು ಪ್ರೋತ್ಸಾಹಿಸಿತು. ಜಾವದ ಮುಖಾಂತರ ಹಿಂದು ಸಂಸ್ಕೃತಿ ಚಂಪಕ್ಕೆ ಹೋಗಿರಬಹುದು. ವಿಯಟ್ನಾಮಿನಲ್ಲಿ ವಾಸಿಸುವ ಅನ್ನಾಮೀಯರು ಚಂಪ ರಾಜ್ಯವನ್ನು ನಾಶಗೊಳಿಸಿ ವಿಯಟ್ನಾಮಿನ ಮೇಲೆ ತಮ್ಮ ಪ್ರಭಾವ ಬೀರಿದರು. ಇವರು ಚೀನ ಸಂಸ್ಕೃತಿಯಿಂದ ಪ್ರಭಾವಿತರಾದರು. ಬರ್ಮದವರು ಟಿಬೆಟಿನ ಜನಾಂಗದ ಗುಂಪಿಗೆ ಸೇರಿದವರಾಗಿದ್ದು ಈಗಿನ ಬರ್ಮದಲ್ಲಿ 12, 16 ಮತ್ತು 18ನೆಯ ಶತಮಾನಗಳಲ್ಲಿ ಪ್ರಸಿದ್ಧ ಸಾಮ್ರಾಜ್ಯ ಕಟ್ಟಿ, 19ನೆಯ ಶತಮಾನದ ವೇಳೆಗೆ ಬ್ರಿಟಿಷರಿಗೆ ಶರಣಾಗತರಾದರು. ಬರ್ಮೀಯರು ಬಹುತೇಕ ಬೌದ್ಧಮತೀಯರಾದರೂ ಹಿಂದು ಸಂಸ್ಕೃತಿಯ ಹಲವಾರು ಅಂಶಗಳನ್ನು ಪಡೆದಿದ್ದಾರೆ. ಚೀನಿ ಜನಾಂಗಕ್ಕೆ ಹತ್ತಿರದವರಾದ ಸಯಾಮಿಗಳು 13ನೆಯ ಶತಮಾನದಲ್ಲಿ ಈಗಿನ ಥೈಲೆಂಡ್ ಪ್ರದೇಶದಲ್ಲಿ ರಾಜ್ಯ ಕಟ್ಟಿ, ಬೌದ್ಧಮತಾವಲಂಬಿಗಳಾಗಿ, ಭಾರತದಿಂದ ಅಕ್ಷರಮಾಲೆಯನ್ನೂ ಭಾರತೀಯ ಸಂಸ್ಕೃತಿಯ ಇನ್ನೂ ಅನೇಕ ಅಂಶಗಳನ್ನೂ ಪಡೆದುಕೊಂಡರು. ಆಧುನಿಕ ಕಾಲದಲ್ಲಿ ಆಗ್ನೇಯ ಏಷ್ಯದಲ್ಲಿ ಥೈಲೆಂಡ್ ಮಾತ್ರ ಪಾಶ್ಚಾತ್ಯರ ನೇರವಸಾಹತು ಆಡಳಿತದಿಂದ ತಪ್ಪಿಸಿ ಕೊಂಡು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡಿತು.

**ಪಾಶ್ಚಾತ್ಯ ಸಾಮ್ರಾಜ್ಯ:** ಹದಿನೈದನೆಯ ಶತಮಾನದ ಕೊನೆಗೆ ವಾಸ್ಕೋಡಗಾಮನ ನೇತೃತ್ವದಲ್ಲಿ ಪೋರ್ಚುಗೀಸ್ ನೌಕೆ ಗುಡ್‌ಹೋಪ್ ಭೂಶಿರದ ಮಾರ್ಗವಾಗಿ ಹಿಂದೂ ಮಹಾಸಾಗರವನ್ನು ಪ್ರವೇಶಿಸಿತು. ಏಷ್ಯದ ಆಧುನಿಕ ಇತಿಹಾಸದಲ್ಲಿ ಇದೊಂದು ಮುಖ್ಯ ಘಟನೆ. ಏಕೆಂದರೆ ಇಲ್ಲಿಂದಾಚೆಗೆ ಐರೋಪ್ಯರು ಏಷ್ಯವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವ ಪ್ರಯತ್ನ ನಡೆಸಿದರು. ಈ ಘಟನೆ ಭಾರತದಲ್ಲಿ ಮೊಗಲ್ ಸಾಮ್ರಾಜ್ಯ ಆರಂಭವಾಗುವುದಕ್ಕೆ ಸು.25 ವರ್ಷಗಳ ಹಿಂದೆ ನಡೆಯಿತು. ಚೀನದ ಕೊನೆಯ ಅರಸರಾದ ಮಂಚುಗಳು ಪ್ರಾಬಲ್ಯಕ್ಕೆ ಬರಲು ಇನ್ನೂ ಸುಮಾರು ಅರ್ಧ ಶತಮಾನವಿತ್ತು. ಪೋರ್ಚುಗೀಸರು ಹಿಂದೂ ಮಹಾಸಾಗರದಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದಲ್ಲದೆ ಪೂರ್ವಕ್ಕಿರುವ ಎಲ್ಲ ಸಮುದ್ರಗಳ ಮೇಲೂ ತಮ್ಮ ಹತೋಟಿಯನ್ನಿಟ್ಟುಕೊಂಡರು. ಪೋರ್ಚುಗೀಸರು ಹೋದಲ್ಲಿ ಅವರನ್ನು ಹಿಂಬಾಲಿಸಿ ಸ್ಪಾನಿಷರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲಿಷರು ನಡೆದರು. ಎಲ್ಲಕ್ಕಿಂತ ಮಿಗಿಲಾಗಿ ಇವರೆಲ್ಲ ವ್ಯಾಪಾರವನ್ನೇ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿದ್ದರು. ಏಷ್ಯದ ರೇಷ್ಮೆ ಮತ್ತು ಸಂಬಾರ ಪದಾರ್ಥಗಳು ಪಾಶ್ಚಾತ್ಯರನ್ನು ಆಕರ್ಷಿಸಿದುವು. ವ್ಯಾಪಾರವನ್ನು ಹಿಂಬಾಲಿಸಿ ಪಾಶ್ಚಾತ್ಯರ ಮತ ಬಂತು. ಕ್ರೈಸ್ತಧರ್ಮವನ್ನು ಹರಡಲು ಅನೇಕ ಪ್ರಯತ್ನಗಳು ನಡೆದುವು. ಪೋರ್ಚುಗೀಸರು ಈ ದಿಸೆಯಲ್ಲಿ ಎಲ್ಲರಿಗಿಂತ ಮಿಗಿಲಾಗಿ ಹೆಣಗಾಡಿದರು.

ಪೋರ್ಚುಗೀಸರು ಗೋವ ಮತ್ತು ಮಕಾವ್‌ಗಳಲ್ಲೂ ಸ್ಪಾನಿಷರು ಫಿಲಿಪೀನ್ಸ್‌ನಲ್ಲೂ (1565) ತಮ್ಮ ಕೋಠಿಗಳನ್ನು ಕಟ್ಟಿದರು. ಐರೋಪ್ಯ ರಾಷ್ಟ್ರಗಳು ಮಧ್ಯೆ ಇದ್ದ ಪೈಪೋಟಿ ಏಷ್ಯಕ್ಕೂ ಹಬ್ಬಿತು. ಡಚ್ಚರು ಪೋರ್ಚುಗೀಸರನ್ನು ಓಡಿಸಿ ಜಾವ ದ್ವೀಪದಲ್ಲಿ ತಮ್ಮ ಸಾಂಬಾರು ಪದಾರ್ಥಗಳ ಒಂದು ಸಾಮ್ರಾಜ್ಯವನ್ನೇ ಕಟ್ಟಿದರು. ಕ್ರಮೇಣ ಸುಮಾತ್ರ ದ್ವೀಪವೂ ಅವರ ವಶವಾಗಿ, ಜಾವಾದ ಬಟೇವಿಯ ಡಚ್ಚರ ವಸಾಹತುಗಳ ಕೇಂದ್ರವಾಯಿತು. 1749 ಮತ್ತು 1805ರ ನಡುವಣ ಕಾಲದಲ್ಲಿ ಫ್ರೆಂಚರಿಗೂ ಬ್ರಿಟಿಷರಿಗೂ ಭಾರತದಲ್ಲಿ ಪ್ರಭಾವ ಗಳಿಸುವ ಸಲುವಾಗಿ ಯುದ್ಧಗಳು ನಡೆದುವು. ಆ ವೇಳೆಗೆ ಮೊಗಲ್ ಸಾಮ್ರಾಜ್ಯ ನಶಿಸಿಹೋಗಿ, ಒಂದು ಕೇಂದ್ರಾಡಳಿತವಿಲ್ಲದಂಥ ಪರಿಸ್ಥಿತಿ ಒದಗಿತ್ತು. ಇದರ ಜೊತೆಗೆ ಭಾರತೀಯರಲ್ಲೇ ಇದ್ದ ಪರಸ್ಪರ ಕಲಹಗಳು ಬ್ರಿಟಿಷರಿಗೆ ತಮ್ಮ ಸಾಮ್ರಾಜ್ಯವನ್ನು ಕಟ್ಟಲು ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಟ್ಟಿತು. 19ನೆಯ ಶತಮಾನದಲ್ಲಿ ಬ್ರಿಟಿಷರು ಬಹು ಸುಲಭವಾಗಿ ಭಾರತವನ್ನೆಲ್ಲ ಜಯಿಸಿದರು. ಭಾರತದಲ್ಲಿ ಕಟ್ಟಿದ ಈ ಸಾಮ್ರಾಜ್ಯವನ್ನು ಕಾಪಾಡಲು, ಏಡನ್, ಪರ್ಷಿಯ, ಅರೇಬಿಯ, ಬರ್ಮ ಮತ್ತು ಸಿಂಗಪುರಗಳಲ್ಲಿ ಕೋಟೆಕೊತ್ತಲಗಳನ್ನು ಕಟ್ಟಿದರು.

ಪರಾಜಿತರಾದ ಫ್ರೆಂಚರು ಭಾರತದಿಂದ ಪೂರ್ವಕ್ಕೆ ಹೋಗಿ ಆಗ್ನೇಯ ಏಷ್ಯದ ಭಾಗಗಳಲ್ಲಿ ತಮ್ಮ ಪ್ರಭಾವ ಬೀರತೊಡಗಿದರು. ಬರ್ಮದಲ್ಲೂ ಸ್ವಲ್ಪ ಕಾಲ ತಮ್ಮ ಪ್ರಭಾವ ಸ್ಥಾಪಿಸಲು ಪ್ರಯತ್ನ ನಡೆಸಿದರು. ಬರ್ಮವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡು ಭಾರತದಲ್ಲಿದ್ದ ಬ್ರಿಟಿಷರೊಡನೆ ಹೋರಾಟ ನಡೆಸುವುದೇ ಇವರ ಉದ್ದೇಶವಾಗಿತ್ತು. ಆದರೆ ಫ್ರೆಂಚರ ಈ ಉದ್ದೇಶ ಪೂರ್ಣವಾಗಲಿಲ್ಲ. ಕಡೆಗೆ ಫ್ರೆಂಚರು ಕೊಚ್ಚಿನ್, ಚೀನ, ಅನ್ನಾಂ, ಟಾಂಕಿಂಗ್, ಲಾವೋಸ್ ಮತ್ತು ಕಾಂಬೋಡಿಯಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಆ ಪ್ರದೇಶದಲ್ಲಿ ಆಳುತ್ತಿದ್ದ ರಾಜರು ಫ್ರೆಂಚರ ಅಧೀನರಾಗಿ ಅವರ ಪೋಷಣೆಗೆ ಒಳಪಟ್ಟರು. ಆಗ್ನೇಯ ಏಷ್ಯದಲ್ಲಿ ಥೈಲೆಂಡ್ ಅಥವಾ ಸಯಾಂ ಮಾತ್ರ ಪಾಶ್ಚಾತ್ಯರ ವಸಾಹತು ನೀತಿಗೆ ತುತ್ತಾಗದೆ ತನ್ನ ಸ್ವಾತಂತ್ರ್ಯ ಕಾಪಾಡಿಕೊಂಡಿತು. ಥೈಲೆಂಡಿನ ಅಕ್ಕಪಕ್ಕಗಳಲ್ಲಿದ್ದ ಫ್ರೆಂಚರೂ ಬ್ರಿಟಿಷರೂ ಆ ದೇಶ ತಮ್ಮಿಬ್ಬರ ಪ್ರಭಾವ ವಲಯಗಳ ನಡುವಿನ ಪ್ರದೇಶವಾಗಿ ಸ್ವತಂತ್ರವಾಗಿ ಇರಬೇಕೆಂದು ಒಪ್ಪಂದ ಮಾಡಿಕೊಂಡಿದ್ದೇ ಇದಕ್ಕೆ ಕಾರಣ.

ಪಶ್ಚಿಮ ಏಷ್ಯದಲ್ಲಿ ಆಟೋಮನ್ನರ ಸಾಮ್ರಾಜ್ಯ ಪ್ರಭಾವಶಾಲಿಯಾಗಿತ್ತು. ಆದರೆ 16ನೆಯ ಶತಮಾನದಿಂದೀಚೆಗೆ ಆ ಸಾಮ್ರಾಜ್ಯ ಅವನತಿಯ ಹಾದಿ ಹಿಡಿದಿತ್ತು. 1882ರಲ್ಲಿ ಬ್ರಿಟಿಷರು ಆ ಸಾಮ್ರಾಜ್ಯದ ಅಧೀನದಲ್ಲಿದ್ದ ಈಜಿಪ್ಟನ್ನು ತಮ್ಮ ಹತೋಟಿಗೆ ತಂದುಕೊಂಡರು. ಈಜಿಪ್ಟ್ ಬ್ರಿಟನಿನ ವ್ಯಾಪಾರ ಮಾರ್ಗಕ್ಕೆ ಅತ್ಯಂತ ಅವಶ್ಯಕವಾಗಿತ್ತು. ಸೂಯೆಜ್ ಕಾಲುವೆ ರಚಿಸಿದ ಅನಂತರ ಈಜಿಪ್ಟಿನ ಉಪಯೋಗ ಹೆಚ್ಚಿತು. ಆಮೇಲೆ ಬ್ರಿಟಿಷರು ತಮ್ಮ ಹತೋಟಿಯನ್ನು ಇಟ್ಟುಕೊಳ್ಳುವ ಸಲುವಾಗಿ ಈಜಿಪ್ಟನ್ನು ತಮ್ಮ ಪ್ರಭಾವ ವಲಯದೊಳಕ್ಕೆ ತಂದುಕೊಂಡರು. ಫ್ರೆಂಚರು ಸಿರಿಯದಲ್ಲಿ ತಮ್ಮ ಪ್ರಭಾವವನ್ನು ಸ್ಥಾಪಿಸಿದರು. ದೂರಪ್ರಾಚ್ಯ ದೂರವಿದ್ದುದ್ದರಿಂದಲೊ ಏನೋ, ಸ್ವಲ್ಪ ಕಾಲ ಪಾಶ್ಚಾತ್ಯರ ವಸಾಹತು ನೀತಿಗೆ ತುತ್ತಾಗದೆ ಉಳಿದಿತ್ತು. ಆದರೆ 1842ರಿಂದಾಚೆಗೆ ಚೀನ ದೇಶ ಪಾಶ್ಚಾತ್ಯರಿಗೆ ವ್ಯಾಪಾರಕ್ಕಾಗಿ ತನ್ನ ಬಾಗಿಲು ತೆಗೆಯಬೇಕಾಯಿತು. ಚೀನಿಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಹೆಚ್ಚಿನ ರಿಯಾಯಿತಿಗಳು 1930ರ ದಶಕದವರೆಗೆ ನಡೆದುಕೊಂಡು ಬಂದುವು. ಇವಕ್ಕೆಲ್ಲ ಚೀನ ದೇಶವನ್ನು 1911ರ ವರೆಗೆ ಆಳಿದ ಮಂಚುಗಳೇ ಕಾರಣವೆನ್ನಬಹುದು. ಅನಂತರ ಸ್ಥಾನಮಾನಗಳಿಗಾಗಿ ನಡೆದ ಆಂತರಿಕ ಕಲಹಗಳಿಂದ ಚೀನ ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ.

ಈ ಕಾಲದಲ್ಲೇ ರಷ್ಯ ಉತ್ತರ ಮತ್ತು ಮಧ್ಯ ಏಷ್ಯಗಳಲ್ಲಿ ತನ್ನ ಪ್ರಭಾವವನ್ನು ಸ್ಥಾಪಿಸುವ ಪ್ರಯತ್ನ ನಡೆಸಿತು. ಸೈನ್ಯಬಲ, ರಾಜಕೀಯ ಕುಟಿಲನೀತಿ ಮತ್ತು ವಸಾಹತುಗಳ ಸ್ಥಾಪನೆ–ಇವೇ ರಷ್ಯನ್ನರ ಅಸ್ತ್ರಗಳಾಗಿದ್ದುವು. 1900ರ ವೇಳೆಗೆ ರಷ್ಯ ಪೆಸಿಫಿಕ್ ಮಹಾಸಾಗರದ ತೀರದವರೆಗೆ ತನ್ನ ಹತೋಟಿ ಹಬ್ಬಿಸಿತ್ತು. ಚೀನ ಮತ್ತು ಕೊರಿಯಗಳು ರಷ್ಯನ್ನರ ಈ ಮುನ್ನುಗ್ಗುವಿಕೆಯಿಂದ ತತ್ತರಿಸಿದುವು.

**ಏಷ್ಯದ ಜಾಗೃತಿ:** ಹತ್ತೊಂಬತ್ತನೆಯ ಶತಮಾನದ ಇತಿಹಾಸ ಮುಖ್ಯವಾಗಿ ಪಾಶ್ಚಾತ್ಯರು ಏಷ್ಯದಲ್ಲಿ ವಿವಿಧ ರೀತಿನೀತಿಗಳಿಂದ, ಕುಟಿಲೋಪಾಯಗಳಿಂದ ಹೇಗೆ ತಮ್ಮ ಪ್ರಭಾವ (ರಾಜಕೀಯ, ಸಾಮಾಜಿಕ ಹಾಗೂ ಮತೀಯ) ಸ್ಥಾಪಿಸಿದರು ಎಂಬುದನ್ನು ತೋರಿಸಿದರೆ, ಇಪ್ಪತ್ತನೆಯ ಶತಮಾನದ ಏಷ್ಯದ ಇತಿಹಾಸ, ಏಷ್ಯ ಹೇಗೆ ಇಂಥ ಬಂಧನದಿಂದ ಮುಕ್ತವಾಗಿ ತನ್ನದೇ ಆದ ಆದರ್ಶಗಳನ್ನು ರೂಪಿಸಿಕೊಳ್ಳತೊಡಗಿತು ಎಂಬುದನ್ನು ತೋರಿಸುತ್ತದೆ. ಇಪ್ಪತ್ತನೆಯ ಶತಮಾನದ ಹೊತ್ತಿಗೆ ಏಷ್ಯದ ವಿವಿಧ ಜನಾಂಗದವರು ಯುರೋಪಿನ ವಿರುದ್ಧ ಎಚ್ಚೆತ್ತು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧರಾದರು. ಏಷ್ಯದಲ್ಲಿ ಮೊತ್ತಮೊದಲ ಬಾರಿಗೆ ಜಪಾನ್ ಯುರೋಪಿನಿಂದಲೇ ಪಾಠ ಕಲಿತು, ಅದರ ಅಸ್ತ್ರಗಳಿಂದಲೇ ಎದುರಿಸುವ ಸಿದ್ಧತೆ ನಡೆಸಿತು. 1868ರಿಂದೀಚೆಗೆ ಅನೇಕ ಸುಧಾರಣೆಗಳಿಂದ ಮಾಡಿ ಜಪಾನ್ ಆಧುನಿಕ ರಾಷ್ಟ್ರವಾಯಿತು. ಹೊಸದಾಗಿ ಸೃಷ್ಟಿಸಿದ ಈ ಬಲವನ್ನು 1894–95ರಲ್ಲಿ ಚೀನದ ವಿರುದ್ಧವಾಗಿಯೂ 1904–05ರಲ್ಲಿ ರಷ್ಯದ ವಿರುದ್ಧವಾಗಿಯೂ ಪ್ರಯೋಗಿಸಿ, ಆ ದೇಶಗಳನ್ನು ಸೋಲಿಸಿದ್ದು ಒಂದು ಮಹಾಸಾಧನೆ. ಪಾಶ್ಚಾತ್ಯರಂತೆ ಜಪಾನ್ ಸಹ ಏಷ್ಯದಲ್ಲಿ ವಸಾಹತುಗಳನ್ನು ಸ್ಥಾಪಿಸುವ ಪ್ರಯತ್ನ ನಡೆಸಿತು. ಮೇಲೆ ತಿಳಿಸಿದ ಎರಡು ಯುದ್ಧಗಳ ಪರಿಣಾಮವಾಗಿ ಫಾರ್ಮೋಸ್, ಕೊರಿಯ ಮತ್ತು ಮಂಚೂರಿಯಗಳಲ್ಲಿ ಜಪಾನ್ ತನ್ನ ಪ್ರಭಾವ ಸ್ಥಾಪಿಸಿತು. 1945ರಲ್ಲಿ ಎರಡನೆಯ ಮಹಾಯುದ್ಧದಲ್ಲಿ ಸಂಪೂರ್ಣ ಸೋಲನ್ನು ಅನುಭವಿಸುವವರೆಗೂ ಜಪಾನಿನ ಈ ಕನಸಿಗೆ ತಡೆಯೇ ಇರಲಿಲ್ಲ.

ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಏಷ್ಯನ್ ರಾಷ್ಟ್ರಗಳಲ್ಲಿ ಒಂದು ಜಾಗೃತಿಯುಂಟಾಯಿತು. ಜಪಾನ್ ರಷ್ಯದ ಮೇಲೆ ಗಳಿಸಿದ ವಿಜಯವೂ (1905) ಚೀನ ದೇಶದ ಕ್ರಾಂತಿಯೂ ಸುಧಾರಣಾ ಚಳವಳಿಯೂ (1911) ಪ್ರಪಂಚದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಭಾರತದಲ್ಲಿ ನಡೆದ ಅಹಿಂಸಾತ್ಮಕ ಚಳವಳಿಯೂ ಏಷ್ಯದ ಇತರ ರಾಷ್ಟ್ರಗಳ ನಾಯಕರನ್ನು ಹುರಿದುಂಬಿಸಿದುವು. ರಷ್ಯದಲ್ಲಿ ಸಂಭವಿಸಿದ ಕ್ರಾಂತಿಯಿಂದ ಏಷ್ಯದ ರಾಷ್ಟ್ರಗಳ ಮೇಲೂ ಪರಿಣಾಮವಾಗದಿರಲಿಲ್ಲ.

ಎರಡನೆಯ ಮಹಾಯುದ್ಧದ ಪರಿಣಾಮವೂ ಅಲ್ಪವೇನಲ್ಲ. ಇದರಿಂದ ಪಾಶ್ಚಾತ್ಯ ಸಾಮ್ರಾಜ್ಯಷಾಹಿಗೆ ಬಲವಾದ ಪೆಟ್ಟು ಬಿತ್ತು. ಭಾರತದ ವಿಭಜನೆ ಮತ್ತು ಸ್ವಾತಂತ್ರ್ಯ ಸಂಪಾದನೆ, ಬರ್ಮ, ಮಲೆಯ, ಇಂಡೊನೇಷ್ಯ ಮುಂತಾದ ರಾಷ್ಟ್ರಗಳ ವಿಮೋಚನೆ, ಇಂಡೊ–ಚೀನ ಪ್ರದೇಶದ ರಾಜ್ಯಗಳಿಗೆ ಸ್ವಾತಂತ್ರ್ಯದಾನ, ಫಿಲಿಪೀನ್ಸಿನ ಬಿಡುಗಡೆ, ಚೀನದಲ್ಲಿ ಕಮ್ಯೂನಿಸ್ಟ್ ಪ್ರಭುತ್ವ ಸ್ಥಾಪನೆ, ವಿಯೆಟ್ನಾಂ ಕಲಹ, ಪಶ್ಚಿಮ ಏಷ್ಯದ ಅಸ್ಥಿರ ರಾಜಕೀಯ–ಇವು ಕೆಲವು ಮುಖ್ಯ ಘಟನೆಗಳು.

ಪಾಶ್ಚಾತ್ಯ ರಾಷ್ಟ್ರಗಳು ದಾಸ್ಯದಿಂದ ಬಿಡುಗಡೆಯಾದ ಮೇಲೆ ಏಷ್ಯದ ರಾಷ್ಟ್ರಗಳೂ ಆಧುನಿಕ ರೀತಿಯಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸಲು ಪ್ರಯತ್ನ ನಡೆಸಿದುವು. ಹಳೆಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ಕೈಬಿಡದೆ, ಪಾಶ್ಚಾತ್ಯರಿಂದ ಕಲಿಯಬಹುದಾದ ಆಧುನಿಕ ಭಾವನೆಗಳನ್ನು ಕಲಿತು ಮುಂದುವರಿಯಲು ಏಷ್ಯ ಯತ್ನಿಸಿತು. ಆಧುನಿಕ ಏಷ್ಯದಲ್ಲಿ ಪೂರ್ವ–ಪಶ್ಚಿಮಗಳ ಸಂಗಮವನ್ನು ನೋಡಬಹುದಾಗಿದೆ. ಅಷ್ಟಾದರೂ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಳು ರಾಜಕೀಯ ಬದಲಾವಣೆಯಷ್ಟೇ ವೇಗದಿಂದ ನಡೆಯುತ್ತಿಲ್ಲದಿರೊಂದು. ಇದೊಂದು ಸಮಸ್ಯೆ. ಪಾಶ್ಚಾತ್ಯ ಪ್ರಜಾಪ್ರಭುತ್ವ, ಕಮ್ಯೂನಿಸ್ಟ್ ವ್ಯವಸ್ಥೆ ಇವುಗಳ ನಡುವೆ ಏಷ್ಯದ ರಾಷ್ಟ್ರಗಳು ಉಯ್ಯಾಲೆಯಾಡುತ್ತಿವೆ. ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಶೀಘ್ರವಾಗಿ ಮುಂದುವರಿಯಲಾಗದ ದೇಶಗಳು ಸರ್ವಾಧಿಕಾರಕ್ಕೂ ಎಡೆಗೊಡುತ್ತಿವೆ. (ಎಸ್.ಕೆ.ಎಸ್.)

**ಪ್ರಾಗಿತಿಹಾಸ:** ಪ್ರಪಂಚದಲ್ಲೇ ವಿಸ್ತಾರವಾದ ಏಷ್ಯ ಖಂಡ ಆದಿಕಾಲದಿಂದಲೂ ವೈವಿಧ್ಯಗಳ ಆಗರವೆನಿಸಿದೆ. ಈ ವೈವಿಧ್ಯಗಳನ್ನು ಮಾನವನ ಉಗಮ ಕಾಲದಿಂದಲೇ ನೋಡಬಹುದು. ಹಳೆಶಿಲಾಯುಗದ ಆರಂಭ ಕಾಲದಲ್ಲಿ ಮಾನವ ಆಫ್ರಿಕ ಪ್ರದೇಶಗಳಲ್ಲಿ ಉಗಮವಾಗಿ ತನ್ನ ಜೀವನಕ್ರಮವನ್ನು ಪ್ರಾರಂಭಿಸಿ ಕ್ರಮೇಣ ವಿಶ್ವದ ಇತರ ಭಾಗಗಳಿಗೆ ಪ್ರಸರಿಸಿದನೆಂಬುದು ಕೆಲವು ವಿದ್ವಾಂಸರ ವಾದ. ಈ ವಿಷಯದಲ್ಲಿ ಖಚಿತವಾದ ಸಾಕ್ಷ್ಯಾಧಾರಗಳು ಇನ್ನೂ ದೊರಕಿಲ್ಲ. ಮಧ್ಯ ಪ್ಲಿಸ್ಟೊಸೀನ್ ಯುಗದ ವೇಳೆಗಾಗಲೇ ಏಷ್ಯದ ಹಲವು ಭಾಗಗಳಲ್ಲಿ ಮಾನವನಿದ್ದ ಬಗ್ಗೆ ಆಧಾರಗಳು ಸಿಕ್ಕಿವೆ. ಇಂಡೋನೇಷ್ಯದ ಜಾವದ್ವೀಪ ಮತ್ತು ಚೀನದ ರಾಜಧಾನಿ ಪೀಕಿಂಗ್ ಬಳಿಯ ಚೀನದ ಮೋಡ್ಜೊ ಕೆರ್ತೊ (18 ಲಕ್ಷ ವರ್ಷ), ಲ್ಯಾಂಟಿಯನ್ (8–7.6ಲಕ್ಷ ವರ್ಷ) ಮತ್ತು ಜೌಕೋಟಿಯನ್ ಗುಹೆ (5–2.3ಲಕ್ಷ ವರ್ಷ) ಮುಂತಾದ ಸ್ಥಳಗಳಲ್ಲಿ ಹೋಮೊ ಎರೆಕ್ಟಸ್ ಮಾನವನ ಅಸ್ಥಿ ಅವಶೇಷಗಳು ಶೋಧವಾಗಿವೆ. ದಲಿ, ಚಿದುಯಿಷನ್, ಹೆಕ್ಸಿಯಾನ್, ಡಿಂಗ್‌ಕನ್, ಮಭ ಮುಂತಾದ ಸ್ಥಳಗಳಲ್ಲಿ ಹೋಮೊ ಸೇಪಿಯನ್ಸ್ ಎಂದು ಹೇಳಬಹುದಾದ ಅಸ್ಥಿ ಅವಶೇಷಗಳು (2.8–1ಲಕ್ಷ ವರ್ಷ) ದೊರೆತಿವೆ. ಜೌಕೋಟಿಯನ್ ಗುಹೆಗಳಲ್ಲಿ ಆದಿ ಹಳೆಶಿಲಾಯುಗದ ಮಾನವನ ಜೀವಾವಶೇಷಗಳು (ಫಾಸಿಲ್ಸ್) ದೊರಕಿದ್ದು ಅವನು ಏಷ್ಯದ ಮಾನವನ ಪೂರ್ವಜ (ಪಿಥೆಕಾಂಥ್ರೋಪಸ್ ಏಷ್ಯಾಟಿಕಸ್) ಸಂತತಿಗೆಸೇರಿದವನೆಂದು ತಿಳಿದುಬಂದಿದೆ. ಇಂಡೋನೇಷ್ಯದ ಪಜ್ಜಿಟೇನಿಯನ್, ಚೀನದ ಜೌಕೋಟಿಯನ್, ಮಲೆಯದ ತಂಪಾನಿಯನ್, ಮಯನ್ಮಾರ್‌ನ ಅನ್ಯಾಥಿಯನ್ ಮತ್ತು ವಾಯವ್ಯ ಭಾರತದ ಸೋಹನ್ ಸಂಸ್ಕೃತಿಗಳು ಉರುಟುಕಲ್ಲಿನಕೊಡಲಿ, ಮಚ್ಚು, ಕತ್ತಿ ಮತ್ತು ಚಕ್ಕೆಕಲ್ಲಿನಾಯುಧಗಳಿಂದ ಕೂಡಿ ಒಂದೇ ರೀತಿಯವಾಗಿರುವುದರಿಂದ ಈ ಅತಿ ಪ್ರಾಚೀನ ಮಾನವನ ಪೂರ್ವಜರೇ ಈ ಉಪಕರಣಗಳ ಕರ್ತೃವೆಂದು ತಿಳಿದುಬಂದಿದೆ. ಇದೇ ಕಾಲದಲ್ಲಿ ಭಾರತದ ಇತರ ಭಾಗಗಳಲ್ಲಿ (ಮುಖ್ಯವಾಗಿ ಮಧ್ಯ ಮತ್ತು ದಕ್ಷಿಣಭಾರತ) ಮತ್ತು ಪಶ್ಚಿಮ ಏಷ್ಯದ ಅನೇಕ ಭಾಗಗಳಲ್ಲಿ ಇದಕ್ಕಿಂತಲೂ ಮುಂದುವರಿದ ಕೈಗೊಡಲಿ ಜೀವನ ವಿಧಾನ ಹರಡಿತ್ತು. ಭಾರತ ಪರ್ಯಾಯದ್ವೀಪದ ನರ್ಮದ, ಗೋದಾವರಿ, ಕೃಷ್ಣ ಮತ್ತು ಪಾಲಾರ್ ನದಿಕಣಿವೆಗಳಲ್ಲಿ ಅಬೆವಿಲಿಯನ್ ಮತ್ತು ಅಶೂಲಿಯನ್ ಮಾದರಿಯ ಕೈಗೊಡಲಿ ಬಳಕೆ ಬಹಳ ಪ್ರಬಲವಾಗಿತ್ತು. ಪಶ್ಚಿಮ ಏಷ್ಯದಲ್ಲಿ ಇತ್ತೀಚಿನ ಸಂಶೋಧನೆಗಳಿಂದ ಈ ಜನರ ಸಂಸ್ಕೃತಿಯ ವಿಷಯ ಸ್ವಲ್ಪಮಟ್ಟಿಗೆ ಬೆಳಕಿಗೆ ಬಂದಿದೆ. ಇರಾನಿನ ಅನೇಕ ಪರ್ವತಗುಹೆ ಮತ್ತು ಮೈದಾನ ಪ್ರದೇಶಗಳಲ್ಲೂ ಮಧ್ಯ ಅರೇಬಿಯದ ಅಡ್‌ಡಾವಾದಿಮಿ, ಇರಾಕಿನ ಬಾರ್ಡಾಬಲ್ಕಾ, ಜೋರ್ಡನಿನ ಬಯಿರ್‌ವೆಲ್ಸ್ ಬಳಿಯಲ್ಲೂ ವಿವಿಧ ಹಂತಗಳಿಗೆ ಸೇರಿದ ಕೈಗೊಡಲಿ ಮತ್ತು ಇತರ ಉಪಕರಣಗಳು ದೊರಕಿ, ಆದಿ ಹಳೆಶಿಲಾಯುಗದ ಮಾನವನ ಬಗೆಗೆ ಮಾಹಿತಿಗಳನ್ನು ಒದಗಿಸಿವೆ. ಪೂರ್ವ ಏಷ್ಯ ಪ್ರದೇಶಗಳಲ್ಲಿ ಮೇಲೆ ಹೇಳಿದ ಉರಟುಕಲ್ಲಿನ ಉಪಕರಣಗಳ ಸಂಸ್ಕೃತಿಗಳು ಪ್ಲಿಸ್ಟೊಸೀನ್ ಯುಗದ ಬಹುಭಾಗದ ವರೆಗೂ ಮುಂದುವರಿಯುತ್ತಿದ್ದು ಅಂತ್ಯಭಾಗದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಹೊಂದಿದಂತೆ ಕಾಣುತ್ತದೆ. ವಾಯವ್ಯ ಭಾರತದ ಸುಧಾರಿತ ಸೋಹನ್ ಸಂಸ್ಕೃತಿ ಮತ್ತು ಜೌಕೋಟಿಯನ್ ಮೇಲ್ಗುಹೆಯಲ್ಲಿಯ ಅವಶೇಷಗಳು ಈ ಹಂತಕ್ಕೆ ಸೇರಿದವು. ಮೊದಲ ಹಂತದ ಮಚ್ಚು–ಕತ್ತಿಗಳ ಬಳಕೆ ಅಲ್ಪಸ್ವಲ್ಪ ಮುಂದುವರಿದರೂ ಈ ಹಂತದಲ್ಲಿ ಚಕ್ಕೆಕಲ್ಲುಗಳಿಂದ ಮಾಡಿದ ಒರೆಯುವ ಉಪಕರಣ ಮತ್ತು ಮೊನೆಗಳೇ ಪ್ರಧಾನವಾಗಿದ್ದುವು. ಚೀನದ ಷಾನ್ಸಿ ಪ್ರಾಂತ್ಯದ ಟಿಂಗ್‌ತ್ಸುನ್ ನೆಲೆಯಲ್ಲೂ ಈ ರೀತಿಯ ಅವಶೇಷಗಳು ದೊರಕಿವೆ. ಚೀನ, ಕೊರಿಯದ ಯುನ್‌ಗ್ಗಾಕ್, ಡಾಂಗ್, ದಿಶೈವನ್ ಡಾಂಗ್, ಡಾಕ್ ಚೋನ್‌ನಲ್ಲಿ (2–50,000 ವರ್ಷ) ಮಾನವನ ಅಸ್ಥಿ ಅವಶೇಷಗಳು ಹಾಗೂ ಮಚ್ಚುಗತ್ತಿ ಸಂಪ್ರದಾಯದ ಕಲ್ಲಿನ ಉಪಕರಣಗಳು ಸಾಮಾನ್ಯವಾಗಿ ದೊರೆಯುತ್ತವೆ. ಶ್ರೀಲಂಕದಲ್ಲಿ 38000–10000 ವರ್ಷ ಹಿಂದಿನ ಸೂಕ್ಷ್ಮ ಶಿಲೋಪಕರಣಗಳನ್ನು ಸಂಗ್‌ವೋ ಗುಹೆಯಲ್ಲಿ ಶೋಧಿಸಲಾಗಿದೆ.

ಕೈಗೊಡಲಿ ಸಂಸ್ಕೃತಿಗಳು ಬಳಕೆಯಲ್ಲಿದ್ದ ದಕ್ಷಿಣ ಮತ್ತು ಪಶ್ಚಿಮ ಏಷ್ಯದ ಅನೇಕ ಪ್ರದೇಶಗಳಲ್ಲಿ ಉಪಕರಣ ತಯಾರಿಕೆ ವಿಧಾನಗಳಲ್ಲಿ ಪ್ರಗತಿ ಕಂಡುಬಂದದ್ದಲ್ಲದೆ ಕ್ರಮೇಣ ಕೈಗೊಡಲಿ ಸಂಸ್ಕೃತಿ ಮರೆಯಾಗಿ ಚಕ್ಕೆಕಲ್ಲಿನ ಉಪಕರಣಗಳು ಹೆಚ್ಚು ಬಳಕೆಗೆ ಬಂದುವು. ಭಾರತದ ಬಹುಭಾಗಗಳಲ್ಲಿ ಮಧ್ಯಹಳೆಶಿಲಾಯುಗ ಸಂಸ್ಕೃತಿಯೆಂದು ಹೆಸರಾಗಿರುವ ಈ ಸಂಸ್ಕೃತಿಯಲ್ಲಿ ಆಯ್ದ ಅರೆಪ್ರಶಸ್ತ ಕಲ್ಲುಗಳಿಂದ ಮಾಡಿದ ಸಣ್ಣ ಗಾತ್ರದ ವಿವಿಧ ರೀತಿಯ ಒರೆಯುವ, ಕೊರೆಯುವ ಉಪಕರಣಗಳೂ ಮೊನೆಗಳೂ ಪ್ರಧಾನವಾಗಿವೆ. ಪಶ್ಚಿಮ ಏಷ್ಯ ಹಳೆಶಿಲಾಯುಗ ಸಂಸ್ಕೃತಿಗಳ ಕೇಂದ್ರವಾದ ಯುರೋಪಿನ ನೆರೆಯಲ್ಲಿದ್ದುದ್ದರಿಂದ ಅಲ್ಲಿಯ ಪ್ರಭಾವ ಹೆಚ್ಚಾಗಿದ್ದು ಮಧ್ಯಹಳೆಶಿಲಾಯುಗದ ಮೌಸ್ಟೀರಿಯನ್ ಮತ್ತು ಲೆವಾಲ್ವ ಸಂಸ್ಕೃತಿಯ ಮಾದರಿಗಳ ಉಪಕರಣಗಳು ಉತ್ತರ ಆಫ್ಘಾನಿಸ್ತಾನ, ಬ್ಯಾಕ್ಟ್ರಿಯ ಪ್ರದೇಶದ ಬಾಲ್ಕ್ ಮತ್ತು ಹೈಬಕ್ ಪಟ್ಟಣಗಳ ಪರಿಸರದಲ್ಲೂ ಇರಾನಿನ ಕರ್ಮನ್‌ಘಾ ಮತ್ತು ಇರಾಕಿನ ಕುರ್ದಿಸ್ತಾನದಲ್ಲಿ ಹಲವೆಡೆಗಳಲ್ಲೂ ಸಿರಿಯ ಮತ್ತು ಪ್ಯಾಲಸ್ತೀನಿನ ಹಲವಾರು ಪ್ರದೇಶಗಳಲ್ಲೂ ದೊರಕಿವೆ.

ಪಶ್ಚಿಮ ಏಷ್ಯ ಅಂತ್ಯ ಹಳೆಶಿಲಾಯುಗದಲ್ಲಿ ಮಾನವರ ಕಾರ್ಯರಂಗದ ಕೇಂದ್ರವಾಗಿತ್ತು. ಈ ಪ್ರದೇಶದಲ್ಲಿ ಪ್ರಾಚೀನತಮ ಪೂರ್ವಜರು ಕ್ರಮೇಣ ಆಧುನಿಕ ಮಾನವ ಸ್ವರೂಪದ ವಿಕಸನ ಹಂತವನ್ನು ಮುಟ್ಟಿದ ನಂತರ ಜನರು ಕ್ರಮೇಣ ಯುರೋಪಿಗೆ ಕೂರಲಗು ಉಪಕರಣಗಳ ಸಂಸ್ಕೃತಿಗಳೊಂದಿಗೆ ಪ್ರವೇಶಿಸಿ, ಇಲ್ಲಿಯ ಅಂತ್ಯ ಹಳೆಶಿಲಾಯುಗದ ಸಂಸ್ಕೃತಿಗೂ ಅಭೂತಪೂರ್ವ ಕಲೆಗಳಿಗೂ ಕಾರಣಕರ್ತನಾದನೆಂದು ವಿದ್ವಾಂಸರ ಅಭಿಪ್ರಾಯ. ಇವರು ಯುರೋಪಿನಲ್ಲಿ ಸಾಧಿಸಿದಷ್ಟು ಪ್ರಗತಿಯನ್ನು ತನ್ನ ಉಗಮಸ್ಥಾನವಾದ ಪ್ಯಾಲಸ್ತೀನಿನಲ್ಲಿ ಸಾಧಿಸಿದಂತೆ ಕಾಣುವುದಿಲ್ಲ. ಪಶ್ಚಿಮ ಏಷ್ಯದ ಅನೇಕ ಪ್ರದೇಶಗಳಲ್ಲಿ ಇಂಥ ಸಂಸ್ಕೃತಿಗಳ ಅವಶೇಷಗಳಿವೆ. ಇರಾಕ್, ಪ್ಯಾಲಸ್ತೀನ್, ಸಿರಿಯ ಮತ್ತು ಜೋರ್ಡಾನ್‌ಗಳಲ್ಲಿ ಈ ಅವಶೇಷಗಳು ದೊರಕಿವೆ.

**ಸೂಕ್ಷ್ಮಶಿಲಾಯುಗ:** ಸೂಕ್ಷ್ಮಶಿಲಾಯುಗದ ಸಂಸ್ಕೃತಿಗಳು ಸಹ ಪಶ್ಚಿಮ ಏಷ್ಯದಲ್ಲಿ ವಿಶೇಷವಾಗಿದ್ದವು. ಜೋರ್ಡಾನಿನ ಆಗ್ನೇಯ ಭಾಗಗಳಲ್ಲಿ ಹಳೆಶಿಲಾಯುಗದಿಂದ ಕ್ರಮೇಣ ಬದಲಾಗುತ್ತ ಸೂಕ್ಷ್ಮಶಿಲಾಯುಗೀನ ಸಂಸ್ಕೃತಿರೂಪಕ್ಕೆ ಪರಿವರ್ತನೆಗೊಳ್ಳುತ್ತಿರುವ ಹಂತದ ಅವಶೇಷಗಳು ಕಂಡುಬಂದಿವೆ. ಪ್ಯಾಲಸ್ತೀನಿನ ಮೌಂಟ್ ಕಾರ್ಮೆಲಿನ ವಾಡಿ–ಎಲ್–ನಟೂಫ್ ಗುಹೆಗಳಲ್ಲಿನ ಸೂಕ್ಷ್ಮಶಿಲಾಯುಗದ ನಟೂಫಿಯನ್ ಸಂಸ್ಕೃತಿ ಬಹಳ ಪ್ರಸಿದ್ಧವಾದದ್ದು. ಇದು ಯುರೋಪಿನ ಸಮಕಾಲೀನ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳನ್ನು ಹೋಲುತ್ತಿದ್ದರೂ ಕ್ರಮೇಣ ಮಾನವನ ಸಂಸ್ಕೃತಿಯ ಪ್ರಗತಿಯಲ್ಲಿ ಪ್ರಧಾನ ಹಂತವಾದ ಆಹಾರೋತ್ಪಾದನೆಗೆ ಕಾರಣವಾದ ನವಶಿಲಾಯುಗ ಕ್ರಾಂತಿಗೆ ಈ ನಟೂಫಿಯನ್

ಸಂಸ್ಕೃತಿಯೇ ಮೂಲಾಧಾರವೆಂದು ಪ್ರಾಕ್ತನಶಾಸ್ತ್ರಜ್ಞರು ತೋರಿಸಿದ್ದಾರೆ. ಈ ಜನ ಮೊದಲ ಹಂತದ ವ್ಯವಸಾಯೋದ್ಯಮ ಮತ್ತು ಪಶುಪಾಲನೆಯನ್ನು ರೂಢಿಗೆ ತಂದವರೆಂಬುದನ್ನು ಇವರು ಉಪಯೋಗಿಸುತ್ತಿದ್ದ ಅಲಂಕೃತ ಕುಡುಗೋಲು ಮತ್ತು ಅರೆಯುವ ಕಲ್ಲುಗಳು ವ್ಯಕ್ತಪಡಿಸುತ್ತವೆ. ಇವರು ಪರ್ವತಗುಹೆಗಳಿಂದ ಕ್ರಮೇಣ ಮೈದಾನ ಪ್ರದೇಶಗಳಿಗೆ ವಲಸೆ ಬರುತ್ತಿದ್ದರೆಂಬುದು ಸ್ವಲ್ಪ ಅನಂತರದ ಕಾಲದ ಐನ್ ಮಲ್ಲಹಾ ನೆಲೆಯಿಂದ ಸಿದ್ಧಪಡುತ್ತದೆ. ಮುಂದಿನ ಹಂತವನ್ನು ಸೂಚಿಸುವ ಜೆರಿಕೋ ನೆಲೆಯ ಕೆಳಗಿನ ಪದರಗಳ ಸಂಸ್ಕೃತಿಯೊಂದಿಗೆ ಸಂಪರ್ಕವಿತ್ತೆಂಬುದನ್ನೂ ಇದು ಸೂಚಿಸುತ್ತದೆ. ಸಿರಿಯ, ಇರಾಕಿನ ಹಜರ್‌ಮದ್ ಮತ್ತು ಷನಿದಾರ್ ಗುಹೆಗಳು, ಜರ್ಜಿ ಮತ್ತು ಪಲೇಗಾವ್ರಾ ನೆಲೆಗಳು, ಇರಾನಿನ ಕರ್ಮನ್‌ಕ್ಷಾ ಬಳಿಯ ತೆಪೆ ಅಸಿಯಾಬ್, ಆಫ್ಘಾನಿಸ್ತಾನದ ಕಾರಾಕಾಮರ್ ಮುಂತಾದೆಡೆಗಳಲ್ಲೂ ಸಮಕಾಲೀನ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಅವಶೇಷಗಳು ದೊರಕಿವೆ.

ಭಾರತದಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಅವಶೇಷಗಳು ಹಲವಾರೆಡೆಗಳಲ್ಲಿವೆ. ದಕ್ಷಿಣದಲ್ಲಿ ತಿರುನೆಲ್ವೇಲಿ ಜಿಲ್ಲೆಯಲ್ಲಿಯ ಸಾಯರ್‌ಪುರಂ ಮುಂತಾದ ತೇರಿನೆಲೆಗಳಲ್ಲೂ ಕರ್ನಾಟಕದ ನಿಟ್ಟೂರು, ಜಾಲಹಳ್ಳಿ, ಸಂಗನಕಲ್ಲು, ದಾಮೋದರ್ ನದಿಕಣಿವೆಯಲ್ಲಿರುವ ಬೀರ್‌ಭಾನ್ಪುರದ ಬಳಿಯೂ ಬೇಲನ್ ನದಿಪ್ರದೇಶದ ಸರಾಯ್ ನಹರ್ ರಾಯ್, ಮಹದಹ, ಸಿಂಗ್ರೌಲಿ ನದಿಕಣಿವೆಯಲ್ಲಿ ವಿಂಧ್ಯಪರ್ವತದ ಪಚ್‌ಮಾರಿ ಮುಂತಾದ ಪ್ರದೇಶ ದಲ್ಲೂ ಬೊಂಬಾಯಿ ಬಳಿಯ ಕಾಂಡಿವಿಲಿ ಮತ್ತು ಬೋರಿವಿಲಿ ಬಳಿಯೂ ದೊರಕಿರುವ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಅವಶೇಷಗಳು ಪ್ರ.ಶ.ಪೂ.4–5ನೆಯ ಸಹಸ್ರಮಾನಗಳಿಗೋ ಇನ್ನೂ ಮೊದಲಕಾಲಕ್ಕೋ ಹೋಗುವುದಾದರೆ ಇತರೆಡೆಗಳಲ್ಲಿನ ಆ ಸಂಸ್ಕೃತಿಯ ಮಾಹಿತಿ ಗಳು ಅನಂತರದ ಕಾಲಕ್ಕೆ ಸೇರುತ್ತವೆ. ಗುಜರಾತಿನ ಲಾಂಗ್‌ನಾಜ್, ಹೀರ್‌ಪುರ, ಪಾಕಿಸ್ತಾನದ ಸುಕ್ಕೂರ್ ಮತ್ತು ರೋಪ್ರಿಗಳಲ್ಲಿ ಈ ಹಂತದಿಂದ ಕ್ರಮೇಣ ಆಹಾರೋತ್ಪಾದನೆಯ ಹಂತವನ್ನು ತಲುಪುತ್ತಿರುವ ಮಾಹಿತಿಗಳೂ ಕಂಡುಬಂದಿವೆ. ಮಂಗೋಲಿಯದ ಜರವೊ ಸೊಗೋಲ್‌ನಲ್ಲಿ 50,000–30,000 ವರ್ಷ ಹಳೆಯ ಸೂಕ್ಷ್ಮಶಿಲಾ ಉಪಕರಣಗಳು ದೊರೆತಿವೆ.

ಸಮಕಾಲೀನ ಚೀನದಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ರೂಪ ಬೇರೆಯಾಗಿಯೇ ಕಂಡುಬಂದಿದೆ. ಪ್ಲಿಸ್ಟೊಸೀನ್ ಯುಗದ ಅಂತ್ಯಭಾಗದಲ್ಲಿ ಬಳಕೆಗೆ ಬಂದ ಆರ್ಡಾಸ್ ಸಂಸ್ಕೃತಿ ಹಳದಿ ನದಿಯ ತಿರುವಿನಲ್ಲಿರುವ ಆರ್ಡಾಸ್ ಹುಲ್ಲುಗಾವಲು ಪ್ರದೇಶದ ದಕ್ಷಿಣದಂಚಿ ನಲ್ಲಿ ಕಂಡುಬಂದಿದೆ. ಸಮಕಾಲೀನ ಮಾನವ ಅವಶೇಷಗಳು ಈವರೆಗೂ ದೊರಕಿಲ್ಲ. ಷು ಇ ಟುಂಗ್ ಕಾ ಎಂಬ ನೆಲೆಯಲ್ಲಿ ಬೂದಿಯೊಡಗೂಡಿದ ಐದು ಒಲೆಗಳೂ ಹೇರಳವಾಗಿ ಕಲ್ಲಿನ ಉಪಕರಣಗಳೂ ದೊರಕಿವೆ. ಒರೆಯುವ, ಕೊರೆಯುವ ಉಪಕರಣಗಳೂ ಮೊನೆಗಳೂ ವಿಶೇಷವಾಗಿರುವ ಈ ಸಂಸ್ಕೃತಿಯನ್ನು ಪ್ಲಿಸ್ಟೊಸೀನ್ ಯುಗದ ಅಂತ್ಯಭಾಗಕ್ಕೆ ಸೇರಿದ್ದಿರಬಹು ದೆಂದು ಕಂಡುಬಂದರೂ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಹಲವಂಶಗಳು ಇಲ್ಲಿ ಕಂಡು ಬಂದು ಇವು ಮುಂದಿನ ಹಂತವನ್ನು ಸೂಚಿಸುವುವೆಂದು ಹೇಳಬಹುದಾಗಿದೆ. ಅನಂತರದ ಕಾಲದಲ್ಲಿ ಯುರೋಪಿನ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳಿಗೆ ಹೋಲಿಸಬಹುದಾದ ಸಂಸ್ಕೃತಿಗಳ ಅವಶೇಷಗಳು ವಿಶೇಷವಾಗಿಲ್ಲದಿದ್ದರೂ ದಕ್ಷಿಣದ ಕ್ವಾಂಗ್ಸಿ ಪ್ರದೇಶದ ಗುಹೆ ಯಲ್ಲಿಯ ಅವಶೇಷಗಳು ವಿಯೆಟ್ನಾಮಿನ ಬ್ಯಾಕ್ಸನ್ ಸಂಸ್ಕೃತಿಯನ್ನು ಹೋಲುತ್ತವೆ. ಉತ್ತರದಲ್ಲಿ ಮಂಗೋಲಿಯ, ಮಂಚೂರಿಯ ಪ್ರದೇಶಗಳಲ್ಲಿ ಹವಾಗುಣದ ಬದಲಾವಣೆ ಯಿಂದ ಆಹಾರ ಸಂಗ್ರಹಣೆ ಮತ್ತು ಬೇಟೆಯ ಮೇಲೆ ಆಧಾರಿತವಾಗಿದ್ದ ಸಂಸ್ಕೃತಿಗಳು ಕ್ರಮೇಣ ಪರಿವರ್ತನೆಗೊಂಡು ಜನ್ಮತಳೆದ ಪ್ರಾರಂಭ ದೆಶೆಯ ವ್ಯವಸಾಯ ಸಂಸ್ಕೃತಿಗಳ ಅವಶೇಷಗಳು ಅನೇಕ ನೆಲೆಗಳಲ್ಲಿವೆ. ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳನ್ನು ಹೋಲುವ ಈ ಅವಶೇಷಗಳು ಗೋಬಿ ಮರುಭೂಮಿ, ಮಂಚೂರಿಯ ಮತ್ತು ಆರ್ಡಾಸ್ ಪ್ರಾಂತಗಳಲ್ಲಿ ವಿಶೇಷ; ಈ ಸಂಸ್ಕೃತಿಯ ಮುಖ್ಯ ನೆಲೆ ಷಬುರಕ್–ಉಸು. ಪೂರ್ವ ಷೆನ್ಸಿ ಪ್ರಾಂತದಲ್ಲಿ ಸೂಕ್ಷ್ಮಶಿಲಾಯುಗದ ಅಂತ್ಯ–ನವಶಿಲಾಯುಗ ಪ್ರಾರಂಭಕಾಲಗಳಿಗೆ ಸೇರುವ ಸಂಸ್ಕೃತಿಯ ಅವಶೇಷಗಳು 15 ಮರಳು ದಿಬ್ಬಗಳ ಮೇಲೆ ಕಂಡುಬಂದಿದೆ. ಷ–ಯುವಾನ್ ಸಂಸ್ಕೃತಿ ಎಂದು ಹೆಸರಿಸಲಾಗಿದೆ. ಇದು ಗೋಬಿ ಸಂಸ್ಕೃತಿಯ ದಕ್ಷಿಣದ ಎಲ್ಲೆಯನ್ನು ಸೂಚಿಸುತ್ತದೆಂದು ಹೇಳಬಹುದು.

ದಕ್ಷಿಣ ಚೀನ, ಇಂಡೋ–ಚೀನ ಮತ್ತು ಇಂಡೋನೇಷ್ಯ ಪ್ರದೇಶಗಳಲ್ಲಿ ಈ ಕಾಲದ ಸಂಸ್ಕೃತಿಗಳ ರೂಪುರೇಷೆಗಳು ಸಾಕಷ್ಟು ವಿಶದವಾಗಿಲ್ಲ. ಈ ಪ್ರದೇಶಗಳಲ್ಲಿಯ ಮುಖ್ಯ ಅಂಶವೆಂದರೆ ಆಗ್ನೇಯ ಏಷ್ಯ ಮತ್ತು ಶಾಂತಿಸಾಗರದ ದ್ವೀಪಸ್ತೋಮಗಳಲ್ಲಿ ತಮ್ಮ ಸಂಸ್ಕೃತಿಯ ಪ್ರಸಾರ. ಬಹುಶಃ ಏಷ್ಯದಲ್ಲಿ ಬತ್ತದ ವ್ಯವಸಾಯ ಕಲೆಯನ್ನು ಹರಡಿದುದಕ್ಕೆ ಇವೇ ಕಾರಣ. ಇದು ಚೀನದ ಲುಂಗ್‌ಷಾನ್ ಸಂಸ್ಕೃತಿಯ ಕೊಡುಗೆಯಾಗಿರಬಹುದು. ಈ ಪ್ರದೇಶಗಳಲ್ಲಿ ಆಗ ಹರಡಿದ್ದ ಬ್ಯಾಕ್ಸನ್ ಅಥವಾ ಹೊಬಿನಿಯನ್ ಸಂಸ್ಕೃತಿಯಲ್ಲಿ ಮುಖ್ಯ ಉಪಕರಣ ಹಳೆಶಿಲಾಯುಗ ಕಾಲದಿಂದಲೂ ಬಳಕೆಯಲ್ಲಿದ್ದ ತುಂಡು ಕೊಡಲಿ. ಇದಲ್ಲದೆ ಅನೇಕ ಚಕ್ಕೆಕಲ್ಲಿನ ಉಪಕರಣಗಳು ಬಳಕೆಯಲ್ಲಿದ್ದುವು. ಶೆಜ್ವಾನ್, ಕ್ವಾಂಗ್ಸಿ, ವಿಯೆಟ್ನಾಮ್, ಥೈಲೆಂಡ್, ಮಲೆಯ ಮತ್ತು ಇಂಡೋನೇಷ್ಯಗಳಲ್ಲಿ ಹಬ್ಬಿದ್ದ ಈ ಸಂಸ್ಕೃತಿಯ ಜನ ಗುಹೆಗಳಲ್ಲಿ ವಾಸಿಸುತ್ತಿದ್ದು ಕಾಡುಹಂದಿ, ಜಿಂಕೆ, ಪಶುಗಳು, ಆಮೆ ಮುಂತಾದ ಪ್ರಾಣಿಗಳನ್ನು ತಿನ್ನುತ್ತಿದ್ದರು. ವಿವಿಧ ರೀತಿಯ ಜಲಚರಗಳೂ ಇವರ ಆಹಾರ. ಅರೆಯುವ ಕಲ್ಲುಗಳು ದೊರಕಿರುವುದರಿಂದ ಸಸ್ಯಾಹಾರಿಗಳೂ ಆಗಿದ್ದರೆಂದು ಹೇಳಬಹುದು. ಕ್ರಮೇಣ ಈ ಜನ ನವಶಿಲಾಯುಗ ಸಂಸ್ಕೃತಿಯ ಹಂತವನ್ನು ತಲುಪಿ ನಯಮಾಡಿದ ಕಲ್ಲಿನ ಉಪಕರಣ ಮತ್ತು ಮಡಕೆಗಳನ್ನು ಉಪಯೋಗಿಸುತ್ತಿದ್ದುದಲ್ಲದೆ ವ್ಯವಸಾಯೋಪಜೀವಿಗಳೂ ಆದರು ಎಂಬುದಕ್ಕೆ ಮಾಹಿತಿಗಳು ಕೆಲವಾರು ನೆಲೆಗಳಲ್ಲಿ ದೊರಕಿವೆ. ಆಗ್ನೇಯ ಏಷ್ಯದ ದ್ವೀಪಗಳಲ್ಲಿ ಸೂಕ್ಷ್ಮಶಿಲೋಪಕರಣಗಳ ಹಲವಾರು ಪ್ರಮುಖ ನೆಲೆಗಳು ಬೆಳಕಿಗೆ ಬಂದಿವೆ. ಬೇಟೆಯೇ ಮುಖ್ಯ ಕಸಬಾಗಿದ್ದ ಗುಹೆಗಳಲ್ಲಿ ವಾಸಿಸುತ್ತಿದ್ದ ಈ ಜನ ಏಷ್ಯದ ಮುಖ್ಯ ಭೂಭಾಗದ ಸಂಸ್ಕೃತಿಗಳೊಂದಿಗೆ ಯಾವ ರೀತಿಯ ಸಂಪರ್ಕ ಹೊಂದಿದ್ದರೆಂಬುದನ್ನು ನಿರ್ಧರವಾಗಿಲ್ಲ. ಸುಮಾತ್ರದ ಜಾಂಬಿ ಜಿಲ್ಲೆಯ ಗುಹೆಗಳಲ್ಲೂ ಜಾವಾದ ಬ್ಯಾಂಡಿಯೊಂಗ್ ಬಳಿಯ ಸರೋವರ ತೀರ ದಲ್ಲೂ ಫಿಲಿಪೀನ್ಸ್ ಲುಝೋನ್ ಜಿಲ್ಲೆಯಲ್ಲೂ ಅಬ್ಸಿಡಿಯನಿನಿಂದ ಮಾಡಿದ ಸೂಕ್ಷ್ಮ ಶಿಲೋಪಕರಣಗಳು ದೊರಕಿವೆ. ಸಿಲೆಬಸ್ ದ್ವೀಪದ ನೈರುತ್ಯಭಾಗದಲ್ಲಿಯ ಗುಹೆಗಳಲ್ಲಿ ಈ ಗುಂಪಿಗೆ ಸೇರಿದ ಅವಶೇಷಗಳು ಪ್ರಾಣಿಗಳ ಅವಶೇಷಗಳೊಂದಿಗೆ ಸಿಕ್ಕಿವೆ. ನಾಯಿ ಯನ್ನುಳಿದು ಇಲ್ಲಿ ದೊರಕಿದ ಇತರ ಪ್ರಾಣಿಗಳ ಅವಶೇಷಗಳು ಸಾಕುಪ್ರಾಣಿಗಳ ವರ್ಗಕ್ಕೆ ಸೇರದಿರುವುದರಿಂದ ಬೇಟೆ ಈ ಜನರ ಮುಖ್ಯ ಕಸುಬಾಗಿದ್ದಿತೆಂದು ತಿಳಿದುಬರುತ್ತದೆ. ಈ ಸಂಸ್ಕೃತಿಗಳು ಇಂಡೋನೇಷ್ಯ ಸಂಸ್ಕೃತಿಗಳಿಂದ ಹುಟ್ಟಿದವೋ ಅಥವಾ ಉತ್ತರ ಚೀನ ಪ್ರಾಂತ್ಯದಿಂದ ಹುಟ್ಟಿದವೋ ಎಂಬ ಸಮಸ್ಯೆ ಇನ್ನೂ ಇದೆ.

ಸು.14,000 ವರ್ಷಗಳ ಹಿಂದೆ ಆಗ್ನೇಯ ಏಷ್ಯದ ಸ್ಪಿರಿಟ್ ಕೇವ್ (14,000–7600 ವರ್ಷ), ಬಾನಿಯನ್ ಕಣಿವೆ ಗುಹೆ (7,600–4,500 ವರ್ಷ) ಮತ್ತು ವಿಯಟ್ನಾಮ್‌ನ ಹೊಬಿನಿಯನ್ ಸಂಸ್ಕೃತಿಯ ನೆಲೆಗಳಲ್ಲಿ (13,000–7,200 ವರ್ಷ) ಆಹಾರ ಸಂಗ್ರಹಣೆ ಯಿಂದ ಕೃಷಿಯ ಹಂತಕ್ಕೆ ಈ ಸಮುದಾಯಗಳು ತಲುಪಿದಂತೆ ಕಾಣುತ್ತದೆ. ಸು.9,000 ವರ್ಷಗಳ ಹಿಂದೆ ಪಶುಸಂಗೋಪನೆ ಹಂತವನ್ನು ತಲುಪಿದಂತೆ ಕಾಣುತ್ತದೆ. ಜಪಾನಿನ ಜೋಮಾನ್ ಸಂಪ್ರದಾಯದ ನೆಲೆಗಳಲ್ಲಿ ಅಂತ್ಯ ಹಳೆಶಿಲಾಯುಗದಿಂದ ಮುಂದುವರಿದ ಸೂಕ್ಷ್ಮಶಿಲಾಸಂಸ್ಕೃತಿ ಹಂತದವರೆಗಿನ ಅವಶೇಷಗಳು ದೊರೆತಿವೆ. ಇವರು ಸು.12,000 ವರ್ಷಗಳ ಹಿಂದೆಯೇ ಮಣ್ಪಾತ್ರೆ ಮಾಡುವ ವಿಧಾನವನ್ನು ಅರಿತುಕೊಂಡಿದ್ದರು. ಕೊರಿಯದಲ್ಲಿ ಲೋಹ ತಂತ್ರಗಾರಿಕೆ ಮತ್ತು ಬತ್ತದ ಕೃಷಿ ಇದ್ದುವು.

**ನವಶಿಲಾಯುಗ:** ನವಶಿಲಾಯುಗ ಕಾಲದಲ್ಲಿ ಪಶ್ಚಿಮ ಏಷ್ಯದ ಪಾತ್ರ ಪ್ರಧಾನ. ಈ ಮೊದಲೇ ತಿಳಿಸಿರುವಂತೆ ಪ್ಯಾಲಸ್ಟೀನ್ ಮತ್ತು ಸಿರಿಯದ ಕೆಲಭಾಗಗಳಲ್ಲಿ ಸೂಕ್ಷ್ಮಶಿಲಾಯುಗದ ನಟೂಫಿಯನ್ನರು ಬೆಟ್ಟಗುಡ್ಡ ಪ್ರದೇಶಗಳಿಂದ ಮೈದಾನ ಪ್ರದೇಶಗಳಿಗೆ ಬಂದು ಕ್ರಮೇಣ ಆಹಾರೋತ್ಪಾದನೆಯ ಚಟುವಟಿಕೆಗಳಲ್ಲಿ ತೊಡಗಲಾರಂಭಿಸಿದ್ದರು. ಪ್ಯಾಲಸ್ಟೀನ್ ಮೌಂಟ್ ಕಾರ್ಮೆಲ್ ಗುಹೆಗಳು, ಐನ್ ಮಲ್ಲಹಾ, ಜೆರಿಕೊ, ಜೋರ್ಡಾನಿನ ಸೆಯ್ಲ್–ಅಕ್ಲಟ್, ಇರಾಕಿನ ಜಾ ವಿ ಷೆಮಿ, ಷನಿದಾರ್, ಕರೀಮ್ ಷಾಹಿರ್, ಮ್ಲಾಫಾತ್ ಮುಂತಾದ ನೆಲೆಗಳು ನವ ಶಿಲಾಯುಗದ ತೀವ್ರಗತಿಯ ಸುಧಾರಣೆಯ ವಿವಿಧ ಹಂತಗಳನ್ನು ಅನುಕ್ರಮವಾಗಿ ನಿರೂಪಿಸುತ್ತವೆ. ಪ್ರ.ಶ.ಪೂ.ಸು.9ನೆಯ ಸಹಸ್ರಮಾನದ ಈ ನೆಲೆಗಳ ಮೊದಲ ಹಂತದಲ್ಲಿ ನಯಮಾಡಿದ ಕಲ್ಲಿನ ಕೊಡಲಿಗಳಿಗೂ ಅಗೆಯುವ ಕೋಲಿನ ಭಾರದ ಗುಂಡುಗಳೂ ಅರೆಯುವ ಕಲ್ಲುಗಳೂ ಅಡ್ಡಾದಿಡ್ಡಿಯಾಗಿ ಕಟ್ಟಿದ ಗುಡಿಸಲ ಅವಶೇಷಗಳೂ ಆಡು, ಕುರಿ ಮತ್ತು ದನ ಮೊದಲಾದ ಸಾಕುಪ್ರಾಣಿಗಳ ಅವಶೇಷಗಳೂ ದೊರಕಿ, ವ್ಯವಸಾಯ, ಮಾನವನ ಸ್ಥಿರವಸತಿ ಮತ್ತು ಪಶುಸಂಗೋಪನೆಗಳು ಜನರ ಮುಖ್ಯ ಚಟುವಟಿಕೆಗಳಾಗಿದ್ದುವೆಂಬುದನ್ನು ತಿಳಿಸುತ್ತವೆ. ಈ ಜನ 200ಕ್ಕೂ ಮಿಗಿಲಾದ ಮನೆಗಳಿದ್ದ ತಮ್ಮ ಗ್ರಾಮವನ್ನು ರಕ್ಷಿಸಲು ಕೋಟೆ ಕಂದಕಗಳನ್ನು ನಿರ್ಮಿಸಿಕೊಂಡಿದ್ದರೆಂಬುದು ಜೆರಿಕೋ ನೆಲೆಯಿಂದ ತಿಳಿದುಬರುತ್ತದೆ. ಇವರು ಕೆಲಕಾಲದಲ್ಲೆ ಮಡಕೆ ಕುಡಿಕೆಗಳನ್ನು ಉಪಯೋಗಿಸಲಾರಂಭಿಸಿದರು. ಸಮಕಾಲೀನ ಸಂಸ್ಕೃತಿಗಳು ಇರಾಕೀ ಕುರ್ದಿಸ್ತಾನದ ಜಾರ್ಮೋ ನೆಲೆಯಲ್ಲೂ ಕಂಡುಬಂದಿವೆ. ಮೊದಲಿಗೆ ಮಣ್ಪಾತ್ರೆಗಳು ಬಳಕೆಯಲ್ಲಿರಲಿಲ್ಲ. ಇವರ ಆಯುಧೋಪಕರಣಗಳು ಕಲಾಕುಶಲತೆ ಯಿಂದ ಕೂಡಿದ್ದುವು. ಇವರ ಧಾರ್ಮಿಕ ನಂಬಿಕೆಗಳ ಮತ್ತು ಸಾಮಾಜಿಕ ಪ್ರಗತಿಯ ಬಗೆಗೂ ಆಧಾರಗಳು ದೊರಕಿವೆ. ಜೆರಿಕೋ ಸಂಸ್ಕೃತಿಗಿಂತಲೂ ಸ್ವಲ್ಪ ಈಚಿನದಾದ ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ.6750. ಇದರ ಮುಂದಿನ ಹಂತವಾದ ಸುಧಾರಿತ ನವ ಶಿಲಾಯುಧ ಸಂಸ್ಕೃತಿಯ ಗುರುತುಗಳು ಇರಾಕಿನ ಹಸುನಾ, ಮಟಾರ್ರಾ, ನಿನಿವೆ ಮುಂತಾದ ನೆಲೆಗಳಲ್ಲೂ ಪ್ಯಾಲಸ್ಟೀನ್, ಸಿರಿಯ, ಜೋರ್ಡಾನ್ ಪ್ರದೇಶಗಳ ಹಲವಾರು ನೆಲೆಗಳಲ್ಲೂ ಇರಾನಿನ ಟಿಪೆಸರಬ್‌ನಲ್ಲೂ ಅದರ ಮುಂದಿನ ಹಂತ ಸಿಯಾಲ್ಕ್, ಚಷ್ಮಾಅಲಿ, ಅನೌ ಮುಂತಾದ ನೆಲೆಗಳಲ್ಲೂ ಆಫ್ಘಾನಿಸ್ತಾನದ ಮುಂಡೀಗಾಕ್ ನೆಲೆಯಲ್ಲೂ ಕಂಡುಬಂದಿದೆ. ಪಶ್ಚಿಮ ಏಷ್ಯದಲ್ಲಿ ಮಾನವನ ಸಂಸ್ಕೃತಿಯ ಪ್ರಗತಿಯ ಚಿತ್ರವನ್ನೂ ಪಡೆಯಲು ಇವುಗಳಿಂದ ಸಾಧ್ಯವಾಗಿದೆ.

ಮುಂದಿನ ಹಂತವಾದ ಇರಾಕಿನ ಹಲಾಫ್ ಸಂಸ್ಕೃತಿಯ ಕಾಲದಲ್ಲಿ ನವಶಿಲಾಯುಗದ ಸಂಸ್ಕೃತಿಯ ಪ್ರಮುಖವಾಗಿದ್ದರೂ ಮೊತ್ತ ಮೊದಲಿಗೆ ತಾಮ್ರದ ಪರಿಚಯವಾದದ್ದು ಆಗಲೇ. ಆ ವರೆಗೂ ಸಂಸ್ಕೃತಿಯ ಪ್ರಗತಿ ಸಾಧನೆಯಲ್ಲಿ ಅಗ್ರಗಣ್ಯವಾಗಿದ್ದ ಈ ಪ್ರದೇಶಕ್ಕೆ ಹೊರಗಿನ ಪ್ರದೇಶಗಳಿಂದ ಮೊತ್ತಮೊದಲಿಗೆ ಮಾರ್ಗದರ್ಶನ (ಕೆಲವಿಷಯಗಳಲ್ಲಿ ಮಾತ್ರ) ದೊರಕಿತೆಂದು ಹೇಳಬಹುದು. ತಾಮ್ರದ ಉಪಯೋಗ ಮತ್ತು ತಯಾರಿಕೆಯ ವಿಧಾನಗಳು ಮೊದಲಿಗೆ ಉತ್ತರ ಇರಾನಿನಲ್ಲಿ ಕಂಡುಹಿಡಿಯಲಾಗಿದ್ದು ಕ್ರಮೇಣ ಇವನ್ನು ಇರಾಕಿಗೆ ತರಲಾಯಿತು.

ಅದುವರೆವಿಗೂ ಉತ್ತರ ಇರಾಕಿನಲ್ಲಿ ಮಾತ್ರ ಜನವಸತಿಯಿತ್ತು. ದಕ್ಷಿಣಭಾಗ ಜೌಗುಪ್ರದೇಶ. ಆದರೆ ಆ ಕಾಲದಲ್ಲಿ ಪ್ರಾರಂಭವಾದ ಉಬೇದ್ ಸಂಸ್ಕೃತಿ ದಕ್ಷಿಣಭಾಗಕ್ಕೂ ಮೊದಲ ಬಾರಿಗೆ ಪ್ರಸರಿಸಿ ಅಲ್ಲಿಯ ಫಲವತ್ತಾದ ಮೆಕ್ಕಲು ಮಣ್ಣಿನ ಪ್ರದೇಶಗಳಲ್ಲಿ ಸಂಪದ್ಯುಕ್ತ ವ್ಯವಸಾಯ ಪದ್ಧತಿಯು ಆರಂಭವಾದುದಲ್ಲದೆ ನಾಗರಿಕಜೀವನಕ್ಕೆ ಬುನಾದಿ ಹಾಕಿತು. ಈ ತಾಮ್ರಶಿಲಾಯುಗೀನ ಸಂಸ್ಕೃತಿಗಳು ಇರಾಕಿನಲ್ಲಿ ಪ್ರಾರಂಭವಾಗಿ ಕಾಲಕ್ರಮೇಣ ನೆರೆಹೊರೆಯ ಪ್ರದೇಶಗಳಾದ ಸಿರಿಯ, ಪ್ಯಾಲಸ್ಟೀನ್, ಜೋರ್ಡನ್ ಪ್ರದೇಶಗಳಿಗೂ ಹರಡಿತು. ಇರಾನಿನ ಉತ್ತರ ಭಾಗದಲ್ಲಿ ಸೂಸ ಮುಂತಾದ ನೆಲೆಗಳಲ್ಲಿ ಪ್ರಗತಿಪರ ಸಂಸ್ಕೃತಿಗಳು ನೆಲೆಗೊಂಡವು. ಸುಮಾರು ಇದೇ ಸಮಯದಲ್ಲಿ ಇರಾಕ್ ಮತ್ತು ಇರಾನ್‌ಗಳಲ್ಲಿ ಚಿತ್ರಲಿಪಿ ಬಳಕೆಗೆ ಬಂತು. ನೆರೆಯ ಪ್ರದೇಶಗಳೊಡನೆ ವಾಣಿಜ್ಯವೂ ಬೆಳೆದು, ಸಂಪದ್ಯುಕ್ತ ನಾಗರಿಕ ಜೀವನ ತ್ವರಿತಗತಿಯಲ್ಲಿ ಬೆಳೆಯಿತು. ಮುಂದಿನ ಹಂತಗಳಾದ ಉರೂಕ್ ಮತ್ತು ಜೆಂಡೆಟ್ ನಾಸರ್ ಸಂಸ್ಕೃತಿಗಳ ಕಾಲದಲ್ಲಿ ಹೆಚ್ಚು ಪ್ರಗತಿ ಆಯಿತು. ನೀರಾವರಿ ವ್ಯವಸಾಯ, ಬರವಣಿಗೆಯ ಉಪಯೋಗ ಮತ್ತು ಇಟ್ಟಿಗೆಯ ಕಟ್ಟಡ–ಇವು ಹೆಚ್ಚಾಗಿ ಬಳಕೆಗೆ ಬಂದು ಕೊನೆಗೆ ಸುವ್ಯವಸ್ಥಿತ ರಾಜ್ಯಾಡಳಿತಗಳು ಸ್ಥಾಪಿತವಾದುವು. ಐತಿಹಾಸಿಕ ಯುಗದ ಸುಮೇರಿಯನ್ ಸಂಸ್ಕೃತಿ ಪ್ರಾರಂಭವಾದದ್ದು ಆಗಲೇ. ಸಿರಿಯ, ಪ್ಯಾಲಸ್ಟೀನ್ ಮತ್ತು ಇರಾನ್‌ಗಳಲ್ಲಿ ಇಷ್ಟು ಬೇಗ ಐತಿಹಾಸಿಕ ಯುಗ ಪ್ರಾರಂಭವಾಗಿದ್ದರೂ ಕ್ರಮೇಣ ಇರಾಕಿನ ಸುಮೇರಿಯನ್ ನಾಗರಿಕತೆಯ ಪ್ರಭಾವದಿಂದ ನಾಗರಿಕತೆ ಹರಡಿತು. ಭಾರತದಲ್ಲಿ ನವಶಿಲಾಯುಗ ಸಂಸ್ಕೃತಿ ಪ್ರಾದೇಶಿಕ ವೈವಿಧ್ಯಗಳಿಂದ ಕೂಡಿದೆ. ಇರಾನಿನ ಸಮಕಾಲೀನ ಸಂಸ್ಕೃತಿಗಳ ಪ್ರಭಾವ ಕಂಡುಬರುವ ನವಶಿಲಾಯುಗ ಸಂಸ್ಕೃತಿ ದಖನ್ ಪ್ರದೇಶದಲ್ಲೂ ಪೂರ್ವತೀರದಲ್ಲೂ ಪ್ರ.ಶ.ಪೂ.2300ರ ಸುಮಾರಿನಲ್ಲಿ ತಲೆದೋರಿ, ಬಳ್ಳಾರಿ, ರಾಯಚೂರು, ತಿ.ನರಸೀಪುರ ಪ್ರದೇಶಗಳಲ್ಲಿ ವಿಶೇಷವಾಗಿತ್ತು. ಇದು ಕ್ರಮೇಣ ಕರ್ನಾಟಕದ ಇತರ ಪ್ರದೇಶಗಳಿಗೂ ಆಂಧ್ರದ ಪಶ್ಚಿಮ ಮತ್ತು ಉತ್ತರ ಭಾಗಗಳಿಗೂ ತಮಿಳುನಾಡಿನ ಉತ್ತರ ಭಾಗಗಳಿಗೂ ಹಬ್ಬಿತು. ನಯ ಮಾಡಿದ ಕಲ್ಲಿನಾಯುಧಗಳು ಕೈಯಲ್ಲಿ ರೂಪಿಸಿದ ಮಣ್ಣಿನ ಪಾತ್ರೆಗಳ ಮತ್ತು ಪಶುಪಾಲನೆಯ ಉಪಯೋಗ ತಿಳಿದಿದ್ದ ಈ ಜನ ಕ್ರಮೇಣ ವ್ಯವಸಾಯವನ್ನು ಆರಂಭಿಸಿ ಬೆಟ್ಟದ ತಪ್ಪಲುಗಳಲ್ಲೂ ಮೈದಾನ ಪ್ರದೇಶಗಳಲ್ಲೂ ನೆಲೆಸಿದರು. ರಾಯಚೂರು ಜಿಲ್ಲೆಯ ಪಿಕ್ಲಿಹಾಳ್, ಮಸ್ಕಿ, ಬಳ್ಳಾರಿ ಜಿಲ್ಲೆಯ ಸಂಗನಕಲ್ಲು, ತೆಕ್ಕಲಕೋಟೆ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಆಂಧ್ರಪ್ರದೇಶದ ನಾಗಾರ್ಜುನಕೊಂಡ, ಯೇಲೇಶ್ವರಂ ಮುಂತಾದವು ಇವರ ಮುಖ್ಯ ನೆಲೆಗಳಲ್ಲಿ ಕೆಲವು. ಇದೇ ಸುಮಾರಿನಲ್ಲಿ ಕಾಶ್ಮೀರದಲ್ಲಿ ಚೀನದ ಪ್ರಭಾವವಿದ್ದ ನವಶಿಲಾಯುಗ ಸಂಸ್ಕೃತಿ ಬಳಕೆಯಲ್ಲಿತ್ತು. ಈ ಜನ ಮೇಲೆ ಹೇಳಿದ ಸಂಸ್ಕೃತಿ ಲಕ್ಷಣಗಳನ್ನು ಹೊಂದಿದ್ದುದಲ್ಲದೆ ನೆಲದಲ್ಲಿ ಗುಂಡಿಯನ್ನಗೆದು ಅವುಗಳ ಮೇಲೆ ಹುಲ್ಲುಛಾವಣಿಗಳನ್ನು ಹೊದಿಸಿ ರಚಿಸಿದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಮೊದಲು ಪಶುಪಾಲನೆ, ಬೇಟೆ ಇವರ ಮುಖ್ಯ ಕಸುಬುಗಳಾಗಿದ್ದರೂ ಕ್ರಮೇಣ ವ್ಯವಸಾಯವನ್ನು ಪ್ರಾರಂಭಿಸಿದುದಾಗಿ ತಿಳಿದುಬರುತ್ತದೆ. ಪೂರ್ವಭಾಗದಲ್ಲಿ ಅಸ್ಸಾಂ, ಬಂಗಾಲ, ಬಿಹಾರ್ ಮತ್ತು ಒರಿಸ್ಸ ಪ್ರಾಂತ್ಯಗಳಲ್ಲಿ ಆಗ್ನೇಯ ಏಷ್ಯ ಮತ್ತು ದಕ್ಷಿಣ ಚೀನಗಳ ತರಹದ ನವಶಿಲಾಯುಗ ಸಂಸ್ಕೃತಿ ತರಹದ ಅವಶೇಷಗಳು ದೊರಕಿದ್ದರೂ ಪ್ರ.ಶ.ಪೂ. ಒಂದನೆಯ ಸಹಸ್ರಮಾನಕ್ಕೆ ಸೇರಬಹುದಾದ ಈ ಸಂಸ್ಕೃತಿಯ ವಿಷಯವಾಗಿ ಹೆಚ್ಚಿನ ಮಾಹಿತಿಗಳು ಗೊತ್ತಾಗಿಲ್ಲ. ಮಧ್ಯ ಮತ್ತು ಪಶ್ಚಿಮ ಭಾರತಗಳಲ್ಲಿ ಪ್ರಾಯಶಃ ಭೌಗೋಳಿಕ ಕಾರಣಗಳಿಂದ ಈ ನವಶಿಲಾಯುಗ ತರಹದ ಸಂಸ್ಕೃತಿ ಬೆಳೆಯದೆ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳ ಅನಂತರ ತಾಮ್ರಶಿಲಾಯುಗದ ಸಂಸ್ಕೃತಿಗಳು ಕಾಣಿಸಿಕೊಂಡವು. ನಾಗರಿಕತೆಯ ಉನ್ನತ ಮಟ್ಟ ತಲಪಿದ್ದ ಹರಪ್ಪ ನಾಗರಿಕತೆ ವಾಯವ್ಯದಲ್ಲಿ ಹಿಂದೆ ಸರಸ್ವತಿ ನದಿ ಇದ್ದಿರಬಹುದಾದ ಪ್ರದೇಶ–ಸಿಂಧೂ ನದೀತೀರದಲ್ಲಿ ಮೊದಲಿಗೆ ಪ್ರಾರಂಭವಾಗಿ ಕ್ರಮೇಣ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಹರಡಿತು. ಆಫ್ಘಾನಿಸ್ತಾನ ಮತ್ತು ಬಲೂಚಿಸ್ತಾನಗಳ ಪರ್ವತ ಪ್ರದೇಶಗಳಲ್ಲಿ ನೆಲೆಸಿದ್ದ, ಆಹಾರೋತ್ಪಾದನೆಯ ಹಂತದ ಪಂಗಡಗಳಿಂದ ಕ್ರಮೇಣ ಬೆಳೆದು ಬಂದ, ಮತ್ತು ಸುಮೇರಿಯನ್ ನಾಗರಿಕತೆಯೊಡನೆ ಸಂಪರ್ಕ ಪಡೆದಿದ್ದ ಈ ಸಂಸ್ಕೃತಿ ವ್ಯವಸಾಯ ಮತ್ತು ಕೈಗಾರಿಕೆಗಳ ಮೇಲೆ ಆಧಾರಿತವಾಗಿದ್ದು, ಭಾರತದ ಇತರ ಕೆಲವು ಪ್ರದೇಶಗಳೊಂದಿಗೂ ಹೊರದೇಶಗಳೊಂದಿಗೂ ವ್ಯಾಪಾರ ಸಾಂಸ್ಕೃತಿಕ ಸಂಪರ್ಕಗಳನ್ನು ಬೆಳೆಸಿಕೊಂಡಿತ್ತು. ಈ ಸಂಸ್ಕೃತಿಯ ಮುಖ್ಯ ನೆಲೆಗಳಾಗಿದ್ದ ರಾಬಿ ನದಿ ದಂಡೆಯ ಹರಪ್ಪ ಮತ್ತು ಸಿಂಧೂ ನದಿ ದಂಡೆಯ ಮೊಹೆಂಜೊದಾರೊ ಹಾಗೂ ಸರಸ್ವತಿ ನದಿದಂಡೆಯ ಮೇಲಿನ ಕಾಲಿಬಂಗನ್, ಈ ನದಿಬಯಲಿನ ಭಿರಡಾಣ, ಲೋಥಾಲ್, ಧೋಲಾವೀರ ಉತ್ಖನನಗಳಿಂದ ಈ ಅಂಶ ವ್ಯಕ್ತಪಡುತ್ತದೆ. ಈ ಅಕ್ಷರಸ್ಥ ನಾಗರಿಕತೆ ಬಹು ಶೀಘ್ರವಾಗಿ ಉನ್ನತ ಮಟ್ಟ ತಲಪಿ ತನ್ನ ಪ್ರಭಾವವನ್ನು ನೆರೆಯ ಗಂಗಾ–ಯಮುನಾ ಬಯಲಿಗೂ ಸೌರಾಷ್ಟ್ರ ಪ್ರದೇಶಕ್ಕೂ ಬಲೂಚಿಸ್ತಾನ ಮತ್ತು ಸಿಂಧ್ ಪ್ರಾಂತಗಳಿಗೂ ವಿಸ್ತರಿಸಿತ್ತು. ಆದರೆ ಕ್ರಮೇಣ ಪರಿಸರ, ಕುಂಠಿತ ಆರ್ಥಿಕ ಸ್ಥಿತಿ ಮುಂತಾದ ಆಂತರಿಕ ಕಾರಣಗಳಿಂದಾಗಿ ಕ್ಷೀಣಗೊಂಡಿತು. ಈ ನಾಗರಿಕತೆಯ ಕಾಲವನ್ನು ಪ್ರ.ಶ.ಪೂ. 2300–1700 ಎಂದು ಹಲವಾರು ಇಂಗಾಲ–14 ವಿಧಾನದಿಂದ ತಿಳಿದಿದೆ. ಇದರ ಅವನತಿಯ ಅನಂತರ ಗಂಗಾನದಿ ಬಯಲಿನಲ್ಲೂ ಮಧ್ಯ ಮತ್ತು ಪಶ್ಚಿಮ ಭಾರತ ಪ್ರದೇಶಗಳಲ್ಲೂ ಇದರ ಮತ್ತು ಮೊದಲಿನ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳಿಂದ ಸುಧಾರಿಸಿದ ತಾಮ್ರಶಿಲಾಯುಗೀನ ಸಂಸ್ಕೃತಿಗಳು ಬೆಳೆದವು. ಹರಪ್ಪ ನಾಗರಿಕತೆಯಲ್ಲಿ ಬಳಕೆಯಲ್ಲಿದ್ದ ಬರೆವಣಿಗೆ ಮತ್ತು ನಗರ ಜೀವನ ಕಣ್ಮರೆಯಾದರೂ ಮುಂದುವರಿದ ವ್ಯವಸಾಯ ಪದ್ಧತಿಯೂ ಗ್ರಾಮೀಣ ಜೀವನವೂ ಇದಕ್ಕೆ ಸಂಬಂಧಿಸಿದ ಕೈಗಾರಿಕೆಗಳೂ ಪ್ರಧಾನವಾಗಿದ್ದ ಈ ಪ್ರಾಗೈತಿಹಾಸಿಕ ಸಂಸ್ಕೃತಿಯ ಕಾಲದಲ್ಲಿ ಫಲವತ್ತಾದ ಗಂಗಾ ಯಮುನಾ ನದೀಬಯಲಿನಲ್ಲಿ ಹೆಚ್ಚು ಪ್ರಗತಿಯಾಯಿತು. ಕಬ್ಬಿಣ ಬಳಕೆಗೆ ಬಂದದ್ದು ಪ್ರ.ಶ.ಪೂ. 2ನೆಯ ಸಹಸ್ರಮಾನದ ಮಧ್ಯದಲ್ಲಿ. ದಕ್ಷಿಣ ಪೂರ್ವ ಭಾರತದಲ್ಲೂ ಈ ವೇಳೆಗಾಗಲೇ ಉತ್ತರ ಭಾರತದಲ್ಲಿ ಮೊದಲ ಐತಿಹಾಸಿಕ ರಾಜ್ಯಗಳು ಉದಯಿಸಿದವು. ಇದರಿಂದ ಚಾರಿತ್ರಿಕಯುಗದ ಪ್ರಾರಂಭವಾಯಿತೆನ್ನಬಹುದು. ದಕ್ಷಿಣ ಭಾರತದಲ್ಲಿ ಕಬ್ಬಿಣಯುಗವನ್ನು ಪೂರ್ವಭಾವಿ ಇತಿಹಾಸ ಕಾಲವೆಂದು ಪರಿಗಣಿಸಲಾಗಿದೆ. ಆ ಸಮಯದಲ್ಲಿ ಪ್ರಭಾವಶಾಲಿ ಯಾಗಿದ್ದ ಬೃಹತ್‌ಶಿಲಾ ಸಮಾಧಿ ಸಂಸ್ಕೃತಿಯ ಜನ ಸುಧಾರಿತ ನೀರಾವರಿ ವ್ಯವಸಾಯ, ಕುಂಬಾರ ಚಕ್ರದಿಂದ ತಯಾರಾದ ಮಣ್ಪಾತ್ರೆ, ಕಬ್ಬಿಣದಿಂದ ಮಾಡಿದ ಆಯುಧೋಪಕರಣ– ಇವನ್ನು ಬೆಳೆಸಿಕೊಂಡು ಗ್ರಾಮೀಣ ಅರೆಸುಧಾರಿಸಿದ ಅರೆನಾಗರಿಕ ಜೀವನ ಪದ್ಧತಿಯನ್ನು ಬೆಳೆಸಿದರು. ಪ್ರ.ಶ.ಪೂ. 5–4ನೆಯ ಶತಮಾನಗಳ ವೇಳೆಗೆ ಇಲ್ಲಿ ಬರವಣಿಗೆ, ರಾಜ್ಯಭಾರ ಪದ್ಧತಿ ಮತ್ತು ನಗರಜೀವನ ಕ್ರಮಗಳು ರೂಢಿಗೆ ಬಂದು ಇತಿಹಾಸಯುಗ ಪ್ರಾರಂಭವಾಯಿತು.

ಪೂರ್ವ ಏಷ್ಯ ಮಂಗೋಲಿಯದ ಕಿನಾನ್ ದದಿಬನ್ ಮತ್ತು ಚಿಂಗ್‌ಲಾಂಗ್ ವಾ ನೆಲೆಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳ ಅವಶೇಷಗಳಿವೆ. ಪ್ರ.ಶ.ಪೂ.5,000–3,500 ಅವಧಿಯಲ್ಲಿ ಕೃಷಿ ಅಭಿವೃದ್ಧಿಯಾಗಿದ್ದು ಬತ್ತ ಬೆಳೆಯುವುದು ಸಾಮಾನ್ಯವಾಗಿತ್ತು. ಅಂತ್ಯಕಾಲಿನ ನವಶಿಲಾಯುಗದಲ್ಲಿ ಜನಸಂಖ್ಯೆ ಗಣನೀಯವಾಗಿ ವೃದ್ಧಿಯಾಗಿ ನೆಲೆಗಳ ಸಂಖ್ಯೆ ಹೆಚ್ಚಾಯಿತು. ಇದೇ ಹಂತದ ಲಾಂಗ್ ಷಾಂಗ್ ಸಂಸ್ಕೃತಿಯ ಜನಸಮುದಾಯ (ಪ್ರ.ಶ.ಪೂ.4,600–4.100) ಲೋಹ ತಂತ್ರಜ್ಞಾನವನ್ನು ಕರಗತಗೊಳಿಸಿಕೊಂಡು ಬೆಳೆದಿತ್ತು. ಈ ಸಂಸ್ಕೃತಿಯ ನೆಲೆಗಳು ಯಾಂಗ್ ಶೋ, ಹೊಂಗ್‌ಶಾನ್ ಮತ್ತು ಲಿಯಾನ್ ಝೂನಲ್ಲಿವೆ ಮತ್ತು ಚೀನ ಪ್ರದೇಶಗಳಲ್ಲಿ ಪ್ರ.ಶ.ಪೂ. 3000ದ ಸುಮಾರಿಗೆ ಸೈಬೀರಿಯ, ಮಂಚೂರಿಯ ಮತ್ತು ಮಂಗೋಲಿಯ ಪ್ರದೇಶಗಳಲ್ಲಿ ನೆಲಸಿದ್ದ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಜನ ನಯಗೊಳಿಸಿದ ಕಲ್ಲಿನಾಯುಧ ಮತ್ತು ಮಣ್ಪಾತ್ರೆಗಳ ಉಪಯೋಗವನ್ನು ಪಶ್ಚಿಮದಿಂದ ಕಲಿತುಕೊಂಡರು. ವ್ಯವಸಾಯ ಮತ್ತು ಪಶುಪಾಲನೆಗಳ ಪರಿಚಯವಿಲ್ಲದಿದ್ದರೂ ಈ ಸಂಸ್ಕೃತಿಗಳನ್ನು ನವಶಿಲಾಯುಗ ಸಂಸ್ಕೃತಿಗಳೆಂದು ಹೆಸರಿಸಲಾಗಿದೆ. ಬೇಟೆ ಮುಖ್ಯ ಕಸಬಾಗಿದ್ದು ಈ ಜನ ಇದಕ್ಕಾಗಿ ಸಾಕಿದ ನಾಯಿಗಳನ್ನು ಉಪಯೋಗಿಸುತ್ತಿದ್ದರು. ಮಡಕೆಗಳನ್ನು ಹುರಿ ಗುರುತುಗಳಿಂದ ಅಲಂಕರಿಸುತ್ತಿದ್ದರು. ಚೀನದಲ್ಲಿ ನವಶಿಲಾಯುಗದಲ್ಲಿ (ಪ್ರ.ಶ.ಪೂ.10,000–8,000) ಮಣ್ಪಾತ್ರೆ ರಹಿತ ಮತ್ತು ಮಣ್ಣಿನಪಾತ್ರೆ ಸಹಿತ ಹಂತಗಳನ್ನು ಗುರುತಿಸಲಾಗಿದೆ. ಈ ಅವಧಿಯ ನೆಲೆಗಳು ದಕ್ಷಿಣ, ಉತ್ತರ ಮತ್ತು ಪಶ್ಚಿಮ ಚೀನದಲ್ಲಿವೆ. ಉತ್ತರ ಭಾಗದಲ್ಲಿ ಸಜ್ಜೆ ಕೃಷಿಯ ಅವಶೇಷಗಳು ದೊರೆತಿವೆ. ದಕ್ಷಿಣ ಚೀನದ ಪೆಂಗ್‌ಟೌಷಾನ್ ಪ್ರದೇಶದಲ್ಲಿ ಪ್ರ.ಶ.ಪೂ.ಸು.8000–5000 ಅವಧಿಯಲ್ಲಿ ಬತ್ತ ಬೆಳೆಯುತ್ತಿದ್ದರೆಂದು ಕಾಣುತ್ತದೆ. ಚೀನದ ಹ್ವಾಂಗ್ ಹೋ ಕಣಿವೆಯಲ್ಲಿಯ ನವಶಿಲಾಯುಗ ಸಂಸ್ಕೃತಿ ಹೆಚ್ಚು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ವ್ಯವಸಾಯ ಉದ್ಯೋಗವಾಗಿತ್ತು. ಅನಂತರ ದಕ್ಷಿಣ ಚೀನ, ಇಂಡೊಚೀನ ಪ್ರದೇಶಗಳಲ್ಲಿ ಹರಡಿದ ಈ ಸಂಸ್ಕೃತಿ ಕ್ರಮೇಣ ಪ್ರಬಲಗೊಂಡಿತು. ಇಂಡೊ–ಚೀನದ ಟಾಂಕಿಂಗ್ ಪ್ರದೇಶದ ಹೊವಬಿನ್ ಎಂಬಲ್ಲಿ ಸಣ್ಣ ಗಾತ್ರದ ಕಲ್ಲಿನಾಯುಧಗಳು ಬಳಕೆಯಲ್ಲಿದ್ದರೆ, ಬ್ಯಾಕ್ಸನಿನಲ್ಲಿ ಅಂಚುಗಳನ್ನು ನಯಗೊಳಿಸಿದ ಕಲ್ಲಿನ ಕೊಡಲಿ ಮತ್ತು ಒರಟಾದ ಮಡಕೆಗಳು ಬಳಕೆಯಲ್ಲಿದ್ದುವು. ಈ ಪ್ರದೇಶದಲ್ಲೆಲ್ಲ ಕ್ರಮೇಣ ಪೂರ್ಣವಾಗಿ ನಯಗೊಳಿಸಿದ ಚೌಕಾಕಾರದ ಕೊಡಲಿ ಪ್ರಧಾನವಾಯಿತು. ಹಿಡಿಯಲ್ಲಿ ಸೇರಿಸಲು ಅನುಕೂಲವಾಗುವಂಥ ಭುಜಗಳುಳ್ಳ ಕೊಡಲಿಗಳೂ ಸ್ವಲ್ಪಕಾಲಾನಂತರ ಬಳಕೆಗೆ ಬಂದುವು. ಈ ವೇಳೆಗೆ ಚೀನದ ದಕ್ಷಿಣ ಭಾಗಗಳಲ್ಲಿ ಕಂಚಿನ ಬಳಕೆ ರೂಢಿಗೆ ಬಂದು ಕ್ರಮೇಣ ಈ ಪ್ರದೇಶಗಳಿಗೂ ಹಬ್ಬಿತು. ಕಲ್ಲಿನ ಆಯುಧಗಳನ್ನು ಸಹ ಕಂಚಿನ ಆಯುಧಗಳ ಮಾದರಿಯಲ್ಲಿ ಅದೇ ತಯಾರಿಕಾ ವಿಧಾನಗಳಿಂದ ಮಾಡುತ್ತಿದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆಗ್ನೇಯ ಏಷ್ಯದಾದ್ಯಂತ ಪ್ರಬಲವಾಗಿದ್ದ ಈ ಸಂಸ್ಕೃತಿಯ ಪ್ರಭಾವ ಪೂರ್ವಭಾರತದ ಅಸ್ಸಾಂ ಬಂಗಾಲ ಪ್ರದೇಶಗಳ ಮೇಲೆ ಆದದ್ದು ಬಹುಶಃ ಈ ಹಂತದಲ್ಲೆ.

ವ್ಯವಸಾಯಾಧಾರಿತ ಪಂಗಡಗಳು ಮಧ್ಯ ಚೀನದ ಹೋನಾನ್ ಪ್ರಾಂತದ ಹ್ವಾಂಗ್ ಹೋ ಮತ್ತು ಷೆನ್ಸಿಗಳಲ್ಲಿ ಹಳದಿ ಮೆಕ್ಕಲುಮಣ್ಣಿನ ಮೈದಾನಗಳಲ್ಲಿ ತಲೆದೋರಿತು. ಬಹುಶಃ ಮಧ್ಯ ಮತ್ತು ಪಶ್ಚಿಮ ಏಷ್ಯದಿಂದ ಬಂದ ಈ ವ್ಯವಸಾಯ ಮತ್ತು ಪಶುಸಂಗೋಪನೋದ್ಯಮಗಳು ಕ್ರಮೇಣ ಹೋನಾನ್ ಪ್ರಾಂತದ ಇತರ ಭಾಗಗಳಲ್ಲೂ ಕಾನ್ಸು ಪ್ರಾಂತ್ಯದಲ್ಲೂ ಹರಡಿ ಜನಜೀವನ ರೀತಿಯನ್ನು ಸುಧಾರಿತಗೊಳಿಸಿತು. ಈ ಪ್ರಭಾವಗಳೊಡನೆ ಮಡಕೆಗಳನ್ನು ಬಣ್ಣಗಳಿಂದ ಅಲಂಕರಿಸುವ ಕಲೆಯೂ ಬಂದಂತೆ ಕಾಣುತ್ತದೆ. ಯಾಂಗ್–ಷಾವೊ ಸಂಸ್ಕೃತಿಯೆಂದು ಹೆಸರಾದ ಈ ಸಂಸ್ಕೃತಿಯ ಜನಸಮುದಾಯಕ್ಕೆ ಮೊದಲಿನಿಂದಲೂ ಧಾನ್ಯಗಳನ್ನು ಬೆಳೆಯುವ ವಿಧಾನ ಗೊತ್ತಿತ್ತು. ಇವರು ಬತ್ತದ ಬೇಸಾಯವನ್ನು ದಕ್ಷಿಣ ಪ್ರದೇಶಗಳಿಂದ ಕಲಿತುಕೊಂಡರು. ವಿಶಾಲವಾದ ಗ್ರಾಮಗಳಲ್ಲಿ ಚಚ್ಚೌಕದ ಮನೆಗಳಲ್ಲಿ ವಾಸಿಸುತ್ತಿದ್ದ ಈ

ಜನ ಧಾನ್ಯಗಳನ್ನು ನೆಲದೊಳಗಿನ ಗುಂಡಿಗಳಲ್ಲಿ ಶೇಖರಿಸುತ್ತಿದ್ದರು. ಗ್ರಾಮದ ಹೊರಭಾಗಗಳಲ್ಲಿ ಶವಗಳನ್ನು ಹೂಳುತ್ತಿದ್ದರು. ಮಣ್ಪಾತ್ರೆಗಳನ್ನು ಕೈಯಿಂದ ತಯಾರಿಸುತ್ತಿದ್ದರು. ಅವುಗಳನ್ನು ಬಣ್ಣಗಳಿಂದ ಅಲಂಕರಿಸುತ್ತಿದ್ದರು.

ಅನಂತರದ ಮುಂದುವರಿದ ಸಂಸ್ಕೃತಿಯ ಮಾಹಿತಿಗಳೂ ಹ್ವಾಂಗ್ ಹೊ ಕಣಿವೆಯ ಪೂರ್ವಭಾಗಗಳಲ್ಲಿ ದೊರೆಕಿವೆ. ಇವು ಲುಂಗ್–ಷಾನ್ ಸಂಸ್ಕೃತಿಯೆಂದು ಹೆಸರಾಗಿದೆ. ಯಾಂಗ್–ಷಾವೊ ಸಂಸ್ಕೃತಿಯೊಂದಿಗೆ ಬಹುಮಟ್ಟಿಗೆ ಹೋಲಿಕೆಗಳಿರುವ ಲುಂಗ್–ಷಾನ್ ಸಂಸ್ಕೃತಿಯ ಮಡಕೆಗಳು ಹೆಚ್ಚು ನಯ, ಕುಂಬಾರ ಚಕ್ರದ ಮೇಲೇ ಮಾಡಲ್ಪಟ್ಟಿದ್ದು. ಇವುಗಳ ಬಣ್ಣ ಕಪ್ಪು, ಹೊಸ ಹೊಸ ಆಕಾರದ ಮಡಕೆಗಳೂ ಬಳಕೆಗೆ ಬಂದುವು. ಈ ಹಂತದಲ್ಲಿ ಜನಜೀವನ ರೀತಿ ಸುಧಾರಿಸಿತು. ದನಕುರಿಗಳನ್ನೂ ಅಪರೂಪವಾಗಿ ಕುದುರೆಗಳನ್ನೂ ಸಾಕುವುದು ರೂಢಿಗೆ ಬಂತು. ಮುಂದುವರಿದ ವ್ಯವಸಾಯ ವಿಧಾನಗಳಿಂದ ಸಂಪತ್ತು ಅಭಿವೃದ್ಧಿ ಹೊಂದಿ ನಾಗರಿಕತೆ ಬೆಳೆಯಲಾರಂಭಿಸಿತು. ಧಾರ್ಮಿಕ, ಸಾಮಾಜಿಕ ಆಚಾರಪದ್ಧತಿಗಳು ಬೆಳೆದುವು. ಲುಂಗ್–ಷಾನ್ ಕೊನೆಯ ಹಂತದ ಹ್ಸಿಯಾವೊ–ತ್ಸನ್ ಸಂಸ್ಕೃತಿ ಕಾಲಕ್ರಮದಲ್ಲಿ ಯಾಂಗ್ಸ್ಟಿ ಬಯಲು, ಷೆಚ್‌ವಾನ್, ದಕ್ಷಿಣ ಸಮುದ್ರತೀರ ಮತ್ತು ಆಗ್ನೇಯ ಏಷ್ಯಗಳಿಗೆ ಹರಡಿ ಬಲು ಪ್ರಭಾವಶಾಲಿಯಾಯಿತೆನ್ನಬಹುದು. ಬತ್ತದ ಬೇಸಾಯ ಪದ್ಧತಿ ಪೂರ್ವ ಏಷ್ಯದಲ್ಲೆಲ್ಲ ಹರಡಿದ್ದು ಅಕ್ಕಿ ಈ ಪ್ರದೇಶದ ಮುಖ್ಯ ಆಹಾರವಾಗಿದ್ದು ಆಗಲೇ. ಪ್ರ.ಶ.ಪೂ. 2ನೆಯ ಸಹಸ್ರಮಾನದ ಅಂತ್ಯಕಾಲದ ವೇಳೆಗೆ ನಗರ ಜೀವನ ನೆಲೆಯಾಗಿ ನಿಂತು ಐತಿಹಾಸಿಕ ಚೀನಿ ಸಂಸ್ಕೃತಿಯ ಅಸ್ತಿಭಾರವೇರ್ಪಟ್ಟಿತೆಂಬುದು ಷಾಂಗ್ ವಂಶದ ಸ್ಥಾಪನೆಯಿಂದಲೂ ಹ್ಸಿಯಾವೊ–ತ್ಸುನ್ ನಗರದ ಸಂಪದ್ಭರಿತ ಸ್ಥಿತಿಗಳಿಂದಲೂ ತಿಳಿಯುತ್ತದೆ. ವಿಶಾಲ ಸುವ್ಯವಸ್ಥಿತ ನಗರದಲ್ಲಿ ಅರಮನೆ, ಕುಶಲಕರ್ಮಿಗಳ ವಸತಿಗಳು, ಆಯಾಕಾರದ ಮರದ ಕಟ್ಟಡಗಳು, ಕಲ್ಲಿನ ಅಥವಾ ಕಂಚಿನ ಪೀಠಗಳ ಮೇಲೆ ನಿಲ್ಲಿಸಿದ ಕಂಬಗಳ ಸಾಲುಗಳಿಂದ ಕೂಡಿದ ವಿಶಾಲ ಭವನಗಳು–ಇವೆಲ್ಲ ಈ ನಾಗರಿಕತೆಯ ಮಟ್ಟವನ್ನು ಸೂಚಿಸುತ್ತವೆ. ಪುರಾತನ ವಿಶ್ವದ ನಾಗರಿಕತೆಗಳ ಕುರುಹುಗಳಲ್ಲಿ ಷಾಂಗ್ ಸಂಸ್ಕೃತಿಕಾಲದ ಕಂಚಿನ ವಸ್ತುಗಳದು ವಿಶಿಷ್ಟ ಸ್ಥಾನ. ಈ ಕಾಲದ ಸಮಾಧಿಗಳಲ್ಲಿರುವ ಸಂಪತ್ತು ಈ ಜನರ ಪ್ರಗತಿಯನ್ನು ಸೂಚಿಸುತ್ತದೆಂದು ಹೇಳಬಹುದು. ಈ ಜನಕ್ಕೆ ಬರೆವಣಿಗೆ ಗೊತ್ತಿತ್ತು ಎಂಬುದು ಕಂಚಿನ ಪಾತ್ರೆಗಳ ಮೇಲಿನ ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಈ ಶಾಸನಗಳದ್ದು ಚೀನಿ ಭಾಷೆ. ಇತಿಹಾಸಯುಗಕ್ಕೆ ಸೇರಿದ ಚೌ ವಂಶ ಅಧಿಕಾರಕ್ಕೆ ಬಂದದ್ದು ಅನಂತರ (ಪ್ರ.ಶ.ಪೂ. 1027–222).

ದಕ್ಷಿಣ ಏಷ್ಯದಲ್ಲಿ ನಾಲ್ಕು ಪ್ರತ್ಯೇಕ ಸಾಂಸ್ಕೃತಿಕ ಸಮುದಾಯಗಳನ್ನು ಗುರುತಿಸಲಾಗಿದೆ. ಪೂರ್ವ ಭಾರತ ಮತ್ತು ಸುತ್ತ ಮುತ್ತಲಿನ ಪ್ರದೇಶದಲ್ಲಿ ಪ್ರ.ಶ.ಪೂ.8,000–7,000 ವರ್ಷಗಳ ಹಿಂದಿನ ನೆಲೆಗಳನ್ನು ಗುರುತಿಸಲಾಗಿದ್ದು ಇಲ್ಲಿಯ ಸಂಸ್ಕೃತಿ ಥೈಲೆಂಡಿನ ಸ್ಪಿರಿಟ್ ಕೇವ್ ಮತ್ತು ಬರ್ಮದ ಪದರಿನ್ ಗುಹೆಗಳಲ್ಲಿ ವಸ್ತುಸಂಸ್ಕೃತಿಯನ್ನು ಹೋಲುತ್ತದೆ. ಚೀನದ ಎರ್‌ಲಿತೌ (ಪ್ರ.ಶ.ಪೂ.2,500–1,800) ನಗರ–ರಾಜ್ಯ ಜನಸಮುದಾಯ ಕಾಣಿಸಿಕೊಳ್ಳುತ್ತದೆ. ವಿಯಟ್ನಾಂನ ಉತ್ತರ ಮತ್ತು ಮಧ್ಯ ಪ್ರದೇಶದಲ್ಲಿ ಸ್ಥಾಯಿ ಸಮುದಾಯಗಳು, ಕೊಲ್ಲಿ ಪ್ರದೇಶಗಳಲ್ಲಿ ಮೀನು ಮುಂತಾದ ಆಹಾರ ಸಂಗ್ರಹಣೆ, ಮಣ್ಪಾತ್ರೆ, ಉಜ್ಜಿ ನಯ ಮಾಡಿದ ಬಾಚಿಗಳ ತಯಾರಿಕೆ ಮುಂತಾದವುಗಳಿಂದ ಜೀವನ ನಡೆಸುತ್ತಿದ್ದ ನಾಂಗ್‌ನಾರ್, ಕೋಕ್ ಫನೌನ್ ದಿ ಮುಂತಾದ ನೆಲೆಗಳಲ್ಲಿ ಕಂಡುಬಂದಿದೆ. ಕೋಕ್ ಫನೌನ್ ದಿ ನಲ್ಲಿ ಬತ್ತದಕೃಷಿ, ಪಶುಸಂಗೋಪನೆ, ಹಂದಿ ಸಾಕಾಣಿಕೆ ಜನರ ಮುಖ್ಯ ಕಸುಬುಗಳಾಗಿದ್ದವು. ಹೊರದೇಶಗಳೊಡನೆ ವ್ಯಾಪಾರ ವ್ಯವಹಾರ ನಡೆಸುತ್ತಿದ್ದದ್ದು ಇವರ ಸಮಾಧಿಗಳಲ್ಲಿರುವ ವಸ್ತುಗಳಿಂದ ತಿಳಿಯುತ್ತದೆ. ನಾಂಗ್‌ನಾರ್‌ನಲ್ಲಿ ಶಂಖ ಉದ್ಯಮ ವಿಶೇಷವಾಗಿತ್ತು. ಕೊರಿಯದ ಜುನ್‌ಮುನ್ ಹಂತದಲ್ಲಿ (ಪ್ರ.ಶ.ಪೂ.6,000–1,300) ಪಶುಸಂಗೋಪನೆ ಮತ್ತು ವ್ಯವಸಾಯದ ಲಕ್ಷಣಗಳು ಹೊಕೋಕ್ ಮತ್ತು ಒಡೋನ್‌ನಲ್ಲಿ ಪತ್ತೆ ಹಚ್ಚಲಾಗಿದೆ. ಈ ಹಂತದಲ್ಲಿ ಸಜ್ಜೆ ಬೆಳೆಯಲಾಗುತ್ತಿತ್ತು. ಈ ಸಮಯದಲ್ಲಿ ನಾಮ್‌ಕ್ಯೊಂಗ್‌ನಲ್ಲಿ ಬತ್ತ ಬೆಳೆಯಲಾಗುತ್ತಿತ್ತು. ಪ್ರ.ಶ.ಪೂ.200ರಲ್ಲಿ ಜಪಾನಿಗೆ ವಲಸೆ ಹೋದ ಜನರು ಬತ್ತದ ಕೃಷಿ ಮತ್ತು ಲೋಹ ತಂತ್ರಜ್ಞಾನದ ಪ್ರಸರಣಕ್ಕೆ ಕಾರಣರಾದರು.

ಇಂಡೊ–ಚೀನದಲ್ಲಿ ಹೋಬಿನ್ಹಿಯನ್ ಬ್ಯಾಕ್ಸೋನಿಯನ್ ಸಂಸ್ಕೃತಿಗಳು ಬಹಳಕಾಲ ಊರ್ಜಿತವಾಗಿದ್ದು ಪ್ರ.ಶ.ಪೂ.1ನೆಯ ಸಹಸ್ರಮಾನದ ಮಧ್ಯಕಾಲದಲ್ಲಿ ಕ್ರಮೇಣ ಕಂಚು ಮತ್ತು ಕಬ್ಬಿಣಗಳ ಉಪಯೋಗ ಗೊತ್ತಿದ್ದ ಡಾಂಗ್ಸನ್ ಸಾಮ್ರಾಂಗ್‌ಸನ್ ಸಂಸ್ಕೃತಿಗಳು ರೂಢಿಗೆ ಬೆಳೆದುಬಂದು ವ್ಯವಸಾಯ ಪಶುಪಾಲನೆಗಳು ಹರಡಿದುವು. ಕೆಲವು ಪ್ರದೇಶಗಳಲ್ಲಿ ಇತ್ತೀಚಿನವರೆಗೂ ಉಪಯೋಗಿಸುತ್ತಿದ್ದ ಬಾಕು, ರಂಧ್ರವಿರುವ ಕೊಡಲಿ, ಭರ್ಜಿಯ ಮೊನೆ ಮತ್ತು ತಾಮ್ರದ ಬುರುಡುಮದ್ದಲೆಗಳು ಬಳಕೆಗೆ ಬಂದದ್ದೂ ಈ ಕಾಲದಲ್ಲೆ. ಕ್ರಮೇಣ ಚೀನ ಮತ್ತು ಭಾರತಗಳ ಸಂಸ್ಕೃತಿಗಳು ಪ್ರ.ಶ.1ನೆಯ ಸಹಸ್ರಮಾನದ ದೀರ್ಘ ಕಾಲದಲ್ಲಿ ಈ ಪ್ರದೇಶಗಳಿಗೆ ಹರಡುವವರೆಗೂ ಇವು ಪ್ರಾಗಿತಿಹಾಸ ಮಟ್ಟದಲ್ಲೇ ಇದ್ದು ಮಧ್ಯಯುಗೀನ ಇತಿಹಾಸ ಕಾಲದಲ್ಲಿ ಚಾರಿತ್ರಿಕ ಯುಗವನ್ನು ಪ್ರವೇಶಿಸಿದುವು.

16–17ನೆಯ ಶತಮಾನಗಳಲ್ಲಿ ಮಲೇಷ್ಯದ ದ್ವೀಪಗಳನ್ನು ಐರೋಪ್ಯರು ಪ್ರವೇಶಿಸುವವರೆಗೂ ಇಲ್ಲಿ ಅನಾಗರಿಕ ಶಿಲಾಯುಗ ಹಂತದ ಪಂಗಡಗಳಿದ್ದುವು. ಈ ಜನಕ್ಕೆ ಅಕ್ಕಿಯ ಉಪಯೋಗ ಗೊತ್ತಿರಲಿಲ್ಲ. ಬಾಳೆ, ಹಲಸು, ತೆಂಗು ಮುಂತಾದವುಗಳನ್ನು ಬೆಳೆಯುತ್ತಿದ್ದರು. ಹಂದಿ, ನಾಯಿ, ಕೋಳಿ ಮತ್ತು ಜಲಚರಗಳೂ ಇವರ ಆಹಾರ ಪೂರೈಕೆಯ ಸಾಧನಗಳಾಗಿದ್ದವು. ನಯಗೊಳಿಸಿದ ಕಲ್ಲಿನಾಯುಧಗಳನ್ನು ಉಪಯೋಗಿಸುತ್ತಿದ್ದರು. ಕೈಯಿಂದ ಮಾಡಿದ ಮಡಕೆಗಳು ಬಳಕೆಯಲ್ಲಿದ್ದವು.

ಕೊರಿಯದಲ್ಲಿ ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಉತ್ತರ ಏಷ್ಯದ ಪ್ರಭಾವದಿಂದ ನವಶಿಲಾಯುಗ ಸಂಸ್ಕೃತಿಗಳು ತಲೆದೋರಿದುವು. ಮೊದಮೊದಲು ಬೇಟೆ ಮತ್ತು ಮೀನುಗಾರಿಕೆ ಇಲ್ಲಿಯ ಜನರ ಮುಖ್ಯ ಕಸಬು. ಕ್ರಮೇಣ ಮಣ್ಪಾತ್ರೆಗಳ ಉಪಯೋಗವನ್ನೂ ಕಲ್ಲಿನ ಕಟ್ಟಡಕಲೆಯನ್ನೂ ಇವರು ಅರಿತರು. ಪ್ರ.ಶ.ಪೂ.4ನೆಯ ಶತಮಾನದಲ್ಲಿ ಕಂಚು ಮತ್ತು ಕಬ್ಬಿಣಗಳ ಬಳಕೆಯೂ ಅನಂತರ ವ್ಯವಸಾಯವೂ ರೂಢಿಗೆ ಬಂದುವು. ಪ್ರ.ಶ.ದ ಆರಂಭ ಕಾಲದಲ್ಲಿ ಜಪಾನ್ ಚೀನಗಳ ಪ್ರಭಾವ ಹೆಚ್ಚಿದಾಗ ಇಲ್ಲಿ ಐತಿಹಾಸಿಕ ಯುಗದ ಆರಂಭವಾಯಿತು.

ಜಪಾನಿನ ಅತ್ಯಂತ ಪುರಾತನ ಅವಶೇಷಗಳು ಪ್ರ.ಶ.ಪೂ. 3–2ನೆಯ ಸಹಸ್ರಮಾನಗಳ ನವಶಿಲಾಯುಗ ಸಂಸ್ಕೃತಿಗಳಿಗೆ ಸೇರಿದವು. ಈ ಸಂಸ್ಕೃತಿಗಳಲ್ಲಿ ಎರಡು ಹಂತಗಳುಂಟು. ಮೊದಲನೆಯದಾದ ಜಮೋನ್ ಸಂಸ್ಕೃತಿಯಲ್ಲಿ (ಪ್ರ.ಶ.ಪೂ.2500–250) ಹಗ್ಗದ ಗುರುತಿರುವ ಮಡಕೆಗಳ ಉಪಯೋಗ ಗೊತ್ತಿದ್ದು ಇದು ಪೂರ್ವ ಸೈಬೀರಿಯದ ಸಂಸ್ಕೃತಿಗಳನ್ನು ಹೋಲುತ್ತದೆ. ಈ ಸಂಸ್ಕೃತಿಯ ಜನಕ್ಕೆ ವ್ಯವಸಾಯ ಗೊತ್ತಿರಲಿಲ್ಲ. ನಯಗೊಳಿಸಿದ ಕಲ್ಲಿನಾಯುಧಗಳು ಆಗ ಬಳಕೆಯಲ್ಲಿದ್ದವು. ಬೇಟೆ ಮತ್ತು ಮೀನುಗಾರಿಕೆ ಮುಖ್ಯ ಕಸಬು. ನೆಲದಲ್ಲಿ ತೋಡಿದ ಗುಂಡಿಗಳ ಮೇಲೆ ಭೂಮಿಯಲ್ಲಿ ನೆಟ್ಟ ಕಂಬದ ಸಹಾಯದಿಂದ ನಿಲ್ಲಿಸಿದ್ದ ಚಾವಣಿಗಳಿದ್ದ ಗುಡಿಸಲುಗಳಲ್ಲಿ ಇವರ ವಾಸ. ಎರಡನೆಯ ಯ ಯೋ ಇ ಸಂಸ್ಕೃತಿ ಕಾಲದಲ್ಲಿ (ಪ್ರ.ಶ.ಪೂ.250–ಪ್ರ.ಶ.250) ಇವರಿಗೆ ವ್ಯವಸಾಯದ ಪರಿಚಯವಾಯಿತು. ಬತ್ತದ ಬೇಸಾಯ ರೂಢಿಗೆ ಬಂದದ್ದು ಆಗ, ಸ್ವಲ್ಪ ಕಾಲಾನಂತರ ಕಂಚಿನ ಉಪಯೋಗ ತಿಳಿದುಬಂದು, ಪ್ರಗತಿಯ ವೇಗ ಹೆಚ್ಚಿತು. ಕುಂಬಾರಚಕ್ರದಿಂದ ತಯಾರಿಸಿದ ಮಡಕೆಗಳೂ ಬತ್ತದ ನೀರಾವರಿ ಬೇಸಾಯವೂ ಈ ಸಂಸ್ಕೃತಿಯ ಮುಖ್ಯಲಕ್ಷಣಗಳು. ಅನಂತರ ಈ ಪ್ರದೇಶ ಚೀನದ ಧಾಳಿಗಳಿಗೆ ತುತ್ತಾಯಿತು. ಆಗ ಚರಿತ್ರಯುಗ ಪ್ರಾರಂಭವಾಯಿತೆನ್ನಬಹುದು. (ಬಿ.ಕೆ.ಜಿ.;ಎ.ಎಸ್.)

**ಏಳು ವರ್ಷಗಳ ಯುದ್ಧ:** 1756–63. ಫ್ರಾನ್ಸ್, ಆಸ್ಟ್ರಿಯ, ರಷ್ಯ, ಸ್ಯಾಕ್ಸನ್, ಸ್ವೀಡನ್ ಮತ್ತು (1762ರಿಂದ) ಸ್ಪೇನ್ ಇವುಗಳಿಗೂ ಪ್ರಷ್ಯ, ಇಂಗ್ಲೆಂಡ್ ಮತ್ತು ಹ್ಯಾನೋವರ್‌ಗಳಿಗೂ ನಡುವೆ ಯುರೋಪ್, ಉತ್ತರ ಅಮೆರಿಕ ಮತ್ತು ಭಾರತ ಕ್ಷೇತ್ರಗಳಲ್ಲಿ ನಡೆದ ಜಾಗತಿಕ ಯುದ್ಧ (ಸವೆನ್ ಇಯರ್ಸ್ ವಾರ್). ಇದಕ್ಕೆ ಕಾರಣಗಳು ಸ್ಥೂಲವಾಗಿ ಎರಡು. ಉತ್ತರ ಅಮೆರಿಕದಲ್ಲೂ ಭಾರತದಲ್ಲೂ ವಸಾಹತಿಗಾಗಿ ಫ್ರೆಂಚರಿಗೂ ಇಂಗ್ಲಿಷರಿಗೂ ನಡೆದಿದ್ದ ಸ್ಪರ್ಧೆ ಒಂದು ಮುಖ್ಯಕಾರಣ. ಅಮೆರಿಕದಲ್ಲಿ ಇಂಗ್ಲಿಷರು ಅಲಿಘನಿ ಪರ್ವತಗಳನ್ನು ದಾಟಿ ಪಶ್ಚಿಮಾಭಿಮುಖವಾಗಿ ಪದಾಕ್ರಮಣ ಮಾಡುತ್ತಿದ್ದಾಗ ಫ್ರೆಂಚರು ಕೆನಡದಿಂದ ನೈರುತ್ಯಾಭಿಮುಖವಾಗಿ ನಡೆಯುತ್ತ ಇಂಗ್ಲಿಷರ ಹಾದಿಯಲ್ಲಿ ಅಡ್ಡಹಾಯ್ದದ್ದರಿಂದ ವಿರಸಕ್ಕೆ ಆಸ್ಪದವುಂಟಾಯಿತು. ಜರ್ಮನಿಯ ಅಧಿನಾಯಕತ್ವಕ್ಕಾಗಿ ಆಸ್ಟ್ರಿಯದ ಮಾರಿಯ ತೆರೇಸಳಿಗೂ ಪ್ರಷ್ಯದ ಎರಡನೆಯ ಫ್ರೆಡರಿಕನಿಗೂ ನಡುವೆ ವಿರಸವೇರ್ಪಟ್ಟದ್ದು ಯುದ್ಧಕ್ಕೆ ಕಾರಣವಾಯಿತು. ಆಸ್ಟ್ರಿಯದ ಉತ್ತರಾಧಿಕಾರದ ಬಗ್ಗೆ ನಡೆದ ಯುದ್ಧ 1748ರಲ್ಲಿ ಕೊನೆಗೊಂಡಿತ್ತಾದರೂ ಅನಂತರದ ವರ್ಷಗಳಲ್ಲೂ ದ್ವೇಷದ ಹೊಗೆಯಾಡುತ್ತಲೇ ಇತ್ತು. ಯುರೋಪಿನಲ್ಲಿ ಯಾರು ಹೆಚ್ಚು ಬಲಿಷ್ಠರು ಎಂಬ ಬಗ್ಗೆ ಮತ್ತೊಮ್ಮೆ ಪರೀಕ್ಷೆ ನಡೆಸಬೇಕೆಂಬ ಚಪಲ ಬೆಳೆಯುತ್ತಿತ್ತು. ತಾನು ಹಿಂದಿನ ಯುದ್ಧದಲ್ಲಿ ಕಳೆದುಕೊಂಡಿದ್ದ ಸೈಲೀಷಿಯ ಪ್ರಾಂತವನ್ನು ಮರಳಿ ಪಡೆಯಬೇಕೆಂಬುದು ಆಸ್ಟ್ರಿಯದ ಹಂಬಲವಾದರೆ ಅದನ್ನು ತಾನೇ ಉಳಿಸಿಕೊಂಡು ಆಸ್ಟ್ರಿಯವೇ ಮುಂತಾದ ನೆರೆರಾಷ್ಟ್ರಗಳ ಹಮ್ಮನ್ನು ಮುರಿಯಬೇಕೆಂಬುದು ಪ್ರಷ್ಯದ ಆಕಾಂಕ್ಷೆ. ರಾಜಕಾರ್ಯ, ಯುದ್ಧವಿದ್ಯೆ ಎರಡರಲ್ಲೂ ಅಸಾಧಾರಣ ಪ್ರತಿಭೆ ಹೊಂದಿದ್ದ ಫ್ರೆಡರಿಕ್ ಆಗ ಪ್ರಷ್ಯದ ದೊರೆಯಾಗಿದ್ದ ಪೂರ್ವದಲ್ಲಿ, ಹದಿನೆಂಟನೆಯ ಶತಮಾನದವರೆಗೂ ತೀರ ಹಿಂದುಳಿದಿದ್ದ ರಷ್ಯ ಈಗ ಗಣನೀಯ ಪ್ರಗತಿ ಹೊಂದಿ ಇತರ ರಾಷ್ಟ್ರಗಳ ಮೇಲೆ ತನ್ನ ಪ್ರಭಾವ ಬೀರಲು ಪ್ರಾರಂಭಿಸಿತು. ಹೀಗಾಗಿ ಒಂದು ಕಡೆ ಇಂಗ್ಲೆಂಡ್ ಮತ್ತು ಪ್ರಷ್ಯ ಇವೂ ಇನ್ನೊಂದು ಕಡೆ ಆಸ್ಟ್ರಿಯ, ಫ್ರಾನ್ಸ್ ರಷ್ಯಗಳು ಇದ್ದು ಎರಡು ಬಣಗಳೇರ್ಪಟ್ಟಿದ್ದುವು.

ಸೈಲೀಷಿಯವನ್ನು ಪುನಃ ಪಡೆಯಬೇಕೆಂಬ ನಿರ್ಧಾರದಿಂದ ಆಸ್ಟ್ರಿಯದ ರಾಣಿ ಮಾರಿಯ ತೆರೇಸ ತನ್ನ ದೇಶದ ಉತ್ತರ ಗಡಿಯಲ್ಲಿ ಸೈನ್ಯಸಂಗ್ರಹ ಮಾಡುತ್ತಿದ್ದಾಳೆಂಬ ನೆಪ ಹೂಡಿ, ಫ್ರೆಡರಿಕ್ 1756ರಲ್ಲಿ ಸ್ಯಾಕ್ಸನಿಯನ್ನಾಕ್ರಮಿಸಿದ. ಫ್ರಾನ್ಸಿನಿಂದೊದಗಬಹುದಾದ ಅಪಾಯವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಆತ ಇಂಗ್ಲೆಂಡಿನ ಒಪ್ಪಿಗೆಯೊಡನೆ ಹ್ಯಾನೊವರನ್ನು ಆಕ್ರಮಿಸಿಕೊಂಡ. ಇದರಿಂದ ಫ್ರಾನ್ಸಿನ ಸೈನ್ಯಗಳು ಪ್ರಷ್ಯದೊಳಗೆ ನುಗ್ಗಲು ಅಡಚಣೆಯಾಯಿತು. ಆದರೆ ದಕ್ಷಿಣದಲ್ಲಿ ಆಸ್ಟ್ರಿಯದ ಪಡೆ ಸಜ್ಜಾಗಿ ಕದನಕ್ಕೆ ನಿಂತಿತ್ತು. ಪೂರ್ವದಿಂದ ರಷ್ಯನ್ ಸೈನ್ಯ ತನ್ನ ದೇಶದೊಳಕ್ಕೆ ನುಗ್ಗುವ ಭಯವೂ ಇತ್ತು. ಇವೆರಡು ಕಡೆಯಲ್ಲೂ ಶತ್ರುಗಳನ್ನು ಪ್ರಷ್ಯ ಎದುರಿಸಬೇಕಾಗಿತ್ತು. ಫ್ರಾನ್ಸಿನ ಸೈನ್ಯವನ್ನೆದುರಿಸಲು ಇಂಗ್ಲೆಂಡಿನಿಂದ ಸೈನ್ಯ ಸಹಾಯ ಬಂದಿತ್ತು. ಯುದ್ಧದ ಮೊದಲ 5 ವರ್ಷ ಇಂಗ್ಲೆಂಡಿಗೂ ಪ್ರಷ್ಯಕ್ಕೂ ಅನುಕೂಲಕರವಾಗಿರಲಿಲ್ಲ. ಫ್ರೆಡರಿಕನ ಸಹಾಯಕ್ಕೆ ಕೊಂಚ ಸೈನ್ಯವನ್ನೂ ಅಪಾರ ಹಣವನ್ನೂ ಕಳುಹಿಸಿ, ಯುರೋಪಿನಲ್ಲೆ ಯುದ್ಧ ಮುಂದುವರಿಯುವಂತೆ ಮಾಡಿದರೆ ಫ್ರಾನ್ಸ್ ತನ್ನ ಸೈನ್ಯದ ಬಹುಭಾಗವನ್ನು

ಯುರೋಪಿನಲ್ಲೇ ಇಟ್ಟುಕೊಳ್ಳಬೇಕಾಗುತ್ತದೆ. ಅದರ ವಸಾಹತುಗಳಿಗೆ ಸೈನ್ಯ ಕಳುಹಿಸುವ ಸ್ಥಿತಿಯಲ್ಲಿರುವುದಿಲ್ಲ. ಇದರಿಂದ ಆ ಪ್ರದೇಶಗಳಲ್ಲಿ ಬ್ರಿಟಿಷರು ಫ್ರಾನ್ಸಿನ ಪ್ರಾಬಲ್ಯ ಮುರಿಯಬಹುದು–ಎಂಬುದು ಇಂಗ್ಲೆಂಡಿನ ಯುದ್ಧಮಂತ್ರಿ ಲಾರ್ಡ್ ಚಾಥಮನ ಹಂಚಿಕೆ. ಆದರೂ ಮೊದಲು ಶತ್ರುಗಳ ಕೈ ಮೇಲಾಗಿ ಇಂಗ್ಲೆಂಡ್ ಪ್ರಷ್ಯಗಳಿಗೆ ಗಂಭೀರ ಪರಿಸ್ಥಿತಿಯುಂಟಾಯಿತು. ಫ್ರೆಡರಿಕ್ ಕೊಲ್ಲಿನಿನಲ್ಲಿ ಸೋತು ಬೊಹಿಮಿಯವನ್ನು ಶತ್ರುಗಳಿಗೆ ಬಿಟ್ಟುಕೊಡ ಬೇಕಾಯಿತು. 1758–59ರಲ್ಲಂತೂ ಪ್ರಷ್ಯದ ಸ್ಥಿತಿ ತೀರ ಹದಗೆಟ್ಟಿತು. ಝಾರೆನ್ ಡಾರ್ಫ್ ಕದನದಲ್ಲಿ ಪ್ರಷ್ಯ ಗೆದ್ದಿತಾದರೂ ಅದಕ್ಕೆ ಸಂಭವಿಸಿದ ನಷ್ಟ ಅಪಾರ. ಮರುವರ್ಷ ಕ್ಯೂನೆರ್ಸ್‍ಡಾಫಿನಲ್ಲಿ ಸೋಲೇ ಕಾದಿತ್ತು. ಭಾರತದಲ್ಲಿ ಫೋರ್ಟ್ ಸೇಂಟ್ ಡೇವಿಡ್ ಫ್ರೆಂಚರ ವಶವಾದ್ದರಿಂದ ಮದರಾಸು ಇಂಗ್ಲಿಷರ ಕೈ ಬಿಟ್ಟುಹೋಗುವ ಸ್ಥಿತಿ ಬಂದಿತ್ತು. ಉತ್ತರ ಅಮೆರಿಕದಲ್ಲೂ ಬ್ರಿಟಿಷರ ಪರಿಸ್ಥಿತಿ ಆಶಾದಾಯಕವಾಗಿರಲಿಲ್ಲ. ಆದರೆ ಕೊನೆಯ 3 ವರ್ಷಗಳಲ್ಲಿ ಶತ್ರುಗಳ ಬಲ ಕುಂದುತ್ತ ಬಂತು. ಪ್ಲಾಸಿ ಕದನ ದಲ್ಲಿ ಬ್ರಿಟಿಷರು ಬಂಗಾಲ ಗೆದ್ದುಕೊಂಡರಲ್ಲದೆ 1760ರಲ್ಲಿ ನಡೆದ ವಾಂಡಿವಾಷ್ ಕದನದಿಂದ ದಕ್ಷಿಣ ಭಾರತದಲ್ಲೂ ಫ್ರೆಂಚರ ಪ್ರಾಬಲ್ಯ ಮುರಿದುಬಿತ್ತು. ಉತ್ತರ ಅಮೆರಿಕದಲ್ಲಿ ಕರ್ನಲ್ ವುಲ್ಫ್ ಕ್ವಿಬೆಕ್ ಕೋಟೆಯನ್ನು ಹಿಡಿದ. ಯುರೋಪಿನಲ್ಲಿ ಲೀಗ್‍ನಿಟ್ಸ್ ಮತ್ತು ಟೋರ್ಗಾನ್ ಕದನಗಳಲ್ಲಿ ಆಸ್ಟ್ರಿಯದ ಸೈನ್ಯವನ್ನು ಫ್ರೆಡರಿಕ್ ಸೋಲಿಸಿ ಹಿಮ್ಮೆಟ್ಟಿಸಿದ. ಇದೇ ಸಮಯಕ್ಕೆ ಸರಿಯಾಗಿ ರಷ್ಯದ ರಾಣಿ ಒಂದನೆಯ ಎಲಿಜಬೆತಳ ಮರಣ ಸಂಭವಿಸಿತು. ಅವಳ ಅನಂತರ ಸಿಂಹಾಸನವೇರಿದ ಪೀಟರ್ ದೊರೆ ಫ್ರೆಡರಿಕನ ಅಭಿಮಾನಿ. ಇದರಿಂದ ರಷ್ಯ ದಿಂದಲೂ ಫ್ರೆಡರಿಕನಿಗೆ ವಿರೋಧ ಅಡಗಿಹೋಯಿತು.

1763ರಲ್ಲಿ ಹ್ಯೂಬರ್ಟ್ಸ್‍ಬರ್ಗಿನಲ್ಲಿ ಪ್ರಷ್ಯಕ್ಕೂ ಆಸ್ಟ್ರಿಯಕ್ಕೂ ಒಪ್ಪಂದವಾಗಿ ಯುದ್ಧ ನಿಂತಿತು. ಸೈಲೀಷಿಯ ಪ್ರಷ್ಯಕ್ಕೆ ಸೇರಿಹೋಯಿತು. ಅದೇ ವರ್ಷ ನಡೆದ ಪ್ಯಾರಿಸ್ ಒಪ್ಪಂದದಲ್ಲಿ ಕೆನಡ ಬ್ರಿಟಿಷರದಾಯಿತು. ಭಾರತದಲ್ಲೂ ಫ್ರೆಂಚರ ಪ್ರಾಬಲ್ಯ ಕೊನೆಗೊಂಡಿತು. ಈ ಎಲ್ಲ ಪರಾಭವಗಳಿಂದ ಫ್ರಾನ್ಸಿನ ಕೀರ್ತಿಗೆ ತಟ್ಟಿದ ಕಳಂಕ ಅಷ್ಟಿಷ್ಟಲ್ಲ. ಮುಂದೆ ಜರುಗಿದ ಮಹಾಕ್ರಾಂತಿಗೆ ಈ ಅವಮಾನವೂ ಒಂದು ಪ್ರಬಲ ಕಾರಣ. ಬ್ರಿಟಿಷರಿಗಂತೂ ಆ ಸಂದರ್ಭದಲ್ಲಿ ಯಾವ ಅಡಚಣೆಯೂ ಇರಲಿಲ್ಲ. ಇದರಿಂದ ಮುಂದಿನ ವರ್ಷಗಳಲ್ಲಿ ಮಹಾಚಕ್ರಾಧಿಪತ್ಯವೊಂದರ ಸ್ಥಾಪನೆಗೆ ಅನುಕೂಲಕರವಾದ ವಾತಾವರಣ ಏರ್ಪಟ್ಟಂತಾಯಿತು. (ಎ.ಎಂ.)

# ಐ

**ಐಫೆಲ್ ಗೋಪುರ:** ಫ್ರಾನ್ಸ್ ದೇಶದ ಪ್ಯಾರಿಸ್ ನಗರದಲ್ಲಿರುವ ಬೃಹತ್ ಗೋಪುರ. ಪ್ಯಾರಿಸಿನ ವಸ್ತುಪ್ರದರ್ಶನಕ್ಕೋಸ್ಕರ ಇದನ್ನು ನಿರ್ಮಿಸಲಾಯಿತು (1889). ಫ್ರಾನ್ಸ್ ದೇಶದ ಪ್ರಸಿದ್ಧ ಎಂಜಿನಿಯರ್ ಮತ್ತು ಸೇತುವೆ ನಿರ್ಮಾಣಕಾರನಾದ ಅಲೆಕ್ಸಾಂಡರ್ ಗಸ್ಟಾವ್ ಐಫೆಲ್ ಈ ಪ್ರಖ್ಯಾತ ಗೋಪುರವನ್ನು ರೂಪಿಸಿ ನಿರ್ಮಿಸಿದ್ದರಿಂದ ಈತನ ಹೆಸರನ್ನೇ ಗೋಪುರಕ್ಕೆ ಇಡಲಾಗಿದೆ. ಪ್ಯಾರಿಸಿನ ಚ್ಯಾಂಪ್ ಡಿ ಮಾರ್ಸ್‍ನಲ್ಲಿರುವ ಈ ಬೃಹತ್‍ಗೋಪುರದ ಎತ್ತರ 298 ಮೀ. ಸು.340 ಚ.ಮೀ ಜಾಗವನ್ನಿದು ಆಕ್ರಮಿಸಿದೆ. ಮೆದು ಕಬ್ಬಿಣದಿಂದಾದ ಇದರ ತೂಕ 7,300 ಟನ್ನುಗಳು. ಇದರ ನಿರ್ಮಾಣಕ್ಕೆ ಹತ್ತು ಲಕ್ಷಕ್ಕಿಂತ ಹೆಚ್ಚು ಡಾಲರುಗಳನ್ನು ವ್ಯಯಮಾಡಲಾಗಿದೆ. ಈ ಗೋಪುರದಿಂದಾಗಿ ಪ್ಯಾರಿಸಿನ ಸೌಂದರ್ಯ ಹೆಚ್ಚಿದೆ. 63 ಜನರನ್ನು ಒಟ್ಟಿಗೆ ಒಯ್ಯಬಲ್ಲ ಮೂರು ವಿದ್ಯುಚ್ಚಾಲಿತ ಯಂತ್ರಗಳು ಕುತೂಹಲವುಳ್ಳವರನ್ನು ಗೋಪುರದ ತುದಿಗೊಯ್ಯುತ್ತವೆ. ಗೋಪುರದ ನೆತ್ತಿಯಿಂದ 136 ಕಿಮೀ ಸುತ್ತಳತೆಯಲ್ಲಿನ ದೃಶ್ಯಗಳನ್ನು ಕಾಣಬಹುದು ಗೋಚರವಾಗುತ್ತವೆ. ಪ್ರವಾಸಿಗಳ ಮುಖ್ಯ ಆಕರ್ಷಣೆಗಳಲ್ಲಿ ಇದೂ ಒಂದಾಗಿದೆ. ಗೋಪುರದಲ್ಲಿ 16.76 ಮೀ ಎತ್ತರದ ಪ್ರಸಾರ ಕೇಂದ್ರವನ್ನು ಅಳವಡಿಸಲಾಗಿದೆ. (ಆರ್.ಡಿ.ಆರ್.)

**ಐರೋಪ್ಯ ಕಲೆ:** ಏಷ್ಯ, ಅಮೆರಿಕ, ಆಫ್ರಿಕ ಮತ್ತು ಆಸ್ಟ್ರೇಲಿಯಗಳಲ್ಲಿನಂತೆ ಯುರೋಪಿನಲ್ಲಿಯೂ ಪ್ರಾಚೀನ ಕಲೆ ಅತಿಪುರಾತನವಾದುದೇ. ಹಿಮಶಿಲಾಯುಗ ಕಳೆದು ನೆಲ ಬಾಳಿಗೆ ಹಸನಾಗುತ್ತಿದ್ದಂತೆ ಉತ್ತರ ಯುರೋಪಿನಿಂದ ಮಧ್ಯಯುರೋಪಿಗೂ ಅಲ್ಲಿಂದ ಸುತ್ತಲೂ ಹರಡಿದ ಮಾನವ ಬುಡಕಟ್ಟುಗಳ ದೈನಂದಿನ ಅಗತ್ಯಗಳು, ಆಶೋತ್ತರಗಳು, ಶಕ್ತಿ ಸಾಮರ್ಥ್ಯಗಳು–ಇವುಗಳಿಗೆ ಅನುಸಾರವಾಗಿ ನಾಗರಿಕತೆ, ಸಂಸ್ಕೃತಿ, ಕಲೆ ಮೊದಲಾದವು ಹರಡಿದುವು. ಮೇಲಿಂದ ಮೇಲೆ ಗುಂಪುಗುಂಪುಗಳಲ್ಲಿ ನಡೆದ ಕಲಹ, ಯುದ್ಧ, ದಾಳಿಗಳಿಂದಾಗಿ ಜೀವನ ಅಲ್ಲೋಲಕಲ್ಲೋಲವಾಯಿತು. ಇದ್ದ ನಾಗರಿಕತೆ ಅಳಿದು ಹೊಸ ನಾಗರಿಕತೆ ಬೆಳೆದು ಅಭಿವೃದ್ಧಿಗೊಂಡಿತು. ಇದರ ಅನೇಕ ವಿವರಗಳನ್ನು ಯುರೋಪಿನ ಪ್ರಾಗಿತಿಹಾಸ ಎಂಬ ಸಚಿತ್ರ ಲೇಖನದಲ್ಲಿ ನೋಡಬಹುದು.

**ಗ್ರೀಕ್ ಶೈಲಿ:** ಯುರೋಪಿನ ಇಂದಿನ ನಾಗರಿಕತೆ, ಸಂಸ್ಕೃತಿ ಹಾಗೂ ಕಲೆಗಳಿಗೆ ಮೂಲಸ್ಥಾನವಾದ ಗ್ರೀಸ್ ದೇಶದ ಕಲೆ ಎರಡು ಸಾವಿರ ವರ್ಷಗಳಿಗೂ ಹಳೆಯದು. ಪ್ರ.ಶ.ಪೂ.ಸು.1000ದಲ್ಲಿ ಡೋರಿಯನರು ಗ್ರೀಸನ್ನು ಆಕ್ರಮಿಸಿದರು. ಆಗಿನಿಂದ ಗ್ರೀಕ್ ಶಿಲ್ಪ ಬೆಳೆಯಿತೆನ್ನಬಹುದು. ಅಲ್ಲಿಂದ ಪ್ರ.ಶ.ಪೂ.10ನೆಯ ಶತಮಾನದಿಂದ ಪ್ರ.ಶ.ಪೂ. 6ನೆಯ ಶತಮಾನದವರೆಗೆ ಅದು ಬೆಳೆದು ಬಲಗೊಂಡಿತು. ಒಲಂಪಿಯದ ಪ್ರಾಚೀನ ದೇವಾಲಯಗಳಲ್ಲಿ ಡೋರಿಕ್ ಮಾದರಿಗಳನ್ನು ಗುರುತಿಸಬಹುದು. ಗ್ರೀಕ್ ಕಲೆಯ ವೈಭವಾವಶೇಷಗಳನ್ನು ಅಥೆನ್ಸ್ ನಗರದಲ್ಲಿ ಇಂದಿಗೂ ಕಾಣಬಹುದು. ಶಿಲ್ಪ ತಂತ್ರದಲ್ಲಿ ಚಾಚೂ ತಪ್ಪದೆ ಅಷ್ಟೊ ಖಚಿತವಾಗಿ ನಿರ್ಮಾಣಗೊಂಡ ಕಟ್ಟಡವೆಂದರೆ 2000 ವರ್ಷಗಳ ಹಿಂದೆ ನಿರ್ಮಾಣವಾದ ಪಾರ್ಥೆನಾನ್ ದೇವಾಲಯ. ಪ್ರಪಂಚದಲ್ಲಿ ಇಂಥ ಶುದ್ಧ ಶಿಲ್ಪ ತಂತ್ರದ ಕಟ್ಟಡಗಳು ಹೆಚ್ಚಿಲ್ಲ. ಈಗ ದೇವಾಲಯ ಶಿಥಿಲಗೊಂಡಿದೆಯಾದರೂ ಅದರ ವೈಖರಿಯನ್ನು ಇಂದಿಗೂ ಗುರುತಿಸಬಹುದು. ಬುದ್ಧಿ ಕೌಶಲಕ್ಕೆ ಅಧಿದೇವತೆಯೆನಿಸಿದ ಅಥೀನೆ ಪಾರ್ಥೆನೋಸ್ ದೇವತೆಯ ಹೆಸರಿನಲ್ಲಿ ಇದನ್ನು ನಿರ್ಮಿಸಲಾಯಿತು. ಅಥೆನ್ಸಿನ ಆಕ್ರೊಪೋಲಿಸ್ ಬೆಟ್ಟದ ನೆತ್ತಿಯಲ್ಲಿರುವ ಆ ಭವ್ಯ ಕಟ್ಟಡದ ಅವಶೇಷವನ್ನು ವೀಕ್ಷಿಸಲು ಇಂದಿಗೂ ಪ್ರಪಂಚದ ನಾನಾ ಭಾಗಗಳಿಂದ ಪ್ರೇಕ್ಷಕರು ಬರುತ್ತಿರುತ್ತಾರೆ. ಈ ದೇವಾಲಯಗಳ ಮುಖ್ಯ ಆಕರ್ಷಣೆ ಎಂದರೆ ಇಲ್ಲಿನ ಕಂಬಸಾಲು. ಇವು ಡೋರಿಕ್ ಮಾದರಿಯ ಗಂಡು ಶೈಲಿಯ ವಾಗಿವೆ. ಈ ಡೋರಿಕ್ ಶೈಲಿ ಸು.1500 ವರ್ಷ ಜನಪ್ರಿಯವಾಗಿತ್ತು. ಅಲಂಕರಣ ಕಡಿಮೆ ಯಾದರೂ–ಅದರಿಂದಲೇ ಅಂಥ ಶೈಲಿಯನ್ನು ಗಂಡುಶೈಲಿ ಎಂಬುದು ನೋಟಕ್ಕೆ ಬಲು ಸೊಗಸಾಗಿರುವ ಈ ಕಂಬಗಳನ್ನು ನೆಲದಲ್ಲಿ ನೆಟ್ಟಿಲ್ಲ. ಇವು ಸುಮ್ಮನೆ ಎತ್ತರದ ವೇದಿಕೆಯ ಮೇಲೆ ನಿಂತಿವೆ ಅಷ್ಟೆ. ಅಲ್ಲದೆ ಇವು ಬುಡದಲ್ಲಿ ದಪ್ಪವಾಗಿದ್ದು ಮೇಲೆ ಹೋಗ ಹೋಗುತ್ತ ತೆಳುವಾಗುತ್ತವೆ. ಒಂದೊಂದು ಕಂಬವನ್ನೂ ಎರಡು ಮೂರು ದಪ್ಪಕಲ್ಲುಗಳಿಂದ ಮಾಡಿದ್ದಾರಾದರೂ ಮಧ್ಯದ ಬೆಸುಗೆ ಎಲ್ಲೂ ಕಾಣಿಸದೆ ಒಂದೇ ಕಲ್ಲಿನ ಕಂಬದಂತೆ ಕಾಣುತ್ತ ಪ್ರೇಕ್ಷಕ ರನ್ನು ದಂಗುಬಡಿಸುತ್ತವೆ. ಗ್ರೀಕರಿಗೆ ಶಿಲ್ಪದಲ್ಲಿ ಅತಿ ಸುಂದರವಾದುದನ್ನು ಕಲ್ಪಿಸುವ ಕಾಣ್ಕೆ ಸಿದ್ಧಿಸಿತ್ತು. ಆದ್ದರಿಂದಲೇ ಅವರು ಅಂಥ ಅದ್ಭುತ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಅವರಾದ ಮೇಲೆ ಅನೇಕರು ಡೋರಿಕ್ ಮೂಲ ಮಾದರಿಯನ್ನು ಅಲ್ಪಸ್ವಲ್ಪ ವ್ಯತ್ಯಾಸ ಮಾಡಿ ಹೊಸ ಶೈಲಿಗಳನ್ನು ರೂಪಿಸಲು ಯತ್ನಿಸಿದರಾದರೂ ಯಾರ ಮಾರ್ಪಾಟೂ ಮೂಲ ಶೈಲಿಯಷ್ಟು ಸುಂದರವಾಗಿಲ್ಲ. ಎರಡು ಸಾವಿರದ ಮುನ್ನೂರು ವರ್ಷಗಳ ಹಿಂದಿನ ಗ್ರೀಕ್ ದೊರೆ ಪೆರಿಕ್ಲೀಸನ ಕಾಲವನ್ನು ಗ್ರೀಸಿನ ಸ್ವರ್ಣಯುಗವೆನ್ನುತ್ತಾರೆ. ಅಂದಿನ ದೇವಾಲಯಗಳು, ದೇವತಾಮೂರ್ತಿಗಳು, ಇತರ ಬೃಹದ್‍ಭವನಗಳು, ಕೋಟೆಕೊತ್ತಳಗಳು, ರಸ್ತೆಗಳು, ಸೇತುವೆಗಳು, ಗೋಪುರಗಳು–ಇವು ಈಗ ಅಳಿದು ಹೋಗಿದ್ದರೂ ಹಿಂದೆ ಇದ್ದವೆನ್ನಲು ಮಾಹಿತಿಯನ್ನೊದಗಿಸುವಷ್ಟು ಮಟ್ಟಿಗೆ ಉಳಿದುಬಂದಿವೆ.

ಗ್ರೀಕರು ತಮ್ಮ ವಾಸ್ತುಶಿಲ್ಪದಲ್ಲಿ ಗಾರೆಯನ್ನು ಬಳಸುತ್ತಿರಲಿಲ್ಲ. ಕಲ್ಲುಗಳನ್ನೇ ಅಚ್ಚುಕಟ್ಟಾಗಿ ಕತ್ತರಿಸಿ ಜೋಡಿಸಿ ಕಟ್ಟಡಗಳನ್ನು ಕಟ್ಟುತ್ತಿದ್ದರು. ಚಿತ್ತಾರಗಳಿಗೆ ಹೊಳಪನ್ನು ಕೊಡುತ್ತಿದ್ದರಲ್ಲದೆ ವಿವಿಧ ಬಣ್ಣಗಳನ್ನು ಬಳಸುತ್ತಿದ್ದರು. ಗ್ರೀಕ್ ಸ್ವಾಸ್ಥ್ಯಗಳಲ್ಲಿ ಪ್ರಾರಂಭವಾದ ಅಯೋನಿಕ್ ಶೈಲಿ ಕ್ರಮೇಣ ಪ್ರ.ಶ.ಪೂ.ಸು.500ರಲ್ಲಿ ಗ್ರೀಸನ್ನು ಪ್ರವೇಶಿಸಿತು. ಇದನ್ನು ಅಥೆನ್ಸಿನ ಎರೆಕ್ತಿಯಂ ದೇವಾಲಯದಲ್ಲಿ ಗುರುತಿಸಬಹುದು. ಗ್ರೀಕ್ ಕಲಾಪರಂಪರೆಯಲ್ಲಿ ಅತಿ ನವೀನವೆನಿಸಿದ ಕಾರಿಂಥಿಯನ್ ಶೈಲಿಯ ಬಳಕೆ ಅಷ್ಟಾಗಿ ಗ್ರೀಸಿನಲ್ಲಿ ಕಂಡುಬರದು. ಅಧಿಕಾರ ಗ್ರೀಸಿನಿಂದ ಏಷ್ಯ ಮೈನರಿಗೆ ವರ್ಗಾವಣೆಯಾದ ಮೇಲೆ (ಪ್ರ.ಶ.ಪೂ.3ನೆಯ ಶತಮಾನ) ಹೆಲೆನಿಸ್ಟಿಕ್ ವಾಸ್ತುಶಿಲ್ಪಕಲೆ ಮೊದಲಾಯಿತೆನ್ನಬಹುದು. ನಗರರಚನೆಯ ಪ್ರಾಮುಖ್ಯ ಮತ್ತು ಸಂಕೀರ್ಣ ರಚನಾವಿಧಾನಗಳು ಆಗ ಮುಖ್ಯವೆನಿಸಿದುವು.

ಗ್ರೀಕ್ ಶಿಲ್ಪದಲ್ಲಿ ಸಹಜತೆಗೆ ಗಮನಕೊಡಲಾಗಿದೆ. ಅವರು ಕೆತ್ತಿದ ದೇವತಾ ವಿಗ್ರಹಗಳು ಆದರ್ಶ ಸ್ತ್ರೀಪುರುಷರ ದೇಹರಚನೆ, ಸೌಂದರ್ಯಗಳನ್ನುಳ್ಳವಾಗಿವೆ. ಅಪೊಲೊ, ಅಥೀನ, ವೀನಸ್, ಅಲೆಕ್ಸಾಂಡರ್ ಮೊದಲಾದವರ ಮೂರ್ತಿಗಳು ಇದಕ್ಕೆ ಒಳ್ಳೆಯ ಉದಾಹರಣೆ. ಪ್ರ.ಶ.ಪೂ.500 ರಿಂದ 300 ರ ವರೆಗಿನ ಕಾಲದಲ್ಲಿ ಪ್ರಸಿದ್ಧರಾದ ಶಿಲ್ಪಿಗಳೆಂದರೆ ಪ್ರಾಕ್ಸಿಟಿಲಿಸ್, ಲಿಸಿಪಸ್, ಮಿರಾನ್ ಕ್ರಿಸಿಲಾಸ್, ಟಿಮೋತಿಯಸ್, ಬ್ರಯಾಕ್ಸಿಸ್. ವರ್ಣಚಿತ್ರಕಾರರೆಂದರೆ ಅಪೊಲೊಡೋರಸ್, ಜ್ಯೂಕ್ಸಿಸ್, ಪಾರ್ಥಾಸಿಯಸ್.

**ರೋಮನ್ ಮಾದರಿ:** ಗ್ರೀಕರಂತೆ ರೋಮನರೂ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿ ವೈಭವದಿಂದ ಹಲವು ಶತಮಾನಗಳ ಕಾಲ ಯುರೋಪಿನ ಬಹು ಭಾಗವನ್ನು ಆಳಿದರು. ಅವರ ಶಿಲ್ಪ ಹಾಗೂ ಕಲೆಗೆ ಸ್ಫೂರ್ತಿ ದೊರೆತದ್ದು ನೆರೆದೇಶವಾದ ಗ್ರೀಸಿನಿಂದ. ದಕ್ಷಿಣ ಇಟಲಿ ಮತ್ತು ಸಿಸಿಲಿಗಳ ಮಾದರಿಗಳನ್ನು ಅವರು ಅನುಸರಿಸಿದಂತೆ ತೋರುತ್ತದೆ. ಅನಂತರ ನೇರವಾಗಿ ಗ್ರೀಸಿನಿಂದಲೂ ಹೆಲೆನಿಸ್ಟಿಕ್ ಪೂರ್ವರಾಷ್ಟ್ರಗಳಿಂದಲೂ ಅವರು ಅನುಸರಿಸಿದರೆನ್ನಬಹುದು. ಇಟ್ರಸ್ಕನರಿಂದ ಕಟ್ಟಡ ವಿನ್ಯಾಸದಲ್ಲಿ ನಿಜವಾದ ಕಮಾನು, ಕಮಾನು ಸರಣಿ ಮತ್ತು ಗುಮ್ಮಟದ ಬಳಕೆಯನ್ನು ಅನುಕರಿಸಲಾಯಿತು. ಪ್ರ.ಶ.ಪೂ.ಸು.2ನೆಯ ಶತಮಾನದ ಹೊತ್ತಿಗಾಗಲೆ ಜಲ್ಲಿಕಲ್ಲಿನ ಗಾರೆ ಬಳಕೆಗೆ ಬಂದದ್ದರಿಂದ ವಾಸ್ತುಶಿಲ್ಪದಲ್ಲಿ ಅಗಾಧ ಬದಲಾವಣೆಗಳಾದುವು. ಕಮಾನಿನ ಬಳಕೆ ಹೆಚ್ಚಿ ಕಂಬ ಸಾಲುಗಳ ಅಲಂಕರಣಕ್ಕೆ ಎಡೆಯಾಯಿತು. ಗೃಹಗಳ ಉದ್ದಗಲಗಳು ಹೆಚ್ಚಿದವು. ಪ್ರಾಚೀನ ರೋಮನ್ ಶಿಲ್ಪತಂತ್ರಕ್ಕೆ ಈಗಿರುವ ಉದಾಹರಣೆಗಳೆಂದರೆ ಅವರು ರೋಮಿನ ಹೊರವಲಯದಲ್ಲಿ ನಿರ್ಮಿಸಿದ ಕಲ್ಲಿನ ಮೇಲು ಕಾಲುವೆಗಳ ಉಳಿಕೆಗಳು ಪ್ರ.ಶ.100–ಪ್ರ.ಶ.300ರವರೆಗಿನ ಕಾಲವನ್ನು ರೋಮನರ ಉಚ್ಛ್ರಾಯ ಕಾಲವೆನ್ನಬಹುದು. ಹಸಿ ಇಟ್ಟಿಗೆಗಳನ್ನೇ ಕಟ್ಟಡಗಳಿಗೆ ಬಳಸುತ್ತಿದ್ದ ರಾದರೂ ಗಾರೆಯ ಗೋಡೆಗಳ ಹೊರಮುಖಕ್ಕೆ ಸುಟ್ಟ ಇಟ್ಟಿಗೆಗಳನ್ನು ಬಳಸುವ ವಾಡಿಕೆ ಹೆಚ್ಚಿತು. ಮುಖ್ಯವಾದ ಕಟ್ಟಡಗಳಿಗೆ ಹೊರಮೈ ನಾಜೂಕಿಗಾಗಿ ನಯಗಾರೆಯನ್ನು ಉಜ್ಜುವ ವಾಡಿಕೆ ಹಿಂದಿನಿಂದ

ಇದ್ದದ್ದೆ. ಕಮಾನು ಸರಣಿಗಳನ್ನು ವಿಧವಿಧವಾಗಿ ಬಳಸಿಕೊಳ್ಳಲಾಯಿತು. ಟ್ರೋಜನ್ ಮಹಾರಾಜನ ಕಾಲವನ್ನು ರೋಮನ್ ಶಿಲ್ಪದ ಉತ್ಕೃಷ್ಟ ಕಾಲವೆನ್ನಬಹುದು (ಪ್ರ.ಶ.98–117). ಗ್ರೀಕ್ ಮಾದರಿಯ ಕುಸುರಿ ಕೆಲಸವಿಲ್ಲದಿದ್ದರೂ ಎಲ್ಲ ಕಾಲದಲ್ಲೂ ರೋಮನರು ತಮ್ಮ ವಾಸ್ತುಕಲೆಯಲ್ಲಿ ವೈಭವಕ್ಕೂ ಅನುಕೂಲಗಳಿಗೂ ಗಮನವಿತ್ತಿರುವುದನ್ನು ಗುರುತಿಸ ಬಹುದು. ನಗರ ಮಧ್ಯದಲ್ಲಿನ ಸಾರ್ವಜನಿಕ ಕ್ಷೇತ್ರಗಳಾದ ಚಾವಡಿಗಳನ್ನು ಇನ್ನೂ ಹೆಚ್ಚು ವಿಸ್ತಾರವಾಗಿ, ಹೆಚ್ಚು ಸುಂದರವಾಗಿ ಕಟ್ಟುವ ಕಲೆ ಕ್ರಮೇಣ ಬೆಳೆದು ಬಂತು. ರೋಮನರ ಉತ್ಕೃಷ್ಟ ಕಲಾ ಮಾದರಿಗಳೆಂದರೆ ಅವರು ವಿಶೇಷವಾಗಿ ನಿರ್ಮಿಸಿರುವ ಬ್ಯಾಸಿಲಿಕಗಳು, ಸ್ನಾನಗೃಹಗಳು, ಅರ್ಧಚಂದ್ರಾಕಾರದ ಪೀಠಪಂಕ್ತಿಯುಳ್ಳ ನಾಟಕ ಮಂದಿರ ಗಳು, ವಿಜಯ ಸ್ಮಾರಕಗಳಾದ ಬೃಹದ್‌ಕಮಾನುಗಳು. ನಗರವಾಸಿಗಳಾದ ಶ್ರೀಮಂತರು ಬಿಡುವಿನ ದಿನಗಳನ್ನು ವಿರಾಮವಾಗಿ ಹಳ್ಳಿಗಾಡಿನಲ್ಲಿ ಕಳೆಯಲು ತಮಗಾಗಿ ದೂರದ ಪ್ರದೇಶಗಳಲ್ಲಿ ಕಟ್ಟಿಕೊಂಡ ವಿಹಾರ ಗೃಹಗಳು (ವಿಲ್ಲ) ಅವರ ಸೂಕ್ಷ್ಮ ಸೌಂದರ್ಯಾ ಭಿರುಚಿಗೂ ಅನುಕೂಲ ದೃಷ್ಟಿಗೂ ಸಾಕ್ಷಿಯಾಗಿವೆ.

ಚಿತ್ರಕಲೆಯಲ್ಲಿ ಮೊದಲ ಹಂತವೆನಿಸಿದ ಇಟ್ರಸ್ಕನ್ ಶೈಲಿಯಲ್ಲಿ ಪ್ರಾಚೀನ ಗ್ರೀಸಿನ ಅನುಕರಣೆ ಎದ್ದು ಕಾಣುತ್ತದಾದರೂ ಸ್ಥಳೀಯವಾದ ವರ್ಣಾಲಂಕರಣ ಹಾಗೂ ವೈಭವಗಳು ಗಮನಾರ್ಹವಾಗಿವೆ. ಬರಬರುತ್ತ ಪ್ರ.ಶ.ಪೂ.ಸು.400 ರಿಂದ ಈಚೆಗೆ ಗ್ರೀಕ್ ಶಿಷ್ಟ ಮಾದರಿ ಯೇ ರೋಮನರ ಆದರ್ಶವಾಗುತ್ತ ಬಂತು. ಪ್ರ.ಶ.ಪೂ.300 ರಿಂದ 100ರ ವರೆಗೆ ಅವೆರಡರ ಮಿಶ್ರಶೈಲಿಗಳನ್ನೂ ಕಾಣಬಹುದು. ಅಗಸ್ಟಸ್ ಕಾಲದಲ್ಲಿ (ಪ್ರ.ಶ.ಪೂ.30–ಪ್ರ.ಶ.4) ಗ್ರೀಕರ ಆದರ್ಶ ಪಂಥದೊಂದಿಗೆ ರೋಮನರ ಸಹಜತೆಯನ್ನು ಮಿಳಿತ ಮಾಡುವ ಪ್ರಯತ್ನಗಳು ನಡೆದುವು. ಮುಂದಿನ ದಶಕಗಳಲ್ಲಿ ಎದೆಯವರೆಗಿನ ಮೂರ್ತಿಚಿತ್ರಣದಲ್ಲಿ ಒಂದೊಂದು ವ್ಯಕ್ತಿಯ ಮನಸ್ಸನ್ನೂ ಮುಖದಲ್ಲಿ ಮೂಡಿಸುವ ಪ್ರಯತ್ನ ನಡೆದಿರುವುದನ್ನು ಗುರುತಿಸಬಹುದು. ಟ್ರೋಜನ್ (ಪ್ರ.ಶ.2ನೆಯ ಶತಮಾನ) ರಾಜನ ಕಾಲದಲ್ಲಿ ಈಜಿಪ್ಟಿನ ಪ್ರಭಾವ ಹೆಚ್ಚಿದಂತೆ ತೋರುತ್ತದೆ. ಇದನ್ನು ರೋಮಿನ ಟ್ರೋಜನ್ ಶ್ರೇಣಿಯಲ್ಲಿ ಗುರುತಿಸ ಬಹುದು. ಹಾಡ್ರಿಯನ್ (ಪ್ರ.ಶ.3ನೆಯ ಶತಮಾನ) ರಾಜನ ಕಾಲದಲ್ಲಿ ಪೂರ್ವ ರಾಷ್ಟ್ರಗಳ ಅನುಕರಣೆ ಹೆಚ್ಚಿ ಇದರಿಂದ ಕಲೆಯಲ್ಲಿ ಅಮೂರ್ತತೆ ಬೆಳೆಯಿತೆನ್ನಬಹುದು. ಪಾಂಪೇ ಪ್ರದೇಶದಲ್ಲಿ ಉಳಿದುಬಂದಿರುವ ವರ್ಣಚಿತ್ರಗಳು ರೋಮನ್ ಮಾದರಿಗೆ ಉತ್ತಮ ನಿದರ್ಶನಗಳಾಗಿವೆ. ರೋಮನರು ಮನೆಯ ಹೊರ ಅಂಗಣಕ್ಕಿಂತ ಒಳ ಅಂಗಣಗಳಲ್ಲೇ ತಮ್ಮ ಚಿತ್ರಕಲೆಯನ್ನು ಪ್ರದರ್ಶಿಸಿರುವುದು ಗಮನಾರ್ಹವಾದ ಒಂದು ಅಂಶ. ಚಿತ್ರಕಲೆಯಲ್ಲೂ ಲೋಹಕಲೆ, ಮಣ್ಣಿನಕಲೆ ಮತ್ತು ಗಾಜುಕಲೆಗಳಲ್ಲೂ ಹೆಚ್ಚಿನ ಅಲಂಕರಣ ಮತ್ತು ತೀಕ್ಷ್ಣ ವರ್ಣಗಳನ್ನು ನಾವು ಕಾಣಬಹುದು.

**ಬೈಜ಼ಾಂಟಿಯನ್ ಶೈಲಿ:** ರೋಮನರ ಅನಂತರ ಪ್ರಾಬಲ್ಯಕ್ಕೆ ಬಂದದ್ದು ಬೈಜ಼ಾಂಟಿಯನ್ ಸಾಮ್ರಾಜ್ಯ. ಇದರ ತಿರುಳು ಪ್ರದೇಶಗಳೆಂದರೆ ಏಷ್ಯ ಮೈನರ್ ಮತ್ತು ಬಾಲ್ಕನ್ ಪ್ರಸ್ಥಭೂಮಿಯ ದಕ್ಷಿಣ ಪ್ರದೇಶ. ಸಾವಿರ ವರ್ಷಗಳ ಇದರ ಚರಿತ್ರೆಯಲ್ಲಿ ಅನೇಕ ಏಳುಬೀಳುಗಳನ್ನು ಕಾಣಬಹುದು. ಬೈಜ಼ಾಂಟಿಯಂ (ಕಾನ್‌ಸ್ಟಾಂಟಿನೋಪಲ್) ಅನ್ನು ರೋಮನ್ ಚಕ್ರಾಧಿಪತ್ಯದ ರಾಜಧಾನಿಯನ್ನಾಗಿ ಮಾಡಿದ (ಪ್ರ.ಶ.330) ಅನಂತರ ಅಲ್ಲಿ ಬೆಳೆದು ಬಂದ ಶೈಲಿಯನ್ನು ಬೈಜ಼ಾಂಟಿಯನ್ ಶೈಲಿ ಎನ್ನುತ್ತಾರೆ. ರೋಮನ್ ರೀತಿಯಲ್ಲಿಯೇ ಕಟ್ಟಡಗಳನ್ನೂ ಕಟ್ಟಿ ಅವಕ್ಕೆ ಇನ್ನೂ ಹೆಚ್ಚಿನ ಬಣ್ಣಗಳನ್ನೂ ಅಲಂಕರಣಗಳನ್ನೂ ಉಪಯೋಗಿಸಿರುವುದು ಈ ಶೈಲಿಯ ವೈಶಿಷ್ಟ್ಯ. ಈ ಶೈಲಿ ಗ್ರೀಸ್, ಬಾಲ್ಕನ್ ಪ್ರದೇಶಗಳ ಮೂಲಕ ಏಷ್ಯ ಮೈನರನ್ನು ಹೊಕ್ಕು ರಷ್ಯದಲ್ಲಿ ಹರಡಿತು. ಇದರ ಖಚಿತ ಅಭಿವ್ಯಕ್ತಿಯನ್ನು ರಾವೆನ್ನದಲ್ಲಿನ ಸ್ಯಾನ್ವಿಟೇಲನ ಚರ್ಚಿನಲ್ಲೂ ಪ್ರಸಿದ್ಧ ಹಾಜಿಯ ಸೋಫಿಯದಲ್ಲೂ ಕಾಣಬಹುದು. ಅನಂತರ ಈ ಶೈಲಿಯ ಮೇಲೆ ಪೂರ್ವ ರಾಷ್ಟ್ರಗಳ ಪ್ರಭಾವ ಹೆಚ್ಚಿರುವುದನ್ನು ವೆನಿಸಿನ ಸೇಂಟ್ ಮಾರ್ಕನ ಚರ್ಚಿ ನಲ್ಲಿ ಗುರುತಿಸಬಹುದು. ಬರಬರುತ್ತ ಈ ಶೈಲಿಯಲ್ಲಿನ ಅಲಂಕರಣ ವಿಧಾನಗಳು ಇನ್ನೂ ವಿಸ್ತಾರಗೊಂಡು ಹೆಚ್ಚು ಹೆಚ್ಚು ಸಂಕೀರ್ಣವಾಗತೊಡಗಿದುವು. ಇದಕ್ಕೆ ಉದಾಹರಣೆ ಯಾಗಿ ಮಾಸ್ಕೊ ಕೆಥೆಡ್ರಲ್ ಅನ್ನು ಹೆಸರಿಸಬಹುದು. ಈ ಎಲ್ಲ ಗುಣಗಳನ್ನೂ ಬೈಜ಼ಾಂಟಿಯನ್ ಚಿತ್ರಕಲೆಯಲ್ಲೂ ಕಾಣಬಹುದು.

**ಪ್ರಾಚೀನ ಕ್ರೈಸ್ತ ಶೈಲಿ:** ಕ್ರೈಸ್ತಧರ್ಮ ಹರಡಲು ಪ್ರಾರಂಭವಾದ ಮೊದಲ ದಿನಗಳಲ್ಲಿನ ಶಿಲ್ಪಶೈಲಿಯನ್ನು ಈ ಹೆಸರಿನಿಂದ ಕರೆಯಬಹುದು. ಎಲ್ಲಿಯವರೆಗೆ ರೋಮನ್ ಚಕ್ರಾಧಿಪತ್ಯದಲ್ಲಿ ಕ್ರೈಸ್ತಮತಕ್ಕೆ ಬಹಿಷ್ಕಾರವಿತ್ತೋ ಅಲ್ಲಿಯವರೆಗೆ ಕ್ರೈಸ್ತರು ತಮ್ಮ ದೇವಾಲಯಗಳನ್ನು ನೆಲಮಾಳಿಗೆಯಲ್ಲಿ ಗುಪ್ತವಾಗಿ ನಿರ್ಮಿಸಿಕೊಳ್ಳುತ್ತಿದ್ದರು (ಕ್ಯಾಟಕೂಂಬ್ಸ್). ಪರಿಸ್ಥಿತಿ ಸುಧಾರಿಸಿ ರೋಮನ್ ದೊರೆ ಕಾನ್‌ಸ್ಟಾಂಟೈನನೇ ಕ್ರೈಸ್ತಮತಾವಲಂಬಿಯಾದಾಗ ಬಳಕೆಯಲ್ಲಿದ್ದ ಬ್ಯಾಸಿಲಿಕಗಳನ್ನೇ ತಮ್ಮ ಚರ್ಚುಗಳನ್ನಾಗಿ ಬಳಸಲಾರಂಭಿಸಿದರು. ಇಂಥ ಅನೇಕ ಚರ್ಚುಗಳು ಹೊರನೋಟಕ್ಕೆ ದೊಡ್ಡ ಉಗ್ರಾಣಗಳಂತೆ ಕಾಣುತ್ತಿದ್ದುವಾದರೂ ಒಳಗಿನ ಅಲಂಕರಣಗಳು ದಂಗುಬಡಿಸುವಂತಿದ್ದುವು. ರೋಮಿನ ಹೊರವಲಯದಲ್ಲಿರುವ ಸೇಂಟ್ ಪಾಲನ ಚರ್ಚು ಇಂಥ ಕಟ್ಟಡಗಳಿಗೆ ಒಂದು ಉತ್ತಮ ನಿದರ್ಶನ. ಇದು ನಿರ್ಮಾಣವಾದದ್ದು ಪ್ರ.ಶ.380ರಲ್ಲಿ. ಅಲ್ಲಿಂದ ಮುಂದೆ ಸು.1400 ವರ್ಷಗಳ ಕಾಲ ಜನ ಇಲ್ಲಿ ಪ್ರಾರ್ಥನೆ ನಡೆಸಿದ್ದಾರೆ. 1823 ರಲ್ಲಿ ಈ ಕಟ್ಟಡ ಬೆಂಕಿಯಿಂದ ನಾಶವಾಯಿತಾದರೂ ಮತ್ತೆ ಇದನ್ನು ಹಿಂದೆ ಇದ್ದಂತೆಯೇ ಕಟ್ಟಲಾಗಿದ್ದು ಇವತ್ತಿಗೂ ನಾವು ಇದನ್ನು ರೋಮಿನಲ್ಲಿ ನೋಡಬಹುದು.

**ಅಂಧಕಾರ ಯುಗದಲ್ಲಿನ ಕ್ರೈಸ್ತಧರ್ಮ:** ತನ್ನ ಕೊನೆಗಾಲದಲ್ಲಿ ರೋಮನ್ ಚಕ್ರಾಧಿಪತ್ಯ ಎರಡಾಗಿ ವಿಭಾಗಗೊಂಡಿತು. ಪೂರ್ವಭಾಗಕ್ಕೆ ಕಾನ್‌ಸ್ಟಾಂಟಿನೋಪಲ್ ಮತ್ತು ಪಶ್ಚಿಮ ಭಾಗಕ್ಕೆ ರೋಮ್ ರಾಜಧಾನಿಗಳಾದುವು. ಅದೇ ಅವರು ಫ್ರಾನ್ಸ್, ಇಟಲಿ, ಸ್ಪೇನುಗಳನ್ನು ಆಕ್ರಮಿಸಿ ಕೊನೆಗೊಮ್ಮೆ ರೋಮಿನಲ್ಲಿ ತಮ್ಮ ಝುಂಡ ಊರಿದರು. ಓದುಬರೆಹ ಬಾರದ ಈ ಜನ ಒರಟರೂ ಯುದ್ಧಪ್ರಿಯರೂ ಆಗಿದ್ದರು. ಇಂಥವರು ಕ್ರಮೇಣ ಕ್ರೈಸ್ತಮತಾವಲಂಬಿ ಗಳಾಗಿದ್ದರು. ಇವರ ಆಳಿಕೆಯ ಕಾಲವನ್ನು ಚರಿತ್ರೆಯಲ್ಲಿ ಅಂಧಕಾರ ಯುಗವೆನ್ನಲಾಗಿದೆ (ಪ್ರ.ಶ.500–ಪ್ರ.ಶ.1000). ಹೀಗೆನ್ನಲು ಅನೇಕ ಕಾರಣಗಳಿವೆ. ಮಧ್ಯಯುರೋಪಿನಲ್ಲಿ ಸುಸಂಘಟಿತವಾದ ಯಾವ ರಾಜಕೀಯ ವ್ಯವಸ್ಥೆಯೂ ಅಂದು ಇರಲಿಲ್ಲ. ಸ್ಪೇನ್, ಇಟಲಿ, ಫ್ರಾನ್ಸ್ ಇವಾವುವೂ ರಾಷ್ಟ್ರಮಟ್ಟವನ್ನು ಮುಟ್ಟಿರಲಿಲ್ಲ. ಸಣ್ಣಪುಟ್ಟ ಪ್ರಾಂತಗಳು ತಮ್ಮ ತಮ್ಮಲ್ಲಿ ಸದಾ ಹೋರಾಡುತ್ತಿದ್ದುವು. ರೋಮನರ ಭಾಷೆಯಾದ ಲ್ಯಾಟಿನ್ ಮರೆಯಾಗುತ್ತ ಬಂದಿದ್ದು ಅದರಿಂದ ಹುಟ್ಟಿದ್ದ ಅನೇಕ ಉಪಭಾಷೆಗಳು ಬಳಕೆಗೆ ಬರುತ್ತಿದ್ದುವು. ಒಬ್ಬರಾಡಿದ ಭಾಷೆ ಇನ್ನೊಬ್ಬರಿಗೆ ಅರ್ಥವಾಗುವಂತಿರಲಿಲ್ಲ. ಎಲ್ಲ ಮಬ್ಬಾದಂತೆ, ಏನೋ ಕಾವಳ ಕವಿದಂತೆ ಆಗಿತ್ತು. ಇಂಥ ಸಂದಿಗ್ಧ ಸಮಯದಲ್ಲಿ ಟ್ಯೂಟನ್ ದೊರೆಯಾದ ಷಾರ್ಲಮಾನನ ಆಡಳಿತ ತನ್ನದೇ ಆದ ಬೆಳಕಿನಿಂದ ಝಗಝಗಿಸುವ ಅವಧಿಯೆನಿಸಿದೆ. ಆತ ಸ್ವತಃ ಅನಾಗರಿಕ ಮತ್ತು ಅನಕ್ಷರಸ್ಥನಾದರೂ ದೇಶದ ಹಿತಚಿಂತನೆಯ ದೃಷ್ಟಿಯಿಂದ ಅನೇಕ ಉತ್ತಮ ಕೆಲಸಗಳನ್ನು ಮಾಡಿದ. ಜೊತೆಗೆ ಅಂದಿನ ಕ್ರೈಸ್ತ ಪಾದ್ರಿಗಳು ಹಿಂದಿನ ರೋಮನ್ ಭಾಷಾ ಸಾಹಿತ್ಯಗಳನ್ನು ಉಳಿಸಿಕೊಂಡು ಬಂದರಲ್ಲದೆ ಅನೇಕ ಹೊಸ ಮಠಗಳನ್ನು ಕಟ್ಟಿಸಿದರು. ಶಿಲ್ಪಕಲೆಯ ದೃಷ್ಟಿಯಿಂದ ಇವು ಪ್ರಮುಖವೆನಿಸಿವೆ. ನಿದರ್ಶನಗಳಾಗಿ ವೆಟ್ಟಿಂಗ್‌ಟನ್ನಿನ ಮೇರಿಯ ಸ್ಟೆಲ ಮಠವನ್ನೂ ರೋಮಿನ ಹೊರವಲಯದಲ್ಲಿದ್ದ ಸೇಂಟ್ ಪಾಲ್ ಮಠವನ್ನೂ ಹೆಸರಿಸಬಹುದು.

**ರೋಮನೆಸ್ಕ್ ಶೈಲಿ:** ಅಂಧಕಾರ ಯುಗ ಕಳೆದ ಮೇಲಿನ ಮೂರುನೂರು ವರ್ಷಗಳ ಐರೋಪ್ಯ ಶಿಲ್ಪ, ಕಲೆಗಳನ್ನು ರೋಮನೆಸ್ಕ್ ಶೈಲಿಯವೆನ್ನುತ್ತಾರೆ (ಪ್ರ.ಶ.1000–1300). ಒಂದು ಕಾಲದಲ್ಲಿ ರೋಮನ್ ಸಾಮ್ರಾಜ್ಯದ ಭಾಗಗಳಾಗಿದ್ದು ಅನಂತರ ಪ್ರತ್ಯೇಕಾಧಿಕಾರ ಕೊಳ್ಳಪಟ್ಟ ಇಟಲಿ, ಫ್ರಾನ್ಸ್, ಸ್ಪೇನ್ ಮೊದಲಾದ ಪ್ರಾಂತ್ಯಗಳಲ್ಲಿ ಕಂಡು ಬಂದುದರಿಂದ ಈ ಶಿಲ್ಪಕ್ಕೆ ರೋಮನೆಸ್ಕ್ ಎಂಬ ಹೆಸರು ಬಂದಿತು. ಇವುಗಳಿಗೆಲ್ಲ ಮೂಲ ರೋಮನ್ ಶಿಲ್ಪವಾದರೂ ಈ ಒಂದೊಂದೂ ಪ್ರಾಂತ್ಯ ತನ್ನದೇ ಆದ ರೀತಿಯಲ್ಲಿ ಶಿಲ್ಪ, ಕಲೆಗಳನ್ನು ಬೆಳೆಸಿಕೊಂಡಿರುವುದನ್ನು ನಾವು ನೋಡಬಹುದು. ಇಟಲಿಯ ಪಿಸ ನಗರದ ಓಲು ಗೋಪುರದ ಪಕ್ಕದಲ್ಲಿರುವ ಕಥೀಡ್ರಲ್ ರೋಮನೆಸ್ಕ್ ಮಾದರಿಗೆ ಒಳ್ಳೆಯ ನಿದರ್ಶನ. ಅದು ರೋಮನ್ ಶಿಲುಬೆಯಂತಿರದೆ ಲ್ಯಾಟಿನ್ ಶಿಲುಬೆಯ ಆಕಾರದಲ್ಲಿದೆ. ಅಂದರೆ ಅದರ ಒಂದು ದಿಂಡು ಇನ್ನೊಂದಕ್ಕಿಂತ ಉದ್ದವಾಗಿದೆ. ಅಲ್ಲದೆ ಅದರ ಮುಖ ಪೂರ್ವಕ್ಕೆ ತಿರುಗಿದಂತಿದೆ. ಕೆಥೆಡ್ರಲಿನ ಕಂಬಸಾಲುಗಳ ಮೇಲಿನ ಮತ್ತು ಕಿಟಕಿಗಳ ಮೇಲಿನ ಗುಂಡು ಕಮಾನುಗಳು ರೋಮನೆಸ್ಕ್ ಮಾದರಿಯ ಮುಖ್ಯ ಗುಣವನ್ನು ತೋರಿಸುತ್ತವೆ. ಕಂಬಸಾಲುಗಳಲ್ಲಿ ನೆಲದ ಮೇಲಿನ ಮೊದಲ ಸಾಲು ಇದ್ದಷ್ಟು ಎತ್ತರವಾಗಿ ಮಹಡಿಯ ಕಂಬ ಸಾಲುಗಳಿಲ್ಲ. ಹಾಗೆಯೇ ಅದರ ಮೇಲಿನ ಸಾಲಿನ ಎತ್ತರವೂ ಕಡಿಮೆಯಾಗಿದೆ. ಇಟಲಿಯ ಒಂದೊಂದು ಊರಿನಲ್ಲೂ ಒಂದೊಂದು ವಾಸ್ತುಶಿಲ್ಪಕೃತಿಯನ್ನು ಅದರದರ ವೈಶಿಷ್ಟ್ಯಕ್ಕಾಗಿ ನಾವು ಹೆಸರಿಸಬಹುದು. ಫ್ರಾನ್ಸಿನ ಅಂಗುಲೆಮ್ ಕಥೀಡ್ರಲ್ ಇನ್ನೊಂದು ಒಳ್ಳೆಯ ಉದಾಹರಣೆ. ಜರ್ಮನಿಯಲ್ಲೂ ಈ ಶೈಲಿಯ ಭವ್ಯ ಕಟ್ಟಡಗಳನೇಕವಿವೆ. ಇಂಗ್ಲೆಂಡಿನಲ್ಲಿ ನಾರ್ಮನರ ಕಾಲದಲ್ಲಾದ ಕಟ್ಟಡಗಳು ಗುಣರೂಪಗಳ ದೃಷ್ಟಿಯಿಂದ ರೋಮನೆಸ್ಕ್ ಶೈಲಿಯವಾದರೂ ಅವನ್ನು ನಾರ್ಮನ್ ಶೈಲಿಯವೆನ್ನುವುದು ವಾಡಿಕೆ.

**ಮಧ್ಯಯುಗದ ಕೋಟೆ ಕೊತ್ತಲಗಳು:** ಪಾಳೆಯಗಾರಿಕೆ ರೂಢಿಯಲ್ಲಿದ್ದ ಮಧ್ಯಯುಗದಲ್ಲಿ ಯುರೋಪಿನಲ್ಲೆಲ್ಲ ಕೋಟೆ ಕೊತ್ತಳಗಳು ನಿರ್ಮಾಣಗೊಂಡುವು. ಸಾಮಾನ್ಯವಾಗಿ ಇವು ಬೆಟ್ಟದ ನೆತ್ತಿಯಲ್ಲಿರುತ್ತವೆ. ಶತ್ರುಗಳ ಧಾಳಿಯಿಂದ ಹಾಳಾಗದಿರಲು ಶ್ರೀಮಂತಾಧಿಕಾರಿಗಳು ಕಟ್ಟಿಸಿಕೊಂಡ ಈ ಮನೆಗಳ ಸುತ್ತಲೂ ಬಲವಾದ ಕಲ್ಲಿನ ಕೋಟೆಯಿರುತ್ತದೆ. ಕೋಟೆಗೊಂದು ದಿಡ್ಡಿಬಾಗಿಲಿದ್ದು ಅದು ಬಹು ಭದ್ರವಾಗಿರುತ್ತದೆ. ಸುತ್ತಣ ಪ್ರಾಕಾರದ ತಳದಲ್ಲಿ ಒಂದು ಕಂದಕವಿದ್ದು ಶತ್ರು ಲಗ್ಗೆ ಹತ್ತುವಾಗ ಅದನ್ನು ನೀರಿನಿಂದ ತುಂಬಲಾಗುತ್ತಿತ್ತು. ಗೋಡೆಯ ಮೇಲಿನ ಬುರುಜಗಳಿಂದ ಸೈನಿಕರು ಶತ್ರುಗಳ ಮೇಲೆ ಅಸ್ತ್ರಪ್ರಯೋಗಮಾಡುವ ಅನುಕೂಲ ಗಳಿರುತ್ತವೆ. ಒಂದು ಕೋಟೆಮನೆ ಎಂದರೆ ಒಂದು ಚಿಕ್ಕ ಊರು ಇದ್ದಂತೆಯೆ. ಅದರಲ್ಲಿ ಅನುಕೂಲವಾದ ಅರಮನೆ, ವಿಹಾರಸ್ಥಳಗಳು, ಪೂಜಾಗೃಹಗಳು, ಬಂದಿಖಾನೆ, ದಿವಾನಖಾನೆ, ಉಗ್ರಾಣ ಇತ್ಯಾದಿ ಸಕಲವೂ ಇರುತ್ತವೆ. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಸ್ಪೇನ್ ಜರ್ಮನಿ, ಆಸ್ಟ್ರಿಯ, ರಷ್ಯ ಮೊದಲಾದ ಕಡೆ ನೀರನ್ನು, ಬೆಟ್ಟವನ್ನು ಆಶ್ರಯಿಸಿ ನಿಂತಿರುವ ಕೋಟೆ ಮನೆಗಳನ್ನು ಇಂದಿಗೂ ಕಾಣಬಹುದು.

**ಗಾಥಿಕ್ ಶೈಲಿ:** ಮಧ್ಯಯುಗದ ಕೊನೆಯ ಭಾಗದಲ್ಲಿ ಹಾಗೂ ಪುನರುಜ್ಜೀವನ ಅವಧಿಯ ಪ್ರಾರಂಭದಲ್ಲಿ ಕಂಡುಬರುವ ವಿಶಿಷ್ಟ ವಾಸ್ತುಶಿಲ್ಪಶೈಲಿಗೆ ಈ ಹೆಸರಿದೆ. ಪ್ರ.ಶ.12ನೆಯ ಶತಮಾನದಿಂದ ಪ್ರ.ಶ.15ನೆಯ ಶತಮಾನದವರೆಗೆ ಯುರೋಪಿನಲ್ಲೆಲ್ಲ ಇದು ಪ್ರಧಾನ ಶೈಲಿಯಾಗಿದ್ದುದು ಕಂಡುಬರುತ್ತದೆ. ಈ ಶೈಲಿಗೆ ಈ ಹೆಸರು ಬರಲು ಇರುವ ಕಾರಣ ಬಹು ವಿಚಿತ್ರವಾಗಿದೆ. ಜರ್ಮನಿಯ ಗಾಥ್ ಜನ ಪಶ್ಚಿಮಕ್ಕೂ ದಕ್ಷಿಣಕ್ಕೂ ನುಗ್ಗಿ ಧಾಳಿ

ಮಾಡಿ ರೋಮನ್ ಚಕ್ರಾಧಿಪತ್ಯವನ್ನು ಹಾಳು ಮಾಡಿದರಷ್ಟೆ. ಈ ಜನ ಒರಟರು, ಕ್ರೂರಿಗಳು, ವಿಧ್ವಂಸಕಾರಿ ಮನೋಧರ್ಮ ಉಳ್ಳವರು. ತಾವು ಹೋದ ಕಡೆಯೆಲ್ಲ ಕೊಲೆ ಸುಲಿಗೆಗಳನ್ನು ಮಾಡಿದರಲ್ಲದೆ ಕಣ್ಣಿಗೆ ಕಂಡ ಊರು ಕೇರಿಗಳಿಗೆ ಬೆಂಕಿಯಿಟ್ಟು ಸುಟ್ಟರು. ಗಾಥ್ ಜನರ ಆಳಿಕೆಯ ಕಾಲದಲ್ಲಿ ಬೆಳೆದು ಬಂದ ವಾಸ್ತುಶಿಲ್ಪಶೈಲಿಯನ್ನು ಆ ಜನರ ಹೆಸರಿಗೇ ಕಟ್ಟಿ ಅದನ್ನು ಗಾಥಿಕ್ ಎಂದು ಕರೆದದ್ದು ಸಹಜವೇ. ಗಾಥಿಕ್ ಶೈಲಿ ನಿಜಕ್ಕೂ ಬಹು ಸುಂದರವಾದ ಶೈಲಿಯಾದರೂ ಅದು ಪ್ರಾಚೀನ ಗ್ರೀಕ್ ಮತ್ತು ರೋಮನ್ ಶೈಲಿಯಷ್ಟು ಸುಸಂಸ್ಕೃತವೆಂದು ಅಂದಿನ ಜನ ತಿಳಿಯಲಿಲ್ಲ. ಅದರ ಬಗೆಗೆ ಅವರಿಗೆ ಬಹು ತಾತ್ಸಾರವಿತ್ತು. ಒರಟು, ಅಸಂಸ್ಕೃತ, ಅನಾಗರಿಕ ಎಂಬ ಅರ್ಥದಲ್ಲಿ ಗಾಥಿಕ್ ಎಂಬ ಪದವನ್ನಿಲ್ಲಿ ಬಳಸಲಾಗಿದೆ. ಆದರೆ ಗಾಥಿಕ್ ಶೈಲಿ ನಿಜಕ್ಕೂ ವಿಚಿತ್ರವಾಗಿದ್ದು ಬಹು ಸುಂದರವಾಗಿದೆ. ಅಲ್ಲದೆ ಅದನ್ನು ಬಳಕೆಗೆ ತಂದವರು ಗಾಥರಲ್ಲ. ಗಾಥರ ಆಳಿಕೆಯ ಕಾಲದಲ್ಲಿ ಆಯಾ ಪ್ರಾಂತ್ಯದ ಸ್ಥಳೀಯ ಶಿಲ್ಪಿಗಳು ಸ್ವಸಂತೋಷದಿಂದ, ಧಾರ್ಮಿಕ ತೃಪ್ತಿಗಾಗಿ, ರೋಮನ್ ಮತ್ತು ರೋಮನೆಸ್ಕ್ ಶೈಲಿಗಳನ್ನು ಅನುಕರಿಸಿದರೂ ಅದಕ್ಕಿಂತ ಭಿನ್ನವೆನಿಸಿದ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡು ನಿರ್ಮಿಸಿದ ವಾಸ್ತುಶಿಲ್ಪಶೈಲಿಯೇ ಗಾಥಿಕ್ ಶೈಲಿ. ಇದರ ಪ್ರಧಾನ ಲಕ್ಷಣಗಳು ಇವು: ಅದುವರೆಗೂ ಅಡ್ಡಗಲ್ಲಾಗಿ ನೆಲದಲ್ಲಿ ವಿಸ್ತಾರವಾಗಿ ಹರಡಿ ನಿಂತಿರುತ್ತಿದ್ದ ಮನೆಗಳು ನೆಟ್ಟಗೆ ಆಕಾಶದ ಕಡೆಗೆ ಎತ್ತರೆತ್ತರವಾಗಿ ಬೆಳೆಯತೊಡಗಿದುವು. ಅಂದರೆ ಹಲವು ಉಪ್ಪರಿಗೆಯ ಮನೆಗಳು ಬಳಕೆಗೆ ಬಂದುವು. ಚಾವಣಿಗಳಿಗೆ ಮರವನ್ನು ಉಪಯೋಗಿಸುವುದನ್ನು ನಿಲ್ಲಿಸಿ ಕಲ್ಲನ್ನೇ ಬಳಸಲು ಪ್ರಾರಂಭಿಸಿದರು. ಕಿಟಕಿ, ಬಾಗಿಲು ಹಾಗೂ ಕಂಬಸಾಲುಗಳ ಮೇಲಿದ್ದ ಕಮಾನುಗಳನ್ನು ಅರ್ಧವೃತ್ತಾಕಾರದಲ್ಲಿ ಮಾಡದೆ ಚೂಪಾಗಿ ನಿರ್ಮಿಸಲಾಯಿತು. ಇದು ಅಂಥ ಹೊಸ ತಂತ್ರವೇನಲ್ಲ. ಪೂರ್ವರಾಷ್ಟ್ರಗಳಲ್ಲಿ ಚೂಪು ಕಮಾನಿನ ಬಳಕೆ ಬಹಳ ಹಿಂದಿನಿಂದಲೂ ಇತ್ತು. ಧರ್ಮಯುದ್ಧಗಳಿಗಾಗಿ ವಿದೇಶಗಳಿಗೆ ಹೋದ ಯೋಧರು ಅದನ್ನು ಯುರೋಪಿಗೆ ತಂದರು. ಶಿಲ್ಪತಂತ್ರದ ದೃಷ್ಟಿಯಿಂದಲೂ ಗುಂಡು ಕಮಾನಿಗಿಂತ ಚೂಪು ಕಮಾನುಗಳ ನಿರ್ವಹಣೆ ಸುಲಭವೆನ್ನಲಾಗಿದೆ.

ಚೂಪು ಕಮಾನುಗಳು, ಎತ್ತರೆತ್ತರದ ಮಹಡಿಗಳು, ತುದಿಯ ಗೋಪುರಗಳು, ಹೆಚ್ಚಿನ ಚಿತ್ರಕೆಲಸಗಳು, ಬಣ್ಣದ ಗಾಜು–ಇವು ಗಾಥಿಕ್ ಶೈಲಿಯ ಮುಖ್ಯಾಂಶಗಳು. ಫ್ರಾನ್ಸಿನಲ್ಲಿ ಈ ಶೈಲಿಯ ಅನೇಕ ಚರ್ಚುಗಳಿವೆ. ಅವುಗಳಲ್ಲೆಲ್ಲ ಬಹು ಪ್ರಸಿದ್ಧವಾದುದು ಆಮಿಯೆನ್ಸ್ ಕಥೀಡ್ರಲ್. ಜೊತೆಗೆ ನೋಟರ್‌ಡೇಮ್, ಸೇಂಟ್ ಚಾಪೆಲ್, ರ್ಹೀಮ್ಸ್‌ಗಳನ್ನು ಹೆಸರಿಸಬಹುದು. ಇಂಗ್ಲೆಂಡಿನಲ್ಲಿ ಗಾಥಿಕ್ ಶೈಲಿಗೆ ಒಳ್ಳೆಯ ಉದಾಹರಣೆಗಳೆಂದರೆ ಸ್ಯಾಲಿಸ್‌ಬರಿ, ಲಿಂಕನ್ ಮತ್ತು ಕ್ಯಾಂಟರ್‌ಬರಿಗಳಲ್ಲಿರುವ ಕಥೆಡ್ರಿಲ್‌ಗಳು. ಸ್ಪೇನಿನ ವಾಸ್ತುಶಿಲ್ಪದಲ್ಲಿ ಅಲಂಕರಣ ಹೆಚ್ಚು ಮತ್ತು ಕಿಟಕಿಗಳು ಬಲು ಚಿಕ್ಕವು. ಜರ್ಮನಿಯ ಕೊಲೋನ್ ಕಥೀಡ್ರಲ್, ಬೆಲ್ಜಿಯಂಮಿನ ಆಂಟ್‌ವರ್ಪ್‌ನಲ್ಲಿರುವ ನಗರ ಸಭಾಭವನ, ಸ್ಪೇನಿನ ಬರ್ಗೋಸ್ ಕೆಥೆಡ್ರಲ್–ಈ ಕೆಲವು ಗಾಥಿಕ್ ಶೈಲಿಯ ಇತರ ಪ್ರಸಿದ್ಧ ನಿದರ್ಶನಗಳು.

**ಮಹಮ್ಮದೀಯ ಶೈಲಿ:** ಇಸ್ಲಾಂ ಧರ್ಮ ಅರೇಬಿಯದಿಂದ ಬಹು ವೇಗವಾಗಿ ಪ್ರಪಂಚದ ಎಲ್ಲೆಡೆಗೂ ಹರಡಿತಷ್ಟೆ. ಅದರೊಂದಿಗೆ ಮುಸ್ಲಿಂ ರಾಷ್ಟ್ರವೂ ವ್ಯಾಪಕವಾಗಿ ಬೆಳೆಯುತ್ತ ಹೋಯಿತು. ಮುಸ್ಲಿಮರು ಮೆಡಿಟರೇನಿಯನ್ ಸಮುದ್ರದ ದಕ್ಷಿಣದಲ್ಲಿ ಈಜಿಪ್ಟ್, ಆಫ್ರಿಕದ ಉತ್ತರ ತೀರಗಳನ್ನು ಆಕ್ರಮಿಸಿ ಕ್ರಮೇಣ ಜಿಬ್ರಾಲ್ಟರ್ ಮುಖಾಂತರ ಸ್ಪೇನನ್ನು ತಲಪಿದರು. ಕಾಲ ಸಂದಂತೆ ಸ್ಪೇನನ್ನೆಲ್ಲ ಆಕ್ರಮಿಸಿ ಫ್ರಾನ್ಸಿನತ್ತ ನಡೆದರು. ಆದರೆ ಫ್ರೆಂಚರು ಟೂರ್ಸ್ ಯುದ್ಧದಲ್ಲಿ ಸೆಣಸಿ ಶತ್ರುಗಳನ್ನು ಹಿಮ್ಮೆಟ್ಟಿಸಿದರು. ಮಹಮ್ಮದೀಯರ ಆಡಳಿತಕ್ಕೆ ಕೆಲಕಾಲ ಒಳಪಟ್ಟಿದ್ದ ಸ್ಪೇನಿನಲ್ಲಿ ಆ ಶೈಲಿಯ ಅನೇಕ ಕಟ್ಟಡಗಳು ನಿರ್ಮಾಣವಾದುವು. ಸ್ಪೇನಿನಲ್ಲಿ ನೆಲೆಸಿದ್ದ ಅರಬ್ಬೀಯರನ್ನು ಮೂರರೆನ್ನುತ್ತಾರೆ. ಇವರ ರಾಜಧಾನಿ ಕಾರ್ಡೋವ. ಮೂರರು ಸ್ಪೇನಿನಲ್ಲಿ ಸು.700 ವರ್ಷ ಆಡಳಿತ ನಡೆಸಿ ಕ್ರಿಸ್ಟೊಫರ್ ಕೊಲಂಬಸನ ಕಾಲಕ್ಕೆ ಅಲ್ಲಿಂದ ಕಾಲು ತೆಗೆದರು. ಸ್ಪೇನಿನ ಗ್ರನಾಡದಲ್ಲಿದ್ದ ಅರಸುಮನೆತನದವರು ನಿರ್ಮಿಸಿದ ಆಲ್ಹಂಬ್ರ ಕೋಟೆ, ಅರಮನೆ ಮಹಮ್ಮದೀಯ ಶೈಲಿಗೊಂದು ಒಳ್ಳೆಯ ಉದಾಹರಣೆ. ಕಾರ್ಡೋವದಲ್ಲಿನ ಮಸೀದಿ, ಸೆವಿಲ್‌ನಲ್ಲಿರುವ ಗಿರಾಲ್ಡ್ ಗೋಪುರಗಳು ಪ್ರಸಿದ್ಧವಿವೆ.

**ಪುನರುಜ್ಜೀವನ (ರೆನೆಸಾನ್ಸ್) ಕಾಲದ ಶಿಲ್ಪ:** ಮಧ್ಯಯುಗದಿಂದ ಆಧುನಿಕ ಯುಗದ ನಡುವಣ ಅವಧಿಯನ್ನು ಪುನರುಜ್ಜೀವನ ಕಾಲವೆನ್ನುತ್ತೇವೆ. ಅದು ಪ್ರ.ಶ.ಸು.14 ರಿಂದ 16 ನೆಯ ಶತಮಾನದವರೆಗಿನ ಕಾಲವನ್ನು ಸೂಚಿಸುತ್ತದೆ. ಇಟಲಿಯಲ್ಲಿ ಪ್ರಾರಂಭವಾದ ಈ ಹೊಸ ಧೋರಣೆ 15 ಮತ್ತು 16 ನೆಯ ಶತಮಾನಗಳಲ್ಲಿ ಪೂರ್ಣವಿಕಾಸಗೊಂಡು ಫ್ರಾನ್ಸ್, ಸ್ಪೇನ್, ಜರ್ಮನಿ, ಇಂಗ್ಲೆಂಡ್ ಮತ್ತು ಇತರ ಐರೋಪ್ಯ ದೇಶಗಳಿಗೆ ಹರಡಿತು. ಇದರಿಂದಾಗಿ ಗಾಥಿಕ್ ಶೈಲಿ ಹಿಂದೆ ಸರಿಯಿತು. ಕಟ್ಟಡದ ಒಟ್ಟು ರಚನೆಗಿಂತ ಅದರ ಮುಖಭಾಗ ಮತ್ತು ಒಳಭಾಗಗಳ ಕುಸುರಿಚಿತ್ರಕ್ಕೆ ಪ್ರಾಶಸ್ತ್ಯಬಂತು. ಈ ಶೈಲಿಯ ಪ್ರಾರಂಭಿಕ ಕಾಲದ (1420–1500) ಮುಖ್ಯಶಿಲ್ಪಿಗಳೆಂದರೆ ಬ್ರೂನೆಲೆಶ್ಚಿ, ಆಲ್ಬರ್ಟಿ, ಬ್ರಮಾಂಟೆ, ಫ್ಲಾರೆನ್ಸ್ ಮಿಲಾನ್, ವೆನಿಸ್‌ಗಳಲ್ಲಿ ಇವರ ಕೃತಿಗಳನ್ನು ಕಾಣಬಹುದು. ಮಧ್ಯಕಾಲದಲ್ಲಿ (1500–1780) ರೋಮ್ ನಗರದಲ್ಲಿ ಮತ್ತು ಅದರ ಸುತ್ತಮುತ್ತ ಬ್ರಮಾಂಟೆ ಮತ್ತು ಇತರರು ಕೆಲಸ ಮಾಡಿದರು. ಅವರ ಶಿಷ್ಟ ಶೈಲಿಗೆ ಸೇಂಟ್ ಪೀಟರನ ಚರ್ಚು ಉತ್ತಮ ನಿದರ್ಶನವಾಗಿದೆ. ಪುನರುಜ್ಜೀವನಕಾಲದ ಕೊನೆಯ ಭಾಗದಲ್ಲಿ (1500–1780) ಬರೋಕ್ ಮತ್ತು ರೊಕೊಕೊ ಶೈಲಿ ಪ್ರಧಾನವಾಯಿತು.

ಈ ಕಾಲದ ಚಿತ್ರ ಕಲಾಪ್ರೌಢಿಮೆಗೆ ಇಟಲಿಯ ಫ್ಲಾರೆನ್ಸ್ ಕೇಂದ್ರವೆನಿಸಿತು. ಅಲ್ಲಿನ ಪ್ರಸಿದ್ಧ ಚಿತ್ರಕಾರರಲ್ಲಿ ಜ಼ಾಟ್ಟೊ, ಫ್ರಾ ಅಂಜೆಲಿಕೊ, ಲಿಯೊನಾರ್ಡೊ ಡ ವಿಂಚಿ, ಬಾಟಿಸಿಲಿ, ಮೈಕೆಲೇಂಜಲೊ ಇವರನ್ನು ಹೆಸರಿಸಬಹುದು. ಸಿಯೆನ್ನಾ, ವೆನಿಸ್, ರೋಮ್ ಮತ್ತು ಇತರ ಇಟಲಿಯ ಪ್ರಮುಖ ಪಟ್ಟಣಗಳಲ್ಲಿ ಕಲಾವಿದರು ತಮ್ಮವೇ ಆದ ಪ್ರಸ್ಥಾನಗಳನ್ನು ಬೆಳಕಿಗೆ ತಂದರು. ಇದೇ ಕಾಲದಲ್ಲಿ ಪ್ರಸಿದ್ಧ ಕಲಾವಿದ ರ್‍ಯಾಫೆಲ್ ರೋಮಿನಲ್ಲಿ ತನ್ನ ಕೃತಿ ರಚನೆ ಮಾಡಿದ. ಎಂಟನೆಯ ಚಾರಲ್ಸ್ ನೇಪಲ್ಸಿನ ಮೇಲೆ ಮಾಡಿದ ದಾಳಿಯಿಂದಾಗಿ ಪುನರುಜ್ಜೀವನಕಾಲದ ಧೋರಣೆಗಳು ಫ್ರಾನ್ಸಿಸ್ ಪ್ರವೇಶಿಸಿದುವು. ಇಟಲಿಯ ಕಲಾವಿದರನ್ನು ಒಂದನೆಯ ಫ್ರಾನ್ಸಿಸ್ ಆಹ್ವಾನಿಸಿದ. ಎರಡನೆಯ ಹೆನ್ರಿ ಇಟಲಿಯ ಕ್ಯಾಥರೀನ್ ಡಿ ಮೆಡಿಚಿಯನ್ನು ಮದುವೆಯಾದ ಮೇಲಂತೂ ಇಟಲಿಗೆ ಕೋಡು ಕೊನರಿತು. ಸು.15ನೆಯ ಶತಮಾನದಲ್ಲಿ ಇದರ ಪ್ರಭಾವ ಸ್ಪೇನಿನ ಮೇಲೂ ಆದಂತೆ ಧೋರಣೆಗಳು ಇಂಗ್ಲೆಂಡ್ ಮತ್ತು ಜರ್ಮನಿಗಳ ಮೇಲೆ ಅಷ್ಟು ಪ್ರಭಾವ ಬೀರದಿರುವ ವಿಷಯ ಗಮನಾರ್ಹವಾದುದು.

**ಬರೋಕ್ ಶೈಲಿ:** ಇಟಲಿಯಲ್ಲಿ 16ನೆಯ ಶತಮಾನದಿಂದಾಚೆ ಬಳಕೆಗೆ ಬಂದ ಶಿಲ್ಪಶೈಲಿ. ಅಭಿಜಾತಶೈಲಿಗೆ ಪ್ರತಿಯಾಗಿ ಹುಟ್ಟಿದುದು. ಅತ್ಯಾಲಂಕಾರವೇ ಇದರ ದಾರಿ. ಅನಂತರ ಸು. ಒಂದೂವರೆ ಶತಮಾನ ಇದು ಇಡೀ ಯುರೋಪಿನಲ್ಲೆಲ್ಲ ಖ್ಯಾತ ಪದ್ಧತಿಯಾಗಿತ್ತು. ಅನಂತರ ಮತ್ತೆ 18ನೆಯ ಶತಮಾನದಲ್ಲಿ ಅಭಿರುಚಿ ಅಭಿಜಾತಪದ್ಧತಿಯ ಕಡೆಗೇ ಹೊರಳಿತು. ರೋಮಿನ ಸೇಂಟ್ ಪೀಟರ್ ಚರ್ಚಿನ ಚೌಕದಲ್ಲಿ ಬರ್ನಿನಿ ಈ ಶೈಲಿಯಲ್ಲಿ ಕೆಲಸ ಮಾಡಿದ್ದಾನೆ. ಈ ಪದ್ಧತಿಯಲ್ಲಿ ಉಳಿದ ಪ್ರಸಿದ್ಧರೆಂದರೆ ಬಾರೊಮಿನಿ, ವಿಗ್ನೋಲ. ಫ್ರಾನ್ಸಿನಲ್ಲಿ ಹದಿನಾಲ್ಕನೆಯ ಲೂಯಿಯ ಆಡಳಿತದಲ್ಲಿ ಈ ಶೈಲಿ ಉಚ್ಛ್ರಾಯ ಸ್ಥಿತಿಗೇರಿತು. ಜರ್ಮನಿ, ಆಸ್ಟ್ರಿಯ, ಸ್ಪೇನುಗಳಲ್ಲಿ ಈ ಶೈಲಿಯ ಅತಿರೇಕಗಳನ್ನು ಕಾಣಬಹುದು.

**ರೊಕೊಕೊ ಶೈಲಿ:** ಬರೋಕ್ ಶೈಲಿಯಿಂದ ಹೊಮ್ಮಿಬಂದ ಒಂದು ನವುರಾದ ಹೊಸ ಶೈಲಿ. ಫ್ರಾನ್ಸಿನಲ್ಲಿ 15ನೆಯ ಲೂಯಿಯ ಕಾಲದಲ್ಲಿ (18ನೆಯ ಶತಮಾನ) ಬಳಕೆಗೆ ಬಂತು. ಒಳಾಂಗಣಗಳ ಕುಸುರಿ ಚಿತ್ರಣವೇ ಈ ಶೈಲಿಯ ವಿಶಿಷ್ಟ ಗುಣವೆನ್ನಬಹುದು. ಅಲಂಕರಣಕ್ಕಾಗಿ ಕಪ್ಪೆಚಿಪ್ಪು, ಶಂಖ, ಹೂ ಮೊದಲಾದವನ್ನು ಬಳಸಲಾಗಿದೆ. ಈ ಶೈಲಿಯಲ್ಲಿ ಸ್ವಲ್ಪಮಟ್ಟಿಗೆ ಚೀನಿಮಾದರಿಗಳ ಅನುಕರಣೆ ಇದೆ. ರೊಕೊಕೊ ಶೈಲಿಯ ಪ್ರಭಾವ ಜರ್ಮನಿ, ಆಸ್ಟ್ರಿಯ ಮತ್ತು ಇಂಗ್ಲೆಂಡಿನ ಮೇಲೆ ಸಾಕಷ್ಟು ಆಯಿತೆನ್ನಲು ದಾಖಲೆಗಳಿವೆ.

**ಜಾರ್ಜಿಯನ್ ಮತ್ತು ರೀಜೆನ್ಸಿ ಶೈಲಿಗಳು:** ಯುರೋಪಿನ ಪುನರುಜ್ಜೀವನ ಕಾಲದ ಶಿಲ್ಪಶೈಲಿಯನ್ನು ಇಂಗ್ಲೆಂಡಿನಲ್ಲಿ ಈ ಹೆಸರಿನಿಂದ ಕರೆಯಲಾಯಿತು. ರಾಣಿ ಆನಳ ರಾಜ್ಯಭಾರ ಮುಗಿದು ಒಂದನೆಯ ಜಾರ್ಜ್ ಪಟ್ಟಕ್ಕೆ ಬಂದ ಸುಮಾರಿನಲ್ಲಿ (ಪ್ರಶ.1720) ಪ್ರಾರಂಭವಾದ ಈ ಶೈಲಿ ಹತ್ತೊಂಬತ್ತನೆಯ ಶತಮಾನದ ಮೊದಲ ದಶಕ ಮುಗಿಯುವವರೆಗೂ ಉಳಿದು ಬಂದಿತೆನ್ನಬಹುದು. ಅನಂತರ ಎಂದರೆ ನಾಲ್ಕನೆಯ ಜಾರ್ಜ್ ಪ್ರಿನ್ಸ್ ರೀಜೆಂಟ್ ಆದ ಸುಮಾರಿನಲ್ಲಿ (1811) ಇದು ರೀಜೆನ್ಸಿ ಶೈಲಿಯಲ್ಲಿ ಲೀನವಾಯಿತೆನ್ನಬಹುದು.

ಅದು ಎಲ್ಲ ಕಡೆಯೂ ಕೈಗಾರಿಕೆಗಳು ಬೆಳೆಯುತ್ತಿದ್ದ ಕಾಲ. ಜನರೆಲ್ಲ ಬಹು ಸಂಖ್ಯೆಯಲ್ಲಿ ನಗರಗಳಲ್ಲಿ ಬಂದು ನೆಲೆಸಲು ಪ್ರಾರಂಭಿಸಿದ್ದರು. ರೋಮನರ ಕಾಲಕ್ಕೆ ನಿಂತುಹೋಗಿದ್ದ ನಗರನಿರ್ಮಾಣಕಲೆಗೆ ಈಗ ಮತ್ತೆ ಅವಕಾಶ ದೊರಕಿದಂತಾಯಿತು. ಬಾತ್ ಮತ್ತು ಎಡಿನ್‌ಬರೊ ನಗರಗಳಲ್ಲಿ ಜಾರ್ಜಿಯನ್ ಶೈಲಿಗೆ ಉತ್ತಮ ನಿದರ್ಶನಗಳು ದೊರೆಯುತ್ತವೆ. ಅವೆರಡೂ ಕಡೆ ನಗರರಚನೆಯ ಕೆಲಸ ಮಾಡಿದವ ರಾಬರ್ಟ್ ಆಡಮ್ ಇಲ್ಲಿ ಮನೆಗಳು ಅಂದವಾಗಿ ಅನುಕೂಲವಾಗಿ ಕಟ್ಟಲ್ಪಟ್ಟಿವೆ. ರಸ್ತೆಗಳ ಯೋಜನೆಯೂ ಸಮರ್ಪಕವಾಗಿದೆ. ಮನೆಗಳ ಬಾಹ್ಯಾಲಂಕರಣ ಅಭಿಜಾತಮಾದರಿಯಾಗಿದ್ದು ಬಾಗಿಲು ಕಿಟಕಿಗಳು ಗ್ರೀಕ್ ಮತ್ತು ರೋಮನ್ ಶೈಲಿಗಳಲ್ಲಿವೆ. ಈಗಲೇ ಬಹುಮಾಳಿಗೆಯ ವಾಸಗೃಹಗಳ ಬಳಕೆ ಹೆಚ್ಚಿದ್ದು. ಜಾಗ ಉಳಿಸುವುದು ಒಂದು ಉದ್ದೇಶವಾದರೆ ಅನುಕೂಲ ಎರಡನೆಯದು. ಅಕ್ಕಪಕ್ಕಗಳಲ್ಲಿ ಜಾಗ ಬಿಡದೆ ಸಾಲಾಗಿ ಮನೆಗಳನ್ನು ಕಟ್ಟಿ ಸಾರ್ವಜನಿಕರ ಅನುಕೂಲಕ್ಕಾಗಿ ಅಲ್ಲಲ್ಲಿ ಸಾರ್ವಜನಿಕ ಉದ್ಯಾನಗಳನ್ನು ನಿರ್ಮಿಸಲಾಯಿತು. ದಾರಿ ಪಕ್ಕದ ಸಾಲು ಮರಗಳೂ ಹಸಿರು ಮೈದಾನಗಳೂ ಊರಿನ ಸೌಂದರ್ಯವನ್ನು ಹೆಚ್ಚಿಸಿದುವು. ಆಡಮ್ ಸಹೋದರರು ಮಧ್ಯ ಲಂಡನ್ನಿನ ಬಹುಭಾಗದ ವಾಸ್ತುಶಿಲ್ಪಕ್ಕೆ ದಾರಿತೋರಿದರು.

ರೀಜೆನ್ಸಿ ಕಾಲದಲ್ಲಿ ಅಂದರೆ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಅದುವರೆಗೂ ಶ್ರೀಮಂತರ ಮನೆಗಳಿಗೆ ದೊರೆಯಲಾಗಿದ್ದ ಪ್ರಾಶಸ್ತ್ಯ ಸಾಮಾನ್ಯರ ಮನೆಗಳಿಗೂ ಬಂತು. ಇದರಿಂದಾಗಿ ಬಾತ್, ಬ್ರೈಟನ್ ಮೊದಲಾದ ಅನೇಕ ಸುಂದರ ನಗರಗಳು ನಿರ್ಮಾಣವಾದುವು. ಲಂಡನ್ನಿನಲ್ಲಿ ಶಿಲ್ಪಿ ಜಾನ್ ನ್ಯಾಷ್ ಎಂಬಾತ ರೀಜೆಂಟ್ ರಸ್ತೆಗಳಲ್ಲಿ ಅದ್ಭುತವಾದ ಗೃಹಗಳನ್ನು ನಿರ್ಮಿಸಿದ. ಜನ ಈತನ ಕೃತಿಗಳನ್ನು ಅಭಿಜಾತ ಗ್ರೀಕ್ ಕಟ್ಟಡಗಳಂತಿವೆಯೆಂದು ಹೊಗಳಿದರು.

ಅಷ್ಟರಲ್ಲಿ ಕೈಗಾರಿಕಾ ಕ್ರಾಂತಿ ತನ್ನ ಕೈವಾಡವನ್ನು ಪ್ರದರ್ಶಿಸಲಾರಂಭಿಸಿತು. ಕಾರ್ಖಾನೆಗಳ ಸುತ್ತಮುತ್ತ ಕಾರ್ಮಿಕರ ವಸತಿಗಳ ನಿರ್ಮಾಣ ಪ್ರಾರಂಭವಾಯಿತು. ಹಳೆಯ ನಗರ ನಿರ್ಮಾಣಕಾರ್ಯ ಸ್ಥಗಿತಗೊಂಡಿತು. ಇರುವಷ್ಟು ಜಾಗದಲ್ಲೇ ಹೆಚ್ಚು ಹೆಚ್ಚು ಜನರಿಗೆ ವಸತಿಯನ್ನೊದಗಿಸುವುದರ ಕಡೆ ಗಮನಹರಿಯಿತು. ಊರುಗಳಲ್ಲಿನ ಜನಸಂಖ್ಯೆ ಇದ್ದಕ್ಕಿದ್ದಂತೆ ಅಪಾರವಾಗಿ ಬೆಳೆಯತೊಡಗಿತು.

**ಹತ್ತೊಂಬತ್ತನೆಯ ಶತಮಾನ:** ಯುರೋಪಿನ ಅದರಲ್ಲೂ ಇಂಗ್ಲೆಂಡಿನ ವಾಸ್ತುಶಿಲ್ಪ ಈ ಶತಮಾನದಲ್ಲಿ ಬಹು ಸಂಕೀರ್ಣವಾಯಿತೆನ್ನಬಹುದು. ಒಂದು ಕಡೆ ಅಭಿಜಾತ ಶೈಲಿಗೂ ಮತ್ತೊಂದು ಕಡೆ ಗಾಥಿಕ್ ಶೈಲಿಗೂ ಪೈಪೋಟಿ ನಡೆದುದನ್ನು ಶತಮಾನದ ಉದ್ದಕ್ಕೂ ನಾವು ನೋಡಬಹುದು. ಪಲ್ಲಾಡಿಯನಿಸಂ ಶೈಲಿಯ ಚೇಂಬರ್ಸ್ ಮತ್ತು ಪಾಂಪೇಯ ಶೈಲಿಯ ಆಡಮ್–ಈ ಇಬ್ಬರು ಶಿಲ್ಪಿಗಳೂ ಇಟಲಿಯಿಂದ ತಮ್ಮ ಸ್ಫೂರ್ತಿಯನ್ನು ಪಡೆದರು. ರೀಜೆಂಟ್ ಪಾರ್ಕಿನ ಬೃಹದ್‌ಗೃಹಗಳು, ಹೋವ್, ಬ್ರೈಟನ್, ವೇಮೌತ್, ಚೆಲ್ಟ್ನ್‌ಹ್ಯಾಂ, ಕ್ಲಿಫ್ಟನ್, ಟರ್ನ್‌ಬ್ರಿಡ್ಜ್ ವೆಲ್ಸ್ ಮೊದಲಾದ ಕಡೆಗಳಲ್ಲಿನ ವಿವಿಧ ಕಟ್ಟಡಗಳ ಮೂಲಕ ಖ್ಯಾತಿಪಡೆದ ಜಾನ್ ನ್ಯಾಷನಿಗೆ ಮೇಲ್ಪಂಕ್ತಿಯಾದವರು ಚೇಂಬರ್ಸ್ ಮತ್ತು ಆಡಮ್. ನ್ಯಾಷನ ಶೈಲಿಯಲ್ಲಿ ರೋಮನ್ ಮತ್ತು ಗ್ರೀಕ್ ಶೈಲಿಗಳ ಅನುಕರಣೆಯಿದೆ. ಅಷ್ಟು ಹೊತ್ತಿಗಾಗಲೇ ಗ್ರೀಸ್ ಮತ್ತು ರೋಮಿಗೆ ಭೇಟಿಕೊಟ್ಟು ಬಂದಿದ್ದ ಸ್ಟೂವರ್ಟ್ ಮತ್ತು ರೆವೆಟ್ಟರ ಆಂಟಿಕ್ವಿಟೀಸ್ ಆಫ್ ಅಥೆನ್ಸ್ ಎಂಬ ಗ್ರಂಥ ಅಚ್ಚಾಗಿತ್ತು (1762). ಅಲ್ಲದೆ ಅಥೆನ್ಸಿನ ಅಪೂರ್ವಕೃತಿಗಳಾದ ಎಲ್ಜಿನ್ ಅಮೃತಶಿಲಾಶಿಲ್ಪಗಳು ಲಂಡನ್ನಿಗೆ ಬಂದಿದ್ದುವು (1801). ಹೀಗಾಗಿ ಗ್ರೀಕ್ ಶೈಲಿಯ ಪುನರುದ್ಧರಣ ಕಾರ್ಯ ಅನೇಕ ವರ್ಷ ಯಶಸ್ವಿಯಾಗಿ ನಡೆಯಿತು. ಡಿ. ಬರ್ಟನ್ನನ ಅಥೀನಿಯಂ ಕ್ಲಬ್ ಕಟ್ಟಡವೂ ಎಚ್.ಡಬ್ಲ್ಯೂ. ಇನ್‌ವುಡ್ಡನ ಸೇಂಟ್ ಪಾಂಕ್ರಾಸ್ ಚರ್ಚು ಇದಕ್ಕೆ ಉತ್ತಮ ಉದಾಹರಣೆಗಳು. ಇದೇ ಮಾದರಿಯ ಗ್ರೀಕ್ ಶೈಲಿಯ ಪುನರುಜ್ಜೀವನವನ್ನು ಜರ್ಮನಿಯಲ್ಲೂ ಕಾಣಬಹುದು. ಪರ್ಸಿಯರ್ ಮತ್ತು ಫಾಂಟೇನರ ಪ್ರಾಚೀನ ಶಿಲ್ಪ ಗ್ರಂಥಗಳಿಂದ ಪ್ರಭಾವಿತರಾದ ಫ್ರಾನ್ಸಿನ ಶಿಲ್ಪಿಗಳು ಹೊಸತಾಗಿ ರೂಢಿಸಿದ ಎಂಪೈರ್ ಶೈಲಿ ಈ ಶತಮಾನದ ಮೊದಲ ಮೂವತ್ತು ವರ್ಷಗಳು ಫ್ರಾನ್ಸಿನಲ್ಲಿ ಪ್ರಸಿದ್ಧವಾಗಿತ್ತು. ಕ್ರಮೇಣ ಈ ಪ್ರಭಾವ ಅಂದಿನ ಅಮೆರಿಕಕ್ಕೂ ಹರಡಿದುದು ಗಮನಾರ್ಹವಾದ ವಿಷಯ.

ಅದುವರೆಗೂ ಬಹು ಜನರ ತಾತ್ಸಾರಕ್ಕೆ ಒಳಗಾಗಿದ್ದ ಗಾಥಿಕ್ ಶೈಲಿಗೆ ಇದ್ದಕ್ಕಿದ್ದಂತೆ ಇಂಗ್ಲೆಂಡಿನಲ್ಲಿ ಪ್ರಾಮುಖ್ಯ ಬಂತು. 1818ರಲ್ಲಿ ಇಂಗ್ಲೆಂಡಿನ ಸಂಸತ್ ಸಭೆ ಹೊಸ ಆಂಗ್ಲಿಕನ್ ಚರ್ಚುಗಳ ನಿರ್ಮಾಣಕ್ಕೆಂದು ಒಂದು ದಶಲಕ್ಷ ಪೌಂಡುಗಳನ್ನು ಕೊಟ್ಟಾಗ ಗಾಥಿಕ್ ಶೈಲಿಗೆ ರೆಕ್ಕೆ ಮೂಡಿದಂತಾಯಿತು. ಆಗ ನಿರ್ಮಾಣವಾದ 214 ಚರ್ಚುಗಳಲ್ಲಿ 174 ಈ ಶೈಲಿಯಲ್ಲಿವೆ. ಅವುಗಳಲ್ಲಿ ಬಹು ಪ್ರಸಿದ್ಧವಾದುದೆಂದರೆ ಲಂಡನ್ನಿನಲ್ಲಿರುವ ಸೇಂಟ್ ಲೂಕನ ಚರ್ಚು. ಇಂಥ ಪುನರುಜ್ಜೀವನಕ್ಕೆ ಅಂದಿನ ಇಂಗ್ಲೆಂಡಿನ ಅದ್ಭುತರಮ್ಯ ಸಾಹಿತ್ಯದ ಧೋರಣೆಯೂ ಕಾರಣವಾಯಿತೆನ್ನಬಹುದು. ಗಾಥಿಕ್ ಶೈಲಿಯ ಪ್ರಭಾವ ಇಂಗ್ಲೆಂಡಿನಲ್ಲಿ ಇಡೀ ನೂರು ವರ್ಷ ಇದ್ದಿತೆನ್ನಬಹುದು.

ಇದೇ ಶತಮಾನದ ಸಾರ್ವಜನಿಕ ಭವನಗಳಲ್ಲಿ ಗ್ರೀಕ್, ರೋಮನ್, ಗಾಥಿಕ್ ಮತ್ತು ಎಲಿಜಬೆತನ್ ಶೈಲಿಗಳ ಮಿಶ್ರಣವಿದೆ.

**ಇಪ್ಪತ್ತನೆಯ ಶತಮಾನದ ವಾಸ್ತುಶಿಲ್ಪ:** ಒಂದನೆಯ ಮಹಾಯುದ್ಧಕ್ಕೆ ಮೊದಲು ಬಳಕೆಗೆ ಬಂದ ವಾಸ್ತುಶಿಲ್ಪಶೈಲಿಯನ್ನು ಆಧುನಿಕ ಶೈಲಿ ಎನ್ನಲಾಗಿದೆ. ಆಧುನಿಕ ಎಂಬ ಮಾತು ಪ್ರಾಚೀನ, ಮಧ್ಯಕಾಲೀನ ಎಂಬವುಗಳಂತೆ ಸಾಪೇಕ್ಷವಾದದ್ದು. ಅದು ಶಬ್ದಾರ್ಥವನ್ನು ವಿಶದೀಕರಿಸುವುದಿಲ್ಲ. ಉಪಯುಕ್ತತಾಶೀಲ (ಫಂಕ್ಷನಲ್) ಎಂಬ ಮಾತು ಆಧುನಿಕ ಕಲೆಯನ್ನು ಸರಿಯಾಗಿ ವಿವರಿಸಿತು. ಜನನಿಬಿಡವಾದ ಪಟ್ಟಣಗಳು, ಹೆಚ್ಚಿನ ವಾಹನ ಸಂಚಾರ, ದೊಡ್ಡ ದೊಡ್ಡ ಕಾರ್ಖಾನೆಗಳು, ಕಾರ್ಮಿಕರ ಮತ್ತು ಇತರ ನೌಕರರ ಸಣ್ಣಪುಟ್ಟ ವಸತಿಗೃಹಗಳು, ದೊಡ್ಡ ದೊಡ್ಡ ಕಚೇರಿಗಳು–ಇವೆಲ್ಲವನ್ನೂ ಕೇವಲ ಉಪಯೋಗದ ದೃಷ್ಟಿಯಿಂದ ಹಿಂದಿನ ಅಲಂಕರಣಶೈಲಿ ನಿರರ್ಥಕವಾಗಿ ತೋರಿತು. ಈ ಶತಮಾನದ ಪ್ರಾರಂಭದಲ್ಲಿ ಪ್ರಖ್ಯಾತ ಕಲಾವಿಮರ್ಶಕನೆನಿಸಿದ ಜಾನ್ ರಸ್ಕಿನ್ನನ ಭಾಷಣಗಳು ಮತ್ತು ಗ್ರಂಥಗಳು ಜನರ ಮನೋಧರ್ಮವನ್ನಾಗಲೆ ಬದಲಿಸಿದ್ದುವು. ಅನಂತರ ಅವನ ಶಿಷ್ಯರಲ್ಲಿ ಒಬ್ಬನಾದ ಎಲಿಯಂ ಮಾರಿಸ್ ಅಲಂಕರಣಕ್ಕಿಂತ ಮುಖ್ಯವಾದುದು ಉಪಯುಕ್ತತೆ ಎಂಬ ವಾದವನ್ನು ಮುಂದುವರಿಸಿ ಕೆಂಟ್‌ನಲ್ಲಿ ನವೀನ ಕಟ್ಟಡಗಳನ್ನು ರೂಪಿಸಿದ. 1851ರಲ್ಲಿ ಜೋಸೆಫ್ ಪ್ಯಾಕ್ಸ್ಟನ್ ಎಂಬ ಶಿಲ್ಪಿ ಅಂದಿನ ಮಹಾ ವಸ್ತುಪ್ರದರ್ಶನಕ್ಕಾಗಿ ಹೈಡ್ ಪಾರ್ಕಿನಲ್ಲಿ ನಿರ್ಮಿಸಿದ ಸ್ಫಟಿಕದ ಅರಮನೆಯನ್ನು (ಕ್ರಿಸ್ಟಲ್ ಪ್ಯಾಲೆಸ್) ಕಟ್ಟಲು ಕೇವಲ ಕಬ್ಬಿಣ ಮತ್ತು ಉಕ್ಕಿನ ಕಂಬ ಸಲಾಕೆಗಳನ್ನು ಬಳಸಿದನಷ್ಟೆ; ಅಲ್ಲಿಂದ ಮುಂದೆ ವಾಸ್ತುಶಿಲ್ಪದ ರೀತಿಯೇ ಬೇರೆ ದಾರಿ ಹಿಡಿಯಿತು. ಫ್ರಾನ್ಸಿನಲ್ಲಿ ಪ್ರಾರಂಭವಾದ ಇದರ ಬಳಕೆ ಕ್ರಮೇಣ ಇಡೀ ಯುರೋಪನ್ನೇ ಆಕ್ರಮಿಸಿತು.

ಫ್ರಾನ್ಸಿನ ಲೆ ಕಾರ್ಬೂಸರ್, ಪೆರ್ರೆ, ಫಿನ್ಲೆಂಡಿನ ಆಲ್ಟೊ, ಸಾರಿನೆನ್, ಜರ್ಮನಿಯ ಗ್ರೋಪಿಯಸ್, ಮೆಂಡೆಲ್ಸಾನ್, ಹಾಲೆಂಡಿನ ಡುಡಾಕ್, ಬ್ರಿಟನ್ನಿನ ಇ.ಎಂ.ಫ್ರೈಗಿಬರ್ಡ್, ಎಚ್.ಎಂ.ರಾಬರ್ಟ್‌ಸನ್–ಈ ಮೊದಲಾದವರು ಆಧುನಿಕ ಶೈಲಿಯ ಅಂಕುರಾರ್ಪಣ ಮಾಡಿದ ಮುಖ್ಯ ಶಿಲ್ಪಿಗಳೆನ್ನಬಹುದು. ಗ್ರೋಪಿಯಸ್ ಮತ್ತು ಕಾರ್ಬೂಸರರ ಗ್ರಂಥಗಳು ಆಧುನಿಕ ಶೈಲಿಗೆ ವ್ಯಾಖ್ಯಾನ ನೀಡುವುದರ ಮೂಲಕ ಅದಕ್ಕೆ ಜನಪ್ರಿಯತೆಯನ್ನು ಗಳಿಸಿಕೊಟ್ಟಿವೆ.

**ಆಧುನಿಕ ಶೈಲಿಯ ಮುಖ್ಯ ಗುಣಲಕ್ಷಣಗಳು:** ನಿರ್ಮಾಣವಾದ ಮನೆ ಉದ್ದೇಶಕ್ಕೆ ಅನುಗುಣವಾಗಿರಬೇಕು. ಭಾರ ಹೊರುವ ಗೋಡೆಗಳಾವುವೂ ಅನಾವಶ್ಯಕ. ಅವುಗಳ ಬದಲು ಭದ್ರ ಕಾಂಕ್ರೀಟಿನ ತೆಳ್ಳನೆಯ ಕಂಬಗಳು, ಅದರದೇ ತೊಲೆಗಳು ಇರಬೇಕು. ಸೂರು ಇಪ್ಪಾರಾಗಿರದೆ ಒಪ್ಪಾರಾಗಿದ್ದು, ಮಟ್ಟಸವಾಗಿರಬೇಕು. ಒಟ್ಟು ಮನೆಗೆ ಭದ್ರ ಕಾಂಕ್ರೀಟಿನ ರಕ್ಷಣೆ ಇರಬೇಕು. ಅಗತ್ಯವಿದ್ದಲ್ಲೆಲ್ಲ ಕ್ಯಾಂಟಿ ಲಿವರುಗಳು ಮತ್ತು ಬಾಲ್ಕನಿಗಳಿದ್ದರೆ ಒಳ್ಳೆಯದು. ಕಿಟಕಿಗಳು ಬಾಗಿಲುಗಳು ಎಷ್ಟು ದೊಡ್ಡವಾಗಿದ್ದರೆ ಅಷ್ಟು ಒಳ್ಳೆಯದು. ಅವುಗಳ ಮೇಲೆ ಯಾವ ಬಗೆಯ ಕಮಾನುಗಳೂ ಬೇಕಿಲ್ಲ. ಅಲಂಕರಣದ ಅಗತ್ಯವೇ ಇಲ್ಲ. ಇಡೀ ಮನೆ ಬೆಂಕಿಯ ಪೊಟ್ಟಣಗಳ ಸಾಲಿನಂತೆ ನೇರವೂ ಸುಲಭವೂ ಆಗಿರಬೇಕು.

ಶಿಷ್ಟ ಅಳತೆಗೆ ತಕ್ಕಂತೆ ಮೊದಲೇ ಸಿದ್ಧವಾದ (ಪ್ರಿ ಫ್ಯಾಬ್ರಿಕೇಟೆಡ್) ಬಿಡಿ ಭಾಗಗಳನ್ನು ಹೇರಳವಾಗಿ ಬಳಸುವ ವಾಡಿಕೆ ಹೆಚ್ಚಿತು. ಎರಡನೆಯ ಮಹಾಯುದ್ಧವಾದ ಅನಂತರ ವಾಸದ ಮನೆಗಳ ಅಭಾವ ತೋರಿಬಂದಾಗ ಇಂಥ ಹೊಸ ಮಾದರಿಗಳ ಕಡೆ ಶಿಲ್ಪಿಗಳ ಗಮನ ಹೆಚ್ಚಾಗಿ ಹರಿಯಿತು. ಗಂಡ, ಹೆಂಡತಿ ಮತ್ತು ಇಬ್ಬರು ಮಕ್ಕಳಿಗಾಗುವ ಪುಟ್ಟ ಮನೆಯಿಂದ ಹಿಡಿದು ಎಂಟು ಹತ್ತು ಸಾವಿರ ಜನ ಕೆಲಸ ಮಾಡುವ ಗಿರಣಿಯವರೆಗಿನ ಎಲ್ಲ ಮನೆಗಳನ್ನು ನವವಿಧಾನದಿಂದ ಕಟ್ಟಲಾಗಿದೆ. ಅಲ್ಲಲ್ಲಿನ ನಿವೇಶನಗಳ ಅನುಕೂಲ, ಅಗತ್ಯ, ಉದ್ದೇಶ, ವಾಯುಗುಣಗಳಿಗೆ ಅನುಸಾರವಾಗಿ ಶಿಲ್ಪವಿಧಾನ ಮಾರ್ಪಡುತ್ತದೆ. ಹಿಂದಿನ ಯಾವ ಅಲಂಕರಣಗಳಿಗೂ ಅವಕಾಶ ಕೊಡದ ನವವಿಧಾನದ ಜೊತೆಗೆ ಹಳೆಯ ಸಂಪ್ರದಾಯಗಳ ಹಿತಮಿತ ಮಿಶ್ರಣದಿಂದ ಹೊಸ ಹೊಸ ಸುಂದರ ವಾಸ್ತು ಶೈಲಿಗಳನ್ನು ರೂಢಿಸಿರುವುದೂ ಉಂಟು. ಓಸಾಕದ ಎಕ್ಸ್‌ಪೊ 70ರ ಶಿಲ್ಪ ತಾಂತ್ರಿಕ ಶಿಲ್ಪವಿಧಾನದಲ್ಲಿ ಹೊಸ ದಾಖಲೆಯನ್ನೇ ಸ್ಥಾಪಿಸಿದೆ. ಪ್ಯಾರಿಸಿನಲ್ಲಿ ಯುನೆಸ್ಕೊ ಕಚೇರಿಗಳಿಗಾಗಿ ಇಂಗ್ಲಿಷಿನ Y ಅಕ್ಷರದ ಆಕಾರದ ಹೊಸ ಕಟ್ಟಡ, ಒಲಿಂಪಿಕ್ ಆಟಗಳಿಗಾಗಿ ರೋಮಿನಲ್ಲಿ ಶಿಲ್ಪಿ ನರ್ವಿ 1960ರಲ್ಲಿ ಕಟ್ಟಿದ ಭವನ, ಸ್ಪೇನಿನಲ್ಲಿ ಶಿಲ್ಪಿ ಯುಡಾರ್ಡೊ ಟೊರೋಜ ನಿರ್ಮಿಸಿದ ಕುದುರೆ ಪಂದ್ಯದ ಸ್ಟೇಡಿಯಂ–ಇವು ಇತರ ಕೆಲವು ನಿದರ್ಶನಗಳು. ಈಚೆಗಂತೂ ಸೌಧನಿರ್ಮಾಣಕ್ಕೆ ಗಾಜು ಮತ್ತು ಪ್ಲ್ಯಾಸ್ಟಿಕ್‌ಗಳನ್ನೂ ಬಳಸಲಾಗಿದೆ. ರಸ್ತೆಗಳು, ಉದ್ಯಾನಗಳು, ಸೇತುವೆಗಳು, ವಠಾರಗಳು, ಗಗನಚುಂಬಿ ಸೌಧಗಳು, ಸುರಂಗಗಳು, ನೆಲಮಾಳಿಗೆಗಳು, ಸಿಡಿಲ ಮೊರೆಯನ್ನೂ ಭೂಕಂಪವನ್ನೂ ಎದುರಿಸುವ ಯೋಜನೆಗಳು, ಕಟ್ಟಿದ ಮನೆಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಒಯ್ಯುವ ವ್ಯವಸ್ಥೆಗಳು–ಇಲ್ಲೆಲ್ಲ ಇಪ್ಪತ್ತನೆಯ ಶತಮಾನದ ತಾಂತ್ರಿಕ ಹಾಗೂ ಕಲಾತ್ಮಕ ಆಧುನಿಕ ವಿಧಾನಗಳನ್ನು ನಾವು ಕಾಣಬಹುದಾಗಿದೆ.

**ಹತ್ತೊಂಬತ್ತನೆಯ ಶತಮಾನದಿಂದೀಚಿನ ಚಿತ್ರಕಲಾ ಸಮೀಕ್ಷೆ:** ಸಮಾಜದಲ್ಲಿ, ಸಾಹಿತ್ಯದಲ್ಲಿ, ವಾಸ್ತುಶಿಲ್ಪದಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಗಳ ಪ್ರಭಾವ ಚಿತ್ರಕಲೆಯ ಮೇಲೂ ಆಯಿತು. ಫ್ರಾನ್ಸಿನ ಮಹಾಕ್ರಾಂತಿಯ ಕಾಲದ ಒಬ್ಬ ಗಣ್ಯ ಕಲಾಕಾರನೆಂದರೆ ಜ್ಯಾಕ್ವಿಸ್ ಲೂಯಿ ಡೇವಿಡ್. ಈತ ಮೊದಲು ಆಸ್ಥಾನ ಕಲಾವಿದನಾಗಿದ್ದು ಅನಂತರ ಕ್ರಾಂತಿಕಾರರೊಡಗೂಡಿ ಬಂಡಾಯದಲ್ಲಿ ಭಾಗವಹಿಸಿದವನು. ಅಭಿಜಾತ ಕಲಾಶೈಲಿಯಲ್ಲಿ ಗ್ರೀಕ್ ಮತ್ತು ರೋಮನ್ ಚರಿತ್ರೆಯ ಅನೇಕ ವರ್ಣಚಿತ್ರಗಳನ್ನು ಈತ ರಚಿಸಿದ್ದಾನೆ. ಈತನ ಕೃತಿಯಾದ ಅಶ್ವಾರೂಢ ನೆಪೋಲಿಯನನ ಚಿತ್ರ ಬಹು ಪ್ರಖ್ಯಾತವಾದುದು. ಡೇವಿಡನ ಶಿಷ್ಯ ಇಂಗ್ರೆಸ್ ಗುರುವಿಗಿಂತ ಒಂದು ಹೆಜ್ಜೆ ಮುಂದೆ ನಡೆದನೆನ್ನಬಹುದು. ಅಭಿಜಾತ ಮಾರ್ಗದ ಕಲಾವಿದರು ಚಿತ್ರದಲ್ಲಿನ ವರ್ಣವಿನ್ಯಾಸಕ್ಕೆ ಅಷ್ಟು ಗಮನವಿತ್ತಿರಲಿಲ್ಲ. ಅವರ ಗಮನವೆಲ್ಲ ಗೆರೆಗಳು ಮತ್ತು ಗಾತ್ರಗಳ ಮೇಲಿತ್ತು. ಆದ್ದರಿಂದ ಅಲ್ಲಿನ ವರ್ಣವಿನ್ಯಾಸ ಮಬ್ಬು ಮಬ್ಬಾಗಿ ನಿರ್ಜೀವವಾಗಿತ್ತು. ಇಂಗ್ರೆಸ್ ರೇಖಾಚಿತ್ರವಿನ್ಯಾಸದಲ್ಲಿ ಅಸಾಧಾರಣ ನೈಪುಣ್ಯವನ್ನು ತೋರಿಸಿದ್ದಾನೆ. ಡೇವಿಡನ ಮತ್ತೊಬ್ಬ ಶಿಷ್ಯ ಬ್ಯಾರನ್‌ಗ್ರಾಸ್ ನೆಪೋಲಿಯನನ ಸೈನ್ಯದಲ್ಲಿ ಅಧಿಕಾರಿಯಾಗಿದ್ದುಕೊಂಡು ಅಲ್ಲಿನ ಯುದ್ಧವಿಷಯಗಳನ್ನು ಚಿತ್ರಿಸಿದ್ದಾನೆ. ಸೈನಿಕರ ಶೌರ್ಯದ ಜೊತೆಗೆ ಅವರ ಅತೀವ ವೇದನೆ, ದುಃಖಗಳನ್ನೂ ಗ್ರಾಸ್ ಹೃದಯ ಕರಗುವಂತೆ ಚಿತ್ರೀಕರಿಸಿದ್ದಾನೆ.

ಅನಂತರ ಡೆಲಕ್ರ್ವಾ ಎಂಬ ಫ್ರೆಂಚ್ ಕಲಾವಿದನ ನಾಯಕತ್ವದಲ್ಲಿ ರೊಮ್ಯಾಂಟಿಸಿಸ್ಟರ ಹೊಸದೊಂದು ಕಲಾಶೈಲಿ ಆವರಿಸಿತು. ಅಭಿಜಾತ ಶೈಲಿಯನ್ನು ಇವರು ಒಪ್ಪಲಿಲ್ಲ. ಅಲ್ಲದೆ ಅಭಿಜಾತ ವಸ್ತುವನ್ನೂ ಇವರು ಆರಿಸಲಿಲ್ಲ. ತಮ್ಮ ಕಾಲದ ಜನಜೀವನವೇ ಚಿತ್ರದ ವಸ್ತುವಾಗಬೇಕೆಂದು ಇವರು ವಾದಿಸಿದರು. ಅಲ್ಲದೆ ಗೀಟು, ಗೆರೆಗಳಿಗಿಂತ ಬಣ್ಣಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡಲಾರಂಭಿಸಿದರು. ಅದರಂತೆ ಡೆಲಕ್ರ್ವಾ ತನ್ನ ಚಿತ್ರಗಳಿಗಾಗಿ ಧರ್ಮಯುದ್ಧ ನಿರತರಾದ ಯೋಧವೀರರು, ಬೈಬಲಿನ ಕಥೆಗಳು, ಆಲ್ಜಿಯರ್ಸಿನ ಜನತೆ, ಗ್ರೀಕರಿಗೂ ತುರ್ಕರಿಗೂ ಅಂದು ನಡೆಯುತ್ತಿದ್ದ ಯುದ್ಧ–ಇಂಥ ವಸ್ತುಗಳನ್ನಾಯ್ದುಕೊಂಡ. ಸಿಂಹದ ಬೇಟೆ ಎಂಬ ಹೆಸರಿನ ಅವನ ಒಂದು ಚಿತ್ರ ಬಹು ಸಹಜವಾಗಿದೆ.

ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ವೆನಿಸಿನಲ್ಲಿ ಟಿಷಿಯನ್, ರೋಮಿನಲ್ಲಿ ಮೈಕೆಲೇಂಜಲೊ, ಸ್ಪೇನಿನಲ್ಲಿ ವೆಲಾಸ್ಕ್ವ, ಫ್ಲಾಂಡರ್ಸಿನಲ್ಲಿ ರೂಬೆನ್ಸ್, ನೆದರ್ಲೆಂಡಿನಲ್ಲಿ ರೆಂಬ್ರಾನ್, ಜರ್ಮನಿಯಲ್ಲಿ ಡ್ಯೂರರ್, ಫ್ರಾನ್ಸಿನಲ್ಲಿ ಪೌಸಿನ್–ಇವರು ಪ್ರಸಿದ್ಧರಾದಂತೆ ಇಂಗ್ಲೆಂಡಿನಲ್ಲಿ ವಿಲಿಯಂ ಹೋಗಾರ್ತ್ ತುಂಬ ಖ್ಯಾತನಾದ. ಅನಂತರ ಜೋಷುವ ರೇನಾಲ್ಡ್ಸ್ ಮತ್ತು ಥಾಮಸ್ ಗೇನ್ಸ್‌ಬರೊ ಎಂಬಿಬ್ಬರು ಕಲಾವಿದರು ಮನುಷ್ಯನ ಭಾವ ಚಿತ್ರಣದಲ್ಲಿ ಅಂದರೆ ತಸ್ವೀರು ಚಿತ್ರಣದಲ್ಲಿ ಹೆಸರು ಗಳಿಸಿದರು. ದಿ ಸ್ಟ್ರಾಬೆರಿ ಗರ್ಲ್, ಮಾಸ್ಟರ್ ಹೇರ್, ದಿ ಏಜ್ ಆಫ್ ಇನ್ನೊಸೆನ್ಸ್–ಇವು ರೇನಾಲ್ಡ್ಸನ ಖ್ಯಾತ ಕೃತಿಗಳು. ಲೇಡಿ ವಾಕಿಂಗ್ ಇನ್ ಸೇಂಟ್ ಜೇಮ್ಸ್ ಪಾರ್ಕ್, ಮಿಸ್ಟ್ರೆಸ್ ಸಿಡಾನ್ಸ್, ದಿ ಬ್ಲೂ ಬಾಯ್–ಇವು ಗೇನ್ಸ್‌ಬರೋನ ಕೆಲವು ಖ್ಯಾತ ಚಿತ್ರಗಳು. ಬೆಂಜಮಿನ್ ವೆಸ್ಟ್ ಮತ್ತು ಜಾನ್ ಸಿಂಗಲ್ಟನ್ ಕಾಪ್ಲೆ ಎಂಬಿಬ್ಬರು ಅಮೆರಿಕನ್ನರು ವರ್ಣಚಿತ್ರ ವೀಕ್ಷಣೆಗೆಂದು ಯುರೋಪಿಗೆ ಬಂದವರು ಪ್ರವಾಸಾನಂತರ ಇಂಗ್ಲೆಂಡಿನಲ್ಲಿ ನೆಲೆಸಿ ಅದ್ಭುತ ಚಿತ್ರಗಳನ್ನು ರಚಿಸಿದರು. ಅಮೆರಿಕದಲ್ಲಿ ಸ್ವಾತಂತ್ರ್ಯ ಯುದ್ಧ

ವಾಗುತ್ತಿದ್ದ ಸಮಯದಲ್ಲಿ ಇಂಗ್ಲಿಷ್ ಕವಿಯೊಬ್ಬ ಚಿತ್ರಗಾರನಾಗಿಯೂ ಪ್ರಸಿದ್ಧಿಗೆ ಬಂದ. ವಿಲಿಯಂ ಬ್ಲೇಕ್. ಆತ ಪ್ರಧಾನವಾಗಿ ಕೆತ್ತನೆಯ ಕೆಲಸದಲ್ಲಿ ನಿಪುಣ. ಮರದ ಫಲಕಗಳ ಮೇಲೆ ಚಿತ್ರಗಳನ್ನು ಕೊರೆದು ಅಚ್ಚು ತಯಾರಿಸಿ ಅದರಿಂದ ಮುದ್ರಣ ಮಾಡುವುದು ಇವನ ಹವ್ಯಾಸ. ಅದಕ್ಕಾಗಿ ಈತ ಮೊದಲು ಬಣ್ಣಗಳಿಂದ ತಯಾರಿಸುತ್ತಿದ್ದ ಆಲೇಖ್ಯ ಚಿತ್ರಗಳೂ ಇವನ ಕಲಾವಂತಿಕೆಗೆ ಸಾಕ್ಷಿಗಳಾಗಿವೆ. ಮುಂದೆ ಬಂದ ಜಾನ್ ಕಾನ್‍ಸ್ಟೆಬಲ್ ಚಿತ್ರಗಳಿಗೆ ನೈಜವರ್ಣಗಳನ್ನು ಬಳಸಿ ಅವುಗಳ ಸಹಜತೆಯನ್ನು ಹೆಚ್ಚಿಸಿದನಲ್ಲದೆ ಗುಪ್ಪೆಗುಪ್ಪೆಯಾಗಿ ಗಿಡಮರಗಳಿಗೆ ಕೇವಲ ಕಂದುಬಣ್ಣವನ್ನು ಉಪಯೋಗಿಸುತ್ತಿದ್ದರು. ಕಾನ್‍ಸ್ಟೆಬಲ್ ಆದರೋ ಹಸಿರು, ಕಪ್ಪುಬಣ್ಣಗಳ ಛಾಯೆಗಳನ್ನು ಬಳಸಿ ಅವು ಸಹಜವಾಗಿ ತೋರುವಂತೆ ಮಾಡಿದ. ಸೂರ್ಯೋದಯ ಸೂರ್ಯಾಸ್ತಗಳ ಸಮುದ್ರದ ಸೊಬಗು, ಕಾಂತಿ ಮತ್ತು ಗಾಂಭೀರ್ಯಗಳನ್ನು ವರ್ಣಗಳಲ್ಲಿ ಉಜ್ಜ್ವಲವಾಗಿ ಸೆರೆಹಿಡಿದಿರುವ ಕಲಾವಿದನೆಂದರೆ ಜೋಸೆಫ್ ಮಲ್ಲಾರ್ಡ್ ವಿಲಿಯಂ ಟರ್ನರ್. ಪೆಟ್‍ವರ್ತ್ ಹೌಸಿನಿಂದ ಕಾಣುವ ಸರೋವರ ಮತ್ತು ವಿನಿಸಿನ ಗ್ರ್ಯಾಂಡ್ ಕೆನಾಲ್–ಎಂಬೆರಡು ಚಿತ್ರಗಳು ಟರ್ನರನ ಪ್ರಸಿದ್ಧ ಕೃತಿಗಳಾಗಿವೆ.

ಫ್ರಾನ್ಸಿನ ಬಾರ್ಬಿಜ಼ಾನ್ ಪಂಥದ ಪ್ರಮುಖ ಶ್ರದ್ಧಾಳುಗಳೆಂದರೆ ಥಿಯೊಡರ್ ರೂಸೊ, ಕೇರೊ, ಮಿಲೆ. ಇವರು ಬಾರ್ಬಿಜ಼ಾನ್ ಹಳ್ಳಿಯ ಸುತ್ತಣ ಕಾಡುಗಳ ಸಹಜರಮ್ಯತೆಯನ್ನು ಚಿತ್ರಿಸುವಲ್ಲಿ ಸಹಜತೆಯನ್ನೂ ಪರಿಣಾಮ ವಿಧಾನವನ್ನೂ (ಇಂಪ್ರೆಷನಿಸಂ) ಬಳಸಿ ಮುಖ್ಯರೆನಿಸಿದ್ದಾರೆ.

ಇಲ್ಲಿಂದ ಮುಂದೆ ಆಧುನಿಕ ಕಲೆ ಬಹು ವಿಸ್ತಾರವಾಗಿ, ಬಹು ಸಂಕೀರ್ಣವಾಗಿ ಬೆಳೆದು ಬಂದಿದೆ. ಅದು ಸೃಷ್ಟಿಸಿರುವ ಕೆಲವು ಪ್ರಸ್ಥಾನಗಳ ಮೂಲಕ ಕೇವಲ ಸಂಕ್ಷೇಪವಾಗಿ ಅದರ ಇತಿಹಾಸವನ್ನು ಇಲ್ಲಿ ಗಮನಿಸಲಾಗಿದೆ.

ಸಾಮಾನ್ಯವಾಗಿ ಚಿತ್ರಕಲೆಯಲ್ಲಿ ಕಣ್ಣಿಗೆ ಕಂಡ ಮೂರ್ತರೂಪಗಳನ್ನು ಹಿಡಿದಿಡುವುದೇ ಮುಖ್ಯವಾದರೂ ಒಂದು ಬಗೆಯ ನವೀನ ಚಿತ್ರಕಲೆ ತದ್ವಿರುದ್ಧವಾದ ದಾರಿಯನ್ನು ಹಿಡಿದಿದೆ. ಅದೇ ಅಮೂರ್ತ ಚಿತ್ರವಿಧಾನ (ಅಬ್‍ಸ್ಟ್ರಾಕ್ಟ್ ಆರ್ಟ್). ಸಾಮಾನ್ಯವಾಗಿ ಸಹಜ ನಿರೂಪಣೆಯದಾದರೂ ಇಲ್ಲಿ ಪದಾರ್ಥಚಿತ್ರಣಕ್ಕಿಂತ ಭಾವ ಚಿತ್ರಣ ಮುಖ್ಯ. ಫಾವಿಸಂ, ಕ್ಯೂಬಿಸಂ (ಘನಾಕೃತಿ ಕಲಾವಿಧಾನ), ಎಕ್ಸ್‌ಪ್ರೆಷನಿಸಂ (ಅಭಿವ್ಯಕ್ತಿ ಪಂಥ) ಇತ್ಯಾದಿ ವಿಧಾನಗಳ ತಳಹದಿಯಾಗಿ ಅಮೂರ್ತ ಚಿತ್ರ ವಿಧಾನ ಇದೆ ಎನ್ನಬಹುದು. ಇದರ ಮೊದಲಿಗ ಕಾಂಡಿಸ್ಕಿ (1910). ಈ ವಿಧಾನದಲ್ಲಿ ಗೀರುಗಳು, ಮೇಲುಮೈ, ಆಕೃತಿಗಳು, ವರ್ಣಗಳು ಎಲ್ಲವೂ ಮೂಲವಸ್ತುವಿಗೆ ಏನೂ ಸಂಬಂಧವಿಲ್ಲದಂತೆ ಮೂಡಿಬಂದಿರುತ್ತವೆ. ಜ್ಯಾಕ್ಸನ್, ಪೊಲಾಕ್, ಕೂನಿಂಗ್, ಹ್ಯಾನ್ಸ್ ಹಾಫ್‍ಮನ್–ಇವರು ಈ ಪಂಥದ ಪ್ರಮುಖರು. ಅಮೂರ್ತ ಚಿತ್ರ ವಿಧಾನದ ಒಂದು ಅಂಗ (ಕನ್‍ಸ್ಟ್ರಕ್ಟಿವಿಸಂ) ರಷ್ಯದಲ್ಲಿ ಬೆಳೆದು ಬಂತು. ನಾಮ್‍ಗಾಬೊ, ಅಂತೊನಿ ಪೆವ್‍ಸ್ನರ್, ಐ ಲಿಸಿಟಿಸ್ಕಿ–ಇವರು ಈ ಪಂಥದ ಪ್ರಮುಖರು. ಕ್ಯೂಬಿಸಂ (ಘನಾಕೃತಿ ಕಲಾವಿಧಾನ) ಕೂಡ ಅಮೂರ್ತ ಚಿತ್ರವಿಧಾನದ ಪೂರ್ವ ಭಾಗವೇ ಆಗಿದೆ. ಸಹಜ ಆಕೃತಿಗಳಿಗಿಂತ ಜ್ಯಾಮಿತೀಯ ಆಕೃತಿಗಳಿಗೇ ಇಲ್ಲಿ ಪ್ರಾಮುಖ್ಯ. ಈ ಪಂಥದಲ್ಲಿ ಪಿಕಾಸೊ, ಬ್ರಾರ್ಕ್, ಸೀಸಾನ್, ಗ್ರೀಸ್ ಮತ್ತು ಲೇಗರ್ ಪ್ರಮುಖರು.

ಎಲ್ಲ ಹಳೆಯ ವಿಧಾನಗಳನ್ನೂ ಸಂಪ್ರದಾಯಗಳನ್ನೂ ಪ್ರತಿಭಟಿಸಿ ಹೊಸ ಜಾಡನ್ನು ಅರಸಹೊರಟ (1916–21) ಐರೋಪ್ಯ ಕಲಾವಿದರ ನೂತನ ಶೈಲಿಯನ್ನು ದಾದಾಯಿಸಂ ಎನ್ನಲಾಗುತ್ತದೆ. ಇದರ ಪ್ರಭಾವದಿಂದಲೇ ಸರ್‍ರಿಯಲಿಸಂ (ಅತಿವಾಸ್ತವಿಕ ವಿಧಾನ) ಮೊದಲಾದ ವಿಶೇಷ ವಿಧಾನಗಳು ಆವಿರ್ಭವಿಸಿದುವು. ಹಾಲೆಂಡಿನಲ್ಲಿ 1917–28ರ ಸುಮಾರಿನಲ್ಲಿ ಚೌಕಗಳನ್ನು, ಮೂಲವರ್ಣಗಳನ್ನು ಪ್ರಧಾನವಾಗುಳ್ಳ ಡೇ ಸ್ಟಿಲ್ ಎಂಬ ಶೈಲಿ ಬಳಕೆಗೆ ಬಂತು. ವಾನ್ ಡೋಸ್‍ಬರ್ಗ್, ಮಾಂಡ್ರಿಯನ್ ಮೊದಲಾದವರು ಈ ಹೊಸ ಮಾದರಿಯ ಅಧ್ವರ್ಯುಗಳೆಂದು ಹೆಸರಾಗಿದ್ದಾರೆ.

ಯಾವ ಕಲೆಯಲ್ಲಿ ಪ್ರಕೃತಿಗಿಂತ ಕಲೆಗಾರನ ಭಾವೋದ್ವೇಗಗಳಿಗೆ ಹೆಚ್ಚಿನ ಸ್ಥಾನವಿರುತ್ತದೋ ಅಂಥ ಕೃತಿಗಳನ್ನು ಅಭಿವ್ಯಕ್ತಿ ಪಂಥದವು ಎನ್ನಲಾಗುತ್ತದೆ(ಎಕ್ಸ್‌ಪ್ರೆಷನಿಸಂ). ಮ್ಯಾಟಿಸ್ಸ್ ಈ ಪಂಥದ ಪ್ರಮುಖ ಕಲಾವಿದ. ಪರಿಣಾಮ ವಿಧಾನಾನಂತರದ ಚಿತ್ರಕಲೆ ಈ ವಿಭಾಗಕ್ಕೆ ಸೇರುತ್ತದೆ. ಇದರ ಒಂದು ರೂಪವೇ ಫ್ರಾನ್ಸಿನ ಫಾವಿಸಂ. ಸಾಹಿತ್ಯದಲ್ಲೂ ಅಭಿವ್ಯಕ್ತಿ ಪಂಥದ ಲೇಖಕರಿದ್ದಾರೆ. ಸ್ವೇಚ್ಛಾ ಸಂಕೇತ ವಿಧಾನ (ಫ್ಯೂಚರಿಸಂ) ಇಟಲಿಯಲ್ಲಿ ಮೂಡಿತೆನ್ನಬಹುದು. 20ನೆಯ ಶತಮಾನದ ಆದಿಯಲ್ಲಿ ಯಂತ್ರಯುಗದ ಕಾರ್ಯವೈಭವವನ್ನು ಕಲೆಯಲ್ಲಿ ಕೊಂಡಾಡಲು ರೂಪುಗೊಂಡ ಈ ವಿಧಾನವನ್ನು ಪ್ರಾರಂಭಿಸಿದವ ಕವಿ ಮ್ಯಾರಿನೆಟ್ಟಿ.

ಪರಿಣಾಮ ವಿಧಾನವೂ (ಇಂಪ್ರೆಷನಿಸಂ) ಫ್ರಾನ್ಸ್ ದೇಶದ್ದು. ಪ್ರಕೃತಿಯಲ್ಲಿ ನೇರ ಕಣ್ಣಿಗೆ ಕಂಡದ್ದನ್ನು ಕಂಡಂತೆ ಚಿತ್ರಿಸುವುದೇ ಈ ವಿಧಾನದ ಗುರಿ. ಒಂದೇ ಸಮುದ್ರ, ಒಂದೇ ಸೂರ್ಯೋದಯ ದಿನದಿನವೂ ಹೊಸದಾಗಿ ಕಾಣಬಹುದು. ಕಾಣ್ಕೆ ವ್ಯಕ್ತಿ ವ್ಯಕ್ತಿಗೂ ಭಿನ್ನವಾಗಿರಬಹುದು. ಬೇರೆ ಬೇರೆ ಜಾಗದಿಂದ ಅದೇ ವಿಷಯ ಬೇರೆ ಬೇರೆಯಾಗಿ ಭಾಸವಾಗಬಹುದು. ಇದನ್ನು ಹಿಡಿಯುವುದೇ ಪರಿಣಾಮ ವಿಧಾನದ ಉದ್ದೇಶ. ಈ ಪಂಥದವರಲ್ಲಿ ಮಾನೆ, ಸಿಸ್ಲೆ, ಪಿಸ್ಸಾರೋ–ಇವರು ಮುಖ್ಯರು. ಉಳಿದವರೆಂದರೆ ರೆನಾರ್, ಡೆಗಾಸ್. (ಪಿ.ಎಸ್.)

**ಐಹೊಳೆ:** ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನಲ್ಲಿರುವ ಬಾದಾಮಿಯ ಚಳುಕ್ಯರ ಕಾಲದ ಸುಂದರ ದೇವಾಲಯ ಸಮೂಹಗಳಿಂದ ಪ್ರಾಚೀನ ವಾಸ್ತುಶಿಲ್ಪ ಕಲಾ ಕೇಂದ್ರವೆಂದು ಪ್ರಪಂಚಪ್ರಸಿದ್ಧವಾಗಿರುವ ಗ್ರಾಮ, ಪ್ರವಾಸಿಕೇಂದ್ರ. ಹುನಗುಂದದಿಂದ 26 ಕಿಮೀ ಪಶ್ಚಿಮಕ್ಕೆ ಮಲಪ್ರಭಾ ನದಿಯ ಬಲದಂಡೆಯ ಮೇಲಿದೆ. ಬಾಗಲಕೋಟೆಯಿಂದ ಅಮೀನಗಡದ ಮೂಲಕ (ಸು.50 ಕಿಮೀ) ಅಥವಾ ಬಾದಾಮಿಯಿಂದ ಪಟ್ಟದಕಲ್ಲಿನ ಮೂಲಕ (ಸು.30ಕಿಮೀ) ಐಹೊಳೆಯನ್ನು ತಲಪಲು ರಸ್ತೆ ಸಾರಿಗೆ ಸೌಕರ್ಯವಿದೆ. ಇಲ್ಲೊಂದು ಪ್ರವಾಸಿ ಮಂದಿರ, ಕೇಂದ್ರ ಪುರಾತತ್ತ್ವ ಇಲಾಖೆಯ ಒಂದು ಕಾರ್ಯಾಲಯ ಸಹ ಇದೆ. ಅಯ್ಯಾವೊಳೆ, ಆರ್ಯಪುರ ಇವು ಶಾಸನಗಳಲ್ಲಿ ಕಂಡುಬರುವ ಈ ಊರಿನ ಹೆಸರುಗಳು.

ಪುರಾತತ್ತ್ವ: ಈ ಗ್ರಾಮದಲ್ಲಿಯ ರಾಚಿಗುಡಿಯ ಬಳಿ ಮಲಪ್ರಭಾ ನದಿ ಪಾತ್ರದಲ್ಲಿ ಆದಿ ಹಳೆ ಶಿಲಾಯುಗದ ಕೊಡಲಿ, ಬಾಚಿ ಮುಂತಾದ ಉಪಕರಣಗಳು ದೊರೆಯುತ್ತವೆ. ಇಲ್ಲಿಯ ಒಂದು ಸಮತಟ್ಟ ಗುಡ್ಡದ ಮೇಲಿರುವ ಸ್ಥಳೀಯವಾಗಿ ಮೇಗುಡಿಯೆಂದು ಕರೆಯಲಾದ ಚಾಳುಕ್ಯ ಅರಸು ಮನೆತನದ ಎರಡನೆಯ ಪುಲಕೇಶಿಯ ಆಸ್ಥಾನ ಜೈನ ಕವಿ ರವಿಕೀರ್ತಿ ಕಟ್ಟಿಸಿದ ಜಿನಾಲಯದ ಬಲಬದಿಯ ಸಮತಟ್ಟಿನಲ್ಲಿ ಆದಿ ಕಬ್ಬಿಣಯುಗದ ನಾನಾ ರೀತಿಯಲ್ಲಿ ಹಾಳು ಬಿದ್ದಿರುವ ಸು.30 ಕಂಡಿ ಕೋಣೆ ಗೋರಿಗಳಿವೆ. ಹಾಗೆಯೆ ಮುಂದುವರೆದು ಗುಡ್ಡದಂಚಿನ ಬಯಲಿನಲ್ಲಿ ಹಲವಾರು ದಾರಿ ಕೋಣೆ ಗೋರಿಗಳಿವೆ. ಹೀಗೆ ಎರಡು ಪ್ರಮುಖ ಮಾದರಿಗಳ ಬೃಹತ್ ಶಿಲಾಗೋರಿಗಳಿರುವ ಇದೊಂದು ಅಪರೂಪದ ನೆಲೆ. ಈ ಗುಡ್ಡದ ಉತ್ತರದಂಚಿನಲ್ಲಿರುವ ಎರಡು ಕಲ್ಲಾಸರೆಗಳಲ್ಲಿ ಒಂದರಲ್ಲಿ ಅರ್ಧಂಬರ್ಧ ಉಳಿದಿರುವ ಮೈಮೇಲೆ ರೇಖಾವಿನ್ಯಾಸವುಳ್ಳ ಪಂದು ಪ್ರಾಣಿಯ ಕಾವಿ ಬಣ್ಣದ ಚಿತ್ರ ಸ್ವಲ್ಪ ಮುಂದಕ್ಕೆ ಎರಡನೆಯದರಲ್ಲಿ ಬಿಳಿವರ್ಣದ ಒಂದು ರೇಖಾ ಚಿತ್ರಗಳಿವೆ. ಕೆಳಗೆ ಬಯಲು ಪ್ರದೇಶದಲ್ಲಿ ಆದಿ ಇತಿಹಾಸ ಕಾಲದ ಜನ ವಾಸ್ತವ್ಯದ ಮಡಿಕೆ ಚೂರುಗಳು ದೊರೆಯುತ್ತವೆ. ಊರೊಳಗೆ ಲಾಡಖಾನ ಗುಡಿಯ ಸುತ್ತ ಮುತ್ತಲ ಪ್ರದೇಶದ ಹಾಳಿ ಮಣ್ಣಿನಲ್ಲೂ ಒಂದು ಸಾತವಾಹನರ ಕಾಲದ ನಾಣ್ಯವೂ ಸಿಕ್ಕಿದೆ.

ಈಗ ಚಿಕ್ಕಗ್ರಾಮವಾಗಿರುವ ಐಹೊಳೆ ಒಂದು ಕಾಲದಲ್ಲಿ ದೊಡ್ಡ ಪಟ್ಟಣ. ಇಲ್ಲಿಯ ಅವಶೇಷಗಳ ಅವಗಾಹನೆಯಿಂದ ಪ್ರ.ಶ.ಪೂ.ಸು.8–6ನೆಯ ಶತಮಾನದ ಹೊತ್ತಿಗೆ ಕಬ್ಬಿಣದ ಯುಗದಲ್ಲೇ ಇಲ್ಲಿ ಜನವಸತಿ ಇದ್ದಿರಬೇಕೆನಿಸುತ್ತದೆ. ಗ್ರಾಮದ ಸಮೀಪದಲ್ಲಿರುವ ಮೇಗುಟಿ ಗುಡ್ಡದ ಮೇಲೆ 1 ಹೆಕ್ಟೇರಿನಷ್ಟು ಹರಹಿನ ಪ್ರದೇಶದಲ್ಲಿ ಮೋರೇರ ಅಂಗಡಿಗಳು ಎಂದು ಕರೆಯಲಾದ ಬೃಹತ್ ಶಿಲಾಸಮಾಧಿಗಳು ಕಂಡುಬಂದಿವೆ. ಇವು ನಾಲ್ಕು ನೇರ ಚಪ್ಪಡಿಗಳನ್ನು ಪೆಟ್ಟಿಗೆಯಾಕೃತಿಯಲ್ಲಿ ಜೋಡಿಸಿ ಮೇಲೊಂದು ಚಪ್ಪಡಿಯಿಂದ ಮುಚ್ಚಿರುವ ಸಮಾಧಿಗಳು (ಡಾಲ್ಮೆನ್). ಇಲ್ಲಿಯ ಅಂಬಿಗೇರ ಗುಡಿ, ಹುಚ್ಚಪ್ಪಯ್ಯ ಮಠ ಇತ್ಯಾದಿಗಳ ಸಮೀಪದಲ್ಲಿ ಇತ್ತೀಚೆಗೆ ನಡೆಸಿದ ಅಗೆತಗಳಿಂದ ಕಂಡುಬಂದ ದೊಡ್ಡ ಪ್ರಮಾಣದ ಇಟ್ಟಿಗೆಗಳಿಂದ ಕಟ್ಟಿದ ಕಟ್ಟಡಗಳ ಅಡಿಪಾಯಗಳು, ಮಡಕೆಗಳು ಇತ್ಯಾದಿಗಳಿಂದ ಚಳುಕ್ಯ ಪೂರ್ವ ಕಾಲದಲ್ಲೂ ಇಲ್ಲಿ ಕಟ್ಟಡಗಳಿದ್ದುವೆಂದು ತಿಳಿಯುತ್ತದೆ.

ಚರಿತ್ರೆ: 6–7ನೆಯ ಶತಮಾನಗಳ ಹೊತ್ತಿಗೆ ಬಹುಶಃ ಬಾದಾಮಿಯ ಚಳುಕ್ಯರ ಆಳಿಕೆ ಪ್ರಾರಂಭವಾದಾರಭ್ಯ ಐಹೊಳೆ ದೊಡ್ಡ ಪಟ್ಟಣವಾಗಿ ಬೆಳೆಯಲಾರಂಭಿಸಿತು. 7–8ನೆಯ ಶತಮಾನಗಳು ಈ ಪಟ್ಟಣದ ವೈಭವದ ಕಾಲ. ಬಹುಪಾಲು ದೇವಾಲಯಗಳು ಹುಟ್ಟಿಕೊಂಡದ್ದು ಈ ಕಾಲದಲ್ಲಿಯೇ. ಇಲ್ಲಿಯ ಅತಿಪ್ರಾಚೀನ ಶಾಸನಗಳು ಸು.6–7ನೆಯ ಶತಮಾನದವು. 8ನೆಯ ಶತಮಾನದಲ್ಲಿ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡುವು. ಚಳುಕ್ಯ ರಾಜ್ಯ ಕೊನೆಗೊಂಡಾಗ ಐಹೊಳೆಯ ವೈಭವವೂ ಇಳಿಮುಖವಾದಂತೆ ತೋರಿದರೂ ಮುಂದೆ ಕಲ್ಯಾಣದ ಚಾಳುಕ್ಯರ ರಾಜ್ಯಾಂತ್ಯದವರೆಗೆ ಈ ನಗರ ಸ್ವಲ್ಪಮಟ್ಟಿಗಾದರೂ ಚಟುವಟಿಕೆಗಳ ಕೇಂದ್ರವಾಗಿ ಮುಂದುವರಿಯಿತು. ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲೂ ಕೆಲವು ಶಾಸನಗಳು ಮತ್ತು ದೇವಾಲಯಗಳು ಹುಟ್ಟಿಕೊಂಡುವು. ಆದರೆ ಬಾದಾಮಿಯ ಚಳುಕ್ಯ ಕಾಲದವಕ್ಕೆ ಹೋಲಿಸಿದರೆ ಇವುಗಳ ಸಂಖ್ಯೆ ಕಡಿಮೆ. ಸ್ವರೂಪ, ವೈವಿಧ್ಯದಲ್ಲಿ ಸಹ ಅವು ಸಾಮಾನ್ಯ ದರ್ಜೆಯವು. 1169–70ರ ಒಂದು ಶಾಸನ ಐಹೊಳೆಯಲ್ಲಿ ದೊರಕಿರುವ ಕೊನೆಯ ಶಾಸನ. ತದನಂತರ ಉತ್ತರ ಕರ್ನಾಟಕದಲ್ಲಿ ಉಂಟಾದ ಸಾಮಾಜಿಕ ರಾಜಕೀಯ ಆಂದೋಳನದಿಂದಾಗಿ ಈ ಪ್ರಾಚೀನ ಪಟ್ಟಣ ತನ್ನ ಪ್ರಾಮುಖ್ಯವನ್ನು ಪೂರ್ಣವಾಗಿ ಕಳೆದುಕೊಂಡಂತೆ ತೋರುತ್ತದೆ.

ಐಹೊಳೆ ತನ್ನ ವೈಭವದ ಕಾಲದಲ್ಲಿ ವಿದ್ವಾಂಸರಿಂದ ತುಂಬಿದ್ದ ಊರಾಗಿತ್ತು. ಪ್ರಾಯಶಃ ಇದೊಂದು ಅಗ್ರಹಾರ. 8–17ನೆಯ ಶತಮಾನದವರೆಗೆ ದಕ್ಷಿಣ ಭಾರತದಾದ್ಯಂತ ಪ್ರಸಿದ್ಧವಾಗಿದ್ದ ವರ್ತಕ ಸಂಘವೊಂದು ಅಯ್ಯಾವೊಳೆ ಐನೂರ್ವರು (**ನೋಡಿ**) ಎಂಬ ಹೆಸರಿನಿಂದ ಮೆರೆಯುತ್ತಿತ್ತು.

ವಾಸ್ತುಶಿಲ್ಪ: ಐಹೊಳೆಯಲ್ಲಿ ಕಿರಿ ಹಿರಿಯವೆಲ್ಲ ಸೇರಿ ಸು.125 ದೇವಾಲಯಗಳಿವೆ. ಪುರಾತತ್ತ್ವ ಸರ್ವೇಕ್ಷಣ ಇಲಾಖೆಯವರು ಇವನ್ನು 22 ಗುಂಪುಗಳಾಗಿ ವಿಂಗಡಿಸಿದ್ದಾರೆ: 1 ಹುಚ್ಚಿಮಲ್ಲಿ, 2 ಚಿಕ್ಕೀ, 3 ಅಂಬಿಗೇರ, 4 ದುರ್ಗ, 5 ಗೌಡರ, ಲಾಡಖಾನ್ ಮತ್ತು ಸೂರ್ಯನಾರಾಯಣ, 6 ಚಕ್ರ ಮತ್ತು ಬಡಿಗೇರ, 7 ರಾಚಿ, 8 ಏಣಿಯರ್, 9 ಹುಚ್ಚಪ್ಪಯ್ಯ

ಮಠ, 10 ಕುಂತಿ, 11 ಚರಂತಿಮಠ, 12 ತ್ರ್ಯಂಬಕೇಶ್ವರ, 13 ಗೌರಿ, 14 ಜೈನ, 15 ಮಲ್ಲಿಕಾರ್ಜುನ, 16 ಗುಡ್ಡದಮೇಲಿನ ಜೈನ, 17 ಮೇಗುಟಿ, 18 ಜ್ಯೋತಿರ್ಲಿಂಗ, 19 ರಾವಳಫಡಿ, 20 ಹುಚ್ಚಪ್ಪಯ್ಯ, 21 ಗಳಗನಾಥ ಮತ್ತು 22 ರಾಮಲಿಂಗ. ಈ ದೇವಾಲಯ ಗುಂಪುಗಳು ಐಹೊಳೆ ಗ್ರಾಮದಲ್ಲಿರುವ ಕೋಟೆಯ ಆವರಣದ ಒಳಗೆ ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಹರಡಿಕೊಂಡಿವೆ. ಈ ಮುಂದೆ ಕೋಟೆ ಮತ್ತು ಕೆಲವು ಮುಖ್ಯ ದೇವಾಲಯಗಳನ್ನು ವಿವರಿಸಲಾಗಿದೆ.

ಕೋಟೆ: ಇಲ್ಲಿಯ ಕೋಟೆ 2–2½ ಹೆ.ನಷ್ಟು ಪ್ರದೇಶವನ್ನು ಆವರಿಸಿದೆ. ಉಸಗು ಕಲ್ಲನ್ನು ದೊಡ್ಡ ಸೈಜುಗಲ್ಲುಗಳಾಗಿ ಕಂಡರಿಸಿ ಯಾವ ಬಂಧಕ ಸಾಮಗ್ರಿಯನ್ನೂ ಉಪಯೋಗಿಸದೆ ಒಂದರ ಮೇಲೊಂದು ಪೇರಿಸಿ ಹೊರಗೋಡೆಯನ್ನು ಕಟ್ಟಲಾಗಿದೆ. ಇದರ ದಪ್ಪ ಸು.3ಮೀ., ಎತ್ತರ ಸು.4ಮೀ. ಕೋಟೆ ಗೋಡೆ ಅಲ್ಲಲ್ಲಿ ಅಟ್ಟಾಲಕಗಳಿಂದ ಕೂಡಿದ್ದು ಸುಮಾರು ಅಂಡಾಕಾರದಲ್ಲಿ ಹಬ್ಬಿದೆ. ಸುತ್ತಲಕಂದಕವನ್ನೂ ಕೆಲವೆಡೆ ಗುರುತಿಸಬಹುದು. ಈಗ ಕೋಟೆಯ ಪಶ್ಚಿಮಭಾಗದ ಗೋಡೆಗಳು ಉಳಿದಿಲ್ಲ. ಪೂರ್ವದಲ್ಲಿ ಹೆಬ್ಬಾಗಿಲಿದೆ. ಕೋಟೆಯ ತೆನೆಗಳ ಮೇಲೆ ಸು.6–7ನೆಯ ಶತಮಾನದ ಹಳಗನ್ನಡ ಅಕ್ಷರದ ಶಾಸನಗಳಿವೆ ಯಾದ್ದರಿಂದ ಕೋಟೆ ಸು.6ನೆಯ ಶತಮಾನದ್ದೆಂದು ಹೇಳಬಹುದು. ಕರ್ನಾಟಕದಲ್ಲಿ ಉಳಿದು ಬಂದಿರುವ ಶಿಲಾಕೋಟೆಗಳಲ್ಲಿ ಇದೇ ಪ್ರಾಚೀನವಾದುದು.



ದುರ್ಗ ದೇವಾಲಯ

ದುರ್ಗಗುಡಿ: ಉತ್ತರದ ರಸ್ತೆಯಿಂದ ಕೋಟೆಯನ್ನು ಪ್ರವೇಶಿಸುತ್ತಿದ್ದಂತೆಯೇ ಕಂಡುಬರುವುದು ಪ್ರಸಿದ್ಧವಾದ ದುರ್ಗ ದೇವಾಲಯ. ಇದು ದುರ್ಗ ದೇವತೆಗೆ ಮೀಸಲಾದ ದೇವಾಲಯವಾಗಿರದೆ, ಸುತ್ತಲೂ ದುರ್ಗದ ರೀತಿಯ ಕಟ್ಟಡವೊಂದರ ಮಧ್ಯ ಇದ್ದುದರಿಂದ ಈ ಹೆಸರು ರೂಢಿತವಾದಂತೆ ಕಾಣುತ್ತದೆ. ದುರ್ಗ ದೇವಾಲಯ ಸು.6700ರ ರಚನೆ. ಇದರ ತಳ ವಿನ್ಯಾಸ ಗಜಪೃಷ್ಠಾಕಾರವಾಗಿದೆ, ಪೂರ್ವಾಭಿಮುಖವಾಗಿದೆ. ಮುಂದುಗಡೆ ಆಯಾಕಾರದಲ್ಲಿ ಮುಂಚಾಚಿದ ಕಿರುಮಂಟಪವಿದ್ದು ಅದಕ್ಕೆ ಪ್ರವೇಶಿಸಲು ಅದರ ಮುಂದೆ ಎರಡು ಪಕ್ಕಗಳಿಂದ ಏರುವ ಪಾವಟಿಕೆಗಳಿವೆ. ಇಡೀ ದೇವಾಲಯ ಆರು ಅಡ್ಡದಿಂಡುಗಳಿರುವ ಎತ್ತರದ ಅಧಿಷ್ಠಾನದ ಮೇಲೆ ಇದೆ. ಇದರ ಮೇಲಿರುವ ಹೊರ ಅಂಚಿನ ಗೋಡೆ ಅರೆ ತೆರೆದ ರೀತಿಯದು. ಕುಳ್ಳ ಕೈಪಿಡಿಯ ಮೇಲೆ ಚೌಕಾಕಾರದ ಅಡ್ಡಕೊಯ್ತದ ಕಂಬಸಾಲುಗಳದು. ಇದು ಒಂದು ಕೈ ಸಾಲೆಯನ್ನು ಆವರಿಸಿದೆ. ಕೈಸಾಲೆಯ ನೆಲಮಟ್ಟದಿಂದ ಮತ್ತೊಂದು ಅಧಿಷ್ಠಾನವಿದ್ದು ಅದರ ಮೇಲೆ ಪುನಃ ಗಜಪೃಷ್ಠಾಕಾರದ ಗರ್ಭಗೃಹವಿದೆ. ಗರ್ಭಗೃಹ ಹೊರಗೋಡೆಯಿಂದ ಸೇರಿದಂತಿದ್ದು ಪ್ರದಕ್ಷಿಣೆಗೆ ಅನುಕೂಲವಿದೆ. ಗರ್ಭಗುಡಿಯ ಮುಂಭಾಗದಲ್ಲಿ ಎರಡು ಕಂಬಸಾಲುಗಳಿದ್ದು ಇವು ಸಭಾಮಂಟಪವನ್ನು ಉದ್ದುದ್ದವಾಗಿ ಮೂರು ಭಾಗಗಳಾಗಿ ವಿಂಗಡಿಸುತ್ತವೆ. ಮಧ್ಯದ ಅಂಕಣ ಗರ್ಭಗುಡಿಯ ಮುಂದೆಯೂ ಪಕ್ಕದ ಅಂಕಣಗಳು ಪ್ರದಕ್ಷಿಣಾ ಪಥಕ್ಕೆ ತೆರೆದಂತೆಯೂ ಇವೆ. ಗರ್ಭಗುಡಿ ಮತ್ತು ಮುಂದಿನ ಸಭಾ ಮಂಟಪದ ಕಂಬಸಾಲಿನ ಮಧ್ಯದ ಆ ಭಾಗದ ಮೇಲೆ ಮಟ್ಟವಾದ ಹಾಸುಗಲ್ಲಿನ ಚಾವಣಿ ಇದೆ. ಒಳ ಪ್ರದಕ್ಷಿಣಾಪಥ ಮತ್ತು ಸಭಾಮಂಟಪದ ಎರಡು ಪಕ್ಕದ ಭಾಗಗಳಿಗೆ ಮಟ್ಟ ಚಾವಣಿಗಿಂತ ಸ್ವಲ್ಪ ಕೆಳ ಮಟ್ಟದಲ್ಲಿ ಪುನಃ ಇಳಿಜಾರು ಚಾವಣಿಯೂ ಹೊರಗಿನ ಕೈಸಾಲೆಗೆ ಅದಕ್ಕಿಂತ ಕೆಳಮಟ್ಟದಲ್ಲಿ ಪುನಃ ಇಳಿಜಾರು ಚಾವಣಿಯೂ ಇವೆ. ಗರ್ಭಗುಡಿಯ ಮೇಲೆ ಚತುರಸ್ರಾಕಾರದ ಕುಳ್ಳದ ರೇಖಾನಾಗರ ಶಿಖರವಿದೆ. ಕಂಬಗಳು ಚತುರಸ್ರಾಕಾರದವು. ಕೆಲವು ಉಬ್ಬುಪಟ್ಟಿಗಳ ಹೊರತು ಬೇರೆ ಅಲಂಕರಣವಿಲ್ಲ, ಒಳಗಿನ ಬಾಗಿಲವಾಡದಲ್ಲೂ ಹೆಚ್ಚಿನ ಅಲಂಕರಣವಿಲ್ಲ. ಆದರೆ ದೇವಾಲಯದ ಮುಖಮಂಟಪದ ಹೊರ ಮೈಯಲ್ಲಿ ಅಡಿಪಟ್ಟಿಕೆಗಳ ಮೇಲಿನ ಕೈಪಿಡಿ ಭಾಗದಲ್ಲಿ ಸುಂದರ ಅಲ್ಪ ಉಬ್ಬು ಶಿಲ್ಪಗಳ ಸಾಲುಗಳೇ ಇವೆ. ರಾಮ ಲಕ್ಷ್ಮಣ ಸೀತೆಯರನ್ನು ಗುಹ ನಾವೆಯಲ್ಲಿ ನದಿ ದಾಟಿಸುತ್ತಿರುವುದು ಮುಂತಾದ ರಾಮಾಯಣದ ವಸ್ತುಗಳು ಶಿಲ್ಪಿತವಾಗಿವೆ. ಇದರ ಮೇಲು ಪಟ್ಟಿಕೆಯಲ್ಲಿ ಮನುಷ್ಯ ಮುಖಗಳು ಇಣಕಿ ನೋಡುವಂತಿರುವ ಚೈತ್ಯಗೂಡುಗಳ ಸಾಲಿದೆ. ಕೈಸಾಲೆಯ ಸುತ್ತಲಿನ ಕಂಬಗಳು ಸಾದಾರೀತಿಯ ಚತುರಸ್ರಾಕಾರದವು. ಆದರೆ ಮುಮ್ಮಂಟಪದಲ್ಲಿರುವ ಇದೇ ವಿನ್ಯಾಸದ ಕಂಬಗಳ ಮೇಲೆ ಅನೇಕ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಶಿವ, ನರಸಿಂಹ ಮುಂತಾದ ವಿಗ್ರಹಗಳಲ್ಲದೆ, ನಾನಾ ಭಂಗಿಗಳಲ್ಲಿರುವ ರಸಿಕ ದಂಪತಿಗಳ ಶಿಲ್ಪಗಳೂ ಇವೆ. ಸೌಂದರ್ಯ ಮತ್ತು ವಿವಿಧ ಭಾವಗಳ ನಿರೂಪಣೆ ಇವುಗಳಿಂದಾಗಿ ಅವು ಚೇತೋಹಾರಿಯಾಗಿವೆ. ಕೈಸಾಲೆಯ ಭಾಗದಲ್ಲಿ ಒಳ ಹಜಾರದ ಹೊರಭಿತ್ತಿಯ ಮೇಲೆ ಸುತ್ತಲೂ ದೇವಕೋಷ್ಠಗಳಿದ್ದು ಒಂದೊಂದು ಕೋಷ್ಠದಲ್ಲೂ ವೃಷಭವಾಹನ ಶಿವ, ಮಹಿಷಮರ್ದಿನಿ, ವಿಷ್ಣು, ನರಸಿಂಹ, ವರಾಹ ಮುಂತಾದ ದೇವಮೂರ್ತಿಗಳಿವೆ. ಮುಮ್ಮಂಟಪದಿಂದ ಒಳ ಮಂಟಪಕ್ಕೆ ಹೋಗುವ ದ್ವಾರದ ಮೇಲೆ ಗರುಡ ಮತ್ತು ಪಕ್ಕದ ನೆಲಗಂಬಗಳ ಮೇಲೆ ಗಂಗಾ ಮತ್ತು ಯಮುನೆಯರ ಶಿಲ್ಪಗಳಿವೆ. ಗರ್ಭಗುಡಿಯಲ್ಲಿನ ಮೂಲಶಿಲ್ಪ ಈಗ ಉಳಿದಿಲ್ಲ. ಆದರೆ ಹಿಂದೆ ಇದು ಸೂರ್ಯ ದೇವಾಲಯವಾಗಿದ್ದಿತ್ತು. ದುರ್ಗ ದೇವಾಲಯ ಅದರ ವಿನ್ಯಾಸದಿಂದ ಹಾಗೂ ಭಾವಪೂರ್ಣ ಶಿಲ್ಪಗಳಿಂದ ಐಹೊಳೆಯಲ್ಲಿಯ ಅತಿ ವೈಶಿಷ್ಟ್ಯಪೂರ್ಣ ವಾಸ್ತುಕೃತಿಯಾಗಿದೆ. ಇಲ್ಲಿ ಒಂದೆರಡು ಶಾಸನಗಳಿದ್ದರೂ ಅವು ದೇವಾಲಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವುದಿಲ್ಲ. ದುರ್ಗಗುಡಿಯ ಬಳಿಯಲ್ಲೇ ಅದೇ ಕಾಲದ ಒಂದು ಕಲ್ಯಾಣಿ ಮತ್ತು ಇನ್ನೊಂದು ಚಿಕ್ಕ ಗುಡಿ ಇವೆ. ದೇವಾಲಯದ ದಕ್ಷಿಣದ ಕಡೆಗೆ ಬೇರೆಯಾಗಿ ನಿಂತಿರುವ ಮಹಾದ್ವಾರ ಮಂಟಪವಿದೆ. ಅದರ ಮೇಲೆ ಇಮ್ಮಡಿ ವಿಕ್ರಮಾದಿತ್ಯನ ಕಾಲದ ಒಂದು ಶಾಸನ ಇದೆ.

ಲಾಡಖಾನ್ ಗುಡಿ: ದುರ್ಗ ಗುಡಿಯಿಂದ ಸ್ವಲ್ಪ ದಕ್ಷಿಣಕ್ಕೆ ಸ್ಥಳೀಯವಾಗಿ ಲಾಡಖಾನ್ ಎಂದು ಕರೆಯಲಾದ ಗುಡಿಯ ಗುಂಪಿದೆ. ಈ ಗುಂಪಿನ ಹಲವು ದೇವಾಲಯಗಳಲ್ಲಿ ಲಾಡಖಾನ್ ಗುಡಿಯೇ ಬಹುಮುಖ್ಯವಾದುದು. ಲಾಡಖಾನ್ ಎಂಬವನೊಬ್ಬ ಈ ಗುಡಿಯಲ್ಲಿ ವಾಸಿಸುತ್ತಿದ್ದರಿಂದ ಈ ಹೆಸರು ಬಂದಿದೆ. ಇದರಲ್ಲಿ ಚೌಕಾಕಾರದ ಮಂಟಪ ಮತ್ತು ಅದರ ಮುಂದೆ ಅಗಲವಾದ ಮುಖಮಂಟಪ ಇವೆ. ಚೌಕಾ ಮಂಟಪ ಮಧ್ಯದಲ್ಲಿರುವ ಕಂಬಗಳಿಂದ ಏಕಕೇಂದ್ರದ ಮೂರು ಚೌಕಾಂಕಣಗಳಂತೆ ರೂಪಿತವಾಗಿದೆ. ಕೇಂದ್ರ ಚೌಕಾ ನಾಲ್ಕು ಮೂಲೆಗಳಲ್ಲಿರುವ ನಾಲ್ಕು ಕಂಬಗಳಿಂದಾದುದು. ಅದನ್ನು ಮಧ್ಯದಲ್ಲಿ ಹೊಂದಿರುವ ಎರಡನೆಯ ಚೌಕಾ ಒಟ್ಟು 12 ಕಂಬಗಳಿಂದ, ಸಾಲಿಗೆ ನಾಲ್ಕರಂತೆ ಆದುದು. ಇದನ್ನೂ ಆವರಿಸಿಕೊಂಡಿರುವ ಚೌಕಾ ಹೊರಗೋಡೆಗಳಿಂದ ಆದುದು. ಈ ಹೊರ ಗೋಡೆ ಈಗ ಗೋಡೆಗೇ ಸೇರಿದಂತಿರುವ ಹಲವು ಕಂಬಗಳ ನಡುವೆ ದಪ್ಪ ಚಪ್ಪಡಿಗಳನ್ನು ಜೋಡಿಸಿ ಮಾಡಿರುವಂಥದು. ಪೂರ್ವ, ದಕ್ಷಿಣ ಮತ್ತು ಉತ್ತರ ಗೋಡೆಗಳಲ್ಲಿ ಸುಂದರವಾದ ಜಾಲಂಧ್ರಗಳಿವೆ. ಒಳ ಹಜಾರದಲ್ಲಿ ಪಶ್ಚಿಮದ ಗೋಡೆಗೆ ಸೇರಿದಂತೆ ಚಿಕ್ಕ ಆಯಾಕಾರದ ಗರ್ಭಗೃಹವಿದೆ. ಇದರ ದ್ವಾರದ ಮೇಲೆ ಗರುಡ ವಿಗ್ರಹವಿದೆ. ಆದರೆ ಇದು ಶಿವ ದೇವಾಲಯ. ಒಳಗೆ ಲಿಂಗವಿದೆ. ಮಧ್ಯದ ಚೌಕಾಂಕಣದಲ್ಲಿ ಬಸವನ ವಿಗ್ರಹವಿದೆ. ಮೂರು ಚೌಕಾಂಕಣಗಳಿಗೂ ಬೇರೆ ಬೇರೆ ಮಟ್ಟದಲ್ಲಿ ಚಾವಣಿಗಳಿವೆ. ಮಧ್ಯದ ಚೌಕದಲ್ಲಿರುವುದು ಮಟ್ಟ ಚಾವಣಿ, ಉಳಿದ ಭಾಗಕ್ಕೆ ಇಳಿಜಾರು ಚಾವಣಿಗಳು. ಚಾವಣಿಗಳೆಲ್ಲ ಹಾಸುಗಲ್ಲಿನವು. ಮೇಲುಗಡೆ ಈ ಕಲ್ಲುಗಳು ಕೂಡುವ ಸ್ಥಳದಲ್ಲಿ ಒಳಕ್ಕೆ ನೀರಿಳಿಯದಂತೆ ಇನ್ನೊಂದು ಚಪ್ಪಡಿಯನ್ನು ಉದ್ದುದ್ದವಾಗಿ ಇಟ್ಟಿದೆ. ಮಟ್ಟ ಚಾವಣಿಯ ಮೇಲುಗಡೆ ಎರಡನೆಯ ಅಂತಸ್ತಾಗಿ ಮತ್ತೊಂದು ಕೋಣೆ ಇದೆ. ಮುಮ್ಮಂಟಪದಲ್ಲಿ ಇಟ್ಟಿರುವ ಕಲ್ಲು ಏಣಿಯಿಂದ ಈ ಅಂತಸ್ತನ್ನು ತಲುಪಬಹುದು. ದೇವಾಲಯದ ಕಂಬಗಳು ಚೌಕಾಕಾರವಾಗಿದೆ. ಬಹು ದಪ್ಪವು. ಮುಂದಿನ ಮಂಟಪದ ಕಂಬಗಳಲ್ಲಿ ಮಾತ್ರ ಬಹು ಉತ್ತಮವಾಗಿ ಕೆತ್ತಿರುವ ಅನೇಕ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಯಮುನೆಯ ವಿಗ್ರಹ ಮತ್ತು ಕಾಮಕೇಳಿನಿರತ ರಸಿಕ ದಂಪತಿಗಳ ವಿಗ್ರಹಗಳು ಮನೋಹರ ಕೃತಿಗಳು. ಛತ್ತಿನ ಮೇಲಿನ ಕೋಣೆಯ ಮೂರು ಪಾರ್ಶ್ವದ ಗೋಡೆಗಳ ಮೇಲೂ ಹೊರಭಾಗದಲ್ಲಿ ದೇವ ಶಿಲ್ಪಗಳಿವೆ. ಇವುಗಳಲ್ಲಿ ಪಶ್ಚಿಮದ ಗೋಡೆಯ ಮೇಲಿರುವ ಸೂರ್ಯವಿಗ್ರಹ ಗಮನಾರ್ಹ. ಇತರ ವಿಗ್ರಹಗಳು ಅಸಂಪೂರ್ಣ. ಸರಳ ವಿನ್ಯಾಸ, ಸ್ಥಳೀಯ ಜನಪದ ವಾಸ್ತು ರೀತಿಗಳೊಡನೆ ಇದು ಹೊಂದಿರುವ ಸಾದೃಶ್ಯ–ಇವುಗಳಿಂದ ಈ ದೇವಾಲಯ ಐಹೊಳೆಯ ಅತಿ ಪ್ರಾಚೀನ ಗುಡಿ (ಸು.450)ಎಂದು ಅಭಿಪ್ರಾಯಪಡಲಾಗಿದೆ. ಆದರೆ ಈ ಊಹೆಯನ್ನು ಕೆಲವು ವಿದ್ವಾಂಸರು ಅಲ್ಲಗಳೆದಿದ್ದಾರೆ **(ನೋಡಿ–ಚಾಳುಕ್ಯ ವಂಶ)**. ದೇವಾಲಯದ ಗೋಡೆಯ ಮೇಲೆ ಎರಡು ಶಾಸನಗಳಿವೆ. ಒಂದು ಶಾಸನ ಆರ್ಯಪುರದ ಮಹಾಜನರನ್ನು ಹೆಸರಿಸುತ್ತದೆ. ಈ ಶಾಸನಗಳು ದೇವಾಲಯದ ರಚನೆಯ ಅನಂತರದವು ಸು.8ನೆಯ ಶತಮಾನದವು.

ಗೌಡರ ಗುಡಿ: ಲಾಡಖಾನ್ ಗುಡಿಯ ಸಮೀಪದಲ್ಲಿ ಗೌಡರ ಗುಡಿ ಇದೆ. ಇದೂ ಸುಮಾರು ಲಾಡಖಾನ್ ಗುಡಿಯ ರೀತಿಯಲ್ಲಿ ಮಂಟಪದಂತಿರುವ ಕಟ್ಟಡ. ಎತ್ತರವಾದ ಅಧಿಷ್ಠಾನದ ಮೇಲೆ ನಿಂತಿದೆ. ಹೊರಗೋಡೆಯಲ್ಲಿ 16 ಕಂಬಗಳಿದ್ದು ಅವುಗಳ ನಡುವೆ ಕಲ್ಲು ಚಪ್ಪಡಿಗಳನ್ನು ಗೋಡೆಯಾಗಿ ಜೋಡಿಸಲಾಗಿದೆ. ಮುಂಭಾಗವನ್ನುಳಿದು ಸಭಾಮಂಟಪದಲ್ಲಿ ಕಕ್ಷಾಸನಗಳಿವೆ. ಇವುಗಳ ಹೊರಬದಿಯಲ್ಲಿ ಪೂರ್ಣ ಕಂಬಗಳ ಅಲಂಕರಣ ಇದೆ. ಒಳಗಡೆ ಮಧ್ಯದಲ್ಲಿ ನಾಲ್ಕು ಛತ್ತನ್ನು ಎತ್ತಿ ಹಿಡಿದಿವೆ. ಹಿಂಭಾಗದಲ್ಲಿ ಗರ್ಭಗುಡಿ ಇದ್ದು ಅದರ ಸುತ್ತಲೂ ಪ್ರದಕ್ಷಿಣೆ ಬರುವ ಅನುಕೂಲವಿದೆ. ಮಧ್ಯದ ಭಾಗದ ಮೇಲಿನ ಛತ್ತು ಮಟ್ಟವಾಗಿಯೂ ಬದಿಯ ಭಾಗದವು ಇಳಿಜಾರಾಗಿಯೂ ಇವೆ. ಕಂಬಗಳು ದಪ್ಪ, ಕುಳ್ಳ;

ಬೋದಿಗೆಗಳೂ ಸಾದಾರೀತಿಯವು. ಮಧ್ಯಾಂಕಣದ ತೊಲೆಗಳಲ್ಲಿ ಹೂವಿನ ಸುರುಳಿಗಳು, ಬಾಲಕರು ಮತ್ತು ಪ್ರಾಣಿಗಳ ಚಿತ್ರಗಳಿವೆ. ಗರ್ಭಗುಡಿಯ ದ್ವಾರಬಂಧ ಒಳ್ಳೆಯ ಕೆತ್ತನೆ. ದ್ವಾರತೋಳುಗಳ ಮೇಲೆ ಎರಡು ನೀಳ ಪುಷ್ಪ ಪಟ್ಟಿಗಳಿವೆ. ಚೌಕಟ್ಟಿನ ನೆತ್ತಿಯ ಮೇಲೆ ಗರುಡ ನಾಗಗಳ ಬಾಲಗಳನ್ನು ಹಿಡಿದು ಹಾರುತ್ತಿರುವಂತೆ ತೋರಿಸಲಾಗಿದೆ. ಇದರ ಮೇಲೆ ಮಾಡದಲ್ಲಿ ಕಮಲದ ಮೇಲೆ ಕುಳಿತ ಗಜಲಕ್ಷ್ಮಿಯ ಚಿತ್ರವಿದೆ. ಲಕ್ಷ್ಮಿ ಕಮಲಪಾಣಿಯಾಗಿದ್ದಾಳೆ. ಇಕ್ಕೆಲದಲ್ಲಿ ಒಂದೊಂದು ಆನೆ ಅಭಿಷೇಕ ಮಾಡುವಂತೆಯೂ ಕೆಳಗೆ ಸರೋವರದಲ್ಲಿ ಒಂದೊಂದು ಆನೆ ನಿಂತಂತೆಯೂ ಶಿಲ್ಪಿತವಾಗಿದೆ. ನಾಲ್ಕು ಆನೆಗಳಿಂದ ಕೂಡಿದ ಗಜಲಕ್ಷ್ಮಿ ಪ್ರಾಚೀನ ಸಂಪ್ರದಾಯದ್ದು. ಈಚೆಗೆ ಇದರ ಸುತ್ತಲೂ ನಡೆದ ಉತ್ಖನನದಿಂದ ಈ ಗುಡಿ ಲಾಡಖಾನಕ್ಕಿಂತ ಹಳೆಯದೆಂದು ಊಹಿಸಲು ಆಧಾರಗಳು ದೊರೆಕಿವೆ. ಆದರೆ ಶೈಲಿಯ ದೃಷ್ಟಿಯಲ್ಲಿ ಇದು ಲಾಡಖಾನಕ್ಕಿಂತ ಪರಿಷ್ಕೃತ ರೀತಿಯದು. ಇದು ಭಗವತಿಯ ಗುಡಿಯಾಗಿತ್ತೆಂದೂ ಇದರಲ್ಲಿಯ 8ನೆಯ ಶತಮಾನದ ಒಂದು ಶಾಸನದಿಂದ ತಿಳಿಯುತ್ತದೆ.

ಸೂರ್ಯನಾರಾಯಣ ಗುಡಿ: ಇದು ಲಾಡಖಾನದಿಂದ ಈಶಾನ್ಯಕ್ಕೆ ಸ್ವಲ್ಪ ದೂರದಲ್ಲಿದೆ. ಇದರಲ್ಲಿ ನಾಲ್ಕು ಕಂಬಗಳ ಮುಖಮಂಟಪ, ನಡುವೆ 4 ಕಂಬ, ಸುತ್ತ 12 ಅರೆಗಂಬಗಳಿರುವ ಮಂಟಪ. 4 ಕಂಬ ಮತ್ತು 2 ಅರೆಗಂಬಗಳುಳ್ಳ ಗರ್ಭಗುಡಿ ಇವೆ. ಮಂಟಪ ಸಾದಾ ರೀತಿಯದು, ದಪ್ಪ ಕಂಬ ಮತ್ತು ಮಟ್ಟ ಚಾವಣಿಯದು. ಮುಂಭಾಗದಲ್ಲಿ ಕಕ್ಷಾಸನಗಳಿವೆ. ಮಧ್ಯದ ಮಂಟಪ ಚೌಕಾ. ಮಧ್ಯದ ನಾಲ್ಕು ಕಂಬಗಳಲ್ಲಿ ಎರಡು ದ್ವಾರದ ಬಳಿ, ಇನ್ನೆರಡು ಗರ್ಭಗುಡಿಯ ಬಳಿ ಇವೆ. ಈ ಕಂಬಗಳು ದಪ್ಪ, ಚಚ್ಚೌಕ ಮಾದರಿಯವು. ಇಲ್ಲಿನ ಗರ್ಭಗುಡಿಯ ಒಳಗೆ 4 ಕಂಬಗಳಿರುವುದು ವಿಶೇಷ. ಇದರ ದ್ವಾರಬಂಧದ ಮೇಲೆ ನಾಗಹಿಡಿದ ಗರುಡ, ನಾಗಗಳ ಬಳಿ ಗಂಗಾ, ಯಮುನಾ ಮತ್ತು ಮೇಲಿನ ಪಟ್ಟಿಯಲ್ಲಿ ದ್ವಿಬಾಹು ಕಮಲಪಾಣಿಯಾದ ಆಸೀನ ಸೂರ್ಯವಿಗ್ರಹ ಇವೆ. ಗರ್ಭಗುಡಿಯ ಒಳಗೆ ಸಹ 2ಮೀ ಎತ್ತರದ ಹಸುರುಮೋಡಿ ಕಲ್ಲಿನ ನಿಂತ ಸೂರ್ಯವಿಗ್ರಹವಿದೆ. ಮಂಟಪದ ಛತ್ತಿನಲ್ಲಿ ಪದ್ಮಾಸನಸ್ಥ ಶಿವಮೂರ್ತಿಯನ್ನು ಕೆತ್ತಿದೆ. ಗರ್ಭಗುಡಿಯ ಮೇಲೆ ಎರಡು ಭೂಮಿಗಳ ರೇಖಾನಗರ ಶಿಖರವಿದೆ. ಇದು ಚೈತ್ಯ ಪಟ್ಟಿಕೆಗಳು ಮತ್ತು ಆಮಲಕಗಳಿಂದ ಅಲಂಕೃತವಾಗಿದೆ. ಕಲಶ ಉಳಿದಿಲ್ಲ. ವಿಶಿಷ್ಟ ರೀತಿಯ ವಿನ್ಯಾಸವುಳ್ಳ ಈ ದೇವಾಲಯ ಚಿಕ್ಕದು, ಆದರೆ ಸುಂದರ ಕೃತಿ. ಇದರ ಕಾಲ ಅನಿರ್ದಿಷ್ಟ ಶೈಲಿಯ ಆಧಾರದಿಂದ ಸು.7–8ನೆಯ ಶತಮಾನದದ್ದೆಂದು ಹೇಳಬಹುದು.

ಚಕ್ರ ಗುಡಿ: ಲಾಡಖಾನ ಗುಂಪಿನಿಂದ ಮತ್ತಷ್ಟು ದಕ್ಷಿಣಕ್ಕಿರುವುದು ಚಕ್ರಗುಡಿ. ಇದು ದೊಡ್ಡ ಬಾವಿಯೊಂದರ ದಕ್ಷಿಣ ಪಾರ್ಶ್ವಕ್ಕಿದೆ. ಮಂಟಪ ಮತ್ತು ಗರ್ಭಗುಡಿಗಳಷ್ಟೇ ಇರುವ ಈ ದೇವಾಲಯದ ಮುಂಭಾಗ ಶಿಥಿಲವಾಗಿದೆ. ತಳ ಚೌಕವಿದ್ದು ಮೇಲೆ ದುಂಡು ವಿನ್ಯಾಸವಿರುವ ಕಂಬಗಳು ಮಂಟಪದಲ್ಲಿವೆ. ಗರ್ಭಗುಡಿಯ ದ್ವಾರಬಂಧದ ತೋಳುಗಳಲ್ಲಿ ಒಂದೊಂದರಲ್ಲಿ ಹತ್ತರಂತೆ ಇಪ್ಪತ್ತು ರಸಿಕ ದಂಪತಿಗಳ ಶಿಲ್ಪಗಳಿವೆ. ಗರ್ಭಗುಡಿಯ ಮೇಲಿನ ಶಿಖರ ರೇಖಾನಾಗರ ರೀತಿಯದು. ಶಿಖರದಲ್ಲಿ ಎರಡು ಭೂಮಿಗಳಿದ್ದು ಮೇಲೆ ಆಮಲಕವಿದೆ. ಇದರ ಕಾಲ ಸು.9ನೆಯ ಶತಮಾನ.

ಬಡಿಗೇರ ಗುಡಿ: ಚಕ್ರಗುಡಿಯ ಪಶ್ಚಿಮಕ್ಕಿರುವ ಬಡಿಗೇರ ಗುಡಿ ಮೂಲತಃ ಸೂರ್ಯ ದೇವಾಲಯ ಮುಖ ಮಂಟಪ, ಮಂಟಪ ಮತ್ತು ಗರ್ಭಗುಡಿಗಳಿರುವ ಈ ದೇವಾಲಯಕ್ಕೆ ಕದಂಬನಾಗರ ಫಾಂಸನ ಶಿಖರವಿದೆ. ಮುಖಮಂಟಪ ಪ್ರದೇಶದ ಬಲ ಗಡೆಯ ಕಂಬದ ಮೇಲೆ ದಕ್ಷಬ್ರಹ್ಮ ಮತ್ತು ಎಡಗಡೆಯದರ ಮೇಲೆ ತ್ರಿಶೂಲ ರೀತಿಯ ಕೀರಿಟ ಧಾರಿಯಾದ ಕುಬ್ಜಮೂರ್ತಿಯೊಂದರ ಶಿಲ್ಪ ಇವೆ. ಶಿಖರದ ಮುಂಭಾಗದಲ್ಲಿರುವ ಚೈತ್ಯ ಗೂಡಿನಲ್ಲಿ ಸೂರ್ಯವಿಗ್ರಹವಿದೆ. ಈ ಗುಡಿಯೂ ಸು.9ನೆಯ ಶತಮಾನದ್ದು.

ರಾಚಿ ಗುಡಿ: ಇದು ಗ್ರಾಮದ ಪಶ್ಚಿಮ ಭಾಗದಲ್ಲಿದೆ. ಸುಮಾರು ಉತ್ತರಕಾಲೀನ 9ನೆಯ ಶತಮಾನದಲ್ಲಿ ಕಟ್ಟಿದ ಒಂದು ಗುಡಿ ತ್ರಿಕೂಟಾಚಲ ಶಿವಾಲಯ ರಾಷ್ಟ್ರಕೂಟ ಕಾಲದ ದೇವಾಲಯ ಪೂರ್ವಾಭಿಮುಖವಾಗಿದೆ. ಎತ್ತರವಾದ ಅಧಿಷ್ಠಾನವಿದೆ. ಅಂತರಾಳ ಸಹಿತವಾದ ಮೂರು ಗರ್ಭಗುಡಿಗಳು ಒಂದೇ ನವರಂಗ ಮಂಟಪಕ್ಕೆ ತೆರೆದಂತೆ ಮೂರು ಮುಖ್ಯ ದಿಕ್ಕುಗಳಿವೆ. ಪೂರ್ವದಲ್ಲಿ ವಿಶಾಲವಾದ ಮುಖಮಂಟಪವಿದೆ. ಮುಖಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳು ಛತ್ತನ್ನು ಎತ್ತಿ ನಿಲ್ಲಿಸಿವೆ. ಸುತ್ತಲೂ ಕಕ್ಷಾಸನವಿದ್ದು ಅದರ ಮೇಲೆ ಚಿಕ್ಕ ಕಂಬಗಳಿವೆ, ಮಧ್ಯದ ಚಾವಣಿ ಮಟ್ಟ, ಸುತ್ತಲೂ ಇಳಿಜಾರು. ಈ ಮಂಟಪದ ನಡುವೆ ನಂದಿಯಿದೆ. ನವರಂಗದಲ್ಲೂ ನಾಲ್ಕು ಕಂಬಗಳಿವೆ. ಮುಖ್ಯ ಗರ್ಭಗೃಹದ ಅಂತರಾಳದ ದ್ವಾರದ ಚೌಕಟ್ಟಿನಲ್ಲಿ ಜಾಲಂಧ್ರಗಳಿವೆ. ಎರಡು ಗರ್ಭಗುಡಿಗಳ ಮೇಲೆ ಶಿಖರಗಳು ಉಳಿದುಕೊಂಡಿವೆ. ಗುಡಿಯ ಹೊರಗೋಡೆಗಳ ಮೇಲೆ ಚಿಕ್ಕ ಕೋಷ್ಠಗಳೂ ಗಣಪತಿ, ನಟರಾಜ, ಭೈರವ, ವಿಷ್ಣು ಮುಂತಾದ ಮೂರ್ತಿಗಳೂ ಇವೆ.

ಹುಚ್ಚಪ್ಪಯ್ಯನ ಮಠ: ಗ್ರಾಮದ ದಕ್ಷಿಣಭಾಗದಲ್ಲಿ ಹುಚ್ಚಪ್ಪಯ್ಯನ ಮಠವಿದೆ. ಇದರಲ್ಲಿ ಎರಡು ಕಟ್ಟಡಗಳು ಅಕ್ಕಪಕ್ಕದಲ್ಲಿವೆ. ಒಂದು ದೇವಾಲಯ, ಇನ್ನೊಂದು ಮಠ. ದೇವಾಲಯದಲ್ಲಿ ಗರ್ಭಗುಡಿ ಮತ್ತು ಮಂಟಪ ಮಾತ್ರ ಇವೆ. ಮಂಟಪದ ಮಧ್ಯದಲ್ಲಿ 3 ಕಂಬಗಳ ಎರಡು ಸಾಲುಗಳಿದ್ದು ಅಂಚಿನಲ್ಲಿ ಅವುಗಳ ನೇರದಲ್ಲಿ ಗೋಡೆಗೆ ಸೇರಿದ ಅರೆಗಂಬಗಳಿವೆ. ಮಧ್ಯದ ಅಂಕಣಕ್ಕೆ ಮಟ್ಟಚಾವಣಿಯೂ ಬದಿಯ ಭಾಗಗಳಿಗೆ ಇಳಿಜಾರು ಚಾವಣಿಯೂ ಇದೆ. ಈ ದೇವಾಲಯ ಸುಂದರ ಶಿಲ್ಪಗಳ ಬೀಡು. ಛತ್ತಿನ ಮೇಲೆ ತ್ರಿಮೂರ್ತಿಗಳ ಶಿಲ್ಪವಿದೆ. ಹಲವು ಕಂಬಗಳ ಮೇಲೆ ಅನೇಕ ರೀತಿಯ ಕಾಮಕೇಳಿಗಳಲ್ಲಿ ನಿರತರಾದ ಸುಂದರ ರಸಿಕ ದಂಪತಿಗಳ ಶಿಲ್ಪಗಳಿವೆ. ಎಲ್ಲದರಲ್ಲೂ ಶೃಂಗಾರಭಾವ ಮತ್ತು ಕ್ರಿಯೆಗಳು ಸಹಜವಾಗಿ ನಿರೂಪಿತವಾಗಿವೆ. ಈ ಗುಡಿ ಸು.8ನೆಯ ಶತಮಾನದ ರಚನೆ. ಮಠ, ಒಳ ಮಂಟಪ ಮತ್ತು ಹೊರಮಂಟಪ ಎಂಬ ಎರಡು ಭಾಗಗಳಿಂದ ಕೂಡಿದ್ದು, ಕಂಬಗಳು ಅಲಂಕಾರ ರಹಿತವಾದವು. ಚಾವಣಿ ಮಟ್ಟ ರೀತಿಯದು. ದ್ವಾರದ ಮೇಲೆ ಗಜಲಕ್ಷ್ಮಿಯ ವಿಗ್ರಹವಿದೆ. ಇದರ ಹೊರತು ಬೇರೆ ಶಿಲ್ಪಗಳಿಲ್ಲ. ಇಲ್ಲಿ 1076ರ ಒಂದು ಶಾಸನವಿದೆ.

ಅಳ್ಳಿಬಸಪ್ಪನ ಗುಡಿ: ಗ್ರಾಮದ ಪಶ್ಚಿಮಕ್ಕಿದೆ. ಸು.7ನೆಯ ಶತಮಾನದ ಚಿಕ್ಕ ಕಟ್ಟಡ. ಗರ್ಭಗುಡಿ ಮತ್ತು ಮಂಟಪವಷ್ಟೇ ಇವೆ. ಮಧ್ಯದ ಚಾವಣಿ ಮಟ್ಟವಾಗಿಯೂ ಹಿಂಭಾಗ ಮುಂಭಾಗ ಇಳಿಜಾರಾಗಿಯೂ ಇವೆ. ಮಂಟಪದ ದ್ವಾರದ ಬಲಮಗ್ಗಲಿನಲ್ಲಿ ಆಮೆಯ ಮೇಲೆ ನಿಂತ ಯಮುನಾ ಮತ್ತು ಎಡಭಾಗದಲ್ಲಿ ಮೊಸಳೆಯ ಮೇಲೆ ನಿಂತ ಗಂಗಾ ವಿಗ್ರಹಗಳು ಇವೆ. ಜೊತೆಯಲ್ಲಿ ಶಂಖನಿಧಿ ಪೂರ್ಣಕುಂಭ ಮುಂತಾದ ಮಂಗಲ ಚಿಹ್ನೆಗಳನ್ನು ಕೆತ್ತಲಾಗಿದೆ.


ಶೈವ ಗುಹ ದೇವಾಲಯ (ರಾವಳಫಡಿ)

ಕೊಂತಿ ಗುಡಿ ಗುಂಪು: ಪೇಟೆಯ ಒಳಗೆ ಸುಮಾರು ನಡುಮಧ್ಯದಲ್ಲಿ ಕುಂತಿಗುಡಿಗಳ ಗುಂಪಿದೆ. ಇದು 4 ದೇವಾಲಯಗಳ ಕೂಟ. ಒಂದನೆಯ ದೇವಾಲಯ ಆಯಾಕಾರದ ಮಟ್ಟ ಚಾವಣಿಯ ಮಂಟಪ. ಒಳಗೆ 6 ಕಂಬಗಳ ಎರಡು ಸಾಲುಗಳಿವೆ. ಹಿಂಬದಿಯ ಗೋಡೆಗೆ ಸೇರಿದಂತೆ ಚಿಕ್ಕ ಆಯಾಕಾರದ ಗರ್ಭಗೃಹವಿದೆ. ಮಂಟಪದ ಛತ್ತಿನಲ್ಲಿ ಕಮಲಾಸೀನಬ್ರಹ್ಮ, ಅನಂತಶಾಯಿವಿಷ್ಣು ಮತ್ತು ಉಮಾಮಹೇಶ್ವರರ ಶಿಲ್ಪಚದರವೂ ಗರ್ಭಗುಡಿಯ ದಕ್ಷಿಣಗೋಡೆಯ ಮೇಲೆ ಶಿವತಾಂಡವ, ಅದರ ದ್ವಾರದ ಇಕ್ಕೆಲದಲ್ಲಿ ಶೈವ ದ್ವಾರಪಾಲಕರು, ಕಂಬಗಳ ಮೇಲೆ ರಸಿಕ ದಂಪತಿಗಳ ಮುಂತಾದ ಶಿಲ್ಪಗಳೂ ಇವೆ. ಇದರ ಎದುರು ಸ್ವಲ್ಪ ಬದಿಗೆ ಇರುವ ಚೌಕ ತಳಪಾಯದ ಕಂಬಗಳ ಮೇಲೆ ನಿಂತ ಮಟ್ಟ ಚಾವಣಿಯ ಗುಡಿ ಎರಡನೆಯದು. ಇದರಲ್ಲೂ ಉಮಾಮಹೇಶ್ವರ, ಸೂರ್ಯ,ಗಣೇಶ, ಮಹಿಷಮರ್ದಿನಿ ಮುಂತಾದ ಶಿಲ್ಪಗಳಿವೆ. ಈ ಎರಡು ಗುಡಿಗಳ ನಡುವೆ ನಾಲ್ಕು ಕಂಬಗಳ ಮೇಲೆ ನಿಂತ ಒಂದು ಮಂಟಪವಿದೆ. ಚಾವಣಿ ಮಟ್ಟವಾಗಿದ್ದು ಸುತ್ತಲೂ ಚಜ್ಜವಿದೆ. ಕಂಬದ ಮೇಲಿನ ಬೋದಿಗೆಗಳ ಕೆಳಗೆ ಯಾಳಿಗಳು ಮತ್ತು ಕುಬ್ಜಮೂರ್ತಿಗಳನ್ನು ಅಳವಡಿಸಲಾಗಿದೆ. ಈ ಮಂಟಪ ಉತ್ತಮ ಪ್ರಮಾಣ ಮತ್ತು ಅಲಂಕರಣದಿಂದ ಆಕರ್ಷಕವಾಗಿದೆ. 1 ಮತ್ತು 2ನೆಯ ಗುಡಿಗಳು ಸು.7ನೆಯ ಶತಮಾನದವು. ಆದರೆ ಈ ಗುಡಿಗಳಲ್ಲಿ ಕಂಡುಬರುವ ಸರಳ ವಿನ್ಯಾಸವನ್ನು ಆಧರಿಸಿ ಇವೇ ಐಹೊಳೆಯ ಅತಿ ಪ್ರಾಚೀನ ಗುಡಿಗಳು ಎಂಬ ಅಭಿಪ್ರಾಯವಿದೆ. ಮಂಟಪ ಸು.9ನೆಯ ಶತಮಾನದ್ದು. ಕುಂತಿಗುಡಿ ಗುಂಪಿನಲ್ಲಿ 3ನೆಯದು. ಸು.7ನೆಯ ಶತಮಾನದ್ದು. ವಿನ್ಯಾಸ ಒಂದನೆಯದರಂತೆಯೇ. ಇದು ಶೈವಗುಡಿ. ಗರ್ಭಗುಡಿಯ ದ್ವಾರದ ಇಕ್ಕೆಲದಲ್ಲಿ ಶಂಖನಿಧಿ ಪದ್ಮನಿಧಿಗಳ ಶಿಲ್ಪಗಳಿವೆ. ಗಜ, ವೃಷಭ, ವರಾಹ, ಎರಡೇ ಕಾಲುಗಳ ಮೇಲೆ ನಿಂತಿರುವ ಮೂವರು ಸ್ತ್ರೀಯರು ಸಂಯುಕ್ತ ಶಿಲ್ಪ ಮುಂತಾದ ಶಿಲ್ಪಗಳು ಈ ಗುಡಿಯಲ್ಲಿವೆ. 4ನೆಯ ಗುಡಿ ಸ್ವಲ್ಪ ಮಟ್ಟಿಗೆ ಹಾಳಾಗಿದೆ. ಇಲ್ಲಿ ಕೆಲವು ರಸಿಕ ದಂಪತಿಗಳ ಶಿಲ್ಪಗಳು ಉತ್ತಮವಾಗಿ ಮೂಡಿದೆ. ಇದು ಸು.10ನೆಯ ಶತಮಾನದಲ್ಲಿ ಕಟ್ಟಿದ್ದು.

ಚರಂತಿ ಮಠ ಗುಂಪು: ಕೊಂತಿಗುಡಿಗಳಿಂದ ಸ್ವಲ್ಪವೇ ಈಶಾನ್ಯಕ್ಕೆ ಇದೆ. ಇದು ಜೈನ ಗುಡಿಗಳ ಗುಂಪು. ಕಾಲಾಂತರದಲ್ಲಿ ಇವು ಚರಂತಿ ಮಠದವರ ಅಧೀನಕ್ಕೆ ಬಂದುದರಿಂದ ಈ ಹೆಸರು ರೂಢಿಗೆ ಬಂದಂತೆ ತೋರುತ್ತದೆ. ಈ ಗುಂಪಿನಲ್ಲಿರುವ ಮುಖ್ಯ ಗುಡಿ ತ್ರಿಕೂಟಾಚಲ. ಸು.11–12ನೆಯ ಶತಮಾನದ್ದು, ಕಲ್ಯಾಣ ಚಾಳುಕ್ಯ ವಾಸ್ತುಸಂಪ್ರದಾಯದಲ್ಲಿರುವ ಈ ಕಟ್ಟಡದಲ್ಲಿ 3 ಗರ್ಭಗೃಹಗಳನ್ನು ಕೂಡಿಸುವ ಒಂದು ಮಂಟಪ ಮತ್ತು ಅದರ ಮುಂದೆ ಮುಖಮಂಟಪ ಇವೆ. ಮುಖಮಂಟಪದಲ್ಲಿ 2 ಕಂಬಗಳು ಮತ್ತು 2 ಅರೆಗಂಬಗಳಿವೆ. ಒಳಮಂಟಪದ ಮಧ್ಯದಲ್ಲಿ ಎತ್ತರವಾದ ಕಟ್ಟೆಯ ಮೇಲೆ 4 ಕಂಬಗಳೂ ಗೋಡೆಗೆ ಸೇರಿದಂತೆ ಅರೆಗಂಬಗಳೂ ಇವೆ. ಇಲ್ಲಿಯ ಕಂಬಗಳು ಚೌಕತಳದವು. ಮೇಲೆ ದುಂಡಗೆ ತಿರುಗಣೆಯಲ್ಲಿ

ಕಡೆದ ಅಲಂಕರಣವುಳ್ಳವು. ದೇವಾಲಯದ ಶಿಖರ ಈಗ ಉಳಿದಿಲ್ಲ. ಮುಂದಣ ಪ್ರವೇಶ ದ್ವಾರದ ಮೇಲೆ ತೀರ್ಥಂಕರ ಮತ್ತು ಮಗ್ಗುಲಲ್ಲಿ ಇಬ್ಬರು ಗಂಧರ್ವರ ವಿಗ್ರಹಗಳಿವೆ. ಮಧ್ಯದ ಗರ್ಭಗುಡಿಯ ಮುಂದೆ ಅಂತರಾಳವಿದ್ದು, ಅದರ ದ್ವಾರ ಬಂಧವು ಗಜಲಕ್ಷ್ಮಿ, ಕೆಲವು ಚಿಕ್ಕ ಮೂರ್ತಿಗಳು ಮತ್ತು ಹೂವಿನ ಸುಳಿವುಗಳಿಂದ ಅಲಂಕೃತವಾಗಿದೆ.

ಇದೇ ಗುಂಪಿನಲ್ಲಿ ಅವಳಿ ಬಸದಿ ಇದೆ. ಎರಡಕ್ಕೂ ಒಂದೇ ಮುಖಮಂಟಪವಿದೆ. ಒಟ್ಟು 24 ತೀರ್ಥಂಕರರನ್ನು ಒಂದರಲ್ಲಿ ಹನ್ನೆರಡರಂತೆ ಎರಡರಲ್ಲಿ ಕಡೆಯಲಾಗಿದೆ. ಅಲ್ಲದೆ ಯಕ್ಷಿಗಳು ಮುಂತಾದ ಇತರ ಜೈನಮೂರ್ತಿಗಳೂ ಇವೆ. ಒಂದು ಗರ್ಭಗುಡಿಯಲ್ಲಿ ಮಾತ್ರ ಜಿನಮೂರ್ತಿ ಇದೆ. ವಾಸ್ತುರಚನೆಯಲ್ಲಿ ಕಲ್ಯಾಣ ಚಾಳುಕ್ಯ ಸಂಪ್ರದಾಯದ ಅಂಶ ಗಳು ಚೆನ್ನಾಗಿ ಮೂಡಿವೆ. ಇದು 1120ರಲ್ಲಿ ರಚಿತವಾಯಿತೆಂದು ಇಲ್ಲಿನ ಒಂದು ಶಾಸನ ತಿಳಿಸುತ್ತದೆ. ತ್ರ್ಯಂಬಕೇಶ್ವರ ಗುಡಿಗಳ ಗುಂಪು: ಚರಂತಿ ಮಠದ ಆಗ್ನೇಯಕ್ಕೆ ಸ್ವಲ್ಪ ದೂರದಲ್ಲಿದೆ. ಇದರಲ್ಲಿರುವುದು ಎರಡು ತ್ರಿಕೂಟಾಚಲಗಳು, ಎತ್ತರವಾದ ಅಧಿಷ್ಠಾನದ ಮೇಲಿರುವ ಈ ಗುಡಿಗಳು ಪಶ್ಚಿಮಾಭಿಮುಖವಾಗಿವೆ. ತ್ರಿಕೂಟಾಚಲಗಳಲ್ಲಿ ಮುಖಮಂಟಪ, ನವರಂಗ ಮತ್ತು ಅದರ ಸುತ್ತ ಮೂರು ಅಂತರಾಳಯುತ ಗರ್ಭಗೃಹಗಳಿವೆ. ನವರಂಗದ ಮಧ್ಯಭಾಗದಲ್ಲಿ ಚೌಕತಳ ಮತ್ತು ಮೇಲೆ ತಿರುಗಣೆಯಲ್ಲಿ ಮಾಡಿದಂತಿರುವ ಶ್ರೀಕಾರ ಮಾದರಿಯ ನಾಲ್ಕು ಕಂಬಗಳಿವೆ. ಇದರ ಕಾಲ ಸು.12ನೆಯ ಶತಮಾನ.

ರವಿಕೀರ್ತಿಯ ಜಿನೇಂದ್ರ ಭವನ

ಇದರ ಸಮೀಪದಲ್ಲಿರುವ ಮದ್ದಿನ ಗುಡಿಯೂ ಮೇಲಿನವುಗಳ ವಿನ್ಯಾಸದ ತ್ರಿಕೂಟಾಚಲ. ಗರ್ಭಗುಡಿಗಳ ಮೇಲೆ ಏರುವ ಕದಂಬ ನಾಗರ ಶಿಖರಗಳಿವೆ. ಮಂಟಪದಲ್ಲಿ ನಟರಾಜನ ಸುಂದರ ಮೂರ್ತಿಯಿದೆ. ಈ ದೇವಾಲಯ ಸು.11ನೆಯ ಶತಮಾನದ್ದು.

ಜೈನಗುಡಿಗಳ ಗುಂಪು: ತ್ರ್ಯಂಬಕೇಶ್ವರ ಗುಂಪಿನಿಂದ ಉತ್ತರಕ್ಕೆ ಜೈನ ನಾರಾಯಣ ಅಥವಾ ಯೋಗಿನಾರಾಯಣ ಎಂದು ಕರೆಯುವ ಗುಂಪಿದೆ. ಪಕ್ಕದಲ್ಲಿರುವ ಗೌರಿಗುಡಿ ಮೊದಲು (ಯೋಗಿ) ನಾರಾಯಣನ ಗುಡಿಯಾಗಿದ್ದುದರಿಂದ, ಈ ಜೈನ ಗುಡಿಗಳಿಗೂ ಜೈನನಾರಾಯಣ ಎಂಬ ಹೆಸರು ಬಂದಿರುವಂತೆ ತೋರುತ್ತದೆ. ಈ ಗುಂಪಿನಲ್ಲಿಯ ಮುಖ್ಯ ಗುಡಿಯೂ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿರುವ ತ್ರಿಕೂಟಾಚಲ 11ನೆಯ ಶತಮಾನದ್ದು. ಇದರಲ್ಲಿಯ ಒಂದು ಕಂಬದ ಮೇಲೆ ಗಂಡವಿಮುಕ್ತ ಭಟ್ಟಾರಕನೆಂಬ ಜೈನಮತಿಯ ಸ್ತುತಿ ಇರುವ ಶಾಸನವಿದೆ. ನವರಂಗಕ್ಕೆ ತೆರೆದಂತಿರುವ ಮೂರು ಗರ್ಭಗುಡಿಗಳಲ್ಲಿ ಜೈನ ತೀರ್ಥಂಕರರ ಮೂರ್ತಿಗಳಿದ್ದವು. ಈಗ ಮಧ್ಯದ ಗರ್ಭಗುಡಿಯಲ್ಲಿನ ಪಾರ್ಶ್ವನಾಥ ಮಾತ್ರ ಉಳಿದಿದೆ. ಬಲಗಡೆಯ ಮೇಲಿನ ಶಿಖರ ಸುಸ್ಥಿತಿಯಲ್ಲಿದೆ.

ಇದರ ಎದುರಿರುವ ಇನ್ನೊಂದು ಗುಡಿಯೂ ಜೈನ. ಸುಕನಾಸಿ ಮತ್ತು ಗರ್ಭಗುಡಿಗಳಷ್ಟೇ ಈಗಿವೆ. ಗರ್ಭಗುಡಿಯಲ್ಲಿ ಮೂಲವಿಗ್ರಹವಿಲ್ಲ. ಈಗ ಪರಶು, ಕಮಲ ಮತ್ತು ಪಾಶವನ್ನು ಹಿಡಿದಿರುವ ಯಕ್ಷನ ಮೂರ್ತಿ ಇದೆ. ಅದರ ಪೀಠದ ಮೇಲೆ ನವಿಲು ಅಥವಾ ಕುಕ್ಕುಟವಿದೆ. ಗುಡಿಯ ಮುಂದೆ ಚೌಮುಖಿ ಇದೆ. ಇದರ ಪ್ರತಿಯೊಂದು ಮಗ್ಗುಲಲ್ಲೂ ಕಾಯೋತ್ಸರ್ಗ ಭಂಗದಲ್ಲಿರುವ ಐದು ತೀರ್ಥಂಕರರ ವಿಗ್ರಹಗಳಿವೆ. ಈ ಗುಡಿಯೂ ಸು.11ನೆಯ ಶತಮಾನದ ರಚನೆ. ಇವಲ್ಲದೆ ಇನ್ನೂ ಎರಡು ಜೈನಗುಡಿಗಳು ಈ ಗುಂಪಿನಲ್ಲಿವೆ.

ಗೌರಿ ಗುಡಿ: ಮೇಲಿನ ಗುಂಪಿನಿಂದ ಉತ್ತರಕ್ಕೆ ಗೌರಿಗುಡಿ (ವಿರೂಪಾಕ್ಷ ಗುಡಿ) ಇದೆ. ಇದರ ಮಂಟಪದಲ್ಲಿ ಎರಡು ಸ್ತ್ರೀ ಮೂರ್ತಿಗಳಿದ್ದು ಒಂದನ್ನು ಗೌರಿ ಎಂದು ಕರೆಯುವುದರಿಂದ ಗೌರಿಗುಡಿ ಎಂಬ ಹೆಸರೂ ಗರ್ಭಗುಡಿಯ ಲಿಂಗ ವಿರೂಪಾಕ್ಷ ಎನ್ನು ವುದರಿಂದ ಆ ಹೆಸರೂ ಈ ದೇವಾಲಯಕ್ಕೆ ಬಂದಿರಬೇಕು. ಆದರೆ ಮೂಲತಃ ಇದು ವೈಷ್ಣವ ದೇವಾಲಯವೆಂಬುದು ಇಲ್ಲಿನ ಅನೇಕ ಶಿಲ್ಪಗಳಿಂದ ತಿಳಿಯುತ್ತದೆ. ದೇವಾಲಯದಲ್ಲಿ ಮುಂದೆ ಒಂದು ವಿಶಾಲವಾದ ಮಂಟಪ ಮತ್ತು ಹಿಂದೆ ಇದಕ್ಕೆ ಸೇರಿದಂತೆ ಸುಕನಾಸಿ ಮತ್ತು ಗರ್ಭಗುಡಿ ಇವೆ. ದೇವಾಲಯ ದಕ್ಷಿಣಾಭಿಮುಖವಾಗಿರುವುದು ವಿಶೇಷ. ಮಂಟಪಕ್ಕೆ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಕಡೆಗಳಿಂದ ಪ್ರವೇಶ ದ್ವಾರಗಳಿವೆ. ಮಂಟಪದ ಮಧ್ಯದಲ್ಲಿರುವ 4 ಎತ್ತರದ ಕಂಬಗಳು ಮತ್ತು ಸುತ್ತಲ ಕಕ್ಷಾಸನದ ಮೇಲಿರುವ ಕಿರುಗಂಬಗಳು ಛತ್ತನ್ನು ಎತ್ತಿಹಿಡಿದಿವೆ. ರಚನೆ ಪೂರ್ಣವಾಗಿ ಕಲ್ಯಾಣ ಚಾಳುಕ್ಯ ಸಂಪ್ರದಾಯದ್ದು. ಇದರ ಕಾಲ ಸು.12ನೆಯ ಶತಮಾನ. ಕಂಬಗಳ ಮೇಲೆ ವೈಷ್ಣವ ಮೂರ್ತಿಗಳ ಉಬ್ಬುಶಿಲ್ಪಗಳಿವೆ. ಅಂತರಾಳದ ಹೊರಗೋಡೆಗಳಲ್ಲಿ ನಾಲ್ಕು ಮಾಡಗಳಿವೆ. ಇವುಗಳಲ್ಲೂ ಹಿಂದೆ ಮೂರ್ತಿಗಳಿದ್ದಿರಬೇಕು. ಮಂಟಪದಲ್ಲಿ ಸುಂದರ ಕಮಲಭುವನೇಶ್ವರಿ ಇದೆ. ಅಂಬಿಗೇರಗುಡಿ ಗುಂಪು: ಕೋಟೆಯ ಹೊರಗೆ ದುರ್ಗ ದೇವಾಲಯದಿಂದ ಪಶ್ಚಿಮಕ್ಕೆ ಈ ಗುಂಪಿದೆ. ಇಲ್ಲಿ ಮೂರು ದೇವಾಲಯಗಳಿವೆ. ಇವುಗಳಲ್ಲಿ ದೊಡ್ಡ ಗುಡಿಯ ಮೇಲೆ ರೇಖಾನಾಗರ ಶಿಖರವಿದೆ. ತಳವಿನ್ಯಾಸದಲ್ಲಿ ಗರ್ಭಗುಡಿ ಮತ್ತು ಮಂಟಪಗಳಷ್ಟೇ ಇರುವ ದೇವಾಲಯ ಪೂರ್ವಾಭಿಮುಖವಾಗಿದ್ದರೂ ಮಂಟಪದ ಉತ್ತರ ಮತ್ತು ದಕ್ಷಿಣಕ್ಕೆ ಪ್ರವೇಶ ದ್ವಾರಗಳಿವೆ. ಮಂಟಪದ ದ್ವಾರಬಂಧದ ಮೇಲೆ ಸುರುಳಿಗಳು, ದ್ವಾರಪಾಲಕರು, ಗಣಪತಿ, ನವಿಲ ಮೇಲೆ ಕುಳಿತ ಸುಬ್ರಹ್ಮಣ್ಯ ಈ ಶಿಲ್ಪಗಳಿವೆ. ಹೊರಗೋಡೆಯ ಮೇಲೆ ಕಲಶ, ಬೋದಿಗೆಗಳನ್ನೆತ್ತಿರುವ ಅರೆಗಂಬಗಳ ಅಲಂಕರಣವಿದೆ. ಗುಡಿ ಸು.10ನೆಯ ಶತಮಾನದ್ದೆಂದು ಊಹಿಸಲಾಗಿದೆ. ಇನ್ನೆರಡು ಗುಡಿಗಳು ಸಾಧಾರಣ ರೀತಿಯವು. ಎರಡನೆಯ ಗುಡಿ 1.20 ಮೀ ಎತ್ತರದ ಇಟ್ಟಿಗೆಯ ಕಟ್ಟೆಯ ಮೇಲೆ ಇದೆ. ಗರ್ಭಗುಡಿಯಲ್ಲಿ ಭಗ್ನವಾದ ಸೂರ್ಯ ಅಥವಾ ವಿಷ್ಣುವಿನ ವಿಗ್ರಹವಿದೆ.

ಚಿಕ್ಕೀಗುಡಿಗಳ ಗುಂಪು: ಅಂಬಿಗೇರ ಗುಡಿಯಿಂದ ಸ್ವಲ್ಪ ಉತ್ತರಕ್ಕೆ ಪ್ರವಾಸಿಮಂದಿರಕ್ಕೆ ಹೋಗುವ ಹಾದಿಯ ಎಡಗಡೆ ಇರುವುದೇ ಚಿಕ್ಕೀಗುಡಿಗಳ ಗುಂಪು. ಈ ಗುಂಪಿನಲ್ಲಿ ದೊಡ್ಡದಾದ ಚಿಕ್ಕೀಗುಡಿಯಲ್ಲಿ ಮುಖಮಂಟಪ, ಮಂಟಪ ಮತ್ತು ಮಂಟಪದ ಒಳಗೇ ಇರುವ ಗರ್ಭಗುಡಿ ಇವೆ. ತಳವಿನ್ಯಾಸ ಸುಮಾರು ಗೌಡರ ಗುಡಿ ರೀತಿಯದು. ಮುಖಮಂಟಪ 4 ಚೌಕಕಂಬಗಳನ್ನುಳ್ಳಮಟ್ಟಸ ಚಾವಣಿಯದು. ಇದು ಮತ್ತು ಹಿಂದಿನ ಮಂಟಪ ಎತ್ತರದ ಅಧಿಷ್ಠಾನದ ಮೇಲೆ ಇವೆ. ಒಳಮಂಟಪದ ಮಧ್ಯದಲ್ಲಿ 4 ಕಂಬಗಳಿವೆ. ಇವುಗಳ ಕೆಳಭಾಗ ಚೌಕ, ಮೇಲುಭಾಗ ಅಷ್ಟಕೋನ ಅಡ್ಡಕೊಯ್ತವುಳ್ಳವು. ಇವುಗಳ ಮೇಲೆ ಅರ್ಧ ಪುಷ್ಪ, ಸರ, ಯಾಳಿ ಮುಂತಾದ ಶಿಲ್ಪಗಳಿವೆ. ಗರ್ಭಗುಡಿಯ ಸುತ್ತ ಪ್ರದಕ್ಷಿಣಾಪಥವಿದೆ. ಪ್ರದಕ್ಷಿಣಾಪಥದ ಹೊರಗೋಡೆಗಳಲ್ಲಿ ಒಂದೊಂದರಲ್ಲೂ ಮೂರು ಮೂರು ಜಾಲಂಧ್ರಗಳಿವೆ. ಇವುಗಳಲ್ಲಿ ಮಧ್ಯದ ಜಾಲಂಧ್ರ ದೊಡ್ಡದು, ಪಕ್ಕದವು ಕಿರಿದು. ಗರ್ಭಗುಡಿಯ ದ್ವಾರಬಂಧದ ಮೇಲೆ ಬಳ್ಳಿ ಹೂವಿನ ಬಂಧಗಳಿವೆ. ದ್ವಾರಾಗ್ರ ಪಟ್ಟಿಯ ಮೇಲೆ ನಾಗಬಾಲಗಳನ್ನು ಹಿಡಿದು ಹಾರುತ್ತಿರುವ ಗರುಡನ ಶಿಲ್ಪವಿದೆ. ಚೌಕಟ್ಟಿನ ಅರ್ಧ ಕಂಬಗಳ ಮೇಲೆ ಬೋದಿಗೆಯೂ ಕೆಳಗೆ ಪೂರ್ಣ ಕುಂಭಗಳೂ ಇವೆ. ದ್ವಾರಾಗ್ರಪಟ್ಟಿಯ ಮೇಲುಗಡೆಯ ಪಟ್ಟಿಯಲ್ಲಿ ಚೈತ್ಯ ಕಿಟಕಿಗಳಿವೆ. ಇವು ಗಳಲ್ಲಿ ಮಧ್ಯ ವೃಷಭಸಹಿತ ಶಿವ, ಬಲಗಡೆ ಬ್ರಹ್ಮ ಮತ್ತು ಎಡಗಡೆ ವಿಷ್ಣುವಿನ ನಿಂತಶಿಲ್ಪಗಳಿವೆ. ಗರ್ಭಗುಡಿಯಲ್ಲಿ ದುಂಡಾದ ಶಾಲುಂಕದ ಮೇಲೆ ಶಿವಲಿಂಗವಿದೆ. ಗರ್ಭಗುಡಿಯ ಹೊರ ಗೋಡೆಯ ಮೇಲೆ ಮೂರು ಕಡೆ ಕೋಷ್ಠಗಳಿವೆ. ಗರ್ಭಗುಡಿಯ ಮುಂದಿನ ಮಂಟಪದಲ್ಲಿ ಕಮಲ, ಗಂಧರ್ವರು, ಅನಂತನ ಮೇಲೆ ಕುಳಿತ ಲಕ್ಷ್ಮೀಸಮೇತ ವಿಷ್ಣು, ತ್ರಿವಿಕ್ರಮ, ನಟರಾಜ ಮುಂತಾದ ಶಿಲ್ಪಗಳನ್ನು ಛತ್ತಿನಲ್ಲಿ ಅಳವಡಿಸಲಾಗಿದೆ. ಮಂಟಪಕ್ಕೆ ಮಧ್ಯದಲ್ಲಿ ಮೇಲೆದ್ದ ಮಟ್ಟ ಚಾವಣಿಯಿದೆ. ಅದರ ಪಕ್ಕಗಳಿಂದ ಕಿಂಡಿಗಳನ್ನು ಮಾಡಿ ಛತ್ತಿನ ಶಿಲ್ಪ ಗಳಿಗೆ ಬೆಳಕು ಬೀಳುವಂತೆ ಮಾಡಿರುವುದು ಇಲ್ಲಿನ ವೈಶಿಷ್ಟ್ಯ. ಮಂಟಪದ ಬದಿಯ ಭಾಗಗಳಿಗೆ ಹಾಸುಗಲ್ಲುಗಳ ಇಳಿಜಾರು ಚಾವಣಿ ಇದೆ. ಗುಡಿ ಸು.7ನೆಯ ಶತಮಾನದ್ದೆಂದು ಊಹಿಸಲಾಗಿದೆ. ಈ ಗುಡಿಯ ಎಡಬದಿಗೆ ಅನತಿ ದೂರದಲ್ಲಿ ಗಜಪೃಷ್ಠಾಕಾರದ ತಳ ವಿನ್ಯಾಸದ ದೇವಾಲಯ ವಿದ್ದಿತ್ತು. ಈಗ ಇದರ ತಳವಿನ್ಯಾಸ ಮಾತ್ರ ಉಳಿದಿದೆ. ಇದರ ಬಲಗಡೆ ನಿಂತ ಇನ್ನೊಂದು ಗುಡಿಯಲ್ಲಿ ಗರ್ಭಗುಡಿ, ಸುಕನಾಸಿ ಮತ್ತು ಮಂಟಪ ಇದ್ದುವು. ಈಗ ಮಂಟಪ ಬಿದ್ದಿದೆ. ಸುಕನಾಸಿಯ ಹತ್ತಿರ ಶೈವದ್ವಾರಪಾಲಕರ ವಿಗ್ರಹಗಳಿವೆ. ಪಕ್ಕದಲ್ಲಿ ಜಾಲಂಧ್ರಗಳಿವೆ. ಗುಡಿಯಲ್ಲಿ ಮೂಲವಿಗ್ರಹವಿಲ್ಲ. ಇದು ಸು.10ನೆಯ ಶತಮಾನದ ಕಟ್ಟಡ.

ಹುಚ್ಚಿಮಲ್ಲಿ ಗುಡಿ: ಗ್ರಾಮದ ಉತ್ತರಕ್ಕೆ ಪ್ರವಾಸಿ ಮಂದಿರ, ಹಿಂಬದಿಯಲ್ಲಿ ಕಾಣುವ ಒಂದು ಸುಂದರ ದೇವಾಲಯದ ಪಶ್ಚಿಮಾಭಿಮುಖವಾಗಿರುವ ಈ ದೇವಾಲಯ, ಗರ್ಭಗುಡಿ ಸಣ್ಣದಾದ ಸಭಾಮಂಟಪ ಮತ್ತು ಮುಖ ಮಂಟಪದಿಂದ ಕೂಡಿದ್ದು, ಎತ್ತರವಾದ ಅಧಿಷ್ಠಾನದ ಮೇಲಿದೆ. ಗರ್ಭಗುಡಿಯಲ್ಲಿ ಮೂಲ ಶಿವಲಿಂಗವಿದೆ. ಇದರ ಬಾಗಿಲ ಚೌಕಟ್ಟು ಎರಡು ಬದಿಯಲ್ಲಿ ನಾಲ್ಕು ಶಾಖೆಗಳಿಂದ ಕೂಡಿದ್ದು, ಚೆಲುವಾದ ಕುಸುರಿನ ಕೆತ್ತನೆಯಿಂದ ಅಲಂಕೃತ ವಾಗಿದೆ. ಎರಡು ಬದಿಯಲ್ಲಿ ಶಾಖೆಗಳಲ್ಲಿ ದಂಪತಿಗಳು, ಆನೆ ಮತ್ತು ಗಂಗೆ ಯಮುನೆಯರ ಶಿಲ್ಪಗಳಿವೆ. ಚೌಕಟ್ಟಿನ ಮೇಲಿನ ಅಡ್ಡಜಂತಿಯ ಮಧ್ಯದಲ್ಲಿ ಗರುಡನ ಮೂರ್ತಿಯೂ ಮತ್ತು ಈ ಜಂತಿಯ ಮೇಲೆ ಬ್ರಹ್ಮ, ನಟರಾಜ ಮತ್ತು ವಿಷ್ಣು, ಉಚ್ಚಮಟ್ಟದ ಶಿಲ್ಪಗಳು, ಸಭಾ ಮಂಟಪದ ಮಧ್ಯದ ಕಂಬಗಳನ್ನು ಸೇರಿಸಿ ಬಾಗಿಲು ಮತ್ತು ಜಾಲರಿಯುಳ್ಳ ಅಡ್ಡ ಗೋಡೆ ಯೊಂದನ್ನು ಮಾಡಲಾಗಿದೆ. ಸಭಾಮಂಟಪದ ಮಾನಲ್ಲಿ ಇಂದ್ರ, ಯಮ, ಕುಬೇರ ಮತ್ತು ಬ್ರಹ್ಮ ಹಾಗೂ ಕಮಲಗಳ ಶಿಲ್ಪಗಳಿವೆ. ಗರ್ಭಗುಡಿಗೆ ಸುತ್ತುಹಾಕಲು ಪ್ರದಕ್ಷಿಣಾಪಥವಿದ್ದು, ಇದರ ಹೊರಬದಿಯಲ್ಲಿ ಜಾಲಂಧ್ರಗಳುಳ್ಳ ಗೋಡೆಗಳಿವೆ. ಸಭಾಮಂಟಪದ ಬಾಗಿಲ ಚೌಕಟ್ಟು ಗರ್ಭಗುಡಿಯ ತರಹದ್ದೇ. ಮುಖಮಂಟಪದಲ್ಲಿ ಕುಳಿತುಕೊಳ್ಳಲು ಎರಡು ಬದಿಯಲ್ಲೂ ಕಕ್ಷಾಸನಗಳಿವೆ. ಮುಂದೆ ಮೆಟ್ಟಿಲುಗಳಿವೆ. ನೆಲದ ಮಟ್ಟದಲ್ಲಿಯ ಮೆಟ್ಟಿಲಿನ ಮುಂದೆ ಅರ್ಧಚಂದ್ರಾಕೃತಿಯ ಹಾಸುಗಲ್ಲಿದೆ. ಕಕ್ಷಾಸನದ ಹೊರಮೈಯಲ್ಲಿ ಪೂರ್ಣ ಘಟಗಳ ಸಾಲಿನ ಉಬ್ಬುಶಿಲ್ಪಗಳಿವೆ. ಮಾಡಿನಲ್ಲಿ ಸುಂದರವಾದ ತಾರಕಾರಿ ಕಾರ್ತಿಕೇಯನ ಉಬ್ಬು ಶಿಲ್ಪವಿದೆ. ಗರ್ಭಗುಡಿಯ ಮೇಲೆ ಔತ್ತರೇಯ ಮಾದರಿಯ ರೇಖಾನಾಗರ ಶಿಖರವಿದೆ. ಇದರ ಉತ್ತರ ಮತ್ತು ಪೂರ್ವಬದಿಗಳಲ್ಲಿ ಬ್ರಹ್ಮ, ಸೂರ್ಯರ ಮೂರ್ತಿಗಳಿವೆ. ದಕ್ಷಿಣ ಬದಿಯಲ್ಲಿಯ ಮೂರ್ತಿ ಒಡೆದುಹೋಗಿದೆ. ಪಶ್ಚಿಮದ ಬದಿಯಲ್ಲಿ ಅಷ್ಟೊಂದಾಗಿ ಎದ್ದು ಕಾಣದ ಶುಕನಾಸಿಯಿದ್ದು ಮುಂಬದಿಯಲ್ಲಿ ನಟರಾಜನ ಶಿಲ್ಪವಿದೆ. ಈ ದೇವಾಲಯದ

ಮುಂದೆ ಮೆಟ್ಟಿಲುಗಳುಳ್ಳ ಒಂದು ಕೊಳವಿದೆ. ಇದರ ಗೋಡೆಯ ಮೇಲಿನ ಹಂತದಲ್ಲೇ ಉದ್ದಕ್ಕೂ ಅಷ್ಟದಿಕ್ಪಾಲಕರು, ನಟರಾಜ, ಮಹಿಷಮರ್ದಿನಿ, ಗಜಾನನ, ಬ್ರಹ್ಮ, ವಿಷ್ಣು, ಗಜಲಕ್ಷ್ಮಿ, ಕಾರ್ತಿಕೇಯ, ಕುದುರೆ, ಆನೆ, ದೇವಭಕ್ತರು, ಪಂಚತಂತ್ರದ ಮೊಸಳೆ ಮಂಗ ಕಥೆಯ ಸನ್ನಿವೇಶ, ಕಿರಾತಾರ್ಜುನೀಯದ ಕಥೆ ಮುಂತಾದ ಅನೇಕ ಶಿಲ್ಪಗಳಿವೆ. ಸ್ವಲ್ಪ ಕೆಳಗೆ ಮೂಲೆಗಳಲ್ಲಿ ಸಿಂಹಗಳ ಶಿಲ್ಪಗಳೂ ಮೆಟ್ಟಿಲುಗಳ ಬದಿಯಲ್ಲಿ ಸಪ್ತಮಾತೃಕೆಯರ ಮೂರ್ತಿಯೂ ಇವೆ. ಇದು ಮೊದಲಿನಿಂದಲೂ ಶಿವ ದೇವಾಲಯ, ಹುಚ್ಚುಮಲ್ಲಿ ಎಂಬುದು ಈಚೆಗೆ ಬಂದ ಹೆಸರು. ಇತ್ತೀಚೆಗೆ ಇದು ಮೂಲತಃ ಕಾರ್ತಿಕೇಯ ದೇವಾಲಯವೆಂದು ಅಭಿಪ್ರಾಯ ಪಡಲಾಗಿದೆ. ಸು.7ನೆಯ ಶತಮಾನಗಳಲ್ಲಿ ಈ ದೇವಾಲಯ ರಚಿತವಾಗಿರಬಹುದು. (ಎ.ಎಸ್.)

## ಒ

**ಒಮನ್ ಪರ್ಯಾಯ ದ್ವೀಪ:** ಡೆನ್ಮಾರ್ಕಿನ ಪುರಾತತ್ತ್ವ ತಂಡ ಇಲ್ಲಿ ಬೃಹತ್ ಶಿಲಾ ಕಂಡಿ ಕೋಣೆ ಗೋರಿಗಳಿರುವ ಅನೇಕ ದಿಬ್ಬಗಳನ್ನು 1960ರ ದಶಕದಲ್ಲಿ ಪತ್ತೆ ಮಾಡಿತು. ಇವುಗಳ ಕಾಲಮಾನ ಪ್ರ.ಶ.ಪೂ.3000–1300. ಬುರೈಮಿಯ ಮರಳು ಗಾಡಿನ ನೀರುಬುಗ್ಗೆಯ ಉತ್ತರಕ್ಕೆ ಇರುವ ಹಿಲಿ ಮತ್ತು ಕಥರ ಗ್ರಾಮಗಳ ನಡುವಿನ ಬೃಹತ್ ಶಿಲಾಗೋರಿ ಸಮೂಹ ಒಂದು ಮಾದರಿ ನೆಲೆ. ಈ ಸಂಸ್ಕೃತಿಯ ಜನವಾಸ್ತವ್ಯ ನೆಲೆಯೂ (ಪ್ರ.ಶ.ಪೂ.3000–1200) ಇಲ್ಲಿದೆ. ಅಲ್‌ಐನಿ ಮತ್ತು ಜಬೆಲ್ ಅಫಿತ್ ಮಧ್ಯದ ಹಲವಾರು ಕಲ್ಲುಗುಪ್ಪೆಗಳು ಉತ್ಖನನದಲ್ಲಿ ದೊರಕಿದ ಲುರಿಸ್ತಾನ್ ಮಾದರಿಯ ಕಂಚಿನ ಖಡ್ಗದ ಆಧಾರದ ಮೇಲೆ ಪ್ರ.ಶ.ಪೂ.1400–1300 ಅವಧಿಯವೆಂದು ನಿರ್ಧರಿಸಲಾಗಿದೆ. ಈ ದ್ವೀಪದಲ್ಲಿ ಬೃಹತ್‌ಶಿಲಾ ಸಂಸ್ಕೃತಿ ಸಮುದಾಯದವರು ಪ್ರಶ.ಪೂ.1200–1000ವರೆಗೆ ನೆಲೆಸಿದ್ದರೆಂದು ಅಭಿಪ್ರಾಯಪಡಲಾಗಿದೆ. ಪ್ರಶ.ಪೂ.ಸು.1000ದ ಹೊತ್ತಿಗೆ ಏಡನ್, ಒಮನ್ ಮತ್ತು ಪರ್ಷಿಯ ಕೊಲ್ಲಿ ಜನರು ಪೂರ್ವದ ಮಕ್ರಾನ್ ಕಡಲತೀರ ಪ್ರದೇಶದ ಮೂಲಕವಾಗಿ ಭಾರತದ ಪಶ್ಚಿಮ ಘಟ್ಟ ಪ್ರದೇಶಕ್ಕೆ ಬಂದಿರಬಹುದೆಂಬ ಅಭಿಪ್ರಾಯವಿದೆ. ಒಮನ್ ಬೃಹತ್ ಶಿಲಾಗೋರಿ ಸಂಪ್ರದಾಯ ದಕ್ಷಿಣ ಭಾರತದ ಬೃಹತ್ ಶಿಲಾಗೋರಿ ಪರಂಪರೆಯ ಮೂಲವೆಂಬ ಅಭಿಪ್ರಾಯವಿದೆ. (ಎ.ಎಸ್.;ಎನ್.ಎಲ್.)

**ಒರಿಸ್ಸ ಶಿಲಾ ಚಿತ್ರಕಲೆ: ನೋಡಿ–ಶಿಲಾಚಿತ್ರಗಳು**

## ಓ

**ಓಜಿಯಾನ:** ರಾಜಸ್ತಾನ ಜಿಲ್ಲೆಯ ಭಿಲವಾಡ ರಾಜ್ಯದಲ್ಲಿರುವ ತಾಮ್ರ–ಶಿಲಾಯುಗದ ವಸತಿ ನೆಲೆ. ಅಹಾರ್‌ನಿಂದ ಏರಣ್‌ವರೆಗೆ, ಅಜ್ಮೀರ್‌ನಿಂದ ನವ್ಡತೋಲಿಯವರೆಗೆ ಹರಡಿದ್ದ ಅಹಾರ್ ಸಂಸ್ಕೃತಿಯ ಪ್ರಮುಖ ವಸತಿ ನೆಲೆಗಳಲ್ಲೊಂದು. ನದಿ ಬಯಲಿನ ಸಂಸ್ಕೃತಿಯಾದ ಅಹಾರ್‌ಗೆ ಬೆಟ್ಟದ ಇಳಿಜಾರಿನಲ್ಲಿರುವ ಓಜಿಯಾನ ಒಂದು ಅಪವಾದ. ಅಹಾರ್ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಶದಿಂದ 2000ದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬಿ.ಆರ್. ಮೀನಾ ಮತ್ತು ಅಲೋಕ್ ತ್ರಿಪಾಠಿಯವರ ನಿರ್ದೇಶನದಲ್ಲಿ ಇಲ್ಲಿ ಉತ್ಖನನವನ್ನು ನಡೆಸಿತು. ಅಹಾರ್ ಸಂಸ್ಕೃತಿಯ ಸು.7.5 ಮೀ ದಪ್ಪದ ವಸತಿ ಪದರ ಇಲ್ಲಿ ಕಂಡುಬಂತು. ಈ ಸಂಸ್ಕೃತಿಯ ಇಷ್ಟು ದಪ್ಪದ ವಸತಿ ಪದರ ಈವರೆಗೆ ಕಂಡುಬಂದಿರುವುದು ಓಜಿಯಾನದಲ್ಲಿ ಮಾತ್ರ. ಕಟ್ಟಡಾವಶೇಷ ಮತ್ತು ಮಣ್ಪಾತ್ರೆಯ ಆಧಾರದ ಮೇಲೆ 3 ಉಪಹಂತಗಳನ್ನು ಗುರುತಿಸಲಾಯಿತು. ಮೊಟ್ಟಮೊದಲು (1ನೆಯ ಉಪಹಂತ) ಇಲ್ಲಿ ವಾಸ್ತವ್ಯ ಹೂಡಿದವರು ಕೃಷಿಕ ಜನರು. ಬಿಳಿ ರೇಖಾ ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಯನ್ನು ಉಪಯೋಗಿಸುತ್ತಿದ್ದ ಇವರು ಒಣ ಇಟ್ಟಿಗೆಯ ಮನೆಗಳನ್ನು ಕಟ್ಟಿಕೊಂಡರು. 2ನೆಯ ಉಪಹಂತದಲ್ಲಿ ಗೃಹನಿರ್ಮಾಣಕ್ಕೆ ಇಟ್ಟಿಗೆಗಿಂತ ಹೆಚ್ಚಾಗಿ ಸ್ಥಳೀಯ ಕಲ್ಲುಗಳನ್ನು ಬಳಸಿಕೊಳ್ಳಲಾಯಿತು. ಸದೃಢವಾಗಿ ಕಟ್ಟಿದ ಉಗ್ರಾಣ ಮತ್ತು ಬಹು ಕೊಠಡಿಯ ಮನೆಯ ಭಾಗಗಳು ಈ ಹಂತದ ಕಟ್ಟಡಾವಶೇಷಗಳು. ಬೆಂಕಿಯ ಆಕಸ್ಮಿಕಕ್ಕೆ ಒಳಗಾದ ಮೇಲೆ ಗೋದಿಯನ್ನು ಸಂಗ್ರಹಿಸಿದ್ದ ಉಗ್ರಾಣದ ಬಳಕೆ ನಿಂತುಹೋಯಿತು. 3ನೆಯ ಉಪಹಂತದಲ್ಲಿ ಜನಜೀವನ ದಲ್ಲಾದ ಬದಲಾವಣೆಯನ್ನು ತಡಿಕೆ ಮನೆಯ ಅವಶೇಷಗಳು ಸೂಚಿಸುತ್ತವೆ. ಈ ವಸತಿ ಪೂರ್ಣವಾಗಿ ಬೆಂಕಿಗೆ ಆಹುತಿಯಾಯಿತು.

3 ಉಪಹಂತಗಳಲ್ಲಿಯೂ ಬಿಳಿ ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಬಳಕೆಯಲ್ಲಿತ್ತು. ಆದರೆ ಇದರ ಆಕಾರ ಹಾಗೂ ಇದನ್ನು ಸುಡುವ ತಂತ್ರವಿಧಾನ ಕಾಲದಿಂದ ಕಾಲಕ್ಕೆ ಬದಲಾಯಿತು. ಕೆಂಪುಪಾತ್ರೆ, ಕಪ್ಪು ಪಾತ್ರೆ, ಬೂದುಪಾತ್ರೆ ಹಾಗೂ ಕಂದುಬಣ್ಣದ ಪಾತ್ರೆಗಳನ್ನೂ ಈ ಜನ ಉಪಯೋಗಿಸುತ್ತಿದ್ದರು. ಇಲ್ಲಿನ ಮತ್ತೊಂದು ವೈಶಿಷ್ಟ್ಯ ಬಿಳಿಬಣ್ಣದಿಂದ ಅಲಂಕರಿಸಿದ ಪುಟ್ಟಪುಟ್ಟ ಸುಡಾವೆ ಮಣ್ಣಿನ ಗೂಳಿಗಳು. ಇಂತಹ ಗೂಳಿಗೊಂಬೆಗಳು ಯಾವ ಸಮಕಾಲೀನ ಸಂಸ್ಕೃತಿಯಲ್ಲಿಯೂ ಈವರೆಗೆ ಕಂಡುಬಂದಿಲ್ಲ. ಇವನ್ನು ಸಮಾಜದ ಪರಂಪರಿಕಾ ಚರಣೆಯಲ್ಲಿ ಬಳಸುತ್ತಿದ್ದಂತೆ ತೋರುತ್ತದೆ. ಇಲ್ಲಿನ ಜನರು ಸುಡಾವೆ ಮಣ್ಣಿನಲ್ಲಿ ದನದ ಆಕೃತಿಗಳನ್ನೂ ತಯಾರಿಸುತ್ತಿದ್ದುದು ಮತ್ತೊಂದು ವಿಶೇಷ. ಈ ಜನರ ಇತರ ಅವಶೇಷಗಳೆಂದರೆ ತಾಮ್ರದ ತೆಳು ಹಾಳೆಯಿಂದ ಮಾಡಿದ ಸಣ್ಣ ಕೊಡಲಿ, ತಾಮ್ರದ ಬಳೆ ಮತ್ತು ಉಂಗುರ, ಹರಪ್ಪ ಮಾದರಿಯ ಫಯನ್ಸ್ ಗಾಜಿನ ಮಣಿ, ಸುಡಾವೆ ಮಣ್ಣಿನ ತಕಲಿ, ಬಿಲ್ಲೆ, ಆಟಿಕೆಯ ಗಾಡಿಯ ಚಕ್ರಗಳು, ಅರೆಯುವ ಕಲ್ಲು ಇತ್ಯಾದಿ. ಈ ನೆಲೆಯ ಕಾಲಮಾನ ಪ್ರ.ಶ.ಪೂ.ಸು.3–2ನೆಯ ಸಹಸ್ರಮಾನ. (ವಿ.ಎಸ್.)

**ಓಲ್ಡುವಾಯ್:** ಪೂರ್ವ ಆಫ್ರಿಕದ ಟಾಂಜಾನಿಯದ ಆಗ್ನೇಯಕ್ಕೆ ಸೆರೆಂಗಟಿ ಮೈದಾನದಲ್ಲಿರುವ ಒಂದು ಕಮರಿ; ಮಾನವನ ಉಗಮಕ್ಕೆ ಸಂಬಂಧಿಸಿದಂತೆ ಪಳೆಯುಳಿಕೆಗಳು ಹಾಗೂ ಸಾಂಸ್ಕೃತಿಕ ಅವಶೇಷಗಳಿಂದ ಸಮೃದ್ಧವಾದ ಒಂದು ಪ್ರದೇಶ. ಪ್ಲಿಸ್ಟೋಸೀನ್ ಯುಗದ ಪ್ರಾರಂಭದಲ್ಲಿ ಉದಿಸಿದ ಶಿಲಾಪದರಗಳು ಇಲ್ಲಿಯ ಓಲ್ಡುವಾಯ್ ನದಿಯ ಬಯಲಿನಲ್ಲಿ ಹರಡಿವೆ. ಪ್ರವಾಹದ ಕೊರೆತದಿಂದ ಇಲ್ಲಿ ಸು.100ಮೀ ಆಳವಿರುವ ಕಮರಿಯೊಂದು ಏರ್ಪಟ್ಟು, ಕಮರಿಯ ಅಕ್ಕಪಕ್ಕಗಳಲ್ಲಿ ವಿವಿಧ ಶಿಲಾಪದರಗಳು ಕಂಡು ಬಂದಿವೆ. ಈ ಪ್ರದೇಶದ ಪ್ರಾಗೈತಿಹಾಸಿಕ ಮಹತ್ತ್ವವನ್ನು ಗುರುತಿಸಿದವರು ಲೂಯಿ ಲೀಕಿ. ಅನಂತರದಲ್ಲಿ ಇಲ್ಲಿ ಇವನ ಪತ್ನಿ ಮೇರಿ ಲೀಕಿ ಆಳವಾದ ಸಂಶೋಧನೆ ನಡೆಸಿದಳು. ಕಮರಿಯ ತಳದಿಂದ ಮೇಲಕ್ಕೆ ಕಂಡುಬರುವ ಪದರಗಳು ಈ ರೀತಿಯಾಗಿವೆ: ಮೊದಲಿಗೆ ಬಸಾಲ್ಟ್ ಶಿಲೆಯ ದಪ್ಪನಾದ ಪದರಗಳು, ಅದರ ಮೇಲೆ ಮರಳುಗಲ್ಲಿನ ಹಾಗೂ ಸುಣ್ಣಕಲ್ಲಿನ ಪದರಗಳಿವೆ. ಈ ಶಿಲಾಪದರಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸ ಬಹುದು. ಭೂವಿಜ್ಞಾನ ರೀತ್ಯ ಮೊದಲ ಮತ್ತು ಎರಡನೆಯ ಪದರಗಳ ಕೆಳಭಾಗದಲ್ಲಿ ವಿಲ್ಲಫ್ರಾಂಚಿಯನ್ ಯುಗಕ್ಕೆ ಸೇರಿದ ಪ್ರಾಣಿಗಳ ಅವಶೇಷಗಳು ದೊರೆತಿವೆ. ಮೂರು ಮತ್ತು ನಾಲ್ಕನೆಯ ಪದರಗಳಲ್ಲಿ ಬೃಹದಾಕಾರದ ಸಸ್ತನಿಗಳಾದ ಆನೆ, ಹಂದಿ, ಜಿಂಕೆ, ನೀರಾನೆ, ಕುರಿ, ಕುದುರೆ, ಖಡ್ಗಮೃಗ ಮತ್ತು ಕಪಿಮಾನವ ವರ್ಗದ ಅವಶೇಷಗಳು ದೊರೆತಿವೆ.

ಈ ವಿವಿಧ ಪದರಗಳ ಹವಾಗುಣವನ್ನು ವಿದ್ವಾಂಸರು ಈ ರೀತಿಯಾಗಿ ನಿರ್ಧರಿಸಿದ್ದಾರೆ. ಮೊದಲು ಮತ್ತು ಎರಡನೆಯ ಪದರದ ಕೆಳಭಾಗಗಳನ್ನು ಹೆಚ್ಚು ಮಳೆ ಸುರಿಯುತ್ತಿದ್ದ, ತೇವ ಹವೆಯಿದ್ದ ಆಫ್ರಿಕದ ಎರಡನೆಯ ಪ್ಲೂವಿಯಲ್ ಯುಗಕ್ಕೂ ಎರಡನೆಯ ಪದರದ ಮೇಲ್ಮಟ್ಟವನ್ನು ಒಣಹವೆಯಿದ್ದ ಎರಡನೆಯ ಪ್ಲೂವಿಯಲ್ ಯುಗದ ಅಂತ್ಯಕಾಲಕ್ಕೂ (ಈ ಕಾಲದಲ್ಲಿ ಅಲ್ಲಿದ್ದ ಸರೋವರಕ್ಕೆ ಆಗಾಗ್ಗೆ ನದಿಪ್ರವಾಹಗಳೊಡನೆ ಬಂದ ಕಲ್ಲು ಮಣ್ಣುಗಳಿಂದ ಉಂಟಾದ ಪದರಗಳನ್ನು ಇಲ್ಲಿ ಕಾಣಬಹುದು) ಮೂರನೆಯ ಪದರವನ್ನು ಉಷ್ಣಹವೆಯ ಎರಡನೆಯ ಅಂತರ ಪ್ಲೂವಿಯಲ್ ಯುಗಕ್ಕೂ ನಾಲ್ಕನೆಯ ಪದರವನ್ನು ಪುನಃ ಆ ಸರೋವರ ಪ್ರಬಲಿಸಿದ ತೇವ ಹವೆಯ ಮೂರನೆಯ ಪ್ಲೂವಿಯಲ್ ಯುಗಕ್ಕೂ ಸೇರಿಸಲಾಗಿದೆ.

ಪೊಟ್ಯಾಷಿಯಂ ಆರ್ಗನ್ ಕಾಲಗಣನಾಪದ್ಧತಿಯ ರೀತ್ಯ ಮೊದಲೆರಡು ಪದರಗಳು ಸು.22–15 ಲಕ್ಷ ವರ್ಷಗಳಷ್ಟು ಮೂರು ಮತ್ತು ನಾಲ್ಕನೆಯ ಪದರಗಳು 15 ಲಕ್ಷದಿಂದ 60 ಸಾವಿರ ವರ್ಷಗಳಷ್ಟು ಪುರಾತನವೆಂದು ತಿಳಿದುಬಂದಿದೆ.

ಮಾನವ ಜಾತಿಯ ಉಗಮ: ಇಲ್ಲಿ ಆದಿಮಾನವನ ಉಗಮ ಮತ್ತು ವಿಕಾಸದ ಪುರಾವೆಗಳು ದೊರಕಿವೆ. ಪೂರ್ವಆಫ್ರಿಕ ಮಾನವ ಜನಾಂಗದ ಉಗಮಸ್ಥಾನವೆಂದು ತೋರಿಸಿಕೊಟ್ಟಿವೆ. ಇವುಗಳಲ್ಲಿ ಬಹಳ ಮುಖ್ಯವಾದುದು 1959ರಲ್ಲಿ ಮೊದಲ ಪದರದ ಮೇಲ್ಮಟ್ಟದಲ್ಲಿ ದೊರಕಿದ ಜಿಂಜಾಂಥ್ರೊಪಸ್ ಕಪಿಮಾನವ ಅವಶೇಷಗಳು. ಸು.22 ಲಕ್ಷ ವರ್ಷಗಳಷ್ಟು ಹಳೆಯದೆಂದು ಅಭಿಪ್ರಾಯಪಡಲಾಗಿತ್ತು. ಈಗ ಈ ಅವಶೇಷಗಳನ್ನು ಆಸ್ಟ್ರಲೋಪಿತಿಕಸ್ ಬೊಯ್ಸಯ್ ವರ್ಗಕ್ಕೆ ಸೇರಿಸಲಾಗಿದೆ. ಅದೇ ಸುಮಾರಿಗೆ ಸೇರಿದ ಇನ್ನೊಂದು ಗುಂಪಿನ ಮಾನವ ಹೋಮೊ ಹ್ಯಾಬಿಲಿಸ್‌ನ ಅವಶೇಷಗಳೊಂದಿಗೆ ಇದುವರೆಗೂ ತಿಳಿದಮಟ್ಟಿಗೆ ಅತ್ಯಂತ ಪ್ರಾಚೀನ ಮಾನವನಿರ್ಮಿತ ಶಿಲೋಪಕರಣಗಳೂ ಕೆಲವು ಜಲಚರಗಳ ಅವಶೇಷಗಳೂ ಈ ನೆಲೆಯಲ್ಲಿ ಕಂಡುಬಂದುವು. ಇಲ್ಲಿ ಕಂಡುಬಂದಿರುವ ಕಲ್ಲಿನ ಅರ್ಧ ವರ್ತುಲದ ಅವಶೇಷಗಳು ಆ ಮಾನವನ ವಸತಿಗಳ ಅವಶೇಷಗಳಿದ್ದಿರಬಹುದೆಂದು ಅಭಿಪ್ರಾಯಪಡಲಾಗಿದೆ. ಎರಡನೆಯ ಪದರದ ಕೆಳಮಟ್ಟದಲ್ಲಿ ಹೋಮೋ ಹ್ಯಾಬಿಲಿಸ್ ಮತ್ತು ಮೇಲ್ಮಟ್ಟದಲ್ಲಿ ಹೋಮೋ ಎರೆಕ್ಟಸ್ ಮಾನವಾವಶೇಷಗಳೂ ಶಿಲೋಪಕರಣಗಳೂ ದೊರಕಿವೆ.

ಸಾಂಸ್ಕೃತಿಕ ಅವಶೇಷಗಳು: ಇಲ್ಲಿ ಕಂಡುಬಂದಿರುವ ಮಾನವ ನಿರ್ಮಿತ ಅವಶೇಷಗಳನ್ನು ಎರಡು ಸಾಂಸ್ಕೃತಿಕ ಹಂತಗಳಾಗಿ ಗುರುತಿಸಲಾಗಿದೆ. ಮೊದಲ ಪದರ ಮತ್ತು ಎರಡನೆಯ ಪದರದ ಕೆಳಮಟ್ಟದಲ್ಲಿ, ಮಾನವ ನಿರ್ಮಿತವೆಂದು ಖಚಿತವಾಗಿ ಪರಿಗಣಿಸಲ್ಪಟ್ಟಿರುವ ಉರುಟುಕಲ್ಲಿನ ಉಪಕರಣ, ತುಂಡುಕೊಡಲಿಗಳು ಹೇರಳವಾಗಿದ್ದು ಇದನ್ನು ಓಲ್ಡೊವಾನ್ ಸಂಸ್ಕೃತಿಯೆಂದು ಕರೆಯಲಾಗಿದೆ (ಕಾಲಮಾನ 22–17 ಲಕ್ಷ). ಎರಡೂ ಪಾರ್ಶ್ವಗಳಿಂದ ಚಕ್ಕೆಗಳನ್ನು ತೆಗೆದುದರಿಂದ ಉಂಟಾದ ಚೂಪಾದ ಉಪಕರಣಗಳ ಅಂಚಿನ ಮೇಲೆ ಉಪಯೋಗದಿಂದುಂಟಾದ ಚಿಹ್ನೆಗಳು ಕಂಡುಬರುತ್ತವೆ. ಈ ಉಪಕರಣಗಳ ತಯಾರಿಕೆಯಲ್ಲಿ ಬಂದ ಚಕ್ಕೆಕಲ್ಲುಗಳನ್ನು ಕೊಯ್ಯುವ ಮತ್ತು ಒರೆಯುವ ಸಾಧನಗಳನ್ನಾಗಿ ಉಪಯೋಗಿಸಿಕೊಂಡಂತೆ ಕಾಣುತ್ತದೆ. ಕ್ರಮೇಣ ಈ ಉರುಟುಕಲ್ಲಿನ ಉಪಕರಣಗಳು

ಮಾರ್ಪಾಟು ಹೊಂದಿ, ಎರಡು ಪಾರ್ಶ್ವಗಳಿಂದ ಚಕ್ಕೆಗಳನ್ನು ತೆಗೆದಿರುವ ಮೊನೆಯಂತೆ ತುದಿಯಿರುವ ಮತ್ತು ದಪ್ಪನಾದ ಕೈಪಿಡಿಯಿರುವ, ಕೈಗೊಡಲಿಯ ಪೂರ್ವರೂಪದ ಉಪಕರಣಗಳಾದುವು. ಈ ಸಂಸ್ಕೃತಿಯನ್ನು ಸುಧಾರಿತ ಓಲ್ಡೊವಾನ್ ಸಂಸ್ಕೃತಿ ಎಂದು ಕರೆಯಲಾಗಿದೆ. ಎರಡನೆಯ ಪದರದ ಮೇಲ್ಭಾಗ ಅಶೂಲಿಯನ್ ಮಾದರಿಯ ಕೈಗೊಡಲಿಗಳು, ಕಡಿಕತ್ತಿಗಳು ದೊರಕಿವೆ (ಕಾಲಮಾನ 14-4 ಲಕ್ಷ). (ಬಿ.ಕೆ.ಜಿ.)

**ಓಸ್ವಾಲ್ಡ್, ಸ್ಪೆಂಗ್ಲರ್:** 1880-1936. ಆಧುನಿಕ ಯುಗದ ಮಹಾನ್ ಚಿಂತಕರಲ್ಲಿ ಒಬ್ಬ. ಹೆಗಲ್ ತತ್ತ್ವಜ್ಞಾನ ಪಂಥಕ್ಕೆ ಸೇರಿದವನು. ಜರ್ಮನಿಯ ಬ್ಲಾಕನ್ ಬರ್ಗ್‍ನಲ್ಲಿ 1880 ಮೇ 20ರಂದು ಜನಿಸಿದ. ಹಾಲೆ, ಮ್ಯೂನಿಕ್ ಮತ್ತು ಬರ್ಲಿನ್ ವಿಶ್ವವಿದ್ಯಾಲಯಗಳಲ್ಲಿ ಗಣಿತವಿಜ್ಞಾನ, ಇತಿಹಾಸ ಮತ್ತು ನೈಸರ್ಗಿಕ ವಿಜ್ಞಾನಗಳನ್ನು ಅಭ್ಯಾಸ ಮಾಡಿದ. ಅನಂತರ ಹಂಬರ್ಗ್‍ನ ಡಸ್ಸೆಲ್ಡ್ರೂಫ್ ಪ್ರೌಢಶಾಲೆಯಲ್ಲಿ ಅಧ್ಯಾಪಕನಾಗಿ ತನ್ನ ವೃತ್ತಿ ಜೀವನವನ್ನು ಆರಂಭಿಸಿದ. ಗಯಟೆ ಮತ್ತು ನೀಶೆ ಈತನಿಗೆ ಬಹುದೊಡ್ಡ ಸ್ಫೂರ್ತಿಯಾಗಿದ್ದರು. 1911-14ರ ಅವಧಿಯಲ್ಲಿ ಈತ ತನ್ನ ಪ್ರಖ್ಯಾತ ಕೃತಿ ಡಿಕ್ಲೈನ್ ಆಫ್ ದಿ ವೆಸ್ಟ್ ರಚಿಸಿದ. ಈ ಕೃತಿ ಬೌದ್ಧಿಕ ವಲಯದಲ್ಲಿ ಸಂಚಲನವನ್ನೇ ಸೃಷ್ಟಿಸಿದ್ದಲ್ಲದೆ ಅನೇಕ ಭಾಷೆಗಳಿಗೂ ಅನುವಾದವಾಯಿತು. ಸಂಸ್ಕೃತಿಯ ಅದರಲ್ಲೂ ಯುರೋಪಿಯನ್ ಸಂಸ್ಕೃತಿಯ ಹುಟ್ಟು, ಬೆಳವಣಿಗೆ ಹಾಗೂ ಅವನತಿಯನ್ನು ಈ ಕೃತಿಯಲ್ಲಿ ಈತ ಚರ್ಚಿಸಿದ್ದಾನೆ; ಪ್ರಕೃತಿಯ ನಿಯಮವನ್ನು ಎತ್ತಿ ಹಿಡಿದಿದ್ದಾನೆ. ಈ ಕೃತಿ ರಚನೆಯ ಹಿಂದೆ ಜರ್ಮನ್ನರ ಒಂದನೆಯ ಮಹಾಯುದ್ಧದ ಸೋಲಿನ ಪ್ರಭಾವವನ್ನು ಕಾಣಬಹುದು.

ಇತಿಹಾಸದಲ್ಲಿ ಆಧುನಿಕ, ಮಧ್ಯಯುಗೀನ ಇಲ್ಲವೆ ಪ್ರಾಚೀನ ಎನ್ನುವ ಕಾಲವಿಂಗಡನೆಯನ್ನು ತಿರಸ್ಕರಿಸಿದ ಸ್ಪೆಂಗ್ಲರ್, ಅದಕ್ಕೆ ಬದಲಾಗಿ ಕೊಪರ್ನಿಕನ್ ಮಾದರಿಯನ್ನು ಒಪ್ಪಿದ್ದ. ತನ್ನ ಕೃತಿಯಲ್ಲಿ ಯಾವುದೇ ಒಂದು ಸಂಸ್ಕೃತಿಯ ಮೇಲ್ಮೆಯನ್ನು ಒಪ್ಪದ ಈತ ಅದು ಪೌರಾತ್ಯವೇ ಇರಲಿ ಪಾಶ್ಚಿಮಾತ್ಯವೇ ಇರಲಿ ಎಲ್ಲವೂ ಮುಖ್ಯವೆನ್ನುತ್ತಾನೆ. ಇತಿಹಾಸ ಕೇವಲ ಬಾಹ್ಯ ಚಟುವಟಿಕೆಗಳ ಅಧ್ಯಯನ ಎನ್ನುವುದನ್ನು ಈತ ಒಪ್ಪುವುದಿಲ್ಲ. ಇತಿಹಾಸ ಒಂದು ನಿರಂತರ ಬದಲಾವಣೆಗಳಿಗೆ ಒಳಪಡುವ ಮತ್ತು ಹರಿಯುವ ಪ್ರಕ್ರಿಯೆಯಾದರೆ, ಪ್ರಕೃತಿ ಒಂದು ಸಿದ್ಧಪಡಿಸಿದ ವಸ್ತು ಎಂದು ಸ್ಪೆಂಗ್ಲರ್ ತನ್ನ ಚಿಂತನೆಯನ್ನು ಉಪಸಂಹರಿಸುತ್ತಾನೆ. ಈತ ಚಕ್ರೀಯ ಜೈವಿಕ ಸಿದ್ಧಾಂತವನ್ನು ನಿರೂಪಿಸುತ್ತಾನೆ. ಪ್ರತಿಯೊಂದು ಸಂಸ್ಕೃತಿಯೂ ಪ್ರತೀ ಕಾಲಘಟ್ಟದಲ್ಲಿ ಹಾದುಹೋಗುತ್ತದೆ ಎನ್ನುವ ಈತ ನಾಗರಿಕತೆಯನ್ನು ಸಂಸ್ಕೃತಿಯ ಬಾಹ್ಯ, ಕೃತಕ ಹಾಗೂ ಅಂತಿಮ ಘಟ್ಟವೆನ್ನುತ್ತಾನೆ. ಯಾವುದೇ ಸಂಸ್ಕೃತಿ ನಾಗರಿಕತೆಯ ಘಟ್ಟವನ್ನು ತಲುಪಿದೆಯೆ ಎನ್ನುವುದನ್ನು ಅರಿಯಲು ಈತ ಕೆಲವು ಲಕ್ಷಣಗಳನ್ನು ಹೇಳುತ್ತಾನೆ. ಅವು ರಾಷ್ಟ್ರೀಯ ಪ್ರತಿಬಂಧಕವಿಲ್ಲದ ಬೃಹನ್ನಗರಗಳಾದ ಲಂಡನ್, ಪ್ಯಾರಿಸ್ ಅಥವಾ ಟೋಕಿಯೋಗಳಂತಿದ್ದು ಅಲ್ಲಿ ಜನಾಂಗೀಯ, ಪಾರಂಪರಿಕ ಮೌಲ್ಯಗಳು ಹಾಗೂ ಸಾಮಾಜಿಕ ಐಕ್ಯತೆಗಳು ನಾಶವಾಗುತ್ತವೆ. ಈತನ ಪ್ರಕಾರ ಪ್ರಪಂಚದಲ್ಲಿ ಎಂಟು ಸಂಸ್ಕೃತಿಗಳು ಮಾತ್ರವೇ ಶ್ರೇಷ್ಠ. ಅವು ಹೀಗಿವೆ: ಈಜಿಪ್ಟ್, ಬ್ಯಾಬಿಲೋನಿಯ, ಭಾರತೀಯ, ಚೀನಿ, ಗ್ರೀಕೋ-ರೋಮನ್ (ಅಭಿಜಾತ), ಅರೇಬಿಯ, ಮೆಕ್ಸಿಕನ್ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳು. ಅನಂತರದ ಸ್ಥಾನವನ್ನು ಈತ ರಷ್ಯಕ್ಕೆ ನೀಡಿದ್ದಾನೆ. ಪ್ರತಿಯೊಂದು ಸಮಾಜದ ಸರ್ಕಾರದ ಬಗೆಗಳನ್ನೂ ಸ್ಪೆಂಗ್ಲರ್ ಚರ್ಚಿಸುತ್ತಾನೆ. ಜನತೆ ಪ್ರಾಚೀನ ಕಾಲದಿಂದ ಊಳಿಗಮಾನ್ಯ ಪದ್ಧತಿಯವರೆಗೆ ಅನಂತರ ಅಂತಿಮ ಹಂತದಲ್ಲಿ ಉತ್ತಮಾಭಿರುಚಿಯ ನಗರ ಜೀವನ, ಕೊನೆಗೆ ಕೃತಕತೆಯ ಪರಾವ ಲಂಬನೆಯ ಕಡೆಗೆ ಸಮಾಜ ಮುಂದುವರೆಯುವುದನ್ನು ಗುರುತಿಸುತ್ತಾನೆ. ಸಂಪತ್ತಿನಿಂದಾಗಿ ಪ್ರಜಾಪ್ರಭುತ್ವ ತನ್ನ ಅವನತಿಗೆ ತಾನೇ ಕಾರಣವಾಗುತ್ತದೆಂದು ಈತ ಅಭಿಪ್ರಾಯ ಪಡುತ್ತಾನೆ. ಸೀಸರಿಸಂ ಅಥವಾ ಸರ್ವಾಧಿಕಾರತ್ವ ಸಂಸ್ಕೃತಿಯ ನಾಟಕದ ಕೊನೆಯ ಅಂಕದ ಕೊನೆಯ ದೃಶ್ಯವಾಗಿರುತ್ತದೆ ಎಂದಿದ್ದಾನೆ. (ಎಂ.ಎಸ್.)

# ಔ

**ಔತ್ತರೇಯ ಮೆರುಗಿನ ಕಪ್ಪುಪಾತ್ರೆ:** ಗಂಗಾನದಿ ಬಯಲಿನ ಆದಿಚಾರಿತ್ರಿಕ ಸಂಸ್ಕೃತಿಯ ವಿಶಿಷ್ಟ ಮಣ್ಪಾತ್ರೆ. ತಕ್ಷಶಿಲೆಯ ಉತ್ಖನನದಲ್ಲಿ ಪ್ರಪ್ರಥಮ ಬಾರಿ ದೊರೆತ ಈ ಪಾತ್ರೆಯ ವೈಶಿಷ್ಟ್ಯವೆಂದರೆ ಮಿರುಗುವ ಕಡುಗಪ್ಪು ಬಣ್ಣದ ಲೇಪನ. ಆದರೆ ಉತ್ತರ ಪ್ರದೇಶದ ಕೌಶಾಂಬಿ ಮತ್ತು ರಾಜಘಾಟ್ ಹಾಗೂ ಬಿಹಾರದ ಸೋನ್‍ಪುರ, ಚಿರಂಡ್ ಮತ್ತು ಒರಿಯುಪ್ ಉತ್ಖನನಗಳಲ್ಲಿ ಇದೇ ಪಾತ್ರೆ ಸುವರ್ಣ, ಬೆಳ್ಳಿ, ಗುಲಾಬಿ, ಉಕ್ಕಿನ ಬಣ್ಣ (ಸ್ಟೀಲ್ ಬ್ಲ್ಯೂ) ಮೊದಲಾದ ಅಪೂರ್ವ ಛಾಯೆಗಳಲ್ಲಿಯೂ ಕಂಡುಬಂದಿದೆ. ಇದರ ತಂತ್ರಜ್ಞಾನ ವೈಜ್ಞಾನಿಕ ಕ್ಷೇತ್ರಕ್ಕೆ ಒಂದು ಸವಾಲಾಗಿದೆ. ಕೌಶಾಂಬಿ ಮತ್ತು ಶ್ರಾವಸ್ತಿಯಲ್ಲಿ ಉಕ್ಕು ಹಾಗೂ ಸುವರ್ಣ ವರ್ಣದ ಲೇಪನಗಳ ಮೇಲೆ ಹಳದಿ ಹಾಗೂ ತಿಳಿಗೆಂಪು ಬಣ್ಣಗಳಲ್ಲಿ ಚಿತ್ರಗಳನ್ನು ಬಿಡಿಸಲಾಗಿದೆ. ಪ್ರ.ಶ.ಪೂ.7-2ನೆಯ ಶತಮಾನದವರೆಗೆ ಬಳಕೆಯಲ್ಲಿದ್ದ ಈ ಪಾತ್ರೆಯ ಜೊತೆಯಲ್ಲಿ ಕಂಡುಬರುವ ಅವಶೇಷಗಳೆಂದರೆ ಮುದ್ರಾಂಕಿತ ಹಾಗೂ ಶಾಸನರಹಿತ ಎರಕ ಹೊಯ್ದ ನಾಣ್ಯಗಳು. ಬಿಹಾರ ಪ್ರಾಂತದಲ್ಲಿ ಮೊದಲು ಚಲಾವಣೆಗೆ ಬಂದ ಈ ಪಾತ್ರೆ ವಾಣಿಜ್ಯ ಸಂಪರ್ಕದ ಮೂಲಕ ಭಾರತದ ಇತರ ಭಾಗಗಳನ್ನು ತಲುಪಿತು. ಇದರ ವ್ಯಾಪ್ತಿ ವಾಯವ್ಯದಲ್ಲಿ ತಕ್ಷಶಿಲೆ, ಪೂರ್ವದಲ್ಲಿ ತಾಮ್‍ಲುಕ್ (ಪಶ್ಚಿಮ ಬಂಗಾಲ) ಹಾಗೂ ದಕ್ಷಿಣದಲ್ಲಿ ಅಮರಾವತಿ. ಇದರ ಕೇಂದ್ರ ವಲಯ ಗಂಗಾನದಿ ಬಯಲು. ಬೌದ್ಧ ನೆಲೆಗಳಲ್ಲಿ ಇದು ಹೆಚ್ಚಾಗಿ ಸಿಗುವುದರಿಂದ ಬೌದ್ಧ ಭಿಕ್ಷುಗಳ ಮುಖಾಂತರ ಇದು ಪಸರಿಸಿರಬೇಕೆಂದು ಅನುಮಾನವಿದೆ. ಪ್ರಾಚೀನ ವಾಣಿಜ್ಯ ಮಾರ್ಗಗಳ ಆಸುಪಾಸಿನಲ್ಲಿರುವ ನೆಲೆಗಳಲ್ಲಿ ಇದು ಪಸರಿಸಿರಬೇಕೆಂಬ ಅನುಮಾನವಿದೆ. ಪ್ರಾಚೀನ ವಾಣಿಜ್ಯ ಮಾರ್ಗಗಳ ಆಸುಪಾಸಿನಲ್ಲಿರುವ ನೆಲೆಗಳಲ್ಲಿ ಈ ಪಾತ್ರೆಗಳು ಅಧಿಕವಾಗಿರುವುದೂ ಗಮನಿಸಬೇಕಾದ ಅಂಶ. ಕಪ್ಪು ಲೇಪನದ ಪಾತ್ರೆಗಳನ್ನು ಕಡಿಮೆ ಆಮ್ಲಜನಕವಿರುವ ವಾತಾವರಣದಲ್ಲಿ ಅಧಿಕ ತಾಪದಲ್ಲಿ ಸುಡುತ್ತಿದ್ದುದೇ ಮೆರುಗಿಗೆ ಕಾರಣ ಎಂಬುದು ರಾಸಾಯನಿಕ ವಿಶ್ಲೇಷಣೆಯಿಂದ ತಿಳಿದುಬಂದಿದೆ. ಇತರ ಛಾಯೆಗಳ ಬಗ್ಗೆ ವೈಜ್ಞಾನಿಕ ಮಾಹಿತಿ ಇನ್ನೂ ಲಭ್ಯವಿಲ್ಲ. (ಡಿ.ಕೆ.ಎಸ್.)

# ಕ

**ಕಂಚಿನಯುಗ:** ತಾಮ್ರ ಮತ್ತು ತವರದ ನೈಸರ್ಗಿಕ ನಿಕ್ಷೇಪಗಳನ್ನು ಗುರುತಿಸಿ, ಗಣಿಗಾರಿಕೆಯಿಂದ ಸಂಗ್ರಹಿಸಿದ ಅದಿರುಗಳನ್ನು ಲೋಹಗಳನ್ನಾಗಿ ಪರಿವರ್ತಿಸಿ, ಈ ಲೋಹಗಳನ್ನು ಕರಗಿಸಿ ಹದವಾಗಿ ಬೆರಸಿ ಉಂಟಾದ ಮಿಶ್ರ ಲೋಹದಿಂದ ಬೇಕಾಗುವ ಸಲಕರಣೆಗಳನ್ನು ತಯಾರಿಸಿಕೊಳ್ಳುತ್ತಿದ್ದ ಒಂದು ಸಾಂಸ್ಕೃತಿಕ ಹಂತ. ಸಾಮಾನ್ಯವಾಗಿ ಇಂಥ ಅದಿರುಗಳಲ್ಲಿ ಆರ್ಸೆನಿಕ್ ಕೂಡ ಇರುತ್ತದೆ. ಈ ತಂತ್ರಗಾರಿಕೆ ಎಲ್ಲಿ ಯಾವಾಗ ಆರಂಭವಾಯಿತೆನ್ನುವುದರ ಬಗ್ಗೆ ವಾದ-ವಿವಾದಗಳಿವೆ. ಆದರೆ ಪ್ರ.ಶ.ಪೂ.ಸು.4ನೆಯ ಸಹಸ್ರಮಾನದ ಅವಧಿಯಲ್ಲಿ ಉತ್ತರ ಕಕೇಶಸ್‍ನಲ್ಲಿಯ ಮೈಕಾಪ್ ಸಂಸ್ಕೃತಿಯ ಜನರು ಈ ತಂತ್ರವನ್ನು ಸ್ವತಂತ್ರವಾಗಿ ಕಂಡುಹಿಡಿದಿರುವ ಸಾಧ್ಯತೆ ಇದೆ. ಈ ಸಂಸ್ಕೃತಿಯ ಕಂಚಿನ ವಸ್ತುಗಳ ಕಾಲಮಾನವನ್ನು ಕೆಲವು ತಜ್ಞರು ಮೂರನೆಯ ಸಹಸ್ರಮಾನದ ಮಧ್ಯಭಾಗವೆಂದು ಅಭಿಪ್ರಾಯಪಟ್ಟಿದ್ದಾರೆ. ಇದುವರೆಗೆ ತಿಳಿದಮಟ್ಟಿಗೆ ಕಂಚು ತಯಾರಿಕೆಯಲ್ಲಿ ಇವರೇ ಮೊದಲಿಗರಾಗಿರುವ ಸಾಧ್ಯತೆಯಿದೆ. ಇವರ ಕಂಚು ಕೇವಲ ಆರ್ಸೆನಿಕ್‍ನಿಂದ ಕೂಡಿದೆ. ತವರ ಬೆರೆಸಿದ ಕಂಚನ್ನು ತಯಾರು ಮಾಡಲು ಉನ್ನತ ತಂತ್ರಜ್ಞಾನ ಅಗತ್ಯ.

ಪ್ರಾಚ್ಯ ಪ್ರದೇಶದಲ್ಲಿಯ ಕಂಚಿನಯುಗದಲ್ಲಿ (ಪ್ರ.ಶ.ಪೂ.ಸು.3300-1200) ಆದಿ, ಮಧ್ಯ ಮತ್ತು ಅಂತ್ಯ ಎಂದು ಮೂರು ಅನುಕ್ರಮ ಹಂತಗಳನ್ನು ಗುರುತಿಸಲಾಗಿದೆ. ಮೆಸಪೊಟೇಮಿಯ ಪ್ರದೇಶದಲ್ಲಿ ಅಂತ್ಯ ಉರುಕ್ ಸಂಸ್ಕೃತಿಯಿಂದ ಆರಂಭವಾಗಿ ಸುಮೇರಿಯದ ಆದಿ ಅರಸು ಮನೆತನವಾದ ಅಕ್ಕಾಡ್ ಸಾಮ್ರಾಜ್ಯ, ಹಳೆ ಬ್ಯಾಬಿಲೋನಿಯ, ಅಸ್ಸೀರಿಯ ಕಸ್ಸೈಟ ಆಧಿಪತ್ಯದವರೆಗಿನ ಕಾಲವನ್ನು ಕಂಚಿನಯುಗವೆಂದು ಗುರುತಿಸಲಾಗಿದೆ. ಪ್ರಾಚೀನ ಈಜಿಪ್ಟ್ ನಾಗರಿಕತೆಯಲ್ಲಿ ರಾಜವಂಶ ಆಡಳಿತದ ಸ್ವಲ್ಪ ಹಿಂದಿನಿಂದ ನವಸಾಮ್ರಾಜ್ಯದ ಕಾಲದವರೆಗಿನ ಕಂಚಿನಯುಗದಲ್ಲಿಯೂ ಮೂರು ಅನುಕ್ರಮ ಹಂತಗಳು ಸ್ಪಷ್ಟವಾಗಿ ಕಂಡುಬಂದಿವೆ. ಲೆವಂಟ್ (ಎಬ್ಲ, ಅಮೊರೈಟ್, ಮಿಟಾನಿ), ಅನಟೋಲಿಯ (ಹಿಟ್ಟೈಟ್ ಸಾಮ್ರಾಜ್ಯ), ಈಜಿಯನ್ ಪ್ರದೇಶಗಳಲ್ಲಿಯೂ ಸರಿಸುಮಾರು ಇದೇ ಅವಧಿಯಲ್ಲಿ ಕಂಚುಯುಗವನ್ನು ಕಾಣಬಹುದಾಗಿದೆ. ಈಜಿಯನ್ ನಾಗರಿಕತೆ ಪ್ರ.ಶ.ಪೂ.3000ರ ಹೊತ್ತಿಗೆ ಬಹುದೂರದವರೆಗೆ ವ್ಯಾಪಕವಾಗಿ ತನ್ನ ವಾಣಿಜ್ಯ ಸಂಪರ್ಕವನ್ನು ವಿಸ್ತರಿಸಿಕೊಂಡಿದ್ದರಿಂದ ಸೈಪ್ರಸ್‍ನಿಂದ ಕಂಚಿನ ತಯಾರಿಕೆಗೆ ಬೇಕಾದ ತವರ ಮತ್ತು ಇದ್ದಿಲನ್ನು ಆಯಾತ ಮಾಡಿಕೊಳ್ಳಲು ಸಾಧ್ಯವಾಯಿತು. ಕಂಚು ಲೋಹವನ್ನು ತಯಾರಿಸಿಕೊಂಡು ವಿವಿಧ ಉಪಕರಣಗಳನ್ನು ಸಿದ್ಧಮಾಡಿ ಅವುಗಳನ್ನು ನಿರ್ಯಾತ ಮಾಡುವುದು ಇದರ ಒಂದು ಪ್ರಮುಖ ಉದ್ಯೋಗವಾಗಿತ್ತು. ಮೆಡಿಟರೇನಿಯನ್ ಪ್ರದೇಶದ ಕಂಚಿನ ವಸ್ತುಗಳನ್ನು ಐಸೊಟೋಪಿಕ್ ವಿಶ್ಲೇಷಣೆ ಮಾಡಿದಾಗ ಅವನ್ನು ಬಹುದೂರದಿಂದ ಅಂದರೆ ಗ್ರೇಟ್ ಬ್ರಿಟನ್ನಿನಿಂದ ಆಯಾತ ಮಾಡಿಕೊಂಡಿರುವುದಾಗಿ ತಿಳಿದುಬಂದಿದೆ. ಅಷ್ಟು ಹೊತ್ತಿಗಾಗಲೆ ಈ ವ್ಯಾಪಾರ ವ್ಯವಹಾರಕ್ಕೆ ಅನುಕೂಲಕರವಾದ ಸಮುದ್ರಯಾನ ತಂತ್ರ ಬೆಳೆದಿತ್ತು. ಈ ವಾಣಿಜ್ಯ ಜಾಲದಲ್ಲಿ ಮಿನೋವನ್ ನಾಗರಿಕತೆ ತನ್ನ ಕಂಚು ವಸ್ತುಗಳ ವ್ಯಾಪಾರವನ್ನು ಇತರರೊಡನೆ ಸಮನ್ವಯ ಮಾಡಿಕೊಂಡು ರಕ್ಷಿಸಿಕೊಂಡಿತ್ತು. ಆದರೆ ಈ ಆರ್ಥಿಕ ವ್ಯವಹಾರದಲ್ಲಿ ತಮ್ಮಲ್ಲಿಯ ಆಹಾರ ಸಾಮಗ್ರಿಗಳ ಮೌಲ್ಯವನ್ನು ಸರಿಯಾಗಿ ತಿಳಿದುಕೊಳ್ಳಲಾಗದೆ ಅವುಗಳನ್ನು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸೌಂದರ್ಯವರ್ಧಕ ಸಾಮಾನುಗಳಿಗೆ ವಿನಿಮಯ ಮಾಡಿಕೊಂಡದ್ದು ಇವರನ್ನು ಆಹಾರದ ಕೊರತೆ ಮುಂತಾದ ತೊಂದರೆಗಳಿಗೆ ಈಡುಮಾಡಿತು. ಇದು ಇವರ ವ್ಯಾಪಾರ ಉದ್ಯಮಕ್ಕೆ ಹಾನಿಯನ್ನುಂಟುಮಾಡಿತು. ಈ ವ್ಯಾಪಾರ ಕುಸಿದು ಬೀಳುವುದಕ್ಕೆ ಇನ್ನೂ ಕೆಲವು ಬೇರೆ ಕಾರಣಗಳನ್ನು ತಜ್ಞರು ಮುಂದಿಟ್ಟಿದ್ದಾರೆ.

ಏಷ್ಯ, ಚೀನದ ಕಂಚಿನಯುಗ ಒಂದು ರೀತಿಯಲ್ಲಿ ವಿಶಿಷ್ಟ. ಇಲ್ಲಿ ಕಂಚಿನಯುಗ ಮುಂದುವರೆಯುತ್ತಿದ್ದಂತೆ ಕಬ್ಬಿಣ ಲೋಹ ಬಳಕೆ ಪ್ರಾರಂಭವಾಯಿತು. ಆದರೂ ಕಂಚಿನ ಉಪಕರಣಗಳ ಬಳಕೆ ಮತ್ತೆ ಮುಂದುವರೆಯಿತು. ಆದ್ದರಿಂದ ದೀರ್ಘಾವಧಿಯ ಕಂಚಿನಯುಗ

ಇನ್ನೂ ಸ್ಪಷ್ಟವಾಗಿಲ್ಲ. ಅತ್ಯಂತ ಪ್ರಾಚೀನ ಕಂಚಿನ ಉಪಕರಣಗಳು ಮಾಜಿಯಾವೋ ಸಂಸ್ಕೃತಿಯಲ್ಲಿ (ಪ್ರ.ಶ.ಪೂ.3100–2700) ಕಂಡುಬರುತ್ತವೆ. ಈ ಲೋಹ ತಂತ್ರಗಾರಿಕೆ ಎರ್ಲಿತೌ ಸಂಸ್ಕೃತಿಯ ಕಾಲದಲ್ಲಿ ಶಾಂಗ್ ವಂಶಾವಳಿ ಆಡಳಿತ ಅಥವಾ ಇದಕ್ಕೂ ಸ್ವಲ್ಪ ಹಿಂದೆ ಗ್ಸಿಯಾ (ಶಿಯ) ರಾಜವಂಶದ ಕಾಲದಲ್ಲಿ ಹುಟ್ಟಿಕೊಂಡಿತು. ಈ ಯುಗದ ಕಾಲಮಾನ ಯು.ಎಸ್.ನ್ಯಾಷನಲ್ ಆರ್ಟ್ ಗ್ಯಾಲರಿ ಸಂಸ್ಥೆಯ ಪ್ರಕಾರ ಪ್ರ.ಶ.ಪೂ.2000–770. ಎರ್ಲಿತೌ ಸಂಸ್ಕೃತಿ ಸರಿಸುಮಾರು ಇದೇ ಸಮಯದಲ್ಲಿ ಆರಂಭವಾಗಿ, ಪಶ್ಚಿಮ ಜ್ಹೌ ಆಳಿಕೆ ಕೊನೆಗೊಳ್ಳುವ ಹೊತ್ತಿಗೆ ಮುಗಿಯಿತು. ಕಬ್ಬಿಣದ ವಿರಳ ಉಪಯೋಗ ಜ್ಹೌ ಕಾಲದಿಂದ ಶುರುವಾಯಿತು. ಪ್ರ.ಶ.ಪೂ.6ನೆಯ ಶತಮಾನದ ಚೀನಿ ಸಾಹಿತ್ಯದಲ್ಲೂ ಕಬ್ಬಿಣ ಲೋಹ ತಯಾರಿಕೆಯ ವಿವರಗಳಿವೆ. ಆದರೂ ಜ್ಹೌ ಸಂತತಿ ಪ್ರ.ಶ.ಪೂ.ಸು.481ರಲ್ಲಿ ಕೊನೆಗೊಳ್ಳುವ ವರೆಗೂ ಕಂಚಿನ ಸಾಮಾನುಗಳ ಉಪಯೋಗ ಮುಂದುವರೆದಿತ್ತು.

ಅನಂತರದ ಕಾಲದಲ್ಲಿ ಇದು ಹ್ಯಾನ್ ಸಂತತಿಯವರ ಕಾಲದವರೆಗೂ ಮುಂದುವರೆಯಿತು. ಈಟಿ ಮೊನೆ, ಬಾಚಿ, ಧಾರ್ಮಿಕ ವಿಧಿಗಳಿಗೆ ಉಪಯೋಗಿಸಲಾಗುತ್ತಿದ್ದ ಮುಕ್ಕಾಲಿನ ಮಣೆ (ಅಡ್ಡಣಿಗೆ), ರಾಕ್ಷಸ ಇಲ್ಲವೆ ಸಾಂಕೇತಿಕ ಪ್ರಾಣಿ ಹಾಗೂ ಸೂಕ್ಷ್ಮಚಿಹ್ನೆಗಳಿಂದ ಕೂಡಿದ, ಕೆಲವುದರ ಮೇಲೆ ಶಾಸನವಿರುವ ನಿತ್ಯ ಬಳಕೆಯ ಪಾತ್ರೆ ಪಗಡಿಗಳು ಸಾಮಾನ್ಯವಾಗಿ ದ್ದುವು. ಇಂಥ ಪಾತ್ರೆಗಳ ಮೇಲಿನ ಶಾಸನಗಳಿಂದ ಸಾಹಿತ್ಯ ಆಕರಗಳಿಂದ ಲಭ್ಯವಿರದ ಚೀನದ, ಮುಖ್ಯವಾಗಿ ಜ್ಹೌ ಮನೆತನದ ಇತಿಹಾಸವನ್ನು ತಿಳಿಯಲು ಸಾಧ್ಯವಾಗಿದೆ. ಈ ಶಾಸನಗಳಲ್ಲಿ ಕಾಲ ಮತ್ತು ಸ್ಥಳ, ಸಂದರ್ಭದ ಸ್ಮರಣೆ, ಆಯಾಯ ಕಂಚಿನ ವಸ್ತುಗಳನ್ನು ಕೊಳ್ಳಲು ದಾನವಾಗಿ ಕೊಟ್ಟ ವಸ್ತುಗಳ ಪಟ್ಟಿ ಮತ್ತು ಯಾರಿಗಾಗಿ ಎಂಬ ವಿವರಗಳಿವೆ.

ಆಗ್ನೇಯ ಏಷ್ಯ ಪ್ರದೇಶದಲ್ಲಿ ಪ್ರ.ಶ.ಪೂ.ಸು.2000 ಹೊತ್ತಿಗೆ ಬಾನ್ ಚಿಯಾಂಗ್ ಸಂಸ್ಕೃತಿಯೊಂದಿಗೆ ಥೈಲೆಂಡಿನಲ್ಲಿ ಕಂಚಿನಯುಗ ಆರಂಭವಾಯಿತು. ನ್ಯಾಯುಂಗ್ಗನ್, ಬರ್ಮ (ಮಯನ್ಮಾರ್) ಉತ್ಖನನಗಳಲ್ಲಿ ಸ್ಥೂಲವಾಗಿ ಪ್ರ.ಶ.ಪೂ.ಸು.3500–500ರ ಕಾಲಾವಧಿಯ ಮಣ್ಪಾತ್ರೆ, ಕಲ್ಲಿನ ಉಪಕರಣಗಳ ಜೊತೆಗೆ ಕಂಚಿನ ಉಪಕರಣಗಳೂ ದೊರೆತಿವೆ. ಕೊರಿಯ ಪರ್ಯಾಯ ದ್ವೀಪದಲ್ಲಿ ಕಂಚಿನಯುಗದ ಹಂತ ಇತರ ಪ್ರದೇಶಗಳೊಡನೆ ಹೋಲಿಸಿದಾಗ ತಡವಾಗಿ ಆರಂಭವಾದಂತೆ ಕಾಣುತ್ತದೆ. ಪ್ರ.ಶ.ಪೂ.ಸು.900–700ರ ಸಮಯದಲ್ಲಿ ಲಿಯೋನಿಂಗ್ ಶೈಲಿಯ ಕಂಚಿನ ಕಠಾರಿಗಳನ್ನು ವಿನಿಮಯದಿಂದ ಪಡೆದುಕೊಂಡ ಅನಂತರ ಮುಮುನ ಮಣ್ಪಾತ್ರೆ ಸಂಸ್ಕೃತಿಯ ಮಧ್ಯಹಂತದಲ್ಲಿ (ಪ್ರ.ಶ.ಪೂ.ಸು.700–600) ಕಂಚಿನ ತಯಾರಿಕೆ ಕ್ರಮೇಣ ಶುರುವಾಯಿತು. ಗಣ್ಯಸ್ಥಾನದ ವ್ಯಕ್ತಿಗಳಿಗೆ ಇಂಥ ಕಂಚಿನ ಕಠಾರಿಗಳನ್ನಿಟ್ಟುಕೊಳ್ಳುವುದು ಮತ್ತು ಅವರವರ ಸಮಾಧಿಗಳಲ್ಲೂ ಅವುಗಳನ್ನು ಇಡುವುದು ಪ್ರತಿಷ್ಠೆಯ ದ್ಯೋತಕವಾಗಿತ್ತು. ಇದು ದಕ್ಷಿಣದ ಕಡಲಂಚಿನಲ್ಲಿಯ ಜೌಡಾಂಗ್ ಮುಂತಾದ ನೆಲೆಗಳಲ್ಲಿಯ ಬೃಹತ್ ಶಿಲಾಗೋರಿಗಳ ಉತ್ಖನನದಿಂದ ತಿಳಿದುಬಂದಿದೆ.

ಮಧ್ಯಯುರೋಪಿನ ಯುನೆಟೈಸ್ ಕಲ್ಚರ್ (ಪ್ರ.ಶ.ಪೂ.1800–1600) ಕಂಚಿನಯುಗಕ್ಕೆ ಸೇರುತ್ತದೆ. ಇದರ ಜೊತೆಗೆ ಸ್ಟ್ರೌಬಿಂಗ್, ಅಡಲ್‌ಬರ್ಗ್ ಮತ್ತು ಹತ್ವನ್ ಮುಂತಾದ ಕಿರು ಸಂಸ್ಕೃತಿಗಳೂ ಈ ಹಂತಕ್ಕೆ ಸೇರಿವೆ. ಲೌಬಿನ್‌ಜೆನ್‌ನಲ್ಲಿಯ ಉತ್ಖನನದಲ್ಲಿ ಕಂಡುಬಂದಂತೆ ಚಿನ್ನ ಮುಂತಾದ ವಿವಿಧ ವಸ್ತುಗಳು ಗೋರಿಗಳಲ್ಲಿದ್ದು ಇವು ಈ ಸಂಸ್ಕೃತಿಯ ಸಮಾಜದಲ್ಲಿದ್ದ ಶ್ರೇಣಿಯನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಈ ಸಾಂಸ್ಕೃತಿಕ ಹಂತದ ಅನಂತರ ಬಂದ ತುಮುಲಸ್ ಸಂಸ್ಕೃತಿ ಮಧ್ಯ ಕಂಚಿನಯುಗವನ್ನು ಪ್ರತಿನಿಧಿಸುತ್ತದೆ. ಹಂಗರಿಯ ಕೋರೋಸ್ ಉಪನದಿಗಳ ಪ್ರದೇಶದಲ್ಲಿ ಆದಿ ಕಂಚಿನಯುಗದ ಮಕೊ ಅನಂತರ ಒಟ್ಟೊಮನಿ ಮತ್ತು ಗ್ಯುಲವರ್ಸಂದ್ ಸಂಸ್ಕೃತಿಗಳ ಅವಶೇಷಗಳು ದೊರೆತಿವೆ. ತುಮುಲಸ್ ಸಂಸ್ಕೃತಿಯ ಅನಂತರ ಅಂತಿಮ ಘಟ್ಟದ ಕಂಚಿನಯುಗದ ಅರ್ನ್‌ಫೀಲ್ಡ್ ಸಂಸ್ಕೃತಿ **(ನೋಡಿ)** ಕಾಣಿಸಿಕೊಂಡಿತು. ಪೂರ್ವ ಜರ್ಮನಿ ಮತ್ತು ಪೋಲೆಂಡ್‌ಗಳಲ್ಲಿ (ಪ್ರ.ಶ.ಪೂ.1300–500) ಲುಸೆಟುಯನ ಸಂಸ್ಕೃತಿ ಈ ಹಂತಕ್ಕೆ ಸೇರುತ್ತದೆ. ತ್ರಿಕೋಣಾಕೃತಿಯ ಕಠಾರಿ, ಚಪ್ಪಟೆ ಕೊಡಲಿ, ಫ್ಲಿಂಟ್‌ನ ಬಾಣದ ಮೊನೆ ಮೊದಲಾದವು ಆದಿ ಹಂತದ ಕಂಚಿನಯುಗದವು. ಲೋಹದ ಹಿಡಿಕೆಯುಳ್ಳ ಕಠಾರಿ, ಹೊರಚಾಚಿದ ಅಂಚಿನ ಕೊಡಲಿ, ಗಟ್ಟಿ ಕೈಕಡಗ, ಸೂಜಿ ಮುಂತಾದುವು ಕಂಚಿನಯುಗದ ಅಂತ್ಯಕಾಲದವು.

ಗ್ರೇಟ್ ಬ್ರಿಟನ್ನಿನಲ್ಲಿ ಕಂಚಿನಯುಗದ ಕಾಲ ಪ್ರ.ಶ.ಪೂ.2100–750. ಸ್ಟೋನ್‌ಹೆಂಜ್‌ನ ಬಳಿಯ ಆದಿ ಕಂಚಿನಯುಗದ ಸಮಾಧಿಗಳಲ್ಲಿ ದೊರೆತ ಮಾನವನ ಹಲ್ಲಿನ ಐಸೊಟೋಪಿನ ವಿಶ್ಲೇಷಣೆಯಿಂದ ಇವರು ಸ್ವಿಟ್ಜರ್ಲೆಂಡಿನಿಂದ ಈ ದ್ವೀಪಕ್ಕೆ ವಲಸೆ ಬಂದ ಜನರೆಂದು ಗೊತ್ತಾಗಿದೆ. ದಕ್ಷಿಣ ಬ್ರಿಟನ್ ಪ್ರದೇಶದ ವೆಸೆಕ್ಸ್ ಸಂಸ್ಕೃತಿಯ ಜನ ಸಮುದಾಯ ಪಶು ಸಂಗೋಪನೆಯನ್ನು ಮುಖ್ಯ ಕಸಬಾಗಿಸಿಕೊಂಡಿತ್ತು. ದಿ ಡೆವೆರೆಲ್ ರಿಂಬುರಿ ಸಂಸ್ಕೃತಿಯ ಜನರು ವಿಶೇಷವಾಗಿ ಕಾರ್ನ್‌ವಾಲ್‌ನಲ್ಲಿಯ ತವರ, ಗ್ರೇಟ್ ಬರ್ಮ ಮುಂತಾದ ಸ್ಥಳಗಳಿಂದ ತಾಮ್ರದ ಅದಿರನ್ನು ಸಂಗ್ರಹಿಸಿ ಕಂಚಿನ ಉಪಕರಣಗಳನ್ನು ತಯಾರು ಮಾಡುತ್ತಿದ್ದರು. ಇವರು ವನವಾಸಿ ಸಮುದಾಯವಾಗಿದ್ದರು. ಇವರ ಸಮಾಜ ಶ್ರೇಣೀಕೃತವಾಗಿದ್ದು ಸಂಕೀರ್ಣವಾದ ಆಚರಣಾತ್ಮಕ ಪದ್ಧತಿಗಳಿಂದ ಕೂಡಿತ್ತು. ಹಿಂದಿನ ನವಶಿಲಾಯುಗ ಜನಸಮುದಾಯಗಳಲ್ಲಿ ಎಲ್ಲ ವರ್ಗದ ಜನರಿಗೆ ದೊಡ್ಡ ದೊಡ್ಡ ಕಲ್ಗುಪ್ಪೆ ಸಮಾಧಿಗಳನ್ನು ಮಾಡುತ್ತಿದ್ದರೆ ಈ ಜನರು ತಮ್ಮ ತಮ್ಮ ಕುಟುಂಬದವರಿಗಾಗಿಯೇ ಸಮಾಧಿಗಳನ್ನು ನಿರ್ಮಿಸುತ್ತಿದ್ದರು. ಪೂರ್ವ ಕೇಂಬ್ರಿಜ್‌ಶೈರಿನ ಇಸ್ಲೆಹಾಮ್‌ನಲ್ಲಿ ಸು.6,500ಕ್ಕೂ ಹೆಚ್ಚು ಕಂಚಿನ ಸಾಮಾನುಗಳು ದೊರೆತಿದ್ದು ಇದು ಯುರೋಪಿನ ದೊಡ್ಡ ಕಂಚಿನ ನಿಕ್ಷೇಪವಾಗಿದೆ. ಈ ಯುಗದ ಇನ್ನೊಂದು ವಿಶಿಷ್ಟ ಕೊಡುಗೆ ವಿವಿಧ ಪ್ರಕಾರಗಳ ದೋಣಿ ನಿರ್ಮಾಣ. ಐರ್ಲೆಂಡಿನಲ್ಲಿ ಪ್ರ.ಶ.ಪೂ.ಸು.2000 ಹೊತ್ತಿಗೆ ಕಂಚಿನಯುಗ ಪ್ರಾರಂಭವಾಯಿತು. ಇದಕ್ಕೂ ಹಿಂದೆ ಕೇವಲ ತಾಮ್ರ ವಸ್ತುಗಳ ಬಳಕೆಯ ಹಂತವಿದ್ದಿತ್ತು. ಕಂಚಿನಯುಗದ ಉಪಕರಣಗಳಲ್ಲಿ ಐದು ಪ್ರಕಾರದ ಚಪ್ಪಟೆ ಕೊಡಲಿಗಳು ವಿಶಿಷ್ಟವಾಗಿವೆ.

ಈ ಕಾಲದಲ್ಲಿ ವ್ಯಾಪಾರ ಮತ್ತು ವೃತ್ತಿನಿಪುಣತೆಗಳು ಬೆಳೆದುಬಂದವು. ಲೋಹದ ಕೆಲಸಗಾರರು, ಅದುರಿನ ನಿಕ್ಷೇಪಗಳನ್ನು ಅಗೆದು ತೆಗೆಯುತ್ತಿದ್ದವರು ತಮ್ಮ ಕಾರ್ಯಕ್ಷೇತ್ರಗಳಲ್ಲಿ ನಿಷ್ಣಾತರಾಗಿದ್ದು ವ್ಯವಸಾಯಾದಿ ಆಹಾರಸಂಪಾದನ ಕಾರ್ಯದಲ್ಲಿ ಭಾಗವಹಿಸಬೇಕಾಗಿರಲಿಲ್ಲ. ತಮ್ಮ ಉತ್ಪನ್ನಗಳನ್ನು ರೈತರಿಗೊದಗಿಸಿ, ಅವರಿಂದ ಆಹಾರ ಅಥವಾ ಇತರ ವಸ್ತುಗಳನ್ನು ಅವರು ಪಡೆದುಕೊಳ್ಳುತ್ತಿದ್ದರು. ಈ ರೀತಿ ಅದಲುಬದಲು ವ್ಯಾಪಾರ ಬೆಳೆಯಿತು. ಅದುರಿನಿಂದ ಲೋಹವನ್ನು ಬೇರ್ಪಡಿಸುವುದು ಮತ್ತು ಆವಶ್ಯಕವಾದ ಆಯುಧೋಪಕರಣಗಳನ್ನು ನಿರ್ಮಿಸುವುದು ಕುಶಲಕಲೆಗಳಾಗಿ ಬೆಳೆದುವು. ಆಯಾ ವೃತ್ತಿಗೆ ಸಂಬಂಧಿಸಿದ ಕುಶಲ ಕೆಲಸಗಾರರ ಸಂಘಗಳು ಹುಟ್ಟಿಕೊಂಡವು. ವೃತ್ತಿಸಂಬಂಧವಾದ ರಹಸ್ಯಗಳನ್ನು ಅವುಗಳ ಸದಸ್ಯರು ಜತನದಿಂದ ಕಾಪಾಡಿಕೊಳ್ಳುತ್ತಿದ್ದರು. ನವಶಿಲಾಯುಗದಲ್ಲಿ ಪ್ರತಿಯೊಂದು ಕುಟುಂಬ ಮತ್ತು ಪಂಗಡ ಸ್ವಯಂಪೂರ್ಣವಾಗಿರುತ್ತಿದ್ದರೆ ಈ ಕಾಲದಲ್ಲಿ ಸಮಾಜದ ವ್ಯಕ್ತಿಗಳು ಪರಸ್ಪರಾವಲಂಬನೆಯಿಂದ ಜೀವಿಸುತ್ತಿದ್ದುದು ಮಾತ್ರವಲ್ಲ, ದೂರಪ್ರದೇಶಗಳಲ್ಲಿ ಉತ್ಪಾದಿಸುತ್ತಿದ್ದ ವಸ್ತುಗಳನ್ನು ವ್ಯಾಪಾರ ಮುಖೇನ ಪಡೆಯಬೇಕಾಗಿತ್ತು. ಪ್ರತಿಯೊಂದು ವೃತ್ತಿಯವರೂ ತಮಗೆ ಬೇಕಾದುದಕ್ಕಿಂತ ಹೆಚ್ಚಿನ ಉತ್ಪನ್ನಗಳನ್ನು ಇತರರಿಗೆ ನೀಡಿ ಅವರಿಂದ ಅವರ ಉತ್ಪನ್ನಗಳನ್ನು ತಾವು ಪಡೆಯುತ್ತಿದ್ದರು. ಇದರಿಂದ ಒಂದು ರೀತಿಯ ಸಹಕಾರಿ ಸಾಮಾಜಿಕ ಜೀವನ ರೂಢಿಗೆ ಬಂತು. ಈ ಯುಗದ ಮತ್ತೆರಡು ಬಹಳ ಮುಖ್ಯ ಆವಿಷ್ಕಾರಗಳೆಂದರೆ ವ್ಯವಸಾಯದ ಪ್ರಗತಿಗೆ ಸಾಧಕವಾಗಿದ್ದು ಎತ್ತುಗಳಿಂದ ಎಳೆಯಲ್ಪಡುತ್ತಿದ್ದ ನೇಗಿಲು ಮತ್ತು ವ್ಯಾಪಾರದ ಸಾಮಾನುಗಳನ್ನು ದೂರ ಪ್ರದೇಶಗಳಿಂದ ಸಾಗಿಸಲು ಅತ್ಯುಪಯುಕ್ತವಾದ ಗಾಡಿಯ ಚಕ್ರ. ಈ ಎರಡು ಶೋಧನೆಗಳಿಂದ ಜನಜೀವನ ರೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಸಂಭವಿಸಿ ಸಂಪದಭಿವೃದ್ಧಿಗೆ ಕಾರಣವಾಯಿತು.

(ಬಿ.ಕೆ.ಜಿ.;ಎ.ವಿ.ಎನ್.)

**ಕಂಚು ಶಿಲ್ಪಕಲೆ (ಕರ್ನಾಟಕ):** ಸಾತವಾಹನ ಆಳಿಕೆಯ ಕಾಲದಿಂದ ಚಂದ್ರವಳ್ಳಿಯಲ್ಲಿ ದೊರೆತ ಕಂಚಿನ ಶಾಲಭಂಜಿಕೆಯ ಮತ್ತು ಹಸುಕರುಗಳ ಸಣ್ಣಮೂರ್ತಿಗಳು ಸುಂದರವಾಗಿದ್ದು, ತಾಮ್ರ ಶಿಲ್ಪ ಕಲೆ ಆ ಕಾಲದಲ್ಲೇ ಜನರಿಗೆ ಚೆನ್ನಾಗಿಯೇ ಸಿದ್ಧಿಸಿತ್ತು ಎಂಬುದನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ ತಲಕಾಡಿನ ಉತ್ಖನನದಲ್ಲಿ ದೊರೆತ ಲೋಹ ಶಿಲ್ಪಿಯ ಕಾರ್ಯಾಗಾರ–ಕುಲುಮೆ, ಸಣ್ಣಸಣ್ಣ ಮೂಸೆಗಳು, ಚಿಕ್ಕ ತಾಮ್ರದ ಕೊಳವೆ ಮತ್ತು ರೋಮನ್ ನಾಣ್ಯವೊಂದರ ಸುಟ್ಟಮಣ್ಣಿನ ಮುದ್ರೆಯ ಒಂದು ಭಾಗ ಮುಂತಾದುವು ಲೋಹಶಿಲ್ಪ ಕಲೆಯ ವಿಧಾನವನ್ನೂ ಸ್ವಲ್ಪಮಟ್ಟಿಗೆ ಮನವರಿಕೆ ಮಾಡಿಕೊಡುತ್ತವೆ.

ಬಾದಾಮಿ ಚಳುಕ್ಯರ ಕಾಲಕ್ಕಾಗಲೇ ಕಂಚುಶಿಲ್ಪ ಕಲೆ ಪ್ರವರ್ಧಮಾನವಾಗಿ ಬೆಳೆದಿತ್ತು. ಹಿಂದು, ಜೈನ, ಬೌದ್ಧ ಧರ್ಮೀಯರು ಪೂಜಾ ಶಿಲ್ಪಗಳನ್ನೂ ವಸ್ತುಗಳನ್ನೂ ಇನ್ನಿತರ ಅಲಂಕಾರಿಕ ವಸ್ತುಗಳನ್ನೂ ತಯಾರಿಸಿ ಬಳಸುತ್ತಿದ್ದರು. ಶಿವರಾಮಮೂರ್ತಿಯವರ ಅಭಿಪ್ರಾಯದಲ್ಲಿ ಮುಂಬಯಿಯ ಜೋಗೇಶ್ವರ ಗುಹಾಲಯದಲ್ಲಿ ದೊರೆತ ಮನುಷ್ಯ, ಪ್ರಾಣಿಗಳ ಶಿಲ್ಪವುಳ್ಳ ಸರಪಳಿ ಬಾದಾಮಿ ಚಳುಕ್ಯರ ಕಾಲದ್ದು, ಈಗ ಇದು ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯದಲ್ಲಿದೆ. ಇದೇ ವಸ್ತುಸಂಗ್ರಹಾಲಯದಲ್ಲಿ ಇರುವ ಬಾಹುಬಲಿಯ ಕಂಚು ಶಿಲ್ಪ ಚಾಳುಕ್ಯ–ರಾಷ್ಟ್ರಕೂಟ ಕಾಲದ್ದೆಂದು ಅವರ ಅಭಿಪ್ರಾಯ. ಬಾದಾಮಿ ಚಳುಕ್ಯರ ಕಾಲಾನಂತರ ಕರ್ನಾಟಕದಲ್ಲಿ ಕಂಚು ಶಿಲ್ಪಗಳ ಬಳಕೆ ಹೆಚ್ಚಾಯಿತು. ಇದಕ್ಕೆ ಮುಖ್ಯಕಾರಣ ಭಕ್ತಪಂಥದ ಪ್ರಭಾವ ತಮಿಳುನಾಡಿನಿಂದ ಕ್ರಮೇಣ ಕರ್ನಾಟಕಕ್ಕೆ ವಿಸ್ತರಿಸಿದ ಈ ಪಂಥ ಪೂಜಾವಿಧಿಗಳಲ್ಲಿ ಬಹಳಷ್ಟು ಬದಲಾವಣೆಯನ್ನು ತಂದಿತು. ಭಕ್ತಿಯ ಮೂಲಕ ದೇವರನ್ನು ಒಲಿಸಿಕೊಳ್ಳುವ ಸಲುವಾಗಿ, ಚಕ್ರವರ್ತಿ ಅನುಭವಿಸುತ್ತಿದ್ದ ಸಕಲ ಐಹಿಕ ಭೋಗವಸ್ತುಗಳನ್ನೂ ದೇವರಿಗೂ ನಿವೇದಿಸುವ ಪರಿಪಾಠ ಪ್ರಾರಂಭವಾಯಿತು. ರಥೋತ್ಸವ, ವಾಹನ ಪ್ರಯಾಣ, ತೆಪ್ಪೋತ್ಸವ, ಉಯ್ಯಾಲೆಯಾಡಿಸುವುದು, ಪುರ ಪ್ರದಕ್ಷಿಣೆ ಮಾಡಿಸುವುದು, ವಿವಿಧ ರೀತಿಯ ಅಭ್ಯಂಜನ, ಅಲಂಕರಣ ಮಾಡುವುದು, ಶೃಂಗಾರ, ಶಯನ, ವಿವಾಹ ಮುಂತಾದ ಸೇವೆಗಳು, ದೇವರ ಮನೋರಂಜನೆಗಾಗಿ ನೃತ್ಯ, ಗಾಯನ, ವಾದ್ಯವಾದನ, ನಾಟಕ, ಪುರಾಣ ಪ್ರವಚನ ಮುಂತಾದವುಗಳೆಲ್ಲವೂ ದೇವರ ಸೇವೆಯ ಅವಿಭಾಜ್ಯ ಕಾರ್ಯಗಳಾದವು. ಇವೆಲ್ಲವನ್ನೂ ನಡೆಸುವುದಕ್ಕೆ ಸಮಾಜದ ಸಕಲವರ್ಗದವರೂ ಅಪಾರ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಮತ್ತು ವೀಕ್ಷಿಸುವುದಕ್ಕೆ ಗರ್ಭಗುಡಿಯಲ್ಲಿ ಅಚಲವಾಗಿ ಪ್ರತಿಷ್ಠಾಪಿಸಿದ್ದ (ಧ್ರುವಭೇರ) ತಯಾರಿಸಿ ಅದನ್ನು ದೇವಾಲಯದ ಯುಕ್ತ ಸ್ಥಳವೊಂದರಲ್ಲಿಟ್ಟು, ಮೇಲೆ ಹೇಳಿದ ಎಲ್ಲಾ ಸೇವೆಗಳನ್ನೂ ಮಾಡುವ ಪರಿಪಾಠ ಮೊದಲಾಯಿತು. ಇದರಿಂದಾಗಿ ಈ ಕಂಚು ಶಿಲ್ಪಗಳು ಉತ್ಸವ ಮೂರ್ತಿಗಳೆಂದೇ ಪ್ರಸಿದ್ಧಿಯಾದವು (ಉತ್ಸವ ಮೂರ್ತಿಗಳ ತಯಾರಿಕ ವಿಧಾನಕ್ಕೆ ನೋಡಿ–ಮಧೂಚ್ಛಿಷ್ಠ ವಿಧಾನ: ವಾಸ್ತುಶಿಲ್ಪ).

ಕರ್ನಾಟಕದಲ್ಲಿ ಕಂಚಿನ ಮೂರ್ತಿ ಪೂಜಾ ಸಂಪ್ರದಾಯ ಪ್ರಾರಂಭದಲ್ಲಿ ಮಂದಗತಿಯಲ್ಲಿತ್ತು. ರಾಜ್ಯದ ಕೋಲಾರ, ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಪ್ರಾಚೀನ ಕಂಚಿನ ಮೂರ್ತಿಗಳು ದೊರೆತಿವೆ. ಈ ಭಾಗದಲ್ಲಿ ಆಳಿದ ಪ್ರಬಲ ರಾಜವಂಶಗಳೆಂದರೆ ತಲಕಾಡಿನ ಗಂಗರು ಮತ್ತು ಹೇಮಾವತಿಯ ನೊಳಂಬರು. 9–10ನೆಯ ಶತಮಾನಗಳಿಗೆ ಸೇರಿಸಬಹುದಾದ ಸೋಮಾಸ್ಕಂದ (ಸ್ಕಂದ ಕಳೆದು ಹೋಗಿದೆ) ಮೂರ್ತಿಯೊಂದು ನಂದಿಯ ಭೋಗನಂದೀಶ್ವರ ದೇವಾಲಯಕ್ಕೆ ಸೇರಿದ್ದು ಈಗ ಬೆಂಗಳೂರು ವಸ್ತುಸಂಗ್ರಹಾಲಯದಲ್ಲಿದೆ. ಪೀಠದ ಮೇಲೆ ಕುಳಿತಿರುವ ಶಿವ–ಪಾರ್ವತಿಯರ ಭಾವ–ಭಂಗಿಗಳು, ಮುಖಚರ್ಯೆ, ಅಂಗ ಸೌಷ್ಠವ, ಅಲಂಕರಣೆ ಇತ್ಯಾದಿ ಸಮಕಾಲೀನ ಪಲ್ಲವ ಕಂಚಿನ ಮೂರ್ತಿಗಳನ್ನು ನೆನಪಿಸುತ್ತವೆ. ಪೀಠದ ಮೇಲೆ ನೆಗೆಯುತ್ತಿರುವ ಸಿಂಹಾಕೃತಿಗಳು ಪಲ್ಲವ ಮತ್ತು ನೊಳಂಬ ಇವೆರಡೂ ಕಲಾ ಸಂಪ್ರದಾಯಗಳ ಪ್ರಭಾವವನ್ನು ಸೂಚಿಸುತ್ತವೆ.

ಕಂಚಿನ ವಿಗ್ರಹ, ಶಿವ

ಕರ್ನಾಟಕದಲ್ಲಿ ವೈದಿಕಧರ್ಮದೊಂದಿಗೆ ಬೆಳೆದ ಮತ್ತೊಂದು ಪ್ರಬಲ ಧರ್ಮವೆಂದರೆ ಜೈನಧರ್ಮ. ಜೈನರು ಶಿಲಾಮೂರ್ತಿಗಳೊಂದಿಗೆ ಕಂಚಿನ ಮೂರ್ತಿಗಳನ್ನೂ ಪೂಜಿಸುತ್ತಿದ್ದರು. ಸಾಕಷ್ಟು ಸಂಖ್ಯೆಯಲ್ಲಿ ಜೈನ ಕಂಚಿನ ಕಲಾಕೃತಿಗಳು ದೊರೆತಿವೆ. ಸರಳ, ನೈಜ, ಮುಗ್ಧ ಹಾಗೂ ಶಾಂತಿ ಮುಖಭಾವ ಈ ಶಿಲ್ಪಗಳ ಲಕ್ಷಣ. ಶ್ರವಣಬೆಳಗೊಳದ ಜೈನ ಮಠದಲ್ಲಿರುವ ಒಂದು ಸ್ಥಾನಕ ಜಿನಮೂರ್ತಿ ಕಲಾತ್ಮಕವಾಗಿ ಮತ್ತು ಚಾರಿತ್ರಿಕವಾಗಿ ಮುಖ್ಯವಾದ ಒಂದು ವಿಗ್ರಹ. ಈ ಮೂರ್ತಿಯನ್ನು ಗಂಗಮಾರಸಿಂಹನ ಅಕ್ಕ ಕುಂದಣ ಸೋಮಿದೇವಿ ಮಾಡಿಸಿದಳೆಂದು ವಿಗ್ರಹಪೀಠದ ಮೇಲಿನ ಶಾಸನದಿಂದ ತಿಳಿದುಬರುತ್ತದೆ. ಇದೇ ಕಾಲದ ಮತ್ತೊಂದು ಶಿಲ್ಪ ಪಂಪನ ತಮ್ಮನಾದ ಜಿನವಲ್ಲಭನ ಸಜ್ಜನೆ ಭಾಗಿಯಬ್ಬೆ ಮಾಡಿಸಿದ್ದು. ಈಗ ಈ ಶಿಲ್ಪ ಕಲ್ಕತ್ತ ವಸ್ತು ಸಂಗ್ರಹಾಲಯದಲ್ಲಿದೆ. ಅರ್ಧ ಪದ್ಮಾಸನದಲ್ಲಿ ಕುಳಿತಿರುವ ಜಿನನಿಗೆ ಹಿಂಬದಿಯಲ್ಲಿ ಪ್ರಭಾವಳಿ ಇದೆ. ಪೀಠದಲ್ಲಿ ಶಾಸನವಿದೆ. ಭಾಗಿಯಬ್ಬೆ ಮಾಡಿಸಿದ ಮತ್ತೊಂದು ಜಿನಬಿಂಬ ಈಗ ಚೆನ್ನೈನ ವಸ್ತುಸಂಗ್ರಹಾಲಯದಲ್ಲಿದೆ. ಶ್ರೀರಂಗಪಟ್ಟಣದ ಬಸದಿಯಲ್ಲಿರುವ ಒಂದು ಪ್ರಾಚೀನ ಜಿನ ಬಿಂಬ ಗಂಗರ ಕಾಲದ್ದಾಗಿದ್ದು, ಕೊಳ್ಳೇಗಾಲದ ಪ್ರದೇಶದ್ದು. ಹೊಯ್ಸಳ ಕಾಲಕ್ಕೆ ಸೇರಿಸಬಹುದಾದ ಕೆಲವು ಶಿಲ್ಪಗಳು ಗುಂಡ್ಲುಪೇಟೆ ಬಳಿಯ ಹಂಗಳದಲ್ಲಿ ದೊರಕಿವೆ. ಪೀಠದ ಮೇಲೆ ಧ್ಯಾನಮುದ್ರೆಯಲ್ಲಿರುವ ಜಿನ ಸುತ್ತಲೂ ಪ್ರಭಾವಳಿಯಲ್ಲಿ ತೀರ್ಥಂಕರರು ಇರುವ ಮೂರು ಪ್ರತಿಮೆಗಳು, ದೀಪದ ಕಂಬಗಳು, ಕಲಶಗಳು, ಕಲಶ ಪೀಠಗಳು, ಗಂಟೆ ಇತ್ಯಾದಿ ಎಲ್ಲವೂ ಒಂದೆಡೆ ದೊರೆತಿವೆ. ಇವು ಕೇವಲ ವ್ಯಕ್ತಿಗತ ಪೂಜಾವಸ್ತುಗಳಾಗಿದ್ದು, ಉತ್ಸವಮೂರ್ತಿಗಳೆನಿಸುವುದಿಲ್ಲ. ಒಂದು ಚೌವೀಸ್ ವಿಗ್ರಹದ ಹಿಂಬದಿಯಲ್ಲಿ, ಹನ್ನೊಂದನೆಯ ಶತಮಾನದ ಲಿಪಿ, ಚಿಕ್ಕ ಜೋಗಬ್ಬೆ, ಆಕೆಯ ಪತಿ ಸರ್ವ ಲೋಕಾಶ್ರಯ ಮತ್ತು ಆಕೆಯ ತಾಯಿ ಮಂಕಬ್ಬೆಯರು ಜಿನಮುನಿ ರಾಮನಂದಿ ಭಟ್ಟಾರಕ ಶಿಷ್ಯರೆಂದು ಉಲ್ಲೇಖಗೊಂಡಿದೆ. ವಿಜಯನಗರ ಕಾಲದಲ್ಲೂ ಕಂಚಿನ ಜಿನಬಿಂಬಗಳ ತಯಾರಿಕೆ ಅವ್ಯಾಹತವಾಗಿ ನಡೆಯಿತು. ಕರಾವಳಿ ಕರ್ನಾಟಕದ ಅನೇಕ ಕಡೆಗಳಲ್ಲಿ ಬಹು ಸಂಖ್ಯೆಯಲ್ಲಿ ಕಂಚಿನ ಜೈನ ಮೂರ್ತಿಗಳು ದೊರೆತಿವೆ. ಇವುಗಳಲ್ಲಿ ಮುಖ್ಯವಾದವು ಮೂಡಬಿದ್ರೆಯ ಸಾವಿರ ಕಂಬ ಬಸದಿಯಲ್ಲಿಯ ಸಂಗ್ರಹಗಳು.

ಬೌದ್ಧಧರ್ಮ ಜೈನಧರ್ಮದಷ್ಟು ಜನಪ್ರಿಯವಾಗಿ ಕರ್ನಾಟಕದಲ್ಲಿ ಬೆಳೆಯಲಿಲ್ಲ. ಸಾತವಾಹನರ ಕಾಲದಲ್ಲಿ ಪ್ರಬಲವಾಗಿದ್ದ ಬೌದ್ಧ ಪಂಥ ಬಾದಾಮಿ ಚಳುಕ್ಯರ ಕಾಲದ ಹೊತ್ತಿಗಾಗಲೇ ಅವನತಿಯತ್ತ ಸಾಗಿತ್ತು. ಇದರಿಂದಾಗಿ ಕರ್ನಾಟಕದಲ್ಲಿ ಬೌದ್ಧ ಕಂಚಿನ ಮೂರ್ತಿಗಳು ಅಪರೂಪವೆನಿಸಿವೆ. ದೊಡ್ಡಬಳ್ಳಾಪುರದ ಬಳಿಯ ರಾಜಘಟ್ಟದ ಉತ್ಖನನದಲ್ಲಿ ಬೌದ್ಧ ಚೈತ್ಯದ ಆವರಣದಲ್ಲಿ ಇತ್ತೀಚೆಗೆ ದೊರೆತ ಬುದ್ಧನ ಕಂಚಿನ ಮೂರ್ತಿಯ ಬಲಪಾದ 6–7ನೆಯ ಶತಮಾನದಷ್ಟು ಪ್ರಾಚೀನವಾದದ್ದು. 10ನೆಯ ಶತಮಾನದ ಅನೇಕ ಕಂಚಿನ ಮೂರ್ತಿಗಳು ಮಂಗಳೂರಿನ ಕದ್ರಿ ದೇವಾಲಯದಲ್ಲಿ ದೊರೆತಿವೆ. ಭಾರತೀಯ ಕಂಚು ಶಿಲ್ಪ ಪರಂಪರೆಯಲ್ಲೇ ಅತ್ಯಂತ ಅಮೋಘವೆನಿಸಿರುವ ಇಲ್ಲಿಯ ಲೋಕೇಶ್ವರನ ಪ್ರತಿಮೆ 968ರಲ್ಲಿ ತಯಾರಾದದ್ದು. ಆಳುಪದೊರೆ ಕುಂದವರ್ಮ ಈ ವಿಗ್ರಹವನ್ನು ಮಾಡಿಸಿ ಕದರಿಕಾ (ಕದ್ರಿ) ವಿಹಾರದಲ್ಲಿ ಪ್ರತಿಷ್ಠಾಪಿಸಿದನೆಂದು ಪೀಠದ ಮೇಲಿನ ಶಾಸನ ತಿಳಿಸುತ್ತದೆ. 1.20 ಮೀ ಮೀರಿದ ಎತ್ತರವುಳ್ಳ ಈ ಆಸೀನ ಶಿಲ್ಪ ಮೂರು ಮುಖಗಳನ್ನೂ ಆರು ಬಾಹುಗಳನ್ನೂ ಹೊಂದಿದ್ದು, ಜಟಾಮುಕುಟದ ಮುಂಭಾಗದಲ್ಲಿ ಧ್ಯಾನಾಸನದ ಭಂಗಿಯಲ್ಲಿ ಕುಳಿತಿರುವ ಬುದ್ಧನ(?) ಮೂರ್ತಿಯನ್ನು ಹೊಂದಿದೆ. ಈ ಪ್ರತಿಮೆಯನ್ನು ಗುರುತಿಸುವ ವಿಚಾರದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಈ ಶಿಲ್ಪದ ಜೊತೆಗೆ, ಅದೇ ಸ್ಥಳದಲ್ಲಿರುವ ಬುದ್ಧ, ಮಂಜುಶ್ರೀ, ಮಂಜುಘೋಷರ ಪ್ರತಿಮೆಗಳನ್ನು ಬೌದ್ಧ ಪಂಥದ್ದೆಂದೂ ಇನ್ನು ಕೆಲವರು ನಾಥಪಂಥದ್ದೆಂದೂ ಗುರುತಿಸಿದ್ದಾರೆ.

ಆಗ್ನೇಯ ಕರ್ನಾಟಕದ ಕೆಲವು ಭಾಗಗಳು 10ನೆಯ ಶತಮಾನದ ಕೊನೆಯ ಭಾಗದಲ್ಲಿ ಚೋಳರ ಆಳಿಕೆಗೆ ಒಳಪಟ್ಟವು. ಇದರಿಂದಾಗಿ ತಮಿಳುನಾಡಿನಲ್ಲಿ ಜನಪ್ರಿಯವಾಗಿದ್ದ ಉತ್ಸವಮೂರ್ತಿ ಸಂಪ್ರದಾಯ ತಯಾರಿಕೆ ದಕ್ಷಿಣ ಕರ್ನಾಟಕದಲ್ಲೂ ಜನಪ್ರಿಯವಾಯಿತು. ಆ ಕಾಲದಲ್ಲಿ ಕರ್ನಾಟಕದ ಎಲ್ಲಾ ಪ್ರಮುಖ ದೇವಾಲಯಗಳಲ್ಲೂ ಉತ್ಸವಮೂರ್ತಿಗಳು ದೇವಾಲಯದ ನಿತ್ಯಪೂಜೆಯ ಅವಿಭಾಜ್ಯ ಅಂಗವಾದವು. ಶಿವದೇವಾಲಯವಾದರೆ ಶಿವ–ಪಾರ್ವತಿಯರು, ನಟರಾಜ, ಭೈರವ, ಗಣೇಶ, ಸೋಮಸ್ಕಂಧ, ಷಣ್ಮುಖ ಮುಂತಾದ ವಿಗ್ರಹಗಳು ಸಾಮಾನ್ಯವಾಗಿರುತ್ತವೆ. ವಿಷ್ಣು ದೇವಾಲಯವಾದರೆ ವರದರಾಜ, ರಾಮ, ಲಕ್ಷ್ಮಣ, ಸೀತೆ, ಆಂಜನೇಯ, ಗೋಪಾಲಕೃಷ್ಣ, ಬೆಣ್ಣೆ ಕೃಷ್ಣ, ಶ್ರೀದೇವಿ, ಭೂದೇವಿಯರ ಉತ್ಸವಮೂರ್ತಿಗಳು ಸಾಮಾನ್ಯ, ಅಪರೂಪವಾಗಿ ಉಗ್ರಮೂರ್ತಿಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಯಾವುದೇ ಕಂಚಿನ ಶಿಲ್ಪಗಳಿಗೆ ಶಾಸನಗಳಿರುವುದಿಲ್ಲ. ಇದರಿಂದಾಗಿ ಈ ಶಿಲ್ಪಗಳ ನಿರ್ಮಾಣ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಅವುಗಳು ಆಕಾರ, ಗಾತ್ರ, ಸೌಂದರ್ಯ, ಮುಖಮುದ್ರೆ ಲಕ್ಷಣ, ಅಂಗಸೌಷ್ಠವ ಮುಂತಾದವುಗಳಲ್ಲಿ ವಿಶಿಷ್ಟವಾದ್ದಾಗಿರುತ್ತವೆ. ಈ ವಿಗ್ರಹಗಳು ಯಾವುದೇ ಒಂದು ಕಾಲದ ನಿರ್ಮಾಣವೆಂದು ಅನುಭವೀ ಕಣ್ಣುಗಳಿಂದ ನೋಡಿ ತಿಳಿಯಬಹುದೇ ಹೊರತು, ಆ ಲಕ್ಷಣಗಳನ್ನು ಮಾತಿನಲ್ಲಿ, ಪದಗಳಲ್ಲಿ ವರ್ಣಿಸಿ ಹೇಳುವುದು ಕಷ್ಟದ ಕೆಲಸವೇ ಸರಿ. ಹೀಗಾಗಿ ಲಕ್ಷಣಗಳ ಮೇಲೆ ಹಾಗೂ ಇತರೆ ಸಾಂದರ್ಭಿಕ ಆಧಾರಗಳ ಮೇಲೆ ಅವುಗಳ ಅಜಮಾನು ಕಾಲವನ್ನು ಶತಮಾನದ ಅಂತರದಲ್ಲಿ ಗುರುತಿಸಬಹುದಾಗಿದೆ.

ಚೋಳರ ಕಾಲದ ಕಂಚಿನ ಶಿಲ್ಪಗಳು ಕರ್ನಾಟಕದಲ್ಲಿ ಬಹಳ ದೊರೆತಿವೆ. ಕೋಲಾರದ ಬಳಿಯ ನರಸಾಪುರದ ನಟರಾಜ (133 ಸೆಂಮೀ ಎತ್ತರ) ಮತ್ತು ಶಿವಕಾಮ ಸುಂದರಿ (85 ಸೆಂಮೀ) ಈ ಶಿಲ್ಪಸಾಲಿನಲ್ಲಿ ಅತ್ಯಂತ ಶ್ರೇಷ್ಠವಾದವು. ನಟರಾಜ ಶಿಲ್ಪ ರಾಜರಾಜ ಚೋಳ ತಂಜಾವೂರಿನ ಬೃಹದೀಶ್ವರ ದೇವಾಲಯಕ್ಕೆ ನೀಡಿದ ಇದೇ ರೀತಿಯ ನಟರಾಜ ಶಿಲ್ಪಕ್ಕೆ ಭವ್ಯತೆಯಲ್ಲಿ, ಗಾತ್ರದಲ್ಲಿ ಸಮವೆನಿಸುತ್ತದೆ. ನರಸಾಪುರದ ಶಿಲ್ಪವೂ ರಾಜರಾಜ ಚೋಳನ ಕಾಲದ್ದೇ ಆಗಿರಬಹುದು. ಚೋಳರ ಕಾಲದ ನಟರಾಜ ಶಿಲ್ಪಗಳು ಶಿವಗಂಗೆ, ಕೂಡಲೂರು, ನಂಜನಗೂಡು ಇತ್ಯಾದಿ ಕಡೆಗಳಲ್ಲಿ ದೊರೆತಿವೆ. ಸೀತೆ ಬೆಟ್ಟ, ಅಗರ ಮುಂತಾದೆಡೆ ಸೊಗಸಾದ ಭೈರವ ಶಿಲ್ಪಗಳು ದೊರೆತಿವೆ. ಶಿವಪಾರ್ವತಿಯರ ಶಿಲ್ಪಗಳು ನಂಜನಗೂಡು, ತಿರುಮಕೂಡಲು ನರಸೀಪುರ, ತೆರಕಣಾಂಬಿ ಮುಂತಾದೆಡೆ ದೊರೆತಿವೆ. ಇವಲ್ಲದೆ ತೆರಕಣಾಂಬಿಯ ರಾಮ–ಸೀತೆ–ಲಕ್ಷ್ಮಣ, ಶಿವ–ಗಂಗೆ–ಗೌರಿ, ತಲಕಾಡು ಮಾಲಂಗಿಯ ಕಾಳಿ, ಬೆಳ್ಳೂರಿನ ಸೋಮಾಸ್ಕಂದ ಮುಂತಾದ ಇನ್ನೂ ಅನೇಕ ಶಿಲ್ಪಗಳು ಚೋಳಕಾಲದ ಉತ್ಸವಮೂರ್ತಿಗಳ ಸಾಲಿಗೆ ಸೇರುತ್ತವೆ.

ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಪ್ರಾಬಲ್ಯಕ್ಕೆ ಬಂದ ಹೊಯ್ಸಳರ ಕಾಲ ಶಿಲಾವಾಸ್ತು ಮತ್ತು ಶಿಲ್ಪಕಲೆಯ ಜೊತೆಗೆ ಕಂಚು ಶಿಲ್ಪಕಲೆ ತಯಾರಿಕೆಗೂ ಹೆಸರುವಾಸಿಯಾಗಿದೆ. ಈ ತಯಾರಿಕೆಯಲ್ಲಿ ಹೊಯ್ಸಳರ ಕಾಲದ ಶಿಲ್ಪಗಳು ತಮ್ಮ ಅಂಥ ವಿಶಿಷ್ಟ ಛಾಪನ್ನೇನೂ ಮೂಡಿಸಿಲ್ಲ. ಚೋಳ ಶಿಲ್ಪಗಳಷ್ಟೇ ಹೊಯ್ಸಳರ ಶಿಲ್ಪಗಳೂ ಸಹಜ ಸೌಂದರ್ಯವನ್ನು ಹೊಂದಿರುತ್ತವೆ. ಜೊತೆಗೆ ಸ್ವಲ್ಪ ಅಲಂಕರಣ ವೈಭವ ಹೆಚ್ಚು ಕಾಣುತ್ತದೆ. ಹೊಯ್ಸಳ ಕಂಚು ಶಿಲ್ಪಗಳ ಅಧ್ಯಯನ ವಿಸ್ತಾರವಾಗಿ ನಡೆದಿಲ್ಲ. ಬೇಲೂರಿನ ಚೆನ್ನಕೇಶವ ದೇವಾಲಯದ ಭಂಡಾರದಲ್ಲಿದ್ದ ಹೊಯ್ಸಳ ವಿಷ್ಣುವರ್ಧನನ ಕಂಚಿನಮೂರ್ತಿ ಈ ಪರಂಪರೆಗೆ ಖಚಿತವಾಗಿ ಸೇರಿಸಬಹುದಾದ ಶಿಲ್ಪ. ಶಿವಗಂಗೆಯ ದಶಭುಜ ನಟರಾಜ ಹೊಯ್ಸಳಕಾಲದ್ದೆಂದು ಹೇಳಬಹುದು. ಇದರ ಮುಖ್ಯ ಲಕ್ಷಣ ಹೊಯ್ಸಳ ಶಿಲಾಶಿಲ್ಪಗಳನ್ನು ಹೋಲುತ್ತದೆ ಹಾಗೂ ಅಲಂಕರಣೆ ಸಮೃದ್ಧವಾಗಿದೆ. ಭವ್ಯ ನಿಲುವು, ಸಮತೋಲನ ಇವುಗಳಲ್ಲಿ ಎದ್ದು ಕಾಣುವುದು. ಇವಕ್ಕೆ ಪೂರಕವಾಗಿ ಶಿಲ್ಪದ ಆಭರಣಗಳಿಗೆ ಸೂತ್ರವಾದೆಡೆಗಳಲ್ಲಿ ಕೆಂಪುಕಲ್ಲನ್ನು ಅಂಟಿಸಲಾಗಿದೆ. ಕರ್ನಾಟಕದ ಕಂಚುಶಿಲ್ಪ ಕಲೆಯಲ್ಲೇ ಇದೊಂದು ಅದ್ವಿತೀಯ ಲಕ್ಷಣ, ಈ ಲಕ್ಷಣ ಕಾಶ್ಮೀರದ ಕಂಚು ವಿಗ್ರಹಗಳಲ್ಲಿದೆ. ಆ ಕಾಲದಲ್ಲಿ ಕರ್ನಾಟಕಕ್ಕೂ ಕಾಶ್ಮೀರಕ್ಕೂ ಸಂಬಂಧವಿದ್ದುದಕ್ಕೆ ಕಾಶ್ಮೀರದಿಂದ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಆಸ್ಥಾನಕ್ಕೆ ಬಂದ ಬಿಲ್ಹಣನೇ ಸಾಕ್ಷಿ. ಹೊಯ್ಸಳ ಕಾಲದ ಇನ್ನೂ ಅನೇಕ ಕಂಚು ಶಿಲ್ಪಗಳು ಕಿಕ್ಕೇರಿ, ನಾಗಮಂಗಲ, ತೆರಕಣಾಂಬಿ, ಶಿವಗಂಗೆ ಮುಂತಾದೆಡೆಗಳಲ್ಲಿವೆ.

ವಿಜಯನಗರ ಕಾಲ ಕರ್ನಾಟಕ ಕಂಚು ಶಿಲ್ಪಕಲೆಯ ಪರ್ವಕಾಲ. ವಿಜಯನಗರ ಚಕ್ರವರ್ತಿಗಳ ಏಕಛತ್ರಛಾಯೆಯಡಿಯಲ್ಲಿ ಕನ್ನಡ ಮತ್ತು ತಮಿಳು ಸಂಸ್ಕೃತಿಗಳು ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಸಮ್ಮಿಳಿತಗೊಂಡವು. ಪ್ರತಿಯೊಂದು ದೇವಾಲಯದಲ್ಲೂ ಉತ್ಸವ ಮೂರ್ತಿ ಪೂಜಾ ಸಂಸ್ಕೃತಿ ವರ್ಧಿಸಿದುದೇ ಅಲ್ಲದೇ, ಈ ಮೂರ್ತಿಗಳ ವೈವಿಧ್ಯವೂ ಸಂಖ್ಯೆಯೂ ಹೆಚ್ಚಾಯಿತು. ಶಿವ, ವಿಷ್ಣುವಿನ ಲೀಲಾಮೂರ್ತಿ, ಅವತಾರ ರೂಪಗಳು, ಪರಿವಾರ ದೇವತೆ, ಆಯುಧಪುರುಷರು, ಸ್ತ್ರೀ ದೇವತಾ ಮೂರ್ತಿ, ಆಳ್ವಾರರು, ನಾಯನ್ಮಾರಗಳು, ವಾಹನಮೂರ್ತಿ ಭಕ್ತವಿಗ್ರಹ, ವ್ಯಕ್ತಿ ಮೂರ್ತಿ, ಗಂಟೆ, ದೀಪಾಲೆ ಕಂಬ, ಬಾಗಿಲುವಾಡಗಳು ಇತ್ಯಾದಿ ಅಪಾರ ಸಂಖ್ಯೆಯಲ್ಲಿ ಬಳಕೆಗೆ ಬಂದವು.

ವಿಜಯನಗರ ಕಾಲದ ಕಂಚುಶಿಲ್ಪಗಳು ಸಾಮಾನ್ಯವಾಗಿ ಒಂದೇ ರೀತಿಯ ಮುಖಚರ್ಯೆ, ಆಭರಣ, ಅಲಂಕರಣೆ, ಅಂಗಸೌಷ್ಠವ ನಿಲುವು, ಸೊಬಗನ್ನು ಹೊಂದಿರುತ್ತವೆ. ಚೂಪಾದ ಕಿರೀಟ, ದುಂಡುಮುಖ, ಅರಳಿದ ದುಂಡಾದ ಕಣ್ಣುಗಳು, ಬಿಲ್ಲಿನಾಕಾರದ ಎತ್ತರಿಸಿದ ಹುಬ್ಬುಗಳು, ಚೂಪಾದ ಮೂಗಿನ ಏಣು ಮತ್ತು ಮೂಗು, ಮೇಲೆತ್ತಿದ ಮೂಗಿನ ಹೊಳ್ಳೆಗಳು, ಉಬ್ಬಿದ ಕೆನ್ನೆ ಮತ್ತು ಗಲ್ಲ ಮುಂತಾದ ಲಕ್ಷಣಗಳು ಇವುಗಳಲ್ಲಿ ಸರ್ವೇಸಾಮಾನ್ಯ. ಎಲ್ಲಾ ವಿಗ್ರಹಗಳಿಗೂ ಸ್ವಲ್ಪ ಉಬ್ಬು ಹೊಟ್ಟೆ ಇರುತ್ತದೆ. ಸ್ತ್ರೀ ವಿಗ್ರಹಗಳಾದರೆ ಅಸ್ವಾಭಾವಿಕವಾದ, ದುಂಡಾದ ಸ್ತನಗಳು, ವಿಶಾಲ ಭಗ, ಪ್ರಧಾನವಾದ ನಿತಂಬಗಳು, ಕೇಶ ಗಂಟು ಇತ್ಯಾದಿ ಕಾಣಬರುತ್ತದೆ. ವಸ್ತ್ರಗಳು, ಕುಚಬಂಧವನ್ನು ಬಿಟ್ಟು, ದೇಹದ ಕೆಳಭಾಗಕ್ಕೆ ಮಾತ್ರ ಮೀಸಲು. ಇಳಿಬಿದ್ದ ಸೀರೆಯ ನೆರಿಗೆ ಸಾಮಾನ್ಯ. ವಿಗ್ರಹಗಳು ಆಯುಧಗಳನ್ನೂ ಇನ್ನಿತರ ವಿಶೇಷಗಳನ್ನು ಬೆಡಗಿನಿಂದ ಹಿಡಿದಿರುತ್ತವೆ. ಶಿಲ್ಪ ನಿರೂಪಣೆಯಲ್ಲಿ ನೈಜತೆ, ಲಾಲಿತ್ಯ, ಸೌಂದರ್ಯ ಮುಂತಾದವುಗಳ ಕೊರತೆ ಕಾಣುತ್ತದೆ. ವಿಜಯನಗರ ಕಂಚುಶಿಲ್ಪ ಪರಂಪರೆಯಲ್ಲಿ ವ್ಯಕ್ತಿ ಶಿಲ್ಪಕ್ಕೆ ಪ್ರಾಧಾನ್ಯವಿತ್ತು. ತಿರುಮಲದಲ್ಲಿರುವ ಶ್ರೀಕೃಷ್ಣದೇವರಾಯ ಮತ್ತು ಆತನ ಇಬ್ಬರು ರಾಣಿಯರ ಕಂಚಿನ ಮೂರ್ತಿಗಳು ಕಂಚಿನ ವ್ಯಕ್ತಿ ಶಿಲ್ಪಗಳ ಸಾಲಿನಲ್ಲೇ ಅತ್ಯಂತ ಶ್ರೇಷ್ಠ.

ಕಂಚಿನ ವಿಗ್ರಹ, ಪಾರ್ವತಿ

ವಿಜಯನಗರಾನಂತರದ ಕಾಲದಲ್ಲಿ ಆಳಿದ ನಾಯಕರು, ಪಾಳೆಯಗಾರರು, ಒಡೆಯರ ಕಾಲದಲ್ಲೂ ಕಂಚು ಶಿಲ್ಪಕಲೆ ಅವ್ಯಾಹತವಾಗಿ ಮುಂದುವರೆಯಿತು. ಆದರೆ ಈ ಮೂರ್ತಿಗಳು ಲಕ್ಷಣದಲ್ಲಿ, ಭಾವನೆಯಲ್ಲಿ ವಿಜಯನಗರ ಕಾಲದ ಕಂಚುಶಿಲ್ಪಗಳನ್ನು ಹೋಲುವುದಾದರೂ ಒಟ್ಟು ರಚನೆಯಲ್ಲಿ ಅವನತಿ ಕಾಣುತ್ತದೆ. ಶ್ರೀರಂಗಪಟ್ಟಣ, ತಿರುಮಕೂಡಲು ನರಸೀಪುರ, ನಂಜನಗೂಡು, ತೆರಕಣಾಂಬಿ, ಗುಂಡ್ಲುಪೇಟೆ, ಮೈಸೂರು ಮುಂತಾದೆಡೆ ಈ ಕಾಲದ ಶಿಲ್ಪಗಳನ್ನು ಕಾಣಬಹುದು. ಈ ಕಾಲದ ವ್ಯಕ್ತಿ ಶಿಲ್ಪಗಳಲ್ಲಿ ಶಿವಗಂಗೆಯಲ್ಲಿರುವ ಮಾಗಡಿ ಕೆಂಪೇಗೌಡ ಮತ್ತು ಆತನ ಕೆಲವು ಸಹಚರರ ಕಂಚುಶಿಲ್ಪಗಳು ಪ್ರಧಾನವೆನಿಸಿವೆ.

ಕರ್ನಾಟಕದಲ್ಲಿ ಕಂಚು ಶಿಲ್ಪಕಲೆಯ ಪ್ರಾಚೀನತೆ, ಬೆಳವಣಿಗೆ, ಬಳಕೆ ಮುಂತಾದ ಅಂಶಗಳು ರಾಜ್ಯದ ದಕ್ಷಿಣ–ಉತ್ತರ ಭಾಗಗಳಲ್ಲಿ ಒಂದೇ ರೀತಿಯದ್ದಾಗಿರಲಿಲ್ಲ. ದಕ್ಷಿಣ ಕರ್ನಾಟಕ ಮೊದಲಿನಿಂದಲೂ ತಮಿಳು ಸಂಸ್ಕೃತಿಗೆ ಹತ್ತಿರವಾಗಿತ್ತು. ಹೀಗಾಗಿ ಇಲ್ಲಿ ಉತ್ಸವಮೂರ್ತಿ ತಯಾರಿಕೆ, ಬಳಕೆ, ಪೂಜಾ ಸಂಸ್ಕೃತಿ ಸಮೃದ್ಧವಾಗಿ ಕಾಣಬರುತ್ತದೆ. ಅದೇ ಉತ್ತರ ಕರ್ನಾಟಕದಲ್ಲಿ ಉತ್ಸವಮೂರ್ತಿಗಳ ತಯಾರಿಕೆ, ಬಳಕೆ ಕಡಿಮೆ ಎಂದೇ ಹೇಳಬೇಕು. ಇದಕ್ಕೆ ಕಾರಣ ಈ ಭಾಗ ವಿಜಯನಗರದ ಕಾಲದ ಹೊತ್ತಿಗಾಗಲೇ ಮುಸ್ಲಿಂ ಸಂಸ್ಕೃತಿಯ, ರಾಜಕೀಯ ಪ್ರಭಾವದ ವಲಯದಲ್ಲಿ ಸೇರಿಹೋಗಿತ್ತು. (ಎಂ.ಎಸ್.ಕೆ.)

**ಕಂದಾರ್:** ಮಹಾರಾಷ್ಟ್ರ ರಾಜ್ಯದ ನಾಂದೇಡ್ ಜಿಲ್ಲೆಯ ಐತಿಹಾಸಿಕ ಸ್ಥಳ. ಇಲ್ಲಿನ ರಾಷ್ಟ್ರಕೂಟ ಮುಮ್ಮಡಿಕೃಷ್ಣನ ಶಾಸನದಲ್ಲಿ ಸ್ವಾರಸ್ಯಕರ ವಿವರಣೆಗಳಿವೆ. ಇದರಲ್ಲಿ ನಾಲ್ಕು ಭಾಗಗಳಿದ್ದು, ಮೊದಲನೆಯ ಭಾಗದಲ್ಲಿ ಕೃಷ್ಣನವರೆಗಿನ ವಂಶಾವಳಿಯ ಪ್ರಶಸ್ತಿಯಿದೆ. ಕಾಲಪ್ರಿಯ ದೇವಾಲಯದಲ್ಲಿ ಮಂತ್ರಪಠನ ಮಾಡುವವರಿಗೆ ಹಣ ಮತ್ತು ಹೊಸ ವಸ್ತ್ರ, 30 ಬ್ರಾಹ್ಮಣರಿಗೆ ಸತ್ರಸಾಲೆಯಲ್ಲಿ ಭೋಜನದ ವ್ಯವಸ್ಥೆ ಮತ್ತು ಗೋದಾವರಿ ನದಿಯ ದಡದ ಮೇಲಿದ್ದ ನಂದಿಪಟ ವಿದ್ಯಾಪೀಠದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಸ್ನಾನಕ್ಕೆ ಎಣ್ಣೆ, ಊಟಕ್ಕೆ ಉಪ್ಪನ್ನು ಒದಗಿಸುವ ವ್ಯವಸ್ಥೆಯಿದ್ದ ಸಂಗತಿಗಳು ಎರಡನೆಯ ಭಾಗದಲ್ಲಿವೆ. ಮೂರನೆಯ ಭಾಗದಲ್ಲಿ ಜನಸಾಮಾನ್ಯರಿಗೆ ವಸತಿಯನ್ನು ಒದಗಿಸುವ ಉದ್ದೇಶದಿಂದ ಹಾಸಿಗೆ ಹೊದಿಕೆ ವ್ಯವಸ್ಥೆಯನ್ನೊಳಗೊಂಡ ಸರ್ವಲೋಕಾಶ್ರಯ ಮಂಟಪ ನಿರ್ಮಾಣ, ಬೇಸಗೆಯಲ್ಲಿ ಬಾಯಾರಿದವರಿಗೆ ಮಕರ ತೋರಣದ ಹತ್ತಿರ, ಯಕ್ಷ ಹೆಬ್ಬಾಗಿಲಿನ ಹತ್ತಿರ, ಮಂಡಲ ಸಿದ್ಧಿವಿನಾಯಕನ ಹತ್ತಿರ, ಪ್ರಧಾನ ರಾಜ ವಿಲಾಸಿನಿಯರ ಕೇರಿಯ ಕಾಮದೇವ (ಮನ್ಮಥ) ಗುಡಿಯ ಹತ್ತಿರ, ಕಾಲಪ್ರಿಯ ದೇವಾಲಯದ ಪ್ರಾಕಾರ ಮತ್ತು ಸರ್ವಲೋಕಾಶ್ರಯ ಮಂಟಪದ ಹತ್ತಿರ ನೀರು ಒದಗಿಸುವ ಅರವಟ್ಟಿಗೆ ನಿರ್ಮಾಣ, ಚಳಿಗಾಲದಲ್ಲಿ ನಿಸ್ಸಹಾಯ ಜನರಿಗೆ ಬೆಂಕಿ ಕಾಯಿಸಿಕೊಳ್ಳಲು ಸರ್ವಲೋಕಾಶ್ರಯ, ಮಂಡಲ ಸಿದ್ಧಿ ವಿನಾಯಕ, ಕಾಲಪ್ರಿಯ, ಜಗತ್ತುಂಗ ಸಮುದ್ರ ಎಂಬ ಕೆರೆದಂಡೆಯ ಮೇಲಿನ ಸಗರೇಶ್ವರ ದೇವಾಲಯ ಮತ್ತು ನಗರದ ಉತ್ತರ ಭಾಗದಲ್ಲಿಯ ಬಂಕೇಶ್ವರ ದೇವಾಲಯದ ಹತ್ತಿರ ಅಗ್ಗಿಷ್ಟಿಕೆಗಳ ವ್ಯವಸ್ಥೆಯಿದ್ದ ಬಗೆಗೆ ವಿವರಗಳಿವೆ. ನಾಲ್ಕನೆಯ ಭಾಗದಲ್ಲಿ ಎತ್ತುಗಳಿಗೆ ಹುಲ್ಲು ಮತ್ತು ಮೇವುಗಳನ್ನು ಗುರ್ಜರ ವರ್ತಕರ ಅಂಗಡಿ ಬೀದಿಯಲ್ಲಿ, ವೀರ ನಾರಾಯಣ, ಕೃಷ್ಣೇಶ್ವರ, ಕ್ಷೇತ್ರಪಾಲ ದೇವಾಲಯಗಳ ಹತ್ತಿರ ಹಾಗೂ ಹೆಚ್ಚು ವ್ಯಾಪಾರ ವ್ಯವಹಾರ ನಡೆಯುವ ಸ್ಥಳಗಳಲ್ಲಿ ಕೊಡುವ ವ್ಯವಸ್ಥೆ ಮಾಡಿದ್ದರ ಬಗೆಗೆ ವಿವರಗಳಿವೆ. ಇವನ್ನು ನಡೆಸಿಕೊಂಡು ಹೋಗಲು ಪ್ರತಿದಿನ 50 ದ್ರಮ್ಮಗಳನ್ನು ಕೊಡಲಾಗುತ್ತಿತ್ತು. ಬಂಕೇಶ್ವರ, ಚಲ್ಲೇಶ್ವರ, ಗಂಜಿಗ ಸೋಮನಾಥ, ತಂಟೇಶ್ವರ ಮತ್ತು ತುಡಿಗೇಶ್ವರ ದೇವಾಲಯಗಳಲ್ಲಿ ದೇವರಿಗೆ ಪಂಚಾಮೃತ ಅಭಿಷೇಕಕ್ಕೋಸ್ಕರ 50 ದ್ರಮ್ಮಗಳ ನೀಡಿಕೆ ಮೊದಲಾದ ಮಹತ್ತ್ವದ ವಿಷಯಗಳ ಪ್ರಸ್ತಾಪವೂ ಈ ಭಾಗದಲ್ಲಿದೆ.

ಉತ್ಖನನ: ಈ ಶಾಸನದಲ್ಲಿಯ ಉಲ್ಲೇಖಗಳನ್ನು ಗಮನಿಸಿ ಡೆಕ್ಕನ್ ಕಾಲೇಜ್ 1984ರಲ್ಲಿ ಉತ್ಖನನ ನಡೆಸಿತು. ಈ ಉತ್ಖನನದಲ್ಲಿ ಪ್ರಥಮ ಬಾರಿಗೆ ನೆಲದ ಮೇಲೆ ಮಲಗಿದಂತಿರುವ ದೊಡ್ಡ ಮನುಷ್ಯಾಕಾರದ ಶಿಲಾಮೂರ್ತಿ ಬೆಳಕಿಗೆ ಬಂದಿತು. ಇದು ಏಕಶಿಲಾ ಮೂರ್ತಿಯಲ್ಲ; ವ್ಯವಸ್ಥಿತವಾಗಿ ಕೆತ್ತಲಾದ ವಿವಿಧ ಭಾಗಗಳನ್ನು ನೆಲದಲ್ಲಿ ಒತ್ತೊತ್ತಾಗಿ ಜೋಡಿಸಿ ಮೂರ್ತಿಯನ್ನು ರಚಿಸಲಾಗಿದೆ. ಇದು 23.05 ಮೀ ಉದ್ದ, ಗರಿಷ್ಠ 7 ಮೀ ಅಗಲವಿದೆ. ವಾಯವ್ಯಾಭಿಮುಖವಾಗಿರುವ ತಲೆಯೇ 6.35 ಮೀ ಉದ್ದ, 4.82 ಮೀ ಅಗಲ. ಆಗ್ನೇಯ ಅಭಿಮುಖವಾಗಿರುವ ಕಾಲುಗಳು 10.38 ಮೀ ಉದ್ದ, ತೊಡೆ 2.20ಮೀ ಅಗಲ, ಕೈಗಳು 9.95ಮೀ ಉದ್ದ, ಭುಜ 2.05ಮೀ ಅಗಲವಿದ್ದು ಹಸ್ತ 1.05ಮೀ ಅಗಲ ಇದೆ. ಇದರ ಸುತ್ತಲೂ ಸಮಾನಾಂತರದಲ್ಲಿರುವ ಎರಡು ಪೌಳಿ ಗೋಡೆಗಳಿವೆ. ಇದರ ಗರಿಷ್ಠ ಉದ್ದಗಲ 37X33ಮೀ. ಪೂರ್ವ ಬದಿಯಲ್ಲಿ ಪ್ರವೇಶದ್ವಾರವಿದೆ. ಈ ಪೌಳಿಗೋಡೆಯನ್ನು ತುಂಡುಕಲ್ಲುಗಳಿಂದ ಮತ್ತು ಸಣ್ಣಸಣ್ಣ ಕಲ್ಲುಚಕ್ಕೆಗಳಿಂದ ಕಟ್ಟಲಾಗಿದೆ. ಇದಕ್ಕೆ ಮಣ್ಣಿನ ಗಾರೆಯನ್ನು ಮಾಡಲಾಗಿದೆ. ಈ ಬೃಹತ್ ಕಟ್ಟಡಕ್ಕೆ ಚಾವಣಿ ಇರಲಿಲ್ಲ. ಈ ಕಟ್ಟಡದ ಉತ್ತರ ಬದಿಯಲ್ಲಿ 10.40X3.52ಮೀ ಉದ್ದಗಲದ ಕಲ್ಲುತುಂಡುಗಳಿಂದ ಮಾಡಿದ ನೆಲವಿದೆ. ಈ ಹಾಸುಗಲ್ಲಿನ ಪಶ್ಚಿಮ ಭಾಗದಲ್ಲಿ ಶಾಸನ ಉಲ್ಲೇಖಿತವಾದ ಯೋಗೇಶ್ವರಮೂರ್ತಿ ಇದ್ದಿರಬೇಕು. ಇದನ್ನು ರಾಷ್ಟ್ರಕೂಟ ಅರಸು ಮುಮ್ಮಡಿಕೃಷ್ಣ ಕಟ್ಟಿಸಿದ. ಇದು ಆ ಕಾಲದಲ್ಲಿ ನಗರದ ಹೊರವಲಯದಲ್ಲಿತ್ತು. ಮಲಗಿದ ಭಂಗಿಯಲ್ಲಿರುವ ಇಷ್ಟು ದೊಡ್ಡ ಮೂರ್ತಿಯನ್ನು ಒಂದೇ ಕಲ್ಲಿನಲ್ಲಿ ಮಾಡಲು ಬೇಕಾದ ದೊಡ್ಡಶಿಲೆ ಈ ಪ್ರದೇಶದಲ್ಲಿ ಸಿಗುವುದು ದುರ್ಲಭವಾದ ಕಾರಣದಿಂದ ಲೆಕ್ಕಾಚಾರವಾಗಿ ಮೂರ್ತಿಯ ಭಾಗಗಳನ್ನು ಬಿಡಿ ಬಿಡಿಯಾಗಿ ಮಾಡಿ ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಹೀಗೆ ಜೋಡಿಸಲಾದ ಮೂರ್ತಿಯ ಭಾಗಗಳಲ್ಲಿ ಒಂದರಲ್ಲಿ ಗೂಟವಿದ್ದರೆ ಇದನ್ನು ಸೇರಿಸಿರುವ ಮತ್ತೊಂದು ಭಾಗದಲ್ಲಿ ಗುಳಿಯಿದೆ. ಹೀಗೆ ಇಡೀ ಮೂರ್ತಿಯ ಬಿಡಿ ಭಾಗಗಳನ್ನು ಪ್ರತ್ಯೇಕ ಮಾಡಿ ನಿರ್ದಿಷ್ಟ ಸ್ಥಳದಲ್ಲಿ ಜೋಡಿಸಿದ ತಂತ್ರಜ್ಞಾನ ಪ್ರಶಂಸನೀಯ. ಈ ಮೂರ್ತಿಯ ಅಂಗಾಲನ್ನು ಕೂಡ ಎಚ್ಚರಿಕೆಯಿಂದ ನಯ ಮಾಡಲಾಗಿದೆ. ಉತ್ಖನನ ಪೂರ್ವದಲ್ಲಿಯೇ ಈ ಮೂರ್ತಿಯ ತುಂಡುಗಳು ಈ ನೆಲೆಯ ಹತ್ತಿರ ಅಲ್ಲಲ್ಲಿ ಬಿದ್ದಿದ್ದವು. ಹಣೆಯ ಮೇಲೆ ಹಣೆಗಣ್ಣನ್ನು ಬಿಡಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿಸಿದ ಕ್ಷೇತ್ರವನ್ನು ರಕ್ಷಿಸುವಂತೆ ಕ್ಷೇತ್ರಪಾಲನೆಂದು ಈ ಮೂರ್ತಿಯನ್ನು ಗುರುತಿಸಲಾಗಿದೆ. ಇದರ ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಬಹುಬೀಜ ಫಲವಿದೆ. ಇದು ವಾಯವ್ಯ–ಆಗ್ನೇಯ ಅಭಿಮುಖವಾಗಿ ಮಲಗಿರುವ ಭಂಗಿಯಲ್ಲಿ ಇರುವುದರಿಂದ ಮತ್ತು ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ವರ್ಣಿಸಿದ ವಾಸ್ತುಲಕ್ಷಣಗಳಿಗೆ ಹೊಂದುವುದರಿಂದ ಇದನ್ನು ವಾಸ್ತುಪುರುಷನೆಂದೂ ಹೇಳಬಹುದು. (ಎ.ಎಸ್.;ಎನ್.ಎಲ್.)

**ಕಂಪಿಲಿರಾಜ್ಯ:** 14ನೆಯ ಶತಮಾನದ ಅವಧಿಯಲ್ಲಿ ಈಗಿನ ಬಳ್ಳಾರಿ, ಕೊಪ್ಪಳ, ಧಾರವಾಡ, ಚಿತ್ರದುರ್ಗ ಹಾಗೂ ಅನಂತಪುರ ಜಿಲ್ಲೆಗಳ ಕೆಲಭಾಗಗಳನ್ನು ಒಳಗೊಂಡಿದ್ದ ಒಂದು ಚಿಕ್ಕ ರಾಜ್ಯ. ಕುಮ್ಮಟ ಮತ್ತು ಕಂಪಿಲಿ ಇದರ ರಾಜಧಾನಿಗಳು. ಕಂಪಿಲಿ ಮೊದಲು ಚಾಳುಕ್ಯರ ಪ್ರಾಂತೀಯ ರಾಜಧಾನಿಯಾಗಿತ್ತು. ಚಾಳುಕ್ಯ ಸಾಮಂತನಾಗಿದ್ದ ಜಗದೇಕಮಲ್ಲ ನೊಳಂಬ–ಪಲ್ಲವ 1022ರಲ್ಲಿ ಕಂಪಿಲಿಯಲ್ಲಿ ಆಳುತ್ತಿದ್ದ. 1046ರಲ್ಲಿ ರಾಜರಾಜ ಚೋಳ ಕಂಪಿಲಿಗೆ ಮುತ್ತಿಗೆ ಹಾಕಿ ಅದನ್ನು ನಾಶಪಡಿಸಿದನಂತೆ. ಸು.1046ರಲ್ಲಿ ಚಾಳುಕ್ಯ ವಿಜಯಾದಿತ್ಯ ಕಂಪಿಲಿ ರಾಜಧಾನಿಯಿಂದ ನೊಳಂಬವಾಡಿ ಪ್ರದೇಶವನ್ನು ಆಳುತ್ತಿದ್ದ. 1178ರ ಶಿಲಾಶಾಸನ ವೊಂದು ತಿಳಿಸುವಂತೆ ಹೊಯ್ಸಳ ವಿಷ್ಣುವರ್ಧನ ಇಲ್ಲಿನ ದುರ್ಗಮ ಕೋಟೆಯೆನಿಸಿದ್ದ ಕುಮ್ಮಟವನ್ನು ವಶಪಡಿಸಿಕೊಂಡ.

13ನೆಯ ಶತಮಾನದ ಅಂತ್ಯಭಾಗದಿಂದ ಕಂಪಿಲಿ ರಾಜ್ಯ ಒಂದು ಅಧೀನ ರಾಜ ಮನೆತನದ ಆಳಿಕೆಗೆ ಒಳಪಟ್ಟಿತು. ಇದರ ಸ್ಥಾಪಕ ಪ್ರಾಯಶಃ ಮುಮ್ಮಡಿ ಸಿಂಗೆಯ ನಾಯಕ (ಸು.1280–1300). ಇವನ ಮಗ ಕಂಪಿಲ ದೇವ (ಸು.1300–27). ಇವನಿಗೆ

ಖಂಡೆಯರಾಯನೆಂದೂ ಹೆಸರಿತ್ತು. ಇವನು ಸೇವುಣರ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದ. ಇದರಿಂದ ಹೊಯ್ಸಳರ ಜೊತೆ ಆಗಾಗ್ಗೆ ಸೆಣಸಬೇಕಾಗಿತ್ತು. 1303ರ ಸುಮಾರಿನಲ್ಲಿ ಕಂಪಿಲದೇವ ಹೊಯ್ಸಳ ದಂಡನಾಯಕ ಸೋಮಯನನ್ನು ರಣರಂಗದಲ್ಲಿ ಕೊಂದ. ಕಂಪಿಲಿಯ ಕಥೆ ಶೌರ್ಯ ಸಾಹಸಗಳಿಂದ ಕೂಡಿದ್ದು ಕಂಪಿಲ ದೇವ ದಕ್ಷಿಣ ಭಾರತದಲ್ಲಿ ಬೆಳೆಯುತ್ತಿದ್ದ ವಿದೇಶಿ ಶಕ್ತಿಯ ಪ್ರಬಲ ವಿರೋಧಿಯಾಗಿದ್ದ. ಮಲಿಕ್ ಕಾಫರ್ ಸು.1314–15ರಲ್ಲಿ ಕಂಪಿಲಿಯ ಮೇಲೆ ದಂಡೆತ್ತಿ ಬಂದನಾದರೂ ಹೆಚ್ಚು ಯಶಸ್ವಿಯಾಗಲಿಲ್ಲ. ಅಲ್ಲದೆ ಮಹಮ್ಮದ್–ಬಿನ್–ತುಗಲಕನ ಅಧಿಕಾರಿಗಳು ಅಪೇಕ್ಷಿಸಿದ ಕಪ್ಪಕಾಣಿಕೆಗಳನ್ನು ಕೊಡಲು ಕಂಪಿಲದೇವ ನಿರಾಕರಿಸಿದ. ಇಲ್ಲಿಂದ ಸು.10 ವರ್ಷಗಳ ಕಾಲ ಕಂಪಿಲಿ ಅಭಿವೃದ್ಧಿ ಸಾಧಿಸಿತಾದರೂ ಅನಂತರ ದೆಹಲಿಯ ಸುಲ್ತಾನನ ಧಾಳಿಗೆ ತುತ್ತಾಯಿತು. ಆ ಸಮಯದಲ್ಲಿ ಗುಲ್ಬರ್ಗ ಸಮೀಪದ ಸಾಗರದ ರಾಜ್ಯಪಾಲನಾಗಿದ್ದ ಸುಲ್ತಾನನ ಸೋದರ ಸಂಬಂಧಿ ಬಹಾಉದ್ದೀನ್ ಗುರ್ಷಾಸ್ಪ್ ಸ್ವಂತ ಕಾರಣಕ್ಕಾಗಿ ಸುಲ್ತಾನನ ವಿಷಯದಲ್ಲಿ ಅಸಮಾಧಾನವನ್ನು ಹೊಂದಿದ್ದು ದೆಹಲಿಯ ಸಿಂಹಾಸನಕ್ಕೆ ತನ್ನ ಹಕ್ಕನ್ನು ಹೂಡಲು ಪ್ರಯತ್ನಿಸಿ ದಂಗೆಯೆದ್ದಿದ್ದ. ಸುಲ್ತಾನನಾದರೂ ತನ್ನ ಸಾಮಂತರಾದ ಗುಜರಾತಿನ ರಾಜ್ಯಪಾಲ ಮಲಿಕ್ ಜಾದ ಮತ್ತು ದೇವಗಿರಿಯ ರಾಜ್ಯಪಾಲನಾದ ಮಜಿರ್ ಅಬುರಿಜ ಇವರಿಬ್ಬರಿಗೂ ಈ ದಂಗೆಕೋರನನ್ನು ಸದೆಬಡಿಯಲು ಆಜ್ಞಾಪಿಸಿದ. ಗೋದಾವರಿ ತೀರದಲ್ಲಿ ನಡೆದ ಯುದ್ಧದಲ್ಲಿ ಬಹಾಉದ್ದೀನ್ ಸೋತು, ತನ್ನ ಮಡದಿಮಕ್ಕಳೊಂದಿಗೆ ಓಡಿಬಂದು ಕಂಪಿಲಿಯ ನಾಯಕನಾದ ಕಂಪಿಲ ದೇವನಲ್ಲಿ ಆಶ್ರಯ ಪಡೆದ. ಇದನ್ನು ತಿಳಿದ ಸುಲ್ತಾನ ಈ ಹಿಂದು ರಾಜನನ್ನು ನಾಶಮಾಡುವಂತೆ ಆಜ್ಞಾಪಿಸಿದ. ಆದರೆ ಇದು ಅವನು ತಿಳಿದಷ್ಟು ಸುಲಭಸಾಧ್ಯವಾದ ಕೆಲಸವಾಗಿರಲಿಲ್ಲ. ಕುಮ್ಮಟ ಕೋಟೆಯನ್ನು ಹಿಡಿಯಲು ಮಲಿಕ್ ಜಾದ ಎರಡು ಬಾರಿ ಪ್ರಯತ್ನಿಸಿದರೂ ಸಫಲನಾಗಲಿಲ್ಲ. ಆದರೂ ಮೂರನೆಯ ಪ್ರಯತ್ನದಲ್ಲಿ ಯಶಸ್ವಿಯಾದ.

ಕುಮ್ಮಟ ಸುಲ್ತಾನನ ವಶವಾಗಿ, ಕಂಪಿಲದೇವ ಹೊಸದುರ್ಗದಲ್ಲಿ (ಆನೆಗೊಂದಿ) ರಕ್ಷಣೆ ಪಡೆದ. ಆದರೆ ಸುಲ್ತಾನನ ಸೇನೆ ಹೊಸದುರ್ಗವನ್ನೂ ಸುತ್ತುವರಿಯಿತು. ಕಂಪಿಲದೇವ ಬಹಾಉದ್ದೀನನನ್ನು ಆತನ ಸಂಸಾರದೊಂದಿಗೆ ಸುರಕ್ಷಿತವಾಗಿ ದ್ವಾರಸಮುದ್ರಕ್ಕೆ ತಲುಪಿಸಿದ. ವೈರಿಗಳನ್ನು ಎದುರಿಸುವ ಮುನ್ನ ಅವನ ರಾಣಿ ಜನರೂ ಮಂತ್ರಿಗಳ ಹಾಗೂ ಸಾಮಂತರ ಪತ್ನಿಯರೂ ಅಗ್ನಿಪ್ರವೇಶ ಮಾಡಿದರು. ಅನಂತರ ಕಂಪಿಲದೇವ ಮತ್ತು ಅವನ ಮಗ ರಾಮನಾಥ ಕಡುಗಲಿಗಳಂತೆ ವೈರಿಗಳ ಮೇಲೆಬಿದ್ದು ಅನೇಕರನ್ನು ಧ್ವಂಸಮಾಡಿದರು. ಕೊನೆಗೆ ರಣಭೂಮಿಯಲ್ಲೇ ಸಾವನ್ನಪ್ಪಿದ (ಸು.1327) ಕಂಪಿಲದೇವನ ತಲೆಬುರುಡೆಯನ್ನು ಸುಲ್ತಾನನಿಗೆ ಕಳುಹಿಸಲಾಯಿತಂತೆ. ಕಂಪಿಲಿ ರಾಜ್ಯವನ್ನು ಸುಲ್ತಾನ ವಶಪಡಿಸಿಕೊಂಡು, ಅಲ್ಲಿಗೆ ತನ್ನವನಾದ ಮಲಿಕ್ ಮಹಮ್ಮದ್ ಎಂಬುವನನ್ನು ರಾಜ್ಯಪಾಲನಾಗಿ ನೇಮಿಸಿದ. ಅಲ್ಲಿನ ಸುತ್ತಮುತ್ತಲಿನ ಪ್ರದೇಶವನ್ನು ತನ್ನ ಹಿಡಿತದಲ್ಲಿಡುವ ಸಲುವಾಗಿ ಹೊಸದುರ್ಗದಲ್ಲಿ ಸೈನ್ಯವನ್ನಿಟ್ಟ. ಕಂಪಿಲ ದೇವನ ಮಗ ರಾಮನಾಥನು ತನ್ನ ಪ್ರಾಮಾಣಿಕ, ದೇಶಪ್ರೇಮ ಹಾಗೂ ತ್ಯಾಗಗಳಿಗೆ ಪ್ರಖ್ಯಾತನಾದ ವೀರಾಗ್ರಣಿಯಾಗಿ ಕುಮಾರರಾಮನೆಂಬ ಹೆಸರಿನಿಂದ ಹಲವು ಕಥೆಗಳ ನಾಯಕನಾಗಿ ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತನಾಗಿದ್ದಾನೆ. ಇಲ್ಲಿಂದ ಯುದ್ಧ ಕೈದಿಗಳಾಗಿ ದೆಹಲಿಗೆ ಕೊಂಡೊಯ್ದ ವ್ಯಕ್ತಿಗಳಲ್ಲಿ ಭಾವೀ ವಿಜಯನಗರದ ಸಂಸ್ಥಾಪಕರಾದ ಹರಿಹರ ಮತ್ತು ಬುಕ್ಕರೆಂಬ ಸಹೋದರರೂ ಸೇರಿದ್ದರೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. (ಜಿ.ಎಸ್.)

**ಕದಂಬ ವಂಶ:** ವಾಯವ್ಯ ಕರ್ನಾಟಕದಲ್ಲಿ 4–7ನೆಯ ಶತಮಾನಗಳಲ್ಲಿ ಬನವಾಸಿ ಯಿಂದ ಸ್ವತಂತ್ರವಾಗಿಯೂ 10–13ನೆಯ ಶತಮಾನಗಳಲ್ಲಿ ಹಾನಗಲ್ಲು, ಗೋವ ಮುಂತಾದ ಕಡೆಗಳಲ್ಲಿ ಬಹುತೇಕ ಸಾಮಂತರ ಸ್ಥಿತಿಯಲ್ಲೂ ಆಳಿದ ಒಂದು ರಾಜ ಮನೆತನ.

ಕದಂಬ ಮನೆತನದ ಮೂಲದ ಬಗ್ಗೆ ಹಲವು ಕಥೆಗಳಿವೆ. ತ್ರಿಲೋಚನ ಕದಂಬ ಈ ಮನೆತನದ ಮೂಲಪುರುಷ. ಶಿವನ ಬೆವರು ಕದಂಬ ವೃಕ್ಷದ ಕೆಳಗೆ ಬಿದ್ದು ಆತ ಹುಟ್ಟಿದ. ಆದ್ದರಿಂದಲೇ ಅವನ ವಂಶಸ್ಥರಿಗೆ ಕದಂಬರೆಂದು ಹೆಸರಾಯಿತು. ಅವನಿಗೆ ನಾಲ್ಕು ಕೈ, ಮೂರು ಕಣ್ಣು ಇದ್ದವಂತೆ. ಆ ತ್ರಿಲೋಚನ ಕದಂಬನ ಮಗ ಮಯೂರಶರ್ಮ. ಅವನೇ ಕದಂಬ ರಾಜ್ಯಸ್ಥಾಪಕ ಎಂದು ಒಂದು ಕಥೆ. ಮಯೂರಶರ್ಮನೇ ಕದಂಬ ವೃಕ್ಷದ ಕೆಳಗೆ ಹುಟ್ಟಿದನೆಂದು ಇನ್ನೊಂದು ಐತಿಹ್ಯ. ಅವನಿಗೂ ಹಣೆಯ ಮೇಲೆ ಕಣ್ಣಿದ್ದುದರಿಂದ ಕಿರೀಟವನ್ನು ಮುಡಿಯ ಮೇಲೆ ಕಟ್ಟಬೇಕಾಯಿತಂತೆ. ಪರಶುರಾಮ ಕ್ಷೇತ್ರಸೃಷ್ಟಿಯಾದ ಮೇಲೆ ಶಿವಪಾರ್ವತಿ ಯರು ಸಹ್ಯಾದ್ರಿಯ ಸುಂದರ ಪ್ರದೇಶಕ್ಕೆ ಬಂದಿದ್ದರೆಂದೂ ಅಲ್ಲಿ ಅವರಿಗೆ ಹುಟ್ಟಿದ ಮಗನೇ ಕದಂಬವಂಶದ ಆದ್ಯ ಪುರುಷನೆಂದೂ ಇನ್ನೊಂದು ಕಥೆಯಿದೆ. ಆದರೆ ಇಂಥ ಕಥೆಗಳು ಕದಂಬರ ಆಡಳಿತ ಆರಂಭವಾದ ಅನೇಕ ವರ್ಷಗಳ ಮೇಲೆ ಹುಟ್ಟಿಕೊಂಡವಾದ್ದರಿಂದ ಇವಕ್ಕೆ ಹೆಚ್ಚಿನ ಬೆಲೆ ಕೊಡಬೇಕಾದುದಿಲ್ಲ. ಕದಂಬಪುಷ್ಪ ಪಾರ್ವತಿಗೆ ಪ್ರಿಯವಾದುದರಿಂದ ಶಿವಸಂಬಂಧವಾದ ಇಂಥ ಕಥೆಗಳು ಹುಟ್ಟಿಕೊಂಡಿರಬಹುದು ಎಂಬುದು ಇತಿಹಾಸಕಾರರ ಅಭಿಪ್ರಾಯ.

**ರಾಜಕೀಯ ಇತಿಹಾಸ:** ಬನವಾಸಿಯ ಕದಂಬರು 4ನೆಯ ಶತಮಾನದ ಆರಂಭದಲ್ಲಿ ಸು.3 ಶತಮಾನಗಳ ಕಾಲ ವಾಯವ್ಯ ಕರ್ನಾಟಕದ ಬಹುಭಾಗವನ್ನಾಳಿದರು. ಇವರ ರಾಜಧಾನಿ ಬನವಾಸಿ. ಮಾನವ್ಯಗೋತ್ರದ ಹಾರೀತೀವಂಶದ ಬ್ರಾಹ್ಮಣ ವೀರಶರ್ಮ ಎಂಬುವನು ಈ ವಂಶದ ಆದ್ಯ. ಇವನ ಮಗ ಬಂಧುಷೇಣ ಕ್ಷಾತ್ರವೃತ್ತಿಯನ್ನು ಕೈಕೊಂಡಿದ್ದ ಎಂದು ಇತ್ತೀಚೆಗೆ ದೊರೆತ ಗುಡ್ನಾಪುರ ಶಾಸನ ತಿಳಿಸುತ್ತದೆ. ಅದೇ ಶಾಸನದಲ್ಲಿ ಬಂಧುಷೇಣನ ಮಗ ಮಯೂರಶರ್ಮ ಎಂದೂ ಈತ ಬ್ರಾಹ್ಮಣ್ಯವನ್ನು ಪಾಲಿಸುತ್ತಿದ್ದನೆಂದೂ ತಿಳಿಸಿದರೆ, ತಾಳಗುಂದದಲ್ಲಿರುವ ಶಾಂತಿವರ್ಮನ ಶಾಸನ ಕದಂಬವಂಶ ಮತ್ತು ರಾಜ್ಯದ ಸ್ಥಾಪನೆಯ ಬಗ್ಗೆ ಹೆಚ್ಚು ವಿವರಗಳನ್ನು ಒದಗಿಸುತ್ತದೆ. ಅದರ ಪ್ರಕಾರ ಬ್ರಾಹ್ಮಣರಾದ ಈ ವಂಶಜರ ಮನೆಯ ಬಳಿ ಕದಂಬ ವೃಕ್ಷವೊಂದು ಇದ್ದುದರಿಂದ, ಈ ಮನೆಯವರಿಗೆ ಕದಂಬ ಎಂಬ ಹೆಸರು ಪ್ರಚಲಿತವಾಯಿತು. ಈ ಶಾಸನದಲ್ಲಿ ಮಾನವ್ಯಗೋತ್ರಕ್ಕೆ ಸೇರಿದ, ಹಾರಿತೀಪುತ್ರರೆನಿಸಿದ ಬ್ರಾಹ್ಮಣ ಕುಟುಂಬದವರು ವಾಸಿಸುತ್ತಿದ್ದರು ಎಂದಿದೆ. ಕದಂಬ ವಂಶದ ಮಯೂರಶರ್ಮನ ಪೂರ್ವಜರಿಗೆ ಈ ವೃಕ್ಷದ ಔಷಧಿ ಗುಣಗಳು ತಿಳಿದು, ತಮ್ಮ ಮನೆಯ ಸಮೀಪ ಇದನ್ನು ಎಚ್ಚರಿಕೆಯಿಂದ ಬೆಳೆಸಿರಬಹುದು. ಚರಕ ಸಂಹಿತದಲ್ಲಿ ಕದಂಬ ವೃಕ್ಷದ ಔಷಧಿ ಗುಣಗಳನ್ನು ಹೇಳುತ್ತಾ ಇದರ ಎಲೆಗಳು ಮೃದುವಾಗಿ ಗಾಯಗಳ ಮೇಲೆ ಮುಚ್ಚುವುದಕ್ಕೆ ಉಪಯೋಗವಾಗುತ್ತದೆ. ಇದರ ತೊಗಟೆ ಮತ್ತು ಎಲೆಯ ಕಷಾಯವನ್ನು ಗಾಯಗಳನ್ನು ವಾಸಿಮಾಡಲು ಉಪಯೋಗಿಸಬಹುದು. ಇದು ಗುಣಕಾರಕ ಮತ್ತು ಪ್ರಭಾವಿ ನೋವು ಶಮನಕ ಮುಂತಾದ ಔಷಧೀಯ ಗುಣಗಳನ್ನು ಹೊಂದಿದೆ ಎಂದು ಹೇಳಿದೆ. ಕದಂಬರು ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರಿಂದ ಗಾಯಗಳಿಂದ



ಕದಂಬರ ಲಾಂಛನ

ತೊಂದರೆಗೆ ಒಳಗಾಗುತ್ತಿದ್ದರು. ಅವುಗಳನ್ನು ಗುಣಪಡಿಸಿಕೊಳ್ಳಲು ಇದರಿಂದ ಔಷಧಿಯನ್ನು ತಯಾರಿಸಿ ಉಪಯೋಗ ಮಾಡಿರಬಹುದು. ಈ ವೃಕ್ಷ ಮಲೆನಾಡಿನ ನಿತ್ಯ ಹರಿದ್ವರ್ಣದ ಅರಣ್ಯದಲ್ಲಿ ಬೆಳೆಯುತ್ತದೆ. ಕದಂಬರು ಮಲೆನಾಡು ಪ್ರದೇಶದವರು. ಈ ಮಯೂರಶರ್ಮನೇ ಕದಂಬರಾಜ್ಯದ ಸ್ಥಾಪಕ. ಈತ ವೇದಾಧ್ಯಯನಕ್ಕಾಗಿ ತನ್ನ ತಾತ ವೀರಶರ್ಮನೊಡನೆ ಕಂಚಿಯ ಘಟಿಕಾಸ್ಥಾನಕ್ಕೆ ಹೋಗಿದ್ದ. ಅಲ್ಲಿಯ ರಾಜ ಅಶ್ವಮೇಧಯಾಗ ಮಾಡಿದಾಗ ಯಾವುದೋ ಕಾರಣದಿಂದ ಅವಮಾನಿತನಾಗಿ, ಛಲದಿಂದ ಶಸ್ತ್ರವಿದ್ಯೆ ಕಲಿತು ದಂಡುಕಟ್ಟಿ ಧಾಳಿಮಾಡಿ ಪಲ್ಲವರ ಗಡಿನೆಲ ಶ್ರೀಪರ್ವತದ ಬಳಿಯ ಭಾಗವನ್ನಾಕ್ರಮಿಸಿಕೊಂಡ. ಮಗ್ಗುಲ ಮುಳ್ಳಾಗಿದ್ದ ಮಯೂರಶರ್ಮನ ವಿರೋಧ ಕಟ್ಟಿಕೊಳ್ಳಬಾರದೆಂಬ ಉದ್ದೇಶದಿಂದ ಪಲ್ಲವರು ಇವನಿಗೆ ಪಶ್ಚಿಮ ಸಮುದ್ರದಿಂದ ಪ್ರೇಹಾರ (ಪ್ರಾಯಶಃ ಮಲಪ್ರಭಾ ಅಥವಾ ಘಟಪ್ರಭಾ) ವರೆಗಿನ ಪ್ರದೇಶವನ್ನು ಬಿಟ್ಟುಕೊಟ್ಟರು.

ಮಯೂರಶರ್ಮ ಪಲ್ಲವಸಾಮಂತನಾಗಿ ಕದಂಬರಾಜ್ಯ ಸ್ಥಾಪನೆ ಮಾಡಿದರೂ ಸ್ವಲ್ಪ ಕಾಲದಲ್ಲೇ ಸ್ವಾತಂತ್ರ್ಯ ಘೋಷಿಸಿಕೊಂಡಂತೆ ತೋರುತ್ತದೆ. ಇವನ ಚಂದ್ರವಳ್ಳಿಯ ಶಾಸನದ ಪ್ರಕಾರ ಈತ ತ್ರೈಕೂಟಕ, ಆಭೀರ, ಪಲ್ಲವ, ಪರಿಯಾತ್ರಕ, ಶಕಸ್ಥಾನ, ಮೋಕರಿ, ಪುನ್ನಾಟ, ಸಯಿಂದಕ (ಸೇಂದ್ರಕ) ಮುಂತಾದ ರಾಜ್ಯಗಳನ್ನು ಗೆದ್ದ. ಅರಾವಳಿಯಿಂದ ವಿಂಧ್ಯದವರೆಗೆ ಇದ್ದದ್ದು ಸಯಿಂದಕರ ರಾಜ್ಯ. ಕಾವೇರಿ ಕಪಿನಿಗಳ ನಡುವಣ ರಾಜ್ಯ ಪುನ್ನಾಟ. ಮೋಕರಿಗಳು ಆಳುತ್ತಿದ್ದ ಉಜ್ಜಯಿನಿ ಮತ್ತು ರಾಜಸ್ತಾನಗಳವರೆಗೆ ತನ್ನ ರಾಜ್ಯ ವಿಸ್ತರಿಸಿದನೇ ಎಂಬುದು ಸಂದೇಹಾಸ್ಪದ. ಅಂತೂ ಈ ನಾನಾ ರಾಜ್ಯಗಳ ಅರಸರೊಂದಿಗೆ ಈತ ಘರ್ಷಣೆ ನಡೆಸಿರಬಹುದೆಂಬುದಾಗಿ ಹೇಳಬಹುದಾಗಿದೆ. ಆದರೆ ಈಚೆಗೆ ಇದೇ ಶಾಸನಪಾಠವನ್ನು ಪರಿಷ್ಕರಿಸಲಾಗಿದ್ದು, ಅದರ ಪ್ರಕಾರ ಈ ಶಾಸನವು ಕೆರೆಯೊಂದರ ನಿರ್ಮಾಣದ ವಿಷಯವನ್ನಷ್ಟೇ ಹೇಳುತ್ತದೆ. ಹಾಗೆಯೇ ಸೊರಬ ತಾಲ್ಲೂಕಿನ ಜಡೆ ಗ್ರಾಮದಲ್ಲಿ ದೊರೆತ ಏಳು ತಾಮ್ರಶಾಸನಗಳು ಕದಂಬರ ಕೆಲವು ಹೊಸ ಅರಸರ ಹೆಸರುಗಳನ್ನು (ಉದಾ: ಪ್ರಿಯವೃತವರ್ಮ) ತಿಳಿಸುತ್ತವೆ. ಈ ಬಗ್ಗೆ ವಿವರಗಳು ಪ್ರಕಟವಾಗಬೇಕಾಗಿವೆ.

**ಬನವಾಸಿಯ ಕದಂಬರ ವಂಶಾವಳಿ**




ಕದಂಬರ ಮೊದಲನೆಯ ಅರಸ ಮಯೂರಶರ್ಮ (ಸು.325–45). ಇವನ ಅನಂತರ ಕದಂಬ ಅರಸರು ತಮ್ಮ ಹೆಸರುಗಳ ಕೊನೆಯಲ್ಲಿ ವರ್ಮ ಎಂದು ಬದಲಾಯಿಸಿಕೊಂಡರು. ಮಯೂರಶರ್ಮನ ಅನಂತರ ಕಂಗವರ್ಮ (ಸು.345–65), ಭಗೀರಥ (ಸು.365–85) ಮತ್ತು ರಘು ಅನುಕ್ರಮವಾಗಿ ಆಳಿದರು. ಅರತಲಗದ್ದೆ ತಾಮ್ರಶಾಸನ ಪ್ರಕಾರ ಶ್ರೀಪ್ರಿಯವೃತ ವರ್ಮನು ಬನವಾಸಿ ರಾಜಧಾನಿಯಿಂದ ಆಳುತ್ತಿದ್ದಾಗ ಯುವರಾಜ ಕಾಕುತ್ಸ್ಥವರ್ಮನ ಯೋಗಕ್ಷೇಮಕ್ಕಾಗಿ ಭೂದಾನವನ್ನು ಮಾಡುತ್ತಾನೆ. ಆದರೆ ಬನವಾಸಿ ಕದಂಬರ ಶಾಸನಗಳಲ್ಲಿ ಇವನ ಹೆಸರನ್ನು ಉಲ್ಲೇಖಿಸದಿರುವುದು ಆಶ್ಚರ್ಯವಾಗುತ್ತದೆ. ಬಿ.ಆರ್.ಗೋಪಾಲ ಅವರು ಕಾಕುತ್ಸ್ಥವರ್ಮನು ರಘುವಿನ ಕನಿಷ್ಠ ಸಹೋದರನೆಂದು ಉಲ್ಲೇಖಿಸಿರುವುದರಿಂದ ಪ್ರಿಯವೃತ ವರ್ಮ, ರಘು ಮತ್ತು ಕಾಕುತ್ಸ್ಥವರ್ಮರು ಬೇರೆ ಬೇರೆ ತಾಯಿಯ ಮಕ್ಕಳು ಎಂದು ಎಸ್.ಜಿ.ಸಾಮಕ್ ಅಭಿಪ್ರಾಯಪಟ್ಟಿದ್ದಾರೆ. ಕಾಕುತ್ಸ್ಥವರ್ಮನು ಪ್ರಸಿದ್ಧ ದೊರೆ. ಗುಪ್ತ, ವಾಕಾಟಕ, ಭಟಾರಿ, ಗಂಗವಂಶದವರೊಂದಿಗೆ ವಿವಾಹ ಸಂಬಂಧ ಬೆಳೆಸಿ ರಾಜ್ಯವನ್ನು ವಿಸ್ತರಿಸಿದ. ಪಲ್ಲವರೊಡನೆ ಹೋರಾಡಿದ. ಅನಂತರ ಕದಂಬರಾಜ್ಯ ಮಕ್ಕಳಾದ ಶಾಂತಿವರ್ಮ ಮತ್ತು ಕೃಷ್ಣವರ್ಮ I ರಲ್ಲಿ ಭಾಗವಾಯಿತು. ಶಾಂತಿವರ್ಮ (ಸು.430–55) ಬನವಾಸಿಯಿಂದಲೂ ಮತ್ತು ಕೃಷ್ಣವರ್ಮ I (ಸು.430–60) ತ್ರಿಪರ್ವತದಿಂದಲೂ ರಾಜ್ಯವಾಳತೊಡಗಿದರು. ಶಾಂತಿ ವರ್ಮನ ಮಗ ಮೃಗೇಶವರ್ಮ (ಸು.455–80) ಗಂಗ ಮತ್ತು ಪಲ್ಲವರೊಡನೆ ಯುದ್ಧಮಾಡಿ ರಾಜ್ಯವನ್ನು ಇನ್ನೂ ವಿಸ್ತರಿಸಿದ. ರಾಜಧಾನಿ ಬನವಾಸಿ ಜೊತೆಗೆ ಪಲಾಶಿಕಾ (ಹಲಸಿ) 2ನೆಯ ರಾಜಧಾನಿಯಾಯಿತು. ಮೃಗೇಶನ ತಮ್ಮ ಮಾಂಧಾತೃ ವರ್ಮ ಅಲ್ಪಕಾಲ (ಸು.480–85) ರಾಜ್ಯವಾಳಿದ. ಅನಂತರ ಮೃಗೇಶ ವರ್ಮನ ಮಗ ರವಿವರ್ಮ (ಸು.485–519) ಆಳಿದ. ಇವನು ಪಲ್ಲವರೊಡನೆ ಹೋರಾಡಿ ವಿಷ್ಣುವರ್ಮನೆಂಬುವನನ್ನು ಸೋಲಿಸಿ ಕಾಂಚೀಪತಿ ಚಂಡದಂಡೇಶನನ್ನು ಕೊಂದು ರಾಜ್ಯವನ್ನು ವಿಸ್ತರಿಸಿದ. ರವಿವರ್ಮನ ಮಗ ಹರಿವರ್ಮ (ಸು.519–30) ರಾಜ್ಯವಾಳಿದ. ಇವನು ಶಾಂತಿವರ್ಮನ ವಂಶದ ಕೊನೆಯ ದೊರೆ. ತ್ರಿಪರ್ವತ ಕದಂಬ ಶಾಖೆಯ ಕೃಷ್ಣವರ್ಮ II ಇವನನ್ನು ಸೋಲಿಸಿ ಬನವಾಸಿ ವಶಪಡಿಸಿಕೊಂಡ.

ತ್ರಿಪರ್ವತ ಶಾಖೆಯ ಕೃಷ್ಣವರ್ಮ I (ಸು.430–60) ಪಲ್ಲವ ನಣಕ್ಕಾಸನನ್ನು ಮತ್ತು ನಾಗರನ್ನು (ಸೇಂದ್ರಕ) ಸೋಲಿಸಿ ಅಶ್ವಮೇಧ ಯಜ್ಞ ಮಾಡಿದ. ಇವನ ಅನಂತರ ವಿಷ್ಣುವರ್ಮ (ಸು.460–90), ಸಿಂಹವರ್ಮ (ಸು.490–516), ಕೃಷ್ಣವರ್ಮ II (ಸು.516–40) ಅನುಕ್ರಮವಾಗಿ ರಾಜ್ಯವಾಳಿದರು, ಇವನು ಬನವಾಸಿಯ ಹರಿವರ್ಮನನ್ನು ಸೋಲಿಸಿ ಬನವಾಸಿಯಿಂದ ರಾಜ್ಯವಾಳಿದ. ಕದಂಬ ರಾಜ್ಯ ಪುನಃ ಒಂದುಗೂಡಿತು. ಇದಾದ ಮೇಲೆ ಸು.10 ವರ್ಷಗಳ ಕಾಲ ಕೃಷ್ಣವರ್ಮ II ರಾಜ್ಯವಾಳಿದ. ಬಾದಾಮಿ ಚಳುಕ್ಯದೊರೆ ಪುಲಕೇಶಿ I ಕದಂಬ ಕೃಷ್ಣವರ್ಮ IIನನ್ನು ಸೋಲಿಸಿ ಬಾದಾಮಿ ಚಳುಕ್ಯರಾಜ್ಯವನ್ನು ಸ್ಥಾಪಿಸಿದ. ಕೃಷ್ಣವರ್ಮ IIನಿಗೆ ಅಜವರ್ಮ ಮತ್ತು ರವಿವರ್ಮ ಎಂಬ ಇಬ್ಬರು ಮಕ್ಕಳಿದ್ದರು. ಅಜವರ್ಮ 2ನೆಯ ಕೃಷ್ಣವರ್ಮನ ಉತ್ತರಾಧಿಕಾರಿಯಾದ. ಆದರೆ ಇವನು ಆಳುವ ವೇಳೆಗೆ ಕದಂಬ ರಾಜ್ಯ ತನ್ನ ಅಸ್ತಿತ್ವ ಕಳೆದುಕೊಂಡಿತ್ತು. ಕೇವಲ ಸಾಮಂತನಾಗಿ ಆಳಿಕೆ ನಡೆಸಿರಬೇಕು. ಇವನೊಂದಿಗೆ ಕದಂಬರ ಆಳಿಕೆ ಮುಗಿಯಿತು.

**ಆಡಳಿತ ವ್ಯವಸ್ಥೆ:** ಕದಂಬ ರಾಜ್ಯವ್ಯವಸ್ಥೆ ಏಕರಾಜಪ್ರಭುತ್ವವಾಗಿದ್ದು ರಾಜತ್ವ ವಂಶಪಾರಂಪರ್ಯವಾಗಿ ಬರುತ್ತಿತ್ತು. ರಾಜ್ಯಾಡಳಿತದಲ್ಲಿ ರಾಜ ನಿರಂಕುಶ ಪ್ರಭುವೇ ಆಗಿದ್ದರೂ ಆತ ಬುದ್ಧಿವಂತ ಮತ್ತು ನಿಷ್ಠಾವಂತ ಅಧಿಕಾರಿಗಳ ಸಹಾಯದಿಂದ ಧರ್ಮವಾಗಿ ಆಡಳಿತ ನಡೆಸಬೇಕಾಗಿತ್ತು. ಕೆಲವು ಕದಂಬ ಶಾಸನಗಳಲ್ಲಿ ರಾಜನ ಸಮೀಪಬಂಧುಗಳು ರಾಜ್ಯದ ಆಡಳಿತದಲ್ಲಿ ಭಾಗವಹಿಸುತ್ತಿದ್ದರೆಂಬುದಕ್ಕೆ ಆಧಾರಗಳಿವೆ (ಉದಾ: ಕಾಕುತ್ಸ್ಥನ ಅಳಿಯ ಪಶುಪತಿ). ಆದರೆ ಈ ಕಾಲದಲ್ಲಿ ರಾಣಿಯರು, ರಾಜಕುಮಾರಿಯರು–ಇವರುಗಳ ಪಾತ್ರ ಆಡಳಿತದಲ್ಲಿ ಇದ್ದಂತೆ ತೋರುವುದಿಲ್ಲ. ಕದಂಬ ರಾಜರು ಆಡಳಿತಕ್ಕೆ ಸಂಬಂಧಿಸಿದಂತೆ ವೃದ್ಧರ ಉಪದೇಶಗಳನ್ನು ಗ್ರಹಿಸುತ್ತಿದ್ದರೆಂಬುದು ಕೆಲವು ಶಾಸನಗಳಲ್ಲಿ ರಾಜನಿಗೆ ಅನ್ವಯ ವಾಗುವಂತಿರುವ ವೃದ್ಧೋಪದೇಶ ಗ್ರಾಹೀ ಎಂಬ ಮಾತಿನಿಂದ ತಿಳಿಯುತ್ತದೆ. ಹರಿವರ್ಮನಿಗೆ ಅವನ ಕಕ್ಕ ಶಿವರಥನೂ 2ನೆಯ ಕೃಷ್ಣವರ್ಮನಿಗೆ ಹರಿದತ್ತ ಶ್ರೇಷ್ಠಿಯೂ ಮೃಗೇಶವರ್ಮನಿಗೆ ಧರ್ಮನನ್ದ ಆಚಾರ್ಯ ಮತ್ತು ರವಿನನ್ದ್ಯಾಚಾರ್ಯರು ಉಪದೇಶಕರಾಗಿದ್ದರು.

ಕದಂಬರ ವಿಸ್ತಾರ ರಾಜ್ಯದಲ್ಲಿ ವಿವಿಧ ಪ್ರದೇಶಗಳನ್ನು ರಾಷ್ಟ್ರ, ವಿಷಯ, ನಾಡು–ಈ ರೀತಿಯ ಸಣ್ಣ ಆಡಳಿತ ಘಟಕಗಳಾಗಿ ವಿಂಗಡಿಸಲಾಗಿತ್ತು. ಇವರ ಶಾಸನಗಳಲ್ಲಿ ಸ್ಥಾನಕುಣ್ದೂರ ವಿಷಯ, ಕರವನ್ನಾಡ್ಗ ವಿಷಯ, ತಗರೆ ವಿಷಯ, ಮೊಗಲೂರು ವಿಷಯ, ಸೇಂದ್ರಕ ವಿಷಯ, ಆಸನ್ದಿ ವಿಷಯ–ಈ ಪ್ರಾಂತ್ಯಗಳ ಹೆಸರುಗಳು ಬರುತ್ತವೆ. ಕದಂಬ ವಿಷ್ಣುಶರ್ಮನ ತಂಗಳಿ ಶಾಸನದಲ್ಲಿ ಸಿನ್ದುಥೆಯ ರಾಷ್ಟ್ರದ ಹೆಸರಿದೆ. ಹಲ್ಮಿಡಿ ಶಾಸನದಲ್ಲಿ ನರಿದಾವಿಳೆನಾಡನ್ನು ಹೆಸರಿಸಿದೆ. ಪ್ರಾಂತೀಯ ವಿಭಾಗಗಳಲ್ಲಿನ ಆಡಳಿತ ಹೇಗಿತ್ತೆಂಬುದಕ್ಕೆ ಸ್ಪಷ್ಟ ಆಧಾರಗಳಿಲ್ಲ. ಆದರೆ ಸೇಂದ್ರಕ ವಿಷಯ ಭಾಗದಲ್ಲಿ ಸೇಂದ್ರಕರು, ಹಾಗೇ ಕೊಂಕಣದ ಭಾಗದಲ್ಲಿ ಕೇಕಯರು ಈ ರೀತಿಯ ಸಣ್ಣ ರಾಜವಂಶಗಳವರು ವಂಶಪಾರಂಪರ್ಯವಾಗಿ ಅಧಿಕಾರದಲ್ಲಿರುತ್ತಿದ್ದರೆಂದು ತೋರುತ್ತದೆ. ಈ ಕಾಲದ ಶಾಸನಗಳಲ್ಲಿ ಉಕ್ತವಾಗಿರುವ ವಿಷಯಪತಿ, ಸಾಮಂತ, ಗ್ರಾಮ ಭೋಗಿಕ, ಮಹತ್ತರ, ದೇಶಾಧಿಪತಿ, ರಾಜಪುರುಷ ಮೊದಲಾದವರು ಪ್ರಾಂತ್ಯಗಳ ಹಾಗೂ ಗ್ರಾಮಗಳ ಅಧಿಕಾರಿಗಳಾಗಿರಬಹುದು. ಸೇನಾಪತಿ, ಬಹುಶಃ ಸಟ್ಟಿಗ್ಗ ಇವರುಗಳು ಸೈನ್ಯದ ಅಧಿಕಾರಿಗಳಾಗಿದ್ದರು.

ರಾಜರು ಪ್ರಜೆಗಳಿಂದ ಅನೇಕ ರೀತಿಯ ತೆರಿಗೆಗಳನ್ನು ಸಂಗ್ರಹಿಸಿ ಕೋಶಾಭಿವೃದ್ಧಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು. ಹಲ್ಮಿಡಿ ಶಾಸನದಲ್ಲಿ ಪತ್ತೊನ್ದಿ, ಕುಱುಮ್ಬಿಡಿ ಈ ತೆರಿಗೆಗಳ ಹೆಸರು ಇವೆ.

**ಆರ್ಥಿಕ, ಸಾಮಾಜಿಕ ಸ್ಥಿತಿ:** ಕದಂಬರ ರಾಜಕೀಯ ಇತಿವೃತ್ತವನ್ನು ಗಮನಿಸಿದರೆ ಈ ಕಾಲದಲ್ಲಿ ಭದ್ರವಾದ ಆರ್ಥಿಕ ಸ್ಥಿತಿ ಮತ್ತು ವ್ಯವಸ್ಥೆಗಳು ಇದ್ದಂತೆ ತೋರುತ್ತದೆ. ವ್ಯವಸಾಯ ನಾಡಿನ ಮುಖ್ಯ ಆರ್ಥಿಕ ಮೂಲವಾಗಿತ್ತು. ಹಲವಾರು ಶಾಸನಗಳಲ್ಲಿರುವ ಭೂಮಿದಾನ ಮಾಡಿರುವುದರ ಪ್ರಸ್ತಾಪ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಭೂಮಿ ಸ್ಥಿರಾಸ್ತಿ, ಸರ್ವಕಾಲದಲ್ಲೂ ಉತ್ಪನ್ನ ನೀಡಬಲ್ಲುದು ಎಂಬುದೇ ಇದಕ್ಕೆ ಕಾರಣ. ವ್ಯವಸಾಯ ಭೂಮಿಗಳಲ್ಲಿ ಗಱ್ದೆ, ಖಜ್ಜಾಣ ಮುಂತಾದ ಭಿನ್ನರೀತಿಯವು ಇದ್ದುದು ಕಂಡುಬರುತ್ತದೆ. ವ್ಯವಸಾಯದ ಅಭಿವೃದ್ಧಿಗೆ ರಾಜ್ಯದ ಪ್ರೋತ್ಸಾಹವೂ ಇರುತ್ತಿತ್ತು. ಚಂದ್ರವಳ್ಳಿ ಶಾಸನದಲ್ಲಿ ಮಯೂರಶರ್ಮ ಅಲ್ಲಿ ಕೆರೆ ಕಟ್ಟಿಸಿದ ವಿಷಯವಿದೆ. ರವಿಮಹಾರಾಜನ ಗುಡ್ನಾಪುರ ಶಾಸನದಲ್ಲಿ ಗುಡ್ಡತಟಾಕದ ಪ್ರಸ್ತಾಪವಿದೆ. ಕಾಕುತ್ಸ್ಥವರ್ಮ ತಾಳಗುಂದದಲ್ಲಿ ಕೆರೆಯೊಂದನ್ನು ಕಟ್ಟಿಸಿದ. ಪಶುಪಾಲನೆ, ನೇಯ್ಗೆ ಮುಂತಾದ ಇತರ ಕಸಬುಗಳೂ ಈ ಕಾಲದಲ್ಲಿದ್ದಿರಬೇಕು. ಬಹುಶಃ ವ್ಯಾಪಾರ ಸಾಕಷ್ಟು ಅಭಿವೃದ್ಧಿಯಾಗಿರಬೇಕು. ಆದರೆ ಈ ವಿಷಯದಲ್ಲಿ ತಕ್ಕಷ್ಟು ಆಧಾರಗಳು ದೊರಕುವುದಿಲ್ಲ. ಕದಂಬರು ಗುಪ್ತರೇ ಮೊದಲಾದವರೊಡನೆ ಸಂಬಂಧ ಬೆಳೆಸಿದ್ದುದು, ಮಯೂರಶರ್ಮನ ಕಂಚಿಯ ಪ್ರಯಾಣ ಮುಂತಾದ ಪ್ರಸ್ತಾಪಗಳು ಅಂದಿನ ಕಾಲದಲ್ಲಿ ಭಾರತದ ಇತರ ಭಾಗಗಳೊಡನೆ ಕದಂಬ ರಾಜ್ಯ ಒಳ್ಳೆಯ ಸಂಪರ್ಕವ್ಯವಸ್ಥೆ ಹೊಂದಿರಬೇಕೆನಿಸುತ್ತದೆ. ಇವು ವ್ಯಾಪಾರಕ್ಕೂ ಸಹಕಾರಿಯಾಗಿರಬೇಕು. ಅಲ್ಲದೆ ಆಗ್ನೇಯ ಏಷ್ಯದಲ್ಲಿ ದೊರಕಿರುವ ಶಾಸನಗಳಲ್ಲಿ ಕದಂಬರ ಕಾಲದಲ್ಲಿದ್ದ ಲಿಪಿ ಹಾಗೂ ಶಾಸನ ಸ್ವರೂಪ ಅಲ್ಲಿಯೂ ಪ್ರಚಲಿತವಾಗಿತ್ತು ಎಂಬುದಕ್ಕೆ ಸ್ಪಷ್ಟ ಸಾಕ್ಷ್ಯಗಳು ದೊರಕುವುದರಿಂದ, ದ್ವೀಪಾಂತರಗಳೊಡನೆ ಕದಂಬರ ಕಾಲದಲ್ಲಿ ಕರ್ನಾಟಕ ಸಂಪರ್ಕ ಬೆಳಸಿಕೊಂಡಿತ್ತೆಂಬುದು

ತಿಳಿಯುತ್ತದೆ. ಅಲ್ಲದೆ ಬನವಾಸಿಯ ಹೆಸರು ಈ ಕಾಲದಲ್ಲಿ ಬರ್ಮ, ಶ್ರೀಲಂಕಗಳಲ್ಲಿ ಸಹ ಪ್ರಸಿದ್ಧವಾಗಿತ್ತು. ಈ ಸಂಪರ್ಕಗಳು ಪ್ರಾರಂಭಿಕವಾಗಿ ವ್ಯಾಪಾರದಿಂದ ಕುದುರಿದ್ದರೆ ಆಶ್ಚರ್ಯವಿಲ್ಲ. ವ್ಯಾಪಾರದ ಸಂಬಂಧದಲ್ಲಿ ರಾಜನ ಪ್ರೋತ್ಸಾಹವೂ ಸಾಕಷ್ಟಿರಬೇಕು. ಕದಂಬರ ಒಂದು ಶಾಸನದಲ್ಲಿ ನನ್ದಪದವೆಂಬ ಹಾದಿಯನ್ನೂ ಕರ್ಣ್ಣೀಸಕವೆಂಬ ಒಂದು ಸೇತುವೆಯನ್ನೂ ಮಾಡಿಸಿದ ವಿಷಯವಿದೆ. ರಾಜರು ನಾಣ್ಯಗಳನ್ನು ಹೊರಡಿಸುತ್ತಿದ್ದುದು ವ್ಯಾಪಾರ ಸುಗಮವಾಗಿ ನಡೆಯಲು ಸಹಾಯಕವಾಗಿತ್ತು. ಹೀಗೆ ಬೆಳೆಯುತ್ತಿದ್ದ ಆರ್ಥಿಕ ವ್ಯವಸ್ಥೆಯಿಂದ ದೇಶ ಸಮೃದ್ಧವಾಗಿ, ರಾಜಧಾನಿ ಬನವಾಸಿಯಲ್ಲದೆ, ತಾಳಗುಂದ, ಹಲಶಿ, ಹರೇಶಪುರ, ಉಚ್ಚಂಗಿ ಮುಂತಾದ ಅನೇಕ ನಗರಗಳು ಹುಟ್ಟಿಕೊಳ್ಳುವ ಸಾಧ್ಯತೆ ಉಂಟಾಯಿತು.

ರಾಮೇಶ್ವರ ದೇವಾಲಯ, ಹಲಸಿ

ಬನವಾಸಿಯ ಕದಂಬರ ಕಾಲದಲ್ಲಿ ಅವರ ರಾಜ್ಯದಲ್ಲಿ ಅನೇಕ ಧರ್ಮಗಳು ಪ್ರಚಲಿತವಾಗಿದ್ದುವು. ಆದರೆ ಈ ಹಿಂದೆ ಬನವಾಸಿ ಪ್ರದೇಶದಲ್ಲಿ ನೆಲೆಗೊಂಡಿದ್ದ ಬೌದ್ಧಧರ್ಮ ಎಷ್ಟರಮಟ್ಟಿಗೆ ಮುಂದುವರಿಯಿತು ಎಂಬುದಕ್ಕೆ ಐತಿಹಾಸಿಕ ಮಾಹಿತಿಗಳು ದೊರಕುವುದಿಲ್ಲ. ಹೊನ್ನಾವರದಲ್ಲಿ ದೊರಕಿದ ಒಂದು ತಾಮ್ರಪಟದಲ್ಲಿ ಮಾತ್ರ ಕದಂಬ ರವಿವರ್ಮನ ಸಾಮಂತನಾಗಿದ್ದ ಕೇಕಯ ಅರಸನೊಬ್ಬ ಬೌದ್ಧರಿಗೆ ದಾನಕೊಟ್ಟ ಪ್ರಸ್ತಾಪವಿದೆ. ಈ ಕಾಲದಲ್ಲಿ ಜೈನಧರ್ಮ ಮತ್ತು ಹಿಂದುಧರ್ಮಗಳು ಪ್ರಬಲಗೊಂಡು ಬೌದ್ಧಧರ್ಮ ಹಿಂದೆ ಸರಿದಿದ್ದಂತೆ ತೋರುತ್ತದೆ.

ಬನವಾಸಿಯ ಕದಂಬರ ಕಾಲದಲ್ಲಿ ಜೈನಧರ್ಮಕ್ಕೆ ಸ್ವಲ್ಪಮಟ್ಟಿನ ರಾಜ ಪ್ರೋತ್ಸಾಹ ದೊರಕಿತು. ಯುವರಾಜ ಕಾಕುತ್ಸ್ಥವರ್ಮ ಪಲಾಶಿಕೆಯಲ್ಲಿದ್ದಾಗ ಅರ್ಹಂತರಿಗೆ ಭೂಮಿದಾನ ಮಾಡಿದನೆಂದು ಹಲಶಿ ತಾಮ್ರಪಟದಲ್ಲಿ ಹೇಳಿದೆ. ಹಲಶಿಯ ಇನ್ನೊಂದು ತಾಮ್ರಪಟದಲ್ಲಿ ಮೃಗೇಶವರ್ಮ ತನ್ನ ತಂದೆಯ ಜ್ಞಾಪಕಾರ್ಥವಾಗಿ ಅದೇ ನಗರದಲ್ಲಿ ಜಿನಾಲಯವೊಂದನ್ನು ಕಟ್ಟಿಸಿ ಜೈನರಿಗೆ ದತ್ತಿಗಳನ್ನು ಕೊಟ್ಟ ವಿಷಯವಿದೆ. ಇದೇ ಹಲಶಿಯ ಜಿನಾಲಯಕ್ಕೆ ದತ್ತಿ ನೀಡಿದ ಬಗ್ಗೆ ರವಿವರ್ಮನ ಕಾಲದ ಶಾಸನಗಳೂ ಇವೆ. ರವಿವರ್ಮ ತನ್ನ ರಾಜಧಾನಿಯಲ್ಲಿ ಅರಮನೆಯ ಬಳಿಯಲ್ಲೇ ಕಾಮಜಿನಾಲಯವೊಂದನ್ನು ಕಟ್ಟಿಸಿದ ವಿಷಯ ಗುಡ್ನಾಪುರ ಶಾಸನದಿಂದ ತಿಳಿಯುತ್ತದೆ. ಕದಂಬರ ಕಾಲದಲ್ಲಿ ಜೈನರು ರಾಜರ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿದ್ದಿರಬೇಕು. ರವಿಮಹಾರಾಜ ಜೈನ ಕುಮಾರದತ್ತನಿಂದ ರಾಜ್ಯ ಹಾಗೂ ಧರ್ಮದ ವಿಷಯದಲ್ಲಿ ಸಲಹೆ ಪಡೆಯುತ್ತಿದ್ದನೆಂದು ಒಂದು ಶಾಸನ ತಿಳಿಸುತ್ತದೆ. ಈ ಕಾಲದ ಜೈನಧರ್ಮದಲ್ಲಿ ಹಲವು ಪಂಥೀಯ ಪ್ರಭೇದಗಳಿದ್ದುವು. ಕದಂಬ ಶಾಸನಗಳಲ್ಲಿ ಯಾಪನೀಯ ನಿರ್ಗ್ರಂಥ ದಿಗಂಬರ ಕೂರ್ಚಕ ಮತ್ತು ಶ್ವೇತಪಟ (ಶ್ವೇತಾಂಬರ) ಪಂಥಗಳ ಪ್ರಸ್ತಾಪ ದೊರಕುತ್ತದೆ. ಜೈನ ದೇವಾಲಯಗಳ ರಚನೆ, ಮುನಿಗಳು ಅಲ್ಲಿ ವಾಸಿಸುತ್ತಿದ್ದದ್ದು, ಬಸದಿಗಳಲ್ಲಿ ಉಪಲೇಪನ, ಅಭ್ಯಂಜನ, ಭಿನ್ನ ಸಂಸ್ಕಾರ, ಮಹಿಮಾ (ಉತ್ಸವ) ಮುಂತಾದವೂ ಆಹಾರ, ವಿದ್ಯಾದಾನಗಳೂ ನಡೆಯುತ್ತಿದ್ದುದು ಸಮಕಾಲೀನ ಶಾಸನಗಳಿಂದ ತಿಳಿಯುತ್ತದೆ.

ಬನವಾಸಿಯ ಕದಂಬರು ಬಹುತೇಕ ವೈದಿಕ ಧರ್ಮಾವಲಂಬಿಗಳಾಗಿದ್ದರು. ತಾಳಗುಂದ ಶಾಸನದಲ್ಲಿ ವೇದಾಧ್ಯಯನ ಮತ್ತು ಯಜ್ಞಯಾಗಾದಿಗಳಲ್ಲಿ ಕದಂಬ ಮನೆತನದವರು ನಿರತರಾಗಿದ್ದರೆಂದು ಹೇಳಿದೆ. ರವಿವರ್ಮ, ಕೃಷ್ಣವರ್ಮ ಮೊದಲಾದ ಅರಸರು ಅಶ್ವಮೇಧಾದಿ ಯಜ್ಞಗಳನ್ನು ಮಾಡಿದ್ದರು. ಕದಂಬ ವಂಶದವರು ಅಹಿಚ್ಛತ್ರದಿಂದ ಬ್ರಾಹ್ಮಣ ಕುಟುಂಬಗಳನ್ನು ತಂದು ರಾಜ್ಯದಲ್ಲಿ ನೆಲಸಿದರೆಂದು ಐತಿಹ್ಯಗಳಿವೆ. ಆ ಕಾಲದಲ್ಲಿ ವೇದಪಾರಂಗತರೂ ಛನ್ದೋಪಾರಗರೂ ಯಜ್ಞವಿದರೂ ಷಟ್ಕರ್ಮನಿರತರೂ ಆದ ಬ್ರಾಹ್ಮಣರು ಇದ್ದರೆಂಬ ವಿಷಯ ಅನೇಕ ಕದಂಬ ಶಾಸನಗಳಲ್ಲಿ ದೊರೆಯುತ್ತದೆ. ಈ ಕಾಲದಲ್ಲಿ ವೈದಿಕ ಹಿಂದುಧರ್ಮ ಮುಂದುವರೆಯುತ್ತಿದ್ದರೂ ಪೌರಾಣಿಕ ಹಿಂದುಧರ್ಮ ಸಹ ಪ್ರಚಾರದಲ್ಲಿತ್ತು. ಕದಂಬರಾಜರ ವ್ಯಕ್ತಿನಾಮಗಳಲ್ಲಿ ಕಂಡುಬರುವ ಭಗೀರಥ, ರಘು, ಕಾಕುತ್ಸ್ಥ, ರವಿ, ಕೃಷ್ಣ, ಹರಿ, ಭಾನು ಇಂಥ ಹೆಸರುಗಳು ರಾಮಾಯಣದೊಳಗಿನ ಮತ್ತು ವೈಷ್ಣವೀಯ ಹೆಸರುಗಳೇ ಆಗಿವೆ. ಮಯೂರಶರ್ಮನ ಹೆಸರು ಸ್ಕಂದನನ್ನು ಸೂಚಿಸುತ್ತದೆ. ಹಲ್ಮಿಡಿ ಮುಂತಾದ ಶಾಸನಗಳಲ್ಲಿ ವಿಷ್ಣುಸ್ತುತಿ, ತಾಳಗುಂದ ಶಾಸನದ ಮಹಾದೇವ ದೇವಾಲಯದ ಉಲ್ಲೇಖ, ಅಲ್ಲದೆ ಇತರ ಕೆಲವು ಶಾಸನಗಳಲ್ಲಿರುವ ಬ್ರಹ್ಮ ಮತ್ತು ತ್ರಿಮೂರ್ತಿಗಳನ್ನು ಕುರಿತು ಪ್ರಾರ್ಥನಾಪದ್ಯಗಳು ಈ ಕಾಲದ ಪೌರಾಣಿಕ ಹಿಂದುಧರ್ಮದ ಪ್ರಭಾವವನ್ನು ಪರಿಚಯ ಮಾಡಿಕೊಡುತ್ತವೆ. ಹಿಂದು ದೇವಾಲಯಗಳ ರಚನೆಯೂ ಈ ಕಾಲದಲ್ಲಿದ್ದುದಕ್ಕೆ ತಾಳಗುಂದ ಶಾಸನ ಮಾಹಿತಿ ನೀಡುತ್ತದೆ. ಶಿವಮೊಗ್ಗ ಜಿಲ್ಲೆಯ ಜಂಬೆಹಳ್ಳಿಯಲ್ಲಿ ಈ ಕಾಲದ ಮಹಿಷಮರ್ದಿನಿಯ ಶಿಲ್ಪವೊಂದು ದೊರಕಿದೆ.

ವರ್ಣ ಮತ್ತು ಜಾತಿಗಳು ಈ ಕಾಲದ ಹೊತ್ತಿಗೆ ವ್ಯವಸ್ಥಿತವಾಗುತ್ತಿದ್ದುವು. ಮನು ಮೊದಲಾದವರ ಧರ್ಮಶಾಸ್ತ್ರಗಳು ಸಮಾಜದ ರೀತಿನೀತಿಗಳಿಗೆ ಆಧಾರಸ್ತಂಭಗಳಾಗಿ ಪರಿಗಣಿತವಾಗಿದ್ದುವು. ಚತುರ್ವರ್ಣಗಳ ಪ್ರಸ್ತಾಪವಲ್ಲದೆ, ವರ್ಣಾಶ್ರಮ ಧರ್ಮವನ್ನು ಸಂರಕ್ಷಿಸುವುದು ರಾಜನ ಕರ್ತವ್ಯವೆಂಬ ಭಾವನೆ ಬೆಳೆದಿತ್ತು. ಆದರೆ ಈ ವರ್ಣ ವ್ಯವಸ್ಥೆ ಮುಂದಿನ ಕಾಲದಲ್ಲಿದಷ್ಟು ಸ್ನಿಗ್ಧವಾಗಿದ್ದಂತೆ ತೋರುವುದಿಲ್ಲ. ಬ್ರಾಹ್ಮಣನಾಗಿದ್ದ ಮಯೂರಶರ್ಮ ಕ್ಷತ್ರಿಯಧರ್ಮವನ್ನು ಅನುಸರಿಸಿದ್ದು, ಆ ಕಾಲದ ಬ್ರಾಹ್ಮಣ ವರ್ಗಗಳಲ್ಲಿ ಹಲವರು ಸಂಸ್ಕೃತಾನ್ಯ ದೇಶೀರೂಪದ ವ್ಯಕ್ತಿನಾಮಗಳನ್ನು ಹೊಂದಿದ್ದು (ಉದಾ: ತದಂಗುಟ್ಟಿ) ಬ್ರಾಹ್ಮಣ ವಂಶೀಯನಾದ ಕಾಕುತ್ಸ್ಥ ವೈಶ್ಯಮೂಲದ ಗುಪ್ತರಂಥವರೊಡನೆ ಕೊಡುಕೊಳ್ಳುವ ಸಂಬಂಧ ಬೆಳೆಸಿದ್ದು ಮುಂತಾದವು ಈ ಸ್ಥಿತಿಯ ಸೂಚಕಗಳಾಗಿವೆ. ಕದಂಬರ ಕಾಲದ ಹೊತ್ತಿಗೆ ವೃತ್ತಿ ಸಂಬಂಧವಾದ ಜಾತಿಗಳೂ ಬೆಳೆದಿರಬಹುದಾದರೂ ಇದಕ್ಕೆ ಸ್ಪಷ್ಟ ನೇರ ಆಧಾರಗಳು ದೊರಕುವುದಿಲ್ಲ. ಸ್ವಕುಲದ ಬಗ್ಗೆ ಗೌರವ ಬಹುಮಟ್ಟಿಗೆ ಬೆಳೆದು ಬಂದಿದ್ದು ಕುಲಾಭಿಮಾನ ಮತ್ತು ಕುಲಶುದ್ಧಿ ಮುಂತಾದ ಅಂಶಗಳು ವರ್ಣ ಜಾತಿಗಳು ಸ್ನಿಗ್ಧವಾಗಲು ಅವಕಾಶ ಮಾಡಿಕೊಟ್ಟಂತೆ ಕಾಣುತ್ತದೆ. ಈ ಪ್ರವೃತ್ತಿಯ ಬಗ್ಗೆ ಸಮಕಾಲೀನ ಶಾಸನಗಳಲ್ಲಿ ಸಾಂದರ್ಭಿಕ ಸಾಕ್ಷ್ಯಗಳು ದೊರಕುತ್ತವೆ. ಜೈನ ಮತ್ತು ಬೌದ್ಧ ಸಂಪ್ರದಾಯಾನುಯಾಯಿಗಳು ಈ ವರ್ಣಜಾತಿ ವ್ಯವಸ್ಥೆಯ ಹೊರಗಿದ್ದಂತೆ ತೋರುತ್ತದೆ.

ಬನವಾಸಿಯ ಕದಂಬರ ಕಾಲದಲ್ಲಿ ಹುಟ್ಟಿದ ತಾಮ್ರ ಶಿಲಾಶಾಸನಗಳನ್ನು ನೋಡಿದರೆ ಆ ಕಾಲದಲ್ಲಿ ಸಾಕಷ್ಟು ವಿದ್ಯಾಪ್ರೋತ್ಸಾಹವಿರಬೇಕೆಂಬುದು ತಿಳಿಯುತ್ತದೆ. ಬಹುಶಃ ತಾಳಗುಂದ ದಂಥ ಸ್ಥಳಗಳಲ್ಲಿ ಬ್ರಹ್ಮಪುರಿಗಳಿದ್ದು ಅವು ವಿದ್ಯಾ ಕೇಂದ್ರಗಳಾಗಿರಬೇಕು. ಸಮಕಾಲೀನ ಶಾಸನಗಳಲ್ಲಿ ನಾನಾ ಗೋತ್ರಸೂತ್ರದ ಬ್ರಾಹ್ಮಣರಿಗೆ ಗ್ರಾಮದಾನ ಮಾಡಿರುವ ವಿಷಯಗಳು ತಿಳಿಯುವುದರಿಂದ ಅಗ್ರಹಾರಗಳೂ ಇದ್ದು ವಿದ್ಯಾಧ್ಯಯನ ಮತ್ತು ಪ್ರಸಾರಕ್ಕೆ ಸಹಾಯಕವಾಗಿರ ಬಹುದೆಂದು ಊಹಿಸಬಹುದು. ಜೈನ ಕೇಂದ್ರಗಳಲ್ಲಿ ವಿದ್ಯಾದಾನವೂ ಮುಖ್ಯವಾಗಿತ್ತು. ವೇದ, ಛಂದಸ್ಸುಗಳಲ್ಲಿ ಪಾರಂಗತರಾಗಿದ್ದ ಬ್ರಾಹ್ಮಣರ ಪ್ರಸ್ತಾಪ ಶಾಸನಗಳಲ್ಲಿವೆ. ಶಾಸ್ತ್ರಾಗಮ ಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಜೈನ ಕುಮಾರದತ್ತ ಎಂಬುವನ ಉಲ್ಲೇಖ ಹಲಶಿಯ ತಾಮ್ರಪಟದಲ್ಲಿದೆ. ಇವು ಆ ಕಾಲದ ಅಧ್ಯಯನ ವಿಷಯಗಳ ಬಗ್ಗೆ ಸ್ವಲ್ಪ ಸೂಚನೆ ನೀಡುತ್ತವೆ. ಸಂಸ್ಕೃತ ಭಾಷೆ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಾರಕ್ಕೆ ಬಂದಿದ್ದು ಕದಂಬರ ಕಾಲದಲ್ಲಿ, ಇವರ ಹಲವಾರು ಶಾಸನಗಳು ಸಂಸ್ಕೃತ ಭಾಷೆಯಲ್ಲಿವೆ. ತಾಳಗುಂದ ಶಾಸನದಂಥ ಉತ್ಕೃಷ್ಟ ಕಾವ್ಯರಚನೆಗಳೂ ಈ ಕಾಲದಲ್ಲಿ ಕಂಡು ಬರುತ್ತವೆ. ಬಹುಶಃ ಕನ್ನಡ ಭಾಷೆಯೂ ಆಡಳಿತಾದಿಗಳಲ್ಲಿ ಉಪಯೋಗಕ್ಕೆ ಬಂದು ಅದು ಗ್ರಂಥಸ್ಥ ಭಾಷೆಯಾಗ ಬಲ್ಲ ರೂಪವನ್ನು ಪಡೆದು ಕೊಳ್ಳಲಾರಂಭಿಸಿರಬೇಕೆಂದು ಹಲ್ಮಿಡಿ ಶಾಸನದಿಂದ ತಿಳಿಯಬಹುದು. ಲಲಿತ ಕಲೆಗಳ ಬಗ್ಗೆ ಸಮಕಾಲೀನ ಮಾಹಿತಿಗಳು ಕಡಿಮೆ. ಸಮಾಜದ ಉನ್ನತ ವರ್ಗಗಳಲ್ಲಿ ಶಿಷ್ಟಸಂಗೀತ ರೂಪಿತವಾಗಿದ್ದಿತೆಂಬುದಕ್ಕೆ ತಾಳಗುಂದ ಶಾಸನದಲ್ಲಿ ಆಧಾರ ದೊರಕುತ್ತದೆ. ಕದಂಬರ ಮನೆಯಲ್ಲಿ ಸಂಗೀತ ಪ್ರತಿಧ್ವನಿಸುತ್ತಿತ್ತು ಎಂದು ಅದರಲ್ಲಿ ಹೇಳಲಾಗಿದೆ.



ಭೂವರಾಹ ಶಿಲ್ಪ, ಹಲಸಿ

**ವಾಸ್ತು ಶಿಲ್ಪ:** ಕಾಕುತ್ಸ್ಥವರ್ಮನ ತಾಳಗುಂದ ಶಾಸನದ ಮಹಾದೇವ ದೇವಾಲಯದ ಉಲ್ಲೇಖ, ಹಲಶಿ ತಾಮ್ರಪಟದಲ್ಲಿ ಬರುವ ಪಲಾಶಿಕಾ ಎಂಬಲ್ಲಿ ಮೃಗೇಶ ಕಟ್ಟಿಸಿದ ಜೈನಬಸದಿಯ ಪ್ರಸ್ತಾಪ–ಇಂಥವು ಆ ಕಾಲದಲ್ಲಿ ದೇವಾಲಯ ರಚನೆ ರೂಢಿಯಲ್ಲಿತ್ತೆಂಬುದಕ್ಕೆ ಸಾಕ್ಷ್ಯಗಳಾಗಿವೆ. ಆದರೆ ಮೊದಲ ಕದಂಬ ಅರಸರ ಕಾಲಕ್ಕೆ ಖಚಿತವಾಗಿ ಸೇರಿದ ಕಟ್ಟಡಗಳನ್ನು

ಗುರುತಿಸಿಲ್ಲವಾದ್ದರಿಂದ, ಅಂದಿನ ದೇವಾಲಯಗಳ ಸ್ವರೂಪವೇನು, ಭಾರತೀಯ ವಾಸ್ತುಶಿಲ್ಪ ಪರಂಪರೆಯಲ್ಲಿ ಅವುಗಳ ಸ್ಥಾನವೇನು ಎಂಬ ಮುಖ್ಯ ವಿಷಯಗಳು ತಿಳಿಯುವಂತಿಲ್ಲ. ದಕ್ಷಿಣ ಭಾರತದಲ್ಲಿ ಶಿಲಾದೇವಾಲಯಗಳ ರಚನಾ ಸಂಪ್ರದಾಯ ಸು.5–6ನೆಯ ಶತಮಾನದಲ್ಲಿ ಬಾದಾಮಿಯ ಚಳುಕ್ಯ ಮತ್ತು ಕಂಚಿಯ ಪಲ್ಲವ ಅರಸರ ಆಶ್ರಯದಲ್ಲಿ ವಿಶೇಷವಾಗಿ ಬೆಳೆಯಿತೆಂದು ಎಲ್ಲ ವಿದ್ವಾಂಸರೂ ಹೇಳುತ್ತಾರೆ. ಹಾಗಿದ್ದಲ್ಲಿ ಬನವಾಸಿಯ ಕದಂಬರ ಕಾಲದ ದೇವಾಲಯಗಳು ಮರ ಅಥವಾ ಇಟ್ಟಿಗೆಯಲ್ಲಿ ಕಟ್ಟಿದವುಗಳಾಗಿರಬೇಕು. ಶಿಲಾ ದೇವಾಲಯಗಳಿದ್ದುದೇ ಆದರೆ ಚಳುಕ್ಯ ಮತ್ತು ಪ್ರಾಯಶಃ ಪಲ್ಲವ ಶೈಲಿಗೆ ಕೂಡ ಮೂಲಮಾದರಿಗಳನ್ನು ಇವು ಒದಗಿಸಿರಬಹುದು. ಈಗ ತಾಳಗುಂದದಲ್ಲಿ ಕದಂಬ ಶಾಸನಗಳಲ್ಲಿ ಹೆಸರಿಸಿರುವ ಪ್ರಣವೇಶ್ವರ ದೇವಾಲಯವೆಂಬುದೊಂದಿದ್ದರೂ ಅದು ಇತ್ತೀಚೆಗೆ ಬಹುವಾಗಿ ನವೀಕರಿಸಲ್ಪಟ್ಟಿದ್ದು, ಸ್ಪಷ್ಟ ಪ್ರಾಚೀನ ಅಂಶಗಳೇನನ್ನೂ ಉಳಿಸಿಕೊಂಡಿಲ್ಲ.

ಗರುಡ ಶಿಲ್ಪ (12ನೆಯ ಶತಮಾನ), ಹಲಸಿ

ಮೊದಲ ಕದಂಬರ ರಾಜಧಾನಿಯಾದ ಬನವಾಸಿಯಲ್ಲಿ ಅವರ ಕುಲದೈವ ಮಧುಕೇಶ್ವರನ ಗುಡಿ ಇದೆ. ಈಗ ಇರುವ ಕಟ್ಟಡದ ಮುಂಭಾಗವೆಲ್ಲಾ 12ನೆಯ ಶತಮಾನದ್ದು. ಗರ್ಭಗುಡಿ, ಸುತ್ತಿರುವ ಪ್ರದಕ್ಷಿಣಾಪಥ ಮತ್ತು ಒಳಮಂಟಪವನ್ನೊಳಗೊಂಡ ಮೂಲ ದೇವಾಲಯ ಹಳೆಯದು. ಆದರೆ ಇವುಗಳ ವಾಸ್ತುವಿನ್ಯಾಸ ಮತ್ತು ಕಂಬಗಳ ರಚನೆಗಳು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯುವೇ ಮುಂತಾದ 8ನೆಯ ಶತಮಾನದ ಕಟ್ಟಡಗಳ ಮಾದರಿಯಲ್ಲಿರುವುದರಿಂದ, ಈ ಗುಡಿಯೂ ಅದೇ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಬನವಾಸಿ ಪ್ರಾಂತ ಚಳುಕ್ಯರ ಅಧೀನದಲ್ಲಿತ್ತಾದ್ದರಿಂದ ಈಗಿನ ಬನವಾಸಿಯ ಮೂಲಗುಡಿ ಸಹ ಕದಂಬರ ಕೊಡುಗೆಯೆಂದು ಹೇಳುವುದು ಕಷ್ಟ. ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹಲಶಿಯಲ್ಲಿ ಕೆಲವು ಪ್ರಾಚೀನ ದೇವಾಲಯಗಳಿವೆ. ಶೈಲಿಯ ದೃಷ್ಟಿಯಿಂದ ನೋಡುವುದಾದರೆ ಇಲ್ಲಿಯ ಜೈನಬಸದಿ ಅತ್ಯಂತ ಹಳೆಯದು. ಇದರಲ್ಲಿ ಗರ್ಭಗೃಹ ಮತ್ತು ಸುಕನಾಸಿ ಮಾತ್ರ ಇವೆ. ಸುಕಾನಾಸಿ ಗರ್ಭಗೃಹಕ್ಕಿಂತ ದೊಡ್ಡದು. ದೊಡ್ಡ ದೊಡ್ಡ ಒರಟುಕಲ್ಲುಗಳನ್ನು ಪೇರಿಸಿ ಗೋಡೆಗಳನ್ನು ಏರಿಸಲಾಗಿದೆ. ದೇವಾಲಯದಲ್ಲಿ ಯಾವ ರೀತಿಯ ಅಲಂಕರಣವೂ ಇಲ್ಲ. ನಯನಾಜೂಕಿಲ್ಲದೆ ಕಟ್ಟಿರುವ ಈ ಕಟ್ಟಡ ಪ್ರಾಯಶಃ ದಕ್ಷಿಣ ಭಾರತದ ಶಿಲಾ ಕಟ್ಟಡಗಳ ರಚನೆಯಲ್ಲಿ ಪ್ರಾರಂಭಿಕ ಘಟ್ಟದ್ದೆಂದು ಹೇಳಬಹುದು. ಇಲ್ಲಿ ಯಾವ ಶಾಸನಗಳೂ ದೊರೆಕಿಲ್ಲವಾದ್ದರಿಂದ ಇದರ ಕಾಲನಿರ್ದೇಶ ಕಷ್ಟ. ಆದರೆ ಮೃಗೇಶವರ್ಮನ ತಾಮ್ರಪಟದಲ್ಲಿ ಉಲ್ಲೇಖಿಸಿರುವ ಜೈನಬಸದಿ ಇದೇ ಆದರೆ ಮೃಗೇಶವರ್ಮನ ತಾಮ್ರಪಟದಲ್ಲಿ ಹೇಳಬಹುದು. ಹಾಗಿದ್ದಲ್ಲಿ ಈ ದೇವಾಲಯವೇ ಕರ್ನಾಟಕದಲ್ಲಿ ಉಳಿದುಬಂದಿರುವ ಅತ್ಯಂತ ಪ್ರಾಚೀನ ಶಿಲಾ ಕಟ್ಟಡವಾಗುತ್ತದೆ.

ಬನವಾಸಿಯ ಕದಂಬರ ಕಾಲದ್ದೆಂದು ಸ್ಪಷ್ಟವಾಗಿ ಹೇಳಬಹುದಾದ ಶಿಲ್ಪಗಳು ಅಲ್ಪ. ಸೊರಬ ತಾಲ್ಲೂಕು ಜಂಬೆಹಳ್ಳಿಯಲ್ಲಿರುವ ದೇವಿ ದೇವಾಲಯದ ಮುಂದಿರುವ ಶಾಸನವೊಂದರಿಂದ ಆ ಗುಡಿ ಮೂಲತಃ ಕದಂಬ ಶಾಂತಿವರ್ಮನ ಕಾಲದಲ್ಲಿ ಕಟ್ಟಿದ್ದೆಂದು ತಿಳಿಯುತ್ತದೆ. ಈಗ ಗುಡಿ ಹಾಳಾಗಿದ್ದರೂ ಅಲ್ಲಿ ದೊರಕಿರುವ ದುರ್ಗಾವಿಗ್ರಹ ಆ ದೇವಾಲಯದ ಮೂಲಶಿಲ್ಪ ಎಂದು ಹೇಳಬಹುದು. ಈ ಶಿಲ್ಪದಲ್ಲಿರುವ ಚತುರ್ಭುಜ ಮಹಿಷಮರ್ದಿನಿ ಪ್ರಾಣಿಯಾಕೃತಿಯಲ್ಲಿರುವ ಅಸುರನನ್ನು ಮೆಟ್ಟಿ ಎಡಗೈಯಲ್ಲಿ ಎಮ್ಮೆಯ ಬಾಲವನ್ನು ಹಿಡಿದೆತ್ತಿದ್ದಾಳೆ. ಇತರ ಕೈಗಳಲ್ಲಿ ಶಂಖ, ಕತ್ತಿ, ತ್ರಿಶೂಲಗಳಿವೆ. ದೇವಿಯ ಸುಂದರ ಮುಖ, ಆಯುಧಗಳನ್ನು ಹಿಡಿದಿರುವ ರೀತಿ, ನಿರಾಯಾಸವಾಗಿ ಅಸುರನನ್ನು ಮೆಟ್ಟಿ ಕೊಲ್ಲುತ್ತಿರುವ ಭಾವ ಮುಂತಾದವು ಸ್ಫುಟವಾಗಿ ವ್ಯಕ್ತವಾಗಿವೆ. ಇದು ಒಂದು ಉತ್ತಮ ಕಲಾಕೃತಿ.

**ಶಾಸನಗಳು:** ಮೊದಲ ಕದಂಬ ವಂಶಕ್ಕೆ ಸೇರಿದ ಶಾಸನಗಳಲ್ಲಿ ಹೆಚ್ಚಿನವು ತಾಮ್ರಪಟಗಳು. ಇವು ಮೈಸೂರು, ಹಾಸನ, ಕಡೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ದೊರಕಿವೆ. ಕದಂಬರ ತಾಮ್ರಪಟಗಳಲ್ಲಿ ಓಲೆಗರಿಯ ರೀತಿಯ ತೆಳುವಾದ ಆಯಾಕಾರದ ತಾಮ್ರದ ಹಲಗೆಗಳ ಮೇಲೆ ಬರೆಹವಿದ್ದು, ಮೂರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ಹಲಗೆಗಳು ಅವುಗಳ ಒಂದು ಕೊನೆಯಲ್ಲಿರುವ ದುಂಡು ತೂತಿನ ಮೂಲಕ ತಾಮ್ರದ ಉಂಗುರದಿಂದ ಪೋಣಿಸಲ್ಪಟ್ಟಿರುತ್ತವೆ. ತಾಮ್ರದ ಉಂಗುರದ ಮೇಲೆ ಕದಂಬರ ರಾಜಚಿಹ್ನೆಯಾದ ಸಿಂಹಮುದ್ರೆ ಇರುತ್ತದೆ. ಇವುಗಳಲ್ಲಿರುವ ಲಿಪಿ ಬಹುತೇಕ ಪೆಟ್ಟಿಗೆಯ ತಲೆಯ ದಾಕ್ಷಿಣಾತ್ಯ ಬ್ರಾಹ್ಮಿ, ಭಾಷೆ ಸಂಸ್ಕೃತ ಗದ್ಯ. ಈ ತಾಮ್ರಪಟಗಳು ದಾನಶಾಸನಗಳು. ದಾನ ಕೊಡುವ ಜನ ಮತ್ತು ಅವನ ವಂಶದ ವಿವರಣೆ ಇವುಗಳಲ್ಲಿರುವುದರಿಂದ ಇವು ಅಮೂಲ್ಯ ಚಾರಿತ್ರಿಕ ದಾಖಲೆಗಳು. ಇದುವರೆಗೆ ಮೊದಲ ಕದಂಬರಲ್ಲಿ ಮೃಗೇಶವರ್ಮ ಮತ್ತು ಅವನ ಅನಂತರದ ಅರಸರ ತಾಮ್ರಶಾಸನಗಳು ಮಾತ್ರ ದೊರಕಿವೆ.

ಈ ಕಾಲದ ಶಿಲಾಶಾಸನಗಳು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಶಿವಮೊಗ್ಗ ಜಿಲ್ಲೆಯ ಮಳವಳ್ಳಿ ಮತ್ತು ತಾಳಗುಂದ, ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಗುಡ್ನಾಪುರ, ಹಾಸನ ಜಿಲ್ಲೆಯ ಹಲ್ಮಿಡಿ ಮುಂತಾದೆಡೆಗಳಲ್ಲಿ ಬೆಳಕಿಗೆ ಬಂದಿವೆ. ಇವುಗಳ ಲಿಪಿಯೂ ಮೇಲಿನ ರೀತಿಯ ಬ್ರಾಹ್ಮಿಯೇ. ಮಳವಳ್ಳಿ ಮತ್ತು ಚಂದ್ರವಳ್ಳಿ ಶಾಸನಗಳ ಭಾಷೆ ಪ್ರಾಕೃತ; ಆದರೆ ಚಂದ್ರವಳ್ಳಿ ಶಾಸನದ ಭಾಷೆ ಸಂಸ್ಕೃತ ಎಂದು ಈಚೆಗೆ ಭಾವಿಸಲಾಗಿದೆ. ತಾಳಗುಂದ, ಬನವಾಸಿ ಇತ್ಯಾದಿಗಳವು ಸಂಸ್ಕೃತದಲ್ಲಿ ಪದ್ಯರೂಪದಲ್ಲಿವೆ. ಹಲ್ಮಿಡಿ ಶಾಸನ (ಸು.430) ಕನ್ನಡದಲ್ಲಿ ಗದ್ಯರೂಪದಲ್ಲಿದೆ. ಈ ಶಿಲಾಶಾಸನಗಳ ಉದ್ದೇಶ ಬೇರೆಬೇರೆಯಾದವು. ಚಂದ್ರವಳ್ಳಿ ಮತ್ತು ತಾಳಗುಂದ ಶಾಸನಗಳು ತಟಾಕ ನಿರ್ಮಾಣವನ್ನು ಹೇಳಿದರೆ, ಹಲ್ಮಿಡಿ ಶಾಸನ ದಾನವನ್ನು ನಿರೂಪಿಸುತ್ತದೆ. ತಾಮ್ರಶಾಸನಗಳಂತೆ ಈ ಶಿಲಾಶಾಸನಗಳೂ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಅಲ್ಲದೆ ಹಲವು ಶಾಸನಗಳು ಭಾಷಾ ಸಾಹಿತ್ಯ ದೃಷ್ಟಿಯಿಂದಲೂ ಮುಖ್ಯವಾದವು. ಮಳವಳ್ಳಿ ಶಾಸನ ಕರ್ನಾಟಕದಲ್ಲಿ ಪ್ರಚಲಿತವಿದ್ದ ಪ್ರಾಕೃತ ಭಾಷೆಯನ್ನು ಪರಿಚಯ ಮಾಡಿಕೊಟ್ಟರೆ ಹಲ್ಮಿಡಿ ಶಾಸನ 5ನೆಯ ಶತಮಾನದಲ್ಲಿ ರೂಢವಾಗಿದ್ದ ಕನ್ನಡ ಭಾಷೆಯ ಸ್ವರೂಪವನ್ನು ತೋರಿಸಿಕೊಡುತ್ತದೆ. ಈಗ ನಮಗೆ ತಿಳಿದಿರುವಂತೆ ಇದೇ ಅತ್ಯಂತ ಪ್ರಾಚೀನ ಕನ್ನಡ ಶಾಸನ. ಹಾಗೆಯೇ ತಾಳಗುಂದ ಶಾಸನವೂ ಕರ್ನಾಟಕದ ಅತ್ಯಂತ ಪ್ರಾಚೀನ ಸಂಸ್ಕೃತ ಶಾಸನವೆನಿಸಿದೆ. ಅಲ್ಲದೆ ಆ ಶಾಸನದಲ್ಲಿ ಅದನ್ನು ರಚಿಸಿದ ಕವಿ ಕುಬ್ಜನ ಹೆಸರೂ ಇದೆ. ಕುಬ್ಜನೇ ಈಗ ಗೊತ್ತಿರುವಂತೆ ಕರ್ನಾಟಕದ ಕವಿಗಳಲ್ಲಿ ಅತ್ಯಂತ ಪ್ರಾಚೀನ. ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ತ್ವ ಇಲಾಖೆಯವರು ಬನವಾಸಿಯಲ್ಲಿ ಪತ್ತೆ ಹಚ್ಚಿದ ಮೃಗೇಶವರ್ಮನ ಶಾಸನವೇ ಕದಂಬರ ರಾಜಧಾನಿಯಲ್ಲಿ ದೊರಕಿರುವ ಮೊಟ್ಟ ಮೊದಲನೆಯ ಶಾಸನ. ಪೆಟ್ಟಿಗೆ ತಲೆಯ ದಾಕ್ಷಿಣಾತ್ಯ ಲಿಪಿಯಲ್ಲಿರುವ ಈ ಶಾಸನವನ್ನು ಬಲು ಸುಂದರವಾದ ಚತುರ್ಮುಖ ಶಿಲಾಸ್ತಂಭದ ಮೇಲೆ ಕೆತ್ತಲಾಗಿದೆ. ಇದೇ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿ ಇರುವ ದೊಡ್ಡ ಸ್ತಂಭ ಶಾಸನವೊಂದು ಬನವಾಸಿಯ ಬಳಿಯ ಗುಡ್ನಾಪುರದಲ್ಲಿ ದೊರಕಿದ್ದು, ಕದಂಬ ಇತಿಹಾಸದ ಮೇಲೆ ಅಮೂಲ್ಯ ಬೆಳಕನ್ನು ಚೆಲ್ಲುತ್ತದೆ.

**ನಾಣ್ಯಗಳು:** ಮೊದಲ ಕದಂಬ ಅರಸರ ಕಾಲಕ್ಕೆ ಖಚಿತವಾಗಿ ಸೇರುವ ನಾಣ್ಯಗಳು ಇದುವರೆಗೆ ದೊರಕಿಲ್ಲ. ಆದರೆ ಪುಟ್ಟ ಬಟ್ಟಲಾಕಾರದ ಕೆಲವು ಚಿನ್ನದ ನಾಣ್ಯಗಳು ಈ ಕಾಲದವೆಂದು ಕೆಲವರ ಅಭಿಪ್ರಾಯ. ಇವನ್ನು ಪದ್ಮಟಂಕ ಎಂದು ಕರೆಯುತ್ತಾರೆ. ಗುಂಡಗಿರುವ ಈ ನಾಣ್ಯಗಳು 0.6–0.8 ಅಂಗುಲ ವ್ಯಾಸವಿದ್ದು, 52–70 ಗ್ರೇನ್ ತೂಗುತ್ತವೆ. ಸಾಮಾನ್ಯವಾಗಿ 52 ಮತ್ತು 66 ಗ್ರೇನ್‌ಗಳವೇ ಹೆಚ್ಚು. ಇವುಗಳ ತಗ್ಗಿನ ಕಡೆಯಲ್ಲಿ ಅಂಕನ ಮಾಡಿದ ಪದ್ಮದ ಚಿತ್ರವೂ ಸುತ್ತಲೂ ನಾಲ್ಕು ಸಣ್ಣ ಚಿಹ್ನೆಗಳೂ ಇರುತ್ತವೆ. ಮೊದಮೊದಲು ಎರಡು ಶ್ರೀಕಾರಗಳು, ಶಂಖ ಮತ್ತು ಬಿಲ್ಲು ಇವೇ ಆ ಸಣ್ಣ ಚಿಹ್ನೆಗಳಾಗಿರುತ್ತಿದ್ದುವು. ಅನಂತರದ ಪದ್ಮಕಂಟಗಳಲ್ಲಿ ಇವುಗಳ ಬದಲು ನಾಲ್ಕು ಸಣ್ಣ ಸಿಂಹಗಳು ಕಾಣುತ್ತವೆ. ಹಿಂಭಾಗದಲ್ಲಿ ಯಾವ ಚಿಹ್ನೆಗಳೂ ಇರುವುದಿಲ್ಲ. ಇವುಗಳ ಮೇಲೆ ಯಾವ ಬರೆಹಗಳೂ ಇಲ್ಲದಿರುವುದರಿಂದ, ಇವು ಕದಂಬರೇ ಹೊರಡಿಸಿದವೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. (ಎಸ್.ಎನ್.)

**ಇತರ ಕದಂಬ ಶಾಖೆಗಳು:**

**ಹಾನಗಲ್ಲಿನ ಕದಂಬರು:** ಇವರು ಸು. 10ನೆಯ ಶತಮಾನದ ಕಡೆಯ ಪಾದದಿಂದ 13ನೆಯ ಶತಮಾನದ ಮೊದಲನೆಯ ಪಾದದವರೆಗೆ ಹೆಚ್ಚು ಮಟ್ಟಿಗೆ ಉತ್ತರ ಕನ್ನಡ ಜಿಲ್ಲೆಯ ಪೂರ್ವ ಮತ್ತು ಧಾರವಾಡ ಜಿಲ್ಲೆಯ ಪಶ್ಚಿಮ ಭಾಗಗಳ ಮೇಲೆ ಒಡೆತನ ಪಡೆದಿದ್ದ ಸಾಮಂತರು. ಇವರ ರಾಜಧಾನಿ ಮೊದಲು ಬನವಾಸಿ, ಅನಂತರ ಹಾನಗಲ್ಲು (ಪಾನುಂಗಲ್ಲು, ಹಾನುಂಗಲ್ಲು, ಹಾನುಗಲ್ಲು).ಈಗ ತಿಳಿದಿರುವಂತೆ ಈ ಕದಂಬ ಶಾಖೆಯ ಆದ್ಯ ಚಟ್ಟಯ್ಯದೇವ (ಚಟ್ಟ, ಚಟ್ಟಿಗ ಸು. 972–1015). ಇವನು ಆರಂಭದಲ್ಲಿ ರಾಷ್ಟ್ರಕೂಟ ಕಕ್ಕನ ಆಶ್ರಿತನಾಗಿದ್ದು, ಅನಂತರ ಚಾಳುಕ್ಯ ಇಮ್ಮಡಿ ತೈಲನ ಸಾಮಂತನಾಗಿ 979–80 ರಲ್ಲಿ ಬನವಾಸಿ ಪ್ರಾಂತ್ಯವನ್ನೂ 982ರ ಹೊತ್ತಿಗೆ ಇದರ ಜೊತೆಗೆ ಸಾಂತಳಿಗೆ 1000 ಪ್ರಾಂತ್ಯವನ್ನೂ ಪುನಃ 986–87, 993,1012ರಲ್ಲಿ ಬನವಾಸಿ 12,000 ಪ್ರಾಂತವನ್ನೂ ಮಾತ್ರ ಆಳುತ್ತಿದ್ದನೆಂದು ಶಾಸನಗಳಿಂದ ತಿಳಿಯುತ್ತದೆ. ಈ ಮೇಲಿನ ವರ್ಷಗಳ ಮಧ್ಯಕಾಲದಲ್ಲಿ ಇತರ ಕೆಲವರು ಇದೇ ಪ್ರದೇಶವನ್ನು ಆಳುತ್ತಿದ್ದರೆಂದು ಕಾಣುವುದರಿಂದ ಚಟ್ಟಯ್ಯನ ಆಳಿಕೆ ಅವಿಚ್ಛಿನ್ನವಾಗಿರಲಾರದು. 1012ರಲ್ಲಿ ಬನವಾಸಿ ಪ್ರಾಂತದ ಅಧಿಕಾರವನ್ನು ಚಾಳುಕ್ಯ ಇಱಿವಬೆಡಂಗ ಸತ್ಯಾಶ್ರಯನ ಅಳಿಯ ಕುಂದಮರಸ ವಹಿಸಿಕೊಂಡ. ಆದರೂ ಚಟ್ಟಯ್ಯ

ಚಾಳುಕ್ಯರ ಆಶ್ರಿತನಾಗಿಯೇ ಮುಂದುವರೆದು, ಇಮ್ಮಡಿ ಜಯಸಿಂಹನ ಕಾಲದಲ್ಲಿ ಚೋಳ, ಪರಮಾರ, ಕಳಚುರಿಗಳು ಒಟ್ಟಾಗಿ ಮಾನ್ಯಖೇಟದ ಮೇಲೆ ಧಾಳಿ ಮಾಡಿದಾಗ ಚಾಳುಕ್ಯರ ಪರವಾಗಿ ಶೌರ್ಯದಿಂದ ಕಾದು ಕಟಕದ ಗೋವ ಎಂಬ ಬಿರುದನ್ನು ಸಂಪಾದಿಸಿದ. ಚಟ್ಟಯ್ಯನ ಮಗ ಜಯಸಿಂಹ. ಇವನ ಮಕ್ಕಳು ಮಾವುಲಿ, ತೈಲ, ಶಾಂತಯ ದೇವ, ಜೋಕಿದೇವ ಮತ್ತು ವಿಕ್ರಮಾಂಕ. ಇವರ ಬಗ್ಗೆ ಏನೂ ತಿಳಿದಿಲ್ಲ. ಇವರ ಕಾಲದಲ್ಲಿ ಬನವಾಸಿ ಪ್ರದೇಶ, ದಂಡನಾಯಕ ಚಾವುಂಡರಾಯರಸ ಮತ್ತು ಇನ್ನೊಂದು ಕದಂಬ ಶಾಖೆಗೆ ಸೇರಿದ ಮಯೂರವರ್ಮ, ಅವನ ಹೆಂಡತಿ ಅಕ್ಕಾದೇವಿ ಮತ್ತು ಅವರ ಮಕ್ಕಳು ಜೋಯಿದೇವ ಮತ್ತು ಅರಿಕೇಸರಿ ಇವರ ಆಳಿಕೆಗೆ ಒಳಪಟ್ಟಿತ್ತೆಂದು ತೋರುತ್ತದೆ. ಈ ಅನ್ಯಶಾಖೆಯ ಮಯೂರವರ್ಮನೇ ಈ ಕಾಲದಲ್ಲಿ ಹಾನಗಲ್ಲಿನ ಮೇಲೆ ಒಡೆತನ ಪಡೆದ ಮೊದಲ ಕದಂಬ ವಂಶೀಯ. ಚಟ್ಟಯ್ಯನ ವಂಶದ ಕೀರ್ತಿವರ್ಮ 1068ರ ಹೊತ್ತಿಗೆ ಬನವಾಸಿ ಪ್ರಾಂತ್ಯದ ಅಧಿಪತಿ ಯಾದ. ಇವನು ಇಮ್ಮಡಿ ಸೋಮೇಶ್ವರನ ವಿರುದ್ಧ ಅವನ ತಮ್ಮ ಆರನೆಯ ವಿಕ್ರಮಾದಿತ್ಯನಿಗೆ ಸಹಾಯಮಾಡಿದ್ದರಿಂದ ಸೋಮೇಶ್ವರ ಬನವಾಸಿಯ ಮೇಲೆ ಧಾಳಿ ಮಾಡಿದ; ಸ್ವಂತ ತಮ್ಮನಾದ ತೈಲಪದೇವನೂ ಎದುರು ಬಿದ್ದ. ಕೊನೆಗೆ 1071ರಲ್ಲಿ ಕೀರ್ತಿವರ್ಮನ ಪ್ರಾಂತ್ಯಾಧಿಪತ್ಯ ಕೈಬಿಟ್ಟು, ಅವನ ಆಳಿಕೆ ಕೇವಲ ಬನವಾಸಿಪುರಕ್ಕೆ ಸೀಮಿತವಾದಂತೆ ತೋರುತ್ತದೆ. ಆರನೆಯ ವಿಕ್ರಮಾದಿತ್ಯ ಪಟ್ಟಕ್ಕೆ ಬಂದಮೇಲೂ ಇವನಿಗೆ ಅಧಿಕಾರ ದಕ್ಕಲಿಲ್ಲ.

**ಹಾನಗಲ್ಲು ಕದಂಬ ಶಾಖೆಯ ವಂಶಾವಳಿ:**




ಆರನೆಯ ವಿಕ್ರಮಾದಿತ್ಯ 1087ರ ಹೊತ್ತಿಗೆ ಕೀರ್ತಿವರ್ಮನ ಚಿಕ್ಕಪ್ಪನಾದ ಶಾಂತಿವರ್ಮನಿಗೆ ಬನವಾಸಿ ಮತ್ತು ಹಾನಗಲ್ಲು ಪ್ರಾಂತಗಳನ್ನು ವಹಿಸಿದ. ಇವನ ಮಗನಾದ ತೈಲ 1082ರ ಸುಮಾರಿನಲ್ಲಿಯೇ ತಂದೆಯ ಜೊತೆಯಲ್ಲಿ ಆಡಳಿತದಲ್ಲಿ ಭಾಗಿಯಾಗಿದ್ದರೂ ತಂದೆಯ ಮರಣಾನಂತರ 1089–90ರಲ್ಲಿ ಪಟ್ಟಕ್ಕೆ ಬಂದು 1130ರ ವರೆಗೆ ಆಳಿದ. ಈತ ಹೊಯ್ಸಳ ವಿಷ್ಣುವರ್ಧನನ ಸತತವಾದ ಧಾಳಿಗಳಿಂದ ತನ್ನ ಪ್ರಾಂತವನ್ನು ರಕ್ಷಿಸಿಕೊಂಡದ್ದಲ್ಲದೆ, ಕೆಲವು ಸಂದರ್ಭಗಳಲ್ಲಿ ತನ್ನ ಆಳಿಕೆಯನ್ನು ಬನವಾಸಿ ಮತ್ತು ಹಾನಗಲ್ಲು ಪ್ರಾಂತ್ಯಗಳ ಹೊರಗೂ ವಿಸ್ತರಿಸಿದ. ಇವನ ಮಗ ಮಯೂರವರ್ಮ (1130–32) ಇನ್ನೂ ಹೆಚ್ಚು ಪ್ರದೇಶಗಳನ್ನು ಅಧೀನ ಮಾಡಿಕೊಂಡಿದ್ದಂತೆ ತೋರುತ್ತದೆ.

ಅನಂತರ ಮಯೂರವರ್ಮನ ತಮ್ಮ ಮಲ್ಲಿಕಾರ್ಜುನ (1132–46) ಹೊಯ್ಸಳರ ದಂಡನ್ನು ಯಶಸ್ವಿಯಾಗಿ ಎದುರಿಸಿ ಅವರ ವಶದಲ್ಲಿದ್ದ ಲೊಕ್ಕಿಗುಂಡಿಯ ಮೇಲೂ ಧಾಳಿಮಾಡಿದ. ಮಲ್ಲಿಕಾರ್ಜುನನ ಅನಂತರ ಕ್ರಮವಾಗಿ ಇವನ ತಮ್ಮ ತೈಲಪ III (1147–48) ಮತ್ತು ತೈಲಪನ ಮಗ ಮಾವುಲಿ ತೈಲ ಆಳಿದರು. ಅನಂತರ ಪಟ್ಟಕ್ಕೆ ಬಂದ ಮಾವುಲಿ ತೈಲನ ತಮ್ಮ ಕೀರ್ತಿವರ್ಮನ (ಸು.1161–75) ಆಳಿಕೆಯ ಕಾಲದಲ್ಲಿ ಚಾಳುಕ್ಯ, ಸೇವುಣ, ಕಳಚುರಿ ಮತ್ತು ಹೊಯ್ಸಳರು ಅಧಿಕಾರಕ್ಕಾಗಿ ಸೆಣಸುತ್ತಿದ್ದರಾದ್ದರಿಂದ, ಸಾಮಂತರ ಮನೆತನಗಳವರ ಸ್ಥಿತಿ ಇಕ್ಕಟ್ಟಿನದಾಗಿತ್ತು. ಕೀರ್ತಿವರ್ಮ 1163–68ರಲ್ಲಿ ಕಳಚುರಿ ಬಿಜ್ಜಳನ ಅಧೀನನಾಗಿದ್ದಂತೆ, ತೋರುತ್ತದೆ. ಉಚ್ಚಂಗಿಯ ವೀರಪಾಂಡ್ಯ ಕದಂಬರ ಅಧೀನನಾಗಿ ಹುಲಿಗೆರೆ ನಾಡನ್ನು ಆಳುತ್ತಿದ್ದ. ಸಾಂತಳಿಗೆಯ ಸಾಂತರ ದೊರೆ ಜಗದೇವ 1160ರಲ್ಲಿ ಬನವಾಸಿ ನಾಡಿನ ಕೆಲಪಾಲನ್ನು ಧಾಳಿಮಾಡಿ ಗೆದ್ದುಕೊಂಡ. ಆದರೆ ಕೀರ್ತಿವರ್ಮ ಮತ್ತು ಬಿಜ್ಜಳ ಅವನನ್ನು ಸೋಲಿಸಿದರು. ಹೊಯ್ಸಳರು ಆಕ್ರಮಿಸಿಕೊಂಡಿದ್ದ ಕುಂತಳದ ಭಾಗಗಳೂ ಕೀರ್ತಿವರ್ಮನ ವಶವಾದುವು. 1175–80ರಲ್ಲಿ ಕದಂಬ ಚಕ್ರವರ್ತಿ ವೀರಸೋವಿ ದೇವ ಆಳುತ್ತಿದ್ದ. ಇವನು ಕದಂಬ ವಂಶದ ಅನ್ಯಶಾಖೆಗೆ ಸೇರಿದಂತೆ ತೋರುತ್ತದೆ. ಅನಂತರ ಪಟ್ಟಕ್ಕೆ ಬಂದ ಕೀರ್ತಿವರ್ಮನ ತಮ್ಮ ಕಾಮದೇವ (ಸು.1180–1217) ಕರ್ನಾಟಕದ ಅರಸುಮನೆತನಗಳು ಪರಸ್ಪರ ಹೋರಾಟದಲ್ಲಿ ನಿರತರಾಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು 1191ರಲ್ಲಿ ಸ್ವತಂತ್ರನಾಗಿ, ಚಾಳುಕ್ಯ ಚಕ್ರೇಶ್ವರರ ಎಲ್ಲ ಬಿರುದುಗಳನ್ನೂ ಧರಿಸಿ ಸುತ್ತಲಿನ ರಾಜ್ಯಗಳನ್ನೂ ಗೆದ್ದು ವಿಶಾಲವಾದ ರಾಜ್ಯಕ್ಕೆ ಅಧಿಪತಿಯಾದ. ಈತನಿಗೆ ಕಾಳಲದೇವಿ ಎಂಬ ಪತ್ನಿಯೂ ಬರ್ಮ, ಸೋಮ, ಮಲ್ಲ (ಮಲ್ಲಿದೇವ) ಎಂಬ ಮಕ್ಕಳೂ ಇದ್ದರು. ಕಾಮದೇವನ ಅನಂತರ ಮಲ್ಲಿದೇವ (ಸು.1217–52) ಮೊದಲು ಪ್ರಾಯಶಃ ಸ್ವತಂತ್ರವಾಗಿ ಅನಂತರ ಸೇವುಣ ಸಿಂಘಣನ ಆಶ್ರಿತನಾಗಿ ಆಳಿದ. ಆತ 1217ರ ಸುಮಾರಿನಲ್ಲಿ ಹೊಯ್ಸಳರನ್ನು ಸೋಲಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡರೂ ಮುಂದೆ ಅವರಿಂದ ಸೋತು ಕೆಲವು ಪ್ರದೇಶಗಳನ್ನು ಕಳೆದುಕೊಂಡ. ಮಲ್ಲಿದೇವ ಹಾನಗಲ್ಲು ಕದಂಬ ಶಾಖೆಯ ಕೊನೆಯ ದೊರೆ.

ಮಲ್ಲಿದೇವನ ಅನಂತರ ಕೆಲವು ಕದಂಬ ವಂಶೀಯರು ಆಗಾಗ್ಗೆ ಈ ಪ್ರದೇಶವನ್ನು ಆಳುತ್ತಿದ್ದರೂ ಹಾನಗಲ್ಲು ಶಾಖೆಗೂ ಇದ್ದ ಸಂಬಂಧ ತಿಳಿಯದು. (ಬಿ.ಎಚ್.ಎಸ್.)

**ಗೋವೆಯ ಕದಂಬರು:** ಇವರು 10 ರಿಂದ 13ನೆಯ ಶತಮಾನದವರೆಗೆ ಬಹುತೇಕ ಗೋವ ರಾಜ್ಯ, ಬೆಳಗಾಂವಿ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳ ಭಾಗಗಳನ್ನೊಳಗೊಂಡಿದ್ದ ಪಲಸಿಗೆ–12,000 ಮತ್ತು ಕೊಂಕಣ–900 ವಿಭಾಗಗಳನ್ನು ಆಳುತ್ತಿದ್ದ ಸಾಮಂತರು. ಇವರ ರಾಜಧಾನಿ ಮೊದಲು ಚಂದ್ರಪುರ (ಗೋವದ ಸಾಲ್ಸೆಟ್‌ನ ಈಗಿನ ಚಂದೋರ್). ಅನಂತರ ಗೋವ (ಪಣಜಿ), ಅಣಿಲಾಪುರ (ಧಾರವಾಡ ಜಿಲ್ಲೆಯ ಅಳಣಾವರ) ಸಹ ಇವರ ನೆಲೆವೀಡಾಗಿತ್ತು. ಶಿವನಿಂದ ಹುಟ್ಟಿದ ಜಯಂತ (ತ್ರಿಲೋಚನ ಪಲ್ಲವ) ಈ ವಂಶದ ಆದ್ಯನೆಂದು ಶಾಸನಗಳ ಹೇಳಿಕೆ. ಬನವಾಸಿ ಪುರವರಾಧೀಶ್ವರ, ತ್ಯಾಗ ಜಗಝಂಪ ಪಡಾಚಾರ್ಯ ಇವರ ಬಿರುದುಗಳು.

ಮೂಲತಃ ಬನವಾಸಿಯವರಾದ ಈ ವಂಶೀಯರು ಶಿಲಾಹಾರರನ್ನು ಗೆದ್ದು ಕೊಂಕಣದಲ್ಲಿ ತಳವೂರಿರಬೇಕು. ಈ ವಂಶದ ಮೊದಲಿಗ ಷಷ್ಠದೇವ I ಅವನ ಮಗ ನಾಗವರ್ಮ. ಅವನ ಮಗ–ಗೂವಲ (ಗೂಹಲ್ಲ) ದೇವ I.ಈ ಅರಸುಗಳ ಬಗ್ಗೆ ಹೆಚ್ಚು ವಿವರಗಳು ತಿಳಿದಿಲ್ಲ. 1ನೆಯ ಷಷ್ಠದೇವ ಚಾಳುಕ್ಯ ತೈಲಪನ ಅನುಗ್ರಹದಿಂದ ಗೋವದ ಮಂಡಲೇಶ್ವರ

ನಾಗಿರಬಹುದು. 1ನೆಯ ಗೂಹಲ್ಲದೇವನಿಗೆ ವ್ಯಾಘ್ರಮಾರಿ ಎಂಬ ಬಿರುದಿತ್ತೆಂದು ಒಂದು ದಾಖಲೆ ತಿಳಿಸುತ್ತದೆ. 1ನೆಯ ಗೂಹಲ್ಲದೇವನ ಮಗ ಷಷ್ಠದೇವ II (ಸು.1000–1072) ಕಲ್ಯಾಣದ ಚಾಳುಕ್ಯರ ಸಾಮಂತತ್ವದಲ್ಲಿ ಶಿಲಾಹಾರರ ಆಳಿಕೆಯನ್ನು ಕೊನೆಗಾಣಿಸಿ ಇಡೀ ಕೊಂಕಣಕ್ಕೆ ಒಡೆಯನಾದ. ಈತನ ಕಾಲದಲ್ಲಿ ಗೋವೆ ಬಹುವಾಗಿ ಅಭಿವೃದ್ಧಿ ಹೊಂದಿತು. 2ನೆಯ ಷಷ್ಠದೇವನಿಗೆ ಗೂವಲದೇವ II ಮತ್ತು ಜಯಕೇಶಿ I ಪೆರ್ಮಾಡಿದೇವ ಎಂಬ ಮಕ್ಕಳಿದ್ದರು. ಇವರಿಬ್ಬರೂ ತಂದೆಯ ಆಡಳಿತದಲ್ಲಿ ಮೊದಲಿನಿಂದಲೂ ಪಾಲುಗೊಂಡಿರಬೇಕು. ಪ್ರಾಯಶಃ ಹಿರಿಯನಾದ ಗೂವಲದೇವನ ಅಕಾಲಮರಣಾನಂತರ ಷಷ್ಠದೇವ ಮತ್ತು ಜಯಕೇಶಿ (ಸು.1050–78) ಜೊತೆಯಾಗಿಯೇ ಆಳುತ್ತಿದ್ದರೆಂದು ಅನೇಕ ಶಾಸನಗಳಿಂದ ಊಹಿಸಬಹುದಾಗಿದೆ. ಜಯಕೇಶಿ ರಾಜಧಾನಿಯನ್ನು ಗೋವಪಟ್ಟಣಕ್ಕೆ ಬದಲಾಯಿಸಿದ. ಇವನ ನೌಕಾಬಲ ಅಜೇಯವಾಗಿತ್ತು. ಎದುರು ಬಿದ್ದ ಕಾಪರ್ದಿಕ ದ್ವೀಪದ ಶಿಲಾಹಾರ ದೊರೆ ಮುಮ್ಮುರಿಯನ್ನು ಸದೆಬಡಿದ, ಲಾಟರಾಜನ ಸೊಕ್ಕನ್ನಿಳಿಸಿದ, ಗೋಕರ್ಣದಲ್ಲಿದ್ದ ಪಾಂಡ್ಯ ತ್ರಿಭುವನಮಲ್ಲ ಕಾಮದೇವನನ್ನು ಉನ್ಮೂಲಗೊಳಿಸಿದ, ಚೋಳರನ್ನೂ ಹಣ್ಣುಮಾಡಿದ ಎಂದು ಶಾಸನಗಳು ತಿಳಿಸುತ್ತವೆ. ಈತ ಚಾಳುಕ್ಯ 2ನೆಯ ಸೋಮೇಶ್ವರನ ಸಾಮಂತನೂ ಗೆಳೆಯನೂ ಆಗಿದ್ದು, ರಾಜತಂತ್ರದ ಆವಶ್ಯಕತೆಯಿಂದ ಅವನ ತಮ್ಮ 6ನೆಯ ವಿಕ್ರಮಾದಿತ್ಯನಿಗೆ ತನ್ನ ಮಗಳನ್ನು ಮದುವೆಮಾಡಿಕೊಟ್ಟು, ಅವನಿಗೆ ರಾಜನಾಗಲೂ ಸಹಾಯ ಮಾಡಿದ. ಕಂಚಿಯಲ್ಲಿ ಚಾಳುಕ್ಯರಿಗೂ ಚೋಳರಿಗೂ ರಾಜಿ ಮಾಡಿಸಿದ್ದು ಈತನ ತಂತ್ರನೈಪುಣ್ಯಕ್ಕೆ ಸಾಕ್ಷಿ. ಇದೇ ದೃಷ್ಟಿಯಿಂದ ತನ್ನ ಇನ್ನೊಬ್ಬ ಮಗಳನ್ನು ಅನಹಿಲವಾಡದ 1ನೆಯ ಕರ್ಣನಿಗೆ ಮದುವೆಮಾಡಿಕೊಟ್ಟಿದ್ದ.

ಜಯಕೇಶಿಯ ಮಗ 3ನೆಯ ಗೂವಲದೇವ (ಸು.1078–1125) ಪಲಸಿಗೆ 12,000 ಮತ್ತು ಕೊಂಕಣ 900 ಪ್ರಾಂತಗಳನ್ನು ಆಳುತ್ತಿದ್ದರೂ ಅನಂತರದಲ್ಲಿ ಚಾಳುಕ್ಯ ವಿಕ್ರಮಾದಿತ್ಯ ಗೂವಲದೇವನ ತಮ್ಮ ವಿಜಯಾದಿತ್ಯನ ಮಗನಾದ ಎರಡನೆಯ ಜಯಕೇಶಿಗೆ ತನ್ನ ಮಗಳು ಮೈಳಲದೇವಿಯನ್ನು ಲಗ್ನ ಮಾಡಿಕೊಟ್ಟು ಪಲಸಿಗೆ 12,000 ಪ್ರಾಂತವನ್ನು ಅವನಿಗೆ ಬಳುವಳಿಯಾಗಿ ಇತ್ತ. ಗೂವಲದೇವನ ಆಳಿಕೆಯ ಕಡೆಯ ಕಾಲದಲ್ಲಿ ಈ ಜಯಕೇಶಿಯೂ ಗೋವ ಕದಂಬ ರಾಜ್ಯದ ಆಡಳಿತದಲ್ಲಿ ಸಮಭಾಗಿಯಾಗಿದ್ದಂತೆ ತೋರುತ್ತದೆ. 1122ರ ಸುಮಾರಿನಲ್ಲಿ, ಚಾಳುಕ್ಯ ರಾಜ್ಯದ ಸಂದಿಗ್ಧ ಸ್ಥಿತಿಯನ್ನು ಉಪಯೋಗಿಸಿಕೊಂಡು ಜಯಕೇಶಿ ಸ್ವತಂತ್ರನಾಗಲು ಪ್ರಯತ್ನಿಸಿದ. ಆದರೆ ಚಾಳುಕ್ಯರ ಪರವಾಗಿ ಸಿಂದ 2ನೆಯ ಆಚುಗಿ ಇವನ ಮೇಲೆ ಯುದ್ಧಹೂಡಿ ಆ ಪ್ರಯತ್ನವನ್ನು ಮುರಿದು ಕೊಂಕಣವನ್ನೂ ಆಕ್ರಮಿಸಿಕೊಂಡ. ಕೇವಲ ಮೂರು ವರ್ಷಗಳಲ್ಲಿ (1125) ಪ್ರಾಯಶಃ ಗೂವಲದೇವನ ಮರಣಾನಂತರ, ಜಯಕೇಶಿ ಪುನಃ ಅಧಿಕಾರ ಪಡೆದುಕೊಂಡರೂ ಹಿಂದೆ ಈ ಮನೆತನದ ಅಧೀನದಲ್ಲಿದ್ದ ಅನೇಕ ಪ್ರಾಂತ್ಯಗಳನ್ನು ಕಳೆದುಕೊಂಡು ಕೇವಲ ಹಲಸಿಗೆ 12,000, ಕೊಂಕಣ 900, ಹೈವೆ 500 ಮತ್ತು ಕವಡಿದ್ವೀಪ 1,25,000 ವಿಭಾಗಗಳ ಮಂಡಲೇಶ್ವರನಾದ. ಮುಂದೆ ಹೈವೆ 500ನ್ನು ಸಹ ಕಳೆದುಕೊಂಡ. 1133ರ ಒಂದು ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನ ಜಯಕೇಶಿಯನ್ನು ಸೋಲಿಸಿದ ಪ್ರಸ್ತಾಪವಿದೆ. 1135ರ ಹೊತ್ತಿಗೆ ಹಲಸಿಗೆ ಭಾಗವೂ ವಿಷ್ಣುವರ್ಧನನಿಗೆ ಸೇರಿತು. 1140ರ ಅನಂತರ ಜಯಕೇಶಿ ಉತ್ತರ ಕೊಂಕಣದ ಶಿಲಾಹಾರ ಅಪರಾದಿತ್ಯನನ್ನು ಸೋಲಿಸಿ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಂಡ.

ಜಯಕೇಶಿಯ ಜ್ಯೇಷ್ಠಪುತ್ರ ಪೆರ್ಮಾಡಿದೇವ ಶಿವಚಿತ್ತ(ಸು. 1147–92) ತನ್ನ ತಂದೆಯ ಕಾಲಾನಂತರ ಪಟ್ಟಕ್ಕೆಬಂದ. ಈತನ ತಮ್ಮ ವಿಜಯಾದಿತ್ಯ ವಿಷ್ಣುಚಿತ್ತ (ಸು. 1147–87) ಆಡಳಿತ ನಿರ್ವಹಣೆಯಲ್ಲಿ ಇವನ ಜೊತೆಗೂಡಿದ್ದ. ಇವರು ರಾಮಲಕ್ಷ್ಮಣರಂತಿದ್ದ ರೆಂದು ಒಂದು ಶಾಸನ ತಿಳಿಸುತ್ತದೆ. ಶಿವಚಿತ್ತನು ಚಾಳುಕ್ಯ ಜಗದೇಕಮಲ್ಲ ಮತ್ತು 3ನೆಯ ತೈಲ ಇವರ ಸಾಮಂತನಾಗಿದ್ದರೂ ಅನಂತರ ಕಳಚುರಿಗಳ ಪ್ರಭಾವದಿಂದ ಚಾಳುಕ್ಯರು ಹಿಂದೆ ಸರಿದಾಗ ಸ್ವತಂತ್ರನಾಗಿ ರಾಜ್ಯಭಾರ ಮಾಡಲಾರಂಭಿಸಿದ. ಮುಂದೆ 4ನೆಯ ಸೋಮೇಶ್ವರ ರಾಜ್ಯಗಳಿಸಿದಾಗ ಅವನ ಸಾಮಂತತ್ವವನ್ನು ಒಪ್ಪಿದ್ದಲ್ಲದೆ, ಕೆಲವು ಕಾಲ ಅವನಿಗೆ ಗೋವೆಯಲ್ಲಿ ನೆಲಸಲೂ ಅವಕಾಶ ನೀಡಿದ್ದಂತೆ ತೋರುತ್ತದೆ. ವಿಜಯಾದಿತ್ಯನ ಅವಸಾನಾನಂತರ (ಸು.1187) ಅವನ ಮಗ 3ನೆಯ ಜಯಕೇಶಿಯನ್ನು ಪೆರ್ಮಾಡಿದೇವ ತನ್ನ ಆಡಳಿತಕ್ಕೆ ಜೊತೆಮಾಡಿಕೊಂಡ. ಪೆರ್ಮಾಡಿದೇವನ ಮರಣಾನಂತರ 3ನೆಯ ಜಯಕೇಶಿ (ಸು. 1187–1225) ರಾಜನಾದ. ಇವನ ಮಗ ವಜ್ರದೇವನೂ ಆಡಳಿತದಲ್ಲಿ ಭಾಗಿಯಾಗಿದ್ದ. ಈ ಕಾಲದಲ್ಲಿ ಸೇವುಣ ಸಿಂಘಣ ಜಯಕೇಶಿಯ ಮೇಲೆ ದಂಡೆತ್ತಿಬಂದು ಪ್ರಾಯಶಃ ಸೋಲಿಸಿದನಾದರೂ ಕದಂಬ ಆಳಿಕೆ ಸಂಕುಚಿತವಾಯಿತೇ ಹೊರೆತು ಅಳಿಯಲಿಲ್ಲ. ಸು.1225ರಲ್ಲಿ ದೊರೆಯಾದ ಜಯಕೇಶಿಯ ಕಿರಿಯಮಗ ತ್ರಿಭುವನಮಲ್ಲ ಸೋಮದೇವ (ಸೋಯಿದೇವ, ಸು.1225–46) ಮತ್ತು ಅನಂತರ ಪಟ್ಟವೇರಿದ ಅವನ ಮಗ 3ನೆಯ ಷಷ್ಠ (ಸು.1246–60) ಇವರ ಬಗ್ಗೆ ಏನೂ ತಿಳಿದಿಲ್ಲ. 1260ರ ಅನಂತರ ಗೋವ ಕದಂಬರ ಬಗ್ಗೆ ಉಲ್ಲೇಖಗಳು ದೊರಕುವುದಿಲ್ಲವಾದ್ದರಿಂದ ಈ ಸುಮಾರಿನಲ್ಲಿ ಸೇವುಣ, ಹೊಯ್ಸಳರ ಧಾಳಿಯಲ್ಲಿ ಅವರ ರಾಜತ್ವ ಅಳಿಸಿಹೋಗಿರಬೇಕು.

**ಗೋವೆಯ ಕದಂಬ ಶಾಖೆಯ ವಂಶಾವಳಿ:**




**ವಾಸ್ತುಶಿಲ್ಪ:** ಗೋವ ಕದಂಬ ಅರಸರ ಆಳಿಕೆಯಲ್ಲಿ ಅನೇಕ ಕಟ್ಟಡಗಳು ನಿರ್ಮಿತವಾಗಿವೆ. ಕದಂಬರ ಕಾಲದ ಬಹುತೇಕ ಕೃತಿಗಳಲ್ಲಿ ಹೊಯ್ಸಳ ಚಾಳುಕ್ಯ ಶೈಲಿಯ ಪ್ರಭಾವ ಕಂಡುಬರುತ್ತದೆ. ಆದರೆ ಕದಂಬರ ಕಟ್ಟಡಗಳಲ್ಲಿ ಕೆಲವು ವೈಶಿಷ್ಟ್ಯಗಳಿರುವುದರಿಂದ ವಾಸ್ತುಶಿಲ್ಪ ಪರಂಪರೆಯಲ್ಲಿ ಕದಂಬ ಶೈಲಿ ಎಂಬ ಒಂದು ಪ್ರಕಾರವನ್ನು ಗುರುತಿಸಬೇಕು ಎಂಬುದು ವಿದ್ವಾಂಸ ಮೊರೇಸ್ ಅಭಿಪ್ರಾಯ. ಸುಕನಾಸಿ ಗರ್ಭಗುಡಿಗಿಂತ ಅಗಲವಾಗಿರುವುದು, ವಿವಿಧ ರೀತಿಯ ಜಾಲಂಧ್ರಗಳ ಅಳವಡಿಕೆ, ಚಾವಣಿಯ ಸುತ್ತ ಚಪ್ಪಡಿಗಳನ್ನು ಇಳಿಜಾರಾಗಿ ಜೋಡಿಸಿ ಮಾಡಿದ ಕಪೋತ ಮತ್ತು ಕದಂಬನಾಗರವೆಂಬ ಶಿಖರರೀತಿ–ಇವು ಮೊರೇಸ್ ಪ್ರಕಾರ ಕದಂಬ ಶೈಲಿಯ ವೈಶಿಷ್ಟ್ಯಗಳು. ಕದಂಬ ನಾಗರಶಿಖರ ಚತುರಸ್ರಾಕಾರದ ಚಾವಣಿಯ

ಮೇಲೆ ಪಿರಮಿಡ್ಡಿನಾಕೃತಿಯಲ್ಲಿ ಮೆಟ್ಟಿಲುಮೆಟ್ಟಿಲಾಗಿ ಮೇಲೆ ಹೋದಂತೆ ಚಿಕ್ಕದಾಗುವ ಚಪ್ಪಟೆ ಸ್ತರಗಳಿಂದ ಎತ್ತಲ್ಪಟ್ಟಿದ್ದು ಮೇಲೆ ಕಳಶ ಹೊಂದಿರುತ್ತದೆ. ಶಿಖರದ ಮೇಲೆ ಯಾವ ರೀತಿಯ ಶಿಲ್ಪಗಳೂ ಇರುವುದಿಲ್ಲ. ಎಲ್ಲೋ ಕೆಲವು ಸಲ ಅಂಚುಗಳನ್ನು ಹಲ್ಲಿನಾಕೃತಿಯಲ್ಲಿ ಬಿಡಿಸಿರುವುದಷ್ಟೇ ಈ ಶಿಖರ ರೀತಿಯ ಅಲಂಕರಣ. ಕದಂಬ ವಾಸ್ತುಶಿಲ್ಪ ಶೈಲಿ ಆದ್ಯ ಕದಂಬರ ಕಾಲದಿಂದ ವಿಶಿಷ್ಟವಾಗಿ ಬೆಳೆದಿರಬೇಕು. ಕ್ರಮವಾಗಿ ಹಲಸಿಯ ಜೈನಬಸ್ತಿ ಮಲಪ್ರಭಾ ದಂಡೆಯ ಕದರೋಲಿಯ ಗುಡಿ, ಹಲಸಿಯ ಹಾಟಕೇಶ್ವರ, ಕಲ್ಲೇಶ್ವರ, ಸುವರ್ಣೇಶ್ವರ ಮತ್ತು ರಾಮೇಶ್ವರ ದೇವಾಲಯಗಳಲ್ಲೂ ಅನಂತರ ಯಲವಟ್ಟಿಯ ಹಿಂದು ಮತ್ತು ಜೈನಗುಡಿಗಳಲ್ಲಿಯೂ ಮುಂದೆ ಈ ಶೈಲಿಯ ಪರಮೋಚ್ಚ ಕೃತಿಯನ್ನು ಬೆಳಗಾಂವಿ ಜಿಲ್ಲೆಯ ದೇಗಾವೆಯ ಕಮಲಾನಾರಾಯಣ ದೇವಾಲಯದಲ್ಲಿಯೂ ಕಾಣಬಹುದೆಂದು ಮೊರೇಸರ ಬರವಣಿಗೆಯಿಂದ ತಿಳಿದುಬರುತ್ತದೆ.

ಶಿವಚಿತ್ತನ (1147–92) ಪತ್ನಿ ಕಮಲಾದೇವಿಯ ಆಜ್ಞೆಯಿಂದ ತಿಪ್ಪೋಜನೆಂಬುವನು ದೇಗಾವೆಯ ಕಮಲಾನಾರಾಯಣ ದೇವಾಲಯವನ್ನು ಕಟ್ಟಿದನೆಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಈ ದೇವಾಲಯ ಒಂದು ತ್ರಿಕೂಟಾಚಲ. ಮೂರು ದೇವಗೃಹಗಳು ಮುಂದಿನ ಮಂಟಪಕ್ಕೆ ತೆರೆದಂತಿವೆ. ದೇವಗೃಹಗಳ ಒಂದೊಂದರಲ್ಲೂ ಒಂದು ಗರ್ಭಗೃಹ ಮತ್ತು ಸುಕನಾಸಿ ಇವೆ. ಸುಕನಾಸಿ ಮತ್ತು ಗರ್ಭಗೃಹದ ಬಾಗಿಲವಾಡಗಳು ಬಲು ನಾಜೂಕಾಗಿ ಶಿಲ್ಪಿತವಾಗಿವೆ. ಸುಕನಾಸಿಯ ಬಾಗಿಲುಗಳನ್ನು ಕಲಾತ್ಮಕವಾಗಿ ಕೆತ್ತಿದ ಜಾಲಂಧ್ರಗಳ ಚೌಕಟ್ಟಿನ ಮಧ್ಯದಲ್ಲಿರಿಸಲಾಗಿದೆ. ದೇವಾಲಯದ ಹೊರಗೋಡೆಯ ಮೇಲೆ ಕದಂಬನಾಗರ ರೀತಿಯ ಶಿಖರವನ್ನು ಹೊತ್ತಿರುವ ಜೋಡಿ ಅರೆಗಂಬಗಳ ಅಲಂಕರಣವಿದೆ. ಮೇಲಿನ ಕೈಪಿಡಿಯನ್ನು ಹೊತ್ತು ಸೆಟೆದು ನಿಂತ ಸಿಂಹಗಳೂ ಅವುಗಳ ಮಧ್ಯೆ ನೃತ್ಯ ಬಾಲಿಕೆಯರ ವಿಗ್ರಹಗಳೂ ಇವೆ. ಅಲಂಕರಣ, ಸ್ತಂಭರೀತಿ ಮುಂತಾದವುಗಳಲ್ಲಿ ಸಮಕಾಲೀನ ಚಾಳುಕ್ಯ ಹೊಯ್ಸಳ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ದೇಗಾವೆಯ ಕಮಲಾನಾರಾಯಣ ಗುಡಿ ಕರ್ನಾಟಕದ ಸುಂದರ ದೇವಾಲಯಗಳಲ್ಲೊಂದೆಂಬುದರಲ್ಲಿ ಸಂದೇಹವಿಲ್ಲ. ಈ ಗುಡಿ ಕದಂಬ ವಾಸ್ತುಶಿಲ್ಪ ಶೈಲಿಯ ಉಚ್ಚ ಹಾಗೂ ಸ್ವರೂಪ ನಿರ್ದೇಶಕ ಕೃತಿ.

ಗೋವ ಕದಂಬರ ಕಾಲದ ಶಿಲ್ಪಗಳು ಹೆಚ್ಚುಮಟ್ಟಿಗೆ ಕಲ್ಯಾಣದ ಚಾಳುಕ್ಯ ಶೈಲಿಯಲ್ಲಿಯೇ ಇರುತ್ತವೆ. ಚೂಪುತಲೆಯ ಪ್ರಭಾವಳಿ ಮಾತ್ರ ಈ ಕದಂಬ ಶಿಲ್ಪಗಳ ವೈಶಿಷ್ಟ್ಯವಿರಬಹುದು. ಹಲಸಿಯ ದೇವಾಲಯದಲ್ಲಿರುವ ಲಕ್ಷ್ಮೀನಾರಾಯಣ ವಿಗ್ರಹ ಗೋವ ಕದಂಬ ಶಿಲ್ಪಗಳಿಗೆ ಒಂದು ಉತ್ತಮ ಉದಾಹರಣೆ. (ಎಸ್.ಎನ್.)

**ನಾಣ್ಯಗಳು:** ಗೋವ ಕದಂಬರ ನಾಣ್ಯಗಳು ಕಲಾತ್ಮಕವಾಗಿಯೂ ವೈವಿಧ್ಯಪೂರ್ಣವಾಗಿಯೂ ಇದ್ದು ಕರ್ನಾಟಕ ನಾಣ್ಯ ಇತಿಹಾಸದಲ್ಲಿ ಮುಖ್ಯವಾಗಿವೆ. ಚಿನ್ನ ಮತ್ತು ತಾಮ್ರದ ಇವರ ನಾಣ್ಯಗಳು ಗೋವದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ವಿಶೇಷವಾಗಿ ದೊರಕಿವೆ. ಸಾಮಾನ್ಯವಾಗಿ ಈ ನಾಣ್ಯಗಳ ಮುಮ್ಮುಖದಲ್ಲಿ ಸಿಂಹ ಮತ್ತು ಸಂವತ್ಸರದ ಹೆಸರು, ಹಿಮ್ಮುಖದಲ್ಲಿ ನಾಗರೀ ಲಿಪಿಯಲ್ಲಿ ರಾಜನ ಹೆಸರು ಸೇರಿದಂತೆ ಬರೆಹ ಕಾಣಬರುತ್ತವೆ. ಮಲೆಗೆಭೈರವ ಮತ್ತು ಮಲವರಮಾರಿ ಎಂಬ ಇವರ ಬಿರುದುಗಳನ್ನು ಇವರ ನಾಣ್ಯಗಳ ಮೇಲೆ ಕಾಣಬಹುದು.

1ನೆಯ ಜಯಕೇಶಿಯ ನಾಣ್ಯಗಳು ಈ ರೀತಿ ಇವೆ: ಮುಮ್ಮುಖದಲ್ಲಿ ಸಿಂಹ ಮತ್ತು ನಾಗರೀಲಿಪಿಯಲ್ಲಿ ವಿಜಯ ಎಂಬ ಬರೆಹ ಹಿಮ್ಮುಖದಲ್ಲಿ ಬಿಂದುಗಳಿಂದ ಮಾಡಿದ ವೃತ್ತದಲ್ಲಿ, ಶ್ರೀಸಪ್ತಕೋಟೀಶ ಲಬ್ಧವರವೀರ ಜಯಕೇಶಿದೇವ ಮಲವರಮಾರಿ ಎಂಬ ಐದು ಸಾಲಿನ ನಾಗರೀ ಬರೆಹ ಇದೆ. ಇವನ ಇನ್ನೊಂದು ರೀತಿಯ ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಗಜಸಿಂಹ, ಹಿಮ್ಮುಖದಲ್ಲಿ ತ್ರಿಶೂಲ ಮತ್ತು ಶ್ರೀಮಲೆಗೈಭೈರವ ಎಂಬ ಎರಡು ಸಾಲುಗಳ ನಾಗರೀಲಿಪಿ ಇರುತ್ತವೆ. ಈ ನಾಣ್ಯಗಳು ಚಿನ್ನದಿಂದ ಮಾಡಿದವು. 76.5 ಗ್ರೇನ್ ತೂಕ, 0.6 ಅಂಗುಲ ವ್ಯಾಸವುಳ್ಳವು. 45 ಗ್ರೇನ್ ತೂಕ, 0.45 ಅಂಗುಲ ವ್ಯಾಸವಿದ್ದು ಹಿಮ್ಮುಖದಲ್ಲಿ ಶ್ರೀಮಲವರಮಾರಿ ಎಂಬ ನಾಗರೀಲಿಪಿಯ ಬರೆಹವಿರುವ ನಾಣ್ಯಗಳು ಸಹ ಇವನವೇ ಇರಬಹುದು. ಇವುಗಳಲ್ಲೂ ನಾಲ್ಕು ರೀತಿಯವಿವೆ. 1ನೆಯ ನಾಣ್ಯದಲ್ಲಿ ಧ್ವಜಸ್ತಂಭ, 2ನೆಯದರಲ್ಲಿ ರಾಜದಂಡ ಮತ್ತು ಛತ್ರಿ, 3ನೆಯದರಲ್ಲಿ ಎತ್ತರವಾದ ಗೋಪುರವುಳ್ಳ ದೇವಾಲಯ, 4ನೆಯದರಲ್ಲಿ ಅಂಕುಶ, ಇವುಗಳ ಜೊತೆಗೆ ಸಿಂಹ ಇವು ಮುಮ್ಮುಖದಲ್ಲಿ ಕಾಣುತ್ತವೆ.

2ನೆಯ ಜಯಕೇಶಿ ಹೊರಡಿಸಿರಬಹುದಾದ ಒಂದು ಚಿನ್ನದ ನಾಣ್ಯದಲ್ಲಿ ದುರ್ಮತಿ ಎಂಬ ಸಂವತ್ಸರದ ಹೆಸರು ಮತ್ತು ಹಿಮ್ಮುಖದಲ್ಲಿ ಐದು ಸಾಲಿನ ಬರೆಹ ಕಾಣುತ್ತದೆ. ಶಿವಚಿತ್ತ ಪೆರ್ಮಾಡಿಯ ಒಂದು ರೀತಿಯ ನಾಣ್ಯದಲ್ಲಿ ಮುಮ್ಮುಖದಲ್ಲಿ ಸಿಂಹ, ಸೂರ್ಯ ಮತ್ತು ಜಯ ಎಂಬ ಬರೆಹ, ಹಿಮ್ಮುಖದಲ್ಲಿ ಸಪ್ತಕೋಟೀಶ ಲಬ್ಧವರ ವೀರ ಹೆಮ್ಮಾಡಿದೇವ ಮಲವರಮಾರಿ ಎಂಬ ಐದು ಸಾಲುಗಳ ನಾಗರೀಬರೆಹವಿದ್ದರೆ ಮತ್ತೊಂದು ನಮೂನೆಯ ನಾಣ್ಯದಲ್ಲಿ ಶಿವಚಿತ್ತ ವೀರಹೆಮ್ಮಾಡಿದೇವ ಎಂಬ ಬರೆಹ ಕಾಣಬರುತ್ತದೆ. ಇವನ ನಾಣ್ಯಗಳಲ್ಲಿ ವಿಷ್ಣು, ಬಹುಧಾನ್ಯ, ಈಶ್ವರ, ಕೀಲಕ ಮುಂತಾದ ಸಂವತ್ಸರಗಳ ಹೆಸರುಗಳು ಕಾಣಬರುತ್ತವೆ. ಇನ್ನೊಂದು ರೀತಿಯ ನಾಣ್ಯವೊಂದನ್ನೂ ಈ ರಾಜ ಅಚ್ಚು ಹಾಕಿಸಿದ. ಮುಮ್ಮುಖದಲ್ಲಿ ಎರಡು ವೃತ್ತಗಳು, ಅದರೊಳಗೆ ನಿಂತಿರುವ ಸಿಂಹ, ಸಿಂಹದ ಬಾಯಿಯ ಸಮೀಪದಲ್ಲಿ ಸ್ವಸ್ತಿಕ ಚಿಹ್ನೆ, ಕೆಳಗೆ ಪ್ಲವ ಎಂಬ ನಾಗರೀ ಬರೆಹ, ಹಿಮ್ಮುಖದಲ್ಲಿ ಎರಡು ವೃತ್ತಗಳು, ಇದರೊಳಗೆ ಶಿವಚಿತ್ತ ಎಂಬ ಹೆಸರು ನಾಗರೀ ಲಿಪಿ ಮತ್ತು ಕನ್ನಡ ಲಿಪಿಗಳಲ್ಲಿ ಒಂದರ ಕೆಳಗೆ ಒಂದರಂತೆ ಬರೆಯಲ್ಪಟ್ಟಿರುತ್ತವೆ. 1ನೆಯ, 3ನೆಯ ಮತ್ತು 5ನೆಯ ಸಾಲುಗಳು ಕನ್ನಡ ಲಿಪಿಯಲ್ಲಿಯೂ ಇರುತ್ತವೆ. 3ನೆಯ ಜಯಕೇಶಿಯ ನಾಣ್ಯಗಳು 1ನೆಯ ಜಯಕೇಶಿಯ ನಾಣ್ಯಗಳಂತೆಯೇ ಇವೆ.

ಸೋಯಿದೇವನ ನಾಣ್ಯಗಳಲ್ಲೂ ಮುಮ್ಮುಖದಲ್ಲಿ ಸಿಂಹ ಮತ್ತು ಸಂವತ್ಸರದ ಹೆಸರು, ಹಿಮ್ಮುಖದಲ್ಲಿ ಸಪ್ತಕೋಟೇಶ್ವರ ಚರಣ ಲಬ್ಧವರ ವೀರ ಸೋಯಿದೇವ ಎಂಬ ನಾಲ್ಕು ಸಾಲುಗಳ ನಾಗರೀ ಲಿಪಿಯ ಬರೆಹ ಇರುತ್ತದೆ. ಪ್ಲವ ಮತ್ತು ವಿಶ್ವಾವಸು ಸಂವತ್ಸರಗಳನ್ನುಳ್ಳ ಇವನ ನಾಣ್ಯಗಳು ಈವರೆವಿಗೆ ದೊರಕಿವೆ. ಇದಕ್ಕಿಂತ ಭಿನ್ನವಾದ ಇವನ ನಾಣ್ಯವೊಂದರ ಮುಮ್ಮುಖದಲ್ಲಿ ಬಿಂದುಗಳಿಂದ ಮಾಡಿದ ವೃತ್ತ, ಅದರೊಳಗೆ ಒಂದು ಕಾಲನ್ನು ಎತ್ತಿರುವ ಸಿಂಹ, ಅದರ ಮುಂದೆ ಶಂಖ ಮತ್ತು ಶ್ರೀಸೋಇ ಎಂಬ ಬರೆಹ ಇವೆ. ಹಿಮ್ಮುಖದಲ್ಲಿ ತ್ರಿಶೂಲ ಮತ್ತು ಶ್ರೀಮಲವರಮಾರಿ ಎಂಬ ಬರೆಹ ಇದೆ.

ಷಷ್ಠದೇವನಿಗೆ ಖಚಿತವಾಗಿ ಸೇರಬಹುದಾದ ನಾಣ್ಯಗಳು ದೊರಕಿಲ್ಲ. ದೇವಷಷ್ಠ ಸೋಮದೇವ ಎಂಬ ಬರೆಹವನ್ನುಳ್ಳ ನಾಣ್ಯ ಷಷ್ಠದೇವನಿಗೆ ಸೇರಿರಬೇಕೆಂದು ಮೊರೇಸರ ಅಭಿಪ್ರಾಯ. ಆದರೆ ಈ ಬರೆಹ ಸರಿಯಾಗಿದೆಯೇ ಎಂಬುದು ಇನ್ನೂ ತಿಳಿದಿಲ್ಲ.

ಇವುಗಳ ಜೊತೆಗೆ ಯಾವ ಗೋವ ಕದಂಬ ರಾಜನಿಗೂ ಖಚಿತವಾಗಿ ಸಂಬಂಧಿಸಿದೆಯೆಂದು ಹೇಳಲಾಗದ ಕೆಲವು ನಾಣ್ಯಗಳೂ ದೊರಕಿವೆ. ಇವುಗಳಲ್ಲಿ ಸಂವತ್ಸರದ ಹೆಸರು, ಸಪ್ತಕೋಟೇಶ್ವರ ಮುಂತಾದ ಬರೆಹಗಳು, ಸೂರ್ಯ, ಚಂದ್ರ, ಸಿಂಹ, ಸ್ವಸ್ತಿಕ ಮುಂತಾದವು ಕಾಣಬರುತ್ತವೆ.

ಗೋವ ಕದಂಬ ನಾಣ್ಯಗಳ ಒಂದು ಒಳ್ಳೆಯ ಸಂಗ್ರಹ ಮುಂಬಯಿಯ ಇಂಡಿಯನ್ ಹಿಸ್ಟಾರಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿದೆ. (ಎ.ವಿ.ಎನ್.)

**ಕದಂಬರ ಕಾಲದಲ್ಲಿ ಸ್ತ್ರೀಯರಿಗಿದ್ದ ಸ್ಥಾನ:** ಪ್ರಾಚೀನ ಕರ್ನಾಟಕದ ಕುಟುಂಬದಲ್ಲಿ ಆದರ್ಶ ಪತ್ನಿಗೂ ಆದರ್ಶ ಸೊಸೆಗೂ ಸ್ಥಾನವಿದ್ದಿತು. ಸ್ತ್ರೀಯರ ವಿದ್ಯಾಭ್ಯಾಸ ವ್ಯವಸ್ಥೆಯನ್ನು ನೋಡಿದರೆ ರಾಜಮನೆತನದ ಸ್ತ್ರೀಯರು, ಮಂತ್ರಿಗಳ ದಂಡನಾಯಕರ, ಅಧಿಕಾರಿಗಳ ಮನೆಯ ಸ್ತ್ರೀಯರು ತಕ್ಕಮಟ್ಟಿಗೆ ವಿದ್ಯಾವತಿಯರಾಗಿರುತ್ತಿದ್ದರು. ಶ್ರೀಮಂತರ ಮನೆಗಳಲ್ಲೂ ಓದು ಬರೆಹಕ್ಕಿಂತ ನರ್ತನ, ಸಂಗೀತ ಕಲೆಗಳಿಗೆ ಹೆಚ್ಚು ಮಾನ್ಯತೆ ಇದ್ದಂತೆ ಕಾಣುತ್ತದೆ. ಬೇಲೂರಿನ ಕದಂಬ ವಂಶದ ರಾಜ ದಯಾಸಿಂಹನ ರಾಣಿ ಮಾಚಲದೇವಿ ಅತಿ ಚುತುರೋಕ್ತಿಯೊಳೆ ಸರಸ್ವತಿಗಂ ಮಿಗಿಲ್ ಎನ್ನಿಸಿಕೊಂಡಿದ್ದಳು. ಅವಳು ಪುಣ್ಯ ಕಥನ ಪುರಾಣ ಪ್ರಸಂಗೆಯೂ ಆಗಿದ್ದಳು ಎಂದು ಶಾಸನ ಉಲ್ಲೇಖಿಸಿದೆ. ಈ ಕಾಲದಲ್ಲಿ ಬಾಲ್ಯ ವಿವಾಹವಾಗಲೀ ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಎಷ್ಟನೆಯ ವಯಸ್ಸಿನಲ್ಲಿ ಮದುವೆ ಮಾಡುತ್ತಿದ್ದರೆಂಬುದನ್ನು ತಿಳಿಯಲು ಹೆಚ್ಚು ಶಾಸನಾಧಾರ ಗಳಿಲ್ಲ. ಯುವತಿಯರು 12–16 ವರ್ಷ ಮತ್ತು ಯುವಕರು 15–20 ವರ್ಷದೊಳಗೆ ವಿವಾಹವಾಗುತ್ತಿದ್ದರು. ಗೋವೆಯ ಕದಂಬ ರಾಜ ಜಯಕೇಶಿಯ ವಿವಾಹ ಸಮಯದಲ್ಲಿ ಪ್ರಬುದ್ಧನಾಗಿದ್ದಂತೆ ಶಾಸನ ಒಂದರಿಂದ ಊಹಿಸಬಹುದು.

ಕದಂಬ ಜಯಕೇಶಿ Iಯ ಮಗಳು ಗುಜರಾತಿನ ಚಾಳುಕ್ಯ ರಾಜ ಕರ್ಣನನ್ನು ಪ್ರೀತಿಸಿ ವಿವಾಹವಾದಳೆಂದು ಹೇಮಚಂದ್ರಸೂರಿ ತನ್ನ ಸಂಸ್ಕೃತ ಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ. ಬಹುಪತ್ನಿತ್ವದ ಪದ್ಧತಿ ಸಾಮಾನ್ಯವಾಗಿ ರಾಜಮನೆತನದಲ್ಲಿ ಮತ್ತು ಶ್ರೀಮಂತರಲ್ಲಿ ರೂಢಿಯಲ್ಲಿತ್ತು. ರಾಜನ ಪತ್ನಿಯರಲ್ಲಿ ಹಿರಿಯವಳೇ ಅಗ್ರಮಹಿಷಿ ಅಥವಾ ಪಿರಿಯರಸಿ. ರಾಣಿಯರಲ್ಲಿ ಕೆಲವರಾದರು ರಾಜತಂತ್ರದಲ್ಲಿ ಪ್ರವೀಣರಾಗಿದ್ದು ಆಡಳಿತ ವಿಷಯದಲ್ಲಿ ರಾಜರು ಅವರ ಸಲಹೆಗಳನ್ನು ಪಡೆಯುತ್ತಿದ್ದಂತೆ ಊಹಿಸಬಹುದು.

11 ಮತ್ತು 12ನೆಯ ಶತಮಾನದಲ್ಲಿ ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ವಿಜ್ಞಾನೇಶ್ವರನ ಮಿತಾಕ್ಷರಾದಲ್ಲಿ ವಿಧವೆಯರ ಹಕ್ಕನ್ನು ಪ್ರತಿಪಾದಿಸಿರುವನು. ಆಸ್ತಿಯಲ್ಲಿ ಪಾಲುಗೊಳ್ಳಲು ಹೆಣ್ಣು ಮಕ್ಕಳಿಗೂ ಅಧಿಕಾರವಿತ್ತು. ವಿಧವೆಯರೂ ಹಕ್ಕುದಾರರಾಗಿದ್ದರು. ಸ್ತ್ರೀಧನ ಎಂಬುದರ ಉಲ್ಲೇಖ ಅಲ್ಲಲ್ಲಿ ಸಿಕ್ಕುತ್ತದೆ. 13ನೆಯ ಶತಮಾನದಲ್ಲಿ ವಿಧವೆಯರ ಹಕ್ಕನ್ನು ಪರಿಗಣಿಸಿದ್ದರು. ಈ ಕಾಲದಲ್ಲಿ ಕದಂಬರ ಆಡಳಿತ ಪ್ರದೇಶದ ಒಂದು ಶಾಸನದಲ್ಲಿ ದಿವಂಗತ ತಿಪ್ಪಯ್ಯನ ಪತ್ನಿ ತಿಪ್ಪವ್ವೆಯು ಪತಿಯ ಭಾಗದ ಭೂಮಿಯನ್ನು ಪಡೆದು, ತಿಪ್ಪಯ್ಯ ಮಾಡಿದ ಸಾಲವನ್ನು ತೀರಿಸಲು ತಿಪ್ಪಯ್ಯನ ಸೋದರ ಅಚಯ್ಯನಿಗೆ ಕೊಟ್ಟಳು. ಇದರಿಂದ ತಿಪ್ಪವ್ವೆ ತನ್ನ ಪತಿಯ ಆಸ್ತಿಯನ್ನು ಮತ್ತು ಸಾಲ ತೀರಿಸುವ ಜವಾಬ್ದಾರಿಯನ್ನು ವಹಿಸಿಕೊಂಡಳು.

ರಾಜಮನೆತನದ ಸ್ತ್ರೀಯರು ರಾಜ್ಯದ ಆಡಳಿತದಲ್ಲಿ ನಿಪುಣೆಯರಾಗಿದ್ದರು. ಇಂತಹ ರಾಣಿಯರಲ್ಲಿ ಬಂಕಾಪುರ ಕದಂಬ ರಾಜ ಮಯೂರವರ್ಮನ ಪತ್ನಿ ಅಕ್ಕಾದೇವಿ ಅತ್ಯಂತ ಪ್ರಸಿದ್ಧಳಾದವಳು. ಇವಳು ಚಾಳುಕ್ಯ ಜಯಸಿಂಹನ ಸೋದರಿಯಾಗಿದ್ದಳು. ಇವಳು 1050ರಲ್ಲಿ ಬನವಾಸಿ–12000, ಕಿಸುಕಾಡು–70, ಬಾಗಡಗೆ–70, ತೊರಗರೆ–60, ಮಾಸಿಯವಾಡಿ–140ಗಳನ್ನು ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನದಿಂದ ಆಳುತ್ತಿದ್ದಂತೆ ಒಂದು ಶಾಸನದಲ್ಲಿದೆ. ಇವಳು ಎಲ್ಲ ಧರ್ಮಗಳಿಗೆ ಸಮಾನ ಪ್ರೋತ್ಸಾಹವಿತ್ತಿದ್ದಳು. ಗೋವ ಕದಂಬ ರಾಜ ಜಯಕೇಶಿ IIಯ ಪತ್ನಿ ಮೈಳಲದೇವಿ ಆಡಳಿತದಲ್ಲಿ ಪತಿಯೊಡನೆ ಭಾಗಿಯಾಗಿದ್ದಳು. ಅದೇ ವಂಶದ ಪೆರ್ಮಾಡಿದೇವನ ಆಡಳಿತ ಕಾಲದಲ್ಲಿ ಲಕ್ಷ್ಮೀದೇವಿ ಎಂಬುವಳು ಕಂದಾಯ

ಅಧಿಕಾರಿಯಾಗಿದ್ದಳು. ಶಾಸನಗಳಲ್ಲಿ ಕದಂಬರಾಣಿ ಅಕ್ಕಾದೇವಿಗೆ ಉಲ್ಲೇಖಿಸಿರುವ ವಿಶೇಷಗುಣಗಳನ್ನು ಗಮನಿಸಿದರೆ ಅವಳೇ ಸ್ವತಃ ಯುದ್ಧರಂಗಕ್ಕೆ ಹೋಗಿ ಯುದ್ಧಗಳಲ್ಲಿ ಭಾಗವಹಿಸಿದ್ದಂತೆ ಕಾಣುತ್ತದೆ.

ಸಹಗಮನದ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಸೊರಬ ತಾಲ್ಲೂಕಿನ ಕವಡಿಯ ಶಾಸನದಲ್ಲಿ ಕದಂಬ ವಂಶದ ರಾಜ ರವಿವರ್ಮನೊಡನೆ ರಾಣಿಯೊಬ್ಬಳು ಮುಕ್ತಳಾದಂತೆ ಉಲ್ಲೇಖವಿದೆ. ಈ ಶಾಸನ 6ನೆಯ ಶತಮಾನದ್ದೆಂದು ಅಭಿಪ್ರಾಯವಿದೆ. ಈ ಕಾಲದಲ್ಲಿ ಕರ್ನಾಟಕದಲ್ಲಿ ಸ್ವಸಂತೋಷದಿಂದ ಚಿತೆಯೇರಿರುವರೆ ಹೆಚ್ಚು.

ದೇವದಾಸಿಯರು ಎಂದರೆ ದೇವರ ಸೇವೆಗೆ ಮೀಸಲಾದವರು ಎಂದರ್ಥ. ದೇವಸ್ಥಾನಗಳಲ್ಲಿ ಸಂಗೀತ ನೃತ್ಯಗಳ ಮೂಲಕ ದೇವರ ಸೇವೆಯನ್ನು ಮಾಡಿ ಬದುಕುತ್ತಿದ್ದರು. ಶಾಸನಗಳಲ್ಲಿ ಅಂಗಭೋಗ ಮತ್ತು ರಂಗಭೋಗ ಎಂಬ ಉಲ್ಲೇಖಗಳಿವೆ. ದೇವಾಲಯದಲ್ಲಿ ಗರ್ಭಗುಡಿಯ ಮುಂದಿನ ರಂಗದ ಮೇಲೆ, ಸುಂದರಿಯರಿಂದ ನಡೆಯುವ ಗೀತ, ನೃತ್ಯಗಳೇ ರಂಗಭೋಗ. ದೇವದಾಸಿಯರು ರಂಗಭೋಗಕ್ಕೆ ಸೇರಿದವರು. ಸೂಡಿಯ ಶಾಸನಗಳಲ್ಲಿ ಕದಂಬರಾಣಿ ಅಕ್ಕಾದೇವಿ 1054ರಲ್ಲಿ ಅಕ್ಕೇಶ್ವರ ದೇವಸ್ಥಾನವನ್ನು ಕಟ್ಟಿಸಿ ಅದಕ್ಕೆ ದತ್ತಿಯನ್ನು ಕೊಟ್ಟಾಗ ಪಾತ್ರದ ಸೂಳೆ, ಕಂಬದ ಸೂಳೆ, ಚಾಮರ ಸೂಳೆ ಮುಂತಾದವರಿಗೆ ದತ್ತಿಗಳನ್ನು ಕೊಟ್ಟ ಉಲ್ಲೇಖವಿದೆ. ದೇವಸ್ಥಾನದ ದತ್ತಿಗಳಲ್ಲಿ ಸೂಳೆ ಎಂಬ ಪದ ಬಂದಾಗ ಅದು ದೇವದಾಸಿಯರನ್ನು ಸೂಚಿಸುತ್ತದೆ. ಬೇರೆಯಾಗಿ ಬಂದಾಗ ಅದು ವೇಶ್ಯೆಯನ್ನು ಸೂಚಿಸುತ್ತದೆ. ದೇವದಾಸಿ ಮತ್ತು ವೇಶ್ಯೆಯರನ್ನು ಕರ್ನಾಟಕ ಶಾಸನಗಳು ಗೌರವದಿಂದ ಉಲ್ಲೇಖಿಸಿವೆ. ದೇವದಾಸಿಯರು ಸಕಲ ಕಲಾ ನಿಪುಣೆಯರಾಗಿರುತ್ತಿದ್ದರು. ನರ್ತನ ಮತ್ತು ಸಂಗೀತ ಕಲೆಗಳಲ್ಲಿ ವಿಶೇಷವಾಗಿ ಪರಿಣತಿಯನ್ನು ಪ್ರೌಢಿಮೆಯನ್ನು ಪಡೆಯುತ್ತಿದ್ದರು.

ಕದಂಬರ ಆಳಿಕೆಯಲ್ಲಿ ಸ್ತ್ರೀಯರು ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸಿದ್ದಾರೆ ಎಂದು ತಿಳಿಯಬಹುದು.(ಎಸ್.ಎಲ್.)

**ಕರಡಿಕಲ್ಲಿನ ಕದಂಬರು:** ರಾಯಚೂರು ಜಿಲ್ಲೆಯಲ್ಲಿ ಲಭಿಸಿರುವ ಶಾಸನಗಳಿಂದ 11-12ನೆಯ ಶತಮಾನಗಳಲ್ಲಿ ಆ ಪ್ರದೇಶದ ಕರಡಿಕಲ್ಲು400 ಪ್ರಾಂತವನ್ನು ಕದಂಬ ಶಾಖೆಗೆ ಸೇರಿದ ಕೆಲವು ಸಾಮಂತರು ಆಳುತ್ತಿದ್ದರೆಂದು ತಿಳಿದಿದೆ. ಬನವಾಸಿಪುರವರೇಶ್ವರ, ಕದಂಬರಾಭರಣ ಎಂಬ ಬಿರುದುಗಳನ್ನು ಧರಿಸಿರುವುದರಿಂದ ಇವರು ಕದಂಬಕುಲಕ್ಕೆ ಸೇರಿದವರೆಂದು ಹೇಳಬಹುದಾಗಿದೆ. ಇತರ ಕದಂಬ ಶಾಖೆಗಳವರಿಂದ ಭಿನ್ನರೆಂಬುದು ಇವರು ಧರಿಸಿದ ನವಿಲೆಯ ಪಾರ್ಥ, ತೊಜೆದಡಿಯ ಭೀಮ, ಮನ್ನೆಯ ಗೂಡವೆ ಎಂಬ ವಿಶಿಷ್ಟ ಬಿರುದುಗಳಿಂದ ಕಂಡುಬರುತ್ತದೆ (ನವಿಲೆ ಎಂಬುದು ಈಗಿನ ನವಲಿ ಎಂಬ ಗ್ರಾಮ. ಇಲ್ಲಿನ ಜಡೆಯ ಶಂಕರದೇವರು 11ನೆಯ ಶತಮಾನದ ಶಂಕರ ದಾಸಿಮಯ್ಯನೆಂಬ ಶಿವಶರಣನ ಆರಾಧ್ಯದೈವ). ಈ ಶಾಖೆಯ ಮಹಾಸಾಮಂತ ನಾಗವರ್ಮರಸ ಚಾಳುಕ್ಯ 1ನೆಯ ಸೋಮೇಶ್ವರನ ಅಧೀನದಲ್ಲಿ 1066ರಲ್ಲಿ ಕರಡಿಕಲ್ಲು-400ನ್ನು ಆಳುತ್ತಿದ್ದ. 1113 ಮತ್ತು 1119ನೆಯ ವರ್ಷಗಳ ಶಾಸನಗಳಲ್ಲಿ ಮಹಾಮಂಡಲೇಶ್ವರ ಬೂತರಸನ ಪ್ರಸ್ತಾಪವಿದೆ. ಈತ 6ನೆಯ ವಿಕ್ರಮಾದಿತ್ಯನ ಸಾಮಂತ, ಬಹುಶಃ ನಾಗವರ್ಮರಸನ ಅನಂತರ ಅಧಿಕಾರಕ್ಕೆ ಬಂದಾತ. ಮೂರನೆಯವ ಮಾಧವತ್ತಿಯರಸ, 3ನೆಯ ಸೋಮೇಶ್ವರನ ಮಹಾಮಂಡಲೇಶ್ವರ- ಈತ ಕಾಣಿಸಿಕೊಳ್ಳುವ ಕಾಲ 1135. ಈತ ಬಹುಶಃ ಬೂತರಸನ ಉತ್ತರಾಧಿಕಾರಿ. ಆದರೆ ಇವರ ನಡುವಣ ಬಾಂಧವ್ಯ ಖಚಿತವಾಗಿ ತಿಳಿಯದು. ಬಹುಶಃ ಕ್ರಮವಾಗಿ ತಂದೆ ಮಕ್ಕಳಾಗಿರಬಹುದು.

ಸು. 6 ದಶಕಗಳ ಅನಂತರ 1191ರ ಮತ್ತು 1215ರ ಕರಡಿಕಲ್ಲು ಮತ್ತು ಮುಟಗಲ್ಲಿನ ಶಾಸನಗಳಲ್ಲಿ ಕದಂಬ ಕುಲದ ಸಾಮಂತರ ಪ್ರಸ್ತಾಪವಿದೆ. ಮೇಲೆ ಹೇಳಿದ ಕದಂಬರು ಧರಿಸಿದ ವಿಶಿಷ್ಟವಾದ ಬಿರುದುಗಳನ್ನೇ ಇವರು ಸಹ ಧರಿಸಿದ್ದರು. ಆದರೆ ಇವರ ಹೆಸರುಗಳು ಮಾತ್ರ ಸ್ವಲ್ಪ ಭಿನ್ನ. ಲಭ್ಯ ಶಾಸನಗಳಿಂದ ಇವರ ವಂಶಾವಳಿಯನ್ನು ಹೀಗೆ ರೂಪಿಸಬಹುದು.

ಬಜ್ಜ I
|
ಕಾಚ I
|
ಬಜ್ಜ II (ಪತ್ನಿ, ಬಾಚಲದೇವಿ)
|
ಕಾಚ II (ಪತ್ನಿ, ಸಜ್ಜಲದೇವಿ)
|
ಬಜ್ಜ III (ಪತ್ನಿ, ಹೊಲ್ಲಾದೇವಿ)

ಶಾಸನಗಳಲ್ಲಿ 1ನೆಯ ಕಾಚನ ಮಗನನ್ನು ಅಗ್ರನಂದನನೆಂದಿರುವುದರಿಂದ 2ನೆಯ ಬಜ್ಜನಿಗೆ ಕಿರಿಯ ಸೋದರರಿದ್ದಿರಬಹುದು. 3ನೆಯ ಬಜ್ಜ ಮುದುಗಲ್ಲ ಪಟ್ಟಣವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದ. ಈತನ ಮಹಾ ಪ್ರಧಾನನಾದ ಮಾಳಯನಾಯಕ ಅಂತರಿಸಿರ್ದ ಕದಂಬ ರಾಜ್ಯವಂಶೋದಯ ಮಾಗಲುದ್ಧರಿಸಿದನೆಂದು ಶಾಸನದಲ್ಲಿ ಹೇಳಿರುವುದನ್ನು ಗಮನಿಸಿದರೆ ಬಹುಶಃ ಮಾದವತ್ತಿಯರಸನ ಅನಂತರ ಇವರು ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದು, ಸ್ವಲ್ಪ ಕಾಲಾನಂತರ ಇನ್ನೊಮ್ಮೆ ತಮ್ಮ ಆಳಿಕೆಯ ಪ್ರದೇಶಗಳನ್ನು ಪಡೆದುಕೊಂಡರೆಂದು ಊಹಿಸಬಹುದಾಗಿದೆ.

ಈ ಕದಂಬರನ್ನು ಶಾಸನಗಳಲ್ಲಿ ಕಡಂಬರೆಂದೂ ಕರೆಯಲಾಗಿದೆ. ಇದು ಕೇವಲ ರೂಪಭೇದ, ಮೂರ್ಧನ್ಯೀಕರಣದ ಫಲ.

**ನೂಱುಂಬಾಡದ ಕದಂಬರು:** ಶಾಸನಗಳಲ್ಲಿ ಕಡಂಬರೆಂದೂ ಕರೆಯಲಾಗಿರುವ ಈ ಶಾಖೆಯವರು 12ನೆಯ ಶತಮಾನದಲ್ಲಿ ಇಂದಿನ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ಮತ್ತು ಹಿರೇಕೆರೂರು ತಾಲ್ಲೂಕಿನ ಭಾಗಗಳನ್ನೊಳಗೊಂಡ ರಟ್ಟಪಳ್ಳಿ70 ಮತ್ತು ಇಟ್ಟಿಗೆ70 ಎಂಬ ಎರಡು ಭಾಗಗಳನ್ನು ಸೇರಿಸಿ ಕರೆಯಲಾದ ನೂಱುಂಬಾಡ ಪ್ರಾಂತವನ್ನು ಆಳುತ್ತಿದ್ದರು. ಚಾಳುಕ್ಯ 1ನೆಯ ಸೋಮೇಶ್ವರನ ಸಮಕಾಲೀನನಾಗಿದ್ದ ಸಾಮಂತ ಬೀರದೇವ ಈ ಶಾಖೆಯ ಮೊದಲಿಗ. ಈತನ ಸೋದರ ಕೇತರಸ 1. ಈತನ ಮಗ ನಾಮರಸ, ಇವರ ವಂಶಾವಳಿ ಹೀಗಿದೆ:

ಬೀರದೇವ — ಕೇತರಸ I
ಕೇತರಸ I
|
ನಾಮರಸ
|
ಕೇತರಸ II (ಪತ್ನಿ, ಅತ್ತಿಯಬ್ಬೆ)
|
ಪುಲಕೇಶಿ, ಪೆರ್ಮ (ಪೆರ್ಮಾಡಿ), ರಾಣಕಿದೇವ, ಬೀರದೇವII (ಪತ್ನಿ, ಬಾಚಲದೇವಿ), ಬಮ್ಮರಸ, ಮಲ್ಲಿದೇವ
ಬೀರದೇವII
|
ಕೇತರಸ III (ಪತ್ನಿಯರು- ಲಳಿಯಾದೇವಿ, ಕಂಚಲದೇವಿ, ದೊಣಲದೇವಿ)
|
ಗರುಡಪಾಂಡ್ಯ (ಪತ್ನಿ, ಬಾಚಲದೇವಿ), ವೀರಪಾಂಡ್ಯ

2ನೆಯ ಕೇತರಸನ ಪತ್ನಿ ಅತ್ತಿಯಬ್ಬೆಗೆ 2ನೆಯ ಬೀರದೇವ, ಬಮ್ಮರಸ, ಮಲ್ಲಿದೇವರೆಂಬ ಮೂವರು ಮಕ್ಕಳಿದ್ದರೆಂದು ಶಾಸನದಲ್ಲಿ ಹೇಳಿದೆ. ಆದರೆ ಕೇತರಸನಿಗೆ ಪುಲಕೇಶಿ, ಪೆರ್ಮ ಮತ್ತು ರಾಣಕಿದೇವ ಎಂಬ ಇನ್ನೂ ಮೂವರು ಮಕ್ಕಳಿರುವುದನ್ನು ಸಹ ಶಾಸನದಲ್ಲಿ ಹೇಳಿದೆಯಾಗಿ, ಅವರು ಆತನ ಇನ್ನೊಬ್ಬ ಪತ್ನಿಯ ಮಕ್ಕಳಾಗಿರಬೇಕು. 2ನೆಯ ಬೀರದೇವನ ಪತ್ನಿ ಬಾಚಲದೇವಿ ಗುತ್ತವಂಶದ ರಾಜಕುಮಾರಿ. ಈತನ ಮಗ 3ನೆಯ ಕೇತರಸನ ಪತ್ನಿ ಲಳಿಯಾದೇವಿ ಸಹ ಆ ವಂಶಕ್ಕೇ ಸೇರಿದವಳು. ಕಂಚಲದೇವಿ ಮತ್ತು ದೋರಲದೇವಿ ಈ ಕೇತರಸನ ಇನ್ನಿಬ್ಬರು ಪತ್ನಿಯರು. ದೋರಲದೇವಿ ಸಿಂದ ಕುಲದವಳು. ಗರುಡ ಪಾಂಡ್ಯನು ಗುತ್ತ 1ನೆಯ ವಿಕ್ರಮಾದಿತ್ಯನ ಮಗಳಾದ ಬಾಚಲದೇವಿಯನ್ನು ಮದುವೆಯಾಗಿದ್ದ. ಗರುಡಪಾಂಡ್ಯ 2ನೆಯ ಸೇವುಣ ಸಿಂಘಣನ ಮಾಂಡಲಿಕನಾಗಿದ್ದ ಇವನ ಪೂರ್ವಜರು ಆರಂಭದಲ್ಲಿ ಚಾಳುಕ್ಯರ, ಅನಂತರ ಕಳಚುರಿಗಳ ಸಾಮಂತರಾಗಿದ್ದರು.

**ಬಂಕಾಪುರದ ಕದಂಬರು:** 11-12ನೆಯ ಶತಮಾನಗಳಲ್ಲಿ ಹಾನಗಲ್ಲು ಪ್ರಾಂತವನ್ನು ಆಳುತ್ತಿದ್ದ ಕದಂಬ ಮನೆತನದಲ್ಲಿ ಮಯೂರವರ್ಮ ಎಂಬ ಅರಸನೂ ಇದ್ದನೆಂದು ಇದುವರೆಗೂ ಭಾವಿಸಲಾಗಿತ್ತು. ಆದರೆ ಲಭ್ಯಶಾಸನಗಳ ಆಧಾರದಿಂದ ಈ ಮಯೂರವರ್ಮ ಬಂಕಾಪುರಕ್ಕೆ ಸೇರಿದವನೆಂದು ತಿಳಿದುಬರುತ್ತದೆ. ಪಾಂಥಿ ಪುರಾಧಿಪ ಎಂಬುದು ಈತನ ವಿಶಿಷ್ಟ ಬಿರುದು. ಈತ ಚಾಳುಕ್ಯ 2ನೆಯ ಜಯಸಿಂಹನ ಸೋದರಿಯಾದ ಅಕ್ಕಾದೇವಿಯನ್ನು ಲಗ್ನವಾಗಿದ್ದ. 1034-35ರಲ್ಲಿ ಈತ ಬನವಾಸಿ 12000 ಮತ್ತು ಪಾನುಂಗಲ್ಲು 500 ಪ್ರಾಂತಗಳನ್ನಾಳುತ್ತಿದ್ದ. ಮಯೂರವರ್ಮನನ್ನು ಹರಿಕಂತನ ಸಿಂಗನೆಂದು ವರ್ಣಿಸಿದೆ. ಈತನ ತಂದೆ ಹರಿಕಂತ ಅರಿಕೇಸರಿ ಆಗಿರಬಹುದು. ಅಕ್ಕಾದೇವಿಯ ಮಗ ತೋಯಿಮದೇವ. ಈತ 1062ರ ಅನಂತರ ಆಡಳಿತ ಹೊಣೆ ವಹಿಸಿದ ಮಯೂರವರ್ಮ 1047ರ ವರೆಗೆ ಹಾನುಂಗಲ್ಲು ಪ್ರಾಂತಾಧಿಕಾರಿಯಾಗಿದ್ದ, ಅನಂತರ ಆತನ ಇನ್ನೊಬ್ಬ ಮಗ ಅರಿಕೇಸರಿ ಅಧಿಕಾರಕ್ಕೆ ಬಂದ. ಅವನ ಉತ್ತರಾಧಿಕಾರಿ ತಮ್ಮನಾದ ತೋಯಿಮ, ಈತ ಕೇವಲ 5-6ವರ್ಷಗಳ ಕಾಲ ಆಳಿದ ಬಳಿಕ ಈ ಪ್ರಾಂತ ಹಾನುಗಲ್ಲಿನ ಕದಂಬರ ವಶವಾಯಿತು.ಇವರನ್ನು ಬಂಕಾಪುರದ ಕದಂಬರೆಂದು ಗುರುತಿಸಿ ಅವರ ವಂಶಾವಳಿಯನ್ನು ಹೀಗೆ ರೂಪಿಸಬಹುದು:

ಅರಿಕೇಸರಿ
|
ಮಯೂರವರ್ಮ (ಪತ್ನಿ: ಅಕ್ಕಾದೇವಿ)
|
ಅರಿಕೇಸರಿ II, ತೋಯಿಮ

**ಬಯಲ್ನಾಡ ಕದಂಬರು:** ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಭಾಗದಲ್ಲಿ 10–12ನೆಯ ಶತಮಾನಗಳಲ್ಲಿ ಕದಂಬ ಶಾಖೆಗೆ ಸೇರಿದ ಕೆಲವು ಸಾಮಂತರ ಶಾಸನಗಳು ದೊರೆತಿವೆ. ಇವರು ಬಯಲ್ನಾಡನ್ನು ಆಳುತ್ತಿದ್ದರೆಂದು ಅವುಗಳಲ್ಲಿ ಹೇಳಿದೆ. ರೈಸ್ ಅವರು ಈ ಸಾಮಂತರನ್ನು ಕುರಿತು ಪ್ರಸ್ತಾಪಿಸಿ ಕೆಲವರ ಹೆಸರುಗಳನ್ನು ಕೊಟ್ಟಿದ್ದಾರೆ. ಆದರೆ ಈ ಶಾಸನಗಳ ಪುನಃಪರಿಶೀಲನೆಯಿಂದ ಜಾಗಿ, ಉರವಿಯಮ್ಮರಸ(998–99) ಈಕರವರ್ಮ (1079) ಮತ್ತು ಇರವಿಚಿಲ್ಲಮ್ಮ (1107) ಎಂಬುವರ ಹೆಸರುಗಳು ಈಗ ಸ್ಪಷ್ಟವಾಗಿ ತಿಳಿದಿವೆ. ಕದಂಬ ಕಂಠೀರವ ಮುಕ್ಕಣ್ಣಕದಂಬ, ಕದಂಬ ವಂಶೋದ್ಭವ ಎಂಬುದು ಇವರ ಬಿರುದುಗಳು. ಈಕರವರ್ಮನನ್ನು ಬನವಾಸಿ ವಿಷಯಾಧೀಶ್ವರನೆಂದು ವರ್ಣಿಸಿದ್ದರೂ ಆತ ಆಳುತ್ತಿದ್ದ ಪ್ರದೇಶ ಬಯಲ್ನಾಡಯ್ದುಮುನ್ನೂರು ಎಂದು ಹೇಳಿದೆ. ಇವರಲ್ಲಿ ಮೊದಲಿಗ ಜಾಗಿ ಮತ್ತು ಮುಂದಣವರ ಸಂಬಂಧ ಸ್ಪಷ್ಟವಾಗಿಲ್ಲ. ಇವರು ಬಹುಶಃ ಇದೇ ಕಾಲದಲ್ಲಿ ಈ ಪ್ರದೇಶದಲ್ಲಿ ಆಳುತ್ತಿದ್ದ ಚೋಳರ ಸಾಮಂತರಾಗಿದ್ದಿರಬಹುದು. ಇವರ ಶಾಸನಗಳ ಕನ್ನಡ ಭಾಷೆ ಬಹುಮಟ್ಟಿಗೆ ತಮಿಳಿನಿಂದ ಪ್ರಭಾವಿತವಾಗಿದೆ. (ಬಿ.ಆರ್.ಜಿ)

**ಚಂದಾವರ ಕದಂಬರು:** ಉತ್ತರ ಕನ್ನಡ ಜಿಲ್ಲೆಯ ಕುಮಟ ಮತ್ತು ಹೊನ್ನಾವರ ತಾಲ್ಲೂಕಿನ ಕೆಲವು ಭಾಗಗಳು, ಶರಾವತಿ ನದಿಯ ಉತ್ತರದ ಸ್ವಲ್ಪ ಭಾಗ ಮತ್ತು ಪಶ್ಚಿಮಕ್ಕೆ ಸಮುದ್ರವಿರುವ ಪ್ರದೇಶವನ್ನು ಕದಂಬರ ಒಂದು ಶಾಖೆಯವರು ಚಂದಾವರ ರಾಜಧಾನಿಯಿಂದ ಆಳುತ್ತಿದ್ದರು. ಇವರು ಮಹಾಮಂಡಳೇಶ್ವರ ಬನವಾಸಿ ಪುರವರಾಧೀಶ್ವರ, ಜಯಂತಿ ಮಧುಕೇಶ್ವರ ದೇವಲಬ್ಧ ವರಪ್ರಸಾದ, ಗೋಕರ್ಣ ಮಹಾಬಳೇಶ್ವರ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕ, ಕದಂಬ ಚಕ್ರವರ್ತಿ ಎಂಬ ಬಿರುದುಗಳನ್ನು ಹೊಂದಿದ್ದರು. ಈ ಶಾಖೆಯ ಚಂದ್ರI ಮೊದಲಿಗ, ಇವನು ಕೊಂಕಣದ ಸಿಸುಗಳಿಯಿಂದ ಆಳುತ್ತಿದ್ದನು. ಇವನ ಮಗ ಕಾಮI, ಇವನ ಮಗ ಚಂದ್ರII, ಇವನ ಮಗ ಮಲ್ಲಿದೇವ, ಇವನ ಉತ್ತರಾಧಿಕಾರಿ ಬಸವಿದೇವರಸ, ಇವನ ಮಗ ಕಾಮದೇವIII, ಇವನ ಮಗ ಬೀರದೇವ(ವೀರದೇವ), ಇವನ ಮಗ ಕಾಮದೇವIV, ಕಾಮದೇವIIನ 1078ರ ಕೆಕ್ಕಾರ ಶಾಸನದಲ್ಲಿ ಶತ್ರುಗಳಾದ ಹೈವೆ, ಕೊಂಕಣ, ಬನವಾಸಿ ಇತ್ಯಾದಿ ಅರಸರೊಡನೆ ಹೋರಾಡಿದನೆಂದಿದೆ. ಇವನು ಕಲ್ಯಾಣ ಚಾಳುಕ್ಯ ವಿಕ್ರಮಾದಿತ್ಯVIನೆ ಸಾಮಂತನಾಗಿರಬಹುದು. ಇವನಿಗೂ ಮತ್ತು ಗೋಕರ್ಣಪುರದ ನಾಗವರ್ಮನ ನಡುವೆ ಹೋರಾಟವನ್ನು ಶಾಸನ ಉಲ್ಲೇಖಿಸುತ್ತದೆ. ಕಾಮದೇವನಿಗೂ ನಗಿರೆಯ ಕೋಟಿಯರಸನಿಗೂ ಆಗಾಗ್ಗೆ ಹೋರಾಟ ನಡೆಯುತ್ತಿತ್ತೆಂದು ತೋರುವುದು. ಇವನ ಆಳಿಕೆಯ 56ನೆಯ ವರ್ಷದ ಮಲ್ಲಾಪುರ ಶಾಸನವು ಸೇವುಣರ ಅಧಿಕಾರಿ ನಾರಣದೇವರಸನು ಚಂದಾವರಕ್ಕೆ ಧಾಳಿ ಮಾಡಿದಾಗ ಹೋರಾಟದಲ್ಲಿ ಕಾಮದೇವನು ಅಸುನೀಗಿದನೆಂದು ಶಾಸನ ತಿಳಿಸುತ್ತದೆ. ಇವನು ಯಾವ ಸಾಮ್ರಾಜ್ಯಕ್ಕೂ ನಿಷ್ಠೆಯಿಂದ ಇರಲಿಲ್ಲ. ತನ್ನನ್ನೇ ಕದಂಬ ಚಕ್ರವರ್ತಿಯೆಂದು ಕರೆದುಕೊಳ್ಳುತ್ತಿದ್ದ. ಕಾಮದೇವನ ಅನಂತರ 1143ರಲ್ಲಿ ಮಲ್ಲಿದೇವ ಮತ್ತು ಸಹೋದರ ತೈಲಪದೇವ ಒಟ್ಟಿಗೆ ರಾಜ್ಯವಾಳುತ್ತಿದ್ದರು. ಮಲ್ಲಿದೇವನು ರಾಜಧಾನಿ ಸಿರಿಯೂರಿನಿಂದ ಹೈವೆ 500, ಕೊಂಕಣ 900, ಬನವಾಸಿ 12000 ಮತ್ತು ಸಾಂತಳಿಗೆ 1000 ಮುಂತಾದ ಪ್ರದೇಶವನ್ನು ಆಳುತ್ತಿದ್ದನೆಂದು ಗುಂಡಬಳೆ ಶಾಸನ ಉಲ್ಲೇಖಿಸಿದೆ. 1157ರಲ್ಲಿ ಬಲ್ಲಾಳ ಸಿರಸಿಯಲ್ಲಿ ಮಲ್ಲಿದೇವನು ಕದನದಲ್ಲಿ ತೊಡಗಿದ್ದನೆಂದು ತಿಳಿಯುತ್ತದೆ. ಇವನ ಅನಂತರ ಬಸವಿದೇವರಸನು ಆಳಿದನು. ಇವನ ಮಗ ಕಾಮದೇವIIIನು 1160ರಲ್ಲಿ ಗೋಕರ್ಣದ ಧಾರೇಶ್ವರ ಕ್ಷೇತ್ರದಲ್ಲಿ ಮಠವನ್ನು ಕಟ್ಟಿಸಿ ಪುರುಷೋತ್ತಮ ಪುರಿ ಶ್ರೀಪಾದರಿಗೆ ಭೂಮಿದಾನ ಮಾಡಿದನೆಂದು ಗೋಕರ್ಣ ಶಾಸನದಲ್ಲಿದೆ. ಇವನ ಕಾಲದಲ್ಲಿ ಅನೇಕ ಹೋರಾಟಗಳಾದವು. 1201ರ ಶಾಸನ ಇವನ ಕಡೆಯ ಶಾಸನವಾಗಿದೆ. ಇವನ ಅನಂತರ ರಾಜ ತ್ರಿಭುವನಮಲ್ಲ ಬೀರದೇವರಸ 1205ರ ಕುಮಟ ಶಾಸನದಲ್ಲಿ ಬೀರದೇವರಸನ ರಾಣಿ ಕಂಚಲದೇವಿ ಸಮಾಧಿ ಮರಣ ಹೊಂದಿದಳೆಂದು ಉಲ್ಲೇಖಿಸಿದೆ. ಬೀರದೇವನು ಗುತ್ತಿಯ ಮಲ್ಲಿದೇವನ ಮೇಲೆ ದಂಡೆತ್ತಿ ಹೋಗಿ ಸೂಳೆಗೇರಿಯಲ್ಲಿ ಯುದ್ಧಮಾಡಿದನೆಂದು ಚಂದಾವರ ಶಾಸನ ತಿಳಿಸುತ್ತದೆ. ಇವನು (ಚಂದಾವರ) ಚಂದ್ರಿಕಾಪುರ ರಾಜಧಾನಿಯಿಂದ ಆಳುತ್ತಿದ್ದನೆಂದಿದೆ. ಅನಂತರ ರಾಜಕಾಮದೇವ IV(ಕಾಮದೇವ) ಆಳಿದ. ಇವನ ಶಾಸನಗಳು 1232–56ರ ವರೆಗೆ ದೊರೆತಿವೆ. ಇವನೇ ಚಂದಾವರ ಕದಂಬರ ಕೊನೆಯ ದೊರೆ.

**ನಾಗರಖಂಡ 70ರ ಕದಂಬರು:** ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ಆಗ್ನೇಯ ಮತ್ತು ಹಿರೇಕೆರೂರು ತಾಲ್ಲೂಕಿನ ವಾಯವ್ಯ ಭಾಗ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಸೊರಬ ತಾಲ್ಲೂಕಿನ ಭಾಗಗಳನ್ನು ಒಳಗೊಂಡಿತ್ತು. ಇದನ್ನು ನಾಗರಖಂಡ 70 ಎಂದು ಕರೆಯುತ್ತಿದ್ದರು. ಇದನ್ನು ಕದಂಬ ಶಾಖೆಗೆ ಸೇರಿದ ಕೆಲವು ಸಾಮಂತರು ಆಳುತ್ತಿದ್ದರು. ಇವರ ರಾಜಧಾನಿ ಬಂಧವಪುರ(ಬಂದಳಿಕೆ). ಈ ಶಾಖೆಯ ಮೊದಲನೆಯ ಅರಸ (ಬೊಮ್ಮರಸ) ಬ್ರಹ್ಮರಸ. ಇವನ ಕಾಲದಲ್ಲಿ ಕಲ್ಯಾಣ ಚಾಳುಕ್ಯರ ದೊರೆ ಸೋಮೇಶ್ವರI ಬಂದಳಿಕೆಗೆ 1050ರಲ್ಲಿ ಭೇಟಿ ಮಾಡಿದ್ದ. ಸೋಮೇಶ್ವರII ನೊಡನೆ ವಿಕ್ರಮಾದಿತ್ಯVI ಹೋರಾಡುವಾಗ ಬೊಮ್ಮರಸನ ಸಹಾಯ ಪಡೆದಿರಬಹುದು. ಬೊಮ್ಮರಸನನ್ನು ಬನವಾಸಿ ಪ್ರಾಂತ್ಯಕ್ಕೆ ಕಲ್ಯಾಣ ಚಾಳುಕ್ಯ ವಿಕ್ರಮಾದಿತ್ಯVI ಮಹಾಸಾಮಂತಾಧಿಪತಿಯನ್ನಾಗಿ ನೇಮಿಸಿದ್ದ. ಸು.50 ವರ್ಷಗಳು ನಾಗರಖಂಡವನ್ನು ಆಳಿರುವನು. ಇವನ ಮಗ ಬೊಪ್ಪದೇವI. ಇವನು ಹಾನಗಲ್ಲು ಕದಂಬ ತೈಲಪIIನ ಸಾಮಂತನಾಗಿದ್ದ. ಇವನ ಪತ್ನಿ ಶ್ರೀದೇವಿ (ಸಿರಿಯಾದೇವಿ) ಇವರ ಮಗ ಸೋಯಿದೇವ (ಸೋಮದೇವ).

ಸೋಯಿದೇವ 1139 ಹಾನಗಲ್ಲು ಕದಂಬರ ಕೆಳಗೆ ಅಧಿಕಾರಿಯಾಗಿ ನಾಗರಖಂಡ 70 ಆಳುತ್ತಿದ್ದ. ಈ ಸಮಯದಲ್ಲಿ ಹಾನಗಲ್ಲು ಕದಂಬರು ಹೊಯ್ಸಳ ಮತ್ತು ಕಳಚುರಿಗಳೊಡನೆ ಹೋರಾಡುತ್ತಿದ್ದರು. 1159ರಿಂದ ಕಳಚುರಿ ಬಿಜ್ಜಳIIನ ಸಾಮಂತನಾಗಿ ಆಳುತ್ತಿದ್ದ. 1166ರಲ್ಲಿ ಕಳಚುರಿ ಬಿಜ್ಜಳನ ಅಪ್ಪಣೆಯಂತೆ ಸಾಂತರ ಮುಖ್ಯಸ್ಥ ಜಗದೇವನ ಮೇಲೆ ಧಾಳಿ ಮಾಡಿದ. 1171ರ ಶಾಸನದಲ್ಲಿ ಇವನು ಚೆಂಗಾಳ್ವರ ದೊರೆಯನ್ನು ಸೋಲಿಸಿ ಸೆರೆಹಿಡಿದನೆಂದಿದೆ. ಇವನಿಗೆ ಅಚಲದೇವಿ ಮತ್ತು ಮಲಳದೇವಿ ಎಂಬ ಪತ್ನಿಯರಿದ್ದರು. ಇವನ ಮಗ ಬೊಪ್ಪದೇವII ಸಾಂತರ ಜೋಯಿದೇವನ ಬಳ್ಳಿಗಾಮೆಯ ಶಾಸನದಲ್ಲಿ ಬೊಪ್ಪದೇವII, ಕೇಶವ ಮತ್ತು ಸೋಮನಾಥ ದೇವರಿಗೆ ಅನೇಕರೊಡನೆ ಮಹಾದಾನವನ್ನು ಮಾಡಿದನೆಂದು ಉಲ್ಲೇಖವಿದೆ. 1182ರಲ್ಲಿ ಇವನು ತನ್ನ ನಿಷ್ಠೆಯನ್ನು ಬದಲಾಯಿಸಿ ಹೊಯ್ಸಳ ಬಲ್ಲಾಳIIನ ಸಾಮಂತನಾಗಿದ್ದ. ಇವನ ಮಗ ಬ್ರಹ್ಮ (ಬೊಮ್ಮ) 1204ರಲ್ಲಿ ಹೊಯ್ಸಳ ಬಲ್ಲಾಳನ ಸಾಮಂತನಾಗಿದ್ದ.

ನಾಗರಖಂಡ 70 ಆಳಿದ ಕದಂಬ ಅರಸರಲ್ಲಿ ಬ್ರಹ್ಮರಸ(ಬೊಮ್ಮರಸ) (1029–78) ಸು.50ವರ್ಷಗಳ ಕಾಲ ನಾಗರಖಂಡವನ್ನು ಆಳಿದ. ಬನವಾಸಿ ಪ್ರಾಂತದಲ್ಲಿ ನಾಗರಖಂಡ ಪ್ರಸಿದ್ಧಿಗೆ ಬಂದಿತು. ಸೋಯಿದೇವರಸ(1139–77) ಅತ್ಯಂತ ಪ್ರಸಿದ್ಧನಾದವನು. ಇವನ 38ವರ್ಷಗಳ ಆಳಿಕೆಯಲ್ಲಿ ಕಲ್ಯಾಣ ಚಾಳುಕ್ಯ ಸೋಮೇಶ್ವರ IV, ಜಗದೇಕಮಲ್ಲII ಮತ್ತು ಕಳಚುರಿ ಬಿಜ್ಜಳ, ರಾಯಮುರಾರಿ ಸೋವೀದೇವ ಮತ್ತು ಸಂಕಮ ಆಡಳಿತದಲ್ಲಿದ್ದ ಅಪರೂಪದ ಒಬ್ಬ ಸಾಮಂತ.

1442ರಲ್ಲಿ ವಿಜಯನಗರದ ಸಂಗಮ ವಂಶದ ರಾಜ ದೇವರಾಯIIನ ಶಾಸನದಲ್ಲಿ ಕದಂಬ ಸೋಯಿದೇವರಸIIನ ಮಗ ಮಧುಕಣ್ಣ ನಾಗರಖಂಡವನ್ನು ರಾಜಧಾನಿ ಬಂದಳಿಕೆಯಿಂದ ಆಳುತ್ತಿದ್ದನೆಂದಿದೆ. ಇವನೇ ಕೊನೆಯ ಅರಸ. ಈ ಶಾಖೆಯ ಮೊದಲನೆಯ ಅರಸ ಮಹಾಮಂಡಲೇಶ್ವರ ಕದಂಬರಸ 1000ರಲ್ಲಿ ಆಳುತ್ತಿದ್ದ. 1026ರಿಂದ ನೀತಿ ಮಹಾರಾಜನು ಆಳುತ್ತಿದ್ದನೆಂದಿದೆ. 1030ರಲ್ಲಿ ನೀತಿಮಹಾರಾಜನು ದಂಡನಾಯಕ ಚಾಮ ಕದಂಬ ರಾಜ್ಯದ ಆಧಾರ ಸ್ತಂಭವಾಗಿದ್ದನೆಂದು ಇದೆ. ನೀತಿ ಮಹಾರಾಜ ಬಹುಶಃ ಕದಂಬರಸನ ಉತ್ತರಾಧಿಕಾರಿ. 1034ರಲ್ಲಿ ಇವನು ಶತ್ರುಗಳೊಡನೆ ಹೋರಾಡಿರುವನು, ಆದರೆ ಶತ್ರುಗಳು ಯಾರೆಂದು ಉಲ್ಲೇಖವಿಲ್ಲ. ಇವನು 1035ರಲ್ಲಿ ಸಂನ್ಯಾಸವನ್ನು ಸ್ವೀಕರಿಸಿ ಮರಣ ಹೊಂದಿರುವನು. ಇವನ ಅನಂತರ ಜಾಗಿ ಮಹಾರಾಜ/ಜಾಗಿನೃಪನು ಆಳಿದ. ಇವನಿಗೆ ಹಿಟ್ಟಿಯರಸ ಎಂಬ ಹೆಸರಿತ್ತು. ಇವನ ಮಗ ದುದ್ದರಸ. ದುದ್ದರಸನಿಗೆ ಇಬ್ಬರು ಪತ್ನಿಯರು ಚಿಲ್ಕಲದೇವಿ ಮತ್ತು ಮಾಚಲದೇವಿ. ಮಾಚಲದೇವಿಗೆ ಸತ್ತಿಗನೃಪ, ಜಾಗಿ ಮತ್ತು ದಯಾಸಿಂಹರೆಂಬ ಮೂವರು ಮಕ್ಕಳಿದ್ದರೆಂದು ಉಲ್ಲೇಖವಿದೆ. ದುದ್ದರಸನ ಅನಂತರ ದಯಾಸಿಂಹ ಆಳಿದ. ಇವನ 1095 ಶಾಸನದಲ್ಲಿ ಇವನು ಶತ್ರುವಾದ ಶ್ರೀಪಾಲನನ್ನು ಕೊಂದನೆಂದಿದೆ, ಆದರೆ ಶ್ರೀಪಾಲ ಯಾವ ವಂಶಕ್ಕೆ ಸೇರಿದವನೆಂಬ ಉಲ್ಲೇಖವಿಲ್ಲ. ದಯಾಸಿಂಹ ಮಹಾಪರಾಕ್ರಮಿ, ಕಲಾಭಿಮಾನಿ, ವಿದ್ಯಾವಂತ. ಇವನ ಪತ್ನಿ ರಾಣಿ ಮಾಚಲದೇವಿಯು ಅತಿ ಚತುರೋಕ್ತಿಯೊಳೆ ಸರಸ್ವತಿಗಂ ಮಿಗಿಲ್, ಪುಣ್ಯ ಕಥನ ಪುರಾಣ ಪ್ರಸಂಗೆಯೂ ಆಗಿದ್ದಳು ಎಂದು ಶಾಸನ ಉಲ್ಲೇಖಿಸಿದೆ. ಇವನು ಚಾಳುಕ್ಯರ ಸಾಮಂತನಾಗಿ ಆಳುತ್ತಿದ್ದ. ಉಳಿದ ಅರಸರು ಯಾರ ಸಾಮಂತರಾಗಿದ್ದರೆಂದು ಉಲ್ಲೇಖವಿಲ್ಲ. ದಯಾಸಿಂಹನ ಅನಂತರ ಇವರ ಆಳಿಕೆಯ ಉಲ್ಲೇಖಗಳು ಲಭ್ಯವಿಲ್ಲ. ನಾಗರಖಂಡ ಕದಂಬರು ಸು.986–1442ರ ವರೆಗೆ ದೀರ್ಘಕಾಲ ನಾಗರಖಂಡವನ್ನು ಆಳಿದ್ದಾರೆ. ಇವರು ಹೊಯ್ಸಳರು, ಸೇವುಣರು, ಗುತ್ತರು ಕೊಡುತ್ತಿದ್ದ ಕಿರುಕುಳಗಳನ್ನು, ಧಾಳಿಗಳನ್ನು ಎದುರಿಸಿ ಸು. 450 ವರ್ಷಗಳವರೆಗೆ ಆಳಿದ ಕೀರ್ತಿ ಇವರದು. ಕರ್ನಾಟಕದ ಇತಿಹಾಸದಲ್ಲಿ ಇಷ್ಟು ದೀರ್ಘಕಾಲ ಆಳಿಕೆ ನಡೆಸಿದ ವಂಶ ಮತ್ತೊಂದಿಲ್ಲ. ಲಭ್ಯ ಇರುವ ಶಾಸನಗಳಿಂದ ಇವರ ವಂಶಾವಳಿಯನ್ನು ಹೀಗೆ ರೂಪಿಸಬಹುದು:

ಬೊಮ್ಮರಸ/ಬ್ರಹ್ಮರಸ (ಪತ್ನಿ: ಕಲಲದೇವಿ/ಚಟ್ಟಲದೇವಿ)
|
ಬೊಪ್ಪದೇವ I (ಪತ್ನಿ: ಶ್ರೀದೇವಿ/ ಸಿರಿಯಾದೇವಿ)
|
ಸೋಯಿದೇವ I / ಸೋಮದೇವ (ಪತ್ನಿಯರು ಅಚಲದೇವಿ, ಮಲಳದೇವಿ)
|
ಬೊಪ್ಪದೇವ II — ಪುತ್ರಿ
|
ಬ್ರಹ್ಮ
|
ಸೋಯಿದೇವರಸ
|
ಮಧುಕಣ್ಣನಾಯಕ

**ಬೇಲೂರಿನ ಕದಂಬರು:** ಹಾಸನ ಜಿಲ್ಲೆಯ ಮಂಜರಬಾದ್ ತಾಲ್ಲೂಕಿನಲ್ಲಿ ಕಲ್ಯಾಣ ಚಾಳುಕ್ಯರ ಸಾಮಂತರಾಗಿ ಆಳುತ್ತಿದ್ದ ಕದಂಬ ವಂಶಕ್ಕೆ ಸೇರಿದ ಕೆಲವು ರಾಜರ ಹೆಸರುಗಳ ಉಲ್ಲೇಖ ಕೆಲವು ಶಾಸನಗಳಲ್ಲಿವೆ. ಇವರು ಬನವಾಸಿಪುರವರೇಶ್ವರ, ಕದಂಬರಾಭರಣ, ತ್ರಿಪುರವರೇಶ್ವರ ಎಂಬ ಬಿರುದುಗಳನ್ನು ಧರಿಸಿದ್ದರು. ಇದರಿಂದ ಇವರು ಕದಂಬ ಕುಲಕ್ಕೆ ಸೇರಿದವರೆಂದು ತಿಳಿಯಬಹುದು. (ಎನ್.ಎಲ್.)

**ಕನ್‌ಫ್ಯೂಷಿಯಸ್:** ಪ್ರ.ಶ.ಪೂ. 551–479. ಚೀನ ದೇಶದ ಪ್ರಸಿದ್ಧ ತತ್ತ್ವಜ್ಞಾನಿ. ರಾಜಕೀಯ ಮತ್ತು ನಿತ್ಯಜೀವನದ ಆಚಾರ ವ್ಯವಹಾರಗಳಲ್ಲಿ ಉನ್ನತಮಟ್ಟ ಸಾಧಿಸಿದ ಮಹಾಪುರುಷ. ಈತ ಬೋಧಿಸಿದ ಸಾರ್ವಜನಿಕ, ರಾಜಕೀಯ ನೀತಿಬೋಧೆಯ ಆಧಾರದ ಮೇಲೆ ಮುಂದೆ ಕನ್‌ಫ್ಯೂಷಿಯನಿಸಂ ಎಂಬ ಪಂಥವೊಂದು ತಲೆಯೆತ್ತಿ ಪ್ರಸಿದ್ಧವಾಯಿತು. ಕೂಂಗ್ ಫೂ ಟ್ಸು (ಕಾಂಗ್ ಕ್ಯೂ) ಎಂಬುದು ಇವನ ಹೆಸರಿನ ಚೀನೀ ರೂಪ. ಪ್ರ.ಶ.ಪೂ. 551ರಲ್ಲಿ ಷಾಂಟುಂಗ್ ಪ್ರಾಂತ್ಯದ ಲು ಎಂಬಲ್ಲಿ ಜನ್ಮವೆತ್ತಿದ. ಇವನು ಷಾಂಗ್ ರಾಜ ವಂಶಕ್ಕೆ ಸೇರಿದವನಾದರೂ ಬಡತನ ದಲ್ಲಿ ಬೆಳೆದ. ಈತ ಹುಟ್ಟಿದಾಗ 70 ವರ್ಷಗಳ ವೃದ್ಧ ತಂದೆ ಸೈನ್ಯದಲ್ಲಿ ಸಣ್ಣ ಅಧಿಕಾರಿಯಾಗಿದ್ದ. ಮೂರು ವರ್ಷಗಳ ಅನಂತರ ತಂದೆ ಮೃತನಾಗಲು ತಾಯಿ ಬಹು ಕಾರ್ಪಣ್ಯದಿಂದ ಈತನನ್ನು ಸಾಕಿದಳು. ಒಳ್ಳೆ ಶಿಕ್ಷಣ ದೊರಕಿ 17 ನೆಯ ವಯಸ್ಸಿನಲ್ಲೇ ಇವನಿಗೆ ಸರ್ಕಾರಿ ನೌಕರಿಯೂ ಸಿಕ್ಕಿತು. 18ನೆಯ ವಯಸ್ಸಿನಲ್ಲಿ ವಿವಾಹ ನಡೆದು ಒಬ್ಬ ಮಗ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ತರುವಾಯ ಉಪಾಧ್ಯಾಯವೃತ್ತಿಗೆ ಕೈಹಾಕಿದ. ಪ್ರ.ಶ.ಪೂ. 517ರಲ್ಲಿ ರಾಜಧಾನಿಗೆ ಹೋದಾಗ ಟಾಓಯಿಸಂ ಪಂಥದ ಸ್ಥಾಪನಾಚಾರ್ಯ ಲಾವೊತ್ಸೆಯೊಡನೆ ಭೇಟಿಯಾಯಿತು. ಇಬ್ಬರಲ್ಲಿ ನಿಕಟ ಪರಿಚಯ ಬೆಳೆಯಿತು. ಕೆಲಕಾಲ ತನ್ನ ಹಿಂಬಾಲಕರೊಂದಿಗೆ ತನ್ನ ತತ್ತ್ವ ಪ್ರಚಾರಕಾರ್ಯದಲ್ಲಿ ತೊಡಗಿದ್ದ. 52ನೆಯ ವಯಸ್ಸಿನಲ್ಲಿ ಚುಂಗ್‌ಟೂವಿನ ನ್ಯಾಯಮೂರ್ತಿಯಾಗಿ ನೇಮಕಗೊಂಡ. ಈ ಕ್ಷೇತ್ರದಲ್ಲಿ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ದುಡಿದು ಪರಿಣಾಮಕಾರಿಯಾದ ಸುಧಾರಣೆಗಳನ್ನು ಜಾರಿಗೆ ತಂದ. ಕ್ರಮೇಣ ಮಂತ್ರಿ ಪದವಿಗೂ ಏರಿದ. ಇಬ್ಬರು ಬುದ್ಧಿವಂತರಾದ ಶಿಷ್ಯರ ಸಹಾಯದಿಂದ ಪ್ರಾಂತವನ್ನು ಸಂಪತ್ಸಮೃದ್ಧಿಗಳೆಡೆಗೆ ಕೊಂಡೊಯ್ದ. ಆ ವೇಳೆಗೆ ಇವನ ಆಶ್ರಯದಾತನಾದ ಪ್ರಾಂತ್ಯಾಧಿಕಾರಿ ಮೃತನಾಗಿ, ತರುವಾಯ ಬಂದ ಪ್ರಮುಖಾಧಿಕಾರಿ ದುರ್ನೀತಿಗೆ ಇಳಿದದ್ದು ಇವನಿಗೆ ಸರಿ ಎನಿಸಲಿಲ್ಲ. ತನ್ನ ತತ್ತ್ವಗಳನ್ನು ಪಾಲಿಸುವ ಅಧಿಕಾರಿ ಬೇರೆಲ್ಲಿಯಾದರೂ ಸಿಕ್ಕಬಹುದೆಂಬ ಆಶೆಯಿಂದ 13 ವರ್ಷಕಾಲ ಅನೇಕ ಕಡೆ ಅಲೆದಾಡಿದ. ಅಂಥವರಾರೂ ಸಿಗದಾಗ ನಿರಾಶನಾಗಿ ಪುನಃ ಲು ಪ್ರಾಂತ್ಯಕ್ಕೆ ಹಿಂತಿರುಗಿದ (ಪ್ರ.ಶ.ಪೂ. 483). ಆದರೆ ಅಧಿಕಾರವನ್ನು ಮಾತ್ರ ಸ್ವೀಕರಿಸಲಿಲ್ಲ. ಅನಂತರದ 5 ವರ್ಷಗಳನ್ನು ವಿಶ್ರಾಂತಿಯಲ್ಲಿ ಕಳೆದು ತನ್ನ 72ನೆಯ ವಯಸ್ಸಿನಲ್ಲಿ ನಿಧನ ಹೊಂದಿದ. ಮರಣಸಮಯದಲ್ಲಿ ಇವನ ತತ್ತ್ವಗಳಿಂದ ಆಕರ್ಷಿತರಾಗಿದ್ದ ಯುವಕರ ತಂಡವೊಂದು ಇವನ ಸುತ್ತ ಸೇರಿದ್ದು, ಈತನ ತತ್ತ್ವಗಳ ಪ್ರಚಾರಕ್ಕೆ ಸಿದ್ಧರಾಗಿದ್ದರು. ಗುರುವಿನ ಪ್ರಭಾವದಿಂದ ಆ ಶಿಷ್ಯರು ಸರ್ಕಾರದ ಉನ್ನತ ಪದವಿಗಳನ್ನು ದೊರಕಿಸಿಕೊಂಡ ರಾದರೂ ಯಾರೂ ಬಹುಕಾಲ ಸಾಕಷ್ಟು ತತ್ತ್ವನಿಷ್ಠರಾಗಿ ಉಳಿಯಲಿಲ್ಲ.

ಇವನ ಗುಣಗಳು ಅಪಾರ. ಸಾಧುಸ್ವಭಾವ, ಗೌರವ ವರ್ತನೆಗಳಿಗೆ ಇವನು ಹೆಸರಾಗಿದ್ದ. ನಿಸ್ಸ್ವಾರ್ಥ, ಪ್ರಾಮಾಣಿಕ ಹಾಗೂ ಶೀಲವಂತ ವ್ಯಕ್ತಿ. ಈ ಗುಣಗಳಿಂದ ಅಂದಿನ ಸಮಾಜ ಜೀವನದಲ್ಲಿ ಗಣ್ಯಸ್ಥಾನಗಳಿಸಿದರೂ ತಾನೊಬ್ಬ ಸುಧಾರಕನೇ ವಿನಾ ಪ್ರವಾದಿಯಲ್ಲ ಎಂದು ಹೇಳಿಕೊಂಡುದು ಈತನ ಘನತೆಗೊಂದು ನಿದರ್ಶನ. ಚೀನದ ಜನತೆಗೆ ವ್ಯಾವಹಾರಿಕ ಸಾಮಾಜಿಕ ಜೀವನದಲ್ಲಿ ಸಾತ್ತ್ವಿಕ ಹಾಗೂ ಸರಳಮಾರ್ಗದ ತತ್ತ್ವಗಳನ್ನು ಬೋಧಿಸಿದವರಲ್ಲಿ ಇವನು ಮೊದಲಿಗ. ಉಪದೇಶವನ್ನು ಮನೋಜ್ಞವಾಗಿ ಮಾಡಲು ಈತ ಇತಿಹಾಸ ಕಾವ್ಯ ಮತ್ತು ಸಂಗೀತ ಮಾಧ್ಯಮಗಳನ್ನು ಬಳಸಿಕೊಂಡು ಮೊದಲು ತಾತ್ತ್ವಿಕವಾಗಿಯೂ ತರುವಾಯ ಪ್ರಯೋಗಾತ್ಮಕವಾಗಿಯೂ ಬೋಧಿಸುತ್ತಿದ್ದ; ಔದ್ಧತ್ಯದಿಂದ ಅಥವಾ ಅಧಿಕಾರಪೂರ್ವಕ ಒತ್ತಾಯಿಸದೇ ಸ್ವಂತ ಆಚರಣೆಯಿಂದ ಶಿಷ್ಯರಿಗೆ ಮಾದರಿಯಾಗಿರುತ್ತಿದ್ದುದೇ ಈತನ ವೈಶಿಷ್ಟ್ಯ. ಅಂಧಾನುಕರಣೆ ಮಾಡದೆ ಸ್ವತಃ ಯೋಚಿಸಿ ತಮ್ಮ ಕಾರ್ಯಗಳ ರೀತಿಯನ್ನು ನಿರ್ಧರಿಸಲು ಶಿಷ್ಯವರ್ಗಕ್ಕೆ ಉತ್ತೇಜನ ನೀಡುತ್ತಿದ್ದ. ತನ್ನ ಶಿಷ್ಯರನ್ನು ಆರಿಸುವುದರಲ್ಲೂ ಸಮತಾಭಾವ ತೋರಿ ಬಡವ ಬಲ್ಲಿದರೆಂಬ ಭೇದಗಳಿಗೆ ಅವಕಾಶ ನೀಡದೆ ಅವರ ಸಚ್ಚಾರಿತ್ರ್ಯ ಮತ್ತು ಬೌದ್ಧಿಕ ಸಾಮರ್ಥ್ಯಗಳಿಗೆ ಪ್ರಾಶಸ್ತ್ಯ ನೀಡುತ್ತಿದ್ದ. ಇವನನ್ನು ಬೋಧಕನೆನ್ನುವುದಕ್ಕಿಂತಲೂ ಸುಧಾರಕನೆನ್ನುವುದು ಹೆಚ್ಚು ಉಚಿತ. ವಿದ್ವಾಂಸನೆಂಬುದು ನಿಜವಾದರೂ ಈತನ ಕೃತಿಗಳೆಂದು ಹೇಳಬಹುದಾದ ಗ್ರಂಥಗಳಾವುವೂ ಕಾಣಬರುವುದಿಲ್ಲ.

ಇವನ ಜೀವಿತಕಾಲ ಚೀನದ ಇತಿಹಾಸದಲ್ಲಿ ಸ್ವಾರಸ್ಯವಾದುದು. ಚೌವಂಶ ಇಳಿಗತಿಯಲ್ಲಿತ್ತು. ದೇಶದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ತುಂಬಾ ಏರುಪೇರುಗಳಾಗಿದ್ದುವು. ಅಧಿಕಾರಕ್ಕಾಗಿ ಪ್ರಾಂತಗಳಲ್ಲಿ ತಿಕ್ಕಾಟಗಳಿದ್ದವು. ಜನರು ರಾಜಪ್ರಭುತ್ವವನ್ನೇ ಬಯಸುತ್ತಿದ್ದರೂ ದೇಶ ಒಗ್ಗಟ್ಟಿನಿಂದಲೂ ಶಿಸ್ತುಸಂಯಮದಿಂದಲೂ ಬಾಳ್ವೆನಡೆಸಬೇಕೆಂಬುದನ್ನು ಮನಗಂಡಿದ್ದರು. ಇದಕ್ಕಾಗಿ ನಿರ್ದಿಷ್ಟವಾದ ಧ್ಯೇಯಧೋರಣೆಗಳನ್ನು ಪ್ರತಿಪಾದಿಸಬಲ್ಲ ಒಬ್ಬ ಮೇಧಾವಿ, ಸುಧಾರಕ ಅತ್ಯಗತ್ಯ ಎಂದು ತಿಳಿದಿದ್ದರು. ಆ ಕಾಲದಲ್ಲಿದ್ದ ಪ್ರಭಾವಿ ವ್ಯಕ್ತಿಗಳೂ ಕೂಡ ರಾಜಕೀಯದ ಕಟ್ಟುಪಾಡಿಗಿಂತ ನೈತಿಕ ಧ್ಯೇಯಗಳೇ ಶ್ರೇಷ್ಠವಾದುವು. ಎಂದು ಅವುಗಳ ಆಚರಣೆಗಾಗಿ ತವಕಗೊಂಡಿದ್ದರು. ಇಂಥ ಸಮಯದಲ್ಲೇ ಇವನ ತನ್ನ ನೀತಿಪ್ರಧಾನ ಮಾರ್ಗವನ್ನು ಪ್ರಚಾರ ಮಾಡಲಾರಂಭಿಸಿದ್ದು. ಇವನು ಗೌತಮ ಬುದ್ಧನ ಸಮಕಾಲೀನ. ಪ್ರ.ಶ.ಪೂ. 5–4ನೆಯ ಶತಮಾನಗಳಲ್ಲಿದ್ದ ಗ್ರೀಕ್ ತತ್ತ್ವವೇತ್ತರ ವಿಚಾರಗಳಿಗೆ ಇವನ ತತ್ತ್ವಗಳು ಸರಿಹೋಲುತ್ತವೆ.

ಈತನ ತತ್ತ್ವಗಳು ಮತೀಯವಲ್ಲ; ನಿತ್ಯ ಜೀವನದಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮಗಳವು; ತನ್ಮೂಲಕ ಸಮಾಜ ಮತ್ತು ರಾಜ್ಯದ ಉದ್ಧಾರಕ್ಕೆ ಸಾಧಕವೆನಿಸ ತಕ್ಕವು. ಸ್ವಂತ ಮತ್ತು ಸಾಮೂಹಿಕ ಸಂಬಂಧಗಳಲ್ಲಿ ವ್ಯಕ್ತಿ ಯಾವ ರೀತಿ ವರ್ತಿಸಬೇಕು ಎಂಬುದೇ ಆ ತತ್ತ್ವಗಳ ಸಾರಾಂಶ. ಇವನ ಮತ ಹೀಗಿದೆ: ವಿಶ್ವದಲ್ಲಿ ನಿರೂಪಕ ಶಕ್ತಿಯುಳ್ಳದ್ದು ಸ್ವರ್ಗವೊಂದೇ. ಸಂಸಾರದಲ್ಲಿ ತಂದೆಗೆ ಆ ಅಧಿಕಾರವುಂಟು. ರಾಜ್ಯದಲ್ಲಿ ರಾಜನ ಸ್ಥಾನಮಾನ ವಿಶ್ವದಲ್ಲಿನ ಸ್ವರ್ಗದಂತೆ, ಸಂಸಾರದಲ್ಲಿನ ತಂದೆಯಂತೆ; ಅವನೇ ರಾಜ್ಯದ ನಿರೂಪಕ ಶಕ್ತಿ. ಸಂಸಾರದ ಮುಖ್ಯಸ್ಥನಿಗೆ ವಿಧೇಯನಾಗಿರುವುದು, ಅನೂಚಾನವಾಗಿ ಬಂದ ಪೂಜ್ಯತೆ ತೋರುವುದು–ಇವೆರಡೂ ಸಂಸಾರ ಮತ್ತು ರಾಜಕೀಯ ಜೀವನಕ್ಕೆ ಅಸ್ತಿಭಾರವಿದ್ದಂತೆ. ಇದರಂತೆ ಜನ ನಡೆದುಕೊಂಡರೆ ಸೌಹಾರ್ದ ಏರ್ಪಡುತ್ತದೆ. ಜನತೆಯ ಅತಿಶಯವಾದ ಸುಖಕ್ಕೆ ಶ್ರಮಿಸಿ ಮಾನವಸ್ವಭಾವಕ್ಕನುಗುಣವಾದ ರೀತಿಯಲ್ಲಿ ಮತ್ತು ಕಾಲದೇಶದ ಸ್ಥಿತಿಗತಿಗನುಸಾರವಾಗಿ ರೀತಿನೀತಿಗಳನ್ನು ರೂಪಿಸುವುದು ಆದರ್ಶ ಆಡಳಿತದ ಗುರಿ. ಅದಕ್ಕಾಗಿ ಶ್ರಮಿಸಿದ ಮಾನವ ಪ್ರೀತಿಯೇ ಸದ್ಗುಣ. ಮಾನವ ಪ್ರಕೃತಿಯನ್ನು ತಿಳಿಯುವುದೇ ಬುದ್ಧಿವಂತಿಕೆ. ಇಡೀ ಮಾನವಕುಲ ಒಂದು ಸಂಸಾರ. ತನ್ನ ಪ್ರಗತಿಯನ್ನು, ಸ್ಥಾನಮಾನಗಳನ್ನು ಅಪೇಕ್ಷಿಸುವವ ಇತರರ ಪ್ರಗತಿ, ಸ್ಥಾನಮಾನಗಳ ಸಾಧನೆಗೆ ಶ್ರಮಿಸುವುದೇ ಒಳ್ಳೆಯ ಮಾರ್ಗ. ಆದುದರಿಂದ ಪ್ರಭುತ್ವ ಜನತೆಯ ಸಹಕಾರೀ ಸಂಸ್ಥೆಯಾಗಿರಬೇಕು. ಜನತೆಯ ಸುಖಸಂಪತ್ತುಗಳ ಸಾಧನೆ ಮಾಡಬಲ್ಲವರೇ ಆಡಳಿತದಲ್ಲಿರಲು ಅರ್ಹರು. ಆದುದರಿಂದ ಆನುವಂಶಿಕ ರಾಜರು ಅರ್ಹರೂ ಸನ್ಮಾರ್ಗಿಗಳು ಆದ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಆಡಳಿತವನ್ನು ವಹಿಸುವುದೊಳ್ಳೆಯದು.

ಈ ತತ್ತ್ವಗಳಿಗೂ ಅನಂತರ ಕಾಲದಲ್ಲಿ ಇವನ ತತ್ತ್ವದ ಆಚರಣೆಗಳಿಗೂ ಹಲವಾರು ಪ್ರಮುಖ ವ್ಯತ್ಯಾಸಗಳು ಕಂಡುಬರುತ್ತವೆ. ಮಹಾಪುರುಷರ ಬೋಧನೆಗಳು ಕಾಲಕ್ರಮೇಣದಲ್ಲಿ ವಿಕೃತಗೊಳ್ಳುವುದು ಸಾಮಾನ್ಯ. ಆದರೂ ಅನಂತರದ ಕಾಲದಲ್ಲಿ–ಉದಾ: ಹ್ಯಾನ್ ವಂಶದ ಕಾಲ ಪ್ರ.ಶ.ಪೂ. 202 ರಿಂದ ಪ್ರ.ಶ. 221ರವರೆಗೆ ಈತನ ಅನೇಕ ಬೋಧನೆಗಳು ಕಾರ್ಯಗತವಾದುವು. ಸಮಾಜದ ಕೆಳವರ್ಗದಲ್ಲಿ ಹುಟ್ಟಿದವರು ಸಹ ತಮ್ಮ ಸದ್ಗುಣ ದಕ್ಷತೆಗಳಿಂದ ಮಂತ್ರಿಗಳಾಗಬಹುದಿತ್ತು. ದೇಶದ ಆಗುಹೋಗುಗಳನ್ನು ನಿರ್ಧರಿಸುವ ಅಧಿಕಾರ ಅವರವರೆಗೂ ಬರುತ್ತಿತ್ತು. ಒಂದಲ್ಲ ಒಂದು ವಿಧದಲ್ಲಿ ಈತನ ತತ್ತ್ವಗಳು ಚೀನ ಮಾತ್ರವಲ್ಲದೆ ಇಡೀ ಆಗ್ನೇಯ ಏಷ್ಯದ ಸಂಸ್ಕೃತಿ, ಇತಿಹಾಸಗಳ ಮೇಲೆ ಪ್ರಭಾವ ಬೀರಿವೆ. (ಕೆ.ಜೆ.;ಎಂ.ವೈ.;ಎಸ್.ಬಿ.ಕೆ.)

**ಕನಿಷ್ಕ I:** ಸು.78–102. ಉತ್ತರ ಭಾರತದಲ್ಲಿ ರಾಜ್ಯವಾಳಿದ ಕುಷಾಣ ವಂಶದ ಪ್ರಸಿದ್ಧ ಚಕ್ರವರ್ತಿ. ಪ್ರಾಚೀನ ಭಾರತದ ಪ್ರದೇಶಗಳಾದ ಮಧ್ಯ ದೇಶ, ಉತ್ತರಾಪಥ ಮತ್ತು ಅಪರಾಂತಗಳು ಇವನ ಆಳಿಕೆಗೆ ಒಳಪಟ್ಟಿದ್ದುವು. ಪೂರ್ವ–ಪಶ್ಚಿಮವಾಗಿ ಬಿಹಾರದಿಂದ ಖೊರಾಸಾನದವರೆಗೂ ಉತ್ತರ–ದಕ್ಷಿಣವಾಗಿ ಖೊತಾನದಿಂದ ಕೊಂಕಣದವರೆಗೂ ಈತನ ಚಕ್ರಾಧಿಪತ್ಯ ಹಬ್ಬಿತ್ತೆಂದು ಹೇಳಲಾಗಿದೆ. ಈತನ ಕಾಲ ಯಾವುದೆಂದು ನಿಶ್ಚಿತವಾಗಿ ಹೇಳುವುದು ಸಾಧ್ಯವಿಲ್ಲ. ಎರಡನೆಯ ಕಡ್‌ಫೀಸಿಸನ ಅನಂತರ ಈತ ಇದ್ದಿರಬೇಕೆಂದು ಕಾಣುತ್ತದೆ. ಎರಡನೆಯ ಕಡ್‌ಫೀಸಿಸನ ಕಾಲ ಸು. 65–75 ಎನ್ನುವುದಾದರೆ, ಕನಿಷ್ಕ ಒಂದನೆಯ ಶತಮಾನದ ಕೊನೆಯ ಭಾಗದಲ್ಲಿ ಆಳಿದನೆಂದು ಹೇಳಬಹುದಾಗಿದೆ. ಈತನೊಬ್ಬ ಶಕಸ್ಥಾಪಕ. ಇವನ ಆಳಿಕೆಯ ವರ್ಷಗಳ ಎಣಿಕೆಯೇ ಅನಂತರವೂ ಮುಂದುವರಿದಿದ್ದಿರಬಹುದು. ಪ್ರಶ. 78ರಲ್ಲಿ ಆರಂಭವಾದ ಶಕೆಯೇ ಇವನದೆಂದು ಊಹಿಸಲಾಗಿದೆ. ಇದನ್ನೊಪ್ಪುವುದಾದರೆ ಈತ ಪ್ರ.ಶ. 101 ಅಥವಾ 102ರವರೆಗೆ ಆಳಿದನೆಂದು ಹೇಳಬಹುದು. ಕನಿಷ್ಕನ ಆಳಿಕೆ ಪ್ರಶ. 130ರಿಂದ ಆರಂಭವಾಯಿತೆಂದು ಕೆಲವು ಭಾರತಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಟಿಬೆಟನ್ ಮತ್ತು ಚೀನಿ ದಾಖಲೆಗಳು ಆಧಾರ. ಈತ ಒಂದನೆಯ ಮತ್ತು ಎರಡನೆಯ ಕಡ್‌ಫೀಸಿಸರಿಗಿಂತಲೂ ಹಿಂದಿನವನೆಂದೂ ಪ್ರ.ಶ.ಪೂ. 58ರಲ್ಲಿ ಆರಂಭವಾದ

ವಿಕ್ರಮಶಕಪುರುಷನೀತನೆಂದೂ ಇನ್ನು ಕೆಲವು ವಿದ್ವಾಂಸರ ವಾದ. ಈತ 248ರಲ್ಲಿ ಸಿಂಹಾಸನಾರೋಹಣ ಮಾಡಿದನೆಂದೂ ತ್ರೈಕೂಟಕ ಮತ್ತು ಇತರ ವಂಶಗಳ ಅರಸರು ಅನುಸರಿಸುವ ಶಕೆಯನ್ನು ಈತ ಆರಂಭಿಸಿದನೆಂದೂ ಒಂದು ಅಭಿಪ್ರಾಯವುಂಟು. ಅದರೆ ಇದು ಇತಿಹಾಸಕಾರರಿಂದ ಅಷ್ಟೇನೂ ಪುರಸ್ಕೃತವಾಗಿಲ್ಲ.

ಕನಿಷ್ಕ ಎಂಬುದು ಇವನ ಹೆಸರಿನ ಸಂಸ್ಕೃತ ರೂಪ. ವೀರಯೋಧ, ಶ್ರೇಷ್ಠ ದಂಡನಾಯಕನಾಗಿದ್ದ ಈತ ಪಾರ್ಥಿಯನರ ವಿರುದ್ಧ ದಂಡಯಾತ್ರೆ ನಡೆಸಿದನೆಂದು ಹೇಳಲಾಗಿದೆ. ಸಾಕೇತ ಮತ್ತು ಪಾಟಲೀಪುತ್ರಗಳನ್ನು ಈತ ಗೆದ್ದ ವಿಚಾರವನ್ನು ಟಿಬೆಟಿನ ಲೇಖಕರು ಉಲ್ಲೇಖಿಸಿದ್ದಾರೆ. ಬಂಗಾಲ ಒರಿಸ್ಸಗಳಲ್ಲೂ ಇವನ ನಾಣ್ಯಗಳು ದೊರೆತಿವೆ. ನೇಪಾಲದ ಲಿಚ್ಛವಿಗಳು ಕನಿಷ್ಕನ ಶಕೆಯನ್ನೇ ಅನುಸರಿಸಿದ್ದಾರೆ. ಹೀಗೆಂದ ಮಾತ್ರಕ್ಕೆ ಈ ಪ್ರದೇಶಗಳೆಲ್ಲ ಕನಿಷ್ಕನಿಗೆ ಅಧೀನವಾಗಿದ್ದುವೆಂದು ಹೇಳಲಾಗುವುದಿಲ್ಲ. ಕಾಶ್ಮೀರದಲ್ಲಿ ಕನಿಷ್ಕ ಆಳಿಕೆ ನಡೆಸಿದ ಬಗ್ಗೆ ಕಲ್ಹಣನ ರಾಜತರಂಗಿಣಿಯಲ್ಲಿ ಉಲ್ಲೇಖವಿದೆ. ಗಾಂಧಾರ ರಾಜ್ಯ ಇವನ ಅಧೀನದಲ್ಲಿತ್ತೆಂದು ಯುವಾನ್‍ಚಾಂಗ್ ಹೇಳಿದ್ದಾನೆ. ಪುರುಷಪುರ (ಪೆಷಾವರ್) ಇದರ ರಾಜಧಾನಿಯಾಗಿತ್ತು. ಟ್ಸಂಗ್‍ಲಿಂಗ್ ಪರ್ವತಗಳಿಗೆ ಪೂರ್ವದ ಪ್ರದೇಶವನ್ನೂ ಈತ ಗೆದ್ದಿದ್ದನೆಂದು ತಿಳಿದುಬರುತ್ತದೆ.

ಮುಪ್ಪು ಸಂಭವಿಸಿದಾಗಲೂ ಕನಿಷ್ಕನಿಗೆ ರಾಜ್ಯ ಗೆಲ್ಲುವ ಆಸೆ ಹೋಗಿರಲಿಲ್ಲವೆಂದು ಕಾಣುತ್ತದೆ. ಮಧ್ಯ ಏಷ್ಯದಲ್ಲಿದ್ದ ಚೀನೀಯರ ವಿರುದ್ಧ ಈತ ಒಂದು ವಿಫಲ ದಂಡಯಾತ್ರೆ ನಡೆಸಿದ. ಯಾರ್‍ಖಂಡ್, ಕ್ಯಾಷ್‍ಘರ್, ಕೋಟಾನ್ ಈ ರಾಜ್ಯಗಳನ್ನು ಗೆದ್ದರೂ ಉತ್ತರದ ನೆಲ ಮಾತ್ರ ಇವನಿಗೆ ದಕ್ಕಲಿಲ್ಲವೆಂದು ತಿಳಿದುಬರುತ್ತದೆ. ಚೀನಿ ದಂಡನಾಯಕ ಪಾನ್–ಚೋ ಆಗ ಅನೇಕ ಪ್ರದೇಶಗಳನ್ನು ಜಯಿಸಿ ಕ್ಯಾಸ್ಪಿಯನ್ ಸಮುದ್ರದವರೆಗೂ ಚೀನಿ ಪ್ರಭಾವ ವಿಸ್ತರಿಸಿದ್ದ. ಚೀನೀಯರ ವಿಜಯದಿಂದ ಕನಿಷ್ಕನಿಗೂ ಹುರುಪು ತುಂಬಿ, ತಾನೂ ಚೀನಿ ಚಕ್ರವರ್ತಿಗೆ ಸಮನೆಂಬುದನ್ನು ಸ್ಥಾಪಿಸುವ ಉದ್ದೇಶದಿಂದ ಇವನು ಚೀನಿ ಚಕ್ರವರ್ತಿಕುಮಾರಿಯ ಕೈಬೇಡಿದ. ಪಾನ್–ಚೋ ಇದಕ್ಕೆ ಒಪ್ಪಲಿಲ್ಲ. ಇದು ತನ್ನ ಚಕ್ರವರ್ತಿ ಗೌರವಕ್ಕೆ ಅಪಮಾನವೆಂಬುದು ಅವನ ಭಾವನೆಯಾಗಿತ್ತು. 70,000 ಮಂದಿ ಅಶ್ವದಳ ಸೈನ್ಯವನ್ನು ಯುದ್ಧಕ್ಕೆ ಕಳಿಸಿದ. ಈ ಸೈನ್ಯ ಹಿಮಾಲಯ ಪರ್ವತಗಳನ್ನು ದಾಟಿ ಚೀನಿ ನೆಲವನ್ನು ಮುತ್ತಿಗೆ ಹಾಕುವ ವೇಳೆಗೆ ಜರ್ಝರಿತವಾಗಿತ್ತು. ಕನಿಷ್ಕನ ಕಂಗೆಟ್ಟ ಸೇನೆಯನ್ನು ಪಾನ್–ಚೋ ನಿರ್ದಯೆಯಿಂದ ಒರೆಸಿ ಹಾಕಿದ. ಕನಿಷ್ಕನ ಮಹತ್ವಾಕಾಂಕ್ಷೆ ಹೀಗೆ ಮುರಿದು ಬಿತ್ತು.

ಬೌದ್ಧ ಸಂಪ್ರದಾಯಗಳಲ್ಲಿ ಕನಿಷ್ಕನ ಹೆಸರು ಬಹಳ ಪ್ರಸಿದ್ಧವಾಗಿದೆ. ಕನಿಷ್ಕ ಬೌದ್ಧನಾಗಿದ್ದನೆಂಬುದಕ್ಕೆ ಅನೇಕ ಶಾಸನಗಳ ಮತ್ತು ನಾಣ್ಯಗಳ ಆಧಾರಗಳುಂಟು. ಇವನು ಪಾಟಲೀಪುತ್ರವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಸೆರೆಸಿಕ್ಕ ಅಶ್ವಘೋಷನ ಪ್ರಭಾವದಿಂದ ಬೌದ್ಧಧರ್ಮಕ್ಕೆ ಮತಾಂತರಗೊಂಡನೆಂಬ ಅಭಿಪ್ರಾಯವೂ ಉಂಟು. ಇವನು ಪೆಷಾವರಿನಲ್ಲಿ ಕಟ್ಟಿಸಿದ ಪ್ರಸಿದ್ಧ ವಿಹಾರದ ಬಗ್ಗೆ ಹಬ್ಬಿದ್ದ ದಂತಕಥೆಗಳನ್ನು ಯುವಾನ್‍ಚಾಂಗ್‍ನೂ ಆಲ್ಬೆರೂನಿಯೂ ಉಲ್ಲೇಖಿಸಿದ್ದಾರೆ. ಇದು ಬೌದ್ಧ ಸಂಸ್ಕೃತಿಯ ಕೇಂದ್ರವಾಗಿತ್ತು. ಪಾರ್ಶ್ವ ಮತ್ತು ಪಾರ್ಶ್ವಿಕರೆಂಬವರ ಸಲಹೆಯ ಮೇರೆಗೆ ಈತ ನಾಲ್ಕನೆಯ ಬೌದ್ಧ ಮಹಾಸಮ್ಮೇಳನವನ್ನು ಏರ್ಪಡಿಸಿದ. ಇದು ಕಾಶ್ಮೀರದಲ್ಲಿ ನಡೆಯಿತೆಂಬುದು ಒಂದು ಮತವಾದರೆ, ಗಾಂಧಾರ ಅಥವಾ ಜಲಂಧರದಲ್ಲಿ ನಡೆಯಿತೆಂಬುದು ಇನ್ನೊಂದು ಮತ. ಕುಂಡಲವನ ವಿಹಾರದಲ್ಲಿ ಸೇರಿದ್ದ ಈ ಸಭೆಯ ಅಧ್ಯಕ್ಷನಾಗಿದ್ದವನು ವಸುಮಿತ್ರ. ಪ್ರಸಿದ್ಧ ಸಂಸ್ಕೃತ ಕವಿ ಅಶ್ವಘೋಷ ಇದರ ಉಪಾಧ್ಯಕ್ಷ. ಈತನನ್ನು ಕನಿಷ್ಕನೇ ಪಾಟಲೀಪುತ್ರದಿಂದ ಹಾರಿಸಿಕೊಂಡು ಬಂದನಂತೆ ಬೌದ್ಧಧರ್ಮ ಕುರಿತ ಅನೇಕ ಧರ್ಮಸೂತ್ರಗಳು ಅಲ್ಲಿ ರಚಿತವಾದುವು. ಆ ಸಭೆಯಲ್ಲಿ ಪ್ರಮುಖವಾಗಿ ಭಾಗವಹಿಸಿದ್ದವರು ಹೀನಾಯಾನ ಪಂಥದವರು. ಆದರೆ ಆ ವೇಳೆಗೆ ಮಹಾಯಾನ ಬಹಳ ಮಟ್ಟಿಗೆ ಅಭಿವೃದ್ಧಿ ಹೊಂದಿತ್ತು. ಅಶ್ವಘೋಷ, ವಸುಮಿತ್ರ ಮೊದಲಾದವರೆಲ್ಲ ಮಹಾಯಾನ ಪಂಥದವರು. ಇವರೆಲ್ಲ ರಾಜಮನ್ನಣೆ ದೊರಕಿಸಿಕೊಂಡಿದ್ದವರು.

ಕನಿಷ್ಕನ ಆಳಿಕೆಯ ಕಾಲದಲ್ಲಿ ಅನೇಕ ಕವಿಗಳಿಗೂ ವಿದ್ವಾಂಸರಿಗೂ ಪ್ರೋತ್ಸಾಹ ದೊರಕಿತೆಂಬುದಂತೂ ನಿಜ. ಮೇಲೆ ಹೇಳಿದ ಬೌದ್ಧ ಕವಿಗಳೂ ವಿದ್ವಾಂಸರೂ ಅಲ್ಲದೆ ಸಂಘರ್ಷಕನೆಂಬ ಪಂಡಿತನೂ ಕನಿಷ್ಕನ ಆಸ್ಥಾನದಲ್ಲಿದ್ದ. ಮಹಾಯಾನ ಬೌದ್ಧಪಂಥದ ಶ್ರೇಷ್ಠ ಪ್ರತಿಪಾದಕನಾದ ನಾಗಾರ್ಜುನ, ಸುಪ್ರಸಿದ್ಧ ಆಯುರ್ವೇದ ತಜ್ಞನಾದ ಚರಕ–ಇವರು ಸಹ ಕನಿಷ್ಕನ ಆಸ್ಥಾನದಲ್ಲಿದ್ದರು. ಮಾಠರನೆಂಬುವನು ಕನಿಷ್ಕನ ಮಂತ್ರಿ, ಇವನೊಬ್ಬ ಮಹಾ ರಾಜನೀತಿಜ್ಞ. ಗ್ರೀಕ್ ವಾಸ್ತು ಶಿಲ್ಪಿ ಅಜೆಸಿಲೇಯಸ್ ಕೂಡ ಇಲ್ಲಿದ್ದನೆನ್ನಲಾಗಿದೆ. ಅಂತೂ ಇವರೆಲ್ಲ ಈ ಕನಿಷ್ಕನ ಕಾಲದಲ್ಲೇ ಇದ್ದರೇ ಅಥವಾ ಇದೇ ಹೆಸರಿನ ಇತರರ ಕಾಲದಲ್ಲಿ ಇದ್ದರೇ ಎಂಬುದು ಸದ್ಯಕ್ಕೆ ಬಿಡಿಸಲಾರದ ಒಗಟಾಗಿದೆ.

ಕನಿಷ್ಕ ಬೌದ್ಧಧರ್ಮೀಯನಾಗಿದ್ದರೂ ಇವನ ನಾಣ್ಯಗಳ ಹಿಂಬದಿಯಲ್ಲಿ ಗ್ರೀಕ್, ಸುಮೇರಿಯನ್, ಎಲಮೈಟ್, ಪರ್ಷಿಯನ್ ಮತ್ತು ಭಾರತೀಯ ದೇವರುಗಳ ಚಿತ್ರಗಳಿವೆ. ಶಿವ, ಶಾಕ್ಯಮುನಿ, ಬುದ್ಧ, ವಾಯು, ಅಗ್ನಿ, ಚಂದ್ರ, ಸೂರ್ಯ, ಮಿತ್ರ–ಮೊದಲಾದವರ ಚಿತ್ರಗಳು ಕೆಲವು ಉದಾಹರಣೆಗಳು. ನಾನಾ ಧರ್ಮಗಳ ದೇವತೆಗಳ ಚಿತ್ರಗಳು ಕನಿಷ್ಕನ ಉದಾರದೃಷ್ಟಿಯನ್ನೂ ಈತನ ರಾಜ್ಯದಲ್ಲಿ ನಾನಾ ಧರ್ಮಗಳು ಸಹಬಾಳ್ವೆ ನಡೆಸುತ್ತಿದ್ದುವೆಂಬುದನ್ನೂ ತೋರಿಸುತ್ತವೆಯೆನ್ನಲಾಗಿದೆ. ಅದುವರೆಗೂ ಚಲಾವಣೆಗೆ ಕೊಡಲಾಗುತ್ತಿದ್ದ ನಾಣ್ಯಗಳಲ್ಲಿದ್ದಂತೆ ಇವುಗಳ ಹಿಂಬದಿಯಲ್ಲಿ ಖರೋಷ್ಠಿ ಲಿಪಿಯಿಲ್ಲ.

ಕನಿಷ್ಕನಿಗೆ ವಾಸ್ತುಶಿಲ್ಪ ಮತ್ತು ಇತರ ಕಲೆಗಳಲ್ಲೂ ಆಸಕ್ತಿಯಿತ್ತು. ಪೆಷಾವರಿನ ಬುದ್ಧನ ಸ್ಮಾರಕದ ಮೇಲೆ 400 ಅಡಿ ಎತ್ತರದ ಗೋಪುರವನ್ನು ಈತ ಕಟ್ಟಿಸಿದ. ತಕ್ಷಶಿಲೆಯನ್ನು ವಿಸ್ತರಿಸಿದ. ಕಾಶ್ಮೀರದಲ್ಲಿ ಕನಿಷ್ಕ ಹುಟ್ಟಿನಿಂದ ವಿದೇಶಿ ಸಂಸ್ಕೃತಿಯವನಾದರೂ ಆಯ್ಕೆಯಿಂದ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದು ಭಾರತದ ಇತಿಹಾಸ ಹಾಗೂ ಪರಂಪರೆಗಳ ಕಾನಿಷ್ಕಪುರವೆಂಬ ತನ್ನ ಹೆಸರಿನಲ್ಲೊಂದು ನಗರ ನಿರ್ಮಿಸಿದ. ಮಥುರಾದಲ್ಲಿ ಅನೇಕ ಸುಂದರ ಭವನಗಳನ್ನು ಇವನೇ ಕಟ್ಟಿಸಿದನೆಂದು ಹೇಳಲಾಗಿದೆ. ಗಾಂಧಾರ ಶೈಲಿಯ ಶಿಲ್ಪಕಲೆಯ ಪ್ರವರ್ತಕ ಇವನೇ ಆಗಿರಬಹುದು. ಸಾರನಾಥ ಮಥುರಾಗಳಲ್ಲಿಯ ಇತರ ಶೈಲಿಗಳೂ ಇವನ ಪ್ರೋತ್ಸಾಹದಿಂದ ವಿಕಾಸ ಹೊಂದಿದುವು. ಆದ್ದರಿಂದಲೇ ಇವನು ಪ್ರಾಚೀನ ಭಾರತದ ಶ್ರೇಷ್ಠ ದೊರೆಗಳಲ್ಲೊಬ್ಬನೆಂದು ಪ್ರಸಿದ್ಧನಾಗಿದ್ದಾನೆ. (ಆರ್.ಆರ್.ಎ.)

**ಕನೌಜ್:** ಉತ್ತರಪ್ರದೇಶ ರಾಜ್ಯದ ಕನೌಜ್ ಜಿಲ್ಲೆಯ ಐತಿಹಾಸಿಕ ಸ್ಥಳ; ಪುರಾತತ್ತ್ವನೆಲೆ ಮತ್ತು ಆಡಳಿತ ಕೇಂದ್ರ. ಕಾನ್ಯಕುಬ್ಜ, ಕನ್ಯಕುಬ್ಜ, ಮಹೋದಯ, ಗಾಂಧಿಪುರ, ಗಾಂಧಿನಗರ, ಕೌಸ್ಥಲ, ಕೌಶ, ಕೌಶಿಕ ಮತ್ತು ಕುಸುಮಪುರ (ಯುವಾನ್‍ಚಾಂಗ್‍ನ ರೀತ್ಯ ಕೊನೆಯ ಹೆಸರು) ಎಂದು ಅನೇಕ ಹೆಸರುಗಳನ್ನು ಹೊಂದಿರುವ ಈ ಪುರಾತನ ಪಟ್ಟಣ ಗಂಗಾ ಮತ್ತು ಕಾಳಿನದಿಯ ಸಂಗಮಸ್ಥಾನವಾದ ಭಾಗೀರಥಿಯ ದಕ್ಷಿಣ ತೀರದಲ್ಲಿದೆ. ಖಿಲಾ ಎಂದು ಕರೆಯಲ್ಪಡುವ ದಿಬ್ಬದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1955ರಲ್ಲಿ ಸಣ್ಣ ಪ್ರಮಾಣದ ಉತ್ಖನನವನ್ನು ಕೈಗೊಂಡಿತ್ತು. ಇದಕ್ಕೂ ಮೊದಲು 7–8ನೆಯ ಶತಮಾನಕ್ಕೆ ಸೇರಿದ ಚತುರ್ಮುಖ ಲಿಂಗಗಳು, ಭೂವರಾಹ, ಕಲ್ಯಾಣ ಸುಂದರ, ಸೂರ್ಯ ಹಾಗೂ ಶ್ರೀದೇವಿ ಮತ್ತು ಭೂದೇವಿ ಸಹಿತ ವಿಶ್ವರೂಪ ವಿಷ್ಣು ಮತ್ತು ಅನಂತರ ಕಾಲದ ನಾಟ್ಯ ಗಣೇಶನ ಕಲ್ಲಿನ ಮೂರ್ತಿಗಳನ್ನು ಇಲ್ಲಿಯ ಸುತ್ತಮುತ್ತಲಿನ ಪ್ರದೇಶಗಳಿಂದ ಸಂಗ್ರಹಿಸಲಾಗಿತ್ತು. ಇತ್ತೀಚಿನ ಕ್ಷೇತ್ರ ಕಾರ್ಯದಲ್ಲಿ ಮಣ್ಪಾತ್ರೆಗಳು ದೊರೆತಿವೆ. ಬಟ್ಟಲು ಮತ್ತು ಬೋಗುಣಿಗಳಿಂದ ಪ್ರತಿನಿಧಿಸಲ್ಪಟ್ಟ ಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸಿದ ಬೂದುಬಣ್ಣದ ಪಾತ್ರೆ, ಕಪ್ಪುಬಣ್ಣದ ಲೇಪನವುಳ್ಳ ಪಾತ್ರೆ, ನುಣುಪು ಹಾಗೂ ಒರಟು ಮೈಯುಳ್ಳ ಕೆಂಪುಬಣ್ಣದ ಪಾತ್ರೆ ಮತ್ತು ಔತ್ತರೇಯ ಕಪ್ಪು ಮೆರುಗಿನ ಪಾತ್ರೆಗಳಿವೆ. 4ನೆಯ ಶತಮಾನದಿಂದ ಮಧ್ಯಯುಗೀನ ಕಾಲದವರೆಗಿನ ಕಲ್ಲಿನ ಮೂರ್ತಿಗಳೂ ದೊರೆತಿವೆ.



**ಉತ್ಖನನ ಗುಂಡಿ, ಸಾಂಸ್ಕೃತಿಕ ಪದರ ವಿನ್ಯಾಸ**

ಇವುಗಳಲ್ಲಿ ಪಾರ್ವತಿ, ಕಾರ್ತಿಕೇಯ, ಸೂರ್ಯ, ವಿಷ್ಣು, ಶಿವ, ಗಣೇಶ ಮತ್ತು ಕೆಲವು ಜೈನಮೂರ್ತಿಗಳು ಅತಿಮುಖ್ಯವಾದವು. ಈ ನೆಲೆಯಲ್ಲಿ ಮಣ್ಣಿನ ಗೊಂಬೆಗಳು ಹೇರಳವಾಗಿ ಇರುವುದು ವೈಶಿಷ್ಟ್ಯ.

ಇಲ್ಲಿ ದೊರೆತ ಪ್ರಾಣಿಗಳ ಮತ್ತು ಮನುಷ್ಯರ ಮಣ್ಣಿನ ಪುಟ್ಟ ಮೂರ್ತಿಗಳು 3ನೆಯ ಶತಮಾನದಿಂದ 17ನೆಯ ಶತಮಾನದವರೆಗಿನವು. ಬೂದುಬಣ್ಣದ ಮಣ್ಣಿನ ಮೂರ್ತಿಯ ಮುಂಡ ಮತ್ತು ಮಣ್ಣಿನ ಆನೆ ಮೌರ್ಯರ ಕಾಲದವು. ಗಜಲಕ್ಷ್ಮಿಯ ಒಂದು ಫಲಕ ಶುಂಗ ಶೈಲಿಯಲ್ಲಿದೆ. ಪತ್ರಾಲಂಕಾರ ಶಿರೋಭೂಷಣವುಳ್ಳ ಸ್ತ್ರೀ ಮತ್ತು ಮಿಥುನ ಗೊಂಬೆಗಳ ಫಲಕವೂ ಇದೇ ಕಾಲದವು. ಒರಟಾದ ಮಣ್ಣಿನಲ್ಲಿ ತಯಾರಿಸಿದ ಕೆಲವು ಶಿರೋಭಾಗಗಳು ಕುಷಾಣರ ಕಾಲದವು. ದಪ್ಪ ಮತ್ತು ಗಿಡ್ಡ ಕಾಲುಗಳಿಂದ ಕೂಡಿದ ಟಗರಿನಾಕಾರದ ಮುಖ ಮತ್ತು ಸ್ತ್ರೀ ಮತ್ತು ಪುರುಷರ ನೈಗಮೇಶ ಮೂರ್ತಿಗಳು ಕೈಯಿಂದ ಮಾಡಿದವು.

ಇವುಗಳ ಮೇಲೆ ಕಚ್ಚುಗಳುಳ್ಳ ರೇಖೆಗಳು ಮತ್ತು ದುಂಡು ಪಟ್ಟಿಗಳನ್ನು ಕಾಣಬಹುದು. ಕೆಲವೊಮ್ಮೆ ಇವುಗಳಲ್ಲಿ ಕೆಂಪುಬಣ್ಣದ ಲೇಪನವಿದೆ. ಸ್ತ್ರೀ ಮೂರ್ತಿಗಳು ಹೆಚ್ಚಿಗೆ ಅಲಂಕರಣಗೊಂಡಿದ್ದು, ಉಬ್ಬಿದ ಸ್ತನಗಳಿಂದ ಆಕರ್ಷಕವಾಗಿವೆ. ಕೆಲವು ಗೊಂಬೆಗಳಲ್ಲಿ ತಲೆಯ ಮೇಲೆ ಸಣ್ಣ ತೂತಿರುವುದರಿಂದ ಬಹುಶಃ ಇವನ್ನು ತೂಗು ಹಾಕುತ್ತಿದ್ದರು. ಈ ಶಿಲ್ಪಗಳು 450–650 ಕಾಲದವು. ಹೆಚ್ಚು ದಪ್ಪವಿಲ್ಲದ ಒಂದೇ ಅಚ್ಚಿನಿಂದ ತಯಾರಿಸಿದ ತಾಯಿ ಮತ್ತು ಶಿಶು ಆಕೃತಿಯ ಎಡಕೈಯಲ್ಲಿ ಶಿಶುವಿದ್ದು, ಪತ್ರಾಲಂಕಾರ ಶಿರೋಭೂಷಣವನ್ನು ಹೊಂದಿದೆ. ಇದೇ ಶೈಲಿಯಲ್ಲಿ ನಿಲುಭಂಗಿಯಲ್ಲಿರುವ ಮತ್ತೊಂದು ಸ್ತ್ರೀ ಶಿಲ್ಪ ತನ್ನ ಎಡ ಹಸ್ತವನ್ನು ಟೊಂಕದ ಮೇಲಿರಿಸಿದೆ. ದಂಪತಿ ಮೂರ್ತಿಗಳನ್ನು ದಪ್ಪವಿಲ್ಲದ/ಆಳವಿಲ್ಲದ ಜೋಡಿ ಅಚ್ಚುಗಳಿಂದ ತಯಾರಿಸಲಾಗಿದೆ. ನಿಲುಭಂಗಿಯಲ್ಲಿರುವ ಸೈನಿಕರ ಎಡಗೈಯಲ್ಲಿ ಖಡ್ಗವಿದೆ. ಈ ಶಿಲ್ಪಗಳು 550–650 ಕಾಲದವು. ಉಳಿದ ಸ್ತ್ರೀ ಮತ್ತು ಪುರುಷ ಮೂರ್ತಿಗಳು



ಸುಡಾವೆ ಮಣ್ಣಿನ ಗೊಂಬೆಗಳು

650ರಿಂದ 750ರ ಕಾಲಕ್ಕೆ ಸೇರಿದವು. ಇದರಲ್ಲಿ ಒಂದು ಗುಂಪು ಜೋಡಿ ಅಚ್ಚಿನಿಂದ ತಯಾರಿಸಿದ ಶಿರಭಾಗಗಳಾಗಿದ್ದು, ದೇಹದ ಭಾಗವನ್ನು ಕೈಯಿಂದ ಸಿದ್ಧಪಡಿಸಲಾಗಿದೆ. ಇವುಗಳಲ್ಲಿ ಕೆಲವಕ್ಕೆ ಕೆಂಪುಬಣ್ಣ ಅಥವಾ ಕಪ್ಪುಬಣ್ಣದ ಲೇಪನ ಇದೆ. ಕೇಶಶೈಲಿ ಭಿನ್ನವಾಗಿದೆ. ಕಣ್ಣುಗಳು ಹೊರ ಉಬ್ಬಿದ್ದು, ದುಂಡಾದ ಪಾಪೆಗಳಿಂದ ಕೂಡಿದೆ. ನಿಡಿದಾದ ಕಿವಿಗಳು ಅಂಟಿಸಲ್ಪಟ್ಟಿವೆ ಮತ್ತು ಕೈ ಮತ್ತು ಕಾಲುಗಳು ಗೆರೆಗಳಿಂದ ಕೂಡಿದ್ದು ಬೆರಳುಗಳು ಮತ್ತು ಉಗುರುಗಳನ್ನು ಗೀರುಗಳಿಂದ ಸೂಚಿಸಲಾಗಿದೆ. ದೇಹವು ಕಚ್ಚು ಗೆರೆಗಳು ಮತ್ತು ದುಂಡು ಪಟ್ಟಿಗಳನ್ನೊಳಗೊಂಡಿದ್ದು ಇವು ಬಹುತೇಕ ಉಡುಪು ಮತ್ತು ಹೊಕ್ಕಳನ್ನು ಸೂಚಿಸುತ್ತವೆ. ಈ ಎರಡೂ ವಿಧದ ಮೂರ್ತಿಗಳಲ್ಲೂ ತಲೆಯ ಮೇಲೆ ರಂಧ್ರವಿರುವ ಸಣ್ಣ ಕೊಂಡಿ ಇದೆ. ಮತ್ತೊಂದು ರೀತಿಯ ಪುರುಷ ಶಿರಗಳು ಒಂದೇ ಅಚ್ಚಿನಿಂದ ತಯಾರಿಸಲ್ಪಟ್ಟಿದ್ದು, ಕೆಲವುದರ ಮೇಲೆ ಕೆಂಪು ಲೇಪನವಿದೆ. ಈ ಶಿಲ್ಪಗಳಿಗೆ ವಿವಿಧ ರೀತಿಯ ಕೇಶಾಲಂಕಾರ ಮಾಡಲಾಗಿದೆ.

ಸ್ತ್ರೀ ಮತ್ತು ಪುರುಷ ಅಥವಾ ಕೇವಲ ಸ್ತ್ರೀ ಶಿಲ್ಪಗಳ ಅನೇಕ ಫಲಕಗಳು 750 ರಿಂದ 850ರ ವರೆಗಿನ ಕಾಲದವು. ಒಂದು ಫಲಕದಲ್ಲಿ ಅಡ್ಡಗಾಲು ಹಾಕಿ ಕುಳಿತಿರುವ ಸ್ತ್ರೀ ಶಿಲ್ಪವಿದೆ. ಇವಳ ಬಲಕ್ಕೆ ಒಂದು ನವಿಲಿದೆ. ಇನ್ನೊಂದು ಫಲಕ ಉಯ್ಯಾಲೆಯ ಮೇಲೆ ಕಾಲುಗಳನ್ನು ಅಡ್ಡಲಾಗಿಸಿ ಕುಳಿತಿರುವ ಸ್ತ್ರೀಯ ಶಿಲ್ಪವನ್ನೊಳಗೊಂಡಿದೆ. ಈಕೆ ತನ್ನ ಕೈಗಳಿಂದ ಉಯ್ಯಾಲೆಯ ಹಗ್ಗವನ್ನು ಹಿಡಿದಿದ್ದಾಳೆ. ಈಕೆ ಪತ್ರಲತಾ ಶಿರೋಭೂಷಣಳಾಗಿದ್ದು ಇವಳ ಮೇಲೆ ಸಿರಿವಂತವಾದ ಎಲೆಗಳುಳ್ಳ ಬಳ್ಳಿಯಿದೆ. ಎಡಗೈಯಲ್ಲಿ ಗುರಾಣಿ ಹಿಡಿದಿರುವ ಸೈನಿಕನ ಚಿತ್ರವುಳ್ಳ ಮತ್ತೊಂದು ಫಲಕವಿದೆ. ಕಠಾರಿಯಾಕಾರದ ಮನುಷ್ಯ ಮೂರ್ತಿಗಳೂ ಸಹ ಇವೆ.

ಕುದುರೆ, ಎತ್ತು, ಪಕ್ಷಿಗಳು, ಕುಲಾವಿ ರೂಪದ ಟೊಪ್ಪಿ ಧರಿಸಿದ ಸವಾರ ಮುಂತಾದ ಪ್ರಾಣಿಗಳ ಮೂರ್ತಿಗಳು, ಅಲಂಕೃತ ಅಂಚುಳ್ಳ ಕದಿರಣಿಗೆಯ ಚಕ್ರಗಳು, ಅಡಿಕೆಯಾಕಾರದ ಮಣಿಗಳು, ಹರಕೆ ತಟ್ಟೆ ಮತ್ತು ಮಾನವ ಮೂರ್ತಿಗಳನ್ನು ತಯಾರಿಸಲು ಉಪಯೋಗಿಸುತ್ತಿದ್ದ ಶುಂಗ ಮತ್ತು ಗುಪ್ತರ ಕಾಲದ ಅಚ್ಚುಗಳು ಇತರೆ ಮಣ್ಣಿನ ವಸ್ತುಗಳು. ಕಲ್ಲಿನ ಮೂರ್ತಿಗಳನ್ನು ಹೊರತುಪಡಿಸಿ ಬೇರೆ ಎಲ್ಲಾ ಮಣ್ಣಿನ ಮೂರ್ತಿಗಳು ಅಹಿಚ್ಛತ್ರ, ಹಸ್ತಿನಾಪುರ ಮತ್ತು ಕೌಶಾಂಬಿಯಲ್ಲಿ ದೊರೆತ ಇದೇ ರೀತಿಯ ಅವಶೇಷಗಳನ್ನು ಹೋಲುತ್ತವೆ.

ಉತ್ಖನನದ ಫಲಿತಾಂಶ ಹೀಗಿದೆ: ಬೂದುಬಣ್ಣದ ವರ್ಣಚಿತ್ರಿತ ಮಣ್ಪಾತ್ರೆ, ವರ್ಣ ಚಿತ್ರಿತ ಕಪ್ಪು ಮಣ್ಪಾತ್ರೆ ಮತ್ತು ಕೆಂಪುಬಣ್ಣದ ಮಣ್ಪಾತ್ರೆಗಳಿಂದ 1ನೆಯ ಹಂತ ಪ್ರ.ಶ.ಪೂ. 1000 ಅವಧಿಯದೆಂದು ಹೇಳಬಹುದು. ಈ ಅವಧಿಯಲ್ಲಿ ಕಟ್ಟಡಗಳ ಅವಶೇಷಗಳು ಕಂಡುಬಂದಿಲ್ಲ. ಎರಡನೆಯ ಹಂತದಲ್ಲಿ ಔತ್ತರೇಯ ಕಪ್ಪು ಮೆರುಗಿನ ಪಾತ್ರೆ ದೊರೆತಿರುವುದರಿಂದ ಈ ಹಂತ ಪ್ರ.ಶ.ಪೂ. 600–700ರ ಅವಧಿಯದು. ಇದಲ್ಲದೆ ಕಪ್ಪು ಮತ್ತು ಕೆಂಪುಬಣ್ಣದ ಮಣ್ಣಿನ ಪಾತ್ರೆಗಳು ದೊರೆತಿವೆ. ಬೋಗುಣಿ, ಬಟ್ಟಲು, ತಟ್ಟೆ, ಮುಚ್ಚಳ, ಹಿಡಿಯುಳ್ಳ ಹರಿವಾಣ, ಕಂಠವಿಲ್ಲದ ಹಂಡೆ ಮತ್ತು ಕುಂಭ ಮಣ್ಪಾತ್ರೆಗಳ ಆಕಾರಗಳಾಗಿವೆ. ದೊಡ್ಡ ಗಾತ್ರದ ಸುಟ್ಟ ಇಟ್ಟಿಗೆಯ ಕಟ್ಟಡವೂ ಕಂಡುಬಂದಿದೆ.

ಮೂರನೆಯ ಹಂತವನ್ನು ಏಳು ಉಪಹಂತಗಳಾಗಿ ಮರು ವಿಂಗಡಿಸಲಾಗಿದೆ. ಈ ಹಂತದಲ್ಲಿ ಕಟ್ಟಡಗಳನ್ನು ಸುಟ್ಟ ಇಟ್ಟಿಗೆಯಿಂದಲೂ ಕೆಲವೊಮ್ಮೆ ದುಂಡು ಕಲ್ಲುಗಳಿಂದಲೂ ನಿರ್ಮಿಸಲಾಗಿದೆ. ಮಣ್ಪಾತ್ರೆಗಳು ಕೆಂಪು ಬಣ್ಣದಾಗಿದ್ದು, ಹೊಳಪುಳ್ಳ ಕೆಂಪುಬಣ್ಣದ ಮಣ್ಪಾತ್ರೆಗಳ ಚೂರುಗಳೂ ದೊರೆತಿವೆ. ಕುಷಾಣರ ಕಾಲದ ಚಿಹ್ನೆಗಳು ಮತ್ತು ವಿನ್ಯಾಸವುಳ್ಳ ಮುದ್ರಿತ ಮಣ್ಪಾತ್ರೆಗಳು ಆದಿ ಸ್ತರಗಳಲ್ಲಿ ದೊರೆತಿವೆ. ಬೋಗುಣಿ, ಮಸಿ ಕುಡಿಕೆ, ದಾನಿ, ಕಿರು ಕಂಠವುಳ್ಳ ಕುಂಭ ಮತ್ತು ಜಾಡಿಗಳು ದೊರೆತಿವೆ. ಮಣ್ಣಿನ ಮೂರ್ತಿಗಳಲ್ಲಿ ಆಳವಿಲ್ಲದ ಅಚ್ಚಿನಿಂದ ತಯಾರಿಸಿದ ಪುರುಷ ಪ್ರತಿಮೆ, ಗಂಡಸಿನ ತಲೆ, ಚಿವುಟು ಗುರುತಿರುವ ಮುಖವುಳ್ಳ ಒರಟಾದ ಪ್ರತಿಮೆಗಳು, ಸತ್ತಿ–ಸತ್ತಾ ಫಲಕಗಳು ಸೇರಿವೆ. ಅಹಿಚ್ಛತ್ರದಲ್ಲಿ ದೊರೆತ ಇದೇ ರೀತಿಯ ಫಲಕಗಳಿಗೆ ಹೋಲಿಸಿದಾಗ ಈ ಹಂತವನ್ನು ಪ್ರ.ಶ. 1ನೆಯ ಶತಮಾನದಿಂದ ಉತ್ತರಕಾಲೀನ ಇತಿಹಾಸಕಾಲದವರೆಗಿನದೆಂದು ಹೇಳಬಹುದು. ಲಖೌರಿ ಮತ್ತು ಸುಣ್ಣದ ಗಾರೆಯಿಂದ ನಿರ್ಮಿಸಲ್ಪಟ್ಟ ಕಟ್ಟಡಗಳ ಆಧಾರದ ಮೇಲೆ ನಾಲ್ಕನೆಯ ಹಂತವನ್ನು ಉಪಹಂತಗಳಾಗಿ ವಿಂಗಡಿಸಬಹುದು. ಗಾಜಿನಂಥ ಹೊಳಪಿನ ಮೈಯುಳ್ಳ ಮಣ್ಪಾತ್ರೆಗಳು ಮತ್ತು ಒರಟಾದ ಕೆಂಪು ಮತ್ತು ಕಪ್ಪು ಮಣ್ಪಾತ್ರೆಗಳು ಈ ಹಂತ ಮಧ್ಯಯುಗೀನ ಕಾಲಕ್ಕೆ ಸೇರಿದ್ದೆಂದು ಸೂಚಿಸುತ್ತವೆ. (ಎಸ್.ಸಿ.ಎಸ್.)

**ಕನ್ನಡ ಚಳವಳಿಗಳು:** ಏಕೀಕರಣೋತ್ತರ ಕರ್ನಾಟಕವನ್ನು ಪ್ರಗತಿಪರವಾಗಿ ರೂಪಿಸಲು ಬೌದ್ಧಿಕ ಹಾಗೂ ಭೌತಿಕ–ಈ ಎರಡು ನೆಲೆಗಳಲ್ಲೂ ನಡೆಸಿದ ಚಳವಳಿಗಳನ್ನು ಕನ್ನಡ ಚಳವಳಿ ಎಂದು ಗುರುತಿಸಲಾಗುತ್ತದೆ. ಬೌದ್ಧಿಕವಾಗಿ ಅಥವಾ ಸೈದ್ಧಾಂತಿಕವಾಗಿ ಕರ್ನಾಟಕವನ್ನು ರೂಪಿಸುವ ಕಾರ್ಯದಲ್ಲಿ ಪ್ರಧಾನವಾದ ಪಾತ್ರವೆಂದರೆ, ಛಿದ್ರಗೊಂಡಿದ್ದ ಕನ್ನಡ ಪ್ರದೇಶಗಳಲ್ಲಿನ ಸೃಜನಶೀಲ ಸಾಹಿತ್ಯ ಸೃಷ್ಟಿ. ಇದು ಕನ್ನಡದ ಸಂವೇದನೆಯನ್ನು ಕಾಯ್ದುಕೊಂಡು ಬಂದ, ಬರುವ ಒಂದು ಸಾಂಸ್ಕೃತಿಕ ಪ್ರಕ್ರಿಯೆ. ಈ ಪ್ರಕ್ರಿಯೆ ಕವಿರಾಜಮಾರ್ಗ ಕಾರನಿಂದ ಮೊದಲ್ಗೊಂಡು ಬೇಂದ್ರೆ, ಕುವೆಂಪು ಅವರನ್ನು ಒಳಗೊಂಡಂತೆ ಇತ್ತೀಚಿನ ಸಾಹಿತ್ಯ ಸೃಷ್ಟಿಯವರೆಗೂ ಮುಂದುವರಿದಿದೆ. ಅಂದರೆ ನಾಡು, ನುಡಿ ಮತ್ತು ಕನ್ನಡಿಗರನ್ನು ಕುರಿತಂತೆ ಸಂಸ್ಕೃತ, ಇಂಗ್ಲಿಷ್ ಇನ್ನಿತರ ಭಾಷೆಗಳನ್ನು ಎದುರುಗೊಳ್ಳುವುದರೊಂದಿಗೆ ಕನ್ನಡದ ಅನನ್ಯತೆಯನ್ನು ಉಳಿಸಿಕೊಳ್ಳಲು ನಡೆಸಿದ ಪ್ರಯತ್ನ. 12ನೆಯ ಶತಮಾನದ ಎಲ್ಲ ವರ್ಗಗಳ ವಚನಕಾರರು ಕನ್ನಡ ಸಂವೇದನೆಯನ್ನು ಮೆರೆದಿದ್ದು ಮಹತ್ತ್ವಪೂರ್ಣವಾದುದು. ಎಲ್ಲ ರೀತಿಯ ಸಂವಹನ, ಅನುಸಂಧಾನಗಳಿಗೆ ಕನ್ನಡ ಭಾಷೆಯೊಂದನ್ನೇ ಮಾಧ್ಯಮವನ್ನಾಗಿಸಿದ್ದು ವಚನಗಳ, ವಚನಕಾರರ ಹೆಗ್ಗಳಿಕೆ. ಈ ದಿಸೆಯಲ್ಲಿ ವಚನಕಾರರನ್ನು ಮೊದಲ ಭಾಷಿಕ [ಕನ್ನಡ] ಹರಿಕಾರರು ಎನ್ನಬಹುದು. ಅನಂತರ ನವೋದಯ, ಪ್ರಗತಿಶೀಲ ಸಾಹಿತ್ಯ ಸೃಷ್ಟಿ, ಭಾರತದ ಸ್ವಾತಂತ್ರ್ಯ ಏಕೀಕರಣ ಪ್ರಕ್ರಿಯೆ ಇವುಗಳು ಕನ್ನಡ ಚಳುವಳಿಗೆ ಪ್ರೇರಣೆ ನೀಡಿದವು. ಇಂಥ ಪ್ರೇರಣೆ, ಪ್ರಯತ್ನಗಳಿಂದಾಗಿ ವಸಾಹತು ಕಾಲದಲ್ಲಿ ತುಂಡಾಗಿದ್ದ ಕನ್ನಡ ಭೂಪ್ರದೇಶ ಗಳು ಒಂದುಗೂಡಿದವು. ಹೀಗೆ ಒಂದಾದದ್ದೂ ಕನ್ನಡ ಚಳವಳಿಯೇ ಆಗಿದೆ. ಆದರೂ ಭಿನ್ನ ಸ್ವರೂಪದ ಚಳವಳಿಯ ಪ್ರಕ್ರಿಯೆಗಳು ಕಾಣಿಸಿಕೊಂಡದ್ದು ಏಕೀಕರಣದ ಅನಂತರವೇ.

ಸಾಂಸ್ಕೃತಿಕವಾಗಿ ದತ್ತವಾದ ಕನ್ನಡ ಸಂವೇದನೆಗಳನ್ನು ತನ್ನದಾಗಿಸಿಕೊಂಡಿದ್ದರೂ ಸೋಲನ್ನು ಅನುಭವಿಸತೊಡಗಿದ್ದು ಏಕೀಕರಣದ ಅನಂತರವೇ. ಆಡಳಿತದ ದೃಷ್ಟಿಯಿಂದ ಒಂದುಗೂಡಿದ ವಿಭಿನ್ನ ಪ್ರದೇಶಗಳ ಕನ್ನಡಿಗರ ಅಭಿರುಚಿ, ಸಂಸ್ಕೃತಿಗಳು ಭಿನ್ನವಾಗಿದ್ದುದರಿಂದ, ಇದನ್ನು ಅರಿಯಲು ಹಾಗೂ ಅರಿತು ಕನ್ನಡಿಗರ ಸಮಸ್ಯೆಗಳನ್ನು ನಿರೀಕ್ಷಿತ ಮಟ್ಟದಲ್ಲಿ ಬಗೆಹರಿಸಲು ಆಗಲಿಲ್ಲ. ಅದರ ಪರಿಣಾಮವಾಗಿಯೇ ಕನ್ನಡ ಚಳುವಳಿ ಭಿನ್ನ ರೀತಿಯಲ್ಲಿ

ಕಾಣಿಸಿಕೊಂಡಿತು. 1960ರ ದಶಕದಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಆಶೋತ್ತರಗಳ ಈಡೇರಿಕೆಗಾಗಿ ಕನ್ನಡಿಗರು ಮತ್ತೆ ಸಂಘಟಿತರಾಗುವ ಅನಿವಾರ್ಯತೆ ಹುಟ್ಟಿಕೊಂಡಿತು. ಏಕೀಕೃತ ಕರ್ನಾಟಕ ಎಲ್ಲ ಕನ್ನಡ ಪ್ರದೇಶಗಳನ್ನು ಒಂದೇ ಆಡಳಿತದ ತೆಕ್ಕೆಗೆ ಪೂರ್ತಿಯಾಗಿ ತೆಗೆದುಕೊಂಡಿರಲಿಲ್ಲ. ಜತ್, ಅಕ್ಕಲಕೋಟೆ, ಸೊಲ್ಲಾಪುರ, ಕಾಸರಗೋಡು, ಆಲೂರು, ಆದವಾನಿ, ರಾಯದುರ್ಗ, ಮಡಕಶಿರ, ಗೂಳ್ಯಂ, ಕೌತಾಳ್, ಬದನೆಹಾಳ್, ಹೊಸೂರು, ತಾಳವಾಡಿ, ನೀಲಗಿರಿ ಮೊದಲಾದುವು ಕನ್ನಡ ರಾಜ್ಯಕ್ಕೆ ಸೇರಿಸಿರಲಿಲ್ಲ. ಈ ಕುರಿತ ಸಮಸ್ಯೆಗಳು ಕರ್ನಾಟಕ ಸರ್ಕಾರದ ಆಡಳಿತಕ್ಕೆ ಸವಾಲಾಗಿ ಪರಿಣಮಿಸಿದವು. ನಾಡಿನ ರಾಜಧಾನಿಯೂ ಆಡಳಿತ ವ್ಯವಸ್ಥೆಯ ಕೇಂದ್ರವೂ ಆಗಿದ್ದ ಬೆಂಗಳೂರು ನಗರದಲ್ಲಿ ಕನ್ನಡೇತರರ ಪ್ರಾಬಲ್ಯವೂ ಎದ್ದು ಕಾಣುತ್ತಿತ್ತು. ಹಳೆಯ ಮೈಸೂರು, ಮುಂಬಯಿ, ಹೈದರಾಬಾದ್, ಮದರಾಸು ಹಾಗೂ ಕೊಡಗು ಪ್ರದೇಶಗಳಲ್ಲಿ ಕನ್ನಡಿಗರ ಮನೋಗತವನ್ನು ಅರಿಯುವಲ್ಲಿ ರಾಜಕಾರಣದ ಪ್ರಯತ್ನ ಸಾಕಾಗಲಿಲ್ಲ. ಸಾಂಸ್ಕೃತಿಕವಾಗಿ ಒಪ್ಪುತ್ತಿದ್ದ ಕರ್ನಾಟಕ ಎಂಬ ಹೆಸರನ್ನು ವ್ಯಾಪಕವಾಗಿ ಮುಂದುವರೆಸಿದ್ದು ಕನ್ನಡಿಗರಲ್ಲಿ ಆಘಾತವನ್ನುಂಟುಮಾಡಿತ್ತು. ಇದಕ್ಕೆ ಮುಂಬಯಿ ಕರ್ನಾಟಕದ [ಉತ್ತರದ] ಕನ್ನಡಿಗರು ತೀವ್ರವಾಗಿ ಪ್ರತಿಕ್ರಿಯಿಸಿದ್ದೂ ಉಂಟು. ಇಂಥ ಹಲವು ಕಾರಣಗಳಿಂದಾಗಿ ನಾಡಿನ ಏಕೀಕರಣ ಸಮಾಧಾನವನ್ನುಂಟು ಮಾಡಿರಲಿಲ್ಲ. ಇದರ ಪರಿಣಾಮವೇ ಬೆಂಗಳೂರಿನ ಪರಿಸರದಲ್ಲಿ ಕನ್ನಡ ಚಳವಳಿ ಸಂಘಟಿತ ರೂಪ ಪಡೆದು, ನಾಡಿನ ಉಳಿದೆಡೆಗಳಿಗೆ ಅದು ಕ್ರಮೇಣ ಪಸರಿಸಿತು. ಆದರೆ ಇದರಲ್ಲಿ ಬೆಂಗಳೂರು ಕೇಂದ್ರಿತ ಕನ್ನಡ ಚಳುವಳಿಗಳ ಪಾಲು ದೊಡ್ಡದು.

**ಬೆಂಗಳೂರಿನ ಕನ್ನಡ ಪರಿಸರ:** ಮೈಸೂರು ಸಂಸ್ಥಾನದ ಆಡಳಿತ ಕೇಂದ್ರವಾಗಿದ್ದ ಬೆಂಗಳೂರು ಏಕೀಕರಣದ ಅನಂತರ ರಾಜ್ಯದ ರಾಜಧಾನಿಯಾಗಿ ಮುಂದುವರಿಯಿತು. ಅದರಿಂದ ನಗರದ ಬೆಳವಣಿಗೆಯೂ ಸಾಧಿಸಿತು. ಆದರೆ ನಾಡು ನುಡಿ, ಸಂಸ್ಕೃತಿಗಳ ಕೇಂದ್ರಸ್ಥಾನವಾಗಿರಲಿಲ್ಲ. ಈ ಸ್ಥಿತಿ ಮುಂಬೈ, ದೆಹಲಿ ಮುಂತಾದ ಮಹಾನಗರಗಳಲ್ಲಿಯೂ ಇದ್ದಿತು. ಕನ್ನಡಿಗರಿಗೆ ಭರವಸೆ ಮೂಡಿಸುವ ಹಾಗೂ ಕನಸುಗಳನ್ನು ನನಸಾಗಿಸುವ ನಿಟ್ಟಿನಲ್ಲಿ ಬೆಂಗಳೂರು ನೆಲೆಯಾಗಲಿಲ್ಲ. ಇದಕ್ಕೆ ಕಾರಣವೆಂದರೆ ಅಲ್ಲಿ ನೆಲೆಸಿದ್ದ ಕನ್ನಡೇತರರ ಪ್ರಾಬಲ್ಯ ಹಿಂದಿನ ಕಮೀಷನರು, ದಿವಾನರುಗಳ ಆಡಳಿತದಿಂದಲೂ ಶಿಕ್ಷಣ, ಉದ್ಯೋಗಗಳನ್ನರಿಸಿ ಬರುವ ಕನ್ನಡೇತರರಿಗೆ ಪ್ರೇರಣೆ ನೀಡಿತ್ತು. ದೇಶದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದ ಅನಂತರವೂ ಅನೇಕ ಉದ್ದಿಮೆಗಳು ಬೆಂಗಳೂರಿನಿಂದ ಆಕರ್ಷಿತವಾದವು. ಇವುಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಬಹುಪಾಲು ಪಕ್ಕದ ತಮಿಳುನಾಡಿನ ತಮಿಳು ಭಾಷಿಕರೇ ಆಗಿದ್ದರು. ಜೊತೆಗೆ ಇತರ ಭಾಷಿಕರೂ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದರು. ಕೇಂದ್ರ ಸರ್ಕಾರಿ ಉದ್ಯಮಗಳಲ್ಲೂ ಇವರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಾಗಿತ್ತು. ಬೆಂಗಳೂರಿನಲ್ಲಿದ್ದ ಐ.ಟಿ.ಐ., ಬಿ.ಇ.ಎಲ್., ಎಚ್.ಎಂ.ಟಿ.,ಮೈಕೋ ಮೊದಲಾದ ಕಾರ್ಖಾನೆಗಳಲ್ಲಿ ಕನ್ನಡಿಗರ ಸಂಖ್ಯೆ ತೀರ ಕಡಿಮೆ. ಸ್ಥಳೀಯ ಕನ್ನಡಿಗರಿಗೆ ಶೇ. 50ರಷ್ಟು ಪ್ರಾತಿನಿಧ್ಯ ಕೊಡಬೇಕೆಂಬ ನಿಯಮವನ್ನು ಕೇಂದ್ರ ಸರ್ಕಾರಿ ಸಂಘ ಸಂಸ್ಥೆಗಳು ಮುರಿದಿದ್ದವು. ಅಂಚೆ, ತಂತಿ, ರೈಲ್ವೆ ಮೊದಲಾದ ಇಲಾಖೆಗಳಲ್ಲಿ ಕನ್ನಡ ಮಾತನಾಡುವವರೇ ಇರಲಿಲ್ಲ. ಸಾರಿಗೆ, ಪೋಲೀಸು ಇಲಾಖೆಗಳಂಥ ರಾಜ್ಯ ಸರ್ಕಾರಿ ನೌಕರಿಗಳಲ್ಲೂ ತಮಿಳರು ಉದ್ಯೋಗಗಳನ್ನು ಪಡೆದಿದ್ದರು.

ಬೆಂಗಳೂರಿನ ಜನನಿಬಿಡ ಪ್ರದೇಶಗಳಾದ ರೈಲ್ವೆ ನಿಲ್ದಾಣ, ಕೆಂಪೇಗೌಡ ಬಸ್ ನಿಲ್ದಾಣ (ಇಂದಿನ ಮೆಜೆಸ್ಟಿಕ್ ಪ್ರದೇಶ), ಗಾಂಧಿನಗರ ಮೊದಲಾದ ಕಡೆಗಳಲ್ಲಿ ತಮಿಳು ಮಾತನಾಡುವವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕನ್ನಡದ ನಾಮಫಲಕಗಳು ಕಾಣುತ್ತಿರಲಿಲ್ಲ. ಬದಲಾಗಿ ತಮಿಳು ಹಾಗೂ ಇಂಗ್ಲಿಷ್‌ನವೇ ಹೆಚ್ಚು. ಕನ್ನಡಿಗರನ್ನು ಸ್ವಾಗತಿಸುತ್ತಿದ್ದ ಕೂಲಿ ಆಳುಗಳು, ರಿಕ್ಷಾ ಚಾಲಕರು ತಮಿಳರೇ ಆಗಿದ್ದರು. ತೆಲುಗು, ಮಲೆಯಾಳ, ಹಿಂದಿ, ಮರಾಠಿ ಭಾಷೆಗಳನ್ನು ಆಡುವವರನ್ನೂ ನೋಡಬಹುದಿತ್ತು. ದೂರದ ಊರುಗಳಿಂದ ಬೆಂಗಳೂರಿಗೆ ಬರುತ್ತಿದ್ದ ಕನ್ನಡಿಗರು ಕನ್ನಡೇತರರಿಂದ ಅವಮಾನ, ಕೀಟಲೆಗಳನ್ನು ಅನುಭವಿಸುವ ಪರಿಸ್ಥಿತಿ ಉದ್ಭವವಾಗಿತ್ತು. ಆಗ ಇದನ್ನು ಪ್ರತಿಭಟಿಸುವ ಯಾವುದೇ ಸಂಘಟಿತ ಮಾರ್ಗಗಳು ಕನ್ನಡಿಗರಿಗೆ ಇರಲಿಲ್ಲ. ಇಂಥ ವೇದಿಕೆಗಳನ್ನು ನಿರ್ಮಿಸಿಕೊಂಡು ಕನ್ನಡತನವನ್ನು ಮೂಡಿಸಲು ಮುಂದೆ ಬಂದವರು ಬೆರಳೆಣಿಕೆಯಷ್ಟು ಸಂಖ್ಯೆಯ ಮಂದಿ ಮಾತ್ರ. ಅ.ನ. ಕೃಷ್ಣರಾವ್, ಕೋಣಂದೂರು ಲಿಂಗಪ್ಪ, ಮ.ರಾಮಮೂರ್ತಿ, ನಾಡಿಗೇರ ಕೃಷ್ಣರಾವ್, ಮೈಸು.ನಟರಾಜ, ಮೈಸು.ಶೇಷಗಿರಿರಾವ್, ಕರ್ಲಮಂಗಲಂ ಶ್ರೀಕಂಠಯ್ಯ, ಬೆ.ನಿ. ಈಶ್ವರಪ್ಪ, ತಿ.ತಾ.ಶರ್ಮ, ಎಂ.ವಿ. ಸುಬ್ಬರಾವ್ ಮೊದಲಾದವರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಇವರೆಲ್ಲ 1960ರ ದಶಕದ ಆರಂಭಿಕ ವರ್ಷಗಳಲ್ಲಿ ಕನ್ನಡದ ಚಳವಳಿಗಾಗಿ ತಮ್ಮನ್ನು ತೊಡಗಿಸಿಕೊಂಡವರು. ಆದರೆ ಇವರನ್ನು ಒಂದು ವೇದಿಕೆಯಡಿಗೆ ತಂದ ಕೋಣಂದೂರು ಲಿಂಗಪ್ಪ ಅವರ ಪ್ರಯತ್ನಗಳು ಪ್ರಧಾನವಾದವು. ಕನ್ನಡ ಚಳವಳಿಗೆ ಆರಂಭಿಕ ನೆಲೆಗಟ್ಟನ್ನು ಹಾಕಿಕೊಟ್ಟ ಕೀರ್ತಿ ಅವರಿಗೂ ಇತರ ಆದ್ಯ ಹೋರಾಟಗಾರರಿಗೂ ಸಲ್ಲುತ್ತದೆ.

**ಚಳವಳಿಯ ಮೊದಲ ಘಟ್ಟ:** ರಾಮಮನೋಹರ ಲೋಹಿಯ ಅವರ ಭಾಷಿಕ ಸಿದ್ಧಾಂತಗಳಿಂದ ಪ್ರೇರಿತರಾಗಿದ್ದ ಶಾಂತವೇರಿ ಗೋಪಾಲಗೌಡರು ತಮ್ಮದೇ ಆದ ರೀತಿಯಲ್ಲಿ ಕನ್ನಡಕ್ಕಾಗಿ ಚಿಂತನೆ ನಡೆಸಿದ್ದರು. ರಾಜಕಾರಣದಲ್ಲಿ ಇವರು ಪ್ರಯತ್ನ ನಡೆಸಿದ್ದಂತೆ ಇದೇ ದಿಕ್ಕಿನಲ್ಲಿ ಸಾಹಿತ್ಯಕವಾಗಿ ಕುವೆಂಪು ಮೊದಲಾದವರು ಚಿಂತನೆ ನಡೆಸಿದ್ದರು. ಪ್ರಗತಿಶೀಲ ವಲಯದಲ್ಲಿ ಅ.ನ.ಕೃ. ಆದಿಯಾಗಿ ಅನೇಕರು ಈ ಕುರಿತು ತಾತ್ತ್ವಿಕ ತಳಹದಿಯನ್ನು ರೂಪಿಸಲು ಪ್ರಯತ್ನಗಳನ್ನು ಮಾಡಿದ್ದು ಗಮನಾರ್ಹ. ಶಾಂತವೇರಿಯವರ ಶಿಷ್ಯರಾಗಿದ್ದ ಕೋಣಂದೂರು ಲಿಂಗಪ್ಪ ಬೆಂಗಳೂರಿಗೆ (ವಿದ್ಯಾರ್ಥಿ ದೆಸೆಯಲ್ಲಿ) ಬಂದಾಗ ತಮಿಳರಿಂದ ಅಪಮಾನಕ್ಕೆ ಒಳಗಾದರು. ಈ ಅಪಮಾನದ ಪರಿಣಾಮವಾಗಿ ಅವರು ಕರ್ನಾಟಕ (ಕನ್ನಡ) ಯುವಜನ ಸಭಾವನ್ನು ಹುಟ್ಟು ಹಾಕಿದರು. 1957 ರ ವೇಳೆಗೆ ಲೋಹಿಯ ಕರೆಯನ್ನು ಅನುಸರಿಸಿ ಅಂಗ್ರೇಜಿ (ಇಂಗ್ಲಿಷ್) ಹಟಾವೋ ಚಳವಳಿ ಆರಂಭಗೊಂಡಿತ್ತು. ಮೈಸೂರಿನಲ್ಲಿ ಕುವೆಂಪು ಅವರು ಸಹ ಈ ಕರೆಗೆ ಸ್ಪಂದಿಸಿದರು. ಇಂಗ್ಲಿಷ್ ಪ್ರಾಧ್ಯಾಪಕರ ರಾಷ್ಟ್ರೀಯ ಸಭೆಯೊಂದು ಮೈಸೂರಿನಲ್ಲಿ ನಡೆಯಿತು. ಇದಕ್ಕೆ ಪ್ರತಿಕ್ರಿಯಿಸಲು ಕೋಣಂದೂರು ಲಿಂಗಪ್ಪ, ಪೂರ್ಣಚಂದ್ರ ತೇಜಸ್ವಿ, ಕೆ.ಎಚ್.ಶ್ರೀನಿವಾಸ, ಕಡಿದಾಳ್ ಶಾಮಣ್ಣ ಮೊದಲಾದ ವಿದ್ಯಾರ್ಥಿಗಳಿಗೆ ಕುವೆಂಪು ಪ್ರೇರಣೆ ನೀಡಿದ್ದರು. ಈ ಪ್ರತಿಕ್ರಿಯೆಗೆ ಇಂಗ್ಲಿಷಿನಲ್ಲಿಯೇ ಪ್ರತಿಭಟನಾ ಕರಪತ್ರಗಳನ್ನು ರಚಿಸುವುದು ಅನಿವಾರ್ಯವಾಯಿತು. ಆಗ ಇಂಗ್ಲಿಷ್ ವಿರುದ್ಧ ಇಂಗ್ಲಿಷಿನಲ್ಲಿಯೇ ಕರಪತ್ರವೊಂದನ್ನು ಬರೆದುಕೊಟ್ಟವರು ಯು.ಆರ್. ಅನಂತಮೂರ್ತಿ. ಇಂಗ್ಲಿಷ್ ಪ್ರಾಧ್ಯಾಪಕರ ಸಭೆಯಲ್ಲಿ ಕನ್ನಡದ ಯುವಕರು ಈ ಕರಪತ್ರಗಳನ್ನು ಹಂಚುವುದರ ಮುಖೇನ ಕನ್ನಡ ಪ್ರಾಶಸ್ತ್ಯದ ಕಡೆಗೆ ಗಮನ ಸೆಳೆದಿದ್ದರು. ಇಂಥ ಚಟುವಟಿಕೆಗಳನ್ನು ಹುಟ್ಟುಹಾಕಿದ ಮೊತ್ತಮೊದಲ ಯುವ ಸಂಘಟನೆಯೇ ಕನ್ನಡ ಯುವ ಜನ ಸಭಾ. ಇದು ಮೈಸೂರಿನ ಇಂದಿನ ದಾಸ ಪ್ರಕಾಶ್ ಹೋಟೆಲ್ ಬಳಿ ತನ್ನ ಮೊದಲ ಸಭೆ ಸೇರಿ ಕನ್ನಡದ ಅಳಿವು ಉಳಿವಿನ ಬಗ್ಗೆ ಚಿಂತನೆ ನಡೆಸಿತ್ತು. ಇದು ಕನ್ನಡ ಚಳುವಳಿಯ ಚರಿತ್ರೆಯಲ್ಲಿಯೇ ಮೊದಲ ಸಂಘಟನೆಯಾಗಿತ್ತು.

ಬೆಂಗಳೂರಿನಲ್ಲಿ ಕನ್ನಡತನವನ್ನು ಮೂಡಿಸುವುದಕ್ಕೆ ಕನ್ನಡ ಯುವಜನ ಸಭಾದ ವೇದಿಕೆಯನ್ನು ಬಳಸಿಕೊಳ್ಳಲಾಯಿತು. ಬೆಂಗಳೂರಿನಲ್ಲಿ ಚಳವಳಿ ಹೂಡುವುದಕ್ಕೆ ಮೊದಲು ನಾಡಿನ ಇತರ ಜಿಲ್ಲೆ, ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ 120 ಕ್ಕೂ ಹೆಚ್ಚಿನ ಈ ಸಭೆಯ ಶಾಖೆಗಳನ್ನು ತೆರೆದು ಸಂಘಟಿಸಿದ್ದು ಗಮನಾರ್ಹ ಸಂಗತಿ. 1959 ರ ವೇಳೆಗೆ ಕನ್ನಡದ ಸ್ಥಿತಿಗತಿಗಳ ಸುಧಾರಣೆಗಾಗಿ ಕನ್ನಡಿಗರು ಸಂಘಟಿತರಾಗುವುದು ಅನಿವಾರ್ಯ ಎಂಬ ವಾತಾವರಣವನ್ನು ಮೂಡಿಸಲಾಗಿತ್ತು. ಇದಕ್ಕೆ ಸಾಹಿತಿ ಅ.ನ.ಕೃ. ಅವರ ಪ್ರಯತ್ನ, ಪ್ರವಾಸ ಕಾರ್ಯಕ್ರಮಗಳು ಹೆಚ್ಚಿನ ಹುರುಪನ್ನು ತಂದಿದ್ದವು. ಅ.ನ.ಕೃ. ಅವರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಂದು ಪರಿಷತ್ತು (ಕ.ಸಾ.ಪ.) ಈ ವೇಳೆಗಾಗಲೇ ಘೋಷಿಸಿತ್ತು. ಅ.ನ.ಕೃ. ಅವರು ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ (ಮಣಿಪಾಲ,1960), ಕನ್ನಡದ ಬಂಟರ ಆವಶ್ಯಕತೆಯನ್ನು ಒತ್ತಿ ಹೇಳಿದ್ದರು. ಸಮ್ಮೇಳನದಲ್ಲಿದ್ದ ಈ ಕನ್ನಡ ಯುವಜನ ಸಭೆಯ ಯುವಕರು ಕನ್ನಡ ಯುವಜನ (ಶಾಖಾ) ಸಭೆಯನ್ನು ವರಕವಿ ಬೇಂದ್ರೆ ಅವರಿಂದ ವಿಧ್ಯುಕ್ತವಾಗಿ ಉದ್ಘಾಟನೆ (1960 ಡಿಸೆಂಬರ್ 28) ಮಾಡಿಸಿದ್ದು ಒಂದು ದಾಖಲೆ. ಲಿಂಗಪ್ಪನವರು ಸಭಾದ ಸಂಚಾಲಕರಾಗಿ ನಾಡಿನ ವಿವಿಧ ಕಡೆಗಳಲ್ಲಿ ಅ.ನ.ಕೃ. ಅವರಿಂದ ಭಾಷಣ ಮಾಡಿಸಿ ಜಾಗೃತಿ ಮೂಡಿಸಿದರು. ಮುಂದೆ ಬೆಂಗಳೂರಿನಲ್ಲಿ ಸಭೆ ಸೇರಿ ಎಂ.ವಿ. ಸುಬ್ಬರಾಯರ ಸಾಹಿತ್ಯ ಕುಟೀರದ ಅಡಿಯಲ್ಲಿ ಕನ್ನಡ ಕೆಲಸದ ರೂಪರೇಷೆಗಳನ್ನು ಸಿದ್ಧಪಡಿಸಲಾಯಿತು. ಇದರಲ್ಲಿ ಬಹುಪಾಲು ಹಿರಿಯ ಸಾಹಿತಿ, ಕಲಾವಿದರು ಭಾಗವಹಿಸಿದ್ದರು. ಸಭಾದವರು ಹಿರಿಯರ ಸಹಕಾರ ಪಡೆದು ಆಲೂರು ವೆಂಕಟರಾಯರ ಕರೆಗೆ ಓಗೊಟ್ಟು ನವೆಂಬರ್ ತಿಂಗಳಲ್ಲಿ ರಾಜ್ಯೋತ್ಸವವನ್ನು (1961) ಆಚರಿಸಿದ್ದು ಗಮನಾರ್ಹ. ಅಲ್ಲದೆ ಬೆಂಗಳೂರಿನಲ್ಲಿ ಕನ್ನಡಿಗರನ್ನು ಸಂಘಟಿಸಿ ಪ್ರತಿಕ್ರಿಯಿಸುವಂತೆ ಮಾಡಲು ಸಭಾದ ಯುವಕರು ಕನ್ನಡ ದಿನವನ್ನು ಆಚರಿಸಲು ಕರೆಕೊಟ್ಟರು. ಅದರಂತೆ 1961 ನವೆಂಬರ್ 23ರಂದು ನಾಡು ನುಡಿಗಳ ಬಗ್ಗೆ ಅರಿವು ಮೂಡಿಸಲಾಯಿತು. ಇದಾದ ಅನಂತರ ದಾವಣಗೆರೆಯಲ್ಲಿ ಬೃಹತ್ ಸಮಾವೇಶವೊಂದನ್ನು ನಡೆಸಲು ಸಿದ್ಧತೆಗಳನ್ನು ಮಾಡಲಾಯಿತು. ಬೆಂಗಳೂರಿನಲ್ಲಿ ಸಭಾದ ಮೊದಲ ಬೃಹತ್ ಅಧಿವೇಶನ ನಡೆಯಿತು. ಕನ್ನಡ ಭುವನೇಶ್ವರಿ ಬಾವುಟವನ್ನು ಹಾರಿಸುವುದರೊಂದಿಗೆ (1962 ಡಿಸೆಂಬರ್ 4) ಉದ್ಘಾಟನೆಗೊಂಡ ಈ ಬೃಹತ್ ಅಧಿವೇಶನ ಕನ್ನಡ ಚಳವಳಿಯ ಚರಿತ್ರೆಯಲ್ಲಿ ಮುಖ್ಯವಾದುದು. ಇಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕಗಳಿಗೆ ಸಂಬಂಧಿಸಿದಂತೆ 15 ನಿರ್ಣಯಗಳನ್ನು ಮಂಡಿಸಿ ಸ್ವೀಕರಿಸಲಾಯಿತು. ನಾಡಿನ ಗಡಿಗಳು, ರೈಲ್ವೆ, ಪ್ರಶಸ್ತಿ, ಕನ್ನಡ ಬೆರಳಚ್ಚು ಯಂತ್ರ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮಾಧ್ಯಮ, ಕನ್ನಡ ಕಲಾವಿದರಿಗೆ ಆದ್ಯತೆ, ಕನ್ನಡ ಚಲನ ಚಿತ್ರಗಳಿಗೆ ಪ್ರೋತ್ಸಾಹ, ಆರ್ಥಿಕ ಅಭಿವೃದ್ಧಿ ಮೊದಲಾದ ಎಲ್ಲ ವಿಚಾರಗಳೂ ನಿರ್ಣಯಗಳಲ್ಲಿ ಸೇರಿದ್ದವು. ಈ ನಿರ್ಣಯಗಳನ್ನು ನಾಡಿನ ಎಲ್ಲ ಕನ್ನಡ ಪರವಾದ ಸಂಘಟನೆಗಳಿಗೂ ಕಳುಹಿಸಿಕೊಡಲಾಯಿತು. ಆದರೆ ಬೆಂಗಳೂರಿನ ಚಾಮರಾಜ ಪೇಟೆಯ ರಾಮಸೇವಾ ಮಂಡಲಿಯವರು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕನ್ನಡ ಕಲಾವಿದರನ್ನು ಕರೆಸದೆ ನಿರ್ಣಯಗಳನ್ನು ಮುರಿದರು. ಮದರಾಸಿನಿಂದ ಎಂ.ಎಸ್. ಸುಬ್ಬುಲಕ್ಷ್ಮಿಯವರನ್ನು ಕರೆಸಿ ಸಂಗೀತ ಕಛೇರಿಯನ್ನು ನಡೆಸಿದ್ದು ಕನ್ನಡ ಕಾರ್ಯಕರ್ತರ ಪ್ರತಿಭಟನೆಗೆ ಗುರಿಯಾಗುವಂತೆ ಮಾಡಿತು. ಶಾಂತ ರೀತಿಯಲ್ಲಿ ಕನ್ನಡದ ಕಳಕಳಿಯನ್ನು ಪ್ರದರ್ಶಿಸಲು ಹಾತೊರೆದಿದ್ದ ಕಾರ್ಯಕರ್ತರನ್ನು ಕಿಡಿಗೇಡಿಗಳು ಕೆಣಕಿದರು. ಪರಿಸ್ಥಿತಿ ಹಿಂಸಾತ್ಮಕ ರೂಪ ಪಡೆದು, ಪೊಲೀಸರಿಂದ ಲಾಠಿ ಪ್ರಹಾರ ಆಯಿತು. ತಮಿಳು ಪತ್ರಿಕೆಗಳು ಇದನ್ನು ಭಾಷಿಕ ದ್ವೇಷವೆಂದು ತಿರುಚಿ ಬರೆದವು. ಕನ್ನಡಿಗರಿಗೆ ಸಂಕುಚಿತರೆಂಬ ಪಟ್ಟ ಕಟ್ಟಲು ಪ್ರಯತ್ನಿಸಿದ ಈ ಘಟನೆಯನ್ನು ಭಿನ್ನ ಸ್ವರೂಪದಲ್ಲಿ ಗ್ರಹಿಸಲು ಎಡೆಮಾಡಿಕೊಟ್ಟಿತು.

**ಕನ್ನಡ ಜಾಗೃತ ಪರಿಷತ್ ಹಾಗೂ ಸಂಯುಕ್ತ ರಂಗ:** ಬೆಂಗಳೂರಿನಲ್ಲಿ ಅ.ನ.ಕೃ., ಮ.ರಾಮಮೂರ್ತಿ ಮೊದಲಾದ ಚಳವಳಿ ನಾಯಕರು ಕನ್ನಡಪರವಾದ ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳಲು ಕರೆ ನೀಡಿದ್ದರು. ತಮಿಳರ ಸಂಘಟನೆಗಳು ವಿಪರೀತವಾಗತೊಡಗಿದ್ದವು. ಅದರಲ್ಲೂ ಡಿ.ಎಂಕೆ. (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷದವರ ಕಪ್ಪು ಮತ್ತು ಕೆಂಪು ಬಣ್ಣದ ಬಾವುಟಗಳ ಹಾರಾಟ ಹೆಚ್ಚಾಯಿತು. ಕನ್ನಡಿಗರಿಗೆ ನಿರ್ದಿಷ್ಟ ಕನ್ನಡ ಬಾವುಟ ಇರಲಿಲ್ಲ. ಭುವನೇಶ್ವರಿ, ಕರ್ನಾಟಕ ಭೂಪಟ, ಗಂಡಭೇರುಂಡ ಚಿತ್ರಗಳಿರುವ ಬಾವುಟಗಳನ್ನೇ ಬಳಸುತ್ತಿದ್ದರು. ಹೀಗಾಗಿ ಕನ್ನಡದ ಈ ಸಂಘಟನೆಗಳು ಬಾವುಟದ ಕೊರತೆಯನ್ನು ಮನಗಂಡು ಕ್ರಿಯಾಶೀಲವಾಗಿದ್ದವು. ಕನ್ನಡಿಗರಲ್ಲಿ, ಸಂಘ–ಸಂಸ್ಥೆಗಳಲ್ಲಿ, ಅಭಿಮಾನವನ್ನು ಮೂಡಿಸಲು ಕನ್ನಡ ಜಾಗೃತ ಪರಿಷತ್ ಎಂಬ ಸಂಘಟನೆ ಹುಟ್ಟಿಕೊಂಡಿತು. ಕನ್ನಡದ ಅಭಿಮಾನಕ್ಕಾಗಿ, ಚಳವಳಿಯ ರೂಪರೇಷೆಗಳಿಗಾಗಿ ಈ ಸಂಘಟನೆ ಹೊರಡಿಸಿದ ಪತ್ರಿಕೆಯೇ ಕನ್ನಡ ಜಾಗೃತ ಪತ್ರ. ಇದು ತ್ರೈಮಾಸಿಕವಾಗಿತ್ತು. ಕೆಲವೇ ದಿನಗಳಲ್ಲಿ ಇದೇ ಆಶಯಕ್ಕಾಗಿ ಧ್ರುವ ಎಂಬ ಮಾಸಿಕ ಹೊರಬಂತು. ಎಂ.ನಾಗರಾಜ್ ಅವರು ಇವೆರಡರ ಸಂಪಾದಕರಾಗಿದ್ದರು. ಅವರು ಪತ್ರಿಕೆ ನಡೆಸಿ, ನಷ್ಟ ಅನುಭವಿಸಿ ಆತ್ಮಹತ್ಯೆ ಮಾಡಿಕೊಂಡರು. ಈ ದುರಂತ ಘಟನೆ ಕನ್ನಡ ಯುವಜನ ಸಭಾದವರಿಗೆ ಮತ್ತಷ್ಟು ಕೆಚ್ಚು, ಹುಮ್ಮಸ್ಸುಗಳನ್ನು ತುಂಬಿತು. ಸಭಾದವರು ಚಳುವಳಿಗಾಗಿಯೇ ಕನ್ನಡ ಯುವಜನ ಎಂಬ ಪತ್ರಿಕೆಯನ್ನು ಹೊರಡಿಸ ಲಾರಂಭಿಸಿದರು. ಇದರ ಸಂಪಾದಕರಾಗಿದ್ದವರು ಚಳುವಳಿಗಾರ ಮ. ರಾಮಮೂರ್ತಿ, ಅ.ನ.ಕೃ. ಮತ್ತು ರಾಮಮೂರ್ತಿ ಅವರು ಜನ ಕರೆದೆಡೆಗೆ ಹೋಗಿ ಕನ್ನಡಿಗರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಸಲಹೆ ನೀಡಿ ಸಂಘಟಿಸತೊಡಗಿದರು. ಇದರ ಪರಿಣಾಮವಾಗಿ ಹುಟ್ಟಿಕೊಂಡಿದ್ದೇ ಕರ್ನಾಟಕ ಸಂಯುಕ್ತ ರಂಗ. ಕನ್ನಡದ ಎಲ್ಲ ಸಂಸ್ಥೆಗಳನ್ನು ಒಂದೇ ವೇದಿಕೆಯಡಿಗೆ ತರುವುದು ಇದರ ಆಶಯವಾಗಿತ್ತು. 1962ರಲ್ಲಿ ಅಸ್ತಿತ್ವಕ್ಕೆ ಬಂದ ಈ ರಂಗದ ಅಧ್ಯಕ್ಷರು ಅ.ನ.ಕೃ., ಕಾರ್ಯದರ್ಶಿ ಮ. ರಾಮಮೂರ್ತಿ. ಇವರೊಂದಿಗೆ ತ.ರಾ.ಸು., ಅ.ನ.ಸುಬ್ಬರಾವ್, ಬೀಚಿ, ವೀರಕೇಸರಿ ಸೀತಾರಾಮಶಾಸ್ತ್ರೀ, ನಾ.ಕೃ.ಸತ್ಯನಾರಾಯಣ, ಭಾರತೀಂದ್ರ ಸ್ವಾಮಿ, ಸುಬ್ಬರಾವ್ ಮೊದಲಾದವರು ಸೇರಿಕೊಂಡಿದ್ದರು. ಸಂಯುಕ್ತ ರಂಗದಿಂದಾಗಿ ಪ್ರಧಾನ ಧಾರೆಗೆ ಸಭೆಯು ಬರಲಾಗದಿದ್ದರೂ ತನ್ನದೇ ಆದ ಮಿತಿಗಳ ನಡುವೆಯೇ ಕನ್ನಡದ ಚಟುವಟಿಕೆಗಳನ್ನು ಚಾಲ್ತಿಯಲ್ಲಿ ಇಟ್ಟಿತ್ತು.

ಕನ್ನಡ ನಾಡು ಏಕೀಕೃತವಾಗಿ 1963 ರ ವೇಳೆಗೆ ಏಳು ವರುಷಗಳಾಗಿದ್ದವು. ಆದರೆ ಕನ್ನಡಿಗರ ಆಶಯಗಳು ಈಡೇರಿರಲಿಲ್ಲ. ಈ ಕುರಿತು ಜಾಗೃತಿ ಮೂಡಿಸಲು ಆ ವರ್ಷದ ನವೆಂಬರ್ ಒಂದರಂದು ಸ್ವಾತಂತ್ರ್ಯೋತ್ಸವದ ರೀತಿಯಲ್ಲಿ ರಾಜ್ಯೋತ್ಸವವನ್ನು ಆಚರಿಸಲು ಸಂಯುಕ್ತ ರಂಗ ಯೋಜಿಸಿತು. ಅದರಂತೆ 1963 ನವೆಂಬರ್ 1ನ್ನು ರಾಜ್ಯೋತ್ಸವ ದಿನವನ್ನಾಗಿ ಅದ್ದೂರಿಯಾಗಿ ಆಚರಿಸಲಾಯಿತು. ನಾಡಿನ ಎಲ್ಲ ಕನ್ನಡಪರ ಸಂಘಟನೆಗಳನ್ನೂ ಬೆಂಗಳೂರಿನ ಧರ್ಮಾಂಬುಧಿ ಕೆರೆಯ (ಸುಭಾಶ್ ನಗರ, ಈಗಿನ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ನಿಲ್ದಾಣವಿರುವ ಪ್ರದೇಶ) ಮೈದಾನದಲ್ಲಿ ಸೇರುವಂತೆ ಮಾಡಿತು. ಕನ್ನಡ ಚಳವಳಿಯ ಚರಿತ್ರೆಯಲ್ಲಿ ಇದೇ ಪ್ರಥಮ ಬಾರಿ ರಾಜ್ಯೋತ್ಸವ ನಡೆಯಿತು. ಅನಂತರ ಪ್ರತಿ ವರ್ಷವೂ ಈ ಆಚರಣೆ ಜಾರಿಗೆ ಬಂತು. ಕನ್ನಡಕ್ಕಾಗಿ ದುಡಿದ ರಾಮಮೂರ್ತಿ ಅವರ ಉತ್ಸಾಹ, ಅಭಿಮಾನಗಳನ್ನು ಕಂಡು ಅವರನ್ನು ಕನ್ನಡ ಸೇನಾನಿ ಎಂದು ಕರೆಯಲಾಯಿತು. ಏಕೆಂದರೆ ಕನ್ನಡ ಕಾರ್ಯಕರ್ತರ ಮೊಕದ್ದಮೆಗಳಲ್ಲಿ ಇವರೇ ಜಾಮೀನುದಾರರು. ಕನ್ನಡದ ಕಾರಣಕ್ಕಾಗಿ ಇವರು ಅನೇಕ ಮೊಕದ್ದಮೆಗಳನ್ನು ಎದುರಿಸಿದರು.

**ಚಲನಚಿತ್ರ ಮತ್ತು ಕನ್ನಡ ಚಳವಳಿ:** ಇದೇ ವೇಳೆಗೆ ಕನ್ನಡ ಚಲನಚಿತ್ರ ರಂಗದಲ್ಲಿಯೂ ಕನ್ನಡತನ ಬಡವಾಗಿತ್ತು. ಕನ್ನಡ ಕಲಾವಿದರಿಗೆ ನಿರ್ಮಾಪಕ ನಿರ್ದೇಶಕರಿಗೆ ಕನ್ನಡ ನಾಡಿನಲ್ಲಿ ಪ್ರಾತಿನಿಧ್ಯವಿರಲಿಲ್ಲ. ಹೆಚ್ಚಾಗಿ ಪರಭಾಷೆಯ ಚಿತ್ರಗಳು ಓಡುತ್ತಿದ್ದವು. ಕನ್ನಡ ಚಿತ್ರಗಳಿಗೆ ಎರಡು ಅಥವಾ ಮೂರನೆಯ ಸ್ಥಾನ ಮೀಸಲಾಗಿತ್ತು. ಕನ್ನಡದ ಕಲಾವಿದರಲ್ಲಿ ಕೆಲವರು ಅನ್ಯಭಾಷೆಗಳಲ್ಲಿ ನೆಲೆನಿಂತು ಅಭಿಮಾನಶೂನ್ಯರಾಗಿದ್ದರು. ಕನ್ನಡಿಗರಿಗೆ ಚಿತ್ರಮಂದಿರ, ಸ್ಟೂಡಿಯೋ ಸಮಸ್ಯೆಗಳ ಜೊತೆಗೆ ಡಬ್ಬಿಂಗ್ ಹಾವಳಿಯೂ ಆವರಿಸಿಕೊಂಡಿತ್ತು. ಬೇರೆ ಭಾಷೆಗಳಲ್ಲಿಯ ಚಿತ್ರಗಳು ಕನ್ನಡ ಭಾಷೆಗೆ ಡಬ್ ಆಗಿ ಕನ್ನಡತನವಿಲ್ಲದಂತೆ ಮಾಡಿದ್ದವು. ಕರ್ನಾಟಕ ಸರ್ಕಾರದಿಂದಲೂ ಕನ್ನಡ ಚಲನಚಿತ್ರೋದ್ಯಮಕ್ಕೆ ಆದ್ಯತೆ ದೊರೆತಿರಲಿಲ್ಲ. ಇಂಥ ಸಮಸ್ಯೆಗಳನ್ನು ಕನ್ನಡ ಚಳುವಳಿಗಾರರು ಕೈಗೆತ್ತಿಕೊಂಡರು. ಮ. ರಾಮಮೂರ್ತಿ, ಅ.ನ.ಕೃ. ಮೊದಲಾದವರು ಪ್ರತಿಭಟನೆಯ ಹಾದಿ ಹಿಡಿದರು. ಈ ಸಂದರ್ಭದಲ್ಲಿ ವಾಟಾಳ್ ನಾಗರಾಜರಂಥ ಯುವಕರು ಚಳವಳಿಗೆ ಧುಮುಕಿದರು. ಕನ್ನಡದ ಮೇರು ನಟ ರಾಜಕುಮಾರ್ ಅವರನ್ನೂ ಒಳಗೊಂಡಂತೆ ಜಿ.ವಿ.ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಸೇರಿ ಕನ್ನಡ ಚಲನಚಿತ್ರ ಕಲಾವಿದರ ಸಂಘವನ್ನು ರಚಿಸಲಾಯಿತು. ಈ ಸಂಘಟನೆಯ ಅಡಿಯಲ್ಲಿ ಅನೇಕ ಕನ್ನಡ ಚಿತ್ರಗಳನ್ನು ನಿರ್ಮಿಸುವ ಪ್ರಯತ್ನಗಳು ನಡೆದವು. ಇಂಥ ಚಿತ್ರಗಳನ್ನು ಸಿನಿಮಾ ಮಂದಿರದ ಮಾಲೀಕರು ಕಡ್ಡಾಯವಾಗಿ ಪ್ರದರ್ಶಿಸಲು ಒತ್ತಾಯಿಸಲಾಯಿತು. ಖಾಸಗಿ ಉದ್ಯಮಗಳ, ಸಂಘಸಂಸ್ಥೆಗಳ ಯುವಕರೂ ಈ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹೀಗಾಗಿ ಕನ್ನಡದ ನಿರ್ಮಾಪಕರುಗಳಿಗೆ, ಕನ್ನಡ ಚಿತ್ರಗಳಿಗೆ ಭರವಸೆಯ ವಾತಾವರಣ ಮೂಡುವಂತಾಯಿತು.

ಮದರಾಸಿನಲ್ಲಿ ಚಲನಚಿತ್ರದ ಉದ್ಯಮ ಪ್ರಗತಿಪರವಾಗಿತ್ತು. ಇದಕ್ಕೆ ಅಲ್ಲಿಯ ಕಲಾವಿದರ, ರಾಜಕಾರಣಿಗಳ ಸ್ವಭಾಷಿಕ ಪ್ರೇಮವೇ ಕಾರಣವಾಗಿತ್ತು. ತಮಿಳು ಚಿತ್ರರಂಗಕ್ಕೆ (ಎಂ.ಜಿ.ರಾಮಚಂದ್ರನ್), ಎಂ.ಕರುಣಾನಿಧಿ ಅವರು ನೀಡಿದ ಪ್ರೋತ್ಸಾಹ ಬಹು ದೊಡ್ಡದು. ಬೆಂಗಳೂರಿನ ಡಿ.ಎಂಕೆ. ಪಕ್ಷದ ಕಾರ್ಯಕರ್ತರು ಇತರೆ ತಮಿಳು ಸಂಘಟನೆಗಳೊಂದಿಗೆ ಸೇರಿಕೊಂಡು ತಮಿಳು ಚಲನಚಿತ್ರಗಳಿಗೆ ಅತಿಯಾಗಿ ಪ್ರೋತ್ಸಾಹಿಸುತ್ತಿದ್ದರು. 1964 ರ ವೇಳೆಗೆ ಎಂ.ಜಿ.ಆರ್. ನಟಿಸುತ್ತಿದ್ದ ಚಲನಚಿತ್ರಗಳು ಬೆಂಗಳೂರಿನ ತಮಿಳರನ್ನು ಅತಿಯಾಗಿ ವರ್ತಿಸುವಂತೆ ಮಾಡಿದ್ದವು. ಇದರ ಪರಿಣಾಮವಾಗಿ ಕಾಂಚಿ ತಲೈವನ್ ವಿರುದ್ಧ ಕನ್ನಡ ಚಳವಳಿ ತೀವ್ರ ಸ್ವರೂಪ ಪಡೆದುಕೊಂಡಿತು.

ಕಾಂಚಿ ತಲೈವನ್ ಚಲನಚಿತ್ರ (1964) ಕಂಚಿಯ ಪಲ್ಲವರ ದೊರೆ 1ನೆಯ ನರಸಿಂಹವರ್ಮ ಬಾದಾಮಿ ಚಳುಕ್ಯ ದೊರೆ ಇಮ್ಮಡಿ ಪುಲಕೇಶಿಯನ್ನು ಸೋಲಿಸಿದ ಕಥೆಯನ್ನೊಳಗೊಂಡಿದೆ. ಕನ್ನಡಿಗರನ್ನು ಅವಮಾನಿಸಲೋ ಎಂಬಂತೆ ತಮಿಳು ದೊರೆ ಕರ್ನಾಟಕದ ಬಾವುಟವನ್ನು ಕಾಲಿನಲ್ಲಿ ತುಳಿಯುವ ದೃಶ್ಯಗಳನ್ನು ಆ ಚಿತ್ರದಲ್ಲಿ ಚಿತ್ರೀಕರಿಸಲಾಗಿತ್ತು. ಚರಿತ್ರೆಯ ಸೂಕ್ಷ್ಮ ಸಂಗತಿಗಳನ್ನು ಭಾಷಿಕ ನೆಲೆಯಲ್ಲಿ ವೈಯಕ್ತಿಕವಾಗಿ ತೆಗೆದುಕೊಂಡ ಸಂದರ್ಭ ಇದಾಗಿತ್ತು. ತಮಿಳರ ಈ ವರ್ತನೆ ಕನ್ನಡಿಗರನ್ನು ಕೆರಳಿಸಿತು. ಚಳವಳಿಗಾರರು, ಇತಿಹಾಸತಜ್ಞರು, ವಿದ್ವಾಂಸರು, ಕನ್ನಡಾಭಿಮಾನಿಗಳು ಚಲನಚಿತ್ರದ ಕೆಲವು ಭಾಗಗಳನ್ನು ತೆಗೆದುಹಾಕಲು ಒತ್ತಾಯಿಸಿ ಪ್ರತಿಭಟಿಸಿದರು. ಆದರೂ ಆಕ್ಷೇಪಾರ್ಹ ಭಾಗಗಳನ್ನು ತೆಗೆಯದೆ ಚಿತ್ರವನ್ನು ಪ್ರದರ್ಶಿಸತೊಡಗಿದ್ದು ಕನ್ನಡಿಗರ ಸ್ವಾಭಿಮಾನವನ್ನು ಕೆರಳಿಸಿತು. ಈ ಘಟನೆ ಹಿಂಸಾರೂಪಕ್ಕೆ ತಿರುಗಿತು. ಈ ಘಟನೆಯೇ ಅ.ನ.ಕೃ ಹಾಗೂ ರಾಮಮೂರ್ತಿಯವರಲ್ಲಿ ಭಿನ್ನಾಭಿಪ್ರಾಯಗಳಿಗೆ ಕಾರಣವಾಯಿತು. ಭಾವೋದ್ವೇಗ ಬಿಟ್ಟು ಚರಿತ್ರೆಯನ್ನು ನೋಡಬೇಕೆಂಬ ವಿಚಾರ ಅ.ನ.ಕೃ. ಅವರದು. ಭಾವನೆಯೂ ಚರಿತ್ರೆಯ ಭಾಗ ಎಂಬುದು ರಾಮಮೂರ್ತಿ ಯವರ ನಿಲುವು. ಇಂಥ ತಾತ್ವಿಕ ಭಿನ್ನಾಭಿಪ್ರಾಯದಿಂದ ಕಡೆಗೆ ಅ.ನ.ಕೃ. ಕನ್ನಡ ಚಳುವಳಿಯಿಂದ ಹಿಂದಕ್ಕೆ ಸರಿದರು. ಆದರೆ ನಾಡಿನ ಬೇರೆಡೆಗಳಲ್ಲೂ ಈ ಚಲನಚಿತ್ರ ಪ್ರದರ್ಶಿತವಾಗದಂತೆ ಮ.ರಾಮಮೂರ್ತಿ ಚಳವಳಿ ಹೂಡಿದರು. ಭದ್ರಾವತಿ, ಹಾಸನ ಮೊದಲಾದೆಡೆಗಳಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಚಳವಳಿಗಾರರ ಮೇಲೆ ಪೊಲೀಸರು ಮೊಕದ್ದಮೆಗಳನ್ನು ದಾಖಲು ಮಾಡಿದ್ದೂ ಇದೆ. ಇವೆಲ್ಲ ಕಾರಣಗಳಿಂದ ತಮಿಳರ ಹಾಗೂ ಕನ್ನಡಿಗರ ಮಧ್ಯೆ ಭಾಷಿಕ ವೈಷಮ್ಯ ವೃದ್ಧಿಸಿತು. ಇದರಿಂದಾಗಿ ಚಳವಳಿ ಹಾಗೂ ಪ್ರತಿಭಟನೆಗಳ ಮೂಲಕ ಕನ್ನಡ ಚಲನಚಿತ್ರ ರಂಗ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬರುವಂತಾಯಿತು.

**ಮ. ರಾಮಮೂರ್ತಿ ಹಾಗೂ ಕನ್ನಡ ಚಳವಳಿ:** ಅ.ನ.ಕೃ. ಅವರು ದೂರ ಸರಿದರೂ ಮ.ರಾಮಮೂರ್ತಿ ಅವರು ಏಕಾಂಗಿಯಾಗಿ ಸಂಯುಕ್ತ ರಂಗವನ್ನು ಮುನ್ನಡೆಸಿದರು. ತಮಿಳರು ಡಿ.ಎಂ.ಕೆ. ಪಕ್ಷದವರ ಸಹಕಾರದಿಂದ ತಾವು ವಾಸಿಸುವ ಕಡೆಗಳಲ್ಲಿ ತಮಿಳು ಬಾವುಟವನ್ನು ಹಾರಾಡಿಸಿದರು. ಈ ಸಂಗತಿ ಕನ್ನಡ ಕಾರ್ಯಕರ್ತರನ್ನು ಪ್ರಚೋದಿಸಿತು. ಕನ್ನಡದ ಪ್ರದೇಶಗಳಲ್ಲಿ ಕನ್ನಡದ ಬಾವುಟಕ್ಕೆ ಪ್ರಾಶಸ್ತ್ಯವೆಂದು ರಾಮಮೂರ್ತಿ ಚಳವಳಿ ಹೂಡಿದರು. ಇದರ ಪರಿಣಾಮವಾಗಿ ಹಿಂಸಾಕೃತ್ಯಗಳೂ ಜರುಗಿದವು. ತಮಿಳರ ಸಂಖ್ಯೆ ಹೆಚ್ಚಿದ್ದ ಕಡೆಗಳಲ್ಲಿ ಅಲ್ಪಸಂಖ್ಯಾತ ಕನ್ನಡಿಗರ ಮೇಲೆ ದೌರ್ಜನ್ಯಗಳು ನಡೆದವು. ಬೆಂಗಳೂರಿನಲ್ಲಿ ತಮಿಳರೇ ಹೆಚ್ಚಾಗಿದ್ದ ಶ್ರೀರಾಮಪುರ, ಜೋಗುಪಾಳ್ಯ, ನಾಗಪ್ಪ, ಬ್ಲಾಕ್ ಕಾಕ್ಸ್‌ಟೌನ್, ಫ್ರೇಜರ್‌ಟೌನ್, ದಂಡು ಪ್ರದೇಶ ಮೊದಲಾದ ಕಡೆಗಳಲ್ಲಿ ಕನ್ನಡ ಚಳುವಳಿ ಹಾಗೂ ಕನ್ನಡದ ಸಂಘಟನೆ ತೀವ್ರಗೊಂಡಿತು. ತಮಿಳರೇ ಹೆಚ್ಚಾಗಿದ್ದ ಕೆಲವು ಕಾರ್ಖಾನೆಗಳಲ್ಲಿ ಕನ್ನಡ ಕಾರ್ಮಿಕರು ಹಿಂಸೆ ಹಾಗೂ ಹಲ್ಲೆಗೆ ಒಳಗಾದರು. ಇದಕ್ಕೆ ಕೆಲವೊಮ್ಮೆ ಡಿ.ಎಂ.ಕೆ. ಯಂಥ ರಾಜಕೀಯ ಪಕ್ಷದ ಬೆಂಬಲವೂ ಕೆಲವು ತಮಿಳು ಪರ ಪತ್ರಿಕೆಗಳ ಬರೆವಣಿಗೆಯ ಬೆಂಬಲವೂ ಇತ್ತು.

ಸ್ಥಳೀಯ ಸಂಸ್ಥೆಗಳಿಗೆ ನಡೆಯುತ್ತಿದ್ದ ಚುನಾವಣೆಗಳಿಗೆ ತಮಿಳರೂ ಸ್ಪರ್ಧಿಸುವ ಮಟ್ಟಿಗೆ ಬಲಾಢ್ಯರಾದರು. ಹಿರಿಯೂರಿನಲ್ಲಿ ತಮಿಳರೇ ಹೆಚ್ಚು ಸಂಖ್ಯೆಯಲ್ಲಿದ್ದರು. ಇವರು ತಮ್ಮ ಕ್ಷೇತ್ರದಲ್ಲಿ ಡಿ.ಎಂ.ಕೆ. ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವುದರೊಂದಿಗೆ ಪ್ರಾತಿನಿಧ್ಯ ಪಡೆದಿದ್ದು ಗಮನಾರ್ಹ ಸಂಗತಿ. ಹಿರಿಯೂರಿನ ವೃತ್ತದಲ್ಲಿ ಡಿ.ಎಂ.ಕೆ. ಪಕ್ಷದ ಬಾವುಟವನ್ನೂ ಪ್ರದರ್ಶಿಸಲಾಗಿತ್ತು. ಇದಕ್ಕೆ ಸ್ಥಳೀಯ ಕನ್ನಡಿಗರು ಪ್ರತಿಭಟಿಸಿದ್ದು ಪ್ರಯೋಜನಕ್ಕೆ ಬರಲಿಲ್ಲ. ಕೊನೆಗೆ ರಾಮಮೂರ್ತಿ ಅವರು ತಮ್ಮ ಕಾರ್ಯಕರ್ತರೊಂದಿಗೆ ಖುದ್ದಾಗಿ ಬಂದು ಡಿ.ಎಂ.ಕೆ. ಬಾವುಟವನ್ನು ತೆಗೆಸಿ ಕನ್ನಡಿಗರನ್ನು ಹುರಿದುಂಬಿಸಿದರು. ಈ ಎಲ್ಲ ಪ್ರಯತ್ನಗಳೂ ಕನ್ನಡಿಗರನ್ನು ಸಂಘಟಿಸುವುದರ ಜೊತೆಗೆ ಕನ್ನಡ ಬಾವುಟದ ಅನಿವಾರ್ಯತೆ ರಾಜಕಾರಣಿಗಳ ನಿರಭಿಮಾನವನ್ನು ಸಾಬೀತುಪಡಿಸಿದ್ದವು. ಇದರ ಪರಿಣಾಮವಾಗಿ ಚಳವಳಿಯಲ್ಲಿ ಜಾತೀಯತೆ, ರಾಜಕಾರಣದ ಸ್ವಾರ್ಥ ಚಿಂತನೆಗಳು ನುಸುಳುವಂತೆ ಆಯಿತು. ಕನ್ನಡೇತರ ಮತಗಳನ್ನು ತಮ್ಮ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದ ಕೆಲವು ರಾಷ್ಟ್ರೀಯ ಪಕ್ಷಗಳು ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಲು ಹಿಂಜರಿದವು. ಹೀಗಾಗಿ ಕನ್ನಡಿಗರ ಆಶೋತ್ತರಗಳಿಗಾಗಿ ಪ್ರಾದೇಶಿಕವಾದ ರಾಜಕೀಯ ಪಕ್ಷವೊಂದರ ಅಗತ್ಯತೆ ಕಾರ್ಯಕರ್ತರನ್ನು ಕಾಡಿತು. ಈ ನಿಟ್ಟಿನಲ್ಲಿ ಆಲೋಚಿಸುವುದಕ್ಕೆ ಮೊದಲೇ ಕನ್ನಡ ಚಳವಳಿಯಲ್ಲಿ ಜಾತೀಯವಾದ ತೋರಿತು. ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರೆಂಬ ಎರಡು ಗುಂಪುಗಳು ಹುಟ್ಟಿಕೊಂಡವು. ಸಂಯುಕ್ತ

ರಂಗದ ಚಳವಳಿ ನಾಯಕರನ್ನು (ರಾಮಮೂರ್ತಿ ಅವರನ್ನೂ ಒಳಗೊಂಡಂತೆ) ಬ್ರಾಹ್ಮಣರ ಗುಂಪಿಗೆ ಸೇರಿಸಲಾಗಿತ್ತು. ಚಳವಳಿಯನ್ನು ಭಿನ್ನ ರೀತಿಯಾಗಿ ನಡೆಸುವಲ್ಲಿ, ಉತ್ಸಾಹ ತೋರಿದ್ದ ವಾಟಾಳ್ ನಾಗರಾಜರ ನೇತೃತ್ವದ ಗುಂಪು ಬ್ರಾಹ್ಮಣೇತರರೆಂದು ಗುರುತಿಸಿಕೊಳ್ಳುವಂತೆ ಆಯಿತು. ಅ.ಸಂಜೀವಪ್ಪ, ಸಾ.ಕೃ. ಸಂಪಂಗಿ, ಜಿ.ನಾರಾಯಣ ಕುಮಾರ್ ಮೊದಲಾದವರು ವಾಟಾಳರೊಂದಿಗೆ ಸೇರಿದರು. ಸೈದ್ಧಾಂತಿಕ ಒಡಕಿನಿಂದಾಗಿ ವಾಟಾಳ್ ನಾಗರಾಜರ ನೇತೃತ್ವದ ಕಾರ್ಯಕರ್ತರು ಸಂಯುಕ್ತ ರಂಗದಿಂದ ಹೊರಬಂದಿದ್ದರು. ವಾಟಾಳರು ಆಟೋ ಚಾಲಕರು, ಹೋಟೇಲು ಕಾರ್ಮಿಕರು, ಸಾರಿಗೆ ಸಿಬ್ಬಂದಿ ಮೊದಲಾದವರು ಕನ್ನಡ ಚಳವಳಿಯನ್ನು ತೀವ್ರ ಸ್ವರೂಪದಲ್ಲಿ ಗುರುತಿಕೊಳ್ಳುವಂತೆ ಸಾಹಿತಿ ಕಲಾವಿದರಿಗಿಂತ ಹೆಚ್ಚಾಗಿ ಜನಸಾಮಾನ್ಯ ಕನ್ನಡಿಗರು ಈ ವಿಚಾರದಲ್ಲಿ ಒಗ್ಗೂಡುವಂತೆ ತಂತ್ರ ರೂಪಿಸಿದರು. ಈ ಘಟ್ಟದಿಂದ ಕನ್ನಡ ಚಳವಳಿ ಛಿದ್ರವಾಗುತ್ತಾ ಹೋಯಿತು.

**ಮಹಾಜನ್ ಆಯೋಗ ಮತ್ತು ಚಳವಳಿಗಾರರು:** 1965 ರ ವೇಳೆಗೆ ಬೆಂಗಳೂರಿನಲ್ಲಿ ರಾಜ್ಯೋತ್ಸವವನ್ನು ಎರಡು ಸ್ಥಳಗಳಲ್ಲಿ ನಡೆಸಲು ಆರಂಭವಾಯಿತು. ಆದರೂ ಮ. ರಾಮಮೂರ್ತಿ ಹಾಗೂ ವಾಟಾಳರು ಬೆಂಗಳೂರಿನಲ್ಲಿ ಕನ್ನಡ ಬಾವುಟದ ವಿಚಾರಕ್ಕಾಗಿ ಒಂದೆಡೆ ಸೇರಿದ್ದು ಗಮನಾರ್ಹ. ಅಲ್ಲದೆ ಈ ವೇಳೆಗೆ (1966) ಮರಾಠಿಗರ ಆಕ್ರಮಣಕಾರಿ ಭಾಷಿಕ ಪ್ರವೃತ್ತಿ ಹೆಚ್ಚಾಗತೊಡಗಿದ್ದವು. ಶಿವಸೇನೆಯ ಬಾಳ ಠಾಕ್ರೆ ಮೊದಲಾದವರಿಂದ ಕನ್ನಡಿಗರಿಗೆ (ಮುಂಬಯಿಯಲ್ಲಿ) ಕಿರುಕುಳ ಆರಂಭವಾಗಿತ್ತು. ಇದೇ ವೇಳೆಗೆ ಮಹಾರಾಷ್ಟ್ರ, ಕೇರಳ ಹಾಗೂ ಕರ್ನಾಟಕದ ಗಡಿಗಳಿಗೆ ಸಂಬಂಧಿಸಿದ ವಿವಾದಗಳ ಇತ್ಯರ್ಥಕ್ಕೆ ಮಹಾಜನ್ ಆಯೋಗ ನೇಮಕ ಆಗಿತ್ತು. ಈ ಆಯೋಗದ ಮೇಲೆ ಹಾಗೂ ಕೇಂದ್ರ ಸರ್ಕಾರದ ಮೇಲೆ ಮರಾಠಿಗರು ಒತ್ತಡ ಹೇರತೊಡಗಿದ್ದರು. ಇದಕ್ಕೆ ಕನ್ನಡಿಗರಿಂದ ಎಲ್ಲೆಡೆ ಪ್ರತಿರೋಧಗಳು ಕಾಣಿಸಿಕೊಂಡವು. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂಬುದನ್ನು ಸಾಬೀತುಪಡಿಸುವುದು ಚಳವಳಿಗಾರರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ಸಭಾದವರು 1966 ಜುಲೈ 29ರಂದು ನಡೆಸಿದ ಸಂಪೂರ್ಣ ಕರ್ನಾಟಕ ಸರ್ವ ಪಕ್ಷ ಸಮ್ಮೇಳನ ಪ್ರಧಾನವಾದುದು. ಹೀಗಾಗಿ ನಾಡಿನ ಎಲ್ಲೆಡೆ ಮಹಾಜನ್ ಆಯೋಗದ ವಿರುದ್ಧ ತೀವ್ರವಾದ ಪ್ರತಿಭಟನೆಗಳು ನಡೆದವು. ರಸ್ತೆ ತಡೆ, ರೈಲು ತಡೆ, ಮೆರವಣಿಗೆ, ಪ್ರದರ್ಶನಗಳು, ಬಂದ್ ಆಚರಣೆ ಇತ್ಯಾದಿಗಳು ಚಳವಳಿಕಾರರನ್ನು ಇನ್ನಷ್ಟು ಹುರಿದುಂಬಿಸಿದ್ದವು.

ಮಹಾಜನ್ ಆಯೋಗದ ವರದಿ ಜತ್, ಅಕ್ಕಲಕೋಟೆ, ಕಾಸರಗೋಡುಗಳನ್ನು ಕರ್ನಾಟಕಕ್ಕೂ ನಿಪ್ಪಾಣಿ ಖಾನಾಪುರ, ಹಳಿಯಾಳಗಳನ್ನು ಮಹಾರಾಷ್ಟ್ರಕ್ಕೂ ಸೇರಿಸಬೇಕೆಂದು ಶಿಫಾರಸು ಮಾಡಿತ್ತು. ಅಲ್ಲದೆ ಕನ್ನಡ ನೆಲವಾದ ಬೆಳಗಾವಿಯನ್ನು ಕರ್ನಾಟಕದಲ್ಲಿಯೇ ಉಳಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಈ ಆಯೋಗದ ವರದಿಗೆ ಒಪ್ಪಿಕೊಳ್ಳುವುದಾಗಿ ಹೇಳಿದ್ದ ಮರಾಠಿಗರು ಮಾತು ಮುರಿದು ಪ್ರತಿಕ್ರಿಯಿಸಿದರು. ಈ ವಿಚಾರ 1970 ರಲ್ಲಿ ದೆಹಲಿಯ ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ಚರ್ಚೆಗೆ ಬಂತು. ಮರಾಠಿಗರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾರಂಭಿಸಿದ್ದರು. ಇದರಿಂದ ಕನ್ನಡಿಗರ ಪ್ರತಿಭಟನೆಗಳು ತೀವ್ರ ಸ್ವರೂಪ ಪಡೆದವು. ಈ ಘಟ್ಟದಲ್ಲಿ ಕೆಲವರು ಕನ್ನಡ ಚಳವಳಿಗಾರರು ಕರ್ನಾಟಕ ಎಕ್ಸ್‌ಪ್ರೆಸ್ ರೈಲನ್ನು ತಡೆಯಲು ಮುಂದಾದರು. ಈ ಪ್ರಯತ್ನದಲ್ಲಿ ಮು. ಗೋವಿಂದರಾಜು ಎಂಬ ಕಾರ್ಯಕರ್ತರು ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಈ ಘಟನೆ (1970 ಡಿಸೆಂಬರ್ 13) ತಾತ್ಕಾಲಿಕವಾಗಿ ಮಹಾಜನ್ ವರದಿಯ ಅನುಷ್ಠಾನವನ್ನು ತಡೆಹಿಡಿಯಿತು. ಅಂದಿನಿಂದ ಇದುವರೆಗೂ ಕರ್ನಾಟಕಕ್ಕೆ ಸೇರಬೇಕಾದ ಕನ್ನಡದ ಭೂಪ್ರದೇಶಗಳು ಕರ್ನಾಟಕದ ಹೊರಗೇ ಉಳಿದಿವೆ.

**ಕನ್ನಡ ಬಾವುಟದ ಚರಿತ್ರೆ:** 1966 ರ ವರೆಗೂ ಕನ್ನಡದ ಕಾರ್ಯಕರ್ತರಿಗೆ ಯಾವುದೇ ನಿರ್ದಿಷ್ಟ ಕನ್ನಡ ಬಾವುಟವೆಂಬುದು ಇರಲಿಲ್ಲ. ಕನ್ನಡ ಬಾವುಟದ ಕೊರತೆಯನ್ನು ನೀಗಲು ರಾಮಮೂರ್ತಿ ಹಾಗೂ ವಾಟಾಳರು ಬೆಂಗಳೂರಿನಲ್ಲಿ ಕನ್ನಡ ಸಂಘಟನೆಗಳ ಸಭೆ ಸೇರಿಸಿದರು. ಇಲ್ಲಿ ಪರಿಚಯಿಸಿದ ಬಾವುಟ ಕರ್ನಾಟಕದ ನಕಾಶೆಯನ್ನು ಹೊಂದಿತ್ತು. ನಕಾಶೆಯ ಮಧ್ಯೆ ಬೆಳೆಯುತ್ತಿರುವ ಪೈರಿನ ಚಿತ್ರಣವಿತ್ತು. ಈ ಬಾವುಟ ಕರ್ನಾಟಕಕ್ಕೆ ಸೇರಬೇಕಾದ ಗಡಿಭಾಗಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಿಕೆ ನೀಡಲಾಯಿತು. ಎಲ್ಲರೂ ಈ ಬಾವುಟವನ್ನು ಒಪ್ಪಿದ್ದರು. ಆದರೆ ರಾಮಮೂರ್ತಿಯವರು ಬಾವುಟವನ್ನು ಬದಲಾಯಿಸಿದ್ದು (ನವೆಂಬರ್ 1969) ಕಾರ್ಯಕರ್ತರಲ್ಲಿ ಅಸಮಾಧಾನಕ್ಕೆ ಎಡೆಮಾಡಿಕೊಟ್ಟಿತು.

ಬಾವುಟದ ಬದಲಾವಣೆಯ ಪ್ರಕ್ರಿಯೆಗೆ ಅಂದಿನ ರಾಜಕಾರಣವೇ ಪ್ರಮುಖ ಕಾರಣ. ಮ. ರಾಮಮೂರ್ತಿ ಹಾಗೂ ವಾಟಾಳ್ ಇವರಿಬ್ಬರ ತಾತ್ವಿಕ ಭಿನ್ನಾಭಿಪ್ರಾಯಗಳು ಎರಡು ಪ್ರಾದೇಶಿಕ ಪಕ್ಷಗಳ ಹುಟ್ಟಿಗೆ ಕಾರಣವಾದವು. ರಾಮಮೂರ್ತಿ ಅವರು ಕನ್ನಡ ಪಕ್ಷ 1966ರ ನಗರಸಭಾ ಹಾಗೂ 1969ರ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿತು. ವಾಟಾಳರ ಚಳವಳಿ ಪಕ್ಷ ಕೊಂಚ ರಾಜಕೀಯ ಶಕ್ತಿಯನ್ನು ಪಡೆಯಿತು. ಜೊತೆಗೆ ಬ್ರಾಹ್ಮಣೇತರ ಚಳವಳಿಗಾರರ ಗುಂಪಾಗಿ ಗುರುತಿಸಿಕೊಂಡಿತ್ತು. ವಾಟಾಳರು ತಮ್ಮ ಪಕ್ಷದ ಚಿಹ್ನೆಯಾಗಿ ನಕಾಶೆಯಿರುವ ಬಾವುಟವನ್ನೇ ಬಳಸಿದ್ದರು. ಇದರಿಂದ ರಾಮಮೂರ್ತಿ ಅವರು ಕನ್ನಡ ಪಕ್ಷಕ್ಕಾಗಿ ಹೊಸ ಬಾವುಟವನ್ನು ಪರಿಚಯಿಸುವುದು ಅನಿವಾರ್ಯವಾಯಿತು.

ಮ. ರಾಮಮೂರ್ತಿ 1968 ರ ವೇಳೆಗೆ ಸಂಯುಕ್ತ ರಂಗದ ಕಾರ್ಯಕರ್ತರ ಸಭೆ ಕರೆದು ಹೊಸ ಬಾವುಟವನ್ನು ಪರಿಚಯಿಸಿದರು. ಕರ್ನಾಟಕ ಮಿತ್ರ ಮಂಡಳಿಯ ಬಿ.ನಿ. ಈಶ್ವರಪ್ಪನವರು ಸೂಚಿಸಿದ ಬಾವುಟವನ್ನು ರಾಮಮೂರ್ತಿ ಒಪ್ಪಿದ್ದರು. ಕಾಟನ್‌ಪೇಟೆಯಲ್ಲಿ ನಡೆದ ಸಭೆಯಲ್ಲಿ ನಾಲ್ಕು ಮೂಲೆಗಳ ಹಳದಿ ಕೆಂಪು ಬಣ್ಣಗಳನ್ನು ಶಾಂತಿ, ಸಹನೆ, ಕ್ರಾಂತಿಗಳ ಸಂಕೇತವೆಂದೂ ಅರಸಿನ–ಕಂಕುಮ ಮುತ್ತೈದೆತನದ ಸಂಕೇತವೆಂದೂ ವಿವರಣೆ ನೀಡಲಾಗಿತ್ತು. ಮ. ರಾಮಮೂರ್ತಿ ಅವರು ಕನ್ನಡ, ಕನ್ನಡಿಗ, ಕರ್ನಾಟಕಗಳನ್ನು ಪ್ರತಿನಿಧಿಸುವ ಯಾವುದೇ ಸಭೆ, ಸಮಾರಂಭಗಳಿಗೆ ಈ ಹೊಸ ಬಾವುಟವನ್ನೇ ಬಳಸಲು ಕರೆಯಿತ್ತರು. ತಮ್ಮ ಕನ್ನಡ ಪಕ್ಷಕ್ಕೂ ಇದೇ ಬಾವುಟವನ್ನೇ ಬಳಸಿದ್ದರು. ಹೀಗಾಗಿ ಇಂದಿಗೂ ಹಳದಿ, ಕೆಂಪು ಬಣ್ಣದ ಬಾವುಟಗಳೂ ಕನ್ನಡದ ಸಂಕೇತವಾಗಿ ಬಳಕೆಯಾಗುತ್ತಿವೆ.

**ವಾಟಾಳ್ ನಾಗರಾಜ್ ಮತ್ತು ಕನ್ನಡ ಚಳವಳಿ:** 1970ರ ದಶಕ ಬಹುಪಾಲು ವಾಟಾಳ್ ನೇತೃತ್ವದ ಕನ್ನಡ ಚಳವಳಿಯಾಗಿ ಪರಿಣಮಿಸಿತು. ಸಂಯುಕ್ತ ರಂಗದ ಅಧ್ಯಕ್ಷರಾಗಿದ್ದ ರಾಮಮೂರ್ತಿ ಅವರು ಆಕಸ್ಮಿಕ ಮರಣಕ್ಕೀಡಾದರು (25.12.1967). ತ.ರಾ.ಸು. ಅವರು ಕನ್ನಡ ಪಕ್ಷದ ಚುಕ್ಕಾಣಿ ಹಿಡಿದಿದ್ದರು. ಆದರೆ ವಾಟಾಳರ ಜನಪ್ರಿಯತೆಯ ಮುಂದೆ ಇನ್ನಾವುದೇ ನಾಯಕನೂ ಚಳವಳಿಯ ನೇತಾರನಾಗಲಿಲ್ಲ. ವಾಟಾಳರ ಹಿಂದೆ ಬೆಂಬಲಕ್ಕಿದ್ದವರೆಂದರೆ ಅ.ಸಂಜೀವಪ್ಪ, ಸಾ. ಕೃ. ಸಂಪಂಗಿ, ಜಿ. ನಾರಾಯಣ ಕುಮಾರ್, ಪ್ರಭಾಕರ್ ರೆಡ್ಡಿ ಮೊದಲಾದ ಚಳವಳಿಗಾರರು. ಇವರೆಲ್ಲರ ಬೆಂಬಲದಿಂದ ಕನ್ನಡ ಚಳವಳಿ ಪಕ್ಷ ರಾಜಕಾರಣದ ಬಲವನ್ನೂ ಪಡೆದಿತ್ತು. ಕನ್ನಡಿಗರ ಸಮಸ್ಯೆಗಳಿಗೆ ಇಂಥ ಪ್ರಾದೇಶಿಕ ಪಕ್ಷವೊಂದು ಸ್ಪಂದಿಸುವುದು ಎಲ್ಲರ ಗಮನ ಸೆಳೆಯಿತು. ಆದರೆ ವಾಟಾಳರ ಒಡನಾಡಿಗಳು ಭಿನ್ನಾಭಿಪ್ರಾಯಗಳನ್ನು ತಳೆದದ್ದು ಮತ್ತೆ ಕನ್ನಡ ಚಳವಳಿಯಲ್ಲಿ ಬಿರುಕನ್ನುಂಟುಮಾಡಿತು. 1980ರಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷ ಎಂದು ಹೊಸ ಹೆಸರು ಪಡೆಯುವವರೆಗೂ ವಾಟಾಳರು ನಾಡಿನ ಸಮಸ್ಯೆಗಳನ್ನು ಕುರಿತಂತೆ ಚಳವಳಿಗಳನ್ನು ಹೂಡುತ್ತಲೇ ಇದ್ದರು. ಅಂಥವುಗಳಲ್ಲಿ ತಾಳವಾಡಿ ಮುತ್ತಿಗೆ (1967) ಚಳವಳಿಯೂ ಒಂದು. ಕರ್ನಾಟಕಕ್ಕೆ ಸೇರಬೇಕಿದ್ದ ಹೊಸೂರು, ತಾಳವಾಡಿಗಳನ್ನು ತಮಿಳುನಾಡಿಗೆ ಸೇರಿಸಲಾಗಿತ್ತು. ಇವುಗಳನ್ನು ಪಡೆಯಲು ತಾಳವಾಡಿ ಮುತ್ತಿಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಇದರಲ್ಲಿ ಭಾಗವಹಿಸಿದ್ದ ವಾಟಾಳರನ್ನು ಅಂದಿನ ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿ ಬಂಧಿಸಲು ಆದೇಶಿಸಿದ್ದರು. ಬಂಧನಕ್ಕೊಳಗಾದ ವಾಟಾಳರ ಬಿಡುಗಡೆಗಾಗಿ ಒತ್ತಾಯಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ, ಹಿಂಸಾಚಾರಗಳು ನಡೆದವು. ತಮಿಳರ ವಿರುದ್ಧ ಕನ್ನಡಿಗರು ಉಗ್ರರೂಪದಲ್ಲಿ ಪ್ರತಿಭಟನೆಗಳನ್ನು ಸಾರಿದರು. ಕನ್ನಡೇತರರ ಮತಗಳಿಗಾಗಿ ಕಾದಿದ್ದ ಕನ್ನಡದ ರಾಜಕಾರಣಿಗಳು ಈ ಘಟನೆಗೆ ಸ್ಪಂದಿಸದೆ ಇದ್ದದ್ದು ಕನ್ನಡಿಗರನ್ನು ಕೆರಳಿಸದಿರಲಿಲ್ಲ. ಅದೇ ರೀತಿ 1968ರಲ್ಲಿ ಸಿ. ರಾಜಗೋಪಾಲಾಚಾರಿ (ರಾಜಾಜಿ) ಅವರು ಕನ್ನಡಕ್ಕೆ ಅಪಮಾನವಾಗುವ ಮಾತುಗಳನ್ನು ಆಡಿದಾಗ ವಾಟಾಳ್ ನಾಗರಾಜ್ ಮತ್ತು ಇತರ ಚಳವಳಿಗಾರರು ಪ್ರತಿಕ್ರಿಯಿಸಿರಲಿಲ್ಲ. ಅಂತೆಯೇ ಕನ್ನಡ ಸಾಹಿತ್ಯ ಪರಿಷತ್ತೂ. ಇಂಥ ವಿರೋಧಾಭಾಸಗಳೂ ಕನ್ನಡ ಚಳವಳಿಯ ಚರಿತ್ರೆಯಲ್ಲಿ ಕಪ್ಪುಚುಕ್ಕೆಯಾಗಿ ಉಳಿದುಬಿಟ್ಟವು.

**ಗೋಕಾಕ್ ಚಳವಳಿ:** ಹಿಂದಿನ ಅವೈಜ್ಞಾನಿಕ ಶಿಕ್ಷಣನೀತಿಯೊಂದು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ತೊಡಕಾಗಿ ಪರಿಣಮಿಸಿತ್ತು. ಇದನ್ನು ಸರಿಪಡಿಸಲು ವ್ಯಾಪಕವಾದ ಭಾಷಿಕ ಚಳವಳಿಯನ್ನೇ ಕನ್ನಡಿಗರು ಹೂಡಿದ್ದು ಗಮನಾರ್ಹ ಸಂಗತಿ. ಸಂಸ್ಕೃತ ಭಾಷೆಯನ್ನು ಮಾತೃಭಾಷೆಗೆ ಸರಿಸಮವೆಂದು ಕರ್ನಾಟಕ ಸರಕಾರದ ಶಿಕ್ಷಣ ನೀತಿ ಪರಿಗಣಿಸಿದ್ದು ಚಳವಳಿಗೆ ಕಾರಣವಾಗಿತ್ತು. ಅಂದರೆ ಕೇವಲ ಪ್ರೌಢಶಾಲೆಯಲ್ಲಿ ಶಿಕ್ಷಣ ಕ್ರಮ ಆರಂಭಿಸಲಾಗುವ ಸಂಸ್ಕೃತ ಹಿಂದಿನ ಏಳು ವರ್ಷಗಳಲ್ಲಿ ವಿದ್ಯಾರ್ಥಿಗಳು ಓದಿದ ಭಾಷೆಯೊಂದಕ್ಕೆ ಸಮವೆನಿಸಿತ್ತು. ಸಂಸ್ಕೃತ ಅಧ್ಯಾಪಕರ ಉದಾರ ಪ್ರೋತ್ಸಾಹ ಮತ್ತು ಹೆಚ್ಚು ಅಂಕ ನೀಡುವ ಪ್ರವೃತ್ತಿಯಿಂದ ಕನ್ನಡದ ವಿದ್ಯಾರ್ಥಿಗಳೂ ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯಾಗಿ ಓದಲು ಆರಂಭಿಸಿದ್ದರು. ಇದರಿಂದ ರ‍್ಯಾಂಕ್ ಗಳಿಕೆ ಸುಲಭವಾಗಿತ್ತು. ಇಲ್ಲಿ ಇನ್ನೊಂದು ಅನುಕೂಲವೂ ಇತ್ತು. ಅದು ಈ ಭಾಷೆಯ ಪ್ರಶ್ನೆಪತ್ರಿಕೆಯನ್ನು ಕನ್ನಡ ಅಥವಾ ಇಂಗ್ಲಿಷಿನಲ್ಲಿ ಉತ್ತರಿಸುವುದು. ಈ ಬಗೆಯ ನೀತಿಯಿಂದ ಕನ್ನಡಕ್ಕೆ ಹೆಚ್ಚಿನ ಪ್ರಾಧಾನ್ಯ ದಕ್ಕಿರಲಿಲ್ಲ. ಹೀಗಾಗಿ ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ತೆಗೆದು ಮೂರನೆಯ ಸ್ಥಾನಕ್ಕೆ ಇಳಿಸುವ ಸರ್ಕಾರದ ಆಜ್ಞೆಗೆ (1969 ಅಕ್ಟೋಬರ್) ಸಂಸ್ಕೃತವಾದಿಗಳಿಂದ ವಿರೋಧಗಳು ವ್ಯಕ್ತವಾದವು. ಇದಕ್ಕೆ ವಿರುದ್ಧವಾಗಿ ಕನ್ನಡ ಪರವಾದಿಗಳು ಸಹ ವಿರೋಧಿಸಲಾರಂಭಿಸಿದ್ದರು. ಕೊನೆಗೆ ಯಾವುದೇ ನಿರ್ಧಾರವನ್ನು ಕೈಗೊಳ್ಳಲಾಗದೆ ಸರ್ಕಾರ ವಿ.ಕೃ. ಗೋಕಾಕ್ ಅಧ್ಯಕ್ಷತೆಯಲ್ಲಿ ಭಾಷಾತಜ್ಞರ ಸಮಿತಿಯೊಂದನ್ನು ರಚಿಸಿತು (1980). ಈ ಸಮಿತಿಯಲ್ಲಿದ್ದ ಬಹುಪಾಲು ಸದಸ್ಯರು ಸಂಸ್ಕೃತವಾದಿಗಳೆಂದೇ ಕನ್ನಡದ ವಾದಿಗಳು ಆರಂಭದಲ್ಲಿ ಶಂಕಿಸಿದ್ದರು. ಹೀಗಾಗಿ ಸಮಿತಿಯ ವಿರುದ್ಧವೇ ಮೊದಲ ಪ್ರತಿಭಟನೆಗಳು ಆರಂಭಗೊಂಡವು. ಈ ಸಮಿತಿ ವರದಿಯ ಸಿದ್ಧತೆಗೆ ನಾಡಿನಾದ್ಯಂತ ಕೈಗೊಂಡ ಪ್ರವಾಸಕ್ಕೆ ಆಗ ಪ್ರತಿರೋಧಗಳು ಕಂಡುಬಂದವು. ಆದರೆ ವರದಿ ಕನ್ನಡ ಪರವಾಗಿದ್ದು ಅಂಥ ಶಂಕೆ, ಸಂದೇಹ ನಿವಾರಿಸಿತು. ಅಂತೆಯೇ ವರದಿಯನ್ನು ಅನುಷ್ಠಾನಗೊಳಿಸುವಲ್ಲಿ ಚಳವಳಿಗಾರರು ತೀವ್ರತರವಾದ ಹೋರಾಟಕ್ಕೆ ಇಳಿದಿದ್ದರು. ಗೋಕಾಕ್ ವರದಿ ಕುರಿತು ನಡೆದ ಚಳವಳಿ ಕನ್ನಡ ಚಳವಳಿಯೇ ಆಗಿ ಗೋಕಾಕ್ ಚಳವಳಿ ಎಂದೇ ಪ್ರಚಾರಕ್ಕೆ ಬಂತು.

ಗೋಕಾಕ್ ಚಳವಳಿಗೆ ಧಾರವಾಡದಿಂದ ಆರಂಭಿಕ ಚಾಲನೆ ದೊರೆತು ನಾಡಿನಾದ್ಯಂತ ವಿಭಿನ್ನ ಘಟ್ಟಗಳಲ್ಲಿ ಚಳವಳಿ ನಡೆಯಿತು. ಚಂದ್ರಶೇಖರ ಪಾಟೀಲ, ಎಂ.ಎಂ. ಕಲಬುರ್ಗಿ, ಬಸವರಾಜ ಕಟ್ಟೀಮನಿ, ಚನ್ನವೀರ ಕಣವಿ, ಪಾಟೀಲ ಪುಟ್ಟಪ್ಪ ಮೊದಲಾದ ಸಾಹಿತಿಗಳು ಹಾಗೂ ಕಲಾವಿದರು, ಮಠಾಧೀಶರು ಉತ್ತರ ಕರ್ನಾಟಕದಲ್ಲಿ ಪ್ರತಿಕ್ರಿಯಿಸಲಾರಂಭಿಸಿದರು. ಅಂತೆಯೇ ಹಳೆಯ ಮೈಸೂರಿನ ಜಿಲ್ಲೆಗಳಿಂದ, ಬೆಂಗಳೂರನ್ನು ಕೇಂದ್ರವಾಗಿಸಿಕೊಂಡು ಚಳವಳಿ ಆರಂಭಗೊಂಡಿತು. ಇದರಲ್ಲಿ ಪಿ. ಲಂಕೇಶ್, ಜಿ.ಎಸ್.ಶಿವರುದ್ರಪ್ಪ, ಗೊರೂರು, ಸಿದ್ದಯ್ಯ ಪುರಾಣಿಕ್, ಎಂ. ಚಿದಾನಂದ ಮೂರ್ತಿ, ಹಾ.ಮಾ.ನಾಯಕ, ಕೋ.ಚೆನ್ನಬಸಪ್ಪ, ಮಳಗಿ, ತ.ರಾ.ಸು, ಸತ್ಯು, ಪೂರ್ಣಚಂದ್ರ ತೇಜಸ್ವಿ ಮೊದಲಾದ ಸಾಹಿತಿಗಳು, ಕಲಾವಿದರು ಭಾಗವಹಿಸಿದ್ದರು. ಸಾಹಿತಿಗಳ, ಕಲಾವಿದರ ಬಳಗ ಹುಟ್ಟಿಕೊಂಡದ್ದು ಇದೇ ಸಂದರ್ಭದಲ್ಲಿಯೇ. ಚಳವಳಿಗಾರ ರಹಮಾನ್ ಖಾನ್, ಜಿ.ನಾರಾಯಣಕುಮಾರ್, ಕೆ.ಪ್ರಭಾಕರ ರೆಡ್ಡಿ ಮೊದಲಾದವರು ತೀವ್ರವಾಗಿ ಪ್ರತಿಕ್ರಿಯಿಸಿದರು. ಈ ಚಳವಳಿಗೆ ಕೇಂದ್ರ ಹಾಗೂ ಸ್ಥಳೀಯ ಕನ್ನಡ ಕ್ರಿಯಾ ಸಮಿತಿಗಳು, ಕನ್ನಡ ಸಂರಕ್ಷಣಾ ಸಮಿತಿ, ಕನ್ನಡ ಸಂಘರ್ಷ ಸಮಿತಿ, ಕನ್ನಡ ಪಕ್ಷ, ಮೈಸೂರಿನ ಚೇತನ ಕನ್ನಡ ಸಂಘ ಮೊದಲಾದ ಸಂಘಟನೆಗಳು ತಮ್ಮನ್ನು ತೊಡಗಿಸಿಕೊಂಡಿದ್ದವು. ಕರ್ನಾಟಕದ ಬಹುಪಾಲು ಎಲ್ಲ ಹಿರಿಯ ಕಿರಿಯ ಸಾಹಿತಿ ಕಲಾವಿದರೂ ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಭಾಗವಹಿಸಿದ್ದು ಇಲ್ಲಿ ಉಲ್ಲೇಖನೀಯ. ಈ ಸಂದರ್ಭದಲ್ಲಿ ಪರ ವಿರೋಧದ ಧ್ವನಿಗಳೂ ಹುಟ್ಟಿಕೊಂಡಿದ್ದುಂಟು. ಸರ್ಕಾರ ಕನ್ನಡವನ್ನು ಒಂದು ಹಂತದಲ್ಲಿ ಕಡ್ಡಾಯವಾಗಿ ಪ್ರೌಢಶಾಲಾ ಹಂತದಲ್ಲಿ ಜಾರಿಗೊಳಿಸುವ ಸೂತ್ರ ಮುಂದಿಟ್ಟಿತು. ಆಗ ಅದನ್ನು ಒಪ್ಪಿ ಹಾ. ಮಾ. ನಾ., ಹಂಪನಾ, ವಿ.ಎಚ್.ಗೌಡ ಮೊದಲಾದವರು ಸ್ವಾಗತಿಸಿದರು. ಆದರೆ ಇದಕ್ಕೊಪ್ಪದವರು ಚಿದಾನಂದಮೂರ್ತಿಗಳು ಮತ್ತು ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಚಳವಳಿಯನ್ನು ಮುಂದುವರಿಸಿ ಪ್ರಾಥಮಿಕ ಹಂತದಿಂದ ಕನ್ನಡ ಕಡ್ಡಾಯ ಮಾಡಲು ಆಗ್ರಹಿಸಿದರು. ಸರ್ಕಾರ ಗೋಕಾಕ್ ಭಾಷಾಸೂತ್ರವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ಹಿಂದೇಟು ಹಾಕಿದಾಗ ಚಳವಳಿ ವ್ಯಾಪಕವೂ ಹಿಂಸಾತ್ಮಕವೂ ಆಯಿತು. ಖ್ಯಾತ ನಟ ರಾಜಕುಮಾರ್ ಅವರು ಜಾಥಾದ ಮುಂದಾಳತ್ವವನ್ನು ವಹಿಸಿದ ಮೇಲೆ ಚಳವಳಿಗೆ ಇನ್ನಷ್ಟು ಚುರುಕು, ಬಿರುಸು ಪ್ರಾಪ್ತವಾಯಿತು. ಮೆರವಣಿಗೆ, ಬಂದ್, ರಸ್ತೆ ರೈಲು ತಡೆ, ಜೈಲು ತುಂಬುವ ಚಳವಳಿ, ಪೊಲೀಸರ ಗೋಲಿಬಾರ್ ಸಾಮಾನ್ಯವಾದವು. ಅರಸಪ್ಪ ಎಂಬ ಕಾರ್ಯಕರ್ತರೊಬ್ಬರು ಪೊಲೀಸರ ಗುಂಡಿಗೆ ಬಲಿಯಾದರು. ಪರಿಸ್ಥಿತಿಗೆ ಮಣಿದ ಸರ್ಕಾರ ಸರ್ವಸಮ್ಮತ ಭಾಷಾಸೂತ್ರವನ್ನು ಪ್ರಕಟಿಸಿತು. ನಾಲ್ಕು ತಿಂಗಳ ಕಾಲ ನಡೆದ ಚಳವಳಿ ಅಂತ್ಯಗೊಂಡಿತು. ಆದರೆ ಕನ್ನಡೇತರರು, ಸಂಸ್ಕೃತಪರವಾದಿಗಳು, ಅಲ್ಪ ಸಂಖ್ಯಾತರು ಕೋರ್ಟಿನಲ್ಲಿ ಖಟ್ಲೆಗಳನ್ನು ಹಾಕಿದ್ದರಿಂದ ವರದಿ ಜಾರಿಗೆ ಬರಲಿಲ್ಲ. 1984 ಜನವರಿ 24 ರಂದು ಸರ್ಕಾರ ಈ ಎಲ್ಲ ಖಟ್ಲೆಗಳ ವಿಲೇವಾರಿ ಮಾಡಿ ಭಾಷಾಸೂತ್ರವನ್ನು ಜಾರಿಗೆ ತಂದಿತು. ಆದರೆ ವರದಿಯ ಸಂಪೂರ್ಣ ಅನುಷ್ಠಾನದ ಬಗ್ಗೆ ಇನ್ನೂ ಯಾವುದೇ ರೀತಿಯ ನಿರೀಕ್ಷಿತ ಫಲಿತಾಂಶ ಕಂಡುಬಂದಿಲ್ಲ.

**ಕನ್ನಡ ದೇಶ ಮತ್ತು ಕರ್ನಾಟಕ ಪ್ರಗತಿರಂಗ:** ಗೋಕಾಕ್ ಚಳವಳಿ ಅಂತ್ಯವಾಗುವ ವೇಳೆಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತ ಕೊನೆಗೊಂಡಿತು. ರೈತ (1983), ದಲಿತ ಹಾಗೂ ಭಾಷಾ ಚಳವಳಿಗಳ ಆಶೋತ್ತರಗಳನ್ನು ಈಡೇರಿಸುವ ಭರವಸೆಯನ್ನು ನೀಡಿ ಜನತಾಪಕ್ಷ ಅಧಿಕಾರಕ್ಕೆ ಬಂತು. ಆದರೆ ಬಹಳ ಬೇಗ ಈ ಸರ್ಕಾರವೂ ಕನ್ನಡಿಗರ ಅಸಹನೆಗೆ ಗುರಿಯಾಯಿತು. ಈ ಸಂದರ್ಭದಲ್ಲಿ ಸ್ಥಳೀಯವಾದ ರಾಜ್ಯಪಕ್ಷವೊಂದರ ಅಗತ್ಯ ಕಂಡುಬಂತು. ಆಗ ಹೊಸ ರಾಜಕೀಯ ಪಕ್ಷವೊಂದರ ತುರ್ತು ಕನ್ನಡಿಗರಲ್ಲಿ ಕಾಣಿಸಿಕೊಂಡಿತು. ಇದರ ಪರಿಣಾಮವಾಗಿ ಹುಟ್ಟಿಕೊಂಡದ್ದೇ ಕನ್ನಡ ದೇಶ ಹಾಗೂ ಕರ್ನಾಟಕ ಪ್ರಗತಿರಂಗ ಎಂಬ ಪಕ್ಷಗಳು.

ವಾಟಾಳರ ಚಳವಳಿ ಪಕ್ಷ ಪ್ರಾದೇಶಿಕವಾಗಿ ಗುರುತಿಸಿಕೊಂಡಿದ್ದರೂ ಅದು ರಾಜ್ಯವ್ಯಾಪಿ ಪಕ್ಷವಾಗಿ ವಿಸ್ತೃತಗೊಂಡಿರಲಿಲ್ಲ. ಹೀಗಾಗಿ 1987 ರಲ್ಲಿ ಕನ್ನಡ ದೇಶ ಪಕ್ಷ ಕವಿ ಕುವೆಂಪು ಅವರ ಪ್ರೇರಣೆಯಿಂದ ಅಸ್ತಿತ್ವಕ್ಕೆ ಬಂತು. ಈ ಪಕ್ಷದ ನೇತೃತ್ವವನ್ನು ವಹಿಸಿದ್ದವರು ರೈತ ಸಂಘದ ಎಂ. ಡಿ. ನಂಜುಂಡಸ್ವಾಮಿ ಅವರು. ಕನ್ನಡ ದೇಶ ಪಕ್ಷ ಕನ್ನಡಿಗರ ಆಶೋತ್ತರಗಳ ಈಡೇರಿಕೆಗೆ ದುಡಿಯುವ ಮುನ್ನವೇ ಸೋಲನ್ನು ಕಂಡಿತು. ಈ ಘಟ್ಟದಲ್ಲಿ ಎ.ಕೆ. ಸುಬ್ಬಯ್ಯನವರ ಕನ್ನಡ ಪರ ಪ್ರಯತ್ನಗಳೂ ಗಮನಾರ್ಹವೆನಿಸಿವೆ.

ಪ್ರಗತಿಪರ ಮನಸ್ಸುಳ್ಳ ವ್ಯಕ್ತಿಗಳು ಅದುವರೆಗಿನ ಎಲ್ಲ ಕೊರತೆಗಳನ್ನು ಪರಿಶೀಲಿಸಿ 1988 ರಲ್ಲಿ ಕರ್ನಾಟಕ ಪ್ರಗತಿ ರಂಗ ಎಂಬ ರಾಜಕೀಯ ಪಕ್ಷವನ್ನು ರೂಪಿಸಿದರು. ಈ ರಂಗಕ್ಕೆ ಲಂಕೇಶ್ ಪತ್ರಿಕೆಯ ಮೂಲಕ ರೂಪಿಸಲಾದ ಹಿನ್ನೆಲೆ ಮತ್ತು ಸಿದ್ಧಾಂತಗಳಿದ್ದವು. ಕಾಂಗ್ರೆಸ್ ಮತ್ತು ಜನತಾಪಕ್ಷಗಳಿಗೆ ಪರ್ಯಾಯವಾಗಿ ಹುಟ್ಟಿಕೊಂಡ ಪಕ್ಷವಿದು. ಇದರ ನೇತೃತ್ವ ಪಿ. ಲಂಕೇಶ್ ಅವರದು. ಕನ್ನಡ, ಕನ್ನಡಿಗ, ಕರ್ನಾಟಕಗಳ ಬಗೆಗಿನ ಕಾಳಜಿಯಿಂದ ರಚನೆಗೊಂಡ ಈ ಪಕ್ಷಕ್ಕೆ ಕನ್ನಡಿಗರಿಂದ ನಿರೀಕ್ಷಿಸಲಾಗಿದ್ದ ಬೆಂಬಲ, ಪ್ರೋತ್ಸಾಹಗಳು ದೊರೆಯಲಿಲ್ಲ. ಈ ಪಕ್ಷವೂ ಸಂಘಟನಾ ಹಂತದಲ್ಲೇ ಕ್ಷೀಣಿಸಿತು. ಕನ್ನಡ ಚಳುವಳಿಯ ಚರಿತ್ರೆಯಲ್ಲಿ ಈ ರಾಜಕೀಯ ಪಕ್ಷಗಳಿಗೆ ದೊರೆಯದೆ ಹೋದ ಬೆಂಬಲಗಳು ಕನ್ನಡಿಗರಿಂದ ಮತ್ತೆ ರಾಷ್ಟ್ರೀಯ ಪಕ್ಷಗಳಿಗೆ ದೊರೆತವು.

ಗೋಕಾಕ್ ಚಳವಳಿಯ ಅನಂತರ ಸಂಭವಿಸಿದ ರಾಜಕೀಯ ಬದಲಾವಣೆಗಳು ಚಳವಳಿಯ ಸ್ವರೂಪ ಬಹುಮುಖಿ ನೆಲೆಗಳನ್ನು ಕಂಡುಕೊಳ್ಳುವಂತೆ ಮಾಡಿತು. ಇದಕ್ಕೆ ಪ್ರಾತಿನಿಧ್ಯ, ಆಮಿಷ, ಅಗ್ಗದ ಪ್ರಚಾರಪ್ರಿಯತೆ, ಕನ್ನಡದ ಹೆಸರಿನಲ್ಲಿ ಲೂಟಿ, ಹಿಂಸೆ, ಜಾತಿ ಮುಖಂಡರ, ರಾಜಕಾರಣಿಗಳ ಭ್ರಷ್ಟಾಚಾರಗಳು ಎಲ್ಲವೂ ಕಾರಣ. 1980 ಹಾಗೂ 1990ರ ದಶಕದಲ್ಲಾದ ಈ ವೈಪರೀತ್ಯಗಳು ಕನ್ನಡ ಚಳವಳಿಯನ್ನು ಭಿನ್ನ ರೀತಿಯಲ್ಲಿ ಗ್ರಹಿಸಲು ಎಡೆಮಾಡಿಕೊಟ್ಟವು. ಆದರೆ ಇವೆಲ್ಲವುಗಳನ್ನು ಹೊರತುಪಡಿಸಿ ನಾಡು, ನುಡಿ, ಸಂಸ್ಕೃತಿಯ ನೆಲೆಗಳಲ್ಲಿ ಕಾರ್ಯನಿರ್ವಹಿಸಿದ ನಿಸ್ವಾರ್ಥ ಕನ್ನಡ ಚಳವಳಿಗಾರರನ್ನು, ಸಂಘಟನೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

**ಕನ್ನಡ ಶಕ್ತಿ ಕೇಂದ್ರ ಮತ್ತು ಇತರ ಸಂಘಟನೆಗಳು:** ಚಳವಳಿಗೆ ಸಂಬಂಧಿಸಿದ ಮಾರ್ಗದರ್ಶನಗಳನ್ನು ನೀಡಿ ನಡೆಸಿಕೊಂಡು ಹೋಗಲು ಸಾಹಿತಿ, ಕಲಾವಿದರ ಬಳಗ ಹುಟ್ಟು ಹಾಕಿದ ಸಂಸ್ಥೆಯೇ ಕನ್ನಡ ಶಕ್ತಿ ಕೇಂದ್ರ. 1988ರಲ್ಲಿ ಅಸ್ತಿತ್ವಕ್ಕೆ ಬಂದ ಈ ಕೇಂದ್ರ ಎಂ. ಚಿದಾನಂದಮೂರ್ತಿಯವರ ನೇತೃತ್ವದಲ್ಲಿ ಮುನ್ನಡೆದಿದೆ. ಇದು ಗೋಕಾಕ್ ಚಳವಳಿಯ ಅನಂತರ ಕನ್ನಡದ ಹೋರಾಟವನ್ನು ಇತರೆ ಸಮಸ್ಯೆಗಳ ಕಡೆಗೂ ಕೇಂದ್ರೀಕರಿಸುವಂತೆ ಮಾಡಿತು.

ಕನ್ನಡ ಶಕ್ತಿ ಕೇಂದ್ರ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವ ಸರೋಜಿನಿ ಮಹಿಷಿ ವರದಿಯ ಅನುಷ್ಠಾನಕ್ಕೆ ಒತ್ತಾಯಿಸಿತು. ಅಲ್ಲದೆ ನೈರುತ್ಯ ರೈಲ್ವೆ ವಲಯದ ಕೇಂದ್ರಗಳನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವವರೆಗೂ ಅನೇಕ ರೀತಿಯಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕಗಳ ಬೇಡಿಕೆಗಳಿಗೆ ಸ್ಪಂದಿಸುತ್ತಿದೆ. ರಾಜ್ಯ ಲೋಕಸೇವಾ ಆಯೋಗದಲ್ಲಿ ಕನ್ನಡಕ್ಕೆ ಆದ್ಯತೆ, ದೂರದರ್ಶನದ ಕನ್ನಡೀಕರಣ, ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ, ಉರ್ದು ವಾರ್ತಾ ಪ್ರಸಾರ ತಡೆ, ಕಾವೇರಿ ಜಲವಿವಾದ ಚಳವಳಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರಗಳ ಸ್ಥಾಪನೆ, ಬೆಳಗಾಂವಿಯಲ್ಲಿ ತಾಂತ್ರಿಕ ವಿಶ್ವವಿದ್ಯಾಲಯದ ಸ್ಥಾಪನೆ ಇತ್ಯಾದಿ ಕನ್ನಡ ಪರವಾದ ಸಾಧನೆಗಳಿಗಾಗಿ ಇದು ಶ್ರಮಿಸಿದೆ. ಕೆ.ಜಿ.ಎಫ್.ನಲ್ಲಿ ತಮಿಳರ ದೌರ್ಜನ್ಯ, ಬೀದರ್‌ನಲ್ಲಿ ಸಿಖ್ಖರಿಂದ ಆಗುತ್ತಿರುವ ಅತ್ಯಾಚಾರಗಳು, ಹಂಪಿ ಮತ್ತು ಗೋಕರ್ಣಗಳಲ್ಲಿನ ಹಿಪ್ಪಿಗಳ ಸ್ವೇಚ್ಛಾಚಾರ, ಬೆಳಗಾಂವಿಯಲ್ಲಿ ಎಂ.ಇ.ಎಸ್. ಪಕ್ಷದವರ ಕನ್ನಡ ವಿರೋಧಿ ಕಾರ್ಯಕ್ರಮಗಳ ವಿರುದ್ಧವೂ ಕನ್ನಡ ಶಕ್ತಿ ಕೇಂದ್ರ ಚಳವಳಿ ಮಾಡಿದೆ. ವಲಸಿಗರ ತಡೆ, ಅಂಚೆ ತಂತಿ ರೈಲ್ವೆ ಆಡಿಟರ್ ಕಚೇರಿಗಳಲ್ಲಿ, ಕನ್ನಡೇತರರ ನೇಮಕಗಳ ಬಗೆಗೂ ಕನ್ನಡ ಪರವಾದ ಸಂಘಟನೆಗಳು ಪ್ರಯತ್ನಿಸುತ್ತಿವೆ. ಶಕ್ತಿ ಕೇಂದ್ರದ ಜೊತೆಗೆ ಕನ್ನಡ ಸಂಘರ್ಷ ಸಮಿತಿ, ಕನ್ನಡ ಸೇನೆ, ಕನ್ನಡ ಸಂರಕ್ಷಣಾ ವೇದಿಕೆ, ಕರ್ನಾಟಕ ರಕ್ಷಣಾ ವೇದಿಕೆ ಮೊದಲಾದ ಸಂಘಟನೆಗಳೂ ಸೇರಿಕೊಂಡಿವೆ. ಸಾರಿಗೆ, ಹೋಟೇಲು, ಚಿತ್ರಮಂದಿರ, ಆಟೋರಿಕ್ಷ, ಬ್ಯಾಂಕು, ಉದ್ಯಮ ಮೊದಲಾದ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಘ ಸಂಸ್ಥೆಗಳಲ್ಲಿ ಕನ್ನಡ ಸಂಘಟನೆಗಳು ಗಮನಾರ್ಹವಾಗಿ ಕಾರ್ಯನಿರತವಾಗಿವೆ. ಅಂತೆಯೇ ಕರ್ನಾಟಕ ಕೆಥೊಲಿಕ್ ಕ್ರೈಸ್ತರ ಕನ್ನಡ ಸಂಘಗಳು ಕ್ರೈಸ್ತ ಮಂದಿರಗಳಲ್ಲಿ ಕನ್ನಡದಲ್ಲಿ ಕಲಾಪಗಳನ್ನು ನಡೆಸಲು ಚಳವಳಿ ಹೂಡಿವೆ.

ಕನ್ನಡ ಚಳವಳಿಗಳು ಕನ್ನಡ ಹೋರಾಟಗಳಾದದ್ದು 1990ರ ದಶಕದಿಂದೀಚೆಗೆ. ಕರ್ನಾಟಕದಲ್ಲೂ ರಾಜಕಾರಣಿಗಳ ಆಸೆ, ಆಮಿಷಗಳಿಂದಾಗಿ ಕೋಮುವಾದಿ ಬೀಜಗಳ ಬಿತ್ತನೆ ಆಯಿತು. ಭ್ರಷ್ಟಾಚಾರ ಮನೋವೃತ್ತಿಯ ರಾಜಕಾರಣಿಗಳು ಜನಸಾಮಾನ್ಯರನ್ನು ಶೋಷಿಸಲು ಕನ್ನಡ ಚಳುವಳಿಗೆ ಹಿಂಸಾತ್ಮಕ ರೂಪ ಕೊಟ್ಟರು ಎಂಬುದೊಂದು ಗುರುತರ ಆರೋಪ. ಕನ್ನಡಿಗರ ಭಾಷಿಕ ಭಾವೋದ್ವೇಗಗಳು ಜಾತಿ, ಧರ್ಮ, ಕೋಮು, ಜನಾಂಗ, ಪ್ರದೇಶ, ನೀರು, ಮೊದಲಾದ ಸೂಕ್ಷ್ಮ ಸಂವೇದನೆಗಳಿಗೆ ಬಂಡವಾಳವಾಗುವಂತೆ ಆಯಿತು. ಕನ್ನಡದ ಹೆಸರಿನಲ್ಲಿ ಕಿಡಿಗೇಡಿಗಳು ತಮಿಳು, ಮುಸ್ಲಿಮ್ ಸಹೋದರರ ಜೊತೆಗೆ ಕನ್ನಡಿಗರೂ ಪ್ರಾಣಗಳನ್ನು ತೆರುವಂತೆ ಮಾಡಿದರು. ಇಂಥ ಸನ್ನಿವೇಶಗಳಲ್ಲಿಯೇ ಕನ್ನಡ ಚಳವಳಿಗಳು ಕನ್ನಡ ಹೋರಾಟಗಳು ಎಂಬ ಭಿತ್ತಿಯನ್ನು ಅನಾವರಣಗೊಳಿಸಿದ್ದು.

ಕೇಂದ್ರ ಸರ್ಕಾರದ ಧೋರಣೆಗಳಿಂದಾಗಿ ಕರ್ನಾಟಕದಂಥ ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ಬರಿದುಮಾಡಿಕೊಳ್ಳುತ್ತಿವೆ. ಜಪಾನ್ ಕೈಗಾರಿಕಾ ವಸಾಹತು, ಸಿಂಗಪೂರ್ ಟೌನ್‌ಷಿಪ್, ಗ್ಯಾಟ್ ಒಪ್ಪಂದಗಳು, ಗಂಗಡಿಕಲ್ಲು ಅದಿರು ಯೋಜನೆ, ತುಂಗಾ ಮೂಲ ನಾಶ, ಪರಿಸರ ಮಾಲಿನ್ಯ ಹೀಗೆ ಕನ್ನಡಿಗರು ಶೋಷಣೆಗೆ ಒಳಗಾಗುತ್ತಿದ್ದುದನ್ನು ಕನ್ನಡ ಚಳುವಳಿಗಾರರು ಪ್ರತಿಭಟಿಸಿದರು. ಈ ನಿಟ್ಟಿನಲ್ಲಿ ಕರ್ನಾಟಕ ವಿಮೋಚನಾ ರಂಗ, ಪ್ರಜಾತಾಂತ್ರಿಕ ಜನರ ವೇದಿಕೆ, ತುಂಗಾಮೂಲ ಉಳಿಸಿ ಸಂಘಗಳಂಥ ಸಂಘಟನೆಗಳ ಹೋರಾಟಗಾರರ ಪಾತ್ರ ದೊಡ್ಡದು.

ಒಟ್ಟಾರೆ ಕನ್ನಡ ಚಳವಳಿಗಳ ಕಳೆದ ಎರಡು ದಶಕಗಳ ಚರಿತ್ರೆಯನ್ನು ಪರಿಶೀಲಿಸಿದರೆ ರಾಜಕಾರಣದ ಆಮಿಷ, ಪ್ರಚಾರಪ್ರಿಯತೆ, ಅಸಂಖ್ಯ ಪೋಷಿತ ಹಾಗೂ ಘೋಷಿತ ನಾಯಕರ ಸಂಘಟನೆಗಳು ಗೋಚರವಾಗುತ್ತವೆ. ಕನ್ನಡದ ರಾಜಕಾರಣಿಗಳು ಕನ್ನಡೇತರ ರಾಜಕೀಯ ಪಕ್ಷಗಳಾದ ಡಿ.ಎಂ.ಕೆ., ಅಣ್ಣಾ ಡಿ.ಎಂ.ಕೆ. ಇತ್ಯಾದಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸ್ಪರ್ಧಿಸುವುದೂ ಕಂಡುಬಂದಿದೆ. ಕನ್ನಡ, ಕನ್ನಡಿಗ, ಕರ್ನಾಟಕ ಪರವಾದ ಪ್ರಾದೇಶಿಕ ರಾಜಕೀಯ ಪಕ್ಷವೊಂದನ್ನು ರಚಿಸಿ ಅಧಿಕಾರಕ್ಕೆ ತರಲಾಗದ ಕನ್ನಡಿಗರ ಅಸಹಾಯಕತೆಯ ಸ್ಥಿತಿಯನ್ನು ಇದು ಸಂಕೇತಿಸುತ್ತದೆ. ಸಂಕುಚಿತ, ಭಾಷಿಕ ಭಾವೋದ್ವೇಗಗಳಿಂದ

ಅತಿರೇಕದ ಭಾಷಾಭಿಮಾನದಿಂದ ಕನ್ನಡ ಚಳವಳಿ ಮತ್ತು ಚಿಂತನೆಗಳು ಕೆಲವೊಮ್ಮೆ ಸೋತಿವೆ ಎನಿಸುತ್ತದೆ. ಕನ್ನಡದ ಅಧಿಕಾರಿಗಳೂ ನೌಕರರೂ ಕನ್ನಡವನ್ನು ಆಡಳಿತದಲ್ಲಿ ಬಳಸುವಲ್ಲಿ ಹೆಚ್ಚು ಉತ್ಸುಕರಾಗದಿರುವುದು ಕಂಡುಬಂದಿದೆ. ಆದ್ದರಿಂದಲೇ ಇಂದಿಗೂ ಶಿಕ್ಷಣರಂಗದಲ್ಲಿ ಕನ್ನಡ ಮಾಧ್ಯಮವಾಗಲಿ, ಸರೋಜಿನಿ ಮಹಿಷಿ ವರದಿಯ ಅನುಷ್ಠಾನವಾಗಲಿ, ಆಡಳಿತ ಭಾಷೆ ಕನ್ನಡವಾಗಲಿ ಪೂರ್ಣವಾಗಿ ಸಾಧ್ಯವಾಗಿಲ್ಲ. ಇತ್ತೀಚಿನ ಕೆಲವು ಪ್ರಕರಣಗಳು ಕನ್ನಡಿಗರನ್ನು ಭಿನ್ನವಾಗಿ ಆಲೋಚಿಸುವಂತೆ ಮಾಡಿವೆ. ಕಾಡುಗಳ್ಳ ವೀರಪ್ಪನಿಂದ ಆದ ನಟ ರಾಜಕುಮಾರ್ ಅಪಹರಣ, ಅಂತೆಯೇ ಸಚಿವ ನಾಗಪ್ಪ ಅವರ ಅಪಹರಣಗಳು ಹಾಗೂ ಅವರ ಸಾವು ಕನ್ನಡಿಗರ ತಾಳ್ಮೆಯನ್ನು ಪರೀಕ್ಷಿಸುವಂತೆ ಮಾಡಿವೆ. ಜೊತೆಗೆ ಕಾವೇರಿ ನದಿಯ ನೀರಿನ ವಿವಾದ, ಹೋರಾಟಗಳು ಉಗ್ರರೂಪ ತಳೆದು ರಾಜಕಾರಣದ ಸ್ವಾರ್ಥ, ಅಸಹಾಯ ಕತೆಗಳನ್ನು ಅನಾವರಣಗೊಳಿಸಿವೆ. ನಿಷ್ಠಾವಂತ ಕನ್ನಡಿಗರಿಂದ ಹಾಗೂ ಕರ್ನಾಟಕ ಸರ್ಕಾರದ ಪ್ರಗತಿಪರ ಸ್ವಾಭಿಮಾನ ಪೂರಿತ ಪ್ರಯತ್ನಗಳಿಂದ ಮುಂದೆ ಕರ್ನಾಟಕದ ಹಿತಗಳನ್ನು ಕಾಯ್ದುಕೊಳ್ಳುವುದು ಸಾಧ್ಯವಾಗಬಹುದೆಂದು ಆಶಿಸಬಹುದು. (ಜಿ.ಸಿ.ಆರ್.)

**ಕಪ್ಪಲವಾಡಿ:** ತಮಿಳುನಾಡು ರಾಜ್ಯದ ಧರ್ಮಪುರಿ ಜಿಲ್ಲೆಯ ಕೃಷ್ಣಗಿರಿ ತಾಲ್ಲೂಕಿನಲ್ಲಿ, ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರಗೂರಿನ ಆಗ್ನೇಯಕ್ಕೆ 8 ಕಿಮೀ ಮತ್ತು ಕೃಷ್ಣಗಿರಿಯ ಪೂರ್ವಕ್ಕೆ 12ಕಿಮೀ ದೂರದಲ್ಲಿದೆ. ಈ ನೆಲೆಯ ಪಶ್ಚಿಮದ ಗುಡ್ಡಗಳಲ್ಲಿ ಕಿಲುಬು ಕಟ್ಟಿದ ಮೇಲ್ಮೈಯುಳ್ಳ ಕಲ್ಲಿನ ಉಪಕರಣಗಳು ದೊರೆತಿವೆ; ಇವು ನವಶಿಲಾಯುಗದ ಉಪಕರಣಗಳಿಗೆ ಹೋಲಿಸಬಲ್ಲವಾಗಿವೆ. ತಯಾರಿಕೆಯ ಬೇರೆ ಬೇರೆ ಹಂತಗಳಿಗೆ ಸೇರಿದ್ದು, ತಯಾರಿಕೆಯಲ್ಲಿ ಉಪಉತ್ಪನ್ನಗಳಾಗಿ ಹೊರಬಂದ ಚಕ್ಕೆಗಳೂ ಹೇರಳವಾಗಿವೆ. ಹಾಗಿದ್ದರೂ ತಯಾರಿಕೆಯ ಅಂತಿಮ ಹಂತವನ್ನು ತೋರುವ–ಎಂದರೆ ಉಜ್ಜಿನಯ ಮಾಡಿದ ಹಂತದ–ಯಾವ ಮಾದರಿಯೂ ಉಪಲಬ್ಧವಾಗಿಲ್ಲ. ಇದೊಂದು ನವಶಿಲಾಯುಗ ಉಪಕರಣಗಳ ಕೈಗಾರಿಕಾ ನೆಲೆಯೆಂದು ಗುರುತಿಸಬಹುದಾಗಿದೆ. ಈ ನೆಲೆಯಲ್ಲಿ ದೊರೆತಂಥ ಕಲ್ಲಿನ ಉಪಕರಣಗಳು ದೊರೆತಿರುವ ಇನ್ನೊಂದು ನೆಲೆ ಬರಗೂರಿನಲ್ಲಿದೆ.

ಈ ನೆಲೆಗಳಲ್ಲಿ ಲಭ್ಯವಾಗಿರುವ ಕಲ್ಲಿನ ಉಪಕರಣಗಳ ಪ್ರಕಾರಗಳು ಸಾಮಾನ್ಯವಾಗಿ ನವಶಿಲಾಯುಗದ ವೈವಿಧ್ಯವೇ. ಆದರೆ ಇಲ್ಲಿಯ ಚೂಪು ಉಪಕರಣಗಳಲ್ಲಿ ದೊರೆತ ಒಂದು ಮಾದರಿ ಪ್ರಾಯಃ ಮಣ್ಣುಕೊಚ್ಚುವ ಎಲಕೋಟು ಅಥವಾ ಗುದ್ದಲಿ ಗಮನಾರ್ಹ. ಕ್ಷೇತ್ರ ಕಾರ್ಯದಲ್ಲಿ ಉಪಲಬ್ಧ ಉಪಕರಣಗಳೆಂದರೆ ಬಾಚಿ, ಕೈಪಿಕಾಸಿ, ಚೂಪಾದ ಉಪಕರಣ, ಸುತ್ತಿಗೆ–ಕಲ್ಲು, ಕೊಚ್ಚುವ ಸಾಧನಗಳು, ಅಲಗು–ಚಕ್ಕೆಗಳು, ಜೋಡಿಕೆಯ ಭಾಗಗಳು ಹಾಗೂ ಅನುಪಯುಕ್ತ ಚಕ್ಕೆಗಳು. ಈ ಎಲ್ಲ ಉಪಕರಣಗಳು ತಯಾರಾಗಿರುವುದು ಡಾಲರೈಟ್ ಶಿಲೆಯಲ್ಲಿ. ಈ ಸಂಸ್ಕೃತಿಯ ಕಾಲವನ್ನು ತಾತ್ಕಾಲಿಕವಾಗಿ ಪ್ರ.ಶ.ಪೂ. 3500–3000 ಎಂದು ಊಹಿಸಬಹುದು. (ಬಿ.ಎನ್.)

**ಕಬ್ಬಿಣ ಯುಗ:** ಗ್ರೀಕ್ ಪುರಾಣಗಳ ಪ್ರಕಾರ ಮಾನವ ಯುಗಗಳ ಪೈಕಿ ಇದು ಕೊನೆಯದು. ಪುರಾತತ್ತ್ವದೃಷ್ಟಿಯಿಂದ ಕೂಡ ಇದು ಕಲ್ಲಿನ ಮತ್ತು ಕಂಚಿನ ಯುಗಗಳ ಅನಂತರದ್ದಾದರೂ ಮಹತ್ತ್ವವಾದ ಯುಗ. ಪಶ್ಚಿಮ ಏಷ್ಯ ಮತ್ತು ಆಗ್ನೇಯ ಏಷ್ಯಗಳಲ್ಲಿ ಕಬ್ಬಿಣ ಯುಗ ಆರಂಭವಾದದ್ದು ಪ್ರ.ಶ.ಪೂ.ಸು.1200ರಲ್ಲಿ. ಆದರೆ ಇದಕ್ಕೂ ಮುಂಚೆ ಕಬ್ಬಿಣದ ಬಳಕೆಯಿತ್ತು ಎಂದು ಹೇಳಲಾಗಿದೆ. ಆಗ ಬಳಕೆಯಲ್ಲಿದ್ದುದು ಬಹುತೇಕ ಉಲ್ಕಾಪಾತದ ಕಬ್ಬಿಣ. ಆಕಾಶದಿಂದ ಉಲ್ಕಾಪಾತಗಳ ರೂಪದಲ್ಲಿ ಬೀಳುತ್ತಿದ್ದ ಕಬ್ಬಿಣವನ್ನು ಆಭರಣ ವಸ್ತುಗಳನ್ನಾಗಿ ಮೆಸಪೊಟೇಮಿಯ, ಈಜಿಪ್ಟ್ ಮುಂತಾದ ಪ್ರಾಚೀನ ನಾಗರಿಕತೆಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಉಲ್ಕಾಪಾತ ಮೂಲದ ಕಬ್ಬಿಣವನ್ನು ಸುಮೇರಿಯನ್ನರು ಸ್ವರ್ಗದ ಲೋಹವೆಂದೂ ಈಜಿಪ್ಷಿಯನ್ನರು ಆಕಾಶದಿಂದ ಬಂದ ಕಪ್ಪು ತಾಮ್ರವೆಂದೂ ತಮ್ಮ ಬರೆವಣಿಗೆಗಳಲ್ಲಿ ಕರೆದಿರುವುದು ಗಮನಾರ್ಹ. ಕಂದುಕಂಚಿನಿಂದ ಭಿನ್ನವಾದ ಕಬ್ಬಿಣದ ಗುಣಗಳ ಸ್ಪಷ್ಟ ಅರಿವು ಆಗಿನ ಜನಕ್ಕೆ ಇನ್ನೂ ಆಗಿರಲಿಲ್ಲ. ಮೊದ ಮೊದಲು ಆಕಸ್ಮಿಕ ಪ್ರಯೋಗಗಳಿಂದಲೂ ಅವರು ಇವನ್ನು ಕ್ರಮೇಣ ಅರಿತುಕೊಂಡರು.

ಕಬ್ಬಿಣಯುಗೀನ ಸಂಸ್ಕೃತಿಯನ್ನು ಪೌರ್ವಾತ್ಯ ವಲಯದ ಪ್ರಾಕೃತಿಕ ಸಂಪತ್ತಿನಿಂದ ಮಾನವ ಸಾಧಿಸಿದ ಪುರೋಗಾಮಿತ್ವದ ಹೆಗ್ಗುರುತೆನ್ನಬಹುದು. ತಾಮ್ರದ ಅದಿರಿಗಿಂತ ಕಬ್ಬಿಣದ ಅದಿರು ಪ್ರಕೃತಿಯಲ್ಲಿ ಹೇರಳವಾಗಿ ಮತ್ತು ಹೆಚ್ಚು ಪ್ರದೇಶಗಳಲ್ಲಿ ದೊರಕುತ್ತಿದ್ದರೂ ತಾಮ್ರ–ಕಂಚುಗಳು ಬಳಕೆಗೆ ಬಂದ ಬಹುಕಾಲಾನಂತರವೇ ಕಬ್ಬಿಣ ಬಳಕೆಗೆ ಬಂದಿತು. ಪ್ರ.ಶ.ಪೂ.ಸು.1500ರ ಹೊತ್ತಿಗೆ ಪಶ್ಚಿಮ ಏಷ್ಯದ ಕೆಲವು ಪ್ರದೇಶಗಳಲ್ಲಿ, ಮುಖ್ಯವಾಗಿ ಕಪ್ಪುಸಮುದ್ರದ ದಕ್ಷಿಣ ತೀರದಲ್ಲಿ (ಅನಟೋಲಿಯ) ಕಬ್ಬಿಣದ ಉಪಯೋಗವನ್ನು ಕಂಡುಹಿಡಿದುದಾಗಿ ತಿಳಿದುಬರುತ್ತದೆ. ಕೊಮಾರನಹಳ್ಳಿಯ (**ನೋಡಿ**) ಬೃಹತ್ ಶಿಲಾಗೋರಿಗಳ ಕಬ್ಬಿಣದ ಆಯುಧಗಳ ಜೊತೆಗೆ ದೊರೆತ ಮಣ್ಪಾತ್ರೆಗಳ ಔಷ್ಣದೀಪ್ತಿ ಕಾಲಮಾನ ಪ್ರ.ಶ.ಪೂ.ಸು.1300. ಆದ್ದರಿಂದ ಭಾರತದಲ್ಲಿ ಪ್ರ.ಶ.ಪೂ.ಸು.1500–1400ರ ಹೊತ್ತಿಗೆ ಕಬ್ಬಿಣ ಲೋಹವನ್ನು ತಯಾರಿಸಲಾಗುತ್ತಿತ್ತೆಂದು ತಿಳಿಯಬಹುದಾಗಿದೆ. ಭಾರತದ ಕಬ್ಬಿಣ ತಂತ್ರಗಾರಿಕೆಯ ಒಂದು ವಿಶಿಷ್ಟ ಸಂಗತಿಯೆಂದರೆ ಅನಂತರ ಕಾಲದಲ್ಲಿ ಮೂಸೆ ವಿಧಾನವೆಂದು ವರ್ಣಿಸಲಾದ ತಂತ್ರದಿಂದ ಶುದ್ಧ ಮೆದುಕಬ್ಬಿಣವನ್ನು ಇದ್ದಿಲಿನೊಂದಿಗೆ, ಇದರಲ್ಲಿಯ ಇಂಗಾಲ ಕಬ್ಬಿಣದೊಡನೆ ಪೂರ್ತಿಯಾಗಿ ಬೆರೆಯುವ ತನಕ ಕಾಯಿಸಿ ಉತ್ತಮ ಉಕ್ಕನ್ನು ತಯಾರಿಸುತ್ತಿದ್ದುದು. ಪಶ್ಚಿಮ ಆಫ್ರಿಕದ ಪೂರ್ವ ನೈಜೀರಿಯದಲ್ಲಿಯ ಟರ್ಮಿಟ್‌ನಲ್ಲಿ ಪ್ರ.ಶ.ಪೂ.ಸು.1500ರಲ್ಲಿ ಕಬ್ಬಿಣ ಲೋಹ ತಯಾರಿಕೆಯ ತಂತ್ರಗಾರಿಕೆಯನ್ನು ಬೆಳೆಸಿಕೊಂಡಿದ್ದರು. ಈ ಪ್ರದೇಶದಿಂದ ದಕ್ಷಿಣ ಆಫ್ರಿಕದ ಭೂಶಿರದವರೆಗೂ ಈ ತಂತ್ರಜ್ಞಾನ ಹರಡಿತು. ಈ ತಂತ್ರಗಾರಿಕೆಯನ್ನು ಬಂಟು ಕೃಷಿಜನಾಂಗದವರು ರೂಢಿಸಿಕೊಂಡಿದ್ದರು. ಇದರಿಂದ ಇವರು ಪ್ರಬಲರೂ, ಶ್ರೀಮಂತರೂ ಆಗಿ ತಮ್ಮ ಕೃಷಿ ಉದ್ಯಮಕ್ಕೆ ಅನುಕೂಲವಾದ ದಕ್ಷಿಣದ ಸವನ್ನ ಪ್ರದೇಶದ ಕಡೆ ವಲಸೆ ಹೋದಂತೆಲ್ಲ ಅಲ್ಲಲ್ಲಿದ್ದ ಬೇಟೆ–ಸಂಗ್ರಹಣೆಯಿಂದ ತಮ್ಮ ಜೀವನವನ್ನು ನಡೆಸುತ್ತಿದ್ದ ಜನಸಮುದಾಯಗಳನ್ನು ಓಡಿಸಿ ಇಲ್ಲವೆ ಸೇರಿಸಿಕೊಳ್ಳುತ್ತಾ ಪ್ರಸರಿಸಿದರು. ಇದು ಯುನೆಸ್ಕೊ ಸಂಶೋಧನೆಯಿಂದ ತಿಳಿದುಬಂದಿದೆ. ಒಟ್ಟಾರೆ ಪ್ರ.ಶ.ಪೂ.1500–1300ರಲ್ಲಿ ಪಶ್ಚಿಮ ಆಫ್ರಿಕ, ಪಶ್ಚಿಮ ಏಷ್ಯ ಮತ್ತು ಭಾರತದಲ್ಲಿ ಕಬ್ಬಿಣಯುಗದ

2ನೆಯ ಹಂತದ ಕಬ್ಬಿಣದ ಕುಲುಮೆ, ಮಲ್ಹಾರ್–ಉತ್ತರ ಪ್ರದೇಶ

ಪ್ರಾಚೀನ ಹಂತ ಕಾಣಸಿಗುವುದರಿಂದ ಇಲ್ಲೆಲ್ಲ ಕಬ್ಬಿಣಯುಗ ಸ್ವತಂತ್ರವಾಗಿ ಪ್ರಾರಂಭವಾಗಿರುವ ಸಾಧ್ಯತೆಯಿದೆ. ಮೆಡಿಟರೇನಿಯನ್ ಪ್ರದೇಶದಲ್ಲಿ ಗ್ರೀಕ್ ಸಂಸ್ಕೃತಿ ಕಾಲದ ಇತಿಹಾಸ ಪರಂಪರೆ ಆರಂಭದ, ರೋಮನ್ ಸಾಮ್ರಾಜ್ಯ ಸ್ಥಾಪನೆ, ಭಾರತದಲ್ಲಿ ಹದಿನಾರು ಜನಪದಗಳ ಆರಂಭಕಾಲ ಮತ್ತು ಚೀನದಲ್ಲಿ ಕನ್‌ಫ್ಯೂಷಿಯಸ್ ಕಾಲದ ಹೊತ್ತಿಗೆ ಕಬ್ಬಿಣಯುಗ ಕೊನೆಗೊಂಡಿತೆಂದು ತಿಳಿಯಲಾಗಿದೆ. ಮೆಸಪೊಟೇಮಿಯದ ಟೆಲ್‌ಅಸ್ಮಾರ್ ಮತ್ತು ಮಾರಿ, ಸಿರಿಯದ ಛಗರ್ ಬಜಾರ್ ನೆಲೆಗಳಲ್ಲಿಯ ಪ್ರ.ಶ.ಪೂ.2500ರ ಕಾಲದ್ದಾಗಿರಬಹುದಾದ ಪದರಗಳಲ್ಲಿ ಇದ್ದಲಿನ ಕುಲುಮೆಗಳಲ್ಲಿ ಕರಗಿಸಿದ ಕೀಳ್ದರ್ಜೆಯ ಕಬ್ಬಿಣದಿಂದ ಮಾಡಲಾದ ವಸ್ತುಗಳು ದೊರಕಿವೆ. ಚಿನ್ನದ ಪಟ್ಟಿಯುಳ್ಳ ಸುಂದರವಾದ ಕಬ್ಬಿಣದ ಚಾಕುವೊಂದು ಅನಟೋಲಿಯದ (ಈಗಿನ ಟರ್ಕಿ) ಅಲಾಕಾ ಹುಯಿಕ್ ನೆಲೆಯಲ್ಲಿ ದೊರಕಿದೆ.

ಪ್ರ.ಶ.ಪೂ.2ನೆಯ ಸಹಸ್ರಮಾನದ ಪ್ರಾರಂಭದಲ್ಲಿದ್ದ ಹಿಟ್ಟೈಟ್ ಸಾಮ್ರಾಜ್ಯ ಪ್ರಬಲಿಸಿ ನೆರೆಯ ಪ್ರದೇಶವಾದ ಅರ್ಮೇನಿಯ ಪ್ರಾಂತದಲ್ಲಿ ವಿಶೇಷವಾಗಿದ್ದ ಕಬ್ಬಿಣದ ಅದುರನ್ನು ಉಪಯೋಗಿಸಿಕೊಂಡು ಕಬ್ಬಿಣದ ಲೋಹವಿದ್ಯೆಯನ್ನು ಬೆಳೆಸಿತು. ಪ್ರ.ಶ.ಪೂ.1900ರ ಸುಮಾರಿನಲ್ಲಿ ಮೆದುಕಬ್ಬಿಣವನ್ನು (ರಾಟ್ ಐರನ್) ತಯಾರಿಸಲಾಗುತ್ತಿತ್ತು. ಪ್ರ.ಶ.ಪೂ. 2ನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ ನಿಜವಾದ ಕಬ್ಬಿಣಯುಗದ ತಂತ್ರಗಳೆಲ್ಲವೂ ಕರಗತವಾಗಿದ್ದುವು.

ಮೊದಮೊದಲು ಕಬ್ಬಿಣ ಲೋಹವಿದ್ಯೆ ಹಿಟ್ಟೈಟ್ ಜನಾಂಗದವರಲ್ಲಿ ಗುಪ್ತವಾಗಿ ಉಳಿದಿತ್ತು. ಈ ಲೋಹದ ಆಯುಧಗಳು ಯುದ್ಧದಲ್ಲಿ ಬಹಳ ಪರಿಣಾಮಕಾರಿಗಳಾಗಿದ್ದುದರಿಂದ ಅವರು ಈ ಗುಟ್ಟನ್ನು ಇತರರಿಗೆ ಬಿಟ್ಟುಕೊಡಲಿಲ್ಲ. ತಮ್ಮ ಮಿತ್ರವರ್ಗಕ್ಕೆ ಸೇರಿದ ಈಜಿಪ್ಟಿನ ಮತ್ತಿತರ ರಾಜಮನೆತನಗಳಿಗೆ ಕಬ್ಬಿಣದ ಬಾಕು ಮತ್ತು ಆಭರಣಗಳನ್ನು ಅಮೂಲ್ಯ ಉಡುಗೊರೆಗಳಾಗಿ ಅರ್ಪಿಸುತ್ತಿದ್ದುದಕ್ಕೆ ಕೆಲವು ದಾಖಲೆಗಳು ದೊರಕಿವೆ. ಟುಟಂಕ್‌ಮನ್ ಸಮಾಧಿಯಲ್ಲಿ ದೊರಕಿರುವ, ಕಂಚಿನ ಹಿಡಿಯುಳ್ಳ, ಚಿನ್ನ ಮತ್ತು ಹರಳುಗಳಿಂದ ಅಲಂಕೃತವಾದ ಬಾಕು ಹಿಟ್ಟೈಟ್ ಪಂಗಡಕ್ಕೆ ಸೇರಿದ್ದ ನೆರೆಯ ಪ್ರದೇಶವಾದ ಸಿರಿಯದಲ್ಲಿ ಆಳುತ್ತಿದ್ದ ಮಿಟಾನಿ ರಾಜರ ಬಳುವಳಿಯೆಂದು ಟೆಲ್ ಅಮಾರ್ನಾದ ಲೇಖಗಳು ತಿಳಿಸುತ್ತವೆ. ಮೂರನೆಯ ಹಟ್ಟೂ ಸಿಲಿಸ್ ದೊರೆ (ಪ್ರ.ಶ.ಪೂ.1281–60) 2ನೆಯ ರ್‍ಯಾಮ್ಸೆಸ್ ದೊರೆಗೆ ಬರೆದ ಪತ್ರವೊಂದರಲ್ಲಿ ಕಬ್ಬಿಣದ ಬಾಕುವೊಂದರ ಉಲ್ಲೇಖವಿರುವುದಲ್ಲದೆ, ಉರರ್ಟು ಸರೋವರದ ಬಳಿ ಅರ್ಮೇನಿಯ ಪ್ರಾಂತದ ಹೊರಗೆ ಕಬ್ಬಿಣದ ತಯಾರಿಕೆಯನ್ನು

ನಿಷೇಧಿಸಿರುವ ಸಂಗತಿಯ ಪ್ರಸ್ತಾಪವಿದೆ. ಇದೇ ಸುಮಾರಿನಲ್ಲಿ ಹಿಟ್ಟೈಟರ ಮಿತ್ರವರ್ಗಕ್ಕೆ ಸೇರಿದ ಪ್ಯಾಲಸ್ಟೀನಿಯನ್ನರು ಸಿರಿಯ ಪ್ರದೇಶದಲ್ಲಿ ಕಬ್ಬಿಣದ ನಿಕ್ಷೇಪಗಳನ್ನು ರೂಢಿಸಲು ಬೇಕಾದ ತಾಂತ್ರಿಕ ಜ್ಞಾನವನ್ನು ಹಿಟ್ಟೈಟರಿಂದ ದೊರಕಿಸಿಕೊಂಡುದಕ್ಕೆ ಆಧಾರಗಳಿವೆ. ಪ್ರ.ಶ.ಪೂ. 1300ರ ಸುಮಾರಿನಲ್ಲಿ ಸಿರಿಯದ ರಾಸ್ ಷಮ್ರಾ ನೆಲೆಯಲ್ಲಿ ಚಿನ್ನದಿಂದಲಂಕೃತವಾದ ಹೆಚ್ಚು ನಿಕ್ಕಲ್ ಬೆರಕೆಯುಳ್ಳ ಕಬ್ಬಿಣದ ಬಾಕುವೊಂದು ಸಿಕ್ಕಿದೆ. ಇದು ಟುಟಂಕ್‌ಮನ್ ಸಮಾಧಿಯ ಬಾಕುವನ್ನು ಹೋಲುತ್ತದೆ.

ಪ್ರ.ಶ.ಪೂ. 12ನೆಯ ಶತಮಾನದಲ್ಲಿ ಸಮುದ್ರ ಜನರ ಧಾಳಿಗಳಿಂದ ಹಿಟ್ಟೈಟ್ ಸಾಮ್ರಾಜ್ಯದ ಪತನವಾದ ಅನಂತರ ಕಬ್ಬಿಣದ ಲೋಹಗಾರಿಕೆ ಪಶ್ಚಿಮ ಏಷ್ಯದ ಅನೇಕ ಭಾಗಗಳಲ್ಲಿ ಹರಡಿತು. ಇದರ ಫಲವಾಗಿ ಕಬ್ಬಿಣದ ಉಪಕರಣಗಳನ್ನು ವ್ಯವಸಾಯ, ಕೈಗಾರಿಕೆ ಮತ್ತಿತರ ನಿತ್ಯಜೀವನ ರಂಗಗಳಲ್ಲಿ ಬಳಸುವಂತಾಯಿತು. ಪ್ರ.ಶ.ಪೂ. 1180ರಲ್ಲಿ ಪ್ಯಾಲಸ್ಟೀನಿನ ಗೆರಾರಿನಲ್ಲಿ ದೊಡ್ಡದೊಂದು ಕಬ್ಬಿಣದ ಕಾರ್ಖಾನೆ ಸ್ಥಾಪಿತವಾಗಿತ್ತು. ಅನಂತರ ಅಸ್ಸೀರಿಯನ್ನರು ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಉತ್ಪಾದನೆ ಮಾಡಲಾರಂಭಿಸಿದರು. ಪ್ರ.ಶ.ಪೂ. 8ನೆಯ ಶತಮಾನಕ್ಕೆ ಸೇರುವ 2ನೆಯ ಸಾರ್ಗಾನ್ ದೊರೆಯ ಅರಮನೆಯಲ್ಲಿ 3,00,000 ಪೌಂಡ್ ತೂಕದ ಕಬ್ಬಿಣದ ಗಟ್ಟಿಗಳನ್ನು ಶೇಖರಿಸಲಾಗಿತ್ತು. ಬಹುಶಃ ಈ ಸುಮಾರಿನಲ್ಲಿ ಈಜಿಪ್ಟಿನಲ್ಲೂ ಕಬ್ಬಿಣ ಲೋಹವಿದ್ಯೆ ಬಳಕೆಗೆ ಬಂದಿತು. ನೈರುತ್ಯ ಇರಾನಿನಲ್ಲಿ ಸಿಯಾಲ್ಕ್ ಎ ಮತ್ತು ಬಿ ಸಂಸ್ಕೃತಿಗಳ ಕಾಲದಲ್ಲಿ ಪ್ರಾರಂಭವಾಗಿ ಪ್ರ.ಶ.ಪೂ. ಮೊದಲ ಸಹಸ್ರಮಾನದ ಆರಂಭದಲ್ಲಿ ಕಬ್ಬಿಣದ ಉಪಯೋಗ ಪ್ರಬಲವಾಯಿತು.

ಈ ಮಾರ್ಗವಾಗಿ ಕಬ್ಬಿಣದ ಉಪಯೋಗ ಭಾರತದ ಗಡಿಗೆ ಪ್ರ.ಶ.ಪೂ. 12ನೆಯ ಶತಮಾನದ ವೇಳೆಗೆ ಬಂದಿರಬಹುದೆಂಬ ಅಭಿಪ್ರಾಯವಿತ್ತು. ಉತ್ತರ ಪ್ರದೇಶದ ಅತ್ರಂಜಿಖೇಡ, ರಾಜಸ್ತಾನದ ನೋಹ್, ಧಾರವಾಡ ಜಿಲ್ಲೆಯ ಹಳ್ಳೂರು ಮುಂತಾದ ನೆಲೆಗಳಲ್ಲಿ ಇಂಗಾಲ-14 ಪರೀಕ್ಷಾವಿಧಾನದಿಂದ ತಿಳಿದುಬಂದಿರುವಂತೆ ಇತ್ತೀಚಿನ ಲಹುರ ದೇವ ಉತ್ಖನನದಲ್ಲಿ ಪ್ರ.ಶ.ಪೂ.1600ರಲ್ಲಿ ಕಬ್ಬಿಣ ತಯಾರಿಕೆಯಿದ್ದುದಕ್ಕೆ ಸ್ಪಷ್ಟ ಪುರಾವೆಗಳು ದೊರೆತಿವೆ. ಗಂಗಾನದಿ ಬಯಲಿನಲ್ಲಿ ವರ್ಣಚಿತ್ರಿತ ಬೂದುಮಡಕೆಗಳ ಮತ್ತು ಮಧ್ಯಭಾರತದಲ್ಲಿ ಕಪ್ಪು-ಕೆಂಪು ದ್ವಿವರ್ಣ ಮಡಕೆಗಳ ಸಂಸ್ಕೃತಿಗಳೊಂದಿಗೂ ದಕ್ಷಿಣ ಭಾರತದಲ್ಲಿ ಬೃಹತ್‌ಶಿಲಾ ಸಮಾಧಿ ಸಂಸ್ಕೃತಿಯೊಂದಿಗೂ ಕಬ್ಬಿಣದ ಬಳಕೆ ಪ್ರಬಲವಾಗಿ, ಜನರ ನಿತ್ಯಜೀವನ ಕ್ರಮದಲ್ಲಿ ಬೆರೆತು ಅತಿ ಶೀಘ್ರದಲ್ಲಿ ಸುಧಾರಣೆಗಳನ್ನುಂಟು ಮಾಡಿದುದಲ್ಲದೆ ಚಾರಿತ್ರಿಕ ನಗರೀಕರಣಕ್ಕೆ ನಾಂದಿಯಾಗಿ ಪರಿಣಮಿಸಿತು. ಆದ್ದರಿಂದ ಈ ತಂತ್ರಗಾರಿಕೆ ಹೊರದೇಶಗಳಿಂದ ಪ್ರಸರಿಸಿ ಇಲ್ಲಿ ಬೆಳೆಯಿತೆಂಬ ಅಭಿಪ್ರಾಯ ಸರಿಯೆಂದು ಕಾಣುವುದಿಲ್ಲ. ಬಹುಮಟ್ಟಿಗೆ ಹರಪ್ಪ ನಾಗರಿಕತೆಯ ತಾಮ್ರ ತಂತ್ರಗಾರಿಕೆಯಿಂದಲೆ ಕ್ರಮೇಣ ಬೆಳೆದು ಬಂದಿರುವ ಸಾಧ್ಯತೆಯಿದೆ. (ಎ.ಎಸ್.)

ಗಾವೊಚೆಂಗ್ (ಹೆಬಿ ಪ್ರಾಂತ, ಚೀನ) ಸಮೀಪದ ನೆಲೆಯ ಉತ್ಖನನದಲ್ಲಿ ಪ್ರ.ಶ.ಪೂ.ಸು.14ನೆಯ ಶತಮಾನದ ಉಲ್ಕಾಪಾತ ಕಬ್ಬಿಣದಿಂದ ತಯಾರಿಸಿದ ಹರಿತ ಬಾಯಿಯ ತೆಳು ತಗಡು ಸಿಕ್ಕಿದೆ. ಯಾಂಗ್ಸಿ ಕೊಳ್ಳದ ಚಂಗಶ ಮತ್ತು ನನ್‌ಜಿಂಗ್‌ನಲ್ಲಿ ದೊರೆತ ಎರಕದಿಂದ ಮಾಡಿದ ಕಬ್ಬಿಣ ಸಾಮಾನುಗಳು ಪ್ರ.ಶ.ಪೂ.6ನೆಯ ಶತಮಾನದ್ದು. ಜಪಾನಿನ ಕ್ಯುಶು-ಹೊನ್ಶು ಪ್ರದೇಶದ ಯಯೊಯಿ ಸಂಸ್ಕೃತಿಯ (ಪ್ರ.ಶ.ಪೂ.500-ಪ್ರ.ಶ.300) ಅವಧಿಯಲ್ಲಿ ಕಬ್ಬಿಣದ ಉಪಯೋಗವಿದ್ದಿತ್ತು.

ಕ್ರೀಟ್ ದ್ವೀಪದಲ್ಲಿ ಪ್ರ.ಶ.ಪೂ.2ನೆಯ ಸಹಸ್ರಮಾನದ ಕೊನೆಯ ಕಾಲದಲ್ಲಿ ಕಬ್ಬಿಣದ ಬಳಕೆ ಪ್ರಾರಂಭವಾಯಿತು. ಫೆಯಿಸ್ಟಾಸ್, ವಾಫಿಯೋ ಮತ್ತಿತರ ನೆಲೆಗಳಲ್ಲಿ ಪ್ರ.ಶ.ಪೂ. 1500-1200ರ ಕಾಲದ ಕಬ್ಬಿಣದ ಅವಶೇಷಗಳು ದೊರಕಿವೆ. ಕ್ರೀಟಿನಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳು ಹೆಚ್ಚಾಗಿಲ್ಲ. ಲೋಹಗಾರಿಕೆಗೆ ಆಮದಾದ ಕಬ್ಬಿಣವನ್ನೇ ಅವಲಂಬಿಸಬೇಕಾಗಿತ್ತು. ಡೆಂಡ್ರಾದ ಸಮಾಧಿಗಳಲ್ಲಿ ದೊರಕಿರುವುವೇ ಗ್ರೀಸಿನ ಅತ್ಯಂತ ಪುರಾತನ ಕಬ್ಬಿಣದ ವಸ್ತುಗಳು. ಇವು ಪ್ರ.ಶ.ಪೂ. 13ನೆಯ ಶತಮಾನಕ್ಕೆ ಸೇರುತ್ತವೆ. ದಕ್ಷಿಣ ರಷ್ಯದ ಕೋಬಾನ್ ಸಂಸ್ಕೃತಿಯಲ್ಲಿ ಈ ಸುಮಾರಿನಲ್ಲೆ ಕಬ್ಬಿಣ ಬಳಸಲಾಗುತ್ತಿತ್ತು. ಈ ಎರಡು ಪ್ರದೇಶಗಳನ್ನು ಬಿಟ್ಟರೆ ಯುರೋಪಿ ನಲ್ಲಿ ಕಬ್ಬಿಣ ಯುಗ ಪ್ರ.ಶ.ಪೂ.800ರ ಸುಮಾರಿನಲ್ಲಿ ಇಟಲಿ ಮತ್ತು ಮಧ್ಯಯುರೋಪ್ ಪ್ರದೇಶಗಳಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ವಿವಿಧ ಪ್ರದೇಶಗಳಲ್ಲಿ ಕಬ್ಬಿಣ ಬೇರೆ ಬೇರೆ ಕಾಲಗಳಲ್ಲಿ ಬಳಕೆಗೆ ಬಂದುದರಿಂದ ಈ ಕಾಲಗಣನೆ ಯುರೋಪಿನ ಎಲ್ಲ ಪ್ರದೇಶಗಳಿಗೂ ಅನ್ವಯಿಸುವುದಿಲ್ಲ. ಯುರೋಪಿನ ಕಬ್ಬಿಣ ಯುಗವನ್ನು ಆದಿ (ಪ್ರ.ಶ.ಪೂ. 800-400) ಮತ್ತು ಅಂತ್ಯ (ಪ್ರ.ಶ.ಪೂ. 400-15) ಕಬ್ಬಿಣ ಯುಗಗಳೆಂದು ವಿಂಗಡಿಸ ಬಹುದಾಗಿದೆ. ಪ್ರ.ಶ.ಪೂ. 16-15ರಲ್ಲಿ ರೋಮನ್ ಆಕ್ರಮಣದೊಂದಿಗೆ ಆಲ್ಪ್ಸ್ ಪ್ರದೇಶ, ಇಟಲಿ, ಫ್ರಾನ್ಸ್ ಮತ್ತು ಆಗ್ನೇಯ ಸ್ಪೇನ್ ಪ್ರದೇಶಗಳಲ್ಲಿ ಐತಿಹಾಸಿಕ ಯುಗ ಪ್ರಾರಂಭವಾಯಿತು.

ಪೂರ್ವಕಾಲೀನ ಕಬ್ಬಿಣ ಯುಗದಲ್ಲಿ ಇಟಲಿ ಮತ್ತು ಮಧ್ಯ ಯುರೋಪುಗಳಲ್ಲಿ ಕಬ್ಬಿಣದ ಬಳಕೆ ಹೆಚ್ಚಾಯಿತು. ಇಟಲಿಯ ಎಟ್ರಸ್ಕನ್ (**ನೋಡಿ**) ಸಂಸ್ಕೃತಿ ಸ್ಥಳೀಯ ಮತ್ತು ಹೊರಗಿನಿಂದ ವಲಸೆ ಬಂದ ಸಂಸ್ಕೃತಿಗಳ ಮಿಲನದಿಂದ ಹುಟ್ಟಿ ಫಿನೀಷಿಯದ ಮತ್ತು ಈಜಿಪ್ಟಿನ ಹಲವು ಲಕ್ಷಣಗಳಿಂದ ಕೂಡಿದೆ. ಈ ಸಂಸ್ಕೃತಿಯ ಹೆಗ್ಗುರುತುಗಳನ್ನು ಟಾರ್ಕ್ವಿನಿಯ, ವೇಯ್, ಪೆಟುಲೋಯ ಮುಂತಾದೆಡೆಗಳಲ್ಲಿಯ ಸಮಾಧಿಗಳಿಂದ ಗುರುತಿಸಬಹುದು. ಇಲ್ಲೂ ಇತರ ಸ್ಥಳಗಳಲ್ಲೂ ಇರುವ ಸಮಾಧಿಗಳಲ್ಲಿ ದೊರಕಿರುವ ಶವಸಂಸ್ಕಾರ ಸಂಬಂಧ ವಸ್ತುಗಳಿಂದ ಪೌರಸ್ತ್ಯ ದೇಶಗಳ ಪ್ರಭಾವಗಳನ್ನೂ ಸಂಸ್ಕೃತಿಯ ರೂಪುರೇಷೆಗಳನ್ನೂ ತಿಳಿಯಬಹುದು.

ಇಟಲಿಯ ಉತ್ತರ ಭಾಗದಲ್ಲಿ ಈ ಕಾಲದಲ್ಲಿ ವಿಲ್ಲನೋವನ್ ಸಂಸ್ಕೃತಿ ಅಸ್ತಿತ್ವಕ್ಕೆ ಬಂತು. ಸರೋವರವಾಸಿಗಳ ಸಂಸ್ಕೃತಿ ಮತ್ತು ಅಸ್ಥಿಪಾತ್ರೆ ಕ್ಷೇತ್ರ ಸಂಸ್ಕೃತಿಗಳ ಮಿಲನದಿಂದ ಪ್ರ.ಶ.ಪೂ. ಮೊದಲ ಸಹಸ್ರಮಾನದ ಪ್ರಾರಂಭದಲ್ಲಿ ಹುಟ್ಟಿದ ಈ ಕಂಚಿನ ಯುಗದ ಸಂಸ್ಕೃತಿಯಲ್ಲಿ ಕ್ರಮೇಣ ಕಬ್ಬಿಣದ ಬಳಕೆ ಆರಂಭವಾಯಿತು. ಕಾಲಕ್ರಮದಲ್ಲಿ ಎಟ್ರಸ್ಕನ್ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿ ಅದರೊಂದಿಗೆ ಲೀನವಾಯಿತು. ಪ್ರ.ಶ.ಪೂ. 400ರಲ್ಲಿ ಕೆಲ್ಟರ ಧಾಳಿಗಳ ಫಲವಾಗಿ ಈ ಸಂಸ್ಕೃತಿಯ ಅಂತ್ಯವಾಯಿತು.

ಪೂರ್ವ ಫ್ರಾನ್ಸಿನಿಂದ ಆಸ್ಟ್ರಿಯದವರೆಗೂ ಹರಡಿದ್ದ ಹ್ಯಾಲ್‌ಸ್ಟಾಟ್ ಸಂಸ್ಕೃತಿ ಮಧ್ಯಯುರೋಪಿನ ಕಬ್ಬಿಣ ಯುಗದ ಸಂಸ್ಕೃತಿಗಳಲ್ಲಿ ಮುಖ್ಯವಾದುದು. ಪ್ರ.ಶ.ಪೂ.5-2ನೆಯ ಶತಮಾನಗಳಲ್ಲಿ ಪ್ರಬಲವಾಗಿದ್ದ ಈ ಸಂಸ್ಕೃತಿ ಆಲ್ಪ್ಸ್ ಪ್ರದೇಶಗಳಲ್ಲಿ ಪ್ರ.ಶ.ಪೂ. 400ರಲ್ಲಿ ಕೆಲ್ಟರ ಧಾಳಿಗಳಿಂದ ನಾಶವಾದರೂ ಕೆಲಭಾಗಗಳಲ್ಲಿ ಪ್ರಸ್ತುತಶಕದ ಆರಂಭದವರೆಗೂ ಉಳಿದಿತ್ತು. ಜರ್ಮನಿ, ಸೈಲೀಷಿಯ, ಬಾಲ್ಕನ್ ಪ್ರದೇಶ, ಹಂಗರಿ ಮತ್ತು ರೋಮೇನಿಯ ಗಳಲ್ಲೂ ಹ್ಯಾಲ್‌ಸ್ಟಾಟ್ ರೀತಿಯ ಸಂಸ್ಕೃತಿಗಳು ಪ್ರ.ಶ.ಪೂ.7-4ನೆಯ ಶತಮಾನಗಳವರೆಗೂ ರೂಢಿಯಲ್ಲಿದ್ದವು. ಪಶ್ಚಿಮ ಯುರೋಪಿನ ಇನ್ನು ಕೆಲವು ಪ್ರದೇಶಗಳಲ್ಲಿ ಕಂಚಿನ ಯುಗದ ಮತ್ತು ಹ್ಯಾಲ್‌ಸ್ಟಾಟ್ ಸಂಸ್ಕೃತಿಗಳ ಸಂಪರ್ಕದಿಂದ ಕಬ್ಬಿಣ ಯುಗೀನ ಸಂಸ್ಕೃತಿಯೊಂದು ವಿಕಾಸ ಗೊಂಡಿತು. ಪ್ರ.ಶ.ಪೂ.4ನೆಯ ಶತಮಾನದಲ್ಲಿ ಈ ಪ್ರದೇಶಗಳಲ್ಲಿ ಲಾ ತೆನೆ ಸಂಸ್ಕೃತಿಯ (**ನೋಡಿ**) ಅಂಶಗಳು ಕಾಣಿಸಿಕೊಂಡವು. ಉತ್ತರ ಫ್ರಾನ್ಸ್ ಮತ್ತು ಬ್ರಿಟಿಷ್ ದ್ವೀಪಗಳಲ್ಲಿ ಕಂಚಿನ ಯುಗದ ಸಂಸ್ಕೃತಿಗಳು ಮುಂದುವರಿಯುತ್ತಿದ್ದು, ಪ್ರ.ಶ.ಪೂ. 5ನೆಯ ಶತಮಾನದ ಅಂತ್ಯದಲ್ಲಿ ಕೆಲ್ಟರ ಆಕ್ರಮಣದಿಂದ ಅಲ್ಲಿಗೂ ಕಬ್ಬಿಣದ ಪ್ರವೇಶವಾಯಿತು.

ಪ್ರ.ಶ.ಪೂ.5ನೆಯ ಶತಮಾನದ ಅಂತ್ಯಕಾಲದಲ್ಲಿ ಯುರೋಪಿನ ಅನೇಕ ಭಾಗಗಳಲ್ಲಿ ಕೆಲ್ಟರ ಪ್ರಭಾವದಿಂದ ಅಂತ್ಯ ಕಬ್ಬಿಣ ಯುಗ ಲಾ ತೆನೆ ಸಂಸ್ಕೃತಿಯೊಂದಿಗೆ ಆರಂಭವಾಗುತ್ತದೆ. ಬ್ರಿಟನ್ನಿನಲ್ಲಿ ಈ ಯುಗದ ಸಂಸ್ಕೃತಿಗಳನ್ನು ಎ, ಬಿ ಮತ್ತು ಸಿ ಎಂಬ ಮೂರು ಅನುಕ್ರಮ ಉಪಹಂತಗಳಾಗಿ ವಿಂಗಡಿಸಲಾಗಿದೆ. ಈ ಕಾಲದ ಐರೋಪ್ಯ ಸಂಸ್ಕೃತಿಗಳಲ್ಲಿ ಗ್ರೀಕ್ ಸಂಸ್ಕೃತಿ ಅಂಶಗಳನ್ನು ಹೋಲುವ ಮತ್ತು ಹ್ಯಾಲ್‌ಸ್ಟಾಟ್ ಸಂಸ್ಕೃತಿಯ ರೀತಿಯಲ್ಲಿ ನಿರ್ಮಿತವಾದ ಕಲಾವಸ್ತುಗಳು ಕಾಣಬರುತ್ತವೆ. ಪ್ರಾಣಿಚಿತ್ರಣದಲ್ಲಿ ಸಿಥಿಯನರ ಪ್ರಭಾವ ಎದ್ದು ಕಾಣುತ್ತದೆ. ಪಶ್ಚಿಮ ಸ್ವಿಟ್ಜರ್ಲೆಂಡಿನಲ್ಲಿ ತಲೆದೋರಿದ ಈ ಸಂಸ್ಕೃತಿ ಕ್ರಮೇಣ ಡ್ಯಾನ್ಯೂಬ್ ಕಣಿವೆಯಲ್ಲೂ ಫ್ರಾನ್ಸ್ ಮತ್ತು ಬ್ರಿಟಿಷ್ ದ್ವೀಪಗಳಲ್ಲೂ ಹರಡಿ ರೋಮನರ ಧಾಳಿಯ ಕಾಲದ (ಪ್ರಚಲಿತ ಶಕೆಯ ಆರಂಭಕಾಲ)ವರೆಗೂ ಪ್ರಬಲವಾಗಿತ್ತು. ರೋಮನರ ಧಾಳಿಗಳೊಂದಿಗೆ ಯುರೋಪಿನ ಹಲವಾರು ಪ್ರದೇಶಗಳಲ್ಲಿ ಇತಿಹಾಸ ಯುಗದ ಪ್ರಾರಂಭವಾಯಿತು. (ಬಿ.ಕೆ.ಜಿ.;ಎ.ಎಸ್.;ಆರ್.ಕೆ.ಎಂ.;ಆರ್.ಎಸ್.ಪಿ.)

**ಕಬ್ಬಿಣ ಲೋಹ ತಂತ್ರಗಾರಿಕೆ:** ಲೋಹ ಪ್ರಾಚೀನತೆಯು ಪ್ರಪಂಚದ ಎಲ್ಲ ಪ್ರದೇಶಗಳಲ್ಲಿಯ ತಾಮ್ರ-ಶಿಲಾ (ಚಾಲ್ಕೋಲಿಥಿಕ್) ಸಂಸ್ಕೃತಿಗಳಷ್ಟು ಹಿಂದಿನದಾಗಿದೆ. ಭಾರತದಲ್ಲಿ ವಿಶೇಷವಾಗಿ ದಖನ್‌ದಲ್ಲಿಯೂ ಮಧ್ಯ ಮತ್ತು ಪಶ್ಚಿಮ ಭಾಗಗಳಲ್ಲಿಯ ಅನೇಕ ಸ್ಥಳಗಳಲ್ಲಿಯೂ ಇಂತಹ ತಂತ್ರಗಾರಿಕೆಯ ಅವಶೇಷಗಳು ಕಂಡುಬರುತ್ತವೆ. ಪ್ರ.ಶ.ಪೂ.ಸು. 2ನೆಯ ಸಹಸ್ರಮಾನದಿಂದ ಹಿಡಿದು ಕಬ್ಬಿಣಯುಗದ ಪ್ರಾರಂಭದ ಕಾಲಾವಧಿ ಯವರೆಗೂ ಸಂಬಂಧಿಸಿದಂತೆ ಈ ಅವಶೇಷಗಳು ಇದ್ದಿರಬಹುದು ಎಂದು ತರ್ಕಿಸಲಾಗಿದೆ.

ಗಣಿಗಾರಿಕೆ, ಅದಿರು ಸಂಗ್ರಹಿಸುವುದು, ಅದಿರಿನಿಂದ ಲೋಹವನ್ನು ಬೇರ್ಪಡಿಸುವುದು ಹಾಗೂ ಇನ್ನಿತರ ಕ್ಲಿಷ್ಟತರವಾದ ಕೆಲ ಹಂತಗಳಲ್ಲಿಯ ಕ್ರಮಗಳು ಲೋಹತಂತ್ರಗಾರಿಕೆಯಲ್ಲಿ ಅಡಕವಾಗಿವೆ. ಲೋಹ ಉಪಕರಣಗಳು ಬಳಕೆಯಲ್ಲಿ ಬಂದ ಅನಂತರ ಮಾತ್ರವೇ ಕೃಷಿ ಮತ್ತು ಪಶುಸಂಗೋಪನೆಗಳ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ತನ್ನ ಸಂರಕ್ಷಣೆಯನ್ನು, ಆರ್ಥಿಕ ಸೌಖ್ಯವನ್ನು ಕೂಡ ಭದ್ರಪಡಿಸಿಕೊಳ್ಳಲು ಅವನಿಗೆ ಸಾಧ್ಯವಾಯಿತು. ಲೋಹತಂತ್ರಗಾರಿಕೆಯಲ್ಲಿ ಹಂತಗಳ ಕ್ರಮವನ್ನು ತಿಳಿದುಕೊಳ್ಳಬೇಕಾದರೆ ಈ ಕೆಳಕಂಡ ಕೆಲ ಅಂಶಗಳತ್ತ ಗಮನ ಹರಿಸಬೇಕಾಗುವುದು: (ಅ) ಅದಿರು ಲಭ್ಯ ಪ್ರದೇಶಗಳಲ್ಲಿ ಗಣಿಗಳು: (ಬ) ಲೋಹವನ್ನು ಬೇರ್ಪಡಿಸುವ ಇಲ್ಲವೆ ಅದಿರನ್ನು ಕರಗಿಸುವ ವಿಧಾನದ ಪೂರ್ವಸಿದ್ಧತೆ: (ಕ) ವಿಶಿಷ್ಟ ರೀತಿಯ ಪ್ರಯೋಜನಗಳಿಗಾಗಿ ಬಳಸಲು ಬೇಕಾದ ಉಪಕರಣ ಉತ್ಪಾದನೆಗೆ: ಕಂಬಾರಿಕೆಯ ವಿಧಾನಗಳನ್ನು ರೂಪಿಸುವುದು. ಈ ಅಂಶಗಳು ತಾಮ್ರ ಮತ್ತು ಕಬ್ಬಿಣ ಈ ಎರಡೂ ಲೋಹಗಳ ತಯಾರಿಕೆಗೆ ಸಂಬಂಧಪಟ್ಟಿರುತ್ತವೆ.

ತಾಮ್ರದ ತಯಾರಿಕೆ ಕರ್ನಾಟಕದಲ್ಲಿ ನವಶಿಲಾಯುಗದ ಒಂದು ಹಂತದಲ್ಲಿ ಪ್ರಾರಂಭ ವಾಯಿತು. ಕರ್ನಾಟಕದಲ್ಲಿ ಕಬ್ಬಿಣದ ನಿಕ್ಷೇಪ ವಿಪುಲವಾಗಿದೆ. ತಾಮ್ರದ ನಿಕ್ಷೇಪ ಅಷ್ಟಿಲ್ಲ. ಚಿತ್ರದುರ್ಗದ ಹತ್ತಿರದ ಇಂಗಳದಾಳು, ಕಲ್ಯಾಡಿ (ಹಾಸನ ಜಿಲ್ಲೆ), ದೇವಗೊಂಡನಹಳ್ಳಿ (ಚಿಕ್ಕಮಗಳೂರು), ತಿಂಥಿಣಿ (ಗುಲ್ಬರ್ಗ), ಸೋಮನಹಳ್ಳಿ (ಮೈಸೂರು), ಮಾಚನೂರು (ರಾಯಚೂರು), ಜಂಬಾನಿ (ಶಿವಮೊಗ್ಗ) ಹಾಗೂ ಬಳ್ಳಾರಿ ಜಿಲ್ಲೆಯ ನೈರುತ್ಯ ಭಾಗ ಈ ಸ್ಥಳಗಳಲ್ಲಿ ತಾಮ್ರದ ಅದಿರಿನ ನಿಕ್ಷೇಪಗಳಿವೆ. ತಾಮ್ರ ಅದಿರಿನ ಗಣಿಗಾರಿಕೆ ಇತ್ಯಾದಿ ಕೆಲಸಗಳು ನಡೆದ ಕುರುಹುಗಳಾದ ಅದಿರಿನ ಕಿಟ್ಟ ಅಥವಾ ಗಸಿ, ಶಾಖಕ್ಕೆ ಒಗ್ಗದ ಬಿರುಸು ಅದಿರು

ಹಾಗೂ ಕಚ್ಚಾ ಅದಿರು ಇವು ಕಲ್ಯಾಡಿ ಗಣಿ ಪ್ರದೇಶದಲ್ಲಿ ಇಂದಿಗೂ ಕಂಡುಬರುತ್ತವೆ. ಚಿತ್ರದುರ್ಗ ಜಿಲ್ಲೆಯ ಇಂಗಳದಾಳದಲ್ಲಿ ಬೃಹತ್‌ಶಿಲಾಯುಗಕ್ಕೆ ಶವಸಂಸ್ಕಾರ ನೆಲೆಯೊಂದರಲ್ಲಿ ಅನುಕ್ರಮವಾಗಿ ನವಶಿಲಾಯುಗ, ತಾಮ್ರ–ಶಿಲಾಯುಗ ಹಾಗೂ ಕಬ್ಬಿಣ ಯುಗ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಸ್ತರಗಳು ಕಂಡುಬರುತ್ತದೆ. ಇಲ್ಲಿಯ ಕಬ್ಬಿಣ ಸರಕುಗಳು ತೀರ ಜಂಗುಗಟ್ಟಿವೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನಲ್ಲಿಯ ಕೊಮಾರನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಗಳಲ್ಲಿಯೂ ರಾಯಚೂರು ಜಿಲ್ಲೆಯ ಪಿಕ್ಲಿಹಾಳ ಮತ್ತು ಮಸ್ಕಿಗಳಲ್ಲಿಯೂ ಧಾರವಾಡ ಜಿಲ್ಲೆಯ ಹಳ್ಳೂರು ಎಂಬಲ್ಲಿಯೂ ಹಾಗೂ ಇನ್ನಿತರ ಕೆಲವೆಡೆಗಳಲ್ಲಿಯೂ ಸೂಚಿಸುವ ಸ್ತರಗಳು ಕಂಡುಬರುತ್ತವೆ. ಹಾಗೆಯೇ ಬಿಜಾಪುರ ಜಿಲ್ಲೆಯ ಹಿಂಗಣಿ, ಇಂಗಳಗಿ ಹಾಗೂ ಬೆಳಗಾಂವಿ ಜಿಲ್ಲೆಯ ಕುಡಚಿ ಎಂಬಲ್ಲಿಯೂ ತಾಮ್ರ–ಶಿಲಾಯುಗ, ಬೃಹತ್ ಶಿಲಾಯುಗದ ನೆಲೆಗಳು ಕಂಡುಬಂದಿವೆ. ಆದ್ದರಿಂದ ತಾಂತ್ರಿಕ ಪ್ರಗತಿಗೆ ಸಂಬಂಧಿಸಿದ ಯಾವುದೇ ಅಧ್ಯಯನ ನಡೆದರೂ ತಾಮ್ರ–ಶಿಲಾಯುಗ ಮತ್ತು ಬೃಹತ್ ಶಿಲಾಯುಗಗಳನ್ನು ಒಟ್ಟಾಗಿ ಗಮನಿಸಬೇಕಾದುದು ಅವಶ್ಯ.

**ಗಣಿಗಾರಿಕೆ:** ಖನಿಜಗಳ ಪ್ರಯೋಜನ ಪಡೆಯಲು ಮಾನವ ನಡೆಸಿದ ಪ್ರಯತ್ನಗಳಿಗೆ ದೀರ್ಘ ಇತಿಹಾಸವಿದೆ. ದಕ್ಷಿಣ ಆಫ್ರಿಕದಲ್ಲಿ ಮಧ್ಯಶಿಲಾಯುಗದಲ್ಲಿ ವರ್ಣದ್ರವ್ಯ ಪಡೆಯಲ್ಲಿ ಕಬ್ಬಿಣದ ಅದಿರನ್ನು ತೋಡಿ ತೆಗೆಯುವ ಗಣಿ ಕೆಲಸ ನಡೆಯುತ್ತಿತ್ತು ಎಂದು ತೋರುತ್ತದೆ. ಆದ್ದರಿಂದ ಹಲವಾರು ಪ್ರಾಗೈತಿಹಾಸಿಕ ಜನ ಸಮುದಾಯಗಳಿಗೆ ಕಬ್ಬಿಣದ ಗಣಿಗಾರಿಕೆಯ ತಂತ್ರ ಪರಿಚಿತವಾಗಿತ್ತು ಎಂಬುದು ವಿಸ್ಮಯಕಾರಕವಾದ ಸಂಗತಿಯಾಗಿದ್ದರೂ ಈ ಗಣಿಗಾರಿಕೆಯಿಂದ ಕಬ್ಬಿಣದ ಲೋಹವನ್ನು ತಯಾರಿಸುವ ಉದ್ದೇಶವಿರಲಿಲ್ಲ. ತಾಮ್ರದ ಲೋಹವನ್ನೇ ಪಡೆಯಬೇಕೆಂಬ ಉದ್ದೇಶದಿಂದ ತಾಮ್ರದ ಅದಿರನ್ನು ಕರಗಿಸಿ ಲೋಹವನ್ನು ಪಡೆಯುವ ತಂತ್ರವು ಕಬ್ಬಿಣದ ಅದಿರನ್ನು ಕರಗಿಸಿ ಕಬ್ಬಿಣವನ್ನು ತಯಾರಿಸುವ ತಂತ್ರಕ್ಕಿಂತ ಹೆಚ್ಚು ಪ್ರಾಚೀನವಾದುದು. ಕಾರಣ ತಾಮ್ರವನ್ನು 1200 ಡಿಗ್ರಿಗಳಿಗಿಂತಲೂ ಕಡಿಮೆ ಶಾಖದಲ್ಲಿ ಕರಗಿಸಬಹುದು. ಆದರೆ ಕಬ್ಬಿಣ 1540 ಡಿಗ್ರಿಗಳಿಗಿಂತ ಹೆಚ್ಚಿನ ಶಾಖದಲ್ಲಿ ಮಾತ್ರ ಕರಗಬಲ್ಲದು. ಇಷ್ಟೊಂದು ಶಾಖವನ್ನು ಉತ್ಪನ್ನಗೊಳಿಸಬಲ್ಲಂತಹ ತಿದಿಗಳನ್ನು ತಯಾರಿಸುವುದು ಆ ಹಿಂದಿನ ಜನರಿಗೆ ಸಾಧ್ಯವಾಗಿರಲಿಲ್ಲವೆಂದು ತೋರುತ್ತದೆ.

ತಾಮ್ರ–ಶಿಲಾಯುಗದ ಜನರು ಗಣಿಗಾರಿಕೆಯ ಕೆಲಸದಲ್ಲಿ ಎರಡು ಬಗೆಯ ವಿಧಾನಗಳನ್ನು ಬಳಸುತ್ತಿದ್ದರು: ಹೆಚ್ಚು ಆಳವಿರದ ತಗ್ಗುಗಳ ಗಣಿ ಅಗೆಯುವುದು. ಅದಿರು ಇದ್ದ ದಿಕ್ಕಿನತ್ತ ಆಳವಾದ ತೋಡುದಾರಿಗಳನ್ನು ನಿರ್ಮಿಸುವುದು. ಅರಾವಳಿ ಬೆಟ್ಟಗಳ ಮಧ್ಯ ಮತ್ತು ನೈರುತ್ಯ ವಲಯಗಳಲ್ಲಿಯ ತಾಮ್ರದ ಅದಿರಿನ ಪಟ್ಟಿಯಲ್ಲಿ ಆಳವಿರದ ತಗ್ಗುಗಳ ಗಣಿಗಳಿವೆ. ರಾಜಸ್ತಾನದ ಖೇತ್ರಿ, ಅಂಬಾಜಿ ಹಾಗೂ ಇನ್ನಿತರೆಡೆಗಳಲ್ಲಿ ಆಳವಾದ ತೋಡುದಾರಿಗಳಿವೆ. ಆಳವಿರದ ತಗ್ಗುಗಣಿಗಳು ಆಳವಾದ ತೋಡುದಾರಿಯ ಗಣಿಗಳಿಗಿಂತ ಹೆಚ್ಚು ಪ್ರಾಚೀನವಾದವು.

ಕರ್ನಾಟಕದಲ್ಲಿ ಕಲ್ಯಾಡಿ ಮತ್ತು ಚಿತ್ರದುರ್ಗಗಳ ತಾಮ್ರ ಅದಿರಿನ ವಲಯಗಳಲ್ಲಿ ಕೆಲವು ಪ್ರಾಚೀನ ಕಾರ್ಯಾಗಾರಗಳ ಕುರುಹುಗಳಿವೆ. ಇವುಗಳಲ್ಲಿಯ ಒಂದು ಗಣಿಯಲ್ಲಿ ಮರದ ಸನ್ನೆ ದೊರೆತಿದ್ದು, ಇದರ ಕಾಲಮಾನ ಪ್ರ.ಶ.ಪೂ.ಸು. 3ನೆಯ ಶತಮಾನವೆಂದು ಇಂಗಾಲ–14ರ ವಿಧಾನದಿಂದ ತಿಳಿದಿದೆ. ಬಿಸ್ನಾಳದಲ್ಲಿ ಬೃಹದಾಕಾರದ ಕಬ್ಬಿಣದ ಗಣಿಗಳ ತಗ್ಗುಗಳಿವೆ. ಇದರ ಬಳಿಯಲ್ಲಿಯೆ ಕಬ್ಬಿಣವನ್ನು ಕರಗಿಸಿದ ಒಂದು ಸ್ಥಳವೂ ಇದೆ. ಈ ಸ್ಥಳಗಳು ತೇರದಾಳ, ಹಳಿಂಗಳಿ ಬೃಹತ್‌ಶಿಲಾ ಗೋರಿಗಳ ನೆಲೆಯಿಂದ ಸು. 40 ಕಿಮೀ ದೂರದಲ್ಲಿದೆ. ಒಟ್ಟಿನಲ್ಲಿ ಕರ್ನಾಟಕದಲ್ಲಿ ಆಳವಿರದ ತಗ್ಗು–ಗಣಿ ಪದ್ಧತಿ ಈ ಎರಡೂ ವಿಧಾನಗಳನ್ನು ಬಳಸಲಾಗುತ್ತಿತ್ತು ಎಂಬುದಕ್ಕೆ ಇವೆಲ್ಲಾ ಸಾಕ್ಷ್ಯಗಳು.

**ಅದಿರು ಶುದ್ಧೀಕರಣ:** ಲೋಹವನ್ನು ಬೇರ್ಪಡಿಸುವ ಮೊದಲು ಅದಿರನ್ನು ಪುಡಿಗೊಳಿಸಿ ಸುಡುವ ಕ್ರಿಯೆ ನಡೆಯಬೇಕಾಗುತ್ತದೆ. ಈ ಕ್ರಿಯೆಯಿಂದ ಬೇಗನೆ ಭಾಷ್ಪೀಭವ ಗೊಳ್ಳಬಲ್ಲಂತಹ ಗಂಧಕ ಮತ್ತು ಆರ್ಸೆನಿಕ್ (ಪಾಷಾಣ)ಗಳು ತಾಮ್ರದ ಅದಿರಿನಿಂದ ಬೇರ್ಪಡುತ್ತವೆ. ಅದಿರು ಶುದ್ಧೀಕರಣಕ್ಕಾಗಿ ಬಳಸುವ ಒಂದು ವಿಶಿಷ್ಟ ವಿಧಾನವೆಂದರೆ ಸಾಂದ್ರತೆ ಪ್ರತ್ಯೇಕೀಕರಣ ಪದ್ಧತಿ. ಈ ಕಾರ್ಯ ಅದಿರನ್ನು ಕರಗಿಸುವ ಸ್ಥಳದ ಹತ್ತಿರವೇ ನಡೆಯುತ್ತಿತ್ತು. ಬಹುತೇಕ ಇವು ಬೆಟ್ಟಗಳಲ್ಲಿ ಹರಿಯುವ ಹಳ್ಳಗಳ ಸಮೀಪದಲ್ಲಿಯೆ ಇರುತ್ತಿದ್ದವು. ರಾಜಸ್ತಾನದಲ್ಲಿಯ ಅಂಬುಜಾದ ಹತ್ತಿರ ಇಂತಹ ಸಾಂದ್ರತೆ ಪ್ರತ್ಯೇಕೀಕರಣದ ನೆಲೆಗಳು ಇವೆ. ಸೂಕ್ಷ್ಮವಾಗಿ ಶುದ್ಧೀಕರಿಸಲ್ಪಟ್ಟ ಅದಿರಿನ ಹುಡಿಯನ್ನು ಇಳಿಜಾರಿನಲ್ಲಿ ನೀರಿನೊಂದಿಗೆ ಹರಿಬಿಡುತ್ತಿದ್ದರು. ಈ ವಿಧಾನದಿಂದ ತಾಮ್ರದ ಆಮ್ಲಜನಕ ಧಾತು ಸಂಯುಕ್ತ ಈ ತಗ್ಗುಗಳಲ್ಲಿ ಸಂಗ್ರಹಗೊಳ್ಳುತ್ತಿತ್ತು. ಈ ವಿಧಾನ ಗಮನೀಯವಾದುದು. ವಿಶೇಷವಾಗಿ ಮಸ್ಕಿ, ಹೊಸಪೇಟೆ, ಕೊಪ್ಪಳ ಮುಂತಾದ ನೆಲೆಗಳನ್ನೊಳಗೊಂಡಂತೆ ಇಡೀ ಉತ್ತರ ಕರ್ನಾಟಕದಲ್ಲಿ ಕಲ್ಲಿನ ಬೆಟ್ಟದ ಭಾಗಗಳಲ್ಲಿ ಇಂತಹ ವಿಧಾನವನ್ನು, ಅಂದರೆ ಇಳಿಜಾರುಗಳ ವಿಧಾನವನ್ನು ಅನುಸರಿಸಿದ್ದ ಇನ್ನೂ ಹಲವಾರು ಸ್ಥಳಗಳು ಕಂಡುಬರಬಹುದು. ಈ ದೃಷ್ಟಿಯಿಂದ ಕಪ್ಪತಗುಡ್ಡದ ಶ್ರೇಣಿಗೂ ಔಚಿತ್ಯವಿದೆ. ಕೋಲಾರ ಜಿಲ್ಲೆಯ ಬನಹಳ್ಳಿಯಲ್ಲಿ ಬೃಹತ್‌ಶಿಲಾಯುಗ ಕಾಲದ ಜನರು ಕಬ್ಬಿಣ ಅದಿರನ್ನು ಚಿಕ್ಕಪುಟ್ಟ ತುಂಡುಗಳನ್ನಾಗಿ ಒಡೆಯುತ್ತಿದ್ದರು. ಇಂಥ ಸ್ಥಳದಲ್ಲಿಯ ಪ್ರಾಚೀನ ಕಾಲದ ಕುಲುಮೆಯ ಒಂದು ಕಲ್ಲಿನ ತುಂಡು ಮತ್ತು ರಸ್ತೆ ಜಲ್ಲಿಕಲ್ಲಿನ ಗಾತ್ರದ ಅದಿರು ಈ ಸಂಗತಿಗೆ ಪುರಾವೆಗಳಾಗಿವೆ. ಆದರೆ ಅದಿರನ್ನು ಶುದ್ಧೀಕರಣ ಉದ್ದೇಶದಿಂದ ಸುಟ್ಟಿದ್ದರ ಸಾಕ್ಷ್ಯಗಳು ಕರ್ನಾಟಕದಲ್ಲಿ ಇದುವರೆಗೂ ದೊರೆತಿರುವುದಿಲ್ಲ.

**ಸ್ರಾವಕ ಕ್ರಿಯೆ (ದ್ರವಕಾರಿ):** ಕರಗಿಸುವ ಕ್ರಿಯೆಯಲ್ಲಿ ಹೆಚ್ಚು ಪ್ರವಾಹಾತ್ಮಕ ಗುಣವನ್ನುಂಟು ಮಾಡುವುದಕ್ಕಾಗಿ ಸ್ರಾವಕ ವಸ್ತು ಅಥವಾ ದ್ರವ್ಯವನ್ನು ಸೇರಿಸುವುದೂ ಒಂದು ಮಹತ್ವದ ಹಂತ. ರಾಜಸ್ತಾನದ ಅಹಾರ್ ಎಂಬಲ್ಲಿ ಸಿಲಿಕ ಇವನ್ನು ತಾಮ್ರದ ಅದಿರಿನೊಂದಿಗೆ ಉದ್ದೇಶಪೂರ್ವಕವಾಗಿ ಸೇರಿಸುತ್ತಿದ್ದುದು ಕಂಡುಬಂದಿದೆ. ಆದ್ದರಿಂದ ತಾಮ್ರ–ಶಿಲಾಯುಗದ ಹಂತದಲ್ಲಿ ತಾಮ್ರಲೋಹ ತಂತ್ರಗಾರಿಕೆ ಸಾಕಷ್ಟು ಮುಂದುವರೆದಿತ್ತು ಎಂದು ಹೇಳಬಹುದು.

ಸ್ರಾವಕ ಕ್ರಿಯೆಯನ್ನು ಬಳಸುತ್ತಿದ್ದುದರ ಕುರುಹುಗಳು ಕರ್ನಾಟಕದಲ್ಲಿ ಕಂಡುಬಂದಿಲ್ಲ. ಆದರೆ ಸ್ರಾವಕ ಕ್ರಿಯೆ ತಂತ್ರವು ಇವರಿಗೆ ಅಪರಿಚಿತವಾಗಿರಲಿಲ್ಲ. ಕಲ್ಯಾಡಿ ಗಣಿಗಳಲ್ಲಿಯ ಕಿಟ್ಟ ಇಲ್ಲವೆ ಗಸಿಯನ್ನು ವಿಶ್ಲೇಷಿಸಿದರೆ ತಾಮ್ರವನ್ನು ಶುದ್ಧಗೊಳಿಸಲು ಕಬ್ಬಿಣದ ಅದಿರನ್ನು ಸ್ರಾವಕ ವಸ್ತುವಾಗಿ ಬಳಸುತ್ತಿದ್ದುದು ಕಂಡುಬಂದಿದೆ. ಬನಹಳ್ಳಿಯಲ್ಲಿದ್ದ ಬೃಹತ್‌ಶಿಲಾಯುಗದ ಜನರು ಕಬ್ಬಿಣದ ಅದಿರನ್ನು ಶುದ್ಧಗೊಳಿಸಲು ಸುಣ್ಣವನ್ನು ಸ್ರಾವಕವಾಗಿ ಬಳಸುತ್ತಿದ್ದರು. ಬೃಹತ್‌ಶಿಲಾಯುಗದ ಹಂತದಲ್ಲಿ ತಾಂತ್ರಿಕತೆ ಪ್ರಬುದ್ಧಮಟ್ಟಕ್ಕೇರಿ ಬೆಳೆದಿತ್ತು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ. ಮಹಾರಾಷ್ಟ್ರದ ನಾಯ್‌ಕುಂಡ್ ಮತ್ತು ಗುಜರಾತಿನ ಧತ್ವಾ ಎಂಬ ಸ್ಥಳಗಳಲ್ಲಿ ಪ್ರಾಚೀನ ಕಾಲದ ಕುಲುಮೆಗಳಿವೆ. ನಾಯ್‌ಕುಂಡ್‌ನಲ್ಲಿ ಬೃಹತ್‌ಶಿಲಾಯುಗದ ಕುರುಹುಗಳೂ ಇವೆ. ಗುಜರಾತದ ಧತ್ವಾ ಸ್ಥಳವು ಇತಿಹಾಸದ ಆದಿಕಾಲಕ್ಕೆ ಸೇರಿದ್ದು. ಇವೆರಡೂ ಸ್ಥಳಗಳಲ್ಲಿ ದೊರೆತ ಕುಲುಮೆಗಳಿಗೆ ಒಂದು ವಿಶೇಷತೆ. ಏಕೆಂದರೆ ಇವುಗಳಲ್ಲಿ ಸ್ರಾವಕ ವಸ್ತುವನ್ನು ಬಳಸುತ್ತಿದ್ದ ಚಿಹ್ನೆಗಳಿಲ್ಲ. ಆದರೆ ನಾಯ್‌ಕುಂಡ್‌ನ ಕುಲುಮೆಯನ್ನು ಒಂದು ವಿಶಿಷ್ಟ ಬಗೆಯಲ್ಲಿ ಕಟ್ಟಿದ್ದರಿಂದ ಇದು ಹೆಚ್ಚು ಕಾರ್ಯಕ್ಷಮತೆಯುಳ್ಳದ್ದಾಗಿತ್ತು.

ಲೋಹವನ್ನು ಬೇರ್ಪಡಿಸುವುದು ಇವೆಲ್ಲವುಗಳ ಮುಂದಿನ ಹಂತ. ಕುಲುಮೆಗಳಲ್ಲಿ ಮಾತ್ರ ಲೋಹವನ್ನು ಬೇರ್ಪಡಿಸುವುದು ಸಾಧ್ಯ. ಆದ್ದರಿಂದ ತಾಮ್ರ–ಶಿಲಾಯುಗದಲ್ಲಿಯೂ ಹಾಗೂ ಬೃಹತ್‌ಶಿಲಾಯುಗದಲ್ಲಿಯೂ ಬಳಕೆಯಲ್ಲಿದ್ದ ಕೆಲವೊಂದು ಕುಲುಮೆಗಳನ್ನು ಪರಿಶೀಲಿಸಬೇಕಾದುದು ಅವಶ್ಯ. ಮದರಾಸು–ಮೈಸೂರು ಭಾಗದಲ್ಲಿಯ ಮಾಗಡಿ ಎಂಬಲ್ಲಿ ಕಿಟ್ಟ ರಹಿತ ಇಲ್ಲವೆ ಗಸಿಸಹಿತವಾದ ರಂಧ್ರವೊಂದನ್ನುಳ್ಳ ದೊಡ್ಡದಾದ ಕುಲುಮೆಯನ್ನು ಬಳಸುತ್ತಿದ್ದರು ಎಂದು ಬುಕಾನನ್ ವಿವರಿಸಿದ್ದಾನೆ. ಅಂಬಾಜಿ ಸ್ಥಳದಲ್ಲಿ ತಾಮ್ರ–ಶಿಲಾಯುಗದಲ್ಲಿ ಇದ್ದ ಕುಲುಮೆಯ ಒಡೆದ ಭಾಗಗಳ ಅಂದರೆ ಅದರ ಗಾಳಿಯ ಕೊಳವೆಯ ಮೂತಿ, ಕಿಟ್ಟ ಮೊದಲಾದ ಭಾಗಗಳ ಅವಶೇಷಗಳನ್ನು ಜೋಡಿಸಿ ಹೊಂದಿಸಿ ಆ ಕುಲುಮೆಯನ್ನು ಪುನರ್ನಿಮಿಸಿದ ಸಂಗತಿ ಇತ್ತೀಚಿನ ವರ್ಷಗಳಲ್ಲಿಯ ಒಂದು ಮಹತ್ವದ ಶೋಧ. ಸ್ಥಳಿಯ ಹಳ್ಳಗಳ ದಂಡೆಯ ಮೇಲಿನ ಮಣ್ಣನ್ನೇ ಉಪಯೋಗಿಸಿ ಈ ಹಳ್ಳಗಳ ದಂಡೆಗಳ ಕುಲುಮೆಗಳನ್ನು ರಚಿಸಲಾಗಿತ್ತು. ಇದರ ರಚನೆಯಲ್ಲಿ ಮೂರು ಭಾಗಗಳಿದ್ದವು. ಒಂದು ಗಾಳಿಯ ಕೊಳವೆಯ ಮೂತಿ, ಎರಡನೆಯದು ಗಸಿಯನ್ನು ಹೊರಚೆಲ್ಲಲು ರಚಿಸಿದ ರಂಧ್ರ. ಮೂರನೆಯದು ಕುಲುಮೆಯ ಇತರ ಭಾಗ. ಒಂದು ಬಿದಿರಿನ ಕೊಳವೆಗೆ ಮಣ್ಣು ಮೆತ್ತಿ ಕುಲುವೆಯ ಗಾಳಿ – ಕೊಳವೆಯನ್ನು ರಚಿಸಲಾಗುತ್ತಿತ್ತು. ಒಡೆದ ಭಾಗಗಳ ಅವಶೇಷಗಳನ್ನು ಪರಿಶೀಲಿಸಿದರೆ ಇವೆಲ್ಲವುಗಳ ತಿರುವುಗಳಲ್ಲಿಯೂ, ಬಾಗುಗಳ ದಪ್ಪದಲ್ಲಿಯೂ ಏಕರೂಪತೆ ಇದ್ದುದು ಕಂಡುಬರುತ್ತದೆ. ಬಹುಶಃ ಈ ಭಾಗಗಳನ್ನು ತಯಾರಿಸಲು ಆಗಿನವರು ಅಚ್ಚು ಪಟ್ಟಿಗಳನ್ನು ಬಳಸುತ್ತಿರಬಹುದು. ಈಗ ಸದ್ಯ ಉಪಲಬ್ಧವಿದ್ದ ಭಾಗಗಳನ್ನು ನೋಡಿದರೆ ಈ ಎಲ್ಲ ಕುಲುಮೆಗಳ ತಳಗಳು ಒಡೆದದ್ದು ಕಾಣುತ್ತದೆ. ಎರಕ ಹೊಯ್ದ ನಂತರ ಬರುವ ಲೋಹದ ಗಟ್ಟಿಗಳನ್ನು ಹೊರ ತೆಗೆಯಲು ಬಹುಶಃ ಈ ಕುಲುಮೆಗಳ ತಳಗಳನ್ನು ಒಡೆಯುತ್ತಿದ್ದಿರಬಹುದು. ಅಂದರೆ, ಈ ಕುಲುಮೆ ಒಂದೆ ಸಲ ಮಾತ್ರ ಎರಕ ಹಾಕಲು ಬಳಸಲಾಗುತ್ತಿತ್ತು. ಪ್ರಾಚೀನ ಕಾಲದಲ್ಲಿ ತಾಮ್ರವನ್ನು ಕರಗಿಸಲು ಬಳಸುತ್ತಿದ್ದ ಕುಲುಮೆಗಳು ಆಕಾರದಲ್ಲಿ ಚಿಕ್ಕವಾಗಿದ್ದರೂ, ಈ ವಿಧಾನ ಮಾತ್ರ ಸಾಕಷ್ಟು ಕಾರ್ಯಕ್ಷಮತೆಯುಳ್ಳದ್ದಾಗಿತ್ತು. ಈ ವಿಧಾನದನ್ವಯ ಕುಲುಮೆಯಲ್ಲಿ ಗಾಳಿಯನ್ನು ಬಲವಂತವಾಗಿ ನುಗ್ಗಿಸುವುದಕ್ಕೆ ಮಹತ್ತ್ವ ಇದ್ದಿತು. ಪುಡಿ ಮಾಡದ ಸುಟ್ಟ ಅದಿರನ್ನು ಚಿಕ್ಕ ಚಿಕ್ಕ ಮುದ್ದೆಗಳನ್ನಾಗಿ ಮಾಡಿ ಅವುಗಳನ್ನು ಈ ಕುಲುಮೆಗಳಲ್ಲಿ ಹಾಕುತ್ತಿದ್ದರು.

ಮಹಾರಾಷ್ಟ್ರದಲ್ಲಿಯ ನಾಯ್‌ಕುಂಡ್‌ನ ಬೃಹತ್‌ಶಿಲಾಯುಗ ನೆಲೆಯಲ್ಲಿ ಕಬ್ಬಿಣ ಕರಗಿಸುವ ಕಟ್ಟಿದ ಕುಲುಮೆಯ ಅವಶೇಷಗಳು ದೊರೆತಿವೆ. ಈ ಸಂಸ್ಕೃತಿಯ ಕಾಲಮಾನ ಪ್ರ.ಶ.ಪೂ.ಸು. 6–4ನೆಯ ಶತಮಾನ.

ಬನಹಳ್ಳಿಯಲ್ಲಿ ಬೃಹತ್‌ಶಿಲಾಯುಗದ ಸಾಂಸ್ಕೃತಿಕ ಸ್ತರಗಳಲ್ಲಿ ಈ ಹಂತದ ಕಬ್ಬಿಣದ ಹಲವಾರು ಉಪಕರಣಗಳು ಹಾಗೂ ಕಬ್ಬಿಣ ಕರಗಿಸುವ ಕುಲುಮೆಯೂ ದೊರೆತಿದೆ. ಈ ಬೃಹತ್ ಶಿಲಾಯುಗದ ಸಂಸ್ಕೃತಿಯು ಪ್ರ.ಶ.ಪೂ.400–300ರ ಅವಧಿಯಲ್ಲಿ ಇದ್ದಿರಬಹುದೆಂದು ತರ್ಕಿಸಲಾಗಿದೆ. ಈ ಕುಲುಮೆಯು ಬಟ್ಟಲಿನ ಆಕಾರದಲ್ಲಿಯ ನೆಲದಲ್ಲಿರುವ ಒಂದು ಕುಣಿ. ಇದಕ್ಕೂ ಇಂಗ್ಲೆಂಡ್‌ನ ಇತಿಹಾಸಪೂರ್ವ ಕಾಲದ ಕುಲುಮೆಗಳಿಗೂ ಸಾಮ್ಯವಿದೆ. ನೆಲದ ಒಂದು ಕುಣಿಯನ್ನು ತೋಡಿ ಇದಕ್ಕೆ ಸುತ್ತ ಶಾಖಕ್ಕೆ ಜಗ್ಗದಂತಹ ಮಣ್ಣನ್ನು ಮೆತ್ತಲಾಗಿದೆ. ಇದರಲ್ಲಿ ಗಾಳಿಹಾಕುವ ಕೊಳವೆಯ ಮೂತಿಯ ಹಾಗೂ ಕಿಟ್ಟ

ಇಲ್ಲವೆ ಗಸಿಯನ್ನು ಹೊರತೆಗೆಯುವ ವ್ಯವಸ್ಥೆಗಳೂ ಇವೆ. ಗಣಿಗಳ ತಗ್ಗುಗಳಲ್ಲಿ ಕಿಟ್ಟ ಇಲ್ಲವೆ ಗಸಿ, ಬೂದಿ, ಕಲ್ಲಿದ್ದಲು ಮತ್ತು ಇತರ ಅವಶೇಷಗಳಿವೆ. ಮೂಲ ಅದಿರಿನ ಅವಶೇಷಗಳಿಲ್ಲ. ಮೇಲುಸ್ತರದಲ್ಲಿ ಗಸಿಯ ದಪ್ಪ ಪದರು ಹಬ್ಬಿದೆ. ಆದ್ದರಿಂದ ಗಸಿಯು ಕುಲುಮೆಯಿಂದ ಹೊರಗೆ ಹೋಗುವಂತೆ ಬಿಡಲಾಗುತ್ತಿತ್ತೆಂದು ತೋರುತ್ತದೆ. ಕುಲುಮೆಯ ಕೆಳಭಾಗದಲ್ಲಿ ಕಬ್ಬಿಣದ ವಡೆ ದೊರೆತಿದೆ. ಸಾಕಷ್ಟು ಪ್ರಮಾಣದಲ್ಲಿ ಉಳಿದ ಗಸಿಯು ಶೇಖರವಾಗಿದೆ. ಈ ತರಹದ ಎರಡುಮೂರು ಕುಲುಮೆಗಳನ್ನು ಜೋಡಿಸಿ ಇವೆಲ್ಲವೂ ಏಕಕಾಲಕ್ಕೆ ಕೆಲಸ ನಡೆಸಬಲ್ಲಂಥ ವ್ಯವಸ್ಥೆ ಇದ್ದಿರಬಹುದಾದ ಸಾಧ್ಯತೆಯೂ ಉಂಟು. ಇದು ನಿಜವಿದ್ದರೆ, ಈ ಬಗೆಯ ವ್ಯವಸ್ಥೆಯು 19ನೆಯ ಶತಮಾನದ ವರೆಗೂ ಮುಂದುವರೆಯಿತು ಎಂದು ಹೇಳಬಹುದು. ಈ ವಿಷಯದಲ್ಲಿ ಬುಕಾನನ್‌ನ ಅಭಿಪ್ರಾಯ ಗಮನೀಯ. ಇವೆಲ್ಲ ಒಂದೆ ಚಪ್ಪರದ ಕೆಳಗೆ 2.10–2.40 ಮೀ ಇರುತ್ತಿದ್ದವು. ಎರಡು ಕುಲುಮೆಗಳ ಗಾಳಿ ಕೊಳವೆ ಮೂತಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇವು ಶಾಖಕ್ಕೆ ಒಳಪಡದಂಥ ಮಣ್ಣಿನಿಂದ ಕೂಡಿದ್ದು, ಇವುಗಳಲ್ಲಿ ಶೇಕಡ 66ರಷ್ಟು ಸಿಲಿಕ ಮತ್ತು ಶೇಕಡ 14ರಷ್ಟು ಅಲ್ಯುಮಿನಾ ಅಂಶ ಕಂಡುಬಂದಿದೆ. ಅಂದರೆ ಅಂಬಾಜಿ, ನಾಯ್‌ಕುಂಡ್ ಮತ್ತು ಬನಹಳ್ಳಿ ಕುಲುಮೆಗಳಲ್ಲಿ ಗಾಳಿಯನ್ನು ಹಾಕುವುದಕ್ಕಾಗಿ ಗಾಳಿ ಕೊಳವೆ ಮೂತಿಗಳೂ ಇರುತ್ತಿದ್ದವು. ಗಸಿಯನ್ನು ಹಿಡಿಯಲು ರಂಧ್ರಗಳೂ ಇರುತ್ತಿದ್ದವು. ಈ ಮೂರು ಸ್ಥಳಗಳಲ್ಲಿಯ ಕುಲುಮೆಗಳಲ್ಲಿ ಮೂಲ ಯಾಂತ್ರಿಕ ವ್ಯವಸ್ಥೆ ಒಂದೇ ಬಗೆಯ ದ್ದಾಗಿರುತ್ತಿತ್ತು. ತಾಮ್ರ ಮತ್ತು ಕಬ್ಬಿಣದಂತಹ ಅದಿರುಗಳನ್ನು ಕರಗಿಸುವ ಮೂಲ ತತ್ವಗಳಲ್ಲಿ ತಾಮ್ರ–ಶಿಲಾಯುಗದಿಂದ ಮೊದಲುಗೊಂಡು ಕಬ್ಬಿಣದ ಯುಗದವರೆಗೂ ವಿಶೇಷ ಬದಲಾವಣೆಗಳು ಆಗಿರಲಿಲ್ಲ. ಕುಲುಮೆಗಳನ್ನು ಬೇರೆ ಬೇರೆ ಪ್ರಕಾರಗಳಲ್ಲಿ ರಚಿಸುವುದಕ್ಕೆ ಸ್ಥಳೀಯ ಸ್ಥಿತಿಗತಿಗಳೇ ಕಾರಣವಾಗಿರಬಹುದು ಮತ್ತು ಅದಿರನ್ನು ಕರಗಿಸುವ ವಿಧಾನದಲ್ಲಿ ಪರಿಣತರಾದ ಆ ಜನ ತಮಗೆ ಬೇಕಾದ ಕುಲುಮೆಗಳನ್ನು ರಚಿಸಿಕೊಳ್ಳುವುದ ರಲ್ಲಿಯೂ ಸಮರ್ಥರಾಗಿದ್ದರು. ಆದ್ದರಿಂದ ಭಾರತದಲ್ಲಿ ಕಬ್ಬಿಣ ಯುಗದ ಪ್ರಾರಂಭದ ಕಾಲದಿಂದ ನಾನಾ ಬಗೆಯ ಕುಲುಮೆಗಳು ಇದ್ದವು. ಕರ್ನಾಟಕದ ವಿಷಯದಲ್ಲಿಯೂ ಈ ಮಾತು ಅಷ್ಟೇ ನಿಜವಾಗಿದೆ.

ಕರ್ನಾಟಕದಲ್ಲಿ ತಾಮ್ರವನ್ನು ಹೇಗೆ ಬೇರ್ಪಡಿಸುತ್ತಿದ್ದರು ಎಂಬ ಬಗೆಗಿನ ವಿವರಗಳು ಇನ್ನೂ ಬೆಳಕಿಗೆ ಬಂದಿಲ್ಲ. ಅರಾವಳಿ ಬೆಟ್ಟದಲ್ಲಿರುವ ನಿಕ್ಷೇಪಗಳಲ್ಲಿಯ ತಾಮ್ರದ ಅದಿರಿನಲ್ಲಿ ತಾಮ್ರದ ಅಂಶ ಕಡಿಮೆ ಪ್ರಮಾಣದಲ್ಲಿದೆ. ಗಣಿಯಿಂದ ಹೊರತೆಗೆದ ಮೇಲೆ ಇದನ್ನು ಮುಂದಿನ ಕೆಲಸಕ್ಕೆ ಅಣಿ ಮಾಡಲಾಗುತ್ತಿತ್ತು. ತಾಮ್ರದ ಅದಿರಿಗೆ ಬಂಗಾರದಂತಹ ಹಳದಿ ಬಣ್ಣ ಇರುತ್ತದೆ. ಆದ್ದರಿಂದ ಇಂತಹ ಅದಿರನ್ನು ಕೈಯಿಂದಲೇ ಹೆಕ್ಕಿ ಕೂಡಿ ಹಾಕಿ ಕೆಲಸಕ್ಕೆ ಅಣಿ ಮಾಡಲು ಸುಲಭವಾಗುತ್ತದೆ. ಇಲ್ಲಿಯ ಲೋಹವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಇದರಲ್ಲಿ ಆಂಟಿಮನಿ, ಆರ್ಸೆನಿಕ್ ಮತ್ತು ಸಲ್ಫರ್‌ಗಳು ಮಾತ್ರ ಇದ್ದದ್ದು ಕಂಡುಬಂದಿದೆ. ಏಕೆಂದರೆ ಅರಾವಳಿ ಬೆಟ್ಟಗಳಲ್ಲಿ ತಾಮ್ರದ ಅದಿರಿನಲ್ಲಿ ಈ ಮೂಲವಸ್ತುಗಳು ವಿಪುಲ ಪ್ರಮಾಣದಲ್ಲಿ ದೊರೆಯುತ್ತವೆ. ಬೇರ್ಪಡಿಸಲ್ಪಟ್ಟ ಲೋಹದಲ್ಲಿ ಈ ಘಟಕಗಳು ಶೇಕಡ 2ಕ್ಕಿಂತಲೂ ಹೆಚ್ಚಾದರೆ ಈ ಲೋಹವು ಸಡಿಲವಾಗುತ್ತದೆ. ಅಂದರೆ ಒಡೆಯುವ ಇಲ್ಲವೆ ಸೀಳುವ ಸ್ವಭಾವವನ್ನು ಹೊಂದುತ್ತದೆ. ಕತ್ತರಿಸುವ, ಕೊಯ್ಯುವ ಮುಂತಾದ ಕೆಲಸಕ್ಕಾಗಿ ಬೇಕಾಗುವ ಉಪಕರಣಗಳನ್ನು ತಯಾರಿಸಲು ಇಂತಹ ಸಡಿಲ ಲೋಹ ಪ್ರಯೋಜನಕ್ಕೆ ಬರುವುದಿಲ್ಲ. ಆದರೆ ಅದಿರನ್ನು ಸುಟ್ಟರೆ ಈ ಅಪ್ರಯೋಜನಕಾರಿ ಮೂಲವಸ್ತುಗಳನ್ನು ಅದಿರಿನಿಂದ ಬೇರ್ಪಡಿಸಬಹುದು. ಏಕೆಂದರೆ $500^{0}$ ಸೆಲ್ಸಿಯೆಸ್‌ಗಳಿಂದ $600^{0}$ ಸೆಲ್ಸಿಯೆಸ್‌ಗಳವರೆಗಿನ ಶಾಖಕ್ಕೆ ಒಳಗಾದರೆ ಈ ಮೂಲವಸ್ತುಗಳು ಆಮ್ಲಜನಕಗಳಾಗಿ ಬಾಷ್ಪೀಭವನಗೊಳ್ಳುತ್ತವೆ. ಈ ರೀತಿಯಾಗಿ ತಾಮ್ರದ ಅದಿರನ್ನು ಸಂಯುಕ್ತದಲ್ಲಿ ಏಕಪ್ರಮಾಣ ತಾಮ್ರ ದ್ವಿಯೋಗ ಶಕ್ತಿವಂತ ರೂಪವನ್ನುಳ್ಳ ಕಬ್ಬಿಣ ಸಲ್ಫೈಡುಗಳ ಮಿಶ್ರಣವನ್ನಾಗಿ ಪರಿವರ್ತಿಸ ಬಹುದು. ಇದೇ ಬಗೆಯಾಗಿ ಕಲ್ಯಾಡಿಯಲ್ಲಿ ಹಳೆಯ ಕಾರ್ಯಾಗಾರಗಳ ಅಧ್ಯಯನಗಳಿಂದ ಈ ಕುತೂಹಲಕಾರಿ ಸಂಗತಿಗಳೆ ಬೆಳಕಿಗೆ ಬಂದಿವೆ. ಹಾಗೂ ಈ ಕಾಲದ ತಾಮ್ರವನ್ನು ಕರಗಿಸುವವರ ಕಾರ್ಯಕ್ಷಮತೆಯನ್ನು ಇವು ಸೂಚಿಸುತ್ತವೆ. ಇದೆ ಪ್ರದೇಶದಲ್ಲಿ ಬೃಹತ್‌ಶಿಲಾಯುಗ ಗೋರಿಗಳ ನೆಲೆಯು ಇರುವುದು ಗಮನಾರ್ಹ.

ಕಬ್ಬಿಣ ವಸ್ತುಗಳ ಒಳ ರಚನೆ ಇಲ್ಲವೆ ಲೋಹದಿಂದ ವಸ್ತುಗಳನ್ನು ತಯಾರಿಸುವ ತಂತ್ರ ಇವುಗಳನ್ನು ಅರಿತುಕೊಳ್ಳುವ ಮೊದಲು ಕಬ್ಬಿಣವನ್ನು ಕರಗಿಸುವ ವಿಧಾನದ ಬಗ್ಗೆಯೆ ಒಂದೆರಡು ಮಾತುಗಳನ್ನು ಅರಿತುಕೊಳ್ಳುವುದು ಅವಶ್ಯ. ಇದರಲ್ಲಿ ಎರಡು ವಿಧಾನಗಳು ಔಚಿತ್ಯಪೂರ್ಣವಾಗಿ ತೋರುತ್ತವೆ. (1) ಪ್ರತ್ಯಕ್ಷ ಇಲ್ಲವೆ ಕಮ್ಮಾರ ಸಾಲೆಯ ವಿಧಾನ, ಮತ್ತು (2) ಅಪ್ರತ್ಯಕ್ಷ ವಿಧಾನ. ಪ್ರತ್ಯಕ್ಷ ವಿಧಾನದಲ್ಲಿ ಅದಿರಿನಿಂದ ಕಬ್ಬಿಣವನ್ನು ಇದ್ದಲಿನ $1200^{0}$ ಸೆಲ್ಸಿಯಸ್ ಕಾವಿನಲ್ಲಿ ಕರಗಿಸುತ್ತಾರೆ. ಆದರೆ ಇದರ ದ್ರವೀಕರಣಕ್ಕೆ ಬೇಕಾಗುವ ಕಾವು $1500^{0}$ ಸೆಲ್ಸಿಯಸ್ ಇರುತ್ತದೆ. ಈ ಹಂತದಲ್ಲಿ ಸಿದ್ಧವಾಗುವ ವಸ್ತು ಪಾಚಿಯ ರಚನೆಯಂತಿರುತ್ತದೆ. ಕಬ್ಬಿಣ ಮುದ್ದೆಯ ರೂಪದಲ್ಲಿ ಇರುವುದಿಲ್ಲ ಅಥವಾ ದ್ರವರೂಪದಲ್ಲಿಯೂ ಇರುವುದಿಲ್ಲ. ಆಗ ಹೊರಡುವ ಕಬ್ಬಿಣದ ಕಿಟ್ಟ ಅಥವಾ ಗಸಿಯು ಅರ್ಧಾವ್ಯಸ್ಥೆಯಲ್ಲಿದ್ದು ಜಿಗುಟಾಗಿರುತ್ತದೆ. $1170^{0}$ ಸೆಲ್ಸಿಯಸ್‌ನ ಕಾವಿನಲ್ಲಿ ಈ ಗಸಿ (ಕಬ್ಬಿಣ ಸಿಲಿಕೇಟ್)ಯನ್ನು ಸುತ್ತಿಗೆಯ ಪೆಟ್ಟುಗಳನ್ನು ಕೊಟ್ಟು ಬೇರ್ಪಡಿಸಲಾಗುವುದು. ಲೋಹದಲ್ಲಿ ಗಸಿಯು ಸೂಕ್ಷ್ಮ ಪ್ರಮಾಣದಲ್ಲಿ ಕಂಡುಬರುತ್ತಿದ್ದರೆ, ಕಬ್ಬಿಣವನ್ನು ಪ್ರತ್ಯಕ್ಷ ವಿಧಾನದಿಂದ ಬೇರ್ಪಡಿಸಲಾಗಿದೆ ಎಂದು ಅರ್ಥವಾಗುತ್ತದೆ. ಈ ರೀತಿಯಾಗಿ ಪಡೆದ ಕಬ್ಬಿಣವನ್ನು ಮೆದು ಕಬ್ಬಿಣ ಎಂದೆನ್ನುತ್ತಾರೆ. ಇದು ಕೊಂಚ ಮಿದುವಾಗಿರುತ್ತದೆ. ಬಿಳುಪುಮಿಶ್ರಿತ ಬೂದಿ ಬಣ್ಣದಲ್ಲಿರುತ್ತದೆ ಮತ್ತು ಇದರಲ್ಲಿ ಅಲ್ಪ ಮೊತ್ತದಲ್ಲಿ ಇಂಗಾಲವು ಇರುತ್ತದೆ.

ಅಪ್ರತ್ಯಕ್ಷ ವಿಧಾನದಲ್ಲಿ ಕಬ್ಬಿಣವನ್ನು ಕರಗಿಸುವ ಇನ್ನೊಂದು ಪದ್ಧತಿ ಇದೆ. ಈ ಬಗೆ ಕರಗಿಸುವುದರಲ್ಲಿ ಶುದ್ಧ ಕಬ್ಬಿಣ $1140^{0}$ ಸೆಲ್ಸಿಯಸ್ ಕಾವಿನಲ್ಲಿ ಕರಗುತ್ತದೆ. ಗಾಳಿಯಿಂದ ಪ್ರಜ್ವಲಿತವಾದ ಇದ್ದಿಲಿನ ಬೆಂಕಿಯಲ್ಲಿ ಇಷ್ಟು ಕಾವನ್ನು ಉಂಟುಮಾಡಬಹುದು. ಈ ರೀತಿಯಾಗಿ ಪಡೆದ ಕಬ್ಬಿಣವನ್ನು ಉಕ್ಕನ್ನಾಗಿ ಪರಿವರ್ತಿಸಬಹುದು. ಇದರಲ್ಲಿಯ ಇಂಗಾಲವನ್ನೆಲ್ಲ ಹೊರಗೆಡಹುವಂತೆ ಮಾಡಬಹುದು. ಇದರಲ್ಲಿಯ ಕಶ್ಮಲವನ್ನು ಹೊರತೆಗೆಯಬಹುದು. ಈ ಪದ್ಧತಿಯಲ್ಲಿ ಕಬ್ಬಿಣವನ್ನು ಹೊರತೆಗೆಯಬಹುದು. ಈ ಪದ್ಧತಿಯಲ್ಲಿ ಕಬ್ಬಿಣವನ್ನು ಕರಗುವ ಹಂತ ಮುಟ್ಟಿದಾಗಲೆ ಪಡೆಯಬಹುದು. ಆದರೆ ಸ್ಪಂಜ್ ಇಲ್ಲವೆ ಕಬ್ಬಿಣದ ಮುದ್ದೆಯನ್ನು ಹೀಗೆ ಪಡೆಯುವುದು ಸಾಧ್ಯವಿಲ್ಲ. ಇದರಲ್ಲಿ ಗಸಿ ಸೂಕ್ಷ್ಮ ಪ್ರಮಾಣದಲ್ಲಿ ಉಳಿದುಕೊಳ್ಳುತ್ತದೆ. ಸ್ಪಂಜ್ ಮುದ್ದೆ ಅಥವಾ ಮೆದು ಕಬ್ಬಿಣದಿಂದ ಬೇಕಾದ ವಸ್ತುಗಳನ್ನು ಸಿದ್ಧಪಡಿಸಲಾಗುವುದಿಲ್ಲ. ಏಕೆಂದರೆ ಇದರಲ್ಲಿ ಕಾಠಿಣ್ಯ ಇರುವುದಿಲ್ಲ. ಆದ್ದರಿಂದ ಇದರಲ್ಲಿ ಕಾಠಿಣ್ಯವನ್ನು ತರಬೇಕಾದರೆ ಇದರ ಕನಿಷ್ಠ ಅಂಶವನ್ನಾದರೂ ಉಕ್ಕಿನಲ್ಲಿ ಪರಿವರ್ತಿಸ ಬೇಕಾಗುವುದು. ನಿಯಂತ್ರಿತವಾದ ಶೈತ್ಯೀಕರಣ ಮತ್ತು ಶಾಖವನ್ನು ಒದಗಿಸುವ ಕ್ರಿಯೆಗಳಿಂದ ಇಂಗಾಲದ ಅಣುಗಳನ್ನು ಕಬ್ಬಿಣದೊಂದಿಗೆ ಬೆರೆಸುವುದರಿಂದ ಉಕ್ಕು ಆಗುವುದು. ಇದರಿಂದಾಗಿ ಉಕ್ಕಿನ ಭೌತಿಕ ಗುಣಗಳು ಬದಲುಗೊಳ್ಳುತ್ತವೆ. ಮತ್ತು ಇದೊಂದು ಬಿರುಸಾದ ಬಲಯುತವಾದ ಕಠಿಣ ಲೋಹವಾಗುತ್ತದೆ. ಉಕ್ಕಿಗೆ ತೀಕ್ಷ್ಣವಾದ ಧಾರೆಯನ್ನು ಒದಗಿಸುವುದು ಸಾಧ್ಯ. ಆದರೆ ಉಕ್ಕಿನ ಕೆಲಸ ಮಾಡುವುದು ಅಷ್ಟು ಸುಲಭವಲ್ಲ. ಮತ್ತು ಉಕ್ಕು ಬೇಗನೆ ಜಂಗುಗಟ್ಟುವ ಗುಣವನ್ನೂ ಹೊಂದಿರುತ್ತದೆ. ಕಬ್ಬಿಣ ವಿಷಯ ಬೇರೆ, ಕಬ್ಬಿಣಕ್ಕೆ ತೀಕ್ಷ್ಣತೆಯನ್ನು ಒದಗಿಸುವುದು ಕಠಿಣ. ಆದರೆ ಇದಕ್ಕೆ ಕಪ್ಪು ಮಿಶ್ರಿತ ಕಂದುಬಣ್ಣದ ಒಂದು ಕವಚ ಇರುವುದರಿಂದ ಅದು ಬೇಗನೆ ಜಂಗುಗಟ್ಟುವುದಿಲ್ಲ.

ಉಕ್ಕನ್ನು ಉತ್ಪಾದಿಸಲು ಪ್ರಾಚೀನ ಕಾಲದಲ್ಲಿ ಮೂರು ವಿಧಾನಗಳನ್ನು ಅನುಸರಿಸುತ್ತಿದ್ದರು. ಮೊದಲನೆಯ ವಿಧಾನದಂತೆ ಉಕ್ಕನ್ನು ನೇರವಾಗಿ ಕುಲುಮೆಯಲ್ಲಿಯೇ ಉತ್ಪಾದಿಸಲಾಗುತ್ತಿತ್ತು. ಮ್ಯಾಂಗನೀಸ್‌ನ ಅಂಶವನ್ನುಳ್ಳ ಅದಿರನ್ನು ಕುಲುಮೆಯ ಬಾಯಿಗೆ ಕೊಟ್ಟರೆ – ಈ ಬಗೆಯಾಗಿ ಉಕ್ಕನ್ನು ಪಡೆಯುವುದು ಸಾಧ್ಯ. ಈ ಬಗೆಯಾಗಿ ಸಿದ್ಧಗೊಂಡ ಲೋಹ ಉಕ್ಕು ಆಗುತ್ತದೆ. ಆದರೆ ಈ ಅದಿರುಗಳಲ್ಲಿ ಗಂಧಕ, ಸಲ್ಫರ್ ಮತ್ತು ಆರ್ಸೆನಿಕ್‌ಗಳು ಇರಬಾರದು. ಅಂದರೆ ಸುಲಭ ಸಾಧ್ಯವಾದ ಉಕ್ಕನ್ನು ತಯಾರಿಸಬಹುದು. ಆದರೆ ಈ ರೀತಿಯ ಉಕ್ಕನ್ನು ಪಡೆದ ಸಂಗತಿ ಒಂದು ಆಕಸ್ಮಿಕವಾಗಿತ್ತೆ ಹೊರತು ಉದ್ದೇಶಪೂರ್ವಕವಾದ ವಿಧಾನದಿಂದಲೂ ಉತ್ಪಾದನೆಯಾಗಿರಲಿಲ್ಲ.

ಎರಡನೆಯದು ಬೆಸುಗೆಯ ಅಥವಾ ಮೂಸೆಯ ವಿಧಾನ. ಈ ರೀತಿಯಾಗಿ ಪಡೆದ ಲೋಹಕ್ಕೆ ವೂಟ್ಸ್ ಎಂದು ಹೆಸರು. ವೂಟ್ಸ್ ಶಬ್ದವು ಕನ್ನಡ–ತೆಲುಗುಗಳ ವುಕ್ಕೆ ಅಥವಾ ಉಕ್ಕು ಶಬ್ದದ ಅಪಭ್ರಂಶವಾಗಿದೆ ಎಂಬ ಮಾತು ಕುತೂಹಲಕಾರಿ. ಕಾಂತಾಕರ್ಷಣದ ಕಪ್ಪುಬಣ್ಣದ ಅದಿರು, ಬಿದಿರು ಕಟ್ಟಿಗೆಯಿಂದಾದ ಇದ್ದಿಲು ಹಾಗೂ ಇಂಗಾಲಾತ್ಮಕವಾದ ಕೆಲವೊಂದು ಜಾತಿಯ ಸಸ್ಯಗಳು ಇವನ್ನೆಲ್ಲ ಒಂದು ಮೂಸೆಯಲ್ಲಿ ಮುಚ್ಚಿಹಾಕಿ ಇದಕ್ಕೆ ಅತಿ ಉಷ್ಣತೆಯನ್ನು ಕೊಟ್ಟು ಈ ಬಗೆಯ ಉಕ್ಕನ್ನು ಉತ್ಪಾದಿಸಲಾಗುತ್ತಿತ್ತು. ಪ್ರಾಚೀನ ಭಾರತೀಯರು ಕಂಡುಹಿಡಿದ ಅತ್ಯಂತ ಮಹತ್ವದ ಸಂಗತಿಗಳಲ್ಲಿ ಈ ವಿಧಾನವೂ ಒಂದು. ವೂಟ್ಸ್ ದಲ್ಲಿ ಒಂದು ವಿಶಿಷ್ಟವಾದ ಯಾಂತ್ರಿಕ ಗುಣವಿದೆ. ಅತ್ಯಂತ ಬಿರುಸುತನವು ಇದರಲ್ಲಿ ಮೃದುತ್ವದೊಂದಿಗೆ ಕೂಡಿಕೊಂಡಿರುತ್ತದೆ. ಇದಕ್ಕೆ ಬೇಕಾದ ರೂಪವನ್ನು ಕೊಡುವದೂ ಸಾಧ್ಯ. ಇದರಲ್ಲಿ ಶೇಕಡ 1.3 ರಿಂದ 1.7ರವರೆಗೆ ಇಂಗಾಲಾಂಶ ಇರುತ್ತದೆ. ಉಕ್ಕಿನಲ್ಲಿ ಇವೆಲ್ಲ ಕಂಡುಬರುವುದಿಲ್ಲ. ಶಾಖವನ್ನು ಒದಗಿಸುವ ಕ್ರಿಯೆಯ ಹೊಸ ವಿಧಾನದಿಂದ ಉಕ್ಕಿಗೆ ಈ ವಿಶೇಷ ಗುಣವನ್ನು ಸೇರಿಸುವುದು ಸಾಧ್ಯ. ತಮಗೆ ಬೇಕಾದ ಉಕ್ಕನ್ನೆಲ್ಲ ರೋಮನ್ನರು ಭಾರತದಿಂದ ಆಯಾತ ಮಾಡಿಕೊಳ್ಳುತ್ತಿದ್ದರು ಎಂಬ ಸಂಗತಿ ಗಮನಾರ್ಹ. ಭಾರತದಿಂದ ತರಿಸಿದ್ದ ವೂಟ್ಸ್ ಉಕ್ಕಿನಿಂದಲೆ ದಮಾಸ್ಕನ ಪ್ರಪಂಚ ವಿಖ್ಯಾತ ಖಡ್ಗಗಳು ತಯಾರಾಗುತ್ತಿದ್ದವು.

ವೂಟ್ಸ್ ಉಕ್ಕನ್ನು ಉತ್ಪಾದನೆ ಮಾಡುವ ವಿಧಾನದಲ್ಲಿ ಮೂಸೆ ಮುಖ್ಯವಾದುದು. ಮಣ್ಣಿನ ಮೂಸೆಯಲ್ಲಿ ಕಬ್ಬಿಣದ ಒಂದು ಬೆಣೆಯನ್ನು ಇರಿಸುತ್ತಾರೆ. ಭಾರತದ ಸಸ್ಯದ ಎಲೆಗಳನ್ನು ಮತ್ತು ಅಗಲವಾದ ಮೆತ್ತಗಿನ ಎಲೆಯನ್ನು ಇದರಲ್ಲಿ ಇಡಲಾಗುತ್ತದೆ. ಅನಂತರ ಮೂಸೆಯ ಬಾಯನ್ನು ಮಣ್ಣಿನಿಂದ ಮುಚ್ಚಲಾಗುತ್ತದೆ. ಇಂತಹ ಅನೇಕ ಮೂಸೆಗಳನ್ನು ಕುಲುಮೆಯೊಂದರಲ್ಲಿ ಕಮಾನಿನಾಕಾರದಲ್ಲಿ ಜೋಡಿಸಿ ಇಡಲಾಗುತ್ತದೆ. ಕುಲುಮೆಯಲ್ಲಿಯ ಅಗ್ನಿಸ್ಥಾನದಲ್ಲಿಯೂ ಮತ್ತು ಮೂಸೆಗಳ ಸುತ್ತಲೂ ಕಾಡುಮರಗಳ ಇದ್ದಿಲನ್ನು ತುಂಬುತ್ತಾರೆ. ಆದರೆ ಫಿಕಸ್ ಬೆಂಗಾಲೆನ್ಸಿಸ್ ಎಂಬ ಜಾತಿಯ ಮರದ ಇದ್ದಿಲನ್ನು ಮಾತ್ರ ಬಳಸುವುದಿಲ್ಲ. ಈ ರೀತಿಯಾಗಿ ಉತ್ಪಾದಿತವಾದ ಉಕ್ಕಿನ ಮೇಲೆ ಗುರುತುಗಳು ಇರುತ್ತವೆ ಮತ್ತು ಆ ಉಕ್ಕನ್ನು ಮೂಸೆಯ ಕೆಳಬದಿಯಿಂದ ಸಂಗ್ರಹಿಸಲಾಗುತ್ತದೆ.

ಕರ್ನಾಟಕದಲ್ಲಿ ದೊರೆತ ಉಕ್ಕಿನ ಗಟ್ಟಿಗಳ ಮೇಲಸ್ತರಗಳು ಇಂಗಾಲೀಕರಣಗೊಂಡಿರುತ್ತವೆ. ಗಟ್ಟಿಯ ಅಂಚಿನಲ್ಲಿ ಇಂಗಾಲದ ಪ್ರಮಾಣ ಹೆಚ್ಚು ಇರುತ್ತದೆ. ಗಟ್ಟಿಭಾಗದಿಂದ ಕೇಂದ್ರದತ್ತ ಬಂದಂತೆ ಅದರ ಪ್ರಮಾಣ ಕಡಿಮೆಯಾಗುತ್ತದೆ.

ಆದರೆ ಪ್ರಾಚೀನ ಕಾಲದಲ್ಲಿ ಉಕ್ಕು ತಯಾರಿಕೆಗೆ ಮತ್ತೊಂದು ವಿಧಾನವನ್ನೇ ಹೆಚ್ಚು ವ್ಯಾಪಕವಾಗಿ ಅನುಸರಿಸುತ್ತಿದ್ದರು. ಈ ವಿಧಾನಕ್ಕೆ ಸಿಮೆಂಟೇಷನ್ ಅಥವಾ ಬಂಧನಕ್ರಿಯಾ ವಿಧಾನವೆಂದೂ ಇಲ್ಲವೆ ಮೆದು ಕಬ್ಬಿಣದ ಇಂಗಾಲೀಕರಣ ವಿಧಾನವೆಂದೂ ಹೆಸರು. ಪ್ರಾಚೀನ ಕಾಲದ ಮೆದು ಕಬ್ಬಿಣ ಶುದ್ಧ ಇರುವುದೇ ಇಲ್ಲ. ಎಷ್ಟೋ ಸಂದರ್ಭದಲ್ಲಿ ಅದರಲ್ಲಿ ಗಸಿಯ ಅಥವಾ ಕಿಟ್ಟದ ಅಲ್ಪಾಂಶ ಇರುತ್ತದೆ. ಇಂಗಾಲದ ಅಂಶಗಳೂ ಇರುತ್ತವೆ. ಈ ಅಂಶಗಳು ಒಂದೇ ವಸ್ತುವಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಇರುತ್ತಿದ್ದವು. ಅಂದರೆ ಶುದ್ಧಗೊಳಿಸದ ಮೆದು ಕಬ್ಬಿಣದ ಮುದ್ದೆಯ ಅಂಕಿತ ಸಾಮಾನ್ಯವಾಗಿ ಉಕ್ಕು ಎನಿಸುವಂತಹ ವಸ್ತುವಾಗಿರುತ್ತಿತ್ತು.

ಭಾರತದಲ್ಲಿ ಉಕ್ಕು ಉತ್ಪಾದನೆಯ ಇತಿಹಾಸವನ್ನು ಪ್ರ.ಶ.ಪೂ.ಸು.10ನೆಯ ಶತಮಾನಕ್ಕೂ ಹಿಂದೆ ಒಯ್ಯಬಹುದು. ಆಗ ಅದು ಬಂಧನಕ್ರಿಯಾ ವಿಧಾನದಿಂದಲೇ ಉತ್ಪನ್ನವಾಗುತ್ತಿತ್ತು. ಮಧ್ಯಭಾರತದ ಉರಿಕಾಗಾಂವ ಎಂಬಲ್ಲಿ ವೂಟ್ಸ್ – ಉಕ್ಕಿನ ಆಯುಧಗಳು ದೊರೆಯುತ್ತವೆ. ಆದರೆ ವೂಟ್ಸ್ ಮೂಸೆವಿಧಾನದಿಂದ ಋಗ್ವೇದದ ಕಾಲದಲ್ಲಿಯ ಭಾರತದಲ್ಲಿ ಉಕ್ಕನ್ನು ಉತ್ಪಾದಿಸುತ್ತಿದ್ದರೆಂದು ಬ್ಯಾನರ್ಜಿಯವರು ವಾದಿಸಿದ್ದಾರೆ.

**ತಯಾರಿಕೆ ತಂತ್ರ:** ಮಧ್ಯಪ್ರದೇಶದ ನವ್ದತೋಲಿ, ಮಹಾರಾಷ್ಟ್ರದ ಚಂದೋಲಿ, ಗುಜರಾತ್‌ನ ಸೋಮನಾಥದ ಪ್ರಾಚೀನ ನೆಲೆಗಳಲ್ಲಿ ತಾಮ್ರದ ವಿವಿಧ ಆಕಾರದ ಕೊಡಲಿಗಳು ದೊರೆತಿವೆ. ಇವುಗಳ ಅಧ್ಯಯನದಿಂದಲೇ ಲೋಹ ತಯಾರಕರು ಅಚ್ಚು ಹಾಕುವುದರಲ್ಲಿಯೂ ಶಾಖೋತ್ಪನ್ನದ ಹಾಗೂ ಶೈತ್ಯೀಕರಣ ವಿಧಾನಗಳಲ್ಲಿ ಹಾಗೂ ಹದಗೊಳಿಸುವಂತಹ ಇನ್ನಿತರ ಕ್ರಿಯೆಗಳಲ್ಲಿಯೂ ಪರಿಣತರಾಗಿದ್ದರು. ಮೆದು ಕಬ್ಬಿಣವನ್ನು ತಯಾರಿಸಿದ ಅನಂತರ ಅದನ್ನು ತೆಳುವಾದ ಪಟ್ಟಿಗಳನ್ನಾಗಿ ಪರಿವರ್ತಿಸಿ, ಅನಂತರ ಈ ಪಟ್ಟಿಗಳನ್ನು ಒಂದಕ್ಕೊಂದು ಬೆಸೆದು ಸಿದ್ಧಮಾಡಬೇಕಾಗಿದ್ದ ವಸ್ತುವಿಗನುಗುಣವಾಗಿ ಬೆಸೆಯುವ ಮೊದಲು ಅಥವಾ ಅನಂತರ ಅವುಗಳು ಇಂಗಾಲೀಕರಣಗೊಳ್ಳುತ್ತಿದ್ದವು. ಸುಮಾರು $1000^0$ ಸೆಲ್ಸಿಯಸ್‌ನಲ್ಲಿ ಮೆದು ಕಬ್ಬಿಣವು ಬೆಸೆದುಕೊಳ್ಳುತ್ತದೆ. ಬೆಸುಗೆ ಎಂದೇ ಪರಿಚಿತವಾದ ಈ ನೇರ ವಿಧಾನದ ಕಬ್ಬಿಣ ಉತ್ಪಾದನೆಯ ಪದ್ಧತಿಗೂ ಕಬ್ಬಿಣದ ವಸ್ತುಗಳನ್ನು ಮಾಡುವುದಕ್ಕೂ ಪರಸ್ಪರ ಸಂಬಂಧಗಳಿವೆ. ಮೆದು ಕಬ್ಬಿಣದಲ್ಲಿ ಸೇರಿಕೊಂಡ ಗಸಿ ಭಾಗಗಳು ವಿಧಾನದಲ್ಲಿ ಸ್ರಾವಕ ವಸ್ತುಗಳಂತೆ ಕಾರ್ಯ ಮಾಡುತ್ತವೆ. ಕಬ್ಬಿಣದ ವಿವಿಧ ವಸ್ತುಗಳನ್ನು, ಉಪಕರಣಗಳನ್ನು ತಯಾರಿಸುವಾಗ ಅಗಾರಿಯಾ ಜನರು ಈ ಪದ್ಧತಿಯನ್ನು ಅನುಸರಿಸುತ್ತಿದ್ದರು. ಶಾಖಕ್ರಿಯೆಗೆ ಒಳಪಟ್ಟಾಗ ಉಕ್ಕು ಬದಲಿಸುವ ಬಣ್ಣಗಳನ್ನು ನೋಡಿ ಅದರ ಗುಣಧರ್ಮಗಳು ಮತ್ತು ಯಾವ ಬದಲಾವಣೆಗಳು ನಡೆದಿವೆ ಎಂಬುದನ್ನು ಒಬ್ಬ ಸಾಮಾನ್ಯ ಕಮ್ಮಾರನೂ ಹೇಳಬಲ್ಲನೆಂಬ ಸಂಗತಿಯು ವಿಸ್ಮಯಕಾರಕ. ಇದಕ್ಕೆ ಟಿಂಟ್ ಪದ್ಧತಿ ಇಲ್ಲವೆ ಛಾಯಾ ಪದ್ಧತಿ ಎಂದು ಹೆಸರು. ಇದು ಹಿಂದಿನ ಕಾಲದ ಕಮ್ಮಾರರಿಗೆ ಬಹಳ ಉಪಯುಕ್ತವಾಗಿತ್ತು. ಬಣ್ಣದಲ್ಲಿಯ ಬದಲಾವಣೆ ಆ ಲೋಹ ವಸ್ತುವಿನ ಕಾಠಿಣ್ಯ ಮತ್ತು ಹದವನ್ನು ಸೂಚಿಸಬಲ್ಲದು. ಬೈರಿಗೆ (ಸ್ಕ್ರೂಡ್ರೈವರ್)ಗಳನ್ನು ಒಣಹುಲ್ಲಿನ ಬಣ್ಣಕ್ಕೂ ಹದಗೊಳಿಸುತ್ತಾರೆ. ಚೌಶ ಅಂದರೆ ಉಳಿ ಮತ್ತು ಬೈರಿಗೆ ಯಂತ್ರ ಅಂದರೆ ಡ್ರಿಲ್‌ಗಳನ್ನು ಕಡುಕೆಂಪು ಬಣ್ಣಕ್ಕೂ ಹದಗೊಳಿಸಲಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಹಳಿಂಗಳಿ, ಹಳ್ಳೂರು, ತಡಕನಹಳ್ಳಿ ನೆಲೆಗಳಲ್ಲಿಯ ಬೃಹತ್‌ಶಿಲಾ ಸಂಸ್ಕೃತಿಯ ವಸ್ತುಗಳನ್ನು ನೋಡಬಹುದು.

ಹಳಿಂಗಳಿಯ ಉತ್ಖನನ ಮಾಡಿದ ಬೃಹತ್‌ಶಿಲಾಯುಗದ ಮೂರನೆಯ ಶಿಲುಬೆಯಾಕಾರದ ಕಲ್ಗೋರಿಯಲ್ಲಿ ಕಬ್ಬಿಣದ ಸಣ್ಣ ಸಣ್ಣ ಉಪಕರಣಗಳಿದ್ದವು. ಇವುಗಳಲ್ಲಿ ದೀಪದ ಹಣತೆಗಳು, ಪಟ್ಟಿಗಳು, ಕೊಂಡಿಗಳು, ಕೊಕ್ಕೆಗಳು, ಅರ್ಧವರ್ತುಲದ ಅಲಗುಗಳು, ಹಿಡಿಕೆಗಳು, ಸರಳುಗಳು, ನಿರ್ದಿಷ್ಟ ಆಕಾರವಿಲ್ಲದ ವಸ್ತುಗಳಿವೆ. ಚೌಕಾಕಾರದ ಒಂದು ತಾಮ್ರದ ತಗಡೂ ಕೂಡಾ ಇದ್ದಿತು. ಇದ್ದಿಲಿನ ತುಣುಕುಗಳ ಇಂಗಾಲ 14 ಕಾಲಮಾಪನ ಪ್ರ.ಶ.ಪೂ.80ನ್ನು ಸೂಚಿಸುತ್ತದೆ. ತುಕ್ಕು ಹಿಡಿದ ಈ ಕಬ್ಬಿಣ ಉಪಕರಣಗಳಲ್ಲಿ ಎರಡು ಕಬ್ಬಿಣ ಸರಳುಗಳನ್ನು ಲೋಹರಚನಾಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿದಾಗ ಕೆಳಕಂಡ ಕುತೂಹಲಕಾರಿ ಸಂಗತಿಗಳು ಬೆಳಕಿಗೆ ಬಂದಿವೆ.

ಎರಡು ಸರಳು (ನಂ.1 ಮತ್ತು 2)ಗಳಿಗೆ ಕ್ಯಾಲ್ಷಿಯಮ್ ಕಾರ್ಬೋನೇಟ್ ಮತ್ತು ಫೆರಿಕ್ ಆಕ್ಸೈಡ್‌ಗಳಿಂದ ಮಾಡಿದ ಬಿಳಿ ಮಿಶ್ರಿತ ಕಂದುಬಣ್ಣವನ್ನು ಹಚ್ಚಲಾಯಿತು. ಅವುಗಳ ಉದ್ದಗಲಗಳನ್ನೆಲ್ಲ ತಿಕ್ಕಿ ನುಣುಪುಗೊಳಿಸಲಾಯಿತು. ಎರಡೂ ಸರಳುಗಳ ಅಂತರ ಭಾಗಗಳ ಲೋಹವೂ ಕೂಡ ಇನ್ನೂ ಹೊಳೆಯುತ್ತಿರುವ ಸ್ಥಿತಿಯಲ್ಲಿಯೆ ಕಂಡುಬಂತು. ಒಂದನೆಯ ಸರಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಶೇಕಡವಾರು 0.13ರಷ್ಟು ಗಂಧಕ, 0.15ರಷ್ಟು ಫಾಸ್ಫರಸ್, 0.9ರಷ್ಟು ಸಿಲಿಕಾನ್ ಹಾಗೂ 0.14ರಷ್ಟು ಟಿಟ್ಯಾನಿಯಮ್ ಅದರಲ್ಲಿದ್ದುದು ಕಂಡುಬಂತು. ಕಬ್ಬಿಣವೆ ಶೇ.98.8ರಷ್ಟು, ಕಾರ್ಬನ್ ಶೇ.0.18ರಷ್ಟಿತ್ತು. ಎರಡನೆಯ ಸರಕಿನಲ್ಲಿ ಶೇಕಡವಾರು 0.11ರಷ್ಟು ಸಲ್ಫರ್, 0.12ರಷ್ಟು ಫಾಸ್ಫರಸ್, 0.9ರಷ್ಟು ಸಿಲಿಕಾನ್, 0.8ರಷ್ಟು ಮೆಗ್ನೀಶಿಯಮ್, 0.1ರಷ್ಟು ಕ್ಯಾಲ್ಷಿಯಮ್ ಮತ್ತು 0.13ರಷ್ಟು ಟಿಟ್ಯಾನಿಯಮ್‌ಗಳನ್ನು ಹೊಂದಿದೆ. ಕಬ್ಬಿಣದ ಶುದ್ಧತೆಯ ಶೇ.0.13ರಷ್ಟಿದೆ. ಎರಡೂ ಸರಳುಗಳ ಕೆಲ ಭಾಗಗಳ ಸೂಕ್ಷ್ಮರಚನೆಗಳು ಬಹಳ ಸಾಮ್ಯವನ್ನು ಹೊಂದಿವೆ. ಎಲ್ಲ ಭಾಗಗಳಲ್ಲಿ ಗಸಿಯ ಪ್ರಮಾಣ ಅಲ್ಪಸ್ವಲ್ಪವಾಗಿ ಇದ್ದದ್ದು ಕಂಡುಬಂದಿತು. ಕೆಲವು ಆಕ್ಸೈಡ್ ಗುಣಗಳೂ ಕಂಡುಬಂದಿವೆ. ಶೇ.98ರಷ್ಟಿನ ಇಥಿಲ್ ಇಲ್ಲವೆ ಮೀಥೈಲ್ ಆಲ್ಕೊಹಾಲಿನಲ್ಲಿ ಶೇ.2ರಷ್ಟಿದ್ದ ನಿತಾಲದಿಂದ ಕೆತ್ತಿದಾಗ ಬಿರುಸಾದ ಭಾಗವೂ ಸರಕುಗಳಲ್ಲಿ ಕಂಡುಬಂದಿದೆ. ವಸ್ತುವಿನ ವಿವಿಧ ಹಂತಗಳನ್ನು ಆಯ್ಕೆ ಮಾಡಬೇಕಾದರೆ ಈ ಬಗೆಯ ಕೆತ್ತುವಿಕೆ ಅವಶ್ಯವಾಯಿತು. ಹಾಗೆ ಮಾಡುವುದರಿಂದ ಈ ವಸ್ತು ಅಥವಾ ಲೋಹ ಯಾವ ಬಗೆಯ ಉಷ್ಣಕ್ರಿಯೆಗೆ ಒಳಗಾಗಿದೆ ಎಂಬುದನ್ನು ತಿಳಿಯಬಹುದು. ಬಿರುಸಾದ ಕಪ್ಪು ಪುಡಿಯ ಬಣ್ಣವನ್ನು ಆಳವಾಗಿ ಹೊಂದಿತ್ತು. ಈ ಎರಡು ವಸ್ತುಗಳನ್ನು ಮೆದು ಕಬ್ಬಿಣದಿಂದಲೇ ಮಾಡಲಾಗಿತ್ತು. ಒಂದನೆಯದು ಸರಳಿನ ತುದಿಯು ಇಂಗಾಲೀಕರಣದ ಕವಚವನ್ನು ಹೊಂದಿತ್ತು. ಇದಕ್ಕೂ ಮೊದಲು ಇದಕ್ಕೆ ಕುಲುಮೆಯಲ್ಲಿ ಕಾಯಿಸಿ ಬೇಕಾದ ಆಕಾರವನ್ನು ತರಲಾಯಿತು. ಇದರ ತುದಿಯ ಒಂದು ಭಾಗದ ಅಂಚಿನಲ್ಲಿ ಇಂಗಾಲದ ಅಂಶ ಹೆಚ್ಚು. ಇದಕ್ಕೆ ಮಾರ್ಟೆನ್ಸೈಟ್ ಮತ್ತು ಬೈನೈಟದ ಮಿಶ್ರಣದಿಂದೊಡಗೂಡಿದ ಲೋಹರಚನೆಯಿದ್ದರೆ ಹೀಗಾಗುತ್ತದೆ. ಇವೆರಡಕ್ಕೂ ಕಾರಣವೆಂದರೆ ಈ ವಸ್ತುವನ್ನು ಇದರ ಕಾಯ್ದ ಸ್ಥಿತಿಯಿಂದ ತಣ್ಣಗಾಗಿಸುವ ವೇಗವೂ ಹೆಚ್ಚಿರುತ್ತದೆ. ಈ ವಸ್ತುವಿನ ಫೆರೈಟ್ ಭಾಗ ಸಾಧಾರಣವಾಗಿ ಒತ್ತೊತ್ತಾಗಿರುತ್ತದೆ. ಅಂದರೆ ಮೆದು ಕಬ್ಬಿಣದ ಚಿಕ್ಕದಾದ ಒಂದು ಮುದ್ದೆಗೆ ಒರಟು ಆಕಾರವನ್ನು ಕೊಟ್ಟು ಆ ಮೇಲೆ ಅದನ್ನು ಇಂಗಾಲೀಕರಣಗೊಳಿಸಿದಂತೆ ತೋರುತ್ತದೆ. ಈ ಕಬ್ಬಿಣವೂ ಇಂಗಾಲೀಕರಣಗೊಂಡ ಭಾಗದತ್ತ ಹೆಚ್ಚು ಹೆಚ್ಚು ಬಿರುಸಾಗುತ್ತ ಬರುತ್ತದೆ.

ಎರಡನೆಯ ಸರಳಿನ ಒಂದು ತುದಿಗೆ ಪದರುಳ್ಳ ರಚನೆಯಿತ್ತು. ಇಂಗಾಲೀಕರಣಗೊಂಡ ಪಟ್ಟಿಗಳನ್ನು ಜೋಡಿಸಿ ಈ ಭಾಗವನ್ನು ಮಾಡಿರಬಹುದು. ಫೆರೈಟ್ ಅಚ್ಚಿನಲ್ಲಿ ಸಿಮೆಂಟೈಟ್ ಅನ್ನು (ಫೆರಿಕ್ ಕಾರ್ಬೈಡ್–ಎಫ್ ಇ 3 ಸಿ) ಗೋಲಾಕಾರಕ್ಕೆ ಇಳಿಸಿದಂತೆ ತೋರುತ್ತದೆ. ಈ ಸರಳನ್ನು ಅಡ್ಡ ಕತ್ತರಿಸಿ ನೋಡಿದಾಗ ಅಲ್ಲಿ ಒಂದು ಭಾಗದಲ್ಲಿ ಒರಟು ಕಣಗಳು ಕಾಣುತ್ತಿತ್ತು. ಈ ವಸ್ತು ಸು.$1000^0$ ಸೆಲ್ಸಿಯಸ್‌ನಲ್ಲಿ ಕಾಯಿಸಿದಾಗ ಇದನ್ನು ತಂಪುಗೊಳಿಸಿದಂತೆ ತೋರುತ್ತದೆ. ಮೇಲೆ ಅದನ್ನು ಶೀಘ್ರವಾಗಿ ಕಡಿಮೆ ಆಗುತ್ತಿದ್ದ ಶಾಖದಲ್ಲಿ ರೂಪಗೊಳಿಸಿರಬಹುದು. ಇದರಲ್ಲಿಯ ನ್ಯೂಮನ್ ಸಮೂಹಗಳು ಮತ್ತು ಅಸಮಾನ ಕಣಗಳು ಇದನ್ನು ಸೂಚಿಸುತ್ತಿದ್ದುವು. ಉಕ್ಕಿನಲ್ಲಿ ಸಲ್ಫರ್ ಮತ್ತು ಫಾಸ್ಪರಸ್‌ಗಳು ಅಲ್ಪ ಪ್ರಮಾಣದಲ್ಲಿ ಇವೆಯಾದ್ದರಿಂದ ಈ ಉಕ್ಕನ್ನು ತಯಾರಿಸಲು ಬಳಸಿದ ಅದಿರು ಬಹಳ ಉತ್ತಮ ಗುಣಮಟ್ಟದ್ದಾಗಿರಬೇಕು. ಆದರೆ ಈ ವಸ್ತುವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಈ ಮೊದಲೇ ಹೇಳಿದಂತೆ ಸಲ್ಫರ್ ಮತ್ತು ಫಾಸ್ಪರಸ್‌ಗಳು ಕೊಂಚ ಹೆಚ್ಚಿನ ಮಟ್ಟದಲ್ಲಿಯೇ ಇದ್ದದ್ದು ಕಾಣುತ್ತಿತ್ತು. ಆದ್ದರಿಂದ ಈ ವಸ್ತುವನ್ನು ಕೆಳ ಗುಣಮಟ್ಟದ ಅದಿರಿನಿಂದ ತಯಾರಿಸಬಹುದೆಂದು ಹೇಳಬಹುದು. ಈ ಎರಡೂ ವಸ್ತುಗಳಲ್ಲಿ ಕಶ್ಮಲಗಳ ರಚನೆ ಇನ್ನೂ ಕುತೂಹಲಕಾರಿಯಾಗಿದೆ. ಈ ಎರಡೂ ವಸ್ತುಗಳನ್ನು ಒಂದೆ ಮೆದು ಕಬ್ಬಿಣದಿಂದ ಮಾಡಿದ್ದನ್ನು ಅದು ಸೂಚಿಸುತ್ತದೆ. ಆ ಮೆದು ಕಬ್ಬಿಣವಾದರೂ ಕೂಡ ಟಿಟೈನಿಫೆರಸ್ ಅದಿರಿನಿಂದ ಉತ್ಪಾದಿಸಬಹುದಾಗಿದೆ. ಈ ವಸ್ತುವನ್ನು ಲೋಹರಚನಾಶಾಸ್ತ್ರೀಯವಾಗಿ ಪರೀಕ್ಷಿಸಿದಾಗ ವಿಶೇಷತಃ ಇಂಗಾಲೀಕರಣಗೊಂಡ ಅದರ ತುದಿಭಾಗವನ್ನು ಇಂಥ ಪರೀಕ್ಷೆಗೆ ಒಳಪಡಿಸಿದಾಗ ಇದು ಒಂದು ಚಿಕ್ಕ ಮೊನೆ ಇಲ್ಲವೆ ಬಾಣದ ತುದಿಯಾಗಿರಬಹುದೆಂದು ತೋರುತ್ತದೆ. ಬೃಹತ್‌ಶಿಲಾಯುಗದ ಒಂದೇ ಸ್ಮಾರಕದಲ್ಲಿ 13ರಷ್ಟು ಸಂಖ್ಯೆಯಲ್ಲಿ ಸರಳುಗಳು ಒಂದೇ ಎಡೆಯಲ್ಲಿ ಇದ್ದುದ್ದನ್ನು ನೋಡಿದರೆ ಈ ಸರಳುಗಳು ಅಪೂರ್ಣಾವಸ್ಥೆಯಲ್ಲಿ ಇದ್ದ ಉತ್ಪಾದನೆಗಳಾಗಿರಬಹುದು ಎಂದೆನಿಸುತ್ತದೆ.

ಬಾಣದ ಮೊನೆಯನ್ನು ಶಾಸ್ತ್ರೀಯವಾಗಿ ಪರೀಕ್ಷಿಸಲಾಯಿತು. ಅದೊಂದು ಅತಿಯಾಗಿ ಜಂಗುಗಟ್ಟಿದ ವಸ್ತು. ಅದರಲ್ಲಿ ಲೋಹಗರ್ಭವನ್ನೆ ಕಾಣುವುದು ಸಾಧ್ಯವಿದ್ದಿಲ್ಲ. ಆದ್ದರಿಂದ ಕಾರ್ಬೈಡ್ ಕಣಗಳ ಅವಶೇಷಗಳ ಆಧಾರದಿಂದ ಅದರ ತಯಾರಿಕೆಯ ತಂತ್ರವನ್ನು ತಿಳಿಯಲು ಯತ್ನಿಸಲಾಯಿತು.

ಉಕ್ಕಿನಲ್ಲಿ ಪರ್ಲೈಟ್ ಎಂಬ ಒಂದು ಸಾಮಾನ್ಯ ಘಟಕವಿರುತ್ತದೆ. ಕಬ್ಬಿಣದಲ್ಲಿ ಮಾತ್ರ ಪರ್ಲೈಟ್‌ನಿಂದ ವ್ಯಾಪ್ತವಾಗುವ ಕ್ಷೇತ್ರದ ಪ್ರಮಾಣವೂ ಶೂನ್ಯದಷ್ಟು ಕೂಡ ಇರಬಲ್ಲದು. ಆದರೆ ಇಂಗಾಲವು ಶೇ.0.8ರಷ್ಟಿದ್ದರೆ, ಆ ವಸ್ತುವಿನ ಭಾಗವು ಪರ್ಲೈಟ್ ಕ್ಷೇತ್ರವನ್ನು ಮಾತ್ರ ತೋರಿಸುತ್ತದೆ. ಈ ಪರ್ಲೈಟ್ ತನ್ನ ಸೂಕ್ಷ್ಮರಚನೆಯ ಪ್ರತಿರೂಪಗಳನ್ನು ಕಬ್ಬಿಣದ ಆಕ್ಸೈಡ್‌ನಲ್ಲಿ ಬಿಡಬಹುದು. ಇದೊಂದು ಬಹಳ ಜಂಗುಗಟ್ಟಿದ ವಸ್ತುವಾಗಿರುತ್ತದೆ. ಇಂಗಾಲದ ಅಂಶ ಹೆಚ್ಚಾಗಿದ್ದರೆ ಸೂಕ್ಷ್ಮ ರಚನೆಯಲ್ಲಿ ಮುಕ್ತ ಸಿಮೆಂಟೈಟಿನ (ಫೆರಿಕ್ ಕಾರ್ಬೈಡ್) ಸಣ್ಣ ಸಣ್ಣ ಗೋಲಿಗಳು ಕಾಣುತ್ತವೆ. ಇದಲ್ಲದೆ ಪರ್ಲೈಟಿನಲ್ಲಿ ಅಡಕಗೊಂಡ ಸಿಮೆಂಟೈಟ್ ಅಂತೂ ಇದ್ದೇ ಇರುತ್ತದೆ.

ಸಂಪೂರ್ಣವಾಗಿ ಆಕ್ಸೈಡೀಕರಣಗೊಂಡ ಮತ್ತು ಉಕ್ಕಿನದೆಂದು ತರ್ಕಿಸಲಾದ ಉಪಕರಣಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಇಂತಹ ಸಿಮೆಂಟೈಟ್ ರಚನೆಗಳ ಅಥವಾ ಪರ್ಲೈಟ್‌ಗಳ ಸುಳಿಯನ್ನು ಹುಡುಕಿ ತೆಗೆಯಬೇಕಾದುದು ಅವಶ್ಯ. ಗೋಲಿಗಳು ಕಾರ್ಬೈಡುಗಳ ಪ್ರತಿರೂಪಗಳ ಅವಶೇಷಗಳಾಗಿರಬಹುದು. ಜಂಗುಗಟ್ಟುವಿಕೆಯಿಂದಾಗಿ ಇವು

ಇಂಗಾಲಾಂಶ ವಸ್ತುಗಳಿಂದ ಕಪ್ಪಾಗಿರಲು ಸಾಧ್ಯ. ಇಂತಹ ವಸ್ತುಗಳು ರೂಪವಿಹೀನ ಇಂಗಾಲ ಮತ್ತು ಆಕ್ಸೈಡ್‍ಗಳ ದಟ್ಟ ಮಿಶ್ರಣಗಳೂ ಆಗಿರಬಹುದು. ಇಂತಹ ವಸ್ತುಗಳಲ್ಲಿಯ ಆಕ್ಸೈಡ್ ಅವಶೇಷಗಳಲ್ಲಿ ಕಾರ್ಬೈಡುಗಳ ಪ್ರತಿರೂಪಗಳ ಅಸ್ತಿತ್ವ ಇದ್ದರೆ ಈ ವಸ್ತುವನ್ನು ಉಕ್ಕಿನ ಮೇಲೆ ಮಾಡಲಾಗಿದೆ ಎಂದು ಅರ್ಥ.

ಮೇಲೆ ಹೇಳಿದ ವಿಷಯಗಳಿಂದ ಕೆಲವೊಂದು ಸಂಗತಿಗಳನ್ನು ಅರಿತುಕೊಳ್ಳಬಹುದು. ಹಳ್ಳೂರಿನ ಬಾಣದ ಮೊನಚನ್ನು ಪದರು ಬೆಸುಗೆಯ ತಂತ್ರದಿಂದ (ಲ್ಯಾಮಿನೇಶನ್ ತಂತ್ರ) ಮಾಡಿರಬಹುದು. ಅಂದರೆ ಇಂಗಾಲೀಕರಣಗೊಂಡ ಇಲ್ಲವೆ ಉಕ್ಕಿನಲ್ಲಿ ಪರಿವರ್ತಿತವಾದ ಮೆದು ಕಬ್ಬಿಣದ ಪಟ್ಟಿಗಳನ್ನು ಒಂದರಲ್ಲೊಂದು ಬೆಸೆದು ನಿರ್ದಿಷ್ಟ ಆಕಾರವನ್ನಿತ್ತಿರಬಹುದು. ಇದರಲ್ಲಿ ಲೋಹದ ಹರಳುಗಳಿಲ್ಲ. ಆದರೆ ಕಾರ್ಬೈಡ್ ಕಣಗಳು ಅವಶೇಷಗಳ ಜಾಲದಲ್ಲಿ ವ್ಯವಸ್ಥಿತವಾಗಿರುವ ಸಂಗತಿಯನ್ನು ಗಮನಿಸಿದರೆ ಈ ವಸ್ತುವು ಉಕ್ಕಿನಿಂದ ಆಗಿರಬಹುದೆಂದು ತರ್ಕಿಸಬಹುದು. ತಡಕನಹಳ್ಳಿಯಲ್ಲಿಯ ಕೆಲ ಕಬ್ಬಿಣದ ವಸ್ತುಗಳನ್ನು ಪರೀಕ್ಷಿಸಿದಾಗ ಇವುಗಳನ್ನು ಕೂಡ ಉಕ್ಕಿನ ಮೇಲೆಯೆ ಮಾಡಿದ್ದಾಗಿ ಕಂಡುಬಂದಿದೆ. ಅವಶೇಷ ರೂಪದಲ್ಲಿ ಪರ್ಲೈಟ್ ಕಣಗಳನ್ನು ಕಂಡು ಈ ತರ್ಕವನ್ನು ಮಾಡಲಾಗಿದೆ.

ಒಟ್ಟಿನಲ್ಲಿ ತಾಮ್ರ ಮತ್ತು ಕಬ್ಬಿಣದ ಲೋಹಗಳನ್ನು ಉತ್ಪಾದಿಸುವುದರಲ್ಲಿ ಪ್ರಾಗೈತಿಹಾಸಿಕ ಕರ್ನಾಟಕದಲ್ಲಿಯ ಲೋಹಗಾರರು ಸಾಕಷ್ಟು ಪರಿಣಿತರಾಗಿದ್ದರು ಎಂಬ ಮಾತನ್ನು ಈ ಮೇಲೆ ವಿವರಿಸಲಾದ ಸಂಗತಿಗಳಿಂದ ನಿರ್ಣಯಿಸಬಹುದು. ಕಬ್ಬಿಣದ ವಸ್ತುಗಳ ಬಗ್ಗೆ ಹೇಳಬೇಕೆಂದರೆ ಈ ಕೆಲಸದಲ್ಲಿ ತೊಡಗಿದ ಕಮ್ಮಾರರು ತಮ್ಮ ಸರಕುಗಳ ಬಗ್ಗೆಯೂ ಇವುಗಳ ಗುಣಧರ್ಮಗಳ ಬಗ್ಗೆಯೂ ಸಂಪೂರ್ಣವಾದ ಅರಿವು ಮತ್ತು ತಿಳುವಳಿಕೆಯನ್ನು ಉಳ್ಳವರಾಗಿದ್ದರು. ಕಬ್ಬಿಣಕ್ಕೆ ಕಾವು ಕೊಡುವ ಕೆಲಸವನ್ನು ಕರಾರುವಾಕ್ಕಾಗಿ ಮಾಡುತ್ತಿದ್ದರು. ವಸ್ತುಗಳ ಅಂಚನ್ನು ರೂಪಿಸುವದರಲ್ಲಿಯೂ ತುದಿ ಅಥವಾ ಮೊನಚುಗಳನ್ನು ರೂಪಿಸುವದರಲ್ಲಿಯೂ ಆಶ್ಚರ್ಯಕರ ಪರಿಣಿತಿಯನ್ನು ಸಂಪಾದಿಸಿದ್ದರು. ಮೆದುಕಬ್ಬಿಣದ ಪಟ್ಟಿಗಳ ಮೇಲ್ಪದರುಗಳನ್ನು ಇವರು ಇಂಗಾಲೀಕರಣಗೊಳಿಸಿದ್ದನ್ನು ನೋಡಿದರೆ, ವ್ಯವಸ್ಥಿತವಾಗಿ ಉಕ್ಕನ್ನು ತಯಾರಿಸುವುದನ್ನು ಇವರು ಬಲ್ಲವರಾಗಿದ್ದರು ಎಂಬುದನ್ನು ತೋರಿಸಿ ಕೊಡುತ್ತದಲ್ಲದೆ ಈ ಕಮ್ಮಾರರ ಕರ್ಮಪ್ರಾವೀಣ್ಯತೆಯನ್ನು ಸೂಚಿಸುತ್ತದೆ. ಕರ್ನಾಟಕ ದಲ್ಲಿಯ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ವಸ್ತುಗಳನ್ನು ಮತ್ತು ನಮೂನೆ ಗಳನ್ನೂ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಇವುಗಳಲ್ಲಿಯ ಕಶ್ಮಲಗಳಲ್ಲಿ ಟಿಟ್ಯಾನಿಯಮ್ ಇದ್ದದ್ದು ಕಂಡುಬರುತ್ತದೆ. ಆದರೆ ಅದೇ ಕಾಲಕ್ಕೆ ಸಂಬಂಧಿಸಿದ ಆಂಧ್ರದಲ್ಲಿ ನಮೂನೆಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಟಿಟ್ಯಾನಿಯಮ್ ಲಭ್ಯವಾಗುವುದಿಲ್ಲ. ಇದರಿಂದ ಕಮ್ಮಾರರು ತಮ್ಮ ಸುತ್ತಮುತ್ತಲು ಇದ್ದ, ಇಲ್ಲವೆ ಬೇರೆ ಬೇರೆ ವಿಶಿಷ್ಟವಾದ ಅದುರುಗಳನ್ನು ಬಳಸುತ್ತಿದ್ದರು ಎಂಬುದು ಸಿದ್ಧವಾಗುತ್ತದೆ. ಆಂಧ್ರಪ್ರದೇಶದ ನಮೂನೆಗಳಲ್ಲಿ ಅಲ್ಯುಮಿನಾ ಕೂಡ ಹೆಚ್ಚಿನ ಅಂಶದಲ್ಲಿತ್ತು ಎಂಬುದನ್ನು ದೃಢಪಡಿಸುತ್ತದೆ ಮತ್ತು ಅನುಮಾನಕ್ಕೆ ಎಡೆ ಕೊಡುತ್ತದೆ. ಆದ್ದರಿಂದ ಕರ್ನಾಟಕದಲ್ಲಿಯ ಲೋಹಶಾಸ್ತ್ರ ತಂತ್ರ ಪ್ರತ್ಯೇಕವಾಗಿಯೂ ಸ್ವತಂತ್ರವಾಗಿಯೂ ಬೆಳೆಯಿತು ಎಂದು ಹೇಳಬಹುದಾಗಿದೆ. ಪ್ರ.ಶ.ಪೂ.ಸು.1200 ವರ್ಷಗಳ ಪೂರ್ವದಲ್ಲಿಯೆ ಕರ್ನಾಟಕದಲ್ಲಿಯ ಬೃಹತ್‍ಶಿಲಾಯುಗದ ಜನರಿಗೆ ಉಕ್ಕು ತಯಾರಿಸುವ ತಂತ್ರ ಚೆನ್ನಾಗಿ ತಿಳಿದಿತ್ತು. (ಜಿ.ಎಬಿ.)

**ಕಯಥ:** ಮಧ್ಯಪ್ರದೇಶ ರಾಜ್ಯದ ಉಜ್ಜಯಿನಿ ಜಿಲ್ಲೆಯಲ್ಲಿ ಉಜ್ಜಯನಿಯಿಂದ ಸು. 25 ಕಿಮೀ ಪೂರ್ವಕ್ಕೆ ಛೋಟಿ ಕಾಲಿಸಿಂಧ್ ನದಿಯ ಬಲದಂಡೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಈಗಿರುವ ಹಳ್ಳಿ ಪುರಾತನ ಅವಶೇಷಗಳ ದಿಬ್ಬದ ಮೇಲೆಯೇ ಇದೆ. ಪ್ರಖ್ಯಾತ ಖಗೋಳವಿಜ್ಞಾನಿ ವರಾಹಮಿಹಿರನ ಹುಟ್ಟೂರಾದ ಕಪಿಥಕ ಇದೇ ಸ್ಥಳವೆಂದು ಹೇಳುತ್ತಾರೆ. 1964–65 ರಲ್ಲಿ ವಿಕ್ರಮ್ ವಿಶ್ವವಿದ್ಯಾಲಯದ ವಿ.ಎಸ್. ವಾಕಣಕರ್ ಈ ನಿವೇಶನವನ್ನು ಶೋಧಿಸಿ 1965–67ರಲ್ಲಿ ಸಣ್ಣ ಪ್ರಮಾಣದ ಉತ್ಖನನವನ್ನು ನಡೆಸಿದರು. ಅನಂತರ ಡೆಕ್ಕನ್ ಕಾಲೇಜ್, ವಿಕ್ರಮ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ 1968ರಲ್ಲಿ ಉತ್ಖನನ ನಡೆಸಿ ಐದು ಸಾಂಸ್ಕೃತಿಕ ಹಂತಗಳನ್ನು ಗುರುತಿಸಿತು.

ಮೊದಲನೆಯ ಹಂತವಾದ ತಾಮ್ರ–ಶಿಲಾಯುಗದ ಸಾಂಸ್ಕೃತಿಕ ಅವಶೇಷಗಳು ಭಾರತೀಯ ಉಪಖಂಡದ ಇತರ ತಾಮ್ರ–ಶಿಲಾಯುಗ ಸಂಸ್ಕೃತಿಗಳಿಗಿಂತ ಭಿನ್ನವಾಗಿವೆ. ಮೂರು ವಿಧದ ಮಣ್ಪಾತ್ರೆಗಳು ಈ ಸಂಸ್ಕೃತಿಯ ಮುಖ್ಯ ಲಕ್ಷಣವಾಗಿವೆ. ತಾಮ್ರದ ಉಪಕರಣಗಳು ಹಾಗೂ ಬೆಣಚುಕಲ್ಲಿನ ನೀಳ ಚಕ್ಕೆಗಳು ಇತರ ತಾಮ್ರ–ಶಿಲಾಯುಗ ಸಂಸ್ಕೃತಿಗಳಲ್ಲಿರುವಂತಿವೆ. ಇಲ್ಲಿಯ ಜನರು ಮಣ್ಣು ಮತ್ತು ಹುಲ್ಲಿನ ಸಣ್ಣ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಮಣ್ಪಾತ್ರೆಗಳಲ್ಲಿ ಒಂದು ಅತಿ ವಿಶಿಷ್ಟವಾಗಿದೆ. ನಯವಾಗಿ ಗಟ್ಟಿಮುಟ್ಟಾಗಿಯೂ ಇರುವ ಈ ಪಾತ್ರೆಗಳು ದಪ್ಪ ಕಂದುಬಣ್ಣದ ಲೇಪನವನ್ನು ಅಂಚಿನಿಂದ ಭುಜದವರೆಗೂ, ಕೆಲವೊಮ್ಮೆ ತಳಭಾಗದವರೆಗೂ ಹೊಂದಿವೆ. ಲೇಪನದ ಮೇಲೆ ನೇರಳೆ ವರ್ಣದ ವಿವಿಧಾಕೃತಿಯ ವಕ್ರವಾದ, ನೀಳವಾದ ಹಾಗೂ ಏರಿಳಿತಗಳಿಂದ ಕೂಡಿದ ದಪ್ಪವಾದ ಚಿತ್ರಗಳನ್ನು ಬಿಡಿಸಲಾಗಿದೆ. ದುಂಡಾದ ಜಾಡಿಗಳು ಹಾಗೂ ದಪ್ಪ ಬಟ್ಟಲುಗಳು ವಿಶೇಷವಾಗಿವೆ. ಹರಪ್ಪ ಸಂಸ್ಕೃತಿಯ ಮಡಕೆಯನ್ನು ಹೋಲುವ ದೊಡ್ಡ ಶೇಖರಣಾ ಜಾಡಿಗಳು ಇವೆ. ಎರಡನೆಯ ಮಾದರಿಯ ಮಣ್ಪಾತ್ರೆಗಳು ಮಾಸಲು ಕಂದುಬಣ್ಣದ ಮೇಲೆ ಕೆಂಪುವರ್ಣದಿಂದ ಅಲಂಕರಿಸಲ್ಪಟ್ಟಿವೆ. ಇವು ನಯವಾಗಿ ತೆಳುವಾಗಿ ಇವೆ. ಇವುಗಳಲ್ಲಿ ಚೆಂಬು ಸರ್ವೇಸಾಮಾನ್ಯವಾಗಿದ್ದು ತಟ್ಟೆ ಹಾಗೂ ನೀಳ್ಗತ್ತಿನ ದುಂಡನೆಯ ಜಾಡಿಗಳು ಪ್ರಮುಖವಾಗಿವೆ. ಮೂರನೆಯ ಮಾದರಿಯ ಮಣ್ಪಾತ್ರೆಗಳನ್ನು ಲೇಪನ ಮಾಡದೆಯೇ ಅಂಕುಡೊಂಕಾದ ಕೊರೆದ ಚಿತ್ರಗಳಿಂದ ಚಿತ್ರಿಸಲಾಗಿದೆ. ಇವುಗಳಲ್ಲಿ ಬಟ್ಟಲು ಹಾಗೂ ಪಾತ್ರೆಗಳು ಪ್ರಮುಖ ಮಾದರಿಗಳು. ಈ ಮಣ್ಪಾತ್ರೆಗಳ ಜೊತೆಗೆ ಕೈಯಿಂದ ಮಾಡಿದ ಒರಟಾದ ಕೆಂಪು–ಬೂದು ಬಣ್ಣದ, ಕೆಲವೊಮ್ಮೆ ಕೊರೆದ ಚಿತ್ರಗಳಿಂದ ಚಿತ್ರಿಸಲ್ಪಟ್ಟ ಪಾತ್ರೆಗಳು, ಶೇಖರಣಾ




ವರ್ಣರೇಖಾಚಿತ್ರಿತ ಮಣ್ಪಾತ್ರೆಗಳು

ಜಾಡಿಗಳು, ಬೋಗುಣಿ, ಹರಿವಾಣ ದೊರೆತಿವೆ. ಇತರ ತಾಮ್ರ–ಶಿಲಾಯುಗ ಸಂಸ್ಕೃತಿಗಳ ಮಣ್ಪಾತ್ರೆಗಳಿಗಿಂತ ಭಿನ್ನವಾದ ಇವು ಪ್ರಥಮ ಬಾರಿಗೆ ಈ ನೆಲೆಯಲ್ಲಿ ಕಂಡುಬಂದಿರುವುದರಿಂದ ಈ ಹಂತದ ಸಂಸ್ಕೃತಿಯನ್ನು ಕಯಥ ಸಂಸ್ಕೃತಿಯೆಂದು ಉತ್ಖನನಕಾರರು ಹೆಸರಿಸಿದ್ದಾರೆ.

ಕಯಥ ಸಂಸ್ಕೃತಿಯ ಜನರು ತಾಮ್ರ ಲೋಹ ತಂತ್ರಗಾರಿಕೆಯಲ್ಲಿ ನಿಪುಣರಾಗಿದ್ದರು. ಇಲ್ಲಿ ದೊರೆತ ತಾಮ್ರದ ಎರಡು ಕೊಡಲಿ ಮತ್ತು 28 ಬಳೆಗಳು ಇವರ ನೈಪುಣ್ಯಕ್ಕೆ ಸಾಕ್ಷಿಯಾಗಿವೆ. 160 ರಿಂದ 175 ಮಂದಗೆಂಪಿನ ಕಲ್ಲು ಹಾಗೂ ಅಗೇಟ್ ಮಣಿಗಳಿಂದ ಮಾಡಿದ ಎರಡು ಕೊರಳ ಹಾರಗಳು ಹಾಗೂ ಸ್ಟಿಯಟೈಟ್‍ನಲ್ಲಿ ಮಾಡಿದ 40,000 ಸೂಕ್ಷ್ಮ ಮಣಿಗಳು ದೊರೆತಿವೆ. ಕಯಥ ಸಂಸ್ಕೃತಿ ಮರೆಯಾದ ಒಂದು ಶತಮಾನದ ಅನಂತರ (ಪ್ರ.ಶ.ಪೂ. 1800) ಈ ನೆಲೆಯಲ್ಲಿ ಬಾನಾಸ್ ಸಂಸ್ಕೃತಿಯ ಜನ ಬಂದು ನೆಲೆಸಿದರು.

ಬಾನಾಸ್ ಸಂಸ್ಕೃತಿ ತಾಮ್ರಯುಗ ಸಂಸ್ಕೃತಿಯಾದರೆ ಕಯಥ ಕಲ್ಲಿನ ಚಕ್ಕೆಯ ಅಲುಗುಗಳ ಬಳಕೆಯಿಂದಾಗಿ ತಾಮ್ರ–ಶಿಲಾಯುಗ ಸಂಸ್ಕೃತಿಯಾಗಿದೆ. ಬಾನಾಸ್ ಸಂಸ್ಕೃತಿಯ ಸುಡಾವೆ ಮಣ್ಣಿನ ಗೂಳಿಯ ನೈಜತೆ ಹಾಗೂ ಅಂಗಾಂಗಗಳ ವಿಶಿಷ್ಟ ನಿಲುವು ಆಕರ್ಷಕವಾಗಿದೆ. ಬಹುತೇಕ ಆಕೃತಿಗಳಲ್ಲಿ ತಲೆ, ಕೊಂಬು, ಹಾಗೂ ಇಣಿ ಮಾತ್ರ ಎದ್ದು ಕಾಣುವಂತೆ ರೂಪಿಸಿ ಇವುಗಳಿಗೆ ವೃತ್ತಾಕಾರದ ಪೀಠವನ್ನು ಒದಗಿಸಲಾಗಿದೆ. ಕೆಲವು ಆಕೃತಿಗಳ ಕೊಂಬುಗಳನ್ನು ಮಾತ್ರ ಪೀಠದ ಮೇಲೆ ತೋರಿಸಲಾಗಿದೆ. ಇವುಗಳನ್ನು ಪೂಜೆಗಾಗಿ ಉಪಯೋಗಿಸುತ್ತಿದ್ದಿರಬಹುದು. ಇಂತಹ ಮಾದರಿಗಳು ಇಲ್ಲಿಯವರೆಗೂ ಬೇರೆ ಎಲ್ಲಿಯೂ ದೊರೆತಿಲ್ಲ.

ಮೂರನೆಯ ಹಂತದಲ್ಲಿ ಬಾನಾಸ್ ಸಂಸ್ಕೃತಿ ಮಾಳ್ವ ಸಂಸ್ಕೃತಿಯೊಂದಿಗೆ ಮಿಶ್ರಗೊಳ್ಳು ತ್ತದೆ. ಮಾಳ್ವ ಸಂಸ್ಕೃತಿಯ ವಿಶಿಷ್ಟವಾದ ಮಣ್ಪಾತ್ರ ವರ್ಣಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ. ಇವುಗಳ ಜೊತೆಗೆ ಬಿಳಿಯ ಚಿತ್ರಗಳಿಂದ ಅಲಂಕೃತವಾದ ಕಪ್ಪು–ಕೆಂಪು ದ್ವಿವರ್ಣ ಮಡಕೆಗಳು ದೊರೆತಿದ್ದು ಇವು ಬಾನಾಸ್ ಸಂಸ್ಕೃತಿಯ ಉಳಿಕೆಗಳು. ಕೈಯಿಂದ ಮಾಡಿದ ಒರಟಾದ ಮಡಕೆಗಳೂ ಸಹ ಹಿಂದಿನ ಸಂಸ್ಕೃತಿಯಿಂದ ಮುಂದುವರೆದಿವೆ. ಸುಟ್ಟಮಣ್ಣಿನ ಗೂಳಿಯ ಗೊಂಬೆಗಳೂ ಈ ಹಂತದಲ್ಲಿವೆ. ಈ ಹಂತದ ಅನಂತರ ಇಲ್ಲಿ ಯಾರೂ ನೆಲೆಸಿದಂತೆ ಕಾಣುವುದಿಲ್ಲ. 30ಸೆಂಮೀ ನಷ್ಟು ಕಪ್ಪು ಮಣ್ಣಿನ ಬರಡು ಪದರ ಇದನ್ನು ಸೂಚಿಸುತ್ತದೆ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಕಬ್ಬಿಣ ಲೋಹ ತಯಾರಿಕೆಯ ತಾಂತ್ರಿಕಜ್ಞಾನ ಮತ್ತು ಪರಿಣಿತಿ ಇದ್ದ ಜನರು ಇಲ್ಲಿ ನೆಲೆಸಿದರು. ಈ ಹಂತದಲ್ಲಿ ವಿವಿಧ ರೀತಿಯ ಕಬ್ಬಿಣದ ಸಾಮಾನುಗಳು ಹಾಗೂ ಆಯುಧಗಳು ದೊರೆತಿವೆ. ಔತ್ತರೇಯ ಮೆರುಗಿನ ಕಪ್ಪುಬಣ್ಣದ ಪಾತ್ರೆ ಹಾಗೂ ವರ್ಣಚಿತ್ರಿತ ಬೂದುಬಣ್ಣದ ಮಡಕೆಯ ಚೂರುಗಳು ದೊರೆತಿವೆ. ಜೊತೆಗೆ ಬೂದುಬಣ್ಣದ ಹಾಗೂ ಒರಟಾದ ಕಪ್ಪು–ಕೆಂಪು ಮಡಕೆಗಳು ಸಹ ಲಭ್ಯವಾಗಿವೆ. ಸುಟ್ಟಮಣ್ಣಿನ ಕಿವಿಯೋಲೆ, ಬಳೆ, ತಕಲಿ, ಮತ್ತು ಗಾಜಿನ ಹಾಗೂ ಅರೆ ಅಮೂಲ್ಯ ಹರಳಿನ ಮಣಿಗಳು ದೊರೆತಿವೆ. ಇದರ ಮುಂದಿನ ಹಂತದಲ್ಲಿ ಶುಂಗ, ಕುಷಾಣ ಹಾಗೂ ಗುಪ್ತ ಕಾಲದ ಕೆಂಪು ಲೇಪನ ಮಾಡಿದ ಮಣ್ಪಾತ್ರೆ ದೊರೆತಿವೆ. ಕೆಂಪುಮಣ್ಣಿನ ಬಟ್ಟಲುಗಳು, ಸುಟ್ಟಮಣ್ಣಿನ ತಕಲಿ, ಕಿವಿಯೋಲೆ, ಆಟಿಕೆಯ ಎತ್ತಿನ ಬಂಡಿಯ ಚೌಕಟ್ಟು ಮತ್ತು ಶಂಖದ ಬಳೆಗಳು ಈ ಕಾಲದ ಇತರ ಅವಶೇಷಗಳು. (ಪಿ.ಸಿ.ಬಿ.)

**ಕರ್ನಾಟಕ ಏಕೀಕರಣ:** ಟಿಪ್ಪುಸುಲ್ತಾನನ ಪತನದೊಂದಿಗೆ ಕನ್ನಡದ ಭೂಪ್ರದೇಶಗಳನ್ನು ಬ್ರಿಟಿಷರು ವಿಭಿನ್ನ ಆಡಳಿತ ಘಟಕಗಳಲ್ಲಿ ವಿಭಜಿಸಿದರು (1799). ಈ ವಿಭಜನೆಗೆ ಯಾವುದೇ ತಾತ್ವಿಕ ತಳಹದಿ ಇರಲಿಲ್ಲ. ಬದಲಾಗಿ ಆಂಗ್ಲರ ಆಡಳಿತದ ಅನುಕೂಲವೇ ಪ್ರಧಾನವಾಗಿತ್ತು. ಟಿಪ್ಪುವಿನ ಪತನಕ್ಕಾಗಿ ಸಹಕರಿಸಿದ ಮರಾಠರಿಗೂ ಹೈದರಾಬಾದಿನ ನಿಜಾಮನಿಗೂ ಕೆಲವು ಪ್ರದೇಶಗಳನ್ನು ಹಂಚಿದರು. ಉಳಿದ ಭಾಗವನ್ನು ಮೈಸೂರು ಸಂಸ್ಥಾನದ ಒಡೆಯರಿಗೆ ನೀಡಲಾಯಿತು. ಅಲ್ಲದೆ ಒಂದಷ್ಟು ಭಾಗವನ್ನು ತಮ್ಮ ನೇರವಾದ ಹಿಡಿತಕ್ಕೂ ತೆಗೆದುಕೊಳ್ಳಲಾಯಿತು. ಜಹಗೀರುಗಳ ರೂಪದಲ್ಲೂ ಕೆಲವು ಪ್ರದೇಶಗಳು ಹಂಚಲ್ಪಟ್ಟವು. ಒಟ್ಟಾರೆ ಕನ್ನಡಿಗರು ಭಾಗ-ಉಪವಿಭಾಗಗಳಾಗಿ ಹತ್ತು-ಹಲವು ಕಡೆಗೆ ಹಂಚಿಹೋದರು. ಈ ಬಗೆಯ ತುಂಡಾದ ವಿಭಾಗಗಳು 22 ಎಂದು ಗುರುತಿಸಲಾಗಿದೆ. ಅವು ಹೀಗಿವೆ:

1. ಬೊಂಬಾಯಿ ಕರ್ನಾಟಕ, 2. ಮದರಾಸು (ಬ್ರಿಟಿಷ್) ಕರ್ನಾಟಕ, 3. ಮೈಸೂರು ಸಂಸ್ಥಾನ, 4. ಕೊಡಗು, 5. ಹೈದರಾಬಾದ್ (ನಿಜಾಂ) ಕರ್ನಾಟಕ, 6. ಹೈದರಾಬಾದ್ ಕರ್ನಾಟಕದ ಜಹಗೀರು (ಕೊಪ್ಪಳ, ಗದ್ವಾಲ), 7. ಕಂಟೋನ್ಮೆಂಟ್ ಕರ್ನಾಟಕ (ದಂಡು ಪ್ರದೇಶ), 8. ಕೊಲ್ಲಾಪುರ ಸಂಸ್ಥಾನ, 9. ಕೊಲ್ಲಾಪುರ ಸಂಸ್ಥಾನದ ಜಹಗೀರುಗಳು, 10. ಸಾಂಗ್ಲಿ, 11. ಔಧ್, 12. ಮೀರಜ್ (ಹಿರಿ), 13. ಮೀರಜ್ (ಕಿರಿ), 14. ಕುಂದರವಾಡ (ಹಿರಿ), 15. ಕುಂದರವಾಡ (ಕಿರಿ), 16. ಜಮಖಂಡಿ, 17. ಮುಧೋಳ, 18. ರಾಮದುರ್ಗ, 19. ಅಕ್ಕಲಕೋಟೆ, 20. ಜತ್ತ, 21. ಸವಣೂರು, 22. ಸೊಂಡೂರು.

ಈ ಮೇಲಿನ 22 ಭಾಗಗಳಲ್ಲಿನ ಕನ್ನಡಿಗರು ತಮ್ಮದೇ ಆದ ರೀತಿಯಲ್ಲಿ ಗುರುತಿಸಿಕೊಳ್ಳುವುದು ಸಾಧ್ಯವಾಗದ ಮಾತಾಗಿತ್ತು. ಸಾಂಸ್ಕೃತಿಕವಾಗಿ ಕನ್ನಡಿಗರು ಕರ್ನಾಟಕ ಎಂಬ ಹೆಸರನ್ನು ಹೊಂದಿದವರಾಗಿದ್ದರೂ ಈ ಘಟ್ಟದಲ್ಲಿ ಅಖಂಡವಾಗಿ ಉಳಿದಿರಲಿಲ್ಲ. ಇತರೆ ಭಾಷೆಗಳನ್ನು ಆಡುತ್ತಿದ್ದವರೊಂದಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕಾದ ತೊಡಕು ಕಾಣಿಸಿಕೊಂಡಿತು. ಮರಾಠಿ (ಮುಂಬಯಿ ಕರ್ನಾಟಕ), ತಮಿಳು (ಮದ್ರಾಸ್ ಅಥವಾ ಬ್ರಿಟಿಷ್ ಕರ್ನಾಟಕ) ಹಾಗೂ ತೆಲುಗು ಮತ್ತು ಉರ್ದು ಮಾತನಾಡುವವರ (ಹೈದರಾಬಾದ್ ಸಂಸ್ಥಾನ) ನಡುವೆ ಅಲ್ಪಸಂಖ್ಯಾತರಾಗಿದ್ದ ಕನ್ನಡಿಗರು ಭಾಷಿಕ ದಬ್ಬಾಳಿಕೆಗೆ ಒಳಗಾಗಿದ್ದೂ ಉಂಟು. ಇದರ ಜೊತೆಗೆ ಸಾಂಸ್ಕೃತಿಕವಾದ ಕೀಳರಿಮೆಗಳು ಸಹ ಮೂಡಲಾರಂಭಿಸಿದ್ದವು. ಈ ದಿಸೆಯಲ್ಲಿ ಮತ್ತೆ ಕನ್ನಡಿಗರೆಲ್ಲ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕವಾಗಿ ಒಂದುಗೂಡಲು ಪ್ರಯತ್ನಿಸಿದ್ದೇ ಏಕೀಕರಣ ಚಳವಳಿ. ಭಾಷೆಯ ಆಧಾರದ ಮೇಲೆ ತಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಬೇಕಿದ್ದುದು ಅನಿವಾರ್ಯವಾಗಿತ್ತು. ಈ ಕೆಲಸವನ್ನು ಆಗುಮಾಡಿಸಿದವರು ಕನ್ನಡದ ಸಾಹಿತಿಗಳು ಮತ್ತು ಕಲಾವಿದರು. ತಮ್ಮ ಕತೆ, ಕವನ, ನಾಟಕ, ಕಾದಂಬರಿ, ವೈಚಾರಿಕ ಬರೆಹಗಳ ಮೂಲಕ ಕರ್ನಾಟಕತ್ವವನ್ನು ಮೂಡಿಸುವ ಪ್ರಯತ್ನಗಳು ನಡೆದವು. ಈ ಪ್ರಯತ್ನಗಳಿಗೆ ಹಿನ್ನೆಲೆಯಾಗಿದ್ದುದು ಪಾಶ್ಚಾತ್ಯ ಸಂಶೋಧಕರ ಹಾಗೂ ವಿದ್ವಾಂಸರ ಕನ್ನಡ-ಕರ್ನಾಟಕತ್ವವನ್ನು ಕುರಿತ ಸಾಧನೆಗಳು. ಅಂದರೆ ಬಿ.ಎಲ್. ರೈಸ್, ಈ.ಪಿ. ರೈಸ್, ಫ್ಲೀಟ್, ರೀವ್, ಕಿಟ್ಟೆಲ್, ಜಿಗ್ಲರ್, ಸಿವೆಲ್ ಮೊದಲಾದ ವಿದ್ವಾಂಸರು ನಾಡಿನ ಸಾಹಿತ್ಯ, ಚರಿತ್ರೆ, ಸಂಸ್ಕೃತಿ ವಿಚಾರಗಳನ್ನು ಕುರಿತು ಉಂಟುಮಾಡಿದ ಅರಿವು. ಈ ಅರಿವು ಮುಂದೆ ಆಧುನಿಕ ಕನ್ನಡ ಸಾಹಿತ್ಯ-ಸಂಸ್ಕೃತಿ ಚಿಂತನೆಗಳ ಬರೆಹಗಾರರಿಗೆ ಮಾರ್ಗದರ್ಶವಾಯಿತು.

**ಚಳವಳಿಯ ಮೊದಲ ಹೆಜ್ಜೆಗಳು:** ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದ ಆಲೋಚನೆಯನ್ನು ಬೊಂಬಾಯಿ ಪ್ರಾಂತ್ಯದಲ್ಲಿ ಮೊಟ್ಟಮೊದಲಿಗೆ ಶಾಂತಕವಿ ಮತ್ತು ಡೆಪ್ಯೂಟಿ ಚೆನ್ನಬಸಪ್ಪನವರು ಆರಂಭಿಸಿದರು. ಶಾಂತಕವಿಗಳಂಥ ಕನ್ನಡ ಮಾಸ್ತರರು ಈ ಭಾಗದಲ್ಲಿ ಮರಾಠಿ ಪ್ರಭಾವವನ್ನು ಮಟ್ಟ ಹಾಕಲು ತಮ್ಮ ನಿರಂತರ ಕಾರ್ಯಕ್ರಮಗಳ ಮುಖೇನ ಪ್ರಯತ್ನಿಸಿದ್ದೂ ಉಂಟು. ಅಲ್ಲದೆ ಡೆಪ್ಯೂಟಿ ಚೆನ್ನಬಸಪ್ಪ ಅವರು ಶಿಕ್ಷಣ ಅಧಿಕಾರಿಗಳಾಗಿ ಬಂದು ಮುಂಬಯಿ ಕರ್ನಾಟಕದಲ್ಲಿ ಕನ್ನಡದ ಕೆಲಸಗಳಿಗೆ ಚಾಲನೆ ನೀಡಿ, ಕನ್ನಡ ಪರವಾದ ಚಳವಳಿಯನ್ನೇ ಹುಟ್ಟುಹಾಕಿದರು (1856). ಅಲ್ಲದೆ ಎಲ್ಲ ಬಗೆಯ ಲೆಕ್ಕ-ಪತ್ರಗಳನ್ನು, ದಾಖಲೆಗಳನ್ನು ಸಹ ಕನ್ನಡದಲ್ಲಿಯೇ ಇರಿಸಲು ಶ್ರಮಿಸಿ, ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಭಾಷಾ ಮಾಧ್ಯಮವನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಕಾರ್ಯನಿರ್ವಹಿಸಿದರು. ಸಾಮಾನ್ಯವಾಗಿ ಇಲ್ಲಿಂದಲೇ ಕರ್ನಾಟಕದ ಏಕೀಕರಣ ಪರವಾದ ಧ್ವನಿಯನ್ನು ಗುರುತಿಸಲಾಗುತ್ತಿದೆ. ಮರಾಠಿ, ಗುಜರಾತಿ, ಬಂಗಾಳಿ ಭಾಷೆಗಳ ಪರಿಣಾಮವೂ ಮುಂಬಯಿ ಕರ್ನಾಟಕದ ಕನ್ನಡಿಗರನ್ನು ಈ ದಿಸೆಯಲ್ಲಿ ತೀವ್ರವಾಗಿ ಆಲೋಚಿಸುವಂತೆ ಮಾಡಿತ್ತು.

ಸಾಹಿತಿ-ಕಲಾವಿದರು ಹಾಗೂ ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಪಾತ್ರ: ಕನ್ನಡಿಗರ ಶ್ರೇಯೋಭಿವೃದ್ಧಿಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ಹುಟ್ಟಿಕೊಂಡಿತು (1890). ಭಾಷಾಭಿಮಾನದ ಮೂಲ ಬೀಜಾಂಕುರ ಆದದ್ದು ಈ ಸಂಘದಿಂದಲೇ. ರಾ. ಹ. ದೇಶಪಾಂಡೆ ಅವರಂಥ ಕನ್ನಡಾಭಿಮಾನಿಗಳು ಧಾರವಾಡದ ನೆಲದಿಂದ ಈ ಪ್ರಕ್ರಿಯೆಗಳಿಗೆ ಚಾಲನೆ ಕೊಟ್ಟರು. ಅದೇ ರೀತಿಯಲ್ಲಿ ನಾಡು-ನುಡಿ ಚಿಂತನೆಗಳನ್ನು ಹುಟ್ಟು ಹಾಕಲು ಕರ್ನಾಟಕ ಭಾಷೋಜ್ಜೀವನ ಸಭಾ ಸಹ ಹುಟ್ಟಿಕೊಂಡಿತು (1877). ಧಾರವಾಡದಲ್ಲಿ ಮೊಟ್ಟಮೊದಲ ಬಾರಿಗೆ ಬೆನಗಲ್ ರಾಮರಾಯರು ಏಕೀಕರಣದ ಕಲ್ಪನೆಯನ್ನು ಮೂಡಿಸುವ ಭಾಷಣ ಮಾಡಿ, ಉತ್ತರ ಕರ್ನಾಟಕದ ಹಾಗೂ ಮದ್ರಾಸ್ ಕರ್ನಾಟಕಗಳ ಒಂದುಗೂಡುವಿಕೆಯ ಅನಿವಾರ್ಯತೆಯ ಬಗೆಗೆ ಕನ್ನಡಿಗರ ಗಮನ ಸೆಳೆದರು (1903). ವಿದ್ಯಾವರ್ಧಕ ಸಂಘದಿಂದ ಪ್ರಕಟವಾಗುತ್ತಿದ್ದ ವಾಗ್ಭೂಷಣ ಎಂಬ ಮಾಸಿಕ ನಾಡು-ನುಡಿಗಳ ಬಗೆಗೆ ಕನ್ನಡಿಗರನ್ನು ಆಲೋಚಿಸುವಂತೆ ಪ್ರೇರಣೆ ನೀಡುತ್ತಿತ್ತು. ಕನ್ನಡ ಕುಲಪುರೋಹಿತರೆಂದೇ ಖ್ಯಾತಿ ಪಡೆದ ಆಲೂರ ವೆಂಕಟರಾಯರು ಈ ಪತ್ರಿಕೆಯಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡಿಗರ ಏಕೀಕರಣವನ್ನು ಕುರಿತು ಬರೆದರು (1907ರ ಫೆಬ್ರವರಿ). ಇಂಥ ಹತ್ತು ಹಲವು ಕಾರ್ಯ ಚಟುವಟಿಕೆಗಳು ಮುಂಬಯಿ ಕನ್ನಡಿಗರನ್ನು ಏಕೀಕರಣಕ್ಕೆ ಸಜ್ಜುಗೊಳ್ಳುವಂತೆ ಮಾಡಿದವು. ಅಲ್ಲದೆ ಇತರೆ ಪ್ರಾಂತದವರನ್ನು ಸೆಳೆದುಕೊಳ್ಳುವಂತೆ ಮಾಡಿದ್ದೂ ಉಂಟು.

ಬಂಗಾಲ ವಿಭಜನೆ ಘಟನೆ ಕೇವಲ ಬಂಗಾಲಿಗರನ್ನಷ್ಟೇ ಅಲ್ಲದೆ ಇತರ ಭಾಷಾಪ್ರೇಮಿಗಳೂ ಜಾಗೃತಗೊಳ್ಳುವಂತೆ ಮಾಡಿತು (1905). 1911ರಲ್ಲಿ ಈ ವಿಭಜನೆ ರದ್ದಾಗಿ ಬಂಗಾಲ ಒಂದುಗೂಡುವವರೆಗೂ ವಿಭಿನ್ನ ರೀತಿಯ ಚಳವಳಿಗಳನ್ನು ಬಂಗಾಳಿಗಳು ಹುಟ್ಟುಹಾಕಿದರು. ಇವುಗಳನ್ನು ಕನ್ನಡಿಗರು ಬಹಳ ಆಪ್ತವಾಗಿ ಗಮನಿಸಿದ್ದೂ ಉಂಟು. 1907ರಲ್ಲಿ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವೊಂದು ಧಾರವಾಡದಲ್ಲಿ ನಡೆಯಿತು. ಇದರಲ್ಲಿ ವಿವಿಧ ಕನ್ನಡ ಪ್ರದೇಶಗಳ ಸಾಹಿತಿಗಳು, ಪ್ರಕಾಶಕರು ಒಂದೆಡೆ ಸೇರಿ ಪ್ರತಿ ವರ್ಷವೂ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿ ವಿಚಾರಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಹೊರತರುವುದರ ಬಗೆಗೆ ಚಿಂತನೆ ನಡೆಸಿದರು. ಇದರ ಎರಡನೆಯ ಸಭೆ ಮೈಸೂರ ಸಂಸ್ಥಾನಿಕರ ಅಸಮಾಧಾನದ ನಡುವೆಯೂ ಧಾರವಾಡದಲ್ಲಿ ನಡೆಯಿತು (1908). ಇದರ ನೇತೃತ್ವ ಮತ್ತೆ ಆಲೂರರದೇ ಆಗಿತ್ತು. ಮೂರನೆಯ ಸಭೆಯನ್ನೂ ಹಠ ತೊಟ್ಟು ಮೈಸೂರು ಸಂಸ್ಥಾನದಲ್ಲಿಯೆ ನಡೆಸಲು ತೀರ್ಮಾನಿಸಲಾಯಿತು. ಹೀಗಾಗಿ ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ ಈ ಸಭೆ ನಾಲ್ಕು ದಿನಗಳ ಕಾಲ ನಡೆಯಿತು. ಇದರ ಪರಿಣಾಮವೇ 1915 ಮೇ 5 ರಂದು ಹುಟ್ಟಿದ ಕರ್ನಾಟಕ ಸಾಹಿತ್ಯ ಪರಿಷತ್ತು (ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಆಯಿತು). ಈ ಸಂಸ್ಥೆ ಮುಂದೆ ಪ್ರತಿವರ್ಷವೂ ಛಿದ್ರವಾಗಿದ್ದ ಕನ್ನಡದ ಭೂಪ್ರದೇಶಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸತೊಡಗಿತು. ಈ ಸಮ್ಮೇಳನಗಳಲ್ಲಿ ಕನ್ನಡ-ಕರ್ನಾಟಕ ಪರವಾದ ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಇದರಿಂದ ನಾಡಿನ ಏಕೀಕರಣ ಪ್ರಕ್ರಿಯೆಗೆ ಎಲ್ಲ ಪ್ರದೇಶಗಳ ಕನ್ನಡಿಗರಿಂದಲೂ ಬೆಂಬಲ ದೊರೆಯುವಂತಾಯಿತು.

1917ರ ವೇಳೆಗೆ ಆಲೂರ ವೆಂಕಟರಾಯರ ಕರ್ನಾಟಕ ಗತವೈಭವದಂಥ ಕೃತಿಗಳು ಪ್ರಕಟಗೊಂಡವು. ಇದರಿಂದ ಕನ್ನಡಿಗರು ತಮ್ಮದೇ ಆದ ಚರಿತ್ರೆ-ಸಂಸ್ಕೃತಿಗಳಿಗಾಗಿ ಕರ್ನಾಟಕತ್ವದ ಪರಿಕಲ್ಪನೆಯನ್ನು ಮೂಡಿಸಿಕೊಂಡು ಕ್ರಿಯಾಶೀಲರಾದರು. ಮುದವೀಡು ಕೃಷ್ಣರಾವ್, ಮುದವೀಡು ವೆಂಕಟರಾವ್, ಕಡಪರಾಘವೇಂದ್ರರಾವ್, ಆಲೂರವೆಂಕಟರಾವ್, ಹೊನ್ನಾಪುರ ಮಠ ಗದಿಗೆಯ್ಯ, ಅಬ್ಬಿಗೇರಿ ಪಾಟೀಲ ಸಂಗನಗೌಡ, ಶೇಷಗಿರಿ ರಾಮಚಂದ್ರ ರಾವ್, ಜೋಷಿ ವೆಂಕಟರಾವ್, ನರಗುಂದಕರ, ರಾಜಪುರೋಹಿತ ಮೊದಲಾದವರು ಈ ಭಾಗದ ಕರ್ನಾಟಕತ್ವದ ಚಳವಳಿಯ ಜೊತೆಗೆ ರಾಷ್ಟ್ರೀಯ ಹೋರಾಟದ ಪ್ರಕ್ರಿಯೆಗೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಏಕೆಂದರೆ ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣದ ಚಳವಳಿಗಳು ಒಟ್ಟೊಟ್ಟಿಗೆ ಸಾಗಬೇಕಾದ ಅನಿವಾರ್ಯತೆ ಆ ಹೊತ್ತಿನದು. ಮುಂಬಯಿ ಕರ್ನಾಟಕದಲ್ಲಿ ಬಾಲಗಂಗಾಧರ ತಿಲಕರ ಪ್ರಭಾವ ಅದರಲ್ಲೂ ಧಾರವಾಡ ಪರಿಸರದ ಕನ್ನಡಿಗರ ಮೇಲೆ ತೀವ್ರ ಪರಿಣಾಮ ಬೀರಿತ್ತು. ಗಂಗಾಧರ ರಾವ್ ದೇಶಪಾಂಡೆ, ಶ್ರೀನಿವಾಸರಾವ್ ಕೌಜಲಗಿ ಮೊದಲಾದವರು ಈ ಭಾಗದ ಕನ್ನಡಿಗರನ್ನು ರಾಷ್ಟ್ರೀಯ ಹೋರಾಟದಲ್ಲಿ ಲೀನವಾಗುವಂತೆ ಮಾಡಿದ್ದರು. ಇದರ ಜೊತೆಗೆ ಸಂಸ್ಥಾನದ ಕನ್ನಡಿಗರು ತಮ್ಮದೇ ಆದ ತೊಡಕುಗಳ ನಡುವೆಯೂ ಕನ್ನಡ-ಕರ್ನಾಟಕತ್ವಕ್ಕಾಗಿ ಹಾತೊರೆದರು.

**ರಾಜಕಾರಣ ಹಾಗೂ ಏಕೀಕರಣ ಚಳವಳಿ:** ಏಕೀಕರಣದಂಥ ರಾಜಕೀಯ ಚಳವಳಿಗೆ ಒಂದು ರಾಜಕೀಯವಾದ ಸಂಸ್ಥೆ ಬೇಕಾಗಿತ್ತು. ಇದನ್ನು ಹೊನ್ನಾಪುರಮಠ ಅವರನ್ನೂ ಒಳಗೊಂಡಂತೆ ಧಾರವಾಡದ ಮುಂದಾಳುಗಳು ಕರ್ನಾಟಕ ಸಭಾವನ್ನು ಹುಟ್ಟುಹಾಕುವುದರ ಮೂಲಕ ಆರಂಭಿಸಿದರು (1917). ಕನ್ನಡಿಗರ ಕರ್ತವ್ಯ ಎಂಬ ಕೃತಿಯನ್ನು ಪ್ರಕಟಿಸಿದ ಈ ಸಂಸ್ಥೆ ಏಕೀಕರಣಕ್ಕಾಗಿ ಸಭೆ-ಸಮಾರಂಭಗಳನ್ನು ನಡೆಸಿ ಅಭಿಪ್ರಾಯ ಮೂಡಿಸಿದ್ದು ಗಮನಾರ್ಹ. ಇದರಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನಗಳಲ್ಲೂ ಕರ್ನಾಟಕ ಪ್ರಾಂತ ರಚನೆ ಬಗೆಗೆ ಪ್ರಸ್ತಾಪಗಳು ಮಂಡಿತವಾಗತೊಡಗಿದವು. ಇದರ ಪರಿಣಾಮವಾಗಿ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆ.ಪಿ.ಸಿ.ಸಿ) ಶಾಖೆ ಅಸ್ತಿತ್ವಕ್ಕೆ ಬಂದಿತು (1920). 21 ಭಾಷೆಗಳ ಆಧಾರದ ಮೇಲೆ ಈ ಪ್ರದೇಶ ಕಾಂಗ್ರೆಸ್ ಸಮಿತಿಗಳು ಅಸ್ತಿತ್ವಕ್ಕೆ ಬಂದಿದ್ದವು. ಇದಕ್ಕೆ ಮೂಲ ಕಾರಣಕರ್ತರು ಮಹಾತ್ಮ ಗಾಂಧಿ ಅವರು. ಈ ನಡುವೆ ಮಾಜಿ ದಿವಾನರಾಗಿದ್ದ ವಿ.ಪಿ.ಮಾಧವರಾಯರ ಅಧ್ಯಕ್ಷತೆಯಲ್ಲಿ ರಾಜಕೀಯ-ಆಡಳಿತಾತ್ಮಕ ವಿಚಾರಗಳ ಮಂಡನೆಗಾಗಿ ಅಖಿಲ ಕರ್ನಾಟಕ ರಾಷ್ಟ್ರೀಯ ಪರಿಷತ್ತು ಅಸ್ತಿತ್ವಕ್ಕೆ ಬಂದಿತು (1920).

ಅಖಿಲ ಭಾರತ ರಾಷ್ಟ್ರಿಯ ಕಾಂಗ್ರೆಸ್ಸಿನ 39ನೆಯ ಅಧಿವೇಶನ ಬೆಳಗಾಂವಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು (1924). ಈ ಅವಕಾಶವನ್ನು ಬಳಸಿಕೊಂಡ ಏಕೀಕರಣವಾದಿಗಳು ಅಖಿಲ ಕರ್ನಾಟಕ ಏಕೀಕರಣ ಪರಿಷತ್ತನ್ನು ನಡೆಸಿದರು. ಅಲ್ಲದೆ ಇಲ್ಲಿ ಕರ್ನಾಟಕ

ಏಕೀಕರಣ ಸಂಘವೂ ಅಸ್ತಿತ್ವಕ್ಕೆ ಬಂದಿತು. ಶಂಕರರಾವ್ ಜೋಷಿ, ಮಂಗಳವೇಡೆ ಶ್ರೀನಿವಾಸರಾವ್ ಮೊದಲಾದವರ ಸಹಕಾರಗಳೊಂದಿಗೆ ಕಡಪ ರಾಘವೇಂದ್ರರಾಯರು ಬೆಳಗಾಂವಿ ಅಧಿವೇಶನದ ಯಶಸ್ವಿಗೆ ಕಾರಣರಾದರು. ಇಲ್ಲಿ ನಡೆದ ಏಕೀಕರಣ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ಸರ್ ಸಿದ್ದಪ್ಪ ಕಂಬಳಿ. ಮುಂದೆ ಎರಡು ವರುಷಗಳಿಗೊಮ್ಮೆ ಏಕೀಕರಣದ ಸಮ್ಮೇಳನವನ್ನು ನಡೆಸಲು ನಿರ್ಣಯಿಸಿದ ಈ ಸಮ್ಮೇಳನದಲ್ಲಿ ಕನ್ನಡಿಗನ ಸರ್ವಸ್ವ(ಸಂಯುಕ್ತ ಕರ್ನಾಟಕ ಪ್ರಾಂತ) ಎಂಬ ಕೃತಿಯನ್ನು ಸಹ ಬಿಡುಗಡೆ ಮಾಡಲಾಯಿತು. ಹುಯಿಲಗೋಳ ನಾರಾಯಣರಾಯರು ಈ ಸಮ್ಮೇಳನದಲ್ಲಿ ಹಾಡಿದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ನಾಡಗೀತೆ ಏಕೀಕರಣಕ್ಕಾಗಿ ಪ್ರೇರಣೆ ನೀಡಿತು. ಗಾಂಧೀಜಿ ಅವರು ಈ ಸಂದರ್ಭದಲ್ಲಿ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಬೆಂಬಲಿಸಿದ್ದು ಗಮನಾರ್ಹವಾದುದು.

ಕಾಂಗ್ರೆಸ್ ಹಾಗೂ ಏಕೀಕರಣ ಸಂಘಗಳು ಹೊಸಕೊಪ್ಪ ಕೃಷ್ಣರಾವ್, ಕೌಜಲಗಿ ಶ್ರೀನಿವಾಸರಾವ್, ಚಿಕ್ಕೋಡಿ ಪಂಡಿತರಾಯಪ್ಪ ಹಾಗೂ ಆರ್. ಆರ್. ದಿವಾಕರ್ ಅವರುಗಳ ನೇತೃತ್ವದಲ್ಲಿ ನೆಹರು ಸಮಿತಿಗೆ ಏಕೀಕರಣದ ಅಹವಾಲುಗಳನ್ನು ಮಂಡಿಸಿದವು (1928). ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯ ಈ ಸಮಿತಿ ಆಂಧ್ರದ ಬಗೆಗೆ ಸ್ಪಷ್ಟವಾಗಿತ್ತೇ ವಿನಾ ಕರ್ನಾಟಕದ ಬಗೆಗೆ ಒಲವು ತೋರಿಸಿರಲಿಲ್ಲ. ಮುಂದೆ 1928–29 ರಲ್ಲಿ ಸೈಮನ್ ಕಮೀಷನ್‌ಗೂ ಏಕೀಕರಣದ ಪ್ರಸ್ತಾಪವನ್ನು ಸಲ್ಲಿಸಲಾಯಿತು. ಇದು ಸಹ ಪ್ರಯೋಜನಕ್ಕೆ ಬರಲಿಲ್ಲ. ಕೊನೆಗೆ ನಡೆದ ದುಂಡುಮೇಜಿನ ಸಮ್ಮೇಳನ (ಲಂಡನ್)ದಲ್ಲಿ ನಾಡಿನ ಏಕೀಕರಣದ ಬಗೆಗೆ ಒತ್ತಾಯಿಸಲಾಯಿತು (1931). ಕರ್ನಾಟಕದಿಂದ ಈ ಸಮ್ಮೇಳನಕ್ಕೆ ಬೆನಗಲ್ ರಾಮರಾವ್, ಬೆನಗಲ್ ಶಿವರಾವ್ ಹಾಗೂ ಮಿರ್ಜಾ ಇಸ್ಮಾಯಿಲ್‌ರು ಭಾಗವಹಿಸಿದ್ದರು.

ಕರ್ನಾಟಕ, ಆಂಧ್ರ ಹಾಗೂ ಕೇರಳ ರಾಜ್ಯಗಳ ಅಸ್ತಿತ್ವಕ್ಕಾಗಿ ಜನರ ಚಳವಳಿ ತೀವ್ರವಾಯಿತು. ಸಿಂಧ್ ಹಾಗೂ ಒರಿಸ್ಸಗಳು ಈ ವೇಳೆಗಾಗಲೇ ಅಸ್ತಿತ್ವಕ್ಕೆ ಬಂದಿದ್ದುದು ಇನ್ನಷ್ಟು ಹುರುಪು ಹೊಂದುವಂತೆ ಮಾಡಿತ್ತು. 1937 ಅಕ್ಟೋಬರ್ 10 ರಂದು ಏಕೀಕರಣ ದಿನವನ್ನಾಗಿ ಆಚರಿಸಿದ ಕನ್ನಡಿಗರು ಕೇಂದ್ರ ಹಾಗೂ ಪ್ರಾಂತೀಯ ಹಂತಗಳಲ್ಲಿ ಏಕೀಕರಣದ ಸಾಕಾರತೆಗಾಗಿ ಒತ್ತಾಯಿಸಿದ್ದೂ ಉಂಟು. ಬೆಂಗಳೂರಿನಲ್ಲೂ ಏಕೀಕರಣ ಸಂಘ ಅಸ್ತಿತ್ವಕ್ಕೆ ಬಂದು ಚಳವಳಿಗೆ ಇನ್ನಷ್ಟು ಬೆಂಬಲ ದೊರೆತಂತೆ ಆಯಿತು (1938). ಇದರ ಜೊತೆಗೆ ಕಡಪ ರಾಘವೇಂದ್ರರಾವ್, ಶಂ.ಬಾ.ಜೋಷಿ, ಆಲೂರ ವೆಂಕಟರಾವ್, ಬಿ.ಎಂ.ಶ್ರೀಕಂಠಯ್ಯ, ಅ.ನ.ಕೃಷ್ಣರಾವ್, ತಿ.ತಾ.ಶರ್ಮ, ಗೋವಿಂದ ಪೈ, ವಿ.ಕೃ.ಗೋಕಾಕ್, ಬೆಟಗೇರಿ ಕೃಷ್ಣಶರ್ಮ, ಶ್ರೀರಂಗ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮಕಾರಂತ, ಬಿ. ಶಿವಮೂರ್ತಿಶಾಸ್ತ್ರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮೊದಲಾದವರು ಆ ಹೊತ್ತಿನ ರಾಷ್ಟ್ರೀಯತೆ ಹಾಗೂ ಕರ್ನಾಟಕತ್ವದ ವಿಚಾರಗಳನ್ನು ಕುರಿತು ಬರೆಯಲಾರಂಭಿಸಿದರು. ಇವರು ತಮ್ಮ ಸೃಜನಶೀಲ ಬರೆಹ ಹಾಗೂ ವೈಚಾರಿಕತೆಯ ಮೂಲಕ ಕನ್ನಡಿಗರನ್ನು ಏಕೀಕರಣದ ಪ್ರಕ್ರಿಯೆಗೆ ಸಜ್ಜುಗೊಳಿಸುವ ದಿಸೆಯಲ್ಲಿ ಮುಂದುವರೆದಿದ್ದರು.

ಭಾರತ ಆಂಗ್ಲರಿಂದ ಮುಕ್ತವಾದ ಮೇಲೆ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳಾದಿಯಾಗಿ ಈ ನಾಡು ಏಕೀಕರಣ ಆಗುವುದರ ಕಡೆಗೆ ಗಮನಹರಿಸಿದರು (1947). ಆದರೆ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರ ತನ್ನ ಹಿಂದಿನ ತುರ್ತನ್ನು ವ್ಯಕ್ತಪಡಿಸಲು ಹಿಂದೇಟು ಹಾಕಿತು. ಇದರ ಪರಿಣಾಮವೇ ಏಕೀಕರಣವನ್ನು ಕುರಿತು ಹತ್ತು ಹಲವು ಆಯೋಗಗಳು ನೇಮಕಗೊಂಡವು. ಅವುಗಳಲ್ಲಿ ಎಸ್. ಕೆ. ಥರ್ ಸಮಿತಿ (1948), ಜೆ.ವಿ.ಪಿ. (ಜವಹರ್‌ಲಾಲ್ ನೆಹರು, ವಲ್ಲಭಬಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ) ಸಮಿತಿ (1948), ಕೇಳ್ಕರ್ ಸಮಿತಿ ಹಾಗೂ ವಾಂಚೂ ಸಮಿತಿಗಳು (1953) ಪ್ರಮುಖವಾದವು. ಇವುಗಳಲ್ಲಿ ಯಾವುದೂ ನಾಡಿನ ಏಕೀಕರಣದ ಸಾಕಾರತೆಯ ಬಗೆಗೆ ಸ್ಪಷ್ಟ ನಿಲುವು ತಾಳಲಿಲ್ಲ. ಕಾಂಗ್ರೆಸ್ ಸಮಿತಿಯವರು ಅದರಲ್ಲೂ ಎಸ್. ನಿಜಲಿಂಗಪ್ಪ ಮೊದಲಾದವರು ನೆಹರು ಅವರನ್ನು ಏಕೀಕರಣಕ್ಕಾಗಿ (ಕರ್ನಾಟಕ ಏಕೀಕರಣ ಮಹಾಸಮಿತಿಯ ಮೂಲಕವೂ) ಒತ್ತಾಯಿಸುತ್ತಲೇ ಇದ್ದರು. ಆದರೆ ನೆಹರು 1952ರ ಅಕ್ಟೋಬರ್‌ನಲ್ಲಿ ಆಂಧ್ರದ ಪೊಟ್ಟಿ ಶ್ರೀರಾಮುಲು ಅವರ ಆಮರಣಾಂತ ಉಪವಾಸದ ಸಾವಿಗೆ ಮಾತ್ರ ಸ್ಪಂದಿಸಿದರು. ಹೀಗಾಗಿ ಎಸ್. ಕೆ. ಥರ್ ಹಾಗೂ ಕೆ. ಎನ್. ವಾಂಚೂ ಸಮಿತಿಗಳು ಆಂಧ್ರದ ತೆಲುಗರ ಏಕೀಕರಣವನ್ನು (1953) ಮಾತ್ರ ಶಿಫಾರಸ್ಸು ಮಾಡಿದ್ದವು. ಈ ಸಂದರ್ಭದಲ್ಲಿ (1953) ಬಳ್ಳಾರಿ ಹಳೆಯ ಮೈಸೂರು ಸಂಸ್ಥಾನಕ್ಕೆ ಸೇರಿಕೊಂಡಿತು. ಈ ಸಂತಸದ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ರಂಜಾನ್‌ಸಾಬ್ ಎಂಬುವವರು ದುಷ್ಕರ್ಮಿಗಳ ಆಸಿಡ್ ಬಾಂಬಿಗೆ ಪ್ರಾಣ ತೆತ್ತದ್ದೂ ಉಂಟು. ಇದರಿಂದ ಮೈಸೂರಿನವರು ಸಹ ಏಕೀಕರಣದ ಪ್ರಕ್ರಿಯೆಗೆ (ಉತ್ತರದವರ ಕೂಗಿಗೆ) ಸ್ಪಂದಿಸುವಂತಾಯಿತು. ಚುನಾವಣೆಗಳಲ್ಲಿ ಆಶ್ವಾಸನೆ ನೀಡಲಾಗಿದ್ದ ಏಕೀಕರಣದ ಆಶ್ವಾಸನೆಯನ್ನು ಕುರಿತು ಜವಾಹರ್‌ಲಾಲ್ ನೆಹರು ಗಮನಕ್ಕೆ ತಂದರೂ ಪ್ರಯೋಜನ ಆಗಲಿಲ್ಲ. ಆಂಧ್ರದ ರೀತಿಯಲ್ಲಿಯೆ ಜಕ್ಕಲಿಯಲ್ಲಿ ದೊಡ್ಡಮೇಟಿ ಅಂದಾನಪ್ಪ ಹಾಗೂ ಅದರಗುಂಚಿಯಲ್ಲಿ ಶಂಕರ ಕಲ್ಲನಗೌಡ ಪಾಟೀಲರು ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದರು. ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು (ಅಕರಾನಿ), ಕಮ್ಯುನಿಸ್ಟ್ ಪಕ್ಷ, ಪ್ರಜಾ ಸಮಾಜವಾದಿ ಪಕ್ಷ ಮೊದಲಾದ ಕಾಂಗ್ರೆಸೇತರ ಪಕ್ಷಗಳು ಸಹ ಈ ಸಂದರ್ಭದಲ್ಲಿ ಒತ್ತಡ ತಂದವು. ಕೊನೆಗೂ ಮಣಿದ ಜವಾಹರ್ ಲಾಲ್ ನೆಹರು ಅವರು 1953 ಡಿಸೆಂಬರ್ 12 ರಂದು ಭಾಷಾವಾರು ಪ್ರಾಂತಗಳ ಬಗೆಗೆ ವರದಿ ನೀಡಲು ಫಜಲ್ ಅಲಿ ಆಯೋಗವೊಂದನ್ನು ರಚಿಸಿದರು. ರಾಜ್ಯ ಪುನರ್ವಿಂಗಡಣಾ ಆಯೋಗ ಇದರ ಅಧ್ಯಕ್ಷರು ಎಸ್. ಫಜಲ್ ಅಲಿ, ಎಚ್. ಎನ್. ಕುಂಜ್ರು ಮತ್ತು ಕೆ. ಎಂ. ಪಣ್ಣಿಕ್ಕರ್ ಇಬ್ಬರೂ ಸಮಿತಿಯ ಸದಸ್ಯರಾಗಿದ್ದರು. ಈ ಸಮಿತಿ ದೇಶದಾದ್ಯಂತ ಪ್ರವಾಸ ಕೈಗೊಂಡು ಕನ್ನಡದ ಪ್ರದೇಶಗಳನ್ನೂ, ಏಕೀಕರಣ ವಾದಿಗಳನ್ನೂ ಸಂಘ–ಸಂಸ್ಥೆಗಳನ್ನು ಸಂದರ್ಶಿಸಿ ಮಾಹಿತಿ–ಪುರಾವೆಗಳನ್ನು ಸಂಗ್ರಹಿಸಿತು. ಹಳೆಯ ಮೈಸೂರು ಹಾಗೂ ಉತ್ತರ ಭಾಗದ ಕನ್ನಡಿಗರ ನಡುವೆಯಿದ್ದ ಪೂರ್ವಾಗ್ರಹಪೀಡಿತ ಗುಮಾನಿಗಳನ್ನು (ಎರಡು ಕರ್ನಾಟಕಗಳ ಅಸ್ತಿತ್ವದ ಬಗೆಗೆ) ಸಹ ಪರಿಶೀಲಿಸಿತು. ಅಂತಿಮವಾಗಿ ಅದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ (1955 ಸೆಪ್ಟೆಂಬರ್ 30 ರಂದು) ನಾಡಿನ ಏಕೀಕರಣದ ವಿಚಾರಗಳಿಗೆ ಮಾನ್ಯತೆ ನೀಡಿತ್ತು. ಈ ವರದಿ ರಾಜ್ಯಸಭೆ ಮತ್ತು ಲೋಕಸಭೆಗಳೆರಡರಲ್ಲೂ ಒಪ್ಪಿಗೆ ಪಡೆದು ಕೊನೆಗೆ ಅಂದಿನ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರ ಸಹಿಯೊಂದಿಗೆ ಮಸೂದೆ (ಕಾಯಿದೆ) ಆಯಿತು. ಈ ಕಾಯಿದೆಯ ಅನ್ವಯ ಕನ್ನಡ ಭೂಪ್ರದೇಶಗಳು ಹಾಗೂ ಕನ್ನಡಿಗರು ಒಂದೇ ಆಡಳಿತದಡಿಗೆ ಬಂದರು (1956 ನವೆಂಬರ್ 1 ರಂದು). ಈ ಏಕೀಕರಣದ ಸಾಕಾರತೆಯ ಕುರುಹಾಗಿ ನಾಡು ವಿಶಾಲ ಮೈಸೂರು ರಾಜ್ಯವಾಗಿ ಕರೆಸಿಕೊಂಡಿತು.

ಉತ್ತರ ಕರ್ನಾಟಕದವರಿಗೆ ನಾಡು ಕರ್ನಾಟಕ ಎಂದು ಕರೆಸಿಕೊಳ್ಳದಿದ್ದುದರ ಬಗೆಗೆ ಅಸಮಾಧಾನ ಉಂಟಾಯಿತು. ಅಲ್ಲದೆ ಬಹುಪಾಲು ಕನ್ನಡಿಗರು ಚಂದಗಢ, ರಾಯದುರ್ಗ, ಆದವಾನಿ, ಆಲೂರು, ಮಡಕಶಿರ, ಕಾಸರಗೋಡು, ಜತ್, ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ, ಹೊಸೂರು, ನೀಲಗಿರಿ, ತಾಳವಾಡಿ ಮೊದಲಾದ ಪ್ರದೇಶಗಳಲ್ಲಿಯೆ ಉಳಿದುಬಿಟ್ಟರು. ಇವು ಆಂಧ್ರ, ಕೇರಳ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಿಗೆ ಸೇರಿದ ಭಾಗಗಳಾದವು. ಇಂಥ ಅಸಮಾಧಾನ ಸಹ ಹಾಗೆಯೇ ಉಳಿಯಿತು. ಆದರೆ ನಾಡು ಏಕೀಕರಣವಾದ 11 ವರ್ಷಗಳ ಅನಂತರ ಡಿ. ದೇವರಾಜ ಅರಸು ಅವರ ಅವಧಿಯಲ್ಲಿ ಮತ್ತೆ ಕರ್ನಾಟಕ ಎಂದು ನಾಮಕರಣ ಪಡೆದದ್ದು ಸಮಾಧಾನಕರ ಸಂಗತಿ (1973 ನವೆಂಬರ್ 1 ರಂದು).

ಈ ಏಕೀಕರಣ ಚಳವಳಿ ವಿಭಿನ್ನ ರೀತಿಯ ಹಂತಗಳನ್ನು ದಾಟಿ ಸಾಕಾರಗೊಳ್ಳಲು ನಾಡಿನಾದ್ಯಂತ ಅನೇಕ ವಿದ್ವಾಂಸರು, ಸಾಹಿತಿಗಳು, ಕಲಾವಿದರು, ರಾಜಕಾರಣಿಗಳು, ಚಿಂತಕರು, ಸಂಶೋಧಕರು, ವಕೀಲರು, ಜನಸಾಮಾನ್ಯರು ಮೊದಲಾದವರು ತಮ್ಮನ್ನು ತಾವು ತೊಡಗಿಸಿಕೊಂಡು ಸಹಕರಿಸಿದ್ದರು. ಅವರುಗಳಲ್ಲಿ ಎಂ.ಎಚ್.ಕೃಷ್ಣ ಎಸ್.ಎಸ್.ಬಸವನಾಳ್, ಫ.ಗು.ಹಳಕಟ್ಟಿ, ಜಿ.ವಿ.ಹಳ್ಳಿಕೇರಿ, ಎಚ್.ಸಿ.ದಾಸಪ್ಪ, ಬಿ.ಎನ್.ದಾತರ್, ಆರ್.ಆರ್.ದಿವಾಕರ್, ಎ.ದೊಡ್ಡಮೇಟಿ, ಶಾಂತವೇರಿ ಗೋಪಾಲಗೌಡ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಬಿ.ಎಂ.ಶ್ರೀ, ದೇವುಡು ನರಸಿಂಹಶಾಸ್ತ್ರಿ, ಬೇಂದ್ರೆ, ಕುವೆಂಪು, ಶಿವರಾಮ ಕಾರಂತ, ಯು.ರಾಮರಾವ್, ಜಿನರಾಜ ಹೆಗ್ಗಡೆ, ಎನ್.ಕೆ.ಉಪಾಧ್ಯಾಯ, ಟಿ.ಆರ್.ಚಿಕ್ಕೋಡಿ, ಜೆ.ವಿ.ಸಾಲ್ಡಾನಾ, ಡಿ.ವಿ.ಬೆಳವಿ, ಎಂ.ಪಿ.ಪಾಟೀಲ, ಟಿ.ಸುಬ್ರಹ್ಮಣ್ಯಂ, ಎ.ಜೆ.ಮುಧೋಳ, ಸಿದ್ದಪ್ಪಕಮ್ಮಾರ, ಕರಮರಕರ್, ಬಿ.ವಿ.ಕಕ್ಕಿಲ್ಲಾಯ, ವೆಂಕಟ ರಂಗೋಕಟ್ಟಿ, ಚುರಮುರಿ ಶೇಷಗಿರಿರಾವ್, ಜೀರಗೆ ಕಟ್ಟೆ ಬಸಪ್ಪ, ಜಂಗಿನ ಮುರಗೆಯ್ಯ, ಜಯದೇವಿತಾಯಿ ಲಿಗಾಡೆ, ಸಿ.ಬಿ.ಮೋನಯ್ಯ, ಸದಾನಂದ ಹೆಗಡೆ, ಪಿಂಟೋ , ಕೆ.ಎಂ.ರುದ್ರಪ್ಪ, ವಿ.ಎನ್.ಪಾಟೀಲ, ಕೆಂಗಲ್ ಹನುಮಂತಯ್ಯ, ಕೆ.ಎಫ್.ಪಾಟೀಲ, ಎಂ.ಬಿ.ಲಠ್ಠೆ, ಎಂ.ರಂಗನಾಥ ಮೊದಲಿಯಾರ್, ಬಾಲಗಂಗಾಧರ್ ಖೇರ್, ನಾ.ಸು.ಹರ್ಡೀಕರ್, ಹರ್ಡೇಕರ್ ಮಂಜಪ್ಪ, ಎಂ.ವಿಶ್ವೇಶ್ವರಯ್ಯ ಮೊದಲಾದವರು ಪ್ರಮುಖರು. ಅಲ್ಲದೆ ಕನ್ನಡಿಗ, ವಿಶ್ವಕರ್ನಾಟಕ, ಜಯ ಕರ್ನಾಟಕ, ಕರ್ಮವೀರ, ಕರ್ನಾಟಕ ವೃತ್ತ, ಧನಂಜಯ, ವಿಜಯಿ, ಸತ್ಯಾಗ್ರಹಿ, ಕಾನಾಡವೃತ್ತ, ಕನ್ನಡ ಸಹಜೀವನ, ಕೊಡಗು, ಶುಭೋದಯ, ಸ್ವದೇಶಾಭಿಮಾನಿ, ಧನಂಜಯ, ಕರ್ನಾಟಕ ಮೊದಲಾದ ಪತ್ರಿಕೆಗಳು, ನಿಯತಕಾಲಿಕೆಗಳು ಸಹ ಕರ್ನಾಟಕತ್ವವನ್ನು ಮೂಡಿಸಿ ನಾಡಿನ ಏಕೀಕರಣವನ್ನು ಆಗು ಮಾಡಿಸಿದವು.

ನಾಡಿನ ಏಕೀಕರಣದ ಪ್ರಕ್ರಿಯೆಯಲ್ಲಿ ಅನೇಕ ಸಂಘ–ಸಂಸ್ಥೆಗಳು, ವ್ಯಕ್ತಿಗಳು ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಸುಲಭದ ಮಾತಲ್ಲ. ಇಂದಿನ ಅಸ್ತಿತ್ವ ಆ ಹೊತ್ತಿನವರ ಕೊಡುಗೆ ಎಂಬುದನ್ನು ಪ್ರತಿಯೊಬ್ಬರೂ ನೆನಪಿಸಿಕೊಳ್ಳುವ ಜರೂರು ಇದೆ. ಅಲ್ಲದೆ ಯುವ ಪೀಳಿಗೆಗೆ ಮಾರ್ಗದರ್ಶಕವಾದ ಭವಿಷ್ಯತ್ತಿನ ಕರ್ನಾಟಕವನ್ನು ರೂಪಿಸಬೇಕಾದ ಜವಾಬ್ದಾರಿಯೂ ಎಲ್ಲರದಾಗಿದೆ. (ಜಿ.ಸಿ.ಆರ್.)

**ಕರ್ನಾಟಕದ ಕಿರು ಅರಸು ಮನೆತನಗಳು:** ಆಧುನಿಕ ಕಾಲದ ಕಲ್ಪನೆಗನು ಗುಣವಾದ ರಾಷ್ಟ್ರೀಯ ಭಾವನೆ ಮಧ್ಯಯುಗದಲ್ಲಿ ಇರಲಿಲ್ಲವಾಗಿ ಕಿರು ಅರಸು ಮನೆತನಗಳ (ತುಂಡರಸರ) ಅಥವಾ ಮಾಂಡಲಿಕರ ಆಡಳಿತವ್ಯವಸ್ಥೆ ಬಹಳ ಮಹತ್ತ್ವದ್ದಾಗಿತ್ತು. ಆಯಾ ರಾಜಮನೆತನಗಳ ಸಾಮಂತ ಅರಸರಾಗಿದ್ದ ಇವರು ತಮ್ಮ ದೊರೆಗೆ ನಿಷ್ಠೆಯನ್ನು ಪ್ರದರ್ಶಿಸುತ್ತಿದ್ದರು. ಇವರು ಸ್ಥಾನೀಯ ಸಂಸ್ಕೃತಿಯನ್ನು ಕಾಪಾಡಿಕೊಂಡು ಸಾಮ್ರಾಟರುಗಳ ರಾಜಶಕ್ತಿಗೆ ಸ್ಥಿರತೆಯನ್ನು ಒದಗಿಸುತ್ತಿದ್ದರು. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಶ್ರೇಷ್ಠ ಸಾಧನೆಗಳು ಇಂಥ ಕೆಲವು ಮಾಂಡಲಿಕರಿಂದ ಪೂರ್ಣಗೊಂಡವು. ಇವರು ತಮ್ಮ ರಾಜನಿಗಾಗಿ ಸೈನ್ಯಶಕ್ತಿಯನ್ನು ಸಂಘಟಿಸುವ ಭಂಡಾರಗಳಂತಿದ್ದರು. ವಿದ್ಯೆ, ಧರ್ಮ, ನೀತಿ,

ವಾಣಿಜ್ಯ, ಆಡಳಿತ, ಯುದ್ಧಶಾಸ್ತ್ರ, ಸಂಗೀತ, ನೃತ್ಯ ಮುಂತಾದ ಲಲಿತಕಲೆಗಳು–ಈ ಮಾಂಡಲಿಕರಿಂದ ಅಭಿವೃದ್ಧಿ ಹೊಂದಿದವು. ಇವರು ದೂರದೃಷ್ಟಿ, ಧೈರ್ಯ ಹಾಗೂ ಶ್ರದ್ಧೆಯಿಂದ ಜೀವನ ನಡೆಸುತ್ತಿದ್ದರು. ಸಾಮ್ರಾಜ್ಯವನ್ನು ಕಟ್ಟಿ ಆಳಿದ ಮೌರ್ಯ, ಕದಂಬ, ಗಂಗ, ರಾಷ್ಟ್ರಕೂಟ, ಚಾಳುಕ್ಯ, ಹೊಯ್ಸಳ, ವಿಜಯನಗರದರಸರು, ಮೈಸೂರು ಒಡೆಯರು ಮೊದಲಾದ ರಾಜರುಗಳಿಗೆ ಸಹಾಯಕರಾಗಿ, ಸಾಮಂತರಾಗಿ ನಿಂತರು. ಸ್ಥಳೀಯ ಪ್ರದೇಶದ ಆಡಳಿತ ನಡೆಸಿದ ಕಿರು ಅರಸು ಮನೆತನಗಳನ್ನು ಕಾಲಾನುಕ್ರಮದಲ್ಲಿ ಸಂಕ್ಷಿಪ್ತವಾಗಿ ನೀಡಿದೆ.

**ಕೇಕಯ ವಂಶ:** ಸು. 5–8ನೆಯ ಶತಮಾನಗಳ ನಡುವಣ ಅವಧಿಯಲ್ಲಿ ಚಿತ್ರದುರ್ಗ, ಶಿವಮೊಗ್ಗ, ಹಾಸನ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿದ್ದ ಸಾಮಂತ ಮನೆತನ. ರಾಮಾಯಣಾದಿ ಗ್ರಂಥಗಳಲ್ಲಿ ಈ ಮನೆತನದ ಉಲ್ಲೇಖವಿದ್ದರೂ ಈ ವಂಶದವರು ಉತ್ತರ ಭಾರತದಲ್ಲಿ ಆಳಿದುದರ ಬಗ್ಗೆ ಶಾಸನೇತ್ಯಾದಿ ಚಾರಿತ್ರಿಕ ಆಧಾರಗಳು ದೊರಕಿಲ್ಲ. ಆದರೂ ಮೂಲತಃ ಈ ಮನೆತನದವರು ಪಂಜಾಬ್ ಪ್ರದೇಶದವರೆಂದೂ ಊಹಿಸಲಾಗಿದೆ. ಕರ್ನಾಟಕದಲ್ಲಿ ಈ ಮನೆತನಕ್ಕೆ ಸೇರಿದ ಹಲವರು ಶಾಸನೋಕ್ತರಾಗಿದ್ದಾರೆ. ಈ ಮನೆತನದ ಅರಸರ ಅತ್ಯಂತ ಪ್ರಾಚೀನ ಉಲ್ಲೇಖ ಚಿತ್ರದುರ್ಗ ಜಿಲ್ಲೆಯ ಅಣಜಿ ಗ್ರಾಮದ ಶಾಸನದಲ್ಲಿದೆ. ಸು.5ನೆಯ ಶತಮಾನಕ್ಕೆ ಸೇರಬಹುದಾದ ಈ ಶಾಸನದಲ್ಲಿ ಉಕ್ತನಾದ ಶಿವಾನಂದವರ್ಮ ಕೇಕಯ ಕುಲದವನು. ಸೋಮವಂಶೋದ್ಭವನಾದ ಈತ ಆತ್ರೇಯ ಗೋತ್ರಜನಾಗಿದ್ದು ಇಕ್ಷ್ವಾಕು ಮೊದಲಾದ ರಾಜಕುಲದವರೊಡನೆ ವೈವಾಹಿಕ ಸಂಬಂಧ ಪಡೆದಿದ್ದ.

ಹಲ್ಮಿಡಿ ಶಾಸನದಲ್ಲಿ ಕೇಕಯ ವಂಶವನ್ನು ಪಲ್ಲವರೊಡಗೂಡಿಸಿ, ಆ ಎರಡು ಮನೆತನದವರನ್ನೂ ಕದನದಲ್ಲಿ ಇರಿದುದಾಗಿ ಹೇಳಿದೆ. ಆದರೆ ಅರಸರ ಹೆಸರನ್ನು ಹೇಳಿಲ್ಲ. 8ನೆಯ ಶತಮಾನದ ಶಾಸನವೊಂದರಿಂದ ಪಲ್ಲವ ಗೋಪಾಲದೇವನೂ ಕೇಕಯರಿಗೆ ಸಂಬಂಧಿಸಿದವನೆಂದು ತಿಳಿದಿದೆ. ಭೋಜ ಅಶಂಕಿತವರ್ಮನ ಹಿರೇಗುತ್ತಿ ತಾಮ್ರಶಾಸನ ನಂದಿಪಲ್ಲಿ ಕೈಕಯಾನ್ವಯಕ್ಕೆ ಸೇರಿದ ಕೊತ್ತಿಪೆಗ್ಗಿಲಿ ಎಂಬಾತನನ್ನು ಹೆಸರಿಸಿದೆ. ಇನ್ನೊಬ್ಬ ಅಶಂಕಿತವರ್ಮನ ಶಾಸನದಲ್ಲಿ ಇದೇ ವಂಶದಲ್ಲಿ ಜನಿಸಿದ ಏಲಕೆಲ್ಲನ ಉಲ್ಲೇಖವಿದೆ. ಕದಂಬ ರವಿವರ್ಮನ ಶಾಸನವೊಂದರಲ್ಲಿಯೂ ಇದೇ ಕುಲದ ಕೆಲ್ಲ ಎಂಬ ನಾಮಾಂತ್ಯವುಳ್ಳ ಚಿತ್ರಸೇನ ಮಹಾಕೆಲ್ಲನ ಪ್ರಸ್ತಾಪವಿದೆ. ಈತ ವಿಜಯಾಂಬುದ್ವೀಪದಲ್ಲಿ ಆಳುತ್ತಿದ್ದನೆಂದಿದೆ. ಇವರ ನಡುವಣ ಸಂಬಂಧ ತಿಳಿಯದು. ಕದಂಬ ಕೃಷ್ಣವರ್ಮನ ಪತ್ನಿಯೊಬ್ಬಳು ಈ ವಂಶಕ್ಕೆ ಸೇರಿದವಳು. ಈಕೆಯ ಹೆಸರು ಗೊತ್ತಿಲ್ಲ. ಈ ದಂಪತಿಗಳಿಗೆ ಜನಿಸಿದಾತ ವಿಷ್ಣುಶರ್ಮ. ಅಂತೆಯೇ ಕದಂಬ ಮೃಗೇಶವರ್ಮನ ಪತ್ನಿ ಪ್ರಭಾವತಿ ಕೇಕಯ ಮಹಾಕುಲ ಪ್ರಸೂತಳು. ಈಕೆಯ ಮಗ ರವಿವರ್ಮ.

ಕೆಕ್ಕಾರ್ ಗ್ರಾಮದ 8ನೆಯ ಶತಮಾನದ ಶಾಸನದಲ್ಲಿ ಇನ್ನೊಬ್ಬ ಕೇಕಯ ಅಣ್ಣಿಯರಸನ ಪ್ರಸ್ತಾಪವಿದೆ. ಈತನನ್ನು ಪಯೊಗುಂಡ ಪುರವರೇಶ್ವರನೆಂದು ಶಾಸನದಲ್ಲಿ ವರ್ಣಿಸಿರುವುದರಿಂದ ಈ ಮನೆತನದವರು ಪಶ್ಚಿಮ ತೀರಪ್ರದೇಶದಲ್ಲಿ ಅಧಿಕಾರದಲ್ಲಿದ್ದವರೆಂದೂ ಊಹಿಸಬಹುದು. ಈತನ ಲಾಂಛನ ಸಿಂಹ. (ಬಿ.ಆರ್.ಜಿ.)

**ಚಲ್ಲಕೇತನ ಮನೆತನ:** ಸು.7–9ನೆಯ ಶತಮಾನದವರೆಗೆ ಬನವಾಸಿ ಪನ್ನಿರ್ಚ್ಛಾಸಿರವನ್ನೊಳಗೊಂಡಂತೆ 31,102 ಗ್ರಾಮಗಳನ್ನು ಆಳಿದ ರಾಷ್ಟ್ರಕೂಟರ ಸಾಮಂತರ ಮನೆತನ. ಅಮೋಘವರ್ಷ ನೃಪತುಂಗ ಈ ಸಾಮ್ರಾಜ್ಯದ ಪ್ರಸಿದ್ಧ ಪುರುಷ. ಈ ಮನೆತನದ ಸಮರ್ಥ ಸೇನಾನಿ, ದಂಡನಾಯಕ ವೀರಬಂಕೇಯ. ಈತ ನೃಪತುಂಗನ ಬಲಗೈ ಬಂಟ. ಕೊಣ್ಣೂರು ಶಾಸನ ಬಂಕೇಯನ ವ್ಯಕ್ತಿತ್ವಕ್ಕೆ ಪೂರಕ ದಾಖಲೆಯೆನಿಸಿದೆ. ಕೊಣ್ಣೂರು, ಲೋಕಾಪುರ, ಶಿಗ್ಗಾಂವಿ ಹಳೇತ್ರಿ, ಬಂಕಾಪುರ, ಬಂದಳಿಕೆ ಶಾಸನಗಳು ರಾಷ್ಟ್ರಕೂಟ ಹಾಗೂ ಚಲ್ಲಕೇತನ ಮನೆತನದ ಮಧುರ ಬಾಂಧವ್ಯಕ್ಕೆ ಸಾಕ್ಷಿಯಾಗಿವೆ. 873–76ರ ಶಾಸನ ಸತ್ಯ ಸುರಸ ಸಂಘಟನೋಪಲಬ್ಧ ವಿಜಯ, ಲಕ್ಷ್ಮೀ ನಿವಾಸದ ಚಲ್ಲಕೇತನ ಶ್ರೀಮತ್ ಬಂಕೇಯರಸರ್ ಎಂದು ಬಂಕೇಯನನ್ನು ಹೊಗಳಿದೆ. ಚಲ್ಲಕೇತನ ಮನೆತನ ಮೂಲತಃ ಕರುದೇವರಾಯಾನ್ವಯಕ್ಕೆ ಸಂಬಂಧಪಟ್ಟುದು. ಬಂದಳಿಕೆಯ ಶಾಸನದಲ್ಲಿ ಕಲಿವಿಟ್ಟರಸ ಬನವಾಸಿ ಪನ್ನಿರ್ಚ್ಛಾಸಿರ ಆಳಿದ್ದ ಕಾಲ್ಕುದೇವಯ್ಯನಾನ್ವಯನೆಂದು ಆಶ್ರಯದಲ್ಲಿದ್ದನೆಂದು ಹೇಳಿದ ನಾಗರಖಂಡ ಮೂಲಕ ಈ ಮನೆತನದ ಮೂಲಪುರುಷ ಕರುದೇವಯ್ಯ ಅಥವಾ ಕಾಲ್ಕುದೇವಯ್ಯ – ಆದ್ದರಿಂದಲೇ ಚಲ್ಲಕೇತನ ಮನೆತನ ಕಾಲ್ಕುದೇವರಾನ್ವಯ ಎನಿಸಿದೆ.

ಎರಕೋರಿ ಧೋರರು ಈ ಮನೆತನದ ಪ್ರತಿಷ್ಠಿತರು. ನೃಪತುಂಗನ ತಂದೆ ಮೂರನೆಯ ಗೋವಿಂದ 814ರಲ್ಲಿ ಕಾಲವಾದ. ನೃಪತುಂಗ ವಿರೋಧಿಗಳ ಸಂಕಷ್ಟವನ್ನು ಎದುರಿಸಬೇಕಾಯಿತು. ಇಂಥ ಸಂದಿಗ್ಧ ಸಂದರ್ಭದಲ್ಲಿ ಬಂಕೇಯರಸನ ಆಸರೆಯಿಂದ ಚಾಳುಕ್ಯರನ್ನು ಹಿಮ್ಮೆಟ್ಟಿಸಿ ಕಳೆದುಕೊಂಡ ದೇಶಕೋಶಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಾಯಿತು. ವೀರಬಂಕೇಯನ ಮುತ್ಸದ್ದಿತನ, ಮುಂದಾಲೋಚನೆ, ಸ್ವಾಮಿನಿಷ್ಠೆಯಿಂದ ಕಳೆದುಕೊಂಡ ಸಾಮ್ರಾಜ್ಯ ಮರಳಿ ದೊರೆಯಿತು.

ಬಂಕೇಯನ ಮಡದಿ ತೈಲಕಚ್ಚೆಗೆ ಕುಂದಟ್ಟೆ, ಲೋಕಾದಿತ್ಯ, ಧೋರ, ದೂಲಿಕ, ಮತ್ತು ಬಂಕಾ ಎಂಬ ಐವರು ಗಂಡುಮಕ್ಕಳಿದ್ದರು. ಅವರಲ್ಲಿ ಕುಂದಟ್ಟೆ ಹಿರಿಯ ಮಗ. ಈತ 866ರಲ್ಲಿ ಬಹುಶಃ ಚಿಂಚಿಲಿ50ರ ಆಳಿಕೆ ನಡೆಸುತ್ತಿದ್ದ. ನಿಡಗುಂದಿ 12ರ ಅಧಿಕಾರಿಯಾಗಿದ್ದ ಇವನು ಚಿಕ್ಕವಯಸ್ಸಿನಲ್ಲಿಯೆ ಕೀಳ್ಗುಂಟೆಯಾದ ದಾಖಲೆಯೊಂದು ಹೆಂಜೇರುವಿನಲ್ಲಿದೆ. ಅನಂತಪುರ ಜಿಲ್ಲೆ ಮಡಕಶಿರ ತಾಲ್ಲೂಕಿನ ಹೆಂಜೇರಿನ ಕೆರೆಯ ದಂಡೆಯ ಮೇಲೆ ಒಂದು ಶಾಸನವಿದ್ದು ಅದರಲ್ಲಿ ಕುಂದಟೆಟೆ ಸಂನ್ಯಾಸನದಿಂದ ಸಮಾಧಿಮರಣ ಹೊಂದಿದುದಾಗಿ ತಿಳಿದುಬರುತ್ತದೆ.

ಬಂಕೇಯನ ದ್ವಿತೀಯ ಪುತ್ರ ಲೋಕಾದಿತ್ಯ. 880ರಲ್ಲಿ ಪಟ್ಟಾಭಿಷಿಕ್ತನಾದ. 902ರ ಬಂದಳಿಕೆ ಶಾಸನ ಎರಡನೆಯ ಕೃಷ್ಣನದಾಗಿದ್ದು ಅದರಲ್ಲಿ ಲೋಕಾದಿತ್ಯರಸ ಬನವಾಸಿ ಪಲಸಿಗೆ ಪನ್ನಿರ್ಚ್ಛಾಸಿರ, ಮಾನ್ಯಖೇಟ ಆರುಸಾವಿರ, ತರ್ದವಾಡಿ ಸಾವಿರ, ಕೊಳನೂರು ಮೂವತ್ತು, ಲೋಕಾಪುರ ಹನ್ನೆರಡು, ತೊರುಗಲೆ ಅರವತ್ತು–ಹೀಗೆ ಒಟ್ಟು 31,102 ಗ್ರಾಮಗಳ ಆಳಿಕೆ ನಡೆಸಿದ.

ಪಟ್ಟಕ್ಕೆ ಮುನ್ನ ವಿರೋಧಿರಾಜರು ಯುವರಾಜ ಕೃಷ್ಣನನ್ನು ಕುತಂತ್ರಕ್ಕೆ ಸಿಲುಕಿಸಿ ತಮ್ಮೆಡೆಗೆ ಸೆಳೆದುಕೊಂಡು ತಂದೆ ಅಮೋಘವರ್ಷ ನೃಪತುಂಗನ ವಿರುದ್ಧ ಬಂಡಾಯವೆಬ್ಬಿಸಿದರು. ಚೇದಿಯ ಅರಸು ಕೊಕ್ಕಲನ ಮಗಳನ್ನು ಮದುವೆಯಾಗುವ, ಜೊತೆಗೆ ಕೃಷ್ಣನೇ ರಾಷ್ಟ್ರಕೂಟ ಚಕ್ರವರ್ತಿಯಾಗಿ ಅಧಿಕಾರ ಸ್ವೀಕರಿಸುವ ಎರಡು ಘಟನೆಗಳು ಈ ಬಂಡಾಯಕ್ಕೆ ಮುಖ್ಯ ಕಾರಣಗಳಾಗಿದ್ದವು. ಇಂಥ ಸಂದಿಗ್ಧ ಸಂದರ್ಭದಲ್ಲಿ ಬಂಕೇಯನು ತನ್ನ ಅದಮ್ಯ ಸಾಹಸ, ಮುಂದಾಲೋಚನೆ, ಸಮಯಪ್ರಜ್ಞೆಗಳಿಂದ ಗಂಗವಾಡಿಯ ಮೇಲೆರಗಿ ವಿಜಯಸಾಧಿಸಿ ಚೇದಿಯ ಕೊಕ್ಕಲನ ಮಗಳನ್ನು ರಾಷ್ಟ್ರಕೂಟ ಕೃಷ್ಣನಿಗೆ ವಿವಾಹ ಮಾಡಿಸಿ ವೈರತ್ವವನ್ನು ಬಾಂಧವ್ಯದಲ್ಲಿ ಪರ್ಯಾವಸಾನಗೊಳಿಸಿದ.

ಅಮೋಘವರ್ಷ ನೃಪತುಂಗ ಹಾಗೂ ಚಲ್ಲಕೇತನ ಬಂಕೇಯರ ಆಡಳಿತಾವಧಿಯಲ್ಲಿ ಜೈನಗುರು ಜಿನಸೇನಾಚಾರ್ಯರು ಪೂರ್ವಪುರಾಣವನ್ನು ಗುಣಭದ್ರಾಚಾರ್ಯ ಉತ್ತರ ಪುರಾಣವನ್ನು (898) ರಚಿಸಿದರು. ಗುಣಭದ್ರಾಚಾರ್ಯರ ಉತ್ತರ ಪುರಾಣದ ಪ್ರಾರಂಭದ ಪದ್ಯಗಳಲ್ಲಿ ಚಲ್ಲಕೇತನ ಮನೆತನದ ವಿವರ, ಲೋಕಾದಿತ್ಯ ತಂದೆಯ ಹೆಸರಿನಿಂದ ಕಟ್ಟಿದ ಬಂಕಾಪುರದ ಉಲ್ಲೇಖಗಳಿವೆ. ಚಲ್ಲಕೇತನ ಲೋಕಾದಿತ್ಯನು ರಾಷ್ಟ್ರಕೂಟ ಕೃಷ್ಣನ ಅತ್ಯಂತ ನಿಕಟವರ್ತಿಯಾಗಿದ್ದ ತನ್ನ ತಂದೆಯ ಹೆಸರಿನಲ್ಲಿ ಬಂಕಾಪುರವನ್ನು ತನ್ನ ಹೆಸರಿನಲ್ಲಿ ಲೋಕಾಪುರವನ್ನು (ಜಮಖಂಡಿ) ಕಟ್ಟಿಸಿದ. ಲೋಕಾದಿತ್ಯನಿಗೆ ಒಂದನೆಯ ಶಿಲವಿಟ್ಟ, ಎರಡನೆಯ ಧೋರ ಮತ್ತು ಮೂರನೆಯ ಬಂಕೇಯನ ಗಂಡು ಮಕ್ಕಳು ಈ ಮೂವರೂ ಕ್ರಮವಾಗಿ ರಾಷ್ಟ್ರಕೂಟ ದ್ವಿತೀಯ ಕೃಷ್ಣ, ಮೂರನೆಯ ಇಂದ್ರ, ನಿತ್ಯವರ್ಷರ ಆಳಿಕೆಯ ಕಾಲದಲ್ಲಿ ರಾಜ್ಯಭಾರ ಮಾಡಿದರು.

ಚಲ್ಲಕೇತನ ಮನೆತನದ ಲೋಕಾದಿತ್ಯನ ಸೋದರ ಎರಡನೆಯ ಧೋರ ರಾಷ್ಟ್ರಕೂಟ ಇಂದ್ರವಲ್ಲಭನ ಆಡಳಿತದಲ್ಲಿ ಬನವಾಸಿ ನಾಡನ್ನಾಳುತ್ತಿದ್ದನೆಂದು ತಿಳಿದುಬರುತ್ತದೆ. ಧೋರನ ಕಾಲದ 919 ಪ್ರಮಾಥಿ ಸಂವತ್ಸರದ ಕಣ್ಣಮಗೆರೆ ಶಾಸನದಲ್ಲಿ ದಂಡಾಪುರ 220 ಮಹಾಜನದ ಅಪ್ಪಣೆಯ ಮೇರೆಗೆ ಧೋರ ಮತ್ತು ರಾಷ್ಟ್ರಕೂಟ ಇಂದ್ರ ಪ್ರಭೂತವರ್ಷ ದಾನ ಮಾಡಿದ ವಿಷಯವಿದೆ. ಇಂದಿಗೂ ಕಣ್ಣಮಗೆರೆ ನರಗುಂದ ನಾಡಿನಲ್ಲಿ ಶೋಭಿಸುತ್ತಿದೆ.

ಎರಡನೆಯ ಬಂಕರಸ 915ರ ಬಂಕಾಪುರ ತಾಲ್ಲೂಕು ಬಿಸನಳ್ಳಿ ಮತ್ತು 919 ಶಿಗ್ಗಾಂವ ಶಾಸನಗಳು ಇಂದ್ರವಲ್ಲಭನ ಅಧಿಕಾರದಲ್ಲಿ ಎರಡನೆಯ ಬಂಕರಸನ ಆಡಳಿತವನ್ನು ಹೆಸರಿಸಿವೆ. 919 ಶಿಗ್ಗಾಂವ ಶಾಸನ ಮಹಾಸಾಮಂತ ಶ್ರೀಮತುರು ಬಂಕೇಯರ ಬನವಾಸಿ ಮೂವರ್ತ್ತಿರ್ಚ್ಛಾಸಿರ ಪನ್ನಿರ್ಚ್ಛಾಸಿರ ಆಳುತ್ತಿದ್ದ. 918ರಲ್ಲಿ ಎಡೆವೊಳಲ ಎಪ್ಪತ್ತರ ಸುಂಕವೆಗ್ಗಡೆ ಕಾಮಿರಸ ಅಲ್ಲಿಯ ಕಲಿದೇವರ ದೀಪಕ್ಕೆ ದಾನನೀಡಿದ. ರಾಷ್ಟ್ರಕೂಟರ ಇನ್ನೊಬ್ಬ ಸಾಮಂತ ಶಂಕರಗಂಡ. 10ನೆಯ ಶತಮಾನದಲ್ಲಿ ರಾಷ್ಟ್ರಕೂಟ ಮೂರನೆಯ ಇಂದ್ರ, ಬನವಾಸಿ ಪನ್ನಿರ್ಚ್ಛಾಸಿರವನ್ನು ಎರಡನೆಯ ಬಂಕ ಮತ್ತು ಶಂಕರಗಂಡರಿಗೆ ಇಬ್ಭಾಗಿಸಿ ಹಂಚಿದಂತೆ ಉಲ್ಲೇಖಗಳಿವೆ. ಗುಡ್ಡದ ಚೆನ್ನಪುರ ಶಾಸನ ಲೋಕಟಿಯ ಸೋದರನೊಬ್ಬನಿದ್ದ ಬಗ್ಗೆ ತಿಳಿಸುವಲ್ಲಿ ಆತ ಕುಂದೂರು ಮೂವತ್ತರ ಅಧಿಕಾರಿಯಾಗಿದ್ದದು ತಿಳಿದುಬರುತ್ತದೆ. ಹೀಗಾಗಿ ಶಿಗ್ಗಾಂವಿ ತಾಲೂಕಿನ ಧುಂಡಸಿ ಗ್ರಾಮ ಇಂದಿಗೂ ಚಲ್ಲಕೇತನ ದೊಂಡನ ಹೆಸರಿನಲ್ಲಿ ಶೋಭಿಸುತ್ತದೆ.

ಲೋಕಾದಿತ್ಯನ ಮಗ ಕಲಿವಟ್ಟ, ಇವನ ಕಾಲ 923. ಇವನು ತನ್ನ ಚಿಕ್ಕಪ್ಪಂದಿರಿಗಿಂತ ಪೂರ್ವದಲ್ಲಿ ತಂದೆ ಲೋಕಾದಿತ್ಯನೊಡನೆ ಬನವಾಸಿಯ ರಾಜ್ಯಭಾರ ಮಾಡಿದಂತಿದೆ. ಗದಗ ತಾಲ್ಲೂಕು ಶೀರುಂಜದ 928–29 ಶಾಸನವೊಂದು ಕಲಿಪಟ್ಟರಸ ಬನವಾಸಿ ಪನ್ನಿರ್ಚ್ಛಾಸಿರ ಜೊತೆಗೆ ಬೆಳ್ವಲಮೂನ್ನರಂ ಆಳಿಕೆ ಮಾಡುತ್ತಿದ್ದಂತೆ ವಿವರಗಳಿವೆ. ಮೂರನೆಯ ಧೋರರಸ 914ರಲ್ಲಿ ಬನವಾಸಿ ಪ್ರಾಂತವನ್ನಾಳುತ್ತಿದ್ದ. ಈತನ ಕಾಲ 928. ಇವನ ತರುವಾಯ ಎರಡನೆಯ ಶಿಲಪಟ್ಟರಸ 945ರಲ್ಲಿ ಪಟ್ಟಾಭಿಷಿಕ್ತನಾದ.

949ರಲ್ಲಿ ಚೋಳ ಅರಸರಿಗೂ ರಾಷ್ಟ್ರಕೂಟರಿಗೂ ಆರ್ಕಾಟ್ ಜಿಲ್ಲೆಯಲ್ಲಿ ತಕ್ಕೋಲಂನಲ್ಲಿ ಯುದ್ಧ ನಡೆದು ಚೋಳರಿಂದ ರಾಷ್ಟ್ರಕೂಟರಿಗೆ ಸೋಲಾಯಿತು. ಈ ಸಂದರ್ಭದಲ್ಲಿ ಚೋಳ ಅರಸರ ಉತ್ತರಾಧಿಕಾರಿಯಾಗಬೇಕಿದ್ದ ರಾಜಾದಿತ್ಯ ಬೂತುಗನಿಂದ ಹತನಾದ. ಮುಂದೆ ಚಲ್ಲಕೇತನ ಮನೆತನದಲ್ಲಿ ಚಟ್ಟಯ್ಯ, ಕಲಿವಿಟ್ಟರಿಸ ಎಂಬ ಹೆಸರುಗಳು ಗೋಚರಿಸಿದರೂ ಅವರು ಮೇಲಿನ ಸಾಮಂತರಷ್ಟು ಸಮರ್ಥರಾಗದೇ ಹೋದರು. ಆ ವೇಳೆಗೆ ರಾಷ್ಟ್ರಕೂಟರ ಅವನತಿಯೂ ಪ್ರಾರಂಭವಾಗಿ ಚಲ್ಲಕೇತನ ಮನೆತನ ಅಂತ್ಯಗೊಂಡಿತು.(ಸಿ.ಪಿ.)

**ಉಚ್ಚಂಗಿ ಪಾಂಡ್ಯರು:** 11–12ನೆಯ ಶತಮಾನಗಳಲ್ಲಿ ಕಲ್ಯಾಣ ಚಾಳುಕ್ಯರ ಆಶ್ರಯದಲ್ಲಿ ಸಣ್ಣಪುಟ್ಟ ನಾಡುಗಳನ್ನು ಆಳುತ್ತಿದ್ದ 12 ಸಾಮಂತ ಮನೆತನಗಳಲ್ಲಿ ಒಂದು. ಇವರಿಗೆ ತಾವು ಯದುವಂಶದವರೆಂಬ ನಂಬಿಕೆ.

ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಲಿನ ಪ್ರದೇಶವನ್ನೊಳಗೊಂಡ ನೊಳಂಬವಾಡಿ 32000 ಪ್ರದೇಶವನ್ನು ನೊಳಂಬ, ಪಲ್ಲವರ ಅನಂತರ ಪಾಂಡ್ಯರು ಮಹಾಮಂಡಳೇಶ್ವರ, ಕಾಂಚಿಪುರವರಾಧೀಶ್ವರ, ಪರಿಚ್ಛೇಧಿಗಂಡ ಮುಂತಾದ ಬಿರುದುಗಳನ್ನು ಧರಿಸಿಕೊಂಡು ಉಚ್ಚಂಗಿಯಿಂದ ಆಳಿಕೆ ಮಾಡುತ್ತಿದ್ದರು. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ಒಂದು ಗಿರಿದುರ್ಗ ಇವರ ರಾಜಧಾನಿಯಾಗಿತ್ತೆಂದು ಹೇಳಲಾಗಿದೆ. ಮೂಲತಃ ಇವರು ಕೊಂಕಣದ ಶಿಸುಗಲಿಯಲ್ಲಿ ನೆಲೆಸಿ ಅನಂತರ ನೊಳಂಬವಾಡಿ ಪ್ರದೇಶಕ್ಕೆ ಬಂದು ಆಳಿಕೆ ಪ್ರಾರಂಭಿಸಿದರು. ಉಚ್ಚಂಗಿಯ ಪಾಂಡ್ಯರು ಸೂರ್ಯವಂಶಸ್ಥರಾದರೆ ಶಿಸುಗಲಿಯ ಪಾಂಡ್ಯರು ಚಂದ್ರವಂಶೀಯರು. ಈ ಪಾಂಡ್ಯರೂ ಶಿಸುಗಲಿಯ ಪಾಂಡ್ಯರ ಹಾಗೆ ತಮಿಳುನಾಡಿನಿಂದ ಬಂದವರಿರಬೇಕು. ಅಲ್ಲದೇ ಉಚ್ಚಂಗಿ ಪಾಂಡ್ಯರ ಕೆಲವು ಅರಸರ ಹೆಸರುಗಳು ತಮಿಳು ಹೆಸರುಗಳಾಗಿವೆ ಎಂಬುದನ್ನು ಇಲ್ಲಿ ಗಮನಿಸಬೇಕು.

1079ರ ನೀಲಗುಂದದ ಮುಕ್ತೇಶ್ವರ ಗುಡಿಯಲ್ಲಿಯ ಶಾಸನವೊಂದರ ಪ್ರಕಾರ ಕಲ್ಯಾಣ ಚಾಳುಕ್ಯರ ಸಾಮಂತನಾದ ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯನು ಉಳುವ ಮತ್ತು ಕಣಮೆಕಲ್ಲು ನೆಲವೀಡಿನಿಂದ ನೊಳಂಬವಾಡಿ 32000 ಪ್ರದೇಶವನ್ನು ಆಳಿಕೆ ಮಾಡಿದ್ದು ತಿಳಿದುಬರುತ್ತದೆ. ಉಚ್ಚಂಗಿ ಅನಂತರದಲ್ಲಿ ಪಾಂಡ್ಯರ ರಾಜಧಾನಿಯಾಯಿತು.

ಆದಿತ್ಯದೇವ ಅಥವಾ ಮಂಗಯ್ಯ ಈ ರಾಜ್ಯದ ಸ್ಥಾಪಕ. ಈತನ ಅನಂತರ ಆತನ ಮಗ ಚೇದಿರಾಜ ಅಧಿಕಾರಕ್ಕೆ ಬಂದ. ಚೇದಿರಾಜನ ಅನಂತರ ಪಾಂಡ್ಯ ಸಿಂಹಾಸನವನ್ನೇರಿದವನು ಆತನ ಮಗ ಪಲಮಾಂದ ಪಾಂಡ್ಯದೇವ. ಈತ ಚೇದಿ ಅರಸರನ್ನು ತನ್ನ ಅಧೀನಕ್ಕೊಳಪಡಿಸಿಕೊಂಡ.

ಪಲಮಾಂದ ಪಾಂಡ್ಯದೇವನ ಮಗ ಇರುಕ್ಕವೇಲ್ ಅಥವಾ ಪಲಿಂದ ಪಾಂಡ್ಯ (1087–1123). ಈತನಿಗೆ ಸಂಬಂಧಿಸಿದ ತಾಮ್ರ ಶಾಸನದ ಪ್ರಕಾರ ಚಾಳುಕ್ಯ ದೊರೆ ತ್ರಿಭುವನಮಲ್ಲ ಕಲ್ಯಾಣಪುರದ ನೆಲೆವೀಡಿನಿಂದ ಆಳಿಕೆ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರ ಪಲಿತಪಾಂಡ್ಯನು ಬ್ರಾಹ್ಮಣರಿಗೆ ನೀರ್ಗುಂದವನ್ನು ದಾನ ನೀಡಿದ್ದ. ಚಾಳುಕ್ಯ ಅರಸ ತ್ರಿಭುವನ ಮಲ್ಲ ಬನವಾಸಿಯಲ್ಲಿ ತಂಗಿದ್ದಾಗ ಅವನ ಸರ್ವಾಧ್ಯಕ್ಷನಾದ ಪಲಿತಪಾಂಡ್ಯನ ಮಗ ರಾಯಪಾಂಡ್ಯನ ಕೋರಿಕೆಯ ಮೇರೆಗೆ ಕೃಷ್ಣಫಲಕವನ್ನು ಬ್ರಾಹ್ಮಣರಿಗೆ ದಾನ ನೀಡಿದ್ದ ವಿಷಯ ಇಲ್ಲಿಯ ಇನ್ನೊಂದು ಶಾಸನದಿಂದ ತಿಳಿದುಬರುತ್ತದೆ. 1101ರಲ್ಲಿ ಈತ ಬಲ್ಲಕುಂದಿ 200ರ ಆಡಳಿತವನ್ನು ಸಹ ನೋಡಿಕೊಳ್ಳುತ್ತಿದ್ದ. ಚಾಳುಕ್ಯ ದೊರೆ ತ್ರಿಭುವನಮಲ್ಲನಿಗೆ ಈತನ ಮೇಲೆ ಅಪಾರ ವಿಶ್ವಾಸ ಇತ್ತು. ಇವನೊಬ್ಬನೇ ಚೋಳ, ಆಂಧ್ರ, ಕಳಿಂಗ, ಅಂಗ, ವಂಗ, ಮಗಧ, ಗೂರ್ಜರ ದೊರೆಗಳನ್ನು ಮಣಿಸಲು ಸಾಕೆಂದು ಹೆಮ್ಮೆಯಿಂದ ಹೇಳಿದ್ದಾನೆ. 1124ರ ಹೊತ್ತಿಗೆ ಸಾಂತಳಿಗೆ 1000 ಮತ್ತು ನೊಳಂಬವಾಡಿಯನ್ನು ಸ್ವತಂತ್ರವಾಗಿ ಆಳಿಕೆ ಮಾಡಿದ್ದುದು ತಿಳಿದುಬರುತ್ತದೆ.

ಅನಂತರದ ಪಾಂಡ್ಯರ ದೊರೆ ರಾಯಪಾಂಡ್ಯ. ಈತ ದಾವಣಗೆರೆ ಸಮೀಪದಲ್ಲಿರುವ ಬೆಳತೂರಿನಿಂದ ಆಳಿಕೆ ಮಾಡುತ್ತಿದ್ದನೆಂದು ಹೇಳಲಾಗಿದೆ. ಈತ ಕಳಿಂಗ, ಸಿಂಹಳ, ಸಿಂಗ ಮತ್ತು ಕಲುತ ದೊರೆಗಳನ್ನು ಸೋಲಿಸಿದ್ದ. ಈತನಿಗೆ ಪಂಡಿತ ಪಾಂಡ್ಯ, ವೀರಪಾಂಡ್ಯ, ವಿಜಯ ಪಾಂಡ್ಯ ಮತ್ತು ಕಾಮದೇವ ಎಂಬ ಮಕ್ಕಳಿದ್ದರು. ಈತನ ಹಿರಿಯ ಮಗ ಪಂಡಿತ ಪಾಂಡ್ಯ ಎಲ್ಲಿಯೂ ಆಳಿಕೆ ಮಾಡಿದ್ದಂತೆ ಕಂಡುಬರುವುದಿಲ್ಲ. ಆತನ ಎರಡನೆಯ ಮಗ ವೀರ ಪಾಂಡ್ಯ ಉಚ್ಚಂಗಿಯಿಂದ ಆಳಿಕೆ ಮಾಡಿದ್ದನು. ಈತನ ಆಳಿಕೆಯಿಂದ ಉಚ್ಚಂಗಿ ಇವರ ರಾಜಧಾನಿಯಾಗಿರಬೇಕು. ಆತ ಮಲೆರಾಜ್ಯವನ್ನು ಗೆದ್ದು ಕಲ್ಯಾಣ ಚಕ್ರವರ್ತಿಗೆ ಒಪ್ಪಿಸಿ, 1148ರಲ್ಲಿ ಹಲವಾರು ದತ್ತಿಗಳನ್ನು ಬಿಟ್ಟಿದ್ದ. ಈತನಿಗೆ ರಾಜಕುಮಾರನ ಬಲಭಾಗದಲ್ಲಿ ನಿಲ್ಲುವ ಹಕ್ಕನ್ನು ನೀಡಲಾಗಿತ್ತು.

ಈ ವಂಶದಲ್ಲಿ ಅನಂತರದ ರಾಜನಾದವನು ವಿಜಯಪಾಂಡ್ಯ ಅಥವಾ ಕಾಮದೇವ. ಬಹುಶಃ ಈತ ಸ್ವತಂತ್ರ ಅರಸನಾಗಿ ಆಡಳಿತ ನಡೆಸಿರಬೇಕು. ತನ್ನ ಕಿರೀಟಾಗ್ರ ದೊಡ್ಡ ನೀಲಮಣಿಯಿಂದ ನಿರ್ಮಿತವಾಗಿತ್ತೆಂದು ತನ್ನ ಬಾಹುಗಳು ಸುವರ್ಣದ ತೋಳುಬಂಧಿಯಿಂದ ಅಲಂಕರಿಸಲ್ಪಟ್ಟಿದ್ದವೆಂದು ಹೇಳಿಕೊಂಡಿದ್ದಾನೆ. ಕನಕ ಪರ್ವತದಲ್ಲಿ ಆತ ಮತ್ಸ್ಯ ಲಾಂಛನದ ವಿಜಯಸ್ತಂಭವನ್ನು ಸ್ಥಾಪಿಸಿದ್ದ. ಅವನ ಖಜಾನೆ ತಾಮ್ರಪರ್ಣಿಯಿಂದ ಕೂಡಿದ ಮುತ್ತು ರತ್ನಗಳಿಂದ ತುಂಬಿತ್ತು. ಅವನ ಕೆಳ ಗೃಹ ಮಲಯ ಪರ್ವತ ಚಂದನ ವೃಕ್ಷಗಳ ಸಮೂಹದಲ್ಲಿತ್ತೆಂದು ಶಾಸನಗಳು ವರ್ಣಿಸಿವೆ.

ಇವರ ಶಾಸನಗಳಲ್ಲಿ ಉದಯ, ಪಂಡಿತಪಾಂಡ್ಯ, ಕುಮಾರ ವಿಜಯಪಾಂಡ್ಯ, ತೈಲಪ, ಜಗದ್ದಳ ಇತ್ಯಾದಿ ಪಾಂಡ್ಯರ ಹೆಸರುಗಳು ಕಂಡು ಬರುತ್ತವೆ. ಆದರೆ ಜಗದ್ದಳ ಪಾಂಡ್ಯನನ್ನು ಹೊರತುಪಡಿಸಿ ಉಳಿದವರು ಆಳಿಕೆ ನಡೆಸಿದಂತೆ ಕಂಡುಬರುವುದಿಲ್ಲ. ಇವರ ಆಳಿಕೆಗೆ ಸಂಬಂಧಿಸಿದ ಯಾವುದೇ ದಾಖಲೆಗಳು ಲಭ್ಯವಿಲ್ಲ. (ಜಿ.ಎಂ.ಎನ್.)

**ಕುಮ್ಮಟ ರಾಜ್ಯ:** ಹಂಪಿ ಪರಿಸರದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವ ಮುಂಚೆ ಇದ್ದ ಒಂದು ಸಣ್ಣರಾಜ್ಯ. ಕುಮ್ಮಟದುರ್ಗ ಎಂಬ ಸ್ಥಳ ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ಕೊಪ್ಪಳ ರಸ್ತೆಗೆ 2ಕಿಮೀ ದಕ್ಷಿಣದಲ್ಲಿ ಮುಕ್ಕುಂಪಿ ಎಂಬ ಹಳ್ಳಿಗೆ ಸಮೀಪದಲ್ಲಿದೆ. ತುಂಗಭದ್ರೆಯ ಉತ್ತರಕ್ಕಿರುವ ಈ ಸ್ಥಳ ಬೆಟ್ಟಗುಡ್ಡಗಳಿಂದ ಸುತ್ತುವರೆದು ರಕ್ಷಣೆಗೆ ಯೋಗ್ಯವಾಗಿದ್ದರಿಂದ ಕುಮ್ಮಟದ ನಾಯಕರು ರಾಜಧಾನಿ ಪಟ್ಟಣಕ್ಕೆ ಆಯ್ಕೆ ಮಾಡಿಕೊಂಡರೆಂದು ತೋರುತ್ತದೆ. ಸಿಂಗೆಯನಾಯಕನೆಂಬುವನು ಕುಮ್ಮಟ ರಾಜ್ಯದ ಮೊದಲ ಅರಸ. ಕುಮ್ಮಟ ನಾಯಕರ ರಾಜಧಾನಿ ಕಂಪಿಲಿ ಎಂದು ಈ ಮೊದಲು ವಿದ್ವಾಂಸರು ಗುರುತಿಸಿದ್ದರು. ಕಾರಣ ಈ ರಾಜ್ಯದ ಕಂಪಿಲಿ ಪ್ರಮುಖ ಪಟ್ಟಣವಾಗಿದ್ದು, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು. ವಿದೇಶಿ ಪ್ರವಾಸಿಗರೂ ಕೂಡ ಕಂಪಿಲಿ ರಾಜ್ಯದ ಉಲ್ಲೇಖ ಮಾಡಿದ್ದಾರೆ. ಇಬ್ನಬತೂತ ಆನೆಗುಂದಿಯ ಅರಸರ ಹೆಸರನ್ನು ಹೇಳದೆ ಕಂಪಿಲದ ರಾಜ ಎಂದಿದ್ದಾನೆ. ರಾಬರ್ಟ್ ಸಿವೆಲನು ಕಂಪಿಲ ಎಂಬ ಪದವನ್ನು ಕಂಬಿಲ ಎಂದು ಕಂಪಿಲದ (ಕಂಪ್ಲಿ ಅರಸ] ಅರಸು ಎಂದಿದ್ದಾನೆ. ಇದರಿಂದ ಕಂಪಿಲೆರಾಯನನ್ನು ಕಂಪಿಲಯರಾಯ ಎಂಬ ವ್ಯಾಖ್ಯಾನದಿಂದ ಇವರ ರಾಜ್ಯವನ್ನು ಕಂಪಿಲಿ ಎಂದು ತಿಳಿಯಲಾಗಿತ್ತು. ಇತ್ತೀಚಿನ ಶೋಧಗಳಿಂದ ಕುಮ್ಮಟದುರ್ಗ ಇವರ ರಾಜಧಾನಿ ಎಂಬುದು ಸುಸ್ಪಷ್ಟವಾಗಿದೆ. ಕುಮ್ಮಟದುರ್ಗ, ಹೊಸಮಲೆದುರ್ಗ, ದೊರವಡಿ (ದರೋಜಿ), ಕಂಪ್ಲಿ, ಆನೆಗುಂದಿ ಇವರ ಆಳಿಕೆಯ ಪ್ರಮುಖ ಪಟ್ಟಣಗಳಾಗಿದ್ದವು.

3ನೆಯ ಸಿಂಗೆಯನಾಯಕ ಅವನ ಮಗ ಕಂಪಿಲರಾಯ ಅಥವಾ ಕಂಪಿಲದೇವ ಅನಂತರ ಅವನ ಮಗ ಕುಮಾರರಾಮ ಅಥವಾ ಕುಮಾರರಾಮನಾಥ ಇವರೆಲ್ಲರೂ ಹನ್ನೆಯ, ದೊರವಡಿ, ಕುಮ್ಮಟದುರ್ಗ ಮತ್ತು ಹೊಸಮಲೆದುರ್ಗಗಳಿಂದ ರಾಜ್ಯವಾಳಿದರು. ಕುಮ್ಮಟ ರಾಜ್ಯಸ್ಥಾಪಕನಾದ 3ನೆಯ ಸಿಂಗೆಯನಾಯಕನ ಪೂರ್ವಜರು ಯಾರು ಎಂದು ತಿಳಿದುಬಂದಿಲ್ಲ. ಸು.200 ವರ್ಷಗಳ ಅನಂತರ ನಂಜುಂಡ ಕವಿ ವಿರಚಿತ ರಾಮನಾಥ ಚರಿತೆ ಎಂಬ ಸಾಂಗತ್ಯದಲ್ಲಿ ಇವರ ಮೂಲ ಕುರಿತಂತೆ ಐತಿಹ್ಯವಿದೆ. ಸೇವುಣ ರಾಜಕುಮಾರನೊಬ್ಬ ಪುಳಿಂದ (ಬೇಡ) ಯುವತಿಯನ್ನು ಮದುವೆಯಾಗಿ ಬಹಿಷ್ಕಾರಕ್ಕೆ ಒಳಪಟ್ಟ. ಆಗ ಅವನು ಚಿತ್ರಕೂಟದ ದೊರೆಯಲ್ಲಿ ಆಶ್ರಯ ಪಡೆದ. ಈ ವಂಶದಲ್ಲಿ 3ನೆಯ ಸಿಂಗೆಯನಾಯಕನ ಜನನವಾಯಿತಂತೆ, ಆದರೆ ಇದಕ್ಕೆ ಯಾವುದೇ ಪುರಾವೆಗಳಿಲ್ಲ.

ಶಾಸನಗಳ ಪ್ರಕಾರ ಕುಮ್ಮಟ ಸು.11ನೆಯ ಶತಮಾನದಿಂದಲೇ ಅಸ್ತಿತ್ವದಲ್ಲಿತ್ತು. 1055ರ ಬನ್ನಿಗೋಳ (ರಾಯಚೂರು ಜಿಲ್ಲೆ) ಶಾಸನದಲ್ಲಿ, ಚಾಳುಕ್ಯ ಅರಸ 1ನೆಯ ಸೋಮೇಶ್ವರ ಬನ್ನಿಗೋಳಕ್ಕೆ ಬರುವಾಗ, ಮಾರ್ಗಮಧ್ಯದಲ್ಲಿ ವೈರಿಗಳ ವಶದಲ್ಲಿದ್ದ ಕುಮ್ಮಟ ಕೋಟೆಯನ್ನು ಮುಕ್ತಿಗೊಳಿಸಿದ. ಇದರಿಂದ ಕುಮ್ಮಟದಲ್ಲಿ ಆಗಲೇ ಒಂದು ಕೋಟೆಯಿದ್ದು, ಅದು ವೈರಿಗಳ ಅಧೀನವಾಗಿತ್ತು. ಬಹುಶಃ 1053ರಲ್ಲಿ ಚಾಳುಕ್ಯ ಮತ್ತು ಚೋಳರ ಮಧ್ಯ ಕೊಪ್ಪಮ್‌ನಲ್ಲಿ (ಕುಪ್ಪ) ಯುದ್ಧವಾಯಿತು. ಈ ಯುದ್ಧದಲ್ಲಿ ರಾಜೇಂದ್ರ ಚೋಳ ಕುಮ್ಮಟದ ಕೋಟೆಯನ್ನು ವಶಪಡಿಸಿಕೊಂಡಿರಬೇಕೆಂದು ಊಹಿಸಲಾಗಿದೆ. 12ನೆಯ ಶತಮಾನದ ವೇಳೆಗೆ ಇದು ಹೊಯ್ಸಳ ವಿಷ್ಣುವರ್ಧನ ಮತ್ತು ಬಲ್ಲಾಳರ ಆಡಳಿತಕ್ಕೆ ಒಳಪಟ್ಟಿತ್ತು. ಲಕ್ಷ್ಮೇಶ್ವರದ ಶಾಸನದಂತೆ, 3ನೆಯ ಸಿಂಗೆಯನಾಯಕ ಈ ಕೋಟೆಯನ್ನು ಹಿಡಿದುಕೊಂಡಿದ್ದ. ಅನಂತರ ಕಂಪಿಲದೇವ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ.

ದಕ್ಷಿಣ ಭಾರತದ ಮೇಲೆ 13ನೆಯ ಶತಮಾನದ ಕೊನೆಯ ಹಾಗೂ 14 ನೆಯ ಶತಮಾನದ ಆರಂಭದಲ್ಲಿ ಮುಸ್ಲಿಂ ಧಾಳಿಗಳು ಆರಂಭವಾದವು. ಆಗ ಕುಮ್ಮಟದ ನಾಯಕರು ಈ ಧಾಳಿಗಳನ್ನು ಸಮರ್ಥವಾಗಿ ಎದುರಿಸಿದರೂ ಯಶಸ್ಸು ಆಗಲಿಲ್ಲ. ಮುಂದೆ ವಿಜಯನಗರ ರಾಜ್ಯಸ್ಥಾಪನೆಯಾಗಿ, ಅವರೊಂದಿಗಿನ ಹೋರಾಟಗಳು ಮುಂದುವರೆದುಕೊಂಡು ಬಂದವು. ಇನ್ನೊಂದೆಡೆ ಹೊಯ್ಸಳ, ಸೇವುಣ ಮತ್ತು ಕಾಕತೀಯರು ತಮ್ಮ ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದರು.

3ನೆಯ ಸಿಂಗೆಯನಾಯಕ ಕುಮ್ಮಟದುರ್ಗದ ಮೊದಲ ರಾಜ. ಇವನು ದೊರವಡಿ, ಕಂಪಿಲಿ ಪ್ರದೇಶಗಳನ್ನು ಗೆದ್ದು, ಅನಂತರ ಕುಮ್ಮಟವನ್ನು ಆಕ್ರಮಿಸಿಕೊಂಡ. 1276ರಲ್ಲಿ ದ್ವಾರಸಮುದ್ರ ಬಳಿ ಬೆಳವಡಿಯಲ್ಲಿ ಸೇವುಣರಿಗೂ ಹೊಯ್ಸಳರಿಗೂ ಯುದ್ಧ ನಡೆಯಿತು. ಆಗ ಕುಮ್ಮಟದ ನಾಯಕ ಹೊಯ್ಸಳರ ಪರವಾಗಿ ಹೋರಾಡಿ ಸೇವುಣರನ್ನು ಹಿಮ್ಮೆಟ್ಟಿಸಿದ. ಕುರುಗೋಡಿನಲ್ಲಿ ನಡೆದ (1280) ಯುದ್ಧದಲ್ಲಿ ಸೇವುಣ ರಾಮಚಂದ್ರನ ಸೇನಾನಿ ಚಾವುಂಡರಸನನ್ನು ಕೊಂದ. 1288ರ ಸುಮಾರಿಗೆ ಹೊಯ್ಸಳ ಪಕ್ಷ ಬಿಟ್ಟು ಸೇವುಣರೊಂದಿಗೆ ಸ್ನೇಹ ಬೆಳೆಯಿತು. ಆದರೆ ಇವರಿಬ್ಬರ ಮಧ್ಯ ಕದನ ಮುಂದುವರೆದಿತ್ತು. ಶೂರ ಸೇನಾನಿಯಾದ 3ನೆಯ ಸಿಂಗೆಯನಾಯಕ ತನ್ನ ರಾಜ್ಯವನ್ನು ಹರಿಹರದವರೆಗೂ ವಿಸ್ತರಿಸಿದ.

ಸಿಂಗೆಯನಾಯಕನ ಅನಂತರ ಅವನ ಮಗ ಕಂಪಿಲದೇವ ಅಧಿಕಾರ ವಹಿಸಿಕೊಂಡ. ಇವನಿಗೆ ಖಂಡೇಯರಾಯ ಎಂಬ ಹೆಸರೂ ಇತ್ತು. ಕಂಪಿಲದೇವ ಎನ್ನುವ ಹೆಸರು ಕಂಪಿಲಿಯ ಆದಿ ದೈವದೊಡನೆ ಸಂಬಂಧಹೊಂದಿತ್ತು. ಕಂಪಿಲಿಯ ಆದಿದೈವ ಸೋಮೇಶ್ವರ ದೇವರ ಕೃಪೆಯಿಂದ 3ನೆಯ ಸಿಂಗೆಯನಾಯಕನಿಗೆ ಪುತ್ರನೊಬ್ಬ ಹುಟ್ಟಿದಾಗ, ಅವನಿಗೆ ಕಂಪಿಲರಾಯ ಎಂದು ಹೆಸರಿಡಲಾಯಿತೆಂಬ ಸಂಗತಿ ಚೆನ್ನರಾಯನ ಸಾಂಗತ್ಯದಲ್ಲಿದೆ.

ಹೊಯ್ಸಳರು ಮತ್ತು ಸೇವುಣರ ಮಧ್ಯೆ 1303ರಲ್ಲಿ ಹೊಳಲ್ಕೆರೆಯಲ್ಲಿ ನಡೆದ ಯುದ್ಧದಲ್ಲಿ, ಕಂಪಿಲದೇವ ಸೇವುಣರ ಪರವಾಗಿ ಹೋರಾಡಿ ಹೊಯ್ಸಳ 3ನೆಯ ಬಲ್ಲಾಳನ ಸಂಬಂಧಿ ಸೋಮಯ ದಂಡನಾಯಕನನ್ನು ಕೊಂದ. ಸೇವುಣ ರಾಮಚಂದ್ರನ ಮರಣದ ಅನಂತರ ಕಂಪಿಲದೇವ ತನ್ನ ರಾಜ್ಯವನ್ನು ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಅನಂತಪುರ, ರಾಯಚೂರು

ಜಿಲ್ಲೆಯ ಪ್ರದೇಶಗಳನ್ನೊಳಗೊಂಡಂತೆ ವಿಸ್ತರಿಸಿದ. 1314ರ ವೇಳೆಗೆ ಅಲಾವುದ್ದೀನ್ ಖಿಲ್ಜಿಯ ಸೇನಾನಿ ಧಾಳಿಯನ್ನು ಎದುರಿಸಬೇಕಾಯಿತು. 1320ರಲ್ಲಿ 3ನೆಯ ಬಲ್ಲಾಳ ಕಂಪಿಲದೇವನನ್ನು ಸೋಲಿಸಿ ದೋರವಡಿ ಮತ್ತು ಕಂಪಿಲಿಗಳನ್ನು ವಶಪಡಿಸಿಕೊಂಡ. ಇದಕ್ಕೆ ಆಧಾರವೆಂಬಂತೆ ಬಲ್ಲಾಳ ಹಂಪಿಯ ಹೊಸಪಟ್ಟಣದಲ್ಲಿದ್ದನೆಂದು ಶಾಸನ ತಿಳಿಸುತ್ತದೆ. ಮತ್ತೊಂದೆಡೆ ಕಾಕತೀಯ ಪ್ರತಾಪರುದ್ರನ ಧಾಳಿಯನ್ನು ಕುಮ್ಮಟದ ನಾಯಕರು ಎದುರಿಸಬೇಕಾಯಿತು. ಒಟ್ಟಾರೆ ಕುಮ್ಮಟ ರಾಜ್ಯ ಕಂಪಿಲದೇವನ ಕಾಲದಲ್ಲಿ ದೆಹಲಿ ಸುಲ್ತಾನರು, ಹೊಯ್ಸಳರು, ಸೇವುಣ ಹಾಗೂ ಕಾಕತೀಯರ ಪೈಪೋಟಿ ರಾಜ್ಯವಾಗಿತ್ತು.

**ಮುಸ್ಲಿಂ ಧಾಳಿಗಳು:** 1314–15ರಲ್ಲಿ ಮಲ್ಲಿಕ್ ಕಾಫರ್‌ನು ಕೈಗೊಂಡ ದಂಡಯಾತ್ರೆಯಲ್ಲಿ ಯಶಸ್ವಿಯಾಗಲಿಲ್ಲ. ಅನಂತರ ಮಹಮ್ಮದ್ ಬಿನ್ ತುಗಲಕ್‌ನ ಅಧಿಕಾರಿಗಳು ಒಡ್ಡಿದ ಕಪ್ಪಕಾಣಿಕೆಗಳ ಬೇಡಿಕೆಯನ್ನು ಕಂಪಿಲದೇವ ತಿರಸ್ಕರಿಸಿದ. ಈ ನಡುವೆ ಮಹಮ್ಮದ್ ಬಿನ್ ತುಗಲಕ್‌ನ ಸಹೋದರ ಸಂಬಂಧಿ ಬಹ–ಉದ್–ದೀನ್–ಗುರ್ಷಾಸ್ಪ್ ಎಂಬುವನು ಗುಲ್ಬರ್ಗ ಸಮೀಪದ ಸಗರದ ರಾಜ್ಯಪಾಲನಾಗಿದ್ದ. ಅವನು ವೈಯಕ್ತಿಕ ಕಾರಣಕ್ಕಾಗಿ ಸುಲ್ತಾನನ ವಿಷಯದಲ್ಲಿ ಅಸಮಾಧಾನ ಹೊಂದಿದ್ದು, ದೆಹಲಿ ಸಿಂಹಾಸನಕ್ಕೆ ತನ್ನ ಹಕ್ಕನ್ನು ಸಾಧಿಸಲು ಹೊರಟ. ಇವನ ದಂಗೆಯನ್ನಡಗಿಸಲು ಸುಲ್ತಾನ ತನ್ನ ಸಾಮಂತರಾದ ಗುಜರಾತಿನ ರಾಜ್ಯಪಾಲ ಮಲಿಕ್‌ಜಾದ್ ಮತ್ತು ದೇವಗಿರಿಯ ರಾಜ್ಯಪಾಲ ವಜೀರ್ ಅಜುರಿಜರನ್ನು ನೇಮಿಸಿದ. ಇವರ ಮಧ್ಯೆ ಗೋದಾವರಿ ತೀರದಲ್ಲಿ ಯುದ್ಧ ನಡೆದು ಬಹ–ಉದ್–ದೀನ್ ಸೋತು ತನ್ನ ಕುಟುಂಬದೊಂದಿಗೆ ಓಡಿ ಬಂದು ಕುಮ್ಮಟದಲ್ಲಿ ಆಶ್ರಯ ಪಡೆದುಕೊಂಡ. ಆಗ ಸುಲ್ತಾನನ ಸೈನ್ಯ ಮಲಿಕ್‌ಜಾದ್‌ನ ನೇತೃತ್ವದಲ್ಲಿ ಕುಮ್ಮಟ ಕೋಟೆಗೆ ಮುತ್ತಿಗೆ ಹಾಕಿತು. ದುರ್ಗಮವಾದ ಕುಮ್ಮಟದ ಕೋಟೆಯನ್ನು ಹಿಡಿಯುವಲ್ಲಿ ಮಲಿಕ್‌ಜಾದ್‌ನು ಎರಡು ಬಾರಿ ವಿಫಲನಾದರೂ ಕೊನೆಗೆ ಸಫಲನಾದ. ಇದರಿಂದ ಕಂಪಿಲದೇವ ಹೊಸದುರ್ಗದಲ್ಲಿ ರಕ್ಷಣೆ ಪಡೆದ. ಬಹ–ಉದ್–ದೀನ್ ಮತ್ತು ಆತನ ಕುಟುಂಬದವರನ್ನು ಸುರಕ್ಷಿತವಾಗಿ ದ್ವಾರಸಮುದ್ರಕ್ಕೆ ತಲುಪಿಸಿದ. ಸುಲ್ತಾನನ ಸೈನ್ಯ ಹೊಸದುರ್ಗವನ್ನು ಮುತ್ತಿಗೆ ಹಾಕಿದಾಗ ರಾಜನ ಆಜ್ಞೆಯ ಮೇರೆಗೆ ಆತನ ಹೆಂಡತಿಯರು ಮತ್ತು ಹೆಣ್ಣು ಮಕ್ಕಳು ಅಗ್ನಿಪ್ರವೇಶ ಮಾಡಿದರು. ಕಂಪಿಲದೇವ ಮತ್ತು ಮಗ ಕುಮಾರರಾಮ ಹೋರಾಡಿ ಮಡಿದರು. ಕುಮ್ಮಟ ದುರ್ಗದ ವೀರಗಲ್ಲು ಶಾಸನ, ಈ ಧಾಳಿಯಲ್ಲಿ ರಾಮನಾಯಕ ಮತ್ತು ಸಿಂಗ ಎಂಬ ವೀರರು ಹೋರಾಡಿ ಮಡಿದರೆಂದು ತಿಳಿಸುತ್ತದೆ.

ತನ್ನ ಆಳಿಕೆಯ ಬಹುಪಾಲು ಯುದ್ಧದಲ್ಲಿಯೇ ನಿರತನಾದ ಕಂಪಿಲದೇವ ಅನೇಕ ದಾನ ದತ್ತಿಗಳನ್ನು ಬಿಟ್ಟಿದ್ದಾನೆ. 1300ರ ಹರಿಹರ ಶಾಸನ, ಖಂಡೆರಾಯನು ದೇವಾಲಯ ವೊಂದಕ್ಕೆ ಹರಿಹರ ಗ್ರಾಮವನ್ನು ಪುನಃ ದತ್ತಿಯಾಗಿ ನೀಡಿದನೆಂದು ಉಲ್ಲೇಖಿಸುತ್ತದೆ. ಹಂಪೆಯ ಹೇಮಕೂಟ ದೇವಾಲಯವೊಂದರ ಶಾಸನ, 3ನೆಯ ಸಿಂಗೆಯನಾಯಕನ ಮಗನಾದ ಕಂಪಿಲದೇವ ಸಂಗಮೇಶ್ವರ ದೇವರ ಆರಾಧಕನಾಗಿದ್ದು, ತನ್ನ ತಾಯಿ ಮಾದಯನಾಯಕತಿ, ತಂದೆ ಸಿಂಗೆಯನಾಯಕ ಹಾಗೂ ಪೆರುಮೆಯನಾಯಕ ಇವರ ಜ್ಞಾಪಕಾರ್ಥವಾಗಿ ಮೂರು ಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿಸಿದನೆಂದು ಹೇಳಿದೆ.(ಪಿ.ಬಿ.ಡಿ.)

**ಕುಮಾರರಾಮ:** ಕುಮ್ಮಟರಾಜ್ಯದ ರಾಜಕುವರ ಕನ್ನಡನಾಡಿನ ಜನಪ್ರಿಯ ನಾಯಕರಲ್ಲೊಬ್ಬನಾದ ಇವನು ಶೌರ್ಯ ಪ್ರಾಮಾಣಿಕ ನಡತೆ, ತ್ಯಾಗಗಳಿಂದ ಪ್ರಸಿದ್ಧನಾಗಿದ್ದ. ಈತನನ್ನು ಕುರಿತು ಕನ್ನಡದಲ್ಲಿ ನಂಜುಂಡ ಕವಿಯ ಕುಮಾರರಾಮ ಚರಿತೆ (16ನೆಯ ಶತಮಾನ), ಪಾಂಚಳಗಂಗನ ಚೆನ್ನರಾಮ ಸಾಂಗತ್ಯ (7ನೆಯ ಶತಮಾನ) ಹಾಗೂ ಮಹಾಲಿಂಗಸ್ವಾಮಿಯ ಬಾಲರಾಮ ಸಾಂಗತ್ಯ (18ನೆಯ ಶತಮಾನ) ಗಳನ್ನು ರಚಿಸಿದ್ದಾರೆ. ಇವರು ತಾವು ಬರೆದಿರುವುದು ಕೇವಲ ನರಕೃತಿಗಳಲ್ಲ. ದೈವಾಂಶಸಂಭೂತ ಮಹಾಪುರುಷನ ಪುಣ್ಯಪ್ರದವಾದ ಕಥೆಯ ನಿರೂಪಣೆ ಎಂದು ತಿಳಿಸಿದ್ದಾರೆ. ಕುಮಾರರಾಮನ ಅಂತ್ಯ ಕಾಲಕ್ಕೆ ಸಂಬಂಧಪಟ್ಟ ಕೆಲವು ಅಂಶಗಳು ಸು.16ನೆಯ ಶತಮಾನದಲ್ಲಿ ಬಾಳಿದ ಬಸವಣ್ಣಯ್ಯನು ಬರೆದ ನವರತ್ನ ಮಾಲಿಕೆಯಲ್ಲಿವೆ.

ಸಾಹಿತ್ಯ ಗ್ರಂಥಗಳ ಪ್ರಕಾರ ಕುಮಾರರಾಮ ಕಂಪಿಲ ಮತ್ತು ಹರಿಹರ (ಹರಿಯಾಲದೇವಿ) ದೇವಿಯರ ವರಪುತ್ರ. ಈತನಿಗೆ ರಾಮನಾಥ, ರಾಮುಗ, ಚೆನ್ನಿಗರಾಮ ಎಂಬ ಹೆಸರುಗಳೂ ಉಂಟು. ಚಿಕ್ಕಂದಿನಿಂದಲೇ ಆಟ, ಪಾಠ, ಬೇಟೆ ಮುಂತಾದ ಸಮಸ್ತ ವಿದ್ಯೆಗಳಲ್ಲಿಯೂ ಪ್ರವೀಣನಾಗಿ ಕಂಪಿಲದೇವನಿಗೆ ಬಲಗೈಯಂತಿದ್ದ. ಕುಮ್ಮಟದುರ್ಗ ಮತ್ತು ಹೊಸಮಲೆದುರ್ಗಗಳಲ್ಲಿ ಪಾಳೆಯವನ್ನು ಸ್ಥಾಪಿಸಿಕೊಂಡು ಪ್ರಬಲನಾಗಿದ್ದ ಕಂಪಿಲದೇವನಿಗೆ ಹೊಯ್ಸಳ ವೀರಬಲ್ಲಾಳ, ಕಾಕತೀಯ ಪ್ರತಾಪರುದ್ರ ಮೊದಲಾದ ನೆರೆಯ ರಾಜರು ಶತ್ರುಗಳಾಗಿದ್ದರು. ಕುಮಾರರಾಮ ಈ ಅರಸರನ್ನೆಲ್ಲ ಹಿಮ್ಮೆಟ್ಟಿಸಿ, ಚಿಕ್ಕ ವಯಸ್ಸಿನಲ್ಲಿಯೇ ತುಂಬ ಯಶೋವಂತನಾದ. ಕ್ರಮೇಣ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡು ಬಲಿಷ್ಠನಾಗುತ್ತಿದ್ದ ಕಂಪಿಲದೇವನ ಮೇಲ್ಮೆಯನ್ನು ದೆಹಲಿಯ ಸುಲ್ತಾನ ಸಹಿಸದೆ ಹೋದ.

ಪರಾಕ್ರಮಿ ಮತ್ತು ಸ್ಫುರದ್ರೂಪಿ ಆಗಿದ್ದ ಕುಮಾರರಾಮನ ರೂಪಕ್ಕೆ ಮರುಳಾದ ದೆಹಲಿ ಸುಲ್ತಾನನ ಮಗಳು ಆತನನ್ನೇ ವರಿಸಬೇಕೆಂದು ಹಟ ತೊಟ್ಟಳು. ಸುಲ್ತಾನ ತನ್ನ ವಜೀರರ ಮೂಲಕ ಕಂಪಿಲನಿಗೆ ಹೇಳಿಕಳುಹಿಸಿದ. ಆದರೆ ಕುಮಾರರಾಮನಾಗಲೀ ಕಂಪಿಲನಾಗಲೀ ಈ ಸಲಹೆಗೆ ಒಪ್ಪಲಿಲ್ಲ. ಈ ನಿರಾಕರಣೆಯಿಂದ ಸುಲ್ತಾನನಿಗೆ ಅವಮಾನವಾದಂತಾಯಿತು. ಕಂಪಿಲ ಮತ್ತು ಅವನ ಮಗನ ಅಹಂಕಾರವನ್ನು ಅಡಗಿಸಬೇಕೆಂದು ನಿರ್ಧರಿಸಿದ. ಇದೇ ವೇಳೆಗೆ ಸುಲ್ತಾನನೊಂದಿಗೆ ವೈರತ್ವ ಕಟ್ಟಿಕೊಂಡಿದ್ದ ಬಾದೂರಖಾನನೆಂಬ ಸರದಾರ ತಲೆತಪ್ಪಿಸಿಕೊಂಡು ಬಂದು ಹಿಂದು ರಾಜರಲ್ಲಿ ಆಶ್ರಯ ಕೋರಿದ. ಆದರೆ ಸುಲ್ತಾನನ ನಿಷ್ಠುರಕ್ಕೆ ಹೆದರಿದ ಹಿಂದು ರಾಜರು ಅವನಿಗೆ ಆಶ್ರಯವೀಯಲು ಹಿಂದೆಗೆದರು. ಕುಮಾರರಾಮನ ಸಲಹೆಯ ಮೇರೆಗೆ ಕಂಪಿಲ ಮುಂದೆ ಬಂದು ಬಾದೂರಖಾನನಿಗೆ ಆಶ್ರಯವಿತ್ತ. ಈಗ ಸುಲ್ತಾನನಿಗೆ ಕಂಪಿಲನ ಮೇಲೆ ದಂಡೆತ್ತಿ ಬರಲು ಸಾಕಷ್ಟು ಕಾರಣ ಒದಗಿತು. ಸುಲ್ತಾನನ ಅಪ್ಪಣೆಯ ಮೇರೆಗೆ, ನೇಮಿ ಎಂಬಾತ ಸುತ್ತುಮುತ್ತಲಿನ ಪಾಳೆಯಗಾರರನ್ನು ಕೂಡಿಕೊಂಡು ಕುಮ್ಮಟದುರ್ಗವನ್ನು ಮುತ್ತಿದ. ಕಡುಗಲಿಯಾದ ಕುಮಾರರಾಮ ಆತನ ಸಹೋದರ ಸಮಾನನಾದ ಕಾಟಣ್ಣ ವೀರಾವೇಶದಿಂದ ಹೋರಾಡಿ ಶತ್ರುಗಳನ್ನು ಹಿಂದಕ್ಕಟ್ಟಿದರು.

ಈ ನಡುವೆ ಚಿಕ್ಕಮ್ಮ ರತ್ನಾಜಿ ಕುಮಾರರಾಮನನ್ನು ಮೋಹಿಸಿದಳು. ಪರನಾರಿ ಸಹೋದರನಾದ ಕುಮಾರರಾಮ ಅವಳ ಒಲವನ್ನು ನಿರಾಕರಿಸಿದ, ಅಪವಾದಕ್ಕೆ ಈಡಾದ. ರಾಜ ಮರಣದಂಡನೆ ವಿಧಿಸಿದ. ಮಂತ್ರಿ ಬೈಚಪ್ಪ ಕೊಂದನೆಂದು ಹೇಳಿ ಕುಮಾರರಾಮನನ್ನು ಗುಪ್ತವಾಗಿರಿಸಿದ. ಕುಮಾರರಾಮನ ಮರಣ ವೃತ್ತಾಂತದಿಂದ ಸುಲ್ತಾನ ಉತ್ತೇಜಿತನಾದ. ಎರಡನೆಯ ಬಾರಿ ಮುತ್ತಿಗೆ ಹಾಕಲು ಸನ್ನದ್ಧನಾದ. ಮುಸಲ್ಮಾನರು ದಂಡೆತ್ತಿ ಬರುತ್ತಿರುವ ಸುದ್ದಿಯನ್ನು ಗಡಿ ಕಾಯುತ್ತಿದ್ದ ಚಾರರು ಕಂಪಿಲನಿಗೆ ತಿಳಿಸಿದೊಡನೆಯೇ ವೃದ್ಧರಾಜ ಚಿಂತಾಕ್ರಾಂತನಾದ. ಬೈಚಪ್ಪನನ್ನು ಕರೆದು ಮಂತ್ರಾಲೋಚನೆ ಮಾಡಿದ. ಬೈಚಪ್ಪನ ಹಿತೋಕ್ತಿಗಳನ್ನು ಅಲ್ಲಗಳೆಯಲಾರದೆ ಕುಮಾರರಾಮ ವೇಷಮರೆಸಿಕೊಂಡು, ತನ್ನ ನೆಚ್ಚಿನ ಕುದುರೆಯಾದ ಬೊಲ್ಲನನ್ನು ಏರಿ ರಣರಂಗದತ್ತ ಧಾವಿಸಿದ. ಶತ್ರುಸೈನಿಕರೊಂದಿಗೆ ವೀರಾವೇಶದಿಂದ ಕಾದಾಡಿ, ಅವರನ್ನು ಬಡಿದೋಡಿಸಿ, ಕುಮ್ಮಟದುರ್ಗಕ್ಕೆ ಪ್ರಾಪ್ತವಾಗಿದ್ದ ಕಂಟಕವನ್ನು ಪರಿಹರಿಸಿದ. ಯುದ್ಧದಲ್ಲಿ ಜಯವಾದ ಬಳಿಕ ಬೈಚಪ್ಪ ವೇಷಮರೆಸಿಕೊಂಡಿದ್ದ ಕುಮಾರರಾಮನನ್ನು ಕಂಪಿಲನ ಬಳಿಗೆ ಕರೆತಂದ. ಪರಾಭವದಿಂದ ಕ್ರೋಧಗೊಂಡ ಸುಲ್ತಾನ ಕಂಪಿಲನಿಗೆ ಪರಮಾನಂದವಾಯಿತು. ಸಮಯೋಚಿತವಾದ ಚಾತುರ್ಯಕ್ಕೆ ಬೈಚಪ್ಪನನ್ನು ಶ್ಲಾಘಿಸಿದ. ಕಂಪಿಲನ ಹೆಸರನ್ನೇ ಅಳಿಸುವುದಾಗಿ ಶಪಥ ಮಾಡಿದ. ಮಾತಂಗಿ ಎಂಬಾಕೆ ತನಗೆ ಸಾಕಷ್ಟು ಸೈನ್ಯವನ್ನು ಸಜ್ಜುಗೊಳಿಸಿಕೊಟ್ಟರೆ, ಕುಮಾರರಾಮನನ್ನು ಸಂಹರಿಸಿ, ಆತನ ತಲೆಯನ್ನು ತಂದುಕೊಡುವುದಾಗಿ ಪ್ರತಿಜ್ಞೆ ಮಾಡಿದಳು. ಅದರಂತೆ ಸುಲ್ತಾನ ಸೈನ್ಯಸಜ್ಜುಗೊಳಿಸಿಕೊಟ್ಟ. ಯುದ್ಧ ನಡೆದು ಯುದ್ಧದಲ್ಲಿ ಕುಮಾರರಾಮ ಮಾತಂಗಿ ಯಿಂದ ಹತನಾದ. ಮಾತಂಗಿ ಕುಮಾರರಾಮನ ರುಂಡವನ್ನು ಚಾರರ ಮೂಲಕ ದೆಹಲಿಗೆ ಕಳುಹಿಸಿಕೊಟ್ಟಳು. ಅದನ್ನು ಕಂಡು ಸುಲ್ತಾನನಿಗೆ ಪರಮಾನಂದವಾಯಿತು. ಆದರೆ ಆತನ ಮಗಳಾದ ಬಾಬಮ್ಮ ಈ ದಾರುಣ ವೃತ್ತಾಂತವನ್ನು ಕೇಳಿ ಹತಾಶಳಾಗಿ ಪ್ರಾಣ ತ್ಯಜಿಸಿದಳು.

ಕುಮಾರರಾಮನ ಕತೆಯಲ್ಲಿರುವ ಐತಿಹಾಸಿಕ ಸಂಗತಿಗಳನ್ನು ಬೆಳಕಿಗೆ ತರಲು ವಿದ್ವಾಂಸರಿಂದ ಸಾಕಷ್ಟು ಪ್ರಯತ್ನಗಳು ನಡೆದಿವೆ. ಇಬ್ನಬತೂತ, ನ್ಯೂನಿಜ್, ಫೆರಿಷ್ತ, ಇಸಾಮಿ ಮೊದಲಾದವರ ಉಲ್ಲೇಖಗಳಲ್ಲಿ ಕುಮ್ಮಟದುರ್ಗದ ದುರಂತ ವೃತ್ತಾಂತದ ಕಥೆ ಅಲ್ಪಸ್ವಲ್ಪ ತಿಳಿದುಬರುತ್ತದೆ. ಕುಮಾರರಾಮನ ಸಾಂಗತ್ಯವನ್ನು ಬರೆದಿರುವ ಪ್ರತಿಯೊಬ್ಬ ಕವಿಯೂ ತನ್ನ ಕಾವ್ಯವನ್ನು ನರಚರಿತ್ರೆಯೆಂದು ಅಲ್ಲಗಳೆಯಬಾರದೆಂದೂ ಅದು ಪರನಾರಿ ಸೋದರನೊಬ್ಬನ ವೀರಕಥಾನಕವೆಂದೂ ಅಲ್ಲಿ ಪ್ರತಿಪಾದಿತವಾಗಿರುವ ಶೌರ್ಯ ಮತ್ತು ಶುಚಿತ್ವಗಳು ಆದರ್ಶಪ್ರಾಯವಾದ ಸದ್ಗುಣಗಳೆಂದೂ ಬಿನ್ನವಿಸಿಕೊಂಡಿರುವುದನ್ನು ಗಮನಿಸಿದರೆ, ಕುಮಾರರಾಮ ಕಲ್ಪಿತ ವ್ಯಕ್ತಿಯಲ್ಲವೆಂಬುದು ದೃಢವಾಗುತ್ತದೆ. ಈತನನ್ನು ಕುರಿತ ಶಾಸನಗಳು ಧಾರವಾಡ ಜಿಲ್ಲೆಯ ಸಂಗೂರು, ಬಳ್ಳಾರಿ ಜಿಲ್ಲೆಯ ರಾಮಘಡ, ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮುಂತಾದ ಕಡೆಗಳಲ್ಲಿ ಲಭಿಸಿವೆ. ರಾಮಘಡದ ಶಾಸನದಲ್ಲಿ 3ನೆಯ ಸಿಂಗನ ಮಗನಾದ ಕಂಪಿಲರಾಯ ಮತ್ತು ಆತನ ಹೆಂಡತಿ ಹರಿಹರದೇವಿಯರ ಪುತ್ರ ರಾಮನಾಥ ಒಡೆಯರು ಎಂಬ ವಂಶಾವಳಿ ಸ್ಪಷ್ಟವಾಗಿದೆ.

ಕುಮಾರರಾಮನ ಹೆಸರು ಇಂದಿಗೂ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಲಿತವಾಗಿದೆ. ಕುಮ್ಮಟದುರ್ಗದಲ್ಲಿ (ಗಂಗಾವತಿ ತಾಲ್ಲೂಕು) ಪ್ರತಿವರ್ಷವೂ ವೈಶಾಖ ಶುಕ್ಲ ಪೌರ್ಣಿಮೆಯಂದು ಕುಮಾರರಾಮನ ಜಾತ್ರೆ ನಡೆಯುತ್ತದೆ. ಅಲ್ಲದೆ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲೂ ಕುಮಾರರಾಮನ ಜಾತ್ರೆಯ ಆಚರಣೆಗಳನ್ನು ಕಾಣಬಹುದು. ಈತನ ಪೂಜೆಗಾಗಿ ದೇವಾಲಯಗಳನ್ನು ನಿರ್ಮಿಸಿದ ಉಲ್ಲೇಖ ಶಾಸನಗಳಲ್ಲಿದೆ. ಈತ ಪರನಾರಿಸೋದರತ್ವದ ಪ್ರತೀಕವಾದ ದೈವಾಂಶಪುರುಷನಾಗಿ, ಜನಮನದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾನೆ.

ಕುಮ್ಮಟ ರಾಜ್ಯದ ನಾಯಕರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಕುಮ್ಮಟದುರ್ಗ ಮತ್ತು ಕುಮಾರರಾಮನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಹೊಸಮಲೆ ದುರ್ಗಗಳಲ್ಲಿರುವ ಅವಶೇಷಗಳು ಚಾರಿತ್ರಿಕ ಮಾಹಿತಿಯನ್ನೊದಗಿಸುತ್ತವೆ. ಕುಮ್ಮಟದ ಕೋಟೆ, ಕುಮಾರರಾಮನ ಬೆಟ್ಟ ಹಾಗೂ ಮಾದಿಗ ಹಂಪಯ್ಯನ ಬೆಟ್ಟಗಳನ್ನೊಳಗೊಂಡಂತೆ ಎರಡು ಸುತ್ತುಗಳಲ್ಲಿ ಕಟ್ಟಿಸಲಾಗಿದೆ. ಇವುಗಳೊಂದಿಗೆ ಸಂಬಂಧ ಬೆರೆಯುವಂತೆ, ಹನುಮಂತನ ಬೆಟ್ಟ, ಬೊಲ್ಲನ ಬೆಟ್ಟ, ಗುಲಗಂಜಿ ಬೆಟ್ಟಗಳಲ್ಲಿ ಸು.6 ಕೋಟೆ ಸುತ್ತುಗಳಿವೆ. ಕುಮಾರರಾಮನ

ಬೆಟ್ಟದಲ್ಲಿ ಅರಮನೆಯ ಅವಶೇಷಗಳು, ದಿಬ್ಬಗಳು, ಜೈನ ಬಸದಿ, ರಾಮಸ್ವಾಮಿ, ಆಂಜನೇಯ ದೇವಾಲಯಗಳು, ರಾಮನ ದೋಣೆ ಎಂಬ ಪ್ರಾಕೃತಿಕ ತೊಟ್ಟಿಗಳಿವೆ. ಕುಮಾರರಾಮ ಬೆಟ್ಟದ ಸುತ್ತಮುತ್ತು ಪರಿಸರದಲ್ಲಿ ಕುದುರೆಕಲ್ಲು, ಆನೆಲಾಯ, ಕಾಗಿರಾಮನ ಕಲ್ಲು, ಈಶ್ವರಗುಡಿ, ಬೈಚಪ್ಪನ ಗುಡಿ, ಕಾಟಪ್ಪನ ಗುಡಿ ಹಾಗೂ ವಕ್ರಾಣಿಕೆರೆ, ಬೊಲ್ಲನಕೆರೆ, ಮಾದಿಗ ಹಂಪಯ್ಯನಕೆರೆ ಮುಂತಾದವುಗಳಿವೆ. ಇವುಗಳಲ್ಲಿ ಕೆಲವು ಇಂದಿಗೂ ಸಾಂಪ್ರದಾಯಿಕ ಪೂಜೆಗೊಳ್ಳುತ್ತಿವೆ. ಹೊಸಮಲೆದುರ್ಗ ಸಂಡೂರ ಪ್ರಾಂತಕ್ಕೆ ಸೇರಿದೆ. ಈ ಕೋಟೆಯ ಬಗ್ಗೆ ನಂಜುಂಡಕವಿ ತನ್ನ ರಾಮನಾಥ ಚರಿತ್ರೆಯಲ್ಲಿ ಸಾಕಷ್ಟು ವಿವರಣೆ ನೀಡಿದ್ದಾನೆ. ಕೋಟೆಯನ್ನು ರಾಮಘಡ ಎಂದು ಕರೆಯಲಾಗಿದೆ. ಇಲ್ಲಿ ಕಲ್ಲಿನ ಹಜ್ಜೆ ನೆಲಮಾಳಿಗೆ, ಕಾಟಣ್ಣನ ಶಿಲ್ಪ, ವೀರಗಲ್ಲು ಮುಂತಾದವು ಕುಮ್ಮಟದುರ್ಗದಲ್ಲಿದ್ದ ಹೆಸರಿನಂತಿವೆ. ಕೃಷ್ಣದೇವರಾಯನ (1527) ಕಾಲದಲ್ಲಿ ರಾಮನಾಥನ ಹೆಸರಿನಲ್ಲಿ ಗೋಪಾಯಿ ಹಾಗೂ ತಮ್ಮ ರಾಯಣನೂ ಸೇರಿ ದೇವಾಲಯ ನಿರ್ಮಿಸಿದ್ದಾರೆ. ಅನಂತರ ಬ್ರಿಟಿಷರ ಕಾಲದಲ್ಲಿ ನಿರ್ಮಾಣಗೊಂಡ ಅನೇಕ ಕಟ್ಟಡ ಅವಶೇಷಗಳು ಇಲ್ಲಿವೆ. (ವಿ.ಬಿ.)

**ಕೊಂಗಾಳ್ವರು:** ಪ್ರಾಚೀನ ಕರ್ನಾಟಕದಲ್ಲಿ ಅರಕಲಗೂಡು–ಕೊಡಗು ಪ್ರದೇಶಗಳನ್ನೊಳಗೊಂಡಿದ್ದ ಕೊಂಗನಾಡಿನ ಅರಸರು. ಇವರ ಮೂಲ ಪುರುಷ ಮನಿಜ. ಸು.1004ರಲ್ಲಿ ಹನಸೋಗೆಯ ಕದನದಲ್ಲಿ ಚೆಂಗಾಳ್ವರನ್ನು ಸೋಲಿಸಿದ ಮನಿಜ ಮಹಾರಾಯನಿಗೆ ಕ್ಷತ್ರೀಯ ಶಿಖಾಮಣಿ ಕೊಂಗಾಳ್ವ ಎಂಬ ಬಿರುದಿನೊಂದಿಗೆ ಈ ಪ್ರದೇಶದ ಆಳಿಕೆಯನ್ನು ಚೋಳರ ರಾಜರಾಜ ವಹಿಸಿಕೊಟ್ಟಿರುವುದರಿಂದ ಈ ವಂಶದ ಅರಸರಿಗೆ ಕೊಂಗಾಳ್ವರೆಂದು ಹೆಸರಾಯಿತು. ಗಂಗರಸರ ಕಾಲದಿಂದಲೆ ಕೊಜ್ಜುಗಣಿ ಎಂಬ ಉಪಾಧಿ ಕೊಜ್ಜಳ್ನಾಡು ಆಡಳಿತ ಘಟಕವಿದ್ದುವು. ಕೊಜ್ಜು ಅಥವಾ ಕೊಂಗು ಎಂದರೆ ಅಡಿಕೆ ಎಂದರ್ಥ. ಇಂಥ ಪ್ರದೇಶದಿಂದ ಈ ಮನೆತನದವರು ಬಂದಿದ್ದು ಆಡಳಿತಗಾರರಾದ್ದರಿಂದ ಇವರಿಗೆ ಕೊಂಗಾಳ್ವರೆಂದು ಹೆಸರು ಬಂದಿರಬಹುದು. ಪ್ರಾಯಶಃ ಈ ಕಾರಣದಿಂದಲೇ ಚೋಳ ರಾಜರಾಜನು ಮನಿಜನನ್ನು ಕೊಂಗಾಳ್ವನೆಂದು ಹೆಸರಿಸಿದನೆಂದು ಕಾಣುತ್ತದೆ.

ಕೊಂಗಾಳ್ವರು ತಮ್ಮನ್ನು ಸೂರ್ಯವಂಶೀಯರೆಂದು ಹೇಳಿಕೊಂಡಿದ್ದಾರೆ. ಇದನ್ನು ಅದಟರಾದಿತ್ಯ ಚೈತ್ಯಾಲಯ, ಆದಿತ್ಯ ದೇಗುಲ ಇತ್ಯಾದಿ ನಾಮಾಂಕಿತಗಳು ಪುಷ್ಟೀಕರಿಸುತ್ತವೆ. ವೆಂಗಿ ಮತ್ತು ಗಂಗ ಮಂಡಲಗಳ ಮಹಾದಂಡನಾಯಕ ಪದವಿಯನ್ನೂ ಈತನಿಗೆ ನೀಡಲಾಗಿತ್ತು. ಇವನು ಮಲಬಾರ್ ಪ್ರದೇಶದಲ್ಲಿ ಚೇರಮನನ್ನೂ ಸೋಲಿಸಿದುದಾಗಿ ತಿಳಿದುಬರುತ್ತದೆ. ಇವನ ಅನಂತರದ ದೊರೆಗಳಲ್ಲಿ ತ್ರಿಭುವನಮಲ್ಲ ಕೊಂಗಾಳ್ವ (1079–1105) ಚೆಂಗಾಳ್ವರನ್ನು ಸದೆಬಡಿದ. ದೊಡ್ಡ ಮಲ್ಲದೇವ ದೇವಾಲಯವನ್ನು ನಿರ್ಮಿಸಿ ದಾನಧರ್ಮಗಳನ್ನು ಮಾಡಿ ಹೆಸರುಗಳಿಸಿದ್ದ. ಸು. 1115ರಲ್ಲಿ ಆಳುತ್ತಿದ್ದ ವೀರ ಕೊಂಗಾಳ್ವ ಸತ್ಯವಾಕ್ಯನೇ ಜಿನಾಲಯದ ನಿರ್ಮಾತ. ಈ ವಂಶದ ತ್ರಿಭುವನಮಲ್ಲ ವೀರ ದೊಡ್ಡ ಕೊಂಗಾಳ್ವ (1171–77) ಹೊಯ್ಸಳರ ಆಕ್ರಮಣವನ್ನು ಹಿಮ್ಮೆಟ್ಟಿಸಿದ.

ಕೊಂಗಾಳ್ವರು ಜೈನಧರ್ಮೀಯರು. ಕೊಡಗಿನ ವಾಣಿಜ್ಯ ಕೇಂದ್ರ ಅಂಜನಗಿರಿಯ ಜೈನ ಬಸದಿಯಲ್ಲಿ ಶಾಂತಿನಾಥ ದೇವರ ಹಾಗೂ ಕಲಕಂದೂರಿನ ಜೈನ ಬಸದಿಯಲ್ಲಿ ಮಾಣಿಕ ದೇವರ ಪ್ರತಿಷ್ಠೆ ದೊಡ್ಡ ಕಣಗಾಲದ ಪ್ರಭಾಚಂದ್ರ ದೇವರ ಬಸದಿ ನಿರ್ಮಾಣ, ಇವರ ಕನ್ನಡ ಶಾಸನಗಳಲ್ಲಿ ಕಾಣಬರುವ ಜೈನಗುರುಗಳ ಸ್ಮರಣೆ ಇವೆಲ್ಲ ಇದಕ್ಕೆ ಸಾಕ್ಷಿಯಾಗಿವೆ. ಮತ್ತು ಬಳಸಿದ ಕನ್ನಡ ಭಾಷೆಯಲ್ಲಿ ಕನ್ನಡ ದೇಸಿಯತೆಯನ್ನು ಕಾಣಬಹುದು. ಇವರ ಆಳಿಕೆಯ ಕೊನೆಯಲ್ಲಿ ಇವರು ಶೈವಾರಾಧಕರಾದಂತೆ ಕಾಣುತ್ತದೆ. ಕೊಡಗಿನ ಮನೆತನ ಪದಗಳಲ್ಲಿ ಕೊಂಗೀರಂಡ, ಕೊಂಗೇಟರ ವ್ಯಕ್ತಿ / ಗ್ರಾಮಗಳ ಹೆಸರುಗಳಲ್ಲಿ ಕೊಂಗಳಾಚಾರಿ, ಹೆಣ್ಣಿಕೊಂಗಳಿ ಮುಂತಾದವು ಕೊಂಗಾಳ್ವ ಅರಸು ಮನೆತನದ ಪ್ರಭಾವ ಉಳಿದು ಬಂದಂತೆ ಕಾಣುತ್ತದೆ.

ಶೈವ–ವೈಷ್ಣವ ಸಮನ್ವಯದ ಸಂಕೇತವಾಗಿ ವೀರಭದ್ರನ ಗುಡಿ ಹಾಗೂ ಶ್ರೀರಂಗನಾಥನ ಸಣ್ಣಗುಡಿಯನ್ನು ನಿರ್ಮಿಸಿದರು. ಇದೇ ಕೊಡಗು ಶ್ರೀರಂಗಪಟ್ಟಣವೆನಿಸಿತು. ಚೋಳ ಪ್ರತಿಷ್ಠಾವೀರಭದ್ರ ಗುಡಿಯನ್ನು ಚೋಳ ದಂಡನಾಯಕ ಪಂಚವನ್ ಮಹಾರಾಯ ಕಟ್ಟಿಸಿದ. ಪಂಚಲಿಂಗೇಶ್ವರ ದೇವಾಲಯವನ್ನು ಕಾಡಿನಲ್ಲಿ ನಿರ್ಮಿಸಿದ. ಹೊಯ್ಸಳ ಸೇನಾಧಿಪತಿ ಫಣೀಶನು 1116 ರಲ್ಲಿ ವೀರಕೊಂಗಾಳ್ವನನ್ನು ಸೋಲಿಸಿ ಹೊಯ್ಸಳ ಸಾಮಂತನನ್ನಾಗಿಸಿದ. ಕೊಂಗಾಳ್ವನು ತನ್ನ ಪುತ್ರಿ ಚಂದಲಾದೇವಿಯನ್ನು ಹೊಯ್ಸಳ ವಿಷ್ಣುವರ್ಧನನಿಗೆ ಮದುವೆಮಾಡಿಕೊಟ್ಟ. 1117ರಲ್ಲಿ ಕೊಂಗಾಳ್ವ ರಾಜಕುಮಾರಿ ಪದುಮಲದೇವಿ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ರಾಣಿಯಾಗಿದ್ದಳು. ಹೀಗಾಗಿ ಹೊಯ್ಸಳ ಮತ್ತು ಕೊಂಗಾಳ್ವರಲ್ಲಿ ವೈವಾಹಿಕ ಸಂಬಂಧ ಬೆಳೆದಿತ್ತು. ಹೊಯ್ಸಳರ ಪತನಾನಂತರ ಸು.1390ರಲ್ಲಿ ಈ ವಂಶದ ರಾಜರು ವಿಜಯನಗರ ಸಾಮ್ರಾಜ್ಯದಲ್ಲಿ ವಿಲೀನರಾದರು. (ಎನ್.ಎಂ.ಜಿ.)

**ಉದ್ಧರೆಯ ಅರಸರು:** ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಉದ್ಧರೆ ಗ್ರಾಮದಲ್ಲಿ ಸು.11ನೆಯ ಶತಮಾನದ ಅಂತ್ಯದಿಂದ 13ನೆಯ ಶತಮಾನದವರೆಗೆ ಆಡಳಿತ ನಡೆಸಿದ ಸಾಮಂತ ಮನೆತನ. ಪ್ರಾಚೀನ ವಿಭಾಗದಲ್ಲಿ ಜಿಡ್ಡುಳಿಗೆ70ಕ್ಕೆ ಸೇರಿದ್ದ ಉದ್ರಿಯನ್ನು ಸು. 20ಕ್ಕೂ ಹೆಚ್ಚು ಶಾಸನಗಳು ಬಹು ವಿಧವಾಗಿ ವರ್ಣಿಸಿವೆ. ಕೆಲವು ಕಾಲ ಜಿಡ್ಡುಳಿಗೆ ಪ್ರಾಂತ್ಯದ ರಾಜಧಾನಿಯಾಗಿ, ಅಗ್ರಹಾರವಾಗಿ ಪ್ರಸಿದ್ಧವಾಗಿತ್ತು. ಇಲ್ಲಿ ಕೋಳಾಲ ಪುರವರಾಧೀಶ್ವರ, ಮಹಾಮಂಡಳೇಶ್ವರ, ಗಂಗಮಾರ್ತಾಂಡ ಮುಂತಾಗಿ ಹೆಸರಿಸಿಕೊಂಡಿರುವ ಗಂಗವಂಶದ ಕವಲೊಂದು 11ನೆಯ ಶತಮಾನದ ಅಂತ್ಯದಿಂದ 13ನೆಯ ಶತಮಾನದವರೆಗೂ ಆಳಿಕೆ ನಡೆಸಿದ್ದುದಕ್ಕೆ ಶಾಸನಾಧಾರಗಳಿವೆ. ಹೀಗೆ ಆಳಿಕೆ ನಡೆಸಿದ ಪ್ರಮುಖರೆಂದರೆ: ಮೊದಲ ರಾಜ ಬಿಟ್ಟಿಗ, ಅನಂತರ ಈತನ ಮಗ ಮಾರಸಿಂಗ, ಕೀರ್ತಿದೇವ, ಈತನ ಮಗ ಎರಡನೆಯ ಮಾರಸಿಂಗ ಇವನ ಮಗ ಮೊದಲನೆಯ ಎಕ್ಕಲದೇವ, ಈತನ ಪಟ್ಟದ ರಾಣಿ ಬೊಪ್ಪಾದೇವಿ, ತಂಗಿ ಚಟ್ಟಲದೇವಿ, ಈಕೆಯ ಮಕ್ಕಳಾದ ಎರಗ, ಕೇಶವ, ಮಾರಸಿಂಗ, ಮಾರಸಿಂಗನ ಮಗ ಎರಡನೆಯ ಎಕ್ಕಲ. ಇವರು ಕಲ್ಯಾಣಿ ಚಾಳುಕ್ಯ, ಹೊಯ್ಸಳ, ಸೇವುಣರ ಸಾಮಂತರಾಗಿದ್ದರು.

ಇವರ ಆಳಿಕೆ ಹೊತ್ತಿಗೆ ಎಕ್ಕಲರಸ ಪೋಷಣೆ ನೀಡಿದ ಬ್ರಹ್ಮಪುರಿ ಉದ್ಧರೆಯಲ್ಲಿತ್ತು. ಇಲ್ಲಿಯ ಬ್ರಹ್ಮಪುರಿ ವೈಜನಾಥ ಭಟ್ಟೋಪಾಧ್ಯಾಯರ ನೇತೃತ್ವದೊಂದಿಗೆ ವಿಷ್ಣುಭಟ್ಟ, ಗೋವಿಂದ ಕ್ರಮಿತ, ಕಾವದೇವ, ಚಂದ್ರಭಟ್ಟ, ಭಾಸ್ಕರಭಟ್ಟ, ವಾಸುದೇವಭಟ್ಟ ಹಾಗೂ ದಾಮೋದರರೆಂಬ ಪಂಡಿತರಿದ್ದ ಬಗ್ಗೆ ಉಲ್ಲೇಖವಿದೆ.

ದಂಡನಾಯಕ ಮಹಾದೇವನ ಪತ್ನಿ ಲೋಕಲದೇವಿಯನ್ನು ಇಲ್ಲಿಯ ಒಂದು ಶಾಸನದಲ್ಲಿ ಹೆಸರಿಸಿದೆ. ಇವಳ ಜಿನ ಧರ್ಮದ ಅಪರಿಮಿತ ಸೇವೆಯನ್ನು ಸ್ಮರಿಸಿ ದಾನಚಿಂತಾಮಣಿ ಅತ್ತಿಮಬ್ಬೆಗೆ ಹೋಲಿಸಲಾಗಿದೆ. ಮಹಾದೇವ ಉದ್ಧರೆಯಲ್ಲಿ ಎರಗ ಜಿನಾಲಯ ಕಟ್ಟಿಸಿದ ವಿಷಯ ಶಾಸನದಲ್ಲಿ ಉಲ್ಲೇಖಗೊಂಡಿದೆ.

ಉದ್ಧರೆಯ ಅರಸರು ಸರ್ವಧರ್ಮ ಸಮನ್ವಯಕ್ಕೆ ಆಶ್ರಯ ನೀಡಿದ್ದರೆನ್ನಲು ಇಲ್ಲಿಯ ವಿವಿಧ ಮತಗಳ ದೇವಾಲಯಗಳು ಇಂದಿಗೂ ಸಾಕ್ಷಿಗಳಾಗಿವೆ. ಇಲ್ಲಿ ಇವರ ಕಾಲದ ಜೈನ ಬಸದಿ, ಲಕ್ಷ್ಮೀನಾರಾಯಣ ದೇಗುಲ, ಬೃಹತ್ ಶೈವ ಯಕ್ಷರ ಪ್ರತಿಮೆ, ಬೋಪೇಶ್ವರ ದೇಗುಲ, ಸಿಂಗೇಶ್ವರ ದೇಗುಲಗಳು ಸಾಕ್ಷಿಯಾಗಿವೆ. ಸನಿಹದ ಕೆಲವು ಹಳ್ಳಿಗಳಲ್ಲಿಯೂ ಇವರ ಕಾಲದ್ದೆನ್ನಬಹುದಾದ ಅನೇಕ ದೇಗುಲ, ಮೂರ್ತಿಶಿಲ್ಪಗಳಿವೆ. (ಯು.ಬಿಬಿ.)

**ತೊರಗಲ್ಲಿನ ಮಹಾಮಂಡಳೇಶ್ವರರು:** ಪ್ರಾಚೀನ ಕಾಲದ ಸಾಂಸ್ಕೃತಿಕ ದ್ವಾರವಾದ ಕುಹುಂಡಿ 3000 ಪ್ರಾದೇಶಿಕ ಪ್ರಮುಖ ನಾಡು. ಉತ್ತರಕ್ಕೆ ಕೃಷ್ಣ, ದಕ್ಷಿಣಕ್ಕೆ ಮಲಪ್ರಭ, ಪೂರ್ವಕ್ಕೆ ತೊರಗಲ್ಲು ನಾಡು ಹರಡಿದೆ. ಪ್ರಾಚೀನ ಕರ್ನಾಟಕದಲ್ಲಿ ತೊರಗಲೆ 6000 ಗ್ರಾಮ ವ್ಯಾಪ್ತಿಯ ಪ್ರದೇಶ. ಕಾಲಾಂತರದಲ್ಲಿ ತೊರಗಲೆ 60 ಗ್ರಾಮ ವ್ಯಾಪ್ತಿಗೆ ಬಂದಿದೆ. ಅನೇಕ ರಾಜಮನೆತನಗಳಿಗೆ ಆಶ್ರಯ ತಾಣವಾದ ಈ ಪ್ರದೇಶ ರಾಷ್ಟ್ರಕೂಟರ ಕಾಲದಲ್ಲಿ ಲೋಕಾಪುರ 12, ಹೊಳಲುಗುಂದ 30, ನಲಗುಂದ 40, ಕೊಳನೂರು 30 ದೊಡವಾಡ ಪಟ್ಟಣ ಇವು ಆಡಳಿತ ವಿಭಾಗಗಳು.

ಚಾಳುಕ್ಯ ಮನೆತನದ ದಶವರ್ಮ ಭಾಗಲದೇವಿಯರ ಸುಪುತ್ರಿ ಅಕ್ಕಾದೇವಿ. ಈಕೆ ಬಂಕಾಪುರ ಕದಂಬ ಮಯೂರವರ್ಮನ ರಾಣಿ. ಅಂದು ಅಕ್ಕಾದೇವಿಯ ಆಳ್ವಿಕೆಯ ನಾಡು ತೊರಗಲ್ಲು. ಚಾಳುಕ್ಯರ ತರುವಾಯ ತೊರಗಲ್ಲ ಮಹಾಮಂಡಳೇಶ್ವರರು, ದೇವಗಿರಿ ಸೇವುಣರು, ವಿಜಯನಗರ ವಿಜಾಪುರದ ಸುಲ್ತಾನರು, ಮರಾಠ ಅರಸರು, ಕೊಕಟನೂರು, ತೊರಗಲ್ಲ ಪರಗಣೆ, ಸಿಂಧೆ ದೇಶಗತಿಗಳ ಒಡೆತನ– ಹೀಗೆ ಹಲವರ ಆಡಳಿತಕ್ಕೆ ಒಳಪಟ್ಟು ಸಂಸ್ಕೃತಿ ಕಲೆಗಳಿಗೆ ಸತ್ವಪೂರ್ಣ ತಾಣವೆನಿಸಿ, ಶರಣರ ದಂಡಿನ ದಾರಿಯ ತಂಗುದಾಣವಾಗಿ ತೊರಗಲ್ಲು ಮಹತ್ತರ ಸ್ಥಾನ ಪಡೆದಿದೆ.

ರಾಷ್ಟ್ರಕೂಟ ಅಮೋಘವರ್ಷನ ಆಳಿಕೆಯಲ್ಲಿ ಕೊಳನೂರಿನ ಮಹಾಪ್ರಧಾನಿ ಹೊಳೆಯರಸನು ರಾಜ್ಯವಾಳುತ್ತಿದ್ದುದನ್ನು ಕೊಣ್ಣೂರಿನ 860ರ ಶಾಸನ ತಿಳಿಸುತ್ತದೆ. ಈ ಕೊಣ್ಣೂರು ಏಳು ಅಂದಿನ ತೊರಗಲೆನಾಡಿನ ಒಂದು ಉಪವಿಭಾಗ.

ಚಾಳುಕ್ಯ ಜಯಸಿಂಹನ ಕಾಲದಲ್ಲಿ (1015–43) ಚಟ್ಟನೆಂಬ ಮಂಡಳೇಶ್ವರ ತೊರಗಲ್ಲಿನಿಂದ ಆಳುತ್ತಿದ್ದ. ಅವನ ಆಳಿಕೆಗೆ ಲೋಕಾಪುರ 12, ಹೊಳಲುಗುಂದ 30 ದೊಡವಾಡ, ನವಿಲುಗುಂದ 40, ಕೊಳನೂರು 40 ಹಳ್ಳಿಗಳು ಸೇರ್ಪಡೆಯಾಗಿದ್ದವು. ಚಾಳುಕ್ಯ ಅಕ್ಕಾದೇವಿ ಕಿಸುಕಾಡೆಳ್ವರು, ತೊರಗಲ 60 ಮಾಸವಾಡಿ 140 ಆಳಿದ್ದು ಮಹಾಸಾಮಂತ ತೊರಗಲೆಯ ದಂಡನಾಯಕ ಮತ್ತು ಚಾಗಲದೇವಿಯರ ಉಲ್ಲೇಖ ಬಾದಾಮಿ ತಾಲೂಕಿನ ನೀಲಗುಂದದ 1106ರ ಶಾಸನದಲ್ಲಿದೆ. ತೊರಗಲೆಯ ಸಾಮಂತನ ಮಡದಿ ಚಾಗಲದೇವಿ ಧಾಳಿಯಿಟ್ಟು, ನೀಲಗುಂದದಲ್ಲಿ ಕೈಗೊಂಡ ಹೋರಾಟದಲ್ಲಿ ಚಾರಿಗಾವುಂಡ ಮಲ್ಲಗಾವುಂಡರು ನಿಧನರಾದ ವಿಷಯವಿದೆ.

ತೊರಗಲ್ಲಿನ ಮಹಾಮಂಡಳೇಶ್ವರ ಭೂತೇಯದೇವನ ಅನಂತರ ಡಾವರಮಲ್ಲ, ಚಟ್ಟರಸರು ಆಳಿದ್ದು ಇದೇ ತಲೆಮಾರಿನಲ್ಲಿ ಬರ್ಮರಸನೆಂಬವನು ಆಳಿದ್ದಾನೆ. 'ಚಾಳುಕ್ಯ ರಾಜ್ಯ ಪ್ರತಿಷ್ಠಾಪಕ'ನೆನಿಸಿದ. ಮಹಾಮಂಡಳೇಶ್ವರನಾದ ಪರಮಶಿವಭಕ್ತರು, ಘಟಸರ್ಪ ಪವಾಡದ ಮೂಲಕ ತನ್ನ ಪಾತಿವ್ರತ್ಯ ಬಿತ್ತರಿಸಿದ ಶರಣೆ ಸುಗ್ಗಲದೇವಿ ಬರ್ಮರಸನ ಮಡದಿ. ಬರ್ಮಭೂಪಾಳನ ತಂದೆ 2ನೆಯ ಭೂತೇಯ ಅಥವಾ ಭೂತರಸ ಬರ್ಮರಸ ತೊರಗಲ್ಲಿನ ಅಭೇದ್ಯವೆನಿಸಿದ ಏಳು ಸುತ್ತಿನಕೋಟೆ ನಿರ್ಮಿಸಿರುವನು. ಮಹಾಮಂಡಳೇಶ್ವರ ಭೂತೇಯರಸನಿಂದ ಪ್ರಾರಂಭವಾದ ತೊರಗಲ್ಲ ಮಂಡಳೇಶ್ವರರ ವಂಶಾವಳಿ ಮುಂದೆ ನಾಲ್ಕು ತಲೆಮಾರಿನವರೆಗೆ ತೊರಗಲ್ಲು ಪ್ರದೇಶವನ್ನಾಳಿದೆ. 1184ರ ವೇಳೆಗೆ 2ನೆಯ ಭೂತೇಯರಸನ ಸಾಮರ್ಥ್ಯವನ್ನು ಮನಗಂಡ ಬರ್ಮರಸ ಭೂತೇಶ್ವರ ದೇವಸ್ಥಾನ

ರಚಿಸಿ ಕಳೆದುಹೋದ ಕೊಂಡಿಗೆ ಕೃತಜ್ಞತೆ ಸಲ್ಲಿಸಿರುವನು. ಬರ್ಮರಸ ಲೋಕಾಪುರ 12, ಹೊಳಲುಗುಂದ 30 ದೊಡವಾಡ ಪಟ್ಟಣ, ನವಲಗುಂದ 40, ಕೊಳನೂರು 30 ತೊರಗಲ್ಲು ಕೇಂದ್ರದಿಂದ ಆಳಿರುವನು. 1186ರಲ್ಲಿ ಕಳಚುರಿ ಸೇನಾಪತಿಯಾಗಿ ಹೊಯ್ಸಳರ ಸಂಗಡ ಹೋರಾಟ ಕೈಗೊಂಡ ಬಮ್ಮರಸ ಈತನೇ ಎಂಬುದು ಫ್ಲೀಟರ ಅಭಿಪ್ರಾಯ. 1169ರ ತರುವಾಯ ತೊರಗಲೆಯ ಬಮ್ಮರಸ ಕಳಚುರಿ ಬಿಜ್ಜಳನ ಮಂಡಳೇಶ್ವರನಾಗಿ ಅಧಿಕಾರ ಕೈಕೊಂಡ. ಅವನ ಪ್ರೀತಿಪಾತ್ರ ಮಂಡಳೇಶ್ವರನಾಗಿ 1188ರ ವೇಳೆಗೆ ಲೋಕಾಪುರ 12, ಹೊಳಲುಗುಂದ 30. ದೊಡವಾಡ, ನವಲಗುಂದ 40, ಕೊಳನೂರು 30 ಆಳುತ್ತಿದ್ದು ಯಾವುದೋ ಒಂದು ಹೋರಾಟದಲ್ಲಿ ಕಳಚುರಿ ವೈರಿಗಳನ್ನು ಸದೆಬಡಿದು ದಂಡಿನಗೋವ ನೆಂಬ ಬಿರುದು ಪಡೆದಿದ್ದ.

ತೊರಗಲ್ಲು ಮಂಡಳೇಶ್ವರರ ಆಳ್ವಿಕೆಯ ತರುವಾಯ ಬಂದ ಕಲ್ಲರಸನು ದೇವಗಿರಿ ಸೇವುಣರ ಅಧಿಕಾರಿ. ಈತನ ಮಡದಿ ಕನ್ನದೇವಿ. ಕಲ್ಲರಸನ ಮರಣದ ತರುವಾಯ ಅವಳ ಉಜ್ವಲ ವೈರಾಗ್ಯ ಜೀವನ ಚೌಡದಾನಪುರದ ಶಾಸನದಲ್ಲಿದೆ. 1265ರಲ್ಲಿ ತೊರಗಲೆಯ ದೇವರಸ ಮತ್ತು ಚೌಡದಾನಪುರದ ಶಿವದೇವರ ಅರ್ಥಪೂರ್ಣ ಸಂಭಾಷಣೆ ಇದೆ. ದೇವರಸ ತೊರಗಲ್ಲಿನ ಮಹಾಪ್ರಧಾನಿಯೆನಿಸಿದವ. ಫ.ಗು. ಹಳಕಟ್ಟಿಯವರು 'ದಂಡನಾಯಕ ಬಸವದೇವನೂ ಮಹಾಪ್ರಧಾನ ದೇವರಸನೂ ಒಂದೇ ವಂಶಜರೋ ಹೇಗೆಂಬುದನ್ನು ಶೋಧಿಸ ತಕ್ಕ ವಿಷಯವಾಗಿದೆ, ಇವರು ಒಂದೇ ವಂಶದವರೆಂದು ಸಿದ್ಧವಾದರೆ ಆಹುಮಲ್ಲ ಭೂತೇಯದೇವನಿಂದ ದೇವರಸ ಬಸವದೇವರಸನಿಗೆ ಸು.300 ವರ್ಷಗಳವರೆಗಿನ ಕರ್ನಾಟಕದ ಪ್ರಸಿದ್ಧ ಮಂಡಲಕರ ಇತಿಹಾಸ ವ್ಯಕ್ತವಾಗುತ್ತದೆ' ಎಂದಿದ್ದಾರೆ. (ಸಿ.ಪಿ.)

**ಬಿಳಗಿ ಅರಸು ಮನೆತನ:** ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ 15–18ನೆಯ ಶತಮಾನಗಳಲ್ಲಿ ಆಳಿದ ಸಾಮಂತ ರಾಜಮನೆತನ. ಈ ಅರಸರುಗಳ ಮೂಲ ರಾಜಕೀಯ ಕೇಂದ್ರ ಐಸೂರಿನಲ್ಲಿದ್ದು 1490ರಲ್ಲಿ ಶ್ವೇತಪುರಕ್ಕೆ (ಬಿಳಗಿ) ಬದಲಾಯಿತು. ಈ ಅರಸು ಮನೆತನ ರಾಜಕೀಯಕ್ಕಿಂತ ಸಾಂಸ್ಕೃತಿಕ ರಂಗದಲ್ಲಿ ಹೆಚ್ಚು ಸೇವೆ ಸಲ್ಲಿಸಿತೆಂದು ಸಮಕಾಲೀನ ಕಾಲದ ಆಕರಗಳು ದೃಢೀಕರಿಸುತ್ತವೆ.

ಬಿಳಗಿ ಅರಸರ ಚರಿತ್ರೆಯನ್ನು ತಿಳಿಸುವ ಸಾಹಿತ್ಯ ಕೃತಿಗಳಲ್ಲಿ ಲಿಂಗಣ್ಣ ಕವಿಯ ಕೆಳದಿ ನೃಪವಿಜಯ ಮತ್ತು ಬಿಳಗಿ ಅರಸುಗಳ ವಂಶಾವಳಿ ಗಮನಾರ್ಹ. ಬಿಳಗಿ ಅರಸರ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಬಿಳಗಿ ಅರಸುಗಳ ವಂಶಾವಳಿ ಕಾವ್ಯದಲ್ಲಿ ಆಕರ್ಷಕವಾಗಿ ನಿರೂಪಿತವಾಗಿದೆ. ಆದರೆ ತಿಳಿಸಿದ ಸಂಗತಿಗಳು ಅಪೂರ್ಣವಾಗಿವೆ.

ಬಿಳಗಿ ಅರಸರು 14ನೆಯ ಶತಮಾನದ ಅಂತ್ಯದಲ್ಲಿ ರಾಜಕೀಯ ಚಟುವಟಿಕೆಗಳನ್ನು ಆರಂಭಿಸಿದರು. ಈ ಅರಸುಮನೆತನದ ವಂಶದಲ್ಲಿ ಅಖಂಡತ್ವವಿಲ್ಲ. ಆಗಾಗ್ಗೆ ಬೇರೆ ವಂಶದಿಂದ ದತ್ತು ತೆಗೆದುಕೊಳ್ಳುವುದು ನಡೆಯುತ್ತಿತ್ತು. ದತ್ತು ಸ್ವೀಕರಿಸುವಲ್ಲಿ ಬಿಳಗಿಯ ಸಮಾಜದವರೆಲ್ಲ ಸಹಭಾಗಿಯಾಗುತ್ತಿದ್ದರು. ಇದು ಮನೆತನದ ಶಿವಪ್ಪನನ್ನು ದತ್ತು ಸ್ವೀಕರಿಸುವಲ್ಲಿ ನಡೆಯಿತು ಎಂದು ಬಿಳಗಿ ವಂಶಾವಳಿಯಿಂದ ತಿಳಿದುಬರುತ್ತದೆ. ಈ ಅರಸುಮನೆತನದವರು ವಿಜಯನಗರ ಅರಸರ ಸಾಮಂತರಾಗಿದ್ದರು. ಈ ಅರಸುಮನೆತನದವರ ಕುರಿತಾಗಿ ತಿಳಿಯುವ ಮೊದಲ ಹೆಸರು ಮುಂಡಣ್ಣ. ಇವನು ಐಸೂರಿನ ಭೂಪಾಲ. ಇವನ ಮಗ ಭೈರವ, ಇವನನ್ನು ಮಹಾಪ್ರಭು ಎಂದು ಇಡುವಣಿ ಶಾಸನದಲ್ಲಿ (1473) ಹೇಳಿದೆ. ಇವನು ವಿಜಯನಗರ ಅರಸನ ಸಾಮಂತನಾಗಿದ್ದು ಹಾರಗುಡ್ಡ ಮತ್ತು ಹೆಬ್ಬಲನಾಡನ್ನು (ಸಿದ್ಧಾಪುರ – ಸಾಗರ ತಾಲ್ಲೂಕಿನ ಪ್ರದೇಶ) ಮಲೆಹುಲಿ ಮಾರ್ತಂಡ, ಎಂಟು ದಂಡಿಗೆಯರ ಮುನ್ನೆಯರ ಗಂಡ ಎಂಬ ಬಿರುದುಗಳಿಂದ ರಾಜ್ಯವಾಳುತ್ತಿದ್ದ. ಮುಂಡಣ್ಣನ ಎರಡನೆಯ ಮಗ ಕಲ್ಲಪ್ಪ ಮತ್ತು ಮೊಮ್ಮಗ ಭೈರವ ಐಸೂರು ಮತ್ತು ಇಡುವಣಿಯಲ್ಲಿ ಬಸದಿಗಳನ್ನು ಕಟ್ಟಿ, ಪೂಜಾ ವಿನಿಯೋಗಕ್ಕೆ ದಾನಮಾಡಿ ಜೈನಧರ್ಮದ ಪ್ರಗತಿಗೆ ಕಾರಣರಾದರು.

ಬಿಳಗಿ ಘಂಟೇಂದ್ರನು ಬೆಡಕಣಿ, ಕುಣಜೆ ಮತ್ತು ಮುಗುಂಡುಗಳಲ್ಲಿ ನೆಲಸಿದ್ದ ಹಲವಾರು ಬುಡಕಟ್ಟು ಜನರನ್ನು ಬಗ್ಗುಬಡೆದು ಈ ಪ್ರದೇಶಗಳಲ್ಲಿ ಬಲವಾದ ಕೋಟೆ ಕೊತ್ತಳಗಳನ್ನು ಕಟ್ಟಿಸಿದ. ಇವನೇ ಸೋಮವತಿ ನದಿಯ ತೀರದಲ್ಲಿ ಬಿಳಗಿ ಎಂಬ ಪಟ್ಟಣವನ್ನು ಕಟ್ಟಿಸಿ ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡ (1490).

2ನೆಯ ನರಸಿಂಹನೆಂಬ ಇನ್ನೊಬ್ಬ ಅರಸನು ವಿಜಯನಗರದ ಕೃಷ್ಣದೇವರಾಯನ ಸಮಕಾಲೀನ. ಇವನು ವಿಜಯನಗರದ ಚಕ್ರವರ್ತಿಯ ಆಜ್ಞೆಯಂತೆ ಬಹಮನಿ ಅರಸರ ಆಕ್ರಮಣವನ್ನು ಯಶಸ್ವಿಯಾಗಿ ಎದುರಿಸಿ ಅವರನ್ನು ಗಡಿಯಾಚೆ ಅಟ್ಟಿದ (1511). ಇವನ ಅನಂತರ ಪಟ್ಟಕ್ಕೆ ಬಂದವನು ಮಗ ವೀರೇಂದ್ರ; ಅನಂತರ ರಂಗರಾಜ. ಶಾಸನಗಳು ರಂಗನನ್ನು 3ನೆಯ ನರಸಿಂಹನೆಂದು ಉಲ್ಲೇಖಿಸಿವೆ. ಇವನು ಹಲವಾರು ವೈರಿಗಳನ್ನು ಜಯಿಸಿದ ಕಾರಣ ಸಂಘ ಲಿಂಗನ ಮತ್ತು ಎಂಟುಮನೆಯರ ಗಂಡನೆಂಬ ಬಿರುದುಗಳನ್ನು ಪಡೆದಿದ್ದ. ಮಹಮ್ಮದೀಯ ಆಕ್ರಮಣಕಾರ ಸೈನ್ಯವನ್ನು ರಂಗರಾಜ ಬಡಿದಟ್ಟಿ ತನ್ನ ರಾಜ್ಯವನ್ನು ನಿಷ್ಕಂಟಗೊಳಿಸಿದನೆಂದು ವಂಶಾವಳಿ ತಿಳಿಸುತ್ತದೆ. ಈ ಘಟನೆಯು ವಿಜಯನಗರ ಅರಸರ ಅನುಮತಿಯಿಂದಲೇ ನಡೆದಿರಬೇಕೆಂದು ಸಾಂದರ್ಭಿಕ ಸಾಕ್ಷ್ಯಗಳು ಸೂಚಿಸುತ್ತವೆ. ಇದೇ ಅರಸನು ಗೇರುಸೊಪ್ಪೆಯ ಚೆನ್ನಭೈರಾದೇವಿಯರೊಡನೆ ಹಳದಿಪುರದಲ್ಲಿ ಘರ್ಷಣೆಗೆ ಬಂದನೆಂದು ಇದೇ ಸ್ಥಳದಲ್ಲಿ ಸಿಕ್ಕಿದ ವೀರಗಲ್ಲಿನ ಶಾಸನ ತಿಳಿಸುತ್ತದೆ (1573). ಬಿಳಗಿಯಲ್ಲಿ ಶಿಲಾಮಯ ರತ್ನತ್ರಯ ಚೈತ್ಯಾಲಯ ಇವನ ಕಾಲದಲ್ಲೇ ಕಟ್ಟಲ್ಪಟ್ಟಿತು (ಬಿಳಗಿ ಶಾಸನ 1592). ಇವನ ಅನಂತರ ಪಟ್ಟಕ್ಕೆ ಬಂದ 2ನೆಯ ಘಂಟೇಂದ್ರ, (ಘಂಟಣ್ಣ ಒಡೆಯ) ಅತ್ಯಂತ ಪ್ರಮುಖನೆಂದು ಬಿಳಗಿ ಬಸದಿಯ ಶಾಸನದಿಂದ (1593) ತಿಳಿದುಬರುತ್ತದೆ. ಇವನು ಗೇರುಸೊಪ್ಪೆಯಲ್ಲಿ ಆಳುತ್ತಿದ್ದ ಚೆನ್ನಭೈರಾದೇವಿಯೊಡನೆ ಘರ್ಷಣೆಗೆ ಬಂದ. ರಕ್ಕಸತಂಗಡಿ (1565) ಯುದ್ಧದ ಅನಂತರ ಆದಿಲ್‌ಶಾಹಿ ಮತ್ತು ನಿಜಾಮ ಶಾಹಿ ಸೈನ್ಯಗಳನ್ನು ಇವನು ತಡೆಗಟ್ಟಿದನೆಂದು ವಂಶಾವಳಿಯಲ್ಲಿದೆ. ಇವನ ಪರಾಕ್ರಮವನ್ನು ಪೆನುಗೊಂಡೆಯಲ್ಲಿ ಆಳುತ್ತಿದ್ದ ವಿಜಯನಗರ ಅರಸು ವೆಂಕಟಪತಿರಾಯ ಮತ್ತು ಕೆಳದಿ ವೆಂಕಟಪ್ಪನಾಯಕರು ಮೆಚ್ಚಿಕೊಂಡರು. ಬದಲಾದ ರಾಜಕೀಯ ಸ್ಥಿತಿಯಲ್ಲಿ ಘಂಟಣ್ಣ ಒಡೆಯ ಕೆಳದಿ ವೆಂಕಟಪ್ಪ ನಾಯಕನ ಸಾಮಂತನಾಗಬೇಕಾಗಿಬಂತು. ಇದನ್ನು 1623ರಲ್ಲಿ ಇಟಲಿ ಪ್ರವಾಸಿ ಡೆಲ್ಲವೆಲ್ಲಿಯ ವರದಿಯಿಂದ ತಿಳಿಯುವುದು. ಇವನು ಕೆಳದಿ ಮತ್ತು ಸ್ವಾದಿ ಅರಸುಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದ. ಆದರೆ ಇವನ ಅನಂತರ 3ನೆಯ ಘಂಟೇಂದ್ರ ಕೆಳದಿ ಅರಸರ ಪ್ರತಾಪಕ್ಕೆ ಬಲಿಯಾಗಬೇಕಾಯಿತು. ಇದು 1630ರ ಪೋರ್ಚುಗೀಸರ ದಾಖಲೆಯಿಂದ ತಿಳಿದುಬರುತ್ತದೆ. ಇವನು ಮತ್ತು ಅನಂತರ ಬಂದ 4ನೆಯ ಘಂಟೇಂದ್ರ ಮತ್ತು ಸ್ವಾದಿ ಅರಸರೊಂದಿಗೆ ಕೂಡಿ ಬಿಜಾಪುರ ಆದಿಲ್‌ಶಾಹಿಯ ಮಧ್ಯಸ್ಥಿಕೆಯಿಂದ ರಾಜ್ಯವನ್ನು ರಕ್ಷಿಸಿಕೊಂಡ. ಬಿಳಗಿಯನ್ನು ಎರಡೂವರೆ ಶತಮಾನಗಳವರೆಗೆ ಆಳಿಕೊಂಡಿದ್ದ ಮುಂಡಣ್ಣನ ವಂಶ ಘಂಟೇಂದ್ರನೊಂದಿಗೆ ಅಂತ್ಯವಾಯಿತು. ಅನಂತರ ಪಟ್ಟಕ್ಕೆ ಬಂದವರು ದತ್ತುಪುತ್ರರು. ಕೆಳದಿಯವರ ಜೊತೆ ದ್ವೇಷ ಸಾಧಿಸುವುದು ಸರಿಯಲ್ಲವೆಂದು ಭಾವಿಸಿ ಬಿಳಗಿಯವರು ಅವರ ಜೊತೆ ರಕ್ತಸಂಬಂಧ ಬೆಳೆಸಿದರು. ಅನಂತರ ಬಂದ ಬಿಳಗಿ ಅರಸರು ಮರಾಠರನ್ನು ಮತ್ತು ಮುಸಲ್ಮಾನ ಸೈನ್ಯವನ್ನು ಎದುರಿಸಿದರು. ಬಿಳಗಿಯ ಕೊನೆಯ ಅರಸ 3ನೆಯ ಸೋಮಶೇಖರ. 1800ರಲ್ಲಿ ಇಂಗ್ಲಿಷರು ಬಿಳಗಿ ಅರಸರನ್ನು ಮೂಲೆಪಾಲು ಮಾಡಿ ಬಿಳಗಿಯನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಇದರಿಂದಾಗಿ ಬಿಳಗಿ ಅರಸ ವಂಶ ನಾಮಾವಶೇಷವಾಯಿತು. ಒಟ್ಟಿನಲ್ಲಿ ಬಿಳಗಿ ಅರಸರ ರಾಜಕೀಯ ಚಟುವಟಿಕೆಗಳು ವಿಜಯನಗರ ಗೇರುಸೊಪ್ಪೆ, ಕೆಳದಿ, ಸ್ವಾದಿ ಮತ್ತು ಆದಿಲ್‌ಶಾಹಿಯೊಂದಿಗೆ ನಡೆಯುತ್ತಿತ್ತು. ಇವರು ವಿಜಯನಗರ ಅರಸರ ಸಾಮಂತರು ಗೇರುಸೊಪ್ಪೆಯ ಬಗ್ಗೆ ಇವರಿಗೆ ದ್ವೇಷವಿತ್ತು. ಆದಿಲ್‌ಶಾಹಿಯವರ ನೆರವಿನಿಂದ, ಸೋದೆಯವರ ಜೊತೆ ಸ್ನೇಹದಿಂದ ತಮ್ಮ ರಾಜ್ಯವನ್ನು ಉಳಿಸಿಕೊಂಡರು. ಕೆಳದಿಯ ಜೊತೆ ಒಮ್ಮೆ ತೀವ್ರ ದ್ವೇಷ ಇನ್ನೊಮ್ಮೆ ಸ್ನೇಹವಿತ್ತು. ಸಮುದ್ರ ಸಂಪರ್ಕವಿಲ್ಲದ ಬಿಳಗಿ ರಾಜರು ತಮ್ಮದೇ ಆದ ರಾಜಕೀಯ ಚಟುವಟಿಕೆಗಳನ್ನು ನಡೆಸಿದ್ದು ಗಮನಾರ್ಹ.

ಬಿಳಗಿ ರಂಗರಾಜ ವಿದ್ವಾಂಸನಾಗಿದ್ದುದ್ದರಿಂದ ಅವನನ್ನು ಭೋಜರಾಜನೆಂದು ಜನರು ಕರೆಯುತ್ತಿದ್ದರು. ಘಂಟೇಂದ್ರ, ಬಸವೇಂದ್ರ ಮತ್ತು 2ನೆಯ ಸೋಮಶೇಖರ ವಿದ್ವಾಂಸರಾಗಿದ್ದು, ಅನೇಕ ಬಗೆಯ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು. ಇವರ ಆಸ್ಥಾನದಲ್ಲಿ ಕವಿ ಪಂಡಿತರು ಇದ್ದರು. ಕನ್ನಡ ಸಾಹಿತ್ಯಕ್ಕೆ ಈ ಅರಸರು ಉತ್ತೇಜನ ನೀಡಿದರು. ಇವರ ಕಾಲದಲ್ಲಿ ಕನ್ನಡಭಾಷೆ ಹಾಗೂ ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು. ಬಿಳಗಿ ಅರಸರ ಕಾಲದಲ್ಲಿ ಶಾಸ್ತ್ರ ಸಾಹಿತ್ಯ ರಚನೆಗೆ ಅವಕಾಶ ದೊರಕಿತ್ತು. ಪ್ರಸಿದ್ಧ ವ್ಯಾಕರಣ ಕೃತಿಯಾದ ಕರ್ನಾಟಕ ಶಬ್ದಾನುಶಾಸನದ ರಚನೆ ಆದದ್ದು ಬಿಳಗಿ ಅರಸರ ಕಾಲದಲ್ಲಿ. ಇದನ್ನು ಬರೆದವ ಭಟ್ಟಾಕಳಂಕ. ಈ ಕೃತಿಯಿಂದಾಗಿ ಕನ್ನಡ ಭಾಷೆಯ ಸಾಮರ್ಥ್ಯ ಸಂಸ್ಕೃತ ಪಂಡಿತರಿಗೆ ತಿಳಿಯುವಂತಾದದ್ದು ಮಹತ್ತ್ವದ ಸಂಗತಿ. ಕನ್ನಡ ಭಾಷೆಗೆ ಎಲ್ಲ ವಿಧದ ಶಕ್ತಿ ಇದೆ ಎಂದು ತಿಳಿಯಿತು. ಆಧ್ಯಾತ್ಮಿಕ ತತ್ತ್ವಗಳನ್ನು ಕನ್ನಡಕ್ಕೆ ತರುವ ಕೆಲಸ ಬಿಳಗಿ ಅರಸರ ಕಾಲದಲ್ಲಿ ನಡೆಯಿತು.

ವೀರಶೈವ ಧರ್ಮಕ್ಕೆ ಈ ಅರಸರು ಬಹಳ ಸಹಕರಿಸಿದರೂ ಪರಮತ ಸಹಿಷ್ಣುತೆಯನ್ನು ಇವರು ಮನಗಂಡಿದ್ದರು. ಇವರ ರಾಜ್ಯದ ಶಿಲ್ಪಕಲೆಗಳು ಧಾರ್ಮಿಕ ಮತ್ತು ರಕ್ಷಣಾ ಹಿನ್ನೆಲೆಯಲ್ಲಿ ರಚಿತವಾದವು. ಧಾರ್ಮಿಕ ಹಿನ್ನೆಲೆಯಲ್ಲಿ ರಚಿತವಾದ ಶಿಲ್ಪಕಲೆಗಳು ಬಸದಿ, ದೇವಾಲಯ ಮತ್ತು ಇವುಗಳಲ್ಲಿದ್ದ ಮೂರ್ತಿಶಿಲ್ಪಗಳಾಗಿವೆ. ತಮ್ಮ ರಾಜಧಾನಿ ಬಿಳಗಿಯಲ್ಲೇ ಅತ್ಯಂತ ಚಿತ್ತಾಕರ್ಷಕವಾದ ರತ್ನತ್ರಯ ಚೈತ್ಯಾಲಯವನ್ನು 2ನೆಯ ಘಂಟೇಂದ್ರ ನಿರ್ಮಿಸಿದ (1593). ಈ ಚೈತ್ಯಾಲಯಕ್ಕೆ ರಂಗಮಂಟಪ, ಚಂದ್ರಶಾಲೆ, ಮುನಿವಾಸ ಪ್ರಾಕಾರ ಮುಂತಾದವುಗಳನ್ನು ಮಾಡಿಸಿದ. ಇದರೊಂದಿಗೆ ನೇಮೀಶ್ವರ, ಪಾರ್ಶ್ವನಾಥ ಮತ್ತು ವರ್ಧಮಾನ ತೀರ್ಥಂಕರರ ಪ್ರತಿಮೆಗಳನ್ನು ಇವನು ನಿರ್ಮಿಸಿದ. ಬಿಳಗಿ ವಿರೂಪಾಕ್ಷ, ಇಟಗಿ ರಾಮೇಶ್ವರ, ಸಿದ್ಧಾಪುರದ ಸಿದ್ಧಿವಿನಾಯಕ ದೇವಾಲಯಗಳನ್ನು ಸ್ಥಾಪಿಸಿದ. ರಕ್ಷಣಾ ದೃಷ್ಟಿಯಿಂದ ರಚಿತವಾದವುಗಳು ಬಿಳಗಿರಾಜ್ಯದ ಕೋಟೆಗಳು. ಐಸೂರು, ಬಿಳಗಿ, ಬೇಡ್ಕಣಿ ಮತ್ತು ಹುಕ್ಕಳಿ ಕೋಟೆಗಳು ಗಮನಾರ್ಹ. ಸ್ಥಳೀಯ ಜಾನಪದ, ಯಕ್ಷಗಾನ ಸಂಪ್ರದಾಯದ ಪ್ರಸಾದನ ಕಲೆಯೂ ಅಲ್ಲಲ್ಲಿ ಮೂಡಿಬಂದಿದೆ. ವೈದ್ಯಶಾಸ್ತ್ರ ಪ್ರಗತಿಗೆ ಬಿಳಗಿ ಅರಸರು ಪ್ರೋತ್ಸಾಹಿಸಿದ ಸಂಗತಿ ಕೆಲವು ಆಕರಗಳಿಂದ ತಿಳಿದುಬರುತ್ತದೆ. ಆಯುರ್ವೇದದಲ್ಲಿ ಆಸಕ್ತಿಯಿದ್ದ ಜೈನ ವಿದ್ವಾಂಸರು ಈ ರಾಜ್ಯದಲ್ಲಿ ಇದ್ದರು. ಇಂತಹವರಲ್ಲಿ ಗಮನಾರ್ಹವ್ಯಕ್ತಿ ಜೈನ ಗುರು ಭಟ್ಟಾಕಳಂಕ. ವೈದ್ಯಕ್ಕೆ ಸಂಬಂಧಿಸಿದ ತಾಡೋಲೆ ಗ್ರಂಥಗಳು ಬಿಳಗಿ, ಸಿದ್ಧಾಪುರ ಪರಿಸರದಲ್ಲಿ ದೊರಕಿವೆ.

ಬಿಳಗಿ ರಾಣಿಯರು ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ್ದರು. ವಿರೋಪ್ಪ ಒಡೆಯರ ರಾಣಿ ವೀರಮ್ಮ, 2ನೆಯ ಘಂಟೇಂದ್ರನ ರಾಣಿ ಮತ್ತು ಇವಳ ತಾಯಿ ಜಟ್ಟಮ್ಮ, ಬಿಳಗಿ ಅರಸು ಕುಮಾರಿ ಘಂಟಮ್ಮ ಮತ್ತು 2ನೆಯ ಸೋಮಶೇಖರನ ಪತ್ನಿ ಚೆನ್ನಮಲ್ಲಮಾಜಿ ಮೊದಲಾದವರು ಪ್ರಮುಖರು. (ವಿ.ಕೆ.ಜ.)

**ಬೆಳಗುತ್ತಿ ಹಾಗೂ ಇತರ ಪ್ರದೇಶಗಳ ಸಿಂಧರು:** ಗಂಗರಂತೆ ಸಿಂಧರೂ ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದವರೆಂದು ಶಾಸನಗಳಲ್ಲಿದೆ. ಆದರೆ ಸಿಂಧರು ತಾವು ಯಾವುದೇ ಪ್ರಾಚೀನ ರಾಜವಂಶಕ್ಕೆ ಸೇರಿದವರೆಂದು ಹೇಳಿಕೊಂಡಿಲ್ಲ. ಇವರ ಮೂಲದ ಬಗ್ಗೆ ಹಲವಾರು ದಂತ ಕಥೆಗಳಿವೆ. ಬೆಳಗುತ್ತಿಯ ಸಿದ್ಧೇಶ್ವರ ದೇವಾಲಯದಲ್ಲಿನ ಶಾಸನದಲ್ಲಿ ಶಿವಸಿಂಧು ಪ್ರಿಯಸಂಗದಿಂದೋದನದೊರ್ವಂ ಕುಮಾರಂ ಮಹೋತ್ಸವದಿಂದಂ ಎಂದು ಹೇಳಿರುವಂತೆ ಈ ವಂಶದ ಮೂಲ ಪುರುಷನಾದ ನಿಡುದೋಳ ಸಿಂಧನು ಶಿವ ಮತ್ತು ಸಿಂಧುವಿನ ಸಮಾಗಮದಿಂದ ಜನಿಸಿದವನು. ಇವನಿಗೆ ಸೈಂಧವನೆಂದೂ ಹೆಸರಾಯಿತು. ಇವನ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಮತ್ತಷ್ಟು ರೋಚಕ ವಿಷಯಗಳು ತಿಳಿದುಬಂದಿವೆ. ಕೊನೆಗೆ ಈ ಮಗುವನ್ನು ಒಬ್ಬ ವಿಪ್ರ ಕರೆದೊಯ್ದು ಚೌಲೋಪನಯನ ಮಾಡಿದ. ಇವನು ಬೆಳೆದು ಯುವಕನಾಗಿ ಶಸ್ತ್ರಾಸ್ತ್ರಗಳ ಪ್ರಯೋಗದಲ್ಲಿ ಪರಿಣಿತಿ ಪಡೆದ. ಹಲವಾರು ಶಾಸನಗಳಲ್ಲಿ ಸಿಂಧರನ್ನು ನಾಗವಂಶೀಯರು, ಭೋಗಾವತಿಪುರವರಾಧೀಶ್ವರರೆಂದು ಕರೆದಿದೆ. 2ನೆಯ ವಿಕ್ರಮಾದಿತ್ಯನ (655–81) ಕಾಲದ ಕುಕ್ಕನೂರಿನ ಶಾಸನ ಸಿಂಧರಸ ಎಂಬುವನು ಈ ಪ್ರದೇಶವನ್ನು ಆಳುತ್ತಿದ್ದನೆಂದು ಹೇಳಿದೆ. 2ನೆಯ ಕೀರ್ತಿವರ್ಮನ (745–57) ಕಾಲದ ಆಡೂರು (ಧಾರವಾಡ ಜಿಲ್ಲೆ) ಶಾಸನದಲ್ಲಿ ಪಾಂಥಿಪುರದ (ಹಾನಗಲ್ಲು) ಸಿಂಧರಸನ ಹೆಸರಿದೆ.

ನಿಡುದೋಳ ಸಿಂಧ ಸಿಂಧವಂಶದ ಮೂಲಪುರುಷ. ಇವನಿಗೆ ಕದಂಬ ಮಯೂರ ವರ್ಮನ ಮಗಳೊಂದಿಗೆ ವಿವಾಹ ನಡೆಯಿತು. ಒಮ್ಮೆ ಮಯೂರವರ್ಮ ಕೋಪಗೊಂಡಾಗ ನಿಡಿದಾದ ತೋಳಿನಿಂದ ಶಮನಗೊಳಿಸಿದನೆಂದು ಕೋಲಾರದ ಒಂದು ಶಾಸನದಲ್ಲಿದೆ. ಇದನ್ನು ಕುರಿತು ನಿಂ ನೊಸಲು ಕಣ್ಣಿದ್ದರಿಯಂ, ನಿಮಿರ್ದ ಕರತಳದಿಂ ಸಂ ಪೊಯ್ವನಪ್ಪದರಿಂ, ನಿಡುದೋಳ ಸಿಂಧನ ಮೆಂಬ ಹೆಸರು ಪಡೆದ. ನಿಡುದೋಳ ಸಿಂಧನ ಶೌರ್ಯಾತಿಶಯವನ್ನು ಇದೇ ಸಿದ್ಧೇಶ್ವರ ದೇವಾಲಯದ ಶಾಸನದಲ್ಲಿ ಮಹಾಶಬ್ದ ಮಹಾ ಮಂಡಳೇಶ್ವರ, ಕರಹಾಟ ಪುರವರಾಧೀಶ್ವರ, ಮಾಲತೀದೇವಿ ಲಬ್ಧವರಪ್ರಸಾದಾ, ಸಾರಿತ ಸಮಸ್ತ ಮಹೀಮಂಡಳಂ ವಿಜಯಲಕ್ಷ್ಮಿ ಕರ್ಣ ಕುಂಡಳಂ ಎಂದು ಶ್ಲಾಘಿಸಿದೆ. ಬೆಳಗುತ್ತಿಯ 50ನೆಯ ಶಾಸನದಲ್ಲಿ ನಿಡುದೋಳ ಸಿಂಧನು ಕರಹಾಟ 4,000 ನಾಡನ್ನು ಮಾಂಡಳಿಕನಾಗಿ ಆಳುತ್ತಿದ್ದನೆಂದು ಹೇಳಿದೆ. ಇವನನ್ನು ಕರಹಾಟಪುರವರಾಧೀಶ್ವರನೆಂದೂ ಕರೆದಿದೆ. ಈ ನಾಡು ಮಹಾರಾಷ್ಟ್ರದ ಇಂದಿನ ಸತಾರಾ ಜಿಲ್ಲೆಯ ದಕ್ಷಿಣಭಾಗ ಮತ್ತು ಕರ್ನಾಟಕದ ಬಿಜಾಪುರ ಜಿಲ್ಲೆಯ ಉತ್ತರದ ಪ್ರದೇಶವಾಗಿತ್ತು. ಭೈರನಮಟ್ಟಿ ಮತ್ತು ರಂಜೋಳಿಯ ಶಾಸನದಲ್ಲಿ ಇವನಿಗೆ ಪ್ರಭಾಸೇವ್ಯ, ಸತ್ಯಸೇವ್ಯ, ಜಗತ್ಸೇವ್ಯ ಮತ್ತು ಬುಧಸೇವ್ಯ ಎಂಬ ನಾಲ್ವರು ಮಕ್ಕಳಿದ್ದರೆಂದು ಹೇಳಿದೆ. ನಿಡುದೋಳ ಸಿಂಧನು ತನ್ನ ಮಕ್ಕಳನ್ನು ಬೇರೆ ಬೇರೆ ಪ್ರಾಂತಗಳ ಆಡಳಿತ ನಡೆಸಲು ನೇಮಿಸಿದ. ಅವರು ಕ್ರಮವಾಗಿ ಪಳಿಯಂಡ, ಬಾಗಡಗೆ, ಬಳ್ಳವೆ ಮತ್ತು ಅಟ್ಟಳೆನಾಡಿನ ಅಧಿಪತಿಗಳಾದರು. ಕರಹಾಟನಾಡಿನ ಸಿಂಧರು ಬಾಗಟೆ, ಕುರುಗೋಡು, ಗುತ್ತಿ, ರಂಜೋಳಿ, ಯಲಬುರ್ಗ, ಬೆಳಗುತ್ತಿ, ಮುಳುಗುಂದ, ಕೋಗಳಿನಾಡು, ಸಾಲಗುಂದೆ, ಚಕ್ರಕೂಟ ಮತ್ತು ಪ್ರತ್ಯಂಡಕದಲ್ಲಿ ಬೇರೆ ಬೇರೆ ಶಾಖೆಗಳಾಗಿ ಆಳಿದರು.

**ಬೆಳಗುತ್ತಿ ಸಿಂಧರು:** ಬೆಳಗುತ್ತಿ ಇಂದಿನ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿದೆ. ನಿಡುದೋಳ ಸಿಂಧನ ವಂಶಜರ ಒಂದು ಶಾಖೆ ಇಲ್ಲಿ ಆಡಳಿತ ನಡೆಸಿದೆ. ಆದರೆ ಇದು ಸಿಂಧರ ರಾಜಧಾನಿಯಾದ ಕಾಲವು ತಿಳಿದುಬಂದಿಲ್ಲ. ಇವರು ರಾಷ್ಟ್ರಕೂಟರ ಕಾಲದಿಂದಲೂ ಮಾಂಡಳಿಕರಾಗಿಯೇ ಆಳಿದ್ದಾರೆ. ಇವರು ದೈವ ಭಕ್ತರು, ಪಣಿರಾಜ ವಂಶದವರು ಎಂದು ಗುರುತಿಸಿಕೊಂಡಿದ್ದಾರೆ. ತಾವು ಮಾಳಚೀದೇವಿ ಲಬ್ಧವರಪ್ರಸಾದರೆಂದು ಹೇಳಿಕೊಂಡಿದ್ದಾರೆ. ಇವರ ನೀಲಧ್ವಜದ ಮೇಲೆ ಹುಲಿಯ ಲಾಂಛನವಿತ್ತೆಂದು ತಿಳಿಯುತ್ತದೆ.

ಬೆಳಗುತ್ತಿಯಲ್ಲಿ ಆಳುತ್ತಿದ್ದ ಅರಸರ ಹೆಸರನ್ನು ಶಾಸನದಲ್ಲಿ ಜಾತರಸ, ನನ್ನಿಯ ಸಂಭ, ಕಯವೀರರಸ, ಚಟ್ಟರಸ ಮತ್ತು ಇವನ ಮಗ ಜೋಗರಸನೆಂದು ಹೇಳಿದೆ. ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ ಗುಂಡೇರಿಯ ಶಾಸನದಲ್ಲಿ ಹೇಳಿರುವ ಸನ್ನಿಯ ಸಿಂಧನು ಬೆಳಗುತ್ತಿ ಅರಸರ ಮೂಲ ಪುರುಷನಿರಬಹುದೆಂದು ದಿನಕರ ದೇಸಾಯಿಯವರು ಹೇಳಿದ್ದಾರೆ. ಇದು ರಾಷ್ಟ್ರಕೂಟರ 3ನೆಯ ಕೃಷ್ಣನ ಕಾಲಕ್ಕೆ ಸಂಬಂಧಿಸಿದೆ. 992ರ ಹರಿಹರ ತಾಲ್ಲೂಕಿನ ವಾಸನ ಶಾಸನ ಸಿಂಧ ಜಾತರಸನು ಕದಂಬಳಿಗೆ ಸಾವಿರದೊಳಗಣ ಮುಳುಗುಂದ 12 ಅನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.

ಶಾಸನದ ಆಧಾರದಂತೆ ಪಿರಿಯಚಟ್ಟರಸ ಬೆಳಗುತ್ತಿಯನ್ನು ಆಳಿದ ಸಿಂಧರ ಮೊದಲ ಅರಸನಾಗಿದ್ದಾನೆ. ಇವನ ಪತ್ನಿ ದೋರಬಾರಸಿ. ಅಯ್ಯಣ ಮತ್ತು ಜೋಗರಸ ಮಕ್ಕಳು. ಇವನಿಗೆ ಸಂಬಂಧಿಸಿದ ಮೇದೂರಿನ ಶಾಸನಕಾಲವನ್ನು ಬಿ.ಆರ್.ಗೋಪಾಲ್‌ರವರು 1062–63 ಎಂದು ತರ್ಕಿಸಿದ್ದಾರೆ. ಅಯ್ಯನ ಜೋಗರಸ (1060–90) ಇವನು ಪಿರಿಯ ಚಟ್ಟರಸನ ಮಹಮೇದೂರಿನ ಶಾಸನದಂತೆ ಇವನು ಮಾಸೂರು 12, ಕುಂದೂರು 12, ಕೊಳ್ಳಿಗನೂರು 70, ಅರಕೆರೆ 12 ಮುಂತಾದ ವಿಭಾಗಗಳನ್ನು ಆಳುತ್ತಿದ್ದ. 2ನೆಯ ಚಟ್ಟರಸನ (1090–1120) ಗೊಗ್ಗದ 1117ರ ಶಾಸನದಂತೆ ಚಾಳುಕ್ಯ ತ್ರಿಭುವನ ಮಲ್ಲದೇವನ ದಂಡನಾಯಕ ಗೋವಿಂದರಸನು ಬನವಾಸಿಯನ್ನು ಆಳುತ್ತಿದ್ದಾಗ ಮಾಂಡಳಿಕ ಬಟ್ಟರಸನು ಎಡವಟ್ಟ 70ನ್ನು ಆಳುತ್ತಿದ್ದನು. ಮಾಚರಸ (1120–40) ಇವನು ಮೊದಲನೆಯ ಈಶ್ವರ ದೇವನ ಮಗ 1117ರ ಗೊಗ್ಗರದ ಶಾಸನದಂತೆ ಇವನ ಅಜ್ಜ ಪಿರಿಯಭಟ್ಟರಸನೊಂದಿಗೆ ಮೊಮ್ಮಗ ಮಾಚರಸನೂ ಆಡಳಿತ ನಡೆಸುತ್ತಿದ್ದನೆಂದು ತಿಳಿಯುತ್ತದೆ. ಇವನು ಕುದುರೆಯ ಕಾಳಗದಲ್ಲಿ ಅಪ್ರತಿಮ ಸಾಹಸಿಯೆಂದು ತಿಳಿಯುತ್ತದೆ. 1128ರ ಶಾಸನ ಇವನು ಎಡವಟ್ಟ 70, ಅರಕೆರೆ 12 ಮತ್ತು ಬಾಡ 50ನ್ನು ಆಳುತ್ತಿದ್ದನೆಂದು ಹೇಳಿದೆ.

ಚಾಳುಕಿ ಅಹಿಯರಸನು ಮಾಚರಸನ ಮಾವ, ಪತ್ನಿ ಭಟ್ಟಲದೇವಿ ಅಹಿಯರಸನ ಮಗಳಾಗಿರಬಹುದು. ಮಲ್ಲಿದೇವ (1140–45) ಇವನು ಮೊದಲನೆಯ ಈಶ್ವರದೇವನ ಎರಡನೆಯ ಮಗ. ಇವನು 1143ರಲ್ಲಿ ಹರಿಹರದ ಯೋಗೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದಾನೆ. ಇವನ ಮಗ ರಾಯರಸ ಆಡಳಿತ ನಡೆಸಿಲ್ಲ. ಈಶ್ವರದೇವ (1155–85) ರಾಯರಸನ ಮಗ. ಸಿಂಧವಂಶದ ಪ್ರಸಿದ್ಧ ಮಾಂಡಳಿಕ. ಶಾಸನದಲ್ಲಿ ಇವನನ್ನು ಪ್ರಚಂಡ ಯಶೋವಂತ ಎಂದು ಬಣ್ಣಿಸಿದೆ. ಕೊಡಮಗ್ಗಿಯ 1158ರ ಶಾಸನದಂತೆ ಇವನು ಕಳಚುರಿ ಬಿಜ್ಜಳನ ಮಹಾಮಾಂಡಳೇಶ್ವರನಾಗಿ ಎಡವಟ್ಟ 70ನ್ನು ಆಳುತ್ತಿದ್ದ.

ಬೆಳಗುತ್ತಿಯ 50ನೆಯ ಶಾಸನದಂತೆ ಮಾಸೂರ 12, ಎಡವಟ್ಟ 70, ಬಳ್ಳವೆ 70, ನರಿಯಳಿಗೆ 40, ಸಾಂತಳಿಗೆ ಸಾಯಿರದೊಳಗಣ ಮಲೆ 70, ಮುದುವರೆ 70, ಮಂಡಳಿ ನಾಡೊಳಗಣ ಹೊಲಲೂರು 12, ನೊಳಂಬವಾಡಿನಾಡೊಳಗಿನ ಮುಜವೊಳಲು 12, ಅರಕೆರೆ 12, ಬ್ರಾನ್ತಿ 30, ಕುಂದೂರ 70, ಅಯ್ಯತ್ತಾರು ಬಾಡ ಅತ್ತಿಗೇರಿ 12, ಪಡುಗಲು 12, ಅಸಂದಿನಾಡೊಳಗಣ ಅರಬಲ 70, ಕಳಿಕಟ್ಟೆ 12ನ್ನು ಆಳುತ್ತಿದ್ದನೆಂದು ತಿಳಿಯುತ್ತದೆ.

1166ರಲ್ಲಿ ಹೊಯ್ಸಳ ವೀರನರಸಿಂಹ ಬೆಳಗುತ್ತಿಯ ಮೇಲೆ ಧಾಳಿ ಮಾಡಿದಾಗ ನಡೆದ ಕದನದಲ್ಲಿ ಈಶ್ವರದೇವ ಸೋತು ಹೋದ. ವೀರನರಸಿಂಹ ತೋಡಪಿಳ್ಳೆನಾಯಕನನ್ನು ಬೆಳಗುತ್ತಿಯ ರಾಜ್ಯಪಾಲನನ್ನಾಗಿ ನೇಮಿಸಿದ. ಸಾಂತರ ಅರಸು ಸಿಂಗಿದೇವನು 1171ರಲ್ಲಿ ಬೆಳಗುತ್ತಿಯ ಮೇಲೆ ಧಾಳಿಮಾಡಿದ.

ಕಳಚುರಿ ಮತ್ತು ಸಿಂಧರ ಸಂಬಂಧ ಹಿತಕರವಾಗಿತ್ತು. 2ನೆಯ ಈಶ್ವರದೇವ ಇವರ ಮಾಂಡಳಿಕನಾಗಿ ಆಳುತ್ತಿದ್ದಾಗ ಕಳಚುರಿ ದೊರೆ ಸಂಕಮನು ಮಹದೇವ ದಂಡನಾಯಕನನ್ನು ಬೆಳಗುತ್ತಿಯ ರಾಜ್ಯಪಾಲನನ್ನಾಗಿ ನೇಮಿಸಿದ. ಇವನು ಕಳಚುರಿ ಮತ್ತು ಸಿಂಧರ ಸ್ನೇಹದ ಬೆಸುಗೆ ಬೆಸೆದ.

ಈಶ್ವರ ದೇವ ಸಾನ್ನಳಿಗೆಯ ಗಡಿಸೀಮೆಗಳಾದ ಎಡವಟ್ಟ, ಬಳ್ಳವೆನಾಡು ಮುದುವಳಿ 30 ಮತ್ತು ನರಿವಳಿಗೆ 40 ನಾಡುಗಳನ್ನು ವಶಪಡಿಸಿಕೊಂಡಿದ್ದ. ಚಾಳುಕ್ಯರ ರಾಜ್ಯ ಹೊಯ್ಸಳರು ಹಾಗೂ ಸೇವುಣರ ನಡುವೆ ಹಂಚಿಹೋಯಿತು. ಇವರ ನಡುವಿನ ಕದನದಲ್ಲಿ ಬೆಳಗುತ್ತಿ ಸಿಂಧರಿಗೆ ಅಪಾರ ಹಾನಿಯುಂಟಾಯಿತು. 2ನೆಯ ಮಲ್ಲಿದೇವ (1185–1205) 2ನೆಯ ಈಶ್ವರ ದೇವನ ಎರಡನೆಯಮಗ. ಉಚ್ಚಂಗಿಯ ವಿಜಯಪಾಂಡ್ಯನು ನೇಲವತಿಯ (ನ್ಯಾಮತಿ) ಮೇಲೆ ಧಾಳಿಮಾಡಿದ (1187). ಹೊಯ್ಸಳ ವೀರಬಲ್ಲಾಳನ ರಾಣಿ ಉಮಾದೇವಿ ಕಪ್ಪಡಿ ಹೊಳೆ ಎಂಬ ಸ್ಥಳದಿಂದ 1196ರಲ್ಲಿ ಬೆಳಗುತ್ತಿಗೆ ಮುತ್ತಿಗೆ ಹಾಕಿದಳು. ರಾಜ್ಯದ ಅನೇಕ ಭಾಗಗಳು ಕೈಬಿಟ್ಟು ಹೋಯಿತು. 2ನೆಯ ಮಲ್ಲಿದೇವ ಸೇವುಣರ ದೊರೆ ಸಿಂಘಣ ನೊಡನೆ ಸ್ನೇಹಮಾಡಿಕೊಂಡರೂ ಫಲವಾಗಲಿಲ್ಲ. ಸೇವುಣರು 3ನೆಯ ಈಶ್ವರದೇವನ ಕಾಲದಲ್ಲಿ (1205–29) ಬೆಳಗುತ್ತಿಯನ್ನು ವಶಪಡಿಸಿಕೊಂಡರು. ಹರಬೀರದೇವ (1245–47) ಬೆಳಗುತ್ತಿಯನ್ನಾಳಿದ ಕೊನೆಯ ಮಾಂಡಳಿಕ. ಸೇವುಣರ ದಂಡನಾಯಕ ಶ್ರೀಧರನು ಬೆಳಗುತ್ತಿಗೆ ಮುತ್ತಿಗೆಹಾಕಿ ಹರಬೀರದೇವನನ್ನು ಓಡಿಸಿಬಿಟ್ಟ. ಇಲ್ಲಿಗೆ ಸಿಂಧರ ಆಡಳಿತ ಕೊನೆಗೊಂಡಿತು.

**ರಂಜೇರುವಿನ ಸಿಂಧರು:** ಅಲ್ಲಮ ರಂಜೇರು ಸಿಂಧರ ವಂಶದ ಮೊದಲ ಮಾಂಡಲಿಕ ನೆಂದು ತಿಳಿಯುತ್ತದೆ. ಇವನ ಮಗ ಬದ್ದೆಗ. ಗೊಣ್ಣ ಮತ್ತು ಗೊಂಕ ಬದ್ದೆಗನ ಮಕ್ಕಳು. ಹಜ್ಜರಸ ಎಂಬುವನು ಇದೇ ವಂಶದವನೆಂದು ಶಾಸನಾಧಾರವಿದೆ. ಹಜ್ಜರಸ ಅಟ್ಟನಾಡನ್ನು (ಬಾಲ್ಕಿ ತಾಲ್ಲೂಕಿನ ಸುತ್ತಲಿನ ಪ್ರದೇಶವ) ಸು.1090–1115ರವರೆಗೆ ಆಳಿದನೆಂದು ತಿಳಿಯುತ್ತದೆ. ಇವನ ಪತ್ನಿ ಹಮ್ಮಲದೇವಿ ಮಗ ಪೆರ್ಮಾಡಿಯು ಚಾಳುಕ್ಯ ಭೂಲೋಕಮಲ್ಲ ಮತ್ತು 3ನೆಯ ಸೋಮೇಶ್ವರನ ಸಾಮಂತನಾಗಿದ್ದ. ಮೈಳಲದೇವಿ ಪೆರ್ಮಾಡಿಯ ಪತ್ನಿ. 1169ರ ರಂಜೋಳಿ ಗ್ರಾಮದ ಶಾಸನದಿಂದ ಇವನಿಗೆ ಭೈರವನೆಂಬ ಮಗನಿದ್ದನೆಂದು ತಿಳಿಯುತ್ತದೆ. ಭೈರವನಮಗ ಹೆಮ್ಮ (2ನೆಯ ಪೆರ್ಮಾಡಿ), ಹೆಮ್ಮನಿಗೆ ಚಾಚಿದೇವ ಮತ್ತು ಬರ್ಮದೇವ ಎಂಬ ಇಬ್ಬರು ಮಕ್ಕಳು. ಬರ್ಮದೇವ ಕಳಚುರಿ ಸೋವಿದೇವನ ಸಾಮಂತನಾಗಿದ್ದ. ಅನಂತರ ಈ ಮಾಂಡಲಿಕರು ಸೇವುಣ ಹಾಗೂ ವಾರಂಗಲ್ಲಿನ ಕಾಕತೀಯರ ಸಾಮಂತರಾದ ರೆಂದು ಶಾಸನಾಧಾರಗಳಿಂದ ತಿಳಿಯುತ್ತದೆ. ಈ ವಂಶದ ಭೈರವನು ಮಹಾವೀರ. ಇವನು ಕಾಕತೀಯ ರುದ್ರಮದೇವಿಯ ಸಾಮಂತನಾಗಿದ್ದ. ಸೇವುಣರೇ ಮೊದಲಾದ ಹಲವು ರಾಜರನ್ನು ಸೋಲಿಸಲು ರಾಣಿಗೆ ನೆರವು ನೀಡಿದ್ದ.

**ಬಾಗಡಗೆಯ ಸಿಂಧರು:** ಸು.10ನೆಯ ಶತಮಾನದಲ್ಲಿ ಬಾಗಡಗೆಯಲ್ಲಿ (ಬಾಗಲಕೋಟೆ) ಈ ವಂಶದವರು ಆಳುತ್ತಿದ್ದರು. ನಾಗವಂಶಕ್ಕೆ ಸೇರಿದ್ದ ಈ ಸಿಂಧರಿಗೆ ಭೋಗವತೀ ಪುರವರಾಧೀಶ್ವರ ಎಂಬ ಬಿರುದಿತ್ತು. ಪಾತಾಳದಿಂದ ಬಂದ ಧರಣೇಂದ್ರನಿಗೆ ಅಹಿಚ್ಛತ್ರದಲ್ಲಿ

ನಿಡುದೋಳ ಸಿಂಧನೆಂಬ ಮಗನು ಜನಿಸಿದನಂತೆ. ನಿಡುದೋಳನು ಕದಂಬಕುಲದ ರಾಜಕುಮಾರಿಯನ್ನು ಮದುವೆಯಾಗಿ ಮೂವರು ಮಕ್ಕಳನ್ನು ಪಡೆದ. ಕೆಲವು ವರ್ಷಗಳ ಅನಂತರ ಇವರ ವಂಶದಲ್ಲಿ ಕಮ್ಮಯ್ಯರಸನ ಮಗನಾದ ಪುಲಿಕಾಲನೆಂಬುವನು ಆಳಿದ. ಇವನು ಚಾಳುಕ್ಯ 2ನೆಯ ತೈಲಪನ ಮಾಂಡಲೀಕನಾಗಿದ್ದ. ಆತನಿಗೆ ರೇವಕಬ್ಬೆಯಲ್ಲಿ ನಾಗಾದಿತ್ಯನೆಂಬ ಮಗ ಹುಟ್ಟಿದ. ಸೇವ್ವರಸನು ನಾಗಾದಿತ್ಯನ ಮಗ. ಇವನು ಚಾಳುಕ್ಯ ಇಮ್ಮಡಿ ಸೋಮೇಶ್ವರನ ಮಾಂಡಲಿಕನಾಗಿದ್ದನೆಂದು ತಿಳಿಯುತ್ತದೆ. ಇವನ ಅನಂತರದ ಇತಿಹಾಸ ತಿಳಿದುಬಂದಿಲ್ಲ.

**ಬೆಳಗುತ್ತಿ ಸಿಂಧರ ವಂಶಾವಳಿ**

ಪಿರಿಯಚಟ್ಟರಸ (ಪತ್ನಿ ದೋರಬಾರಸಿ)
|
ಅಯ್ಯಣ್ಣ ಚೋಗರಸ (1060–90)
|
ಇಮ್ಮಡಿ ಚಟ್ಟರಸ (1090–1120)
|
ಈಶ್ವರದೇವ–I (1120–25)

| ಮಾಚರಸ (1125–40) | ಮಲ್ಲಿದೇವ–I (1140–50) | ಐಹರಸ | ದೋರಲದೇವಿ (ಪತಿ: ಕೇತರಸ–3) |
|---|---|---|---|

ಐಹರಸ
|
ರಾಯರಸ
|
ಈಶ್ವರದೇವ–II (1155–85)

| ಪಾಂಡ್ಯದೇವ | ಮಲ್ಲಿದೇವ–2 (1185–1205) | ರಾಯರಸ | ವಿಜಯನೃಪಾಲ |
|---|---|---|---|

ಮಲ್ಲಿದೇವ–2
|
ಈಶ್ವರದೇವ –III (1205–29)
|
ಕೇಶವದೇವ (1229–39)

| ಬೀರದೇವ (1239–44) | ಹರಬೀರದೇವ (1245–47) |
|---|---|

**ರಂಜೇರುವಿನ ಸಿಂಧರ ವಂಶಾವಳಿ**

ಅಲ್ಲಮ
|
ಬದ್ದೆಗ

| ಗೊಣ್ಣ | ಗೊಂಕ |
|---|---|

ಹಜ್ಜರಸ (1090–1115)
(ಪತ್ನಿ: ಹಮ್ಮಲದೇವಿ)
|
(ವೀರ) ಪೆರ್ಮಾಡಿ
(1115–40) (ಪತ್ನಿ: ಮೈಳಲದೇವಿ)
|
ಭೈರವ
|
ಹೆಮ್ಮ (2ನೆಯ ಪೆರ್ಮಾಡಿ)

| ಬಾಚಿದೇವ | ಬರ್ಮದೇವ (1169) |
|---|---|

ಆದ್ಯರಸ (1208)
|
ನೂರ್ಮಡಿಗಣ್ಣ ಭೈರವ
|
ದುಗ್ಗರಸ
|
ಗೊಂಕರಸ
|
ಹಿರಿಯ ಭೈರವ

(ಆರ್.ಬಿ.ಎಸ್.)

**ಬೆಳವಡಿ ಸಂಸ್ಥಾನ:** ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಿಂದ ಆಳಿದ ಒಂದು ಸಾಮಂತ ಮನೆತನ. ಸೊಗಲದ ಶಾಸನದಲ್ಲಿ (980) ಬೆಳವಾಡಿ, ಬೆಳವಡಿ ಶಾಸನದಲ್ಲಿ (1075) ಬೆಳ್ವಾಡಿ ಎಂದಿದ್ದರೆ, ಮರಾಠಿ ಶಕಾವಲಿ ಮತ್ತು ಬಖೈರುಗಳಲ್ಲಿ ಬಲೇವಡಿ, ಬಲವಾಡಾ, ಬೇಲವಾಡಿ, ಬಾಲೇವಾಡಿ ಎಂಬ ಹೆಸರುಗಳೂ ಕಂಡುಬರುತ್ತವೆ.

ರಾಷ್ಟ್ರಕೂಟರ ಸಂತತಿಯವರಾದ ರಟ್ಟರು (975–1233) ಬೆಳಗಾಂವಿ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಮತ್ತು ದೇವಗಿರಿ ಸೇವುಣರ ಸಾಮಂತರಾಗಿ ಆಳಿದರು. ಶಾಸನದಲ್ಲಿ ಅವರನ್ನು ರಟ್ಟ ವಂಶೋದ್ಭವಃ ಎಂದು ಕರೆದಿದೆ. ಮೊದಲು ಸವದತ್ತಿ ಅನಂತರ ಬೆಳಗಾಂವಿ ಇವರ ರಾಜಧಾನಿಗಳು. ಇವರು ಜೈನರಾಗಿದ್ದು ಬೆಳವಡಿಯ 11–12ನೆಯ ಶತಮಾನದ ಎರಡು ಜೈನಶಾಸನಗಳು ಬೆಳವಡಿಯಲ್ಲಿದ್ದು ಇವರು ಜೈನರೆಂಬುದಕ್ಕೆ ಪುಷ್ಟಿ ನೀಡುತ್ತವೆ. ತರುವಾಯ 13ನೆಯ ಶತಮಾನದಲ್ಲಿ ಇವರು ಶೈವರಾಗಿರಬಹುದು.

ಬೆಳವಡಿ ಸಂಸ್ಥಾನಿಕರ ಸುದೀರ್ಘವಾದ ವಂಶಾವಳಿ ಅವರ ಗುರುಗಳಾದ ಹೂಲಿಮಠದ ಸ್ವಾಮಿಗಳ ಛಪ್ಪನ್ನಪಟ್ಟಿಯಲ್ಲಿದೆ. ಇದರಿಂದ 32ಜನ ಆಳಿದಂತೆ ತಿಳಿಯುತ್ತದೆ. ಧರ್ಮವರ್ಧನ ಈ ವಂಶದ ಮೂಲ ಪುರುಷ. 2ನೆಯವನಾದ ಶಾಂತಿವರ್ಮ ಈ ವಂಶದ ಸಂಸ್ಥಾಪಕ. ಮಲ್ಲಮ್ಮನ ವಂಶದ ಮರಿಮಗ ಸೋಮರಾಜ (ನಾಗಭೂಷಣ, ನಾಗಪ್ಪ ದೇಸಾಯಿಯ ಮಗ) ನವರೆಗೆ ಈ ವಂಶಾವಳಿಯಿದೆ. ಸಂಸ್ಥಾಪಕ ಅರಸನಾದ ಶಾಂತಿವರ್ಮನ ತರುವಾಯ 2ನೆಯ ಅರಸನಿಂದ ಹಿಡಿದು 17ನೆಯ ದೊರೆಯವರೆಗೆ ಯಾವುದೇ ಮಾಹಿತಿಗಳು ಸಿಕ್ಕಿಲ್ಲ. 19ನೆಯ ದೊರೆ ಈಶ್ವರ ಪ್ರಭುವಿನಿಂದ 18ನೆಯ ದೊರೆ ಕಲಿಕೇತು ಮತ್ತು ಮುಂದೆ ಆಳ್ವಿಕೆ ಮಾಡಿದ ದೊರೆಗಳ ಕಾಲಾವಧಿ ಮಾತ್ರ ತಿಳಿದುಬಂದಿದೆ (1208–52). 2ನೆಯ ದೊರೆ ಚಂದ್ರಶೇಖರ ಮರಣ ಹೊಂದಿದ ಮೇಲೆ ಅವನ ಮಗ ಈಶ್ವರ ಪ್ರಭು 2ನೆಯ ದೊರೆಯಾಗಿ ಬೆಳವಡಿ ಸಂಸ್ಥಾನದ ಸಿಂಹಾಸನವನ್ನೇರಿದ (1638). ಶಿವಾಜಿ ಬೆಳವಡಿ ಕೋಟೆಯನ್ನು ಮುತ್ತಿಗೆ ಹಾಕಿದಾಗ ಈಶ್ವರಪ್ರಭು ಅಸುನೀಗಿದ. ಇವನ ರಾಣಿ ಮಲ್ಲಮ್ಮ ಮರಾಠ ಸೈನ್ಯವನ್ನು ಸೋಲಿಸಿದಳು (1677). ಮಲ್ಲಮ್ಮ ರಾಣಿ 2000 ಮಂದಿ ಸ್ತ್ರೀಯರನ್ನೊಳಗೊಂಡ ಸೈನ್ಯ ಸಂಘಟನೆ ಮಾಡಿದ್ದಳು. ಶಿವಾಜಿ ಈಕೆಯೊಂದಿಗೆ ಸಂಧಾನ ಮಾಡಿಕೊಂಡ. ಈ ಯುದ್ಧ 27 ದಿನಗಳ ಕಾಲ ನಡೆಯಿತೆಂದು ತಿಳಿದುಬರುತ್ತದೆ. ಶಿವಾಜಿ ಬೀಡುಬಿಟ್ಟ ಸ್ಥಳ ಯಾದವಾಡ: ಇಲ್ಲಿ ಶಿವಾಜಿ ಮತ್ತು ಮಲ್ಲಮ್ಮರನ್ನು ಪ್ರತಿನಿಧಿಸುವ ಕುದುರೆಯ ಮೇಲಿನ ಶಿವಾಜಿಯ ಮತ್ತು ಮಲ್ಲಮ್ಮಾಜಿ ಮಗುವಿನ ಜೊತೆಗಿರುವ ಶಿಲ್ಪವಿದೆ (ವೀರಗಲ್ಲು). ಶಿವಾಜಿಯು ಮಲ್ಲಮ್ಮನನ್ನು ಸಹೋದರಿಯೆಂದು ಗೌರವಿಸಿ ಅವಳ ರಾಜ್ಯವನ್ನು ಅವಳಿಗೆ ಬಿಟ್ಟುಕೊಟ್ಟನೆಂದು ತಿಳಿದುಬರುತ್ತದೆ (1678). ಈ ಅವಧಿಯಲ್ಲಿ ಕಿತ್ತೂರು ಸಂಸ್ಥಾನವನ್ನು ದೊರೆ ಅಲ್ಲಪ್ಪಗೌಡ ಸರದೇಸಾಯಿ ಸಂಪಗಾವಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ. ಇದರ ಅನಂತರ ಬೆಳವಾಡಿಯ ಇತಿಹಾಸ ಸ್ಪಷ್ಟವಿಲ್ಲದಿದ್ದರೂ ಕಿತ್ತೂರು ಸಂಸ್ಥಾನಕ್ಕೆ ಸೇರಿದುದು ಸ್ಪಷ್ಟವಾಗುತ್ತದೆ. ಮಲ್ಲಮ್ಮ 1750–1775ರ ಅವಧಿಯಲ್ಲಿ ಮರಣ ಹೊಂದಿರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದ್ದು ಇವಳ ದಾನ ಶಾಸನ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ.

ಧಾರ್ಮಿಕವಾಗಿ ಬೆಳವಡಿ ಸಂಸ್ಥಾನಕ್ಕೆ ಹೂಲಿಯ ಬೃಹನ್ಮಠದ ಸಂಬಂಧವಿತ್ತು. ಬೆಳವಡಿಯ ಉಜ್ವಲ ಪರಂಪರೆ ಎತ್ತಿಹಿಡಿದ ಮೊದಲರಾಣಿ ಕೇತಿಮಯ್ಯನ ಧರ್ಮಪತ್ನಿ ಕಂಚಿಕಬ್ಬೆಯನ್ನು ಬೆಳವಡಿಯ ಚಿಂತಾಮಣಿ ಎಂದಿದೆ. ಬೆಳವಡಿ ಒಂದು ಧಾರ್ಮಿಕ ಕೇಂದ್ರವಾಗಿತ್ತು. (ಕೆ.ಆರ್.ಎಂ.)

**ಭೋಜರು:** ಕೊಂಕಣತೀರ ಹಾಗೂ ಗೋವ ಪ್ರದೇಶಗಳಲ್ಲಿ 4–7ನೆಯ ಶತಮಾನಗಳ ಕಾಲದಲ್ಲಿ ಆಡಳಿತ ನಡೆಸಿದ ಒಂದು ಮಾಂಡಳಿಕ ಮನೆತನ. ಇವರನ್ನು ಕುರಿತು ಸಾಹಿತ್ಯಕ ಆಕರಗಳು, ಶಾಸನಗಳು ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ಇವರನ್ನು ಮಹಾಭೋಜ ರೆಂದು ಕರೆಯಲಾಗಿದೆ. ಹಿಂದೆ ಕಾಕುಸ್ಥವರ್ಮನು ಶ್ರುತಕೀರ್ತಿ ಭೋಜನಿಗೆ ಖೇಟ ಗ್ರಾಮವನ್ನು ದತ್ತಿಯಾಗಿ ನೀಡಿದ. ಈ ದಾನವನ್ನು ಶಾಂತಿವರ್ಮ ಮತ್ತು ಆತನ ಮಗ ಮೃಗೇಶವರ್ಮ ದಾಮಕೀರ್ತಿಯ ತಾಯಿಗೆ ಪುನರ್ದತ್ತಿ ನೀಡಿದರು. ಮೃಗೇಶವರ್ಮನ ಶಾಸನದ ಕಾಲ 458–59, ಆದ್ದರಿಂದ ರವಿವರ್ಮ ತನ್ನ ತಂದೆ ಪುನರ್ದತ್ತಿ ನೀಡಿದ್ದನ್ನು ನವೀಕರಿಸಿ ಪ್ರತೀಹಾರಿ ಜಯಕೀರ್ತಿಗೆ ನೀಡಿದ. ಭೋಜ ಪ್ರತೀಹಾರರು ಒಂದೇ ಮನೆತನಕ್ಕೆ ಸೇರಿದ್ದ ಪಕ್ಷದಲ್ಲಿ ಅವರ ವಂಶಾವಳಿಯನ್ನು ಹೀಗೆ ಗುರುತಿಸಬಹುದು: ಭೋಜಕ ಶ್ರುತಕೀರ್ತಿಗೆ ಇಬ್ಬರು ಮಕ್ಕಳು–ಭೋಜಕ ದಾಮಕೀರ್ತಿ ಮತ್ತು ಶ್ರೀಕೀರ್ತಿ. ದಾಮಕೀರ್ತಿಯ ಮಗ ಪ್ರತೀಹಾರಿ ಜಯಕೀರ್ತಿ. ಕಾಲಕ್ರಮೇಣ ಭೋಜರು ಸಾಮಂತ ಅರಸರಾಗಿ ಆಳಿಕೆ ನಡೆಸಿದರು. ಭೋಜರಿಗೆ ಸಂಬಂಧಿಸಿದಂತೆ ಈವರೆಗೆ 6 ತಾಮ್ರ ಪಟಗಳು ಮಾತ್ರ ಲಭ್ಯವಾಗಿವೆ.

ಭೋಜ ಮನೆತನದ ಐದು ಸಾಮಂತ ಅರಸರಲ್ಲಿ ಮೊದಲನೆಯವನು ದೇವರಾಜ. ರಾಜಧಾನಿ ಚಂದ್ರಾಪುರದಿಂದ ಹೊರಟ ಶಿರೋಡದ ತಾಮ್ರಪಟ ಶಾಸನ ದೇವರಾಜನನ್ನು ಕುರಿತು ಉಲ್ಲೇಖಿಸುತ್ತದೆ. ಚಂದ್ರಾಪುರ ಎಂಬುದು ಪ್ರಸ್ತುತ ಗೋವದ ಚಾಂದೋರ್ ಎಂದು ಗುರುತಿಸಲಾಗಿದೆ. ದೇವರಾಜ ಸು.3ನೆಯ ಶತಮಾನ ಕೊನೆ ಹಾಗೂ 4ನೆಯ ಶತಮಾನದ ಆರಂಭದವರೆಗೆ ಆಳಿಕೆ ನಡೆಸಿರಬೇಕು.

ಭೋಜವಂಶಜರಲ್ಲಿ ಅನಂತರ ಆಳಿಕೆ ನಡೆಸಿದವನು ಅಶಂಕಿತವರ್ಮ. ಇವನು ದೀಪಕ ವಿಷಯ ಎಂಬ ಆಡಳಿತ ವಿಭಾಗದಲ್ಲಿಯ ಸುಂದರಿಕಾ ಎಂಬ ಗ್ರಾಮವನ್ನು ಬೌದ್ಧವಿಹಾರಕ್ಕೆ ದತ್ತಿಯಾಗಿ ನೀಡಿದ್ದನ್ನು ಹಿರೇಗುತ್ತಿಯ ತಾಮ್ರಶಾಸನ ತಿಳಿಸುತ್ತದೆ. ಬಹುಶಃ ಈ ಗ್ರಾಮ ಮಿರ್ಜಾನ್ ಸಮೀಪದ ದೀವಗಿ ಇರಬೇಕು. ಪ್ರಸ್ತುತ ಇದು ಕುಮಟ ತಾಲ್ಲೂಕಿಗೆ ಒಳಪಡುತ್ತದೆ. ಈ ತಾಮ್ರಪಟದಲ್ಲಿ ಅಶಂಕಿತವರ್ಮನ ಮಾಂಡಳಿಕ ಕೈಕೇಯ ವಂಶದ ಕೊಟ್ಟಿಪೆಗ್ಗಿಲನನ್ನು ಉಲ್ಲೇಖಿಸಿದೆ. ಅಶಂಕಿತವರ್ಮನಿಗೆ ಸಂಬಂಧಿಸಿದ ಕಪೊಲಿ ತಾಮ್ರಪಟ, ಹಲಸಿ ವಿಭಾಗದಲ್ಲಿನ (ಪಲಾಶಿಕ ವಿಷಯ) ಬ್ರಾಹ್ಮಣರ ದತ್ತಿಯನ್ನು ದಾಖಲಿಸಿದೆ. ಪ್ರಸ್ತುತ ಈ ಭಾಗ ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕಿಗೆ ಒಳಪಡುತ್ತದೆ. ಇದರಿಂದ ಹಲಸಿಪ್ರಾಂತ ಮತ್ತು ಉತ್ತರ ಕನ್ನಡ ಪ್ರಾಂತ ಭೋಜರ ಆಳಿಕೆಗೆ ಒಳಪಟ್ಟಿತ್ತೆಂಬುದು ಸ್ಪಷ್ಟವಾಗಿದೆ. ಮೂರನೆಯ ಅರಸನಾಗಿ ಕಪಾಲಿವರ್ಮ ಆಳಿಕೆಗೆ ಬಂದ. ಕಾರವಾರ ತಾಲ್ಲೂಕಿನ ಅರಗದ ತಾಮ್ರಪಟ ಶಾಸನ ಭೋಜ ಕಪಾಲಿವರ್ಮನನ್ನು ಧರ್ಮಮಹಾರಾಜ ಎಂದಿದೆ. ಇವನು ಘಾಮಸಖೇಟವನ್ನು ಸ್ವಾಮಿಕ ರಾಜನ ಮೂಲಕ ದಾನ ಮಾಡಿದ ವಿವರವನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಕಪಾಲಿವರ್ಮನ ಅನಂತರ ಭೋಜ ಪೃಥ್ವಿವರ್ಮ ಆಳಿಕೆ ನಡೆಸಿದ. ಗೋವ ಪ್ರಾಂತ್ಯದಲ್ಲಿಯ ಎರಡು ತಾಮ್ರಪಟಗಳು ಭೋಜ ಪೃಥ್ವಿಮಲ್ಲವರ್ಮನನ್ನು ಉಲ್ಲೇಖಿಸುತ್ತದೆ.

ಶಾಸನಗಳಲ್ಲಿ ಉಲ್ಲೇಖಿಸಲ್ಪಡುವ ಅರಸರು–ದೇವರಾಜ, ಅಶಂಕಿತವರ್ಮ, ಕಪಾಲಿವರ್ಮ ಮತ್ತು ಪೃಥ್ವೀಮಲ್ಲವರ್ಮ. ಈ ಅರಸರುಗಳ ಸಂಬಂಧ ಏನೆಂಬುದು ತಿಳಿಯದು. ಲಭ್ಯವಾದ ಶಾಸನ ದಾಖಲೆಗಳು ಅಯುಕ್ತ, ಭೋಗಿಕ, ಸರ್ವಂತ್ರಾಧಿಕಾರಿ ಮಹಾರಹಸ್ಯಾದಿಕ್ರಿತ ಹೀಗೆ ಅಧಿಕಾರಿ ವರ್ಗದ ಹೆಸರುಗಳನ್ನು ಸೂಚಿಸುತ್ತದೆ. ಬಹುಶಃ ಈ ಸಾಮಂತ ಅರಸರನ್ನು ಕೊಂಕಣ ಮೌರ್ಯರು ಅಂತಿಮವಾಗಿ ಸೋಲಿಸಿರುವ ಸಾಧ್ಯತೆಗಳಿವೆ. (ಕೆ.ಜಿ.ಬಿ.)

**ಮಲೆನಾಡ ಹೆಚ್ಚೆಯ ಅರಸರು:** ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹೆಚ್ಚೆಯಿಂದ ಆಳಿದ ಒಂದು ಸಾಮಂತ ಮನೆತನ. ಇವರು ಮಾಟೂರ ವಂಶಕ್ಕೆ ಸೇರಿದವರು. ಮಾಟೂರ ವಂಶೀಯರ ಮಹತ್ತ್ವಪೂರ್ಣ ಶಾಸನ ದೊರೆತ ಸ್ಥಳ ಹಾಗೂ ಇವರ ಎಡೆನಾಡಿನ ಪ್ರಮುಖ ಕೇಂದ್ರ ಹೆಚ್ಚೆ. ಇದು ಸು.400ರ ಹೊತ್ತಿಗೇ ಅಸ್ತಿತ್ವದಲ್ಲಿದ್ದು ಪೆರ್ದಸೆ, ಪೆಲ್ದಸೆ, ಹೆರ್ದಸೆ, ಹೆದ್ದಸೆ, ಹೆಚ್ಚೆ ಮುಂತಾದ ಹೆಸರಿನಿಂದ ಪ್ರಸಿದ್ಧವಾಗಿದೆ. ಹೆಚ್ಚೆಯಲ್ಲಿ ಈ ಅರಸರ ಮೂರು ಶಾಸನಗಳು ದೊರೆತಿವೆ.

ಇವರ ಆರಾಧ್ಯದೈವ ತ್ರಿಕುಂದದ ಪುರವರೇಶ್ವರ. ಈ ತ್ರಿಕುಂದವನ್ನು ಮುಗುಂದ ಎಂದು ಭಾವಿಸಬಹುದು. ಇವರ ಆರಾಧ್ಯದೈವ ಈ ಮುಗುಂದದ ಈಶ್ವರನೆಂತಲೂ ಇವರು ಶೈವಾರಾಧಕರು ಎಂತಲೂ ಗುರುತಿಸಬಹುದು. ಇಂದಿನ ಚಿನ್ನಮುಳುಗುಂದವೇ ಅಂದಿನ ಮುಗುಂದ.

ಇವರಿಗೆ ಸಂಬಂಧಿಸಿದ ಸು. 24 ಶಾಸನಗಳು ಲಭ್ಯವಿವೆ. 1017ರ ಕನವಳ್ಳಿ ಶಾಸನ ಈ ವಂಶದ ಅಸ್ಪಷ್ಟ ವಂಶಾವಳಿಯನ್ನು ನೀಡಿದೆ. ಈ ಶಾಸನ ಮೊದಲನೆಯದಾಗಿ ದೋಸಿ ಎಂಬಾತನನ್ನು ಉಲ್ಲೇಖಿಸಿದೆ. ಇವನ ಅನಂತರ ಸಿನ್ದನನ್ನು, ಸಿನ್ದನ ಅನಂತರ ಶಾಂತಿವರ್ಮನನ್ನು ಮುಂದೆ ಪಯ್ಯರ, ಸಿರಿಯಾಗರನನ್ನು ಉಲ್ಲೇಖಿಸಿದೆ. ಇಲ್ಲಿ ಪಯ್ಯರ ಮತ್ತು ಚಾರಕಬ್ಬೆ ಪುತ್ರ ಸಿರಯಾಗರ ಎಂಬುದನ್ನು ಬಿಟ್ಟರೆ ಇನ್ನುಳಿದವರ ನಡುವಿನ ಸಂಬಂಧ ಅಸ್ಪಷ್ಟವಾಗಿದೆ. 8ನೆಯ ಶತಮಾನದ ಶಾಸನವೊಂದು ದೋಸಿ ಎಂಬುವನು ಬಾದಾಮಿ ಚಳುಕ್ಯ ಕಾಲದಲ್ಲಿ ಮಾಂಡಳೀಕನಾಗಿದ್ದು ಮುಗುನ್ದವನ್ನಾಳುತ್ತಿದ್ದ ಉಲ್ಲೇಖವಿದೆ. ಮುಂದಿನ ಅವಧಿಯಲ್ಲಿ ಈ ಮುಗುನ್ದ ಮಾಟೂರು ಅರಸರ ಆಡಳಿತ ವ್ಯಾಪ್ತಿಯಲ್ಲಿದ್ದುದನ್ನು ಗಮನಿಸಬೇಕು. ಆದರೆ ಈ ದೋಸಿಯನ್ನು ವಿದ್ವಾಂಸರಾದ ನೇಗಿನಹಾಳರವರು ಸೇನವಾರರ ಅರಸ ಎಂದು ಗುರುತಿಸಿದ್ದಾರೆ. ದೋಸಿಯ ಅನಂತರ ಸಿದ್ಧ, ಶಾಂತಿವರ್ಮ (958–91), ಪಯ್ಯರ (ಪಯ್ಯರಸ) (1068–88), ಸಾಂತಯ್ಯ, ಆಲಯ್ಯ, ಜಯಸಂಘ, ಸತ್ಯಾಶ್ರಯ, ವಿಜಯಾದಿತ್ಯ ಮೊದಲಾದವರು ಈ ಮನೆತನದ ಪ್ರಮುಖ ಅರಸರಾಗಿ ಕಂಡುಬರುತ್ತಾರೆ. ಇವರು ಧಾರವಾಡ ಜಿಲ್ಲೆಯ ಹಾವೇರಿ, ರಾಣಿಬೆನ್ನೂರು ಹಾಗೂ ಹಿರೇಕೆರೂರು ತಾಲ್ಲೂಕಿನ ವ್ಯಾಪ್ತಿಯಲ್ಲಿಯೂ ಶಿವಮೊಗ್ಗ ಜಿಲ್ಲೆಯ ಸೊರಬ, ಸಾಗರ, ಶಿಕಾರಿಪುರ, ತೀರ್ಥಹಳ್ಳಿ, ಹೊಸನಗರದ ಕೆಲಭಾಗಗಳನ್ನು ಆಳುತ್ತಿದ್ದರು.

958ರ ದೇವಗೆರೆ ಶಾಸನ, 1033ರ ಕುಪ್ಪಗಡ್ಡೆ ಶಾಸನ, 938ರ ಓಟೂರ ಶಾಸನ, ಕದರ ಮಂಡಲಗಿ, ಉಕ್ಕುಂದ ಮೊದಲಾದ ಶಾಸನಗಳು ಈ ವಂಶಸ್ಥರ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮುಂತಾದ ಸಾಧನೆಗಳು ಹಾಗು ಕೊಡುಗೆಗಳ ಬಗೆಗೆ ವಿವರವಾದ ಮಾಹಿತಿಗಳನ್ನೊದಗಿಸುತ್ತವೆ. ಸು.200 ವರ್ಷಗಳಷ್ಟು ಕಾಲ ತಮ್ಮ ಆಡಳಿತ ಕ್ಷೇತ್ರಗಳಿಗೆ ವಿವಿಧ ರೀತಿಯ ಸೇವೆ ಸಲ್ಲಿಸಿದ ಮಾಟೂರ ಅರಸರಿಗೆ, ಕಲ್ಯಾಣ ಚಾಳುಕ್ಯ ಹಾಗೂ ಕದಂಬರ ವೈವಾಹಿಕ ಸಂಬಂಧದ ಕಾರಣವಾಗಿ ಬಹುಶಃ ಈ ಭಾಗಗಳ ಒಡೆತನ ಕೈಬಿಟ್ಟಿರಬೇಕು. ಅಲ್ಲದೆ ಬನವಾಸಿ ಪ್ರದೇಶ 4ನೆಯ ಶತಮಾನದಿಂದಲೇ ಕದಂಬರ ಒಡೆತನದಲ್ಲಿದ್ದು, ಆನಂತರದಲ್ಲಿ ಕೈತಪ್ಪಿದ್ದರೂ ಮತ್ತೆ ಮತ್ತೆ ಹಕ್ಕುಸ್ಥಾಪನೆಗಾಗಿ ಹೋರಾಟ ಪ್ರಯತ್ನ ನಡೆಸುತ್ತಿದ್ದುದು ಶಾಸನಗಳಿಂದ ತಿಳಿಯುತ್ತದೆ. 1198ರ ಹೊತ್ತಿಗಾಗಲೇ ಇವರ ಮುಖ್ಯ ನೆಲೆಯಾದ ಹೆದ್ದರಸೆಯನ್ನು ನೇಮಯ್ಯನೆಂಬುವನು ಆಕ್ರಮಿಸಿಕೊಂಡ ಉಲ್ಲೇಖ ಶಾಸನದಲ್ಲಿದೆ. ಆ ಹೊತ್ತಿಗೆ ಮಲ್ಲಯ್ಯ ಎಂಬುವನು ಎಡೆನಾಡ ಅಧಿಕಾರಿಯಾಗಿದ್ದ. ಇದು ಕದಂಬ ಕಾಮದೇವನ ಕಾಲದ ಶಾಸನ. (ಎಸ್.ಬಿಜಿ.)

**ಶಿಸುಗಲಿಯ ಪಾಂಡ್ಯರು:** ಉತ್ತರ ಕನ್ನಡ ಜಿಲ್ಲೆಯಲ್ಲಿ 10–12ನೆಯ ಶತಮಾನದವರೆಗೆ ಕಲ್ಯಾಣ ಚಾಳುಕ್ಯರ ಸಾಮಂತರಾಗಿ ಆಳಿಕೆ ನಡೆಸಿದ ಸ್ಥಳೀಯ ಅರಸು ಮನೆತನ. ಸೋಮವಂಶೀಯರಾದ ಇವರು ಗೋಕರ್ಣ ಮಹಾಬಳೇಶ್ವರ–ಪಾದ–ಪದ್ಮಾರಾಧಕ, ಬನವಾಸಿ ಪುರವರಾಧೀಶ್ವರ ಸೋಮಕುಳತಿಲಕ ಇತ್ಯಾದಿ ಬಿರುದುಗಳನ್ನು ಧರಿಸಿದ್ದನ್ನು ಶಾಸನಗಳು ತಿಳಿಸುತ್ತವೆ. ಶಿಸುಗಲಿಯ ಹೆಸರು ಇಂದು ಈ ಭಾಗದಲ್ಲಿ ಎಲ್ಲಿಯೂ ಕಾಣಲು ಸಿಗದಿರುವುದರಿಂದ ಕರಾವಳಿಯಲ್ಲಿನ ಗೋಕರ್ಣವೇ ಅಂದಿನ ಶಿಸುಗಲಿಯಾಗಿತ್ತೆಂದು ಸದಾನಂದನಾಯಕರವರು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಕೆಲವರು ಇಂದಿನ ಗುಂಡಬಾಳವೆ ಶಿಸುಗಲಿಯಾಗಿತ್ತೆಂದು ಹೇಳುತ್ತಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನಲ್ಲಿ ಸಸಿಗುಳಿ ಎಂಬ ಊರೊಂದಿದೆ. ಅಲ್ಲಿಯ ಐತಿಹಾಸಿಕ ಅವಶೇಷಗಳನ್ನು ಗಮನಿಸಿದರೆ ಈ ಸಸಿಗುಳಿಯೇ ಮೂಲದಲ್ಲಿ ಪಾಂಡ್ಯರ ರಾಜಧಾನಿಯಾಗಿರುವ ಸಾಧ್ಯತೆ ಇದೆ.

ಪಾಂಡ್ಯರ ಹೆಸರು ಅಶೋಕನ ಶಿಲಾಶಾಸನದಲ್ಲಿ ದೊರೆಯುತ್ತದೆ. ತಮಿಳಿನ ಸಂಗಂ ಸಾಹಿತ್ಯವೂ ಇವರ ವಿವರಣೆಯನ್ನು ಒದಗಿಸುತ್ತದೆ. ತಮಿಳುನಾಡಿನ ಉರೈಯೂರ್ ಮತ್ತು ಮಧುರೈ ಇವರ ರಾಜಧಾನಿಯಾಗಿತ್ತು. ಆದರೆ ಕರ್ನಾಟಕದಲ್ಲಿ ಆಳಿಕೆ ಮಾಡಿದ ಶಿಸುಗಲಿಯ ಪಾಂಡ್ಯರಾಗಲೀ ಅಥವಾ ಉಚ್ಚಂಗಿಯ ಪಾಂಡ್ಯರಾಗಲೀ ಎಲ್ಲಿಂದ ಬಂದರೆನ್ನುವುದಕ್ಕೆ ಆಧಾರಗಳು ಲಭ್ಯವಿಲ್ಲ. ದಕ್ಷಿಣ ಕನ್ನಡದಲ್ಲಿ ಆಳ್ವಿಕೆ ಮಾಡಿದ ಆಳುಪರೂ ತಮ್ಮನ್ನು ಪಾಂಡ್ಯ ಚಕ್ರವರ್ತಿಗಳೆಂದು ಕರೆದುಕೊಂಡಿದ್ದಾರೆ.

ಇಲ್ಲಿಯವರೆಗೆ ಶಿಸುಗಲಿ ಪಾಂಡ್ಯರಿಗೆ ಸಂಬಂಧಿಸಿದ ಒಟ್ಟು 15 ಶಾಸನಗಳು ದೊರೆಕಿವೆ. ಇವು ತಿಳಿಸುವಂತೆ ಇವರ ಮೊದಲನೆಯ ದೊರೆ ಚಂದ್ರ. ಈತನಿಗಿಂತ ಮೊದಲು ಆಳಿಕೆ ಮಾಡಿದವರ ಹೆಸರು ತಿಳಿದಿಲ್ಲ. ಇಲ್ಲಿ ಇವರಿಗಿಂತ ಪೂರ್ವದಲ್ಲಿ ಪಲ್ಲವರು ಆಳಿಕೆ ಮಾಡಿರುವ ವಿಷಯ ಶಾಸನಗಳಿಂದ ತಿಳಿಯುತ್ತದೆ. ಇದಕ್ಕೆ ಪೂರಕವಾಗಿ ಪಲ್ಲವರು ಪೈಯ್ವಿಗುಂದದಿಂದ (ಇಂದಿನ ಹೈಗುಂದ) ಆಳಿಕೆ ಮಾಡಿರುವುದಕ್ಕೆ ಶಾಸನ ದಾಖಲೆಗಳಿವೆ. ಹಲವು ಪಾಂಡ್ಯ ಅರಸರು ಆಳಿಕೆ ಮಾಡಿದ ಅನಂತರ ಚಂದ್ರನ (995–1020) ಆಳಿಕೆ ಪ್ರಾರಂಭವಾಯಿತು. ಚಂದ್ರನ ಅನಂತರ ಕಾಮ I (1020–45), ಚಂದ್ರ II (1045–70), ಕಾಮ II (1030–1113), ಮಲ್ಲಿದೇವ I (1113–19), ಬೊಪ್ಪದೇವ ಅಥವಾ ವಿಕ್ರಮತೈಲ (1119–25), ಮಲ್ಲಿದೇವ II (1125–45), ಪಟ್ಟಣದ ತೈಲವರ್ಮ (1145–83) ಮೊದಲಾದವರು ಆಳಿದರು. ಇವರ ಬಿರುದಾವಳಿಗಳು ಸ್ವಾರಸ್ಯಕರವಾಗಿವೆ. ಮತ್ತಲೆಸಿಂಘ, ಸಂಗ್ರಾಮ ಗರುಡ, ಗಡ್ಡರದಾವುಣಿ, ಮುಸಿವರಸೂಲ, ಪರಾಂಗನಾ ನದೀನನ್ದನ ತುಂಬೊಳ್ಳಿ ದೇವಾಲಯದ ವಿಷ್ಣುಮೂರ್ತಿಯು ಕಲ್ಯಾಣ ಚಾಳುಕ್ಯ ಶಿಲ್ಪಶೈಲಿಗಿಂತ ಭಿನ್ನವಾಗಿದ್ದು ವಿಶಿಷ್ಟವಾಗಿದೆ.

ಇವರ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕೊಡುಗೆಯೂ ಗಮನಾರ್ಹವಾದದ್ದು. ಕರ್ಣಾಟಕ ಕಾದಂಬರಿಯನ್ನು ಬರೆದ ಒಂದನೆಯ ನಾಗವರ್ಮ ಹತ್ತನೆಯ ಶತಮಾನದ ಕೊನೆಯಲ್ಲಿ ಹೈವೆಯಲ್ಲಿ ಆಳುತ್ತಿದ್ದ ಮೊದಲನೆಯ ಚಂದ್ರರಾಜನ ಆಶ್ರಯದಲ್ಲಿದ್ದ. ಇವರ ಆಡಳಿತದಲ್ಲಿ ಜೈನ ದಂಡಾಧಿಕಾರಿಗಳು ಹೆರವಟ್ಟ, ಮುಟ್ಟ, ಶಿಸುಗಲಿ ಮತ್ತು ವಿಜಯಪುರಗಳಲ್ಲಿ ಜೈನ ದೇವಾಲಯಗಳನ್ನು ನಿರ್ಮಿಸಿದ್ದ. ಇವುಗಳಲ್ಲಿ ಕೆಲವು ಇಂದಿಗೂ ತನ್ನ ಗತ ವೈಭವವನ್ನು ಸಾರುತ್ತಿವೆ. ಕೆಲವು ಅಧಿಕಾರಿ ಹುದ್ದೆಗಳಾದ ಹೆಗ್ಗಡೆ, ಅಕ್ಕಡಿಕೆಯ ಹೆಗ್ಗಡೆ, ಸೇನಬೋವ ಮಾರ್ತಂಡ, ತಳರ, ಸಂಧಿವಿಗ್ರಹಿ, ಮಹಾಪ್ರಧಾನ ದಂಡಾಧಿಪ, ಶ್ರೀಕರ್ಣ, ಮಹಾಪ್ರಚಂಡ, ಓಜ ಮೊದಲಾದವು ಅಂದಿನ ಆಡಳಿತ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತವೆ. ರಾಣಿಯರ ಜೊತೆಗೆ ಅಧಿಕಾರಿಗಳ ಮಡದಿಯರೂ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ರಾಣಿ ಕಾಳಲದೇವಿ ತುಂಬೊಳ್ಳಿಯಲ್ಲಿ ಕನ್ನೆದಾನದ ಅಗ್ರಹಾರವನ್ನು ನಿರ್ಮಿಸಿ ದತ್ತಿ ಬಿಟ್ಟರೆ, ವೀರ ಮಹಿಳೆ ಬನ್ದಿಯಬ್ಬೆ ಯುದ್ಧಭೂಮಿಯಲ್ಲಿ ಹೋರಾಡಿ ಹುತಾತ್ಮಳಾದ ನಿದರ್ಶನಗಳಿವೆ. (ಜಿಜಿ.ಎಸ್.)

**ಗುತ್ತರು:** ಕರ್ನಾಟಕದಲ್ಲಿ ಆಳಿದ ಒಂದು ಸಾಮಂತ ಮನೆತನ (ಸು.12–13ನೆಯ ಶತಮಾನ). ಗುತ್ತು ಎನ್ನುವ ಪದ ಗುಪ್ತ ಎಂಬ ಸಂಸ್ಕೃತ ಪದದಿಂದ ಬಂದಿರಬೇಕೆಂದು ಅನೇಕ ಚರಿತ್ರಾಕಾರರು ಅಭಿಪ್ರಾಯಪಟ್ಟಿದ್ದಾರೆ. ಗುತ್ತರ ಶಾಸನಗಳಲ್ಲಿ ಇವರಿಗೆ ಚಂದ್ರಗುಪ್ತ ವಂಶೋದ್ಭವ, ವಿಕ್ರಮಾದಿತ್ಯವಂಶೋದ್ಭವ, ಗುಪ್ತವಂಶತ್ರಿನೇತ್ರ, ಉಜ್ಜಯಿನೀಪುರವರಾಧೀಶ್ವರ, ಪಾಟಲೀಪುರವರಾಧೀಶ್ವರ ಎಂಬ ಬಿರುದುಗಳು ಇರುವುದು ಕಾಣಬರುತ್ತದೆ. ಆದ್ದರಿಂದ ಗುತ್ತರು ಗುಪ್ತವಂಶದ ಎರಡನೆಯ ಚಂದ್ರಗುಪ್ತನ ವಂಶದವರೆಂದೂ ಇವರು ಮೊದಲು ಉಜ್ಜಯಿನಿಯಲ್ಲಿ ಆಳುತ್ತಿದ್ದರೆಂದೂ ಕೆಲವರ ಮತ. ವಿಕ್ರಮಶಕೆಯನ್ನು ಸ್ಥಾಪಿಸಿದ ವಿಕ್ರಮಾದಿತ್ಯನೇ ಗುತ್ತರ ಮೂಲ ಪುರುಷ ಎಂದು ಮತ್ತೆ ಕೆಲವರ ವಾದ. ಇವರು ಪಾಟಲೀಪುತ್ರದಲ್ಲಿ ಆಳಿದ ಮೌರ್ಯದೊರೆ ಚಂದ್ರಗುಪ್ತನ ವಂಶಜರಾಗಿದ್ದಿರುವುದು ಸಾಧ್ಯವೆಂದು ಮತ್ತೆ ಕೆಲವರ ಅಭಿಪ್ರಾಯ. ಈ ವಾದಗಳೆಲ್ಲ ನಿಜವಲ್ಲವೆಂದೂ ಗುತ್ತರದು ಕರ್ನಾಟಕದಲ್ಲಿಯೇ ಬೆಳಕಿಗೆ ಬಂದ ಸಾಮಂತ ರಾಜಮನೆತನವೆಂದೂ ಇವರ ಮೂಲನಿವಾಸಸ್ಥಾನ ಉಜ್ಜಯಿನಿ

ಅಥವಾ ಪಾಟಲೀಪುತ್ರವಲ್ಲವೆಂದೂ ಇವರು ಕರ್ನಾಟಕದವರೆಂದೂ ಕೆಲವರ ಅಭಿಪ್ರಾಯ ಪಡುತ್ತಾರೆ. ಈ ವಾದದಲ್ಲಿಯೇ ಹೆಚ್ಚು ತಿರುಳಿರುವಂತೆ ತೋರುತ್ತದೆ. ಗುತ್ತವೊಳಲು ಇವರ ಸ್ಥಳ. ಈಗಿನ ರಾಣೆಬೆನ್ನೂರು, ಕರಜಗಿ ಮುಂತಾದ ಪ್ರದೇಶಗಳನ್ನೊಳಗೊಂಡ ಗುತ್ತವೊಳಲು ಪ್ರಾಂತ್ಯಕ್ಕೆ ಗುತ್ತವೊಳಲು ನಗರ ರಾಜಧಾನಿಯಾಗಿತ್ತು. ಈ ನಗರ ಕರಜಗಿಗೆ ಪೂರ್ವದಲ್ಲಿ 10 ಕಿಮೀ ದೂರದಲ್ಲಿದೆ.

ಮಹಾಗುತ್ತ ಅಥವಾ ಮಾಗುತ್ತನೇ ಈ ವಂಶದ ಮೊದಲ ದೊರೆ. ಇವನು ಬಹುಶಃ ಪ್ರ.ಶ.11ನೆಯ ಶತಮಾನದಲ್ಲಿ ಚಾಳುಕ್ಯರ ಸಾಮಂತನಾಗಿದ್ದಿರಬೇಕೆಂದು ಊಹೆ. ಇವನ ಅನಂತರ ಇವನ ಮಗನಾದ 1ನೆಯ ಗುತ್ತ ರಾಜನಾದ. ಇವನು ಹಾನುಗಲ್ ಕದಂಬರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಇವನಾದ ಅನಂತರ ಇವನ ಮಗನಾದ ಮಲ್ಲಿದೇವ ರಾಜನಾದ. ಇವನೊಬ್ಬ ಪ್ರಸಿದ್ಧರಾಜ. ಇವನು ಬನವಾಸಿಯ ರಾಜ್ಯಪಾಲ ಗೋವಿಂದರಸನ ಆಶ್ರಯದಲ್ಲಿ ಗುತ್ತವೊಳಲಿನಲ್ಲಿ ಆಳುತ್ತಿದ್ದ. ಮಲ್ಲಿದೇವ ಸಾಮಂತನಾಗಿಯೇ ಇದ್ದ. ಇವನ ಸಮಕಾಲೀನ ಹೊಯ್ಸಳ ದೊರೆ ವಿಷ್ಣುವರ್ಧನ ಇವನನ್ನು ಜಯಿಸಿದಂತೆ ಕಾಣಬರುವುದಿಲ್ಲ. 1139ರಲ್ಲಿ ಇವನು ಮರಣಹೊಂದಲು ಇವನ ಮಗನಾದ ಒಂದನೆಯ ವಿಕ್ರಮಾದಿತ್ಯ ರಾಜನಾದ. ಈ ವೇಳೆಗೆ ಕರ್ನಾಟಕದಲ್ಲಿ ಅನೇಕ ರಾಜಕೀಯ ಬದಲಾವಣೆಗಳುಂಟಾಗಿದ್ದುವು. ಚಾಳುಕ್ಯರ ಪ್ರಾಬಲ್ಯ ಕಡಿಮೆಯಾಗಿ, ಕಲ್ಯಾಣದ ಕಳಚುರಿಗಳು ತಲೆ ಎತ್ತುತ್ತಿದ್ದರು. ಬಹುಶಃ ವಿಕ್ರಮಾದಿತ್ಯ, ಇತರ ಸಾಮಂತ ರಾಜರಂತೆ ಚಾಳುಕ್ಯರನ್ನು ಕಡೆಗಣಿಸಿ ಕಳಚುರಿಗಳ ಸಾಮಂತನಾಗಿರಬೇಕು. ಇವನು ಸು.1170ರಲ್ಲಿ ಮರಣಹೊಂದಿದ. ಇವನ ಮಗನಾದ 1ನೆಯ ಜೋಯಿದೇವ ರಾಜನಾದ. 1179 ಮತ್ತು 1181ರಲ್ಲಿ ಇವನು ಬರೆಯಿಸಿದ ಎರಡು ಶಾಸನಗಳಲ್ಲಿ ಇವನು ಕಳಚುರಿ ದೊರೆಗಳಾದ ಸಂಕಮದೇವ ಮತ್ತು ಆಹವಮಲ್ಲರ ಅಧೀನದಲ್ಲಿ ಮಹಾಮಂಡಲೇಶ್ವರನಾಗಿದ್ದನೆಂದು ಹೇಳಿದೆ. ಇಷ್ಟರಲ್ಲಿ ಕಳಚುರಿಗಳ ಪ್ರಾಬಲ್ಯ ಕಡಿಮೆಯಾಗಿ ಚಾಳುಕ್ಯರು ಮತ್ತೆ ತಲೆ ಎತ್ತಿದ್ದರು. ಇದನ್ನು ಗಮನಿಸಿದ ಜೋಯಿದೇವ ಕಳಚುರಿಗಳನ್ನು ಕಡೆಗಣಿಸಿ, ಚಾಳುಕ್ಯರ ಸಾಮಂತನಾದ. ಇವನ ರಾಜ್ಯಕ್ಕೆ ನಾಗರಖಂಡ ಪ್ರಾಂತ್ಯದ ಕೆಲವು ಭಾಗಗಳು ಸೇರಿದ್ದುವು.

ಜೋಯಿದೇವನ ಮರಣಾನಂತರ ಇವನ ಸಹೋದರನ ಮಗನಾದ 2ನೆಯ ವಿಕ್ರಮಾದಿತ್ಯ 1185ರಲ್ಲಿ ರಾಜನಾದ. ಇವನು ಗುತ್ತರಲ್ಲೆಲ್ಲ ಅತ್ಯಂತ ಶ್ರೇಷ್ಠನಾದ ಮಹಾಮಂಡಲೇಶ್ವರ. ಇವನು ರಾಜನಾದಾಗ ಕರ್ನಾಟಕದ ರಾಜಕೀಯದಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳನೂ ಸೇವುಣ 5ನೆಯ ಭಿಲ್ಲಮನೂ ತಮ್ಮ ತಮ್ಮಲ್ಲೇ ಯುದ್ಧಗಳನ್ನು ಮಾಡುತ್ತಿದ್ದರು. ಇದರಿಂದ ಇವರಿಬ್ಬರಿಗೂ ಗುತ್ತರನ್ನು ಸೋಲಿಸುವಷ್ಟು ವ್ಯವಧಾನವಿರಲಿಲ್ಲ. ಇದನ್ನು ಗಮನಿಸಿದ ವಿಕ್ರಮಾದಿತ್ಯ ಸ್ವತಂತ್ರನಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದ. ಇವನ ಈ ಕಾಲದ ಶಾಸನಗಳಲ್ಲಿ ಹೊಯ್ಸಳರ ಅಥವಾ ಸೇವುಣರಾಜರ ಉಲ್ಲೇಖವೇ ಕಾಣುವುದಿಲ್ಲ. 1233ರಲ್ಲಿ ಬರೆಸಲಾದ ಕನಕವಳ್ಳಿಯ ಶಾಸನದಲ್ಲಿ ಮಹಾಮಂಡಲೇಶ್ವರ ವಿಕ್ರಮಾದಿತ್ಯ ತನ್ನ ಪ್ರಧಾನಿ ಯೊಂದಿಗೆ ಬನವಾಸಿ ನಾಡನ್ನು ಆಳುತ್ತಿದ್ದನೆಂದು ಹೇಳಿದೆ. ಬಹುಶಃ ಇವನು ತನ್ನ ಮರಣ ದವರೆಗೂ ಸ್ವತಂತ್ರನಾಗಿಯೇ ಇದ್ದನೆಂದು ತೋರುತ್ತದೆ. ಇವನಿಗೆ ಪಟ್ಟಮಹಾದೇವಿ ಎಂಬ ರಾಣಿಯಿಂದ ಜೋಯಿದೇವ, ವಿಕ್ರಮಾದಿತ್ಯ ಮತ್ತು ತುಳುವಲಾದೇವಿ ಎಂಬ ಮಕ್ಕಳಿದ್ದರು. ವಿಕ್ರಮಾದಿತ್ಯನ ಮರಣಾನಂತರ 2ನೆಯ ಜೋಯಿದೇವ 1233ರಲ್ಲಿ ದೊರೆಯಾದ. ಈ ಸಮಯದಲ್ಲಿ ಸೇವುಣ 2ನೆಯ ಸಿಂಘಣನ ಅತ್ಯಂತ ಬಲಿಷ್ಠನಾಗಿ ಕರ್ನಾಟಕದ ಬಹು ಭಾಗವನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದ. ಗುತ್ತ ಎರಡನೆಯ ಜೋಯಿದೇವನನ್ನು ಸಿಂಘಣನ ಮಂತ್ರಿಯಾದ ಬೀಚ ತನ್ನ ಅಧೀನಕ್ಕೆ ತಂದ. 1238ರಲ್ಲಿ ಬರೆಸಲಾದ ಶಾಸನವೊಂದರಲ್ಲಿ 2ನೆಯ ಜೋಯಿದೇವ ಸಿಂಘಣನ ಪಾದಪದ್ಮೋಪಜೀವಿ ಎಂದು ಹೇಳಿಕೊಂಡಿದ್ದಾನೆ. ಸೇವುಣರ ಪರವಾಗಿ ಸಿಂಘಣ ತನ್ನ ದಂಡನಾಯಕ ಚಿಕ್ಕದೇವನನ್ನು ಗುತ್ತವೊಳಲಿನಲ್ಲಿ ಇರಿಸಿದ. ಜೋಯಿದೇವ 1248ರಲ್ಲಿ ಮರಣಹೊಂದಿದಾಗ ಅವನ ತಮ್ಮನಾದ 3ನೆಯ ವಿಕ್ರಮಾದಿತ್ಯ ಮಹಾಮಂಡಲೇಶ್ವರನಾದ. ಈತ ಸೇವುಣ ದೊರೆ ಕೃಷ್ಣನ ಆಶ್ರಯದಲ್ಲಿದ್ದ. 3ನೆಯ ಗುತ್ತದೇವ, ಹಿರಿಯದೇವ ಮತ್ತು 3ನೆಯ ಜೋಯಿದೇವ ಇವರು ವಿಕ್ರಮಾದಿತ್ಯನಿಗೆ ರಾಣಿ ಮೈಲಾಳದೇವಿಯಿಂದ ಜನಿಸಿದ ಮಕ್ಕಳು. ವಿಕ್ರಮಾದಿತ್ಯನ ಮರಣಾನಂತರ ಇವನ ಜ್ಯೇಷ್ಠಪುತ್ರ 3ನೆಯ ಗುತ್ತ 1259ರಲ್ಲಿ ಮಹಾಮಂಡಲೇಶ್ವರನಾದ. ಇವನು ಸ್ವಲ್ಪಕಾಲದಲ್ಲಿಯೇ ಸೇವುಣ ಕೃಷ್ಣನ ಆಧಿಪತ್ಯದಿಂದ ಸ್ವತಂತ್ರನಾಗಲು ಹವಣಿಸಿದ. ಆದರೆ ಕೃಷ್ಣ ತನ್ನ ಸೇನಾಧಿಪತಿ ಗಳನ್ನು ಕಳುಹಿಸಿ ಈ ಪ್ರಯತ್ನವನ್ನು ಅಡಗಿಸಿದ. ಇಷ್ಟರಲ್ಲಿ ಸೇವುಣ ಕೃಷ್ಣ ಮರಣ ಹೊಂದಿ ಮಹಾದೇವ ಸೇವುಣ ರಾಜನಾಗಿದ್ದ. ಮಹಾದೇವ ಸಾಳುವ ತಿಕ್ಕಮನೆಂಬ ದಳಪತಿಯ ನೇತೃತ್ವದಲ್ಲಿ ಹೊಯ್ಸಳರ ಮೇಲೆ ಒಂದು ಸೈನ್ಯವನ್ನು ಕಳುಹಿಸಿದ. ಈ ಸೈನ್ಯ ಗುತ್ತವೊಳಲಿಗೆ ಬಂದು ಅಲ್ಲಿ ತಂಗಿತು. ಇಷ್ಟರಲ್ಲಿ ಸೇವುಣ ರಾಮಚಂದ್ರ ದೊರೆಯಾಗಿದ್ದ. ರಾಮಚಂದ್ರನ ಆದೇಶದಂತೆ ಗುತ್ತರಾಜ ಸಾಳುವ ತಿಕ್ಕಮನಿಗೆ ಸೈನ್ಯ ಸಹಾಯವನ್ನು ಒದಗಿಸಿದ. ಈ ಯುದ್ಧದಲ್ಲಿ ಸಹಾಯ ನೀಡುವುದರಲ್ಲಿಯೇ ಗುತ್ತನ ಕಾಲವೆಲ್ಲ ಕಳೆಯಿತು. ಸು.1280ರಲ್ಲಿ ಇವನು ಮರಣಹೊಂದಿದ. ಇವನ ಅನಂತರ ಇವನ ಸಹೋದರರು ಮಹಾಮಂಡಲೇಶ್ವರ ರಾಜರಾಗಿದ್ದರೇ ಎಂಬುದು ಖಚಿತವಾಗಿ ಗೊತ್ತಿಲ್ಲ. ಆದರೆ ಇವನ ತಮ್ಮ ಮೂರನೆಯ ಜೋಯಿದೇವನ ಮಗ 4ನೆಯ ವಿಕ್ರಮಾದಿತ್ಯ 1283ರಲ್ಲಿ ಸೇವುಣ ರಾಮಚಂದ್ರನ ಆಶ್ರಯದಲ್ಲಿದ್ದನೆಂದು ಹಿರೇಬಿದ್ರಿ ಎಂಬಲ್ಲಿ ದೊರಕಿರುವ ಶಾಸನದಿಂದ ಗೊತ್ತಾಗುತ್ತದೆ. ಇವನು ತನ್ನ ರಾಣಿ ಪದ್ಮಲಾದೇವಿಯ ಸಮೇತ ಕಲ್ಲಿನಾಥ ದೇವಾಲಯಕ್ಕೆ ಕೆಲವು ದತ್ತಿಗಳನ್ನು ಬಿಟ್ಟ ವಿಚಾರವನ್ನು ಈ ಶಾಸನ ತಿಳಿಸುತ್ತದೆ. ಈ ವಿಕ್ರಮಾದಿತ್ಯ ಎಲ್ಲಿಯವರೆಗೆ ಆಳಿದನೆಂಬುದು ತಿಳಿದಿಲ್ಲ. ಬಹುಶಃ ರಾಮಚಂದ್ರ ಮಹಮ್ಮದೀಯರಿಗೆ ಸೋತ ಅನಂತರ ಗುತ್ತರ ವಂಶವೂ ನಾಶವಾಗಿರಬೇಕೆಂದು ಊಹಿಸಬಹುದು.



(ಎ.ವಿ.ಎನ್.)

**ಸಂತೆಬೆನ್ನೂರು ನಾಯಕರು:** ವಿಜಯನಗರ ಸಾಮ್ರಾಜ್ಯದ ಕಡೆಯ ದಿನಗಳಲ್ಲಿ ಸಂತೆಬೆನ್ನೂರನ್ನು ಕೇಂದ್ರವಾಗಿಟ್ಟುಕೊಂಡು ಈಗಿನ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು, ಹಾವೇರಿ ಜಿಲ್ಲಾ ವ್ಯಾಪ್ತಿಯ ಅನೇಕ ಭೂಭಾಗವನ್ನು ಆಳಿದ ಒಂದು ಸಾಮಂತ ಮನೆತನ. ಈ ನಾಯಕರಿಗೆ ಸಂಬಂಧಿಸಿದಂತೆ ಈವರೆಗೆ 54ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಇದಲ್ಲದೆ ಈ ವಂಶಸ್ಥರು ಬರೆಸಿದ ಕೈಫಿಯತ್ತುಗಳು ಮತ್ತಿತರ ದಾಖಲೆಗಳಿಂದ ಈ ನಾಯಕ ವಂಶಾವಳಿಯ ಆಡಳಿತ, ಕಾಲ, ವ್ಯಾಪ್ತಿ, ಕೊಟ್ಟ ದಾನ ದತ್ತಿ, ಕಟ್ಟಿಸಿದ ಕೆರೆ, ಕೊಳ, ದೇವಸ್ಥಾನ–ಇವುಗಳ ಬಗೆಗೆ ಮಾಹಿತಿಗಳು ದೊರೆಯುತ್ತವೆ.

ವಿಜಯನಗರ ಅರಸರ ಸೈನ್ಯಾಧಿಕಾರಿಯಾಗಿದ್ದ ಧೂಮರಾಜನಿಗೆ ಕೆಂಗಪ್ಪ ಮತ್ತು ರಾಮಪ್ಪ ಎಂಬ ಇಬ್ಬರು ಮಕ್ಕಳು. ಕೆಂಗಪ್ಪ ಬಸವಾಪಟ್ಟಣದಲ್ಲಿ ನೆಲೆ ನಿಂತು ಕೋಟೆ ಕಟ್ಟಿಸಿ, ತನ್ನ ಪಾಳೆಯ ಪಟ್ಟು ವಿಸ್ತರಿಸಿದ. ಇವನ ಮಗ ಹನುಮಪ್ಪನಾಯಕ ತಾಳಿಕೋಟೆ ಯುದ್ಧದಲ್ಲಿ ಭಾಗವಹಿಸಿ ವಿಜಯನಗರ ಅರಸರ ಕೃಪಾಕಟಾಕ್ಷಕ್ಕೆ ಬಿದ್ದುದರ ಕಾರಣ ಮದಕರಿನಾಡಿನ ಸಂತೆಬೆನ್ನೂರು ಪ್ರಾಂತವನ್ನು ಅಮರ ಮಾಗಣಿಯಾಗಿ ಪಡೆದ. ಇವನಿಗೆ ಕೆಂಗಾ ಹನುಮಪ್ಪನಾಯಕನೆಂದೂ ಕರೆಯಲಾಗುತ್ತದೆ. ಇವನು ಸಂತೆಬೆನ್ನೂರನ್ನು ರಾಜಧಾನಿಯಾಗಿಟ್ಟುಕೊಂಡು ಅಲ್ಲಿ ಕೋಟೆ, ಅರಮನೆ, ಶ್ರೀರಾಮಚಂದ್ರ ದೇವಸ್ಥಾನ, ಶ್ರೀರಾಮತೀರ್ಥ ಎಂಬ ಪುಷ್ಕರಣಿ, ಆಂಜನೇಯ ದೇವಸ್ಥಾನ ಮುಂತಾದವುಗಳನ್ನು ಕಟ್ಟಿಸಿ ತಮ್ಮ ವಂಶದ ಆಡಳಿತಕ್ಕೆ ಭದ್ರಬುನಾದಿ ಹಾಕಿದ. ಮುಂದೆ ಬಿಜಾಪುರದ ಆದಿಲ್‌ಶಾಹಿ ದಂಡನಾಯಕ ರಣದುಲ್ಲಾಖಾನ್ ಸಂತೆಬೆನ್ನೂರಿನ ಮೇಲೆ ದಂಡೆತ್ತಿ ಬಂದು ಇವರು ಕಟ್ಟಿಸಿದ ಕೋಟೆ, ಶ್ರೀರಾಮಚಂದ್ರ ದೇವಸ್ಥಾನವನ್ನು ಕೆಡವಿದ್ದಲ್ಲದೆ, ಆಗ ಆಡಳಿತ ನಡೆಸುತ್ತಿದ್ದ

ಹಿರೇ ಹನುಮಪ್ಪನಾಯಕನನ್ನು ಕೈವಶ ಮಾಡಿಕೊಂಡು ಬಿಜಾಪುರಕ್ಕೆ ಎಳದೊಯ್ದು. ಆಗ ಬಾಣಾವರದಲ್ಲಿ ಆಡಳಿತ ನಡೆಸುತ್ತಿದ್ದ ಅವನ ತಮ್ಮ ಚಿಕ್ಕ ಹನುಮಪ್ಪನಾಯಕ ಈ ಸುದ್ದಿ ತಿಳಿದು ಬಿಜಾಪುರಕ್ಕೆ ಹೋಗಿ ಸಮಯ ಕಾದು ಅಲ್ಲಿಯ ಸುಲ್ತಾನನು ಏರ್ಪಡಿಸಿದ್ದ ಹುಲಿಯಕಾಳಗದಲ್ಲಿ ಹುಲಿಯನ್ನು ಕೊಂದು, ರಾಜನ ಮೆಚ್ಚುಗೆ ಗಳಿಸಿ ಅವನಿಂದ ಸರ್ಜಾ ಎಂಬ ಬಿರುದು ಪಡೆದುದಲ್ಲದೆ ಮರಳಿ ಸಂತೆಬೆನ್ನೂರನ್ನು ತಮ್ಮ ವಶಕ್ಕೆ ಪಡೆದುಕೊಂಡ. ಸೆರೆಯಲ್ಲಿದ್ದ ಅಣ್ಣನನ್ನು ಬಿಡಿಸಿಕೊಂಡು ಸಂತೆಬೆನ್ನೂರಿಗೆ ವಾಪಸ್ಸು ಬಂದ. ಸಂತೆಬೆನ್ನೂರಿಗೆ ಹಿಂತಿರುಗಿದಾಗ ಅಲ್ಲಿ ಶ್ರೀರಾಮಚಂದ್ರ ದೇವಾಲಯವಿದ್ದ ಜಾಗದಲ್ಲಿ ಮಸೀದಿ ನಿರ್ಮಾಣವಾಗಿರುವುದನ್ನು ಕಂಡು ಅದನ್ನು ಹಾಳುಗೆಡವಿ ತನ್ನ ಸೇಡನ್ನು ತೀರಿಸಿಕೊಂಡ. ಹೀಗಾಗಿ ಅವನಿಗೆ ಪುಂಡಾ ಹನುಮಪ್ಪನಾಯಕನೆಂಬ ಹೆಸರೂ ಇತ್ತು. ಅನಂತರ ನಾಯಕರು ಸಂತೆಬೆನ್ನೂರಿನಲ್ಲಿ ಇರಲು ಇಚ್ಛಿಸದೆ ತಮ್ಮ ರಾಜಧಾನಿಯನ್ನು ತರೀಕೆರೆಗೆ ಬದಲಾಯಿಸಿಕೊಂಡರು. ತರೀಕೆರೆಗೆ ಹೋದ ಅನಂತರ ಬಿಜಾಪುರ ಸುಲ್ತಾನರ ಅಧೀನದಲ್ಲಿಯೇ ಆಡಳಿತ ಮುಂದುವರಿಸಿದರು. ತಮ್ಮ ಹೆಸರಿನ ಮುಂದೆ ಸರ್ಜಾ ಎಂಬ ಬಿರುದನ್ನು ಧರಿಸಿದರು.

ತರೀಕೆರೆಯನ್ನು ಕೇಂದ್ರವಾಗಿಟ್ಟುಕೊಂಡು ಈ ನಾಯಕರು ಹೈದರ ದಂಡಯಾತ್ರೆಯ ವರೆಗೂ ಆಡಳಿತ ನಡೆಸಿಕೊಂಡು ಬಂದರು. ಹೈದರ್ ತರೀಕೆರೆ ಗೆದ್ದಾಗ ಪೊಗದಿ ಕೊಡಲು ಒಪ್ಪಿ ಅವನಿಗೆ ಅಧೀನರಾಗಿ ಆಡಳಿತ ಮುಂದುವರೆಸಿದರು. ಆದರೆ ಮುಂದೆ ಟಿಪ್ಪುಸುಲ್ತಾನನ ಕಾಲದಲ್ಲಿ ನಿಗದಿಮಾಡಿದ್ದ ಖಂಡಣಿ ಹಣ ಸಮಯಕ್ಕೆ ಸರಿಯಾಗಿ ಪಾವತಿಸದೆ ಇದ್ದುದರಿಂದ, ಟಿಪ್ಪು ಇವರನ್ನು ಪದಚ್ಯುತಿಗೊಳಿಸಿ, ಇವರ ಅಧೀನ ಪ್ರದೇಶಗಳನ್ನು ಮೈಸೂರು ಪ್ರಾಂತ್ಯಕ್ಕೆ ಸೇರಿಸಿಕೊಂಡ. ಅನಂತರ ಬ್ರಿಟಿಷರ ಆಧಿಪತ್ಯ ಆರಂಭಗೊಂಡಾಗ ಇವರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಅವರ ವಿರುದ್ಧವೂ ಹೋರಾಡಿ, ಅವರೊಂದಿಗೆ ಸಮಬಲವಾಗಿ ಕಾದಲಾಗದೆ ತಮ್ಮ ಸಂಪೂರ್ಣ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. ಇವರ ಸ್ವತಂತ್ರ ಸ್ಥಾನಮಾನಕ್ಕೆ ಚ್ಯುತಿ ಬಂದಿತು.

ಕೂಡಲಿಯಲ್ಲಿ ದೊರೆತ ಒಂದು ತಾಮ್ರಶಾಸನ ಶ್ರೀಮತ್ ಸಂತೆಬೆನ್ನೂರು ರಾಮಚಂದ್ರ ದೇವರ ನಿಜ ಭಕ್ತರಾದ ವಾಲ್ಮೀಕಿಗೋತ್ರದ ಪೂವಲಾನ್ವಯ ಎಂದು ಈ ರಾಜವಂಶದ ಪ್ರವರವನ್ನು ತಿಳಿಸುತ್ತದೆ. ಚನ್ನಗಿರಿ ಮತ್ತು ತರೀಕರೆಗಳಲ್ಲಿ ದೊರೆತ ಶಾಸನಗಳಲ್ಲಿ ಪೂವಲ ವಂಶಸ್ಥರೆಂದು ಇವರು ತಮ್ಮನ್ನು ಕರೆದುಕೊಂಡಿದ್ದಾರೆ. ಇದರಿಂದ ಇವರು ಬೇಡರ ಕುಲದವರೆಂದು ತಿಳಿಯಬಹುದು. ಇವರ ಕುರಿತು ಬರೆದ ಒಂದು ಹಳೆಯ ಕೈ ಬರಹ ಪ್ರತಿಯಲ್ಲಿ ವಾಲ್ಮೀಕಿ ವರ್ಣಾಶ್ರಮ ಭಾಸ್ಕರ ಎಂದು ನಿರೂಪಿಸಿದ್ದು, ತಾವು ಪ್ರಸಿದ್ಧಿ ಪಡೆದ ವಾಲ್ಮೀಕಿ ವಂಶಸ್ಥರೆಂದು ಹೇಳಿಕೊಂಡಿದ್ದಾರೆ. ಪೌರಾಣಿಕ ಪ್ರಸಿದ್ಧಿ ಪಡೆದ ಬೇಡರ ಕಣ್ಣಪ್ಪ ಈ ವಂಶಸ್ಥನೆಂದೂ ಅವನಿಂದ ಬೆಳೆದು ಬಂದ ವಂಶ 24 ಬೆಡಗುಗಳಾದುವೆಂದೂ ಇವುಗಳಲ್ಲಿ ಪುವ್ವಲ ಎಂದರೆ ಬೆಡಗು, ಶಾಖೆ ಎಂತಲೂ ಹೇಳಲಾಗುತ್ತದೆ. ಇನ್ನೊಂದು ಅರ್ಥದಲ್ಲಿ ಪುವ್ವಲ ಎಂದರೆ ಸುಂದರ, ಸೂರ್ಯ ಎಂದೂ ಅರ್ಥವಿದೆ. ಇವರು ಸೂರ್ಯ ವಂಶಸ್ಥರೆಂಬುದು ಇವರ ವಂಶದ ಬಗ್ಗೆ ಒಂದು ಕಾವ್ಯವನ್ನು ಬರೆದ ಕೃಷ್ಣಶರ್ಮನ ಅಭಿಪ್ರಾಯ. ರಾಜಭಕ್ತಿ ಪ್ರತೀಕವಾಗಿ ಈ ರೀತಿ ಕರೆದುಕೊಂಡಿರಬಹುದೆಂದು ಕೆಲವರ ಅಭಿಪ್ರಾಯ.

ಇವರು ತಮ್ಮ ತಾಮ್ರ ಶಾಸನದಲ್ಲಿ ಶ್ರೀರಾಮ ಎಂಬ ಅಂಕಿತವನ್ನು ಬಳಸಿದ್ದಾರೆ. ವಿಜಯನಗರ ಅರಸರ ಅಧೀನರಾದ ಇವರು ಅವರ ಪದ್ಧತಿಯನ್ನೇ ಅನುಸರಿಸಿದ್ದು, ಅವರಂತೆಯೇ ವರಾಹ ಲಾಂಛನವನ್ನು ಬಳಸುತ್ತಿದ್ದರು. ಈ ನಾಯಕರು ವಿಜಯನಗರದ ಪತನಾನಂತರ ಸ್ವತಂತ್ರ ಆಡಳಿತಗಾರರಾಗಿ ಕಾರ್ಯ ನಿರ್ವಹಿಸಿದರು. ಅನಂತರ ಬಿಜಾಪುರದ ಆದಿಲ್‌ಶಾಹಿ, ಕೆಳದಿ, ಚಿತ್ರದುರ್ಗ, ಕೆಲಕಾಲ ಮೈಸೂರು, ಹೈದರ್ ಹಾಗೂ ಟಿಪ್ಪು ಮುಂತಾದ ಅರಸರ ಅಧೀನರಾಗಿ ಅನಂತರ ಬ್ರಿಟಿಷರ ಆಧಿಪತ್ಯ ಆರಂಭವಾದಾಗ ಅವರ ವಿರುದ್ಧವಾಗಿ ಹೋರಾಡಿ ಕೊನೆಗೆ ತಮ್ಮ ಅಸ್ತಿತ್ವ ಕಳೆದುಕೊಂಡರು.

ಇವರು ಬಸವಾಪಟ್ಟಣ, ಸಂತೆಬೆನ್ನೂರು, ತರೀಕೆರೆಗಳಿಂದ ಆಡಳಿತ ನಡೆಸುತ್ತಿರುವಾಗಲೂ ತಮ್ಮನ್ನು ಸಂತೆಬೆನ್ನೂರು ನಾಯಕರೆಂದೇ ಶಾಸನದಲ್ಲಿ ಕರೆದುಕೊಂಡಿದ್ದಾರೆ. ವಿಜಯನಗರದ ಕಡೆಯ ದಿನಗಳಲ್ಲಿ ಅವರ ಅಧೀನರಾಗಿ ಆಡಳಿತ ನಡೆಸಿದ, ಬಸವಾಪಟ್ಟಣದಲ್ಲಿ ತಮ್ಮ ವಂಶದ ಪಾಳೆಪಟ್ಟು ಆರಂಭಿಸಿದ ಈ ನಾಯಕರು ತಮ್ಮ ಆಡಳಿತವನ್ನು ಅಲ್ಲಿ ಸು. 80 ವರ್ಷಗಳೂ ಅನಂತರ ಸಂತೆಬೆನ್ನೂರಿನಿಂದ ಒಂದು ಶತಮಾನ ಕಾಲವೂ ಅನಂತರ ತರೀಕೆರೆಯಿಂದ 150 ವರ್ಷಗಳ ಕಾಲ ಆಳ್ವಿಕೆ ನಡೆಸಿ ತಮ್ಮ ರಾಜ್ಯವನ್ನು ಪೂರ್ವದ ಚಿತ್ರದುರ್ಗದಿಂದ ಪಶ್ಚಿಮದ ತೀರ್ಥರಾಜಪುರದವರೆಗೂ ದಕ್ಷಿಣದ ಬಾಬಾ ಬುಡನ್‌ಗಿರಿ ತಪ್ಪಲಿನಿಂದ ಉತ್ತರದ ಹಾವೇರಿ ಜಿಲ್ಲೆಯ ಕದರಮಂಡಳಿಯವರೆಗೂ ವಿಸ್ತರಿಸಿ ಆಡಳಿತ ನಡೆಸುತ್ತಿದ್ದುದಾಗಿ ಶಾಸನಗಳು ತಿಳಿಸುತ್ತವೆ. ಇವರ ಶಾಸನಗಳಲ್ಲಿ ಇಮ್ಮಡಿ, ಮುಮ್ಮಡಿ, ನಿಚ್ಚಮದುವಣಿಗ, ಸರಜಾ, ಕೆಂಗಾ ಎಂಬ ಬಿರುದುಗಳುಳ್ಳ ಹೆಸರುಗಳೂ ದೊರೆಯುತ್ತವೆ. ವೀರಪ್ರತಾಪ ವೆಂಕಟಪತಿ ದೇವರ ಕಾಲದ ಒಂದು ಶಾಸನದಲ್ಲಿ ವಿಜಯನಗರ ಅರಸರ ದಕ್ಷಿಣ ಭುಜದಂಡರು ಎಂದು ವರ್ಣಿಸಲ್ಪಟ್ಟಿವೆ. ಈ ವಂಶದಲ್ಲಿ ಧೂಮರಾಜ, ಕೆಂಗಪ್ಪನಾಯಕ, ಬಿಲ್ಲಪ್ಪ ನಾಯಕ, ಕೆಂಗಾ ಹನುಮಪ್ಪನಾಯಕ, ಚಿಕ್ಕ ಕೆಂಗಾ ಹನುಮಪ್ಪನಾಯಕ, ಸೀತಾ ರಾಮಪ್ಪನಾಯಕ, 2ನೆಯ ಹನುಮಪ್ಪನಾಯಕ, 3ನೆಯ ಹನುಮಪ್ಪನಾಯಕ, ನಿಚ್ಚ ಮದುವಣಿಗ ಹನುಮಪ್ಪನಾಯಕ, ದಳನಾಯಕ, ಬಾಲಗಿರಿನಾಯಕ, ರಾಜಪ್ಪನಾಯಕ, ಹುಚ್ಚ ಹನುಮಪ್ಪ ನಾಯಕ, ಸರ್ಜಪ್ಪನಾಯಕ, ಸರ್ಜಾ ಹನುಮಪ್ಪನಾಯಕ, ರಂಗಪ್ಪನಾಯಕ, ಕೃಷ್ಣಪ್ಪನಾಯಕ, ಬಾಳಪ್ಪನಾಯಕ, ಪಟ್ಟಾಭಿರಾಮಪ್ಪ ಮೊದಲಾದವರು ಪ್ರಖ್ಯಾತರಾಗಿ ಆಡಳಿತ ನಡೆಸುತ್ತಿದ್ದುದಾಗಿ ಶಾಸನಗಳಿಂದ ತಿಳಿದುಬರುತ್ತದೆ.

ಇವರು ಬೇಡವಂಶಕ್ಕೆ ಸೇರಿದವರಾಗಿದ್ದರೂ ಕೂಡಲಿ ಶೃಂಗೇರಿ ಮಠದ ಗುರುಗಳನ್ನು ತಮ್ಮ ರಾಜಗುರುಗಳನ್ನಾಗಿ ಮಾಡಿಕೊಂಡಿದ್ದಾಗಿ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಇವರ ಆಡಳಿತ ಭಾಷೆ ಕನ್ನಡವಾಗಿತ್ತು. ಇವರು ಬರೆಯಿಸಿದ ಎಲ್ಲ ಶಾಸನಗಳು ಕನ್ನಡ ಭಾಷೆ ಮತ್ತು ಲಿಪಿಯಲ್ಲಿವೆ. 17ನೆಯ ಶತಮಾನದ ಉತ್ತರಾರ್ಧದಲ್ಲಿ ಕೃಷ್ಣಶರ್ಮ ಎಂಬ ಕವಿ ಹನುಮೇಂದ್ರ ಯಶೋವಿಲಾಸ ಎಂಬ ಕಂದ ವೃತ್ತಿ ಷಟ್ಪದಿ ಸಾಂಗತ್ಯಗಳಿಂದ ಒಡಗೂಡಿದ ವಿಶಿಷ್ಟ ಚಂಪೂ ಶೈಲಿಯ ಗ್ರಂಥ ಬರೆದಿದ್ದು, ಇದು ತರೀಕೆರೆಯಿಂದ ಆಳಿದ ಎರಡನೆಯ ಸರ್ಜಾ ಹನುಮಪ್ಪನಾಯಕನ ಕುರಿತಾದ ಐತಿಹಾಸಿಕ ಗ್ರಂಥವಾಗಿದೆ.

ರಾಜ್ಯವನ್ನು ವೇಂಠೆ, ನಾಡು, ಸೀಮೆ, ಹೋಬಳಿ, ಗ್ರಾಮ ಇತ್ಯಾದಿಗಳಾಗಿ ವಿಂಗಡಿಸಿ ಆಡಳಿತ ನಡೆಸಿದರು. ರಾಜ್ಯಾಡಳಿತ ಅಳತೆ, ತೂಕ, ನಾಣ್ಯ ಈ ಎಲ್ಲ ವಿಚಾರದಲ್ಲಿ ವಿಜಯನಗರ ಪದ್ಧತಿಯನ್ನೇ ಅನುಸರಿಸುತ್ತಿದ್ದರಾಗಿ ತಿಳಿದುಬರುತ್ತದೆ. ಬಾರಬಾಲೂತಿ ಕ್ರಮದಂತೆ ಆಡಳಿತ ನಡೆಸುತ್ತಿದ್ದರು. ಇವರ ಆಡಳಿತದಲ್ಲಿ ಪ್ರಧಾನಿ, ಮಂತ್ರಿ, ಭಂಡಾರಿ, ದಂಡನಾಯಕ, ದಳವಾಯಿ, ಕಾರ್ಯಕರ್ತ, ಪಟ್ಟಣ ಶೆಟ್ಟಿ, ರಾಯಭಾರಿ, ರಾಯಸದವ, ಶಾನಭೋಗ, ಪಟೇಲ, ಗೌಡ, ತಳವಾರ ಇತ್ಯಾದಿ ಅಧಿಕಾರಿಗಳಿದ್ದರೆಂದು ಶಾಸನಗಳಿಂದ ತಿಳಿಯಬಹುದು. ಇವರು ಉತ್ತಮ ಯೋಧರಾಗಿದ್ದು, ಇವರ ಬೇಡರ ಪಡೆಗೆ ವಿಜಯನಗರ ಕಾಲದಲ್ಲಿ ವಿಶೇಷ ಮಾನ್ಯತೆ ಇತ್ತು. (ಎಸ್.ಎನ್.ವಿ.)

**ಸವಣೂರು ಸಂಸ್ಥಾನ:** ಧಾರವಾಡ ಜಿಲ್ಲೆಯ ಸವಣೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳಿದ ಒಂದು ಸಾಮಂತ ಮನೆತನ. ಬಂಕಾಪುರದ ನವಾಬರು ಶ್ರಾವಣ ಮಾಸದಲ್ಲಿ ತಮ್ಮ ರಾಜಧಾನಿಯನ್ನು ಬಂಕಾಪುರದಿಂದ ಸವಣೂರಿಗೆ ಬದಲಾಯಿಸಿದ್ದರಿಂದ ಸವಣೂರು ಎಂಬುದಾಗಿರಬಹುದು. ಹಾವೇರಿ ತಾಲೂಕಿನ ಅಗಡಿ ಗ್ರಾಮದ 1081 ಮತ್ತು 1082ರ ಶಾಸನದಲ್ಲಿ ಸವಣೂರ ಅಗ್ರಹಾರ ಎಂಬ ಉಲ್ಲೇಖವಿದೆ. ಬಿಜಾಪುರದ ಬಾದಶಹನ ಸರದಾರ ಮುಸ್ತಫಾಖಾನ್ ದಂಡೆತ್ತಿ ಬಂದು ಬಂಕಾಪುರವನ್ನು ವಶಮಾಡಿಕೊಂಡ ಅನಂತರ ಅಬ್ದುಲ್ ಕರೀಮಖಾನ್ ಎಂಬ ಸರದಾರನನ್ನು ಬಂಕಾಪುರ ಪ್ರಾಂತಕ್ಕೆ ಆಡಳಿತಾಧಿಕಾರಿಯಾಗಿ ಮಾಡಿದ. ಇವನ ಮಗ ಅಬ್ದುಲ್ ರವೂಫಖಾನ್ ಬಿಜಾಪುರ ರಾಜ್ಯದ ಅವನತಿಯ ಅನಂತರ ಔರಂಗಜೇಬನ ಸರದಾರನಾದ. ರವೂಫಖಾನ್‌ನ ಶೌರ್ಯಕ್ಕೆ ಮೆಚ್ಚಿದ ಔರಂಗಜೇಬ ತನ್ನ ಪುತ್ರಿಯನ್ನು ಕೊಟ್ಟು ದಿಲೇರಜಂಗ್ ಬಹದೂರ್ ಎಂಬ ಬಿರುದು ನೀಡಿ 22 ಮಹಲುಗಳ ಜಹಗೀರು ಕೊಟ್ಟ. ಈ ನವಾಬರು ಮೂಲತಃ ಅಫ್ಘಾನಿಸ್ತಾನದಿಂದ ಬಂದವರು. ಇವನ ತಾತ ಬಹಲೋಲಖಾನ್ 2ನೆಯ ಮಹಮ್ಮದ ಆದಿಲ್‌ಷಾನ ಕಾಲದಲ್ಲಿ ಬಿಜಾಪುರಕ್ಕೆ ಬಂದ. ಸವಣೂರನ್ನು ರಾಜಧಾನಿಯನ್ನಾಗಿ ಮಾಡಿದ ಕೀರ್ತಿ ರವೂಫಖಾನನಿಗೆ ಸಲ್ಲುತ್ತದೆ. ಇವನ ಅವಧಿಯಲ್ಲಿ ದಲೇಲಪುರ, ಗುರುವಾರ ಪೇಟೆ, ಮಂಗಳವಾರ ಪೇಟೆ, ರಹವಂತಪುರ (ಶುಕ್ರವಾರ ಪೇಟೆ), ಕಸಬೆಯ ಭಾಜಿಕಬ್ಬಾ, ಶಹಬಜಾರ, ಕೋರಿಪೇಟೆ, ಬುಧವಾರ ಪೇಟೆ ಎಂದು ಎಂಟು ಪೇಟೆಗಳ ನಿರ್ಮಾಣವಾಯಿತು. ಸವಣೂರು ಸಂಸ್ಥಾನದಲ್ಲಿ ಊರಿನ ಸುತ್ತಲೂ ಕೋಟೆಯಿದ್ದು ಅದರ ಸುತ್ತಲೂ ಕಂದಕ ಇದೆ. ಎಂಟು ಕೋಟೆಯ ಬಾಗಿಲುಗಳು ಇಂದಿಗೂ ಉಳಿದುಕೊಂಡಿದ್ದು ಕ್ರಮವಾಗಿ ಹೆಬ್ಬಾಗಿಲು (ಅಗಸೆ), ಅಗಡಿ ದರವಾಜ, ದಿಲ್ಲಿ ದರವಾಜ, ಲಕ್ಷ್ಮೇಶ್ವರ ದರವಾಜ, ಫತೆ ದರವಾಜ, ತಲಾಬ ದರವಾಜ, ಹಿರಾಮನ ದಂಡಿ, ಬಂಕಾಪುರ ಬಾಗಿಲು ಎಂದು ಕರೆಯಲ್ಪಡುತ್ತವೆ.

ಹಿಂದೆ ಅಗ್ರಹಾರವಾಗಿದ್ದ ಸವಣೂರಿನಲ್ಲಿ ಜೈನ, ಶೈವ, ವೈಷ್ಣವ, ಇಸ್ಲಾಂಧರ್ಮಗಳು ಅಸ್ತಿತ್ವದಲ್ಲಿದ್ದುದರಿಂದ ವೆಂಕಟೇಶ್ವರ, ಹನುಮಂತ, ವೀರಭದ್ರ, ಉಡಚವ್ವ, ದುರ್ಗಾದೇವಿ ದೇವಾಲಯಗಳು ಕಂಡುಬರುತ್ತವೆ. ಆಸಾರ ಮಸೀದಿ, ಜಾಮೀ ಮಸೀದಿ, ಗಡೀ ಮಸೀದಿ, ಕಮಾನ ಬಂಗ್ಡಿ ಮಸೀದಿ, ಲಾಲಷಾ ಕಟ್ಟಾ ಮಸೀದಿ ಹಾಗೂ ದರ್ಗಾಗಳೂ ಕಂಡುಬರುತ್ತವೆ.

1730–1754ರ ವರೆಗಿನ ಅವಧಿಯಲ್ಲಿ ಸತ್ಯಬೋಧರು ಸವಣೂರಿಗೆ ಆಗಮಿಸಿದ್ದರು. ಆಗ ಅಬ್ದುಲ್ ಮಜೀದ ಖಾನ್ ಆಡಳಿತ ನಡೆಸುತ್ತಿದ್ದು ದಿವಾನನಾಗಿ ಕಾರ್ಯ ಮಾಡುತ್ತಿದ್ದ ಖಂಡೇರಾಯನು ಸತ್ಯಬೋಧರ ನಿವಾಸಕ್ಕಾಗಿ ಕಟ್ಟಿಸಿದ ಆ ಮಠವೇ ಇಂದು ಸತ್ಯಬೋಧ ಸ್ವಾಮಿಗಳ ಮಠ ಎಂಬ ಅಭಿಪ್ರಾಯವಿದೆ.

1885–92ರ ವರೆಗೆ ಆಡಳಿತ ನಿರ್ವಹಿಸಿದ ಅಬ್ದುಲ್ ತಬ್ರೆಜ್‌ಖಾನನ ಅವಧಿಯಲ್ಲಿ ಈ ಸತ್ಯ ಬೋಧ ಮಠದ ನೆಲ ಮಾಳಿಗೆಯಲ್ಲಿ ಬಂಗಾರ–ಬೆಳ್ಳಿಯ ನಾಣ್ಯ ತಯಾರಿಸುವ ಟಂಕಸಾಲೆಯಿತ್ತು. ಸವಣೂರಿನ ಚಕ್ರೀ ಮುಖದ ನಾಣ್ಯಗಳಿದ್ದುವೆಂದು ಹೇಳಲಾಗಿದೆ. ಈದ್ ಮಿಲಾದಿ ಅಸ್ಸಾರ ದರ್ಗಾದಲ್ಲಿ ಉರುಸು ಆಚರಿಸಲಾಗುತ್ತದೆ.

15 ಜನ ನವಾಬರು, 25 ಜನ ದಿವಾನರು ಸವಣೂರು ಸಂಸ್ಥಾನದ ಆಡಳಿತ ನಿರ್ವಹಿಸಿದರು. ಕರ್ನಾಟಕದಲ್ಲಿ ಮರಾಠ ಪೇಶ್ವೆಗಳ ಆದಿಪತ್ಯ ಪ್ರಾರಂಭವಾದಾಗ ಈ ಭಾಗವು ಮೊಗಲರಿಂದ ಪೇಶ್ವೆಯವರ ಆಡಳಿತಕ್ಕೆ ಒಳಗಾಯಿತು. ಆ ಅವಧಿಯಲ್ಲಿ ಸಂಸ್ಥಾನದ

ಬದಲಿಗೆ ಸವಣೂರು ತಾಲ್ಲೂಕು ಎಂದಾಯಿತು. ಅನಂತರ ಇದು ಮುಂಬೈ ಕರ್ನಾಟಕ ಪ್ರಾಂತ್ಯಕ್ಕೆ ಸೇರಿತು. 1818ರಲ್ಲಿ ಇಂಗ್ಲಿಷರು ಪೇಶ್ವೆಗಳನ್ನು ಗೆದ್ದು ಕಂಪನಿ ಸರ್ಕಾರಕ್ಕೆ ಸೇರಿಸಿ ಕೊಂಡರು. ಕೊನೆಯ ನವಾಬ ಅಬ್ದುಲ್ ಮಜೀದಖಾನ್. 1948 ಮಾರ್ಚ್ 18ರಂದು ಸವಣೂರು ಸಂಸ್ಥಾನ ಭಾರತದ ಒಕ್ಕೂಟದಲ್ಲಿ ಸೇರ್ಪಡೆಯಾಯಿತು. (ಕೆ.ಆರ್.ಎಂ.)

**ಸುರಪುರದ ನಾಯಕರು:** ಗುಲ್ಬರ್ಗ ಜಿಲ್ಲೆಯ ಸುರಪುರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆ ಸುತ್ತಣ ಪ್ರದೇಶಗಳನ್ನು ಆಳಿದ ಒಂದು ಮಾಂಡಳಿಕ ಮನೆತನ. ಇವರು ಬೇಡ ಜನಾಂಗಕ್ಕೆ ಸೇರಿದವರು. ಕಂಪಿಲಿಯ ರಾಮನಾಥನ ಸೈನ್ಯದಲ್ಲಿ ಇವರು ಸೇವೆ ಸಲ್ಲಿಸುತ್ತಿದ್ದರೆಂಬ ಸಂಗತಿ ನಂಜುಂಡ ಕವಿಯ ರಾಮನಾಥಚರಿತದಿಂದ ತಿಳಿದು ಬರುತ್ತದೆ. ಚಾಂದ್‌ಬೀಬಿಯ ಗಂಡ ಮೃತನಾದ ಮೇಲೆ ಆಕೆಗೆ ಸಮರ್ಥ ಆಡಳಿತ ನಿರ್ವಹಿಸಲು ಈ ಬೇಡ ನಾಯಕರ ಸಹಾಯ ಸಹಕಾರಗಳು ದೊರೆತಿದ್ದುವು.

ವಿಜಯನಗರ ಅರಸರ ಸಾಮಂತರಾಗಿದ್ದ ಇವರು ರಕ್ಕಸಗಿ–ತಂಗಡಿಗಿ (ತಾಳಿಕೋಟೆ) ಕದನದ ಅನಂತರ ಬಿಜಾಪುರದ ಸುಲ್ತಾನನ ಅಧೀನಕ್ಕೆ ಒಳಗಾದರು. ಇವರ ಶೌರ್ಯ, ಸಾಹಸಗಳನ್ನು ಗುರುತಿಸಿದ ಸುಲ್ತಾನ ಈ ನಾಯಕರಿಗೆ ಬಿರುದುಗಳನ್ನು ನೀಡಿ ವಾಗಣಗೇರಿಯಲ್ಲಿ ಕಂದಾಯ ವಸೂಲಿ ಮಾಡುವ ಅಧಿಕಾರ ವಹಿಸಿಕೊಟ್ಟ. ಔರಂಗಜೇಬ್ ಬಿಜಾಪುರದ ಮೇಲೆ ಧಾಳಿ ಮಾಡಿದಾಗ ಇವರು ತಮ್ಮ ಶೌರ್ಯ ಪ್ರತಾಪಗಳನ್ನು ಪ್ರದರ್ಶಿಸಿದರು. ವಾಗಣಗೇರಿಯನ್ನು ಔರಂಗಜೇಬ ಆಕ್ರಮಿಸಿದ ಅನಂತರ ಬೇಡರಸನು ಸುರಪುರದಲ್ಲಿ ದುರ್ಗ ಕಟ್ಟಿಕೊಂಡ. ಬೇಡ ನಾಯಕನ ಪರಾಕ್ರಮಕ್ಕೆ ಮೆಚ್ಚಿದ ಔರಂಗಜೇಬ್ ಅವನಿಗೆ ಹಿಂದೆ ಇದ್ದ ಎಲ್ಲ ಹಕ್ಕುಬಾಧ್ಯತೆಗಳನ್ನು ನೀಡಿದ.

ಹದಿನೆಂಟನೆಯ ಶತಮಾನದ ಅಂತ್ಯಭಾಗದಲ್ಲಿ ನಿಜಾಮ ಮತ್ತು ಮರಾಠರು ಒಂದಾದಾಗ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬೇಡ ನಾಯಕನು ನಿಜಾಮನಿಗೆ 50,000 ರೂಪಾಯಿ ಕಾಣಿಕೆ ಸಲ್ಲಿಸಿ ಅಪಾಯದಿಂದ ಪಾರಾದ. ಪ್ರಬಲ ದೊರೆಯಾಗಿದ್ದ ಸುರಪುರದ ಎಂಕಪ್ಪನಾಯಕನ ಮೈತ್ರಿ ಗಳಿಸಲು ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರು ಪ್ರಯತ್ನಿಸಿ ವಿಫಲರಾದರು. ಎಂಕಪ್ಪನಾಯಕನ ರಾಜ್ಯದ ಹಲವು ಭಾಗಗಳನ್ನು ಟಿಪ್ಪು ಆಕ್ರಮಿಸಿದರೂ ಆತ ಸುರಪುರದ ಮೇಲೆ ಧಾಳಿ ಮಾಡಲಿಲ್ಲ. ಎಂಕಪ್ಪನಾಯಕನ ಮರಣಾನಂತರ ನಿಜಾಮನು ಸುರಪುರದ ಮೇಲೆ 15 ಲಕ್ಷ ರೂ.ಗಳ ಉತ್ತರಾಧಿಕಾರ ಶುಲ್ಕ ವಿಧಿಸಿದ. ಕೊನೆಯ ಅರಸ ಕೃಷ್ಣಪ್ಪನಾಯಕ 1841ರಲ್ಲಿ ತೀರಿಕೊಳ್ಳುವ ವೇಳೆಗೆ ಸುರಪುರ ರಾಜ್ಯ ಸಾಲದ ಹೊರೆಗೆ ಗುರಿಯಾಗಿ ತನ್ನ ಸತ್ತ್ವವನ್ನು ಕಳೆದುಕೊಂಡಿತು.

ಬ್ರಿಟಿಷರ ಮತ್ತು ನಿಜಾಮನ ಕುಟಿಲೋಪಾಯಗಳಿಂದ ಸುರಪುರದ ಬೊಕ್ಕಸ ಬರಿದಾಯಿತು. ಕೃಷ್ಣಪ್ಪನಾಯಕ ತೀರಿಕೊಂಡಾಗ ಅವನ ಮಗ ವೆಂಕಟಪ್ಪ ನಾಯಕ ಅಪ್ರಾಪ್ತ ವಯಸ್ಕನಾಗಿದ್ದರಿಂದ ಮೆಡೋಸ್ ಟೇಲರ್‌ನನ್ನು ಸುರಪುರದ ರಾಜಕೀಯ ಕಾರ್ಯಭಾರಿಯಾಗಿ ನೇಮಕ ಮಾಡಲಾಯಿತು. 1853ರಲ್ಲಿ ವೆಂಕಟಪ್ಪ ನಾಯಕನಿಗೆ ರಾಜ್ಯದ ಆಡಳಿತವನ್ನು ವಹಿಸಿ ಕೊಡಲಾಯಿತು. ಆಗ ಭಾರತದಲ್ಲಿ ಬ್ರಿಟಿಷ್ ಗವರ್ನರ್ ಜನರಲ್ಲನಾಗಿದ್ದ ಡಾಲ್‌ಹೌಸಿ ಸುರಪುರದ ರಾಜ ಬ್ರಿಟಿಷ್ ಅಧಿಕಾರಿಯೊಬ್ಬನನ್ನು ರಾಜಕೀಯ ಸಲಹೆಗಾರನನ್ನಾಗಿ ನೇಮಿಸಿಕೊಂಡು ಅವನ ವೆಚ್ಚಕ್ಕೆ 20,000 ರೂ.ಗಳನ್ನು ತೆರಬೇಕೆಂದು ಸೂಚಿಸಿದ. ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದ ವೆಂಕಟಪ್ಪನಾಯಕ ಡಾಲ್‌ಹೌಸಿಯ ಸೂಚನೆಯನ್ನು ನಿರಾಕರಿಸಿದ. ಅಂತೆಯೇ, ತನ್ನ ಸೈನ್ಯಕ್ಕೆ ಅರಬರು, ರೋಹಿಲರು ಮೊದಲಾದವರನ್ನು ಸೇರಿಸಿಕೊಂಡು ವ್ಯವಸ್ಥೆಗೊಳಿಸಿದ. ನಾನಾ ಸಾಹೇಬನೊಡನೆ ರಾಜಕೀಯ ಸಂಪರ್ಕ ಬೆಳೆಸಿಕೊಂಡ. ಅನೇಕ ಜಮೀನುದಾರರು ವೆಂಕಟಪ್ಪನಾಯಕನಿಗೆ ಧನಸಹಾಯ ಮಾಡಲು ಮುಂದಾದರು. ಇಂಥ ಯುದ್ಧಸಿದ್ಧತೆಗಳು ಬ್ರಿಟಿಷರ ಗಮನಕ್ಕೆ ಬಾರದಿರಲಿಲ್ಲ. ಮಹೀಪಾಲಸಿಂಗ್ ಜವಹಾರಸಿಂಗನೆಂಬುವನು ಸುರಪುರದ ರಾಜನಿಂದ ಪ್ರೇರಿತನಾಗಿ ಬೆಳಗಾಂವಿಯಲ್ಲಿ ಬ್ರಿಟಿಷ್ ಸೈನ್ಯ ದಂಗೆ ಏಳಲು ಉತ್ತೇಜನ ನೀಡಿದ. ಇದನ್ನರಿತ ಬ್ರಿಟಿಷರು ಮಹಿಪಾಲಸಿಂಗನನ್ನು ಬಂಧಿಸಿ, ಗುಂಡಿಟ್ಟು ಕೊಂದುದಲ್ಲದೆ ಸುರಪುರದ ನಾಯಕನಿಗೆ ಬೆದರಿಕೆ ಪತ್ರ ಕಳುಹಿಸಿದರು. ವೆಂಕಟಪ್ಪನಾಯಕ ತನ್ನ ಸ್ವಾಮಿನಿಷ್ಠೆಯನ್ನು ಸಾರಿದ. ಈ ಮಧ್ಯದಲ್ಲಿ ಸುರಪುರದಲ್ಲಿ ನಡೆದ ಹಲವು ದರೋಡೆಗಳಿಗೆ ನಾಯಕನೇ ಕಾರಣ ಎಂದು ವಿಚಾರಣೆ ನಡೆಸಲು ಬ್ರಿಟಿಷರು ಕ್ಯಾಪ್ಟನ್ ಕ್ಯಾಂಪ್‌ಬೆಲ್‌ನನ್ನು ನೇಮಿಸಿದರು.

ಈ ವೇಳೆಗಾಗಲೇ ತಮ್ಮ ಕುಟಿಲತಂತ್ರಗಳಿಂದ ನಿಜಾಮ ಮತ್ತು ಬ್ರಿಟಿಷರು ವೆಂಕಟಪ್ಪನಾಯಕನನ್ನು ಕೆರಳಿಸಿದ್ದರು. ಬ್ರಿಟಿಷರ ವಿರುದ್ಧ ನಾಯಕನಿಗೆ ಸಹಾಯ ಮಾಡಲು ಮುಂಡರಗಿ ಭೀಮರಾಯ, ನರಗುಂದದ ಬಾಬಾಸಾಹೇಬ ಮೊದಲಾದವರು ಸಿದ್ಧರಿದ್ದರು. ಬ್ರಿಟಿಷರು ರಾಜಕೀಯ ಕುತಂತ್ರ ಆಪಾದನೆಯನ್ನು ಸುರಪುರದ ಮೇಲೆ ಹೊರೆಸಿ ಅದರ ಆಕ್ರಮಣಕ್ಕೆ ಸನ್ನದ್ಧರಾದರು. ಅಭೇದ್ಯವಾದ ಸುರಪುರದ ದುರ್ಗವನ್ನು ಪ್ರವೇಶಿಸಲು ಕ್ಯಾಪ್ಟನ್ ವೈಂಡ್‌ಹ್ಯಾಮ್ ಸತತ ಪ್ರಯತ್ನ ನಡೆಸಿದ. ಕೊನೆಗೆ ಭೀಮರಾಯನೆಂಬ ದೇಶದ್ರೋಹಿಯ ಕುತಂತ್ರದಿಂದಾಗಿ ಸುರಪುರ ಬ್ರಿಟಿಷರ ಕೈವಶವಾಯಿತು. ತಲೆ ತಪ್ಪಿಸಿಕೊಂಡು ಹೈದರಾಬಾದು ತಲುಪಿದ ವೆಂಕಟಪ್ಪನಾಯಕ ನಿಜಾಮನ ಮುಖಾಂತರ ಬ್ರಿಟಿಷರ ಬಂಧಿಯಾಗಿ ಸಿಕಂದರಾಬಾದಿನ ಸೆರೆಮನೆ ಸೇರಿದ. ಮುಂದೆ ವಿಚಾರಣೆ ನಡೆಸಿದ ಬ್ರಿಟಿಷ್ ನ್ಯಾಯಾಲಯ ಅವನಿಗೆ ಮರಣದಂಡನೆ ವಿಧಿಸಿತು. ಆದರೆ ಮೆಡೋಸ್ ಟೇಲರ್ ಮಧ್ಯೆ ಪ್ರವೇಶಿಸಿ ಮರಣದಂಡನೆಯನ್ನು ಜೀವಾವಧಿ ಕಾರಾಗೃಹವಾಸಕ್ಕೆ ಇಳಿಸಿದ. ಅನಂತರ ಆ ಶಿಕ್ಷೆಯನ್ನೂ ಕೇವಲ ನಾಲ್ಕು ವರ್ಷಗಳ ಬಂಧನವಾಸಕ್ಕೆ ಸೀಮಿತಗೊಳಿಸಲಾಯಿತು. ಆದರೆ ಕಾರಾಗೃಹಕ್ಕೆ ಹೋಗುವ ಮಾರ್ಗಮಧ್ಯದಲ್ಲೇ ವೆಂಕಟಪ್ಪನಾಯಕ ಆತ್ಮಹತ್ಯೆ ಮಾಡಿಕೊಂಡು ಮರಣಹೊಂದಿದ. 1861 ಮಾರ್ಚ್ 4ರಂದು ಸುರಪುರ ಸಂಸ್ಥಾನ ನಿಜಾಮನ ಸ್ವಾಧೀನಕ್ಕೆ ಒಳಪಟ್ಟಿತು. (ಜಿ.ಆರ್.ಆರ್.)

**ಸೇಂದ್ರಕರು:** ಬನವಾಸಿ ಕದಂಬರು, ಬಾದಾಮಿ ಚಳುಕ್ಯರು, ರಾಷ್ಟ್ರಕೂಟರಿಗೆ, ಮಾಂಡಳಿಕರಾಗಿ ಆಳಿದ ಒಂದು ಅತ್ಯಂತ ಬಲಿಷ್ಠವಾದ ವಂಶ. ಸಾತವಾಹನರ ಅನಂತರ ಪ್ರಸಿದ್ಧಿಗೆ ಬಂದ ರಾಜಕೀಯ ಚಟುವಟಿಕೆಗಳಿಗೆ ಸಮಕಾಲೀನರಾಗಿ ಅವರ ನೆರೆಯಲ್ಲಿಯೇ ತಮ್ಮ ರಾಜ್ಯವನ್ನು ಸ್ಥಾಪಿಸಿಕೊಂಡು ಆಡಳಿತ ಮಾಡಿದವರು. ಇವರ ಕಾಲವನ್ನು ಇದುವರೆಗೆ ಚಂದ್ರವಳ್ಳಿಯ ಮಯೂರವರ್ಮನ ಶಾಸನವನ್ನು ಆಧರಿಸಿ ಮೂರನೆಯ ಶತಮಾನವೆಂದು ಹೇಳಲಾಗುತ್ತಿತ್ತು. ಆದರೆ ಚಂದ್ರವಳ್ಳಿ ಶಾಸನದ ಪುನರ್ ಪರಿಶೀಲನೆಯಿಂದ ಇದು ಸರಿಯಲ್ಲವೆಂದು ಕಂಡುಬಂದಿದೆ. ಸೇಂದ್ರಕರ ಕಾಲವನ್ನು ಹೇಳುವ ಮೊದಲ ಶಾಸನ ಸಕ್ಕರೆಪಟ್ಟಣದ್ದಾಗುತ್ತದೆ. ಈ ಶಾಸನದ ಕಾಲ 430–60.

ಸೇಂದ್ರಕರು ಆಳುತ್ತಿದ್ದ ಭೂಪ್ರದೇಶವನ್ನು ಸೇಂದ್ರಕ ವಿಷಯ ಎಂದು ಕರೆಯಲಾಗುತ್ತಿತ್ತು. ಇದು ಬನವಾಸಿ ಮಂಡಲದ ಭಾಗವಾಗಿರದೆ, ಅದಕ್ಕೆ ಹೊಂದಿಕೊಂಡೇ ಇದ್ದ ಒಂದು ಚಿಕ್ಕ ಸ್ವತಂತ್ರ ಮಂಡಲವೇ ಆಗಿದ್ದಿತು. ಸೇಂದ್ರಕ ವಿಷಯ ಮತ್ತು ಮೂಲ ಸ್ಥಳವನ್ನು ನಿರ್ಧರಿಸುವಲ್ಲಿ ಪಲ್ಲವ ಸಿಂಹವರ್ಮನ(436–60) ಸಕ್ಕರೆಪಟಣ ತಾಮ್ರಶಾಸನ, ಹಲಸಿಗಿ ಕದಂಬಶಾಖೆಗೆ ಸೇರಿದ ಪ್ರಾಚೀನ ಕದಂಬ ವಿಷ್ಣುವರ್ಮ (569) ಹಾಗೂ ಸಿಂಹವರ್ಮರ (495) ಮುದಿಗೆರೆ ತಾಮ್ರಶಾಸನಗಳು ಹಾಗೂ ಕದಂಬ 2ನೆಯ ಕೃಷ್ಣವರ್ಮನ (545–70) ಬೆಣ್ಣೂರ ತಾಮ್ರಶಾಸನಗಳು ಮಹತ್ವದ್ದಾಗಿವೆ. ಇವುಗಳ ಆಧಾರದಿಂದ ಸೇಂದ್ರಕ ವಿಷಯವು ದಕ್ಷಿಣ ಕರ್ನಾಟಕದ–ವಿಶೇಷವಾಗಿ ಶಿವಮೊಗ್ಗ, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕೆಲಭಾಗಗಳನ್ನು ಒಳಗೊಂಡ ಪ್ರದೇಶವಾಗಿತ್ತೆಂದು ನಿರ್ಧಾರವಾಗುತ್ತದೆ. ಆದರೆ ಬನವಾಸಿ ಮಂಡಲದ ನಾಗರಖಂಡ ಹಾಗೂ ಜಿಡಗೂರು ಕಂಪಣಗಳು ಸೇಂದ್ರಕರ ಅಧೀನ ಕಂಪಣಗಳಾಗಿದ್ದವೇ ಹೊರತು ಸೇಂದ್ರಕ ವಿಷಯದಲ್ಲಿ ಇರಲಿಲ್ಲ. ಈ ಜೋಡಿ ಕಂಪಣಗಳು ಬಳ್ಳಿಗಾವೆ ಕೇಂದ್ರಗಳಲ್ಲಿದ್ದು, ಸೇಂದ್ರಕವಂಶದ ಪೊಗಿಲ್ಲ ಎಂಬ ಓರ್ವ ಅರಸ ಆಳಿದ್ದಾನೆ.

ಸೇಂದ್ರಕರೆಂದು ಈ ಮನೆತನಕ್ಕೆ ಹೆಸರು ಬಂದುದನ್ನು ಲಕ್ಷ್ಮೇಶ್ವರ ಶಾಸನ (620) ಹೀಗೆ ಹೇಳಿದೆ: ಈ ವಂಶದ ಮೂಲ ಪುರುಷನ ಹೆಸರು ಸೇಂದ್ರ. ಇವನ ವಂಶದಲ್ಲಿ ಬಂದವರು ಸೇಂದ್ರಕರು. ಇವರು ನಾಗವಂಶದವರು. ಇವರು ಸೇಂದ್ರಕ ವಿಷಯದಲ್ಲಿ ಮಾತ್ರ ಆಳ್ವಿಕೆ ನಡೆಸಿದವರಲ್ಲ. ಉತ್ತರ ಕರ್ನಾಟಕ ಹಾಗೂ ಅದರ ಹೊರಗೂ ಇವರ ವ್ಯಾಪ್ತಿ ಇತ್ತು. ಹೀಗೆ ಹೊರಗೆ ಕಂಡುಬರುವ ಇವರ ಕಾಲ ಅನಂತರದ್ದಾಗಿರುವುದು ವಿಶೇಷ. ಕರ್ನಾಟಕದಲ್ಲಿ ಉಪಲಬ್ಧವಿರುವ ಶಾಸನಗಳಲ್ಲಿ ಸೇಂದ್ರಕರ ಎರಡು ಮೂರು ತಲೆಮಾರುಗಳ ಸ್ಥಾನಿಕ ವಂಶಾವಳಿ ಕಂಡುಬರುತ್ತದೆ. ಆದರೆ ಸೇಂದ್ರಕ ಮನೆತನದ ಒಟ್ಟು ವಂಶಾವಳಿ ಎಲ್ಲಿಯೂ ಲಭ್ಯವಿಲ್ಲ. ಇವರು ಬಾದಾಮಿ ಚಳುಕ್ಯರ ಅನಂತರ ಹಿನ್ನೆಲೆಗೆ ಸರಿದರು. ಕರ್ನಾಟಕದಲ್ಲಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಕಂಡುಬರುವ ಅನೇಕ ಸಿಂಧ ಮನೆತನಗಳು ಇವರದೇ ಮುಂದುವರಿದ ವಂಶಗಳೆಂದು ಕಂಡುಬರುತ್ತದೆ. (ಬಿ.ಪಿ.)

**ಹೊನ್ನಾಳಿಯ ನವಾಬರು:** ದಾವಣಗೆರೆ ಜಿಲ್ಲೆಯ ಹೋಬಳಿ ಕೇಂದ್ರವಾದ ಹೊನ್ನಾಳಿ ಯಿಂದ ಕೆಲಕಾಲ ಆಡಳಿತ ನಡೆಸಿದ ಒಂದು ಮುಸ್ಲಿಂ ರಾಜ ಮನೆತನ. ಈ ಪ್ರಾಂತ್ಯದಲ್ಲಿ ಕಲ್ಯಾಣ ಚಾಳುಕ್ಯರು, ಬೆಳಗುತ್ತಿ ಸಿಂಧರು, ಹೊಯ್ಸಳರು, ವಿಜಯನಗರ ಅರಸರು ಆಳ್ವಿಕೆ ನಡೆಸಿದ್ದು, ವಿಜಯನಗರದ ಪತನಾನಂತರ ಕೆಲ ಸಣ್ಣಪುಟ್ಟ ಪ್ರಭುಗಳು ಈ ಪ್ರಾಂತದ ಆಡಳಿತ ನಡೆಸಿದ್ದಾಗಿ ದಾಖಲೆಗಳು ತಿಳಿಸುತ್ತವೆ.

ಆ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ಪ್ರಬಲವಾದ ಆದಿಲ್‌ಶಾಹಿಗಳು ತಮ್ಮ ಸಾಮ್ರಾಜ್ಯ ವಿಸ್ತರಿಸಲು ದಕ್ಷಿಣ ಕರ್ನಾಟಕ ಪ್ರಾಂತದ ಕಡೆ ಬಂದು ಈ ಸಣ್ಣ ಪುಟ್ಟ ಪ್ರಭುಗಳನ್ನು ತಮ್ಮ ಕೈವಶ ಮಾಡಿಕೊಂಡು ಅಲ್ಲಿ ತಮ್ಮ ಪ್ರತಿನಿಧಿಗಳನ್ನು ನೇಮಿಸಿದರು. ಹೀಗೆ 1686ರಲ್ಲಿ ಮೊದಲು ಮೊಗಲರ ಆಸ್ಥಾನದಲ್ಲಿದ್ದು ಅನಂತರ ಬಿಜಾಪುರ ಆದಿಲ್‌ಶಾಹಿಗಳ ಕೈ ಕೆಳಗೆ ಅಧಿಕಾರಿಗಳಾಗಿದ್ದ ಕುತುಬ್ ಉಲ್ ಮುಲ್ಕ, ಷೇರ್ ಖಾನ್ ಜಮಾದ್ ಎಂಬುವರನ್ನು ಹೊನ್ನಾಳಿ, ಹರಿಹರ, ಸವಣೂರು ಪ್ರಾಂತಗಳ ನವಾಬರಾಗಿ ನೇಮಿಸಿದರು. ಇವರೇ ಮುಂದೆ ಹೊನ್ನಾಳಿ ನವಾಬರೆಂದು ಕರೆಯಲ್ಪಟ್ಟರು. ಇವರ ಅನಂತರ ಅಷರ್ ಬೌದ್ಧಿ ಅಹ್ಮದ್, ಮಹ್ಮದ್‌ಖಾನ್, ಸಲಾಖತ್‌ಖಾನ್, ಅಮೀನ್ ಉಲ್ ಮಿಲ್ಕ ಎಂಬುವರು ಹೊನ್ನಾಳಿ ನವಾಬರಾಗಿ ಆಡಳಿತ ನಡೆಸಿದರೆಂದು ಈಚೆಗೆ ದೊರೆತ ಮೆಕೆಂಜಿ ಕೈಫಿಯತ್‌ನಿಂದ ತಿಳಿದುಬರುತ್ತದೆ. ಇವರ ಕಾಲದಲ್ಲಿ ಕೆಲಕಾಲ ಹೊನ್ನಾಳಿ ಕೆಳದಿ ಚೆನ್ನಮ್ಮನ ಆಳ್ವಿಕೆಗೂ ಒಳಪಟ್ಟಿತ್ತು. ಕುತುಬ್‌ದಿನ್ ಖಾನನ ಮಗ ಹಸನ್ ಅಲಿ ಖಾನ್ ನವಾಬ್ ಹೈದರ್ ಅಲಿ ಖಾನ್ ಮತ್ತು ಟಿಪ್ಪುಸುಲ್ತಾನ್ ನೆರವಿನಿಂದ ಮರಳಿ ಇವರು ಹೊನ್ನಾಳಿ ಪ್ರಾಂತಾಧಿಕಾರಿಗಳಾಗಿ ನೇಮಿಸಲ್ಪಟ್ಟರು. ಈ ನವಾಬರು ಹೈದರ್ ಮತ್ತು ಟಿಪ್ಪು ಒಡನಾಡಿಗಳಾಗಿ ಬ್ರಿಟಿಷರ ವಿರುದ್ಧ ನಡೆದ ಎರಡು ಮತ್ತು ಮೂರನೆಯ ಮೈಸೂರು ಯುದ್ಧಗಳಲ್ಲಿ ಭಾಗಿಗಳಾಗಿ ಹೋರಾಡಿದ್ದಾಗಿ ತಿಳಿದುಬರುತ್ತದೆ.

ಟಿಪ್ಪು ಸುಲ್ತಾನನ ಮೆಚ್ಚುಗೆ ಗಳಿಸಿದ ಕುತುಬ್ ಉಲ್‌ದಿನ್ ಖಾನನು ಹೊನ್ನಾಳಿ ಪ್ರಾಂತಾಧಿಕಾರಿಯಾಗಿದ್ದಲ್ಲದೆ ಅವನಿಂದ ಅಮೀನ್ ಉಲ್ ಉಮ್ರ ಎಂಬ ಪ್ರಶಸ್ತಿಯನ್ನು ಗಳಿಸಿದ್ದ. ಅವನ ಮಗ ಹಸನ್ ಅಲಿ ಖಾನನು ಟಿಪ್ಪುವಿನ ಬಲಗೈ ಬಂಟನೆಂಬ ಖ್ಯಾತಿಗೆ ಒಳಗಾಗಿದ್ದ. ಟಿಪ್ಪುವಿನ ಮರಣಾನಂತರ ಹೊನ್ನಾಳಿ ಆಡಳಿತ ನವಾಬರ ಕೈತಪ್ಪಿತು. ಅನಂತರ ಅಧಿಕಾರ ವಹಿಸಿಕೊಂಡ ಮೈಸೂರು ಒಡೆಯರು ಹಸನ್ ಅಲಿಖಾನನಿಗೆ ಅಧಿಕಾರ ಕೊಡದಿದ್ದರೂ ಗೌರವ ನೀಡಿ ಕೆಲವು ಜಮೀನು ಮತ್ತು ಗ್ರಾಮಗಳನ್ನು ಇನಾಮು ನೀಡಿದ್ದಲ್ಲದೆ ಬ್ರಿಟಿಷ್ ಸರ್ಕಾರದ ಒಪ್ಪಿಗೆಯೊಂದಿಗೆ 1799ರಿಂದ ನಿವೃತ್ತಿ ವೇತನವನ್ನು ಕೊಡುತ್ತಾ ಬಂದರು.

ಹಸನ್ ಅಲಿ ಖಾನನ ಮಗ ಷೇರ್‌ಖಾನ್ ಹೊನ್ನಾಳಿ ನವಾಬನೆಂದು ಜನ ಮನ್ನಣೆಗಳಿಸಿದ್ದ. ಇವನು ಹೊನ್ನಾಳಿ ಅಭಿವೃದ್ಧಿಗೆ ಕೆಲಸ ಮಾಡಿದ್ದಲ್ಲದೆ ಹಿಂದು, ಮುಸ್ಲಿಂ ಕೋಮು ಸೌಹಾರ್ದತೆ ಬೆಸೆಯುವ ಕೆಲಸ ಮಾಡಿ ಜನಾನುರಾಗಿಗಳಾಗಿದ್ದ. ಒಂಬತ್ತನೆಯ ಚಾಮರಾಜ ಒಡೆಯರ್ ಕಾಲದಲ್ಲಿ (1891–1900) ಸ್ಥಾಪಿತವಾಗಿದ್ದ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯನಾಗಿ ಹೊನ್ನಾಳಿಯ ನವಾಬ ಷೇರ್‌ಖಾನ್ ಸತತ 15 ವರ್ಷ ಆಯ್ಕೆಯಾಗಿದ್ದು ಇವನ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಈತ ಸ್ವಾತಂತ್ರ್ಯ ಚಳವಳಿಯಲ್ಲಿಯೂ ಮಹಾತ್ಮ ಗಾಂಧೀಜಿಯವರ ಅನುಯಾಯಿಯಾಗಿ ಕೆಲಸ ಮಾಡಿದ. ಈ ವಂಶದ ನವಾಬ್ ಇನಾಯತ್ ಉಲ್ಲಾ ಖಾನ್ ಗಾಂಧೀಜಿ ಹೊನ್ನಾಳಿಗೆ ಬಂದಾಗ ಅವರ ಹಿಂದೀ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ.

ಹೊನ್ನಾಳಿ ನವಾಬರು ಕೆಲಕಾಲ ಸವಣೂರು, ಬಂಕಾಪುರ ಸೀಮೆಗಳ ಆಡಳಿತವನ್ನು ನಡೆಸಿದ್ದಾಗಿ ದಾಖಲೆಗಳು ತಿಳಿಸುತ್ತವೆ. ಹೊನ್ನಾಳಿ ತಾಲ್ಲೂಕಿಗೆ ಹೊಂದಿಕೊಂಡೇ ಇರುವ ಹಿರೇಕೆರೂರು ತಾಲ್ಲೂಕಿನ ಅಂಗಾರಕಟ್ಟೆಯಲ್ಲಿ ಒಂದು ಕೋಟೆ ಕಟ್ಟಿಸಿ ಅಲ್ಲಿಂದಲೂ ಕೆಲ ಕಾಲ ಆಡಳಿತ ನಡೆಸಿದ್ದಾಗಿ ಹೇಳಲಾಗುತ್ತದೆ. (ಎಸ್.ಎನ್‌ಎ.)

**ಕಳಲೆ ಅರಸರು:** ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದವರು. ಮೈಸೂರಿನಲ್ಲಿ ಒಡೆಯರ ಮನೆತನ ಆಳಿಕೆ ಆರಂಭವಾದ ನೂರು ವರ್ಷಗಳ ಅನಂತರ 1500ರಲ್ಲಿ ಕಳಲೆ ಮನೆತನ ಆರಂಭವಾಯಿತು. ನಂಜನಗೂಡಿನಿಂದ 8ಕಿಮೀ ದೂರದಲ್ಲಿರುವ ಕಳಲೆ ಸುಮಾರು ಎರಡೂವರೆ ಶತಮಾನಗಳಿಗೂ ಹೆಚ್ಚು ಕಾಲ ಒಂದು ಅರಸುಮನೆತನದ ಆಡಳಿತ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿತ್ತು. ಈ ಮನೆತನದ ಕಾಂತ ಒಡೆಯ ಕೃಷ್ಣ ಒಡೆಯ, ಸಹೋದರರು ದ್ವಾರಕೆಯಿಂದ ಬಂದವರನ್ನೆಲಾಗಿದ್ದು, ವಿಜಯನಗರದ ಅರಸರ ಸಾಮಂತರಾಗಲು ಒಪ್ಪಿ ಕಳಲೆಯಲ್ಲಿ ಆಳಿಕೆಯನ್ನಾರಂಭಿಸಿದರು. ಈ ಮನೆತನದ ಆರಂಭದ ಇತಿಹಾಸಕ್ಕೆ ಸಂಬಂಧಪಟ್ಟಂತೆ ಅನಂತರ ಕಾಲದಲ್ಲಿ ರಚನೆಯಾದ ಸಾಹಿತ್ಯ ಹಾಗೂ ಶಾಸನಗಳನ್ನೇ ಅವಲಂಬಿಸಬೇಕಾಗಿದೆ. ಲಭ್ಯವಿರುವ ಮಾಹಿತಿಗಳ ಪ್ರಕಾರ ವಿಜಯನಗರದ ಅರಸು ವೀರನರಸಿಂಹನ ಆದೇಶದ ಮೇರೆಗೆ ಅವರ ಸಾಮಂತನಾಗಿದ್ದ ಉಮ್ಮತ್ತೂರಿನ ಪಾಳೆಯಗಾರ ಹರಿಹರ ತನ್ನ ಪ್ರಾಂತದಲ್ಲಿ ಕಳಲೆಯೂ ಸೇರಿದಂತೆ ಕೂಗಲೂರು, ಕೂಡಲಾಪುರ, ಸಿಂಧುವಳ್ಳಿ ಇತ್ಯಾದಿ 28 ಗ್ರಾಮಗಳನ್ನು ಕಾಂತ ಒಡೆಯನಿಗೆ ಬಿಟ್ಟುಕೊಟ್ಟ. 28 ಗ್ರಾಮಗಳುಳ್ಳ ಕಳಲೆ ಪ್ರಾಂತವನ್ನಾಳಿದ ಕಾಂತ ಒಡೆಯ ತನ್ನ ಮಗ ಮಲ್ಲರಾಜನಿಗೆ 1527ರಲ್ಲಿ ಕೃಷ್ಣ ಒಡೆಯ ಎಂಬ ಹೆಸರಿನೊಂದಿಗೆ ಪಟ್ಟಕಟ್ಟಿದ.

ರಕ್ಕಸಗಿ–ತಂಗಡಗಿ ಕದನದಿಂದ ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿತು. ಪರಿಣಾಮವಾಗಿ ಕಳಲೆ ಅರಸರು ಸ್ವತಂತ್ರರಾಗಲು ಪ್ರಯತ್ನಿಸಿದರು. ಇವರು ತಮ್ಮ ನೆರೆಯ ರಾಜಮನೆತನಗಳೊಂದಿಗೆ ಸ್ನೇಹ ಸಂಬಂಧ ಅಥವಾ ವೈವಾಹಿಕ ಸಂಬಂಧ ಬೆಳೆಸುವ ಅನಿವಾರ್ಯತೆ ಉಂಟಾಯಿತು. ಆರ್ಥಿಕವಾಗಿ, ರಾಜಕೀಯವಾಗಿ ತಮಗೆ ಸರಿಸಮಾನರಾಗಿದ್ದ ಹಾಗೂ ಸಮಾನ ಮನಸ್ಕರಾಗಿದ್ದ ಮೈಸೂರು, ಹುರ, ಯಳಂದೂರು, ಹುಲ್ಲಹಳ್ಳಿ ಮುಂತಾದ ರಾಜಮನೆತನಗಳೊಂದಿಗೆ ಕಳಲೆ ಅರಸರು ವೈವಾಹಿಕ ಸಂಬಂಧ ಬೆಳೆಸಿದರು. ಮೈಸೂರಿನ ಎಂಟನೆಯ ಅರಸು ಬೆಟ್ಟದ ಚಾಮರಾಜ ಒಡೆಯರ ರಾಣಿಯರಲ್ಲಿ ಒಬ್ಬಾಕೆ ಕಳಲೆ ಅರಸು ಮನೆತನದ ಹೆಣ್ಣುಮಗಳಾಗಿದ್ದಳು. ಅಂತೆಯೇ ಕಳಲೆಯ ಎರಡನೆಯ ಅರಸು ಕೃಷ್ಣ ಒಡೆಯನ ರಾಣಿ ಮೈಸೂರಿನ ನಾಲ್ಕನೆಯ ಚಾಮರಾಜ ಒಡೆಯರ ಪುತ್ರಿ. ಹೀಗೆ ಪರಸ್ಪರ ವೈವಾಹಿಕ ಸಂಬಂಧದ ಮೂಲಕ ಬಲವರ್ಧನೆಗೆ ತೊಡಗಿದ ಕಳಲೆ ಹಾಗೂ ಮೈಸೂರಿನ ಅರಸರು 16ನೆಯ ಶತಮಾನದ ಮೊದಲ ಭಾಗದಲ್ಲಿ ರಾಜಕೀಯ ಸಂಬಂಧವನ್ನು ಬೆಳೆಸಲು ಉತ್ಸುಕರಾದರು.

ಮತ್ತೊಂದೆಡೆ ಕಳಲೆ ಮನೆತನದ ಆಳಿಕೆ ಆರಂಭವಾದ ಸಂದರ್ಭದಲ್ಲಿ ಉಮ್ಮತ್ತೂರಿನ ಪಾಳೆಯಗಾರರು ತಮ್ಮ ಅಧೀನದಲ್ಲಿದ್ದ ಗ್ರಾಮಗಳನ್ನು ಅವರಿಗೆ ಬಿಟ್ಟುಕೊಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು. ವಿಜಯನಗರದ ಸಾಮ್ರಾಜ್ಯ ಅವನತಿಯನ್ನು ಹೊಂದುತ್ತಿದ್ದ ಸಂದರ್ಭದಲ್ಲಿ ಉಮ್ಮತ್ತೂರಿನ ಪಾಳೆಯಗಾರರು ತಾವು ಕಳಲೆಯವರಿಗೆ ಬಿಟ್ಟುಕೊಟ್ಟಿದ್ದ ಭಾಗಗಳನ್ನು ಪುನಃ ತಮ್ಮ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಿದರು. ಪಾಳೆಯಗಾರ ಹರಿಹರನ ಮಗ ನಂಜರಾಜ ಕುಟಿಲೋಪಾಯದಿಂದ ಕಳಲೆ ಅರಸುಮನೆತನದವರನ್ನು ಸಂಹರಿಸಿದ. ಕಳಲೆ ಸಂಸ್ಥಾನವನ್ನು ಉಮ್ಮತ್ತೂರಿಗೆ ಸೇರಿಸಿದರೆ ಜನಾಭಿಪ್ರಾಯ ಕೆಡುವುದೆಂದು ಆಲೋಚಿಸಿ ಕಳಲೆ ಸಿಂಹಾಸನದಲ್ಲಿ ಅವರ ಬಂಗಾರದವರ ಮಗ ಕಾಂತಣ್ಣನನ್ನು ಕೂರಿಸಿದ. ಕಾಂತಣ್ಣನ ಹಿರಿತನದಿಂದಾಗಿ ಸ್ವಲ್ಪಕಾಲದ ಅನಂತರ ಕಳಲೆ ಸಿಂಹಾಸನ ಆ ಮನೆತನದ ಮಲ್ಲರಾಜ ಎಂಬಾತನಿಗೆ ದೊರಕಿತು. ಮಲ್ಲರಾಜನ ಅನಂತರ ಅಧಿಕಾರಕ್ಕೆ ಬಂದ ಆತನ ಮೊಮ್ಮಗ ತಿಮ್ಮರಾಜನ ಆಳ್ವಿಕೆಯ ಅನಂತರ ಕಳಲೆ ಮನೆತನದಲ್ಲಿ ಆಂತರಿಕ ಬಿಕ್ಕಟ್ಟು ಉಂಟಾಯಿತು. ತಿಮ್ಮರಾಜನ ನಾಲ್ವರು ಪತ್ನಿಯರಲ್ಲಿ ಹಿರಿಯ ರಾಣಿ ಹುರದ ದೊಡ್ಡಮ್ಮಣ್ಣಿಯ ಮಗ ಲಕ್ಷ್ಮೀಕಾಂತ ಒಡೆಯನನ್ನು ತಿಮ್ಮರಾಜನ ಉತ್ತರಾಧಿಕಾರಿಯೆಂದು ಘೋಷಿಸಲಾಯಿತು. ಇದನ್ನು ಸಹಿಸದ ತಿಮ್ಮರಾಜನ ದ್ವಿತೀಯ ಪತ್ನಿ ಚನ್ನಮ್ಮ ಲಕ್ಷ್ಮೀಕಾಂತನನ್ನು ಸಂಹರಿಸಿ ತನ್ನ ಸವತಿಯರನ್ನೂ ಅವರ ಮಕ್ಕಳನ್ನೂ ಬಂಧಿಸಿದಳು. ಆದರೆ ತಿಮ್ಮರಾಜನ ಮಕ್ಕಳಲ್ಲಿ ಮೈಸೂರಿನ ರಾಜ ಒಡೆಯರ ಸಹೋದರಿ ದೇಮಣ್ಣಿಯ ಮಗ ಮಲ್ಲರಾಜನೂ ಒಬ್ಬ (ಈತ ಕಳಲೆ ಅರಸರಲ್ಲಿ ಸರ್ವೇಸಾಮಾನ್ಯವಾಗಿ ಬರುವ ಮಲ್ಲರಾಜನ ಹೆಸರಿನಲ್ಲಿ ಮೂರನೆಯವನು. ಇವನನ್ನೇ ಕರಿಕಾಲು ಮಲ್ಲರಾಜ ಎಂದು ಕರೆಯಲಾಗುತ್ತಿತ್ತು). ಚನ್ನಮ್ಮಳ ಮತ್ಸರದ ದಳ್ಳುರಿಗೆ ಮಲ್ಲರಾಜ ಸಿಲುಕದೆ ಕಳಲೆಯ ವ್ಯಕ್ತಿಯೊಬ್ಬನಿಂದ ಗುಪ್ತವಾಗಿ ರಾಜಒಡೆಯರ ಆಶ್ರಯಕ್ಕೆ ಬಂದ. ಮಲ್ಲರಾಜನ ಪಾಲನೆ ಪೋಷಣೆ, ರಾಜೋಚಿತ ಶಿಕ್ಷಣ ಎಲ್ಲವೂ ರಾಜಒಡೆಯರ ಆಶ್ರಯದಲ್ಲಿ ನಡೆಯಿತು. ಆತ ಪ್ರಾಪ್ತವಯಸ್ಕನಾದ ಅನಂತರ ಕಳಲೆ ಸಿಂಹಾಸನವನ್ನು ತಮ್ಮ ಸೋದರಳಿಯನಿಗೆ ಕೊಡಿಸುವ ಉದ್ದೇಶವೂ ರಾಜಒಡೆಯರದಾಗಿತ್ತು. ತಾವು ನೇರವಾಗಿ ಕಳಲೆಯ ಅಂತಃಕಲಹದಲ್ಲಿ ಹಸ್ತಕ್ಷೇಪ ಮಾಡಲಿಚ್ಛಿಸದೆ ತಮ್ಮ ಆಪ್ತಸ್ನೇಹಿತ ಯಳಂದೂರಿನ ರಾಮರಾಜನ ಮೂಲಕ ಆ ಕೆಲಸ ನೆರವೇರಿಸಿದರು. ಇಲ್ಲಿಂದ ಮುಂದೆ ಕಳಲೆ ಮನೆತನದವರು 1767ರವರೆವಿಗೂ ನಿರಾತಂಕವಾಗಿ ತಮ್ಮ ಸಂಸ್ಥಾನವನ್ನಾಳಿದರು. ಕರಿಕಾಲು ಮಲ್ಲರಾಜ ಕಳಲೆಯ ಸಿಂಹಾಸನವನ್ನು ಪಡೆದಾಗ ಸಂಸ್ಥಾನ 47 ಗ್ರಾಮಗಳಿಂದ ಕೂಡಿದ್ದು ಅವುಗಳ ಒಟ್ಟು ಹುಟ್ಟುವಳಿ 40,000 ಗದ್ಯಾಣಗಳಾಗಿತ್ತು. ಮಲ್ಲರಾಜನ ಅನಂತರ ನಂದಿನಾಥಯ್ಯ, ತಿಮ್ಮರಾಜ, ಮುಪ್ಪಿನ ಕಾಂತರಾಜ, ಕುಮಾರಯ್ಯ, ದೊಡ್ಡಯ್ಯ, ವೀರರಾಜ, ದೇವರಾಜ, ಕರಾಚೂರಿ ನಂಜರಾಜ, ಆತನ ಮಗ ವೀರರಾಜ II ಕಳಲೆ ಸಂಸ್ಥಾನವನ್ನಾಳಿದರು. ಆದರೆ ಈ ಮನೆತನದ ಆಳಿಕೆಯ ಬಗ್ಗೆ ದಾಖಲೆಗಳಲ್ಲಿ ಹೆಚ್ಚು ವಿವರಗಳಿಲ್ಲ. ಆದರೂ ಈ ಮನೆತನದವರು ಮೈಸೂರಿನ ದಳವಾಯಿಗಳಾಗಿ ಸೇವೆ ಸಲ್ಲಿಸಿದ ಬಗ್ಗೆ ಸಾಕಷ್ಟು ಮಾಹಿತಿಗಳು ಲಭ್ಯವಿದೆ. ಮೈಸೂರು ಸಂಸ್ಥಾನದ ದಳವಾಯಿ ಹುದ್ದೆಯನ್ನು ನಿರ್ವಹಿಸುತ್ತಿದ್ದ ಕಳಲೆ ಮನೆತನದವರು ಕಳಲೆ ಸಂಸ್ಥಾನದ ಆಡಳಿತವನ್ನು ಜೊತೆಜೊತೆಗೇ ನೋಡಿಕೊಳ್ಳುತ್ತಿದ್ದಂತೆ ಕಂಡುಬರುತ್ತದೆ.

ಕಳಲೆ ಅರಸರು ತಮ್ಮದೇ ಆದ ಸಂಸ್ಥಾನವನ್ನೂ ಮೈಸೂರಿನ ಒಡೆಯರಿಗೆ ಸಮಾನವಾದ ಆರ್ಥಿಕ ಸ್ಥಾನಮಾನವನ್ನು ಹೊಂದಿದ್ದರೂ ಮೈಸೂರಿನ ದಳವಾಯಿತನವನ್ನು ಒಪ್ಪಿಕೊಳ್ಳಲು ಅನೇಕ ಕಾರಣಗಳಿದ್ದವು. ಈ ಎರಡೂ ಮನೆತನಗಳ ನಡುವಣ ಸಂಬಂಧ ಹಾಗೂ ಸಮಕಾಲೀನ ಸಂದರ್ಭ ಇದಕ್ಕೆ ಮುಖ್ಯ ಕಾರಣಗಳು. ಒಂದನೆಯ ರಾಜ ಒಡೆಯರು ಮೈಸೂರು ಸಂಸ್ಥಾನವನ್ನು ವಿಸ್ತರಿಸುವ ಹಾಗೂ ಅದನ್ನು ರಕ್ಷಿಸುವ ಉದ್ದೇಶದಿಂದ 1614ರಲ್ಲಿ ದಳವಾಯಿ ಹುದ್ದೆಯನ್ನು ಸೃಷ್ಟಿಸಲು ಆಲೋಚಿಸಿ ಈ ಹುದ್ದೆಗೆ ಅಗತ್ಯವಾದ ದಕ್ಷತೆ ಹಾಗೂ ನಿಷ್ಠೆಯುಳ್ಳ ವ್ಯಕ್ತಿಯನ್ನು ಅರಸುವಲ್ಲಿ ಸೋದರಳಿಯ ಕಳಲೆಯ ಕರಿಕಾಲು ಮಲ್ಲರಾಜ ಸೂಕ್ತ ವ್ಯಕ್ತಿಯಾಗಿ ಕಂಡ. ಈತ ಒಡೆಯರ ಪಾಲನೆ ಪೋಷಣೆಯಲ್ಲಿ ಬೆಳೆದು ಅವರ ಸಹಕಾರದಿಂದಲೇ ಕಳಲೆಯ ಸಿಂಹಾಸನವನ್ನು ಗಳಿಸಿದ್ದ. ಈ ಸಲಿಗೆಯಿಂದಲೇ ರಾಜ ಒಡೆಯರು ಮಲ್ಲರಾಜನನ್ನು ದಳವಾಯಿತನ ನಿರ್ವಹಿಸಲು ಆಹ್ವಾನಿಸಿದರು. ಅದೇ ರೀತಿ ಮಲ್ಲರಾಜ ತನ್ನ ಕಷ್ಟಕಾಲದಲ್ಲಿ ಸೋದರಮಾವ ಮಾಡಿದ ಸಹಾಯವನ್ನು ಸ್ಮರಿಸಿಯೇ ದಳವಾಯಿ ಹುದ್ದೆಯನ್ನು ಸ್ವೀಕರಿಸಿದ. ಇವರಿಬ್ಬರ ನಡುವೆ 1614ರಲ್ಲಿ ಒಂದು ಕರಾರು ಏರ್ಪಟ್ಟಿತ್ತು. ಆ ಪ್ರಕಾರ ಮೈಸೂರಿನ ರಾಜ ಒಡೆಯರ ಮನೆತನದವರು ಶ್ರೀರಂಗಪಟ್ಟಣದಿಂದ ಆಳಬೇಕು ಹಾಗೂ ಕಳಲೆ ಮನೆತನದವರು ವಂಶಪಾರಂಪರ್ಯವಾಗಿ ಮೈಸೂರಿನ ದಳವಾಯಿಗಳಾಗಿ ಕರ್ತವ್ಯ ನಿರ್ವಹಿಸಬೇಕೆಂದು ಆ ಕರಾರಾಗಿತ್ತು. ಮಲ್ಲರಾಜ ಕರಾರಿಗೆ ಸಹಿ ಹಾಕಿ ಕಳಲೆಗೆ ಹೋಗಿ ಎಂಟುದಿನಗಳಲ್ಲಿ ಹಿಂತಿರುಗುವುದಾಗಿ ತಿಳಿಸಿದ. ಎಂಟುದಿನ ಕಳೆದ ಅನಂತರ ಮಲ್ಲರಾಜ ಬರಲಿಲ್ಲ; ಬದಲಾಗಿ ತನ್ನ ಮಗ ನಂದಿನಾಥಯ್ಯನ ಬಳಿ ತಾನು ದಳವಾಯಿ ಹುದ್ದೆಯನ್ನು ನಿರ್ವಹಿಸುವುದಿಲ್ಲ ಎಂಬುದಾಗಿ ಬರೆದು ಕಳುಹಿಸಿದ. ತನ್ನ ಸೋದರಮಾವ ಕ್ರಮೇಣ ಕಳಲೆ ಸಂಸ್ಥಾನವನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿ ಕೊಂಡುಬಿಡಬಹುದು ಎಂದು ಯೋಚಿಸಿ ತನ್ನ ತೀರ್ಮಾನವನ್ನು ಬದಲಾಯಿಸಿಕೊಂಡಿದ್ದಿರಬೇಕು ಅಥವಾ ತಾನೂ ಒಂದು ಸಂಸ್ಥಾನದ ಅರಸುವಾಗಿದ್ದು ಮೈಸೂರಿನ ದಳವಾಯಿ ಹುದ್ದೆಯನ್ನು ನಿರ್ವಹಿಸುವುದು ತನ್ನ ಘನತೆಗೆ ಕುಂದೆಂದು ಯೋಚಿಸಿದ್ದಿರಬೇಕು. ಅದೇನೇ ಇದ್ದರೂ ಮಲ್ಲರಾಜನ ನಡವಳಿಕೆಯಿಂದ ಬೇಸರಗೊಂಡ ರಾಜ ಒಡೆಯರು ಕಳಲೆ ಮನೆತನದೊಂದಿಗಿನ ರಾಜಕೀಯ ಹಾಗೂ ವೈವಾಹಿಕ ಸಂಬಂಧಗಳೆರಡನ್ನೂ ಕಡಿದುಕೊಂಡರು.

ಕಳಲೆ ಮತ್ತು ಮೈಸೂರು ಅರಸರುಗಳ ವೈಮನಸ್ಯ ಒಂದನೆಯ ಕಂಠೀರವ ನರಸಿಂಹರಾಜ ಒಡೆಯರ ಕಾಲದಲ್ಲಿ ಕೊನೆಗೊಂಡಂತೆ ಕಂಡುಬರುತ್ತದೆ. ಒಂದನೆಯ ಕಂಠೀರವ ನರಸಿಂಹರಾಜನ 10 ಮಂದಿ ದಳವಾಯಿಗಳಲ್ಲಿ ಕಳಲೆಯ ದಾಸರಾಜಯ್ಯನೂ ಒಬ್ಬನಾಗಿದ್ದ. ಒಡೆಯರು ದಾಸರಾಜಯ್ಯನ ಮಗಳನ್ನು ವಿವಾಹವಾಗಿದ್ದರು. ಇಲ್ಲಿಂದ ಪುನಃ ಬೆಸೆದುಕೊಂಡ ರಾಜಕೀಯ–ವೈವಾಹಿಕ ಸಂಬಂಧಗಳು ಪರಸ್ಪರ ಎರಡೂ ಮನೆತನಗಳ ನಡುವೆ 1759ರವರೆವಿಗೂ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಮುಂದುವರೆದವು.

ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಚಿಕ್ಕದೇವರಾಜ ಒಡೆಯರ ಅನಂತರದ ಹಾಗೂ ಹೈದರ್ ಪೂರ್ವದ ಕಾಲವನ್ನು ಕಳಲೆ ಮನೆತನದ ದಳವಾಯಿಗಳ ಕಾಲವೆಂದೇ ಗುರುತಿಸಲಾಗಿದೆ. ಈ ಅವಧಿಯಲ್ಲಿ ದಕ್ಷಿಣ ಭಾರತದ ರಾಜಕೀಯ ಚದುರಂಗದಾಟದಲ್ಲಿ ಕಳಲೆ ಮನೆತನದ ದಳವಾಯಿಗಳು ಸಕ್ರಿಯವಾಗಿ ಪಾತ್ರವಹಿಸಿದರು. ಮೈಸೂರು ಅರಸರ ಅಸಮರ್ಥತೆಯ ಪರಿಣಾಮವಾಗಿ ರಾಜ್ಯದ ಹೊಣೆಗಾರಿಕೆ ಕಳಲೆಯ ಮನೆತನದವರ ಹೆಗಲಿಗೆ ಬಿತ್ತು. ಅವರು ಅದನ್ನು ಅತ್ಯಂತ ಜವಾಬ್ದಾರಿಯಿಂದ ಮೈಸೂರು ಸಂಸ್ಥಾನದ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಿದರು. ಅಧಿಕಾರವೆಲ್ಲವೂ ತಮ್ಮ ಕೈಯ್ಯಲ್ಲೇ ಇದ್ದರೂ ಮೈಸೂರು ಸಂಸ್ಥಾನದ ಯಾವುದೇ ಭಾಗವನ್ನು ಕಳಲೆಗೆ ಸೇರಿಸಿಕೊಳ್ಳುವ ಯೋಚನೆ ಮಾಡಲಿಲ್ಲ. 18ನೆಯ ಶತಮಾನದ ಮಧ್ಯಭಾಗದಲ್ಲಿ ಮೈಸೂರಿನ ಕೀರ್ತಿ ಧ್ವಜವನ್ನು ತಿರುಚಿರಾಪಳ್ಳಿಯ ಕೋಟೆಯ ಮೇಲೆ ಹಾರಿಸುವ ಮಹತ್ವಾಕಾಂಕ್ಷೆ ದಳವಾಯಿ ನಂಜರಾಜನ ದಾಯಿತು. ಈ ಹಂತದಲ್ಲಿ ಆ ಮಹಮದಾಲಿ ಹಾಗೂ ಬ್ರಿಟಿಷರ ಮೋಸಕ್ಕೆ ಬಲಿಯಾದ. ಶತಾಯಗತಾಯ ತಿರುಚಿರಾಪಳ್ಳಿ ಕೋಟೆಯನ್ನು ಪಡೆಯಲೋಸುಗ ಫ್ರೆಂಚರ ಜೊತೆ ಸ್ನೇಹಬೆಳೆಸಿ, ಫ್ರೆಂಚ್‌ಪರ–ಬ್ರಿಟಿಷ್ ವಿರೋಧಿ ರಾಜನೀತಿಯನ್ನು ಹುಟ್ಟುಹಾಕಿದ. ಇದನ್ನೇ ಮುಂದೆ ನಂಜರಾಜನ ಉತ್ತರಾಧಿಕಾರಿಗಳಾದ ಹೈದರ್–ಟಿಪ್ಪು ಮುಂದುವರಿಸಿದರು. ಆದರೆ ನಂಜರಾಜ ಆ ಸಂದರ್ಭದಲ್ಲಿ ವೈಯಕ್ತಿಕವಾಗಿ ಹಲವಾರು ಕಷ್ಟನಷ್ಟಗಳನ್ನು ಅನುಭವಿಸಿದ್ದಲ್ಲದೆ ರಾಜ್ಯದ ಖಜಾನೆಗೆ ಮೂರು ಕೋಟಿ ರೂಪಾಯಿ ನಷ್ಟವುಂಟುಮಾಡಿದ. ಇದೇ ನಂಜರಾಜನ ಅವನತಿಗೆ ಹಾಗೂ ಹೈದರನ ಅಭಿವೃದ್ಧಿಗೆ ಕಾರಣವಾಯಿತು. ನಂಜರಾಜ 1759ರಲ್ಲಿ ದಳವಾಯಿತನವನ್ನು ಕಳೆದುಕೊಂಡ. ಇದರೊಂದಿಗೆ ಮೈಸೂರು–ಕಳಲೆಯವರ ಸಂಬಂಧಗಳೂ ಅಂತ್ಯಗೊಂಡವು. ಇದಾದ ಕೆಲವೇ ವರ್ಷಗಳಲ್ಲಿ 1767ರಲ್ಲಿ ಕಳಲೆ ಸಂಸ್ಥಾನ ಮೈಸೂರಿನ ಒಂದು ಭಾಗವಾಯಿತು. (ಬಿ.ವಿ.ಎಸ್.)

**ಕಳಸ–ಕಾರ್ಕಳದ ಅರಸು ಮನೆತನ:** ಸಾಂತರ ಮನೆತನಕ್ಕೆ ಸೇರಿದ ಪ್ರಸಿದ್ಧ ಅರಸರು. ಇವರ ರಾಜಕೀಯ ಇತಿಹಾಸವನ್ನು ಮೂರು ಘಟ್ಟಗಳಲ್ಲಿ ಕಾಣಬಹುದು: ವಿಜಯನಗರ ಪೂರ್ವಕಾಲ: ಹೊಂಬುಚದ ಮೂಲ ಸಾಂತರ ವಂಶದ ಕುಡಿಯೊಂದು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನವರೆಗೆ ಹರಡಿ ಕಳಸ ನಗರವನ್ನು ತನ್ನ ಆಡಳಿತ ಕೇಂದ್ರವಾಗಿ ಮಾಡಿಕೊಂಡು ಬಹಳ ಕಾಲ ಆಡಳಿತ ನಡೆಸಿತು. ಸಾಕಷ್ಟು ಪ್ರಬಲವಾಗಿ ಬೆಳೆದಿದ್ದ ಈ ಶಾಖೆ ಹೊಯ್ಸಳರಿಗೆ ಸಾಮಂತರಾಗಿ ಹಲವಾರು ಯುದ್ಧಗಳಲ್ಲಿ ನೆರವಾದಂತೆ ಕಂಡುಬರುತ್ತದೆ. ಇವರ ಶಾಸನಗಳಿಂದ ದೊರೆಯುವ ಈ ಭಾಗದ ವಂಶಾವಳಿ ಇಂತಿದೆ:

ಮೂರು ದೇವ (1154)
|
ವೀರಬಲ್ಲು ದೇವ (1208)
|
ಮಲ್ಲುದೇವ (1210–30)
|
ಮಾರುದೇವ (1230–46)
|
ಜಾಕಳ ಮಹಾದೇವಿ (1246–68)
|
ಕಾಳಲ ಮಹಾದೇವಿ (1268–81)
|
ಬಲದೇವ (ರಾಯ ಬಲ್ಲುದೇವ ಸು. 1281–86)
|
ವೀರಪಾಂಡ್ಯದೇವ (1286–1300)

ಪಾಂಡ್ಯ ಮರಕಾಲ ಧಾಳಿಮಾಡಿ ಖಾಂಡ್ಯದ ಅಗ್ರಹಾರಕ್ಕಾಗಿ ಆಗ್ರಹ ಮಾಡಿದಾಗ ವೀರ ಪಾಂಡ್ಯದೇವ ಮರಕಾಲನ ಸೈನ್ಯವನ್ನು ಧೂಳೀಪಟಮಾಡಿ ಹೊಯ್ಸಳ ರಾಜ್ಯಕ್ಕೆ ಒದಗಿದ್ದ ಕುತ್ತನ್ನು ಪರಿಹರಿಸಿದ. ಈ ಜಯದೊಂದಿಗೆ ಪಾಂಡ್ಯ ಎಂಬುದು ಇವನ ಹೆಸರಿನೊಂದಿಗೆ ಸೇರಿಕೊಂಡಿತು. ಪಾಂಡ್ಯ, ಪಾಂಡ್ಯರಾಜ, ಪಾಂಡ್ಯದೇವ ಎಂಬ ಹೆಸರನ್ನು ಕಾರ್ಕಳದ ಅರಸರಲ್ಲಿ ಕಾಣುತ್ತೇವೆ.

ಮಲ್ಲುದೇವ ಮತ್ತು ಮಾರುದೇವ ಇವರ ಆಳಿಕೆ ಕಾಲದಲ್ಲಿ ಹೊಂಬುಚದ ಮೂಲ ಸಾಂತರ ವಂಶದ ಕುಂದಣ ಆಳುವ ರಾಜ್ಯಕ್ಕೆ ಅಧಿಪತಿಯಾಗಿ (1220–35) ಆಳಿದ. ವೀರಪಾಂಡ್ಯನ ಅನಂತರ ಕಾರ್ಕಳದಲ್ಲಿ ಪ್ರಮುಖವಾಗಿ ಕಾಣುವ ಅರಸು ಲೋಕನಾಥ ದೇವರಸ. ಇವನ ಅನಂತರ ಆಳಿದವರು ಕಾಳಲ ಮಹಾದೇವಿ ಮತ್ತು ಈಕೆಯ ಮಕ್ಕಳಾದ ವೀರಚೆನ್ನರಸ ಮತ್ತು ವೀರಪಾಂಡ್ಯ. ಇವರದು ಜಂಟಿ ಆಳಿಕೆ. ಇವರ ಕಾಲದಲ್ಲಿ ವರ್ಧಮಾನ ಬಸದಿಯ ನಿರ್ಮಾಣ (1378) ವಾಯಿತು. ವೀರಚೆನ್ನರಸನ ಮಿಹೂರು ಶಾಸನ (1385) ಶ್ರೀಕಳಸನಾಥ ಎಂದು ಮುಕ್ತಾಯವಾಗುತ್ತದೆ. ಇವನ ಚಂಡಶಾಸನ (1388) ಈ ಕಳಸನಾಥನಿಗೆ ಮಾಡಿದ ದಾನದ ವಿಚಾರವನ್ನು ತಿಳಿಸುತ್ತದೆ. ಈ ಕಳಸನಾಥ ಘಟ್ಟದ ಮೇಲಣ ನಗರ ಕಳಸದ ಪ್ರಮುಖ ದೇವರಾದ ಕಳಸೇಶ್ವರ. ಈ ಉಲ್ಲೇಖ ಆ ವೇಳೆಗಾಗಲೇ ಕಳಸಕ್ಕೂ ಇದ್ದ ಸಂಬಂಧ ಮತ್ತು ರಾಜ್ಯದ ವಿಸ್ತಾರತೆಯನ್ನು ಸೂಚಿಸುತ್ತದೆ. ಕಾರ್ಕಳದ ಹಿರಿಯ ಗಡಿಯ ಪರ್ವತಿ ಗುಡ್ಡೆಯ ಬಳಿ 1365ಕ್ಕೆ ಸೇರಿದ ಚಕ್ರವರ್ತಿ ಒಂದನೆಯ ಬುಕ್ಕರಾಯನ ಶಾಸನವೊಂದು ದೊರೆತಿದೆ. ಇದು ಇಲ್ಲಿಯ ಗುರುಗಳ ಬಸದಿಯ ರತ್ನತ್ರಯದೇವರಿಗೆ ಕಾತಣ ಹೆಗ್ಗಡೆ ಮಾಡಿದ ದಾನವನ್ನು ಉಲ್ಲೇಖಿಸುತ್ತ ಇಲ್ಲಿಯ ಅರಸು ನಾಗಪ್ಪವೊಡೆಯನನ್ನು ಹೆಸರಿಸಿದೆ. ಪ್ರಾಯಶಃ ಈತ ಲೋಕನಾಥ ದೇವನ ಅನಂತರ ಅಧಿಕಾರಕ್ಕೆ ಬಂದ ವೀರಕಾಳಲದೇವಿಯ ಪತಿಯಾಗಿರಬಹುದು. ಈತನ ಮಕ್ಕಳೇ ವೀರಚೆನ್ನರಸ ಮತ್ತು ವೀರಪಾಂಡ್ಯದೇವ. ಹೀಗೆ ವಿಜಯನಗರದ ಆಳ್ವಿಕೆ ಪ್ರಾರಂಭದ ವೇಳೆಗೆ ಸು.200 ವರ್ಷಗಳ ಇತಿಹಾಸದ ಹರವನ್ನು ಹೊಂದಿ ಮೂಡಿಗೆರೆ, ಬಾಳೆಹೊನ್ನೂರು, ಕೊಪ್ಪ, ಶೃಂಗೇರಿ ಮತ್ತು ಕಾರ್ಕಳ ತಾಲ್ಲೂಕುಗಳನ್ನೊಳಗೊಂಡ ವಿಶಾಲವಾದ ಮಲೆನಾಡಿನ ಪ್ರದೇಶದಲ್ಲಿ ಹರಡಿ ಕಳಸ – ಕಾರ್ಕಳಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿತು.

ವಿಜಯನಗರ ಕಾಲ: ವೀರಚೆನ್ನರಸ ಮತ್ತು ವೀರಪಾಂಡ್ಯನ ಅನಂತರ ಆಳ್ವಿಕೆ ನಡೆಸಿದವ ವೀರ ಭೈರರಸ ಒಡೆಯ (1390–1420) ರಾಜ್ಯಕ್ಕೆ ಅಧಿಪತಿಯಾಗಿದ್ದ. ಈತ ಬಾರಕೂರಿನ ಪಾರ್ಶ್ವನಾಥ ಬಸದಿ ಮತ್ತು ಹಿರಿಯಂಗಡಿಯ ನೇಮೀಶ್ವರ ಬಸದಿಗಳನ್ನು ಕಟ್ಟಿಸಿ ದಾನಧರ್ಮಗಳನ್ನು ಮಾಡಿದ. ಈತನ ಮಗ ಅಭಿನವ ಚಾಮುಂಡರಾಯ ಎಂದು ಬಿರುದಾಂಕಿತನಾದ ವೀರಪಾಂಡ್ಯ (3ನೆಯ ಪಾಂಡ್ಯ, 1420–54). ತಂದೆಯ ಉದಾತ್ತ ಗುಣಗಳನ್ನೆಲ್ಲಾ ಮೈಗೂಡಿಸಿಕೊಂಡಿದ್ದ. ಈ ರಾಜನ ಸಮಕಾಲೀನ ಹಲವಾರು ಜೈನಕಾವ್ಯಗಳ ರಚಯಿತರೂ ಆದ ಸಂತ ಕವಿಗಳೆಂದರೆ. ಮುನಿ ಕಲ್ಯಾಣ ಕೀರ್ತಿರಾಜ ವೀರಪಾಂಡ್ಯ ತನ್ನ ಗುರುಗಳಾದ ಲಲಿತ ಕೀರ್ತಿಮುನಿಗಳ ಆದೇಶದ ಮೇರೆಗೆ ಕಾರ್ಕಳದ ಹಿರಿಯ ಬಂಡೆ ಬೆಟ್ಟದ ಮೇಲೆ ಬಾಹುಬಲಿಯ ಸುಂದರ ಶಿಲಾ ವಿಗ್ರಹವನ್ನು ಸ್ಥಾಪಿಸಿದ (1432). ಇದರ ಮುಂದೆ ಸುಂದರವಾಗಿ ಕಡೆಯಲ್ಪಟ್ಟ ಬ್ರಹ್ಮದೇವಸ್ತಂಭವನ್ನು ನಿಲ್ಲಿಸಿದ (1436). ತನ್ನ ಸೋದರ ರಾಮನಾಥನ ಹೆಸರಿನಲ್ಲಿ ವಿಶಾಲವಾದ ಸರೋವರನ್ನು ಇದೇ ಪರಿಸರದಲ್ಲಿ ನಿರ್ಮಿಸಿದ (ರಾಮಸಮುದ್ರ). ಇವನ ತರುವಾಯ ರಾಜ್ಯವಾಳಿದವ ಅಭಿನವಪಾಂಡ್ಯ ದೇವ ಒಡೆಯ ಎಂದು ಬಿರುದಾಂಕಿತನಾದ 4ನೆಯ ಪಾಂಡ್ಯ (ಪಾಂಡ್ಯಪ್ಪೊಡೆಯ). ಹಿರಿಯ ಗಡಿಯ ಸೋಮೇಶ್ವರ ಬಸದಿಯ ಮುಂದೆ ಉತ್ತುಂಗವೂ ಸುಂದರವೂ ಆದ ಮಾನಸ್ತಂಭವನ್ನು ನಿಲ್ಲಿಸಿದ್ದು (1457) ಹಾಗೂ ಬಂಗರಾಜ ಕಾಮಿರಾಯ ಅರಸ ಇವನೊಂದಿಗೆ ರಾಜಕೀಯ ಒಪ್ಪಂದ ಮಾಡಿಕೊಂಡಿದ್ದ (1461) ಈತನ ಕಾಲದ ಎರಡು ಪ್ರಮುಖ ಘಟನೆಗಳು.

ಅಭಿನವ ಪಾಂಡ್ಯ ದೇವ ಒಡೆಯನ ಕಾಲಾಂತರ (1455–75) ಆಳಿದ 2ನೆಯ ಭೈರವ ಸಾಹಿತ್ಯ, ಸಂಗೀತಗಳಲ್ಲಿ ಅಭಿರುಚಿಹೊಂದಿದ್ದ. ಅನಂತರ ಬಂದ 2ನೆಯ ಪಾಂಡ್ಯರಾಜ ಯೆಲ್ಲರೂ ಮತ್ತು ಸಿಮಂತೂರು ಹೆಗ್ಗಡೆಗಳೊಂದಿಗೆ ರಾಜಕೀಯ ಒಪ್ಪಂದ ಮಾಡಿಕೊಂಡ. ಇವನೊಂದಿಗೆ ಆಳಿದವ ಈತನ ಸೋದರಳಿಯ 3ನೆಯ ಭೈರವ. ಅನಂತರ ಬಂದ 2ನೆಯ ಭೈರರಸ ಒಡೆಯನ (4ನೆಯ ಭೈರವರಸು 1505–40) ಕಾಲದಲ್ಲಿ ಒಂದು ಪ್ರಮುಖ ಘಟನೆ ನಡೆಯಿತು.

ಇವನ ಅನಂತರ ರಾಜ್ಯವಾಳಿದ 6ನೆಯ ಪಾಂಡ್ಯಪ್ಪೊಡೆಯ (1537–55) ಸ್ವಲ್ಪಕಾಲ ಜಂಟಿಆಳ್ವಿಕೆಯನ್ನು 4ನೆಯ ಭೈರರಸನೊಂದಿಗೆ ನಡೆಸಿದ. ಈತ ಕಾರ್ಕಳದ ಆನೆಕೆರೆಯಲ್ಲಿ ಒಂದು ಸುಂದರವಾದ ಚತುರ್ಮುಖ ಬಸದಿಯನ್ನು (1545) ಕಟ್ಟಿಸಿದ. ಚೌಟರಾಜ ತಿರುಮಲರಸನೊಂದಿಗೆ ಒಂದು ರಕ್ಷಣಾ ಒಪ್ಪಂದವನ್ನು (1543) ಮಾಡಿಕೊಂಡ ವೀರ ಇಮ್ಮಡಿ ಪಾಂಡ್ಯಪ್ಪವೊಡೆಯ (1555–65) ಈ ಕಾಲದ ಕೊನೆಯ ರಾಜ (ಈತ 7ನೆಯ ಪಾಂಡ್ಯ).

ವಿಜಯನಗರೋತ್ತರ ಕಾಲ: ಈ ಕಾಲಕ್ಕೆ ಸಂಬಂಧಿಸಿದಂತೆ 7ನೆಯ ಪಾಂಡ್ಯನ ಅನಂತರ ನಾಲ್ವರು ರಾಜ್ಯವಾಳಿದರು. ಅವರೆಂದರೆ ಭೈರರಸ ಒಡೆಯ (5ನೆಯ ಭೈರವ), ಇಮ್ಮಡಿ ಭೈರವ (6ನೆಯ ಭೈರವ), ಪಾಂಡ್ಯಪ್ಪೊಡೆಯ (8ನೆಯ ಪಾಂಡ್ಯ) ಮತ್ತು ಭೈರರಸ (7ನೆಯ ಭೈರವ). ಇಮ್ಮಡಿ ಭೈರವನ ಕಾಲದಲ್ಲಿ (1573–98) ಕಾರ್ಕಳದ ಚಿಕ್ಕಬೆಟ್ಟದ ಮೇಲೆ ಸುಂದರ ಮತ್ತು ಶಿಲಾಮಯವಾದ ಚತುರ್ಮುಖ ಬಸದಿಯ ನಿರ್ಮಾಣವಾಯಿತು (1586). 1588ರಲ್ಲಿ ಕೊಪ್ಪ ತಾಲೂಕಿನ ನಾರಾವೆಯಲ್ಲಿ ಗೋಪಾಲಕೃಷ್ಣ ದೇವಸ್ಥಾನ ಮತ್ತು ಅದಕ್ಕೊಂದು ಛತ್ರ ನಿರ್ಮಾಣವಾದವು. ರಾಜ ತನ್ನ ಮಗ ಪಾಂಡ್ಯಪ್ಪೊಡೆಯನೊಂದಿಗೆ ಕೂಡಿ ಕೊಪ್ಪದಲ್ಲಿ ಸಾದನ ಚೈತ್ಯಾಲಯ ಎಂಬ ಬಸದಿ ನಿರ್ಮಿಸಿದ. ಕಳಸ–ಕಾರ್ಕಳ ವಂಶಕ್ಕೆ ಇದು ಕೊನೆ ಕ್ಷಣಗಳ ಪ್ರಕಾಶ. ಅನಂತರ ಬಂದ ಪಾಂಡ್ಯಪ್ಪೊಡೆಯನ ಕಾಲದಲ್ಲಿ ಶ್ರವಣ ಬಸದಿ ನಿರ್ಮಾಣವಾಯಿತು (1604). ಇವನ ಸೋದರ ಭೈರರಸನ ಕಾಲದಲ್ಲಿ ಕಾರ್ಕಳದ ಗೊಮ್ಮಟನಿಗೆ ಮಹಾಮಸ್ತಕಾಭಿಷೇಕ ನಡೆಯಿತು (1646). ತನ್ನ ಹಾಡುಗಬ್ಬದ

ಮೂಲಕ ಕವಿ ಚದುರ ಚಂದ್ರಮನು ಈ ಉತ್ಸವದ ಸುಂದರ ವಿವರಣೆ ನೀಡಿದ್ದಾನೆ. ಈ ಭೈರರಸನ ಅನಂತರ (1660) ಯಾರು ಎಷ್ಟು ಕಾಲ ರಾಜ್ಯವಾಳಿದರು ಎಂಬುದು ಗೊತ್ತಾಗುವುದಿಲ್ಲ.

ವಿಜಯನಗರ ಪತನಾನಂತರ ಕರಾವಳಿ ಭಾಗದ ಮೇಲೆ ಕೆಳದಿ ಅರಸರ ಹಿಡಿತ ಬಿಗಿಯಾಯಿತು. ದೊಡ್ಡಸಂಕಣ್ಣನಾಯಕ (1546–59), ವೆಂಕಟಪ್ಪನಾಯಕ (1586–1629) ಮತ್ತು ವೀರಭದ್ರ ನಾಯಕ (1629–45) ಇವರ ಕಾಲದಲ್ಲಿ ಕೆಳದಿ–ಕಾರ್ಕಳಗಳ ನಡುವೆ ಹಲವು ಬಾರಿ ಯುದ್ಧ ಘಟಿಸಿತು. ಇವು ಮಿಶ್ರಫಲವನ್ನು ತಂದು ಕೊಟ್ಟವೇ ಹೊರತು ಕಾರ್ಕಳದ ಭೈನರಾಜ ವಂಶವನ್ನು ಕೊನೆಗಾಣಿಸಲಾಗಲಿಲ್ಲ. ಈ ವಂಶದ ಅಂತ್ಯ ಪ್ರಾಯಶಃ ಹೈದರ್ ಅಲಿ ಈ ಭಾಗಕ್ಕೆ ಧಾಳಿ ಇಟ್ಟಾಗ (1763) ಆಗಿರಬಹುದು.

ಕಳಸ–ಕಾರ್ಕಳ ರಾಜವಂಶದ ಕೊಡುಗೆಗಳು ಗಣನೀಯ. ಆಡಳಿತದಲ್ಲಿ ಒಳ್ಳೆಯ ನೀತಿಯನ್ನನುಸರಿಸಿ ಶಾಂತಿ ಮತ್ತು ಸಮೃದ್ಧಿಯನ್ನು ಕಾಯ್ದುಕೊಂಡರು. ಬಸದಿಗಳೊಂದಿಗೆ ದೇವಾಲಯಗಳನ್ನು ನಿರ್ಮಿಸಿ ಎರಡಕ್ಕೂ ದಾನ ಧರ್ಮಗಳನ್ನು ಮಾಡಿದರು. ದೇವಾಲಯಗಳ ಪೂಜೆ, ಉತ್ಸವಾದಿಗಳಲ್ಲಿ ಶ್ರದ್ಧೆ, ಭಕ್ತಿಗಳಿಂದ ಭಾಗವಹಿಸಿದರು. ಧರ್ಮ ಸಮನ್ವಯತೆಯ ಸತ್ಪರಂಪರೆಯನ್ನು ಬೆಳೆಸಿದರು. ಶೃಂಗೇರಿ ಮಠದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಪೋರ್ಚುಗೀಸ್ ಧಾಳಿಗೆ ತುತ್ತಾಗಿ ತಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಗೋವೆಯಿಂದ ಓಡಿಬಂದ ಕೊಂಕಣಸ್ಥ ಬ್ರಾಹ್ಮಣ ವರ್ಗದ ಜನ ಸಮುದಾಯಕ್ಕೆ ಕಳಸ ಮತ್ತು ಕಾರ್ಕಳಗಳಲ್ಲಿ ನೆಲೆಗಳನ್ನು ಕಲ್ಪಿಸಿಕೊಟ್ಟರು. ಇವರ ಕಾಲದಲ್ಲಿ ನಿರ್ಮಾಣಗೊಂಡ ಅಸಂಖ್ಯ ಬಸದಿಗಳು, ಕಾರ್ಕಳದ ಬಾಹುಬಲಿ ವಿಗ್ರಹ, ಅದರ ಎದುರಿನ ಬ್ರಹ್ಮದೇವಸ್ತಂಭ, ಹಿರಿಯಂಗಡಿಯ ಮಾನಸ್ತಂಭ, ಕಾರ್ಕಳ, ವರಾಂಗಗಳ ಕೆರೆಬಸದಿಗಳು ಮತ್ತು ಕಾರ್ಕಳದ ಚತುರ್ಮುಖ ಬಸದಿ–ಎಲ್ಲವೂ ಕಲಾಪ್ರಕಾರದಲ್ಲಿ ಇವರು ನೀಡಿದ ಅದ್ಭುತ ಕೊಡುಗೆಗಳು. ಈಗ ರಾಷ್ಟ್ರದ ಸ್ಮಾರಕಗಳಲ್ಲಿ ಇದೊಂದು ದೇವಾಲಯವಾಗಿದೆ. ದೇವ–ದೇವಿಯರ ವಿಗ್ರಹಗಳ ಅಪರಿಮಿತ ಸಂಖ್ಯೆಯಲ್ಲಿ ಗುರುತಿಸಲೇಬೇಕಾದ ಒಂದು ವಿಗ್ರಹವೆಂದರೆ ಕಾರ್ಕಳದ ಅನಂತಶಯನ ದೇವರ ವಿಗ್ರಹ. ದಕ್ಷಿಣ ಭಾರತದಲ್ಲಿ ಇರುವ ಕೆಲವೇ ಅಭೂತಪೂರ್ವ ಬೃಹದ್‌ವಿಗ್ರಹಗಳ ಪೈಕಿ ಇದು ಒಂದು..

ಕಾರ್ಕಳದ ಅರಸರಿಗೆ ಅವರ ಎಲ್ಲ ಕಾರ್ಯಗಳಲ್ಲೂ ಮಾರ್ಗದರ್ಶಕರಾಗಿದ್ದವರು ಮತ್ತು ಅವರ ರಾಜಗುರುಗಳಾಗಿದ್ದವರು ಲಲಿತ ಕೀರ್ತಿಭಟ್ಟಾರಕರು. ಹನಸೋಗೆ ಮೂಲದ ಈ ಮಠ–ಮುನಿಪರಂಪರೆ ಕಳಸಕ್ಕೆ ಬಂದು ನೆಲೆಸಿ ಸಾಂತರರ ಗುರು ಮಠವಾಗಿತ್ತು. ಸಾಂತರರು ಕಳಸದಿಂದ ಕಾರ್ಕಳಕ್ಕೆ ಬಂದು ನೆಲೆಸಿದಾಗ ಈ ಮಠ ಕಾರ್ಕಳಕ್ಕೆ ವರ್ಗಾವಣೆ ಹೊಂದಿತು. ಈ ಲಲಿತ ಕೀರ್ತಿ ಭಟ್ಟಾರಕರ ಉಪದೇಶದಿಂದ ಹಿರಿಯಂಗಡಿಯ ನೇಮಿನಾಥ ಬಸದಿ, ಅಮ್ಮನವರ ಬಸದಿ, ಮಾನಸ್ತಂಭ, ಪಾಂಡ್ಯನಗರಿಯ ಬಾಹುಬಲಿ ವಿಗ್ರಹ, ಬ್ರಹ್ಮ ದೇವಸ್ತಂಭ, ಚಿಕ್ಕಬೆಟ್ಟದ ಚತುರ್ಮುಖ ಬಸದಿ, ಆನೆಕೆರೆಯ ಚತುರ್ಮುಖ (ಕೆರೆ) ಬಸದಿ ಇತ್ಯಾದಿಗಳು ನಿರ್ಮಾಣವಾದುವು. ಈ ಮುನಿಗಳ ಉಪದೇಶದಿಂದ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ಸಲುವಾಗಿ ಶಾಲೆಯೊಂದನ್ನು ನಡೆಸಲು ಇಲ್ಲಿಯ ಧನಿಕ ಶ್ರಾವಕವರ್ಗ ಅಪಾರವಾದ ಹೊನ್ನಿನ ದಾನಮಾಡಿತು. ಈ ಶಾಲೆ ದಾನಶಾಲೆ ಎಂಬ ಹೆಸರು ಪಡೆಯಿತು. ಇದು ಮಠದ ಆಶ್ರಯದಲ್ಲಿ ನಡೆಯಿತು. ಇದರಿಂದಾಗಿ ಮುಂದೆ ಈ ಜೈನಮಠ ದಾನಶಾಲೆಮಠ ಎಂದು ಗುರುತಿಸಲ್ಪಟ್ಟಿತು. ಕವಿಚದುರ ಚಂದ್ರಮ ವರ್ಣಿಸಿರುವ ಬಾಹುಬಲಿ ಮಸ್ತಕಾಭಿಷೇಕ ಈ ಭಟ್ಟಾರಕರ ಉಪದೇಶದಿಂದಲೇ ನಡೆಯಿತು. (ಪಿ.ಎನ್.ಎನ್.)

**ನಿಡುಗಲ್ಲು ಚೋಳರು:** ಸು.11ನೆಯ ಶತಮಾನದ ಆರಂಭದಿಂದ 14ನೆಯ ಶತಮಾನದ ಅಂತ್ಯದವರೆಗೆ ಸಂಗಮ ಯುಗದ ಕರಿಕಾಲಚೋಳರ ವಂಶಜರೆಂದು ಕರೆದುಕೊಳ್ಳುವ ಒಂದು ಚೋಳ ಮನೆತನ. ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ, ಕರ್ನಾಟಕದ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ಬಹುಭಾಗವನ್ನು ಆಳುತ್ತಿದ್ದರು. ಇವರ ಮೂಲ ಸ್ಥಾನ ಅನಂತಪುರ ಜಿಲ್ಲೆ ಪೆನುಕೊಂಡ ತಾಲ್ಲೂಕಿನ ರೊದ್ದ 300. ಇವರು ಕಲ್ಯಾಣದ ಚಾಳುಕ್ಯ ಮತ್ತು ಕಳಚುರಿಗಳ ಮಂಡಳೇಶ್ವರರಾಗಿದ್ದರು. ಗೋವಿಂದವಾಡಿ, ಹೆಂಜೇರು ಮತ್ತು ನಿಡಗಲ್ಲು ಇವರ ಪ್ರಮುಖ ರಾಜಧಾನಿಗಳಾಗಿದ್ದವು. ಇವರ ಲಾಂಛನ ಸಿಂಹ. ರೊದ್ದಗೋವ, ಹರಪಾಧರಕ, ಚೋಳೇಶ್ವರ ದೇವಲಬ್ಧವರ ಪ್ರಾಸಾದ, ಒರೈಯೂರು ಪುರವರಾಧೀಶ್ವರ ಮೊದಲಾದವು ಇವರ ಬಿರುದುಗಳು.

ಈ ಮನೆತನದವರನ್ನು ಮೊದಲು ಪರಿಚಯಿಸಿದವರು ಬಿ.ಎಲ್. ರೈಸ್. ಆದರೆ ಇವರ ಮೂಲದ ಬಗೆಗೆ ಏನನ್ನೂ ತಿಳಿಸಿಲ್ಲ. ಕೆ.ಎಂ. ನೀಲಕಂಠಶಾಸ್ತ್ರೀ ಹಾಗೂ ಯಶೋಧಾ ದೇವಿಯರವರ ಪ್ರಕಾರ ಅನಂತಪುರ ಜಿಲ್ಲೆಯ ರೇನಾಡು ಚೋಳರೊಂದಿಗೆ ಇವರ ಸಂಬಂಧವಿದೆ. ಆದರೆ ಇದಕ್ಕೆ ಯಾವುದೇ ನಿರ್ದಿಷ್ಟ ಆಧಾರಗಳಿಲ್ಲ. ಕಪ್ಪುರಾಮ್ ಹಾಗೂ ಚೆಲುವರಾಜನ್‌ರವರು ತಮಿಳುನಾಡಿನ ಚೋಳ ಮನೆತನದ ಒಂದು ಅಂಗವೇ ನಿಡುಗಲ್ಲು ಚೋಳ ಎಂದಿದ್ದಾರೆ. ಪ್ರಾರಂಭದ ಶಾಸನಗಳಲ್ಲಿ ತಮ್ಮನ್ನು ರೊದ್ದದಗೋವ (ರೊದ್ದದ ರಕ್ಷಕರು) ಎಂದು ಕರೆದುಕೊಂಡಿದ್ದಾರೆ.

**ಗೋವಿಂದವಾಡಿಯ ಚೋಳರು:** ಈ ಮನೆತನದ ಮೂಲ ದೊರೆ ಜಟಾ. ಇವನ ಮಗ ಬ್ರಹ್ಮದೇವ. ಇವನು ಗೋವಿಂದವಾಡಿಯಿಂದ ಆಳುತ್ತಿದ್ದನೆಂದೂ, ನೊಳಂಬರ ಸಾಮಂತನಾಗಿದ್ದನೆಂದೂ ನೊಳಂಬನಾಳಿಂಮುನಿಯವ ಎಂಬ ಇವನ ಬಿರುದು ತಿಳಿಸುತ್ತದೆ. ಬ್ರಹ್ಮದೇವನ ಮಗನಾದ ಮಂಗರಸ ರೊದ್ದ 300 ಹಾಗೂ ಕನಿಯಕಲ್ಲು 300ರ ಅಧಿಪತಿ ಯಾಗಿದ್ದ. ಇವನ ಅನಂತರ ಈತನ ಮಗ ಬೀಚಿ, ಮೊಮ್ಮಗ ಗೋವಿಂದ ಕ್ರಮವಾಗಿ ಆಳ್ವಿಕೆ ನಡೆಸಿದರು. ಅನಂತರ ಗೋವಿಂದನ ಮಗನಾದ 1ನೆಯ ಇರುಂಗೋಳ (1107–43) ಮನೆತನದ ಶ್ರೇಷ್ಠ ಅರಸ. ಇವನು ಕಣಿಕಲ್ಲು 300, ರೊದ್ದ 300, ಸಿರಾ 300, ಹರವೇ 300 ಮತ್ತು ಸಿಂದವಾಡಿಯ ಅಧಿಪತಿಯಾಗಿದ್ದ. ಹೊಯ್ಸಳರೊಂದಿಗೆ ಇದ್ದ ಇವನ ವೈಮನಸ್ಸನ್ನು ಹೊಯ್ಸಳ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಹೊಯ್ಸಳ ವಿಷ್ಣುವರ್ಧನನು ಇರುಂಗೋಳನ ಸೈನ್ಯವನ್ನು ಮೆಟ್ಟಿದ್ದುದರ ಉಲ್ಲೇಖವೂ ಇದೆ. ಕಾಂಚಿನೂಪುರಂ ರತ್ನಾಕರ, ಕರ್ನಾಟಕ ಕರ್ಣ ರತ್ನ ಮೇಖಲಾಂಕರ ಮೊದಲಾದವು ಇವನ ಬಿರುದುಗಳು.

**ಹೆಂಜೇರಿನ ಅರಸರು:** ಮೊದಲನೆಯ ಇರುಂಗೋಳ ಚೋಳನ ಮಗ ಮಲ್ಲಿದೇವ (1143–96) ಜಗದೇಕಮಲ್ಲ ವೀರನೊಳಂಬ ಮಲ್ಲಿದೇವ ಚೋಳ ಮಹಾರಾಜ, ಹೆಂಜೇರುವಿ ನಿಂದ ಆಳುತ್ತಿದ್ದ. ಇವನ ಸಾಮ್ರಾಜ್ಯ ರೊದ್ದನಾಡು–ಕನಿಯಕಲ್ಲು ನಾಡು, ಸಿನಾಡು, ಹರವೇ ನಾಡುಗಳನ್ನು ಒಳಗೊಂಡಿತ್ತು. ಇವನು ತನ್ನ ರಾಜಧಾನಿಯನ್ನು ಹೆಂಜೇರುವಿಗೆ ವರ್ಗಾಯಿಸಲು ಇದ್ದ ರಾಜಕೀಯ ಉದ್ದೇಶ ಇವನು ನೊಳಂಬ ರಾಜಕುಮಾರಿಯ ಮಗನೆಂದೂ ನೊಳಂಬ ಮನೆತನದಲ್ಲಿ ವಂಶೋದ್ಧಾರಕರಿಲ್ಲದ್ದಿದ್ದ ಕಾರಣ ಸಾಮ್ರಾಜ್ಯದ ರಕ್ಷಣೆಯ ಜವಾಬ್ದಾರಿಯನ್ನು ಮಲ್ಲಿದೇವನಿಗೆ ನೀಡಲಾಯಿತು. ಇವನಿಗಿದ್ದ ವೀರನೊಳಂಬ ಎಂಬ ಬಿರುದು ಮೇಲಿನ ಹೇಳಿಕೆಗೆ ಪುಷ್ಟಿ ನೀಡುತ್ತದೆ. ಅರವತ್ತನಾಲ್ಕು ಮಾಂಡಲೀಕರ ತಲೆಗೊಂಡಗಂಡ ರೊದ್ದಗೋವ ಎಂಬ ಬಿರುದುಗಳನ್ನು ಇವನು ಹೊಂದಿದ್ದ. ಮಲ್ಲಿದೇವನ ಮಗನಾದ 2ನೆಯ ಇರುಂಗೋಳ, ಹೊಯ್ಸಳ ನರಸಿಂಹನ ಮಗಳಾದ ಸಿರಿದೇವಿಯೊಂದಿಗೆ ವಿವಾಹವಾದ ಕಾರಣ ಎರಡು ಮನೆತನಗಳ ನಡುವೆ ಸ್ವಲ್ಪ ಕಾಲ ಒಳ್ಳೆಯ ಬಾಂಧವ್ಯ ಬೆಳೆಯಿತು.

**ನಿಡುಗಲ್ಲಿನ ಅರಸರು:** 2ನೆಯ ಇರುಂಗೋಳನ ಸೋದರ 2ನೆಯ ಬೊಮ್ಮದೇವ. ಇವನು 1219ರಲ್ಲಿ ರಾಜನಾದ. ರೊದ್ದ, ಕನಿಯಕಲ್ಲು, ಸಿರೇನಾಡು, ಮದ್ಯೆಮ್ಮನಾಡು, ಲುಂಕೆನೊರುಂಬ, ನೊಳಂಬವಾಡಿ ರೇಮಾಡಿ (ಇರುಮಾಡಿ) ಪ್ರದೇಶಗಳನ್ನು ಇವನು ಆಳಿದ. ಮಂತ್ರಿ ಬೀಜನಿಗೆ ನಿಡುಗಲ್ಲಿನಿಂದ ಹನಿಯದವರೆಗೆ ಕೋಟೆ ನಿರ್ಮಿಸಲು ಆದೇಶಿಸಿದ.

ಬೊಮ್ಮದೇವನ ಅನಂತರ ಆತನ ಮಗ 3ನೆಯ ಇರುಂಗೋಳ ಆಳಿದ. ಇವನ ಮಗ ತ್ರಿಪುರಾಂತಕದೇವ ಹನಿಯದುರ್ಗದಿಂದ ಆಳುತ್ತಿದ್ದ. ಅನಂತರ ಇವನ ಸಹೋದರ ಪೆರುಮಾಳದೇವ. ಹೊಯ್ಸಳ 3ನೆಯ ನರಸಿಂಹನೊಂದಿಗೆ ಕಾಳಗದಲ್ಲಿ ಹೋರಾಡಿ ಮಡಿದ. 3ನೆಯ ಬೊಮ್ಮದೇವನ ಮಗನಾದ ಗಣೇಶ್ವರದೇವ ನಿಡುಗಲ್ಲನ್ನು ಕಳೆದುಕೊಂಡ ಕಾರಣ 4ನೆಯ ಇರುಂಗೋಳ 1390ರಲ್ಲಿ ಗುಂಡನಹಳ್ಳಿಯಿಂದ ಆಳುತ್ತಿದ್ದ. ಇವನ ಮೊಮ್ಮಗ ಹಾಗೂ ನಾಚಯ್ಯನಾಯಕನ ಮಗನಾದ ಭೈರರಸ ಚೋಳ ಮಹಾರಾಜ 1337ರಲ್ಲಿ ಗುಡಿಯಕುಂಟೆಯಿಂದ ಆಳುತ್ತಿದ್ದ. ಇವನು ಹೊಳಕಲ್ಲು ಬೊಮ್ಮನಾಯಕನ ಅಧೀನನಾಗಿದ್ದ. ಬಹುಶಃ ಹೊಯ್ಸಳ 3ನೆಯ ಬಲ್ಲಾಳ ನಾಯಕ ಮನೆತನದವರಿಗೆ ನಿಡುಗಲ್ಲನ್ನು ನೀಡಿರಬೇಕು. ಭೈರರಸನಿಗೆ ಕೇಸರಸ ಮತ್ತು ವಿಜಯರಸ ಎಂಬ ಇಬ್ಬರು ಮಕ್ಕಳಿದ್ದರು. 1481ರ ರಂಟವೊಳಲು (ಮಧುಗಿರಿ) ಶಾಸನದಲ್ಲಿ ಚೋಳ ಮಹಾರಾಜರು ಎನ್ನುವ ಬದಲು ಚೋಳರ ಮಕ್ಕಳು ಎಂದು ಕರೆದುಕೊಂಡು ಚೋಳ ಮನೆತನದೊಂದಿಗೆ ನಿಡುಗಲ್ಲಿನ ಚೋಳ ಮನೆತನದ ಸಂಬಂಧವನ್ನು ಕಲ್ಪಿಸಿರುವುದಕ್ಕೆ ಆಧಾರಗಳ ಕೊರತೆಯಿದೆ.

ಆಡಳಿತ ವ್ಯವಸ್ಥೆ: ಈ ಮನೆತನದ ಅರಸರು ಕಲ್ಯಾಣ ಚಾಳುಕ್ಯರ ಆಡಳಿತ ವ್ಯವಸ್ಥೆಯನ್ನು ರೂಢಿಸಿಕೊಂಡಿದ್ದರು. ರಾಜನೇ ಆಡಳಿತದ ಸರ್ವಾಧಿಕಾರಿ. ಮಂತ್ರಿಗಳು ಹಾಗೂ ಅಧಿಕಾರಿಗಳು ಆಡಳಿತದ ಆಧಾರ ಸ್ತಂಭಗಳು. ಹೆಗ್ಗಡೆಬೊಮ್ಮಣ್ಣ, ತಂತ್ರಪಾಲನಾಮ, ಸಿಂಗಯ್ಯ ಹೆಗ್ಗಡೆ ಪ್ರಮುಖ ಮಂತ್ರಿಗಳು. ಮಹಾಸಾಮಂತ, ಅಮಾತ್ಯ, ಮಹಾಪ್ರಧಾನ, ದಂಡನಾಯಕ ಮೊದಲಾದ ಮಂತ್ರಿಗಳಿದ್ದರು. ಭಂಡಾರಿ ಕೇತನ ಖಜಾನೆಯ ಅಧಿಕಾರಿ, ಭೋಗಿಯ ಬೊಮ್ಮಯ ಸುಂಕದ ಅಧಿಕಾರಿ. ಆಡಳಿತದ ಭಾಗಗಳಾದ ಕನಿಯಕಲ್ಲು ನಾಡು, ಹರುವೆನಾಡು, ಸಿರೇನಾಡುಗಳು ಕೃಷಿ ಮತ್ತು ಆರ್ಥಿಕ ಏಳಿಗೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಇವರ ಕಾಲದಲ್ಲಿ ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕ ಸ್ಥಾನಗಳು ಪ್ರಮುಖ ವಿದ್ಯಾಕೇಂದ್ರಗಳಾಗಿದ್ದವು. ಹೆಂಜೇರುವಿನ ಮಹಾಘಟಿಕಾ ಸ್ಥಾನ ನೋಣಬೇಶ್ವರ ಕರ್ನಾಟಕದ ಒಂದು ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಇವರು ಸಂಸ್ಕೃತ, ಕನ್ನಡ ಮತ್ತು ತಮಿಳು ಭಾಷೆಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದರು. ಸಂಸ್ಕೃತ ಕಂದಪದ್ಯಗಳಲ್ಲಿ ಮಲ್ಲಿದೇವ ಚೋಳ ಮಹಾರಾಜನ ಗುಣವರ್ಣನೆಗಳಿವೆ.

ಆರ್ಥಿಕ ವ್ಯವಸ್ಥೆ: ಹಲವು ಕೆರೆ ಬಾವಿಗಳನ್ನು ನಿರ್ಮಿಸಿ ಕೃಷಿಗೆ ಒಳಪಡದ ಭೂಮಿ ಯಲ್ಲಿಯೂ ಕೃಷಿಯನ್ನು ವಿಸ್ತರಿಸುವ ನೀತಿಯನ್ನು ಇವರು ಅಳವಡಿಸಿಕೊಂಡಿದ್ದರು. ಇದರಿಂದ ಹಲವು ಪಟ್ಟಣಗಳ ಉದಯವಾದವು. ಉದಾ: ನಿಡುಗಲ್ಲು. ಶ್ರೇಣಿಗಳಾದ ನಾನಾದೇಶಿ ಮಲೆಯಾಳ, ನಕರರು, ಮಹಾವಡ್ಡ ವ್ಯವಹಾರಿಗಳು ವ್ಯಾಪಾರ ವಾಣಿಜ್ಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಗದ್ಯಾಣ, ಹಣ, ಪಣ, ಹಾಗ ಮತ್ತು ವೀಸಾ ಎಂಬ ನಾಣ್ಯಗಳ ಉಲ್ಲೇಖ ಶಾಸನಗಳಲ್ಲಿವೆ. ಕ್ವಾರ್ಯಾದ ಶಾಸನವೊಂದು ಒಂದು ಹಣವನ್ನು ತೆರಿಗೆಯಾಗಿ ಚಪಾವಣಾ ಕೇಂದ್ರ ನೀಡಬೇಕೆಂದು ತಿಳಿಸುತ್ತದೆ.

ಧಾರ್ಮಿಕ ವ್ಯವಸ್ಥೆ: ಈ ಮನೆತನದ ಅರಸರು ಶೈವರಾಧಕರಾದರೂ ವೈಷ್ಣವ ಮತ್ತು ಜೈನಧರ್ಮಕ್ಕೂ ಕೊಡುಗೆ ನೀಡಿ ಧರ್ಮ ಸಹಿಷ್ಣುಗಳಾಗಿದ್ದರು. ಇವರ ಶಾಸನಗಳಲ್ಲಿ ಕಾಣುವ ಸ್ಥಾನಪತಿಗಳ ಹೆಸರುಗಳ ಕೊನೆಯಲ್ಲಿ ಶಿವ, ಜೀಯ, ರಾಶಿ ಪಂಡಿತ ಮತ್ತು

ಶಕ್ತಿ ಎಂದಿದೆ. ಶೈವಧರ್ಮದಂತೆಯೇ ಜೈನಧರ್ಮ ಪ್ರಮುಖ ಸ್ಥಾನ ಹೊಂದಿತ್ತು. ಇರುಂಗೋಳನ ರಾಣಿ ಅಲ್ಪಾದೇವಿ (ಆಳುಪದೇವಿ) ಜೈನ ಧರ್ಮೀಯಳೆಂದೂ ಕುಂದಕುಂದಾನ್ವಯದ ಕಾನೂರು ಗಣಕ್ಕೆ ಸೇರಿದವಳೆಂದೂ ತಿಳಿದುಬರುತ್ತದೆ. ಇವರ ಶಾಸನಗಳಲ್ಲಿ ವಂದಬಲಿ, ಇಂಗಲೇಶ್ವರ ಬಲಿ, ಕಾನೂರುಗಣ ದೇಶಿಗಣಗಳ ಉಲ್ಲೇಖವಿದೆ. ಪಾರ್ಶ್ವನಾಥ ಬಸದಿಯನ್ನು ಗಾಂಗೇಯ ಮಾರೆಯನು ನಿರ್ಮಿಸಿದ. ಅಮರಾಪುರದ ಶಾಸನ ಜೋಗವಟ್ಟಿಗೆ ಬ್ರಹ್ಮಜಿನಾಲಯಕ್ಕೆ ಇರುಂಗೋಳ ಚೋಳದೇವನು ದತ್ತಿ ಕೊಟ್ಟಿರುವುದನ್ನು ತಿಳಿಸುತ್ತದೆ. ಈ ಮನೆತನದ ಅರಸರು ತಮ್ಮ ಹೆಸರಿನೊಂದಿಗೆ ದೇವರ ಹೆಸರುಗಳನ್ನು ಜೋಡಿಸಿಕೊಳ್ಳುವ ಮೂಲಕ ಇರುಂಗೋಳೇಶ್ವರ, ಮಂಗೇಶ್ವರ ನ್ಯಾಯಬದ್ಧ ಧರ್ಮಸಮ್ಮತವಾಗಿ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಿದ್ದಿರಬಹುದು.

**ಕಲೆ ಮತ್ತು ವಾಸ್ತು ಶಿಲ್ಪ:** ಇವರ ದೇವಾಲಯಗಳು ಕಲ್ಯಾಣದ ಚಾಳುಕ್ಯ ಮತ್ತು ಹೊಯ್ಸಳರ ಶೈಲಿಯನ್ನು ಹೋಲುತ್ತವೆ. ಇವರ ಪ್ರಮುಖ ದೇವಾಲಯ ಮತ್ತು ಬಸದಿಗಳೆಂದರೆ ಪಾರ್ಶ್ವನಾಥ ಬಸದಿ, ಲಕ್ಷ್ಮೀ ನಾರಾಯಣ, ನಗರೇಶ್ವರ ಮತ್ತು ಸೋಮನಾಥ ದೇವಾಲಯಗಳು. ನಿಡುಗಲ್ಲು ಬೆಟ್ಟದಲ್ಲಿಯ ಅಭೇದ್ಯವಾದ ಕೋಟೆಗೆ ಹಲವಾರು ದ್ವಾರಗಳಿದ್ದು ಸುಸ್ಥಿತಿಯಲ್ಲಿದೆ. ಬೆಟ್ಟದ ಉತ್ತರದಲ್ಲಿ ಅರಮನೆಯ ಅವಶೇಷಗಳು ಕಂಡುಬಂದಿವೆ.

**ನಿಡುಗಲ್ಲು ಚೋಳರ ವಂಶಾವಳಿ:**

ಜಟಾ (11ನೆಯ ಶತಮಾನದ ಆರಂಭ)
|
ಬ್ರಹ್ಮ ದೇವ / ಭೋಗೇಂದ್ರ / ಭೋಗಿ (ಸು. 1040)
|
ಮಂಗರಸ / ಇರಿವ ಮಂಗರಸ / ಕಲಿಮಂಗಿ (ಸು. 1070–83)
|
ಬೀಚಿ
|
ಗೋವಿಂದರಸ
|
ಇರುಂಗೋಳ (ಸು. 1107–43)
|
ಮಲ್ಲಿದೇವ / ಪರಿಯ ಭೋಗ / ಭೋಗದೇವ (ಸು. 1143–96)

- ಇರುಂಗೋಳ II (ಸು. 1196–1219)
- ಬೋಮ್ಮಿದೇವ II / ಬ್ರಹ್ಮ (ಸು. 1219–32)
  - ಇರುಂಗೊಳ III (ಸು. 1232–80)
    - ತ್ರಿಪುರಾಂತಕದೇವ (ಸು. 1262)
    - ಬೊಮ್ಮ III (ಸು. 1280)
      - ಗಣೇಶ್ವರ
    - ಪೆರುಮಾಳ ದೇವ (ಸು. 1280–86)
      - ಇರುಂಗೋಳದೇವ IV (ಸು. 1280–1320)
        - ನಾಚಯ್ಯನಾಯಕ
          - ಅಲ್ಲಪ್ಪನಾಯಕ
          - ಸೋದಯ್ಯನಾಯಕ
          - ಭೈರರಸ(ಭೈರಯ್ಯ) (ಸು. 1337)
            - ಕೇಸರಸ
            - ವಿಜಯರಸ

(ಆರ್.ಕೆ.)

**ಕರ್ನಾಟಕದ ಕೈಫಿಯತ್ತುಗಳು:** ಸ್ಥಳೀಯ ಇತಿಹಾಸ, ಸ್ಥಳ ಪುರಾಣ, ಜಾನಪದ, ಐತಿಹ್ಯ ಮೊದಲಾದ ಅಂಶಗಳನ್ನು ಒಳಗೊಂಡ ದಾಖಲೆಗಳು. ಕೈಫಿಯತ್ ಎಂಬ ಪದ ಮೂಲತಃ ಅರೇಬಿಕ್ ಭಾಷೆಯ ಪದ. ಕರ್ನಾಟಕದಲ್ಲಿ ಅದೂ ಕನ್ನಡದಲ್ಲಿ ಕೈಫಿಯತ್ ರಚನೆಯನ್ನು ಕೈಗೊಂಡ ಕೀರ್ತಿ ಆಂಗ್ಲರ ಕಾಲದಲ್ಲಿ ಮಿಲಿಟರಿ ಅಧಿಕಾರಿಯಾಗಿದ್ದ ಕರ್ನಲ್ ಮೆಕೆಂಜಿಗೆ ಸಲ್ಲುತ್ತದೆ. ಆದುದರಿಂದ ಸಾಮಾನ್ಯವಾಗಿ ಕನ್ನಡದ ಕೈಫಿಯತ್‌ಗಳನ್ನು ಮೆಕೆಂಜಿ ಕೈಫಿಯತ್ ಎಂದೇ ಕರೆಯಲಾಗುತ್ತದೆ. ಮೆಕೆಂಜಿ ಸ್ಥಳೀಯ ಪಂಡಿತರು, ವಿದ್ಯಾವಂತರು, ಅಧಿಕಾರಿಗಳು, ಶಾನುಭೋಗರು, ಪಟೇಲರು, ಜನ ಸಾಮಾನ್ಯರು ಮೊದಲಾದವರಿಂದ ಆಯಾಯ ಸ್ಥಳೀಯ ಪ್ರದೇಶಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು 1800–12ರ ನಡುವಣ ಅವಧಿಯಲ್ಲಿ ಸಂಗ್ರಹಿಸಿದ. ಕೈಫಿಯತ್ತುಗಳಲ್ಲಿ ಹಸ್ತಪ್ರತಿಗಳ ರೂಪದಲ್ಲಿ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಹಲವಾರು ವಿಷಯಗಳು ಸಿಗುತ್ತವೆ. ಇತಿಹಾಸ ರಚನೆಯಲ್ಲಿ ಸಾಹಿತ್ಯ ಹಾಗೂ ಶಾಸನಾಧಾರಗಳಲ್ಲದೆ ಇತ್ತೀಚೆಗೆ ಕೈಫಿಯತ್ತುಗಳನ್ನು ಸಹ ಬಳಸಿಕೊಳ್ಳಲಾಗುತ್ತಿದೆ. ಉದಾ: ಅರಿಕೊಠಾರ (ಚಾಮರಾಜನಗರ) ಕೈಫಿಯತ್, ಅಷ್ಟಗ್ರಾಮಗಳ ಕೈಫಿಯತ್, ಆನೆಕನ್ನಂಬಾಡಿ ಕೈಫಿಯತ್, ತಲಕಾಡು ಕೈಫಿಯತ್, ತಿರುಮಕೂಡಲು ಕೈಫಿಯತ್, ನಗರಸೀಮೆ ಕೈಫಿಯತ್, ನಾಗಮಂಗಲ ಕೈಫಿಯತ್, ಹೈದರನ ಕೈಫಿಯತ್, ಬಳ್ಳಾರಿಯ ಕೈಫಿಯತ್, ಉಪ್ಪಲಿ ಬಣಜಿಗರ ಕೈಫಿಯತ್, ಕುಂಬಿ ಒಕ್ಕಲಿಗರ ಕೈಫಿಯತ್, ಮಣ್ಣುವಡ್ಡಿಜಾತಿ ಕೈಫಿಯತ್, ತೆಲುಗು ಬಣಜಿಗರ ಜಾತಿ ರಿವಾಜು ಕೈಫಿಯತ್ – ಹೀಗೆ ವಿವಿಧ ಸ್ಥಳನಾಮಗಳು, ಜಾತಿಸೂಚಕ, ವ್ಯಕ್ತಿ ನಾಮಗಳನ್ನೊಳಗೊಂಡ ಕೈಫಿಯತ್‌ಗಳು ರಚಿತವಾಗಿದ್ದು, ಇವುಗಳು ಸಂಬಂಧಪಟ್ಟ ವಿಷಯಗಳ ಬಗೆಗೆ ಸೂಕ್ತ ಮಾಹಿತಿಗಳನ್ನು ಒದಗಿಸುತ್ತವೆ. ಕೈಫಿಯತ್‌ಗಳು ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದಂತೆ ರಾಜಸಂತತಿಗಳ ವಂಶಾವಳಿ, ಯುದ್ಧಗಳ ವಿವರಣೆ, ಸೈನ್ಯ ಸಂಘಟನೆ, ಕೋಟೆಕೊತ್ತಲಗಳು, ಶಸ್ತ್ರಾಸ್ತ್ರಗಳು ಇತ್ಯಾದಿಗಳು ಮತ್ತು ಅಧಿಕಾರವರ್ಗದವರು, ಅಮರನಾಯಕರು ಪ್ರಜಾಕ್ಷೇಮಕ್ಕಾಗಿ ಕಟ್ಟಿಸಿದ ಕೆರೆಕಟ್ಟೆಕಾಲುವೆಗಳ ಬಗೆಗೆ ಪ್ರಸ್ತಾಪಿಸುತ್ತವೆ. ಪಟ್ಟಣ ಮತ್ತು ಗ್ರಾಮಗಳನ್ನು ಹೊಸದಾಗಿ ನಿರ್ಮಾಣ ಮಾಡುವಾಗ ಅನುಸರಿಸುತ್ತಿದ್ದ ಯೋಜನೆಗಳ ಬಗೆಗೆ ಕೈಫಿಯತ್ತುಗಳಲ್ಲಿ ಮಾಹಿತಿಗಳು ದೊರಕುತ್ತವೆ. ಹೊಯ್ಸಳ, ವಿಜಯನಗರ ಮುಂತಾದ ಸಾಮ್ರಾಜ್ಯಗಳ ಸ್ಥಳೀಯ ಪ್ರಭುಗಳ ಸಾಧನೆಗಳು, ಸಾಮಾಜಿಕವಾಗಿ ಅಂದು ಆಚರಣೆಯಲ್ಲಿದ್ದ ಜಾತಿವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ಧಾರ್ಮಿಕ ನಂಬಿಕೆಗಳು ಮುಂತಾದವುಗಳ ಬಗೆಗೆ ಮಾಹಿತಿಗಳು ಸಿಗುತ್ತವೆ. ಹೈದರ್ ಅಲಿ, ಟಿಪ್ಪುಸುಲ್ತಾನರ ಕಾಲದ ಸೈನ್ಯದಲ್ಲಿ ಬಳಸಲಾಗುತ್ತಿದ್ದ ಕುದುರೆ, ಆನೆ, ಎತ್ತು, ಫಿರಂಗಿ, ಮದ್ದುಗುಂಡು ಮುಂತಾದವುಗಳ ವಿಚಾರಗಳು ಕೈಫಿಯತ್ತುಗಳಲ್ಲಿ ಸಿಗುತ್ತವೆ. ಒಟ್ಟಾರೆ ಕರ್ನಲ್ ಮೆಕೆಂಜಿ ಸಂಗ್ರಹಿಸಿದ ಕೈಫಿಯತ್ತುಗಳು ಕರ್ನಾಟಕದ ಇತಿಹಾಸದ ಪುನರ್ರಚನೆಗೆ ಉಪಯುಕ್ತ ಸಾಮಗ್ರಿಗಳನ್ನು ಒದಗಿಸುವುದರಲ್ಲಿ ಯಾವುದೇ ಸಂದೇಹವಿಲ್ಲ. ಈ ಕೈಫಿಯತ್ತುಗಳನ್ನು ಕುರಿತಂತೆ ಕೆ.ಎಸ್. ಶಿವಣ್ಣ, ಎಂ.ಎಂ. ಕಲಬುರ್ಗಿ, ಪುರುಷೋತ್ತಮ ಬಿಳಿಮಲೆ ಮೊದಲಾದವರು ಸಾಕಷ್ಟು ಅಧ್ಯಯನ ನಡೆಸಿ ಇತಿಹಾಸ ರಚನೆಗೆ ಇವುಗಳನ್ನು ಹೇಗೆ ಬಳಸಿಕೊಳ್ಳಬಹುದೆಂಬುದರ ಬಗೆಗೆ ಮಾರ್ಗಸೂಚಿಗಳನ್ನು ನೀಡಿದ್ದಾರೆ. ಆದರೆ ಕೈಫಿಯತ್ತುಗಳಲ್ಲಿರುವ ಮಾಹಿತಿಗಳೆಲ್ಲ ಸತ್ಯಾಂಶಗಳಿಂದ ಕೂಡಿವೆ ಎಂದು ಹೇಳಲಾಗುವುದಿಲ್ಲ. ಐತಿಹ್ಯ, ಪುರಾಣ, ಜಾನಪದ ಮತ್ತು ದಂತಕಥೆಗಳ ನಡುವೆ ಐತಿಹಾಸಿಕ ಅಂಶಗಳು ಬೆರೆತುಕೊಂಡಿರುತ್ತವೆ. ಅಂತಹ ಸಂದರ್ಭಗಳಲ್ಲಿ ಅವುಗಳ ಹಿಂದಿರುವ ಆಶಯಗಳನ್ನು ಸಂಶೋಧನ ದೃಷ್ಟಿಯಿಂದ ಪರಿಶೀಲಿಸಿ ಅಧ್ಯಯನ ನಡೆಸಬೇಕಾದುದು ಇತಿಹಾಸಕಾರರ ಜವಾಬ್ದಾರಿಯಾಗಿದೆ. (ಎಸ್‌ಆರ್.)

**ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗಗಳು:** ಹಿಂದುಳಿದ ವರ್ಗಗಳೆಂದು ಪರಿಗಣಿತವಾದ ಜಾತಿಗಳು ಮತ್ತು ಸಮುದಾಯಗಳ ಉನ್ನತಿಗಾಗಿ ಕರ್ನಾಟಕ ಸರ್ಕಾರ ಕಾಲದಿಂದ ಕಾಲಕ್ಕೆ ಅನೇಕ ಆಯೋಗಗಳನ್ನು ರಚಿಸಿದೆ. 19ನೆಯ ಶತಮಾನದ ಉತ್ತರಾರ್ಧದಲ್ಲಿ ಹಿಂದುಳಿದ ವರ್ಗಗಳೆಂಬ ಪರಿಕಲ್ಪನೆ ಸಾರ್ವಜನಿಕ ವಲಯದಲ್ಲಿ ಕೇಳಿ ಬಂತು. ಅದುವರೆಗೂ ಬ್ರಿಟಿಷರ ನೇರ ಅಧೀನದ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಸರ್ಕಾರಿ ನೌಕರಿಗಳನ್ನು ವಿವೇಚನೆಯ ಮತ್ತು ಅರ್ಹತೆಯ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿತ್ತು. ಇದರಲ್ಲಿ ಶೇಕಡ ಸು.75ರಷ್ಟು ಭಾಗ ಬ್ರಾಹ್ಮಣರೇ ಇರುತ್ತಿದ್ದರು. ಈ ಸಮುದಾಯ ವಿದ್ಯೆಯಲ್ಲಿ ಅದರಲ್ಲೂ ಇಂಗ್ಲಿಷ್ ವಿದ್ಯಾಭ್ಯಾಸದಲ್ಲಿ ಮುಂದಿರುತ್ತಿತ್ತು. ಉಳಿದಂತೆ ಐರೋಪ್ಯ ಅಧಿಕಾರಿಗಳು ಮತ್ತು ಅರಸು ಮನೆತನ ಮೂಲದವರು ಆಡಳಿತದಲ್ಲಿದ್ದರು. ಬ್ರಾಹ್ಮಣ ವರ್ಗ ಆಡಳಿತದ ಎಲ್ಲ ಶಾಖೆಗಳಲ್ಲಿ ಬೇರೂರಿದ್ದಲ್ಲದೆ ರಾಜಕೀಯವಾಗಿಯೂ ಮುಂಚೂಣಿಗೆ ಬಂದಿತು. ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲೂ ಬ್ರಾಹ್ಮಣರು ಮುಂದಾಳುಗಳಾಗಿದ್ದರು. ಇದನ್ನು ಗಮನಿಸಿದ ಬ್ರಿಟಿಷ್ ಪ್ರಭುತ್ವ ಸಮಾಜವನ್ನು ಹಿಂದು–ಮುಸ್ಲಿಮ್ ಎಂದು ಬೇರ್ಪಡಿಸಿದ್ದಂತೆ ಬ್ರಿಟಿಷರ ಆಳಿಕೆಯನ್ನು ಪ್ರಶ್ನಿಸುವ ಬ್ರಾಹ್ಮಣರನ್ನು ಇತರ ಬಹುಸಂಖ್ಯಾತ ಸಮುದಾಯಗಳಿಂದ ಬೇರ್ಪಡಿಸಿದರೆ ಸ್ವಾತಂತ್ರ್ಯ ಚಳವಳಿಯನ್ನು ಸಮರ್ಥವಾಗಿ ಹತ್ತಿಕ್ಕಬಹುದೆಂಬ ಚಿಂತನೆ ಮಾಡಿತು. ಜೊತೆಗೆ ಆಗತಾನೇ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿದ್ದ ಮುಸ್ಲಿಮರೂ ಸೇರಿದಂತೆ ಹಲವಾರು ಹಿಂದುಳಿದ ವರ್ಗಗಳ ವಿದ್ಯಾವಂತ ಯುವಕರು ಬ್ರಾಹ್ಮಣರನ್ನು ಸ್ಪರ್ಧೆಯಲ್ಲಿ

ಸರಿಗಟ್ಟಲು ಸಾಧ್ಯವಾಗದೆ ಚಡಪಡಿಸುತ್ತಿದ್ದರು. ಈ ಅತೃಪ್ತಿ ಪತ್ರಿಕೆಗಳಲ್ಲಿ ಸಾರ್ವಜನಿಕ ಹಾಗೂ ಖಾಸಗೀ ಸಭೆಗಳ ಮೂಲಕ ಪ್ರಕಟವಾಗತೊಡಗಿತು. ಮಹಾರಾಷ್ಟ್ರದಲ್ಲಿ ಜ್ಯೋತಿಭಾಫುಲೆ ಈ ಚಳವಳಿಗೆ ಒಂದು ರೂಪುಕೊಟ್ಟರೆ ಮದರಾಸಿನಲ್ಲಿ ಪೆರಿಯಾರ್ ಅವರು ಇದನ್ನು ಸಂಘಟಿಸಿದರು. ಅಲ್ಲಿ ಜಸ್ಟೀಸ್ ಪಾರ್ಟಿ ಎಂಬ ಒಂದು ರಾಜಕೀಯ ಸಂಘಟನೆ ಪ್ರಾರಂಭವಾಗಿ ಅದು ಬ್ರಾಹ್ಮಣೇತರ ಹಿಂದುಳಿದವರಿಗೆ ರಾಜಕೀಯ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವಂತೆ ಒತ್ತಾಯಿಸಿತು. ಅಲ್ಲಿ ಕೆಲಸ ಮಾಡಿ ಮೈಸೂರು ಸಂಸ್ಥಾನದ ಸೇವೆಗೆ ಸೇರಿದ ಸಿ.ಆರ್.ರೆಡ್ಡಿ ಮೊದಲಾದ ವರ್ಗದ ಅಧಿಕಾರಿಗಳು ಮೈಸೂರಿನಲ್ಲಿ ಅದಕ್ಕೊಂದು ಸಂಸ್ಥಾರೂಪವನ್ನು ನೀಡಲು ಶ್ರಮಿಸಿದರು. ಒಕ್ಕಲಿಗ ಜನಾಂಗದ ಕೆ.ಎಚ್.ರಾಮಯ್ಯನವರು ಇದೇ ಕಾಲದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿದ್ದರು. ಎಂ.ಬಸವಯ್ಯ, ಎಚ್.ಚನ್ನಯ್ಯ, ಗುಲಾಮ್ ಅಹಮ್ಮದ್, ಕಲಾಮಿ ಮೊದಲಾದವರು ಪ್ರಜಾಮಿತ್ರ ಮಂಡಳಿ ಎಂಬ ಪ್ರಥಮ ಹಿಂದುಳಿದವರ ರಾಜಕೀಯ ಸಂಘಟನೆ ಅಸ್ತಿತ್ವಕ್ಕೆ ಬರಲು ಕಾರಣರಾದರು. 1918ರ ಫೆಬ್ರವರಿಯಲ್ಲಿ ಈ ನಿಯೋಗ ಮಹಾರಾಜರನ್ನು ಭೇಟಿ ಮಾಡಿ ತಮ್ಮ ಅಹವಾಲನ್ನು ಸಲ್ಲಿಸಿತು.

**ಮಿಲ್ಲರ್‌ಸಮಿತಿ:** ಹಿಂದುಳಿದ ವರ್ಗದ ಪ್ರತಿನಿಧಿಗಳು ಸರ್ಕಾರಿ ಉದ್ಯೋಗಗಳು, ಶಿಕ್ಷಣ ಪ್ರವೇಶ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ತಮ್ಮ ಸಮುದಾಯಗಳಿಗೆ ಮೀಸಲಾತಿ ಇರಬೇಕೆಂದು ಕೋರಿ ಒತ್ತಾಯಿಸಿದ್ದರು. ಯುವರಾಜ ನರಸಿಂಹರಾಜ ಒಡೆಯರ್ ಈ ಬೇಡಿಕೆ ಬಗ್ಗೆ ಸಹಾನುಭೂತಿ ಉಳ್ಳವರಾಗಿದ್ದರು. ಇದರ ಫಲವಾಗಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಮುಖ್ಯ ನ್ಯಾಯಾಧೀಶರಾಗಿದ್ದ  ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಬ್ರಾಹ್ಮಣೇತರ ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ಅವರ ಏಳಿಗೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಿದರು. ಈ ಅವಧಿಯಲ್ಲಿ ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿದ್ದರು. ಅವರು ಮೈಸೂರು ರಾಜ್ಯ ಸರ್ವತೋಮುಖ ಪ್ರಗತಿ ಸಾಧಿಸಬೇಕೆಂದು ಶಿಕ್ಷಣ, ವ್ಯವಸಾಯ, ಕೈಗಾರಿಕೆ–ಈ ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಮುಂದುವರಿಯುತ್ತಿದ್ದರು. ಮೀಸಲಾತಿಯ ಬಗ್ಗೆ ತಮ್ಮದೇ ಆದ ನಿಲುವು ಹೊಂದಿದ್ದರು. ಹಿಂದುಳಿದ ವರ್ಗದವರನ್ನು ಉತ್ತಮ ಶಿಕ್ಷಣದ ಮೂಲಕ ಹೆಚ್ಚು ಅರ್ಹರನ್ನಾಗಿ ಮಾಡಿ ಸರ್ಕಾರಿ ಸೇವೆಗಳಲ್ಲಿ ನೇಮಿಸುವುದರಿಂದ ಆಡಳಿತದಲ್ಲಿ ದಕ್ಷತೆ ಹೆಚ್ಚುತ್ತದೆ ಹಾಗೂ ಮಿತವಾದ ಮೀಸಲಾತಿಯ ಮೂಲಕ ಹಂತಹಂತವಾಗಿ ಇದನ್ನು ಸಾಧಿಸಿದರೆ ಇತರರಲ್ಲಿ ಅತೃಪ್ತಿ ಕಡಿಮೆ ಪ್ರಮಾಣದಲ್ಲುಳಿದು ಸಾಮರಸ್ಯ ಸಾಧನೆಯೂ ಆಗುತ್ತದೆ ಎಂಬುದು ಅವರ ಖಚಿತ ನಿಲುವಾಗಿತ್ತು. ಆದರೆ ಮಹಾರಾಜರು ಬಹು ಜನಾಭಿಪ್ರಾಯದಂತೆ ಮಿಲ್ಲರ್ ಸಮಿತಿ ನೇಮಿಸಿದರು. ಆ ಸಮಿತಿಗೆ ವಹಿಸಲಾದ ಕಾರ್ಯಸೂಚಿಗಳು ಮೊದಲಾದವು ಗಳ ಬಗ್ಗೆ ವಿಶ್ವೇಶ್ವರಯ್ಯನವರಿಗೆ ಸಮಾಧಾನವಿರಲಿಲ್ಲ. ವಿಶ್ವೇಶ್ವರಯ್ಯನವರು ಈ ಕಾರಣಕ್ಕಾಗಿ ರಾಜೀನಾಮೆ ಕೊಟ್ಟರು ಎಂಬ ಮಾತು ಅಂದಿನ ದಿನಗಳಲ್ಲಿ ಹೆಚ್ಚಾಗಿ ಕೇಳಿಬಂದರೂ ಅವರಿಗೆ ರಾಜೀನಾಮೆ ನೀಡಲು ಇನ್ನೂ ಹಲವಾರು ರಾಜಕೀಯ ಒತ್ತಡಗಳು ಕಾರಣವಾಗಿದ್ದವು. 1918ರಲ್ಲಿ ರಚಿತವಾದ ಈ ಸಮಿತಿ 1919ರಲ್ಲಿ ತನ್ನ ಕಾರ್ಯವನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿತು.

ಮಿಲ್ಲರ್ ಸಮಿತಿ ನೀಡಿದ ವರದಿಯಲ್ಲಿ ಮುಂದಿನ 7 ವರ್ಷಗಳಲ್ಲಿ ಸರ್ಕಾರದ ಶೇಕಡ 50ರಷ್ಟು ಉನ್ನತ ಹುದ್ದೆಗಳು ಮತ್ತು ಮೂರನೆಯ ಎರಡು ಭಾಗ ಕೆಳದರ್ಜೆಯ ಹುದ್ದೆಗಳು ಹಿಂದುಳಿದ ವರ್ಗಗಳಿಗೆ ಪ್ರಾಪ್ತವಾಗಬೇಕೆಂಬ ಅಂಶ ಅಡಕವಾಗಿತ್ತು. ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ಮತ್ತು ವಿಶೇಷ ವಿದ್ಯಾರ್ಥಿವೇತನಗಳು ಈ ವರ್ಗಕ್ಕೆ ಲಭ್ಯವಾಗಬೇಕೆಂಬ ಸಲಹೆಗಳಿದ್ದವು. ಈ ವರದಿಯ ಕೆಲವು ಶಿಫಾರಸುಗಳು 1921ರಲ್ಲಿ ಸರ್ಕಾರಿ ಆದೇಶದ ಮೂಲಕ ಅನುಷ್ಠಾನಕ್ಕೆ ಬಂದವು. ಅಂದಿನಿಂದ ಇಂದಿನವರೆಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಆಯೋಗಗಳು ರಚನೆಯಾಗುತ್ತಲೇ ಬಂದಿವೆ.

1920ರ ದಶಕದ ಕೊನೆಯ ಹೊತ್ತಿಗೆ ಬ್ರಾಹ್ಮಣರನ್ನು ಬಿಟ್ಟು ಇತರ ಎಲ್ಲ ವರ್ಗಗಳಿಗೂ ನೀಡಿದ್ದ ಮೀಸಲಾತಿಯ ಅನುಷ್ಠಾನದಲ್ಲಿ ಪಕ್ಷಪಾತವಾಗಿರುವುದನ್ನು ಗುರುತಿಸಲಾಯಿತು. ಮುಸ್ಲಿಮರು, ವೀರಶೈವರು, ಜೈನರು ಮೊದಲಾದ, ಆಗ ಶಿಕ್ಷಣದಲ್ಲಿ ಸ್ವಲ್ಪ ಹೆಚ್ಚು ಮುಂದಿದ್ದ ಜಾತಿ ವರ್ಗಗಳು ಈ ಸೌಲಭ್ಯದ ಗರಿಷ್ಠ ಲಾಭ ಪಡೆದವೆಂಬ ದೂರು ಕೇಳಬರತೊಡಗಿತು. ಇದರ ಪರಿಣಾಮ ಎಷ್ಟಿತ್ತೆಂದರೆ ಪ್ರಜಾಮಿತ್ರ ಮಂಡಳಿಯಿಂದ ಸಿಡಿದುಹೋದ ಒಂದು ಗುಂಪು, ಪ್ರಜಾಪಕ್ಷ ಎಂಬ ಹೊಸ ಪಕ್ಷವನ್ನೇ ಕಟ್ಟಿಕೊಂಡಿತು. ಆದರೆ ರಾಜಕೀಯ ಸಂಘಟನೆಗಾಗಿ ಅವೆರಡೂ 1935ರಲ್ಲಿ ಒಂದಾಗಿ ಪ್ರಜಾಸಂಯುಕ್ತ ಪಕ್ಷ ಅಸ್ತಿತ್ವಕ್ಕೆ ಬಂದಿತು.

ಮೀಸಲಾತಿ ಕುರಿತ ವಾದವಿವಾದಗಳು ಮುಂದುವರಿಯುತ್ತಲೇ ಇದ್ದವು. ಆದರೆ ಸಮಾಜದಲ್ಲಿ ಹೊಸ ರಾಜಕೀಯ ಬೆಳವಣಿಗೆ ಕಾಣಿಸಿಕೊಂಡಿತು. ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬ್ರಾಹ್ಮಣರು ಉತ್ಸಾಹದಿಂದ ಭಾಗವಹಿಸುತ್ತಿದ್ದು ತಮಗಾದ ನಷ್ಟವನ್ನು ಮರೆತು ಇತರರೊಡನೆ ಬೆರೆಯತೊಡಗಿದರು. ಸ್ವಾತಂತ್ರ್ಯ ಚಳವಳಿ ಎಲ್ಲ ವರ್ಗದ ಜನರನ್ನೂ ಆಕರ್ಷಿಸಿತು. 1937ರಲ್ಲಿ ಪ್ರಜಾಸಂಯುಕ್ತ ಪಕ್ಷ ಕಾಂಗ್ರೆಸ್ ಪಕ್ಷದಲ್ಲಿ ವಿಲೀನವಾಯಿತು. ಮುಂದೆ ಸ್ವಾತಂತ್ರ್ಯ ಚಳವಳಿಗೆ ದುಮುಕಿದ ಎಲ್ಲ ವರ್ಗದ ಮುಖಂಡರು ಈ ಮೀಸಲಾತಿಯ ಅಸಮಾಧಾನಗಳನ್ನು ಮರೆತು ಭಾವೈಕ್ಯ ತೋರಿದರು. ಬಹುಕಾಲದವರೆಗೆ ಮಿಲ್ಲರ್ ಸಮಿತಿಯ ವರದಿಯ ಶಿಫಾರಸುಗಳೇ ಪ್ರಮುಖ ಮಾರ್ಗದರ್ಶಿ ಸೂತ್ರಗಳಾಗಿ ಮೀಸಲಾತಿ ವ್ಯವಸ್ಥೆ ಅನುಷ್ಠಾನದಲ್ಲಿತ್ತು.

**ನಾಗನಗೌಡಸಮಿತಿ:** ಸ್ವಾತಂತ್ರ್ಯಾನಂತರದ ಒಂದು ದಶಕ ಸಂವಿಧಾನದ ಅಳವಡಿಕೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಅನುಷ್ಠಾನ ಮತ್ತು ರಾಜ್ಯಗಳ ಪುನರ್ವಿಂಗಡಣೆಯ ಪ್ರಕ್ರಿಯೆಯಲ್ಲಿ ಕಳೆದುಹೋಯಿತು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳಿಗೆ ಸಂವಿಧಾನ ನೀಡಿದ ವಿಶೇಷ ಮೀಸಲಾತಿಯಿಂದ ಆ ವರ್ಗಗಳು ಮೀಸಲಾತಿ ದೃಷ್ಟಿಯಿಂದ ಹಿಂದುಳಿದ ವರ್ಗಗಳಿಂದ ಬೇರೆಯಾದವು. ಸರ್ಕಾರ ಕೈಗೊಂಡ ವಿವಿಧ ಅಭಿವೃದ್ಧಿ ಯೋಜನೆಗಳ ಫಲ ಎಲ್ಲ ಸಮುದಾಯಗಳಿಗೂ ಸಮಾನವಾಗಿ ಸಿಕ್ಕಲಿಲ್ಲ. ಭೂರಹಿತ ಕಾರ್ಮಿಕರು ಮತ್ತು ಚಿಕ್ಕ ಪುಟ್ಟ ಉಪಕಸಬುಗಳನ್ನು ಮಾಡುತ್ತಿದ್ದ ಜನರಿಗೆ ಸೂಕ್ತ ಪ್ರಾತಿನಿಧ್ಯವಿಲ್ಲವೆಂಬ ಕೂಗು ಕೇಳಿಬಂತು. ಈ ಹಿನ್ನೆಲೆಯಲ್ಲಿ 1960ರಲ್ಲಿ ಸರ್ಕಾರ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಅದಕ್ಕೆ ಹಿಂದುಳಿದ ವರ್ಗಗಳ ವಿಂಗಡಣೆ ಮತ್ತು ಮೀಸಲಾತಿಯ ಪ್ರಮಾಣವನ್ನು ನಿರ್ಧರಿಸಿ ವರದಿ ಸಲ್ಲಿಸುವಂತೆ ಕೋರಿತು.

ಈ ಸಮಿತಿ ಅಧ್ಯಯನ ಕೈಗೊಂಡು ಒಂದು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿತು. ಅದು ಒಟ್ಟು 399 ಜಾತಿಗಳನ್ನು ಮೀಸಲಾತಿಗೆ ಅರ್ಹವೆಂದು ಪರಿಗಣಿಸಿತ್ತು. ಈ ಜಾತಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ. 45ರಷ್ಟು ಮತ್ತು ಶಿಕ್ಷಣ ಪ್ರವೇಶದಲ್ಲಿ ಶೇ.50ರಷ್ಟು ಮೀಸಲಾತಿ ಇರಬೇಕೆಂದು ಸಲಹೆಮಾಡಿತ್ತು. ಈ ಸಮಿತಿ ಲಿಂಗಾಯತ ಸಮುದಾಯವನ್ನು ಮೀಸಲಾತಿ ಪಟ್ಟಿಯಿಂದ ಕೈಬಿಟ್ಟಿತ್ತು. ವ್ಯವಸಾಯ ಮತ್ತು ಕೈಗಾರಿಕೆ ಅಭಿವೃದ್ಧಿ ಹಾಗೂ ಗೃಹಕೈಗಾರಿಕೆಗಳಿಗಾಗಿ ಹಿಂದುಳಿದ ವರ್ಗಗಳಿಗೆ ವಿಶೇಷ ಹಣಕಾಸು ನೆರವು ನೀಡಲೂ ಈ ಸಮಿತಿ ಶಿಫಾರಸು ಮಾಡಿತ್ತು. ಆದರೆ ಸರ್ಕಾರ ಈ ವರದಿಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿ 1962ರಲ್ಲಿ ಒಂದು ಆದೇಶ ಹೊರಡಿಸಿತು. ಅದರಲ್ಲಿ ಹಿಂದುಳಿದ ವರ್ಗಗಳು ಮತ್ತು ಅತಿ ಹಿಂದುಳಿದ ವರ್ಗಗಳು ಎಂಬ ಎರಡು ಗುಂಪಗಳನ್ನು ಮಾಡಲಾಗಿತ್ತು. ಈ ವರ್ಗಗಳಿಗೆ ಅನುಕ್ರಮವಾಗಿ ಶೇ. 28ರಷ್ಟು ಮತ್ತು ಶೇ. 22ರಷ್ಟು ಮೀಸಲಾತಿ ನೀಡಲಾಗಿತ್ತು. ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಅದು ಅನೂರ್ಜಿತಗೊಳಿಸಲ್ಪಟ್ಟಿತು. ಈ ತೀರ್ಪಿನ ಹಿನ್ನೆಲೆಯಲ್ಲಿ 1963ರಲ್ಲಿ ಹಾಗೂ 1968ರಲ್ಲಿ ಮಾರ್ಪಾಡಾದ ಸರ್ಕಾರಿ ಆದೇಶಗಳು ಹೊರಟವು. ಎಲ್ಲ ಹಿಂದುಳಿದ ವರ್ಗಗಳು ಸೇರಿದಂತೆ ಶೇ. 30ರಷ್ಟು ಮೀಸಲಾತಿ ನೀಡಲಾಯಿತು. ಆದಾಯ ಮಿತಿಯನ್ನು 2400 ರೂಪಾಯಿಗಳೆಂದು ನಿಗದಿಗೊಳಿಸಲಾಯಿತು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಒಟ್ಟು ಶೇ. 18ರಷ್ಟು ಮೀಸಲಾತಿ ಪ್ರತ್ಯೇಕವಾಗಿ ಮುಂದುವರಿಯಿತು. ಇದಕ್ಕೆ ಆದಾಯ ಮಿತಿ ಇರಲಿಲ್ಲ.

**ಹಾವನೂರ್‌ಆಯೋಗ:** 1970ರ ದಶಕದ ಪ್ರಾರಂಭದ ಹೊತ್ತಿಗೆ ಕರ್ನಾಟಕದ ರಾಜಕೀಯ ವಿದ್ಯಮಾನಗಳು ಹೊಸ ತಿರುವನ್ನು ಪಡೆದವು. ಬಡವರ ಏಳ್ಗೆಗಾಗಿ ಶ್ರಮಿಸುವುದು ಸರ್ಕಾರದ ಮುಖ್ಯ ಹೊಣೆ ಎಂಬ ವಿಚಾರ ಪ್ರಚಲಿತ ಮೌಲ್ಯ ಪಡೆಯಿತು. ಆಗಿನ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ನಾಯಕರಾಗಿ ಪ್ರತಿಬಿಂಬಿಸಲ್ಪಟ್ಟರು. ಅವರು ಈ ವರ್ಗಗಳ ಬಗ್ಗೆ ವಿಶೇಷ ಕಾಳಜಿ ಹೊಂದಿ ಗೇಣಿ ಶಾಸನ, ಲೇವಾದೇವಿ ರದ್ದಾಯಿತಿ ಶಾಸನ, ಬಾಡಿಗೆ ನಿಯಂತ್ರಣ ಕಾಯಿದೆ ಮೊದಲಾದವನ್ನು ಜಾರಿಗೆ ತಂದರು. ಬಡವರಿಗೆ ಮನೆ, ನಿವೇಶನ ನೀಡುವ ಮತ್ತು ಉಪ ಕಸಬುಗಳಿಗೆ ಉತ್ತೇಜನ ನೀಡುವ ಹಲವಾರು ಯೋಜನೆಗಳು ಜಾರಿಗೆ ಬಂದವು. ಹಿಂದುಳಿದ ವರ್ಗಗಳ ಮೀಸಲಾತಿ ಮತ್ತಿತರ ವಿಚಾರಗಳನ್ನು ಪರಿಶೀಲಿಸಿ ಸಲಹೆ ಮಾಡಲು ನ್ಯಾಯವಾದಿ ಎಲ್.ಜಿ.ಹಾವನೂರ್ ಅವರ ಅಧ್ಯಕ್ಷತೆಯಲ್ಲಿ 1972ರಲ್ಲಿ ಒಂದು ಸಮಿತಿ ರಚಿಸಲಾಯಿತು. ಈ ಸಮಿತಿ 1975ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತು.

ಈ ವರದಿಯಲ್ಲಿ ವಿವಿಧ ಬ್ರಾಹ್ಮಣೇತರ ವರ್ಗಗಳನ್ನು ಮೀಸಲಾತಿಯಿಂದ ಕೈಬಿಡಲಾಗಿತ್ತು. ಅವುಗಳಲ್ಲಿ ಲಿಂಗಾಯತ ಅಥವಾ ವೀರಶೈವ, ಜೈನ, ಬಂಟ, ಕ್ರೈಸ್ತ, ಅರಸು ಮತ್ತಿತರ ಸಮುದಾಯಗಳು ಮುಖ್ಯವಾಗಿದ್ದವು. ಈ ವರ್ಗಗಳಿಂದ ಬರಬಹುದಾದ ಪ್ರತಿಭಟನೆಯ ಬಗ್ಗೆ ಆತಂಕಗೊಂಡ ಸರ್ಕಾರ ವರದಿಯ ಅನುಷ್ಠಾನವನ್ನು ಸ್ವಲ್ಪಕಾಲ ಮುಂದೂಡಿತು. ಮುಂದೆ ರಾಷ್ಟ್ರದಲ್ಲಿ ತುರ್ತುಸ್ಥಿತಿ ಜಾರಿಗೆ ಬಂದು ಸರ್ಕಾರ ಹೆಚ್ಚು ಪ್ರಬಲವಾದಾಗ ದೇವರಾಜ ಅರಸು ಅವರು ಈ ವರದಿಯ ಅನುಷ್ಠಾನಕ್ಕೆ ಧೈರ್ಯ ತೋರಿದರು. ಸರ್ಕಾರ 1977 ಫೆಬ್ರವರಿ 22ರಂದು ಈ ವರದಿಯನ್ನು ಅಂಗೀಕರಿಸಿ ಆದೇಶ ಹೊರಡಿಸಿತು. ಅದರಲ್ಲಿ ವಿವಿಧ ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಲಾಗಿತ್ತು. 1. ಹಿಂದುಳಿದ ಸಮುದಾಯಗಳು (ಶೇ.20), 2. ಹಿಂದುಳಿದ ಜಾತಿಗಳು (ಶೇ.10), 3. ಹಿಂದುಳಿದ ಪಂಗಡಗಳು (ಶೇ.5). ಇವುಗಳ ಜೊತೆಗೆ ಮುಂದುವರಿದವೆಂದು ಪರಿಗಣಿತವಾದ ವಿವಿಧ ಸಮುದಾಯಗಳ ಬಡವರನ್ನು ವಿಶೇಷ ಗುಂಪೆಂದು ಪರಿಗಣಿಸಿ ಅವುಗಳಿಗೆ ಶೇ. 5ರಷ್ಟು ಮೀಸಲಾತಿಯನ್ನು ನೀಡಲಾಯಿತು. ಈ ಎಲ್ಲ ವರ್ಗಗಳ ಹಿಂದುಳಿದ ಜಾತಿ ಮತ್ತು ಸಮುದಾಯಗಳ ವ್ಯಕ್ತಿಗಳಿಗೆ ಮೀಸಲಾತಿ ಸೌಲಭ್ಯ ಪಡೆಯಲು ವಾರ್ಷಿಕ 10,000 ರೂಪಾಯಿಗಳ ಆದಾಯ ಮಿತಿಯನ್ನು ವಿಧಿಸಲಾಯಿತು. ಈ ವರದಿ ಹಿಂದುಳಿದ ವರ್ಗಗಳ ಆಯೋಗಗಳಲ್ಲಿ ಮಾತೃಸ್ಥಾನ ಪಡೆದಿದೆ. ಈ ಆಯೋಗದ ಮಾರ್ಗದರ್ಶಿ ಸಲಹೆಗಳ ಆಧಾರಗಳು ವೈಜ್ಞಾನಿಕವಾದ ಭದ್ರ ಅಂಕಿ–ಅಂಶಗಳಿಂದ ಕೂಡಿದ್ದವು. ಈ ಸಂದರ್ಭದಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ವಿಚಾರ ಪ್ರಶ್ನೆಯಾಗುಳಿಯದೆ ಹಿಂದುಳಿದ

ವರ್ಗಗಳಲ್ಲಿ ಯಾರನ್ನು ಮೀಸಲಾತಿಯಿಂದ ಕೈಬಿಡಬೇಕು ಮತ್ತು ಯಾರನ್ನು ಸೇರಿಸಬೇಕು ಎಂಬ ಪ್ರಶ್ನೆ ಬೃಹದಾಕಾರ ಪಡೆಯಿತು. ಯಾವುದೇ ಮಾನದಂಡದಿಂದ ನೋಡಿದರೂ ಒಂದು ಸಮುದಾಯದಲ್ಲಿ ಹಿಂದುಳಿದ ವ್ಯಕ್ತಿಗಳ ಸಮೂಹ ಇದ್ದೇ ಇರುತ್ತಿತ್ತು. ಮುಖ್ಯಮಂತ್ರಿ ದೇವರಾಜ ಅರಸರಿಗೆ ತಮ್ಮ ಅರಸು ಸಮುದಾಯವನ್ನು ಹಿಂದುಳಿದ ಪಟ್ಟಿಯಿಂದ ಹಾವನೂರ್ ಆಯೋಗ ಕೈಬಿಟ್ಟಿದ್ದು ಸರಿಕಾಣಲಿಲ್ಲ. ಕೆಲವು ಕೈ ಬಿಟ್ಟ ಜನಾಂಗಗಳೊಡನೆ ಅರಸು ಸಮುದಾಯವನ್ನು ಸೇರಿಸಿ ಅರಸು ಸರ್ಕಾರ ಮೀಸಲಾತಿ ಆದೇಶ ಹೊರಡಿಸಿತು. ಹಾವನೂರು ಆಯೋಗದ ವರದಿಯನ್ನು ಆಧರಿಸಿದ ಸರ್ಕಾರಿ ಆದೇಶ ನ್ಯಾಯಾಲಯದಲ್ಲಿ ಪ್ರಶ್ನಿಸಲ್ಪಟ್ಟಿತ್ತು. ನ್ಯಾಯಾಲಯ ಹೊಸದಾಗಿ ಸರ್ಕಾರದಿಂದ ಸೇರಿಸಲಾದ ಸಮುದಾಯಗಳನ್ನು ಅನೂರ್ಜಿತಗೊಳಿಸಿತು. 1979ರಲ್ಲಿ ಈ ಸಂಬಂಧವಾದ ಮರು ಆದೇಶವನ್ನು ಸರ್ಕಾರ ಹೊರಡಿಸಿತು. ಇಡೀ ಹಿಂದುಳಿದ ವರ್ಗಗಳಿಗೆ ಶೇ.50ರಷ್ಟಕ್ಕೆ ಮೀರದಂತೆ ಮೀಸಲಾತಿಯನ್ನು ನಿಗದಿಪಡಿಸಲಾಯಿತು. ಅದರಲ್ಲಿ ಶೇ.5ರಷ್ಟು ಮೀಸಲಾತಿ ಪಡೆದಿದ್ದ ವಿಶೇಷ ಗುಂಪಿಗೆ ಮೀಸಲಾತಿಯನ್ನು ಶೇ. 15ಕ್ಕೆ ಹೆಚ್ಚಿಸಲಾಯಿತು.

**ವೆಂಕಟಸ್ವಾಮಿಆಯೋಗ:** ಹಿಂದುಳಿದ ವರ್ಗಗಳ ಮೀಸಲಾತಿ ಪ್ರಶ್ನೆ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲು ಹತ್ತಿತ್ತು. ಅಲ್ಲಿ ತೋರಿಬಂದ ಕೆಲವು ನ್ಯೂನತೆಗಳ ಸಂಬಂಧವಾಗಿ ಕರ್ನಾಟಕ ಸರ್ಕಾರ ನ್ಯಾಯಾಲಯಕ್ಕೆ ಒಂದು ದೃಢೀಕರಣ ಪತ್ರ ನೀಡಿ ಇನ್ನೊಂದು ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲು ತಾನು ಬದ್ಧವಿರುವುದಾಗಿ ತಿಳಿಸಿತು. 1983ರಲ್ಲಿ ರಾಮಕೃಷ್ಣಹೆಗ್ಗಡೆಯವರ ನೇತೃತ್ವದ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ವೆಂಕಟಸ್ವಾಮಿ ಅವರ ಅಧ್ಯಕ್ಷತೆಯ ಎರಡನೆಯ ಹಿಂದುಳಿದ ಆಯೋಗ ಅಸ್ತಿತ್ವಕ್ಕೆ ಬಂದಿತು. ಅದು 17 ವಿವಿಧ ಸೂಚಕಗಳನ್ನು ಪರಿಶೀಲಿಸಿ ವಿವಿಧ ಹಿಂದುಳಿದ ವರ್ಗಗಳಿಗೆ ಸಲ್ಲಬೇಕಾದ ಮೀಸಲಾತಿಯಪ್ರಮಾಣವನ್ನು ನಿರ್ಧರಿಸಿ 1986ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯನ್ನು ಕೆಲವು ಸಮುದಾಯಗಳನ್ನು ಮೀಸಲಾತಿಯಿಂದ ಕೈಬಿಟ್ಟಿದ್ದರಿಂದ ಉಂಟಾದ ರಾಜಕೀಯ ಒತ್ತಡಕ್ಕೆ ಮಣಿದ ಸರ್ಕಾರ ಕೆಲವು ಕಾರಣಗಳನ್ನು ನೀಡಿ ಈ ಆಯೋಗದ ವರದಿಯನ್ನು ತಿರಸ್ಕರಿಸಿತು.

ಈ ನಡುವೆ ಸರ್ಕಾರ 1986ರ ಅಕ್ಟೋಬರ್ ತಿಂಗಳಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಒಂದು ಮಧ್ಯಂತರ ಆಜ್ಞೆಯನ್ನು ಹೊರಡಿಸಿತು. ಅದರ ಪ್ರಕಾರ ಎ, ಬಿ, ಸಿ, ಡಿ ಮತ್ತು ಇ ಗುಂಪುಗಳಾಗಿ ಹಿಂದುಳಿದವರನ್ನು ವಿಂಗಡಿಸಲಾಯಿತು. ಕೊನೆಯದು ಹಿಂದಿನಂತೆ ವಿಶೇಷ ಗುಂಪಾಗಿ ಪರಿಗಣಿತವಾಯಿತು. ಹಾವನೂರು ಆಯೋಗದಲ್ಲಿ ಅವಕಾಶ ಪಡೆಯದಿದ್ದ ಲಿಂಗಾಯತರು ಅಥವಾ ವೀರಶೈವರು ಮತ್ತಿತರರೂ ಇದರಲ್ಲಿ ಅವಕಾಶ ಪಡೆದದ್ದು ಗಮನಾರ್ಹವಾಗಿತ್ತು. ಎ ಗುಂಪಿಗೆ ಆದಾಯ ಮಿತಿಯ ನಿರ್ಬಂಧ ತೆಗೆದು ಹಾಕಲಾಯಿತು.

**ಚಿನ್ನಪ್ಪರೆಡ್ಡಿಆಯೋಗ:** ಹಿಂದುಳಿದ ವರ್ಗಗಳ ಮೀಸಲಾತಿಯ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯಗಳು ಉದ್ಭವಿಸಿದರೂ ಆಯೋಗಗಳಿಗೆ ಪುನರಪಿ ಮರಣ ಪುನರಪಿ ಜನನದ ಅವಸ್ಥೆ ತಪ್ಪಲಿಲ್ಲ. ಮತ್ತೆ ಕರ್ನಾಟಕ ಸರ್ಕಾರ ಚಿನ್ನಪ್ಪರೆಡ್ಡಿಯವರ ನೇತೃತ್ವದಲ್ಲಿ 4ನೆಯ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿತು. ಈ ಆಯೋಗ ಹಿಂದುಳಿದ ವರ್ಗಗಳನ್ನು ಕುರಿತು ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಪರಿಶೀಲನೆ ನಡೆಸಿತು. ಈ ಆಯೋಗ 1960ರ ದಶಕಲ್ಲಿದ್ದಂತೆ ಅತ್ಯಂತ ಹಿಂದುಳಿದವರು, ಅತಿ ಹಿಂದುಳಿದವರು ಮತ್ತು ಹಿಂದುಳಿದವರು ಎಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಈ ವರ್ಗಗಳನ್ನು ವಿಭಜಿಸಿ ಪ್ರಮಾಣಾನುಗುಣವಾಗಿ ಮೀಸಲಾತಿಯನ್ನು ನಿಗದಿಪಡಿಸಿತು. ಆ ಪ್ರಕಾರ ಇಡೀ ವರ್ಗವನ್ನು ಒಟ್ಟು ನಾಲ್ಕು ಗುಂಪುಗಳಾಗಿ ವಿಂಗಡಿಸಿತು. ಶೇ.50ರಷ್ಟು ಮೀಸಲಾತಿ ನಿಗದಿಪಡಿಸಿತು. ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ವೃತ್ತಿ ನಡೆಸುವ ಹಿಂದುಳಿದವರಿಗೆ ಹೇಗೆ ಸರ್ಕಾರ ನೆರವಾಗಬೇಕೆಂಬ ಬಗ್ಗೆಯೂ ಯೋಜನೆ ಹಾಕಿಕೊಟ್ಟಿತು. ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯವೆಂದು ಸಲಹೆ ಮಾಡಿತು.

ಈ ಆಯೋಗದ ವರದಿಯನ್ನು 1990ರ ಏಪ್ರಿಲ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಲಾಯಿತು. 1992ರಲ್ಲಿ ಕೇಂದ್ರ ಸರ್ಕಾರ ಹಿಂದುಳಿದ ವರ್ಗಗಳನ್ನು ಕುರಿತು ವರದಿ ಸಲ್ಲಿಸಲು ನೇಮಿಸಿದ್ದ ಮಂಡಲ್ ಆಯೋಗದ ವರದಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಲಯ ಒಂದು ತೀರ್ಪು ನೀಡಿತು. ಅದನ್ನು ಅನುಸರಿಸಿ 1993ರಲ್ಲಿ ಕೇಂದ್ರಸರ್ಕಾರ ಒಂದು ಪರಿಷ್ಕೃತ ಆದೇಶ ಹೊರಡಿಸಿತು. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ನೀಡುವ ಮೀಸಲಾತಿಯೂ ಸೇರಿದಂತೆ ಯಾವುದೇ ಮೀಸಲಾತಿಯೂ ಶೇ.50ಕ್ಕೆ ಮೀರಬಾರದೆಂಬುದು ನ್ಯಾಯಾಲಯದ ನಿರ್ದೇಶನವಾಗಿತ್ತು. ರಾಜ್ಯ ಸರ್ಕಾರದ ಚಿನ್ನಪ್ಪರೆಡ್ಡಿ ಆಯೋಗ ಹಿಂದುಳಿದವರ ಪಟ್ಟಿಯಿಂದ ಕೈಬಿಟ್ಟಿದ್ದ ಕೆಲವು ಸಮುದಾಯಗಳನ್ನು ಮಂಡಲ್ ಆಯೋಗ ಹಿಂದುಳಿದದ್ದೆಂದು ಪರಿಗಣಿಸಿತ್ತು. ಉದಾಹರಣೆಗೆ, ಕರ್ನಾಟಕದ ಒಕ್ಕಲಿಗ ಸಮುದಾಯ. ಚಿನ್ನಪ್ಪರೆಡ್ಡಿ ಆಯೋಗದ ಅನುಷ್ಠಾನಕ್ಕೆ ಆದೇಶ ಹೊರಟಾಗ ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆಗಳು ಪ್ರಕಟವಾದವು. ಇದರಿಂದ ವಿಚಲಿತವಾದ ರಾಜ್ಯಸರ್ಕಾರ ಈ ವರದಿಯ ಅನುಷ್ಠಾನವನ್ನು ಹಿಂದಕ್ಕೆ ತೆಗೆದುಕೊಂಡಿತು. ಅನಂತರದಲ್ಲಿ ಮಧ್ಯಂತರ ಆದೇಶವೇ ಅಧಿಕೃತವಾಯಿತು. ಮಧ್ಯಂತರ ಆದೇಶದ ಕಲಂಗಳಿಗೆ 2ಎ, 2ಬಿ, 3ಎ, 3ಬಿ ಎಂಬ ಉಪವಿಂಗಡಗಳನ್ನೂ ಮಾಡುವ ಮೂಲಕ ಕೆಲವು ಸಮುದಾಯಗಳಿಗೆ ನಿರ್ದಿಷ್ಟ ಪ್ರಮಾಣದ ಮೀಸಲಾತಿ ನಿಗದಿಪಡಿಸಲಾಗಿದೆ. ಪ್ರತಿಯೊಂದು ಸಮುದಾಯಕ್ಕೂ ಮೀಸಲಾತಿಯ ಸೌಲಭ್ಯ ಒದಗಿಸುವುದೇ ಈ ಒಳವಿಂಗಡಣೆಯ ಉದ್ದೇಶ. ಆದರೆ ಹಿಂದುಳಿದ ವರ್ಗಗಳ ವಿಷಯ ಮತ್ತು ವಿಚಾರ ಸದಾಪರಿಶೀಲನೆಗೆ ಅರ್ಹವಾದುದೆಂದೂ ಅವುಗಳಿಗೆ ನೀಡಬೇಕಾದ ಸೌಲಭ್ಯಗಳು ಸದಾ ವೀಕ್ಷಣೆಗೆ ಒಳಪಡಬೇಕೆಂದೂ ಸಾರ್ವಜನಿಕ ಅಭಿಪ್ರಾಯ ರೂಪಿತವಾಯಿತು. ಇದನ್ನನುಸರಿಸಿ ಸರ್ಕಾರ 1994ರಲ್ಲಿ ಹಿಂದುಳಿದ ವರ್ಗಗಳ ಖಾಯಂ ಆಯೋಗ ರಚನೆಗೆ ಕ್ರಮಕೈಗೊಂಡಿತು. ಹೀಗೆ ರಚಿತವಾದ ಖಾಯಂ ಆಯೋಗದ ಮೊದಲ ಅಧ್ಯಕ್ಷರು ನಿವೃತ್ತ ನ್ಯಾಯಧೀಶರಾಗಿದ್ದ ಕುದೂರು ನಾರಾಯಣ ಪೈ ಅವರು. ಅನಂತರದಲ್ಲಿ ಅನೇಕರು ಅಧ್ಯಕ್ಷರಾಗಿ ಕೆಲಸಮಾಡಿದ್ದಾರೆ.

ಇಪ್ಪತ್ತನೆಯ ಶತಮಾನ ಹಿಂದುಳಿದ ವರ್ಗಗಳ ಜಾಗೃತಿಯ ಶತಮಾನ. ದೀರ್ಘ ಕಾಲದ ಹೋರಾಟ ಮತ್ತು ಪ್ರಜಾಪ್ರಭುತ್ವ ಸರ್ಕಾರಗಳ ಕಾಳಜಿಯ ಫಲವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯೂ ಸೇರಿದಂತೆ ವಿವಿಧ ಅಭಿವೃದ್ಧಿ ಸವಲತ್ತುಗಳು ಜಾರಿಗೆ ಬಂದಿವೆ. ಸರ್ಕಾರ ಹಿಂದುಳಿದ ವರ್ಗಗಳ ಕುಂದುಕೊರತೆಗಳನ್ನು ಗಮನಿಸಿ ಸೌಲಭ್ಯ ಕಲ್ಪಿಸಲು ಒಂದು ಇಲಾಖೆಯನ್ನೇ ತೆರೆದಿದೆ. ಈ ವರ್ಗಗಳ ಹಣಕಾಸು ಕಾರ್ಪೊರೇಷನ್ ರಚಿತವಾಗಿದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಈ ಮೇಲಿನ ಆಯೋಗಗಳ ಕೊಡುಗೆ ಅಪಾರವಾದದ್ದೂ ಬೆಲೆಯುಳ್ಳದ್ದೂ ಆಗಿರುವುದು ಗಮನಾರ್ಹ ವಿಚಾರವಾಗಿದೆ. (ಡಿ.ಎಸ್.ಜಿ.)

**ಕರ್ನಾಟಕದಲ್ಲಿ ಕ್ರೈಸ್ತ ಮಿಷನರಿಗಳು:** ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಪೋರ್ಚುಗೀಸರು ಕಂಡುಬಂದ ಅನಂತರ ಕ್ರೈಸ್ತ ಧರ್ಮೀಯರ ಚಟುವಟಿಕೆಗಳು ಗೋವ, ಕರ್ನಾಟಕ, ಮಲಬಾರ್ ಮುಂತಾದ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತವೆ. 16ನೆಯ ಶತಮಾನದಲ್ಲಿ ರೋಮನ್ ಕ್ಯಾಥೊಲಿಕ್ ಪಂಥದವರೂ 19ನೆಯ ಶತಮಾನದಲ್ಲಿ ಪ್ರಾಟೆಸ್ಟಂಟರ ವಿವಿಧ ಪಂಥಗಳವರೂ ಕರ್ನಾಟಕದಲ್ಲಿ ಕ್ರೈಸ್ತಧರ್ಮವನ್ನು ವ್ಯವಸ್ಥಿತವಾಗಿ ಸ್ಥಾಪಿಸಿದರು. ಕ್ರೈಸ್ತ ಮಿಷನರಿಗಳು ಕೈಗೊಂಡ ಧಾರ್ಮಿಕ ಚಟುವಟಿಕೆಗಳು, ಸ್ಥಾಪಿಸಿದ ಶಿಕ್ಷಣ ಕೇಂದ್ರಗಳು, ನಡೆಸಿದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಭಾವ ಇಡೀ ಭಾರತದಲ್ಲಿ ಹರಡಿತು. ಕ್ರೈಸ್ತಧರ್ಮದ ಹಿನ್ನೆಲೆಯಿಂದಲೂ ಕರ್ನಾಟಕ ಭಾರತದಲ್ಲೆ ಮುಖ್ಯ ಸ್ಥಾನವನ್ನು ಪಡೆದಿದೆ.

ಉತ್ತರ ಕರ್ನಾಟಕದ ಬೀದರ್, ಗುಲ್ಬರ್ಗ, ಬಳ್ಳಾರಿ ಜಿಲ್ಲೆಗಳು, ದಕ್ಷಿಣ ಕರ್ನಾಟಕದ ಮೈಸೂರು, ಬೆಂಗಳೂರು, ಚಾಮರಾಜನಗರ, ಕೋಲಾರ, ತುಮಕೂರು, ಕೊಡಗು ಹಾಗೂ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಮೊದಲಾದ ಜಿಲ್ಲೆಗಳಾದ್ಯಂತ ಕ್ರೈಸ್ತಧರ್ಮ (**ನೋಡಿ**) ತನ್ನ ಅಸ್ತಿತ್ವವನ್ನು ಕ್ರಮೇಣ ಪಡೆದುಕೊಂಡಿತು. ಹೀಗೆ ಆರಂಭವಾದ ಕ್ರೈಸ್ತಧರ್ಮ ತನ್ನ ಪ್ರಭಾವವನ್ನು ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿದೆ.

ಮಂಗಳೂರು ಮತ್ತು ಬಾರಕೂರುಗಳ ಮೂಲಕ ಒಳನಾಡನ್ನು ಪ್ರವೇಶಿಸಿದ ಕ್ರೈಸ್ತ ಮಿಷನರಿಗಳು ಪೋರ್ಚುಗೀಸರ ಬೆಂಬಲವನ್ನು ಪಡೆದಿದ್ದರಿಂದ ಸ್ಥಳೀಯ ರಾಜರ, ಅಧಿಕಾರಿಗಳ ಗೌರವಕ್ಕೆ ಪಾತ್ರರಾದರು. ವಿಜಯನಗರದ ಆಸ್ಥಾನದಲ್ಲಿ ನಿಮ್ಮೆಪೆಜಿರ್ ಎಂಬ ಕ್ರೈಸ್ತ ಮಂತ್ರಿ ಇದ್ದನೆಂದು ಹೇಳಲಾಗಿದೆ. ಪೋರ್ಚುಗೀಸರು ಕ್ರೈಸ್ತರ ಧಾರ್ಮಿಕ ಚಟುವಟಿಕೆಗಳಿಗೆ ಅನೇಕ ಚರ್ಚುಗಳನ್ನು ಸ್ಥಾಪಿಸಲು ಅನುಮತಿ ನೀಡಿದರು. ಮುಂದೆ ಕೆಳದಿ ನಾಯಕರ ಕಾಲದಲ್ಲೂ ಮಿಷನರಿಗಳಿಗೆ ಮನ್ನಣೆ ದೊರೆಯಿತು. ಶಿವಪ್ಪನಾಯಕ ದೇಶೀಯ ಕ್ರೈಸ್ತ ಪುರೋಹಿತ ವರ್ಗವನ್ನು ಸ್ಥಾಪಿಸುವ ವಿಷಯವನ್ನು ಚರ್ಚಿಸಲು ಗೋವಕ್ಕೆ ತನ್ನ ಪ್ರತಿನಿಧಿಗಳನ್ನು ಕಳಿಸಿದ್ದ. ಕರಾವಳಿಯ ಕನ್ನಡ ಜಿಲ್ಲೆಗಳಲ್ಲಿ 16 ಮತ್ತು 17ನೆಯ ಶತಮಾನಗಳಲ್ಲಿ ಪುರೋಹಿತರ ಅಭಾವದಿಂದ ಕ್ರೈಸ್ತ ಧರ್ಮಪಾಲನೆಗೆ ಧಕ್ಕೆಯುಂಟಾಯಿತು. ಆಗ ಫಾದರ್ ಜೋಸೆಫ್ ವಾಜ್ ಎಂಬುವನು ಈ ಪರಿಸ್ಥಿತಿಯನ್ನು ಬಹಳ ಮಟ್ಟಿಗೆ ಸುಧಾರಿಸಿದ. ಕರ್ನಾಟಕದಲ್ಲಿರುವ ಕ್ರೈಸ್ತರು ಗೋವದ ಧರ್ಮಗುರುಗಳ ಅಧಿಕಾರವ್ಯಾಪ್ತಿಗೆ ಒಳಪಟ್ಟಿದ್ದರು.

ಫಾದರ್ ಜೆಯೋಕಿಮ್ ಮಿರಾಂಡಾ ಬರೆದ ರಿಗ್ಲೊ ಜೆಬು ಎಂಬ ಈ ಕಾವ್ಯ, ಫಾದರ್ ಸ್ಟೀಫನ್ಸ್ 1614ರಲ್ಲಿ ಬರೆದ ಕ್ರಿಸ್ತಾಂವ್ ಪುರಾಣ ಎಂಬ ಬೃಹತ್ ಕಾವ್ಯ ಇವು ಮಂಗಳೂರಿನಲ್ಲಿ ಜನಪ್ರಿಯವಾದುವು. ಪರಂಗಿ ಪೇಟೆಯಲ್ಲಿ ಮಂಗಳೂರಿನ ಪುರೋಹಿತರ ತರಬೇತಿ ಕೇಂದ್ರ (ಸೆಮಿನರಿ) ಸ್ಥಾಪಿತವಾಯಿತು. ಅಂಕೋಲ, ಸುಪಾಶಿವೇಶ್ವರ ಗಳಲ್ಲಿ ಕೆಲಸ ಮಾಡುತ್ತಿದ್ದು, ಜೊಯ್ಡಾದಲ್ಲಿ ಒಂದು ವಿದ್ಯಾಕೇಂದ್ರವನ್ನು ತೆರೆದರು. 1637ರಲ್ಲಿ ಬಿಜಾಪುರವನ್ನು, 1666ರಲ್ಲಿ ಕನ್ನಡ ಜಿಲ್ಲೆಗಳನ್ನೂ ವಿಕ್ಯಾರಿಯೆಟ್ ಎಪೊಸ್ಟಾಲಿಕ್ ಎಂಬ ಧರ್ಮಕ್ಷೇತ್ರ (ಕೆಥೊಲಿಕ್ ಕ್ರೈಸ್ತರ ಬಿಷಪ್ ಇವರ ಆಡಳಿತದ ಭಾಗ)ಗಳನ್ನಾಗಿ ಪೋಪ್ ಸ್ಥಾಪಿಸಿದ. 1759ರಲ್ಲಿ ಪೋರ್ಚುಗಲ್ಲಿನ ಅಧಿಪತ್ಯದಿಂದ ಜೆಸುಯಿಟರನ್ನು ಬಹಿಷ್ಕರಿಸಿದ್ದಾಗ ಕಾರ್ಮೆಲೈಟ್ ಸಂಸ್ಥೆ ಅದರ ಕೆಲವನ್ನು ಮುಂದುವರಿಸಿತು. ಇದರ ಕಾರ್ಯಕ್ಷೇತ್ರಕ್ಕೆ ಒಳಪಟ್ಟ ಧಾರವಾಡಜಿಲ್ಲೆಯ ತುಮರಿಕೊಪ್ಪ ಹಳ್ಳಿಯಲ್ಲಿ ಮತಪ್ರಚಾರ ಕಾರ್ಯ ವಿಶೇಷವಾದ ಯಶಸ್ಸನ್ನು ಗಳಿಸಿತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂತ ಮೇರಿಯ ಜೀವನ ಚರಿತ್ರೆಯನ್ನು ಒಳಗೊಂಡ ಹಳೆಯ ತಾಳೆಗರಿಗಳನ್ನು ಇಲ್ಲಿ ಕಾಣಬಹುದು. 1783ರಲ್ಲಿ ಕನ್ನಡ ಜಿಲ್ಲೆಗಳಲ್ಲಿ 27 ಕ್ರೈಸ್ತ ದೇವಾಲಯಗಳಿದ್ದುವು.

ಈ ಮಧ್ಯೆ ಕ್ರೈಸ್ತಧರ್ಮದ ಪ್ರಚಾರಕ್ಷೇತ್ರಗಳಿಗೆ ಧನಸಹಾಯವನ್ನು ಒದಗಿಸಿದುದಕ್ಕೆ ಪ್ರತಿಯಾಗಿ ಬಿಷಪ್ಪರನ್ನು ನೇಮಕ ಮಾಡುವುದರಲ್ಲಿ ಪೋರ್ಚುಗೀಸ್ ರಾಜನಿಗೆ ಪೋಪ್ ಅಧಿಕಾರ ಕೊಟ್ಟಿದ್ದ. ಈ ವಿಷಯದಲ್ಲಿ ಇವರಿಬ್ಬರ ನಡುವಿನ ಒಡಂಬಡಿಕೆಯನ್ನು ಪಾದ್ರೊವಾದೊ ಎಂದು ಕರೆಯಲಾಗಿದೆ. ಕನ್ನಡ ಜಿಲ್ಲೆಗಳು ಸೇರಿದಂತೆ ಇತರ ಪ್ರದೇಶಗಳಲ್ಲಿ ಪಾದ್ರೊವಾದೊ ಅಧಿಕಾರ ಮಾನ್ಯವೇ ಅಥವಾ ಪೋಷಕಧರ್ಮ ಪ್ರಚಾರ ಸಂಸ್ಥೆಯ ಅಧಿಕಾರ ಮಾನ್ಯವೇ ಎಂಬುದರ ಬಗ್ಗೆ ಅನೇಕ ವಿವಾದಗಳು ಎದ್ದವು. ಇತ್ತಂಡದ ಅಧಿಕಾರ ವ್ಯಾಪ್ತಿಗೆ ಕೆಲವು ಪ್ರದೇಶಗಳು ಸೇರಿದವು. ಈ ಪ್ರಶ್ನೆ ಸಮರ್ಪಕವಾಗಿ 1886ರಲ್ಲಿ ಬಗೆಹರಿಯಿತು.

ಬ್ರಿಟಿಷರಿಗೆ ಕ್ರೈಸ್ತರು ಸಹಾನುಭೂತಿ ತೋರಿಸಿದ್ದರಿಂದ ಟಿಪ್ಪುಸುಲ್ತಾನ್ ತನ್ನ ಅಧೀನದಲ್ಲಿದ್ದ ಬಿದನೂರು, ಸುಂಕೇರಿ ಮುಂತಾದ ಪ್ರದೇಶಗಳಲ್ಲಿದ್ದ 30,000 ಕ್ರೈಸ್ತರನ್ನು ಬಂಧಿಸಿ ಶ್ರೀರಂಗಪಟ್ಟಣಕ್ಕೆ ಸಾಗಿಸಿದ (1784). ಟಿಪ್ಪುವಿಗೆ ನಿಷ್ಠಾವಂತರಾದ 5,000 ಕ್ರೈಸ್ತರು ಕ್ಷೇಮವಾಗಿದ್ದರು. ಟಿಪ್ಪುವಿನ ಸೆರೆಯಾಳಾಗಿದ್ದ ಕ್ರೈಸ್ತರನ್ನು ಬಲವಂತವಾಗಿ ಮತಾಂತರಗೊಳಿಸಲಾಯಿತು. ಆದರೆ ಇದರಿಂದ ಟಿಪ್ಪುವಿಗೆ ಯಾವುದೇ ರಾಜಕೀಯ ಪ್ರಯೋಜನವಾಗಲಿಲ್ಲ. ಫ್ರೆಂಚ್ ಸರ್ಕಾರ ಟಿಪ್ಪುವಿಗೂ ಒತ್ತಡ ತಂದು ಕ್ರೈಸ್ತರನ್ನು 1789ರಲ್ಲಿ ಬಿಡುಗಡೆಗೊಳಿಸಿತು. ಕೆಲವರು ಕನ್ನಡ ಜಿಲ್ಲೆಗಳಿಗೆ ಹಿಂದಿರುಗಿ ಬಹಳ ಶ್ರಮಪಟ್ಟು ತಮ್ಮ ಆಸ್ತಿಗಳನ್ನು ಪುನಃ ಪಡೆದರು. ಇವರನ್ನು ಪುನರ್ವಸತಿಗೊಳಿಸುವ ಕೆಲಸದಲ್ಲಿ ಅಬ್ಬೆ ದುಬಾಯ್ ಮತ್ತು ಫಾದರ್ ಫ್ರಾನ್ಸಿಸ್ ಜೇವಿಯರ್ ಪ್ರಮುಖ ಪಾತ್ರ ವಹಿಸಿದರು. ಟಿಪ್ಪುವಿನ ಹಿಂಸಾಚಾರವನ್ನು ತಪ್ಪಿಸಲು 1792ರಲ್ಲಿ ಅನೇಕ ಕ್ರೈಸ್ತರು ಕೊಡಗಿನಲ್ಲಿ ನೆಲೆಸಿದರು. 1784ರ ಮೊದಲೇ ಕ್ರೈಸ್ತಧರ್ಮ ಪ್ರಚಾರಕಾರ್ಯ ನಡೆದರೂ ಕೊಡಗಿನಲ್ಲಿ ಅದಕ್ಕೂ ಮುಂಚೆ ಕ್ರೈಸ್ತರಿದ್ದುದು ತಿಳಿಯದು. 1730ರಲ್ಲಿ ಹಾಲೇರಿಯ ರಾಜ ದೊಡ್ಡ ವೀರಪ್ಪನ ಆಮಂತ್ರಣವನ್ನು ಸ್ವೀಕರಿಸಿ ಫಾದರ್ ರೆಬೆಲೊ ಎಂಬುವನು ಮಡಿಕೇರಿಯಲ್ಲಿ ನೆಲೆಸಿ ಕ್ರೈಸ್ತಧರ್ಮವನ್ನು ಪ್ರಚಾರಗೊಳಿಸಿದ.

1700ರ ಹೊತ್ತಿಗೆ ಮೈಸೂರು ಪ್ರದೇಶದಲ್ಲಿ 18 ಮಂದಿ ಮಿಷನರಿಗಳೂ 30,000 ಮಂದಿ ಕ್ರೈಸ್ತರೂ ಇದ್ದರು. ಬಸವಪುರ, ಕಾನಕಾನಹಳ್ಳಿ (ಕನಕಪುರ), ಹಾರುಬಲೆ, ಕೆಲಮಂಗಳ–ಇವು ಮುಖ್ಯ ಕ್ರೈಸ್ತಧರ್ಮದ ಕೇಂದ್ರಗಳಾದವು. ತಮಿಳುನಾಡಿನ ಧರ್ಮಪುರಿಯ ಮೂಲಕ ಬೆಂಗಳೂರಿಗೆ ಕ್ರೈಸ್ತಧರ್ಮ ಹಬ್ಬಿತು. ಸಿನ್ನಾಮಿ ಎಂಬುವನು ಕನ್ನಡದಲ್ಲಿ (ಲಿಂಗ್ವ ಕೆನರಿಕ ಮಲಬಾರಿಕ ಎಂದು ಕನ್ನಡವನ್ನು ಅವನು ಹೆಸರಿಸಿದ್ದ) ಧರ್ಮೋಪದೇಶ, ಧರ್ಮೋಪದೇಶ ಸಂಹಿತೆ, ಸಂತರ ಜೀವನ ಚರಿತ್ರೆಗಳು, ಧರ್ಮ ಸಮರ್ಥನೆ ಮುಂತಾದ ವಿಷಯಗಳನ್ನು ಕುರಿತು ಪುಸ್ತಕಗಳನ್ನು ಬರೆದ. ನಿಮ್ನವರ್ಗದವರನ್ನು ಮತಾಂತರಗೊಳಿಸಲು ಗೂಡೊರೊ (ಗುಡೂರು), ಮಗ್ಗೆ, ಕಲಗಂಜಿ ಮುಂತಾದೆಡೆಗಳಲ್ಲಿ ಧರ್ಮಪ್ರಚಾರಕರು ಧರ್ಮಪ್ರಚಾರಗೊಳಿಸಿದರು. ಶಿರಾ, ರಾಯಚೂರು, ಕಿತ್ತೂರು, ತುಮರಿಕೊಪ್ಪ, ಸೆಟ್ಟಿಹಳ್ಳಿಗಳಲ್ಲಿ ಕ್ರೈಸ್ತಧರ್ಮ ಪ್ರಚಾರಕಾರ್ಯ 18ನೆಯ ಶತಮಾನದ ಆದಿಭಾಗದಲ್ಲಿ ಶುರುವಾಯಿತು.

1672ರಲ್ಲಿ ಮೈಸೂರಿನ ರಾಜ ದೇವರಾಜ ಒಡೆಯರು ತನ್ನ ಧೋರಣೆಗಳಿಗನುಸಾರವಾಗಿ ಕ್ರೈಸ್ತ ಮಿಷನರಿಗಳನ್ನು ಶ್ರೀರಂಗಪಟ್ಟಣದಿಂದ 1684ರ ವರೆಗೆ ಹೊರಹಾಕಿದ್ದ. ಮತ್ತೆ ಅವರಿಗೆ ಪ್ರವೇಶ ದೊರೆತದ್ದು 1711ರಲ್ಲಿ. ಮಾನ್ವೆಲ್ ದೆ ಕೊನ್ಹಾ ಎಂಬ ಜೆಸ್ವಿಟ್ ಪಾದ್ರಿಯನ್ನು ಬೆಂಗಳೂರು ಸಮೀಪದ ಕಂಗೊಂಡಿಯಲ್ಲಿ ಕೊಲ್ಲಲಾಯಿತು. ಪೋರ್ಚುಗಲ್ ಆಧಿಪತ್ಯದಿಂದ ಜೆಸ್ಯುಯಿಟರನ್ನು ಬಹಿಷ್ಕರಿಸಿದ ಮೇಲೆ ಮೈಸೂರಿನಲ್ಲಿ 13 ಜೆಸ್ಯುಯಿಟರು ಮತ್ತು 57 ಸಹಾಯಕರಿದ್ದರು. ಮೈಸೂರು ಪ್ರಾಂತದಲ್ಲಿ ಚಟುವಟಿಕೆಗಳನ್ನು ಕಾರ್ಮೆಲೈಟ್ ಸಂಸ್ಥೆಯವರ ವಶಕ್ಕೆ ಪೋಪ್ ಒಪ್ಪಿಸಿದ. ಆದರೆ ಇವರು ಈ ವಿಷಯದಲ್ಲಿ ಆಸಕ್ತಿ ವಹಿಸಲಿಲ್ಲ. 1800ರ ಬಳಿಕ ಮೈಸೂರಿನಲ್ಲಿದ್ದ ಸು. 25,000 ಕ್ರೈಸ್ತರ ಸಂಖ್ಯೆ ಕಾರಣಾಂತರವಾಗಿ ಬಹಳ ಕ್ಷೀಣಿಸಿತು. ಕೆಲವರು ಸಣ್ಣಪುಟ್ಟ ಸೈನ್ಯಗಳನ್ನು ಸೇರಿ ತಮ್ಮ ಆಚಾರ ಧರ್ಮವನ್ನು ಕಡೆಗಣಿಸಿದರು. ಇನ್ನು ಕೆಲವರು ಹೆಚ್ಚು ಧಾರ್ಮಿಕ ಸ್ವಾತಂತ್ರ್ಯ ಮತ್ತು ರಕ್ಷಣೆ ಇರುವ ಮದರಾಸು ರಾಜ್ಯದಲ್ಲಿ ನೆಲೆಸಿದರು. ಪ್ಯಾರಿಸಿನ ಫ್ರೆಂಚ್ ಫಾರಿನ್ ಮಿಷನ್ ಸಂಸ್ಥೆಯ ಪುರೋಹಿತರು ಮೈಸೂರು ಪ್ರದೇಶದಲ್ಲಿ ಕ್ರೈಸ್ತಧರ್ಮವನ್ನು ರಕ್ಷಿಸಿ ಊರ್ಜಿತಗೊಳಿಸಿದರು.

ಕರ್ನಾಟಕದಲ್ಲಿ ಪ್ರಾಟೆಸ್ಟಂಟರು ಮತಪ್ರಚಾರ ಮಾಡಿದುದು 1800ರ ಬಳಿಕ ಕ್ರಿಶ್ಚಿಯನ್ ಫ್ರೆಡರಿಕ್ ಶ್ವಾರ್ಟ್ ಎಂಬ ಡೇನಿಷ್ ಲುತೆರನ್ ಮಿಷನರಿ ಮೈಸೂರಿನಲ್ಲಿ ಏಸುವಿನ ಸುವಾರ್ತೆಗಳನ್ನು ಮೊದಲು ಪ್ರಚಾರಗೊಳಿಸಿದ ಹೈದರ್ ಇವನನ್ನು ಗೌರವದಿಂದ ನಡೆಸಿಕೊಂಡ. ಲಂಡನ್ ಮಿಷನರಿ ರೆವರೆಂಡ್ ಜಾನ್ ಹ್ಯಾಂಡ್ಸ್ ಬಳ್ಳಾರಿಯಲ್ಲಿ (1810), ವಲ್ಲಿಯನ್ ಮೆಥಾಡಿಸ್ಟ್ ಮಿಷನರಿ ರೆವರೆಂಡ್ ಥಾಮಸ್ ಹಡ್ಸನ್ ಗುಬ್ಬಿಯಲ್ಲಿ (1815), ಬಾಸೆಲ್ ಮಿಷನ್‌ರವರು ಮಂಗಳೂರು (1834) ಮತ್ತು ಧಾರವಾಡ (1837) – ಈ ಸ್ಥಳಗಳಲ್ಲಿ ಮಿಷನ್ ನೆಲೆಗಳನ್ನು ಸ್ಥಾಪಿಸಿದರು. ವೆಸ್ಲಿಯನ್ ಮಿಷನ್‌ನವರು ಗುಬ್ಬಿ, ಕುಣಿಗಲ್ಲು, ತುಮಕೂರು, ಹಾಸನ, ಶಿವಮೊಗ್ಗಗಳಲ್ಲಿ ಬಾಸೆಲ್ ಮಿಷನ್‌ರವರು ಹುಬ್ಬಳ್ಳಿ, ಬೆಟಗೇರಿ, ಗುಳೇದಗುಡ್ಡ, ಮೈಸೂರು, ಕೋಲಾರ, ಬಿಜಾಪುರಗಳಲ್ಲಿ, ಲಂಡನ್ ಮಿಷನ್‌ನವರು ಬೆಂಗಳೂರು, ಚಿಕ್ಕಬಳ್ಳಾಪುರ, ಗೌರಿಬಿದನೂರುಗಳಲ್ಲಿ ಕಾರ್ಯನಿರತರಾದರು. ಹೆಚ್ಚಾಗಿ ನಿಮ್ನವರ್ಗದವರಿಗೆ ಕ್ರೈಸ್ತಧರ್ಮವನ್ನು ಬೋಧಿಸಲಾಯಿತು. ಹ್ಯಾಂಡ್ಸನ್ ಎಂಬುವವನು ಬೈಬಲನನ್ನು ಬೆಂಗಳೂರಿನ ಬೈಬಲ್ ಸೊಸೈಟಿ ಆಫ್ ಇಂಡಿಯದ ಮೂಲಕ ಮೊದಲಿಗೆ ಕನ್ನಡಕ್ಕೆ ಭಾಷಾಂತರಿಸಿದ.

ಕನ್ನಡ ಜಿಲ್ಲೆಗಳು ಬ್ರಿಟಿಷರ ವಶವಾದ ಮೇಲೆ ಗೋವದಲ್ಲಿ ಮತ್ತೆ ಕ್ರೈಸ್ತಧರ್ಮಪ್ರಚಾರಕರು ಬರಲಾರಂಭಿಸಿದರು. ಪ್ರತಿಭಾವಂತ ಸ್ಥಳೀಯ ಯುವಕರು ಗೋವದಲ್ಲಿ ತರಬೇತಿಗೊಂಡು ಪುರೋಹಿತರಾದರು. 1878ರಲ್ಲಿ ಮಂಗಳೂರು ಮಿಷನ್ ಪ್ರದೇಶವನ್ನು ಜೆಸುಯಿಟರು ವಹಿಸಿಕೊಂಡರು. 19 ಮತ್ತು 20ನೆಯ ಶತಮಾನಗಳಲ್ಲಿ ಕನ್ನಡ ಜಿಲ್ಲೆಗಳು ಹಾಗೂ ಕರ್ನಾಟಕದ ಇತರ ಭಾಗಗಳಲ್ಲಿ ಕ್ರೈಸ್ತಧರ್ಮ ತಕ್ಕಮಟ್ಟಿಗೆ ಬೆಳೆಯಲಾರಂಭಿಸಿತು.

19ನೆಯ ಶತಮಾನದ ಅನಂತರ ಕ್ರೈಸ್ತಧರ್ಮದ ಚಟುವಟಿಕೆಗಳು ಧಾರ್ಮಿಕ ವಲಯವನ್ನು ಮೀರಿ ಕ್ರೈಸ್ತೇತರರಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಟ್ಟಿತು. 1870ರಲ್ಲಿ ಮಂಗಳೂರಿನಲ್ಲಿ ಸ್ಥಾಪನೆಯಾದ ಸ್ಟಿಟರ ಸೇಂಟ್ ಅಲಾಸಿಯಸ್ ಕಾಲೇಜು, ಅಪೊಸ್ಟಾಲಿಕ್ ಕಾರ್ಮೆಲ್ ಕನ್ಯಾಸ್ತ್ರೀಯರು (ಸಿಸ್ಟರ್ಸ್) ಹೆಣ್ಣು ಮಕ್ಕಳಿಗಾಗಿ ತೆರೆದ ಸೇಂಟ್ ಆಗ್ನಿಸ್ ಕಾಲೇಜು ಮತ್ತು ಸೇಂಟ್ ಆನ್ಸ್ ಕಾಲೇಜು. 1882ರಲ್ಲಿ ಪ್ಯಾರಿಸಿನ ಫಾರಿನ್ ಮಿಷನ್ ಸಂಸ್ಥೆಯವರು ತೆರೆದ ಸೇಂಟ್ ಜೋಸೆಫ್ ಕಾಲೇಜುಗಳು ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹವಾದುವು. ಬೆಥಿನಿ ಕನ್ಯಾಸ್ತ್ರೀಯರೂ ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳನ್ನೂ ನಡೆಸುತ್ತಾರೆ. ವೈದ್ಯಕೀಯ ಸೇವಾಕ್ಷೇತ್ರದಲ್ಲಿ ಫಾದರ್ ಮುಲ್ಲರ್ 1891ರಲ್ಲಿ ಮಂಗಳೂರಿನ ಕಂಕನಾಡಿಯಲ್ಲಿ ಆರಂಭಿಸಿದ. ಇಲ್ಲಿಯ ಹೋಮಿಯೋಪತಿ ಕೇಂದ್ರ ಇಂದು ವೈದ್ಯಕೀಯ ಕಾಲೇಜು ಆಗಿ ಪರಿವರ್ತನೆ ಆಗಿದೆ. ಬೆಂಗಳೂರಿನಲ್ಲಿ ಗುಡ್‌ಶೆಫರ್ಡ್ ಕನ್ಯಾಸ್ತ್ರೀಯರು ನಡೆಸುವ ಸೇಂಟ್ ಮಾರ್ತಾ ಆಸ್ಪತ್ರೆ ಕರ್ನಾಟಕ ಡಯೋಸಿಸನ್‌ರವರು ಆರಂಭಿಸಿರುವ ಸೇಂಟ್ ಜಾನ್ ಆಸ್ಪತ್ರೆ ಮತ್ತು ಕಾಲೇಜು, ಮೈಸೂರಿನ ವೆಸ್ಲಿಯನ್ ಮಿಷನ್. ಅವರ ಹೋಲ್ಡ್ಸ್‌ವರ್ತ್ ಮೆಮೋರಿಯಲ್ ಆಸ್ಪತ್ರೆ ಉಲ್ಲೇಖಾರ್ಹವಾಗಿವೆ. ಇವುಗಳ ಜೊತೆಗೆ ನೂರಾರು ಆರೋಗ್ಯಕೇಂದ್ರಗಳನ್ನು ರಾಜ್ಯದ ನಾನಾ ಕಡೆ ತೆರೆಯಲಾಗಿದೆ. ಔದ್ಯೋಗಿಕ ತರಬೇತಿಯಲ್ಲಿ ಬಾಸೆಲ್ ಮಿಷನ್‌ನವರ ಕೈಮಗ್ಗದ ನೇಯ್ಗೆ, ಹೆಂಚಿನ ಉದ್ಯಮ ಮತ್ತು ಅಚ್ಚುಕೂಟ ಪ್ರಖ್ಯಾತವಾದವು. ಜೆಪ್ಪು ಇಂಡಸ್ಟ್ರಿಯಲ್ ವರ್ಕ್‌ಷಾಪ್ ಗಮನಾರ್ಹ. ಇವುಗಳಲ್ಲಿ ಹೆಚ್ಚಿನ ಸಂಸ್ಥೆಗಳು ಈಗಲೂ ನಡೆಯುತ್ತಿವೆ.

ಸಾಹಿತ್ಯ ಕ್ಷೇತ್ರದಲ್ಲಿ ಕಿಟ್ಟೆಲ್ ಅವರು ಕನ್ನಡಕ್ಕೆ, ಜೀಗ್ಲರ್ ಅವರು ತುಳು ಭಾಷೆಗೆ, ಮಾಫ್ ಸ್ಟೀವನ್ಸ್ ಅವರು ಕೊಂಕಣಿಗೆ ಭಾಷೆ ಸಲ್ಲಿಸಿದ ಸೇವೆ ಗಮನಾರ್ಹ. ಬೈಬಲ್ ಗ್ರಂಥದ ಭಾಷಾಂತರ, ಪ್ರಕಟಣೆಯ ಜೊತೆಗೆ ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಪಠ್ಯ ಪುಸ್ತಕಗಳನ್ನೂ ಪ್ರೌಢ ಸಾಹಿತ್ಯ ಕೃತಿಗಳನ್ನು ಬಾಸೆಲ್ ಮಿಷನ್ ಮುದ್ರಿಸುತ್ತ ಬಂದಿದೆ.

ಕರ್ನಾಟಕದಲ್ಲಿ ಪ್ರಸ್ತುತ ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಮಂಗಳೂರು, ಬಳ್ಳಾರಿ, ಬೆಳಗಾಂವಿ, ಶಿವಮೊಗ್ಗ, ಕಾರವಾರ ಮತ್ತು ಬೀದರ್ ಜಿಲ್ಲೆಗಳಲ್ಲಿ 9 ಸ್ವತಂತ್ರ ಧರ್ಮಕ್ಷೇತ್ರಗಳಿವೆ. ಸಾವಿರಾರು ಪಾದ್ರಿಗಳು ಮತ್ತು ಕನ್ಯಾಸ್ತ್ರೀಯರು ಈ ಧರ್ಮಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 19ನೆಯ ಶತಮಾನದಲ್ಲಿ ಕ್ರೈಸ್ತರು ಸ್ಥಾಪಿಸಿದ ಶಾಲಾ ಕಾಲೇಜು ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಸೇವಾಸಂಸ್ಥೆಗಳಾದ ಆಸ್ಪತ್ರೆ, ವೃದ್ಧಾಶ್ರಮ, ಅನಾಥಾಶ್ರಮ ಮೊದಲಾದ ಕ್ಷೇತ್ರಗಳಲ್ಲಿ ಮಾಡಿದ ಸಾರ್ವಜನಿಕ ಸೇವೆಗಳ ಪ್ರಭಾವ ಇಡೀ ಭಾರತದಲ್ಲಿಯೇ ಹರಡಿದೆ. ಹಿಂದುಳಿದ, ದಲಿತ, ಶೋಷಣೆಗೆ ಒಳಗಾದ ಹೆಣ್ಣುಮಕ್ಕಳು ಮೊದಲಾದವರಿಗೆ, ಶಿಕ್ಷಣ ಪಡೆಯದ ಸಮುದಾಯಗಳಿಗೆ ಮಿಷನರಿಗಳು ನೀಡಿದ ಶಿಕ್ಷಣ ಸೌಲಭ್ಯ ಇತರ ಧರ್ಮಗಳ ಮುಖಂಡರಿಗೆ ಆದರ್ಶಪ್ರಾಯವಾಗಿದೆ. ಶಿಕ್ಷಣದಲ್ಲಿ ಆಂಗ್ಲಭಾಷಾ ಮಾಧ್ಯಮವನ್ನು ಆರಂಭಿಸಲಾಯಿತು. ಕ್ರೈಸ್ತ ಧಾರ್ಮಿಕ ವಿಷಯಗಳಲ್ಲೂ ಕರ್ನಾಟಕ ಭಾರತದಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದಿವೆ. ಸೇಂಟ್ ಜೋಸೆಫ್ ಹಿಟರ್ ಡಯಸೀಜನ್ ಸೆಮಿನರಿ, ಬೆಂಗಳೂರಿನ ಸೇಂಟ್ ಪೀಟರ್ಸ್ ಸೆಮಿನರಿ, ಮೈಸೂರಿನ ಸೇಂಟ್ ಮೇರಿಸ್ ಸೆಮಿನರಿಗಳು ದಕ್ಷಿಣ ಭಾರತದ ವಿವಿಧ ಭಾಗಗಳಿಗೆ ಬೇಕಾಗುವ ಪುರೋಹಿತರಿಗೆ ತರಬೇತಿ ನೀಡುತ್ತಿವೆ. ಬೆಂಗಳೂರು ಕ್ರೈಸ್ತ ಧಾರ್ಮಿಕ ಚಟುವಟಿಕೆಗಳ ಬೃಹತ್ ಕೇಂದ್ರವಾಗಿದೆ. ಸಲೆಸಿಯನ್, ರಿಡೆಂಪ್ಟರಿಸ್ಟ್ ಮುಂತಾದ ಸನ್ಯಾಸಿ ಸಂಸ್ಥೆಗಳು, ದೇವಶಾಸ್ತ್ರ ಪೀಠಗಳು, ಬೋಧನಾ ಶೋಧನಾಂಗಗಳು, ಗ್ರಂಥಾಲಯಗಳು, ಬೈಬಲ್ ಭಾಷಾಂತರ ಕೇಂದ್ರ, ಬೈಬಲ್ ಸೊಸೈಟಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸರ್ವಿಸ್ ಸೆಂಟರ್ ಮುಂತಾದವುಗಳಿವೆ. ಇಲ್ಲಿಯ ಯುನೈಟೆಡ್ ಥಿಯೋಲೋಜಿಕಲ್ ಕಾಲೇಜು ಭಾರತದಾದ್ಯಂತ ಪ್ರಾಟೆಸ್ಟಂಟರ ಪಾದ್ರಿಗಳಿಗೆ ತರಬೇತಿ ನೀಡುತ್ತಿದೆ. ಕೆಥೊಲಿಕ್ ಪಾದ್ರಿಗಳಿಗೆ ಸಿ.ಆರ್.ಐ. ಇನ್‌ಸ್ಟಿಟ್ಯೂಟ್, ಕನ್ಯಾಸ್ತ್ರೀಯರಿಗೆ ಸುದೀಪ್ ಕೇಂದ್ರಗಳು ಧಾರ್ಮಿಕ ತರಬೇತಿಯನ್ನು ಒದಗಿಸುತ್ತಿವೆ. ನ್ಯಾಷನಲ್ ಬಿಬ್ಲಿಕಲ್, ಕ್ಯಾಟೆಕೆಟಿಕಲ್ ಅಂಡ್ ಲಿಥರ್ಜಿಕಲ್ ಸೆಂಟರ್, ನ್ಯಾಷನಲ್ ಎಕ್ಯುಮೆನಿಕಲ್ ಸೆಂಟರ್ ಮುಂತಾದ ಸಂಸ್ಥೆಗಳಲ್ಲಿ ಕ್ರೈಸ್ತಧರ್ಮದವರ ಒಕ್ಕೂಟ ಮತ್ತು ಕ್ರೈಸ್ತಧರ್ಮವನ್ನು ಭಾರತೀಯ ದೇಶೀಯ ಹಾಗೂ ಸ್ಥಳೀಯ ಭಾವನೆ ಆಚರಣೆಗಳಿಗೆ ಹೊಂದಿಸಿಕೊಳ್ಳುವ ಬಗೆಗೆ ಅಧ್ಯಯನ ಪ್ರಯೋಗಗಳು ನಡೆಯುತ್ತವೆ. ಪ್ರಾಟೆಸ್ಟಂಟರು ನಡೆಸುವ ಇಂಡಿಯ, ಬರ್ಮಾ, ಸಿಲೋನ್ ಮತ್ತು ಪಾಕಿಸ್ತಾನಗಳ ಬೈಬಲ್ ಸೊಸೈಟಿಗಳೂ ಬೆಂಗಳೂರಿನಲ್ಲಿವೆ.

ಹೀಗೆ ಕೆಥೊಲಿಕ್, ಪ್ರಾಟೆಸ್ಟಂಟ್, ಬ್ಯಾಪ್ಟಿಸ್ಟ್ ಮಿಷನ್, ವೆಸ್ಲಿಮಿಷನ್, ಬಾಸೆಲ್‌ಮಿಷನ್, ಮೆಥೋಡಿಸ್ಟ್ ಮಿಷನ್, ಲಂಡನ್ ಮಿಷನ್ ಇತ್ಯಾದಿ ಮಿಷನರಿಗಳು ಕರ್ನಾಟಕದ ಸಂಸ್ಕೃತಿ ಹಾಗೂ ಪ್ರಗತಿಗಾಗಿ ದುಡಿಯುತ್ತಿವೆ. ನಿಮ್ನ ಹಾಗೂ ಶೋಷಿತ ಸಮುದಾಯಗಳ ಜನರ ಕಲ್ಯಾಣಕ್ಕಾಗಿ ಮಿಷನರಿಗಳು ಶ್ರಮಿಸುತ್ತಿವೆ. (ಎನ್‌ಆರ್.)

**ಕರ್ನೂಲು ಗುಹೆಗಳು:** ಆಂಧ್ರಪ್ರದೇಶದ ಕರ್ನೂಲು ಬಳಿಯ ಬೇತಂಚೆರ್ಲದ ಗುಡ್ಡಗಳ ಸಾಲಿನಲ್ಲಿರುವ ಗುಹೆಗಳು. ಈ ಗುಹೆಗಳನ್ನು ಭಿಲ್ಲಾಸರ್ಗಮ್, ಯಗಂಜಿ, ಯೆರ‍್ರಾಜರಿ ಗಬ್ಬಿ, ಸನ್ಯಾಸಲು ಗವಿ, ಕೃಷ್ಣಮ್ಮನ ಕೋಣ ಗವಿ ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ. 1840ರ ದಶಕದಲ್ಲಿ ಕ್ಯಾಪ್ಟನ್ ನ್ಯೂಬೋಲ್ಡ್ ಎಂಬ ಬ್ರಿಟಿಷ್ ಅಧಿಕಾರಿ ಮೊದಲಬಾರಿಗೆ ಈ ಗುಹೆಗಳನ್ನು ಗುರುತಿಸಿ ಇವುಗಳಲ್ಲಿ ಕೆಲವು ಪ್ರಾಣಿಗಳ ಪಳೆಯುಳಿಕೆಗಳನ್ನು ಪತ್ತೆ ಹಚ್ಚಿದ. ಇವನ ಅನಂತರ ಬ್ರೂಸ್‌ಫುಟ್ 1884ರಲ್ಲಿ ಭಿಲ್ಲಾಸರ್ಗಮ್ ಗುಹೆಯಲ್ಲಿ ಉತ್ಖನನ ನಡೆಸಿದಾಗ ಮೊದಲಬಾರಿಗೆ ಪ್ರಾಣಿಯ ಮೂಳೆಗಳಿಂದ ತಯಾರಿಸಲಾದ ಉಪಕರಣಗಳು ಮತ್ತು ಕೆಲವು ಶಿಲೋಪಕರಣಗಳು ದೊರೆತವು. ಮಣ್ಣಾತ್ರೆಯ ಚೂರುಗಳು, ಕಬ್ಬಿಣದ ಉಪಕರಣಗಳು ಈ ಪ್ರದೇಶದಲ್ಲಿ ದೊರಕಿರುವುದರಿಂದ ಪ್ರಾಗೈತಿಹಾಸಿಕ ಕಾಲದ ವಿಭಿನ್ನ ಘಟ್ಟಗಳನ್ನು ಗುರುತಿಸಲು ಸಾಧ್ಯವಾಯಿತು.



ಅಂತ್ಯ ಹಳೆಶಿಲಾಯುಗ ಉಪಕರಣಗಳು, ಮುಚ್ಚಟ್ಲಚಿಂತಮಾನು

1970–1982ರ ಅವಧಿಯಲ್ಲಿ ಕೆ. ತಿಮ್ಮಾರೆಡ್ಡಿಯವರು ಭಿಲ್ಲಾಸರ್ಗಮ್ ಗವಿಯಲ್ಲಿ, ಎಂ.ಎಲ್.ಕೆ.ಮೂರ್ತಿಯವರು ಮುಚ್ಚಟ್ಲಚಿಂತಮಾನು ಗವಿ ಪ್ರದೇಶದಲ್ಲಿ ಉತ್ಖನನ ಮಾಡಿದರು. ಈ ಗುಹೆಗಳು ಬೇತಂಚೆರ್ಲ ಮತ್ತು ಕಡಪ ಪ್ರದೇಶಗಳಲ್ಲಿವೆ. ಮುಚ್ಚಟ್ಲಚಿಂತಮಾನು ಗವಿಯಲ್ಲಿ ಎರಡು ಕಡೆಗಳಲ್ಲಿ ಉತ್ಖನನ ನಡೆಸಲಾಯಿತು. ಮೊದಲನೆಯದರಲ್ಲಿ (ಎಂ.ಸಿ.ಜಿ.1) ನಡೆದ ಉತ್ಖನನದಲ್ಲಿ ಅಂತ್ಯ ಹಿಮಯುಗಕ್ಕೆ ಸೇರಿದ ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯ ವಿವಿಧ ನಮೂನೆಯ ಕಲ್ಲಿನ ಅಲಗುಗಳು, ಕೊರೆಗ, ಹೆರೆಚಕ್ಕೆ, ಶಿಲಾತಿರುಳು, ತ್ಯಾಜ್ಯ ಚಕ್ಕೆ ಚೂರುಗಳು, ಮೂಳೆಯಿಂದ ಮಾಡಿದ ಹೆರೆಚಕ್ಕೆ, ಉಳಿ, ಮೊನೆ, ಚಮಚ, ರಂಧ್ರಗಳು ಹಾಗೂ ಪ್ರಾಣಿ ಮೂಳೆಗಳು, ಚರ್ಟ್ ಮತ್ತು ಸುಣ್ಣಕಲ್ಲುಗಳಿಂದ ಮಾಡಿದ ಕಲ್ಲಿನ ಉಪಕರಣಗಳು ದೊರೆತಿವೆ. ಎರಡನೆಯದರಲ್ಲಿ ನಡೆದ ಉತ್ಖನನದಲ್ಲಿ (ಎಂ.ಸಿ.ಜಿ.2) ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳು ದೊರೆತವು. ಇಲ್ಲಿಯ ಸೂಕ್ಷ್ಮಶಿಲಾಯುಗ ಸಂಸ್ಕೃತಿಯನ್ನು ಆದಿ ಮತ್ತು ಅಂತ್ಯ ಹಂತಗಳಾಗಿ ವಿಭಜಿಸಲಾಗಿದೆ. ಎರಡನೆಯ ಹಂತ ಈ ಪ್ರದೇಶದ ತಾಮ್ರ–ಶಿಲಾಯುಗ ಸಾಂಸ್ಕೃತಿಕ ಹಂತಕ್ಕೆ ಸಮಕಾಲೀನವಾಗಿದೆ. ಎರಡೂ ಹಂತದ ಸೂಕ್ಷ್ಮಶಿಲೋಪಕರಣಗಳು ಅತ್ಯುತ್ತಮ ದರ್ಜೆಯವು. ಇವನ್ನು ಜಾಸ್ಪರ್, ಕ್ಯಾಲ್ಸೆಡನಿ ಮತ್ತು ಸುಣ್ಣಕಲ್ಲುಗಳಿಂದ ಮಾಡಲಾಗಿದೆ. ಈ ಅವಶೇಷಗಳನ್ನುಳ್ಳ ಪದರಗಳಲ್ಲಿ ಅಲ್ಲಲ್ಲಿ ಬೂದಿಯೂ ಕಂಡುಬಂದಿದೆ. ಇದು ಜನವಸತಿಯ ಸ್ಪಷ್ಟ ಕುರುಹಾಗಿದೆ. ವಿವಿಧ ನಮೂನೆಯ ಅಲಗುಗಳು, ಹೆರೆಚಕ್ಕೆಗಳು, ರಂಧ್ರಕ, ಬಾಣದ ಮೊನೆ, ಅರ್ಧಚಂದ್ರಾಕೃತಿ, ತ್ರಿಕೋನಾಕೃತಿ ಮೊದಲಾದ ಉಪಕರಣಗಳೂ ಕವಣೆಕಲ್ಲು, ಸುತ್ತಿಗೆ ಕಲ್ಲು, ಅರೆಯುವ ಕಲ್ಲುಗಳೂ ಈ ಪದರಗಳಲ್ಲಿದ್ದವು. ಈ ಉಪಕರಣಗಳನ್ನು ಇಲ್ಲಿಯೇ ಸಿದ್ಧ ಮಾಡಲಾಗುತ್ತಿತ್ತೆಂದು ಕಾಣುತ್ತದೆ. ಇವರು ಪಶುಸಂಗೋಪನೆ, ಕೃಷಿ ಉದ್ಯೋಗದ ತಾಮ್ರ–ಶಿಲಾ ಸಂಸ್ಕೃತಿಯ ಜನ ಸಮುದಾಯದವರೊಡನೆ ಸಂಪರ್ಕದಿಂದ ತಾಮ್ರದ ಬಳೆ, ಉಂಗುರ, ಸ್ಟಿಯಟೈಟ್ ಮಣಿ ಮುಂತಾದ ವಸ್ತುಗಳನ್ನು ಪಡೆದುಕೊಳ್ಳುತ್ತಿದ್ದರು. ಅಪರೂಪವಾಗಿ ಮಡಕೆಗಳನ್ನು ಉಪಯೋಗಿಸುತ್ತಿದ್ದರೆಂದು ಕಾಣುತ್ತದೆ. ಈ ನೆಲೆಯ ಪದರಗಳಲ್ಲಿ ದೊರೆತ ಮಡಕೆ ಚೂರುಗಳಲ್ಲೊಂದರ ಔಷ್ಣದೀಪ್ತಿ ಕಾಲಮಾನ ಪ್ರ.ಶ.ಪೂ. 1850±20%.

ಇವೆರಡು ಸಂಸ್ಕೃತಿಗಳ ಸಮುದಾಯಗಳು ಜಿಂಕೆ, ಸಾರಂಗ, ಕಾಡುಹಂದಿ, ಮೊಲ, ಕಾಡುಬೆಕ್ಕು, ಉಡ, ಮುಳ್ಳುಹಂದಿ, ಆಮೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದುವು. ಅಂತ್ಯ ಹಳೆ ಶಿಲಾಯುಗದ ಜನರು ಸಮೀಪದಲ್ಲಿರುವ ನಿಕ್ಷೇಪದಿಂದ ಚರ್ಟ್‌ಕಲ್ಲಿನ ತುಂಡುಗಳನ್ನು ಗುಹೆಗೆ ತಂದು ಶಾಖಕೊಟ್ಟು ಕಾಯಿಸಿ ಅವುಗಳಿಂದ ಚಕ್ಕೆಗಳನ್ನು ಒತ್ತಿ ತೆಗೆಯುತ್ತಿದ್ದರು. ಇದೇ ಸಮಯಕ್ಕೆ ಸೇರಿದ ಕಮಾನಿನ ಆಕಾರದಲ್ಲಿರುವ ಅಗ್ಗಿಷ್ಟಿಕೆಯೊಂದು ಉತ್ಖನನದಲ್ಲಿ ಕಂಡುಬಂತು. ಅಗ್ಗಿಷ್ಟಿಕೆಯೊಳಗೆ ದೊರೆತ ಸುಟ್ಟ ಮಣ್ಣಿನ ತುಂಡನ್ನು ಔಷ್ಣದೀಪ್ತಿ ಕಾಲ ನಿರ್ಣಯಕ್ಕೆ ಒಳಪಡಿಸಿ ಈ ಸಂಸ್ಕೃತಿಯ ಕಾಲಮಾನ 17,390±10% ಎಂದು ನಿರ್ಧರಿಸಲಾಗಿದೆ.

ಭಿಲ್ಲಾಸರ್ಗಮ್ ಮತ್ತು ಇತರ ಗುಹೆಗಳಲ್ಲಿ ನವಶಿಲಾಯುಗ ಸಂಸ್ಕೃತಿಯ ಮಡಕೆ ಚೂರುಗಳು, ಉಜ್ಜಿ ನಯಮಾಡಿದ ತ್ರಿಕೋಣಾಕೃತಿಯಯ ಕೊಡಲಿಗಳು ಸಿಕ್ಕಿವೆ. ಈ ಜನ ಗುಹೆಗಳ ತಪ್ಪಲಿನ ಪ್ರದೇಶವನ್ನು ತಮ್ಮ ಪಶುಗಳ ಹುಲ್ಲುಗಾವಲಾಗಿಯೂ ಒಣ ಬೇಸಾಯಕ್ಕೂ ಉಪಯೋಗಿಸುತ್ತಿದ್ದಿರಬಹುದು. (ಎಂ.ಎಲ್.ಕೆ.ಎಂ.)

**ಕಲ್ಪನಾದತ್:** ಭಾರತದ ಪ್ರಸಿದ್ಧ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು. ಇವರು ಬಂಗಾಲದಲ್ಲಿ 1913ರಲ್ಲಿ ಜನಿಸಿದರು. ತಮ್ಮ ಉನ್ನತ ವಿದ್ಯಾಭ್ಯಾಸವನ್ನು ಕೋಲ್ಕತ ವಿಶ್ವವಿದ್ಯಾಲಯದಲ್ಲಿ ಮಾಡಿದರು. ಆಗ ಇವರು ಲೇಡಿಸ್ ಅಸೋಸಿಯಷನ್ ಎಂಬ ಸಂಘವನ್ನು ಸೇರಿ ಅಲ್ಲಿ ಶಸ್ತ್ರಾಸ್ತ್ರ ತರಬೇತಿ ಮತ್ತು ಬಾಂಬ್ ತಯಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದರು. ಇವರು ಪುರುಷರಂತೆ ಉಡುಗೆ ತೊಡುಗೆಯನ್ನು ಧರಿಸುತ್ತಿದ್ದರು. ಮೊದಲ ಬಾರಿಗೆ ಪಹರ್ತಲಿ ಕ್ಲಬ್‌ನ ಧಾಳಿಯ ಮೊಕದ್ದಮೆಯಲ್ಲಿ ಇವರನ್ನು ಶಂಕಿಸಲಾಯಿತಾದರೂ ಸೂಕ್ತ ಸಾಕ್ಷ್ಯಾಧಾರಗಳು ದೊರೆಯದೆ ಶಿಕ್ಷಿಸಲಾಗಲಿಲ್ಲ. ಅನಂತರ ಜಾಮೀನಿನ ಮೇಲೆ ಬಿಡುಗಡೆಯಾಗಿ ತಲೆತಪ್ಪಿಸಿಕೊಂಡರು. ಮುಂದೆ 1930 ಏಪ್ರಿಲ್ 18 ರಂದು ಸೂರ್ಯಸೇನ್‌ರ ನೇತೃತ್ವದಲ್ಲಿ ಪೂರ್ವ ಬಂಗಾಲದ ಚಿತ್ತಗಾಂಗ್‌ನ ಸರ್ಕಾರಿ ಶಸ್ತ್ರಾಗಾರದಿಂದ ವಶಪಡಿಸಿಕೊಂಡ ಶಸ್ತ್ರಾಸ್ತಗಳನ್ನು ಕಾಡಿನಲ್ಲಿದ್ದುಕೊಂಡೆ ಬ್ರಿಟಿಷರ ವಿರುದ್ಧ ಹೋರಾಟ ಮುಂದುವರೆಸಿದರು. ಕೊನೆಗೆ ಸೆರೆಸಿಕ್ಕ ಇವರಿಗೆ ಸೂರ್ಯಸೇನ್‌ರೊಡನೆ ಆಜೀವ ಸೆರೆವಾಸದ ಶಿಕ್ಷೆ ನೀಡಲಾಯಿತು. 1937ರಲ್ಲಿ ಪ್ರಾಂತೀಯ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ಇವರನ್ನು ಬಿಡುಗಡೆಗೊಳಿಸಲು ರವೀಂದ್ರನಾಥ್ ಠಾಕೂರ್ ಮತ್ತು ಮಹಾತ್ಮಗಾಂಧಿ ಮೊದಲಾದವರು ಪ್ರಯತ್ನಸಿದ ಫಲವಾಗಿ 1939ರಲ್ಲಿ ಬಿಡುಗಡೆಗೊಂಡರು. ಅನಂತರ ಶಿಕ್ಷಣಕ್ಷೇತ್ರ ಹಾಗೂ ಕಮ್ಯುನಿಸ್ಟ್ ಚಳವಳಿಯಲ್ಲಿ ತೊಡಗಿಸಿಕೊಂಡರು. ಕಾರ್ಮಿಕರ ನೆಲೆಗಳಿಗೆ ಭೇಟಿ ನೀಡುತ್ತಾ ಕಿಸಾನ್ ಸಭಾದ ಚಟುವಟಿಕೆಗಳಲ್ಲಿ ಭಾಗವಹಿಸಲಾರಂಭಿಸಿದರು. ಅನಂತರ ಟ್ರಾಂವೇ ವರ್ಕರ್ಸ್ ಯೂನಿಯನ್‌ನಲ್ಲಿ ಖಾಯಂ ಸದಸ್ಯೆಯಾಗಿ ಸೇರಿ ಕಮ್ಯುನಿಸ್ಟ್ ಮುಖಂಡರಾದ ಬಿ. ಸಿ. ಜೋಷಿಯವರನ್ನು ವಿವಾಹವಾಗಿ ಕಮ್ಯುನಿಸ್ಟ್ ಮತ್ತು ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. (ಕೆ.ಎಸ್‌ಡಿ.)

**ಕಲ್ಲೂರು:** ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನಲ್ಲಿರುವ ತಾಮ್ರ–ಶಿಲಾಯುಗದ ನೆಲೆ. ರಾಯಚೂರಿನಿಂದ ಸು.23 ಕಿಮೀ ದೂರದಲ್ಲಿ ಜಿಂಗೆರಗೆ ಹೋಗುವ ರಸ್ತೆಯಲ್ಲಿರುವ ಈ ಸ್ಥಳದಲ್ಲಿ ಕಣಶಿಲೆಯ ಬೆಟ್ಟಗಳಿವೆ. ಗುಹೆಗಳನ್ನೊಳಗೊಂಡ ಎಮ್ಮಿಗುಡ್ಡದ ಪ್ರದೇಶ ಮುಖ್ಯವಾದದ್ದಾಗಿದೆ. ಈ ಬೆಟ್ಟದ ಪೂರ್ವ ತುದಿಯಲ್ಲಿರುವ ಒಂದು ಬಂಡೆಯ ಮೇಲೆ ಕುಟ್ಟಿ ಮಾಡಿದ ಎರಡು ಕೋಣಗಳ ಚಿತ್ರವಿದೆ. ಇದರ ಉತ್ತರಕ್ಕೆ ಮತ್ತೊಂದು ಬಂಡೆಯ ಮೇಲೆ ಉದ್ರೇಕಗೊಂಡ ಗೂಳಿಗಳ ಸಣ್ಣಚಿತ್ರಗಳಿವೆ.

ಕಲ್ಲೂರಿನಲ್ಲಿ ಪಿರಬನ್ನಸ್ಸು ಗುಡ್ಡಗಳ ಆಗ್ನೇಯಕ್ಕೆ ಬೃಹತ್ ಗುಂಡಗಲ್ಲಿನ ಕೆಳಭಾಗದಲ್ಲಿ ಆಕಸ್ಮಿಕವಾಗಿ ದೊರೆತ ಮೂರು ಮಿಡತೆ ಮೀಸೆಯಾಕಾರದ ಹಿಡಿಕತ್ತಿಗಳು ಫತೇಗಡದ (ರಾಜಸ್ತಾನ) ತಾಮ್ರೋಪಕರಣ ಗುಡ್ಡೆಯ ಕತ್ತಿಗಳನ್ನು ನೆನಪಿಗೆ ತರುತ್ತವೆ. ದಕ್ಷಿಣಕ್ಕೆ ತಾಮ್ರೋಪಕರಣ ಗುಡ್ಡ ಸಂಸ್ಕೃತಿಯ ಪ್ರಸರಣವನ್ನು ಸೂಚಿಸುತ್ತದೆ. ಈ ನೆಲೆಯ ದಕ್ಷಿಣ ಇಳಿಜಾರಿನಲ್ಲಿ 1937–40ರಲ್ಲಿ ಅಹಮದ್ ಕೈಗೊಂಡ ಪ್ರಯೋಗ ಉತ್ಖನನದಿಂದ ಮಣ್ಣಿನ ಪಾತ್ರೆಗಳು ಅದರಲ್ಲೂ ರಂಧ್ರಗಳುಳ್ಳ ಜಾಡಿಯಂತಹ ಪಾತ್ರೆಗಳ ಚೂರುಗಳು, ಸೂಕ್ಷ್ಮಶಿಲಾಯುಗದ ಸಮಾನಾಂತರ ಅಂಚಿನ ನೀಳ ಚಕ್ಕೆಗಳು ಮತ್ತು ಚಕಮಕಿಕಲ್ಲು, ಬೆಣಚುಕಲ್ಲು ಮತ್ತು

ಸ್ಫಟಿಕದ ತಿರಳುಗಳು, ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಗಳು ದೊರೆತಿವೆ. ಮಸ್ಕಿ ಮತ್ತು ಬ್ರಹ್ಮಗಿರಿಯ ಆದಿಹಂತದಲ್ಲಿ ದೊರೆತ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳಿಗೆ ಸರಿಹೊಂದುವ ಕೆಲವು ಮಡಕೆ ಚೂರುಗಳು ಅತಿಮುಖ್ಯವಾದವು. ಚಕಮಕಿ ಕಲ್ಲಿನ ನೀಳ ಅಲಗುಗಳನ್ನು ಸುಕ್ಕುರು–ರೋಹರಿ ಮತ್ತು ಹರಪ್ಪದಲ್ಲಿ ದೊರೆತ ನೀಳ ಅಲಗುಗಳಿಗೆ ಹೋಲಿಸಬಹುದಾಗಿದೆ.

ಇಲ್ಲಿ ದೊರೆತ ತಾಮ್ರದ ಕೊಡಲಿ ಚೂರುಗಳು ಮತ್ತು 50 ಸೆಂಮೀ ದಪ್ಪದ ಬೂದಿ ಪದರದಿಂದ ಇಲ್ಲಿ ಪ್ರಾರಂಭದಲ್ಲಿ ನವಶಿಲಾಯುಗದ ಸಂಸ್ಕೃತಿ ಇತ್ತೆಂದು ಖಚಿತವಾಗುತ್ತದೆ. ಆದಿಚಾರಿತ್ರಿಕ ಕಾಲದಲ್ಲಿಯೂ ಜನವಸತಿ ಇತ್ತೆಂಬುದು ಇಲ್ಲಿ ದೊರೆತ ಕೆಂಪುಬಣ್ಣ ಲೇಪನಗೊಂಡ ಪಾತ್ರೆಗಳು, ಚಿತ್ರಿತ, ಮುದ್ರಿತ ಮತ್ತು ಕಚ್ಚುಗಳುಳ್ಳ ಹೊಳಪಿನ ಕೆಂಪುಬಣ್ಣದ ಪಾತ್ರೆಗಳು, ವರ್ಣಚಿತ್ರಿತ ಬೂದುಬಣ್ಣದ ಮಣ್ಪಾತ್ರೆಗಳು, ಶಂಖದ ಬಳೆಗಳು, ಅರೆ–ಅಮೂಲ್ಯ ಕಲ್ಲಿನ ಮಣಿಗಳು, ಸಾತವಾಹನ ನಾಣ್ಯಗಳಿಂದ ತಿಳಿದುಬರುತ್ತದೆ. ಕಬ್ಬಿಣವನ್ನು ಅದಿರಿನಿಂದ ಬೇರ್ಪಡಿಸುವ ಕುಲುಮೆಗಳು ಇಲ್ಲಿತ್ತೆಂದು ಇಲ್ಲಿ ದೊರೆತ ಕಬ್ಬಿಣದ ಅದಿರು, ಬೀಸುವ ಕಲ್ಲುಗಳು ಮತ್ತು ಪುಡಿಯಾದ ಸ್ಫಟಿಕ ಶಿಲೆಯಿಂದ ರುಜುವಾಗುತ್ತದೆ.

ಸೂಕ್ಷ್ಮಶಿಲಾ ಅಲಗುಗಳು, ನವಶಿಲಾಯುಗದ ನುಣುಪುಗೊಳಿಸಿದ ಕಲ್ಲಿನ ಕೊಡಲಿಗಳು ಮತ್ತು ಇತಿಹಾಸಕಾಲದ ಮಣ್ಪಾತ್ರೆಗಳು ದೊರೆಯುವ ಇತರೆ ಮೂರು ನೆಲೆಗಳು – ಅಗಸರಗುಡ್ಡದ ಇಳಿಜಾರು, ಕಂಪನಗುಡ್ಡ ಸುತ್ತಲ ಪ್ರದೇಶ ಮತ್ತು ಪೊಲನಗುಡ್ಡ ಮತ್ತು ಪಿರಬನೂರು ಗುಡ್ಡಗಳ ಪ್ರದೇಶ ಹಾಗೂ ಅನಂತಗಿರಿ.

ಕಲ್ಲೂರಿನಲ್ಲಿ ಮಧ್ಯಯುಗೀನ ಕಾಲದ ಅವಶೇಷಗಳನ್ನೂ ಕಾಣಬಹುದು. ಇದರಲ್ಲಿ ಪೊಲ್ಲಮ್ಮ ಬೆಟ್ಟದ ತಪ್ಪಲಲ್ಲಿರುವ ಮಾರ್ಕಂಡೇಶ್ವರ ದೇವಾಲಯ ಪ್ರಾಚೀನವಾದದ್ದು. ಇದು ದ್ರಾವಿಡ ಶೈಲಿಯಲ್ಲಿದ್ದು ಮೂಲತಃ ಕಲ್ಯಾಣಿ ಚಾಳುಕ್ಯ ಅಥವಾ ಕಾಕತೀಯರ ಕಾಲದ್ದಾಗಿದ್ದು ಕಾಲಕ್ರಮೇಣ ಅನೇಕ ಬದಲಾವಣೆಗಳನ್ನೊಳಗೊಂಡಿದೆ. ಐದು ಪ್ರಮುಖ ದ್ವಾರಗಳನ್ನೊಳಗೊಂಡ ಆದಿಲ್‌ಶಾಹಿ ಕಾಲದ ಬೃಹತ್ ಕೋಟೆಯೂ ಇಲ್ಲಿದೆ. (ಎಸ್.ಸಿ.ಎಸ್.)

**ಕಲ್ಹಣ:** ಕಾಶ್ಮೀರದ ಪಂಡಿತ ಕವಿ. ಸಂಸ್ಕೃತ ರಾಜತರಂಗಿಣಿ ಈತನ ಪ್ರಸಿದ್ಧ ಕೃತಿ. ಇವನ ತಂದೆ ಚಂಪಕ, ಕಾಶ್ಮೀರದ ಹರ್ಷರಾಜನ (1089–1101) ಅಮಾತ್ಯನಾಗಿದ್ದ. ರಾಜಕಾರಣಿಯ ಮಗನಾಗಿದ್ದುದರಿಂದ ಕಲ್ಹಣನಿಗೆ ಇತಿಹಾಸ ರಚನೆಗೆ ಅಗತ್ಯವಾದ ಶಿಕ್ಷಣ ದೊರೆತಂತೆ ಕಾಣುತ್ತದೆ. 1148ರಲ್ಲಿ ರಾಜಾಶ್ರಯ ತಪ್ಪಿ ನಿರಾಶನಾಗಿದ್ದ ಕಲ್ಹಣ ಒಂದು ವರ್ಷದ ಅವಧಿಯಲ್ಲಿ ಕಾಶ್ಮೀರದ ಬೃಹತ್ ಇತಿಹಾಸ ಗ್ರಂಥವಾದ ರಾಜತರಂಗಿಣಿಯನ್ನು ಕಾವ್ಯರೂಪದಲ್ಲಿ ಬರೆದ. ಐತಿಹಾಸಿಕ ವಿಷಯಗಳ ಆಗರವಾಗಿರುವುದಲ್ಲದೆ ಈ ಕಾವ್ಯ ಐಸಿರಿಯ ನಶ್ವರತೆ, ರಾಜವೈಭವದ ಹಿಂದಿರುವ ಹೊಲಸುಗಳು, ಜೀವನದಲ್ಲಿ ವಿರಕ್ತಿ ಶಾಂತಿಗಳ ಆವಶ್ಯಕತೆ–ಇವನ್ನು ವಿವರಿಸುತ್ತದೆ. ಕಾಲಾನಂತರದಲ್ಲಿ ಕಲ್ಹಣನಿಗೆ ರಾಜ ಜಯಸಿಂಹನ ಸನ್ಮಾನ ಲಭ್ಯವಾಯಿತು. ಆಗ ಈತ ಜಯಸಿಂಹಾಭ್ಯುದಯವೆಂಬ ಕಾವ್ಯ ರಚಿಸಿದ.

ಕಲ್ಹಣ ರಾಜತರಂಗಿಣಿಯನ್ನು ರಚಿಸುವ ಮುನ್ನ ಮಹಾಕಾವ್ಯ, ಹರ್ಷಚರಿತಾದಿ ಗದ್ಯಕೃತಿಗಳು ಮೊದಲಾದ ರಚನೆಗಳು, ಜ್ಯೋತಿಷಶಾಸ್ತ್ರ – ಇವನ್ನು ಅಭ್ಯಾಸ ಮಾಡಿದುದಾಗಿ ತಾನೇ ಹೇಳಿಕೊಂಡಿದ್ದಾನೆ. ಕಾಶ್ಮೀರದ ಮೂಲೆಗಳಲ್ಲಿದ್ದ ಉತ್ಕೀರ್ಣ ಶಿಲಾಶಾಸನಗಳು, ತಾಮ್ರಪಟಗಳು, ದಾನಪತ್ರಗಳು, ತಾಳೆಯೋಲೆಗಳು ಮುಂತಾದವನ್ನು ಈತ ಬಹು ಶ್ರಮದಿಂದ ಶೇಖರಿಸಿದ. ಪ್ರಾಚೀನ ರಾಜಾವಳೀಕಥೆಗಳು, ಪುರಾಣೇತಿಹಾಸಗಳು ಮುಂತಾದವನ್ನು ಸಂಗ್ರಹಿಸಿದ್ದ ನೀಲಮತ, ಸುವ್ರತ, ಕ್ಷೇಮೇಂದ್ರ, ಹೇಲರಾಜ, ಪದ್ಮಮಿಹಿರ, ಮೊದಲಾದವರ ಕೃತಿಗಳನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿದ. ಅನಂತರ ಪೂರ್ವಗ್ರಹದೋಷ ಬಾರದಂತೆ ನಿಷ್ಪಕ್ಷಪಾತದೃಷ್ಟಿಯಿಂದ ರಾಜರ ವ್ಯಕ್ತಿತ್ವ ಹಾಗೂ ಕೃತಿಗಳನ್ನು ತೂಗಿ ನೋಡಿದುದಾಗಿ ನಿಸ್ಸಂದಿಗ್ಧವಾಗಿ ಹೇಳಿದ್ದಾನೆ. ಜನಜೀವನದಲ್ಲಾಗುತ್ತಿದ್ದ ಏರುಪೇರುಗಳನ್ನು ಕೂಲಂಕಷವಾಗಿ ಚಿತ್ರಿಸಲು ಯತ್ನಿಸಿದ್ದಾನೆ.

ಪುರಾಣಕಾಲದಿಂದ ತನ್ನ ಜೀವಿತಕಾಲದವರೆಗಿನ ಕಾಶ್ಮೀರದ ಸಮಗ್ರ ಇತಿಹಾಸವನ್ನು ಬರೆಯುವುದು ಕಲ್ಹಣನ ಗುರಿ; ಮೊದಲ ಭಾಗದಲ್ಲಿ ಗೋನಂದ, ಕರ್ಕೋಟ, ಉತ್ಪಲ, ಲೋಹರ ಮುಂತಾದ ರಾಜವಂಶಗಳ ಚರಿತ್ರೆ ಬರುತ್ತದೆ. ಈ ಭಾಗದಲ್ಲಿ ಪೌರಾಣಿಕಾಂಶಗಳೇ ಹೆಚ್ಚು; ಖಚಿತವಾದ ಕಾಲದೇಶಾದಿ ವಿವರಗಳು ಕಡಿಮೆ. ಆದರೆ ತನ್ನ ಕಾಲದ ಹತ್ತಿರ ಹತ್ತಿರಕ್ಕೆ ಬಂದಂತೆಲ್ಲ ಕಲ್ಹಣನ ನಿರೂಪಣೆ ಐತಿಹಾಸಿಕ ದೃಷ್ಟಿಯಿಂದ ಹೆಚ್ಚು ಖಚಿತಗೊಳ್ಳುತ್ತದೆ.

ರಾಜತರಂಗಿಣಿ ಕೇವಲ ರಾಜರ ಪಟ್ಟಿಯಲ್ಲ; ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳ ಆಕರ. ರಾಜಾಸ್ಥಾನದವರ ದೃಷ್ಟಿಕೋನದಿಂದ ಬರೆದ ರಚನೆಯಾದರೂ ಮಧ್ಯಯುಗದಲ್ಲಿ ಭಾರತ ಜನತೆಯ ಜೀವನಸ್ವರೂಪವನ್ನು ಅರಿಯಲು ಇದು ಹೆಚ್ಚು ಸಹಾಯಕವಾಗಿದೆ. ಅರಮನೆಯ ಆವರಣದವರ, ಅಂತಃಪುರದವರ ಸೋಗುಗಳ ಹಿಂದಿನ ನಿಜಾಂಶವನ್ನೂ ಕಲ್ಹಣ ಹೊರಗೆಡಹುತ್ತಾನೆ. ಆರ್ಯಸಂಸ್ಕೃತಿಯ ಸಾರವಾದ ಧರ್ಮದ ಹೆಸರಿನಲ್ಲಿ ಕಡೆಕಡೆಗೆ ನಡೆಯತೊಡಗಿದ ಅತ್ಯಾಚಾರವನ್ನು ಕನ್ನಡಿ ಹಿಡಿದು ತೋರಿಸುತ್ತಾನೆ. ಪ್ರಜಾಕ್ಷೇಮಕ್ಕಾಗಿ ಜೀವನವನ್ನೇ ಮುಡಿಪಾಗಿಡುತ್ತಿದ್ದ ರಾಜರ್ಷಿಗಳದೇ ಅಲ್ಲದೆ ನೀಚರೂ ಧೂರ್ತರೂ ಆದವರ ಸ್ಪಷ್ಟ ಚಿತ್ರಗಳೂ ಪ್ರಜಾಕ್ಷೇಮಕ್ಕಾಗಿ ಕೆರೆಬಾವಿಗಳನ್ನೂ ದೇವಾಗಾರಗಳನ್ನೂ ಕಟ್ಟಿಸಿದ ದಾನಿಗಳ ವರ್ಣನೆಯೂ ಇಲ್ಲಿ ಬರುತ್ತವೆ. ಭಾರತೀಯ ದೃಷ್ಟಿಯಿಂದ ಭಾರತದ ಇತಿಹಾಸ ರಚನೆಯ ಈ ಪ್ರಪ್ರಥಮ ಪ್ರಯತ್ನ ಭಾರತೀಯ ಹಾಗೂ ವಿದೇಶಿ ವಿದ್ವಾಂಸರ ಪ್ರಶಂಸೆ ಗಳಿಸಿದೆ. ರಾಜತರಂಗಿಣಿ ಕಾವ್ಯ ದೃಷ್ಟಿಯಿಂದಲೂ ಅತ್ಯಂತ ಹೃದಯಂಗಮವಾದದ್ದು. ಇಲ್ಲಿಯ ಪದ್ಯಗಳಲ್ಲಿ ಮಾಧುರ್ಯಕಾಂತಿಗುಣಗಳು ಮನೆ ಮಾಡಿಕೊಂಡಿರುವಂತೆ ಉತ್ಪ್ರೇಕ್ಷಾದಿ ಅಲಂಕಾರಗಳು ಸಾಲ್ಗೊಂಡು ಸಂದಣಿಸುತ್ತವೆ. ಶಾಂತ ರಸವಂತೂ ಉಕ್ಕಿಹರಿಯುತ್ತದೆ. ಹೀಗೆ ಕಾವ್ಯ–ಇತಿಹಾಸ ಎರಡನ್ನೂ ಏಕಕಾಲದಲ್ಲಿ ಸವ್ಯಸಾಚಿಯಂತೆ ಸಾಧಿಸಿದ ಕಲ್ಹಣನ ಸಿದ್ಧಿ ಅದ್ಭುತ.

ಕಲ್ಹಣನ ಜೀವಿತ ಕಾಲದಲ್ಲಿದ್ದ ಕಾಶ್ಮೀರದ ಸ್ಥಿತಿ ಹೃದಯವಿದ್ರಾವಕವಾಗಿ ವರ್ಣಿತವಾಗಿದೆ. ಸೈನಿಕರಲ್ಲಾಗಲೀ ಅಧಿಕಾರಿಗಳಲ್ಲಾಗಲೀ ಶಿಸ್ತು ಶೂನ್ಯವಾಗಿತ್ತು. ಸ್ವಾರ್ಥಿಗಳಾದ ಮಂತ್ರಿಗಳು, ದ್ರೋಹಿಗಳಾದ ಅಧಿಕಾರಿಗಳು, ಕಪಟಿ ಪುರೋಹಿತರು, ಸುಖಲೋಲುಪ ಜನತೆ – ಇದರಿಂದ ದೇಶ ತುಂಬಿತ್ತು. ಅದರ ಪರಿಣಾಮವಾಗಿ ಮೋಸ, ಪಿತೂರಿ, ಕೊಲೆ, ಜಗಳ, ಸುಲಿಗೆಗಳು ದೇಶದಲ್ಲೆಲ್ಲ ಹಾಹಾಕಾರವನ್ನೆಬ್ಬಿಸಿದ್ದುವು. ತತ್ಕಾಲದಲ್ಲಿ ಇದು ಸ್ವಲ್ಪಮಟ್ಟಿಗೆ ಕಡಿಮೆಯಾದರೂ ಮುಂದಿನ 200 ವರ್ಷಗಳೊಳಗೆ ಒಟ್ಟು ದೇಶವೇ ಮುಸಲ್ಮಾನರ ಕೈವಶವಾಗಲು ಕಾರಣವಾದುದನ್ನು ಇತಿಹಾಸ ಹೇಳುತ್ತದೆ. ಕಲ್ಹಣನ ಚರಿತ್ರೆಯನ್ನು ಕಾಶ್ಮೀರದ ಲೇಖಕರಾದ ಜೋನರಾಜ, ಶ್ರೀವರ, ಪ್ರಾಜ್ಯಭಟ್ಟ ಮತ್ತು ಶುಕ ಮುಂದುವರಿಸಿದ್ದಾರೆ. (ಕೆ.ಕೆ.)

**ಕಸ್ತೂರ ಬಾ ಗಾಂಧಿ:** 1869–1944. ಮಹಾತ್ಮ ಗಾಂಧೀಜಿಯವರ ಪತ್ನಿ. ಇವರ ತಂದೆ ಗೋಕುಲದಾಸ ಮಾಕಂಜಿ, ತಾಯಿ ವೆರಾಜ್ ಕುಂವರ್ ಬಾ. ಇವರು 1869ರಲ್ಲಿ ಪೋರ್ ಬಂದರಿನಲ್ಲಿ ಜನಿಸಿದರು. ಇವರ ತಂದೆಯೂ ಗಾಂಧೀಜಿಯವರ ತಂದೆಯೂ ಸ್ನೇಹಿತರು. ಹಿರಿಯರ ಆಸೆಯಂತೆ ಗಾಂಧೀಜಿಯವರೊಡನೆ ಇವರ ವಿವಾಹ ನೆರವೇರಿತು. ಇದೊಂದು ಬಾಲ್ಯ ವಿವಾಹ. ಆಗ ಇವರಿಬ್ಬರ ವಯಸ್ಸು 12 ವರ್ಷ.

ಸಂಪ್ರದಾಯವಂತ ಧನಿಕ ಮನೆತನದಲ್ಲಿ ಬೆಳೆದ ಬಾ ಅನಕ್ಷರಸ್ಥೆ. ಗಾಂಧೀಜಿ ಈಕೆಯನ್ನು ವಿದ್ಯಾವಂತಳನ್ನಾಗಿ ಮಾಡಲು ಪ್ರಯತ್ನಿಸಿದರೂ ಅದು ಫಲಿಸಲಿಲ್ಲ. ಗಾಂಧೀಜಿಗೆ ತಮ್ಮ ಪತ್ನಿ ಸದಾ ವಿಧೇಯಳಾಗಿ ಆದರ್ಶ ಸತಿಯಾಗಿರಬೇಕೆಂಬ ಅಪೇಕ್ಷೆಯಿತ್ತು. ಹಾಗಾಗಿ ಬಾ ಮೇಲೆ ಅನೇಕ ನಿರ್ಬಂಧ ಹೇರಿದ್ದರು. ಬಾ ಅವರು ಪ್ರತಿಭಟಿಸದಿದ್ದರೂ ಪೂರ್ಣವಾಗಿ ಒಪ್ಪುತ್ತಿರಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಸಂಸಾರ ಪ್ರಾರಂಭವಾಯಿತು. ಬಾ ಅವರು ಸಂಪ್ರದಾಯ ನಿಷ್ಠೆಯನ್ನು ಎಂದೂ ಬಿಟ್ಟವರಲ್ಲ. 1906ರಲ್ಲಿ ಗಾಂಧೀಜಿ ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿದರು. ಕಸ್ತೂರ ಬಾ ಸಂತೋಷದಿಂದ ಅದಕ್ಕೆ ಸಮ್ಮತಿಯಿತ್ತರು. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಯವರೊಡನೆ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಗೆ ಹೋದರು.

ಗಾಂಧೀಜಿ ಸ್ಥಾಪಿಸಿದ ಸಬರಮತಿ ಆಶ್ರಮದಲ್ಲಿ ಕಸ್ತೂರ ಬಾರವರೇ ಮೊದಲ ಶಿಷ್ಯೆ. ಇಡೀ ಆಶ್ರಮವೇ ಇವರ ಸಂಸಾರವಾಗಿತ್ತು. 1936ರಲ್ಲಿ ಅಮೃತಸರದಲ್ಲಿ ಏರ್ಪಡಿಸಿದ್ದ ಹರಿಜನರ ಮಹಾಸಭೆಗೆ ಬಾ ಅವರೇ ಅಧ್ಯಕ್ಷೆ. ಅಂದು ಇವರು ಮಾಡಿದ ಸರಳ ಭಾಷಣದಲ್ಲಿ ಹರಿಜನರ ಬಗೆಗಿನ ಅನುಕಂಪ ಸಹಾನುಭೂತಿಗಳು ವ್ಯಕ್ತವಾಗಿವೆ. 1917ರಲ್ಲಿ ಚಂಪಾರಣ್ಯದಲ್ಲಿ ಗಾಂಧೀಜಿ ಚಳವಳಿ ಪ್ರಾರಂಭಿಸಿದಾಗ ಇವರು ಹಳ್ಳಿ ಹಳ್ಳಿಗೆ ಹೋಗಿ ಜನರಿಗೆ ಶಿಸ್ತು, ಶುಚಿ, ಸದಾಚಾರ, ಸದ್ವರ್ತನೆಗಳನ್ನು ಹೇಳಿಕೊಟ್ಟರು. 1922ರ ಅಸಹಕಾರ ಚಳವಳಿಯ ಕಾಲದಲ್ಲಿ ಗಾಂಧೀಜಿ ಬಂಧನಕ್ಕೊಳಗಾದಾಗ ಅವರ ಸ್ಥಾನದಲ್ಲಿ ನಿಂತು ಜನತೆಗೆ ಮಾರ್ಗದರ್ಶನ ನೀಡಿದರು. 1930ರಲ್ಲಿ ಕಾನೂನುಭಂಗ ಚಳವಳಿ ದೇಶದೆಲ್ಲೆಡೆ ವ್ಯಾಪಿಸಿತು. ಆಗ ಇವರು ಅವಿಶ್ರಾಂತವಾಗಿ ದುಡಿದರು. 1932ರಲ್ಲಿ ಬಾರ್ಡೋಲಿಯ ಸೆರೆಮನೆಯಲ್ಲಿ 6 ತಿಂಗಳ ಕಠಿಣ ಕಾರಗೃಹವಾಸ ಅನುಭವಿಸಿದರು. 1935ರ ಅನಂತರ ಗಾಂಧೀಜಿ ಚಳವಳಿ ನಿಲ್ಲಿಸಿ ವರ್ಧಾಬಳಿ ಸೇವಾಗ್ರಾಮದಲ್ಲಿ ಹೊಸ ಆಶ್ರಮ ಸ್ಥಾಪಿಸಿದಾಗ ಬಾ ಅವರೇ ಆಶ್ರಮದ ಮೇಲ್ವಿಚಾರಣೆಯ ಹೊಣೆ ಹೊತ್ತರು. 1942ರಲ್ಲಿ ಸ್ವಾತಂತ್ರ ಚಳವಳಿ ದೇಶವ್ಯಾಪಿಯಾದಾಗ ಆಗಾಖಾನ್ ಅರಮನೆಯಲ್ಲಿ ಸೆರೆವಾಸ ಅನುಭವಿಸಿದರು. ಆದರ್ಶ ಹಿಂದು ನಾರಿಯ ಪ್ರತೀಕವಾಗಿದ್ದ ಇವರು 1944 ಫೆಬ್ರವರಿ 22ರಂದು ನಿಧನರಾದರು. (ಜಿ.ಎಸ್.ಸಿ.)

**ಕಳಚುರಿ ವಂಶ:** 6–16ನೆಯ ಶತಮಾನದವರೆಗೆ ಸು. 1000 ವರ್ಷಗಳ ಕಾಲ ಭಾರತದ ಚರಿತ್ರೆಯಲ್ಲಿ ಪ್ರಮುಖ ಪಾತ್ರವಹಿಸಿದ ಮನೆತನದ ಅರಸರು. ಇವರು ಬೇರೆ ಬೇರೆ ರಾಜಧಾನಿಗಳಿಂದ ಆಳಿದರು. ಈ ವಂಶದ ಅತ್ಯಂತ ಪ್ರಾಚೀನ ಶಾಖೆ ಮಾಳ್ವ,

ಗುಜರಾತ್ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ 6ನೆಯ ಶತಮಾನದಲ್ಲಿ ಅಧಿಕಾರದಲ್ಲಿತ್ತು. ಇವರಿಗೆ ಹೈಹಯರೆಂದು ಹೆಸರಿತ್ತು. ಇವರ ರಾಜಧಾನಿ ಯಾವುದೆಂದು ತಿಳಿದಿಲ್ಲವಾದರೂ ಶಾಸನಗಳನ್ನು ಉಜ್ಜಯಿನಿ, ವಿದಿಶ, ಆನಂದಪುರ (ಗುಜರಾತ್) ಮುಂತಾದ ಸ್ಕಂಧಾವಾರಗ ಳಿಂದ ಹೊರಡಿಸಲಾಗಿತ್ತು. ನಿರ್ದಿಷ್ಟವಾಗಿ ತಿಳಿದು ಬಂದಿರುವ ರೀತ್ಯಾ ಕಳಚುರಿ ವಂಶಗಳಲ್ಲಿ ಮಾಹಿಷ್ಮತೀ, ತ್ರಿಪುರಿ, ಸರಯುಪಾರ, ರತ್ನಪುರ ಮತ್ತು ಕಲ್ಯಾಣಗಳಲ್ಲಿ ಆಳಿದ ರಾಜರು ಪ್ರಮುಖರು. ಕಳಚುರಿ ಎಂಬ ಶಬ್ದ ಕಟಚ್ಚುರಿ, ಕಲತ್ಸೂರಿ, ಕಳಚೂರ್ಯ, ಕಲಚ್ಚುಟಿ ಮುಂತಾದ ವಿವಿಧ ರೂಪಗಳಲ್ಲಿ ಕಾಣಬರುತ್ತದೆ.

**ಮಾಹಿಷ್ಮತೀ ಕಳಚುರಿಗಳು:** ಇವರು ಪ್ರಬಲರಾದದ್ದು 6ನೆಯ ಶತಮಾನದ ಉತ್ತರಾರ್ಧದಲ್ಲಿ. ಇವರ ರಾಜ್ಯ ಆಗ ಉತ್ತರ ಮಹಾರಾಷ್ಟ್ರ, ಗುಜರಾತ್ ಮತ್ತು ಮಾಳ್ವದ ಕೆಲವು ಭಾಗಗಳನ್ನೊಳಗೊಂಡಿತ್ತು. ಕೃಷ್ಣರಾಜ (550–575), ಅವನ ಮಗ ಶಂಕರಗಣ, ಮೊಮ್ಮಗ ಬುದ್ಧರಾಜ–ಈ ಮೂವರು ಕಳಚುರಿ ರಾಜರು ಈ ಕಾಲದಲ್ಲಿ ಆಳಿದವರೆಂದು ಶಾಸನಗಳಿಂದ ತಿಳಿಯುತ್ತದೆ. ಪರಮ ಮಾಹೇಶ್ವರ ಕೃಷ್ಣರಾಜ ಎಂಬ ಶಾಸನವುಳ್ಳ ಮತ್ತು ನಂದಿಯ ಚಿತ್ರವುಳ್ಳ ಬೆಳ್ಳಿಯ ನಾಣ್ಯಗಳು ಗುಜರಾತ್, ಕೊಂಕಣ, ರಾಜಸ್ತಾನ, ಮಾಳ್ವ, ವಿದರ್ಭ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿರುವುದರಿಂದ ಇವನ ರಾಜ್ಯ ಎಷ್ಟು ವಿಸ್ತಾರವಾಗಿತ್ತೆಂಬುದು ಗೊತ್ತಾಗುತ್ತದೆ. ಕೃಷ್ಣರಾಜನ ಮಗ ಶಂಕರಗಣ ಶಕ್ತನಾದ ದೊರೆ. ಇವನ ಕಾಲ 575–600. ಮಂಡಸರದ ಔಲಿಕವಂಶದ ಅರಸರನ್ನು ಶಂಕರಗಣ ಸೋಲಿಸಿದ. ನಾಸಿಕ ಜಿಲ್ಲೆಗೆ ಸೀಮಿತವಾಗಿದ್ದ ಕಳಚುರಿ ಪ್ರಭಾವವನ್ನು ಗುಜರಾತ್ ಮತ್ತು ಕಾಠಿಯಾವಾಡಗಳಿಗೆ ಹರಡಿದ ಕೀರ್ತಿ ಇವನಿಗೆ ಸೇರುತ್ತದೆ. ಸಮುದ್ರಗುಪ್ತನ ಅಲಹಾಬಾದ್ ಶಾಸನದ ಅನೇಕ ಭಾಗಗಳು ಇವನ ಶಾಸನಗಳಲ್ಲಿ ಕಾಣುವುದರಿಂದ, ಶಂಕರಗಣ ಗುಪ್ತ ರಾಜರ ಅಧೀನದಲ್ಲಿದ್ದ ಉತ್ತರ ಭಾರತದ ಭಾಗಗಳನ್ನು ಗೆದ್ದುಕೊಂಡಿರಬಹುದು. 597ರ ಉಜ್ಜಯಿನಿ ಶಾಸನ ಇವನನ್ನು ಪೂರ್ವಾಪರ ಸಮುದ್ರಾಂತಾದಿದೇಶಸ್ವಾಮಿ ಎಂದು ಕರೆದಿದೆ. ಸು. 600ರಲ್ಲಿ ಶಂಕರಗಣನ ಮಗ ಬುದ್ಧರಾಜ ದೊರೆಯಾದ. 608ರ ವದ್ನೇರ್ ಶಾಸನದಿಂದ ಬುದ್ಧರಾಜ ದೇವಗುಪ್ತನೆಂಬ ರಾಜನಿಂದ ಪೂರ್ವ ಮಾಳ್ವವನ್ನು ಗೆದ್ದುಕೊಂಡ ನೆಂದು ತಿಳಿಯುತ್ತದೆ. ಬಾದಾಮಿ ಚಳುಕ್ಯ ದೊರೆ ಮಂಗಳೇಶನಿಂದ ಬುದ್ಧರಾಜ 602 ರಲ್ಲಿ ಬಹುಶಃ ಸಂಪೂರ್ಣವಾಗಿ ಸೋತುಹೋದ. ಇದರಿಂದ ಕಳಚುರಿಗಳ ಪ್ರಭಾವ ಕಡಿಮೆಯಾಗಿ, ಚಾಳುಕ್ಯರು ಉತ್ತರ ಭಾರತದಲ್ಲಿ ತಮ್ಮ ಪ್ರಭಾವ ಬೆಳೆಸಿಕೊಳ್ಳಲು ಅನುಕೂಲ ವಾಯಿತು. ಬುದ್ಧರಾಜನ ಮರಣದೊಡನೆ (620) ಮಾಹಿಷ್ಮತೀ ನಗರದ ಕಳಚುರಿಗಳ ಅವನತಿ ಪ್ರಾರಂಭವಾಯಿತು. ಚಾಳುಕ್ಯ ವಿನಯಾದಿತ್ಯ ತನ್ನ ಶಾಸನದಲ್ಲಿ ಹೈಹಯರನ್ನು ಸೋಲಿಸಿದುದಾಗಿ ಹೇಳಿರುವುದರಿಂದ, ಬುದ್ಧರಾಜನ ಅನಂತರವೂ ಕೆಲವರು ಆಳುತ್ತಿದ್ದಿರಬೇಕು. ಈ ವಂಶದ ರಾಜಕುಮಾರಿಯರಾದ ಲೋಕ ಮಹಾದೇವಿಯನ್ನೂ ಅವಳ ತಂಗಿ ತ್ರೈಲೋಕ್ಯ ಮಹಾದೇವಿಯನ್ನೂ 2 ನೆಯ ವಿಕ್ರಮಾದಿತ್ಯ ವಿವಾಹವಾಗಿದ್ದ.

**ತ್ರಿಪುರಿಯ ಕಳಚುರಿಗಳು:** ಕಳಚುರಿ ಶಾಖೆಗಳಲ್ಲೆಲ್ಲ ಅತ್ಯಂತ ಪ್ರಬಲರಾಗಿದ್ದವರು. ತ್ರಿಪುರಿ ಈಗಿನ ಜಬ್ಬಲ್‌ಪುರದ ಸಮೀಪದಲ್ಲಿದೆ. ಈ ಕಳಚುರಿಗಳು 675 ರಿಂದಲೇ ಆಳಲು ಪ್ರಾರಂಭಿಸಿದರೆಂದು ಕೆಲವರ ಅಭಿಮತ. ಆದರೆ 1 ನೆಯ ಕೊಕ್ಕಲ್ಲ (850–90) ಈ ಶಾಖೆಯ ಮುಖ್ಯನಾದ ಮೊದಲ ರಾಜ. ಪ್ರತೀಹಾರ ದೊರೆ 1ನೆಯ ಭೋಜನ ಮೇಲೆ ಕೊಕ್ಕಲ್ಲ ದಂಡೆತ್ತಿಹೋದ. ಭೋಜನ ಸಾಮಂತರಾಗಿದ್ದ ಸರಯುಪಾರದ ಶಂಕರಗಣ, ಗುಹಿಲ ಹರ್ಷರಾಜ, ಚಾಹಮಾನಗೂವಕ–ಇವರೆಲ್ಲರನ್ನು ಈತ ಸೋಲಿಸಿದ. ಪೂರ್ವದಲ್ಲಿ ಬಂಗಾಲದವರೆಗೂ ದಂಡಯಾತ್ರೆ ನಡೆಸಿದ. ಅನಂತರ ಕೊಂಕಣದಲ್ಲಿ ಆಳುತ್ತಿದ್ದ ಶಿಲಾಹಾರ ಕಪರ್ದಿಯನ್ನು ಸೋಲಿಸಿ, ರಾಷ್ಟ್ರಕೂಟ 2 ನೆಯ ಕೃಷ್ಣನ ಮೇಲೂ ದಂಡೆತ್ತಿಹೋದ. ಈ ಯುದ್ಧದಲ್ಲೂ ಕೊಕಲ್ಲ ಜಯಶಾಲಿಯಾದ. ರಾಷ್ಟ್ರಕೂಟ 2 ನೆಯ ಕೃಷ್ಣ ಅನಂತರ ಕೊಕಲ್ಲನೊಡನೆ ಸ್ನೇಹ ಬೆಳೆಸಿ ಅವನ ಮಗಳನ್ನು ವಿವಾಹವಾದ. ಈ ಎಲ್ಲ ವಿಜಯಗಳಿಂದ ಕಳಚುರಿಗಳ ರಾಜ್ಯ ವಿಸ್ತರಣೆಯಾಗಲಿಲ್ಲವಾದರೂ ಅವರ ಪ್ರಾಬಲ್ಯ ಹೆಚ್ಚಿತು. ಕೊಕಲ್ಲನ ಮರಣಾನಂತರ ಅವನ ಮಗ ಶಂಕರಗಣ ರಾಜನಾದ. ಈತ ಕೋಸಲದಲ್ಲಿ ಆಳುತ್ತಿದ್ದ ಸೋಮವಂಶೀ ರಾಜನನ್ನು ಸೋಲಿಸಿದ. ಅಷ್ಟರಲ್ಲಿ ರಾಷ್ಟ್ರಕೂಟ 2 ನೆಯ ಕೃಷ್ಣ ಪೂರ್ವ ಚಾಳುಕ್ಯರಾಜ ವಿಜಯಾದಿತ್ಯನ ಮೇಲೆ ಯುದ್ಧ ಮಾಡಲು ಶಂಕರಗಣನ ಸಹಾಯ ಕೋರಿದ. ಆದರೆ ರಾಷ್ಟ್ರಕೂಟ ಮತ್ತು ಕಳಚುರಿಗಳನ್ನು ವಿಜಯಾದಿತ್ಯ ಸೋಲಿಸಿದ. 2ನೆಯ ಕೃಷ್ಣನ ಮಗ ಜಗತ್ತುಂಗ ಶಂಕರಗಣನ ಮಗಳಾದ ಲಕ್ಷ್ಮಿಯನ್ನು ವಿವಾಹವಾದ. ಶಂಕರಗಣನ ಮರಣಾನಂತರ ಅವನ ಮಗನಾದ ಯುವರಾಜ (915–45) ರಾಜನಾದ.

ಪಾಲರಾಜನನ್ನು ಯುವರಾಜ ಸೋಲಿಸಿ ಕಳಿಂಗದ ಮೇಲೆ ದಂಡಯಾತ್ರೆ ನಡೆಸಿದ. ರಾಷ್ಟ್ರಕೂಟರು ಯುವರಾಜನನ್ನು ಸಂಪೂರ್ಣವಾಗಿ ಸೋಲಿಸಿದರು. ಯುವರಾಜ ತನ್ನ ಮಗಳು ಕುಂದದೇವಿಯನ್ನು 3ನೆಯ ಅಮೋಘವರ್ಷನಿಗೆ ವಿವಾಹ ಮಾಡಿಕೊಟ್ಟ. 3ನೆಯ ಕೃಷ್ಣ ಈಕೆಯ ಮಗನಾದರೂ ತನ್ನ ಸೋದರಮಾವ ಯುವರಾಜನ ಮೇಲೆ ಯುದ್ಧ ಮಾಡಿ ಅವನನ್ನು ಸಂಪೂರ್ಣವಾಗಿ ಸೋಲಿಸಿದ. ಕಳಚುರಿರಾಜ್ಯ ರಾಷ್ಟ್ರಕೂಟ ರಾಜ್ಯದಲ್ಲಿ ಲೀನವಾಗಿ ಹೋಗುವ ಪರಿಸ್ಥಿತಿ ಬಂದೊದಗಿತು. ಅಷ್ಟರಲ್ಲಿ ಯುವರಾಜ ಸೈನ್ಯವನ್ನು ಸಿದ್ಧಪಡಿಸಿಕೊಂಡು ರಾಷ್ಟ್ರಕೂಟರನ್ನು ಡಾಹಲ ದೇಶದಿಂದ ಓಡಿಸಿ, ತನ್ನ ರಾಜ್ಯವನ್ನು ಬಲಪಡಿಸಿಕೊಂಡ. ಯುವರಾಜ ಧಾರ್ಮಿಕ ವಿಷಯಗಳಲ್ಲೂ ವಿಶೇಷ ಆಸಕ್ತಿ ವಹಿಸಿದ್ದ. ಗೋಲಕಿ ಮಠಕ್ಕೆ ಆಶ್ರಯದಾತನಾಗಿದ್ದುದಲ್ಲದೆ, ಅನೇಕ ಶೈವ ದೇವಾಲಯ ಗಳನ್ನು ನಿರ್ಮಿಸಿದ. ಯುವರಾಜನ ಅನಂತರ ಅವನ ಮಗ ಲಕ್ಷ್ಮಣರಾಜ (945–70) ರಾಜನಾದ. ಈತ ಪೂರ್ವದಲ್ಲಿ ವಂಗರಾಜ್ಯದಲ್ಲಿ ಆಳುತ್ತಿದ್ದ ಚಂದ್ರವಂಶದ ರಾಜನನ್ನೂ ಓಡ್ರ ರಾಜನನ್ನೂ ಕೋಸಲದ ಮಹಾಭವಗುಪ್ತನನ್ನೂ ಸೋಲಿಸಿದ. ಪಶ್ಚಿಮದಲ್ಲಿ ಲಾಟರಾಜ, ಚಾಳುಕ್ಯ ಮೂಲರಾಜ, ಅಭೀರರಾಜ ಗೃಹರಿಪು ಮೊದಲಾದವರನ್ನು ಸೋಲಿಸಿದ. ಲಕ್ಷ್ಮಣರಾಜ ತನ್ನ ಮಗಳು ಬೊಂತಾದೇವಿಯನ್ನು ಚಾಳುಕ್ಯ 4 ನೆಯ ವಿಕ್ರಮಾದಿತ್ಯನಿಗೆ ವಿವಾಹ ಮಾಡಿಕೊಟ್ಟ. ಇವಳ ಮಗನೇ ಚಾಳುಕ್ಯ 2 ನೆಯ ತೈಲಪ. ಲಕ್ಷ್ಮಣ ರಾಜನ ಮಗ ಶಂಕರಗಣ ಸ್ವಲ್ಪ ಕಾಲ ಆಳಿದಮೇಲೆ ಅವನ ತಮ್ಮ 2 ನೆಯ ಯುವರಾಜ (980–90) ರಾಜನಾದ. ಈತ ಅಸಮರ್ಥ ದೊರೆ. ತನ್ನ ಸೋದರಮಾವ ಯುವರಾಜನ ಮೇಲೆ ತೈಲಪನೂ ಯುದ್ಧ ಮಾಡಿದ. ಪರಮಾರ ಮುಂಜ ಯುವರಾಜನನ್ನು ಪೂರ್ಣವಾಗಿ ಸೋಲಿಸಿದ. ಯುವರಾಜ ಸೋತು ಓಡಿಹೋದ. ಹೀಗಾಗಿ ಕಳಚುರಿಗಳ ಪ್ರಾಬಲ್ಯ ಅಧೋಮುಖ ವಾಯಿತು. ಆದರೆ ಇವನ ಮಗ 2 ನೆಯ ಕೊಕಲ್ಲನ (990–1015) ಶಕ್ತಿಸಾಮರ್ಥ್ಯಗಳಿಂದ ಕಳಚುರಿಗಳ ಪ್ರಾಬಲ್ಯ ವೃದ್ಧಿಗೊಂಡಿತು. ಈತ ಗೂರ್ಜರರ ಮೇಲೆ ದಂಡೆತ್ತಿಹೋಗಿ ಮೂಲರಾಜನನ್ನು ಮತ್ತು ಅವನ ಮಗ ಚಾಮುಂಡರಾಜನನ್ನು ಸೋಲಿಸಿದ. ತನ್ನ ತಂದೆಯನ್ನು ಸೋಲಿಸಿದ್ದ ಚಾಳುಕ್ಯ ತೈಲಪನನ್ನೂ ಈತ ಪರಾಜಯಗೊಳಿಸಿದ. ಪಾಲರಾಜ 1 ನೆಯ ಮಹೀಪಾಲನೂ ಇವನಿಂದ ಸೋತ. ಈ ಎಲ್ಲ ವಿಜಯಗಳಿಂದ ಕಳಚುರಿ ಸಾಮ್ರಾಜ್ಯ ಪುನಃ ವರ್ಧಿಸಿತು.

2ನೆಯ ಕೊಕಲ್ಲನ ಮಗ ಗಾಂಗೇಯದೇವ (1015–41) ಶಕ್ತನಾದ ದೊರೆಯಾಗಿದ್ದ. ಇವನ ಕಾಲದಲ್ಲಿ ಕಳಚುರಿಗಳ ಪ್ರಾಬಲ್ಯ ಹೆಚ್ಚಿತು. ಈತ ರಾಜೇಂದ್ರ ಚೋಳ ಮತ್ತು ಪರಮಾರ ಭೋಜರೊಡಗೂಡಿ ಚಾಲುಕ್ಯ 2 ನೆಯ ಜಯಸಿಂಹನ ಮೇಲೆ ಯುದ್ಧ ಮಾಡಿದ. ಆದರೆ ಇದರಿಂದ ಏನೂ ಉಪಯೋಗವಾಗಲಿಲ್ಲ. ಅನಂತರ ಗಾಂಗೇಯದೇವ ಕೋಸಲಕ್ಕೆ ಹೋಗಿ ಮಹಾ ಶಿವಗುಪ್ತನನ್ನು ಸೋಲಿಸಿದ. ರತ್ನಪುರಿಯ ಕಳಚುರಿ ದೊರೆ ಕಮಲರಾಜನ ಸಹಾಯದಿಂದ ಉತ್ಕಲ ರಾಜ್ಯವನ್ನು ಗೆದ್ದು ತ್ರಿ ಕಲಿಂಗಾಧಿಪತಿ ಎಂಬ ಬಿರುದನ್ನು ಧರಿಸಿದ. ಚಂಡೆಲ್ಲ ಧಂಗರಾಜ ಇಲ್ಲವೇ ಮಹೀಪಾಲನನ್ನು ಸೋಲಿಸಿ ಕಾಶಿ ಮತ್ತು ಪ್ರಯಾಗಗಳನ್ನು ತನ್ನ ವಶಮಾಡಿಕೊಂಡ. ಪೂರ್ವದಲ್ಲಿ ಅಂಗರಾಜ್ಯದ ಮೇಲೆ ದಂಡಯಾತ್ರೆಯನ್ನು ನಡೆಸಿದ. ಪಂಜಾಬಿನ ಕಾಂಗ್ರಾ ಕಣಿವೆಯಿಂದ ಮಹಮ್ಮದೀಯರನ್ನು ಹೊಡೆದಟ್ಟಿದ. ಆದರೆ ಅವರು ಕಾಶಿಯನ್ನು ಲೂಟಿಮಾಡಿ ಸಂಪತ್ತನ್ನು ದೋಚಿಕೊಂಡು ಓಡಿಹೋದರು. ಪ್ರಯಾಗ ಇವನ ಉಪರಾಜಧಾನಿಯಾಗಿತ್ತು. ಈತ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳನ್ನು ಚಲಾವಣೆಗೆ ತಂದಿದ್ದ. ಗಾಂಗೇಯದೇವನ ಅನಂತರ ಅವನ ಮಗ ಕರ್ಣ(1041–73) ದೊರೆಯಾದ. ಇವನೂ ಒಬ್ಬ ಶಕ್ತ ದೊರೆ. ಈತ ಪ್ರತೀಹಾರಯಶಃ ಪಾಲನಿಂದ ಅಲಹಾಬಾದನ್ನು ಗೆದ್ದುಕೊಂಡ. ತೀರಪ್ರದೇಶದಲ್ಲಿ ಮುಸ್ಲಿಮರ ಮೇಲೆ ಜಯಗಳಿಸಿದ. ಪಾಲರ ಮೇಲೆ ದಂಡೆತ್ತಿಹೋದರೂ ಅದರಿಂದ ಪ್ರಯೋಜನವಾಗಲಿಲ್ಲ. ಜಾತವರ್ಮನನ್ನು ಸೋಲಿಸಿ ಅಂಗರಾಜ್ಯವನ್ನು ಗೆದ್ದುಕೊಂಡ. ಗಂಗವಂಶದ ವಜ್ರಹಸ್ತನನ್ನೂ ಸೋಲಿಸಿದ. ಚೋಳ ರಾಜಾಧಿರಾಜನನ್ನು ಸೋಲಿಸಿ ಕಾಂಡಿಯವರೆಗೂ ದಂಡಯಾತ್ರೆ ನಡೆಸಿದ. ಕರ್ಣನಿಂದ ಪರಾಜಿತನಾದ ಪಂತಲದ ದೊರೆ ಚಾಳುಕ್ಯ 1ನೆಯ ಸೋಮೇಶ್ವರನಿರ ಬೇಕು. ಕರ್ಣ ಅನಂತರ ಚಂಡೆಲ್ಲ ಕೀರ್ತಿವರ್ಮನನ್ನು ಸೋಲಿಸಿ ಸ್ವಲ್ಪಕಾಲ ಬುಂದೇಲ್ ಖಂಡಕ್ಕೂ ಒಡೆಯನಾಗಿದ್ದ. ಚಾಳುಕ್ಯ ಭೀಮನ ಸಹಾಯದಿಂದ ಮಾಳ್ವದ ಮೇಲೆ ಯುದ್ಧ ಮಾಡಿದ. ಆದರೆ ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಸಹಾಯದಿಂದ ಪರಮಾರರು ಜಯಶಾಲಿಗಳಾದರು. ಕರ್ಣ ಹಿಂದಿರುಗಬೇಕಾಯಿತು. ಈತ ಹೂಣಕುಲದ ಆವಲ್ಲದೇವಿ ಯನ್ನು ಮದುವೆಯಾಗಿದ್ದ. ಪಂಡಿತರಿಗೂ ಕವಿಗಳಿಗೂ ಆಶ್ರಯದಾತನಾಗಿದ್ದು 6 ನೆಯ ವಿಕ್ರಮಾದಿತ್ಯನ ಆಸ್ಥಾನ ಕವಿ ಬಿಲ್ಹಣನಿಗೆ ವಿಶೇಷ ಗೌರವ ನೀಡಿದ್ದ. ಕಾಶಿಯ ಕರ್ಣ ಮೇರು ದೇವಾಲಯವನ್ನು ಸ್ಥಾಪಿಸಿ, ಆ ನಗರವನ್ನು ತನ್ನ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದವನೀತನೇ.

ಕರ್ಣ ಮುಪ್ಪಿನಲ್ಲಿ ತನ್ನ ಮಗ ಯಶಃಕರ್ಣನಿಗೆ ರಾಜ್ಯವನ್ನು ವಹಿಸಿದ. ಈತ ಚಂಪಾರಣ್ಯ ಮತ್ತು ಆಂಧ್ರದ ಮೇಲೂ ಧಾಳಿ ಮಾಡಿದ. ಚಾಳುಕ್ಯ ಜಯಸಿಂಹ ಇವನ ಮೇಲೆ ದಾಳಿ ಮಾಡಿದ. ಚಂದ್ರದೇವ ಯಶಃಕರ್ಣನಿಂದ ಅಲಹಾಬಾದ್ ಮತ್ತು ಕಾಶಿರಾಜ್ಯಗಳನ್ನು ಕಿತ್ತುಕೊಂಡ. ಪರಮಾರ ಲಕ್ಷ್ಮದೇವನಿಂದ ತ್ರಿಪುರಿ ಲೂಟಿಯಾಯಿತು. ಈ ಘಟನೆಗಳು ಕಳಚುರಿಗಳ ಪತನಕ್ಕೆ ಕಾರಣವಾದುವು. ಯಶಃಕರ್ಣನ ಮರಣಾಂತರ ಗಯಾಕರ್ಣ (1123–53) ರಾಜ್ಯವಾಳಿದ. ಈತನನ್ನು ಚಂಡೆಲ್ಲ ಮದನವರ್ಮ ಸೋಲಿಸಿದ. ಗಯಾಕರ್ಣನ ಅನಂತರ ಅವನ ಮಕ್ಕಳು ನರಸಿಂಹ ಮತ್ತು ಜಯಸಿಂಹ (1163–88) ಕ್ರಮವಾಗಿ ಆಳಿದರು. ಚಾಳುಕ್ಯ ಕಪೂರಪಾಲ ಮತ್ತು ಮುಸ್ಲಿಮರ ಮೇಲೂ ಜಯಸಿಂಹ ವಿಜಯಗಳಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಜಯಸಿಂಹನ ಅನಂತರ ಅವನ ಮಗ ವಿಜಯಸಿಂಹ (1188–1210) ದೊರೆಯಾದ. ಸು. 1211ರ ಸಮಯಕ್ಕೆ ಚಂಡೆಲ್ಲ ತ್ರೈಲೋಕ್ಯವರ್ಮ ಕಳಚುರಿಗಳ ರಾಜ್ಯವಾದ ಡಾಹಲ ಮಂಡಲವನ್ನು ಸ್ವಾಧೀನಪಡಿಸಿಕೊಂಡ.

ವಿಜಯಸಿಂಹನಿಗೆ ಅಜಯಸಿಂಹನೆಂಬ ಮಗನಿದ್ದ. ಅವನ ವಿಷಯವೇನೂ ತಿಳಿಯದು. ಒಟ್ಟಿನಲ್ಲಿ 13ನೆಯ ಶತಮಾನದ ಆದಿಭಾಗದಲ್ಲಿ ತ್ರಿಪುರಿಯ ಕಳಚುರಿಗಳ ಆಳ್ವಿಕೆ ಕೊನೆಗೊಂಡಿತು. ಇವರ ಕಾಲದಲ್ಲಿ ಮತ್ತಮಯೂರಾನ್ವಯದ ಶೈವಾಚಾರ್ಯರು ಕೆಲಕಾಲ ರಾಜಗುರುಗಳಾಗಿದ್ದು ಡಾಹಲದಲ್ಲಿ (ತ್ರಿಪುರಿ) ಗೋಲಕಿ ಮಠವನ್ನು ಸ್ಥಾಪಿಸಿ, ಆ ಮತಪ್ರಚಾರಕಾರ್ಯದಲ್ಲಿ ಆಸಕ್ತಿ ತೋರಿಸಿದರು. ಆಂಧ್ರ ಮತ್ತು ತಮಿಳು ದೇಶಗಳಲ್ಲಿ ಅದರ ಶಾಖೆಗಳು ಸ್ಥಾಪಿತವಾಗಿದ್ದವು.

**ಸರಯೂಪಾರದ ಕಳಚುರಿಗಳು:** ಇವರ ಮತ್ತೊಂದು ಶಾಖೆ 8 ನೆಯ ಶತಮಾನದ ಕೊನೆಯ ಭಾಗದಿಂದ 11ನೆಯ ಶತಮಾನದ ವರೆಗೆ ಸರಯೂನದೀ ಪ್ರದೇಶದಲ್ಲಿ (ಈಗಿನ ಗೋಗ್ರಾ) ಆಳುತ್ತಿತ್ತು. ಈ ರಾಜ್ಯವನ್ನು ಸರಯೂಪಾರ ಎಂದು ಶಾಸನಗಳು ಕರೆಯುತ್ತವೆ. ಆದ್ದರಿಂದ ಇವರಿಗೆ ಸರಯೂಪಾರದ ಕಳಚುರಿಗಳೆಂದು ಹೆಸರು ಬಂದಿದೆ.

7ನೆಯ ಶತಮಾನದ ಆದಿಭಾಗದಲ್ಲಿದ್ದ ಶಂಕರಗಣ ಈ ವಂಶದ ಮೊದಲ ದೊರೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. 8 ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ರಾಜಪುತ್ರ ಈ ವಂಶದ ಮೊದಲ ದೊರೆ ಎಂದು ಮತ್ತೆ ಕೆಲವರ ಅಭಿಮತ. ಇವನು ತುರಗಪತಿ ವಾಹಲಿ ಮತ್ತು ಕಿರೀಟನ್ ಮೊದಲಾದ ರಾಜರನ್ನು ಸೋಲಿಸಿದ. ಪಾಲವಂಶದ ದೊರೆಯಾದ ಧರ್ಮಪಾಲ ರಾಜಪುತ್ರನ ಮೇಲೆ ದಂಡೆತ್ತಿ ಹೋದ. ರಾಜಪುತ್ರ ಧೈರ್ಯದಿಂದ ಕಾದಾಡಿ ಧರ್ಮಪಾಲನನ್ನು ಹೊಡೆದೋಡಿಸಿದ. ಈ ವಿಜಯಗಳಿಂದ ರಾಜಪುತ್ರ ಕಳಚುರಿಗಳ ಪ್ರಾಬಲ್ಯವನ್ನು ಹೆಚ್ಚಿಸಿದ. ಇವನ ಅನಂತರ ಆಳಿದ ಶಿವರಾಜನ ವಿಷಯವೇನೂ ತಿಳಿಯದು. ಅನಂತರ ಆಳಿದ ಇವನ ಮಗ ಶಂಕರಗಣನನ್ನು ತ್ರಿಪುರಿಯ ಕಳಚುರಿ ವಂಶದ ಕೋಕಲ್ಲರಾಜ ಸೋಲಿಸಿದ. ಶಂಕರಗಣನ ಮಗ 1ನೆಯ ಗುಣಸಾಗರ 9ನೆಯ ಶತಮಾನದ ಮಧ್ಯಭಾಗದಲ್ಲಿ ಆಳಿದ. ಈತ ಮಾಡಿದ ಮುಖ್ಯ ಕಾರ್ಯವೆಂದರೆ ಬಂಗಾಲದ ಮೇಲೆ ಗಳಿಸಿದ ವಿಜಯ. ಪ್ರತೀಹಾರ ಭೋಜನಿಗೆ ಯುದ್ಧಗಳಲ್ಲಿ ಸಹಾಯ ಮಾಡಿದುದರಿಂದ ಸಂತೋಷಗೊಂಡ ಭೋಜನಿಂದ ಇವನಿಗೆ ಬಳುವಳಿಯಾಗಿ ಕೆಲವು ಜಿಲ್ಲೆಗಳು ಬಂದವು. ಇದರಿಂದ ಸರಯೂಪಾರದ ಕಳಚುರಿಗಳ ರಾಜ್ಯ ಗೋರಖಪುರದವರೆಗೂ ವಿಸ್ತಾರವಾಯಿತು.

ಗುಣಸಾಗರನ ಮರಣಾನಂತರ ಅವನ ಮಕ್ಕಳಾದ ಉಲ್ಲಭ ಮತ್ತು ಭಾಮಾನದೇವ ರಾಜ್ಯವಾಳಿದರು. ಭಾಮಾನದೇವ ಪ್ರತೀಹಾರ ಮಹೀಪಾಲನ ಯುದ್ಧಗಳಲ್ಲಿ ಸಹಾಯಕನಾಗಿದ್ದ. ಭಾಮಾನದೇವನ ಅನಂತರ ಶಂಕರಗಣ, ಮುಗ್ಧತುಂಗ, ಗುಣಸಾಗರ, ಶಿವರಾಜ, ಭಾಮಾನ, ಶಂಕರಗಣ ಎಂಬ ರಾಜರು ಕ್ರಮವಾಗಿ ಆಳಿದರು. ಅನಂತರ ಅಂದರೆ 11ನೆಯ ಶತಮಾನದ ಆದಿಭಾಗದಲ್ಲಿ ಆಳಿದವನೇ ಭೀಮ. ಯಾದವೀ ಕಲಹಗಳ ಫಲವಾಗಿ ಈತ ಪದಚ್ಯುತನಾದ. 1055–80ರ ವರೆಗೆ ಶೋಧದೇವನೆಂಬವ ರಾಜನಾದ. ಮಹಾರಾಜಾಧಿರಾಜ ಬಿರುದಾಂಕಿತನಾದ ಇವನ ರಾಜ್ಯ ಗೋಗ್ರಾ ಮತ್ತು ಗಂಡಕೀ ನದಿಗಳ ಮಧ್ಯ ಪ್ರದೇಶವನ್ನು ಒಳಗೊಂಡಿತ್ತು. ಈಗ ತಿಳಿದಿರುವಂತೆ ಶೋಢದೇವನೇ ಸರಯೂಪಾರದ ಕಳಚುರಿಗಳ ಕೊನೆಯ ರಾಜ.

**ರತ್ನಪುರದ ಕಳಚುರಿಗಳು:** ತ್ರಿಪುರಿಯಲ್ಲಿ ಆಳಿದ ಕಳಚುರಿ ಅರಸ 1 ನೆಯ ಕೋಕಲ್ಲನ ವಂಶಜನಾದ ಕಲಿಂಗರಾಜ ಸು. 1000ದಲ್ಲಿ ದಕ್ಷಿಣ ಕೋಸಲವನ್ನು ಗೆದ್ದುಕೊಂಡು ತುಮ್ಮಾಣದಲ್ಲಿ (ಮಧ್ಯಪ್ರದೇಶದ ಬಿಲಾಸ್‌ಪುರ ಜಿಲ್ಲೆ) ತ್ರಿಪುರಿ ಕಳಚುರಿಗಳ ಸಾಮಂತನಾಗಿ ಆಳಲು ಪ್ರಾರಂಭಿಸಿದ. ಸು. 1020 ರಲ್ಲಿ ಇವನ ಮಗ ಕಮಲರಾಜ ಪಟ್ಟಕ್ಕೆ ಬಂದ. ಇವನೂ ಸಾಮಂತನಾಗಿದ್ದು ತ್ರಿಪುರಿಯ ಕಳಚುರಿ ರಾಜ ಗಂಗೇಯ ದೇವನ ಯುದ್ಧಗಳಲ್ಲಿ ಸಹಾಯಕನಾಗಿದ್ದ. ಇವನ ಮಗನೇ ರತ್ನರಾಜ. ಈತ ರತ್ನಪುರಿ ನಗರವನ್ನು (ಈಗಿನ ರತನ್‌ಪುರ ; ಬಿಲಾಸ್‌ಪುರಕ್ಕೆ 16 ಕಿಮೀ ದೂರ) ಸ್ಥಾಪಿಸಿದ. ರತ್ನರಾಜನ ಮರಣಾಂತರ ಅವನ ಮಗ ಪೃಥ್ವೀದೇವ ರಾಜ್ಯವಾಳಿದ. ಇವನ ಕಾಲದಲ್ಲಿ ರತ್ನಪುರಿ ರಾಜಧಾನಿಯಾದುದರಿಂದ ಇವರನ್ನು ರತ್ನಪುರಿಯ ಕಳಚುರಿಗಳೆಂದು ಕರೆಯಲಾಗಿದೆ. ಪೃಥ್ವೀದೇವನ ಮಗ 1ನೆಯ ಜಾಜಲ್ಲದೇವ ಅತ್ಯಂತ ಪ್ರಖ್ಯಾತನಾದ ದೊರೆ. ಇದೇ ಸಮಯದಲ್ಲಿ ತ್ರಿಪುರಿಯ ಕಳಚುರಿಗಳ ಪ್ರಾಬಲ್ಯ ಕಡಿಮೆಯಾಗುತ್ತಿತ್ತು. ಇದನ್ನು ಗಮನಿಸಿದ 1ನೆಯ ಜಾಜಲ್ಲ (1090–1120) ತ್ರಿಪುರಿಯ ರಾಜ ಯಶಃಕರ್ಣನಿಂದ ಸ್ವತಂತ್ರನಾದ. ದಕ್ಷಿಣ ಕೋಸಲದ ಭಾಗಗಳು ಚಕ್ರಕೋಟೆಯಲ್ಲಿ ಆಳುತ್ತಿದ್ದ ನಾಗವಂಶದ ಸೋಮೇಶ್ವರನ ಆಕ್ರಮಣಕ್ಕೆ ಒಳಗಾಗಿದ್ದವು. ಜಾಜಲ್ಲ ಅವನನ್ನು ಸೋಲಿಸಿ ಸೆರೆಹಿಡಿದ. ಈತ ಒರಿಸ್ಸದ ಮೇಲೆ ದಂಡೆತ್ತಿಹೋಗಿ ಸುವರ್ಣಪುರದ ಭುಜವಲ ಎಂಬ ರಾಜನನ್ನು ಸೋಲಿಸಿದ. ಇವನ ಪರಾಕ್ರಮವನ್ನು ಗಮನಿಸಿದ ಗಾಹಡವಾಲ ಗೋವಿಂದ ಚಂದ್ರ ಮತ್ತು ಛಂಡೆಲ್ಲ ಸಲ್ಲಕ್ಷಣವರ್ಮರು ಇವನೊಡನೆ ಸ್ನೇಹ ಬೆಳೆಸಿದ್ದರು. ಈ ರೀತಿ ಜಾಜಲ್ಲದೇವ ರತ್ನಪುರಿಯ ಕಳಚುರಿಗಳ ಪ್ರಾಬಲ್ಯ ಹೆಚ್ಚಿಸಿದ.

ಜಾಜಲ್ಲದೇವನ ಮಗ 2ನೆಯ ರತ್ನದೇವ ದೊರೆಯಾದದ್ದು 1120 ರಲ್ಲಿ. ಪೂರ್ವೀಗಂಗರ ರಾಜ ಅನಂತವರ್ಮ ಚೋಡಗಂಗ ತನ್ನ ರಾಜ್ಯವನ್ನು ವಿಸ್ತರಿಸುವ ಆಸೆಯಿಂದ ಕಳಚುರಿ ರತ್ನದೇವನ ಮೇಲೆ ಯುದ್ಧ ಮಾಡಿದ. ರತ್ನದೇವ ಈ ಯುದ್ಧದಲ್ಲಿ ಜಯಶಾಲಿಯಾದ. ಇವನ ಮರಣಾನಂತರ ದೊರೆಯಾದವ ಇವನ ಮಗ 2ನೆಯ ಪೃಥ್ವೀದೇವ. ಈತ ಜಟೇಶ್ವರನೆಂಬ ರಾಜನನ್ನು ಸೋಲಿಸಿದ. ಪೃಥ್ವೀದೇವನ ಮಗ 2ನೆಯ ಜಾಜಲ್ಲ ರಾಜ್ಯವಾಳಿದ್ದು 1165 –1170ರ ವರೆಗೆ. ಅನಂತರ ಇವನ ಸಹೋದರ ಜಗದ್ದೇವನೂ 3ನೆಯ ರತ್ನದೇವನೂ 3ನೆಯ ಪೃಥ್ವೀದೇವ ಮತ್ತು ಪ್ರತಾಪಮಲ್ಲರೂ ಕ್ರಮವಾಗಿ ರಾಜ್ಯವಾಳಿದರು. ಪ್ರತಾಪಮಲ್ಲನ ಕಾಲದಲ್ಲಿ ಪೂರ್ವೀಗಂಗ ಅನಂಗಭೀಮ ಕಳಚುರಿಗಳ ಮೇಲೆ ದಂಡಯಾತ್ರೆ ನಡೆಸಿದ. ಪ್ರತಾಪಮಲ್ಲನ ಅನಂತರ ಯಾರು ಆಳಿದರು ಎಂಬುದು ತಿಳಿದಿಲ್ಲ. ಇದೇ ವಂಶದ ವಾಹರ ಎಂಬ ರಾಜ (1480–1525) ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದು ಬಂದಿದೆ. ಇವನಿಗಿಂತ ಮೊದಲ ರಾಜರ ಹೆಸರುಗಳೂ ಈ ಶಾಸನಗಳಿಂದ ತಿಳಿದುಬರುತ್ತವೆ. 14ನೆಯ ಶತಮಾನದ ಕೊನೆಯಲ್ಲಿ ರತ್ನಪುರಿಯ ಕಳಚುರಿಗಳಲ್ಲಿ ಎರಡು ಭಾಗಗಳಾದುವು. ಒಂದು ಭಾಗ ರತ್ನಪುರಿಯಲ್ಲಿ ಮುಂದುವರಿದರೆ, ಇನ್ನೊಂದು ಶಾಖೆ ರಾಯಪುರದಿಂದ ಆಳಲು ಪ್ರಾರಂಭಿಸಿತು. ರಾಯಪುರದಲ್ಲಿ ರಾಮಚಂದ್ರ ಮತ್ತು ಬ್ರಹ್ಮದೇವ (1402–15) ಎಂಬ ರಾಜರು ಆಳಿದರೆಂದು ತಿಳಿದುಬಂದಿವೆ. ಇಲ್ಲಿಗೆ ಈ ಶಾಖೆ ಕೊನೆಗೊಂಡಿತು. ವಾಹರನೊಂದಿಗೆ ರತ್ನಪುರಿಯ ಕಳಚುರಿಗಳ ಪತನವೂ ಆಯಿತು.

**ಕಲ್ಯಾಣದ ಕಳಚುರಿಗಳು:** ಕರ್ನಾಟಕದಲ್ಲಿಯೂ ಒಂದು ಕಳಚುರಿ ಮನೆತನ ಕಲ್ಯಾಣದ ರಾಜಧಾನಿಯಿಂದ ರಾಜ್ಯಭಾರ ಮಾಡುತ್ತಿತ್ತು. ಈ ಮನೆತನದ ಹೆಸರು ಕಳಚುರ್ಯಕುಲವೆಂದು ಇವರ ಶಾಸನಗಳಿಂದ ಗೊತ್ತಾಗುತ್ತದೆ. ಇವರು ಕಾಲಂಜರಪುರವರಾಧೀಶ್ವರರೆಂದು ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಕಾಲಂಜರಪುರ ಈಗಿನ ಬುಂದೇಲ್ ಖಂಡದ ಕಾಲಂಜರ್. ಇವರು ಅಲ್ಲಿಂದ ದಕ್ಷಿಣಕ್ಕೆ ಯಾವಾಗ, ಹೇಗೆ ಬಂದರೆಂಬುದು ಖಚಿತವಾಗಿ ತಿಳಿದಿಲ್ಲವಾದರೂ 1156–57ರಲ್ಲಿ ಚಾಳುಕ್ಯ ರಾಜ್ಯವನ್ನು ಆಕ್ರಮಿಸಿದ ಬಿಜ್ಜಳನಿಗಿಂತ ಮೊದಲು ಏಳೆಂಟು ತಲೆಮಾರುಗಳ ಅರಸರ ಹೆಸರುಗಳು ಶಾಸನಗಳಲ್ಲಿ ಕಂಡುಬಂದಿರುವುದರಿಂದ ಸು. 10ನೆಯ ಶತಮಾನದಲ್ಲಿ ಇವರು ಕರ್ನಾಟಕಕ್ಕೆ ಬಂದಿದ್ದಿರಬಹುದು. ಇವರಲ್ಲಿ ಪ್ರಬಲನಾದ ಉಚಿತನೇ ಮೊದಲ ನಾಯಕ. ಇವರು ತಲಕಾಡುನಾಡಿನಲ್ಲಿ ನೆಲೆಸಿ ಮಂಗಳವೇಡೆಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದರು. ಈ ವಂಶದ ಜೋಗಮ ತನ್ನ ಪುತ್ರಿ ಸಾವಲದೇವಿಯನ್ನು 6ನೆಯ ವಿಕ್ರಮಾದಿತ್ಯನಿಗೆ ವಿವಾಹ ಮಾಡಿಕೊಟ್ಟಿದ್ದ. ಇವನ ಮಗ ಪೆರ್ಮಾಡಿ 3ನೆಯ ಸೋಮೇಶ್ವರನ ಸೋದರಿಯನ್ನು ವಿವಾಹವಾಗಿದ್ದ. ಇವರ ಮಗ 2ನೆಯ ಬಿಜ್ಜಳ, 3ನೆಯ ಸೋಮೇಶ್ವರನ ಸೋದರಳಿಯ. ಪೆರ್ಮಾಡಿ 1128 ರಲ್ಲಿ ಚಾಳುಕ್ಯ 3 ನೆಯ ಸೋಮೇಶ್ವರನ ಸಾಮಂತನಾಗಿ ತರ್ದವಾಡಿ (ಬಿಜಾಪುರ ಜಿಲ್ಲೆ) ಪ್ರಾಂತವನ್ನು ಆಳುತ್ತಿದ್ದ. ಚಾಳುಕ್ಯ 2ನೆಯ ಜಗದೇಕಮಲ್ಲ, 3ನೆಯ ತೈಲ–ಇವರ ಅಧೀನನಾಗಿ 2ನೆಯ ಬಿಜ್ಜಳ ಅನೇಕ ಪ್ರಾಂತಗಳಿಗೆ ಅಧಿಪತಿಯಾಗಿದ್ದ. ಕ್ರಮೇಣ ಪ್ರಬಲನಾಗುತ್ತಿದ್ದ ಬಿಜ್ಜಳ 1142ರಲ್ಲಿ ಕರಹಾಡ ಪ್ರಾಂತವನ್ನು ವಶಪಡಿಸಿಕೊಂಡ. ಐದು ವರ್ಷಗಳ ಅನಂತರ ತರ್ದವಾಡಿ ಇವನ ವಶವಾಯಿತು. 3ನೆಯ ತೈಲನ ಕಾಲದಲ್ಲಿ ಚಾಳುಕ್ಯರು ದುರ್ಬಲರಾದ ಸಮಯ ಸಾಧಿಸಿ ಈತ 1153ರ ವೇಳೆಗೆ ಸ್ವತಂತ್ರ ಮನೋಭಾವ ಪ್ರದರ್ಶಿಸಲಾರಂಭಿಸಿದ. ಐದು ವರ್ಷಗಳೊಳಗೆ ಈತ ರಾಜ್ಯವನ್ನು ಪೂರ್ಣವಾಗಿ ಆಕ್ರಮಿಸಿ ಕಳಚುರ್ಯಚಕ್ರವರ್ತಿ, ಭುಜಬಲ ಚಕ್ರವರ್ತಿ ಮೊದಲಾದ ಬಿರುದುಗಳ ಸಹಿತ ಕಲ್ಯಾಣದಿಂದ ರಾಜ್ಯಭಾರ ಮಾಡತೊಡಗಿದ. 1162ರ ಕೊನೆಯಲ್ಲಿ 3ನೆಯ ತೈಲನ ಮರಣಾನಂತರ ಕಳಚುರಿಗಳು ಇಡೀ ಚಾಳುಕ್ಯ ಸಾಮ್ರಾಜ್ಯದ ಅಧಿಕೃತ ಅರಸರೆಂದು ಘೋಷಿಸಿಕೊಂಡರು. ಮರಣಕ್ಕೆ ಮೊದಲು ತೈಲ ತನ್ನ ಮಗ 4ನೆಯ ಸೋಮೇಶ್ವರನನ್ನು ಉತ್ತರಾಧಿಕಾರಿಯಾಗಿ ಘೋಷಿಸಿದ್ದ. ಈತ ತನ್ನ ತಮ್ಮಂದಿರೊಡಗೂಡಿ ಬಳ್ಳಾರಿ ಪ್ರಾಂತದಲ್ಲಿ ಆಳುತ್ತಿದ್ದಂತೆ ಕೆಲವು ಶಾಸನಗಳು ತಿಳಿಸುತ್ತವೆ. ವೀರಶೈವ ಮತೋದ್ಧಾರಕ ಬಸವಣ್ಣ ಇವನ ಪ್ರಧಾನನಾಗಿದ್ದ ನೆಂದು ರಾಜಾಸ್ಥಾನದಲ್ಲಿ ಪ್ರಬಲನಾಗಿದ್ದ ಆತನಿಗೂ ಸೋದರಳಿಯ ಚನ್ನಬಸವನಿಗೂ ತಮ್ಮ ಮತದ ಪ್ರಚಾರಕ್ಕಾಗಿ ವಿಪುಲ ಅವಕಾಶವಾಯಿತೆಂದೂ ಹೇಳಲಾಗಿದೆ. 1167ರಲ್ಲಿ ಬಿಜ್ಜಳ ರಾಜ್ಯಸೂತ್ರಗಳನ್ನು ತನ್ನ ಹಿರಿಯ ಮಗ ಸೋವಿದೇವನಿಗೆ (ಸೋಮೇಶ್ವರನಿಗೆ) ಒಪ್ಪಿಸಿದ. ಈ ರೀತಿಯ ರಾಜ್ಯತ್ಯಾಗಕ್ಕೆ ಕಾರಣವೇನೆಂದು ತಿಳಿದಿಲ್ಲ. ಬಹುಶಃ ಪ್ರಬಲನಾಗಿದ್ದ ಬಸವಣ್ಣ ಮತ್ತು ಬಿಜ್ಜಳರ ನಡುವೆ ಮತಭೇದವುಂಟಾಗಿರಬೇಕು. 1168 ರಲ್ಲಿ ಬಿಜ್ಜಳ ಅಸುನೀಗಿದ. ಸೋವಿದೇವ ಅಷ್ಟು ಸಮರ್ಥ ದೊರೆಯಾಗಿರಲಿಲ್ಲ. ಆಗ ಬಿಜ್ಜಳನ ತಮ್ಮ ಮೈಳುಗಿ ಮತ್ತು ಮೊಮ್ಮಗ ಕರ್ಣದೇವ ರಾಜ್ಯವನ್ನು ಆಕ್ರಮಿಸಿ ಸ್ವಲ್ಪಕಾಲ ರಾಜ್ಯಭಾರ ಮಾಡಿದರು. ಆದರೆ ಸ್ವಾಮಿಭಕ್ತ ಮಾಧವದಂಡನಾಥ ಕರ್ಣನನ್ನು ಕೊಂದು ಪುನಃ (1168) ಸೋಮಿದೇವನನ್ನು ಸಿಂಹಾಸನಕ್ಕೇರಿಸಿದ. ಸೋವಿದೇವ ಸಾರ್ವಭೌಮತ್ವದ ದ್ಯೋತಕವಾಗಿ ತನ್ನ ನಾಣ್ಯಗಳನ್ನು ಅಚ್ಚು ಹಾಕಿಸಿದ. ಇವನಿಗೆ ಕಳಚುರ್ಯ ಚಕ್ರವರ್ತಿ, ರಾಯಮುರಾರಿ ಮುಂತಾದ ಬಿರುದುಗಳಿದ್ದವು. ಇವನಿಗೆ ಮಲ್ಲುಗಿ, ಸಂಕಮ, ಆಹವಮಲ್ಲ, ಸಿಂಘಣ ಎಂಬ ನಾಲ್ಕು ಜನ ಸೋದರರಿದ್ದರು. 1175 ರಲ್ಲಿ ಮಲ್ಲುಗಿ ದಂಗೆಯೆದ್ದು ಭೀಮಾ ನದಿಯ ದಡದಲ್ಲಿರುವ ಮಾಸನೂರಿನಿಂದ ಸ್ವತಂತ್ರನಾಗಿ ಆಳಲಾರಂಭಿಸಿದ. ಅದೇ ವರ್ಷ ಸಂಕಮನೂ ದಂಗೆಯೆದ್ದು ಬಿಜಾಪುರ ಪ್ರದೇಶದಲ್ಲಿ ಸ್ವತಂತ್ರನಾದ. ಸೋವಿದೇವನ ವಿಚಾರ 1176ರ ಅನಂತರ ಏನೂ ತಿಳಿದುಬರುವುದಿಲ್ಲ. ಬಹುಶಃ ಆತ ಆ ವರ್ಷದಲ್ಲಿ ಸತ್ತಿರಬಹುದು. ಅನಂತರ ಮಲ್ಲುಗಿಯ ಹೆಸರೂ ಮರೆಯಾಗುತ್ತದೆ. ಸಂಕಮನೂ ಅವನ ತಮ್ಮಂದಿರಾದ ಆಹವಮಲ್ಲ ಮತ್ತು ಸಿಂಘಣರೂ 1184ರ ವರೆಗೂ ಅನುಕ್ರಮವಾಗಿ ರಾಜ್ಯವಾಳುತ್ತಿದ್ದರು. 1184ರಲ್ಲಿ ಚಾಳುಕ್ಯ 4ನೆಯ ಸೋಮೇಶ್ವರನ ದಂಡನಾಯಕ ಬಮ್ಮರಸ ಕಳಚುರ್ಯರನ್ನು ಓಡಿಸಿ ಸೋಮೇಶ್ವರನನ್ನು ಪುನಃ ಸಿಂಹಾಸನಕ್ಕೇರಿಸಿ ಚಾಳುಕ್ಯ ರಾಜ್ಯದ ಪುನರುದ್ಧಾರ ಮಾಡಿ ಚಾಲುಕ್ಯರಾಜ್ಯಪ್ರತಿಷ್ಠಾಪಕನೆಂಬ ಬಿರುದು ಪಡೆದ. ಈ ರೀತಿ ಕಲ್ಯಾಣದ ಕಳಚುರ್ಯರ ಅಲ್ಪಾವಧಿಯ ಆಕ್ರಮಣ ಕೊನೆಗೊಂಡಿತು.

(ಎ.ವಿ.ಎನ್.; ಎಲ್.ಎನ್.ಆರ್.;ಪಿ.ಬಿ.ಡಿ.)

**ಕಳಭ್ರರು:** ದಕ್ಷಿಣ ಭಾರತದ ಖ್ಯಾತ ಮನೆತನಗಳಾದ ಚೋಳ, ಚೇರ, ಪಾಂಡ್ಯ ಮತ್ತು ಪಲ್ಲವರನ್ನು ಬದಿಗೊತ್ತಿ 5–6ನೆಯ ಶತಮಾನಗಳಲ್ಲಿ ರಾಜ್ಯವಾಳಿದ ದೊರೆಗಳು. ಇವರ ಉಲ್ಲೇಖ ಶಾಸನಗಳಲ್ಲಿ ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಕಾಣಬರುತ್ತದೆ. ಕಳಭ್ರರು ಯಾರು ಎಂಬ ವಿಷಯದಲ್ಲಿ ಚರಿತ್ರಕಾರರಲ್ಲಿ ಒಮ್ಮತವಿಲ್ಲ. ಇವರು ಕೊಡಂಬಾಳೂರಿನ ಮುತ್ತರೈಯರ್ ವಂಶಜರೆಂದು ಕೆಲವರ ಮತ. ತೊಂಡೈಮಂಡಲದ ಉತ್ತರಭಾಗಗಳಲ್ಲಿ ಆಳುತ್ತಿದ್ದ ಕಳವರ್ ಎಂಬ ಈ ಗುಡ್ಡನಾಡಿನ ಜನ ಈಗಿನ ತಿರುಪತಿಯ ಸಮೀಪದಲ್ಲಿ ವಾಸವಾಗಿದ್ದು ಕಳ್ಳತನ ದರೋಡೆಗಳನ್ನು ಮಾಡುತ್ತಿದ್ದರೆಂದೂ ಸು. 4ನೆಯ ಶತಮಾನದ ಹೊತ್ತಿಗೆ ಸಾತವಾಹನರ ಪ್ರಾಬಲ್ಯ ಕುಂಠಿತವಾಗಿ ಪಲ್ಲವರು ಪ್ರಬಲವಾದುದರಿಂದ ಮತ್ತು ಸಮುದ್ರಗುಪ್ತ ದಕ್ಷಿಣಾಪಥದ ಮೇಲೆ ದಂಡೆತ್ತಿ ಹೋಗಿ ವಿಜಯವನ್ನು ಸಂಪಾದಿಸಿದುದರಿಂದ ಉಂಟಾದ ರಾಜಕೀಯ ಕ್ಷೋಭೆಯ ಸಮಯದಲ್ಲಿ ಇವರು ತಿರುಪತಿಯಿಂದ ಹೊರಟು ತೊಂಡೈಮಂಡಲದಲ್ಲಿ ನೆಲೆಸಿದರೆಂದೂ ಚರ್ಚೆಯಿದೆ. ತಮಿಳು ಶಾಸನ ಮತ್ತು ಸಾಹಿತ್ಯದಲ್ಲಿ ವೆಲ್ಲಾಳ ಕುಲಕ್ಕೆ ಸೇರಿದ ಕಳಪ್ಪಾಳರ್ ಎಂಬ ಜನಗಳ ಉಲ್ಲೇಖ ಕಾಣಬರುತ್ತದೆ. ಈ ಕಳಪ್ಪಾಳರೇ ಕಳಭ್ರರೆಂದೂ ಆದ್ದರಿಂದ ಇವರು ವೆಲ್ಲಾಳಕುಲದವರೆಂದೂ ಮತ್ತೆ ಕೆಲವು ಇತಿಹಾಸಕಾರರು ವಾದಿಸಿದ್ದಾರೆ. ಕಳಭ್ರರು ಕರ್ನಾಟಕದವರೆಂದೂ ಇನ್ನು ಕೆಲವು ಇತಿಹಾಸಕಾರರು ತರ್ಕಿಸಿದ್ದಾರೆ. ಶ್ರವಣಬೆಳಗೊಳದ ಚಿಕ್ಕಬೆಟ್ಟವನ್ನು ಪ್ರಾಚೀನ ಶಾಸನಗಳಲ್ಲಿ ಕಳ್ವಪ್ಪು ಎಂದು ಕರೆದಿರುವುದು ಗಮನಾರ್ಹ. ಈ ಪ್ರದೇಶಕ್ಕೆ ಕಳ್ವಪ್ಪು, ಕಳ್ಬಪ್ಪುನಾಡು ಎನ್ನುವ ಹೆಸರೂ ಇತ್ತು. ಅದೇ ರೀತಿ ಕಳವರನಾಡು ಎಂಬುದು ಪ್ರಾಚೀನ ಕರ್ನಾಟಕದಲ್ಲಿ ಬೆಂಗಳೂರು–ಕೋಲಾರ ಪ್ರಾಂತ್ಯದ ಹೆಸರಾಗಿದ್ದಿತು. ಹಲ್ಮಿಡಿ ಶಾಸನದಲ್ಲಿ ಕಾಕುತ್ಸ್ಥವರ್ಮನಿಗೆ ಕಳಭೋರ ಎಂಬ ಶತ್ರುಗಳು ಇದ್ದರೆಂದು ಹೇಳಿದೆ. ಇವರು ಕಳಭ್ರರೇ ಇರಬೇಕೆಂದು ಊಹಿಸಲಾಗಿದೆ. ಅಂದರೆ ಶ್ರವಣಬೆಳಗೊಳದ ಪ್ರದೇಶದಲ್ಲಿ ಮೊದಲಿಗೆ ನೆಲೆಸಿದ್ದ ಇವರು ಕದಂಬ ಮತ್ತು ಗಂಗ ದೊರೆಗಳ ಪ್ರಾಬಲ್ಯದಿಂದ ಪೂರ್ವಕ್ಕೆ ಹೋಗಿ ಕೋಲಾರ ಜಿಲ್ಲೆಯ ನಂದಿಯಲ್ಲಿ ನೆಲೆಸಿದರೆಂದೂ ಸು.5ನೆಯ ಶತಮಾನದ ಪ್ರಾರಂಭದಲ್ಲಿ ತಮಿಳುನಾಡಿನ ಕಡೆಗೆ ಹೋದರೆಂದೂ ಹೇಳಬಹುದು.

ಕಳಭ್ರರ ಉಗಮದ ಬಗೆಗೆ ಇರುವ ಅಸ್ಪಷ್ಟತೆಯೇ ಇವರ ಇತಿಹಾಸದ ವಿಷಯದಲ್ಲೂ ಕಾಣಬರುತ್ತದೆ. ಪ್ರಸಿದ್ಧವಾದ ವೆಳ್ವಿಕ್ಕುಡಿ ಶಾಸನದಲ್ಲಿ ಕಳಭ್ರವಂಶದ ರಾಜನೊಬ್ಬ (ಕಲಿಯರಸನ್) ಅನೇಕಾನೇಕ ಅಧಿರಾಜರನ್ನು ಸೋಲಿಸಿ ಭೂಮಿಯನ್ನು ತನ್ನ ವಶಮಾಡಿಕೊಂಡು ಬ್ರಹ್ಮದೇಯ ಭೂಮಿಗಳನ್ನು ಕಿತ್ತುಕೊಂಡನೆಂದೂ ಅನಂತರ ಪಾಂಡ್ಯರಾಜ ಕಡುಂಗೋನ್ ಕಳಭ್ರರನ್ನು ಸೋಲಿಸಿ ರಾಜ್ಯವನ್ನು ತನ್ನ ವಶಮಾಡಿಕೊಂಡನೆಂದೂ ಹೇಳಿದೆ. ಈ ಕಳಭ್ರ ರಾಜ ಯಾರು ಎಂಬುದಾಗಿ ಮಾತ್ರ ಇಲ್ಲಿ ಹೇಳಿಲ್ಲ. ಆದರೆ ಪ್ರಸಿದ್ಧ ಬೌದ್ಧ ಲೇಖಕ ಬುದ್ಧದತ್ತನ ಬರೆವಣಿಗೆಯಿಂದ ಅಚ್ಚುತ ವಿಕ್ರಾಂತ ಎಂಬ ಕಳಭ್ರರಾಜ ಚೋಳರಾಜ್ಯದಲ್ಲಿ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈ ಅಚ್ಚುತವಿಕ್ರಾಂತನೇ ಪಾಂಡ್ಯ, ಚೇರ, ಚೋಳ ಮತ್ತು ಪಲ್ಲವ ರಾಜರುಗಳನ್ನು ಸೋಲಿಸಿ ತಮಿಳುನಾಡನ್ನು ಕಳಭ್ರರ ವಶಕ್ಕೆ ಸೇರಿಸಲು ಕಾರಣನಾದವನೆಂದು ಊಹಿಸಬಹುದು. ಅಚ್ಚುತವಿಕ್ರಾಂತ ಕಳಭ್ರರಾಜರಲ್ಲಿ ಶಕ್ತನೆಂದು ಹೇಳಲು ಅನೇಕ ಸಾಹಿತ್ಯ ಗ್ರಂಥಗಳಲ್ಲಿ ಕಾಣಬರುವ ಉಲ್ಲೇಖವೇ ಸಾಕ್ಷಿ. ಅಚ್ಚುತ ವಿಕ್ರಾಂತ ಬೌದ್ಧಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟನೆಂದೂ ಇವನ ಕಾಲದಲ್ಲಿ ಅನೇಕ ಬೌದ್ಧವಿಹಾರಗಳು ಚೋಳ ರಾಜ್ಯದಲ್ಲಿದ್ದುವೆಂದೂ ಬುದ್ಧದತ್ತನ ಬರೆವಣಿಗೆಯಿಂದ ತಿಳಿಯುತ್ತದೆ. ತಮಿಳು ವ್ಯಾಕರಣ ಗ್ರಂಥಕರ್ತೃ ಅಮಿತಸಾಗರ (10ನೆಯ ಶತಮಾನ) ಅಚ್ಚುತ ವಿಕ್ರಾಂತನ ವಿಷಯದಲ್ಲಿ ಕೆಲವು ಪದ್ಯಗಳನ್ನು ಉದಾಹರಿಸುತ್ತಾನೆ. ಬಹುಶಃ ಕಳಭ್ರರು ಬೌದ್ಧರೆಂದೂ ತಮಿಳುನಾಡಿನಲ್ಲಿ ಇವರು ನಡೆಸಿದ ಕ್ರಾಂತಿಗೆ ಮತೀಯ ಕಾರಣಗಳೇ ಪ್ರಧಾನವಾದವೆಂದೂ ನೀಲಕಂಠಶಾಸ್ತ್ರಿ ಯವರು ಊಹಿಸುತ್ತಾರೆ. ವೆಳ್ವಿಕ್ಕುಡಿ ಶಾಸನವನ್ನೇ ಪ್ರಧಾನವಾಗಿಟ್ಟುಕೊಂಡು ಬಹುಪಾಲು ವಿದ್ವಾಂಸರೂ ಕಳಭ್ರರು ದುಷ್ಟ ದೊರೆಗಳು (ಕಲಿಯರಸನ್), ಸಂಸ್ಕೃತಿ ನಾಶಕರು ಎಂದು ಹೇಳಿದ್ದಾರೆ. ಕಳಭ್ರರ ಪ್ರಾಬಲ್ಯವನ್ನು ಮುರಿದು ಇವರ ನಾಶಕ್ಕೆ ಕಾರಣರಾದವರು ಪಾಂಡ್ಯರಾಜ ಕಡುಂಗೋನ್ ಮತ್ತು ಪಲ್ಲವ ಸಿಂಹವಿಷ್ಣು. ಪಲ್ಲವ 1ನೆಯ ನರಸಿಂಹವರ್ಮ, ಚಾಳುಕ್ಯ 1ನೆಯ ಮತ್ತು 2ನೆಯ ವಿಕ್ರಮಾದಿತ್ಯ – ಇವರೂ ಕಳಭ್ರರನ್ನು ಸೋಲಿಸಿದರೆಂದು ಅವರ ಶಾಸನಗಳಲ್ಲಿ ಹೇಳಿದೆ. (ಎ.ವಿ.ಎನ್.)

**ಕಳಲೆ ಅರಸರು: ನೋಡಿ–ಕನಾಟಕದ ಕಿರು ಅರಸು ಮನೆತನಗಳು**

**ಕಳಸ–ಕಾರ್ಕಳದ ಅರಸು ಮನೆತನ: ನೋಡಿ–ಕನಾಟಕದ ಕಿರು ಅರಸು ಮನೆತನಗಳು**

**ಕಳಿಂಗ:** 5ನೆಯ ಶತಮಾನದ ಅಂತ್ಯದಿಂದ ಗಂಗರ ರಾಜಧಾನಿಯಾಗಿದ್ದ ನಗರ. ಇದಕ್ಕೆ ಕಳಿಂಗ ಪಟ್ಟಣವೆಂದೂ ಹೆಸರಿತ್ತು. ಈಗಿನ ಒರಿಸ್ಸದ ಗಂಜಾಂ ಜಿಲ್ಲೆಯಲ್ಲಿರುವ ಮುಖಲಿಂಗಂ ಪ್ರಾಚೀನ ಕಳಿಂಗನಗರವೆಂದು ಇತಿಹಾಸಕಾರರು ಒಪ್ಪಿದ್ದಾರೆ. ಮೊಟ್ಟ ಮೊದಲು ಕಳಿಂಗದ ಉಲ್ಲೇಖ ಬರುವುದು ಮೌರ್ಯ ಚಕ್ರವರ್ತಿ ಅಶೋಕ ಈ ದೇಶದ ಮೇಲೆ ಯುದ್ಧ ಮಾಡಿದ ಸಂದರ್ಭದಲ್ಲಿ. ಕಳಿಂಗದ ಗಂಗರ ಮೂಲಪುರುಷ ಮಹಾರಾಜ 1ನೆಯ ಇಂದ್ರವರ್ಮ (496–535). ತ್ರಿಕಳಿಂಗಾಧಿಪತಿಯೆಂಬ ಬಿರುದಾಂಕಿತನಾಗಿ ಕಳಿಂಗ ನಗರದಿಂದ ರಾಜ್ಯಭಾರ ಮಾಡಿದ. ಪ್ರಾರಂಭ ಕಾಲದಲ್ಲಿ ಈ ರಾಜ್ಯ ಈಗಿನ ಆಂಧ್ರದ ಶ್ರೀಕಾಕುಳಂ ಜಿಲ್ಲೆಗೆ ಸೀಮಿತವಾಗಿದ್ದರೂ ಕ್ರಮೇಣ ಪ್ರಾಬಲ್ಯ ಹೊಂದಿ ಈಶಾನ್ಯದಲ್ಲಿ ಭಾಗೀರಥೀ ತೀರದಿಂದ ಗೋದಾವರಿಯವರೆಗೂ ಹಬ್ಬಿತ್ತು. ಕಳಿಂಗನಗರ ರಾಜಧಾನಿಯಾಗಿದ್ದುದರಿಂದ ಅಲ್ಲಿ ಆಳುತ್ತಿದ್ದ ರಾಜವಂಶಕ್ಕೆ ಕಳಿಂಗ ಗಂಗರೆಂದೇ ಹೆಸರಾಯಿತು. ತಾವು ಮೂಲತಃ ಕೋಲಾಹಲಪುರದವರೆಂದು ಇವರು ಹೇಳಿಕೊಳ್ಳುವುದರಿಂದ, ಇವರದು ಕೋಲಾರವೂ ಅನಂತರ ತಲಕಾಡೂ ರಾಜಧಾನಿಗಳಾಗಿದ್ದ ಪಶ್ಚಿಮ ಗಂಗರ ವಂಶದ ಶಾಖೆಯಾಗಿರಬಹುದೆಂದೂ ಒರಿಸ್ಸದಲ್ಲಿ ಆಳಿದ ಶ್ವೇತಕ ಗಂಗಮನೆತನದವರು ಈ ವಂಶದವರಾಗಿದ್ದು ಪ್ರಾರಂಭದಲ್ಲಿ ಇವರ ಅಧೀನರಾಗಿದ್ದರೆಂದೂ ಅಭಿಪ್ರಾಯಪಡಲಾಗಿದೆ. ಕಳಿಂಗ ನಗರ 5–11ನೆಯ ಶತಮಾನದವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮುಖಲಿಂಗಂ ಬಳಿ ಸು. 9ನೆಯ ಶತಮಾನದ್ದೆನ್ನಬಹುದಾದ ನಾಗರ ವಾಸ್ತು ಮಾದರಿಗೆ ಸೇರಿದ ಕೆಲವು ದೇವಾಲಯಗಳಿವೆ. ಇವುಗಳಲ್ಲಿ ಮುಖಲಿಂಗೇಶ್ವರ ದೇವಾಲಯ ಮುಖ್ಯವಾದದ್ದು. ಇದರಲ್ಲಿ ಐದು ಗರ್ಭಗುಡಿಗಳಿವೆ. ಬಾದಾಮಿ ಚಳುಕ್ಯ ಮತ್ತು ಗುಪ್ತಶೈಲಿಯ ಪ್ರಭಾವಗಳನ್ನಿಲ್ಲಿ ಕಾಣಬಹುದು. (ಜಿ.ಆರ್.ಆರ್.)

**ಕಾಂಡಿವಿಲಿ:** ಮಹಾರಾಷ್ಟ್ರ ರಾಜ್ಯದ ಮುಂಬಯಿಯ ಉಪನಗರ. ಜಿಲ್ಲಾಕೇಂದ್ರದಿಂದ 33 ಕಿಮೀ ಉತ್ತರಕ್ಕೆ ಸಾಲ್ಸೆಟ್ ದ್ವೀಪದಲ್ಲಿದೆ. ಈ ಪ್ರದೇಶದಲ್ಲಿ, ಮುಖ್ಯವಾಗಿ ಮುಂಬಯಿಯಿಂದ ಜಯಗಡ್‌ವರೆಗಿನ ಕೊಂಕಣ (ಮಹಾರಾಷ್ಟ್ರ ಕರಾವಳಿ) ಪ್ರಾಂತದಲ್ಲಿ ಪ್ರಾಗೈತಿಹಾಸಿಕ ಉಪಕರಣಗಳನ್ನು ಮೊದಲಿಗೆ ಶೋಧಿಸಿದವನು ಕೆ.ಆರ್.ಯು.ಟಾಡ್. ಹೆಚ್ಚಿನವು ಮೇಲ್ಮೈ ನೆಲೆಗಳಾಗಿದ್ದು ಸೂಕ್ಷ್ಮಶಿಲಾಯುಗದವು. ಕಾಂಡಿವಿಲಿ ಹಳ್ಳದ ಪದರಗಳಲ್ಲಿ ಕ್ಲ್ಯಾಕ್ಟನ್, ಅಶೂಲಿಯನ್, ಹೆರೆಚಕ್ಕೆ–ಅಲಗು, ಅಲಗು–ಕೊರೆಯುಳಿ ಹಾಗೂ ಸೂಕ್ಷ್ಮಶಿಲೋಪಕರಣ ಸಂಪ್ರದಾಯಗಳನ್ನು ಇವನು 1932ರಲ್ಲಿ ಗುರುತಿಸಿದ. ಜೊತೆಗೆ ಪದರ ಸಂರಚನೆಯ ಆಧಾರದ ಮೇಲೆ ಸಮಕಾಲೀನ ವಾತಾವರಣವನ್ನು ತಿಳಿಯುವ ಪ್ರಯತ್ನ ಮಾಡಿದ. ಕಮಿಯಡೆ ಹಾಗೂ ಬರ್ಕಿಟ್ (ನೋಡಿ: ಗಿಡ್ಡಲೂರು) ಪೂರ್ವ ಕರಾವಳಿಯಲ್ಲಿ ಗುರುತಿಸಿದ ಹಿಮಯುಗ–ಪ್ರಾಗೈತಿಹಾಸಿಕ ಸ್ತರಕ್ರಮವನ್ನು ಟಾಡ್‌ನ ಅಧ್ಯಯನ ಪುಷ್ಟೀಕರಿಸುವಂತಿದ್ದುದು ಇದರ ಮಹತ್ತ್ವ. ಇವು ಭಾರತೀಯ ಪ್ರಾಗಿತಿಹಾಸ ಕ್ಷೇತ್ರದಲ್ಲಿ ನಡೆದ ಈ ಪ್ರಕಾರದ ಮೊದಲ ಅಧ್ಯಯನಗಳೆಂಬುದು ಗಮನಾರ್ಹ. ಬಸಾಲ್ಟ್, ಚರ್ಟ್, ಶೇಲ್‌ನಿಂದ ತಯಾರಿಸಿದ ಕೈಗೊಡಲಿ, ಕೊಚ್ಚುವ ಉಪಕರಣ, ದೊಡ್ಡಚಕ್ಕೆ ಹಾಗೂ ಹೆರೆಚಕ್ಕೆಗಳು ಟಾಡ್ ಸಂಗ್ರಹಿಸಿದ ಆದಿ ಹಳೆಶಿಲಾಯುಗದ ಉಪಕರಣಗಳು.

ಎರಡು ದಶಕಗಳ ಅನಂತರ ಎಸ್.ಸಿ.ಮಲಿಕ್ ಮುಂಬಯಿ–ಸತಾರ ಪ್ರದೇಶವನ್ನೊಳಗೊಂಡಂತೆ ಪಶ್ಚಿಮ ಭಾರತದಲ್ಲಿ ಹಿಮಯುಗ ವಾತಾವರಣ ಹಾಗೂ ಶಿಲಾಯುಗ ನೆಲೆಗಳ ಬಗೆಗೆ ಸಂಶೋಧನೆ ನಡೆಸಿದರು. ಬೋರಿವಿಲಿ ಹಾಗೂ ನಲಸೋಪಾರ ಪ್ರದೇಶದಲ್ಲಿ ಹೆರೆಚಕ್ಕೆ–ಅಲಗು ಸಂಪ್ರದಾಯದ ನೆಲೆಗಳನ್ನೂ ಘೋಡ್‌ಬಂದರ್‌ನಲ್ಲಿ ಕೈಗೊಡಲಿಗಳನ್ನೂ ಇವರು ಕಂಡುಹಿಡಿದರು. ಈ ಪ್ರದೇಶದಲ್ಲಿ ಕೈಗೊಡಲಿ ಸಂಸ್ಕೃತಿಯ ಅನಂತರ ಅಲಗು–ಹೆರೆಚಕ್ಕೆ ಸಂಸ್ಕೃತಿಯೂ ಮುಂದೆ ಸೂಕ್ಷ್ಮಶಿಲಾಯುಗ ಸಂಸ್ಕೃತಿಯೂ ಬೆಳೆಯಿತೆಂಬ ಟಾಡ್‌ನ ಅಭಿಪ್ರಾಯವನ್ನು ಇವರ ಅಧ್ಯಯನ ಪುಷ್ಟೀಕರಿಸಿತು.

1949ರಲ್ಲಿ ಜ್ಞಾಯಿನರ್ ಜೊತೆಗೂ 1958ರಲ್ಲಿ ಮ್ಯಾಕ್‌ಕಾನ್ ಜೊತೆಗೂ 1960ರಲ್ಲಿ ಮಿಶ್ರ ಮತ್ತು ಮಹಾಪಾತ್ರ ಜೊತೆಗೂ ಸಾಂಕಳಿಯ ಅವರು ಕಾಂಡಿವಿಲಿ ಪ್ರದೇಶದಲ್ಲಿ ಸರ್ವೇಕ್ಷಣೆ ನಡೆಸಿದರು. ಇವರಿಗೆ ಸಿಕ್ಕಂತಹ ಮೊನೆ, ಕೊರೆಯುಳಿ ಹಾಗೂ ಹೆರೆಚಕ್ಕೆಗಳು ಮಧ್ಯ ಹಳೆಶಿಲಾಯುಗದವು. 1970ರಲ್ಲಿ ವಾಡಿಯಗೆ ಬೋರಿವಿಲಿ ಮತ್ತು ಕಾಂಡಿವಿಲಿಯಲ್ಲಿ ಇದೇ ಸಂಪ್ರದಾಯದ ಉಪಕರಣಗಳು ದೊರೆತವು. ಈ ಹೊತ್ತಿಗಾಗಲೇ ಟಾಡ್ ಪರೀಕ್ಷಿಸಿದಂತಹ ಸ್ತರಗಳು ನಶಿಸಿಹೋಗಿದ್ದವು. ಇದೇ ದಶಕದಲ್ಲಿ ಇವರು ಅಂತ್ಯ ಹಿಮಯುಗದ ಸ್ತರಕ್ರಮ ಹಾಗೂ ಪುರಾತತ್ತ್ವ ದಾಖಲೆಯನ್ನು ಉದ್ದೇಶವಾಗಿಟ್ಟುಕೊಂಡು ಕೊಂಕಣ ಪ್ರದೇಶದಲ್ಲಿ ವ್ಯವಸ್ಥಿತ ಅಧ್ಯಯನ ಕೈಗೊಂಡರು. ಮಾಳ್ವನ್ ಪರಿಸರದಲ್ಲಿ ಇವರಿಗೆ ಕೈಗೊಡಲಿಗಳು ಸಿಕ್ಕವು. ಇಂತಹುದೇ ಕೈಗೊಡಲಿಗಳು 1972ರಲ್ಲಿ ಮಹಾಡ್ ಪ್ರದೇಶದಲ್ಲಿ ಜೋಶಿ ಹಾಗೂ ಬೋಪರ್ಡಿಕರ್ ಕೈಗೊಂಡ ಸರ್ವೇಕ್ಷಣೆಯಲ್ಲಿ ಬೆಳಕಿಗೆ ಬಂದವು. ಈ ಎರಡೂ ನೆಲೆಗಳಲ್ಲಿ ಕೊಚ್ಚುವ ಸಲಕರಣೆಗಳು (ಚಾಪರ್) ಗಣನೀಯವಾಗಿವೆ. ಜೊತೆಗೆ ಅಲಗು, ಚಕ್ಕೆ, ಹೆರೆಚಕ್ಕೆಗಳಿವೆ. ಇವನ್ನು ಬಸಾಲ್ಟ್ ಹಾಗೂ ಬೆಣಚುಕಲ್ಲಿನಿಂದ ತಯಾರಿಸಲಾಗಿದೆ.

ಲಂಡನ್ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿಯಲ್ಲಿ ಇಟ್ಟಿರುವ ಟಾಡ್ ಸಂಗ್ರಹವನ್ನು ಎನ್.ಐಸಾಕ್ ಪುನರ್‌ಪರಿಶೀಲಿಸಿ ವಿವರಿಸಿದ್ದಾರೆ. ಈ ಸಂಗ್ರಹದ ಉಪಕರಣಗಳಲ್ಲಿ ಎರಡು ಮಾತ್ರ ಆದಿ ಹಳೆಶಿಲಾಯುಗದ ಕೈಗೊಡಲಿಗಳೆಂಬುದು ಇದರಿಂದ ತಿಳಿದುಬಂದಿದೆ.

ಒಟ್ಟಾರೆ ಕೊಂಕಣದಲ್ಲಿ ಹಳೆಶಿಲಾಯುಗದ ಉಪಕರಣಗಳು ನಿಶ್ಚಿತ ಸ್ತರಕ್ರಮದಲ್ಲಿ ಕಂಡುಬಂದಿಲ್ಲ. ಟಾಡ್ ಗಮನಿಸಿದ ಸ್ತರಗಳು ಅನುಮಾನಾಸ್ಪದವಾಗಿವೆ. ನಮೂನೆಯ ಆಧಾರದ ಮೇಲೆ ಈ ಪ್ರದೇಶದ ಉಪಕರಣಗಳನ್ನು ಕೊಚ್ಚುವ ಉಪಕರಣ (ಚಾಪರ್) ವರ್ಗ ಹಾಗೂ ಚಕ್ಕೆ–ಅಲಗು–ಹೆರೆಚಕ್ಕೆ ವರ್ಗವಾಗಿ ವಿಭಜಿಸಬಹುದು. ಮೊದಲ ವರ್ಗ ಆದಿ ಹಳೆಶಿಲಾಯುಗದ ಲಕ್ಷಣಗಳನ್ನು ಹೊಂದಿದೆ; ಎರಡನೆಯದು ಮಧ್ಯ ಹಳೆಶಿಲಾಯುಗಕ್ಕೆ ಸೇರಿದುದು.

ಮುಂಬಯಿ ಪ್ರದೇಶದ ಸೂಕ್ಷ್ಮಶಿಲಾಯುಗ ನೆಲೆಗಳನ್ನು ಕಡಲತೀರದ ನೆಲೆ (ಮರ್ವೆ); ಕಡಲ ತೀರದ ದಿಣ್ಣೆಗಳ ಮೇಲಿನ ನೆಲೆ (ಮನೋರಿ, ಯರಂಗಲ್, ಪಾಯಿಂಟ್, ಗೋರಾಯಿ); ಒಳನಾಡಿನ ನದಿತೀರದ ನೆಲೆ (ಕಾಂಡಿವಿಲಿ, ಬೋರಿವಿಲಿ) ಹಾಗೂ ಬೆಟ್ಟಗುಡ್ಡ ಪ್ರದೇಶಗಳ ನೆಲೆಗಳೆಂದು (ಚೆಂಬೂರು, ಮಲಾಡ್) ವಿಂಗಡಿಸಬಹುದು. ಈ ನೆಲೆಗಳಲ್ಲಿ ದೊರೆತ ಉಪಕರಣಗಳನ್ನು ನಿರ್ದಿಷ್ಟ ಹಾಗೂ ಅನಿರ್ದಿಷ್ಟ ಆಕೃತಿಯೆಂದು ವಿಂಗಡಿಸಲಾಗಿದೆ. ಮರ್ವೆ ಹಾಗೂ ಯರಂಗಲ್‌ನ ಉತ್ಖನನಗಳಲ್ಲಿ ದೊರೆತ ಉಪಕರಣಗಳನ್ನು ಹೊರತುಪಡಿಸಿ ಉಳಿದ ಉಪಕರಣಗಳು ನೆಲೆಯ ಮೇಲ್ಮೈಯಲ್ಲಿ ದೊರೆತವು. ಇವನ್ನು ಚರ್ಟ್ ಹಾಗೂ ವಿವಿಧ ರೀತಿಯ ಸಿಲಿಕ ಶಿಲೆಗಳಿಂದ ತಯಾರಿಸಲಾಗಿದೆ. ಮನೋರಿ, ಹಾಗ್ ದ್ವೀಪ, ವೆಹಾರ್ ಸರೋವರ ಮತ್ತು ಕಸುಶೋಅಲ್ ನೆಲೆಗಳಲ್ಲಿ ಮಣಿಗಳು ದೊರೆತಿವೆ. ಮುಂಬಯಿಯ ದಕ್ಷಿಣಕ್ಕಿರುವ ನದಿಗಳ ಸ್ತರಗಳಲ್ಲಿ, ಆಸುಪಾಸಿನ ಹೊಲಗಳಲ್ಲಿ ಹಾಗೂ ಪಾಚಡ್, ಹಾತ್‌ಕಂಬ ಉತ್ಖನನದಲ್ಲಿ ಸೂಕ್ಷ್ಮಶಿಲಾಯುಗದ ನಿರ್ದಿಷ್ಟ ಮಾದರಿಯ ಉಪಕರಣಗಳನ್ನು ಶೋಧಿಸಲಾಗಿದೆ.

ನಮೂನೆಯ ಆಧಾರದ ಮೇಲೆ ಕೊಂಕಣದ ಸೂಕ್ಷ್ಮಶಿಲಾಯುಗ ಪ್ರ.ಶ.ಪೂ.500ರ ಅವಧಿಯದೆಂದು ಟಾಡ್ ಊಹಿಸಿದ. ಗೋರ್ಡನ್ ಪ್ರಕಾರ ಈ ಪ್ರದೇಶದಲ್ಲಿ ಸೂಕ್ಷ್ಮಶಿಲಾಯುಗ ಪ್ರ.ಶ.ಪೂ.8000–6000ದ ಅವಧಿಯಲ್ಲಿ ಅಸ್ತಿತ್ವದಲ್ಲಿತ್ತು. (ಕೆ.)

**ಕಾಂಚೀಪುರಂ:** ತಮಿಳುನಾಡು ರಾಜ್ಯದ ಚೆಂಗಲ್‌ಪೇಟ್ ಜಿಲ್ಲೆಯ ಆಡಳಿತ ಕೇಂದ್ರ; ಪ್ರಸಿದ್ಧ ಯಾತ್ರಾಸ್ಥಳ. ಪಾಲಾರ್ ನದಿ ಈ ನಗರದ ಪಶ್ಚಿಮ ಭಾಗದಲ್ಲಿ ಸಾಗಿ ಅದರ ಉಪನದಿಗಳಲ್ಲಿ ಒಂದಾದ ವೇಗವತಿಯನ್ನು ಸೇರಿಕೊಳ್ಳುತ್ತದೆ. ಪಾಲಾರ್ ನದಿ ಮತ್ತು ವೇಗವತಿ – ಇವೆರಡೂ ಕೂಡುವ ಸ್ಥಳಕ್ಕೆ ರೆನ್ನುಮ ಕೂಡಲು ಎಂಬ ಹೆಸರಿದ್ದು ಇದು ಕಾಂಚೀಪುರಂಗೆ ಕೆಲವೇ ಕಿಮೀ ದೂರದಲ್ಲಿದೆ.

ಕಾಂಚಿ ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ನಗರಗಳಲ್ಲೊಂದು. ಪ್ರ.ಶ.ಪೂ. 3ನೆಯ ಶತಮಾನದಿಂದ ತಮಿಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಸ್ಥಳ ಮಹಾಭಾರತ ಮತ್ತು ಪುರಾಣಗಳಲ್ಲಿ ಉಲ್ಲೇಖಗೊಂಡಿದೆ.

ಕೈಲಾಸನಾಥ ದೇವಾಲಯ

ಇತಿಹಾಸದುದ್ದಕ್ಕೂ ಇದು ಏಳುಬೀಳುಗಳನ್ನು ಕಂಡಿದ್ದರೂ ಇಂದಿಗೂ ತನ್ನ ಐತಿಹಾಸಿಕ ಮಹತ್ತ್ವವನ್ನು ಉಳಿಸಿಕೊಂಡಿದೆ. ಸಂಗಂ ಸಾಹಿತ್ಯದ ಕಾಲದಲ್ಲಿ ಐತಿಹಾಸಿಕವಾಗಿ ಪ್ರಥಮ ಬಾರಿಗೆ ಬೆಳಕಿಗೆ ಬಂದಿತು. ತರುವಾಯ ಇದು ಪಲ್ಲವರ ರಾಜಧಾನಿಯಾಗಿ ದಕ್ಷಿಣ ಭಾರತದ ಸುಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಬೌದ್ಧ, ಜೈನ, ಶೈವ ಮತ್ತು ವೈಷ್ಣವ ಪಂಥಗಳ ಅನುಯಾಯಿಗಳಿಗೂ ಇದು ಮುಖ್ಯ ಸ್ಥಳ. ಈ ನಗರವನ್ನು ಸ್ಥೂಲವಾಗಿ ವಿಷ್ಣು ಕಾಂಚಿ, ಶಿವ ಕಾಂಚಿ ಮತ್ತು ಜಿನ ಕಾಂಚಿ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಈ ಪಂಥಗಳ ಅನುಯಾಯಿಗಳು ಈಗಲೂ ಇಲ್ಲಿಗೆ ದೊಡ್ಡ ಪ್ರಮಾಣದಲ್ಲಿ ಬರುತ್ತಾರೆ. ಈ ಸ್ಥಳ ವಿಶೇಷವಾಗಿ ಶೈವ ಮತ್ತು ವೈಷ್ಣವ ದೇವಾಲಯಗಳಿಗೆ ಪ್ರಸಿದ್ಧ. ಇಲ್ಲಿಯ ಕೆತ್ತನೆಗಳ ಸೌಂದರ್ಯ ಕಣ್ಮನ ಸೆಳೆಯುವಂತಿದೆ. ಕಾಂಚಿ ಅಥವಾ ಕಾಚಿ ಎಂಬ ನಗರ ವ್ಯುತ್ಪತ್ತಿಯ ಬಗೆಗೆ ಅನೇಕ ವ್ಯಾಖ್ಯಾನಗಳಿವೆ. ವಿದ್ವಾಂಸರಾದ ವಿ.ವಿ. ಮಹಾಲಿಂಗ ಅವರು ಕಾಂಚಿ ಎಂಬ ವೃಕ್ಷದಿಂದ ಈ ಹೆಸರು ಬಂದಿರಬಹುದೆಂದು ಹೇಳಿರುವುದು ಗಮನಾರ್ಹ. ಭೌಗೋಳಿಕವಾಗಿ ಈ ಸ್ಥಳ ಅನುಕೂಲಕರ ಆಯಕಟ್ಟಿನ ಜಾಗದಲ್ಲಿದೆ. ಪ್ರಾಚೀನ ಕಾಲದಿಂದಲೂ ಇಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯ ವಹಿವಾಟುಗಳು ನಡೆದು ಬಂದುದಕ್ಕೆ ಇಲ್ಲಿ ದಾಖಲೆಗಳಿವೆ. ವಾಣಿಜ್ಯ ಮಹತ್ತ್ವದಿಂದ ಕದಂಬರು, ಗಂಗರು, ಚಾಳುಕ್ಯರು ಮತ್ತು ರಾಷ್ಟ್ರಕೂಟರು ಸಹ ಈ ನಗರದೊಂದಿಗೆ ಸಂಪರ್ಕವನ್ನಿಟ್ಟುಕೊಂಡಿದ್ದರು. ಕರ್ನಾಟಕದ ಕದಂಬ ವಂಶ ಸ್ಥಾಪಕ ಮಯೂರಶರ್ಮನೂ ಇಲ್ಲಿಗೆ ಅಧ್ಯಯನ ಮಾಡಲು ಬಂದಿದ್ದ **(ನೋಡಿ–ಕದಂಬ ವಂಶ)**. ಕಂಚಿ ಪ್ರಾಚೀನ ತೊಂಡೈ ಮಂಡಲಂ ರಾಜ್ಯದ ಒಂದು ಆಡಳಿತ ಘಟಕವಾಗಿತ್ತು. ಇಲ್ಲಿನ ಮುಖ್ಯ ಕೈಗಾರಿಕೆ ರೇಷ್ಮೆನೇಯುವುದು. ಕಂಚಿಯ ರೇಷ್ಮೆ ಪ್ರಪಂಚಪ್ರಸಿದ್ಧವಾಗಿದೆ.

ಪಲ್ಲವ ರಾಜಸಿಂಹ ಮತ್ತು ಇಮ್ಮಡಿ ನರಸಿಂಹವರ್ಮ ಕಂಚಿಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದಾಗ ಇಲ್ಲಿ ಕೈಲಾಸನಾಥ ದೇವಾಲಯವನ್ನು ಕಟ್ಟಿಸಿದ್ದ (ಸು. 8ನೆಯ ಶತಮಾನದ ಮಧ್ಯಭಾಗ). ಇದರ ಪ್ರಾಕಾರದ ಒಳಹೊರ ಪಾರ್ಶ್ವಗಳಲ್ಲಿ ಪರಿವಾರ ದೇವತೆಗಳಿಗೆ ಸಣ್ಣ ಗುಡಿಗಳ ಸಾಲುಗಳಿರುವುದು ಗಮನಾರ್ಹ. ಸಣ್ಣ ಶಿಖರ ಸಹ ಈ ಆಲಯಗಳಿಗಿದೆ. ಈ ಬಗೆಯ ರಚನೆಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದದ್ದು. ಪ್ರಧಾನ ಗರ್ಭಗೃಹದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿದೆ. ಇದಕ್ಕೆ ಪೂರಕವಾಗಿ ಹೊರ ಮುಖವಾಗಿ ಇನ್ನೂ ಏಳು ಗುಡಿಗಳಿವೆ. ಆದರೆ ಅನಂತರದ ಕಾಲದಲ್ಲಿ ಈ ಉಪಗುಡಿಗಳನ್ನೂ ಮುಖ್ಯ ಗುಡಿಯಿಂದ ಪ್ರತ್ಯೇಕಿಸಿ ದೇವಾಲಯದ ಅಂಗಳದಲ್ಲಿ ಕಟ್ಟುವ ಪದ್ಧತಿ ಅಸ್ತಿತ್ವಕ್ಕೆ ಬಂತು. ಈ ನಗರದ ವೈಕುಂಠ ಪೆರುಮಾಳ್ ದೇವಾಲಯ ಸು. 8ನೆಯ ಶತಮಾನದ ಮಧ್ಯಭಾಗಕ್ಕೆ ಸೇರಿದ್ದಾಗಿದೆ. ಇದಕ್ಕೆ ಮೂರು ಅಂತಸ್ತುಗಳ ವಿಮಾನವಿದೆ. ಇಂಥ ವಿಮಾನಗಳನ್ನು ಅಷ್ಟಾಂಗ ವಿಮಾನಗಳೆಂದು ಕರೆಯಲಾಗಿದೆ. ಈ ಬಗೆಯ ವಿಮಾನಕ್ಕೆ ಇದು ಬಹುಶಃ ಪ್ರಾಚೀನ ನಿದರ್ಶನ.

ಇಲ್ಲಿ ಅನೇಕ ಪುರಾತತ್ತ್ವ ಶೋಧಕಾರ್ಯಗಳು ನಡೆದಿವೆ. 1953–54ರಲ್ಲಿ ಕಾಂಚೀಪುರಂ ನಗರದ ಹೊರ ಭಾಗದಲ್ಲಿರುವ ಪಲಿಮೇಡು ಅಥವಾ ಪಲ್ಲವಮೇಡು ಎಂಬಲ್ಲಿ ಈ ನಗರದ ಸಾಂಸ್ಕೃತಿಕ ಬೆಳೆವಣಿಗೆಯನ್ನು ತಿಳಿಯಲು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯವರು ಉತ್ಖನನ ನಡೆಸಿದರು. ಈ ಉತ್ಖನನದಲ್ಲಿ ನಾಲ್ಕು ಸ್ತರಗಳನ್ನು ಗುರುತಿಸಲಾಯಿತು. ಕೆಳಸ್ತರದಲ್ಲಿ ಬಳೆಬಾವಿಗಳು ಕಂಡುಬಂದವು ಹಾಗೂ ನೂರಾರು ಬಳೆ ಚೂರುಗಳು ದೊರೆತವು. ಇದರಿಂದಾಗಿ ಈ ಸ್ಥಳ ಬಳೆ ತಯಾರು ಮಾಡುವ ಕೈಗಾರಿಕೆಯ ಸ್ಥಳವೆಂದು ತಿಳಿಯಿತು. 1970–71ರಲ್ಲಿ ತಮಿಳುನಾಡು ರಾಜ್ಯದ ಪುರಾತತ್ತ್ವ ಇಲಾಖೆಯವರು ಈ ಸ್ಥಳದಲ್ಲಿ ಉತ್ಖನನ ಕೈಗೊಂಡರು. 1962–63ರಲ್ಲಿ ಭಾರತೀಯ ಪುರಾತತ್ತ್ವ ಇಲಾಖೆಯವರು ಕಂಚಿಯ ಶಂಕರಚಾರ್ಯ ಕಾಮಕೋಟಿ ಪೀಠದಲ್ಲೂ ಉತ್ಖನನ ಕಾರ್ಯಮಾಡಿದ್ದಾರೆ. ಹಾಗೆಯೇ 1970–1976ರ ವರೆವಿಗೆ ಮದರಾಸು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಟಿ.ವಿ.ಮಹಾಲಿಂಗಮ್ ಅವರ ನೇತೃತ್ವದಲ್ಲಿ ಉತ್ಖನನ ಕೈಗೊಂಡು ಅನೇಕ ಪ್ರಾಚ್ಯವಸ್ತುಗಳನ್ನು ಬೆಳಕಿಗೆ ತಂದಿತು; ಅವುಗಳ ಕಾಲಮಾನವನ್ನೂ ನಿರ್ಧರಿಸಲಾಯಿತು. ಇಲ್ಲಿ ದೊರೆತ ಕೆಲವು ಮುಖ್ಯ ಅವಶೇಷಗಳು: ಕಪ್ಪು ಮತ್ತು ಕೆಂಪು ಮಡಕೆಗಳು, ಜೇಡಿಮಣ್ಣಿನ ಪಾತ್ರೆಗಳು, ಗಾಜಿನ ಮಣಿಗಳು, ತಾಮ್ರದ ಸಾಮಾನುಗಳು, ಶಂಖದ ಬಳೆಗಳು, ಕಬ್ಬಿಣದ ಸಾಮಾನುಗಳು ಇಲ್ಲಿಯ ಸಾಂಸ್ಕೃತಿಯ ಮೂರು ಹಂತಗಳ ಕಾಲಮಾನ ಇಂತಿವೆ: ಹಂತ1: ಪ್ರ.ಶ.ಪೂ. 300–ಪ್ರ.ಶ. 100 ರವರೆಗೆ. ಹಂತ 2ಎ: 100 ರಿಂದ 500. ಹಂತ 2ಬಿ: 500 ರಿಂದ 1000. ಹಂತ 3: 1000 ರಿಂದ 1500. (ಡಿ.ಟಿ.)

**ಕಾಕತೀಯರು:** ಮೊದಲಿಗೆ ಹನುಮಕೊಂಡ ಮತ್ತು ಅನಂತರ ವಾರಂಗಲ್ ರಾಜಧಾನಿಗಳಿಂದ ಆಂಧ್ರಪ್ರದೇಶದಲ್ಲಿ 12ನೆಯ ಶತಮಾನದಿಂದ ಸು. 200 ವರ್ಷಕಾಲ ಆಳಿದ ಮನೆತನ. ಕಾಕತಿ ಗ್ರಾಮ ಮತ್ತು ಈ ಗ್ರಾಮದ ದೇವತೆ ಕಾಕತಮ್ಮ–ಇವು ಕಾಕತೀಯ ಪದದ ಮೂಲವನ್ನು ಸೂಚಿಸುತ್ತವೆ.

1ನೆಯ ಬೇತನಿಂದ ಈ ವಂಶದ ಚರಿತ್ರೆ ನಿಶ್ಚಿತವಾಗಿ ಗೊತ್ತಾಗಿದೆ. ಇವನು ಕಲ್ಯಾಣದ ಚಾಳುಕ್ಯ ಸಾಮ್ರಾಜ್ಯಕ್ಕೆ ಸೇರಿದ್ದ ತೆಲಂಗಾಣ ಪ್ರದೇಶದಲ್ಲಿ ಸಾಮಾನ್ಯ ನಾಯಕನಾಗಿದ್ದ. ಇವನ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲ. ಕಲ್ಯಾಣ ಚಾಳುಕ್ಯ 1ನೆಯ ಸೋಮೇಶ್ವರ (1043–68) ಚೋಳರಾಜ್ಯದಲ್ಲಿ ಮಾಡಿದ ದಂಡಯಾತ್ರೆಯಲ್ಲಿ ಈತ ಭಾಗಹಿಸಿದ್ದ. ಇವನ ಮಗ 1ನೆಯ ಪ್ರೋಲ ಶತ್ರುದಮನ ಮಾಡಿ ಆ ಚಾಳುಕ್ಯ ದೊರೆಯಿಂದ ಹನುಮಕೊಂಡ ಸೀಮೆಯ ಸ್ವಾಮಿತ್ವವನ್ನು ಪಡೆದುಕೊಂಡ. ಇದು ಈ ವಂಶದ ಅಭ್ಯುದಯಕ್ಕೆ ನಾಂದಿ ಆಯಿತು. ಯುವರಾಜ ವಿಕ್ರಮಾದಿತ್ಯನ ಕೊಂಕಣ, ಚೋಳದೇಶ, ವೇಂಗಿ ಮತ್ತು ಚಕ್ರಕೂಟಗಳ ದಂಡಯಾತ್ರೆಯಗಳಲ್ಲಿ ಪ್ರೋಲ ಭಾಗಿಯಾಗಿ ಆತನ ವಿಜಯಕ್ಕೆ ಸಹಾಯಕನಾದ. ಇವನ ಮಗ 2ನೆಯ ಭೇತ (1075–90) 6ನೆಯ ವಿಕ್ರಮಾದಿತ್ಯನಿಗೆ (1076–1126) ವಿರೋಧವಾಗಿ ವರ್ತಿಸಿ ಆತನ ಕ್ರೋಧಕ್ಕೆ ಈಡಾದರೂ ಅನಂತರ ಕ್ಷಮೆ ಕೋರಿ ತನ್ನ ಪಿತ್ರಾರ್ಜಿತ ರಾಜ್ಯವನ್ನು ಮತ್ತೆ ಸಂಪಾದಿಸಿಕೊಂಡ. ವಿಕ್ರಮಾದಿತ್ಯನ ಪರವಾಗಿ ಇವನು ಮಾಳವದ ಪರಮಾರ ಉದಯಾದಿತ್ಯ, 1ನೆಯ ಕುಲೋತ್ತುಂಗ ಚೋಳ–ಇವರ ಮೇಲೆ ಜಯಗಳಿಸಿದ. ಸುಪ್ರೀತನಾದ ವಿಕ್ರಮಾದಿತ್ಯ ತ್ರಿಭುವನ ಮಲ್ಲ ಎಂಬ ಬಿರುದನ್ನೂ ಸಬ್ಬಿ1000 ಪ್ರಾಂತವನ್ನೂ ಇವನಿಗೆ ಕೊಟ್ಟಂತೆ ಕಾಣುತ್ತದೆ.

2ನೆಯ ಪ್ರೋಲ ಇವನ ಅನಂತರ ಅಧಿಕಾರಕ್ಕೆ ಬಂದ (1115). ಈತ ಪರಾಕ್ರಮಿ, ಮಹಾತ್ವಾಕಾಂಕ್ಷಿ. ಆಗ 6ನೆಯ ವಿಕ್ರಮಾದಿತ್ಯನ ರಾಜ್ಯಭಾರ ಕೊನೆಯ ಹಂತ ಮುಟ್ಟಿತ್ತು. 1126ರಲ್ಲಿ ವಿಕ್ರಮಾದಿತ್ಯ ಮರಣ ಹೊಂದಿದ. ಅನಂತರ ಬಂದ ಚಾಳುಕ್ಯ ಅರಸರು ಸಮರ್ಥರಾಗಿರಲಿಲ್ಲ. ಈ ಸನ್ನಿವೇಶ ಪ್ರೋಲನ ರಾಜ್ಯ ವಿಸ್ತರಣಾಕಾಂಕ್ಷೆಯನ್ನು ಸಫಲಗೊಳಿಸಿತು. ಈತ ಕೊಂಡಪಲ್ಲಿಯ ಗೋವಿಂದರಾಜ ಮತ್ತು ಮಂತ್ರಕೂಟದ ಗುಂಡರನ್ನು ಸೋಲಿಸಿ, ಆ ಪ್ರದೇಶಗಳನ್ನು ವಶಪಡಿಸಿಕೊಂಡುದಲ್ಲದೆ ಚಾಳುಕ್ಯ ಚಕ್ರವರ್ತಿ 3ನೆಯ ತೈಲಪನನ್ನು ಸೆರೆಹಿಡಿದು ಅನಂತರ ದಯೆತೋರಿ ವಿಮುಕ್ತಿಗೊಳಿಸಿದನಲ್ಲದೆ ಚಾಳುಕ್ಯರ ಮಾಂಡಲಿಕತ್ವವನ್ನು

ತ್ಯಜಿಸಿ ಸ್ವತಂತ್ರನಾದ. ಆರಂಭದಲ್ಲಿ ತೆಲಂಗಾಣದ ವಾರಂಗಲ್ ಮತ್ತು ಕರೀಂನಗರ ಜಿಲ್ಲೆಗಳ ಪ್ರದೇಶಕ್ಕೆ ಸೀಮಿತವಾಗಿದ್ದ ಕಾಕತೀಯ ಆಧಿಪತ್ಯ ಅನಂತರ ಗೋದಾವರೀ ಕೃಷ್ಣಾ ನದಿಗಳ ನಡುವಣ ಭೂಭಾಗವನ್ನೂ ವ್ಯಾಪಿಸಿತು. ಪ್ರೋಲ ಸು.1158ರ ವರೆಗೆ ಜೀವಿಸಿದ್ದ.

ಅನಂತರ ಪಟ್ಟಕ್ಕೆ ಬಂದ ಪ್ರೋಲನ ಪುತ್ರ ರುದ್ರದೇವನಿಂದ ಕಾಕತೀಯ ಚರಿತ್ರೆಯಲ್ಲಿ ಸ್ವತಂತ್ರ ಸಾಮ್ರಾಜ್ಯಾಧಿಕಾರದ ಹೊಸ ಅಧ್ಯಾಯ ಪ್ರಾರಂಭವಾಗುತ್ತದೆ. ರುದ್ರದೇವ ಸಂಗ್ರಾಮವೀರ, ಪ್ರತಾಪಶಾಲಿ. ಇವನು ನೆರೆನಾಡಿನ ಹಲವು ನಾಯಕರೊಡನೆ ಯುದ್ಧಹೂಡಿ ಅವರ ರಾಜ್ಯಗಳನ್ನು ವಶಪಡಿಸಿಕೊಂಡ. ಇವನು ಜಯಿಸಿದ ವೈರಿಗಳಲ್ಲಿ ತೋಟ ನಾಯಕರು, ತೆಲುಗು ಚೋಳರು, ಮತ್ತು ಚಾಳುಕ್ಯ 3ನೆಯ ತೈಲಪ ಪ್ರಮುಖರು. ಕರಾವಳಿಯ ಪ್ರದೇಶವನ್ನೂ ವೆಂಗಿ ಮಂಡಲವನ್ನೂ ಗೆಲ್ಲಲು ಇವನಿಗೆ ಸಾಧ್ಯವಾಗಲಿಲ್ಲ. ಆದರೂ ಇವನಿಗೆ ಗೋದಾವರಿ ಕೃಷ್ಣಾನದಿಗಳ ಮಧ್ಯದ ವಿಸ್ತಾರವಾದ ರಾಜ್ಯ ವಶವಾಗಿತ್ತು. ರುದ್ರದೇವ ತನ್ನ ಆಳ್ವಿಕೆಯ ಕೊನೆಯ ಭಾಗದಲ್ಲಿ ಹನುಮಕೊಂಡ ರಾಜಧಾನಿಯ ಪಕ್ಕದಲ್ಲಿ ಓರುಗಲ್ಲು (ಈಗಿನ ವಾರಂಗಲ್) ಎಂಬ ಹೊಸ ನಗರವನ್ನು ಕಟ್ಟಿಸಿದ. ಇದು ಮುಂದೆ ಇವರ ಆಳ್ವಿಕೆಯಲ್ಲಿ ಸಮಸ್ತ ಆಂಧ್ರಪ್ರದೇಶದ ರಾಜಧಾನಿಯಾಯಿತು. ಇತ್ತ ಕಾಕತೀಯರು ಊರ್ಜಿತವಾಗುತ್ತಿದ್ದಾಗ ಅತ್ತ ಪಶ್ಚಿಮದಲ್ಲಿ ಸೇವುಣರು ಪ್ರಬಲರಾಗುತ್ತಿದ್ದರು. ಈ ಪ್ರತಿಸ್ಪರ್ಧಿಗಳಲ್ಲಿ ರುದ್ರದೇವ ಸು. 1196ರಲ್ಲಿ ನಡೆದ ಸಮರದಲ್ಲಿ ಹತನಾದ.

ರುದ್ರದೇವನ ಅನಂತರ (ಸು. 1195) ಪಟ್ಟಕ್ಕೆ ಬಂದ ಆತನ ತಮ್ಮ ಮಹಾದೇವ 3 ವರ್ಷ ಮಾತ್ರ ಅಧಿಕಾರದಲ್ಲಿದ್ದ. ಇವನು ಸೇವುಣರ ರಾಜಧಾನಿ ದೇವಗಿರಿಯ ಮೇಲೆ ಧಾಳಿ ಮಾಡಿ ಸು. 1198ರಲ್ಲಿ ನಡೆದ ಕದನದಲ್ಲಿ ನಿಧನನಾದ. ಅದೇ ಕಾಲಕ್ಕೆ ಮಹಾದೇವನ ಮಗ ಗಣಪತಿದೇವ ಶತ್ರುಗಳ ಕೈಗೆ ಸಿಕ್ಕಿ ದೇವಗಿರಿಯ ಕಾರಾಗೃಹದಲ್ಲಿರಬೇಕಾಯಿತು. ಸ್ವಲ್ಪ ಕಾಲಾನಂತರ ಸೆರೆಮನೆಯಿಂದ ಹೊರಬಂದ ಗಣಪತಿದೇವ ಮರಳಿ ತನ್ನ ರಾಜ್ಯಕ್ಕೆ ಬಂದಾಗ ಅಲ್ಲಿ ಅರಾಜಕತೆ ಉಂಟಾಗಿತ್ತು. ನೆರೆಯ ಅರಸರು ದಂಡೆತ್ತಿ ಬಂದಿದ್ದರು. ಈ ಅವ್ಯವಸ್ಥೆಯನ್ನು ಕೊನೆಗೊಳಿಸಿ ಸೇನಾಪತಿ ರೇಚರ್ಲ ರುದ್ರ ಪುನಃ ಕಾಕತೀಯ ಪ್ರಭುತ್ವವನ್ನು ಸ್ಥಿರಗೊಳಿಸಿದ.

ಗಣಪತಿದೇವ (1198–1261) ಸು.63 ವರ್ಷ ರಾಜ್ಯಭಾರ ಮಾಡಿದ. ಈತ ಪಟ್ಟಕ್ಕೆ ಬಂದಾಗ ಕಲ್ಯಾಣದ ಚಾಳುಕ್ಯರ ಮತ್ತು ಚೋಳರ ಸಾಮ್ರಾಜ್ಯಗಳು ಅಸ್ತಂಗತವಾಗಿ, ತುಂಡರಸರೂ ಪ್ರಾದೇಶಿಕ ಪಾಳೆಯಗಾರರೂ ತಲೆಯೆತ್ತಿ ರಾಜ್ಯಲಾಲಸೆಯಿಂದ ಕಾದಾಡುತ್ತಿದ್ದರು. ಶಕ್ತಿವಂತನೂ ಮಹತ್ವಾಕಾಂಕ್ಷಿಯೂ ರಾಜನೀತಿಚತುರನೂ ಕಾರ್ಯತತ್ಪರನೂ ಆದ ಗಣಪತಿ ಈ ಪರಿಸ್ಥಿತಿಯನ್ನು ತನ್ನ ರಾಜ್ಯಾಭಿವೃದ್ಧಿಗೆ ಬಳಸಿಕೊಂಡ. ಎಡೆಬಿಡದೆ ಅನೇಕ ಯುದ್ಧಗಳನ್ನು ಮಾಡಿ, ಪೂರ್ವ ಕರಾವಳಿ ಪ್ರದೇಶದ ವೆಲನಾಡು ನಾಯಕರ ಪ್ರದೇಶವನ್ನು ಆಕ್ರಮಿಸಿದ. ಇದರಿಂದ ಕಾಕತೀಯ ಸಾಮ್ರಾಜ್ಯರೇಖೆ ಪೂರ್ವಸಾಗರದ ವರೆಗೆ ಚಾಚಿತು. ದಕ್ಷಿಣದಲ್ಲಿ ನೆಲ್ಲೂರಿನ ತೆಲುಗು ಚೋಳನಾಯಕರ ಸಹಾಯದಿಂದ ಇವನ ವರ್ಚಸ್ಸು ಬೆಳೆಯಿತು. ಈತ ಕಳಿಂಗದ ಪೂರ್ವಗಂಗರೊಡನೆ ಮತ್ತು ಮಧುರೆಯ ಪಾಂಡ್ಯರೊಡನೆ ಯುದ್ಧಮಾಡಿ ಅತ್ಯಂತ ಸಮರ್ಥನೆಂಬ ಖ್ಯಾತಿ ಗಳಿಸಿದ.

ಗಣಪತಿ ದಕ್ಷ ಶಾಸಕ, ಪ್ರಜಾಹಿತ ಚಿಂತಕ. ಕೃಷಿ ವ್ಯಾಪಾರಗಳಿಗೆ ಪ್ರೋತ್ಸಾಹವಿತ್ತುದರಿಂದ ಆರ್ಥಿಕ ಅಭಿವೃದ್ಧಿ ಸಾಧ್ಯವಾಯಿತು. ಈತ ರಾಜಧಾನಿಯನ್ನು ಹನುಮಕೊಂಡದಿಂದ ಓರುಗಲ್ಲಿಗೆ (ವಾರಂಗಲ್ಲಿಗೆ) ಸ್ಥಳಾಂತರಿಸಿ ಅದರ ಸುತ್ತ ಭದ್ರವಾದ ಕೋಟೆ ಕಟ್ಟಿಸಿದ. ಈ ಕಾಲದಲ್ಲಿ ಕಾಕತೀಯ ರಾಜ್ಯಕ್ಕೆ ಸಾಮ್ರಾಜ್ಯದ ಘನತೆ ಬಂತು. ಮುಖ್ಯವಾಗಿ ತೆಲುಗು ಭಾಷೆಯ ನೆಲವನ್ನೆಲ್ಲ ಒಂದೇ ರಾಜ್ಯಶಾಸನಕ್ಕೆ ಒಳಪಡಿಸಿದ ಕೀರ್ತಿ ಇವನದು.

ಗಣಪತಿಗೆ ಗಂಡುಸಂತಾನವಿರಲಿಲ್ಲ; ರುದ್ರಾಂಬಾ (ರುದ್ರಮಹಾದೇವಿ) ಮತ್ತು ಗಣಪಾಂಬಾ (ಗಣಪಮಹಾದೇವಿ) ಇವನ ಪುತ್ರಿಯರು. ರುದ್ರಾಂಬಾ ಪೂರ್ವ ಚಾಳುಕ್ಯ ವಂಶದ ರಾಜಕುಮಾರ ವೀರಭದ್ರನನ್ನು ವರಿಸಿದ್ದಳು. ಗಣಪತಿದೇವ ಈಕೆಯನ್ನು ತನ್ನ ರಾಜ್ಯಕ್ಕೆ ಉತ್ತರಾಧಿಕಾರಿಣಿಯಾಗಿ ನೇಮಿಸಿ, ರುದ್ರದೇವ ಎಂಬ ಪುರುಷನಾಮದಿಂದ ಕರೆದ. ಗಣಪತಿಗೆ ಮುಪ್ಪಡರಿದಾಗ ಸು.1259ರ ಹೊತ್ತಿಗೆ–ರುದ್ರಮಹಾದೇವಿ ರಾಜ್ಯಭಾರದಲ್ಲಿ ಭಾಗವಹಿಸತೊಡಗಿದಳು. ಒಂದೆರಡು ವರ್ಷಗಳಲ್ಲಿ ಈತ ಅಧಿಕಾರದಿಂದ ನಿವೃತ್ತನಾದ. ಅನಂತರ ರಾಜಪುತ್ರಿಯೇ ರಾಜ್ಯಸೂತ್ರವನ್ನು ಸ್ವತಂತ್ರವಾಗಿ ವಹಿಸಿಕೊಂಡಳು. ಅನಂತರವೂ ಕೆಲವು ವರ್ಷಗಳ ಕಾಲ ಗಣಪತಿ ಬದುಕಿದ್ದ.

ರುದ್ರಮಹಾದೇವಿ ರಾಜ್ಯಾಧಿಕಾರ ವಹಿಸಿಕೊಂಡದ್ದು ಕೆಲವು ರಾಜವಂಶದವರ ಮತ್ತು ನಾಯಕರ ಅಸಹನೆ ಮತ್ತು ಪ್ರತಿಭಟನೆಗಳಿಗೆ ಕಾರಣವಾಯಿತು. ಆದರೆ ರೇಚರ್ಲ ಪ್ರಸಾದಿತ್ಯ, ಗೋನಗನ್ನಯರೆಡ್ಡಿ ಮೊದಲಾದ ಹಲವು ಸ್ವಾಮಿನಿಷ್ಠ ಸಾಮಂತರ ಮತ್ತು ಅಧಿಕಾರಿಗಳ ಬೆಂಬಲ ದೊರೆತದ್ದರಿಂದ ಈಕೆ ತನ್ನ ರಾಜ್ಯಭಾರವನ್ನು 35 ವರ್ಷಗಳ ಕಾಲ (1261–95) ಸ್ಥೈರ್ಯದಿಂದ ನಡೆಸಿದಳು. ಒಳಗಿನ ಶತ್ರುಗಳಿಗಿಂತ ಹೆಚ್ಚಾಗಿ ಬಾಹ್ಯ ಶತ್ರುಗಳಿಂದ ಈಕೆಗೆ ಆತಂಕಗಳು ಒದಗಿದವು. ಹೊರಗಿನ ಶತ್ರುಗಳ ಪೈಕಿ ಪೂರ್ವದಲ್ಲಿ ಕಳಿಂಗದ ಗಜಪತಿ, ಪಶ್ಚಿಮದಲ್ಲಿ ಸೇವುಣರು ಮತ್ತು ದಕ್ಷಿಣದಲ್ಲಿ ಪಾಂಡ್ಯರು ಪ್ರಮುಖರು.

ರುದ್ರಮಹಾದೇವಿ ಸಮರ್ಥ ರೀತಿಯಿಂದ ರಾಜ್ಯಭಾರ ಮಾಡಿದಳು. ಪೂರ್ವಭಾಗದಲ್ಲಿ ಗೋದಾವರಿಯ ಮತ್ತು ವೆಂಗಿಯ ಪ್ರದೇಶಗಳು ಕೆಲಕಾಲ ಕೈಬಿಟ್ಟು ಹೋಗಿ ಮತ್ತೆ ಸ್ವಾಧೀನವಾದುವು. ಸೇವುಣರ ಆಕ್ರಮಣವನ್ನು ಶೌರ್ಯದಿಂದ ವಿರೋಧಿಸಿದಳು. ಪಾಂಡ್ಯರು ಆಕ್ರಮಿಸಿದ್ದ ಪ್ರದೇಶಗಳನ್ನು ಗೆದ್ದುಕೊಂಡಳು. ಈ ಸಮರಗಳಲ್ಲಿ ರುದ್ರಮಹಾದೇವಿಯ ಮಗಳ ಮಗನೂ ದತ್ತುಪುತ್ರನೂ ಆದ ಕುಮಾರ ರುದ್ರದೇವ ಪರಾಕ್ರಮದಿಂದ ಹೋರಾಡಿ ಜಯಗಳಿಸಿದ. ಆಂಧ್ರದೇಶದ ಮತ್ತು ಭಾರತದ ಚರಿತ್ರಾರ್ಹ ಮಹಿಳೆಯರಲ್ಲಿ ಈಕೆಯೂ ಒಬ್ಬಳು. ಸ್ತ್ರೀಯಾದರೂ ಈಕೆ ರಾಜಕಾರ್ಯದಲ್ಲಿಯೂ ಶೌರ್ಯ ಪರಾಕ್ರಮದಲ್ಲಿಯೂ ಯಾವ ರಾಜನಿಗೂ ಕಡಿಮೆಯಿರಲಿಲ್ಲ. ಪುರುಷವೇಷ ಧರಿಸಿ ಉತ್ಸಾಹದಿಂದ ಸಕಲ ರಾಜಕೀಯ ವ್ಯವಹಾರಗಳನ್ನೂ ನಿರ್ವಹಿಸುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಸಮರಭೂಮಿಯಲ್ಲಿಯೂ ಮುನ್ನುಗ್ಗುತ್ತಿದ್ದದ್ದುಂಟು. ಈಕೆಯ ಆಳಿಕೆಯಲ್ಲಿ ಪ್ರಜೆಗಳು ಸುಖಸಮಾಧಾನಗಳಿಂದ ಬಾಳಿದರು.

ರುದ್ರಮಹಾದೇವಿಯ ಮರಣಾನಂತರ ಕುಮಾರ ರುದ್ರದೇವ 1295ರಲ್ಲಿ ತನ್ನ 35ನೆಯ ವಯಸ್ಸಿನಲ್ಲಿ ಪಟ್ಟವೇರಿದ. ಇವನಿಗೆ ಪ್ರತಾಪರುದ್ರನೆಂದೂ ಹೆಸರಿತ್ತು. ಇವನಿಗೆ ರಾಜನೀತಿ ಯುದ್ಧನೀತಿಗಳಲ್ಲಿ ಸಾಕಷ್ಟು ಅನುಭವವಿತ್ತು. ಶತ್ರುಗಳ ಆಕ್ರಮಣವನ್ನು ವಿರೋಧಿಸಲು ಇವನು ಸೈನ್ಯವನ್ನು ಸಂಗ್ರಹಿಸಿ ಅದರ ಬಲವನ್ನೂ ಸಂಘಟನೆಯನ್ನೂ ಹೆಚ್ಚಿಸಿದ. ಈ ಹೊತ್ತಿಗೆ ದಿಲ್ಲಿಯ ಸಿಂಹಾಸನವನ್ನು ಆಕ್ರಮಿಸಿದ ಸುಲ್ತಾನ ಅಲಾವುದ್ದೀನ್ ಖಿಲ್ಜಿ ಉತ್ತರ ಭಾರತದಲ್ಲಿ ತನ್ನ ಆಧಿಪತ್ಯವನ್ನು ಸ್ಥಿರಗೊಳಿಸಿ ದಕ್ಷಿಣ ಭಾರತವನ್ನು ಜಯಿಸುವ ಮಹತ್ವಾಕಾಂಕ್ಷೆಯಿಂದ ದಂಡಯಾತ್ರೆಗಳಲ್ಲಿ ತೊಡಗಿದ. 1303ರಲ್ಲಿ ಕಾಕತೀಯ ರಾಜ್ಯದ ಮೇಲೆ ನಡೆದ ದಂಡಯಾತ್ರೆಯಲ್ಲಿ ದಿಲ್ಲಿಯ ಸೇನೆ ಪರಾಭವ ಹೊಂದಿತು. ಅನಂತರ 1310ರಲ್ಲಿ ಸುಲ್ತಾನನ ಸೇನಾಪತಿ ಮಲ್ಲಿಕ್ ಕಾಫುರ್ ಪ್ರಚಂಡ ಸೈನ್ಯದೊಂದಿಗೆ ನುಗ್ಗಿ, ವಾರಂಗಲ್ ರಾಜಧಾನಿಗೆ ಮುತ್ತಿಗೆ ಹಾಕಿದ. ಪ್ರತಾಪರುದ್ರ ಸೋತು, ಅಪಾರ ಹಣ ಕೊಡಬೇಕಾಯಿತು. ಇದರಿಂದ ಆಂಧ್ರದಲ್ಲಿ ರಾಜಕೀಯ ಪರಿಸ್ಥಿತಿ ಅಸ್ಥಿರವಾಯಿತು.

ಪ್ರತಾಪರುದ್ರ ಸುಲ್ತಾನನಿಗೆ ಕೊಡತಕ್ಕ ಪೊಗದಿಯನ್ನು ನಿಲ್ಲಿಸಿದನೆಂಬ ನೆಪಹೂಡಿ, ಸೈನ್ಯಾಧಿಕಾರಿ ಖುಸ್ರುಖಾನ 1318ರಲ್ಲಿ ವಾರಂಗಲ್ಲಿಗೆ ದಾಳಿಯಿಟ್ಟಾಗ ಪ್ರತಾಪರುದ್ರ ಪುನಃ ನಿರುಪಾಯನಾಗಿ ಕಪ್ಪ ತೆರಬೇಕಾಯಿತು. ಮುಂದೆ ದೆಹಲಿಯಲ್ಲಿ ರಾಜಕೀಯ ಕ್ರಾಂತಿ ನಡೆದು ಖಿಲ್ಜಿ ಸುಲ್ತಾನರ ಆಳಿಕೆ ಕೊನೆಗೊಂಡು 1320ರಲ್ಲಿ ತುಗಲಕ್ ಮನೆತನದ ಆಳಿಕೆ ಪ್ರಾರಂಭವಾಯಿತು. ಘಿಯಾಸುದ್ದೀನ್ ಈ ಮನೆತನದ ಮೊದಲ ಸುಲ್ತಾನ. ಈತ ತನ್ನ ಮಗ ಉಲುಘ್‌ಖಾನನನ್ನು 1323ರಲ್ಲಿ ತೆಲಂಗಾಣದ ದಂಡಯಾತ್ರೆಗೆ ಕಳುಹಿಸಿದ. ಮೊದಲ ಸಲ ಈ ಆಕ್ರಮಣ ವಿಫಲವಾದುದರಿಂದ, ದೆಹಲಿಯ ಸೇನೆ ಬೇಗನೆ ಸುಸಂಘಟಿತವಾಗಿ ಎರಡನೆಯ ಸಲ ವಾರಂಗಲ್ಲಿನ ಮೇಲೆ ಎರಗಿತು. ಅಜಾಗರೂಕತೆಯಿಂದಾಗಿ ಪ್ರತಾಪರುದ್ರ ಈ ಧಾಳಿಯನ್ನು ಎದುರಿಸಲಾರದೆ ಪರಾಜಯ ಹೊಂದಿ ರಾಜಧಾನಿಯನ್ನು ಶತ್ರುವಿನ ವಶಕ್ಕೆ ಒಪ್ಪಿಸಬೇಕಾಯಿತು. ಉಲುಘ್‌ಖಾನ್ ಅವನನ್ನೂ ಅವನ ಪರಿವಾರದವರನ್ನೂ ಬಂಧಿಸಿ ದಿಲ್ಲಿಗೆ ಕಳುಹಿಸಿದ. ಮಾರ್ಗದಲ್ಲಿ ಪ್ರತಾಪರುದ್ರ ಮೃತನಾದ. ಇವನ ಮರಣದೊಂದಿಗೆ ಕಾಕತೀಯರ ಆಳಿಕೆ ಮುಗಿಯಿತು. ತೆಲಂಗಾಣ ಪ್ರದೇಶದ ಮೇಲೆ ದೆಹಲಿಯ ಪ್ರಭುತ್ವ ಸ್ಥಾಪಿತವಾಯಿತು. (ಪಿ.ಬಿ.ಡಿ.)

**ಕಲೆ:** ಕಾಕತೀಯರ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಕರೀಂನಗರ ಮತ್ತು ವಾರಂಗಲ್ ಜಿಲ್ಲೆಗಳಲ್ಲಿವೆ. ಉತ್ತರ ಆಂಧ್ರದ ಇತರ ಜಿಲ್ಲೆಗಳಲ್ಲೂ ಕಾಕತೀಯ ನಿರ್ಮಿತ ದೇವಾಲಯಗಳಿದ್ದು, ಅವರ ಎಲ್ಲಾ ಮುಖ್ಯ ದೇವಾಲಯಗಳ ಸಂಖ್ಯೆ ಸರಿಸುಮಾರು ಎಪ್ಪತ್ತಾಗುತ್ತವೆ. ದೇವಾಲಯಗಳು ಕಾಣಬರುವ ಸ್ಥಳಗಳ ಸಂಖ್ಯೆಯೂ ಹೆಚ್ಚೂ ಕಡಿಮೆ ಅಷ್ಟೇ. ಕಾಕತೀಯರು ಆಳಿಕೆಯ ಕಾಲದಲ್ಲಿ ಆಗಲೇ ದೇವಾಲಯ ವಾಸ್ತುವಿನಲ್ಲಿ ಕೆಲವು ಪ್ರಮುಖ ಬದಲಾವಣೆಗಳು ಕಂಡು ಬಂದಿದ್ದವು. ಕಾಕತೀಯರ ರಾಜ್ಯದ ಪಶ್ಚಿಮಕ್ಕೆ ಕಲ್ಯಾಣ ಚಾಳುಕ್ಯರು, ಸೇವುಣರು ಆಳುತ್ತಿದ್ದರು. ಕಲ್ಯಾಣ ಚಾಳುಕ್ಯ ಶೈಲಿ, ಆ ಕಾಲಕ್ಕೆ ಹಿಂದು ಧಾರ್ಮಿಕ ನಂಬಿಕೆಗಳಲ್ಲಿ, ಆಚರಣೆಗಳಲ್ಲಿ, ಪೂಜಾವಿಧಾನಗಳಲ್ಲಿ ಆಗಿದ್ದ ಎಲ್ಲಾ ಬೆಳವಣಿಗೆ, ಬದಲಾವಣೆಗಳಿಗೆ ಅನುಗುಣವಾಗುವಂತೆ, ದೇವಾಲಯ ವಾಸ್ತು ಸಂಕೀರ್ಣವನ್ನು ಒಳಗೊಂಡಿದ್ದ ಶೈಲಿ. ಹೀಗಾಗಿ ಕಲ್ಯಾಣ ಚಾಳುಕ್ಯ ದೇವಾಲಯಗಳು, ಹಿಂದಿನ ಬಾದಾಮಿ ಚಳುಕ್ಯ, ರಾಷ್ಟ್ರಕೂಟ ಶೈಲಿ ದೇವಾಲಯಗಳಿಗಿಂತ ವಿಭಿನ್ನವಾಗಿದ್ದವು. ಕಲ್ಯಾಣ ಚಾಳುಕ್ಯರ ವಾಸ್ತು ಶೈಲಿ, ಅದರ ಸಮಕಾಲೀನ ಇತರ ವಾಸ್ತು ಶೈಲಿಗಳು ಅಂದರೆ ಹೊಯ್ಸಳ ವಾಸ್ತು ಶೈಲಿ ಮತ್ತು ಕಾಕತೀಯ ವಾಸ್ತು ಶೈಲಿ ಇವುಗಳಲ್ಲಿ ಅವುಗಳಿಗೆ ಆದ ಸಮಾನ ಅಥವಾ ಹೋಲಿಸಬಹುದಾದ ಲಕ್ಷಣಗಳಿವೆ. ಚಾರಿತ್ರಿಕವಾಗಿ ನೋಡಿದರೆ ಮಧ್ಯಯುಗದಲ್ಲಿ ಭಕ್ತಿ ಪಂಥದ ಪ್ರಭಾವ ಅತಿ ಮುಖ್ಯವಾದದ್ದು. ಶೈವ ಮತ್ತು ವೈಷ್ಣವ ಪಂಥದ ಭಕ್ತರು, ಅನುಯಾಯಿಗಳು, ಈ ಪಂಥಗಳವರು ಪೂಜಾ ವಿಧಾನದ ಇಡೀ ಸ್ವರೂಪವನ್ನೆ ಬದಲಿಸಿದರು. ವೈದಿಕ ರೀತಿಯಲ್ಲಿ, ಆಗಮೋಕ್ತವಾಗಿ ಪೂಜಿಸಲ್ಪಡುತ್ತಿದ್ದ ದೇವರುಗಳಿಗೆ, ಅವುಗಳ ಜೊತೆಗೆ ರಂಗಭೋಗಗಳು, ಪೂಜೆ ಪುನಸ್ಕಾರಗಳೂ ಪ್ರಾರಂಭವಾದವು. ಇದರಿಂದಾಗಿ ಲಿಂಗ ಭೋಗಗಳಷ್ಟೇ ಪ್ರಮುಖವಾಗಿ ರಂಗಭೋಗಗಳ ಆಚರಣೆಯೂ ನಡೆದವು. ದೇವಾಲಯಗಳಲ್ಲಿ ವಿಶೇಷ ಆಚರಣೆಗಳು ಅಂದರೆ ದೇವರ ಹುಟ್ಟುಹಬ್ಬ, ಕಲ್ಯಾಣೋತ್ಸವ, ಪಟ್ಟಾಭಿಷೇಕ, ರಥೋತ್ಸವ ಮುಂತಾದವು ಕಾಲಕಾಲಕ್ಕೆ ನಡೆದವು. ಇವುಗಳೆಲ್ಲದರ ಆಚರಣೆಯ ಸಂದರ್ಭದಲ್ಲಿ ನೂರಾರು, ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ದೇವಾಲಯಗಳಲ್ಲಿ ನೆರೆಯುತ್ತಿದ್ದರು. ಇವಲ್ಲದೆ ಮದುವೆ, ಮುಂಜಿ, ನಾಮಕರಣ ಇತ್ಯಾದಿ ಹಲವಾರು ಸಾಮಾಜಿಕ ಶುಭ ಸಮಾರಂಭಗಳೂ ದೇವಾಲಯಗಳಲ್ಲಿ ನಡೆಯುತ್ತಿದ್ದವು. ದೇವಾಲಯವು ಹಲವಾರು

ಸಂದರ್ಭಗಳಲ್ಲಿ ಆ ಊರಿನ ನ್ಯಾಯಾಲಯವಾಗಿಯೂ ಬಳಕೆಯಾಗುತ್ತಿದ್ದವು. ಈ ರೀತಿಯಾಗಿ ಮಧ್ಯಯುಗೀನ ದೇವಾಲಯಗಳು ಆ ಊರಿನ ಸಮಾಜೋ–ಧಾರ್ಮಿಕ ಕಟ್ಟಡಗಳಾಗಿ ಪರಿವರ್ತಿತಗೊಂಡವು. ಈ ಎಲ್ಲಾ ಆಚರಣೆಗಳಿಗೆ ಅನುಗುಣವಾಗುವಂತೆ ದೇವಾಲಯದ ವಾಸ್ತು ವಿನ್ಯಾಸದಲ್ಲಿ ಬಹಳಷ್ಟು ಬದಲಾವಣೆಗಳಾದವು.

ದೇವಾಲಯದ ಗರ್ಭಗೃಹದ ಸುತ್ತಲೂ ಇರುತ್ತಿದ್ದ ಕತ್ತಲು ಕವಿದ ಪ್ರದಕ್ಷಿಣ ಪಥದ ನಿರ್ಮಾಣ ನಿಂತಿತು. ಬದಲಿಗೆ ದೇವಾಲಯಕ್ಕೆ ಸುತ್ತಲೂ ಎತ್ತರವಾದ ಜಗಲಿ ನಿರ್ಮಾಣವಾಗಿ, ಜಗಲಿಯೇ ಪ್ರದಕ್ಷಿಣಪಥವಾಯಿತು. ಮಿತವಾದ ಗಾಳಿಬೆಳಕನ್ನು ಹೊಂದಿದ್ದ ನವರಂಗಗಳು, ವಿಶಾಲವಾದ ಸುತ್ತಲೂ ತೆರವಾದ, ಸಮೃದ್ಧ ಗಾಳಿಬೆಳಕನ್ನು ಹೊಂದಿದ್ದ ಹಜಾರ ಅಥವಾ ಮಹಾಮಂಡಪಗಳಾದವು. ಈ ತೆರವು ಮಂಟಪಗಳ ಸುತ್ತಲು ಅಂಚಿನಲ್ಲಿ, ಪ್ರೇಕ್ಷಕರು ಕಾರ್ಯಕ್ರಮಗಳನ್ನು ಕುಳಿತು ವೀಕ್ಷಿಸಲು, ಕಕ್ಷಾಸನಗಳೂ ಮತ್ತು ಅವುಗಳಿಗೆ ಒರಗು ಹಲಗೆಗಳೂ ನಿರ್ಮಾಣವಾದವು. ಹಜಾರದ ಛಾವಣಿಯ ಅಂಕಣಗಳು, ಭುವನೇಶ್ವರಿಯ ರೀತಿಯಲ್ಲಿ, ಆಳವಾಗಿ ನಿರ್ಮಾಣಗೊಂಡವು. ಇದರಿಂದ ಪೂಜಾ ಸಮಯದಲ್ಲಿ, ಸಮಾರಂಭಗಳ ಸಮಯದಲ್ಲಿ ಮೊಳಗುತ್ತಿದ್ದ ಮಹಾವಾದ್ಯಗಳ ಜೋರು ಶಬ್ದದ ಪ್ರತಿಧ್ವನಿ ನಿಯಂತ್ರಿತವಾಗುತ್ತಿತ್ತು. ಜೊತೆಗೇ ಛಾವಣಿಯ ಅಂಕಣಗಳೂ ಆಕರ್ಷಕವಾಗಿ ಕಾಣುತ್ತಿತ್ತು.

ಇವೆಲ್ಲವೂ ದೇವಾಲಯದ ವಾಸ್ತು ರೂಪದ ವಿನ್ಯಾಸದಲ್ಲಿ ಆದ ಬದಲಾವಣೆಗಳಾದರೆ, ಆ ಕಾಲದಲ್ಲಿ ಆದ ತಾಂತ್ರಿಕ ಪ್ರಗತಿಯೂ ದೇವಾಲಯದ ವಾಸ್ತು ವಿನ್ಯಾಸದ ಮೇಲೆ ತನ್ನ ಪ್ರಭಾವ ಬೀರಿತ್ತು. ಆ ಕಾಲಕ್ಕೆ ವಾಸ್ತುತಜ್ಞರು ದೇವಾಲಯ ನಿರ್ಮಾಣಕ್ಕೆ, ಕಠಿಣ ಶಿಲೆಗಳ ಬದಲಿಗೆ ಮೃದು ಶಿಲೆಯ ಬಳಕೆಯನ್ನು ಪರಿಚಯಿಸಿದರು. ಕಣ ಶಿಲೆ, ಮರಳು ಶಿಲೆಗಳ ಬದಲಾಗಿ ಬಳಪದ ಕಲ್ಲಿನ ಉಪಯೋಗ ಪ್ರಾರಂಭವಾಯಿತು. ಈ ಮೃದು ಮಾಧ್ಯಮದ ಬಳಕೆ ಅಲಂಕರಣಾ ಕೆತ್ತನೆಗಳನ್ನು ಸುಗುಮಗೊಳಿಸಿತು. ಪರಿಣಾಮವಾಗಿ ಹೆಚ್ಚು–ಹೆಚ್ಚು ಕೆತ್ತನೆಗಳು. ಅಲಂಕರಣಗಳು ಅತೀ ಸೂಕ್ಷ್ಮವೆನಿಸುವವರೆಗೂ ಕೊರೆಯಲ್ಪಟ್ಟವು. ವಾಸ್ತು ನಿರ್ಮಾಣದ ಕಲ್ಲು ಮೃದುವಾಗಿದ್ದುದರಿಂದ, ಕಂಬದ ದಿಂಡುಗಳನ್ನು ತಿರುಗಣೆ ಯಂತ್ರದ ಮೇಲೆ ತಿರುಗಿಸಿ ವಿವಿಧಾಕಾರದ ಕೆತ್ತನೆಯ ಕಂಬದ ದಿಂಡುಗಳನ್ನು ರೂಪಿಸಿದರು. ಈ ರೀತಿಯ ತಿರುಗಣೆಯಂತ್ರ ತಯಾರಿತ ದಿಂಡುಗಳು ಅವುಗಳ ವೈವಿಧ್ಯತೆಗೆ, ಹೊಳಪಿಗೆ, ನವಿರಾದ ಸುಂದರ ಸೂಕ್ಷ್ಮ ಕೆತ್ತನೆಗಳಿಗೆ ಹೆಸರುವಾಸಿಯಾಗಿವೆ.

ಈ ಪ್ರಕಾರದ ಬದಲಾವಣೆಗಳಿಂದ ಈ ಕಾಲದ ದೇವಾಲಯಗಳ ಸ್ವರೂಪವೇ ಬದಲಾಯಿತು. ದೇವಾಲಯಗಳ ಭಿತ್ತಿಗಳು, ದ್ವಾರ ಬಂಧಗಳು, ಕಂಭಗಳು, ಛಾವಣಿಗಳು ಅಲಂಕಾರಿಕ ಕೆತ್ತನೆಗಳಿಂದ, ಶಿಲ್ಪಗಳಿಂದ ಕಂಗೊಳಿಸತೊಡಗಿದವು. ಈ ಕಾಲದ ದೇವಾಲಯ ಗಳಲ್ಲಿ ಸಮಕಾಲೀನ, ಸಮಾಜದ ಸಂತೋಷ ಸಂಭ್ರಮ, ಹೊಸತನ, ಉತ್ಸಾಹ, ಸಾಮರ್ಥ್ಯ, ಶಕ್ತಿ, ಪೌರುಷ, ಶೃಂಗಾರ ಮುಂತಾದ ಅನೇಕ ಅಮೂರ್ತ ಭಾವನೆಗಳ ಮೂರ್ತರೂಪಗಳು ಪ್ರತಿಫಲಿತಗೊಂಡಿದೆ ಎಂಬುದರಲ್ಲಿ ಸಂದೇಹವಿಲ್ಲ. ಈ ಬದಲಾವಣೆಗಳೂ ಕಾಕತೀಯ ದೇವಾಲಯಗಳಾದಿಯಾಗಿ, ಸಮಕಾಲೀನ ಕರ್ನಾಟಕದ ಎಲ್ಲಾ ದೇವಾಲಯಗಳಿಗೂ ಅನ್ವಯವಾಗುತ್ತದೆ.

ಕಾಕತೀಯ ಪೂರ್ವಕಾಲದಲ್ಲಿ ಬಳಕೆಯಲ್ಲಿದ್ದ ನಿಜದ್ರಾವಿಡ ವಾಸ್ತು ರೂಪದ ಮೇಲೆ ಈ ಬದಲಾವಣೆಗಳು ಕಾಣಬರುತ್ತವೆ. ಕಾಕತೀಯರೂ ನಿಜದ್ರಾವಿಡ ವಾಸ್ತು ಶೈಲಿಯಲ್ಲಿ ಹೊಸ ಹೊಸ ದೇವಾಲಯಗಳನ್ನು ನಿರ್ಮಿಸಿದರು. ಜೊತೆಗೆ ನವ–ನವೀನ ವಿನ್ಯಾಸಗಳನ್ನು ಬಳಕೆಗೆ ತಂದರು. ಭೂಮಿಜ ಮತ್ತು ಕದಂಬ ನಗರ ಶೈಲಿಯ ವಿಮಾನ ಪ್ರಾಸಾದಗಳನ್ನು ನಿರ್ಮಿಸಿದರು, ದೇವಾಲಯದ ವಿವಿಧ ಭಾಗಗಳನ್ನು ಸುಂದರ ಸೂಕ್ಷ್ಮ ವಾಸ್ತು ಹಾಗೂ ಅಲಂಕರಣಾ ವಿನ್ಯಾಸಗಳಿಂದ ತುಂಬಿದರು. ಕಾಕತೀಯ ಪ್ರಾಂತ್ಯ ಕಲ್ಯಾಣ ಚಾಳುಕ್ಯ ಪ್ರಾಂತ್ಯಕ್ಕೆ ಪಕ್ಕದಲ್ಲಿಯೆ ಇದ್ದುದರಿಂದ ಕಲ್ಯಾಣ ಚಾಳುಕ್ಯ ವಾಸ್ತು ಶೈಲಿಯ ಪ್ರಭಾವ ಕಾಕತೀಯ ಕಲೆಯಲ್ಲಿ ಹೆಚ್ಚು ಕಾಣಬರುತ್ತದೆ. ಕಾಕತೀಯ ಪ್ರಾಂತ್ಯದಲ್ಲಿ ಡಾಲರೈಟ್ ಎಂಬ ಕರಿ ಕಣಶಿಲೆಯ ಬಳಕೆ ಮಾಡಿದರು. ಈ ಶಿಲೆ ವಿಪರೀತ ಕಠಿಣವಾದ ಶಿಲೆ. ಕಠಿಣ ವಾದರೂ ಇದರ ಸೂಕ್ಷ್ಮಕಣರಚನೆಯಿಂದಾಗಿ, ಈ ಶಿಲೆಯಲ್ಲಿ ಸುಂದರ ಸೂಕ್ಷ್ಮ ಕೆತ್ತನೆಗಳೂ ನುಣುಪು–ಹೊಳಪುಗಳೂ ಅತ್ಯಂತ ಆಕರ್ಷಕವಾಗಿ ಮೂಡಿಸಬಹುದು. ಕಲ್ಯಾಣ ಚಾಳುಕ್ಯ ಸುಂದರ, ಹೊಳಪಿನ ಕಂಬಗಳಿಗೆ ಸರಿಸಮವಾಗಿ, ಕೇವಲ ಡಾಲರೈಟ್ ನಿರ್ಮಿತ ಹೊಳಪಿನ ಕಂಬಗಳು ನಿಲ್ಲಬಹುದೇ ಹೊರತು, ಸಾಧಾರಣ ಕಣ ಶಿಲೆಯ ಕಂಬಗಳಿಗೆ ಸಾಧ್ಯವಿಲ್ಲ. ಹೀಗಾಗಿ ಕಾಕತೀಯ ಶಿಲ್ಪಗಳು ಕಠಿಣವೆನಿಸಿದರೂ ಸೌಂದರ್ಯದ ದೃಷ್ಟಿಯಿಂದ, ಆಕರ್ಷಣೀಯ ದೃಷ್ಟಿಯಿಂದ,ಡಾಲರೈಟ್ ಶಿಲೆಯನ್ನು ಬಳಸಿ ಕಂಬಗಳನ್ನೂ ದ್ವಾರಬಂಧಗಳನ್ನೂ ಶಿಲ್ಪಗಳನ್ನೂ ಹೆಚ್ಚು ಆಕರ್ಷಕವನ್ನಾಗಿ ಮಾಡಿ ತಮ್ಮ ಗರಿಮೆಯನ್ನು ಪ್ರದರ್ಶಿಸಿದ್ದಾರೆ. ಸುಂದರ ಸೂಕ್ಷ್ಮಕೆತ್ತನೆಗಳಿಗೆ ಡಾಲರೈಟ್ ಮತ್ತು ಇತರ ಭಾಗಗಳಿಗೆ ಗ್ರಾನೈಟ್ ಹಾಗೂ ಮರಳು ಶಿಲೆಯನ್ನು ಬಳಸಿರುವುದರಿಂದಾಗಿ, ಗುಡಿಗಳಲ್ಲಿ ಶಿಲ್ಪಾಲಂಕರಣ ಕಡಿಮೆಯಾಗಿ ವಾಸ್ತು ಅಲಂಕರಣ ಹೆಚ್ಚಾಗಿ ಕಾಣಬರುತ್ತದೆ.

ತಳವಿನ್ಯಾಸ ರಚನೆಯಲ್ಲಿ, ದ್ರಾವಿಡ ದೇವಾಲಯ ಮಾದರಿಯಲ್ಲಿ ನಿರಂಧರ ದೇವಾಲಯಗಳೇ ಹೆಚ್ಚು. ಕಾಕತೀಯ ಶಿಲ್ಪಗಳ ಹೆಚ್ಚಿನ ದೇವಾಲಯಗಳು ಏಕಕೂಟ ದೇವಾಲಯಗಳು. ಸಾಕಷ್ಟು ದ್ವಿಕೂಟ ದೇವಾಲಯಗಳು ವಿರಳವಾಗಿ ತ್ರಿಕೂಟ (ಹನುಮ ಕೊಂಡ), ಚತುಷ್ಕೂಟ (ಪಾನಂಗಲ್) ಮತ್ತು ಪಂಚಕೂಟ (ರಾಮಾನುಜಪುರ) ದೇವಾಲಯಗಳು ಕಾಣಬಹುದು. ಗಜಪೃಷ್ಠಾಕಾರದ ದೇವಾಲಯಗಳೂ (ಚಿಲಂಕೂರು, ಪಾಪನಾಶಿ) ಸಹ ಕಂಡುಬಂದಿವೆ. ನಕ್ಷತ್ರಾಕಾರದ ತಳವಿನ್ಯಾಸದ ದೇವಾಲಯ ಕಾಕತೀಯ ವಾಸ್ತು ಶೈಲಿಯಲ್ಲಿ ಇಲ್ಲ. ಏರುವಿನ್ಯಾಸದಲ್ಲಿ ಅನೇಕ ಕಾಕತೀಯ ದೇವಾಲಯಗಳಿಗೆ ಎತ್ತರವಾದ ಜಗತಿ ಕಾಣಬರುತ್ತದೆ (ರಾಮಪ್ಪ ದೇವಾಲಯ). ದೇವಾಲಯಗಳಿಗೆ ಎತ್ತರವಾದ, ವಿವಿಧಾ ಕೃತಿಯ ಪಟ್ಟಿಕೆಗಳುಳ್ಳ ಅಧಿಷ್ಠಾನವಿರುತ್ತದೆ. ಈ ಅಧಿಷ್ಠಾನಗಳು ಹೆಚ್ಚಿನ ಮಟ್ಟಿಗೆ ಕಲ್ಯಾಣ ಚಾಳುಕ್ಯ ಅಧಿಷ್ಠಾನಗಳನ್ನು ಹೋಲುತ್ತವೆ. ಸರಳವಾದ ಪಾದಬಂಧ ಅಧಿಷ್ಠಾನದ ಬಳಕೆ ಹೆಚ್ಚಾಗಿದ್ದರೂ ಪಟ್ಟಿಕೆಗಳ ನಿಖರವಾದ ಕೆತ್ತನೆ, ಕೆಲವು ಸಂದರ್ಭಗಳಲ್ಲಿ ಅಧಿಷ್ಠಾನ ರೀತಿಯ ಉಪಪೀಠ (ಹನುಮಕೊಂಡ) ಇವುಗಳಿಂದಾಗಿ, ಅಧಿಷ್ಠಾನ ಬಹಳ ಪ್ರಭಾವಶಾಲಿಯಾದ ನೋಟವನ್ನು ನೀಡುತ್ತದೆ. ಹೊಯ್ಸಳ ರೀತಿಯ ಶಿಲ್ಪ ಪಟ್ಟಿಕೆಗಳನ್ನುಳ್ಳ ಅಧಿಷ್ಠಾನಗಳೂ ಅಲ್ಲಲ್ಲಿ ಕಾಣಬರುತ್ತವೆ (ರಾಮಪ್ಪ ದೇವಾಲಯ). ಆದರೆ ಇವುಗಳಲ್ಲಿ ಶಿಲ್ಪ ವಿಷಯ ಅಲ್ಪಪ್ರಮಾಣದಾಗಿದ್ದು, ಪಟ್ಟಿಕೆ ಶಿಲ್ಪಗಳ ಸಂಯೋಜನಕ್ರಮ ಹೊಯ್ಸಳ ರೀತಿಯಂತಿರುವುದಿಲ್ಲ.

ಭಿತ್ತಿಯ ಅಲಂಕರಣೆಯಲ್ಲಿ ಕೇವಲ ವಾಸ್ತು ಅಲಂಕರಣೆಮಾತ್ರ ಕಾಣಬರುತ್ತದೆ. ಕಾರಣ, ನಿರ್ಮಾಣಕ್ಕೆ ಗಟ್ಟಿ ಹಾಗೂ ಒರಟು ಕಲ್ಲುಗಳನ್ನು ಬಳಸಲಾಗಿದೆ. ಇದರಿಂದಾಗಿ ಕಲ್ಯಾಣ ಚಾಳುಕ್ಯ ವಾಸ್ತು ಮಾದರಿಗಳಂತೆ ನಿಬಿಡವಾಗಿರುವ ಭಿತ್ತಿಪಾದಗಳು, ಭಿತ್ತಿಯ ಭದ್ರ ಭಾಗದಲ್ಲಿ ಸಣ್ಣ ಗುಡಿಯಾಕೃತಿಯ ದೇವ ಕೋಷ್ಠಗಳು ಉಳಿದಂತೆ ಸಾಧಾರಣ ಕೋಷ್ಠಗಳು, ಅಪರೂಪವಾಗಿ ಶಿಲ್ಪಗಳು ಕಾಣಬರುತ್ತವೆ. ಭಿತ್ತಿಯ ಮೇಲಿನ ಕಪೋತವು ಅವಶ್ಯಕತೆಗೆ ತಕ್ಕಂತೆ ನಿರೂಪಿತವಾದ ಭಾಗ. ಸಾಧಾರಣ ದಿಂಡು ರೀತಿಯ ಕಪೋತ, ಕೂಡುಗಳಿಂದಲಕೃತವಾದ ಕಪೋತ (ಫಾನ್‌ಪುರ್) ಹಾಗೂ ವಿಶಾಲವಾದ ಎರಡು ಬಾಗುಳ್ಳ ಕಪೋತ (ಪಾಲಂಪೇಟೆ)ಗಳು ಕಾಕತೀಯ ವಾಸ್ತು ಶೈಲಿಯಲ್ಲಿ ಕಾಣಬರುತ್ತವೆ. ಗ್ರಾನೈಟ್ ಶಿಲೆಯದಾದರೂ ಹೊಯ್ಸಳ ಶೈಲಿಯ ಕಪೋತಗಳಂತೆ ನವಿರಾದ ಅಲಂಕರಣೆಗಳಿಗೆ, ಸೂಕ್ಷ್ಮಕೆತ್ತನೆಗಳಿಗೆ ಕಾಕತೀಯರ ಕಪೋತಗಳು ಹೆಸರುವಾಸಿಯಾಗಿವೆ. ಹಾರದ ಅಲಂಕರಣೆ ಯಲ್ಲಿ ಕಾಕತೀಯ ಶಿಲ್ಪಿಗಳು ಎರಡು ವಿಧಗಳನ್ನು ಅನುಸರಿಸಿದ್ದಾರೆ. ಹೊಯ್ಸಳ ರೀತಿಯ ಸ್ವಲ್ಪ ಒರಟಾದ ಹಾರಕೃತಿ (ಫಾನ್‌ಪುರ್) ಮತ್ತು ದ್ರಾವಿಡ ರೀತಿಯ ಹಾರಾಕೃತಿಗಳು (ಪಾಲಂಪೇಟೆ) ಬಳಕೆಯಲ್ಲಿತ್ತು. ದುರಾದೃಷ್ಟವಶಾತ್ ಬಹುತೇಕ ಕಾಕತೀಯ ದೇವಾಲಯಗಳಲ್ಲಿ ಹಾರದ ಭಾಗ ಕಾಣೆಯಾಗಿದೆ.

ಕಾಕತೀಯ ದೇವಾಲಯಗಳ ವಿಮಾನ ಪ್ರಾಸಾದಗಳು ದ್ರಾವಿಡ (ಪಾಲಂಪೇಟೆ) ಕಳಿಂಗ/ ಕದಂಬ ನಗರ (ಪಾನುಗಲ್) ಮತ್ತು ಭೂಮಿಜ (ಪೆದ್ದತುಂಬುಲಂ) ಮಾದರಿ ಶೈಲಿಗಳಲ್ಲಿ ಕಂಡು ಬಂದಿವೆ. ಇವರ ಬಹಳಷ್ಟು ದೇಗುಲಗಳು ಕುಸಿದು ಬಿದ್ದಿರುವುದರಿಂದ ಕೇವಲ ಈ ಮೇಲ್ಕಂಡ ಪ್ರಾಸಾದ ಮಾದರಿಗಳು ಮಾತ್ರ ತಿಳಿದಿವೆ. ವೇಸರ ಮಾದರಿಯ ವಿಮಾನ ಪ್ರಾಸಾದಗಳು ಈ ಶೈಲಿಯಲ್ಲಿ ಕಂಡು ಬಂದಿಲ್ಲ. ಕಳಿಂಗನಗರ ಮಾದರಿಯ ಪ್ರಾಸಾದಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವುಗಳ ಜನಪ್ರಿಯತೆಗೆ ಕಾರಣವಿರಬಹುದು. ಕಾಕತೀಯ ಶಿಲ್ಪಿಗಳು ವಿಮಾನ ಪ್ರಾಸಾದದ ನಿರ್ಮಾಣದಲ್ಲಿ ಸಂಕೀರ್ಣಮಾಧ್ಯಮ, ಅಂದರೆ ಇಟ್ಟಿಗೆ ಗಾರೆ ಮುಂತಾದ ವಸ್ತುಗಳನ್ನೂ ಬಳಸಲಾಗಿದೆ (ಪಾಲಂಪೇಟೆ, ಚೇಬ್ರೋಲು).

ಕಾಕತೀಯ ದೇವಾಲಯಗಳ ದ್ವಾರಬಂಧಗಳು ಕಲ್ಯಾಣ ಚಾಳುಕ್ಯ, ಹೊಯ್ಸಳ ಶೈಲಿಯ ದ್ವಾರಬಂಧಗಳಂತೆ, ಅವುಗಳ ಅನುಪಮ ಕೆತ್ತನೆ ಹಾಗೂ ಆಕರ್ಷಣೆಗೆ ಹೆಸರು ವಾಸಿಯಾಗಿವೆ. ಕಲ್ಯಾಣ ಚಾಳುಕ್ಯ ಶೈಲಿಯ ದ್ವಾರಬಂಧಗಳನ್ನು ಬಹಳಷ್ಟು ಹೋಲುವ ಈ ದ್ವಾರ ಬಂಧಗಳು, ಪೇದ್ಯ ಭಾಗದಲ್ಲಿ ಸಾಲಾಗಿ ದ್ವಾರಪಾಲಕರು, ಚಾಮರಧಾರಿಗಳು, ಗಂಗ–ಯಮುನೆಯರು, ದಾನಿಗಳು, ಭಕ್ತರು ಮುಂತಾದ ಶಿಲ್ಪಗಳನ್ನು ಹೊಂದಿರುತ್ತವೆ. ದ್ವಾರಬಂಧಗಳಲ್ಲಿ ಅರೆಗಂಬಗಳ ಆಸರೆಯ ಮೇಲೆ ನಿಂತಿರುವ ಆಕರ್ಷಕ ಪ್ರಸ್ತರವಿರುತ್ತದೆ. ಪ್ರಸ್ತರದಲ್ಲಿ ಉತ್ತರಾ, ಲಲಾಟ ಬಿಂಬ, ಕಪೋತ, ಹಾರ ಮುಂತಾದ ಭಾಗಗಳಿರುತ್ತವೆ. ಶಿಲ್ಪಾಲಂಕರಣಗಳೂ (ವಾರಂಗಲ್) ಉಂಟು. ಅರೆಗಂಬಗಳ ಹೊರ–ಒಳ ಪಾರ್ಶ್ವಗಳಲ್ಲಿ ಜಾಲಂಧ್ರಗಳನ್ನೂ ಕೂಡಿಸಿರುವುದುಂಟು (ಪಾಲಂಪೇಟೆ). ಇಲ್ಲದಿದ್ದಲ್ಲಿ ಆ ಜಾಗದಲ್ಲಿ ವೈವಿಧ್ಯಮಯ ಅಲಂಕರಣಗಳಿಂದ ಕೂಡಿದ ದ್ವಾರ ಶಾಖೆಗಳ ಕೆತ್ತನೆಯೂ ಇರುವುದುಂಟು (ನಾಗುಲಪಾಡು). ದ್ವಾರ ಬಂಧಗಳ ಸಾಲಿಗೇ ಸೇರುವಂತಹ ಕಾಕತೀಯರ ಮತ್ತೊಂದು ಆಕರ್ಷಕ ಹಾಗೂ ವಿಶಿಷ್ಟ ವಾಸ್ತು ಕೃತಿಯಂದರೆ ಕೀರ್ತಿ ತೋರಣಗಳು. ನಗರ, ಪಟ್ಟಣ, ಊರುಗಳ ಮುಖ್ಯ ಪ್ರವೇಶ ಸ್ಥಳಗಳಲ್ಲಿ ಈ ರೀತಿಯ ಕಲ್ಲಿನ ಕೀರ್ತಿತೋರಣಗಳು ಕಾಣ ಬರುತ್ತವೆ. ಬಾದಾಮಿ ಚಳುಕ್ಯ, ಕಲ್ಯಾಣ ಚಾಳುಕ್ಯ ಪ್ರಾಂತ್ಯಗಳಲ್ಲಿ ಜನಪ್ರಿಯವಾಗಿದ್ದ ಸಿರಿವಾಗಿಲು ಎಂದು ಹೆಸರುವಾಸಿಯಾಗಿದ್ದ ತೋರಣಗಳು ಈಗಲೂ ಉತ್ತರ ಕರ್ನಾಟಕದಲ್ಲಿ ಕಾಣಬರುತ್ತವೆ. ಇದೇ ರೀತಿಯ ಇನ್ನೂ ಆಕರ್ಷಕ ತೋರಣಗಳು ಕಾಕತೀಯರಾಳಿದ ಪ್ರಾಂತ್ಯಗಳಲ್ಲಿ (ನಂದಿಕಂಡಿ, ವೊಲ್ಲಾಳ, ವಾರಂಗಲ್) ಕಾಣಬಹುದು.

ಕಾಕತೀಯ ವಾಸ್ತು ಶಿಲ್ಪದ ಮತ್ತೊಂದು ಆಕರ್ಷಕ ಕೃತಿಗಳೆಂದರೆ ಸುಂದರವಾಗಿ ಕಾಣುವಂತೆ ಕಡೆದಿರುವ ಕಂಬಗಳು. ಗ್ರಾನೈಟ್, ಮರಳುಗಲ್ಲು ಹಾಗೂ ಡಾಲರೈಟ್ ಶಿಲೆಗಳಲ್ಲಿ ಇವರು ನಿರ್ಮಿಸಿದ ಕಂಬಗಳಿವೆ. ಕಲ್ಯಾಣ ಚಾಳುಕ್ಯ ಶೈಲಿಯಲ್ಲಿ, ಅತೀ ಸಾಮಾನ್ಯ ವಾಗಿ ಕಾಣಬರುವ ಕಂಬ ಮಾದರಿಯನ್ನೇ ಇವರೂ ಅನುಸರಿಸಿದರು. ಸಾಧಾರಣವಾಗಿ

ಕಡೆದ ಎಲ್ಲಾ ಕಂಬಗಳಿಗೂ ಸಾಲಂಕೃತ ಪೀಠವಿರುತ್ತದೆ. ಪೀಠದ ಮೇಲಿನ ದಿಂಡು ಚಕ್ರ, ವೃತ್ತ ಬಹುಮುಖಗಳಿಂದ ಕೂಡಿರುತ್ತದೆ. ದಿಂಡು, ಬುಡದಲ್ಲಿ ಚೌಕಾಕೃತಿ, ಮೇಲೆ ಅಷ್ಟ ಅಥವಾ ಬಹುಮುಖ ಭಾಗ, ಮತ್ತೆ ಚೌಕಾಕೃತಿ, ಮೇಲೆ ಉರುಳೆ ಆಕೃತಿ, ಇವು ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ಕಾಣುವುದು ಸಾಮಾನ್ಯ. ಈ ಆಕೃತಿಗೆ ಅಪವಾದವಿಲ್ಲವೆಂದೇನಿಲ್ಲ. ಸಾಮಾನ್ಯವಾಗಿ ಚೌಕಾಕೃತಿಯ ದಿಂಡಿನ ಭಾಗದ ನಾಲ್ಕೂ ಮುಖಗಳಲ್ಲಿ ಧಾರ್ಮಿಕ, ಸಾಮಾಜಿಕ, ಅಲಂಕಾರಿಕ ವಿಷಯಗಳ ಉಬ್ಬು ಕೆತ್ತನೆಗಳಿರುತ್ತವೆ ಅಥವಾ ಖಾಲಿಯೂ ಇರಬಹುದು. ಸಾಮಾನ್ಯವಾಗಿ ಈ ರೀತಿಯ ಉಬ್ಬು ಕೆತ್ತನೆಗಳಿಗೆ ಸುತ್ತಲೂ ಕಟ್ಟು ಇರುವುದಿಲ್ಲ. ಮೇಲಿನ ಚೌಕವೂ ಇದೇ ರೀತಿ ಅಲಂಕರಣೆ ಹೊಂದಿರುತ್ತದೆ. ಅಷ್ಟ, ಬಹು, ದುಂಡು ಮುಖದ ದಿಂಡಿನ ಭಾಗದಲ್ಲಿ ಸೂಕ್ಷ್ಮವಾಗಿ, ಸಣ್ಣದಾಗಿ, ನಿಬಿಡವಾಗಿ ಕಡೆದ ಅನೇಕ ಗಾಡಿಗಳು, ದಿಂಡುಗಳು ಹಾಗೂ ಇನ್ನಿತರ ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಗಳ ಅಲಂಕರಣೆಗಳು ಸಾಮಾನ್ಯ. ಕಂಭದ ದಿಂಡಿನ ಮೇಲೆ ಕುಂಭ, ಮಂಡಿ, ಫಲಕ ಇವುಗಳ ಅಲಂಕರಣ ಇದ್ದೇ ಇರುತ್ತದೆ. ಇದರ ಮೇಲೆ ಮುಷ್ಟಿಬಂಧ ರೀತಿಯ ಪೋತಿಕಾ ಕಾಣುತ್ತದೆ. ಈ ರೀತಿಯ ಅಲಂಕರಣೆ ಕಾಕತೀಯ ಕಂಬಗಳಲ್ಲಿ ಸಾಮಾನ್ಯವಾಗಿ ಕಾಣುವ ಅಂಶಗಳು. ಇವುಗಳ ಪ್ರಭೇದಗಳೂ ಅಲ್ಲಲ್ಲಿ ಕಾಣಬರುತ್ತವೆ. ಪ್ರಖ್ಯಾತ ದೇವಾಲಯಗಳಲ್ಲಿ (ಪಾಲಂಪೇಟ್) ಕಂಬಗಳ ಕೆತ್ತನೆಯ ವಿವರಗಳಿಗೆ, ವೈವಿಧ್ಯಗಳಿಗೆ ಶಿಲ್ಪಿಯ ಕಲ್ಪನಾ ಸಾಮರ್ಥ್ಯವೇ ಮಿತಿಯಾಗಿರುತ್ತದೆ. ಅತ್ಯಲಂಕೃತವಾದ ಕಾಕತೀಯ ಸ್ತಂಭಗಳು ಸಾಮಾನ್ಯವಾಗಿ ಡಾಲರೈಟ್ ಶಿಲೆಯಲ್ಲೇ ಮಾಡಲ್ಪಟ್ಟಿವೆ. ಉಳಿದಂತೆ ಸಾಮಾನ್ಯ ಕಂಬಗಳು ಗ್ರಾನೈಟ್ ಮತ್ತು ಮರಳುಗಲ್ಲಿನದ್ದಾಗಿವೆ. ಡಾಲರೈಟ್ ಶಿಲೆಯ ಕಂಬಗಳ ಮತ್ತೊಂದು ಆಕರ್ಷಣೆ ಎಂದರೆ, ಅವುಗಳಿಗೆ ನೀಡಿರುವ ನುಣುಪು, ಹೊಳಪುಗಳು. ಅತೀ ಕಠಿಣ ಶಿಲೆಯಾದರೂ ಕಾಕತೀಯ ಶಿಲ್ಪಿಗಳು, ಸುಂದರ ಸೂಕ್ಷ್ಮ ಕೆತ್ತನೆಗಳನ್ನು ಮಾಡಿ, ಕಂಬದ ಎಲ್ಲಾ ಭಾಗಗಳನ್ನೂ ನಯಗೊಳಿಸಿ, ಹೊಳಪು ನೀಡಿರುವುದು, ಆ ಶಿಲ್ಪಿಗಳ ಪರಿಶ್ರಮ, ತಾಳ್ಮೆ, ಕಾರ್ಯಕ್ಷಮತೆ ಮತ್ತು ಅರ್ಪಣಾಮನೋಭಾವಗಳಿಗೆ ಉತ್ತಮ ಉದಾಹರಣೆಯಾಗಿದೆ.

ಕಾಕತೀಯ ದೇವಾಲಯಗಳ ಚಾವಣಿಯ ಅಂಕಣಗಳು, ಕಲ್ಯಾಣ ಚಾಳುಕ್ಯ ಹಾಗೂ ಹೊಯ್ಸಳ ದೇವಾಲಯಗಳ ಚಾವಣಿಯಂಕಣಗಳಷ್ಟು ವಿಸ್ತೃತವಾಗಿಲ್ಲ. ಇದಕ್ಕೆ ಕಾರಣ, ಬಳಸಿದ ವಾಸ್ತು ಮಾಧ್ಯಮ. ಹೊಯ್ಸಳರು ನಿರ್ಮಾಣಕ್ಕೆ ಮೃದು ಬಳಪದ ಕಲ್ಲನ್ನು ಬಳಸಿದ್ದರಿಂದ, ಚಾವಣಿಯು ಭದ್ರತೆಗಾಗಿ ಬಹು ಹಂತಗಳಲ್ಲಿ ಆಳವಾಗಿ ನಿರ್ಮಾಣವಾಗಿ ಭುವನೇಶ್ವರಿಗಳೆಂದು ಪ್ರಖ್ಯಾತವಾಗಿವೆ. ಆದರೆ ಕಾಕತೀಯರು ಬಳಸಿದ ಗ್ರಾನೈಟ್ ಅಥವಾ ಮರಳುಗಲ್ಲು ಗಡುಸಾಗಿರುವುದರಿಂದ ಸರಳವಾದ ಚಾವಣಿಯ ನಿರ್ಮಾಣಕ್ಕೆ ಅನುವಾಗಿದ್ದವು. ಹೀಗಾಗಿ ಒಂದೆರಡು ಹಂತಗಳ ನಾಭಿಚ್ಛಂದ ಅಥವಾ ಕದಳೀಕರ್ಣ ರೀತಿಯ ಚಾವಣಿಗಳನ್ನು ಮಾತ್ರ ನಿರ್ಮಿಸಲಾಗಿತ್ತು. ಚಾವಣಿ ನಿರ್ಮಾಣದಲ್ಲಿ ಸಾಧಾರಣವಾಗಿದ್ದರೂ ಗುಡಿಯ ಚಾವಣಿಯ ಮುಖ್ಯ ಅಂಕಣಗಳನ್ನು, ವಿವಿಧ ರೀತಿಯ ಕೆತ್ತನೆಗಳಿಂದ ಅಲಂಕರಿಸಲಾಗಿದೆ. ರಾಮಾಯಾಣ, ಮಹಾಭಾರತದ ಕಥನಗಳ ಪಟ್ಟಿ ಚಿತ್ರಗಳು (ಪಿಲ್ಲಲಮರ್ರಿ) ಹಾಗೂ ಸಸ್ಯಾಲಂಕರಣಗಳು ಇತ್ಯಾದಿ ಅಲ್ಲಲ್ಲಿ ಕಾಣಬರುತ್ತವೆ.

ಕಾಕತೀಯ ಕಲೆ ಮೂಲತಃ ಕರ್ನಾಟಕದ ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳ ಕಲೆಗಳಿಂದ ಪ್ರಭಾವಗೊಂಡ ಕಲೆ. ಹೀಗಾಗಿ ಈ ಎರಡೂ ಕರ್ನಾಟಕದ ಕಲೆಗಳ ಮುಖ್ಯ ಲಕ್ಷಣಗಳೆಲ್ಲವೂ ಹೆಚ್ಚೂ ಕಡಿಮೆ ಅದೇ ರೀತಿಯಲ್ಲಿ, ನಿರ್ಮಾಣ ಮಾಧ್ಯಮ ಅವಕಾಶ ನೀಡುವಷ್ಟರ ಮಟ್ಟಿಗೆ, ಅನುಕರಿಸಿ ಮಾಡಿರುವ ಕಲೆ. ಕಾಕತೀಯ ಶಿಲ್ಪಗಳು ಸಾಲಭಂಜಿಕೆಯರ /ಶಿಲಾಬಾಲಿಕೆಯರ ಶಿಲ್ಪಗಳನ್ನು, ಅತಿ ಕಠಿಣ ಡಾಲರೈಟ್ ಶಿಲೆಯಲ್ಲೇ ಕಂಡರಿಸಿ ತಮ್ಮ ಶಿಲ್ಪಕಲಾ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಈ ರೀತಿಯ ಶಿಲ್ಪಗಳು ಅವರ ಒಂದೇ ಒಂದು ದೇವಾಲಯದಲ್ಲಿ (ಪಾಲಂಪೇಟೆ) ಮಾತ್ರ ಕಾಣ ಬರುತ್ತವೆ. ಮಹಾಮಂಟಪದ ವಿಶಾಲ ಕಪೋತಕ್ಕೆ ಆಧಾರವಾಗಿ ನಿಂತಿರುವ ಈ ಶಿಲ್ಪಗಳು ಸುಂದರ ಯುವತಿಯರ ವೈಯ್ಯಾರ, ಬೆಡಗು-ಬಿನ್ನಾಣಗಳನ್ನೂ ನಾಟ್ಯದ ವಿವಿಧ ಭಂಗಿಗಳನ್ನೂ ಪ್ರದರ್ಶನ ವಸ್ತುವನ್ನಾಗಿ ಹೊಂದಿವೆ. ಡಾಲರೈಟ್ ಶಿಲೆಯಲ್ಲಿ ಶಿಲ್ಪಗಳು ಕಂಡರಣೆಯಾಗಿರುವುದರಿಂದ ಅಲಂಕರಣ ಕಡಿಮೆ, ಆದರೆ ಸೂಕ್ಷ್ಮ ರೀತಿಯದು. ಬಳಸಿರುವ ಕಲ್ಲಿನ ಗಾತ್ರ ಹಾಗೂ ಉದ್ದ ಹೆಚ್ಚಿರುವುದರಿಂದ, ಜೊತೆಗೆ ಈ ಕಲ್ಲುಗಳು ಮೇಲಿನ ವಿಶಾಲ ಕಪೋತಕ್ಕೆ ಆಸರೆಗಳೂ ಆಗಿರುವುದರಿಂದ, ಭದ್ರತೆಗಾಗಿ ಶಿಲ್ಪಗಳನ್ನು ಕೆಲಮಟ್ಟಿಗೆ ಮೂರು ಆಯಾಮದಲ್ಲಿ ಕೆತ್ತನೆ ಮಾಡಿಲ್ಲ. ಹಿಂಭಾಗವನ್ನು ಕಡಯದೆಯೇ ಬಿಟ್ಟು, ಆಭಾಗವನ್ನು ನಯಗೊಳಿಸಲಾಗಿದೆ. ಒಂದು ಪಕ್ಷ ಇವುಗಳನ್ನು, ಹೊಯ್ಸಳ ಮದನಿಕಾ ಶಿಲ್ಪಗಳಂತೆ ಕಡೆದಿದ್ದಲ್ಲಿ ಶಿಲೆಯ ಭಾರಕ್ಕೆ ಶಿಲ್ಪವು ತುಂಡಾಗಿ ಬೀಳುವ ಸಾಧ್ಯತೆ ಇತ್ತೂ. ಅದರಿಂದಾಗಿ ಶಿಲ್ಪಿಗಳು ಈ ವಿಧಾನವನ್ನು ಅನುಸರಿಸಿದ್ದಾರೆ. ಪ್ರತಿ ಶಿಲ್ಪಗಳಿಗೂ ಎತ್ತರವಾದ ಚೌಕಪೀಠ, ನಿಂತಿರುವ ಭಂಗಿಯಲ್ಲಿ, ಎತ್ತರವಾದ, ನೀಳಕಾಯದ ತರುಣಿಯರು, ಮೇಲೆ ಚೌತಿಚಂದ್ರಾಕಾರದ ಲತಾಕುಂಜ ಮತ್ತು ಮೇಲೆ ಎತ್ತರವಾದ ಗುಬುಟು ಇವಿಷ್ಟೂ ಇವೆ. ನಿರ್ಮಾಣ ಅವಶ್ಯಕತೆಗೆ ತಕ್ಕಂತೆ ಕಲ್ಲಿನ ಉದ್ದವನ್ನು ನಿಗದಿ ಪಡಿಸಿರುವುದರಿಂದ, ಶಿಲಾ ಬಾಲಿಕೆಯರ ಕಾಯವೂ ಉದ್ದವಾಗಿ ಎತ್ತರವಾಗಿವೆ. ಹೊಯ್ಸಳ ಶಿಲಾಬಾಲಿಕೆಯರ ಬಹುತೇಕ ಅಲಂಕರಣ ಲಕ್ಷಣಗಳು ಇಲ್ಲಿ ಕಾಣಬರುತ್ತವೆ. ತರುಣಿಯರ ದೇಹ ಆಕರ್ಷಕ ಹಾವ-ಭಾವಗಳಿಂದ, ಲಾಲಿತ್ಯ ಪೂರ್ಣವಾಗಿ ಬಿಂಬಿತವಾಗಿವೆ. ಕೆಲವು ಶಿಲ್ಪಗಳು ನಗ್ನವಾಗಿದ್ದರೂ ಅಶ್ಲೀಲವಾಗಲೀ ಕಾಮುಕತನವಾಗಲೀ ಕಂಡು ಬರುವುದಿಲ್ಲ. ದೇಹ ಸೌಷ್ಠವತೆಯ ಕಂಡರಣೆಯಲ್ಲಿ ಮಾರ್ದವತೆ ಇದೆ. ಇವುಗಳ ಮುಖ್ಯ ವಿಷಯ ಶೃಂಗಾರ ರಸ ಪ್ರದರ್ಶನ. ಹೊಯ್ಸಳರ ಶಿಲಾಬಾಲಿಕೆಯ ವಸ್ತುವಿನ ರೀತಿಯಲ್ಲಿ ಇಲ್ಲಿಯೂ ಕೋತಿಯೊಂದು ಯುವತಿಯೊಬ್ಬಳ ಸೀರೆಯನ್ನೆಳೆದು ಆಕೆಯನ್ನು ಅರೆನಗ್ನಳನ್ನಾಗಿ ಮಾಡಿರುವುದು ಗಮನಾರ್ಹ.

ಕಾಕತೀಯ ದೇವಾಲಯಗಳಲ್ಲಿ ಪ್ರಮುಖವಾದವುಗಳು ಪಾಲಂಪೇಟೆ, ಕುಸುಮಾಂಚಿ, ಹನುಮಕೊಂಡ, ರಾಮಾನುಜಪುರ, ನಾಗುಲಪಾಡು, ಕೊಂಡಪರ್ತಿ, ಪೆದ್ದತುಂಬಲಂ, ಚೇಬ್ರೊಲು, ಧರ್ಮಪುರಿ, ಪಿಲ್ಲಲಮರ್ರಿ ಮುಂತಾದೆಡೆ ಕಾಣಬರುತ್ತವೆ. ಪಾಲಂಪೇಟೆಯ (ವಾರಂಗಲ್ ಜಿಲ್ಲೆ) ರಾಮಪ್ಪ ದೇವಾಲಯ ಕಾಕತೀಯ ಶಿಲ್ಪಿಗಳ ಮಹೋನ್ನತ ಕೃತಿ. 1213ರಲ್ಲಿ ಕಾಕತೀಯ ದೊರೆ ಗಣಪತಿ ದೇವನ ದಂಡನಾಯಕ ರುದ್ರನಿಂದ ನಿರ್ಮಿತವಾದ ಈ ರುದ್ರೇಶ್ವರ ದೇವಾಲಯ ಇದು. ಪೂರ್ವಾಭಿಮುಖವಾದ ಈ ದೇವಾಲಯ ವಿಶಾಲ ಪ್ರಾಕಾರದ ಮಧ್ಯೆನಿಂತಿದೆ. ಎತ್ತರವಾದ ವೇದಿಯ ಮಧ್ಯದಲ್ಲಿ ನಿರ್ಮಿತವಾದ ಈ ದೇಗುಲಕ್ಕೆ ಸುತ್ತಲೂ ಜಗತಿಯ ಮೇಲಿನ ವಿಶಾಲ ಪ್ರದಕ್ಷಿಣಾಪಥವಿದೆ. ತಳವಿನ್ಯಾಸದಲ್ಲಿ ದೇವಾಲಯಕ್ಕೆ ಗರ್ಭಗೃಹ, ಸುಕನಾಸಿ ಮತ್ತು ತೆರೆದ ರಂಗಮಂಟಪವಿದೆ. ರಂಗಮಂಟಪ ಚೌಕಾಕಾರ, ಆದರೆ, ಇದರ ಮೂರು ಮುಖಗಳಲ್ಲಿ ಮುಂಚಾಚಿದ ವಿಶಾಲ ಮುಖ ಮಂಟಪ ಮತ್ತು ಪ್ರವೇಶ ದ್ವಾರಗಳಿವೆ. ರಂಗಮಂಟಪ ಮತ್ತು ಅದರ ಮುಖಮಂಟಪಗಳೆಲ್ಲವನ್ನೂ ಕೂಡಿದಂತೆ, ಅವುಗಳ ಪರಿಧಿಯಲ್ಲಿ, ಅರ್ಧಭಿತ್ತಿ ಮತ್ತು ಕಕ್ಷಾಸನ ಒರಗು ಹಲಗೆಗಳಿವೆ. ನವರಂಗಕ್ಕೆ ಮಧ್ಯದಲ್ಲಿ ನಾಲ್ಕೇ ಕಂಭಗಳಿದ್ದರೂ ಸುತ್ತಲಿನ ಕಕ್ಷಾಸನದ ಮೇಲಿನ ಎಲ್ಲಾ ಕಂಭಗಳನ್ನೂ ಕೂಡಿಸಿದರೆ ಒಟ್ಟು 58 ಕಂಭಗಳಾಗುತ್ತವೆ. ಏರುವಿನ್ಯಾಸದಲ್ಲಿ ಎತ್ತರವಾದ ಸಾಲಂಕೃತ ವೇದಿ, ಪಟ್ಟಿಕೆಗಳಿಂದ ಅಲಂಕೃತವಾದ ಅಧಿಷ್ಠಾನ, ಗರ್ಭಗೃಹ, ಸುಕನಾಸಿ ಭಾಗಗಳಲ್ಲಿ ಮಾತ್ರ ಭಿತ್ತಿ, ವಿಶಾಲ ಕಪೋತ, ನಾಲ್ಕು ತಲದ ದ್ರಾವಿಡ ವಿಮಾನ ಪ್ರಾಸಾದ ಹಾಗೂ ಬ್ರಹ್ಮಕಾಂತ ಮಾದರಿಯ ಶಿಖರ ಇವಿಷ್ಟೂ ಇವೆ. ವಿಮಾನ ಪ್ರಾಸಾದಕ್ಕೆ ಮುಂದುಗಡೆ ಸುಕನಾಸವೂ ಇದೆ. ವಿಮಾನ ಪ್ರಾಸಾದ ಇಟ್ಟಿಗೆ ಗಾರೆಯದು. ದೇವಾಲಯ ಮರಳುಗಲ್ಲಿನದು. ಕಂಬಗಳು, ದ್ವಾರಬಂಧ ಮತ್ತು ಸಾಲಭಂಜಿಕಾ ಶಿಲ್ಪಗಳು ಡಾಲರೈಟ್ ಶಿಲೆಯವು. ಮಹಾಮಂಟಪದ ಅಧಿಷ್ಠಾನ ಮೇಲಿನ ಅರೆಭಿತ್ತಿ, ಕಕ್ಷಾಸನದ ಹಿಮ್ಮುಖ ಮುಂತಾದುವೆಲ್ಲವೂ ಪ್ರತ್ಯೇಕ ಕಟ್ಟುಗಳಿಂದಾವೃತವಾದ ಮೂರ್ತಿ ಹಾಗೂ ಅಲಂಕಾರಿಕ ಉಬ್ಬುಶಿಲ್ಪಗಳಿಂದ ಕೂಡಿದೆ. ವಿಶಾಲವಾಗಿ ಮುಂಚಾಚಿದ ಎರಡು ಭಾಗನ್ನುಳ್ಳ ಕಪೋತ. ಇದರ ತಳಭಾಗ ವಿನ್ಯಾಸ ವಿಶೇಷತೆಗೆ ಆಕರ್ಷಕವಾಗಿದೆ. ಗರ್ಭಗೃಹದ ಭಿತ್ತಿಯ ಮೂರು ಭದ್ರ ಭಾಗಗಳಲ್ಲಿ ಕಾಣಬರುವ ಮೂರು ತಲದ ಕೋಷ್ಠ ಗುಡಿಗಳು, ಇವುಗಳ ಭಿತ್ತಿವಿನ್ಯಾಸ, ಜಾಲಂಧ್ರಗಳು, ಇಳಿಜಾರು ಕಪೋತಗಳು ಅವುಗಳ ಸುಂದರ ಸೂಕ್ಷ್ಮ ಅಲಂಕರಣೆ ಮುಂತಾದವು ಇನ್ನಿತರ ವಿಶೇಷತೆಗಳು.

ದೇವಾಲಯದ ಅತ್ಯಂತ ಆಕರ್ಷಕ ಭಾಗಗಳೆಂದರೆ ಡಾಲರೈಟ್ ಶಿಲೆಯ ಕಂಭಗಳು, ಸಾಲಭಂಜಿಕೆಯರು, ವಿತಾನಾಂಕಣಗಳು ಮತ್ತು ದ್ವಾರಬಂಧ. ಈ ಎಲ್ಲಾ ವಾಸ್ತು ಭಾಗಗಳ ಸುಂದರ ಸೂಕ್ಷ್ಮ ಕೆತ್ತನೆಗಳ ವಿನ್ಯಾಸ ವೈವಿಧ್ಯತೆ ಹೊಳಪು-ನುಣುಪು ಅನುಪಮವಾದದ್ದು. ಕಠಿಣ ಡಾಲರೈಟ್ ಶಿಲೆಯಲ್ಲಿ ಇಷ್ಟು ಸುಂದರವಾಗಿ, ಸೂಕ್ಷ್ಮವಾಗಿ, ನವಿರಾಗಿ, ನುಣುಪಾಗಿ ಕಂಡರಿಸಿರುವ ಊಹಾತೀತವಾದ ಮಾದರಿಗಳು, ಇಡೀ ಆಂಧ್ರಪ್ರದೇಶದ ಯಾವುದೇ ಶಿಲ್ಪಕಲಾ ಶೈಲಿಯಲ್ಲಿ ಕಾಣಬರದಿರುವುದು, ಕಾಕತೀಯ ಶಿಲ್ಪಿಗಳ ಪರಿಶ್ರಮಕ್ಕೆ, ಚಾತುರ್ಯಕ್ಕೆ ಹಾಗೂ ವಿಪುಲ ಕಲ್ಪನಾಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ.

ಕಾಕತೀಯರ ಮತ್ತೊಂದು ಮಹೋನ್ನತ ವಾಸ್ತು ಕೃತಿಯೆಂದರೆ ಹನುಮಕೊಂಡದ ಶಿವದೇವಾಲಯ. ತ್ರಿಕೂಟಾಚಲವಾದ ಈ ದೇವಾಲಯ (ತ್ರೈಪುರುಷ) ಶಿವ, ವಿಷ್ಣು ಮತ್ತು ಸೂರ್ಯರಿಗಾಗಿ ನಿರ್ಮಿತವಾಯಿತು. 1163ರಲ್ಲಿ ರುದ್ರದೇವನಿಂದ ನಿರ್ಮಿತವಾದ ಈ ದೇವಾಲಯ ತಳವಿನ್ಯಾಸದಲ್ಲಿ ಮೂರು ದಿಕ್ಕಿಗೆ ಮುಖಮಾಡಿರುವ ಮೂರು ಗರ್ಭಗುಡಿಗಳು, ಪ್ರತಿಗರ್ಭಗುಡಿಗೂ ಒಂದೊಂದು ಶುಕನಾಸ, ಒಂದು ಸಾಮಾನ್ಯ ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಹಾಗೆಯೇ ಪ್ರತ್ಯೇಕವಾಗಿ ನಿರ್ಮಿತವಾದ ವಿಶಾಲ ರಂಗಮಂಟಪವಿದೆ. ಈ ರಂಗಮಂಟಪವನ್ನು ಸಾವಿರ ಕಂಬದ ಮಂಟಪವೆಂದು ಕರೆಯುತ್ತಾರೆ. ಆದರೆ ಇಲ್ಲಿರುವ ಕಂಭಗಳ ಸಂಖ್ಯೆ ಕೇವಲ ನೂರು ಮಾತ್ರ. ಎತ್ತರವಾದ ಜಗತಿ, ಜಗತಿಯ ಮೇಲೆ, ವಿಶಾಲ ಪ್ರದಕ್ಷಿಣ ಪಥ, ಉಪಪೀಠದಿಂದ ಕೂಡಿದ ಅಧಿಷ್ಠಾನ, ಭಿತ್ತಿಪಾದ-ಕೋಷ್ಠಾಲಂಕೃತ ಭಿತ್ತಿ, ವಿಶಾಲ ಕಪೋತ ಇವಿಷ್ಟೂ ಏರುವಿನ್ಯಾಸದಲ್ಲಿದೆ. ದೇವಾಲಯದ ಯಾವ ಗುಡಿಗೂ ಮೇಲೆ ಪ್ರಾಸಾದವಿಲ್ಲ. ದೇವಾಲಯದಲ್ಲಿ ಅಲ್ಲಲ್ಲಿ ರಾಮಾಯಣ, ಮಹಾಭಾರತ ಹಾಗೂ ಮತ್ತಿತರ ಪೌರಾಣಿಕ ಸನ್ನಿವೇಶದ, ಕಥಾನಕದ ಉಬ್ಬು ಶಿಲ್ಪಗಳಿವೆ. ಹಾಗೆಯೇ ಹೊಳಪು ಮಾಡಿರುವ ಕಂಬಗಳು ಇಲ್ಲಿಯ ಆಕರ್ಷಣೆ.

ಕಾಕತೀಯರ ವಿಶಿಷ್ಟ ವಾಸ್ತುವಿನ ಇತರ ದೇವಾಲಯಗಳು ಪೆದ್ದತುಂಬುಲಂ, ಚೇಬ್ರೊಲು (ಭೂಮಿಜ ವಿಮಾನ), ಕೊಂಡಿಪರ್ತಿ, ಪಾನುಗಲ್ (ಕದಂಬನಗರ ವಿಮಾನ) ಘಾನ್‌ಪುರ (ದ್ರಾವಿಡ ವಿಮಾನ) ಮುಂತಾದೆಡೆ ಇವೆ. ಇವುಗಳಲ್ಲದೆ ಇನ್ನೂ ಅನೇಕ ಕಡೆ ದುಸ್ಥಿತಿಯಲ್ಲಿರುವ ದೇವಾಲಯಗಳು ಹಾಗೂ ಅವುಗಳ ಭಿನ್ನ ಭಾಗಗಳು ಕಾಣಬರುತ್ತವೆ.

ಇವುಗಳಲ್ಲಿ ಕರೀಂನಗರ ಜಿಲ್ಲೆಯ ಧರ್ಮಪುರಿಯ ಉತ್ಸವ ಮಂಟಪ ಇಲ್ಲಿಯ ಸುಂದರ ಕೆತ್ತನೆಗಳಿಗೆ ಆರ್ಕಷಕವಾಗಿದೆ. ಇದೇ ಜಿಲ್ಲೆಯ ನಾಗನೂರಿನ ಭಗ್ನ ದೇವಾಲಯದ ಮುಂದಿನ ಗರುಡಗಂಬ ಸಹ ಗಮನಾರ್ಹವಾದದ್ದು. ಎತ್ತರವಾದ ಏಕಶಿಲಾಕಂಬದ ಮೇಲೆ ಕೂಡಿಸಿರುವ ಮಂಟಪ, ಮಧ್ಯೆ ಅಂಜಲಿ ಬದ್ಧನಾಗಿ ಕುಳಿತಿರುವ ಗರುಡ ಶಿಲ್ಪ, ಜೈನ ಮಾನಸ್ತಂಬಗಳ ರೂಪಣೆಯನ್ನು ನೆನಪಿಗೆ ತರುತ್ತದೆ. ನಾಲ್ಗೊಂಡ ಜಿಲ್ಲೆಯ ನಾಗುಲಪಾಡುವಿನ ಶಿವದೇವಾಲಯದ ದ್ವಾರಬಂಧ, ಸುಂದರಾಕರ್ಷಕ ಕಂಭಗಳು ಮುಂತಾದವು ವಾರಂಗಲ್, ವಲ್ಲಾಳ, ನಂದಿಕಂಡಿಯಲ್ಲಿನ ಬೃಹತ್ ತೋರಣಗಳು ಮುಂತಾದವು ಕಾಕತೀಯ ವಾಸ್ತುಶಿಲ್ಪದ ಮಹೋನ್ನತ ಕೃತಿಗಳಲ್ಲಿ ಕೆಲವು.

ಕಾಕತೀಯರ ಶಿಲ್ಪಕಲೆಯ ಅಧ್ಯಯನಕ್ಕೆ ದೊರೆಯುವ ಆಕರಗಳು ಸ್ವಲ್ಪ ಕಡಿಮೆ ಯೆಂದೇ ಹೇಳಬಹುದು. ಇದಕ್ಕೆ ವಾಸ್ತು ನಿರ್ಮಾಣಕ್ಕೆ ಅವರು ಬಳಸಿದ ಕಠಿಣ ಮಾಧ್ಯಮ ಹಾಗೂ ಹಲವಾರು ಕಾರಣಗಳಿಂದ ಬಹಳಷ್ಟು ಶಿಲ್ಪಗಳು ನಾಶವಾಗಿವೆ. ಸಾಲು ಶಿಲ್ಪಗಳು, ಪಟ್ಟಿಕೆಗಳ ಕಥಾನಕ ಶಿಲ್ಪಗಳು, ಕೋಷ್ಠಶಿಲ್ಪಗಳು, ದ್ವಾರಬಂಧದ ಶಿಲ್ಪಗಳು, ಸಮೂಹ ಶಿಲ್ಪಗಳು, ಕಂಬದ ಮೇಲಿನ ಉಬ್ಬು ಕೆತ್ತನೆಗಳು ಇತ್ಯಾದಿಯಾಗಿ ಇವುಗಳ ವಸ್ತು ವಿಷಯ ಹಲವಾರಿವೆ. ಕಾಕತೀಯ ದೇವಾಲಯಗಳ ಅಧಿಷ್ಠಾನಗಳು ಸಂಪೂರ್ಣ ದ್ರಾವಿಡ ದಿಂಡುಗಳಿಂದ ಆಲಂಕೃತವಾದವುಗಳು. ಈ ಅವಕಾಶವಿದ್ದೆಡೆಗಳಲ್ಲಿ ಕೆಲವು ಮಹೋನ್ನತವಾದ ದೇಗುಲಗಳಲ್ಲಿ (ಕುಸುಮಾಂಚಿ, ಪಾಲಂಪೇಟೆ), ಅಧಿಷ್ಠಾನದಲ್ಲಿ ಪಟ್ಟಿಶಿಲ್ಪಗಳು ಕಾಣಬರುತ್ತವೆ. ಸಾಮಾನ್ಯವಾಗಿ ಚಲಿಸುತ್ತಿರುವ ಆನೆಯ ಸಾಲಿನ ಉಬ್ಬು ಶಿಲ್ಪ, ಪದ್ಮಪುಷ್ಪದ ಕೆತ್ತನೆ, ಅಲ್ಲಲ್ಲಿ ದೇವತಾ ಪುರುಷರು ಇತ್ಯಾದಿ ಕಿರುಶಿಲ್ಪಗಳ ಕೆತ್ತನೆಯೂ ಕಾಣಬಂದಿದೆ (ರಾಮಾನುಜಪುರ).

ದೇವಾಲಯದ ಒಳಭಾಗದಲ್ಲಿ ಚಾವಣಿಯ ಪ್ರಧಾನ ಅಂಕಣದ ತೊಲೆಗಳ ಮೇಲೆ ರಾಮಾಯಣ, ಅಮೃತಮಂಥನ (ಪಿಲ್ಲಲಮರ್ರಿ) ಶಿವಲೀಲೆಗಳು (ನಿದಿಕೊಂಡ) ಇತ್ಯಾದಿ ಕಥಾನಕ ಉಬ್ಬುಶಿಲ್ಪಗಳಿವೆ. ದ್ವಾರಬಂಧದ ಪೇದ್ಯಗಳಲ್ಲಿ ದ್ವಾರಪಾಲಕ, ಚಾಮರಧಾರಿ, ಗಂಗೆ, ಯಮುನೆ, ದಾನಿಗಳು ಮುಂತಾದವರ ಶಿಲ್ಪಗಳು ಸಾಮಾನ್ಯ (ನಾಗುಲಪಾಡು). ಹಾಗೆಯೇ ದ್ವಾರಬಂಧದ ಮೇಲಿನ ಹಾರದ ಭಾಗದಲ್ಲಿ ವಿಶಾಲವಾಗಿ ನಿರೂಪಣೆಯಾದ ಶಿವನಟರಾಜ ಹಾಗೂ ಸಹಚರರ, ವ್ಯಾಳಗಳ ಕೆತ್ತನೆಯೂ ಇದೆ (ವಾರಂಗಲ್ ಕೋಟೆ) ಕಂಬಗಳ ಮೇಲಿನ ಶಿಲ್ಪಗಳು ಬಹಳಷ್ಟು ಸಮಾಜೋ–ಧಾರ್ಮಿಕ ವಸ್ತು ವಿಷಯಗಳಾಗಿವೆ. ದೇವ–ದೇವತೆಗಳ ಉಬ್ಬು ಶಿಲ್ಪಗಳು ಗೀತನರ್ತನಕಾರರು, ವಾದ್ಯಪಟುಗಳು ಇವರ ಶಿಲ್ಪಗಳು ಕಂಬದ ಸುತ್ತಲೂ ಪಟ್ಟಿರೂಪದಲ್ಲಿ ಪ್ರಕಟಗೊಂಡಿವೆ (ಬೆಜ್ಜಂಕಿ).

ಕಾಕತೀಯರ ಮೂರ್ತಿಶಿಲ್ಪಗಳಲ್ಲಿ ಹೆಚ್ಚಿನವು ಶೈವ, ವೈಷ್ಣವ ಪಂಥದವು. ಜೈನ ಶಿಲ್ಪಗಳು ಅತಿ ಕಡಿಮೆ. ಬೌದ್ಧ ಶಿಲ್ಪಗಳು ಕಾಣಬರುವುದಿಲ್ಲ. ಮೂರ್ತಿ ಶಿಲ್ಪಗಳಲ್ಲಿ ಉಬ್ಬು ಶಿಲ್ಪಗಳು, ದುಂಡು ಶಿಲ್ಪಗಳು ಕಾಣಬರುತ್ತವೆ. ಸ್ಥಾನಕ, ಆಸೀನ ಶಿಲ್ಪಗಳೇ ಜಾಸ್ತಿ. ಕೆಲವು ಸಂಹಾರ ಮೂರ್ತಿಗಳೂ ಇವೆ. ತ್ರಿಪುರಾಂತಕ ಅಂಧಕಾಸುರಾದಿ (ಮಂಥಣಿ), ಮಹಿಷಮರ್ದಿನಿ (ಕರೀಂನಗರ), ಉಗ್ರನರಸಿಂಹ (ಮಂಥಣಿ) ಇತ್ಯಾದಿಗಳು ಕೆಲವು ಉತ್ತಮ ಉದಾಹರಣೆಗಳು. ಇವುಗಳಲ್ಲದೆ ಶಿವ, ಭೈರವ, ಸರಸ್ವತಿ, ಗಣಪತಿ ಮುಂತಾದವು (ವಾರಂಗಲ್), ಲಕ್ಷ್ಮೀನರಸಿಂಹ (ಮಂಥಣಿ), ಅನ್ನಪೂರ್ಣೆ (ಕಾಲೇಶ್ವರಂ), ಸಪ್ತಮಾತೃಕೆಯರು (ಪಾಲಂಪೇಟೆ) ಯೋಗಾನರಸಿಂಹ (ಸಂಗಮೇಶ್ವರಂ), ಚೆನ್ನಕೇಶವ (ಸತ್ಯಂಪೇಟೆ) ಮುಂತಾದುವು ಗಮನಾರ್ಹವಾದವುಗಳು. ಬಹುತೇಕ ಕಾಕತೀಯ ಶಿಲ್ಪಗಳ ಒಂದು ವಿಶಿಷ್ಟ ಲಕ್ಷಣವೆಂದರೆ ಇವುಗಳ ಪ್ರಭಾವಳಿಯ ವಿನ್ಯಾಸ. ಕಲ್ಯಾಣ ಚಾಳುಕ್ಯ ಶಿಲ್ಪ ಪ್ರಭಾವಳಿಯ ರೀತಿಯಲ್ಲಿ ಇವುಗಳನ್ನೂ ವಿನ್ಯಾಸಗೊಳಿಸಿರುತ್ತಾರೆ. ಶಿಲ್ಪದ ಇಕ್ಕೆಲದಲ್ಲಿ ಎತ್ತರವಾಗಿ ನಿಂತ ಸ್ತಂಭಿಕೆಗಳು, ಸ್ತಂಭಿಕೆಯ ಮೇಲೆ ವ್ಯಾಳಗಳು. ವ್ಯಾಳಗಳ ಬಾಯಿಂದ ಹೊರಡುವ ಬಳ್ಳಿ ಸುರುಳಿಗಳು ಸರ್ಪ ಗತಿಯಲ್ಲಿ, ಲಾಳದ ರೀತಿಯ ಸುರುಳಿಗಳಲ್ಲಿ ಮೇಲೇರಿ ಎರಡೂ ಸಂಧಿಸುತ್ತವೆ. ಈ ಶೃಂಗ ಭಾಗದಲ್ಲಿ ಕೀರ್ತಿ ಮುಖದ ಕಿರೀಟ ಅಥವಾ ಜೋತುಬಿದ್ದ ಮಾವಿನ ಫಲದ ಕೆತ್ತನೆ ಇರುತ್ತದೆ. ಇದುವರೆಗೆ ದೊರೆತಿರುವ ಕಾಕತೀಯ ಶಿಲ್ಪಗಳು ಸಾಧಾರಣವಾಗಿ ಸುಂದರವಾಗಿವೆ. ಇವುಗಳಲ್ಲಿ ವಸ್ತು ನಿರೂಪಣೆ ಪ್ರಭಾವಶಾಲಿಯಾಗಿ ಕಂಡು ಬಂದರೂ ಮುಖಚರ್ಯೆ ಹಾವ–ಭಾವ, ಲಾಲಿತ್ಯ, ಆಕರ್ಷಣೆ ಕಡಿಮೆ. ಇವುಗಳಿಗೆ ಅಪವಾದವೆಂದರೆ ಕಾಕತೀಯ ಶಿಲ್ಪಿಗಳ ಮೇರುಕೃತಿಯನ್ನಬಹುದಾದ ಸಾಲಭಂಜಿಕೆಯರ ಶಿಲ್ಪಗಳು(ಪಾಲಂಪೇಟೆ). ಈ ಸಾಲಭಂಜಿಕೆ ಶಿಲ್ಪಗಳು ತರುಣಿಯರ ನಿಲುವು, ಹಾವ–ಭಾವ, ಭಂಗಿ, ಬೆಡಗು, ಬಿನ್ನಾಣ ಪ್ರದರ್ಶನದ ಸುಂದರ ಸೃಷ್ಟಿಗಳೆನಿಸಿವೆ.

ಚಾಳುಕ್ಯ ಹೊಯ್ಸಳ ಕಾಕತೀಯ ಮೂರು ಶಿಲ್ಪಶೈಲಿಗಳೂ ಆಯಾ ಪ್ರಾಂತ್ಯಗಳ ಸಾಂಸ್ಕೃತಿಕ ಬೆಳವಣಿಗೆಯ ಬೆನ್ನೆಲುಬಾಗಿರುವುದಲ್ಲದೇ, ಸಾಂಸ್ಕೃತಿಕ ಸಂಬಂಧ, ವಿನಿಮಯಗಳಿಂದಾಗಿ ಈ ಮೂರು ಪ್ರಾಂತ್ಯಗಳಲ್ಲಿ ಹೆಚ್ಚೂ ಕಡಿಮೆ ಏಕರೂಪದ ಬೆಳವಣಿಗೆ, ಬದಲಾವಣೆಗಳಾದವು ಎಂದು ಹೇಳಬಹುದು. ಈ ಎಲ್ಲಾ ದೇವಾಲಯಗಳ ವಿವಿಧ ಭಾಗಗಳು, ಅವುಗಳ ರೂಪಗಳು, ಅಲಂಕರಣೆಗಳು, ಸಮಕಾಲೀನ ಸಮಾಜದಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಸ್ಥಿತಿಗತಿಗಳ ವಿವಿಧ ಛಾಯೆಗಳನ್ನು ಪ್ರತಿಬಿಂಬಿಸುವುದಲ್ಲದೆ, ಆ ಕಾಲದ ಸಾಂಸ್ಕೃತಿಕ ವಾತಾವರಣ, ಸಾಂಸ್ಕೃತಿಕ ಉತ್ಸಾಹ, ಸಂಭ್ರಮ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳನ್ನು ಪ್ರತಿನಿಧಿಸುತ್ತವೆ. ಹೀಗಾಗಿ ಈ ದೇವಾಲಯಗಳನ್ನು ಆಕಾಲದ ಬೌದ್ಧಿಕ ಪ್ರಗತಿಯ ಚೌತಿಕ ರೂಪಗಳೆಂದು ಪರಿಗಣಿಸಬಹುದು. (ಎಂ.ಎಸ್.ಕೆ.)

**ಕಾಗೋಡು ಸತ್ಯಾಗ್ರಹ:** ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಕಾಗೋಡು ಗ್ರಾಮದಲ್ಲಿ ನಡೆದ ಗೇಣಿ ರೈತರ ಸತ್ಯಾಗ್ರಹ (1951). ದೇಶಕ್ಕೆ ಸ್ವಾತಂತ್ರ್ಯ ಬಂದಾಗ ರಾಜಕೀಯ ಅಧಿಕಾರ ಜನರಿಗೆ ಪ್ರಾಪ್ತವಾಗಿದ್ದರೂ ಆರ್ಥಿಕ ಶೋಷಣೆಯಿಂದ ಜನರು ಮುಕ್ತವಾಗಿರಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನ್ದಾರಿಕೆ ವ್ಯವಸ್ಥೆಯ ಮೂಲದಿಂದ ಬಂದ ಗೇಣಿ ಪದ್ಧತಿಯೂ ಅಂತಹ ಶೋಷಣೆಗೆ ಹೆಚ್ಚಿನ ಅವಕಾಶ ನೀಡಿತ್ತು. ಆಗ ಇಂಥ ವ್ಯವಸ್ಥೆಯ ವಿರುದ್ಧ ನಡೆದ ಈ ರೈತ ಹೋರಾಟ ಕರ್ನಾಟಕದ ರೈತ ಚಳವಳಿಯ ಇತಿಹಾಸದಲ್ಲಿ ಮೈಲಿಗಲ್ಲಾಗಿದೆ.

ಸಾಗರ ಪಟ್ಟಣದಿಂದ ಉತ್ತರದಿಕ್ಕಿಗೆ ಕೆಳದಿ–ಮಾಸೂರು ಮಾರ್ಗದಲ್ಲಿ ಸಾಗರದಿಂದ 15ಕಿಮೀ ದೂರದಲ್ಲಿ ವರದಾ ನದಿಯ ದಂಡೆಯ ಮೇಲಿರುವ ಕಾಗೋಡು ಮಲೆನಾಡಿನ ಒಂದು ಪುಟ್ಟ ಹಳ್ಳಿ. ಕಾಗೋಡು ಚಳವಳಿ ನಡೆದ ಕಾಲಕ್ಕೆ ಇಲ್ಲಿ ಒಟ್ಟು 50 ಮನೆಗಳಿದ್ದುವು. ಈಗ 232 ಕುಟುಂಬಗಳಿವೆ. ಅವುಗಳಲ್ಲಿ ದೀವರ ಕುಟುಂಬಗಳೇ ಹೆಚ್ಚು. ಉಳಿದಂತೆ ಹರಿಜನರು, ಮಡಿವಾಳರು, ಅಕ್ಕಸಾಲಿಗರು, ಲಿಂಗಾಯಿತರು ಮೊದಲಾದವರಿದ್ದರು. ಒಟ್ಟು ಜಮೀನಿನ ವಿಸ್ತೀರ್ಣ ಸು. 891 ಎಕರೆ.

ಆಗಿನ ಮೈಸೂರು ರಾಜ್ಯದ ಮಲೆನಾಡು ಪ್ರಾಂತ್ಯದಲ್ಲಿ ಭೂ ಒಡೆತನದ ಹಕ್ಕು ಹಿಂದು ಶ್ರೇಣೀಕೃತ ಸಮಾಜದ ಮೇಲ್ವರ್ಗದವರ ಕೈಯಲ್ಲಿ ಹೆಚ್ಚಾಗಿತ್ತು. ಕೆಲವೇ ಜಮೀನ್ದಾರರ ಅಡಿಯಲ್ಲಿ ರೈತಾಪಿ ಗೇಣಿ ಒಕ್ಕಲುಗಳು ಇರುತ್ತಿದ್ದವು. ಅವರೆಲ್ಲ ಬಹುತೇಕ ಗೇಣಿದಾರರಾಗಿ ಮತ್ತು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಈ ದುಡಿಮೆ ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುತ್ತಿತ್ತು. ಭೂ ಒಡೆಯರ ಮನೆಗಳಲ್ಲಿ ವರ್ಷದಲ್ಲಿ ಹಲವಾರು ದಿವಸ ಬಿಟ್ಟಿ ದುಡಿಮೆ ಮಾಡುವ ಪದ್ಧತಿಯೂ ಇತ್ತು. ರುಮಾಲು ಸುತ್ತಿಕೊಳ್ಳುವುದು, ಉದ್ದವಾಗಿ ಮೊಳಕಾಲ ಕೆಳಗಿನವರೆಗೆ ಪಂಚೆ ಉಡುವುದು, ಕಾಲಿಗೆ ಚಪ್ಪಲಿ ಹಾಕಿಕೊಳ್ಳುವುದು, ಒಡೆಯರ ಎದುರು ಛತ್ರಿ ಹಿಡಿದು ನಡೆಯುವುದು ಅಪರಾಧಗಳಾಗಿದ್ದುವು. ಒಡೆಯರು ಎದುರಾದಾಗ ಮಳೆ ಸುರಿಯುತ್ತಿದ್ದರೂ ಛತ್ರಿ ಮಡಿಚಿ ಹಿಡಿದು ಮಳೆಯಲ್ಲಿ ನೆನೆಯುತ್ತಲೇ ಮುಂದೆ ಹೋಗ ಬೇಕಾಗಿತ್ತು. ಒಡೆಯರು ಎದುರಾದಾಗ ಚಪ್ಪಲಿ ಕೈಯಲ್ಲಿ ಹಿಡಿದು ನಡುಬಗ್ಗಿಸಿ ನಮಸ್ಕರಿಸಿ ಮುಂದೆ ಹೋಗಬೇಕು. ತಪ್ಪಿದರೆ ಅದು ಅವಿಧೇಯ ವರ್ತನೆ ಎಂದು ಭಾವಿಸಲಾಗುತ್ತಿತ್ತು. ಅದಕ್ಕೆ ಶಿಕ್ಷೆ ಕಾದಿರುತ್ತಿತ್ತು. ಪ್ರತಿಯೊಬ್ಬ ಗೇಣಿದಾರನೂ ಭೂ ಮಾಲೀಕರ ಬಳಿ ವರ್ಷದಲ್ಲಿ 15–20 ದಿವಸ ಸಂಬಳವಿಲ್ಲದೆ ಬಿಟ್ಟಿ ಕೆಲಸ ಮಾಡಬೇಕಾಗಿತ್ತು.

ಮಲೆನಾಡಿನಲ್ಲಿ ಬತ್ತ ಮತ್ತು ಇತರ ಧಾನ್ಯಗಳನ್ನು ಅಳೆಯುವ ಸಾಧನವಾಗಿ ಕೊಳಗ ಎಂಬ ಮಾನಕವಿತ್ತು. ಒಂದು ಕೊಳಗಕ್ಕೆ ಮೂರು ಸೇರು ಎಂದು ಸರ್ಕಾರದ ಅಧಿಕೃತ ಅಳತೆ. ಆದರೆ ಕೆಲವು ಭೂಮಾಲೀಕರು ಗೇಣಿ ಬತ್ತ ಅಳೆಯಲು ಮೂರುವರೆ ಅಥವಾ ನಾಲ್ಕು ಸೇರುಗಳು ಹಿಡಿಯುವ ಕೊಳಗವನ್ನು ಮಾಡಿಸಿಟ್ಟುಕೊಂಡಿದ್ದರು. ತಮ್ಮ ಕೊಳಗದಲ್ಲೇ ಗೇಣಿ ಬತ್ತ ಅಳೆದುಕೊಡಬೇಕೆಂದು ರೈತರಿಗೆ ಕಡ್ಡಾಯ ಮಾಡುತ್ತಿದ್ದರು. ಅದಕ್ಕೆ ತಪ್ಪಿದರೆ ಜಮೀನು ಕಳೆದುಕೊಳ್ಳುವ ಅನಿಶ್ಚಿತತೆಯ ಬದುಕಿನ ಭಯದಿಂದಾಗಿ ರೈತರು ಯಾರೂ ಪ್ರತಿಭಟಿಸದೆ ಮೌನ ವಹಿಸಿದ್ದರು. ಇದಲ್ಲದೆ ಗೇಣಿ ರೈತ ಬತ್ತ ಕೊಡುವಾಗ ನಿಗದಿಪಡಿಸಿದ ಅಳತೆಯ ಬತ್ತವನ್ನು ಕೊಡುವುದಲ್ಲದೆ ಪ್ರತಿಯೊಂದು ಚೀಲಕ್ಕೆ ಹೆಚ್ಚು ಬತ್ತವೆಂದು ಒಂದು ಕೊಳಗವನ್ನು ಹೆಚ್ಚಾಗಿ ಕೊಡಬೇಕಾಗಿತ್ತು.

ರೈತ ಸಂಘಟನೆಯು ಸ್ವಾತಂತ್ರ್ಯ ಬರುವ ಸ್ವಲ್ಪ ಮೊದಲೇ ಒಂದು ನೆಲೆಯನ್ನು ಕಂಡುಕೊಂಡಿತ್ತು. ಕಾಂಗೆಸ್‌ನ ಪ್ರಮುಖರು ಮತ್ತು ಮುಂದೆ ಸಚಿವರಾಗಿ ಕೀರ್ತಿಪಡೆದ ಕಡಿದಾಳ್ ಮಂಜಪ್ಪನವರು 1945ರಲ್ಲಿಯೇ ತೀರ್ಥಹಳ್ಳಿಯಲ್ಲಿ ಮಲೆನಾಡು ಗೇಣಿ ರೈತ ಸಂಘವನ್ನು ಸ್ಥಾಪಿಸಿದ್ದರು. ಕಡಿದಾಳರೂ ಒಂದು ಗೇಣೀ ಕುಟುಂಬ ಮೂಲದಿಂದಲೇ ಬಂದವರಾಗಿದ್ದು ಅವರು ಭೂಮಾಲೀಕರು ಮತ್ತು ಒಕ್ಕಲುಗಳ ನಡುವೆ ಸಂಧಾನ ಮಾರ್ಗದಲ್ಲಿ ಸಮಸ್ಯೆಗಳ ಪರಿಹಾರವಾಗಬೇಕೆಂದು ನಂಬಿದ್ದರು. ಸಾಗರ ತಾಲ್ಲೂಕಿನಲ್ಲಿಯೂ ಅದೇವರ್ಷ ಗೇಣಿ ರೈತರ ಸಂಘಟನೆ ರೂಪುತಳೆಯಿತು. ಸ್ವಾತಂತ್ರ್ಯ ಹೋರಾಟಗಾರ ಎಚ್. ಗಣಪತಿಯಪ್ಪ, ಮರತ್ತೂರಿನ ಡಿ. ಮೂಕಪ್ಪ, ಮನೆಘಟ್ಟ ಚೌಡಪ್ಪ, ಎಲಗಳಲೆ ಡಿ.ಆರ್.ಹುಚ್ಚಪ್ಪ, ಬರಸಿನ ದ್ಯಾವಪ್ಪ, ಕಾಗೋಡಿನ ಪವಾಜಿ ಬೀರನಾಯ್ಕ, ಮಂಡಗಳಲೆ ಹೊಸೂರು ರಾಮನಾಯ್ಕ ಮೊದಲಾದ ಮುಖಂಡರು ಈ ಸಂಘಟನೆಯಲ್ಲಿ ಪಾಲ್ಗೊಂಡಿದ್ದರು. ಗೇಣಿದಾರರ ಸಮುದಾಯದ ಬಹುಭಾಗವಾಗಿದ್ದ ದೀವರ ಜನಾಂಗದ ಹಿರಿಯರು ಈ ಸಂಸ್ಥೆಯ ಮುಂಚೂಣಿಯಲ್ಲಿದ್ದರು. ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಗೇಣಿದಾರರಲ್ಲಿ ಅವರು ಜಾಗೃತಿ ಮೂಡಿಸತೊಡಗಿದರು.

ಆಗಿನ ಕಾಲಕ್ಕೆ ವಿದ್ಯಾವಂತರಾಗಿದ್ದ ಎಚ್. ಗಣಪತಿಯಪ್ಪನವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರದ ಸಮೀಪದ ಹೊಸೂರಿನವರು. ರೈತಕುಟುಂಬದಲ್ಲಿ ಹುಟ್ಟಿದ ಇವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಗಾಂಧೀವಾದಿಗಳಾಗಿದ್ದರು. ಸರ್ಕಾರಿ ನೌಕರಿ ಬಿಟ್ಟು ಖಾಸಗಿ

ಶಾಲೆಯ ಉಪಾಧ್ಯಾಯರಾಗಿ ಜೀವನ ನಿರ್ವಹಿಸುತ್ತಿದ್ದರು. ಶೋಷಣೆಗೊಳಗಾದವರಲ್ಲಿ ಜಾಗೃತಿ ಉಂಟುಮಾಡುವುದು ಇವರ ಕಾರ್ಯನೀತಿಯಾಗಿತ್ತು. ಕಾಗೋಡು ಹಿರೇನೆಲ್ಲೂರು ಗ್ರಾಮಕ್ಕೆ ಸೇರಿದ ಮುಖ್ರೆ ಗ್ರಾಮ. ಇಲ್ಲಿಯ ಭೂಮಾಲೀಕರಾದ ಕೆ.ಜಿ.ಒಡೆಯರ್ ಕುಟುಂಬ ದವರು ಶಿವಮೊಗ್ಗ ಜಿಲ್ಲೆಯ ಭೂಮಾಲೀಕರಲ್ಲಿ ಪ್ರಮುಖರಾಗಿದ್ದರು. ಅವರು ಮೂವರು ಅಣ್ಣ ತಮ್ಮಂದಿರು. ಕಾಗೋಡು ಚಳವಳಿಯ ಸಂದರ್ಭದಲ್ಲಿ ಕಾಗೋಡಿನಲ್ಲಿದ್ದ ಮನೆಗಳಲ್ಲಿ ಲಿಂಗಾಯತರದಾಗಿದ್ದ ಮನೆ ಅದೊಂದೇ. ಈ ಕಾಗೋಡು ಗೌಡರ ಮನೆಗೆ ಏಳುಹಳ್ಳಿ ಗೌಡಿಕೆ ಇತ್ತು. ನೆರೆಹೊರೆಯ ಅನೇಕ ಊರುಗಳಲ್ಲಿ ಇವರ ಜಮೀನುಗಳಿದ್ದುವು. ಆಗಿನ ಕಾಲದಲ್ಲಿ ಎಕರೆಗೆ ನಾಲ್ಕಾಣೆಯಂತೆ ಮೂರು ಸಾವಿರ ರೂಪಾಯಿ ಕಂದಾಯ ಕಟ್ಟುತ್ತಿದ್ದರು. ಸಾವಿರಾರು ಎಕರೆಭೂಮಿ ಇವರಿಗೆ ವಂಶಪಾರಂಪರ್ಯವಾಗಿ ಬಂದಿದ್ದಿತ್ತು. ಕಾಗೋಡು ಮನೆತನದ ಕೆ.ಗುರುಬಸಪ್ಪಗೌಡ ಅಥವಾ ಕೆ.ಜಿ.ಒಡೆಯರ್ ನಡುಕಲ ಸಹೋದರರಾಗಿದ್ದು ಉನ್ನತ ವ್ಯಾಸಂಗ ಮಾಡಿ, ವಿದೇಶ ಪ್ರವಾಸ ಕೈಗೊಂಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು. ರಾಜ್ಯಮಟ್ಟದ ಅನೇಕ ಕಾಂಗ್ರೆಸ್ ನಾಯಕರಿಗೆ ನಿಕಟ ಒಡನಾಡಿಗಳಾಗಿದ್ದರು. ಇವರು ಶಿವಮೊಗ್ಗ, ಬೆಂಗಳೂರುಗಳಲ್ಲಿ ಹೆಚ್ಚಾಗಿರುತ್ತಿದ್ದರು.

ಇಂತಹ ಪ್ರಭಾವಶಾಲಿ ಕುಟುಂಬದ ಗುರುವೇಗೌಡರು ಗೇಣಿ ರೈತರನ್ನು ತಮ್ಮ ಕೊಳಗದಲ್ಲೇ ಬತ್ತ ಅಳೆದುಕೊಡಲು ಒತ್ತಾಯಿಸುತ್ತಿದ್ದರು. ಕೊಡದಿದ್ದವರ ಮೇಲೆ ದರ್ಪ ತೋರಿಸುತ್ತಿದ್ದರು. ಇಂಥದ್ದೊಂದು ಪರಿಸ್ಥಿತಿಯಲ್ಲಿ ಗೇಣಿ ರೈತರಲ್ಲಿ ಹುಟ್ಟಿದ ಜಾಗೃತಿ ಕ್ರಮೇಣ ದಂಗೆಯ ರೂಪ ತಳೆಯತೊಡಗಿತು. ಇದರ ಫಲವಾಗಿ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ರೈತರು ಒಡೆಯರ ಮನೆಗಳಿಗೆ ಬಿಟ್ಟಿ ಬಿಗಾರಿ ಕೆಲಸಗಳಿಗೆ ಹೋಗುವುದನ್ನು ನಿಲ್ಲಿಸಬೇಕು. ಪ್ರತಿವರ್ಷ ಗೇಣಿ ಬತ್ತ ಕೊಟ್ಟದ್ದಕ್ಕೆ ರಶೀದಿ ಪಡೆಯಬೇಕು. ಗೇಣಿ ಬತ್ತ ಅಳೆಯುವಾಗ ಸರ್ಕಾರಿ ಅಳತೆಯ ಮಾಪನವಾದ ಮೂರು ಸೇರಿನ ಕೊಳಗದಲ್ಲಿ ಅಳೆಯಬೇಕು ರೈತರು ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಬೇಕು. ಗೇಣಿ ಜಮೀನಿನಿಂದ ಒಕ್ಕಲೆಬ್ಬಿಸದಂತೆ ಸರ್ಕಾರಕ್ಕೆ ರಕ್ಷಣೆ ನೀಡುವಂತೆ ಕೇಳಬೇಕು. ಇಂಥ ಅನೇಕ ಹೊಸ ವಿಚಾರಗಳು ರೈತ ಸಂಘದ ಸದಸ್ಯರಲ್ಲಿ ಚಲಾವಣೆಗೊಳ್ಳತೊಡಗಿದವು. ಈ ಬಗೆಯ ಸಂಘದ ಸಭೆಗಳಿಂದ ಪ್ರಭಾವಿತರಾದ ರೈತರು ಒಡೆಯರ ಮುಂದೆ ನಿಂತು ಧೈರ್ಯವಾಗಿ ತಮ್ಮ ಬೇಡಿಕೆಗಳನ್ನು ಮಂಡಿಸತೊಡಗಿದರು.

ಕಾಗೋಡಿನ ರೈತರಲ್ಲಿ ಜಾಗೃತಿ ಮೂಡಿಸುತ್ತಿದ್ದ ಎಲೆ ಕನ್ನಪ್ಪ ಗೇಣಿ ಬತ್ತ ಕೊಟ್ಟದ್ದಕ್ಕೆ ರಶೀದಿ ಕೇಳಿದನೆಂಬ ಕಾರಣಕ್ಕೆ ಕಾಗೋಡು ಗೌಡರು ಆತನನ್ನು ಹಿಡಿದು ಥಳಿಸಿದರು. ಈ ವಿಚಾರ ರೈತರಲ್ಲಿ ಕಿಚ್ಚು ಹಚ್ಚಿತು. ಆಗ ಸಾಗರ ತಾಲ್ಲೂಕು ರೈತಸಂಘದ ಮುಖಂಡರು ಕಾಗೋಡು ಒಡೆಯರ ದಬ್ಬಾಳಿಕೆಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಎದುರಾಗಿ ಸತ್ಯಾಗ್ರಹ ಹೂಡುವಂತೆ ಹುರಿದುಂಬಿಸಿದರು. ಈ ನಡುವೆ 1951 ಏಪ್ರಿಲ್ 16ರಂದು ಕಡಗಳಲೆ ಎಂಬ ಗ್ರಾಮದಲ್ಲಿ ಭೂಮಾಲೀಕರು ಮತ್ತು ರೈತರ ನಡುವೆ ಜಮೀನು ಉಳುತ್ತಿದ್ದಾಗ ಘರ್ಷಣೆ ನಡೆದು ರೈತರ ಮೇಲೆ ಹಲ್ಲೆಗಳು ನಡೆದವು. ಎತ್ತುಗಳನ್ನು ಬಿಚ್ಚಿ ಓಡಿಸಿ ನೇಗಿಲು ನೊಗಗಳನ್ನು ಕಡಿದು ಹಾಕಿ, ಹೊಡೆದು ಬಡಿದು ಅವರನ್ನು ಅಲ್ಲಿಂದ ಅಟ್ಟಲಾಯಿತು. ಈ ಸುದ್ದಿ ಕೂಡಲೇ ತಾಲ್ಲೂಕಿನಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು.

ಮಾರನೆಯ ದಿನ ಎಚ್. ಗಣಪತಿಯಪ್ಪನವರ ನೇತೃತ್ವದಲ್ಲಿ ಸಾವಿರಾರು ರೈತರು ಸಾಗರ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ತಹಸೀಲ್ದಾರರಿಗೆ ಮನವಿ ಸಲ್ಲಿಸಿ ಕಾನೂನನ್ನು ಕೈಗೆ ತೆಗೆದುಕೊಂಡವರ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿದರು. ಕಾಗೋಡಿನಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ನಡೆಸಲು ತೀರ್ಮಾನ ಮಾಡಲಾಯಿತು. ಏಪ್ರಿಲ್ 18ರಂದು ರೈತ ಸಂಘದ ಅಧ್ಯಕ್ಷರಾದ ಡಿ.ಮೂಕಪ್ಪನವರ (ಮಾಜಿ ಶಾಸಕರು) ಮುಖಂಡತ್ವದಲ್ಲಿ ಪ್ರಥಮ ಸತ್ಯಾಗ್ರಹ ತಂಡ ಧರಣಿ ಕುಳಿತು ಬಂಧನಕ್ಕೊಳಗಾಯಿತು. ಸರಕಾರ ನೂರಾರು ಪೊಲೀಸರನ್ನು ಒಡೆಯರ ಜಮೀನಿಗೆ ಪಹರೆ ಹಾಕಿತು. ರೈತರು ಅಲ್ಲಲ್ಲಿ ಚಳವಳಿ ನಡೆಸಿ ಲಾಠಿ ಏಟು ತಿಂದರೂ ಹೆದರದೆ ಬಂಧನಕ್ಕೊಳಗಾಗುತ್ತಿದ್ದರು. ಆಗ ಕಂದಾಯ ಸಚಿವರಾಗಿದ್ದ ಕಡಿದಾಳ್ ಮಂಜಪ್ಪನವರು ಕಾಗೋಡು ಭೂಮಾಲೀಕರಿಗೂ ರೈತರಿಗೂ ನಡುವೆ ಸಂಧಾನಸಭೆ ನಡೆಸಿದರು. ಆದರೆ ರೈತರಿಗೆ ಯಾವುದೇ ಭೂಮಿಯನ್ನು ಬಿಡಲು ಸಾಧ್ಯವಿಲ್ಲವೆಂದು ಗುರುವೇ ಗೌಡರು ಪಟ್ಟುಹಿಡಿದಾಗ ಈ ಸಂಧಾನ ವಿಫಲವಾಯಿತು. ಅನೇಕ ರೈತ ಮುಂದಾಳುಗಳು ಬಂಧಿತರಾದರು.

ಇದರಿಂದಾದ ರೈತ ಚಳವಳಿ ದುರ್ಬಲಗೊಳ್ಳುತ್ತಾ ಸಾಗಿಬಂತು. 1951 ಮೇ 21ರಂದು ಎಚ್.ಗಣಪತಿಯಪ್ಪನವರು ಕಾಗೋಡಿನಲ್ಲಿ ರೈತ ಸಂಘದ ಸಭೆ ಏರ್ಪಡಿಸಿದರು. ಆಗ ಆ ಸಭೆಯಲ್ಲಿ ಸಮಾಜವಾದಿ ಪಕ್ಷದ ಮುಖಂಡರಾಗಿದ್ದ ತೀರ್ಥಹಳ್ಳಿ ತಾಲ್ಲೂಕಿನ ಶಾಂತವೇರಿ ಗೋಪಾಲಗೌಡರು ಭಾಗವಹಿಸಿದ್ದರು. ರೈತ ಸಂಘ ಮತ್ತು ಸಮಾಜವಾದಿ ಪಕ್ಷಗಳು ಒಟ್ಟಾಗಿ ಚಳವಳಿಯನ್ನು ಮುಂದುವರಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಗೋಪಾಲಗೌಡರು ಈ ಹೋರಾಟದ ನೇತೃತ್ವ ವಹಿಸಿದರು. 28ರ ಹರೆಯದ ಗೋಪಾಲ ಗೌಡರು ತಮ್ಮ ವಿದ್ಯಾರ್ಥಿದೆಸೆಯಿಂದಲೂ ಪುರೋಹಿತಶಾಹಿಯನ್ನು, ಜಮೀನ್ದಾರಿ ದಬ್ಬಾಳಿಕೆ ಯನ್ನು, ಮೂಢ ನಂಬಿಕೆಗಳನ್ನು ವಿರೋಧಿಸಿಕೊಂಡು ಬಂದಿದ್ದ ಹೋರಾಟಗಾರರಾಗಿದ್ದರು. 1948 ರಿಂದಲೇ ಅವರು ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಸಂಘಟನೆಯ ಹೊಣೆಹೊತ್ತಿದ್ದರು. ಅವರು ತೀರ್ಥಹಳ್ಳಿಯಲ್ಲಿ 1948ರಲ್ಲಿ ಸಂಘಟಿಸಿದ ರೈತ ಸಮಾವೇಶಕ್ಕೆ ರಾಮಾನಂದ ಮಿಶ್ರ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬಂದು ಭಾಗವಹಿಸಿದ್ದರು. ಹೀಗೆ ರೈತರೊಡನೆ ಸಂಪರ್ಕ ಮತ್ತು ರಾಜಕೀಯ ಪ್ರಬುದ್ಧತೆ ಪಡೆದಿದ್ದ ಗೋಪಾಲಗೌಡರ ನಾಯಕತ್ವ ಕಾಗೋಡು ಸತ್ಯಾಗ್ರಹಕ್ಕೆ ದೊರೆತದ್ದು ಅದರ ಶಕ್ತಿ ನೂರ್ಮಡಿಯಾಗಲು ಕಾರಣವಾಯಿತು.

ಕಾಗೋಡಿನ ಒಡೆಯರ ಮನೆತನದ ಕೆ.ಜಿ. ಒಡೆಯರು ಅಂದಿನ ಕಾಂಗ್ರೆಸ್‌ನ ಪ್ರಮುಖ ಮುಂದಾಳಾಗಿದ್ದುದರಿಂದ ಸಮಾಜವಾದಿ ಪಕ್ಷ ಈ ಚಳವಳಿಯನ್ನು ಒಂದು ಮಾದರಿ ಹೋರಾಟವಾಗಿ ರೂಪುಗೊಳಿಸಲು ಸಜ್ಜಾಯಿತು. ಈ ಚಳವಳಿಯಲ್ಲಿ ಸಮಾಜವಾದಿ ಕಾರ್ಯಕರ್ತರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ರೈತರೊಂದಿಗೆ ಭಾಗವಹಿಸಿದರು. ಗೋಪಾಲಗೌಡ, ವೈ.ಆರ್. ಪರಮೇಶ್ವರಪ್ಪ, ಜಿ. ಸದಾಶಿವರಾವ್, ಗರುಡಶರ್ಮ, ಖಾದ್ರಿ ಶಾಮಣ್ಣ, ಟಿ.ಎನ್. ಗಂಡುಗಲಿ, ಬೀ.ಸು. ಕೃಷ್ಣಮೂರ್ತಿ, ಸಿ.ಜಿ.ಕೆ. ರೆಡ್ಡಿ, ಮುಲ್ಕಾಗೋವಿಂದ ರೆಡ್ಡಿ, ಈಶ್ವರಪ್ಪ ಮೊದಲಾದವರು ಗೇಣಿ ರೈತರ ನಡುವೆ ಶಿಬಿರಗಳನ್ನು ನಡೆಸುತ್ತಾ ಹಳ್ಳಿ ಹಳ್ಳಿಗಳನ್ನು ಸುತ್ತುತ್ತಾ ರೈತರನ್ನು ಸತ್ಯಾಗ್ರಹಕ್ಕೆ ಹುರಿದುಂಬಿಸುತ್ತಿದ್ದರು. ಗೋಪಾಲಗೌಡರು, ಎಚ್.ಗಣಪತಿಯಪ್ಪ ಸೇರಿದಂತೆ ಅನೇಕ ಮುಖಂಡರು ಬಂಧನಕ್ಕೊಳಗಾಗಿ ಜೈಲು ಸೇರಿದರು. ಆಗ ಶಾಂತವೇರಿ ಗೋಪಾಲಗೌಡರು ರಾಷ್ಟ್ರಮಟ್ಟದ ಸಮಾಜವಾದಿ ನಾಯಕರಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ್, ಪಂಡಿತ ರಮಾನಂದ ಮಿಶ್ರರಂತಹವರ ಗಮನವನ್ನು ಈ ಚಳವಳಿಯತ್ತ ಸೆಳೆದರು. ಅವರು ತಮ್ಮ ಇತರ ಕಾರ್ಯಕ್ರಮಗಳನ್ನು ಬದಿಗೊತ್ತಿ ಕಾಗೋಡಿನತ್ತ ಧಾವಿಸಿದರು. ಈ ನಾಯಕರನ್ನು ನೋಡಲು ಮಲೆನಾಡಿನ ಜನಸಾಗರವೇ ಸೇರಿತ್ತು.

ಲೋಹಿಯಾರವರು ಕಾಗೋಡಿನಲ್ಲಿ ರೈತ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿ ದ್ದಲ್ಲದೆ ಸ್ವತಃ ಒಡೆಯರ ಜಮೀನನ್ನು ಸುತ್ತುವರಿದಿದ್ದ ಬೇಲಿಯನ್ನು ಕಿತ್ತೆಸೆದು ಮುನ್ನುಗ್ಗಿದ್ದರು. ಆಗ ರೈತ ಸಮೂಹ ಪ್ರವಾಹದೋಪಾದಿಯಲ್ಲಿ ನುಗ್ಗಿಬಂದು ಎಲ್ಲ ಬಂಧನಗಳನ್ನು ಕಿತ್ತೆಸದು ಉಳುವವನೆ ನೆಲದೊಡೆಯ, ಇಂಕಿಲಾಬ್ ಜಿಂದಾಬಾದ್ ಎಂಬ ಘೋಷಣೆಗಳನ್ನು ಮೊಳಗಿಸುತ್ತ ರೈತ ಚಳವಳಿಗೆ ಹೊಸ ಇತಿಹಾಸ ಬರೆಯಿತು. ಅಂದು ರಾತ್ರಿ ಸಾಗರ ರೈಲ್ವೆ ನಿಲ್ದಾಣದಲ್ಲಿ ಲೋಹಿಯಾ ಅವರನ್ನು ಬಂಧಿಸಲಾಯಿತು. ಅವರು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ರೈತರ ಹೋರಾಟದ ನ್ಯಾಯಸಮ್ಮತ ಬೇಡಿಕೆಯನ್ನು ಪ್ರತಿಪಾದಿಸಿದರು. ಈ ಸುದ್ದಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಯಿತು. ಆಗ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂರವರು ಕೂಡಲೇ ಲೋಹಿಯಾ ಅವರ ಮೇಲೆ ಹೂಡಿದ್ದ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದರು. ರೈತ ಚಳವಳಿ ಹಾಗೂ ಕಾಗೋಡು ಸತ್ಯಾಗ್ರಹ ಚಳವಳಿ ನಿಂತಿತು. ಆದರೆ ರೈತರು ಹಿಂದಿಗಿಂತ ಹೆಚ್ಚು ಸಂಘಟಿತರಾಗಲು ಇದು ನಾಂದಿಯಾಯಿತು.

ಕಾಗೋಡು ಸತ್ಯಾಗ್ರಹ ಮೈಸೂರು ರಾಜ್ಯದ ಮೇಲೆ ಪರೋಕ್ಷವಾಗಿ ರಾಜಕೀಯ ಮತ್ತು ಸಾಮಾಜಿಕ ಪರಿಣಾಮ ಬೀರಿತು. ಜೊತೆಗೆ ಗೇಣಿ ರೈತವರ್ಗದ ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆಯನ್ನು ಒದಗಿಸಿತು. ರಾಷ್ಟ್ರಮಟ್ಟದಲ್ಲಿಯೂ ಚಳವಳಿ ಗುರುತಿಸಲ್ಪಟ್ಟಿತು. ಶಾಂತವೇರಿ ಗೋಪಾಲಗೌಡರು 1952ರಲ್ಲಿ ಸಾಗರ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ವತಿಯಿಂದ ವಿಧಾನಸಭೆಗೆ ಸ್ಪರ್ಧಿಸಿ ಚುನಾಯಿತರಾದರು. ವಿಧಾನಸಭೆ ರಚಿತವಾದ ಸ್ವಲ್ಪ ಕಾಲದಲ್ಲೇ ಗೇಣಿದಾರರ ಶಾಸನ ಜಾರಿಗೆ ಬಂದಿತ್ತು. ಮುಂದೆ 1961ರ ಜತ್ತಿ ಸಮಿತಿ ವರದಿಯನ್ನು ಆಧರಿಸಿ ಮತ್ತೊಂದು ಗೇಣಿ ಶಾಸನವನ್ನು ರಚಿಸಲಾಯಿತು. ಅದು 1965ರಲ್ಲಿ ಜಾರಿಗೆ ಬಂತು. ಈ ಕಾಯಿದೆಗಳು ರೈತರ ಹಕ್ಕನ್ನು ಮತ್ತು ಉಳುವ ರೈತನೆ ನೆಲದೊಡೆಯ ನಾಗುವ ಅವಕಾಶವನ್ನು ಹೆಚ್ಚಿಸಿದ್ದವು. ಈ ಕಾಯಿದೆ ರಚನೆಯಲ್ಲಿ ಆಗ ಕಂದಾಯ ಸಚಿವರಾಗಿದ್ದ ಮಲೆನಾಡ ಗಾಂಧಿಯೆಂದು ಪ್ರಸಿದ್ಧರಾದ ಕಡಿದಾಳ್ ಮಂಜಪ್ಪನವರ ಪಾತ್ರವೂ ಗಣನೀಯ ವಾಗಿತ್ತು. 1974ರಲ್ಲಿ ಡಿ.ದೇವರಾಜ ಅರಸು ಅವರ ಸರ್ಕಾರ ತಂದ ಸಮಗ್ರ ಗೇಣಿ ಶಾಸನ ಸಂಪೂರ್ಣವಾಗಿ ಸಮಗ್ರ ಗೇಣಿ ಜಮೀನಿಗೆ ಗೇಣಿದಾರರನ್ನು ಒಡೆಯರನ್ನಾಗಿ ಮಾಡುವಲ್ಲಿ ದೊಡ್ಡ ಹೆಜ್ಜೆಯಾಯಿತು. ಅಲ್ಲಿಗೆ ಕಾಗೋಡು ಸತ್ಯಾಗ್ರಹ ಯಾವ ಧ್ಯೇಯೋದ್ದೇಶಗಳಿಗಾಗಿ ಹುಟ್ಟಿಕೊಂಡಿತೋ ಅದು ಪೂರ್ಣಗೊಂಡಂತಾಯಿತು. (ಎಸ್.ಎಚ್.ಎಂ.)

**ಕಾಣ್ವ ಮನೆತನ:** ಪ್ರಾಚೀನ ಭಾರತದಲ್ಲಿ ಆಳಿದ ಒಂದು ಪುಟ್ಟ ರಾಜವಂಶ. ಇದರ ಇತಿಹಾಸ ಪುರಾಣಗಳಲ್ಲಿದೆ. ಈ ವಂಶದ ಸ್ಥಾಪಕ ವಸುದೇವ. ಈತ ಶುಂಗ ವಂಶದ ದೇವಭೂತಿಯ (ದೇವಭೂಮಿ) ಅಮಾತ್ಯನಾಗಿದ್ದ. ದೇವಭೂತಿಯನ್ನು ಕೊಂದು ರಾಜ್ಯವನ್ನು ಅಪಹರಿಸಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿದ. ಈತನ ಗೋತ್ರದಿಂದ ಈ ವಂಶಕ್ಕೆ ಕಾಣ್ವ (ಕಾಣ್ವಾಯನ) ಎಂಬ ಹೆಸರು ಬಂದಿದೆ. ವಸುದೇವ 9 ವರ್ಷ ಆಳಿದ. ಅನಂತರ ಇವನ ಸಂತತಿಯ ಭೂಮಿಮಿತ್ರ, ನಾರಾಯಣ, ಸುಶರ್ಮ–ಇವರು 36 ವರ್ಷ ರಾಜ್ಯಭಾರ ಮಾಡಿದರು. ಸುಶರ್ಮನೇ ಈ ವಂಶದ ಕೊನೆಯ ಅರಸ. ಈ ವಂಶದ ಆಳ್ವಿಕೆ ಪ್ರ.ಶ.ಪೂ. 76–30ರ ವರೆಗೆ ನಡೆಯಿತು. ಸಾತವಾಹನಸಂತತಿಯ ಸೀಮುಖ ಇದನ್ನು ಕೊನೆಗಾಣಿಸಿದ. (ಪಿ.ಬಿ.ಡಿ.)

**ಕಾರ್ನ್‌ವಾಲಿಸ್:** ಭಾರತದ ಗೌರ್ನರ್ ಜನರಲ್ (1786–93) ಆಗಿದ್ದ ಬ್ರಿಟಿಷರ ಮಹಾಸೇನಾಧಿಪತಿ. ಇವನು ಆಡಳಿತದಲ್ಲಿ ಹೆಚ್ಚು ಅನುಭವವನ್ನು ಪಡೆದಿದ್ದನಲ್ಲದೆ ಉತ್ತಮ ಯೋಧನೂ ರಾಜನೀತಿಜ್ಞನೂ ಆಗಿದ್ದ. ಇವನು ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಸೋಲನ್ನನುಭವಿಸಿದರೂ ಇಂಗ್ಲಿಷರು ಇವನ ಬಗೆಗೆ ಉನ್ನತ ಮಟ್ಟದ ಗೌರವವನ್ನು ತೋರಿಸುತ್ತಿದ್ದರು. ಕರ್ತವ್ಯನಿಷ್ಠೆಯನ್ನು ಹೊಂದಿದ್ದ ಇವನು ಸ್ವಾರ್ಥಪರವಾಗಿರಲಿಲ್ಲ. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಕಟ್ಟಲು ಬಹುವಾಗಿ ಹೋರಾಡಿದ. ಲೋಕಸೇವಾ ವೃತ್ತಿಯಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಬಂಗಾಲದಲ್ಲಿ ಸ್ಥಿರಭೂಕಂದಾಯ ಪದ್ಧತಿಯನ್ನು ಜಾರಿಗೆ ತಂದು ಅಲ್ಲಿಯ ನ್ಯಾಯಾಲಯಗಳ ಸುಧಾರಣೆಯನ್ನು ಕೈಗೊಂಡ. ಆಡಳಿತ, ಸೈನ್ಯ, ವಿಶೇಷವಾಗಿ ಭೂಕಂದಾಯ ಸುಧಾರಣೆಯನ್ನು ಕೈಗೊಂಡು ಅನೇಕ ಬದಲಾವಣೆಗಳನ್ನು ವಸಾಹತು ಸಾಮ್ರಾಜ್ಯದಲ್ಲಿ ಅನುಷ್ಠಾನಗೊಳಿಸಿದ. ಬಂಗಾಲ ಪ್ರಾಂತವನ್ನು ರೆವಿನ್ಯೂ ವಿಭಾಗಗಳಾಗಿ ವಿಭಜಿಸಿ ಅವುಗಳನ್ನು ಕಲೆಕ್ಟರ್ಸ್ ಅಧೀನಕ್ಕೆ ವಹಿಸಲಾಯಿತು.

1790ರಲ್ಲಿ ಜಮೀನ್ದಾರರೊಂದಿಗೆ 10 ವರ್ಷಗಳ ಅವಧಿಗೆ ಕಂದಾಯ ಒಪ್ಪಂದ ಮಾಡಿಕೊಳ್ಳಲಾಯಿತು. ಇದನ್ನು 1793ರಲ್ಲಿ ಖಾಯಂ ಆಗಿ ಮಾಡಲಾದ್ದರಿಂದ ಇದಕ್ಕೆ ಖಾಯಂ ಜಮೀನ್ದಾರಿ ಪದ್ಧತಿ ಎಂದು ಹೆಸರಾಯಿತು. ಭೂಕಂದಾಯ ವಸೂಲಿ ಮಾಡಲು ಗುತ್ತಿಗೆದಾರರನ್ನು ನೇಮಿಸಲಾಯಿತು. ಈ ಗುತ್ತಿಗೆದಾರರು ರೈತರಿಂದ ಕಂದಾಯ ವಸೂಲಿ ಮಾಡಿ, ಅದರಿಂದ $1/_{10}$ ಭಾಗವನ್ನು ಕಮಿಷನ್ ಆಗಿ ಪಡೆಯುತ್ತಿದ್ದರು.

ಅಧಿಕಾರಿಗಳನ್ನು ನೇಮಿಸಲು ಇಂಡಿಯನ್ ಸಿವಿಲ್ ಸರ್ವಿಸ್ ಪದ್ಧತಿಯನ್ನು ಜಾರಿಗೆ ತಂದ. ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಅನೇಕ ಸಿವಿಲ್ ನ್ಯಾಯಾಲಯಗಳನ್ನು ಸ್ಥಾಪಿಸಿದ. ಜಿಲ್ಲೆಯ ಫೌಜುದಾರಿ ನ್ಯಾಯಾಲಯಗಳಲ್ಲಿ ಭಾರತೀಯ ನ್ಯಾಯಾಧೀಶರು ಮತ್ತು ಹೊಸದಾಗಿ 4 ಸರ್ಕ್ಯುಟ್ ಕೋರ್ಟ್‌ಗಳನ್ನು ಬ್ರಿಟಿಷ್ ನ್ಯಾಯಾಧೀಶರ ಅಧೀನದಲ್ಲಿ ಸ್ಥಾಪಿಸಿದ. ಸ್ಥಳೀಯ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ಚಿಕ್ಕ ನ್ಯಾಯಾಲಯಗಳನ್ನು ಸ್ಥಾಪಿಸಿದ. ಪ್ರತಿಯೊಂದು ಜಿಲ್ಲೆ ಹಾಗೂ ನಗರಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಿ, ಈ ನ್ಯಾಯಾಲಯಗಳಲ್ಲಿ ಇಂಗ್ಲಿಷ್ ನ್ಯಾಯಾಧೀಶರನ್ನು ಮತ್ತು ದೇಶಿಯ ವಕೀಲರನ್ನು ನೇಮಿಸಲಾಯಿತು. ಕಲ್ಕತ್ತ, ಡಾಕಾ, ಮುರ್ಷಿದಾಬಾದ್, ಪಾಟ್ನಾ ಮುಂತಾದ ಕಡೆಗಳಲ್ಲಿ ಹೈಕೋರ್ಟ್‌ಗಳು ಸ್ಥಾಪಿಸಲ್ಪಟ್ಟವು. ಗೌರ್ನರ್ ಜನರಲ್ ಮತ್ತು ಕೌನ್ಸಿಲ್ ಸದಸ್ಯರನ್ನೊಳಗೊಂಡ ಪುನರ್ವಿಚಾರಣೆ ನ್ಯಾಯಾಲಯ ಅಥವಾ ಸದರ್–ದಿವಾನಿ ಅದಾಲತ್ ಅನ್ನು ಸ್ಥಾಪಿಸಲಾಯಿತು. ಇದೇ ಮಾದರಿಯಲ್ಲಿ ಕ್ರಿಮಿನಲ್ ನ್ಯಾಯಾಲಯಗಳು ಸ್ಥಾಪಿತವಾದವು. ಇವನು ಜಾರಿಗೆ ತಂದ ಪೊಲೀಸ್ ಸುಧಾರಣೆಗಳಲ್ಲಿ ಜಮೀನ್ದಾರರ ರಕ್ಷಣೆಯ ಅಧಿಕಾರವನ್ನು ರದ್ದುಗೊಳಿಸಿದ. ಜಿಲ್ಲಾ ಪೊಲೀಸ್ ಅಧಿಕಾರಿ ಬ್ರಿಟಿಷ್ ಅಧಿಕಾರಿಯಾಗಿದ್ದ. ಇವನ ಕೈಕೆಳಗೆ ಇತರ ಪೊಲೀಸ್ ಅಧಿಕಾರವರ್ಗ ಏರ್ಪಟ್ಟಿತ್ತು. 1791ರ ಕಾಯಿದೆ ಈ ಜಿಲ್ಲಾ ಪೊಲೀಸ್ ಅಧಿಕಾರಿಯ ಅಧಿಕಾರಗಳನ್ನು ನಿಗದಿ ಪಡಿಸಿತು.

ವಿದೇಶಾಂಗ ವ್ಯವಹಾರಗಳಲ್ಲಿ ತಟಸ್ಥ ನೀತಿಯನ್ನು ಅನುಸರಿಸಬೇಕೆಂದು ಪ್ರಯತ್ನಪಟ್ಟರೂ ಅದು ಸಾಧ್ಯವಾದರೆ ಟಿಪ್ಪುವಿನೊಡನೆ, 1790–92ರಲ್ಲಿ ಮೂರನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಅನಿವಾರ್ಯವಾಗಿ ತೊಡಗಿಸಿಕೊಳ್ಳಲಾಯಿತು. ಮೊದಲೆರಡು ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಮೈಸೂರು ಸೈನ್ಯಕ್ಕೆ ಸೋತು ಅವಮಾನಕರ ಒಪ್ಪಂದಗಳಿಗೆ ಸಹಿಹಾಕಿದ್ದ ಬ್ರಿಟಿಷ್‌ರಿಗೆ ಅದ್ಭುತ ಜಯವನ್ನು ತಂದುಕೊಟ್ಟು ಟಿಪ್ಪುವಿನಿಂದ ಅರ್ಧರಾಜ್ಯ ಹಾಗೂ 3 ಕೋಟಿ ಹಣವನ್ನು ವಸೂಲಿಮಾಡುವ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಒಳಪಡಿಸಿದ. ಇದು ಬ್ರಿಟಿಷ್ ವಸಾಹತು ವಿಸ್ತರಣೆಗೆ ಪೂರಕವಾಯಿತಲ್ಲದೆ ಬ್ರಿಟಿಷ್‌ರಿಗೆ ಅಪಾಯಕಾರಿಯಾಗಿದ್ದ ಟಿಪ್ಪುವನ್ನು ಸದೆಬಡಿದಂತಾಯಿತು. ಇಷ್ಟೆಲ್ಲಾ ಯಶಸ್ಸುಗಳನ್ನು ಪಡೆದು ಇವನು 1793ರ ಅಕ್ಟೋಬರ್‌ನಲ್ಲಿ ಇಂಗ್ಲೆಂಡಿಗೆ ತೆರಳಿ, ಪುನಃ 1805ರಲ್ಲಿ ಎರಡನೆಯ ಬಾರಿಗೆ ಗೌರ್ನರ್ ಜನರಲ್ ಆಗಿ ನೇಮಕಗೊಂಡ ಕೀರ್ತಿಗೆ ಪಾತ್ರನಾಗಿದ್ದಾನೆ. (ಎನ್‌ಆರ್.)

**ಕಾಪಾಲಿಕರು:** ದಕ್ಷಿಣಭಾರತದಲ್ಲಿ 7ನೆಯ ಶತಮಾನದಿಂದ ಪ್ರಬಲವಾದ ಶೈವಮತದ ಒಂದು ಪಂಗಡ. ಕಂಚಿ, ತಿರುವೊಟ್ರಿಯೂರ್, ಮೇಲ್ಪಾಡಿ ಮತ್ತು ಕೊಡುಂಬಾಳೂರು ಪ್ರಾಂತಗಳಲ್ಲಿ ಇವರು ಪ್ರಬಲರಾಗಿದ್ದಂತೆ ಶಾಸನ ಮತ್ತು ಸಾಹಿತ್ಯಗಳಿಂದ ತಿಳಿದುಬರುತ್ತದೆ. ಶಿವ, ದುರ್ಗೆಯರನ್ನು ಅವರ ಉಗ್ರರೂಪವಾದ ಭೈರವ ಮತ್ತು ಚಂಡಿಯ ಹೆಸರಿನಿಂದಿವರು ಪೂಜಿಸುತ್ತಿದ್ದರು. ತಲೆಬುರುಡೆಗಳ (ಕಪಾಲ) ಮಾಲೆ ಧರಿಸಿ ಒಂದು ಕಪಾಲವನ್ನೇ ಭಿಕ್ಷಾಪಾತ್ರೆಯನ್ನಾಗಿ ಉಪಯೋಗಿಸುತ್ತಿದ್ದುದರಿಂದ ಇವರಿಗೆ ಕಾಪಾಲಿಕರೆಂಬ ಹೆಸರು ಬಂದಿತು. ಅದೇ ಬುರುಡೆಯನ್ನು ಇವರು ನೀರು ಕುಡಿಯಲೂ ಬಳಸುತ್ತಿದ್ದರು. ಮಹೇಂದ್ರ ವರ್ಮ ಪಲ್ಲವನ ಮತ್ತವಿಲಾಸಪ್ರಹಸನ ಮತ್ತು ಭವಭೂತಿಯ ಮಾಲತೀಮಾಧವ ಕೃತಿಗಳಲ್ಲಿ ಈ ಪಂಥದ ಒಂದು ಇಣುಕುನೋಟ ದೊರೆಯುತ್ತದೆ. ಮದ್ಯ ಮತ್ತು ಹೆಣ್ಣುಗಳಿಗೆ ಪ್ರಾಶಸ್ತ್ಯವಿತ್ತಿದ್ದ ಈ ಮತದಲ್ಲಿ ಆಧುನಿಕ ದೃಷ್ಟಿಯಲ್ಲಿ ಕೀಳೆಂದು ಪರಿಗಣಿಸಲ್ಪಡುವ ಅನೇಕ ದುರಾಚಾರಗಳೂ ದುಷ್ಟಸಂಪ್ರದಾಯಗಳೂ ಬಳಕೆಯಲ್ಲಿದ್ದುವು. (ಜಿ.ಎನ್.ಎಸ್.)

**ಕಾಬ:** ಸೌದಿ ಅರೇಬಿಯದಲ್ಲಿರುವ ಮೆಕ್ಕನಗರದಲ್ಲಿನ ಮುಸ್ಲಿಂ ಸಮುದಾಯದವರ ಪವಿತ್ರ ದೇವಾಲಯ. ಮೆಕ್ಕ ನಗರದ ಪ್ರಮುಖ ಆಕರ್ಷಣೆಯ ಕಾಬ ಚೌಕಾಕಾರದ ಒಂದು ಕಲ್ಲಿನ ಕಟ್ಟಡ. ಇದರ ಒಳಭಾಗದಲ್ಲಿ ಒಂದು ಅಗ್ನಿಶಿಲೆಯಿದ್ದು ಅದು ಆಯಾತಕಾರದ ಮಾನವಶಿಶುವಿನಾಕಾರವಿರುವುದರಿಂದ ಇದನ್ನು ಕಾಬ ಎಂದು ಕರೆಯಲಾಗುತ್ತದೆ. ಮುಸ್ಲಿಂ ಸಂಪ್ರದಾಯದ ಪ್ರಕಾರ ಕಾಬವನ್ನು ಮನುಕುಲದ ಮೂಲ ಪುರುಷ ಆಡಮ್ ನಿರ್ಮಿಸಿದನೆಂದೂ ಅನಂತರ ಪ್ರವಾದಿ ಅಬ್ರಹಮ್ ಮಗ ಇಸ್ಮಾಯಿಲ್ ಪುನರ್ನಿಮಿಸಿದನೆಂದೂ ಭಾವಿಸಲಾಗಿದೆ. ಇಸ್ಲಾಂ ಧರ್ಮದ ಪ್ರಾರಂಭದ ಕಾಲದಲ್ಲಿ (608) ಕೆಂಪುಸಮುದ್ರ ತೀರದಲ್ಲಿ ದೊರಕಿದ ಬೈಜಾಂಟಿಯನ್‌ಗೆ ಸೇರಿದ ಹಡಗಿನ ಅವಶೇಷಗಳನ್ನು ಬಳಸಿ ಮತ್ತೆ ನಿರ್ಮಿಸಲಾಯಿತೆನ್ನುವರು.

ಮೂಲತಃ ಕಾಬ ಸಂಕೀರ್ಣ ರೂಪದ ಗುಡಿಯಂತಿದ್ದು ಅನಂತರದ ಕಾಲದಲ್ಲಿ ಮೇಲ್ಛಾವಣಿ ನಿರ್ಮಿಸಲಾಗಿದೆ. ಕಾಬದ ಕಟ್ಟಡಕ್ಕೆ ರೇಷ್ಮೆ ಬಟ್ಟೆಯ ಹೊದಿಕೆಯನ್ನು ಹಾಕಲಾಗಿದ್ದು ಚಿನ್ನ–ಬೆಳ್ಳಿ ದಾರದಿಂದ ಕುರಾನಿನ ಶ್ಲೋಕಗಳನ್ನು ಹೆಣೆಯಲಾಗಿದೆ. ಇಸ್ಲಾಂ ವಿದ್ವಾಂಸರ ಹೇಳಿಕೆಯ ಪ್ರಕಾರ ಕಾಬ ಸುತ್ತುಹಾಕುವುದರಿಂದ ದೇವರ ಸಿಂಹಾಸನವನ್ನು ಸುತ್ತುಹಾಕಿದಷ್ಟೆ ಪುಣ್ಯ ಲಭಿಸುತ್ತದೆ. ಹೀಗಾಗಿ ಇಸ್ಲಾಂ ಪೂರ್ವಕಾಲದಿಂದಲೂ ಇಲ್ಲಿಗೆ ಬರುವ ಯಾತ್ರಾರ್ಥಿಗಳು ಕಾಬದ ಸುತ್ತ ಏಳು ಪ್ರದಕ್ಷಿಣೆ ಹಾಕಿ ಅನಂತರ ಇದಕ್ಕೆ ಮುತ್ತನಿಡುವುದರ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸಲಾಗುತ್ತದೆ. ಕಾಬದ ಪಕ್ಕದಲ್ಲಿ ಜಮ್‌ಜಮ್ ಎಂಬ ನೀರಿನ ಬಾವಿ ಇದೆ. ಹಜ್ ಯಾತ್ರಾರ್ಥಿಗಳು ಇಲ್ಲಿನ ಪವಿತ್ರಜಲವನ್ನು ದೇವರ ಸೃಷ್ಟಿಎಂದು ನಂಬಿದ್ದಾರೆ.

ಕಾಬದ ಸುತ್ತಲೂ ಸುಂದರವಾದ ಮೊಗಸಾಲೆಯಿದ್ದು ಯಾತ್ರಾರ್ಥಿಗಳು ಮಳೆ, ಬಿಸಿಲಿನಿಂದ ರಕ್ಷಣೆ ಪಡೆಯಬಹುದಾಗಿದೆ. ಇಸ್ಲಾಂ ಧರ್ಮ ಪ್ರಾರಂಭಕ್ಕೆ ಮೊದಲು ಇಲ್ಲಿಗೆ ಯಾತ್ರೆಗಾಗಿ ಅರಬ್ಬರು, ಕ್ರೈಸ್ತರು ಹಾಗೂ ಯಹೂದಿಯರು ಭೇಟಿ ನೀಡುತ್ತಿದ್ದರು ಹಾಗೂ ಇದರ ಸುತ್ತಲೂ ಸು.360 ದೇವತೆಗಳ ವಿಗ್ರಹಗಳು ಪೂಜಿಸಲ್ಪಡುತ್ತಿದ್ದವು ಎಂದು ತಿಳಿದುಬರುತ್ತದೆ. ಪ್ರವಾದಿ ಮಹಮ್ಮದ್‌ರು ಇಲ್ಲಿಗೆ ಬಂದು ಮೆಕ್ಕದ ಜನತೆಯ ಸಹಮತದೊಂದಿಗೆ ಎಲ್ಲಾ ವಿಗ್ರಹಗಳನ್ನು ತೆಗೆಸಿಹಾಕಿದರು. ಏಕದೇವತಾ ಆರಾಧನೆಯನ್ನು ಪುರಸ್ಕರಿಸುವ ಇಸ್ಲಾಂ ಧರ್ಮದ ಪ್ರಾಚೀನ ಗುರುತಾಗಿ ಕಾಬವನ್ನು ಉಳಿಸಿಕೊಳ್ಳಲಾಯಿತು. ಇಸ್ಲಾಂ ಧರ್ಮದ ಉದಯದ ಅನಂತರ ಮುಸ್ಲಿಂ ಜನತೆ ಪ್ರಾರ್ಥನೆ ಸಲ್ಲಿಸುವಾಗ ಜೆರುಸಲೆಂಗೆ ಬದಲಾಗಿ ಕಾಬದ ಕಡೆ ತಿರುಗಿ ಪ್ರಾರ್ಥಿಸುವುದು ರೂಢಿಯಾಯಿತು. ಕಾಬಕ್ಕೆ ಭೇಟಿ ನೀಡುವ ಪ್ರತಿಯೊಬ್ಬ ಯಾತ್ರಾರ್ಥಿ ಬಿಳಿಯ ಹತ್ತಿ ವಸ್ತ್ರವನ್ನು ಧರಿಸುವುದು ಕಡ್ಡಾಯ.

ಇಲ್ಲಿಗೆ ವರ್ಷವಿಡೀ ಭೇಟಿ ನೀಡಬಹುದು. ಇದನ್ನು ಉಮ್ರಾ ಎಂದು ಕರೆಯಲಾಗುತ್ತದೆ. ಇಸ್ಲಾಂ ಪಂಚಾಂಗದ ಕೊನೆಯ ಎರಡು ಮಾಸಗಳು ಹಜ್‌ಯಾತ್ರೆಗೆ ಪವಿತ್ರವಾಗಿವೆ. ಕೊನೆಯ ತಿಂಗಳು ದುಲ್ ಅಲ್–ಹಜ್ಜಾನಲ್ಲಿ ನಡೆಯುವ ಯಾತ್ರೆಯನ್ನು ಹಜ್ ಯಾತ್ರೆಯೆಂದು ಕರೆಯಲಾಗುತ್ತದೆ. ನೈಸರ್ಗಿಕವಾಗಿ ಬೆಟ್ಟ ಪ್ರದೇಶದಿಂದ ಕೂಡಿರುವ ಕಾಬ ಇಸ್ಲಾಂ ಸಮುದಾಯದವರ ಪುಣ್ಯ ಸ್ಥಳವಾಗಿದೆ. (ಸಿ.ಜಿ.ಎಸ್.)

**ಕಾಲಿನ್ ರೆನ್‌ಫ್ರ್ಯೂ, ಆಂಡ್ರ್ಯೂ:** 1937– . ಆಂಗ್ಲ ಪುರಾತತ್ತ್ವಜ್ಞ. 1937 ಜುಲೈ 25ರಂದು ಜನಿಸಿದ. ಹರ್ಟ್‌ಫೋರ್ಡ್‌ಶೈರ್‌ನ ಸೇಂಟ್ ಆಲ್ಬನ್ಸ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ. 1962ರಲ್ಲಿ ಕೇಂಬ್ರಿಜ್‌ನ ಸೇಂಟ್ ಜಾನ್ಸ್ ಕಾಲೇಜಿನಲ್ಲಿ ಪುರಾತತ್ತ್ವ ಹಾಗೂ ಮಾನವಶಾಸ್ತ್ರದಲ್ಲಿ ಪದವಿ ಪಡೆದ. ನಿಯೋಲಿಥಿಕ್ ಅಂಡ್ ಬ್ರಾಂಜ್ ಏಜ್ ಕಲ್ಚರ್ಸ್ ಆಫ್ ದಿ ಸೈಕ್ಲೆಡ್ಸ್ ಅಂಡ್ ದೇಯರ್ ಎಕ್ಸ್‌ಟರ್ನಲ್ ರಿಲೇಷನ್ಸ್ ಎಂಬ ಸಂಶೋಧನೆಗೆ 1965ರಲ್ಲಿ ಪಿಎಚ್.ಡಿ. ಪದವಿ ಗಳಿಸಿದ. ಇದೇ ವರ್ಷ ಶೆಫೀಲ್ಡ್ ವಿಶ್ವವಿದ್ಯಾಲಯದ ಪ್ರಾಗಿತಿಹಾಸ ಪುರಾತತ್ತ್ವ ವಿಭಾಗದಲ್ಲಿ ಉಪನ್ಯಾಸಕನಾಗಿ ಸೇರಿದ. 1968–70ರಲ್ಲಿ ಗ್ರೀಸ್‌ನ ಸಿತಗ್ರೋಯ್‌ನಲ್ಲಿ ಇವನ ನಿರ್ದೇಶನದಲ್ಲಿ ಉತ್ಖನನ ನಡೆಯಿತು. ಮುಂದೆ ಸೊಸೈಟಿ ಆಫ್ ಸ್ಕಾಟ್ಲೆಂಡ್‌ನ ಫೆಲೊ ಆಗಿ ನೇಮಕಗೊಂಡ. 1972ರಲ್ಲಿ ಸೌತ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯದಲ್ಲಿ ಪುರಾತತ್ತ್ವದ ಪ್ರಾಧ್ಯಾಪಕನಾಗಿ ಸೇರಿದ. ಈ ಅವಧಿಯಲ್ಲಿ ಗ್ರೀಸ್‌ನ ಕ್ವಾಂಟಿನೆರ್ಸ್ ಮತ್ತು ಫೈಲಕೋಪಿಯಲ್ಲಿ ಉತ್ಖನನ ನಡೆಸಿದ. 1980ರಲ್ಲಿ ಇವನನ್ನು ಬ್ರಿಟಿಷ್ ಅಕಾಡೆಮಿಯ ಫೆಲೊ ಆಗಿ ನೇಮಿಸಲಾಯಿತು. ಒಂದು ವರ್ಷದ ಅನಂತರ ಕೇಂಬ್ರಿಜ್ ವಿಶ್ವವಿದ್ಯಾಲಯದ ಡಿಸ್ನೆ ಪ್ರಾಧ್ಯಾಪಕ ಪೀಠಕ್ಕೆ ಆಯ್ಕೆಗೊಂಡು ನಿವೃತ್ತಿಯವರೆಗೆ (2004) ಇಲ್ಲಿ ಸೇವೆ ಸಲ್ಲಿಸಿದ. 1986–97ರ ವರೆಗೆ ಜೀಸಸ್ ಕಾಲೇಜಿನ ಮಾಸ್ಟರ್‌ನಾಗಿ ಕಾರ್ಯ ನಿರ್ವಹಿಸಿದ. 1990ರಲ್ಲಿ ಮ್ಯಾಕ್‌ಡೊನಾಲ್ಡ್ ಇನ್‌ಸ್ಟಿಟ್ಯೂಟ್ ಫಾರ್ ಆರ್ಕಿಯಲಾಜಿಕಲ್ ರಿಸರ್ಚ್‌ನ ನಿರ್ದೇಶಕನಾಗಿ ಕೆಲಸ ಮಾಡಿದ. ಮರುವರ್ಷ ರೆನ್‌ಫ್ರ್ಯೂ ಜಿಲ್ಲೆಯ ಹ್ಯುರ್ಲೆಟಿನ

ಬ್ಯಾರನ್ ರೆನ್‌ಫ್ರ್ಯೂ ಆಫ್ ಖೈಮ್ಸ್‌ಥಾರ್ನ್ ಎಂಬ ಬಿರುದನ್ನು ಇವನಿಗೆ ನೀಡಲಾಯಿತು. ಪುರಾತತ್ತ್ವ ಕ್ಷೇತ್ರದಲ್ಲಿಯ ಕೊಡುಗೆಗಾಗಿ 2004ರಲ್ಲಿ ಇವನಿಗೆ ಬಲ್ಜನ್ ಪ್ರಶಸ್ತಿ ಲಭಿಸಿತು. ಕ್ಯಾಟ್ಸನ್ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿಯಲ್ಲಿ 2005–06ರಲ್ಲಿ ಸಂದರ್ಶಕ ಪ್ರಾಧ್ಯಾಪಕನಾಗಿದ್ದ ಇವನು ಅನೇಕ ಕೃತಿಗಳನ್ನು ರಚಿಸಿದ್ದಾನೆ. ಪ್ರಮುಖ ಬರೆಹಗಳಿವು: ಬಿಫೋರ್ ಸಿವಿಲೈಜೇಷನ್, ದಿ ರೇಡಿಯೊಕಾರ್ಬನ್ ರೆವಲ್ಯೂಷನ್ ಅಂಡ್ ಪ್ರೀ ಹಿಸ್ಟಾರಿಕ್ ಯುರೋಪ್ (1973), ಆರ್ಕಿಯಾಲಜಿ ಅಂಡ್ ಲ್ಯಾಂಗ್ವೇಜ್: ದಿ ಪಜ್ಲ್ ಆಫ್ ಇಂಡೊ–ಯುರೋಪಿಯನ್ ಆರಿಜನ್ಸ್ (1987), ಲೂಟ್, ಲೆಜಿಟಿಮಸಿ ಅಂಡ್ ಓನರ್‌ಶಿಪ್: ದಿ ಎಥಿಕಲ್ ಕ್ರೈಸಿಸ್ ಇನ್ ಆರ್ಕಿಯಾಲಜಿ(2000), ಫೈಟಿಂಗ್ ಇಟ್ ಔಟ್: ದಿ ಪ್ಯಾರಲಲ್ ವಿಷನ್ಸ್ ಆಫ್ ಆರ್ಟಿಸ್ಟ್ಸ್ ಅಂಡ್ ಆರ್ಕಿಯಾಲಜಿಸ್ಟ್ಸ್(2003). ಇವನು ಪೌಲ್ ಬಾನ್ ಸಹಯೋಗದಲ್ಲಿ ಬರೆದ ಆರ್ಕಿಯಾಲಜಿ: ಥಿಯರೀಸ್, ಮೆಥಡ್ಸ್ ಅಂಡ್ ಪ್ರಾಕ್ಟಿಸ್ ಜನಪ್ರಿಯ ಕೃತಿಗಳಲ್ಲೊಂದಾಗಿದೆ. (ವಿ.ಎಸ್.)

**ಕಾಲಿಬಂಗನ್:** ರಾಜಸ್ತಾನ ರಾಜ್ಯದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಘಗ್ಗರ್ ನದಿಯ ಎಡದಂಡೆಯ ಮೇಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಘಗ್ಗರ್ ನದಿಯೇ ವೇದಕಾಲದ ಸರಸ್ವತಿ ನದಿ ಇರಬೇಕೆಂದು ಅನೇಕ ವಿದ್ವಾಂಸರ ನಂಬಿಕೆ. 1960–69ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬಿ.ಬಿ.ಲಾಲ್, ಬಿ.ಕೆ.ಥಾಪರ್, ಜೆ.ಪಿ.ಜೋಷಿಯವರು ಇಲ್ಲಿ ಉತ್ಖನನ ನಡೆಸಿದರು. ಇಲ್ಲಿ ಒಟ್ಟು 3 ದಿಬ್ಬಗಳಿವೆ. ಮೊದಲನೆಯ ದಿಬ್ಬದಲ್ಲಿರುವ ಆದಿ ಹರಪ್ಪ ಹಂತವನ್ನು ಅನೇಕ ವರ್ಷಗಳವರೆಗೆ ಹರಪ್ಪ ಪೂರ್ವಕಾಲ ಎಂದು ಕರೆಯಲಾಗುತ್ತಿತ್ತು. ಆದರೆ ಇತ್ತೀಚೆಗಿನ ಸಂಶೋಧನೆಯಿಂದ ಹರಪ್ಪ ಪೂರ್ವ ಹಂತವನ್ನು ಈಗ ಆದಿಹರಪ್ಪ ಹಂತವೆಂದು ಕರೆಯಲಾಗುತ್ತಿದೆ. ಎರಡನೆಯ ದಿಬ್ಬ ಕೇವಲ ಪ್ರೌಢ ಹರಪ್ಪ ಕಾಲದ್ದಾಗಿದೆ. ಮೂರನೆಯ ದಿಬ್ಬ ಆಕಾರದಲ್ಲಿ ಚಿಕ್ಕದಾಗಿದ್ದು ಹಲವು ಅಗ್ನಿಕುಂಡಗಳನ್ನೊಳಗೊಂಡಿದೆ.

ಆದಿ ಹರಪ್ಪ ಸಂಸ್ಕೃತಿ ನೆಲೆಯ ವಿಸ್ತೀರ್ಣ 1800 ಚ.ಮೀ. ಇದರ ಸುತ್ತಲೂ ಕೋಟೆಗೋಡೆಯನ್ನು ಕಟ್ಟಲಾಗಿದೆ. ಕೋಟೆಗೋಡೆ ಹಾಗೂ ಮನೆಗಳನ್ನು 3:2:1 ಅನುಪಾತ ದಲ್ಲಿ ತಯಾರಿಸಿದ ಹಸಿಇಟ್ಟಿಗೆಗಳಿಂದ ಕಟ್ಟಲಾಗಿದೆ. ಕಟ್ಟಡಗಳ ಒಳ ಹಾಗೂ ಹೊರಮೈಯನ್ನು ಗಿಲಾವು ಮಾಡಲಾಗಿದೆ. ಮನೆಗಳ ಪೂರ್ತಿ ವಿನ್ಯಾಸ ದೊರೆತಿಲ್ಲ. ಈ ಕಾಲದ ಸುಟ್ಟಇಟ್ಟಿಗೆಗಳನ್ನು ಹಸಿಇಟ್ಟಿಗೆಗಳ ಅಳತೆಯಲ್ಲಿಯೇ ತಯಾರಿಸಲಾಗಿದೆ; ಆದರೆ ಇವನ್ನು ಚರಂಡಿ ಕಟ್ಟುವುದಕ್ಕೆ ಉಪಯೋಗಿಸಲಾಗಿದೆ. ಪೂರ್ವ–ಪಶ್ಚಿಮಾಭಿಮುಖವಾಗಿರುವ ಒಂದು ಬೀದಿಯನ್ನು ಬೆಳಕಿಗೆ ತರಲಾಗಿದೆ. ಮನೆಗಳಲ್ಲಿ ಗುಂಡಿ ತೋಡಿ ಅಥವಾ ನೆಲದ ಮೇಲೆ ಕಟ್ಟಿ ತಯಾರಿಸಿದ

ಅಗ್ನಿ ಕುಂಡ ವೇದಿಕೆ

ಒಲೆಗಳು, ಈಗಿನ ತಂದೂರ್ ಹಾಗೂ ಇನ್ನಿತರ ಒಲೆಗಳನ್ನು ಹೋಲುತ್ತವೆ. ನೆಲ ಗುಂಡಿಗಳನ್ನು ಧಾನ್ಯ ಶೇಖರಣೆಗಾಗಿ ಬಳಸಲಾಗುತ್ತಿತ್ತು. ಈ ಹಂತದಲ್ಲಿ ಬಳಕೆಯಲ್ಲಿದ್ದ ಮಣ್ಪಾತ್ರೆಗಳು ಪ್ರೌಢ ಹರಪ್ಪ ಪಾತ್ರೆಗಳಿಗಿಂತ ಭಿನ್ನವಾಗಿವೆ. ಇವನ್ನು ಆರು ವರ್ಗಗಳಲ್ಲಿ ವಿಂಗಡಿಸಲಾಗಿದೆ. ಈ ಕಾಲದ ಪಾತ್ರೆ ತುಣುಕುಗಳ ಮೇಲೆ ಗೀರುಗೀಟಿನಿಂದ ಬಿಡಿಸಿದ ಚಿತ್ರಗಳು ಪ್ರಾಯಶಃ ಹರಪ್ಪಕಾಲದ ಲಿಪಿಯ ಉಗಮಕ್ಕೆ ಮೂಲವಾಗಿರ ಬಹುದೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಇವಲ್ಲದೆ ಈ ಸಂಸ್ಕೃತಿಯ ಸ್ತರಗಳಲ್ಲಿ ದೊರಕಿರುವ ಚಕಮಕಿ ಹಾಗೂ ಬೆಣಚುಕಲ್ಲುಗಳ ತೆಳುನೀಳ ಚಕ್ಕೆಯ ಅಲಗುಗಳು, ಶಂಖದ ಬಳೆಗಳು, ಸುಟ್ಟಮಣ್ಣಿನ ಚಕ್ರಗಳು, ಗೂಳಿಯ ಗೊಂಬೆಗಳು, ಬಳೆಗಳು, ತಾಮ್ರದ ಕೊಡಲಿಗಳು, ವಾಸ್ತುಕಲೆ ಹಾಗೂ ಇನ್ನಿತರ ಅವಶೇಷಗಳು ಆದಿ ಹರಪ್ಪ ಜನರೇ ಪ್ರೌಢ ಹರಪ್ಪ ಸಂಸ್ಕೃತಿಯ ಪೂರ್ವಜರೆನ್ನುವುದನ್ನು ಸ್ಪಷ್ಟಪಡಿಸುತ್ತವೆ. ಈ ಹಂತದಿಂದ ದೊರೆತ ಕೆಲವು ವಿಶೇಷ ಅವಶೇಷಗಳೆಂದರೆ ಸುಡುವುದಕ್ಕೆ ಮೊದಲು ಹೊರಮೈಮೇಲೆ ಸಾಲಾಗಿ ಒತ್ತಿ ಅಂಟಿಸಿದ ಸ್ಟಿಯಟೈಟ್ ಮಣಿಗಳುಳ್ಳ ಮಣ್ಪಾತ್ರೆ, ಸುಡಾವೆಮಣ್ಣಿನ ಮುರಿದು ಹೋದ ಪುಟ್ಟ ಮಂಚ. ಅತ್ಯಪರೂಪದ ಶೋಧನೆಯೆಂದರೆ ಆದಿ ಹರಪ್ಪ ಕಾಲದಲ್ಲಿ ಬೇಸಾಯ ಮಾಡಿದ ಹೊಲ. ಪ್ರಾಚೀನ ಭಾರತದ ಕೃಷಿ ಪದ್ಧತಿಗೆ ಇದೊಂದು ಉತ್ಕೃಷ್ಟ ಉದಾಹರಣೆಯಾಗಿದೆ. ಹೊಲದಲ್ಲಿ ಪೂರ್ವ–ಪಶ್ಚಿಮ ಹಾಗೂ ಉತ್ತರ–ದಕ್ಷಿಣ ದಿಶೆಯಲ್ಲಿ ನೇಗಿಲಿನ ಜಾಡುಗಳಿವೆ. ಆ ಕಾಲದಲ್ಲಿಯೂ ಒಂದೇ ಸಮಯದಲ್ಲಿ ಎರಡು ಬೆಳೆಗಳನ್ನು ಬೆಳೆಯುವ ಪದ್ಧತಿ ಜಾರಿಯಲ್ಲಿತ್ತು. ಆದಿಹರಪ್ಪ ಸಂಸ್ಕೃತಿಯ ಕಾಲಮಾನ ಪ್ರ.ಶ.ಪೂ. ಸು.3000–2700. ಅನಂತರ ಬಹುಶಃ ಭೂಕಂಪದಿಂದ ವಸತಿ ಹಾಳಾಯಿತು.

ಮುದ್ರಿಕೆ

ಅನತಿ ಕಾಲದ ಅನಂತರ ಇದೇ ಸ್ಥಳದಲ್ಲಿ ಪ್ರೌಢ ಹರಪ್ಪ ಸಂಸ್ಕೃತಿಯ ನಗರ ನಿರ್ಮಾಣವಾಯಿತು. ನಗರದಲ್ಲಿ ಎರಡು ವಿಭಾಗಗಳಿವೆ: ಇಡೀ ಪಟ್ಟಣ ಕಾಣುವಂತೆ ಪಶ್ಚಿಮ ದಿಶೆಯಲ್ಲಿ ಎತ್ತರ ಭಾಗದಲ್ಲಿ ಕಟ್ಟಿರುವ ಕೋಟೆ ಮತ್ತು ಅದರ ಸು. 40 ಮೀ ಪೂರ್ವಕ್ಕೆ ನೆಲಮಟ್ಟದಲ್ಲಿಯ ಕೆಳ ನಗರ. ಆದಿಹರಪ್ಪ ಸಂಸ್ಕೃತಿಯ ಅವಶೇಷಗಳ ಮೇಲೆ ಕೆಳನಗರವನ್ನು ಕಟ್ಟಲಾಯಿತು. ಚತುರ್ಭುಜ ವಿನ್ಯಾಸದಲ್ಲಿದ್ದ ಕೋಟೆಯ ಗೋಡೆಗಳು 3–7 ಮೀ ದಪ್ಪವಾಗಿದ್ದು ಅಲ್ಲಲ್ಲಿ ಚೌಕಾಕಾರದ ಬುರುಜುಗಳಿವೆ; ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ದ್ವಾರಗಳಿವೆ. ಕೋಟೆಯ ಒಳಭಾಗವನ್ನು ಪೂರ್ವ–ಪಶ್ಚಿಮವಾಗಿ ಕಟ್ಟಿದ ಅಡ್ಡಗೋಡೆಯೊಂದರಿಂದ ಸುಮಾರು ಸಮವಿಸ್ತೀರ್ಣದ ವಜ್ರಾಕಾರದ (ರಾಂಬಾಯಿಡ್) ಎರಡು ಭಾಗಗಳಲ್ಲಿ ವಿಭಜಿಸಲಾಗಿದೆ. ದಕ್ಷಿಣ ಭಾಗದಲ್ಲಿ ಇಟ್ಟಿಗೆಯ ಆರುಕಟ್ಟೆಗಳಿವೆ. ಒಂದು ಕಟ್ಟೆಯ ಮೇಲೆ ಬಾವಿ, ಅಗ್ನಿಕುಂಡ ಮತ್ತು ಇಟ್ಟಿಗೆಯ ತೊಟ್ಟಿ ಇದ್ದು ತೊಟ್ಟಿಯೊಳಗೆ ದನದ ಮೂಳೆ ಹಾಗೂ ಜಿಂಕೆಯ ಕೊಂಬುಗಳಿದ್ದವು. ಇನ್ನೊಂದು ಕಟ್ಟೆಯ ಮೇಲೆ ಸಾಲಾಗಿದ್ದ ಆಯತ ಅಥವಾ ಅಂಡಾಕಾರದ ಏಳು ಅಗ್ನಿಕುಂಡಗಳಲ್ಲಿ ಬೂದಿ, ಇದ್ದಿಲು ಮತ್ತು ವೃತ್ತಾಕಾರದ ಮಣ್ಣಿನ ಸಣ್ಣ ಫಲಕಗಳು ದೊರಕಿವೆ. ಈ ಕುಂಡಗಳು ಪ್ರಾಯಶಃ ಈ ಜನರ ಧಾರ್ಮಿಕ ಆಚರಣೆಗೆ ಸಂಬಂಧಿಸಿರಬೇಕೆಂದೂ ಇಲ್ಲಿ ಸಿಕ್ಕಿರುವ ಪ್ರಾಣಿಗಳ ಅವಶೇಷಗಳು ಯಜ್ಞಗಳಲ್ಲಿ ಬಲಿಯಾದ ಪ್ರಾಣಿಗಳವೆಂದೂ ಊಹಿಸಲಾಗಿದೆ. ಈ ಭಾಗದಲ್ಲಿದ್ದ ಮನೆಗಳಲ್ಲಿ ಅಗ್ನಿಕುಂಡಗಳಿಗಾಗಿಯೇ ಮೀಸಲಾದ ಕೋಣೆಗಳಿವೆ. ಕೋಟೆಯ ಉತ್ತರಾರ್ಧದ ಭಾಗದಲ್ಲಿ ಬೆಳಕಿಗೆ ಬಂದ ಒಂದೇ ಒಂದು ರಸ್ತೆಯ ಇಕ್ಕೆಲದಲ್ಲಿ ಅಚ್ಚುಕಟ್ಟಾಗಿ ಕಟ್ಟಿದ ದೊಡ್ಡ ಮನೆಗಳಿದ್ದವು. ಇವು ಸಮಾಜದ ಪ್ರತಿಷ್ಠಿತರ ಗೃಹಗಳಿದ್ದಿರಬೇಕು.

ಕೆಳನಗರ 235ಮೀ ಉದ್ದ 360 ಮೀ ಅಗಲ ಇದ್ದು, ಇದರ ಸುತ್ತಲೂ ಗೋಡೆಯನ್ನು ಕಟ್ಟಲಾಗಿದೆ. ಉತ್ತರ ಹಾಗೂ ಪಶ್ಚಿಮ ದಿಶೆಯ ಗೋಡೆಗಳಲ್ಲಿ ಪ್ರವೇಶದ್ವಾರಗಳಿವೆ. ಸಮಕೋನದಲ್ಲಿ ಸಂಧಿಸಿದ ಮುಖ್ಯರಸ್ತೆಗಳಿಂದ ನಗರ ಚದುರಂಗದ ಹಾಸಿನಂತೆ ಹಲವು ಚೌಕಗಳಾಗಿ ವಿಭಜಿತವಾಗಿತ್ತು. ಒಂದೊಂದು ಚೌಕದಲ್ಲೂ ಹಲವು ಮನೆಗಳೂ ನಡುವೆ ಅನೇಕ ಉಪಬೀದಿಗಳೂ ಇದ್ದು ನಗರ ವಿನ್ಯಾಸ ವ್ಯವಸ್ಥಿತವಾಗಿತ್ತು. ಕಟ್ಟಡಗಳ ಗೋಡೆಗಳು ಹಾಳಾಗದಿರಲೆಂದು ಬೀದಿಗಳ ಮೂಲೆಗಳಲ್ಲಿ ಕಟ್ಟಿಗೆಯ ಕಂಬವನ್ನು ನೆಡಲಾಗಿರುತ್ತಿತ್ತು. ಇಲ್ಲಿಯ ರಸ್ತೆಗಳಿಗೆ ಮೋರಿಗಳಿಲ್ಲದಿದ್ದುದು ವಿಶೇಷ. ಬಚ್ಚಲು ನೀರನ್ನು ಇಟ್ಟಿಗೆಯಿಂದ ಕಟ್ಟಿದ ಅಥವಾ ಕಟ್ಟಿಗೆಯಲ್ಲಿ ಕೊರೆದು ತಯಾರಿಸಿದ ಮೋರಿಯ ಮುಖಾಂತರ ಬೀದಿಯಲ್ಲಿದ್ದ ದೊಡ್ಡ ಜಾಡಿಗಳಿಗೆ ಬೀಳುವಂತೆ ಮಾಡಲಾಗಿತ್ತು. ಇಲ್ಲಿಯ ಮನೆಗಳು ಆಯಾತಾಕಾರದವು. ಅವು ಕನಿಷ್ಠ ಎರಡು ಬೀದಿಗಳಿಗೆ ಸೇರಿದಂತಿರುತ್ತಿದ್ದವು. ಕೆಲವು ಕಟ್ಟಡಗಳಲ್ಲಿ ಇಟ್ಟಿಗೆಯ ದೊಡ್ಡ ಮೆಟ್ಟಿಲುಗಳಿರುವುದರಿಂದ ಮಹಡಿಗಳೂ ಇದ್ದಿರಬಹುದು. ಮನೆಯ ಮಧ್ಯದ ಅಂಗಳದ ಸುತ್ತ ಮೂರು ಕಡೆ ಆರು ಅಥವಾ ಏಳು ಕೋಣೆಗಳಲ್ಲದೆ, ಒಂದು ಬಾವಿಯೂ ಇರುತ್ತಿತ್ತು. ಕೆಲವೆಡೆ ನೆಲಕ್ಕೆ ಹಾಸಿದ ಚಿತ್ರಿತ ಬಿಲ್ಲೆಗಳು ಕಂಡುಬಂದಿವೆ.

ಪ್ರೌಢ ಹರಪ್ಪಕಾಲದ ಸುಟ್ಟ ಹಾಗೂ ಹಸಿ ಇಟ್ಟಿಗೆಗಳನ್ನು 4:2:1ರ ಅನುಪಾತದಲ್ಲಿ ತಯಾರಿಸಲಾಗಿದೆ. ಹಸಿಇಟ್ಟಿಗೆಯಿಂದ ಕಟ್ಟಿದ ಕೋಟೆಗೋಡೆಗಳ ಹಾಗೂ ಮನೆಗಳ ಹೊರ ಮತ್ತು ಒಳಮೈಗಳಿಗೆ ಮಣ್ಣಿನ ಗಿಲಾವು ಮಾಡಲಾಗಿತ್ತು. ತಿಗುರಿಯ ಮೇಲೆ ತಯಾರಿಸಿದ ಉತ್ತಮ ಮಟ್ಟದ ಮಣ್ಪಾತ್ರೆಗಳು ಈ ಕಾಲದ ಕಲಾಕೌಶಲ್ಯಕ್ಕೆ ಕನ್ನಡಿಯಂತಿವೆ. $930^0$ ಗೂ ಹೆಚ್ಚಿನ ಉಷ್ಣತೆಯಲ್ಲಿ ಸುಟ್ಟ, ವಿವಿಧ ಆಕಾರ ಮತ್ತು ಉಪಯೋಗವುಳ್ಳ ಗಾಢಕೆಂಪು ಬಣ್ಣದ ತೆಳು ಲೇಪನವುಳ್ಳ ಹಾಗೂ ಶ್ರೀಮಂತ ಚಿತ್ರಕಲೆಯಿಂದಲಂಕರಿಸಿದ ಈ ಪಾತ್ರೆಗಳು ವಿಶಿಷ್ಟವಾದವು. ವಿವಿಧ ರೇಖಾಕೃತಿಗಳನ್ನೂ ನಿಸರ್ಗದಲ್ಲಿರುವ ಗಿಡ, ಬಳ್ಳಿ, ಪ್ರಾಣಿ, ಪಕ್ಷಿಗಳನ್ನೊಳಗೊಂಡ ಚಿತ್ರಗಳನ್ನೂ ಕಪ್ಪು ಅಥವಾ ದಟ್ಟಕಂದುಬಣ್ಣದಿಂದ ಪಾತ್ರೆಗಳ

ಹೊರಮೈಮೇಲೆ ಬಿಡಿಸಲಾಗಿದೆ. ಪ್ರೌಢ ಹರಪ್ಪ ಸಂಸ್ಕೃತಿಯ ಇನ್ನಿತರ ಅವಶೇಷಗಳೆಂದರೆ ಚಕಮಕಿ ಕಲ್ಲಿನಿಂದ ತಯಾರಿಸಿದ ತೆಳು ಅಲಗುಗಳು, ಅರೆ ಪ್ರಶಸ್ತಕಲ್ಲುಗಳಿಂದ ತಯಾರಿಸಲಾದ ಮಣಿಗಳು, ಆನೆದಂತದ ಹಣಿಗೆ, ತಾಮ್ರದ ಗೂಳಿ, ಸುಟ್ಟಮಣ್ಣಿನ ಆಟಿಗೆಗಾಡಿಗಳು, ಅರೆಯುಳ್ಳ ಚಕ್ರಗಳು, ಹಕ್ಕಿಗಳು, ಖಡ್ಗಮೃಗ, ಜಿರಾಫೆ(?), ಆಮೆ, ಗೂಳಿ, ಕುರಿ, ಎಮ್ಮೆ, ಒಂಟೆ, ನಾಯಿ, ನರಿ, ಆನೆ ಇತ್ಯಾದಿ; ತೂಕದ ಬಟ್ಟುಗಳು, ಚಿತ್ರ ಮತ್ತು ಲಿಪಿಯಿರುವ ಸುಂದರ ಶಿಲಾಮುದ್ರಿಕೆಗಳು, ಪೀಠಯುಕ್ತ ಶಿವಲಿಂಗ; ಸುಡಾವೆ ಮಣ್ಣಿನ, ಫಯಾನ್ಸಿನ,



ರೇಖಾಚಿತ್ರಿತ ಮಣ್ಪಾತ್ರೆಗಳು

ಶಂಖದ ಬಳೆಗಳು ಇತ್ಯಾದಿ. ಮುದ್ರೆಗಳ ಮೇಲೆ ಹಾಗೂ ಸುಟ್ಟಮಣ್ಣಿನ ಬಿಲ್ಲೆಗಳ ಮೇಲೆ ಬಿಡಿಸಿದ ಕೆಲವು ಚಿತ್ರಗಳು ಬಹುಶಃ ಆಗಿನ ಸಮಾಜದಲ್ಲಿದ್ದ ಧಾರ್ಮಿಕ ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತವೆ. ಈ ಕಾಲದ ಸ್ತರಗಳಿಂದ ದೊರೆತ ಪ್ರಾಣಿಗಳ ಎಲುಬುಗಳಲ್ಲಿ ಒಂಟೆ ಹಾಗೂ ಕುದುರೆಗಳ ಅವಶೇಷಗಳು ಮುಖ್ಯವಾದವು. ಕುದುರೆಯದೆಂದು ಗುರುತಿಸಲಾದ ಎಲುಬುಗಳು ಕಾಡುಕತ್ತೆಯದಾಗಿರಬಹುದೆಂದು ಕೆಲವು ಪ್ರಾಣಿಶಾಸ್ತ್ರಜ್ಞರು ಅನುಮಾನಿಸಿದ್ದಾರೆ.

ಕೋಟೆಯ ಈಶಾನ್ಯಕ್ಕೆ 300ಮೀ ದೂರದಲ್ಲಿ ಸ್ಮಶಾನವಿತ್ತು. ಇಲ್ಲಿ ಮೂರು ರೀತಿಯ ಶವ ಸಂಸ್ಕಾರ ವಿಧಾನಗಳು ಕಂಡುಬಂದಿವೆ. ಉತ್ತರ–ದಕ್ಷಿಣವಾಗಿ ತೋಡಿದ ಉದ್ದವಾದ ಗುಂಡಿಯಲ್ಲಿ ಹೆಣದ ತಲೆ ಉತ್ತರಕ್ಕಿರುವಂತೆ ಮಾಡಿ, ಅದರ ಸುತ್ತಲೂ ಮಡಕೆಗಳನ್ನಿಡುವ ರೀತಿ ಸಾಮಾನ್ಯ. ಇನ್ನೆರಡು ರೀತಿಯ ಸಮಾಧಿಗಳಲ್ಲಿ ಅಸ್ಥಿ ಅವಶೇಷ ಗಳೇನೂ ಇಲ್ಲ. ದುಂಡು ಅಥವಾ ಅಂಡಾಕಾರದ ಗುಂಡಿಯ ಮಧ್ಯೆ ಒಂದು ದೊಡ್ಡ ಗುಡಾಣವನ್ನಿಟ್ಟು ಸುತ್ತಲೂ ಸಣ್ಣ ಮಡಕೆಗಳನ್ನು ಜೋಡಿಸಿಡುವುದು ಮತ್ತೊಂದು ರೀತಿ. ಇನ್ನೊಂದು ಬಗೆಯ ಶವಕುಣಿಯಲ್ಲಿ ಮಡಕೆಗಳನ್ನಷ್ಟೆ ಗುಂಡಿಗಳಲ್ಲಿ ಇಡಲಾಗಿದೆ. ಇಂಥ ಮಡಕೆಗಳಲ್ಲಿ ಮೃತರಿಗಾಗಿ ಆಹಾರ–ಪಾನೀಯಗಳನ್ನಿಟ್ಟಿರಬೇಕು.

ಪ್ರೌಢ ಹರಪ್ಪ ಸಂಸ್ಕೃತಿ ಪ್ರ.ಶ.ಪೂ. 2ನೆಯ ಸಹಸ್ರಮಾನದ ಪೂರ್ವಾರ್ಧದವರೆಗೆ ಅಸ್ತಿತ್ವದಲ್ಲಿತ್ತು. ಪ್ರಾಯಶಃ ಸಮೀಪದ ಸರಸ್ವತಿ ನದಿ ಬತ್ತುತ್ತ ಬಂದು, ಸುತ್ತಣ ಪ್ರದೇಶದಲ್ಲಿ ಬೇಸಾಯ ಕಡಿಮೆಯಾಗಿ, ನಗರದ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗ ದಿದ್ದುದರಿಂದ ಇಲ್ಲಿಯ ಜನ ಬೇರೆಡೆಗೆ ವಲಸೆ ಹೋಗಿರಬಹುದೆಂದು ಊಹಿಸಲಾಗಿದೆ. (ಎಲ್.ಎಸ್.ಆರ್.)

**ಕಾರ್ಲೆ:** ಮಹಾರಾಷ್ಟ್ರ ರಾಜ್ಯದ ಪುಣೆ–ಮುಂಬೈ ಹೆದ್ದಾರಿಯಲ್ಲಿರುವ 2ನೆಯ ಶತಮಾನದ ಬೌದ್ಧ ಗುಹಾ ಚೈತ್ಯಾಲಯಕ್ಕೆ ಪ್ರಸಿದ್ಧವಾಗಿರುವ ನೆಲೆ. ಸು. 3–4 ಸಾವಿರ ವರ್ಷಗಳ ಹಿಂದೆಯೇ ಸೂಕ್ಷ್ಮ ಶಿಲಾಯುಗ ಸಾಂಸ್ಕೃತಿಕ ಹಂತದಲ್ಲಿದ್ದ ಜನರು ಇಲ್ಲಿ ಜೀವನ ನಡೆಸುತ್ತಿದ್ದರು. ಸೂಕ್ಷ್ಮಶಿಲೋಪಕರಣಗಳು 1956–57ರಲ್ಲಿ ನಡೆಸಿದ ಪುರಾತತ್ತ್ವ ಅನ್ವೇಷಣೆಯಲ್ಲಿ ದೊರೆತವು (**ನೋಡಿ–ಗುಹಾ ವಾಸ್ತುಶಿಲ್ಪ**). (ಎ.ಎಸ್.)

**ಕಾವಿ ಮಣ್ಪಾತ್ರೆ ಸಂಸ್ಕೃತಿ:** ಪೂರ್ವಭಾವಿ ಇತಿಹಾಸ ಕಾಲದ ಸಂಸ್ಕೃತಿಗಳಲ್ಲೊಂದು. ಉತ್ತರ ಪ್ರದೇಶದ ರಾಜ್‌ಪುರ್ ಪರ್ಸು, ಬಿಸೌಲಿ ನೆಲೆಗಳಲ್ಲಿ ನಡೆದ ಉತ್ಖನನಗಳಲ್ಲಿ ಕಾವಿ ಬಣ್ಣದ ಪಾತ್ರೆಗಳನ್ನು (ಓಕರ್ ಕಲರ್ ವೇರ್) ಉಪಯೋಗಿಸುತ್ತಿದ್ದ ಈ ಸಂಸ್ಕೃತಿ ಬೆಳಕಿಗೆ ಬಂದಿತು. ಇದೇ ರಾಜ್ಯದಲ್ಲಿರುವ ಹಸ್ತಿನಾಪುರ, ಅತ್ರಂಜಿಖೇಡ, ಅಂಬ್‌ಖೇಡಿ, ಝಿನ್‌ಝುನ, ಕಸೇರಿ, ಬಹರಿಯ, ಲಾಲ್‌ಖಿಲಾ ಮತ್ತು ಅಹಿಚ್ಛತ್ರ, ರಾಜಸ್ಥಾನದ ನೋಹ್ ಮತ್ತು ಜೋಧ್‌ಪುರ ಹಾಗೂ ಪಂಜಾಬಿನ ಕಟ್ಪಲೋನ್‌ನಲ್ಲಿ ಈ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಉತ್ತರ ಪ್ರದೇಶದ ಸೈಪೈನಲ್ಲಿ ನಡೆದ ಉತ್ಖನನದಲ್ಲಿ ತಾಮ್ರೋಪಕರಣ ಗುಡ್ಡೆ ಸಂಸ್ಕೃತಿಯ ಒಂದು ಮುಖ್ಯ ನಮೂನೆಯಾದ ಈಟಿಗಾಳ ಕಾವಿಬಣ್ಣದ ಪಾತ್ರೆಯ ಸಾಂಸ್ಕೃತಿಕ ಪದರದಲ್ಲಿ ಕಂಡುಬಂದಿರುವುದು ಗಮನಾರ್ಹವಾಗಿದೆ. ಈ ನೆಲೆಗಳು ವ್ಯಾಪ್ತಿಯಲ್ಲಿ ಸಣ್ಣವು, ವಸತಿ ಪದರವೂ ತೆಳುವಾಗಿರುತ್ತದೆ (0.3–1.2ಮೀ). ರಾಜಸ್ಥಾನ ಹಾಗೂ ಗಂಗಾ–ಯಮುನ ದೋಆಬ್ ಪ್ರದೇಶದಲ್ಲಿ ಈ ಸಂಸ್ಕೃತಿಯ ನೆಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕಾವಿಬಣ್ಣದ ಪಾತ್ರೆಗಳು ಮಂದಗೆಂಪು ಬಣ್ಣದವಾಗಿದ್ದು ಮಣ್ಣು ನಯವಾಗಿರುತ್ತದೆ. ಕಡಿಮೆ ತಾಪದಲ್ಲಿ ಸುಡಲಾದ ಈ ಪಾತ್ರೆಗಳು ಸವೆದು ಹೋದ ಸ್ಥಿತಿಯಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತವೆ. ಪಾತ್ರೆಗಳ ಮೇಲಿರುವ ತೆಳು ಲೇಪನದಲ್ಲಿ ಬಳಸಲಾದ ಕಾವಿಬಣ್ಣದ ಪುಡಿ ಲಘುವಾಗಿ ಉಜ್ಜಿದರೂ ಉದುರಿ ಬೀಳುತ್ತದೆ. ಇಷ್ಟು ಶಿಥಿಲವಾದ ಮೈ–ಲೇಪನಗಳನ್ನುಳ್ಳ ಪಾತ್ರೆಯನ್ನು ಏಕೆ ತಯಾರಿಸಲಾಯಿತು ಎಂಬುದರ ಬಗ್ಗೆ ಒಮ್ಮತವಿಲ್ಲ. ಗಾಳಿ ಅಥವಾ ನದಿಯ ಪ್ರಕ್ರಿಯೆಗಳಿಂದ ಪಾತ್ರೆಗಳು ಕಾಲಕ್ರಮೇಣ ಶಿಥಿಲವಾಗಿದ್ದಿರಬಹುದು. ಈ ವರ್ಗದಲ್ಲಿ ಕಂಡುಬರುವ ಸಾಮಾನ್ಯ ಆಕಾರಗಳೆಂದರೆ ಬಳೆಯಂಚಿನ ಸಂಗ್ರಹಣ ಜಾಡಿಗಳು, ಹಿಡಿಕೆಯಿರುವ ಮುಚ್ಚಳ, ಸಿಂಬಿ, ಹೊರಚಾಚಿದ ಅಂಚಿನ ಬಟ್ಟಲು, ಹಿಡಿಕೆಯುಳ್ಳ ಮಡಕೆ, ಪುಟ್ಟ ಮಡಕೆಗಳು, ಹೊರಚಾಚಿದ ಅಗಲ ಬಾಯಿಯ ಜಾಡಿ ಹಾಗೂ ಬೋಗುಣಿ, ಹಿಡಿಕೆಯಿರುವ ಮುಚ್ಚಳ ಇತ್ಯಾದಿ. ಕೆಲವು ಪಾತ್ರೆಗಳ ಮೇಲೆ ಗೀರಿನ ವಿನ್ಯಾಸಗಳು, ವರ್ಣಚಿತ್ರಗಳು ಹಾಗೂ ಮಣ್ಣಿನ ಪಟ್ಟಿಯನ್ನು ಅಂಟಿಸಿ ಮಾಡಿದ ವಿನ್ಯಾಸಗಳಿವೆ. ಅಂಬ್‌ಖೇಡಿ ಮುಂತಾದ ನೆಲೆಗಳಲ್ಲಿ ಕಾವಿಬಣ್ಣದ ಪಾತ್ರೆಗಳೊಂದಿಗೆ ಕಡಿಮೆ ತಾಪದಲ್ಲಿ ಸುಟ್ಟ ಬೂದುಬಣ್ಣದ ಪಾತ್ರೆಗಳಿವೆ.

ಈ ಸಂಸ್ಕೃತಿಯ ಇತರ ಅವಶೇಷಗಳೆಂದರೆ ಸುಡಾವೆ ಮಣ್ಣಿನಪ್ರಾಣಿ ಹಾಗೂ ಸ್ತ್ರೀ ಗೊಂಬೆಗಳು, ಬಳೆ, ಮಣ್ಣಿನ ಹಾಗೂ ಮಂದಗೆಂಪು ಕಲ್ಲಿನ ಮಣಿಗಳು, ಬಾಣದ ಮೊನೆ, ಮೂಳೆಯ ಮೊನೆ, ರುಬ್ಬುವ ಕಲ್ಲು, ಸುಡಾವೆ ಮಣ್ಣಿನ ಆಟಿಕೆಯ ಚಕ್ರಗಳು ಇತ್ಯಾದಿ. ಲಾಲ್‌ಖಿಲಾ ಉತ್ಖನನದಲ್ಲಿ ಈ ಸಂಸ್ಕೃತಿಯ 4 ಉಪಹಂತಗಳನ್ನು ಗುರುತಿಸಲಾಗಿದೆ. 3ನೆಯ ಉಪಹಂತದ ಮಣ್ಣಿನ ನೆಲಗಟ್ಟುಗಳು, 4ನೆಯ ಉಪಹಂತದ ಸುಡಾವೆ ಮಣ್ಣಿನ ಮಣಿ ಹಾಗೂ ಬಿಲ್ಲೆ, ಹಸಿ ಇಟ್ಟಿಗೆಯ ಕಟ್ಟಡ ಅವಶೇಷಗಳು ಉಲ್ಲೇಖಾರ್ಹ. ಗಂಗಾ–ಯಮುನ ದೋಆಬ್‌ನ ಕೇಂದ್ರ ಭಾಗದಲ್ಲಿರುವ ನೆಲೆಗಳಲ್ಲಿನ ಕಾವಿಬಣ್ಣದ ಪಾತ್ರೆಗಳ ಆಕಾರಗಳು ಸೀಮಿತವಾಗಿರುವುದಲ್ಲದೆ ಗುಣಮಟ್ಟವೂ ಸಾಮಾನ್ಯವಾಗಿದೆ. ಆದರೆ ದೋಆಬ್ ಪ್ರದೇಶದ ಮೇಲ್ದಂಡೆಯ ಪಾತ್ರೆಗಳು ವೈವಿಧ್ಯಮಯವಾಗಿದ್ದು ಹರಪ್ಪ ಮಾದರಿಗಳ ಅವತರಣಿಕೆಯಾಗಿವೆ. ಅಂಬ್‌ಖೇಡಿಯ ಕೆಲವು ಕಾವಿಬಣ್ಣದ ಪಾತ್ರೆಗಳು ಸಿಮೆಟ್ರಿ–ಎಚ್ ಸಂಸ್ಕೃತಿಯ ಪ್ರಭಾವವನ್ನು ಸೂಚಿಸುತ್ತವೆ. (ಡಿ.ಕೆ.ಎನ್.)

**ಕಾವೇರಿಪಟ್ಟಣಂ:** ತಮಿಳುನಾಡು ರಾಜ್ಯದ ತಂಜಾವೂರು ಜಿಲ್ಲೆಯಲ್ಲಿ ಕಾವೇರಿ ಮುಖಜ ಭೂಮಿಯಲ್ಲಿರುವ ಚೋಳರ ಕಾಲದ ಪ್ರಸಿದ್ಧ ಬಂದರು ಪಟ್ಟಣ. ಇಂದು ಕೋರಮಂಡಲ ತೀರದ ಮೀನುಗಾರರ ಒಂದು ಸಾಮಾನ್ಯ ಹಳ್ಳಿಯಾಗಿದೆ. ಪ್ರಾಚೀನ ತಮಿಳು ಗ್ರಂಥಗಳಲ್ಲಿ ಈ ಸ್ಥಳವನ್ನು ವೈಭವಪೂರಿತವಾಗಿ ವರ್ಣಿಸಲಾಗಿದೆ. 2ನೆಯ ಶತಮಾನದ ಪಟ್ಟಿನಪ್ಪಲೈ ಕಾವ್ಯದಲ್ಲಿ ದೇಶವಿದೇಶಗಳಿಂದ ಇಲ್ಲಿಗೆ ವ್ಯಾಪಾರಕ್ಕಾಗಿ ಬರುತ್ತಿದ್ದ ಅಶ್ವಗಳು, ಹರಳು, ಹವಳ, ಬಂಗಾರ, ಗಂಧ, ಮುತ್ತು ಹಾಗೂ ಆಹಾರ ಪದಾರ್ಥಗಳನ್ನು ಸವಿಸ್ತಾರವಾಗಿ ಉಲ್ಲೇಖಿಸಲಾಗಿದೆ. 5–6ನೆಯ ಶತಮಾನದ ಶಿಲಪ್ಪದಿಗಾರಂನಲ್ಲಿ ಈ ನಗರದ ವಿನ್ಯಾಸ, ಅರಮನೆ, ವಾಸಸ್ಥಳಗಳು, ಯವನರು (ರೋಮನರು), ಅವಂತಿ ಹಾಗೂ ಉಜ್ಜಯನಿಯಿಂದ ಬಂದಂತಹ ಕರಕುಶಲಗಾರರ ಮತ್ತು ಇಲ್ಲಿಯ ವಾಣಿಜ್ಯ ಚಟುವಟಿಕೆಗಳ ಬಗ್ಗೆ ವರ್ಣಿಸಲಾಗಿದೆ. ಇಲ್ಲಿ ಶಿವ, ವಿಷ್ಣು (ಕೃಷ್ಣ), ಬಲರಾಮ, ಕಾರ್ತಿಕೇಯ ದೇವಾಲಯಗಳು ಹಾಗೂ ಬೌದ್ಧ ವಿಹಾರಗಳಿದ್ದ ಪ್ರಸ್ತಾಪ ಈ ಕೃತಿಯಲ್ಲಿದೆ. ಇದೇ ಶತಮಾನಕ್ಕೆ ಸೇರಿದ ಮಣಿಮೇಖಲೈ ಗ್ರಂಥ ಈ ನಗರದಲ್ಲಿದ್ದ ಚಂಪಾಪತಿ ಇಲ್ಲಿಯ ಗ್ರಾಮದೇವತೆ ಎಂದು ತಿಳಿಸುತ್ತದೆ ಮತ್ತು ಬೌದ್ಧ ನೆಲೆಗಳ ಬಗ್ಗೆ ಮಾಹಿತಿ ನೀಡುತ್ತದೆ. ಜೀರ್ಣಾವಸ್ಥೆಯಲ್ಲಿರುವ ಪ್ರಾಚೀನ ಚಂಪಾವತಿ ಅಮ್ಮನ ಇಟ್ಟಿಗೆಯ ದೇವಾಲಯ ಇಲ್ಲಿದೆ. ವಿದೇಶಿ ಬರವಣಿಗೆಗಳಲ್ಲಿಯೂ ಈ ಪಟ್ಟಣದ ವಿವರ ದೊರೆಯುತ್ತದೆ. ಪೆರಿಪ್ಲಸ್ ಆಫ್ ಎರಿಥ್ರಿಯನ್ ಸೀ ಗ್ರಂಥದಲ್ಲಿ ಚೋಳರ 2 ರಾಜಧಾನಿಗಳ ಬಗ್ಗೆ ಉಲ್ಲೇಖವಿದೆ. ಇವುಗಳಲ್ಲಿ ಅರಗರು (ಉರೈಯೂರು) ಒಳನಾಡಿನ ರಾಜಧಾನಿ ಎಂದೂ ಕಾವೇರಿಪಟ್ಟಣಂ ನಗರವನ್ನು ಸಮುದ್ರತೀರದಲ್ಲಿರುವ ನಗರವೆಂದೂ ಹೇಳಲಾಗಿದೆ. ಗ್ರೀಕ್ ಭೂಗೋಳಶಾಸ್ತ್ರಜ್ಞನಾದ ಟಾಲಮಿ ಇದನ್ನು ಕಾಬೇರಿಸ್ ಎಂಪೋರಿನ್ ಎಂದು ಉಲ್ಲೇಖಿಸಿದ್ದಾನೆ. ಚೋಳರ ರಾಜನಾದ ಇಲಂಗ್‌ಕಿಲ್ಲಿ ಸಮಯದಲ್ಲಿ ಕಾವೇರಿಪಟ್ಟಣಂ ಸಮುದ್ರದ ವಿಕೋಪಕ್ಕೆ ತುತ್ತಾಯಿತೆಂದು ಮಣಿಮೇಖಲೈ ಗ್ರಂಥದಲ್ಲಿದೆ. ಈ ಚೋಳರಾಜ ತನ್ನ ಮಗನ ಮರಣದಿಂದ ದುಃಖಿತಪ್ತನಾಗಿ ಇಂದ್ರನ ವಾರ್ಷಿಕೋತ್ಸವ ಮರೆತಾಗ ಮಣಿಮೇಖಲೈ ದೇವತೆ ಸಿಟ್ಟಿಗೆದ್ದು ಈ ನಗರವನ್ನು ಸಮುದ್ರದ ಪಾಲಾಗುವಂತೆ ಮಾಡಿದಳೆಂದು ಹೇಳಲಾಗುತ್ತದೆ. ಇದೊಂದು ವಿಸ್ಮಯಕಾರಿ ಘಟನೆ ಎಂದು ಗುರುತಿಸಿದ್ದರೂ ಈ ಪಟ್ಟಣದ ಕೆಲವು ಭಾಗಗಳು ಪ್ರಾಯಶಃ ಭೂಕೊರೆತ ಅಥವಾ ಸಮುದ್ರದ ಅಲೆಗಳ

(ಸುನಾಮಿ) ಹೊಡೆತದಿಂದ ನಾಶವಾಗಿರಬಹುದೆಂದು ತೋರುತ್ತದೆ. 5ನೆಯ ಶತಮಾನದ ಪ್ರಸಿದ್ಧ ಬೌದ್ಧ ವಿದ್ವಾಂಸ ಹಾಗೂ ಕವಿಯಾದ ಬುದ್ಧದತ್ತನು ಇಲ್ಲಿಯ ಒಂದು ವಿಹಾರದಲ್ಲಿ ವಾಸವಾಗಿದ್ದು ಅಭಿದಮ್ಮಾವತಾರ ಎಂಬ ಗ್ರಂಥವನ್ನು ರಚಿಸಿದ್ದಾನೆ. ಈ ಕೃತಿಯಲ್ಲಿ ನಗರ ವಾಸಿಗಳು ಶ್ರೇಷ್ಠರೆಂದೂ ಇಲ್ಲಿಯ ಅರಮನೆಯಂತಹ ಭವನಗಳ, ಅಲಂಕರಿಸಿದ ಮಹಾದ್ವಾರಗಳ, ಸಾಲಂಗಡಿಗಳ ಹಾಗೂ ಇಲ್ಲಿ ನಡೆಯುತ್ತಿದ್ದ ವಾಣಿಜ್ಯ ಚಟುವಟಿಕೆಗಳ ಬಗ್ಗೆ ವಿಸ್ತಾರವಾಗಿ ವರ್ಣಿಸಲಾಗಿದೆ. 7ನೆಯ ಶತಮಾನದ ತೇವಾರಂ ಕರ್ತೃಗಳಾದ ಅಪ್ಪಾರ್ ಮತ್ತು ಸಂಬಂದಾರ್ ಎಂಬ ಶೈವ ಸಂತರು ಕಾವೇರಿಪುಂಪಟ್ಟಿನಟ್ಟು ಪಲ್ಲವನೇಶ್ವರಂ ಮತ್ತು ಪುಹರ್ ಸಯಕ್ಕಾಡು ಎಂಬ ಸ್ಥಳಗಳನ್ನು ಉಲ್ಲೇಖಿಸಿದ್ದಾರೆ. ಇವುಗಳಲ್ಲಿ ಎರಡನೆಯದು ಈ ನಗರ ಇಂದಿನ ಪುಹರ್ ಪಟ್ಟಣವೆಂದು ಸೂಚಿಸುತ್ತದೆ. 11–12ನೆಯ ಶತಮಾನದ ಶಾಸನಗಳು ಸಯವನಂ ಕಾವೇರಿಪಟ್ಟಣದ ಒಂದು ಭಾಗವಾಗಿತ್ತೆಂದು ತಿಳಿಸುತ್ತವೆ.

1962–67 ಹಾಗೂ 1972–73ರ ಅವಧಿಯಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎಸ್.ಆರ್.ರಾವ್ ಹಾಗೂ ರಾಮನ್ (1962–64), ಕೃಷ್ಣದೇವ ಮತ್ತು ಅವರ ಸಂಗಡಿಗರಾದ ರಾಮನ್ (1965–66) ಮತ್ತು ಸೌಂದರರಾಜನ್ (1972–73) ಕಾವೇರಿಪಟ್ಟಣಂ ಹಾಗೂ ಇದರ ಪರಿಸರದಲ್ಲಿ ಉತ್ಖನನ ಮಾಡಿದರು. ಸಮುದ್ರ ದಂಡೆಯ ಅನ್ವೇಷಣೆಯಲ್ಲಿ ದೊರೆತ ಪುರಾವಶೇಷಗಳಾದ ಸುಟ್ಟಮಣ್ಣಿನ ಬಳೆಯ ಬಾವಿಗಳು, ಮಡಕೆ ಹಾಗೂ ಇಟ್ಟಿಗೆ ಚೂರುಗಳು, ವಿವಿಧ ಮಣಿಗಳು ಇಲ್ಲಿ ಪುರಾತನ ವಾಸ್ತವ್ಯವಿತ್ತೆಂದು ಹೇಳುತ್ತವೆ. ಈ ನಗರ ತನ್ನ ಪ್ರೌಢಾವಸ್ಥೆಯಲ್ಲಿದ್ದಾಗಿನ ವಾಸ್ತವ್ಯತಾಣಗಳಾದ ವಣಗಿರಿ, ನೈದವಾಸಲ್, ಕಿಲಿಯೂರ್‌ಗಳನ್ನು ಸಹ ಗುರುತಿಸಲಾಯಿತು. ವಣಗಿರಿಯಲ್ಲಿ ಚೋಳರ ರಾಜಚಿಹ್ನೆಯನ್ನು ಹೊಂದಿದ್ದ ಹಾಗೂ ಒಂದು ಮುಖದಲ್ಲಿ ಹುಲಿ ಮತ್ತೊಂದು ಮುಖದಲ್ಲಿ ಆನೆಯನ್ನು ಮುದ್ರಿಸಿರುವ ಚೌಕಾಕಾರದ ನಾಣ್ಯಗಳು, ಕೆಂಪು–ಕಪ್ಪು ದ್ವಿವರ್ಣ ಪಾತ್ರೆಯ ಚೂರುಗಳು, ವಿವಿಧ ರೀತಿಯ ಅರೆ ಅಮೂಲ್ಯ ಮಣಿಗಳು, ರೋಮ್‌ದೇಶದಿಂದ ವ್ಯಾಪಾರದ ಮೂಲಕ ಬಂದ ಬೂದು ಹಾಗೂ ಕಪ್ಪುಬಣ್ಣದ ರೌಲೆಟ್ ಪಾತ್ರೆಚೂರುಗಳು ದೊರೆತಿವೆ. ವಲ್ಲೈಯನ್ ಇರುಪ್ಪಿನಲ್ಲಿ ರೋಮನ್ ನಾಣ್ಯ ಹಾಗೂ ಮಲಪ್ಪರುಂಪಲ್‌ನಲ್ಲಿ ಸುಟ್ಟಮಣ್ಣಿನ ಆಕೃತಿಗಳು ಈ ಅನ್ವೇಷಣೆಗಳಲ್ಲಿ ಲಭಿಸಿವೆ.

ಕಾವೇರಿಪಟ್ಟಣಂ, ವಣಗಿರಿ, ಕಿಲಿಯೂರ್ ಮತ್ತು ಪಲ್ಲವನೇಶ್ವರಂನಲ್ಲಿ ಉತ್ಖನನ ಮಾಡಲಾಗಿದೆ. ಈ ಉತ್ಖನನದ ಆಧಾರದ ಮೇಲೆ ಕಾವೇರಿಪಟ್ಟಣಂನಲ್ಲಿ ಪ್ರ.ಶ.ಪೂ. 3ರಿಂದ 12ನೆಯ ಶತಮಾನದವರೆಗೆ ಜನ ವಸತಿಯಿದ್ದಿತ್ತೆಂದು ಹೇಳಬಹುದು. ಈ ಸಾಂಸ್ಕೃತಿಕ ಅವಧಿಯನ್ನು 4 ಹಂತಗಳಲ್ಲಿ ವಿಂಗಡಿಸಲಾಗಿದೆ. ಇವುಗಳಲ್ಲಿ 2ನೆಯ ಹಂತವನ್ನು ಪುನಃ ಎ ಹಾಗೂ ಬಿ ಉಪಹಂತಗಳೆಂದು ವಿಂಗಡಿಸಲಾಗಿದೆ. ಮೊದಲನೆಯ ಹಂತ ಪ್ರ.ಶ.ಪೂ.3ರಿಂದ ಪ್ರ.ಶ.ಪೂ.1ನೆಯ ಶತಮಾನದ ಅಂತ್ಯದವರೆಗೆ, 2ನೆಯ ಎ ಉಪಹಂತ ಪ್ರ.ಶ. 1–3ನೆಯ ಶತಮಾನದವರೆಗೆ, 2ನೆಯ ಬಿ ಉಪಹಂತ 1–2ರಿಂದ 6–7ನೆಯ ಶತಮಾನದವರೆಗೆ, 3ನೆಯ ಹಂತ 7–9ನೆಯ ಶತಮಾನದವರೆಗೆ ಹಾಗೂ 4ನೆಯ ಹಂತ 9–12ನೆಯ ಶತಮಾನದವರೆಗೆ ಇದ್ದವು.

ಉತ್ಖನನದಲ್ಲಿ 3 ಅತ್ಯಂತ ಮಹತ್ತ್ವದ ಕಟ್ಟಡ ಅವಶೇಷಗಳನ್ನು ಗುರುತಿಸಲಾಗಿದೆ. ಕಿಲಿಯೂರಿನಲ್ಲಿ ಹಡಗುಗಳ ಆಗಮನ ಹಾಗೂ ನಿರ್ಗಮನಕ್ಕಾಗಿ ನಿರ್ಮಿಸಿದ್ದ ಸಮುದ್ರದೊಳಗೆ ಸ್ವಲ್ಪ ಚಾಚಿದ ಬಂದರಿನ ಕಟ್ಟೆಯೊಂದು ಪತ್ತೆಯಾಗಿದೆ. ಆಯತಾಕಾರದ ಈ ಜಗುಲಿ 18.2 X 7.62 ಮೀ ಉದ್ದಗಲವಾಗಿದ್ದು 1.71 ಮೀ ಎತ್ತರವಾಗಿದೆ. ಇದನ್ನು ದೊಡ್ಡ ಆಕಾರದ ಇಟ್ಟಿಗೆಗಳಿಂದ (61 X 40.5 X 7.7 ಸೆಂಮೀ) ಕಟ್ಟಲಾಗಿದೆ. ಹಡಗುಗಳನ್ನು ಲಂಗರು ಹಾಕಿ ನಿಲ್ಲಿಸಲು ಕಟ್ಟೆಯ ಮಧ್ಯಭಾಗದಲ್ಲಿ ಗಟ್ಟಿಯಾದ ಕಟ್ಟಿಗೆಯ ಕಂಬಗಳನ್ನು 2 ಸಾಲುಗಳಲ್ಲಿ ನೆಡಲಾಗಿತ್ತು. ಇಂಗಾಲ 14 ಕಾಲಮಾನದ ಆಧಾರದ ಮೇಲೆ ಈ ಕಂಬಗಳು ಪ್ರ.ಶ.ಪೂ. 3– 2ನೆಯ ಶತಮಾನದವುಗಳೆಂದು ತಿಳಿಯುತ್ತದೆ.

ಪಲ್ಲವನೇಶ್ವರಂನಲ್ಲಿ ದೊರೆತ ಇಟ್ಟಿಗೆಯಿಂದ ನಿರ್ಮಿಸಿದ ಬೌದ್ಧವಿಹಾರ ಇನ್ನೊಂದು ಮುಖ್ಯ ಕಟ್ಟಡ. ವಿಹಾರದ ಒಂದು ಭಾಗದಲ್ಲಿ 9 ಕೋಣೆಗಳನ್ನು ಒಂದೇ ಸಾಲಿನಲ್ಲಿ ನಿರ್ಮಿಸಿದ್ದರು. ಇವುಗಳ ಮುಂಭಾಗದಲ್ಲಿ ಆಯತಾಕಾರದ ಅಂಗಳವಿತ್ತು. ಪ್ರತಿಯೊಂದು ಕೋಣೆಯೂ ಸರಾಸರಿ 3.10 X 2.40 ಮೀ ಅಳತೆಯದ್ದು. ಈ ವಿಹಾರದ ಎದುರು 2 ಬೌದ್ಧ ದೇವಾಲಯಗಳ ಅವಶೇಷಗಳನ್ನು ಸಹ ಗುರುತಿಸಲಾಗಿದೆ. ಭೂಮಿಸ್ಪರ್ಶ ಮುದ್ರೆಯ ಕಂಚಿನ ಸಣ್ಣ ಬುದ್ಧನ ವಿಗ್ರಹ ಹಾಗೂ ಕಲ್ಲಿನ ಬುದ್ಧಪಾದ ಕ್ರಮವಾಗಿ ವಿಹಾರ ಹಾಗೂ ದೇವಾಲಯದ ಹತ್ತಿರ ದೊರೆತಿರುವುದು ಈ ಉತ್ಖನನದ ಇನ್ನೊಂದು ವಿಶೇಷ. ವಣಗಿರಿಯ ಉತ್ಖನನದಲ್ಲಿ ದೊರೆತ ತೂಬು ಹಾಗೂ ಅದರ ಕಾಲುವೆಗಳನ್ನು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಈ ಕಾಲುವೆಗಳ ತೂಬಿಗೆ ಒಂದು ಬದಿಯಲ್ಲಿ 2 ವಕ್ರಾಕಾರದ ತಿರುವುಗಳನ್ನು ನೀರಿನ ಹರಿಯುವಿಕೆಯ ಅನುಕೂಲಕ್ಕಾಗಿ ನಿರ್ಮಿಸಲಾಗಿದೆ. ಈ ಉತ್ಖನನದಲ್ಲಿ ಅನೇಕ ಪುರಾವ ಶೇಷಗಳು ಲಭ್ಯವಾಗಿವೆ. ವಿವಿಧ ರೀತಿಯ ಮಣಿಗಳನ್ನು ಗಾಜು, ಅಗೇಟ್, ಮಂದಗೆಂಪಿನ ಕಲ್ಲು, ಜಾಸ್ಪರ್, ಹವಳ, ಸುಟ್ಟಮಣ್ಣು, ಕಲ್ಲು ಮತ್ತು ತಾಮ್ರದಲ್ಲಿ ತಯಾರಿಸಲಾಗಿದೆ. ಸುಟ್ಟಮಣ್ಣಿನಲ್ಲಿ ಮಾಡಿದ ಸುಂದರವಾದ ಪುರುಷ ಹಾಗೂ ಸ್ತ್ರೀಯರ ವಿಗ್ರಹಗಳು, ಪಕ್ಷಿ ಹಾಗೂ ಪ್ರಾಣಿಗಳ, ದೇವಾನುದೇವತೆಗಳ, ಧಾರ್ಮಿಕ ಆಕೃತಿಗಳು ಇಲ್ಲಿ ದೊರೆತಿವೆ. ಇಲ್ಲಿ ರೋಮನ್ ಹಾಗೂ ಚೋಳರ ಕಾಲದ ಮುದ್ರಾಂಕಿತ ನಾಣ್ಯಗಳೂ ದೊರೆತಿವೆ. (ಪಿ.ಸಿ.ಬಿ.)

**ಕಾಷ್ಠ ಶಿಲ್ಪಗಳು: ನೋಡಿ–ಮೂರ್ತಿಶಿಲ್ಪ**

**ಕಾಸ್ಕರ್:** ಫ್ರಾನ್ಸಿನ ಅಂತ್ಯ ಹಳೆಶಿಲಾಯುಗದ ಶಿಲಾಚಿತ್ರ ನೆಲೆ. ಮಾರ್ಸೆಲ್ಸ್ ಬಳಿ ಸಮುದ್ರಮಟ್ಟದಿಂದ ಸು. 30 ಮೀ ಆಳದಲ್ಲಿರುವ ಈ ನೆಲೆಯನ್ನು 1985ರಲ್ಲಿ ಹೆನ್ರಿ ಕಾಸ್ಕರ್ ಪತ್ತೆಹಚ್ಚಿದ. ವಿಶಾಲವಾದ ಕಗ್ಗತ್ತಲ ಗುಹೆಯೊಳಗಿರುವ ಚಿತ್ರಗಳನ್ನು ಇಂದು ಕಾಣಬೇಕಾದರೆ ಸಮುದ್ರದೊಳಗಿಳಿದು 130 ಮೀ ಉದ್ದದ ಕಿರಿದಾದ ನೈಸರ್ಗಿಕ ಸುರಂಗವನ್ನು ಹಾದು ಬರಬೇಕು. ಆದರೆ ಅಂತ್ಯ ಹಳೆಶಿಲಾಯುಗದಲ್ಲಿ ಸಮುದ್ರಮಟ್ಟ 100 ಮೀ ಕೆಳಗಿದ್ದುದರಿಂದ



ಗವಿ ವರ್ಣಚಿತ್ರ, ಜಿಂಕೆ

ಈ ಗುಹೆಯ ಪ್ರವೇಶದ್ವಾರ ಸಮುದ್ರ ತೀರದಿಂದ ಕೆಲವು ಕಿಮೀಗಳಷ್ಟು ದೂರದಲ್ಲಿತ್ತು. ಗುಹೆಯ ಗೋಡೆಗಳ ಮೇಲೆ ಕುದುರೆ, ಕಾಡುಹೋತ, ಎರಳೆ, ಕಾಡೆಮ್ಮೆ ಮುಂತಾದ ಪ್ರಾಣಿಗಳ ವರ್ಣಚಿತ್ರಗಳನ್ನೂ ಗೀರು ರೇಖಾಚಿತ್ರಗಳನ್ನೂ ಬಿಡಿಸಲಾಗಿದೆ. ಕಡಲಬಾತು, ನೀರುನಾಯಿ, ಮೀನು ಮುಂತಾದ ಸಮುದ್ರಜೀವಿಗಳನ್ನೂ ಇಲ್ಲಿ ಚಿತ್ರಿಸಿರುವುದು ಆಶ್ಚರ್ಯಕರ. ಇಲ್ಲಿ 50ಕ್ಕೂ ಹೆಚ್ಚು ಹಸ್ತಮುದ್ರೆಗಳಿದ್ದು ಇವು ಇಂಗಾಲ 14ರ ಪ್ರಕಾರ 27,000 ವರ್ಷ ಹಳೆಯವು. ಇದ್ದಿಲಿನಿಂದ ಬಿಡಿಸಿದ ಕೆಲವು ಚಿತ್ರಗಳ ಎ.ಎಂ.ಎಸ್. ಕಾಲಮಾನ ಸು. 19,000 ವರ್ಷ. 25ಕ್ಕೂ ಹೆಚ್ಚು ವೈಜ್ಞಾನಿಕ ಕಾಲಮಾನಗಳನ್ನು ಪಡೆದಿರುವ ಮೊದಲ ಗುಹಾಚಿತ್ರ ನೆಲೆಯಿದು. (ವಿ.ಎಸ್.)

**ಕಾಳಾಮುಖ:** ಲಾಕುಳ ಶೈವ ಪಂಥದ ಒಂದು ಶಾಖೆ; ಮಧ್ಯಕಾಲೀನ ಆಂಧ್ರ–ಕರ್ನಾಟಕಗಳಲ್ಲಿ ನೆಲಸಿದ್ದ ಅಲ್ಪ ಸಂಖ್ಯಾತ ಮತಗಳಲ್ಲಿ ಪ್ರಮುಖವಾದ್ದು. ಲಾಕುಳ ಪಂಥದ ಅನುಯಾಯಿಗಳಾದ ಕೆಲವರು ಕಾಳಾಮುಖ ಅಥವಾ ಅಸಿತವಕ್ತ್ರ ದೀಕ್ಷೆಯನ್ನು ಪಡೆಯುತ್ತಿದ್ದರು. ಇವರಿಗೆ ಎಕ್ಕೋಟಿಮುನಿಗಳೆಂದೂ ಹೆಸರಿತ್ತು. ಮುಖದ ಮೇಲೆ ಕಪ್ಪುಬಣ್ಣದ ಗುರುತುಗಳನ್ನು ಮಾಡಿಕೊಳ್ಳುತ್ತಿದ್ದುದರಿಂದ ಇವರಿಗೆ ಕಾಳಾಮುಖರೆಂದು ಹೆಸರಾಯಿತು. ಕ್ರಿಸ್ತಶಕದ ಆರಂಭದಲ್ಲಿ ಕಾಶ್ಮೀರದ ದೇವ ವ್ರತಮುನಿಸಂತತಿಗೆ ಸೇರಿದವರೊಡನೆ ಇವರ ಸಂಬಂಧವಿತ್ತೆಂದು ಶಿಕಾರಿಪುರದ 99ನೆಯ ಶಾಸನ ಸೂಚಿಸುತ್ತದೆ. 7ನೆಯ ಶತಮಾನದಿಂದ 500 ವರ್ಷಗಳ ಕಾಲ ಇದು ಕರ್ನಾಟಕದಲ್ಲಿ ಬೌದ್ಧ–ಜೈನಧರ್ಮಗಳ ವಿರುದ್ಧ ಸ್ಪರ್ಧಿಸುತ್ತ ಪ್ರಬಲವಾಗಿತ್ತು. ಆಂಧ್ರ ಮತ್ತು ತಮಿಳುನಾಡಿನ ಹಲಭಾಗಗಳಲ್ಲೂ ಇದರ ಪ್ರಾಬಲ್ಯ ಕಾಣಬರುತ್ತದೆ. ಬಳ್ಳಿಗಾವೆಯ ಕೇದಾರೇಶ್ವರ ಮಂದಿರ, ಆಂಧ್ರದ ಶ್ರೀಶೈಲ ಈ ಪಂಥದವರ ಪ್ರಮುಖ ಸ್ಥಾನಗಳಾಗಿದ್ದುವು. ಇವರಿಗೆ ರಾಜಾಶ್ರಯ ದೊರೆತಿತ್ತು. ಇವರು ಅನೇಕ ದತ್ತಿಗಳನ್ನು ಬಿಟ್ಟಿದ್ದುದಾಗಿ ಶಾಸನಗಳು ತಿಳಿಸುತ್ತವೆ. ಚಾಳುಕ್ಯ 2ನೆಯ ಜಯಸಿಂಹನ (1013–42) ರಾಣಿ ಸುಗ್ಗಲೆ ಈ ಪಂಥದವಳಾಗಿದ್ದು, ತನ್ನ ಪತಿಯನ್ನೂ ಇದಕ್ಕೆ ಪರಿವರ್ತಿಸಿದಳು. 2ನೆಯ ಸೋಮೇಶ್ವರನ ಕಾಲದಲ್ಲಿ (1068–76) ಇದು ಬಹಳ ಪ್ರಬಲವಾಯಿತು. ಆ ಕಾಲದ ಕಾಳಾಮುಖಗುರು ಸರ್ವೇಶ್ವರ ಶಕ್ತಿದೇವನಿಗೆ (ಸು. 1070) ರಾಜಗುರು ಎಂಬ ಬಿರುದೂ 77 ದೇವಾಲಯಗಳ ಒಡೆತನವೂ ಇದ್ದುದಾಗಿ ಶಾಸನವೊಂದು ತಿಳಿಸುತ್ತದೆ. ಸೋಮೇಶ್ವರ ಚಕ್ರವರ್ತಿ ಆತನ ಶಿಷ್ಯ. ಅನಂತರದ ಚಕ್ರವರ್ತಿ 6ನೆಯ ವಿಕ್ರಮಾದಿತ್ಯ ಜೈನಧರ್ಮದಲ್ಲಿ ಆಸಕ್ತನಾಗಿದ್ದರೂ ಕಾಳಾಮುಖರಿಗೂ ಆಶ್ರಯ ನೀಡಿದ್ದ. ಹೊಯ್ಸಳರ ಕಾಲದಲ್ಲಿ ಹಳೇಬೀಡಿ ನಲ್ಲಿ ಕಾಳಾಮುಖ ಪಂಥದ ಪ್ರಸಿದ್ಧ ಗುರುಪರಂಪರೆಯೊಂದಿದ್ದು, ಕೋಡಿಯ ಮಠದೊಡನೆ ಇದರ ಸಂಬಂಧವಿತ್ತು. 1162ರಲ್ಲಿ ಕಳಚುರಿ ಬಿಜ್ಜಳ ಈ ಮಠವನ್ನು ಸಂದರ್ಶಿಸಿ, ಮೆಚ್ಚಿ ಇದಕ್ಕೆ ದತ್ತಿಗಳನ್ನು ಬಿಟ್ಟಿದ್ದಂತೆ ತಿಳಿದುಬರುತ್ತದೆ.

ಹಲವಾರು ಶಾಸನಗಳಲ್ಲಿ ಇವರ ತಪಸ್ಸೆ, ಪಾಂಡಿತ್ಯ, ಔದಾರ್ಯಗಳ ಪ್ರಶಂಸೆಯಿದೆ. ಆದರೂ ವೇದಶಾಸ್ತ್ರಗಳಿಗೆ ವಿರುದ್ಧವಾದ ಮತ್ತು ಸತ್ವದ ಬಗ್ಗೆ ವಿಚಿತ್ರವಾದ ಭಾವನೆಗಳನ್ನು ಇವರು ತಳೆದಿದ್ದರೆಂದು ಶ್ರೀರಾಮಾನುಜ, ಅಲ್ಲಮಪ್ರಭು ಮತ್ತು ಚೆನ್ನಬಸವ ಇವರು ಹೇಳಿದ್ದಾರೆ. ಕಾಳಾಮುಖರು ತಲೆಬುರುಡೆಯನ್ನು ಪಾನಪಾತ್ರೆಗಳನ್ನಾಗಿ ಬಳಸುತ್ತಿದ್ದರು; ಶ್ಮಶಾನದ ಬೂದಿಯನ್ನು ದೇಹಕ್ಕೆ ಬಳಿದುಕೊಳ್ಳುತ್ತಿದ್ದರು; ನರಮಾಂಸವನ್ನು ತಿನ್ನುತ್ತಿದ್ದರು;

ದಂಡಧಾರಿಗಳಾಗಿರುತ್ತಿದ್ದರು; ಮದ್ಯದ ಪಾತ್ರೆಯಲ್ಲಿ ದೇವರಿಗೆ ಬಲಿಯನ್ನರ್ಪಿಸುತ್ತಿದ್ದರು–ಎಂದೆಲ್ಲ ಅವರು ಹೇಳಿದ್ದಾರೆ. ಇವರಲ್ಲಿ ಲೈಂಗಿಕ ಸ್ವೇಚ್ಛಾಚಾರವಿತ್ತೆಂದೂ ತಿಳಿದುಬರುತ್ತದೆ. ಕಾರಣವಿಲ್ಲದೆ ನಗುವುದು, ಕುಣಿಯುವುದು, ಉದ್ಗರಿಸುವುದು, ಅಂಗವಿಕಲರಂತೆ ನಟಿಸುವುದು–ಇವೇ ಮುಂತಾದವು ಇವರ ಅತಿಗಾಮಿಚರ್ಯೆಗಳಾಗಿದ್ದುವು.

ಈ ಪಂಥದ ಗುರುಗಳಲ್ಲಿ ಸಾಮಾನ್ಯವಾಗಿ ರಾಶಿ, ಶಕ್ತಿ ಎಂಬ ಎರಡು ಪಂಗಡಗಳಿದ್ದುವು. ಶಾಸನಗಳಲ್ಲಿ ಇವರ ಕೆಲವು ಗುರುಗಳ ಉಲ್ಲೇಖವಿದೆ. ಕಲಾಶಕ್ತಿ (ಸು. 640) ನೇತ್ರಶಿವಾಚಾರ್ಯ (ಸು. 900), ಈಶ್ವರದೇವ ರುದ್ರಗಣ (ಸು. 1030), ಸರ್ವೇಶ್ವರಶಕ್ತಿ (ಸು. 1070) ಮತ್ತು ನಾಗಶಿವಪಂಡಿತ (ಸು. 1183) ಗಮನಾರ್ಹರು. ಇವರ ಇತಿಹಾಸದಲ್ಲಿ ಪ್ರಮುಖನಾದವನೆಂದರೆ ಕೊನೆಯಲ್ಲಿ ಕಂಡುಬರುವ ಶಿವಗುರು, ವಾಣೀವಿಲಾಸ ಕಾಶೀವಿಲಾಸ ಕ್ರಿಯಾಶಕ್ತಿ (ಸು. 1370). ರಾಜರಾಜಗುರುವೆಂದು ಕೀರ್ತಿತನಾದ ಈತ ವಿದ್ಯಾರಣ್ಯರ ಸಮಕಾಲೀನ. ಈತ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಹರಿಹರ ಬುಕ್ಕ ಸೋದರರಿಗೆ ಉತ್ತೇಜನ ನೀಡಿದ ನೆಂಬುದು ಕೆಲವರ ವಾದ. ಕ್ರಿಯಾಶಕ್ತಿಯೇ ವಿದ್ಯಾರಣ್ಯರೆಂದು ಹೇಳುವವಾದವೂ ಉಂಟು. ಈತನ ಅನಂತರ ಕಾಳಾಮುಖಪಂಥ ಕ್ಷೀಣವಾದಂತೆ ಕಾಣುತ್ತದೆ. (ಜಿ.ಎಸ್.ಎಸ್.)

**ಕಿಂಗ್, ಮಾರ್ಟಿನ್ ಲೂಥರ್ (ಜೂನಿಯರ್):** 1929–68. ವರ್ಣಭೇದ ಹಾಗೂ ಪ್ರತ್ಯೇಕೀಕರಣ ನೀತಿಯ ವಿರುದ್ಧ ಅಮೆರಿಕದ ನೀಗ್ರೋಗಳು ನಡೆಸಿದ ಹೋರಾಟದ ಪ್ರಮುಖನಾಯಕ. 39 ವರ್ಷಗಳ ತನ್ನ ಆಯಸ್ಸಿನಲ್ಲಿ ಕಿಂಗ್ ಹದಿನೈದಕ್ಕೂ ಹೆಚ್ಚು ಬಾರಿ ಕಾರಾಗೃಹವಾಸವನ್ನು ಕಂಡ: ಲೆಕ್ಕವಿಲ್ಲದಷ್ಟು ಬೆದರಿಕೆಗಳನ್ನು ಎದುರಿಸಿದ; ಅನೇಕ ಸಲ ಏಟುಗಳನ್ನು ತಿಂದ. ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ ನೀಗ್ರೋಗಳ ಸಂವೇದನೆಯ, ಧೈರ್ಯಸ್ಥೈರ್ಯಗಳ, ಅಹಿಂಸೆಯ ಉದಾತ್ತ ಸಂಕೇತವಾಗಿ ಬೆಳೆದ.

ಇವನು ಹುಟ್ಟಿದ್ದು 1929 ಜೂನ್ 15 ರಂದು. ತಂದೆ ಜಾರ್ಜಿಯ ಸಂಸ್ಥಾನದ ಅಟ್ಲಾಂಟದ ಚರ್ಚೊಂದರ ನೀಗ್ರೋ ಪಾದ್ರಿ; ಕಿಂಗ್ ಪ್ರತಿಭಾವಂತ ವಿದ್ಯಾರ್ಥಿಯಾದ್ದರಿಂದ 19 ವರ್ಷಕ್ಕೇ ಪದವೀಧರನಾಗಿ ಮುಂದೆ ಧರ್ಮಶಾಸ್ತ್ರ ಪದವಿಗಾಗಿ ಬಿಳಿಯರ ಕಾಲೇಜೊಂದರಲ್ಲಿ ಓದಿದ.

1951ರಲ್ಲಿ ಕಾಲೇಜಿಗೆ ಮೊದಲಿಗನಾಗಿ ಉತ್ತೀರ್ಣನಾದ. ಇದಾದ ಮೇಲೆ ಬಾಸ್ಟನ್ನಿನಲ್ಲಿ ಡಾಕ್ಟೊರೇಟ್‌ಗೆ ವ್ಯಾಸಂಗ ನಡೆಸಿ, ಅಲ್ಲೇ ಸಂಗೀತ ಕಲಿಯುತ್ತಿದ್ದ ಕೊರೆಟಾ ಸ್ಕಾಟಳನ್ನು ಮದುವೆಯಾದ.

ಈತ 1954ರಲ್ಲಿ ಅಲಬಾಮ ರಾಜ್ಯದ ಮಾಂಟೆಗೊಮರಿಯ ಡೆಕ್ಸ್‌ಟರ್ ಅವೆನ್ಯೂ ಬ್ಯಾಪ್ಟಿಸ್ಟ್ ಚರ್ಚಿನ ಪಾದ್ರಿಯಾಗಿ ಕೆಲಸವನ್ನು ಒಪ್ಪಿಕೊಂಡು ಆ ನಗರಕ್ಕೆ ಸೆಪ್ಟೆಂಬರಿನಲ್ಲಿ ಬಂದು ನೆಲೆಸಿದ. ತನ್ನ ಚರ್ಚಿನ ವ್ಯಾಪ್ತಿಗೆ ಒಳಪಟ್ಟ ನೀಗ್ರೋಗಳ ಸಂಘಟನೆಗಾಗಿ ಮಾತ್ರ ಪ್ರಯತ್ನಿಸುತ್ತ, ತನ್ನ ಕರ್ತವ್ಯ ಪಾಲಿಸುತ್ತ ಸಾಮಾನ್ಯ ಗೃಹಸ್ಥಜೀವನ ಪ್ರಾರಂಭಿಸಿದ. 1955 ಡಿಸೆಂಬರ್ 1 ರಂದು ಮಾಂಟೆಗೊಮರಿಯ ನಗರ ಬಸ್ಸೊಂದರಲ್ಲಿ ಕುಳಿತಿದ್ದ ರೋಸಾ ಪಾರ್ಕ್ಸ್ ಎಂಬ ನೀಗ್ರೋ ಮಹಿಳೆ ಆ ಬಸ್ಸಿನಲ್ಲಿದ್ದ ಬಿಳಿಯನೊಬ್ಬನಿಗೆ ತನ್ನ ಸ್ಥಳವನ್ನು ಬಿಟ್ಟುಕೊಡಲು ನಿರಾಕರಿಸಿ ಪೊಲೀಸರ ಬಂಧನಕ್ಕೆ ಒಳಗಾದಾಗ ಬಸ್ಸುಗಳಲ್ಲಿ ಅನುಸರಿಸಲಾಗುತ್ತಿದ್ದ ಪ್ರತ್ಯೇಕೀಕರಣ ನೀತಿಯಿಂದ ನೀಗ್ರೋಗಳು ಅಸಮಾಧಾನಗೊಂಡು, ಡಿಸೆಂಬರ್ 5 ರಂದು ಬಸ್ಸುಗಳಿಗೆ ಬಹಿಷ್ಕಾರ ಹಾಕಲು ನಿರ್ಧರಿಸಿದರು. ಇವನನ್ನು ತಮ್ಮ ನಾಯಕನಾಗಿ ಆಯ್ಕೆ ಮಾಡಿದರು. ಒಂದು ದಿನದ ಬಹಿಷ್ಕಾರ 382 ದಿನ ಮುಂದುವರೆಯಿತು. ಅಧಿಕಾರಿಗಳು ಇವನನ್ನು ಕುಂಟು ನೆವದ ಮೇಲೆ ಬಂಧಿಸಿದರು. ಹೆಂಡತಿ ಮತ್ತು ಎರಡು ಮಕ್ಕಳು ಮನೆಯೊಳಗಿದ್ದಾಗ, ಅವರ ಮನೆಯೊಳಕ್ಕೆ ಬಾಂಬನ್ನು ಎಸೆಯಲಾಯಿತು. ರೊಚ್ಚಿಗೆದ್ದ ನೀಗ್ರೋಗಳನ್ನು ಸಮಾಧಾನಪಡಿಸುತ್ತ ಇವನು ಅವರಿಗೆ ತಮ್ಮ ಅಹಿಂಸಾವ್ರತದ ಮೊದಲ ಪಾಠವನ್ನು ಕಲಿಸಿದ. ಅಲಬಾಮದ ಬಸ್ ಪತ್ಯೇಕೀಕರಣ ನೀತಿ ಕಾನೂನುಬಾಹಿರವೆಂದು ಅಮೆರಿಕದ ಪರಮೋಚ್ಚ ನ್ಯಾಯಾಲಯ ಸಾರಿತು. ಬಹಿಷ್ಕಾರದ ಈ ಅಪ್ರತಿಮ ವಿಜಯದಿಂದಾಗಿ ಇವನ ನಾಯಕತ್ವಕ್ಕೆ ರಾಷ್ಟ್ರೀಯ ಮನ್ನಣೆ ದೊರೆಯಿತು.

ಮುಂದಿನ ಮೂರು ವರ್ಷ ಇವನು ಅಮೆರಿಕದ ನೀಗ್ರೋಗಳ ಸಂಘಟನೆಗಾಗಿ ಬಿಡುವಿಲ್ಲದೆ ಕೆಲಸ ಮಾಡಿದ. 1957ರಲ್ಲಿ ಆಫ್ರಿಕದ ಘಾನ ರಾಜ್ಯದ ಸ್ವಾತಂತ್ರ್ಯೋತ್ಸವದಲ್ಲಿ ಆ ಸರ್ಕಾರದ ಅತಿಥಿಯಾಗಿ ಭಾಗವಹಿಸಿದ್ದ. 1959 ರಲ್ಲಿ ನೀಗ್ರೋ ಹೋರಾಟದಲ್ಲಿ ಇವನಿಗೆ ಸ್ಫೂರ್ತಿ ಕೊಟ್ಟಿದ್ದು ಗಾಂಧೀಜಿಯವರ ತತ್ತ್ವಗಳು. ಅನಂತರ ಈತ ಭಾರತದ ಯಾತ್ರೆ ಕೈಗೊಂಡ. ರಾಷ್ಟ್ರೀಯ ನಾಯಕತ್ವದ ಹೊಣೆ ಹೊರುತ್ತ ಒಂದು ಚರ್ಚಿನ ಎಲ್ಲ ಕೆಲಸವನ್ನೂ ತಾನೇ ನೋಡಿಕೊಳ್ಳುವುದು ಇವನಿಗೆ ಕಠಿಣವಾಯಿತು. ಆದ್ದರಿಂದ 1960ರಲ್ಲಿ ಈತ ಮಾಂಟೆಗೊಮರಿಯನ್ನು ಬಿಟ್ಟು ಅಟ್ಲಾಂಟಕ್ಕೆ ಬಂದ. ಅಲ್ಲಿಯ ಬ್ಯಾಪ್ಟಿಸ್ಟ್ ಚರ್ಚಿನಲ್ಲಿ ತನ್ನ ತಂದೆಯ ಸಹಾಯಕ ಪಾದ್ರಿಯಾದ. ಉಪಾಹಾರಗೃಹ ಪ್ರವೇಶ, ಬಿಳಿಯರ ಮತ್ತು ನೀಗ್ರೋಗಳ ಸಂಯುಕ್ತ ಬಸ್ ಪ್ರವಾಸ ಪ್ರದರ್ಶನ–ಹೀಗೆ ದಕ್ಷಿಣ ನೀಗ್ರೋ ಹೋರಾಟ 1960–61 ರಲ್ಲಿ ಹೊಸ ಹೊಸ ರೂಪ ತಳೆಯಿತು. ಈ ಸ್ವಾತಂತ್ರ್ಯ ಪ್ರವಾಸಗಳ ಫಲಶ್ರುತಿಯಾಗಿ ಜಾರ್ಜಿಯದಲ್ಲಿ ಹೊಸದೊಂದು ಚಳವಳಿಯೇ ಪ್ರಾರಂಭವಾದಾಗ ಇವನು ಇದರ ನಾಯಕತ್ವ ವಹಿಸಿದ. 2,000 ಜನ ಸೆರೆವಾಸವನ್ನು ಅನುಭವಿಸಿದರೂ ಚಳವಳಿ ಸಫಲವಾಗಲಿಲ್ಲ. ನೀಗ್ರೋ ಚಳವಳಿಯ ವಿಚಾರದಲ್ಲಿ ಅಮೆರಿಕದ ಕೇಂದ್ರ ಸರ್ಕಾರ ಸಾಕಷ್ಟು ದೃಢವಾದ ನಿಲವನ್ನು ತಳೆಯುತ್ತಿಲ್ಲವೆಂದೂ ಅದಕ್ಕೆ ಅಗತ್ಯವಾದ ಕಾನೂನಿನ ನೆರವನ್ನು ಕೊಡುತ್ತಿಲ್ಲವೆಂದೂ ಇವನು ಎಚ್ಚರಿಕೆ ನೀಡುತ್ತಲೇ ಇದ್ದ. ಈ ಸಂಬಂಧದಲ್ಲಿ 1962ರಲ್ಲಿ ಅಧ್ಯಕ್ಷ ಕೆನಡಿಯನ್ನು ಕಂಡು ಎರಡನೆಯ ನೀಗ್ರೋ ವಿಮೋಚನಾ ಘೋಷಣೆಯೊಂದನ್ನು ಹೊರಡಿಸಬೇಕೆಂದು ಒತ್ತಾಯಪಡಿಸಿದ. 1954ರಲ್ಲಿ ಕಾಂಗ್ರೆಸ್ ಹೊಸ ನಾಗರಿಕ ಹಕ್ಕುಗಳ ಕಾಯ್ದೆಯೊಂದನ್ನು ಅಂಗೀಕರಿಸಿತು. ಅಲ್ಪಸಂಖ್ಯಾತರ ಎಲ್ಲ ಸಮಸ್ಯೆಗಳನ್ನೂ ಇದು ಪರಿಹರಿಸದಿದ್ದರೂ ಕೆಲವನ್ನಾದರೂ ಪರಿಹರಿಸುತ್ತದೆಂಬುದು ಇವನ ಅಭಿಪ್ರಾಯವಾಗಿತ್ತು.

ಇವನು ತನ್ನ ಹೋರಾಟಗಳಲ್ಲೆಲ್ಲ ಅತ್ಯಂತ ಕಠಿಣವಾದ್ದು ಎಂದು ಕರೆದ ಹೋರಾಟ ವೊಂದನ್ನು 1962 ಏಪ್ರಿಲ್‌ನಲ್ಲಿ ಅಲಬಾಮದ ಬರ್ಮಿಂಗ್‌ಹ್ಯಾಂ ನಗರದಲ್ಲಿ ಪ್ರಾರಂಭಿಸಿದ. ನೀಗ್ರೋಗಳ ಸಂಘಟನೆ ಆಗಲೇ ನಡೆದಿತ್ತು. ಸಹಸ್ರಾರು ವಿದ್ಯಾರ್ಥಿಗಳು ಕೂಡ ಸಂಕಲ್ಪ ಪತ್ರಕ್ಕೆ ತಮ್ಮ ಸಹಿ ಹಾಕಿ ಹೋರಾಟಕ್ಕಾಗಿ ಉತ್ಸುಕರಾಗಿ ಕಾದಿದ್ದರು. ಎಲ್ಲ ವಿಚಾರಗಳಲ್ಲೂ ನೀಗ್ರೋಗಳಿಗೆ ಸಮಾನಾವಕಾಶ ಸಿಗುವಂತೆ ತಾನು ಚಳವಳಿ ನಡೆಸುತ್ತಿರುವುದಾಗಿ ಘೋಷಿಸಿದ. ಸಣ್ಣ ಪ್ರದರ್ಶನಗಳಿಂದ ಇದು ಮೊದಲಾಯಿತು. ಈ ಪ್ರದರ್ಶನಗಳನ್ನು ಪ್ರಾದೇಶಿಕ ನ್ಯಾಯಾಲಯ ನಿಷೇಧಿಸಿತು. ಮಾರನೆಯ ದಿನವೇ ತನ್ನ 40 ಅನುಯಾಯಿಗಳೊಡನೆ ಇದನ್ನು ಪ್ರತಿಭಟಿಸಿ ಬಂಧನಕ್ಕೆ ಒಳಗಾದ. ಜಾಮೀನು ಕೊಟ್ಟು ಹೊರಗೆ ಬಂದು ಚಳವಳಿಯನ್ನು ತೀವ್ರಗೊಳಿಸಿದ. ಸಹಸ್ರಾರು ವಿದ್ಯಾರ್ಥಿಗಳು ಹಾಡುತ್ತ ಕೂಗುತ್ತ ನಿಷೇಧಾಜ್ಞೆಗಳನ್ನು ಮುರಿದರು. ಪೊಲೀಸರು ಇವರನ್ನು ಹತ್ತಿಕ್ಕಲು ಯತ್ನಿಸಿದರು. ಪೊಲೀಸ್ ದೌರ್ಜನ್ಯಗಳ ಸುದ್ದಿ ದೇಶವಿದೇಶ ಗಳಲ್ಲೆಲ್ಲ ಹಬ್ಬಿತು. ವಿಶೇಷ ವರದಿಗಳೂ ಚಿತ್ರಗಳೂ ಆಡಳಿತದ ವಿರುದ್ಧವಾಗಿ ಜನಾಭಿಪ್ರಾಯವನ್ನು ಸಂಘಟಿಸಿದವು. ಬರ್ಮಿಂಗ್‌ಹ್ಯಾಮಿನ ಭೇದವಾದಿಗಳು ನೀಗ್ರೋಗಳೊಂದಿಗೆ ಒಪ್ಪಂದ ಮಾಡಿಕೊಂಡರು. ಪ್ರತ್ಯೇಕೀಕರಣದ ನಿವಾರಣೆಗಾಗಿ ಯೋಜನೆಯೊಂದನ್ನು ಎರಡು ಪಂಗಡಗಳೂ ಅಂಗೀಕರಿಸಿದವು.

ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಂಥ ಘಟನೆಗಳೇ ಅಮೆರಿಕದಲ್ಲೆಲ್ಲ ನಡೆಯಲು ಪ್ರಾರಂಭವಾದವು. 1963 ಆಗಸ್ಟ್ 28 ರಂದು ವಾಷಿಂಗ್‌ಟನ್ನಿನ ಲಿಂಕನ್ ಸ್ಮಾರಕದ ಮುಂದೆ ಎರಡೂವರೆ ಲಕ್ಷ ಜನರ ಪ್ರಚಂಡ ಪ್ರದರ್ಶನವೊಂದು ನಡೆಯಿತು. ಇದರಲ್ಲಿ 60,000 ಬಿಳಿಯರು ಸೇರಿದ್ದರು. ಈ ಮಹಾ ಜನಸಮುದಾಯವನ್ನುದ್ದೇಶಿಸಿ ಇವನು ಮಾಡಿದ ಭಾಷಣ ಲೋಕಪ್ರಸಿದ್ಧವಾಗಿದೆ. ಆದರೆ ಇವನು ಕಂಡ ಕನಸು ನನಸಾಗಲಿಲ್ಲ. ಮತ್ತೊಮ್ಮೆ ಅಮೆರಿಕದ ನಗರಗಳಲ್ಲಿ ಹಿಂಸಾಕಾಂಡ ಮೊದಲಾಯಿತು. 1968 ಏಪ್ರಿಲ್ 4 ರಂದು ಟೆನಿಸಿ ಸಂಸ್ಥಾನದ ಮೆಂಫಿಸ್‌ನಲ್ಲಿ ಹಂತಕನೊಬ್ಬನ ಗುಂಡಿಗೆ ಬಲಿಯಾಗಿ ಇವನು ನಿಧನನಾದಾಗ ಅಮೆರಿಕದ ನೀಗ್ರೋಗಳ ಮುಂದೆ ಹೊಸತೊಂದು ಬೆಳಕಿನ ಕಿಂಡಿ ತೆರೆದಿತ್ತು. ಹೊಸ ಆಕಾಂಕ್ಷೆಗಳು ಮೆಲ್ಲನೆ ತಲೆದೋರಿದವು. ಇವನಿಗೆ ಅನೇಕ ಪ್ರಶಸ್ತಿಗಳೂ ಗೌರವಗಳೂ ದೊರೆತಿವೆ. 1964 ರಲ್ಲಿ ಇವನಿಗೆ ನೊಬೆಲ್ ಶಾಂತಿ ಪಾರಿತೋಷಕ ದೊರಕಿತು. ಅಂತಾರಾಷ್ಟ್ರೀಯ ಸ್ನೇಹ ಸಂವರ್ಧನೆಗಾಗಿ ಭಾರತ ಸ್ಥಾಪಿಸಿರುವ ಜವಾಹರಲಾಲ್ ನೆಹರು ಪಾರಿತೋಷಕವನ್ನು ಈತನಿಗೆ ಮರಣೋತ್ತರವಾಗಿ ನೀಡಿ ಗೌರವಿಸಲಾಯಿತು. (ಎಂ.ಎಸ್‌ಎಚ್.ಎ.)

**ಕಿತಾಬೇನವರಸ್:** ಬಿಜಾಪುರದ 2ನೆಯ ಇಬ್ರಾಹಿಂ ಆದಿಲ್ ಷಾ (1580–1627) ಸುಲ್ತಾನ ರಚಿಸಿದ ಅತ್ಯುತ್ಕೃಷ್ಟ ಗೀತೆಗಳ ಸಂಗ್ರಹ. ಸುಲ್ತಾನನ ಕಲೆಯ ಅಭಿರುಚಿ ಮತ್ತು ಅಭಿಲಾಷೆ ಈ ಗ್ರಂಥದಿಂದ ತಿಳಿಯುತ್ತದೆ.

ಇದು ಪರ್ಶಿಯನ್ ಭಾಷೆಯ ದಖನಿ ಲಿಪಿಯಲ್ಲಿ ಬರೆದಿರುವ 17 ದೋಹ್ರ ಹಾಗೂ 59 ಗೀತೆಗಳನ್ನೊಳಗೊಂಡ ಕೃತಿ. ಇದರಲ್ಲಿ ಸಂಗೀತ ಮತ್ತು ಕಾವ್ಯದ ಸಾರ ಸಮ್ಮಿಶ್ರವಾಗಿದೆ. ಅಲ್ಲದೆ, ಸುಲ್ತಾನನ ಕಾವ್ಯ ನಿರೂಪಣೆ ಮತ್ತು ಪ್ರತಿಭೆಗೆ ಇದು ಶ್ರೇಷ್ಠ ಸಾಕ್ಷಿಯಾಗಿದೆ. ದಖನಿ ಭಾಷೆಯ ಅತಿ ಪುರಾತನವಾದ ಪುಸ್ತಕಗಳಲ್ಲಿ ಕಿತಾಬೇನವರಸ್ ಒಂದು. ಈ ಕೃತಿ ಸುಲ್ತಾನನ ಪಾಂಡಿತ್ಯವನ್ನು ದಖನಿ ಉರ್ದು ಸಾಹಿತ್ಯ ಸಂಗೀತ, ಕಲೆ, ಕಾವ್ಯ ಮತ್ತು ಸುಂದರ ಬರವಣಿಗೆಯ ಮೇಲಿದ್ದ ಪ್ರಭುತ್ವವನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ಹಿಂದು ಧರ್ಮ ಮತ್ತು ಇಸ್ಲಾಂ ಧರ್ಮಕ್ಕೂ ಕಲೆಯ ನೆರವಿನಿಂದ ಸಾಂಸ್ಕೃತಿಕ ಸಂಯೋಜನೆಯನ್ನು ಇಬ್ರಾಹಿಂ ಸಾಧಿಸಿರುವ ಅನುಭವವಾಗುತ್ತದೆ.

ಈ ಗ್ರಂಥದ ಪ್ರಾರಂಭದ ಪದ್ಯದಲ್ಲಿ ಸರಸ್ವತಿ ದೇವಿಗೆ ಸುಲ್ತಾನ ವಂದಿಸಿ 'ನಿನ್ನ ಅನುಗ್ರಹದಿಂದ ನವರಸದಲ್ಲಿರುವ ಮಧುರ ಗೀತೆಗಳು ನಿಪುಣ ಸಂಗೀತಗಾರರಿಗೆ ಅರಿವು ಕೊಡಲಿ' ಎಂದು ಆಕೆಯ ಕೃಪೆ ಬೇಡಿದ್ದಾನೆ. ಈ ಗ್ರಂಥದಲ್ಲಿ ಗಣೇಶ, ಸಯ್ಯದ್ ಮುಹಮ್ಮದ್ ಗೇಸು ದರಜ್, ಅವನ ಪ್ರೀತಿ ಪಾತ್ರಳಾದ ರಾಣಿ, ಅವನ ಆನೆ ಆತಷ್ ಖಾನ್, ಪ್ರೀತಿಯ ವಾದ್ಯ ಮೋತಿ ಖಾನ್, ಕೆಲವು ರಾಗಗಳು ಹಾಗೂ ಅಲ್ಲಿಯ ಕೆಲವು ಸ್ಮಾರಕಗಳ ವಿವರಣೆಗಳನ್ನು ಕಾಣಬಹುದು. ಈ ಗ್ರಂಥದ ಐತಿಹಾಸಿಕ ಮೌಲ್ಯ ಸಂಗೀತ ಕಲೆಯ ದೃಷ್ಟಿಯಿಂದ ಅತಿ

ಮಹತ್ವವಾದುದು. ಇದು ಆಗ ಬಳಸುತ್ತಿದ್ದ ವಾದ್ಯಗಳು, ಜನಪ್ರಿಯ ರಾಗಗಳು ಇವುಗಳ ಮೇಲೆ ಸುಲ್ತಾನನಿಗಿದ್ದ ಅಭಿರುಚಿಯನ್ನು ತೋರಿಸುತ್ತದೆ. ಈ ರಾಗಗಳು ಭಾರತೀಯ ಉತ್ಕೃಷ್ಟ ಇಂಪಾದ ಸಂಗೀತದ ಪ್ರತಿಯೊಂದು ಗೀತೆಗೂ ವಿಧಿಸಿರುವ ಮಕಾಂಗಳು ಧ್ರುಪದ್ ರೀತಿಯ ಸಂಗೀತದ ಆಧಾರದ ಮೇಲಿವೆ. ಇವುಗಳಲ್ಲಿ ಸ್ಥಾಯಿ, ಅಂತರ ಮತ್ತು ಅಭೋಗ್ ಎಂಬ ಮೂರು ಪಂಗಡಗಳಿವೆ. ಈ ಸಂಗ್ರಹ 17 ರಾಗಗಳನ್ನು ವಿವರಿಸುತ್ತದೆ. ಅವುಗಳು ಭೂಪಾಲಿ, ರಾಂಕ್ರಿ, ಭೈರವ್, ಹಿಜಾಜ್, ಮಾರು, ಅಸಾವರಿ, ದೇಸಿ, ಪೂರ್ವಿ, ಬೆರಾರಿ, ತೋಡಿ, ಮಲ್ಹಾರ್, ಗೌರಿ, ಕಲ್ಯಾಣ್, ಧನಶ್ರೀ, ಕಾನಡಾ, ಕೇದಾರ್ ಮತ್ತು ನೌರೋಜ್. ಇವುಗಳಲ್ಲದೆ 14 ಅತಿ ಜನಪ್ರಿಯವಾದ ಸಂಗೀತದ ವಾದ್ಯೋಪಕರಣಗಳನ್ನೂ ಉಲ್ಲೇಖಿಸಿದೆ. ಅವು ತಂಬೂರಿ, ಕಮಾಜ್, ರುಬಾಬ್, ಜಂತರ್ ಮತ್ತು ಚಾಂಗ್ ಎಂಬ ತಂತಿಯ ವಾದ್ಯೋಪಕರಣಗಳು. ಇವುಗಳ ಜೊತೆಗೆ ತಾಳವಾದ್ಯಗಳಾದ ದುಲಕ್, ದಫ್, ಹುರ್ಗ್‌ತಾಲ್ ಬಿರ್‌ದಂಗ್ (ಮೃದಂಗ್) ಮತ್ತು ಊದು ವಾದ್ಯಗಳಾದ ಷಹನಾಯಿ, ಪಾವಾ, ನೈ, ಖಲು ಮತ್ತು ಉಪಾಂಗ್ ಇವುಗಳನ್ನು ಉಲ್ಲೇಖಿಸಿದೆ. ಈ ಕೃತಿಯಲ್ಲಿ ನಿರೂಪಿಸಿದಂತೆ ಕಲೆಯನ್ನು ಜನಪ್ರಿಯ ಮಾಡಲು ಇಬ್ರಾಹಿಂ ಸಂಗೀತಗಾರರನ್ನು ಅತಾಯ್ (ಅತ್ಯುತ್ತಮ), ಧಧಿ (ಮಧ್ಯಮ) ಮತ್ತು ಗುನಿಜನ್ (ಸಾಮಾನ್ಯ) ಎಂಬ ಮೂರು ಪಂಗಡಗಳಾಗಿ ವಿಭಾಗಿಸಿದ್ದಾನೆ.

ಕಿತಾಬೇನವರಸ್‌ನ ಕಾವ್ಯ ಗುಣ ಮತ್ತು ಉತ್ತಮ ರಚನೆಯಿಂದ ಕೂಡಿದೆ. ಹಿಂದಿ ಮತ್ತು ಬ್ರಜ ಭಾಷೆಯ ಅನೇಕ ಪದಗಳನ್ನು ಪರ್ಷಿಯನ್ ಮತ್ತು ಅರಬ್ ಪದಗಳೊಂದಿಗೆ ಗ್ರಂಥಕಾರನು ಬಳಸಿದ್ದಾನೆ.

ಸುಲ್ತಾನನ ಜೀವನದಲ್ಲಿ ನವರಸಪುರ ಪಟ್ಟಣ, ಸಂಗೀತ ಮಹಲ್ ಮತ್ತು ಸಾತ್ ಮಂಜಿಲ್ ವಿಶೇಷವಾಗಿ ಪರಿಣಾಮ ಬೀರಿರುವ ಸ್ಮಾರಕಗಳ ಹಸ್ತಲಿಪಿಯ ಸುಂದರ ನಮೂನೆಗಳು ಇವುಗಳ ಮೂಲ ಆಕರ್ಷಣೆಯನ್ನು ವಿವರಿಸಿದ್ದಾರೆ. ಇದು ಬಿಜಾಪುರದ ರಾಜ ದರ್ಬಾರಿನಲ್ಲಿ ಪ್ರಚಲಿತ ಮಾದರಿಗಳ ಅರಿವು ಮೂಡಿಸುತ್ತದೆ.

ಇಬ್ರಾಹಿಂ ಸ್ವತಃ ಕುಶಲ ಹಸ್ತಲಿಪಿಕಾರನಾಗಿದ್ದ. ಆದರೆ ಬರೆವಣಿಗೆಯ ಒಂದು ನಮೂನೆಯೂ ಈ ಗ್ರಂಥದಲ್ಲಿಲ್ಲ. ಪರ್ಷಿಯ ಮತ್ತು ಅರೇಬಿಯದ ಹಸ್ತಲಿಪಿಕಾರರು ಬಿಜಾಪುರಕ್ಕೆ ಬಂದು ನೆಲೆಸಿದ್ದರು. ಕಿತಾಬೇನವರಸ್‌ನ್ನು ಬರೆದ ಹಲವು ಆಸ್ಥಾನ ಬರೆಹಗಾರರೆಂದರೆ ಅಬ್ದುಲ್ ಲತೀಫ್ ಮುಸ್ತಾಫ್, ಅಬ್ದುಲ್ ರಶೀದ್ ಮತ್ತು ಅಬ್ದುಲ್ ಹಲೀಂ ಅವರು. ಬಹಳ ಲೋಕಪ್ರಿಯವಾಗಿ ಬಳಸಿರುವ ನಮೂನೆಗಳು ನಷ್ಕ, ಸುಲ್ಸ್ ಮತ್ತು ರೈಹಾನ್. ಅವುಗಳಲ್ಲಿ ಅತ್ಯಂತ ಪ್ರತಿಭಾನ್ವಿತ ಹಸ್ತ ಲಿಪಿಗಳು ನಷ್ಕ ನಮೂನೆಯಲ್ಲಿವೆ, ಸುಲ್ತಾನನಿಗೆ ಈ ನಮೂನೆ ಅತಿ ಪ್ರಿಯವಾಗಿತ್ತು. ಕಿತಾಬ್ ಎ ನವರಸ್ ಮೂರು ಹಸ್ತಲಿಪಿಗಳಲ್ಲಿ ಶೈಲಿಗಳ ಭಿನ್ನ ಮಾದರಿ ಗೋಚರಿಸುತ್ತದೆ. ಇದು ಹಸ್ತಲಿಪಿಯ ಕಲೆಯನ್ನು ವ್ಯಾಸಂಗ ಮಾಡಲು ಆಧಾರವಾಗುತ್ತದೆ. ಬರೆವಣಿಗೆಯ ಸೊಬಗನ್ನು ನಷ್ಕ ಶೈಲಿಯಲ್ಲಿ ವ್ಯಾಪಕವಾಗಿ ನೋಡಬಹುದು. ಸೂಲ್ಸ್ ಮಾದರಿ ನಷ್ಕನ ಅಲಂಕೃತ ಶೈಲಿಯಾಗಿತ್ತು, ರೈಹಾನ್ ಶೈಲಿ ಸೂಲ್ಸ್ ಮಾದರಿಯನ್ನೇ ಹೋಲುತ್ತಿದ್ದರೂ ಅದು ನೇರ ಬಿಂದುಗಳಲ್ಲಿ ಅಂತ್ಯವಾಗುತ್ತದೆ. ಮತ್ತೊಂದು ಗ್ರಂಥದ ಪರ್ಷಿಯನ್ ಹಸ್ತಲಿಪಿಗಳೊಂದರಲ್ಲಿ ನಷ್ಕ ಶೈಲಿಯ ಹಸ್ತಲಿಪಿ ಮತ್ತು ದಕ್ಷಿಣದಲ್ಲಿ 17ನೆಯ ಶತಮಾನದಲ್ಲಿ ಪ್ರಚಲಿತ ದೇವನಾಗರಿ ಲಿಪಿಗಳೆರಡರ ಸಮ್ಮಿಶ್ರಣವನ್ನು ಕಾಣಬಹುದು.

ಒಂದು ದಂತಕಥೆಯಂತೆ ನವರಸಪುರದ ಅಸ್ತಿಭಾರ ಶಿಲೆಯನ್ನು ಹಾಕುವ ಸಮಯದಲ್ಲಿ ಸಮೀಪದ ತೊರವಿ ಗ್ರಾಮದಿಂದ ಒಬ್ಬ ಪ್ರಜೆ ಮಾದಕರಸದಿಂದ ತುಂಬಿದ (ವೈನ್) ಪಾನಪಾತ್ರೆಯನ್ನು ಸುಲ್ತಾನನಿಗೆ ಗೌರವಾರ್ಥವಾಗಿ ಒಪ್ಪಿಸಿದ. ಅದರ ಸ್ವಾದಿಷ್ಟ ರುಚಿಯನ್ನು ಅನುಭವಿಸಿ ಮಹದಾನಂದದಿಂದ ಆ ಮಾದಕಕ್ಕೆ ನವರಸವೆಂದೂ, ತಾನು ಅಸ್ತಿಭಾರ ಹಾಕಿದ ಪಟ್ಟಣಕ್ಕೆ ನವರಸಪುರ್ ಎಂದೂ ಸುಲ್ತಾನ ಹೆಸರಿಟ್ಟ. ತನ್ನ ಆಡಳಿತ ಕಾಲದಲ್ಲಿ, ಕಲಾಕೃತಿ ಸಾಧನೆಗಳಿಂದ ಜಾತ್ಯಾತೀತ ಸಂಗಮದ ಮಹತ್ ಪ್ರಭಾವವಾಗಲೆಂದು ಶ್ರಮಿಸಿದ. ಭ್ರಾತೃಭಾವ, ಸಹನೆ, ಎಲ್ಲ ಜಾತಿ, ಮತ, ಜನಾಂಗಗಳಲ್ಲಿ ಪರಸ್ಪರ ಗೌರವ ಮೂಡಿಸಲು ಎಲ್ಲ ಪ್ರತಿಬಂಧಗಳನ್ನೂ ತೊರೆದು ಕಲೆಯ ಮಹತ್ವ ಮೆರೆದ. ಕಲೆಯ ಸ್ಫೂರ್ತಿದಾಯಕ ಪೋಷಕನಾಗಿದ್ದ ಇಬ್ರಾಹಿಂನನ್ನು ಜಗದ್ಗುರು ಎಂದು ಇವನ ಅನುಯಾಯಿಗಳು ಅಭಿಮಾನದಿಂದ ಕರೆದಿದ್ದಾರೆ. (ಪಿಎಲ್.)

**ಕಿತ್ತೂರು ಚೆನ್ನಮ್ಮ:** 1780–1830. ಕನ್ನಡನಾಡಿನ ವೀರಮಹಿಳೆಯರಲ್ಲಿ ಅಗ್ರಪಂಕ್ತಿಗೆ ಸೇರಿದ, ಸ್ವಾತಂತ್ರ್ಯ ಸ್ವಾಭಿಮಾನಗಳ ಸಾಕಾರಮೂರ್ತಿ. ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಕಿರಿಯ ಹೆಂಡತಿ. ಕಾಗತಿ ದೇಸಾಯಿಯ ಮಗಳು. ತನ್ನ ಪುಟ್ಟ ರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ಸೆಟೆದು ನಿಂತು ನಡೆಸಿದ ಹೋರಾಟ, ಅಲ್ಲಿ ತೋರಿಸಿದ ಧೈರ್ಯ, ಸಾಹಸ, ಕೆಚ್ಚುಗಳು ಈಕೆಯನ್ನು ಅಜರಾಮರವಾದ ಕೀರ್ತಿಶಿಖರಕ್ಕೇರಿಸಿದೆ. ಇವಳಿಂದ ಕಿತ್ತೂರು ಪ್ರಸಿದ್ಧವಾಗಿದೆ.

ಮಲ್ಲಸರ್ಜನ ಕಾಲದಲ್ಲಿ ಹೈದರ್, ಟಿಪ್ಪು ಹಾಗೂ ಮರಾಠರು ಕಿತ್ತೂರಿನ ಮೇಲೆ ಧಾಳಿ ಮಾಡಿದ್ದರು. ಮರಾಠರು ದೇಸಾಯಿಯನ್ನು ಸೆರೆಹಿಡಿದಿದ್ದರು. ರಾಣಿ ಚೆನ್ನಮ್ಮನೇ ರಾಜ್ಯದ ಆಡಳಿತ ಸೂತ್ರಗಳನ್ನು ಹಿಡಿದಿದ್ದಳು (1809–10). ಪೇಶ್ವೆಯ ಬಂಧನದಲ್ಲಿದ್ದ ಮಲ್ಲಸರ್ಜ ತನ್ನ ಕಡೆಗಾಲದಲ್ಲಿ ಬಿಡುಗಡೆ ಹೊಂದಿ ಕಿತ್ತೂರಿಗೆ ಹಿಂತಿರುಗಿದೊಡನೆಯೇ ನಿಧನನಾದಾಗ ಅವನ ಮಗ ಶಿವಲಿಂಗರುದ್ರ ಸರ್ಜ ಪಟ್ಟಕ್ಕೆ ಬಂದು (1816) 8 ವರ್ಷಗಳ ಕಾಲ ಮಾತ್ರ ಆಳಿ, ಕ್ಷಯರೋಗಪೀಡಿತನಾಗಿ ತೀರಿಕೊಂಡ. ಇವಳಿಗೆ ಮಕ್ಕಳಿಲ್ಲದಿದ್ದುದರಿಂದ ಮಾಸ್ತಮರಡಿ ಗೌಡರ ಮಗ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡು ದತ್ತಕನ ಹೆಸರಿನಿಂದ ರಾಜ್ಯಭಾರ ಮಾಡುತ್ತಿದ್ದಳು. ಶಿವಲಿಂಗರುದ್ರ ಸರ್ಜ ನೀಡಿದ ಸಹಾಯ ಸಹಕಾರಗಳಿಂದ ಸುಪ್ರೀತರಾಗಿದ್ದ ಬ್ರಿಟಿಷರು ಆತನಿಗೆ ವಂಶಪಾರಂಪರ್ಯವಾಗಿ ಕಿತ್ತೂರನ್ನಾಳಿಕೊಂಡಿರುವಂತೆ ಸನ್ನದನ್ನು ಕೊಟ್ಟಿದ್ದರು. ಆದರೆ ಅವರಿಗೆ ಅವನ ಮರಣದೊಂದಿಗೆ ಕಿತ್ತೂರು ಸಂಸ್ಥಾನವನ್ನು ಕಬಳಿಸಲು ನೆಪ ಸಿಕ್ಕಂತಾಯಿತು. ಧಾರವಾಡದಲ್ಲಿ ಕಲೆಕ್ಟರನೂ ರಾಜಕೀಯ ಪ್ರತಿನಿಧಿಯೂ ಆಗಿದ್ದ ಥ್ಯಾಕರೆ ದಖನ್ನಿನ ಕಮಿಷನರ್ ಆಗಿದ್ದ ಚಾಪ್ಲಿನ್ನನ ಜೊತೆಗೂಡಿ ಸನ್ನಾಹ ಮಾಡಿ

ದತ್ತು ಸ್ವೀಕಾರವನ್ನು ಶಿವಲಿಂಗರುದ್ರ ಸರ್ಜ ಮಾಡಿಕೊಂಡಿಲ್ಲವೆಂದೂ ಅದು ಅವನ ಮರಣಾನಂತರ ಆದುದೆಂದೂ ತನ್ನ ಮೇಲಧಿಕಾರಿ ಗೌರ್ನರ್ ಎಲ್ಫಿನ್‌ಸ್ಟನ್‌ಗೆ ಸುಳ್ಳುವರದಿ ಕಳುಹಿಸಿ ಅವನನ್ನು ತಪ್ಪುದಾರಿಗೆಳೆದ. ಅಲ್ಲದೆ ತನ್ನ ಸರ್ಕಾರದಿಂದ ಉತ್ತರ ಬರುವವರೆಗೆ ಬನ್ನೂರು ಮಲ್ಲಪ್ಪಶೆಟ್ಟಿ ಮತ್ತು ವೆಂಕಟರಾವ್ ಎಂಬ ಕಾರಭಾರಿಗಳಿಗೆ ಆಡಳಿತವನ್ನು ಒಪ್ಪಿಸಬೇಕೆಂದು ತಿಳಿಸಿ ಖಜಾನೆಗೆ ಬೀಗಮುದ್ರೆ ಹಾಕಲು ಪ್ರಯತ್ನಿಸಿದ. ಹೀಗೆ ಥ್ಯಾಕರೆ ತನ್ನ ರಾಜ್ಯದ ಕಾರ್ಯಭಾರದಲ್ಲಿ ಅನವಶ್ಯಕವಾಗಿ ತಲೆಹಾಕಿದುದು ಇವಳ ಸ್ವಾಭಿಮಾನವನ್ನು ಕೆಣಕಿತು. ಸಂಸ್ಥಾನದ ಹಿರಿಯರೂ ಇದಕ್ಕೆ ಒಪ್ಪಲು ಸಿದ್ಧರಿರಲಿಲ್ಲ. ಆದರೂ ತಾಳ್ಮೆಯಿಂದ ದತ್ತಕ ಮತ್ತು ಆಡಳಿತದ ವಿಷಯವಾಗಿ ಪತ್ರವ್ಯವಹಾರ ನಡೆಸಿ ಸಂಸ್ಥಾನದ ಪರವಾಗಿ ಸಂಧಾನ ನಡೆಸಲು ಲಿಂಗಾಭಟ್ಟ, ರಾಚಪ್ಪ ಎಂಬ ಇಬ್ಬರು ವಕೀಲರನ್ನು ಕಂಪನಿ ಸರ್ಕಾರಕ್ಕೆ ಕಳುಹಿಸಿದಳಾದರೂ ಪ್ರಯೋಜನವಾಗಲಿಲ್ಲ. ಸಂಸ್ಥಾನದ ಅಸ್ತಿತ್ವವನ್ನು ಉಳಿಸಬೇಕೆಂದು ಸಂಕಲ್ಪಿಸಿ ಸೈನ್ಯವನ್ನು ಸಜ್ಜುಗೊಳಿಸಲು ಸರದಾರರನ್ನೂ ಸೈನಿಕರನ್ನು ಕರೆಸಿಕೊಂಡಳು. ಇದು ಬ್ರಿಟಿಷರಿಗೆ ತಿಳಿಯದಿರಲಿಲ್ಲ. ಥ್ಯಾಕರೆ 1824 ಅಕ್ಟೋಬರ್ 23ರಂದು ಸೈನ್ಯಸಮೇತನಾಗಿ ಕಿತ್ತೂರಿಗೆ ಬಂದು ಕೋಟೆಯ ಬಾಗಿಲು ತೆಗೆಯಲು ಆಜ್ಞಾಪಿಸಿದಾಗ ಕಿತ್ತೂರು ಸೈನ್ಯ ಜಗ್ಗಲಿಲ್ಲ. ಆಗ ಯುದ್ಧ ನಡೆಯಿತು. ಗುರುಸಿದ್ದಪ್ಪನ ನಾಯಕತ್ವದಲ್ಲಿ ಕಿತ್ತೂರು ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ಬಿದ್ದಿತು. ಕತ್ತಿಯನ್ನು ಹಿಡಿದು ಕುದುರೆಯನ್ನೇರಿದ ಚೆನ್ನಮ್ಮ ಸೈನಿಕರನ್ನು ಹುರಿದುಂಬಿಸಿದಳು. ಈಕೆಯ ಅಂಗರಕ್ಷಕನಾದ ಅಮಟೂರ ಬಾಳಪ್ಪನು ಥ್ಯಾಕರೆಯನ್ನು ಗುಂಡಿಟ್ಟುಕೊಂದ. ಬ್ರಿಟಿಷರ ಕಡೆ ಹಲವರು ಸತ್ತರಲ್ಲದೆ ಅವರಿಗೆ ಸೋಲಾಯಿತು. ಕೆಲವರು ಸೆರೆ ಸಿಕ್ಕರು. ಸೆರೆ ಸಿಕ್ಕವರಲ್ಲಿ ಸ್ಟೀವನ್‌ಸನ್, ಎಲಿಯಟ್ ಮುಖ್ಯರು. ಅವರೊಂದಿಗೆ ಹಲವು ಮಕ್ಕಳೂ ಇದ್ದರು. ಅವರನ್ನು ದಯೆಯಿಂದ ಸುಖವಾಗಿರಿಸಲು ಆಜ್ಞಾಪಿಸಿದಳು.

ಬ್ರಿಟಿಷರ ಸೋಲಿನ ಸುದ್ದಿಯನ್ನು ಕೇಳಿದೊಡನೆ ಚಾಪ್ಲಿನ್ ಮತ್ತು ಲೆಫ್ಟಿನೆಂಟ್ ಕರ್ನಲ್ ಡೀಕನ್ ದೊಡ್ಡ ಸೈನ್ಯದೊಡನೆ ಕಿತ್ತೂರಿನ ಮೇಲೆ ಸಾಗಿಬಂದರು (1824 ನವೆಂಬರ್ 3). ಯುದ್ಧವನ್ನು ತಪ್ಪಿಸಲು ಈಕೆ ಕಿತ್ತೂರಿನ ಪರಿಸ್ಥಿತಿಯನ್ನು ವಿವರಿಸಿ ಗೌರ್ನರಿಗೂ ಕಮಿಷನರಗೂ ತಿಳಿಸಿದಳಾದರೂ ವ್ಯರ್ಥವಾಯಿತು. ಬ್ರಿಟಿಷರ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿತು; ಬಂದಿಗಳನ್ನು ಬಿಡಿಸಲು ಚಾಪ್ಲಿನ್ ಪ್ರಯತ್ನಿಸಿದ. ಆದರೆ ಕಿತ್ತೂರಿನ ಆಡಳಿತದಲ್ಲಿ ಬ್ರಿಟಿಷರು ಪ್ರವೇಶ ಮಾಡುವುದಿಲ್ಲವೆಂಬ ಭರವಸೆ ಕೊಡುವವರೆಗೂ ಬಂದಿಗಳ ಬಿಡುಗಡೆ ಇಲ್ಲವೆಂದು ಈಕೆ ಸ್ಪಷ್ಟವಾಗಿ ತಿಳಿಸಿದಳು. ಎರಡು ಕಡೆಯೂ ಯುದ್ಧ ಸಿದ್ಧತೆಗಳಾದವು. ಆದರೆ ಕೋಟೆಯೊಳಗೇ ಹಲವು ವಿದ್ರೋಹಿಗಳು ಸೇರಿ ಪಿತೂರಿ ನಡೆಸಿದ್ದರು. ಆದರೆ ಇವಳ ಸ್ವಾತಂತ್ರ್ಯಪ್ರೇಮ ಹಾಗೂ ಸೈನಿಕರ ಸ್ವಾಮಿಭಕ್ತಿ ಇವು ಈಕೆಯ ಧೈರ್ಯವನ್ನು ನೂರ್ಮಡಿಗೊಳಿಸಿದುವು. 1824 ನವೆಂಬರ್ 30ರಂದು ಯುದ್ಧ ಆರಂಭವಾಗಿ ಡಿಸೆಂಬರ್ 3ರಂದು ತೀವ್ರವಾಯಿತು. ಕಿತ್ತೂರಿನ ಸೈನಿಕರೊಂದಿಗೆ ವೀರಾವೇಶದಿಂದ ಹೋರಾಡಿದಳು. ಆದರೆ ಬ್ರಿಟಿಷರ ಫಿರಂಗಿಗಳು ಕೋಟೆಯ ಭಾಗಗಳನ್ನು ಕೆಡವಿದುವು. ಕೋಟೆಯೊಳಗಿನ ವಿದ್ರೋಹದಿಂದ ಮದ್ದಿನ ಮನೆಯಲ್ಲಿ ಮೋಸ ನಡೆದುಹೋಯಿತು. ಕಿತ್ತೂರಿಗೆ ಸೋಲು ಸಿದ್ಧವೆನಿಸಿತು. ಶತ್ರುಗಳ ಕೈಗೆ ಸೆರೆ ಸಿಕ್ಕಬಾರದೆಂದು ಇವಳು ಕೋಟೆಯ ಕಿರುಗಂಡಿಯಿಂದ ಪಾರಾಗಿ ಸಂಗೊಳ್ಳಿಯ ಮಾರ್ಗವಾಗಿ ತಪ್ಪಿಸಿಕೊಂಡು ಹೋಗಲೆತ್ನಿಸಿದ್ದರೂ ಬ್ರಿಟಿಷರು ಇವಳನ್ನು ಹಿಡಿದು ಬೈಲಹೊಂಗಲದಲ್ಲಿ ಸೆರೆಯಿಟ್ಟರು. 6 ವರ್ಷಗಳ ಕಾಲ ಸೆರೆಮನೆಯಲ್ಲಿದ್ದಾಗ ಸಂಗೊಳ್ಳಿರಾಯಣ್ಣ, ಬಿಚ್ಚುಗತ್ತಿ ಚೆನ್ನಬಸಪ್ಪ, ಗಜವೀರ, ಬಾಲಣ್ಣ ಮೊದಲಾದವರು ಈಕೆಯ ನಿಕಟ ಸಂಪರ್ಕದಿಂದ ಅಲ್ಲಲ್ಲಿ ದಂಗೆಯೆಬ್ಬಿಸಿದರು. ಸಂಗೊಳ್ಳಿ ರಾಯಣ್ಣನನ್ನು ಸೆರೆಹಿಡಿದು ಬ್ರಿಟಿಷರು ಗಲ್ಲಿಗೇರಿಸಿದಾಗ ಚೆನ್ನಮ್ಮನಿಗೆ ಪುನಃ ತನ್ನ ನಾಡನ್ನು ಬಿಡುಗಡೆ ಮಾಡುವ ಕನಸು ಒಡೆದು ಹೋಯಿತು. ಹತಾಶಳಾದ ಈಕೆ 1830ರ ಫೆಬ್ರವರಿಯಲ್ಲಿ ಸೆರೆಯಲ್ಲಿಯೇ ನಿಧನಳಾದಳು.

ಚೆನ್ನಮ್ಮ ತನ್ನ ಸಂಸ್ಥಾನದ ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ನಡೆಸಿದ ಹೋರಾಟ ಜನಮನದಲ್ಲಿ ಅಚ್ಚಳಿಯದೆ ಉಳಿಯಿತು. ಬಗೆಬಗೆಯಲ್ಲಿ ಲಾವಣಿಯಾಗಿ, ಹಾಡಾಗಿ, ಕಥೆಯಾಗಿ ವೀರ ಚೆನ್ನಮ್ಮನ ಸಾಹಸಗಳು ಕಿತ್ತೂರಿನ ಸುತ್ತಮುತ್ತಲ ಊರುಗಳಲ್ಲಿ ಹಬ್ಬಿ ಇಂದಿಗೂ ಉಳಿದಿದೆ. ಬ್ರಿಟಿಷರ ಮೇಲೆ ಬಂಡೆದ್ದು, ಅವರನ್ನು ಈ ದೇಶದಿಂದಲೇ ಹೊರದೂಡಲು ನಡೆಸಿದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಚೆನ್ನಮ್ಮ ನಡೆಸಿದ ಪ್ರಥಮ ಹೋರಾಟ ಸ್ಫೂರ್ತಿಯ ನೆಲೆಯಾಯಿತು. (ಎಂ.ಎಚ್.)

**ಕಿಬ್ಬನಹಳ್ಳಿ:** ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿರುವ ಪ್ರಾಗೈತಿಹಾಸಿಕ ನೆಲೆ. ತಿಪಟೂರಿನ ಪೂರ್ವಕ್ಕೆ ಸು. 21ಕಿಮೀ ದೂರದಲ್ಲಿದೆ. ಕಿಬ್ಬನಹಳ್ಳಿ–ಬಿಳಿಗೆರೆ ಗ್ರಾಮಗಳ ದಕ್ಷಿಣಕ್ಕೆ ಪೂರ್ವ–ಪಶ್ಚಿಮವಾಗಿ ಹಬ್ಬಿರುವ ಬಾಣಸಂದ್ರ ಬೆಟ್ಟದ ಸಾಲುಗಳಿರುವ ಈ ಪ್ರದೇಶ ಆದಿ ಹಳೆಶಿಲಾಯುಗದ ನೆಲೆಯೆಂದು ಈಗಾಗಲೇ ಪರಿಚಿತವಾಗಿದೆ.

1900–01ರಲ್ಲಿ ವಿಧಿರಿಲ್ ಎಂಬ ಭೂವಿಜ್ಞಾನಿ ಇಲ್ಲಿ ಸರ್ವೇಕ್ಷಣೆಯನ್ನು ಕೈಗೊಂಡು ಈ ಪ್ರದೇಶ ಶಿಸ್ಟ್ ಮತ್ತು ಗ್ರಾನೈಟ್ ಶಿಲೆಗಳಿಂದ ರಚಿತವಾಗಿರುವುದನ್ನು ಗಮನಕ್ಕೆ ತಂದ. ಈ ಬೆಟ್ಟದ ಸಾಲಿನಲ್ಲಿ ಆದಿ ಹಳೆಶಿಲಾಯುಗದ ಶಿಲೋಪಕರಣಗಳನ್ನು ಮೊದಲಬಾರಿಗೆ 1924ರಲ್ಲಿ ಪಿ.ಸಂಪತ್ ಐಯ್ಯಂಗಾರ್ ಮತ್ತು ಬಿ.ರಾಮರಾವ್ ಅವರು ಬೆಳಕಿಗೆ ತಂದರು. ಇಲ್ಲಿ ದೊರೆತಿರುವ ಅಶೂಲಿಯನ್ ಮತ್ತು ಅಬೆವಿಲಿಯನ್ ಮಾದರಿಯ ಉಪಕರಣಗಳ ಬಗೆಗೆ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿ ಪ್ರಪಂಚದ ಒಂದು ಪ್ರಮುಖ ನೆಲೆಯೆಂಬ ವಿಷಯವನ್ನು ಪ್ರಸ್ತುತಪಡಿಸಿದರು. ಇವರ ಸಂಗ್ರಹವನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಭೂವಿಜ್ಞಾನ ವಿಭಾಗದಲ್ಲಿ ಇಡಲಾಗಿದೆ.

ಎಂ. ಶೇಷಾದ್ರಿಯವರು ಇಲ್ಲಿನ ಉಪಕರಣಗಳ ವಿಶ್ಲೇಷಣೆಯನ್ನು ಮಾಡಿದರು. ಈ ಉಪಕರಣಗಳನ್ನು ಉರುಟು ಕಲ್ಲು ಹಾಗೂ ಚಕ್ಕೆಗಳಿಂದ ರೂಪಿಸಲಾಗಿದ್ದು ಕೈಗೊಡಲಿ ಹಾಗೂ ಕಡಿಗತ್ತಿಗಳು ಪ್ರಧಾನ ನಮೂನೆಗಳಾಗಿವೆ. ಮುಂದೆ ಅಲ್ಚಿನ್ ಈ ನೆಲೆ ಕೇವಲ ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ ಮತ್ತು ಅಂತ್ಯ ಹಳೆಶಿಲಾಯುಗ ಸಂಸ್ಕೃತಿಗೆ ಸೀಮಿತವಾಗಿರದೆ ಮುಂದಿನ ಹಂತವಾದ ಸೂಕ್ಷ್ಮಶಿಲಾಯುಗದಲ್ಲಿಯೂ ಒಂದು ಮುಖ್ಯ ನೆಲೆಯಾಗಿದ್ದಿತ್ತೆಂಬ ಅಂಶವನ್ನು ಪ್ರಸ್ತುತಪಡಿಸಿದ. ಇಲ್ಲಿ ದೊರೆತಿರುವ ಸೂಕ್ಷ್ಮ ಶಿಲೋಪಕರಣಗಳಲ್ಲಿ ವಿವಿಧ ನಮೂನೆಯ ಅಲಗುಗಳು, ಹೆರೆಚಕ್ಕೆಗಳು ಹಾಗೂ ಮೊನೆಗಳಿವೆ. ಕಿಬ್ಬನಹಳ್ಳಿಯಿಂದ 3 ಕಿಮೀ ವಾಯವ್ಯಕ್ಕಿರುವ ಜಕ್ಕನಹಳ್ಳಿ ಗ್ರಾಮದ ಸಮೀಪದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ 2 ಕಲ್ಗುಪ್ಪೆಗಳು, 1 ನೆಲಕೋಣೆ ಮತ್ತು 10 ಶಿಲಾವೃತ್ತ ಗೋರಿಗಳು ಇತ್ತೀಚಿನ ಸರ್ವೇಕ್ಷಣೆಯಲ್ಲಿ ಪತ್ತೆಯಾಗಿವೆ. ಜೊತೆಗೆ ಈ ಕಾಲಮಾನದ ಕೆಂಪು, ಕಪ್ಪು, ಕಪ್ಪು–ಕೆಂಪು ದ್ವಿವರ್ಣದ ಮಣ್ಪಾತ್ರೆಗಳನ್ನು ಸಂಗ್ರಹಿಸಲಾಗಿದೆ. (ಎಸ್.ಕೆ.ಬಿ.)

**ಕಿಷ್ಕಿಂಧ:** ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹಂಪಿ ಮತ್ತು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗುಂದಿ ಐತಿಹಾಸಿಕ ಕೇಂದ್ರಗಳು. ಹಂಪಿ, ಆನೆಗುಂದಿ ಗ್ರಾಮಗಳನ್ನು ತುಂಗಭದ್ರಾ ನದಿ ಎರಡು ಭಾಗಗಳನ್ನಾಗಿ ಮಾಡಿದೆ. ಪ್ರದೇಶ ರಾಮಾಯಣದ ಉಲ್ಲೇಖಗೊಂಡಿರುವ ಕಿಷ್ಕಿಂಧವೆನ್ನುವರು. ಸ್ಥಳಪುರಾಣ ಮತ್ತು ಶಾಸನಗಳಲ್ಲಿ ಕಿಷ್ಕಿಂಧ ನಗರ, ಕಿಷ್ಕಿಂಧ ನಾಡು, ಕಿಷ್ಕಿಂಧ ಪರ್ವತಗಳ ಉಲ್ಲೇಖಗಳಿವೆ. ಹನುಮಂತ, ವಾಲಿ, ಸುಗ್ರೀವ ಈ ಪರಿಸರದಲ್ಲಿಯೇ ವಾಸವಾಗಿದ್ದರೆಂದೂ ರಾಮ ದರ್ಶನವಿತ್ತ ಪವಿತ್ರಸ್ಥಳವೆಂಬ ನಂಬಿಕೆಯಿದೆ. ಇಲ್ಲಿಯ ನಿಸರ್ಗನಿರ್ಮಿತ ಕುರುಹುಗಳು ಪ್ರಾಗಿತಿಹಾಸ ಕಾಲದ ಅವಶೇಷಗಳನ್ನು ರಾಮಾಯಣದ ಘಟನೆಗಳಿಗೆ ಹಾಗೂ ಪ್ರಮುಖ ವ್ಯಕ್ತಿಗಳಿಗೆ ಜೋಡಿಸುವುದುಂಟು. ಈ ಸನ್ನಿವೇಶಗಳು ಮುಂದೆ ಅನೇಕ ಪುರಾಣ ಕಥೆಗಳ ಹುಟ್ಟಿಗೆ ಕಾರಣವಾದವು. ವಿಜಯನಗರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳ ಕಂಬ, ಗೋಡೆಗಳ ಮೇಲೆ ರಾಮಾಯಣದ ಕಥಾನಕ ಭಾಗಗಳನ್ನು ಶಿಲ್ಪ ರೂಪದಲ್ಲಿ ಬಿಡಿಸಿದೆ.

ಹಂಪಿ–ಆನೆಗುಂದಿ ಪರಿಸರದಲ್ಲಿ ಬೆಟ್ಟಗುಡ್ಡ, ಕಲ್ಲುಬಂಡೆಗಳ ಮಧ್ಯೆ ಹರಿಯುತ್ತಿರುವ ತುಂಗಭದ್ರೆಯನ್ನು ಪಂಪಾ ನದಿಯೆಂದು ಕರೆಯಲಾಗುತ್ತದೆ. ಈ ನದಿಯ ಎಡದಂಡೆಯ ಮೇಲಿನ ವಿಶಾಲವಾದ ಪ್ರದೇಶದಲ್ಲಿ ಪಂಪಾವನ, ಮಾನಸಸರೋವರ, ಹತ್ತಿರದ ಬೆಟ್ಟದಲ್ಲಿ ಶಬರಿಗುಹೆ, ಅಂಜನಾದ್ರಿ, ಆನೆಗುಂದಿ ಹತ್ತಿರ ವಾಲಿಭಂಡಾರಗಳಿದ್ದರೆ, ನದಿಯ ಇನ್ನೊಂದು ಭಾಗದಲ್ಲಿ ಸುಗ್ರೀವ ಗುಹೆ, ಸೀತೆಯ ಸೆರಗು, ಮತಂಗ ಪರ್ವತ, ಹೇಮಕೂಟ, ರತ್ನಕೂಟಗಳಿವೆ. ಹೊಸಪೇಟೆ ಸಮೀಪ ಜಾಂಬವಂತನು ತಪಸ್ಸು ಮಾಡಿದ ಜಂಬುನಾಥ ಪರ್ವತ ಹಾಗೂ ಹಂಪಿಯಿಂದ ಸು. 25 ಕಿಮೀ ದಕ್ಷಿಣದಲ್ಲಿ ಕಾರ್ತಿಕೇಯ ತಪೋವನಗಳಿವೆ. ಕುಡತಿನಿಯ ಶಾಸನಗಳು ಕಾರ್ತಿಕೇಯ ತಪೋವನ ಮತ್ತು ಅದನ್ನು ನೋಡಿಕೊಳ್ಳುತಿದ್ದ ತಪೋವನಾಧಿಪತಿಗಳನ್ನು ಉಲ್ಲೇಖಿಸುತ್ತವೆ. ಹಂಪಿಯ ಹತ್ತಿರ ವೆಂಕಟಾಪುರದಲ್ಲಿರುವ ಬೂದಿದಿಬ್ಬ ವಾಲಿಯ ದಹನಕ್ರಿಯೆಯಿಂದುಂಟಾದ ದಿಬ್ಬವೆಂದೂ ಜನರ ನಂಬಿಕೆ. ಹಂಪಿ, ಆನೆಗುಂದಿ, ಮಲ್ಲಾಪುರ ಬೆಟ್ಟಗಳಲ್ಲಿ ನಿರ್ಮಾಣವಾದ ಪ್ರಾಗಿತಿಹಾಸ ಕಾಲದ ಗವಿವರ್ಣ ಚಿತ್ರಗಳು ಹೇರಳ ಪ್ರಮಾಣದಲ್ಲಿವೆ. ಅವುಗಳಲ್ಲಿ ಕೆಲವು ಮನುಷ್ಯರಿಗೆ ಬಾಲವಿರುವ ಚಿತ್ರಗಳು ಕಿಷ್ಕಿಂಧೆಯ ವಾನರರನ್ನು ನೆನಪಿಗೆ ತರುತ್ತವೆ. ಆಂಜನೇಯನ ಜನನ ಸ್ಥಳವಾದ ಅಂಜನಾದ್ರಿ, ಅದರ ಪಕ್ಕದ ಹನುಮಂತ ನಗರ, ಚಿಂಚಲಕೋಟೆ ಹಾಗೂ ಸ್ವಲ್ಪ ದೂರದಲ್ಲಿ ತುಂಗಭದ್ರಾನದಿ ಎಡದಂಡೆಯ ಮೇಲಿನ ಅಯೋಧ್ಯೆ ಮುಂತಾದ ಹೆಸರುಗಳು ರಾಮಾಯಣದ ನಗರ, ಸಾಂಸ್ಕೃತಿಕ ಘಟನೆಗಳಿಗೆ ಪೂರಕವಾಗಿವೆ.

ಪಂಪಾ ಮಹಾತ್ಮೆಯಲ್ಲಿ ಬರುವ ಮಾಲ್ಯವಂತಗಿರಿ, ಋಷ್ಯಮೂಕ, ಕಿಷ್ಕಿಂಧಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಸೋಮಪರ್ವತ, ಮಣಿಭದ್ರೇಶ್ವರ ಪರ್ವತ ಮುಂತಾದವು ವಾಲ್ಮೀಕಿ ರಾಮಾಯಣ ಮಹಾಕಾವ್ಯದ ಉಲ್ಲೇಖಗಳಿಗೆ ಸಮಾನವಾಗಿದ್ದು, ಅವು ಹಂಪಿ–ಆನೆಗುಂದಿ ಪರಿಸರದಲ್ಲಿರುವುದು ಗಮನಾರ್ಹ.

ಹಂಪಿ–ಆನೆಗುಂದಿ ಪ್ರದೇಶ ರಾಮಾಯಣದ ಕಿಷ್ಕಿಂಧವೆಂಬುದು ಈಚಿನ ಕಾಲದ ನಂಬಿಕೆಯೇನಲ್ಲ. ಅದು ಪ್ರಾಚೀನಕಾಲದಿಂದಲೂ ಜನಮನದಲ್ಲಿ ಆಳವಾಗಿ ಬೇರೂರಿತ್ತೆಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಹಂಪಿಯಿಂದ ಸು. 10 ಕಿಮೀ ದೂರದಲ್ಲಿ ತುಂಗಭದ್ರಾ ನದಿಯ ಎಡದಂಡೆಯ ಮೇಲೆ ದೇವಿಘಾಟ್ ಎಂಬ ಸ್ಥಳವಿದೆ. ಬೆಟ್ಟದ ಮೇಲೆ ಕಲ್ಯಾಣ ಚಾಳುಕ್ಯರ ಕಾಲದ ಶೈವ ದೇವಾಲಯದಲ್ಲಿ ಆರನೆಯ ವಿಕ್ರಮಾದಿತ್ಯನ 1069ರ ಶಾಸನದಲ್ಲಿ ತುಂಗಭದ್ರಾ ತಟದ ಬಡಗ ಕಿಷ್ಕಿಂಧಾಮಿ ಪರ್ವತಂ ಎಂಬ ಉಲ್ಲೇಖ ಆನೆಗುಂದಿ ಪ್ರದೇಶವನ್ನು ಸೂಚಿಸುತ್ತದೆ. ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲೂಕಿನ ಶಿರಸಂಗಿ ಗ್ರಾಮ ಋಷ್ಯಶೃಂಗ ಮುನಿಯ ತಪೋನೆಲೆಯಾಗಿತ್ತೆಂಬ ನಂಬಿಕೆಯಿದೆ. ಇಲ್ಲಿಯ ಕಾಳಿಕಾ ದೇವಾಲಯದಲ್ಲಿರುವ 1136ರ ಕಲ್ಯಾಣ ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಶಾಸನದ 15–20 ಸಾಲುಗಳಲ್ಲಿ ಋಷ್ಯಶೃಂಗ ಮುನಿಯ ಮಹಿಮೆ ಮತ್ತು ಕಿಷ್ಕಿಂಧೆಯ ಹಿರಿಮೆಯ ವರ್ಣನೆ ಬರುತ್ತದೆ. ಋಷ್ಯಶೃಂಗ ಮುನಿಯ ಪುತ್ರಕಾಮೇಷ್ಟಿಯಾಗದಿಂದ ದಶರಥನಿಗೆ ನಾಲ್ಕು ಮಕ್ಕಳು ಜನಿಸಿದರೆಂಬ ಸಂಗತಿ, ಮುಂದೆ ಕಿಷ್ಕಿಂಧೆಯಿಂದ ಅಯೋಧ್ಯೆಗೆ ಮರಳುವಾಗ ರಾಮ, ಲಕ್ಷ್ಮಣ, ಸೀತಾ, ಹನುಮಂತ ಸಹಿತ ಮುನಿಯ ಆಶ್ರಮಕ್ಕೆ ಬಂದು ಆಶೀರ್ವಾದ ಪಡೆದು, ತಮ್ಮ ತಮ್ಮ ಹೆಸರಿನ ಶಿವಲಿಂಗಗಳನ್ನು ಶಿರಶೃಂಗಿಯಲ್ಲಿ ಪ್ರತಿಷ್ಠಾಪಿಸಿದರೆಂದಿದೆ. ಈ ಪುತ್ರಕಾಮೇಷ್ಟಿಯಾಗದಲ್ಲಿ ತೊಡಗಿರುವ ಋಷ್ಯಶೃಂಗ ಮುನಿ, ದಶರಥ ಹಾಗೂ ಅವನ ಪತ್ನಿಯರ ಉಬ್ಬು ಶಿಲ್ಪಗಳು ಹಂಪಿಯ ಹಜಾರರಾಮಸ್ವಾಮಿ ದೇವಾಲಯದ ಗೋಡೆಯ ಮೇಲಿರುವುದು ವಿಶೇಷವಾಗಿ ಕಾಣುತ್ತದೆ. ಪೂರ್ವ, ಪಶ್ಚಿಮ ಹಾಗೂ ಸಮುದ್ರ ಪರ್ಯಂತ ವಿಸ್ತಾರವಾದ ಭೂಮಿಗೆ ಹಿಮವತ್ಪರ್ವತ ವಿಂಧ್ಯ, ಕಿಷ್ಕಿಂಧ ಈ ಮೂರು ಪರ್ವತಗಳು ಉನ್ನತವಾದವು; ಇವುಗಳಲ್ಲಿ ಅತ್ಯಂತ ಶ್ರೇಷ್ಠವಾದುದು, ಉತ್ತಮವಾದುದು ಎಂದರೆ ಕಿಷ್ಕಿಂಧ ಗಿರಿಯೇ. ಇದು ಜನನಿಬಿಡವಾದ ನಗರವಾಗಿದ್ದು, ವಾಲಿ, ಮರುತ್ತ, ಅಂಗದ, ದಿನೇಸ, ಮತಂಗ, ಹಂಸ, ಕಪಿಲ, ಅಗಸ್ತ್ಯ ಮೊದಲಾದವರಿಗೆ ಆಶ್ರಯ ಸ್ಥಾನವಾಗಿತ್ತೆಂದು ಹೇಳಲಾಗಿದೆ.

ರಾಮಾಯಣದ ಪ್ರಕಾರ ಕಿಷ್ಕಿಂಧ ಪ್ರದೇಶ ಸುಗ್ರೀವ ವಾಲಿಯರ ಪ್ರದೇಶ. ವಾಲಿ–ಸುಗ್ರೀವರ ಕಾಳಗ, ವಾಲಿಯ ವಧೆ ನಡೆಯುವುದು ಈ ಪ್ರದೇಶದಲ್ಲಿ ರಾಮ ಸುಗ್ರೀವನನ್ನು ಭೇಟಿಯಾಗುವುದೂ ಮತಂಗ ಪರ್ವತದಲ್ಲಿ. ಕಾರ್ತಿಕೇಯ ವನದ ಉಲ್ಲೇಖ 10–13ನೆಯ ಶತಮಾನದ ಕುಡತಿನಿ ಮತ್ತು ಕೊಳಗಲ್ಲು ಶಾಸನಗಳಲ್ಲಿ ಬರುತ್ತದೆ. ಈ ಭಾಗದ ಕಬ್ಬಿಣ ಅದಿರನ್ನು ಹೊಂದಿದ ಬೆಟ್ಟ ಸಾಲುಗಳಲ್ಲಿ ಕಾರ್ತಿಕೇಯ ತಪೋವನ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಪ್ರಮುಖ ಕೇಂದ್ರವಾಗಿ ಪ್ರಾಚೀನಕಾಲದಿಂದಲೂ ಮುಂದುವರೆದಿತ್ತೆಂಬುದು ಗಮನಿಸಬೇಕಾದ ಸಂಗತಿ.

ರಾಮ ವಾಲಿಯನ್ನು ಕೊಂದ ಸ್ಥಳ ಆನೆಗುಂದಿಯ ತಾರಾ ಬೆಟ್ಟವೆಂಬುದು ಜನಪದರ ನಂಬಿಕೆ. ಈ ಭಾಗದ ಜನಪದರ ರಂಗಭೂಮಿಯಲ್ಲಿ ರಾಮಾಯಣದ ಪ್ರಸಂಗಗಳು ಮಹತ್ವದ ಸ್ಥಾನ ಪಡೆದು ಪ್ರದರ್ಶನಗೊಳ್ಳುತ್ತವೆ. ರಂಗಭೂಮಿಯ ಪ್ರಾಚೀನ ರೂಪವೆಂದು ಹೇಳಲಾಗುವ ಹಗಲು ವೇಷಗಾರರು ಇಂಥ ಘಟನೆಗಳನ್ನು ಕಥಾಪ್ರಸಂಗವಾಗಿ ಪ್ರದರ್ಶನ ನೀಡುತ್ತಾರೆ. ಈ ಎಲ್ಲ ಸನ್ನಿವೇಶ, ಐತಿಹಾಸಿಕ ಕುರುಹುಗಳೂ ಜನಪದರ ನಂಬಿಕೆಗಳಲ್ಲಿ ಹಂಪಿ–ಆನೆಗುಂದಿ ಪರಿಸರ ರಾಮಾಯಣದ ಕಿಷ್ಕಿಂಧವಾಗಿ ಪ್ರಮುಖ ಸ್ಥಾನ ಪಡೆದುಕೊಂಡಿದೆ.(ವಿ.ಬಿ.)

**ಕುಂತಾಸಿ:** ಗುಜರಾತ್ ರಾಜ್ಯದ ಕಚ್ಛ್ ಮತ್ತು ಸೌರಾಷ್ಟ್ರದ ಗಡಿ ಪ್ರದೇಶದಲ್ಲಿ, ಮೊರಬಿ ಪಟ್ಟಣದಿಂದ 35ಕಿಮೀ ಉತ್ತರಕ್ಕೆ ಘುಲಿ ನದಿಯ ಎಡದಂಡೆಯ ಮೇಲಿರುವ ಪುರಾತತ್ತ್ವ ನೆಲೆ. ಇದು ಸಮುದ್ರತೀರದಿಂದ 5ಕಿಮೀ ದೂರದಲ್ಲಿದೆ. ಇಲ್ಲಿ ಪ್ರಾಚೀನ ಅವಶೇಷಗಳುಳ್ಳ 5ಮೀ ಎತ್ತರದ ಒಂದು ದಿಬ್ಬವಿದೆ. ಇಲ್ಲಿ ಪ್ರೌಢ (ಪ್ರ.ಶ.ಪೂ.2200–1900) ಹಾಗೂ ಅಂತ್ಯ ಹರಪ್ಪ (ಪ್ರ.ಶ.ಪೂ.1900–1700) ಹಂತಗಳು ದಾಖಲಾಗಿವೆ. ಪುಣೆಯ ಡೆಕ್ಕನ್ ಕಾಲೇಜು ಮತ್ತು ಗುಜರಾತ್ ರಾಜ್ಯದ ಪುರಾತತ್ತ್ವ ಇಲಾಖೆಗಳಿಂದ ಇಲ್ಲಿ ಮೂರು ವರ್ಷ (1987–89) ಉತ್ಖನನ ನಡೆಯಿತು.

ಹರಪ್ಪ ನಾಗರಿಕರು ಗುಜರಾತಿನ ಮೂಲ ನಿವಾಸಿಗಳಲ್ಲ, ಸಿಂಧ್ ಪ್ರದೇಶದಿಂದ ವ್ಯಾಪಾರಕ್ಕಾಗಿ ಬಂದವರು. ಗುಜರಾತ್‌ನಲ್ಲಿ ಅವರ ಉಚ್ಛ್ರಾಯ ಕಾಲ ಪ್ರ.ಶ.ಪೂ.2200–1900ರ ಅವಧಿ. ಇವರ ಆಗಮನ ಎರಡು ಹಂತಗಳಲ್ಲಿ ಕಂಡುಬರುತ್ತದೆ. ಒಂದನೆಯ ಹಂತದಲ್ಲಿ (ಪ್ರ.ಶ.ಪೂ.2500–2200) ಲೋಥಲ್ ಮತ್ತು ಧೋಲಾವೀರದಂಥ ಕೆಲವು ಪಟ್ಟಣಗಳು ಇದ್ದವು. ಎರಡನೆಯ ಹಂತದಲ್ಲಿ (ಪ್ರ.ಶ.ಪೂ.2200–1900) ಇಡೀ ಸೌರಾಷ್ಟ್ರದಲ್ಲಿ ಹರಪ್ಪ ನಾಗರಿಕರು ನೆಲೆಸಿದ್ದರು.

ಕುಂತಾಸಿಯ ಅವಶೇಷಗಳಲ್ಲಿ ಸಿಕ್ಕಿರುವ ಕಟ್ಟಡಗಳನ್ನು ನಾಲ್ಕು ಅನುಕ್ರಮ ಹಂತಗಳಲ್ಲಿ (ಎ, ಬಿ, ಸಿ, ಡಿ) ಗುರುತಿಸಬಹುದು. ಎ, ಬಿ, ಸಿ ಉಪಹಂತಗಳು ಪ್ರೌಢ ಹರಪ್ಪ ಕಾಲಕ್ಕೂ ಡಿ ಉಪಹಂತ ಅಂತ್ಯ ಹರಪ್ಪ ಕಾಲಕ್ಕೂ ಸೇರುತ್ತವೆ. ಪ್ರೌಢ ಹರಪ್ಪ ಹಂತದಲ್ಲಿ ಘನಾಕಾರದ ಚರ್ಟ್ ಕಲ್ಲಿನ ತೂಕದ ಬಟ್ಟುಗಳು, ಸುಟ್ಟಮಣ್ಣಿನ ಎತ್ತಿನ ಗಾಡಿಗಳು, ಮೂಳೆಯ ದಬ್ಬಳ,

ಚರ್ಟ್ ಕಲ್ಲಿನ ಹರಿತ ನೀಳ ಚಕ್ಕೆಗಳು, ಅಮೂಲ್ಯ ಕಲ್ಲು, ಆನೆದಂತ, ಬಳಪದ ಕಲ್ಲಿನ ಮಣಿಗಳು, ಕಾರ್ನೀಲಿಯನ್‌ನ ಕೊಳವೆಯಾಕಾರದ ಮಣಿ ಸಿಕ್ಕಿವೆ. ಪುಟ್ಟ ಮಡಕೆಯಲ್ಲಿ ಇಟ್ಟಿದ್ದ ತಾಮ್ರದ ಆಭರಣಗಳ ಒಂದು ಸಂಗ್ರಹ ಕೂಡ ಇಲ್ಲಿ ಸಿಕ್ಕಿದೆ. ತಾಮ್ರದ ಬಳೆಗಳು, ಒಂದು ಸಾವಿರಕ್ಕಿಂತ ಹೆಚ್ಚು ಬಳಪದ ಕಲ್ಲಿನ ಮಣಿಗಳು, ತಾಮ್ರದ ಎರಡು ಉಂಗುರಗಳು ಇದರೊಳಗಿದ್ದವು. ತಂತಿಯನ್ನು ಸುರುಳಿ ಸುತ್ತಿ ಮಾಡಿರುವ ಉಂಗುರಗಳು ಅಪೂರ್ವವಾದುವು. ಈ ಸಂಗ್ರಹ ಸಿಕ್ಕಿದ ಕಟ್ಟಡ ಭದ್ರತಾ ಅಧಿಕಾರಿಯ ಮನೆಯೆಂದು ಊಹಿಸಲಾಗಿದೆ. ಹತ್ತಿರದಲ್ಲಿಯೆ ಮುಖ್ಯ ಪುರೋಹಿತನ ಮನೆಯನ್ನು ಗುರುತಿಸಲಾಗಿದೆ. ಊರಿನ ಪಶ್ಚಿಮ ಭಾಗದಲ್ಲಿ ಔದ್ಯೋಗಿಕ ಸಂಕೀರ್ಣವಿತ್ತು. ಇಲ್ಲಿ ಚೌಕಾಕಾರದ, ಫೇಂಸ ಎನ್ನುವ ಬರೆಹವುಳ್ಳ ಒಂದು ಫಯಾನ್ಸ್ ಮುದ್ರೆ ದೊರಕಿದೆ. ಹತ್ತಿರದಲ್ಲೇ ಧಾನ್ಯದ ಉಗ್ರಾಣಗಳಿವೆ. ವಿಶಾಲ



ತಾಮ್ರ ಲೋಹಾರರ ಮನೆ

ವಾದ ಕೋಣೆಗಳ ಈ ಸಂಕೀರ್ಣ ಮುಖ್ಯಸ್ಥನ ಮನೆಯಾಗಿರಬಹುದು. ಮುದ್ರೆಯೂ ಅವನದೇ ಆಗಿರಬಹುದು. ಇದಲ್ಲದೆ ಕುಲುಮೆಗಳು, ದೊಡ್ಡ ಒಲೆಗಳು ಇದರೊಳಗೆ ಇದ್ದವು. ಈ ಹಂತದ ಮಣ್ಪಾತ್ರೆಗಳಲ್ಲಿ S ಆಕಾರದ ಹೂಜಿ, ಚೂಪಾದ ತಳ ಇರುವ ಹೂಜಿ (ಗಾಬ್ಲೆಟ್), ಹಿಡಿಯುಳ್ಳ ಬಟ್ಟಲುಗಳು ಮತ್ತು ವಿಭಿನ್ನ ಸಸ್ಯಗಳ ಚಿತ್ರಣವುಳ್ಳ ಸುಂದರ ತಟ್ಟೆಗಳು ಇವೆ.

ಅಂತ್ಯಹರಪ್ಪ ಕಾಲದಲ್ಲಿ ಪರದೇಶದೊಂದಿಗಿನ ವ್ಯಾಪಾರ ಕಡಿಮೆಯಾಗುತ್ತ ಬಂತು. ಕುಂತಾಸಿ ಒಂದು ಔದ್ಯೋಗಿಕ ಸಂಕೀರ್ಣ ಮತ್ತು ವ್ಯಾಪಾರ ಕೇಂದ್ರವಾದುದರಿಂದ ಇದರ ಪ್ರಭಾವ ತೀಕ್ಷ್ಣವಾಗಿತ್ತು. ಈ ಕಾಲದ ಮಣ್ಪಾತ್ರೆಗಳು ಹೆಚ್ಚು ಅಲಂಕರಣಗಳಿಲ್ಲದೆ ಸರಳವಾಗಿವೆ. ಸುತ್ತಲೂ ಮನೆಗಳು, ಮಧ್ಯದಲ್ಲಿ ವಿಶಾಲ ಜಾಗ ಇರುವ ಈ ವಸತಿ ಎರಡು ಕೋಟೆಗಳಿಂದ ಸುತ್ತುವರೆಯಲ್ಪಟ್ಟಿತ್ತು. ಪೂರ್ವದ ಪ್ರವೇಶದ್ವಾರ 3 ಮೀ ಅಗಲ ಇತ್ತು. ಎರಡು ಕಡೆ ಆಯತಾಕಾರದ ಕೊತ್ತಳಗಳಿದ್ದವು. ಆದರೆ ಲೋಥಲ್‌ನಲ್ಲಿದ್ದಂತೆ ಇಲ್ಲಿನ ಪಟ್ಟಣದಲ್ಲಿ ದಿಬ್ಬದ ಮೇಲಿನ ಕೋಟೆ ಮತ್ತು ನೆಲಮಟ್ಟದಲ್ಲಿಯ ಕೆಳನಗರ ಎಂಬ ಎರಡು ವಿಭಾಗಗಳು ಇರಲಿಲ್ಲ. ಇದು ಕೋಟೆಯಿಂದಾವೃತವಾಗಿದ್ದರೂ ಇಲ್ಲಿ ಸೈನ್ಯದ ಕಾವಲು, ದಂಡು ಇರಲಿಲ್ಲ. ಹತ್ತಿರದ ನದಿಯ ನೀರು ಈಗಲೂ ಉಪ್ಪಾಗಿರುವುದರಿಂದ ಇದು ಕೃಷಿ ವಸತಿ ಆಗಿರುವ ಸಾಧ್ಯತೆಯಿಲ್ಲ.

ಕುಂತಾಸಿಯ ಭೌಗೋಳಿಕ ಸನ್ನಿವೇಶವನ್ನು ನೋಡಿದರೆ ಈಗ 5 ಕಿಮೀ ದೂರವಿರುವ ಸಮುದ್ರ ಆಗ 1.5 – 2ಕಿಮೀ ಇದ್ದಿರಬಹುದು. ಲೋಥಲ್‌ನಂತೆ ಇಲ್ಲಿಯೂ ಸಮುದ್ರದ ನೀರಿನ ಮಟ್ಟ ಏರಿದಾಗ ದೋಣಿ–ಹಡಗುಗಳು ಊರಿನ ಸಮೀಪ ಬಂದು ನಿಲ್ಲಲು ವ್ಯವಸ್ಥೆಯಿದ್ದಿರಬೇಕು. ಈ ಮೂಲಕ ಕುಂತಾಸಿಯಲ್ಲಿ ತಯಾರಾದ ವಸ್ತುಗಳು ಹೊರದೇಶಕ್ಕೆ ರಫ್ತಾಗುತ್ತಿದ್ದವು. (ಯು.ಎಸ್.)

**ಕುರ್ಗನ್ ಸಂಸ್ಕೃತಿ:** ಕಂಚಿನ ಯುಗದ ಒಂದು ವಿಶಿಷ್ಟ ಪ್ರಕಾರದ ದಿಣ್ಣೆಗಳು. ಕುರ್ಗನ್ ರಷ್ಯನ್‌ಪದ ಎಂದು ಗುರುತಿಸಲಾಗಿದೆ. ಇದರ ಅರ್ಥ ಶವಸಂಸ್ಕಾರದ ದಿಣ್ಣೆ. ಈ ಶವ ದಿಣ್ಣೆಗಳು ಒಂದು ಕುಲದವರದಾಗಿರಬಹುದು; ಇಲ್ಲವೆ ಒಬ್ಬ ವ್ಯಕ್ತಿಯದಾಗಿರಬಹುದು. ಈ ಜನ ಸಮುದಾಯಗಳ ಮುಖ್ಯಸ್ಥ ವ್ಯಕ್ತಿಗಳಿಗೆ ಪ್ರತ್ಯೇಕ ಶವದಿಣ್ಣೆಗಳನ್ನು ಮಾಡಲಾಗುತ್ತಿತ್ತು. ಈ ಜನ ಬಹುಮಟ್ಟಿಗೆ ಭಾರತೀಯ–ಐರೋಪ್ಯ ಪೂರ್ವ ಹಂತದ ಭಾಷೆಯನ್ನು ಆಡುತ್ತಿದ್ದರೆಂದು ತಿಳಿಯಲಾಗಿದೆ. ಬೈಕಲ್ ಸರೋವರದಿಂದ ಕಪ್ಪು ಸಮುದ್ರ ದವರೆಗೆ ದೊರೆತಿರುವ ಸ್ಥಳನಾಮಗಳಲ್ಲಿ ಕುರಗನ್ ಪದ ಕೂಡ ಒಂದು. ಈ ದಿಣ್ಣೆಗಳು ರಷ್ಯದ ಅಲೆಮಾರಿ ಸಮುದಾಯದ್ದೆಂದೂ ಅಲ್ತೆ ಪರ್ವತ ಪ್ರದೇಶದಿಂದ ಕಕೇಶಿಯನ್ ಮತ್ತು ರೊಮೇನಿಯ ಪ್ರದೇಶದವರೆಗೆ ಪ್ರಸರಿಸಿದ್ದರೆಂದು ಗೊತ್ತು ಮಾಡಲಾಗಿದೆ. ಇದೇ ಬಗೆಯ ಶವದಿಣ್ಣೆಗಳನ್ನು ಇಪತೊವೊ ಕುತುಲಕ್ (ಸಮರ ಹತ್ತಿರ) ನವೋವೆಲಿಚ್‌ಕೋವ್ ವ್‌ಸ್ಕಯ, ಇಸ್ಸಿ ಬುಕ್ತರ್‌ಮ ನದಿ ಪ್ರದೇಶ, ಅಲ್ಕೆಸನ್‌ದ್ರೋವು ಹಗ ಮುಂತಾದೆಡೆಗಳಲ್ಲಿ ಉತ್ಖನನ ಮಾಡಲಾಗಿದೆ. ಮೊದಲನೆಯ ಸ್ಥಳದಲ್ಲಿ ಪ್ರಶ.ಪೂ. 4000ದ ಮೆಕಾಪ್ಸ್ ಸಂಸ್ಕೃತಿ ಹಂತದಿಂದ ಪ್ರ.ಶ.ಪೂ. 3ನೆಯ ಶತಮಾನದವರೆಗಿನ ಶವಕುಣಿಗಳನ್ನು ಗುರುತಿಸಲಾಗಿದೆ. ಕಡ್ವಲ್ ಸಂಸ್ಕೃತಿಯ ಒಂದು ಶವದಿಣ್ಣೆಯ ಉತ್ಖನನದಲ್ಲಿ ಅಸ್ಥಿಪಂಜರದ ಎಡ ಮೊಣಕೈ ಮೇಲೆ 65 ಸೆಂಮೀ ಉದ್ದದ ಒಂದು ತಾಮ್ರದ ವಸ್ತುವಿದ್ದಿತು. ಇದರ ಹಿಡಿಕೆಯ ಬಾಯಿ ವಜ್ರಾಕೃತಿಯಂತೆ ಹರಿತವಾಗಿತ್ತು. ಕುತೂಹಲಕಾರಿ ವಿಷಯವೆಂದರೆ ಇದನ್ನು ಉತ್ಖನನಕಾರರು ಭಾರತೀಯ ವೈದಿಕಧರ್ಮದ ಇಂದ್ರಾಯುದ್ಧಕ್ಕೆ ಹೋಲಿಸಿದ್ದಾರೆ. ಮೋವೋವೇಲಿಚ್‌ಕೋವ್ ವ್‌ಸ್ಕಯದಲ್ಲಿಯ ಪ್ರ.ಶ.ಪೂ. 2000ವರ್ಷದ ಒಂದು ಶವ ದಿಣ್ಣೆಯಲ್ಲಿ 11 ವ್ಯಕ್ತಿಗಳ ಅಸ್ಥಿ ಪಂಜರಗಳು ದೊರಕಿವೆ. ಇವುಗಳಲ್ಲಿ ಎರಡು ಒಂದನೊಂದು ಅಪ್ಪಿಕೊಂಡಂತಿವೆ. ಜೊತೆಗೆ ಕಂಚಿನ ಉಪಕರಣಗಳು, ಕಲ್ಲಿನ ಕೆತ್ತನೆಗಳು, ರತ್ನ ಖಚಿತ ಆಭರಣಗಳು, ಸಿತಿಯ ಸಂಸ್ಕೃತಿಯ ಪ್ರಾಣಿಗೊಂಬೆಗಳು ದೊರೆತಿವೆ. ಕಜಕಸ್ತಾನದ ಭುಕ್ತರ್ ನದಿಯ ಪ್ರದೇಶದ ಬೇರೆಲ್ ಸ್ಮಶಾನದಲ್ಲಿ ಪ್ರ.ಶ.ಪೂ.300ರ ಒಂದು ಶವ ದಿಣ್ಣೆಯಲ್ಲಿ ಬೂರ್ಜಮರದ ತೊಗಟೆ ಮೇಲೆ ಸಾಲಾಗಿದ್ದ, ಆಹುತಿ ಕೊಟ್ಟ 12 ಕುದುರೆಗಳು, ಅವುಗಳ ಜೀನು ಮುಂತಾದವು ದೊರಕಿರುವುದು ಒಂದು ಅಪೂರ್ವ ಶೋಧನೆ. ಉತ್ಖನನ ಮಾಡಿದ ಕೆಲವು ಶವದಿಣ್ಣೆಗಳಲ್ಲಿ ಕೊಠಡಿಗಳಿಂದ ಕೂಡಿದ ಸಂಕೀರ್ಣ ಕಟ್ಟಡವಿದ್ದಿತ್ತು. ಉಚ್ಚ ವರ್ಗದ ವ್ಯಕ್ತಿಗಳ ಶವದೊಡನೆ ಕುದುರೆ ಮತ್ತು ಪಾತ್ರೆಗಳು ಆಯುಧೋಪಕರಣಗಳನ್ನೂ ಇಡಲಾಗುತಿತ್ತು. ಕೆಲವು ದಿಣ್ಣೆಗಳು ಸು. 20ಮೀ ಎತ್ತರವಿದ್ದು ಮತ್ತೂ ಎತ್ತರದ ಪ್ರದೇಶದಲ್ಲಿ ಈ ದಿಣ್ಣೆಗಳು ಕೆಲವು ಕಿಮೀವರೆಗೆ ಸಾಲುಸಾಲಾಗಿ ಇರುತ್ತಿದ್ದವು. ಇವುಗಳ ಉತ್ಖನನದಿಂದ ಸಿತಿಯ ಜನಾಂಗದ ಜೀವನ ಶೈಲಿ ಮತ್ತು ಕಲೆ ತಿಳಿಯಲು ಸಾಧ್ಯವಾಗಿದೆ. 1956ರಲ್ಲಿ ಮರಿಜ ಜಿಂಬುತಾಸ ಎಂಬಾತ ಇಂಥ ದಿಣ್ಣೆಗಳ ಉತ್ಖನನದಿಂದ ತಿಳಿದುಬಂದ ಸಂಸ್ಕೃತಿಯನ್ನು ಭಾರತೀಯ–ಐರೋಪ್ಯ ಭಾಷೆಗಳನ್ನು ಮಾತನಾಡುವ ಜನಸಮುದಾಯದ ಮೂಲವನ್ನು ಕಂಡುಹಿಡಿಯಲು ಭಾಷ ವಿಜ್ಞಾನದೊಂದಿಗೆ ಸಮನ್ವಯ ಮಾಡಿದಾಗ ಸಾಧ್ಯವಾಗಬಹುದೆಂಬ ಪ್ರಮೇಯವನ್ನು ಮುಂದಿಟ್ಟ. ಇದು ಭಾರತೀಯ–ಐರೋಪ್ಯ ಸಂಶೋಧನೆ ಮೇಲೆ ಗಂಭೀರವಾದ ಪ್ರಭಾವವನ್ನು ಬೀರಿತು. ಹೀಗೆ ಪ್ರಭಾವಿತರಾದ ಕೆಲವು ತಜ್ಞರು ಕುರ್ಗನ್ ಸಂಸ್ಕೃತಿಯ ಜನ ಭಾರತೀಯ–ಐರೋಪ್ಯ ಜನ ಸಮುದಾಯದ ಮೂಲಪುರುಷರ ವಿಶಿಷ್ಟಲಕ್ಷಣಗಳನ್ನು ಸೂಚಿಸುತ್ತವೆಯೆಂದೂ ಇವರು ಪ್ರ.ಶ.ಪೂ.5000–3000 ಅವಧಿಯಲ್ಲಿ ಇದ್ದಿರಬಹುದೆಂದೂ ಅಭಿಪ್ರಾಯ ಪಟ್ಟಿದ್ದಾರೆ. (ಎ.ಎಸ್; ಎನ್.ಎಲ್.)

**ಕುಚೈ:** ಒರಿಸ್ಸರಾಜ್ಯದ ಮಯೂರಭಂಜ್ ಜಿಲ್ಲೆಯಲ್ಲಿರುವ ನವಶಿಲಾಯುಗ ವಸತಿನೆಲೆ. 1961–62ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬಿ.ಕೆ.ಥಾಪರ್ ಇಲ್ಲಿ ಉತ್ಖನನ ನಡೆಸಿದರು. ಕೆಳಗಿನ ಪದರದಲ್ಲಿ ಸೂಕ್ಷ್ಮ ಶಿಲಾಯುಗದ ಅವಶೇಷಗಳೂ ಮೇಲ್ಪದರ ದಲ್ಲಿ ನವಶಿಲಾಯುಗದ ಅವಶೇಷಗಳೂ ಕಂಡುಬಂದವು. ಗೀರಿನ ಅಥವಾ ಬೆರಳಿನಿಂದ ಮೂಡಿಸಿದ ಅಲಂಕರಣವುಳ್ಳ ದೊರಕುಮಣ್ಣಿನ ಕೆಂಪುಪಾತ್ರೆಗಳು, ನಯಗೊಳಿಸಿದ ಕಲ್ಲಿನ ಕೊಡಲಿಗಳು, ಉಳಿ, ಕುಟ್ಟಾಣಿ, ಅರೆಯುವ ಕಲ್ಲುಗಳು ನವಶಿಲಾಯುಗದ ಅವಶೇಷ ಗಳಾಗಿವೆ. ಅಲಗು, ಮೊನೆ, ಹೆರಚಕ್ಕೆ ಮುಂತಾದ ಅನಿರ್ದಿಷ್ಟ ಆಕೃತಿಯ ಸೂಕ್ಷ್ಮ ಶಿಲೋಪ ಕರಣಗಳು ಕೆಳಪದರದಲ್ಲಿ ದೊರೆತ ವಸ್ತುಗಳು. ಶೌಲನಿಕ ಆಧಾರದ ಮೇಲೆ ನವಶಿಲಾಯುಗವನ್ನು ಪ್ರ.ಶ.ಪೂ. 2ನೆಯ ಸಹಸ್ರಮಾನದ ಕೊನೆಯ ಭಾಗಕ್ಕೆ ಸೇರಿಸಲಾಗಿದೆ. ಒರಿಸ್ಸದಲ್ಲಿ ಸೂಕ್ಷ್ಮಶಿಲೋಪಕರಣಗಳೂ ನವಶಿಲಾಯುಗದ ಉಪಕರಣಗಳ ಜೊತೆ ಮಣ್ಪಾತ್ರೆಗಳೂ ಮೊದಲಿಗೆ ಕಂಡುಬಂದಿರುವುದು ಇದೇ ನೆಲೆಯಲ್ಲಿ. (ವಿ.ಎಸ್.)

**ಕುಡುತಿನಿ:** ಬಳ್ಳಾರಿ ಜಿಲ್ಲೆಯಲ್ಲಿರುವ ನವಶಿಲಾಯುಗದ ಬೂದಿದಿಬ್ಬ. ಬಳ್ಳಾರಿಯಿಂದ 25 ಕಿಮೀ ದೂರದಲ್ಲಿದೆ. ಇದನ್ನು ಬೂದಿಕಣಮ, ಬೂದಿಗುಂಟ ಎಂದೂ ಕರೆಯಲಾಗುತ್ತದೆ. ದಿಬ್ಬದ ಪೂರ್ವಕ್ಕಿರುವ ಬಳ್ಳಾರಿ ಗುಡ್ಡ ಹಾಗೂ ಪಶ್ಚಿಮಕ್ಕೆ 3 ಕಿಮೀ ದೂರದಲ್ಲಿರುವ ತೋರಣಗಲ್ಲು ಗುಡ್ಡದ ಬಳಿ ನವಶಿಲಾಯುಗದ ವಸತಿ ಅವಶೇಷಗಳಿವೆ. 1840ರ ದಶಕದಲ್ಲಿ ನ್ಯೂಬೋಲ್ಡ್ ಈ ದಿಬ್ಬವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದ. ಆಗ ದಿಬ್ಬ 14 ಮೀ ಎತ್ತರವಿದ್ದು 126 ಮೀ ಸುತ್ತಳತೆಯನ್ನು ಹೊಂದಿತ್ತು. ಇದೇ ಶತಮಾನದ ಕೊನೆಯ ದಶಕಗಳಲ್ಲಿ ಕೋಲ್ ಹಾಗೂ ಬ್ರೂಸ್‌ಫುಟ್ ಇಲ್ಲಿ ಸರ್ವೇಕ್ಷಣೆ ನಡೆಸಿದರು. ಕಲ್ಲಿನ ಕೊಡಲಿ, ಮಣ್ಪಾತ್ರೆ, ಅರೆಯುವ ಕಲ್ಲು ಮುಂತಾದ ಅವಶೇಷಗಳನ್ನು ಇಲ್ಲಿಂದ ಸಂಗ್ರಹಿಸಿದ ಬ್ರೂಸ್‌ಫುಟ್ ಜಾನುವಾರುಗಳ ಸಗಣಿಯನ್ನು ಇಲ್ಲಿ ರಾಶಿ ಹಾಕಿ ಸುಟ್ಟಿದ್ದರಿಂದ ದಿಬ್ಬ ನಿರ್ಮಾಣಗೊಂಡಿರ

ಬೇಕೆಂದು ತರ್ಕಿಸಿದ. ಲಾಂಗ್‌ಹರ್ಸ್ಟ್ ಇಲ್ಲಿ 1916ರಲ್ಲಿ ಉತ್ಖನನ ಮಾಡಿದ. ಆಗಲೇ ರಸ್ತೆ ನಿರ್ಮಾಣದಿಂದಾಗಿ ದಿಬ್ಬದ ಸಾಕಷ್ಟು ಭಾಗ ನಿರ್ನಾಮವಾಗಿತ್ತು. 1957ರಲ್ಲಿ ಅಲ್ಚಿನ್ ಇಲ್ಲಿ ಸಂಶೋಧನ ಕಾರ್ಯ ಆರಂಭಿಸಿದಾಗ ದಿಬ್ಬ ಮತ್ತಷ್ಟು ನಾಶವಾಗಿತ್ತು. ಗೋಲಾಕಾರದಲ್ಲಿದ್ದ ಇದರ ಆಗಿನ ಎತ್ತರ 5.4ಮೀ; ವ್ಯಾಸ 65ಮೀ. ಒಟ್ಟು 12 ಪದರಗಳನ್ನು ಇವನು ಗುರುತಿಸಿದ. ಅತ್ಯಂತ ಕೆಳ ಪದರ ಕೆಂಪು ಗರಸು ಮಣ್ಣಿನದಾಗಿದ್ದು ಇದನ್ನು ಉದ್ದೇಶಪೂರ್ವಕವಾಗಿ ನಿರ್ಮಿಸಿದಂತೆ ತೋರುತ್ತದೆ. 9 ಬೂದಿಯ ಪದರಗಳು ಇಲ್ಲಿದ್ದು ಇವು ಸೆಗಣಿ ರಾಶಿಯನ್ನು ಬೇರೆ ಬೇರೆ ಸಂದರ್ಭದಲ್ಲಿ ಸುಟ್ಟಾಗ ಆದಂತಹವು. ಕೆಲವೊಮ್ಮೆ ಸಗಣಿ ಪೂರ್ಣ ದಹಿಸಿದ ಅನಂತರ ಅದರ ಮೇಲೆ ಮಣ್ಣಿನ ತೆಳು ಪದರ ಹಾಸಿ ಸಮತಟ್ಟು ಮಾಡಲಾಗಿದೆ.



ನಾಲ್ಕು ಕಾಲಿನ ಮಣ್ಣಿನ ಶವಪೆಟ್ಟಿಗೆ

ಕೆಲವೆಡೆ ಸೆಗಣಿ ಪೂರ್ಣ ಬೂದಿಯಾಗಿ ಗಾಜಿನ ಕಿಟ್ಟದ (ವೆಟ್ರಿಫಿಕೇಷನ್) ರೂಪ ಪಡೆದುಕೊಂಡಿದೆ. 1ನೆಯ ಮತ್ತು 4ನೆಯ ಪದರಗಳಲ್ಲಿ ನವಶಿಲಾಯುಗದ ಸಾಂಸ್ಕೃತಿಕ ಅವಶೇಷಗಳಿವೆ. ಬೂದು-ಕಂದು ಬಣ್ಣ, ಬೂದು-ಕಪ್ಪು ಬಣ್ಣ, ಕಿತ್ತಳೆ-ಕಂದು ಬಣ್ಣದ ಮಣ್ಪಾತ್ರೆಗಳೂ ಜಾನುವಾರುಗಳ ದವಡೆ, ಕೊಂಬು, ಮೂಳೆಗಳೂ ಈ ಪದರಗಳಲ್ಲಿದ್ದವು. 1ನೆಯ ಪದರದಲ್ಲಿ ಮೇಲಿನ ಮಣ್ಪಾತ್ರೆಗಳಲ್ಲದೆ ಕಪ್ಪು-ಕಂದು ಬಣ್ಣ ಹಾಗೂ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಯ ಕೆಲವೊಂದು ಚೂರುಗಳಿದ್ದವು. 2002ರಲ್ಲಿ ರವಿ ಕೋರಿಸೆಟ್ಟರ ಅವರ ತಂಡ ಇಲ್ಲಿ ಅಗೆದ ಪರೀಕ್ಷಾ ಗುಂಡಿಯಲ್ಲಿ ಅಪರೂಪದ ಅವಶೇಷ ಬೆಳಕಿಗೆ ಬಂದಿತು. ಒಂದರ ಮೇಲೊಂದಿಟ್ಟ 3 ಪೂರ್ಣ ಮಡಕೆಗಳ ಕೆಳಗೆ ಮಣ್ಣಿನ ಆರು ಕಾಲಿನ ಶವಪೆಟ್ಟಿಗೆ ಇಲ್ಲಿತ್ತು. ಇದರೊಳಗೆ 6-7 ವರ್ಷದ ಮಗುವನ್ನು ಸಮಾಧಿಗೊಳಿಸಲಾಗಿತ್ತು. ಉತ್ತರ-ದಕ್ಷಿಣಾಭಿಮುಖವಾಗಿದ್ದ ಈ ಪೆಟ್ಟಿಗೆಯ ಸುತ್ತಲಿಟ್ಟಿದ್ದ 13 ಗಡಿಗೆಗಳಲ್ಲೂ ಮಗುವಿನ ಕೆಲವೊಂದು ಮೂಳೆಗಳನ್ನು ಇಡಲಾಗಿತ್ತು. ಈ ಸಮಾಧಿ ನವಶಿಲಾಯುಗದ ಅಂತಿಮ ಹಂತಕ್ಕೆ ಸೇರುತ್ತದೆ.

ಈ ಸ್ಥಳವನ್ನು ಸಗಣಿರಾಶಿ ಹಾಕಲು ಏಕೆ ಆಯ್ದುಕೊಂಡರು ಎಂಬುದು ಕುತೂಹಲಕಾರಿ. ವರ್ಷಕ್ಕೆರಡು ಬಾರಿ (ಏಪ್ರಿಲ್ ಹಾಗೂ ಸೆಪ್ಟೆಂಬರ್) ಇಲ್ಲಿಂದ ತೋರಣಗಲ್ಲು ಗುಡ್ಡದ ಹಿಂಭಾಗದಲ್ಲಿ ಸೂರ್ಯ ಮುಳುಗುವುದನ್ನು ಕಾಣಬಹುದು. ಪ್ರಾಯಶಃ ಈ ಸುಂದರ ದೃಶ್ಯವೇ ನೆಲೆಯ ಆಯ್ಕೆಗೆ ಪ್ರೇರಣೆಯಾಗಿದ್ದಿರಬೇಕು. (ಆರ್‌ಕೆ.ಎಸ್.)

**ಕುಣಾಲ್:** ಹರಿಯಾಣ ರಾಜ್ಯದ ಫತೇಹಾಬಾದ್ ಜಿಲ್ಲೆಯ ರತಿಯ ತಾಲ್ಲೂಕಿನಲ್ಲಿರುವ ಪುರಾತತ್ತ್ವನೆಲೆ. ಪ್ರಾಚೀನ ಸರಸ್ವತಿ ಮತ್ತು ದೃಶದ್ವತಿ (ವರ್ತಮಾನದ ಘಗ್ಗರ್ ಮತ್ತು ಚೌತಂಗ) ನದಿತೀರದ ನೆಲೆಗಳಲ್ಲಿ ಈಚೆಗೆ ನಡೆದ ಉತ್ಖನನಗಳ ಪೈಕಿ (ರಾಖಿಗಡಿ, ಬನಾವಳಿ, ಮಿಟಾತಲ್, ಸೋಥಿ, ಭಿರಡಾಣ ಇತ್ಯಾದಿ) ಅತಿಪ್ರಾಚೀನವಾದ ಗ್ರಾಮ್ಯ ಸಂಸ್ಕೃತಿಯ ಅವಶೇಷಗಳು ಇಲ್ಲಿ ಕಂಡುಬಂದಿವೆ.

ಪಾಕಿಸ್ತಾನದಲ್ಲಿ ಸಿಂಧು ಬಯಲಿಗೆ ವಾಯವ್ಯದಲ್ಲಿ ಇರುವ ಬಲೂಚಿಸ್ತಾನದ ಗಿರಿ ಪ್ರದೇಶದಲ್ಲಿ ಕೂಡ ಇಂಥ ಗ್ರಾಮ್ಯ ಸಂಸ್ಕೃತಿಗಳ ಅವಶೇಷಗಳುಳ್ಳ ಸ್ತರಗಳು ಕಂಡುಬಂದಿದ್ದವು. ಆದರೆ ಆಗ ಈ ಸಂಸ್ಕೃತಿಗಳು ಇರಾನ್ ಮತ್ತು ಮೆಸಪೊಟೇಮಿಯ (ಇರಾಕ್) ಸಂಸ್ಕೃತಿಗಳ ಪ್ರಭಾವದಿಂದ ಹುಟ್ಟಿದುದವೆಂದು ಬಹಳಷ್ಟು ತಜ್ಞರ ಅಭಿಪ್ರಾಯವಾಗಿತ್ತು. 1974ರಲ್ಲಿ ನಡೆದ ಮೆಹರಗಡ ಉತ್ಖನನದಲ್ಲಿ ಮೊದಲ ಬಾರಿ ಹರಪ್ಪ ಸಂಸ್ಕೃತಿಯ ಸ್ಥಳೀಯ ಉಗಮ ಮತ್ತು ವಿಕಾಸ ಕಂಡುಬಂದಿತು. ಇದಕ್ಕೆ ಸದೃಶವಾದ ಬೆಳವಣಿಗೆ ಕುಣಾಲ್ ಮತ್ತು ಭಿರಡಾಣಗಳಲ್ಲಿ ದಾಖಲಾಗಿದೆ. ಹರಪ್ಪ ಸಂಸ್ಕೃತಿ ಗ್ರಾಮ್ಯ ಹಂತದಿಂದ ಕಾಲಾಂತರದಲ್ಲಿ ಪರಿವರ್ತನೆಗೊಂಡು ನಗರ ಸಂಸ್ಕೃತಿಯಾಗಿರುವುದು ಈ ಉತ್ಖನನಗಳಲ್ಲಿ ಕಂಡುಬಂದಿದೆ.

ಕುಣಾಲ್ ಉತ್ಖನನದಲ್ಲಿ ಅನುಕ್ರಮವಾಗಿ Iಎ, Iಬಿ ಮತ್ತು Iಸಿ ಎಂದು ಮೂರು ಹಂತಗಳನ್ನು ಗುರುತಿಸಲಾಗಿದೆ. ಆದರೆ ಈ ಮೂರೂ ಹಂತಗಳು ಆದಿ ಹರಪ್ಪ ಸಂಸ್ಕೃತಿಗೆ ಸೇರಿವೆ. ಇಲ್ಲಿ ಪ್ರೌಢ ಹರಪ್ಪ ಸಂಸ್ಕೃತಿಯ ಅವಶೇಷಗಳು ಕಂಡುಬಂದಿಲ್ಲ.

ಹಂತ Iಎ-ಆರಂಭದಲ್ಲಿ ಇಲ್ಲಿ ನೆಲೆಸಿದವರು ಕೆಂಪು ಹುಡಿಮಣ್ಣನ್ನು (ಕಂಕರಿ ಸಾಯಿಲ್) ತಂದು ಸಮತಟ್ಟಾಗಿ ಹಾಸಿ ಅನಂತರ 2 ಮೀ ವ್ಯಾಸದ ವೃತ್ತಾಕಾರದ ಗುಂಡಿಗಳನ್ನು ತೋಡಿ ಅವುಗಳಲ್ಲಿ ವಾಸ ಮಾಡಿದರು. ಈ ಗುಂಡಿಗಳು 1.10 ಮೀ ಆಳವಿದ್ದವು. ಗುಂಡಿಯ ತಳಭಾಗವನ್ನು ದಮ್ಮಸು ಮಾಡಿದ್ದಲ್ಲದೆ, ಗೋಡೆಗಳನ್ನು ಸಾರಿಸಿ ನಯ ಮಾಡಲಾಗಿತ್ತು. ಗುಂಡಿಗಳ ಸುತ್ತ ಭೂಮಟ್ಟದಲ್ಲಿ ಮರದ ಕಂಬಗಳನ್ನು ನೆಟ್ಟ ಗುರುತು ಕಂಡುಬಂದವು. ಬಹುಶಃ ಮನೆಗಳಿಗೆ ಹುಲ್ಲು ಮಿಶ್ರಿತ ಮಣ್ಣಿನ ತಡಿಕೆ ಗೋಡೆಗಳಿದ್ದುವು. ಕೆಲವು ಗುಂಡಿಗಳಲ್ಲಿ ಅಗ್ಗಿಷ್ಟಿಕೆಯ ಅವಶೇಷಗಳಿದ್ದುವು. ಇಂಥ ನಾಲ್ಕು ಗುಂಡಿಗಳು ಮತ್ತು ಹತ್ತಿರದಲ್ಲಿಯೇ ಕಸದ ಗುಂಡಿಗಳು ಕೂಡ ಉತ್ಖನನದಲ್ಲಿ ಕಂಡುಬಂದಿವೆ. ಪಶುಪಾಲನೆ ಮತ್ತು ಕೃಷಿ ಜನರ ಮುಖ್ಯ ಉದ್ಯೋಗವಾಗಿತ್ತು. ಈ ಹಂತದ ವಿಶಿಷ್ಟ ಮಣ್ಪಾತ್ರೆಗಳನ್ನು ಹಾಕ್ರ ಪಾತ್ರೆಗಳು ಎಂದು ಗುರುತಿಸಲಾಗಿದೆ. ಈ ಪಾತ್ರೆಗಳನ್ನು ಕೈಯಲ್ಲಿ ಮತ್ತು ತಿಗುರಿಯ ಮೇಲೆ ಮಾಡಿದ್ದೆಂದು ವಿಂಗಡಿಸಲಾಗಿದೆ. ಭಿರಡಾಣ ಉತ್ಖನನದಲ್ಲಿ ಹಾಕ್ರ ಸಂಸ್ಕೃತಿಯ ಕಾಲಮಾನ ವನ್ನು ಪ್ರ.ಶ.ಪೂ. 6000 ವರ್ಷವೆಂದು ಇಂಗಾಲ -14 ಕಾಲಮಾಪನದಿಂದ ನಿರ್ಧರಿಸಲಾಗಿದೆ.

ಈ ಕಾಲದ ಮಣ್ಪಾತ್ರೆಗಳಲ್ಲಿ ಮುಖ್ಯವಾದದ್ದು ಕಪ್ಪು-ಕೆಂಪು ದ್ವಿವರ್ಣದ ಪಾತ್ರೆಗಳು, ಮಾಸಲು ಚಾಕಲೇಟ್ ಬಣ್ಣದ ಉಜ್ಜಿ ಹೊಳಪು ಮಾಡಿದ ಪಾತ್ರೆಗಳು, ಗೀರುಗಳಿಂದ ಅಲಂಕರಿಸಿದ ಮಬ್ಬಾದ ಕೆಂಪುಬಣ್ಣದ ಪಾತ್ರೆಗಳು, ಬಿಳಿಬಣ್ಣದಿಂದ ತುಂಬಿದ ಕರಿಗೆರೆಯ ಚಿತ್ರಾಕೃತಿಗಳುಳ್ಳ ಕೆಂಪುಪಾತ್ರೆ. ಇದರ ಚಿತ್ರಗಳಲ್ಲಿ ಅರಳಿಮರದ ಎಲೆಗಳು ಮತ್ತು ದೊಡ್ಡ ಕೊಂಬುಗಳಿರುವ ಕೋಣನ ರುಂಡದ ಚಿತ್ರಗಳು ಗಮನಾರ್ಹ. ಮೂಳೆಯ ಉಪಕರಣಗಳು, ಕ್ಯಾಲ್ಸೆಡನಿ ಕಲ್ಲಿನ ನೀಳ ಅಲಗುಗಳು, ತಾಮ್ರದ ಬಾಣ ಮತ್ತು ಮೀನು ಹಿಡಿಯುವ ಕೊಕ್ಕೆ ಇತರ ಮುಖ್ಯ ಅವಶೇಷಗಳು.

ಹಂತ Iಬಿ-ಈ ಹಂತದಲ್ಲಿ ವಿಶಾಲವಾದ ವಾಸಗುಂಡಿಗಳು ನಿರ್ಮಿತವಾದುವು. ಅವುಗಳ ಸುತ್ತ ಮಣ್ಣಿನ ಇಟ್ಟಿಗೆಗಳನ್ನು ಜೋಡಿಸಲಾಯಿತು. ಈ ಹಂತದಲ್ಲಿ ಮೊದಲಬಾರಿಗೆ ಇಟ್ಟಿಗೆಯ ಉಪಯೋಗವನ್ನು ಕಾಣಬಹುದು. ಆದರೆ ಇಟ್ಟಿಗೆಯ ಅಳತೆ ಯಾವುದೇ ಒಂದು ನಿರ್ದಿಷ್ಟ ಪ್ರಮಾಣದಲ್ಲಿಲ್ಲ. ಹಿಂದಿನ ಹಂತದ ಮಣ್ಪಾತ್ರೆಗಳೇ ಇಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿದ್ದವು. ಇದರಲ್ಲಿ ಬಿಳಿಬಣ್ಣ ತುಂಬಿದ ಕರಿ ಅಥವಾ ಸೆಪಿಯಾ ಬಣ್ಣದ ಗೆರೆಗಳ ಚಿತ್ರಾಕೃತಿಯಿರುವ ಕೆಂಪುಪಾತ್ರೆಗಳು ಮುಖ್ಯವಾದವು. ಇದಲ್ಲದೆ ಆದಿ ಹರಪ್ಪ ಕಾಲದ ಕಾಲಿಬಂಗನ್ I ಎಂದು ವರ್ಗೀಕರಿಸಲಾದ ಮಣ್ಪಾತ್ರೆಗಳೂ ಇದ್ದುವು. ಇವುಗಳಲ್ಲಿ ಬೂದುವರ್ಣದ ಪಾತ್ರೆಗಳು, ಒಳಭಾಗದಲ್ಲಿ ಕೊರೆದು ಅಲಂಕರಿಸಲಾದ ಬೋಗುಣಿಯಂತ ಪಾತ್ರೆಗಳು, ಮರಳು-ಮಣ್ಣು ಮಿಶ್ರಣವನ್ನು ಹೊರಬದಿಯಲ್ಲಿ ಲೇಪಿಸಿ ಒರಟು ಮಾಡಲಾದ ಮಡಕೆಯ ಪ್ರಕಾರಗಳು ಮುಖ್ಯವಾದವು. ಈ ಪಾತ್ರೆಗಳು ಸರಸ್ವತಿ-ದೃಶದ್ವತಿ ನದಿ ಪ್ರದೇಶದಲ್ಲಿಯ ಎಲ್ಲ ನೆಲೆಗಳ ಉತ್ಖನನಗಳಲ್ಲೂ ಕೆಳಗಿನ ಸ್ತರಗಳಲ್ಲಿ ಕಂಡುಬಂದಿವೆ. ಈ ಹಂತದಲ್ಲಿ ಮೊದಲ ಬಾರಿಗೆ ಗಟ್ಟಿಮುಟ್ಟಾದ ಕೆಂಪುಪಾತ್ರೆಗಳು ಕಂಡುಬರುತ್ತವೆ. ಈ ಪಾತ್ರೆಗಳನ್ನು ಪ್ರೌಢ ಹರಪ್ಪ ಸಂಸ್ಕೃತಿಯ ಪಾತ್ರೆಗಳೊಂದಿಗೆ ಹೋಲಿಸಬಹುದು. ತ್ರಿಕೋನಾಕಾರದ ಸುಟ್ಟಮಣ್ಣಿನ ಚಪ್ಪಟೆ ಬಿಲ್ಲೆಗಳು ಕೂಡ ಪ್ರೌಢ ಹರಪ್ಪ ಸಂಸ್ಕೃತಿಯ ಆರಂಭವನ್ನು ಸೂಚಿಸುತ್ತವೆ.

ಹಂತ Iಸಿ - ಆದಿ ಮತ್ತು ಪ್ರೌಢ ಹರಪ್ಪ ನಡುವಿನ ಸಂಕ್ರಮಣ ಹಂತ. ವೃತ್ತಾಕಾರದ ಗುಂಡಿ ಹಾಗೂ ಗುಡಿಸಲುಗಳ ಬದಲಾಗಿ ವ್ಯವಸ್ಥಿತವಾದ ಆಯತಾಕಾರದ ಮತ್ತು ಚೌಕಾಕಾರದ ಹಸಿ ಇಟ್ಟಿಗೆಗಳ ಮನೆಗಳು ಕಾಣಿಸಿಕೊಳ್ಳುತ್ತವೆ. ಅಡುಗೆಮನೆ ಮತ್ತು ಸ್ನಾನದ ತೊಟ್ಟಿ ಕೂಡ ಈ ಮನೆಗಳಲ್ಲಿ ಪ್ರತ್ಯೇಕವಾಗಿದ್ದವು. ಚರಂಡಿ ವ್ಯವಸ್ಥೆಯನ್ನು ಈ ಹಂತದಲ್ಲಿ ಕಲ್ಪಿಸಲಾಯಿತು. ರಸ್ತೆಯ ಅಕ್ಕಪಕ್ಕದಲ್ಲಿ ಮನೆಗಳಿಂದ ಹರಿದು ಬರುವ ಬಚ್ಚಲು ನೀರನ್ನು ಸಂಗ್ರಹಿಸುವ ಜಾಡಿಗಳನ್ನು ಹುಗಿಯಲಾಯಿತು. ಮನೆಯ ಅಂಗಳದಲ್ಲಿ ಪ್ರತ್ಯೇಕ ಕಸದ ಗುಂಡಿಗಳಿದ್ದವು.

ಈ ಹಂತವನ್ನು Iಸಿ (i) ಮತ್ತು Iಸಿ (ii) ಎಂಬ ಎರಡು ಉಪಹಂತಗಳನ್ನಾಗಿ ವಿಂಗಡಿಸಲಾಗಿದೆ. ಉಪಹಂತ Iಸಿ (i)ರಲ್ಲಿ ಸುಟ್ಟ ಧಾನ್ಯಗಳಲ್ಲದೆ, ಮಣ್ಣಿನ ಚಪ್ಪಟೆ ಬಿಲ್ಲೆ, ಇಟ್ಟಿಗೆ ಹಾಗೂ ಮಡಕೆ ಚೂರುಗಳ ಮೇಲೆ ತೌಡಿನ ಕಣಗಳ ಗುರುತು ಕಂಡುಬಂದವು. ಸಸ್ಯಬೀಜಗಳು ಮತ್ತು ಪಶುಮೂಳೆಗಳು ಗಣನೀಯ ಪ್ರಮಾಣದಲ್ಲಿದ್ದವು. ಭೂಮಿಯಲ್ಲಿ ವೃತ್ತಾಕಾರದ ಗುಂಡಿಗಳನ್ನು ತೋಡಿ ಸುಣ್ಣ ಮತ್ತು ಜೇಡಿಮಣ್ಣಿನ ಮಿಶ್ರಣವನ್ನು ಒಳಗೆ ಸಾರಿಸಿ ಮಾಡಿರುವ ಕಣಜಗಳೂ ಇದ್ದವು.

ಈ ನೆಲೆಯಲ್ಲಿ ಮನುಷ್ಯನ ಶವಸಂಸ್ಕಾರದ ಬಗ್ಗೆ ಏನೂ ತಿಳಿದುಬಂದಿಲ್ಲ. ಆದರೆ ಹಲವಾರು ಗುಂಡಿಗಳಲ್ಲಿ ಬೂದಿ ಮತ್ತು ಇದ್ದಿಲಿನ ಜೊತೆಗೆ ಸುಟ್ಟ ಪ್ರಾಣಿ ಮೂಳೆಗಳಿದ್ದವು. ಸುಟ್ಟು ಚೂಪು ಮಾಡಿರುವ ಮೂಳೆಯ ದಬ್ಬಳ ಕೂಡ ಸಿಕ್ಕಿದೆ. ಈ ಗುಂಡಿಗಳು ಪ್ರಾಣಿ ಬಲಿಯ ಕುಂಡಗಳಾಗಿರಬಹುದೆಂಬ ಅನುಮಾನವಿದೆ.

ಇಲ್ಲಿ ಆದಿ ಹರಪ್ಪ ಕಾಲದಲ್ಲೇ ತಾಮ್ರ ಕಮ್ಮಾರಿಕೆ ಪ್ರೌಢ ಮಟ್ಟದಲ್ಲಿದ್ದುದಕ್ಕೆ ಸಾಕ್ಷ್ಯಗಳಿವೆ. ಸು. 6x8ಮೀ ಉದ್ದದ ಪ್ರಮಾಣದ ಕುಲುಮೆಯಲ್ಲಿ ನಿತ್ಯವೂ ಉಂಟಾಗುವ ಶಾಖದಿಂದ ಕೆಂಪುಗಟ್ಟಿ ಆಗಿರುವ ಗಚ್ಚು, ಮಣ್ಣಿನ ಮೂಸೆಗೆ ಕರಗಿ ಅಂಟಿಕೊಂಡಿರುವ ತಾಮ್ರದ

ಚೂರು ಇವೆಲ್ಲ ಸಿಕ್ಕಿವೆ. ತಾಮ್ರದ ಉಳಿ, ಸಾದಾ ಉಂಗುರ, ತಾಮ್ರ ತಂತಿಯ ಸುರುಳಿ ಸುತ್ತಿದ ಉಂಗುರ, ಬಾಣದ ಮೊನೆ, ಚಪ್ಪಟೆಯಾದ ಕೊಡಲಿ, ಮೀನು ಹಿಡಿಯುವ ಕೊಕ್ಕೆ, ಈಟಿ ಮೊನೆ ಇಲ್ಲಿ ದೊರೆತ ವಸ್ತುಗಳು.

ಈ ಹಂತದ ಒಂದು ಮನೆಯಲ್ಲಿ ರಾಜಯೋಗ್ಯ ಬೆಳ್ಳಿ ಮತ್ತು ಚಿನ್ನದ ಆಭರಣಗಳನ್ನು ಒಂದು ಮಡಕೆಯಲ್ಲಿ ಹೂತಿಟ್ಟಿದ್ದುದು ಬೆಳಕಿಗೆ ಬಂದಿದೆ: ಚಿನ್ನದ ಆಭರಣಗಳಲ್ಲಿ ಸರಕ್ಕೆ ಪೋಣಿಸಲು ಎರಡು ತೂತು ಇರುವ ಆರು ಚಿನ್ನದ ವೃತ್ತಾಕಾರದ ಬಿಲ್ಲೆಗಳು, ಮೂರು ನಳಿಗೆಯಾಕಾರದ ಮಣಿಗಳು ಮತ್ತು ಒಂದುಗೂಡಿರುವ ಮೂರು ಪುಷ್ಪದಳ ಆಕಾರದ ಆಭರಣಗಳು ಸೇರಿವೆ. ಬೆಳ್ಳಿಯ ಆಭರಣಗಳಲ್ಲಿ ಅಲಂಕಾರದ ಎರಡು ಪುಷ್ಪದಳಗಳು ಇರುವ ಅರಳಿರುವ ಹೂವಿನಂತಿರುವ ಸರಳ ಕಿರೀಟ ಸಿಕ್ಕಿದೆ. ಇದಲ್ಲದೆ ಅಲಂಕೃತ ತೋಳ್ಬಂದಿ, ವೃತ್ತಾಕಾರದ ದಾರದ ಕೊಳವೆ ಇರುವ ಚಪ್ಪಟೆಯಾದ ಹನ್ನೊಂದು ಮಣಿಗಳ ಸರ ಮತ್ತು ಬಳೆಗಳು ದೊರೆತಿವೆ. ಈ ಆಭರಣಗಳು ಬಹುಶಃ ಅರಸನಿಗೆ ಅಥವಾ ಊರ ಮುಖ್ಯಸ್ಥನಿಗೆ ಸಂಬಂಧಿಸಿದ್ದಾಗಿರಬೇಕು. ಈ ಪ್ರದೇಶದಲ್ಲಿ ಬೆಳ್ಳಿ ದೊರಕುವುದಿಲ್ಲ; ಈ ಆಭರಣಗಳು ಯಾವ ಮೂಲದಿಂದ ಬಂದದ್ದೆಂಬುದು ತಿಳಿದಿಲ್ಲ.

ಇಲ್ಲಿಯ ಉತ್ಖನನದಲ್ಲಿ 12,445 ಮಣಿಗಳ ಸಂಗ್ರಹವೊಂದು ಬೆಳಕಿಗೆ ಬಂತು. ಈ ಮಣಿಗಳಲ್ಲಿ 3370 ಕಾರ್ನೀಲಿಯನ್, 2806 ಬಳಪದ, 5690 ವೈಡೂರ್ಯ, 487 ಶಂಖ ಮತ್ತು 92 ಅಗೇಟ್ ಕಲ್ಲಿನವು. ಸಿಂಧೂ–ಸರಸ್ವತಿ ನದಿಗಳ ಪ್ರದೇಶದಲ್ಲಿ ಇಂಥ ವಿಪುಲ ಸಂಗ್ರಹ ಸಿಕ್ಕಿರುವುದು ಇದೇ ಮೊದಲು. ಈ ಸಂಗ್ರಹದ ಹಲವಾರು ಮಣಿಗಳು ಹರಪ್ಪ ಮತ್ತು ಮೊಹೆಂಜೋದಾರೊ ಇತ್ಯಾದಿ ಪಟ್ಟಣಗಳಲ್ಲಿ ಸಿಕ್ಕ ಪ್ರೌಢಹರಪ್ಪ ಹಂತದ ಮಣಿಗಳನ್ನು ಹೋಲುತ್ತವೆ. ಆದಿ ಹರಪ್ಪ ಕಾಲದಲ್ಲೆ ಚರ್ಟ ಕಲ್ಲಿನ ಅಲಗು ಮತ್ತು ಮಣಿಗಳು ಸಿಗುವುದರಿಂದ ಈ ಉದ್ಯಮ ಬಹಳ ಹಿಂದಿನಿಂದಲೇ ಇದ್ದುದು ಖಚಿತ.

ಈ ಉತ್ಖನನದ ಒಂದು ಮುಖ್ಯವಾದ ಕೊಡುಗೆಯೆಂದರೆ 12 ಮುದ್ರೆಗಳು. ಇವುಗಳಲ್ಲಿ 8 ಬಳಪದ ಕಲ್ಲಿನವು, 2 ಸುಟ್ಟಮಣ್ಣಿನವು ಮತ್ತು 2 ಶಂಖದಲ್ಲಿ ಮಾಡಿದವು. ಬಳಪದ ಕಲ್ಲಿನ ವೃತ್ತಾಕಾರದ, ತೂತಿರುವ ಚಪ್ಪಟೆಯಾದ ಮುದ್ರೆಯೊಂದರ ಮುಂಬದಿ ಮತ್ತು ಹಿಂಬದಿಯಲ್ಲಿ ಕೊರೆದು ಅಲಂಕರಿಸಲಾಗಿದೆ. ಇತರ ಮುದ್ರೆಗಳು ಚೌಕಾಕಾರದವು. ಮುಂಬದಿಯಲ್ಲಿ ಗೆರೆಗಳು, ಇಲ್ಲವೇ ಜ್ಯಾಮಿತೀಯ ವಿನ್ಯಾಸ, ಹಿಂಬದಿಯಲ್ಲಿ ದಾರ ಹಾಕಲು ತೂತು ಇರುವ ಗುಬಟು ಇದೆ. ಆದಿ ಹರಪ್ಪ ಕಾಲದ ಇಂಥ ಚಿತ್ರಾಕೃತಿ ಮತ್ತು ಹರಪ್ಪ ಕಾಲದ ಅಕ್ಷರಗಳಿಲ್ಲದ ಮುದ್ರೆಗಳು ಸಿಕ್ಕಿರುವುದು ಗಮನಾರ್ಹ. ನಗರೀಕರಣಕ್ಕೆ ಮುಂಚೆಯೇ ವ್ಯಾಪಾರದಲ್ಲಿ ಮುದ್ರೆಗಳನ್ನು ಉಪಯೋಗಿಸುವ ಪದ್ಧತಿ ಇದ್ದುದು ಈ ಆಧಾರಗಳಿಂದ ಗೊತ್ತಾಗುತ್ತದೆ. ಪ್ರೌಢ ಹರಪ್ಪ ಕಾಲದ ಮುದ್ರೆಗಳ ಮೇಲಿರುವ ಅಕ್ಷರಗಳನ್ನು ಹೋಲುವ ಹಲವಾರು ಚಿಹ್ನೆಗಳು ಕುಣಾಲ್‌ನಲ್ಲಿ ಆದಿ ಹರಪ್ಪ ಕಾಲದ ಮಡಕೆ ಚೂರುಗಳ ಮೇಲಿವೆ.

Iಸಿ (ii) ಉಪಹಂತದಲ್ಲಿ ಹಿಂದಿನ ಹಂತದ ಅವಶೇಷಗಳೊಂದಿಗೆ ವರ್ಣಚಿತ್ರಿತ ಬೂದುಬಣ್ಣದ ಮಣ್ಪಾತ್ರೆಗಳೂ ಕಬ್ಬಿಣಯುಗದ ಅವಶೇಷಗಳೂ ದೊರೆತಿವೆ. ಇಲ್ಲಿಯ ಹರಪ್ಪ ಸಂಸ್ಕೃತಿಯ ಕಾಲಮಾನ ಪ್ರ.ಶ.ಪೂ.ಸು.3500–2500. (ಯು.ಎಸ್.)

**ಕುತುಬ್ ಶಾಹಿ ಮನೆತನ:** 1512–1687: 16ನೆಯ ಶತಮಾನದಲ್ಲಿ ಬಹಮನಿ ಸಮ್ರಾಜ್ಯವನ್ನು ಐದು ಭಾಗಗಳಾಗಿ ವಿವಿಧ ಶಾಹಿ ಮನೆತನದ ಆಡಳಿತಗಾರರು ಹಂಚಿಕೊಂಡಾಗ ಬರಿದ್ ಶಾಹಿಗಳು ಬೀದರ್ ರಾಜ್ಯದ ಆಡಳಿತವನ್ನು ವಹಿಸಿಕೊಂಡಿದ್ದರು. ಇವರ ಅಧಿಕಾರ ದರ್ಪಗಳನ್ನು ಸಹಿಸಲಾರದೆ ಗೋಲ್ಕಂಡ ಪ್ರಾಂತದ ರಾಜ್ಯಪಾಲನಾಗಿದ್ದ ಷಿಯ ಪಂಥಿಯ ಕುಲಿ ಕುತುಬ್ ಮುಲ್ಕ ಎಂಬುವನು ಸ್ವತಂತ್ರ ರಾಜನೆಂದು ಘೋಷಿಸಿಕೊಂಡು ಅಧಿಕಾರಕ್ಕೆ ಬಂದ. ಈತನೇ ಕುತುಬ್ ಶಾಹಿ ಮನೆತನದ ಸ್ಥಾಪಕ.

ಮಲಿಕ್ ಕುಲಿ ಕುತುಬ್ ಷಾಹಿ ಪರ್ಷಿಯ ದೇಶದ(ಇಂದಿನ ಇರಾನ್) ಹಮದಾನ್ ಪ್ರಾಂತದವನು. ಬಹರುಲ್ಲಾ ಎಂಬ ತುರ್ಕಿ ಪಂಗಡಕ್ಕೆ ಸೇರಿದ ಈತ ಸುಸಂಸ್ಕೃತ ಹಾಗೂ ಓದು ಬರೆಹ ಬಲ್ಲವನಾಗಿದ್ದ. ಈತ ಸೈನಿಕ ತರಬೇತಿಗಾಗಿ ಭಾರತಕ್ಕೆ ಬಂದು ಬಹಮನಿ ರಾಜ್ಯದಲ್ಲಿ ಮಹಮೂದ್ ಗಾವಾನ್‌ನ ಸೇನಾಧಿಕಾರಿಯಾಗಿದ್ದ ವೇಳೆಯಲ್ಲಿ ಕಾವಲುಗಾರನಾಗಿ ನಿಯುಕ್ತಿಗೊಂಡ. ತನ್ನ ವಿಧೇಯತೆ, ನಿಷ್ಠೆಯ ಫಲವಾಗಿ ಇವನು ಗೋಲ್ಕೊಂಡ ಪ್ರಾಂತದ ರಾಜ್ಯಪಾಲನಾಗಿ ನಿಯುಕ್ತಗೊಂಡು, 1512 ರಲ್ಲಿ ಸುಲ್ತಾನ್ ಕುಲಿ ಕುತುಬ್ ಷಾ ಎಂಬ ಹೆಸರಿನೊಂದಿಗೆ ಅಧಿಕಾರಕ್ಕೆ ಬಂದು ಸ್ವತಂತ್ರ ರಾಜನೆಂದು ಘೋಷಿಸಿಕೊಂಡ.

ಸುಲ್ತಾನ್ ಕುಲಿ ಕುತುಬ್ ಷಾನ (1512–1543) ಆಡಳಿತದಲ್ಲಿ ರಾಜ್ಯ ಸಂಪತ್ಭರಿತವಾಗಿತ್ತು. ಬಿಜಾಪುರದ ವಿರುದ್ಧ ನಡೆದ ಯುದ್ಧಗಳಲ್ಲಿ ಈತ ಯಶಸ್ವಿಯಾಗಿದ್ದ. ಉತ್ತಮ ಆಡಳಿತಗಾರನಾಗಿದ್ದ ಈತ ಷಿಯ ಧರ್ಮವನ್ನು ಪರಿಚಯಿಸಿದ್ದ. 1543 ರಲ್ಲಿ ತನ್ನ 90ನೆಯ ವಯಸ್ಸಿನಲ್ಲಿ ತನ್ನ ಮಗ ಜಮಷದ್‌ನಿಂದಲೇ ಕೊಲೆಯಾಗಬೇಕಾಯಿತು.

ಜಮ್‌ಷದ್ (1543–50) ಅಧಿಕಾರಕ್ಕೆ ಬಂದು ಸು.7 ವರ್ಷಗಳ ಕಾಲ ಆಡಳಿತ ನಡೆಸಿದ. ಈತನೂ ಬಿಜಾಪುರದ ವಿರುದ್ಧ ಅನೇಕ ಯುದ್ಧಗಳಲ್ಲಿ ಭಾಗವಹಿಸಬೇಕಾಯಿತು. ಕೊನೆಗೆ ತನ್ನ ಎಳೆಯ ಮಗ ಸುಭಾನ್‌ಗೆ ಅಧಿಕಾರ ವಹಿಸಿಕೊಟ್ಟ. ಆದರೆ ಸುಭಾನ್ ತನ್ನ ಚಿಕ್ಕಪ್ಪ ಇಬ್ರಾಹಿಂನ ಸಂಚಿಗೆ ಬಲಿಯಾಗಿ ಅಧಿಕಾರ ಕಳೆದುಕೊಳ್ಳಬೇಕಾಯಿತು.

ಇಬ್ರಾಹಿಂ ಷಾ (1550–80) ಅಧಿಕಾರಕ್ಕೆ ಬಂದ ತಕ್ಷಣವೇ ದಖನ್ನಿನ ಷಾಹಿ ಆಡಳಿತಗಾರರನ್ನೆಲ್ಲ ಒಗ್ಗೂಡಿಸಿ ವಿಜಯನಗರದ ಮೇಲೆ ಧಾಳಿಗೆ ಸಿದ್ಧತೆ ನಡೆಸಿದ. 1565 ರಲ್ಲಿ ರಕ್ಕಸಗಿ–ತಂಗಡಗಿಯಲ್ಲಿ ನಡೆದ ಯುದ್ಧದಲ್ಲಿ ವಿಜಯನಗರದ ಸೈನ್ಯ ಸೋಲುವಂತಾಯಿತು. ಈತನು ಅನಂತರ ವಾರಂಗಲ್‌ನ ರಾಜಮನೆತನಗಳ ಮೇಲೆ ಯುದ್ಧ ಸಾರಿ ವಾರಂಗಲ್ ಪ್ರಾಂತವನ್ನೂ ಗೋಲ್ಕೊಂಡಕ್ಕೆ ಸೇರಿಸಿಕೊಂಡ. ಸು.30 ವರ್ಷಗಳ ಕಾಲ ಆಡಳಿತ ನಡೆಸಿದ ಇಬ್ರಾಹಿಂ ಷಾ ಕುತುಬ್ ಶಾಹಿ ಮನೆತನದವರಲ್ಲಿ ಒಬ್ಬ ಉತ್ತಮ ಆಡಳಿತಗಾರನಾಗಿದ್ದ.

ಮಹಮ್ಮದ್ ಕುಲಿ ಕುತುಬ್ ಷಾ (1580–1612) ಮಹಮ್ಮದ್ ಕುಲಿ ಕುತುಬ್ ಷಾ ಹೈದರಾಬಾದಿನ ಸ್ಥಾಪಕ. ಗೋಲ್ಕೊಂಡ ಕೋಟೆ ಸುರಕ್ಷಿತವಾದುದಲ್ಲ ಎಂದು ಮನಗಂಡು 1589ರಲ್ಲಿ ಗೋಲ್ಕೊಂಡದಿಂದ 10 ಕಿಮೀ ದೂರದಲ್ಲಿ ಒಂದು ನಗರವನ್ನು ನಿರ್ಮಿಸಿ ತನ್ನ ಪ್ರೇಯಸಿಯಾದ ಭಾಗ್ಯವತಿ ಎಂಬುವವಳ ನೆನಪಿಗಾಗಿ ಭಾಗ್ಯನಗರ ಎಂದು ಹೆಸರಿಟ್ಟ. ಈ ವೇಳೆಯಲ್ಲಿಯೇ ಹೈದರಾಬಾದಿನ ಚಾರ್‌ಮಿನಾರ್ ನಿರ್ಮಾಣವಾಯಿತು. ಇವನ ಅನಂತರ ಮಹಮ್ಮದ್ ಎಂಬಾತ 1612–26ರ ತನಕ ಆಡಳಿತ ನಡೆಸಿದ.

ಅಬ್ದುಲ್ ಕುತುಬ್ ಷಾ (1626–1672) ಮಹಮ್ಮದ್‌ನ ಅನಂತರ ಅಧಿಕಾರಕ್ಕೆ ಬಂದ ಈತ ಮೊಗಲರ ಧಾಳಿಯನ್ನು ಎದುರಿಸಬೇಕಾಯಿತು. ಷಹಜಹಾನ್ 1635ರಲ್ಲಿ ಗೋಲ್ಕೊಂಡದ ಮೇಲೆ ಮುತ್ತಿಗೆ ಹಾಕಿದಾಗ ಈತ ಮೊಗಲರ ಆಳಿಕೆಯನ್ನು ಒಪ್ಪಿಕೊಳ್ಳಬೇಕಾಯಿತು. ಈತನ ಕಾಲದಲ್ಲಿ ಆಂಧ್ರದ ತೀರ ಪ್ರದೇಶದಲ್ಲಿ ವ್ಯಾಪಾರಕ್ಕೆ ಪರವಾನಗಿಯನ್ನು ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿ ಪಡೆದುಕೊಂಡಿತು. ಇವನ ಆಡಳಿತ ಕಾಲದಲ್ಲಿ ಭಾರತೀಯರು ತೆಲಂಗಾಣ ಆಡಳಿತ ಹಾಗೂ ಸೇನೆಯಲ್ಲಿ ಪ್ರಮುಖ ಸ್ಥಾನಗಳನ್ನು ಪಡೆದಿದ್ದರು. ಈತ ವೈದಿಕ ದೇವಾಲಯಗಳಿಗೆ ದಾನ–ದತ್ತಿ ನೀಡಿದ್ದ. ಧಾರ್ಮಿಕ ಸಹಿಷ್ಣುತೆ ನೆಲೆಗೊಂಡಿತ್ತು. ಈ ಕಾರಣಕ್ಕಾಗಿ ಔರಂಗಜೇಬ್ ಅಲ್ಲಿನ ಪ್ರಮುಖ ಅಧಿಕಾರಿಗಳೊಡನೆ ಗುಪ್ತ ಒಪ್ಪಂದ ಮಾಡಿಕೊಂಡು ಗೋಲ್ಕೊಂಡ ಕೋಟೆಯನ್ನು 1665 ರಲ್ಲಿ ಮುತ್ತಿಗೆ ಹಾಕಿದಾಗ ಹೈದರಾಬಾದ್ ನಗರ ಲೂಟಿಗೆ ಒಳಗಾಗಿ ಅಪಾರ ಪ್ರಮಾಣದ ಸಂಪತ್ತು ಮೊಗಲರ ವಶವಾಯಿತು. ಸೋತ ಅಬ್ದುಲ್ ಮೊಗಲರ ಸಾರ್ವಭೌಮತ್ವವನ್ನು ಒಪ್ಪಿಕೊಂಡು ತನ್ನ ಸಂಬಂಧಿ ಅಬುಲ್ ಹಸನ್ ಪರವಾಗಿ ಅಧಿಕಾರ ತ್ಯಜಿಸಬೇಕಾಯಿತು.

ಅಬುಲ್ ಹಸನ್(ತಾನ ಷಹಾ) (1672–87) ಈತನ ಆಡಳಿತ ಕಾಲದಲ್ಲಿ ಪ್ರಧಾನ ಮಂತ್ರಿಯಾಗಿ ವೈಷ್ಣವ ಬ್ರಾಹ್ಮಣ ಅಕ್ಕಣ್ಣ, ಪ್ರಧಾನ ದಂಡನಾಯಕನಾಗಿ ಇವನ ತಮ್ಮ ಮಾದಣ್ಣ ಅಧಿಕಾರ ಹೊಂದಿದ್ದರು. ಅಬುಲ್ ಹಸನ್ 1677 ಫೆಬ್ರವರಿಯಲ್ಲಿ ಮೊಗಲರ ವಿರುದ್ಧ ಶಿವಾಜಿಯ ಜೊತೆ ಸ್ನೇಹ ಒಪ್ಪಂದ ಮಾಡಿಕೊಂಡಿದ್ದ. ಶಿವಾಜಿ ಹೈದರಾಬಾದಿಗೆ ಭೇಟಿ ನೀಡಿದ್ದಾಗ ಅಬುಲ್ ಹಸನ್ ತುಂಬಾ ಮರ್ಯಾದೆಯಿಂದ ಬರಮಾಡಿಕೊಂಡಿದ್ದ (1667 ಮಾರ್ಚ್7). ಇದನ್ನು ಸಹಿಸದ ಔರಂಗಜೇಬ್ ಗೋಲ್ಕೊಂಡದ ಕೋಟೆಯ ಮೇಲೆ ಧಾಳಿ ನಡೆಸಿ (1687) ಅಕ್ಕಣ್ಣ ಮತ್ತು ಮಾದಣ್ಣರನ್ನು ಕೊಲೆಗೈದ. ಆದರೂ ಗೋಲ್ಕೊಂಡ ಕೋಟೆಯನ್ನು ರಕ್ಷಿಸುವುದರಲ್ಲಿ ರಜಾಕ್ ಯಶಸ್ವಿಯಾದ. ಆದರೆ ಕೆಲವು ದೇಶ ದ್ರೋಹಿಗಳು ಔರಂಗಜೇಬನೊಡನೆ ಸೇರಿಕೊಂಡು ಅಂತಿಮವಾಗಿ ತಾನಷಾಹನನ್ನು ಸೆರೆಹಿಡಿದು ದೌಲತ್‌ಬಾದ್‌ಗೆ ಕರೆದೊಯ್ದರು.

ಅಬುಲ್ ಹಸನ್ ಕಾಲದಲ್ಲಿ ಹಿಂದು–ಮುಸ್ಲಿಮರು ಸಾಮರಸ್ಯದಿಂದಿದ್ದರು. ವೈದಿಕ ಧರ್ಮ, ಸಾಹಿತ್ಯ, ವೇದ, ಪುರಾಣಗಳಲ್ಲಿ ಪರಿಶ್ರಮ ಪಡೆದಿದ್ದ ಪಂಡಿತರಿಗೆ ಅಗ್ರಹಾರ, ಭೂಮಿಗಳನ್ನು ದಾನವಾಗಿ ನೀಡಿದ್ದಲ್ಲದೆ ಕವಿಗಳಿಗೂ ಉತ್ತೇಜನ ನೀಡಿದ. ತೆಲುಗು ಸಾಹಿತ್ಯದಲ್ಲಿ ಇವನು ಇಬಾ ರಾಮ ಎಂದು ಹೆಸರು ಪಡೆದಿದ್ದಾನೆ. ಭದ್ರಾಚಲ ರಾಮದಾಸರು ತಮ್ಮ ಕಥೆಯಲ್ಲಿ ಇವನನ್ನು ತಾನೇಷಾ ಎಂದು ಹೆಸರಿಸಿದ್ದಾರೆ.

ಗೋಲ್ಕೊಂಡ ರಾಜ್ಯವನ್ನು ಯಶಸ್ವಿಯಾಗಿ ಆಳಿ, ಹೈದರಾಬಾದ್ ನಗರವನ್ನು ಸ್ಥಾಪಿಸಿದ ಕುತುಬ್ ಶಾಹಿಗಳ ಆಡಳಿತ 1687ರ ಮೊಗಲರ ಮುತ್ತಿಗೆಯೊಂದಿಗೆ ಅವನತಿ ಹೊಂದಬೇಕಾಯಿತು. ಬ್ರಿಟಿಷ್ ಅಧಿಕಾರಿ ಸರ್ ಥಾಮಸ್ ಮನ್ರೋ ಈ ಕೋಟೆಯನ್ನು ವಜ್ರದ ಗಣಿ, ರತ್ನಗರ್ಭವೆಂದು ಕರೆದಿದ್ದಾನೆ. (ಸಿ.ವಿ.ಆರ್.)

**ಕುನ್ನತ್ತೂರು:** ತಮಿಳುನಾಡು ರಾಜ್ಯದ ಚೆಂಗಲ್‌ಪೇಟ್ ಜಿಲ್ಲೆಯಲ್ಲಿರುವ (ಈಗಿನ ಎಂ.ಜಿ.ಆರ್.ಜಿಲ್ಲೆ) ಪುರಾತತ್ತ್ವ ನೆಲೆ. ಇಲ್ಲಿರುವ ಬೃಹತ್ ಶಿಲಾಗೋರಿಗಳ ಲಕ್ಷಣಗಳನ್ನು ತಿಳಿಯುವ ಹಾಗೂ ಸಮೀಪದಲ್ಲಿರುವ ವಸತಿ ನೆಲೆಯೊಂದಿಗೆ ಇವುಗಳಿಗಿರಬಹುದಾದ ಸಂಬಂಧವನ್ನು ಪರಿಶೀಲಿಸುವ ದೃಷ್ಟಿಯಿಂದ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬಿ. ಸರನ್ ಇಲ್ಲಿ 1955–57ರಲ್ಲಿ ಉತ್ಖನನ ನಡೆಸಿದರು. ಕಲ್ಗುಪ್ಪೆ ವೃತ್ತ, ಕಲ್ಮನೆ ಕೋಣೆ (ಡಾಲ್ಮೆನಾಯಿಡ್ ಸಿಸ್ಟ್), ಶವಪೆಟ್ಟಿಗೆ ಹಾಗೂ ಅಸ್ಥಿಮಡಕೆ–ಇವು ಇಲ್ಲಿರುವ ಪ್ರಕಾರಗಳು. ಎಲ್ಲ ಸಮಾಧಿಗಳಲ್ಲೂ ಕಪ್ಪು, ಕೆಂಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳನ್ನು ಇಡಲಾಗಿತ್ತು. ಅಸ್ಥಿ ಅವಶೇಷಗಳಿರದ ಕಲ್ಗುಪ್ಪೆವೃತ್ತ ಪ್ರಕಾರದ ಒಂದು ಸಮಾಧಿಯಲ್ಲಿ 26 ಮಣ್ಪಾತ್ರೆಗಳೂ 7 ಕಬ್ಬಿಣದ ಉಪಕರಣಗಳೂ ಇದ್ದವು. ಇದೇ ಪ್ರಕಾರದ ಮತ್ತೊಂದು ಸಮಾಧಿಗೆ 2 ವೃತ್ತಗಳಿದ್ದು ಇದರ ಒಂದು ಮೂಲೆಯಲ್ಲಿ ಮೂಳೆಗಳಿದ್ದ ಸಣ್ಣ ಮಡಕೆಯಿತ್ತು. ಕಲ್ಮನೆ ಕೋಣೆಯೊಳಗೆ ಇಟ್ಟಿದ್ದ ವಸ್ತುಗಳಲ್ಲಿ ಮುರಿದ ಕಬ್ಬಿಣದ ಕತ್ತಿ, ತಾಮ್ರದ ಗಂಟೆ ಹಾಗೂ ಸುಡಾವೆಮಣ್ಣಿನ ಮಣಿ ಗಮನಾರ್ಹ. ಕಾಲಿರುವ ಶವಪೆಟ್ಟಿಗೆಗಳಿದ್ದ

ಎರಡು ಪ್ರತ್ಯೇಕ ಗೋರಿಗಳ ಮೇಲೆ ಗುರುತಿಗಾಗಿ ಕಲ್ಲುಚಪ್ಪಡಿ ಹಾಸಿದ್ದರು. ಒಂದರಲ್ಲಿ ಚಪ್ಪಡಿಯ ಸುತ್ತ ಕಲ್ಲುಗ್ಗಪ್ಪೆಯನ್ನು ನಿರ್ಮಿಸಿ ಹೊರಸುತ್ತಿನಲ್ಲಿ ಕಲ್ಲುವೃತ್ತ ರಚಿಸಲಾಗಿತ್ತು. ಶವಪೆಟ್ಟಿಗೆಯನ್ನು ಕುಣಿಯೊಳಗೆ ಹೂಳಲಾಗಿತ್ತು. ಒಂದು ಶವಪೆಟ್ಟಿಗೆಯ (54x34x49 ಸೆಂಮೀ) ಒಳಗೆ ಕಬ್ಬಿಣದ ಎರಡು ಸುರುಳಿಯ ತೋಳಿನ ಆಭರಣ, ಯುವಕನ ಹಲ್ಲು, ಹೊರಭಾಗದಲ್ಲಿ 13 ಮಡಕೆಗಳು ಇದ್ದವು. ಉತ್ಖನನಕ್ಕೊಳಗಾದ ಕೊನೆಯ ಸಮಾಧಿಯಲ್ಲಿ ಕಿರಿಯ ತಳವುಳ್ಳ ಗುಡಾಣದಂತಹ ಮಡಕೆಗಳು ಸಾಲಾಗಿ ಜೋಡಿಸಲ್ಪಟ್ಟಿದ್ದವು.

ವಸತಿ ನೆಲೆಯಲ್ಲಿ ತಳಬಂಡೆಯವರೆಗೂ ಉತ್ಖನನ ನಡೆಸಲಾಯಿತು. ಇಲ್ಲಿ ಅನುಕ್ರಮವಾಗಿ ಎರಡು ಹಂತಗಳನ್ನು ಗುರುತಿಸಲಾಗಿದೆ. ಮೊದಲನೆಯ ಹಂತವನ್ನು (ಸು.2.45 ಮೀ) ಎ ಮತ್ತು ಬಿ ಎಂಬ ಉಪಹಂತಗಳಾಗಿ ವಿಂಗಡಿಸಲಾಗಿದೆ. ಎ ಉಪಹಂತದಲ್ಲಿ 25x18x51 ಸೆಂಮೀ ನ ಒಂದು ಇಟ್ಟಿಗೆ ಗೋಡೆ ಮತ್ತು ಒಂದರೊಳಗೊಂದು ಸೇರಿಸಿರುವ ಮಣ್ಣಿನ ಕೊಳವೆಗಳಿಂದ ನಿರ್ಮಿಸಿರುವ ಒಳಚರಂಡಿ ದೊರಕಿದೆ. ಬಿ ಉಪಹಂತದಲ್ಲಿ ಸಣ್ಣಕಲ್ಲುಗಳಿಂದ ನಿರ್ಮಿಸಿರುವ 2.56 ಮತ್ತು 2.69 ಮೀ ಉದ್ದದ ಶಿಥಿಲ ಗೋಡೆ ದೊರಕಿದೆ. ಇಲ್ಲಿ ದೊರೆತ ಇತರ ಪ್ರಾಚ್ಯಾವಶೇಷಗಳಲ್ಲಿ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಹೊಳಪಿನ ಕೆಂಪುಬಣ್ಣದ ಮಡಕೆಗಳನ್ನು ಹೋಲುವ ಪಾತ್ರೆಗಳು ಮುಖ್ಯವಾದವು. ಕಪ್ಪು–ಕೆಂಪು ದ್ವಿವರ್ಣದ ಮಣ್ಣಿನ ಪಾತ್ರೆಗಳೂ ದೊರಕಿವೆ. ಆದರೆ ಆದಿಚಾರಿತ್ರಿಕ ಕಾಲದ ಬಿಳಿ ವರ್ಣ ರೇಖಾಚಿತ್ರಿತ ಮಣ್ಪಾತ್ರೆಗಳು ದೊರಕಿಲ್ಲ. ದೊಡ್ಡ ಜಾಡಿಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲ ಪಾತ್ರೆಗಳನ್ನು ತಿಗುರಿಯ ಮೇಲೆ ತಯಾರಿಸಲಾಗಿದೆ. ಎ ಉಪಹಂತದ ಆದಿ ಭಾಗದಲ್ಲಿ ಸ್ವಲ್ಪ ಒಳಬಾಗಿದ ಅಥವಾ ನೆಟ್ಟಗಿನ ಪಾರ್ಶ್ವದ ಆಳದ ಹರಿವಾಣ ದೊರೆತಿವೆ. ಇತರ ನಮೂನೆಗಳೆಂದರೆ ಬಟ್ಟಲು, ಗೆರೆಗಳಿಂದ ಅಲಂಕೃತವಾದ ಅಡಿಗೆ ಪಾತ್ರೆಗಳು, ಒಳಬಾಗಿದ ಅಂಚಿನ ದುಂಡನೆಯ ಬೋಗುಣಿ, ಎರಡು ಬದಿಗಳಲ್ಲಿ ಹಿಡಿಯಿರುವ ಚಪ್ಪಟೆಯಾದ ದಪ್ಪ ಅಂಚಿನ ಜಾಡಿ ಮತ್ತು ಬೋಗುಣಿ. ಬೋಗುಣಿಯ ತಳಭಾಗದಲ್ಲಿ ಕೆಲ ಕಚ್ಚುಗಳಿದ್ದು ಬಹುಶಃ ತರಕಾರಿಯ ಸಿಪ್ಪೆಯನ್ನು ತೆಗೆಯಲು ಉಪಯೋಗಿಸಿರಬಹುದೆಂದು ಊಹಿಸಬಹುದು. ಕುದುರೆ ಲಾಳಾಕೃತಿಯ ಒಲೆಯ ಚೂರುಗಳು, ವಿವಿಧ ಆಕಾರ ಮತ್ತು ಬಣ್ಣಗಳ ಬೆಣಚುಕಲ್ಲಿನ, ಗಾಜಿನ ಮತ್ತು ಹವಳದ ಮಣಿಗಳು, ಗಾಜಿನ ಬಳೆಗಳು, ಸುಟ್ಟಮಣ್ಣಿನ ಚಿಕ್ಕ ಚಿಕ್ಕ ಬೊಂಬೆಗಳು, ಪ್ರಾಣಿಯ ಗುರುತುಳ್ಳ ಮೊಹರು, ಒಂದು ಬಂಗಾರದ ಗುಂಡುಸೂಜಿ ಮತ್ತು ತಾಮ್ರದ 3 ಮುರಿದ ನಾಣ್ಯಗಳೂ ದೊರೆತಿವೆ. ಎರಡನೆಯ ಹಂತದಲ್ಲಿ ಪಿಂಗಾಣಿ ಮತ್ತು ಕೆಂಪು ಮತ್ತು ಕಪ್ಪು ಬಣ್ಣದ ಮಣ್ಪಾತ್ರೆಗಳು ದೊರಕಿವೆ. ಈ ಹಂತ 12ನೆಯ ಶತಮಾನದಲ್ಲಿ ಕುನ್ನತ್ತೂರಿನಲ್ಲಿದ್ದು ಪೆರಿಯ ಪೆರುಮಾಳ್ ಕೃತಿಯನ್ನು ರಚಿಸಿದ ಸಂತ ಶೆಕ್ಕಿಳಾರ್ ಪೆರುಮಾಳ್‌ರ ಕಾಲದ್ದೆಂದು ಗುರುತಿಸಲಾಗಿದೆ. (ಸಿ.ಕೆ.ಎಂ.)

**ಕುಮ್ಮಟರಾಜ್ಯ: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಕುಮ್ರಹಾರ್:** ಬಿಹಾರ ರಾಜ್ಯದ ಪಾಟಲಿಪುತ್ರದ (ಈಗಿನ ಪಟಣ) ಒಂದು ಉಪನಗರ. ಪಾಟಲಿಪುತ್ರ ಪ್ರ.ಶ.ಪೂ. 5ನೆಯ ಶತಮಾನದಿಂದ ಪ್ರ.ಶ.ಪೂ. 600ರ ವರೆಗೆ ಪ್ರಸಿದ್ಧ ಬಂದರಾಗಿ, ವ್ಯಾಪಾರ ಕೇಂದ್ರವಾಗಿ, ಸೈನ್ಯದ ಆಯಕಟ್ಟಿನ ಸ್ಥಳವಾಗಿ, ಭದ್ರ ಕೋಟೆಯುಳ್ಳ ಪಟ್ಟಣವಾಗಿ ಮೆರೆಯಿತು ಎಂಬ ವಿಷಯ ಕುಮ್ರಹಾರದಲ್ಲಿ 1912–19ರಲ್ಲಿ ಡಿ.ಬಿ.ಸ್ಪೂನರ್, 1951–55ರಲ್ಲಿ ಎ.ಎಸ್.ಅಲ್ತೇಕರ ಮತ್ತು ವಿ.ಮಿಶ್ರರು ನಡೆಸಿದ ಉತ್ಖನನ ಗಳಿಂದ ತಿಳಿದುಬರುತ್ತದೆ. ಕುಮ್ರಹಾರದ ದಕ್ಷಿಣಕ್ಕೆ ಸೋಣ ನದಿಯ ಹಳೆಯ ಪಾತ್ರವಿದೆ. ಇದರ ಈಶಾನ್ಯಕ್ಕೆ ಗಂಗಾನದಿ ಹರಿಯುತ್ತದೆ. ಕುಮಾರ ಮಹೇಂದ್ರನ ಸಲುವಾಗಿ ಈ ಪ್ರದೇಶದಲ್ಲಿ ಮೌರ್ಯವಂಶದ ಅಶೋಕ ಒಂದು ವಿಹಾರವನ್ನು ಕಟ್ಟಿಸಿದ್ದಿರಬಹುದೆಂದೂ ಕುಮಾರ ವಿಹಾರವೇ ಕುಮ್ರಹಾರವಾಗಿರಬಹುದೆಂದೂ ಪ್ರತೀತಿ.

ಡಿ. ಬಿ. ಸ್ಪೂನರ್ ಕುಮ್ರಹಾರದಲ್ಲಿ ಉತ್ಖನನ ನಡೆಸಿದಾಗ ಅಖಂಡ ಕಲ್ಲಿನ 72 ಕಂಬಗಳ ಅದ್ಭುತ ಸಭಾಂಗಣವೊಂದು ಪತ್ತೆಯಾಯಿತು. ಮುಂದೆ ಅಲ್ತೇಕರ ಮತ್ತು ಮಿಶ್ರರು ಇನ್ನೂ 8 ಕಂಬಗಳನ್ನು ಪತ್ತೆಹಚ್ಚಿದರು. ಈ ಮಂಟಪಕ್ಕೆ 80 ಕಂಬಗಳಿದ್ದುವೆಂದೂ ಇದಕ್ಕೆ ದಕ್ಷಿಣ ದಿಕ್ಕಿನಲ್ಲಿ ಪ್ರವೇಶಿಸಲು ನಾಲ್ಕು ಕಂಬಗಳ ಒಂದು ಮುಖಮಂಟಪ ಇದ್ದಿರಬಹುದೆಂದೂ ಅವರು ಸಿದ್ಧಪಡಿಸಿದರು. ಇಟ್ಟಿಗೆಯಲ್ಲಿ ಕಟ್ಟಿದ ಬೌದ್ಧವಿಹಾರಗಳು ಮತ್ತು ಚೈತ್ಯಗಳು ಇಲ್ಲಿ ಕಂಡುಬಂದಿವೆ. ಇವಲ್ಲದೆ ಬೂದುಬಣ್ಣದ ಮಣ್ಪಾತ್ರೆಗಳು, ಔತ್ತರೇಯ ಮೆರುಗಿನ ಕಪ್ಪುವರ್ಣದ ಪಾತ್ರೆಗಳು, ಕುಷಾಣರ ಮತ್ತು ಗುಪ್ತರ ನಾಣ್ಯಗಳು, ಶುಂಗರ, ಕುಷಾಣರ ಮತ್ತು ಗುಪ್ತರ ಕಾಲದ ಸುಟ್ಟಮಣ್ಣಿನ ಮುದ್ರಿಕೆಗಳು ಮತ್ತು ಕುಷಾಣಪೂರ್ವ ಕಾಲದ ಅಕ್ಷರಗಳನ್ನು ಕೊರೆದ ಮಡಕೆಯ ಚೂರುಗಳು ದೊರೆತಿವೆ. ಹೀಗೆ ದೊರೆತ ವಸ್ತುಗಳಲ್ಲಿ ಗುಪ್ತರ ಕಾಲದ ಒಂದು ಮುದ್ರೆಯ ಮೇಲೆ ಶ್ರೀ ಆರೋಗ್ಯ ವಿಹಾರೇ ಭಿಕ್ಷು ಸಂಘಸ್ಯ ಎಂಬ ಬರೆಹವಿದೆ. ಇದೇ ರೀತಿ ಇತರ ಶಾಸನಗಳುಳ್ಳ ಮುದ್ರೆಗಳೂ ದೊರೆತಿವೆ. (ಎ.ಎಂ.ಎ.)

**ಕುರುಕ್ಷೇತ್ರ:** ಹರಿಯಾಣ ರಾಜ್ಯದ ಒಂದು ಜಿಲ್ಲೆ, ಜಿಲ್ಲೆಯ ಆಡಳಿತ ಕೇಂದ್ರ. ಸರಸ್ವತಿ ನದಿಯ ದಕ್ಷಿಣಕ್ಕೂ ದೃಶದ್ವತಿ ನದಿಯ ಉತ್ತರಕ್ಕೂ ಇರುವ ಐತಿಹಾಸಿಕ ಸ್ಥಳ; ಪ್ರಸಿದ್ಧ ಯಾತ್ರಾಸ್ಥಳ. ಇದರ ಪ್ರಾಚೀನ ಉಲ್ಲೇಖ ವೈದಿಕಯುಗದಲ್ಲಿ ರಚಿತವಾದ ಬ್ರಾಹ್ಮಣಗಳಲ್ಲಿ ಕಂಡುಬರುತ್ತದೆ. ಸುರರು ಕುರುಕ್ಷೇತ್ರದಲ್ಲಿ ಸತ್ರಗಳನ್ನು (ಯಾಗ) ಮಾಡಿದ್ದರೆಂದು ಶತಪಥ ಹಾಗೂ ತೈತ್ತರೀಯ ಬ್ರಾಹ್ಮಣಗಳಲ್ಲೂ ಮೈತ್ರಾಯಣೀ ಸಂಹಿತೆಯಲ್ಲೂ ಹೇಳಲಾಗಿದೆ. ಬ್ರಹ್ಮಾವರ್ತ, ರಾಮಹ್ರದ, ಸಮಂತ (ಸ್ಯಮಂತ), ಪಂಚಕ, ವಿನಶವ, ಸನ್ನಿಹತಿ ಎಂಬ ಹೆಸರುಗಳಿಂದಲೂ ಪ್ರಸಿದ್ಧವಾಗಿದ್ದ ಕುರುಕ್ಷೇತ್ರವನ್ನು ಬ್ರಾಹ್ಮಣಗಳಲ್ಲಿ ಪುಣ್ಯಭೂಮಿಯೆಂದೂ ವಾಮನ ಪುರಾಣ ಮತ್ತು ಮಹಾಭಾರತಗಳಲ್ಲಿ ಧರ್ಮಕ್ಷೇತ್ರವೆಂದೂ ಕರೆಯಲಾಗಿದೆ. ಇದು ಆಭೀರ ದೇಶದ ಒಂದು ಭಾಗವಾಗಿತ್ತೆಂದು ವಾತ್ಸ್ಯಾಯನನ ಕಾಮಸೂತ್ರದಲ್ಲಿ ವರ್ಣಿಸಲಾಗಿದೆ. ಇದು ಮಹಾಭಾರತದ ಯುದ್ಧಭೂಮಿಯೆಂದು ಪ್ರಖ್ಯಾತಿ ಪಡೆದಿದೆ. ಇಲ್ಲಿಗೆ 7ನೆಯ ಶತಮಾನದಲ್ಲಿ ಯುವಾನ್‌ಚಾಂಗ್ ಭೇಟಿಕೊಟ್ಟಿದ್ದ. ಈ ಪ್ರದೇಶದಲ್ಲಿ ಪ್ರಾಚ್ಯಾವಶೇಷಗಳು ವಿಪುಲವಾಗಿವೆ. ಮೊದಲು ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮನಿಂದ 19ನೆಯ ಶತಮಾನದ ಉತ್ತರಾರ್ಧದಲ್ಲಿ ಥಾನೇಸರ್ ಪ್ರದೇಶದಲ್ಲಿ ಪ್ರಾಚೀನ ದಿಬ್ಬಗಳು ಪತ್ತೆಹಚ್ಚಲ್ಪಟ್ಟವು.

ಡಿ.ಬಿ.ಸ್ಪೂನರ್ 1921–23ರ ಅವಧಿಯಲ್ಲಿ ರಾಜಾ ಕರ್ಣ್ ಕ ಖಿಲಾದಲ್ಲಿಯೂ 1934–38ರಲ್ಲಿ ಥಾನೇಸರ್ ಪ್ರದೇಶದ ಬಳಿ ಇರುವ ಥೇ ಪೋಲಾರ್‌ನಲ್ಲಿಯೂ ಉತ್ಖನನ ನಡೆಸಿದ. 1950ರಲ್ಲಿ ಬಿ.ಬಿ.ಲಾಲ್ ವರ್ಣಚಿತ್ರಿತ ಬೂದುಬಣ್ಣದ ಮಡಕೆಗಳನ್ನು ಪೆಹೊವಾ (ಪ್ರಾಚೀನ ಪೃಥೂದಕ), ರಾಜಾ ಕರ್ಣ್ ಕ ಖಿಲಾ, ಅಮಿನ್ ಮುಂತಾದ ನೆಲೆಗಳಲ್ಲಿ ಶೋಧಿಸಿದರು.

ಕುರುಕ್ಷೇತ್ರ ಪ್ರದೇಶದ ಕ್ರಮಬದ್ಧ ಅಧ್ಯಯನ ಸೂರಜ್‌ಭಾನ್‌ರಿಂದ 1960–61ರಲ್ಲಿ ಆರಂಭವಾಯಿತು. ಇವರು ಸಿಸ್‌ವಾಲ್, ಅಂತ್ಯ ಹರಪ್ಪ ಸಂಸ್ಕೃತಿ ಮತ್ತು ಅಂತ್ಯ ಬೂದುಬಣ್ಣದ ಮಣ್ಪಾತ್ರೆ ಸಂಸ್ಕೃತಿಗಳ ನೆಲೆಗಳನ್ನು ಬೆಳಕಿಗೆ ತಂದರು. ಅನಂತರ ಜಿಮ್‌ಜಿ ಶೆಫರ್ ಮತ್ತು ಎಂ.ಆರ್. ಶರ್ಮ ಅವರೊಂದಿಗೆ 1977ರಲ್ಲಿ ಹೆಚ್ಚಿನ ಅಧ್ಯಯನ ಕೈಗೊಂಡರು. ಈ ಜಂಟಿ ಅಧ್ಯಯನ ಕುರುಕ್ಷೇತ್ರದ ಪ್ರಾಚೀನತೆಯನ್ನು ಹರಪ್ಪ ಸಂಸ್ಕೃತಿಯ ಕಾಲಕ್ಕೆ ಕೊಂಡೊಯ್ಯಿತು. ಪಕ್ಕದ ಜಿಂದ್ ಜಿಲ್ಲೆಯ ಬಾಲು, ಹತೋ ಮತ್ತು ಜಿಂದ್ ನೆಲೆಗಳಲ್ಲಿ ಆದಿಹರಪ್ಪ ಕಾಲದ ಮಣ್ಪಾತ್ರೆಗಳು ಸರ್ವೇಕ್ಷಣೆಯಲ್ಲಿ ಬೆಳಕಿಗೆ ಬಂದವು.

ಹರಪ್ಪ ಸಂಸ್ಕೃತಿಯ ಮಡಕೆಗಳು, ಅರೆ–ಪ್ರಶಸ್ತ ಕಲ್ಲಿನ ಮಣಿಗಳು, ಮಣ್ಣಿನ ಬಳೆಗಳು, ಸುಟ್ಟಮಣ್ಣಿನಿಂದ ಮಾಡಿದ ಆಟದಗಾಡಿ, ಚಕ್ರಗಳು, ತ್ರಿಭುಜಾಕೃತಿಯ ಬಿಲ್ಲೆ ಮತ್ತು ವೃತ್ತಾಕಾರದ ಚಕ್ರಗಳು ಬಾಲು ನೆಲೆಯಲ್ಲಿ ದೊರೆತಿರುವುದರಿಂದ ಇಲ್ಲಿ ಪ್ರೌಢ ಹರಪ್ಪ ಸಂಸ್ಕೃತಿಯ ಹಂತವೂ ಇತ್ತೆಂಬುದು ಖಚಿತವಾಗುತ್ತದೆ. ಬಾಲು ಒಂದು ದೊಡ್ಡ ದಿಬ್ಬವಾಗಿದ್ದು 265ಮೀ ಉದ್ದ, 290ಮೀ ಅಗಲ ಮತ್ತು 3.6ಮೀ ಎತ್ತರವಾಗಿದೆ.

ಅಂತ್ಯಹರಪ್ಪ ಕಾಲದ ಅನೇಕ ನೆಲೆಗಳು ಇಲ್ಲಿವೆ. ಹೆಚ್ಚಿನ ನೆಲೆಗಳಲ್ಲಿ ಅಂತ್ಯಹರಪ್ಪದ ಅನಂತರ ಬೂಮಪಾ ಸಂಸ್ಕೃತಿ ಬೆಳೆಯಿತು. ಇವುಗಳಲ್ಲಿ ಪ್ರಮುಖವಾದುದು ಕರ್ನಾಲ್ ಜಿಲ್ಲೆಯ ಔಗಂದ್‌ನ ಅಂತ್ಯ ಹರಪ್ಪ ಕಾಲದ ದಿಬ್ಬ. ಇಲ್ಲಿ ದೊಡ್ಡದಾದ ಹಸಿಇಟ್ಟಿಗೆಯ ಕುರುಹುಗಳು ಕಂಡುಬಂದಿವೆ. ಇದು ಹರಪ್ಪ ಸಂಸ್ಕೃತಿಯ ಪ್ರಮುಖ ಲಕ್ಷಣವಾಗಿದೆ. ಜೊತೆಗೆ ಹರಪ್ಪ ಸಂಸ್ಕೃತಿಯ ಲಿಪಿ ಇರುವ ಮಡಕೆಯ ಚೂರು ಮತ್ತು ಒಂದು ಚೆರ್ಟ್‌ಕಲ್ಲಿನ ಚಕ್ಕೆ ಕೂಡ ದೊರೆತಿವೆ.

ಬೂಮಪಾ ಕಾಲದ ವಸತಿ ನೆಲೆಗಳೂ ಇಲ್ಲಿ ಗಣನೀಯ ಸಂಖ್ಯೆಯಲ್ಲಿದ್ದು ಅನೇಕ ನೆಲೆಗಳಲ್ಲಿ ವಸತಿ ಚಾರಿತ್ರಿಕ ಕಾಲದಲ್ಲಿಯೂ ಮುಂದುವರೆಯಿತು. ಇವುಗಳಲ್ಲಿ ಕೆಲವು ವಿಸ್ತಾರ (40–70 ಚ.ಕಿಮೀ) ಪಟ್ಟಣಗಳಾಗಿದ್ದವು. ಜಿಲ್ಲಾಕೇಂದ್ರವಾದ ಕುರುಕ್ಷೇತ್ರ ಪ್ರಾಚೀನ ಕಾಲದ ದಿಬ್ಬಗಳಿಂದ ಸುತ್ತುವರೆಯಲ್ಪಟ್ಟಿದೆ. ಇವುಗಳಲ್ಲಿ ಥಾನೇಸರ್ ಪಶ್ಚಿಮಕ್ಕಿರುವ ನೆಲೆ ಮುಖ್ಯವಾದದ್ದು. ಇದರ ಮೇಲೆ ಮಧ್ಯಯುಗೀನ ಕಾಲದ ಶೇಕ್ ಚಿಲ್ಲಿಯ ಗೋರಿಯಿದೆ. ಇದು ಬಹುಶಃ ಹರ್ಷವರ್ಧನನ (606–48) ಕಾಲದ ಕೋಟೆಯಾಗಿರಬೇಕು. ಇವನ ಮೊದಲ ರಾಜಧಾನಿ ಥಾಣೇಶ್ವರವಾಗಿತ್ತು. ಈ ಪ್ರದೇಶದಲ್ಲಿ ಆದಿ ಇತಿಹಾಸ ಕಾಲದ ಮತ್ತು ಮಧ್ಯಯುಗೀನ ಕಾಲದ ಮಡಕೆಗಳು ದೊರೆತಿವೆ. ಇದೇ ರೀತಿ ಬರ್ಹಿಹಳ್ಳಿಯ ಪಶ್ಚಿಮದಲ್ಲಿ ದಿಬ್ಬವೊಂದಿದೆ. ಇದನ್ನು ಹಳ್ಳಿಯ ಜನ ಪಂಡಿತೋಂ ಕಾ ಟೀಲ ಎಂದು ಕರೆಯುತ್ತಾರೆ. ಕನ್ನಿಂಗ್‌ಹ್ಯಾಮ್ ಇದನ್ನು ಮದರಸ ಟೀಲ ಎಂದು ಹೇಳಿದ್ದಾನೆ. ಇಲ್ಲಿಯೂ ಹರಪ್ಪ, ಬೂಮಪಾ ಮತ್ತು ಆದಿ ಇತಿಹಾಸ ಕಾಲದ ಮಡಕೆಗಳು ದೊರೆತಿವೆ. ಥಾನೇಸರ್ ನಗರದ ಪೂರ್ವಕ್ಕಿರುವ ದೂದ್ಹೇರಿ ನೆಲೆಯ ಅವಶೇಷಗಳಲ್ಲಿ ಅಂತ್ಯ ಹರಪ್ಪ ಮತ್ತು ಬೂಮಪಾ ಕಾಲದ ಮಡಕೆಗಳು ದೊರೆತಿವೆ. ಹಾಗೆಯೇ ಸಬ್‌ಜಿ ಕ ಟೀಲದಲ್ಲಿ ಗೂರ್ಜರ–ಪ್ರತೀಹಾರರ ಕಾಲದ ದೇವಾಲಯ ಸಂಕೀರ್ಣ ದೊರೆತಿದೆ.

ಕುರುಕ್ಷೇತ್ರ ವಿಶ್ವವಿದ್ಯಾಲಯದ ಪಶ್ಚಿಮದಲ್ಲಿರುವ ರಾಜಾ ಕರ್ಣ್ ಕಾ ಖಿಲಾ ಮತ್ತು ಮಿರ್ಜಾಪುರ ನೆಲೆಗಳ ಉತ್ಖನನವನ್ನು ಕುರುಕ್ಷೇತ್ರ ವಿಶ್ವವಿದ್ಯಾಲಯದ ಪುರಾತತ್ತ್ವ ವಿಭಾಗದಿಂದ 1970–71ರಿಂದ 1975–76ರವರೆಗೆ ಕೈಗೊಳ್ಳಲಾಯಿತು. ಮಿರ್ಜಾಪುರ ದಿಬ್ಬದಲ್ಲಿ ಅಂತ್ಯ ಹರಪ್ಪ ಕಾಲದ ಅವಶೇಷ, ಆದಿ ಇತಿಹಾಸ ಕಾಲದ ದೇವಾಲಯ ಮತ್ತು ಮಧ್ಯಯುಗೀನ ಕಾಲದ ಸಮಾಧಿಗಳ ಪ್ರದೇಶವನ್ನು ಶೋಧಿಸಲಾಯಿತು. ರಾಜಾ ಕರ್ಣ್ ಕಾ ಖಿಲಾದ ದೊಡ್ಡ ದಿಬ್ಬದಲ್ಲಿ ಔತ್ತರೇಯ ಮೆರುಗಿನ ಕಪ್ಪುಪಾತ್ರೆ ಸಂಸ್ಕೃತಿ, ಆದಿ ಇತಿಹಾಸ ಕಾಲದ ಅವಶೇಷಗಳಲ್ಲದೆ ಮಧ್ಯಯುಗೀನ ಕಾಲದ ಲಖೌರಿ ಇಟ್ಟಿಗೆಗಳಿಂದ ಕಟ್ಟಲ್ಪಟ್ಟ ಕೋಟೆಗೋಡೆಗಳು ದೊರಕಿದವು.

ಈ ಎರಡು ದಿಬ್ಬಗಳ ಸಾಂಸ್ಕೃತಿಕ ಕಾಲಾನುಕ್ರಮಣಿಕೆ ಹೀಗಿದೆ: ಹಂತ – I (ಅಂತ್ಯ ಹರಪ್ಪ ಕಾಲ) ಮಿರ್ಜಾಪುರ; ಹಂತ – II (ಔತ್ತರೇಯ ಮೆರುಗಿನ ಕಪ್ಪುಪಾತ್ರೆ ಸಂಸ್ಕೃತಿ) ರಾಜಾ ಕರ್ಣ್ ಕಾ ಖಿಲಾ; ಹಂತ – III (ಆದಿ ಇತಿಹಾಸಕಾಲ) ಯೌಧೇಯ – ಕುಷಾಣ) ರಾಜಾ ಕರ್ಣ್ ಕಾ ಖಿಲಾ – 2 ಮಿರ್ಜಾಪುರ; ಹಂತ – IV (ಮಧ್ಯಯುಗೀನ ಕಾಲ) ರಾಜಾ ಕರ್ಣ್ ಕಾ ಖಿಲಾ, ಮಿರ್ಜಾಪುರ.

ಮಿರ್ಜಾಪುರದ ಅಂತ್ಯ ಹರಪ್ಪ ಅವಶೇಷಗಳಲ್ಲಿ ಹಸಿಇಟ್ಟಿಗೆಗಳಿಂದ ಮಾಡಿದ ನಿರ್ಮಾಣಗಳು, ಅಗ್ಗಿಷ್ಟಿಕೆ ಗುಂಡಿ ಮತ್ತು ಧಾನ್ಯ ಕಣಜಗಳು ಇರುವ ಕೋಣೆಗಳು ದೊರೆತಿವೆ. ಮಿಟಾತಲ್IIಬಿ ಹಾಗೂ ಬಾರ ಮಾದರಿಯ ಪಾತ್ರೆಗಳನ್ನು ಹೋಲುವ ಕಪ್ಪು ಚಿತ್ರಿತ ಕೆಂಪು ಮಡಕೆ ದೊರೆತಿದೆ. ಅಗೇಟ್ ಕಲ್ಲಿನ ವಿವಿಧ ರೀತಿಯ ಮಣಿಗಳು, ಸ್ಫಟಿಕ, ಕಾರ್ನೇಲಿಯನ್, ಜಾಸ್ಪರ್, ಸ್ಟಿಯಟೈಟ್, ಸುಂದರವಾದ ಚೀನಿ ಮಣ್ಣಿನ ಸಾಮಗ್ರಿಗಳು, ಸುಡಾವೆ ಮಣ್ಣಿನ ಗೊಂಬೆಗಳು, ಉಳಿಗಳು, ಉಂಗುರಗಳು, ಸೂಜಿಗಳು, ಎಲೆಯಾಕಾರದ ಈಟಿ ಮೊನೆ, ತಾಮ್ರದ ಕುಡುಗೋಲು, ಡುಬ್ಬವಿರುವ ಎತ್ತಿನ ಆಟದ ಬೊಂಬೆ, ಚಿತ್ರಿತ ಹಾವಿನ ಬೊಂಬೆ, ತ್ರಿಭುಜ ಬಿಲ್ಲೆ, ವೃತ್ತಾಕಾರದ ಚಕ್ರ, ಬಳೆಗಳು, ಜೇಡಿಮಣ್ಣಿನಲ್ಲಿ ಮಾಡಿದ ಆಟದ ಗಾಡಿಗಳು, ಕಲ್ಲಿನ ಬೀಸುವಕಲ್ಲು ಮತ್ತು ಕುಟ್ಟಾಣಿ (ಒನಕೆ), ಬಳೆಗಳು, ಜಿಂಕೆಯ ಕವಿಯೋಲೆ ಮುಂತಾದ ಪ್ರಾಚ್ಯಾವಶೇಷಗಳು ದೊರೆತಿವೆ. ಈ ಕಾಲವನ್ನು ಪ್ರ.ಶ.ಪೂ. ಸು.1700-1300 ಎಂದು ಅಂದಾಜಿಸಬಹುದು. (ಎಸ್.ಪಿ.ಐ.)

**ಕುಶಿನಗರ:** ಉತ್ತರಪ್ರದೇಶ ರಾಜ್ಯದ ದೇವರಿಯ ಜಿಲ್ಲೆಯಲ್ಲಿ ಐತಿಹಾಸಿಕ ಸ್ಥಳ. ಗಂಡಕಿ ನದಿ ದಡದ ಮೇಲಿರುವ ಪ್ರಸಿದ್ಧ ಬೌದ್ಧಕ್ಷೇತ್ರ. ಈಗ ಕಾಸಿಯ ಎಂದು ಹೆಸರಾಗಿರುವ ಈ ನಗರಕ್ಕೆ ಕುಶಿನಗರ ಎಂಬ ಹೆಸರೂ ಬಳಕೆಯಲ್ಲಿತ್ತು. ಪ್ರ.ಶ.ಪೂ.7-6ನೆಯ ಶತಮಾನಗಳಲ್ಲಿ ಮಲ್ಲ ವಂಶದವರ ಹಾಗೂ ಇತಿಹಾಸ ಪ್ರಾರಂಭಯುಗದಲ್ಲಿ ಮಹಾಸುದಸ್ಸನ ರಾಜಧಾನಿ ಯಾಗಿತ್ತು. 7ನೆಯ ಶತಮಾನದಲ್ಲಿ ಚೀನಿ ಯಾತ್ರಿಕ ಯುವಾನ್‌ಚಾಂಗ್ ಈ ಸ್ಥಳವನ್ನು ಸಂದರ್ಶಿಸಿದಾಗ ಈ ನಗರ ಹಾಳುಬಿದ್ದಿತ್ತೆಂದು ಹೇಳಿದ್ದಾನೆ. ಬುದ್ಧನ ಪರಿನಿರ್ವಾಣ ಹಾಗೂ ಅಂತ್ಯಸಂಸ್ಕಾರವಾದುದು ಇಲ್ಲಿಯೇ. ಇಲ್ಲಿ ಅಶೋಕನ ಕಾಲದ್ದಾಗಿರಬಹುದಾದ ನಿರ್ವಾಣ ಸ್ತೂಪದ ಸುತ್ತ ಮಹಾ ಪರಿನಿರ್ವಾಣ ವಿಹಾರ ಸಂಕೀರ್ಣವಿದೆ. ನಿರ್ವಾಣ ಸ್ತೂಪದ ಎದುರಿರುವ ಮಂದಿರದಲ್ಲಿ ಮರಣಶಯ್ಯೆಯಲ್ಲಿರುವ ಬುದ್ಧನ ವಿಗ್ರಹವನ್ನೂ ಗುಪ್ತ ಲಿಪಿಯ ಶಾಸನವುಳ್ಳ ಭಕ್ತನ ಮೂರ್ತಿಯನ್ನೂ ಕಾಣಬಹುದು. 1880ರ ದಶಕದಲ್ಲಿ ಸ್ತೂಪ ಹಾಗೂ ಮಂದಿರದ ಅವಶೇಷಗಳನ್ನು ಕಾರ್ಲೈಲ್ ಅನಾವರಣಗೊಳಿಸಿದ. 1904-05ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಸ್ತೂಪದ ಮಧ್ಯಭಾಗದಲ್ಲಿ ಕೊಳವೆಯ ಹಾಗೆ ಒಂದು ಗುಂಡಿಯನ್ನು ಅಗೆದು ತಳದಲ್ಲಿದ್ದ ಅವಶೇಷ ಕರಡಿಕೆಯನ್ನೂ ಅದರ ಮೇಲಿಟ್ಟಿದ್ದ ತಾಮ್ರ ಶಾಸನವನ್ನೂ ಹೊರತೆಗೆಯಿತು. ಶಾಸನದಲ್ಲಿ ಪ್ರತೀತ್ಯ ಸಮುತ್ಪಾದ ಸೂತ್ರದ ಪಠ್ಯವಿದೆ. ಭಕ್ತನೊಬ್ಬ ಈ ಶಾಸನವನ್ನು ನಿರ್ವಾಣ ಚೈತ್ಯದಲ್ಲಿ ಇರಿಸಿದನೆಂದು ಶಾಸನದ ಕೊನೆಯಲ್ಲಿ ಉಲ್ಲೇಖಿಸಿದೆ. ತಾಮ್ರದ ಅವಶೇಷ ಕರಡಿಕೆಯೊಳಗೆ ಇದ್ದಿಲು, ಕವಡೆ, ಪ್ರಶಸ್ತ ಕಲ್ಲುಗಳು ಹಾಗೂ 1ನೆಯ ಕುಮಾರಗುಪ್ತನ ಚಿನ್ನದ ನಾಣ್ಯಗಳಿದ್ದವು. ಕುಷಾಣರ ಕಾಲದಲ್ಲಿ ಕಟ್ಟಲ್ಪಟ್ಟ 8 ವಿಹಾರಗಳ ಅವಶೇಷಗಳನ್ನೂ ಉತ್ಖನನದಲ್ಲಿ ಹೊರತೆಗೆಯ ಲಾಯಿತು. ಈ ಸಂಕೀರ್ಣ 10-11ನೆಯ ಶತಮಾನದವರೆಗೆ ಅಸ್ತಿತ್ವದಲ್ಲಿತ್ತು. ಇದಕ್ಕೆ ಹೊಂದಿದಂತಿರುವ ಚೈತ್ಯದಲ್ಲಿ ಬುದ್ಧ ವಿಗ್ರಹ ಮತ್ತು ಕಳಚುರಿ ಅಧಿಕಾರಿಯೊಬ್ಬನ ಶಾಸನವಿದೆ. ಇದಕ್ಕೆ ಒಂದು ಕಿಮೀ ಪೂರ್ವದಲ್ಲಿರುವ ಬೃಹತ್ ಸ್ತೂಪ ಬುದ್ಧನ ಅಂತ್ಯಕ್ರಿಯೆಯ ಸ್ಥಳವಾಗಿರಬಹುದೆಂಬ ಊಹೆ. (ವಿ.ಎಸ್.)

**ಕುಷಾಣರು:** ಮಧ್ಯ ಏಷ್ಯದಿಂದ ಪ್ರಾಚೀನ ಭಾರತಕ್ಕೆ ವಲಸೆ ಬಂದು, ವಾಯವ್ಯ ಭಾಗದಲ್ಲಿ ನೆಲಸಿದ ಒಂದು ರಾಜವಂಶ. ಇವರು ಯೂ-ಚಿ ಕುಲದವರು (ಚಂದ್ರವಂಶದವರು). ಈ ಅಲೆಮಾರಿ ತಂಡ ಪ್ರಶ.ಪೂ.2ನೆಯ ಶತಮಾನದಲ್ಲಿ ಮಧ್ಯ ಏಷ್ಯದಲ್ಲಿ ಉದಯಿಸಿತ್ತೆಂಬುದು ಚೀನಿ ಇತಿಹಾಸಕಾರರ ಅಭಿಪ್ರಾಯ. ಆದರೆ ಪ್ರ.ಶ.ಪೂ.165ರ ಸುಮಾರಿಗೆ ಮಧ್ಯ ಏಷ್ಯದ ಮತ್ತೊಂದು ಗಣಕ್ಕೆ ಸೇರಿದ ಮತ್ತು ಇವರ ನೆರೆಯವರಾದ ಹ್ಯೂಂಗ್ ನುಗಳು ಇವರನ್ನು ಸೋಲಿಸಿದ್ದರಿಂದ ಯೂ-ಚಿಗಳು ತಮ್ಮ ನೆಲೆಯಾದ ಹುಲ್ಲುಗಾವಲನ್ನು ಬಿಟ್ಟು ಪಶ್ಚಿಮದ ಕಡೆಗೆ ಸರಿದರು. ಹೀಗೆ ನೆಲೆಗಾಗಿ ಅಲೆಯುತ್ತಿದ್ದ ಯೂ-ಚಿಗಳು ಇಲ್ಲಿ ನದೀಪ್ರದೇಶದ ಸನ್ ಜನಾಂಗವನ್ನು ಸೋಲಿಸಿದರು. ಇಷ್ಟರಲ್ಲಿ ಯೂ-ಚಿಗಳ ತಂಡದಲ್ಲಿ ಇಬ್ಭಾಗವಾಗಿ ಅವರ ಸಣ್ಣತಂಡ ದಕ್ಷಿಣಕ್ಕೆ ಸರಿದು ಟಿಬೆಟಿನತ್ತ ವಲಸೆ ಹೋಯಿತು. ಪ್ರಧಾನ ತಂಡ (ಟಯೂ-ಚಿ) ಪಶ್ಚಿಮಕ್ಕೆ ಪ್ರಯಾಣ ಬೆಳೆಸಿ, ವು-ಸನ್ ರಾಜ್ಯದ ಪಶ್ಚಿಮದ ಮತ್ತು ಜಕ್ಸಾರ್ಟಿಸ್ ನದಿಯ ಉತ್ತರದ ಭಾಗಗಳನ್ನು ಆಕ್ರಮಿಸಿಕೊಂಡು ಶಕರನ್ನು ಸೋಲಿಸಿತು. ಶಕರು ಆಫ್ಘಾನಿಸ್ತಾನದ ದಕ್ಷಿಣ ಭಾಗಕ್ಕೆ ಹೋಗಿ ನೆಲೆಸಿದರು. ಇಷ್ಟರಲ್ಲಿ ಶತ್ರುಗಳು ಕೈಯಿಂದ ಪಾರಾಗಿದ್ದ ವು-ಸನ್ ರಾಜಪುತ್ರ ಹ್ಯೂಂಗ್-ನುಗಳ ಸಹಾಯದಿಂದ ಯೂ-ಚಿಗಳನ್ನು ಸೋಲಿಸಿ ಅವರನ್ನು ತನ್ನ ಮತ್ತು ಶಕರ ಪ್ರದೇಶಗಳಿಂದ ಹೊರದೂಡಿದ. ಅನಂತರ ಪ್ರಧಾನ ಯೂ-ಚಿ ತಂಡ ಅಲೆಯುತ್ತ ಬ್ಯಾಕ್ಟ್ರಿಯದ ಆಕ್ಸಸ್ ನದೀ ಪ್ರದೇಶವನ್ನು ತಲುಪಿ ಅಲ್ಲಿ ನೆಲಸಿದ್ದ ಶಕರನ್ನು ಮತ್ತೆ ಓಡಿಸಿ ಹಲವಾರು ನೆರೆಹೊರೆಯ ಪ್ರದೇಶವನ್ನು ಗೆದ್ದುಕೊಂಡು ರಾಜ್ಯ ವಿಸ್ತಾರ ಮಾಡಿದರು. ಆಗ ಅವರ ಆಡಳಿತ ಬ್ಯಾಕ್ಟ್ರಿಯದಿಂದ ಆಕ್ಸಸ್‌ನ ದಕ್ಷಿಣದವರೆಗೂ ಹಬ್ಬಿತ್ತು. ಅವರ ರಾಜಧಾನಿ ಆಕ್ಸಸ್ ನದಿಯ ಉತ್ತರಕ್ಕಿದ್ದ ಕಿಯೆನ್-ಚಿ ಎಂದೂ ಅವರ ರಾಜ್ಯದ ದಕ್ಷಿಣದ ಗಡಿ ಕಿ-ಪಿನ್ ಬಳಿಯಿತ್ತೆಂದೂ 24ರವರೆಗಿನ ಇತಿಹಾಸವನ್ನು ತಿಳಿಸುವ ಚೀನಿ ಚರಿತ್ರಕಾರ ಪಾನ್-ಕುವಿನ ಬರೆಹಗಳಿಂದ ತಿಳಿದು ಬರುತ್ತದೆ. 5 ಗುಂಪುಗಳನ್ನೊಳ ಗೊಂಡಿದ್ದ ಯೂ-ಚಿ ಪಂಗಡದಲ್ಲಿ ಕಾಲಕ್ರಮದಲ್ಲಿ ಒಂದು ಪಂಗಡ ಪ್ರಬಲವಾಗಿ ಇತರ ಗುಂಪುಗಳನ್ನು ಗೆದ್ದು ಕೊಂಡಿತೆಂದು ಇನ್ನೊಬ್ಬ ಚೀನಿ ಚರಿತ್ರಕಾರ ಫಾನ್-ಯೆ ತಿಳಿಸಿದ್ದಾನೆ. ಅನಂತರ ಯೆನ್-ಕಾವೊ-ಚೆನ್ ಎಂಬ ನಾಯಕನ ಆಳ್ವಿಕೆಯಲ್ಲಿ ಭಾರತದ ಪಂಜಾಬ್ ಪ್ರದೇಶ ಇವರ ವಶವಾಯಿತು. ಪ್ರಬಲರಾದ ಯೂ-ಚಿಯರಿಗೆ ಆಗಿನಿಂದ ಕುಷಾಣರೆಂದು ಹೆಸರಾಯಿತು.

ಭಾರತದಲ್ಲಿ ಆ ವಂಶದ ಮೊದಲ ದೊರೆ 1ನೆಯ ಕುಸುಲುಕ ಅಥವಾ ಕುಜುಲ ಕಡ್‌ಫೀಸಿಸ್. ಈತ ಉಳಿದ ಯೂ-ಚಿ ಬಣಗಳ ನೇತೃತ್ವವನ್ನು 40ರ ಸುಮಾರಿನಲ್ಲಿ ಪಡೆದನೆಂದು ತಿಳಿದುಬರುತ್ತದೆ. ಬಹುಶಃ ಈತ 15ರಿಂದ 65ರವರೆಗೆ ಅಧಿಕಾರದಲ್ಲಿದ್ದಿರ ಬಹುದು. ಪಾರ್ಥಿಯದ ಗಡಿಯಿಂದ ಸಿಂಧ್‌ವರೆಗೆ ಇವನ ರಾಜ್ಯ ವಿಸ್ತರಿಸಿದ್ದಿರಬಹುದು. ಇವನ ನಾಣ್ಯಗಳು ಅಧಿಕ ಸಂಖ್ಯೆಯಲ್ಲಿ ದೊರಕಿವೆ. ಈತ ತನ್ನ ಜೀವಿತ ಕಾಲದ ಕೊನೆಯ ಭಾಗದಲ್ಲಿ ಬೌದ್ಧಧರ್ಮ ಸ್ವೀಕಾರ ಮಾಡಿದ್ದಿರಬಹುದೆಂದು ಹೇಳಲಾಗಿದೆ.

ಮೊದಲನೆಯ ಕಡ್‌ಫೀಸಿಸನ ತರುವಾಯ ಅವನ ಮಗ ವಿಮ ಕಡ್‌ಫೀಸಿಸ್ ಪಟ್ಟಕ್ಕೆ ಬಂದ. ಇವನ ಆಳ್ವಿಕೆಯ ಕಾಲ ಸು. 65-75. ಈ ವಿಷಯ ಅವನ ನಾಣ್ಯಗಳನ್ನು ಬಳಕೆಗೆ ತಂದ ಕುಷಾಣರ ಮೊದಲನೆ ದೊರೆ ಈತ. ಇತರ ಕುಷಾಣರೂ ಅನಂತರ ಕಾಲದ ಭಾರತೀಯ ರಾಜರೂ ಚಿನ್ನದ ನಾಣ್ಯಪದ್ಧತಿಯನ್ನು ಮುಂದುವರಿಸಿ ದರು. ತಾಮ್ರದ ನಾಣ್ಯಗಳೂ ಚಲಾವಣೆ ಯಲ್ಲಿದ್ದುವು. ಇವನ ನಾಣ್ಯಗಳ ಮೇಲೆ ಶಿವನ ಮತ್ತು ತ್ರಿಶೂಲದ ಚಿತ್ರಗಳಿರುವು ದರಿಂದ ಈತ ಶೈವಮತಾನುಯಾಯಿ ಯಾಗಿದ್ದನೆಂದು ಹೇಳಬಹುದು. ಈತ ಭಾರತದ ಹಲವಾರು ಪ್ರದೇಶಗಳನ್ನು ಗೆದ್ದು ರಾಜ್ಯವಿಸ್ತಾರ ಮಾಡಿದಂತೆ ತಿಳಿದುಬರುತ್ತದೆ. ಪಂಜಾಬ್, ಕಾಂದ ಹಾರ್ ಹಾಗೂ ಕಾಬೂಲ್ ಕಣಿವೆಗಳಲ್ಲಿ ದೊರೆತ ನಾಣ್ಯಗಳ ಮೇಲೆ ಗ್ರೀಕ್ ಮತ್ತು ರೋಮನರ ಪ್ರಭಾವ ಎದ್ದುಕಾಣುತ್ತದೆ. ಎರಡನೆಯ ಕಡ್‌ಫೀಸಿಸನಿಗೆ ಮಹಾ ರಾಜ, ರಾಜಾಧಿರಾಜ, ಸರ್ವಲೋಗ ಈಶ್ವರ, ಮಹೇಶ್ವರ ಹಾಗೂ ಮಹಾ ರಕ್ಷಕ ಎಂಬ ಬಿರುದುಗಳಿದ್ದುವೆಂಬುದು ನಾಣ್ಯಗಳಿಂದ ತಿಳಿಯುತ್ತದೆ. ನಾಣ್ಯದ ಮುಂಭಾಗದಲ್ಲಿ ಅರಸರ ಸುಂದರ ಚಿತ್ರವೂ ಹಿಂಭಾಗದಲ್ಲಿ ನಂದಿಯೊಡನಿದ್ದ ಜಟಧಾರಿ ಶಿವನ ಚಿತ್ರವೂ ಇರುವುದು ಇವನ ನಾಣ್ಯಗಳ ವೈಶಿಷ್ಟ್ಯ. ನಾಣ್ಯಗಳ ಮೇಲ್ಮುಖದಲ್ಲಿ ಗ್ರೀಕ್ ಲಿಪಿಯ ಹಾಗೂ ಹಿಂಭಾಗದಲ್ಲಿ ಖರೋಷ್ಠಿ ಲಿಪಿಯ ಶಾಸನಗಳಿವೆ. ಈ ನಾಣ್ಯಗಳು ಗಾಂಧಾರ ಇಲ್ಲವೆ ಬ್ಯಾಕ್ಟ್ರಿಯದಲ್ಲಿ ಮುದ್ರಿತವಾದುವು. ರೋಮ್ ಸಾಮ್ರಾಜ್ಯದ ಟ್ರೋಜನನ (98-117) ಆಸ್ಥಾನಕ್ಕೆ ಕುಷಾಣರ ರಾಯಭಾರಿಗಳು ಹೋಗಿದ್ದು, ತಮ್ಮೆರಡು ರಾಜ್ಯಗಳ ನಡುವೆ ಬೆಳೆಯುತ್ತಿದ್ದ ವ್ಯಾಪಾರ ಸಂಬಂಧವನ್ನು ಬಲಗೊಳಿಸಿದರು. ಭಾರತದಿಂದ ರೋಮ್ ಸಾಮ್ರಾಜ್ಯಕ್ಕೆ ಮೆಣಸು, ರೇಷ್ಮೆ, ಜರಿಬಟ್ಟೆ, ವಜ್ರ ವೈಡೂರ್ಯ ಮತ್ತು ಪರಿಮಳ ದ್ರವ್ಯಗಳು ಹೋಗುತ್ತಿದ್ದುವು. ಆ ದೇಶದಿಂದ ವಿಪುಲ ಸಂಪತ್ತು ಭಾರತಕ್ಕೆ ಬರುತ್ತಿತ್ತು.



ಗಾಂಧಾರ ಶೈಲಿಯ ಬುದ್ಧ

ಕುಷಾಣರ ರಾಜವಂಶದಲ್ಲಿ ಅತ್ಯುನ್ನತ ಕೀರ್ತಿ ಗಳಿಸಿದ ಪ್ರಭಾವಶಾಲಿ ಚಕ್ರವರ್ತಿ ಕನಿಷ್ಕ. ಇವನು 78 ರಿಂದ 120 ರವರೆಗೆ ಆಳಿದ. ಇವನ ಕಾಲದಲ್ಲಿ ಸಾಮ್ರಾಜ್ಯ ಉತ್ತರದಲ್ಲಿ ಖೋಟಾನ್ ಹಾಗೂ ದಕ್ಷಿಣದಲ್ಲಿ ಕೊಂಕಣ, ಪೂರ್ವದಲ್ಲಿ ಬಿಹಾರ ಹಾಗೂ ಪಶ್ಚಿಮದಲ್ಲಿ ಖೋರಾಸಾನ್‌ವರೆಗೆ ಹರಡಿತ್ತೆಂದು ಇವನ ಶಾಸನಗಳಿಂದ ತಿಳಿದುಬರುತ್ತದೆ. ಎರಡನೆಯ ಕಡ್‌ಫೀಸಿಸ್ ಹಾಗೂ ಅನಂತರ ಪಟ್ಟಕ್ಕೆ ಬಂದ ಕನಿಷ್ಕರ ಮಧ್ಯೆ ಸ್ವಲ್ಪ ಕಾಲಾಂತರವಿದ್ದರೂ ಕನಿಷ್ಕನೇ ಎರಡನೆಯ ಕಡ್‌ಫೀಸಿಸನ ತರುವಾಯದ ಕುಷಾಣ ದೊರೆಯೆಂಬುದು ಖಚಿತವಾಗಿದೆ. ಈತ ಕಾಶ್ಮೀರವನ್ನು ಗೆದ್ದು ಅಲ್ಲಿ ಕನಿಷ್ಕಪುರವನ್ನು ಕಟ್ಟಿಸಿ ಬುದ್ಧಗಯೆ ಹಾಗೂ ಪಾಟಲೀಪುತ್ರವನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡ. ಬೌದ್ಧಪಂಡಿತ ಅಶ್ವಘೋಷನನ್ನು ಕನಿಷ್ಕ ಪಾಟಲೀಪುತ್ರದಿಂದ ತನ್ನಲ್ಲಿಗೆ ಆಹ್ವಾನಿಸಿದ. ಪುರುಷಪುರ ಅಥವಾ ಪೆಷಾವರ್ ಇವನ ರಾಜಧಾನಿ. ತನ್ನ ವಿಸ್ತಾರವಾದ ಸಾಮ್ರಾಜ್ಯವನ್ನು ರಾಜಕೀಯ ಅನುಕೂಲತೆಗಾಗಿ ಹಲವು ಪ್ರಾಂತ್ಯಗಳನ್ನಾಗಿ ವಿಂಗಡಿಸಿ ರಾಜಪ್ರತಿನಿಧಿಗಳ ಸಹಾಯದಿಂದ ರಾಜ್ಯಭಾರ ಸಾಗಿಸಿದ. ಕ್ಷತ್ರಪರ ರಾಜ್ಯಪದ್ಧತಿಯನ್ನೂ ಮುಂದುವರಿಸಿಕೊಂಡು ಬಂದ. ಕ್ಷತ್ರಪರು ಮತ್ತು ಮಹಾಕ್ಷತ್ರಪರೇ ಪ್ರಾಂತ್ಯಾಧಿಪತಿಗಳು. ಎರಡನೆಯ ಕಡ್‌ಫೀಸಿಸ್ ಧರಿಸಿದ ದೇವಪುತ್ರನೆಂಬ ಬಿರುದನ್ನು ಕನಿಷ್ಕನೂ ಧರಿಸುತ್ತಿದ್ದ. ಚೀನಾದ ದಳಪತಿ ಪಾನ್‌ಚಾವನೊಂದಿಗೆ ನಡೆದ ಕದನದಲ್ಲಿ ಕನಿಷ್ಕ ಸೋಲನ್ನನುಭವಿಸಿದರೂ ಅವನ ಮಗ ಪಾನಯಾಂಗನನ್ನು

ಸೋಲಿಸಿ ಸೇಡು ತೀರಿಸಿಕೊಂಡು, ಕ್ಯಾಷ್‍ಘರ್, ಯಾರ್ಕಂಡ್ ಮತ್ತು ಖೋಟಾನುಗಳನ್ನು ವಶಪಡಿಸಿಕೊಂಡ. ಅನಂತರ ಪಾರ್ಥಿಯನರನ್ನೂ ಸೋಲಿಸಿದ. ಈ ಹಲವಾರು ವಿಜಯಗಳ ಸ್ಮಾರಕವಾಗಿ ಒಂದು ಹೊಸ ಶಕವನ್ನು 78ರಲ್ಲಿ ಪ್ರಾರಂಭಿಸಿದ. ರಾಜಧಾನಿಯಾದ ಪುರುಷಪುರದಲ್ಲಿ ಭವ್ಯವಾದ ಸಾರ್ವಜನಿಕ ಕಟ್ಟಡಗಳನ್ನೂ ಬೌದ್ಧವಿಹಾರಗಳನ್ನೂ ಬುದ್ಧನ ಅವಶೇಷಗಳನ್ನೊಳಗೊಂಡಿದ್ದ ಸ್ತೂಪವನ್ನೂ ಈತ ಕಟ್ಟಿಸಿದನೆಂದು ಹೇಳಲಾಗಿದೆ.

ಕನಿಷ್ಕ ಅಶೋಕ ಚಕ್ರವರ್ತಿಯಂತೆ ಬೌದ್ಧ ಧರ್ಮಾವಲಂಬಿ ಮತ್ತು ಪ್ರಸಾರಕನೆಂದು ಬೌದ್ಧಗ್ರಂಥಗಳಲ್ಲಿ ಕೀರ್ತಿ ಪಡೆದಿದ್ದಾನೆ. ಬೌದ್ಧಧರ್ಮದೊಂದಿಗೆ ಇತರ ಧರ್ಮಗಳಲ್ಲೂ ಕನಿಷ್ಕನಿಗೆ ನಿಷ್ಠೆಯಿತ್ತೆಂಬ ಸಂಗತಿ ಅವನ ನಾಣ್ಯಗಳ ಮೇಲಿರುವ ಗ್ರೀಕ್, ಸುಮೇರಿಯ, ಪರ್ಷಿಯ ಹಾಗೂ ಭಾರತದ ಹಿಂದು ದೇವತೆಗಳ ಲಾಂಛನಗಳಿಂದ ಕಂಡುಬರುತ್ತದೆ. ಬೌದ್ಧಧರ್ಮದ ವಸುಮಿತ್ರ ಮತ್ತು ಅಶ್ವಘೋಷ ಇವರಿಂದ ಪ್ರಭಾವಿತನಾಗಿ ಬೌದ್ಧಧರ್ಮವನ್ನು ಸ್ವೀಕರಿಸಿದರೂ ಕನಿಷ್ಕ ಅನ್ಯಮತೀಯರನ್ನು ಹಿಂಸಿಸದೆ, ಪರಧರ್ಮ ಸಹಿಷ್ಣುವಾಗಿದ್ದ. ಬೌದ್ಧಧರ್ಮ ಪ್ರಚಾರಕರನ್ನು ಏಷ್ಯದ ಮೂಲೆಮೂಲೆಗೂ ಕಳಿಸಿದುದರ ಪರಿಣಾಮವಾಗಿ ಬೌದ್ಧಧರ್ಮ ಬಹುಬೇಗನೆ ಚೀನ, ಜಪಾನ್, ಟಿಬೆಟ್ ಹಾಗೂ ಮಧ್ಯ ಏಷ್ಯದಲ್ಲಿ ಪ್ರಸರಿಸಿತು.

ಬುದ್ಧನ ಇನ್ನೊಂದು ಶಿಲ್ಪ

ಕನಿಷ್ಕ ಕಾಲದಲ್ಲಿ ನಡೆದ ಒಂದು ಮಹತ್ವದ ಘಟನೆಯೆಂದರೆ ಬೌದ್ಧ ಧರ್ಮದ ನಾಲ್ಕನೆಯ ಮಹಾಸಭೆ. ಸು. 500 ಬೌದ್ಧ ಸಂನ್ಯಾಸಿಗಳು ಇದರಲ್ಲಿ ಭಾಗವಹಿಸಿದ್ದರು. ಉದಾಮ ಪಂಡಿತರೆನಿಸಿದ ವಸುಮಿತ್ರ, ಅಶ್ವಘೋಷ, ನಾಗಾರ್ಜುನ ಮತ್ತು ಪಾರ್ಶ್ವ ಈ ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಯ ಕಾರ್ಯಕಲಾಪಗಳನ್ನು ನಡೆಸಲು ವಸುಮಿತ್ರ ಅಧ್ಯಕ್ಷನಾಗಿಯೂ ಅಶ್ವಘೋಷ ಉಪಾಧ್ಯಕ್ಷನಾಗಿಯೂ ಇದ್ದರು. ಬೌದ್ಧಧರ್ಮದಲ್ಲಿ ಬೆಳೆದು ಬಂದ ಕೆಲವು ವಿವಾದಾಸ್ಪದವಾದ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿ, ಆ ಧರ್ಮಕ್ಕೆ ಒಂದು ಹೊಸ ರೂಪ ಕೊಡುವುದೇ ಈ ಸಭೆಯ ಮೂಲ ಉದ್ದೇಶವಾಗಿತ್ತು. ಪಂಡಿತರು ಬೌದ್ಧ ಸಾಹಿತ್ಯವನ್ನು ಪರಿಶೀಲಿಸಿ ತ್ರಿಪಿಟಕಗಳ ಮೇಲೆ ಭಾಷ್ಯವನ್ನು ಬರೆದರು. ಅದೇ ಸಮಯದಲ್ಲಿ ಬೌದ್ಧಧರ್ಮೀಯರಲ್ಲಿದ್ದ ಭಿನ್ನಾಭಿಪ್ರಾಯಗಳಿಂದ ಮತದ ಏಕತೆಗೆ ಭಂಗ ಬಂದು ಇಬ್ಭಾಗವಾಗಿ, ಹೀನಯಾನ ಮತ್ತು ಮಹಾಯಾನಗಳೆಂಬ ಎರಡು ಪಂಗಡಗಳು ಹುಟ್ಟಿಕೊಂಡುವು. ಸ್ವತಃ ಕನಿಷ್ಕನೇ ಮಹಾಯಾನ ಬೌದ್ಧಧರ್ಮವನ್ನು ಸ್ವೀಕರಿಸಿ ತನ್ನ ವಿಸ್ತಾರವಾದ ಸಾಮ್ರಾಜ್ಯದಲ್ಲಿ ಇದು ಹರಡಲು ಕಾರಣನಾದ.

ಕನಿಷ್ಕನ ಅನಂತರ ಬಂದ ದೊರೆ ವಸಿಷ್ಕ. ಆದರೆ ಈ ದೊರೆ ಅಷ್ಟು ಪ್ರಬಲನಲ್ಲದ ಕಾರಣ ಇವನ ರಾಜ್ಯ ಕೇವಲ ಮಥುರ ಹಾಗೂ ಅದರ ಸುತ್ತಮುತ್ತಣ ಪ್ರದೇಶಗಳಿಗೇ ಸೀಮಿತವಾಗಿತ್ತು. ಅನಂತರ ದೊರೆಯಾದ ಹುವಿಷ್ಕ (120–138) ಕುಷಾಣರ ರಾಜ್ಯವನ್ನು ಸುಸ್ಥಿತಿಗೆ ಒಯ್ದ. ಬೌದ್ಧಧರ್ಮಕ್ಕೆ ಆಶ್ರಯ ನೀಡಿದ. ಕನಿಷ್ಕ ಕಟ್ಟಿಸಿದ ವಿಪುಲವಾದ ಸ್ಮಾರಕಗಳಿಂದಾಗಿ ಪೆಷಾವರ್ ಅಲಂಕೃತವಾದರೆ ಹುವಿಷ್ಕ ಕಟ್ಟಿಸಿದ ವಿಪುಲವಾದ ಸ್ಮಾರಕಗಳಿಂದ ಮಥುರ ಕಂಗೊಳಿಸಿತು. ಕುಷಾಣರ ವಂಶಕ್ಕೆ ಸೇರಿದ ಕೊನೆಯ ಮುಖ್ಯ ಅರಸ 1ನೆಯ ವಾಸುದೇವ (152–177). ಇವನ ಶಾಸನಗಳು ಮಥುರದಲ್ಲಿ ಲಭಿಸಿವೆ. ಇವನ ನಾಣ್ಯಗಳಲ್ಲಿ ಶಿವನ ಲಾಂಛನವಿದೆ. ಇವನು ವಿದ್ವಾಂಸರಿಗೆ ಆಶ್ರಯದಾತನಾಗಿದ್ದ. ಅನಂತರ ಬಂದ ಕುಷಾಣ ರಾಜರು ಅಶಕ್ತರಾಗಿದ್ದುದರಿಂದ ಕನಿಷ್ಕ ನಿರ್ಮಿಸಿದ ವಿಸ್ತಾರವಾದ ರಾಜ್ಯ ನಾಶವಾಯಿತು. ಕುಷಾಣ ವಂಶಕ್ಕೆ ಸೇರಿದ ಹಲವು ಪುಟ್ಟ ರಾಜರು ಭಾರತದ ವಾಯುವ್ಯ ಭಾಗದಲ್ಲಿ 9ನೆಯ ಶತಮಾನದವರೆಗೂ ಆಳುತ್ತಿದ್ದರು.

ಮೌರ್ಯ ಸಾಮ್ರಾಜ್ಯ ಆಳಿದ ಅನಂತರ ಇಳಿಮುಖವಾಗಿದ್ದ ಭಾರತದ ಸಂಸ್ಕೃತಿಯನ್ನು ಪುರಸ್ಕರಿಸಿ ಕುಷಾಣರು ಉತ್ತರ ಭಾರತದ ಹಲವಾರು ಭಾಗಗಳನ್ನು ಸು. 300 ವರ್ಷಗಳವರೆಗೆ ಸಮರ್ಪಕವಾಗಿ ಆಳಿ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಬೌದ್ಧಿಕ ಹಾಗೂ ಕಲಾಕ್ಷೇತ್ರಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದಲ್ಲದೆ ಹೊಸ ಚೈತನ್ಯವನ್ನೂ ನೀಡಿದರು. ಮಹಾಯಾನ ಬೌದ್ಧಪಂಥದ ಉದಯ, ಗಾಂಧಾರ ಶೈಲಿಯ ವಾಸ್ತು ಶಿಲ್ಪಕಲೆ, ಬುದ್ಧನ ಪ್ರತಿಮೆಯ ನಿರ್ಮಾಣ, ವಿವಿಧ ದೇಶಗಳೊಂದಿಗೆ ರಾಜಕೀಯ ಹಾಗೂ ವ್ಯಾಪಾರ ಸಂಬಂಧ, ಪಂಡಿತರಿಗೆ ಆಶ್ರಯ ಹಾಗೂ ಪರಧರ್ಮ ಸಹಿಷ್ಣುತೆ–ಇವು ಕುಷಾಣರ ಕಾಲದ ಗಮನಾರ್ಹ ಕೊಡುಗೆಗಳು. (ಎ.ಕೆ.ಎಸ್‍ಎಚ್‍ವಿ.)

**ನಾಣ್ಯಗಳು:** ಕನಿಷ್ಕನಿಗಿಂತ ಹಿಂದಿನವರಾದ ಒಂದನೆಯ ಕುಜುಲ ಕಡ್‍ಫೀಸಿಸ್ ಮತ್ತು ಎರಡನೆಯ ವಿಮ ಕಡ್‍ಫೀಸಿಸ್ ಇವರ ಚರಿತ್ರೆಯನ್ನು ತಿಳಿಯಲು ನಾಣ್ಯಗಳಲ್ಲದೆ ಬೇರೆ ಆಧಾರಗಳೇ ಇಲ್ಲ. ಕುಜುಲ ಕಡ್‍ಫೀಸಿಸ್ ಭಾರತದಲ್ಲಿ ಆಳಿದ ಕೊನೆಯ ಗ್ರೀಕ್ ರಾಜ ಹರ್ಮಿಯಸನನ್ನು ಸೋಲಿಸಿ ಅವನ ರಾಜ್ಯವನ್ನು ಆಕ್ರಮಿಸುವ ಮುನ್ನ ಅವನ ಜೊತೆಯಲ್ಲೇ ಸ್ವಲ್ಪಕಾಲ ರಾಜ್ಯವನ್ನಾಳುತ್ತಿದ್ದನೆಂಬ ವಿಷಯ ನಾಣ್ಯಗಳಿಂದ ತಿಳಿದುಬಂದಿದೆ. ಒಂದು ನಾಣ್ಯದ ಮುಂಭಾಗದಲ್ಲಿ ಹರ್ಮಿಯಸನ ಎದೆ ವಿಗ್ರಹ ಮತ್ತು ಗ್ರೀಕ್ ಲಿಪಿಯಿಂದ ಕೂಡಿದ ಶಾಸನ ಇವೆ. ಹಿಂಭಾಗದಲ್ಲಿ ಬಲಗೈಯಲ್ಲಿ ದೊಣ್ಣೆ ಮತ್ತು ಎಡಗೈಯಲ್ಲಿ ಸಿಂಹದ ಚರ್ಮದೊಂದಿಗೆ ನಿಂತ ಹೆರಾಕ್ಲಿಸನ ಚಿತ್ರವಿದೆ. ಖರೋಷ್ಠಿ ಲಿಪಿಯಲ್ಲಿ ಕುಜುಲಕನಸ ಎಂಬ ಶಾಸನವಿದೆ. ಈ ತಾಮ್ರದ ನಾಣ್ಯದ ಕಾಲ ಸು. 40–50. ಇನ್ನೊಂದು ತಾಮ್ರದ ನಾಣ್ಯದಲ್ಲಿ ಅವನೊಬ್ಬನ ಚಿತ್ರ ಮಾತ್ರ ಇರುವುದರಿಂದ ಆತ ಹರ್ಮಿಯಸನನ್ನು ಸೋಲಿಸಿ ತಾನೊಬ್ಬನೇ ರಾಜ್ಯವನ್ನಾಳಲು ಪ್ರಾರಂಭಿಸಿದನೆಂದು ಊಹಿಸಬಹುದು. ಮುಂಭಾಗದ ಗ್ರೀಕ್ ಲಿಪಿಯ ಶಾಸನದಲ್ಲೂ ಹಿಂಭಾಗದ ಖರೋಷ್ಠಿ ಲಿಪಿಯ ಶಾಸನದಲ್ಲೂ ಅವನ ಹೆಸರಿದೆ. ಮೂರನೆಯ ರೀತಿಯ ತಾಮ್ರದ ನಾಣ್ಯದಲ್ಲಿ ಮುಂಭಾಗದಲ್ಲಿ ರಾಜನ ತಲೆಯೂ ಗ್ರೀಕ್ ಶಾಸನವೂ ಹಿಂಭಾಗದಲ್ಲಿ ಆಸೀನ ರಾಜನ ಚಿತ್ರವೂ ಇವೆ.

ಸು.85–120ರಲ್ಲಿ ಆಳುತ್ತಿದ್ದ ವಿಮ ಕಡ್‍ಫೀಸಿಸನ ಚಿನ್ನದ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನ ನಾಣ್ಯಗಳಿಂದ ಈತ ಶಿವಭಕ್ತನೆಂದು ಕಾಣುತ್ತದೆ. ಚಿನ್ನದ ನಾಣ್ಯದ ಮುಂಬದಿಯಲ್ಲಿ ಅಂಕುಶ ಮತ್ತು ದೊಣ್ಣೆಗಳೊಂದಿಗೆ ರಾಜನ ಎದೆ ಚಿತ್ರವೂ ಹಿಂಬದಿಯಲ್ಲಿ ಬಲಗೈಯಲ್ಲಿ ತ್ರಿಶೂಲ–ಪರಶುಗಳೆರಡೂ ಕೂಡಿರುವ ಆಯುಧ ಹಿಡಿದ ಶಿವನ ಚಿತ್ರವೂ ಇವೆ. ಎಡಗೈಯ ಮೇಲೆ ಚರ್ಮವಿದೆ (ಬಹುಶಃ ಹುಲಿಯ ಚರ್ಮ). ಹಿಂಬದಿಯಲ್ಲಿ ಮಹಾರಾಜನ ಸರ್ವಲೋಗ ಈಶ್ವರ ಮಹೇಶ್ವರಸ ವಿಮಾಕತ್ ಪಿಸಸ ತ್ರಾತರಸ ಎಂದಿದೆ. ಚಿನ್ನದ ಇನ್ನೊಂದು ಚಿಕ್ಕ ನಾಣ್ಯದ ಮೇಲಿನ ಚೌಕದಲ್ಲಿ ರಾಜನ ತಲೆ ಇದೆ. ಹಿಂಬದಿಯಲ್ಲಿ ತ್ರಿಶೂಲಕ್ಕೆ ಸೇರಿಸಿದ ಪರಶುವುಂಟು. ಮಹಾ ರಾಜಾಧಿರಾಜ ವಿಮಾಕತ್ ಪಿಸಸ ಎಂಬ ಖರೋಷ್ಠಿ ಶಾಸನವಿದೆ. ತಾಮ್ರದ ನಾಣ್ಯದಲ್ಲಿ ನಿಂತಿರುವ ರಾಜನ ಚಿತ್ರದಲ್ಲಿ ಉದ್ದವಾದ ಕೋಟು ಷರಾಯಿಗಳಿವೆ. ಹಿಮ್ಮುಖದಲ್ಲಿ ಬಸವನೊಂದಿಗೆ ನಿಂತಿರುವ ಶಿವನ ಚಿತ್ರವಿದೆ.

ಕನಿಷ್ಕನ ನಾಣ್ಯಗಳ ಮೇಲೆ ಗ್ರೀಕರ ಮತ್ತು ಇರಾನಿನ ದೇವತೆಗಳೊಡನೆ ಬುದ್ಧ ಮತ್ತು ಈಶ್ವರ ಚಿತ್ರಗಳಿವೆ. ಮತೀಯ ವಿಚಾರಗಳಲ್ಲಿ ಆತ ಉದಾರ ನೀತಿ ತಳೆದಿದ್ದನೆಂಬುದಕ್ಕೆ ಇದು ದೃಷ್ಟಾಂತ. ಅವನ ಚಿನ್ನದ ನಾಣ್ಯವೊಂದರಲ್ಲಿ ಓಡುತ್ತಿರುವ ವಾಯುದೇವತೆಯ ಚಿತ್ರವಿದೆ. ಅವನ ಅನಂತರ ಬಂದ ಹುವಿಷ್ಕ ಮತ್ತು ವಾಸುದೇವರೂ ಇದೇ ಬಗೆಯ ನಾಣ್ಯಗಳನ್ನು ಅಚ್ಚು ಹಾಕಿಸಿದರು. (ಎಸ್.ಎಂ.)

**ಶಾಸನಗಳು:** ಕುಷಾಣರ ಶಾಸನಗಳು ಉತ್ತರ ಪ್ರದೇಶ, ಪಶ್ಚಿಮ ಪಾಕಿಸ್ತಾನ, ಕಾಬೂಲ್, ಬಲೂಚಿಸ್ತಾನ ಮತ್ತು ಮಧ್ಯ ತುರ್ಕಿಸ್ತಾನಗಳ ಅನೇಕ ಕಡೆಗಳಲ್ಲೂ ಒಂದು ಶಾಸನ ಸಾಂಚಿಯಲ್ಲೂ (ಮಧ್ಯಪ್ರದೇಶ) ಸಿಕ್ಕಿವೆ. ಇವನ್ನು ಶಿಲೆ, ತಾಮ್ರ ಬೆಳ್ಳಿ ಮತ್ತು ಕಂಚುಗಳ ಫಲಕಗಳ ಮೇಲೂ ತೆಳುವಾದ (ಬೆಳ್ಳಿಯ) ಹಾಳೆಗಳ ಮೇಲೂ ಬೌದ್ಧ ಹಾಗೂ ಜೈನ ಪ್ರತಿಮೆಗಳ ಪೀಠಗಳ ಮೇಲೂ ಪಾತ್ರೆಮತ್ತು ಯೂಪಕರಂಡಕಗಳ ಮೇಲೂ ಕೊರೆಯಲಾಗಿದೆ. ಈ ಶಾಸನಗಳು ಬ್ರಾಹ್ಮಿ ಹಾಗೂ ಖರೋಷ್ಠಿ ಲಿಪಿಗಳಲ್ಲಿವೆ. ಭಾಷೆ ಪ್ರಾಕೃತ ಮತ್ತು ಸಂಸ್ಕೃತ ದಿಂದ ಹೆಚ್ಚು ಪ್ರಭಾವಿತವಾದ್ದು ಕಂಡು ಬರುತ್ತದೆ. ಶಾಸನಗಳ ಪಾಠಗಳು ಸಂಕ್ಷಿಪ್ತವಾಗಿವೆ. ಇವು ಸಾಮಾನ್ಯವಾಗಿ ಗದ್ಯದಲ್ಲಿವೆ. ಅಲ್ಲಲ್ಲಿ ಒಂದೆರಡು ಶ್ಲೋಕಗಳೂ ಕಾಣಸಿಗುತ್ತವೆ. ನಾಣ್ಯಗಳ ಮೇಲಿರುವ ಶಾಸನಗಳು ಖರೋಷ್ಠ ಅಥವಾ ಗ್ರೀಕ್ ಲಿಪಿಯಲ್ಲಿವೆ. ಅವುಗಳ ಭಾಷೆ ಪ್ರಾಕೃತ, ಪೂರ್ವ ಪರ್ಷಿಯನ್ ಅಥವಾ ಗ್ರೀಕ್. ಶಾಸನಗಳು ಸಿದ್ಧಂ ಎಂಬ ಮಂಗಳವಾಚಕದಿಂದ, ಆಳುವ ರಾಜನ ಸಂವತ್ಸರದಿಂದ ಅಥವಾ ಅವನ ಪ್ರಶಸ್ತಿಗಳಿಂದ ಪ್ರಾರಂಭವಾಗುತ್ತವೆ. ಅನಂತರ ಶಾಸನದ ಉದ್ದೇಶ ಹೇಳಲಾಗಿರುತ್ತದೆ. ಇವುಗಳಲ್ಲಿ ದಾನಶಾಸನಗಳೇ ಅಧಿಕ. ಸ್ತೂಪ ಹಾಗೂ ಚೈತ್ಯಗಳ ನಿರ್ಮಾಣ, ಶಾಕ್ಯಮುನಿಯ (ಬುದ್ಧ) ಶಾರೀರಿಕ ಅವಶೇಷಗಳ ಅಥವಾ ಜೈನಪ್ರತಿಮೆಗಳ ಪ್ರತಿಷ್ಠಾಪನೆ–ಇಂಥ ಸಂದರ್ಭಗಳಲ್ಲಿತ್ತ ದಾನಗಳ ವಿವರಗಳಿರುತ್ತವೆ. ದಾನಕೊಟ್ಟವರಿಗೆ, ಅವರ ಸಂಬಂಧಿಕರಿಗೆ ಅಥವಾ ಪ್ರಜಾಸಾಮಾನ್ಯರಿಗೆ ಶುಭಕೋರಿಕೆಯೊಂದಿಗೆ ಶಾಸನ ಅಂತ್ಯವಾಗುತ್ತದೆ. ಕೆಲವು ಶಾಸನಗಳಲ್ಲಿ ಅವುಗಳಲ್ಲಿ ಉಕ್ತವಾದ ವಿಗ್ರಹ ಮುಂತಾದವನ್ನು ನಿರ್ಮಿಸಿದ ಶಿಲ್ಪಿಗಳ, ಶಾಸನಗಳನ್ನು ಬರೆದವರ ಮತ್ತು ಕೊರೆದವರ ಹೆಸರುಗಳೂ ಕಂಡುಬರುತ್ತವೆ.

ಶಾಸನಗಳಲ್ಲಿ ಕೊಡಲಾಗಿರುವ ತೇದಿಯ ವಿವರಗಳು ಕುಷಾಣರ ಪ್ರಖ್ಯಾತ ಚಕ್ರವರ್ತಿ 1ನೆಯ ಕನಿಷ್ಕನ ರಾಜ್ಯ ಸಂವತ್ಸರಕ್ಕೆ ಅಥವಾ ಆಯಾ ಕಾಲಗಳಲ್ಲಿ ಆಳುತ್ತಿದ್ದ ಇತರ ಕುಷಾಣ ಚಕ್ರವರ್ತಿಗಳ ರಾಜ್ಯಸಂವತ್ಸರಗಳಿಗೆ ಸಂಬಂಧಿಸಿವೆ. ಅವುಗಳಲ್ಲಿ ಸಂವತ್ಸರ ಮಾಸ ದಿವಸಗಳ, ಕೆಲವೊಮ್ಮೆ ಇವುಗಳ ಜೊತೆಗೆ ನಕ್ಷತ್ರದ ಉಲ್ಲೇಖ ಇರುತ್ತವೆ. ಸಂವತ್ಸರ

ಮತ್ತು ದಿವಸ ಸಂಖ್ಯೆ ಸಾಮಾನ್ಯವಾಗಿ ಅಕ್ಷರ ಮತ್ತು ಅಂಕಿ ಎರಡರಲ್ಲೂ ಇರುತ್ತವೆ. ಈ ವಿವರಗಳನ್ನು ನೀಡುವಾಗ ಋತುಮಾನ ಅಥವಾ ಚಾಂದ್ರಮಾನ ಅಥವಾ ಯವನರ ಪದ್ಧತಿಯನ್ನು ಅನುಸರಿಸಲಾಗಿದೆ.

ಕುಷಾಣ ಎಂಬ ಪ್ರಯೋಗವೇ ಎಲ್ಲ ಶಾಸನಗಳಲ್ಲೂ ಇಲ್ಲ. ಮಧ್ಯ ತುರ್ಕಿಸ್ತಾನವನ್ನುಳಿದು ಇತರ ಪ್ರದೇಶಗಳಲ್ಲಿ ದೊರಕಿದ ಶಾಸನಗಳಲ್ಲಿ ಖುಷಣ, ಗುಷಣ ಮತ್ತು ಕುಷಾಣ ಎಂಬ ಪ್ರಯೋಗಗಳೂ ಮಧ್ಯ ತುರ್ಕಿಸ್ತಾನದಲ್ಲಿಯ ಶಾಸನಗಳಲ್ಲಿ ಕುಷಣ ಹಾಗೂ ಕುರ್ಷನ ಎಂಬ ಪ್ರಯೋಗಗಳೂ ಇವೆ. ನಾಣ್ಯಗಳ ಮೇಲಿರುವ ಶಾಸನಗಳಲ್ಲಿ ಕುಷನ ಮತ್ತು ಕೊಷಾನೊ ಎಂಬ ರೂಪಗ ಳುಂಟು. ಭಾರತದಲ್ಲಿ ಇಂದಿಗೂ ಅಧಿಕ ಪ್ರಸಾರದಲ್ಲಿರುವ ಶಕಸಂವತ್ಸರ ಕುಷಾಣರ ಕೊಡುಗೆ. ಇದರ ಮೂಲ ಪುರುಷ 4ನೆಯ ಕನಿಷ್ಕನೋ ಅವನ ಹಿಂದಿನವನಾದ ಎರಡನೆಯ ಕಡ್ ಫೀಸಿಸನೊ ಎಂಬ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಕನಿಷ್ಕನೇ ಇದರ ಪ್ರವರ್ತಕ ನೆಂಬುದು ಶಾಸನಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ. (ಎಂ.ಎಸ್.ಕೆ.)

ಶಿವ

**ವಾಸ್ತು ಶಿಲ್ಪ:** ಭಾರತೀಯ ವಾಸ್ತು ಶಿಲ್ಪದ ಚರಿತ್ರೆಯಲ್ಲಿ ಕುಷಾಣರ ಪಾತ್ರ ಮಹತ್ತರವಾದ್ದು. ಇವರ ಆಳ್ವಿಕೆಯಲ್ಲಿ ಮಥುರ ಮತ್ತು ಗಾಂಧಾರ ರೀತಿಯ ಶಿಲ್ಪಗಳು ಬಳಕೆಗೆ ಬಂದುವು. ಕನಿಷ್ಕ, ಹುವಿಷ್ಕ ಮತ್ತು ವಾಸುದೇವ ಇವರ ಕಾಲದಲ್ಲಿ ಮಥುರ ಶಿಲ್ಪ ಮತ್ತು ವಾಸ್ತು ಶಿಲ್ಪ ಅತ್ಯಂತ ಉನ್ನತಮಟ್ಟಕ್ಕೇರಿದುವು. ಸು.5,000 ಪ್ರಾಚೀನ ಅವಶೇಷಗಳು ಮಥುರದಲ್ಲಿ ಸಿಕ್ಕಿವೆ. ಅವುಗಳಲ್ಲಿ ಹೆಚ್ಚಿನ ಸಂಖ್ಯೆಯವು ಕುಷಾಣರ ಕಾಲಕ್ಕೆ ಸೇರಿದವು. ಮಥುರಶಿಲ್ಪಗಳು ಅನೇಕ ಸ್ತೂಪಗಳನ್ನು ಬಾರ್ಹುತ್ ಮತ್ತು ಸಾಂಚಿಗಳಲ್ಲಿಯ ಸ್ತೂಪಗಳ ಮಾದರಿಯಲ್ಲಿ ರಚಿಸಿದರು. ಕಂಕಾಲಿ ತೀಲಾದಲ್ಲಿದ್ದ ಸ್ತೂಪವೂ ಹುವಿಷ್ಕನ ಕಾಲದ ಭುತೇಶ್ವರದ ಮತ್ತೊಂದು ಸ್ತೂಪವೂ ನಾಶವಾಗಿದ್ದರೂ ಅವಕ್ಕೆ ಸೇರಿದ ಅನೇಕ ಭಾಗಗಳು ಉಳಿದುಬಂದಿವೆ. ಪ್ರಾಕಾರದ ಕಂಬಗಳ ಮೇಲಿನ ಶಾಲಭಂಜಿಕಾವಿಗ್ರಹಗಳನ್ನು ಅತ್ಯಂತ ನಾಜೂಕಿನಿಂದ ಕೆತ್ತಲಾಗಿವೆ. ಮಥುರಶಿಲ್ಪಕ್ಕೆ ಆಧಾರವಾಗಿದ್ದದ್ದು ಜಾನಪದ ಕಲೆ. ಮಣ್ಣಿನಲ್ಲಿ ಮಾಡಿದ ನಮೂನೆಗಳೆ ಅದರ ತಯಾರಿಕ ತಂತ್ರಕ್ಕೆ ಆಧಾರ. ಶಿಲ್ಪಗಳನ್ನು ಚುಕ್ಕಿಚುಕ್ಕಿಯಿಂದ ಕೂಡಿದ ಕೆಂಪುಮರಳುಗಲ್ಲಿ ನಿಂದ ಮಾಡಲಾಗಿದೆ. ಅತ್ಯಂತ ಸುಂದರಿ ಯರೂ ಲಾವಣ್ಯವತಿಯರೂ ಬೆಡಗುಗಾರ್ತಿಯರೂ ಆದ ಯುವತಿಯರು, ಜೈನತೀರ್ಥಂಕರರು, ಬುದ್ಧ ಮತ್ತು ಬೋಧಿಸತ್ತ್ವರನ್ನು ಮಥುರ ಶಿಲ್ಪದಲ್ಲಿ ಹೆಚ್ಚಾಗಿ ಕಾಣಬಹುದು. ಬುದ್ಧನ ಪ್ರತಿಮೆಗಳು ಮೊಟ್ಟಮೊದಲು ಮಥುರಶಿಲ್ಪದಲ್ಲಿ ಬಳಕೆಗೆ ಬಂದುವು. ವಾಸುದೇವ ಅಗ್ರವಾಲರ ಅಭಿಪ್ರಾಯದಂತೆ ಮೊಟ್ಟಮೊದಲಿನ ಬುದ್ಧನ ವಿಗ್ರಹಗಳು ಕನಿಷ್ಕನ ಕಾಲಕ್ಕೆ ಸೇರಿದವು. ಕುಳಿತಿರುವ ಅಥವಾ ನಿಂತಿರುವ ಬುದ್ಧನ ತಲೆಯ ಸುತ್ತಣ ಪ್ರಭಾಮಂಡಲ ಕುಷಾಣರ ಕಾಲದಲ್ಲಿ ಬಳಕೆಗೆ ಬಂತು.

ಭಿಕ್ಷುಬಲನೆಂಬ ವ್ಯಕ್ತಿ ಕನಿಷ್ಕನ ಆಳ್ವಿಕೆಯ 3ನೆಯ ವರ್ಷದಲ್ಲಿ ಬೋಧಿಸತ್ತ್ವನ ಮೂರ್ತಿಯನ್ನು (ನಿಂತ ಭಂಗಿಯಲ್ಲಿ) ಸಾರನಾಥದಲ್ಲಿ ಮಾಡಿಸಿದ. ಅವನ ಆಳ್ವಿಕೆಯ 2ನೆಯ ವರ್ಷಕ್ಕೆ ಸೇರಿದ ಮತ್ತೊಂದು ಮೂರ್ತಿ ಕೌಶಾಂಬಿಯಲ್ಲಿ ಸಿಕ್ಕಿದೆ. ಬೋಧಿಸತ್ತ್ವ ಮೈತ್ರೇಯನ ಮೂರ್ತಿ ಬಲಗೈಯ ಅಭಯಮುದ್ರೆ ಮತ್ತು ಎಡಗೈಯ ಅಮೃತಘಟದಿಂದ ಕೂಡಿ ನಿಂತಿದೆ.

ವೈದಿಕ ಧರ್ಮಕ್ಕೆ ಸೇರಿದ ಬ್ರಹ್ಮ, ಸೂರ್ಯ, ವಿಷ್ಣು, ಶಿವ, ಮಹಿಷಾಸುರಮರ್ದಿನಿ ಮೊದಲಾದ ಮೂರ್ತಿಗಳು ಕುಷಾಣರ ಕಾಲದಲ್ಲಿ ಮಥುರದಲ್ಲಿ ನಿರ್ಮಿತವಾದವು. ಮಥುರ ಶೈಲಿಯ ಶಿಲ್ಪದ ಪ್ರಭಾವ ವಿದೇಶಗಳಿಗೂ ಹರಡಿತು. ಅಫ್ಘಾನಿಸ್ತಾನದ ಬೆಗ್ರಾಂನಲ್ಲೂ ಇಟಲಿಯ ಪಾಂಪೆಯಲ್ಲೂ ಸಿಕ್ಕಿದ ದಂತದ ಕೆತ್ತನೆಯ ಕೃತಿಗಳು ಮಥುರಶೈಲಿಗೆ ಸೇರಿದವೆಂಬುದು ವಿದ್ವಾಂಸರ ಅಭಿಪ್ರಾಯ.

ಮಥುರ ಶಿಲ್ಪ ಸ್ವಲ್ಪಮಟ್ಟಿಗೆ ಗಾಂಧಾರ ಶಿಲ್ಪದ ಪ್ರಭಾವಕ್ಕೆ ಒಳಗಾದಂತೆ ಕಾಣುತ್ತದೆ. ಸಿಂಹದೊಡನೆ ಹರ್ಕ್ಯುಲಿಸ್ ಹೋರಾಡುವ ಶಿಲ್ಪ ಇದಕ್ಕೊಂದು ನಿದರ್ಶನ. ಕುಬೇರನ ಶಿಲ್ಪದಲ್ಲೂ ಈ ಪ್ರಭಾವವನ್ನು ಸ್ವಲ್ಪಮಟ್ಟಿಗೆ ಕಾಣಬಹುದು. ಪಾನದಲ್ಲಿ ಪ್ರಮತ್ತರಾಗಿರುವಂತೆ ತೋರಿಸುವ ಶಿಲ್ಪಗಳು ಇದೇ ಪ್ರಭಾವದಿಂದ ಬಂದಿರಬಹುದು. ಕ್ರಮೇಣ ಇದರಲ್ಲಿಯೂ ಭಾರತೀಯತೆ ಹೆಚ್ಚಾಗುತ್ತದೆ. 1938ರಲ್ಲಿ ಸಿಕ್ಕಿದ ಬೋಗುಣಿಯೊಂದರ ತಳಭಾಗದಲ್ಲಿರುವ ಶಿಲ್ಪ ಇದಕ್ಕೆ ಒಳ್ಳೆಯ ಉದಾಹರಣೆ. ಅದರಲ್ಲಿ ಪಾನಮತ್ತಳಾದ ಯುವತಿಯೊಬ್ಬಳು ಮಂಡಿ ಊರಿ ಕುಳ್ಳಿರಿ ತನ್ನ ಸಖಿಯ ಹೆಗಲ ಮೇಲೆ ತನ್ನ ಕೈಯನ್ನು ಆಸರೆಗಾಗಿ ಇಟ್ಟುಕೊಂಡಿದ್ದಾಳೆ. ಪುರುಷನೊಬ್ಬ ಅವಳ ಬಲತೋಳನ್ನು ಹಿಡಿದುಕೊಂಡಿದ್ದಾನೆ. ಚಕಿತಳಾದ ಸ್ತ್ರೀ ಹಿಂದೆ ನಿಂತಿದ್ದಾಳೆ.

ಗಾಂಧಾರ ಪ್ರದೇಶದಲ್ಲಿ ತಕ್ಷಶಿಲ, ಪುಷ್ಕಲಾವತಿ, ಪೆಷಾವರ್ ಮತ್ತು ಕಪಿಶಾ–ಇವುಗಳಿದ್ದುವು. ಈಗ ಈ ಪ್ರದೇಶ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನಗಳಲ್ಲಿ ಹಂಚಿಹೋಗಿದೆ. ತಕ್ಷಶಿಲೆಯಲ್ಲಿ ಕನಿಷ್ಕನ ಕಾಲದಲ್ಲಿ ಸಿರ್‌ಸುಕ್ ಎಂಬ ಹೊಸ ಪಟ್ಟಣವಿತ್ತೆಂಬುದು ಜಾನ್ ಮಾರ್ಷಲ್ ಕೈಗೊಂಡ ಭೂಶೋಧನೆಯಿಂದ ಗೊತ್ತಾಗಿದೆ. ತಕ್ಷಶಿಲೆಯ ಜಾಲಿಯನ್ ಸ್ತೂಪದಲ್ಲಿ ಬುದ್ಧ ಮತ್ತು ಬೋಧಿಸತ್ತ್ವರ ಶಿಲ್ಪಗಳಿವೆ. ಧರ್ಮರಾಜಿಕ ಸ್ತೂಪ ಅಲ್ಲಿಯ ಬಹಳ ದೊಡ್ಡದಾದ ಪ್ರಸಿದ್ಧ ಸ್ತೂಪ (ಕಾಬೂಲ್ ನದಿಯ ಕೆಳಗೆ). ಭೂಶೋಧನೆಯಲ್ಲಿ ಕನಿಷ್ಕ ಕಟ್ಟಿಸಿದ ಸ್ತೂಪದ ಅವಶೇಷಗಳು ಕಾಣಬಂದಿವೆ. ಇವುಗಳಲ್ಲಿ 74/3 ಇಂಚಿನ ತಾಮ್ರದ ಕೊಳವೆಯಾಕಾರದ ಮತ್ತು ಮುಚ್ಚಳದಿಂದ ಕೂಡಿದ ಸಂಪುಟವೂ ಒಂದು. ಮುಚ್ಚಳದ ಮೇಲೆ ಬುದ್ಧ, ಇಂದ್ರ, ಬ್ರಹ್ಮ ಇವರ ಮೂರ್ತಿಗಳಿವೆ. ಸಂಪುಟದ ಮೇಲಿನ ಶಾಸನದಲ್ಲಿ ಕನಿಷ್ಕನ ಮತ್ತು ಅವನ ಗ್ರೀಕ್ ಶಿಲ್ಪಿ ಅಜಶಿಲನ ಹೆಸರುಗಳಿವೆ. ಗಾಂಧಾರಶಿಲ್ಪ ಗ್ರೀಕ್ ಮತ್ತು ರೋಮನ್ ಪ್ರಭಾವದಿಂದ ಮೂಡಿಬಂತು. ಪರದೇಶದ ಪ್ರಭಾವಕ್ಕೆ ಒಳಗಾದ ಈ ಮೂರ್ತಿಗಳು ಭಾರತೀಯ ಪರಂಪರೆಗೆ ಅನುಗುಣವಾಗಿರಲಿಲ್ಲ. ಬುದ್ಧನಿಗೆ ಮೀಸೆಯಿದೆ. ರೋಮನರ ತೊಡಿಗೆಯಿದೆ. (ಎಸ್.ವಿ.ಪಿ.)

**ಕೃಷ್ಣ, ಎಂ.ಎಚ್. :** 1892–1947. ಕರ್ನಾಟಕದ ಪ್ರಸಿದ್ಧ ಪುರಾತತ್ತ್ವಜ್ಞ. 1892 ಆಗಸ್ಟ್ 19ರಂದು ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿದ್ದು 1928 ಜೂನ್ 10ರಂದು ಪುರಾತತ್ತ್ವ ಇಲಾಖೆಯ ಮುಖ್ಯಸ್ಥರಾದರು. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗಲೇ ಇಂಗ್ಲೆಂಡಿಗೆ ಹೋಗಿ ನಾಣ್ಯಶಾಸ್ತ್ರವನ್ನು ಅಧ್ಯಯನ ಮಾಡಿ ಪ್ರಾಚೀನ ದಖನ್ನಿನ ನಾಣ್ಯಗಳ ಮೇಲೆ ಉತ್ತಮ ಪ್ರಬಂಧ ರಚಿಸಿ ಡಾಕ್ಟೊರೇಟ್ ಪದವಿ ಗಳಿಸಿದರು. ಪುರಾತತ್ತ್ವ ಕ್ಷೇತ್ರದಲ್ಲಿ ಅನೇಕ ಮಹತ್ತ್ವಪೂರ್ಣ ಸಂಶೋಧನೆಗಳನ್ನು ಮಾಡಿದರು.

ಚಿತ್ರದುರ್ಗದ ಬಳಿಯ ಚಂದ್ರವಳ್ಳಿಯಲ್ಲಿ ಇವರು ನಡೆಸಿದ ಭೂಶೋಧನೆ ಪ್ರಸಿದ್ಧವಾದದ್ದು. ಚಂದ್ರವಳ್ಳಿ ಸಾತವಾಹನರ ಕಾಲದ ಪಟ್ಟಣವಾಗಿತ್ತೆಂದೂ ಅದು ಆಗಸ್ಟಸ್ ಮತ್ತು ಟೈಬೀರಿಯಸ್ ಕಾಲದ ರೋಮನ್ ಚಕ್ರಾಧಿಪತ್ಯದೊಡನೆ ವ್ಯಾಪಾರ ಸಂಬಂಧ ಹೊಂದಿತ್ತೆಂದೂ ಸ್ಥಿರಪಡಿಸಿದರು. ಬ್ರಹ್ಮಗಿರಿಯಲ್ಲಿಯ ಅಶೋಕನ ಕಿರು ಬಂಡೆಯ ಶಾಸನದಲ್ಲಿ ಉಲ್ಲೇಖಿತ ಇಸಿಲ (ಪಟ್ಟಣ) ವನ್ನು ಶಾಸನದ ಸುತ್ತ ಮುತ್ತಲಿನ ಪರಿಸರದಲ್ಲಿ ಹುಡುಕುವ ಪ್ರಯತ್ನದಲ್ಲಿ ಒಂದು ವಿಶಾಲವಾದ ಪ್ರಾಚೀನ ವಾಸ್ತವ್ಯ ನೆಲೆಯನ್ನೂ ಇದಕ್ಕೆ ಹೊಂದಿಕೊಂಡಂತೆ ಬೃಹತ್ ಶಿಲಾ ಸಂಸ್ಕೃತಿಯ ನೂರಾರು ಗೋರಿಗಳ ನೆಲೆಯನ್ನೂ ಪತ್ತೆ ಮಾಡಿದರು. ಪದರುಶಾಸ್ತ್ರ ಕ್ರಮದಂತೆ ಈ ನೆಲೆಗಳಲ್ಲಿ ಉತ್ಖನನ ಮಾಡಿ ಅನುಕ್ರಮವಾಗಿ ಸೂಕ್ಷ್ಮ ಶಿಲಾಯುಗ ಹಂತದಿಂದ ಆದಿ ಕದಂಬ ಕಾಲದವರೆಗೆ ಆರು ಪ್ರಾಗಿತಿಹಾಸ ಮತ್ತು ಇತಿಹಾಸ ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದರು. ಕೆಲವು ಕಲ್ಗೋರಿಗಳನ್ನು ಉತ್ಖನನ ಮಾಡಿ ಇವು ವಾಸ್ತವ್ಯ ನೆಲೆಯ ಆದಿ ಕಬ್ಬಿಣ ಯುಗ ಸಾಂಸ್ಕೃತಿಕ ಹಂತದ್ದೆಂದೂ ಈ ಸಂಸ್ಕೃತಿ ಇದರ ಹಿಂದಿನ ನವಶಿಲಾ ಯುಗದ ಅಂತಿಮ ಘಟ್ಟದಲ್ಲಿ, ಇದರಂತೆಯೆ ಇದರ ಮುಂದಿನ ಮೌರ್ಯ–ಸಾತವಾಹನ ಐತಿಹಾಸಿಕ ಹಂತದ ಇದರ ಕೊನೆಯ ಘಟ್ಟದಲ್ಲಿ ವ್ಯಾಪಿಸಿರುವುದು ಆಯಾಯಾ ಪದರುಗಳಲ್ಲಿ ದೊರೆತ ವಸ್ತು ಅವಶೇಷಗಳ ಆಧಾರದ ಮೇಲೆ ಸ್ಪಷ್ಟವಾಗಿ ಗುರುತಿಸಿದವರು. ಪದರುಶಾಸ್ತ್ರ ಕ್ರಮವನ್ನು ಅನುಸರಿಸಿದವರಲ್ಲಿ ದಕ್ಷಿಣ ಭಾರತದಲ್ಲೇ ಇವರು ಮೊದಲಿಗರು. ಇದರಿಂದ ಅದುವರೆಗೂ ತುಂಬ ಗೊಂದಲಮಯವಾಗಿದ್ದ ಬೃಹತ್ ಶಿಲಾಸಂಸ್ಕೃತಿಯ ಕಾಲಮಾನವನ್ನು ಇವರ ಶೋಧನೆಯಿಂದ ನಿರ್ದಿಷ್ಟವಾಗಿ ನಿರ್ಧರಿಸಲು ಸಾಧ್ಯವಿದ್ದಿತ್ತು. ಆದರೆ ಇವರ ಅಕಾಲ ಮರಣದಿಂದ ಉತ್ಖನನದ ಪೂರ್ಣ ವರದಿ ಹೊರಬರಲಿಲ್ಲ. ಮುಂದೆ 1947ರಲ್ಲಿ ಸರ್ ಮಾರ್ಟಿಮರ್ ವೀಲರ್ ಅವರು ದಕ್ಷಿಣ ಭಾರತದ ಪ್ರಾಚೀನ ಸಂಸ್ಕೃತಿಗಳಲ್ಲಿ ಪ್ರಮುಖವಾಗಿದ್ದ ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ

ಜನ ಸಮುದಾಯದ ಅದುವರೆಗೂ ತಿಳಿಯದ ದೈನಂದಿನ ಜೀವನ ಕ್ರಮವನ್ನು ತಿಳಿಯಲು ಮತ್ತು ಗೊಂದಲಮಯ ಕಾಲಮಾನವನ್ನು ಸರಿಪಡಿಸಲು ತತ್ಸಂಬಂಧ ಸೂಕ್ತ ನಿವೇಶನವನ್ನು ಹುಡುಕುತ್ತಿದ್ದಾಗ ಕೃಷ್ಣರವರ ಶೋಧನೆಗಳನ್ನೂ ಪರಿಶೀಲಿಸಿ ಬ್ರಹ್ಮಗಿರಿಯೇ ಈ ಸಂಸ್ಕೃತಿಯ ಸಮಸ್ಯೆಗಳಿಗೆ ಉತ್ತರ ದೊರಕಿಸಲು ಸೂಕ್ತ ನೆಲೆಯೆಂದು ಅದನ್ನು ಆರಿಸಿ ಉತ್ಖನನ ಮಾಡಿದರು. ಇವರ ಅಚ್ಚುಕಟ್ಟಾದ ಶಿಸ್ತುಬದ್ಧ ಉತ್ಖನನದ ಫಲಿತಾಂಶಗಳು ಇವರ ಶೋಧನೆಗಳ ಸತ್ಯತೆಯನ್ನು ಅಕ್ಷರಶಃ ಪೂರ್ಣವಾಗಿ ಎತ್ತಿ ಹಿಡಿದವು. ಇವರು ಪ್ರಕಟಿಸಿದ ಪುರಾತತ್ತ್ವ ಇಲಾಖೆ ವರದಿಗಳೂ (1929–45) ಮೈಸೂರು ಮತ್ತು ಹಾಸನಗಳ ಶಾಸನ ಗ್ರಂಥಗಳೂ ವಿದ್ವತ್ಪೂರ್ಣವೂ ಅತ್ಯಂತ ಉಪಯುಕ್ತವೂ ಆಗಿವೆ.ಕನ್ನಡದ ಮೊಟ್ಟ ಮೊದಲ ಶಾಸನವಾದ ಹಲ್ಮಿಡಿ ಶಾಸನದ (ಸು. 430) ಬಗ್ಗೆ ವಿದ್ವತ್ ವಲಯದಲ್ಲಿ ಹೆಚ್ಚಿನ ಗಮನ ಸೆಳೆದವರು ಇವರೇ. ಇವರು 1947 ಡಿಸೆಂಬರ್ 23ರಂದು ನಿಧನರಾದರು. (ಎಂ.ಎಚ್.)

**ಕೃಷ್ಣದೇವರಾಯ:** ವಿಜಯನಗರ ಸಾಮ್ರಾಜ್ಯವನ್ನು ಆಳಿದ ತುಳುವ ವಂಶದ ಪ್ರಖ್ಯಾತ ದೊರೆ (1519–29). ನರಸನಾಯಕ ಮತ್ತು ನಾಗಲಾದೇವಿಯವರ ಮಗ. ಈತನ ಆಳಿಕೆಯಲ್ಲಿ ವಿಜಯನಗರ ಸಾಮ್ರಾಜ್ಯ ಉತ್ತುಂಗ ಶಿಖರಕ್ಕೇರಿತು. ಈ ಮೊದಲು ಇವನು 1509 ಅಗಸ್ಟ 8ರ ಕೃಷ್ಣಜಯಂತಿಯಂದು ಸಿಂಹಾಸನವೇರಿದನೆಂದು ತಿಳಿಯಲಾಗಿತ್ತು. ಇತ್ತೀಚೆಗೆ ಬೆಳಕಿಗೆ ಬಂದ ಸಿಂಗೆನಾಯಕನಹಳ್ಳಿಯ ಶಾಸನ 1510 ಜನವರಿ 24ರಲ್ಲಿ ಪಟ್ಟಾಭಿಷೇಕವಾಯಿತೆಂದು ತಿಳಿಸುತ್ತದೆ. ಇವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯ ಒಳ ಹೊರ ಶತ್ರುಗಳಿಂದ ಮತ್ತು ದೀರ್ಘಕಾಲದ ದುರಾಡಳಿತದಿಂದ ದುರ್ಬಲವಾಗಿತ್ತು. ಈತ ಮೊದಲು ಸೈನ್ಯವನ್ನು ಬಲಗೊಳಿಸಿದ. ರಾಜ್ಯದ ಸಂಪನ್ಮೂಲಗಳ ಅಭಿವೃದ್ಧಿಗೆ ಮತ್ತು ಆಂತರಿಕ ಸುವ್ಯವಸ್ಥೆಗೆ ಗಮನ ನೀಡಿದ. ಮದುವೆ ಸುಂಕ ಮೊದಲಾದ ಕಿರುಕುಳದ ರೀತಿಯ ಕೆಲವು ತೆರಿಗೆಗಳನ್ನು ರದ್ದು ಮಾಡುವ ಮೂಲಕ ಜನರ ವಿಶ್ವಾಸವನ್ನು ಗಳಿಸಿದ. ಹೆಚ್ಚು ಭೂಮಿಯನ್ನು ಆಬಾದಿಗೆ ತರಲು ಜನರನ್ನು ಪ್ರೋತ್ಸಾಹಿಸಿ ರಾಜ್ಯಾದಾಯವನ್ನು ಹೆಚ್ಚಿಸಿದ. ಪ್ರಾಂತಾಧಿಕಾರಿಗಳು ಮತ್ತು ಸಾಮಂತರು ನಿರ್ದಿಷ್ಟ ಸಂಖ್ಯೆಯ ಸೈನಿಕರನ್ನು ರಾಜನಿಗೆ ಒದಗಿಸಬೇಕೆಂಬ ಕಟ್ಟುಪಾಡು ಮಾಡಿದ. ಪೋರ್ಚುಗೀಸರೊಡನೆ ಉತ್ತಮ ಸಂಬಂಧವನ್ನು ಬೆಳೆಸಿದ. ಪೋರ್ಚುಗೀಸರು ಬಿಜಾಪುರದ ಆದಿಲ್‍ಷ ಗೋವೆಯನ್ನು ವಶಪಡಿಸಿಕೊಂಡರು. ಇವನ ಅನುಮತಿ ಮೇರೆಗೆ ಭಟ್ಕಳದಲ್ಲಿ ಕೋಟೆಯನ್ನು ನಿರ್ಮಿಸಿದರು. ಈ ಸಂಬಂಧದಲ್ಲಿ ಪೋರ್ಚುಗೀಸರು ರಾಯನಿಗೆ ಉತ್ತಮ ಕುದುರೆಗಳನ್ನು ಒದಗಿಸುತ್ತಿದ್ದರು.

ಸಾಮ್ರಾಜ್ಯದ ಆಂತರಿಕ ವ್ಯವಸ್ಥೆಯ ಅನಂತರ ಶತ್ರುನಿಗ್ರಹ ಕಾರ್ಯವನ್ನು ರೂಪಿಸಿ ಕೊಂಡ. ಆಗ ರಾಜ್ಯದಲ್ಲಿಯ ಉಮ್ಮತ್ತೂರಿನ ಪಾಳೆಯಗಾರರು ವಿಜಯನಗರ ವಿರುದ್ಧ ತಿರುಗಿಬಿದ್ದರು. ಉತ್ತರ ಪೂರ್ವ ಪಶ್ಚಿಮ ಗಡಿ ಭಾಗಗಳಲ್ಲಿ ಒರಿಸ್ಸದ ಗಜಪತಿ, ಬಹಮನಿ ಮತ್ತು ಬಿಜಾಪುರದ ಸುಲ್ತಾನರ ಒತ್ತಡ ಬಲವಾಗಿತ್ತು.

ಬಹುಮನಿ ಮಹಮ್ಮದ್ ಷಾ ದುರ್ಬಲಗೊಳ್ಳುತ್ತಿದ್ದ ತನ್ನ ರಾಜ್ಯವನ್ನು ಉಳಿಸಿಕೊಳ್ಳಲು ಜೀಹಾದ್‍ನ ನೆಪದಲ್ಲಿ ವಿಜಯನಗರದ ಮೇಲೆ ದಂಡೆತ್ತಿ ಬಂದ. ಇವನೊಂದಿಗೆ ಬಿಜಾಪುರದ ಯೂಸಫ್ ಆದಿಲ್ ಖಾನನು ಸೇರಿಕೊಂಡಿದ್ದ. ಬಹು ದೊಡ್ಡ ಸೈನ್ಯದೊಂದಿಗೆ ಕೃಷ್ಣದೇವರಾಯ ಅವನ ಮೇಲೇರಿ ಹೋದ. ದೋಣಿಯಲ್ಲಿ ನಡೆದ ಯುದ್ಧದಲ್ಲಿ ಮಹಮ್ಮದ್ ಷಾ ಗಾಯಗೊಂಡು ಓಡಿಹೋದ. ಆದಿಲ್ ಖಾನ್ ಮರಣ ಹೊಂದಿದ. ಮುಂದೆ ಯೂಸೆಫ್‍ನ ಮಗ ಇಸ್ಮಾಯಿಲ್ ಅಧಿಕಾರಕ್ಕೆ ಬಂದ. ಅನಂತರ ಇವನು ದಕ್ಷಿಣದಲ್ಲಿ ತೊಂದರೆ ಕೊಡುತ್ತಿದ್ದ ಉಮ್ಮತ್ತೂರು ಪಾಳೆಯಗಾರರನ್ನು ಸದೆಬಡಿದು ಅವರ ಮುಖ್ಯ ಪಟ್ಟಣಗಳಾದ ಉಮ್ಮತ್ತೂರು, ಶಿವಸಮುದ್ರ, ಶ್ರೀರಂಗಪಟ್ಟಣದ ಭಾಗಗಳನ್ನು ವಶಪಡಿಸಿಕೊಂಡ. ಈ ಭಾಗವನ್ನು ಹೊಸ ಪ್ರಾಂತವನ್ನಾಗಿ ರಚಿಸಿ, ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿದ. ಗೋವಿಂದರಾಜನನ್ನು ರಾಜ್ಯಪಾಲನಾಗಿ ನೇಮಕ ಮಾಡಿದ.

1513ರಲ್ಲಿ ಇವನು ಉದಯಗಿರಿ ಕೊಂಡವೀಡು ರಾಜ್ಯಗಳನ್ನು ಆಕ್ರಮಿಸಿದ. ಒರಿಸ್ಸದ ಗಜಪತಿ ಪ್ರತಾಪರುದ್ರನ ಮೇಲೆ ದಂಡೆತ್ತಿ ಹೋದ. ಮೊದಲು ಉದಯಗಿರಿಯನ್ನು ಮುತ್ತಿದ. ಹಲವು ಹಂತಗಳಲ್ಲಿ ನಡೆದ 18 ತಿಂಗಳ ಯುದ್ಧದ ಅನಂತರ ಉದಯಗಿರಿ ಇವನ ವಶವಾಯಿತು. ಪ್ರತಾಪರುದ್ರನ ಸೈನ್ಯ ಅಪಾರ ನಷ್ಟವನ್ನು ಅನುಭವಿಸಿ ಕೊಂಡವೀಡಿನ ಕಡೆಗೆ ಪಲಾಯನ ಮಾಡಿತು. ಕೊಂಡವೀಡನ್ನು ಆಕ್ರಮಿಸಲು ಸಾಳುವ ತಿಮ್ಮರಸನ ನೇತೃತ್ವದಲ್ಲಿ ಸೈನ್ಯವನ್ನು ಸಜ್ಜುಗೊಳಿಸಿದ ಕೃಷ್ಣದೇವರಾಯ ತಿರುಪತಿಗೆ ಭೇಟಿ ನೀಡಿ ವಿಜಯನಗರಕ್ಕೆ ಹಿಂದಿರುಗಿದ. ತಿಮ್ಮರಸನು ಕಂದುಕೂರು, ವಿನುಕೊಂಡ, ನಾಗಾರ್ಜುನ ಕೊಂಡಗಳನ್ನು ಹಿಡಿದು ಕೊಂಡವೀಡನ್ನು ತಲುಪುವ ಹೊತ್ತಿಗೆ ಕೃಷ್ಣದೇವರಾಯ ಅವನೊಡನೆ ಕೂಡಿಕೊಂಡ. 1515ರಲ್ಲಿ ಕೊಂಡವೀಡು ಕೋಟೆಯನ್ನು ಆಕ್ರಮಿಸಿ ಗಜಪತಿ, ವೀರಭದ್ರ ಮತ್ತು ಅವನ ಹೆಂಡತಿಯನ್ನು ಬಂಧಿಸಲಾಯಿತು. ಈ ದಾಳಿಯ ಮುಂದುವರಿಕೆಯಿಂದ 1517ರಲ್ಲಿ ಕರಾವಳಿಯ ವಿಜಯವಾಡ, ರಾಜ ಮಹೇಂದ್ರಿ, ಸಿಂಹಾಚಲಗಳೂ, ತೆಲಂಗಾಣದ ನಲಗೊಂಡ, ವಾರಂಗಲ್ ಪ್ರದೇಶಗಳೂ ಒಂದರ ಮೇಲೊಂದರಂತೆ ವಶವಾದವು. ಅನಂತರ ಸಿಂಹಾಚಲದೆಡೆಗೆ ಸಾಗಿ ಅಲ್ಲಿಯ ಕೋಟೆಗಳನ್ನು ವಶಪಡಿಸಿಕೊಂಡು ಪೊಟ್ನೂರಿ ನಲ್ಲಿ ವಿಜಯಸ್ತಂಭವನ್ನು ನೆಡಿಸಿದ. 1518ರಲ್ಲಿ ಗಜಪತಿಯ ರಾಜಧಾನಿ ಕಟಕವನ್ನು ಮುತ್ತಿದ. ರಾಯನನ್ನು ಎದುರಿಸಲಾಗದ ಪ್ರತಾಪರುದ್ರ ಸಂಧಿ ಮಾಡಿಕೊಂಡ. ರಾಯಾವಾಚಕಮುದ ಪ್ರಕಾರ ಕುಟಿಲೋಪಾಯದಿಂದ ಗಜಪತಿ ಸಂಧಿಯನ್ನು ಮಾಡಿಕೊಂಡು ತನ್ನ ಮಗಳು ಜಗನ್ಮೋಹಿನಿಯನ್ನು ಇವನಿಗೆ ಮದುವೆ ಮಾಡಿಕೊಟ್ಟು, ಕೃಷ್ಣೆಯ ಉತ್ತರದ ರಾಜ್ಯಗಳನ್ನೆಲ್ಲ ಹಿಂದಕ್ಕೆ ಪಡೆದ. ಈ ಮೊದಲು ಬಂಧಿಸಲ್ಪಟ್ಟಿದ್ದ ರಾಜಕುಮಾರ ವೀರಭದ್ರ ಸೆರೆಯಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡನೆಂದು ನ್ಯೂನಿಜ್ ಹೇಳುತ್ತಾನೆ.

ಒರಿಸ್ಸದ ಗಜಪತಿಯ ಸೋಲು ಗೋಲ್ಕೊಂಡದ ಖ್ವಾಲಿ ಕುತ್ಬ್ ಷಾ ತಲೆಯೆತ್ತುವಂತೆ ಮಾಡಿತು. ಅವನು ಹಲವು ಸ್ಥಳಗಳನ್ನು ಆಕ್ರಮಿಸಿ ವಿಜಯನಗರದ ಮೇಲೆ ದಂಡೆತ್ತಿ ಬಂದ. ಸಾಳುವ ತಿಮ್ಮರಸನ ನಾಯಕತ್ವದಲ್ಲಿ ಕಳುಹಿಸಲಾದ ವಿಜಯನಗರದ ಸೈನ್ಯ, ಸುಲ್ತಾನನನ್ನು ಮಣಿಸಿ ಆಕ್ರಮಿತ ಪ್ರದೇಶಗಳಿಂದ ಓಡಿಸಿತು. ತಿಮ್ಮರಸ ಆ ಪ್ರದೇಶದಲ್ಲಿ ವ್ಯವಸ್ಥಿತವಾದ ಆಡಳಿತವನ್ನು ಸ್ಥಾಪಿಸಿ ರಾಜಧಾನಿಗೆ ಹಿಂದಿರುಗಿದ. ಇವನ ದಾಳಿಗಳಲ್ಲಿ 1520 ರಾಯಚೂರು ಮುತ್ತಿಗೆ ಮತ್ತು ಪತನ ಬಹು ಮಹತ್ವವುಳ್ಳದ್ದು. ಈ ಮೊದಲು ರಾಯಚೂರು, ಮುದುಗಲ್ಲು ಕೋಟೆಗಳನ್ನು ವಶಪಡಿಸಿಕೊಳ್ಳುವ ಸಂಬಂಧ ಬಿಜಾಪುರ, ಗುಲ್ಬರ್ಗ ಮತ್ತು ವಿಜಯನಗರ ಮಧ್ಯ ಅನೇಕ ಯುದ್ಧಗಳು ನಡೆದಿದ್ದವು. ಇವನು ಗಜಪತಿಯೊಡನೆ ನಡೆಸಿದ ಯುದ್ಧದ ಸದವಕಾಶವನ್ನು ಉಪಯೋಗಿಸಿಕೊಂಡು ಇಸ್ಮಾಯಿಲ್ ಆದಿಲ್ ಷಾ ರಾಯಚೂರು ಕೋಟೆಯನ್ನು ಗೆದ್ದುಕೊಂಡ. ಇವನು 1520 ಮೇ 19 ರಂದು ರಾಯಚೂರನ್ನು ಮುತ್ತಿ, ಆದಿಲ್ ಷಾನೊಂದಿಗೆ ಭೀಕರ ಯುದ್ಧಮಾಡಿದ. ಇಲ್ಲಿ ಪೋರ್ಚುಗೀಸ್ ಬಂದೂಕುಧಾರಿಗಳ ನೆರವನ್ನು ಪಡೆದುಕೊಂಡಿದ್ದ. ಈ ಯುದ್ಧದಲ್ಲಿ ಸೋತ ಸುಲ್ತಾನ ರಣರಂಗದಿಂದ ಪಲಾಯನ ಮಾಡಿದ.

ಇಸ್ಮಾಯಿಲನ ಪ್ರತಿನಿಧಿ ವಿಜಯನಗರಕ್ಕೆ ಬಂದು ರಾಜನು ರಾಯಚೂರಿನ ಮೇಲೆ ಆಕ್ರಮಣ ಮಾಡಿದುದು ತಪ್ಪೆಂದು ಹೇಳಿ, ಇಸ್ಮಾಯಿಲನಿಂದ ಕಿತ್ತುಕೊಂಡ ಭಾಗಗಳನ್ನು ಒಡನೆಯೇ ಮರಳಿಸಬೇಕೆಂದು ಬೇಡಿಕೊಂಡ. ಇಸ್ಮಾಯಿಲ್ ತನ್ನ ಪಾದಗಳಿಗೆ ಮುತ್ತಿಟ್ಟು ಗೌರವಿಸುವುದಾದಲ್ಲಿ ಎಲ್ಲವನ್ನು ಹಿಂದಿರುಗಿಸುವುದಾಗಿ ಇವನು ಷರತ್ತು ಹಾಕಿದ. ಇಬ್ಬರೂ ಮುದಗಲ್ಲಿನಲ್ಲಿ ಸಂಧಿಸುವುದಾಗಿ ವ್ಯವಸ್ಥೆಯಾಯಿತು. ಇದಕ್ಕೆ ಒಪ್ಪಿಕೊಂಡಿದ್ದ ಬಿಜಾಪುರದ ಸುಲ್ತಾನ ಮುದಗಲ್ಲಿಗೆ ಬರಲಿಲ್ಲ. ಇದರಿಂದ ರೊಚ್ಚಿಗೆದ್ದ ಇವನು 1523 ಬಿಜಾಪುರದ ಮೇಲೆ ಧಾಳಿ ಕೈಗೊಂಡಿದ್ದರಿಂದ ಮತ್ತೆ ಎರಡೂ ಸೈನ್ಯಗಳು ಸಂಧಿಸಿದವು. ಸುಲ್ತಾನನ ಸೈನ್ಯಕ್ಕೆ ಖಚಿತವಾದ ಸೋಲಾಯಿತು. ಮುಂದೆ ಗುಲ್ಬರ್ಗಕ್ಕೆ ಧಾಳಿಯಿಟ್ಟು ಮಂತ್ರಿ ಅಮೀರ್ ಬರೀದನನ್ನು ಸೋಲಿಸಿ, ಅಲ್ಲಿ ಬಂಧಿತರಾಗಿದ್ದ ಬಹಮನಿ ಎರಡನೆಯ ಮಹಮದನ ಮೂರು ಮಕ್ಕಳನ್ನು ಬಿಡಿಸಿ ಹಿರಿಯನಿಗೆ ರಾಜ್ಯಾಧಿಕಾರ ಕೊಟ್ಟು ಇಬ್ಬರನ್ನು ವಿಜಯನಗರಕ್ಕೆ ಕರೆತಂದು ಗೌರವಿಸಿದ. ಈ ಸಾಧನೆಯ ಕುರುಹಾಗಿ ಯವನರಾಜ್ಯ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದನ್ನು ಧರಿಸಿದ.

ಇವನ ಪ್ರತಾಪದ ವ್ಯಾಪ್ತಿ ದಕ್ಷಿಣ ಭಾರತದಲ್ಲೆಲ್ಲ ಹಬ್ಬಿತ್ತು. ಶ್ರೀಲಂಕದಲ್ಲಿ ಜನಕ್ರಾಂತಿ ಯಿಂದಾಗಿ ವಿಜಯಬಾಹು ಸಿಂಹಾಸನವನ್ನು ಕಳೆದುಕೊಳ್ಳಬೇಕಾಯಿತು. ಆಗ ಇವನು ಮಧ್ಯ ಪ್ರವೇಶಿಸಿ ಆತನ ಮಗ ಭುವನೈಕಬಾಹುವನ್ನು ಸಿಂಹಾಸನವೇರುವಂತೆ ಮಾಡಿದ. ಇದರಿಂದ ಇವನ ಕೀರ್ತಿ ಸಿಂಹಳದವರೆಗೂ ವ್ಯಾಪಿಸಿತು.

ರಾಯನ ಆಳಿಕೆಯ ಕೊನೆ ವರ್ಷಗಳಲ್ಲಿ ಶಾಂತಿ ನೆಲಸಿತ್ತು. ರಾಜನಿಗೆ ಬಹುಕಾಲ ಪುತ್ರಸಂತಾನವಿರಲಿಲ್ಲ. 1518ರಲ್ಲಿ ರಾಣಿ ತಿರುಮಲದೇವಿಗೆ ಗಂಡುಮಗ ಜನಿಸಿತು. ಅವನಿಗೆ ತಿರುಮಲನೆಂದು ಹೆಸರಿಡಲಾಯಿತು. ತನ್ನ ಆರು ವರ್ಷದ ಮಗ ತಿರುಮಲನನ್ನು ಯುವರಾಜ ನನ್ನಾಗಿ ಮಾಡಿದ. ಆದರೆ ಅಲ್ಲಿಂದ ಎಂಟು ತಿಂಗಳಲ್ಲಿ ಮಂತ್ರಿ ಸಾಳುವ ತಿಮ್ಮರಸನ ಮಗ ತಿಮ್ಮ ದಂಡನಾಯಕ ವಿಷಪ್ರಯೋಗ ಮಾಡಿದ್ದರಿಂದ ಈ ಬಾಲಕ ಮೃತನಾದನೆಂದೂ ಇದರಿಂದ ರೊಚ್ಚಿಗೆದ್ದ ಕೃಷ್ಣದೇವರಾಯ ತಂದೆ ಮಕ್ಕಳಿಬ್ಬರನ್ನೂ ಸೆರೆಗೆ ದೂಡಿದನೆಂದೂ ತಿಮ್ಮ ಸೆರೆಯಿಂದ ತಪ್ಪಿಸಿಕೊಂಡು ಗುತ್ತಿಗೆ ಹೋಗಿ ದಂಗೆಯೆದ್ದನೆಂದೂ ಅವನನ್ನು ಸೋಲಿಸಿ, ತಂದೆ ಮಕ್ಕಳಿಬ್ಬರ ಕಣ್ಣು ಕಿತ್ತು ಸೆರೆಗೆ ಅಟ್ಟಿದನೆಂದೂ ನ್ಯೂನಿಜ್ ತಿಳಿಸುತ್ತಾನೆ. ಆದರೆ ಈ ಅಭಿಪ್ರಾಯವನ್ನು ಅನೇಕ ಇತಿಹಾಸಕಾರರು ಒಪ್ಪುವುದಿಲ್ಲ. ಮುಂದೆ ತನ್ನ ಉತ್ತರಾಧಿಕಾರಿ ಯನ್ನಾಗಿ ಮಲಸಹೋದರ ಅಚ್ಯುತರಾಯನನ್ನು ನೇಮಿಸಿದ.

ಕೃಷ್ಣದೇವರಾಯನಿಗೆ ಚಿನ್ನಾದೇವಿ, ತಿರುಮಲಾದೇವಿ ಎಂಬ ರಾಣಿಯರಿದ್ದರು. ಇಬ್ಬರು ಗಂಡುಮಕ್ಕಳಲ್ಲಿ ಒಬ್ಬ ತಿರುಮಲ 6ನೆಯ ವಯಸ್ಸಿನಲ್ಲಿ ನಿಧನನಾದ. ಮತ್ತೊಬ್ಬ ಕೃಷ್ಣದೇವರಾಯ ಸಾಯುವಾಗ ಹದಿನೆಂಟು ತಿಂಗಳ ಮಗುವಾಗಿದ್ದ. ರಾಯನಿಗೆ ತಿರುಮಲಾಂಬಾ ಮತ್ತು ವೆಂಗಳಾಂಬಾ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಇಬ್ಬರೂ ಕ್ರಮವಾಗಿ ಅರವೀಡು ಮನೆತನದ ಅಳಿಯ ರಾಮರಾಯ ಹಾಗೂ ಅವನ ತಮ್ಮ ತಿರುಮಲನನ್ನು ಮದುವೆಯಾಗಿದ್ದರು.

ಇವನು ಕವಿಪೋಷಕನೂ ಸ್ವತಃ ಕನ್ನಡ ಮತ್ತು ತೆಲಗು ವಿದ್ವಾಂಸನೂ ಆಗಿದ್ದ. ಜಾಂಬವತೀ ಕಲ್ಯಾಣ ಎಂಬ ನಾಟಕ ಮತ್ತು ಇತರ ಸಂಸ್ಕೃತ ಗ್ರಂಥಗಳನ್ನೂ ಆಮುಕ್ತ ಮಾಲ್ಯಾದಾ ಎಂಬ ತೆಲಗು ಕಾವ್ಯವನ್ನೂ ರಚಿಸಿದ. ಇವನ ಆಸ್ಥಾನದಲ್ಲಿ ಅಷ್ಟದಿಗ್ಗ ಜಗಳೆನ್ನಿಸಿಕೊಂಡ ವಿವಿಧ ಭಾಷಾಕವಿಗಳೂ ವಿದ್ವಾಂಸರೂ ಇದ್ದರು. ಅವರಲ್ಲಿ ಮಹಾಕವಿ ಅಲ್ಲಸಾನಿಪೆದ್ದನ ತೆಲುಗು ಕವಿಗಳಲ್ಲಿ ಮುಖ್ಯನಾದವನು. ಕನ್ನಡ ಕವಿ ತಿಮ್ಮಣ್ಣನು ಕುಮಾರವ್ಯಾಸ ಭಾರತವನ್ನು (8 ಪರ್ವಗಳು) ಪೂರ್ಣಗೊಳಿಸಿ ರಾಜನಿಗೆ ಅರ್ಪಿಸಿದ. ಇದನ್ನು ಕರ್ನಾಟ ಕೃಷ್ಣರಾಯ ಭಾರತ ಕಥಾಮಂಜರಿ ಎಂದೇ ಕರೆಯಲಾಗಿದೆ.

ಮಧ್ವ ಸಂಪ್ರದಾಯದ ಪ್ರಸಿದ್ಧ ಯತಿಗಳಾದ ವ್ಯಾಸರಾಯರು ರಾಜಗುರುಗಳಾಗಿದ್ದರು. ವಿಜಯನಗರದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ, ಅನೇಕ ಕೀರ್ತನಕಾರರು ಮತ್ತು ವಿದ್ವಾಂಸರ ಬೆಳವಣಿಗೆಗೆ ಆಶ್ರಯ ನೀಡಿದರು. ದಾಸಶ್ರೇಷ್ಠರಾದ ಪುರಂದರದಾಸರು ದಾಸಸಾಹಿತ್ಯದ ನಿರ್ಮಾಣ ಮತ್ತು ಪ್ರಚಾರಕಾರ್ಯವನ್ನು ಈತನ ಕಾಲದಲ್ಲಿ ಮಾಡಿದರು. ಕನಕದಾಸರೂ ಈ ಕಾಲದ ಶ್ರೇಷ್ಠ ಕೀರ್ತನಕಾರರು.

ಇವನು ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಟ್ಟ. ಅನೇಕ ಊರು, ಅಣೆಕಟ್ಟು, ನಾಲೆ, ಕೆರೆ, ದೇವಾಲಯ ಮತ್ತು ಇತರ ಕಟ್ಟಡಗಳನ್ನು ಕಟ್ಟಿಸಿದ. ತಾಯಿಯ ಹೆಸರಿನಲ್ಲಿ ನಾಗಲಾಪುರ(ನಾಗೇನಳ್ಳಿ) ಎಂಬ ಗ್ರಾಮ, ದೇವಾಲಯ ಮತ್ತು ಕೆರೆಯನ್ನೂ ಹೆಂಡತಿಯ ನೆನಪಿಗಾಗಿ ತಿರುಮಲದೇವಿಯವರ ಪಟ್ಟಣವನ್ನೂ (ಈಗಿನ ಹೊಸಪೇಟೆ) ನಿರ್ಮಿಸಿದ. ವಿಜಯನಗರ ಪಟ್ಟಣದ ವಿಸ್ತರಣೆಯನ್ನು ರೂಪಿಸಿದ. ಬಹು ಉದಾರವಾಗಿ ದಾನ ಧರ್ಮಗಳನ್ನು ಮಾಡುತ್ತಿದ್ದ ಇವನು ಧಾರ್ಮಿಕ ವ್ಯವಹಾರದಲ್ಲಿ ವೈಷ್ಣವನಾಗಿದ್ದ. ತಿರುಪತಿ, ಶ್ರೀರಂಗಂ, ಕುಂಭಕೋಣಂ, ಅಹೋಬಲಂ ಮತ್ತು ಕಾಂಚಿಪುರಂಗಳಲ್ಲಿಯ ಶ್ರೀವೈಷ್ಣವ ದೇವಾಲಯಗಳ ಕಡೆಗೆ ಹೆಚ್ಚು ಒಲವು ತೋರಿದ. ಕಾಳಹಸ್ತಿ, ಶ್ರೀಶೈಲಂ ಮೊದಲಾದ ಶೈವ ಕ್ಷೇತ್ರಗಳೂ ಇವನ ಗಮನ ಸೆಳೆದಿದ್ದುವು. ತನ್ನ ಪಟ್ಟಾಭಿಷೇಕ ಸಂದರ್ಭದಲ್ಲಿ ವಿರೂಪಾಕ್ಷ ದೇವಾಲಯದಲ್ಲಿ ಬೃಹತ್ ರಂಗ ಮಂಟಪವನ್ನು ಅದರ ಮುಂದಿನ ರಾಯಾ ಗೋಪುರವನ್ನೂ ಕಟ್ಟಿಸಿದ. ಇವನ ರಾಣಿಯರಾದ ಚಿನ್ನಾದೇವಿ, ತಿರುಮಲದೇವಿಯರು ವಿಠಲ ದೇವಾಲಯದ ಗೋಪುರಗಳನ್ನು ನಿರ್ಮಿಸಿದರು. ಉದಯಗಿರಿ ವಿಜಯದಲ್ಲಿ ಅಲ್ಲಿಂದ ತಂದ ಕೃಷ್ಣ ವಿಗ್ರಹವನ್ನು ಸ್ಥಾಪಿಸಲು ಕೃಷ್ಣಸ್ವಾಮಿ ದೇವಾಲಯವನ್ನು ಕಟ್ಟಿಸಿದ. ಲಕ್ಷ್ಮೀನರಸಿಂಹ ಇವನ ಕಾಲದ ನಿರ್ಮಿತಿಗಳಲ್ಲಿ ಪ್ರಮುಖವಾದುದು. ತಿರುಮಲೆ ದೇವಾಲಯದಲ್ಲಿ ಚಿನ್ನಾದೇವಿ, ಕೃಷ್ಣದೇವರಾಯ ಮತ್ತು ತಿರುಮಮದೇವಿಯರ ಕಂಚಿನ ವಿಗ್ರಹಗಳನ್ನು ಕಾಣಬಹುದು.

ಇವನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಪೋರ್ಚುಗೀಸ್ ಪ್ರವಾಸಿಗಳಾದ ನ್ಯೂನಿಜ್ ಮತ್ತು ಪೇಯಿಸ್‌ರ ವರದಿಗಳು ಅಮೂಲ್ಯವಾದವು. ತಾವು ಕಂಡ ಆಗಿನ ವಿಜಯನಗರ ವೈಭವದ ವರ್ಣನೆಯನ್ನು ನೀಡಿದ್ದಾರೆ. ಅಲ್ಲದೇ ಈ ಕಾಲದ ಸಾಹಿತ್ಯ ಕೃತಿಗಳು, ನೂರಾರು ಶಾಸನಗಳು ನಾಣ್ಯಗಳು ಇವನ ವ್ಯಕ್ತಿತ್ವ, ಮಾಡಿದ ಯುದ್ಧಗಳು, ದಾನ ಧರ್ಮಗಳು, ಸಾಮಾಜಿಕ, ಆರ್ಥಿಕ ವಿವರಗಳನ್ನು ಒದಗಿಸುತ್ತವೆ. ಅತ್ಯಂತ ಶೂರ, ಸಮರ್ಥ, ಶ್ರೀಮಂತ, ಮುತ್ಸದ್ದಿ, ಸಾಹಿತ್ಯ ಸಂಸ್ಕೃತಿಪ್ರಿಯ, ಸಾಮ್ರಾಟರಲ್ಲಿ ಅಗ್ರಗಣ್ಯನಾಗಿದ್ದ ಇವನು ಕನ್ನಡ ರಾಜ್ಯ ರಮಾರಮಣ, ಆಂಧ್ರಭೋಜ, ಚತುಸ್ಸಮಯ ಸಮುದ್ಧರನ ರಾಯ, ಯವನರಾಜ್ಯ ಪ್ರತಿಷ್ಠಾಪನಾಚಾರ್ಯ ಮುಂತಾದ ಬಿರುದುಗಳನ್ನು ಹೊಂದಿದ್ದ. ಈತ ಆಡಳಿತವನ್ನು ಎಷ್ಟು ಸಮರ್ಥವಾಗಿ ನಿರ್ವಹಿಸಿದನೆಂದರೆ ಧರ್ಮ ನಾಲ್ಕೂ ಕಾಲುಗಳಲ್ಲಿ ಭದ್ರವಾಗಿ ಊರಿ ಗುಟುರು ಹಾಕುವ ಸಶಕ್ತ ಹೋರಿಯಂತೆ ಇದೆ ಎಂದು ಸೋಮನಾಥ ಕವಿ ಹೇಳಿದ್ದಾನೆ. ಇಪ್ಪತ್ತು ವರ್ಷಗಳ ಕಾಲ ಸಮರ್ಥ ಆಡಳಿತವನ್ನು ನಿರ್ವಹಿಸಿದ ಇವನು ತನ್ನ 42ನೆಯ ವಯಸ್ಸಿನಲ್ಲಿ 1529ರಲ್ಲಿ ನಿಧನ ಹೊಂದಿದ. (ವಿ.ಬಿ)

**ಕೃಷ್ಣರಾಜ ಒಡೆಯರ್ III:** 1794–1868. ಹಿಂದಿನ ಮೈಸೂರಿನ ರಾಜವಂಶದ 22ನೆಯ ಅರಸು (1799–1868). 1831ರಲ್ಲಿ ರಾಜ್ಯದಲ್ಲಿ ತಲೆದೋರಿದ ಪ್ರಕ್ಷುಬ್ಧ ಪರಿಸ್ಥಿತಿಯ ನೆವದಿಂದ ಬ್ರಿಟಿಷರು ಸಂಸ್ಥಾನದ ಸೂತ್ರವನ್ನು ತಾವೇ ವಹಿಸಿಕೊಂಡು ಕಮಿಷನರುಗಳ ಮೂಲಕ 1868ರವರೆಗೂ ಅಂದರೆ ಇವರ ಮರಣದವರೆಗೂ ಆಡಳಿತ ನಡೆಸುತ್ತಿದ್ದರೂ ಹೆಸರಿಗೆ ಮಾತ್ರ ಇವರೇ ಅರಸರಾಗಿದ್ದರು. ಮೈಸೂರಿನ ಚರಿತ್ರೆಯಲ್ಲಿ ಇವರ ಕಾಲದಲ್ಲಿ ಉಂಟಾದ ವಿಷಮಪರಿಸ್ಥಿತಿ ಮತ್ತು ಸಾಹಿತ್ಯನಿರ್ಮಾಣ ಇವೆರಡೂ ಗಮನಾರ್ಹವಾದವು. ಕೃಷ್ಣರಾಜರು ಸ್ವತಃ ಕವಿ. ಅಲ್ಲದೆ ಅನೇಕ ಕವಿಗಳಿಗೆ ಆಶ್ರಯ ಕೊಟ್ಟು ಕವಿಜನ ಕಾಮಧೇನು, ಕನ್ನಡದ ಭೋಜ ಎಂದೆಲ್ಲ ಪ್ರಸಿದ್ಧರಾಗಿದ್ದರು. ಇವರ ಅಂಕಿತದಲ್ಲಿರುವ ಕೃತಿಗಳ ಸಂಖ್ಯೆ 59. ಇವರ ಘನತೆ, ಗಾಂಭೀರ್ಯ, ರಸಿಕತೆ, ಕಲಾಪ್ರೇಮ ಅನುಪಮವಾದವೆಂದು ಹೇಳಲಾಗಿದೆ.

ಹೈದರ್ ಅಲಿ ಮತ್ತು ಟಿಪ್ಪುವಿನ ಕಾಲದಲ್ಲಿ ಅಧಿಕಾರ ಕಳೆದುಕೊಂಡಿದ್ದ ರಾಜ ಮನೆತನ 1799, ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಮರಣ ಹೊಂದಿದಾಗ, ಮತ್ತೆ ಅಧಿಕಾರ ಪಡೆಯಿತು. ದುರಾಡಳಿತ, ಎಡೆಬಿಡದ ಯುದ್ಧಗಳು, ಕ್ಷಾಮದ ಭಯ–ಇವುಗಳಿಂದ ದೇಶ ನರಳುತ್ತಿದ್ದಾಗ 1799ರಲ್ಲಿ ಕೃಷ್ಣರಾಜರು ತಮ್ಮ 5ನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದರು.

ಇವರು ಬಾಲಕರಾಗಿದ್ದುದರಿಂದ ದಿವಾನ್ ಪೂರ್ಣಯ್ಯ ಮತ್ತು ರಾಣಿ ಲಕ್ಷಮ್ಮಣ್ಣಿಯವರು ಆಡಳಿತ ಸೂತ್ರಗಳನ್ನು ವಹಿಸಿಕೊಳ್ಳಬೇಕಾಯಿತು. ರಾಣಿ ಲಕ್ಷಮ್ಮಣ್ಣಿ ಬಹಳ ಚತುರಮತಿಯುಳ್ಳ ಸ್ತ್ರೀ. ಟಿಪ್ಪುವಿನ ಕೈಯಿಂದ ರಾಜ್ಯವನ್ನು ಹಿಂದಕ್ಕೆ ಗಳಿಸಲು ಅವರು ಕಂಪನಿ ಸರ್ಕಾರದೊಂದಿಗೆ ನಡೆಸಿದ ಪತ್ರವ್ಯವಹಾರ ಉತ್ತಮ ರಾಜಕಾರಣದ ನಿದರ್ಶನ. ಇದರ ಜೊತೆಗೆ ಆಡಳಿತನಿಪುಣನೂ ಅನುಭವಿಯೂ ಆದ ಪೂರ್ಣಯ್ಯ ದಿವಾನನಾದುದು ಆಡಳಿತ ಸುಸೂತ್ರವಾಗಿ ಸಾಗಲು ಕಾರಣವಾಯಿತು. ಪೂರ್ಣಯ್ಯ ಇವರಿಗೆ ರಾಜಯೋಗ್ಯವಾದ ಸಕಲ ಶಿಕ್ಷಣವನ್ನೂ ನೀಡಿದ್ದ. ಕನ್ನಡ, ಸಂಸ್ಕೃತ, ಮರಾಠಿ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಇವರಿಗೆ ಪಾಂಡಿತ್ಯವಿತ್ತು. 1811ರಲ್ಲಿ ಪೂರ್ಣಯ್ಯ ನಿವೃತ್ತನಾದಾಗ 18 ವಯಸ್ಸಿನ ಇವರು ಆಡಳಿತವನ್ನು ವಹಿಸಿಕೊಂಡರು. ಪೂರ್ಣಯ್ಯನ ದಕ್ಷ ಆಡಳಿತದಿಂದ ರಾಜ್ಯ ಸುಧಾರಿಸತೊಡಗಿದ್ದರೂ ಇನ್ನೂ ಪರಿಸ್ಥಿತಿ ಪೂರ್ಣ ಹತೋಟಿಗೆ ಬಂದಿರಲಿಲ್ಲ. ಆ ಸಂದರ್ಭದಲ್ಲಿ ಬ್ರಿಟಿಷರು ಪಿಂಡಾರೆ ಮತ್ತು ಮರಾಠರೊಂದಿಗೆ ನಡೆಸುತ್ತಿದ್ದ ಯುದ್ಧಗಳಲ್ಲಿ ಮೈಸೂರಿನ ಸೈನ್ಯ ಪಾಲುಗೊಳ್ಳಬೇಕಾಯಿತು. 1816–17 ಮತ್ತು 1823–24ರಲ್ಲಿ ದೇಶದಲ್ಲಿ ಭೀಕರ ಕ್ಷಾಮ ತಲೆದೋರಿತು. ತ್ವರಿತವಾಗಿ ಪರಿಹಾರ ಒದಗಿಸಬೇಕಾಯಿತು. ಜನತೆಯ ಬಗ್ಗೆ ಅಪಾರ ಅನುಕಂಪವಿದ್ದ ಇವರು ಪರಿಹಾರಕಾರ್ಯಗಳಿಗೆ ಅಧಿಕ ಹಣ ಖರ್ಚು ಮಾಡಿದರು. ಇದರಿಂದಾಗಿ ದೇಶದ ಆರ್ಥಿಕಸ್ಥಿತಿ ಹದಗೆಟ್ಟಿತು.

ಇದೇ ಸಮಯದಲ್ಲಿ 1830ರಲ್ಲಿ ರಾಜ್ಯದ ಹಲವು ಕಡೆ ದಂಗೆಗಳುಂಟಾದುವು. ಇವುಗಳಲ್ಲಿ ನಗರ ಪ್ರಾಂತದ ಗಲಭೆ ಮುಖ್ಯವಾದುದು. ಈ ಭಾಗದಿಂದ ರಾಜ್ಯಕ್ಕೆ ಬರಬೇಕಾದ ಕಂದಾಯ ಸರಿಯಾಗಿ ಬಂದಿರಲಿಲ್ಲ. 13 ಲಕ್ಷ ರೂಪಾಯಿಗಳವರೆಗೆ ಬಾಕಿ ಏರಿತ್ತು. ಅಲ್ಲಿಯ ಪೌಜುದಾರ

ಏಳೂವರೆ ಲಕ್ಷ ರೂಪಾಯಿಗಳ ಕಂದಾಯ ರಿಯಾಯಿತಿಗಾಗಿ ಶಿಫಾರಸು ಮಾಡಿದಾಗ ಅರಸರು ಅದನ್ನು ಒಪ್ಪಲಿಲ್ಲ. ಅಲ್ಲಿಗೆ ಹೊಸ ಪೌಜುದಾರನನ್ನು ಕಳಿಸಿ ವಿವರಗಳನ್ನು ಪಡೆದಾಗ ಅಲ್ಲಿ ನಡೆದಿದ್ದ ಮೋಸ ಬೆಳಕಿಗೆ ಬಂತು. ಆದ್ದರಿಂದ ಮೊದಲಿನ ಕಂದಾಯವನ್ನೇ ಖಾಯಂಗೊಳಿಸಲಾಯಿತು. ಇದರಿಂದ ಅಸಮಾಧಾನಗೊಂಡ ಸಂಬಂಧಪಟ್ಟವರು ಏನೂ ಅರಿಯದ ಜನತೆಯನ್ನು ರಾಜ್ಯದ ವಿರುದ್ಧ ಎತ್ತಿ ಕಟ್ಟಿದರು. ಇದೇ ಸಮಯದಲ್ಲಿ ಬಿದನೂರಿನ ಅರಸು ಮನೆತನದ ಹಕ್ಕುದಾರನೆಂದು ನಟಿಸುತ್ತಿದ್ದ ಬೂದಿ ಬಸವಯ್ಯ ದಂಗೆಯ ನಾಯಕನಾದ. ಗಲಭೆಯನ್ನು ಅಡಗಿಸಲು ಮೈಸೂರು ಸೈನ್ಯಕ್ಕೆ ಸಾಧ್ಯವಾಗದೆ ಬ್ರಿಟಿಷ್ ಸೈನ್ಯದ ಸಹಾಯ ಪಡೆದು ದಂಗೆಗಳನ್ನು ಅಡಗಿಸಲಾಯಿತು. ಮೈಸೂರಿನಲ್ಲಿದ್ದ ಬ್ರಿಟಿಷ್ ರೆಸಿಡೆಂಟ್ ಅರಸರ ವಿರುದ್ಧ ವರದಿ ಕಳಿಸಿ, ಅವರು ರಾಜ್ಯದ ಹಣವನ್ನು ಪೋಲು ಮಾಡುತ್ತಿದ್ದಾರೆಂದೂ ಆಡಳಿತ ಹದಗೆಡಲು ಅವರೇ ಕಾರಣರೆಂದೂ ಆಪಾದಿಸಿದ. ಈ ವರದಿಯ ಸತ್ಯಾಸತ್ಯತೆಗಳನ್ನು ಪರೀಕ್ಷಿಸುವ ಮೊದಲೇ ಗವರ್ನರ್–ಜನರಲ್ ಬೆಂಟಿಂಕ್ ಮೈಸೂರು ಸಂಸ್ಥಾನದ ಆಡಳಿತವನ್ನು ಕಂಪನಿ ವಹಿಸಿಕೊಳ್ಳತಕ್ಕದ್ದೆಂದು ಆಜ್ಞೆ ಮಾಡಿದ. ತಮಗಾದ ಅನ್ಯಾಯವನ್ನು ಸರಿಪಡಿಸುವಂತೆ ಬ್ರಿಟಿಷ್ ಸರ್ಕಾರದೊಡನೆ 37 ವರ್ಷಕಾಲ ಇವರು ಪತ್ರ ವ್ಯವಹಾರ ನಡೆಸುತ್ತ ಹೋರಾಡಿದರು. ಬ್ರಿಟನ್ನಿನಲ್ಲಿ ಉದಾರವಾದ ಬೆಳೆಯುತ್ತಿದ್ದ ಆ ಕಾಲದಲ್ಲಿ ಅಲ್ಲಿಯ ಜನತೆಯ ಮತ್ತು ಪತ್ರಿಕೆಗಳ ಅಭಿಪ್ರಾಯ ಮೈಸೂರರಸರಿಗಾದ ಈ ಅನ್ಯಾಯವನ್ನು ಸರಿಪಡಿಸುವಂತೆ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ತಂದಿತು. ಪ್ರಸಿದ್ಧ ಬ್ರಿಟಿಷ್ ರಾಜಕಾರಣಿಗಳಾದ ಬೆಲ್, ಕ್ಯಾಂಬೆಲ್, ಮಾರ್ಲೆ ಇವರ ಪ್ರಯತ್ನದಿಂದಾಗಿ 1867ರಲ್ಲಿ ಬ್ರಿಟಿಷ್ ಸರ್ಕಾರ ಮಕ್ಕಳಿಲ್ಲದ ಇವರು ದತ್ತು ಪಡೆಯಬಹುದೆಂದೂ ಆ ದತ್ತುಪುತ್ರ ಪ್ರಾಪ್ತವಯಸ್ಕನಾದಮೇಲೆ ಸಿಂಹಾಸನವನ್ನು ಅವರಿಗೆ ವಹಿಸಿಕೊಡುವುದಾಗಿಯೂ ಒಪ್ಪಿತು. 1867ರ ಜುಲೈ 18ರಂದು ರಾಜಮನೆತನದವರೇ ಆದ, 17 ವರ್ಷದ ಚಾಮರಾಜ ಒಡೆಯರನ್ನು ದತ್ತು ತೆಗೆದುಕೊಳ್ಳಲಾಯಿತು. ಇದಾದ ಒಂದೇ ವರ್ಷದಲ್ಲಿ 1868ರ ಜೂನ್ 27ರಂದು ನಿಧನರಾದರು.

**ಸಾಹಿತ್ಯ, ಕಲೆ:** ಇವರು ಅಧಿಕಾರವನ್ನು ಕಳೆದುಕೊಂಡರೂ ಮನಃಸ್ವಾಸ್ಥ್ಯವನ್ನು ಕಳೆದುಕೊಳ್ಳಲಿಲ್ಲ. ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರವಾದ ಒಲವನ್ನು ಹೊಂದಿದ್ದ ಇವರು ಕೈಬಿಟ್ಟು ಹೋಗಿದ್ದ ಅಧಿಕಾರವನ್ನು ಹಿಂದಕ್ಕೆ ಪಡೆಯಲು ಕ್ರಮಬದ್ಧ ವ್ಯವಹಾರದಲ್ಲಿ ತೊಡಗಿದರಾದರೂ ಅಧಿಕಾರದ ಆಸೆಯ ಕನಸಿನಲ್ಲಿ ಕಾಲ ಕಳೆಯಲಿಲ್ಲ. ತಮ್ಮ ಬಿಡುವಿನ ವೇಳೆಯನ್ನೆಲ್ಲ ಸಾಹಿತ್ಯಾಧ್ಯಯನಕ್ಕೆ ಮೀಸಲಾಗಿಸಿದರು.

ಇವರ ಆಶ್ರಯದಲ್ಲಿ ಪ್ರಸಿದ್ಧರಾದ ವಿದ್ವಾಂಸರು, ಕವಿಗಳು, ಶಿಲ್ಪಿಗಳು ಮತ್ತು ಸಂಗೀತಗಾರರು ಕಲಾಸೃಷ್ಟಿಯಲ್ಲಿ ನಿರತರಾಗಿದ್ದರು. ವೀಣೆ ವೆಂಕಟಸುಬ್ಬಯ್ಯ, ಕುಣಿಗಲ್ ರಾಮಶಾಸ್ತ್ರಿ, ಸೋಸಲೆ ಗರಳಪುರಿಶಾಸ್ತ್ರಿ, ಅಳಿಯ ಲಿಂಗರಾಜ, ಕೆಂಪುನಾರಾಯಣ, ದೇವಲಾಪುರದ ನಂಜುಂಡ, ಬಸವಪ್ಪಶಾಸ್ತ್ರಿ ಮೊದಲಾದ ಕವಿ, ಕಲಾವಿದರನ್ನಿಲ್ಲಿ ಹೆಸರಿಸಬಹುದು. ಇವರು ಇಂಥ ಕವಿಗಳಿಗೆ, ಕಲಾವಿದರಿಗೆ ಆಶ್ರಯ ನೀಡಿದುದಷ್ಟೇ ಅಲ್ಲದೆ ಸ್ವತಃ ಕನ್ನಡದಲ್ಲಿ ಹೇರಳವಾಗಿ ಕೃತಿ ರಚನೆ ಮಾಡಿದ್ದಾರೆ. ಸಂಸ್ಕೃತದಲ್ಲಿ ಕೃಷ್ಣಕಥಾ ಪುಷ್ಪಮಂಜರಿ, ರಾಮಾಯಣ ಕಥಾ ಪುಷ್ಪಮಂಜರಿ, ಚಾಮುಂಡಿ ಮಂಗಳ ಮಾಲಿಕಾ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರ ಕನ್ನಡ ಕೃತಿ ರಚನೆಯಂತೂ ಯಾರನ್ನಾದರೂ ಆಶ್ಚರ್ಯಪಡಿಸುವಂತಿದೆ. ಸು.59 ಗ್ರಂಥಗಳು ಇವರ ಹೆಸರಿನಲ್ಲಿದ್ದು ಇವರ ವಿದ್ವತ್ತು, ಪ್ರತಿಭೆಗಳಿಗೆ ಸಾಕ್ಷಿಯಾಗಿವೆ. ಸಂಸ್ಕೃತ ಸಾಹಿತ್ಯದ ಪ್ರಮುಖ ಗ್ರಂಥಗಳನ್ನು ಕನ್ನಡ ಜನಕ್ಕೆ ಪರಿಚಯ ಮಾಡಿಕೊಡಬೇಕೆಂಬುದು ಇವರ ಆಸೆಯಾಗಿತ್ತು.

ಶೃಂಗಾರಪ್ರಧಾನವಾದ ರತ್ನಾವಳಿ ನಾಟಕದ ಕತೆಯನ್ನು ವಿಸ್ತಾರವಾಗಿ ಸುಲಲಿತವಾದ ಗದ್ಯದಲ್ಲಿ ಬರೆದು ವತ್ಸರಾಜಕಥೆ ಎಂಬ ಹೆಸರಿಟ್ಟಿದ್ದಾರೆ. ಯೌಗಂಧರಾಯಣ ಹೂಡಿದ ಉಪಾಯಗಳಿಂದ ಸಿಂಹಳದ ರಾಜಕುಮಾರಿ ರತ್ನಾವಳಿಯನ್ನು ಕೌಶಾಂಬಿಯ ವತ್ಸರಾಜ ಮದುವೆಯಾದ ಪ್ರಸಂಗವೇ ಇದರ ಕತೆ. ಸೌಗಂಧಿಕಾಪರಿಣಯವನ್ನು ಭಾಮಿನಿ ಷಟ್ಪದಿಯಲ್ಲಿಯೂ ಗದ್ಯದಲ್ಲಿಯೂ ಬರೆದಿದ್ದಾರೆ. ದುರ್ವಾಸ ಮುನಿಯ ಶಾಪದಿಂದ ಇಂದ್ರ ರತ್ನಪುರಿಯ ರಾಜನಾದ ಸುಚರಿತ್ರನಿಗೆ ಗುಣವತಿಯ ಗರ್ಭದಲ್ಲಿ ಸುಗಂಧರಾಯನೆಂಬ ಮಗನಾಗಿ ಹುಟ್ಟಿ ಸೌಗಂಧಿಕಾದೇವಿಯಾಗಿ ಹುಟ್ಟಿದ್ದ ಶಚೀದೇವಿಯನ್ನು ಮದುವೆಯಾದುದೇ ಈ ಕೃತಿಯ ಕಥಾವಸ್ತು. ಕೃಷ್ಣಕಥಾಸಂಗ್ರಹದಲ್ಲಿ ಕೃಷ್ಣನ ಅನೇಕ ಅವತಾರಗಳು ವರ್ಣಿತವಾಗಿವೆ. ರಾಮಾವತಾರದ ಕಥೆ 77 ಅಧ್ಯಾಯಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ಬೌದ್ಧಾವತಾರ, ಕಪಿಲಾವತಾರಗಳೂ ದತ್ತಾತ್ರೇಯ ವೃತ್ತಾಂತವೂ ವೆಂಕಟೇಶ ಮಹಾತ್ಮ್ಯೆ, ಶ್ರೀನಿವಾಸ ಕೊರವಂಜಿಯ ವೇಷ ಧರಿಸಿದ ಪ್ರಸಂಗಗಳೂ ಇಲ್ಲಿ ಸೇರಿವೆ.

ಸಂಸ್ಕೃತ ಭಾಷೆಯಲ್ಲಿದ್ದು ಸಾಮಾನ್ಯ ಜನರಿಗೆ ನಿಲುಕದಿದ್ದ ಭಾರತ, ಭಾಗವತಗಳನ್ನು ಇವರು ತಿಳಿಯಾದ ಕನ್ನಡದಲ್ಲಿ ವಿಸ್ತಾರವಾಗಿ ಗದ್ಯರೂಪದಲ್ಲಿ ಬರೆದಿದ್ದಾರೆ. ಕಾಳಿದಾಸನ ಶಾಕುಂತಲ, ವಿಕ್ರಮೋರ್ವಶೀಯ, ಮಾಳವಿಕಾಗ್ನಿಮಿತ್ರ ನಾಟಕಗಳನ್ನು ಕನ್ನಡ ಗದ್ಯರೂಪಕ್ಕೆ ತಂದಿದ್ದಾರೆ. ಪಂಚತಂತ್ರದ ನೀತಿಕಥೆಗಳನ್ನು ಕನ್ನಡದಲ್ಲಿ 'ಬಾಲಹಿತಾರ್ಥ' ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ಕಥೆಗಳನ್ನು ಸಂಕ್ಷಿಪ್ತವಾಗಿ ಹೇಳುವ ಕಲೆ ಕೃಷ್ಣರಾಜರಿಗೆ ಸಿದ್ಧಿಸಿದೆ. ಪದ್ಮಪುರಾಣಾಂತರ್ಗತವಾದ ಅರ್ಕಪುಷ್ಕರಿಣಿ ಮಾಹಾತ್ಮ್ಯವೂ ಅಖಂಡ ಕಾವೇರಿ ಮಹಾತ್ಮ್ಯವೂ ಸಾಮಾನ್ಯ ಜನರಿಗಾಗಿ ಬರೆದ ಕೃತಿಗಳು. ಅಖಂಡ ಕಾವೇರಿ ಮಾಹಾತ್ಮ್ಯ ಟೀಕು ಸ್ಕಂದಪುರಾಣದ ಆಧಾರದ ಮೇಲೆ ರಚಿತವಾದುದು. ಇದರಲ್ಲಿ ಸಂಸ್ಕೃತ ಶ್ಲೋಕಗಳಿಗೆ ವಿವರಣಾತ್ಮಕ ಟೀಕೆಯಿದೆ.

ಶ್ರೀತತ್ತ್ವನಿಧಿ ಮುಮ್ಮಡಿಯವರಿಂದ ರಚಿತವಾದ ಒಂದು ವಿಶಿಷ್ಟ ಗ್ರಂಥ. ಅದರಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ ಮತ್ತು ಕೌತುಕನಿಧಿ ಎಂಬ ಒಂಬತ್ತು ನಿಧಿಗಳಿವೆ. ಅವುಗಳಲ್ಲಿರುವ ವಿಷಯಗಳನ್ನು ಸುಲಭವಾಗಿ ಅರಿತುಕೊಳ್ಳಲು ಸಾಧ್ಯವಾಗುವಂತೆ ಚಿತ್ರಗಳನ್ನು ಕೊಡಲಾಗಿದೆ. ಈಗ ಉಪಲಬ್ಧವಿರುವ ಹಸ್ತಪ್ರತಿಯಲ್ಲಿ ಸುಮಾರು ನಾಲ್ಕು ಸಾವಿರ ಚಿತ್ರಗಳಿವೆ. ಈ ಚಿತ್ರಗಳ ಕಲಾಕೌಶಲ ಅದ್ಭುತವಾದುದು. ಕೊನೆಯದಾದ ಕೌತುಕ ನಿಧಿಯಲ್ಲಿ ಪುರಾತನ ಕಾಲದಿಂದ ರೂಢಿಯಲ್ಲಿ ಬಂದಿರುವ ಹಸ್ತಬಂಧಾದಿ ಕ್ರೀಡೆಗಳ ವಿವರಣೆ, ಚತುರಂಗಾದಿ ಆಟಗಳ ನಿರೂಪಣೆ ವಿವರವಾಗಿ ಬಂದಿವೆ. ಇದೊಂದು ಸಣ್ಣ ವಿಶ್ವಕೋಶ. ಸಂಖ್ಯಾರತ್ನಮಾಲಾ, ತ್ರೇತಾಗ್ನಿ, ತ್ರಿಮೂರ್ತಿಗಳು, ಗುಣತ್ರಯ, ಪಂಚಮಹಾಪಾತಕಗಳು, ಪಂಚಪ್ರಾಣ, ಪಂಚೇಂದ್ರಿಯಗಳು ಮುಂತಾದವುಗಳ ಸಾರ ಸಂಗ್ರಹವಿಲ್ಲಿದೆ.

ರಾಜ್ಯಾಧಿಕಾರವನ್ನು ಕಳೆದುಕೊಂಡ ಮುಮ್ಮಡಿ ಕೃಷ್ಣರಾಜರು ಆಳವಾದ ಅಧ್ಯಯನದಲ್ಲಿ ತೊಡಗಿದರು. 'ಮುಮ್ಮಡಿ ಶ್ರೀಕೃಷ್ಣಕಂಠೀರವರು ಶ್ರೀಮದ್ರಾಮಯಣ, ವಿಷ್ಣುಪುರಾಣ, ಪಾದ್ಮ, ಕೂರ್ಮ, ಆಧ್ಯಾತ್ಮ ರಾಮಾಯಣ, ಶಿವ, ವಿಷ್ಣು ಧರ್ಮೋತ್ತರ, ಜೈಮಿನ್ಯಾದಿ ಗ್ರಂಥಗಳಲ್ಲಿರುವ ಅನೇಕ ರಾಮ ಕಥೆಗಳ ಪರಿಶೋಧನೆಯಂ ಮಾಡಿ' ಎಂಬ ಮಾತುಗಳು ಇವರ ಸಂಶೋಧನ ದೃಷ್ಟಿಯ ಅಧ್ಯಯನ ನಿಷ್ಠೆಯ ಪ್ರತೀಕವಾಗಿವೆ. ಅಧ್ಯಯನ ಹೆಚ್ಚಿದಂತೆಲ್ಲ ಇವರ ಹೃದಯ, ಮನಸ್ಸುಗಳು ಲೌಕಿಕ ಕ್ರಿಯೆಗಳಿಂದ ದೂರವಾಗಿ ಪಾರಮಾರ್ಥಿಕದತ್ತ ತುಯ್ಯುತ್ತಿರುವುದನ್ನು 'ಕೆಂದುಟಿಯಂ ಪೆರ್ಮೊಲೆಯಂ ಚಂದದ ಮುಖವನ್ನು ನೋಡಿ ಸುಂದರಿಯರ ನಾಂ ಪೊಂದಿ ಮದದಿಂದ ಮರೆತೆನು ಚಂದಿರಧರ ನಿನ್ನ ಪದವ' ಎಂಬ ಇವರ ಮಾತುಗಳಲ್ಲಿ ಕಾಣಬಹುದು.

ಇವರ ಕಾಲದಲ್ಲಿದ್ದ ಇಬ್ಬರು ಪ್ರಮುಖ ಗದ್ಯ ಕವಿಗಳೆಂದರೆ ದೇವಚಂದ್ರ ಮತ್ತು ಕೆಂಪುನಾರಾಯಣ. ದೇವಚಂದ್ರನ ರಾಮಕಥಾವತಾರ ಜೈನ ಸಂಪ್ರದಾಯದ ರಾಮಕಥೆ ಯಾಗಿದೆ. ಆತನ ಇನ್ನೊಂದು ಕೃತಿಯಾದ ರಾಜಾವಳೀ ಕಥೆ ಸಾಹಿತ್ಯ ದೃಷ್ಟಿಯಿಂದ ಮುಖ್ಯವಾದುದು. ಈ ಗದ್ಯ ಕೃತಿಯಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಕಥೆಗಳು ಅನೇಕ ರಾಜರ ಚರಿತ್ರೆಗಳು ಮೈಸೂರು ಒಡೆಯರ ವಂಶಾವಳಿಯಲ್ಲೂ ಇವೆ. ಆಧುನಿಕ ಗದ್ಯಕಥಾಶೈಲಿ ಯನ್ನು ನಿರ್ಮಾಣ ಮಾಡಿದವನೆಂದೂ ಪ್ರಸಿದ್ಧನಾಗಿರುವ ಕೆಂಪುನಾರಾಯಣನ ಕೃತಿ ಮುದ್ರಾಮಂಜೂಷ. ಇದು ಮತ್ತು ಕೃಷ್ಣ ರಾಜರ ಕೆಲವು ಕೃತಿಗಳು ಇಂದಿನ ಗದ್ಯಕ್ಕೆ ಬುನಾದಿ ಹಾಕಿದಂಥವು. ರಾಜಾಶ್ರಯದಲ್ಲಿದ್ದು ಅನೇಕ ಕೃತಿಗಳನ್ನು ರಚಿಸಿದ ಖ್ಯಾತಿಗೆ ಪಾತ್ರನಾದ ಇನ್ನೊಬ್ಬನೆಂದರೆ ಅಳಿಯ ಲಿಂಗರಾಜ. (ಎಚ್.ಕೆ.ಆರ್.ಜಿ.)

**ಕೃಷ್ಣರಾಜ ಒಡೆಯರ್ IV:** 1884-1940. ಮೈಸೂರು ಸಂಸ್ಥಾನದ ರಾಜ ಮನೆತನದ 24ನೆಯ ಅರಸು; ಮೈಸೂರಿಗೆ ಮಾದರಿ ಸಂಸ್ಥಾನವೆಂಬ ಅಭಿದಾನಗಳಿಸಿ ಕೊಟ್ಟ ರಾಜನೀತಿಜ್ಞ. ಇವರು ಭಾರತದ ಸ್ವಾತಂತ್ರ್ಯ ಚಳವಳಿ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಪಟ್ಟಕ್ಕೆ ಬಂದರು (1895). ಆಗಿನ್ನೂ ಇವರು ಚಿಕ್ಕವರಾಗಿದ್ದುದರಿಂದ ಇವರ ತಾಯಿ ಕೆಂಪನಂಜಮ್ಮಣ್ಣಿ ಯವರು ರಾಜಪ್ರತಿನಿಧಿಯಾಗಿ ಆಡಳಿತದಲ್ಲಿ ಮಹತ್ತರವಾದ ಪಾತ್ರ ವಹಿಸಿದರು. ಅವರಿಗೆ ಸಹಾಯಕರಾಗಿ ದಿವಾನರೂ ರೆಸಿಡೆಂಟರೂ ಇದ್ದರು. ಇವರಿಗೆ ಕಾಲಾನುಗುಣವಾಗಿ ಹೊಸ ರೀತಿಯ ವಿದ್ಯೆ ಕೊಡಿಸಲಾಯಿತು. ಮೊದಲಿಗೆ ಜೆ.ಜೆ.ವಿಟ್ಲಿ, ಅನಂತರ ಸ್ಟೂವರ್ಟ್‌ಫ್ರೇಸರ್ ಇವರ ಅಧ್ಯಾಪಕರಾಗಿದ್ದರು. ಇವರು ರಾಜ್ಯಾದ್ಯಂತ ಪ್ರವಾಸ ಮಾಡಿ, ಅಧಿಕಾರಿಗಳನ್ನೂ ಪ್ರಜೆಗಳನ್ನೂ ಭೇಟಿ ಮಾಡಿ ಆಡಳಿತಾನುಭವ ಪಡೆದರು. ಉತ್ತರಭಾರತದ ಅನೇಕ ರಾಜ್ಯಗಳಲ್ಲೂ ಪ್ರವಾಸ ಮಾಡಿದರು. 1900ರಲ್ಲಿ ಕಾಠಿಯವಾಡದ ಉಪಶಾಖೆಗೆ ಸೇರಿದ ರಾಣಾ ಥಲಬಾಸೆ ಸಿಂಘ್‌ಜೀಯವರ ಪುತ್ರಿ ಪ್ರತಾಪ ಕುಮಾರಿಯ ವರನ್ನು ಮದುವೆಯಾದರು.

ಇವರು ಪ್ರಾಪ್ತವಯಸ್ಕರಾದ ಮೇಲೆ (1902) ರಾಜ್ಯಾಡಳಿತವನ್ನು ಸ್ವತಃ ವಹಿಸಿಕೊಂಡರು. ರಾಜ್ಯದ ಎಲ್ಲೆಡೆಯಲ್ಲೂ ಪ್ರವಾಸ ಕೈಗೊಂಡು ಜನರ ಕುಂದು ಕೊರತೆಗಳನ್ನು ವಿಚಾರಿಸಿ, ಜನತೆಯಲ್ಲಿ ಪ್ರಜಾಸರ್ಕಾರದ ಬಗೆಗೆ ಇದ್ದ ಒಲವನ್ನು ಅರಿತರು. ಸಂಸ್ಥಾನದ ಕಾನೂನು



ರಚನೆಯ ಕಾರ್ಯದಲ್ಲಿ ಅಧಿಕಾರಿಗಳು ಹಾಗೂ ಸಾರ್ವಜನಿಕ ಪ್ರತಿನಿಧಿಗಳು ಪಾಲ್ಗೊಳ್ಳುವಂತೆ ಮಾಡಿದ ದೃಷ್ಟಿಯಿಂದ 1907ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಜೊತೆಗೆ ನ್ಯಾಯವಿಧಾಯಕ ಸಭೆಯನ್ನು ರಚಿಸಿದರು. ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆಯಲ್ಲಿ ಸ್ತ್ರೀಯರಿಗೂ ಮತದಾನದ ಹಕ್ಕು ಲಭಿಸಿತು. 1923ರಲ್ಲಿ ಆಡಳಿತ ಸುಧಾರಣೆಗಳನ್ನು ಪ್ರಕಟಪಡಿಸುತ್ತ ಜನತಾ ಪ್ರತಿನಿಧಿಗಳು ಅಧಿಕಾಧಿಕ ಸಂಖ್ಯೆಯಲ್ಲಿ ರಾಜ್ಯಭಾರ ದಲ್ಲಿ ಭಾಗಿಗಳಾಗು ವಂತೆ ಮಾಡುವಲ್ಲಿ ಭಾರತದ ಸಂಸ್ಥಾನಗಳಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯೇ ಪ್ರಾಚೀನತಮ ವಾದ್ದು ಎಂದು ನುಡಿದರು. ಅನೇಕ ಜನಹಿತ ಕಾರ್ಯಗಳಲ್ಲಿ ತೊಡಗಿದರು. ಇವರ ಕಾಲದಲ್ಲಿ ಆಸ್ಪತ್ರೆಗಳು ಮತ್ತು ಸಾರಿಗೆ ಸಂಪರ್ಕಗಳಿಗೆ ಹೆಚ್ಚು ಗಮನ ಕೊಡಲಾಯಿತು. ಎಂ.ವಿಶ್ವೇಶ್ವರಯ್ಯನಂಥ ಸಮರ್ಥ ದಿವಾನರು ಇವರಿಗೆ ದೊರೆತು ಆಧುನಿಕ ಮೈಸೂರಿನ ಯೋಜನೆಗಳು ಕಾರ್ಯಗತವಾದುವು. ಇವರಿಬ್ಬರ ನೇತೃತ್ವದಲ್ಲಿ ಮೈಸೂರು ಸರ್ವತೋಮುಖ ಪ್ರಗತಿ ಹೊಂದಿತು. ರಾಜ್ಯದ ಪ್ರಗತಿಗೆ ವ್ಯವಸಾಯ ಮತ್ತು ಕೈಗಾರಿಕೆಗಳ ಬೆಳವಣಿಗೆ ಅತ್ಯಾವಶ್ಯಕವೆಂದು ಅರಿತಿದ್ದ ಇವರು ವಿಶ್ವೇಶ್ವರಯ್ಯನವರ ಸಹಾಯದಿಂದ ಕೃಷ್ಣರಾಜಸಾಗರ, ವಾಣಿವಿಲಾಸಸಾಗರಗಳಂತಹ ಬೃಹತ್ ನೀರಾವರಿ ಯೋಜನೆಗಳ ಜೊತೆಗೆ ಅನೇಕ ಸಣ್ಣ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ವ್ಯವಸಾಯಾಭಿವೃದ್ಧಿಗೆ ಭದ್ರ ಬುನಾದಿ ಹಾಕಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಮೊದಲ ಹೆಜ್ಜೆಯಾಗಿ ಶಿವಸಮುದ್ರದ ಜಲವಿದ್ಯುತ್ ಯೋಜನೆಯನ್ನೂ ಅನಂತರ ಭದ್ರಾವತಿಯ ಕಬ್ಬಿಣ ಉಕ್ಕು ಕಾರ್ಖಾನೆಯನ್ನೂ ಸ್ಥಾಪಿಸಿದರು. ಹೀಗೆ ನಾಲ್ವಡಿಯವರು ಮೊಟ್ಟಮೊದಲ ಬಾರಿಗೆ ಇಡೀ ಸಂಸ್ಥಾನದ ಹಿತದೃಷ್ಟಿಯಿಂದ ಅನೇಕ ಕೆಲಸಗಳನ್ನು ಕೈಗೆತ್ತಿಕೊಂಡು ಸಾಧಿಸಿದರು. ಇದರಿಂದ ಸಂಸ್ಥಾನದ ಆರ್ಥಿಕ ವ್ಯವಸ್ಥೆ ಹೆಚ್ಚು ಸುಭದ್ರವಾಯಿತು.

ಇವರ ಮತ್ತೊಂದು ಮಹತ್ತರ ಸಾಧನೆ ಎಂದರೆ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ (1916). ಇವರು ಬನಾರಸ್ ಹಿಂದು ವಿಶ್ವವಿದ್ಯಾಲಯದ ಮೊದಲ ಕುಲಾಧಿಪತಿ ಯಾಗಿದ್ದರು. ಆ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟೊರೇಟ್ ಪ್ರಶಸ್ತಿ ನೀಡಿ ಗೌರವಿಸಿತ್ತು. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡುವ ವಿಚಾರದಲ್ಲಿ ಇವರಿಗೆ ಅಪಾರ ಆಸಕ್ತಿಯಿತ್ತು. ಮೈಸೂರು ವಿಶ್ವವಿದ್ಯಾನಿಲಯ ಕನ್ನಡದಲ್ಲಿ ಸಮಗ್ರ ಶಿಕ್ಷಣ ನೀಡುವಂದು ಕನ್ನಡ ವಿಶ್ವವಿದ್ಯಾನಿಲಯವಾಗಬೇಕೆಂಬುದು ಇವರ ಹೆಬ್ಬಯಕೆಯಾಗಿತ್ತು. ಇವರು 1940ರಲ್ಲಿ ನಿಧನರಾದರು. ಇವರ ಗೌರವಾರ್ಥ ಮೈಸೂರು ವಿಶ್ವವಿದ್ಯಾನಿಲಯ ಇವರ ಹೆಸರಿನ ಪೀಠವೊಂದನ್ನು ಸ್ಥಾಪಿಸಿದೆ. (ಎಚ್.ಆರ್.ಡಿ.ಜಿ.;ವಿ.ಎಸ್.ಎಸ್.)

**ಕೃಷ್ಣಸ್ವಾಮಿ, ವಿ.ಡಿ:** 1904-70. ಭಾರತೀಯ ಪುರಾತತ್ತ್ವ ಶಾಸ್ತ್ರಜ್ಞ. ಮದರಾಸಿನಲ್ಲಿ ಜನಿಸಿದರು. ಮದರಾಸು ವಿಶ್ವವಿದ್ಯಾಲಯದಿಂದ ಭೂವಿಜ್ಞಾನದಲ್ಲಿ ಎಂ.ಎ. ಪದವೀಧರರಾಗಿ, ಲಂಡನ್ನಿನ ಪುರಾತತ್ತ್ವ ಶಾಲೆಯಲ್ಲಿ ಪುರಾತತ್ತ್ವ ವಿಭಾಗದಲ್ಲಿ ಉನ್ನತ ವ್ಯಾಸಂಗ ನಡೆಸಿ ಭಾರತಕ್ಕೆ ಹಿಂದಿರುಗಿದರು. ಅದುವರೆಗೂ ಉಪೇಕ್ಷಿತವಾಗಿದ್ದ ಭಾರತೀಯ ಶಿಲಾಯುಗ ಮತ್ತು ಬೃಹತ್‌ಶಿಲಾ ಸಮಾಧಿ ಸಂಸ್ಕೃತಿಗಳ ಬಗ್ಗೆ ವ್ಯವಸ್ಥಿತ ಅಧ್ಯಯನ ಆರಂಭಿಸಿದ್ದು ಇವರ ಮಹತ್ತ್ವದ ಕಾರ್ಯ. ಮದರಾಸಿನ (ಚೆನ್ನೈ) ಪರಿಸರದಲ್ಲಿರುವ ಕೋರ್ತಲೈಯಾರ್ ನದಿಕಣಿವೆಯಲ್ಲಿ ಇವರು ಮೊಟ್ಟಮೊದಲು ಸಂಶೋಧನೆ ನಡೆಸಿದರು. ಅನಂತರ ಭಾರತದ ಪುರಾತತ್ತ್ವ ಇಲಾಖೆಯಲ್ಲಿ ಸಂಶೋಧಕರಾಗಿ ಸೇರಿ 1944, ಅದೇ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಜನರಲ್ ಆದರು (1963). ಈ ಹುದ್ದೆಯಿಂದ ನಿವೃತ್ತರಾಗುವವರೆಗೂ ಇವರು ತಮಿಳಿನಾಡಿನ ಬೃಹತ್ ಶಿಲಾಯುಗ ಸಂಸ್ಕೃತಿಗಳು, ಭಾರತದ ನವಶಿಲಾಯುಗ ಸಂಸ್ಕೃತಿಗಳು, ಕರ್ನಾಟಕದ ಶಿಲಾಕೆತ್ತನೆಗಳು ಮತ್ತು ರೇಖಾಚಿತ್ರಗಳು, ಭಾರತದ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗಳು ಮುಂತಾದ ವಿಷಯಗಳ ಮೇಲೆ ವಿಶೇಷ ಅಧ್ಯಯನ ನಡೆಸಿದರು. ಇದರ

ಫಲವಾಗಿ ಪ್ರಿ–ಹಿಸ್ಟಾರಿಕ್ ಮ್ಯಾನ್ ರೌಂಡ್ ಮದ್ರಾಸ್ (1938), ಸ್ಟೋನ್ ಏಜ್ ಇಂಡಿಯ (1947), ಮೆಗಾಲಿಥಿಕ್ ಟೈಪ್ಸ್ ಆಫ್ ಸೌತ್ ಇಂಡಿಯ (1949), ಲಿಥಿಕ್ ಟೂಲ್ ಇಂಡಸ್ಟ್ರೀಸ್ ಆಫ್ ಸಿಂಗ್ರೌಲಿ (1951), ಪ್ರೋಗ್ರೆಸ್ ಇನ್ ಪ್ರಿ–ಹಿಸ್ಟರಿ (1952), ನಿಯೊಲಿಥಿಕ್ ಪ್ಯಾಟರ್ನ್ ಆಫ್ ಇಂಡಿಯ (1962) ಎಂಬ ಲೇಖನಗಳು ಪ್ರಕಟವಾಗಿವೆ. ಭೂವಿಜ್ಞಾನ ರೀತಿಯಾಗಿ ಒಂದು ಪ್ರದೇಶದ ನದಿಮಟ್ಟಗಳ ಕಾಲ ನಿರ್ಣಯ, ನದಿಮಟ್ಟಗಳಲ್ಲಿ ಕಾಣಬರುವ ಶಿಲಾಯುಗ ಸಂಸ್ಕೃತಿಗಳ ವಿಶ್ಲೇಷಣಾತ್ಮಕ ಪರಿಶೀಲನೆ– ಇಂಥ ಕಾರ್ಯಗಳನ್ನು ಭಾರತದ ಪ್ರಾಗಿತಿಹಾಸ ಸಂಶೋಧನೆಯ ಅಂಗವಾಗಿ ಇವರು ಮೊಟ್ಟಮೊದಲು ಕೈಗೊಂಡರು. ಭಾರತದ ಬೃಹತ್ ಶಿಲಾಸಮಾಧಿ ಸಂಸ್ಕೃತಿಗಳ ಅಧ್ಯಯನ ಕ್ಷೇತ್ರದಲ್ಲಿ ನಿಖರ ಪರಿಭಾಷೆಯಾಗಲೀ ಖಚಿತ ಅಭಿಪ್ರಾಯಗಳಾಗಲೀ ಇಲ್ಲದಿದ್ದ ಸ್ಥಿತಿಯಲ್ಲಿ ತಮಿಳುನಾಡು ಮತ್ತು ಕೇರಳದ ಕೆಲವು ಪ್ರದೇಶಗಳಲ್ಲಿ ಈ ಸಂಸ್ಕೃತಿಗಳ ಅವಶೇಷಗಳನ್ನು ವ್ಯಾಪಕವಾಗಿ ಅಭ್ಯಸಿಸಿ ಇವರು ಮೊದಲ ಬಾರಿಗೆ ಒಂದು ವೈಜ್ಞಾನಿಕ ವರ್ಗೀಕರಣವನ್ನು ಒದಗಿಸಿದರು. ಇವರ ಲೇಖನಗಳು ಸಂಖ್ಯೆಯಲ್ಲಿ ಅಲ್ಪವಾದರೂ ಒಂದೊಂದು ಭಾರತೀಯ ಪ್ರಾಗಿತಿಹಾಸದ ಅಧ್ಯಯನದಲ್ಲಿ ಮೈಲಿಗಲ್ಲುಗಳೆಂದು ಪರಿಗಣಿತವಾಗಿವೆ. ಇವರು ತಮ್ಮ ಅಧಿಕಾರಾವಧಿಯಲ್ಲಿ ಭಾರತದ ಅನೇಕ ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವುದರಲ್ಲಿ ಆಸಕ್ತಿಯನ್ನೂ ಸಕ್ರಿಯಪಾತ್ರವನ್ನೂ ವಹಿಸಿದ್ದರು. ನಿವೃತ್ತಿಯ ಅನಂತರ ಕಲ್ಕತ್ತದ ಭಾರತೀಯ ವಸ್ತುಸಂಗ್ರಹಾಲಯ ಮತ್ತು ಹೈದರಾಬಾದಿನ ಸಾಲಾರ್ಜಂಗ್ ವಸ್ತು ಸಂಗ್ರಹಾಲಯಗಳ ನಿರ್ದೇಶಕರಾಗಿದ್ದು, ಅವನ್ನು ಆಕರ್ಷಕವಾಗಿ ಪುನರ್ವ್ಯವಸ್ಥೆಗೊಳಿಸಲು ಕಾರಣರಾದರು. ತರುಣಪೀಳಿಗೆಯ ಅನೇಕ ವಿದ್ವಾಂಸರಿಗೆ ಭಾರತೀಯ ಪುರಾತತ್ತ್ವದಲ್ಲಿ ಯೋಗ್ಯ ತರಬೇತು ನೀಡಿ, ಆ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದು ಇವರ ಇನ್ನೊಂದು ದೊಡ್ಡ ಕೆಲಸ. ಇವರು 1970ರಂದು ನಿಧನರಾದರು. (ಎಸ್.ಎನ್.)

**ಕೆಂಪೇಗೌಡ I:** ಯಲಹಂಕ ಪಾಳೆಯಗಾರರ ವಂಶದ ಪ್ರಭು (ಸು.1513–69). ಬೆಂಗಳೂರನ್ನು ಸ್ಥಾಪಿಸಿ ಅಲ್ಲೇ ನೆಲಸಿದ್ದರಿಂದ ಬೆಂಗಳೂರು ಕೆಂಪೇಗೌಡ ಎಂದು ಪ್ರಸಿದ್ಧನಾಗಿದ್ದಾನೆ. ಆವತಿ ವಂಶಕ್ಕೆ ಸೇರಿದ್ದ ಈತ ವಿಜಯನಗರದ ಕೃಷ್ಣದೇವರಾಯ ಮತ್ತು ಅಚ್ಯುತರಾಯರ ಸಾಮಂತನಾಗಿ ಯಲಹಂಕನಾಡನ್ನು ಆಳುತ್ತಿದ್ದ. ಒಮ್ಮೆ ತನ್ನ ಪ್ರವಾಸಕಾಲದಲ್ಲಿ ಶಿವಸಮುದ್ರಂ (ಈಗಿನ ಬೆಂಗಳೂರು ಪ್ರದೇಶ) ಕೋಟೆಯ ರಚನೆಗೆ ಅನುಕೂಲವಾಗಿರುವುದನ್ನು ಕಂಡು ಅಚ್ಯುತರಾಯನ ಅನುಮತಿಯಿಂದ ಅಲ್ಲೊಂದು ದುರ್ಗ ನಿರ್ಮಾಣಮಾಡಿ ಬೆಂಗಳೂರು ಎಂದು ಕರೆದು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಆದರೆ ಬೆಂಗಳೂರು ಇದಕ್ಕೂ ಮುಂಚಿನಿಂದಲೂ ಇತ್ತೆಂದೂ ಇವನು ಅಲ್ಲಿ ಕೋಟೆ ಕಟ್ಟಿರಬೇಕು ಎಂದೂ ಊಹಿಸಲು ಆಧಾರಗಳಿವೆ. ಇದೇ ಸಂದರ್ಭದಲ್ಲಿ ಅಚ್ಯುತರಾಯ 30,000 ವರಹ ಆದಾಯವಿದ್ದ ಹಳೆ ಬೆಂಗಳೂರು, ವರ್ತೂರು, ಬೇಗೂರು, ಹಲಸೂರು, ಕೆಂಗೇರಿ, ತಲಗಟ್ಟಪುರ, ಜಿಗಣಿ, ಕುಂಬಳಗೋಡು, ಕಾನಳ್ಳಿ, ಬಾಣಾವರ, ಹೆಸರಘಟ್ಟ ಮುಂತಾದ 12 ಹೋಬಳಿಗಳನ್ನು (ಬೆಂಗಳೂರಿನ ಸುತ್ತಲಿನ ಪ್ರದೇಶ) ಕೆಂಪೇಗೌಡನಿಗೆ ಕೊಟ್ಟ. ಈತ ಇಲ್ಲಿನ ಆದಾಯವನ್ನು ಉಪಯೋಗಿಸಿಕೊಂಡು ಬೆಂಗಳೂರನ್ನು ವಿಸ್ತರಿಸಿ, ಪೇಟೆಗಳನ್ನು ಸ್ಥಾಪಿಸಿ, ವ್ಯಾಪಾರಿಗಳನ್ನೂ ಕುಶಲಕರ್ಮಿಗಳನ್ನೂ ನೆಲೆಗೊಳಿಸಿದ. ಬೆಂಗಳೂರು ಕೋಟೆಯನ್ನು ಕಟ್ಟುವ ಸಂದರ್ಭದಲ್ಲಿ ಇವನ ಸೊಸೆ ಲಕ್ಷ್ಮಮ್ಮ ತಾನೇ ಬಲಿಯಾದಳೆಂಬ ಪ್ರತೀತಿ ಇದೆ. ಇವನು ಅವಳ ಜ್ಞಾಪಕಾರ್ಥವಾಗಿ ಕೋರಮಂಗಲದಲ್ಲಿ ಒಂದು ದೇವಾಲಯವನ್ನು ಸ್ಥಾಪಿಸಿ ಅವಳ ಮೂರ್ತಿಯನ್ನು ಪ್ರತಿಷ್ಠಾಪಿಸಿದ. ಈ ನಗರದ ಬೆಳೆವಣಿಗೆಯ ಭವಿಷ್ಯ ಸೂಚಕವೆಂಬಂತೆ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ, ಪೂರ್ವದಲ್ಲಿ ಅಲಸೂರು ಕೆರೆ ಏರಿ ಮೇಲಿನ ಬಂಡೆಯ ಮೇಲೆ, ಪಶ್ಚಿಮದಲ್ಲಿ ಕೆಂಪಾಂಬುಧಿ ಕೆರೆ ಏರಿ ಬಂಡೆಯ ಮೇಲೆ, ಉತ್ತರದಲ್ಲಿ ಹೆಬ್ಬಾಳದ ರಸ್ತೆಯಲ್ಲಿ ಮತ್ತು ದಕ್ಷಿಣದಲ್ಲಿ ಲಾಲ್‌ಬಾಗಿನ ಎತ್ತರವಾದ ಬಂಡೆಯ ಮೇಲೆ ಒಂದೊಂದು ಕಾವಲು ಗೋಪುರಗಳನ್ನು ನಿರ್ಮಿಸಿದ.

ಕಂಚುಶಿಲ್ಪದ ಮಾದರಿ

1550ರಲ್ಲಿ ಇವನು ಶಿವಗಂಗೆ ಬೆಟ್ಟವನ್ನು ಆಕ್ರಮಿಸಿಕೊಂಡ. ಇವನ ಏಳಿಗೆ ಕೀರ್ತಿಗಳಿಂದ ಹಲವು ಸಾಮಂತರಿಗೆ ಅಸೂಯೆ ಉಂಟಾಯಿತು. ಇವರಲ್ಲಿ ಜಗದೇವರಾಯ ಎಂಬುವನು ಇವನನ್ನು ತುಳಿಯಲು ಪಿತೂರಿ ಮಾಡಿದ. ವಿಜಯನಗರದ ಅರಸರಿಗೂ ಇವನಿಗೂ ಇದ್ದ ಸ್ನೇಹವನ್ನು ಮುರಿಯಲೂ ಪ್ರಯತ್ನಿಸಿದ. ಇವನು ಜಗದೇವರಾಯನ ಪ್ರಲೋಭನಕ್ಕೆ ಒಳಗಾಗದೆ ವಿಜಯನಗರದ ಅರಸುಗಳ ಬಗ್ಗೆ ತನಗಿದ್ದ ರಾಜಭಕ್ತಿ ಅಚಲವಾದುದೆಂದು ತೋರಿಸಿದ. ಇದರಿಂದ ಕುಪಿತನಾದ ಜಗದೇವರಾಯ ವಿಜಯನಗರದ ರಾಮರಾಯ ರಾಜಧಾನಿಯಲ್ಲಿಲ್ಲದ ಕಾಲದಲ್ಲಿ ಅಲ್ಲಿಗೆ ಬಂದ ಇವನನ್ನೂ ಇವನ ಸಂಗಡಿಗರನ್ನೂ ಸೆರೆಮನೆ ಸೇರುವಂತೆ ಮಾಡಿದ. ಜಗದೇವರಾಯನ ಮಾತನ್ನು ನಂಬಿದ ಸದಾಶಿವರಾಯ, ಯಲಹಂಕನಾಡನ್ನು ಜಗದೇವರಾಯನಿಗೆ ಕೊಟ್ಟ. 5 ವರ್ಷಗಳ ಕಾಲ ಇವನು ಸೆರೆಮನೆ ವಾಸವನ್ನು ಅನುಭವಿಸ ಬೇಕಾಯಿತು. ರಾಜಧಾನಿಗೆ ಹಿಂದಿರುಗಿದ ಅನಂತರ, ನಿಜಸ್ಥಿತಿಯನ್ನರಿತ ರಾಮರಾಯ ಇವನನ್ನು ಬಿಡುಗಡೆ ಮಾಡಿ ಬೆಂಗಳೂರನ್ನು ಮತ್ತೆ ಅವನಿಗೆ ಕೊಟ್ಟು ಗೌರವಿಸಿ ಕಳುಹಿಸಿದ. ಇವನು ಪ್ರಜಾಪೋಷಕನಾಗಿ, ಧರ್ಮಪ್ರಭುವಾಗಿ ರಾಜ್ಯವಾಳಿ, ಪ್ರಜಾವತ್ಸಲ, ಅರಿಗಳಿಗೆ ಗಂಡಭೇರುಂಡ ಎಂಬ ಬಿರುದುಗಳನ್ನು ಪಡೆದ. ಈತ 1569ರಲ್ಲಿ ಕಾಲವಾದ.

ಕೆಂಪೇಗೌಡ ಧರ್ಮಿಷ್ಠ ಕುಲದೈವ ಭೈರವನಾದ್ದರಿಂದ ಇವನ ಒಲುಮೆ ಶೈವಧರ್ಮದೆಡೆಗಿದ್ದಂತೆ ತೋರುತ್ತದೆ. ಈತ ಅನೇಕ ಜನಹಿತಕಾರ್ಯಗಳನ್ನು ಮಾಡಿದ. ತನ್ನ ಕುಲದಲ್ಲಿ ವಿವಾಹವಯಸ್ಕರಾದ ಕನ್ನೆಯರ ಬೆರಳುಗಳನ್ನು ಕತ್ತರಿಸುವ ಕ್ರೂರ ಸಂಪ್ರದಾಯವನ್ನು ನಿಲ್ಲಿಸಿದ. ಕೆಂಪಾಂಬುಧಿ ಕೆರೆಯನ್ನೂ ಅದರ ಸಮೀಪದಲ್ಲಿ ಹಲವು ಅಗ್ರಹಾರ–ದೇವಾಲಯಗಳನ್ನೂ ನಿರ್ಮಿಸಿದ. ಬೆಂಗಳೂರಿನ ಗವಿಪುರದಲ್ಲಿರುವ ಗವಿ ಗಂಗಾಧರೇಶ್ವರ ದೇವಾಲಯ, ಬಸವನ ಗುಡಿಯಲ್ಲಿರುವ ದೊಡ್ಡ ಬಸವಣ್ಣನ ಗುಡಿ 11 ಅಡಿಯ ಬಸವನ ವಿಗ್ರಹ, ಅದರ ಸಮೀಪದ ಗಣಪತಿ, ಆಂಜನೇಯ, ನಂದೀಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯ ಇವು ಈತನ ಕಾಲದ ರಚನೆಗಳು. ಇಷ್ಟೇ ಅಲ್ಲದೆ ಅಲಸೂರಿನ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡಿಸಿದ. ಬೆಂಗಳೂರಿನಲ್ಲಿ ಕೇಶವ ದೇವಾಲಯ ವೊಂದನ್ನು ಕಟ್ಟಿಸಿದ್ದನೆಂಬ ಪ್ರತೀತಿ ಇದೆ. ಇದು ಈಗ ಉಳಿದಿಲ್ಲ. ಮಾಗಡಿಯಲ್ಲೂ ದೇವಾಲಯಗಳ ಜೀರ್ಣೋದ್ಧಾರ ಮಾಡಿರುವನಲ್ಲದೆ ಅಲ್ಲಿ ಛತ್ರಗಳನ್ನು ಕಟ್ಟಿಸಿದ. ಈತ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಭೈರವ ನಾಣ್ಯಗಳನ್ನು ಟಂಕಿಸಿದ. (ಕೆ.ಪಿ.)

**ಕೆಳದಿ ಅರಸು ಮನೆತನ:** ಕೆಳದಿ ಸಂಸ್ಥಾನ 1499ರಲ್ಲಿ ಜನ್ಮ ತಾಳಿತು. ವಿಜಯನಗರದ ಪತನದ ಅನಂತರ ಕೆಳದಿಯ ಅರಸರು ಸ್ವತಂತ್ರರಾದರು. ಇವರು ಒಟ್ಟು 265 ವರ್ಷಗಳ ಕಾಲ ಆಳಿದರು. ಕೆಳದಿ ಆಡಳಿತದ ಕೊನೆಯ ಕಾಲದಲ್ಲಿದ್ದ ಲಿಂಗಣ್ಣ ಕವಿಯ ಕೆಳದಿ ನೃಪವಿಜಯ ಮತ್ತು ಕೆಳದಿ ರಾಜನಾದ ಬಸವಪ್ಪ ನಾಯಕನ ಶಿವತತ್ತ್ವ ರತ್ನಾಕರ ಕೆಳದಿ ಇತಿಹಾಸದ ಪುನರ್ರಚನೆಗೆ ಪ್ರಮುಖ ಆಕರಗಳಾಗಿವೆ. ಶಾಸನಗಳು ಗಮನಾರ್ಹ ಆಕರ. ಕೆಳದಿ ಸಂಸ್ಥಾನದ ಉಗಮದ ಬಗೆಗೆ ಕೆಲವು ಐತಿಹ್ಯಗಳಿವೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹಳ್ಳಿಬೈಲು ಎಂಬ ಗ್ರಾಮದ ಬಸವಪ್ಪ ಮತ್ತು ಬಸವಾಂಬೆಯರಿಗೆ ಚೌಡಪ್ಪ–ಭದ್ರಪ್ಪರೆಂಬ ಇಬ್ಬರು ಮಕ್ಕಳು. ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯನು ಇವರ ಸಾಮರ್ಥ್ಯವನ್ನು ಗಮನಿಸಿ ಮುಸಲ್ಮಾನರ ಮತ್ತು ಕೆಲವು ಸಣ್ಣ ಪುಟ್ಟ ಪಾಳೆಯಗಾರರಿಂದ ತಮಗಾಗುತ್ತಿದ್ದ ಕಿರುಕುಳವನ್ನು ತಪ್ಪಿಸಿಕೊಳ್ಳಲು ಈ ಸಹೋದರರನ್ನು ತನ್ನ ಬಳಿಗೆ ಕರೆಸಿಕೊಂಡಿದ್ದನ್ನು ಹಾಗೂ ವಿಜಯನಗರ ಸಾಮ್ರಾಜ್ಯಕ್ಕೆ ತೊಂದರೆ ಕೊಡುತ್ತಿದ್ದ ಪಾಳೆಯಗಾರರನ್ನು ಇವರು ಸೋಲಿಸಿ ಆ ಮೂಲಕ ವಿಜಯನಗರದರಸರ ಕೃಪೆಗೆ ಪಾತ್ರರಾದುದನ್ನು ಕೆಳದಿ ನೃಪವಿಜಯ ತಿಳಿಸುತ್ತದೆ. ಇದರಿಂದಾಗಿ ಕ್ರಮೇಣ ಮುಸಲ್ಮಾನರನ್ನು ಎದುರಿಸಲು ಇವರನ್ನು ಉತ್ತರದ ಗಡಿಯ ರಕ್ಷಣೆಗೆ ವಿಜಯನಗರದ ಅರಸರು ನೇಮಿಸಿದರು. ಜೊತೆಗೆ ಇವರಿಗೆ ಚಂದ್ರಗುತ್ತಿ, ಕೆಳದಿ, ಇಕ್ಕೇರಿ, ಪೆರ್ಬಯಲು, ಯಳಗಳಲೆ, ಮೇದೂರು, ಕಲಸೆ, ಲತವಾಡಿ ಎಂಬ ಎಂಟು ಮಾಗಣೆಗಳನ್ನು ನೀಡಿದರು. ಕೆಳದಿ ಅರಸರಿಗೆ ರಾಯಸವನ್ನು ಬರೆಸುವ, ನಾಣ್ಯವನ್ನು ಅಚ್ಚು ಹಾಕಿಸುವ, ಅಧಿಕಾರವೂ ದೊರೆಯಿತು. ಕೆಳದಿಯ ಅರಮನೆಯಲ್ಲಿ ಅರಸನಾಗಿ ಚೌಡಪ್ಪನಿಗೆ 1500 ಜನವರಿ 8 ರಂದು ಪಟ್ಟಾಭಿಷೇಕವಾಯಿತು. ಚೌಡಪ್ಪ ಚೌಡಪ್ಪ ನಾಯಕನಾಗಿ ಕೆಳದಿ ರಾಜ್ಯದ ಆಡಳಿತವನ್ನು ಪ್ರಾರಂಭಿಸಿದ. ಈತ ಉತ್ತಮ ಆಡಳಿತಗಾರ, ಶಿವಭಕ್ತ. ಆಡಳಿತಗಾರನಾಗಿ ಈತನೂ ಸೇರಿದಂತೆ ಒಟ್ಟು 18 ರಾಜರು 1499 ರಿಂದ 1763 ರವರೆಗೆ 265 ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಇವರಲ್ಲಿ ಇಬ್ಬರು ರಾಣಿಯರು ಪ್ರಮುಖರಾಗಿದ್ದಾರೆ. ಕೆಳದಿ ಆಡಳಿತ ನಡೆಸಿದ ಮೊದಲ ದೊರೆಗಳ ಕಾಲಾವಧಿಯ ಬಗೆಗೆ ನಿರ್ದಿಷ್ಟ ಪುರಾವೆಗಳು ದೊರೆಯುವುದಿಲ್ಲವಾದ್ದರಿಂದ ಇತಿಹಾಸಕಾರರು ಈ ದೊರೆಗಳ ಕುರಿತು ಬೇರೆ ಬೇರೆ ಕಾಲಾವಧಿಯನ್ನು ಸೂಚಿಸುತ್ತಾರೆ.

ಚೌಡಪ್ಪನಾಯಕನ ತರುವಾಯ ಅವನ ಮಗ ಸದಾಶಿವನಾಯಕ ದೊರೆಯಾದ. ಇವನು ಕೆಳದಿಯಿಂದ ಇಕ್ಕೇರಿಗೆ ರಾಜಧಾನಿ ಬದಲಾಯಿಸಿದ. ಈತನೇ ಕೆಳದಿ ಸಂಸ್ಥಾನಕ್ಕೆ ಭದ್ರಬುನಾದಿಯನ್ನು ಹಾಕಿದವನು. ಇವನ ಅನಂತರ ಬಂದ ದೊಡ್ಡಸಂಕಣ್ಣನಾಯಕ, ಚಿಕ್ಕಸಂಕಣ್ಣನಾಯಕ, ರಾಮರಾಜನಾಯಕರು ಆಡಳಿತ ನಡೆಸಿದರು. ದೊಡ್ಡಸಂಕಣ್ಣನಾಯಕ ಜಂಗಮನಂತೆ ಜೀವನ ನಡೆಸಿ ತೀರ್ಥಯಾತ್ರೆ ಹೋದುದನ್ನು ಕೆಳದಿ ನೃಪವಿಜಯ ಮತ್ತು ಶಿವತತ್ತ್ವ ರತ್ನಾಕರ ಎಂಬ ಗ್ರಂಥಗಳು ಉಲ್ಲೇಖಿಸುತ್ತವೆ.

ದೊಡ್ಡಸಂಕಣ್ಣ ನಾಯಕನು ಕೆಳದಿಯಿಂದ ದಕ್ಷಿಣದ ಶಿವಗಂಗೆ, ಕಂಚಿ, ಚಿದಂಬರಂ, ಕುಂಭಕೋಣ, ರಾಮೇಶ್ವರಗಳನ್ನು ಸಂದರ್ಶಿಸಿ ಅಲ್ಲಿಂದ ಉತ್ತರದ ಕಡೆಗೆ ಪ್ರಯಾಣ ಬೆಳೆಸಿ ಇಂದಿನ ಹೈದರಾಬಾದ್ ಅಂದಿನ ಭಾಗ್ಯನಗರವನ್ನು ಹಾದು ದೆಹಲಿಗೆ ಸೇರಿದ.

ದೆಹಲಿಗೆ ಹೋದ ಸಂದರ್ಭದಲ್ಲಿ ಅಲ್ಲಿ ಉದಾರ ಮನೋಭಾವವನ್ನು ಹೊಂದಿದ್ದ ಅಕ್ಬರನು ಆಡಳಿತ ನಡೆಸುತ್ತಿದ್ದ. ಅಕ್ಬರನ ಆಸ್ಥಾನದಲ್ಲಿದ್ದ ಅಂಕುಶಖಾನನೆಂಬುವವನನ್ನು ಈತ ತನ್ನ ಖಡ್ಗ ಯುದ್ಧ ಕೌಶಲದಿಂದ ಸೋಲಿಸುವುದರ ಮೂಲಕ ಅಕ್ಬರನ ಮೆಚ್ಚಿಗೆಯನ್ನೂ ಪಡೆದು, ಎಲ್ಲ ಧರ್ಮವನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದ ಅಕ್ಬರನಿಂದ ಅಂದು ಮುಸ್ಲಿಮರ ವಶದಲ್ಲಿದ್ದ ಕಾಶಿ ವಿಶ್ವನಾಥ ದೇವರ ಪೂಜೆಗೆ ಮತ್ತು ಉತ್ತರದಲ್ಲಿ ಜಂಗಮ ಮಠಗಳು ಸ್ಥಾಪನೆಗೆ ಅನುಮತಿಯನ್ನು ಪಡೆದುಕೊಂಡ.

ದೊಡ್ಡ ಸಂಕಣ್ಣನಾಯಕ ಅಧಿಕಾರಿಗಳ ಅನುಮತಿ ಪಡೆದು ಕಾಶಿಯಲ್ಲಿ ವಿಶ್ವನಾಥ ದೇವರಿಗೆ ಪೂಜೆ ಸಲ್ಲಿಸಿದ. ಅಲ್ಲಿದ್ದ ಮೂಲ ಶಿವಲಿಂಗದ ಮೇಲು ಭಾಗದ ಗೋಳಕವನ್ನು ಅಂದು ಆ ದೇವಾಲಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮುಸಲ್ಮಾನ ಅಧಿಕಾರಿಗಳಿಗೆ ತಿಳಿಸಿ ಅದನ್ನು ಮತ್ತು ಭಗ್ನಗೊಂಡ ವಿಶ್ವನಾಥನ ಲಿಂಗವನ್ನು ಈತ ತನ್ನ ವಶಕ್ಕೆ ತೆಗೆದುಕೊಂಡ ನೆಂದು ಕೆಳದಿ ನೃಪ ವಿಜಯ ಉಲ್ಲೇಖಿಸುತ್ತದೆ. ತನ್ನ ಕಾಶಿ ಪ್ರವಾಸದ ಸಂದರ್ಭದಲ್ಲಿ ಒಂದು ಮಠವನ್ನು ಮುಸಲ್ಮಾನರಿಂದ ಬಿಡಿಸಿಕೊಂಡು ಅದಕ್ಕೆ ಜಂಗಮವಾಡಿ ಅಥವಾ ಜಂಗಮವಾಟಿ ಎಂದು ಹೆಸರಿಸಿದ. ಕಾಶಿಯಲ್ಲಿ ಕಪಿಲಧಾರಾ, ಮಾನಸ ಸರೋವರ, ಗಂಧರ್ವಸಾಗರ ಎಂಬ ಗಂಗೆಯ ತೀರ್ಥಗಳನ್ನು ನಿರ್ಮಿಸಿದ್ದಲ್ಲದೆ ಕರ್ದಮೇಶ್ವರ, ನರ್ಮದೇಶ್ವರ, ಭೀಮಚಂಡಿಕೆ, ವೃಷಭ ಧ್ವಜೇಶ್ವರ ದೇವಾಲಯಗಳನ್ನು ತನ್ನ ಮಗ ವೆಂಕಟಪ್ಪನಾಯಕನ ಹೆಸರಿನಲ್ಲಿ ಜೀರ್ಣೋದ್ಧಾರ ಮಾಡಿಸಿದ. ಇಂದೂ ಕಪಿಲಧಾರ ತೀರ್ಥದ ಮೆಟ್ಟಿಲ ಮೇಲೆ ಈ ಕುರಿತು ಪರ್ಶಿಯನ್ ಶಾಸನಗಳನ್ನು ನೋಡಬಹುದು. ಅಲ್ಲಿಂದ ಅನಂತರ ದೆಹಲಿಯ ಚಾವಲಿಕೆ ಮುಂಡ್ಯೆ ( ಅಕ್ಕಿ ಪೇಟೆ ಅಥವಾ ಮಂಡ್ಯೆ) ಎಂಬಲ್ಲಿ ಕೇದಾರ ಪ್ರಯೋಗ ಮತ್ತು ನೇಪಾಲದ ಭಕ್ತಪುರದಲ್ಲಿ ಜಂಗಮ ಮಠಗಳನ್ನು ನಿರ್ಮಿಸಿದ.

7ನೆಯ ವೀರಭದ್ರನಾಯಕನ (1629–40) ಕಾಲದಲ್ಲಿ ಬಿಜಾಪುರದ ಆದಿಲ್‌ಷಾಹಿ ಸುಲ್ತಾನನ ದಂಡನಾಯಕ ರಣದುಲ್ಲಾಖಾನನ ಧಾಳಿಗೆ ಈಡಾಗಿ 1638 ರಲ್ಲಿ ರಾಜಧಾನಿ ಇಕ್ಕೇರಿಯು ಹಾಳಾಯಿತು. ಇದರಿಂದಾಗಿ ರಾಜಧಾನಿಯು ಆ ವರುಷವೇ ಬಿದನೂರಿಗೆ (ವೇಣುಪುರ,ನಗರ) ವರ್ಗಾಯಿಸಲ್ಪಟ್ಟಿತು.

**ಕೆಳದಿ ಅರಸು ಮನೆತನದ ವಂಶಾವಳಿ:**

| | |
|---|---|
| 1. ಚೌಡಪ್ಪನಾಯಕ | 1498–1506 |
| 2. ಸದಾಶಿವನಾಯಕ | 1509–65 |
| 3. ದೊಡ್ಡಸಂಕಣ್ಣನಾಯಕ | 1567–70 |
| 4. ಚಿಕ್ಕಸಂಕಣ್ಣನಾಯಕ | 1572–86 |
| 5. ರಾಮರಾಜನಾಯಕ | 1571–86 |
| 6. ಹಿರಿಯವೆಂಕಟಪ್ಪನಾಯಕ | 1592–1629 |
| 7. ವೀರಭದ್ರನಾಯಕ | 1628–46 |
| 8. ಶಿವಪ್ಪನಾಯಕ | 1646–60 |
| 9. 2ನೆಯ ವೆಂಕಟಪ್ಪನಾಯಕ | 1661–61 |
| 10. ಭದ್ರಪ್ಪನಾಯಕ | 1661–63 |
| 11. ಹಿರಿಯ ಸೋಮಶೇಖರನಾಯಕ | 1663–72 |
| 12. ಕುತ್ಸಿತ ಶಿವಪ್ಪನಾಯಕ | 1672 |
| 13. ಚೆನ್ನಮ್ಮಾಜಿ | 1672–97 |
| 14. ಹಿರಿಯ ಬಸಪ್ಪ ನಾಯಕ | 1697–1714 |
| 15. 2ನೆಯ ಸೋಮಶೇಖರನಾಯಕ | 1714–39 |
| 16. 2ನೆಯ ಬಸಪ್ಪನಾಯಕ | 1739–54 |
| 17. ಚೆನ್ನಬಸಪ್ಪನಾಯಕ | 1754–57 |
| 18. 2ನೆಯ ಸೋಮಶೇಖರನಾಯಕ ಮತ್ತು ವೀರಮ್ಮಾಜಿ. | 1758–63 |

ಕೆಳದಿ ರಾಜವಂಶದಲ್ಲಿ ದಕ್ಷ ಮತ್ತು ಚಾಣಾಕ್ಷ ದೊರೆ ಎಂದು ಪ್ರಖ್ಯಾತನಾದವನು ಕೆಳದಿ ಶಿವಪ್ಪನಾಯಕ. ಶಿವಪ್ಪನಾಯಕನ ಶಿಸ್ತು ನಾಡಿನಾದ್ಯಂತ ಮನೆಮಾತಾಗಿ ಉಳಿದಿದೆ. ಕೆಳದಿ ರಾಜ್ಯದಲ್ಲಿ ಸಾಗುವಳಿ ಭೂಮಿಯನ್ನು ಗುಣಮಟ್ಟದ ಮೇಲೆ ಉತ್ತಮ, ಮಧ್ಯಮ, ಕನಿಷ್ಠ, ಅಧಮ ಹಾಗೂ ಅಧಮಾಧಮ ಎಂದು ಐದು ತರಹದ ಭೂಮಿ ವಿಂಗಡನೆಯನ್ನು ಈ ರಾಜನು ಮಾಡಿಸಿದ. ಇಂತಹ ಭೂಮಿಯನ್ನು ಹಳ್ಳಿಗಳಲ್ಲಿ ಗುರುತಿಸಿ ಪ್ರತಿ ತರಗತಿಯ ಭೂಮಿಯನ್ನು ಆರಿಸಿ ಸರ್ಕಾರದಿಂದ ಐದು ವರ್ಷ ಸಾಗುವಳಿ ಮಾಡಿಸಿದ್ದಲ್ಲದೆ ಈ ಐದು ವರ್ಷಗಳ ಸರಾಸರಿ ಉತ್ಪನ್ನದ ಆಧಾರದ ಮೇಲೆ ಆಯಾ ತರಗತಿಯ ಭೂಮಿಗೆ ಅನುಗುಣವಾಗಿ ಮೂರನೆಯ ಒಂದಂಶದ (1/3) ಕಂದಾಯವು ನಿಗದಿಗೊಳಿಸಲ್ಪಟ್ಟಿತು. 1700 ರವರೆಗೆ ಇದೇ ವ್ಯವಸ್ಥೆ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಜಾರಿಯಲ್ಲಿದ್ದಿತು. ಬ್ರಿಟಿಷ್ ಅಧಿಕಾರಿಗಳೂ ಕೆಳದಿ ಕಾಲದ ಕಂದಾಯ ವ್ಯವಸ್ಥೆಯನ್ನು ಬಹುವಾಗಿ ಕೊಂಡಾಡಿದ್ದಾರೆ. ಕಾಶಿಯಿಂದ ರಾಮೇಶ್ವರದವರೆಗೆ ಕೆಲವೆಡೆ ಶೈವ, ವೈಷ್ಣವ ದೇವಾಲಯಗಳಲ್ಲಿ ದಾನ, ಧರ್ಮ, ಪೂಜಾದಿಗಳನ್ನು ಸರಿಯಾಗಿ ನಡೆಯುವಂತೆ ಅನುಕೂಲ ಕಲ್ಪಿಸಿದ. ಶೃಂಗೇರಿ ಮತ್ತು ಇತರ ಮಠಗಳಲ್ಲಿ ಈ ಹಿಂದಿನಿಂದ ಬಂದಂತಹ ರಾಜಾಶ್ರಯವನ್ನು ಮುಂದುವರಿಸಿದ. ಕ್ರೈಸ್ತರಿಗೆ ಉಪದೇಶ ಮಾಡುವ, ಭಾರತೀಯರೇ ಚರ್ಚಿನ ಅಧಿಕಾರಿಗಳಾಗಿರಬೇಕೆಂಬ ಕಟ್ಟಪ್ಪಣೆ ಇವನ ಕಾಲದಲ್ಲಿತ್ತು. ಗುಡಿ ಕೈಗಾರಿಕೆಯಲ್ಲಿ ಪ್ರಾವೀಣ್ಯ ಪಡೆಯಲು ಜನಗಳಿಗೆ ಪ್ರೋತ್ಸಾಹ ನೀಡಿದ. ಕೆಳದಿ ರಾಜ್ಯವನ್ನು ವಾಣಿಜ್ಯ ಕೇಂದ್ರವನ್ನಾಗಿ ಮಾಡುವುದು ಇವನ ಗುರಿಯಾಗಿತ್ತು. ಕಾವೇರಿ ನದಿಗೆ ಸೇತುವೆ ನಿರ್ಮಾಣವೇ ಮುಂತಾದ ಹಲವಾರು ಸಾಮಾಜಿಕ ಕೆಲಸಗಳು ಇವನ ಕಾಲದಲ್ಲಿ ನಡೆದವು.

ಶಿವಪ್ಪನಾಯಕ (ವರ್ಣಚಿತ್ರ)

ಭಾರತೀಯ ಇತಿಹಾಸದಲ್ಲಿ ಕೆಚ್ಚೆದೆಗೆ, ಶೌರ್ಯಕ್ಕೆ ಹೆಸರಾಗಿರುವ ಕೆಲವೇ ರಾಣಿಯರಲ್ಲಿ ಕೆಳದಿಯ ರಾಣಿ ಚೆನ್ನಮ್ಮಾಜಿಯೂ ಒಬ್ಬಳು. ಕೋಟಿ ಪುರದ ಸಿದ್ದಪ್ಪ ಶೆಟ್ಟರ ಮಗಳಾದ ಇವಳು ಸೋಮಶೇಖರನಾಯಕನ ಹೆಂಡತಿ; ಶಿವಪ್ಪನಾಯಕನ ಸೊಸೆ. ತನ್ನ ಪತಿಯಿಂದ ರಾಜ್ಯಾಡಳಿತದ ಅನುಭವ ವನ್ನು ಪಡೆದಿದ್ದಳು. ರಾಜ್ಯದ ಆಸೆಗಾಗಿ ಶತ್ರುಗಳಿಂದ ಸೋಮಶೇಖರ ನಾಯಕನ ಕೊಲೆಯಾದ ಅನಂತರ ರಾಜ್ಯವು ದುಃಸ್ಥಿತಿಗೆ ಒಳಗಾಗುವ ಸಂದರ್ಭ ಒದಗಿ ಬಂದಾಗ ಆಕಸ್ಮಿಕ ಪರಿಸ್ಥಿತಿಗೆ ಒಳಗಾಗಿ ತನ್ನ ಪತಿಯ ನಿಧನದ ದುಃಖದ ಸಂದರ್ಭದಲ್ಲಿಯೂ ಧೈರ್ಯಗೆಡದೆ ಕೆಳದಿ ರಾಜ್ಯದ ಅಧಿಕಾರವನ್ನು ವಹಿಸಿಕೊಂಡು ಅಪ್ರತಿಮ ಧೈರ್ಯವನ್ನು ತೋರಿಸಿದ ವೀರ ಮಹಿಳೆ. ತನ್ನ ಬುದ್ಧಿವಂತಿಕೆಯಿಂದ ತನ್ನ ಸಂಬಂಧಿಕರ, ಹಿರಿಯ ಅಧಿಕಾರಿ ವರ್ಗದವರ ವಿಶ್ವಾಸವನ್ನು ಗಳಿಸಿದಳು. ಚೆನ್ನಮ್ಮಾಜಿಯ ಪಟ್ಟಾಭಿಷೇಕ ಕವಲೇದುರ್ಗದ (ಭುವನಗಿರಿದುರ್ಗ) ಅರಮನೆ ಯಲ್ಲಿ ಜರುಗಿತು. ತನ್ನ ಮೇಲೆ ದಂಡೆತ್ತಿ ಬಂದಿದ್ದ ಸೋಂದಾ, ಬನವಾಸಿ, ಶಿರಸಿ ಮೊದಲಾದ ಅರಸರನ್ನು, ಮೈಸೂರಿನ ದಳವಾಯಿ ಕುಮಾರಯ್ಯನನ್ನು ಸೋಲಿಸಿ ಕಡೂರು, ಬಾಣಾವರ, ಹಾಸನ, ಬೇಲೂರು ಮೊದಲಾದುವುಗಳನ್ನು ವಶಪಡಿಸಿ ಕೊಂಡು ಕೆಳದಿ ರಾಜ್ಯದ ದಕ್ಷಿಣ ಗಡಿಯನ್ನು ಭದ್ರಪಡಿಸಿದಳು. ಬಸವಾಪಟ್ಟಣವನ್ನು ಗೆದ್ದುಕೊಂಡಳಲ್ಲದೆ ಹುಲಿಗೆರೆ ಕೋಟೆ ಯನ್ನು ತನ್ನದಾಗಿಸಿಕೊಂಡು ಅದಕ್ಕೆ ಚನ್ನಗಿರಿ ಕೋಟೆ ಎಂದು ಹೆಸರಿಸಿದಳು. ರಾಣಿ ಚೆನ್ನಮ್ಮಾಜಿಯ ಪ್ರಮುಖ ಸಾಧನೆಗಳಲ್ಲಿ ಮರಾಠ ದೊರೆ ಶಿವಾಜಿಯ ಮಗ ರಾಜಾರಾಮನನ್ನು ಮೊಗಲ್ ಚಕ್ರವರ್ತಿ ಔರಂಗಜೇಬನ ಉಪಟಳದಿಂದ ರಕ್ಷಿಸಿದುದು. ಚೆನ್ನಮ್ಮಾಜಿಗೆ ಮಕ್ಕಳಿಲ್ಲದ್ದ ರಿಂದ ಬಸಪ್ಪನೆಂಬ ಹುಡುಗನನ್ನು ದತ್ತು ತೆಗೆದುಕೊಂಡು ಅವನಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸಿದಳು. ಈತ ಶಿವತತ್ತ್ವ ರತ್ನಾಕರವೆಂಬ ಸಂಸ್ಕೃತ ವಿಶ್ವಕೋಶ ರಚನೆ ಮಾಡಿದ.

ಮಹಿಳೆಯೊಬ್ಬಳು 25 ವರ್ಷಕ್ಕೂ ಹೆಚ್ಚುಕಾಲ ಆಡಳಿತ ನಡೆಸಿದವರಲ್ಲಿ ಕೆಳದಿ ರಾಣಿ ಚೆನ್ನಮ್ಮಾಜಿ ಪ್ರಮುಖಳು. ಚೆನ್ನಮ್ಮಾಜಿ ತನ್ನ ಮಗನಿಗೆ ಮಾರ್ಗದರ್ಶನ ಮಾಡುವಂಥ ಆಡಿದ ನುಡಿಮುತ್ತುಗಳು ಹೀಗಿವೆ: ನುಡಿದದ್ದನ್ನು ಬದಲಿಸದಿರು, ಎಂದಿಗೂ ಕರ್ತವ್ಯಚ್ಯುತನಾಗದಿರು, ಸರ್ವದಾ ಮಧುರವಾಗಿ ಮಾತನಾಡುವಂತೆ ಎಚ್ಚರವಹಿಸು. ದುಷ್ಟರಿಗೆ ನಿನ್ನಹೃದ್ಗತವನ್ನು ತೋರದಿರು, ದುರ್ಮಾರ್ಗ ಹಿಡಿಯದಿರು, ಸ್ವಜನರಲ್ಲಿ ಭೇದವೆಣಿಸದಿರು. ಪಾಪಕಾರ್ಯ ಮಾಡದಿರು, ಸತ್ಕಾರ್ಯಗಳನ್ನು ಮಾಡು, ಸದಾ ಶಂಭುವಿನ ಪಾದಗಳನ್ನು ಧ್ಯಾನಿಸು, ಸಕಲ ಜೀವಿಗಳಲ್ಲಿ ದಯೆ ತೋರು, ಆಶ್ರಯ ಬಂದವರಿಗೆ ರಕ್ಷಣೆ ನೀಡು. ಪರರನ್ನು ನಿಂದಿಸದಿರು, ಪ್ರಪಂಚದಲ್ಲಿ ಆಶ್ರಯ ಬಯಸಿ ಬಂದವರಿಗೆ ರಕ್ಷಣೆ ನೀಡು, ಪ್ರಪಂಚದಲ್ಲಿ ಆತ್ಮ ಸಂಯಮವಿಲ್ಲದೆ ನಡೆಯದಿರು, ಕಾಮಾದಿ ದೋಷಗಳನ್ನು ಜಯಿಸು, ಹುಟ್ಟು ಸಾವುಗಳಿಂದ ಮುಕ್ತಿ ಪಡೆ, ವಿಪತ್ಕಾಲದಲ್ಲಿ ಸಹ ಧೃತಿಗೆಡದಿರು, ಸಿರಿತನ ಬಂದಾಗ ಸೊಕ್ಕದಿರು, ತತ್ತ್ವವನ್ನು ಕುರಿತು ಚಿಂತಿಸು, ಅದ್ವೈತ ತತ್ತ್ವದ ತಿರುಳನ್ನು ತಿಳಿದುಕೋ. ಸುಸಂಧಿಯನ್ನು ಕಳೆದುಕೊಳ್ಳದಿರು, ವೇದಜ್ಞರನ್ನು ಸನ್ಮಾನಿಸು, ಜೀವನವೊಂದು ಕನಸೆಂದು ತಿಳಿ, ನಾನು ಯಾರು ಎಂಬ ಪ್ರಶ್ನೆಯನ್ನು ವಿವೇಚಿಸು. ನೀನು ನಗೆಗೀಡಾಗದಂತೆ ನಗು. ಉತ್ತಮವಾಗಿ ಮಾತನಾಡು, ಜಗಸ್ತುತಿ ಮಾಡುವ ಹಾಗೆ ನಡೆ, ಪುನರ್ಜನ್ಮ ತಾರದ ಮಾರ್ಗವನ್ನು ಅನುಸರಿಸು, ಶಿವನನ್ನು ವಿವಿಧ ರೀತಿಯಲ್ಲಿ ಪೂಜಿಸು ಹಾಗೂ ಅನಂತ ಆನಂದವನ್ನು ಅನುಭವಿಸು.

ಕೆಳದಿ ಸಂಸ್ಥಾನದ ದುಃಖಾಂತ್ಯ: ಕೆಳದಿ ಸಂಸ್ಥಾನದ ಕೊನೆಯ ದೊರೆಯಾಗಿ ಹೆಸರಿಗೆ ಮಾತ್ರ ಚೆನ್ನಬಸಪ್ಪನಾಯಕನು ಆಳಿದ. ಇವನ ದತ್ತು ತಾಯಿ ವೀರಮ್ಮಾಜಿಯೇ ವಾಸ್ತವಿಕವಾಗಿ ರಾಜ್ಯಭಾರ ಮಾಡುತ್ತಿದ್ದಳು. ಚೆನ್ನಬಸಪ್ಪನಾಯಕನ ಮರಣಾನಂತರ ಈಕೆಯೇ ರಾಜ್ಯವಾಳಿದಳು. 1763ರಲ್ಲಿ ಮೈಸೂರಿನ ಹೈದರ್ ಅಲಿಯು ಕೆಳದಿ ರಾಜಧಾನಿ ಬಿದನೂರನ್ನು ಮುತ್ತಿದನು. ವೀರಮ್ಮಾಜಿ ಧೈರ್ಯದಿಂದ ಕಾದಾಡಿದರೂ ಶತ್ರುವಿಗೆ ಗೆಲುವಾಯಿತು. ಹೈದರ್ ಅಲಿ ಇಲ್ಲಿನ ಸಿರಿಸಂಪತ್ತನ್ನು ಸೂರೆ ಮಾಡಿದ. ಬಿದನೂರಿಗೆ ಹೈದರನಗರ ಎಂದು ಹೊಸ ಹೆಸರಿಟ್ಟ. ವೀರಮ್ಮಾಜಿ ಮತ್ತು 3ನೆಯ ಸೋಮಶೇಖರನಾಯಕನ ಬಂಧನವಾಯಿತು. ಬಿಡುಗಡೆ ಹೊಂದಿ ಬರುತ್ತಿದ್ದಾಗ ಪುಣೆಗೆ ಹೋಗುವ ಮಾರ್ಗಮಧ್ಯಮದಲ್ಲಿ ವೀರಮ್ಮಾಜಿ ನಿಧನಳಾದಳು. ಉಜಿನಿ ಮಠದ ಆವರಣದಲ್ಲಿ ಅವಳ ಸಮಾಧಿಯಾಯಿತು. 3ನೆಯ ಸೋಮಶೇಖರನಾಯಕ ಧಾರವಾಡದ ನರಗುಂದದ ದೇಸಾಯಿಯವರಲ್ಲಿ ಆಶ್ರಯ ಪಡೆದ. ಮುಂದೆ ಹೈದರ್ ನಗರವು ಬ್ರಿಟಿಷರ ವಶವಾಯಿತು, ಟಿಪ್ಪು ಬ್ರಿಟಿಷರಿಂದ ಹಿಂದಕ್ಕೆ ಪಡೆದನು. ಟಿಪ್ಪುವಿನ ಅನಂತರ ಇದು ಮೈಸೂರು ರಾಜ್ಯಕ್ಕೆ ಸೇರಿತು.

ವಿಜಯನಗರಕ್ಕೆ ನಿಷ್ಠೆಯಿಂದ ನಡೆದುಕೊಂಡವರು ಈ ಕೆಳದಿ ಅರಸರು. ಯುದ್ಧದಲ್ಲಿ ಸೋತ ಅನಂತರ ವಿಜಯನಗರ ಸಂಸ್ಥಾನದಿಂದ ಬಂದ ಅಧಿಕಾರಿಗಳಿಗೆ ಇಲ್ಲಿ ಆಶ್ರಯ ದೊರೆಯಿತು. ಅಂದಿನ ಜನಜೀವನ, ಸಂಸ್ಕೃತಿಯ ಕುರಿತು ಇಟಲಿಯ ಪಿಯತ್ರೊಡೆಲ್ಲಾವೆಲ್ಲ, ಇಂಗ್ಲೆಂಡಿನ ಪೀಟರ್ ಮಂಡಿ ಮೊದಲಾದ ಪ್ರವಾಸಿಗರು ತಮ್ಮ ಪ್ರವಾಸಿ ಕಥನದಲ್ಲಿ ಕೆಳದಿ ಇತಿಹಾಸವನ್ನು ಚಿತ್ರಿಸಿದ್ದಾರೆ.

**ಆಡಳಿತ:** ಕೆಳದಿ ಸಂಸ್ಥಾನ ಆರಂಭದಲ್ಲಿ ಸಾಕಷ್ಟು ತೊಂದರೆಯನ್ನು ಅನುಭವಿಸಿತು. ಸಂಸ್ಥಾನದ ಸುತ್ತಮುತ್ತಲ ಪಾಳೆಯಗಾರರ ದಬ್ಬಾಳಿಕೆ, ಮೈಸೂರು, ಮರಾಠ ದೊರೆಗಳು ಹಠಾತ್ತನೆ ದಂಡೆತ್ತಿ ಬಂದಾಗ ಅವರನ್ನು ಎದುರಿಸಿದುದು ಈ ಮೊದಲಾದ ಕಾರಣದಿಂದಾಗಿ ತಮ್ಮ ಹೆಚ್ಚು ಕಾಲವನ್ನು ಯುದ್ಧಗಳಿಗಾಗಿಯೇ ವಿನಿಯೋಗಿಸಬೇಕಾಯಿತು. ಅವುಗಳನ್ನು ಮುತ್ಸದ್ದಿತನದಿಂದ ಎದುರಿಸಬೇಕಿತ್ತು. ಈ ಮಧ್ಯೆ ಜನರ ರಕ್ಷಣೆ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ತಮ್ಮ ರಾಜ್ಯಾಭಿವೃದ್ಧಿಯ ಸೀಮಿತ ಅವಧಿಯಲ್ಲಿ ಈ ಅರಸರು ಸಾಕಷ್ಟು ಶಕ್ತಿಮೀರಿ ಪ್ರಯತ್ನಪೂರ್ವಕವಾಗಿ ಸೇವೆ ಸಲ್ಲಿಸುತ್ತಿದ್ದರು. ವಿಜಯನಗರ ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ಸೋಲು ಅನುಭವಿಸಿದ ಸಂದರ್ಭದಲ್ಲಿ ತನ್ನನ್ನು ಬೆಳೆಸಿದ ವಿಜಯನಗರವನ್ನು ಮರೆಯದೇ ಶ್ರೀರಂಗರಾಯನಿಗೆ ಶಿವಪ್ಪನಾಯಕನು ಸಕ್ಕರೆಪಟ್ಟಣದ ಆಧಿಪತ್ಯವನ್ನು ಕೊಟ್ಟು ಗೌರವಿಸಿದುದು ಅವರ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ.



**17ನೆಯ ಶತಮಾನದ ಕೊಳ 'ದೇವಗಂಗೆ', ಹಳೆ ನಗರ**

ಸರ್ಕಾರದ ಸಹಾಯಕ್ಕೆ ಮಂತ್ರಿ ಮಂಡಲ ಇತ್ತು. ಇವರಿಂದ ರಾಜ ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಲಹೆ, ಸಹಕಾರ ಪಡೆಯುತ್ತಿದ್ದ. ಇವರಿಗೆ ಸಹಾಯಕರಾಗಿ ಇತರ ಅಧಿಕಾರಿಗಳು ಇದ್ದರು. ಮಂತ್ರಿ ಪದವಿ ವಂಶ ಪಾರಂಪರ್ಯವಾಗಿತ್ತು. ಅನರ್ಹರಾದ ಮಂತ್ರಿಗಳಿಂದ ಪದವಿ ಹಿಂಪಡೆಯುತ್ತಿದ್ದರು. ಮಂತ್ರಿಗಳ ಸಂಖ್ಯೆ ತಿಳಿದುಬರುವುದಿಲ್ಲ. ಕೆಳದಿ ನೃಪವಿಜಯದ ಉಲ್ಲೇಖದಿಂದ ಆಸ್ಥಾನದಲ್ಲಿ ಸು.6–8ರ ವರೆಗೆ ಮಂತ್ರಿಗಳು ಇದ್ದಿರಬಹುದು. ಮಂತ್ರಿಗಳಲ್ಲಿ ರಾಜಗುರುಗಳು, ಪ್ರಧಾನಿ, ಹುಜೂರು ಪ್ರಧಾನಿ, ಸರ್ವಾಧಿಕಾರಿ, ದಳವಾಯಿ, ಬೊಕ್ಕಸದ ಅಧಿಕಾರಿ, ಮಂತ್ರಿ ಮೊದಲಾದ ಹೆಸರುಗಳು ಕಂಡುಬರುತ್ತವೆ. ಇತರ ಅಧಿಕಾರಿಗಳಲ್ಲಿ ಸೇನೆಬೋವ ಕರಣಿಕ, ಮನೆವಾರ್ತೆಗಾರ, ಹೆಗ್ಗಡೆ, ಪಟೇಲ ಮೊದಲಾದ ಅಧಿಕಾರಿಗಳು ಇದ್ದರು. ರಾಜಗುರುಗಳ ಸ್ಥಾನ ಪ್ರಮುಖವಾಗಿದ್ದಿತು. ಬುಕನನ್ ತನ್ನ ಪ್ರವಾಸಿ ಕಥನದಲ್ಲಿ ಕೆಳದಿ ಆಸ್ಥಾನದ ರಾಜಗುರುಗಳ ಬಗ್ಗೆ ಉಲ್ಲೇಖಿಸಿದ್ದಾನೆ. ಮಾಧವ ಜೋಯಿಸ ಎಂಬ ಗುರು ಶಾಸನೋಕ್ತರಾಗಿದ್ದಾರೆ. ಚೌಡಪ್ಪನ ಕಾಲದಲ್ಲಿ ವೆಂಕಟಾದ್ರಿ ಜೋಯಿಸರು ಆಸ್ಥಾನದ ಗುರುಗಳಾಗಿದ್ದುದು ತಿಳಿಯುತ್ತದೆ. ಈತನೇ ಯುದ್ಧದಲ್ಲಿ ಮಹಾ ದಂಡನಾಯಕ. ರಾಮನಾಯಕನ ಕಾಲದಲ್ಲಿ ನಾರಣಪ್ಪಯ್ಯ ಪ್ರಧಾನಿಯಾಗಿದ್ದನು. ಅನಂತರದಲ್ಲಿ ಚಿನ್ನಭಂಡಾರದ ಅಧಿಕಾರಿಯಾಗಿ ಕೆಲಸ ಮಾಡಿದ ಉಲ್ಲೇಖ ಕಂಡುಬರುತ್ತದೆ. ಹುಜೂರು ಪ್ರಧಾನಿಯಾಗಿ ವೀರಭದ್ರದೇವ ಎಂಬುವನು ಇದ್ದ ಉಲ್ಲೇಖವಿದೆ. ಮಂತ್ರಿ ಪದವಿಯ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಬೊಕ್ಕಸದ ಅಧಿಕಾರಿ ಅಥವಾ ಚಿನ್ನಭಂಡಾರದ ಅಧಿಕಾರಿಯ ಬಗೆಗೆ ಸಾಕಷ್ಟು ಶಾಸನಗಳು ಉಲ್ಲೇಖಿಸುತ್ತವೆ. ಚಿನ್ನಭಂಡಾರದ ರಾಮಕೃಷ್ಣಯ್ಯ, ಪುರುಷೋತ್ತಮಯ್ಯ, ಹೂವಯ್ಯ, ಬೊಕ್ಕಸದ ಸಿದ್ದಬಸವಯ್ಯ ಮೊದಲಾದ ಹೆಸರುಗಳ ಉಲ್ಲೇಖ ಕಂಡುಬರುತ್ತದೆ. ಇತರ ಮಂತ್ರಿ ಅಧಿಕಾರಿಗಳಲ್ಲಿ ಸಂಧಿ ವಿಗ್ರಹಿಗಳು ಪ್ರಮುಖರಾಗಿದ್ದರು. ಇವರನ್ನು ಸರ್ವಾಧಿಕಾರಿ, ದಳವಾಯಿ ಎಂದು ಕರೆಯಲಾಗುತ್ತಿತ್ತು. ದೂತರು, ನಿಯೋಗಿಗಳು, ಮನೆವಾರ್ತೆಗಾರ, ಮಣಿಹ್ಯಗಾರ, ಕರಣಿಕ ಮೊದಲಾದ ಉಲ್ಲೇಖಗಳೂ ಶಾಸನಗಳಲ್ಲಿವೆ.

**ಆರ್ಥಿಕತೆ:** ಕೆಳದಿ ಕಾಲದಲ್ಲಿ ವ್ಯವಸಾಯಕ್ಕೆ ಅಗ್ರ ಪ್ರಾಶಸ್ತ್ಯ ನೀಡಲಾಗಿತ್ತು. ನೀರಾವರಿ ಅಭಿವೃದ್ಧಿ, ಬೇಸಾಯಕ್ಕೆ ಅಗತ್ಯವಾದ ಕೆರೆ, ಕಾಲುವೆ ನಿರ್ಮಾಣ, ಕಟ್ಟೆ, ಒಡ್ಡು ನಿರ್ಮಾಣ ಇವುಗಳಿಗೆ ವಿಶೇಷ ಪ್ರಾಧಾನ್ಯ ಇತ್ತು. ರೈತರಿಗೆ ಅಗತ್ಯವಿರುವ ಸಾಮಾಗ್ರಿಗಳು ರಾಜ್ಯದಿಂದ ಕೊಟ್ಟು ಅವರಿಂದ ಧಾನ್ಯದ ರೂಪದಲ್ಲಿ ಹಿಂಪಡೆಯುತ್ತಿದ್ದರು. ಕೊತ್ವಾಲ ಕಟ್ಟೆ, ಸುಂಕದ ಕಟ್ಟೆ, ವಿದೇಶಿ ರಫ್ತು, ಮೆಣಸಿನಕಾಳಿನ ವ್ಯಾಪಾರ ಇವುಗಳಿಂದ ಸರ್ಕಾರಕ್ಕೆ ಆದಾಯವಿತ್ತು. ಇಂಗ್ಲಿಷ್, ಪೋರ್ಚುಗೀಸ್, ಡಚ್, ಅರಬ್ಬರು ಮುಂತಾದವರೊಡನೆ ವಾಣಿಜ್ಯೋದ್ಯಮದ ಮೂಲಕ ಇಲ್ಲಿಯ ಅಕ್ಕಿ, ಕಾಳುಮೆಣಸು ಮೊದಲಾದ ಸಂಬಾರ ಪದಾರ್ಥಗಳನ್ನು ರಫ್ತು ಮಾಡಲಾಗುತ್ತಿತ್ತು. ವಿದೇಶದೊಡನೆ ವಿಶೇಷ ಬಾಂಧವ್ಯವಿತ್ತು. ಯುರೋಪಿನ ಪ್ರವಾಸಿ ಜಾಕೋಬಸ್ ಕ್ಯಾಂಟರ್ ವಿಶ್ಚರ್ ಈ ರಾಜ್ಯವನ್ನು ಭಾರತದ ಸರಕು ಮತ್ತು ಧಾನ್ಯ ಸಂಗ್ರಹದ ಉಗ್ರಾಣ ಎಂದು ಕರೆದಿದ್ದಾನೆ.

ಕೆರೆ, ಬಾವಿ, ನದಿ ಮೊದಲಾದವುಗಳು ನೀರಾವರಿ ಮೂಲವಾಗಿತ್ತು. ನದಿಗಳಿಗೆ ಸೇತುವೆ ನೀರಿಗೆ ಒಡ್ಡು ಕಟ್ಟುವುದು ಆ ಮೂಲಕ ತೂಬುಗಳನ್ನು ಅಳವಡಿಸಿ ತೋಟಗಾರಿಕೆಗೆ ನೀರು ಹಾಯಿಸುವ ವ್ಯವಸ್ಥೆ ಇತ್ತು. ತೂಬು ಹಾಳು ಮಾಡುವುದು ಪಾಪದ ಕೆಲಸವೆಂಬ ಭಾವನೆ ಇತ್ತು. ಒಬ್ಬ ವ್ಯಕ್ತಿ ನೀರಾವರಿ ಸೌಕರ್ಯವನ್ನು ಏರ್ಪಡಿಸುವುದು ಶ್ರೇಯಸ್ಕರವಾದ ಏಳು ಕಾರ್ಯಗಳನ್ನು ಮಾಡಿದ ಹಾಗೆ ಎಂದು ತಿಳಿಯಲಾಗುತ್ತಿತ್ತು. ಆದರೆ ನಿರ್ವಹಣೆಗೆ ಪ್ರತ್ಯೇಕ ಇಲಾಖೆ ಇದ್ದಂತೆ ತಿಳಿದುಬರುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿಯೂ ನೀರಾವರಿ ಪ್ರಾಮುಖ್ಯ ಪಡೆದಿತ್ತು. ಈ ಕಾಲದಲ್ಲಿ ಅನೇಕ ಕೆರೆ, ಕಟ್ಟೆ, ಕೊಳಗಳನ್ನು ನಿರ್ಮಿಸಲಾಗಿದೆ. ವೆಂಕಟಪ್ಪನಾಯಕನು ತನ್ನ ಅಜ್ಜ ಸದಾಶಿವನಾಯಕನ ಹೆಸರಲ್ಲಿ ಸಾಗರದಲ್ಲಿ ಕೆರೆಯೊಂದನ್ನು ನಿರ್ಮಿಸಿದ್ದನು. ಇದೇ ಕಾಲದಲ್ಲಿ ಆನಂದಪುರದಲ್ಲಿ ಸರೋವರವೊಂದು ನಿರ್ಮಾಣವಾಗಿತ್ತು.

ಹಿರಿಯ ವೆಂಕಟಪ್ಪನ ಕಾಲದಲ್ಲಿ 1621 ರಲ್ಲಿ ಸೇನಬೋವ ಕಾಮದೇವಭಟ್ಟನ ಮಗ ಕೋನಪ್ಪನು ಗೋವರ್ಧನಗಿರಿ ಗೇರುಸೊಪ್ಪೆ ಮಾರ್ಗದಲ್ಲಿ ಕೆರೆ ಕಟ್ಟಿಸಿದುದನ್ನೂ ಕೆಳದಿಯಲ್ಲಿ ವಡ್ಡರ ತಿಮ್ಮಿ 1512 ರಲ್ಲಿ ಕೆರೆಕಟ್ಟಿಸಿದುದನ್ನು ಸಮಕಾಲೀನ ದಾಖಲೆಗಳು ಉಲ್ಲೇಖಿಸಿರುವುದನ್ನು ಗಮನಿಸಿದಾಗ ಸಾರ್ವಜನಿಕರು ಕೆರೆ ಕುಂಟೆ ನಿರ್ಮಾಣದಲ್ಲಿ ಆಸಕ್ತಿ ತೋರುತ್ತಿದ್ದದನ್ನು ತಿಳಿಯಬಹುದಾಗಿದೆ. 2ನೆಯ ಸೋಮಶೇಖರನಾಯಕನ 1772 ರ ಶಾಸನವು ಬಸವನ ಒಡ್ಡು ಅಣೆಕಟ್ಟು ಕಟ್ಟಿಸಿದುದನ್ನು ಉಲ್ಲೇಖಿಸುತ್ತದೆ. ಹಾಗೆಯೇ ವಿರಕ್ತ ಮಠದ ಖಜಾನೆ ಸಿದ್ದಬಸವನು 17ನೆಯ ಶತಮಾನದಲ್ಲಿ ಕೆರೆ ನಿರ್ಮಿಸಿದ ಬಗ್ಗೆ ಶಾಸನ ತಿಳಿಸುತ್ತದೆ. ಬಸಪ್ಪನಾಯಕನು ಬಿದನೂರಿನಲ್ಲಿ ಸೇತುವೆಯನ್ನು ನಿರ್ಮಾಣ ಮಾಡಿದ್ದ. ಶಿವಪ್ಪನಾಯಕನ ಕಾಲದಲ್ಲಿಯೂ ಹಲವು ಕೆರೆ ನಿರ್ಮಾಣವಾದವು. ವೀರಮ್ಮಾಜಿಯ ಕಾಲದವರೆಗೂ ರಾಜ್ಯದಲ್ಲಿ ಸಾಕಷ್ಟು ಕೆರೆಕುಂಟೆಗಳು ನಿರ್ಮಾಣವಾದ ಬಗ್ಗೆ ಸಮಕಾಲೀನ ದಾಖಲೆಗಳು, ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಧಾರ್ಮಿಕ ಉದ್ದೇಶದ ಬಳಕೆಗಾಗಿ ಬಳಸುವ ಭೂಮಿಗೆ ಬೆಲೆಯಲ್ಲಿ ವಿನಾಯಿತಿ ಇರುತ್ತಿತ್ತು. ಪಾಳು ಭೂಮಿಯನ್ನು ಕೊಂಡುಕೊಂಡು ಮಠಮಾನ್ಯಗಳು, ಅಗ್ರಹಾರಗಳಿಗೆ ದಾನ ನೀಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಉತ್ತಾರ, ಉಂಬಳಿ ಬಿಡುವ ಭೂಮಿಗಳು ತೆರಿಗೆ ವಿನಾಯಿತಿ ಪಡೆಯುತ್ತಿದ್ದವು. ಗ್ರಾಮ ಸಭೆಗಳ ಸಲಹೆಯನ್ನು ಆಧರಿಸಿ ನೀರಾವರಿ ವ್ಯವಸ್ಥೆಯನ್ನು ನೀರಗಂಟಿ ಹಾಗೂ ತಳವಾರರು ನಿರ್ವಹಿಸುತ್ತಿದ್ದರೆಂದು ತಿಳಿದುಬರುತ್ತದೆ. 1664 ರ ಶಾಸನವೊಂದು ರೈತನ ನೀರಾವರಿ ಬಾವಿ ಅನಿರೀಕ್ಷಿತವಾಗಿ ಹಾಳಾದಾಗ ಪರಿಹಾರ ನೀಡಿದ್ದನ್ನು ತಿಳಿಸುತ್ತದೆ. ರೈತರಿಗೆ ಕಷ್ಟ ಕಾಲದಲ್ಲಿ ಪರಿಹಾರ ನೀಡಿ ಅನುಕೂಲ ಸ್ಥಿತಿಯಲ್ಲಿ ಅದನ್ನು ಹಿಂಪಡೆಯುವ ಪದ್ಧತಿ ಇತ್ತು. ಗಿಡ, ಮರ ಬೆಳೆಯಲು ಮತ್ತು ತೋಟ ಮಾಡಲು ನೀಡಿದ ಮುಂಗಡ ಹಣ ಕಂದಾಯ ರೂಪದಲ್ಲಿ ವಸೂಲು ಮಾಡುತ್ತಿದ್ದದನ್ನು 1730 ರ ಶಾಸನ ಉಲ್ಲೇಖಿಸುತ್ತದೆ. ಒಂದು ಖಂಡುಗ ಬೀಜ ಬಿತ್ತುವ ಬೀಜವರಿ ಭೂಮಿಯನ್ನು ಘಟಕವಾಗಿಟ್ಟುಕೊಂಡು ಶಿವಪ್ಪನಾಯಕನು ಶಿಸ್ತನ್ನು ಜಾರಿಗೊಳಿಸಿದ್ದನು. ಇದು 1800 ರ ವರೆಗೆ ಮುಂದುವರದಿತ್ತೆಂದು ಬುಕನನ್ ಬರೆಯುತ್ತಾನೆ. ಸರ್ಕಾರಕ್ಕೆ ಆದಾಯದ ಮೂಲವು ಕಂದಾಯದಾಗಿತ್ತು. ರೈತರು ಬೆಳೆದ ಬೆಳೆಯ 1/6 ಭಾಗ ಸರ್ಕಾರಕ್ಕೆ ಕೊಡಬೇಕಿತ್ತು. ಬಿತ್ತುವ ಬೀಜ ಸಾಗುವಳಿ ಖರ್ಚು, ಉತ್ಪನ್ನವಾದ ಧಾನ್ಯಗಳು ಅವುಗಳನ್ನು ಆಧರಿಸಿ ಕಂದಾಯ ನಿಗದಿಯಾಗುತ್ತಿತ್ತು. ಐದು ವರ್ಷದ ಸರಾಸರಿ 50 ಸೇರಿನ ಒಂದು ಖಂಡುಗದ ಬೆಲೆ ಒಂದು ಹಣ ಎಂದು ಗೊತ್ತುಮಾಡಿ ಉತ್ಪನ್ನದಲ್ಲಿ 1/3 ಭಾಗ ಕಂದಾಯ ನಿಗದಿ ಮಾಡಲಾಗಿತ್ತು. ಬೆದ್ದಲು, ಖುಷ್ಕಿ ಅಥವಾ ಹಕ್ಕಲು ಭೂಮಿ ದರವು ಶಿಸ್ತಿನಲ್ಲಿ ಸೇರಿದ್ದಿತು. ಬಯಲುಸೀಮೆಯಲ್ಲಿ ಒಂದು ಖಂಡುಗ ಬೀಜವರಿಗೆ ಬೇರೆಯೇ ರೀತಿಯ ಕಂದಾಯ ನಿಗದಿಯಾಗಿತ್ತು. ಅದು ಮಣ್ಣಿನ ಫಲವತ್ತತೆಯನ್ನು ಅವಲಂಬಿಸಿರುತ್ತಿತ್ತು. ರಹದಾರಿ ಮೂಲಕ ಹೋಗುವ ಸರಕು ಸಾಗಣೆ ವಾಹನಗಳ ಮೇಲೆ ತೆರಿಗೆಯನ್ನು ಹಾಕುವುದು, ದಂಡಿನ ಬಿರಾಡ, ಕೋಟೆ

ಬಿರಾಡ ಮೊದಲಾದ ಮೂಲಗಳೂ ಆದಾಯ ಹೆಚ್ಚಿಸಿಕೊಳ್ಳಲು ಅವರು ಅನುಸರಿಸಿದ ಮಾರ್ಗವೆಂದು ಶಾಸನಗಳಿಂದ ತಿಳಿದುಬರುತ್ತದೆ. ಘಟ್ಟದ ಕೆಳಗಿನ ಸುಂಕದ ಠಾಣೆ, ಮಂಜೇಶ್ವರ, ಉಪ್ಪಿನಂಗಡಿ, ಬಂಗಾಡಿ, ಬಂಟ್ವಾಳ, ಬೈಂದೂರು ಮೊದಲಾದ ಕಡೆಗಳಲ್ಲಿ ಸುಂಕ ವಸೂಲಿಗಾಗಿ ಸುಂಕದ ಠಾಣ್ಯಗಳಿದ್ದವು.

ವರಹದ ಅಥವಾ ಗದ್ಯಾಣದ ಅರ್ಧಭಾಗ ಹೊನ್ನು ಎಂಬ ಚಿನ್ನದ ನಾಣ್ಯ. ಚಾರಣ ಎನ್ನುವುದು ಕೆಳದಿ ಕಾಲದ ಇನ್ನೊಂದು ನಾಣ್ಯ. ಹಣ ಅಥವಾ ಪಣ ಮತ್ತೊಂದು ನಾಣ್ಯ. ಒಂದು ಗದ್ಯಾಣಕ್ಕೆ ಹತ್ತು ಹಣ ಸಮ. ಅಂದರೆ ಒಂದು ಹೊನ್ನಿಗೆ ಐದು ಪಣಗಳು ಸಮ. ಪಣ ಎಂಬ ನಾಣ್ಯ ಶಾಸನದಲ್ಲಿ ಪದೇ ಪದೇ ಕಾಣಿಸಿಕೊಳ್ಳುವುದರಿಂದ ಇದು ಸಾಮಾನ್ಯವಾಗಿ ಬಳಕೆಯಲ್ಲಿದ್ದ ನಾಣ್ಯವಿದ್ದಿರಬಹುದು. ಪಣದ ಅನಂತರ ಅಡ್ಡ. ಅಡ್ಡದ ನಂತರ ಹಾಗ. ಒಂದು ಅಡ್ಡಕ್ಕೆ ಎರಡು ಹಾಗಗಳು. ಇದಕ್ಕಿಂತ ಸಣ್ಣ ಮೌಲ್ಯದ ನಾಣ್ಯ ಬೇಳೆ. ಒಂದು ಹಾಗಕ್ಕೆ ಎರಡು ಬೇಳೆ. ಬೇಳೆಗಿಂತ ಕನಿಷ್ಠ ವೀಸ. ಇವು ಚಿನ್ನದ ನಾಣ್ಯಗಳು.



ಅಘೋರೇಶ್ವರ ದೇವಾಲಯ, ಇಕ್ಕೇರಿ

ಶಾಸನಗಳಲ್ಲಿ ಬೆಳ್ಳಿ ನಾಣ್ಯದ ಉಲ್ಲೇಖವಿಲ್ಲ. ಆದರೆ ವಿದೇಶಿ ಪ್ರವಾಸಿ ಪಿಯತ್ರೋ ಡೆಲ್ಲಾವೆಲ್ಲ ಭಟ್ಕಳಕ್ಕೆ ಭೇಟಿಯಿತ್ತಾಗ ತಾರ ಎಂಬ ಬೆಳ್ಳಿ ನಾಣ್ಯವನ್ನು ಒಂದು ತಾರಾಗೆ ನಾಲ್ಕು ಕಾಸು ಎಂದು ಆತ ವರ್ಣಿಸಿದ್ದಾನೆ. ಕಾಸು ಎಂಬುದು ಆ ಕಾಲದ ತಾಮ್ರದ ನಾಣ್ಯ. ಪೀಟರ್ ಮಂಡಿ ಇದನ್ನು ಉಲ್ಲೇಖಿಸಿದ್ದಾನೆ. ಶಾಸನಗಳ ಪ್ರಕಾರ ಒಂದು ಅರೆವೀಸಾಕೆ ಎರಡು ಕಾಸು ಸಮ.

ಬಿದನೂರಿನಲ್ಲಿ ಟಂಕಸಾಲೆ ಇತ್ತೆಂದು ಅಲ್ಲಿ ಸಿಕ್ಕ ಅಚ್ಚಿನ ಕಲ್ಲಿನಿಂದ ತಿಳಿಯಬಹುದು. ಇದನ್ನು ರಾಮನಗರದ ಬಳಿಯ ಜಾನಪದ ಲೋಕದಲ್ಲಿ ಇರಿಸಲಾಗಿದೆ. ಇದು 2ನೆಯ ಸೋಮಶೇಖರನಾಯಕನ ಕಾಲದ್ದು. ಶಾಸನಗಳಲ್ಲಿ ಅಚ್ಚಿನ ಅಧಿಕಾರಿಯ ಉಲ್ಲೇಖ ಬರುತ್ತದೆ. ಕೆಳದಿ ಸದಾಶಿವ ನಾಯಕ, ಶಿವಪ್ಪನಾಯಕ, ವೆಂಕಟಪ್ಪನಾಯಕರ ಕಾಲದ ನಾಣ್ಯಗಳು ಮತ್ತು ಬರೆಹವಿಲ್ಲದ ಕೆಲವು ನಾಣ್ಯಗಳೂ ದೊರೆತಿವೆ.

**ಧಾರ್ಮಿಕ ಸ್ಥಿತಿ:** ಕೆಳದಿ ಅರಸರು ಹೆಚ್ಚಿನ ಮಟ್ಟಿಗೆ ವೀರಶೈವರಾಗಿದ್ದರೂ ಇತರ ಧರ್ಮಗಳನ್ನು ಗೌರವಿಸಿ ಪೋಷಿಸಿದರು. ದೊಡ್ಡ ಸಂಕಣ್ಣನಾಯಕನು ತೀರ್ಥಯಾತ್ರೆಯ ಸಂದರ್ಭದಲ್ಲಿ ಪೈಠಣದಲ್ಲಿದ್ದ ಅಘೋರೇಶ್ವರ ಮೂರ್ತಿಯ ಚಿತ್ರವನ್ನು ಹಾಳೆಯಲ್ಲಿ ಚಿತ್ರಿಸಿಕೊಂಡು ಅದರಂತೆ ಅಘೋರೇಶ್ವರ ದೇವಾಲಯವನ್ನು ಇಕ್ಕೇರಿಯಲ್ಲಿ ನಿರ್ಮಿಸಿದನು. ಇವರ ಕಾಲದಲ್ಲಿ ಆನಂದಪುರ ಮತ್ತು ಭುವನಗಿರಿ ದುರ್ಗದಲ್ಲಿ ಮಸೀದಿಗೆ ದಾನ ನೀಡಿದರು. ಚೆನ್ನಮ್ಮಾಜಿಯ ಕಾಲದಲ್ಲಿ ಮಂಗಳೂರಿನಲ್ಲಿ ಮಿಲಾಗ್ರಿಸ್ ಚರ್ಚ್ ನಿರ್ಮಾಣಕ್ಕೆ ಸಹಾಯ ಮಾಡಿದರು. ಮೂಡುಬಿದರೆಯ ಸಾವಿರ ಕಂಬದ ಬಸದಿಗೂ ಇವರ ಕಾಲದಲ್ಲಿ ದಾನವನ್ನು ನೀಡಿದರು. ರಾಜ್ಯಾದ್ಯಂತ ಬಹಳಷ್ಟು ಮಠಗಳು ದೇವಾಲಯಗಳು ಈ ಕಾಲದಲ್ಲಿ ನಿರ್ಮಾಣ ವಾದವು. ಶೃಂಗೇರಿ, ಉಡುಪಿ, ಮುಳುಬಾಗಿಲು ಮಠಗಳನ್ನು ಜೀರ್ಣೋದ್ಧಾರ ಮಾಡಿದರು. ಜೈನಧರ್ಮಕ್ಕೂ ಹೆಚ್ಚಿನ ಮರ್ಯಾದೆ ಕೊಟ್ಟಿರುವ ನಿದರ್ಶನವಿದೆ. ಶೈವ, ಮಾಧ್ವ ಕ್ಷೇತ್ರಗಳು ವಿಶೇಷ ಮಾನ್ಯತೆ ಪಡೆದಿದ್ದವು. ಉತ್ತಮ, ಜಾತ್ರೆ, ಸಮಾರಂಭಗಳು, ದ್ವೈತ, ಅದ್ವೈತ ವಿಶಿಷ್ಟಾದ್ವೈತ, ವೀರಶೈವ ಮಠಗಳಿಗೆ ಕೊಡುತ್ತಿದ್ದ ದಾನದತ್ತಿ ಇತ್ಯಾದಿಗಳು ಅಂದಿನ ಧಾರ್ಮಿಕ ಸ್ಥಿತಿಗಳನ್ನು ಎತ್ತಿ ತೋರಿಸುತ್ತದೆ.

**ಸಾಮಾಜಿಕ:** ಈ ಅರಸರ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವಿತ್ತು. ಕೆಳದಿ ಕಾಲದ ಇಟಲಿಯ ಪ್ರವಾಸಿ ಪಿಯಾತ್ರೋ ಡೆಲ್ಲಾವಲ್ಲೆ ಇಲ್ಲಿನ ಶಿಕ್ಷಣ ಪದ್ಧತಿಯನ್ನು ಬಹುವಾಗಿ ಕೊಂಡಾಡಿದ್ದಾನೆ. ಅಂದಿನ ಆಡಳಿತಾತ್ಮಕವಾದ ಪತ್ರಾಗಾರವು ಅಚ್ಚುಕಟ್ಟಾಗಿ ಜೋಡಿಸಲ್ಪಟ್ಟಿದ್ದನ್ನು ಪೀಟರ್‌ಮಂಡಿ ಬರೆಯುತ್ತಾನೆ. ಸತಿ ಪದ್ಧತಿಯು ಅಷ್ಟಾಗಿ ಇರಲಿಲ್ಲ. ಕೆಳದಿ ಅರಸರು ಸಾಹಿತ್ಯ ಪೋಷಕರಾಗಿದ್ದರು. ಅರಸ ಬಸವರಾಜ ಸ್ವತಃ ಕವಿಯಾಗಿದ್ದು, ಶಿವತತ್ತ್ವ ರತ್ನಾಕರ, ಸುಭಾಷಿತ ಸುರದ್ರುಮಗಳನ್ನು ರಚಿಸಿದ. ಲಿಂಗಣ್ಣ ಕವಿಯ ಕೆಳದಿ ನೃಪವಿಜಯ, ಶಿವಗೀತೆ ಗಮನಿಸಬೇಕಾದ ಕೃತಿಗಳು. ನಾಟಕ, ಸಂಗೀತ ಮೊದಲಾದ ಕ್ಷೇತ್ರಗಳಿಗೂ ವಿಶೇಷ ಪ್ರೋತ್ಸಾಹ ಇದ್ದಿತು. ವೆಂಕಟಪ್ಪನಾಯಕನ ಕಾಲದಲ್ಲಿ ನಾಟಕಕ್ಕಾಗಿ ಇಕ್ಕೇರಿಯಲ್ಲಿ ರಂಗಮಂದಿರವಿದ್ದಿತು. ಸಂಗೀತ ವಿದ್ವಾಂಸರಿಗೆ ಉಂಬಳಿ ಬಿಟ್ಟಿರುವುದಿದೆ. ವಿಜಯದಶಮಿ ಉತ್ಸವವನ್ನು ಸೋಮಶೇಖರನಾಯಕನು ಪಲ್ಲಕಿಯಲ್ಲಿ ಕುಳಿತು ವೀಕ್ಷಿಸುತ್ತಿದ್ದ. ಕೆಳದಿ ನಾಯಕರು ನ್ಯಾಯ ಪಕ್ಷಪಾತಿಗಳಾಗಿದ್ದರು. ನ್ಯಾಯ ವಿಚಾರಣೆಯನ್ನು ಸ್ವತಃ ರಾಜನೇ ಮಾಡುತ್ತಿದ್ದ. ನ್ಯಾಯಶಾಸ್ತ್ರವನ್ನರಿತ ಪಂಡಿತರು ನ್ಯಾಯ ತೀರ್ಮಾನಕ್ಕಾಗಿ ನೆರವಾಗುತ್ತಿದ್ದರು.

ಯಾದವ ಮುರಾರಿಯವರ ಗೊಂಬೆಗಳನ್ನು ರಥದಲ್ಲಿ ದೇವರ ಮಧ್ಯದಲ್ಲಿಟ್ಟು ಈಗಲೂ ಗೌರವಿಸುತ್ತಿರುವುದು ಗಮನಾರ್ಹ. ಕಾನೂನು ಶಿಸ್ತುಪಾಲನೆಯೂ ಅಪೂರ್ವವಾಗಿತ್ತು. ಕಳ್ಳ ಕಾಕರ ಭಯವೇ ಇರಲಿಲ್ಲವೆಂದು ಜಾಕೋಬಸ್ ಕಾಂಟರ್ ವಿಶ್ಚರ್ ರವರು ಹೇಳಿದ್ದಾರೆ. ಕೆಳದಿ ರಾಜ್ಯ ನೆಮ್ಮದಿಯ ರಾಜ್ಯವೆಂಬುದನ್ನು ವಿದೇಶಿಯರೂ ಎತ್ತಿ ಹೇಳಿದ್ದಾರೆ. (ಕೆ.ವಿ.ಜಿ.)

**ವಾಸ್ತುಶಿಲ್ಪ:** ಕೆಳದಿ ಅರಸರ ಕಾಲದಲ್ಲಿ ಕಟ್ಟಲಾದ ದೇವಾಲಯ, ಕೋಟೆ, ಕೆರೆ-ಕಟ್ಟೆ ಇತ್ಯಾದಿಗಳನ್ನು ಕೆಳದಿ ವಾಸ್ತುಶಿಲ್ಪಗಳೆಂದು ಗುರುತಿಸುವುದು ಸಾಮಾನ್ಯ. ಇವುಗಳ ಶೈಲಿ ತನ್ನದೇ ಆದ ಶಾಸ್ತ್ರೀಯ ಶೈಲಿಯನ್ನು ಅಭಿವ್ಯಕ್ತಪಡಿಸುವುದಿಲ್ಲ. ಇದನ್ನು ವಿಭಿನ್ನ ಶಾಸ್ತ್ರೀಯ ಶೈಲಿಗಳಿಂದ ಹಾಗೂ ಜನಪದ ಶೈಲಿಗಳಿಂದ ತನಗೆ ಆವಶ್ಯಕವಾದ ಮಾದರಿಗಳನ್ನು ಬಳಸಿ ಕೊಂಡು ಅನುಕೂಲ ಹಾಗೂ ಆಸಕ್ತಿಗೆ ತಕ್ಕಂತೆ ನಿರ್ಮಿಸಲಾಗಿದೆ. ಇವುಗಳಲ್ಲಿ ಅನೇಕ ದೇವಾಲಯಗಳು ಆಶ್ರಯ ಸಿಕ್ಕ ಹಾಗೆ ವಿಸ್ತರಿಸಲ್ಪಟ್ಟು, ಹಾಳಾದಂತೆಲ್ಲಾ ಜೀರ್ಣೋದ್ಧಾರಕ್ಕೆ ಒಳಪಟ್ಟು ಇಂದಿನ ಸ್ವರೂಪ ಪಡೆದಿದೆ. ಕೆಳದಿ ಶೈಲಿಯ ಮೇಲೆ ಪ್ರಭಾವ ಬೀರಿರಬಹುದಾದ ವಿವಿಧ ಮಾದರಿ ಹಾಗೂ ಶೈಲಿಗಳಿವೆ.

ವೇಸರ ಮಾದರಿ: ಇದು 13ನೆಯ ಶತಮಾನದಲ್ಲಿದ್ದ ಒಂದು ಚಾಳುಕ್ಯ ಮಾದರಿ. ಈ ಮಾದರಿಯ ದೇವಾಲಯಗಳಿಗೆ ಒಂದು ಕಕ್ಷಾಸನ ಸಹಿತವಾದ ತೆರೆದ ಅಥವಾ ಗೂಢ ರಂಗಮಂಟಪಗಳಿರುತ್ತದೆ. ಈ ರಂಗಮಂಟಪ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿತವಾಗಿದ್ದು, ಮೂರು ಕಡೆಯಿಂದ ಪ್ರವೇಶಿಸಲು ಮೆಟ್ಟಿಲುಗಳಿರುತ್ತವೆ. ಮೆಟ್ಟಿಲಿಗೆ ಹಸ್ತಿ ಹಸ್ತಗಳನ್ನು ಜೋಡಿಸಲಾಗುತ್ತದೆ ಅಥವಾ ವೇದಿಕೆಯ ಗೋಡೆಯನ್ನು ಅಳವಡಿಸಲಾಗುತ್ತದೆ. ರಂಗಮಂಟಪದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳಿರುತ್ತವೆ. ಕೆಳದಿ ಕಾಲದ ದೇವಾಲಯಗಳು ಈ ಮಾದರಿಯಲ್ಲಿ ಕಾಣಿಸಿಕೊಳ್ಳುವ ರಂಗಮಂಟಪ ಬಹುಶಃ 13ನೆಯ ಶತಮಾನ ಬಹುಸ್ತಂಬಗಳ ಸಭಾಮಂಟಪದಂತಿದೆ.

ಈ ರೀತಿಯ ಸಭಾಮಂಟಪಗಳನ್ನು ನಾಡ ಕಲಶಿ, ಹೊಸಗುಂದ, ಮರಗಳಲೆ ಹಾಗೂ ಸೊರಬ ತಾಲೂಕಿನ ಕೆಲವು ದೇವಾಲಯಗಳಲ್ಲಿ ಕಾಣಬಹುದು. ಈ ಎಲ್ಲ ದೇವಾಲಯಗಳೂ 12ನೆಯ ಶತಮಾನದ ಚಾಳುಕ್ಯ ಶೈಲಿಯ ಮುಂದುವರೆದ ರೂಪಗಳಾಗಿವೆ. 12ನೆಯ ಶತಮಾನದಲ್ಲೇ ಇಂಥ ಸಭಾಮಂಟಪಗಳಿಗೆ ಜಾಲಂಧ್ರಗಳನ್ನು ಅಳವಡಿಸಿ ಗೂಡುಮಂಟಪ ಗಳನ್ನಾಗಿ ಮಾಡುವ ಪದ್ಧತಿ ಮಲೆನಾಡಿನಲ್ಲಿತ್ತು. ಬೇಲೂರು ಚೆನ್ನಕೇಶವ ದೇವಾಲಯದಲ್ಲಿ ಈ ವಾಸ್ತು ಅಂಶವನ್ನು ಕಾಣಬಹುದು. 15-16ನೆಯ ಶತಮಾನದ ಅನಂತರ ಇಂಥ ಗೂಢಮಂಟಪಗಳ ರಚನೆ ಮಲೆನಾಡಿನ ವೈಶಿಷ್ಟ್ಯವಾಗಿತ್ತು. ಆದರೆ ಬಹುಸ್ತಂಭಗಳ ಮಂಟಪಗಳು ಮರೆಯಾಗಿ ನಾಲ್ಕು ಸ್ತಂಭಗಳ ನವರಂಗಗಳು ಮಾತ್ರ ಬಳಕೆಯಾದುವು. ಕೆಳದಿ ರಾಮೇಶ್ವರ ದೇವಾಲಯ, ಇಕ್ಕೇರಿ ಅಘೋರೇಶ್ವರ ದೇವಾಲಯ ಇತ್ಯಾದಿ ಈ ಕಾಲದ ಮಹತ್ತರ ದೇವಾಲಯಗಳೆಲ್ಲ ಈ ವಿನ್ಯಾಸದಲ್ಲೇ ನಿರ್ಮಿತವಾಗಿವೆ. ಈ ರೀತಿಯ ಮಂಟಪಗಳಿಗೆ ಅಧಿಷ್ಠಾನದಲ್ಲಿ ವಿಮಾನ ಮಾದರಿಯ ಬಂಧಗಳಿರುತ್ತವೆ. ಕಕ್ಷಾಸನದ ಹಿಂಭಾಗದಲ್ಲಿ ಕೂಟಸ್ತಂಭಗಳ ಸಾಲುಗಳ ಕೆತ್ತನೆ ಕಡ್ಡಾಯವಾಗಿ ಇರುತ್ತದೆ. ಪ್ರಸ್ತುತದ ಮೇಲೆ ಮುಂಚಾಚಿಕೊಂಡಿರುವ ಕಲ್ಲಿನ ಮಾಡುಗಳಿರುತ್ತದೆ. ಇವೆಲ್ಲ ವೇಸರ ಮಾದರಿಯ ಮುಂದುವರಿಕೆಯೆಂದು ಹೇಳಬಹುದು.

ದೇವಾಲಯಗಳ ಅಧಿಷ್ಠಾನಗಳೂ ಚಾಳುಕ್ಯ ವೇಸರ ಶೈಲಿಯ ಬೆಳವಣಿಗೆಗಳೂ ಆಗಿವೆ. 12-13ನೆಯ ಶತಮಾನದಲ್ಲಿ ಬಹುತೇಕ ಎಲ್ಲ ದೇವಾಲಯಗಳಲ್ಲೂ ಕಾಣಿಸಿಕೊಳ್ಳುವ ಕಪೋತ ಬಂಧ ಮಾದರಿ ಇಲ್ಲೂ ಮುಂದುವರಿದಿದೆ. ಕಪೋತದಿಂಡಿನ ಮೇಲೆ ಪ್ರತಿಕಂಠ ಅಥವಾ ವ್ಯಾಳಪಟ್ಟಿಯಿರುತ್ತದೆ. ಇಂಥ ಪ್ರತಿಕಂಠಗಳು ಅಧಿಷ್ಠಾನದ ಮೇಲೆ ಮಾತ್ರವಲ್ಲದೇ ಶಿಖರಭಾಗದಲ್ಲೂ ಹಾರಗಳಲ್ಲಿ ಬರುತ್ತದೆ.

ವಿಮಾನದ ತಲವಿನ್ಯಾಸದಲ್ಲಿ ಭದ್ರ ಹಾಗೂ ಕರ್ಣಗಳ ಉಬ್ಬುಗಳು ಇರುವುದು ಚಾಳುಕ್ಯ ಶೈಲಿಯ ಇನ್ನೊಂದು ವೈಶಿಷ್ಟ್ಯವಾಗಿದೆ. ಇಕ್ಕೇರಿಯ ಅಘೋರೇಶ್ವರ ದೇವಾಲಯದ ವಿಮಾನದ ತಳವಿನ್ಯಾಸದಲ್ಲಿ ಇಂಥ ಭದ್ರ ಹಾಗೂ ಕರ್ಣಗಳನ್ನು ಅಳವಡಿಸುವ ಪ್ರಯತ್ನವಿದೆ. ಇದೇ ರೀತಿ ವಿಮಾನದ ಹಾರ ಹಾಗೂ ಶಿಖರಗಳು ಚಾಳುಕ್ಯಶೈಲಿಗೇ ಹೆಚ್ಚು ಹತ್ತಿರದ್ದಾಗಿದ್ದರೆ ಇಕ್ಕೇರಿಯ ಅಘೋರೇಶ್ವರ ದೇವಾಲಯದ ಶಿಖರ ದ್ರಾವಿಡ ಮಾದರಿಗೆ ಹೆಚ್ಚು ಹತ್ತಿರವಾಗಿದೆ. ಚಾಳುಕ್ಯ ಶೈಲಿಯ ಪ್ರತೀಹಾರವೂ ಒಂದು ಪ್ರತಿಕಂಠದ ದಿಂಡಿನಿಂದ ಪ್ರಾರಂಭವಾಗುತ್ತದೆ. ಈ ರೀತಿ ಯಲ್ಲಿ ಅಘೋರೇಶ್ವರ ದೇವಾಲಯದ ಭದ್ರಕೋಷ್ಠಗಳು ಮುಚ್ಚಿಗೆಯ ಚಾಳುಕ್ಯ ಶೈಲಿಯಂತಿದೆ.

ಕೆಳದಿ ವಾಸ್ತುವಿನಲ್ಲಿಯ ಕಂಬಗಳೂ ಚಾಳುಕ್ಯ ಶೈಲಿಯ ಕಂಬಗಳ ಮಾದರಿಗಳಿಂದಲೇ ಬೆಳೆದು ಬಂದಹಾಗಿವೆ. ಪ್ರಥಮ ಮಾದರಿಯು ಚಾಳುಕ್ಯ ಘಂಟಾಕೃತಿಯ ಕಂಬಗಳ ವಿನ್ಯಾಸವನ್ನೇ ಹೋಲುತ್ತದೆ. ಘಂಟಾಕೃತಿಯ ಮೈಮೇಲೆ ಸೂಕ್ಷ್ಮವಿನ್ಯಾಸಗಳನ್ನು ಕೆತ್ತುವ ಕಲೆ ಈ ಕಾಲದ ಶಿಲ್ಪಿಗಳಿಗೂ ಕರಗತವಾಗಿತ್ತು ಎಂಬುದನ್ನು ಇಕ್ಕೇರಿಯ ರಂಗಮಂಟಪದ ಕಂಬಗಳು ಪ್ರತಿಬಿಂಬಿಸುತ್ತವೆ. ಮತ್ತೊಂದು ಮಾದರಿಯ ಕಂಬಗಳು ಚೌಕಾಕಾರ ಕಾಂಡಗಳನ್ನು ಹೊಂದಿದ್ದು ಮಧ್ಯಭಾಗದಲ್ಲಿ 8 ಹಾಗೂ 16 ಮೂಲೆಗಳ ಕಟ್ಟುಗಳನ್ನು ಹೊಂದಿದೆ.

ತಳಭಾಗದ ಮೂಲೆಗಳನ್ನು ನಾಗಬಂಧಗಳನ್ನಾಗಿ ರೂಪಿಸಲಾಗಿದೆ. ಲಶುನದಿಂದ ಮೇಲ್ಭಾಗದಲ್ಲಿ ಬೋದಿಗೆಯವರೆಗೂ ಈ ಸ್ತಂಭಗಳು ಮೂಲತಃ ಚಾಳುಕ್ಯ ಕಂಬಗಳ ಮಾದರಿಗಳು ಮುಂದುವರಿಕೆಯಾಗಿದೆ.

ದ್ರಾವಿಡಮಾದರಿ: ಕೆಳದಿ ಶೈಲಿಯಲ್ಲಿ ದ್ರಾವಿಡ ಮಾದರಿ ಪ್ರಭಾವವನ್ನು ಧಾರಾಳವಾಗಿ ನೋಡಬಹುದಾಗಿದೆ. ವಿಜಯನಗರ ಕಾಲದಲ್ಲಿ ದ್ರಾವಿಡ ನಿರ್ಮಾಣಕ್ಕೆ ಗ್ರಾನೈಟ್ ಕಲ್ಲಿನ ಬಳಕೆಯೂ ಸಾಮಾನ್ಯವಾಗಿತ್ತು. ಕೆಳದಿ ದೇವಾಲಯಗಳಲ್ಲಿ ಸಾಧಾರಣವಾಗಿ ಈ ಕಲ್ಲನ್ನೇ ಬಳಸಲಾಗಿದೆ.

ಕೆಳದಿ ರಾಮೇಶ್ವರ ದೇವಾಲಯಕ್ಕೆ ಅನಂತರ ಸೇರಿಸಲಾದ ದ್ರಾವಿಡ ಮಾದರಿಯ ವೀರಭದ್ರ ದೇವಾಲಯ ವಿಜಯನಗರ ದ್ರಾವಿಡ ಶೈಲಿಯಲ್ಲಿದೆ. ಈ ದೇವಾಲಯದ ಗರ್ಭಗೃಹ ಎತ್ತರದಲ್ಲಿದ್ದು, ರಂಗಮಂಟಪದಿಂದ ಹತ್ತಲು ಮೆಟ್ಟಿಲುಗಳನ್ನು ಅಳವಡಿಸಲಾಗಿದೆ. ರಂಗಮಂಟಪ ಮಧ್ಯದ ಕಂಬಗಳ ಮಧ್ಯಭಾಗದಲ್ಲಿ ಕಿರುದಾಗಿದ್ದು, ಅಕ್ಕಪಕ್ಕದ ಪಾರ್ಶ್ವದಲ್ಲಿ ವೇದಿಕೆಗಳನ್ನು ನಿರ್ಮಿಸಲಾಗಿದೆ. ಕಂಬಗಳಿಗೆ ಪ್ರತ್ಯೇಕ ಚಾಚು ಬೋದಿಗೆಗಳನ್ನು ಜೋಡಿಸಲಾಗಿದೆ. ಸಂಕೀರ್ಣ ಸ್ತಂಭಗಳು ವಿಜಯನಗರ ಶೈಲಿಯಲ್ಲಿವೆ. ಪ್ರಧಾನ ಕಂಭದ ಚೌಕಾಕಾರದ ಕಾಂಡದ ಮೇಲೆ ವಿಜಯನಗರ ಶೈಲಿಯ ಕೆತ್ತನೆಗಳಿವೆ. ಇದರ ಒಂದು ಪಾರ್ಶ್ವಕ್ಕೆ ಮುಂಗಾಲುಗಳನ್ನು ಎತ್ತಿ ನಿಂತ ವ್ಯಾಳಿ ಹಾಗೂ ಇದರ ತಲೆಯ ಮೇಲೆ ಚಾಚು ಬೋದಿಗೆಯನ್ನು ಹೊಂದಿದ ಉಪಸ್ತಂಭವನ್ನು ಜೋಡಿಸಲಾಗಿದೆ. ಈ ಕಂಭದ ಬೋದಿಗೆ ವಿಜಯನಗರ ಶೈಲಿಯ ಪುಷ್ಪ ಬೋದಿಗೆಯಾಗಿದೆ.

ದ್ರಾವಿಡ ಮಾದರಿಯ ವಿಮಾನದ ಹಾರ–ಶಿಖರಗಳನ್ನು ಅಘೋರೇಶ್ವರ ದೇವಾಲಯದಲ್ಲಿ ನೋಡಬಹುದು. ಶಿಖರ ತನ್ನ ವಿಭಿನ್ನ ಸ್ತರಗಳಲ್ಲಿ ಶಾಖೆ ಹಾಗೂ ಕೋಷ್ಠಕಗಳಿವೆ. ಕೆಳದಿ ಶಿಖರಗಳು ಬ್ರಹ್ಮಚ್ಛಂದ ಮಾದರಿಯಲ್ಲಿದ್ದು ಇವುಗಳಲ್ಲಿ ನಾಲ್ಕೂ ದ್ರಾವಿಡ ಮಾದರಿಯ ಕೋಷ್ಠ ಪಂಜರಗಳಿರುತ್ತವೆ.

ವಿಜಯನಗರ ಶೈಲಿಯಲ್ಲಿ ದೇವಾಲಯಗಳಲ್ಲಿ ಮುಚ್ಚಿದ ಪ್ರದಕ್ಷಿಣಾಪಥ ಈ ವಾಸ್ತು ಅಂಶಯ ಕೆಳದಿ ರಾಮೇಶ್ವರ ದೇವಾಲಯ ವಿಮಾನ ಹಾಗೂ ಇಕ್ಕೇರಿ ಅಘೋರೇಶ್ವರ ದೇವಾಲಯದ ವಿಮಾನಗಳು ಈ ಶೈಲಿಯಲ್ಲಿ ಇವೆ.

ಹಿಂದು–ಇಸ್ಲಾಂ ಪ್ರಭಾವ: 17–18ನೆಯ ಶತಮಾನದಲ್ಲಿ ಕೆಳದಿ ರಾಜ್ಯ ಪ್ರದೇಶದ ದೇವಾಲಯಗಳಲ್ಲಿ ಬಿಜಾಪುರದ ಹಿಂದು–ಇಸ್ಲಾಂ ಶೈಲಿಯ ಕೆಲವೊಂದು ಲಕ್ಷಣಗಳನ್ನು ಕೆಳದಿ ವಾಸ್ತು ವಿನ್ಯಾಸದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅವು ಹೀಗಿವೆ: ದೇವಾಲಯಗಳ ಪ್ರಸ್ತರದ ಮೇಲೆ ಹಾರಗಳ ಬದಲಾಗಿ ಕಂಗುರಗಳ ಸಾಲು ನಾಲ್ಕು ಮೂಲೆಗಳಲ್ಲಿ ಸಣ್ಣ ಸಣ್ಣ ಮಿನಾರ್‌ಗಳು. ಇದೊಂದು ಸಾಮಾನ್ಯ ವಿನ್ಯಾಸವಾಗಿ 17–18ನೆಯ ಶತಮಾನದಲ್ಲಿ ಕರ್ನಾಟಕದ ದೇವಾಲಯಗಳಲ್ಲೆಲ್ಲ ಅಳವಡಿಸಿಕೊಳ್ಳಲಾಯಿತು. ಬಾಗಿಲು ಹಾಗೂ ಕಿಟಕಿ ಕಮಾನುಗಳ ವಿನ್ಯಾಸ: ಈ ಕಮಾನುಗಳು ಕಟ್ಟಡ ತಂತ್ರದಿಂದ ಕಟ್ಟಿದವಾಗಿರದೇ ಕಲ್ಲಿನ ಹಲಗೆಯಲ್ಲಿ ಕೊರೆದು ಮಾಡಿದವುಗಳಾಗಿವೆ. ಇಕ್ಕೇರಿಯ ಅಖಿಲಾಂಡೇಶ್ವರಿ ಅಮ್ಮನವರ ದೇವಾಲಯದ ಸುಖನಾಸಿಯ ಬಾಗಿಲು ಈ ಶೈಲಿಯಲ್ಲಿದೆ. ಇಂಥ ಬಾಗಿಲುಗಳನ್ನು ಕವಲೆದುರ್ಗ, ಗೋವರ್ಧನಗಿರಿ ಇತ್ಯಾದಿ ಸ್ಥಳಗಳಲ್ಲಿ ಕಾಣಬಹುದಾಗಿದೆ. ಇಕ್ಕೇರಿಯ ನಂದಿಮಂಟಪದ ನಾಲ್ಕು ಬದಿಗಳಲ್ಲಿ ಕಮಾನುಗಳಿವೆ. ಇದರ ಕಮಾನುಗಳ ಹೊರಬದಿಯಲ್ಲಿ ದ್ರಾವಿಡ ಮಾದರಿಯ ಕೋಷ್ಠ ಪಂಜರದ ಬಾಗಿಲಿನ ಬಿಜಾಪುರ ಕಮಾನುಗಳಿಗೆ ಹೆಚ್ಚು ಸಮೀಪವಾಗಿ ಅಲಂಕರಿಸಲಾಗಿ ಅಘೋರೇಶ್ವರ ದೇವಾಲಯದ ಕಕ್ಷಾಸನದ ಮೇಲ್ಭಾಗದಲ್ಲಿ ಇಂಥ ಕಮಾನುಗಳ ಜಾಲವಾತಾಯನಗಳನ್ನು ಸೇರಿಸಲಾಗಿದೆ. ದೇವಾಲಯದ ಗರ್ಭಗುಡಿಯ ಮೇಲ್ಕಟ್ಟಡವನ್ನು ಗುಮ್ಮಟದಂತೆ ರೂಪಿಸಿರುವುದನ್ನು ನಗರದ ನೀಲಕಂಠೇಶ್ವರ ದೇವಾಲಯದ ವಿಮಾನದಲ್ಲಿ ನೋಡಬಹುದು. ಈ ದೇವಾಲಯದ ಪ್ರಸ್ತರದ ಮೇಲೆ ಚಚ್ಚೌಕಾಕಾರದ ಕಟ್ಟಡವಿದ್ದು ಇದರ ನಾಲ್ಕು ಮೂಲೆಗಳಲ್ಲಿ ಕಲಶಗಳನ್ನು ಮಿನಾರ್‌ಗಳಂತೆ ಅಳವಡಿಸಲಾಗಿದೆ. ಈ ಕಟ್ಟಡದ ಮೇಲೆ ಗುಮ್ಮಟದಂತೆ ಕಾಣುವ ವಿಷ್ಣುಚ್ಛಂದ ಶಿಖರವಿದೆ. ಈ ಶಿಖರದ ನಾಲ್ಕು ಮುಖಗಳಲ್ಲಿ ಒಂದೊಂದು ಕೀರ್ತಿಮುಖವಿದೆ. ತಳವಿನ್ಯಾಸದಲ್ಲಿ ಬಿಜಾಪುರದಲ್ಲಿಯ ಒಂದು ಪ್ರಕಾರದ ಚೌಕೋನ ಗೋರಿ ನಿರ್ಮಿತಿಯನ್ನು ಹೋಲುವ ಮಾದರಿ ಗೆಣಸಿನಕುಣಿಯ (ಸಾಗರ ತಾಲ್ಲೂಕು) ಸಿದ್ದೇಶ್ವರ ದೇವಾಲಯ ಎತ್ತರ ಕಟ್ಟೆಯ ಮೇಲೆ ನಿರ್ಮಿತವಾಗಿದ್ದು, ಒಳಗೆ ಮಧ್ಯಭಾಗದಲ್ಲಿ ಚೌಕೋನ ಗರ್ಭಗೃಹವಿದೆ. ಇದರ ಸುತ್ತಲೂ ಧಾರಾಳವಾಗಿ ಓಡಾಡಲು ಪ್ರದಕ್ಷಿಣೆ ಹಾಕಲು ಸ್ಥಳವಿದೆ. ಈ ಪ್ರದಕ್ಷಿಣಪಥ ಹೊರ ಅಂಚಿನಲ್ಲಿ ಉದ್ದಕ್ಕೂ ಸಮಾನಾಂತರದಲ್ಲಿ ಕಂಬಗಳಿದ್ದು ಇವುಗಳ ನಡುವಿನ ಅಂತರವು ತೆರೆದಿದೆ. ಗರ್ಭಗೃಹದೊಳಗಡೆ ನಾಲ್ಕು ಕಂಭಗಳ ಮಂಟಪದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಎದುರುಭಾಗದಲ್ಲಿ ಬಹುಕಂಬಗಳ ಮಂಟಪವಿದೆ. ಈ ಕಟ್ಟಡದ ಶಿಖರ ಕದಂಬನಾಗರ ಮಾದರಿಯಂತಿದೆ. ಇಡೀ ಕಟ್ಟಡದ ತಲವಿನ್ಯಾಸ ಆದಿಲ್‌ಶಾಹಿ ಗೋರಿ ಕಟ್ಟಡದ ಮಾದರಿಯಂತಿರುವುದು ಗಮನಾರ್ಹ. ಗರ್ಭಗುಡಿಯ ಮುಂಬದಿಯ ಬಲ–ಎಡ ಬದಿಗಳಲ್ಲಿ ಒಂದೊಂದು ಕಮಾನಿನ ಪ್ರವೇಶದ್ವಾರವಿದೆ. ಇಲ್ಲಿ ಎರಡು ಕಮಾನು ದ್ವಾರಗಳ ಮೂಲಕ ಪ್ರವೇಶಿಸಬಹುದಾದ ಗರ್ಭಗುಡಿಯ ಹೊರಾಂಗಣದಲ್ಲಿ ಯಾವುದೇ ಶಿಲ್ಪಗಳಿರದೇ ರೇಖಾವಿನ್ಯಾಸಗಳಿರುವುದು. ಹಿಂದು–ಇಸ್ಲಾಂ ವಾಸ್ತುಶೈಲಿಯ ಪ್ರಭಾವವಿರಬಹುದೇನೋ.

ಜನಪದ ಅಥವಾ ಸ್ಥಾನಿಕ ಪ್ರಭಾವಗಳು: ಕೆಳದಿ ಕಾಲದ ದೇವಾಲಯಗಳಲ್ಲಿ ಸ್ಥಾನಿಕ ಕಟ್ಟಡ ಶೈಲಿಯ ನಿರ್ಮಾಣ ಪ್ರಭಾವವನ್ನು ನೋಡಬಹುದಾಗಿದೆ. ಉದಾ: ಮಲೆನಾಡಿನ ಕೆಲವು ದೇವಾಲಯಗಳಲ್ಲಿ ಗರ್ಭಗೃಹಕ್ಕೆ ಪಡಸಾಲೆಯೊಂದನ್ನು ಜೋಡಿಸಿದಂತಿರುತ್ತದೆ. ಇಂಥ ನಿರ್ಮಿತಿಗಳಲ್ಲಿ ಸ್ಥಳೀಯವಾಗಿ ದೊರೆಯುವ ಜಂಬಿಟ್ಟಿಗೆಗಳನ್ನು ಉಪಯೋಗಿಸಲಾಗಿರುತ್ತದೆ. ತೀರ್ಥಹಳ್ಳಿ ತಾಲ್ಲೂಕು ಭೀಮನಕಟ್ಟೆಯ ಕೆಲ ದೇವಾಲಯಗಳು ಸುತ್ತಲೂ ಸರಳವಾಗಿದ್ದರೂ ಅಚ್ಚುಕಟ್ಟಾಗಿರುವ ಜಂಬಿಟ್ಟಿಗೆಯ ಪ್ರಾಕಾರಗಳನ್ನು ನೋಡಬಹುದಾಗಿದೆ.

ಕೆಳದಿ ದೇವಾಲಯಗಳ ಗೋಡೆಯ ನಿರ್ಮಾಣ ಶೈಲಿಯಲ್ಲಿ ಒಂದು ಅತ್ಯಂತ ವಿಶಿಷ್ಟವಾದ ಸ್ಥಾನಿಕ ಬೆಳವಣಿಗೆಯನ್ನು ಕಾಣಬಹುದಾಗಿದೆ. ಅದೇಂದರೆ ಗೋಡೆಗಳನ್ನು ಕಲ್ಲಿನ ಚಪ್ಪಡಿಗಳಿಂದ ನಿರ್ಮಿಸಿರುವುದು. ಚಪ್ಪಡಿಗಳನ್ನು ಕಂಬಗಳ ಮಧ್ಯೆ ಅಡ್ಡವಾಗಿ ಇಲ್ಲವೆ ನೆಟ್ಟಗೆ ನಿಲ್ಲಿಸಿ ಉದ್ದುದ್ದವಾಗಿ ಜೋಡಿಸುವ ತಂತ್ರ ಮೂಲತಃ ಈ ತಂತ್ರವನ್ನು ಮರದ ಕಟ್ಟಡಗಳಲ್ಲಿ ಕಾಣಬಹುದು. ಮಲೆನಾಡಿನಲ್ಲಿ ಅತ್ಯಂತ ಜನಪ್ರಿಯವಾಗಿರುವ ಮರವಾಸ್ತು ತಂತ್ರಗಾರಿಕೆಯನ್ನು ಶಿಲೆಯಲ್ಲಿ ಅನುಕರಿಸುವ ಮೂಲಕ ಸಣ್ಣಪುಟ್ಟ ಶಿಲಾದೇವಾಲಯಗಳನ್ನು ಸುಲಭವಾಗಿ ನಿರ್ಮಿಸಬಹುದು. ಆದರೆ ಕೆಳದಿಯವರು ಇದನ್ನು ರಾಮೇಶ್ವರ, ವೀರಭದ್ರ, ಪಾರ್ವತೀ ದೇವಾಲಯಗಳಂಥ ದೊಡ್ಡ ದೇವಾಲಯಗಳಲ್ಲಿ ಅನುಸರಿಸಿದ್ದು ಕೆಳದಿ ವಾಸ್ತು ಶೈಲಿಯ ಕೊಡುಗೆಯಾಗಿದೆ. ಈ ತಂತ್ರವನ್ನು 17–18ನೆಯ ಶತಮಾನದಲ್ಲಿ ಕರ್ನಾಟಕದ ಮಲೆನಾಡಿನ ನಿರ್ಮಿತಿಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ರೀತಿಯ ಗೋಡೆಗಳ ಮೇಲೆ ತೀರ ತೆಳುವಾದ ಉಬ್ಬುಶೈಲಿಯಲ್ಲಿ ರೇಖಾಚಿತ್ರಗಳಂತೆ ತೋರುವ ಶಿಲ್ಪಗಳನ್ನು ಕೊರೆಯಲಾಗಿದೆ. ಈ ತಂತ್ರದಲ್ಲಿ ಕಮಾನು ಬಾಗಿಲುಗಳನ್ನು ಹಾಗೂ ಕಿಟಕಿಗಳನ್ನು ಸುಲಭವಾಗಿ ರಚಿಸಲಾಗಿದೆ.

ಮರದ ಕೆತ್ತನೆ ಕೆಳದಿ ದೇವಾಲಯಗಳ ಕಂಬಗಳ ಮೇಲೆ ವಿಶೇಷ ಪ್ರಭಾವ ಬೀರಿದೆ. ಕೆಳದಿ ಕಟ್ಟಡಗಳ ಮರದ ಕಂಬಗಳ ಬೊಡ್ಡೆ ದಪ್ಪವಾಗಿದ್ದು ಮೇಲ್ಮುಖವಾಗಿ ಕಿರಿದಾಗಿರುತ್ತಿತ್ತು. ನೈಸರ್ಗಿಕವಾಗಿಯೇ ಹೀಗೆ ಇರುವ ಮರದ ಕಾಂಡಗಳನ್ನು ಕಂಬಗಳನ್ನಾಗಿ ಉಪಯೋಗಿಸಲಾಗುತ್ತಿತ್ತು. ಆದರೆ ಇದೇ ರೀತಿಯಲ್ಲಿ ಕಲ್ಲಿನ ಕಂಬಗಳನ್ನು ಕೆತ್ತುವ ಪರಿಪಾಠವನ್ನು ಶಿಲ್ಪಿಗಳು ರೂಢಿಸಿಕೊಂಡಿದ್ದರು. ಈ ಭಾಗದ ದೇವಾಲಯಗಳಲ್ಲಿ 18ನೆಯ ಶತಮಾನಕ್ಕೆ ಹಿಂದಿನ ಮರದ ಕಂಬ ಮಾದರಿಗಳು ನೋಡಲು ಸಿಗುತ್ತವೆ. ಇವುಗಳ ಬೊಡ್ಡೆ ಚೌಕಾಕಾರದಲ್ಲಿದ್ದು, ಕಂಬದ ಮಧ್ಯಭಾಗದ ಕಾಂಡ ಎಂಟು ಮೂಲೆಯದಾಗಿ ಪರಿವರ್ತಿತವಾಗಿರುತ್ತದೆ. ಮೇಲ್ಭಾಗದಲ್ಲಿ ಕಮಲದ ಮೊಗ್ಗಿನಂಥ ಭಾಗವನ್ನು ಲಶುನದಲ್ಲಿ ಕೆತ್ತಲಾಗಿರುತ್ತದೆ. ಈ ಮಾದರಿಯ ಕಲ್ಲಿನ ಕಂಬಗಳು 18ನೆಯ ಶತಮಾನದ ನಿರ್ಮಿತಿಗಳಲ್ಲಿವೆ. ಈ ರೀತಿಯಾಗಿ ಕೆಳದಿ ಕಾಲದಲ್ಲಿ ಶಿಲೆ ಹಾಗೂ ಮರದ ಬಳಕೆ ಒಟ್ಟಾಗಿ ಬೆಳೆದುಬಂದಿದೆ.



**ಭವಾನಿ ದೇವಾಲಯದಲ್ಲಿಯ ಕಾಷ್ಠ ಶಿಲ್ಪ, ಕೆಳದಿ**

ಕೆಳದಿಯ ಕಾಲದ ರಕ್ಷಣಾತ್ಮಕ ವಾಸ್ತುನಿರ್ಮಿತಿ ಬೆಳೆದುದನ್ನು ನೋಡಬಹುದು. ಇಕ್ಕೇರಿ, ನಗರ, ಕವಲೆದುರ್ಗ, ಬೇಕಲ, ಕುಂಬಳ ಮತ್ತು ಕಾಸರಗೋಡುಗಳಲ್ಲಿ ಕೆಳದಿಯ ಕಾಲದ ಕೋಟೆಗಳಿವೆ. ಇವೆಲ್ಲವೂ ಬಹುತೇಕ ಗ್ರಾನೈಟ್/ಜಂಬಿಟ್ಟಿಗೆಯ ನಿರ್ಮಾಣಗಳಾಗಿ ಕೆಳದಿ ಅರಸರ ವಾಸ್ತುಶೈಲಿಯ ವಿಶಿಷ್ಟತೆಗೆ ಒಂದು ಉದಾಹರಣೆಯೆಂದರೆ ಶಿವಮೊಗ್ಗದಲ್ಲಿರುವ ಶಿವಪ್ಪನಾಯಕನ ಅರಮನೆ. ಇದರಲ್ಲಿ ಅಧಿಕವಾಗಿ ಬಳಕೆಯಾಗಿರುವುದು ಮರ. ಉಳಿದಂತೆ ಮಣ್ಣು ಮತ್ತು ಗಜ್ಜುಗಾರೆ. ಎರಡು ಅಂತಸ್ತುಗಳ ಈ ಅರಮನೆ ಜನೋಪಯೋಗಿಯಾಗಿದ್ದು ಇಲ್ಲಿಯ ಪ್ರೇಕ್ಷಕಭವನ ಆಕರ್ಷಕವಾಗಿದೆ. ವಾಸ್ತುಶೈಲಿಗೆ ಇದೊಂದು ಉತ್ತಮ ಉದಾಹರಣೆ. ಇಲ್ಲಿಯೂ ಕಮಾನು ಇತ್ಯಾದಿಗಳ ರಚನೆಯಲ್ಲಿ ಇಸ್ಲಾಂಶೈಲಿಯ ಪ್ರಭಾವವನ್ನು ಕಾಣಬಹುದಾಗಿದೆ. ಈ ಕಾಲದಲ್ಲಿ ಅನೇಕ ಮಠಗಳು ನಿರ್ಮಾಣಗೊಂಡಿದೆ. ಇವುಗಳಲ್ಲೆಲ್ಲ ಮರದ ಬಳಕೆ ಅಧಿಕವಾಗಿದೆ. ಕೆಳದಿ ಕಾಲದ ನೀರಿನ ವ್ಯವಸ್ಥೆಗಾಗಿ ನಿರ್ಮಾಣ ಮಾಡಿರುವ ಕೆರೆಗಳು, ಕೆಲವು ಸರೋವರಗಳು ಗಮನಾರ್ಹವಾಗಿವೆ. ನಗರದ ಗಂಗಾಕೊಳ, ಆನಂದಪುರದ ಚಂಪಕಸರಸ್ಸು, ಕೆಳದಿಯ ಸಂಪೆಕಟ್ಟೆ ಕೆರೆ, ತೊಟ್ಟಿಲಬಾವಿ ಇವೆಲ್ಲವುಗಳ ಸುಂದರವಾದ ವಾಸ್ತುಶೈಲಿ ಮೆಚ್ಚುವಂಥದ್ದು.

ಕೆಳದಿಯ ಅರಸರು ಆಳಿದ ಬಹುಭಾಗ ಮಲೆನಾಡೇ ಆಗಿತ್ತು. ಆದ್ದರಿಂದ ಮಲೆನಾಡಿನ ಹವೆಗೆ ತಕ್ಕಂತೆ ಇಲ್ಲಿಯ ಕಟ್ಟಗಳು ನಿರ್ಮಾಣವಾಗಬೇಕಾಗಿತ್ತು. ಕೆಳದಿ ಅರಸರ ಕಾಲದ ವಾಸ್ತುಶಿಲ್ಪವನ್ನು ಕೆಳದಿ ಶೈಲಿ, ಮಲೆನಾಡ ಶೈಲಿ, ಭಾರತೀಯ–ಇಸ್ಲಾಂ ಶೈಲಿ ಇತ್ಯಾದಿಯಾಗಿ ಗುರುತಿಸುವ ಕ್ರಮವಿದೆ. ಕೆಳದಿಯ ಅರಸರು ತಮ್ಮ ಕಾಲದಲ್ಲಿ ನಿರ್ಮಿತವಾದ ವಾಸ್ತುಗಳು ಎಲ್ಲ ರೀತಿಯಲ್ಲೂ ಉಪಯೋಗವಾಗಬೇಕು ಎಂಬ ಅಭಿಲಾಷೆಯುಳ್ಳವರಾಗಿದ್ದರು. ಆ ಕಾಲದಲ್ಲಿ ಸುತ್ತಮುತ್ತಲು ಪ್ರಚಲಿತವಿದ್ದ ಶೈಲಿಗಳನ್ನು ತಮ್ಮದಾಗಿಸಿಕೊಂಡರು ಎಂದು ಹೇಳಬಹುದು. (ಎಸ್.ಜಿ.ಎಸ್.)

**ಸ್ಮರಣ ಶಿಲ್ಪಗಳು:** ಕೆಳದಿ ರಾಜ್ಯದ ಇತಿಹಾಸವನ್ನು ಪ್ರತಿಬಿಂಬಿಸುವ ಹಲವಾರು ಸ್ಮರಣಶಿಲ್ಪಗಳು ಉಳಿದುಕೊಂಡಿವೆ. ಆಳಿ ಅಳಿದ ರಾಜ ಮತ್ತು ರಾಣಿಯರ ಸಮಾಧಿಗಳು ಇದರೊಂದಿಗೆ ಸೇರಿವೆ. ಇವರಲ್ಲಿ ಹಿರಿಯ ವೆಂಕಟಪ್ಪನಾಯಕ (1583–1630) ನವರೆಗಿನ ಸಮಾಧಿಗಳು ಇಕ್ಕೇರಿಯಲ್ಲಿವೆ.

ಕೊಪ್ಪಲುಮಠ: ಬಿದನೂರಿನಿಂದ ಆಳಿದ ವೀರಭದ್ರನಾಯಕ (1630–46) ನಿಂದ ಮುಂದೆ ಆಳಿದವರ ಸ್ಮರಣ ಶಿಲ್ಪಗಳು ಬಿದನೂರು ನಗರದಲ್ಲಿವೆ. ಈ ಸಮಾಧಿಗಳಿರುವ ಸ್ಥಳವನ್ನು ಇಕ್ಕೇರಿ ಮತ್ತು ಬಿದನೂರಿನಲ್ಲಿ ಕೊಪ್ಪಲು ಮಠವೆಂದು ಕೆಳದಿ ನೃಪವಿಜಯದಲ್ಲಿ ಉಲ್ಲೇಖಿಸಿದೆ. ಕೊಪ್ಪಲು ಎಂದರೆ ಮರಗಿಡಗಳಿಂದ ಆವೃತವಾದ ತೋಪು. ಮಠ ಎಂದರೆ ಇದರ ಸಮೀಪದಲ್ಲಿರಬಹುದಾದ ಗುರುಪೀಠ.

ಸ್ಮಾರಕಗಳು: ಕೊಪ್ಪಲು ಮಠದಲ್ಲಿ ಶಿವಪ್ಪನಾಯಕ (1646–61), ವೆಂಕಟಪ್ಪನಾಯಕ (1661–62) ಭದ್ರಪ್ಪನಾಯಕ (1662–64) ಹಿರಿಯ ಸೋಮಶೇಖರನಾಯಕ (1664–72) ಚನ್ನಮ್ಮಾಜಿ (1672–98) ಹಿರಿಯ ಬಸಪ್ಪನಾಯಕ (1698–1715) ಕಿರಿಯ ಸೋಮಶೇಖರ ನಾಯಕ (1715–40) ಕಿರಿಯ ಬಸಪ್ಪನಾಯಕ (1740–55) ಮತ್ತು ಚನ್ನಬಸವನಾಯಕ (1755–58) ಹಾಗೂ ಕೊನೆಯ ರಾಣಿ ವೀರಮ್ಮಾಜಿ (1758–63) ಎಂದು ಹೇಳಲಾಗುತ್ತಿರುವ ಸ್ಮಾರಕ ಶಿಲ್ಪಗಳಿವೆ.

ಪ್ರತಿಯೊಂದು ಗದ್ದುಗೆಯ ಮುಂದೆ ಸಮಾಧಿಸ್ಥರಾದವರ ಶಿಲ್ಪವನ್ನು ಕೆತ್ತಿದ ಶಿಲೆಯನ್ನು ನೆಟ್ಟಿದೆ. ಇದು ಸು.75 ಸೆಂಮೀ ಎತ್ತರ ಹಾಗೂ 60 ಸೆಂಮೀ ಅಗಲವಿದೆ. ಇವೆಲ್ಲವೂ ಕೃಷ್ಣಶಿಲೆ ಮೇಲುಭಾಗದಲ್ಲಿ ಸೂರ್ಯ ಮತ್ತು ಚಂದ್ರನ ಚಿತ್ರವಿದೆ. ರಾಜ ಅಥವಾ ರಾಣಿಯ ಪಕ್ಕದಲ್ಲಿ ಒಂದು ಸ್ತ್ರೀವಿಗ್ರಹವಿದೆ. ಇದು ಮಹಾಸತಿ ಕಲ್ಲಿನಂತಿದ್ದು ಕೈಯಲ್ಲಿ ನಿಂಬೆಹಣ್ಣಿದ್ದು ನೃತ್ಯಭಂಗಿಯಲ್ಲಿದೆ.

ಸ್ಮಾರಕದ ಮುಂದಿರುವ ಸ್ಮಾರಕ ಶಿಲೆಯಲ್ಲಿ ಶಾಸನವಿಲ್ಲ. ರಾಜ ಅಥವಾ ರಾಣಿಯರ ಹೆಸರನ್ನಾಗಲೀ ಹಾಗೂ ನಿಧನ ಹೊಂದಿದ ಕಾಲವನ್ನು ಕೆತ್ತಿಲ್ಲ. ಈ ಸಮಾಧಿಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಸಾಲಾಗಿ ಕಟ್ಟಲಾಗಿದೆ. ಆದುದರಿಂದ ಇವುಗಳನ್ನು ಗುರುತಿಸ ಬಹುದು. ಶಿವಪ್ಪನಾಯಕನ ಗದ್ದುಗೆ ಮಾತ್ರ ಸಾಲಿನಿಂದ ಸ್ವಲ್ಪ ಮುಂದಿದೆ. ವೆಂಕಟಪ್ಪನಾಯಕ ನೆಂದು ಗುರುತಿಸಲಾಗುವ ಗದ್ದುಗೆ ಮುಂದೆ ಒಂದು ಪುಟ್ಟ ಮಂಟಪವಿದೆ. ಇದು ಸು. 1.80 ಮೀ ಎತ್ತರವಾಗಿದೆ. ಕೆಳದಿ ವೀರಭದ್ರ ದೇವಾಲಯದ ಮುಂದಿನ ಧ್ವಜ ಸ್ಥಂಭದ ತಳ ಭಾಗದಲ್ಲಿರುವ ರಾಣಿ ಚನ್ನಮ್ಮಾಜಿ ಚಿತ್ರವನ್ನು ಹೋಲುವಂತಹ ಸ್ಮಾರಕ ಶಿಲ್ಪದ ಸಮಾಧಿ ಚೆನ್ನಮ್ಮಾಜಿಯದಾಗಿರಬಹುದು.

ಮೇಲಿನ ಸ್ಮಾರಕಗಳ ಸಾಲಿನ ಕೊನೆಯಲ್ಲಿರುವ ಸಮಾಧಿ ಕೆಳದಿಯ ಅರಸೊತ್ತಿಗೆಯ ಕೊನೆಯ ರಾಣಿಯದು. ಇವಳು ನರಗುಂದದ ಬಳಿ ಶಿವೈಕ್ಯಳಾದಳು ಆದರೂ ಇವಳ ಗದ್ದುಗೆ ಸಹ ಈ ಸಾಲಿನಲ್ಲಿದೆ ಎಂದು ಹೇಳಿದ್ದರೂ ಇದಕ್ಕೆ ಸ್ಪಷ್ಟವಾದ ಆಧಾರ ಆವಶ್ಯಕವಾಗಿದೆ.

ಕೆಳದಿ ರಾಜ ಮತ್ತು ರಾಣಿಯರ ಸಮಾಧಿಗಳು ಜೊತೆಜೊತೆಯಲ್ಲಿರುವುದು ಕೆಳದಿ ಇತಿಹಾಸದಲ್ಲಿದೆ. ಇಂಥ ಸ್ಮಾರಕಗಳು ಬಿದನೂರಿನ ಹಳೆಯ ಮಠದಲ್ಲಿದೆ ಎಂಬ ಅಭಿಪ್ರಾಯವಿದೆ. ಆದರೆ ಈ ಹಳೆಯ ಮಠ ಯಾವುದೆಂದು ತಿಳಿಯುವುದಿಲ್ಲ. ಕಾನಗದ್ದೆಯ ಕೊಪ್ಪಲು ಮಠದಲ್ಲಿರುವ ಸಮಾಧಿಗಳ ಪಕ್ಕದಲ್ಲಿ ರಾಣಿಯರ ಸಮಾಧಿಗಳು ಕಂಡುಬಂದಿಲ್ಲ. ಒಟ್ಟಿನಲ್ಲಿ ಈ ಸ್ಮಾರಕ ಶಿಲೆಗಳ ಹೆಚ್ಚಿನ ಅಧ್ಯಯನ ಗಮನಾರ್ಹವಾದುವು. (ಆರ್.ಬಿ.ಎಸ್.)

**ಶಾಸನಗಳು:** ಇವರಿಗೆ ಸಂಬಂಧ ಪಟ್ಟ ದಾಖಲೆಗಳು ಬಹುಮುಖಿಯಾಗಿವೆ. ಮತ್ತಾವ ಪಾಳೆಯಪಟ್ಟೂ ನೀಡಿರದಷ್ಟು ಶಾಸನಗಳನ್ನು ಇವರು ಬಹುಭಾಷೆಯಲ್ಲಿ ಬರೆಸಿರುವುದು ಗಮನಾರ್ಹ. ಅವು ಶಿಲಾಶಾಸನ, ತಾಮ್ರಪಟ, ನಿರೂಪಗಳು, ಕಡತ, ಆಭರಣ ಉಪಕರಣಗಳ ಮೇಲಿನ ಬರೆಹಗಳು ಕೆಳದಿ ಇತಿಹಾಸ ರಚನೆಗೆ ಪ್ರಮುಖ ಆಕರಗಳಾಗಿವೆ. ಇವರ ಕಾಲದ ದಾನ ಶಾಸನಗಳಲ್ಲಿ ಕ್ರಯದಾನದ ಸಂಖ್ಯೆ ಹೆಚ್ಚು ಸರ್ಕಾರದಿಂದ ಕಡಿಮೆ ಬೆಲೆಯಲ್ಲಿ ಭೂಮಿಯನ್ನು ಕೊಂಡು ಸದುದ್ದೇಶಕ್ಕಾಗಿ ನೀಡಲಾಗುತ್ತಿತ್ತು. ಇವುಗಳ ಪಾಠ ರಚನೆಯಲ್ಲಿ ಒಂದು ನಿರ್ದಿಷ್ಟವಾದ ಕ್ರಮವಿತ್ತು. ಪ್ರಶಸ್ತಿ ಶಾಸನಗಳು ಬಹುಮಟ್ಟಿಗೆ ಶಿಲಾಶಾಸನಗಳು. ಇದಕ್ಕೆ ಹಿರೇಶಕುನದ 1696ರ ಶಾಸನವನ್ನು ಉಲ್ಲೇಖಿಸಬಹುದು.

ತಾಮ್ರ ಮತ್ತು ನಿರೂಪಗಳಲ್ಲಿ ರಾಜಾಜ್ಞೆಗಳನ್ನು ಜನರಿಗೆ ತಿಳಿಸುವ ಶಾಸನಗಳು ದೊರೆತಿವೆ. ಉದಾ: ಇಕ್ಕೇರಿಯ ಲಿಂಗಾಭಟ್ಟರಿಗೆ ಕೊಟ್ಟ ಆದೇಶದಂತೆ ಇನ್ನು ಮುಂದೆ ನಾರಾಯಣ, ತಿರುಮಲ ಮೊದಲಾದ ದೇವಸ್ಥಾನಗಳಲ್ಲಿ ಸ್ಮಾರ್ತರು ಪೂಜೆ ಮಾಡಬಾರದು ಅವರ ಬದಲಿಗೆ ವೈಷ್ಣವರೇ ಪೂಜೆ ಮಾಡಬೇಕು ಎಂಬ ಆಜ್ಞೆ ವಿಧಿಸಿದ್ದುದು. ತಾಮ್ರ ಶಾಸನದ ಪ್ರತಿಗಳು ತಾಳೆಯೋಲೆಗಳಲ್ಲಿ ಮತ್ತು ಕಾಗದಗಳಲ್ಲಿ, ಕಡತಗಳಲ್ಲಿವೆ. ರಾಜ್ಯದ ಆಡಳಿತದ ವಿವರಗಳನ್ನು ದಾಖಲಿಸುವ ಸಂದರ್ಭದಲ್ಲಿ ಇವನ್ನು ಬಳಸಿಕೊಳ್ಳುತ್ತಿದ್ದರು. ತಾಮ್ರ ಶಾಸನಗಳ ಸಂಖ್ಯೆ ಕಡಿಮೆ. ಕಡತಗಳು ಕವಲೆದುರ್ಗ, ಕಳಸ, ಶೃಂಗೇರಿ, ಕೂಡ್ಲಿಗಳಲ್ಲಿ ದೊರೆತಿವೆ. ಕಡತಗಳಲ್ಲಿ ವಿಶೇಷವಾಗಿ ಕಂದಾಯ ವಿವರಗಳೇ ನಿರೂಪಿತವಾಗಿದ್ದರೂ ಕಂದಾಯ ಇಲಾಖೆಗೆ ಸಂಬಂಧಿಸಿದ ದಾನ ದತ್ತಿಯ ವಿವರಗಳೂ ಇವುಗಳಲ್ಲಿ ಲಭಿಸುತ್ತದೆ.

ಪ್ರಾದೇಶಿಕ ಪ್ರಸರಣ: ಕೆಳದಿ ನಾಯಕರ ಆಳ್ವಿಕೆಯ ಪ್ರದೇಶದಲ್ಲಿ ಸು.600ಕ್ಕೂ ಹೆಚ್ಚು ಶಾಸನಗಳು ಇದುವರೆಗೆ ಶೋಧವಾಗಿವೆ. ಇವು ಬಹುಮಟ್ಟಿಗೆ ಪ್ರಕಟವಾಗಿವೆ. ಕವಲೆದುರ್ಗದ ಮಠದಲ್ಲಿ 90ಕ್ಕೂ ಹೆಚ್ಚು ತಾಮ್ರಶಾಸನಗಳು ಲಭ್ಯವಾಗಿವೆ. ಹೊಸನಗರ ತಾಲ್ಲೂಕಿನ ನಿಟ್ಟೂರಿನಲ್ಲಿ ಸಿಕ್ಕ ಹಸ್ತಪ್ರತಿಯೊಂದರಲ್ಲಿ 150ಕ್ಕೂ ಹೆಚ್ಚು ನಿರೂಪಗಳು ದಾಖಲಾಗಿವೆ. ಅಲ್ಲದೆ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣಕನ್ನಡ (ಮಂಗಳೂರು), ಧಾರವಾಡ, ಗದಗ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಶಾಸನಗಳು ದೊರೆತಿವೆ. ಹೆಚ್ಚಿನ ಶಾಸನಗಳು ರಾಜಧಾನಿಗೆ ಹತ್ತಿರದಲ್ಲಿ ಸಿಕ್ಕಿದ್ದರೂ ಇವರ ಮೇರೆ ಎಲ್ಲಿಯವರಗೆ ಹಬ್ಬಿದ್ದಿತೊ ಅಲ್ಲಿಯವರೆಗೆ ಶಾಸನಗಳ ಪ್ರಸಾರ ಕಂಡುಬರುತ್ತದೆ. ಕರ್ನಾಟಕದಿಂದ ಹೊರಗೆ ವಾರಾಣಸಿ, ಗೋವಗಳಲ್ಲಿ ಸಹ ಇವರ ಶಾಸನಗಳು ದೊರೆತಿವೆ.

ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಚೌಡಗೌಡನಿಂದ ಕೆಳದಿ ಅರಸು ಮನೆತನ ಅಸ್ತಿತ್ವಕ್ಕೆ ಬಂದು, ಮುಂದುವರೆಯಿತು. ಇವನ 1506ರ ನಾಡಕಲಸಿ ಶಾಸನವೇ ಈ ಮನೆತನದ ಪ್ರಥಮ ಶಾಸನ. ಇಲ್ಲಿಂದ 2ನೆಯ ಸೋಮಶೇಖರ ನಾಯಕನವರೆಗಿನ 18 ಜನರ ಆಳ್ವಿಕೆಯಿಂದಾಗಿ 265 ವರ್ಷ ಅಸ್ತಿತ್ವದಲ್ಲಿದ್ದ ಈ ಮನೆತನದಲ್ಲಿ ಸದಾಶಿವರಾಯ, ಸಂಕಣ್ಣನಾಯಕ, ಶಿವಪ್ಪನಾಯಕರು ಸುಪ್ರಸಿದ್ಧರೆಂದು ತಿಳಿದು ಬರುತ್ತದೆ. ಚೆನ್ನಮ್ಮ, ವೀರಮ್ಮ ಪ್ರಸಿದ್ಧ ರಾಣಿಯರು. ಸದಾಶಿವನಾಯಕನನ್ನು ಪಡುವಣ ಸಮುದ್ರಾಧೀಶ್ವರ ಎಂದು ಕರೆದಿದೆ.

ಕೆಳದಿ ರಾಜ್ಯ ದಕ್ಷಿಣದಲ್ಲಿ ಕೇರಳದ ಬಿಲಿಯಾಪಟಮ್, ಉತ್ತರದಲ್ಲಿ ಕಾರವಾರ, ಗೋವ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಚಿಕ್ಕನಾಯಕಹಳ್ಳಿಗಳವರೆಗೆ ವಿಸ್ತರಿಸಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಪ್ರದೇಶದ ಆಡಳಿತದ ಅನುಕೂಲತೆಗಾಗಿ ಮಂಡಲ, ನಾಡು, ಸೀಮೆ, ವೇಂಠೆ ಹೋಬಳಿ ಇತ್ಯಾದಿಯಾಗಿ ವಿಂಗಡಿಸಲಾಗಿತ್ತು. ಅಧಿಕಾರಿಗಳಲ್ಲಿ ಪ್ರಧಾನ ಮಾದಪ್ಪಯ, ಪ್ರಧಾನಿ ಗುರುಬಸವಯ್ಯ, ಪ್ರಧಾನಿ ವೀರಭದ್ರ ಮೊದಲಾದವರ ಉಲ್ಲೇಖಗಳಿದ್ದು ನಿರ್ವಾಣಯ್ಯ ಮೊದಲಾದವರೂ ರಾಜಕಾರ್ಯವನ್ನು ನಿರ್ವಹಿಸಿದ ವಿಷಯ ತಿಳಿದುಬರುತ್ತದೆ.

ಸಾಮಾನ್ಯವಾಗಿ ಈ ಶಾಸನಗಳು ಮುಖ್ಯ ವಿಷಯಗಳ ಜೊತೆಗೆ ರಾಜಕೀಯ ಮತ್ತು ಧಾರ್ಮಿಕ ವಿಚಾರಗಳನ್ನು ಹೇಳುತ್ತವೆ. ಹೀಗಿದ್ದೂ ಆಗಾಗ ಬರುವ ಸಾಮಾಜಿಕ ವಿಚಾರಗಳು ಸಮಕಾಲೀನ ಪರಿಸ್ಥಿತಿಯನ್ನು ತಿಳಿಸುತ್ತವೆ. ಸಿದ್ಧಹಳ್ಳಿ, ಹೊನಗೇರಿ, ಶಾಸನಗಳು ನೆತ್ತರ ಕೊಡುಗೆಯನ್ನು ತಿಳಿಸುತ್ತಿದ್ದರೆ, ಶಾಸನವೊಂದು ಕರಿಯ ತಿಮ್ಮಗೌಡನ ಹೆಂಡತಿ ರಾಮಕ್ಕ ಮಾಸ್ತಿಯಾದುದನ್ನು ಹೇಳುತ್ತದೆ. ಪಟ್ಟನಹಳ್ಳಿಯ ಶಾಸನ ಇಲ್ಲಿಯ ಭದ್ರಗೌಡನ ಕಣ್ಣು ತೆಗೆಯಿಸಿದ, ಆ ಕಾರಣವಾಗಿ ಹೊಲವನ್ನು ಉಂಬಳಿ ಬಿಟ್ಟ ವಿಷಯವನ್ನು ವ್ಯಕ್ತಪಡಿಸುತ್ತದೆ ಯಾದರೂ ಕಣ್ಣು ತೆಗೆಯಿಸಿದ ಕಾರಣವನ್ನು ತಿಳಿಸುವುದಿಲ್ಲ. ಪುಂಡತನ ಮಾಡಿದ ಬಸಪ್ಪನಿಗೆ ಶಿಕ್ಷೆ ನೀಡಿದ ವಿಷಯ ಶಿಕಾರಿಪುರ ಶಾಸನದಲ್ಲಿದೆ. ಹುಲಿಮನೆ ಕಾಳಿ ಸುಬ್ಬಣ್ಣನ ಮಗ ಶೇಷಯ್ಯನಿಗೆ ಇಕ್ಕೇರಿ ಶೇಷಾಚಾರ್ಯರ ಮಗ ಭೀಮಾಚಾರ್ಯನು ಬರೆದುಕೊಟ್ಟ ಹೊಲೆಯಾಳೂ ಹೆಣ್ಣಾಳೂ ಕ್ರಯಚೀಟಿಯನ್ನೊಳಗೊಂಡ ಹುಲಿಮನೆ ಶಾಸನ ಮಹತ್ತ್ವದ್ದಾಗಿದೆ. ಅಲ್ಲಿ ನಾನು ನನ್ನ ಅವಸರ ನಿಮಿತ್ತವಾಗಿ ನಂನ ಹೊಲೆಯಾಳು ಕಂನನ ಹೆಂಡತಿ ಚಉಡಿಯೆಂಬ ಹುಡುಗಿಯನ್ನು ನಿಮಗೆ ಕ್ರಯಕ್ಕೆ ಕೊಟ್ಟನಾಗಿ, ಯೀ ಹೆಂಣು ಅಳಿಗೆ ಬುದ್ಧಿವಂತರು ಕಂಡು ಕಟ್ಟಿದ ಕ್ರಯ ಗ 3 ಅಕ್ಷಾರದಲು ಮೂರು ವರಹಂನ ತೆಗೆದುಕೊಂಡು ಯೀ ಹೆಂಣಾಳೂ ಹುಡುಗಿಯನ್ನು ನಿಮಗೆ ಕ್ರಯ ಮೂಲಕ್ಕೆ ಕೊಟ್ಟೆವು ಎಂಬ ವಿವರವಿದೆ. ಇಲ್ಲಿ ತನ್ನ ಹೊಲೆಯಾಳಿನ ಹೆಂಡತಿಯನ್ನು ಮೂರು ಗದ್ಯಾಣಕ್ಕೆ ಮಾರಿದುದು ಸಾಮಾಜಿಕ ಶ್ರೇಣಿಯಲ್ಲಿ ನಡೆಯುತ್ತಿದ್ದ ಅನ್ಯಾಯ, ಹೆಣ್ಣಿನ ಮಾರಾಟ ಅಂದಿನ ಸಾಮಾಜಿಕ ವ್ಯವಸ್ಥೆ ಕುರಿತು ಈ ಶಾಸನ ಬೆಳಕು ಚೆಲ್ಲುತ್ತದೆ. ಯೀ ಹೆಂಣಿಗೆ ಆದಿ ಅಡಮು ಅಡ್ಡಿ ಸಡ್ಡಿಯೇನು ಉಂಟಾದಂನ್ನು ನಾನೇ ನೋಡಿ ಕೊಂಡೇನು ಎಂಬ ಭೀಮಾಚಾರ್ಯನ ಒಪ್ಪಿಗೆ ಇಲ್ಲಿ ಗಮನಿಸ ತಕ್ಕ ಸಂಗತಿಯಾಗಿದೆ. ನಗರ ಮತ್ತು ನಾಡಕಲಸಿ ಶಾಸನಗಳು ವ್ಯಕ್ತಿಯೊಬ್ಬ ಅಪುತ್ರಿಕನಾಗಿ ಸತ್ತರೆ ಅವನ ಆಸ್ತಿ ದಾಯಾದಿಗಳಿಗೆ ಸ್ವಗೋತ್ರದವರಿಗೆ. ಇವರಿಲ್ಲದಿದ್ದರೆ ಆ ಗ್ರಾಮದ ದೇವರಿಗೆ ಬಿಡಬೇಕೇ ಹೊರತು ಅರಮನೆಗೆ ತೆಗೆದುಕೊಳ್ಳಕೂಡದೆಂದು ತಿಳಿಸುತ್ತದೆ. ಪ್ರತ್ಯೇಕ ಅಧ್ಯಯನ ವಿಷಯಗಳೇ ಆಗಿವೆ. ಶಾಸನದಲ್ಲಿ ಉಲ್ಲೇಖವಾಗಿರುವ ಅನ್ಯಾಯ ದಂಡ, ಉಪ್ಪಿನ ವಡಿಕೆ, ಕೊಡವೀಸ, ಚಂಗಮ, ವಿರಾಡ, ಮೂಲವೀಸ, ಸಿದ್ದಾಯ, ಧರಣ ಮೊದಲಾದ ಆರ್ಥಿಕ ವ್ಯವಸ್ಥೆ ಹಾಗೂ ಕೃಷಿ ವಾಣಿಜ್ಯದ ಸ್ಥಿತಿಗತಿಗಳ ಬಗ್ಗೆ ತಿಳಿಸುತ್ತವೆ.

ಬಹುಪಾಲು ಶಾಸನಗಳು ಧಾರ್ಮಿಕ ವಿಷಯಕ್ಕೆ ಮೀಸಲಾಗಿದೆ. ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ, ಶಿವ ಗುರು ಭಕ್ತಿ ಪರಾಯಣ ಎಂದು ತಪ್ಪದೇ ಕರೆದುಕೊಂಡಿರುವ ಕೆಳದಿ ಅರಸರು ಏಕ ಕಾಲಕ್ಕೆ ಶೈವ ಮತ್ತು ವೀರಶೈವ ನಿಷ್ಠೆಗಳನ್ನು ಮೆರೆದಿದ್ದಾರೆ. ಮಲ್ಲಿಕಾರ್ಜುನ, ಶಂಭುಲಿಂಗ, ಸೋಮನಾಥ, ವೀರಭದ್ರ, ಅಘೋರೇಶ್ವರ, ಸಿದ್ಧಲಿಂಗೇಶ್ವರ, ಬಸವೇಶ್ವರ ಇತ್ಯಾದಿ ದೇವಾಲಯಗಳನ್ನು ಇವರ ಕಾಲದಲ್ಲಿ ನಿರ್ಮಿಸಲಾಯಿತು.

ಜೀರ್ಣೋದ್ಧಾರಗೊಂಡವು ವಿರೂಪಾಕ್ಷ ದೇವರಮಠ, ಸೋಮನಾಥ ದೇವರ ಮಠ, ಹೊಸಪೇಟೆ ಮಠ, ಚೆನ್ನಬಸವೇಶ್ವರ ಮಠ, ಕಾಶೀ ಪೀಠ ಮಠ, ಕಲ್ಲಿನ ಮಠ, ಗದ್ದಿಗೆ ಮಠಗಳಲ್ಲದೆ ವಶೀಕೃತ ಮಠ, ನಿರಾಸಿ ಮಠ, ಮಹತ್ತಿನ ಮಠ, ವಿರಕ್ತ ಮಠಗಳ ಉಲ್ಲೇಖನಗಳು ಈ ಶಾಸನಗಳಲ್ಲಿ ಬಹು ಸಂಖ್ಯೆಯಲ್ಲಿವೆ. ಮಹತ್ತಿನ ಮಠಗಳು ಇವು. ಸು. 60ರಷ್ಟಿವೆ. ಡಂಬಳದ ತೋಟದಾರ್ಯ ಮಠಕ್ಕೆ ಕಳಸ, ಬಂಗಾರದ ಪಾದುಕೆಗಳನ್ನು ದಾನ ನೀಡಿದ ವಿಷಯ ಇಲ್ಲಿ ದಾಖಲಾಗಿದೆ. ಅನೇಕ ವೀರಶೈವ ಮಠಗಳಿಗೆ ದಾನಗಳನ್ನು ಕೊಟ್ಟಿರುವ ಉಲ್ಲೇಖಗಳು ಮತ್ತು ವೀರಶೈವ ಧರ್ಮಾಧಿಕಾರಿಗಳ ಉಲ್ಲೇಖನಗಳು ಇಲ್ಲಿ ಪದೇ ಪದೇ ಕಂಡುಬರುತ್ತವೆ.

ವೀರಶೈವ ಮಠಗಳಿಗೆ ಕೊಟ್ಟ ಶಾಸನಗಳನ್ನು ಬಿಟ್ಟರೆ ಅಧಿಕ ಸಂಖ್ಯೆಯಲ್ಲಿ ಕಂಡು ಬರುವವು ಶೈವ ಧರ್ಮಕ್ಕೆ ನೀಡಿದವು. ತಮ್ಮ ಶಾಸನಗಳಲ್ಲಿ ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ ಎಂದು ಬಿರುದು ಅದ್ವೈತದ ಮೇಲಿನ ಒಲವನ್ನು ಸೂಚಿಸುತ್ತದೆ. ಶೃಂಗೇರಿ ಮಠದ ಗುರುಗಳ ಬಗ್ಗೆ ಕೆಳದಿ ಅರಸರಿಗೆ ಗೌರವದ ಭಾವನೆಯನ್ನು ಹಲವು ಶಾಸನಗಳು ವ್ಯಕ್ತಪಡಿಸುತ್ತವೆ. ತೀರ್ಥಮತ್ತೂರಿನ ಜ್ಞಾನೇಂದ್ರ ಭಾರತೀಸ್ವಾಮಿ, ಮುಳುಬಾಗಿಲಿನ ಸಚ್ಚಿದಾನಂದ ಸ್ವಾಮಿ ಮೊದಲಾದವರಿಗೆ ದಾನ ನೀಡಿದ ವಿಷಯ ಕೆಲವು ಶಾಸನಗಳಲ್ಲಿದೆ. ಮಾಧ್ವಮಠಗಳಿಗೆ ಸಂಬಂಧಿಸಿದಂತೆ ಉಡುಪಿ ಕೃಷ್ಣ ಮಠಕ್ಕೆ ಕೊಟ್ಟ ಶಾಸನ ಉಲ್ಲೇಖಿಸು ವಂತಹುದು. ಅನೇಕ ದೇವಸ್ಥಾನಗಳಿಗೆ ಬಿಟ್ಟ ದಾನದ ವಿವರಗಳನ್ನು ಕೆಳದಿ ಶಾಸನಗಳನ್ನು ಉಲ್ಲೇಖಿಸುತ್ತವೆ. ಜೈನಧರ್ಮಕ್ಕೆ ಸಹ ಪ್ರೋತ್ಸಾಹವಿತ್ತಿರುವುದನ್ನು ಕಾಪು, ಮೇಳಿಗೆ, ಮೂಡಬಿದರೆ, ಶಾಸನಗಳು ತಿಳಿಸುತ್ತವೆ. ಸಾಹಿತ್ಯ ರತ್ನಾಕರ, ಸಂಗೀತ ಗಂಗಾಧರನಾದ ವೆಂಕಟಪತಿ ದೇವಾರಾಯ ಪೆನುಗೊಂಡೆಯಿಂದ ಆಳುವ ಕಾಲದಲ್ಲಿ ಬೊಮ್ಮಣ್ಣ ಶ್ರೇಷ್ಠಿ ಕಟ್ಟಿಸಿದ ಬಸದಿಯನ್ನು ಆತನ ಸಂತಾನದವರು ಶಿಲಾಮಯವಾಗಿ ಕಟ್ಟಿಸಿದ ವಿಷಯವನ್ನು ಮೇಳಿಗೆಯ ಶಾಸನ ತಿಳಿಸುತ್ತದೆ. ಮೂಡಬಿದರೆ ಶಾಸನ ಶ್ರೀಮದಭಿನವ ಚಾರುಕೀರ್ತಿ ಪಂಡಿತ ದೇವರಿಗೆ ಬರೆಸಿಕೊಟ್ಟುದಾಗಿದ್ದು ಇಲ್ಲಿ ಜೈನರಿಗೂ ಮಿಕ್ಕವರಿಗೂ ನಡೆದ ಜಗಳದ ಉಲ್ಲೇಖವಿದೆ.

ಕೆಳದಿ ರಾಜ್ಯದಲ್ಲಿ ಇಸ್ಲಾಂ ಧರ್ಮದ ಚಟುವಟಿಕೆಗಳೂ ನಡೆಯುತ್ತಿದ್ದವು. ಕವಲೇದುರ್ಗದ ಎರಡು ಶಾಸನ (57,58)ಗಳು ಭುವನದುರ್ಗದಲ್ಲಿ ಕೆಳದಿ ವೆಂಕಟಪ್ಪನಾಯಕ ಮಸೀದಿ ಕಟ್ಟಿಸಿ, ದತ್ತಿಬಿಟ್ಟ ವಿಷಯವನ್ನು ತಿಳಿಸುತ್ತವೆ. ರಾಜನಿಗೆ ಪಾದುಷಾಗಳಿಗೆ ಅರಸುಗಳಿಗೆ ಪುಣ್ಯಪ್ರಾಪ್ತಿಯಾಗಲೆಂದು ನೀಡಿದ ದಾನ ವಿಷಯ ನಿರೂಪಿತವಾಗಿದೆ. ವೀರಭದ್ರನಾಯಕನು ಆನಂದಪುರದ ಸೀಮೆ ಮಾಲಹಗೋಪದ ತಾವರೆಗೆರೆಗೆ ಹೊಂದಿ ಕಟ್ಟಿಸಿದ ಮಸೀದಿಗೆ ದಾನ ಕೊಟ್ಟ. ಕೆಳದಿ ಅರಸರು ಸಾರ್ವಜನಿಕ ಕೆಲಸಗಳಿಗೆ ವಿಶೇಷ ಗಮನ ಕೊಟ್ಟುದುದಕ್ಕೆ ಚಂಪಕಸರಸ್ಸು, ಬಸವನ ಒಡ್ಡು, ಕಲ್ಲುಭಾವಿ (83) ಇತ್ಯಾದಿ ಕೆಲಸಗಳು ಸಾಕ್ಷಿಯಾಗಿವೆ. ಕೆರೆ, ಮಂಟಪಗಳನ್ನು ಕಟ್ಟಿಸಿದುದಕ್ಕೆ ಅನೇಕ ಉದಾಹರಣೆಗಳು ಶಾಸನದಲ್ಲಿ ಸಿಗುತ್ತವೆ.

ಲೇಖ್ಯವಸ್ತು: ಕೆಳದಿ ಕಾಲದಲ್ಲಿ ಶಾಸನದ ಲೇಖ್ಯವಸ್ತುವಾಗಿ ಶಿಲೆ, ತಾಮ್ರ, ಬೆಳ್ಳಿ, ಚಿನ್ನ, ಕಂಚು, ಹಿತ್ತಾಳೆ ಮುಂತಾದವು ಬಳಸಿರುವುದನ್ನು ನೋಡಬಹುದು. ಶಿಲಾ ಬಳಕೆಗಿಂತ ತಾಮ್ರದ ಬಳಕೆ ಹೆಚ್ಚಿದೆ. ಶಿಲಾ ಶಾಸನಗಳು ಕೆಳದಿಯ ಮೊದಲ ಅರಸರಲ್ಲಿ ಮಾತ್ರ ಕಂಡುಬರುತ್ತವೆ. ಕೆಳದಿ ಕಾಲದ ತಾಮ್ರಫಲಕಗಳು ಸು. 25–30 ಸೆಂಮೀ ಉದ್ದ ಮತ್ತು 15–40 ಸೆಂಮೀ ಅಗಲವಿರುತ್ತವೆ. ಒಂದೇ ಫಲಕದಲ್ಲಿ ಪೂರ್ಣ ಶಾಸನ ಮುಗಿಸುತ್ತಿದ್ದರು. ಇಲ್ಲದೆ ಎರಡು, ಮೂರು ಫಲಕಗಳಲ್ಲಿ ಶಾಸನ ಬರೆಯಿಸಿ, ಉಂಗುರದಲ್ಲಿ ಜೋಡಿಸಿ, ರಾಜಮುದ್ರೆ ಹಾಕಲಾಗುತ್ತಿತ್ತು. ಉಂಗುರದಲ್ಲಿ ನಂದಿಯ ಚಿತ್ರವಿರುತ್ತಿತ್ತು. ಮಠಗಳು ತಾಮ್ರಶಾಸನವನ್ನು ಅಡವಿಟ್ಟುಕೊಂಡು ಹಣ ಕೊಡುವ ಲೇವಾದೇವಿ ವ್ಯವಹಾರ ಮಾಡುತ್ತಿದ್ದವು ಅಡವಿಟ್ಟ ಶಾಸನಗಳು ಅಲ್ಲಿಂದ ಹಿಂದಕ್ಕೆ ಪಡೆಯದ್ದರಿಂದ ಮಠದಲ್ಲಿಯೇ ಉಳಿಯುವ ಸಾಧ್ಯತೆ ಇರುತ್ತಿತ್ತು. ರಕ್ಷಿಸಲು ಸುಲಭವಾದ್ದರಿಂದ, ಶಿಲೆಗಿಂತ ತಾಮ್ರದ ಬಳಕೆ ಇವರಿಗೆ ಅನುಕೂಲವೆನಿಸಿರಬೇಕು.

ತಾಮ್ರ ಶಾಸನದ ಪ್ರತಿ ಕಡತದಲ್ಲಿ ದಾಖಲು ಮಾಡಿಕೊಳ್ಳಲಾಗುತ್ತಿತ್ತು. ದೇವಾಲಯ, ಮಠಗಳಿಗೆ ಕೊಡುವ ಚಿನ್ನ, ಬೆಳ್ಳಿ, ಕಂಚು ರೂಪದ ಆಭರಣ ಉಪಕರಣಗಳ ಮೇಲೆ ಸಹ ಶಾಸನವನ್ನು ಬರೆಸುತ್ತಿದ್ದರು. ಅದರಲ್ಲಿ ಆಭರಣವನ್ನು ಕೊಟ್ಟ ದಾನಿಯ ಹೆಸರು, ಅದರ ತೂಕ ಅಳತೆ ಇವುಗಳನ್ನು ಸೂಚಿಸಿರುತ್ತಿದ್ದರು.

ಕೆಳದಿ ಕಾಲದಲ್ಲಿ ಶಾಸನಗಳು ಶಿಲ್ಪದ ದೃಷ್ಟಿಯಿಂದ ತುಂಬಾ ಸರಳ. ಅವರ ಹೆಚ್ಚಿನ ಶಿಲಾಶಾಸನಗಳು ಮೇಲ್ಭಾಗದ ಎಡ ತುದಿಯಲ್ಲಿ ಸೂರ್ಯ ಚಂದ್ರರ ಚಿತ್ರ ಇರುತ್ತದೆ. ತಾಮ್ರ ಶಾಸನದ ಮೇಲ್ಭಾಗದಲ್ಲಿ ವರಹ ಮುದ್ರೆ, ಶ್ರೀ ಮಧುಕೇಶ, ಶ್ರೀ ಕೈಟಭೇಶ್ವರ ಎಂಬ ಬರಹ ಕಂಡು ಬಂದರೆ, ವೀರಗಲ್ಲು ಹಾಗೂ ಮಾಸ್ತಿ ಕಲ್ಲುಗಳು ಶಿಲ್ಪದ ದೃಷ್ಟಿಯಿಂದ ಗಮನ ಸೆಳೆಯುವುದಿಲ್ಲ.

ಈ ಕಾಲದ ಶಾಸನಗಳಲ್ಲಿ ಈಗಾಗಲೇ ಬಳಸಲ್ಪಟ್ಟಿದ್ದ ಶುಭವಾಚಕಗಳನ್ನೇ ಉಪಯೋಗಿಸಿ ಕೊಳ್ಳಲಾಗಿದೆ. ಮೂಕಾಂಬಿಕೆ, ಅಘೋರ, ಗುರುಲಿಂಗ, ಗಣಪತಿಯ ಸ್ತುತಿ ಇದೆ. ಶಕವರ್ಷ, ತಿಥಿ, ವಾರ ಮೊದಲಾದವುಗಳನ್ನು ತಿಳಿಸಿರುತ್ತಾರೆ. ಅಗ್ರಹಾರ, ದ್ವೈತ, ಅದ್ವೈತ ಮಠಗಳಿಗೆ ಕೊಟ್ಟ ಶಾಸನಗಳಲ್ಲಿ ಮೊದಲ ಕೆಲವು ಸಾಲುಗಳು ಸಂಸ್ಕೃತದಲ್ಲಿವೆ. ಶಾಸನದ ಮಧ್ಯ ಭಾಗದಲ್ಲಿ ರಾಜವಂಶದ ವರ್ಣನೆ, ದಾನ ಪಡೆಯುವವರ ವರ್ಣನೆ ಇರುತ್ತವೆ. ಇಲ್ಲಿ ಕೆಲವೊಮ್ಮೆ ಉತ್ಪ್ರೇಕ್ಷೆಯೂ ಇರುತ್ತದೆ. ವೀರಶೈವ ಮಠಗಳಿಗೆ ಕೊಟ್ಟ ಶಾಸನಗಳಲ್ಲಿ ಶ್ರೀಮತ್ಸಜ್ಜನ ಶುದ್ಧ ಶಿವಾಚಾರ ಸಂಪನ್ನ ದ್ವಾವಾಪೃಥ್ವೀ ಮಹಾಮಹತ್ತಿನ ಒಳಗಾದ ಎಂಬುದಾಗಿ ಪ್ರಾರಂಭ ದಲ್ಲಿ ಬರುತ್ತದೆ. ಶೃಂಗೇರಿ, ಉಡುಪಿ ಮಠಗಳಿಗೆ ಕೊಟ್ಟ ಶಾಸನಗಳಲ್ಲಿ ಮಠ ಪರಂಪರೆಯ ವರ್ಣನೆ ಇರುತ್ತದೆ. ಈ ಅಗ್ರಹಾರಗಳಿಗೆ ಕೊಟ್ಟ ಶಾಸನಗಳಲ್ಲಿ ದಾನ ಪಡೆಯುವವರ ವಂಶಾವಳಿಯ ವಿವರ, ದಾನ ಕೊಡುವಂತೆ ಬಿನ್ನವಿಸಿಕೊಂಡ ವಿವರವಿದೆ. ಕೆಳದಿಯ ಮೊದಲ ಶಾಸನಗಳಲ್ಲಿ ವಿಜಯನಗರದ ಹೆಸರಿನ ಅನಂತರ ಇವರ ಹೆಸರು ಬರುತ್ತದೆ.

ಶಾಸನದ ಮಧ್ಯ ಭಾಗದಲ್ಲಿ ದಾನದ ವಿಷಯ, ಅದರ ಪ್ರಮಾಣ, ಗುಣ, ಮೇರೆಯನ್ನು, ಆಭರಣವಾದರೆ ತೂಕ ಮೊದಲಾದವುಗಳನ್ನು ತಿಳಿಸಲಾಗಿರುತ್ತದೆ. ದಾನವನ್ನು ಮಠ ಧರ್ಮಕ್ಕೆ ಅನುಗುಣವಾಗಿ ವಂಶ ಪಾರಂಪರ್ಯವಾಗಿ ಹೊರಗೆ ಮಾರಿಕೊಳ್ಳದಂತೆ ಕಾಲಂ ಪ್ರತಿ ವಿಧಿ ವಿಧಾನಗಳನ್ನು ತಪ್ಪದೇ ಕಾಪಾಡಿಕೊಂಡು ಬರುವಂತೆ ತಿಳಿಸಲಾಗಿರುತ್ತದೆ. ಅಂತ್ಯದಲ್ಲಿ ಭೂವಿಯಲ್ಲಿ ಸಿಗುವ ಜಲ, ಪಾಷಾಣ, ನಿಧಿ, ನಿಕ್ಷೇಪ ಅಕ್ಷಿಣಿ ಆಗಾಮಿ, ಸಿದ್ಧ ಸಾಧ್ಯಂಗಳೆಂಬ ಅಷ್ಟಭೋಗವನ್ನು ಸಂತಾನ ಪಾರಂಪರೆಯಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂದ ಅನುಭವಿಸಿಕೊಂಡು ಬರುವಂತೆ ಕೇಳಿಕೊಳ್ಳಲಾಗಿದೆ. ಶಾಸನದ ಅಂತ್ಯದಲ್ಲಿ ಕೆಲವೊಮ್ಮೆ ಶಾಸನ ರಚಿಸಿದವನ ಹೆಸರು ಇರುತ್ತದೆ. ತಾಮ್ರಪಟಗಳಲ್ಲಿ ದೇವರ ಹೆಸರಿನ ಒಪ್ಪವಿರುವುದೂ ಇದೆ. ಕೆಳದಿ ಶಾಸನಗಳಲ್ಲಿ ಶ್ರೀ ವೆಂಕಟಾದ್ರಿ, ಶ್ರೀಸದಾಶಿವ, ಶ್ರೀ ವೀರಭದ್ರ, ಶ್ರೀ ಕೃಷ್ಣ, ಶ್ರೀ ರಾಮಕೃಷ್ಣ, ಶ್ರೀ ಸೋಮನಾಥ ಮೊದಲಾದ ಒಪ್ಪಗಳಿವೆ. ಹೆಚ್ಚಿನದಾಗಿ ಕೆಲವೊಮ್ಮೆ ಮತ್ತೂರ ಹೆಗಡೆ, ಬೊಮ್ಮಣ್ಣ ಎಂಬಂಥ ವ್ಯಕ್ತಿಗಳ ಸಾಕ್ಷಿ ಇರುವುದುಂಟು.

**ಸಾಹಿತ್ಯ:** ಇವರ ಕಾಲಕ್ಕೆ ಡ,ದ,ಪ,ಬ, ಮೊದಲಾದ ಅಕ್ಷರಗಳಿಗೆ ಹೊಕ್ಕಳ ಸೀಳಿ ಮಹಾಪ್ರಾಣ ರೂಢಿಸಿಕೊಂಡಿರುವುದನ್ನು ನೋಡಬಹುದು. ಈ ಕಾಲದಲ್ಲಿ ಶಾಸನ ಸಂಸ್ಕೃತ ಭೂಯಿಷ್ಠವಾಗಿರಲಿಲ್ಲ. ಸಾಮಾನ್ಯನಿಗೂ ತಿಳಿಯುವ ರೀತಿಯಲ್ಲಿ ಸರಳವಾಗಿದ್ದಿತು. ಹೀಗಿದ್ದೂ ಅಗ್ರಹಾರ, ದ್ವೈತ, ಅದ್ವೈತ ಮಠಗಳಿಗೆ ಕೊಟ್ಟ ಶಾಸನಗಳಲ್ಲಿ ಸಂಸ್ಕೃತ, ಕ್ಲಿಷ್ಟ ರೂಪದ ಕನ್ನಡ ಪ್ರಯೋಗ ಗಣನೀಯ.

ಲಿಂಗಣ್ಣ ಕವಿಯ ಕೆಳದಿ ನೃಪವಿಜಯ ಹಾಗೂ ಬಸವರಾಜನ ಶಿವತತ್ವ ರತ್ನಾಕರ ಎಂಬ ಕೃತಿಗಳು ಈ ಕಾಲದ ಕೆಲವು ಮಹತ್ವದ ಕೃತಿಗಳಲ್ಲಿ ಸೇರಿವೆ. ಈ ಕಾಲದಲ್ಲಿ ಸು.27 ರಚನಾಕಾರರು ಇದ್ದರೆಂದು ಮತ್ತು ಸು.75 ಕೃತಿಗಳು ರಚಿತವಾದವೆಂದು ಹೇಳಲಾಗಿದೆ. ಹೆಚ್ಚಿನವು ಧಾರ್ಮಿಕ ಸ್ವರೂಪದವು. ಇವುಗಳಲ್ಲಿ ತಿರುಮಲಭಟ್ಟನ ಕರ್ನಾಟಕ ಶಿವಗೀತೆ, ನಿರ್ವಾಣಯ್ಯನ ಶಿವಪೂಜಾವಿಧಾನ, ಶಿವಪೂಜಾದರ್ಪಣ, ಶಿವಕಲ್ಯಾಣ ದಕ್ಷಾಧ್ವರ ವಿಜಯ, ಪಾರ್ವತಿ ಪರಿಣಯ ಮೊದಲಾದವು ಪ್ರಮುಖವಾದವು. ಕೆಳದಿ ನೃಪವಿಜಯ ಕೆಳದಿ ವಂಶಪರಂಪರೆಯನ್ನು ಕುರಿತ ಐತಿಹಾಸಿಕ ಕಾವ್ಯ. ಗಂಗಾದೇವಿಯ ಕೆಳದಿ ರಾಜ್ಯಾಭ್ಯುದಯ ಅಪೂರ್ಣವಾಗಿ ದೊರೆತಿರುವ ಐತಿಹಾಸಿಕ ಕೃತಿ.

ಆರಗ ದೇವಾಲಯ

ಲಿಂಗಣ್ಣ ಕವಿಯ ಮಗ ವೆಂಕಣ್ಣ ಕವಿಯು ಪಾರ್ವತಿವಲ್ಲಭ ಶತಕ, ಗಣ ಸಹಸ್ರನಾಮ, ನರಹರಿ ವಿಜಯ, ಕೆಳದಿ ರಾಮೇಶ್ವರನನ್ನು ಕುರಿತ ಹಾಡುಗಳನ್ನು ಬರೆದಿದ್ದಾನೆ. ಪಾರ್ವತಿ ವಲ್ಲಭ ಶತಕ–ಇದು ಒಂದು ನೀತಿ ಶತಕ, ತಾತ್ತ್ವಿಕ ಗ್ರಂಥ, ನರಹರಿವಿಜಯ, ಪ್ರಹ್ಲಾದ ಚರಿತ್ರೆ ಇವು ಭಾಮಿನಿ ಷಟ್ಪದಿಯಲ್ಲಿವೆ. ಅವನಿಂದ ರಚಿತವಾದ ಕೀರ್ತನೆಗಳು ಹರಿಕೀರ್ತ ನೆಯಂತಿವೆ. 32 ಪದ್ಯಗಳುಳ್ಳ ಒಂದು ಪದ್ಯಾವಳಿ ಲಭ್ಯವಿದೆ.

ಕೆಳದಿ ಅರಮನೆಯ ರಾಜಗುರುವಾಗಿದ್ದ ಚನ್ನವೀರಮಹೇಶ್ವರ (1546–59)ರಚಿಸಿದ ಶಬ್ದಮಣಿ ಸಾರಸ್ವತ ಮುನಿರಚಿತ ಕಳಸೌವ್ಯಾಕರಣದ ಕನ್ನಡ ಟೀಕು ಇತರ ಕೃತಿಗಳು. ಆ ಕಾಲದಲ್ಲಿ ರಚಿತವಾದ ಒಂದು ಐತಿಹಾಸಿಕ ಕೃತಿ ಗಂಗಾದೇವಿಯ ಕೆಳದಿರಾಜ್ಯಾಭ್ಯುದಯ.

ಕೆಳದಿ ಅರಸರ ಕಾಲದಲ್ಲಿ ಹಲವು ಟೀಕಾ ಗ್ರಂಥಗಳು ರಚಿಸಲ್ಪಟ್ಟವು. ಕನ್ನಡದಲ್ಲಿ ರಚಿಸಲ್ಪಟ್ಟ ಟೀಕಾ ಕೃತಿಗಳಲ್ಲಿ ಪ್ರಮುಖವಾದವು ಚರಮೂರ್ತಿ ಬಸವಲಿಂಗನ ವೀರಮಹೇಶ್ವರ ಸುಧಾವಾರಿಧಿ ಟೀಕು. ನಿರ್ವಾಣಯ್ಯನ ಮಗ ಸಂಗನ ಬಸಪ್ಪ ರಚಿಸಿದ ವೀರಶೈವ ಸುಧಾನಿಧಿ ಟೀಕು. ಕೆಳದಿಯ ದೊರೆ ವೆಂಕಟಪ್ಪನು ರಚಿಸಿದ ಪುರುಷಸೂಕ್ತ ವ್ಯಾಖ್ಯಾನ ಮುಂತಾದವು.

(ಕೆ.ವಿ.ಜೆ.)

ಕೆಳದಿ ಇತಿಹಾಸ ಪುನರ್‍ರಚನೆಗೆ ಕೆಲವು ಸಾಹಿತ್ಯ ಕೃತಿಗಳು ಸು.600ಕ್ಕೂ ಹೆಚ್ಚು ಶಾಸನಗಳು ಲಭ್ಯ. ಸಾಹಿತ್ಯ ಕೃತಿಗಳಲ್ಲಿ ಲಿಂಗಣ್ಣ ಕವಿಯ ಕೆಳದಿ ನೃಪವಿಜಯ ಪ್ರಮುಖ ವಾದುದು. ಇದು ಕೆಳದಿ ಅರಸು ಮನೆತನ ಪೂರ್ಣ ಇತಿಹಾಸವನ್ನು ಚಂಪೂಕಾವ್ಯದಲ್ಲಿ ನಿರೂಪಿಸಿದೆ. ಇದನ್ನೇ ಆಧಾರವಾಗಿಟ್ಟುಕೊಳ್ಳಲಾಗಿದೆ. ಇನ್ನೆರಡು ಕೃತಿಗಳು ಈ ದಿಶೆಯಲ್ಲಿ ಗಮನಾರ್ಹ. ಇವು ಶಿವತತ್ತ್ವ ರತ್ನಾಕರ ಮತ್ತು ಗುರುವಂಶಕಾವ್ಯ. ಇವು ಕೆಳದಿ ನೃಪ ವಿಜಯದಲ್ಲಿಯ ಮಾಹಿತಿಗೆ ಪೂರಕವಾಗಿವೆ. ಇವೆರಡು ಕೃತಿಗಳಲ್ಲಿಯ ನಿರೂಪಿಸಿದ ಕೆಳದಿ ಇತಿಹಾಸವನ್ನು ಇಲ್ಲಿ ಸಂಕ್ಷೇಪಿಸಲಾಗಿದೆ.

ಶಿವತತ್ವರತ್ನಾಕರದ ಕರ್ತೃ ಕೆಳದಿ ಬಸಪ್ಪನಾಯಕ ತನ್ನ ಕೃತಿಯಲ್ಲಿ ಚೌಡಪ್ಪನಾಯಕನಿಂದ ಪ್ರಾರಂಭಿಸಿ ತನ್ನ ತಾಯಿ ಕೆಳದಿ ಚೆನ್ನಮ್ಮಾಜಿಯ ತನಕ ಕೆಳದಿ ಚರಿತ್ರೆಯನ್ನು ವಿವರಿಸಿದ್ದಾನೆ. ಐದನೆಯ ಕಲ್ಲೋಲದ 2ನೆಯ ತರಂಗದಲ್ಲಿ ಕೆಳದಿ ರಾಜ್ಯಸ್ಥಾಪನೆಯ ಬಗ್ಗೆ ಹೀಗೆ ವಿವರಿಸಿದ್ದಾನೆ:

ಕೆಳದಿ ದೇಶ ವರ್ಣನೆಯನ್ನು ಮಾಡಿ ಇಂತಹ ಕೆಳದಿ ದೇಶದಲ್ಲಿ ಶೈವನೂ ಗೃಹಸ್ಥನೂ ಆಗಿದ್ದ ಬಸವನೆಂಬುವವನು; ತನ್ನದೇ ಹೆಸರಿನ (ಬಸವಮ್ಮ) ಹೆಂಡತಿಯಿಂದ ಕೂಡಿಕೊಂಡು ವಾಸವಾಗಿದ್ದನು. ಅವನಿಗೆ ನಾಲ್ಕು ಜನ ಮಕ್ಕಳಿದ್ದರು. ಅವರಲ್ಲಿ ಇಬ್ಬರು ಶಿವಸಾಯುಜ್ಯವನ್ನು ಹೊಂದಿದ್ದರು. ಬಸಪ್ಪನು ಶಿವಸಾನಿಧ್ಯ ಸೇರಿದ್ದನು. ಚೌಡಪ್ಪ ಮತ್ತು ಭದ್ರಪ್ಪ ಎಂಬಿಬ್ಬರು ಮಕ್ಕಳು ತನ್ನ ತಾಯಿಯೊಂದಿಗೆ ಸುಖವಾಗಿದ್ದರು. ಇವರು ಕೃಷಿಕರಾಗಿದ್ದರು. ಒಮ್ಮೆ ಮಾವಿನ ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದಾಗ ಸರ್ಪವೊಂದು ಹೆಡೆಬಿಚ್ಚಿ ಚೌಡಪ್ಪನ ತಲೆಯ ಮೇಲೆ ಆಡಿಸಲಾರಂಭಿಸಿತು. ಅದನ್ನು ಕಂಡ ಅವನ ತಾಯಿ ಹೆದರಿದಳು. ಹಾವು ಕೆಲಕ್ಷಣದ ನಂತರ ದೂರಸರಿಯಿತು. ಮಗನನ್ನು ಎಬ್ಬಿಸಿ ವಿಷಯ ತಿಳಿಸಿ ಆ ಹಾವನ್ನು ತೋರಿಸಿದಳು. ಅನಂತರ ಅವರು ಮನೆಗೆ ಹೋದರು. ಅವರ ಮನೆಯ ಒಂದು ಹಸು ಹಾಲನ್ನು ಕೊಡುತ್ತಿರಲಿಲ್ಲ. ಇದರ ಬಗ್ಗೆ ಮನೆಯ ಆಳನ್ನು ವಿಚಾರಿಸಿದಾಗ, ಮಾರನೆಯ ದಿನ ಆಳು ಹಸುವನ್ನೇ ಹಿಂಬಾಲಿಸಿ ಹೋಗಿ ನೋಡಿದಾಗ, ಅದು ಒಂದು ಪೊದೆಯಲ್ಲಿ ಹಾಲು ಸುರಿಸುವುದನ್ನು ಕಂಡು ತನ್ನ ಒಡೆಯನಿಗೆ ತಿಳಿಸಿದ. ಮಾರನೆಯ ದಿನ ಚೌಡಪ್ಪನು ಹಸುವನ್ನು ಹಿಂಬಾಲಿಸಿ ಆ ಅದ್ಭುತವನ್ನು ನೋಡಿ, ಊರಜನರ ಸಹಕಾರದಿಂದ ಆ ಪೊದೆಯನ್ನು ಸ್ವಚ್ಛಗೊಳಿಸಿದಾಗ ಅಲ್ಲಿ ಒಂದು ಶಿವಲಿಂಗವನ್ನು ಕಂಡನು. ಅಲ್ಲಿ ಅಗೆದಾಗ ಶಾಸನವೊಂದು ಸಿಕ್ಕಿತು. ಅದನ್ನು ಓದಿದಾಗ ಅದು ರಾಮೇಶ್ವರಲಿಂಗವೆಂದು ತಿಳಿಯಿತು. ಅದನ್ನು ಪ್ರತಿನಿತ್ಯವೂ ಭಕ್ತಿಯಿಂದ ಪೂಜಿಸುತ್ತಿದ್ದನು. ಹೀಗಿರುವಾಗ ಒಂದು ದಿನ ರಾತ್ರಿ ಕನಸಿನಲ್ಲಿ ನಿಧಿಸಿಕ್ಕುವ ಸೂಚನೆ ಬಂದಿತು. ಅನಂತರ ಅಧಿಕವಾದ ನಿಧಿಯನ್ನು ಪಡೆದುಕೊಂಡ. ಅನಂತರ ಚೌಡಪ್ಪ-ಭದ್ರಪ್ಪರು ಪ್ರಖ್ಯಾತಿಯನ್ನು ಹೊಂದಿದರು. ನಿಧಿ ಸಿಕ್ಕ ಅನಂತರ ಚೌಡಪ್ಪನು ರಾಮೇಶ್ವರನ ಅನುಗ್ರಹದಿಂದ ಹಳ್ಳಿಯ ಪಾಳೆಯಗಾರಿಕೆಯನ್ನು ಪಡೆದು, ಚಿಕ್ಕ ಸೈನ್ಯವನ್ನು ಕಟ್ಟಿದ ಈ ವಿಚಾರಗಳನ್ನು ಕೇಳಿದ ವಿಜಯನಗರ ಸಾರ್ವಭೌಮನು, ಚೌಡಪ್ಪನನ್ನು ತನ್ನ ಆಸ್ಥಾನಕ್ಕೆ ಕರೆಸಿಕೊಂಡು; ಚೌಡಪ್ಪನ ಬಾಯಿಂದಲೇ ಅವನ ವೃತ್ತಾಂತವನ್ನು ಕೇಳಿ ಸಂತೋಷಗೊಂಡು, ಕೆಳದಿ ಚೌಡಪ್ಪನಾಯಕ ಎಂದು ನಾಮಧೇಯ ಮಾಡಿದ.

ಈ ಚೌಡಪ್ಪ ಕೆಳದಿಯ ರಾಮೇಶ್ವರ ದೇವಾಲಯವನ್ನು ಕಟ್ಟಿಸಿ, ಪೂಜೆಗಾಗಿ ಭೂದಾನ ಮಾಡಿದ. ಇವನಿಗೆ ಸದಾಶಿವ ಮತ್ತು ಭದ್ರಪ್ಪ ಎಂಬ ಮಕ್ಕಳಿದ್ದರು. ಚೌಡಪ್ಪನು ಸದಾಶಿವನಿಗೆ ರಾಜ್ಯಭಾರವನ್ನು ವಹಿಸಿ ಕೊಟ್ಟ. ಸದಾಶಿವ ವಿಜಯನಗರದ ರಾಮರಾಜನಿಗೆ ಅನೇಕ ಯುದ್ಧಗಳಲ್ಲಿ ಸಹಾಯ ಮಾಡಿ ಕಲ್ಯಾಣ, ಕಲಬುರಗಿ, ವಿಜಾಪುರದ ಅರಸ, ಬಿದರೆಯ ಬಾದಷಹ, ತುಳುನಾಡು,ಕೇರಳ ರಾಜರು, ಚಂದ್ರಗುತ್ತಿಯ ಮುಸ್ಲಿಂ ದೊರೆಗಳು ಮುಂತಾದವರನ್ನು ಗೆದ್ದು ಅನೇಕ ಕೋಟೆಗಳನ್ನು ವಶಪಡಿಸಿ ಕೊಟ್ಟ. ಇವನ ಸಾಹಸಕ್ಕೆ ಮೆಚ್ಚಿ ರಾಮರಾಜ ಅನೇಕ ಬಿರುದುಗಳು, ಆಭರಣಗಳು ಜೊತೆಗೆ ಗುತ್ತಿ, ಬಾರ್ಕೂರು, ಮಂಗಳೂರುಗಳನ್ನು ಕೊಟ್ಟ. ಜಾಲಿಹಾಳು ರಾಜ್ಯದಲ್ಲಿದ್ದ ಯಾದವ ಮತ್ತು ಮುರಾರಿ ಎಂಬ ದುಷ್ಟರನ್ನು ಸದೆಬಡಿದು ಗೆಲಲ್ಲು ಅಸಾಧ್ಯವಾದ ಕೋಟೆಯನ್ನು ಗೆದ್ದು ಯಾದವ-ಮುರಾರಿ-ಕೋಟೆಕೋಲಾಹಲ ಎಂಬ ಬಿರುದನ್ನು ಪಡೆದ.

ಕೆಳದಿ ರಾಮೇಶ್ವರನ ಪೂಜೆಗೆ ಭೂದಾನ, ಕೆರೆಗಳ ನಿರ್ಮಾಣ,ಸದಾಶಿವಪುರ ಅಗ್ರಹಾರ ನಿರ್ಮಾಣ, ಸದಾಶಿವೇಶ್ವರ ದೇವಾಲಯ ಸ್ಥಾಪನೆ; ಆವರಣ ದೇವತೆಗಳ ನಿರ್ಮಾಣ; ಹದಿನಾರು ಮಹಾದಾನಗಳು; ಹೀಗೆ ಅನೇಕ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಈತ ಮಾಡಿದ. ಇವನಿಗೆ ದೊಡ್ಡಸಂಕಣ್ಣ ನಾಯಕ ಮತ್ತು ಚಿಕ್ಕ ಸಂಕಣ್ಣ ನಾಯಕರೆಂಬ ಮಕ್ಕಳಿದ್ದರು. ತನ್ನ ತಮ್ಮ ಭದ್ರಪ್ಪನಾಯಕನಿಗೆ ಇಮ್ಮಡಿ ಸದಾಶಿವ ನಾಯಕನೆಂದು ಹೆಸರಿಟ್ಟು ಈತ ತಪೋವನಕ್ಕೆ ಹೋದ. ಅನಂತರದ ಭದ್ರಪ್ಪನಾಯಕನು ಕೆಲಕಾಲ ರಾಜ್ಯವಾಳಿ, ದೊಡ್ಡಸಂಕಣ್ಣನಿಗೆ ಸಮಗ್ರ ರಾಜ್ಯಭಾರ ವಹಿಸಿ, ಚಿಕ್ಕ ಸಂಕಣ್ಣನಾಯಕನಿಗೆ ಯುವರಾಜ ಪಟ್ಟ ಕಟ್ಟಿದ.

ಸಂಕಣ್ಣನಾಯಕ ವಿಜಯನಗರದರಸನಿಗೆ ಜಂಬೂರಿನ ರಾಜ ವಿರೂಪನಿಂದ ಬರಬೇಕಾಗಿದ್ದ ಕಪ್ಪವನ್ನು ವಸೂಲು ಮಾಡಿಕೊಟ್ಟ. ಇವನ ಶೌರ್ಯವನ್ನು ಮೆಚ್ಚಿಕೊಂಡ ವಿಜಯನಗರದ ಅರಸನು ಆತನಿಗೆ ರಾಜಧಾನಿಗೆ ಬಂದಿರಲು ಹೇಳಿದನು. ಹೀಗೆ ವಿಜಯನಗರದಲ್ಲಿದ್ದಾಗ ದೊಡ್ಡಸಂಕಣ್ಣನಾಯಕನಿಗೆ ಇಬ್ಬರು ಮಕ್ಕಳು ಜನಿಸಿದರು. ಅವರಿಗೆ ರಾಮರಾಜ ಮತ್ತು ವೆಂಕಟಪ್ಪನೆಂದು ಹೆಸರಿಡಲಾಯಿತು. ಸಂತೋಷಗೊಂಡ ವಿಜಯನಗರದ ರಾಮರಾಜ, ಇವನಿಗೆ ಮಕ್ಕಳ ಪಾಲನೆ ಪೋಷಣೆಗಾಗಿ ಹೊಳೆಹೊನ್ನೂರು, ಮಾಸೂರು, ಬೇಲ, ಮಲ್ಲೂರು ಗ್ರಾಮಗಳನ್ನು ನೀಡಿದ.

ದೊಡ್ಡ ಸಂಕಣ್ಣನಾಯಕನ ತೀರ್ಥಯಾತ್ರೆಯ ವಿವರಗಳನ್ನು ಈ ಕೃತಿಯಲ್ಲಿ ಚೆನ್ನಾಗಿ ವಿವರಿಸಲಾಗಿದೆ. ಕಾಶಿ ವಿಶ್ವೇಶ್ವರ, ನೇಪಾಲದ ನೀಲಕಂಠೇಶ್ವರ, ಕೇದಾರ, ಕುರುಕ್ಷೇತ್ರ ಮುಂತಾದ ಸ್ಥಳಗಳನ್ನು ಸಂದರ್ಶಿಸಿ ದೆಹಲಿಗೆ ಬಂದು, ಅಲ್ಲಿ ಅಂಕುಶಖಾನನನ್ನು ಸಂಹರಿಸಿ ದಿಲ್ಲಿಯ ರಾಜನಿಂದ ಅನೇಕ ಉಡುಗೊರೆಗಳೊಂದಿಗೆ ಈತ ಗೌರವಿಸಲ್ಪಟ್ಟ. ತನ್ನ ರಾಜ್ಯಕ್ಕೆ ಹಿಂದಿರುಗುವಾಗ ಮಾಸೂರು ಪ್ರದೇಶದ ವಲವಳ್ಳಿಯ(ಆಲಂಬಳ್ಳಿ) ವೀರಭದ್ರಮೂರ್ತಿಯನ್ನು ತಂದು ಕೆಳದಿ ರಾಮೇಶ್ವರ ದೇವಾಲಯದ ಪಕ್ಕದಲ್ಲಿ ಪ್ರತಿಷ್ಠಾಪಿಸಿದ. ಇಕ್ಕೇರಿಯಲ್ಲಿ ಅಘೋರೇಶ್ವರನನ್ನು ಪ್ರತಿಷ್ಠೆ ಮಾಡಿಸಿದ. ತಮ್ಮ ಚಿಕ್ಕ ಸಂಕಣ್ಣನಾಯಕನಿಗೆ ಪಟ್ಟಾಭಿಷೇಕ ಮಾಡಿದ.

ವಿಜಯನಗರದ ಮೇಲೆ ಮುಸಲ್ಮಾನರು ಧಾಳಿ ಮಾಡಿದಾಗ ಚಿಕ್ಕಸಂಕಣ್ಣ ಅವರನ್ನು ನಿಗ್ರಹಿಸಿದ; ಮಂಜುಲಖಾನ, ಗೇರುಸೊಪ್ಪೆಯ ಭೈರಾದೇವಿ ಮುಂತಾದವರಿಂದ ಕಪ್ಪಕಾಣಿಕೆ ಪಡೆದ. ದೊಡ್ಡ ಸಂಕಣ್ಣನಾಯಕನ ಮಗ ವೆಂಕಟಪ್ಪ ನಾಯಕನಿಗೆ ಚಿಕ್ಕಸಂಕಣ್ಣ ಪಟ್ಟಾಭಿಷೇಕ ಮಾಡಿದ. ರಾಜ್ಯವನ್ನು ಪಡೆದ ವೆಂಕಟಪ್ಪನಾಯಕನು ಶತೃಗಳನ್ನೆಲ್ಲ ನಿಗ್ರಹಿಸಿ ಇಕ್ಕೇರಿಯೆಂಬ ದೇಶದಲ್ಲಿ ರಮಣೀಯವಾದ ಪುರವನ್ನು ಕಟ್ಟಿಸಿದ. ಅಲ್ಲಿ ನಿರ್ಮಾಣವಾದದ್ದು ಭವ್ಯ ಅರಮನೆ, ವಿಶಿಷ್ಟ ನಾಟ್ಯಶಾಲೆ. ಈತ ಚಮತ್ಕಾರಯುಕ್ತವಾದ, ವ್ಯಕ್ತಿಚಿತ್ರದಿಂದ ಕೂಡಿದ ಸದ್ಗ್ರಂಥಗಳನ್ನು ಬರೆಸಿದ. ಕೆರೆ ಹಾಗೂ ಉದ್ಯಾನಗಳನ್ನು ಮಾಡಿಸಿದ. ವೆಂಕಟಪ್ಪನಾಯಕನಿಗೆ ಭದ್ರಪ್ಪನಾಯಕನೆಂಬ ಮಗನಿದ್ದ. ಈ ಭದ್ರಪ್ಪನಾಯಕನ ಮಗ ವೀರಭದ್ರ. ಹೊಳೆಹೊನ್ನೂರು ಕೋಟೆಯಲ್ಲಿ ವೆಂಕಟಪ್ಪ ನಾಯಕ ವಾಸವಾಗಿದ್ದಾಗ ಹನುಮನೆಂಬಾತ ಮುಸಲ್ಮಾನರ ಸಹಾಯ ಪಡೆದು ಏಳು ಕೋಟೆಯನ್ನು ಮುತ್ತಿಗೆ ಹಾಕಿದ. ಆಗ ವೆಂಕಟಪ್ಪನಾಯಕ ಒಬ್ಬನೇ ಉತ್ತಮವಾದ ಕುದುರೆಯನ್ನು ಏರಿಕೊಂಡು ಕೋಟೆಯಿಂದ ಹೊರಹೋಗಿ, ಸುತ್ತಲಿನ ಊರುಗಳಿಂದ ಸೇನೆಯನ್ನು ಸಂಗ್ರಹಿಸಿಕೊಂಡು, ಹನುಮನ ಸಹಾಯಕ್ಕೆ ಬಂದಿದ್ದ ಮಂಜುಲಖಾನ್ ಎಂಬುವವನನ್ನು ಎದುರಿಸಿ ಅವನನ್ನು ಶಾಶ್ವತವಾಗಿ ಗಡಿಪಾರು ಮಾಡಿಸಿದ. ಹಾನಗಲ್ಲು ಎಂಬಲ್ಲಿ ವಿಜಯಸ್ತಂಭ ನೆಟ್ಟ. ಕಡೆಗೆ ಹನುಮನ ಹಿರಿಯ ಮಗ ವೆಂಕಟಪ್ಪ ನಾಯಕನೊಂದಿಗೆ ಸಂಧಿಮಾಡಿಕೊಂಡು ಲಕ್ಕುವಳ್ಳಿ, ಗಾಜನೂರು, ಶಿವಮೊಗ್ಗ ಕೋಟೆಗಳನ್ನು ಕಾಣಿಕೆಯಾಗಿ ನೀಡಿ ಶರಣಾದ. ಅದನ್ನು ಸಹಿಸಲಾರದ ಹನುಮನ ಕಿರಿಯ ಮಗ ಯುದ್ಧ ಸಾರಿ ಸೋತು ಬಾಣಾವರದ ಕಡೆ ಓಡಿಹೋದ.

ಅನಂತರ ದಾನಿವಾಸ, ಕುಂಭಸೆ ಮುಂತಾದ ಸ್ಥಳಗಳಲ್ಲಿದ್ದ ಸಣ್ಣಪುಟ್ಟ ಶತ್ರುಗಳನ್ನು ನಿಗ್ರಹಿಸಿದ. ಹೆಚ್ಚೆ, ಆರಗ ಮುಂತಾದ ಪ್ರಮುಖ ಸ್ಥಳಗಳಲ್ಲಿ ಕೋಟೆಗಳನ್ನು ಕಟ್ಟಿಸಿದ ಪ್ರಜೆಗಳಿಗೆ ಉಪಟಳ ನೀಡುತ್ತಿದ್ದ ವೇಣುಪುರದ ಶಂಕರನಾರಾಯಣ ಭಟ್ಟನನ್ನು ಬಂಧಿಸಿ ಶಿಕ್ಷೆ ವಿಧಿಸಿದ. ಕವಲೆದುರ್ಗವನ್ನು ದುಷ್ಟರಿಂದ ರಕ್ಷಿಸಿದ. ಅದಕ್ಕೆ ಭುವನಗಿರಿದುರ್ಗ ಎಂದು ನಾಮಕರಣ ಮಾಡಿದ. ಅದರ ಮೇಲ್ಭಾಗದಲ್ಲಿ ಶಿಖರೇಶ್ವರ, ಲಕ್ಷ್ಮೀನಾರಾಯಣ ಮತ್ತು ಮೈಲಾರ ಎಂಬ ಹೆಸರಿನ ಗುಡಿಗಳನ್ನು ಕಟ್ಟಿಸಿದ. ಕೋಟೆಯ ಹೊರಗೆ ವಿರೂಪಾಕ್ಷ, ವಿಠಲ, ನರಸಿಂಹ, ವೃಷೇಂದ್ರ, ವೀರಭದ್ರ, ಗುರುನಾಥ ಮತ್ತು ಕಾಲಿಕಾ ದೇವತೆಗಳನ್ನು ಪ್ರತಿಷ್ಠಾಪಿಸಿ ಎಲ್ಲೆಡೆ ಮಂದಿರಗಳನ್ನು ಕಟ್ಟಿಸಿದ.

ಈತ ಶೃಂಗೇರಿ ಮಠದ ಜೀರ್ಣೋದ್ಧಾರ ಮಾಡಿಸಿದ; ಶಿವಪುರಿಯಲ್ಲಿ ಆನಂದ ಎಂಬ ಪಟ್ಟಣವನ್ನು ನಿರ್ಮಿಸಿ ಅದರ ಸುತ್ತಲೂ ಕೋಟೆಯನ್ನು ಕಟ್ಟಿಸಿದ. ಅಲ್ಲಿ ತಾಂಡವೇಶ ದೇವಾಲಯದಲ್ಲಿ ಶಿವನನ್ನು ಪ್ರತಿಷ್ಠಾಪಿಸಿದ ಹಾಗೆಯೇ ರಂಗನಾಥ ದೇವಾಲಯವನ್ನು ಹೊಸದಾಗಿ ಕಟ್ಟಿಸಿದ. ಅದರ ಪೂಜೆಗಾಗಿ ಹೇರಳ ಭೂದಾನ ನೀಡಿದ. ಸದಾಶಿವ ಸಾಗರ ಎಂಬ ನಗರವನ್ನು ಕಟ್ಟಿಸಿ ಅಲ್ಲಿ ಅರಮನೆಯನ್ನು ನಿರ್ಮಿಸಿ, ಸುಂದರವಾದ ಜಲಕ್ರೀಡಾ ಪ್ರಾಸಾದವನ್ನು ಕಟ್ಟಿಸಿದ. ವರದಾನದಿಯ ತೀರದಲ್ಲಿ ವಿಶ್ವನಾಥಪುರ ಎಂಬ ಹೆಸರಿನ ಅಗ್ರಹಾರವನ್ನು ಕಟ್ಟಿಸಿ ವಿದ್ವಾಂಸರಿಗೆ ದಾನ ಮಾಡಿದ. ವಾಜಪೇಯ ಮೊದಲಾದ ಅನೇಕ ಯಾಗಗಳನ್ನು ಮಾಡಿಸಿದ. ತಾಯಿಯ ಹೆಸರಿನಲ್ಲಿ ವೀರಾಂಬಾಪುರ ಮತ್ತು ಹೆಂಡತಿಯ ಹೆಸರಿನಲ್ಲಿ ಅಭಿನವ ವೀರಾಂಬಾಪುರ ಎಂಬ ಅಗ್ರಹಾರಗಳನ್ನು ಕಟ್ಟಿಸಿ ವಿದ್ವಾಂಸರಿಗೆ ದಾನವಾಗಿ ನೀಡಿದ. ಆದಿಶಕ್ತಿ, ಮಹೇಶ ವಿಶೇಷವಾಗಿ ಮೂಕಾಂಬಿಕಾ, ಸುಬ್ರಹ್ಮಣ್ಯ, ಶಂಕರ ನಾರಾಯಣ ಮೊದಲಾದ ದೇವರುಗಳ ನಿತ್ಯ ಪೂಜೆಗಾಗಿ ಅನೇಕ ದಾನಗಳನ್ನು ನೀಡಿದ.

ಕಾವ್ಯ, ನಾಟಕ, ಧರ್ಮಶಾಸ್ತ್ರ ಮುಂತಾದ ಶಾಖೆಗಳಲ್ಲಿ ಮಹತ್ತರವಾದ ವಿದ್ವತ್ ಚಮತ್ಕೃತಿಗಳುಳ್ಳ ಕೃತಿಗಳನ್ನು ಬರೆಸಿದ. ಮೊಮ್ಮಗನಾದ ವೀರಭದ್ರನಾಯಕನಿಗೆ ಪಟ್ಟಕಟ್ಟಿದ. ಈತ ಶಿವಪ್ಪನಾಯಕ-ವೆಂಕಟಪ್ಪನಾಯಕರೊಂದಿಗೆ ಆಳುತ್ತಿರುವಾಗ ಇಕ್ಕೇರಿಯನ್ನು ಆಕ್ರಮಿಸಲು ಬಂದಿದ್ದ ಹನುಮ ಎಂಬುವವನನ್ನು ನಿಗ್ರಹಿಸಿದ. ಬಸವಪಟ್ಟಣವನ್ನು ಜಯಿಸಿದ ಅನಂತರ ವೈರಾಗ್ಯ ಬಂದು ಶಿವಪ್ಪನಾಯಕನಿಗೆ ರಾಜ್ಯವನ್ನು ವಹಿಸಿ ಕೊಟ್ಟ. ವೆಂಕಟನೆಂಬ ತಮ್ಮನೊಂದಿಗೆ ರಾಜ್ಯವಾಳುತ್ತಿದ್ದ ಶಿವಪ್ಪನಾಯಕ ಅಸಾಮಾನ್ಯ ಪರಾಕ್ರಮಿ, ಔದಾರ್ಯಗಳಿಂದ ಕೂಡಿದವನು. ವೇಲಾಪುರಿಗೆ (ಈಗಿನ ಬೇಲೂರು) ಮುತ್ತಿಗೆ ಹಾಕಿ ಅದನ್ನು ಜಯಿಸಿದ. ಈ ವಿಷಯವನ್ನು ತಿಳಿದು ಸಂತೋಷಗೊಂಡ ವಿಜಯನಗರ ಶ್ರೀರಂಗರಾಯ

ಶಿವಪ್ಪನಾಯಕನನ್ನು ನೋಡಲು ವೇಲಾಪುರಿಗೆ ಬಂದ. ಶಿವಪ್ಪನು ಆ ವೇಲಾಪುರಿಯನ್ನು ಶ್ರೀರಂಗರಾಯನಿಗೆ ಸಮರ್ಪಿಸಿದ. ಸಂತಸಗೊಂಡ ರಾಯನು 'ರಾಮಬಾಣ' ಎಂಬ ಹೆಸರಿನ ಆನೆಯನ್ನು ಶಿವಪ್ಪನಿಗೆ ಉಡುಗೊರೆಯಾಗಿ ನೀಡಿದ; ಅನೇಕ ಆಭರಣಗಳು, ಜಗಜ್ಝಂಪಾ ಎಂಬ ಹೆಸರಿನ ಛತ್ರಿ ಶಾತ್ರಮಸ್ತಕ ಎಂಬ ಬಿರುದುಗಳನ್ನಿತ್ತು ಗೌರವಿಸಿದ.

ತುಂಗಭದ್ರಾ ನದೀ ತೀರದಲ್ಲಿ ಶಿವರಾಜಪುರವೆಂಬ ಅಗ್ರಹಾರ ಕಟ್ಟಿಸಿ ದಾನ ಮಾಡಿದ. ವಾಜಪೇಯಾದಿ ಯಾಗಗಳನ್ನು ಆಚರಿಸಿದ; ಕೇರಳದಲ್ಲಿ ಅನೇಕ ಕೋಟೆಗಳನ್ನು ಕಟ್ಟಿಸಿದ. ಲೆಕ್ಕವಿಲ್ಲದಷ್ಟು ಬಾವಿ, ಕೆರೆ, ಹಾಳು ಬಿದ್ದ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದ; ಅನೇಕ ಪುಣ್ಯಕ್ಷೇತ್ರಗಳಲ್ಲಿ ನಿತ್ಯಪೂಜಾದಿ ಸೇವೆಗಳು ನಡೆಯುವಂತೆ ವ್ಯವಸ್ಥೆ ಮಾಡಿದ. ಕಾಶಿ ವಿಶ್ವೇಶ್ವರನಿಗೆ ಸುವರ್ಣಕಿರೀಟ ಮುಂತಾದವನ್ನು ದಾನ ಮಾಡಿದ. ಕಾಶಿ ವಿಶ್ವೇಶ್ವರನ ಸಾನ್ನಿಧ್ಯದಲ್ಲಿ ಹಸುವಿನ ತುಪ್ಪದಿಂದ ಕೋಟಿದೀಪೋತ್ಸವವನ್ನು ಮಾಡಿಸಿದ. ರಾಮೇಶ್ವರ, ಜಂಬುಕೇಶ, ನಂಜುಂಡೇಶ್ವರ, ಶಿವಗಂಗೆಯ ಗಂಗಾಧರ, ಹರಿಹರೇಶ್ವರ, ನಾಸಿಕದ ತ್ರ್ಯಂಬಕಾಧೀಶ, ರಾಮನಾಥೇಶ್ವರ ಹಾಗೂ ಪಂಚನಂದೀಶ್ವರ ಇತ್ಯಾದಿ ಹದಿನಾರು ದೇವತೆಗಳ ಪೂಜೆಗಾಗಿ ಭೂದಾನ ಮಾಡಿದ. ಕಾಶಿಯಲ್ಲಿ ಕಪಿಲಧಾರಾ ತೀರ್ಥವನ್ನು ಜೀರ್ಣೋದ್ಧಾರ ಮಾಡಿಸಿದ.

ಶ್ರೀರಂಗ ಕಾಂಚೀವರದರಾಜ, ವೆಂಕಟೇಶ್ವರ ಮತ್ತು ಜಗನ್ನಾಥೇಶ್ವರ, ಕಾಮಾಕ್ಷಿ, ಮೀನಾಕ್ಷಿ, ವಿಶಾಲಾಕ್ಷಿ ಮುಂತಾದ ಪ್ರಮುಖ ದೇವತೆಗಳನ್ನು ಪೂಜಿಸಿದ. ಕೆಳದಿಯಲ್ಲಿರುವ ರಾಮೇಶ್ವರ, ವೀರಭದ್ರ ಮತ್ತು ಮೂಕಾಂಬಿಕ ದೇವರುಗಳಿಗೆ ರಥವನ್ನು ಮಾಡಿಸಿದ. ತನ್ನ ಕಿರಿಯ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಶಿವಪ್ಪನಾಯಕನ ವಶಕ್ಕೆ ಒಪ್ಪಿಸಿದ. ಶಿವಪ್ಪನಾಯಕ ವೆಂಕಟಪ್ಪನಿಗೆ ಯೋಗ ವಿದ್ಯೆಯನ್ನು ಉಪದೇಶಿಸಿದ.

ಶಿವಜಂಗಮರ ಪೂಜೆಗಾಗಿ ವೆಂಕಟಪ್ಪ ಪಾದಪೂಜಾ ಪದ್ಧತಿಯನ್ನು ಜಾರಿಗೆ ತಂದಿದ. ದಾಸೋಹ ಮಹಾಧರ್ಮವನ್ನು ವ್ಯವಸ್ಥೆ ಮಾಡಿದ. ತನ್ನ ಮಗ ದೊಡ್ಡ ಭದ್ರಪ್ಪನಾಯಕನಿಗೆ ಪಟ್ಟಾಭಿಷೇಕ ಮಾಡಿ ತನ್ನ ಪೀಠದ ಬಲಭಾಗದಲ್ಲಿ ಆಸನಾರೂಢವಾಗುವಂತೆ ಮಾಡಿ, ಅವನಿಗೆ ಸಕಲ ರಾಜ್ಯ ವ್ಯವಹಾರ ಕ್ರಮಗಳನ್ನು ಉಪದೇಶಿಸಿದ.

ಭದ್ರಪ್ಪನಾಯಕ ಹೆಚ್ಚುಕಾಲ ರಾಜ್ಯವಾಳಿ ರಾಜ್ಯ ವಿಸ್ತರಿಸಿದ. ಈತ ತೀರ್ಥರಾಜಪುರದಲ್ಲಿ ಹಿರಣ್ಯಗರ್ಭ ದಾನ ಮಾಡಿದ; ಶರಾವತೀ ನದಿಯ ತೀರದಲ್ಲಿ ರಾಮಚಂದ್ರಾಪುರದಲ್ಲಿ ತುಲಾಪುರುಷ ದಾನ ಮಾಡಿದ. ಶಿವರಾಜಪುರ ವೆಂಕಟಾಪುರ ಭದ್ರರಾಜಪುರ ಅಗ್ರಹಾರಗಳನ್ನು ಕಟ್ಟಿಸಿ ದಾನ ನೀಡಿದ. ಉಡುಪಿ ಕೃಷ್ಣ, ಸುಬ್ರಹ್ಮಣ್ಯದಲ್ಲಿ ಗುಹೆ, ಕೋಟೇಶ್ವರದ ಶಂಕರನಾರಾಯಣ, ಕೊಲ್ಲೂರಿನ ಮೂಕಾಂಬಿಕೆ ಮುಂತಾದ ದೇವತೆಗಳ ಪೂಜೆಗಾಗಿ ಭೂದಾನ ನೀಡಿದ. ತನ್ನ ತಮ್ಮ ಸೋಮಶೇಖರನಾಯಕನಿಗೆ ರಾಜ್ಯವನ್ನು ವಹಿಸಿಕೊಟ್ಟ. ಸೋಮಶೇಖರನಾಯಕನು ಚೆನ್ನಾಂಬೆಯನ್ನು ಮದುವೆಯಾದ, ಅವಳಿಗೆ ಶಿವಪೂಜಾ ವಿಧಾನವನ್ನು ರಾಜ್ಯದ ಆಗುಹೋಗುಗಳನ್ನು ವಿವರಿಸಿದ. ಕೆಳದಿ ಚೆನ್ನಮ್ಮಾಜಿ, ಸಾಮ ಮೊದಲಾದ ಉಪಾಯಗಳಿಂದ, ಆರು ಗುಣಗಳಿಂದ, ಮೂರು ಶಕ್ತಿಗಳಿಂದ, ಏಳು ಅಂಗಗಳಿಂದ ಕೂಡಿದ ರಾಜ್ಯವನ್ನು ಸದಾಕಾಲ ಜಾಗರೂಕತೆಯಿಂದ ಶೈವಾಚಾರಗಳೊಂದಿಗೆ ನೀತಿ ಪರವಾಗಿ ಆಳಿದಳು. ರಾಜಾರಾಮ ಸಂಕಷ್ಟದಲ್ಲಿದ್ದಾಗ, ಚೆನ್ನಮ್ಮಾಜಿ ತನ್ನ ಮಂತ್ರಿಮಂಡಲದೊಂದಿಗೆ ಚರ್ಚಿಸಿ ಅವನಿಗೆ ಆಶ್ರಯ ನೀಡಿ ರಕ್ಷಿಸಿದಳು. ಅವನನ್ನು ಬೆನ್ನಟ್ಟಿ ಬಂದ ದೊರೆಗಳನ್ನು ಹಿಮ್ಮೆಟ್ಟಿಸಿದಳು. ಈಕೆ ಕೊಲ್ಲೂರು ಮೂಕಾಂಬಿಕೆಗೆ ವಿಶೇಷ ಸೇವೆ ಮಾಡಿಸಿದಳು. ಚೆನ್ನಾಂಬಪುರವೆಂಬ ಅಗ್ರಹಾರವನ್ನು ಕಟ್ಟಿಸಿ ಶ್ರೇಷ್ಠರಿಗೆ ದಾನ ನೀಡಿದಳು. ಜಂಗಮರ ಪೂಜೆಯನ್ನು ಭಕ್ತಿಯಿಂದ ಮಾಡಿದಳು. ಶಿವಪೂಜಾ ವಿಧಿಯನ್ನು ಜಾರಿಗೆ ತಂದಳು. ಈ ಕೃತಿಯಲ್ಲಿ ಕೆಳದಿ ಅರಸರ ಚರಿತ್ರೆಯನ್ನು ಹೇಳಿರುವ ಕೃತಿಕಾರನ, ಅರಸರು ಪಟ್ಟಕ್ಕೆ ಬಂದ ದಿನಾಂಕಗಳನ್ನು ಹೇಳಿಲ್ಲ.

ಗುರುವಂಶ ಕಾವ್ಯ: ಕೆಳದಿಯ ಇತಿಹಾಸದ ವಿಚಾರಗಳನ್ನು ಒಳಗೊಂಡಿರುವ ಕಾವ್ಯ. ಇದರಲ್ಲಿರುವ ಕೆಳದಿಯ ಇತಿಹಾಸದ ವಿಷಯಗಳು ಹೀಗಿವೆ: ಬಸವಪ್ಪ ಮತ್ತು ಬಸವಾಂಬೆಯರ ಪುತ್ರ ಚೌಡಪ್ಪ. ಕೃಷಿಕನಾದ ಇವನು ತನ್ನ ಹೊಲದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಸರ್ಪವೊಂದು ಇವನ ತಲೆಯ ಮೇಲೆ ಹೆಡೆ ಆಡಿಸುತ್ತಿತ್ತಂತೆ; ಇದನ್ನು ಕಂಡ ತಾಯಿಗೆ ಆಶ್ಚರ್ಯವಾಯಿತು. ಇವನ ಮನೆಯ ಹಸು ಪ್ರತಿನಿತ್ಯವೂ ಒಂದು ಹುತ್ತಕ್ಕೆ ಹಾಲೆರೆಯುತ್ತಿತ್ತು. ಆ ಸ್ಥಳವನ್ನು ಸ್ವಚ್ಛಗೊಳಿಸಿದಾಗ ಅಲ್ಲಿ ಶಿವಲಿಂಗವಿತ್ತು. ಅದರ ಬಳಿಯಿದ್ದ ಶಾಸನದಿಂದ ಅದು ರಾಮೇಶಲಿಂಗವೆಂದು ತಿಳಿಯಿತು. ಚೌಡಪ್ಪ ಅಲ್ಲೇ ಒಂದು ರಾಮೇಶ್ವರ ದೇವಾಲಯವನ್ನು ಕಟ್ಟಿಸಿದ. ಇವನ ಸೋದರ ಭದ್ರಪ್ಪ.

ವಿಜಯನಗರದರಸರು ಈ ಸೋದರರಿಗೆ ಕೋಟೆಕೋಲಾಹಲ ಎಂಬ ಬಿರುದು ಕೊಟ್ಟು ರಾಜ್ಯವನ್ನು ಕೊಟ್ಟು ಗೌರವಿಸಿದರು. ಅನೇಕ ಯುದ್ಧಗಳಲ್ಲಿ ವಿಜಯನಗರದ ಅರಸರಿಗೆ ಇವರು ಸಹಕಾರ ನೀಡಿದರು. ಅನಂತರ ಸದಾಶಿವನಾಯಕ ರಾಜ್ಯವಾಳಿದ. ಬಿಜಾಪುರದ ಸುಲ್ತಾನರ ಜೊತೆ ಯುದ್ಧ ಮಾಡಿ ಕಲ್ಯಾಣದುರ್ಗವನ್ನು ವಶಪಡಿಸಿಕೊಂಡ. ಕೇರಳದವರನ್ನೂ ತುಳು ಅರಸರನ್ನೂ ಜಯಿಸಿ ಯಡವಮುರಾರಿ ಎಂಬ ಬಿರುದನ್ನು ಪಡೆದ.

ಸದಾಶಿವನಾಯಕನ ಅನಂತರ ಭದ್ರಪ್ಪ ಅಥವಾ 2ನೆಯ ಸದಾಶಿವನಾಯಕ ಮತ್ತು ದೊಡ್ಡ ಸಂಕಣ್ಣ ನಾಯಕ ಆಳಿದರು. ಚಿಕ್ಕ ಸಂಕಣ್ಣ ದೊಡ್ಡ ಸಂಕಣ್ಣನ ತಮ್ಮ ಹಾಗೂ ರಾಮರಾಜ ಮತ್ತು ವೆಂಕಟಪ್ಪ ಮಕ್ಕಳು.

ಚಿಕ್ಕ ಸಂಕಣ್ಣನಾಯಕನಿಗೆ ಪಟ್ಟಕಟ್ಟಿ ದೊಡ್ಡ ಸಂಕಣ್ಣ ತೀರ್ಥಯಾತ್ರೆಗೆ ಹೋದನು. ಚಿಕ್ಕ ಸಂಕಣ್ಣನಾದರೂ ವೀರಾಗ್ರೇಸರ, ದಕ್ಷ ಆಡಳಿತಗಾರನಾಗಿದ್ದನು. ತೀರ್ಥಯಾತ್ರೆ ಸಂದರ್ಭದಲ್ಲಿ ದೆಹಲಿಗೆ ಬಂದ ದೊಡ್ಡ ಸಂಕಣ್ಣ ಅಲ್ಲಿ ಬಾದಶಾಹನನ್ನು ಭೇಟಿಯಾದ. ದೆಹಲಿ ಸುಲ್ತಾನನು ಇವನಿಗೆ ಅನೇಕ ಉಡುಗೊರೆಗಳನ್ನು ನೀಡಿ ಕಳುಹಿಸಿದ. ತೀರ್ಥಯಾತ್ರೆಯಿಂದ ಹಿಂದಿರುಗಿದ ದೊಡ್ಡ ಸಂಕಣ್ಣ ಕೆಳದಿಯಲ್ಲಿ ವೀರಭದ್ರ ದೇವಾಲಯ ಮತ್ತು ಇಕ್ಕೇರಿಯಲ್ಲಿ ಅಘೋರೇಶ್ವರ ದೇವಾಲಯಗಳನ್ನು ನಿರ್ಮಿಸಿದ.

ಅನಂತರ ವೆಂಕಟಪ್ಪನಾಯಕ ಪಟ್ಟಕ್ಕೆ ಬಂದ. ಇವನು ಭೈರಾದೇವಿಯನ್ನು ಜಯಿಸಿದ, ಇಕ್ಕೇರಿಯಲ್ಲಿ ನಾಟ್ಯಶಾಲೆಯನ್ನು ಕಟ್ಟಿಸಿದ. ರಾಜ್ಯದಲ್ಲೆಲ್ಲ ತಟಾಕಗಳನ್ನು ಕಟ್ಟಿಸಿದ, ಉಪವನಗಳನ್ನು ನಿರ್ಮಾಣ ಮಾಡಿದ; ಹನುಮಾನ್ ಪಾಳೆಯಗಾರ, ಬಿಜಾಪುರ ದಂಡನಾಯಕ ಮಂಜರ್‌ಖಾನ್, ಶಹಪುರದರಸ, ತುಳುವ ಅರಸರು ಮೊದಲಾದ ಅನೇಕ ಅರಸರನ್ನು ಜಯಿಸಿದ; ಶಿವಗೀತೆಗೆ ಭಾಷ್ಯವನ್ನು ಸಂಸ್ಕೃತದಲ್ಲಿ ರಚಿಸಿದ; ಅನೇಕ ವಿದ್ವಾಂಸರಿಗೆ ಆಶ್ರಯವನ್ನು ನೀಡಿದ; ಈತ ಆನಂದಪುರದಲ್ಲಿ ಚಂಪಕ ಕೊಳವನ್ನು, ಮಠವನ್ನು ಕಟ್ಟಿಸಿದ; ವಿದ್ವಾಂಸರಿಗಾಗಿ ವಿಶ್ವನಾಥಪುರ ಅಗ್ರಹಾರವನ್ನು, ಸಾಗರ ಪಟ್ಟಣವನ್ನು ಕಟ್ಟಿಸಿದ; ಅನೇಕ ಮಠ ಮಂದಿರಗಳ ನಿರ್ಮಾಣ ಮಾಡಿದ.

ವೀರಭದ್ರನಾಯಕ ಮುಂದಿನ ರಾಜ. ಈ ಹಿಂದೆ ವೆಂಕಟಪ್ಪ ನಾಯಕ ಸೋಲಿಸಿದ ಸಣ್ಣ ಪುಟ್ಟ ಪಾಳೆಯಗಾರರು ತಿರುಗಿ ಬಿದ್ದಾಗ ಅವರನ್ನೆಲ್ಲ ಸದೆ ಬಡಿದು ಆರು ಯೋಜನಗಳ ರಾಜ್ಯ ವಿಸ್ತಾರ ಮಾಡಿದ. ಶೃಂಗೇರಿಗೆ ಸದಾ ಉಪಟಳ ನೀಡುತ್ತಿದ್ದ ಭೈರವಭೂಪನನ್ನು ಸದೆಬಡಿದು ಶೃಂಗೇರಿ ಮಠವನ್ನು ರಕ್ಷಿಸಿದ. ಅದರ ನೆನಪಿಗಾಗಿ ಶೃಂಗೇರಿ ಜಗದ್ಗುರುಗಳು ಶ್ರೀರಾಮಚಂದ್ರಮಹೋದಯ ಎಂಬ ಕಾವ್ಯವನ್ನು ರಚಿಸಿದ್ದಾರೆ. ಶಿವಪ್ಪನಾಯಕ ಮುಂದಿನ ರಾಜ. ಒಮ್ಮೆ ಭೀಕರ ಬರಗಾಲ ಬಂದಾಗ ಶೃಂಗೇರಿ ಸಚ್ಚಿದಾನಂದಯೋಗೀಂದ್ರರ ಸಹಕಾರದಿಂದ ಇವನು ಆಹಾರ ವ್ಯವಸ್ಥೆ ಮಾಡಿದ.

ಅನಂತರ ಚೆನ್ನಮ್ಮಾಜಿ ರಾಜ್ಯವಾಳಿದಳು. ಇವಳು ಶೃಂಗೇರಿ ಮಠಕ್ಕೆ ಬಂದಿದ್ದ ಅನೇಕ ವಿಪತ್ತುಗಳನ್ನು ದೂರಮಾಡಿ ಅನೇಕ ದಾನ ದತ್ತಿಗಳನ್ನು ನೀಡಿದಳು. ಈಕೆ ದಕ್ಷ ಆಡಳಿತಗಾರಳಾಗಿದ್ದಳು. ಅನೇಕ ರಾಜರನ್ನು ಜಯಿಸಿದಳು. ಮರಾಠ ದೊರೆ ಶಿವಾಜಿಯ ಮಗ ರಾಜಾರಾಮನು ಆಶ್ರಯ ಬೇಡಿ ಬಂದಾಗ ಆಶ್ರಯ ನೀಡಿ, ಮೊಗಲರನ್ನು ಯುದ್ಧದಲ್ಲಿ ಸೋಲಿಸಿ ಹಿಮ್ಮೆಟ್ಟಿಸಿದಳು.

ಚೆನ್ನಮ್ಮಾಜಿಯ ಮಗ ಬಸಪ್ಪನಾಯಕ ಅನಂತರ ರಾಜ್ಯವಾಳಿದ. ಇವನು ಉತ್ತಮ ಆಡಳಿತಗಾರನಾಗಿದ್ದ. ಶೃಂಗೇರಿ ಜಗದ್ಗುರುಗಳು ಕೊಲ್ಲೂರಿಗೆ ಬಂದಾಗ ಇವನು ಪರಿವಾರ ಸಮೇತ ಅಲ್ಲಿಗೆ ತೆರಳಿ, ಗುರುಗಳ ಪಾದಪೂಜೆ ಮಾಡಿ, ತಮ್ಮ ಆರಾಧ್ಯ ದೇವಿಯಾದ ಮೂಕಾಂಬಿಕೆಯನ್ನು ಅನೇಕ ವಿಧವಾಗಿ ಸ್ತುತಿಸಿ, ಗುರುಗಳಿಗೆ ಅನೇಕ ರೀತಿಯ ಉಡುಗೊರೆಗಳನ್ನು ನೀಡಿದ. ಇವನು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಸೇವೆ ಮಾಡಿ ಚಂಪಾಷಷ್ಠಿಯಂದು ರಥೋತ್ಸವ ನಡೆಯುವಂತೆ ಏರ್ಪಾಟು ಮಾಡಿ ರಥವನ್ನು ಮಾಡಿಸಿಕೊಟ್ಟಿದ್ದಾನೆ. ಸುಬ್ರಹ್ಮಣ್ಯದಲ್ಲಿ ಶೃಂಗೇರಿ ಮಠ ಸ್ಥಾಪಿಸಿದ. ಬಸಪ್ಪನಾಯಕನ ಮಗ ಎರಡನೆಯ ಸೋಮಶೇಖರ ನಾಯಕ ಮುಂದಿನ ದೊರೆಯಾದ.

ಈ ಕಾವ್ಯದಲ್ಲಿ ಉಲ್ಲೇಖವಾಗಿರುವ ಕೆಲವು ರಾಜರುಗಳು: ಬಲ್ಲಾಳ ಹೆಬ್ರಿಯರಾಜ (ಶ್ಲೋ 13, ಸರ್ಗ–14), ಬಸವಪ್ಪನಾಯಕನ ಮಗ ಸೋಮಶೇಖರನಾಯಕ (ಶ್ಲೋ 46, ಸರ್ಗ–14), ಬಂಕಾಪುರದ ಅರಸ ಹನುಮಾನ್ (ಶ್ಲೋ 50, ಸರ್ಗ–14), ತರೀಕೆರೆ ಪಾಳೆಯಗಾರ ಪಟ್ಟಾಭಿರಾಮ (ಶ್ಲೋ 52, ಸರ್ಗ–14), ಮೊಗಲರ ಗೌರ್ನರ್ ಉಲ್ಲೇಖ (ಶ್ಲೋ 55–56, ಸರ್ಗ–14), ಬನವಾಸಿಯ ಬಳಿ ರಾಜ್ಯಭಾರ ಮಾಡುತ್ತಿದ್ದ ಸದಾಶಿವ (ಶ್ಲೋ 101, ಸರ್ಗ–15), ಸೋಮಶೇಖರನಾಯಕ (ಶ್ಲೋ 46, ಸರ್ಗ 15), ನಿರ್ವಾಣಯ್ಯ ಸೋಮಶೇಖರನಾಯಕನ ಮಾವ (ಶ್ಲೋ, ಸರ್ಗ–15), ಬಸವರಾಜನ ಮಗ ಸೋಮಶೇಖರನಾಯಕ (ಶ್ಲೋ 60, ಸರ್ಗ–16), ಶ್ರೀರಂಗಪಟ್ಟಣದ ಅರಸ – ಶ್ರೀ ಕೃಷ್ಣರಾಜ ಒಡೆಯರ್ (ಶ್ಲೋ 11, ಸರ್ಗ–19). (ಜಿ.ವಿ.ಕೆ.)

**ಕೇಕಯ ವಂಶ: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಕೇರಳದ ವಾಸ್ತುಶಿಲ್ಪ ಮತ್ತು ಕಲೆ:** ಕೇರಳದಲ್ಲಿ ಮೂರು ಪ್ರಸಿದ್ಧ ರಾಜವಂಶಗಳು ದೀರ್ಘ ಕಾಲದವರೆಗೆ ಆಳಿದ್ದು ತಿಳಿಯುತ್ತದೆ. ಇವರಲ್ಲಿ ಕರೂರನ್ನು (ವಂಜಿ ಎಂದೂ ಇದು ಪ್ರಸಿದ್ಧವಿದ್ದು, ಇದನ್ನು ಗುರುತಿಸುವ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ) ರಾಜಧಾನಿಯಾಗಿ ಹೊಂದಿದ್ದ ಚೇರರು ಒಂದು ಹಂತದಲ್ಲಿ ಕೊಂಗುದೇಶವನ್ನೂ (ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಪ್ರದೇಶ) ಒಳಗೊಂಡಂತೆ ಕೇರಳದ ವಿಶಾಲ ಪ್ರದೇಶದ ಮೇಲೆ ಹಿಡಿತ ಸಾಧಿಸಿದ್ದರು. ಕೇರಳದ ದಕ್ಷಿಣ ಭಾಗದಲ್ಲಿ ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯ ಕೆಲಭಾಗವನ್ನೂ ಒಳಗೊಂಡ ಪ್ರದೇಶವನ್ನು ಯಾದವ ವಂಶೀಯರೆಂದು ಹೇಳಿಕೊಳ್ಳುತ್ತಿದ್ದ ಆಯ್ ಎಂಬ ಅರಸರು ಆಳುತ್ತಿದ್ದರು. ಉತ್ತರ ಮಲಬಾರ್ ಪ್ರದೇಶದಲ್ಲಿ ಎಟುಲ್‌ಮಲೈಯ ನಣ್ಣರು ರಾಜಕೀಯವಾಗಿ ಪ್ರಭಾವಿಯಾಗಿದ್ದರು. ಇವರಾಳಿದ ಪ್ರದೇಶದಲ್ಲಿ ಬೆಳೆದುಬಂದ ವಾಸ್ತು ಮತ್ತು ಶಿಲ್ಪಕಲೆ ವೈಶಿಷ್ಟ್ಯಗಳಿಂದೊಡಗೂಡಿ ಕೇರಳದ ವಾಸ್ತು ಮತ್ತು ಶಿಲ್ಪಕಲೆಗೆ ನಿರ್ದಿಷ್ಟ ಸ್ಥಾನಮಾನಗಳನ್ನೊದಗಿಸಿವೆ.

ಪ್ರಾಗೈತಿಹಾಸಿಕ ಎಂದು ಗುರುತಿಸಬಹುದಾದ ಅವಶೇಷಗಳು ಕೇರಳ ಪ್ರದೇಶದಲ್ಲಿ ಕಡಿಮೆ. ಕರ್ನಾಟಕದ ತಪ್ಪಲಿಗೆ ಹೊಂದಿಕೊಂಡಿರುವ ವೈನಾಡು ಪ್ರದೇಶದಲ್ಲಿ ಎಡಕಲ್ಲು ಗುಹೆಯಲ್ಲಿ ಕಲ್ಲಿನಿಂದ ಗೀರಿ ಬರೆಯಲಾದ ಮನುಷ್ಯ ಮತ್ತು ಪ್ರಾಣಿಗಳ ಹಾಗೂ ಸ್ವಸ್ತಿಕದಂತಹ ಸಂಕೇತಗಳ ಚಿತ್ರಗಳಿವೆ. ಇವುಗಳ ಕಾಲ ನಿರ್ಣಯಿಸಲಾಗಿಲ್ಲ. ಪ್ರ.ಶ.ಸು.500ರ ಕೆಲವು ಶಾಸನಗಳೂ ಇಲ್ಲಿವೆ. ವಾಸ್ತು ರಚನೆಯ ಖಚಿತ ಉದಾಹರಣೆಗಳ ದೃಷ್ಟಿಯಿಂದ ಕೇರಳದ ಬೃಹತ್ ಶಿಲಾ ಗೋರಿಗಳು ಉಲ್ಲೇಖನೀಯವಾಗಿವೆ. ಇವುಗಳಲ್ಲಿ ಜಂಬಿಟ್ಟಿಗೆಯ ಸಮತಟ್ಟಲ್ಲಿ ಕೊರೆದು ನಿರ್ಮಿಸಿರುವ ಗೋರಿಗಳು, ಕುಡ್ಯೆಕಲ್ಲು (ಕೊಡೆಯಂತಿರುವ) ಗೋರಿಗಳು ಮತ್ತು ಟೋಪಿಕಲ್ಲು (ಟೋಪಿಯಂತಿರುವ) ಗೋರಿಗಳು ಕೇರಳಕ್ಕೆ ವಿಶಿಷ್ಟವೆನಿಸಿವೆ. ಉಳಿದೆಡೆ ದೊರೆತಿರುವ ಡಾಲ್ಮೆನೈಡ್ ಸಿಸ್ಟ್‌ಗಳು, ಅಸ್ಥಿ ಜಾಡಿಗಳು, ನಿಲಿಸುಗಲ್ಲುಗಳು ಸಹ ಇಲ್ಲಿವೆ. ಜಂಬಿಟ್ಟಿಗೆಯ ಪ್ರದೇಶವಾದ ತ್ರಿಶೂರ್, ಮಲಪ್ಪುರಮ್, ಕೋಜಿಕೋಡು, ಕಣ್ಣೂರು ಜಿಲ್ಲೆಗಳಲ್ಲಿ ಜಂಬಿಟ್ಟಿಗೆಯಲ್ಲಿ ಕೊರೆದ ನೆಲಗುಹಾ ಗೋರಿಗಳನ್ನು ಕಾಣಬಹುದು. ಇವು ಆಯತ ಇಲ್ಲವೆ ವೃತ್ತಾಕಾರದ ವಿನ್ಯಾಸಹೊಂದಿದ್ದು, ಒಂದು ಇಲ್ಲವೆ ಹೆಚ್ಚು ಕೋಣೆಗಳನ್ನೊಳಗೊಂಡಿವೆ. ಇವುಗಳಿಗೆ ಮೇಲ್ಗಡೆಯಿಂದ ಆಯತಾಕಾರದ ಸಪೂರವಾದ ಒಂದೇ ಪ್ರವೇಶ ಇರುತ್ತದೆ. ಕೆಲವು ಗುಹೆಗಳಿಗೆ ಒಂದು ಇಲ್ಲವೆ ಎರಡು ಪೀಠಗಳು ಹಾಗೂ ತೆರೆದ ಅಂಗಳ ಇರುತ್ತದೆ. ಗುಹೆಗಳು ಪೂರ್ವ ಇಲ್ಲವೆ ಉತ್ತರಕ್ಕೆ ಮುಖ ಮಾಡಿವೆ. ತ್ರಿಶೂರಿನ ಪೋರ್ಕಳಮ್‌ನಲ್ಲಿ ಜಂಬಿಟ್ಟಿಗೆಯಲ್ಲಿ ಕೊರೆದಿರುವ ಬೃಹತ್‌ಶಿಲಾಗುಹೆಗಳ ಉದಾಹರಣೆಗಳನ್ನು ಕಾಣಬಹುದು.

ಮಹಾದೇವ ದೇವಾಲಯ: ಕಳಕುತ್ತಮ್

ಒಂದು ಕಾಲಕ್ಕೆ ಕೇರಳದಲ್ಲಿ ಬೌದ್ಧರ ಚಟುವಟಿಕೆಗಳಿದ್ದುದು ಸ್ಪಷ್ಟವಿದೆ. 7–8ನೆಯ ಶತಮಾನದ ಬುದ್ಧ ವಿಗ್ರಹಗಳು ಅಲ್ಲೆಪ್ಪಿ ಮತ್ತು ಕೊಲ್ಲಂ ಜಿಲ್ಲೆಗಳಲ್ಲಿ ಕರುಮಡಿ, ಮಾವೇಲಿಕರ, ಭರನಿಕಾವು, ಪಲ್ಲಿಕ್ಕಲ್ ಮುಂತಾದೆಡೆ ವರದಿಯಾಗಿವೆ. ತಿರುವನಂತಪುರದ ಸಮೀಪ ಮೌದುರ್ಕುಲಂಗರದಲ್ಲಿ ದೊರೆತಿರುವ ಸು. 7–8ನೆಯ ಶತಮಾನದ ಬುದ್ಧವಿಗ್ರಹ ಶ್ರೀಲಂಕದ ಅನುರಾಧಾಪುರ ಶೈಲಿಯಲ್ಲಿದೆ. ಶ್ರೀಮೂಲವಾಸಂ ಎಂಬ ವಿಹಾರ ಕೇರಳದಲ್ಲಿ ಬಹು ಪ್ರಸಿದ್ಧವಾಗಿತ್ತೆಂದೂ ಇದು ಮೂಶಿಕ ದೊರೆ ವಿಕ್ರಮರಾಮನ ಕಾಲದಲ್ಲಿ ಸಮುದ್ರ ಪಾಲಾಗ ತೊಡಗಿತೆಂದೂ ತಿಳಿಯುತ್ತದೆ. ಇಲ್ಲಿದ್ದ ಬೋಧಿಸತ್ವ ಲೋಕನಾಥನ ವಿಗ್ರಹ ಭಾರತದಲ್ಲೆಲ್ಲ ಪ್ರಸಿದ್ಧವಾಗಿತ್ತು. ಪ್ರ.ಶ.1015ಕ್ಕೆ ಅನ್ವಯಿಸುವ ಇದರ ಚಿತ್ರವಿರುವ ಹಸ್ತಪ್ರತಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿದೆ. ಬಿಳಿಬಣ್ಣದ, ಚತುರ್ಭುಜ ಲೋಕನಾಥ ನಿಂತ ಭಂಗಿಯಲ್ಲಿದ್ದು ಇವನ ಪಾರ್ಶ್ವಗಳಲ್ಲಿ ನೀಲೋತ್ಪಲಧಾರಿ ತಾರಾ ಹಾಗೂ ಪದ್ಮ ಮತ್ತು ಕಲಶ ಹಿಡಿದಿರುವ ಭೃಕುಟಿ ಇದ್ದಾರೆ. ಅದರ ಕೆಳಗೆ ದಕ್ಷಿಣಪಥ ಮೂಲವಾಸ ಲೋಕನಾಥ ಎಂಬ ಬರೆವಣಿಗೆ ಇದೆ.

ಜೈನಧರ್ಮ ಕೇರಳದಲ್ಲಿ ಸಾಕಷ್ಟು ಪ್ರಚಾರ ಪಡೆದಿತ್ತು. ಬೇರೆ ಬೇರೆ ಪ್ರದೇಶಗಳಲ್ಲಿ 9–11ನೆಯ ಶತಮಾನದ ಜೈನ ಕಟ್ಟಡಗಳು ದೊರೆತಿವೆ. ಕನ್ಯಾಕುಮಾರಿ ಜಿಲ್ಲೆಯಲ್ಲಿ ಚಿತ್ರಾಲ್ ಸಮೀಪವಿರುವ ತಿರುಚ್ಚಾರಣತ್ತುಮಲೈ ಬಂಡೆ ಆಶ್ರಯಗಳಲ್ಲಿ ನೈಸರ್ಗಿಕ ಗುಹೆಯ ಪಾರ್ಶ್ವದಲ್ಲಿ ಹಲವು ತೀರ್ಥಂಕರ ಶಿಲ್ಪಗಳನ್ನು ಕಡೆಯಲಾಗಿದೆ. ಈ ಶಿಲ್ಪಗಳಲ್ಲಿ ಪಾರ್ಶ್ವನಾಥ, ಮಹಾವೀರ, ಪದ್ಮಾವತಿ, ಅಂಬಿಕಾ ಮುಂತಾದವು ಸೇರಿವೆ. ಇಲ್ಲಿರುವ 9–10ನೆಯ ಶತಮಾನದ ಆಯ್ ದೊರೆ ವಿಕ್ರಮಾದಿತ್ಯ ವರಗುಣನ ಶಾಸನದಲ್ಲಿ ತಿಚ್ಚಾರಣತ್ತುಮಲೈಯ ಭಟರಿಯಾರ್ ದೇವತೆಗೆ ಬಂಗಾರದ ಆಭರಣಗಳನ್ನು ಕೊಡಮಾಡಿದ ಉಲ್ಲೇಖವಿದೆ. 13ನೆಯ ಶತಮಾನದಲ್ಲಿ ಇದು ಭಗವತಿಯ ಗುಡಿಯಾಗಿ ಪರಿವರ್ತಿತವಾಯಿತು. ಎರ್ನಾಕುಲಂ ಜಿಲ್ಲೆಯ ಪೆರುಮ್ಬವೂರಿನ ಸಮೀಪ ಕಲ್ಲಿಲ್ ಎಂಬಲ್ಲಿಯೂ ಜೈನ ಬಂಡೆ ಆಶ್ರಯವಿದೆ. ಇದು ಕೂಡ ತದನಂತರ ಕಾಲದಲ್ಲಿ ಭಗವತಿಯ ದೇಗುಲವಾಗಿದೆ. ಜೈನರ ಕಟ್ಟಡ ಮಾದರಿಯ ದೇಗುಲಗಳಲ್ಲಿ ಪಾಲ್ಘಾಟ್ ಜಿಲ್ಲೆಯ ಗೋದಾಪುರಂನಲ್ಲಿರುವ ಸಕ್ಕಿಯರ್ ಭಗವತೀ ಗುಡಿ ಉಲ್ಲೇಖನೀಯ. ಇಲ್ಲಿ ದೊರೆತ ಮಹಾವೀರ ಮತ್ತು ಪಾರ್ಶ್ವನಾಥ ವಿಗ್ರಹಗಳು ಈಗ ತ್ರಿಶೂರ್ ವಸ್ತು ಸಂಗ್ರಹಾಲಯದಲ್ಲಿವೆ. 10ನೆಯ ಶತಮಾನದ ಶಾಸನವೂ ಇಲ್ಲೇ ದೊರೆತಿದೆ. ಪಾಲ್ಘಾಟ್‌ನಲ್ಲಿ ಚಂದ್ರಪ್ರಭನ ಜಿನಾಲಯವಿದೆಯಾದರೂ ಇದರ ಆರಂಭ ಹಂತದ ಕಾಲವನ್ನು ನಿರ್ಧರಿಸು ವಂತಿಲ್ಲ. 10–11ನೆಯ ಶತಮಾನದ ವಜ್ರಪರ್ಯಂಕಾಸನದಲ್ಲಿ ಕುಳಿತಿರುವ ಜಿನವಿಗ್ರಹ ಇಲ್ಲಿ ದೊರೆತಿದೆ.

ಗ್ರಾನೈಟ್ ಶಿಲೆಯಲ್ಲಿ ಗುಹಾಲಯಗಳನ್ನು ಕೊರೆಯುವ ಪರಂಪರೆ ಬಹುಶಃ ತಮಿಳುನಾಡಿ ನಿಂದ ಕೇರಳಕ್ಕೆ ದಾಟಿದಂತಿದೆ. ಇಲ್ಲಿಯ ಗುಹಾಲಯಗಳು ಎರಡು ಪ್ರದೇಶಗಳಲ್ಲಿ – ದಕ್ಷಿಣದಲ್ಲಿ ಆಯ್ ದೊರೆಗಳ ಪ್ರದೇಶದಲ್ಲಿ ಹಾಗೂ ಉತ್ತರದಲ್ಲಿ ಚೇರರ ಪ್ರದೇಶದಲ್ಲಿ ಕೇಂದ್ರೀಕೃತವಾಗಿವೆ. ದಕ್ಷಿಣ ಗುಂಪಿನ ಗುಹಾಲಯಗಳ ಉದಾಹರಣೆಗಳನ್ನು ತಿರುವನಂತಪುರ ಜಿಲ್ಲೆಯ ವಿಲಿಂಜಂ ಮತ್ತು ಅಯಿರೂರ್ಪಾರ, ಕೊಲ್ಲಂ ಜಿಲ್ಲೆಯ ಕೊಟ್ಟುಕಲ್ಲು, ಅಲ್ಲೆಪ್ಪಿ ಜಿಲ್ಲೆಯ ಕವಿಯೂರು, ಕನ್ಯಾಕುಮಾರಿ ಜಿಲ್ಲೆಯ (ತಮಿಳುನಾಡು) ತಿರುನನ್ದಿಕರ, ಭೂತಪಾಣ್ಡಿ, ತುವರನ್ಕಾಡು, ಸಿವಗಿರಿ ಮತ್ತು ಅಲಗಿಅಪಾಣ್ಡಿಪುರಂ ನೆಲೆಗಳಲ್ಲಿ ಕಾಣಬಹುದು.

ಕವಿಯೂರಿನಲ್ಲಿರುವ ಶೈವ ಗುಹಾಲಯ ಪ್ರೌಢ ಶಿಲ್ಪಪರಂಪರೆಯ ಛಾಪು ಹೊಂದಿದ್ದು ಪೂರ್ತಿಗೊಂಡಿರುವ ಉದಾಹರಣೆಗಳಲ್ಲಿ ಉತ್ಕೃಷ್ಟವಾದುದಾಗಿದೆ. ಪಶ್ಚಿಮಾಭಿಮುಖವಾಗಿರುವ ಈ ಗುಹಾಲಯಕ್ಕೆ ಗರ್ಭಗೃಹ, ಅರ್ಧಮಂಟಪ ಮತ್ತು ಮುಖಮಂಟಪ ಇವೆ. ಗರ್ಭಗೃಹದಲ್ಲಿ ಲಿಂಗವಿದೆ. ಅರ್ಧಮಂಟಪದ ಗೋಡೆಗಳಲ್ಲಿ ಕೈಕಟ್ಟಿಕೊಂಡು ನಿಂತಿರುವ ಅರಸ (ಇಲ್ಲವೆ ದಾನಿ), ಋಷಿ, ಕುಳಿತಿರುವ ಚತುರ್ಭುಜ ಗಣೇಶ ಮತ್ತು ದ್ವಾರಪಾಲರ ಉಬ್ಬು ಶಿಲ್ಪಗಳಿವೆ. ಇವುಗಳಲ್ಲಿ ಕೈಕಟ್ಟಿ ನಿಂತಿರುವ ಅರಸನ (?) ಶಿಲ್ಪ ವಿಶಿಷ್ಟವಾಗಿದೆ. ಪಾಂಡ್ಯರ ರಾಜ್ಯದಲ್ಲಿರುವ ತಿರುಮಯಂ ಮತ್ತು ವೀರಶಿಖಾಮಣಿ ಗುಹೆಗಳಲ್ಲಿ ಇದೇ ಪ್ರಕಾರದ ಶಿರ ಅಲಂಕಾರವಿರುವ ವ್ಯಕ್ತಿಶಿಲ್ಪಗಳು ಇರುವುದರಿಂದ ಕವಿಯೂರಿನ ಗುಹಾಲಯ ಶಿಲ್ಪಗಳು ಪಾಂಡ್ಯರ ಪರಂಪರೆ ಯೊಂದಿಗೆ ಬಲವಾದ ಸಂಬಂಧ ಹೊಂದಿವೆಯೆಂದು ಹೇಳಬೇಕಾಗುತ್ತದೆ. ಇದಲ್ಲದೆ ಕವಿಯೂರಿನ ದ್ವಾರಪಾಲ ಶಿಲ್ಪಗಳು ರಾಮನಾಥಪುರಂ ಜಿಲ್ಲೆಯ ಸೆಲ್ವಪಟ್ಟಿಯ ಹಾಗೂ ತಿರುನೆಲ್ವೇಲಿ ಜಿಲ್ಲೆಯ ತಿರುಮಲಪುರಂ ಶಿಲ್ಪಗಳನ್ನು ಹೋಲುತ್ತವೆ.

ತಿರುನನ್ದಿಕರದಲ್ಲಿರುವ ಗುಹಾಲಯವನ್ನು ಎಲ್ಲ ರೀತಿಯಲ್ಲಿಯೂ ತಿರುಪ್ಪರನ್ಕುನ್ರಂದಲ್ಲಿ ರುವ ಉಮ್ಮೆಯಾಣ್ಡನ್ ಗುಹೆಗೂ ತಿರುಮಯಂದಲ್ಲಿರುವ ಸತ್ಯವಾಗೀಶ್ವರ ದೇವಾಲಯಕ್ಕೂ ಹೋಲಿಸಬಹುದು. ಮಹಾಮಂಟಪ, ಅರ್ಧಮಂಟಪ ಮತ್ತು ಆಯತಾಕಾರದ ಗರ್ಭಗೃಹ ವಿರುವ ಈ ಗುಹಾಲಯ ದಕ್ಷಿಣಾಭಿಮುಖವಾಗಿದ್ದರೂ ಮೆಟ್ಟಿಲುಗಳಿರುವ ಗರ್ಭಗೃಹ ಅರ್ಧಮಂಪಟದ ಪಶ್ಚಿಮ ಪಾರ್ಶ್ವದಲ್ಲಿದೆ. ಮೂಲತಃ ಗುಹಾಲಯವನ್ನು ವರ್ಣಚಿತ್ರಗಳಿಂದ ಅಲಂಕರಿಸಲಾಗಿತ್ತು. ಈ ಪರಂಪರೆ ಪಾಂಡ್ಯರ ಗುಹಾಲಯಗಳಲ್ಲಿಯೂ ಗೋಚರಿಸುತ್ತದೆ. ಕಂಬವೊಂದರ ಮೇಲಿರುವ 8ನೆಯ ಶತಮಾನದ ಉತ್ತರಾರ್ಧದ ಶಾಸನ ಇದರ ಕಾಲ ವನ್ನು ಸೂಚಿಸುತ್ತದೆ. ಕೊಟ್ಟುಕಲ್ಲಿನಲ್ಲಿರುವ ಎರಡು ಗುಹೆಗಳೂ ಪೂರ್ವಾಭಿಮುಖವಾಗಿರುವ ಶೈವ ಗುಹೆಗಳು. ಇವುಗಳಲ್ಲಿ ಚಿಕ್ಕ ಗುಹೆಗೆ ಗರ್ಭಗೃಹ ಮತ್ತು ಮುಖಮಂಟಪ ಇದ್ದು, ಇದರ ಒಂದು ಕೋಷ್ಠದಲ್ಲಿ ಹನುಮಂತನ ಶಿಲ್ಪವಿದೆ. ಈ ಗುಹೆಯ ಪಕ್ಕದಲ್ಲಿರುವ ದೊಡ್ಡ ಗುಹೆಯಲ್ಲಿ ನಾಲ್ಕು ಬದಿಗಳಿರುವ ಗರ್ಭಗೃಹ, ಅರ್ಧಮಂಟಪ ಮತ್ತು ಮುಖಮಂಟಪ ಇವೆ. ಪ್ರತಿಯೊಂದಕ್ಕೂ ನಂದಿಯ ಸ್ವತಂತ್ರ ದುಂಡುಶಿಲ್ಪವಿದೆ. ವಲಿಂಜಂದಲ್ಲಿರುವ (ಕೊಟ್ಟುಕಲ್ಲು) ಗ್ರಾನೈಟ್ ಬಂಡೆಯಲ್ಲಿ ಕೊರೆದಿರುವ ಗುಹಾಲಯದಲ್ಲಿ ಅಪೂರ್ಣವಾಗಿರುವ ಕಿರಾತಮೂರ್ತಿ ಶಿವ ಹಾಗೂ ಪಾರ್ವತಿಯೊಂದಿಗೆ ನಟೇಶ ಶಿವ ಉಬ್ಬುಶಿಲ್ಪಗಳಿವೆ. ಈ ಗುಹಾಲಯದ ಶಿಲ್ಪಗಳಾದರೂ ಪಾಂಡ್ಯ ಶೈಲಿಯನ್ನು ಹೋಲುತ್ತವೆ. ವೈಷ್ಣವ ಹಿನ್ನೆಲೆಯ ಏಕಮೇವ ಗುಹೆ ಕನ್ಯಾಕುಮಾರಿ ಜಿಲ್ಲೆಯ ಅಲಗಿಅಪಾಣ್ಡಿಪುರಂದಲ್ಲಿದೆ. ಇದರ ಹಿಂಗೋಡೆಯಲ್ಲಿ ಚತುರ್ಭುಜ ವಿಷ್ಣುವಿನ ಅಪೂರ್ಣ ಶಿಲ್ಪವಿದೆ.

ಉತ್ತರ ಗುಂಪಿನ ಗುಹಾಲಯಗಳೂ ಶೈವ ಗುಹಾಲಯಗಳೇ. ತ್ರಿಶೂರು ಜಿಲ್ಲೆಯ ತ್ರಿಕ್ಕೂರಿನ ಗುಹಾಲಯದಲ್ಲಿ ಗರ್ಭಗೃಹ ಮತ್ತು ದ್ವಾರಪಾಲರು ಉತ್ತರಾಭಿಮುಖವಾಗಿದ್ದರೂ ಹುಟ್ಟುಗಲ್ಲಿನಲ್ಲಿ ರೂಪಿಸಿರುವ ಲಿಂಗಪೀಠ ಪೂರ್ವಾಭಿಮುಖವಾಗಿದೆ. ಇರುನಿಲಕ್ಕೋಡಿನಲ್ಲಿ ರುವ ಗುಹಾಲಯಕ್ಕೆ ಮುಖಮಂಟಪವಿಲ್ಲ. ಇದರ ಗರ್ಭಗೃಹದ ಗೋಡೆಯಲ್ಲಿ ದಕ್ಷಿಣಾಮೂರ್ತಿ, ವಿಷ್ಣು ಮತ್ತು ಶಿವನ ಉಬ್ಬುಶಿಲ್ಪಗಳಿವೆ. ಇವು ಅತಿಯ ಮತ್ತು ಪಲ್ಲವ ಶಿಲ್ಪಶೈಲಿಯನ್ನು ಹೋಲುತ್ತವೆ. ಪಾಲ್ಘಾಟ್ ಜಿಲ್ಲೆಯ ಭ್ರಾನ್ತಸ್ಪರದಲ್ಲಿ ಗುಹಾಲಯವನ್ನು ಕೊರೆಯುವ ತಂತ್ರದ ಪುರಾವೆಯಲ್ಲಿಯೂ ಪಲ್ಲವ ರೀತಿಯ ಪ್ರಭಾವವಿದೆ.

ಕೇರಳದಲ್ಲಿ ಕಟ್ಟಡ ಮಾದರಿಯ ಅಂದರೆ ರಾಚನಿಕ ದೇಗುಲಗಳ ನಿರ್ಮಾಣ ಪರಂಪರೆಯ ಪ್ರಾಚೀನತೆಯನ್ನು ಖಚಿತವಾಗಿ ನಿರ್ಧರಿಸುವಂತಿಲ್ಲ. ಸಂಗಂ ಸಾಹಿತ್ಯದಲ್ಲಿ ವಿಷ್ಣು, ಸ್ಕಂದ, ಕೊಜ್ಜುವೈ ದೇಗುಲಗಳು ಚಾವಣಿರಹಿತ ಆಕಾಶಕ್ಕೆ ತೆರೆದುಕೊಂಡ ಗುಡಿಗಳಾಗಿದ್ದಿರಬಹುದು. ಬಹುಶಃ ಈ ಗುಡಿಗಳಿಗೆ ಕಟ್ಟಿಗೆಯ ಬಳಕೆ ದೊಡ್ಡ ಪ್ರಮಾಣದಲ್ಲಿ ಆಗಿದ್ದಿರಬೇಕು. 6–9ನೆಯ ಶತಮಾನಗಳಲ್ಲಿ ಉಚ್ಛ್ರಾಯದಲ್ಲಿದ್ದ ಭಕ್ತಿಪಂಥದ ಪ್ರಭಾವ ಕೇರಳದಲ್ಲಿ ದೇಗುಲವಾಸ್ತು ಬೆಳವಣಿಗೆಗೆ ಹೆಚ್ಚಿನ ಸ್ಫೂರ್ತಿ ನೀಡಿತು. ಆದರೆ 9ನೆಯ ಶತಮಾನಕ್ಕಿಂತ ಮುಂಚಿನ ಉದಾಹರಣೆಗಳು ಲಭ್ಯವಿಲ್ಲ. ತಿರುವಂಚಿಕುಲಂದ ಸಮೀಪ ತಿರುಕುಲಸೇಖರಪುರಂದಲ್ಲಿ ಕೃಷ್ಣನ ಗುಡಿಯನ್ನು ಕುಲಶೇಖರ ಆಳ್ವಾರ್ ಕಟ್ಟಿಸಿದರೆಂದು ಪ್ರತೀತಿ. ಇಲ್ಲಿರುವ ಶಾಸನ ಪುರಾವೆ ಈ ದೇಗುಲದ ಸ್ಥಾಪನೆಯ ಕಾಲವನ್ನು 9ನೆಯ ಶತಮಾನಕ್ಕೆ ಕೊಂಡೊಯ್ಯುತ್ತದೆ. ಸಮೀಪದಲ್ಲಿರುವ ಕೀಜಿತಳಿ ಶಿವ ದೇವಾಲಯವೂ ಪ್ರಾಯಶಃ ಇದೇ ಕಾಲದ್ದು. ಈಗ ತ್ರಿಶೂರಿನ ವಸ್ತುಸಂಗ್ರಹಾಲಯದಲ್ಲಿರುವ 9ನೆಯ ಶತಮಾನದ ಸಪ್ತಮಾತೃಕೆಯರ ವಿಗ್ರಹ ಈ ದೇಗುಲದ್ದೇ. ಅಲ್ಲೆಪ್ಪಿ ಜಿಲ್ಲೆಯ ಕಂಡಿಯೂರ್ ದಲ್ಲಿರುವ ಶಿವ ದೇವಾಲಯ ಶಾಸನ ಪುರಾವೆಯ ಪ್ರಕಾರ ಮೂಲತಃ 823ರದ್ದಾಗಿದೆ. ಈ ಹಿನ್ನೆಲೆಯಲ್ಲಿ ಕೇರಳದಲ್ಲಿ ದೇಗುಲ ವಾಸ್ತು ಪರಂಪರೆ 9ನೆಯ ಶತಮಾನದಿಂದ ಉಚ್ಛ್ರಾಯಕ್ಕೇರಿತೆಂದು ಹೇಳಬಹುದು. ಈ ದೇಗುಲಗಳು ಕಾಲದಿಂದ ಕಾಲಕ್ಕೆ ಜೀರ್ಣೋದ್ಧಾರಗೊಂಡಿವೆ.

ಕೇರಳದ ದೇವಾಲಯಗಳು ಚೌಕ, ಆಯತ, ಚಾಪಾಕಾರ, ವೃತ್ತ ಮತ್ತು ದೀರ್ಘವೃತ್ತ ಆಕಾರದ ತಲವಿನ್ಯಾಸಗಳಲ್ಲಿವೆ. ಭಾರತದಲ್ಲಿ ಇತರೆಡೆ ಎಲ್ಲೂ ಕಾಣದಷ್ಟು ಸಂಖ್ಯೆಯಲ್ಲಿ ವೃತ್ತ ವಿನ್ಯಾಸದ ದೇಗುಲಗಳು ಕೇರಳದಲ್ಲಿವೆ. ದಕ್ಷಿಣ ಕೇರಳದಲ್ಲಿ ಇವು ಹೆಚ್ಚು ಪ್ರಮಾಣದಲ್ಲಿದ್ದು, ಉತ್ತರಕ್ಕೆ ಸಾಗಿದಂತೆ ಅವುಗಳ ಸಂಖ್ಯೆ ಕಡಿಮೆಯಾಗುತ್ತ ಸಾಗಿದೆ. ಚಾಪಾಕಾರದ ದೇಗುಲಗಳು ಪಶ್ಚಿಮ ಕರಾವಳಿಯ ಉದ್ದಕ್ಕೂ – ಕರ್ನಾಟಕದ ಉತ್ತರ–ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯೂ ಸೇರಿದಂತೆ ಅಲ್ಲಲ್ಲಿ ನೋಡಲು ದೊರೆಯುತ್ತವೆ. ದೀರ್ಘವೃತ್ತ ವಿನ್ಯಾಸದ ದೇಗುಲಗಳು ಕಡಿಮೆ. ಅವುಗಳ ಉದಾಹರಣೆಗಳನ್ನು ಕೊಟ್ಟಾಯಂ ಜಿಲ್ಲೆಯ ವೈಕಂನಲ್ಲಿರುವ ಶಿವದೇವಾಲಯದಲ್ಲಿ, ಚೆಂಗಣ್ಣೂರಿನಲ್ಲಿರುವ ಮಹಾದೇವ ದೇವಾಲಯದಲ್ಲಿ, ಈಗ ಕೊತ್ತಂಬಲಂ ಆಗಿ ಬಳಕೆಯಾಗುತ್ತಿರುವ ಗ್ರಾನೈಟ್ ಶಿಲೆಯ ದೇಗುಲದ ಅಧಿಷ್ಠಾನದ ಅವಶೇಷ ದಲ್ಲಿ ಕಾಣಬಹುದು. ಅನಂತಶಯನ ವಿಷ್ಣು ಹಾಗೂ ಸಪ್ತಮಾತೃಕೆಯರ ದೇಗುಲಗಳಿಗೆ ಆಯತ ವಿನ್ಯಾಸವನ್ನು ಸಾಮಾನ್ಯವಾಗಿ ಬಳಸಲಾಗಿದೆ. ಕನ್ಯಾಕುಮಾರಿ ಜಿಲ್ಲೆಯ ಅಂಗಡಿ ಪ್ಪುರಂದಲ್ಲಿರುವ ಭಗವತೀ ದೇವಾಲಯ ಹಾಗೂ ತಿರುವತ್ತರ್ ದೇವಾಲಯ ಮತ್ತು ತಿರುವನಂತಪುರಂದಲ್ಲಿರುವ ಪದ್ಮನಾಭಸ್ವಾಮಿ ದೇವಾಲಯ ಇದಕ್ಕೆ ಉದಾಹರಣೆಗಳು. ಕೇರಳದ ಬಹುತೇಕ ದೇಗುಲಗಳು ಜಂಬಿಟ್ಟಿಗೆಯ ಘನಗಳಿಂದ ರಚಿತವಾಗಿವೆ. ಕೊಲ್ಲಂ ಮತ್ತು ತಿರುವನಂತಪುರ ಜಿಲ್ಲೆಗಳಲ್ಲಿ (ಚಾವಣಿಯನ್ನು ಹೊರತುಪಡಿಸಿ) ಪೂರ್ತಿ ಗ್ರಾನೈಟ್ ಶಿಲೆಯ ನಿರ್ಮಾಣಗಳು ಸಾಮಾನ್ಯ. ಕೊಟ್ಟಾಯಂ ಮತ್ತು ಅಲ್ಲೆಪ್ಪಿ ಜಿಲ್ಲೆಗಳಲ್ಲಿ ದೇಗುಲಗಳ ಗೋಡೆಗಳು ಪೂರ್ತಿ ಕಟ್ಟಿಗೆಯಿಂದ ನಿರ್ಮಾಣವಾಗಿದ್ದು ಪೌರಾಣಿಕ ದೃಶ್ಯಗಳ ಕೆತ್ತನೆಗಳಿಂದ ಅಲಂಕೃತವಾಗಿವೆ.

ಕೇರಳದ ದೇಗುಲ ವಾಸ್ತುಶಿಲ್ಪದ ಬೆಳವಣಿಗೆಯನ್ನು ಪ್ರಾರಂಭಿಕ ಹಂತ (ಸು. 800–1,000), ಮಧ್ಯ ಹಂತ (1000–1300) ಮತ್ತು ಅನಂತರದ ಹಂತ (1300–1800) ಎಂಬ ಮೂರು ಹಂತಗಳಾಗಿ ವಿಂಗಡಿಸಬಹುದು.

ಪ್ರಾರಂಭಿಕ ಹಂತದಲ್ಲಿ ದೇಗುಲ ವಾಸ್ತುಶಿಲ್ಪವನ್ನು ಮಹೋದಯದಪುರದ ಚೇರರು, ದಕ್ಷಿಣ ಕೇರಳದ ಆಯ್ ದೊರೆಗಳು ಹಾಗೂ ಉತ್ತರ ಮಲಬಾರಿನ ಮೂಷಿಕರು ಪ್ರೋತ್ಸಾಹಿಸಿದರು. ಚೌಕ, ಆಯತ, ವೃತ್ತ ಮತ್ತು ಚಾಪಾಕಾರದ ತಲವಿನ್ಯಾಸವುಳ್ಳ ದೇಗುಲಗಳು ರಚನೆಯಾದವು. ಸಾಮಾನ್ಯವಾಗಿ ಶ್ರೀಕೋವಿಲ್ ಎಂದು ಕರೆಯಲಾಗುವ ಮುಖ್ಯ ದೇಗುಲ ದಿಂದ ಬೇರ್ಪಟ್ಟ, ನಮಸ್ಕಾರಮಂಟಪ ಚೌಕ ತಲವಿನ್ಯಾಸವುಳ್ಳದ್ದಾಗಿದ್ದು ಪಿರಮಿಡ್ಡಿನಾಕಾರದ ಚಾವಣಿಯನ್ನು ಹೊಂದಿರುತ್ತದೆ. ಪಲ್ಲವ ರಾಜಸಿಂಹ ನಿರ್ಮಿಸಿದ್ದ ಕಂಚಿಯ ಕೈಲಾಸನಾಥ ದೇಗುಲ ಮೂಲತಃ ಮೂಲ ವಿಮಾನದಿಂದ ಬೇರ್ಪಟ್ಟ ಮಂಟಪವನ್ನು ಹೊಂದಿತ್ತೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಂದಿನವರೆಗೂ ಈ ಪ್ರಾಚೀನ ಪರಂಪರೆಯನ್ನು ಕೇರಳದಲ್ಲಿ ಅನುಸರಿಸಲಾಗುತ್ತಿದೆ. ನಮಸ್ಕಾರಮಂಟಪವಿರದ ಕೆಲವು ದೇಗುಲಗಳೂ ಇವೆ. ಎಲ್ಲ ದೇಗುಲಗಳಲ್ಲಿಯೂ ಚತುಷ್ಕೋಣಾಕಾರದ ನಾಲಂಬಲಂ ಎಂಬ ರಚನೆ ಶ್ರೀಕೋವಿಲ್ ಮತ್ತು ನಮಸ್ಕಾರ ಮಂಟಪವನ್ನು ಸುತ್ತುವರಿದಿರುತ್ತದೆ. ನಾಲಂಬಲಂದ ಪ್ರವೇಶದಲ್ಲಿ ಬಲಿಪೀಠ ಎಂಬ ಆಕರ್ಷಕ ಚಿಕ್ಕ ರಚನೆ ಇರುತ್ತದೆ. ತರುವಾಯ ಕಾಲದಲ್ಲಿ ಕೇರಳ ದೇವಾಲಯಗಳು ಇನ್ನೂ ಹೆಚ್ಚು ಭಾಗಗಳನ್ನೊಳಗೊಂಡು ನಿರ್ಮಾಣವಾದವು.

ಗುಹಾಲಯಗಳಲ್ಲಿ ಚೌಕ ಗರ್ಭಗೃಹಗಳೇ ಕಾಣುವುದರಿಂದ ಪ್ರಾಯಶಃ ಚೌಕ ಗರ್ಭಗೃಹವುಳ್ಳ ದೇಗುಲಗಳು ಪ್ರಾಚೀನ ಪರಂಪರೆಯ ದ್ಯೋತಕವೆಂದು ಭಾವಿಸಬಹುದು. ತ್ರಿಶೂರು ಜಿಲ್ಲೆಯಲ್ಲಿರುವ ತಿರುಕುಲಸೇಖರಪುರಮ್ ಕೃಷ್ಣದೇವಾಲಯ, ತಿರುವಂಚಿಕುಲಮ್ ಕೀಟಿತಳಿ ದೇವಾಲಯ, ವದಕಂಚೇರಿಯ ಸಮೀಪದ ತಲಿಯಲ್ಲಿರುವ ಶಿವದೇವಾಲಯ, ಮಲ್ಲಪ್ಪುರಂ ಜಿಲ್ಲೆಯ ಇಂದ್ಯನೂರಿನ ಗಣಪತಿ ಕ್ಷೇತ್ರಂ, ತಿರುವನಂತಮರಂ ಜಿಲ್ಲೆಯ ಕಟಿಕುತ್ತಮ್‌ದಲ್ಲಿರುವ ಮಹಾದೇವ ದೇವಾಲಯ ಮುಂತಾದವು ಚೌಕ ಗರ್ಭಗೃಹವುಳ್ಳ, ಸುತ್ತ ಪ್ರದಕ್ಷಿಣಾಪಥವುಳ್ಳ (ಸಾಂಧಾರ), ಅರ್ಧಮಂಟಪವಿರುವ, ಎರಡು ಮಹಡಿಗಳುಳ್ಳ (ದ್ವಿತಲ) ವಿಮಾನಗಳಾಗಿವೆ. ಇವೆಲ್ಲವುಗಳಲ್ಲಿಯೂ 9–10ನೆಯ ಶತಮಾನದ ಶಾಸನ ಇಲ್ಲವೇ ಶಿಲ್ಪಗಳಿವೆ. ಚಾಳುಕ್ಯ ಇಲ್ಲವೆ ಪಲ್ಲವರ ಮೂಲಕ ಕೇರಳ ಈ ಸಾಂಧಾರ ವಿಮಾನ ವಾಸ್ತು ಲಕ್ಷಣವನ್ನು ಪಡೆದಿರಬಹುದು. ಕಣ್ಣೂರು ಜಿಲ್ಲೆಯ ಎರಮಂದಲ್ಲಿರುವ ದೇವಾಲಯ ಪೂರ್ತಿ ಜಂಬಿಟ್ಟಿಗೆಯ ನಿರ್ಮಾಣವಾಗಿದ್ದು ಚೌಕ ಗರ್ಭಗೃಹವಿರುವ ಸಾಂಧಾರ ವಿಮಾನ ವಾಗಿದೆ. 9ನೆಯ ಶತಮಾನದ ವಿಷ್ಣು ಶಿಲ್ಪ ಹಾಗೂ 11ನೆಯ ಶತಮಾನದ ಮೂಷಿಕ ದೊರೆಯ ವಟ್ಟೆಬುತ್ತು ಶಾಸನ ಇಲ್ಲಿವೆ.

ಈ ಪ್ರಕಾರದ ದ್ರಾವಿಡ–ಕೇರಳ ಶೈಲಿಯ ದೇವಾಲಯಗಳಷ್ಟೇ ಅಲ್ಲದೆ ಪೂರ್ತಿಯಾಗಿ ದಕ್ಷಿಣ ಭಾರತೀಯ ದ್ರಾವಿಡ ರೀತಿಯಲ್ಲಿ ಕಟ್ಟಿದ ಕೆಲವು ದೇವಾಲಯಗಳೂ ಕೇರಳದಲ್ಲಿವೆ. ಕನ್ಯಾಕುಮಾರಿ ಜಿಲ್ಲೆಯ ಪಾರ್ಥಿವಪುರಂದಲ್ಲಿರುವ ಪಾರ್ಥಸಾರಥಿ ದೇವಾಲಯ ಚೌಕ ಗರ್ಭಗೃಹವುಳ್ಳ ತ್ರಿತಲ, ಸಾಂಧಾರ ವಿಮಾನವಾಗಿದೆ. ಗ್ರಾನೈಟ್ ಶಿಲೆಯ ಅಧಿಷ್ಠಾನವನ್ನು ಹೊರತು ಪಡಿಸಿ ಇದರ ಇತರ ಭಾಗಗಳು ಜೀರ್ಣೋದ್ಧಾರಗೊಂಡಿವೆ. ಮೂಲ ದೇಗುಲ ಆಯ್ ದೊರೆ ಕರುನನ್ದಡಕ್ಕಣ್ ಎಂಬಾತನಿಂದ 866 ಜುಲೈ 7ರಂದು ನಿರ್ಮಾಣವಾದದ್ದು.



ರಾಜರಾಜೇಶ್ವರ ದೇವಸ್ಥಾನ–ಗೋಡೆ ಮತ್ತು ಅಧಿಷ್ಠಾನ, ತ್ರಿಚ್ಚಂಬರಮ್

ಹೆಚ್ಚು ಕಡಿಮೆ ಇವುಗಳಿಗೆ ಸಮಕಾಲೀನವಾಗಿ ವೃತ್ತ ವಿನ್ಯಾಸದ ದೇಗುಲಗಳೂ ನಿರ್ಮಾಣವಾದವು. ಪಾಲ್ಘಾಟ್ ಜಿಲ್ಲೆಯ ಪೊಲ್ಪುಲ್ಲಿಯಲ್ಲಿರುವ ಶಿವದೇವಾಲಯದ ಗ್ರಾನೈಟ್ ಶಿಲೆಯ ಅಧಿಷ್ಠಾನ ಮಾತ್ರ ಉಳಿದಿದ್ದು ಇದು ನಿರಂಧಾರ ವಿನ್ಯಾಸ ಹೊಂದಿದೆ. 9ನೆಯ ಶತಮಾನದ ಸಂಸ್ಕೃತ ಶಾಸನಗಳು ಇಲ್ಲಿವೆ. ಕಣ್ಣೂರು ಜಿಲ್ಲೆಯ ರಮಂತಲಿಯಲ್ಲಿರುವ ನರಸಿಂಹ ದೇವಾಲಯದಲ್ಲಿ ಸಾಂಧಾರ ರೀತಿಯ ವೃತ್ತಾಕಾರದ ಗರ್ಭಗೃಹವಿದೆ. ಇದರ ಹೊರಗೋಡೆಯಲ್ಲಿ ನಾಲ್ಕೂ ಮುಖ್ಯ ದಿಕ್ಕುಗಳಿಂದ ಪ್ರವೇಶ ಒದಗಿಸಲಾಗಿದ್ದು ಸರ್ವತೋಭದ್ರ ಕಲ್ಪನೆಯನ್ನು ನೆನಪಿಸುತ್ತದೆ. ಗರ್ಭಗೃಹದ ಒಳ ಗೋಡೆಯನ್ನು ಚೌಕವಿನ್ಯಾಸದಲ್ಲಿ ರಚಿಸಿದೆ. ಇಲ್ಲಿ 928ರ ಹಾಗೂ 1132ರ ಶಾಸನಗಳಿವೆ. ಹತ್ತಿರದಲ್ಲಿರುವ ಶಾಸ್ತ ವಿಗ್ರಹವನ್ನು 9ನೆಯ ಶತಮಾನಕ್ಕೆ ಅನ್ವಯಿಸಬಹುದು.

ಇದೇ ಕಾಲಕ್ಕೆ ಅನ್ವಯಿಸಬಹುದಾದ ಚಾಪಾಕಾರ ವಿನ್ಯಾಸದ ದೇಗುಲಗಳೂ ಇವೆ. ಮಲ್ಲಪುರಂ ಜಿಲ್ಲೆಯಲ್ಲಿರುವ ತಿರುಕಣ್ಡಿಯೂರಿನ ಶಿವದೇವಾಲಯ, ತ್ರಿಪ್ರಂಗೋಡಿನ ಕಾಲಸಂಹಾರಮೂರ್ತಿ ದೇವಾಲಯ; ಕಲ್ಲಿಕೋಟೆಯ ತಿರುವಣ್ಣೂರಿನ ಶಿವ ದೇವಾಲಯ ಇವುಗಳಲ್ಲಿ ಮೂಲ ಅಧಿಷ್ಠಾನ ಮಾತ್ರವಿದ್ದು ಅವನ್ನು ಈಗ ಉಪಪೀಠಗಳಾಗಿ ಬಳಸಿದೆ. ಮಂಜೇರಿಯ ಕರಿಕ್ಕಾಡು ಕ್ಷೇತ್ರಂದಲ್ಲಿರುವ ಅಯ್ಯಪ್ಪನ್ ದೇಗುಲ ನಿರಂಧಾರ ರೂಪದ ಚಾಪಾಕಾರದ (ಗಜಪೃಷ್ಠ) ದೇಗುಲ. ಇದರ ಒಳಗಡೆ ಮಾತ್ರ ಗರ್ಭಗೃಹವನ್ನು ಚೌಕಾಕಾರ ವಾಗಿಯೂ ಮಹಾಮಂಟಪವನ್ನು ಆಯತಾಕಾರವಾಗಿಯೂ ವಿನ್ಯಾಸಗೊಳಿಸಿದೆ. ಇದು 9ನೆಯ ಶತಮಾನದ್ದಿರಬಹುದು.

ಮಧ್ಯ ಹಂತದಲ್ಲಿ ದಕ್ಷಿಣ ಭಾರತದ ವಾಸ್ತು ಇತಿಹಾಸದಲ್ಲಿ ಅಪೂರ್ವದ್ದೆನಿಸುವ ವಿಕಸಿತ ಸಾಂಧಾರ ವಿಮಾನದ ಕೇರಳದಲ್ಲಿ ಕಾಲಿಟ್ಟಿದೆ. ಭಾರತದ ಪ್ರಾಚೀನ ಸಾಂಧಾರ ದೇಗುಲಗಳಲ್ಲಿ ಗರ್ಭಗೃಹದ ಒಳಸುತ್ತಿನ ಗೋಡೆ ಹಾಗೂ ಹೊರಸುತ್ತಿನ ಗೋಡೆಯ ನಡುವೆ ಚಾವಣಿ ಇರುವ ಪ್ರದಕ್ಷಿಣಾಪಥ ಇರುತ್ತದೆ. ಆದರೆ ಕೇರಳದ ಈ ಹಂತದ ಸಾಂಧಾರ ದೇಗುಲಗಳಲ್ಲಿ ಶ್ರೀಕೋವಿಲ್‌ನ ಸುತ್ತ ಪ್ರದಕ್ಷಿಣಾಪಥದ ಮೇಲ್ಗಡೆ ಚಾವಣಿ ಇರುವುದಿಲ್ಲ. ಕೆಲವು ದೇಗುಲಗಳಲ್ಲಿ ಗರ್ಭಗೃಹದ ಸುತ್ತ ಎರಡು ಪ್ರದಕ್ಷಿಣಾಪಥಗಳಿವೆ.

ಅನೇಕ ಉದಾಹರಣೆಗಳಲ್ಲಿ ಪ್ರದಕ್ಷಿಣಾಪಥದಗುಂಟ ಶುಟ್ಟುನಾಡಿ ಎಂದು ಕರೆಯಲಾಗುವ ಕಂಬಗಳಿವೆ. ಎರಡು ಅಥವಾ ಮೂರು ದ್ವಾರಗಳಿರುವ ದೇಗುಲಗಳು ಈ ಹಂತದಲ್ಲಿ ಕಾಣುತ್ತವೆ. ಗರ್ಭಗೃಹ ವಿಶಿಷ್ಟ ಮೇಲ್ಕಟ್ಟಡವುಳ್ಳ ಸ್ವತಂತ್ರ ಕಟ್ಟಡವಾಗಿ, ಕೆಲವು ಸಲ ಸೋಪಾನಗಳುಳ್ಳದ್ದಾಗಿ, ವಿಕಾಸ ಹೊಂದಿದೆ. ಇದು ಚೌಕ, ವೃತ್ತ ಇಲ್ಲವೇ ಚಾಪಾಕಾರದ ದ್ರಾವಿಡ (ದಾಕ್ಷಿಣಾತ್ಯ) ವಿಮಾನವಾಗಿದ್ದು ಸ್ವತಂತ್ರ ಗ್ರೀವ ಮತ್ತು ಶಿಖರ ಭಾಗಗಳನ್ನು ಹೊಂದಿರುತ್ತದೆ. ಕೆಲವು ಉದಾಹರಣೆಗಳಲ್ಲಿ ಇದಕ್ಕೆ ತನ್ನದೇ ಆದ ಅಧಿಷ್ಠಾನ ಹಾಗೂ ದಕ್ಷಿಣ ಭಾರತೀಯ ದೇಗುಲಗಳಲ್ಲಿ ಕಾಣುವ ಇತರ ಅಂಗಗಳೂ ಇರುವುದುಂಟು. ಒಟ್ಟಾರೆ



ಮಹಾದೇವ ದೇವಸ್ಥಾನದಲ್ಲಿಯ ನಾಟ್ಯಶಿವ ವರ್ಣಚಿತ್ರ, ಎತ್ತುಮನೂರ್

ನೋಡಿದಾಗ ಈ ಹಂತದ ದೇಗುಲಗಳು ಕಟ್ಟಡ ರಚನೆಯ ಸ್ವರೂಪದಲ್ಲಿ ದ್ರಾವಿಡ ಮಾದರಿಯ ಲಕ್ಷಣಗಳನ್ನೂ ಮಹಡಿಗಳ ಇಳಿಜಾರಾದ ಚಾವಣಿಯ ರಚನೆಯಲ್ಲಿ ಕೇರಳ ಶೈಲಿಯ ಲಕ್ಷಣವನ್ನೂ ಮೇಳೈಸಿಕೊಂಡಿರುವುದು ಗೋಚರಿಸುತ್ತದೆ. ವೃತ್ತಾಕಾರದ ಗರ್ಭಗೃಹವುಳ್ಳ ದೇಗುಲಗಳಲ್ಲಿ ಒಂದು ಇಲ್ಲವೆ ಎರಡು ಸುತ್ತು ಕಂಬಗಳಿರುವುದು ಪ್ರಾಯಶಃ ಶ್ರೀಲಂಕದ ವಟದಾಗ ಎಂದು ಕರೆಯಲಾಗುವ ಬೌದ್ಧ ದೇಗುಲಗಳ ರಚನೆಯ ಪ್ರಭಾವದಿಂದಾಗಿರ ಬಹುದೆಂದೂ ಇಂಥ ವಾಸ್ತು ರಚನೆಯನ್ನು ಶ್ರೀಲಂಕದಿಂದ ಕೇರಳಕ್ಕೆ ವಲಸೆ ಬಂದಿರುವ ಈಟವರು ಜನಪ್ರಿಯಗೊಳಿಸಿರಬಹುದೆಂದೂ ಅಭಿಪ್ರಾಯವಿದೆ.

ಮಂಜೇರಿಯ ಕರಿಕ್ಕಾಡುಕ್ಷೇತ್ರಂದಲ್ಲಿ ಈ ಹಂತದ ವೃತ್ತಾಕಾರದ ಸುಬ್ರಹ್ಮಣ್ಯ ದೇಗುಲವಿದೆ. ಇದು ಸರ್ವತೋಭದ್ರ ರೀತಿಯ (ನಾಲ್ಕು ಪ್ರವೇಶದ್ವಾರಗಳಿರುವ) ದ್ವಿತಲ ವಿಮಾನವಾಗಿದ್ದು, ಗರ್ಭಗೃಹದ ಪ್ರದಕ್ಷಿಣಾಪಥದಗುಂಟ 12 ಕಂಬಗಳ ಸಾಲು ಇದೆ. ಪಾಲ್ಘಾಟಿನ ಸಮೀಪ ತಿರುನಿಲ್ಲೈದಲ್ಲಿರುವ ಶಿವದೇವಾಲಯದಲ್ಲಿ ಇಟ್ಟಿಗೆಯಿಂದ ರಚಿತವಾದ ವೃತ್ತಾಕಾರದ ಗರ್ಭಗೃಹದ (ಒಳಗಡೆ ಇದು ಚೌಕಾಕಾರವಿದೆ) ಸುತ್ತ ಒಂದೇ ಪ್ರದಕ್ಷಿಣಾಪಥವಿದ್ದು, ಅಷ್ಟಕೋಣಾಕಾರದ ಗ್ರೀವ–ಶಿಖರಗಳಿವೆ. ತಿರುವನಂತಪುರದ ಸಮೀಪ ನೇಮಂದಲ್ಲಿರುವ ನಿರಮಂಕರ ದೇವಾಲಯದಲ್ಲಿ ಒಳಗುಡಿ ಇಟ್ಟಿಗೆಯ ಚೌಕವಿನ್ಯಾಸದ ದ್ರಾವಿಡ ವಿಮಾನವಾಗಿದ್ದು ಇದರ ಸುತ್ತ ವೃತ್ತಾಕಾರದ ಹೊರಗೋಡೆಯಿದೆ. ಗರ್ಭಗೃಹದ ಪ್ರದಕ್ಷಿಣಾಪಥದಲ್ಲಿ ವೃತ್ತಕ್ಕನುಗುಣವಾಗಿರುವ ಎಂಟು ಕಂಬಗಳಿವೆಯಲ್ಲದೆ ಒಳ ಗುಡಿಯಲ್ಲಿ ಇನ್ನು ಎರಡು ಕಂಬಗಳಿವೆ. 14ನೆಯ ಶತಮಾನದ್ದೆಂದು ಹೇಳಲಾಗುತ್ತಿದ್ದರೂ ಇದರ ಪರಿಸರದ ಗುಡಿಯಲ್ಲಿ ರುವ ವಿಷ್ಣು ವಿಗ್ರಹ ಹಾಗೂ ಸಪ್ತಮಾತೃಕೆಯರ ಗುಂಪಿನ ಬ್ರಾಹ್ಮೀಯ ವಿಗ್ರಹ ಖಚಿತವಾಗಿ ಹೆಚ್ಚು ಪ್ರಾಚೀನತಮವಾದವುಗಳಾದ್ದರಿಂದ ಎರಡನೆಯ ಹಂತಕ್ಕೆ ಈ ದೇವಾಲಯ ಅನ್ವಯಿಸುವದೆಂದು ಏಳುವುದು ಸಮಂಜಸ. ಕೊಲ್ಲಂ ಜಿಲ್ಲೆಯ ಮನಲೂರಿ ನಲ್ಲಿರುವ ತ್ರಿಕೋಟೇಶ್ವರ ಮಹಾದೇವ ದೇವಾಲಯ ಗ್ರಾನೈಟ್ ಶಿಲೆಯಿಂದ ರಚಿತವಾದ ಚೌಕ ವಿಮಾನವುಳ್ಳ, ಆದರೆ ಅಷ್ಟಕೋಣಾಕಾರದ ಗ್ರೀವ–ಶಿಖರವುಳ್ಳ ದೇವಾಲಯ.

ಮಧ್ಯ ಹಂತದಲ್ಲಿ ಹಲವು ದೇವಾಲಯಗಳು ಹೊಸದಾಗಿ ನಿರ್ಮಾಣವಾದುದಷ್ಟೇ ಅಲ್ಲ, ಹಲವಾರು ದೇವಾಲಯಗಳು, ಹಳೆಯ ದೇಗುಲಗಳು ಜೀರ್ಣೋದ್ಧಾರವಾದವು. ಇಂದಿರುವ ಅನೇಕ ದೇವಾಲಯಗಳ ಪ್ರಾರಂಭವು ಮಧ್ಯ ಹಂತದಲ್ಲಾಯಿತು. ತ್ರಿಶೂರಿನ ವಡಕ್ಕುನ್ನಾಥ ದೇವಾಲಯ ಮತ್ತು ಪೆರುವನಂದಲ್ಲಿರುವ ಇರಟ್ಟೈಯಪ್ಪನ್ ಗುಡಿ ಸುಮಾರು 11–12ನೆಯ ಶತಮಾನದವು. ಇವೆರಡೂ ಚೌಕ ದ್ರಾವಿಡ ವಿಮಾನವನ್ನು ಸುತ್ತುವರಿದಿರುವ ವೃತ್ತಾಕಾರದ ಗೋಡೆಯಿರುವ ದೇಗುಲಗಳಾಗಿದ್ದು ಮೂರು ದ್ವಾರಗಳುಳ್ಳದ್ದಾಗಿವೆ. ಇವೆರಡ ರಲ್ಲಿಯೂ ಗುಡಿಯ ಹಿಂಭಾಗವನ್ನು ಆಯಾ ದೇವತೆಯ ಮಡದಿಗಾಗಿ ಮುಡುಪಾಗಿಟ್ಟಿದೆ.

ಚಾಪಾಕಾರದ ದೇಗುಲಗಳಲ್ಲಿಯೂ ಒಳಗಡೆ ಗರ್ಭಗೃಹವನ್ನು ಅದೇ ಆಕಾರದ ದ್ರಾವಿಡ ವಿಮಾನ ರೀತಿಯಲ್ಲಿ ಕಲ್ಪಿಸಲಾಗಿದೆ. ಕೊಟ್ಟಾಯಂ ಜಿಲ್ಲೆಯ ಕಿಟವೆಲ್ಲೂರಿನ ವಾಮನ ದೇವಾಲಯ ಈ ಹಂತದ ಚಾಪಾಕಾರದ ದೇಗುಲದ ಉದಾಹರಣೆಯಾಗಿದೆ. ಜಂಬಿಟ್ಟಿಗೆಯ ಘನಗಳಿಂದ ನಿರ್ಮಿತ ಈ ದೇವಾಲಯಕ್ಕೆ ಚಾಪಾಕಾರದ ವಿನ್ಯಾಸವಿರುವ ಗಜಪೃಷ್ಠಾಕಾರದ ಚಾವಣಿ ಇದೆ. ಪ್ರದಕ್ಷಿಣಾಪಥದಗುಂಟ 14 ಕಂಬಗಳಿವೆ. ಪ್ರ.ಶ.1035ರ ಶಾಸನವಿಲ್ಲಿದ್ದು ಚೇರ ರಾಜಸಿಂಹನ ಕಾಲಕ್ಕೆ ಅನ್ವಯಿಸುತ್ತದೆ.

ಹಲವು ದ್ವಿತಲ ದ್ರಾವಿಡ ವಿಮಾನಗಳೂ ಈ ಕಾಲದಲ್ಲಿ ರಚಿತವಾದವು. ಮಣಿಯೂರಿನ ಸುಬ್ರಹ್ಮಣ್ಯ ದೇವಾಲಯ, ತ್ರಿಚ್ಚಂಬರಂದಲ್ಲಿರುವ ರಾಜರಾಜೇಶ್ವರ ದೇವಾಲಯ, ಪುಲ್ಲೂರಿನ ಶ್ರೀ ಕೊಡವಲಂ ವಿಷ್ಣುದೇವಾಲಯ ಮುಂತಾದವು ಇದಕ್ಕೆ ಉದಾಹರಣೆಗಳು. ತಿರುವಂಚಿ ಕುಲಂದಲ್ಲಿರುವ ಶಿವ ದೇವಾಲಯ ಈ ಹಂತದ ಬಹು ಅಲಂಕೃತ ದೇವಾಲಯವಾಗಿದೆ. ಪೆರುವಣಂದಲ್ಲಿರುವ ಶಿವದೇವಾಲಯದಲ್ಲಿಯ ಮಾಡತ್ತಿಲಪ್ಪನ್ ಗುಡಿ ಅಷ್ಟಕೋಣ ಗ್ರೀವ–ಶಿಖರಗಳಿರುವ ತ್ರಿತಲ ವಿಮಾನವಾಗಿದೆ.

ಇವುಗಳೊಂದಿಗೆ ದಕ್ಷಿಣ ಕೇರಳ ಭಾಗದಲ್ಲಿ ಕೆಲವು ಶುದ್ಧ ದಕ್ಷಿಣ ಭಾರತದ ಶೈಲಿಯ ದೇಗುಲಗಳೂ ನಿರ್ಮಾಣವಾದವು. ಪಾಲ್ಘಾಟ್ ಜಿಲ್ಲೆಯ ಚಲ್ಪುರಂದಲ್ಲಿರುವ ಕಟ್ಟಿಲ್ಮಾಡಮ್ ಶಿಲಾದೇಗುಲ ಚೌಕಾಕಾರದ ಗರ್ಭಗೃಹವುಳ್ಳ ಅಷ್ಟಕೋಣಾಕಾರದ ಗ್ರೀವ–ಶಿಖರವಿರುವ ನಿರಂಧಾರ ದ್ರಾವಿಡ ವಿಮಾನ. ತಿರುವನಂತಪುರದ ಸಮೀಪವಿರುವ ತಿರುವಲ್ಲಂದಲ್ಲಿರುವ ಪರಶುರಾಮ ದೇವಾಲಯ ಸಂಕೀರ್ಣದಲ್ಲಿ ವೃತ್ತಾಕಾರದ ದ್ರಾವಿಡ ವಿಮಾನಗಳು ಕೇರಳ ಶೈಲಿಯ ದೇಗುಲಗಳೊಟ್ಟಿಗೆ ನೋಡ ದೊರೆಯುತ್ತವೆ.

ಕೇರಳದಲ್ಲಿಯ ಇಂದಿನ ಹೆಚ್ಚಿನ ದೇವಾಲಯಗಳು ಅನಂತರದ ಹಂತದವಾಗಿವೆ (1300–1800). ತಲವಿನ್ಯಾಸದಲ್ಲಿ ಹೆಚ್ಚಿನ ಬೆಳವಣಿಗೆ ಈ ಹಂತದಲ್ಲಿ ಕಾಣುವುದಿಲ್ಲವಾದರೂ ದೇವಾಲಯ ಸಂಕೀರ್ಣದ ಸ್ವರೂಪ ಅಭಿವೃದ್ಧಿಗೊಂಡುದು ಕಾಣುತ್ತದೆ. ಇಂತಹ ಸಂಕೀರ್ಣ ದಲ್ಲಿ ಶ್ರೀಕೋವಿಲ್ ಕೇಂದ್ರವಾಗಿದ್ದು, ತೆರೆದ ಪ್ರದಕ್ಷಿಣಾಪಥ, ಸುತ್ತಣ ನಾಲಂಬಲಂ, ದೀಪಮಾಲೆ ಯುಳ್ಳ ವಿಳಕ್ಕುಮಾಡಮ್, ಹೊರಗಡೆಯ ಪ್ರದಕ್ಷಿಣವರಿ ಮತ್ತು ಪ್ರಾಕಾರ ಅಥವಾ ಪ್ರಾಕಾರಗಳು ಒಂದಾದ ಮೇಲೆ ಒಂದರಂತೆ ವ್ಯವಸ್ಥಿತವಾಗಿ ರಚಿತವಾಗಿರುತ್ತವೆ. ಶ್ರೀಕೋವಿಲ್ ಚೌಕ, ಆಯತ, ಚಾಪ, ವೃತ್ತ ಇಲ್ಲವೇ ದೀರ್ಘವೃತ್ತಾಕಾರವಾಗಿರಬಹುದು. ಆದರೆ ಉಳಿದ ಅಂಗಗಳು ಏಕಕೇಂದ್ರೀಯ ಆಯತಾಕಾರದ ವಿನ್ಯಾಸಕ್ಕೆ ಬದ್ಧವಾಗಿರುತ್ತವೆ. ಶ್ರೀಕೋವಿಲ್‌ನ ಎದುರಿನಲ್ಲಿ ಚೌಕವಿನ್ಯಾಸದ ನಮಸ್ಕಾರಮಂಟಪವಿದ್ದು ಇದಕ್ಕೆ ಪಿರಿಮಿಡ್ಡಿನಾಕಾರದ ಇಳಿಜಾರಾದ ಚಾವಣಿಯಿರುತ್ತದೆ. ಕೆಲವು ದೇವಾಲಯಗಳಲ್ಲಿ ವಳಿಅಂಬಲಂದ (ನಾಲಂಬಲಂದ ಒಂದು ಪಾರ್ಶ್ವಭಾಗ) ಮುಂದುಗಡೆ ಬಲಿಕ್ಕಲ್‌ಮಂಟಪ ಎಂಬ ಕಂಬಗಳುಳ್ಳ ಇನ್ನೊಂದು ಮಂಟಪ ಇರುವುದುಂಟು. ಬಲಿಪೀಠವನ್ನೊಳಗೊಂಡ ಬಲಿಕ್ಕಲ್‌ಮಂಟಪದ ಎದುರುಗಡೆ ದೀಪಸ್ತಂಭ, ಇನ್ನು ಕೆಲವು ಸಲ ಧ್ವಜಸ್ತಂಬವಿರುತ್ತದೆ. ಇದರ ಸಮೀಪ ದೊಡ್ಡ ದೇವಾಲಯಗಳಲ್ಲಿ ನೃತ್ಯ, ಸಂಗೀತ ಮುಂತಾದವುಗಳಿಗಾಗಿ ಕೂತ್ತಂಬಲಂ ಎಂಬ ದೊಡ್ಡ ಮಂಟಪವಿರುವುದು. ದೊಡ್ಡ ದೇವಾಲಯ ಸಂಕೀರ್ಣಗಳಲ್ಲಿ ಹೊರ ಪ್ರಾಕಾರ ಅನ್ನೂ ತೆಪ್ಪಕುಳಂ (ಪುಷ್ಕರಣಿ) ಸುತ್ತಿರಬಹುದು. ಈ ಪ್ರಾಕಾರಕ್ಕೆ ನಾಲ್ಕೂ ದಿಕ್ಕುಗಳಿಂದ ಪ್ರವೇಶವಿದ್ದು, ಪ್ರತಿಯೊಂದಕ್ಕೂ ಬಹುಮಹಡಿಯ ಆದರೆ ಹೆಚ್ಚು ಎತ್ತರವಿಲ್ಲದ ಗೋಪುರವಿರುತ್ತದೆ.



ದ್ವಾರಪಾಲ ಮತ್ತು ಋಷಿ, ಕವಿಯೂರ್

ಈ ಹಂತದ ಕೊನೆಯಲ್ಲಿ ಸಂಕೀರ್ಣ ರೂಪದ ಗುಡಿಗಳ ಹಾಗೂ ಒಂದೇ ಸಂಕೀರ್ಣವನ್ನು ಒಂದಕ್ಕಿಂತ ಹೆಚ್ಚು ದೇವತೆಗಳಿಗೆ ಮುಡಿಪಾಗಿಡುವ ಸಂಪ್ರದಾಯ ಔನ್ನತ್ಯಕ್ಕೇರಿತು. ತ್ರಿಶೂರಿನ ವಡಕ್ಕುನ್ನಾಥ ದೇವಾಲಯ ಅನೇಕಗುಡಿಗಳುಳ್ಳಸಂಕೀರ್ಣವಾಗಿದ್ದು ಇದರಲ್ಲಿ ವಡಕ್ಕುನ್ನಾಥ (ಅಥವಾ ತೆನ್ಕೈಲಾಸನಾಥ), ಶಂಕರನಾರಾಯಣ ಮತ್ತು ರಾಮ ದೇವರುಗಳ ಗುಡಿಗಳಿಗೆ ಪ್ರಾಧಾನ್ಯ ನೀಡಲಾಗಿದೆ. ಶಂಕರನಾರಾ ಯಣ ಗುಡಿಯಲ್ಲಿ ಮಹಾಭಾರತದ ಕಥೆಯ ನಿರೂಪಣೆಯಿರುವ 17ನೆಯ ಶತಮಾನದ ಸುಂದರವಾದ ಭಿತ್ತಿಚಿತ್ರಗಳಿವೆ. ಈ ಮುಖ್ಯ ಗುಡಿಗಳಲ್ಲದೇ ಅನಂತರದಲ್ಲಿ ಅನೇಕ ಸಂಕೀರ್ಣಗಳಲ್ಲಿ ಹತ್ತರವರೆಗೂ ಉಪದೇಗುಲಗಳನ್ನು ಸೇರಿಸಲಾಗಿದೆ. ಉದಾಹರಣೆಗೆ ತ್ರಿಪ್ರಯಾರ್‌ನಲ್ಲಿ ಅಯ್ಯಪ್ಪನ ಗುಡಿಯನ್ನು ನಾಲಂಬಲಂ ಆವರಣದ ಒಳಗಡೆ ಸೇರಿಸಲಾಗಿದೆ. ವಡಕ್ಕುನ್ನಾಥ ಸಂಕೀರ್ಣದಲ್ಲಿ ಚಾಪಾಕಾರದ ವಿನ್ಯಾಸವುಳ್ಳ ಅಯ್ಯಪ್ಪನ ಗುಡಿ (ಶಾಸ್ತಾ) ಸೇರಿಸಲ್ಪಟ್ಟಿದೆ. ಇದಲ್ಲದೆ ತ್ರಿಶೂರಿನ ವಡಕ್ಕುನ್ನಾಥ ದೇವಾಲಯದಲ್ಲಿ ಕೃಷ್ಣನಿಗೆ ಮುಡಿಪಾದ ಚಿಕ್ಕ ದ್ರಾವಿಡ ವಿಮಾನವನ್ನು ಕೂತ್ತಂಬಲಂ ಭಾಗದ ಸಮೀಪ ನಿರ್ಮಿಸಲಾಗಿದೆ. ಆಲೆಪ್ಪಿ ಜಿಲ್ಲೆಯ ಕಂಡಿಯೂರಿನ ಶಿವ ದೇವಾಲಯದಲ್ಲಿ 10 ಉಪದೇಗುಲ ಗಳನ್ನು ರಚಿಸಲಾಗಿದೆ. ಎರ್ನಾಕುಲಂ ಜಿಲ್ಲೆಯ ತ್ರಿಕ್ಕಕರದಲ್ಲಿರುವ ವೃತ್ತಾಕಾರದ ವಾಮನಮೂರ್ತಿ ಮಹಾವಿಷ್ಣು ದೇವಾಲಯ ಸಂಕೀರ್ಣದಲ್ಲಿ ಮತ್ತು ತ್ರಿಶೂರು ಜಿಲ್ಲೆಯತಿರುವಂಚಿಕುಲಂದಲ್ಲಿರುವ ಶಿವದೇವಾಲಯ ಸಂಕೀರ್ಣದಲ್ಲಿ 8 ಉಪಗುಡಿಗಳಿವೆ.

17–18ನೆಯ ಶತಮಾನದಲ್ಲಿ ಎತ್ತರವಾದ ಪ್ರಾಕಾರಗಳು, ಶಿಲ್ಪಿತ ಮೊಗಸಾಲೆಗಳು, ಅಲಂಕೃತ ಬಲಿಕ್ಕಲ್‍ಮಂಟಪಗಳಿಂದಾಗಿ ಶ್ರೀಕೋವಿಲ್ ದೇವಾಲಯ ಸಂಕೀರ್ಣದಲ್ಲಿ ಮರೆಯಾಗುವಂತಾಯಿತು. ಉದಾಹರಣೆಗೆ ಕನ್ಯಾಕುಮಾರಿ ಜಿಲ್ಲೆಯ ಸುಚೀನ್ದ್ರಂದಲ್ಲಿರುವ ಸ್ಥಾಣುನಾಥಸ್ವಾಮಿ ದೇವಾಲಯ, ತಿರುವನಂತಪುರದ ಪದ್ಮನಾಭಸ್ವಾಮಿ ದೇವಾಲಯ ಇತ್ಯಾದಿ. ಕನ್ಯಾಕುಮಾರಿ ಜಿಲ್ಲೆಯ ತಿರುವತ್ತರ್‌ದಲ್ಲಿರುವ ಆದಿಕೇಶವಪ್ಪೆರುಮಾಳ್ ದೇಗುಲದ ಪ್ರದಕ್ಷಿಣಾಪಥ ಚಾವಣಿಯುಳ್ಳ, ದೀಪಲಕ್ಷ್ಮಿಯ ಶಿಲ್ಪಗಳುಳ್ಳ 222 ಕಂಬಗಳಿರುವ ಹಾದಿಯಾಗಿ ಪರಿವರ್ತಿತವಾಗಿದೆ. ಈ ಹಂತದಲ್ಲಿ ಬಹಳ ಅಲಂಕಾರಪೂರಿತ ಬಲಿಕ್ಕಲ್ ಮಂಟಪಗಳು ನಿರ್ಮಾಣವಾದವು. ಕೊಟ್ಟಾಯಂ ಜಿಲ್ಲೆಯ ಮೈಕಂನಲ್ಲಿರುವ ದೀರ್ಘವೃತ್ತಾ ಕಾರದ ಶಿವ ದೇವಾಲಯ, ವರ್ಕಲದ ಜನಾರ್ದನ ದೇವಾಲಯ ಇದಕ್ಕೆ ಉದಾಹರಣೆಗಳು. ಇಷ್ಟು ಅಲಂಕಾರ ಕೇರಳದ ದೇವಾಲಯಗಳ ಸಾಮಾನ್ಯ ವಿನ್ಯಾಸಕ್ಕೆ ಅಷ್ಟಾಗಿ ಸರಿಹೊಂದು ವಂತಿಲ್ಲ; ಏಕೆಂದರೆ ಕೇರಳದ ದೇವಾಲಯಗಳಲ್ಲಿ ಶಿಲ್ಪ ಅಲಂಕಾರ ಸೋಪಾನದ ಕೈಪಿಡಿಗಳಿಗೆ ಹಾಗೂ ಕುಬ್ಜನ ಶಿಲ್ಪವುಳ್ಳ ಪ್ರಣಾಲಗಳಿಗೆ ಸೀಮಿತವಾಗಿರುವುದು ವಾಡಿಕೆ.

ಕೇರಳ ಶೈಲಿಯ ವಾಸ್ತುಶಿಲ್ಪ ಕರ್ನಾಟಕದ ಕರಾವಳಿಯಲ್ಲಿಯೂ ಪ್ರಭಾವ ಬೀರಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿರುವ ಬಹುತೇಕ ದೇವಾಲಯಗಳೆಲ್ಲ ಈ ಶೈಲಿಗೆ ಬದ್ಧವಾಗಿವೆ. ಉಡುಪಿಯ ಅನಂತೇಶ್ವರ (ಚಾಪಾಕಾರ), ಚಂದ್ರಮೌಳೀಶ್ವರ ದೇವಾಲಯ, ಉತ್ತರ ಕನ್ನಡ ಜಿಲ್ಲೆಯ ಹಿರೇಗುತ್ತಿಯ ಶಿವ ದೇವಾಲಯ, ಗೋಕರ್ಣದ ಬ್ರಹ್ಮೇಶ್ವರ ಹಾಗೂ ವೃತ್ತ ವಿನ್ಯಾಸದ ವೇದೇಶ್ವರ ಮುಂತಾದವುಗಳನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು. ಹಿಮಾಲಯದ ಪರಿಸರದಲ್ಲಿರುವ ಹಲವೆಡೆ ಮತ್ತು ಚೀನ, ನೇಪಾಲ ಮುಂತಾದ ಕೆಲವು ಏಷ್ಯದ ದೇಶಗಳಲ್ಲಿ ಕೇರಳ ಶೈಲಿಯನ್ನು ನೆನಪಿಸುವ ವಾಸ್ತುರಚನೆಗಳು ಕಾಣುತ್ತವೆ. ಇದಕ್ಕೆ ಪರಿಸರ ಕಾರಣವೋ ಅಥವಾ ಕೇರಳ ವಾಸ್ತುಶೈಲಿಯ ಪ್ರಭಾವ ಕಾರಣವೋ ಎಂಬುದರ ಬಗ್ಗೆ ಒಮ್ಮತವಿಲ್ಲ. (ಎಸ್.ವಿ.ಪಿ.)

**ಕೇಸರಿಯ ಸ್ತೂಪ:** ಬಿಹಾರ್ ರಾಜ್ಯದ ಪೂರ್ವ ಚಂಪಾರಣ್ ಪ್ರದೇಶದಲ್ಲಿರುವ ಸ್ಮಾರಕ ಸ್ತೂಪ. ಕುಶಿನಗರಕ್ಕೆ ಅಂತಿಮ ಪಯಣ ಬೆಳೆಸುವ ಮೊದಲು ಇದೇ ಸ್ಥಳದಲ್ಲಿ ಬುದ್ಧ ತನ್ನ ಭಿಕ್ಷಾಪಾತ್ರೆಯನ್ನು ವೈಶಾಲಿಯ ಜನತೆಗೆ ಅರ್ಪಿಸಿ, ತನ್ನನ್ನು ಹಿಂಬಾಲಿಸದಂತೆ ಬಿನ್ನವಿಸಿಕೊಂಡ. ಇಲ್ಲಿಯೇ ಆತ ಗಂಡಕಿ ನದಿಯನ್ನು ದಾಟಿದ. ಕುಶಿನಗರದಲ್ಲಿ ಬುದ್ಧನ ಪರಿನಿರ್ವಾಣವಾಯಿತು. ಭಿಕ್ಷಾಪಾತ್ರೆಯನ್ನು ಬಿಟ್ಟುಹೋದ ಸ್ಮರಣಾರ್ಥ ಇಲ್ಲಿ ಸಣ್ಣದಾದ ಮಣ್ಣಿನ ಸ್ತೂಪವೊಂದನ್ನು ನಿರ್ಮಿಸಲಾಯಿತು. ತರುವಾಯ ಮೌರ್ಯ, ಶುಂಗ ಮತ್ತು ಕುಷಾಣರ ಕಾಲದಲ್ಲಿ ಈ ಸ್ತೂಪವನ್ನು ವಿಸ್ತರಿಸಿ ಇದಕ್ಕೆ ಇಟ್ಟಿಗೆಯ ಹೊದಿಕೆಯನ್ನು ಮಾಡಲಾಯಿತು. ಮುಂದೆ ಗುಪ್ತರ ಕಾಲದಲ್ಲಿ ಮಹಾಯಾನ ಪಂಥದ ಪ್ರಭಾವದಿಂದಾಗಿ ಇದು 41ಮೀ ಎತ್ತರದ, ಬಹುಮಜಲುಗಳುಳ್ಳ ಸ್ತೂಪದ ರೂಪವನ್ನು ಪಡೆಯಿತು. ಇದರ ನೆತ್ತಿಯ ಮೇಲೆ ಕೊಳವೆಯಾಕಾರದ ಮೇಧಿಯನ್ನು ಕೂರಿಸಲಾಯಿತು. ಫಾಹಿಯಾನ್



ಸ್ತೂಪ

ಮತ್ತು ಯುವಾನ್‌ಚಾಂಗ್ ಇಬ್ಬರೂ ಈ ಸ್ಥಳಕ್ಕೆ ಭೇಟಿ ನೀಡಿರುವರು. ಭಿಕ್ಷಾಪಾತ್ರೆಯ ಘಟನೆಯನ್ನು ನಿರೂಪಿಸುವ, ಪ್ರಾಯಶಃ ಅಶೋಕ ರಾಜನಿಂದ ಸ್ಥಾಪಿತವಾದ ಶಾಸನ ಕಂಬವೊಂದು ಇಲ್ಲಿದ್ದುದಾಗಿ ಫಾಹಿಯಾನ್ ತಿಳಿಸಿದ್ದಾನೆ.

1814ರಲ್ಲಿ ಕರ್ನಲ್ ಮೆಕೆಂಜಿ ಮತ್ತು ಕಾಶಿನಾಥ್, 1835ರಲ್ಲಿ ಹೋಡ್ಸನ್ ಮತ್ತು ಜೆ.ಬಿ. ಎಲಿಯಟ್ ಮಣ್ಣಿನಿಂದ ಸಂಪೂರ್ಣ ಮುಚ್ಚಿಹೋಗಿದ್ದ ಈ ಸ್ತೂಪದ ಸರ್ವೇಕ್ಷಣೆ ನಡೆಸಿದರು. ಸ್ತೂಪದಿಬ್ಬದ ಪಕ್ಕದಲ್ಲಿಯೇ ಇದ್ದ ರಾಣಿವಾಸ್ ಎಂಬ ಹೆಸರಿನ ದಿಬ್ಬದಲ್ಲಿ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್ ಉತ್ಖನನ ನಡೆಸಿದ. ಸಣ್ಣಸಣ್ಣ ಕೋಣೆಗಳೂ ಬುದ್ಧನ ಬೃಹತ್ ಮೂರ್ತಿಯೂ ಇಲ್ಲಿ ಅನಾವರಣಗೊಂಡವು. ಈ ಕೋಣೆಗಳು ಬೌದ್ಧ ಭಿಕ್ಷುಣಿಯರಿಗಾಗಿ ಕಟ್ಟಿದ ವಾಸಗೃಹಗಳಾಗಿರಬಹುದು.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಸ್ತೂಪದಿಬ್ಬದಲ್ಲಿ ಉತ್ಖನನ ನಡೆಸಿ ಆರು ಮಜಲುಗಳುಳ್ಳ ಸ್ತೂಪವನ್ನು ಹೊರತೆಗೆದಿದೆ. ಇದರ ತಳ ಬಹುಭುಜಗಳ ವಿನ್ಯಾಸದಲ್ಲಿದೆ. ಸ್ತೂಪದೊಳಗೆ 2.2 x 1.8 x 2.25ಮೀ ವಿಸ್ತೀರ್ಣದ ಆರು ಕೋಣೆಗಳಿವೆ. ಕೋಣೆಗಳ ಬಾಗಿಲು 0.75ಮೀ ಎತ್ತರವಿದೆ. ಪ್ರತಿ ಕೋಣೆಯೊಳಗೆ ಗಾರೆಯಿಂದ ಮಾಡಿದ, ಭೂಮಿಸ್ಪರ್ಶ ಮುದ್ರೆಯಲ್ಲಿರುವ ಬುದ್ಧನ ವಿಗ್ರಹವನ್ನು 25 ಸೆಂಮೀ ಎತ್ತರದ ಪೀಠದ ಮೇಲೆ ಕೂರಿಸಲಾಗಿದೆ. ಎಲ್ಲ ವಿಗ್ರಹಗಳಲ್ಲಿಯೂ ಶಿರಭಾಗ ನೈಸರ್ಗಿಕವಾಗಿ ನಾಶವಾಗಿದೆ. ಕೆಲವೊಂದು ಕೋಣೆಗಳಲ್ಲಿ ಇದೇ ಮುದ್ರೆಯಲ್ಲಿರುವ, ವಿವಿಧ ಗಾತ್ರದ ಬುದ್ಧನ ಮೂರು ಮೂರ್ತಿಗಳಿವೆ. ಪೀಠದ ಮೇಲೆ ಸಿಂಹದ ಗಾರೆಶಿಲ್ಪವಿದೆ. ಕೋಣೆಗಳ ಹೊರಗೋಡೆಯನ್ನು ಗುಪ್ತರ ಕಾಲದ ವಾಸ್ತುಲಕ್ಷಣವಾದ ಕುಂಭ ವಿನ್ಯಾಸದ ಕಾರಣಿ (ಮೌಲ್ಡಿಂಗ್) ಹಾಗೂ ಸಣ್ಣಗೂಡುಗಳಿಂದ ಅಲಂಕರಿಸಲಾಗಿದೆ. ಈ ಸ್ತೂಪ ಆ ಕಾಲದಲ್ಲಿಯೇ ವಿನೂತನ ವಾಸ್ತು ವಿನ್ಯಾಸಗಳಿಂದ ಕಂಗೊಳಿಸುತ್ತಿದ್ದ ಅಪೂರ್ವ ಸ್ಮಾರಕವಾಗಿತ್ತು. ಪ್ರಾಚ್ಯಾವ ಶೇಷಗಳು ಮತ್ತು ಶಿಲ್ಪ ಶೈಲಿಯ ಆಧಾರದ ಮೇಲೆ ಇದರ ಕಾಲ 6–7ನೆಯ ಶತಮಾನ ಎಂದು ಹೇಳಬಹುದು. ಈ ಸ್ತೂಪದ ಆಕರ್ಷಕ ವಿನ್ಯಾಸ ಅನಂತರದ ಕಾಲದಲ್ಲಿ ಆಗ್ನೇಯ ಏಷ್ಯದ ದೇಶಗಳಲ್ಲಿ ನಿರ್ಮಾಣಗೊಂಡ ಸ್ತೂಪಗಳಿಗೆ ಮಾದರಿಯಾಗಿದ್ದಂತೆ ತೋರುತ್ತದೆ. ಈ ಮಾದರಿಯಲ್ಲಿ ಕಟ್ಟಿದ ಕೊನೆಯ ಸ್ತೂಪ 9ನೆಯ ಶತಮಾನದ್ದಾಗಿದ್ದು ಇದು ಬೋರಬುದೂರ್‌ನಲ್ಲಿದೆ. (ಕೆ.ಕೆ.ಎಚ್.)

**ಕೊಂಗಾಳ್ವರು:** ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು

**ಕೊಂಡಾಪುರ:** ಆಂಧ್ರಪ್ರದೇಶ ರಾಜ್ಯದ ಮೇದಕ್ ಜಿಲ್ಲೆಯಲ್ಲಿ ತೆರ್‌ಪೋಲ್ ಹಳ್ಳಿಯಲ್ಲಿರುವ ಆದಿ ಇತಿಹಾಸ ಕಾಲದ ನೆಲೆ. 1 ಕಿಮೀ ವಿಸ್ತೀರ್ಣದ ಈ ನೆಲೆಯಲ್ಲಿ 8–9 ಮೀ ಎತ್ತರದ ಬೂದಿ ದಿಣ್ಣೆಗಳಿವೆ. ಹೈದರಾಬಾದಿನ ಪುರಾತತ್ತ್ವ ಇಲಾಖೆಯ ವತಿಯಿಂದ ಯಾಜ್ದಾನಿ ಇಲ್ಲಿ 1941–42ರಲ್ಲಿ ಉತ್ಖನನ ಕೈಗೊಂಡ. ಇಲ್ಲಿ ಸಿಕ್ಕ ಅವಶೇಷಗಳಿಂದ ಕೊಂಡಾಪುರ ಸಾತವಾಹನ ಕಾಲದ ಪ್ರಮುಖ ನಗರವಾಗಿತ್ತೆಂದು ತಿಳಿಯಬಹುದು. ಇಲ್ಲಿ ಕಂಡುಬಂದಿರುವ ಧಾರ್ಮಿಕ ಕಟ್ಟಡಗಳನ್ನು ಮಣ್ಣು ಮತ್ತು ಇಟ್ಟಿಗೆಗಳಿಂದ ಕಟ್ಟಲಾಗಿದ್ದು ಇವು ಸ್ತೂಪ ಮತ್ತು ಚೈತ್ಯಾಲಯಗಳಂತಿವೆ. ಇಲ್ಲಿಯ ಒಂದು ಸ್ತೂಪದ ಸುತ್ತಲೂ ಸಣ್ಣ ಕೊಠಡಿಗಳಿವೆ. ಇನ್ನೊಂದರಲ್ಲಿ ಸಣ್ಣ ಮೆಟ್ಟಿಲುಗಳನ್ನು ಒಳಗೊಂಡ ಕೊಠಡಿಗಳಿವೆ. ಇಲ್ಲಿದ್ದ ಇನ್ನೆರಡು ದಿಣ್ಣೆಗಳಲ್ಲಿ ಸುಡಾವೆಮಣ್ಣಿನ ಮುದ್ರೆಗಳು ಹಾಗೂ ನಾಣ್ಯಗಳು, ಕೆಂಪುಬಣ್ಣದ ಹೊಳಪಿನ ಮಣ್ಪಾತ್ರೆ ಮತ್ತು ರೌಲೆಟ್ ತಟ್ಟೆಗಳು ದೊರೆತಿದ್ದು, ರೌಲೆಟ್ ಪಾತ್ರೆಗಳ ಮೇಲೆ ತ್ರಿರತ್ನ ಮತ್ತು ಧರ್ಮಚಕ್ರದ ಚಿಹ್ನೆಗಳು, ರೇಖಾಚಿತ್ರಗಳು, ಕಮಲದ ಚಿತ್ರಗಳು ಇವೆ.

ಸುಡಾವೆಮಣ್ಣಿನ ಬಳೆಗಳು, ವಿವಿಧ ಕಲ್ಲುಗಳಿಂದ ಮಾಡಿದ ಮಣಿಗಳು, ತಾಯಿತಗಳು, ಮುದ್ರೆಗಳು, ತ್ರಿರತ್ನ, ಅರಳಿದ ಎಲೆ, ಸ್ತೂಪ ಮತ್ತು ಗೋಪುರದ ಚಿಹ್ನೆಗಳು ದೊರೆತಿವೆ. ತಾಯಿತಗಳು ಹೆಚ್ಚು ಪ್ರಚಲಿತವಿದ್ದಂತೆ ತೋರುತ್ತದೆ. ಇವುಗಳ ಮೇಲೆ ಸ್ವಸ್ತಿಕ, ಹಸು, ಶ್ರೀವತ್ಸ, ಗಜಲಕ್ಷ್ಮಿ ಹಾಗೂ ಹೂವಿನ ಚಿತ್ರಗಳಿವೆ. ಪದಕಗಳಂತಿರುವ ರೋಮನ್ ನಾಣ್ಯಗಳು ದೊರೆತಿದ್ದು ರೋಮ್‌ನೊಡನೆ ವ್ಯಾಪಾರ ಸಂಬಂಧವನ್ನು ಸೂಚಿಸುತ್ತವೆ. ದಂತದಿಂದ ಮಾಡಿದ ವಸ್ತುಗಳ ಮೇಲೆ ಆನೆ, ಸ್ತ್ರೀ–ಪುರುಷ ಚಿತ್ರಗಳಿವೆ. ಕಬ್ಬಿಣದ ಚಾಕು, ಚೂರಿ, ಸಲಾಕೆ, ಕುಡುಗೋಲುಗಳು ದೊರೆತಿವೆ. ಇಲ್ಲಿಯ ಸುಡಾವೆಮಣ್ಣಿನ ಗೊಂಬೆಗಳು ಅಪರೂಪ ಶೈಲಿಯಲ್ಲಿವೆ. ಎರಡು ಶಿರಗಳು ಅಚ್ಚಿನಿಂದ ಮಾಡಿದವು. ಇವಕ್ಕೆ ಹಸುರು, ಕೆಂಪು, ಅರಿಸಿನ ಬಣ್ಣದ ಲೇಪವಿದೆ. ಹಲವು ಭಂಗಿಗಳಲ್ಲಿಯ ಸ್ತ್ರೀ–ಪುರುಷ ಗೊಂಬೆಗಳಲ್ಲಿ ದೈಹಿಕ ಸೌಂದರ್ಯಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಅಲಂಕಾರ ಸಾಧನಗಳನ್ನು ಧರಿಸಿರುವ ಗೊಂಬೆಗಳು ವಿಶೇಷ. ಇವುಗಳಲ್ಲಿ ಯಕ್ಷರು, ದೇವಿ, ಬೋಧಿಸತ್ತ್ವ, ಸಿಂಹ, ಕುದುರೆ, ಆನೆ, ಹಸು, ಎಮ್ಮೆ, ಮಗು ಮತ್ತು ತಾಯಿಯ ಗೊಂಬೆಗಳಿವೆ (ಪ್ರ.ಶ.ಪೂ. 27). ಅಗಸ್ಟಸ್‌ನ ಕಾಲದ ಚಿನ್ನದ ನಾಣ್ಯಗಳು ಇಲ್ಲಿ ದೊರೆತಿವೆ. ಬೆಳ್ಳಿ, ತಾಮ್ರ, ಸತುವಿನ ಸೀಸದ ನಾಣ್ಯಗಳು ಗೌತಮಿಪುತ್ರ ಸಾತಕರ್ಣಿ, ಪುಳುಮಾವಿ ಮತ್ತು ಯಜ್ಞಶ್ರೀ ಸಾತಕರ್ಣಿಯ ಕಾಲದ್ದಾಗಿವೆ. ಪ್ರ.ಶ.ಪೂ.200–ಪ್ರ.ಶ.300 ರವರೆಗೆ ಪ್ರಚಲಿತದಲ್ಲಿದ್ದ ಜೀವನಶೈಲಿ ಮತ್ತು ಸಂಸ್ಕೃತಿಯನ್ನು ಈ ನೆಲೆ ಪ್ರತಿಬಿಂಬಿಸುತ್ತದೆ. (ಆರ್‌ಕೆ.)

**ಕೊಡುಮನಲ್:** ತಮಿಳುನಾಡು ರಾಜ್ಯದ ಈರೋಡು ಜಿಲ್ಲೆಯಲ್ಲಿರುವ ಆದಿ ಚಾರಿತ್ರಿಕ ಕಾಲದ ವಸತಿ ಹಾಗೂ ಸಮಾಧಿ ನೆಲೆ. ನೊಯ್ಯಲ್ ನದಿಯ ಎಡದಂಡೆಯ ಮೇಲಿದೆ. ಸಂಗಮ್ ಚೇರರ ರಾಜಧಾನಿಯಾದ ಕರೂರು ಹಾಗೂ ಕೇರಳದ ಬಂದರು ಮುಝಿರಿಸ್ ನಡುವಿನ ಪ್ರಾಚೀನ ವ್ಯಾಪಾರ ಮಾರ್ಗದಲ್ಲಿದ್ದ ಈ ನೆಲೆಯನ್ನು ಸಂಗಮ್ ಕಾವ್ಯ ಪತ್ತಿರುಪಾಟ್ಟು ಕೊಡುಮನಮ್ ಎಂದು ಉಲ್ಲೇಖಿಸಿದೆ. 1985–90 ರ ನಡುವೆ ತಮಿಳು ವಿಶ್ವವಿದ್ಯಾಲಯ, ಮದ್ರಾಸ್ ವಿಶ್ವವಿದ್ಯಾಲಯ ಹಾಗೂ ರಾಜ್ಯ ಪುರಾತತ್ತ್ವ ಇಲಾಖೆಯ ಸಹಯೋಗದಲ್ಲಿ ಇಲ್ಲಿ ನಡೆಸಿದ ಉತ್ಖನನದಲ್ಲಿ 1–2 ಮೀ ದಪ್ಪದ ವಸತಿ ಪದರದಲ್ಲಿ ಆದಿ ಚಾರಿತ್ರಿಕ ಸಂಸ್ಕೃತಿಯ (ಪ್ರ.ಶ.ಪೂ. 400–100) ಮಹತ್ತ್ವಪೂರ್ಣ ಅವಶೇಷಗಳು ತೋರಿಬಂದವು. ಇದನ್ನು ಮೂರು ಉಪಹಂತಗಳಲ್ಲಿ (ಎ,ಬಿ,ಸಿ) ವಿಭಜಿಸಲಾಗಿದೆ. ಮೊದಲೆರಡು ಉಪಹಂತಗಳಲ್ಲಿ ಅರೆಪ್ರಶಸ್ತ ಕಲ್ಲುಗಳ ಮಣಿಗಾರಿಕೆ (ಬೀಡ್ ಮೇಕಿಂಗ್) ಇಲ್ಲಿ ವ್ಯಾಪಕವಾಗಿ ನಡೆಯುತ್ತಿತ್ತು. ಈ ಅವಧಿಯಲ್ಲಿ ತಮಿಳು–ಬ್ರಾಹ್ಮಿ ಬರೆಹ ಹಾಗೂ ಗೀರುಚಿತ್ರಗಳುಳ್ಳ ಮಣ್ಪಾತ್ರೆ ಚೂರುಗಳು, ಕಾವಿಲೇಪನದಡಿ ಬಿಳಿಚಿತ್ರಿತ ಮಣ್ಪಾತ್ರೆಗಳು ಅಧಿಕವಾಗಿದ್ದು ಕಬ್ಬಿಣದ ಕುಲುಮೆ ಹಾಗೂ ತೆರೆದ ಕುಲುಮೆಗಳು ಕಂಡುಬಂದಿವೆ. ಕೊನೆಯ ಉಪಹಂತದಲ್ಲಿ ಕೃಷಿಗೆ ಹೆಚ್ಚು ಆದ್ಯತೆ ನೀಡಲಾಯಿತು. ಸುಡಾವೆಮಣ್ಣಿನ ಮತ್ತು ಗಾಜಿನ ವಸ್ತುಗಳು, ಸಂಗ್ರಹಣ ಗುಳಿಗಳು, ಕೆಂಪು ಮಣ್ಪಾತ್ರೆಗಳು ಈ ಉಪಹಂತಗಳ ಪ್ರಧಾನ ಅವಶೇಷಗಳಾಗಿವೆ.

ವಸತಿ ವಿನ್ಯಾಸ: ನುರುಜುಕಲ್ಲನ್ನು ಹಾಸಿ ಸುಣ್ಣ ಲೇಪಿಸಿದ ಎಂಟು ನೆಲಗಟ್ಟುಗಳು ಹಾಗೂ ಇವುಗಳ ಸುತ್ತಲಿದ್ದ ಕಂಬದ ಗುಳಿಗಳು ಜನರು ಸಾಮಾನ್ಯವಾಗಿ ಹುಲ್ಲುಚಾವಣಿಯ ತಡಿಕೆ ಗುಡಿಸಲುಗಳಲ್ಲಿ ವಾಸಿಸುತ್ತಿದ್ದುದನ್ನು ತಿಳಿಸುತ್ತವೆ. ಕೆಲವು ಗುಡಿಸಲುಗಳಲ್ಲಿ ನುರುಜುಕಲ್ಲಿನ ಗೋಡೆಯಿದ್ದು ಇವುಗಳ ತಳಪಾಯ ಮಾತ್ರ ಉಳಿದಿದ್ದವು. ಮೊದಲೆರಡು ಉಪಹಂತಗಳ ಎರಡು ನೆಲಗಟ್ಟುಗಳಲ್ಲಿ ಕಣಜಗಳಿಗಾಗಿ ಕಟ್ಟಿದ ದಂಡೆಗಳಿದ್ದುವು. ಕೊನೆಯ ಉಪಹಂತದಲ್ಲಿ ಇಟ್ಟಿಗೆ ಗೋಡೆಯಿದ್ದ ವೃತ್ತಾಕಾರದ ಗುಂಡಿಯೊಳಗೆ ಧಾನ್ಯ ಸಂಗ್ರಹಿಸುವ ವಿಧಾನ ರೂಢಿಗೆ ಬಂದಂತೆ ಕಾಣುತ್ತದೆ.

ಕಬ್ಬಿಣ ಮತ್ತು ಉಕ್ಕು ಉದ್ಯಮ: ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆ ಈ ಜನರ ವಿಶೇಷ ಸಾಧನೆಗಳಲ್ಲೊಂದು. ಸು.115 ಸೆಂಮೀ ವ್ಯಾಸದ ಕಬ್ಬಿಣ ಕುಲುಮೆಯೊಂದು ಇಲ್ಲಿದ್ದು ಇದರೊಳಗೆ ಕಿಟ್ಟ, ಅದರೊಂದಿಗೆ ಬೆರೆತ ಸುಟ್ಟಮಣ್ಣಿನುಂಡೆ, ಸುಟ್ಟು ಗಾಜಿನಂತಾದ ಇಟ್ಟಿಗೆ ಚೂರುಗಳು, ಸುಡಾವೆಮಣ್ಣಿನ ಗಾಳಿ ಕೊಳವೆ ಭಾಗಗಳು (ಟ್ವಿಯೆರ್) ಮುಂತಾದ ಅವಶೇಷಗಳು ತುಂಬಿದ್ದವು. ಕುಲುಮೆಯ ಸಮೀಪದಲ್ಲಿದ್ದ ಗ್ರಾನೈಟ್ ಚಪ್ಪಡಿಗಳ ಮೇಲೆ ಪ್ರಾಯಶಃ ಕಬ್ಬಿಣವನ್ನು ಬಡಿದು ಆಕಾರಕ್ಕೆ ತರಲಾಗುತ್ತಿತ್ತು. ವಸತಿ ಅವಶೇಷಗಳು ಇಲ್ಲಿ ಇಲ್ಲದಿರುವುದರಿಂದ ಈ ಕಮ್ಮಾರಸಾಲೆ ವಸತಿಯ ಹೊರವಲಯದಲ್ಲಿದ್ದಂತೆ ಕಾಣುತ್ತದೆ. ಎರಡನೆಯ ಉಪಹಂತದಲ್ಲಿ ಅಂಡಾಕಾರದ ಎರಡು ತೆರೆದ ಕುಲುಮೆಗಳೂ (ಕ್ರೂಸಿಬಲ್ ಫರ್ನೇಸ್) ಇವುಗಳ ಸುತ್ತ ಸಮಾಂತರದಲ್ಲಿ 12 ಕ್ಕೂ ಹೆಚ್ಚು ಪುಟ್ಟ ಕುಲುಮೆಗಳನ್ನೂ ಪತ್ತೆಮಾಡಲಾಯಿತು. ಇವುಗಳಲ್ಲಿ ಉಕ್ಕನ್ನು ತಯಾರಿಸಲಾಗುತ್ತಿತ್ತು. ಅತಿದೊಡ್ಡ ಕುಲುಮೆ 112×100ಮೀ ವ್ಯಾಸದ್ದಾಗಿದ್ದು 40 ಸೆಂಮೀ ಆಳವಿತ್ತು. ಪುಟ್ಟ ಕುಲುಮೆಗಳು 30 ಸೆಂಮೀ ವ್ಯಾಸದವಾಗಿದ್ದು ಇವುಗಳ ಮಧ್ಯದಲ್ಲಿ ರಂಧ್ರವನ್ನು ಮಾಡಲಾಗಿತ್ತು. ಶಾಖ ನಿಯಂತ್ರಣದಲ್ಲಿ ಇವು ಅನುಕೂಲಕಾರಿಯಾಗಿದ್ದಿರಬೇಕು. ಇಂತಹ ಒಂದು ಕುಲುಮೆಯೊಳಗೆ ಸುಟ್ಟು ಗಾಜಿನಂತಾದ ಬಟ್ಟಲಿನಾಕಾರದ ಮೂಸೆಯೊಂದು (9 ಸೆಂಮೀ ವ್ಯಾಸ) ದೊರಕಿದ್ದು ಗಮನಾರ್ಹ.

ಪ್ರಶಸ್ತ ಕಲ್ಲುಗಳ ಮಣಿಗಾರಿಕೆ: ಈ ಪ್ರದೇಶ ಪಚ್ಚೆ (ಬೆರಿಲ್), ಇಂದ್ರನೀಲ (ಸ್ಯಾಫೈರ್), ಬೆಣಚುಕಲ್ಲು ಮುಂತಾದ ಪ್ರಶಸ್ತ-ಅರೆಪ್ರಶಸ್ತ ಶಿಲಾನಿಕ್ಷೇಪಗಳಿಗೆ ಹೆಸರಾಗಿದೆ. ಈ ಕಲ್ಲುಗಳಿಂದಲೂ ಆಯಾತದಿಂದ ಪಡೆದ ವೈಡೂರ್ಯ, ಪದ್ಮರಾಗ, ಬಳಪದ ಕಲ್ಲು, ಕಾರ್ನೇಲಿಯನ್, ಜಾಸ್ಪರ್, ಗಾರ್ನೆಟ್ ಮುಂತಾದ ಕಲ್ಲುಗಳಿಂದಲೂ ತಯಾರಿಸಿದ ಮಣಿಗಳು ವಸತಿ ಪ್ರದೇಶದಲ್ಲಿ ಹೇರಳವಾಗಿವೆ. ಕಾರ್ನೇಲಿಯನ್ ಕಲ್ಲನ್ನು ಗುಜರಾತಿನಿಂದಲೂ ವೈಡೂರ್ಯವನ್ನು ಆಫ್ಘಾನಿಸ್ತಾನದಿಂದಲೂ ಆಮದು ಮಾಡಿಕೊಂಡಿರಬೇಕು. ಸಮಾಧಿಗಳಲ್ಲಿ ಅಲಂಕರಿಸಿದ ಕುಂದಣದ (ಎಚ್ಡ್) ಕಾರ್ನೇಲಿಯನ್ ಮಣಿಗಳೂ ಅಗೇಟ್ ಮಣಿಗಳೂ ವಿಶೇಷವಾಗಿದ್ದುವು. ಒಂದು ಸಮಾಧಿಯಲ್ಲಿ 80, ಇನ್ನೊಂದರಲ್ಲಿ ಸು.2200, ಮತ್ತೊಂದರಲ್ಲಿ ಸು.1000 ಕಾರ್ನೇಲಿಯನ್ ಮಣಿಗಳಿದ್ದುವು. 2200 ಮಣಿಗಳು ಒಂದೇ ಸಮಾಧಿಯಲ್ಲಿ ಸಿಕ್ಕಿರುವುದು ಭಾರತದಲ್ಲಿ ಇದೇ ಪ್ರಥಮ. ಮಣಿಗಳು ತಯಾರಿಕೆಯ ವಿವಿಧ ಹಂತಗಳಲ್ಲಿರುವುದು ಮಣಿಗಾರಿಕೆ ಒಂದು ಉದ್ಯಮವಾಗಿದ್ದುದನ್ನು ಸೂಚಿಸುತ್ತದೆ.

ನೇಯ್ಗೆ: ಇಲ್ಲಿ ಸಿಕ್ಕ ಕಬ್ಬಿಣ ಕಂಬಿ ಸಹಿತ ಸುಡಾವೆಮಣ್ಣಿನ ತಕಲಿಗಳು ಹಾಗೂ ಹತ್ತಿಬಟ್ಟೆಯ ಒಂದು ಚೂರಿನಿಂದ ಹತ್ತಿ ನೇಯ್ಗೆಯ ಕಾರ್ಯ ಇಲ್ಲಿ ನಡೆಯುತ್ತಿತ್ತೆಂಬುದು ದೃಢವಾಗುತ್ತದೆ.

ಗೀರುಚಿತ್ರಗಳು: ಮೊದಲೆರಡು ಉಪಹಂತಗಳಲ್ಲಿ ಗೀರುಚಿತ್ರಗಳು ಅಥವಾ ಚಿಹ್ನೆಗಳುಳ್ಳ ಸು.50 ಕಪ್ಪು-ಕೆಂಪು ದ್ವಿವರ್ಣ ಮಣ್ಪಾತ್ರೆ ಚೂರುಗಳು ದೊರೆತಿವೆ. ಇವು ಬಟ್ಟಲು ಹಾಗೂ ಮಡಕೆಯ ಭುಜಭಾಗಗಳಾಗಿವೆ. ಕೆಲವೊಂದು ಚೂರುಗಳಲ್ಲಿ ಒಂದಕ್ಕಿಂತ ಹೆಚ್ಚು ಚಿತ್ರಗಳಿವೆ. ಸೂರ್ಯ, ಸ್ವಸ್ತಿಕ, ನಕ್ಷತ್ರ, ಏಣಿ, ನಂದಿಪಾದ, ಮೀನು, ಬಿಲ್ಲು-ಬಾಣ, ಚಕ್ರ, ಬಂಡಿ ಇವು ಸಾಮಾನ್ಯ ಚಿತ್ರಗಳು. ಒಂದು ಮಣ್ಪಾತ್ರೆ ಚೂರಿನಲ್ಲಿ ಚಿತ್ರದೊಂದಿಗೆ ತಮಿಳು-ಬ್ರಾಹ್ಮಿ ಅಕ್ಷರಗಳಿದ್ದವು. ಉತ್ಖನನಕ್ಕೊಳಪಡಿಸಿದ 13 ಸಮಾಧಿಗಳಲ್ಲಿ 10ರಲ್ಲಿ ಇಂಥ ಚಿತ್ರ ಅಥವಾ ಚಿಹ್ನೆಗಳಿರುವ ಮಣ್ಪಾತ್ರೆಗಳಿದ್ದುವು. ಪ್ರತಿಯೊಂದು ಸಮಾಧಿಯಲ್ಲೂ ಒಂದು ವಿಶಿಷ್ಟ ಚಿಹ್ನೆ ಇದ್ದು ಇದು ಆ ಸಮಾಧಿಯಲ್ಲಿದ್ದ ಎಲ್ಲ ಮಣ್ಪಾತ್ರೆಗಳ ಮೇಲೆಯೂ ಇದ್ದಿತ್ತು. ಇವು ಪ್ರಾಯಶಃ ಕುಲಚಿಹ್ನೆಗಳಿರಬೇಕೆಂದು ಊಹಿಸಲಾಗಿದೆ.

ತಮಿಳು-ಬ್ರಾಹ್ಮಿ: 250 ಕ್ಕೂ ಹೆಚ್ಚು ಮಣ್ಪಾತ್ರೆ ಚೂರುಗಳ ಮೇಲೆ ತಮಿಳು-ಬ್ರಾಹ್ಮಿ ಅಕ್ಷರಗಳಿವೆ. ಇವು ಕಣ್ಣನ್ ಆತನ್, ಪಣ್ಣನ್, ಅಂತವನ್ ಆತನ್ ಮತ್ತು ಆತನ್ ಎಂಬ ತಮಿಳು ಹೆಸರುಗಳಲ್ಲದೆ ವರುಣಿ, ವಿಸಾಕಿ, ಕವಿರನ್ ಹಾಗೂ ನಿಕಮ ಎಂಬ ಪ್ರಾಕೃತ ಹೆಸರುಗಳೂ ಇವೆ. ವಿಸಾಕಿ ಎಂಬ ಹೆಸರುಳ್ಳ ಮಣ್ಪಾತ್ರೆ ಚೂರು ಸಮಾಧಿಯೊಂದರಿಂದ ದೊರೆತದ್ದು.

ಮುದ್ರಾಂಕಿತ ನಾಣ್ಯಗಳು: ಅಂತ್ಯ ಉಪಹಂತದಿಂದ ಬೆಳ್ಳಿಯ ಒಂದು ಮುದ್ರಾಂಕಿತ ನಾಣ್ಯ ಹಾಗೂ ಮೇಲ್ಮೈಯಿಂದ ಇಂಥ ಮತ್ತೊಂದು ನಾಣ್ಯ ದೊರೆತಿವೆ.

ಸಮಾಧಿಗಳು: ವಸತಿಯ ಪೂರ್ವ ಹಾಗೂ ಈಶಾನ್ಯ ಭಾಗದಲ್ಲಿ ಸು. 50 ಹೆ. ಪ್ರದೇಶದಲ್ಲಿ 150 ಕ್ಕೂ ಹೆಚ್ಚು ಸಮಾಧಿಗಳಿದ್ದುವು. ಇವುಗಳಲ್ಲಿ ಕಲ್ಗುಪ್ಪೆ ಸಮಾಧಿಗಳು ಅಧಿಕ. ಇವುಗಳಡಿಯಲ್ಲಿ ನೆಲಕೋಣೆ ಅಥವಾ ವಿಭಜಿತ ನೆಲಕೋಣೆ (ಟ್ರಾನ್ಸೆಪ್ಟೆಡ್ ಸಿಸ್ಟ್) ಇದ್ದುವು. ವಿಭಜಿತ ನೆಲಕೋಣೆಗಳಲ್ಲಿ ಆಯತಾಕಾರದ ಕೋಣೆಯನ್ನು 2 ಅಥವಾ 3 ಭಾಗಗಳಾಗಿ ವಿಭಜಿಸಿದ್ದು ಇವುಗಳ ಮಧ್ಯೆಯಿದ್ದ ಚಪ್ಪಡಿಗಳಲ್ಲಿ ಕಂಡಿಯಿತ್ತು. ಮತ್ತೊಂದು ಪ್ರಕಾರವೆಂದರೆ ಅಕ್ಕಪಕ್ಕದಲ್ಲಿ ಪುಟ್ಟ ಕೋಣೆಗಳಿದ್ದ (ಸಬ್‌ಸಿಡಿಯರಿ ಸಿಸ್ಟ್) ವಿಭಜಿತ ನೆಲಕೋಣೆ. ಕೆಲವು ಸಮಾಧಿಯಲ್ಲಿ ಕಲ್ಲುವೃತ್ತಗಳೊಳಗೆ ನಿಲಸುಗಲ್ಲಿತ್ತು. ಎಲ್ಲ ನೆಲಕೋಣೆಗಳಲ್ಲೂ ಕೋಣೆಯ ಪೂರ್ವಬದಿಯಲ್ಲಿ ಹಾದಿಯನ್ನು ಮಾಡಲಾಗಿತ್ತು. ಸಮಾಧಿಗಳೊಳಗೆ ಅಲಂಕರಿಸಿದ ಕಾರ್ನೇಲಿಯನ್ ಹಾಗೂ ಪಟ್ಟೆ ಅಗೇಟಿನ ಮಣಿಗಳು ವಿಶೇಷವಾಗಿದ್ದುವು. ತ್ರಿಕೋನಾಕಾರದ ಕಾರ್ನೇಲಿಯನ್ ಹಾಗೂ ಪದ್ಮರಾಗಗಳನ್ನು ಕುಂದಣದಿಂದ ಕೂಡಿಸಿದ್ದ, ಹುಲಿಯನ್ನು ಹೋಲುವ ತಾಮ್ರದ ಪ್ರಾಣಿಗೊಂಬೆ, ತಾಮ್ರದ ಚಮಚ, ಬಟ್ಟಲು, ಸೋಸಕ, ಬಳೆಗಳು, ಬೆಳ್ಳಿಯ ಸುತ್ತುಬಳೆ ಹಾಗೂ ಉಂಗುರಗಳು ಸಮಾಧಿಗಳೊಳಗಿದ್ದ ಇತರ ಅವಶೇಷಗಳು. ಬೆಳ್ಳಿಯುಂಗುರದ ನಡುವೆ ಪೀಪಾಯಿ ಆಕಾರದ ಕಾರ್ನೇಲಿಯನ್ ಮಣಿಯನ್ನು ಕೂಡಿಸಿದ್ದು ಇವು ಕಂಠಾಹಾರದ ಭಾಗಗಳಾಗಿರಬೇಕು. ಚಿನ್ನದ ಮಣಿ, ಉಂಗುರ ಮತ್ತು ಸುತ್ತುಂಗುರಗಳೂ ತಾಮ್ರದ ಸುತ್ತುಂಗುರಕ್ಕೆ ಚಿನ್ನದ ತಗಡು ಸುತ್ತಿದ ಒಂದು ಉಂಗುರವೂ ಇಲ್ಲಿ ದೊರೆತಿವೆ. ಕಬ್ಬಿಣದ ಆಯುಧೋಪಕರಣಗಳಲ್ಲಿ ವಿವಿಧ ರೂಪದ ಖಡ್ಗಗಳು, ತೊಟ್ಟು ಅಥವಾ ಮುಳ್ಳಿರುವ ಬಾಣದ ಮೊನೆಗಳು, ಎಲೆಯಾಕಾರದ ಬಾಣದ ಮೊನೆಗಳು, ಬಿಲ್ಲುಗಳಿವೆ. ಕುದುರೆಯ ಕಡಿವಾಣ ಮತ್ತು ರಿಕಾಪಿನ ಭಾಗಗಳು ಇಲ್ಲಿ ಕಂಡುಬಂದಿರುವುದು ಗಮನಾರ್ಹ. ವಿಭಜಿತ ಸಮಾಧಿಯೊಂದರಲ್ಲಿ ಪಕ್ಕದ ಪುಟ್ಟ ಕೋಣೆಯಲ್ಲಿ ಬಾಣದ ಮೊನೆಯ ಕಟ್ಟು ಕಂಡಿಯ ಸಮೀಪ ಸಿಕ್ಕಿತು. ಕಪ್ಪು-ಕೆಂಪು ದ್ವಿವರ್ಣ ಪಾತ್ರೆ ಮತ್ತು ಕಪ್ಪು ಪಾತ್ರೆಗಳು ಅಧಿಕ ಸಂಖ್ಯೆಯಲ್ಲಿಯೂ ಕೆಂಪುಪಾತ್ರೆಗಳು ವಿರಳವಾಗಿಯೂ ಸಮಾಧಿಗಳೊಳಗೆ ಇದ್ದವು. ಕಾವಿಬಣ್ಣದ ಲೇಪನದಡಿ ಬಿಳಿಚಿತ್ರವುಳ್ಳ ಪಾತ್ರೆಗಳ ಕೆಲವು ಚೂರುಗಳೂ ದೊರೆತಿದ್ದು ಇವನ್ನು ವಸತಿಯಿಂದ ತಂದಿದ್ದಿರಬೇಕು.

ಎರಡು ಪ್ರಕಾರದ ಶವಸಂಸ್ಕಾರ ಪದ್ಧತಿಗಳು ಇಲ್ಲಿ ಕಂಡುಬಂದವು. ಇವು ನೆಲಕೋಣೆ ಸಮಾಧಿಗಳು ಹಾಗೂ ಶವಕುಣಿಗಳು. ನೆಲಕೋಣೆಗಳಲ್ಲಿ ನೆಲಚಪ್ಪಡಿಯ ಮೇಲೆ ಆಯ್ದ ಅಸ್ಥಿಚೂರುಗಳನ್ನು ಅಸ್ತವ್ಯಸ್ತವಾಗಿಡಲಾಗಿತ್ತು (ಸೆಕೆಂಡರಿ ಬರಿಯಲ್). ಆದರೆ ಶವಕುಣಿಗಳು ವಸತಿ ಪ್ರದೇಶದಲ್ಲೇ ಕಂಡುಬಂದವು. ಇವುಗಳಲ್ಲಿ ಅಸ್ಥಿಚೂರುಗಳನ್ನು ವ್ಯವಸ್ಥಿತವಾಗಿ ಇರಿಸಲಾಗಿತ್ತು. ಅಂತ್ಯ ಉಪಹಂತದಲ್ಲಿ ಇಂಥ 3 ಶವಕುಣಿಗಳು ಕಂಡುಬಂದವು. ಒಂದು ಕುಣಿಯೊಳಗೆ ಪದ್ಮಾಸನ ಭಂಗಿಯಲ್ಲಿ ವಯಸ್ಕನ ಶವವನ್ನು ಇರಿಸಲಾಗಿತ್ತು. ಇದರ ಬಲಗೈ ಬೆರಳಿನಲ್ಲಿ ತಾಮ್ರದ ಉಂಗುರವಿತ್ತು. 2ನೆಯ ಶವಕುಣಿಯೊಳಗೆ ಮಗುವಿನ ಶವವನ್ನು ಮುದುರಿದ ಭಂಗಿಯಲ್ಲಿ ಹೂಳಲಾಗಿತ್ತು. 3ನೆಯ ಶವಕುಣಿಯಲ್ಲಿ ತಂದೆ, ತಾಯಿ ಮತ್ತು ಮಗುವಿನ ಶವವನ್ನು ಹೂಳಲಾಗಿತ್ತು. ಶವಗಳನ್ನು ಪೂರ್ವ-ಪಶ್ಚಿಮಾಭಿಮುಖವಾಗಿ ಹೂಳಲಾಗಿತ್ತು. (ಕೆ.ಆರ್.)

**ಕೊಡೇಕಲ್ಲು:** ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿರುವ ನವಶಿಲಾಯುಗದ ಬೂದಿದಿಬ್ಬ. ಕೊಡೇಕಲ್ಲು ಗ್ರಾಮದಿಂದ 4ಕಿಮೀ ಆಗ್ನೇಯಕ್ಕಿರುವ ಈ ದಿಬ್ಬವನ್ನು 1941ರಲ್ಲಿ ಸಿ.ಮಹದೇವನ್ ಶೋಧಿಸಿದರು. ಅಂಡಾಕಾರದ ವಿನ್ಯಾಸದಲ್ಲಿರುವ ದಿಬ್ಬದ ವ್ಯಾಸ 37 ಮೀ ಮತ್ತು ಎತ್ತರ 3.5 ಮೀ. ದಿಬ್ಬದ ಪಶ್ಚಿಮಕ್ಕೆ ನವಶಿಲಾಯುಗದ ವಿಸ್ತಾರವಾದ ವಸತಿ ನೆಲೆಯಿದೆ.

ಬೂದಿದಿಬ್ಬದ ಸ್ತರಕ್ರಮ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿಯುವ ದೃಷ್ಟಿಯಿಂದ ಕೆ.ಪದ್ದಯ್ಯನವರು 1976ರಲ್ಲಿ ದಿಬ್ಬದ ಈಶಾನ್ಯ ಭಾಗದಲ್ಲಿ 3.66x3 ಮೀ ಭಾಗದಲ್ಲಿ ಉತ್ಖನನ ನಡೆಸಿದರು. ಒಟ್ಟು ಏಳು ಪದರಗಳು ಸ್ತರಕ್ರಮದಲ್ಲಿ ದಾಖಲಾಗಿವೆ. ಮೊದಲನೆಯ ಪದರ ಅತಿ ಸೂಕ್ಷ್ಮ ಗುಳಿಗಳುಳ್ಳ ಕಿಟ್ಟದುಂಡೆಗಳಿಂದಲೂ ಎರಡನೆಯ ಪದರ ಕಡುಗಂದುಬಣ್ಣದ ಮಣ್ಣಿನಿಂದಲೂ ಮೂರನೆಯ ಪದರ ತೂತುಳ್ಳ ಕಿಟ್ಟದುಂಡೆಗಳಿಂದಲೂ ರಚನೆಗೊಂಡಿದೆ. ನಾಲ್ಕನೆಯ ಪದರ ಬಹುಸ್ವರೂಪದ ಕಡುಗಂದುಬಣ್ಣದ ಮಣ್ಣಿನಿಂದಲೂ ಐದನೆಯ ಪದರ ಗರಸು ಮಣ್ಣಿನ ತೆಳುಪದರದಿಂದಲೂ ಆರನೆಯ ಪದರ ಬೂದಿಬಣ್ಣದ ಮಣ್ಣಿನಿಂದಲೂ ಆಗಿದೆ. ಏಳನೆಯ ಪದರ ನೈಸರ್ಗಿಕ ಮಣ್ಣಿನದು; ಇದು ಸ್ವಾಭಾವಿಕವಾಗಿ ಸವೆದ ಗ್ರಾನೈಟ್ ರೂಪದಲ್ಲಿದೆ. ನವಶಿಲಾಯುಗ ಸಂಸ್ಕೃತಿಯ ಮಣ್ಪಾತ್ರೆಗಳು ಮತ್ತು ಕಲ್ಲಿನ ಉಪಕರಣಗಳು ಎಲ್ಲ ಪದರಗಳಲ್ಲಿ ಅಲ್ಪ ಪ್ರಮಾಣದಲ್ಲಿ ಸಿಕ್ಕಿವೆ. ಈ ದಿಬ್ಬ ನವಶಿಲಾಯುಗದ ಸಂಸ್ಕೃತಿಗೆ ಸೇರಿದ್ದು ಎಂಬುದನ್ನು ಇವು ಸ್ಪಷ್ಟಪಡಿಸುತ್ತವೆ. ಸುಟ್ಟುಕರಕಲಾದ ಬೋರೆಹಣ್ಣಿನ ಬೀಜಗಳು, ಜಾನುವಾರು, ಎಮ್ಮೆ, ಜಿಂಕೆ, ಉಡ, ಮೀನಿನ ಮೂಳೆಗಳು ಈ ಪದರಗಳಿಂದ ದೊರೆತಿವೆ. ನಾಲ್ಕನೆಯ ಪದರದಲ್ಲಿ ಸಿಕ್ಕಿದ ಇದ್ದಿಲಿನ ತುಣುಕೊಂದು ಇಂಗಾಲ-14 ಕಾಲಮಾಪನದ ಪ್ರಕಾರ 4285 ± 105 (ಪ್ರ.ಶ.ಪೂ.2335) ವರ್ಷಗಳಷ್ಟು ಹಳೆಯದು. ಇದು ಇಲ್ಲಿಯ ನವ ಶಿಲಾಯುಗ ಸಂಸ್ಕೃತಿಯ ಕಾಲಮಾನ. (ಪಿ.ಕೆ.)

**ಕೊಣ್ಣೂರು:** ಬೆಳಗಾಂವಿ ಜಿಲ್ಲೆಯ ಗೋಕಾಕದ ವಾಯವ್ಯಕ್ಕೆ 10 ಕಿಮೀ ದೂರದಲ್ಲಿ ಘಟಪ್ರಭ ನದಿಯ ತೀರದಲ್ಲಿರುವ ಪ್ರಾಚೀನ ನೆಲೆ. ಇಲ್ಲಿ ದೊರೆತ ಶಿಲಾ ಉಪಕರಣಗಳಿಂದ ಈ ಪ್ರದೇಶ ನವಶಿಲಾಯುಗ ಸಂಸ್ಕೃತಿಯ ಕಾಲದಿಂದಲೂ ಮಾನವ ಚಟುವಟಿಕೆಗಳಿಗೆ ನೆಲೆಯಾಗಿರುವುದು ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿ ನವಶಿಲಾಯುಗ, ತಾಮ್ರ-ಶಿಲಾಯುಗ

ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ನೆಲೆಗಳಿವೆ. ಕುಹೂಂಡಿ–3000ದ ಆಡಳಿತ ವಿಭಾಗಕ್ಕೆ ಒಳಪಟ್ಟ ಈ ಊರನ್ನು ಪ್ರಾಚೀನ ಶಾಸನಗಳಲ್ಲಿ ಕೊಂಡನೂರು ಎಂದು ಕರೆಯಲಾಗಿದೆ. ಕೊಣ್ಣೂರಿನ ಸಮೀಪ ನವಶಿಲಾಯುಗ ಸಂಸ್ಕೃತಿಗೆ ಸೇರಿದ ಕೆಲವು ಶಿಲಾ ಉಪಕರಣಗಳು ಲಭ್ಯವಾಗಿದೆ. ಅದೇ ರೀತಿ ತಾಮ್ರ–ಶಿಲಾಯುಗ ಸಂಸ್ಕೃತಿಗೆ ಸೇರಿದ ಬೂದಿದಿಬ್ಬ, ಕಂದು, ಕಪ್ಪು–ಕಂದು ಮತ್ತು ತಿಳಿಕೆಂಪು ವರ್ಣದ ಮಡಕೆ, ಕಾಗೆಬಂಗಾರ ಮಿಶ್ರಿತ ಹಾಗೂ ಗೀರು ಚಿತ್ರಗಳುಳ್ಳ ಮಡಕೆಯ ಭಾಗ ಚಕ್ಕೆ, ನೀಳಚಕ್ಕೆ, ಅರೆಯುವ ಕಲ್ಲು, ಮೂಳೆ ಇತ್ಯಾದಿ ಅವಶೇಷಗಳು ದೊರೆತಿವೆ.

ಬೃಹತ್ ಶಿಲಾ ಸಂಸ್ಕೃತಿಯ ಗೋರಿಗಳನ್ನು 1874 ರಲ್ಲಿ ಬರ್ಜೆಸ್ ಪತ್ತೆಹಚ್ಚಿದ. ಕೊಣ್ಣೂರಿನಿಂದ ದಕ್ಷಿಣಕ್ಕೆ ಸು. 1 ಕಿಮೀ ದೂರದಲ್ಲಿ ಸು.2 ಹೆ. ಪ್ರದೇಶದಲ್ಲಿ ನೂರಾರು ಬೃಹತ್ ಶಿಲಾಗೋರಿಗಳಿವೆ. ಈ ಪ್ರದೇಶವನ್ನು ಸ್ಥಳೀಕರು ತಪಸಿಮರಡಿ, ಮುನಿವಾಸದ ಗುಹೆಗಳು ಮತ್ತು ಪಾಂಡವರ ಮನೆಗಳು ಎಂದು ಕರೆಯುತ್ತಾರೆ. ಇಲ್ಲಿರುವ ಬೃಹತ್ ಶಿಲಾಗೋರಿಗಳನ್ನು ಹಾದಿಕೋಣೆ ಗೋರಿ, ಚೌಕಾಕಾರದ ಸಣ್ಣ ಹಾದಿಕೋಣೆ ಗೋರಿ, ಕಲ್ಗುಪ್ಪೆ ಮತ್ತು ಸಣ್ಣ ಸಣ್ಣ ಕಲ್ಲುಗಳ ವೃತ್ತಗಳಿರುವ ಗೋರಿ ಎಂದು ವಿಂಗಡಿಸಲಾಗಿದೆ. ಹೆಚ್ಚಿನ ಗೋರಿಗಳು ಹಾದಿಕೋಣೆ ಗೋರಿಗಳಾಗಿವೆ. ತಳವಿನ್ಯಾಸ, ದಿಕ್ಕು ಮತ್ತು ರಚನಾವಿಧಾನಗಳನ್ನು ಆಧರಿಸಿ ಎರಡು ರೀತಿಯ ಹಾದಿಕೋಣೆಗಳನ್ನು ರಚಿಸಲಾಗಿದೆ. ಈ ರೀತಿಯ ಹಾದಿಕೋಣೆ ಗೋರಿಗಳು ಈ ಪ್ರದೇಶವನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಕಂಡುಬರುವುದಿಲ್ಲ. ಇವುಗಳಲ್ಲಿ ಕಪ್ಪು–ಕೆಂಪು ದ್ವಿವರ್ಣ ಮಡಕೆಗಳು, ಕಬ್ಬಿಣ ಉಪಕರಣಗಳು, ಮಾನವನ ಅಸ್ಥಿಪಂಜರ ಲಭ್ಯವಾಗಿವೆ. ಸಾಮಾನ್ಯವಾಗಿ ಹಾದಿಕೋಣೆ ಗೋರಿಗಳನ್ನು ಆರು ದಪ್ಪ ಚಪ್ಪಡಿಗಳಿಂದ ನಿರ್ಮಿಸಲಾಗಿದ್ದು ಅವುಗಳಲ್ಲಿ ಐದು ಚಪ್ಪಡಿಗಳನ್ನು ಕೋಣೆಯಂತೆ ನಿಲ್ಲಿಸಲಾಗಿರುತ್ತದೆ. ಇನ್ನೊಂದನ್ನು ಮೇಲ್ಭಾಗದಲ್ಲಿ ಮುಚ್ಚಲಾಗಿರುತ್ತದೆ. ಹಾದಿಕೋಣೆ ಗೋರಿಗಳನ್ನು ಮತ್ತು ಸಣ್ಣ ಆಯತಾಕಾರದ ಕೋಣೆಗೋರಿಗಳನ್ನು ಕಟ್ಟಲು ಸ್ಥಳೀಯವಾಗಿ ದೊರೆಯುವ ಮರಳುಶಿಲೆಯ ಚಪ್ಪಡಿಗಳನ್ನು ಬಳಸಲಾಗಿದೆ. ಆಯತಾಕಾರದ ಗೋರಿಯನ್ನು ಮುಚ್ಚಲು ಸುತ್ತಲೂ ಆಯತಾಕಾರದ ಕಲ್ಲಿನ ಪಟ್ಟಿಕೆಗಳನ್ನು ಬಳಸಲಾಗಿದೆ. ಮರಳುಶಿಲೆ, ಕಪ್ಪುಶಿಲೆ, ಬಿಳಿಕ್ವಾರ್ಟ್ಸೈಟ್ ಮುಂತಾದ ಆರು ವಿಧದ ಕಲ್ಲುಗಳನ್ನು ಬೃಹತ್ ಶಿಲಾಗೋರಿಗಳನ್ನು ನಿರ್ಮಿಸಲು ಬಳಸಿರುವುದು ಕಂಡುಬರುತ್ತದೆ. ಬೃಹತ್ ಶಿಲಾಸಂಸ್ಕೃತಿಯ ಕಾಲ ಪ್ರ.ಶ.ಪೂ.ಸು.1200–800 ಎಂದು ಗುರುತಿಸಲಾಗಿದೆ.

ಇತಿಹಾಸ ಕಾಲದಲ್ಲಿ ಈ ಪ್ರದೇಶ ಬೇರೆ ಬೇರೆ ಅರಸು ಮನೆತನಗಳ ಹಿಡಿತದಲ್ಲಿತ್ತು. ಇಲ್ಲಿರುವ ಪಾರ್ಶ್ವನಾಥ ಬಸದಿ ಮತ್ತು ಚಿಕ್ಕಲೇಶ್ವರ ದೇವಾಲಯಗಳು ಈ ಅರಸು ಮನೆತನಗಳ ಪ್ರತೀಕಗಳಾಗಿ ಇಂದಿಗೂ ಉಳಿದುಬಂದಿವೆ.

ಪಾರ್ಶ್ವನಾಥ ಬಸದಿ: ಸು.10 ನೆಯ ಶತಮಾನದಲ್ಲಿ ನಿರ್ಮಾಣಗೊಂಡಿದೆ. ಮೂಲತಃ ಗರ್ಭಗೃಹ, ಅಂತರಾಳ, ಗೂಢಮಂಟಪಗಳನ್ನು ಒಳಗೊಂಡ ಈ ಬಸದಿಯ ಜೀರ್ಣೋದ್ಧಾರ ಸಂದರ್ಭದಲ್ಲಿ ಗರ್ಭಗೃಹದಲ್ಲಿರುವ ಮೂಲ ವಿಗ್ರಹವನ್ನು ಸ್ಥಳಾಂತರಿಸಿ ಗ್ರಾನೈಟ್ ಶಿಲೆಯಿಂದ ಹೊಸದಾಗಿ ನಿರ್ಮಿಸಿದ ಪಾರ್ಶ್ವನಾಥ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ದ್ವಾರ ತ್ರಿಶಾಖಾ ರೀತಿಯದಾಗಿದ್ದು ಅದರಲ್ಲಿ ಸ್ತಂಭಶಾಖೆ ಪ್ರಧಾನವಾಗಿದೆ. ಉತ್ತರಾಂಗದಲ್ಲಿ ದ್ರಾವಿಡ ಶಿಖರಗಳ ಪ್ರತಿಕೃತಿಗಳಿವೆ. ಸಭಾಮಂಟಪದ ಇಕ್ಕೆಲಗಳಲ್ಲಿರುವ ಸ್ತಂಭಗಳು ಭದ್ರಕ ಮಾದರಿಯಲ್ಲಿವೆ. ಈ ಬಸದಿಗೆ ಕಪೋತಬಂಧ ಅಧಿಷ್ಠಾನವಿದ್ದು ನಖರ ಪಟ್ಟಿಕೆಯಲ್ಲಿ ಕೀರ್ತಿಮುಖ, ಮಕರತೋರಣ, ಮನುಷ್ಯ ಇತ್ಯಾದಿ ಶಿಲ್ಪಗಳಿವೆ. ಹೊರಭಿತ್ತಿ ಭದ್ರ ಮತ್ತು ಸಲಿಲಾಂತರಗಳಿಂದ ಕೂಡಿದ್ದು ಭದ್ರಗಳ ಮಧ್ಯದಲ್ಲಿ ದ್ರಾವಿಡ ಕೂಟ ಮತ್ತು ಸ್ತಂಭಕೋಷ್ಠಗಳ ಅಲಂಕಾರವಿದೆ. ದ್ರಾವಿಡ ಕೂಟಗಳ ಮಧ್ಯದಲ್ಲಿ ಕಾಯೋತ್ಸರ್ಗಭಂಗಿಯಲ್ಲಿರುವ ತೀರ್ಥಂಕರ ಶಿಲ್ಪಗಳಿವೆ. ಕೋಷ್ಠಸ್ತಂಭಗಳ ಮೇಲೆ ಲತಿನಾ–ಕೂಟ ಮಾದರಿಯ ಅಲಂಕಾರವಿದೆ. ಈ ಲತಿನಾ–ಕೂಟದ ಮಧ್ಯದಲ್ಲಿ ಗವಾಕ್ಷದ ಅಲಂಕಾರವಿದೆ. ಈ ಬಸದಿಯ ಸಭಾಮಂಟಪದಲ್ಲಿರುವ ಒಂದೇ ಶಿಲಾಫಲಕದ ಮೇಲೆ ಎರಡು ಶಾಸನಗಳನ್ನು ಬರೆಯಲಾಗಿದೆ. ಇವುಗಳಲ್ಲಿ 1087 ರ ಶಾಸನ ಕೊಂಡನೂರಿನಲ್ಲಿ (ಇಂದಿನ ಕೊಣ್ಣೂರು) ಮಹಾಪ್ರಭು ನಿಧಿಯಮ ಗಾವುಂಡನಿಂದ ನಿರ್ಮಿಸಲ್ಪಟ್ಟ ಜೈನಬಸದಿಗೆ ಕುಂದಿಯ ಕೋಲಿನ ಅಳತೆ ಪ್ರಕಾರ ಎರಡು ಮತ್ತರು ಭೂಮಿಯನ್ನು, ಒಂದು ಎಣ್ಣೆಯ ಗಾಣ ಮತ್ತು ಹೂದೋಟವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ದಾನ ನೀಡಿದ ವ್ಯಕ್ತಿ ಮೂಲಸಂಘ ಬಲತ್ಕಾರಗಣಕ್ಕೆ ಸೇರಿದವನೆಂದು ಉಲ್ಲೇಖಿಸಲಾಗಿದೆ. ಇದೇ ಶಿಲಾಫಲಕದ ಮೇಲಿರುವ ಇನ್ನೊಂದು ಶಾಸನ ವಿಕ್ರಮಚಕ್ರಿಯ ಮಗನಾದ ಜಯಕರ್ಣ ಜೈನ ದೇವಾಲಯದ ಪೂಜೆಗಾಗಿ ವಾಸುಪೂಜ್ಯ ಮುನಿಗಳಿಗೆ ದಾನ ನೀಡಿದ್ದನ್ನು ಉಲ್ಲೇಖಿಸಿದೆ. ಈ ಬಸದಿಯ ಅಂತರಾಳದಲ್ಲಿ ಪಾರ್ಶ್ವನಾಥ ತೀರ್ಥಂಕರ ಶಿಲ್ಪದ ಪ್ರಭಾವಳಿ ಮತ್ತು ಪೀಠದ ಮೇಲೆ ಶಾಸನವನ್ನು ಬರೆಯಲಾಗಿದ್ದು, ಈ ಶಾಸನದ ಪ್ರಕಾರ ಈ ವಿಗ್ರಹವನ್ನು ಶ್ರೀಕುಮಾರಸೇನ ದೇವರ ಶಿಷ್ಯರಾದ ಮೂಲಸಂಘದ ನಾಗಸೇನ ದೇವರು ಮಾಡಿಸಿದ.

ಚಿಕ್ಕಲೇಶ್ವರ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ಗೂಢಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳದ ಬಲಬದಿಯಲ್ಲಿ ಸುಖಾಸೀನ ಭಂಗಿಯಲ್ಲಿರುವ ಗಣೇಶನ ಶಿಲ್ಪವಿದೆ. ಗರ್ಭಗೃಹದ ದ್ವಾರ ಪಂಚಶಾಖಾ ರೀತಿಯದಾಗಿದ್ದು ಸರಳವಾಗಿದೆ. ಲಲಾಟ ಪಟ್ಟಿಯಲ್ಲಿ ಗಣೇಶ ಶಿಲ್ಪವಿದೆ. ಉತ್ತರಾಂಗದಲ್ಲಿ ಎರಡು ರೇಖಾನಾಗರ, ಮೂರು ದ್ರಾವಿಡ ಮಾದರಿಯ ಶಿಖರಗಳ ಪ್ರತಿಕೃತಿಗಳಿವೆ. ಅಂತರಾಳದ ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಗೂಢಮಂಟಪದಲ್ಲಿರುವ ಅರ್ಧಗಂಬಗಳು ಭದ್ರಕ ರೀತಿಯಲ್ಲಿವೆ. ಅಧಿಷ್ಠಾನದ ಕಪೋತ ಪಟ್ಟಿಯಲ್ಲಿ ನಾಶಿಯ ಅಲಂಕಾರವಿದೆ. ಭಿತ್ತಿಯ ಹೊರತಲ ವಿನ್ಯಾಸ ತ್ರಿರಥ ರೀತಿಯದಾಗಿದ್ದು ಸರಳವಾಗಿದೆ. ಮೇಲ್ಭಾಗದಲ್ಲಿ ಫಾಂಸನಾ ರೀತಿಯ 12 ಸ್ತರಗಳಿರುವ ಶಿಖರವಿದೆ. ಮುಖಪಟ್ಟಿಯಲ್ಲಿ ಪದ್ಮಾಸನದಲ್ಲಿ ಕುಳಿತ ಶಿವನ ಶಿಲ್ಪವಿದೆ. ಈ ದೇವಾಲಯದಲ್ಲಿರುವ 1032 ರ ಶಾಸನ ಕೊಂಡನೂರಿನ ಕಯಮೇಶ್ವರ ದೇವಾಲಯಕ್ಕೆ ಕಲಿಯಗಾವುಂಡ ಎಂಬುವನಿಂದ ಭೂಮಿ, ಮನೆ–ನಿವೇಶನ, ಎಣ್ಣೆಯ ಗಾಣ ಮತ್ತು ಆರು ಗದ್ಯಾಣ ನಾಣ್ಯವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. (ಸಿ.ಬಿ.ಟಿ.)

**ಕೋಣಾರ್ಕ್:** ಒರಿಸ್ಸ ರಾಜ್ಯದ ಪುರಿ ಜಿಲ್ಲೆಯ ನಿಮಾಪಾಡ ತಾಲ್ಲೂಕಿನಲ್ಲಿರುವ ಪ್ರಪಂಚ ಪ್ರಸಿದ್ಧ ಸೂರ್ಯದೇವಾಲಯವಿರುವ ಸ್ಥಳ. ಪುರಿಯಿಂದ ಸು. 35 ಕಿಮೀ, ಭುವನೇಶ್ವರದಿಂದ 66 ಕಿಮೀ ದೂರದಲ್ಲಿದೆ. ಬೃಹದಾಕಾರದ ವಾಸ್ತು ವಿನ್ಯಾಸದ ಜೊತೆಗೆ ಅದರ ಅನುಪಾತ ಮತ್ತು ಅನುರೂಪಕ್ಕೆ ತಕ್ಕಂತಿರುವ ಮನಮೋಹಕ ಹಾಗೂ ವೈವಿಧ್ಯಮಯ ಶಿಲ್ಪಕಲೆ ಹಾಗೂ ಅಲಂಕಾರ ಶ್ರೀಮಂತಿಕೆಯಿಂದ ಕೂಡಿದೆ. ಐರೋಪ್ಯ ನಾವಿಕರಿಂದ ಕಪ್ಪು ಪಗೋಡ ಎಂದು ಕರೆಯಲ್ಪಟ್ಟಿತು. ಭವಿಷ್ಯ ಹಾಗೂ ಸಾಂಬಪುರಾಣಗಳಲ್ಲಿ ಹೇಳಿದ ಕೃಷ್ಣ ಮತ್ತು ಜಾಂಬವತಿಯರ ಪುತ್ರ ಸಾಂಬ ತಂದೆಯಿಂದಲೇ ಶಾಪಗ್ರಸ್ತನಾಗಿ ಅನಂತರ ಕುಷ್ಠರೋಗ ವಿಮೋಚನೆಗಾಗಿ ಮಿತ್ರವನ ಸ್ಥಾನದಲ್ಲಿದ್ದ ಸೂರ್ಯ ದೇವಾಲಯದಲ್ಲಿ ಮಾಡಿದ

ಸೂರ್ಯ ದೇವಾಲಯ

ತಪಸ್ಸಿನ ಪ್ರಸಿದ್ಧ ಕಥೆಯನ್ನು ಒರಿಸ್ಸದ ಸ್ಥಳೀಯ ಗ್ರಂಥಗಳಾದ ಕಪಿಲ ಸಂಹಿತ, ಮಾದಲಾಪಾಂಜಿ ಹಾಗೂ ಪ್ರಾಚೀನ ಮಾಹಾತ್ಮ್ಯಗಳು ಕೋಣಾರ್ಕ್‌ನ ಸೂರ್ಯದೇವಾಲಯ ದೊಂದಿಗೆ ಅಳವಡಿಸಿಕೊಂಡು ಇದರ ಧಾರ್ಮಿಕ ಹಾಗೂ ಸ್ಥಳೀಯ ಮಹತ್ತ್ವವನ್ನು ಹೆಚ್ಚಿಸುವ ಪ್ರಯತ್ನ ಮಾಡಿವೆ.

ಮಾದಲಾಪಾಂಜಿ ಹಸ್ತಲಿಪಿ ಗ್ರಂಥದ (ಅಪ್ರಕಟಿತ) ಪ್ರಕಾರ ಕೇಸರಿ ವಂಶದ ಪುರಂದರ ಕೇಸರಿ ಅರ್ಕಕ್ಷೇತ್ರದಲ್ಲಿ (ಕೋನಾರಕ) ಕೋಣಾರ್ಕ (ಸೂರ್ಯ) ದೇವನಿಗಾಗಿ ಒಂದು ಗುಡಿಯನ್ನು ಕಟ್ಟಿಸಿದ. ಕೇಸರಿ ವಂಶವನ್ನು ಕಬಳಿಸಿ ಅಧಿಕಾರಕ್ಕೆ ಬಂದ ಗಂಗ ಮನೆತನದ ಅನಂಗಭೀಮನೂ ಕೋಣಾರ್ಕ ದೇವನಿಗೆ ಸೇವಾ–ದತ್ತಿಯನ್ನು ನೀಡಿದ. ಅನಂಗ ಭೀಮ ಪುರಿಯಲ್ಲಿಯ ಪುರುಷೋತ್ತಮ ದೇವ (ಜಗನ್ನಾಥ) ದೇವಾಲಯದ ವಿಸ್ತರಣೆಗಾಗಿ ಶ್ರಮಿಸಿದ. ಆದರೆ ಕಾರ್ಯ ಪೂರ್ತಿಯಾಗದೆ ನಿಧನ ಹೊಂದಿದ. ಇವನ ಮಗನಾದ ನರಸಿಂಹದೇವ (ಸು. 1238–84) ತನ್ನ ಅಧಿಕಾರಿಯಾದ ಶಿವಸಾಮಂತರಾಯ ಮಹಾಪಾತ್ರನ ಮುಖಾಂತರ ಕೋಣಾರ್ಕದಲ್ಲಿ ಹೊಸ ದೇವಾಲಯ ನಿರ್ಮಾಣ ಮಾಡಿಸಿ, ಅದರಲ್ಲಿ ಕೇಸರಿ ವಂಶ ಕಾಲದ ದೇವಾಲಯದಲ್ಲಿಯ ಸೂರ್ಯನ ಮೂಲ ವಿಗ್ರಹವನ್ನು ಪುನರ್ ಪ್ರತಿಷ್ಠಾಪಿಸಿ ಅನೇಕ ದತ್ತಿಗಳನ್ನು ಕೊಟ್ಟ. ವಿಷ್ಣುಮಹಾರಾಣ ಎಂಬ ಶಿಲ್ಪಿ ಈ ದೇವಾಲಯದ ಸ್ವರೂಪವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಕಟ್ಟಿದನೆಂದು ದಂತಕಥೆಯುಂಟು. ಈ ದೇವಾಲಯ ಕಳಿಂಗ ರೇಖಾನಾಗರ ಪ್ರಾಸಾದಶೈಲಿಯಲ್ಲಿದೆ. 24 ಚಕ್ರಗಳಿಂದ ಕೂಡಿದ ಭವ್ಯರಥವನ್ನು 7 ಬಲಶಾಲಿ ಕುದುರೆಗಳು ಎಳೆಯುತ್ತಿರುವ ಹಾಗೆ ಪೂರ್ವಾಭಿಮುಖವಾಗಿ ಈ ದೇವಾಲಯವನ್ನು ರಚಿಸಲಾಗಿದೆ. ಸೇವಕರು ಮತ್ತು ಉಷಾಪ್ರತ್ಯೂಷರೊಡನೆ ಮಂದಹಾಸದಿಂದ ಕಂಗೊಳಿಸುವ ಸಮಭಂಗದಲ್ಲಿರುವ ದಿವ್ಯ ಸೂರ್ಯನ ಮೂರ್ತಿ ಇದರಲ್ಲಿ ಪ್ರತಿಷ್ಠಿತವಾಗಿದೆ. ತರುವಾಯ ಗಂಗ ಮುಕುಂದರಾಜನ (1559–68) ಮರಣಾ ನಂತರ ಮುಸಲ್ಮಾನರು ಈ ದೇವಾಲಯವನ್ನು ನಾಶಗೊಳಿಸಲು ಪ್ರಯತ್ನಿಸಿ ಅಸಫಲರಾದಾಗ ಕೇವಲ ದೇವಾಲಯದ ತಾಮ್ರದ ಕಲಶ ಮತ್ತು ಪದ್ಮಧ್ವಜವನ್ನು ದೋಚಿಕೊಂಡು ಹೋದರೆಂದು ಮಾದಲಾಪಾಂಜಿ

ಕೃತಿಯಿಂದ ತಿಳಿದುಬರುತ್ತದೆ. ಈ ವಿವರಣೆಯಲ್ಲಿರುವ ಕೆಲ ಸತ್ಯಾಂಶಗಳು ಗಂಗರ ಒಂದನೆಯ ನರಸಿಂಹದೇವನ (ಸು.1238–64) ಅನಂತರ ಆಗಿಹೋದ ವಂಶಸ್ಥರಾಜರ ತಾಮ್ರಪಟ ಶಾಸನಗಳಲ್ಲಿವೆ.

ಈ ದೇವಾಲಯದ ಮಹಾತ್ಮೆಯಿಂದಾಗಿ ವೈಷ್ಣವ ಸಂತ ಚೈತನ್ಯ ಮಹಾಪ್ರಭು (1486–1533) ಇಲ್ಲಿಗೆ ಆಗಮಿಸಿದ್ದನೆಂದು ಪ್ರತೀತಿ. ಅಬುಲ್‍ಫಜಲ್‍ನ (1556–1605) ಐನ್–ಈ–ಅಕ್ಬರಿಯಲ್ಲಿಯೂ ಈ ದೇವಾಲಯ ಕುರಿತಾಗಿ ವಿಶೇಷ ಉಲ್ಲೇಖವಿದೆ.

ಸೂರ್ಯದೇವಾಲಯದ ಭಗ್ನಾವಸ್ಥೆಗೆ ವಿದ್ವಾಂಸರು ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ– ದೇವಾಲಯದ ಅಡಿಪಾಯ ಕುಸಿತ, ಭೂಕಂಪ, ಸಿಡಿಲು ಬಡಿತ. ಜೊತೆಗೆ ದೇವಾಲಯವನ್ನು ಸಂಪೂರ್ಣವಾಗಿ ಕಟ್ಟಲಾಗಿತ್ತೆ ಎಂಬ ಅನುಮಾನವನ್ನೂ ವ್ಯಕ್ತಪಡಿಸಿದ್ದಾರೆ. ಬಹುಶಃ ಮುಸಲ್ಮಾನರ ಧಾಳಿಯಿಂದ ಅಪವಿತ್ರವಾದ ಮಂದಿರದಿಂದ ಮೂಲವಿಗ್ರಹವನ್ನು ಪುರಿಗೆ ಸ್ಥಳಾಂತರಿಸಲಾಯಿತೆಂದು ತೋರುತ್ತದೆ. ಆಶ್ರಯದಾತರಿಲ್ಲದೆ ಕಾಲಕ್ರಮೇಣ ದೇವಾಲಯದ ಕಟ್ಟಡ ಶಿಥಿಲಗೊಂಡು ನಾಶವಾಗಿರಬಹುದು. 18ನೆಯ ಶತಮಾನದಲ್ಲಿ ಸೂರ್ಯ ದೇವಾಲಯದ ಮುಂಭಾಗದಲ್ಲಿ ಸ್ಥಾಪಿಸಿದ್ದ ಧ್ವಜಸ್ತಂಭ ಅಥವಾ ಅರುಣಸ್ತಂಭವನ್ನು



ಸೂರ್ಯ ದೇವಾಲಯದ ಊರ್ಧ್ವ ವಿನ್ಯಾಸ

ಕಿತ್ತೊಯ್ದು ಪುರಿಯ ಜಗನ್ನಾಥ ಮಂದಿರದ ಪೂರ್ವದ್ವಾರದ ಮುಂಭಾಗದಲ್ಲಿ ಪುನರ್ ಪ್ರತಿಷ್ಠಾಪಿಸಲಾಗಿದೆ. ಎ.ಸ್ಟರ್ಲಿಂಗ್ ಎಂಬಾತ 1825ಕ್ಕೂ ಪೂರ್ವದಲ್ಲಿ ಈ ದೇವಾಲಯವನ್ನು ಸಂದರ್ಶಿಸಿದಾಗ ಸು. 36 ಮೀ ಎತ್ತರವುಳ್ಳ ಭಗ್ನಗೊಂಡು ನಿಂತಿದ್ದ ದೇವಾಲಯದ ವಿವರಣೆ ನೀಡಿದ್ದಾನೆ. 1837ರಲ್ಲಿ ಜೇಮ್ಸ್ ಫರ್ಗ್ಯುಸನ್‍ನ ವಿವರಣೆಯಂತೆ ಗರ್ಭಗುಡಿಯ ಸು.42–45 ಮೀ ಎತ್ತರದ ಭಾಗ ಉಳಿದಿತ್ತು. ಆದರೆ ಕಿಟ್ಟೋ ಸಂದರ್ಶಿಸಿದಾಗ ದೇವಾಲಯದ ಎತ್ತರ ಕೇವಲ 24–30 ಮೀ ಗಳಷ್ಟಿತ್ತು. 1868ರಲ್ಲಿ ರಾಜೇಂದ್ರಲಾಲ್ ಭೇಟಿನೀಡಿದಾಗ ಗರ್ಭಗೃಹವೆಲ್ಲ ಕುಸಿದುಬಿದ್ದು ಅಲ್ಲಿ ಇಲ್ಲಿ ಅಶ್ವತ್ಥ ವೃಕ್ಷಗಳು ಬೆಳೆದುನಿಂತಿದ್ದವು. ದೇವಾಲಯದ ಉನ್ನತ ಪಿಷ್ಟ ಅಥವಾ ಜಗತಿಯ ಬಹುಭಾಗ ಮರಳಿನಲ್ಲಿ ಮುಚ್ಚಿಹೋಗಿತ್ತು. 1815ರಲ್ಲಿ ಮೆಕೆಂಜಿ ತಯಾರಿಸಿದ ರೇಖಾಚಿತ್ರಗಳಲ್ಲಿ ದೇವಾಲಯದ ಪೂರ್ವದಿಶೆಯಲ್ಲಿ ಕಂಡುಬರುತ್ತಿದ್ದ ಆಂಶಿಕ ಸೋಪಾನ, ಎರಡು ಗಾಲಿಗಳು ಮತ್ತು ಎರಡು ಕುದುರೆಗಳುಳ್ಳ ಪಿಷ್ಟವನ್ನು ಮಾತ್ರ ತೋರಿಸಲಾಗಿದೆ. ಕೇವಲ ನೈಸರ್ಗಿಕ ಕಾರಣದಿಂದಾಗಿ ಈ ದೇವಾಲಯ ಭಗ್ನವಾಗಲಿಲ್ಲ, ಖುರ್ದಾ ಎಂಬ ರಾಜ ತಾನು ನಿರ್ಮಿಸುತ್ತಿದ್ದ ನವ ದೇವಾಲಯಕ್ಕಾಗಿ ಇಲ್ಲಿಂದ ಒಳ್ಳೊಳ್ಳೆಯ ಶಿಲ್ಪವುಳ್ಳ ಬಂಡೆಗಳನ್ನು ಕಿತ್ತು ತೆಗೆದು ಅದರ ದುರ್ಗತಿಗೆ ಕಾರಣನಾದನೆಂದು ಫರ್ಗ್ಯುಸನ್ ಮತ್ತು ಕಿಟ್ಟೋ ಅಭಿಪ್ರಾಯಪಟ್ಟಿದ್ದಾರೆ.

19ನೆಯ ಶತಮಾನದ ಪ್ರಾರಂಭದಲ್ಲಿ ಸೂರ್ಯದೇವಾಲಯದ ಸಂರಕ್ಷಣೆಗಾಗಿ ಅಂದಿನ ಬ್ರಿಟಿಷ್ ಸರ್ಕಾರಕ್ಕೆ ಮಾಡಿದ ಮನವಿಗಳು ಫಲಿಸಲಿಲ್ಲ. ಮುಂದೆ 1881ರಲ್ಲಿ ಬಂಗಾಲದ ಉಪ–ರಾಜ್ಯಪಾಲ ಆ್ಯಷ್ಲೇ ಈಡನ್‍ರ ಪ್ರಥಮ ಭೇಟಿ ಈ ದೇವಾಲಯದ ಪುನರುಜ್ಜೀವನದ ಮಾರ್ಗಕ್ಕೆ ನಾಂದಿಯಾಯಿತು. ಆದರೂ ಅಪೇಕ್ಷಿತ ಗತಿಯಲ್ಲಿ ಈ ಕಾರ್ಯ ನಡೆಯಲಿಲ್ಲ. ಕೊನೆಗೆ ಸರ್ ಜಾನ್‍ವುಡ್ ಬರ್ನ್ 1900ರಲ್ಲಿ ಇಲ್ಲಿಗೆ ಭೇಟಿ ನೀಡಿ, ದೇವಾಲಯದ ಜೀರ್ಣೋದ್ಧಾರ ಮತ್ತು ಸಂರಕ್ಷಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಆದೇಶ ನೀಡಿದ. 1901ರಿಂದ ನಡೆಸಿದ ಸುತ್ತು ಪರಿಸರದ ಉತ್ಖನನ ಹಾಗೂ ಕಟ್ಟಡದ ಪುನರುದ್ಧಾರ ಕಾರ್ಯಗಳ ಫಲವಾಗಿ ಈಗಿರುವ ಸೂರ್ಯ ದೇವಾಲಯ ಸಂಕೀರ್ಣ, ಅದರ ತಳವಿನ್ಯಾಸ ಹಾಗೂ ಅದನ್ನಾವರಿಸಿ ನಿಂತ ಪ್ರಾಕಾರ ಇತ್ಯಾದಿಯನ್ನು ಕಾಣುವುದಕ್ಕೆ ಸಾಧ್ಯವಾಗಿದೆ.

ಸೂರ್ಯದೇವಾಲಯ ಒಂದು ವಿಶಾಲ ಹಾಗೂ ಉನ್ನತ ಪಿಷ್ಟ ಅರ್ಥಾತ್ ಜಗತಿಯ ಮೇಲೆ ಗರ್ಭಗೃಹ ಹಾಗೂ ಜಗಮೋಹನವನ್ನೊಳಗೊಂಡು ನಿಂತಿದೆ. ಪಿಷ್ಟದ ಮುಂಭಾಗ ದಿಂದ ಅನತಿ ದೂರದಲ್ಲಿ ಭೋಗಮಂಟಪವಿದೆ. ದೇವಾಲಯದ ನೈರುತ್ಯ ದಿಕ್ಕಿನಲ್ಲಿ ಎರಡು ಚಿಕ್ಕ ಭಗ್ನ ದೇವಾಲಯಗಳಿವೆ. ಇವೆರಡರಲ್ಲಿ ಕಲ್ಲಿನಿಂದ ಕಟ್ಟಿದ ಬಹುಶಃ ಸೂರ್ಯ ದೇವಾಲಯವನ್ನು ಈಗ ಮಾಯಾದೇವಿ ಗುಡಿ ಎಂದೂ ಇಟ್ಟಿಗೆಯಿಂದ ಕಟ್ಟಲಾಗಿದ್ದ ಎರಡನೆಯ ದೇವಾಲಯವನ್ನು ವೈಷ್ಣವ ಗುಡಿ ಎಂದೂ ಕರೆಯುತ್ತಾರೆ. ಪಾಕಶಾಲೆ, ಬಾವಿ, ಇನ್ನಿತರ ಕಟ್ಟಡಗಳನ್ನು ಒಳಗೊಂಡ ಸೂರ್ಯದೇವಾಲಯ ಸಂಕೀರ್ಣವನ್ನು ಆವರಿಸಿ ಪೌಳಿಯನ್ನು ಕಟ್ಟಲಾಗಿದೆ. ಪೂರ್ವ ಹಾಗೂ ದಕ್ಷಿಣ ದಿಶೆಯಿಂದ ಪೌಳಿಯನ್ನು ಪ್ರವೇಶಿಸಲು ದ್ವಾರಗಳಿವೆ.

ಈ ದೇವಾಲಯದ ಕಟ್ಟಡಕ್ಕಾಗಿ ಮೂರು ವಿಧದ ಕಲ್ಲುಗಳನ್ನು ಬಳಸಲಾಗಿದೆ. ಕ್ಲೋರೈಟನ್ನು ಪ್ರವೇಶದ್ವಾರ ಶಾಖೆಗಳಿಗೆ ಮತ್ತು ಮೂರ್ತಿಗಳಿಗಾಗಿ ಉಪಯೋಗಿಸಿದರೆ ಜಂಬಿಟ್ಟಿಗೆ ಕಲ್ಲನ್ನು ಅಡಿಪಾಯ ಹಾಗೂ ಪಿಷ್ಟ ಕಾಣದ ಒಳಭಾಗಕ್ಕಾಗಿ ಉಪಯೋಗಿಸಲಾಗಿದೆ. ಆದರೆ ದೇವಾಲಯವನ್ನು ಸ್ಥಳೀಯ ಕೊಂಡಲೈಟ್ (ಒಂದು ಪ್ರಕಾರದ ಮರಳುಕಲ್ಲು) ಕಲ್ಲಿನಿಂದ ಕಟ್ಟಲಾಗಿದೆ. ವಾಂಛಿತ ಆಕಾರದಲ್ಲಿ ತಯಾರಿಸಿದ ಶಿಲೆಗಳನ್ನು ಗಾರೆಯನ್ನು ಪಯೋಗಿಸದೆ ಒಂದರಮೇಲೊಂದು ಏರಿಸಿ ಕಬ್ಬಿಣದ ಹಿಡಿಕೆಗಳಿಂದ ಜೋಡಿಸಲಾಗಿದೆ. ಅಪೂರ್ಣವಾಗಿ ಕೆತ್ತಿದ ಶಿಲೆಗಳಿಂದ ತಿಳಿದುಬಂದ ಅಂಶವೆಂದರೆ ಗೋಡೆ ಹಾಗೂ ಇನ್ನುಳಿದ ಭಾಗಗಳನ್ನು ಕಲ್ಲಿನಿಂದ ಪೂರ್ಣವಾಗಿ ಕಟ್ಟಿದ ಬಳಿಕ ಅವುಗಳ ಮೇಲೆ ಶಿಲ್ಪ ಹಾಗೂ ಅಲಂಕಾರ ಚಿತ್ರಗಳನ್ನು ಶಿಲ್ಪಿಗಳು ಕೆತ್ತುತ್ತಿದ್ದರೆಂದು ಕಾಣುತ್ತದೆ.

ಸೂರ್ಯ ದೇವಾಲಯದ ನಿಮ್ನ ಸ್ತರವಾದ ಉಪಾನ ಆನೆಗಳ ಸಾಲು, ದಂಡುಗಳ ಕವಾಯಿತು, ವನ್ಯಮೃಗಗಳ ಬೇಟೆ ಸನ್ನಿವೇಶ, ಸಾರ್ಥವಾಹಕರ ಮತ್ತು ಪ್ರವಾಸಿಗರ ಚಿತ್ರಗಳು, ಆಟ–ಪಾಟಗಳ ಚಿತ್ರಗಳಲ್ಲದೆ ಜಿರಾಫೆಯ ಚಿತ್ರಗಳಿಂದ ಅಲಂಕೃತಗೊಂಡಿದೆ. ಉಪಾನದ ಮೇಲೆ 4 ಮೀ ಎತ್ತರದ ಪಿಷ್ಟದ (ಜಗತಿ) ಪಾಭಾಗವು (ಅಧಿಷ್ಠಾನ) ಖುರಾ, ಕುಂಭ, ಪಟಾ, ಕಣಿ ಮತ್ತು ಬಸಂತ ಎಂಬ ಭಾಗಗಳಿಂದ ಕೂಡಿದೆ. ಈ ವಿಶಾಲವಾದ ಪಿಷ್ಟ ಸೂರ್ಯನ ರಥವನ್ನು ಹೋಲುವಂತೆ ರಚಿಸಲಾಗಿದೆ. ಪಿಷ್ಟದ ಉತ್ತರ ಹಾಗೂ ದಕ್ಷಿಣ ಗೋಡೆಗಳಲ್ಲಿ ಅತ್ಯಂತ ಅಲಂಕೃತವಾದ ಒಟ್ಟು ಹನ್ನೆರಡು ಚಕ್ರಗಳನ್ನು ಕೆತ್ತಲಾಗಿದೆ. ಪೂರ್ವದಿಕ್ಕಿನಲ್ಲಿ, ರಥವನ್ನೊಯ್ಯುವ ನಾಗಾಲೋಟ ಭಂಗಿಯಲ್ಲಿ ನಿಂತ ಸೂರ್ಯನ ಸುಸಜ್ಜಿತ ಸಪ್ತಾಶ್ವಗಳ ಭಗ್ನಗಳನ್ನು ಕಾಣಬಹುದು. ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಕಲ್ಪಿಸಿದ ವಿಶಾಲ ಸೋಪಾನಗಳಿಂದ ಪಿಷ್ಟದ ಮೇಲ್ಭಾಗವನ್ನು ಸೇರಬಹುದು.

ಪಂಚರಥ ತಳವಿನ್ಯಾಸ ಹೊಂದಿದ ಜಗಮೋಹನ ಒರಿಸ್ಸದ ಪ್ರಬುದ್ಧ ದೇವಾಲಯದ ಎಲ್ಲ ಲಕ್ಷಣಗಳನ್ನೊಳಗೊಂಡ ಒಂದು ಉತ್ತಮ ಮಾದರಿ. ಉಪಾನದಿಂದ ಖಪೂರಿಯ ವರೆಗಿನ ಒಟ್ಟು ಎತ್ತರ ಸು. 39 ಮೀ. ಜಗಮೋಹನವನ್ನು ಪಾಭಾಗ, ತಳಜಂಘ, ಬಾಂಧನಾ, ಉಪರಜಂಘ ಹಾಗೂ ಬರಾಂಡಗಳೆಂದು ಐದು ಸಮತಲ ಭಾಗಗಳಲ್ಲಿ ವಿಭಜಿಸಲಾಗಿದೆ. ಪೂರ್ವ, ಉತ್ತರ ಮತ್ತು ದಕ್ಷಿಣ ದಿಶೆಯಲ್ಲಿ ಪ್ರವೇಶದ್ವಾರಗಳಿವೆ. ಪಶ್ಚಿಮದ ಗೋಡೆಯಲ್ಲಿರುವ ದ್ವಾರ ಗರ್ಭಗೃಹವನ್ನು ಜೋಡಿಸುತ್ತದೆ. ಅಲಂಕೃತ ದ್ವಾರ ಶಾಖೆಗಳನ್ನು ಕ್ಲೋರೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಜಗಮೋಹನದ ಮೇಲಿರುವ ಗಂಡಿ ಎತ್ತರಕ್ಕೆ ಸರಿದಂತೆ, ಸಮತಲ ಆಕಾರದಲ್ಲಿ ಚಿಕ್ಕದಾಗುವ ಪೀಢಾಸಮೂಹಗಳ ಅಂತಸ್ತಿನಿಂದಾಗಿ ದೂರದಿಂದ ಪಿರಮಿಡ್‍ನಂತೆ ಕಾಣುತ್ತದೆ. ಪೀಢಾ ಸಮೂಹಗಳ ಮೂರು ಪ್ರತ್ಯೇಕ ಗುಂಪಿನ ಅಂತಸ್ತುಗಳ ನಡುವೆ ಕಾಂತಿ (ಕುತ್ತಿಗೆ) ಇದೆ. ಇಂತಹ ಪ್ರತ್ಯೇಕ ಪೀಢಾಸಮೂಹಕ್ಕೆ ಪೋಟಲ ಎಂದು ಕರೆಯಲಾಗು ತ್ತದೆ. ಪೋಟಲಗಳ (ಪೀಢಾ ಸಮೂಹದ ಅಂತಸ್ತು) ನಡುವಿನ ರಿಕ್ತ ಭಾಗಗಳಲ್ಲಿ ಗೋಡೆಗಂಬ, ಖಾಖರಮುಂಡಿ, ಸುರಸುಂದರಿಯರ, ನಾಗ–ನಾಗಿನಿಯರ, ದೇವತೆಗಳ ಶಿಲ್ಪಗಳನ್ನು ಕಾಣಬಹುದು. ಗಂಡಿಯ ಮೇಲ್ಭಾಗದಲ್ಲಿರುವ ಮಸ್ತಕದಲ್ಲಿ ಬೆಕಿ (ಕುತ್ತಿಗೆ), ಶ್ರೀ ಅಥವಾ ಘಂಟಾ (ತಲೆಕೆಳಗೆ ಮಾಡಿಟ್ಟ ಗಂಟೆಯಾಕಾರದ ಭಾಗ), ಆಮ್ಲ–ಬೆಕಿ, ಆಮ್ಲ ಅಥವಾ ಆಮಲಕ, ಖಪೂರಿ (ಸಮತಟ ಗಂಟೆಯಾಕಾರದ ಭಾಗ) ಗಳನ್ನು ನೋಡಬಹುದು. ಆದರೆ ಕಲಶ ಮತ್ತು ಆಯುಧಗಳು ಈಗಿಲ್ಲ.

ಸಂರಕ್ಷಣೆ: ವರ್ತಮಾನ ಪರಿಸ್ಥಿತಿಯಲ್ಲಿ ಜಗಮೋಹನದೊಳಗೆ ಪ್ರವೇಶಿಸಲು ಸಾಧ್ಯವಿಲ್ಲ. ಸೂರ್ಯದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಕೈಗೆತ್ತಿಕೊಂಡಾಗ ಗರ್ಭಗೃಹ ಸಂಪೂರ್ಣ ಕುಸಿದುಹೋಗಿತ್ತು. ಜಗಮೋಹನವೂ ಕ್ರಮೇಣವಾಗಿ ಕುಸಿಯುತ್ತಿದ್ದು, ಪ್ರವೇಶ ದ್ವಾರಗಳು ಹಾಗೂ ಹೊರಮೈ ಗೋಡೆಯ ಕಲ್ಲುಗಳು ಬಿದ್ದುಹೋಗಿ, ಮೇಲಿದ್ದ ಉನ್ನತ ಪೀಢಾ ಛಾವಣಿಯ ಅಸ್ತಿತ್ವವೇ ಗಂಡಾಂತರದಲ್ಲಿತ್ತು. ಈ ಅದ್ಭುತ ದೇವಾಲಯದ

ಉಳಿದ ಮೂಲರೂಪವನ್ನು ಆಂಶಿಕವಾಗಿಯಾದರೂ ಭವಿಷ್ಯತ್ತಿನ ಪೀಳಿಗೆಗಾಗಿ ಉಳಿಸಿಕೊಳ್ಳುವ ಉದ್ದೇಶದಿಂದಾಗಿ, ಜಗಮೋಹನದ ಒಳಮೈಗೆ ಅನುರೂಪವಾಗಿ ನಾಲ್ಕು ದಿಶೆಯಲ್ಲಿ ಹೊಸ ಗೋಡೆಗಳನ್ನು ಕಟ್ಟಿ ಉಸುಕಿನಿಂದ ತುಂಬಿ, ಮೂರೂ ಮುಖ್ಯ ಪ್ರವೇಶದ್ವಾರಗಳಲ್ಲದೆ, ಗರ್ಭಗೃಹವನ್ನು ಜೋಡಿಸುವ ನಾಲ್ಕನೆಯ ದ್ವಾರವನ್ನೂ ಸ್ಥಾಯಿರೂಪವಾಗಿ ಮುಚ್ಚಲಾಗಿದೆ.

ಜಗಮೋಹನದ ಹಿಂಭಾಗದಲ್ಲಿರುವ ಗರ್ಭಗೃಹ ರೇಖಾದೇಗುಲವಾಗಿದ್ದು, ಅದರ ಮೇಲ್ಭಾಗದಲ್ಲಿದ್ದ ಕಳಿಂಗ ವಾಸ್ತುವಿನ ಉನ್ನತ ಲಂಬವಕ್ರರೇಖೆಯ ಶಿಖರ ಸಂಪೂರ್ಣವಾಗಿ ನಾಶವಾಗಿದೆ. ಗರ್ಭಗೃಹ ಚಾವಣಿಯಿಲ್ಲದೆ ಆಕಾಶಕ್ಕೆ ಬಾಯ್ತೆರೆದು ನಿಂತಂತಿದೆ. ಅಳಿದುಳಿದ ಶಿಖರ ಅಂಶಗಳ ಆಧಾರದ ಮೇಲೆ ತಿಳಿಯುವುದೇನೆಂದರೆ ಈ ಶಿಖರ ಭುವನೇಶ್ವರದಲ್ಲಿರುವ ಸಮಕಾಲೀನ ಯಮೇಶ್ವರ ಮತ್ತು ಅನಂತವಾಸುದೇವ ದೇವಾಲಯಗಳ ಶಿಖರದಂತಿದ್ದಿರಬಹುದು. ಜಗಮೋಹನದ ಎತ್ತರದ ಅನುಪಾತಕ್ಕನುಗುಣವಾಗಿ ಗರ್ಭಗೃಹದ ಮೂಲ ಎತ್ತರ ಬಹುಶಃ 61 ಮೀ ಇದ್ದಿರಬಹುದೆಂದು ಊಹಿಸಲಾಗಿದೆ. ಗರ್ಭಗೃಹದ ಮಧ್ಯಭಾಗದಲ್ಲಿ ಅಲಂಕೃತಗೊಂಡ ಚಿಕ್ಕ ಪೀಠವಿದೆ. ಆದರೆ ಮೂಲ ವಿಗ್ರಹವಿಲ್ಲ. ಈಗ ಗರ್ಭಗೃಹಕ್ಕೆ ನಾಲ್ಕುಕಡೆಗಳಿಂದ ಪ್ರವೇಶದ್ವಾರ ವಿಲ್ಲ. ಆದರೆ ಗರ್ಭಗೃಹದ ಪಶ್ಚಿಮ ಗೋಡೆಗೆ ಹೊಂದಿಕೊಂಡು, ದೇವಾಲಯದ ಮೇಲ್ಭಾಗದಿಂದ ಹೊಸದಾಗಿ ಕಟ್ಟಿರುವ ಮೆಟ್ಟಿಲಿನ ಮೂಲಕ ಇದರೊಳಗೆ ಇಳಿಯಬಹುದು. ಸೂರ್ಯದೇವಾಲಯದ ಪೂರ್ವ ದಿಕ್ಕಿನ ಮುಂಭಾಗದಲ್ಲಿ ದೇವರ ನೈವೇದ್ಯಕ್ಕಾಗಿ ಕಟ್ಟಿಸಿದ ಕಂಬಗಳುಳ್ಳ ಭೋಗಮಂಟಪವಿದೆ. ಆದರೆ ಅದರ ಮಾಳಿಗೆಯೂ ಸಂಪೂರ್ಣ ಬಿದ್ದುಹೋಗಿದೆ.

ಸೂರ್ಯ ದೇವಾಲಯದಲ್ಲಿನ ಸೂರ್ಯಶಿಲ್ಪ

ಅನೇಕ ಶತಮಾನಗಳ ಅನುಭವದಿಂದ ಪಡೆದ ವಾಸ್ತುಶಿಲ್ಪ ಹಾಗೂ ವಿದ್ಯಾ ಪರಿಪಕ್ವತೆಯ ನಿಖರತೆಯನ್ನೊಳಗೊಂಡ ಈ ದೇವಾಲಯ ಸೂರ್ಯನ ವಿರಾಟ್ ಸ್ವರೂಪ ರಥದಂತೆ ತೋರುವ ಒಂದು ಅಗಾಧ ಭವ್ಯ ಸೃಷ್ಟಿ. ಇಡೀ ದೇವಾಲಯ ಅಲಂಕಾರಮಯವಾಗಿದ್ದು, ಚಿತ್ರಕಾರನು ಬಿಚ್ಚಿಟ್ಟ ಎಂದೂ ಮುಗಿಯದ ಚಿತ್ರಪಟದಂತಿದೆ. ಉಪಾನದಿಂದ ಜಗಮೋಹನದ ಖಪೂರಿಯ ತನಕ ಅತಿ ಸುಂದರ ಮೂರ್ತಿಗಳಿಂದಷ್ಟೇ ಅಲ್ಲದೆ, ಕುಸುರಿ ಚಿತ್ರಗೆಲಸದಿಂದಲೂ ಅಲಂಕರಿಸಿದ್ದು, ನೋಡುವವರ ಮನಸೂರೆಗೈಯ್ಯುತ್ತದೆ. ಎಲ್ಲಿ ನೋಡಿದರಲ್ಲಿ ಕಂಡುಬರುವ ಜೀವಂತ ಶಿಲ್ಪಗಳಂತಿರುವ ದೇವತಾ ವಿಗ್ರಹಗಳು, ಸಂಗೀತ ಹಾಗೂ ನೃತ್ಯದಲ್ಲಿ ನಿರತರಾಗಿರುವ ಅಪ್ಸರೆಯರು, ಮಾನವ ಲೋಕದ ಸನ್ನಿವೇಶಗಳನ್ನು ದರ್ಶಿಸುವ ಶಿಲ್ಪಪಟ್ಟಿಗಳು, ಪಶು–ಪಕ್ಷಿಗಳು, ಜಲಚರಪ್ರಾಣಿಗಳು, ನಾಗ–ನಾಗಿಯರು, ಶಾರ್ದೂಲ, ವ್ಯಾಳ ಇತ್ಯಾದಿಗಳಲ್ಲದೆ ವಾಸ್ತುಕಲೆಯ ಪೀಢಾಮುಂಡಿ, ಖಾಖರಮುಂಡಿ, ವಜ್ರಮುಂಡಿ, ಗೋಡೆಗಂಬ, ಚೈತ್ಯ–ಗವಾಕ್ಷಿ, ಜಾಲಂಧ್ರವಾತಾಯನ ಮುಂತಾದ ಮಾದರಿಗಳು, ಅಲಂಕಾರದ ಚಿತ್ರಗಳಾದ ಹೂವು–ಬಳ್ಳಿಗಳು, ಜ್ಯಾಮಿತಿ ಆಕಾರಗಳು–ಇವೆಲ್ಲವೂ ಅನೇಕ ಪರಿಣಿತ ಕಲಾಕಾರ/ಶಿಲ್ಪಕಾರರ ತಂಡದ ಶ್ರಮ ಸಾಫಲ್ಯದ ಫಲವಾಗಿ ರೂಪುಗೊಂಡಿದೆ. ಈ ದೇವಾಲಯದ ಇನ್ನೊಂದು ವಿಶೇಷ ಸಂಗತಿಯೆಂದರೆ ಅಪಾರ ಸಂಖ್ಯೆಯಲ್ಲಿ ಬಿಡಿಸಿದ, ರತಿಕ್ರೀಡೆಯಲ್ಲಿ ಸ್ವಚ್ಛಂದವಾಗಿ ನಿರತರಾದ ತುಂಬು ಯೌವನದಿಂದೊಡಗೂಡಿದ ಸ್ತ್ರೀ–ಪುರುಷರ ಮಿಥುನ ಶಿಲ್ಪಗಳು. ಶಿಲ್ಪಕಲಾ ಸೌಂದರ್ಯದಲ್ಲಿ ಬಹುಮಟ್ಟಿಗೆ ಶೃಂಗಾರ ರಸ ಉಚ್ಚಳಿಸುತ್ತಿದ್ದು ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಮುಕ್ತ ಶೃಂಗಾರದಲ್ಲಿ ತೊಡಗಿದ ಶಿಲ್ಪಗಳ ಔಚಿತ್ಯವನ್ನು ತಿಳಿಸಲು ಅನೇಕ ವಿದ್ವಾಂಸರು ಆಧ್ಯಾತ್ಮಿಕ ಹಾಗೂ ಲೌಕಿಕ ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ ನಿರ್ದಿಷ್ಟವಾದ ಕಾರಣವೇನೆಂದು ತಿಳಿಯಲು ಸಾಧ್ಯವಾಗಿಲ್ಲ. ಈ ಶ್ರೇಷ್ಠ ವಾಸ್ತುಕೃತಿಯನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ರಾಷ್ಟ್ರೀಯ ಸ್ಮಾರಕವೆಂದು ಪರಿಗಣಿಸಿದೆ. ಇದನ್ನು ವಿಶ್ವಪರಂಪರೆಯ ಸ್ಮಾರಕವೆಂದೂ ಘೋಷಿಸಲಾಗಿದೆ. (ಎಲ್.ಎಸ್.ಆರ್.)

**ಕೊಪ್ಪ:** ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾ ಸಂಸ್ಕೃತಿಯ ನೆಲೆ. 1869ರಲ್ಲಿ ಕ್ಯಾಪ್ಟನ್ ಕೋಲ್ ಇಲ್ಲಿಯ ಬೃಹತ್‌ಶಿಲಾ ಸಂಸ್ಕೃತಿಗೆ ಸಂಬಂಧಿಸಿದ 17 ಗೋರಿಗಳನ್ನು ಉತ್ಖನನ ನಡೆಸಿದ. ಈ ನೆಲೆಯಲ್ಲಿ ದೊರೆತ ಶಿಲಾ ಗೋರಿಗಳಲ್ಲಿ ಹಲವು ಗೋರಿಗಳು ನೆಲದಡಿಕೋಣೆ ಗೋರಿಯ ಮಾದರಿಯವಾಗಿದ್ದವು. ಕೆಲವು ನೆಲದಡಿ ಕೋಣೆ ಗೋರಿಗಳಿಗೆ ಒಂದೆರಡು ಶಿಲಾಚಪ್ಪಡಿಗಳನ್ನು ಜೋಡಿಸಿದ್ದರೆ, ಕೆಲವು ಗೋರಿಗಳ ತಳದಲ್ಲಿ ಮಾತ್ರ ಹಾಸುಗಲ್ಲನ್ನು ಹಾಸಿರುವುದು ಕಂಡುಬಂದಿದೆ. (ಡಿ.ಎಸ್.ಜಿ.)

**ಕೊಪ್ಪಳ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಆಡಳಿತ ಕೇಂದ್ರ. ಪೂರ್ವಭಾವಿ ಇತಿಹಾಸ ಸಂಸ್ಕೃತಿ ಹಂತದಿಂದ ಉತ್ತರಕಾಲೀನ ಮಧ್ಯಯುಗೀನ ಹಂತದ ವರೆಗಿನ ಅವಶೇಷವುಳ್ಳ ಮಹತ್ತ್ವದ ಐತಿಹಾಸಿಕ ಸ್ಥಳ. ಈ ಪ್ರದೇಶ ಹಲವಾರು ಗ್ರಾನೈಟ್–ನೀಸ್ ಬೆಟ್ಟಗಳ ಸಾಲುಗಳಿಂದ ತುಂಬಿದೆ. ಈ ಸ್ಥಳದ ಸುತ್ತಮುತ್ತ ಭಿಲ್ಲಮರಾಯನಗುಡ್ಡ, ತಾವರಗೇರ, ಪಿಕ್ಲಿಹಾಳ, ಮಸ್ಕಿ (**ನೋಡಿ**), ಹಿರೇಬೆನಕಲ್ಲು (**ನೋಡಿ**), ಬಳಿಭಾವಿ ಮುಂತಾದ ನವಶಿಲಾ–ತಾಮ್ರಯುಗದ ನೆಲೆಗಳು, ಬೃಹತ್ ಶಿಲಾ ಗೋರಿಗಳು, ಬೂದಿದಿಬ್ಬ, ಗವಿ–ಕಲ್ಲಾಸರೆ ವರ್ಣ–ಗೀರು–ಕುಟ್ಟು ಚಿತ್ರಗಳ ನೆಲೆ, ಆದಿ ಇತಿಹಾಸ ಕಾಲದ, ಮಧ್ಯಯುಗೀನ ಕಾಲದ ಕನಕಗಿರಿ ಮುಂತಾದ ಹಲವಾರು ಸಾಂಸ್ಕೃತಿಕ ನೆಲೆಗಳಿವೆ.

ಕೊಪ್ಪಳದ ಬಳಿಯ ಮಲಿಮಲ್ಲಪ್ಪ ಬೆಟ್ಟದ ತುದಿಯ ಮೇಲೆ ಅನೇಕ ಕಂಡಿಕೋಣೆ ಗೋರಿಗಳಿವೆ. ಇವನ್ನು ಸ್ಥಳೀಯವಾಗಿ ಮೋರಿಯರ ಅಂಗಡಿ ಎಂದು ಕರೆಯಲಾಗುತ್ತದೆ. ಈ ನಗರದ ಬೆಟ್ಟದಲ್ಲಿಯ ಪಾಲ್ಕಿಗುಂಡು ಮತ್ತು ಗವಿಮಠ ಬೆಟ್ಟದಲ್ಲಿ ಅಶೋಕನ ಒಂದೊಂದು ಕಿರು ಬಂಡೆ ಶಾಸನಗಳಿವೆ. ಬ್ರಹ್ಮಗಿರಿ (**ನೋಡಿ**) ಶಾಸನದಲ್ಲಿ ಬರುವ ಸುವರ್ಣಗಿರಿಯನ್ನು ಕೊಪ್ಪಳ ಜಿಲ್ಲೆಯ ಕನಕಗಿರಿ ಎಂದು ಕೆಲವು ವಿದ್ವಾಂಸರು ಗುರುತಿಸಿದ್ದರೆ, ಇನ್ನು ಕೆಲವರು ಇದನ್ನು ಮಸ್ಕಿ ಇರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಅದೇನೇ ಇದ್ದರೂ ಈ ಪ್ರದೇಶ ಬಹು ಪುರಾತನ ನಾಗರಿಕತೆ ಮತ್ತು ಸಂಸ್ಕೃತಿಗಳ ನೆಲೆಬೀಡೆಂಬುದು ಸ್ಪಷ್ಟವಾಗಿದೆ. ಸಾತವಾಹನರ ಕಾಲದಿಂದ ಕೊಪ್ಪಳ ಪ್ರಸಿದ್ಧಿ ಪಡೆದಿತ್ತು. ಇಲ್ಲಿನ ಸುತ್ತಮುತ್ತಲ ಬೆಟ್ಟಗುಡ್ಡಗಳಿಗೆ ಕೊಪಣಾದ್ರಿ ಮತ್ತು ಕುಪಣಾಚಲ ಎಂಬ ಹೆಸರುಗಳಿವೆ. ಕೊಪ್ಪಳಕ್ಕೆ ಕೊಪಣ ಅಥವಾ ಕೋಪಣ ನಗರವೆಂಬ ಹೆಸರಿದ್ದಿತು. 4ನೆಯ ಶತಮಾನ ಆದಿ ಭಾಗದ ಚಂದ್ರವಳ್ಳಿಯ ಕದಂಬ ಮಯೂರವರ್ಮನ ಶಾಸನದಲ್ಲಿ ಕುಪಣವೆಂಬ ಉಲ್ಲೇಖವಿದ್ದು ಇದೇ ಇಂದಿನ ಕೊಪ್ಪಳವೆನಿಸಿದೆ. (ಡಿ.ಎಸ್.ಜಿ.)

ಇದನ್ನು ಆದಿತೀರ್ಥ, ಮಹಾತೀರ್ಥವಿದಿತ ಮಹಾಕೊಪಣನಗರ ಮುಂತಾಗಿ ಬಣ್ಣಿಸಲಾಗಿದೆ. ಗವಿಮಠ ಬೆಟ್ಟದಲ್ಲಿ ನಾಲ್ಕು ಗವಿಗಳಿವೆ. ಅಲ್ಲದೆ ಪುರಾತನವಾದ ವೀರಶೈವ ಮಠ ಮತ್ತು ಜೈನಸಮಾಧಿಗಳೂ ಇವೆ. ಪಾಲ್ಕಿಗುಂಡು ಬೆಟ್ಟದ ಕಡಿದಾದ ಬದಿಯಂಚಿನಲ್ಲಿ ನಿಸರ್ಗ ಸುರಕ್ಷಿತ ಒಂದು ಪ್ರಾಚೀನ ಜನವಾಸ್ತವ ನೆಲೆಯಿದೆ. ಇದರಲ್ಲಿ ನವಶಿಲಾಯುಗ, ಆದಿ ಕಬ್ಬಿಣಯುಗದ ಬೃಹತ್ ಶಿಲಾಯುಗ ಮತ್ತು ಆದಿ ಇತಿಹಾಸ ಕಾಲದ ಪ್ರಾಚ್ಯಾವಶೇಷಗಳು ಹೇರಳವಾಗಿವೆ. ಈ ನೆಲೆಯಲ್ಲಿ ಸು. 2ನೆಯ ಶತಮಾನದ ಹಸುರು ಛಾಯೆಯ ಬೂದುವರ್ಣ ಶೇದಿ ಸುಣ್ಣಕಲ್ಲಿನ ಒಡೆದ ಒಂದು ಮೂರ್ತಿಯ ಭಾಗವೊಂದು ಸಿಕ್ಕಿದೆ. ಬೃಹತ್ ಶಿಲಾಯುಗೀನ ಕಲ್ಮನೆ ಸಮಾಧಿ ಹಾಗೂ ಅಶೋಕನ ಶಾಸನಗಳಿಂದ ಕೊಪ್ಪಳ ಪ್ರ.ಶ.ಪೂ. 3ನೆಯ ಶತಮಾನದಷ್ಟು ಪ್ರಾಚೀನವಾದದ್ದೆಂದು ಊಹಿಸಬಹುದು. ಪಾಲ್ಕಿಗುಂಡು ಬೆಟ್ಟದ ಮಧ್ಯದಲ್ಲಿಯ ಕಡಿದಾದ ಕಿರುದಾದ ಕಣಿವೆಯ ಕಲ್ಲಾಸರೆಯಲ್ಲಿ ಕಾವಿ ಬಣ್ಣದಲ್ಲಿ ಬರೆದ 8ನೆಯ ಶತಮಾನದ ಬಹುಶಃ ಪ್ರತಿಷ್ಠಿತ ವ್ಯಕ್ತಿಗಳ ಹೆಸರುಗಳಿವೆ. ಈ ಕಲ್ಲಾಸರೆಯನ್ನೆ ಮೋರಿಯರ ಅಂಗಡಿಗಳೆಂದು ಕರೆಯಲಾಗಿದೆ. 9–13ನೆಯ ಶತಮಾನದವರೆಗಿನ ಹಲವು ಶಿಲಾಶಾಸನಗಳೂ ಜೈನ, ಶೈವ ದೇವಾಲಯಗಳು ಅನಂತರದ ಮುಸ್ಲಿಂ ದಾಖಲೆಗಳೂ ದೊರಕಿವೆ. ಕೊಪಣಪುರವರಾಧೀಶ್ವರರಾದ ಶಿಲಾಹಾರರ ಒಂದು ಶಾಖೆಗೆ ಇದು ರಾಜಧಾನಿಯಾಗಿದ್ದಿರಬಹುದು. ಗಂಗ ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕೊಪ್ಪಳ ಮುಖ್ಯ ಕೇಂದ್ರವಾಗಿದ್ದಿರಲೂಬಹುದು. ಒಂದು ಕಾಲದಲ್ಲಿ ಇದು ಪ್ರಸಿದ್ಧ ಜೈನಕ್ಷೇತ್ರವಾಗಿತ್ತು. ಇಲ್ಲಿ 722 ಬಸದಿಗಳೂ 24 ಜೈನಸಂಘಗಳೂ ಇದ್ದುವೆಂದು ಹೇಳಲಾಗಿದೆ. ಇಲ್ಲಿ ಹಿಂದೆ ಮತ್ತು ಇತ್ತೀಚೆಗೆ ಅನೇಕ ಜೈನಶಾಸನಗಳೂ ದೊರೆತಿವೆ. ಇತಿಹಾಸಪಸಿದ್ಧವಾದ ಕೊಪ್ಪಳದ ಕೋಟೆಯನ್ನು ಕಟ್ಟಿದವರು ಯಾರೆಂಬುದು ತಿಳಿದಿಲ್ಲ. ಟಿಪ್ಪುಸುಲ್ತಾನ 1786ರಲ್ಲಿ ಇದನ್ನು ವಶಪಡಿಸಿಕೊಂಡು ಫ್ರೆಂಚ್ ಶಿಲ್ಪಿಗಳ ನೆರವಿನಿಂದ ಇನ್ನೂ ಭದ್ರಪಡಿಸಿದನೆಂದು ತಿಳಿದುಬರುತ್ತದೆ. ಕಡಿದಾದ ಮೆಟ್ಟಿಲುಗಳನ್ನೊಳಗೊಂಡಿದೆ. ದಕ್ಷಿಣ ಭಾರತದ ದುರ್ಗಮ ಕೋಟೆಗಳಲ್ಲಿ ಕೊಪ್ಪಳ ಕೋಟೆಯೂ ಒಂದು. ಈ ಕೋಟೆಗೆ 1790ರಲ್ಲಿ ಇಂಗ್ಲಿಷ್ ಮತ್ತು ನಿಜಾಮಿ ಪಡೆಗಳು ಸತತವಾಗಿ ಮುತ್ತಿಗೆ ಹಾಕಿದ್ದುಂಟು. 1858ರಲ್ಲಿ ಈ ದುರ್ಗ ಮುಂಡರಗಿ ಭೀಮರಾಯನ ವಶದಲ್ಲಿತ್ತು. 1949ರ ವರೆಗೆ ಕೊಪ್ಪಳ ನವಾಬ ಸಾಲಾರ್‌ಜಂಗನ ಜಹಗೀರಿಯಾಗಿತ್ತು. (ಜಿ.ಆರ್.ಪಿ.;ಎಚ್.ಆರ್.ಆರ್.ಬಿ.)

ಕೊಪ್ಪಳ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಖ್ಯ ಪಾತ್ರವಹಿಸಿತ್ತು. ಸಂಗ್ರಾಮದ ಜ್ವಾಲೆ 1858ರಲ್ಲಿ ಮುಂಡರಗಿ ಭೀಮರಾಯ ಹಾಗೂ ಹಮ್ಮಿಗೆ ಕೆಂಚನಗೌಡ ಇವರ ಹೋರಾಟದಿಂದಲೇ ಪ್ರಾರಂಭವಾಯಿತೆನ್ನಬಹುದು. ಹೈದರಾಬಾದು ಕರ್ನಾಟಕದಲ್ಲಿ ಕೊಪ್ಪಳ ಭಾಗದಲ್ಲಿಯೇ ಮೊದಲಿಗೆ ರಾಜಕೀಯ ಚಟುವಟಿಕೆಗಳು ಕಂಡುಬಂದವು. ಬಹಳ ಮೊದಲೇ ಕೀರ್ತನಕೇಸರಿ ಜಯರಾಮಾಚಾರ್ಯರು ಪುರಾಣದ ಕಥೆಗಳಿಗೆ ರಾಜಕೀಯ ರಂಗು ಕೊಟ್ಟು ಸ್ಫೂರ್ತಿ ಹುಟ್ಟುವಂತೆ ಸ್ವಚ್ಛಂದ ಶೈಲಿಯಲ್ಲಿ ಕೀರ್ತನೆಗಳನ್ನು ಹೇಳತೊಡಗಿ ಕರ್ನಾಟಕದಲ್ಲೆಲ್ಲ ಅಸಹಕಾರ, ಕಾಯಿದೆ ಭಂಗ, ಖಾದಿ ಪ್ರಚಾರ, ನಿಧಿಸಂಗ್ರಹಗಳಿಗಾಗಿ

ಅದನ್ನು ಬಳಸಿಕೊಂಡರು. ಪುಟ್ಟಾಭಟ್ಟ ಜಹಗೀರದಾರ ಮತ್ತು ಹೊಸಪೇಟೆಯ ಚಕ್ರಪಾಣಿ ಆಚಾರ್ಯರು ಈ ಭಾಗದಲ್ಲಿ ಖಾದಿ ಪ್ರಚಾರ ಮಾಡಿದರು. ಇಲ್ಲಿಯವರಾದ ಬಸವಂತರಾವ್ ಕಾಟರಹಳ್ಳಿ ಮತ್ತು ಹಿರೇಮಠ ಅವರು ಹೈದರಾಬಾದಿನಲ್ಲಿ ಪೊಲೀಸರ ಕಣ್ಣುತಪ್ಪಿಸಿ ರಾಷ್ಟ್ರಧ್ವಜ ಹಾರಿಸಿದರು. 1928ರಷ್ಟು ಮಂಚೆಯೇ ಕಾಂಗ್ರೆಸ್ಸನ್ನು ಸೇರಿದವರಲ್ಲಿ ಪ್ರಮುಖರೆಂದರೆ ಕೊಪ್ಪಳದವರಾದ ಎಚ್. ಕೊಟ್ರಪ್ಪ, ಹಂಪಿ ನರಸಿಂಗರಾವ್ ಮತ್ತು ಸಿರೂರು ವೀರಭದ್ರಪ್ಪ ನವರು. ನಿಜಾಮ್ ಮತ್ತು ಬ್ರಿಟಿಷ್ ಸರ್ಕಾರ ಇವರಿಗೆ ಬಹಳ ತೊಂದರೆ ಕೊಟ್ಟಿತ್ತು. 1938ರಲ್ಲಿ ಹೈದರಾಬಾದಿನಲ್ಲಿ ನಡೆದ ವಂದೇ ಮಾತರಂ ವಿದ್ಯಾರ್ಥಿ ಆಂದೋಲನದಲ್ಲಿ ಮತ್ತು 1941ರಲ್ಲಿ ನಡೆದ ವೈಯಕ್ತಿಕ ಸತ್ಯಾಗ್ರಹದಲ್ಲಿ ಕೊಪ್ಪಳದ ವಿದ್ಯಾರ್ಥಿ ಮುಖಂಡ ಇಟಗಿ ವಿರೂಪಾಕ್ಷಯ್ಯನವರ ನೇತೃತ್ವದಲ್ಲಿ ಅನೇಕರು ಸೆರೆಮನೆ ಸೇರಿದರು. ಈ ಭಾಗದಲ್ಲಿದ್ದ ಕುಕನೂರಿನ ವಿದ್ಯಾವಂತ ಗುರುಕುಲ ಅದರ ಸಂಸ್ಥಾಪಕರಾದ ರಾಘವೇಂದ್ರರಾವ್ ದೇಸಾಯಿ ಅವರ ಮುಂಧೋರಣೆಯಿಂದ ರಾಜಕೀಯ ಜಾಗೃತಿಯಲ್ಲಿ ಬಹಳ ಮಹತ್ತ್ವದ ಪಾತ್ರ ವಹಿಸಿತು. ಈ ಹೊತ್ತಿಗೆ ನಗರದ ಪ್ರಮುಖ ವಕೀಲರನೇಕರು ರಾಜಕೀಯದಲ್ಲಿ ದುಮುಕಿದರು. ಹಳ್ಳಿಹಳ್ಳಿಗಳಲ್ಲಿ ವಾಚನಾಲಯಗಳು ಸ್ಥಾಪನೆಯಾದವು. ಚಲೇಜಾವ್ ಚಳವಳಿಯಿಂದಾರಂಭಿಸಿ ಸ್ವಾತಂತ್ರ್ಯದವರೆಗೆ ಈ ಭಾಗದಲ್ಲಿ ಆದ ಹೆಚ್ಚಿನ ಜಾಗೃತಿ ಮುಖಂಡರಾದ ಜನಾರ್ದನರಾವ್ ದೇಸಾಯಿ (ವಕೀಲರು), ಪಾಣೇಶಾಚಾರ್ ಮೊದಲಾದವರ ಲಕ್ಷ್ಯವನ್ನು ಸೆಳೆಯಿತು. ತಂಡತಂಡವಾಗಿ ಸತ್ಯಾಗ್ರಹಿಗಳು ಕೊಪ್ಪಳಕ್ಕೆ ಬಂದು ಸೆರೆಯಾದರು. ಭಾರತ ಸ್ವತಂತ್ರವಾದರೂ ಇನ್ನೂ ಜಾಗೀರಾಗಿ ಉಳಿದಿದ್ದ ಕೊಪ್ಪಳ ಭಾಗದಲ್ಲಿ ಅನೇಕ ಕಡೆ ಜನರು ರಾಷ್ಟ್ರಧ್ವಜವನ್ನು ಹಾರಿಸಿ ಸ್ವಾತಂತ್ರ್ಯ ಘೋಷಿಸಿ ಮತ್ತೆ ಸೆರೆಮನೆಗೆ ಹೋದರು. ಈ ಚಳವಳಿಯೇ ಪ್ರಬಲವಾಗಿ ಹೈದರಾಬಾದ್ ಸ್ವಾತಂತ್ರ್ಯಾಂದೋಳನದ ಸ್ವರೂಪ ತಳೆಯಿತು. ಚಳವಳಿ ಹೆಚ್ಚಿದಂತೆ ನಿಜಾಮರ ದಬ್ಬಾಳಿಕೆ ಹೆಚ್ಚಾದಾಗ ಕೊಪ್ಪಳ ಭಾಗದಿಂದ ಜೈಲು ಸೇರಿದ ಬೆಣಕಲ್ಲು ಭೀಮಸೇನರಾವ್ ಎಂಬ ತರುಣ ಸತ್ಯಾಗ್ರಹಿ ಗುಲ್ಬರ್ಗ ಜೈಲಿನಲ್ಲಿ ನಡೆದ ಲಾಠಿ ಪ್ರಹಾರದಲ್ಲಿ ಮೃತನಾದ. ಜನ ರೊಚ್ಚಿಗೆದ್ದರು. ಗದಗಿನಲ್ಲಿ ಪ್ರಾದೇಶಿಕ ಸ್ಟೇಟ್ ಕಾಂಗ್ರೆಸ್ ಕೇಂದ್ರವನ್ನು ತೆರೆದರು. ನಿರಾಶ್ರಿತರಾಗಿ ಹೊರಬರುವ ಕುಟುಂಬಗಳ ವ್ಯವಸ್ಥೆ ಮಾಡಬೇಕಾಯಿತು. ಕೊಪ್ಪಳದ ಗಡಿಯ ಸುತ್ತ ಕಾಂಗ್ರೆಸಿನ ಕಾರ್ಯಕರ್ತರ ಸಶಸ್ತ್ರ ಶಿಬಿರಗಳು ಏರ್ಪಟ್ಟವು. ನಿಜಾಮರ ಪೊಲೀಸು, ಸೈನ್ಯ ಮತ್ತು ರಜಾಕಾರರ ವಿರುದ್ಧ ಧಾಳಿ, ಕಚೇರಿಗಳ ನಾಶ ಮುಂತಾದವು ನಡೆದವು. ಗಡಿಭಾಗದ ಅನೇಕ ಹಳ್ಳಿಗಳು ಸಂಪೂರ್ಣವಾಗಿ ಈ ಕಾರ್ಯಕರ್ತರ ಅಧೀನವಾದವು. ಹೀಗೆ ನಿಜಾಮರ ಸತ್ತೆಯನ್ನು ನಿಷ್ಕ್ರಿಯಗೊಳಿಸುವ ಆಂದೋಲನ ತೀವ್ರಗೊಂಡಾಗ ಭಾರತ ಸರ್ಕಾರದಿಂದ ಪೊಲೀಸ್ ಕಾರ್ಯಾಚರಣೆ ನಡೆದು ಹೈದರಾಬಾದಿ ನೊಂದಿಗೆ ಕೊಪ್ಪಳವೂ ಸ್ವತಂತ್ರವಾಯಿತು. (ಜಿ.ಆರ್.ಪಿ.)

**ಕೊಮಾರನಹಳ್ಳಿ:** ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾಯುಗದ ಗೋರಿನೆಲೆ. ಕೊಮಾರನಹಳ್ಳಿಯ ದಕ್ಷಿಣದಲ್ಲಿರುವ ಗುಡ್ಡದ ತಪ್ಪಲಿನಲ್ಲಿ ಈ ಗೋರಿಗಳಿವೆ. ಪಕ್ಕದಲ್ಲಿ ಒಂದು ದೊಡ್ಡ ಕೆರೆಯಿದೆ. ಈ ನೆಲೆಯಲ್ಲಿ 2 ಪ್ರಕಾರದ ಗೋರಿಗಳಿವೆ. ಇವು ಕಲ್ಲುಗ್ಗವೆಯ ಅಡಿಯಲ್ಲಿರುವ ಶವಕುಣಿಗಳು ಮತ್ತು ಚಪ್ಪಡಿಕಲ್ಲಿನಿಂದ ಮುಚ್ಚಿರುವ ಶವಕುಣಿಗಳು. ಎಲ್ಲ ಗೋರಿಗಳು ಕಲ್ಲುವೃತ್ತದಿಂದ ಆವೃತವಾಗಿವೆ. ಎರಡೂ ಪ್ರಕಾರದ ಎರಡೆರಡು ಗೋರಿಗಳನ್ನು 1978ರಲ್ಲಿ ಎಂ.ಎಸ್.ನಾಗರಾಜರಾವ್ ಮಾರ್ಗದರ್ಶನ ದಲ್ಲಿ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ ಉತ್ಖನನದ ಮೂಲಕ ಹೊರತೆಗೆಯಿತು.



ಪಂಚಮುಖಿ ಮಣ್ಪಾತ್ರೆ

ಶವಕುಣಿಯನ್ನು ನೈಸರ್ಗಿಕ ಮಣ್ಣು ಹಾಗೂ ಅದರ ಕೆಳಗಿರುವ ತಳಬಂಡೆಯೊಳಗೆ ತೋಡಲಾಗಿದೆ. ಕುಣಿಯ ತಳದಲ್ಲಿ ಕಬ್ಬಿಣದ ಉಪಕರಣಗಳು ಮತ್ತು ಮಣ್ಪಾತ್ರೆಗಳನ್ನಿಟ್ಟು ಇವುಗಳ ಮೇಲೆ ಅಸ್ಥಿ ಅವಶೇಷಗಳನ್ನು ಇಡಲಾಗಿದೆ. ಅನಂತರ ಶವಕುಣಿಗಳನ್ನು ಕೆರೆಯ ಕಪ್ಪುಮಣ್ಣು ಅಥವಾ ಬೂದು–ಕೆಂಪುಮಣ್ಣಿನಿಂದ ತುಂಬಲಾಗಿದೆ. ಇದರ ಮೇಲೆ ಗುರುತಿಗಾಗಿ ಚಪ್ಪಡಿಕಲ್ಲನ್ನು ಇಡಲಾಗಿದೆ ಇಲ್ಲವೆ ಕಲ್ಲುಗ್ಗವೆಯನ್ನು ರಚಿಸಲಾಗಿದೆ. ಒಂದು ಗೋರಿಯಲ್ಲಿ 3 ಮಾನವ ತಲೆಬುರುಡೆಗಳು, ಪಕ್ಕೆಲುಬುಗಳು ಮತ್ತು ಉದ್ದ ಮೂಳೆಗಳಲ್ಲದೆ ಪ್ರಾಯಶಃ ಪ್ರಾಣಿ ಮೂಳೆಗಳಿದ್ದವು. ಮತ್ತೊಂದರಲ್ಲಿ 2 ತಲೆಬುರುಡೆಗಳು, ಉದ್ದ ಮೂಳೆಗಳು ಮತ್ತು ಪಕ್ಕೆಲುಬುಗಳಿದ್ದವು. ಒಂದರಲ್ಲಿ ಮಾತ್ರ ಯಾವುದೇ ಅಸ್ಥಿ ಅವಶೇಷಗಳಿರಲಿಲ್ಲ. ಕಲ್ಲಿನ ಅರೆಗುಂಡುಗಳು ಮತ್ತು ಸುಡಾವೆಮಣ್ಣಿನ ಮಣಿಗಳು ಇಲ್ಲಿ ಸಿಕ್ಕ ಇತರ ವಸ್ತುಗಳು. ಜೊತೆಗೆ ಭರ್ಜಿ–ಬಾಣದ ಮೊನೆಗಳು, ಚೂರಿ, ಖಡ್ಗ, ಈಟಿ ಮುಂತಾದ ಕಬ್ಬಿಣದ ಉಪಕರಣಗಳಿದ್ದವು.

ಮೂರು ಪ್ರಕಾರದ ಮಣ್ಪಾತ್ರೆಗಳನ್ನು ಗೋರಿಗಳೊಳಗೆ ಇಡಲಾಗಿತ್ತು. ಇವು ಕೆಂಪು, ಕಪ್ಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಬಗೆಯ ಪಾತ್ರೆಗಳು. ಕೆಂಪುಬಣ್ಣದ ಪಾತ್ರೆ ವರ್ಗದಲ್ಲಿ ಶಂಕುವಿನಾಕಾರದ ತಳವುಳ್ಳ ಮಡಕೆಗಳು, ಗೋಲ ಮಡಕೆಗಳು, ಸಿಂಬಿ, ಚುಳ್ಳಿಯಿರುವ ಬಟ್ಟಲು ಮತ್ತು 3 ನಳಿಕೆಗಳುಳ್ಳ ಪಾತ್ರೆಗಳಿವೆ. ಇವುಗಳಲ್ಲಿ ಕೆಲವು ತಿಗುರಿಯ ಮೇಲೆ ಮಾಡಿದುವಾದರೆ ಇನ್ನು ಕೆಲವು ಕೈಯಿಂದಲೇ ತಟ್ಟಿ ಮಾಡಿದಂತಹವು. ಕಪ್ಪು ಬಣ್ಣದ ಪಾತ್ರೆಗಳೆಂದರೆ ಬಟ್ಟಲು ಮತ್ತು ಶಂಕುವಿನಾಕಾರದ ಮುಚ್ಚಳಗಳು. ಶಂಕುವಿನಾಕಾರದ 2 ಮುಚ್ಚಳಗಳ ಹೊರಮೈ ಮೇಲೆ ಬಿಳಿಬಣ್ಣದಲ್ಲಿ ಪರಸ್ಪರ ಛೇದಿಸುವ ಗೆರೆಗಳನ್ನು ಚಿತ್ರಿಸಲಾಗಿದೆ. ಸಿಂಬಿ, ಬಟ್ಟಲು, ಶಂಕುವಿನಾಕಾರದ ಬಟ್ಟಲು ಮತ್ತು ಮಡಕೆ ಇವು ಕಪ್ಪು–ಕೆಂಪು ದ್ವಿವರ್ಣ ಪಾತ್ರೆಯ ನಮೂನೆಗಳು.

ಮಣ್ಪಾತ್ರೆಗಳ ಔಷ್ಣದೀಪ್ತಿ ಕಾಲಮಾನ–ಪ್ರ.ಶ.ಪೂ. 1440, ಪ್ರ.ಶ.ಪೂ. 1200 ಮತ್ತು ಪ್ರ.ಶ.ಪೂ. 930. ಹಾಗಾಗಿ ಈ ಗೋರಿಗಳು 2ನೆಯ ಸಹಸ್ರಮಾನದ ಕೊನೆಯ ಭಾಗಕ್ಕೆ ಸೇರುವುದರಲ್ಲಿ ಅನುಮಾನವಿಲ್ಲ. ಸಮೀಪದಲ್ಲಿರುವ ಹಳ್ಳೂರಿನ ಉತ್ಖನನದಲ್ಲಿ ಕಂಡುಬಂದ ನವಶಿಲಾಯುಗ–ಕಬ್ಬಿಣಯುಗದ ಸಮ್ಮಿಶ್ರ ಹಂತಕ್ಕೆ ಈ ಗೋರಿಗಳು ಸಮಕಾಲೀನವಾಗಿರ ಬೇಕು. ಏಕೆಂದರೆ ಗೋರಿಗಳಲ್ಲಿ ಕಂಡುಬಂದ ಬಿಳಿಚಿತ್ರವುಳ್ಳ ಪಾತ್ರೆಗಳು ಹಳ್ಳೂರಿನ ಸಮ್ಮಿಶ್ರ ಹಂತದಲ್ಲಿಯೂ ಇವೆ. (ಎಂ.ಎಸ್.ಎನ್.)

**ಕೊರಿಯ:** ಏಷ್ಯಖಂಡದ ಪ್ರಮುಖ ದೇಶಗಳಲ್ಲೊಂದು. ಪ್ರಚಲಿತ ಶಕಾರಂಭಕ್ಕೂ ಅನೇಕ ಶತಮಾನಗಳ ಹಿಂದೆಯೇ ಕೊರಿಯ ಪರ್ಯಾಯ ದ್ವೀಪದ ನಾಗರಿಕತೆ ಪ್ರಾರಂಭ ವಾಗಿತ್ತು. ಪ್ರಚಲಿತವಾಗಿರುವ ಐತಿಹ್ಯಗಳ ಪ್ರಕಾರ ಪ್ರ.ಶ.ಪೂ.2333 ದೇವಾಂಶ ಸಂಭೂತ ಮಾನವನೊಬ್ಬ ಅಲ್ಲಿಯ ಮೊಟ್ಟಮೊದಲನೆಯ ರಾಜನಾದ. ಸೃಷ್ಟಿಕರ್ತನ ಪುತ್ರನಾದ ಹ್ವಾನಂಗ್ ಅಲ್ಲಿಯ ಅರಣ್ಯವನ್ನು ಪ್ರವೇಶಿಸಿ, ಅದುವರೆಗೂ ಕರಡಿಯ ರೂಪದಲ್ಲಿದ್ದು ಆಗತಾನೇ ಸುಂದರ ರೂಪ ಧರಿಸಿದ್ದ ಕನ್ಯೆಯೊಡನೆ ವಿಹರಿಸಿದನೆಂದೂ ಅವಳ ಗರ್ಭಸಂಜಾತ ನಾದ ಟಾಂಗುನ್ ಎಂಬುವನೇ ಕೊರಿಯದ ಪ್ರಪ್ರಥಮ ರಾಜನೆಂದೂ ಈ ಪುರಾಣ ಕಥೆ ತಿಳಿಸುತ್ತದೆ. ಈ ಘಟನೆಯಿಂದ ಕೊರಿಯದ ಮೂಲನಿವಾಸಿಗಳಲ್ಲಿ ಕೆಲವರಾದರೂ ಉತ್ತರ ಏಷ್ಯ ವಿಭಾಗದಿಂದ ಬಂದರೆಂದು ತಿಳಿದುಬರುತ್ತದೆ. ಪ್ರಾಚೀನ ಚೀನದ ಸಂತರಲ್ಲೊಬ್ಬನಾದ ಕಿಜ ಪ್ರ.ಶ.ಪೂ.1122 ರಲ್ಲಿ ತನ್ನ 5000 ಅನುಚರರೊಡನೆ ಕೊರಿಯವನ್ನು ಪ್ರವೇಶಿಸಿ ಅಲ್ಲಿ ಚೀನಿ ಸಂಸ್ಕೃತಿಯನ್ನು ಪ್ರಸಾರ ಮಾಡಿದನೆಂದು ಮತ್ತೊಂದು ಐತಿಹ್ಯ ತಿಳಿಸುತ್ತದೆ. ಕೊರಿಯ ದಲ್ಲಿ ಚೀನೀ ಸಂಸ್ಕೃತಿ ಕಾಲಕ್ರಮೇಣ ವ್ಯಾಪಿಸಿತೆಂಬುದು ಸತ್ಯಸಂಗತಿ. ಪ್ರಾರಂಭದಲ್ಲಿ ಕೊರಿಯದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿದ್ದು ಕ್ರಮೇಣ ವ್ಯವಸಾಯ, ಕಂಚು, ಕಬ್ಬಿಣ ಮುಂತಾದವುಗಳ ಉಪಯೋಗ ಹೆಚ್ಚಾದಂತೆ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಆಚರಣೆಗೆ ಬಂದಂತೆ ತಿಳಿದುಬರುತ್ತದೆ. ಪ್ರ.ಶ.ಪೂ. 400 ರ ವೇಳೆಗೆ ಅಲ್ಲಿ ವ್ಯವಸಾಯ, ಪಶುಪಾಲನೆಗಳು ಅಭಿವೃದ್ಧಿ ಹೊಂದಿದುವು. ಚೀನದ ಷಿನ್ ಮತ್ತು ಹ್ಯಾನ್ ಸಂತತಿಗಳ ಆಳಿಕೆಯ ಕಾಲದಲ್ಲಿ ಕೊರಿಯ ಮತ್ತು ಚೀನ ದೇಶಗಳ ಮಧ್ಯೆ ಸಂಪರ್ಕ ವಿಶೇಷವಾಗಿ ಬೆಳೆಯಿತು. ಪ್ರ.ಶ.ಪೂ. 2 ಮತ್ತು 1 ನೆಯ ಶತಮಾನಗಳಲ್ಲಿ ಚೀನೀಯರು ವಾಯವ್ಯ ಕೊರಿಯದಲ್ಲಿ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದರು. ಚೀನದ ಸಂಸ್ಕೃತಿ ಕೊರಿಯದಲ್ಲಿ ಆ ಕಾಲದಲ್ಲಿ ಪ್ರಸಾರವಾಯಿತು. ಚೀನದ ಹ್ಯಾನ್ ಸಂತತಿಯ ಆಡಳಿತ ಕೊನೆಗೊಂಡ ಅನಂತರ ಕೊರಿಯದಲ್ಲಿ ಮೂರು ರಾಜ್ಯಗಳು ತಲೆಯೆತ್ತಿದವು. (ಬಿ.ಕೆ.ಜಿ.)

ಕೊರಿಯದಲ್ಲಿ ಸ್ಥಾಪಿತವಾದ ಮೂರು ರಾಜ್ಯಗಳ ಆಳಿಕೆಯ ಕಾಲದಿಂದ ಅಲ್ಲಿ ಇತಿಹಾಸ ಯುಗ ಪ್ರಾರಂಭವಾಯಿತು. ಪ್ರ.ಶ.ಪೂ. 57 ರಲ್ಲಿ ಆಗ್ನೇಯ ಭಾಗದಲ್ಲಿ ಸಿಲ್ಲ ಎಂಬ ರಾಜ್ಯವೂ ಪ್ರ.ಶ.ಪೂ.37ರಲ್ಲಿ ಉತ್ತರ ಕೊರಿಯದಲ್ಲಿ ಕೊರ್‍ಯೊ ರಾಜ್ಯವೂ ಪ್ರ.ಶ.ಪೂ.20 ರ ಸುಮಾರಿನಲ್ಲಿ ವಾಯವ್ಯ ಭಾಗದಲ್ಲಿ ಪೆಕ್ಚೆ ರಾಜ್ಯವೂ ಸ್ಥಾಪನೆಯಾದವು. ಈ ಮೂರು ರಾಜ್ಯಗಳೂ ತಮ್ಮ ಆಳಿಕೆಯ 700 ವರ್ಷಗಳ ಉದ್ದಕ್ಕೂ ಪರಸ್ಪರ ಕಾದಾಡುತ್ತಿದ್ದವು. ಸಿಲ್ಲ ರಾಜ್ಯದ ಮೇಲೆ ಜಪಾನ್ ಅನೇಕ ಸಾರಿ ಆಕ್ರಮಣ ನಡೆಸಿದರೂ ಆ ರಾಜ್ಯ ಚೀನದ ಟ್ಯಾಂಗ್ ಸಂತತಿಯ ಸಹಕಾರದಿಂದ ಪ್ರಬಲವಾಗಿತ್ತು. 7ನೆಯ ಶತಮಾನದ ಮಧ್ಯಭಾಗದಿಂದ ಸಿಲ್ಲ ರಾಜ್ಯ ಉಳಿದೆರಡು ರಾಜ್ಯಗಳನ್ನೂ ಸೋಲಿಸಿ ಇಡೀ ಕೊರಿಯವನ್ನು ವಶಪಡಿಸಿ ಕೊಂಡಿತು. ಚೀನದ ಟ್ಯಾಂಗ್ ಮನೆತನದ ಕಾಲದಲ್ಲಿ ಕೊರಿಯ ಮತ್ತು ಚೀನ ದೇಶಗಳ ಮಧ್ಯೆ ವಿಶೇಷವಾಗಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ವಾಣಿಜ್ಯ ಸಂಪರ್ಕವಿತ್ತು. ಚೀನಿ ಸಂಸ್ಕೃತಿಯ ಜೊತೆಗೆ ಬೌದ್ಧಧರ್ಮವೂ ಕೊರಿಯದಲ್ಲಿ ಪ್ರಸಾರವಾಯಿತು. ಕನ್‍ಫ್ಯೂಷಿಯಸ್ ಮತ್ತು ಬೌದ್ಧಮತ ತತ್ತ್ವಗಳನ್ನು ಅಭ್ಯಸಿಸಲು ಅನೇಕ ಮಂದಿ ಕೊರಿಯನ್ನರು ಚೀನ ದೇಶಕ್ಕೆ ಹೋಗುತ್ತಿದ್ದರು. ಅವರಲ್ಲಿ ಅನೇಕರು ಚೀನದಲ್ಲಿ ಉನ್ನತ ಹುದ್ದೆಗಳನ್ನು ಪಡೆದರು. ಮಿಗಿಲಾಗಿ ಕೊರಿಯದ ಬೌದ್ಧಭಿಕ್ಷುಗಳು ಆ ಧರ್ಮದ ತವರಾದ ಭಾರತವನ್ನೂ ಆ ಕಾಲದಲ್ಲಿ ಸಂದರ್ಶಿಸಿದರು. ಚೀನ ಮತ್ತು ಜಪಾನ್ ದೇಶಗಳಂತೆ ಕೊರಿಯದಲ್ಲೂ ಕಲೆಯ ಪ್ರಗತಿಗೆ ಬೌದ್ಧಧರ್ಮದಿಂದ ಸ್ಫೂರ್ತಿ ಲಭ್ಯವಾಯಿತು. ಆ ಕಾಲದಲ್ಲಿ ಚೀನಿ ಲಿಪಿಯೂ ಬರವಣಿಗೆಯೂ ಕೊರಿಯದಲ್ಲಿ ಪ್ರಸಾರವಾದವು. ಕೊರಿಯಕ್ಕೆ ಜಪಾನಿನೊಡನೆ ಸಂಪರ್ಕವಿದ್ದರೂ ಅಲ್ಲಿ ಚೀನಿ ಸಂಸ್ಕೃತಿ ಪ್ರಬಲವಾಗಿತ್ತು.

918ರ ವೇಳೆಗೆ ಸಿಲ್ಲ ಆಡಳಿತ ದುರ್ಬಲವಾಗಿ, ಸೈನ್ಯಾಧಿಕಾರಿ ವಾಂಗ್ ಕೊನ್ ದಂಗೆಯೆದ್ದು ಸ್ವತಂತ್ರನಾದ. 935 ರಲ್ಲಿ ಸಿಲ್ಲ ಸಂತತಿಯ ಕೊನೆಯ ರಾಜ ಸಿಂಹಾಸನ ತ್ಯಾಗ ಮಾಡಿದ. ಅನಂತರ ವಾಂಗ್ ಕೊನ್ ಸ್ಥಾಪಿಸಿದ ಕೊರ್ಯೊಸಾಮ್ರಾಜ್ಯ 1392 ರವರೆಗೂ ಕೊರಿಯದಲ್ಲಿ ಆಳಿಕೆ ನಡೆಸಿತು. ಕೊರಿಯ ಮತ್ತು ಚೀನ ಸಾಮ್ರಾಜ್ಯಗಳ ಮಧ್ಯೆ ಹಿತಕರವಾದ ರಾಜಕೀಯ ಸಂಬಂಧವಿತ್ತು. ಕೊರಿಯ ಚೀನದ ಆಶ್ರಿತರಾಜ್ಯಗಳ ಲ್ಲೊಂದೆಂದು ಪರಿಗಣಿತವಾಗಿದ್ದರೂ ಚೀನಿ ಪ್ರಭುತ್ವ ಕೊರಿಯದ ಮೇಲೆ ಬಿಗಿನೀತಿ ಅನುಸರಿಸುತ್ತಿರಲಿಲ್ಲ. ಆಗಾಗ ಚೀನಕ್ಕೆ ರಾಯಭಾರಿಗಳನ್ನು ಕಳುಹಿಸುವ ಮತ್ತು ಅಲ್ಪ ಸ್ವಲ್ಪ ಕಾಣಿಕೆಯನ್ನು ಚೀನದ ಸಾಮ್ರಾಟನಿಗೆ ಸಲ್ಲಿಸುವ ಪರಿಪಾಟವಿತ್ತು. ಕೊರ್ಯೊ ಆಳಿಕೆಯ ಕಾಲದಲ್ಲಿ ರಾಜ್ಯವನ್ನು ಆಡಳಿತ ಸೌಕರ್ಯಕ್ಕಾಗಿ ಅನೇಕ ಪ್ರಾಂತಗಳನ್ನಾಗಿ ವಿಂಗಡಿಸಲಾಗಿತ್ತು. ರಾಜನಿಂದ ನೇಮಿತರಾದ ಪ್ರಾಂತ್ಯಾಧಿಕಾರಿಗಳು ಅಲ್ಲಿಯ ಆಡಳಿತ ನಡೆಸುತ್ತಿದ್ದರು. ಕನ್‍ಫ್ಯೂಷಿಯಸ್ ಮತ್ತು ಬೌದ್ಧಧರ್ಮಗಳು ಅಲ್ಲಿ ಪ್ರಬಲವಾಗಿದ್ದವು. ಆ ಕಾಲದಲ್ಲಿ ವಾಯವ್ಯ ಸರಹದ್ದಿನ ಬುಡಕಟ್ಟುಗಳ ಜನರಿಂದ ಹಾಗೂ ಜಪಾನಿನ ಕಡಲ್ಗಳ್ಳರಿಂದ ಆಗಾಗ ದರೋಡೆಗಳೂ ಉಪದ್ರವಗಳೂ ಸಂಭವಿಸುತ್ತಿದ್ದುವು.

1231ರಲ್ಲಿ ಮಂಗೋಲರು ಕೊರಿಯ ಪರ್ಯಾಯದ್ವೀಪವನ್ನು ಆಕ್ರಮಿಸಿಕೊಂಡರು. ಕೊರಿಯದ ರಾಜ ಶರಣಾಗತನಾಗಿ ತನ್ನ ಸಿಂಹಾಸನವನ್ನು ಉಳಿಸಿಕೊಂಡದ್ದಲ್ಲದೆ ಅವನ ಉತ್ತರಾಧಿಕಾರಿಗಳು ಮಂಗೋಲ್ ರಾಜಪುತ್ರಿಯನ್ನು ವರಿಸಿದರು. ಆ ಕಾಲದಲ್ಲಿ ಅಲ್ಲಿ ಮಂಗೋಲರ ಹಲವು ಪದ್ಧತಿಗಳು ಆಚರಣೆಗೆ ಬಂದವು. 1274 ಮತ್ತು 1279 ರಲ್ಲಿ ಕುಬ್ಲೈಖಾನ್ ಕೊರಿಯದ ಮೂಲಕ ಜಪಾನಿನ ಮೇಲೆ ಆಕ್ರಮಣ ಮಾಡಿದಾಗ ಕೊರಿಯನರು ಅವನಿಗೆ ವಿಶೇಷ ಕಾಣಿಕೆ ಮತ್ತು ಸೈನ್ಯ ಸಹಾಯವನ್ನು ನೀಡಬೇಕಾಯಿತು. ಕೊನೆಗೆ ಮಂಗೋಲರು ಚೀನದ ಮಿಂಗ್ ಸಂತತಿಯೊಡನೆ ಹೋರಾಟ ಮಾಡಿ ದುರ್ಬಲರಾಗಿದ್ದಾಗ ಕೊರಿಯದ ಸಾಹಸಿ ದಂಡನಾಯಕ ಯೀ–ಟೇಜೋ ಮಂಗೋಲರನ್ನು ಸೋಲಿಸಿದ. ದುರ್ಬಲವಾಗಿದ್ದ ಕೊರ್ಯೊ ಸಂತತಿಯ ಕೊನೆಯ ರಾಜ ಪದಚ್ಯುತನಾದ. 1392 ರಲ್ಲಿ ಯಿ ಸಂತತಿ ಸ್ಥಾಪಿತವಾಯಿತು.

ಹನ್ಯಾಂಗ್ (ಈಗಿನ ಸಿಯೋಲ್) ಯಿ ಸಂತತಿಯ ರಾಜಧಾನಿಯಾಗಿತ್ತು. ಜಪಾನ್ 1910 ರಲ್ಲಿ ಕೊರಿಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವವರೆಗೂ ಈ ಸಂತತಿ ಆಳಿಕೆ ನಡೆಸಿತು. ಆ ವೇಳೆಗೆ ಚೀನದಲ್ಲಿ ಮಂಗೋಲ್ ಸಂತತಿಯನ್ನು ಮಾನ್ಯ ಮಾಡಿದ್ದಲ್ಲದೆ, ಆ ರಾಜ್ಯವನ್ನು ಪುರಾತನ ಹೆಸರಾದ ಕೊರಿಯದ ಬದಲು ಚೊಸೊನ್ ಎಂಬ ಚೀನೀ ಹೆಸರಿನಿಂದ ಕರೆಯಲು ಒಪ್ಪಿದ. ಆ ಕಾಲದಲ್ಲಿ ಬೌದ್ಧಧರ್ಮಕ್ಕೆ ಬದಲಾಗಿ ಕನ್‍ಫ್ಯೂಷಿಯಸ್ ಮತಕ್ಕೆಹೆಚ್ಚುಪ್ರೋತ್ಸಾಹ ನೀಡಲಾಯಿತು. ಚೀನದ ಪಂಚಾಂಗವನ್ನು ಅಳವಡಿಸಿಕೊಳ್ಳಲಾಯಿತು. ಯಿ ಸಂತತಿಯ ಆಳಿಕೆಯಲ್ಲಿ ಕೊರಿಯ ದೇಶ ಬೌದ್ಧಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪುನಶ್ಚೇತನಗೊಂಡಿತು. ಕೊರಿಯನರು ಚೀನದ ಸಂಸ್ಕೃತಿಯನ್ನು ಅನುಕರಿಸಿದರೂ ತಮ್ಮದೇ ಆದ ಸಂಪ್ರದಾಯಗಳನ್ನು ಮುಂದುವರೆಸಿದರು. ಚೀನಿ ಬರೆವಣಿಗೆಯ ಜೊತೆಗೆ ತಮ್ಮದೇ ಆದ ಬರೆವಣಿಗೆಯನ್ನು ಬೆಳೆಸಿಕೊಂಡರು. 1443 ರಲ್ಲಿ ಒನ್‍ಮುನ್ ಲಿಪಿಯನ್ನೂ ಬರೆವಣಿಗೆ ಯಲ್ಲಿ ಬೆಳೆಸಿಕೊಂಡರು. ವೈದ್ಯ, ಖಗೋಳಶಾಸ್ತ್ರ, ಭೂವಿಜ್ಞಾನ, ಇತಿಹಾಸ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ಪ್ರಗತಿಯುಂಟಾಯಿತು. 16ನೆಯ ಶತಮಾನದಲ್ಲಿ ಜಪಾನಿನ ಷೋಗೂನ್ ಹಿಡೆಯೊಷಿ ಕೊರಿಯದ ಮೇಲೆ ಎರಡು ಬಾರಿ ಆಕ್ರಮಣ ನಡೆಸಿದ. 1592ರ ಆಕ್ರಮಣ ಏಳುವರ್ಷಗಳ ಕಾಲ ಮುಂದುವರಿಯಿತು. ಈ ಅವಧಿಯ ಕೊನೆಯಲ್ಲಿ ಕೊರಿಯನರು ಮೊಸಳೆಯಾಕಾರದಲ್ಲಿ ಹೊಸದಾಗಿ ಕಟ್ಟಿದ ನೌಕೆಗಳ ಸಹಾಯದಿಂದ ಜಪಾನಿನ ನೌಕಾದಳ ವನ್ನು ಸೋಲಿಸಿ ಹಿಂದಿರುಗಿಸಿದರು. 1644 ರಲ್ಲಿ ಚೀನದಲ್ಲಿ ಸ್ಥಾಪಿತವಾದ ಮಂಚೂ ಸಂತತಿ ಕೊರಿಯವನ್ನು ತನ್ನ ಆಶ್ರಿತರಾಜ್ಯವಾಗಿ ಪರಿಗಣಿಸಿತು. ಆದರೂ ಕೊರಿಯಕ್ಕೆ ಒಳಾಡಳಿತದಲ್ಲಿ ಸ್ವಾತಂತ್ರ್ಯವಿತ್ತು. 17 ನೆಯ ಶತಮಾನದ ಮಧ್ಯಭಾಗದಲ್ಲಿ ಕೊರಿಯ ಆಡಳಿತದಲ್ಲಿ ಒಡಕುಗಳುಂಟಾಗಿ ಯಿ ಸಂತತಿಯ ಆಡಳಿತ ದುರ್ಬಲವಾಯಿತು. ಆ ವೇಳೆಗೆ ಪಾಶ್ಚಾತ್ಯರು ಕೊರಿಯದೊಡನೆ ಸಂಪರ್ಕ ಬೆಳೆಸಿದರು. ಕ್ರೈಸ್ತಧರ್ಮವೂ ಕೊರಿಯ ಪರ್ಯಾಯ ದ್ವೀಪವನ್ನು ಪ್ರವೇಶಿಸಿತು.

1880 ರವರೆಗೂ ಕೊರಿಯ ದೇಶ ಪಾಶ್ಚಾತ್ಯರ ಸಂಪರ್ಕಕ್ಕೆ ಅವಕಾಶ ಕೊಟ್ಟಿರಲಿಲ್ಲ. ಕ್ರಮೇಣ ಫ್ರಾನ್ಸ್ ಮತ್ತು ಅಮೆರಿಕಗಳು ಸಂಪರ್ಕ ಸ್ಥಾಪಿಸಿಕೊಂಡು ವಾಣಿಜ್ಯ ಒಪ್ಪಂದ ಗಳನ್ನೇರ್ಪಡಿಸಿಕೊಂಡವು. ಜಪಾನ್ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ಹವಣಿಸಿ ತನಗೆ ಅನುಕೂಲವಾಗುವ ಒಪ್ಪಂದವೊಂದಕ್ಕೆ ಕೊರಿಯವನ್ನು ಬಲಾತ್ಕರಿಸಿ ಒಪ್ಪಿಸಿತು. ಪರ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧ ಹಾಗೂ ಒಪ್ಪಂದಗಳ ಪರಿಣಾಮವಾಗಿ ಕೊರಿಯದಲ್ಲಿ ಜಾಗೃತಿ ಉಂಟಾಯಿತು. ಪ್ರಗತಿವಾದಿಗಳು, ಸಂಪ್ರದಾಯವಾದಿಗಳು ಎಂಬ ಎರಡು ಗುಂಪುಗಳಾದವು. ಪಾಶ್ಚಾತ್ಯರನ್ನು ಅನುಕರಿಸಬೇಕೆಂಬ ಒತ್ತಾಯವನ್ನು ಪ್ರಗತಿವಾದಿಗಳು ರಾಜನ ಮುಂದಿಟ್ಟರು. ಇದನ್ನು ಸಂಪ್ರದಾಯವಾದಿಗಳು ವಿರೋಧಿಸಿದರು. ಪ್ರಗತಿವಾದಿ ಜನರು ರಾಜನ ವಿರುದ್ಧ 1884ರಲ್ಲಿ ದಂಗೆಯೆದ್ದರು. ಚೀನದ ಸಹಾಯದಿಂದ ದಂಗೆಯನ್ನಡ ಗಿಸಲಾಯಿತು. ಅದೇ ಸಮಯದಲ್ಲಿ ಸುಧಾರಣಾವಾದಿಗಳ ಸಹಾಯಕ್ಕಾಗಿ ಜಪಾನ್ ತನ್ನ ಸೈನ್ಯವನ್ನು ಕೊರಿಯಕ್ಕೆ ಕಳುಹಿಸಿತು. 1885ರಲ್ಲಿ ಚೀನ ಮತ್ತು ಜಪಾನ್ ಕೊರಿಯಕ್ಕೆ ಸಂಬಂಧಿಸಿದಂತೆ ಟೀಯೆಂಟ್ಸಿನ್ ಒಪ್ಪಂದ ಮಾಡಿಕೊಂಡವು. ಆ ಒಪ್ಪಂದದ ಪ್ರಕಾರ ಚೀನ ಮತ್ತು ಜಪಾನ್ ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದೂ ಕೊರಿಯ ತನ್ನದೇ ಆದ ಸೈನ್ಯದೊಂದಿಗೆ ಸ್ವತಂತ್ರವಾಗಿರತಕ್ಕದ್ದೆಂದೂ ಒಂದು ವೇಳೆ ಆವಶ್ಯಕತೆಯುಂಟಾ ದರೆ ಜಪಾನಿನ ಅಥವಾ ಚೀನದ ಸೈನ್ಯ ಮಧ್ಯೆ ಪ್ರವೇಶಿಸಿ, ಶಾಂತಿಯೇರ್ಪಟ್ಟ ಕೂಡಲೇ ಹಿಂದಿರುಗಬೇಕೆಂದೂ ಪರಸ್ಪರ ಒಪ್ಪಿಕೊಂಡವು. ಈ ಒಪ್ಪಂದ ಜಾರಿಯಲ್ಲಿದ್ದ 9 ವರ್ಷಗಳ ಕಾಲ ಜಪಾನ್ ಸಣ್ಣ ಪುಟ್ಟ ನೆಪ ಹೂಡಿ ಕೊರಿಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. 1894ರಲ್ಲಿ ಜಪಾನ್ ಕೊರಿಯದ ಮುಖಾಂತರ ಚೀನದ ಮೇಲೆ ಯುದ್ಧ ಹೂಡಿ ಅತ್ಯಲ್ಪ ಅವಧಿಯಲ್ಲಿ ಜಯ ಗಳಿಸಿತು. ಅನಂತರ ಅದು ಸುಧಾರಣೆಯ ನೆಪದಲ್ಲಿ ಕೊರಿಯದ ರಾಜನ ಅಧಿಕಾರವನ್ನು ಮೊಟಕು ಮಾಡಿತಲ್ಲದೆ ತನ್ನ ಪರವಾಗಿದ್ದ ಜನರನ್ನೊಳಗೊಂಡ ಮಂತ್ರಿಮಂಡಲವನ್ನು ಕೊರಿಯದಲ್ಲಿ ನೇಮಿಸಿತು. 1896 ರಲ್ಲಿ ಕೊರಿಯವು ರಷ್ಯದ ಸಹಾಯದಿಂದ ಜಪಾನಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿತು. ಚೀನ, ಜಪಾನ್ ಮತ್ತು ರಷ್ಯಗಳನ್ನನುಕರಿಸಿ ಕೊರಿಯದ ರಾಜನನ್ನು ಚಕ್ರವರ್ತಿ ಎಂದೂ ಕೊರಿಯವನ್ನು ಟೆ ಹ್ಯಾನ್ ಸಾಮ್ರಾಜ್ಯವೆಂದೂ ಕರೆಯಲಾಯಿತಲ್ಲದೆ ಆ ದೇಶ ಅಲಿಪ್ತನೀತಿಯನ್ನು ಅನುಸರಿಸುವುದಾಗಿಯೂ ಘೋಷಿಸಲಾಯಿತು. ಆದರೆ ಜಪಾನ್ ಇದಕ್ಕೆ ಮನ್ನಣೆ ನೀಡಲಿಲ್ಲ.

1904ರಲ್ಲಿ ರಷ್ಯ, ಜಪಾನ್‍ಗಳ ನಡುವೆ ನಡೆದ ಯುದ್ಧದಲ್ಲಿ ಜಪಾನ್ ಕೊರಿಯವನ್ನು ಆಕ್ರಮಿಸಿತು. ಮರುವರ್ಷ ರಷ್ಯ ಸೋತು ಜಪಾನಿನೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಅದು ಕೊರಿಯದ ಮೇಲೆ ಜಪಾನಿನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿತು. ಗ್ರೇಟ್ ಬ್ರಿಟನ್ ಮತ್ತು ಅಮೆರಿಕಗಳು ಅದನ್ನು ಮಾನ್ಯ ಮಾಡಿದವು. 1906 ರಲ್ಲಿ ರಾಜಕುಮಾರ ಇಟೊಹಿರೊಬುಮಿ ಕೊರಿಯದಲ್ಲಿ ಜಪಾನಿನ ಪ್ರಪ್ರಥಮ ಪ್ರತಿನಿಧಿಯಾಗಿ ಸಿಯೋಲಿಗೆ ಬಂದ. ಕೊರಿಯದ ಸೈನ್ಯವನ್ನು ವಿಸರ್ಜಿಸಲಾಯಿತು. ಪೊಲೀಸ್, ನ್ಯಾಯಾಂಗ, ಬಂದೀಖಾನೆ, ವಿದೇಶ ವ್ಯವಹಾರ, ಹಣಕಾಸು ಮೊದಲಾದ ಎಲ್ಲ ಮುಖ್ಯ ಅಧಿಕಾರಗಳನ್ನೂ ಜಪಾನ್ ತನ್ನ ಹತೋಟಿಗೆ ತೆಗೆದುಕೊಂಡಿತು. ಕೊರಿಯ ಜಪಾನಿನ ಭಾಗವೆಂಬ ಸೇರ್ಪಡೆಯ ಬಲಾತ್ಕಾರ ಒಪ್ಪಂದಕ್ಕೆ 1910ರಲ್ಲಿ ಯಿ ಸಂತತಿಯ ಕೊನೆಯ ರಾಜ ಸಹಿ ಹಾಕಬೇಕಾಯಿತು. ರಾಜನಿಗೆ ಜೀವನಾಂಶವನ್ನು ಕೊಡಲಾಯಿತು. ಜಪಾನ್ ಅಲ್ಲಿ ಗವರ್ನರ್ ಜನರಲ್ ಒಬ್ಬನನ್ನು ನೇಮಿಸಿ ಕೊರಿಯದ ಆಡಳಿತವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತು. ಜಪಾನೀ ಪೊಲೀಸರೂ ಸೈನಿಕರೂ ಹೆಚ್ಚು ಸಂಖ್ಯೆಯಲ್ಲಿ ನೇಮಕವಾದರು.

ಜಪಾನಿನ ಆಕ್ರಮಣಕ್ಕೊಳಗಾದ ಕೂಡಲೇ ಕೊರಿಯದಲ್ಲಿ ರಾಷ್ಟ್ರೀಯ ಮನೋಭಾವ ತೀವ್ರವಾಯಿತು. ಒಂದನೆಯ ಮಹಾಯುದ್ಧಕ್ಕೆ ಹಿಂದೆ ಕೊರಿಯನರು ಜಪಾನಿನ ವಿರುದ್ಧ ಅನೇಕ ಬಾರಿ ದಂಗೆಯೆದ್ದರು. ಜಪಾನ್ ಈ ದಂಗೆಗಳನ್ನೆಲ್ಲ ಅಡಗಿಸಿತು. ಯುದ್ಧಾನಂತರ ಕೊರಿಯನರು ಜಪಾನಿನ ಸಂಚು ಮತ್ತು ಅಸಹಕಾರವನ್ನು ಮುಂದುವರಿಸಿದರು. ಜಪಾನು ಬಿಗಿಮುಷ್ಟಿಯ ನೀತಿಯನ್ನನುಸರಿಸಿ ಕೊರಿಯನರ ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕಿತು. 1919 ರಲ್ಲಿ ಜಪಾನಿನ ವಿರುದ್ಧ ಕ್ರಾಂತಿಯೆದ್ದ ಕೊರಿಯನರು ಸ್ವಾತಂತ್ರ್ಯ ಘೋಷಿಸಿಕೊಳ್ಳಲು ಹವಣಿಸಿದರು. ಜಪಾನ್ ಉಗ್ರಕ್ರಮದಿಂದ ಕ್ರಾಂತಿಯನ್ನು ಹತ್ತಿಕ್ಕಿತು. ಸಹಸ್ರಾರು ಮಂದಿ ಬಂಧನಕ್ಕೊಳಗಾದರು. ಅನೇಕರು ದೇಶದಿಂದ ಹೊರದೂಡಲ್ಪಟ್ಟರು. ಕೊರಿಯದ ರಾಷ್ಟ್ರಭಕ್ತರು ಸೈಬೀರಿಯ, ಚೀನ ಮತ್ತು ಅಮೆರಿಕಗಳಲ್ಲಿ ಸಂಘಗಳನ್ನು ಸ್ಥಾಪಿಸಿಕೊಂಡು ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಿದರು. ಅನೇಕ ಮಂದಿ ಕೊರಿಯನರು ಷಾಂಘೈ ನಗರದಲ್ಲಿ ಸೇರಿ ಕೊರಿಯದ ರಾಷ್ಟ್ರೀಯ ಸರ್ಕಾರವನ್ನು ರಚಿಸಿಕೊಂಡರು. ಪ್ರಿನ್ಸ್‍ಟನ್ ವಿಶ್ವವಿದ್ಯಾಲಯ ದಲ್ಲಿ ವ್ಯಾಸಂಗ ಮಾಡಿದ ಸಿಂಗ್‍ಮನ್ ರ್ಹೀ ಅವರಲ್ಲೊಬ್ಬ. ಕೊರಿಯದ ರಾಷ್ಟ್ರಭಕ್ತರು ಪ್ಯಾರಿಸ್ ಸಮ್ಮೇಳನದ ಮುಂದೆಯೂ ಅನಂತರ ಸ್ಥಾಪಿತವಾದ ಲೀಗ್ ಆಫ್ ನೇಷನ್ಸ್ ಮುಂದೆಯೂ ತಮ್ಮ ಬೇಡಿಕೆಯನ್ನು ಮಂಡಿಸಿದರು. ಕ್ರಾಂತಿಕಾರಿ ರಾಷ್ಟ್ರೀಯರು ಜಪಾನ್ ಚಕ್ರವರ್ತಿಯ ಹತ್ಯೆಗೂ ಪ್ರಯತ್ನಪಟ್ಟರು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ವಿರುದ್ಧ ಕೊರಿಯನರ ಚಳವಳಿ ಮುಂದುವರಿಯಿತು. ಕೊರಿಯಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವುದಾಗಿ 1943ರ ಕೈರೋ ಘೋಷಣೆಯಲ್ಲಿ ಬ್ರಿಟನ್, ಚೀನ ಮತ್ತು ಅಮೆರಿಕಗಳು ವಾಗ್ದಾನ ಮಾಡಿದವು. 1945ರಲ್ಲಿ ಜರ್ಮನಿ ಸೋತು ಐರೋಪ್ಯ ಕ್ಷೇತ್ರದಲ್ಲಿ ಯುದ್ಧ ಮುಕ್ತಾಯವಾದ ಮೇಲೆ ಸೋವಿಯತ್ ಸೈನ್ಯ ಆಗಸ್ಟ್ 12ರಂದು ಉತ್ತರದ ಕಡೆಯಿಂದಲೂ ಅಮೆರಿಕನ್ ಸೈನ್ಯ ಸೆಪ್ಟೆಂಬರ್ 9 ರಂದು ದಕ್ಷಿಣದ ಕಡೆಯಿಂದಲೂ ಕೊರಿಯವನ್ನು ಪ್ರವೇಶಿಸಿದುವು. ಜಪಾನಿನ ಶರಣಾಗತಿಯನ್ನು ನಿರ್ವಹಿಸುವ ಸೇನಾಕಾರ್ಯಾಚರಣೆಯ ಸಲುವಾಗಿ 38 ನೆಯ ಅಕ್ಷಾಂಶದ ಉತ್ತರಕ್ಕೆ ಸೋವಿಯತ್ ಪ್ರದೇಶವೆಂದೂ ಅದರ ದಕ್ಷಿಣಕ್ಕೆ ಅಮೆರಿಕನ್ ಪ್ರದೇಶವೆಂದೂ ಪರಿಗಣಿಸಲಾಯಿತು. ಅನಂತರ ಉತ್ತರ ದಕ್ಷಿಣ ಭಾಗಗಳಲ್ಲಿ ಪ್ರತ್ಯೇಕ ಕೊರಿಯನ್ ಸರ್ಕಾರಗಳು ಸ್ಥಾಪಿತವಾದುವು.

**ಇತಿಹಾಸ:** 1910–45ರ ವರೆಗೆ ಕೊರಿಯ ರಾಜಪ್ರಭುತ್ವ ಜಪಾನಿನ ಅಧೀನವಾಗಿತ್ತು. ಎರಡನೆಯ ಮಹಾಯುದ್ಧದ ಅಂತಿಮ ಘಟ್ಟದಲ್ಲಿ ಸೋವಿಯತ್ ಸೈನ್ಯಗಳು ಕೊರಿಯದ ಉತ್ತರ ಭಾಗವನ್ನೂ ಅಮೆರಿಕನ್ ಸೈನ್ಯಗಳು ದಕ್ಷಿಣ ಭಾಗವನ್ನೂ ಆಕ್ರಮಿಸಿಕೊಂಡವು. ಕೊರಿಯದ ಎರಡು ಭಾಗಗಳನ್ನು ಒಂದುಗೂಡಿಸುವ ಪ್ರಯತ್ನಗಳು ಸಫಲವಾಗಲಿಲ್ಲ. 1948ರಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ದಕ್ಷಿಣ ಕೊರಿಯದಲ್ಲಿ ಚುನಾವಣೆಗಳು ನಡೆದು ರಾಷ್ಟ್ರೀಯ ಸಭೆಯಿಂದ ಸಂವಿಧಾನ ರಚನೆಗೊಂಡು, ಗಣರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಸಿಂಗ್‍ಮನ್ ರ್ಹೀ ದಕ್ಷಿಣ ಕೊರಿಯದ ಅಧ್ಯಕ್ಷರಾಗಿ ಚುನಾಯಿತರಾದರು.

ಉತ್ತರ–ದಕ್ಷಿಣ ಕೊರಿಯಗಳ ನಡುವೆ ವಿರಸ ಬೆಳೆದು 1950ರಲ್ಲಿ ಯುದ್ಧ ಪ್ರಾರಂಭವಾಯಿತು. ಉತ್ತರ ಕೊರಿಯಕ್ಕೆ ಚೀನವೂ ದಕ್ಷಿಣ ಕೊರಿಯಕ್ಕೆ ವಿಶ್ವಸಂಸ್ಥೆಯ ಹೆಸರಿನಲ್ಲಿ ಅಮೆರಿಕವೂ ಸೇರಿದಂತೆ 16 ರಾಷ್ಟ್ರಗಳ ಸೈನ್ಯಗಳೂ ಬೆಂಬಲ ನೀಡಿದುವು. 1953ರಲ್ಲಿ ಎರಡೂ ಪಕ್ಷಗಳ ನಡುವೆ ಪಾನ್‌ಮುಂಜಾಮ್‌ನಲ್ಲಿ ಕದನವಿರಾಮ ಒಪ್ಪಂದ ವಾಯಿತು. ಈ ಸಂದರ್ಭದಲ್ಲಿ ಎರಡೂ ಕಡೆ ನಿಶ್ಶಸ್ತ್ರೀಕೃತ ಪ್ರದೇಶದಲ್ಲಿ ಪ್ರಕೃತದ ಗಡಿ ರೇಖೆಯನ್ನು ನಿರ್ಧರಿಸಲಾಯಿತು.

ಆದರೂ ದಕ್ಷಿಣ ಕೊರಿಯದಲ್ಲಿ ಶಾಂತಿ ನೆಲೆಸಿರಲಿಲ್ಲ. ಅಧ್ಯಕ್ಷರಾಗಿದ್ದ ಸಿಂಗಮನ್ ರ್‍ಹೀ ರಾಜೀನಾಮೆ ನೀಡಿದ ಮೇಲೆ (1960) ಪರಿಸ್ಥಿತಿ ಗೊಂದಲಮಯವಾಗಿ ಸೈನ್ಯದ ಕ್ಷಿಪ್ರಾಕ್ರಮಣ ನಡೆಯಿತು (1961). 1963ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಅಸೈನಿಕ ಸರ್ಕಾರ ಪುನಃ ಸ್ಥಾಪಿತವಾಗಿ ಪಾರ್ಕ್‌ಚುಂಗ್ ಹೀ ಅಧ್ಯಕ್ಷರಾದರು. ಇವರ ಕಾಲದಲ್ಲಿ ಅನೇಕ ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳಾದವು. 1965ರಲ್ಲಿ ಜಪಾನಿ ನೊಡನೆ ಪ್ರಸಾಮಾನ್ಯ ಸಂಬಂಧ ಸ್ಥಾಪಿಸುವ ಕೌಲಿಗೆ ಸಹಿಯಾಯಿತು. ಇದರಿಂದ ಅವರ ಜನಪ್ರಿಯತೆ ಕುಗ್ಗಿತು. 1967ರಲ್ಲಿ ಮತ್ತೆ ಹೆಚ್ಚಿನ ಬಹುಮತಗಳಿಸಿ ಅಧ್ಯಕ್ಷರಾಗಿ ಚುನಾಯಿತರಾ ದರು. 1971ರ ಚುನಾವಣೆಯ ಅನಂತರವೂ ಅವರೇ ಅಧಿಕಾರದಲ್ಲಿ ಮುಂದುವರಿದಾಗ ಪರಿಸ್ಥಿತಿ ಮತ್ತೆ ಪ್ರಕ್ಷುಬ್ಧವಾಯಿತು. ಸ್ವಲ್ಪ ಕಾಲ ಲಷ್ಕರಿ ಶಾಸನ ಜಾರಿಗೆ ಬಂದು ಮತ್ತೆ ಚುನಾವಣೆಗಳು ನಡೆದವು. ಸಂವಿಧಾನದಲ್ಲಿ ಬದಲಾವಣೆಗಳಾದವು. ಇದಕ್ಕೆ ಮುಂಚೆ, 1972 ಜುಲೈಯಲ್ಲಿ ಉತ್ತರಕೊರಿಯದೊಂದಿಗೆ ಒಪ್ಪಂದವೊಂದನ್ನು ಮಾಡಿಕೊಳ್ಳಲಾಯಿತು. ಉತ್ತರ–ದಕ್ಷಿಣ ಕೊರಿಯಗಳ ಏಕೀಕರಣಕ್ಕೆ ಶಾಂತಿಯುತ ವಿಧಾನಗಳನ್ನೇ ಅನುಸರಿಸಬೇಕು, ಪರಸ್ಪರ ಅಪಪ್ರಚಾರ ನಿಲ್ಲಬೇಕು, ಉತ್ತರ–ದಕ್ಷಿಣ ಕೊರಿಯಗಳ ರಾಜಧಾನಿಗಳ ನಡುವೆ ನೇರ ಸಂಪರ್ಕ ಏರ್ಪಡಬೇಕು, ಎರಡೂ ಸರ್ಕಾರಗಳ ನಡುವೆ ಹೆಚ್ಚಿನ ಸಂಬಂಧ ಬೆಳೆಯ ಬೇಕು ಎಂಬಿತ್ಯಾದಿ ವಿಚಾರಗಳನ್ನು ಒಪ್ಪಂದದಲ್ಲಿ ಹೇಳಲಾಗಿದೆ. ಆದರೆ ಎರಡು ಭಾಗಗಳನ್ನೂ ಒಂದುಗೂಡಿಸುವ ಪ್ರಯತ್ನಗಳು ಇದುವರೆಗೂ ಫಲಕಾರಿಯಾಗಿಲ್ಲ. ಪ್ರಯತ್ನಗಳು ಮುಂದುವರಿಯುತ್ತಿವೆ. 1950ರ ಅನಂತರ ಶಾಂತಿಮಾತುಗಳು ನಡೆದರೂ ಸಣ್ಣ–ಪುಟ್ಟ ಘರ್ಷಣೆಗಳು ನಡೆಯುತ್ತಲೇ ಇದ್ದವು. 1970–80ರ ನಡುವೆ ಈ ಎರಡು ಪ್ರಾಂತಗಳ ಏಕೀಕರಣಕ್ಕೆ ಸಂಬಂಧಿಸಿದ ಹಾಗೆ ಮಾತುಕತೆಗಳು ನಡೆಯುತ್ತಿವೆ. 1991ರಲ್ಲಿ ದಕ್ಷಿಣ ಮತ್ತು ಉತ್ತರ ಕೊರಿಯ ಪರಸ್ಪರ ಘರ್ಷಣೆಗಳಲ್ಲಿ ಶಸ್ತ್ರಾಸ್ತ್ರಗಳನ್ನು ಬಳಸದಿರಲು, ಪರಸ್ಪರರ ಆಳಿಕೆಯನ್ನು ಮಾನ್ಯ ಮಾಡಲು ಸಹ ಒಪ್ಪಿವೆ. 2000ದರಲ್ಲಿ ಈ ಎರಡು ಪ್ರಾಂತಗಳ ಮುಖಂಡರು ಮೊದಲಬಾರಿಗೆ ನೇರ ಮಾತುಕತೆ ನಡೆಸಿದ್ದಾರೆ. 2000ರಿಂದ ಈ ಎರಡು ಪ್ರಾಂತಗಳ ಜನತೆ ತಮ್ಮ ಬಂಧು–ಬಾಂಧವರನ್ನು ಭೇಟಿಯಾಗಲು ಅವಕಾಶ ಕಲ್ಪಿಸಲಾಗಿದೆ. ಭಾವನಾತ್ಮಕವಾದ ವಿಚಾರಗಳಲ್ಲಿ ಆಡಳಿತ ಹೆಚ್ಚು ತಲೆಹಾಕದಿರಲು ಪರಸ್ಪರ ಒಪ್ಪಿವೆ. ಆದರೂ ಈ ಎರಡು ಪ್ರಾಂತಗಳ ಏಕೀಕರಣಕ್ಕೆ ಪೂರಕವಾದ ರಾಜಕೀಯ ನೆಲಗಟ್ಟು ರೂಪಿತವಾಗಬೇಕಾಗಿದೆ. (ಜಿ.ಆರ್.ಆರ್.)

**ದಕ್ಷಿಣ ಕೊರಿಯ:** ಕೊರಿಯ ಪರ್ಯಾಯ ಭೂಭಾಗದ ದಕ್ಷಿಣ ಭಾಗವನ್ನು ಒಳಗೊಂಡಿರುವ ಗಣರಾಜ್ಯ. ಸಿಯೋಲ್ ಇದರ ರಾಜಧಾನಿ. ಬಹುತೇಕ ಕೊರಿಯನ್ನರು ಬೌದ್ಧಧರ್ಮಾನುಯಾಯಿಗಳು. ಕ್ರೈಸ್ತರು ಮತ್ತು ಕನ್‌ಫ್ಯೂಷಿಯನ್ ಧರ್ಮಾವಲಂಬಿಗಳೂ ಇದ್ದಾರೆ. ಭಾಷೆ ಕೊರಿಯ. ಇವರ ಬಳಕೆಯ ಹಣ ವನ್.

ಕೊರಿಯ ಗಣರಾಜ್ಯ 1948ರಲ್ಲಿ ಸ್ಥಾಪಿತವಾಯಿತು. ಈ ಭೂಭಾಗವನ್ನು ಎರಡನೆಯ ಮಹಾಯುದ್ಧ ಕಾಲದಲ್ಲಿ ಅಮೆರಿಕ ತನ್ನ ವಶಕ್ಕೆ ತೆಗೆದುಕೊಂಡಿತ್ತು. ಉತ್ತರ ಕೊರಿಯನ್ನರು ಈ ಪ್ರಾಂತವನ್ನು ವಶಪಡಿಸಿಕೊಳ್ಳಲು ನಡೆಸಿದ ಪ್ರಯತ್ನವನ್ನು ವಿಶ್ವಸಂಸ್ಥೆಯ ತುರ್ತುಪಡೆ ವಿಫಲಗೊಳಿಸಿತು. 1953ರಲ್ಲಿ ಉತ್ತರ ಮತ್ತು ದಕ್ಷಿಣ ಕೊರಿಯ ಆಡಳಿತ ಯುದ್ಧನಿಲುಗಡೆಗೆ ಒಪ್ಪಿದವು. ಅಮೆರಿಕದ ಆರ್ಥಿಕ ನೆರವಿನೊಂದಿಗೆ ದಕ್ಷಿಣ ಕೊರಿಯ ತನ್ನ ಪ್ರಗತಿ ಸಾಧಿಸುತ್ತಿದೆ. ಇಲ್ಲಿಯ ಆರ್ಥಿಕ ವಲಯದ ರಫ್ತಿಗೆ ಹೆಚ್ಚು ಮಹತ್ತ್ವ ನೀಡಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಬಾಂಕಿಮೂನ್ ಅವರು ಕಾರ್ಯನಿರ್ವಹಿಸುತ್ತಿದ್ದಾರೆ (2007ರಿಂದ).

1997ರ ಸಾರ್ವತ್ರಿಕ ಚುನಾವಣೆಯಲ್ಲಿ ಕಿಮ್ ಡೇ ಜುಂಗ್ ದಕ್ಷಿಣ ಕೊರಿಯದ ಅಧ್ಯಕ್ಷರಾದರು. 1990ರಲ್ಲಿ ಇತರ ಏಷ್ಯದ ರಾಷ್ಟ್ರಗಳಂತೆ ದಕ್ಷಿಣ ಕೊರಿಯವೂ ಆರ್ಥಿಕ ಕುಸಿತಕ್ಕೆ ಒಳಗಾಗಿದ್ದರೂ 2000ದ ವೇಳೆಗೆ ಚೇತರಿಸಿಕೊಂಡಿತು.

**ಉತ್ತರ ಕೊರಿಯ:** ಕೊರಿಯ ಪರ್ಯಾಯ ಭೂ ಪ್ರದೇಶದ ಉತ್ತರ ಪ್ರಾಂತ್ಯ. ರಾಜಧಾನಿ: ಪ್ಯಾಂಗ್‌ಯಾಂಗ್. ಜನಾಂಗೀಯವಾಗಿ ಎಲ್ಲರೂ ಕೊರಿಯನ್ನರು. ಭಾಷೆ: ಕೊರಿಯ.

1948ರಲ್ಲಿ ಉತ್ತರ ಕೊರಿಯ ಸ್ಥಾಪನೆಯಾದಾಗ ಕಿಮ್ ಸುಂಗ್ ಅಧಿಕಾರ ವಹಿಸಿ ಕೊಂಡಿದ್ದರು. 1996ರಲ್ಲಿ ರಷ್ಯದ ಆಕ್ರಮಣವಾದಾಗ ಇಲ್ಲಿನ ಭೂಮಾಲೀಕರ ಭೂಮಿಯನ್ನು ಬಡ ರೈತರಿಗೆ ಹಂಚಲಾಯಿತು. ಇಲ್ಲಿ ಕಮ್ಯುನಿಸ್ಟ್ ಆಡಳಿತವೇರ್ಪಟ್ಟ ಕಾರಣದಿಂದಾಗಿ ಇಲ್ಲಿನ ಕೈಗಾರಿಕೆಗಳು ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟವು. 1953–56ರ ನಡುವೆ ಇಲ್ಲಿನ ಕೃಷಿ ಭೂಮಿಯು ಸಾಮೂಹಿಕ ವ್ಯವಸಾಯ ಪದ್ಧತಿಗೆ ಒಳಪಟ್ಟಿತು. 1994ರ ತನಕ ಈ ದೇಶದ ಆಡಳಿತವು ಕಿಮ್ ಸುಂಗ್‌ರ ಸರ್ವಾಧಿಕಾರಕ್ಕೆ ಒಳಪಟ್ಟಿತ್ತು. ಉತ್ತರ ಕೊರಿಯ ಅಣುಬಾಂಬ್ ಹೊಂದಿದೆ ಎಂಬ ಆರೋಪದಿಂದಾಗಿ ಅಮೆರಿಕ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳ ಅವಕೃಪೆಗೆ ಗುರಿಯಾಗಿದೆ. 1995–98 ರ ನಡುವೆ ಈ ದೇಶವು ಆಹಾರದ ಸಮಸ್ಯೆಯನ್ನು ಎದುರಿಸಬೇಕಾಯಿತು. 1994ರಲ್ಲಿ ಕಿಮ್ ಇಲ್ ಸುಂಗ್‌ರ ಅನಂತರ ಅವರ ಮಗ ಎರಡನೆಯ ಕಿಮ್ ಜಂಗ್ ಉತ್ತರ ಕೊರಿಯದ ಪರಮೋಚ್ಚ ನಾಯಕರಾಗಿದ್ದಾರೆ.

ಉತ್ತರ ಕೊರಿಯ ಕಮ್ಯುನಿಸ್ಟ್ ರಾಷ್ಟ್ರವಾಗಿದ್ದರೆ, ದಕ್ಷಿಣ ಕೊರಿಯ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಶೀತಲ ಯುದ್ಧ ಕಾಲದಲ್ಲಿ ವಿಶ್ವದ ಎರಡು ಬಣಗಳ ನಡುವಿನ ಯುದ್ಧ ಭೂಮಿಯಂತಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಎರಡು ರಾಷ್ಟ್ರಗಳು ಮತ್ತೆ ಒಂದಾಗುವುದರತ್ತ ಸಾಗುತ್ತಿರುವುದು ಸಂತಸದ ವಿಷಯವಾಗಿದೆ. (ಸಿ.ಜಿ.ಎಸ್.)

**ಕೊಲಂಬಸ್, ಕ್ರಿಸ್ಟೋಫರ್:** 1451–1506. ಅಮೆರಿಕ ಖಂಡವನ್ನು ಕಂಡುಹಿಡಿದವನೆಂದು ಪ್ರಸಿದ್ಧನಾಗಿರುವ ಪರಿಶೋಧಕ ಸಾಹಸಿ. ತಾನು ಗುರುತಿಸಿದ ನೆಲ ಅಮೆರಿಕ ಎಂಬ ಪ್ರಜ್ಞೆ ಆಗ ಕೊಲಂಬಸನಿಗೆ ಇರಲಿಲ್ಲ. ಅಂದಿಗೆ ಯುರೋಪಿಗೂ ಏಷ್ಯಕ್ಕೂ ಸಂಪರ್ಕವಿದ್ದುದು ಪೂರ್ವದ ಭೂಮಾರ್ಗಗಳಿಂದ ಮಾತ್ರ. ಸಾಂಬಾರ ಪದಾರ್ಥಗಳು, ಶ್ರೀಗಂಧ, ಏಲಕ್ಕಿ ಮುಂತಾದವುಗಳ ವ್ಯಾಪಾರವೆಲ್ಲ ಬಹುಪಾಲು ಈ ಮಾರ್ಗಗಳಿಂದಲೇ ನಡೆಯುತ್ತಿದ್ದುವಲ್ಲದೆ ಇವೆಲ್ಲ ಅರಬರ ವಶದಲ್ಲಿದ್ದವು. ಆದ್ದರಿಂದ ಪೂರ್ವರಾಷ್ಟ್ರಗಳಿಗೆ ಅದರಲ್ಲೂ ಭಾರತಕ್ಕೆ ಹೊಸದೊಂದು ಮಾರ್ಗವನ್ನು ಕಂಡುಹಿಡಿಯುವುದರ ಕಡೆ ಯುರೋಪಿನ ಸಾಹಸಿಗಳ ಗಮನ ಹರಿದಿತ್ತು. ಭೂಮಿ ಗುಂಡಾಗಿರುವುದರಿಂದ ಅಟ್ಲಾಂಟಿಕ್ ಸಾಗರದಲ್ಲಿ ನೇರವಾಗಿ ಪಶ್ಚಿಮಕ್ಕೆ ಪ್ರಯಾಣ ಮಾಡಿದಲ್ಲಿ ಏಷ್ಯದ ತೀರ ಪ್ರದೇಶವನ್ನು ಮುಟ್ಟಬಹುದೆಂಬ ನಂಬಿಕೆಯಿಂದ ಕೊಲಂಬಸ್ ಯಾನ ಮಾಡಿದ. ಆದ್ದರಿಂದಲೇ ತಾನು ಕಂಡ ದ್ವೀಪಗಳನ್ನು ಇಂಡೀಸ್ ಎಂದೂ ಅಲ್ಲಿನ ಜನರನ್ನು ಇಂಡಿಯನರೆಂದೂ ಕರೆದ. ತಾನು ನಿರ್ವಹಿಸಿದ ನಾಲ್ಕು ಯಾನಗಳಲ್ಲಿ ಈತ ವೆಸ್ಟ್‌ಇಂಡೀಸ್ ಗುಂಪಿನ ಹಲವಾರು ದ್ವೀಪಗಳನ್ನು ಕಂಡುಹಿಡಿದನಲ್ಲದೆ ಟ್ರಿನಿದಾದ್ ಮತ್ತು ಮಧ್ಯ ಅಮೆರಿಕಗಳಲ್ಲಿ ಕಾಲಿಟ್ಟಿದ್ದ. ಆದರೂ ಟ್ರಿನಿದಾದ್‌ನ ಆಚೆ ದಕ್ಷಿಣ ಅಮೆರಿಕ, ಮಧ್ಯಅಮೆರಿಕದ ಉತ್ತರದಲ್ಲಿ ಉತ್ತರ ಅಮೆರಿಕ ಖಂಡಗಳು ಇವೆಯೆಂಬ ಅಂಶ ಈತನಿಗೆ ತಿಳಿಯದಾಗಿತ್ತು ಭಾರತಕ್ಕೆ ಜಲಮಾರ್ಗವೊಂದನ್ನು ಕಂಡುಹಿಡಿಯುವ ತನ್ನ ಪ್ರಯತ್ನ ಸಫಲವಾಗಲಿಲ್ಲವಲ್ಲ ಎಂಬ ಕೊರಗು ಇವನಿಗೆ ಕೊನೆಯವರೆಗೂ ಇತ್ತು.

ಕೊಲಂಬಸ್ 1451 ಆಗಸ್ಟ್ 25–ಅಕ್ಟೋಬರ್ 31ರ ನಡುವಿನ ಅವಧಿಯಲ್ಲಿ ಜಿನೋವಾ ನಗರದಲ್ಲಿ ಜನಿಸಿದ. ತಂದೆ ಡೊಮೆನಿಕೊ ಕೊಲಂಬೊ ವೃತ್ತಿಯಿಂದ ನೇಕಾರ, ತಾಯಿ ಸುಸನ್ನ ಫಾಂಟನರೊಸ್ಸ. ಕೊಲಂಬಸನಿಗಾದರೋ ಎಳೆತನದಿಂದಲೂ ಸಮುದ್ರಯಾನದ ಕಡೆಗೆ ಒಲವು. 1476ರಲ್ಲಿ ಯಾವುದೋ ಒಬ್ಬ ವ್ಯಾಪಾರಿಯ ನೌಕೆಯನ್ನೇರಿ ಕೊಲಂಬಸ್ ಲಿಸ್ಬನ್ನಿಗೆ ಬಂದ. ಅಲ್ಲಿ ತನ್ನ ಸಹೋದರರೊಂದಿಗೆ ಕೂಡಿ ಭೂಪಟ, ಜಲಪಟಗಳ ರಚನೆಯಲ್ಲಿ ತಲ್ಲೀನನಾದ. ಪೋರ್ಚುಗಲ್ಲಿನ ಸ್ಯಾಗ್ರೆಸ್ ಎಂಬ ಸಣ್ಣ ಗ್ರಾಮದಲ್ಲಿ ಪ್ರಿನ್ಸ್ ಹೆನ್ರಿ ದಿ ನ್ಯಾವಿಗೇಟರ್ ಸ್ಥಾಪಿಸಿದ ನೌಕಾಶಾಲೆಯನ್ನು ನೋಡಿಬಂದ. ನಡುವೆ ಐಸ್ಲೆಂಡಿನವರೆಗೂ ಯಾನ ಮಾಡಿ ಬಂದ ಈತನಿಗೆ ಪೋರ್ಚುಗೀಸ್ ಜನರ ಯಾನೋತ್ಸಾಹ ಅಮಿತ ಸ್ಫೂರ್ತಿಯನ್ನು ಕೊಟ್ಟಿತು. ಪಶ್ಚಿಮದಿಂದ ಪ್ರಯಾಣಮಾಡಿ ಭಾರತಕ್ಕೊಂದು ಹೊಸ ಹಾದಿಯನ್ನು ಕಂಡುಹಿಡಿಯುವ ವಿಷಯವನ್ನು ಆತ ಪೋರ್ಚುಗಲ್ಲಿನ ದೊರೆ ಎರಡನೆಯ ಜಾನನ ಮುಂದಿಟ್ಟ (1484). ಒಂದು ವರ್ಷದ ಮೇಲೆ, ತನ್ನ ಬಿನ್ನಪ ಅಂಗೀಕೃತವಾಗಲಿಲ್ಲವೆಂಬ ವಿಷಯವನ್ನು ತಿಳಿದು ಮರುಗಿದ. ಇಂಗ್ಲೆಂಡ್, ಫ್ರಾನ್ಸ್ ದೇಶಗಳ ರಾಜರಿಂದಲೂ ಈತನಿಗೆ ಯಾವ ಸಹಾಯ ದೊರೆಯಲಿಲ್ಲ. ಅನಂತರ ಸ್ಪೇನ್ ದೇಶಕ್ಕೆ ಹೋಗಿ ತನ್ನ ಯೋಜನೆಯನ್ನು ರಾಜದಂಪತಿಗಳಾದ ಫರ್ಡಿನೆಂಡ್ ಮತ್ತು ಇಸಾಬೆಲರಿಗೆ ವಿವರಿಸಿ ಅವರ ಕೃಪೆ ಬೇಡಿದ. ಅಲ್ಲೂ ಕೂಡಲೆ ನೆರವು ದೊರೆಯುವ ಸೂಚನೆ ಕಾಣಲಿಲ್ಲ. ಕೊನೆಗೆ ಸ್ಪೇನಿನ ಶ್ರೀಮಂತನೊಬ್ಬನ ಮಧ್ಯಸ್ಥಿಕೆಯ ಫಲವಾಗಿ ರಾಜದಂಪತಿಗಳು ಕೊಲಂಬಸನಿಗೆ ಬೇಕಾದ ಸಹಾಯ ಸೌಕರ್ಯಗಳನ್ನೆಲ್ಲ ಒದಗಿಸುವುದಾಗಿ ಆಶ್ವಾಸನೆ ನೀಡಿದರು.

ಸ್ಪೇನ್ ದೇಶದ ಉದಾರ ಆಶ್ರಯದಿಂದ ಸಾಂತ ಮೆರಿಯ, ಪಿಂಟ ಮತ್ತು ನಿನಾ ಎಂಬ ಮೂರು ಹಡಗುಗಳನ್ನು ಸಜ್ಜುಗೊಳಿಸಿಕೊಂಡ ಕೊಲಂಬಸ್ ಸು. 90 ಮಂದಿ ಸಂಗಡಿಗರೊಡನೆ 1492 ಆಗಸ್ಟ್ 3 ರಂದು ಪಾಲೋಸ್ ರೇವು ಪಟ್ಟಣದಿಂದ ಹೊರಟು ಮಾರ್ಗಮಧ್ಯೆ ಕ್ಯಾನರಿ ದ್ವೀಪಗಳಲ್ಲಿ ತನ್ನ ಹಡಗು ಪರಿವಾರಕ್ಕೆ ಬೇಕಾದ ಆವಶ್ಯಕತೆಗಳನ್ನು ಪೂರೈಸಿಕೊಂಡು ನೇರವಾಗಿ ತನ್ನ ಯಾನವನ್ನು ಪಶ್ಚಿಮದತ್ತ ಮುಂದುವರಿಸಿದ. ಅಂದಿಗೆ ಅಟ್ಲಾಂಟಿಕ್ ಸಾಗರದ ಗೊತ್ತು ಗುರಿಗಳನ್ನು ಯಾರೂ ಕಂಡಿರಲಿಲ್ಲ. ಮೊತ್ತಮೊದಲ ಬಾರಿಗೆ, ಜಲಪಟದ ಸಹಾಯವಿಲ್ಲದೆ, ಹೊಸ ನೀರಿನಲ್ಲಿ ಪ್ರಯಾಣ ಮಾಡಿದ ಕೊಲಂಬಸನ ಧೈರ್ಯ, ಜಾಣ್ಮೆ ಮೆಚ್ಚತಕ್ಕವೆ. ಪ್ರಯಾಣದ ಕಾಲದಲ್ಲಿ ಕೊಲಂಬಸ್ ಸ್ಯಾನ್ ಸಾಲ್ವಡೊರ್ ದ್ವೀಪವನ್ನು ತಲಪಿ ಅಲ್ಲಿ ಆದಿವಾಸಿಗಳನ್ನೂ ಅವರು ಸೇದುತ್ತಿದ್ದ ಚುಟ್ಟಗಳನ್ನೂ ಕಂಡು ವಿಸ್ಮಿತನಾದ.

1493ರಲ್ಲಿ ಎರಡನೆಯ ಬಾರಿ ಪ್ರಯಾಣ ಮಾಡಿದ ಕೊಲಂಬಸನು ಪ್ಯೂರ್ಟೊರಿಕೊ, ವರ್ಜಿನ್ ದ್ವೀಪ, ಜಮೈಕಗಳನ್ನು ಗುರುತಿಸಿದ. ಮೂರನೆಯ ಪ್ರಯಾಣದಲ್ಲಿ (1498) ವೆನಿಜ್ವೇಲವನ್ನು ಮುಟ್ಟಿದ. ನಾಲ್ಕನೆಯ ಪ್ರಯಾಣದಲ್ಲಿ (1502) ಹಾಂಡುರಾಸ್ ಅನ್ನು ತಲಪಿದ. ಎರಡು ವರ್ಷಗಳ ಅನಂತರ 1504ರಲ್ಲಿ ಸ್ಪೇನಿಗೆ ಹಿಂತಿರುಗಿದ. ಅಷ್ಟುಹೊತ್ತಿಗೆ

ನಿರಂತರ ಯಾನಗಳಿಂದ ಅವನ ದೇಹ ಸೋತುಹೋಗಿತ್ತು. ರಾಜಕೀಯದಿಂದ ಮನಸ್ಸು ವಿರಕ್ತವಾಗಿತ್ತು. ರಾಜದಂಪತಿಗಳಿಂದ ತನಗೆ ದೊರಕಬೇಕಾದ ಗೌರವ ಮತ್ತು ಗೌರವಧನಗಳನ್ನು ಪಡೆಯುವ ಪ್ರಯತ್ನದಲ್ಲಿ ತೊಡಗಿದ್ದು ಕೆಲಕಾಲಾನಂತರ ತನ್ನ ಇಬ್ಬರು ಮಕ್ಕಳ ಎದುರಿನಲ್ಲಿ ವಲ್ಲಾಡೋಲಿಡ್ ಎಂಬಲ್ಲಿ 1506 ಮಾರ್ಚ್ 30ರಂದು ನಿಧನನಾದ. ಅವನ ಮೂಳೆಗಳನ್ನು ಸೆವಿಲ್, ಸ್ಯಾಂಟೊಡೋಮಿಂಗೊ ಮತ್ತು ಹವಾನ, ಕ್ಯೂಬನಗರಗಳಿಗೆ 1795ರಲ್ಲಿ ಕೊಂಡೊಯ್ದರು ತರುವಾಯ ಅಂತಿಮವಾಗಿ 1899ರಲ್ಲಿ ಸೆವಿಲ್‌ನಲ್ಲಿ ಸಮಾಧಿ ಮಂದಿರವನ್ನು ನಿರ್ಮಿಸಿ ಅಲ್ಲಿ ಅವನ ಮೂಳೆಗಳನ್ನು ಹೂಳಿಟ್ಟರು.

ಕೊಲಂಬಸ್‌ನಿಗೆ ಇಬ್ಬರು ಮಕ್ಕಳು. ಮೊದಲ ಹೆಂಡತಿ ಫಿಲಿಪ್ಪ ಮೋನೀಜ್ ಎಂಬಾಕೆಯ ಮಗ ಡಿಯಾಗೊ. ಮೋನಿಜ್ 1485ರಲ್ಲಿ ಸತ್ತಳಾಗಿ 1486ರಲ್ಲಿ ಕೊಲಂಬಸ್ ಬೀಟ್ರಿಸ್ ಎನ್‌ರಿಕ್ ಎಂಬಾಕೆಯನ್ನು ಮದುವೆಯಾದ. ಅವಳ ಮಗ ಫರ್ಡಿನೆಂಡ್.

ಕೊಲಂಬಸನ ಪರಿಶೋಧನೆಯ ಮಹತ್ತ್ವ ಅವನ ಮರಣಾನಂತರ ಎಲ್ಲರ ತಿಳಿವಳಿಕೆಗೆ ಬರತೊಡಗಿತು. ಕ್ರಮೇಣ ಐರೋಪ್ಯ ಜನ ಯಾನ ಮಾಡಿ ಉತ್ತರ ಅಮೆರಿಕಗಳಲ್ಲಿ ಹೊಸ ಹೊಸ ವಸಾಹತುಗಳನ್ನು ಸ್ಥಾಪಿಸಿಕೊಂಡರು. ಇಂದಿಗೂ ಸಂಯುಕ್ತ ಸಂಸ್ಥಾನದ 40 ರಾಜ್ಯಗಳಲ್ಲಿ ಪೋರ್ಟೋ ರಿಕೋನಲ್ಲಿ ಕೊಲಂಬಸ್ ಮೊದಲಬಾರಿ ಹೊಸ ನೆಲಮುಟ್ಟಿದ ದಿನವನ್ನು (1492 ಅಕ್ಟೋಬರ್ 12) ರಾಷ್ಟ್ರೀಯ ಹಬ್ಬವೆಂದು ಪರಿಗಣಿಸಲಾಗಿದೆ. (ಎಂ.ಕಿ.ಬಿ.)

**ಕೋಟ್‌ದಿಜಿ:** ಈಗಿನ ಪಾಕಿಸ್ತಾನದಲ್ಲಿರುವ ಒಂದು ಪ್ರಾಕ್ತನ ನೆಲೆ. ಪಾಕಿಸ್ತಾನದಲ್ಲಿ ಖೈರ್‌ಪುರದಿಂದ 24 ಕಿಮೀ ಮೊಹೆಂಜೋದಾರೊದಿಂದ ಪಶ್ಚಿಮಕ್ಕೆ 40 ಕಿಮೀ ದೂರದಲ್ಲಿದೆ. ಇಲ್ಲಿ 1955 ಮತ್ತು 1957ರಲ್ಲಿ ನಡೆಸಿದ ಭೂಶೋಧನೆಗಳಲ್ಲಿ ಹರಪ್ಪ ಸಂಸ್ಕೃತಿಯ ಅವಶೇಷಗಳು ದೊರಕಿದುವಲ್ಲದೆ ಅದಕ್ಕೂ ಹಿಂದಿನ ಮತ್ತು ಅದರ ಮೂಲವೆಂದು ಪರಿಗಣಿಸಲಾದ ಕೋಟ್‌ದಿಜಿಯನ್ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಇಲ್ಲಿ ಕಂಡುಬಂದ ಆರು ಸ್ತರಗಳಲ್ಲಿ ಕಡೆಯ ಮೂರು ಹರಪ್ಪ ಸಂಸ್ಕೃತಿಗೂ ಮೇಲಿನಿಂದ 4ನೆಯ ಸ್ತರ ಹರಪ್ಪ ಮತ್ತು ಹರಪ್ಪ–ಪೂರ್ವ ಅಥವಾ ಕೋಟ್‌ದಿಜಿಯನ್ ಸಂಸ್ಕೃತಿಗೂ ಸೇರುತ್ತವೆ. ಕೋಟ್ ದಿಜಿಯನ್ ಸಂಸ್ಕೃತಿಕಾಲದಲ್ಲಿ ಕೋಟೆ ಕೊತ್ತಲಗಳಿಂದ ರಕ್ಷಿತವಾದ ವಸಾಹತುಗಳಲ್ಲಿ ಕಲ್ಲಿನ ತಳಹದಿಯ ಮೇಲೆ ಹಸಿ ಇಟ್ಟಿಗೆಗಳಿಂದ ಕಟ್ಟಿದ ಮನೆಗಳಿದ್ದುವು. ವ್ಯವಸಾಯ ಜನರ ಮುಖ್ಯ ಕಸಬಾಗಿತ್ತು. ತಾಮ್ರವಾಗಲಿ ಬೇರೆ ಯಾವ ಲೋಹವಾಗಲಿ ಬಳಕೆಯಲ್ಲಿರಲಿಲ್ಲ. ಚಾಕುಗಳು, ಬಾಣದ ಮೊನೆಗಳು ಮುಂತಾದ, ಸಿಂಧೂನದಿಯ ಬಯಲಿನಲ್ಲಿ ಹೆಚ್ಚು ಬಳಕೆಯಲ್ಲಿಲ್ಲದಿದ್ದ, ಕಲ್ಲಿನ ಉಪಕರಣಗಳು ಇಲ್ಲಿ ಉಪಯೋಗದಲ್ಲಿದ್ದುವು. ಮಣ್ಣಿನ ಪಾತ್ರೆಗಳು ಕುಂಬಾರಚಕ್ರದ ಮೇಲೆ ಮಾಡಿದಂಥವು. ಇವು ಮೇಲ್ಭಾಗದಲ್ಲಿ ಕಪ್ಪುಬಣ್ಣದ ಪಟ್ಟಿ ಮತ್ತು ನೇರ ಅಥವಾ ಡೊಂಕು ಗೆರೆಗಳಿಂದ ಅಲಂಕೃತವಾಗಿರುತ್ತಿದ್ದುವು. ಕೊನೆಗಾಲದಲ್ಲಿ ಹರಪ್ಪ ಸಂಸ್ಕೃತಿಯ ಮಡಕೆಗಳ ಅಲಂಕಾರಕ್ಕೆ ಬೇಕಾದ ಮಾದರಿಗಳೂ ಸುಟ್ಟ ಮಣ್ಣಿನ ತ್ರಿಕೋಣಾ ಕಾರದ ಫಲಕಗಳೂ ಬಳಕೆಗೆ ಬಂದು ಆ ಎರಡು ಸಂಸ್ಕೃತಿಗಳ ಪರಸ್ಪರ ಸಂಬಂಧವನ್ನು ಸೂಚಿಸುತ್ತವೆ. ಇಂಗಾಲ–14 ಕಾಲಗಣನೆ ಪದ್ಧತಿಯಂತೆ ಕೋಟ್‌ದಿಜಿಯನ್ ಸಂಸ್ಕೃತಿಗೆ ಪ್ರ.ಶ.ಪೂ.2750–1960ರ ವರೆಗೆ ಕಾಲ ನಿರ್ದೇಶನ ಮಾಡಲಾಗಿದೆ. ಅನಂತರದ ಹರಪ್ಪ ಸಂಸ್ಕೃತಿ ಇತರ ಪ್ರದೇಶಗಳಲ್ಲಿಯ ಆ ಸಂಸ್ಕೃತಿಯಂತಿದ್ದರೂ ಹಲವಾರು ಪ್ರಾದೇಶಿಕ ಇತರ ಪ್ರದೇಶಗಳಲ್ಲಿಯ ವೈಪರೀತ್ಯಗಳನ್ನು ಒಳಗೊಂಡಿದೆ. (ಬಿ.ಕೆ.ಜಿ.)

**ಕೋಟೆಗಳು:** ಶತ್ರುಗಳ ಸಂಭವನೀಯ ಧಾಳಿಗಳಿಂದ ರಕ್ಷಿಸಿಕೊಳ್ಳಲು ನಗರ ಅಥವಾ ಗ್ರಾಮದ ಸುತ್ತಲೂ ನಿರ್ಮಿಸಿದ ಎತ್ತರದ ಹಾಗೂ ಭದ್ರವಾದ ರಕ್ಷಣಾ ಗೋಡೆಯನ್ನು ಕೋಟೆ ಎಂದು ಕರೆಯಲಾಗುತ್ತದೆ. ಕಾಲದಿಂದ ಕಾಲಕ್ಕೆ ಯುದ್ಧ ಅಥವಾ ಆಕ್ರಮಣಗಳಲ್ಲಿಯ ತಂತ್ರಗಳಿಗೆ ಹೊಸದಾಗಿ ಆವಿಷ್ಕಾರಗೊಂಡ ಆಯುಧಗಳಿಗೆ ತಕ್ಕಂತೆ ಕೋಟೆಗಳ ರಚನೆಯ ವಿಧಾನದಲ್ಲಿ ಮಾರ್ಪಾಡುಗಳಾದವು.

ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಲ್ಲೂ ತಾವು ವಾಸಿಸುವ ನೆಲೆಯ ಸುತ್ತಲೂ ರಕ್ಷಣೆಗಾಗಿ ಬೇಲಿ ಅಥವಾ ಕಿರುಗಾತ್ರದ ಗೋಡೆಯನ್ನು ನಿರ್ಮಿಸಿದ್ದ ಉದಾಹರಣೆಗಳಿವೆ. ಹರಪ್ಪ ಸಂಸ್ಕೃತಿಯ ಪ್ರಮುಖ ನಗರಗಳು ರಕ್ಷಣಾ ಕೋಟೆಗಳನ್ನು ಹೊಂದಿದ್ದವು. ಈ ಕೋಟೆಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದ್ದು, ಅಗಲವಾದ ಗೋಡೆಗಳಿಂದ ಕೂಡಿವೆ. ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಹಾಗೂ ಪುರಾಣಗಳಲ್ಲಿ ಕೋಟೆಗಳಿಂದ ಕೂಡಿದ ನಗರಗಳ ಉಲ್ಲೇಖಗಳಿವೆ. ರಾಮಾಯಣದಲ್ಲಿ ಉಲ್ಲೇಖಿಸಿದಂತೆ ಲಂಕಾ ಪಟ್ಟಣ ಬಲವಾದ ಕೋಟೆಯಿಂದ ಸುತ್ತುವರೆಯಲ್ಪಟ್ಟಿತ್ತು. ಕೋಟೆಗಳ ರಚನೆಯ ವಿಷಯವಾಗಿ ಕೌಟಿಲ್ಯ ನೈಸರ್ಗಿಕ ಸನ್ನಿವೇಶಗಳಿಗನುಗುಣವಾಗಿ ಕೋಟೆಗಳನ್ನು ಜಲದುರ್ಗ, ವನದುರ್ಗ, ಸ್ಥಳದುರ್ಗ, ಗಿರಿದುರ್ಗ ಇತ್ಯಾದಿಯಾಗಿ ವರ್ಗೀಕರಿಸಿ ಅವುಗಳ ರಚನೆಯ ವಿಧಾನವನ್ನು ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ ವಿವರಿಸಿದ್ದಾನೆ. ಪ್ರಾಚೀನ ವಾಸ್ತುಶಾಸ್ತ್ರಗಳ ಕೃತಿಗಳು ವಿಭಿನ್ನ ಕೋಟೆಯ ರಚನೆಗಳ ಕುರಿತಾಗಿ ವಿವರಿಸಿವೆ. ಆ ಕಾರಣದಿಂದಾಗಿ ಕೋಟೆಯ ರಚನೆ ರಾಜ್ಯದ ಹಾಗೂ ರಾಜನ ಆದ್ಯ ಕರ್ತವ್ಯಗಳಲ್ಲಿ ಒಂದಾಗಿತ್ತು.

**ಪ್ರಾಚೀನ ಕೋಟೆಗಳು:** ಭಾರತದ ಇತಿಹಾಸದ ಆರಂಭಿಕ ಅವಧಿಯ ಪ್ರಮುಖ ನಗರಗಳು ಕೋಟೆಗಳಿಂದ ಕೂಡಿದ್ದವು. ಉತ್ತರ ಪ್ರದೇಶದ ಗಂಗಾ ನದಿ ಬಯಲಿನ ಅಹಿಚ್ಛತ್ರ ರಾಜಧಾನಿ ರಕ್ಷಣೆಗಾಗಿ ಕೋಟೆಯಂತಹ ಗೋಡೆಯಿಂದ ಆವರಿಸಲ್ಪಟ್ಟಿತ್ತೆಂದು ಉತ್ಖನನಗಳಿಂದ ತಿಳಿದುಬಂದಿದೆ. ಮಗಧ ರಾಜ್ಯದ ರಾಜಗೀರ್‌ನಲ್ಲಿಯೂ ಮರದ ದಿಮ್ಮಿಗಳಿಂದ ನಿರ್ಮಿಸಿದ ಕೋಟೆಯ ಅವಶೇಷಗಳನ್ನು ಶೋಧಿಸಲಾಗಿದೆ. ಮೌರ್ಯರ ರಾಜಧಾನಿ ಪಾಟಲೀಪುತ್ರ ಅಂದಿನ ಗ್ರೀಕ್ ರಾಯಭಾರಿ ಮೆಗಾಸ್ತನೀಸ್ ವಿವರಿಸಿದಂತೆ, 500 ಕಾವಲುಗೋಪುರಗಳು 64 ದ್ವಾರಗಳಿಂದ ಕೂಡಿದ ಒಂದು ಭದ್ರ ಕೋಟೆಯಾಗಿತ್ತು. ಕಳಿಂಗ ರಾಜ್ಯದ ರಾಜಧಾನಿಯೆಂದು ಗುರುತಿಸುವ ಒರಿಸ್ಸದ ಭುವನೇಶ್ವರದ ಹತ್ತಿರದ ಶಿಶುಪಾಲಗಡದಲ್ಲಿ ಆಯತಾಕಾರದ ಕೋಟೆ ಇದೆ. ವಿಶಾಲವಾದ ಈ ಕೋಟೆ ಸುರಕ್ಷಿತವಾಗಿ ಉಳಿದುಕೊಂಡು ಬಂದ ಅತ್ಯಂತ ಪ್ರಾಚೀನ ಕೋಟೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಾಚೀನ ಕೌಶಾಂಬಿ, ಉಜ್ಜಯಿನಿ, ತಕ್ಷಶಿಲೆ, ವೈಶಾಲಿ ಇತ್ಯಾದಿ ನಗರಗಳ ಕೋಟೆಗಳ ಅವಶೇಷಗಳನ್ನು ಶೋಧಿಸಲಾಗಿದೆ. ಈ ಕೋಟೆಗಳಿಗೆ ಭವ್ಯವಾದ ದ್ವಾರಗಳು ಹಾಗೂ ರಕ್ಷಣೆಗಾಗಿ ಆಳವಾದ ಕಂದಕಗಳಿದ್ದವು. ಪ್ರಾಚೀನ ಕೋಟೆಗಳ ಚಿತ್ರಣ ಬೌದ್ಧಜಾತಕ ಶಿಲ್ಪಗಳಲ್ಲಿ ಕಾಣಬರುತ್ತದೆ. ಸಾಂಚಿ, ಬಾರ್ಹುತ್, ಅಮರಾವತಿ, ನಾಸಿಕ್, ಬೌದ್ಧ ಶಿಲ್ಪಗಳಲ್ಲಿ ಹಾಗೂ ಅಜಂತದ ವರ್ಣ ಚಿತ್ರಕಲೆಗಳಲ್ಲಿ ಕೋಟೆಗಳ ಚಿತ್ರಣವನ್ನು ಕಾಣಬಹುದು.

ಉಜ್ಜಯಿನಿಯಲ್ಲಿ ಪ್ರಾಚೀನ ಕೋಟೆಯ ಅವಶೇಷಗಳನ್ನು ಶೋಧಿಸಲಾಗಿದೆ. ನದಿಯ ದಡದಲ್ಲಿ ನಿರ್ಮಿಸಲಾದ ಈ ಕೋಟೆ ಪ್ರಾಚೀನ ಕೋಟೆಗಳಲ್ಲಿ ಒಂದೆನಿಸಿದೆ. ಕರ್ನಾಟಕದ ಭೀಮಾನದಿಯ ದಡದಲ್ಲಿ ನಿರ್ಮಿಸಲಾದ ಸನ್ನತಿಯ ಕೋಟೆ ಹಾಗೂ ಬನವಾಸಿಯ ಪ್ರಾಚೀನ ಹಂತದ ಇಟ್ಟಿಗೆ ಕೋಟೆಗಳು ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನವಾದವು. ಇಟ್ಟಿಗೆಗಳಿಂದ ನಿರ್ಮಿಸಿದ ಈ ಕೋಟೆ ವಿಶಾಲ ಪ್ರದೇಶವನ್ನು ಒಳಗೊಂಡಿದೆ. ಸಾತವಾಹನರ ಕಾಲದಲ್ಲಿ ನಿರ್ಮಿಸಲಾದ ಸನ್ನತಿ ಕೋಟೆಯೊಳಗೆ ರಣಮಂಡಲ ಮತ್ತು ನಗರಗಳೆಂಬ ಎರಡು ಭಾಗಗಳಿವೆ. ಇಕ್ಷ್ವಾಕು ಅರಸು ಮನೆತನದ ನಾಗಾರ್ಜುನ ಕೊಂಡ ಮತ್ತು ಸಾತವಾಹನರ ಕಾಲದ ಶ್ರೀಕಾಕುಳಮ್ ಕೋಟೆಗಳು ಆಂಧ್ರದ ಪ್ರಾಚೀನ ಕೋಟೆಗಳು. ಈ ಪ್ರಾಚೀನ ಕಾಲದ ಕೋಟೆಗಳು ಹೆಚ್ಚಾಗಿ ನದಿಗಳ ದಡದಲ್ಲಿ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ.

4–5 ನೆಯ ಶತಮಾನಗಳ ಗುಪ್ತರ ಕಾಲದ ಕೋಟೆಗಳ ನಿರ್ಮಾಣದಲ್ಲಿ ಒಂದು ಹೊಸ ಆಯಾಮ ಪಡೆಯಿತು. ತೀಕ್ಷ್ಣವಾದ ಬಿಲ್ಲುಬಾಣಗಳು ಹಾಗೂ ವಿನಾಶಕಾರಿ ಆಯುಧಗಳು ಯುದ್ಧಗಳಲ್ಲಿ ಬಳಕೆಗೆ ಬಂದಿದ್ದರಿಂದ ಕೋಟೆಗಳನ್ನು ದಪ್ಪ ಶಿಲೆಗಳಿಂದ ಎತ್ತರವಾಗಿ ನಿರ್ಮಿಸಲಾಗಿತ್ತು. ವೈರಿಗಳು ಸುಲಭವಾಗಿ ಕೋಟೆಗೋಡೆಯನ್ನು ಏರದಂತೆ ಸುತ್ತಲೂ ಆಳವಾದ ಕಂದಕವನ್ನು ಅಳವಡಿಸುತ್ತಿದ್ದರು.

ಆಂಧ್ರದ ಕಾಕತೀಯ ಅರಸರ ರಾಜಧಾನಿ ವಾರಂಗಲ್ಲಿನಲ್ಲಿ ಎರಡು ಸುತ್ತಿನ ವರ್ತುಲಾಕಾರದ ಕೋಟೆಯಿದೆ. ಹೊರ ಸುತ್ತಿನ ಕೋಟೆ ಮಣ್ಣಿನಲ್ಲಿ ನಿರ್ಮಿತವಾಗಿದೆ. ಇದರ ಸುತ್ತಲೂ ಕಂದಕವಿದೆ. ಕೋಟೆಯ ಒಳಸುತ್ತನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಈ ಕೋಟೆಯ ನಾಲ್ಕು ದಿಕ್ಕುಗಳಲ್ಲಿ ದ್ವಾರಗಳಿವೆ. ಕೋಟೆಯ ಮಧ್ಯದಲ್ಲಿ ಅರಮನೆಗಳು ಹಾಗೂ ನಾಶಗೊಂಡ ಬೃಹದಾಕಾರದ ಶಿವದೇವಾಲಯದ ಅವಶೇಷಗಳಿವೆ. ಮಧ್ಯಭಾರತದಲ್ಲಿ ಆಳಿಕೆ ನಡೆಸಿದ ಬುಂದೇಲಖಂಡದ ಚಂದೇಲರ ಕೋಟೆಗಳು ಕಾಳಂಜರ, ಅಜಯಗಡ, ಬೈರಾಗಡ ಮೊದಲಾದ ಸ್ಥಳಗಳಲ್ಲಿವೆ. ಇವುಗಳಲ್ಲಿ ಕಾಳಂಜರ ಕೋಟೆ ಅಭೇದ್ಯವಾದುದು. ಈ ಕೋಟೆ ವಿಂಧ್ಯ ಪರ್ವತಶ್ರೇಣಿಗಳಲ್ಲಿ ಸು. 6ಕಿಮೀ ಸುತ್ತಳತೆಯಿಂದ ಕೂಡಿದೆ. ಬಂಗಾಲದ ಪಾಲರ ಕೋಟೆಯೆಂದು ಇಂದಿನ ಬಂಗ್ಲಾದೇಶದಲ್ಲಿಯ ಮಹಸ್ಥನಗರ ಕೋಟೆಯನ್ನು ಗುರುತಿಸಲಾಗಿದೆ.

13ನೆಯ ಶತಮಾನದ ದೆಹಲಿಯ ಸುಲ್ತಾನರ ಕಾಲದಲ್ಲಿ ಮುಖ್ಯವಾಗಿ ಖಿಲ್ಜಿ ಮತ್ತು ತುಗಲಕ್‌ರ ಅವಧಿಯಲ್ಲಿ ಕೋಟೆ ರಚನೆಯ ನಿರ್ಮಾಣದಲ್ಲಿ ಹಾಗೂ ಯುದ್ಧ ತಂತ್ರಗಾರಿಕೆಗಳಲ್ಲಿ ಗಣನೀಯ ಬದಲಾವಣೆಯಾಯಿತು. ಕೋಟೆಯ ಸುತ್ತಲೂ ಸೈನಿಕರು ಪಹರೆ ಕೈಗೊಳ್ಳಲು ಕೋಟೆ ಕೈಪಿಡಿಗೋಡೆಯಲ್ಲಿ ಅಗಲವಾದ ಪಹರೆ ಗೋಡೆ ಮತ್ತು ಸೈನಿಕರು ಮರೆಯಲ್ಲಿ ನಿಂತು ಶತ್ರುಗಳ ಮೇಲೆ ಪ್ರತಿದಾಳಿ ಮಾಡಲು ಕೈಪಿಡಿ ಗೋಡೆಯಲ್ಲಿ ನಿಟುಗಳನ್ನು (ತೆನೆ) ಹಾಗೂ ಶತ್ರುಪಡೆಗಳನ್ನು ವೀಕ್ಷಿಸಲು ಗೋಡೆಗಳಲ್ಲಿ ವೀಕ್ಷಣಾಕಿಂಡಿಗಳನ್ನು ಅಳವಡಿಸುವುದು ಸಾಮಾನ್ಯವಾಯಿತು. 1320ರ ದಶಕದಲ್ಲಿ ಘಿಯಾಸುದ್ದೀನ ತುಗಲಕನು ನಿರ್ಮಿಸಿದ ದೆಹಲಿಯ ತುಗಲಕಾಬಾದ್ ಕೋಟೆ ನೂತನ ತಂತ್ರಗಾರಿಕೆ ಅಂಶಗಳನ್ನು ಅಳವಡಿಸಿಕೊಂಡು ನಿರ್ಮಿಸಿದ ಕೋಟೆಯಾಗಿದೆ. ಈ ಕೋಟೆಗಳಲ್ಲಿ ವರ್ತುಲಾಕಾರದ ಕೊತ್ತಳಗಳು, ನಿಟ್ಟುಗಳಿರುವ ಕೈಪಿಡಿ ಗೋಡೆ ಇತ್ಯಾದಿಗಳನ್ನು ಕಾಣಬಹುದು. ಈ ಕೋಟೆಯೊಳಗೆ ವಿಶಾಲವಾದ ಅರಮನೆ ಆವರಣವಿದೆ. ಇದೇ ಸಂಪ್ರದಾಯದ ಅಥವಾ ರಚನಾ ತಂತ್ರದ ಕೋಟೆಗಳನ್ನು ಗುಜರಾತಿನ ಸುಲ್ತಾನರ, ಬಂಗಾಲ ಸುಲ್ತಾನರ, ಮಾಳ್ವ ಸುಲ್ತಾನರ ಹಾಗೂ ದಖನ್ನಿನ ಬಹಮನಿ ಸುಲ್ತಾನರ ರಾಜ್ಯಗಳಲ್ಲಿ ಕಾಣಬಹುದು. ಬಂಗಾಲದ ಗೌರ್ ಕೋಟೆ, ಮಾಳ್ವದ ಮಾಂಡುವಿನ ಕೋಟೆಗಳಲ್ಲಿ ತುಗಲಕ್ ಶೈಲಿಯ ಪ್ರಭಾವನ್ನು ಗುರುತಿಸಬಹುದು. ಬಹಮನಿ ಸುಲ್ತಾನರ ಗುಲ್ಬರ್ಗ, ಫಿರೋಜಾಬಾದ್ ಮತ್ತು ಸಗರ ಕೋಟೆಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಶತ್ರುಗಳ ಪಡೆಯನ್ನು ಎದುರಿಸುವಲ್ಲಿ ಸಮರ್ಥವಾಗಿದ್ದವು. ಸ್ಫೋಟಕ ವಸ್ತುಗಳನ್ನು ಎದುರಿಸಲು ಗೋಡೆಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಪಹರೆ ಗೋಡೆ ಹಾಗೂ ವೀಕ್ಷಣಾ ಕಿಂಡಿಗಳನ್ನು ಈ ಕೋಟೆಗಳಲ್ಲಿ ಅಳವಡಿಸಲಾಗಿದೆ. ಈ ಕೋಟೆಗಳ ಮುಖ್ಯ ದ್ವಾರಗಳ ಮೇಲೆ ರಾಜ್ಯದ ಲಾಂಛನವಾದ ಉದಯಿಸುತ್ತಿರುವ ಸೂರ್ಯ ಹಾಗೂ ಹುಲಿಯ ಶಿಲ್ಪಗಳನ್ನು ಕಾಣಬಹುದಾಗಿದೆ. ಕೋಟೆಗಳ ಅಲಂಕಾರಕ್ಕಾಗಿ ಮುಖ್ಯದ್ವಾರದಲ್ಲಿ ನೀಲಿ ಮತ್ತು ಕಂದು ವರ್ಣದ

ಶಿಲೆಗಳನ್ನು ವಿವಿಧ ಆಕಾರಗಳಲ್ಲಿ ಜೋಡಿಸಲಾಗಿದೆ. ಸುಲ್ತಾನರ ಕೋಟೆಗಳು ಮುಖ್ಯವಾಗಿ ಅವರ ರಾಜಧಾನಿಗಳು ವೈರಿಗಳಿಂದ ರಕ್ಷಣೆ ಪಡೆಯುವ ತಾಣಗಳಾಗಿ ಮುಂದುವರೆಯುವುದರ ಜೊತೆಗೆ ಭವ್ಯ ಅರಮನೆ, ಉದ್ಯಾನವನಗಳು, ವಿಶಾಲ ಬಜಾರಗಳು, ಪರ್ಷಿಯ ಮಾದರಿಯ ಹಬೆ ನೀರಿನ ಸ್ನಾನಗೃಹಗಳು (ಹಮಾಮ್), ಮೋಜಿನ ಅಥವಾ ಪಂದ್ಯಗಳನ್ನಾಡುವ ಕಟ್ಟಡಗಳು ಇತ್ಯಾದಿಗಳಿಂದ ಕೂಡಿದ ನಗರಗಳಾಗಿ ಮಾರ್ಪಟ್ಟವು. ನಗರ ಜೀವನ, ಸಂಸ್ಕೃತಿ ಬೆಳೆದಂತೆ ನಾಗರಿಕರಿಗೆ ರಕ್ಷಣೆ ಒಂದು ಆದ್ಯತೆಯಾಗಿ ಕಾಣತೊಡಗಿತು.

ಅರಬ್ಬರು ಪಶ್ಚಿಮ ಕರಾವಳಿಯಲ್ಲಿ ನಗರ ಸಂಸ್ಕೃತಿಗೆ ಪೂರಕ ಸಾಮಗ್ರಿಗಳಾದ ಮದ್ಯ, ಮಸ್ಲಿನ್ ಬಟ್ಟೆ, ಅಶ್ವಗಳು, ವಿವಿಧ ವರ್ಣದ ಹೆಂಚುಗಳು, ಪಿಂಗಾಣಿ ಉಪಕರಣಗಳು ಇತ್ಯಾದಿಗಳನ್ನು ಸರಬರಾಜು ಮಾಡತೊಡಗಿದರು. ಇದರಿಂದ ದೇಶದ ವಿವಿಧ ಭಾಗಗಳಲ್ಲಿ ರಾಜಧಾನಿಗಳಲ್ಲಿ ವ್ಯಾಪಾರಿ ಮಾರ್ಗಗಳಲ್ಲಿ ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿ ನಗರ ಸಂಸ್ಕೃತಿಯನ್ನು ಬೆಳೆಸಿರುವುದು ಬಹಮನಿ, ಅಹಮದಾಬಾದ್, ಮಾಳ್ವ



ಕೋಟೆ ಬಾಗಿಲು, ವಾರಂಗಲ್

ಹಾಗೂ ಬಂಗಾಲ ಸುಲ್ತಾನರ ರಾಜ್ಯಗಳಲ್ಲಿ ಕಾಣುತ್ತೇವೆ. ಇದರ ಅನುಕರಣೆಯನ್ನು ದಕ್ಷಿಣ ಭಾರತದಲ್ಲಿ ಉದಯಿಸಿದ ವಿಜಯನಗರದಲ್ಲಿ, ಒರಿಸ್ಸದ ಗಜಪತಿ ರಾಜ್ಯಗಳಲ್ಲಿಯೂ ಕಾಣಬಹುದು. ವಿಜಯನಗರದ ರಾಜಧಾನಿ ಹಂಪಿಯಲ್ಲಿ ಬಹು ವಿಸ್ತಾರವಾದ ಕೋಟೆಯಿಂದ ಕೂಡಿದ ನಗರ ಹಾಗೂ ಕೋಟೆಯೊಳಗೆ ಅರಮನೆಗಳಿವೆ. ಮಧ್ಯಕಾಲೀನ ಪ್ರಮುಖ ನಗರವೆನಿಸಿದ ಹಂಪಿಯ ಕೋಟೆ ಸಾಂಪ್ರದಾಯಿಕ ಶೈಲಿಯಲ್ಲಿದ್ದು, ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ ಬಹಮನಿ ಕೋಟೆಯಂತೆ ರಕ್ಷಣೆಗೆ ಪಹರೆ ಗೋಡೆ ಕಾವಲು ಗೋಪುರ ಹಾಗೂ ಕೊತ್ತಳಗಳನ್ನು ನಿರ್ಮಿಸಲಾಗಿದೆ. ವಿಶಾಲ ಕೋಟೆಯ ಒಳಭಾಗದಲ್ಲಿ, ಪ್ರಮುಖ ವಾಸಸ್ಥಳಗಳ ಹೆಚ್ಚಿನ ರಕ್ಷಣೆಗಾಗಿ ಉಪಕೋಟೆಗಳನ್ನೂ ಆವರಣ ಗೋಡೆಗಳನ್ನೂ ನಿರ್ಮಿಸುವ ಸಂಪ್ರದಾಯ ಹಂಪಿಯಲ್ಲಿ ಕಂಡುಬರುತ್ತದೆ. ಕರ್ನಾಟಕದ ಚಿತ್ರದುರ್ಗ ನಾಯಕರು, ಮಧುಗಿರಿಯ ಪಾಳೆಯಗಾರರು, ಕೆಳದಿಯ ನಾಯಕರು, ತಮಿಳುನಾಡಿನ ಜಿಂಜಿ ನಾಯಕರು, ಮದುರೈ ತಿರುಚಿರಾಪಳ್ಳಿಯ ನಾಯಕರು ಮೊದಲಾದವರು ಆಂಧ್ರಪ್ರದೇಶದ ರತ್ನಗಿರಿ ನಾಯಕರು ತಮ್ಮ ತಮ್ಮ ರಾಜ್ಯದ ರಾಜಧಾನಿಗಳಲ್ಲಿ ಹಾಗೂ ಇತರ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದಾರೆ. ದಕ್ಷಿಣ ಭಾರತದ ನಾಯಕರ ಕೋಟೆಗಳು ವಿಜಯನಗರದ ಮಾದರಿಯ ಕೋಟೆಗಳಂತಿವೆ. ಆದರೂ ಮದ್ದು-ಗುಂಡುಗಳ ಹೊಡೆತ ಎದುರಿಸಲು ಕೋಟೆಗಳಲ್ಲಿ ದಪ್ಪ ಕಲ್ಲುಗಳನ್ನು ಬಳಸುವುದು, ವಿವಿಧ ದಿಕ್ಕುಗಳಲ್ಲಿ ಸೈನಿಕರಿಗೆ ದೂರದಲ್ಲಿ ಬರುವ ಶತ್ರುಪಡೆಗಳನ್ನು ವೀಕ್ಷಿಸಲು ಹಾಗೂ ಕೋಟೆಯನ್ನು ವಶಪಡಿಸಿಕೊಳ್ಳುವ ಶತ್ರುಗಳನ್ನು ಸದೆಬಡಿಯುವ ಸಲುವಾಗಿ ವೃತ್ತಾಕಾರದ ಕೊತ್ತಳಗಳನ್ನು ಅಳವಡಿಸಿಕೊಳ್ಳಲಾಯಿತು. ಕೋಟೆ ದ್ವಾರಗಳನ್ನು ಶತ್ರು ಪಡೆ ದಿಮ್ಮಿಗಳ ಸಹಾಯದಿಂದ ಅಥವಾ ಆನೆಗಳ ಸಹಾಯದಿಂದ ಭೇದಿಸಲಾಗದಂತೆ ದ್ವಾರದ ಮುಂಭಾಗದಲ್ಲಿ ಅಡ್ಡಗೋಡೆಯನ್ನು ರಚಿಸಿ ಚಿಕ್ಕ ಅಂಗಳವನ್ನು ನಿರ್ಮಿಸುತ್ತಿದ್ದರು. ತಮಿಳುನಾಡಿನ ಜಿಂಜಿ ಕೋಟೆ ಗ್ರಾನೈಟ್ ಬೆಟ್ಟಗಳಲ್ಲಿ ನಿರ್ಮಿಸಿದ ಸುದೃಢ ಕೋಟೆಯಾಗಿದೆ. ಮೂರು ಬೃಹತ್ ಬೆಟ್ಟಗಳನ್ನು ಆವರಿಸಿಕೊಂಡು ಕಟ್ಟಲಾದ ಜಿಂಜಿ ಕೋಟೆ ಅಸಂಖ್ಯ ಕೊತ್ತಳಗಳು ಹಾಗೂ ದ್ವಾರಗಳಿಂದ ಕೂಡಿದೆ. ಇಲ್ಲಿಯ ಜನರ ಹಾಗೂ ಸೈನಿಕರ ಅನುಕೂಲಕ್ಕಾಗಿ ಅನೇಕ ಉಗ್ರಾಣಗಳನ್ನು ಹಾಗೂ ಮದ್ದು-ಗುಂಡುಗಳ ಶೇಖರಣೆಗೆ ಮದ್ದಿನ ಮನೆಗಳನ್ನು ಹಾಗೂ ಅನೇಕ ಅರಮನೆಗಳನ್ನು ನಿರ್ಮಿಸಲಾಗಿದೆ. ಆಂಧ್ರದ ಅನಂತಪುರ ಜಿಲ್ಲೆಯ ರತ್ನಗಿರಿ ಕೋಟೆ ಎರಡು ಬೆಟ್ಟಗಳನ್ನು ಹಾಗೂ ಅವುಗಳ ಕೆಳಗಿನ ಬಯಲನ್ನೂ ಆವರಿಸಿದಂತೆ ವಿಸ್ತಾರವಾಗಿ ನಿರ್ಮಿಸಲಾಗಿದೆ. ಈ ಕೋಟೆಯಲ್ಲಿ ಅರಮನೆಗಳ ಅವಶೇಷಗಳು, ಉಗ್ರಾಣಗಳು ಬಾವಿಗಳು ಇತ್ಯಾದಿಗಳನ್ನು ಗುರುತಿಸಬಹುದು.

ಆಂಧ್ರಪ್ರದೇಶವನ್ನು ಆಳಿದ ಕುತುಬ್‌ಶಾಹಿ ಸುಲ್ತಾನರ ರಾಜಧಾನಿ ಗೋಲ್ಕೊಂಡ ಒಂದು ಸುಸಜ್ಜಿತ ಹಾಗೂ ಅಭೇದ್ಯ ಕೋಟೆಗಳಲ್ಲಿ ಒಂದಾಗಿತ್ತು. ಪಹರೆ ಗೋಡೆ, ನಿಟ್ಟುಗಳಿಂದ ಕೂಡಿದ ಕೈಪಿಡಿ ಗೋಡೆ, ವೀಕ್ಷಣಾ ಕಿಂಡಿಗಳು ಇತರ ಹಲವಾರು ತಂತ್ರಗಾರಿಕೆಯ ಲಕ್ಷಣಗಳು ಈ ಕೋಟೆಯಲ್ಲಿವೆ. ಬೆಟ್ಟ ಹಾಗೂ ಬಯಲು ಪ್ರದೇಶವನ್ನು ಬಳಸಿಕೊಂಡು ರಚಿಸಲಾದ ಈ ಕೋಟೆಯಲ್ಲಿ ವಿಶಾಲವಾದ ಉದ್ಯಾನಗಳು, ಅರಮನೆಗಳು, ಮದ್ದಿನ ಮನೆಗಳು ಹಾಗೂ ಉಗ್ರಾಣಗಳಿವೆ. ಕುತುಬ್‌ಶಾಹಿಗಳ ಕಾಲದಲ್ಲಿ ಸ್ಫೋಟಕದ ಮದ್ದಿನ ಬಳಕೆ ವ್ಯಾಪಕವಾಗಿತ್ತು. ಆಳವಾದ ಕಂದಕದಂಚಿನಲ್ಲಿ ವೃತ್ತಾಕಾರದ ಕೊತ್ತಳಗಳನ್ನು ಕೋಟೆಗಳಲ್ಲಿ ಕಟ್ಟಲಾಗಿದೆ. ಇವುಗಳ ಮೇಲೆ ಫಿರಂಗಿಗಳನ್ನು ನೆಲೆಗೊಳಿಸಿ ಶತ್ರುಗಳ ಮೇಲೆ ಧಾಳಿಮಾಡುವ ಕಲೆ ಕರಗತ ಮಾಡಿಕೊಂಡಿದ್ದ ಸೈನ್ಯ ಪಡೆ ಅವರಲ್ಲಿತ್ತು. ಆದಿಲ್‌ಶಾಹಿಗಳ (1490–1678) ಬಿಜಾಪುರದ ಕೋಟೆ ಸು. 10 ಕಿಮೀ ಸುತ್ತಳತೆಯದಾಗಿದ್ದು, 5 ಹೆಬ್ಬಾಗಿಲುಗಳು 96 ವೃತ್ತಾಕಾರದ ಕೊತ್ತಳಗಳಿಂದ ಕೂಡಿದೆ. ರಚನೆಯಲ್ಲಿ ಬಿಜಾಪುರ ಕೋಟೆ ಸ್ವಲ್ಪ ಹೆಚ್ಚು ಕಡಿಮೆ ವರ್ತುಲಾಕಾರದಲ್ಲಿದ್ದು, ಭದ್ರವಾದ ಮತ್ತು ಎತ್ತರವಾದ ಕೋಟೆ ಗೋಡೆಗಳು ವಿಶಾಲ ನಗರವನ್ನು ಸುತ್ತುವರೆದಿವೆ. ಕೋಟೆಯ ಮಧ್ಯಭಾಗದಲ್ಲಿ ವಿಶಾಲವಾದ ಅರಮನೆಗಳು, ವಿವಿಧ ಮಹಲುಗಳು ಇತ್ಯಾದಿ ಇದ್ದುವು. ಪಶ್ಚಿಮ ಕರಾವಳಿಯ ವ್ಯಾಪಾರವನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದ ಆದಿಲಶಾಹಿಗಳು ಒಳನಾಡಿನ ವ್ಯಾಪಾರದ ರಕ್ಷಣೆಗಾಗಿ ಹಾಗೂ ನೆರೆರಾಜ್ಯಗಳ ಧಾಳಿಗಳನ್ನು ತಡೆಯಲು ನಾಡಿನಾದ್ಯಂತ ಕೋಟೆಗಳ ನಿರ್ಮಾಣಕ್ಕೆ ಉತ್ತೇಜನ ನೀಡಿದ್ದರು. ಉದ್ದನೆಯ ಫಿರಂಗಿಗಳು ಹಾಗೂ ಇತರ ವಿನಾಶಕಾರಿ ಆಯುಧಗಳ ಬಳಕೆ ಈ ಕಾಲದ ಯುದ್ಧಗಳಲ್ಲಿ ಸಾಮಾನ್ಯವಾಗಿತ್ತು. ಫಿರಂಗಿಗಳ ಗುಂಡುಗಳನ್ನು ಸಮರ್ಥವಾಗಿ ಎದುರಿಸಲು, ಕೋಟೆಯ ಸೈನಿಕರು ಸದಾಕಾಲ ಕಾಯಲು ಕೋಟೆಗಳಲ್ಲಿ ಪಹರೆಗೋಡೆಗಳನ್ನು ಅಳವಡಿಸಿದ್ದರು. ನೀಟುಗಳಿಂದ ಕೂಡಿದ ಕೈಪಿಡಿಗೋಡೆ ಮುಖ್ಯ ಲಕ್ಷಣವಾಗಿತ್ತು. ದ್ವಾರಗಳು ಶತ್ರುಗಳಿಗೆ ಗೋಚರಿಸದಂತೆ ಇವುಗಳ ಮುಂಭಾಗದಲ್ಲಿ ಅಡ್ಡಗೋಡೆಗಳನ್ನು ನಿರ್ಮಿಸಿ ಪ್ರವೇಶಕ್ಕೆ ಇಕ್ಕಟ್ಟಿನ ಮಾರ್ಗವನ್ನು ರೂಪಿಸಿದರು. ಕೋಟೆಯ ಸುತ್ತಲೂ ಕಂದಕವನ್ನು ನಿರ್ಮಿಸುವುದು ಹಾಗೂ ಮುಳ್ಳು ಅಥವಾ ಕಳ್ಳಿ ಮರಗಳನ್ನು ಕೋಟೆಯ ಸುತ್ತಲೂ ಬೆಳೆಸುವುದು ಅನಿವಾರ್ಯವಾಗಿತ್ತು. ವೈರಿ ಪಡೆಗೆ ಈ ಮರಗಳಿಂದ ತಮ್ಮ ಕಣ್ಣುಗಳನ್ನು ರಕ್ಷಿಸಿಕೊಳ್ಳುವುದೇ ಬಹುಮುಖ್ಯ ಸಮಸ್ಯೆಯಾಗಿತ್ತು.

ಕೋಟೆಗಳೇ ತಮ್ಮ ತಾಣಗಳಾಗಿದ್ದ ಮರಾಠರು ಮಹಾರಾಷ್ಟ್ರದ ಬಹುತೇಕ ಪ್ರದೇಶದಲ್ಲಿ ಅನೇಕ ಕೋಟೆಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಿಸಿದರು. ಗೆರಿಲ್ಲಾ ಯುದ್ಧ ಕಲೆಯಲ್ಲಿ ಪರಿಣಿತರಾದ ಮರಾಠರು ಗಿರಿದುರ್ಗಗಳನ್ನು ಸಹ್ಯಾದ್ರಿ ಬೆಟ್ಟಗಳಲ್ಲಿ ಹಾಗೂ ವಿದರ್ಭ ಮತ್ತು ಮರಾಠವಾಡಗಳಲ್ಲಿ ನೆಲದುರ್ಗಗಳನ್ನು ನಿರ್ಮಿಸಿದ್ದಾರೆ. ಮರಾಠರ ಗಿರಿದುರ್ಗಗಳು ಸಾಮಾನ್ಯವಾಗಿ ಬೆಟ್ಟದ ಅಂಚಿನಲ್ಲಿ ವಿಸ್ತಾರವಾಗಿ ನಿರ್ಮಾಣವಾಗಿವೆ. ಕೋಟೆಯ ಮುಖ್ಯಭಾಗವನ್ನು ಬಾಳಕಿಲ್ಲಾ ಎಂದು ಕರೆಯುತ್ತಾರೆ. ಬಾಳಹಿಸಾರದಿಂದ ಕೋಟೆಯ ಗೋಡೆಯನ್ನು ಪಕ್ಕದ ಬೆಟ್ಟಗಳ ಅಂಚಿನವರೆಗೆ ವಿಸ್ತರಿಸಿದ್ದನ್ನು ಮಾಚಿ ಎಂದು ಹೆಸರಿಸಲಾಗಿದೆ. ಮಾಚಿಗಳು ಅತ್ಯಂತ ವಿಸ್ತಾರವಾಗಿದ್ದು ಕೆಲವು ಕೋಟೆಗಳಲ್ಲಿ ಇವು 2–3ಕಿಮೀ ವಿಸ್ತಾರವಾಗಿ ಹರಡಿಕೊಂಡಿವೆ. ಕೋಟೆ ಪ್ರವೇಶಿಸುವ ದ್ವಾರಗಳನ್ನು ರಕ್ಷಿಸುವುದಕ್ಕಾಗಿ ದ್ವಾರಗಳ ಇಕ್ಕೆಡೆಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಇಕ್ಕಟ್ಟಾದ ದ್ವಾರಗಳ ಮೇಲೆ ಸಾಮಾನ್ಯವಾಗಿ ಗಣೇಶನ ಶಿಲ್ಪಗಳಿರುತ್ತವೆ. ಮರಾಠರು ಫಿರಂಗಿಗಳನ್ನು ಬಳಸುವುದರಲ್ಲಿ ನಿಸ್ಸೀಮರು. ಪೋರ್ಚುಗೀಸರ ನೆರವು ಅಥವಾ ಅವರ ತಂತ್ರಗಾರಿಕೆಯನ್ನು ಅಳವಡಿಸಿಕೊಂಡು, ತಮ್ಮ ವಶದ ಕೋಟೆಗಳಲ್ಲಿ ಫಿರಂಗಿಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಿದರು. ಮರಾಠರ ಬಹುತೇಕ ಕೋಟೆಗಳು ಒಂದಕ್ಕೊಂದು ಹತ್ತಿರದಲ್ಲಿದ್ದು ಮಹಾರಾಷ್ಟ್ರದಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚು ಕೋಟೆಗಳನ್ನು ಗುರುತಿಸಲಾಗಿದೆ. ವೈರಿಗಳ ಧಾಳಿಯನ್ನು ಸಮರ್ಥವಾಗಿ ಎದುರಿಸಲು ಗೆರಿಲ್ಲಾ ಯುದ್ಧ ನೀತಿಯನ್ನು ಮರಾಠರು ಅನುಸರಿಸಲು ಇವು ಸಹಾಯಕವಾಗಿದ್ದವು. ಶಿವಾಜಿಯ ರಾಜಧಾನಿ ರಾಯಗಡ ಕೋಟೆ ಒಂದು ಸುಭದ್ರ ಕೋಟೆಯಾಗಿತ್ತು. ಕೊಂಕಣ ಕರಾವಳಿ ಹಾಗೂ ಸಹ್ಯಾದ್ರಿ ಬೆಟ್ಟಗಳ ಪ್ರದೇಶದಲ್ಲಿರುವ ರಾಯಗಡ ಕೋಟೆ ಅನೇಕ ದ್ವಾರಗಳಿಂದ ಹಾಗೂ ವಿವಿಧ ಗಾತ್ರದ ಕೊತ್ತಳಗಳಿಂದ ಕಟ್ಟಲಾಗಿದೆ. ಇದರ ಬಾಳಕಿಲ್ಲಾದಲ್ಲಿ ಶಿವಾಜಿಯ ಆರಾಧ್ಯ ದೈವದ ದೇವಸ್ಥಾನವಿದೆ. ಶಿವಾಜಿ ಸಮಾಧಿಯೂ ಇಲ್ಲಿ ಇದೆ. 1656ರಲ್ಲಿ ನಿರ್ಮಿಸಲಾದ ಪ್ರತಾಪಗಡ ಕೋಟೆ ಶಿವಾಜಿಯ ಸೈನಿಕ ತಂತ್ರಗಾರಿಕೆಗೆ ಹೆಸರುವಾಸಿಯಾಗಿತ್ತು. ಆದಿಲ್‌ಶಾಹಿ ಸೇನಾಧಿಕಾರಿ ಅಫಲ್ ಖಾನನನ್ನು ಚಾಣಾಕ್ಷತನದಿಂದ ಶಿವಾಜಿ ಪ್ರತಾಪಗಡದಲ್ಲಿ ಕೊಲೆಗೈದನು. ಪುಣೆ ಜಿಲ್ಲೆಯ ರಾಜಗಡ, ಸಿಂಹಗಡ ಕೋಟೆಗಳು ಮರಾಠರ ಕೋಟೆಗಳಿಗೆ ಉತ್ತಮ ಉದಾಹರಣೆಯಾಗಿವೆ. ರಾಜಗಡ ಕೋಟೆಯಲ್ಲಿ ಮರಾಠರ ಕಾಲದ ಅರಮನೆಯ ಅವಶೇಷಗಳಿವೆ. ಸಿಂಹಗಡ, ತೋರಣ, ರಾಜಗಡ, ಪ್ರತಾಪಗಡ, ವಿಜಯದುರ್ಗ, ರತನಗಡ, ರಾಯಗಡ, ಶಿವನೇರಿ, ಪೂನಾ, ರಾಜಮಾಚಿ, ಲೋಹಗಡ, ದೌಲತಾಬಾದ್, ನಳದುರ್ಗ, ಸೋಲಾಪುರ, ಕೊಲ್ಹಾಪುರ, ಸತಾರಾಗಳು ಹೆಸರಿಸಬಹುದಾದ ಮರಾಠರ ಕೋಟೆಗಳು. ಇವು ಕರ್ನಾಟಕದ ಬೆಳಗಾಂವಿ, ಧಾರವಾಡ, ತುಮಕೂರು ಜಿಲ್ಲೆಗಳಲ್ಲೂ ಇವೆ. ಕೊಂಕಣ ಕರಾವಳಿಗೆ ಹೊಂದಿಕೊಂಡಂತೆ ಇರುವ ಜಂಜಿರಾ ಕೋಟೆ ಒಂದು ಜಲದುರ್ಗ. ಇದು ಅಹ್ಮದನಗರದ ನಿಜಾಮ್ ಶಾಹಿ ಸುಲ್ತಾನನ ವಜೀರನಾಗಿದ್ದ

ಮಲ್ಲಿಕ್ ಅಂಬರ್ 17ನೆಯ ಶತಮಾನದ ಅಂತ್ಯದಲ್ಲಿ ನಿರ್ಮಿಸಿ ಸಿದ್ಧಿಕಿಯವರ ಉಸ್ತುವಾರಿಗೆ ವಹಿಸಿದ್ದ. ಸುತ್ತಲೂ ಸಮುದ್ರದಿಂದ ಕೂಡಿದ ಜಂಜಿರಾ ಕೋಟೆ ತನ್ನ ಚರಿತ್ರೆಯಲ್ಲಿ ಅಭೇದ್ಯ ಕೋಟೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕೋಟೆಯನ್ನು ವಶಪಡಿಸಿಕೊಳ್ಳಲು ಶಿವಾಜಿ ಪ್ರಯತ್ನಿಸಿ ಕೈಬಿಡಬೇಕಾಯಿತು. ಹಾಗೆಯೇ ಸಂಭಾಜಿ ಕೋಟೆ ವಶಪಡಿಸಿಕೊಳ್ಳಲು ಗುಪ್ತಮಾರ್ಗ ಕೊರೆದು ಪ್ರಯತ್ನಿಸಿ ವಿಫಲನಾದ.

**ರಜಪೂತ ಕೋಟೆಗಳು:** ರಾಜಸ್ತಾನ, ಮಧ್ಯಪ್ರದೇಶ ಹಾಗೂ ಗುಜರಾತಿನ ಕೆಲವು ಪ್ರದೇಶಗಳಲ್ಲಿ ರಜಪೂತರ ಕೋಟೆಗಳಿವೆ. ಇವು ಅರಾವಳಿ, ವಿಂಧ್ಯ ಬೆಟ್ಟ ಹಾಗೂ ರಾಜಸ್ತಾನ ಮರುಭೂಮಿಯಲ್ಲಿವೆ. ಈ ರಜಪೂತ ಕೋಟೆಗಳು ಇನ್ನೂ ಸುಸ್ಥಿತಿಯಲ್ಲಿವೆ. ಈ ಕಾರಣಗಳಿಂದ ದೇಶದ ಪ್ರಮುಖ ಪ್ರವಾಸಿ ತಾಣಗಳಾಗಿ ಇವುಗಳನ್ನು ಗುರುತಿಸಲಾಗಿದೆ. ರಜಪೂತ ಕೋಟೆಗಳು ಕೆಂಪು ಛಾಯೆಯ ಮರಳುಗಲ್ಲಿನಿಂದ ನಿರ್ಮಾಣವಾಗಿದ್ದು, ಬೆಟ್ಟಗಳ ಅಂಚಿನಲ್ಲಿ



ಕೋಟೆನಗರ, ಚಿತ್ತೋರ್‌ಗಡ

ಅನೇಕ ಕಿಮೀ ದೂರದವರೆಗೆ ವಿಸ್ತರಿಸಿರುತ್ತವೆ. ರಜಪೂತ ಕೋಟೆಗಳು ವೃತ್ತಾಕಾರದಲ್ಲಿ ಕೊತ್ತಳಗಳನ್ನು ಹೊಂದಿವೆ. ಕೋಟೆಗಳ ಅಂಚಿನಲ್ಲಿ, ದ್ವಾರಗಳ ಅಥವಾ ಆಯಕಟ್ಟಿನ ಸ್ಥಳಗಳಲ್ಲಿ ಗುಮ್ಮಟಗಳಿಂದ ಕೂಡಿದ ಛತ್ರಿಗಳಿವೆ. ರಜಪೂತ ಕೋಟೆಗಳಲ್ಲಿ ನೀರಿನ ಶೇಖರಣೆಗಾಗಿ ಕೆರೆಗಳನ್ನು ನಿರ್ಮಿಸುವುದು ಸಾಮಾನ್ಯ. ಕೆಲವು ಕೋಟೆಗಳಲ್ಲಿ ಕೆರೆಗಳಲ್ಲದೆ, ನೀರಿನ ಕೊಳಗಳು ಇವೆ. ರಜಪೂತರು ಮೊಗಲರಂತೆ ವಿವಿಧ ಬಗೆಯ ಅರಮನೆಗಳು, ಉದ್ಯಾನವನಗಳು, ನೀರಿನ ಕೊಳಗಳನ್ನು ತಮ್ಮ ಕೋಟೆಗಳಲ್ಲಿ ನಿರ್ಮಿಸಿದ್ದಾರೆ. ಅರಮನೆಗಳಲ್ಲಿ ಸೂಕ್ಷ್ಮ ಕೆತ್ತನೆ ಹಾಗೂ ವಿನ್ಯಾಸ ಪ್ರಮುಖ ಲಕ್ಷಣವಾಗಿರುತ್ತದೆ. ಸೂಕ್ಷ್ಮ ಕೆತ್ತನೆಗಳಿಂದ ಮಾಡಿದ ಅರಮನೆಯ ಜಾಲಂಧ್ರಗಳನ್ನು ಜರೋಕೆ ಎಂದು ಕರೆಯುವುದು ವಾಡಿಕೆ. ರಾಜಸ್ತಾನದ ಕುಂಬಳಗಡ ಕೋಟೆ ರಜಪೂತ ಕೋಟೆಗಳಲ್ಲಿ ಒಂದು ಪ್ರಮುಖ ಕೋಟೆ. 15ನೆಯ ಶತಮಾನದ ಈ ಕೋಟೆ ಚಿತ್ತೋರಗಡದ ಮಹಾರಾಜ ರಾಣಕುಂಭ ನಿರ್ಮಿಸಿದ. ಸು. 4 ಕಿಮೀ ವಿಸ್ತೀರ್ಣದ ಈ ಕೋಟೆಯನ್ನು ಮೇವಾಡದ ಕಣ್ಣು ಎಂದು ಕರೆಯುವುದುಂಟು. ಅಂಭರಕೋಟೆ ಕಿಚ್ಛವಾದ ರಾಜ್ಯದ ರಾಜಧಾನಿ. ಇದನ್ನು 16ನೆಯ ಶತಮಾನದಲ್ಲಿ ಮಾನ್‌ಸಿಂಗ್ ನಿರ್ಮಿಸಿದ. ಸೂರಜ ದರವಾಜ, ಸಿಂಹ ದರವಾಜ, ಗಣೇಶ ದರವಾಜ ಇತ್ಯಾದಿ ದ್ವಾರಗಳಿಂದ, ಅನೇಕ ಕೊತ್ತಳಗಳಿಂದ ಹಾಗೂ ಜರೋಕೆಗಳಿಂದ ಕೂಡಿದ ಈ ಕೋಟೆ ಸುಭದ್ರ ಕೋಟೆಯೆನಿಸಿದೆ. ಕೋಟೆಯ ಒಳಾಂಗಣದಲ್ಲಿ ಮಹಲ್, ದಿವಾನ್–ಇ–ಆಮ್ ಹಾಗೂ ಜನಾನ–ಮಹಲ್ ಎಂಬ ಭವ್ಯವಾದ ಅರಮನೆಗಳಿವೆ. ರಜಪೂತ ಚರಿತ್ರೆಯಲ್ಲಿ ಹೆಸರುವಾಸಿಯಾದ ಚಿತ್ತೋರಗಡ ಕೋಟೆ ಅತ್ಯಂತ ಆಯಕಟ್ಟಿನ ಕೋಟೆಯಾಗಿದೆ. 1303ರಲ್ಲಿ ದೆಹಲಿ ಸುಲ್ತಾನ ಅಲಾವುದ್ದೀನ್ ಖಿಲ್ಜಿ ಆಕ್ರಮಣ ಮಾಡಿದ ಕಾಲದಲ್ಲಿ ಚಿತ್ತೋರಗಡದ ರಾಣಿ ಪದ್ಮಿನಿ ತನ್ನ ಸಂಗಡಿಗರೊಂದಿಗೆ ಆತ್ಮ ಬಲಿದಾನವನ್ನು ಈ ಕೋಟೆಯಲ್ಲಿ ಮಾಡಿದಳು. ಪದ್ಮಿನಿ ರಾಣಿಯ ಹೆಸರಿನ ಒಂದು ಸುಂದರ ಅರಮನೆ ಈ ಕೋಟೆಯಲ್ಲಿದೆ. ಚಿತ್ತೋರಗಡ ಕೋಟೆ ಏಳುನೂರು ಎಕರೆ ವಿಸ್ತೀರ್ಣದಿಂದ ಕೂಡಿದ್ದು ಇದಕ್ಕೆ ವಿವಿಧ ದಿಕ್ಕುಗಳಲ್ಲಿ ಏಳು ದ್ವಾರಗಳಿವೆ. ಕೋಟೆಯಲ್ಲಿ ರತನಸಿಂಗ್ ಅರಮನೆ, ರಾಣಕುಂಭನ ಅರಮನೆ, ನೀರಿನ ಕೊಳಗಳು ಹಾಗೂ ಮಾಳ್ವ ಸುಲ್ತಾನರ ವಿರುದ್ಧ ಜಯ ಸಾಧಿಸಿದ ನೆನಪಿಗಾಗಿ ರಾಣಕುಂಭ ನಿರ್ಮಿಸಿದ ವಿಜಯಸ್ತಂಭ ಇಲ್ಲಿವೆ. ರಾಜಸ್ತಾನ ಮರುಭೂಮಿಯಲ್ಲಿನ ಬೆಟ್ಟದ ಮೇಲೆ ನಿರ್ಮಿಸಿದ ಜೈಸಲಮೇರ್ ಕೋಟೆ ಬಹು ಆಕರ್ಷಣೀಯ ಕೋಟೆಗಳಲ್ಲಿ ಒಂದು. 13–17ನೆಯ ಶತಮಾನಗಳ ಕಾಲಾವಧಿಯಲ್ಲಿ ರಚಿತವಾದ ಈ ಕೋಟೆಯನ್ನು ರಾವಲ ಎಂಬ ರಜಪೂತ ಅರಸರು ಆಳಿದ್ದಾರೆ. ಈ ಕೋಟೆಯಲ್ಲಿ ಮೋತಿ ಮಹಲ್, ರಾಜಾಲ್–ಕಿ–ಮಹಲ್, ನೀರಿನ ಕೊಳ ಇತ್ಯಾದಿಗಳಿವೆ. ಮಧ್ಯಪ್ರದೇಶದ ಗ್ವಾಲಿಯರ್ ಕೋಟೆ ರಜಪೂತ ಕೋಟೆಗಳಲ್ಲಿ ಅದ್ವಿತೀಯ. ಮಧ್ಯ ಭಾರತದಲ್ಲಿ ಆಧಿಪತ್ಯ ವಿಸ್ತರಿಸುವುದಕ್ಕೆ ಆಯಕಟ್ಟಿನ ಕೋಟೆಗಳಲ್ಲಿ ಒಂದೆನಿಸಿದ ರಜಪೂತರ ಗ್ವಾಲಿಯರ್ ಕೋಟೆ ಅನೇಕ ಬಾರಿ ದೆಹಲಿ ಸುಲ್ತಾನರ, ಮೊಗಲರ ಹಾಗೂ ಬ್ರಿಟಿಷರ ಧಾಳಿಗೆ ಒಳಪಟ್ಟಿದೆ. ಮೊಗಲ ಸುಲ್ತಾನ ಬಾಬರನು ಗ್ವಾಲಿಯರ್ ಕೋಟೆಗೆ ಭೇಟಿ ನೀಡಿ ಇಲ್ಲಿಯ ರಕ್ಷಣಾ ವ್ಯವಸ್ಥೆಯನ್ನು ತನ್ನ ಗ್ರಂಥದಲ್ಲಿ ವಿವರಿಸಿದ್ದಾನೆ.

ಮಾಂಡು ಕೋಟೆ ರಜಪೂತ ಮತ್ತು ದಖನ್ ಶೈಲಿಗಳ ಸಮ್ಮಿಶ್ರಣ ಕೋಟೆ. ಮಂಡಪದುರ್ಗ ಎಂದು ಪ್ರಾಚೀನಕಾಲದಲ್ಲಿ ಕರೆಯುತ್ತಿದ್ದ ಮಾಂಡು ಕೋಟೆ ಮಾಳ್ವ ಸುಲ್ತಾನರ ರಾಜಧಾನಿಯಾಗಿತ್ತು. ಬಹು ವಿಸ್ತಾರವಾದ ಈ ಕೋಟೆ ಆಯಕಟ್ಟಿನ ಸ್ಥಳದಲ್ಲಿದ್ದು, ಅನೇಕ ಅರ್ಧ ವರ್ತುಲಾಕಾರದ ಕೊತ್ತಳಗಳಿಂದ ಹಾಗೂ ಕಮಾನಿನಾಕಾರದ ದ್ವಾರಗಳಿಂದ ನಿರ್ಮಿಸಲಾಗಿದೆ. ಹಿಂದು ಮತ್ತು ಮುಸ್ಲಿಂ ಸಂಸ್ಕೃತಿಗಳ ಸಂಗಮವಾಗಿದ್ದ ಮಾಳ್ವ ದೇಶದ ಮಾಂಡು ಕೋಟೆಯಲ್ಲಿ ವೈವಿಧ್ಯಮಯ ಅರಮನೆಗಳು, ನೀರಿನ ಕಾರಂಜಿಗಳು, ಕಛೇರಿಗಳು ಇದ್ದವು. ಇವುಗಳಲ್ಲಿ ಹಿಂದೋಳ ಮಹಲ್, ರೂಪವತಿ ಮಹಲ್ ಮತ್ತು ಜಾಹಜ್ ಮಹಲ್ ಹೆಸರುವಾಸಿ. ಈ ಭವ್ಯ ಕಟ್ಟಡಗಳಲ್ಲಿ ರಜಪೂತ ಹಾಗೂ ದೆಹಲಿ ಸುಲ್ತಾನರ ಶೈಲಿಗಳ ಸಂಗಮವನ್ನು ಕಾಣಬಹುದಾಗಿದೆ.

**ಮೊಗಲರ ಕೋಟೆಗಳು:** ದೆಹಲಿಯ ಲೋದಿ ಆಳ್ವಿಕೆಯನ್ನು ಕೊನೆಗೊಳಿಸಿ ಅಸ್ತಿತ್ವಕ್ಕೆ ಬಂದ ಮೊಗಲರು ಸುಮಾರು ಮುನ್ನೂರು ವರ್ಷಗಳವರೆಗೆ ಆಳಿಕೆ ನಡೆಸಿದರು. ಮೊಗಲರು ತಮ್ಮ ಸಾಮ್ರಾಜ್ಯ ವಿಸ್ತರಣೆ ನೀತಿಯಿಂದ ಭಾರತದ ಬಹುಭಾಗವನ್ನು ಒಂದೇ ಆಧಿಪತ್ಯದಲ್ಲಿ ನೆಲೆಗೊಳಿಸಲು ಪ್ರಯತ್ನಿಸಿದರು. ಬಾಬರ್ ನಾಮದಲ್ಲಿ ವಿವರಿಸಿದಂತೆ ಬಾಬರನು ಪ್ರಥಮ ಬಾರಿಗೆ ಯುದ್ಧಗಳಲ್ಲಿ ಮದ್ದು ಗುಂಡುಗಳನ್ನು ಪ್ರಯೋಗಿಸಿ ಆಧಿಪತ್ಯ ಸ್ಥಾಪಿಸಿದ. ಪರ್ಷಿಯದ ಆಟೋಮನ್ ಸಾಮ್ರಾಜ್ಯದಲ್ಲಿ ಪ್ರಚಲಿತವಾಗಿದ್ದ ಮದ್ದು ಗುಂಡಿನ ಬಳಕೆ ಭಾರತದ ನೆಲದಲ್ಲಿ ಪ್ರಥಮವಾಗಿ ಬಳಕೆಗೆ ಬಂದಿತು. ಈ ವಿನಾಶಕಾರಿ ಆಯುಧಗಳ ಸಂಗ್ರಹಣೆ ಹಾಗೂ ಅವುಗಳ ಪ್ರಯೋಗದಿಂದ ಸಾಮ್ರಾಜ್ಯದಾದ್ಯಂತ ಕೇಂದ್ರೀಕೃತ ಆಡಳಿತ ಸ್ಥಾಪನೆಗೆ ಅನುವು ಮಾಡಿಕೊಡಲಾಯಿತು. ಬಲಿಷ್ಠ ಸೈನಿಕ ವ್ಯವಸ್ಥೆಯಿಂದಾಗಿ ಕೇಂದ್ರೀಕೃತ ರಾಜ್ಯದ ಸ್ಥಾಪನೆಯನ್ನು ಮೊಗಲರು ಪ್ರಾರಂಭಿಸಿದರು. ಸೈನ್ಯದಲ್ಲಿ ಮದ್ದಿನ ಬಳಕೆ ಆರಂಭವಾದೊಡನೆ ಕೋಟೆಗಳ ರಚನೆಯಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡಲಾಯಿತು. ಮದ್ದಿನ ಗುಂಡುಗಳನ್ನು ಎದುರಿಸಲು ಕೋಟೆಗಳಲ್ಲಿ ಸುಭದ್ರ ಗೋಡೆಗಳ ನಿರ್ಮಾಣ, ಮದ್ದಿನ ಫಿರಂಗಿಗಳನ್ನು ಕೋಟೆಗಳಲ್ಲಿ ಇರಿಸಲು ಎತ್ತರದ ಹಾಗೂ ವರ್ತುಲಾಕಾರದ ಕೊತ್ತಳಗಳ ಅಳವಡಿಕೆ ಪ್ರಾರಂಭವಾಯಿತು. ಕೋಟೆಯಲ್ಲಿ ಪಹರೆಗೆ ಹೆಚ್ಚಿನ ಗಮನಕೊಡಲಾಯಿತು.

ಮೊಗಲರು ನಿರ್ಮಿಸಿದ ಆಗ್ರದ ಕೋಟೆ, ದೆಹಲಿಯ ಪುರಾನ ಖಿಲಾ, ಶಹಜಾನಾಬಾದ ಕಿಲ್ಲೆ, ಫತೇಪುರ ಸಿಕ್ರಿ, ಲಾಹೋರ ಕೋಟೆ, ಔರಂಗಾಬಾದ ಕೋಟೆ, ಕರ್ನಾಟಕದ ವಾಗೀಣಗೇರಿ ಕೋಟೆ, ಚಿತ್ತಾಪುರ ಕೋಟೆ ಮೊದಲಾದವು ಕೆಲವು ಮುಖ್ಯ ಕೋಟೆಗಳೆನಿಸಿವೆ. ದೆಹಲಿಯ ಪುರಾನ ಖಿಲಾ ಶೇರ್–ಷಾನ ಕಾಲದಲ್ಲಿ ಪ್ರಾರಂಭವಾಗಿ ಹುಮಾಯೂನನ ಕಾಲದಲ್ಲಿ ಪೂರ್ಣಗೊಂಡಿತು. ಆಯತಾಕಾರದ ಈ ಕೋಟೆ 2 ಕಿಮೀ ಸುತ್ತಳತೆಯಿಂದ ಕೂಡಿದೆ. ಪ್ರಪಂಚ ಪ್ರಸಿದ್ಧ ತಾಜಮಹಲ್‌ಗೆ ಸ್ವಲ್ಪ ದೂರದಲ್ಲಿರುವ ಆಗ್ರ ಕೋಟೆ ಮೊಗಲರ ರಾಜಧಾನಿಯಾಗಿತ್ತು. ಆಗ್ರ ಕೋಟೆ 21 ಮೀ ಎತ್ತರದ ಗೋಡೆ ಹಾಗೂ ಸಾಲಾಗಿ ನೀಟುಗಳಿರುವ ಕೈಪಿಡಿಗೋಡೆಯನ್ನು ಹೊಂದಿದೆ. ಕೋಟೆಯ ಒಳಗಿನಿಂದ ವೈರಿಗಳನ್ನು ವೀಕ್ಷಿಸಲು ವೀಕ್ಷಣಾ ಕಿಂಡಿಗಳನ್ನು ಹಾಗೂ ಪಹರೆಗೋಡೆಯನ್ನು ಕೋಟೆಯ ಗೋಡೆಯ ಒಳಭಾಗದಲ್ಲಿ ಮಾಡಲಾಗಿದೆ. ಆಗ್ರ ಕೋಟೆಯಲ್ಲಿ ಅಕ್ಬರ್ ದರವಾಜ ಮತ್ತು ದೆಹಲಿ

ಕೋಟೆ, ಬೀದರ್

ದರವಾಜ ಎಂಬ ಎರಡು ಹೆಬ್ಬಾಗಿಲುಗಳಿವೆ. ಕೋಟೆ ನೆಲದುರ್ಗವಾದ್ದರಿಂದ ಕೋಟೆಯ ಸುತ್ತಲೂ ಆಳವಾದ ಕಂದಕವಿದೆ. ಕೋಟೆಯ ಒಳಾಂಗಣದಲ್ಲಿ ಭವ್ಯವಾದ ದಿವಾನ್–ಇ–ಆಮ್, ಅಕ್ಬರಿ ಮಹಲ್, ಜಹಗೀರ ಮಹಲ್ ಅರಮನೆಗಳಿವೆ. ಅಕ್ಬರ್ ನಿರ್ಮಿಸಿದ, ಆಗ್ರದ ಹತ್ತಿರದ ಫತೇಪುರ್ ಸಿಕ್ರಿ ಕೋಟೆಯಲ್ಲಿ ದೆಹಲಿ–ದರವಾಜ, ಅಜಮೀರ್–ದರವಾಜ, ಆಗ್ರ–ದರವಾಜ, ಲಾಲ–ದರವಾಜ, ಸೂರಜ–ದರವಾಜ, ಚೌಂದಾರ–ದರವಾಜ ಮತ್ತು ಗ್ವಾಲಿಯರ್–ದರವಾಜ ಎಂಬ ಭವ್ಯ ದ್ವಾರಗಳಿವೆ. ಅರಮನೆಗಳ ಸಂಕೀರ್ಣವಾದ ದೌಲತಾಖಾನ ಎಂದು ಕರೆಯುವ ಉತ್ಕೃಷ್ಟ ಶೈಲಿಯ ಅರಮನೆಗಳು ಹಾಗೂ ಸಂಗೀತ ಚಾವಡಿಗಳು, ಉದ್ಯಾನಗಳು, ಮಸೀದಿಗಳು, ಬಜಾರಗಳು ಈ ಕೋಟೆಯಲ್ಲಿ ಹೆಸರಿಸಬಹುದಾದ ಭವ್ಯ ಕಟ್ಟಡಗಳು. ಶಹಜಾನಾಬಾದ್ ಎಂದು ಕರೆಯುವ ದೆಹಲಿಯ ಹಳೆಕೋಟೆ

ಮೊಗಲರಿಂದ ನಿರ್ಮಾಣವಾಗಿದೆ. ಕೆಂಪು–ಕೋಟೆಯನ್ನು ಒಳಗೊಂಡ ಶಹಜಾನಾಬಾದ್ ಕೋಟೆ ಒಂದು ವಿಶಾಲ ನಗರವಾಗಿತ್ತು. ಯಮುನಾ ನದಿಯ ದಡದಲ್ಲಿ ನಿರ್ಮಿಸಲಾದ ಈ ಮೊಗಲರ ಕೋಟೆ ಅತ್ಯಂತ ವ್ಯವಸ್ಥಿತವಾಗಿ ನಿರ್ಮಾಣವಾಗಿತ್ತು. ಕಾಶ್ಮೀರ ದ್ವಾರ, ಅಜ್ಮೀರ್ ದ್ವಾರ, ದೆಹಲಿ ದ್ವಾರ ಇತ್ಯಾದಿ ಮುಖ್ಯ ದ್ವಾರಗಳಿಂದ ಕೂಡಿದ್ದ ಶಹಜಾನಾಬಾದ್ ಕೋಟೆಯ ಪೂರ್ವದಿಕ್ಕಿನ ಅಂಚಿನಲ್ಲಿ ವಿವಿಧ ಅರಮನೆಗಳಿಂದ ಕೂಡಿದ ಒಂದು ಕಿರು ಕೋಟೆಯಿದೆ. ಈ ಕಿರುಕೋಟೆ ಇಂದಿಗೂ ಸುರಕ್ಷಿತವಾಗಿದ್ದು ಇದನ್ನು ಕೆಂಪುಕೋಟೆ



**ಕೆಂಪುಕೋಟೆ, ದೆಹಲಿ**

ಎಂದು ಕರೆಯುತ್ತಾರೆ. ಕೆಂಪುಕೋಟೆಯ ಪ್ರವೇಶಕ್ಕೆ ಲಾಹೋರ್ ದ್ವಾರ ಮತ್ತು ದೆಹಲಿ ದ್ವಾರಗಳೆಂಬ ಎರಡು ದ್ವಾರಗಳಿವೆ. ಕೆಂಪುಕೋಟೆ ಮೊಗಲ್ ಬಾದಶಹಾನ ವಾಸದ ಸ್ಥಳವಾಗಿದ್ದು, ಇಲ್ಲಿ ಅನೇಕ ಭವ್ಯವಾದ ಅರಮನೆಗಳು ಮತ್ತು ಉದ್ಯಾನಗಳಿವೆ. ಇಲ್ಲಿಯ ಅರಮನೆಗಳನ್ನು ದಿವಾನ್–ಇ–ಆಮ್, ದಿವಾನ್–ಇ–ಖಾಸ್, ಮಮ್ತಾಜ–ಮಹಲ್, ಜಫರ್ ಮಹಲ್ ಇತ್ಯಾದಿಯಾಗಿ ಕರೆಯುತ್ತಾರೆ. ಮೊಗಲರ ಕೊನೆಯ ಬಾದಶಹಾ ಜಫರ ಶಹಾ ಬಹದ್ದೂರ್ ಇಲ್ಲಿಯೇ ವಾಸವಾಗಿದ್ದ. ಬ್ರಿಟಿಷರು 1857ರ ದಂಗೆಯಲ್ಲಿ ಮೊಗಲ ಬಾದಶಹಾನನ್ನು ಬಂಧಿಸಿ ಈ ಕೋಟೆಯನ್ನು ಆಕ್ರಮಿಸಿಕೊಂಡರು.

ಮೊಗಲರ ಸಾಮ್ರಾಜ್ಯ ದಕ್ಷಿಣ ಭಾರತದಲ್ಲಿ ವಿಸ್ತರಿಸಿದ್ದರೂ ಮೊಗಲರು ದಕ್ಷಿಣದಲ್ಲಿ ಕೋಟೆಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಲಿಲ್ಲ. ಆದರೂ ಮೊಗಲರು ನಿರ್ಮಿಸಿದ ಕೋಟೆಗಳೆಂದು ಮಹಾರಾಷ್ಟ್ರದ ಔರಂಗಾಬಾದ್ ಕೋಟೆ ಮತ್ತು ಕರ್ನಾಟಕದ ವಾಗಣಗೇರಿ ಕೋಟೆಗಳನ್ನು ಗುರುತಿಸಲಾಗುತ್ತದೆ. ಇಳಿಜಾರಾದ ಬೆಟ್ಟಗಳಲ್ಲಿ ನಿರ್ಮಿಸಲಾದ ವಾಗಣಗೇರಿ ಕೋಟೆ ಸೈನ್ಯದ ಪಹರೆಗೋಡೆ, ಕಮಾನುಗಳಿಂದ ಕೂಡಿದ ಕೈಪಿಡಿಗೋಡೆ, ವರ್ತುಲಾಕಾರದ ಕೊತ್ತಳಗಳು, ಮೂರು ದ್ವಾರಗಳಿಂದ ಕೂಡಿದೆ. ಮೊಗಲರು ಪೂರ್ವದ ಬಂಗಾಲ, ಅಸ್ಸಾಮ್ ಪ್ರದೇಶದಲ್ಲಿ ಹಾಗೂ ಬಾಂಗ್ಲದೇಶದ ಢಾಕಾದಲ್ಲಿ ಕೋಟೆಗಳನ್ನು ನಿರ್ಮಿಸಿದ್ದಾರೆ. ಢಾಕದಲ್ಲಿಯ ಲಾಲ್‌ಕೋಟೆ ಎಂದು ಕರೆಯುವ ಮೊಗಲರ ಕೋಟೆ ಕೆಂಪುವರ್ಣದ ಇಟ್ಟಿಗೆಗಳಿಂದ ನಿರ್ಮಿತವಾಗಿದೆ.

**ಪೋರ್ಚುಗೀಸ್ ಕೋಟೆಗಳು:** ಪೋರ್ಚುಗೀಸರ ಕೋಟೆಗಳು ಪಶ್ಚಿಮ ಕರಾವಳಿಯ ಮಹಾರಾಷ್ಟ್ರ, ಕರ್ನಾಟಕ, ಗೋವ, ಕೇರಳ, ಒರಿಸ್ಸ ಮತ್ತು ಬಂಗಾಲಗಳಲ್ಲಿ ಕಂಡುಬರುತ್ತವೆ. ಪೋರ್ಚುಗೀಸರು ತಮ್ಮ ಕೋಟೆಗಳನ್ನು ನಿರ್ಮಿಸುವುದಕ್ಕೆ ಕರಾವಳಿಯ ದ್ವೀಪ, ಸಮುದ್ರ ಸೇರುವ ನದಿಗಳ ದಡಗಳನ್ನು ಆಯ್ಕೆಮಾಡಿಕೊಂಡರು. ಸಮುದ್ರಯಾನದ ಹಡಗುಗಳನ್ನು ನಿಯಂತ್ರಿಸಲು ಕೋಟೆಗಳಲ್ಲಿ ದೀಪಗೃಹ (ಲೈಟ್ ಹೌಸ್) ನಿರ್ಮಿಸಿದರು. ಕೋಟೆಗಳ ಬಳಿ ಸರಕುಗಳನ್ನು ಹಡಗುಗಳಿಂದ ಇಳಿಸಲು, ಜಟ್ಟಿಗಳನ್ನು ನಿಯಮಿಸಿದರು. ಆಕ್ರಮಣಗಳಂತಹ ತುರ್ತುಪರಿಸ್ಥಿತಿಯಲ್ಲಿ ಕೋಟೆಯಿಂದ ಪಲಾಯನ ಮಾಡಲು, ಸಮುದ್ರಕ್ಕೆ ಹೋಗಲು ಗುಪ್ತಮಾರ್ಗಗಳನ್ನು ನಿರ್ಮಿಸಿದರು. ಪೋರ್ಚುಗೀಸರ ಕೋಟೆಗಳ ಅತ್ಯಂತ ಸುರಕ್ಷಿತ ಸ್ಥಳಗಳಲ್ಲಿ ಕ್ರೈಸ್ತ ಮಂದಿರ (ಚಾಪೆಲ್) ಹಾಗೂ ಅಲ್ಲಿಯ ಅಧಿಕಾರಿಯ ವಾಸದ ಮನೆಗಳನ್ನು ನಿರ್ಮಿಸಿದರು. ಕೋಟೆಗಳಲ್ಲಿಯ ಜನರನ್ನು ಹಾಗೂ ಸರಕುಗಳನ್ನು ವೈರಿಗಳಿಂದ ಸಂರಕ್ಷಿಸಲು ಉದ್ದನೆಯ ಫಿರಂಗಿಗಳನ್ನು ಅಳವಡಿಸಿದರು. ಗೋವ ಸಮುದ್ರ ತೀರದ ಪೋರ್ಚುಗೀಸರ ಕೋಟೆಗಳಲ್ಲೊಂದಾದ ಅಗುಡ ಕೋಟೆಯನ್ನು ಸಮುದ್ರಕ್ಕೆ ಸೇರುವ ಮಾಂಡವಿ ನದಿಯ ತೀರದಲ್ಲಿ ಕಟ್ಟಲಾಗಿದೆ. 1612ರಲ್ಲಿ ನಿರ್ಮಿಸಿದ ಅಗುಡ ಕೋಟೆಯ ಕೈಪಿಡಿ ಗೋಡೆ ಹಾಗೂ ಕೊತ್ತಳಗಳಲ್ಲಿ ಫಿರಂಗಿಗಳನ್ನು ಬಳಸಲು ಆಯತಾಕಾರದ ಕಿಂಡಿಗಳನ್ನು ಮಾಡಲಾಗಿದೆ. ಪಹರೆಗಾಗಿ ಕೈಪಿಡಿಯಲ್ಲಿ ಪಹರೆಗೋಡೆಯನ್ನು ನಿರ್ಮಿಸಲಾಗಿದೆ. ವೈರಿಗಳ ಆಕ್ರಮಣ ತಡೆಯಲು ಕೋಟೆಯ ಸುತ್ತಲೂ ಕಂದಕವನ್ನು ರಾಯಗಡ ಜಿಲ್ಲೆಯ ರೆವದಂಡ ಎಂದು ಕರೆಯುವ ಚೌಕದ ಹತ್ತಿರ ಪೋರ್ಚುಗೀಸರ ಕೊರ್ಲೆ ಕೋಟೆ ಇದೆ. ಬೆಟ್ಟದ ಅಂಚಿನಲ್ಲಿ ನಿರ್ಮಿಸಲಾದ ಈ ಕೋಟೆಯಲ್ಲಿ ಅನೇಕ ಫಿರಂಗಿಗಳನ್ನು ಅಳವಡಿಸಲಾಗಿದೆ. ಕೆಳಕೋಟೆ ವಿಶಾಲವಾಗಿದ್ದು, ಸರಕುಗಳನ್ನು ಸಂಗ್ರಹಿಸಲು ಹಲವಾರು ಕೋಣೆಗಳನ್ನು ಉಗ್ರಾಣಗಳನ್ನೂ ನಿರ್ಮಿಸಲಾಗಿದೆ. ಮೇಲಿನ ಕೋಟೆಯಲ್ಲಿ ಕ್ರೈಸ್ತ ಮಂದಿರ ಹಾಗೂ ವಾಸಿಸುವ ಮನೆಗಳ ಅವಶೇಷಗಳಿವೆ. ಇಲ್ಲಿಯ ಹಳೆಯ ದೀಪಗೃಹ ಪುನರ್ ನಿರ್ಮಿಸಲಾಗಿದ್ದು ಈಗಲೂ ಬಳಕೆಯಲ್ಲಿದೆ. ಮುಂಬೈ ನಗರದ ಹತ್ತಿರದ ಬಾಂದ್ರ ವಸೈ ಕೋಟೆಗಳು ಪೋರ್ಚುಗೀಸರಿಂದ ರಚಿತವಾಗಿವೆ. ಬಸ್ಸಯಿನ್ ಎಂದು ಕರೆಯಲ್ಪಡುವ ವಸೈ ಕೋಟೆ 16ನೆಯ ಶತಮಾನದಲ್ಲಿ ಸಮೃದ್ಧಿಯ ನಗರವೆನಿಸಿತ್ತು. ಅನೇಕ ಕೊತ್ತಳಗಳಿಂದ ಕೂಡಿದ ಈ ಕೋಟೆಯಲ್ಲಿ ಸುಂದರವಾದ ಪೋರ್ಚುಗೀಸರ ಒಂದು ಚರ್ಚು ಹಾಗೂ ಅನೇಕ ಉಗ್ರಾಣಗಳಿವೆ. ಕೇರಳದ ಕಣ್ಣೂರು ಕೋಟೆಯನ್ನು 1505ರಲ್ಲಿ ಪೋರ್ಚುಗೀಸರು ನಿರ್ಮಿಸಿದರು. ಅನಂತರ ಇದನ್ನು ಡಚ್ಚರು ಮತ್ತು ಬ್ರಿಟಿಷರು ವಶಪಡಿಸಿಕೊಂಡರು. ಸಮುದ್ರತೀರದ ಈ ಕೋಟೆ ಚಿಕ್ಕದಾಗಿದ್ದರೂ ಅಂದು ಬಳಸಿದ ಫಿರಂಗಿಗಳು ಹಾಗೂ ಮದ್ದಿನ ಮನೆಗಳು ಇಂದಿಗೂ ಕಾಣಸಿಗುತ್ತವೆ. ಪೋರ್ಚುಗೀಸರ ಅಧೀನದಲ್ಲಿದ್ದ ಕೊಚ್ಚಿನ್‌ನಲ್ಲಿ ಆ ಕಾಲದ ಒಂದು ಚಿಕ್ಕ ಕೋಟೆ ಇದೆ.

**ಡಚ್ಚರ ಕೋಟೆಗಳು:** ಪೋರ್ಚುಗೀಸರನ್ನು ಹಿಂಬಾಲಿಸಿ ಭಾರತದಲ್ಲಿ ವ್ಯಾಪಾರ ವಾಣಿಜ್ಯ ಸ್ಥಾಪಿಸಿದ ಹಾಲೆಂಡಿನ ಡಚ್ಚರು ದೇಶದ ಕರಾವಳಿಯಲ್ಲಿ ಕೋಟೆಗಳನ್ನು ನಿರ್ಮಿಸಿದರು. ಡಚ್ಚರ ಕೋಟೆಗಳು ಹೆಚ್ಚಾಗಿ ತಮಿಳುನಾಡಿನ ಕರಾವಳಿಯಲ್ಲಿ ಕಂಡುಬರುತ್ತವೆ. ತರಂಗಬಾಡಿ (ಟ್ರೆಂಕೋಬಾರ್), ಕಿಲಕ್ಕರೈ (ರಾಮನಾಡ ಜಿಲ್ಲೆ), ಪುಲಿಕಾಟ್ (ಕಾಂಚೀಪುರ ಜಿಲ್ಲೆ) ಆಂಧ್ರ ಪ್ರದೇಶದ ಭೀಮುನೀ ಪಟನಾಮ್ (ವಿಶಾಖಪಟ್ಟಣ ಜಿಲ್ಲೆ) ಇತ್ಯಾದಿಗಳಲ್ಲಿ ಕಂಡುಬರುತ್ತವೆ. ಹಿಂದೆ ಪಾಲಕ್ಕಾಡು ಎಂದು ಕರೆಯಲ್ಪಡುತ್ತಿದ್ದ ಪುಲಿಕಾಟ್‌ನಲ್ಲಿ ಡಚ್ಚರ ಕೋಟೆ 1609ರಲ್ಲಿ ಕಟ್ಟಲಾಯಿತು. ಸುತ್ತಲೂ ಕಂದಕವಿದ್ದ ಈ ಕೋಟೆ ಇಂದು ನಾಶವಾಗಿದೆ. ಕೇರಳದ ಕೊಚ್ಚಿನ್‌ನಲ್ಲಿ ಡಚ್ಚರ ಒಂದು ಕೋಟೆ ಹಾಗೂ ಅರಮನೆ ಇವೆ. ಇಲ್ಲಿಯ ಐರೋಪ್ಯ ಶೈಲಿಯ ಡಚ್ಚರ ಅರಮನೆ ಭವ್ಯವಾಗಿದೆ. ಇಲ್ಲಿಯ ದ್ವಾರಗಳು ಜಾಲಂಧ್ರಗಳು ಹಾಗೂ ಭಿತ್ತಿಚಿತ್ರಗಳು ಸ್ಥಳೀಯ ಮಾದರಿಯಲ್ಲಿವೆ.

**ಫ್ರೆಂಚರ ಕೋಟೆಗಳು:** ಫ್ರೆಂಚರು ದಕ್ಷಿಣ ಭಾರತದ ಕರಾವಳಿ ತೀರದಲ್ಲಿ ಕೆಲವು ಕೋಟೆಗಳನ್ನು ನಿರ್ಮಿಸಿದ್ದಾರೆ. ಪಾಂಡಿಚೇರಿ ಫ್ರೆಂಚರು ನಿರ್ಮಿಸಿದ ಒಂದು ಉತ್ತಮ ನಗರವೆನಿಸಿದೆ. ಅದರಂತೆ ಜಿಂಜಿ ಮತ್ತು ತಿರುಚಿರಾಪಳ್ಳಿ ಕೋಟೆಗಳನ್ನು ಫ್ರೆಂಚರು ವಶಪಡಿಸಿಕೊಂಡು ಕೆಲವು ಕೊತ್ತಳ ಹಾಗೂ ದ್ವಾರಗಳಿಂದ ವಿಸ್ತರಿಸಿದ್ದಾರೆ. ಇವುಗಳಲ್ಲದೆ ಫ್ರೆಂಚರ ಅನೇಕ ತಜ್ಞರು ದಕ್ಷಿಣ ಭಾರತದ ಸ್ಥಳೀಯ ಅರಸರಿಗೆ ಕೋಟೆಗಳನ್ನು ಸುಸಜ್ಜಿತಗೊಳಿಸಲು ನೆರವು ನೀಡಿದರು. ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದ ಟಿಪ್ಪು ಸುಲ್ತಾನನ ನೆರವಿಗೆ ಬಂದಿದ್ದ ಫ್ರೆಂಚರು ಶ್ರೀರಂಗಪಟ್ಟಣ, ದೇವನಹಳ್ಳಿ, ದಿಂಡುಗಲ್ಲು ಇತ್ಯಾದಿ ಕೋಟೆಗಳಲ್ಲಿ ಅನೇಕ ಮಾರ್ಪಾಡುಗಳನ್ನು ಕೈಗೊಂಡರು. ಫ್ರೆಂಚರು ನಿರ್ಮಿಸಿದ ಕೋಟೆಗಳಲ್ಲಿ



**ಕಬ್ಬಿಣಯುಗದ ಕೋಟೆನಗರ, ಚಿಂಕಿರ್ಲಿ (ಆಗ್ನೇಯ ಟರ್ಕಿ)**

ಬತೇರಿಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಫಿರಂಗಿಗಳನ್ನು ಕೊತ್ತಳಗಳಲ್ಲಿ ಅಳವಡಿಸಿ ವಿವಿಧ ದಿಕ್ಕುಗಳಲ್ಲಿ ಅದನ್ನು ಬಳಸುವ ಅನುಕೂಲಕ್ಕಾಗಿ ಕೊತ್ತಳಗಳ ಕುಂಬಿಯಲ್ಲಿ ಆಯತಾಕಾರದ ಕಿಂಡಿಗಳನ್ನು ಮಾಡಲಾಗಿದೆ.ಅದರಂತೆ ಹೊರಗಿನಿಂದ ಬರುವ ಗುಂಡುಗಳು ಕೋಟೆಯ ಗೋಡೆಯ ಮೇಲೆ ನಿಲ್ಲದಂತೆ ಕೋಟೆಯ ಕುಂಬಿಯನ್ನು ಇಳಿಜಾರಾಗಿ ನಿರ್ಮಿಸಲಾಗಿದೆ. ಮದ್ದುಗುಂಡುಗಳನ್ನು ಸಂಗ್ರಹಿಸಲು ಅನೇಕ ಮದ್ದಿನ ಮನೆಗಳನ್ನು ನೆಲದ ಆಳದಲ್ಲಿ ನಿರ್ಮಿಸಲಾಗಿದೆ. ನೆಲಮಾಳಿಗೆಯ ಮದ್ದಿನ ಮನೆಗಳನ್ನು ಪಾವಗಡದಲ್ಲಿ, ಶ್ರೀರಂಗಪಟ್ಟಣದಲ್ಲಿ ಮತ್ತು ಬೆಂಗಳೂರಿನಲ್ಲಿ ಕಾಣುತ್ತೇವೆ.

**ಆಂಗ್ಲರ ಕೋಟೆಗಳು:** ಫ್ರೆಂಚರ ರಾಜಕೀಯ ಆಧಿಪತ್ಯ ಸಾಹಸಕ್ಕೆ ಬಲವಾದ ಪೆಟ್ಟುಕೊಟ್ಟು ತಮ್ಮ ರಾಜಕೀಯ ಪ್ರಭಾವವನ್ನು ವಿಸ್ತರಿಸಿ ಆಂಗ್ಲರು ಭಾರತದ ನೆಲದಲ್ಲಿ ತಮ್ಮ ರಕ್ಷಣೆಗೆ ಕೋಟೆಗಳನ್ನು ನಿರ್ಮಿಸಿದರು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಕೋಟೆಗಳನ್ನು

ನಿರ್ಮಿಸುವ ಸಂಪ್ರದಾಯ ಕ್ಷೀಣಿಸುತ್ತಾ ಬಂದಿತು. ವಿಮಾನಗಳಂತಹ ಆವಿಷ್ಕಾರಗಳು ಹಾಗೂ ಸಹಾಯಕ ಸೈನ್ಯ ಪದ್ಧತಿಗಳಂತಹ ಕುಟಿಲ ನೀತಿಗಳಿಂದ ಕೋಟೆಗಳು ತಮ್ಮ ಪ್ರಾಧಾನ್ಯ ಕಳೆದುಕೊಳ್ಳತೊಡಗಿದವು. ಆ ಕಾರಣದಿಂದ ಬ್ರಿಟಿಷರ ಕೋಟೆಗಳ ಸಂಖ್ಯೆ ಕಡಿಮೆ. ಬೆಂಗಳೂರಿನ ದಂಡು ವಿಭಾಗ 1800ರ ಸುಮಾರಿಗೆ ಪ್ರಾರಂಭವಾದರೂ ಕೋಟೆ ಕಟ್ಟದೆ ಇರುವುದು ಒಂದು ಉದಾಹರಣೆ. ಆದರೂ 18ನೆಯ ಶತಮಾನದಲ್ಲಿ ಬ್ರಿಟಿಷರು ತಮ್ಮ ವ್ಯಾಪಾರ ನಗರಗಳಲ್ಲಿ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ಬ್ರಿಟಿಷರು ತಾವು ವಶಪಡಿಸಿಕೊಂಡ ಕೋಟೆಗಳನ್ನು ಮಾರ್ಪಡಿಸಿ ಬಳಸಿಕೊಂಡರು.

ಕೋಟೆ, ದೇವನಹಳ್ಳಿ

ಮದರಾಸಿನಲ್ಲಿ ನಿರ್ಮಿಸಿದ ಬ್ರಿಟಿಷರ ಕೋಟೆ ಇಂದು ಭಾಗಶಃ ನಾಶವಾಗಿದೆ. ಫೋರ್ಟ್ ಸೆಂಟ್ ಜಾರ್ಜ್ ಎಂದು ಕರೆಯುವ ಕೋಟೆಯನ್ನು 1640 ರಲ್ಲಿ ನಿರ್ಮಿಸಲಾಗಿದೆ. ಇಳಿಜಾರಿನ ಕುಂಬಿ ಹಾಗೂ ಐರೋಪ್ಯ ಶೈಲಿಯ ಕೊತ್ತಳಗಳು ಹಾಗೂ ಐದು ದ್ವಾರಗಳಿಂದ ಈ ಕೋಟೆಯನ್ನು ನಿರ್ಮಿಸಲಾಗಿದೆ. ಕಲ್ಕತ್ತಾದ ಫೋರ್ಟ್ ವಿಲಿಯಮ್ ಕೋಟೆ ನಾಶವಾಗಿದೆ. ಅಳಿದುಳಿದ ಈ ಕೋಟೆ ಮದರಾಸು ಕೋಟೆಯ ಮಾದರಿಯಂತೆ ಕಂಡುಬರುತ್ತದೆ.

**ಕರ್ನಾಟಕ:** 1800ರ ಅವಧಿಯಲ್ಲಿ ಕರ್ನಲ್ ಮೆಕೆಂಜಿ ಮೈಸೂರು ಪ್ರಾಂತ್ಯದ ಸರ್ವೇಕ್ಷಣೆ ಮಾಡಿ ರಚಿಸಿದ ನಕ್ಷೆಯಲ್ಲಿ 1800ರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕೋಟೆಗಳನ್ನು ದಾಖಲಿಸಲಾಗಿದೆ. ಆ ನಕ್ಷೆಯ ಪ್ರಕಾರ ಸಾಮಾನ್ಯವಾಗಿ ಪ್ರತಿ ಹೋಬಳಿಯೂ ಕೋಟೆಗಳಿಂದ ಕೂಡಿದ್ದವು. ಈ ಕೋಟೆಗಳು ನಿರ್ದಿಷ್ಟ ಅಂತರದಲ್ಲಿದ್ದು, ಕೇವಲ ಒಂದು ದಿನದ ಅವಧಿಯಲ್ಲಿ ಒಂದು ಕೋಟೆಯಿಂದ ಇನ್ನೊಂದು ಕೋಟೆಗೆ ಎತ್ತಿನಗಾಡಿಯ ಮೂಲಕ ತಲುಪುವ ಸಮಯದ ಅಂತರದಲ್ಲಿರುತ್ತಿದ್ದವು. ಅಲ್ಲದೇ ಈ ಕೋಟೆಗಳನ್ನು ಹೆದ್ದಾರಿ ಅಥವಾ ವಾಣಿಜ್ಯ ಮಾರ್ಗಗಳ ಆಯಕಟ್ಟಿನಲ್ಲಿ ನಿರ್ಮಿಸಿರುವುದು ಈ ನಕ್ಷೆಗಳಿಂದ ತಿಳಿದುಬರುವುದು. ಕರ್ನಾಟಕದಲ್ಲಿ ಅಸಂಖ್ಯ ಕೋಟೆ–ಕೊತ್ತಳಗಳಿವೆ.

ಗುಲಬರ್ಗ ಜಿಲ್ಲೆಯ ಬೂದಿಹಾಳದಲ್ಲಿ ನವಶಿಲಾಯುಗ ಕಾಲಕ್ಕೆ ಸೇರಿದ ಕಲ್ಲು ಹಾಗೂ ಮಣ್ಣಿನಿಂದ ರಚಿಸಿದ ಒಂದು ರಕ್ಷಣಾ ಗೋಡೆಯನ್ನು ಉತ್ಖನನಗಳಲ್ಲಿ ಶೋಧಿಸಲಾಗಿದೆ. ಈವರೆಗೂ ದೊರೆತ ಅತ್ಯಂತ ಪ್ರಾಚೀನ ರಕ್ಷಣಾ ಗೋಡೆ ಇದಾಗಿದೆ. ನಾಗರಿಕತೆ ಬೆಳೆದಂತೆ ಸಮಾಜ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಇತಿಹಾಸದ ಆರಂಭ ಕಾಲದಿಂದ ನಗರಗಳನ್ನು ಹಾಗೂ ವ್ಯಾಪಾರಿ ಮಾರ್ಗಗಳನ್ನು ಸಂರಕ್ಷಿಸಲು ಕೋಟೆಗಳನ್ನು ನಿರ್ಮಿಸುವ ಪರಿಪಾಠ ಪ್ರಾರಂಭವಾಯಿತು. ಗುಲ್ಬರ್ಗ ಜಿಲ್ಲೆಯ ಸನ್ನತಿ ಹಾಗೂ ಉತ್ತರಕನ್ನಡ ಜಿಲ್ಲೆಯ ಬನವಾಸಿಗಳಲ್ಲಿ ಅತ್ಯಂತ ಪ್ರಾಚೀನ ಕೋಟೆಗಳ ಅವಶೇಷಗಳಿವೆ. ಭೀಮಾ ನದಿ ದಂಡೆಯ ಮೇಲಿರುವ ಸನ್ನತಿಯಲ್ಲಿ ನದಿಗೆ ಹೊಂದಿಕೊಂಡಂತೆ ನಿರ್ಮಿಸಲಾದ ಕೋಟೆ ಎರಡು ಸುತ್ತಿನಿಂದ ಕೂಡಿದ್ದು ಸು.500 ಎಕರೆ ವಿಸ್ತೀರ್ಣ ಹೊಂದಿದೆ. ಈ ಕೋಟೆಯನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಇದರ ಉತ್ತರ ದಿಕ್ಕಿನಲ್ಲಿ ಎರಡು ದ್ವಾರಗಳಿವೆ. ಎರಡು ಸುತ್ತಿನ ಗೋಡೆಯ ಸನ್ನತಿ ಕೋಟೆ ಒಳಾಂಗಣದಲ್ಲಿ ಜನವಸತಿಗೆ ಅವಕಾಶ ಕಲ್ಪಿಸಲಾಗಿತ್ತು. ಎರಡನೆಯ ಸುತ್ತಿನ ಕೋಟೆಯನ್ನು ರಣಮಂಡಲವೆಂದು ಕರೆಯಲಾಗುತ್ತದೆ. ಇದು ಅರಸರ ಅಥವಾ ಅಧಿಕಾರಿಗಳ ವಾಸದ ತಾಣವಾಗಿತ್ತು. ರಣಮಂಡಲ ಪ್ರದೇಶದಲ್ಲಿ ಇತ್ತೀಚೆಗೆ ಉತ್ಖನನ ಮಾಡಲಾಗಿದ್ದು ಅಲ್ಲಿ ಕೆಲವು ಮಹತ್ವದ ಕಟ್ಟಡಗಳು, ನೀರಿನ ಬಾವಿಗಳು, ಇತ್ಯಾದಿಗಳನ್ನು ಶೋಧಿಸಲಾಗಿದೆ. ಕದಂಬರ ರಾಜಧಾನಿ ಬನವಾಸಿಯಲ್ಲಿಯೂ ಪುರಾತನ ಕೋಟೆಯ ಅವಶೇಷಗಳನ್ನು ಶೋಧಿಸಲಾಗಿದೆ. ವರದಾ ನದಿಯ ದಂಡೆಯ ಮೇಲೆ ನಿರ್ಮಿಸಿದ ಬನವಾಸಿ ಕೋಟೆಯನ್ನು ಇಟ್ಟಿಗೆ ಹಾಗೂ ಜಂಬಿಟ್ಟಿಗೆಗಳಿಂದ ಕಟ್ಟಲಾಗಿದೆ. ಮಧ್ಯದಲ್ಲಿ ವಿಶಾಲವಾದ ಊರಿನ ಸುತ್ತ ಕೋಟೆಯನ್ನು ನಿರ್ಮಿಸಲಾಗಿತ್ತು. ಕದಂಬರ ಕಾಲದ ದೇವಾಲಯ ಹಾಗೂ ಅರಮನೆ ಅವಶೇಷಗಳನ್ನು ಕೋಟೆಯೊಳಗೆ ಶೋಧಿಸಲಾಗಿದೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ಕೋಟೆ ಪುರಾತನ ಶಾಸನೋಕ್ತ ಕೋಟೆಯೆನಿಸಿದೆ. 543ರಲ್ಲಿ ಚಳುಕ್ಯ ಅರಸ (ಒಂದನೆಯ ಪುಲಕೇಶಿ) ಈ ದುರ್ಗವನ್ನು ನಿರ್ಮಿಸಿದನೆಂದು ಕೋಟೆಯ ಶಾಸನ ತಿಳಿಸುತ್ತದೆ. ಬಾದಾಮಿಯ ಉತ್ತರಕ್ಕೆ ಇರುವ ಬೆಟ್ಟದ ಮೇಲೆ ಕಟ್ಟಲಾದ ಕೋಟೆ ಅನೇಕ ಚೌಕಾಕಾರದ ಕೊತ್ತಳಗಳನ್ನು ಹೊಂದಿದೆ.

6ನೆಯ ಶತಮಾನದ ಯುದ್ಧಗಳಲ್ಲಿ ತೀಕ್ಷ್ಣವಾದ ಆಯುಧಗಳ ಬಳಕೆ ಪ್ರಾರಂಭವಾಯಿತು. ವಿನಾಶಕಾರಿ ಆಯುಧಗಳ ಬಳಕೆ ಹಾಗೂ ಪ್ರತಿ ತಂತ್ರಗಾರಿಕೆಗೆ ಅನುಕೂಲವಾಗುವುದಕ್ಕೆ ಕೋಟೆಗಳ ನಿರ್ಮಾಣದಲ್ಲಿ ಕೊತ್ತಳಗಳ ಅಳವಡಿಕೆ ಪ್ರಾರಂಭವಾಯಿತು. 6ನೆಯ ಶತಮಾನದಿಂದ ರಚಿತವಾದ ಕೋಟೆಗಳಲ್ಲಿ ಚೌಕಾಕಾರದ ಕೊತ್ತಳ ಹಾಗೂ ಭದ್ರವಾದ ದ್ವಾರಗಳ ನಿರ್ಮಾಣ ಸಾಮಾನ್ಯ. ಉತ್ತರಭಾರತದ ದಂಡಯಾತ್ರೆ ಕೈಕೊಂಡು ಬೃಹತ್ ಸಾಮ್ರಾಜ್ಯ ಸ್ಥಾಪಿಸಿದ್ದ ರಾಷ್ಟ್ರಕೂಟರು ತಮ್ಮ ರಾಜ್ಯದಲ್ಲಿ ಅನೇಕ ಕೋಟೆಗಳನ್ನು ಕಟ್ಟಿದ್ದರು. ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಗುಲ್ಬರ್ಗ ಜಿಲ್ಲೆಯ ಮಳಖೇಡದಲ್ಲಿ ಕಾಗಿಣಾ ನದಿ ದಂಡೆಯ ಮೇಲೆ ಕೋಟೆಯನ್ನು ನಿರ್ಮಿಸಲಾಗಿದೆ. ಕೋಟೆಯ ಇನ್ನೊಂದು ಭಾಗದಲ್ಲಿ ಒಂದು ಚಿಕ್ಕ ಹಳ್ಳ ಹರಿಯುವುದು. ಈ ನೈಸರ್ಗಿಕ ರಕ್ಷಣೆಯಲ್ಲಿ ನಿರ್ಮಿಸಲಾದ ಮಳಖೇಡದ ಕೋಟೆ ವರ್ತುಲಾಕಾರದಲ್ಲಿದೆ. ಕೋಟೆಯಲ್ಲಿ ಎತ್ತರವಾದ ಒಂದು ಬತೇರಿ ಇದೆ. ಇದನ್ನು ಉಪ್ಲಿ–ಬುರ್ಜ ಎಂದು ಕರೆಯಲಾಗುತ್ತದೆ. ಮಳಖೇಡ ಕೋಟೆಯಲ್ಲಿ ಚೌಕಾಕಾರದ ಪುರಾತನ ಕೊತ್ತಳಗಳ ಜೊತೆಗೆ ಬಹಮನಿ–ಆದಿಲ್‌ಶಾಹಿಗಳ ಕಾಲದಲ್ಲಿ ಪುನರ್ನಿರ್ಮಿಸಿದ ವರ್ತುಲಾಕಾರದ ಕೊತ್ತಳಗಳಿವೆ. ಗಂಗವಾಡಿನಾಡನ್ನು ಅನೇಕ ಶತಮಾನಗಳ ಕಾಲ ಆಳಿದ ತಲಕಾಡಿನ ಗಂಗರು ತಮ್ಮ ರಾಜ್ಯದ ರಕ್ಷಣೆಗಾಗಿ ಆಯಕಟ್ಟಿನ ಸ್ಥಳಗಲ್ಲಿ ಕೋಟೆಗಳನ್ನು ನಿರ್ಮಿಸಿದ್ದರು. ತಲಕಾಡಿನಲ್ಲಿ ಕೋಟೆಯ ಅವಶೇಷಗಳು ದೊರೆತಿವೆ. ಬೆಂಗಳೂರಿನ ಹತ್ತಿರದ ಬೇಗೂರಿನಲ್ಲಿ ಗಂಗರ ಕಾಲದ್ದೆಂದು ಗುರುತಿಸುವ ಕೋಟೆ ವರ್ತುಲಾಕಾರ ವಿನ್ಯಾಸದಲ್ಲಿದೆ. ಇದು ಮಣ್ಣಿನಿಂದ ನಿರ್ಮಿಸಲಾಗಿದ್ದು ಒಂದು ನೆಲದುರ್ಗಕ್ಕೆ ಉತ್ತಮ ಉದಾಹರಣೆಯಾಗಿದೆ. ಕೋಟೆಯ ವಿವಿಧ ದಿಕ್ಕುಗಳಲ್ಲಿ ಒಟ್ಟು ಹತ್ತು ಕೊತ್ತಳಗಳಿವೆ. ಇದರ ಪ್ರವೇಶದ್ವಾರ ಕೋಟೆಯ ಪೂರ್ವ ದಿಕ್ಕಿನಲ್ಲಿದ್ದು, ಕೋಟೆಯೊಳಗೆ ದೇವಾಲಯಗಳು ಹಾಗೂ ಕೆಲವು ಪಾಳುಬಿದ್ದ ಕಟ್ಟಡಗಳ ಅವಶೇಷಗಳಿವೆ.

ಹಾವೇರಿ ಜಿಲ್ಲೆಯ ಹಾನಗಲ್ಲು ಕೋಟೆ ವರದಾ ನದಿಯ ಒಂದು ಉಪನದಿಯ ದಂಡೆಯ ಮೇಲಿದೆ. ಹಾನಗಲ್ಲು ಕೋಟೆ ಎರಡು ಸುತ್ತಿನಿಂದ ರಚಿಸಲಾಗಿದೆ. ಪುರಾತನ ಊರಿನ ಸುತ್ತಲೂ ರಚಿಸಿದ ಕೋಟೆಯ ಮಧ್ಯಭಾಗದಲ್ಲಿ ಎತ್ತರದ ಗೋಡೆಗಳಿಂದ ಕಟ್ಟಿದ್ದ ಅರಮನೆ ಅವಶೇಷಗಳಿವೆ. ಇಂದಿನ ಬಸವಕಲ್ಯಾಣದ ಕೋಟೆ ಗಾತ್ರದಲ್ಲಿ ಕಿರಿದಾಗಿದ್ದರೂ ರಚನೆಯ ದೃಷ್ಟಿಯಿಂದ ಮಹತ್ವ ಪಡೆದಿದೆ. ವರ್ತುಲಾಕಾರದಲ್ಲಿ ನಿರ್ಮಿಸಲಾದ ಬಸವಕಲ್ಯಾಣ ಕೋಟೆ ಮೂರು ಸುತ್ತಿನ ಗೋಡೆಗಳಿಂದ ಕೂಡಿದೆ. ಆದರೆ ಚಾಳುಕ್ಯರ ಕಾಲದ ಕೋಟೆಯನ್ನು ಬಹಮನಿ ಸುಲ್ತಾನರು, ಆದಿಲ್‌ಶಾಹಿಗಳು ಮತ್ತು ಮೊಗಲರು ಸಂಪೂರ್ಣವಾಗಿ ಪುನರ್

ಏಳುಸುತ್ತಿನ ಕೋಟೆ, ಚಿತ್ರದುರ್ಗ

ರಚಿಸಿದ್ದಾರೆ. ಮೂಲ ವರ್ತುಲಾಕಾರದ ಕೋಟೆ ವಿನ್ಯಾಸ ಉಳಿದುಕೊಂಡು ಬಂದಿದೆ. ಕೋಟೆಯ ಮೂರು ಸುತ್ತಿನ ಗೋಡೆಗಳಲ್ಲಿ ಅನೇಕ ಕೊತ್ತಳಗಳನ್ನೂ ಅಳವಡಿಸಲಾಗಿದೆ. ಅಲ್ಲದೆ ಕೋಟೆಯ ಸುತ್ತಲೂ ಆಳವಾದ ಕಂದಕವನ್ನೂ ನಿರ್ಮಿಸಲಾಗಿದೆ. ಕೋಟೆಯ ಒಳಗಡೆ ರಾಜ ಮಹಲ್, ನೃತ್ಯ ಮಹಲ್, ಹೈದರ ಮಹಲ್, ಮಸೀದಿ, ಮದ್ದಿನ ಮನೆಗಳು, ವಿವಿಧ ಆಕಾರದ ಬಾವಿಗಳು ಇವೆ. ದೋರಸಮುದ್ರ ಅಥವಾ ಹಳೇಬೀಡು ಹೊಯ್ಸಳರ ರಾಜಧಾನಿಯಾಗಿತ್ತು. ನಗರವನ್ನು ರಕ್ಷಿಸಲು ಭದ್ರವಾದ ಕೋಟೆಯನ್ನು ಸುತ್ತಲೂ ನಿರ್ಮಿಸಲಾಗಿತ್ತು. ಹಳೇಬೀಡಿನ ಕೋಟೆ ಈಗ ನಾಶವಾಗಿದೆ. ಆದರೆ ಅಳಿದುಳಿದ ಕೋಟೆ ಗೋಡೆ ಹಾಗೂ ದ್ವಾರಗಳು ಅಲ್ಲಲ್ಲಿ ಕಂಡುಬರುತ್ತವೆ. ರಾಯಚೂರಿನ ಕೋಟೆ ಒಂದು

ಗಿರಿದುರ್ಗ. ಬೆಟ್ಟ ಹಾಗೂ ನೆಲಭಾಗವನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ದೊಡ್ಡ ಗಾತ್ರದ ಕಲ್ಲುಗಳನ್ನು ಬಳಸಿಕೊಂಡು ನಿರ್ಮಿಸಿದ ಈ ಕೋಟೆ ಮೂಲತಃ ವಾರಂಗಲ್ಲಿನ ಕಾಕತೀಯರಿಂದ ನಿರ್ಮಿಸಲಾದುದು. ಅನಂತರ ಇದನ್ನು ಬಹಮನಿ ಸುಲ್ತಾನರು, ವಿಜಯನಗರದ ಅರಸರು, ಆದಿಲ್‌ಶಾಹಿಗಳು ಮತ್ತು ಹೈದರಾಬಾದಿನ ನಿಜಾಮರು ವಿಸ್ತರಿಸಿದರು. ಬಹಮನಿ, ಆದಿಲ್‌ಶಾಹಿಗಳು ಮತ್ತು ವಿಜಯನಗರದ ಅರಸರು ರಾಯಚೂರು ಕೋಟೆಯನ್ನು ರಚಿಸಿದ ಬಗ್ಗೆ ಶಾಸನಗಳು ದೊರಕಿವೆ. ಕೋಟೆಯ ಪೂರ್ವದ ಕಾಟಿದರವಾಜ ಎನ್ನುವ ದ್ವಾರವನ್ನು ಬಹಮನಿ ಸುಲ್ತಾನರು, ಅದರಂತೆ ಎತ್ತರವಾದ ದ್ವಾರವುಳ್ಳ ನವರಂಗ ದರವಾಜವನ್ನು ವಿಜಯನಗರದ ಅರಸರು ನಿರ್ಮಿಸಿದ್ದಾರೆ.

ತುಂಗಭದ್ರಾನದಿ ದಂಡೆಯ ಮೇಲಿರುವ ಕಮ್ಮಟದುರ್ಗ ಮತ್ತು ಹೊಸಮಲೆದುರ್ಗ ಕೋಟೆಗಳನ್ನು 14ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿಸಲಾಗಿದೆ. ಸುತ್ತಲಿನ ಕಿರಿಯ ಮತ್ತು ಹಿರಿಯ ಬೆಟ್ಟಗಳನ್ನು ಆವರಿಸಿ ನಿರ್ಮಿಸಲಾದ ಈ ಎರಡು ಕೋಟೆಗಳಲ್ಲಿ ಚೌಕಾಕಾರದ ಕೊತ್ತಳಗಳು ಇಕ್ಕಟ್ಟಾದ ದ್ವಾರಗಳು ನಿರ್ಮಿತವಾಗಿವೆ. ವೈರಿಗಳು ಸುಲಭವಾಗಿ ಕೋಟೆಯೊಳಗೆ ಪ್ರವೇಶಿಸದಂತೆ ದ್ವಾರಗಳ ಮುಂದೆ ಅಡ್ಡಲಾಗಿ 'ಐ' ಆಕಾರದಲ್ಲಿ ಗೋಡೆಯನ್ನು ಕಟ್ಟಲಾಗಿದೆ.



ಕೋಟೆ, ಗುಲ್ಬರ್ಗ

ಪ್ರವೇಶಿಸುವ ವೈರಿಗಳ ಮೇಲೆ ಕೋಟೆಯ ಮೇಲ್ಭಾಗದಿಂದ ಸೈನಿಕರು ಪ್ರತಿರೋಧಿಸಲು ಈ ವ್ಯವಸ್ಥೆಯಾಗಿದೆ. 14ನೆಯ ಶತಮಾನದ ಮೊದಲ ದಶಕದಲ್ಲಿ ಕಂಪಿಲರಾಯ ನಿರ್ಮಿಸಿದ ಕಮ್ಮಟದುರ್ಗ ಕೋಟೆ ಮುಂಭಾಗದ ಬಯಲಿನಲ್ಲಿ ಮಧ್ಯಮಗಾತ್ರದ ಗುಂಡುಕಲ್ಲುಗಳನ್ನು ಸಾಲಾಗಿ ಜೋಡಿಸಲಾಗಿದೆ. ಇವುಗಳನ್ನು ಕುದುರೆ ಕಲ್ಲುಗಳೆನ್ನುವರು. ಸಾವಿರಾರು ಸಂಖ್ಯೆಯಲ್ಲಿ ರುವ ಇವುಗಳು ವೇಗವಾಗಿ ಬರುವ ವೈರಿಗಳ ಕುದುರೆಗಳಿಗೆ ತೊಂದರೆಯಾಗಲು ಮಾಡಿರುವ ತಂತ್ರ. ಕಂಪಿಲರಾಯ ಮತ್ತು ವೀರ ಕುಮಾರರಾಮನ ರಾಜಧಾನಿಯಾದ ಹೊಸಮಲೆದುರ್ಗ ವನ್ನು ಇಂದು ರಾಮಗಡ ಎಂದು ಕರೆಯಲಾಗುತ್ತದೆ. ಬೆಟ್ಟಗಳ ಮಧ್ಯದಲ್ಲಿ ಕಟ್ಟಲಾದ ಈ ಕೋಟೆಗೆ ನಾಲ್ಕು ಪ್ರವೇಶದ್ವಾರಗಳಿವೆ.

ಕಮ್ಮಟದುರ್ಗದ ಮಾದರಿಯಲ್ಲಿರುವ ವಿಜಯನಗರ ಅಥವಾ ಹಂಪಿಯ ಕೋಟೆ ಮಧ್ಯಯುಗೀನ ಚರಿತ್ರೆಯಲ್ಲಿ ಮಹತ್ವ ಪಡೆದಿದೆ. 1336ರಲ್ಲಿ ಸ್ಥಾಪಿತವಾದ ವಿಜಯನಗರ ಬಹು ವಿಸ್ತಾರವುಳ್ಳ ಸುಭದ್ರ ಕೋಟೆಯಾಗಿತ್ತು. ನೈಸರ್ಗಿಕವಾದ ಆಯಕಟ್ಟಿನ ಸ್ಥಳವಾದ ತುಂಗಭದ್ರಾನದಿಯ ದಂಡೆಯ ಬೆಟ್ಟಗಳಲ್ಲಿ ನಿರ್ಮಿಸಲಾದ ವಿಜಯನಗರ ಕೋಟೆಯಲ್ಲಿ ಪ್ರಾಚೀನ ಸಾಂಪ್ರದಾಯಿಕ ಕೋಟೆ ನಿರ್ಮಾಣದ ತಂತ್ರಗಾರಿಕೆ ಕಾಣುತ್ತದೆ. ಈ ಕೋಟೆ ದಪ್ಪ ಕಲ್ಲುಗಳಿಂದ ಕಟ್ಟಲಾಗಿದ್ದು ವಿವಿಧ ದಿಕ್ಕುಗಳಲ್ಲಿ ಮಹಾದ್ವಾರಗಳು ಹಾಗೂ ಹಲವಾರು ದಿಡ್ಡಿ ಬಾಗಿಲುಗಳನ್ನು ಹೊಂದಿದೆ. ಅನೇಕ ಬೆಟ್ಟಗಳನ್ನು ಆವರಿಸಿದ ಈ ಕೋಟೆಯ ನೈಋತ್ಯ ಭಾಗದಲ್ಲಿ ಭವ್ಯವಾದ ಅರಮನೆಗಳು, ಮಹಾನವಮಿ ದಿಬ್ಬದಂತಹ ಹಲವಾರು ಕಟ್ಟಡಗಳನ್ನು ನಿರ್ಮಿಸಲಾಗಿದೆ. ಅರಸರ ಅಥವಾ ಮಂತ್ರಿವರ್ಯರ ಅರಮನೆಗಳು ವಿಶೇಷ ರಕ್ಷಣಾತ್ಮಕ ಕಿರುಗೋಡೆಗಳಿಂದ ಕೂಡಿವೆ. ಕಾವಲಿಗಾಗಿ ನಿರ್ಮಿಸಿದ ಇಲ್ಲಿಯ ಕೆಲವು ಕೊತ್ತಲಗಳಿಗೆ ಬಂಡೆಗಲ್ಲಿನಲ್ಲಿ ಅವುಗಳ ಹೆಸರಿರುವುದು ವಿಶೇಷವಾಗಿದೆ. ದ್ವಾರಗಳ ಪಕ್ಕದಲ್ಲಿ ಆಂಜನೇಯ ಶಿಲ್ಪಗಳು ಅಥವಾ ಆಂಜನೇಯ ಗುಡಿಗಳ ನಿರ್ಮಾಣ ವಿಜಯನಗರದ ಕೋಟೆಯಲ್ಲಿ ಕಾಣುತ್ತೇವೆ.

ವಿಜಯನಗರ ಸ್ಥಾಪನೆಯ ಜೊತೆಯಲ್ಲಿಯೇ ಪ್ರಾರಂಭವಾದ ಬಹಮನಿ ಸುಲ್ತಾನರ ರಾಜ್ಯ ಪ್ರಾರಂಭದಲ್ಲಿ ಸ್ಥಳೀಯ ಸಾಂಪ್ರದಾಯಿಕ ಕೋಟೆ ವಾಸ್ತುಶಿಲ್ಪದ ಮಾದರಿಯಲ್ಲಿ ತನ್ನ ರಾಜಧಾನಿ ಹಾಗೂ ಇತರ ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಿಸಿತು. ಬಹಮನಿ ರಾಜಧಾನಿ ಯಾದ ಗುಲ್ಬರ್ಗದಲ್ಲಿ ನಗರಕ್ಕೆ ಹೊಂದಿಕೊಂಡಂತೆ ಕೋಟೆ ಇದೆ. ಮೂಲತಃ ಚೌಕಾಕಾರದ ಕೊತ್ತಳಗಳಿದ್ದು ಈ ಕೋಟೆಯನ್ನು ವೃತ್ತಾಯುತ ಆಕಾರದಲ್ಲಿ ನಿರ್ಮಿಸಿ ವೃತ್ತ ಕೊತ್ತಲಗಳನ್ನು ಅಳವಡಿಸಿದರು. ಗುಲ್ಬರ್ಗದ ಕೋಟೆ ಎರಡು ಸಮಾನಾಂತರ ಗೋಡೆಗಳಿಂದ ನಿರ್ಮಿಸಲಾಗಿದ್ದು ಅನೇಕ ಕೊತ್ತಳಗಳಿಂದ ಕೂಡಿದೆ. ಪೂರ್ವ ಮತ್ತು ಪಶ್ಚಿಮದಲ್ಲಿ ಎರಡು ಪ್ರಮುಖ ದ್ವಾರಗಳಿವೆ. ಕೋಟೆಯ ಒಳಾಂಗಣದಲ್ಲಿ 1367ರಲ್ಲಿ ನಿರ್ಮಿಸಿದ ಬೃಹದಾಕಾರದ ಜುಮ್ಮಾ ಮಸೀದಿ, ಬಾಳಹಿಸಾರ ಎಂದು ಕರೆಯುವ ದೊಡ್ಡ ಬತೇರಿ, ಅನೇಕ ಮಳಿಗೆಗಳಿರುವ ಬಜಾರ ಹಾಗೂ ಅರಮನೆ ಅವಶೇಷಗಳಿವೆ. ಕೋಟೆಯ ಪಶ್ಚಿಮ ದ್ವಾರ ಇನ್ನೂ ಸುಸ್ಥಿತಿಯಲ್ಲಿದ್ದು ಇಲ್ಲಿಯ ಮರದ ಬಾಗಿಲ ಮೇಲೆ ಉದ್ದವಾದ ಶೂಲದಂತಹ ಮೊಳೆಗಳಿವೆ. ವೈರಿಗಳು ಆನೆಗಳಿಂದ ಕದವನ್ನು ತೆರೆಯಲು ಪ್ರಯತ್ನಿಸದಂತೆ ಮಾಡಲಾದ ಈ ತಂತ್ರಗಾರಿಕೆ ಇಲ್ಲಿಯ ವಿಶೇಷ. ಬಹಮನಿ ಸುಲ್ತಾನ ಫಿರೋಜ್ ಷಾನಿಂದ ನಿರ್ಮಿಸಲಾದ ಭೀಮಾ ನದಿ ದಂಡೆಯ ಮೇಲಿರುವ ಫಿರೋಜಾಬಾದ್ ಕೋಟೆ ಮಧ್ಯಕಾಲೀನ ಕೋಟೆ ರಚನೆಯಲ್ಲಿ ಮಹತ್ವದ ಹಂತವನ್ನು ಸೂಚಿಸುತ್ತದೆ. ಸಾಂಪ್ರದಾಯಿಕ ಚೌಕಾಕಾರದ ಕೊತ್ತಲಗಳಿಗೆ ಬದಲಾಗಿ ಅಷ್ಟಕೋನಾಕಾರದ ಕೊತ್ತಲಗಳ ನಿರ್ಮಾಣವನ್ನು ಇಲ್ಲಿ ಕಾಣಬಹುದು. ಫಿರೋಜಾಬಾದ್ ಕೋಟೆ ಒಳಾಂಗಣದಲ್ಲಿ ಅರಮನೆಗಳ ಕಟ್ಟಡಗಳು, ಹಮಾಮ್ ಅಥವಾ ಸುಲ್ತಾನರ ಹಬೆ ಸ್ನಾನಗೃಹ, ಜುಮ್ಮಾ ಮಸೀದಿ, ಮಳಿಗೆಗಳಿರುವ ಬಜಾರ ಇತ್ಯಾದಿಗಳಿವೆ. ಬಹಮನಿ ಸುಲ್ತಾನರ ಎರಡನೆಯ ರಾಜಧಾನಿ ಬೀದರ್ ಕೋಟೆ ಭಾರತೀಯ ಕೋಟೆಗಳಲ್ಲಿ ಮೂರು ಕಂದಕಗಳಿಂದ ಕೂಡಿದ ಏಕೈಕ ಕೋಟೆಯಾಗಿದೆ. ಪರ್ಷಿಯದ ಕೋಟೆಗಳ ರಚನೆ ಮಾದರಿಯಲ್ಲಿ ಇವುಗಳನ್ನು ರಚಿಸಲಾಗಿದೆ. 1424 ರಿಂದ 1432ರ ಅವಧಿಯಲ್ಲಿ ನಿರ್ಮಿಸಿದ ಬೀದರ್ ಕೋಟೆ ಸ್ಥಳದುರ್ಗಗಳಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಎತ್ತರವಾದ ಗೋಡೆಗಳಿಂದ ಕೂಡಿದ ಬೀದರ್ ಕೋಟೆಯಲ್ಲಿ ಅರಸರಿಗೆ ಹಾಗೂ ನಾಗರಿಕರಿಗೆ ಪ್ರತ್ಯೇಕ ವಿಭಾಗಗಳು ಇರುವುದು ವಿಶೇಷ. ಅರಸರು ವಾಸಿಸುವ ಅರಮನೆ ಆವರಣ ಮೂರು ಕಂದಕಗಳಿಂದ ಕೂಡಿದ ವಿಶೇಷ ರಕ್ಷಣೆ ಪಡೆದಿದೆ. ಇಲ್ಲಿಯ ವಿವಿಧ ಬಗೆಯ ಅರಮನೆಗಳು, ದರ್ಬಾರುಗಳು ಮತ್ತು ಉದ್ಯಾನಗಳು ಅಂದಿನ ವೈಭವವನ್ನು ತಿಳಿಸುತ್ತವೆ. ನಾಗರಿಕರು ವಾಸಿಸುವ ಪ್ರದೇಶವನ್ನು ಎತ್ತರದ ಗೋಡೆಗಳಿಂದ ರಕ್ಷಿಸಲಾಗಿದೆ. ಈ ವಿಶಾಲ ನಗರದಲ್ಲಿ ಮಹಮೂದ್ ಗವಾನ್ ಕಟ್ಟಿಸಿದ ಮದರಸ ಮತ್ತು ಬಹು ದೊಡ್ಡದಾದ ಜುಮ್ಮಾ ಮಸೀದಿಗಳಿವೆ. ಬೀದರ್ ಕೋಟೆ ಒಟ್ಟು 37 ಕೊತ್ತಳಗಳು ಮತ್ತು 8 ದ್ವಾರಗಳಿಂದ ಸು.4 ಕಿಮೀ ಸುತ್ತಳತೆಯಿಂದ ಕೂಡಿದೆ. ಅಷ್ಟಕೋನಾಕಾರ ಹಾಗೂ ವರ್ತುಲಾಕಾರದ ಕೊತ್ತಲಗಳು ಹಾಗೂ ಕೋಟೆಯ ಗೋಡೆಯಲ್ಲಿ ಕಮಾನಿನಾಕಾರದ ನೀಟುಗಳು ಮತ್ತು ಕೋಟೆಯ ಪಹರೆಗಾಗಿ ಕೈಪಿಡಿಗೋಡೆಗೆ ಹೊಂದಿಕೊಂಡಂತೆ ಪಹರೆ ಗೋಡೆಯನ್ನು ರಚಿಸಲಾಗಿದೆ. ಕೊತ್ತಳಗಳ ಮೇಲೆ ಉದ್ದನೆಯ ತೋಪುಗಳನ್ನು ಬಹಮನಿ ಸುಲ್ತಾನರ ಅನಂತರ ಆಳಿದ ಬರೀದ್‌ಗಳು ಮತ್ತು ಆದಿಲ್‌ಶಾಹಿಗಳು ಇರಿಸಿದ್ದಾರೆ ಎಂದು ಶಾಸನಗಳಿಂದ ತಿಳಿಯುತ್ತದೆ. 1490ರಿಂದ 1686 ರವರೆಗೆ ಆಳಿದ ಬಿಜಾಪುರದ ಆದಿಲ್‌ಶಾಹಿಗಳು ಕರ್ನಾಟಕದ ಕೋಟೆ ನಿರ್ಮಾಣದಲ್ಲಿ ಬಹು ಮುಖ್ಯ ಕೊಡುಗೆಗಳನ್ನು ನೀಡಿದ್ದಾರೆ. ಬದಲಾದ ಯುದ್ಧ ತಂತ್ರ ಹಾಗೂ ಮದ್ದುಗುಂಡುಗಳ ಬಳಕೆಗಳಿಗೆ ಅನುಗುಣವಾಗಿ ಅಸ್ತಿತ್ವದಲ್ಲಿದ್ದ ಕೋಟೆಗಳನ್ನು ಪುನರ್ ರಚಿಸುವ ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ರಚಿಸುವ ಪ್ರಕ್ರಿಯೆಯನ್ನು ಈ ಅವಧಿಯಲ್ಲಿ ಕಾಣುತ್ತೇವೆ. ವಿಜಯನಗರದ ಪತನದ ಅನಂತರ ಮಹಾರಾಷ್ಟ್ರವಲ್ಲದೆ ಕರ್ನಾಟಕದ ಬಹುಭಾಗದಲ್ಲಿ ವಿಸ್ತರಿಸಿದ ಆದಿಲ್‌ಶಾಹಿ ರಾಜ್ಯ ಪೋರ್ಚುಗೀಸ್ ಹಾಗೂ ಮಧ್ಯ ಏಷ್ಯದ ಅನೇಕ ತಂತ್ರಜ್ಞರ ನೆರವಿನೊಂದಿಗೆ ಭದ್ರವಾದ ತೋಪುಗಳನ್ನು ಹಾಗೂ ಮದ್ದು ಗುಂಡುಗಳನ್ನು ತನ್ನ ಯುದ್ಧ ಪಡೆಗಳಲ್ಲಿ ಬಳಕೆಗೆ ತಂದಿತು. ಈ ಕಾರಣದಿಂದಾಗಿ ಆದಿಲ್‌ಶಾಹಿ ರಾಜ್ಯದ ಬಹುತೇಕ ಕೋಟೆಗಳಲ್ಲಿ ವರ್ತುಲಾಕಾರದ ಕೊತ್ತಲಗಳಿದ್ದು ಅವುಗಳ ಮೇಲೆ ಉದ್ದನೆಯ ತೋಪುಗಳು ಇರಿಸಿರುವು ದನ್ನು ಕಾಣುತ್ತೇವೆ. ಕೋಟೆಯ ಪ್ರವೇಶದ್ವಾರಗಳ ಇಕ್ಕೆಲಗಳಲ್ಲಿ ಅರ್ಧವೃತ್ತಾಕಾರದ ಬುರುಜುಗಳನ್ನು ರಚಿಸಿ ದ್ವಾರಗಳು ವೈರಿಗಳಿಗೆ ನೇರವಾಗಿ ಗೋಚರಿಸದಂತೆ ಮರೆಮಾಚುವ ಅಡ್ಡಗೋಡೆಗಳನ್ನು ನಿರ್ಮಿಸುವ ಸಂಪ್ರದಾಯವನ್ನು ಕಾಣುತ್ತೇವೆ.

ಆದಿಲ್‌ಶಾಹಿಗಳ ರಾಜಧಾನಿಯಾಗಿದ್ದ ಬಿಜಾಪುರದ ಕೋಟೆ ವರ್ತುಲಾಕಾರದಲ್ಲಿದೆ. ಸು. 10 ಕಿಮೀ ಸುತ್ತಳತೆಯ ಬಿಜಾಪುರದ ಕೋಟೆ ಒಟ್ಟು 96 ಕೊತ್ತಲಗಳು, ಐದು ಹೆಬ್ಬಾಗಿಲು ಮತ್ತು ಅನೇಕ ದಿಡ್ಡಿಬಾಗಿಲುಗಳಿಂದ ಕೂಡಿದೆ. ಅತ್ಯಂತ ವಿಸ್ತಾರವಾದ ಬಿಜಾಪುರದ ಕೋಟೆ ತನ್ನ ರಚನೆಯಲ್ಲಿ ಸಾಂಪ್ರದಾಯಿಕವಾದ ವಾಸ್ತುಶಾಸ್ತ್ರಪ್ರಕಾರದಲ್ಲಿದೆ. ವರ್ತುಲಾಕಾರದ ನಗರ ಮಧ್ಯದಲ್ಲಿ ಒಳಕೋಟೆಯಿದೆ. ಇದರಲ್ಲಿ ಸುಲ್ತಾನರಿಗೆಂದು ನಿರ್ಮಿಸಲಾದ ಅರಮನೆಗಳು, ಮಸೀದಿಗಳು ಹಾಗೂ ದರ್ಬಾರುಗಳಿವೆ. ಒಳಕೋಟೆ ಹಾಗೂ ಹೊರಕೋಟೆಗಳ ಸುತ್ತಲೂ ಕಂದಕಗಳಿವೆ. ಸುಲ್ತಾನರ ಗೋರಿಗಳು ನಗರದ ವಿವಿಧ ಭಾಗಗಳಲ್ಲದೆ ಅನೇಕ ಮಸೀದಿಗಳು, ಅಲಂಕೃತ ಮೆಟ್ಟಿಲುಗಳ ಬಾವಿ ಇತ್ಯಾದಿಗಳು ಈ ಕೋಟೆಯೊಳಗಿನ ಪ್ರಮುಖ ಕಟ್ಟಡಗಳು. ಆದಿಲ್‌ಶಾಹಿಗಳು ಕರ್ನಾಟಕದ ಬೆಳಗಾವಿ, ಶಹಾಪುರ, ಯಾದಗೀರ್, ಜಲದುರ್ಗ, ಮುದಗಲ್ಲು, ಕೊಪ್ಪಳ, ಬಸವಕಲ್ಯಾಣ, ಗುಲ್ಬರ್ಗ, ರಾಯಚೂರು ಇತ್ಯಾದಿ ಕೋಟೆಗಳನ್ನು ಅಂದಿನ ಯುದ್ಧ ತಂತ್ರಗಾರಿಕೆಗೆ ತಕ್ಕಂತೆ ನವೀಕರಿಸಿದರು. ಮುದಗಲ್ಲು ಕೋಟೆ ಅತ್ಯಂತ ಸುಭದ್ರ ಕೋಟೆಗಳಲ್ಲಿ ಒಂದೆನಿಸಿದೆ. ಎರಡು ಸುತ್ತಿನಿಂದ ಕೂಡಿದ ಈ ಕೋಟೆ ವಿಜಯನಗರ ಅರಸರಿಂದ ಹಾಗೂ ಆದಿಲ್‌ಶಾಹಿ ಸುಲ್ತಾನರಿಂದ ನಿರ್ಮಿಸಲಾಗಿದೆ. ಆಳವಾದ ಕಂದಕದಿಂದ ಕೂಡಿದ ಮುದಗಲ್ಲು ಕೋಟೆ ನೆಲ ಹಾಗೂ ಬೆಟ್ಟವನ್ನು ಆವರಿಸಿದೆ. ಕಾಂದರವಾಜ,

ಫತೇದರವಾಜ ಮುಂತಾದ ದ್ವಾರಗಳು ಹಾಗೂ ಅನೇಕ ಕೊತ್ತಳಗಳಿಂದ ಈ ಕೋಟೆಯನ್ನು ಆದಿಲ್‌ಶಾಹಿಗಳು ನಿರ್ಮಿಸಿದ್ದಾರೆ. ವರ್ತುಲಾಕಾರದ ಕೊತ್ತಳಗಳಿಂದ ವಿವಿಧ ಬಗೆಯ ತೋಪುಗಳನ್ನಿರಿಸಿ ನವೀಕರಿಸಿದರು. ರಾಯಚೂರು ಮತ್ತು ಕೊಪ್ಪಳದ ಕೋಟೆಗಳನ್ನೂ ವಿವಿಧ ಆಕಾರದ ಕೊತ್ತಳಗಳಿಂದ ವಿಸ್ತರಿಸಿ ಭದ್ರಪಡಿಸಲಾಗಿದೆ.

ವಿಜಯನಗರದ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಅನೇಕ ಸಾಮಂತರು ಅಥವಾ ಪಾಳೆಯಗಾರರು ತಮ್ಮ ಅಧೀನ ಪ್ರದೇಶಗಳಲ್ಲಿ ರಕ್ಷಣೆಗೋಸ್ಕರ ಕೋಟೆಗಳನ್ನು ನಿರ್ಮಿಸಿದ್ದರು. ಈ ಪಾಳೆಯಗಾರರ ಅಥವಾ ನಾಡಪ್ರಭುಗಳ ಕೋಟೆಗಳು ವಿಜಯನಗರದಂತೆ ಸಾಂಪ್ರದಾಯಿಕ ಶೈಲಿಯಲ್ಲಿಯೇ ನಿರ್ಮಾಣವಾಗುತ್ತಿದ್ದವು. ಚೌಕಾಕಾರದ ಕೊತ್ತಳಗಳು, ಬೋದಿಗೆ ಮತ್ತು ಅರೆಕಂಬಗಳಿಂದ ಕೂಡಿದ ದ್ವಾರಗಳು ಇತ್ಯಾದಿ ಸಾಂಪ್ರದಾಯಿಕ ರಚನೆಯ ಕೋಟೆಗಳು ಸಾಮಾನ್ಯವಾಗಿದ್ದವು. ಉಚ್ಚಂಗಿದುರ್ಗ, ನಿಡುಗಲ್ಲು, ಮಧುಗಿರಿ, ಮಿಡಿಗೇಶಿ, ಚಿತ್ರದುರ್ಗ, ದೇವರಾಯನದುರ್ಗ, ಗುಡಿಬಂಡೆ, ಗುಮ್ಮನಾಯಕನ ಕೋಟೆಗಳಲ್ಲಿ ಸಾಂಪ್ರದಾಯಿಕ ರಚನೆ ಕಂಡುಬರುತ್ತವೆ. ವಿಜಯನಗರ ಅನಂತರದ ಪಾಳೆಯಗಾರರು ಮದ್ದು ಗುಂಡುಗಳ ಬಳಕೆಗೆ ತಕ್ಕಂತೆ ಆದಿಲ್‌ಶಾಹಿಗಳಂತೆ ವರ್ತುಲಾಕಾರದ ಕೊತ್ತಳಗಳನ್ನು ಚೌಕಾಕಾರದ ಕೊತ್ತಳಗಳೊಂದಿಗೆ ನಿರ್ಮಿಸಿದರು. 16 ರಿಂದ 18ನೆಯ ಶತಮಾನದವರೆಗೆ ಆಳಿದ ಚಿತ್ರದುರ್ಗದ ಪಾಳೆಯಗಾರರ ರಾಜಧಾನಿಯಾಗಿದ್ದ ಚಿತ್ರದುರ್ಗದ ಕೋಟೆ ನಾಡಿನ ಕೋಟೆಗಳಲ್ಲಿ ಅಗ್ರಮಾನ್ಯ ಕೋಟೆಯೆಂದು ಹೆಸರಾಗಿದೆ. ಆಯಕಟ್ಟಿನ ಸ್ಥಳದಲ್ಲಿ ನಿರ್ಮಿಸಲಾದ ಈ ಕೋಟೆ ಬೆಟ್ಟಗಳು ಹಾಗೂ ಬೆಟ್ಟದ ಕೆಳಗಿನ ವಿಶಾಲವಾದ ಪ್ರದೇಶದಲ್ಲಿ 19 ಬಾಗಿಲುಗಳು ಹಾಗೂ ಅನೇಕ ಕೊತ್ತಳಗಳಿಂದ ನಿರ್ಮಿಸಲ್ಪಟ್ಟಿದೆ. ಕೋಟೆಯ ಒಳಗಡೆ ಅನೇಕ ಕಟ್ಟಡಗಳ ಅರಮನೆ, ಕಣಜಗಳು, ಮದ್ದಿನ ಮನೆಗಳು, ಬಾವಿಗಳು, ದೋಣೆಗಳು ಮತ್ತು ದೇವಾಲಯಗಳಿವೆ. ವಿಜಯನಗರದ ಪಾಳೆಯಗಾರರು ಮತ್ತು ಹೈದರ್‌ಅಲಿ ಟಿಪ್ಪುಸುಲ್ತಾನರ ಕಾಲದಲ್ಲಿ ಈ ಕೋಟೆ ಅಭಿವೃದ್ಧಿಗೊಂಡಿದೆ. ಅನೇಕ ಬತೇರಿಗಳು, ತೋಪುಗಳು ಹಾಗೂ ಮದ್ದು ತಯಾರಿಸುವ ಬೀಸುಕಲ್ಲುಗಳಿವೆ. ಈ ಆಯಕಟ್ಟಿನ ಸ್ಥಳಗಳಲ್ಲಿ ಪಾಳೆಯಗಾರರ ಕೋಟೆಗಳಲ್ಲಿ ಎಣ್ಣೆ ಕೊಳ ಅಥವಾ ತುಪ್ಪದ ಕೊಳ ಎನ್ನುವ ಮಡಕೆಯಾಕಾರದ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಚಿಕ್ಕ ಉಗ್ರಾಣಗಳು ಕಂಡುಬರುತ್ತವೆ. ಆ ಕಾಲದ ಯುದ್ಧದಲ್ಲಿ ಗಾಯಗೊಂಡ ಸೈನಿಕರಿಗೆ ತುಪ್ಪದ ಲೇಪನ ಮಾಡಲು ಇವುಗಳಲ್ಲಿ ತುಪ್ಪವನ್ನು ಶೇಖರಿಸಲಾಗುತ್ತಿತ್ತು.

ದಕ್ಷಿಣ ಕರ್ನಾಟಕದ ಮಧುಗಿರಿ ಮಲೆನಾಡ ಪ್ರಭುಗಳು, ಯಲಹಂಕ ನಾಡಪ್ರಭುಗಳು, ಹಾಗಲವಾಡಿ ನಾಯಕರು ತಮ್ಮ ಅಧೀನ ಪ್ರದೇಶಗಳಲ್ಲಿ ಕೋಟೆಗಳ ನಿರ್ಮಾಣ ಮಾಡಿದ್ದಾರೆ. ತುಮಕೂರು ಜಿಲ್ಲೆಯ ಮಧುಗಿರಿ ಕೋಟೆ ಒಂದು ಅಭೇದ್ಯ ಕೋಟೆ ಎನಿಸಿದೆ. ಏಕಶಿಲೆಯ ಈ ಬೆಟ್ಟದಲ್ಲಿ ಅನೇಕ ದ್ವಾರಗಳು ಹಾಗೂ ಕೊತ್ತಳಗಳಿವೆ. ಬೆಟ್ಟದ ಬುಡದಿಂದ ಪ್ರಾರಂಭವಾದ ಕೋಟೆ ಗೋಡೆಗಳು ಬೆಟ್ಟದ ಮೇಲಿನವರೆಗೂ ಅನೇಕ ಸುತ್ತುಗಳಿಂದ ನಿರ್ಮಿಸಲ್ಪಟ್ಟಿವೆ. ಕೋಟೆಯ ಒಳಗೆ ನೀರಿನ ಶೇಖರಣೆಗಾಗಿ ದೊಡ್ಡ ಬಾವಿ, ಧಾನ್ಯಗಳ ಶೇಖರಣೆಗಾಗಿ ಅನೇಕ ಉಗ್ರಾಣಗಳು ಮತ್ತು ತುಪ್ಪದ ಕೊಳಗಳು ಇವೆ. ಮಧುಗಿರಿಯ ಹತ್ತಿರದ ಚನ್ನರಾಯನದುರ್ಗ, ಮಿಡಿಗೇಶಿ, ಪಾವಗಡ, ನಿಡುಗಲ್ಲು ಕೋಟೆಗಳು ತುಮಕೂರು ಜಿಲ್ಲೆಯ ಇತರ ಪ್ರಮುಖ ಕೋಟೆಗಳೆನಿಸಿವೆ. ಚನ್ನರಾಯನದುರ್ಗ ಎತ್ತರವಾದ ಬೆಟ್ಟದ ಮೇಲೆ ಮಧುಗಿರಿ ಅರಸರಿಂದ ನಿರ್ಮಿಸಲ್ಪಟ್ಟಿದೆ. ಪಾವಗಡ ಮತ್ತು ನಿಡುಗಲ್ಲು ಕೋಟೆಗಳು ಮೂಲತಃ ಪುರಾತನ ಕೋಟೆಗಳಾಗಿದ್ದು ಇವುಗಳನ್ನು ಆಮೇಲೆ ನವೀಕರಿಸಲಾಗಿದೆ. ಈಗಿನ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸಾವನದುರ್ಗ ಕೋಟೆ ನಾಡಿನ ಅಭೇದ್ಯ ಕೋಟೆಗಳಲ್ಲಿ ಒಂದಾಗಿದೆ. 16ನೆಯ ಶತಮಾನದ ಕಾಲದಲ್ಲಿ ನಿರ್ಮಾಣಗೊಂಡ ಈ ಕೋಟೆ ಯಲಹಂಕ ನಾಡಪ್ರಭುಗಳ ವಶದಲ್ಲಿತ್ತು. ಬಿಳಿಗುಡ್ಡ ಮತ್ತು ಕರಿಗುಡ್ಡ ಗಳೆಂಬ ಬೆಟ್ಟಗಳನ್ನು ಆವರಿಸಿದ ಈ ಕೋಟೆ 2.5 ಕಿಮೀ ಸುತ್ತಳತೆಯಿಂದ ಕೂಡಿದೆ. ಅನೇಕ ಕಣಜಗಳು, ನೀರಿನ ದೋಣೆಗಳು, ದೇವಾಲಯಗಳು ಹಾಗೂ ಪಾಳುಬಿದ್ದ ಅರಮನೆಯ ಅವಶೇಷಗಳನ್ನು ಈ ಕೋಟೆಯಲ್ಲಿ ಕಾಣುತ್ತೇವೆ. ಬಸವನದುರ್ಗ ಎಂಬ ಕಿರುಕೋಟೆ ಸಾವನದುರ್ಗದ ಕೋಟೆಯ ನೈರುತ್ಯ ಭಾಗದಲ್ಲಿದೆ. ಮಾಗಡಿ ಕೋಟೆ ಮೂಲತಃ ಚೌಕಾಕಾರದ ಮಣ್ಣಿನ ಚಿಕ್ಕ ಕೋಟೆಯಾಗಿದ್ದು ಅನಂತರದ ಕಾಲದಲ್ಲಿ ಕಲ್ಲಿನಿಂದ ಹೊರಗೋಡೆಯನ್ನು ರಚಿಸಲಾಯಿತು. ಈ ಕೋಟೆಯಲ್ಲಿ ಕೆಂಪೇಗೌಡನ ಕಾಲದ ದೇವಾಲಯ ಹಾಗೂ ಅರಮನೆಯ ಅವಶೇಷಗಳನ್ನು ಕಾಣಬಹುದು. 1537ರ ಕಾಲದಲ್ಲಿ ನಿರ್ಮಿಸಲಾದ ಬೆಂಗಳೂರಿನ ಕೋಟೆ ಈಗ ನಾಶವಾಗಿದೆ. ಆದರೆ 1791ರಲ್ಲಿ ಬ್ರಿಟಿಷರು ರಚಿಸಿದ ನಕ್ಷೆಯನ್ನು ಆಧರಿಸಿ ಬೆಂಗಳೂರಿನ ಕೋಟೆಯ ವಿಸ್ತೀರ್ಣ ಹಾಗೂ ಅದರ ರಚನೆಯನ್ನು ತಿಳಿಯಬಹುದು. ರಚನೆಯ ವಿಧಾನದಲ್ಲಿ ಬೆಂಗಳೂರಿನ ಕೋಟೆ ದಖನ್ ಸುಲ್ತಾನರ ಕಾಲದ ಅನುಕರಣೆಯನ್ನು ಕಾಣಬಹುದು.

ಕೆಳದಿ ಅರಸರ ಕಾಲದ ಕೋಟೆಗಳನ್ನು ಇಕ್ಕೇರಿ, ಬಿದನೂರು, ಕೆಳದಿ ಮತ್ತು ಚನ್ನಗಿರಿ ಮುಂತಾದೆಡೆಗಳಲ್ಲಿವೆ. ಮಲೆನಾಡು ಪರಿಸರದ ಈ ಕೋಟೆಗಳನ್ನು ಅಲ್ಲಿಯ ಭೌಗೋಳಿಕ ಲಕ್ಷಣಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಅರ್ಧವರ್ತುಲಾಕಾರದ ಕೊತ್ತಲಗಳು ಸರಳವಾದ ದ್ವಾರಗಳು ಕೋಟೆಯ ಗೋಡೆಗಳಲ್ಲಿವೆ. ಬಹುತೇಕ ಮಲೆನಾಡಿನ ಕೋಟೆಗಳು ವ್ಯಾಪಾರದ ದೃಷ್ಟಿಕೋನದಿಂದ ನಿರ್ಮಿಸಲಾಗಿದ್ದು ಪಶ್ಚಿಮ ಕರಾವಳಿಯಲ್ಲಿ ವಿಜಯನಗರದ ಕಾಲದಲ್ಲಿ ನಡೆಯುತ್ತಿದ್ದ ಅವ್ಯಾಹತ ಕುದುರೆ ಮತ್ತು ಭಾರತೀಯ ಮಸಾಲೆ ತಿನಿಸುಗಳ ಸಾಗಾಣಿಕೆಗೆ ಸ್ಥಳೀಯ ನಾಯಕರು ಈ ಕೋಟೆಗಳನ್ನು ನಿರ್ಮಿಸಿ ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದರು. ಮಲೆನಾಡು ಕರಾವಳಿಯ ಕೋಟೆಗಳು ಮಧ್ಯಯುಗೀನ ಕಾಲದಲ್ಲಿ ಹೆಚ್ಚು ಪ್ರಾಮುಖ್ಯ ಪಡೆದಿದ್ದವು. ಸಮುದ್ರ ವ್ಯಾಪಾರ ಕಡಿಮೆಯಾ ದಂತೆ ಈ ಕೋಟೆಗಳು ಮಹತ್ವ ಕಳೆದುಕೊಂಡವು. ಇದರಿಂದ ಕರಾವಳಿ ಮತ್ತು ಮಲೆನಾಡಿನ ಕೆಲವು ಕೋಟೆಗಳು ಪಾಳುಬಿದ್ದಂತೆ ಕಾಣುತ್ತವೆ. ಆದಿಲ್‌ಶಾಹಿಗಳ ಜಹಗೀರನ್ನು ಪಡೆದು ಆಳಿಕೆ ನಡೆಸಿದ ಸುರಪುರ ಅರಸರು ಕೆಲವು ಹೊಸ ಕೋಟೆಗಳನ್ನು ನಿರ್ಮಿಸಿದ್ದಾರೆ. ಬೆಟ್ಟಗಳ ಮಧ್ಯದಲ್ಲಿ ಊರನ್ನು ನಿರ್ಮಿಸಿ ಸುತ್ತಲೂ ಕೋಟೆಯನ್ನು ಹೊಂದಿರುವ ಸುರಪುರ ಈ ಸಂಸ್ಥಾನದ ರಾಜಧಾನಿಯಾಗಿತ್ತು. ನಗರದ ಮಧ್ಯದಲ್ಲಿ ಅರಮನೆ, ಪ್ರಧಾನ ದೇವಾಲಯ ಮತ್ತು ದರ್ಬಾರುಗಳನ್ನು ಹೊಂದಿರುವ ಸುರಪುರದ ಕೋಟೆ ಪ್ರಾಚೀನ ಭಾರತೀಯ ನಗರ ರಚನೆಯ ವಾಸ್ತುಶಾಸ್ತ್ರದ ಆಧಾರದ ಮೇರೆಗೆ ನಿರ್ಮಿಸಲಾಗಿದೆ. ಇಜೇರಿ ಮತ್ತು ವನದುರ್ಗದ ಕೋಟೆಗಳು ಗಾತ್ರದಲ್ಲಿ ಚಿಕ್ಕವಾಗಿದ್ದು ಚೌಕಾಕಾರವಾಗಿವೆ.

ಶ್ರೀರಂಗಪಟ್ಟಣ ಕಾವೇರಿ ನದಿಯ ಮೇಲಿನ ಒಂದು ಜಲದುರ್ಗವಾಗಿದೆ. ಮೈಸೂರಿನ ಅರಸರ ಅಧೀನದಲ್ಲಿದ್ದ ಈ ಕೋಟೆಯನ್ನು ಅನಂತರ ಟಿಪ್ಪುಸುಲ್ತಾನ ಫ್ರೆಂಚ್ ತಜ್ಞರ ಸಹಾಯದೊಂದಿಗೆ ಬಹುಪಾಲು ಭಾಗವನ್ನು ಪುನರ್ ನಿರ್ಮಿಸಿದ. ಮದ್ದುಗುಂಡುಗಳ ಬಳಕೆಗೆ ತಕ್ಕಂತೆ ಕೋಟೆಯ ಹಾಗೂ ಕೊತ್ತಳಗಳ ಕೈಪಿಡಿ ಗೋಡೆಗಳಲ್ಲಿ ಬದಲಾವಣೆ ಮಾಡಲಾಯಿತು. ಟಿಪ್ಪುಸುಲ್ತಾನನ ಕಾಲದಲ್ಲಿ ಮೈಸೂರು ರಾಜ್ಯದ ಅನೇಕ ಆಯಕಟ್ಟಿನ ಸ್ಥಳದ ಕೋಟೆಗಳನ್ನು ಮದ್ದುಗುಂಡುಗಳ ಬಳಕೆಗೆ ತಕ್ಕಂತೆ ಮಾರ್ಪಡಿಸಲಾಯಿತು. ಮಧುಗಿರಿ, ಪಾವಗಡ, ಮಿಡಿಗೇಶಿ, ಬೆಂಗಳೂರು, ದೇವನಹಳ್ಳಿ, ನಂದಿಬೆಟ್ಟ ಮುಂತಾದವು ಟಿಪ್ಪುಸುಲ್ತಾನ ಪುನರ್ ನಿರ್ಮಿಸಿದ ಕೋಟೆಗಳು. ಹಾಸನ ಜಿಲ್ಲೆಯ ಸಕಲೇಶಪುರದ ಮಂಜರಾಬಾದ್ ಕೋಟೆಯನ್ನು ಟಿಪ್ಪುಸುಲ್ತಾನ ನಿರ್ಮಿಸಿದ (1792). ಇದು ನಕ್ಷತ್ರಾಕಾರದಲ್ಲಿದೆ. ಐರೋಪ್ಯ ಶೈಲಿಯ ಈ ಕೋಟೆಯಲ್ಲಿ ಅನೇಕ ಮದ್ದಿನ ಮನೆಗಳೂ ಉಗ್ರಾಣಗಳೂ ಇವೆ. ಬ್ರಿಟಿಷರು ಕರ್ನಾಟಕದ ಬಹುತೇಕ ಭಾಗವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡ ಅನಂತರ ತಮಗೆ ಅನುಕೂಲವಾಗುವ ಕೋಟೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಕೆಲವು ಕಡೆ ಹೊಸ ಕೋಟೆಗಳನ್ನು ನಿರ್ಮಿಸಿದರು. ಬಳ್ಳಾರಿಯ ಕೋಟೆ ಒಂದು ಉತ್ತಮ ಉದಾಹರಣೆಯಾಗಿದೆ. ಮಡಿಕೇರಿಯ ಕೋಟೆ ಅಲ್ಲಿಯ ಅರಸರಿಂದ ನಿರ್ಮಿಸಲಾಗಿದ್ದು, ಬ್ರಿಟಿಷರ ಕಾಲದಲ್ಲಿ ಇದನ್ನು ನವೀಕರಿಸಲಾಯಿತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಕೋಟೆಗಳ ನಿರ್ಮಾಣ ಮಹತ್ತ್ವ ಕಳೆದುಕೊಂಡಿತು. ಇಂದು ಅಳಿದುಳಿದ ಕೋಟೆಗಳು ಪ್ರಾಚೀನ ಸ್ಮಾರಕಗಳಾಗಿವೆ. (ಎ.ಎಸ್.ಕೆ.)

**ಕೋಡಂಗಲ್ಲೂರು:** ಕೇರಳ ರಾಜ್ಯದ ತ್ರಿಶೂರ್ ಜಿಲ್ಲೆಯಲ್ಲಿರುವ ಪ್ರಾಚೀನ ಚೇರ ಅರಸರ ರಾಜಧಾನಿ. ಪೆರಿಯಾರ್ ನದಿಯ ಮುಖಜ ಭೂಮಿಯಲ್ಲಿದೆ. ಪ್ರಶ. ಆರಂಭದಲ್ಲಿ ಇದು ರೋಮನ್ ವ್ಯಾಪಾರ ಕೇಂದ್ರವಾಗಿತ್ತೆಂದು ಪೆಟಿಂಜರ್ ಕೃತಿಯಿಂದ ತಿಳಿಯುತ್ತದೆ. ಈ ಸ್ಥಳವೇ ಪೆರಿಪ್ಲಸ್‌ನಲ್ಲಿ ಉಲ್ಲೇಖಗೊಂಡಿರುವ ಮುಜಿರಿಸ್ ಎಂದೂ ಇಲ್ಲಿ ರೋಮನ್ ರಾಜನ ಹೆಸರಿನಲ್ಲಿ ದೇವಾಲಯವಿತ್ತೆಂದೂ ಮಾರ್ಟಿಮರ್ ವೀಲರ್‌ನ ಅಭಿಪ್ರಾಯ. ಹಿಂದೆ ಇದಕ್ಕೆ ಮಹೋದಾಯಿ ಅಥವಾ ಮಹೋದಯಪುರಮ್ ಎಂಬ ಹೆಸರಿತ್ತು. ಆಗ ಇದು ಉದಯಗೊಂಡ ಚೇರ ಅರಸನ ರಾಜಧಾನಿಯಾಗಿತ್ತು (9ನೆಯ ಶತಮಾನ). ಇಲ್ಲಿ ಕೊಚ್ಚಿನ್ ರಾಜ್ಯದ ಪುರಾತತ್ತ್ವ ಇಲಾಖೆ ನಡೆಸಿದ ಉತ್ಖನನದಲ್ಲಿ 13–14ನೆಯ ಶತಮಾನದ ಪ್ರಾಚ್ಯಾವಶೇಷಗಳು ದೊರೆತಿವೆ. ಈ ಪ್ರದೇಶವನ್ನು ಚೇರಮನ್ ಪರಂಬು ಎಂದು ಕರೆಯಲಾಗುತ್ತಿತ್ತು.

1969–70ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ತಿರುಕುಲಶೇಖರ ಪುರಮ್, ಕೀಲತ್ತಲಿ, ತಿರುವಾಂಜಿಕುಲಮ್, ಕರುಪ್ಪದಾನ ಹಾಗೂ ಮಡಿಲಾಕಮ್ ಮುಂತಾದ ನೆಲೆಗಳಲ್ಲಿ ಸರ್ವೇಕ್ಷಣೆ ಹಾಗೂ ಉತ್ಖನನ ನಡೆಸಿತು. ಮೊದಲ ಮೂರು ಸ್ಥಳಗಳು ಕೋಡಂಗಲ್ಲೂರಿನೊಂದಿಗೆ ನಿಕಟ ಸಂಬಂಧ ಹೊಂದಿದ್ದವು; ಕೊನೆಯೆರಡು ನೆಲೆಗಳು ಹಿನ್ನೀರಿನ ದಂಡೆಯ ಮೇಲಿವೆ. ಈ ತಾಣಗಳು ಪ್ರಾಚೀನ ತಮಿಳು ಹಾಗೂ ಕೇರಳ ಸಾಹಿತ್ಯದಲ್ಲಿ ಉಲ್ಲೇಖಗೊಂಡಿವೆ. ಈ ಸಂಗತಿ ಪ್ರಾಚೀನ ತಮಿಳು ಸಾಹಿತ್ಯದ ಕೃತಿ ಇಳಂಗೋವನ್ ಎಂಬ ಹೆಸರಿನ ಚೇರ ರಾಜಕುಮಾರನ ಶಿಲಪ್ಪದಿಕಾರಮ್‌ನಲ್ಲಿ ಪುಷ್ಟೀಕರಿಸಲ್ಪಟ್ಟಿದೆ. ಈ ರಾಜಕುವರನು ಚೇರ ಮನೆತನವನ್ನು ಆಳುತ್ತಿದ್ದ ರಾಜನಾದ ಸೆಂಗುಟ್ಟುವನ್‌ನ ಸಹೋದರನಾಗಿದ್ದ. ಇವರು ರೋಮ್ ಸಾಮ್ರಾಜ್ಯದ ಸಮಕಾಲೀನರಾಗಿದ್ದರಲ್ಲದೆ ಶ್ರೀಲಂಕದ ಗಜಬಾಹು ಎಂಬ ಅರಸನ ಆಳಿಕೆಯ ಕಾಲದವರೂ ಆಗಿದ್ದರು. ಇಳಂಗೋವನ್ ರಾಜಕುವರ ಮುಡಿಲಾಕಮ್‌ನಲ್ಲಿ ವಾಸಿಸುತ್ತಿದ್ದ. ಕರುಪ್ಪಾದನ ಹಾಗೂ ಕರೂರ, ಕರೂರವಾಂಜಿ ಇವೆಲ್ಲವೂ ಒಂದೇ ಆಗಿದ್ದು ಆರಂಭದಲ್ಲಿ ಚೇರ ರಾಜಧಾನಿ ಆಗಿದ್ದುದಾಗಿ ತಿಳಿದುಬರುತ್ತದೆ. ಈ ತಾಣಗಳನ್ನು ಸಂಗಮ್ ಸಾಹಿತ್ಯದಲ್ಲಿ ಹೆಸರಿಸಲಾಗಿವೆ.

ಇಲ್ಲಿ ಕೈಕೊಂಡ ಉತ್ಖನನ ಮೇಲಣ ಎಲ್ಲ ತಾಣಗಳ ಅನ್ಯೋನ್ಯ ಸಂಬಂಧವನ್ನು ಸೂಚಿಸುತ್ತದೆ. ಉತ್ಖನನದಲ್ಲಿ ಮಡಕೆಗಳು, ನಾಣ್ಯಗಳು, ಹೆಂಚುಗಳು, ಕೆಂಗರಸುಗಲ್ಲಿನ ಗೋಡೆಗಳು 9–11 ಶತಮಾನಗಳ ಸ್ತರಗಳಲ್ಲಿ ದೊರೆತಿವೆ. ಇವಲ್ಲದೆ ಗಟ್ಟಿಮುಟ್ಟಾದ ಕೆಂಪು ಗಡಿಗೆಗಳ ಚೂರುಗಳು, ಚೀನದ ಸೆಲೆಡನ್ ಮಡಕೆ ಚೂರುಗಳು ದೊರೆತಿವೆ.

ಕೀಲತ್ತಲಿ, ತಿರುಕ್ಕುಲಶೇಖರಪುರಮ್ ತಾಣಗಳಲ್ಲಿ ಎರಡು ದೇವಾಲಯಗಳಿವೆ. ಇವು ಶಾಸನೋಕ್ತವಾಗಿಯೂ ವಾಸ್ತುಶಿಲ್ಪ ಹಾಗೂ ಶಿಲ್ಪಶಾಸ್ತ್ರಗಳ ಆಧಾರವಾಗಿಯೂ 10ನೆಯ ಶತಮಾನಕ್ಕೆ ಸಂಬಂಧಿಸಿದ್ದವು ಎಂದು ಹೇಳಬಹುದು.

ಇತ್ತೀಚೆಗೆ ಇಲ್ಲಿ ಕೇರಳ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್–ಇವರು ನಡೆಸಿದ ಉತ್ಖನನದಲ್ಲಿ ನಾಲ್ಕು ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದರು: ಕಬ್ಬಿಣಯುಗ ಹಾಗೂ ಆದಿಚಾರಿತ್ರಿಕ ಕಾಲದ ಸ್ಥಿತ್ಯಂತರ (ಪ್ರ.ಶ.ಪೂ.–ನಿಂದ ಪ್ರ.ಶ.ಪೂ.2); ಆದಿ ಚಾರಿತ್ರಿಕಕಾಲ (ಪ್ರ.ಶ.1–4); ಆರಂಭಿಕ ಮಧ್ಯಯುಗೀನ ಕಾಲ (5–10 ಶತಮಾನ); ಆಧುನಿಕ ಕಾಲ (17ನೆಯ ಶತಮಾನದ ಅನಂತರ). (ಎಸ್.ಕೆ.ಜಿ.)

**ಕೋಲ್ಡಿವ:** ಉತ್ತರಪ್ರದೇಶ ರಾಜ್ಯದ ಅಲಹಾಬಾದ್ ಜಿಲ್ಲೆಯಲ್ಲಿ ಬೇಲನ್ ನದಿ ಬಯಲಿನಲ್ಲಿರುವ ಪುರಾತತ್ತ್ವ ನೆಲೆ. ಉತ್ತರ ಮಧ್ಯಭಾರತದ ನವಶಿಲಾಯುಗ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು ಮೊತ್ತಮೊದಲಿಗೆ ಉತ್ಖನನದಲ್ಲಿ ಕಾಣಿಸಿಕೊಂಡ ಮಹತ್ತ್ವದ ನೆಲೆಯಿದು. 1973–74ರಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯದ ಜಿ.ಆರ್. ಶರ್ಮ ನಿರ್ದೇಶನದಲ್ಲಿ ಇಲ್ಲಿ ನಡೆದ ಉತ್ಖನನದಲ್ಲಿ ನವಶಿಲಾಯುಗ, ತಾಮ್ರ–ಶಿಲಾಯುಗ ಹಾಗೂ ಕಬ್ಬಿಣಯುಗದ ಅವಶೇಷಗಳನ್ನು ಹೊರತೆಗೆಯಲಾಯಿತು. ಹೊರಮೈ ಮೇಲೆ ಹುರಿಯೊತ್ತಿ ಮಾಡಿದ ಅಲಂಕರಣವಿರುವ ಪಾತ್ರೆ, ಕೆಂಪು ಪಾತ್ರೆ, ಒರಟಾದ ಕಪ್ಪು–ಕೆಂಪು ದ್ವಿವರ್ಣಪಾತ್ರೆ ಮುಂತಾದ ತಿಗುರಿಯ ಸಹಾಯವಿಲ್ಲದೆ ಕೈಯಿಂದ ಮಾಡಿದ ಪಾತ್ರೆಗಳು ನವಶಿಲಾಯುಗದಲ್ಲಿ ಬಳಸಲ್ಪಡುತ್ತಿದ್ದವು. ಮೊದಲನೆಯ ಪ್ರಕಾರದ ಪಾತ್ರೆಗಳು ಪ್ರಧಾನವಾಗಿದ್ದು ಇವು ಈಶಾನ್ಯ ಹಾಗೂ ಮಧ್ಯಭಾರತದ ನವಶಿಲಾಯುಗ ಸಂಸ್ಕೃತಿಗೆ ಸೀಮಿತವಾದುವು. ಅನೇಕ ಮಣ್ಪಾತ್ರೆಗಳಲ್ಲಿ ಕಾಡು ಬತ್ತದ ಹೊಟ್ಟನ್ನು ಜೇಡಿಮಣ್ಣಿನೊಂದಿಗೆ ಬೆರೆಸಿರುವುದು ಗಮನಾರ್ಹ. ಬತ್ತದ ಕೃಷಿಗೆ ಸಂಬಂಧಿಸಿದ ನವಶಿಲಾಯುಗದ ಅತ್ಯಂತ ಪ್ರಾಚೀನ ನೆಲೆಗಳಲ್ಲೊಂದು ಎಂಬ ಮಹತ್ತ್ವ ಕೂಡ ಇದಕ್ಕಿದೆ. ಈಶಾನ್ಯ ಹಾಗೂ ಉತ್ತರ ಮಧ್ಯಭಾರತದ ಭಾರತದ ನವಶಿಲಾಯುಗ ಸಂಸ್ಕೃತಿಯ ಮತ್ತೊಂದು ವೈಶಿಷ್ಟ್ಯವಾದ ಅರೆಗೋಲಾಕಾರದ ಚಪ್ಪಟೆ ಶಿಲಾಕೊಡಲಿಗಳು, ಸೂಕ್ಷ್ಮಶಿಲೋಪಕರಣಗಳು, ಪ್ರಾಣಿಮೂಳೆಗಳು, ಮಣ್ಣು ಮೆತ್ತಿದ ಬೊಂಬಿನ ತಡಿಕೆ ಗೋಡೆಯ ಭಾಗಗಳು ಈ ಹಂತದ ಇತರ ಅವಶೇಷಗಳಾಗಿವೆ.

ತಾಮ್ರ–ಶಿಲಾಯುಗದಲ್ಲಿ ಕಪ್ಪು ಲೇಪನವುಳ್ಳ ಪಾತ್ರೆ, ಹೊಸಬಗೆಯ ಕೆಂಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಬಳಕೆಗೆ ಬಂದವು. ಇವು ನಯವಾದ ಮಣ್ಣಿನಿಂದ ತಿಗುರಿಯ ಮೇಲೆ ಮಾಡಿದವು. ಪಾತ್ರೆಗಳ ಆಕಾರದಲ್ಲಿಯೂ ವೈವಿಧ್ಯ ಕಂಡುಬರುತ್ತದೆ. ಕೆಲವೊಂದು ಕೆಂಪುಪಾತ್ರೆಗಳ ಮೇಲೆ ಕಪ್ಪು ಬಣ್ಣದಲ್ಲಿಯೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳ ಮೇಲೆ ಬಿಳಿ ಬಣ್ಣದಲ್ಲಿಯೂ ಚಿತ್ರ ಬಿಡಿಸಲಾಗಿದೆ. ಬೊಂಬಿನ ಗುರುತುಳ್ಳ ಸುಟ್ಟ ಮಣ್ಣಿನ ಗೋಡೆ ಚೂರುಗಳು, ದಮ್ಮಸ್ಸು ಮಾಡಿದ ನೆಲಗಟ್ಟು, ಆಧಾರಕಂಬಗಳ ಗುಳಿಗಳು ವಾಸಗೃಹಗಳ ಅವಶೇಷಗಳಾಗಿವೆ. ಚರ್ಟ್ ಹಾಗೂ ಕ್ಯಾಲ್ಸೆಡನಿಯ ಸೂಕ್ಷ್ಮಶಿಲೋಪ ಕರಣಗಳು, ಮೂಳೆಯ ಬಾಣದ ಮೊನೆಗಳು, ಪ್ರಾಣಿಮೂಳೆಗಳು, ಕೃಷಿಯಿಂದ ಬೆಳೆದ ಸುಟ್ಟ ಅಕ್ಕಿ ಕಾಳುಗಳು, ತಾಮ್ರದ ಚೂರು, ಅರೆಯುವ ಕಲ್ಲು, ಅರೆಪ್ರಶಸ್ತ ಕಲ್ಲು–ಶಂಖ, ಚಿಪ್ಪಿನ ಮಣಿಗಳು ಇಲ್ಲಿ ದೊರೆತ ಸಾಂಸ್ಕೃತಿಕ ಅವಶೇಷಗಳು. ಕೊನೆಯ ಹಂತದಲ್ಲಿ (ಕಬ್ಬಿಣಯುಗ) ಕಬ್ಬಿಣದ ಬಳಕೆ ಕಂಡುಬರುತ್ತದೆ. ಕೊಡಲಿ, ಬಾಣದ ಮೊನೆ ಮುಂತಾದ ಉಪಕರಣಗಳೂ ಮೂಸೆ–ಕಿಟ್ಟದಂತಹ ತಯಾರಿಕಾ ಕುರುಹುಗಳೂ ಇಲ್ಲಿ ಸಿಕ್ಕಿವೆ. ಸುಟ್ಟ ಗೋದಿಯ ಕರಕಲು ಹಾಗೂ ಹೆಸರುಕಾಳು ದೊರೆತಿರುವುದರಿಂದ ಈ ಹಂತದಲ್ಲಿ ಇವುಗಳನ್ನು ಬೆಳೆಯುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಇತ್ತೀಚಿನ ಅಧ್ಯಯನದಿಂದ ನವಶಿಲಾಯುಗದ ಕೊನೆಯ ಹಂತದಲ್ಲಿಯೇ ಜವೆ, ಗೋದಿ, ಎಳ್ಳು ಮತ್ತು ತೃಣಧಾನ್ಯಗಳನ್ನು ಬೆಳೆಯುತ್ತಿದ್ದರೆಂಬುದು ಸಾಬೀತಾಗಿದೆ.

ತಾಮ್ರ–ಶಿಲಾಯುಗ ಹಂತಕ್ಕೆ ದೊರೆತ ಇಂಗಾಲ–14 ಕಾಲಮಾನ ಪ್ರ.ಶ.ಪೂ. 4530±185 ಪ್ರ.ಶ.ಪೂ.5440±240 ಮತ್ತು ಪ್ರ.ಶ.ಪೂ.4440±120 ತಾಮ್ರ–ಶಿಲಾಯುಗ ಹಂತದ ಆರಂಭವನ್ನು ಉತ್ಖನನಕಾರರು 2ನೆಯ ಸಹಸ್ರಮಾನದ ಉತ್ತರಾರ್ಧಕ್ಕೆ ಸೇರಿಸಿದ್ದಾರೆ. ಇತ್ತೀಚಿಗೆ ದೊರೆತ ಇಂಗಾಲ–14 ಕಾಲಮಾನದ ಹಿನ್ನೆಲೆಯಲ್ಲಿ ಕೋಲ್ಡಿವ ನೆಲೆಯೂ ಸೇರಿದಂತೆ ಉತ್ತರ ಮಧ್ಯಭಾರತದ ನವಶಿಲಾಯುಗ ಸಂಸ್ಕೃತಿಯ ಆರಂಭ ಪ್ರ.ಶ.ಪೂ. 8ನೆಯ ಸಹಸ್ರಮಾನವೆಂದು ಅಭಿಪ್ರಾಯಪಡಲಾಗಿದೆ. (ಆರ್‌ಕೆ.)

**ಕೋಲ್‌ಬ್ರೂಕ್, ಹೆನ್ರಿ ಥಾಮಸ್:** 1765–1837. ಹೆಸರಾಂತ ಆಂಗ್ಲ ವಿದ್ವಾಂಸ, ಪ್ರಾಚ್ಯಶಾಸ್ತ್ರಜ್ಞ. ಸಂಸ್ಕೃತವನ್ನು ಕರಗತಮಾಡಿಕೊಂಡು ತನ್ಮೂಲಕ ಭಾರತೀಯ ನ್ಯಾಯಶಾಸ್ತ್ರಾದಿಗಳನ್ನು ವ್ಯಾಸಂಗಮಾಡ ಹೊರಟ ಐರೋಪ್ಯ ವಿದ್ವಾಂಸರಲ್ಲಿ ಮೊದಲಿಗ. ಲಂಡನ್ನಿನಲ್ಲಿ ಜನಿಸಿದ. ಜಾರ್ಜ್ ಕೋಲ್‌ಬ್ರೂಕ್ ಇವನ ತಂದೆ. ಈತ 1782ರಲ್ಲಿ ಭಾರತಕ್ಕೆ ಬಂದು ಬಂಗಾಲದ ಸಿವಿಲ್ ಸರ್ವಿಸ್ಸಿನಲ್ಲಿ ಕೆಲಸಕ್ಕೆ ಸೇರಿ ಕೆಲ ಕಾಲದಲ್ಲಿಯೇ ರೆವಿನ್ಯೂ ಅಧಿಕಾರಿಯಾದ. ಆ ಸಮಯದಲ್ಲಿ ರಿಮಾರ್ಕ್ಸ್ ಆನ್ ದಿ ಹಸ್ಬೆಂಡ್ರಿ ಅಂಡ್ ಕಾಮರ್ಸ್ ಆಫ್ ಬೆಂಗಾಲ್ ಎಂಬ ಗ್ರಂಥವನ್ನು ಬರೆದ. ಈಸ್ಟ್ ಇಂಡಿಯ ಕಂಪನಿಯ ಸೇವಾವೃತ್ತಿಯಲ್ಲಿದ್ದರೂ ತನ್ನ ಲೇಖನದಲ್ಲಿ ಸರ್ಕಾರದ ವಾಣಿಜ್ಯನೀತಿಯನ್ನು ಕುರಿತು ಕಟುವಾಗಿ ಟೀಕಿಸಿರುವುದು ಈತನ ನಿಷ್ಪಕ್ಷಪಾತಬುದ್ಧಿಗೆ ನಿದರ್ಶನವಾಗಿದೆ. ಈ ಗ್ರಂಥ ಇಂಗ್ಲೆಂಡಿನಲ್ಲಿ ಪ್ರಕಟವಾಗಲಿಲ್ಲ. ಇದನ್ನು ಕೋಲ್‌ಬ್ರೂಕನೇ ಖಾಸಗಿಯಾಗಿ ಭಾರತದಲ್ಲಿ ಪ್ರಕಟಿಸಿದ (1795).

ಭಾರತದಲ್ಲಿ ಸಮರ್ಥಶಾಲಿ ಅಧಿಕಾರಿ ಎನ್ನಿಸಿಕೊಳ್ಳಬೇಕಾದರೆ ಭಾರತದ ಸಂಸ್ಕೃತಿಯ ಪರಿಚಯ, ಸಂಸ್ಕೃತ ಭಾಷೆಯ ಜ್ಞಾನ ಅತ್ಯಂತ ಅವಶ್ಯಕವೆಂದು ಮನಗಂಡ ಈತ ಸಂಸ್ಕೃತ ಭಾಷಾಧ್ಯಯನವನ್ನು ಆರಂಭಿಸಿ ಅಲ್ಪಕಾಲದಲ್ಲಿಯೆ ಸಂಸ್ಕೃತಭಾಷೆಯ ಮೇಲೆ ಹತೋಟಿ ಪಡೆದ. ಅದೇ ಸಮಯದಲ್ಲಿ ಸರ್ ವಿಲಿಯಂ ಜೋನ್ಸ್ ಸಿದ್ಧಪಡಿಸಿದ್ದ ಭಾರತೀಯ ನ್ಯಾಯಶಾಸ್ತ್ರ ಗ್ರಂಥವನ್ನು ಎ ಡೈಜೆಸ್ಟ್ ಆಫ್ ಹಿಂದು ಲಾ ಆನ್ ಕಾನ್‌ಟ್ರ್ಯಾಕ್ಟ್ಸ್ ಅಂಡ್ ಸಕ್ಸೆಷನ್ಸ್ (1798) ಎಂಬ ಶೀರ್ಷಿಕೆಯಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿದ. ಇದರಿಂದ ಈತನ ಕೀರ್ತಿ ಎಲ್ಲೆಲ್ಲಿಯೂ ಹರಡಿತು. ಆಗ ಈತ ಬರೆದ ಅನೇಕ ಲೇಖನಗಳು ಏಷ್ಯಾಟಿಕ್ ರಿಸರ್ಚ್ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಈತ 1801ರಲ್ಲಿ ಕಲ್ಕತ್ತದ ಹೊಸ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಂಡ. ಅದೇ ಸಮಯದಲ್ಲಿ (1805) ಈತ ತನ್ನ ವಿರಾಮ ಕಾಲದಲ್ಲಿ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ವೇತನರಹಿತ ಸಂಸ್ಕೃತ ಪ್ರಾಧ್ಯಾಪಕನಾಗಿ ಕೆಲಸ ಮಾಡತೊಡಗಿದ್ದನ್ನು ನೋಡಿದರೆ ಈತನಿಗೆ ಸಂಸ್ಕೃತದ ಬಗ್ಗೆ ಇದ್ದ ಅಪಾರ ಆಸಕ್ತಿ ವ್ಯಕ್ತವಾಗುತ್ತದೆ. ಆ ಕಾಲದಲ್ಲೀತ ಸಂಸ್ಕೃತ ವ್ಯಾಕರಣವನ್ನು ಬರೆದನಲ್ಲದೆ ಪಾಣಿನಿಯ ವ್ಯಾಕರಣ, ಅಮರಕೋಶ ಮತ್ತಿತರ ಕೆಲವು ಸಂಸ್ಕೃತ ಕೋಶಗಳು, ಹಿತೋಪದೇಶ ಮತ್ತು ಕಿರಾತಾರ್ಜುನೀಯಗಳನ್ನು ಪರಿಷ್ಕರಿಸಿದ. ಜೊತೆಗೆ ಅನೇಕ ಶಾಸನಗಳನ್ನು ಪರಿಷ್ಕರಿಸಿ ಇಂಗ್ಲಿಷಿಗೆ ಭಾಷಾಂತರಿಸಿದ.

ಈತ 1807ರಲ್ಲಿ ಸುಪ್ರೀಂ ಕೌನ್ಸಿಲ್ಲಿನ ಸದಸ್ಯನಾಗಿ ನೇಮಕಗೊಂಡ. ಈತ ಬರೆದ ಎಸ್ಸೆ ಆನ್ ದಿ ವೇದಾಸ್ ಎಂಬ ಲೇಖನ ಮೊದಲ ಬಾರಿಗೆ ಯುರೋಪಿಯನ್ನರಿಗೆ ಭಾರತೀಯ ಪ್ರಾಚೀನ ಸಾಹಿತ್ಯ ಮತ್ತು ಸಂಸ್ಕೃತಿಗಳ ಪರಿಚಯವನ್ನು ಮಾಡಿಕೊಟ್ಟಿತು. 5 ವರ್ಷಗಳಾದ ಮೇಲೆ ಸುಪ್ರೀಂ ಕೌನ್ಸಿಲ್ ಸದಸ್ಯತ್ವವನ್ನು ತ್ಯಜಿಸಿ ಪುನಃ ತನ್ನ ಸಾಹಿತ್ಯ ಸೇವೆಯನ್ನು ಪ್ರಾರಂಭಿಸಿದ. 1810ರಲ್ಲಿ ಜೀಮೂತವಾಹನನ ದಾಯಭಾಗವನ್ನೂ ಅದೇ ವಿಷಯವನ್ನು ಕುರಿತ ಮಿತಾಕ್ಷರದ ಕೆಲವು ಭಾಗಗಳನ್ನೂ ಇಂಗ್ಲಿಷಿಗೆ ಭಾಷಾಂತರಿಸಿದ.

ಕೋಲ್‌ಬ್ರೂಕನಿಗಿದ್ದ ಜ್ಞಾನದಾಹ ಅಪರಿಮಿತವಾದುದು. ಭಾಷಾವಿಜ್ಞಾನ, ಖಗೋಳ ವಿಜ್ಞಾನ, ಧರ್ಮಶಾಸ್ತ್ರ, ಗಣಿತವಿಜ್ಞಾನಗಳಲ್ಲದೆ ಸಾಂಖ್ಯ, ನ್ಯಾಯ, ವೈಶೇಷಿಕ, ಮೀಮಾಂಸಾ ಮತ್ತು ವೇದಾಂತಶಾಸ್ತ್ರಗಳೆಲ್ಲವುಗಳಲ್ಲೂ ಈತ ಸಾಕಷ್ಟು ಪರಿಶ್ರಮ ಪಡೆದಿದ್ದ. 1814ರಲ್ಲಿ ಇಂಗ್ಲೆಂಡಿಗೆ ಹಿಂತಿರುಗುವಾಗ ಈತ ತಾನು ಹತ್ತು ಸಾವಿರ ಪೌಂಡ್ ವೆಚ್ಚಮಾಡಿ ಸಂಗ್ರಹಿಸಿದ್ದ ಭಾರತದ ಅನೇಕ ಪ್ರಾಚೀನ ತಾಲಪತ್ರ ಗ್ರಂಥಗಳು, ಲೇಖನಗಳನ್ನು ಈಸ್ಟ್ ಇಂಡಿಯ ಕಂಪನಿಗೆ ನೀಡಿದ. ಈ ಗ್ರಂಥರಾಶಿ ಲಂಡನ್ನಿನ ಇಂಡಿಯ ಆಫೀಸ್ ಗ್ರಂಥಾಲಯ ದಲ್ಲಿ ಇಂದಿಗೂ ಅತ್ಯಮೂಲ್ಯ ನಿಧಿಯಾಗಿ ಸಂರಕ್ಷಣೆಗೊಂಡಿದೆ. (ಸಿ.ಆರ್‌ವಿ.)

**ಕೋಸಾಂಬಿ, ಡಿ.ಡಿ.:** 1907–66. ಪ್ರಪಂಚ ಪ್ರಸಿದ್ಧ ಗಣಿತಶಾಸ್ತ್ರಜ್ಞ. 1907 ಜುಲೈ 31ರಂದು ಜನಿಸಿದರು. ತಮ್ಮ ತಂದೆಯೊಡನೆ ಕೇಂಬ್ರಿಜ್ ಮತ್ತು ಮೆಸಾಚುಸೆಟ್‌ಗೆ ಹೋಗಿ ಅಲ್ಲಿ ಒಂದು ವರ್ಷ ಗ್ರಾಮರ್ ಸ್ಕೂಲಿನಲ್ಲಿ ಕಲಿತು 1920ರಲ್ಲಿ ಕೇಂಬ್ರಿಜ್ ಹೈ ಅಂಡ್ ಲ್ಯಾಟಿನ್ ಸ್ಕೂಲು ಸೇರಿದರು. ಶಾಲೆಯ ಪರೀಕ್ಷೆಯಲ್ಲಿ ಇವರ ಸಾಧನೆ ಅತ್ಯುತ್ತಮವಾಗಿದ್ದುದರಿಂದ ಪ್ರವೇಶ ಪರೀಕ್ಷೆ ಇಲ್ಲದೆ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಸೇರಿಸಿಕೊಳ್ಳಲಾಯಿತು. ಇಲ್ಲಿ ಜಾರ್ಜ್ ಡೇವಿಡ್ ಬರ್ಕಾಫ್ ಅವರಲ್ಲಿ ಗಣಿತಶಾಸ್ತ್ರ ಅಧ್ಯಯನ ಮಾಡಿದರು. 1929ರಲ್ಲಿ ಸುಮ್ಮಕಮ್ ಲೌದೆ ಇವರೊಡನೆ ಬಿ.ಎ. ಪದವಿಯನ್ನು ಪಡೆದರು. ಅನಂತರ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಜರ್ಮನ್ ಭಾಷೆ ಮತ್ತು ಗಣಿತಶಾಸ್ತ್ರ ಬೋಧಿಸುತ್ತಿದ್ದರು. 1931 ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಗಣಿತಶಾಸ್ತ್ರಜ್ಞ ಆಂದ್ರೆ ವೀಲ್ ಅವರೊಡನೆ ಕೆಲಸ ಮಾಡಿದರು. 1933 ರಿಂದ ಪುಣೆಯ ಫರ್ಗುಸನ್ ಕಾಲೇಜಿನಲ್ಲಿ 12ವರ್ಷ ಗಣಿತಶಾಸ್ತ್ರವನ್ನು ಬೋಧಿಸಿದರು. 1944ರಲ್ಲಿ ದಿ ಎಸ್ಟಿಮೇಶನ್ ಆಫ್ ಮ್ಯಾಪ್ ಡಿಸ್ಟೆನ್ಸ್ ಫ್ರಂ ರಿಕಾಂಬಿನೇಶನ್ ವ್ಯಾಲ್ಯೂಸ್ ಎಂಬ ಮಹತ್ತ್ವದ ಸಂಶೋಧನೆ ಆನಲ್ಸ್ ಆಫ್ ಯೂಜೆನಿಕ್ಸ್‌ನಲ್ಲಿ ಪ್ರಕಟವಾಯಿತು. ಅನಂತರ ಇದು ಕೋಸಾಂಬಿ ಮ್ಯಾಪ್ ಎಂದು ಹೆಸರುವಾಸಿಯಾಯಿತು.

ಸಂಖ್ಯಾಶಾಸ್ತ್ರಕ್ಕೆ ಇವರ ಮುಖ್ಯ ಕೊಡುಗೆಯೆಂದರೆ 1943ರಲ್ಲಿ ಸಿದ್ಧಪಡಿಸಿದ ಪ್ರಾಪರ್ ಆರ್ಥೋಗೊನಲ್ ಡಿಕಾಂಪೋಸಿಷನ್ ತಂತ್ರ. ಇದು ಇಮೇಜ್ ಪ್ರಾಸೆಸಿಂಗ್, ಸಿಗ್ನಲ್ ಪ್ರಾಸೆಸಿಂಗ್, ಡಾಟ ಕಂಪ್ರೆಷನ್ ಓಷಿಯನೋಗ್ರಫಿ, ಕೆಮಿಕಲ್ ಎಂಜನಿಯರಿಂಗ್ ಮುಂತಾದ ಕ್ಷೇತ್ರಗಳಲ್ಲಿ ಉಪಯುಕ್ತವಾಗಿದೆ. ಇದನ್ನು ಇತ್ತೀಚೆಗೆ ಕೋಸಾಂಬಿ–ಕರ್ಹುನೆನ್–ಲೂವ್ ಡಿಕಾಂಪೊಸಿಷನ್ ಎಂದು ಕರೆಯಲಾಗುತ್ತಿದೆ.

ಇವರು ನಾಣ್ಯ ಅಧ್ಯಯನದ ಆಸಕ್ತಿಯಿಂದ 1945–48ರಲ್ಲಿ ಪ್ರಾಚೀನ ಸಂಸ್ಕೃತ ಮತ್ತು ಇತರ ಸಾಹಿತ್ಯದ ಅಧ್ಯಯನವನ್ನು ಗಂಭೀರವಾಗಿ ನಡೆಸಿದರು. ಭರ್ತೃಹರಿಯ ಶತಕತ್ರಯ ಮತ್ತು ಸುಭಾಷಿತಾನಿ ಕೃತಿಗಳನ್ನು ವಿಮರ್ಶಾತ್ಮಕವಾಗಿ ಸಂಪಾದಿಸಿ ಪ್ರಕಟಿಸಿದರು. ಇದೇ ಸಮಯದಲ್ಲಿ ಇವರು ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ವಿಶೇಷವಾಗಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಕ್ಕೆ ಸಮೀಪವಾದರು; ಬಿಚ್ಚು ಮಾತಿನ ಮಾರ್ಕ್ಸಿಸ್ಟ್ ಆದರು. 1945–62ರಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಗಣಿತಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ವರ್ಲ್ಡ್ ಪೀಸ್ ಕೌನ್ಸಿಲ್‌ನಲ್ಲಿ ಸದಸ್ಯರಾಗಿ ದುಡಿದರು.

ಈ ಸಮಯದಲ್ಲಿ ಇವರ ಗಮನ ಪ್ರಾಚೀನ ಭಾರತ ಇತಿಹಾಸದ ಕಡೆಗೆ ಹರಿಯಿತು. ಮಾರ್ಕ್ಸಿಸ್ಟ್ ದೃಷ್ಟಿಕೋನದಿಂದ ಎನ್ ಇಂಟ್ರೊಡಕ್ಷನ್ ಟು ದಿ ಸ್ಟಡಿ ಆಫ್ ಇಂಡಿಯನ್ ಹಿಸ್ಟರಿ (1956) ಎಂಬ ಕೃತಿಯನ್ನು ಬರೆದು ಪ್ರಕಟಿಸಿದರು. 1962ರಿಂದ ಭಾರತೀಯ ಇತಿಹಾಸದ ಮೇಲೆ ಇವರ ಅಧ್ಯಯನ ಕೇಂದ್ರೀಕೃತವಾಯಿತು. ತತ್ಪರಿಣಾಮವಾಗಿ, ದಿ ಕಲ್ಚರ್ ಅಂಡ್ ಸಿವಿಲೈಜೇಶನ್ ಆಫ್ ಏನ್ಶಿಯಂಟ್ ಇಂಡಿಯ ಎಂಬ ಗ್ರಂಥ ಪ್ರಕಟವಾಯಿತು (1955). ಇದು ಪ್ರಪಂಚ ಖ್ಯಾತಿಯನ್ನು ಪಡೆಯಿತು. ಜರ್ಮನ್, ಫ್ರೆಂಚ್ ಮತ್ತು ಜಪಾನ್ ಭಾಷೆಗಳಿಗೆ ತರ್ಜುಮೆಯಾಯಿತು. ಮಿಥ್ ಅಂಡ್ ರಿಯಾಲಿಟಿ: ಸ್ಟಡೀಸ್ ಇನ್ ದಿ ಫಾರ್ಮೇಶನ್ ಆಫ್ ಇಂಡಿಯನ್ ಕಲ್ಚರ್ (1962) ಇವರ ಇನ್ನೊಂದು ಮಹತ್ತ್ವದ ಕೃತಿ. ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಇವರು ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತಿನ ಸೈಂಟಿಸ್ಟ್ ಎಮಿರಿಟಸ್ ಎಂದು ಪುಣೆಯ ವಿದ್ಯಾವರ್ಧಿನಿಯಲ್ಲಿ ಕೆಲಸ ಮಾಡಿದರು. ಇತಿಹಾಸ, ವಿಜ್ಞಾನ ಮತ್ತು ಪುರಾತತ್ತ್ವ ವಿಷಯಗಳಿಗೆ ಸಂಬಂಧಿಸಿದ ಅನೇಕ ಸಂಶೋಧಕ ಯೋಜನೆಗಳನ್ನು ಕೈಗೊಂಡರು. ಇವರಿಗೆ ಧನ ಸಹಾಯ ಆಯೋಗದ ಹರಿ ಓಂ ಆಶ್ರಮ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಇವರ ಪತ್ನಿ ನಳಿನಿ. ಎ.ಎಲ್. ಬ್ಯಾಷಾಂ ಇವರ ಆತ್ಮೀಯ ಸ್ನೇಹಿತ. ಡಿ.ಡಿ. ಕೋಸಾಂಬಿ: ಕಂಬೈನ್ಡ್ ಮೆಥಡ್ಸ್ ಇನ್ ಇಂಡಾಲಜಿ ಅಂಡ್ ಅದರ್ ರೈಟಿಂಗ್ಸ್ ಎಂಬ ಸ್ಮರಣ ಗ್ರಂಥ ಇವರನ್ನು ಕುರಿತು ಪ್ರಕಟವಾಗಿದೆ. ಇವರು 1966 ಜೂನ್ 29ರಂದು ನಿಧನ ಹೊಂದಿದರು.

(ಎ.ಎಸ್.)

**ಕೌಂಡಿನ್ಯಪುರ:** ಮಹಾರಾಷ್ಟ್ರ ರಾಜ್ಯದ ಅಮರಾವತಿ ಜಿಲ್ಲೆಯಲ್ಲಿ ವರ್ಧಾನದಿಯ ಪಶ್ಚಿಮ ದಂಡೆಯ ಮೇಲಿರುವ ಪ್ರಸಿದ್ಧ ಐತಿಹಾಸಿಕ ಹಾಗೂ ಧಾರ್ಮಿಕ ಸ್ಥಳ. ಇದನ್ನು ವಿದರ್ಭದ ರಾಜಧಾನಿಯೆಂದು ಪ್ರಾಚೀನ ಸಾಹಿತ್ಯಗಳಲ್ಲಿ ಉಲ್ಲೇಖಿಸಲಾಗಿದೆ. ಕೌಂಡಿನ್ಯಪುರದ ಭೀಷ್ಮಕನ ಮಗಳಾದ ರುಕ್ಮಿಣಿ ಕೃಷ್ಣನ ಜೊತೆಗೂಡಿ ಇಲ್ಲಿಂದಲೇ ಪಲಾಯನ ಮಾಡಿದಳೆಂದು ಮಹಾಭಾರತದಲ್ಲಿ ನಿರೂಪಿಸಲಾಗಿದೆ. ಈ ಸ್ಥಳ ನಳ ದಮಯಂತಿ ಕಥೆಗೂ ಸಂಬಂಧಿಸಿದೆ. ಇಲ್ಲಿನ ಒಂದು ನೆಲೆಯನ್ನು 1928 ರಲ್ಲಿ ಎ.ಆರ್. ದೇಶಪಾಂಡೆ ಬೆಳಕಿಗೆ ತಂದರು. ಇಲ್ಲಿಯ ಪ್ರಾಚ್ಯವಸ್ತುಗಳನ್ನು 1936 ರಲ್ಲಿ ಕೆ.ಎನ್.ದೀಕ್ಷಿತ್ ಶೋಧಿಸಿದರು. 1962–64 ರಲ್ಲಿ ಕೈಗೊಂಡ ಉತ್ಖನನದಲ್ಲಿ ಇಲ್ಲಿಯ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಆರು ಹಂತಗಳನ್ನು ಎಂ.ಜಿ.ದೀಕ್ಷಿತ್ ಗುರುತಿಸಿದರು. ಮೊದಲನೆಯ ಹಂತ ಬೃಹತ್ ಶಿಲಾ ಸಂಸ್ಕೃತಿ. ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ಈ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಕೆಲವೊಂದು ಮಡಕೆಗಳ ಮೇಲೆ ಗೀರು ರೇಖಾಚಿತ್ರಗಳಿವೆ. ಕಾರ್ನೇಲಿಯನ್ ಮಣಿಗಳು ದೊರೆತಿವೆ. ಅವುಗಳಲ್ಲಿ ಒಂದು ಮಣಿ ಫಲಕದ ಆಕಾರದಲ್ಲಿದ್ದು ತ್ರಿಜ್ಯಾಕಾರದ ಗೆರೆಗಳನ್ನು ಹೊಂದಿದೆ. ಇವು ದಕ್ಷಿಣ ಭಾರತದ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳನ್ನು ಹೋಲುತ್ತವೆ. ಈ ಹಂತದ ಕಾಲಮಾನವನ್ನು ಉತ್ಖನನಕಾರರು ನಿರ್ಣಯಿಸಿಲ್ಲ. ನಾಗಪುರ ಜಿಲ್ಲೆಯ ತಕಲ್‌ಘಾಟ್ ಮತ್ತು ಖಾಪಗಳ ಇಂಗಾಲ–14 ರ ಕಾಲಮಾನವನ್ನು ಅನುಸರಿಸಿ ಈ ಹಂತ ಪ್ರ.ಶ.ಪೂ. 750–500 ಅವಧಿಯದೆಂದು ನಿರ್ಣಯಿಸಬಹುದು. ಈ ಸಂಸ್ಕೃತಿಯ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಎರಡನೆಯ ಹಂತದಲ್ಲಿಯೂ ಮುಂದುವರೆದವು. ಈ ಹಂತ ಮೌರ್ಯ ಪೂರ್ವ ಕಾಲದ್ದು. ಮೂರನೆಯ ಹಂತದಲ್ಲಿ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಗಳು ಹಾಗೂ ಮುದ್ರಿತ ನಾಣ್ಯಗಳು ದೊರೆತಿವೆ. ಈ ಹಂತ ಮೌರ್ಯರ ಸಮಯದ್ದು. ಇಲ್ಲಿ ಸಿಕ್ಕ ಕಿವಿಯೋಲೆಗಳು ಗಮನಾರ್ಹವಾಗಿವೆ. ಚಕ್ರಾಕಾರವಾಗಿದ್ದು ಇವು ನಯಗೊಳಿಸಿದ ಜಾಸ್ಪರ್, ಗಾಜು, ಸುಟ್ಟಮಣ್ಣಿನಿಂದ ಮಾಡಲಾಗಿದೆ. ಸಾಹಿತ್ಯ ಕೃತಿಗಳಲ್ಲಿ ಇಂತಹ ಓಲೆಗಳನ್ನು ತಾಟಂಕ ಚಕ್ರ ಎಂದು ಉಲ್ಲೇಖಿಸಲಾಗಿದೆ. ನಾಲ್ಕನೆಯ ಹಂತ ಪ್ರ.ಶ.ಪೂ.150–ಪ್ರ.ಶ. 200ರ ಅವಧಿಯದು. ಇಲ್ಲಿ ದೊರೆತ ಸಾತವಾಹನ ಕಾಲದ ನಾಣ್ಯಗಳ ಆಧಾರದ ಮೇಲೆ ಇದನ್ನು ಸಾತವಾಹನ ಹಂತವೆಂದು ಹೇಳಲಾಗಿದೆ. ಒರಟಾದ ಕೆಂಪು ಮಡಕೆಗಳ ಜೊತೆಗೆ ಹೊಳಪಿನ ಕೆಂಪು ಮಣ್ಪಾತ್ರೆಗಳು ದೊರೆತಿವೆ. ಮೌರ್ಯ ಮತ್ತು ಸಾತವಾಹನ ಹಂತಗಳ ಮಧ್ಯದಲ್ಲಿ ಕೆಲವು ಕಪ್ಪುಬಣ್ಣದ ಮಣ್ಪಾತ್ರೆಗಳು ದೊರೆತಿವೆ. ಇವನ್ನು ಪಶ್ಚಿಮ ಭಾರತದ ರಂಗಮಹಲ್‌ನ ಬಣ್ಣದ ಮಣ್ಪಾತ್ರೆಗಳ ಜೊತೆಗೆ ಹೋಲಿಸಬಹುದು. ದಖನ್ ಭೂಪ್ರದೇಶದಲ್ಲಿ ಸಾಮಾನ್ಯವಾಗಿರುವ ಕಾವಿಬಣ್ಣದ ಲೇಪನದಡಿ ಬಿಳಿ ಚಿತ್ರಿತ ಮಣ್ಪಾತ್ರೆಯ ಏಕೈಕ ತುಂಡು ಸಹ ಸಿಕ್ಕಿದೆ. ಮಣಿಗಳಲ್ಲಿ ಕಾರ್ನೇಲಿಯನ್‌ನಿಂದ ಮಾಡಿದವು ಅಧಿಕ ಸಂಖ್ಯೆಯಲ್ಲಿವೆ. ಅರೆ ಪ್ರಶಸ್ತ ಹಾಗೂ ಗಾಜಿನ ಮಣಿಗಳು ಸಹ ಲಭ್ಯವಾಗಿವೆ. ಉತ್ತಮ ಕುಶಲತೆಯುಳ್ಳ ಸಣ್ಣ ಆಯತಾಕಾರದ ಪದಕ ಆಕರ್ಷಕವಾಗಿದೆ. ಮುಂಭಾಗದಲ್ಲಿ ಇಟ್ಟಿಗೆಗಳನ್ನು ಜೋಡಿಸಿದ ಬಾವಿಗಳೂ ಈ ಹಂತಕ್ಕೆ ಸೇರಿವೆ. ಐದನೆಯ ಹಂತವನ್ನು (200–250) ಸಾತವಾಹನ ಕಾಲದ ಅಂತ್ಯ ಭಾಗವೆಂದು ನಿರ್ಣಯಿಸಲಾಗಿದೆ. ಸುಡಾವೆ ಮಣ್ಣಿನ ಹರಕೆ ತಟ್ಟೆ ಈ ಹಂತದಲ್ಲಿ ದೊರೆತಿದೆ. ತದನಂತರ ಇಲ್ಲಿ ವಾಕಾಟಕ ಹಾಗೂ ರಾಷ್ಟ್ರಕೂಟ ಕಾಲದ ವಸತಿಯಿದ್ದಿತೆಂದೂ ಮಧ್ಯಯುಗೀನ ಕಾಲದ ಚಟುವಟಿಕೆಗಳಿಂದಾಗಿ ಈ ಅವಶೇಷಗಳು ಹಾಳಾಗಿವೆ ಎಂದೂ ಅಭಿಪ್ರಾಯಪಡಲಾಗಿದೆ. ಆರನೆಯ ಹಂತ ಅಂತ್ಯ ಮಧ್ಯಯುಗೀನ ಕಾಲದ್ದು. ದೊಡ್ಡ ದೊಡ್ಡ ಗುಂಡುಗಲ್ಲುಗಳ ಗೋಡೆ ಹಾಗೂ ಸುಣ್ಣದ ನೆಲವಿದ್ದ ಮನೆಗಳು ಈ ಸಂಸ್ಕೃತಿಯ ಕುರುಹುಗಳು. ಮುಸ್ಲಿಂ ನಾಣ್ಯಗಳು ಸಹ ಇಲ್ಲಿ ದೊರೆತಿವೆ. ಇಲ್ಲಿ ದೊರೆತ ಮುಸುಕಿನ ಜೋಳದ ತೆನೆಯ ಪಡಿಯಚ್ಚು ಇರುವ ಒಂದು ಮಣ್ಪಾತ್ರೆ ಚೂರು ಕುತೂಹಲಕಾರಿಯಾಗಿದೆ.

(ಕೆ.)

**ಕೌಟಿಲ್ಯ:** ಭಾರತದ ಪ್ರಸಿದ್ಧ ರಾಜನೀತಿಜ್ಞ. ವಿಷ್ಣುಗುಪ್ತ, ಚಾಣಕ್ಯ ಎಂಬ ಅಭಿಧಾನಗಳೂ ಇವನಿಗುಂಟು. ಈತ ಕುಟಲನೆಂಬ ಗೋತ್ರಪ್ರವರ್ತಕನ ವಂಶದಲ್ಲಿ ಹುಟ್ಟಿದ್ದರಿಂದ ಇವನ ಹೆಸರು ಕೌಟಿಲ್ಯನೆಂದೂ ಚಣಕ ದೇಶದಲ್ಲಿ ಜನಿಸಿದವನಾದ್ದರಿಂದ ಚಾಣಕ್ಯನೆಂದೂ ಇವನಿಗೆ ತಂದೆತಾಯಿಗಳಿಟ್ಟ ಹೆಸರು ವಿಷ್ಣುಗುಪ್ತನೆಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ತಕ್ಷಶಿಲೆಯ ಬ್ರಾಹ್ಮಣ ಮನೆತನಕ್ಕೆ ಸೇರಿದ ಈತ ನಂದವಂಶದ ಕೊನೆಯ ರಾಜ ಧನನಂದನನನ್ನು ಸಿಂಹಾಸನದಿಂದ ಉರುಳಿಸಿ, ಚಂದ್ರಗುಪ್ತ ಮೌರ್ಯನಿಂದ ರಾಜ್ಯಸ್ಥಾಪನೆ ಮಾಡಿಸಿದನೆಂದು ಪ್ರತೀತಿ ಇದೆ. ಸಾಮ್ರಾಜ್ಯ ಸ್ಥಾಪನೆಯ ಅನಂತರ ಇವನು ಚಂದ್ರಗುಪ್ತ ಮೌರ್ಯನ ಪ್ರಧಾನ ಮಂತ್ರಿಯಾಗಿ, ಸ್ನೇಹಿತನಾಗಿ, ಮಾರ್ಗದರ್ಶಕನಾಗಿ ರಾಜ್ಯಭಾರವನ್ನು ವ್ಯವಸ್ಥಿತಗೊಳಿಸಲು ಬಹುಮಟ್ಟಿಗೆ ಕಾರಣನಾದ. ಚಂದ್ರಗುಪ್ತನ ತರುವಾಯ ಸಿಂಹಾಸನವನ್ನೇರಿದ ಬಿಂದುಸಾರನ ಕಾಲದಲ್ಲೂ ಸ್ವಲ್ಪಕಾಲ ಪ್ರಧಾನಿಯಾಗಿದ್ದನೆಂದು ಕಾಣುತ್ತದೆ. ಇವನ ಅರ್ಥಶಾಸ್ತ್ರವೆಂಬ ರಾಜನೀತಿಗ್ರಂಥ ಪ್ರ.ಶ.ಪೂ. 325–296 ಸುಮಾರಿನಲ್ಲಿ ರಚಿತವಾದ್ದೆಂದು ಹೇಳಲಾಗಿದೆ. 3ನೆಯ ಶತಮಾನದಲ್ಲಿ ಈ ಗ್ರಂಥ ರಚಿತವಾಗಿರಬಹುದೆಂಬ ಅಭಿಪ್ರಾಯವೂ ಉಂಟು. ಮೈಸೂರಿನ ಪ್ರಾಚ್ಯ ಸಂಶೋಧನಾಲಯದಲ್ಲಿ ಗ್ರಂಥಪಾಲಕರಾಗಿದ್ದ ಆರ್. ಶಾಮಶಾಸ್ತ್ರಿಗಳು 1909ರಲ್ಲಿ ಈ ಗ್ರಂಥವನ್ನು ಪ್ರಕಟಿಸಿದರು. ಅನಂತರ ತಿರುವನಂತಪುರದ ಟಿ. ಗಣಪತಿ ಶಾಸ್ತ್ರಿಯವರೂ ಈ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದರು. ಈ ಗ್ರಂಥದ ಮೇಲೆ ಅನೇಕ ಟೀಕೆ ಟಿಪ್ಪಣಿಗಳು ಬಂದಿವೆ. ಇದು ಇಂಗ್ಲಿಷ್, ಫ್ರೆಂಚ್, ಜರ್ಮನ್ ಮುಂತಾದ ಅನೇಕ ಆಧುನಿಕ ಭಾಷೆಗಳಿಗೆ ಭಾಷಾಂತರಗೊಂಡಿದೆ. ಪ್ರಾಚೀನ ಭಾರತದ ರಾಜನೀತಿ, ಧರ್ಮ ಮತ್ತು ಸಾಮಾಜಿಕ ಜೀವನಗಳನ್ನು ರೂಪಿಸುವ ಕಾರ್ಯದಲ್ಲೂ ಈ ಸಂಬಂಧವಾಗಿ ಅನಂತರಕಾಲದಲ್ಲಿ ರಚಿತವಾದ ಗ್ರಂಥಗಳ ಮೇಲೂ ಕೌಟಿಲ್ಯನ ಅರ್ಥಶಾಸ್ತ್ರ ತುಂಬ ಪ್ರಭಾವ ಬೀರಿತು. ಕೆಲವು ಆಧುನಿಕ ವಿದ್ವಾಂಸರು ಈ ಗ್ರಂಥವನ್ನು ಇಟಲಿಯ ಮಧ್ಯಕಾಲೀನ ರಾಜನೀತಿಜ್ಞ ಮ್ಯಾಕಿಯವೆಲಿಯ ಇಲ್ ಪ್ರಿನ್ಸಿಪೆ (ದಿ ಪ್ರಿನ್ಸ್) ಎಂಬ ಗ್ರಂಥದೊಂದಿಗೆ ಹೋಲಿಸಿ ಕೌಟಿಲ್ಯನನ್ನು ಭಾರತದ ಮ್ಯಾಕಿಯವೆಲಿ ಎಂದು ಕರೆದಿದ್ದಾರೆ. ಹಾಗೆಯೇ ಕೌಟಿಲ್ಯನನ್ನು ಗ್ರೀಸಿನ ಅರಿಸ್ಟಾಟಲ್‌ನಿಗೆ ಹೋಲಿಸಬಹುದೆಂದು ಕೆಲವರು ಹೇಳುವುದುಂಟು.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸರ್ಕಾರದ ಆಡಳಿತದ ರೀತಿನೀತಿ, ರಾಜಧರ್ಮ, ಮಂತ್ರಿಗಳೇ ಮುಂತಾದ ಆಡಳಿತಾಧಿಕಾರಿಗಳ ನಡೆವಳಿಕೆ, ಅಂತಾರಾಷ್ಟ್ರೀಯ ವ್ಯವಹಾರ ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಭಾರತೀಯ ದೃಷ್ಟಿಕೋನವನ್ನು ಕೌಟಿಲ್ಯ ಹೊರಗೆಡಹಿದ್ದಾನೆ. ತನ್ನ ಗ್ರಂಥದಲ್ಲಿ ರಾಜ್ಯಾಡಳಿತ, ನ್ಯಾಯಾಂಗ ವಿಧಿನಿಯಮಗಳು, ಯುದ್ಧನೀತಿ ಮತ್ತು ತಂತ್ರಗಳು, ಆಸ್ತಿಯ ವಿನಿಮಯದ ಬಗ್ಗೆ ಅನುಸರಿಸಬೇಕಾದ ನಿಯಮಗಳು, ಸಾಮಾಜಿಕ ಜೀವನದ ಕಟ್ಟುಪಾಡುಗಳು–ಇವೆಲ್ಲವನ್ನೂ ಪರಿಶೀಲಿಸಿದ್ದಾನೆ. ಧಾರ್ಮಿಕ ದೃಷ್ಟಿ ಪ್ರಧಾನವಾಗಿದ್ದರೂ ತನ್ನ ಗ್ರಂಥದಲ್ಲಿ ಲೌಕಿಕ ಉಪಯುಕ್ತತೆಗೆ ಪ್ರಾಧಾನ್ಯ ನೀಡಿದ್ದಾನೆ. ಒಟ್ಟಿನಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಕೇವಲ ಆದರ್ಶನೀತಿ ನಿಯಮಗಳ ಸಂಗ್ರಹಗ್ರಂಥವಾಗಿರದೆ ಪ್ರಜಾಹಿತೈಷಿಯಾದ ರಾಜ ನಿತ್ಯವೂ ಅನುಸರಿಸಬೇಕಾದ ಮಾರ್ಗಗಳನ್ನು ತಿಳಿಸುವ ಉತ್ತಮ ಮಾರ್ಗದರ್ಶಿ ಗ್ರಂಥವಾಗಿದೆ.

ಶಾಸ್ತ್ರಗಳನ್ನು ತ್ರಯೀ, ಆನ್ವೀಕ್ಷಿಕೀ, ವಾರ್ತಾ ಮತ್ತು ದಂಡನೀತಿ ಎಂದು ನಾಲ್ಕಾಗಿ ವಿಭಾಗ ಮಾಡುವ ಪ್ರಾಚೀನ ಸಂಪ್ರದಾಯವನ್ನೇ ಕೌಟಿಲ್ಯನೂ ಅನುಸರಿಸಿದ್ದಾನೆ. ವೇದ ಮತ್ತು ಅದಕ್ಕೆಸಂಬಂಧಿಸಿದ ಶಾಸ್ತ್ರಗಳು ತ್ರಯೀ, ಅದು ಧರ್ಮಾಧರ್ಮಗಳ ತಿಳಿವಳಿಕೆಯನ್ನುಂಟು ಮಾಡಿ, ವರ್ಣಾಶ್ರಮ ಧರ್ಮಗಳಿಗನುಗುಣವಾಗಿ ನಡೆಯುವುದರಿಂದ ಉಂಟಾಗುವ ಪ್ರಯೋಜನ, ಅವನ್ನು ಮೀರಿದರೆ ಒದಗುವ ಆಪತ್ತು ಇತ್ಯಾದಿ ವಿಷಯಗಳನ್ನು ಒಳಗೊಂಡಿದೆ. ಅನ್ವೀಕ್ಷಿಕೀ ತತ್ತ್ವಶಾಸ್ತ್ರ ಕಾರ್ಯಕಾರಣಗಳ ತಿಳಿವನ್ನು ಬಲಪಡಿಸಿ, ಮನಸ್ಸನ್ನು ಕ್ಲೇಶಗಳಿಗೀಡಾಗದಂತೆ ಹದಗೊಳಿಸುತ್ತದೆ. ಕೃಷಿ, ಪಶುಪಾಲನೆ, ಕೈಗಾರಿಕೆಗಳನ್ನು ತಿಳಿಸುವುದು ವಾರ್ತಾ, ಆಡಳಿತದ ರೀತಿನೀತಿಗಳನ್ನು ತಿಳಿಸುವುದು ದಂಡನೀತಿ ಅಥವಾ ಅರ್ಥಶಾಸ್ತ್ರ.

ಕೌಟಿಲ್ಯನ ಅರ್ಥಶಾಸ್ತ್ರವನ್ನು 15 ಅಧಿಕರಣಗಳಾಗಿ ವಿಭಾಗಿಸಿದೆ. ಒಂದನೆಯ ಅಧಿಕರಣದಲ್ಲಿ ರಾಜಕುಮಾರನ ಪೋಷಣೆ ಮತ್ತು ವಿದ್ಯಾಭ್ಯಾಸಗಳಿಗೆ ಸಂಬಂಧಪಟ್ಟ ವಿಚಾರ ತಿಳಿಸಲಾಗಿದೆ. ರಾಜಕುಮಾರ ವೇದವೇದಾಂಗಗಳಿಂದ ಕೂಡಿದ ಧರ್ಮವನ್ನೂ ಅರ್ಥಶಾಸ್ತ್ರ, ಕೃಷಿ, ಪಶುಪಾಲನೆ, ವಾಣಿಜ್ಯ, ಕೈಗಾರಿಕೆ, ರಾಜನೀತಿ ಮತ್ತು ದಂಡನೀತಿಗಳನ್ನೂ ಅಭ್ಯಾಸಿಸಬೇಕು. ಅವನ ಮಂತ್ರಿಗಳ ಮತ್ತು ಆಸ್ಥಾನಿಕರ ಬಗ್ಗೆಯೂ ವಿವರಗಳನ್ನು ಕೊಟ್ಟಿದೆ. ಇವುಗಳಲ್ಲದೆ, ಅವನನ್ನು ಕೊಲ್ಲಲೆಳಸುವ, ಅವನ ವಂಶದ ರಾಜಕುಮಾರರಿಂದ ಆರಂಭಿಸಿ ಸಾಮಾನ್ಯ ಪ್ರಜೆಯವರೆಗೆ ಅವನ ರಾಜ್ಯದ ಎಲ್ಲ ಉಚ್ಚ ನೀಚ ವರ್ಗಗಳ ಜನರ ಮೇಲೆ ಭದ್ರವಾದ ಹಿಡಿತವನ್ನಿರಿಸಲು ಸಹಕರಿಸುವ ಗೂಢಚಾರರ ಬಗ್ಗೆಯೂ ತಿಳಿಸಲಾಗಿದೆ.

ಪರರಾಷ್ಟ್ರಗಳಲ್ಲಿರುವ ರಾಯಭಾರಿಗಳು ಅವನ ಪ್ರತಿನಿಧಿಗಳಾಗಿಯೂ ಗೂಢಚಾರರಾಗಿಯೂ ಇರಬೇಕು. ಗೂಢಚಾರರು ದೇಶದಲ್ಲಿ ಏನೆಲ್ಲ ಆಗುತ್ತದೋ ಅದನ್ನೆಲ್ಲ ರಾಜನಿಗೆ ತಿಳಿಸುತ್ತಿರಬೇಕು. ರಾಜನ ಅಂತಃಪುರಕ್ಕೆ ವಿಶೇಷ ಗಮನವೀಯಲಾಗಿದೆ. ಅಲ್ಲಿ ಇವನಿಗೆ

ಒದಗಬಹುದಾದ ಅಪಾಯಗಳನ್ನು ಕುರಿತ ಹೆಚ್ಚಿನ ವಿವೇಚನೆಯಿದೆ. ಅಂತಃಪುರದಲ್ಲಿ ಕೊಲೆ ಮಾಡಲ್ಪಟ್ಟ ಪ್ರಸಿದ್ಧ ಅರಸರನ್ನು ಉದಾಹರಣೆಗಾಗಿ ಉಲ್ಲೇಖಿಸಲಾಗಿದೆ. ಅರಮನೆಯಲ್ಲಿ ಮಾತ್ರವಲ್ಲದೆ, ಬೀದಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿಯೂ ರಾಜ ಕೊಲೆಗೆ ಗುರಿಯಾಗದಂತೆ ಕೈಗೊಳ್ಳಬೇಕಾದ ರಕ್ಷಣೆಯ ಅಗತ್ಯವನ್ನು ವಿವರಿಸಿದೆ. ರಾಜ್ಯದ ಆಡಳಿತದ ಮೇಲೆ ಸಂಪೂರ್ಣ ಹಿಡಿತವನ್ನು ಪರಿಣಾಮಗೊಳಿಸುವ ದೊಡ್ಡ ಪರಿವೀಕ್ಷಕ ದಳದ ಕರ್ತವ್ಯವನ್ನು ಎರಡನೆಯ ಅಧಿಕರಣದಲ್ಲಿ ತಿಳಿಸಿದೆ. ಮೂರನೆಯ ಅಧಿಕರಣದಲ್ಲಿ ಕಾನೂನಿನ ವಿವರಣೆಯುಂಟು. ಪೊಲೀಸ್ ಕಾರ್ಯ ಮತ್ತು ಕಠಿಣಶಿಕ್ಷೆಗಳಿಂದ ದುಷ್ಟರನ್ನು ಅಡಗಿಸುವ ವಿಧಾನ, ವಂಚಕ ವ್ಯಾಪಾರಿಗಳ ಮೋಸದ ತೂಕ ಅಳತೆಗಳ ಮತ್ತು ಕೃತಕವಾಗಿ ವಸ್ತುಗಳ ಬೆಲೆಯನ್ನು ಏರಿಸುವುದರ ವಿರುದ್ಧವಾಗಿ ತೆಗೆದುಕೊಳ್ಳಬೇಕಾದ ಜಾಗ್ರತಾ ಕ್ರಮಗಳು–ಇವನ್ನು ನಾಲ್ಕನೆಯ ಅಧಿಕರಣದಲ್ಲಿ ವಿವರಿಸಿದೆ. ರಾಜ ಮೋಸಗಾರನಾದ ಮಂತ್ರಿಯನ್ನು ನಾಶಮಾಡುವ ಕ್ರಮ, ತೆರಿಗೆಗಳನ್ನು ವಸೂಲು ಮಾಡುವ ಕ್ರಮ, ಕೃಷಿಕರಿಂದ ಮತ್ತು ಕೈಕಸಬುದಾರರಿಂದ ಸಾಮಗ್ರಿಗಳನ್ನು ವಸೂಲು ಮಾಡಿ ಸಂಗ್ರಹಿಸುವುದು, ಗೂಢಚಾರರು ಶ್ರೀಮಂತರನ್ನು ದಾನ ಮಾಡುವಂತೆ ಪ್ರಚೋದಿಸುವುದು ಮತ್ತು ಕೆಟ್ಟ ಶ್ರೀಮಂತರ ಸ್ವತ್ತನ್ನು ರಾಜ್ಯಭಂಡಾರಕ್ಕೆ ಸೇರಿಸುವುದು, ರಾಜಸೇವಕರ ವಾರ್ಷಿಕ ವೇತನಕ್ರಮ–ಮುಂತಾದವನ್ನು ಐದನೆಯ ಅಧಿಕರಣದಲ್ಲಿ ವಿವರಿಸಿದೆ. ಆರನೆಯ ಅಧಿಕರಣದಲ್ಲಿ ರಾಜ, ಮಂತ್ರಿ, ಭೂಮಿ, ಕೋಟೆ, ಕೋಶ, ಸೇನೆ ಮತ್ತು ಮಿತ್ರರ ಬಗ್ಗೆ ವಿವರಗಳೂ ರಾಷ್ಟ್ರಾಂತರ ಸಂಬಂಧದ ವಿವರಣೆಯೂ ಇವೆ. ಶಾಂತಿ, ಯುದ್ಧ ತಾಟಸ್ಥ್ಯ ವಿಜಯಯಾತ್ರೆಗೆ ಸನ್ನಾಹ, ಒಪ್ಪಂದ, ಅನಿಶ್ಚಿತ ವರ್ತನೆಗಳು ಎಂಬ ಆರು ರಾಜಕಾರ್ಯಗಳ ವಿವೇಚನೆಗೆ ಏಳನೆಯ ಅಧಿಕರಣ ಮೀಸಲು. ಜೂಜು, ಬೇಟೆ, ಸ್ತ್ರೀ ಮತ್ತು ಮದ್ಯಗಳಿಗೆ ರಾಜ ಬಲಿ ಬೀಳುವುದರಿಂದ ಉಂಟಾಗಬಹುದಾದ ಅಪಾಯಗಳನ್ನು ಮತ್ತು ಬೆಂಕಿ, ನೀರು ಮತ್ತು ಇತರ ವಿಷಯಗಳು ತರಬಹುದಾದ ತೊಂದರೆಗಳನ್ನು ಎಂಟನೆಯ ಅಧಿಕರಣದಲ್ಲಿ ಕೌಟಿಲ್ಯ ವಿವರಿಸಿದ್ದಾನೆ. ಒಂಬತ್ತು ಮತ್ತು ಹತ್ತನೆಯ ಅಧಿಕರಣಗಳಲ್ಲಿ ಯುದ್ಧದ ವಿಚಾರವಿದೆ. ನೇರವಾದ ಯುದ್ಧವನ್ನು ತಪ್ಪಿಸಲು ಬೇಕಾದಷ್ಟು ಸಂದರ್ಭವನ್ನು ರಾಜನಿಗೊದಗಿಸಲಾಗಿದೆ. ನೇರ ಹೋರಾಟ ನಡೆಯಬೇಕಾದ ಸಂದರ್ಭದಲ್ಲಿ ಸೈನಿಕರನ್ನು ಹುರಿದುಂಬಿಸುವ ರೀತಿಯನ್ನು ಹೇಳಲಾಗಿದೆ. ಜ್ಯೋತಿಷ್ಯರು, ಪುರೋಹಿತರು ಮತ್ತು ಇತರ ರಾಜನಿಷ್ಠರು ಈ ಕೆಲಸದಲ್ಲಿ ರಾಜನಿಗೆ ಸಹಾಯ ಮಾಡಬೇಕು. ಯುದ್ಧದಲ್ಲಿ ಕುಹಕೋಪಾಯವೇ ಮುಖ್ಯ ಎಂದು ವಿವರಿಸಿದೆ. ಹನ್ನೊಂದನೆಯ ಅಧಿಕರಣದಲ್ಲಿ ಶತ್ರುಸೈನ್ಯದ ಅಧಿಕಾರವರ್ಗದಲ್ಲಿರುವ ಒಗ್ಗಟ್ಟನ್ನು ನಾಶಪಡಿಸಲು ರಾಜ ಕಲಹದ ಬೀಜವನ್ನು ಬಿತ್ತಬೇಕಾದ ವಿಧಾನ ಮತ್ತು ಈ ಕಾರ್ಯಕ್ಕೆ ಸ್ತ್ರೀಯರ ನೆರವು–ಇವನ್ನು ವಿವರಿಸಿದೆ. ಹನ್ನೆರಡನೆಯ ಅಧಿಕರಣದಲ್ಲಿ ಗೂಢಚಾರ, ಗುಪ್ತಸಹಾಯಕ, ಕೊಲೆಗಡುಕ, ಸೆರೆಯಾಳು ಮತ್ತು ಸ್ತ್ರೀಯರ ನೆರವಿನಿಂದ ಒಬ್ಬ ದುರ್ಬಲರಾಜ ತನ್ನ ಬಲವನ್ನು ಹೆಚ್ಚಿಸಿಕೊಳ್ಳಬಹುದಾದ ರೀತಿಯನ್ನೂ ಶತ್ರುರಾಜನನ್ನು ಮೋಸದಿಂದ ಕೊಲ್ಲುವ ವಿಧಾನಗಳನ್ನೂ ವಿವರಿಸಿದೆ. ಹದಿಮೂರನೆಯ ಅಧಿಕರಣದಲ್ಲಿ ರಾಜನ ಪಾಂಡಿತ್ಯ ಮತ್ತು ಅವನ ಗುಣಾತಿಶಯಗಳನ್ನು ಮತ್ತು ದೈವದೊಲುಮೆಯನ್ನು ಪ್ರಚಾರ ಮಾಡಿ, ಶತ್ರುಗಳನ್ನು ಹೆದರಿಸಿಡುವ ಕ್ರಮವನ್ನೂ ಇದಕ್ಕೆ ಗೂಢಚಾರರಿಂದ ಮತ್ತು ಇತರರಿಂದ ಸಹಾಯ ಪಡೆದು ತಮ್ಮ ನೆರವಿಗೆ ಉಪಯೋಗಿಸಿಕೊಳ್ಳುವುದನ್ನೂ ಜನರ ಮೂಢ ನಂಬಿಕೆಗಳು ಮತ್ತು ವಿಶ್ವಾಸವನ್ನು ಬಳಸಿಕೊಳ್ಳುವ ಬಗೆಯನ್ನೂ ವಿವರಿಸಿದೆ. ಒಬ್ಬನನ್ನು ಕೊಲ್ಲಲು, ಕುರುಡು ಮಾಡಲು, ಇಲ್ಲವೆ ಬುದ್ಧಿಭ್ರಮಣೆಗೊಳಿಸಲು ಔಷಧ ಮತ್ತು ಮಂತ್ರಗಳ ಬಳಕೆ, ಬಣ್ಣ ಬದಲಾಯಿಸುವುದು, ಮನುಷ್ಯರು ಮತ್ತು ಪ್ರಾಣಿಗಳು ನಿದ್ದೆಮಾಡುವಂತೆ ಮಾಡುವ ಕ್ರಮ, ಕತ್ತಲೆಯಲ್ಲಿ ನೋಡುವುದು, ಬೆಂಕಿಯಲ್ಲಿ ಅಪಾಯವಾಗದಂತೆ ರಕ್ಷಣೆ–ಇವು ಹದಿನಾಲ್ಕನೆಯ ಅಧಿಕರಣದ ವಿಷಯಗಳು. ಕೊನೆಯದಾದ ಹದಿನೈದನೆಯ ಅಧಿಕರಣದಲ್ಲಿ ಗ್ರಂಥದ ಯೋಜನೆಯನ್ನೂ ವಾದದಲ್ಲಿ ಅನುಸರಿಸಬೇಕಾದ ಮೂವತ್ತೆರಡು ಸೂತ್ರಗಳನ್ನೂ ಉದಾಹರಣೆಗಳೊಡನೆ ವಿವರಿಸಲಾಗಿದೆ. (ಬಿ.ಎಸ್‌ಎಚ್.;ಎ.ವಿ.ವಿ.;ಕೆ.ಕೆ.;ಜಿ.ಎಸ್.ಎಸ್.)

**ಕೌಶಾಂಬಿ:** ಉತ್ತರ ಪ್ರದೇಶ ರಾಜ್ಯದ ಅಲಹಾಬಾದ್ ಜಿಲ್ಲೆಯಲ್ಲಿ ಅಲಹಾಬಾದಿನಿಂದ ಸು.52 ಕಿಮೀ ದೂರದಲ್ಲಿ ನೈರುತ್ಯ ದಿಕ್ಕಿಗೆ ಯಮುನ ನದಿಯ ದಂಡೆಯ ಮೇಲಿರುವ ಪುರಾತತ್ತ್ವ ನೆಲೆ. ಮಹಾಕಾವ್ಯಗಳು ಕೌಶಾಂಬಿ ಕುಶಾಂಬ ರಾಜನಿಂದ ಸ್ಥಾಪಿತವಾಯಿತೆಂದು ತಿಳಿಸುತ್ತವೆ. ಗಂಗೆ ಹಸ್ತಿನಾಪುರವನ್ನು ನಾಶ ಮಾಡಿದಾಗ, ಪಾಂಡವ ವಂಶದ ನಿಚಕ್ಷು ರಾಜ ಇಲ್ಲಿದ್ದನೆಂದು ಪುರಾಣಗಳಲ್ಲಿ ಉಲ್ಲೇಖಿಸಿದೆ. ಬುದ್ಧನ ಕಾಲದಲ್ಲಿ ಈ ಸ್ಥಳ ವತ್ಸ ಜನಪದದ ರಾಜಧಾನಿಯಾಗಿದ್ದು ಉದಯನನಿಂದ ಆಳಲ್ಪಡುತ್ತಿತ್ತು. ಉದಯನ ಹಾಗೂ ಆವಂತಿಯ ಪ್ರದ್ಯೋತನ ಮಗಳಾದ ವಾಸವದತ್ತರ ಪ್ರೇಮ ಪ್ರಸಂಗಗಳು ಹಾಗೂ ಅವರ ಮದುವೆ ಕೆಲವು ಸಂಸ್ಕೃತ ಕೃತಿಗಳ ಕಥಾವಸ್ತುವಾಗಿವೆ. ಬೌದ್ಧ ಸಾಹಿತ್ಯ ಹಾಗೂ ಯುವಾನ್ ಚಾಂಗನ ಬರೆಹಗಳ ಪ್ರಕಾರ ಬುದ್ಧ ಇಲ್ಲಿಗೆ ಬಂದಿದ್ದ. ಅಲಹಾಬಾದಿನ ಅಶೋಕ ಸ್ತಂಭ ಶಾಸನ ಮೊದಲು ಇಲ್ಲಿಯೆ ಸ್ಥಾಪಿಸಲ್ಪಟ್ಟಿತ್ತು ಎಂದು ಪ್ರತೀತಿ. ಅಶೋಕನ ಮಹಾಮಾತ್ರರ ಆಡಳಿತ ವಿಭಾಗಗಳಲ್ಲಿ ಕೌಶಾಂಬಿ ಒಂದು ಪ್ರಮುಖ ಕೇಂದ್ರವಾಗಿತ್ತು. ಕೌಶಾಂಬಿಯ ದಕ್ಷಿಣಕ್ಕೆ ದೂರದಲ್ಲಿ ವಿಂಧ್ಯ ಪರ್ವತಗಳಿದ್ದು, ಅಲ್ಲಿ ಅನೇಕ ಹೆದ್ದಾರಿಗಳು ಹಾದು ಹೋಗಿದ್ದವು. ಇವುಗಳಲ್ಲಿ ಕೆಲವು ದೂರದ ದಖನ್ ಮತ್ತು ದಕ್ಷಿಣ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದವು.

ಸವಿಸ್ತಾರವಾಗಿ ಹರಡಿರುವ ಅವಶೇಷಗಳು, ದಿಬ್ಬಗಳು ಹಾಗೂ ಅಶೋಕನಿಂದ ಸ್ಥಾಪಿಸಲ್ಪಟ್ಟ ಸ್ತಂಭಗಳ ಪ್ರದೇಶವೇ ಪ್ರಾಚೀನ ಕೌಶಾಂಬಿ ಎಂದು ಕನ್ನಿಂಗ್‌ಹ್ಯಾಮ್ 1862–63 ರಲ್ಲಿ ಪ್ರಪ್ರಥಮವಾಗಿ ಗುರುತಿಸಿ ಪ್ರತಿಪಾದಿಸಿದ. ಈ ಪ್ರದೇಶದಲ್ಲಿ ಅನೇಕ ನಾಣ್ಯ, ಸುಟ್ಟಮಣ್ಣಿನ ಆಕೃತಿ, ಕಲ್ಲಿನ ವಿಗ್ರಹ ಹಾಗೂ ವಿವಿಧ ಪ್ರಾಚ್ಯಾವಶೇಷಗಳನ್ನು ಆಗಿಂದಾಗ್ಗೆ ಸಂಗ್ರಹಿಸಲಾಗಿದೆ. ಈ ನೆಲೆಯ ಸುತ್ತ ಒಂದು ಭವ್ಯ ಕೋಟೆಯಿದೆ. ಈ ಕೋಟೆ ಉತ್ತರಕ್ಕೆ 1584, ದಕ್ಷಿಣಕ್ಕೆ 1822, ಪೂರ್ವಕ್ಕೆ 1795 ಹಾಗೂ ಪಶ್ಚಿಮಕ್ಕೆ 1249 ಮೀ ಗಳು ಇದ್ದು ಸರಾಸರಿ 10.6 ಮೀ ಎತ್ತರವಿದೆ. ಇದರ ಕೊತ್ತಲಗಳು 21.3–22.9 ಎತ್ತರವಿದ್ದು 6.4 ಮೀ ಪರಿಧಿಯ ಚತುರ್ಭುಜಾಕಾರದಲ್ಲಿವೆ.

1937–38ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎಮ್.ಜಿ.ಮಜುಂದಾರ್ ಸ್ತಂಭದ ಹತ್ತಿರ ಸಣ್ಣ ಉತ್ಖನನ ನಡೆಸಿದರು. 1949–50 ರಿಂದ 1966–67ರ ಅವಧಿಯಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯದ ಜಿ.ಆರ್.ಶರ್ಮ ಹಾಗೂ ಸಂಗಡಿಗರು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಉತ್ಖನನ ನಡೆಸಿದ ಸ್ತಂಭದ ಸಮೀಪದಲ್ಲಿಯೇ ರಕ್ಷಣಾ ಸಂಕೀರ್ಣ, ಘೋಷಿತಾರಾಮ ಪ್ರದೇಶ ಹಾಗೂ ಅರಮನೆ ಆವರಣ ಪ್ರದೇಶಗಳಲ್ಲಿ ಉತ್ಖನನ ನಡೆಸಿದರು.

ಸ್ತಂಭದ ಹತ್ತಿರದ ಉತ್ಖನನದಲ್ಲಿ 3 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು: 1 ನೆಯ ಹಂತದ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಯ ಪೂರ್ವಕಾಲ; 2ನೆಯ ಹಂತ ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆ ಹಂತ; 3ನೆಯದು ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆ ಅನಂತರದ ಹಂತ. ಎರಡನೆಯ ಹಂತದ ಪ್ರಾರಂಭದ ಸ್ತರಗಳಲ್ಲಿ ಇಟ್ಟಿಗೆಯ ಕಟ್ಟಡಗಳು ಇರಲಿಲ್ಲ. ಆದರೆ ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳು ಇದ್ದವು. ತದನಂತರ ಲಿಪಿರಹಿತ ಎರಕದ ನಾಣ್ಯಗಳ ಚಲಾವಣೆ ಹಾಗೂ ಇಟ್ಟಿಗೆ ಕಟ್ಟಡಗಳು ಮತ್ತು ರಸ್ತೆಗಳ ನಿರ್ಮಾಣ ಪ್ರಾರಂಭವಾಯಿತು. ಇವು ಪ್ರಶ.ಪೂ. 3ನೆಯ ಶತಮಾನದವೆಂದು ನಿರ್ಧರಿಸಲಾಗಿದೆ. ಅನಂತರ ತೆಳುವಾದ ಉದ್ದನೆಯ ನಂದಿ ಚಿತ್ರಿತ ಕೌಶಾಂಬಿ ಮಾದರಿ ನಾಣ್ಯಗಳು ದೊರೆತಿವೆ. ಮೂರನೆಯ ಹಂತ ಪ್ರ.ಶ.ಪೂ. 175 ರಿಂದ 325 ಎಂದು ನಿರ್ಧರಿಸಲಾಗಿದೆ. ಈ ಹಂತದಲ್ಲಿ ಮಿತ್ರ ರಾಜರಾದ ಬೃಹಸ್ಪತಿಮಿತ್ರ, ಸೂರಮಿತ್ರ, ಪ್ರಜಾಪತಿಮಿತ್ರ ಹಾಗೂ ರಜನಿಮಿತ್ರರ ನಾಣ್ಯಗಳು ಅನಂತರ ಕುಷಾಣ ಹಾಗೂ ಮಘರ ನಾಣ್ಯಗಳು ಚಲಾವಣೆಯಲ್ಲಿದ್ದವು. ಇವುಗಳಲ್ಲಿ ಮಘ ನಾಣ್ಯಗಳು 250ರವರೆಗೆ ಚಲಾವಣೆಯಲ್ಲಿದ್ದವು. ಪ್ರ.ಶ. 350ರ ಸುಮಾರಿಗೆ ಸಮುದ್ರಗುಪ್ತ ಸೋಲಿಸಿದ ಗಣಪತಿನಾಗನ ಗಣೇಂದ್ರ ಮಾದರಿಯ ನಾಣ್ಯಗಳು ಚಲಾವಣೆಗೆ ಬಂದವು. ಎರಡನೆಯ ಹಂತದಲ್ಲಿ ಪ್ರಾರಂಭಿಸಿದ ರಸ್ತೆ ಸು. ಪ್ರ.ಶ. 300 ರವರೆಗೆ ಉಪಯೋಗದಲ್ಲಿದ್ದಿತು. 4ನೆಯ ಶತಮಾನದ ಹೊತ್ತಿಗೆ ಈ ಸ್ಥಳದಲ್ಲಿ ಜನವಸತಿ ಸೀಮಿತಗೊಂಡಿತು.

ರಕ್ಷಣಾ ಆವರಣದಲ್ಲಿ ನಡೆಸಿದ ಉತ್ಖನನದ ಆಧಾರದ ಮೇಲೆ ಉತ್ಖನನಕಾರರು ನಾಲ್ಕು ಅನುಕ್ರಮ ಹಂತಗಳನ್ನು ನಿರ್ಧರಿಸಿದರು. ಇವು ಪ್ರ.ಶ.ಪೂ. 1165–885; ಪ್ರ.ಶ.ಪೂ. 885–605; ಪ್ರ.ಶ.ಪೂ.605–45 ಹಾಗೂ ಪ್ರ.ಶ.ಪೂ.45–580. ಅಂದರೆ ಈ ಮೊದಲೇ ಗುರುತಿಸಿದ್ದ ಒಂದರಿಂದ ಮೂರನೆಯ ಕಾಲಾನುಕ್ರಮಗಳು ಕ್ರಮವಾಗಿ ಈಗಿನ ಎರಡರಿಂದ–ನಾಲ್ಕನೆಯದೆಂದು ಪರಿಗಣಿಸಬೇಕಾಗುತ್ತದೆ. 1ನೆಯ ಹಂತ ವರ್ಣಚಿತ್ರಿತ ಬೂದುಬಣ್ಣದ ಪಾತ್ರೆಗಳ ಪೂರ್ವಕಾಲ.

1ನೆಯ ಹಂತದ ಮಣ್ಪಾತ್ರೆಗಳು ಕೇವಲ ರಕ್ಷಣಾ ಆವರಣದ ಪ್ರಾರಂಭಿಕ ಪದರಗಳಲ್ಲಿ ದೊರೆತಿವೆ. 2ನೆಯ ಹಂತದ ಪಾತ್ರೆಗಳು ರಕ್ಷಣಾ ಆವರಣದ ಮೇಲಿನ ಪದರಗಳಲ್ಲಿ ಹಾಗೂ ಅರಮನೆ ಸಂಕೀರ್ಣದ ಕೆಳ ಹಂತದಲ್ಲಿ ದೊರೆತಿವೆ. ಇವುಗಳು ಕೆಂಪು, ಬೂದುಬಣ್ಣದಿಂದ ಮಾಸಲು ಹಳದಿ ಬಣ್ಣ, ಕಪ್ಪು ಹಾಗೂ ಕೆಂಪು–ಕಪ್ಪು ದ್ವಿವರ್ಣ ಮಣ್ಪಾತ್ರೆಗಳಾಗಿವೆ. ಕೆಂಪುಪಾತ್ರೆಗಳನ್ನು ನಯಗೊಳಿಸಿದ ಮಣ್ಣಿನಿಂದ ತಿಗುರಿಯ ಮೇಲೆ ಮಾಡಲಾಗಿದ್ದು ಗಟ್ಟಿಯಾಗಿವೆ. ಇವುಗಳಿಗೆ ಉಜ್ವಲವಾದ ಕೆಂಪು ಲೇಪನವನ್ನು ಮಾಡಲಾಗಿದೆ. ಕೆಲವೊಂದು ಪಾತ್ರೆಗಳ ಹೊರಭಾಗ ಹಾಗೂ ಅಂಚುಗಳನ್ನು ಕಪ್ಪುಬಣ್ಣದ ಚಿತ್ರಗಳಿಂದ ಅಲಂಕರಿಸಿದೆ. ಬಟ್ಟಲು, ಬಟ್ಟಲು–ಬೋಗುಣಿ ಹಾಗೂ ಕಾಲಿರುವ ತಟ್ಟೆಗಳು ಸಾಮಾನ್ಯವಾದ ಮಾದರಿಗಳು. ಕಪ್ಪು–ಕೆಂಪು ಪಾತ್ರೆಗಳನ್ನು ಮಂದಗತಿಯ ತಿಗುರಿಯ ಮೇಲೆ ಮಾಡಲಾಗಿದ್ದು ಇವು ಒರಟಾಗಿವೆ. ಕೆಲವೊಂದು ಮಡಕೆಗಳ ಕಪ್ಪು ಲೇಪನದ ಮೇಲೆ ಬಿಳಿಬಣ್ಣದ ಚಿತ್ರಗಳಿವೆ. ಈ ಎಲ್ಲ ಅವಶೇಷಗಳು ಕಬ್ಬಿಣ ಉಪಯೋಗಿಸುವ ಹಂತದ ಪೂರ್ವ ಕಾಲಕ್ಕೆ ಸೇರಿವೆ. 2 ಮತ್ತು 3ನೆಯ ಹಂತಗಳಲ್ಲಿ ವರ್ಣಚಿತ್ರಿತ ಬೂದುವರ್ಣದ ಪಾತ್ರೆಗಳು ಪ್ರಮುಖವಾಗಿವೆ. ಜೊತೆಗೆ ಕಪ್ಪು ಲೇಪನದ ಮಡಕೆಗಳು ಸಹ ದೊರೆತಿವೆ. ಬೂದುವರ್ಣದ ಪಾತ್ರೆಗಳನ್ನು ವಿವಿಧ ವಿನ್ಯಾಸಗಳಿಂದ ಚಿತ್ರಿಸಲಾಗಿದೆ. 3 ನೆಯ ಹಂತದಲ್ಲಿ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಗಳು ಯಥೇಚ್ಛವಾಗಿ ದೊರೆಯುತ್ತವೆ. ಇವು ಬೂದು, ಕಪ್ಪು, ಕಡುಕಂದು, ಕಿತ್ತಳೆ ಹಾಗೂ ಬಂಗಾರದ ವಿವಿಧ ಛಾಯೆಗಳಲ್ಲಿವೆ. ಅಂಚುಗಳು ಪಟ್ಟಿಗಳಿಂದ ಚಿತ್ರಿಸಲ್ಪಟ್ಟಿವೆ. ಇವುಗಳಲ್ಲಿ ಬಟ್ಟಲು, ತಟ್ಟೆ ಸರ್ವೇಸಾಮಾನ್ಯವಾಗಿವೆ. ಮುಚ್ಚಳ, ನೀರುದಾನಿ ಹಾಗೂ ಹಂಡಿ ಇತರ ಮಾದರಿಗಳು. ಕೆಂಪು ಲೇಪನದ ಪಾತ್ರೆಗಳೂ ದೊರಕಿವೆ. 4ನೆಯ ಹಂತದಲ್ಲಿ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಗಳು ಮರೆಯಾಗಿ, ಕೆಂಪುವರ್ಣದ ಪಾತ್ರೆಗಳು

ಬಳಕೆಗೆ ಬಂದವು. ಈ ಹಂತದ ಕೊನೆಯಲ್ಲಿ ಕಡುಗಂದು ಲೇಪನದ ಪಾತ್ರೆಗಳನ್ನು ತಯಾರಿಸಲಾಯಿತು. ಅವಶೇಷಗಳನ್ನು ಹೋಲಿಸಿದಾಗ ಮಧ್ಯ ಏಷ್ಯ ಹಾಗೂ ಕೌಶಾಂಬಿ ನಡುವೆ ಸಂಪರ್ಕವಿತ್ತೆಂದು ಕಾಣುತ್ತದೆ.

ಕೋಟೆಯ ರಕ್ಷಣಾ ಗೋಡೆ (ರಾಂಪರ್ಟ್) ಸಮಾನಾಂತರದಲ್ಲಿ ಹೊರಮುಖ ಕೋನ ಹಾಗೂ ಕೊತ್ತಲಗಳನ್ನು ಹೊಂದಿದೆ. ಇದಕ್ಕೆ ಐದು ಮುಖ್ಯ ದ್ವಾರಗಳಿದ್ದು ಅವುಗಳಲ್ಲಿ ಉತ್ತರ ಹಾಗೂ ಪೂರ್ವಕ್ಕೆ ಎರಡೆರಡು ಮತ್ತು ಪಶ್ಚಿಮಕ್ಕೆ ಒಂದು ಇದ್ದು ಪೂರಕವಾದ ಬಾಗಿಲುಗಳು ಸಹ ಇದ್ದವು. 106.6X27.4 ಮೀ ವಿಸ್ತೀರ್ಣದ ಕೆರೆಯ ಏರಿಯೂ ಪೂರ್ವದಿಕ್ಕಿನ ಮುಖ್ಯದ್ವಾರದ ಎದುರಿಗಿದೆ. ಇದು ಬಹುಶಃ ಅಡ್ಡಗೋಡೆ ಅಥವಾ ವಿಭಜಕ ವಾಗಿತ್ತು. ಈ ಏರಿಯ ಹಾಗೂ ರಕ್ಷಣಾ ಗೋಡೆಯ ಮಧ್ಯದಲ್ಲಿಯ 7.6 ಮೀ ಅಗಲದ ಪ್ರದೇಶ ಇಲ್ಲಿಯ ರಸ್ತೆಯಾಗಿತ್ತು. ಇದೇ ಭಾಗದ ಇನ್ನೊಂದು ತುದಿಯಲ್ಲಿ ಹಾಗೂ ಕಂದಕದ ಹತ್ತಿರ ಕಾವಲುಗೋಪುರಗಳು ಪೂರ್ವ ಮಹಾದ್ವಾರಕ್ಕೆ ವಿಶೇಷ ರಕ್ಷಣೆ ಒದಗಿಸಿದ್ದವು. ಎಲ್ಲ ದ್ವಾರಗಳಲ್ಲಿ ಕಾವಲುಗಾರರ ಕೊಠಡಿಗಳನ್ನು ನಿರ್ಮಿಸಲಾಗಿತ್ತು. ಈ ಗೋಡೆಯ ಸುತ್ತ ಕಂದಕವಿತ್ತು. ಇಲ್ಲಿ ಒಂದು ಅಣೆಕಟ್ಟು ಇದ್ದು ಅದರ ಏರಿ 3.96 ಮೀ ಎತ್ತರವಿತ್ತು. ಪೂರ್ವದಿಕ್ಕಿನ ಮಹಾದ್ವಾರ ಮತ್ತು ಕಾವಲು ಗೋಪುರಗಳ ಮಧ್ಯೆ ಇರುವ 21.3ಮೀ ಅಗಲದ ಕಾಲುವೆ ಈ ಭಾಗದ ರಸ್ತೆಯನ್ನು ಎರಡು ಭಾಗಗಳಾಗಿ ವಿಭಜಿಸಿತ್ತು. ಈ ಕಾಲುವೆಗೆ ಒಂದು ಮೇಲು ಸೇತುವೆಯನ್ನು ಅಳವಡಿಸಲಾಗಿತ್ತು. ಇಲ್ಲಿಯ ಎರಡು ಶಂಖಾ ಕಾರದ ಗುಂಡಿಗಳು ಬಹುಶಃ ನಾವೆಗಳನ್ನು ಲಂಗರು ಹಾಕಲು ಉಪಯೋಗಿಸುತ್ತಿದ್ದುದನ್ನು ಸೂಚಿಸುತ್ತವೆ. ಈ ಕಾಲುವೆ ಪೂರ್ವ ಕಾವಲು ಗೋಪುರದ ಹತ್ತಿರ ಹಾಗೂ ರಕ್ಷಣಾದಿಬ್ಬದ ಉತ್ತರಕ್ಕೆ ಅಣೆಕಟ್ಟನ್ನು ಜೋಡಿಸಿತ್ತು. ತುರ್ತು ಪರಿಸ್ಥಿತಿಯಲ್ಲಿ ಈ ಅಣೆಕಟ್ಟಿನಿಂದ ನೀರು, ರಸ್ತೆ ಹಾಗೂ ಕಾವಲು ಗೋಪುರಗಳ ಮಧ್ಯೆ ಹರಿದು ದೊಡ್ಡ ಪ್ರಮಾಣದ ಕಂದಕವನ್ನು ನಿರ್ಮಿಸುತ್ತಿತ್ತು. ಎರಡು ಹಂತಗಳಲ್ಲಿ ಕಟ್ಟಿದ ಈ ಕಂದಕವನ್ನು ಇಟ್ಟಿಗೆಗಳಿಂದ ಆಚ್ಛಾದಿಸಲಾಗಿತ್ತು.

ಕೋಟೆಯ ರಕ್ಷಣಾ ಗೋಡೆಯ ಒಂದು ಭಾಗದಲ್ಲಿ ಉತ್ಖನನ ಮಾಡಲಾಯಿತು. ಉತ್ಖನನಕಾರರ ಪ್ರಕಾರ ಇದನ್ನು ಪ್ರ.ಶ.ಪೂ.ಸು. 2ನೆಯ ಸಹಸ್ರಮಾನದ ಕೊನೆಯ ಭಾಗದಲ್ಲಿ ಹದವಾಗಿ ದಮ್ಮಸ್ಸು ಮಾಡಿದ ಮಣ್ಣಿನಿಂದ ನಿರ್ಮಿಸಲಾಗಿತ್ತು. ಇದಕ್ಕೆ ನಿರ್ಮಾಣದ ಪ್ರಾರಂಭದಲ್ಲಿಯೇ ಹೊರಮುಖದಲ್ಲಿ ಕಲ್ಲಿನ ಆಧಾರಗೋಡೆ (ರಿವಿಟ್‌ಮೆಂಟ್) ಕಟ್ಟಲಾಗಿತ್ತು. ಇದರ ತಳಭಾಗ 2.75 ಮೀ ಅಗಲವಾಗಿದ್ದು ಎತ್ತರ 12.13 ಮೀ. ಇದಕ್ಕೆ ಸುಣ್ಣ ಹಾಗೂ ಮಣ್ಣಿನದಪ್ಪ ಲೇಪನ ಮಾಡಲಾಗಿದೆ. ಪ್ರ.ಶ.ಪೂ.ಸು.955–885 ರ ಅವಧಿಯಲ್ಲಿ ನೀರಿನ ಜಿನುಗುವಿಕೆಯಿಂದಾಗಿ ಕೋಟೆಯ ಗೋಡೆ ವಾಲಿತ್ತು. ಇದನ್ನು ತಡೆಹಿಡಿಯಲು ತಳಭಾಗ ದಿಂದ ಸು. 91 ಸೆಂಮೀ ಎತ್ತರದಲ್ಲಿ ಏಳು ರಂಧ್ರಗಳನ್ನು ಸಮನಾಂತರದಲ್ಲಿ ಮಾಡಿದ್ದರು. ಇವುಗಳ ಮೂಲಕ ನೀರು ಹೊರಗೆ ಹರಿದು ನೆಲದಲ್ಲಿ ನಿರ್ಮಿಸಿದ ವೃತ್ತಾಕಾರದ ಗುಂಡಿಗಳಲ್ಲಿ ಶೇಖರಣೆಯಾಗುತ್ತಿತ್ತು. ಮೂರನೆಯ ಹಂತದಲ್ಲಿ (ಪ್ರ.ಶ.ಪೂ.675–605) ಕೋಟೆಯ ಬೃಹತ್ ಪುನರ್‌ನಿರ್ಮಾಣ ಕಾರ್ಯ ನಡೆಯಿತು. ರಕ್ಷಣಾ ಗೋಡೆಯ ಎತ್ತರವನ್ನು 2.43 ಮೀ ನಷ್ಟು ಹೆಚ್ಚಿಸಲಾಯಿತು. ಅನಂತರ ಪ್ರ.ಶ.ಪೂ. 605–535 ಅವಧಿಯಲ್ಲಿ ಈ ಗೋಡೆ ಹಾಗೂ ಹೊರಮುಖ ಗೋಡೆಗಳನ್ನು ಪುನಃ 91 ಸೆಂಮೀ ನಷ್ಟು ಎತ್ತರಿಸಲಾಯಿತು. ಮುಂದಿನ ಹಂತದಲ್ಲಿ (ಪ್ರ.ಶ.ಪೂ.535–465) ಎರಡನೆಯ ರಕ್ಷಣಾ ಗೋಡೆಯನ್ನು ನಿರ್ಮಿಸಲಾಯಿತು. ಕೋಟೆಯ ಪಶ್ಚಿಮ ಮೂಲೆಯಲ್ಲಿ 2.43x1.82 ಮೀ ಅಳತೆಯ ಬುರುಜನ್ನು ಕಟ್ಟಲಾಯಿತು. ಪ್ರ.ಶ.ಪೂ. 325–255ರಲ್ಲಿ ಕಟ್ಟಲಾಯಿತು. ಈ ಹಂತ ಬೆಂಕಿಯ ಅನಾಹುತದಿಂದ ಕೊನೆಗೊಂಡಿತು. ಮುಂದಿನ ಹಂತದಲ್ಲಿ (ಪ್ರ.ಶ.ಪೂ.185–125) ಕೋಟೆಯನ್ನು ಪುನಃ ಎತ್ತರಿಸಲಾಯಿತು ಹಾಗೂ ಕಾವಲುಗಾರರ ಕೊಠಡಿ, ಗೋಡೆಗಳು ಹಾಗೂ ಗೋಪುರಗಳನ್ನು ನಿರ್ಮಿಸಲಾಯಿತು. ಹೂಣರು ನಾಶ ಮಾಡುವವರೆಗೆ ಕೋಟೆಯನ್ನು ಎತ್ತರಿಸಲಾಯಿತು. ಕೋಟೆಯ ಕಡೆಗೆ ಹೋಗುವ ಐದು ರಸ್ತೆಗಳನ್ನು ಗುರುತಿಸಲಾಗಿದೆ.

ಕೋಟೆಯ ಹೊರಭಾಗದಲ್ಲಿ ಒಂದು ಯಜ್ಞವೇದಿಕೆ ಇದೆ. ಹಾರುವ ಹಕ್ಕಿಯ (ಗರುಡ) ಆಕಾರದಲ್ಲಿರುವ ಇದರ ಮುಖ ಈಶಾನ್ಯಕ್ಕಿದೆ. ಮಟ್ಟ ಮಾಡಿದ ನೆಲದಲ್ಲಿ ಈ ಪಕ್ಷಿಯ ತಲೆ, ದೇಹ, ರೆಕ್ಕೆ ಹಾಗೂ ಬಾಲಗಳನ್ನು ಇಟ್ಟಿಗೆಗಳಿಂದ ಮಾಡಿದೆ. ಈ ಹಕ್ಕಿಯ ತಲೆ ಹಾಗೂ ದೇಹದ ಭಾಗಗಳು ಮಾತ್ರ ಉಳಿದಿದ್ದವು. ಇಂತಹ ಯಜ್ಞವೇದಿಕೆ ಉಲ್ಲೇಖ ಬ್ರಾಹ್ಮಣ ಗ್ರಂಥದಲ್ಲಿದೆ. ಉತ್ಖನನಕಾರರ ಅಭಿಪ್ರಾಯದಂತೆ ಪುರುಷಮೇಧ ಯಜ್ಞಕ್ಕೆ ಇಂಥ ವೇದಿಕೆಯನ್ನು ಉಪಯೋಗಿಸಲಾಗುತ್ತಿತ್ತು. ಇಂಥ ಯಜ್ಞವನ್ನು ಮಿತ್ರ ಸ್ಥಾಪಕನು ಮಾಡಿದ್ದನೆಂದು ಹೇಳಲಾಗುತ್ತದೆ.

ನಗರ ಪ್ರದೇಶದಲ್ಲಿ ಆಯತಾಕಾರದ ಒಂದು ಬೌದ್ಧ ವಿಹಾರವಿತ್ತು. ಶಾಸನಗಳ ಆಧಾರದ ಮೇಲೆ ಇದನ್ನು ಘೋಷಿತಾರಾಮ ವಿಹಾರವೆಂದು ಗುರುತಿಸಲಾಗಿದೆ. ಇದನ್ನು ಬುದ್ಧನ ಅನುಯಾಯಿಯಾಗಿದ್ದ ಘೋಷಿತ ಸ್ಥಾಪಿಸಿದ. ಈ ವಿಹಾರದಲ್ಲಿ ಅನೇಕ ಕೋಣೆಗಳು ಹಾಗೂ ಒಳಾಂಗಣಗಳು ಇವೆ. ಬೃಹತ್ ಚೌಕಾಕಾರದ ಸ್ತೂಪ, ಇನ್ನೆರಡು ಚಿಕ್ಕ ಸ್ತೂಪ ಹಾಗೂ ಹಾರಿತಿ ದೇವಾಲಯ, ಗಜ ಪೃಷ್ಠಾಕಾರದ ಕಟ್ಟಡಗಳು ಇಲ್ಲಿವೆ. ಈ ವಿಹಾರದಲ್ಲಿ ವಾಸಿಸುತ್ತಿದ್ದ ಬೌದ್ಧ ಭಿಕ್ಷುಗಳ ನೆನಪಿಗಾಗಿ ಕಟ್ಟಿದ ಸ್ಮಾರಕಗಳೂ ಇಲ್ಲಿವೆ. ಈ ಆವರಣ ಬಹುಶಃ ಪ್ರ.ಶ.ಪೂ. 5 ನೆಯ ಶತಮಾನದಲ್ಲಿ ಸ್ಥಾಪನೆಯಾಗಿದ್ದಿರಬೇಕು. ಮೂರನೆಯ ಹಂತದಲ್ಲಿ ಅಶೋಕ ಮಹತ್ತ್ವದ ಕಟ್ಟಡಗಳನ್ನು ನಿರ್ಮಿಸಿದ. ಈ ವಿಹಾರಕ್ಕೆ ಕೋಣೆಗಳು ಹಾಗೂ ಒಳಾಂಗಣವನ್ನು ಎಂಟನೆಯ ಹಂತದಲ್ಲಿ ಕಟ್ಟಲಾಯಿತು. ಈ ಕಟ್ಟಡದ ಸವಿಸ್ತಾರ ವಿಸ್ತರಣೆ ಮಘ ರಾಜರ ಅದರಲ್ಲೂ ವಿಶೇಷವಾಗಿ ಭದ್ರಮಘನ ಕಾಲದಲ್ಲಾಗಿದೆ. ಈ ಸಂಕೀರ್ಣದ ಆವರಣ ಗೋಡೆಯನ್ನು 13ನೆಯ ಹಂತದಲ್ಲಿ ಕಟ್ಟಲಾಗಿದೆ. ಈ ವಿಹಾರ ಹೂಣರಿಂದ ನಾಶವಾಯಿತು.

ಕೋಟೆಯ ನೈರುತ್ಯ ದಿಕ್ಕಿನಲ್ಲಿ ಯಮುನ ನದಿಯ ದಂಡೆಯ ಮೇಲೆ ಅರಮನೆಯ ಸಂಕೀರ್ಣವನ್ನು ಗುರುತಿಸಲಾಗಿದೆ. ಈ ಆವರಣದ ವಿಸ್ತಾರ 315x150 ಮೀ. ಇಲ್ಲಿರುವ ಎರಡು ಎತ್ತರವಾದ ಸ್ಥಳಗಳು ಭದ್ರವಾದ ಗೋಪುರಗಳನ್ನು ನಿರ್ಮಿಸಿದ್ದುದಕ್ಕೆ ಪುಷ್ಟಿ ನೀಡುತ್ತವೆ. ಈ ಸಂಕೀರ್ಣದ ಆವರಣ ಗೋಡೆಗಳನ್ನು ಕಲ್ಲಿನಿಂದ ಸುಣ್ಣದ ಗಾರೆ ಹಾಕಿ ಕಟ್ಟಲಾಗಿದೆ. ಅರಮನೆಯನ್ನು ಮಣ್ಣು ಹಾಗೂ ಹಸಿ ಇಟ್ಟಿಗೆಗಳಿಂದ ನಿರ್ಮಿಸಿದ 2.5 ಮೀ ಎತ್ತರದ ಜಗತಿ ಮೇಲೆ ಕಟ್ಟಲಾಗಿದೆ. ಔತ್ತರೇಯ ಮೆರುಗಿನ ಕಪ್ಪು ಪಾತ್ರೆ ಹಂತದಲ್ಲಿ ಈ ಅರಮನೆಯನ್ನು ರಕ್ಷಿಸುವ ಸಲುವಾಗಿ ಕಂದಕವನ್ನು ಉತ್ತರದ ಸರಹದ್ದಿನಲ್ಲಿ ನಿರ್ಮಿಸಲಾಯಿತು. ಅರಮನೆ ಆವರಣದ ವಿಕಾಸವನ್ನು ಮೂರು ಹಂತಗಳಲ್ಲಿ ವಿಭಜಿಸಬಹುದು. ಮೊದಲ ನೆಯ ಹಂತದಲ್ಲಿ ಅರಮನೆಯನ್ನು ಒರಟಾದ ಕಲ್ಲುಗಳಿಂದ ನಿರ್ಮಿಸಿ ಹೊರಭಾಗಗಳಿಗೆ ಬಹುಶಃ ಲೇಪನವನ್ನು ಮಾಡಲಾಗಿತ್ತು. ಎರಡನೆಯ ಹಂತದಲ್ಲಿ 66x53x23 ಸೆಂಮೀ ಅಳತೆಯ ನಯಗೊಳಿಸಿದ ಕಲ್ಲುಗಳಿಂದ ಗೋಡೆಯ ಹೊರಭಾಗವನ್ನು ಕಟ್ಟಲಾಯಿತು. ಮೂಲೆಗಳಲ್ಲಿರುವ ಕಾವಲು ಗೋಪುರಗಳನ್ನು ವಿಸ್ತಾರವಾಗಿ ಪುನರ್ನಿರ್ಮಿಸಲಾಯಿತು. ಹಲವಾರು ಕಟ್ಟಡಗಳು ಈ ಆವರಣದಲ್ಲಿವೆ. ಮಧ್ಯ ಗೋಪುರದ ಎದುರಿಗೆ ಒಂದು ಹಜಾರ ಹಾಗೂ ಅದರ ಎರಡು ಬದಿಗಳಲ್ಲಿ ಕೊಠಡಿಗಳಿರುವ ಕಟ್ಟಡವಿದೆ. ಇದರ ನೆಲವನ್ನು ಗಾರೆಯಿಂದ ಮಾಡಲಾಗಿದೆ ಹಾಗೂ ಗೋಡೆಗಳಿಗೆ ಇದೇ ಗಾರೆಯಿಂದ ಲೇಪನಮಾಡಲಾಗಿದೆ. ಎರಡನೆಯ ಹಂತಕ್ಕೆ ಸೇರಿದ 86 ಸೆಂಮೀ ಆಳ ಹಾಗೂ 45 ಸೆಂಮೀ ಅಗಲವಿರುವ ನಯಗೊಳಿಸಿದ ಕಲ್ಲಿನ ಚರಂಡಿಯಿದೆ. ಕೊನೆಯ ಹಂತದಲ್ಲಿ ಕಟ್ಟಡಗಳ ನಿರ್ಮಾಣ ಉತ್ಕೃಷ್ಟವಾಗಿತ್ತು. ಈ ಆವರಣದಲ್ಲಿ ಎರಡು ಗ್ಯಾಲರಿಗಳನ್ನು ಹೊಂದಿದ ಮೂರು ಕಟ್ಟಡ ಸಮುಚ್ಚಯವಿದ್ದವು. ಪ್ರತಿಯೊಂದು ಸಮುಚ್ಚಯದ ಬಾಗಿಲುಗಳು ಸಮನಾಂತರದಲ್ಲಿದ್ದವು. ಮಧ್ಯಭಾಗದ ಸಮುಚ್ಚಯದಲ್ಲಿ 11.50x3.42 ಮೀ ಅಳತೆಯ ಸಭಾಭವನವಿತ್ತು. ಇದರ ಕೋಣೆಗಳು ಆಂತರಿಕ ಸಂಪರ್ಕವನ್ನು ಹೊಂದಿದ್ದವು. ಈ ಕಾಲದ ಕೊನೆಯ ಹಂತದಲ್ಲಿ ನೆಲಮಾಳಿಗೆಯ ಕಟ್ಟಡಗಳನ್ನು ನಿರ್ಮಿಸಲಾಯಿತು. ಈ ಆವರಣದ ನಿರ್ಮಾಣ ಬಹುಶಃ ಪ್ರ.ಶ.ಪೂ. 8ನೆಯ ಶತಮಾನದಲ್ಲಿ ಆರಂಭವಾಯಿತು. ಮೂರನೆಯ ಹಂತದ ಕಟ್ಟಡ ಚಟುವಟಿಕೆ ಪ್ರ.ಶ.ಪೂ. 3ನೆಯ ಶತಮಾನದ ಅಂತ್ಯದವರೆಗಿತ್ತು. ಆದರೆ ಈ ಆವರಣದಲ್ಲಿ ಜನವಸತಿ ಇನ್ನೂ 3 ಶತಮಾನಗಳ ಕಾಲ ಮುಂದುವರೆಯಿತು.

ವಿವಿಧ ರೀತಿಯ ಮುದ್ರಾಂಕಿತ, ಹೆಸರಿರುವ ಹಾಗೂ ಹೆಸರಿಲ್ಲದ ನಾಣ್ಯಗಳು ಉತ್ಖನನದಲ್ಲಿ ದೊರೆತಿವೆ. ಅತ್ಯಂತ ಪುರಾತನವಾದ ಹಾಗೂ ಹೆಸರಿಲ್ಲದ ಅಚ್ಚೊತ್ತಿದ ನಾಣ್ಯ ದೊರೆತಿದ್ದು ಇದು ಪ್ರ.ಶ.ಪೂ. 9ನೆಯ ಶತಮಾನದ್ದೆಂದು ಉತ್ಖನನಕಾರರು ಅಭಿಪ್ರಾಯಪಟ್ಟಿದ್ದಾರೆ. ಮುದ್ರಾಂಕಿತ ನಾಣ್ಯಗಳು ಪ್ರ.ಶ.ಪೂ. 1ನೆಯ ಶತಮಾನದ ಅಂತ್ಯದವರೆಗೆ ಬಳಕೆಯಲ್ಲಿದ್ದವು. ಕೌಶಾಂಬಿಯ ಉದ್ದನೆಯ ನಂದಿ ಮಾದರಿಯ ನಾಣ್ಯಗಳು ಪ್ರ.ಶ.ಪೂ. 4ನೆಯ ಶತಮಾನದ ಅಂತ್ಯದ ವೇಳೆಗೆ ದೊರಕುತ್ತವೆ. ನಾಲ್ಕು ಬೆಳ್ಳಿಯ ಹಾಗೂ ಮೂರು ತಾಮ್ರದ ಮುದ್ರಾಂಕಿತ ನಾಣ್ಯಗಳು ಪ್ರ.ಶ.ಪೂ. 535–185 ಅವಧಿಯ ಸ್ತರಗಳಲ್ಲಿ ದೊರೆತಿವೆ. ಮೊದಲ ಘಟ್ಟಗಳಲ್ಲಿ ದೊರೆತ ಮುದ್ರೆಗಳಲ್ಲಿ ಕೇವಲ ಚಿಹ್ನೆಗಳು ಮಾತ್ರ ಇವೆ. ದೂತಕ ಎನ್ನುವ ಬರೆಹವನ್ನೊಳಗೊಂಡ ಮುದ್ರೆ ಪ್ರ.ಶ.ಪೂ. 2ನೆಯ ಶತಮಾನದ್ದು. ಕನಿಷ್ಕ, ತೋರಮಾನ ಹಾಗೂ ಹೂಣ ರಾಜರ ಮುದ್ರೆಗಳು ಗಮನಾರ್ಹ.

ಕೌಶಾಂಬಿಯ ಸುಡಾವೆಮಣ್ಣಿನ ಆಕೃತಿಗಳು ಭಾರತದ ಕಲಾ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಇವನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು– ಕೈಯಲ್ಲಿ ಮಾಡಿದ, ಅಚ್ಚಿನಲ್ಲಿ ಮಾಡಿದ ಹಾಗೂ ಕೈ ಮತ್ತು ಅಚ್ಚು ಎರಡನ್ನೂ ಬಳಸಿ ಮಾಡಿದ ಸುಡಾವೆಮಣ್ಣಿನ ಆಕೃತಿಗಳು. ಬೂದುಬಣ್ಣ ಹಾಗೂ ಮಾಸಲು ಕೆಂಪುಬಣ್ಣಗಳ, ಕೆಲವೊಮ್ಮೆ ಮಣ್ಣಿನ ಮುದ್ದೆಯನ್ನು ಅಂಟಿಸಿ ಕಣ್ಣು, ಉಡುಪು, ಆಭರಣ ಮೊದಲಾದವುಗಳನ್ನು ವಿನ್ಯಾಸಗೊಳಿಸಿ (ಅಪ್ಲಿಕ್ ಡಿಸೈನ್) ಮಾಡಿದ ಆಕೃತಿಗಳಿವೆ. ಅಚ್ಚಿನಲ್ಲಿ ಮಾಡಿದ ಆಕೃತಿಗಳು ಪ್ರ.ಶ.ಪೂ. 2–1ನೆಯ ಶತಮಾನಕ್ಕೆ ಸೇರಿವೆ. ಮೂರನೆಯ ಗುಂಪಿನ ಆಕೃತಿಗಳು ಕುಷಾಣ ಕಲೆಯನ್ನು ಅದರಲ್ಲೂ ವಿಶೇಷವಾಗಿ ಮುಖದ ಮೇಲಿನ ಹಾವಭಾವಗಳನ್ನು ಪ್ರತಿಬಿಂಬಿಸುತ್ತವೆ. ವಿಸ್ತೃತವಾಗಿ ಅಲಂಕರಿಸಿದ ಮಾತೃದೇವತೆ, ಶಯ್ಯಾಸನ ಮಹಿಳೆ, ನೃತ್ಯಗಾತಿಯರು ಹಾಗೂ ಮೃದಂಗ ವಾದಕರ ಆಕೃತಿಗಳು ಗಮನಾರ್ಹ. ಕೈಯಲ್ಲಿ ಮಾಡಿದ ಹಾಗೂ ಅಚ್ಚೊತ್ತಿದ ಫಲಕಗಳು ಮಥುರ, ಅಹಿಚ್ಛತ್ರ ಹಾಗೂ ತಾಮ್‌ಲುಕ್‌ಗಳಲ್ಲಿ ದೊರೆತ ಫಲಕಗಳನ್ನು ಹೋಲುತ್ತವೆ. ಹರಕೆಯ ತಟ್ಟೆಗಳು ಪ್ರ.ಶ.ದ ಆರಂಭ ಕಾಲದವು.

ಕೊಂಬು, ಮೂಳೆ ಹಾಗೂ ದಂತದ ಬಾಣದ ಮೊನೆಗಳು, ಕಪ್ಪೆ ಚಿಪ್ಪು, ಹರಳು, ತಾಮ್ರ, ಗಾಜು ಹಾಗೂ ಸುಟ್ಟಮಣ್ಣಿನ ಬಳೆಗಳು, ಸುಡಾವೆಮಣ್ಣಿನ ಆಟಿಕೆಗಳು, ತಾಮ್ರದ ಉಂಗುರ ಹಾಗೂ ಮೂಗುತಿ, ಕಲ್ಲಿನ ಆಭರಣ ಪೆಟ್ಟಿಗೆಗಳು, ಅರೆ ಪ್ರಶಸ್ತ ಕಲ್ಲಿನ ಚಿತ್ರಿತ

ಹಾಗೂ ಸಾಮಾನ್ಯ ಮಣಿಗಳು ಹಾಗೂ ಕಪ್ಪೆ ಚಿಪ್ಪು, ಮೂಳೆ, ತಾಮ್ರ, ಬಂಗಾರ ಹಾಗೂ ಸುಡಾವೆ ಮಣ್ಣಿನ ಮಣಿಗಳು ಇತರ ಪ್ರಮುಖ ಪ್ರಾಚ್ಯಾವಶೇಷಗಳು. ಔತ್ತರೇಯ ಮೆರುಗಿನ ಕಪ್ಪು ಮಡಕೆಗಳ ಕಾಲದಲ್ಲಿ ಕಬ್ಬಿಣವನ್ನು ಯಥೇಚ್ಛವಾಗಿ ಬಳಸಲಾಗಿತ್ತು. ಹನ್ನೊಂದು ಮಾದರಿಯ ಕಬ್ಬಿಣದ ಬಾಣದ ಮೊನೆಗಳು ದೊರೆತಿವೆ. ಇವುಗಳಲ್ಲಿ ಎಂಟು ಮಾದರಿಗಳು ಎಲ್ಲ ಹಂತಗಳಲ್ಲಿ ದೊರೆತಿದ್ದು ಉಳಿದ ಮೂರು ಮಾದರಿಗಳು ಎರಡು ಅಂಚುಳ್ಳ, ಮೂರು ಅಲಗುಳ್ಳ ಹಾಗೂ ಮುಳ್ಳಿನ ಒರಟು ಮೇಲ್ಮೊನೆಯ ಅಲಗುಗಳು ಇತಿಹಾಸಕಾಲದ ಆರಂಭದಲ್ಲಿ ಕಾಣಿಸಿಕೊಳ್ಳುತ್ತವೆ.

ಕೌಶಾಂಬಿಯ ಉತ್ಖನನದ ಕೆಲವು ಫಲಿತಾಂಶಗಳು, ವಿಶೇಷವಾಗಿ ಕಾಲಮಾನ ಚರ್ಚಾಸ್ಪದವಾಗಿವೆ. ಈ ನೆಲೆಯ ಕಂಬದ ಹತ್ತಿರದ ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳ ಹಾಗೂ ಅನಂತರದ ಸ್ತರಗಳನ್ನು ನಾಣ್ಯ, ಮುದ್ರೆ ಹಾಗೂ ಇಂಗಾಲ–14 ಕಾಲಮಾನಗಳ ಆಧಾರ ಮೇಲೆ ನಿರ್ಧಾರ ಮಾಡಲಾಗಿದೆ. ಅವುಗಳಲ್ಲಿ ಕೆಲವು ಪ್ರ.ಶ.ಪೂ. 500–200ರ ಅವಧಿಯಲ್ಲಿ ಇವೆ. ಔತ್ತರೇಯ ಮೆರುಗಿನ ಕಪ್ಪು ಬಣ್ಣದ ಪಾತ್ರೆ ಸ್ತರಗಳಿಂದ ಹೂಣರು ಈ ನೆಲೆಯನ್ನು ನಾಶಮಾಡುವವರೆಗೆ ಪ್ರತಿಯೊಂದು ಕಾಲಮಾನ ಸರಾಸರಿ ಎಪ್ಪತ್ತು ವರ್ಷಗಳಷ್ಟಿದೆ. ಇದೇ ಎಪ್ಪತ್ತು ವರ್ಷಗಳ ಅವಧಿಯನ್ನು ಉತ್ಖನಕಾರರು 1–3 ನೆಯ ಹಂತದ ಸಂರಕ್ಷಣಾ ಕಟ್ಟಡಗಳ ಪುನರ್ನಿರ್ಮಾಣ ಕಾಲಮಾನಗಳಿಗೆ ಅಳವಡಿಸಿದ್ದಾರೆ. ಆದರೆ ಇದು ಪ್ರಶ್ನಾರ್ಹವಾಗಿದೆ. ಕಾವಲುಗಾರರ ಕೋಣೆಗಳು ಹಾಗೂ ನೀರು ಸೋರುವಿಕೆಯನ್ನು ತಡೆಗಟ್ಟಲು ಇಷ್ಟೊಂದು ಅವಧಿ ಬೇಕಿಲ್ಲವೆಂದೂ ಇವನ್ನು ಸ್ವಲ್ಪ ಸಮಯದಲ್ಲಿಯೇ ಕಟ್ಟಬಹುದೆಂದೂ ಅಭಿಪ್ರಾಯಪಡಲಾಗಿದೆ. ಬೂದುಬಣ್ಣದ ಚಿತ್ರಿತ ಪಾತ್ರೆಗಳು ಅನಂತರದ ಕಾಲಮಾನದವುಗಳಾಗಿದ್ದುವು. ಇವು ಹಾಗೂ ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳು ಅಂತ್ಯ ಕಾಲದಲ್ಲಿ ಒಂದೇ ಅವಧಿಗೆ ಸೇರಿದವುಗಳಾಗಿವೆ. ಆದ್ದರಿಂದ ಇವು 1ನೆಯ ಶತಮಾನದವೆಂದು ಹೇಳುವುದು ಸರಿಯಲ್ಲವೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಬೇರೆ ಬೇರೆ ನೆಲೆಗಳ ಮಡಕೆಗಳ ತೌಲನಿಕ ಅಧ್ಯಯನ ಉಪಯೋಗವಾಗುವುದಿಲ್ಲವೆಂದು ಹೇಳಲಾಗಿದೆ. ಹರಪ್ಪ ಸಂಸ್ಕೃತಿಯ ಸಂಪ್ರದಾಯ ಹಾಗೂ ಕೌಶಾಂಬಿಯ ರಕ್ಷಣಾ ದಿಬ್ಬ ಮತ್ತು ಕೋಡುಗಳ ನಡುವೆ ಉತ್ಖನನಕಾರರು ಕಂಡ ಸಾಮ್ಯ ಅಷ್ಟೊಂದು ಸಮಂಜಸವಲ್ಲ. ಹೆಸರಿಲ್ಲದ ಅಚ್ಚೊತ್ತಿದ ನಾಣ್ಯವನ್ನು ಪ್ರ.ಶ.ಪೂ. 9ನೆಯ ಶತಮಾನವೆಂದು ಹೇಳುವುದು ಹೆಚ್ಚು ತಾರ್ಕಿಕವಾಗಿರದೆ ಕೇವಲ ನಾಣ್ಯಶಾಸ್ತ್ರ ಅಧ್ಯಯನದ ವಸ್ತುವಾಗಿದೆ. (ಪಿ.ಸಿ.ಬಿ.)

**ಕ್ಯಾಲ್ಡಿಯ ಸಾಮ್ರಾಜ್ಯ:** ಇರಾಕಿನ ದಕ್ಷಿಣದಲ್ಲಿ ಪರ್ಷಿಯನ್ ಖಾರಿಯ ತೀರದಲ್ಲಿ ಪ್ರ.ಶ.ಪೂ. 1ನೆಯ ಸಹಸ್ರಮಾನದ ಪೂರ್ವಾರ್ಧದಲ್ಲಿ ಪ್ರಬಲರಾಗಿದ್ದ ಸೆಮಿಟಿಕ್ ಜನರ ರಾಜ್ಯ. ಬೈಬಲ್ ಗ್ರಂಥದ ಹಳೆ ಒಡಂಬಡಿಕೆಯಲ್ಲಿ ಕ್ಯಾಲ್ಡಿಯ ಮತ್ತು ಕ್ಯಾಲ್ಡಿಯನರನ್ನು ಕ್ರಮವಾಗಿ ಬ್ಯಾಬಿಲೋನಿಯ ಮತ್ತು ಬೆಬಿಲೋನಿಯರೆಂದು ಸಂಬೋಧಿಸಲಾಗಿದೆ. ಕ್ಯಾಲ್ಡಿಯನರ ಮೂಲನಿವಾಸದ ಗಡಿ ರೇಖೆಗಳನ್ನು ಸ್ಪಷ್ಟವಾಗಿ ಗುರುತಿಸುವುದು ಇನ್ನೂ ಸಾಧ್ಯವಾಗಿಲ್ಲ. ಆದರೆ ಯೂಫ್ರೆಟೀಸ್ ಮತ್ತು ಟೈಗ್ರಿಸ್ ನದಿಮುಖಗಳ ಅಂದಿನ ವಿಸ್ತಾರವಾದ ಮೆಕ್ಕಲು ಪ್ರದೇಶದಲ್ಲಿ ಕ್ಯಾಲ್ಡಿಯನರು ವಾಸವಾಗಿದ್ದರೆಂದು ಸ್ಥೂಲವಾಗಿ ಹೇಳಬಹುದು. ಇವರು ಬಹುಶಃ ಸೆಮಿಟಿಕ್ ಜನಾಂಗದ ಮೂಲ ಸ್ಥಳವಾದ ಅರೇಬಿಯದಿಂದ ಬಂದವರೆಂದೂ ಆ ಪ್ರದೇಶದ ಸುತ್ತಮುತ್ತ ನೆಲಸಿದರೆಂದೂ ಅಭಿಪ್ರಾಯಪಡಲಾಗಿದೆ. ಬಿಟ್ ಯಕಿನ್ ಇವರ ಪುರಾತನ ರಾಜಧಾನಿ. ಮೊತ್ತಮೊದಲಿಗೆ ಪ್ರ..ಶ.ಪೂ. 884–59ರಲ್ಲಿ ಅಸ್ಸೀರಿಯದ ದೊರೆ ಅಷುರ್ ಬನಿಪಾಲನ ಕಾಲದ ದಾಖಲೆಗಳಲ್ಲಿ ಕ್ಯಾಲ್ಡಿಯನರ ವಿಷಯ ಕಂಡುಬರುತ್ತದೆ. ಪ್ರ.ಶ.ಪೂ.850ರಲ್ಲಿ 3ನೆಯ ಷಾಲ್ಮನೆಸೆರ್ ಈ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದ. ಪುನಃ ಇದು ಸ್ವತಂತ್ರವಾಯಿತು. ಅನಂತರ ಬಂದ 5ನೆಯ ಷಂಷಿ–ಅಡಾಡ್, 3ನೆಯ ಅಡಾಡ್–ನಿರಾರಿ (ಪ್ರ.ಶ.ಪೂ.ಸು.810), 3ನೆಯ ತಿಗ್ಲಾತ್–ಪಿಲೆಸೆರ್ (ಪ್ರ.ಶ.ಪೂ.745–27) ಇವರು ಪುನಃಪುನಃ ಇವರನ್ನು ಗೆದ್ದರೂ ಪ್ರಯೋಜನವಾಗಲಿಲ್ಲ. 2ನೆಯ ಸಾರಗಸನ ಕಾಲದಲ್ಲಿ ಮಿರೊಡಾಕ್–ಬಲಾಡನ್ ಎಂಬ ಕ್ಯಾಲ್ಡಿಯನ್ ವೀರ ಅಲ್ಲಿಯ ನಾಯಕನಾಗಿ 10 ವರ್ಷಗಳ ಕಾಲ (ಪ್ರ.ಶ.ಪೂ.721–10) ಸ್ವತಂತ್ರವಾಗಿ ಆಳಿದ. ಅವನು ಅಸ್ಸಿರಿಯದ ರಾಜರಾಗಿದ್ದ ಸಾರ್ಗನ್ ಮತ್ತು ಸೆನ್ನಾಕೆರಿಬ್‌ರ ವಿರುದ್ಧ ಹೋರಾಡುತ್ತಿದ್ದುದಲ್ಲದೆ ಜುಡಾ ರಾಜ್ಯವನ್ನು ಅವರ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸಿದ. ಪ್ರ.ಶ.ಪೂ.710ರಲ್ಲಿ ಆತ ಸೋತರೂ ಹೋರಾಟವನ್ನು ಬಿಡದೆ ಮುಂದುವರಿಸಿ, ಪ್ರ.ಶ.ಪೂ.703–02ರಲ್ಲಿ ಮತ್ತೆ ಸ್ವಾತಂತ್ರ್ಯ ಗಳಿಸಿದ. ಆದರೆ ಕಡೆಗೂ ಆತ ಸೋತು ಓಡಿಹೋಗಬೇಕಾಯಿತು.

ಅಸ್ಸೀರಿಯ ಸಾಮ್ರಾಜ್ಯದ ಅವನತಿಯ ಅನಂತರ ಸ್ಥಳೀಯ ಪ್ರಾಂತ್ಯಾಧಿಕಾರ ನಬೊಪೊಲಸ್ಸಾರನಿಂದ ಕ್ಯಾಲ್ಡಿಯನರ ಪ್ರಭಾವ ಹೆಚ್ಚಿತು. ಆತ ಪ್ರ.ಶ.ಪೂ.626ರಲ್ಲಿ ಬ್ಯಾಬಿಲೋನಿಯದ ದೊರೆಯಾದ. ಅವನ ವಂಶಜರು ಪ್ರ.ಶ.ಪೂ.539ರಲ್ಲಿ ಪರ್ಷಿಯನ್ ಆಕ್ರಮಣವಾಗುವವರೆಗೂ ಆಳಿದರು. ಅವರಲ್ಲಿ ಪ್ರಮುಖನೆಂದರೆ ನೆಬುಚೆಡ್ನಸರ್ (ಪ್ರ.ಶ.ಪೂ.605–562). ಅವನು ಈಜಿಪ್ಟಿನಿಂದ ಪರ್ಷಿಯದ ಪಶ್ಚಿಮ ಭಾಗದವರೆಗೂ ಸಾಮ್ರಾಜ್ಯವನ್ನು ವಿಸ್ತರಿಸಿದ. ಅವನ ಅನಂತರ ಬಂದ ನಬೊನಿಡಸ್ ಶಕ್ತನಾಗಿರಲಿಲ್ಲ (ಪ್ರ.ಶ.ಪೂ.556–39). ಪ್ರ.ಶ.ಪೂ.539ರಲ್ಲಿ ಪರ್ಷಿಯದ ಸಾಮ್ರಾಟ ಸೈರಸ್ ಮಹಾಶಯ ಬ್ಯಾಬಿಲೋನಿಯವನ್ನು (ಕ್ಯಾಲ್ಡಿಯ ಸಾಮ್ರಾಜ್ಯವೂ ಸೇರಿ) ಗೆದ್ದು ಕ್ಯಾಲ್ಡಿಯನರ ಸ್ವಾತಂತ್ರ್ಯವನ್ನು ಕೊನೆಗಾಣಿಸಿದ.

ಕಣ್ಮರೆಯಾಗುತ್ತಿದ್ದ ಬ್ಯಾಬಿಲೋನಿಯದ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ ಕ್ಯಾಲ್ಡಿಯನ್ ಅರಸರು ವಿಶ್ವದ ಏಳು ಅದ್ಭುತಗಳಲ್ಲಿ ಸೇರಿದ ತೂಗುವ ಉದ್ಯಾನಗಳು (ಹ್ಯಾಂಗಿಂಗ್ ಗಾರ್ಡನ್ಸ್) ಮತ್ತು ಬೇಬಲ್ ಗೋಪುರಗಳ ನಿರ್ಮಾಪಕ. ನೆಬುಚೆಡ್ನಸರನ ಅರಮನೆ ಆ ಕಾಲದ ವಾಸ್ತು ಕೃತಿಗಳಲ್ಲಿ ಅಪೂರ್ವ. ಅಲ್ಲಿಯ ಹೊಳಪುಹೆಂಚುಗಳ ಅಲಂಕರಣ ಅಮೋಘ. ಪ್ರಪಂಚದ ನಾಗರಿಕತೆಯ ಇತಿಹಾಸದಲ್ಲಿ ಇವರ ಸ್ಥಾನ ಶಾಶ್ವತವಾದುದ್ದು. (ಬಿ.ಎಸ್.ಎನ್.)

**ಕ್ಯುಸಕ್:** ಫ್ರಾನ್ಸಿನ ದೊರ್‌ದೊನೆ ಶ್ರೇಣಿಯಲ್ಲಿಯ ಬೋರ್‌ದೊ ಹತ್ತಿರ ಸು.28000 ವರ್ಷಗಳ ಹಿಂದಿನ ರೇಖಾಚಿತ್ರಗಳು ಮತ್ತು ಮಾನವ ಅಸ್ಥಿ ಅವಶೇಷಗಳಿರುವ ನೆಲೆ. ಇದನ್ನು ಮಾರ್ಕ್ ಡಿಲಕ್ ನೇತೃತ್ವದ ತಂಡ 2000ದಲ್ಲಿ ಶೋಧಿಸಿತು. ಇಲ್ಲಿ ಕುದುರೆ, ಕೋಣ, ಘೇಂಡಾಮೃಗ ಮುಂತಾದ ಪ್ರಾಣಿಗಳ ಗೀರು ರೇಖಾಚಿತ್ರಗಳಿವೆ. ಸು.22 ಮೀ ವಿಸ್ತಾರದಲ್ಲಿ 40 ಚಿತ್ರಗಳಿವೆ. ಕಾಡುಕೋಣದ ಒಂದು ಚಿತ್ರ ಸು. 3.60 ಮೀ ಉದ್ದವಿದೆ. ಇವಲ್ಲದೆ ಹಿಮಯುಗದ ಆನೆ, ಕುದುರೆ, ಕಾಡುಮೇಕೆ, ಬಾತುಕೋಳಿ ಮುಂತಾದ ಪ್ರಾಣಿ–ಪಕ್ಷಿಗಳ ಹಾಗೂ ಸ್ತ್ರೀಯರ 100ಕ್ಕೂ ಹೆಚ್ಚು ಚಿತ್ರಗಳಿವೆ. ಈ ಗುಹೆಯಲ್ಲಿ ವರ್ಣಚಿತ್ರಗಳೂ ಇರುವುದು ಗಮನಾರ್ಹ. ಇದು ಲ್ಯಾಸ್ಕೊ ಗುಹೆಯಷ್ಟೆ ಮಹತ್ತ್ವದ್ದೆಂದು ಅಭಿಪ್ರಾಯಪಡಲಾಗಿದೆ. ಈ ಗುಹೆಯಲ್ಲಿ 7 ಮಾನವ ಸಮಾಧಿಗಳನ್ನೂ ಗುರುತಿಸಲಾಗಿದೆ. (ವಿ.ಎಸ್.)

**ಕ್ರಾಂತಿಗಳು:** ಒಂದು ದೇಶದ ಸರ್ಕಾರ, ಆಡಳಿತ ವ್ಯವಸ್ಥೆ, ಸಂವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಉಂಟಾಗುವ ಅಸಾಧಾರಣ ಹಾಗೂ ಅನಿರೀಕ್ಷಿತ ಬದಲಾವಣೆ (ರೆವಲ್ಯೂಷನ್). ಸಾಮಾನ್ಯವಾಗಿ ರಾಜಕೀಯ ಬದಲಾವಣೆಯನ್ನು ಮಾತ್ರ ಕ್ರಾಂತಿಯೆಂದು ಹೇಳುವುದುಂಟು. ಆದರೆ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಕ್ರಾಂತಿಕಾರಕ ಬದಲಾವಣೆಗಳಿವೆ. ಆದ್ದರಿಂದ ಕ್ರಾಂತಿಯ ಅರ್ಥ ವ್ಯಾಪಕವಾದದ್ದು. ಅದು ಮಾನವ ಜೀವನದ ಯಾವುದೇ ಕ್ಷೇತ್ರದಲ್ಲಿ ಆಗುವ ಅಸಾಧಾರಣ ಮತ್ತು ತೀವ್ರ ಬದಲಾವಣೆಯನ್ನು ಸೂಚಿಸುತ್ತದೆ.

ಮಧ್ಯಯುಗದ ಕೊನೆಯ ಭಾಗದಲ್ಲಿ ಇಟಲಿಯ ನಗರರಾಜ್ಯಗಳಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಉಂಟಾದ ತೀವ್ರ ಸುಧಾರಣೆಗಳನ್ನು ಕ್ರಾಂತಿಯೆಂದು ಬಣ್ಣಿಸಲಾಗಿತ್ತು. ಇಂಗ್ಲೆಂಡಿನಲ್ಲಿ ಆಲಿವರ್ ಕ್ರಾಮ್ವೆಲನ ಕಾಲದಲ್ಲಿ ಹಳೆಯ ಆಡಳಿತ ಪದ್ಧತಿಯನ್ನು ಪುನರ್‌ಸ್ಥಾಪಿಸುವ ಪ್ರಯತ್ನದ ಸಂಬಂಧವಾಗಿ ಕ್ರಾಂತಿ ಎಂಬ ಪದವನ್ನು ಬಳಸಲಾಯಿತು. ಇದು ಈ ಶಬ್ದದ ವಿಪರ್ಯಾಸ.

ಈಚೆಗೆ ಕ್ರಾಂತಿ ನಿಜವಾದ ಆಧುನಿಕ ಅರ್ಥದಲ್ಲಿ ಬಳಕೆಗೆ ಬಂತು. ದಬ್ಬಾಳಿಕೆ, ಅನೀತಿಯುತ ಆಡಳಿತ, ಲಂಚಗುಳಿತನ, ನಿರುಪಯುಕ್ತ ರಾಜಕೀಯ ವ್ಯವಸ್ಥೆ ಹಾಗೂ ಸಾಮಾಜಿಕ ಅನ್ಯಾಯದ ವಿರುದ್ಧ ಜನತೆಯ ಬಂಡಾಯ, ವಸಾಹತು ಆಡಳಿತದ ವಿರುದ್ಧ ಜನರ ದಂಗೆ, ಸ್ವಾತಂತ್ರ್ಯ ಘೋಷಣೆ ಮತ್ತು ಯುದ್ಧಗಳು ಕ್ರಾಂತಿಗಳೆನಿಸಿಕೊಳ್ಳುತ್ತವೆ. ಇಂಥ ಸ್ವಾತಂತ್ರ್ಯ ಸಮರ ಅಥವಾ ಕ್ರಾಂತಿಯನ್ನುಂಟುಮಾಡುವುದರಲ್ಲಿ ನಾಯಕನ ಪಾತ್ರ ಬಹು ಮುಖ್ಯ. ಕ್ರಾಂತಿಗಳು ಯಾವುದಾದರೂ ಒಂದು ಸಿದ್ಧಾಂತದ ವಿರುದ್ಧವಾಗಿ ಅಥವಾ ಪರವಾಗಿ ಉಂಟಾದ ಚಳವಳಿಯ ರೂಪವನ್ನು ತಳೆಯಬಹುದಾಗಿದೆ. ಜನತೆಯ ಮನಸ್ಸಿನಲ್ಲಿ ಹಾಗೂ ಭಾವನೆಗಳಲ್ಲಿ ಹಳೆಯ ವಿಚಾರಗಳ ಬದಲು ಹೊಸ ವಿಚಾರಗಳನ್ನು ಪ್ರಚೋದಿಸುವ ಪ್ರಯತ್ನ ಸಫಲವಾದಾಗ ಅದೂ ಕ್ರಾಂತಿ ಎನ್ನಿಸಿಕೊಳ್ಳುತ್ತದೆ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆಸಲಾದ ಹೋರಾಟ ಅಥವಾ ಬಂಡಾಯವೇ ಕ್ರಾಂತಿ–ಎಂಬುದಾಗಿ ಫ್ರೆಂಚ್ ವೈಚಾರಿಕ ಕಂಡಾರ್ಸೆ ನೀಡಿರುವುದಕ್ಕಿಂತ ಇಂದು ಇದರ ವ್ಯಾಖ್ಯೆ ಬಹಳ ವಿಸ್ತೃತವಾದದ್ದಾಗಿದೆ.

ಇತಿಹಾಸದಲ್ಲಿ ಇದುವರೆಗೆ ಅನೇಕ ಬಗೆಯ ಹಲವಾರು ಕ್ರಾಂತಿಗಳು ಆಗಿಹೋಗಿವೆ. ಪ್ರತಿಯೊಂದು ದೇಶದಲ್ಲೂ ಇಂಥ ಕ್ರಾಂತಿಕಾರಕ ಬದಲಾವಣೆಗಳನ್ನು ಗುರುತಿಸಬಹುದು. ಪ್ರತಿಯೊಂದು ಕ್ರಾಂತಿಗೂ ತನ್ನದೇ ಆದ ಕಾರಣಗಳಿರುವಂತೆ ಎಲ್ಲ ಕ್ರಾಂತಿಗಳಿಗೂ ಕೆಲವು ಸಾಮಾನ್ಯ ಲಕ್ಷಣಗಳಿರುತ್ತವೆ. ಆಡಳಿತವರ್ಗದ ಅದಕ್ಷತೆ ಮತ್ತು ಅನೀತಿಯುತ ನಡೆವಳಿಕೆಯಿಂದ ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆ ಕುಸಿದುಬಿದ್ದು ಆರ್ಥಿಕ ಬಿಕ್ಕಟ್ಟುಂಟಾದಾಗ ಕ್ರಾಂತಿ ಅನಿವಾರ್ಯವಾಗುತ್ತದೆ. 1788ರಲ್ಲಿ ಫ್ರಾನ್ಸಿನಲ್ಲಿ ಉಂಟಾದ ಕ್ಷಾಮ 1789ರ ಮಹಾಕ್ರಾಂತಿಗೆ ಕಾರಣವಾಯಿತು.

ಹೆಚ್ಚಿನ ಕ್ರಾಂತಿಗಳಿಗೆ ಯುದ್ಧಗಳೇ ಕಾರಣ. 20ನೆಯ ಶತಮಾನದ ಪ್ರತಿಯೊಂದು ಕ್ರಾಂತಿಯೂ ಸಾಮಾನ್ಯವಾಗಿ ಯಾವುದಾದರೊಂದು ಯುದ್ಧದ ತರುವಾಯವೇ ಸಂಭವಿಸಿದೆ. 1905ರ ರಷ್ಯನ್ ಕ್ರಾಂತಿಯೂ 1914–1918ರ ಹಾಗೂ 1939–45ರ ಎರಡು ಮಹಾಯುದ್ಧಗಳ ಅನಂತರ ಉಂಟಾದ ಕ್ರಾಂತಿಗಳೂ ಅದರಲ್ಲಿಯೂ ಚೀನದಲ್ಲಿ ಆದ ಕ್ರಾಂತಿಯೂ ಇದಕ್ಕೆ ನಿದರ್ಶನಗಳಾಗಿವೆ. ಯುದ್ಧಗಳಿಂದ ಉಂಟಾಗುವ ಅನಿಶ್ಚಿತತೆ, ಅಸ್ತವ್ಯಸ್ತೆ, ಜೀವ ವಿತ್ತಗಳ ನಷ್ಟ ಮತ್ತು ಕಷ್ಟಗಳಿಂದ ಕ್ರಾಂತಿಕಾರಕ ಬದಲಾವಣೆಗೆ ಅನುಕೂಲಕರವಾದ ವಾತಾವರಣ ನಿರ್ಮಾಣವಾಗುತ್ತದೆ. ಇದೂ ಅಲ್ಲದೆ ಯುದ್ಧದಲ್ಲಿ ಸೋತದೇಶದಲ್ಲಿ ಆಡಳಿತಾಧಿಕಾರ ಸಡಿಲವಾಗಿ ಸಾಮಾಜಿಕ ಅತೃಪ್ತಿಯುಂಟಾಗುತ್ತದೆ. ಇಂಥ ಅತೃಪ್ತಿಯೊಡನೆ ಸೋಲಿನಿಂದುಂಟಾದ ಅವಮಾನವೂ ಸೇರಿ ಆ ದೇಶದ ಜನತೆಯಲ್ಲಿ ಪ್ರತೀಕಾರದ ಭಾವನೆಯುಂಟಾಗಿ ತಮ್ಮ ಸೋಲಿನ ಸೇಡು ತೀರಿಸಿಕೊಳ್ಳಲು ಎಂಥ ಕ್ರಾಂತಿಕಾರಕ

ಬದಲಾವಣೆಗೂ ಅವರು ಸಿದ್ಧರಾಗುತ್ತಾರೆ. 1908ರಲ್ಲಿ ಕಿರಿಯ ತುರ್ಕಿಗಳು (ಯಂಗ್ ಟರ್ಕ್ಸ್) ಮತ್ತು 1952ರಲ್ಲಿ ಈಜಿಪ್ಟಿನ ನಗೀಬ್ ಮತ್ತು ನಾಸೆರರು ಇಂಥ ವಾತಾವರಣದಲ್ಲಿ ಕ್ರಾಂತಿಯ ನಾಯಕರಾಗಿ ತಂತಮ್ಮ ದೇಶಗಳ ಕ್ರಾಂತಿಗಳಿಗೆ ಕಾರಣರಾದರು.

ಕ್ರಾಂತಿಗಳು ಸಮಾಜದಲ್ಲಿ ಯಾವುದಾದರೂ ಒಂದು ಸಾಮಾಜಿಕ ಗುಂಪಿನ, ವರ್ಗದ ಅಥವಾ ಪಂಗಡದ ಜನರನ್ನು ಪಕ್ಷಪಾತದಿಂದ ಕಾಣುವುದರಿಂದಲೂ ಸಂಭವಿಸಬಹುದು. ಸಾಮಾಜಿಕ ಅರಾಜಕತೆ ಮತ್ತು ರಾಜಕೀಯ ಆಂದೋಲನದ ರೂಪದಲ್ಲಿ ಕ್ರಾಂತಿ ಉದ್ಭವಿಸುತ್ತದೆ. ಒಂದು ವರ್ಗದ ಜನರಿಗೆ ಇತರರಂತೆ ರಾಜಕೀಯ ಹಕ್ಕುಬಾಧ್ಯತೆಗಳು ಇಲ್ಲವೆಂಬ ಭಾವನೆಯುಂಟಾದಾಗ ಅಥವಾ ಸಾಮಾಜಿಕವಾಗಿ ತಾವು ಇತರರೊಡನೆ ಸಮಾನರಾಗಿಲ್ಲವೆಂದು ಅರಿತಾಗ ಮತ್ತು ತಮ್ಮ ಆರ್ಥಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶಕ್ತರಾಗಿಲ್ಲವೆಂದು ಪರಿತಪಿಸಿದಾಗ ಕ್ರಾಂತಿಯ ಕಿಡಿ ಹೊತ್ತಿಕೊಳ್ಳುತ್ತದೆ. ಅದರಲ್ಲಿಯೂ ತಮ್ಮ ಆಶೋತ್ತರಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವುದು ಅಸಾಧ್ಯವೆಂದು ತೋರಿದಾಗ ಅಂಥ ವರ್ಗಗಳು ಕ್ರಾಂತಿಗೆ ಶರಣಾಗುತ್ತವೆ. ಅಧಿಕಾರದಲ್ಲಿರುವವರು ಜನತೆಯಲ್ಲಿ ಕಾಲ ಕಾಲಕ್ಕೆ ಉಂಟಾಗುವ ಆಶೋತ್ತರಗಳನ್ನು ಅರಿತುಕೊಳ್ಳದಿದ್ದರೆ, ಅರಿತುಕೊಂಡರೂ ಇತರರೊಡನೆ ತಮ್ಮ ಅಧಿಕಾರವನ್ನು ಹಂಚಿಕೊಳ್ಳಲು ಸಿದ್ಧರಿಲ್ಲದಿದ್ದರೆ ಕ್ರಾಂತಿ ಅನಿವಾರ್ಯ ವಾಗುತ್ತದೆ. ಆಗ ಜನತೆ ಪರಂಪರಾನುಗತವಾಗಿ ಬಂದಿರುವ ಆಡಳಿತ ಪದ್ಧತಿ ಮತ್ತು ರಾಜಕೀಯ ವ್ಯವಸ್ಥೆಯ ವಿರುದ್ಧ ಬಂಡೆದ್ದು ಅದನ್ನು ನಿರ್ಮೂಲಗೊಳಿಸಿ ಅದರ ಸ್ಥಾನದಲ್ಲಿ ಒಂದು ಹೊಸ ವ್ಯವಸ್ಥೆಯನ್ನೇ ಸ್ಥಾಪಿಸಬಯಸುತ್ತದೆ. ಹೀಗೆ ಅತೃಪ್ತಿ ಮತ್ತು ಅಸಮಾನತೆಯ ನಿರ್ಮೂಲಕ್ಕಾಗಿ ಕ್ರಾಂತಿ ಸಂಭವಿಸುತ್ತದೆ. ಇದು ಕ್ಷಿಪ್ರವಲ್ಲದಿದ್ದರೂ ಇದರ ಪರಿಣಾಮಗಳು ಅಸಾಧಾರಣವಾದವುಗಳಾದ್ದರಿಂದ ಇದೂ ಕ್ರಾಂತಿಯೇ ಎನಿಸುವುದು. ಫ್ರೆಂಚ್ ಮತ್ತು ರಷ್ಯದ ಕ್ರಾಂತಿಗಳೂ ಆಯಾ ದೇಶಗಳ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಅನೇಕ ವರ್ಷಗಳಿಂದ ನಡೆದುಬಂದಿದ್ದ ಅನ್ಯಾಯದ ವಿರುದ್ಧವಾಗಿದ್ದುವೆ ಹೊರತು ಜನತೆಯಲ್ಲಿ ಅನಿರೀಕ್ಷಿತವಾಗಿ ಅಥವಾ ಹಠಾತ್ತನೆ ಉಂಟಾದ ಕ್ಷೋಭೆಯಿಂದಲ್ಲ.

ಒಂದು ವಸಾಹತಿನ ಜನತೆ ಸಾಕಷ್ಟು ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗದೆ ಹೋಗಿ, ತನ್ನ ವಿದೇಶಿ ಆಡಳಿತಗಾರರಿಂದ ಮುಕ್ತವಾಗುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಆ ವಸಾಹತಿಗೂ ವಸಾಹತುಶಾಹಿ ರಾಷ್ಟ್ರಕ್ಕೂ ನಡುವೆ ಉಂಟಾಗುವ ಘರ್ಷಣೆಯೂ ಕ್ರಾಂತಿಯಾಗಿ ಪರಿಣಮಿಸುತ್ತದೆ. ವಸಾಹತುಶಾಹಿ ರಾಷ್ಟ್ರ ಸ್ವಸಂತೋಷದಿಂದ ತನ್ನ ವಸಾಹತನ್ನು ಸ್ವತಂತ್ರರಾಷ್ಟ್ರವೆಂದು ಘೋಷಿಸಿರುವುದು ವಿರಳ. 18ನೆಯ ಶತಮಾನದ ಅಮೆರಿಕನ್ ಕ್ರಾಂತಿ ಸ್ವಾತಂತ್ರ್ಯಸಮರವಾಗಿ ರೂಪಿತವಾಗಿತ್ತು. ಅಂತೆಯೇ 20ನೆಯ ಶತಮಾನದಲ್ಲಿ ಏಷ್ಯ ಮತ್ತು ಆಫ್ರಿಕ ಖಂಡಗಳ ಅನೇಕ ವಸಾಹತುಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದುವು. ಭಾರತ ಸ್ವಾತಂತ್ರ್ಯ ಸಮರವೂ ವಿಶಿಷ್ಟವಾದ ಕ್ರಾಂತಿಯೇ ಆಗಿದೆ. ಈ ರೀತಿಯ ಕ್ರಾಂತಿಯಲ್ಲಿ ನಾಯಕರ ಪಾತ್ರ ಮಹತ್ತ್ವದ್ದು. ಪ್ರತಿಯೊಂದು ಕ್ರಾಂತಿಗೂ ಹೆಸರಾದ ನಾಯಕರಿದ್ದು ಅವರೇ ಸ್ವತಂತ್ರ ರಾಷ್ಟ್ರದ ಮುಖಂಡರಾಗುತ್ತಾರೆ.

ಕ್ರಾಂತಿಗಳು ಸಾಮಾನ್ಯವಾಗಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಮತ್ತು ಒಂದು ಜನತೆಯಿಂದ ಇನ್ನೊಂದು ಜನತೆಗೆ ಹಬ್ಬುತ್ತವೆ. ಒಂದು ಕಡೆ ಉಂಟಾದ ಕ್ರಾಂತಿಯಿಂದ ಇನ್ನೊಂದು ಜನಾಂಗ ಸ್ಫೂರ್ತಿ ಪಡೆಯಬಹುದು. 1820ರಲ್ಲಿ ಸ್ಪೇನಿನಲ್ಲಿ ಜರುಗಿದ ಕ್ರಾಂತಿಯಿಂದ ಪೋರ್ಚುಗಲ್ ಮತ್ತು ನೇಪಲ್ಸ್‌ಗಳಲ್ಲಿ ಬಂಡಾಯಗಳಾದವು. 1830ರಲ್ಲಿ ಫ್ರಾನ್ಸಿನಲ್ಲಿ ಜರುಗಿದ ಘಟನೆಗಳು ಬೆಲ್ಜಿಯಂ ಮತ್ತು ಪೋಲೆಂಡ್ ದೇಶಗಳ ಮೇಲೆ ತಮ್ಮ ಪ್ರಭಾವ ಬೀರಿದವು. ಇದೇ ರೀತಿ ಅಮೆರಿಕನ್ ಸ್ವಾತಂತ್ರ್ಯ ಯುದ್ಧ ಮತ್ತು ಫ್ರಾನ್ಸಿನ ಮಹಾಕ್ರಾಂತಿ ಗಳು ಒಂದಕ್ಕೊಂದು ಪೂರಕವಾದವು. 1947ರಲ್ಲಿ ಸ್ವಾತಂತ್ರ್ಯ ಗಳಿಸಿದ ಭಾರತ ಏಷ್ಯ ಮತ್ತು ಆಫ್ರಿಕ ಖಂಡಗಳಲ್ಲಿ ಅನೇಕ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿತು.

**ಕ್ರಾಂತಿಯ ವಿವಿಧ ಹಂತಗಳು:** ಪ್ರತಿಯೊಂದು ಕ್ರಾಂತಿಯೂ ಕಾಲ ಮತ್ತು ಉದ್ದೇಶ ಗಳಿಗನುಗುಣವಾಗಿ ಪ್ರಾರಂಭವಾಗಿ ಕೊನೆಯವರೆಗೂ ತನ್ನದೇ ಆದ ವಿವಿಧ ಹಂತಗಳಲ್ಲಿ ಮುಂದುವರಿಯುತ್ತದೆ. ಆದರೂ ಸಾಮಾನ್ಯವಾಗಿ ಕ್ರಾಂತಿಗಳಲ್ಲಿ ಕೆಲವು ಪ್ರಮುಖ ಘಟ್ಟಗಳನ್ನು ಕಾಣಬಹುದು. ರಷ್ಯದ ಕ್ರಾಂತಿಯ ಒಂದು ಸಂದರ್ಭ (1917 ನವೆಂಬರ್ 7): ಅಖಿಲ ರಷ್ಯದ ಸೋವಿಯೆತ್ ಕಾಂಗ್ರೆಸ್ಸಿನ ಸದಸ್ಯರನ್ನು ಉದ್ದೇಶಿಸಿ ಲೆನಿನ್ ಭಾಷಣ ಮಾಡಿದ್ದು.

ಕ್ರಾಂತಿ ತೀವ್ರಗತಿಯ ಚಟುವಟಿಕೆ ಎನಿಸಿಕೊಂಡರೂ ಅದರ ಪೂರ್ವಘಟ್ಟವನ್ನು ಗುರುತಿಸಲು ಸಾಧ್ಯ. ಪ್ರದರ್ಶನಗಳು, ಮುಷ್ಕರಗಳು, ಸಭೆಗಳು, ಹಿಂಸಾಚಾರ, ಕಾಯಿದೆಯ ಮತ್ತು ಶಿಸ್ತಿನ ಭಂಗ ಮುಂತಾದ ಅಸಾಮಾನ್ಯ ಘಟನೆಗಳು ಮುಂಬರುವ ಕ್ರಾಂತಿಯ ಪೂರ್ವಭಾವಿ ಘಟ್ಟಗಳು. ಇವುಗಳಿಂದುಂಟಾಗುವ ಅರಾಜಕತೆಯಿಂದ ಇಂಥ ಚಟುವಟಿಕೆಗಳ ನಾಯಕರ ಗುಂಪೊಂದು ಅಧಿಕಾರಕ್ಕೆ ಬರಬಹುದು. ಇದು ತಾತ್ಕಾಲಿಕ ಸ್ವರೂಪದ್ದಾಗಿರ ಬಹುದು. ಕ್ರಾಂತಿಯ ಪೂರ್ವ ಇಂಥ ಅನೇಕ ಶಕ್ತಿ ಮತ್ತು ವ್ಯಕ್ತಿಗಳು ಅಧಿಕಾರದ ಮೇಲೆ ತಮ್ಮ ಕಣ್ಣನ್ನಿರಿಸಿಕೊಂಡಿರುವುದು ಸಹಜ. ಬಹು ದಿನಗಳ ಆಂತರಿಕ ಯುದ್ಧದ ತರುವಾಯ ಕ್ರಾಂತಿಕಾರಿಗಳು ಸಂಪೂರ್ಣ ಅಧಿಕಾರವನ್ನು ಗಳಿಸುವುದು ವಿರಳ. ಚೀನದಲ್ಲಿ 1949ರ ಕ್ರಾಂತಿಯ ತರುವಾಯ ಕಮ್ಯೂನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದ ನಿದರ್ಶನವುಂಟು. ಹೀಗೆ ಅಧಿಕಾರಕ್ಕೆ ಬಂದ ವ್ಯಕ್ತಿ ಶಕ್ತಿಗಳ ವಿರುದ್ಧ ಪ್ರತಿಕ್ರಾಂತಿಯ ಘಟ್ಟವನ್ನು ಕಾಣಬಹುದು. ಇಲ್ಲವೇ ವಿದೇಶಗಳು ಹಸ್ತಕ್ಷೇಪ ಮಾಡುವ ಸಾಧ್ಯತೆಯೂ ಇದೆ. ಅಧಿಕಾರದಲ್ಲಿರುವ ಶ್ರೀಮಂತರ ಅಥವಾ ಕುಲೀನರ ಗುಂಪನ್ನು ಕಿತ್ತೊಗೆದು ಅವರ ಸ್ಥಾನದಲ್ಲಿ ಸಮಾಜದ ಮಧ್ಯಮ ವರ್ಗದವರ ಮತ್ತು ಕೆಳವರ್ಗದವರ ಅಧಿಕಾರ ಸ್ಥಾಪಿಸುವುದು ಕ್ರಾಂತಿಯ ಮೂಲ ಉದ್ದೇಶವಾಗಿರುವುದರಿಂದ ಪ್ರತಿಯೊಂದು ಕ್ರಾಂತಿಯಲ್ಲೂ ಈ ಮೂರು ಹಂತಗಳಿರುವುದು ಸ್ವಾಭಾವಿಕ. ರಷ್ಯದಲ್ಲಿ 1917ರ ಫೆಬ್ರುವರಿ ಕ್ರಾಂತಿಯ ತರುವಾಯ ಅಕ್ಟೋಬರ್ ಕ್ರಾಂತಿಯಾಗಿ ಬಾಲ್ಷೆವಿಕರು ಅಧಿಕಾರಕ್ಕೆ ಬಂದರು. ಕ್ರಾಂತಿಯ ಕಾರ್ಯಕ್ರಮ ಪೂರ್ಣವಾದ ಕೂಡಲೆ ಶಾಂತಸ್ಥಿತಿಯುಂಟಾಗಿ ತದನಂತರ ಅಧಿಕಾರಕ್ಕಾಗಿ ಪೈಪೋಟಿ ನಡೆದು ಕ್ರಾಂತಿಯ ನಾಯಕರ ಸ್ಥಾನದಲ್ಲಿ ಸೈನ್ಯದ ಸಹಾಯ ಮತ್ತು ಸಹಾನುಭೂತಿಯನ್ನು ಪಡೆದಂಥ ಚತುರ ವ್ಯಕ್ತಿ ಅಧಿಕಾರಕ್ಕೆ ಬರುವುದು ಒಂದು ವಿಶಿಷ್ಟ ಲಕ್ಷಣ. ರಷ್ಯದ ಕ್ರಾಂತಿಯ ನಾಯಕ ಲೆನಿನನ ಮರಣಾನಂತರ ಜೋಸೆಫ್ ಸ್ಟಾಲಿನ್ ಅಧಿಕಾರಕ್ಕೆ ಬಂದ. ಈಜಿಪ್ಟಿನಲ್ಲಿ ನಗೀಬನ ಅಲ್ಪಕಾಲದ ಅಧಿಕಾರದ ಅನಂತರ ನಾಸೆರ್ ಅವನ ಸ್ಥಾನಕ್ಕೆ ಬಂದು ತನ್ನ ಜೀವನದ ಕೊನೆಯವರೆಗೂ ಆ ದೇಶದ ನಾಯಕ ಹಾಗೂ ಅಧ್ಯಕ್ಷನಾಗಿದ್ದ.

**ನಾಯಕತ್ವ:** ಪ್ರತಿ ವ್ಯಕ್ತಿಯಲ್ಲೂ ಕ್ರಾಂತಿಕಾರಿ ವಿಚಾರಗಳು ಇರುವುದು ಸಾಧ್ಯವಿಲ್ಲ. ಇದ್ದಾಗ್ಯೂ ಅವು ವ್ಯಕ್ತವಾಗಬೇಕಾದರೆ ಅದಕ್ಕೆ ಅನುಕೂಲಕರವಾದ ಪರಿಸರದ ಅವಶ್ಯಕತೆ ಇರುತ್ತದೆ. ಇದೇ ರೀತಿ ಒಂದು ಸಮಾಜದ ವರ್ಗರಚನೆಯೂ ಮುಖ್ಯವಾದ ಅಂಶವಾಗಿರುತ್ತದೆ. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾಜದ ವಿವಿಧ ವರ್ಗಗಳ ಸ್ಥಾನಮಾನಗಳು ಬೇರೆಯಾಗಿರುತ್ತವೆ. ಸಾಮಾನ್ಯವಾಗಿ ಶ್ರೀಮಂತ ವರ್ಗದವರು ಅಧಿಕಾರ ದಲ್ಲಿರುತ್ತಾರೆ. ಶ್ರೀಮಂತ ವರ್ಗಕ್ಕೂ ಕಾರ್ಮಿಕವರ್ಗಕ್ಕೂ ನಡುವಣ ಮಧ್ಯಮ ವರ್ಗದವರು ಸಾಮಾನ್ಯವಾಗಿ ಕ್ರಾಂತಿಕಾರಿ ವಿಚಾರಗಳನ್ನು ತಳೆದವರಾಗಿದ್ದು ಅವರೇ ಕ್ರಾಂತಿಗಳ ಜನಕರಾಗಿರುವು ದುಂಟು. ಅವರು ವಿದ್ಯಾವಂತರೂ ಹೆಚ್ಚು ಅನುಕೂಲಗಳನ್ನು ಹೊಂದದ ವರ್ಗಕ್ಕೆ ಸೇರಿದವರೂ ಆಗಿರುವುದರಿಂದ ಸಮಾಜದ ನ್ಯೂನತೆಗಳನ್ನು ಅರಿತುಕೊಂಡು ಅವುಗಳ ನಿವಾರಣೆಗಾಗಿ ಪ್ರಯತ್ನಿಸುವ ಜ್ಞಾನ ಮತ್ತು ಪರಿಸರದ ಒತ್ತಡ ಅವರಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಹೆಚ್ಚು ವಯಸ್ಸಾದವರು ಮತ್ತು ಶ್ರೀಮಂತರು ಕ್ರಾಂತಿಯ ಪರವಾಗಿ ಇರುವುದು ಸಾಧ್ಯವಿಲ್ಲ. ಆದ್ದರಿಂದ ಉನ್ನತ ವ್ಯಾಸಂಗದಲ್ಲಿ ತೊಡಗಿರುವ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಕೀಲರು ಅಥವಾ ಸೈನ್ಯದ ಕಿರಿಯ ಅಧಿಕಾರಿಗಳೇ ಸಾಮಾನ್ಯವಾಗಿ ಕ್ರಾಂತಿಯ ನಾಯಕತ್ವವನ್ನು ವಹಿಸುತ್ತಾರೆ. ಉನ್ನತ ಶಿಕ್ಷಣ ಜನತೆಯಲ್ಲಿ ಉನ್ನತ ಆಕಾಂಕ್ಷೆಗಳನ್ನು ಹುಟ್ಟಿಸುತ್ತದೆ. ಇಂಥ ಆಕಾಂಕ್ಷೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕ್ರಾಂತಿಗಳುಂಟಾಗಿರುವುದನ್ನು ಎಲ್ಲೆಲ್ಲೂ ಕಾಣಬಹುದು. ರಷ್ಯ, ಚೀನ, ಲ್ಯಾಟಿನ್ ಅಮೆರಿಕ, ಆಫ್ರಿಕ, ಏಷ್ಯ ಮತ್ತು ಪಶ್ಚಿಮ ಏಷ್ಯ ದೇಶಗಳ ಕ್ರಾಂತಿಗಳಲ್ಲಿ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಕೀಲರು ಮತ್ತು ಕಿರಿಯ ಸೈನ್ಯಾಧಿಕಾರಿಗಳು ವಹಿಸಿದ ಪಾತ್ರವನ್ನು ಇಲ್ಲಿ ಉಲ್ಲೇಖಿಸಬಹುದು. ಐರೋಪ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಕ್ರಾಂತಿಗಳು ಸಾಮಾನ್ಯವಾಗಿ ಬುದ್ಧಿಜೀವಿಗಳ ವರ್ಗಕ್ಕೆ ಸೇರಿದ ಸೈದ್ಧಾಂತಿಕರು, ಬರೆಹಗಾರರು ಮತ್ತು ಕವಿಗಳಿಂದ ಸ್ಫೂರ್ತಿ ಪಡೆದವುಗಳಾಗಿವೆ. ಇದುವರೆಗೆ ಆಗಿಹೋಗಿರುವ ಕ್ರಾಂತಿಗಳಲ್ಲಿ ಕೆಲವು ಒಂದೇ ಒಂದು ನಿರ್ದಿಷ್ಟ ವರ್ಗದ ಜನರಿಂದ–ಕಾರ್ಮಿಕರು ಅಥವಾ ರೈತರುಗಳಿಂದ ಉಂಟಾದವುಗಳಾಗಿವೆಯಾದರೂ ಕೆಲವು ಪ್ರಮುಖ ಕ್ರಾಂತಿಗಳ ಪರವಾಗಿ ಇಡೀ ಜನತೆಯ ಸಹಕಾರವಿದ್ದು ಅವು ವ್ಯಾಪಕವಾಗಿರುತ್ತವೆ. ಈ ಕ್ರಾಂತಿಗಳು ವಿಶಾಲ ತಳಹದಿ ಹೊಂದಿರುವ ಚಳವಳಿಗಳು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕ್ರಾಂತಿಗಳು ಇಂಥ ವಿಶಾಲ ತಳಹದಿಯನ್ನು ಹೊಂದಿರುತ್ತವೆಯಾದರೂ ಅಭಿವೃದ್ಧಿ ಹೊಂದುತ್ತಿರುವ ಅಥವಾ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಸೈನಿಕ ಅಧಿಕಾರಿಗಳು ಕ್ರಾಂತಿ ಗಳಿಗೆ ಕಾರಣರಾಗಿರುತ್ತಾರೆ. ಸೈನ್ಯವನ್ನು ಮೊದಲನೆಯ ಘಟ್ಟದಲ್ಲಿ ಉಪಯೋಗಿಸಬಹುದು ಅಥವಾ ಕೊನೆಯವರೆಗೂ ಅವರೇ ಕ್ರಾಂತಿಯ ಮುಂಚೂಣಿಯಲ್ಲಿ ಇರಬಹುದು. ಇದನ್ನು ಕ್ರಾಂತಿಯೆನ್ನುವುದಕ್ಕಿಂತ ಕ್ಷಿಪ್ರಾಕ್ರಮಣವೆನ್ನಬಹುದು. ಹೀಗೆ ದೇಶ ಕಾಲ ಸ್ಥಿತಿಗಳಿಗನುಗುಣವಾಗಿ ಸಮಾಜದ ಒಂದು ವಿಶಿಷ್ಟ ವರ್ಗದ ಹಲವು ವರ್ಗಗಳ ಗುಂಪುಗಳು ಕ್ರಾಂತಿಗಳ ಮುಂಚೂಣಿಯಲ್ಲಿರುತ್ತವೆ.

(ಎ.ಎಂ.ಆರ್.;ಎಂ.ವಿ.ಕೆ.)

**ಕ್ರೈಸ್ತಧರ್ಮ:** ಪ್ರಪಂಚದ ಪ್ರಮುಖ ಧರ್ಮಗಳಲ್ಲೊಂದು. ಯೇಸುಕ್ರಿಸ್ತನ ಉಪದೇಶದ ಆಧಾರದ ಮೇಲೆ ಹುಟ್ಟಿ ಬೆಳೆದು ಬಂದಿರುವ ಎಲ್ಲ ಸಿದ್ಧಾಂತಗಳಿಗೂ ಮತ ಸಂಸ್ಥೆಗಳಿಗೂ ಒಟ್ಟಾಗಿ ಅನ್ವಯವಾಗುವ ಪದವಿದು. ಈ ಧರ್ಮವನ್ನು ಅನುಸರಿಸುವವರನ್ನು ಕ್ರೈಸ್ತರೆನ್ನಲಾಗು ತ್ತದೆ. 2000 ವರ್ಷಗಳ ಹಿಂದೆ ಪ್ಯಾಲಸ್ತೀನ್ ದೇಶದಲ್ಲಿ ಆರಂಭವಾಗಿ ಈಗ ಪ್ರಪಂಚದಲ್ಲೆಡೆ ಹಬ್ಬಿಕೊಂಡಿರುವ ಕ್ರೈಸ್ತಧರ್ಮ ಸು.850 ದಶಲಕ್ಷ ಮತಾನುಯಾಯಿಗಳನ್ನೊಳಗೊಂಡಿದೆ. 15ನೆಯ ಶತಮಾನದ ಅನಂತರ ಅನೇಕ ಪಂಗಡಗಳಾಗಿ ವಿಭಾಗಿಸಲ್ಪಟ್ಟಿದ್ದು ಬೇರೆ ಬೇರೆ ಸಾಂಸ್ಕೃತಿಕ ಹಿನ್ನೆಲೆಗಳಿರುವ ಜನಾಂಗಗಳ ಮಧ್ಯೆ ಇರುವುದಾದರೂ ಈ ಧರ್ಮದಲ್ಲಿ ತಾತ್ತ್ವಿಕ ಏಕತೆ ಇದೆ. ಈ ಹಿನ್ನೆಲೆಯಲ್ಲಿ ಕ್ರೈಸ್ತಧರ್ಮದ ಇತಿಹಾಸ, ತಿರುಳು, ಧರ್ಮ ಸಭೆಯ ಆಡಳಿತ ವ್ಯವಸ್ಥೆ, ಭಾರತದಲ್ಲಿ ಅದು ಹರಡಿದ ಬಗೆ–ಈ ವಿಷಯಗಳನ್ನು ಸಂಗ್ರಹವಾಗಿ ತಿಳಿಸಿದೆ.

(ಎ) ಕ್ರೈಸ್ತಧರ್ಮದ ಸಂಸ್ಥಾಪಕ ಯೇಸುಕ್ರಿಸ್ತ. ಆತನ ಜೀವನ, ಬೋಧನೆ, ನಿಧನ, ಪುನರುತ್ಥಾನ ಮತ್ತು ದೇವರ ಪ್ರೀತಿಯನ್ನು ಪ್ರಕಟಿಸಿ ಮಾನವ ಕುಲಕ್ಕೆ ಆತ ತೋರಿದ ರಕ್ಷಣಾಮಾರ್ಗ–ಈ ಅಂಶಗಳ ಮೇಲೆ ಕ್ರೈಸ್ತ ಧರ್ಮ ನಿಂತಿದೆ. ಯೇಸುಕ್ರಿಸ್ತ ತನ್ನ ಲೋಕಸೇವೆಯನ್ನು ಆರಂಭಿಸುವಾಗ ಹನ್ನೆರಡು ಮಂದಿ ಶಿಷ್ಯರನ್ನು ಆರಿಸಿಕೊಂಡಿದ್ದು

ಒಂದು ಧಾರ್ಮಿಕ ಸಂಘ ಅಥವಾ ಸಭೆಯನ್ನು ಕಟ್ಟುವ ಉದ್ದೇಶ ಆತನಿಗಿತ್ತೆಂಬುದು ಸ್ಪಷ್ಟವಾಗುತ್ತದೆ. ದೈವ ಪ್ರೀತಿ ಪ್ರಕಟನೆಯೂ ಮಾನವನರಕ್ಷಣೆಯೂ ಆತನ ಮುಖ್ಯ ಉದ್ದೇಶವಾಗಿದ್ದುದರಿಂದ, ಜನ ಆತನನ್ನು ಹೆಚ್ಚಾಗಿ ಹಿಂಬಾಲಿಸುತ್ತಿದ್ದರೂ ಅವರನ್ನು ಒಂದು ಸಭೆಯಾಗಿ ಕೂಡಿಸಿ ಕ್ರಮಸೂತ್ರಗಳ ಮೂಲಕ ಸಂಘಟಿಸುವುದಕ್ಕೆ ಆತ ಹೆಚ್ಚಿನ ಗಮನ ಕೊಡಲಿಲ್ಲ. ಆದರೆ ಆತನ ಪುನರುತ್ಥಾನದ ತರುವಾಯ ಶಿಷ್ಯರು ಸುವಾರ್ತಾ ಸಂದೇಶವನ್ನು ಸಾರಿದ್ದರ ಫಲವಾಗಿ ಅನೇಕ ಮಂದಿ ಆತನ ಶಿಷ್ಯರ ಗುಂಪನ್ನು ಸೇರಿದರು. ಈ ಲೇಖನದಲ್ಲಿ ಮುಂದೆ ಧರ್ಮಸಭೆ, ಕ್ರೈಸ್ತ ಸಭೆ, ಸಭೆ, ಧಾರ್ಮಿಕ ಸಂಘ–ಈ ಮಾತುಗಳನ್ನು ಚರ್ಚು ಎಂಬ ಅರ್ಥದಲ್ಲಿ ಬಳಸಿದೆ. ಪ್ರಾರಂಭದ ಕ್ರೈಸ್ತ ಸಭೆಯಲ್ಲಿದ್ದ ಪೀಟರ್, ಯೋಹಾನ, ಯಾಕೋಬ ಮತ್ತು ಪೌಲನೇ ಮೊದಲಾದ ಮುಂದಾಳುಗಳು ಈ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಿದರು.

(ಬಿ) ಕ್ರೈಸ್ತ ಸುವಾರ್ತೆಯನ್ನು ಭೂಮಧ್ಯ ಸಮುದ್ರದ ದೇಶಗಳಲ್ಲಿ ಪ್ರಚುರಪಡಿಸಿ ಅನೇಕ ಸಭೆಗಳನ್ನು ಸ್ಥಾಪಿಸಿ ಕ್ರೈಸ್ತಧರ್ಮದ ಚಾರಿತ್ರಿಕ ಮುನ್ನಡೆಗೆ ಬಲವಾದ ಪ್ರೇರಣೆಯನ್ನಿತ್ತು ಅದಕ್ಕಾಗಿ ಕೆಲಸ ಮಾಡಿದಾತ ಅಪೋಸ್ತಲರಲ್ಲೊಬ್ಬನಾದ ಪೌಲ. ಪೌಲ್ ಕ್ರಿಸ್ತನಿಗಿಂತ ಮುಂಚೆ ಟಾರ್ಸಸ್ ಎಂಬ ಪಟ್ಟಣದಲ್ಲಿ ಹುಟ್ಟಿದ ಉತ್ತಮ ಕುಲದ ಒಬ್ಬ ಯಹೂದ್ಯ ; ರೋಮ್


ಸೇ ಕತೀಡ್ರಲ್ ಚರ್ಚ್‌ನಲ್ಲಿರುವ ಹೋಲಿಗೋಸ್ಟ್ ಚಿತ್ರ, ಹಳೆಗೋವ

ಸಾಮ್ರಾಜ್ಯದ ಹಕ್ಕುಳ್ಳ ನಾಗರಿಕ; ಯಹೂದ್ಯ ತತ್ತ್ವ ಮತ್ತು ನ್ಯಾಯ ಪ್ರಮಾಣದಲ್ಲಿ ಘನ ಪಂಡಿತನಾಗಿದ್ದ ವ್ಯಕ್ತಿ. ಆರಂಭದಲ್ಲಿ ಕ್ರೈಸ್ತರನ್ನು ನಾನಾ ವಿಧವಾಗಿ ಹಿಂಸೆಗೆ ಗುರಿ ಪಡಿಸಿದರೂ ಕೊನೆಗೆ ತಾನೇ ಯೇಸುಕ್ರಿಸ್ತನ ದರ್ಶನದಿಂದ ಆತನ ಶಿಷ್ಯನಾದ. ಅನಂತರ ಈತ ತನ್ನ ಸಂಪೂರ್ಣ ಜೀವನವನ್ನೇ ಯೇಸುಕ್ರಿಸ್ತನ ಸುವಾರ್ತೆಯನ್ನು ಸಾರುವ ಸೇವೆಗೆ ಮೀಸಲಾಗಿಟ್ಟು ಸು.30 ವರ್ಷಗಳ ಸೇವಾ ಕಾಲದಲ್ಲಿ ಬಹು ಕಷ್ಟ–ನಷ್ಟಗಳಿಗೊಳಗಾಗಿ ಅನೇಕ ಸಭೆಗಳನ್ನು ಸ್ಥಾಪಿಸಿದ. ಸು.64ರಲ್ಲಿ ಈತ ಹುತಾತ್ಮನಾದ ಎಂಬ ಪ್ರತೀತಿಯಿದೆ. ಪೌಲನ ತತ್ತ್ವನಿರೂಪಣಾ ರೀತಿ, ಬೋಧನಾ ಕ್ರಮ, ಸಂಘಟನಾಶಕ್ತಿ ಮತ್ತು ಸುವಾರ್ತಾಸೇವೆ–ಇವುಗಳಿಲ್ಲದಿದ್ದರೆ ಕ್ರೈಸ್ತಧರ್ಮ ಯಹೂದ್ಯರಲ್ಲಿ ಒಂದು ಪಂಗಡದ ಮತವಾಗಿ ಉಳಿಯಬಹುದಿತ್ತೇ ಹೊರತು ಸಾರ್ವತ್ರಿಕ ಧರ್ಮವಾಗುತ್ತಿರಲಿಲ್ಲ.

ಯೇಸುಕ್ರಿಸ್ತ ಯಹೂದ್ಯರ ನಿರೀಕ್ಷೆಯನ್ನು ಸಂಪೂರ್ಣಗೊಳಿಸಿದ ಪ್ರವಾದಿ ಮಾತ್ರವಲ್ಲ, ಪುನರುತ್ಥಾನದ ಕರ್ತನೂ ಹೌದು. ಕ್ರೈಸ್ತ ಸಂದೇಶದ ಕೇಂದ್ರಸ್ಥಾನ ಯೇಸುಕ್ರಿಸ್ತನ ಮರಣದಲ್ಲಿದೆ. ಈ ಮರಣ ಮಾನವರ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ದೇವರು ತಾನೇ ಕೈಗೊಂಡ ಮಾರ್ಗ. ಯೇಸುಕ್ರಿಸ್ತ ಯೆಹೂದ್ಯರ ನ್ಯಾಯಪ್ರಮಾಣವನ್ನು ಸಂಪೂರ್ಣಗೊಳಿಸಿದ್ದರಿಂದ ಇನ್ನು ಮುಂದೆ ಕರ್ಮಮಾರ್ಗದ ಅಗತ್ಯವಿಲ್ಲ. ಕೇವಲ ಕೃಪೆ ಹಾಗೂ ನಂಬಿಕೆಯಿಂದಲೇ ರಕ್ಷಣೆ ದೊರಕುವ ಸಾಧ್ಯತೆ ಇದೆ. ಕ್ರಿಸ್ತ ಮಾನವಕುಲದ ಪರವಾಗಿ ಮರಣ ಹೊಂದಿದ್ದರಿಂದ ಆತನ ಮರಣವನ್ನು ಪ್ರಾಯಶ್ಚಿತ್ತ ಯಜ್ಞವೆಂಬುದಾಗಿ ತಿಳಿದುಕೊಳ್ಳತಕ್ಕದ್ದು. ಇದು ಪೌಲನ ಬೋಧನೆಯ ಸಾರಾಂಶ. ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತ ನಿಯಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟ. ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತ ನಮಗೋಸ್ಕರ ಪ್ರಾಣ ಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ. ಇಂಥ ಸುವಾರ್ತಾ ಸಂದೇಶವನ್ನೂ ಬೋಧನೆಯನ್ನೂ ಬರಿಯ ತಾತ್ತ್ವಿಕ ದೃಷ್ಟಿಯಿಂದ ಬೋಧಿಸುವುದು ಮಾತ್ರ ಪೌಲನ ಉದ್ದೇಶವಾಗಿರಲಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಕ್ರೈಸ್ತ ಸಭೆಗಳನ್ನು ಸ್ಥಾಪಿಸಿ ಯೋಗ್ಯ ಆಡಳಿತ ಕ್ರಮಗಳ ಮೂಲಕ ಅವುಗಳನ್ನು ಸಂಘಟಿಸಿದ್ದರಿಂದ ಕ್ರೈಸ್ತಧರ್ಮ ರೋಮ್ ಸಾಮ್ರಾಜ್ಯದಲ್ಲಿ ಬಲವಾಗಿ ಬೇರೂರಿ ಹಬ್ಬಲು ಸಾಧ್ಯವಾಯಿತು.

(ಸಿ) ಆದಿ ಕ್ರೈಸ್ತ ಸಭೆಯನ್ನು ಕಟ್ಟುವ ಕೆಲಸದಲ್ಲಿ ಪೌಲನಂತೆ ಇತರರೂ ನೆರವಾಗಿದ್ದರು. ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಮುಂದಾಳುವಾಗಿದ್ದ ಸಿಮೋನ್ ಪೀಟರ್ ಕೂಡ ಇದಕ್ಕಾಗಿ ಹೆಚ್ಚಿನ ಕೆಲಸ ಮಾಡಿದ. ಕ್ರೈಸ್ತಧರ್ಮವನ್ನು ಯಹೂದ್ಯರ ಮಧ್ಯದಲ್ಲಿ ಸ್ಥಾಪಿಸಲು ಮತ್ತು ಯಹೂದ್ಯರ ನ್ಯಾಯಪ್ರಮಾಣಕ್ಕೆ ಕ್ರೈಸ್ತಧರ್ಮ ನಿರೂಪಣೆಯಲ್ಲಿ ತಕ್ಕ ಸ್ಥಾನವನ್ನು ಕೊಡಲು ಪೀಟರ್ ಹೆಚ್ಚಿನ ಪ್ರಯತ್ನ ಮಾಡಿದರೂ ಯಹೂದ್ಯರಲ್ಲದವರಿಗೆ ಕ್ರೈಸ್ತ ಸಂದೇಶವನ್ನು ಸಾರುವುದಕ್ಕೆ ಆತ ಅಡ್ಡಿ ಮಾಡಲಿಲ್ಲ. ಯೇಸುಕ್ರಿಸ್ತನ ಪುನರುತ್ಥಾನದ ಅನಂತರ ಸುವಾರ್ತೆಯನ್ನು ಜನರಲ್ಲಿ ಹರಡಿ, ಸಾವಿರಾರು ಮಂದಿ ಕ್ರೈಸ್ತ ಸಭೆಯಲ್ಲಿ ಸೇರಿಕೊಳ್ಳುವಂತೆ ಮಾಡಿದವರಲ್ಲಿ ಮುಂದಾಳು ಪೀಟರ್. ಇದನ್ನರಿತುದರಿಂದಲೇ ಯೇಸು ಪ್ರಭು ಪೀಟರನೆಂಬ ಬುನಾದಿಯ ಮೇಲೆ (ಪೀಟರ್ ಎಂದರೆ ಕಲ್ಲುಬಂಡೆ ಎಂಬ ಅರ್ಥವೂ ಇದೆ) ತನ್ನ ಸಭೆಯನ್ನು ಕಟ್ಟುವುದಾಗಿ ಹೇಳಿದ್ದ.

ಪೌಲ್, ಪೀಟರರಲ್ಲದೆ ಕ್ರೈಸ್ತತತ್ತ್ವ ನಿರೂಪಣೆಯಲ್ಲಿ ಯೋಹಾನನಿಗೂ ಅಗ್ರಸ್ಥಾನ ಸಲ್ಲಬೇಕು. ಯೋಹಾನನ ಸುವಾರ್ತೆಯಲ್ಲಿ ಕ್ರೈಸ್ತತತ್ತ್ವ ನಿರೂಪಣೆಗೆ ವಿಶೇಷ ಸ್ಥಾನವಿದೆ. ಆ ಕಾಲದ ಗ್ರೀಕ್ ತತ್ತ್ವಜ್ಞಾನಿಗಳ ಬೋಧನೆಗಳನ್ನು ಗಮನಿಸಿ ಯೇಸುಕ್ರಿಸ್ತನ ಸರಳ ಸುವಾರ್ತೆಯನ್ನು ಅವರು ಒಪ್ಪಬೇಕೆಂಬ ದೃಷ್ಟಿಯಿಂದ ಈತ ನಿರೂಪಿಸಲು ಪ್ರಯತ್ನ ಮಾಡಿದ ಕಾರಣ ಕ್ರೈಸ್ತಧರ್ಮ ತನ್ನ ಚಾರಿತ್ರಿಕ ಮುನ್ನಡೆಯಲ್ಲಿ ಇನ್ನೊಂದು ದೊಡ್ಡ ಹೆಜ್ಜೆಯನ್ನಿಟ್ಟಂತಾಯಿತೆಂದು ಹೇಳಬಹುದು.

ಪೌಲ್ ಮತ್ತು ಪೀಟರರ ಮರಣಾನಂತರ ಮೆಡಿಟರೇನಿಯನ್ ಸಮುದ್ರದ ರೋಮ್ ಸಂಸ್ಥಾನಗಳಲ್ಲಿ ಕ್ರೈಸ್ತಧರ್ಮ ಹಬ್ಬುತ್ತ ಬಂದರೂ ಅದು ರೋಮ್ ಸಾಮ್ರಾಜ್ಯದ ಅರಸರ ಆಗ್ರಹಕ್ಕೊಳಗಾಗಿ ಬಹು ಕಠಿಣವಾದ ಹಿಂಸೆಗೆ ಗುರಿಯಾಗಬೇಕಾಯಿತು. ಹೀಗೆ ಕೇವಲ ಬಡ ಸಂಸ್ಥೆಯಾಗಿದ್ದ ಕ್ರೈಸ್ತಸಭೆ ಮಹಾ ರೋಮನ್ ಸಾಮ್ರಾಜ್ಯದ ಹಿಂಸೆಯನ್ನು ತಾಳಿಕೊಂಡು ಉಳಿದು, ಕ್ರಮೇಣ ರೋಮನ್ ಸಾಮ್ರಾಜ್ಯದಲ್ಲೆಲ್ಲ ಹಬ್ಬಿಕೊಂಡದ್ದು ಬಹು ಗಮನಾರ್ಹ ವಿಷಯ.

ರೋಮನ್ ಸಾಮ್ರಾಜ್ಯದ ಅರಸನಾದ ಕಾನ್‌ಸ್ಟಂಟೈನ್ ಎಂಬಾತ 312 ರಲ್ಲಿ ಕ್ರೈಸ್ತಧರ್ಮ ರೋಮನ್ ಸಾಮ್ರಾಜ್ಯದ ಅಧಿಕೃತ ಧರ್ಮವೆಂದು ಸಾರಿದ್ದು ಈ ಧರ್ಮದ ಮುನ್ನಡೆಯಲ್ಲಿ ಬಹು ದೊಡ್ಡ ಮೈಲಿಗಲ್ಲು. ಇದರ ಫಲವಾಗಿ ಹೆಚ್ಚು ಮಂದಿ ಕ್ರೈಸ್ತಧರ್ಮವನ್ನು ಅಂಗೀಕರಿಸಿದ ಕಾರಣ ಯುರೋಪ್ ಖಂಡದ ಸಂಸ್ಕೃತಿಯ ಮೇಲೆ ಕ್ರೈಸ್ತ ತತ್ತ್ವಗಳು ಹೆಚ್ಚಿನ ಪ್ರಭಾವವನ್ನು ಬೀರುತ್ತ ಬಂದವು. ಅಂದಿನಿಂದ ಇಂದಿನವರೆಗಿನ ಶತಮಾನಗಳಲ್ಲಿ ಈ ಧರ್ಮ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಪ್ರಚಾರಗೊಂಡು ಅಲ್ಲಲ್ಲಿನ ಸಾಂಸ್ಕೃತಿಕ ಹಿನ್ನೆಲೆಗಳಿಗೆ ಅನುಸಾರವಾಗಿ ಬೆಳೆಯುತ್ತ ಬಂದಿದೆ.

ಚಾರಿತ್ರಿಕ ಮತ್ತು ತಾತ್ತ್ವಿಕ ದೃಷ್ಟಿಗಳಿಂದ ಜಾಗತಿಕ ಕ್ರೈಸ್ತ ಸಭೆಯಲ್ಲಿ ಮೂರು ಮುಖ್ಯ ವಿಭಾಗಗಳಿವೆ: (i) ರೋಮನ್ ಕೆಥೊಲಿಕ್ ಸಭೆ (ii) ಪೌರ್ವಾತ್ಯಸ್ಯ ಸಾಂಪ್ರದಾಯಿಕ ಸಭೆ (ಈಸ್ಟರ್ನ್ ಆರ್ಥೊಡಾಕ್ಸ್ ಚರ್ಚು) (iii) ಪ್ರಾಟೆಸ್ಟಂಟ್ ಸಭೆ. ಸುಧಾರಣೆಯ ಸ್ವಾತಂತ್ರ್ಯ ವಹಿಸಿರುವ ಪ್ರಾಟೆಸ್ಟಂಟ್ ಸಭೆಗಳಲ್ಲಿ ಎಷ್ಟೋ ಚಿಕ್ಕ ದೊಡ್ಡ ಶಾಖೆಗಳಿವೆ. ಅಮೆರಿಕದ ಪ್ರಾಟೆಸ್ಟಂಟ್ ಸಭೆಯಲ್ಲಿಯೇ ಸು.255 ಶಾಖೆಗಳಿವೆ. ಈ ಎಲ್ಲ ಸಭೆಗಳು ಪ್ರಪಂಚದ ಬೇರೆ ಬೇರೆ ಕಡೆಗಳಿಗೆ ಹೋಗಿ ಸುವಾರ್ತೆಯನ್ನು ಸಾರಿ, ಸಭೆಗಳನ್ನು ಸ್ಥಾಪಿಸಿರುವುದರಿಂದ ಈ ಪಂಗಡಗಳು ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಹಬ್ಬಿವೆ. ಈ ಮುಖ್ಯ ವಿಭಾಗಗಳಿಗೂ ಪಂಗಡಗಳಿಗೂ ಕ್ರೈಸ್ತ ತತ್ತ್ವದ ತಿರುಳಿನಲ್ಲಿ ಮತ್ತು ಮುಖ್ಯವಾಗಿ ಯೇಸುಕ್ರಿಸ್ತನನ್ನು ಕುರಿತಾದ ನಂಬಿಕೆಯಲ್ಲಿ ಐಕ್ಯಮತ್ಯವಿದ್ದರೂ ಆಡಳಿತ ಕ್ರಮಗಳಲ್ಲಿ, ಸಂಸ್ಕಾರಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಮತ್ತು ಇನ್ನೂ ಕೆಲವು ಮುಖ್ಯ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿವೆ.

**(i) ರೋಮನ್ ಕೆಥೊಲಿಕ್ ಸಭೆ:** ರೋಮ್ ನಗರದಲ್ಲಿರುವ ಪೋಪನ ಸರ್ವಾಧಿಕಾರವನ್ನು ಮನ್ನಿಸುವ ಈ ಸಭೆಯಲ್ಲಿ ಸು.423 ದಶಲಕ್ಷ ಸದಸ್ಯರಿದ್ದಾರೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಯುರೋಪ್ ಖಂಡದ ಜನಾಂಗಗಳ ಚರಿತ್ರೆಯ ಮೇಲೂ ಜನಜೀವನದ ಮೇಲೂ ಈ ಸಭೆ ಹೆಚ್ಚಿನ ಪರಿಣಾಮವನ್ನು ಬೀರಿದೆ. ಕೆಥೊಲಿಕ್ ಎಂಬ ಗ್ರೀಕ್ ಪದದ ಮೂಲ ಅರ್ಥ ಸಾರ್ವತ್ರಿಕ ಎಂದು. ಇಗ್ನೇಷಿಯಸ್ ಎಂಬ ಸಭಾಪಿತೃ 115ರಲ್ಲಿ ಬರೆದ ಒಂದು ಪತ್ರದಲ್ಲಿ ಈ ಪದವನ್ನು ಮೊದಲು ಉಪಯೋಗಿಸಿದ. ಆತನ ಅಭಿಪ್ರಾಯದ ಮೇರೆಗೆ ಎಲ್ಲಿ ಕ್ರಿಸ್ತನಿದ್ದಾನೋ ಅಲ್ಲಿ ಸಾರ್ವತ್ರಿಕ ಕ್ರೈಸ್ತ ಸಭೆಯಿದೆ. ಮೊದಲಿನ ಶತಮಾನಗಳಲ್ಲಿ ಕ್ರೈಸ್ತಸಭೆ ಇತರ ಧರ್ಮಗಳೊಡನೆಯೂ ರಾಜಕೀಯ ಶಕ್ತಿಗಳೊಡನೆಯೂ ಹೋರಾಡಿ ಪ್ರೌಢಾವಸ್ಥೆಗೆ ಮುಟ್ಟುವ ಅಗತ್ಯವಿತ್ತು. ಅದು ಸಭೆಯ ಸತ್ತ್ವಪರೀಕ್ಷೆಯ ಕಾಲ. ತನ್ನ ಸಂದೇಶದ ತಿರುಳನ್ನೂ ಆಡಳಿತ ಕ್ರಮಗಳನ್ನೂ ಈ ಎಲ್ಲ ಭಿನ್ನಾಭಿಪ್ರಾಯಗಳ ಮಧ್ಯದಲ್ಲಿ ಕಾಪಾಡಿಕೊಳ್ಳುವ ಅಗತ್ಯತೆ ಇದ್ದುದರಿಂದಲೇ ಪಾಶ್ಚಾತ್ಯ ರಂಗದಲ್ಲಿ ಕೆಥೊಲಿಕ್

ಸಭೆ ಬೆಳೆದು ಬಂತು. ಈ ಸಭಾ ತತ್ತ್ವದಲ್ಲಿ 3 ಮುಖ್ಯವಾದ ವಿಷಯಗಳು ಅಡಕವಾಗಿವೆ. ರೋಮ್ ನಗರದಲ್ಲಿ ಅಪೋಸ್ತಲನಾದ ಪೀಟರ್ ಬಿಷಪ್ ಆಗಿದ್ದ ಎಂಬ ಅಭಿಪ್ರಾಯವನ್ನು ಮನ್ನಿಸಿ ಪಾರಂಪರಿಕವಾಗಿ ಬಂದಿರುವುದೆಂದು ತಿಳಿದ ಬಿಷಪ್‌ರ ಆಡಳಿತದ ಸ್ವೀಕಾರ ಮೊದಲನೆಯದು. ಇದೇ ಕ್ರಮೇಣ ಪೋಪನ ಸ್ಥಾನವನ್ನೂ ಅಧಿಕಾರವನ್ನೂ ಧಾರ್ಮಿಕ ಮಾನ್ಯತೆಯನ್ನೂ ರೂಪಿಸಿ ಬಲಪಡಿಸಿತು. ಎರಡನೆಯದು ಬೈಬಲ್ ಗ್ರಂಥ ಮತ್ತು ಸಭೆಯ ಸಾಂಪ್ರದಾಯಿಕ ಬೋಧನೆಗಳು ಸಭೆಯ ತತ್ತ್ವನಿರೂಪಣೆಗೆ ಮೂಲವೂ ಬೋಧನಾ ಶುದ್ಧತೆಗೆ ಪ್ರಮಾಣಗಳೂ ಆಗಿವೆ ಎಂಬ ಸೂತ್ರದ ಸ್ವೀಕಾರ. ಕೊನೆಯದು ಸರ್ವ ಸಭಾಂಗೀಕೃತವಾಗಿದ್ದು ಕ್ರೈಸ್ತ ಬೋಧನೆಯ ಸಾರಾಂಶವನ್ನು ಒಳಗೊಂಡಿರುವ ವಿಶ್ವಾಸ ಪ್ರಮಾಣಗಳು. ಇವುಗಳಲ್ಲಿ 325ರಲ್ಲಿ ಸ್ವೀಕರಿಸಲ್ಪಟ್ಟ ನಿಕೇಯದ ವಿಶ್ವಾಸ ಪ್ರಮಾಣವೂ ಸು.400ರಲ್ಲಿ ರೂಪಿತವಾದ ಅಪೋಸ್ತಲರ ವಿಶ್ವಾಸ ಪ್ರಮಾಣವೂ ಮುಖ್ಯವಾದವು. ಯೇಸುಕ್ರಿಸ್ತನ ಮಾತೆಯಾದ ಕನ್ಯಾ ಮೇರಿಗೆ ಈ ಸಭೆಯಲ್ಲಿ ಹೆಚ್ಚಿನ ಮನ್ನಣೆಯಿದೆ.

**(ii) ಪೌರ್ವಾತ್ಯ ಸಾಂಪ್ರದಾಯಿಕ ಸಭೆ:** ಪೌರ್ವಾತ್ಯ ದೇಶಗಳಲ್ಲಿ ಅಂದರೆ ಪ್ಯಾಲಸ್ಟೀನ್, ಸಿರಿಯ, ಈಜಿಪ್ಟ್, ಇಥಿಯೋಪಿಯ, ಭಾರತ, ಗ್ರೀಸ್, ರಷ್ಯ ಮುಂತಾದ ದೇಶಗಳಲ್ಲಿ ಹಬ್ಬಿಕೊಂಡಿರುವ ಈ ಸಭೆಗಳ (ಈಸ್ಟರ್ನ್ ಆರ್ಥೊಡಾಕ್ಸ್ ಚರ್ಚ್) ವಿಷಯವಾಗಿ ಸಾಕಷ್ಟು ತಿಳುವಳಿಕೆ ಪಡೆದುಕೊಳ್ಳುವುದು ಅನೇಕ ಸಲ ಕಷ್ಟವಾಗುತ್ತದೆ. ರೋಮ್ ನಗರದಲ್ಲಿ ಕ್ರೈಸ್ತರು ನೆಲೆಸುವ ಮುಂಚೆಯೇ ಈ ದೇಶಗಳಲ್ಲಿ ಕ್ರೈಸ್ತರೂ ಕ್ರೈಸ್ತಸಭೆಗಳೂ ಇದ್ದವೆಂಬುದನ್ನು ಮರೆಯಲಾಗದು. ಪೌರ್ವಾತ್ಯ ಸಾಂಪ್ರದಾಯಿಕ ಸಭೆಗೆ ಸಂಬಂಧಿಸಿದಂತೆ ಸು.150 ದಶಲಕ್ಷದ ಕ್ರೈಸ್ತರೂ 35 ಸಾವಿರ ಧರ್ಮಬೋಧಕರೂ 20 ಸಾವಿರ ಚಿಕ್ಕ ಪುಟ್ಟ ಸಭೆಗಳೂ ಇವೆ. ರೋಮ್ ನಗರದಲ್ಲಿ ಕೇಂದ್ರೀಕೃತವಾದ ಪಾಶ್ಚಾತ್ಯ ರೋಮನ್ ಕೆಥೊಲಿಕ್ ಸಭೆಗೂ ಈ ಸಭೆಗಳಿಗೂ ತಾತ್ತ್ವಿಕ, ಭೌಗೋಳಿಕ ಮತ್ತು ಚಾರಿತ್ರಿಕ ದೃಷ್ಟಿಗಳಿಂದ ಭಿನ್ನಾಭಿಪ್ರಾಯಗಳು ಹುಟ್ಟಿ ಕೊನೆಗೆ 1054ರಲ್ಲಿ ಇವು ರೋಮ್ ಸಭೆಯಿಂದ ಬೇರ್ಪಟ್ಟು ಅಂದಿನಿಂದ ಇಂದಿನವರೆಗೂ ಹಾಗೆಯೇ ಉಳಿದಿವೆ. ಪ್ರಭು ಭೋಜನದ ವಿವರಣೆಗೆ ಇವರ ಆರಾಧನೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದೆ. ಇವರು ವಿಗ್ರಹಗಳನ್ನು ನಿರಾಕರಿಸಿ ಶಿಲುಬೆಯನ್ನು ಮಾತ್ರ ಸ್ವೀಕರಿಸಿದ್ದಾರೆ. ರೋಮನ್ ಕೆಥೊಲಿಕ್ ಸಭೆ 7 ಸಂಸ್ಕಾರಗಳನ್ನೂ (ಸ್ಯಾಕ್ರಮೆಂಟ್ಸ್) ಪ್ರಾಟೆಸ್ಟಂಟರು 2 ಸಂಸ್ಕಾರಗಳನ್ನೂ ಒಪ್ಪಿಕೊಳ್ಳುವಾಗ ಇವರು 5 ಸಂಸ್ಕಾರಗಳನ್ನೂ ಸ್ವೀಕರಿಸುತ್ತಾರೆ. ಬೇರೆ ಬೇರೆ ದೇಶಗಳಿಗೆ ಹೋಗಿ ಸುವಾರ್ತಾ ಪ್ರಸಾರ ಮಾಡುವ ಕೆಲಸಕ್ಕೆ ಇವರು ಹೆಚ್ಚಿನ ಗಮನಕೊಟ್ಟಿಲ್ಲ. ಹೀಗಿದ್ದರೂ ದಕ್ಷಿಣ ಭಾರತಕ್ಕೆ ಸುವಾರ್ತೆಯನ್ನು ತಂದು ಕೇರಳದ ಕ್ರೈಸ್ತ ಸಭಾ ಸ್ಥಾಪನೆಗೆ ಇವರು ಕಾರಣರಾದರು.

**(iii) ಪ್ರಾಟೆಸ್ಟಂಟ್ ಸಭೆಗಳು:** ಈ ಸಭೆಗಳ ಮೂಲಪಿತೃ ಜರ್ಮನಿ ದೇಶದಲ್ಲಿ ಕ್ರೈಸ್ತ ಧರ್ಮಸುಧಾರಣೆಯನ್ನು ಆರಂಭಿಸಿದ ಮಾರ್ಟಿನ್ ಲೂಥರ್ (1443–1546). ಈತ ಬಹು ಧೈರ್ಯದಿಂದ ಸಾರಿದ ಧಾರ್ಮಿಕ ಸ್ವಾತಂತ್ರ್ಯದ ಚಳವಳಿ ಬಹುಬೇಗ ಯುರೋಪ್ ಖಂಡದಲ್ಲಿ ಮಾತ್ರವೇ ಅಲ್ಲ, ಇತರ ದೇಶಗಳಲ್ಲೂ ಹರಡಿತು. ಲೂಥರ್ ಮೊದಲು ರೋಮನ್ ಕೆಥೊಲಿಕ್ ಸಭೆಯಲ್ಲೇ ಸಂನ್ಯಾಸಿಯಾಗಿದ್ದು, ದೇಹದಂಡನೆಯಿಂದಲೂ ಆಳವಾದ ಧ್ಯಾನ, ಅಭ್ಯಾಸಗಳಿಂದಲೂ ಆತ್ಮಶಾಂತಿಯನ್ನು ದೊರಕಿಸಿಕೊಳ್ಳಲು ಬಹುನಿಷ್ಠೆ ಯಿಂದ ಪ್ರಯತ್ನಿಸುತ್ತಿದ್ದ. ಸ್ವಲ್ಪಸಮಯ ಜರ್ಮನಿಯ ಒಂದು ವಿಶ್ವವಿದ್ಯಾಲಯದಲ್ಲಿ ಮತಧರ್ಮಶಾಸ್ತ್ರದ ಪ್ರಾಧ್ಯಾಪಕನೂ ಆಗಿದ್ದ. ಮನಸ್ಸಿಗೆ ಶಾಂತಿ ದೊರಕದೆ ಹೆಚ್ಚಿನ ಒಳತೋಟಿಗೆ ಗುರಿಯಾಗಿ ಕಾಲಕ್ರಮೇಣ ಸತ್ಯವನ್ನು ಕಂಡುಕೊಂಡ. ದೇಹದಂಡನೆಯಿಂದ, ಬಾಹ್ಯ ಆಚಾರಗಳಿಂದ ಅಥವಾ ಕೇವಲ ಕರ್ಮಮಾರ್ಗದಿಂದ ಉಪಶಾಂತಿ ಒದಗುವುದಿಲ್ಲ. ಅದು ದೃಢವಿಶ್ವಾಸ ಹೊಂದಿದವನಿಗೆ ಮಾತ್ರ ಯೇಸುಕ್ರಿಸ್ತನ ಮೂಲಕ ದೊರಕುವ ವರಪ್ರಸಾದ–ಎಂಬ ಆಳವಾದ ಅನುಭಾವ ಇವನಿಗೆ ಉಂಟಾಯಿತು. ತನ್ನ ನಂಬಿಕೆಗೆ ಆಧಾರಗಳನ್ನು ಈತನು ಸಂತ ಆಗಸ್ಟೀನ್ ಮತ್ತು ಸಂತ ಪೌಲರಲ್ಲಿ ಕಂಡುಕೊಂಡ.

ಪ್ರಾಟೆಸ್ಟಂಟ್ ಸಭೆಗಳ ಅಸ್ತಿತ್ವಕ್ಕೆ ಕಾರಣನಾದ ಲೂಥರ್ ನಿರೂಪಿಸಿದ ಮುಖ್ಯ ಸೂತ್ರಗಳನ್ನು ಹೀಗೆ ಸಂಕ್ಷೇಪವಾಗಿ ಹೇಳಬಹುದು: ಕ್ರಿಸ್ತನ ಬೋಧನೆಗೂ ಜೀವಿತಕ್ಕೂ ಬೈಬಲ್ ಅಲ್ಲದೆ ಬೇರೆ ಯಾವ ಮೂಲವಾಗಲೀ ಆಧಾರವಾಗಲೀ ಇಲ್ಲ. ದೇವರ ವಾಕ್ಯವಾದ ಬೈಬಲ್ಲಿಗೆ ವಿರೋಧವಾಗಿ ಹೋಗುವ ಯಾವ ವಿಷಯಗಳನ್ನೂ ಸ್ವೀಕರಿಸಲಾಗದು. ಪಾಪಿಮಾನವನಿಗೆ ರಕ್ಷಣೆ ದೊರಕುವುದು ಪುಣ್ಯಕಾರ್ಯಗಳಿಂದಲ್ಲ, ಕೇವಲ ಭಕ್ತಿಯಿಂದಲೇ. ಒಳ್ಳೇ ಕೃತ್ಯಗಳು ಅಥವಾ ನೈತಿಕ ಸೂತ್ರಗಳು ಭಕ್ತಿವಿಶ್ವಾಸಗಳ ಫಲಗಳೇ ಹೊರತು, ತಾವಾಗಿ ಅವನ್ನು ಹುಟ್ಟಿಸುವಂಥವಲ್ಲ. ದೇವ ಕೃಪಾಸಾಧನಗಳಾದ ದೀಕ್ಷಾಸ್ನಾನ ಮತ್ತು ಪ್ರಭುಭೋಜನ ಎಂಬ ಎರಡು ಸಂಸ್ಕಾರಗಳು ಮಾತ್ರ ಸ್ವೀಕಾರಾರ್ಹ. ಲೂಥರನ ಆದ್ಯ ಉದ್ದೇಶ ಸಭೆಯನ್ನು ಶುದ್ಧೀಕರಿಸಿ ಪುನರುಜ್ಜೀವನಗೊಳಿಸುವುದೇ ಹೊರತು ಸಭೆಯ ಐಕ್ಯತೆಯನ್ನು ಭಂಗಪಡಿಸುವದಾಗಿರಲಿಲ್ಲ. ಆದರೆ ಆತನ ಬೋಧನೆಯ ಫಲವಾಗಿ ಸಾರ್ವತ್ರಿಕ ಸಭೆಯಲ್ಲಿ ಇನ್ನೊಂದು ವಿಭಾಗ ಅಸ್ತಿತ್ವಕ್ಕೆ ಬಂತು. ಪ್ರಪಂಚದ ದೇಶಗಳಲ್ಲೆಲ್ಲ ಪರಿಣಾಮಕಾರಿ ಯಾದ ಈ ಧಾರ್ಮಿಕ ಸುಧಾರಣೆ ಈ ಒಬ್ಬ ವ್ಯಕ್ತಿಯಿಂದಲೇ ಆಯಿತೆಂದು ಹೇಳಲಿಕ್ಕೆ ಆಗುವುದಿಲ್ಲ. ಲೂಥರನ ನಂಬಿಕೆ, ವಾಕ್ಚಾತುರ್ಯ, ದೇವರ ಮೇಲಿನ ಭರವಸೆ, ಧೈರ್ಯ–ಇವನ್ನು ಗಮನಿಸುವುದು ಅಗತ್ಯವಾದರೂ ಸುಧಾರಣೆ ಮುಂದುವರಿಯಲು ಇತರ ವಿಷಯಗಳೂ ಸಹಾಯಕವಾದುವು. ಆ ಸಮಯದಲ್ಲಿದ್ದ ರೋಮ್ ಸಭೆಯ ಕೀಳ್ಮಟ್ಟ, ಆಧ್ಯಾತ್ಮಿಕ ವಿಷಯಗಳನ್ನು ಬದಿಗೊತ್ತಿದ್ದ ಲೌಕಿಕತ್ವ, ಪೋಪನ ಅಧಿಕಾರಕ್ಕೆ ಒಳಗಾಗಲು ಆಂತರ್ಯದಲ್ಲಿ ಒಪ್ಪದಿದ್ದ ರಾಜಕೀಯ ಮುಂದಾಳುಗಳ ಮನೋಭಾವನೆ, ಯುರೋಪಿನ ಜನಾಂಗಗಳೊಳಗಿದ್ದ ಪರಸ್ಪರ ಸ್ಪರ್ಧೆ–ಇವೆಲ್ಲವುಗಳ ಫಲವಾಗಿ ದೇಶ ದೇಶಗಳಲ್ಲಿ ಪ್ರಾಟೆಸ್ಟಂಟ್ ಸಭೆಗಳು ಬಲವಾಗುತ್ತ ಬಂದುವು. ಕ್ಯಾಲ್ವಿನ್, ಜ್ವಿಂಗ್ಲಿ, ನಾಕ್ಸ್, ವೆಸ್ಲಿ ಮೊದಲಾದ ಮುಂದಾಳುಗಳು ಲೂಥರನ ಸೂತ್ರಗಳನ್ನು ತಮ್ಮ ದೇಶಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಿಗೆ ಅನುಸಾರವಾಗಿ ರೂಪಿಸುತ್ತ ಬಂದರು. ಜರ್ಮನಿಯಲ್ಲಿ ಲೂಥರನ ಸಭೆ, ಸ್ವಿಟ್ಜರ್‌ಲೆಂಡ್‌ನಲ್ಲಿ ಪ್ರೆಸ್ಬಿಟೇರಿಯನ್ ಸಭೆ, ಇಂಗ್ಲೆಂಡಿನಲ್ಲಿ ಆಂಗ್ಲಿಕನ್ ಸಭೆ ಮತ್ತು ಮುಂದಿನ ಶತಮಾನಗಳಲ್ಲಿ ಇಂಥ ಎಷ್ಟೋ ಇತರ ಪ್ರಾಟೆಸ್ಟಂಟ್ ಸಭೆಗಳು ಅಸ್ತಿತ್ವಕ್ಕೆ ಬಂದುವು.

ಈ ಚಳವಳಿಯಿಂದ ಎಚ್ಚೆತ್ತ ರೋಮನ್ ಕೆಥೊಲಿಕ್ ಸಭೆ ಸ್ವಸುಧಾರಣೆಗಾಗಿ ಪ್ರಯತ್ನಗಳನ್ನು ಮಾಡದೆ ಬಿಡಲಿಲ್ಲ. ಟ್ರೆಂಟಿನ ಸಮಿತಿ (1545–64) ಸು.18 ವರ್ಷಗಳ ಕಾಲ ಅನೇಕ ರೀತಿಗಳಲ್ಲಿ ಕೆಥೊಲಿಕ್ ತತ್ತ್ವವನ್ನೂ ಜೀವನವನ್ನೂ ಸುಧಾರಿಸಲು ಪ್ರಯತ್ನಿಸಿತು. ಮುಖ್ಯವಾಗಿ ಲಯೋಲದ ಇಗ್ನೇಷಿಯಸ್‌ನಿಂದ ಸ್ಥಾಪಿತವಾದ ಯೇಸುಪಂಥ (ಜೆಸುಯೆಟ್ ಸಭೆ) ತನ್ನ ಸಂಘಟನಾ ಶಕ್ತಿಯಿಂದಲೂ ಶ್ರೇಷ್ಠ ಧ್ಯೇಯಗಳಿಂದಲೂ ಸಮರ್ಥ ಕಾರ್ಯಗಳಿಂದಲೂ ಕಟ್ಟುನಿಟ್ಟಾದ ಶಿಕ್ಷಣದಿಂದಲೂ ಮುಖ್ಯವಾದ ವಿದ್ಯಾಸಂಸ್ಥೆಗಳ ಮೂಲಕ ಈಗಲೂ ಕೆಲಸ ಮಾಡುತ್ತಿದೆ.

**ಆಧುನಿಕ ಕಾಲ:** ಕ್ರೈಸ್ತಸಭೆಯ ಧರ್ಮಪ್ರಚಾರ ಮಂಡಲಿಗಳು ಪ್ರಪಂಚದಾದ್ಯಂತ ವಿಸ್ತಾರಗೊಳ್ಳಲು ಕಾರಣವಾದವು. ತಮ್ಮ ಧಾರ್ಮಿಕ ಪುನರುಜ್ಜೀವನದೊಡನೆ ಕ್ರೈಸ್ತ ಸಂದೇಶವನ್ನು ಇತರ ದೇಶಗಳ ಜನರಿಗೂ ಸಾರಿ ಹೇಳಿ ಅಲ್ಲೂ ಸಭೆಗಳನ್ನು ಸ್ಥಾಪಿಸಬೇಕೆಂಬ ಆಕಾಂಕ್ಷೆ ಎಷ್ಟೋ ಕ್ರೈಸ್ತರಲ್ಲಿ ಮೂಡಿಬಂತು. ಪರಿಣಾಮವಾಗಿ 1706ರಲ್ಲಿ ದಕ್ಷಿಣ ಭಾರತದ ಟ್ರಾಂಕ್ವೆಬಾರ್ ಎಂಬಲ್ಲಿ ಡೆನ್ಮಾರ್ಕ್ ದೇಶದ ಅರಸನ ಆಶ್ರಯ ಪಡೆದ ಕೆಲವು ಪ್ರಚಾರಕರು ಭಾರತಕ್ಕೆ ಬಂದಿಳಿದರು. 1813ರಲ್ಲಿ ಬ್ರಿಟಿಷರ ಈಸ್ಟ್ ಇಂಡಿಯ ಕಂಪನಿಯವರು ಸಹ ತಮ್ಮ ಪ್ರಚಾರಕರು ಈ ದೇಶಕ್ಕೆ ಬಂದು ಸೇವೆ ಮಾಡಲು ಅನುಮತಿಕೊಟ್ಟರು. ಕೋಲ್ಕತ್ತದ ಪಕ್ಕದಲ್ಲಿರುವ ಈ ದೇಶಕ್ಕೆ ಬಂದು ಸೇವೆ ಮಾಡಲು ಅನುಮತಿಕೊಟ್ಟರು. ಕೋಲ್ಕತ್ತದ ಪಕ್ಕದಲ್ಲಿರುವ ಸೆರಾಂಪೂರ್‌ನಲ್ಲಿ ಬಹು ಪರಿಣಾಮಕಾರಿಯಾಗಿ ಕ್ರೈಸ್ತ ಪ್ರಚಾರ ನಡೆಸಿದ ಪ್ರಸಿದ್ಧ ಭಕ್ತ ವಿಲಿಯಂ ಕ್ಯಾರಿ ಇದೇ ರೀತಿಯಲ್ಲಿ ಬೇರೆ ಬೇರೆ ಸಭೆಗಳಿಗೆ ಸೇರಿದ ಪ್ರಚಾರ ಸಂಸ್ಥೆಗಳು ಏಷ್ಯ ಮತ್ತು ಆಫ್ರಿಕ ಖಂಡಗಳಲ್ಲಿ ತಮ್ಮ ಕೆಲಸವನ್ನಾರಂಭಿಸಿದ್ದರಿಂದ ಆ ದೇಶಗಳಲ್ಲೂ ಕ್ರೈಸ್ತಸಭೆಗಳು ಹುಟ್ಟಿ ಬೆಳೆದವು. ಅಷ್ಟೇ ಅಲ್ಲ, ಎಷ್ಟೋ ವಿದ್ಯಾಸಂಸ್ಥೆಗಳೂ ಆಸ್ಪತ್ರೆಗಳೂ ಇತರ ಸೇವಾ ಕೇಂದ್ರಗಳೂ ಕ್ರಿಸ್ತನ ಸಂದೇಶವನ್ನು ಪ್ರಚುರ ಪಡಿಸಲು ಪ್ರಯತ್ನಿಸುತ್ತಿವೆ.

ಭಾರತದಲ್ಲಿ 1947ರಲ್ಲಿ ದಕ್ಷಿಣ ಭಾರತ ಸಭೆ ಅಸ್ತಿತ್ವಕ್ಕೆ ಬಂತು. ಐಕ್ಯಗೊಂಡ ಈ ಸಭೆಯಲ್ಲಿ 5 ಪ್ರಾಟೆಸ್ಟಂಟ್ ಸಭೆಗಳಿಗೆ ಸೇರಿದ ಸು. 1 ದಶಲಕ್ಷ ಕ್ರೈಸ್ತರಿದ್ದರೆ ಇದೇ ಐಕ್ಯದ ದಾರಿಯಲ್ಲಿ ಶ್ರೀಲಂಕದ, ಉತ್ತರ ಹಿಂದುಸ್ತಾನದ ಮತ್ತು ಆಫ್ರಿಕದ ಸಭೆಗಳೂ ಮುನ್ನಡೆಯುವ ನಿರೀಕ್ಷೆಯಿದೆ.

ಜಾಗತಿಕ ಐಕ್ಯತಾ ಚಳವಳಿಯೊಂದು ಇಡೀ ಪ್ರಪಂಚದ ಕ್ರೈಸ್ತಸಭೆಗಳನ್ನು ಕಾಲಕ್ರಮೇಣ ಒಂದುಗೂಡಿಸಲು ಪ್ರಯತ್ನಿಸುತ್ತಿದೆ. ಸಾರ್ವತ್ರಿಕ ಕ್ರೈಸ್ತಸಭಾಮಂಡಲಿಯ ಮೊದಲನೆಯ ಮಹಾಕೂಟ 1948ರಲ್ಲಿ ಆಮ್‌ಸ್ಟರ್‌ಡ್ಯಾಮ್‌ನಲ್ಲೂ ಇನ್ನೊಂದು ಮಹಾಕೂಟ 1961 ನವೆಂಬರ್, ಡಿಸೆಂಬರ್ ತಿಂಗಳಲ್ಲಿ ನವದೆಹಲಿಯಲ್ಲೂ ಜರುಗಿದುವು.

**ಕ್ರೈಸ್ತ ಧರ್ಮದ ತಿರುಳು:** ಪ್ರಪಂಚದಲ್ಲಿರುವ ಕ್ರೈಸ್ತಸಭೆಗಳೆಲ್ಲ ಸರ್ವಸಾಧಾರಣವಾಗಿ ಕ್ರೈಸ್ತ ತತ್ತ್ವದಲ್ಲಿ ಕೆಲವು ಮುಖ್ಯ ವಿಷಯಗಳನ್ನು ಐಕ್ಯಮತದಿಂದ ಸ್ವೀಕರಿಸಿದರೂ ಅವನ್ನು ನಿರೂಪಿಸುವ ರೀತಿಯಲ್ಲಿ ಅನೇಕ ವೇಳೆ ಭಿನ್ನಾಭಿಪ್ರಾಯಗಳು ಕಂಡು ಬರುತ್ತವೆ. ಆದರೂ ಬೈಬಲ್ ಗ್ರಂಥ, ವಿಶ್ವಾಸ ಪ್ರಮಾಣಗಳು, ಸಭೆಯ ಸಾಮೂಹಿಕ ಆರಾಧನೆ, ಪ್ರಪಂಚದಲ್ಲಿ ಕ್ರೈಸ್ತ ಸಭೆಗಿರುವ ಕರ್ತವ್ಯ ಮತ್ತು ಸ್ಥಾನ–ಇವುಗಳ ವಿಷಯದಲ್ಲಿ ಬಹುಮಟ್ಟಿನ ಸಭೆಯವರು ತಕ್ಕಮಟ್ಟಿಗೆ ಒಮ್ಮತದಿಂದಿದ್ದಾರೆಂದು ಹೇಳಬಹುದು. ಸಾಧಾರಣವಾಗಿ ಅಪೋಸ್ತಲರ ಉಪದೇಶಗಳು ಕ್ರೈಸ್ತಸಭೆಯ ನಂಬಿಕೆಗಳನ್ನು ಸಂಕ್ಷಿಪ್ತ ರೀತಿಯಲ್ಲಿ ನಿರೂಪಿಸುತ್ತವೆ.

(ಎಸ್.ಜೆ.ಎಸ್.ಎ.;ಎಚ್.ಎಸ್.)

ಕ್ರೈಸ್ತ ಧರ್ಮಸಭೆಯ ಆಡಳಿತ: ಆಡಳಿತವರ್ಗದ ಈ ವಿಷಯದಲ್ಲಿ ರೋಮನ್ ಕೆಥೊಲಿಕ್ ಆರ್ಥೊಡಾಕ್ಸ್ ಸಭೆಯವರಿಗೂ ಪ್ರಾಟೆಸ್ಟಂಟರಿಗೂ ಏಕಾಭಿಪ್ರಾಯವಿಲ್ಲವಾಗಿ ಆಡಳಿತ ವರ್ಗಶ್ರೇಣಿ ಒಬ್ಬೊಬ್ಬರಲ್ಲಿ ಒಂದೊಂದು ಬಗೆಯಾಗಿದೆ. ಆದರೂ ಎಲ್ಲ ಶ್ರೇಣಿಗಳಲ್ಲೂ ಬೈಬಲ್ ಗ್ರಂಥದಲ್ಲಿಯೂ ಹುದುವಾಗಿ ಕಂಡುಬರುವ ವಿಷಯಗಳನ್ನು ಹೀಗೆ ಸಂಗ್ರಹಿಸ ಬಹುದು. ಮತ ಪ್ರಚಾರಕ್ಕಾಗಿ ಧರ್ಮಸಭೆ ಆಗಿಂದಾಗ್ಗೆ ದೇಶವಿದೇಶಗಳಿಗೆ ಕಳುಹಿಸಿಕೊಡುವ ಪ್ರಚಾರಕರನ್ನು ಮಿಷನರಿಗಳೆಂದು ಕರೆಯಲಾಗುತ್ತದೆ. ಇವರು ಆಯಾ ಧರ್ಮಸಭೆಯಿಂದಲೂ ಸ್ಥಳೀಯ ಸಂಘಸಂಸ್ಥೆಗಳಿಂದಲೂ ಸಹಾಯ ಪಡೆದುಕೊಂಡು ಶಾಲೆ, ಆಸ್ಪತ್ರೆ ಮುಂತಾದ ಸಾರ್ವಜನಿಕ ಸೇವಾಕಾರ್ಯಗಳನ್ನು ನಡೆಸುತ್ತ ಧರ್ಮಬೋಧನೆ ಮಾಡುತ್ತಿರುತ್ತಾರೆ.

(ಎಸ್.ಎ.ಕೆಯು.)

**ಭಾರತದಲ್ಲಿ ಕ್ರೈಸ್ತಧರ್ಮ:** ಕ್ರೈಸ್ತಧರ್ಮದ ಚರಿತ್ರೆಯನ್ನು ವಿಚಾರ ಮಾಡುವಾಗ ಅದು ಭಾರತದೇಶಕ್ಕೆ ಬಂದ ಬಗೆ ಮತ್ತು ಅದರ ವ್ಯಾಪ್ತಿಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯಕ. ಭರತಖಂಡದಲ್ಲಿ ಹಿಂದು ಧರ್ಮ ಬಹು ಪಕ್ಷೀಯ ಧರ್ಮವಾಗಿದ್ದರೂ ಆರಂಭದಿಂದಲೂ ಇತರ ಧರ್ಮಗಳಿಗೂ ಈ ದೇಶದಲ್ಲಿ ಮನ್ನಣೆ ದೊರಕುತ್ತಾ ಬಂದಿದೆ. ಪ್ರ.ಶ.ದ ಆರಂಭ ಶತಮಾನದಲ್ಲಿಯೇ ಇಲ್ಲಿಗೆ ಬಂದ ಕ್ರೈಸ್ತಧರ್ಮ ಕ್ರಮೇಣ ಬೇರೂರಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಜೀವನಕ್ಕೆ ಸಹಾಯ ಮಾಡುತ್ತಿದೆ ಎಂಬುದು ಇಲ್ಲಿ ಸಮಾಧಾನದ ಸಂಗತಿ.

ದಕ್ಷಿಣ ಭಾರತದಲ್ಲಿ ಕ್ರೈಸ್ತಧರ್ಮದ ಪ್ರಚಾರ ಕಾರ್ಯ ಮೂರೂ ಸಮುದ್ರತೀರಗಳ ರೇವುಗಳಲ್ಲಿ ಆರಂಭವಾಯಿತು. ಪಶ್ಚಿಮ ತೀರದಲ್ಲಿ ಕ್ರಾಂಗನೂರು ಮತ್ತು ಗೋವ, ಪೂರ್ವದಲ್ಲಿ ಟ್ರಾಂಕ್ವಿಬಾರ್–ಈ ಸ್ಥಳಗಳಲ್ಲಿ ಸಿರಿಯನ್, ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಮಿಷನುಗಳು ಸುವಾರ್ತಾ ಸೇವೆಯನ್ನು ಆರಂಭಿಸಿದುವು.

ಪಶ್ಚಿಮ ತೀರಕ್ಕೂ ಪೌರ್ವಾತ್ಯ ಸಭೆಗಳಿಗೂ ಮೊದಲ ಶತಮಾನದಿಂದಲೇ ಸಂಬಂಧ ವಿತ್ತೆಂದು ಹೇಳಬಹುದು. ಅಪೋಸ್ತಲ ಥಾಮಸ್ ತಾನೇ ಸು.52ರಲ್ಲಿ ದಕ್ಷಿಣ ಭಾರತಕ್ಕೆ ಬಂದು ಮಲಬಾರಿನ ತೀರದಲ್ಲಿ ಹಲಕೆಲವು ಸಭೆಗಳನ್ನು ಸ್ಥಾಪಿಸಿದನೆಂದು ಕೇರಳದ ಸಿರಿಯನ್ ಕ್ರೈಸ್ತರು ಹೇಳುವುದುಂಟು. ಆ ಮೇಲೆ ಈ ಭಕ್ತ ಪೂರ್ವ ತೀರಕ್ಕೆ ಹೋಗಿ ಮದರಾಸಿನ ಬಳಿಯಲ್ಲಿ ಕೊಲ್ಲಲ್ಪಟ್ಟನೆಂಬ ಐತಿಹ್ಯವಿದೆ. ಒಟ್ಟಾರೆ ಮೊದಲಿನ ಶತಮಾನದಲ್ಲೇ ಕ್ರೈಸ್ತಧರ್ಮ ಭಾರತಕ್ಕೆ ಬಂತೆನ್ನಬಹುದು. ಆದರೆ ಪ್ರಚಾರಕರು ಸುವಾರ್ತಾ ಸೇವೆಗೆ ಹೆಚ್ಚಿನ ಗಮನ ಕೊಡದಿದ್ದುದರಿಂದ ಅದು ದೇಶದ ಇತರ ಭಾಗಗಳಿಗೆ ಹಬ್ಬಲಿಲ್ಲ.

ವಾಸ್ಕೊಡಗಾಮ 1498ರಲ್ಲಿ ಕಲ್ಲಿಕೋಟೆಗೆ ಬಂದು ಮುಟ್ಟಿದ್ದು ಯುರೋಪ್ ಮತ್ತು ಭಾರತಗಳ ಸಂಪರ್ಕದಲ್ಲೇ ದೊಡ್ಡದೊಂದು ಮೈಲಿಗಲ್ಲು. ಅನಂತರ ಬಹು ಬೇಗನೆ ಪೋರ್ಚುಗಲ್ಲಿನಿಂದ ರೋಮನ್ ಕೆಥೊಲಿಕ್ ಪ್ರಚಾರ ತಂಡಗಳು ಮುಖ್ಯವಾಗಿ ಗೋವ, ಕೊಚ್ಚಿ ಮುಂತಾದ ಸ್ಥಳಗಳನ್ನು ಸೇವಾ ಕೇಂದ್ರಗಳನ್ನಾಗಿ ಮಾಡಿಕೊಂಡು ತಮ್ಮ ಕೆಲಸವನ್ನು ಆರಂಭಿಸಿದುವು. ಭಾರತದ ಅಪೋಸ್ತಲನೆಂದು ಹೆಸರು ಹೊತ್ತು ಫ್ರಾನ್ಸಿಸ್ ಜೇವಿಯರ್ ಎಂಬಾತ ಭಾರತಕ್ಕೆ ಬಂದ ಜೆಸ್ಯೂಟ್ ಪ್ರಚಾರಕರಲ್ಲಿ ಮೊದಲನೆಯವ. ರಾಬರ್ಟ್ ಡಿ. ನೋಬಿಲಿ ಎಂಬಾತ ಸಹ ಹಿಂದು ಸಂಸ್ಕೃತಿಯ ಹಿನ್ನೆಲೆಗೆ ಮನ್ನಣೆ ಕೊಟ್ಟು ಸನ್ಯಾಸಿಯ ಮಾರ್ಗವನ್ನವಲಂಬಿಸಿ ತನ್ನ ಕೆಲಸವನ್ನು ಮುಂದುವರಿಸಿದ. ಮುಂದಣ ಶತಮಾನಗಳಲ್ಲಿ ಕೂಡ ರೋಮನ್ ಕೆಥೊಲಿಕ್ ಪ್ರಚಾರಸಂಸ್ಥೆಗಳು ಮುಖ್ಯವಾಗಿ ತಮ್ಮ ಪ್ರಸಿದ್ಧ ವಿದ್ಯಾಸಂಸ್ಥೆಗಳ ಮೂಲಕ ಈ ದೇಶದಲ್ಲಿ ತಮ್ಮ ಕ್ರೈಸ್ತ ಸೇವೆಯನ್ನು ಮುಂದುವರಿಸುತ್ತಿವೆ. ದೇಶೀಯ ಮುಂದಾಳುಗಳನ್ನು ತರಬೇತು ಮಾಡಿ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡುವ ವಿಷಯದಲ್ಲಿ ರೋಮನ್ ಕೆಥೊಲಿಕ್ ಸಭೆಗಳು ಹೆಚ್ಚಿನ ಪ್ರಯತ್ನ ಮಾಡಿವೆ.

ತಿರುಚಿರಾಪಳ್ಳಿಯ ಹತ್ತಿರವಿರುವ ಟ್ರಾಂಕ್ವಿಬಾರ್ ಎಂಬುದು ದಕ್ಷಿಣ ಭಾರತದಲ್ಲಿ ಪ್ರಾಟೆಸ್ಟಂಟ್ ಕ್ರೈಸ್ತ ಸಭೆಯ ಉಗಮ ಸ್ಥಾನವೆನ್ನಬಹುದು. ಈ ಪಶ್ಚಿಮತೀರದ ಪಟ್ಟಣಕ್ಕೆ 1706ರಲ್ಲಿ ಡೆನ್ಮಾರ್ಕಿನ ಅರಸನ ಆಶ್ರಯ ಹೊಂದಿದ್ದ ಇಬ್ಬರು ಜರ್ಮನ್ ಪ್ರಚಾರಕರು ಬಂದಿಳಿದರು. ತೊಂದರೆ, ಇಕ್ಕಟ್ಟು, ಕಷ್ಟಗಳ ಮಧ್ಯದಲ್ಲಿಯೂ ಇವರ ಸೇವೆ ಫಲದಾಯಕವಾಗಿ ಮುಂದುವರಿಯಿತು. ಜಿಗೆನ್ ಬಾಲ್ಗ್ ನಾಲ್ಕು ಸುವಾರ್ತೆಗಳನ್ನು ತಮಿಳು ಭಾಷೆಗೆ ಭಾಷಾಂತರಿಸಿದ್ದು (1714) ದೊಡ್ಡ ಪ್ರಯತ್ನ. ಈ ಪ್ರಚಾರಕರಲ್ಲಿ ಅತಿ ಪ್ರಸಿದ್ಧನಾದವ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಸು.50 ವರ್ಷಗಳವರೆಗೆ ಸೇವೆ ಮಾಡಿದ ಸಿ.ಎಫ್. ಷ್ವಾರ್ಟ್ಸ್. ತಂಜಾವೂರಿನ ರಾಜನೊಡನೆಯೂ ಹೈದರ್ ಅಲಿಯೊಡನೆಯೂ ಬ್ರಿಟಿಷರೊಡನೆಯೂ ಹೆಚ್ಚಿನ ಸ್ನೇಹ ಸಂಪರ್ಕವನ್ನಿಟ್ಟುಕೊಂಡಿದ್ದರಿಂದ ಈತನಿಗೆ ಕ್ಷಾಮ ಸಮಯಗಳಲ್ಲಿ ಎಷ್ಟೋ ಜನರಿಗೆ ಸಹಾಯ ಮಾಡಲು ಸಾಧ್ಯವಾಯಿತು.

ಕಾಲಕ್ರಮೇಣ ಯುರೋಪು ಮತ್ತು ಅಮೆರಿಕ ಖಂಡಗಳಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದ್ದ ಅನೇಕ ಪ್ರಚಾರಕ ಸಂಸ್ಥೆಗಳು ಈ ದೇಶದಲ್ಲೆಲ್ಲ ಕೆಲಸವನ್ನು ಮುಂದುವರಿಸಿದುವು. ಉತ್ತರ ಹಿಂದುಸ್ತಾನದಲ್ಲಿ ವಿಲಿಯಮ್ ಕ್ಯಾರಿ ಬಂದಿಳಿದಾಗ 1793 ಭಾರತದ ಕ್ರೈಸ್ತ ಸಭಾ ಚರಿತ್ರೆ ಹೊಸತೊಂದು ಮೈಲಿಗಲ್ಲನ್ನು ಮುಟ್ಟಿದಂತಾಯಿತು. ಏಕೆಂದರೆ ಅದುವರೆಗೆ ಭಾರತಕ್ಕೆ ಬಂದಿದ್ದ ಇತರ ಪ್ರಚಾರಕರಂತಲ್ಲದೆ, ಕ್ಯಾರಿ ಒಂದು ಪ್ರಚಾರ ಸಂಸ್ಥೆಯ ಪ್ರತಿನಿಧಿಯಾಗಿ ಭಾರತಕ್ಕೆ ಬಂದ. ಆಧುನಿಕ ಪ್ರಚಾರ ಸೇವೆಯ ಪಿತೃ ಎಂಬ ಬಿರುದು ಕ್ಯಾರಿಗೆ ಸಹಜವಾಗಿ ಸಲ್ಲುತ್ತದೆ. ಬೈಬಲನ್ನು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಿಸುವುದರಲ್ಲಿ, ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವುದರಲ್ಲಿ, ಪತ್ರಿಕೆ ಮತ್ತು ಸಾಹಿತ್ಯ ರಚನೆಗಳನ್ನು ಆರಂಭಿಸುವುದರಲ್ಲಿ ಅನಿವಾರ್ಯವಾಗಿ ಕಷ್ಟ ತೊಂದರೆಗಳಿರುವಾಗಲೂ ತನ್ನ ಧ್ಯೇಯವನ್ನು ಅಚಲವಾಗಿ ಅನುಸರಿಸಿದ ಧೈರ್ಯ ತಾಳ್ಮೆಗಳ ನಿಮಿತ್ತ ಕ್ಯಾರಿಗೆ ಉತ್ತರ ಹಿಂದುಸ್ತಾನದ ಕ್ರೈಸ್ತಧರ್ಮ ಪ್ರಚಾರಕ್ಷೇತ್ರದಲ್ಲಿ ಅಗ್ರಸ್ಥಾನ ಸಲ್ಲಬೇಕು. ಭಕ್ತಿಮಾರ್ಗದ ಅಭಿವೃದ್ಧಿಗಾಗಿಯೂ ವಿದ್ಯಾಭಿವೃದ್ಧಿಗಾಗಿಯೂ ಕ್ರೈಸ್ತತತ್ತ್ವ ನಿರೂಪಣೆಯ ಅಭ್ಯಾಸಕ್ಕಾಗಿಯೂ ಕೋಲ್ಕೊತದ ಹತ್ತಿರವಿರುವ ಸೆರಾಂಪೂರ್‌ನಲ್ಲಿ ಒಂದು ದೊಡ್ಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಏಷ್ಯ ಖಂಡದಲ್ಲಿ ಇದು ಸ್ಥಾಪಿತವಾದ ಇಂಥ ಆದ್ಯ ವಿಶ್ವವಿದ್ಯಾಲಯಗಳಲ್ಲಿ ಒಂದೆನಿಸಿದೆ.

ಇಂದು ಭಾರತದ ಕ್ರೈಸ್ತಸಭೆಯಲ್ಲಿ ಸು.10 ದಶಲಕ್ಷಕ್ಕೂ ಹೆಚ್ಚಿನ ಸದಸ್ಯರಿದ್ದಾರೆ. ಅನೇಕ ಪ್ರಚಾರ ಸಂಘಗಳು ತಮ್ಮ ಆಡಳಿತದ ಜವಾಬ್ದಾರಿಯನ್ನು ಭಾರತೀಯ ಸಭೆಗಳಿಗೆ ಕ್ರಮೇಣ ಒಪ್ಪಿಸಿಕೊಡುವ ಧೋರಣೆಯನ್ನು ಮುಂದುವರಿಸುತ್ತಿವೆ. ಕ್ರೈಸ್ತ ಪ್ರಚಾರ ಸಂಘಗಳ ಸೇವೆಯ ಫಲವಾಗಿ ದೇಶಕ್ಕೆ ಅನೇಕ ರೀತಿಯ ಪ್ರಯೋಜನಗಳಾಗಿವೆ. ಭಾರತದ ಭಾಷೆಗಳ ಪ್ರಗತಿಗೆ, ಸಾಹಿತ್ಯ ರಚನೆಗೆ ಅನೇಕ ಪಾದ್ರಿಗಳು ಸ್ಫೂರ್ತಿ, ಸಹಾಯಗಳನ್ನು ನೀಡಿದ್ದಾರೆ, ನೀಡುತ್ತಿದ್ದಾರೆ. ತಮಿಳು ಭಾಷೆಯಲ್ಲಿ ಫಾದರ್ ಬೆಶಿ, ಕನ್ನಡದಲ್ಲಿ ಕಿಟ್ಟೆಲ್, ಬಂಗಾಲಿಯಲ್ಲಿ ಕೇರಿ ಮೊದಲಾದವರು ಈ ವಿಷಯದಲ್ಲಿ ಮಾಡಿದ ಸೇವೆ ಗಮನಾರ್ಹವಾಗಿದೆ. ಅಲ್ಲದೆ ದೇಶದ ಬಡಜನ ಸಾಮಾಜಿಕ, ಆರ್ಥಿಕ ಕಷ್ಟಕ್ಕೊಳಗಾದವರಿಗೆ ನಾನಾ ವಿಧವಾಗಿ ಸೇವೆ ಮಾಡುವುದರ ಮೂಲಕ ಪ್ರಚಾರಸಂಸ್ಥೆಗಳು ಎಷ್ಟೋ ಸುಧಾರಣಾ ಕೆಲಸಗಳಿಗೆ ಸ್ಫೂರ್ತಿ ನೀಡಿವೆ. ಮಾರ್ಗದರ್ಶನ ಮಾಡಿವೆ. ಆಸ್ಪತ್ರೆಗಳು, ಅನಾಥಾಲಯಗಳು, ಶಾಲೆಗಳು, ವಿಶ್ವವಿದ್ಯಾಲಯಗಳು, ಇನ್ನೂ ಅನೇಕ ಸೇವಾ ಕೇಂದ್ರಗಳು–ಇವುಗಳ ಮೂಲಕ ಕ್ರೈಸ್ತಧರ್ಮವನ್ನು ಪ್ರಚುರಪಡಿಸುವ ಕಾರ್ಯ ಮುಂದುವರಿಯುತ್ತಿದೆ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಮತ್ತು ಅದೇ ವರ್ಷದಲ್ಲಿ ದಕ್ಷಿಣ ಭಾರತ ಸಂಘಟಿತ ಸಭೆಯ ಸ್ಥಾಪನೆಯಾದ ಮೇಲೆ ಕ್ರೈಸ್ತಧರ್ಮ ಜನರ ಜೀವನದಲ್ಲಿ ಹೆಚ್ಚಿನ ಪ್ರಭಾವ ಬೀರಿದೆ. ತಿರುಪತ್ತೂರಿನಲ್ಲಿ 1921ರಲ್ಲಿ ಸ್ಥಾಪಿತವಾದ ಕ್ರಿಸ್ತಕುಲ ಆಶ್ರಮ ಮತ್ತೊಂದು ಉದಾಹರಣೆ. ಜೊತೆಗೆ ಕ್ರೈಸ್ತ ತತ್ತ್ವ ನಿರೂಪಣೆಯಲ್ಲಿ ಭಾರತದ ವಿಚಾರ ಸರಣಿಯನ್ನು ಉಪಯೋಗಿಸುವುದರ ಮೂಲಕವೂ ಸಭೆಯ ಸಾಮೂಹಿಕ ಆರಾಧನೆಗಳಲ್ಲಿ ದೇಶೀಯ ಭಜನೆ, ಸಂಗೀತ ಮುಂತಾದವನ್ನು ಬಳಕೆಗೆ ತರುವುದರ ಮೂಲಕವೂ ಕ್ರೈಸ್ತಧರ್ಮ ತನ್ನ ತಿರುಳನ್ನು ಕಾಪಾಡಿಕೊಂಡೇ ಭಾರತೀಯ ಸಂಸ್ಕೃತಿಯಲ್ಲಿ ಬೇರು ಬಿಡಲು ಹೆಚ್ಚಿನ ಪ್ರಯತ್ನ ಮಾಡುತ್ತಲಿದೆ. ಜಾತಿ ಮತ ಭೇದಗಳಿಲ್ಲದೆ ಸ್ನೇಹ, ಪ್ರೀತಿ, ಅನ್ಯೋನ್ಯತೆಗಳನ್ನು ಕ್ರಿಸ್ತನ ಸಂದೇಶದ ಆಧಾರದ ಮೇಲೆ ಕಟ್ಟುವ ಮನಸ್ಸು, ಜನಾಂಗ ಜೀವನದಲ್ಲಿ ಜವಾಬ್ದಾರಿಕೆಯಿಂದ ಭಾಗವಹಿಸುವ ಧೋರಣೆ–ಇವನ್ನು ಭಾರತದ ಸಭೆಯಲ್ಲೀಗ ಹೆಚ್ಚು ಹೆಚ್ಚಾಗಿ ಕಂಡುಕೊಳ್ಳಲಾಗಿದೆ. ಒಟ್ಟಾರೆ ಹೇಳುವುದಾದರೆ ಕ್ರೈಸ್ತಧರ್ಮ ಭಾರತದಲ್ಲಿ ಬೇರೂರಿ ಇತರ ಧರ್ಮಗಳ ಮಧ್ಯೆ ಮನ್ನಣೆಯ ಸ್ಥಾನವನ್ನು ಗಳಿಸಿಕೊಂಡಿದೆ.

(ಎಸ್.ಜೆ.ಎಸ್.ಎ.;ಡಿ.ವಿ.ಡಬ್ಲ್ಯು.)

**ಕ್ಲೈವ್, ರಾಬರ್ಟ್:** 1725–74. ಭಾರತದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಸ್ಥಾಪನೆಗೆ ಕಾರಣರಾದವರಲ್ಲೊಬ್ಬ ಹಾಗೂ ಬ್ರಿಟಿಷ್ ಸೈನಿಕ, ರಾಜಕಾರಣಿ. ಇವನ ತಂದೆ ದೀರ್ಘಕಾಲ ಪಾರ್ಲಿಮೆಂಟ್ ಸದಸ್ಯನಾಗಿದ್ದ. ಬಾಲ್ಯದಲ್ಲಿ ಅಪ್ರಯೋಜಕನೂ ತುಂಟನೂ ಆಗಿದ್ದ ಇವನು ಹೆಚ್ಚು ಕಲಿಯಲಿಲ್ಲ. ಬೇಸರಗೊಂಡ ತಂದೆ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ಗುಮಾಸ್ತಗಿರಿಯನ್ನು ದೊರಕಿಸಿಕೊಟ್ಟು ಇವನನ್ನು 18ನೆಯ ವಯಸ್ಸಿನಲ್ಲಿ ಭಾರತಕ್ಕೆ ಕಳಿಸಿದ (1743). ಮದರಾಸಿನಲ್ಲಿ ಗುಮಾಸ್ತನಾಗಿದ್ದ ಇವನು ಜಗಳಗಂಟನಾಗಿದ್ದು ಒಂಟಿತನದ ಜೀವನ ನಡೆಸುತ್ತಿದ್ದ. ಬಾಳಿನಲ್ಲಿ ಬೇಸರಹೊಂದಿ ಎರಡು ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿ ಬದುಕಿಕೊಂಡಾಗ ತನ್ನಿಂದ ಯಾವುದೋ ಮಹತ್ಕಾರ್ಯ ನಡೆಯಬೇಕಾಗಿರುವುದರಿಂದ ದೇವರು ತನ್ನನ್ನು ಉಳಿಸಿದುದಾಗಿ ಬಗೆದು ವಿದ್ಯಾಭ್ಯಾಸದ ಕಡೆಗೆ ಗಮನ ನೀಡತೊಡಗಿದ. ದಕ್ಷಿಣ ಭಾರತದಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ಹೋರಾಟಗಳು ನಡೆಯುತ್ತಿದ್ದಾಗ ಅವನಿಗೆ ಸೈನಿಕ ವೃತ್ತಿಗೆ ನುಸುಳಿಕೊಳ್ಳುವ ಅವಕಾಶ ದೊರಕಿತು. 1746ರಲ್ಲಿ ಫ್ರೆಂಚರಿಗೆ ಸೆರೆ ಸಿಕ್ಕಿದರೂ ಅವರಿಂದ ತಪ್ಪಿಸಿಕೊಂಡು ಪುನಃ ಇಂಗ್ಲಿಷ್ ಪಡೆಗಳನ್ನು ಸೇರಿದ. ಕರ್ನಾಟಕದ ಸುಲ್ತಾನ್ ಪದವಿಗಾಗಿ ನಡೆಯುತ್ತಿದ್ದ ಹೋರಾಟಗಳಲ್ಲಿ ಫ್ರೆಂಚರ ಬೆಂಬಲ ಪಡೆದ ಚಂದಾಸಾಹೇಬ ಬ್ರಿಟಿಷರ ಬೆಂಬಲಿಗ ಮಹಮ್ಮದಾಲಿಯ ವಿರುದ್ಧ 1751ರಲ್ಲಿ ತಿರುಚಿರಾಪಳ್ಳಿಯ ಕೋಟೆಗೆ ಮುತ್ತಿಗೆ ಹಾಕಿದಾಗ ಚಂದಾಸಾಹೇಬನ ರಾಜಧಾನಿ ಆರ್ಕಾಟನ್ನು ರಾಬರ್ಟ್ ಕ್ಲೈವ್ ವಶಪಡಿಸಿಕೊಂಡು ಮಹಮ್ಮದಾಲಿಯ ತೊಂದರೆಗಳನ್ನು ಕೊನೆಗಾಣಿಸಿದ. ತರುವಾಯ ಗೆರಿಲ್ಲ ಕದನಗಳಲ್ಲಿ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ಕರ್ನಾಟಕದಲ್ಲಿ ಫ್ರೆಂಚರು ಬ್ರಿಟಿಷರಿಗೆ ಮಣಿಯುವಂತೆ ಮಾಡಿದ. 1753ರಲ್ಲಿ ತನ್ನ ವಿಜಯಗಳಿಂದ ಸಾಕಷ್ಟು ಐಶ್ವರ್ಯಗಳಿಸಿಕೊಂಡು ಬ್ರಿಟನ್ನಿಗೆ ಹಿಂದಿರುಗಿದ. ಭಾರತದಲ್ಲಿದ್ದಾಗಲೇ ಮಾರ್ಗರೇಟ್ ಮ್ಯಾಸ್ಕಿಲೀನಳೊಡನೆ ಈತನ ವಿವಾಹವಾಗಿತ್ತು.

1755ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಅವನಿಗೆ ಸೋಲಾಯಿತು. ಫೋರ್ಟ್‌ಸೇಂಟ್ ಡೇವಿಡ್‌ನ ಮತ್ತು ಮದರಾಸಿನ ಗವರ್ನರ್ ಆಗಿಯೂ ಬ್ರಿಟಿಷ್ ಸೈನ್ಯದಲ್ಲಿ ಕರ್ನಲ್ ಆಗಿಯೂ ನೇಮಕಗೊಂಡು ಆತ ಮರಳಿ ಭಾರತಕ್ಕೆ ಬಂದ. ದಕ್ಷಿಣ ಭಾರತದಿಂದ ಫ್ರೆಂಚರನ್ನು ಹೊಡೆದೋಡಿಸುವುದೇ ಆ ಹುದ್ದೆಯಲ್ಲಿ ಅವನ ಮುಖ್ಯ ಧ್ಯೇಯವಾಗಿತ್ತು.

1756 ಜೂನ್ ಇವನು ಮದರಾಸಿಗೆ ಬಂದೊಡನೆ ಬಂಗಾಲದ ರಾಜಕೀಯ ತೊಡಕಿನಲ್ಲಿ ಸಿಲುಕಿಕೊಳ್ಳಬೇಕಾಯಿತು. ಬಂಗಾಲದ ರಾಜಧಾನಿ ಕೋಲ್ಕೊತ ಪ್ರಮುಖ ವ್ಯಾಪಾರಕೇಂದ್ರವಾಗಿತ್ತು. ಅಲ್ಲಿ ಬ್ರಿಟಿಷರು ತಮ್ಮ ವ್ಯಾಪಾರ ಕೋಠಿಯ ಸುತ್ತ ಕೋಟೆ ಕಟ್ಟಿಸಲು ಪ್ರಯತ್ನಿಸಿದರು. ಬಂಗಾಲದ ನವಾಬ ಸಿರಾಜುದ್ದೌಲ ಅದನ್ನು ನಿಷೇಧಿಸಿ 1756ರಲ್ಲಿ ಅದನ್ನು ವಶಪಡಿಸಿಕೊಂಡ. ಅವನಿಂದ ಅದನ್ನು ಬಿಡಿಸಿಕೊಳ್ಳಲು ನೌಕಾಧಿಕಾರಿ ವ್ಯಾಟ್ಸನನ ನೇತೃತ್ವದಲ್ಲಿ ಕ್ಲೈವನೂ ಹೋದ. 1757ರಲ್ಲಿ ನಡೆಸಿದ ಪ್ಲಾಸಿ ಕದನದಲ್ಲಿ ಕೋಲ್ಕತವನ್ನು ವಶಪಡಿಸಿಕೊಂಡು ಸಿರಾಜುದ್ದೌಲನೊಡನೆ ಸಂಧಿ ಮಾಡಿಕೊಳ್ಳಲಾಯಿತು. ಅಲ್ಲಿ ಕೋಟೆಯನ್ನು ನಿರ್ಮಿಸಲು ಬ್ರಿಟಿಷರಿಗೆ ಅನುಮತಿ ದೊರಕಿತು. ಅನಂತರ ಚಂದ್ರನಗರದಲ್ಲಿದ್ದ ಫ್ರೆಂಚರ ವಸಾಹತನ್ನು ವಶಪಡಿಸಿಕೊಳ್ಳಲಾಯಿತು. ಇವನು ಭೇದನೀತಿಯನ್ನನುಸರಿಸಿ ಬಂಗಾಲದ ನವಾಬಗಿರಿಗೆ ಸಿರಾಜುದ್ದೌಲನ ಅಧಿಕಾರಿಗಳಲ್ಲೊಬ್ಬನಾದ ಮೀರ್‌ಜಾಫರನನ್ನು ನೇಮಿಸಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡ. ಈ ಕಾರ್ಯದಲ್ಲಿ

ಸಹಕಾರ ನೀಡಲಿಲ್ಲವೆಂದು ಕೋಲ್ಕೊತದ ಶ್ರೀಮಂತರಲ್ಲೊಬ್ಬನಾದ ಅಮೀನ್ ಚಂದನಿಗೆ ಅಪಾರ ಧನದಾಸೆ ತೋರಿಸಿ ಬಾಯಿ ಮುಚ್ಚಿಸಲಾಯಿತು. ಅನಂತರ ಅಮೀನ್‌ಚಂದನಿಗೆ ಮೋಸ ಮಾಡಿದುದರಿಂದ ಅವನು ಹುಚ್ಚನಾಗಿ ಮೃತನಾದ.

ಈ ರೀತಿ ಬಂಗಾಲದಲ್ಲಿ ಬ್ರಿಟಿಷರ ಪ್ರಾಬಲ್ಯ ಹೆಚ್ಚಿಸಿದ ಇವನು 1760ರ ವರೆಗೂ ಬಂಗಾಲದಲ್ಲೇ ಗವರ್ನರ್ ಅಧಿಕಾರದಲ್ಲಿದ್ದ. ಬಂಗಾಲವನ್ನು ವಶಪಡಿಸಿಕೊಳ್ಳಲು ಬಂದ ಮೊಗಲ್ ಸೈನ್ಯ 1759ರಲ್ಲಿ ಸೋತುಹೋಯಿತು. ಚಿನ್‌ಸುರಾದಲ್ಲಿದ್ದ ಡಚ್ಚರ ವಸಾಹತನ್ನು ಉಪಾಯದಿಂದ ನಾಶಗೊಳಿಸಿದ. 1760ರಲ್ಲಿ ಇವನು ಇಂಗ್ಲೆಂಡಿಗೆ ವಾಪಸಾಗುವ ವೇಳೆಗೆ ಮೀರ್‌ಜಾಫರನ ಅಧಿಕಾರದಲ್ಲಿ ಬಂಗಾಲದಲ್ಲಿ ಬ್ರಿಟಿಷ್ ಪ್ರಭಾವ ನಿರುಪಾಧಿಕವಾಗಿತ್ತು. ಮೀರ್‌ಜಾಫರ್ ಪೂರ್ಣವಾಗಿ ಬ್ರಿಟಿಷರ ವಶವರ್ತಿಯಾಗಿದ್ದ. ತನ್ನ ಈ ಅಧಿಕಾರಾವಧಿಯಲ್ಲಿ ಕ್ಲೈವ್ ಅನುಸರಿಸಿದ ನೀತಿಯಿಂದ ಬಂಗಾಲಕ್ಕೂ ಈಸ್ಟ್ ಇಂಡಿಯ ಕಂಪನಿಗೂ ಅನೇಕ ಕಷ್ಟಗಳೊದಗಿದುವು. ತನಗೂ ಕಂಪನಿಯ ಇತರ ಸ್ಥಳೀಯ ಅಧಿಕಾರಿಗಳಿಗೂ ನವಾಬನ ಬೊಕ್ಕಸದಿಂದ ಹೆಚ್ಚಿನ ಹಣ ದೊರೆಯುವಂತೆ ಮಾಡಿಕೊಂಡಿದ್ದಲ್ಲದೆ, ಕಂಪನಿಯ ಮತ್ತು ಅದರ ನೌಕರರ ವ್ಯಾಪಾರ ಸರಕುಗಳ ಮೇಲೆ ಸುಂಕಗಳನ್ನು ವಿಧಿಸದಂತೆ ಏರ್ಪಾಡು ಮಾಡಿಕೊಂಡಿದ್ದರಿಂದ ನವಾಬನ ಬೊಕ್ಕಸ ಬರಿದಾಗಿ ತೊಂದರೆ ಉದ್ಭವಿಸಿತು. ಕಂಪನಿಯ ನೌಕರರಲ್ಲಿ ಲಂಚಗುಳಿತನ ಹೆಚ್ಚಿತು. ಇಷ್ಟಾದರೂ ಇವನ ಅಧಿಕಾರ ಮಹತ್ತ್ವಪೂರಿತವಾದುದಾಗಿತ್ತು.

ಇವನು 1760ರ ಫೆಬ್ರವರಿಯಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದಾಗ ಅವನಿಗೆ ಬ್ಯಾರನ್ ಪದವಿಯನ್ನೂ (1762) ಸರ್ ಎಂಬ ಬಿರುದನ್ನೂ (1764) ಕೊಡಲಾಯಿತು. ಪ್ರಧಾನ ಮಂತ್ರಿ ವಿಲಿಯಂ ಪಿಟ್ ಅವನನ್ನು ಸ್ವರ್ಗದಿಂದಿಳಿದು ಬಂದ ದಳಪತಿ ಎಂದು ಹೊಗಳಿದ. ಇವನು ಇಂಗ್ಲೆಂಡಿನಲ್ಲಿ ಜಮೀನನ್ನು ಕೊಂಡು ಅಲ್ಲೇ ನೆಲೆಸಿದ; ಪಾರ್ಲಿಮೆಂಟಿಗೆ ಚುನಾಯಿತನಾದ. ಇಂಗ್ಲೆಂಡಿನ ರಾಜಕೀಯದಲ್ಲಿ ಪ್ರಾಬಲ್ಯ ಗಳಿಸುವುದು ಅವನ ಆಸೆಯಾಗಿತ್ತು. ಆದರೆ ರಾಜಕೀಯದಲ್ಲೂ ಈಸ್ಟ್ ಇಂಡಿಯ ಕಂಪನಿಯ ಆಡಳಿತವರ್ಗದಲ್ಲೂ ಇದ್ದ ಅಸೂಯಾಪರರೂ ದ್ವೇಷಿಗಳೂ ಅವನ ಪ್ರಗತಿಗೆ ಅಡ್ಡಿಯನ್ನುಂಟುಮಾಡಿದರು.

1764ರ ವೇಳೆಗೆ ಭಾರತದಲ್ಲಿ ಕಂಪೆನಿಯ ವ್ಯವಹಾರ ಹದಗೆಟ್ಟಿತ್ತು. ಮೀರ್‌ಜಾಫರ್‌ನನ್ನು ಅಧಿಕಾರದಿಂದ ತಳ್ಳಿ ಆ ಪದವಿಗೆ ಮೀರ್‌ಖಾಸಿಮನನ್ನು ತರಲಾಗಿತ್ತು. 1763ರಲ್ಲಿ ಅವನನ್ನು ನವಾಬಪದವಿಯಿಂದ ಕಿತ್ತು ಹಾಕಲಾಯಿತು. ಮೊಗಲ್ ಚಕ್ರವರ್ತಿ ಷಾ ಆಲಂ ಬಂಗಾಲದ ಮೇಲೆ ಧಾಳಿ ಮಾಡಿದ್ದರಿಂದ ಕಂಪನಿಗೆ ದುರ್ದೆಶೆಯುಂಟಾಗಿತ್ತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪುನಃ ಇವನನ್ನು ಬಂಗಾಲದ ಗವರ್ನರಾಗಿಯೂ ಉಚ್ಚ ಸೈನ್ಯಾಧಿಕಾರಿಯಾಗಿಯೂ ನೇಮಿಸಿ ಸಲಹಾಸಮಿತಿಯ ಸೂಚನೆಗಳನ್ನು ಅತಿಕ್ರಮಿಸುವ ಅಧಿಕಾರವನ್ನೂ ನೀಡಿ 1765ರಲ್ಲಿ ಕೋಲ್ಕೊತಗೆ ಕಳಿಸಲಾಯಿತು. ಆ ವೇಳೆಗೆ ಬಕ್ಸಾರ್ ಕದನ ಮುಗಿದಿದ್ದು ಅಯೋಧ್ಯೆಯ ನವಾಬ ಷೂಜಾ ಉದ್ದೌಲ ಓಡಿಹೋಗಿದ್ದ. ಮೊಗಲ್ ಚಕ್ರವರ್ತಿ ಬ್ರಿಟಿಷರ ಅನುವರ್ತಿಯಾಗಿದ್ದ. ಆದರೂ ಬಂಗಾಲದಲ್ಲಿ ಹೆಚ್ಚಿನ ಅರಾಜಕತೆ ತುಂಬಿತ್ತು.

ಈ ಪರಿಸ್ಥಿತಿಯಲ್ಲಿ ಇವನು ಕೈಕೊಂಡ ಧೋರಣೆಗಳಿಂದ ಇವನ ರಾಜಕಾರ್ಯಪಟುತ್ವ ಬೆಳಕಿಗೆ ಬಂತು. ಕಂಪನಿಯ ಅಧಿಕಾರವನ್ನು ಬಂಗಾಲ ಬಿಹಾರಗಳಿಗೆ ಸೀಮಿತಗೊಳಿಸಿಕೊಂಡು, ಅಯೋಧ್ಯೆಯನ್ನು ಷೂಜಾ ಉದ್ದೌಲನಿಗೆ ಹಿಂದಿರುಗಿಸಲಾಯಿತು. ಮೊಗಲ್ ಚಕ್ರವರ್ತಿ ಷಾ ಆಲಮನಿಂದ ಅಲಹಾಬಾದ್ ಮತ್ತು ಕೋರಾ ಪ್ರದೇಶಗಳನ್ನೂ ವಾರ್ಷಿಕ ಕಪ್ಪವನ್ನೂ ಬಂಗಾಲದ ದಿವಾನ್ ಪದವಿಯನ್ನೂ ಕಂಪನಿಗೆ ದೊರಕಿಸಿಕೊಂಡು ಪ್ರತಿಯಾಗಿ ಅವನಿಗೆ ಬ್ರಿಟಿಷರ ನೆರವಿನ ಭರವಸೆ ನೀಡಲಾಯಿತು. ಅನಂತರ ಬಂಗಾಲದ ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸುವುದರ ಕಡೆಗೆ ಕ್ಲೈವ್ ಗಮನ ನೀಡಿದ. ಬಂಗಾಲದಲ್ಲಿ ದ್ವಿಸರ್ಕಾರ ಪದ್ಧತಿಯನ್ನು ಜಾರಿಗೆ ತಂದು ಆಡಳಿತವನ್ನು ಕಂಪನಿಯ ವಶಕ್ಕೆ ಒಳಪಡಿಸಿದ. ಕಂಪನಿಯ ನೌಕರರಲ್ಲಿದ್ದ ಅವಿಧೇಯತೆಯನ್ನು ಮಟ್ಟ ಹಾಕಿ, ಸಲಹಾಸಮಿತಿಯನ್ನು ವಿಸರ್ಜಿಸಿದ. ನೌಕರರು ರೂ.1,000 ಗಳಿಗಿಂತ ಹೆಚ್ಚಿನ ಮೌಲ್ಯದ ವಸ್ತುಗಳನ್ನು ಯಾರಿಂದಲೂ ತನ್ನ ಅನುಮತಿಯಿಲ್ಲದೆ ಸ್ವೀಕರಿಸಬಾರದೆಂಬ ನಿಯಮವನ್ನು ಜಾರಿಗೆ ತಂದ. ನೌಕರರು ನಡೆಸುತ್ತಿದ್ದ ಸ್ವಂತ ವ್ಯಾಪಾರವನ್ನು ನಿಷೇಧಿಸಲಾಯಿತು. ಆದರೆ ಅವರಿಗೆ ಅಲ್ಪ ಸಂಬಳ ಬರುತ್ತಿದ್ದುದರಿಂದ ಅವರ ಜೀವನ ನಡೆಯುವುದೇ ಕಷ್ಟವಾಗಿದ್ದುದರಿಂದ ಅವರಿಗೆ ಉಪ್ಪಿನ ವ್ಯಾಪಾರದ ಏಕಸ್ವಾಮ್ಯವನ್ನು ಒಂದು ವ್ಯಾಪಾರ ಸಂಸ್ಥೆಯ ಮೂಲಕ ವಹಿಸಿಕೊಟ್ಟ. ಸೈನಿಕರ ಅಶಿಸ್ತನ್ನು ಮಟ್ಟ ಹಾಕಿದ್ದರಿಂದ ಕ್ಲೈವನಿಗೆ ಅವರಿಂದ ತೊಂದರೆಯಾದರೂ ದೃಢಸಂಕಲ್ಪದಿಂದ ಅವರನ್ನು ಎದುರಿಸಿದ. ಹೀಗೆ ಭಾರತದಲ್ಲಿ ತನ್ನ ಅಧಿಕಾರಾವಧಿಯಲ್ಲಿ ಹಲವಾರು ಸುಧಾರಣೆಗಳನ್ನು ರೂಢಿಸಿ ಬ್ರಿಟಿಷ್ ಅಧಿಕಾರ ಇಲ್ಲಿ ನೆಲಸಲು ಕಾರಣನಾದ.

1767ರ ಫೆಬ್ರವರಿಯಲ್ಲಿ ಇವನು ಇಂಗ್ಲೆಂಡಿಗೆ ಹಿಂದಿರುಗಿದ. ಇವನ ವಿರೋಧಿಗಳು ಪುನಃ ಪ್ರಬಲರಾದರು. ಲಾರ್ಡ್ ಚ್ಯಾಟಾಮ್‌ನ ನಾಯಕತ್ವದಲ್ಲಿ ಕಂಪನಿಯ ನಿರ್ದೇಶಕ ಮಂಡಳಿಯ ಕೆಲವರು ಭಾರತದಲ್ಲಿ ಇವನ ಆಡಳಿತದ ಬಗ್ಗೆ ಆಪಾದನೆಗಳನ್ನು ಮಾಡಿದರು. 1772ರಲ್ಲಿ ಪಾರ್ಲಿಮೆಂಟಿನಲ್ಲಿ ಇವನ ವಿರುದ್ಧ ಆಪಾದನೆಗಳನ್ನು ಚರ್ಚಿಸಲಾಯಿತು. ತನಗಿದ್ದ ಸಂದರ್ಭಗಳನ್ನು ಪೂರ್ಣವಾಗಿ ಸ್ವಾರ್ಥಕ್ಕೆ ಉಪಯೋಗಿಸಿಕೊಂಡಿದ್ದಲ್ಲಿ ಅಪಾರ ಐಶ್ವರ್ಯವನ್ನು ಸಂಗ್ರಹಿಸಬಹುದಾಗಿದ್ದರೂ ತಾನು ಆ ರೀತಿ ಮಾಡಲಿಲ್ಲವೆಂದು ವಾದಿಸಿದ. ಕೊನೆಗೆ ಇವನನ್ನು ಆ ಆಪಾದನೆಗಳಿಂದ ವಿಮೋಚನೆಗೊಳಿಸಿದರೂ ಈತ ನಿರಾಶನಾಗಿ 1774 ನವೆಂಬರ್ 22ರಂದು ಆತ್ಮಹತ್ಯೆ ಮಾಡಿಕೊಂಡ. ತ್ವರಿತಗತಿಯಲ್ಲಿ ಉಚ್ಚಸ್ಥಾನಕ್ಕೇರಿದ ಇವನು ಆರಂಭದೆಶೆಯಲ್ಲಿ ಆ ಕಾಲಕ್ಕೆ ಸಾಮಾನ್ಯವೆನಿಸಿದ ತಪ್ಪುಗಳನ್ನು ಮಾಡಿದ್ದುಂಟು. ಇವನ ವಿರೋಧಿಗಳು ಇವನನ್ನು ಎತ್ತಿಹಿಡಿದು ಇವನ ಮನಶ್ಶಾಂತಿ ಮತ್ತು ಗೌರವಗಳಿಗೆ ಕೊಡಲಿ ಪೆಟ್ಟು ಹಾಕಿದರು. (ಬಿ.ಎಂ.)

**ಕ್ಷೇಮೇಂದ್ರ:** 990–1070. ಕಾಶ್ಮೀರದ ಕವಿಗಳಲ್ಲಿ ಅಗ್ರಗಣ್ಯನೆನಿಸಿರುವ ಈತ ಬಹು ವಿದ್ಯಾಪಾರಂಗತನಾಗಿದ್ದು ಸಂಸ್ಕೃತ ಸಾಹಿತ್ಯದ ವಿಭಿನ್ನ ಕ್ಷೇತ್ರಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾನೆ. ವಿದ್ಯಾವಿವೃತ್ತಿಯನ್ನು (ಪ್ರತ್ಯಭಿಜ್ಞಾ ವಿವೃತಿ ವಿಮರ್ಶಿನಿ) ರಚಿಸಿದ ಅಭಿನವಗುಪ್ತನಲ್ಲಿ ತಾನು ಸಾಹಿತ್ಯ ಶಾಸ್ತ್ರವನ್ನು ಕಲಿತುದಾಗಿ ತನ್ನ ಬೃಹತ್ಕಥಾಮಂಜರಿಯಲ್ಲಿ ಹೇಳಿಕೊಂಡಿದ್ದಾನೆ. ಅಭಿನವಗುಪ್ತ ಪ್ರತ್ಯಭಿಜ್ಞಾದರ್ಶನ ವ್ಯಾಖ್ಯಾನ ಬರೆದುದು 1014ರಲ್ಲಿ. ಈ ಆಧಾರದ ಮೇಲೆ ಕ್ಷೇಮೇಂದ್ರ ಸು. 990ರಲ್ಲಿ ಹುಟ್ಟಿದವನಾಗಿರಬೇಕೆಂದು ಭಾವಿಸಲಾಗಿದೆ. ಕಾಶ್ಮೀರದಲ್ಲಿ ಆಳಿದ ರಾಜಾ ಅನಂತರ (1022–63) ಆಸ್ಥಾನದಲ್ಲಿ ತಾನು ಕವಿಯಾಗಿದ್ದುದಾಗಿಯೂ ತನ್ನ ಹಲವಾರು ಕೃತಿಗಳ ಸಮಾಪ್ತಿವಾಕ್ಯಗಳಲ್ಲಿ ಈತನೇ ಹೇಳಿಕೊಂಡಿರುವುದಲ್ಲದೆ ಬೃಹತ್ಕಥಾಮಂಜರಿ ಸಮಯಮಾತೃಕಾ ಮತ್ತು ದಶಾವತಾರ ಚರಿತಗಳಲ್ಲಿ ತಾನು ಅವನ್ನು ರಚಿಸಿದ ಕಾಲವನ್ನೂ ಬರೆದಿಟ್ಟಿದ್ದಾನೆ. ಅದರಂತೆ ಈಗ ಉಪಲಬ್ಧವಾಗಿರುವ ಕೃತಿಗಳಲ್ಲಿ ಬೃಹತ್ಕಥಾಮಂಜರಿ (1037) ಮೊದಮೊದಲು ರಚಿತವಾದುದೆಂದೂ ದಶಾವತಾರಚರಿತ (1066) ಕೊನೆಯಲ್ಲಿ ರಚಿತವಾದುದೆಂದೂ ಹೇಳಬೇಕು. ದಶಾವತಾರಚರಿತ, ರಾಮಾಯಣ ಮಂಜರಿ, ಕವಿಕಂಠಾಭರಣಗಳಲ್ಲಿ ಕ್ಷೇಮೇಂದ್ರನೇ ಹೇಳಿಕೊಂಡಿರುವಂತೆ ಇವನ ತಂದೆ ಪ್ರಕಾಶೇಂದ್ರ, ತಾತ ಸಿಂಧು, ಸಹೋದರ ಚಕ್ರಪಾಲ. ಇವನು ಸು.1070ರ ವೇಳೆಗೆ ಕಾಲವಾದನೆಂದು ನಂಬಲಾಗಿದೆ.

ತನ್ನ ತಂದೆ ಪ್ರಕಾಶೇಂದ್ರ ತುಂಬ ದಾನಶೀಲನೆಂದೂ ಅವನ ಮನೆ ಅನ್ನಸತ್ರವೇ ಆಗಿತ್ತೆಂದೂ ಆತ ದೇವದ್ವಿಜಮಠಾಧಿಗಳಿಗಾಗಿ ಕೋಟಿಗಟ್ಟಲೆ ಹಣವನ್ನು ನೀಡುತ್ತಿದ್ದುದಾಗಿಯೂ ಆತ ಶೈವನಾಗಿದ್ದು ಅನೇಕ ಶಿವಬಿಂಬಗಳನ್ನು ಶಿವಾಲಯಗಳಲ್ಲಿ ಪ್ರತಿಷ್ಠಿಸಿದುದಲ್ಲದೆ ಅಂಥ ಒಂದು ಬಿಂಬವನ್ನು ಪೂಜಿಸಿ ಅದನ್ನೇ ತಬ್ಬಿಕೊಂಡು ಪ್ರಾಣ ನೀಗಿದುದಾಗಿಯೂ ಬೃಹತ್ಕಥಾಮಂಜರಿಯಲ್ಲಿ ಇವನೇ ಹೇಳಿದ್ದಾನೆ. ಇದರಿಂದ ಇವನೂ ಜನ್ಮತಃ ಶೈವನೆಂದಂತಾಯಿತು. ಇವನ ಗುರುವಾದ ಅಭಿನವಗುಪ್ತನಂತೂ ಶೈವನೇ. ಆತ ವಾಸವಾಗಿದ್ದುದೂ ಶೈವಮಂಡಲದಲ್ಲೇ. ಹೀಗಿದ್ದರೂ ಕಾಲಕ್ರಮದಲ್ಲಿ ಆತ ವೈಷ್ಣವನಾಗಿಬಿಟ್ಟ. ಇದಕ್ಕೆ ಕಾರಣ ಪರಮ ಭಾಗವತನಾಗಿದ್ದ ಸೋಮಪಾದನ ಅನುಗ್ರಹವೇ ಎಂದು ಇವನೇ ತನ್ನ ಬೃಹತ್ ಕಥಾಮಂಜರಿಯಲ್ಲಿ ಹೇಳಿಕೊಂಡಿದ್ದಾನೆ.

ಕ್ಷೇಮೇಂದ್ರನಿಂದ ರಚಿತವಾದುವೆಂದು ಈ ವರೆಗೆ ತಿಳಿದು ಬಂದಿರುವ ಗ್ರಂಥಗಳು 35. ಆ ಪೈಕಿ ಉಪಲಬ್ಧವಾಗಿರುವುವು 19. ಅವನ್ನು ಹೀಗೆ ವಿಂಗಡಿಸಬಹುದು: (ಅ) ಮೂರು ಮಂಜರಿಗಳು–ರಾಮಾಯಣ ಮಂಜರಿ, ಭಾರತಮಂಜರಿ, ಬೃಹತ್ಕಥಾ ಮಂಜರಿ. (ಆ) ಎರಡು ಮಹಾಕಾವ್ಯಗಳು–ದಶಾವತಾರಚರಿತ, ಅವದಾನಕಲ್ಪತಾ. (ಇ) ಎಂಟು ಉಪದೇಶಾತ್ಮಕ ಕಾವ್ಯಗಳು–ಕಲಾವಿಲಾಸ, ಸಮಯ ಮಾತೃಕಾ, ಚಾರುಚಾರ್ಯಾಶತಕ, ಸೇವ್ಯಸೇವಕೋಪದೇಶ, ದರ್ಪದಳನ, ದೇಶೋಪದೇಶ, ನರ್ಮಮಾಲಾ, ಚತುರ್ವರ್ಗ ಸಂಗ್ರಹ. (ಈ) ಸಾಹಿತ್ಯ ಶಾಸ್ತ್ರದ ಎರಡು ಕೃತಿಗಳು_ಕವಿಕಂಠಾಭರಣ, ಔಚಿತ್ಯವಿಚಾರಚರ್ಚಾ. (ಉ) ನಾಲ್ಕು ಸಂಕೀರ್ಣ ಕೃತಿಗಳು–ಸುವೃತ್ತತಿಲಕ, ಲೋಕಪ್ರಕಾಶಕೋಶ, ನೀತಿಕಲ್ಪತರು, ವ್ಯಾಸಾಷ್ಟಕ. ಅನುಪಲಬ್ಧ ಕೃತಿಗಳ ವಿವರ ಹೀಗಿದೆ: (ಅ) ಕವಿಕಂಠಾಭರಣದಲ್ಲಿ ಉದಾಹೃತವಾಗಿರುವ ಏಳು ಕೃತಿಗಳು–ಶಶಿವಂಶ ಮಹಾಕಾವ್ಯ, ಪದ್ಯ ಕಾದಂಬರೀ, ಅಮೃತತರಂಗ ಮಹಾಕಾವ್ಯ, ಲಾವಣ್ಯವತೀ, ಕನಕಜಾನಕೀ, ಮುಕ್ತಾವಳೀ, ಚಿತ್ರಭಾರತ ನಾಟಕ. (ಆ) ಔಚಿತ್ಯವಿಚಾರಚರ್ಚೆಯಲ್ಲಿ ಉದಾಹೃತವಾಗಿರುವ ಏಳು ಕೃತಿಗಳು–ಮುನಿಮತ ಮೀಮಾಂಸಾ, ನೀತಿಲತಾ, ವಿನಯವಲ್ಲೀ, ಅವಸರಸಾರ, ಲಲಿತಾ ರತ್ನಮಾಲಾ, ಕವಿಕರ್ಣಿಕಾ, ವಾತ್ಸ್ಯಾಯನ ಸೂತ್ರಸಾರ. (ಇ) ಪವನಪಂಚಾಶಿಕಾ ಸುವೃತ್ತ ತಿಲಕದಲ್ಲಿ ಉದಾಹೃತವಾಗಿರುವ ಒಂದು ಕೃತಿ. (ಈ) ಕಲ್ಹಣನ ರಾಜತರಂಗಿಣಿಯಲ್ಲಿ ಕ್ಷೇಮೇಂದ್ರ ರಚಿತವೆಂದು ಉಕ್ತವಾಗಿರುವ ಒಂದು ಕೃತಿ–ನೃಪಾವಳೀ (ರಾಜಾವಳೀ). (ಎಸ್.ಆರ್.ಎವಿ.)

# ಖ

**ಖಂಬತ್ ಕೊಲ್ಲಿ:** ಗುಜರಾತ್ ರಾಜ್ಯದ ಆಗ್ನೇಯ ದಿಕ್ಕಿನಲ್ಲಿ ಅರಬ್ಬಿ ಸಮುದ್ರ ಒಳಚಾಚಿರುವ ಭಾಗ. ನರ್ಮದ, ತಾಪಿ, ಸಾಬರಮತಿ ಮತ್ತು ಮಾಹಿ ನದಿಗಳು 3000 ಚ.ಕಿಮೀ ಜಾಗವನ್ನಾಕ್ರಮಿಸಿರುವ ಈ ಕೊಲ್ಲಿಯನ್ನು ಸೇರುತ್ತವೆ. ಭಾರತ ಸರ್ಕಾರದ ಸಾಗರ ಅಭಿವೃದ್ಧಿ ಇಲಾಖೆಯ ನ್ಯಾಷನಲ್ ಇನ್‍ಸ್ಟಿಟ್ಯೂಟ್ ಆಫ್ ಓಷನ್ ಟೆಕ್ನಾಲಜಿ ಸಾಗರದಾಳದಲ್ಲಿ ಭೂವೈಜ್ಞಾನಿಕ ಹಾಗೂ ಸಾಗರ–ಸಂಬಂಧಿತ ಸರ್ವೇಕ್ಷಣೆಗಳನ್ನು ಆಗಾಗ ನಡೆಸುತ್ತದೆ. ಖಂಬತ್ ಕೊಲ್ಲಿಯಲ್ಲಿ 2000ದಲ್ಲಿ ಈ ಸಂಸ್ಥೆ ಕೈಗೊಂಡ ಸರ್ವೇಕ್ಷಣೆಯಲ್ಲಿ ಕೆಲವೊಂದು ಅಸಾಮಾನ್ಯ ಲಕ್ಷಣಗಳು ಅನಿರೀಕ್ಷಿತವಾಗಿ ಕಂಡುಬಂದವು. ಇಲ್ಲಿ ಪುನರ್‌ಶೋಧನೆಯನ್ನು ನಡೆಸಿದಾಗ 20–40 ಮೀ ಆಳದ ಕೊಲ್ಲಿಯ ತಳದಲ್ಲಿ ಪುರಾತನ ಜನವಸತಿಯ (?) ಅವಶೇಷಗಳು ಗೋಚರವಾದವು.

ಖಂಬತ್ ಕೊಲ್ಲಿಯಲ್ಲಿ ಸೈಡ್–ಸ್ಕ್ಯಾನ್ ಸೋನಾರ್ ಮತ್ತು ಸೀಸ್ಮಿಕ್ ಸರ್ವೇಕ್ಷಣೆಗಳನ್ನು ಕೈಗೊಳ್ಳಲು ಕಾರಣ ಭೂಕಂಪ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸುವುದಾಗಿತ್ತು. ಕೊಲ್ಲಿಯ ತಳದಲ್ಲಿರುವ ಭೂಸ್ತರಗಳ ರಚನೆ–ಸ್ವರೂಪಗಳನ್ನು ತಿಳಿದುಕೊಳ್ಳುವುದು ಇದರ ಇನ್ನೊಂದು ಉದ್ದೇಶ. ಕೊಲ್ಲಿಯ ತಳಭಾಗ ವಿಭಿನ್ನವಾಗಿರುವುದರಿಂದ ಕಾಲಕಾಲಕ್ಕೆ ಭೂಪ್ರವರ್ತನಗಳಿಗೆ ಒಳಪಡುತ್ತದೆಂದೂ ಈ ಕ್ರಿಯೆಗಳು ಕೊಲ್ಲಿಯ ತಳದ ಮೇಲೆ ಪರಿಣಾಮ ಬೀರುವವೆಂದೂ ಇದರಿಂದ ತಿಳಿದುಬಂತು. ಈ ಪ್ರದೇಶದ ಭೂಕಂಪದ ಇತಿಹಾಸವನ್ನು ಅಭ್ಯಾಸಿಸಿದ ಗಾರ್ಟಿ ಅವರು (ಮಣಿಪುರ ವಿಶ್ವವಿದ್ಯಾಲಯ) ಔಷ್ಣದೀಪ್ತಿ ಮತ್ತು ಓ.ಎಸ್.ಎಲ್. ಕಾಲನಿರ್ಣಯ ತಂತ್ರಗಳ ನೆರವಿನಿಂದ ಈ ಭೂಭಾಗದಲ್ಲಿ 1500, 3000 ಮತ್ತು 5000 ವರ್ಷಗಳ ಹಿಂದೆ ಭೂಕಂಪ ಸಂಭವಿಸಿರುವುದನ್ನು ಗೊತ್ತು ಮಾಡಿದ್ದಾರೆ.

ಇದೇ ಸರ್ವೇಕ್ಷಣೆಯಲ್ಲಿ ಕೊಲ್ಲಿಯ ತಳದಲ್ಲಿ ಎರಡು ಪ್ರತ್ಯೇಕ ಸ್ಥಳಗಳಲ್ಲಿ–ವಲಯ 1 ಮತ್ತು 2–ಎರಡು ಪುರಾತನ ನದಿಗಳ ಹರಿವು ಪತ್ತೆಯಾದವು. ಇದನ್ನು ಖಚಿತಪಡಿಸಿಕೊಳ್ಳಲು ಈ ಸ್ಥಳಗಳಿಂದ ಮಣ್ಣನ್ನು ಮೊಗೆದು ಮೇಲಕ್ಕೆತ್ತಲಾಯಿತು. ಸಿಹಿನೀರಿನ ಶಂಖಗಳಿಂದ ಕೂಡಿದ ನದೀಮೂಲದ ಶುದ್ಧ ಮೆಕ್ಕಲುಮಣ್ಣು ಇದೆಂದು ದೃಢಪಟ್ಟಿತು. ಇದೇ ಜಾಗದಲ್ಲಿ ಬೇರೆಬೇರೆ ಕಡೆಗಳಿಂದ ಕೊಳವೆಗಳಲ್ಲಿ ಮತ್ತೆ ಮಣ್ಣನ್ನು ಮೇಲೆತ್ತಿ ಅದನ್ನು ಓ.ಎಸ್.ಎಲ್. ಕಾಲನಿರ್ಣಯ ತಂತ್ರಕ್ಕೆ ಒಳಪಡಿಸಲಾಯಿತು. ಈ ನದಿಗಳು ಸು. 3000 ವರ್ಷಗಳ ಹಿಂದಿನವರೆಗೂ ಸಕ್ರಿಯವಾಗಿದ್ದು ಭೂಮಿಯ ಮೇಲೆ ಹರಿಯುತ್ತಿದ್ದವೆಂಬುದು ಇದರಿಂದ ತಿಳಿದುಬಂತು. ಈ ಸಮಯದ ತರುವಾಯದಲ್ಲಿ ಕೊಲ್ಲಿಯ ತಳದ ರಚನೆಯಲ್ಲಿ ಆದ ಏರುಪೇರುಗಳಿಂದ ಸಮುದ್ರದ ಮಟ್ಟ ಹೆಚ್ಚಿ ಈ ಪ್ರದೇಶ ಸಮುದ್ರದಲ್ಲಿ ಮುಳುಗಿಹೋಯಿತೆನ್ನಲಾಗಿದೆ.

ಮೊಗೆದು ಮೇಲೆತ್ತಿದ ಮೆಕ್ಕಲುಮಣ್ಣಿನಲ್ಲಿ ಮಣ್ಪಾತ್ರೆಗಳ ಚೂರು, ಅರ್ಧಂಬರ್ಧ ಪಳೆಯುಳಿಕೆಯಾದ ಮರದ ತುಂಡುಗಳು, ಒಲೆಯ ಅವಶೇಷಗಳು, ಕಲ್ಲಿನ ಮಣಿಗಳು, ಅಂತ್ಯ ಹಳೆಶಿಲಾಯುಗದ ಒಂದು ಕಲ್ಲಿನ ಉಪಕರಣ ಮುಂತಾದ ಪ್ರಾಚ್ಯಾವಶೇಷಗಳೂ ಇದ್ದವು. ಇದರೊಂದಿಗಿದ್ದ ಸುಟ್ಟ ಮರದ ತುಂಡೊಂದರ ಇಂಗಾಲ 14 ಕಾಲಮಾನ 9500 ವರ್ಷಗಳು. ಈ ಅವಶೇಷಗಳ ಆಧಾರದ ಮೇಲೆ ಸಮುದ್ರತಳದಲ್ಲಿ ಮುಳುಗಿಹೋದ ಪ್ರಾಚ್ಯ ಕಟ್ಟಡಗಳ ಕುರುಹುಗಳೇನಾದರೂ ಇವೆಯೇ ಎಂಬುದನ್ನು ತಿಳಿಯಲು ಸಬ್ ಬಾಟಮ್ ಪ್ರೊಫೈಲರ್ ಮತ್ತು ಅಯಸ್ಕಾಂತೀಯ ಸರ್ವೇಕ್ಷಣಗಳನ್ನು ನಡೆಸಲಾಯಿತು. ಒಂದನೆಯ ವಲಯದಲ್ಲಿ ಕಟ್ಟಡಗಳಂತಹ ರಚನೆಗಳು ಇರುವ ಸಾಧ್ಯತೆಯನ್ನು ಇವು ಎತ್ತಿಹಿಡಿದವು.

ಪುರಾತತ್ತ್ವ ಅವಶೇಷಗಳು ಇಲ್ಲಿ ಹೇಗೆ ಬಂದವು ಎಂಬುದನ್ನು ನಿರ್ಧರಿಸಲು ಕೆಲವೊಂದು ಅವಶೇಷಗಳನ್ನು ಮತ್ತು ಮೆಕ್ಕಲುಮಣ್ಣನ್ನು ಎಕ್ಸ್‌ರೇ ಡಿಫ್ರ್ಯಾಕ್ಷನ್ ಮತ್ತು ಐ.ಸಿ–ಪಿ.ಎಮ್.ಸ್ ವಿಶ್ಲೇಷಣೆಗಳಿಗೆ ಒಳಪಡಿಸಲಾಯಿತು. ಮೆಕ್ಕಲುಮಣ್ಣು ಮತ್ತು ಅದರೊಳಗೆ ಬೆರೆತಿರುವ ಪ್ರಾಚ್ಯವಸ್ತುಗಳು ಬೇರೆ ಸ್ಥಳದಿಂದ ಬಂದವಲ್ಲ; ಇವು ಇದ್ದ ಸ್ಥಳದಲ್ಲಿಯೇ ಮುಳುಗಿಹೋದವು ಎಂಬುದು ಇದರಿಂದ ಸ್ಪಷ್ಟವಾಯಿತು. ಮುಳುಗಡೆಗೆ ಮುಂಚೆ ಈಗಿನ ಕೊಲ್ಲಿಯ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದ ಸಮುದಾಯಗಳು ನೆಲೆಸಿದ್ದವು. ಅನಂತರ ತಾಮ್ರ–ಶಿಲಾಯುಗದ ವಸತಿಗಳು ಇಲ್ಲಿದ್ದವು ಎಂಬುದನ್ನು ಕೊಲ್ಲಿಯ ತಳದ ಪ್ರಾಚ್ಯಾವಶೇಷಗಳ ಆಧಾರದ ಮೇಲೆ ಹೇಳಬಹುದು. ಮೊಗೆದು ಮೇಲೆತ್ತಿದ ಮಣ್ಣಿನಲ್ಲಿ ಸೂಕ್ಷ್ಮ ಶಿಲಾಯುಗದ 0.5–4 ಸೆಂಮೀ ಉದ್ದದ 248 ಸೂಕ್ಷ್ಮ ಶಿಲೋಪಕರಣಗಳು ಸಿಕ್ಕವು. ಇವುಗಳನ್ನು ಬೆಣಚುಕಲ್ಲು, ಜಾಸ್ಪರ್, ಅಗೇಟ್, ಕ್ಯಾಲ್ಸೆಡನಿ, ಕುರಂಗದ ಕಲ್ಲು ಮೊದಲಾದವುಗಳಿಂದ ಮಾಡಲಾಗಿದೆ. ಇತರ ಪ್ರಾಚ್ಯಾವಶೇಷಗಳೆಂದರೆ ಮಣ್ಣು ಮೆತ್ತಿದ ಬೊಂಬಿನ ತಡಿಕೆ ಗೋಡೆಗಳ ಭಾಗಗಳು, ಮಣ್ಣಿನ ಮುದ್ರಿಕೆ, ಮನೆಯ ನೆಲಗಟ್ಟಿನ ಅವಶೇಷಗಳು. ನೆಲಗಟ್ಟು ಸುಟ್ಟ ಇಟ್ಟಿಗೆಯಂತಹ ವಸ್ತುವಿನಿಂದ ಮಾಡಲ್ಪಟ್ಟು ಇದಕ್ಕೆ ಜೇಡಿಮಣ್ಣಿನ ಗಿಲಾವು ಇದ್ದಿತ್ತೆಂದು ಎಕ್ಸ್‌ರೇ ಡಿಫ್ರ್ಯಾಕ್ಷನ್ ವಿಶ್ಲೇಷಣೆಯಿಂದ ಗೊತ್ತಾಗಿದೆ.

ಮಣ್ಣು ಮೆತ್ತಿದ ಬೊಂಬಿನ ಗೋಡೆಯ ಭಾಗಗಳನ್ನು ಮತ್ತು ಅದರೊಳಗಿದ್ದ ಮಣ್ಪಾತ್ರೆಯ ಚೂರೊಂದನ್ನು ಲಂಡನ್ನಿನ ಪ್ರಯೋಗಶಾಲೆಗೂ ಮಣಿಪುರ ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗಕ್ಕೂ ಕಾಲಮಾನದ ನಿರ್ಧಾರಕ್ಕಾಗಿ ಕಳುಹಿಸಲಾಯಿತು. ಇವು 3,000–10,000 ವರ್ಷಗಳಷ್ಟು ಹಳೆಯವು ಎಂಬುದು ಔಷ್ಣದೀಪ್ತಿ ಮತ್ತು ಓ.ಎಸ್.ಎಲ್. ವಿಧಾನದಿಂದ ನಿಗದಿಯಾಯಿತು. ಈಗಿನ ಖಂಬತ್ ಕೊಲ್ಲಿ ಪ್ರದೇಶದಲ್ಲಿ ಬಹು ದೀರ್ಘಕಾಲ ಮಾನವ ವಸತಿ ಇದ್ದಿತ್ತೆಂದು ಈ ಎಲ್ಲಾ ಅವಶೇಷ ಮತ್ತು ಅವುಗಳ ಕಾಲಮಾನದಿಂದ ಸುಸ್ಪಷ್ಟವಾಗುತ್ತದೆ.

(ಎಸ್.ಎಚ್.ಎ.ಬಿ.)

**ಖಜುರಾಹೊ:** ಮಧ್ಯಪ್ರದೇಶ ರಾಜ್ಯದಲ್ಲಿ ಮಿಥುನ ವಾಸ್ತುಶಿಲ್ಪಗಳಿಗೆ ಪ್ರಸಿದ್ಧವಾಗಿರುವ ಸ್ಥಳ. ಮಧ್ಯ ಭಾರತದ ಬುಂದೇಲ್ ಖಂಡದಲ್ಲಿರುವ ಪ್ರಸಿದ್ಧ ದೇವಾಲಯಗಳ ಕ್ಷೇತ್ರ. ಮಧ್ಯಯುಗದಲ್ಲಿ ಈ ಪ್ರದೇಶದಲ್ಲಿ ಆಳಿದ ಚಂದೆಲ್ಲ ರಾಜರ ಆಶ್ರಯದಲ್ಲಿ 950–1050ರ ಮಧ್ಯದ ಒಂದು ಶತಮಾನದ ಕಾಲದಲ್ಲಿ ಇಲ್ಲಿ ಸು.30 ದೇವಾಲಯಗಳು ನಿರ್ಮಿತವಾದುವು. ಶೈವ, ವೈಷ್ಣವ ಮತ್ತು ಜೈನ ಧರ್ಮೀಯವಾದ ಈ ಮಂದಿರಗಳು ಆಗಿನ ರಾಜರ ಮತ್ತು ಜನತೆಯ ಸರ್ವಧರ್ಮ ಸಮನ್ವಯ ಭಾವನೆಗಳ ಪ್ರತೀಕಗಳಾಗಿವೆ.

ನದಿಯ ದಡದಲ್ಲಿ ಎತ್ತರವಾದ ಜಗತಿಗಳ ಮೇಲೆ ಒಂದೊಂದು ಪ್ರತ್ಯೇಕವಾಗಿ ನಿಂತಿರುವ ಈ ದೇವಾಲಯಗಳ ರಚನೆಯಲ್ಲಿ ಯಾವುದೇ ಬಗೆಯ ವ್ಯವಸ್ಥಾಬದ್ಧ ಯೋಜನೆಯೂ ಕಂಡುಬರುವುದಿಲ್ಲ. ಸಣ್ಣವಾದರೂ ಎತ್ತರವಾದ ವಿಶಾಲ ಜಗತಿಯ ಮೇಲೆ ನಿಂತಿರುವ ಈ ಮಂದಿರಗಳು ಸ್ವಯಂಪೂರ್ಣವಾದ ಉತ್ತಮ ವಾಸ್ತುಕೃತಿಗಳಾಗಿವೆ. ಗರ್ಭಗೃಹ, ಮಂಟಪ ಮತ್ತು ಅರ್ಧಮಂಟಪಗಳೇ ಈ ಭಾಗಗಳು. ಕೆಲವು ಮಂದಿರಗಳಲ್ಲಿ ಗರ್ಭಗೃಹಕ್ಕೆ ಸೇರಿದಂತೆ ಅಂತರಾಳ, ಮುಂಭಾಗದಲ್ಲಿ ಮಹಾಮಂಟಪ ಮತ್ತು ಪ್ರದಕ್ಷಿಣಮಾರ್ಗಗಳೂ ಇವೆ. ಎತ್ತರವಾದ ಜಗತಿಯ ಮೇಲೆ ತಳಭಾಗದ ಅಂತಸ್ತು, ಗೋಡೆಗಳು, ಬಾಗಿಲು ಕಿಟಕಿಗಳು, ಮೇಲ್ಭಾಗದ ಉನ್ನತವಾದ ಶಿಖರಗಳು ಈ ದೇವಾಲಯಗಳ

ವಿಶ್ವನಾಥ ಮಂದಿರ

ಮುಖ್ಯ ಅಂಗಗಳಾಗಿದ್ದು ಕಟ್ಟಡದ ಔನ್ನತ್ಯವನ್ನು ಎತ್ತಿತೋರುತ್ತವೆ. ಹೊರಗೋಡೆಗಳ ಮೇಲಿನ ಅಲಂಕರಣ ಕೆತ್ತನೆಗಳು ಕಟ್ಟಡಗಳ ಭವ್ಯತೆಯನ್ನು ಹೆಚ್ಚಿಸಿವೆ. ಆನಂದಮಯ ತೃಪ್ತ ಜೀವನದ ಭಾವವನ್ನು ಬೀರುತ್ತಿರುವ ಮಾನವರ ಮತ್ತು ಸುಂದರ ದೇವತೆಗಳ ಶಿಲ್ಪಗಳು ನೂರಾರು ಸಂಖ್ಯೆಯಲ್ಲಿ ಅಲಂಕರಣ ಕಾರ್ಯದಲ್ಲಿ ಯೋಜಿತವಾಗಿವೆ. ಇವೆಲ್ಲದರಿಂದ ಇಡೀ ಕಟ್ಟಡವೇ ಜೀವಂತವಾಗಿರುವಂತೆ ಭಾಸವಾಗುತ್ತದೆ. ಮುಂಭಾಗದಿಂದ ಮೆಟ್ಟಿಲುಮೆಟ್ಟಿಲಾಗಿ ಕಟ್ಟಡದ ಶಿಖರ ಅತ್ಯಂತ ಉನ್ನತ ಭಾಗವಾಗಿದ್ದು ದೇವಾಲಯದ ಪ್ರಾಶಸ್ತ್ಯವನ್ನು ಹೆಚ್ಚಿಸುವಂತೆ ಕಾಣುತ್ತದೆ. ಖಜುರಾಹೊ ದೇವಾಲಯಗಳ ಶಿಖರಗಳು ಬಹಳ ಸುಂದರವಾಗಿದ್ದು ಕಟ್ಟಡದ ಎಲ್ಲ ಭಾಗಗಳಿಗೂ ಕೇಂದ್ರಬಿಂದುಗಳಾಗಿವೆ. ಕೇಂದ್ರಶಿಖರದ ಸುತ್ತ ಇರುವ ಸಣ್ಣಸಣ್ಣ ಶಿಖರಗಳು ಅದರ ಭವ್ಯತೆಯನ್ನು ಹೆಚ್ಚಿಸಿವೆ.

ದೇವಾಲಯದ ಒಳಭಾಗವನ್ನು ಮತೀಯ ಕಾರ್ಯಗಳಿಗೆ ಹೊಂದುವಂತೆ, ಸ್ಥಳಪರಿಮಿತಿಯನ್ನು ಗಮನದಲ್ಲಿಟ್ಟುಕೊಂಡು ಯೋಜಿಸಲಾಗಿದೆ. ಕಟ್ಟಡಕ್ಕೆ ಒಂದೇ ಪ್ರವೇಶ ಮಾರ್ಗವಿದ್ದು ಮೆಟ್ಟಿಲುಗಳ ಸರಣಿಯ ಮೂಲಕ ಒಳಹೋಗಬೇಕು. ಈ ರೀತಿ ಅರ್ಧಮಂಟಪಕ್ಕೆ ಪ್ರವೇಶಮಾಡಿ ಕಂಬಗಳಿಂದ ಕೂಡಿದ ಮಂಟಪದೊಳಕ್ಕೆ ಹೋದಾಗ ಅಂತರಾಳದ ಮುಂದೆ ನಿಲ್ಲಬೇಕು. ಅದರ ಮುಂದಿನ ಭಾಗವೇ ಗರ್ಭಗೃಹ. ದೇವಾಲಯದ ಒಂದು ಪಾರ್ಶ್ವದಲ್ಲಿ, ಸಾಮಾನ್ಯವಾಗಿ ಎಡಪಾರ್ಶ್ವದಲ್ಲಿ, ಮಹಾಮಂಟಪ ಮತ್ತು ಗರ್ಭಗೃಹದ ಸುತ್ತ ಪ್ರದಕ್ಷಿಣಮಾರ್ಗ ಇವೆ. ದೇವಾಲಯದ ಒಳಭಾಗದಲ್ಲೂ ಅನೇಕ ಶಿಲ್ಪಗಳು ಅದರ ಅಲಂಕರಣವನ್ನು ಹೆಚ್ಚಿಸುತ್ತವೆ. ಆ ಶಿಲ್ಪಗಳಲ್ಲಿ ಕುಬ್ಜ ಸುಂದರ ಸ್ತ್ರೀ ವಿಗ್ರಹಗಳು ಗಮನಾರ್ಹವಾಗಿವೆ. ಅದರಲ್ಲೂ ಬೋದಿಗೆಗಳ ಮೇಲಿನ ಸೂರುಗಳಲ್ಲಿರುವ ವಿಗ್ರಹಗಳು ಮತ್ತು ಕುಸುರಿ ಕೆಲಸ ಕಲಾ ಐಸಿರಿಯ, ಕಲೆಗಾರನ ಮಹೋನ್ನತಿಯ ಸಾಕ್ಷಿಗಳಾಗಿವೆ.

ಮಧ್ಯದ ಮಂಟಪದ ಚಾವಣಿಯಲ್ಲಿರುವ ಭುವನೇಶ್ವರಿ ಖಜುರಾಹೊ ದೇವಾಲಯಗಳ ಅತ್ಯುತ್ಕೃಷ್ಟವಾದ ಕೆತ್ತನೆಗಳಿಂದ ಕೂಡಿದೆ. ಜ್ಯಾಮಿತೀಯ ಆಕಾರದ ವೃತ್ತ, ಅರ್ಧವೃತ್ತ ಮತ್ತು ರೇಖಾವಿನ್ಯಾಸಗಳಿಂದ ಅತ್ಯಂತ ನಯನಮನೋಹರವಾದ ಅಲಂಕರಣವನ್ನು, ಶಿಲ್ಪಗಳನ್ನು ಕಲ್ಲಿನಲ್ಲಿ ಬಿಡಿಸಿದ್ದಾರೆ.

ಇಲ್ಲಿಯ ದೇವಾಲಯಗಳಲ್ಲಿ ಮುಖ್ಯವಾದ ವಾಯವ್ಯ ಭಾಗದ ಸಮೂಹದಲ್ಲಿ ಶೈವ ವೈಷ್ಣವ ಮಂದಿರಗಳಿವೆ. ಇವುಗಳಲ್ಲಿ ಕಂದರ್ಯ ಮಹಾದೇವ್ ಭಾರತದ ಅತಿಸುಂದರ ದೇಗುಲಗಳಲ್ಲೊಂದು. ಬೇಲೂರು, ಹಳೇಬೀಡುಗಳಲ್ಲಿರುವಂತೆ ಎತ್ತರವಾದ ಜಗಲಿಯ ಮೇಲೆ ಇದನ್ನು ಕಟ್ಟಲಾಗಿದೆ. 33ಮೀ ಉದ್ದ 18ಮೀ ಅಗಲ ಮತ್ತು ಭೂಮಿಯ ಮೇಲಿನಿಂದ 34.8ಮೀ ಎತ್ತರ ಅಥವಾ ಜಗತಿಯಿಂದ 26.4ಮೀ ಇರುವ ತಳಹದಿಯ ಮೇಲೆ ನಿರ್ಮಿತ ವಾಗಿದೆ. ಆಕಾರದಲ್ಲಿ ಅಷ್ಟು ಬೃಹತ್ತಾಗಿಲ್ಲದಿದ್ದರೂ ಒಂದು ಘನವಾಗಿ, ಎತ್ತರದಿಂದ ಎತ್ತರಕ್ಕೆ, ಒಂದನ್ನೊಂದು ಮೀರಿ ಏರುತ್ತಿರುವ ಶಿಖರಗಳಿಂದ ಕೊನೆಗೆ ಏಕಮೇವಾದ್ವಿತೀಯವಾಗಿ

ಪಾರ್ಶ್ವನಾಥ ದೇವಾಲಯದ ಮಿಥುನಶಿಲ್ಪ

ನಿಮಿರಿನಿಂತ ಗಿರಿಶೃಂಗದಂಥ ಗರ್ಭಾಂಕಣದ ಶಿಖರದ ಔನ್ನತ್ಯ ಪ್ರೇಕ್ಷಕರ ಹೃನ್ಮನಗಳನ್ನು ತನ್ನೆಡೆಗೆ ಸೆಳೆಯುತ್ತದೆ. ಕಲೆಯ ದೃಷ್ಟಿಯಿಂದ ಭುವನೇಶ್ವರದ ದೇವಾಲಯಗಳು ಆಕರ್ಷಣೀಯ ವಾಗಿದ್ದರೆ, ಮಹಾದೇವ ದೇವಾಲಯ ಬೇಲೂರಿನ ಚನ್ನಕೇಶವ ದೇವಾಲಯದಂತೆ ಒಳಗೂ ಹೊರಗೂ ಮನೋಹರವಾಗಿದೆ. ಅಷ್ಟದಿಕ್ಪಾಲಕರು, ಅಪ್ಸರೆಯರು, ಸುರಸುಂದರಿಯರು, ವಿದ್ಯಾಧರೆಯರು ಇತ್ಯಾದಿ ವಿವಿಧ ಭಾವಭಂಗಿಗಳ ರಮಣೀಯ ಶಿಲಾಕೃತಿಗಳು ಇಲ್ಲಿ ಗುಂಪುಗೂಡಿವೆ. ಇಲ್ಲಿಯ ಕಲಾಸಂಪತ್ತು, ಭಾವಪ್ರೇರಕಶಕ್ತಿ ಅತ್ಯದ್ಭುತವಾದುದೆಂದು ಕಲಾವಿಮರ್ಶಕರು ಉದ್ಗಾರವೆತ್ತಿದ್ದಾರೆ. ಈ ಗುಂಪಿನ ವೈಷ್ಣವ ದೇವಾಲಯಗಳಲ್ಲಿ ಚತುರ್ಭುಜ ವಿಷ್ಣುಮಂದಿರ 25.5ಮೀ ಉದ್ದ ಮತ್ತು 13.2ಮೀ ಅಗಲವಾಗಿದೆ. ಪಂಚಾಯತನ ಪದ್ಧತಿ ಯಲ್ಲಿ ನಿರ್ಮಿತವಾಗಿರುವ ಈ ಮಂದಿರಗಳಲ್ಲಿ ಐದು ಗರ್ಭಗೃಹಗಳಿವೆ. ಈ ಹಿಂದು ದೇವಾಲಯಗಳ ಮಾದರಿಯಲ್ಲೇ ನಿರ್ಮಿತವಾದ ಆರು ಜೈನ ದೇವಾಲಯಗಳು ಆಗ್ನೇಯ ಭಾಗದಲ್ಲಿದೆ. ಇವುಗಳ ಹೊರಗೋಡೆಗಳ ಮೇಲೆ ತೋರಣಗಳು, ಸ್ತಂಭಿಕೆಗಳು ಮುಂತಾದ ವಾಸ್ತುಕೃತಿಗಳ ಅಲಂಕರಣವಿಲ್ಲದೆ ಅವು ಸರಳವಾಗಿವೆ. ಅವುಗಳ ಸ್ಥಾನದಲ್ಲಿ ಜೋಡಿಸಲಾ ಗಿರುವ ಮೂರ್ತಿಗಳಿಂದಾಗಿ ಈ ಗೋಡೆಗಳಿಗೆ ವಿಶೇಷವಾದ ಶೋಭೆ ಪ್ರಾಪ್ತವಾಗಿದೆ. ಈ ಜೈನ ಮಂದಿರಗಳಲ್ಲಿ ಮುಖ್ಯವಾದ ಜೈನ ಬಸದಿ 18ಮೀ ಉದ್ದ ಮತ್ತು 9ಮೀ ಅಗಲವಾಗಿದೆ.

ಈ ಗುಂಪಿನ ಪಕ್ಕದಲ್ಲಿರುವ ಪಾಳಾದ ಜೈನಮಂದಿರವೊಂದು ಗಮನಾರ್ಹವಾದದ್ದು. ಘಂಟೈ ಮಂದಿರವೆಂದು ಹೆಸರಾದ ಈ ಮಂದಿರ ಪೂರ್ಣವಾಗಿದ್ದಾಗ ಆ ರೀತಿಯ ಕಟ್ಟಡಗಳಲ್ಲಿ ಮಕುಟಪ್ರಾಯವಾಗಿತ್ತೆಂದು ಹೇಳಬಹುದು. ಈಗ ಉಳಿದಿರುವ ಭಾಗಗಳಲ್ಲಿರುವ, ಉತ್ತಮ ಕೈಚಳಕ ತೋರುವ ಕಂಬಗಳು, ಭವ್ಯ ಕೆತ್ತನೆಗಳಿರುವ ಪ್ರವೇಶದ್ವಾರ ನೋಟಕರ ಕಣ್ಮನಗಳನ್ನು ತಣಿಸುತ್ತವೆ. ಈ ಪರಿಸರದಲ್ಲಿರುವ ಮತ್ತೆ ಕೆಲವು ಮಂದಿರಗಳೂ ಉತ್ತಮ ಕಲಾವಂತಿಕೆಯಿಂದ ಕೂಡಿವೆ; ಕೆಲವು ಪಾಳು ಬಿದ್ದಿವೆ. ಒಟ್ಟಿನಲ್ಲಿ ಖಜುರಾಹೊದ ದೇವಾಲಯ ಗಳು ಭಾರತೀಯ ವಾಸ್ತುಕಲೆಯ ಮಹೋನ್ನತ ಘಟ್ಟವನ್ನು ರೂಪಿಸುವ ಉತ್ತಮ ನಿದರ್ಶನಗಳ ಸಾಲಿನಲ್ಲಿ ಸೇರುತ್ತವೆಂದು ನಿಸ್ಸಂದೇಹವಾಗಿ ಹೇಳಬಹುದು. ಭಾರತೀಯ ಶಿಲ್ಪಕಲೆಯ ಪರಾಕಾಷ್ಠೆಯ ಉತ್ತಮ ನಿದರ್ಶನಗಳಲ್ಲಿ ಖಜುರಾಹೊದ ಶಿಲ್ಪಗಳೂ ಸೇರುತ್ತವೆ. ಹಂತಹಂತವಾಗಿ ಕೆತ್ತಲಾದ ನಗ್ನ ಅಪ್ಸರೆಯರ ಅಸಾಧಾರಣ ಸುಂದರ ದೇಹಗಳು ಬಾಗಿ ಬಳುಕುತ್ತ ನೋಟಕರ ಚಿತ್ತವನ್ನು ತಮ್ಮಲ್ಲಿ ಸೆರೆಹಿಡಿಯುತ್ತವೆ. ಸುಂದರ ಸ್ತ್ರೀಯರ ದೇಹಗಳಲ್ಲಿ ತುಂಬಿ ತುಳುಕುವ ವಿವಿಧ ಶೃಂಗಾರ ಪ್ರಧಾನ ಭಾವಭಂಗಿಗಳು, ಪುರುಷರ ಚಿತ್ತವನ್ನು ಕ್ಷೋಭೆಗೊಳಿಸುವ ರಸಮಯ ಸನ್ನಿವೇಶಗಳು ಪ್ರೇಕ್ಷಕರ ಒಂದೊಂದು ನೋಟಕ್ಕೂ ಹೊಸಹೊಸ ಭಾವನೆಗಳನ್ನು ಸೂಚಿಸುತ್ತವೆ. ಮಧ್ಯಯುಗೀನ ಭಾರತೀಯ ಶಿಲ್ಪಿಗಳು ತಮ್ಮ ಅತಿಮಾನುಷ ಕಲಾವಂತಿಕೆಯನ್ನು ಖಜುರಾಹೊ ಮಂದಿರಗಳಲ್ಲಿ ಪ್ರದರ್ಶಿಸಿ ಪ್ರಪಂಚದ ಕಲಾ ಇತಿಹಾಸದಲ್ಲಿ ಅಮರರಾಗಿದ್ದಾರೆ. (ಸಿ.ಜಿ.ಪಿ.;ಎನ್.ಎಸ್.)

**ಖಾರವೇಲ:** ಪ್ರ.ಶ.ಪೂ. 1ನೆಯ ಶತಮಾನದ ಉತ್ತರಾರ್ಧದಲ್ಲಿ ಕಳಿಂಗ ದೇಶವನ್ನಾ ಳುತ್ತಿದ್ದ ಚೇದಿವಂಶದ ದೊರೆ. ಮೇಘವಾಹನ ಚೇದಿವಂಶದ ಮೂಲಪುರುಷನೆಂದು ಪರಿಗಣಿಸಲಾಗಿದೆ. ಭುವನೇಶ್ವರದ (ಒರಿಸ್ಸ) ಬಳಿಯ ಉದಯಗಿರಿ ಬೆಟ್ಟದ ಹಾಥಿಗುಂಫಾ ಎಂಬ ಗವಿಯಲ್ಲಿ ಇವನ ಪರಾಕ್ರಮವನ್ನು ಬಣ್ಣಿಸುವ ಶಾಸನವಿದೆ. ಈತ ಸಾತವಾಹನ ಸಂತತಿಯ ಸಾತಕರ್ಣಿಯೊಂದಿಗೆ ಯುದ್ಧ ಮಾಡಿದ, ವಿದರ್ಭದ ಭೋಜನನ್ನೂ ರಠಿಕರನ್ನೂ ಸೋಲಿಸಿದ, ಅಂಗ ಮತ್ತು ಮಗಧ ರಾಜ್ಯಗಳ ಮೇಲೆ ವಿಜಯಯಾತ್ರೆ ನಡೆಸಿದ, ಈತನ ಸಾಧನೆಗಳ ವಿವರಗಳು ಈ ಶಾಸನದಿಂದ ತಿಳಿಯುತ್ತದೆ. ಈತ ಜೈನಮತಾವಲಂಬಿ; ಆದರೂ ಅನ್ಯಮತಗಳಿಗೆ ಪುರಸ್ಕಾರ ನೀಡಿದ. ಇವನಿಂದ ಸಂಗೀತಾದಿ ಕಲೆಗಳಿಗೆ ಪ್ರೋತ್ಸಾಹ ದೊರೆಯಿತು. ಈ ಶಾಸನದಲ್ಲಿ ಈತನನ್ನು ಕ್ಷೇಮರಾಜ, ವೃದ್ಧರಾಜ, ಭಿಕ್ಷುರಾಜ, ಧರ್ಮರಾಜ ಎಂದು ಪ್ರಶಂಸಿಸಲಾಗಿದೆ. (ಪಿ.ಬಿ.ಡಿ.)

**ಶಾಸನಗಳು:** ಇವನ ಎರಡು ಶಾಸನಗಳು ಒರಿಸ್ಸದ ಭುವನೇಶ್ವರದ ಬಳಿಯ ಉದಯಗಿರಿ–ಖಂಡಗಿರಿ ಪರ್ವತಶ್ರೇಣಿಯ ಹಾಥಿಗುಂಫ ಮತ್ತು ಮಂಚಪುರಿ ಗುಹೆಗಳಲ್ಲಿ ದೊರೆತಿವೆ. ಎರಡೂ ಶಾಸನಗಳೂ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿವೆ. ಮಂಚಪುರಿ ಗುಹಾಶಾಸನ ಮೂರೇಸಾಲುಗಳಿಂದ ಕೂಡಿದೆ. ಅರ್ಹಂತನ ಪ್ರಾಸಾದವನ್ನೂ (ಶಾಸನವನ್ನು ಕೊರೆಯಲಾಗಿರುವ) ಕಳಿಂಗದ ಶ್ರಮಣರ ಗುಹೆಯನ್ನೂ ಕಳಿಂಗ ಚಕ್ರವರ್ತಿ ಖಾರವೇಲನ ಅಗ್ರಮಹಿಷಿ ಮಾಡಿಸಿದಳೆಂದು ತಿಳಿದುಬರುತ್ತದೆ.

ಹಾಥಿಗುಂಫಾ ಶಾಸನ ಹಲವು ದೃಷ್ಟಿಗಳಿಂದ ಐತಿಹಾಸಿಕ ಮಹತ್ತ್ವದ್ದಾಗಿದೆ. ಹದಿನೇಳು ಸಾಲುಗಳಲ್ಲಿ ಕೊರೆಯಲಾಗಿರುವ ಈ ಶಾಸನದ ಪಾಠ ಖಾರವೇಲನ ಹುಟ್ಟಿನಿಂದ, 37 ವರ್ಷಗಳವರೆಗಿನ ಅವನ ಜೀವನದ ಒಂದು ಸಂಕ್ಷಿಪ್ತ ಪರಿಚಯವನ್ನು ಒದಗಿಸಿಕೊಡುವ ರೀತಿಯಲ್ಲಿ ರಚಿತವಾಗಿದೆ. ಶಾಸನದಲ್ಲಿ ನಮೂದಿಸಲಾಗಿರುವ ಮುಖ್ಯ ವಿಷಯಗಳ ಸಾರಾಂಶ ಹೀಗಿದೆ: ಆರ್ಯ, ಮಹಾರಾಜ, ಮಹಾಮೇಘವಾಹನ, ಚೇದಿರಾಜ ವಂಶವರ್ಧನ, ಕಳಿಂಗಾಧಿಪತಿ ಖಾರವೇಲ (ತನ್ನ ಜೀವನದ ಮೊದಲ) 15 ವರ್ಷಗಳನ್ನು ಬಾಲಕ್ರೀಡೆಗಳಲ್ಲಿ ಕಳೆದ ಅನಂತರ ಸಕಲ ಶಾಸ್ತ್ರಗಳಲ್ಲೂ ನೈಪುಣ್ಯವನ್ನು ಗಳಿಸಿ 9 ವರ್ಷಗಳ ಕಾಲ ಯುವರಾಜನಾಗಿ ಮೆರೆದ. ಮುಂದೆ 24 ವರ್ಷದವನಿದ್ದಾಗ ಕಳಿಂಗ ರಾಷ್ಟ್ರದ ಮಹಾರಾಜನಾಗಿ ಪಟ್ಟಗಟ್ಟಿಸಿಕೊಂಡು, ಚಂಡಮಾರುತದ ಹಾವಳಿಯಿಂದ ಶಿಥಿಲವಾಗಿದ್ದ ಕಳಿಂಗನಗರದ ಗೋಪುರ, ಪ್ರಾಕಾರ, ನಿವೇಶನ– ಇವನ್ನು ತನ್ನ ಆಳಿಕೆಯ ಮೊದಲ ವರ್ಷದಲ್ಲಿ ಪುನರುದ್ಧಾರಗೊಳಿಸಿದ. ಎರಡನೆಯ ರಾಜ್ಯಸಂವತ್ಸರದಲ್ಲಿ ಸಾತಕರ್ಣಿಯ ಪ್ರಭಾವವನ್ನು ಕಡೆಗಣಿಸಿ ತುರಗ ಗಜ ಪದಾತಿ ರಥಗಳಿಂದ ಕೂಡಿದ ತನ್ನ ಸೈನ್ಯವನ್ನು ಪಶ್ಚಿಮದ ಪ್ರದೇಶಗಳಿಗೆ ಕಳುಹಿಸಿ ಕೃಷ್ಣವೇಣ್ಣಾನದೀ ತಟದ ಅಸಿಕ (ಋಷಿಕ್) ನಗರವನ್ನು ಆಕ್ರಮಿಸಿದ. ಗಂಧರ್ವ ವಿದ್ಯೆಯಲ್ಲಿ ಪರಿಣತನಾದ ಖಾರವೇಲ 3ನೆಯ ವರ್ಷದಲ್ಲಿ ನೃತ್ಯಗೀತ ವಾದ್ಯಾದಿ ಪ್ರದರ್ಶನಗಳನ್ನು ಏರ್ಪಡಿಸಿ ರಾಜಧಾನಿಯ ಜನರನ್ನು ಸಂತೋಷಗೊಳಿಸಿದ. ನಾಲ್ಕನೆಯ ವರ್ಷದಲ್ಲಿ ರಠಿಕ ಮತ್ತು ಭೋಜಕ ಸಮುದಾಯದವರು ತನ್ನ ಪಾದಗಳಿಗೆ ಎರಗುವಂತೆ ಮಾಡಿದ. 5ನೆಯ ವರ್ಷದಲ್ಲಿ ಹಿಂದೆ ನಂದರಾಜ ತೋಡಿಸಿದ್ದ ಕಾಲುವೆಯ ನೀರು ತನ್ನ ರಾಜಧಾನಿಯನ್ನೂ ತಲುಪುವಂತೆ ಮಾಡಿದನಷ್ಟೇ ಅಲ್ಲದೆ ತನ್ನ ಆಳಿಕೆಯ 6ನೆಯ ವರ್ಷದಲ್ಲಿ ನಗರದ ಹಾಗೂ ಜನಪದದ ಪ್ರಜೆಗಳಿಗೆ ಅಸಂಖ್ಯಾತ ಧನಕನಕಾದಿಗಳನ್ನು ಧಾರೆಯೆರೆದ. 7ನೆಯ ವರ್ಷದಲ್ಲಿ ಅವನ ಪಟ್ಟದರಸಿ ಅವನ ಶಿಶುವಿನ ತಾಯಾದಳು. 8ನೆಯ ವರ್ಷದಲ್ಲಿ ಗೊರಥಗಿರಿಯನ್ನು ಆಕ್ರಮಿಸಿಕೊಂಡು ರಾಜಗೃಹ ನಗರಕ್ಕೆ ಯಶಸ್ವಿಯಾಗಿ ಮುತ್ತಿಗೆ ಹಾಕಿದ. ಈ ಸುದ್ದಿ ತಿಳಿದ ಯವನ ರಾಜ ದಿಮಿತ ಮಥುರೆಗೆ ಪಲಾಯನಗೈದ.

ಅದೇ ವರ್ಷದಲ್ಲಿ ಖಾರವೇಲ ಬ್ರಾಹ್ಮಣರಿಗೆ ಕರಪರಿಹಾರ ನೀಡಿದ. ತನ್ನ ಆಳಿಕೆಯ 9ನೆಯ ವರ್ಷದಲ್ಲಿ 38 ಲಕ್ಷ ಮುದ್ರೆಗಳ ವೆಚ್ಚದಲ್ಲಿ ಮಹಾ ವಿಜಯವೆಂಬ ಅರಮನೆಯನ್ನು ನಿರ್ಮಿಸಿದ. 10ನೆಯ ವರ್ಷದಲ್ಲಿ ಭಾರತದಾದ್ಯಂತ ದಿಗ್ವಿಜಯ ಪ್ರಯಾಣವನ್ನು ಕೈಗೊಂಡ. 11ನೆಯ ವರ್ಷದಲ್ಲಿ, ಪಲಾಯನಗೈದ ವೈರಿರಾಜರುಗಳ ಮಣಿ ರತ್ನಗಳನ್ನು ವಶಪಡಿಸಿಕೊಂಡ. ಪೂರ್ವದಲ್ಲಿ ರಾಜಧಾನಿ ಪಟ್ಟಣವಾಗಿ ಮೆರೆದಿದ್ದ ಪೀಥುಂಡವೆಂಬ ನಗರವನ್ನು ನೆಲಸಮ ಮಾಡಿ, ತನ್ನ ರಾಷ್ಟ್ರದ ಹಿತಕ್ಕೆ ಕಂಟಕಪ್ರಾಯವಾಗಿದ್ದ ತ್ರಮಿರ ದೇಶಗಳ ಒಕ್ಕೂಟವನ್ನು ಮುರಿದುಹಾಕಿದ. 12ನೆಯ ವರ್ಷದಲ್ಲಿ ಉತ್ತರಾಪಥದ ಅರಸುಗಳನ್ನು ಸೋಲಿಸಿ, ಮಗಧದವರಲ್ಲಿ ಭಯ ಹುಟ್ಟಿಸಿ, ಆ ದೇಶದ ಅರಸು ಬೃಹಸ್ಪತಿ ಮಿತ್ರ ತನಗೆ ತಲೆಬಾಗುವಂತೆ ಮಾಡಿದ. ಅಲ್ಲದೆ, ಹಿಂದೆ ನಂದರಾಜ ಸ್ಥಾನಾಂತರಗೊಳಿಸಿದ್ದ ಕಳಿಂಗದ ಜಿನಬಿಂಬವನ್ನು ಪುನಃ ಪ್ರತಿಷ್ಠಾಪಿಸಿ, ಅಂಗ, ಮಗಧ ರಾಷ್ಟ್ರಗಳ ಸಿರಿಸಂಪತ್ತುಗಳನ್ನು ತನ್ನವಾಗಿಸಿಕೊಂಡ. ಗೋಪುರಗಳನ್ನೂ ತೋರಣಗಳಿಂದ ಅಲಂಕೃತವಾದ ಶಿಖರಗಳನ್ನೂ ಅದ್ಭುತವಾದ ಗಜಶಾಲೆಯನ್ನೂ ನಿರ್ಮಿಸಿದ. ಪಾಂಡ್ಯರಾಜನಿಂದ ಮುಕ್ತಮಣಿರತ್ನಗಳ ಕಪ್ಪಪಡೆದ. 13ನೆಯ ವಿಜಯರಾಜ್ಯ ಸಂವತ್ಸರದಲ್ಲಿ ಶ್ರವಣರಿಗಾಗಿ ಕುಮಾರೀ ಪರ್ವತದಲ್ಲಿ ಆಶ್ರಯ ಗುಹೆಗಳನ್ನು ಕೊರೆಯಿಸಿದ. ಹೀಗೆ ಸರ್ವ ದೇವಾಲಯಗಳ ಸಂಸ್ಕಾರಕಾರಕನಾದ ಮಹಾವಿಜಯ ಖಾರವೇಲ ಶುಭಘಟನೆಗಳನ್ನು ವೀಕ್ಷಿಸುತ್ತ, ಕೇಳುತ್ತ ಅನುಭವಿಸುತ್ತ, ಮೆರೆದಿದ್ದ.

ಹೀಗೆ ರಾಜನೊಬ್ಬನ ಸಾಧನೆಗಳನ್ನು ವರ್ಷದಿಂದ ವರ್ಷಕ್ಕೆ ಪಟ್ಟಿ ಮಾಡಿ ಹೇಳುವ ಹಾಥಿಗುಂಫಾ ಶಾಸನ ಭಾರತದ ಶಾಸನಕ್ಷೇತ್ರದಲ್ಲಿ ಅದ್ವಿತೀಯವಾಗಿಯೆ ಉಳಿದಿದೆ. ಅದರಲ್ಲಿ ಉಕ್ತರಾಗಿರುವ ಸಾತಕರ್ಣಿ, ದಿಮಿತ ಮೊದಲಾದವರು ಖಾರವೇಲನ ಸಮಕಾಲೀನರು, ಯಾವ ಕಾಲದವರೆಂಬುದು ಖಚಿತವಾಗಿ ತಿಳಿದಿಲ್ಲವಾದ ಕಾರಣ ಲಿಪಿ ಶಾಸ್ತ್ರವನ್ನೂ ಶಾಸನ ಪಾತದ ಓಜೋಗುಣ ಕಾವ್ಯಶೈಲಿಯನ್ನೂ ಆಧಾರವಾಗಿಟ್ಟುಕೊಂಡು ಖಾರವೇಲ ಪ್ರ.ಶ.ಪೂ. 1ನೆಯ ಶತಮಾನದ ಉತ್ತರಾರ್ಧದಲ್ಲಿ ರಾಜ್ಯವಾಳಿದನೆಂದು ಊಹಿಸಬೇಕಾಗಿದೆ. ಅವನು ಪರಮ ಜಿನಭಕ್ತನಾಗಿದ್ದನೆಂಬುದು ಅವನ ಶಾಸನಗಳಿಂದ ವ್ಯಕ್ತವಾಗುತ್ತದೆ. (ಕೆ.ವಿ.ಆರ್‌ಎ.)

**ಖ್ಯಾಡ್:** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಆಗ್ನೇಯಕ್ಕೆ 8ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಎಡದಂಡೆಯ ಮೇಲಿರುವ ಒಂದು ಗ್ರಾಮ; ಆದಿಹಳೆಶಿಲಾಯುಗದ ನೆಲೆ. ರಾಬರ್ಟ್ ಬ್ರೂಸ್‌ಫುಟ್ 1873ರಲ್ಲಿ ಇಲ್ಲಿ ಶಿಲಾಯುಗಕ್ಕೆ ಸೇರಿದ ಉಪಕರಣಗಳನ್ನು ಸಂಗ್ರಹಿಸಿದ. 1949–50ರಲ್ಲಿ ಮರುಸಂಶೋಧನೆ ನಡೆಸಿದಾಗ ಆ ನೆಲೆಯ ಶಿಲಾಯುಗ ಸಂಸ್ಕೃತಿಯ ಪೂರ್ಣ ಮಾಹಿತಿಗಳು ಮತ್ತು ಅವುಗಳ ಕಾಲನಿರ್ದೇಶನಕ್ಕೆ ಸಹಾಯಕವಾದ ಭೂವೈಜ್ಞಾನಿಕ ಆಧಾರಗಳು ತಿಳಿದುಬಂದವು. ಖ್ಯಾಡ್ ಬಳಿಯಿರುವ ನದಿಯ ತಿರುವಿನಲ್ಲಿ ಸಂಗ್ರಹವಾಗಿರುವ ವಿಸ್ತಾರವಾದ ಉರುಟುಕಲ್ಲುಗಳ ಸ್ತರಗಳಲ್ಲಿ ನೂರಾರು ಸಂಖ್ಯೆಯಲ್ಲಿ ಕಲ್ಲಿನ ಉಪಕರಣಗಳು ಕಂಡುಬಂದಿವೆ. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಉಪಕರಣಗಳು ದೊರಕುವುದರಿಂದ ಖ್ಯಾಡ್ ಆದಿಹಳೆಶಿಲಾಯುಗದ ಉಪಕರಣ ತಯಾರಿಕಾ ಕೇಂದ್ರವೆಂದು ಖಚಿತವಾಗುತ್ತದೆ. ಇಲ್ಲಿ ದೊರಕಿದ ಉಪಕರಣಗಳಲ್ಲಿ ವಿವಿಧ ರೀತಿಯ ಕೈಗೊಡಲಿಗಳು, ಸೀಳುಗತ್ತಿಗಳು, ಚಕ್ಕೆಕಲ್ಲಿನ ಉಪಕರಣಗಳು, ಹೆರೆಯುವ ಉಪಕರಣಗಳು ಮುಖ್ಯವಾದವು. ಈ ಪ್ರದೇಶದಲ್ಲಿ ಉರುಟುಕಲ್ಲಿನಲ್ಲಿ ಮಾಡಿದ ಉಪಕರಣಗಳಿಗಿಂತ ಚಕ್ಕೆಕಲ್ಲುಗಳ ಮೇಲೆ ಮಾಡಿದ ಉಪಕರಣಗಳು ಅಧಿಕವಾಗಿವೆ. ಅಬೆವಿಲಿಯನ್ ಮತ್ತು ಅಶೂಲಿಯನ್ ಮಾದರಿಯ ಕೈಗೊಡಲಿಗಳೂ ಲೆವಾಲ್ವ ಮಾದರಿಯ ಚಕ್ಕೆಕಲ್ಲಿನ ಉಪಕರಣಗಳೂ ಇಲ್ಲಿವೆ. (ಬಿ.ಕೆ.ಜಿ)

# ಗ

**ಗಂಗವಂಶ:** ಕರ್ನಾಟಕದಲ್ಲಿ ಸು. 350 ರಿಂದ 1004 ರವರೆಗೆ ಆಳಿದ ರಾಜವಂಶ. ದಕ್ಷಿಣ ಭಾರತದ ಇತಿಹಾಸದಲ್ಲಿ 4ನೆಯ ಶತಮಾನ ಒಂದು ಪ್ರಮುಖ ಕಾಲ ಘಟ್ಟ. ಸಾತವಾಹನರು ಶಕ್ತಿಹೀನರಾದ ಮೇಲೆ ದಕ್ಷಿಣ ಭಾರತವನ್ನು ಪಲ್ಲವ, ಚುಟು, ಸಾಲಂಕಾಯನ, ಇಕ್ಷ್ವಾಕು, ವಿಷ್ಣುಕುಂಡಿ ಮೊದಲಾದವರು ಆಳಿಕೆ ನಡೆಸಿದರು. ಸಾತವಾಹನರ ಅನಂತರ ಇಡೀ ದಕ್ಷಿಣ ಭಾರತವನ್ನು ಪಲ್ಲವರು ಆಳಿದರು. ಹಿರೇ ಹಡಗಲಿ ಶಾಸನದಲ್ಲಿ ಸಾತವಾಹನರು ಆಳುತ್ತಿದ್ದ ಪ್ರದೇಶವನ್ನು ಮುಂದಿನವರು ಸಾತಹನಿರಟ್ಟ ಎಂದು ಕರೆದಿದ್ದಾರೆ. ಕರ್ನಾಟಕ, ಆಂಧ್ರ ಹಾಗೂ ತಮಿಳುನಾಡಿನ ಬಹುಭಾಗ ಪಲ್ಲವರ ಆಳಿಕೆಗೆ ಒಳಪಟ್ಟಿತ್ತು. 350ರ ಸುಮಾರಿಗೆ ಉತ್ತರ ಭಾರತದಲ್ಲಿ ಗುಪ್ತ ವಂಶದ ಸಮುದ್ರಗುಪ್ತ ದಕ್ಷಿಣಕ್ಕೆ ದಂಡೆಯಾತ್ರೆ ಮಾಡಿ ಸೋಲಿಸಿದ ರಾಜರ ಪಟ್ಟಿಯಲ್ಲಿ ಪಲ್ಲವ ವಿಷ್ಣುಗೋಪನೂ ಒಬ್ಬ. ಇಂತಹ ಸಂದರ್ಭವನ್ನು ಬಳಸಿಕೊಂಡು ಕರ್ನಾಟಕದಲ್ಲಿ ಎರಡು ರಾಜವಂಶಗಳು ಉದಯಿಸಿದವು. ಅವುಗಳೆಂದರೆ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಸ್ಥಾಪನೆ ಮಾಡಿದ ಕದಂಬರು ಹಾಗೂ ಕುವಲಾಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿಕೆ ಆರಂಭಿಸಿದ ಗಂಗರು.

ಗಂಗವಂಶ ಕರ್ನಾಟಕದ ದಕ್ಷಿಣ ಭಾಗದಲ್ಲಿ ಬಹು ದೀರ್ಘಕಾಲ ರಾಜ್ಯವಾಳಿದ ಮನೆತನವಾಗಿದೆ. ಇವರ ಆಳಿಕೆಯ ಅಂತ್ಯದ ವೇಳೆಗೆ ಧಾರವಾಡ ಜಿಲ್ಲೆಯವರೆಗೆ ಇವರ ರಾಜ್ಯ ಹಬ್ಬಿತ್ತು. ಇವರು ಶಾಸನಗಳಲ್ಲಿ ತಮ್ಮನ್ನು ಜಾಹ್ನವೇಯ ಕುಲ, ಗಂಗಕುಲ, ಗಂಗವಂಶದವರೆಂದೂ ಕಾಣ್ವಾಯನ ಗೋತ್ರದವರೆಂದೂ ಹೇಳಿಕೊಂಡಿದ್ದಾರೆ. 11ನೆಯ ಶತಮಾನದಲ್ಲಿ ಬರೆಯಲಾದ ಒಂದೆರಡು ಶಾಸನಗಳಲ್ಲಿ ಇವರನ್ನು ಇಕ್ಷ್ವಾಕುವಂಶದವರೆಂದು ಹೇಳಿದೆ. ಈ ಶಾಸನಗಳ ಕಥೆಯ ಪ್ರಕಾರ ಇಕ್ಷ್ವಾಕುವಂಶದ ಹರಿಶ್ಚಂದ್ರನ ಮಗನಾದ ಭರತ ಮತ್ತು ಅವನ ಪತ್ನಿ ವಿಜಯ ಮಹಾದೇವಿ ಈ ವಂಶದ ಮೂಲ ಪುರುಷರು. ವಿಜಯ ಮಹಾದೇವಿಗೆ ಒಮ್ಮೆ ಗಂಗಾನದಿಯಲ್ಲಿ ಮೀಯಬೇಕೆಂಬ ಬಯಕೆಯುಂಟಾಗಿ, ಮಿಂದಾಗ ಗಂಗದತ್ತನೆಂಬ ಮಗನು ಜನಿಸಿದನಂತೆ. ಇವನಿಂದ ಈ ವಂಶಕ್ಕೆ ಗಂಗವಂಶವೆಂಬ ಹೆಸರು ಬಂದಿದೆ ಎಂದು ಹೇಳಲಾಗಿದೆ. ಇಕ್ಷ್ವಾಕು ಎಂಬ ವಂಶದ ಅರಸರು (225–250) ಸಾತವಾಹನರ ಅನಂತರ ದಕ್ಷಿಣದಲ್ಲಿ ರಾಜ್ಯಭಾರ ಮಾಡಿದರು. ನಾಗಾರ್ಜುನಕೊಂಡ ಇವರ ರಾಜಧಾನಿ. ಇವರೇ ಮುಂದೆ ದಕ್ಷಿಣಕ್ಕೆ ಬಂದು ಗಂಗರ ಶಾಖೆಗೆ ನಾಂದಿಹಾಡಿದರೆಂದು ವಿದ್ವಾಂಸರ ಅಭಿಮತ. ಗಂಗ ದುರ್ವಿನೀತ ಗುಮ್ಮರೆಡ್ಡಿಪುರ ಶಾಸನದಲ್ಲಿ ತನ್ನನ್ನು ಕೃಷ್ಣಕುಲದವನೆಂದು ಕರೆದುಕೊಂಡಿದ್ದಾನೆ. ಇವರಲ್ಲಿ ವಿಷ್ಣುಗುಪ್ತನೆಂಬುವನು ತನ್ನ ಹಿರಿಯ ಮಗನಿಗೆ ಕಳಿಂಗ ದೇಶವನ್ನು ನೀಡಿದನೆಂದು ಕಲ್ಲೂರು ಮತ್ತು ನಗರ ಶಾಸನಗಳಲ್ಲಿದೆ. ಕಳಿಂಗ ರಾಜ್ಯದ ಸ್ಥಾಪಕ ಇಂದ್ರವರ್ಮ. ಇದು 495ರಲ್ಲಿ ಆಗಿದ್ದಂತೆ ಕಾಣುತ್ತದೆ. ಇವನೇ ಗಂಗಶಕೆಯ ಸ್ಥಾಪಕನೆಂದು ವಿದ್ವಾಂಸರ ಅಭಿಪ್ರಾಯ. ಇವನ ಮತ್ತು ವಿಷ್ಣುಗುಪ್ತನ ಹಿರಿಯ ಮಗನ ನಡುವಿನ ಸಂಬಂಧ ತಿಳಿಯದು. ಈ ವಿಷ್ಣುಗುಪ್ತನ ಮರಿಮೊಮ್ಮಗನಾದ ಪದ್ಮನಾಭನು ಪದ್ಮಪ್ರಭನನ್ನು ಆರಾಧಿಸಿ ರಾಮಲಕ್ಷ್ಮಣರೆಂಬ ಹೆಸರಿನ ಮಕ್ಕಳನ್ನು ಪಡೆದ. ಇವರೇ ಮುಂದೆ ದಕ್ಷಿಣಕ್ಕೆ ಬಂದು ಸಿಂಹನಂದಿ ಆಚಾರ್ಯರ ಸಹಾಯದಿಂದ ದಡಿಗ ಮತ್ತು ಮಾಧವರೆಂಬ ಹೆಸರನ್ನು ಪಡೆದು ಗಂಗರಾಜ್ಯ ಸ್ಥಾಪನೆ ಮಾಡಿದರೆಂದು ಈ ಶಾಸನಗಳು ತಿಳಿಸುತ್ತವೆ.

ಈ ಶಾಸನಗಳಲ್ಲಿ ಗಂಗವಾಡಿ ವಿಷಯ ಮತ್ತು ಕೋಲಾಹಲಪುರದ ಉಲ್ಲೇಖ ಬಂದಿದೆ. ಕೋಲಾಹಲಪುರವನ್ನು ರಾಜಧಾನಿ ಎಂದು ಕರೆಯಲಾಗಿದೆ. ಇದನ್ನು ಒಂದು ಶಾಸನದಲ್ಲಿ ಕೋಕಲಾವಲ ಪಟ್ಟಣ ಎಂದು ಕರೆಯಲಾಗಿದೆ. ತಲಕಾಡು ಮತ್ತು ಒರಿಸ್ಸ ಗಂಗರ ಶಾಸನಗಳಲ್ಲಿನ ಒಕ್ಕಣೆಗಳನ್ನು ಗಮನಿಸಿದಾಗ ಅವು ಬಹು ಸಮೀಪವಾಗಿರುವುದು ವೇದ್ಯವಾಗುತ್ತದೆ. ಕೋಲಾಹಲಪುರ ಎಂಬುದು ಕರ್ನಾಟಕದ ಕೋಲಾರವಲ್ಲ, ಒರಿಸ್ಸದಲ್ಲಿಯೇ ಇದ್ದ ಗ್ರಾಮವೆಂದು ಒರಿಸ್ಸದ ವಿದ್ವಾಂಸರು ವಾದಿಸುತ್ತಾರೆ. ಈ ಮೇಲಿನ ವಿವರಗಳನ್ನು ಮತ್ತು ಕೆಲವು ಪುರಾಣಗಳಲ್ಲಿರುವ ವಿವರಗಳನ್ನು ಆಧಾರವಾಗಿಟ್ಟುಕೊಂಡು ಒರಿಸ್ಸದ ಕೆಲವು ಇತಿಹಾಸಕಾರರು ಗಂಗರು ಕಳಿಂಗಕ್ಕೆ ದಕ್ಷಿಣದಿಂದ ಬರಲಿಲ್ಲ. ಶಾಸನಗಳಲ್ಲಿ ಉಲ್ಲೇಖವಾಗಿರುವ ಕೋಲಾಉಲಪುರವು ಸಮುದ್ರಗುಪ್ತನ ಶಾಸನದಲ್ಲಿ ಉಕ್ತವಾಗಿರುವ ಕುರಾಲ ಎಂಬ ಸ್ಥಳವೇ ಆಗಿರಬೇಕು ಎಂದು ಅಭಿಪ್ರಾಯಪಡುತ್ತಾರೆ. ಆದರೆ ಇದೇ ವಿದ್ವಾಂಸರು ಬೆಂಗಳೂರಿನಲ್ಲಿ ದೊರೆತ ದೇವೇಂದ್ರವರ್ಮನ ಶಾಸನವನ್ನು ಸಂಪಾದಿಸುತ್ತ, ಕಳಿಂಗ ಗಂಗರು ಮತ್ತು ತಲಕಾಡಿನ ಗಂಗರು ಇಬ್ಬರೂ ಒಂದೇ ಮೂಲದವರಾಗಿದ್ದು, ಅವರು ಪಶ್ಚಿಮ ಭಾರತದ ಕೊಂಕಣ ಪ್ರದೇಶದಿಂದ ಬಂದಿರುವುದಾಗಿ ಅಭಿಪ್ರಾಯ ಪಡುತ್ತಾರೆ.

ಈ ಎಲ್ಲ ಚರ್ಚೆಗಳನ್ನು ಗಮನಿಸಿದಾಗ ಕೋಲಾಲಪುರವು ಕೋಲಾರವೇ ಆಗಿರುತ್ತದೆ. ಕುರಾಲ ಎಂದಾಗಲು ಸಾಧ್ಯವಿಲ್ಲ. ಶಾಸನಗಳಲ್ಲಿ ಉಕ್ತವಾಗಿರುವ ಗಂಗವಾಡಿಯ ವಿಷಯ ಗಂಗವಾಡಿ 96000 ಎಂದೇ ಭಾವಿಸಬೇಕು.

ಗಂಗ ಅರಸರು ಉತ್ತರ ಭಾರತ ಅಥವಾ ಮತ್ತೆಲ್ಲಿಂದಲೋ ಬಂದ ರಾಜರಾಗಿರದೆ ಸ್ಥಳೀಯರಾದ ಸಣ್ಣ ಮಾಂಡಲಿಕ ರಾಜರಾಗಿದ್ದು, ಮುಂದೆ ಪಲ್ಲವರ ದುರ್ಬಲತೆಯನ್ನು ಮನಗಂಡು ಸ್ವತಂತ್ರವಾಗಿದ್ದಿರಬಹುದು. ಷೇಕ್ ಅಲಿಯವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಗಂಗರ ವಂಶಸ್ಥಾಪಕನೆಂದು ಸಾಮಾನ್ಯವಾಗಿ ಪರಿಗಣಿಸುವ ಕೊಂಗುಣಿ ವರ್ಮನನ್ನು ಶಾಸನಗಳು ಶ್ರೀಮತ್ಕೊಙ್ಗಣಿವರ್ಮ ಮಹಾರಾಜ ಎಂದಿವೆ. ಕೆಲವು ಶಾಸನಗಳು ಈತನನ್ನು ದಡಿಗನೆಂದು ಕರೆದಿವೆ. ಆದರೆ ದಡಿಗನೆಂಬ ಹೆಸರು ಕಲ್ಪಿತವಾಗಿದ್ದು, ಕೊಂಗಣಿ ವರ್ಮನೆಂಬ ಹೆಸರೇ ಹೆಚ್ಚು ಪ್ರಚಲಿತವಾಗಿತ್ತು. ಕೊಂಗಣಿವರ್ಮ ರಾಜ್ಯಸ್ಥಾಪನೆ ಮಾಡಿದ್ದರ ಬಗ್ಗೆ ಹಸ್ತಿಮಲ್ಲನ ಉದಯೇಂದಿರಂ ಶಾಸನ ಮಾರಸಿಂಹನ ಕೂಡಲೂರು ಶಾಸನ ಗೊಮ್ಮಟಸಾರವೆಂಬ ಪ್ರಾಚೀನ ವ್ಯಾಖ್ಯಾನವಲ್ಲದೆ, ಹುಂಚ ಮತ್ತು ಕಲ್ಲೂರಿನ ಶಿಲಾಶಾಸನಗಳು ತಿಳಿಸುತ್ತವೆ.

ಕೊಂಗುದೇಶದ ರಾಜರ ಚರಿತ್ರೆಯಲ್ಲಿ ಕೊಂಗುಣಿವರ್ಮನು ಶತ್ರುರಾಜರೊಡನೆ ಜಯಗಳಿಸಲು ಹೋದಾಗ ತನ್ನ ಕೈ ಕತ್ತಿಯಿಂದ ಒಂದು ಕಲ್ಲನ್ನು ಕಡಿದು, ಆ ಕಲ್ಲನ್ನು ಕಡಿದಂತೆಯೇ ಶತ್ರುರಾಜರನ್ನು ಕಡಿದು ಜಯಗಳಿಸುತ್ತೇನೆಂದು ಪ್ರತಿಜ್ಞೆ ಮಾಡಿದ ಎಂದು ಹೇಳಿದೆ. ಇಲ್ಲಿ ಸಿಂಹ ನಂದಿಯ ಪ್ರಸ್ತಾಪವಿಲ್ಲ. ಆದರೆ ಈ ಮೇಲಿನ ಕಥೆಯನ್ನು ಹಿಂದಿನ ಶಾಸನಗಳು ಕೊಡುವುದಿಲ್ಲ. ಕೊಂಗುಣಿವರ್ಮನನ್ನು ಹೆಸರಿಸಿ ಅವನು ಒಂದೇ ಏಟಿಗೆ ಶಿಲಾಸ್ತಂಭವನ್ನು ಖಡ್ಗದಿಂದ ತುಂಡರಿಸಿದ ವಿಷಯವನ್ನು ಅವು ತಿಳಿಸುತ್ತವೆಯಾದರೂ

ಅಲ್ಲೆಲ್ಲೂ ಸಿಂಹನಂದಿಯ ಉಲ್ಲೇಖವಿಲ್ಲ. ಅಲ್ಲದೆ ಈ ವಂಶದ ಪ್ರಾರಂಭದ ಅರಸರ ಹೆಸರುಗಳೆಲ್ಲವೂ ವಿಷ್ಣುವಿಗೆ ಸಂಬಂಧಿಸಿದ ಹೆಸರುಗಳಾಗಿರುವುದು ಒಂದು ವಿಶೇಷ. ಅವರು ವೇದಶಾಸ್ತ್ರಗಳಲ್ಲಿ ಪಾರಂಗತರಾಗಿದ್ದು ಬಹುತೇಕವಾಗಿ ಬ್ರಾಹ್ಮಣರಿಗೆ ದಾನ ನೀಡಿರುವುದು ತಿಳಿಯುತ್ತದೆ.

ಕೊಂಗುಣಿವರ್ಮ, ಕೊಂಗುಣಿ, ಕೊಙ್ಗವರ್ಮ, ಕೊಂಗಳಿ ಎಂಬ ಪ್ರಯೋಗಗಳು ಶಾಸನಗಳಲ್ಲಿ ಕಾಣಬರುತ್ತವೆಯಾದರೂ ಈ ಪದದ ಅರ್ಥ ಸ್ಪಷ್ಟವಾಗಿಲ್ಲ. ಕೊಂಗು ದೇಶದ ರಾಜರು ಗ್ರಂಥದಲ್ಲಿ ಈ ಪದವನ್ನು ಬಿಡಿಸುತ್ತಾ ಶ್ರೀಮತ್ ಎಂದರೆ ಅಧಿಕ ಸಂಪತ್ತನ್ನು ಹೊಂದಿದವನೆಂದೂ ಮಿಗಿಲಾದ ಧರ್ಮದೊಂದಿಗೆ ರಾಜನೀತಿಯನ್ನು ಪಾಲಿಸಿದವನಾದ್ದರಿಂದ ಧರ್ಮ ಮಹಾಧೀರನೆಂದೂ ಸಂಪತ್ತು, ಧರ್ಮ ಮತ್ತು ಕೊಂಗುರಾಯ ದೇಶದ ಪಟ್ಟ ಇವುಗಳಿಂದ ಶ್ರೀಮತ್ ಕೊಂಗಣಿವರ್ಮ ಧರ್ಮಮಹಾಧಿರಾಯ ಎಂಬ ಹೆಸರು ಬಂತೆಂದೂ ಹೇಳಿದೆ. ಕೊಂಗುದೇಶವನ್ನಾಳಿದ ರಾಜವಂಶಗಳಲ್ಲಿ ಕೊಂಗುಣಿವರ್ಮ ವಂಶದವರ ವಿವರಗಳೂ ಇವೆ. ಕರ್ನಾಟಕದಲ್ಲಿಯೂ ಒಂದು ಕೊಂಗಲ್ನಾಡು ಅಸ್ತಿತ್ವದಲ್ಲಿದ್ದುದು ತಿಳಿದು ಬರುತ್ತದೆ. ಕೊಂಗಳ್ ಎಂಬ ಶಬ್ದ ವ್ಯಾಪಕವಾಗಿ ಅಲ್ಲದಿದ್ದರೂ ಅಲ್ಲಲ್ಲಿ ಬಳಕೆಯಾಗುತ್ತಿತ್ತು. ಕೊಂಗುದೇಶವೆಂದು ಈಗ ಗುರುತಿಸುವ ಭಾಗ ಭೌಗೋಳಿಕವಾಗಿ ಬೆಟ್ಟಗುಡ್ಡಗಳಿಂದ ಕೂಡಿರುವ ಪ್ರದೇಶ. ಕೊಂಗು ಎಂಬ ಪದವನ್ನು ದೇಶವಾಚಕ ಪದವಾಗಿ ತೆಗೆದುಕೊಂಡರೆ,

ಗಂಗರ ಲಾಂಛನ

ಗಡಿನಾಡನ್ನು (ಕೊಂಗನ್ನು) ಆಳಿದವನಿಗೆ ವರ್ಮ ಎಂಬ ಪದವು ಬಿರುದಾಗಿ ಬಂದಿದ್ದು, ಆ ರಾಜನು ಕೊಂಗುಣಿವರ್ಮ ಎನಿಸಿರಬಹುದು. ಒಟ್ಟಾರೆ ಈ ಪದದ ಅರ್ಥ ಕೊಂಗು ದೇಶವನ್ನಾಳಿದ ರಾಜ ಎಂದಾಗುತ್ತದೆ. ಗಂಗರ ಪ್ರಾರಂಭಿಕ ರಾಜಧಾನಿ ಯಾವುದಾಗಿತ್ತೆಂಬ ಬಗ್ಗೆ ವಾದವಿವಾದಗಳಿದ್ದು, ಕೆಲವರು ಕೋಲಾರವೆಂದೂ ಕೆಲವರು ತಲಕಾಡೆಂದೂ ಹೇಳುತ್ತಾರೆ. ಗಂಗರ ಇನ್ನೊಂದು ಶಾಖೆಗೆ ಪರುವಿ ರಾಜಧಾನಿಯಾಗಿತ್ತೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. 9ನೆಯ ಶತಮಾನದ ಅನಂತರ ಗಂಗರ ಶಾಸನಗಳಲ್ಲಿ ಕುವಳಾಪುರವರೇಶ್ವರ ನಂದಗಿರಿನಾಥ ಎಂಬ ಉಲ್ಲೇಖಗಳು ಬರುತ್ತವೆ. ಕುವಲಾಳವನ್ನು ಕೋಲಾರವೆಂದೂ ನಂದಗಿರಿಯನ್ನು ಈಗಿನ ನಂದಿಬೆಟ್ಟವೆಂದೂ ಗುರುತಿಸುತ್ತಾರೆ. ಈ ಪಾರಂಪರಿಕ ಬಿರುದಾವಳಿಯಲ್ಲಿ ತಲಕಾಡನ್ನು ಸೇರಿಸಿಲ್ಲ. ಹರಿವರ್ಮನ ಅನಂತರದ ಶಾಸನಗಳಲ್ಲಿ ತಲಕಾಡಿನ ಉಲ್ಲೇಖ ಬರುತ್ತದೆಯಾದರೂ ದುರ್ವಿನೀತನವರೆಗೆ ಬಹುತೇಕ ತಾಮ್ರ ಶಾಸನಗಳು ಕುವಲಾಳ ಮತ್ತು ಪರುವಿ ವಿಷಯಗಳನ್ನು ಹಾಗೂ ಕೋಲಾರ, ಬೆಂಗಳೂರು ಶಾಸನಗಳು ಜಿಲ್ಲೆಗಳ ಗ್ರಾಮಗಳನ್ನು ಮಾತ್ರ ಉಲ್ಲೇಖಿಸುತ್ತವೆ, ತಲಕಾಡನ್ನು ಉಲ್ಲೇಖಿಸುವುದಿಲ್ಲ. 8ನೆಯ ಶತಮಾನದ ಅನಂತರದ ಶಾಸನಗಳಲ್ಲಿ ಕೋಲಾರ, ಬೆಂಗಳೂರು ಮತ್ತು ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಕೆಲವು ಭಾಗಗಳನ್ನು ಗಂಗ-6000 ನಾಡೆಂದು ಕರೆದಿರುತ್ತವೆ. ಬಹುಶಃ ಈ ಗಂಗ-6000 ವಿಭಾಗ ಪ್ರಾರಂಭದಲ್ಲಿ ಗಂಗ ಅರಸು ಆಳುತ್ತಿದ್ದ ಮೂಲ ಪ್ರದೇಶವಾಗಿದ್ದಿರಬೇಕು. ಈ ಭಾಗ ಗಂಗರಸರ ಕೈತಪ್ಪಿ ಬೇರೆ ಅರಸರ ಅಧೀನದಲ್ಲಿದ್ದಾಗಲೂ ಇದನ್ನು ಗಂಗ-6000 ಎಂದೇ ಕರೆದಿದೆ. ಗಂಗರು ತಮ್ಮ ಮೂಲಸ್ಥಳವಾದ ಕೋಳಾಲವನ್ನು ಬಿರುದಾವಳಿಗಳಲ್ಲಿ ಸೇರಿಸಿದ್ದಾರೆ. ಚಾಳುಕ್ಯರ ಪ್ರಾಬಲ್ಯ, ಪಲ್ಲವರ ಒತ್ತಡ ಇವುಗಳಿಂದಾಗಿ ಇವರು ತಮ್ಮ ರಾಜಧಾನಿಯನ್ನು ಬದಲಾಯಿಸಬೇಕಾಗಿ ಬಂದಿರಬೇಕು. ಇವರ ಆರಂಭದ ರಾಜಧಾನಿ ಕುವಲಾಲಪುರವೇ. ಶ್ರೀಪುರುಷನ ಕಾಲದಲ್ಲಿ ಇವುಗಳ ಜೊತೆಗೆ ಮಾನ್ಯಪುರ ಅಥವಾ ಮಣ್ಣೆ ಇವರ ರಾಜಧಾನಿಗೆ ಸೇರಿಕೊಂಡಿತು. ಇವೆಲ್ಲವೂ ತಾತ್ಕಾಲಿಕ ರಾಜಧಾನಿಯಾದ್ದವೆಂಬುದರಲ್ಲಿ ಸಂಶಯವಿಲ್ಲ. ಮುಂದೆ ಗಂಗರ ಅಂತ್ಯದವರೆಗೆ ತಲಕಾಡೇ ಇವರ ರಾಜಧಾನಿಯಾಗಿತ್ತು. ಕೊಂಗುಣಿವರ್ಮ ನದೆಂದು ಹೇಳುವ ಶಾಸನವೊಂದು ದೊರಕಿದ್ದು ಅದನ್ನು ವಿದ್ವಾಂಸರು ಕೂಟಶಾಸನವೆಂದು ಪರಿಗಣಿಸಿರುತ್ತಾರೆ. ಒಟ್ಟಾರೆ ಈತ ಈ ವಂಶದ ಮೂಲಪುರುಷನೆಂಬುದರಲ್ಲಿ ಸಂಶಯವಿಲ್ಲ. ಎಮ್.ವಿ.ಕೃಷ್ಣರಾಯರು ಇವರ ವಂಶಾವಳಿ ಬಗ್ಗೆ ಬರೆಯುತ್ತಾ ದಡಿಗ ಮಾಧವರು ಅಣ್ಣ ತಮ್ಮಂದಿರೆಂದೂ ದಡಿಗನೇ ಕೊಂಗುಣಿವರ್ಮನೆಂದೂ ಗುರುತಿಸುತ್ತಾರೆ. ಬಹುತೇಕ ಶಾಸನಗಳಲ್ಲಿ ಇವನನ್ನು ಗಂಗ ರಾಜ್ಯದ ಮೂಲಸ್ಥಾಪಕನೆಂಬಂತೆ ವರ್ಣಿಸಿದೆ. ಇವನ ಕಾಲ 350-370.

ಒಂದನೆಯ ಮಾಧವ: ಬಹುತೇಕ ವಿಶ್ವಾಸಾರ್ಹ ಶಾಸನಗಳಲ್ಲಿ ಇವನನ್ನು ಕೊಂಗುಣಿವರ್ಮನ ಮಗನೆಂದು ಕರೆದಿದೆ. ಇವನು ದತ್ತಕಸೂತ್ರಕ್ಕೆ ವ್ಯಾಖ್ಯಾನ ಬರೆದಿರುವಂತೆ ಶಾಸನಗಳಲ್ಲಿ ಹೇಳಿದೆ. ಈತನ ಕಾಲ 370-390. ಈ ಮಾಧವನ ಅನಂತರದ ಕಾಲದಲ್ಲಿ ಗಂಗರ- ಉತ್ತರಾಧಿಕಾರಿಗಳೆಂದು ಹೇಳಿಕೊಂಡಿರುವ ಬೇರೆ ಬೇರೆ ಅರಸರ ತಾಮ್ರಶಾಸನಗಳು ಪತ್ತೆಯಾಗಿವೆ. ಹೀಗಾಗಿ ಇವನಿಗೆ ಅನೇಕ ಮಕ್ಕಳಿದ್ದಿರಬೇಕೆಂಬ ಸಂಶಯ ಬರುತ್ತದೆ. ಅನೇಕ ವಿದ್ವಾಂಸರು ಈ ಹೆಸರುಗಳೆಲ್ಲ ಒಬ್ಬನದೇ ಎಂದರೆ, ಕೆಲವು ವಿದ್ವಾಂಸರು ಬೇರೆ ಬೇರೆ ಎಂದಿದ್ದಾರೆ. ವಿಭಿನ್ನ ವಂಶಾವಳಿಯನ್ನು ನೀಡುವ ಶಾಸನಗಳಲ್ಲಿ ಈ ಅರಸರು ಬಂದು ಪಟ್ಟ ಕಟ್ಟಿದಂತೆ ಉಲ್ಲೇಖವಿದೆ. ಪೆನುಗೊಂಡೆ, ಚುಕ್ಕಟೂರು, ಬೆಂಡಿಗಾನಹಳ್ಳಿ, ಕುಡಿತಿನಿ, ಕುಡಲೂರು ಶಾಸನಗಳು ನೈಜಶಾಸನಗಳಾಗಿದ್ದು, ವಿಭಿನ್ನ ವಂಶಾವಳಿಯನ್ನು ನೀಡುವ ಶಾಸನಗಳಾಗಿವೆ. ಈ ಭಿನ್ನ ವಂಶಾವಳಿಯ ಅರಸರ ಹೆಸರನ್ನು ಮುಂದಿನ ಶಾಸನಗಳಲ್ಲಿ ಕೈಬಿಟ್ಟಿರುವುದೂ ಗಮನಾರ್ಹ. ಮಾಧವನ ಅನಂತರದ ಶಾಸನಗಳಲ್ಲಿ ಮುಖ್ಯವಾಗಿ ಮೂರು ಹೆಸರುಗಳು ಅರಿವರ್ಮ, ಆರ್ಯವರ್ಮ ಮತ್ತು ಕೃಷ್ಣವರ್ಮ- ಕಾಣಬರುತ್ತವೆ. ಆದರೂ ಶಾಸನಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಎರಡು ಹೆಸರುಗಳು ಪ್ರಧಾನವಾಗಿ ಕಾಣುತ್ತವೆ. ಅಯ್ಯವರ್ಮ ಅಥವಾ ಆರ್ಯವರ್ಮ ಅಥವಾ ಅರಿವರ್ಮ ಮತ್ತು ಕೃಷ್ಣವರ್ಮರೇ ಈ ಇಬ್ಬರು.

ಸಿಂಹವರ್ಮ ಮತ್ತು ಕೃಷ್ಣವರ್ಮರನ್ನು ಹೆಸರಿಸುವ ಶಾಸನಗಳಲ್ಲಿ ಅಪ್ಪಿತಪ್ಪಿಯೂ ಪಲ್ಲವರ ಉಲ್ಲೇಖ ಬರುವುದಿಲ್ಲ. ಅರಿವರ್ಮನೆಂದು ಕರೆದಿರುವ ಶಾಸನಗಳಲ್ಲಿ ಅವನನ್ನು ಕೃಷ್ಣವರ್ಮನೆಂದು ಕರೆದಿಲ್ಲ. ಅವನ ಮಗನಾದ 2ನೆಯ ಮಾಧವನ ಶಾಸನದಲ್ಲಿ ಅವನ ಉಪನಾಮಧೇಯವಾಗಿ ಸಿಂಹವರ್ಮನೆಂದು ಕರೆದಿದೆ. ಎನ್. ಲಕ್ಷ್ಮೀನಾರಾಯಣರಾಯರು ಇವರನ್ನು ಬೇರೆ ಶಾಖೆಯವರೆಂಬುದನ್ನು ಒಪ್ಪದೆ 2ನೆಯ ಮಾಧವ ಸಿಂಹವರ್ಮನೆಂದೇ ಗುರುತಿಸುತ್ತಾರೆ ಮತ್ತು ಅವನ ಕಾಲವನ್ನು 460 ಎಂದು ಹೇಳುತ್ತಾರೆ. ಫ್ಲೀಟರು 475 ಎಂದಿರುತ್ತಾರೆ. ಪಲ್ಲವ ಅರಸ ಸಿಂಹವರ್ಮನು ಆರ್ಯವರ್ಮನನ್ನೂ ಸಿಂಹವರ್ಮನ ಮಗನಾದ ಸ್ಕಂಧವರ್ಮನು ಮಾಧವವರ್ಮನನ್ನೂ ಸಿಂಹಾಸನದ ಮೇಲೆ ಕುಳ್ಳಿರಿಸಿದ ವಿಷಯವನ್ನು ಕೆಲವು ಶಾಸನಗಳು ತಿಳಿಸುತ್ತವೆ. ಹೀಗಾಗಿ ಆರ್ಯವರ್ಮನ ಕಾಲವನ್ನು 400 ಅಥವಾ 420 ಎಂದು ತೀರ್ಮಾನಿಸಬಹುದಾಗಿದೆ. ಹೀಗೆ ಪಲ್ಲವ ಅರಸರ ಪ್ರೋತ್ಸಾಹ ಗಂಗರ ಒಂದು ಶಾಖೆಗೆ ದೊರೆತದ್ದರಿಂದ ಸಹಜವಾಗಿ ಆ ಶಾಖೆ ಮುಂದುವರೆದು ಕೃಷ್ಣವರ್ಮನ ಶಾಖೆ ಹಿಂದಕ್ಕೆ ಸರಿದು ಮೂಲೆ ಗುಂಪಾಗುತ್ತದೆ. ಮುಂದೆ ಹರಿವರ್ಮನ ಶಾಖೆಗೆ ಕದಂಬರ ಪ್ರೋತ್ಸಾಹವೂ ದೊರೆತು ಅದು ಮತ್ತಷ್ಟು ಮುಂದುವರೆಯಲು ಕಾರಣವಾಗುತ್ತದೆ. ಗಂಗರ ಮುಂದಿನ ಪಾರಂಪರಿಕ ಶಾಸನಗಳಲ್ಲಿ ಕೃಷ್ಣವರ್ಮನ ಹೆಸರಾಗಲೀ ಸಿಂಹವರ್ಮನ ಹೆಸರಾಗಲೀ ಕಾಣುವುದಿಲ್ಲ.

ಹರಿವರ್ಮನ ಅನಂತರ ಅವನ ಮಗ 2ನೆಯ ಮಾಧವನು ಪಟ್ಟಕ್ಕೆ ಬಂದ. ಇವನನ್ನು ಪಲ್ಲವ ಸ್ಕಂದವರ್ಮನು ಪಟ್ಟಕ್ಕೆ ಕುಳ್ಳಿರಿಸಿದ. ಇವನಿಗೆ ಸಿಂಹವರ್ಮ ಎಂಬ ಇನ್ನೊಂದು ಹೆಸರೂ ಇತ್ತು. ಹೀಗಾಗಿ ಇವನು ಗಂಗರ ಇನ್ನೊಂದು ಶಾಖೆಯ ಕೃಷ್ಣವರ್ಮನ ಮಗನಾದ ಸಿಂಹವರ್ಮನ ಸಮಕಾಲೀನ. ಮೇಲೆ ಹೇಳಿದ ಕೃಷ್ಣವರ್ಮನ ಮಗನಾದ ಸಿಂಹವರ್ಮನ ಮಗನೇ ಯುವರಾಜ ವೀರವರ್ಮ. ಇಮ್ಮಡಿ ಮಾಧವನ ಮಗ ವಿಷ್ಣುಗೋಪ. ವಿಷ್ಣುಗೋಪನ ಮಗನಾದ ಮಾಧವನ ಶಾಸನದಲ್ಲಿ ಉಲ್ಲೇಖಿತನಾಗಿರುವ ಕೃಷ್ಣವರ್ಮ ಕದಂಬ ಕೃಷ್ಣವರ್ಮ. ವಿಷ್ಣುಗೋಪನನ್ನು ಶಾಸನಗಳು ದ್ವಿಜಗುರು ದೇವತಾ ಪೂಜನಪರೋ ನಾರಾಯಣ ಚರಣಾನುಧ್ಯಾತಃ ಎಂದು ಹೇಳುತ್ತವೆ.

ಇವನ ಮಗ ಮೂರನೆಯ ಮಾಧವ. ಈತನನ್ನು ಕೆಲವು ಶಾಸನಗಳು ತಡಂಗಾಲ ಮಾಧವನೆಂದೂ ಬಿರುದುರ ತಡಂಗಾಲ ಪೊಯ್ದಡಗಿಸುವ ಮಾಧವ ಎಂದೂ ಕರೆದಿವೆ. ಇವನ ಕಾಲ ಗಂಗರ ಇತಿಹಾಸದಲ್ಲಿ ಬದಲಾವಣೆಯ ಕಾಲವಾಗಿತ್ತು. ಇವನವರೆಗೆ ಗಂಗರ ಇತಿಹಾಸ ಅಸ್ಪಷ್ಟವಾಗಿದ್ದು, ಇಲ್ಲಿಂದಾಚೆಗೆ ವಿವರವಾಗಿ, ಇತರೇ ವಿಷಯಗಳು ಮತ್ತು ಸಮಕಾಲೀನ ರಾಜರ ಪ್ರಸ್ತಾವನೆಗಳು ಶಾಸನಗಳಲ್ಲಿ ಕಾಣಬರುತ್ತವೆ. ಈತ ಕದಂಬ ಕೃಷ್ಣವರ್ಮನ ತಂಗಿಯನ್ನು ಮದುವೆಯಾಗಿದ್ದಂತೆ ಬಹುತೇಕ ಶಾಸನಗಳು ಬಣ್ಣಿಸುತ್ತವೆ. ಈ ಕೃಷ್ಣವರ್ಮನು ಕದಂಬರ ಕಾಕುಸ್ಥವರ್ಮನ ಎರಡನೆಯ ಮಗ ಮತ್ತು ಕದಂಬರ ಇನ್ನೊಂದು ಶಾಖೆಯ ಪ್ರಾರಂಭಿಕನೂ ಆಗಿರುತ್ತಾನೆ. ಮೃಗೇಶವರ್ಮ ತನ್ನನ್ನು ಗಂಗರ ವೈರಿ ಎಂದು ಕರೆದುಕೊಂಡಿದ್ದರೆ ಕದಂಬರ ಕೃಷ್ಣವರ್ಮ ದಾಯಾದಿ ಕಲಹದಲ್ಲಿ ವೈರಿಗಳಾದ

ಗಂಗರ ಸ್ನೇಹ ಬಯಸುತ್ತಾನೆ. ಹೀಗಾಗಿ ಕದಂಬರಿಗೂ ಗಂಗರಿಗೂ ಸಂಬಂಧ ನಡೆದಿರಬೇಕು. ಶಾಸನಗಳು ಮಾಧವನನ್ನು ತ್ರ್ಯಂಬಕದೇವರ ಚರಣಗಳೆಂಬ ಕಮಲಗಳ ಪರಾಗದಿಂದ ಪವಿತ್ರವಾದ ಶರೀರವನ್ನು ಉಳ್ಳವನು, ಸ್ವಂತ ಭುಜಬಲದಿಂದ ರಾಜ್ಯವನ್ನು ಗಳಿಸಿದವನು ಎಂದು ಹೇಳುತ್ತವೆ. ಇವನನ್ನು ಕೋಡಂಚರವು ಮತ್ತು ಚುಕ್ಕುಟೂರಿನ ಶಾಸನಗಳಲ್ಲಿ ವಿಷ್ಣುಗೋಪನ ಮಗನೆಂದೇ ಕರೆಯಲಾಗಿದೆ.

ಮಾಧವನ ಮಗ ಅವಿನೀತ. ಈತನ ತಾಯಿ ಕದಂಬ ಕೃಷ್ಣವರ್ಮನ ತಂಗಿ. ಈತ ಪುನ್ನಾಡು ರಾಜಕುಮಾರಿಯನ್ನು ಮದುವೆಯಾಗಿದ್ದಂತೆ ಶಾಸನಗಳು ತಿಳಿಸುತ್ತವೆ. ಬೆಂಗಳೂರು ರೆಸಿಡೆನ್ಸ್ ಶಾಸನದಲ್ಲಿ ಈತ ಶೈಶವದಲ್ಲಿಯೇ ಪಟ್ಟಕ್ಕೆ ಬಂದಂತೆ ಹೇಳಿದೆ. ಪಲ್ಲವ ಸಿಂಹವಿಷ್ಣುವಿನ ತಾಯಿ ಕಟ್ಟಿಸಿದ ಜೈನಬಸದಿಯೊಂದಕ್ಕೆ ಈತ ದಾನ ನೀಡಿದ. ಇದು ನಿಜವಾದಲ್ಲಿ ಈ ಸಿಂಹವಿಷ್ಣುವಿನ ತಾಯಿ ಅವಿನೀತನ ಸೋದರಿಯಾಗಿದ್ದಿರಬೇಕು. ಹೀಗಾದಲ್ಲಿ ಸಿಂಹವಿಷ್ಣು ಹಾಗೂ ಅವಿನೀತನ ಮಗ ದುರ್ವಿನೀತ ಸಮಕಾಲೀನರಾಗುತ್ತಾರೆ. ಸಿಂಹವಿಷ್ಣುವಿನ ಕಾಲ ಸು.550–610. ಇವನಿಗಿಂತ ಅವಿನೀತ ಹಿರಿಯನಾದ್ದರಿಂದ ಇವನ ಕಾಲವನ್ನು ಸು.510 ರಿಂದ 560 ಎಂದು ನಿಗದಿಪಡಿಸಬಹುದು.



ಚಾವುಂಡರಾಯ ಬಸದಿ, ಶ್ರವಣಬೆಳಗೊಳ

ಅವಿನೀತನ ಮಗ ದುರ್ವಿನೀತ ತಗರೆಯ ಶಾಸನದಲ್ಲಿ ಸಂಯತಿ ಅರಿನರಪ ದುರ್ವಿನೀತಃ (ಯುದ್ಧದಲ್ಲಿ ಶತ್ರುರಾಜನಿಗೆ ಬಗ್ಗದವನು) ಎಂದೂ ನರಸಿಂಹರಾಜಪುರ ಶಾಸನದಲ್ಲಿ ದುರ್ವಿನೀತ ಕಲೌ ದುರ್ವಿನೀತಃ (ದುಷ್ಟ ಕಲಿಗೆ ದುಷ್ಟ) ನೆಂದೂ ಹೇಳಿದೆ. ದುರ್ವಿನೀತನ ಶಾಸನಗಳಲ್ಲಿ ತಾನು ದಕ್ಷಿಣ ದೇಶಕ್ಕೆ ಉಂಟಾಗಿದ್ದ ವಿಪತ್ತನ್ನು ಹೋಗಲಾಡಿಸಿದ್ದಾಗಿ ಹೇಳಿಕೊಂಡಿದ್ದಾನೆ. ಈ ದಕ್ಷಿಣ ದೇಶ ಯಾವುದೆಂದು ಸ್ಪಷ್ಟವಿಲ್ಲ. ಈತನ ಕಾಲ 560–600.

ದುರ್ವಿನೀತನನ್ನು ಗುಮ್ಮರೆಡ್ಡಿಪುರದ ಶಾಸನದಲ್ಲಿ ವೃಷ್ಣಿಕುಲತಿಲಕನಾದ ಕೃಷ್ಣನ ಸಮನೆಂದೂ ಕೃಷ್ಣ ಕುಲದವನೆಂದೂ ಹಿರಣ್ಯಗರ್ಭಯಾಗ ಮಾಡಿದಂತೆಯೂ ಹೇಳಿದೆ. ಈ ದುರ್ವಿನೀತ ಕವಿಯೂ ಆಗಿದ್ದಿರಬೇಕು. ಭಾರವಿಯ ಕಿರಾತಾರ್ಜುನೀಯದ 15ನೆಯ ಸರ್ಗಕ್ಕೆ ಟೀಕು ಬರೆದ ಶಬ್ದಾವತಾರ ಹಾಗೂ ದೇವಭಾರತೀನಿಬದ್ಧ ವಡ್ಡಕಥೆಗೂ ಟೀಕೆ ಬರದಂತೆ ಹೇಳಿದೆ. ಈತನ ಪ್ರಭಾವ ಮುಂದಿನ ಗಂಗರಾಜ ವಂಶಸ್ಥರ ಮೇಲೆ ಎಷ್ಟು ಅಗಾಧವಾಗಿತ್ತೆಂದರೆ, ಇವನ ಅನಂತರ ಬಂದ ಶ್ರೀಪುರುಷ, ಎರಡನೆಯ ರಾಚಮಲ್ಲ, 2ನೆಯ ಬೂತುಗ ಮುಂತಾದವರು ತಮ್ಮನ್ನು ದುರ್ವಿನೀತ ಎಂದೇ ಕರೆದುಕೊಂಡಿದ್ದಾರೆ. ಸಮಸ್ತ ಪುನ್ನಾಡು, ಪಾನ್ನಾಡುಗಳಿಗೆ ಅಧಿಪತಿಯಾಗಿದ್ದ ದುರ್ವಿನೀತನು, ಅನ್ದರಿ, ಪೊರಳರೆ, ಪೆನ್ನಗರ ಮುಂತಾದ ಊರುಗಳ ಮೇಲೆ ಯುದ್ಧಮಾಡಿ ಜಯಪಡೆದ ದುರ್ವಿನೀತನಿಗೆ ಮೂವರು ಮಕ್ಕಳಿದ್ದು ಅವರಲ್ಲಿ ಮುಷ್ಕರ ಮತ್ತು ಪೊಲವೀರರ ಹೆಸರು ಮಾತ್ರ ತಿಳಿದುಬರುತ್ತದೆ.

ಮುಷ್ಕರ ದುರ್ವಿನೀತನ ಮಗ. ಮುಷ್ಕರನನ್ನು ಹುಲ್ಲಹಳ್ಳಿ ಶಾಸನದಲ್ಲಿ ಉರಗಪುರಾಧಿಪತಿಯಾದ ಚೋಳರಾಜನ ಮಗಳ ಮಗನೆಂದು ಕರೆದಿದೆ. ದುರ್ವಿನೀತ ಚೋಳ ರಾಜಕುಮಾರಿಯನ್ನು ಮದುವೆಯಾಗಿದ್ದ. ಸಿಂಧೂ ರಾಜನ ಮಗಳನ್ನು ಮದುವೆಯಾಗಿದ್ದನೆಂದು ಶಾಸನವೊಂದು ತಿಳಿಸುತ್ತದೆ. ಕೃಷ್ಣವರ್ಮನ ಶಾಸನದಲ್ಲಿ ಬರುವ ಸಿಂದುಥಯ ರಾಷ್ಟ್ರದ ಅರಸು ಕುವರಿಯು ಈತನ ಪತ್ನಿಯಾಗಿದ್ದಿರಬಹುದು. 2ನೆಯ ಮಾರಸಿಂಹನ ಲಕ್ಷ್ಮೇಶ್ವರದ ಶಾಸನದಲ್ಲಿ ಈತನು ಮಿರಜೆಯಲ್ಲಿ ಮೊಕ್ಕರಬಸದಿ ಕಟ್ಟಿಸಿದಂತೆ ಹೇಳಿದೆ.

ಶ್ರೀವಿಕ್ರಮ ಮುಷ್ಕರನ ಮಗ. ಇವನ ಕಾಲದಿಂದೀಚೆಗೆ ಗಂಗರ ಶಿಲಾಶಾಸನಗಳು ದೊರೆಯಲಾರಂಭಿಸಿವೆ. ಇತ್ತೀಚೆಗೆ ಹೊನ್ನುಡುಕೆಯಲ್ಲಿ ದೊರೆತ ಶಾಸನದಲ್ಲಿ ಈತನ ಉಲ್ಲೇಖವಿದೆ.

ಭೂವಿಕ್ರಮ: ಶ್ರೀವಿಕ್ರಮನಿಗೆ ಇಬ್ಬರು ಮಕ್ಕಳು. ಭೂವಿಕ್ರಮ ಹಾಗೂ ಶಿವಮಾರ. ಹಳ್ಳಗೆರೆ ಶಾಸನದಲ್ಲಿ ಭೂವಿಕ್ರಮನು ಪಲ್ಲವೇಂದ್ರನನ್ನು ವಿಳಿಂದೆ ಎಂಬಲ್ಲಿ ಸೋಲಿಸಿದಂತೆ ಹೇಳಿದೆ. ಚಳುಕ್ಯ ಒಂದನೆಯ ವಿಕ್ರಮಾದಿತ್ಯನ ಗದ್ವಾಲ ಶಾಸನದಲ್ಲಿ ಉಕ್ತವಾಗಿರುವ ಗಂಗ ಮಹಾದೇವಿ ಈ ಭೂವಿಕ್ರಮನ ಮಗಳಾಗಿದ್ದಿರಬಹುದು. ಈ ಕಾರಣದಿಂದ ಚಳುಕ್ಯರು ಗಂಗರು ಸಂಬಂಧಿಗಳಾಗಿ ಪಲ್ಲವರೊಡನೆ ಯುದ್ಧಮಾಡಿದ್ದಿರಬಹುದು. ಈತ ಪಲ್ಲವೇಂದ್ರನ ಮೇಲೆ ಯುದ್ಧಮಾಡಿ ಶ್ರೀವಲ್ಲಭನೆಂಬ ಬಿರುದನ್ನು ಗಳಿಸಿದ. ಪಲ್ಲವರಿಂದ ಉಗ್ರೋದಯವೆಂಬ ಹಾರವನ್ನು ಪಡೆದನಂತೆ. ಇವನ ಬೆದಿರೂರಿನ ಶಾಸನದಲ್ಲಿ ಕಾಲವನ್ನು 634 ಎಂದು ಹೇಳಿರುವುದರಿಂದ ಈತನು 619ರಲ್ಲಿ ಪಟ್ಟಕ್ಕೆ ಬಂದಿರಬಹುದು. ಆದರೂ ಭೂವಿಕ್ರಮ ಮತ್ತು ಶಿವಕುಮಾರ ಇಬ್ಬರೂ ಅಣ್ಣತಮ್ಮಂದಿರಾಗಿದ್ದು ಈ ಉಲ್ಲೇಖಿತ ಕಾಲಗಳನ್ನು ನೋಡಿದಲ್ಲಿ ಸು. 100 ವರ್ಷಗಳಿಗೆ ಮೇಲ್ಪಟ್ಟು ರಾಜ್ಯಪಾಲನೆ ಮಾಡಿದಂತೆ ತಿಳಿಯಬೇಕಾಗುತ್ತದೆ. ಇದು ಅಸಂಭವವಾಗಿದ್ದು ಭೂವಿಕ್ರಮನು 650ರಲ್ಲಿ ಪಟ್ಟಕ್ಕೆ ಬಂದನೆಂದು ಊಹಿಸುವುದು ಸೂಕ್ತ. ಹೀಗಾದಲ್ಲಿ ಇವನು 679ರ ವರೆಗೆ ರಾಜ್ಯವಾಳಿದ ಅನಂತರ ಶಿವಮಾರ ಪಟ್ಟಕ್ಕೆ ಬಂದು 725 ರವರೆಗೆ ರಾಜ್ಯವಾಳಿದ. ಹೀಗಾಗಿ ಶಿವಮಾರನ ಮಗ ಅಥವಾ ಶ್ರೀಪುರುಷನ ತಂದೆ ಶಿವಮಾರನ ಆಳಿಕೆಯ ಕಾಲದಲ್ಲಿಯೇ ತೀರಿಹೋಗಿರಬಹುದು. ಭೂವಿಕ್ರಮನಿಗೆ ಮಗನೊಬ್ಬನಿದ್ದಂತೆ ಚಿಕ್ಕಬಳ್ಳಾಪುರದ ಶಾಸನ ತಿಳಿಸುತ್ತಾದರೂ ಇವನನ್ನು ಗುರುತಿಸುವುದು ಕಷ್ಟವಾಗಿದೆ.

ಒಂದನೆಯ ಶಿವಮಾರ ಭೂವಿಕ್ರಮನ ತಮ್ಮ. ಈತನಿಗೆ ನವಕಾಮ ಎಂಬ ಹೆಸರೂ ಇತ್ತು. ಕೊಂಗು ದೇಶ ರಾಜಾಕ್ಕಳ್ ಗ್ರಂಥದಲ್ಲಿ ಇವನನ್ನು ಭೂವಿಕ್ರಮನ ಮಗನೆಂದು ಕರೆದಿದೆ. ಇವನಿಗೆ ಕೊಂಗುಣಿ ಮಹಾರಾಜ, ಶಿಷ್ಟಪ್ರಿಯ, ಅವನಿಮಹೇಂದ್ರ, ಸ್ಥಿರವಿನೀತ, ಲೋಕಧೂರ್ತ, ದೇವರಾಜ, ಪೃಥ್ವಿ ಕೊಂಗಣಿ ವೃದ್ಧರಾಜ ಮುಂತಾದ ವಿಶೇಷಣಗಳಿದ್ದವು. ಇವನು ಪಟ್ಟಕ್ಕೆ ಬರುವ ಮೊದಲು ಚಳುಕ್ಯ ಒಂದನೆಯ ವಿಕ್ರಮಾದಿತ್ಯನು ಬಹುಶಃ ಕಂಚಿಯ ಪಲ್ಲವರ ಮೇಲೆ ಯುದ್ಧಕ್ಕೆ ಬಂದಿದ್ದಂತೆ ತಿಳಿಯುತ್ತದೆ. ಈ ಶಿವಮಾರನು 679 ರಲ್ಲಿ ಪಟ್ಟಕ್ಕೆ ಬಂದ. ಇವನ ಆಡಳಿತದ 21ನೆಯ ವರ್ಷದಲ್ಲಿ ಇಂದ್ರನೆಂಬುವವನು ದಂಡೆತ್ತಿ ಬಂದ. ಈ ಇಂದ್ರ ಬಹುಶಃ ಪಲ್ಲವರ ಕಡೆಯವನಿರಬೇಕು. ಈ ಕಾಲಕ್ಕೆ ಗಂಗನಾಡನ್ನು ಮಹಾವಲಿವಾಣರಾಯನು ಆಳುತ್ತಿದ್ದ. ಪಲ್ಲವರೊಂದಿಗೆ ಈತ ಮಧುರ ಬಾಂಧವ್ಯ ಹೊಂದಿದ್ದಿರಬಹುದು. ಜಯ, ವೃದ್ಧಿ ಎಂಬ ಪಲ್ಲವ ಎಳ ಅರಸರು ಕಿರಿನಿ ನದಿಗೆ ಸೇತುವೆಯನ್ನೂ ಪಲ್ಲವ ತಟಾಕವೆಂಬ ಕೆರೆಯನ್ನೂ ಕಟ್ಟಿಸಿದರು. ಇದೇ ಅರಸರು ಕೊಡಗೂರ್ನಾಡಿನಲ್ಲಿದ್ದು ಕೆಲ್ಲಿಪುಸೂರುಚೇದಿಯಕ್ಕೆ (ಬಸದಿ) ದಾನ ನೀಡಿದರು. ಇವರು ಪಲ್ಲವ 2ನೆಯ ನರಸಿಂಹವರ್ಮನ ಮೊಮ್ಮಕ್ಕಳು ಮತ್ತು ಮೂರನೆಯ ಮಹೇಂದ್ರವರ್ಮನ ಮಕ್ಕಳು. ಇವರನ್ನು ಮೂಲೆಗೆ ತಳ್ಳಿ, ಎರಡನೆಯ ನರಸಿಂಹವರ್ಮನ ಇನ್ನೊಬ್ಬ ಮಗ 2ನೆಯ ಪರಮೇಶ್ವರವರ್ಮ ಪಟ್ಟಕ್ಕೆ ಬಂದ. ಬಹುಶ: ಈ ಎಳೆ ಅರಸರು ಸಹಾಯವನ್ನು ಕೋರಿ ಗಂಗ ರಾಜ್ಯಕ್ಕೆ ಬಂದಿದ್ದಿರಬೇಕು ಎಂದು ಟಿ. ವಿ. ಮಹಾಲಿಂಗಂ ಭಾವಿಸುತ್ತಾರೆ. ಎಱೆಯ, ಮರಿಯಾನೆ ಎಂಬ ಪದಗಳು ಇವನ ಕಾಲದಿಂದ ಬಳಕೆಗೆ ಬರುತ್ತವೆ. ಸು.679–725 ರವರೆಗೆ ಅಂದರೆ 47 ವರ್ಷಗಳ ಕಾಲ ಶಿವಮಾರ ರಾಜ್ಯಭಾರ ಮಾಡುತ್ತಾನೆ. ಇವನ ಕಾಲದಲ್ಲಿ ದೊರೆತಿರುವ ಶಾಸನಗಳು ಕಡಿಮೆಯಾದ್ದರಿಂದ ಹೆಚ್ಚಿನ ವಿವರಗಳು ದೊರೆಯುವುದಿಲ್ಲ. ಚಳುಕ್ಯ ಒಂದನೆಯ ವಿಕ್ರಮಾದಿತ್ಯ, ವಿನಯಾದಿತ್ಯ ಮತ್ತು ವಿಜಯಾದಿತ್ಯ ಹೀಗೆ ಮೂವರ ಆಳಿಕೆಯಲ್ಲೂ ಶಿವಮಾರನು ಗಂಗರಾಜ್ಯದ ಅರಸನಾಗಿರುತ್ತಾನೆ.

ಶ್ರೀ ಪುರುಷ 725 ರಲ್ಲಿ ಪಟ್ಟಕ್ಕೆ ಬಂದ. ಕೆಲವು ಶಾಸನಗಳು ಇವನನ್ನು ಶಿವಮಾರನ ಮೊಮ್ಮಗನೆಂದು ಹೇಳಿದ್ದರೆ, ಕೆಲವು ಶಾಸನಗಳು ಶಿವಮಾರನ ಮಗನೆಂದು ಕರೆದಿವೆ. ಶಿವಮಾರನ ಮೊಮ್ಮಗನೆಂದು ಹೇಳುವ ಶಾಸನಗಳಲ್ಲಿ ಇವನ ತಂದೆಯ ಹೆಸರು ಹೇಳುವುದಿಲ್ಲ. ದುಗ್ಗಮಾರನ ಸೇಲಂ ಶಾಸನದಲ್ಲಿ ಶ್ರೀಪುರುಷನನ್ನು ಶಿವಮಾರನ ಮಗನೆಂದೇ ಹೇಳಿದೆ. ಶ್ರೀಪುರುಷನ ಕಾಲದ ಅನೇಕ ಶಿಲಾ ಮತ್ತು ತಾಮ್ರ ಶಾಸನಗಳು ದೊರೆತಿದ್ದು, ಬಹುದೀರ್ಘಕಾಲ ರಾಜ್ಯವನ್ನಾಳಿದ ರಾಜರಲ್ಲಿ ಈತನೂ ಒಬ್ಬನಾಗಿದ್ದಾನೆ. ಸಾಲಿಗ್ರಾಮದ ಶಾಸನ ಇವನ ಆಳಿಕೆಯ ಮೊದಲ ವರ್ಷದ್ದು (725). ಈತ ಪಟ್ಟಕ್ಕೆ ಬರುವ ಮೊದಲು ಕೆರೆಕುನ್ದ 300ನ್ನು ಆಳುತ್ತಿದ್ದಂತೆಯೂ ಇವನಿಗೆ ಗಂಗಾನಾಯಕನೆಂಬ ಪಟ್ಟವನ್ನು ಕಟ್ಟಿದಂತೆಯೂ ಉಲ್ಲೇಖ ಬರುತ್ತದೆ. ಇವನು ತನ್ನ ಆಳಿಕೆಯ ಮೂರನೆಯ ವರ್ಷದಲ್ಲಿ ಗಂಗನಾಡು, ಪುರುಮಲೈನಾಡು, ಕೋವೂರ್ ನಾಡು, ವೇಳ್ಗಲಿನಾಡು, ಮನ್ನಾನಾಡು, ನಯನೂರ್ ನಾಡನ್ನು ಆಳುತ್ತಿದ್ದಂತೆ ತಿಳಿಯುತ್ತದೆ. 733 ರಲ್ಲಿ ಈತ ಮಾನ್ಯಪುರದಲ್ಲಿದ್ದ ಉಲ್ಲೇಖ ಬರುತ್ತದೆ. ಇಲ್ಲಿಂದ ಮಾನ್ಯಪುರ ಗಂಗರ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿ ಬೆಳೆಯುತ್ತದೆ. ಈ ಕಾಲಕ್ಕೆ ಕೆರೆಗೋಡು ವಿಷಯವನ್ನು ಇವನ ಮಗ ರಣವಿಕ್ರಮರಸ ಆಳುತ್ತಿದ್ದ. ಈತ ಪಟ್ಟಕ್ಕೆ ಬಂದ ಹೊಸದರಲ್ಲಿ ಚಲುಕ್ಯ ವಿಜಯಾದಿತ್ಯನ ಜೊತೆ ಕಂಚಿಯ ಪಲ್ಲವರ ಮೇಲೆ ದಂಡೆತ್ತಿ ಹೋಗಿ 2ನೆಯ ಪರಮೇಶ್ವರವರ್ಮನಿಂದ (722–30) ತೊಂದರೆಗೀಡಾದ. ಪಲ್ಲವರ ಮೇಲೆ 2ನೆಯ ವಿಕ್ರಮಾದಿತ್ಯ ಯುದ್ಧಕ್ಕೆ ಹೋಗಿದ್ದಾಗ ಕೊಂಗುಣಿ ಅರಸರ ಆಳು ಯುದ್ಧದಲ್ಲಿ ಸತ್ತಂತೆ ತಿಳಿಯುತ್ತದೆ. ಈ ಕೊಂಗುಣಿ ಅರಸ ಶ್ರೀಪುರುಷನೇ ಆಗಿರುತ್ತಾನೆ. ಈ ಯುದ್ಧ ನಡೆದ ಕಾಲ ಸು.740. ಇವನ ಕಾಲದಲ್ಲಿ ನೊಳಂಬರು ಸಣ್ಣ ಗಾಮುಂಡರಾಗಿದ್ದಂತೆ ತಿಳಿಯುತ್ತದೆ. ಶಿವಾರಪಟ್ಟಣದ ಶಾಸನದಿಂದ ಲೋಕಾದಿತ್ಯನು ಎಳ ಅರಸನಾಗಿ (ಯುವರಾಜ) ಕದಂಬೂರನ್ನು ಆಳುತ್ತಿದ್ದು, ಅವನಿಗೆ ಮಲ್ಲಾಡಿ ಎಂಬ ಮಗನಿದ್ದಂತೆ ತಿಳಿಯುತ್ತದೆ. ಕಲ್ಲೂರು ಶಾಸನದ ಕಾಲಕ್ಕೆ ಶ್ರೀಪುರುಷನ ಮಗ ದುಗ್ಗಮಾರ ಕೊವಳಾಲ 300, ಗಂಗ 6000, ಪನ್ನೆನಾಡು, ದೇತೂರ್ನಾಡು, ಪುಲ್ವಕಿನಾಡು–1000, ಮುಬೆಪೋಡು–1000 ಮುಂತಾದ ನಾಡುಗಳನ್ನು ಆಳುತ್ತಿದ್ದ.

ಇದೇ ಕಾಲದಲ್ಲಿ ಶ್ರೀಪುರುಷನ ಇನ್ನೊಬ್ಬ ಮಗ ವಿಜಯಾದಿತ್ಯ(ಲೋಕಾದಿತ್ಯ) ಆಸಂದಿನಾಡನ್ನು ಆಳುತ್ತಿದ್ದ. ಸೀಯವಲ್ಲವರಸನ ಉಲ್ಲೇಖವೂ ಬಂದಿದ್ದು, ಈತ ಮುಂದೆ ಮರುಗೆರೆನಾಡನ್ನು ಆಳಿದ.

ಗಂಗ ರಾಷ್ಟ್ರಕೂಟರ ಯುದ್ಧಗಳು ಪ್ರಾರಂಭವಾಗುವ ಕಾಲಕ್ಕೆ ಮೊದಲು ಈತ ಅನೇಕ ಬ್ರಹ್ಮದೇಯಗಳನ್ನು ನೀಡಿದ. ತನ್ನ ಜನ್ಮನಕ್ಷತ್ರದಂದು 12 ಜನ ಬ್ರಾಹ್ಮಣರ ಭೋಜನಕ್ಕೆ ವ್ಯವಸ್ಥೆ ಮಾಡುತ್ತಾನೆ. ಎಳ್ಳುಣಸೆ ಎಂಬ ಊರನ್ನು ಸಿರಿವಚ್ಚ, ಶ್ರೀಪುರುಷ ಮತ್ತು ಶಿವಮಾರರು ಸೇರಿ ಬ್ರಹ್ಮದೇಯ ನೀಡುತ್ತಾರೆ. ಇವನ ಮಹಾಸಾಮಂತನಾಗಿ ಮುದುಕೊಂಗುಣಿ ಬಾಣವಂಶದ ದಿಂಡಿಕರಾಜನು ಕಳ್ವಿಪ್ಪುನಾಡು 1000 ಆಳುತ್ತಿದ್ದ. ಶ್ರೀಪುರುಷನ ಪತ್ನಿ ವಿನ್ನೆತ್ತಿ ನಿಮ್ಮಡಿ ಎಂಬಾಕೆ ವೆಳ್ಳೂರನ್ನು ಆಳುತ್ತಿದ್ದಳು. ಅರಟ್ಟಿಗಳರಸ ಚೊತ್ತಮ್ಮ ಎಡತ್ತೊರೆನಾಡು 1000ವನ್ನು ಆಳುತ್ತಿದ್ದ. 754ರಲ್ಲಿ ಕದಂಬೂರನ್ನು ಶಿವಮಾರನು ಆಳುತ್ತಿದ್ದ. ಈ ಮೊದಲು ಇದನ್ನು ಎಳಅರಸ ಲೋಕಾದಿತ್ಯ ಆಳುತ್ತಿದ್ದ. ಶ್ರೀಪುರುಷನು ಚಳುಕ್ಯ ವಂಶದ ವಿಜಯ ಮಹಾದೇವಿಯನ್ನು ಮದುವೆಯಾಗಿದ್ದಂತೆಯೂ ಇವರ ಮಗನೇ ವಿಜಯಾದಿತ್ಯನೆಂದೂ ಉಲ್ಲೇಖವಿದೆ. ಈಕೆ ಚಳುಕ್ಯ ವಿಜಯಾದಿತ್ಯನ ಮಗಳಿರಬಹುದು. ಸು. 760ರಲ್ಲಿ ದಕ್ಷಿಣದಲ್ಲಿ ಶ್ರೀಪುರುಷನ ವಶದಲ್ಲಿದ್ದ ಪೂಮಲೆನಾಡು, ಗಂಗೆನಾಡು, ಕೋವೂರ್ನಾಡು ಮೇಳಲನಾಡು ಗಳು ಬಾಣರ ವಶಕ್ಕೆ ಹೋಗಿದ್ದವು. ಇದನ್ನು ಪಡೆಯಲು ಪೊನ್ನೇರ, ಬಿನ್ನತ್ತ, ರಿರಿಸಿಯ, ವೈದುಮ್ಬ ಮುಂತಾದವರು ಗಂಗರ ಪರವಾಗಿ ಬಾಣರ ಮೇಲೆ ಯುದ್ಧ ಮಾಡಿದರು. ಬಾಣರಾಜ ಸೋತು ಹೋದ. ಈ ಯುದ್ಧದಲ್ಲಿ ಭಾಗವಹಿಸಿದ್ದ ಪೊನ್ನೇರನು ನೊಳಂಬರ ಚಾರುಪೊನ್ನೇರುನಿರಬಹುದು. ಈ ಯುದ್ಧದಲ್ಲಿ ಪೂಮಲೆನಾಡನ್ನು ಶ್ರೀಪುರುಷ ಮತ್ತೆ ಪಡೆಯುತ್ತಾನೆ. 762ರಲ್ಲಿ ಶ್ರೀಪುರುಷನು ಮಾನ್ಯಪುರದಲ್ಲಿರುತ್ತಾನೆ.

ಈ ಮಧ್ಯೆ ಉತ್ತರದ ಬಾದಾಮಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಚಳುಕ್ಯರನ್ನು ಮೂಲೆಗುಂಪು ಮಾಡಿ ರಾಷ್ಟ್ರಕೂಟರು ಅಧಿಕಾರಕ್ಕೆ ಬಂದರು. ರಾಷ್ಟ್ರಕೂಟರ ಒಂದನೆಯ ಕೃಷ್ಣ ಪಟ್ಟಕ್ಕೆ ಬಂದ ಮೇಲೆ (756–75) ಗಂಗರನ್ನು ಸಾಮಂತರನ್ನಾಗಿಸಿಕೊಳ್ಳಲು ಹವಣಿಸಿರಬಹುದು. ಚಳುಕ್ಯರೊಡನೆ ವಿವಾಹ ಸಂಬಂಧ ಬೆಳೆಸಿದ್ದ ಗಂಗರು ಇದನ್ನು ಒಪ್ಪದೆ ಚಲುಕ್ಯ ಅರಸರನ್ನು ಪಟ್ಟಕ್ಕೆ ತರಲು ಪ್ರಯತ್ನಿಸಿರಬಹುದು. ಈ ಸಮಯದಲ್ಲಿ ಕೃಷ್ಣನು ಗಂಗರ ವಿರುದ್ಧ ದಂಡೆತ್ತಿ ಬರುತ್ತಾನೆ. ದಕ್ಷಿಣದಿಂದ ಪಲ್ಲವರು, ಉತ್ತರದಿಂದ ರಾಷ್ಟ್ರಕೂಟರು ಹೀಗೆ ಎರಡು ಕಡೆಯಲ್ಲಿ ಗಂಗರು ವೈರಿಗಳನ್ನು ಎದುರಿಸಬೇಕಾಗಿ ಬರುತ್ತದೆ. 768 ರಲ್ಲಿ ದುಗ್ಗಮಾರನು ಕುವಲಾಳ 300, ಗಂಗ 6000 ವನ್ನು ಆಳುತ್ತಿದ್ದಾಗ, ಅವನ ಪತ್ನಿ ಕಂಚಿಯಬ್ಬೆ ಅಗಳಿಯನ್ನು ಆಳುತ್ತಿರುತ್ತಾಳೆ. ಗಂಗರು ಪಾಂಡ್ಯರ ಮೇಲೆ ಈ ಕಾಲಕ್ಕೆ ದಂಡೆತ್ತಿ ಹೋದಂತೆ ತಿಳಿಯುತ್ತದೆ.

ದುಗ್ಗಮಾರನು ಕಂಪಿಲಿಯಲ್ಲೂ ಯುದ್ಧಮಾಡಲು ಹೋಗಿದ್ದ. ಇದು ರಾಷ್ಟ್ರಕೂಟರನ್ನು ಎದುರಿಸಿದ ಮೊದಲ ಯುದ್ಧವಿರಬಹುದು. 768 ರ ತಳಗಾಂವ್ ಶಾಸನದಲ್ಲಿ ಕೃಷ್ಣನು ಮಾನ್ಯಪುರದಲ್ಲಿ ಬೀಡು ಬಿಟ್ಟಿದ್ದಂತೆ ತಿಳಿಯುವುದರಿಂದ ಈ ಯುದ್ಧ ಸು.766ರಲ್ಲಿ ಪ್ರಾರಂಭವಾಗಿರಬೇಕು. ಇನ್ನು ಕೆಲವು ಕಡೆ ದುಗ್ಗಮಾರನು ಶತ್ರುಗಳ ಮೇಲೆ ಯುದ್ಧ ಮಾಡಿದ ಉಲ್ಲೇಖಗಳೂ ದೊರೆಯುತ್ತವೆ. ಬಾಗೂರ ಶಾಸನದಲ್ಲಿ ಬಾಲಾದಿತ್ಯರ ಆಳು ಶ್ರೀಮಂಜ ಎಂಬುವವನು ನೀಲಸಿಂಧ, ಮನಸಿಜರನ್ನು ಕೊಂದಂತೆ ಉಲ್ಲೇಖವಿದೆ. ತಿರುಮಕೂಡಲು ನರಸೀಪುರದ ಒಂದು ಶಾಸನದಲ್ಲಿ ಉಕ್ತವಾಗಿರುವ ಈ ಮನಸಿಜ ಗಂಗರ ಕಡೆಯ ಅಧಿಕಾರಿಯಾಗಿದ್ದಿರಬಹುದು. ಶ್ರೀಪುರುಷನು ರಟ್ಟರು ತನ್ನ ರಾಜ್ಯದ ಮೇಲೆ ದಂಡೆತ್ತಿ ಬಂದಾಗ ಸಮಸ್ತ ಗಣ್ಯರನ್ನು ಸಹಾಯಕ್ಕಾಗಿ ಕೇಳುತ್ತಾನೆ. ಅವನ ಕೋರಿಕೆಯಂತೆ 12 ಜನ ಸಾಮಂತರಾಜರು ಸೇರಿ ಯುದ್ಧಕ್ಕೆ ಹೊರಟರು. ಇದನ್ನು ಶಾಸನಗಳಲ್ಲಿ ಪನ್ನೀರ್ವ್ವರದಣ್ಣು ಎಂದು ಕರೆಯಲಾಗಿದೆ. ಈ ಹನ್ನೆರಡು ಜನರಲ್ಲಿ ಎರಗಲ್ವಾಡಿಯನ್ನು ಆಳುತ್ತಿದ್ದ ಚೋಳ ಧನಂಜಯ, ರಾಮರಾ ಮಡಿನಾಡನ್ನು ಆಳುತ್ತಿದ್ದ ದೊನ್ನಮಾರ ಸಹ ಇದ್ದರು. ರಾಷ್ಟ್ರಕೂಟರ ದಂಡನ್ನು ಅಷ್ಟಬಲವೆಂದು ಕರೆದಿದೆ. ಶ್ರವಣಗುಡಿ ಶಾಸನಗಳು ಈ ವಿಷಯದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ. ಈ ಯುದ್ಧವು ಪರಮಿಳ್ಳ, ತಿರುವೂರುಗಳಲ್ಲಿ ನಡೆದಾಗ ಇದರಲ್ಲಿ ಕಣ್ಣಕುರು ಎಂಬುವವನು ಸಾಯುತ್ತಾನೆ. ಈ ಹೋರಾಟ ಗಳಲ್ಲಿ ಭಾಗವಹಿಸಿದ್ದ ರಾಜರೆಂದರೆ ತಮಾಕೆರೆಯನ್ನಾಳುತ್ತಿದ್ದ ಶ್ರೀಪುರುಷನ ಮಗ ವಿಜಯಾದಿತ್ಯ, ಕೆಸಮಣ್ಣುನಾಡು, ಮರುಗೆರೆ 300 ಆಳುತ್ತಿದ್ದ ಸಿಯಗೆಲ್ಲ, ಶಿವಮಾರ ಮುಂತಾದವರು. ಕದನಗಳು ಪಿಂಚನೂರು, ಬಾಗೆಯೂರು, ಕಾಗೆಮೊಗೆಯೂರು, ಬೀರಿಯ, ಖಗಪಳ್ಳಿ, ಕೊಪಳವೂರು ಮುಂತಾದ ಕಡೆಗಳಲ್ಲಿ ನಡೆದವು. ಬೆಂಗಳೂರಿನ ಕೃಷ್ಣರಾಜಪುರದ ಶಾಸನದಲ್ಲಿ ಈ ಯುದ್ಧದ ಪ್ರಸ್ತಾಪವಿದ್ದು, ಅನೇಕರು ಮಡಿದಂತೆ ತಿಳಿಯುತ್ತದೆ. ಈ ಯುದ್ಧದಲ್ಲಿ ರಾಷ್ಟ್ರಕೂಟರು ಮಣ್ಣೆಯನ್ನು ಹಿಡಿದಿರಬಹುದಾದರೂ ಪೂರ್ಣವಾಗಿ ಗಂಗರ ರಾಜ್ಯ ಅವರ ಕೈಸೇರುವುದಿಲ್ಲ. ಆದರೂ ಆಸಂದಿ ನಾಡನ್ನಾಳುತ್ತಿದ್ದ ವಿಜಯಾದಿತ್ಯ ಈ ಯುದ್ಧವೊಂದರಲ್ಲಿ ಸಾವನ್ನಪ್ಪಿರಬಹುದು. ಏಕೆಂದರೆ ಇಲ್ಲಿಂದಾಚೆಗೆ ಇವನ ಶಾಸನಗಳು ನಮಗೆ ದೊರಕುವುದಿಲ್ಲ.

ಕೋಲಾರ ಪ್ರಾಂತ್ಯವನ್ನು ದುಗ್ಗಮಾರ ಆಳುತ್ತಿದ್ದದು ಸರಿಯಷ್ಟೆ. ಶ್ರೀಪುರುಷನು ತನ್ನ ಸಾಮ್ರಾಜ್ಯವನ್ನು ತನ್ನ ಮಕ್ಕಳಲ್ಲಿ ಹಂಚಿ ಆಯಕಟ್ಟಿನ ಸ್ಥಳಗಳಲ್ಲಿ ಅವರನ್ನು ನೇಮಿಸಿದ್ದ, ತಾನು ಇಡೀ ಸಾಮ್ರಾಜ್ಯದ ಜವಾಬ್ದಾರಿಯನ್ನು ಇವರ ಮೂಲಕ ನಿರ್ವಹಿಸುತ್ತಿದ್ದ. ಹೀಗಾಗಿ ಪಲ್ಲವರ ದಾಳಿಯುಂಟಾಗಬಹುದಾಗಿದ್ದ ಕೋಲಾರ ಸೀಮೆಯಲ್ಲಿ ದುಗ್ಗಮಾರ ರಾಜ್ಯಭಾರ ನಿರ್ವಹಿಸುತ್ತಿದ್ದ. ಈತ ರಾಷ್ಟ್ರಕೂಟ ಕಂಚಿಯಬ್ಬೆಯನ್ನು ವಿವಾಹವಾಗಿದ್ದ. ಈ ರಾಷ್ಟ್ರಕೂಟರಿಗೂ ಮಾನ್ಯಖೇಟರ ರಾಷ್ಟ್ರಕೂಟರಿಗೂ ಯಾವ ಬಗೆಯ ಸಂಬಂಧವೆಂಬುದು ತಿಳಿಯುವುದಿಲ್ಲ. ಈ ರಾಷ್ಟ್ರಕೂಟರ ದಾಳಿಯನ್ನು ಗಮನಿಸಿದ ಪಲ್ಲವರು ಬಾಣರೊಡಗೂಡಿ ಗಂಗವಾಡಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದಿರಬೇಕು. ಕೆಲವೊಮ್ಮೆ ಕೈವಾರದವರೆಗೆ ಪಲ್ಲವ ಸೈನ್ಯ ನುಗ್ಗಿ ಬಂದ ಉಲ್ಲೇಖವಿದೆ. ಪಲ್ಲವರ ಪರವಾಗಿ ವಿಷ್ಣುಗೋಪರಸ ಎಂಬುವವನು ಗಂಗರ ಎದುರಾಳಿಯಾಗಿದ್ದ. ಈ ಯುದ್ಧ 772–773ರಲ್ಲಿ ನಡೆದಿರಬೇಕು. ಈ ಯುದ್ಧದಲ್ಲಿ ದುಗ್ಗಮಾರ ಸತ್ತಿರಬಹುದು. ಇವನ ನೆನಪಿನಲ್ಲಿ ಹೆಬ್ಬಲುಗುಪ್ಪೆಯಲ್ಲಿ ದುಗ್ಗಮಾರ ಕೋಯಿಲ್ ಬಸದಿ ಕಟ್ಟಿರಬೇಕು. ಈ ಯುದ್ಧದ ಸಮಯದಲ್ಲಿ ಭೂವಿಕ್ರಮನ ಕಾಲದಲ್ಲಿ ಗಂಗರು ಪಲ್ಲವರಿಂದ ಪಡೆದಿದ್ದ ಉಗ್ರೋದಯವೆಂಬ ರತ್ನಹಾರವನ್ನು 2ನೆಯ ನಂದಿವರ್ಮ ಹಿಂದೆ ಪಡೆದಿರ ಬಹುದು. 772ರ ಸುಮಾರಿಗೆ ಶ್ರೀಪುರುಷನ ಇಬ್ಬರು ಮಕ್ಕಳು ಬಹುಶಃ ಸತ್ತುಹೋಗಿದ್ದರು. ಇಲ್ಲಿಂದ ಆಚೆಗೆ ಗಂಗ 6000 ವನ್ನು ಮುತ್ತಯ್ಯಭಟ್ಟನೆಂಬುವವನು ಆಳಿದ. ತನದೆಕಲ್ಲ ತುರುಗೋಳಿನಲ್ಲಿ ಮುತ್ತಯ್ಯಭಟ್ಟ ಎಂಬಾತ ಮಡಿದ. ಇವನಿಗೆ ಪೃಥವೀ ಕೊಂಗಣೀ ಎಂಬ ಹೆಸರಿತ್ತು. ಈ ಮುತ್ತಯ್ಯನೇ ಅವನ್ಯವನ್ನು ಆಳುತ್ತಿದ್ದ ಮಾಧವ ಮುತ್ತರಸನಾಗಿದ್ದಿರಬೇಕು. ಚೋಳ ಧನಂಜಯನು ರಟ್ಟಪಾಡಿಯ ಮೇಲೆ ದಂಡೆತ್ತಿ ಹೋದಾಗ ಈ ಮಾಧವ ಮುತ್ತರಸನ ಸೇವಕ ಮರಪ್ಪ ಮೃತಪಟ್ಟ. ಈ ಮಾಧವ ಮುತ್ತರಸನು ಗಂಗ 6000, ಕೊವಳಾಲ 300ನ್ನು ಆಳುತ್ತಿದ್ದ. ಎರಡನೆಯ ಶಿವಮಾರನ ಕಾಲದಲ್ಲಿಯೂ ಈತ ಇದ್ದಂತೆ ತಿಳಿದು ಬರುತ್ತದೆ.

ಈ ಘಟನೆಯ ಅನಂತರ ಶ್ರೀಪುರುಷ ಮತ್ತು ಶಿವಮಾರರ ಶಾಸನಗಳು ಹೆಚ್ಚಾಗಿ ದೊರೆಯುತ್ತವೆ. ಸು.775 ರಲ್ಲಿ ಕುಣಿಗಲನ್ನು ಶಿವಮಾರ ಆಳುತ್ತಿದ್ದ. 776 ರಲ್ಲಿ ಇವನು ನೀರ್ಗುಂದದ ಬಸದಿಗೆ ದಾನ ನೀಡುತ್ತಾನೆ. ಸುಮಾರು ಇದೇ ಕಾಲದ ಕೊಂಡ್ರಹಳ್ಳಿ



ಭೋಗನಂದೀಶ್ವರ ದೇವಾಲಯ, ನಂದಿಗ್ರಾಮ

ಶಾಸನದಲ್ಲಿ ಶ್ರೀಪುರುಷನನ್ನು ದುರ್ವಿನೀತನೆಂದೇ ಕರೆದಿದ್ದು ಪುಣ್ಣಾಟ, ಪುನ್ನಾಟಾಧಿಪತಿ ಎಂದೂ ಕರೆದಿದೆ. ಹಲ್ಕೂರು ಮತ್ತು ಕೊಂಡ್ರಹಳ್ಳಿ ಶಾಸನಗಳು 788ಕ್ಕೆ ಸೇರಿದ್ದು, ಶ್ರೀಪುರುಷನು ಈ ಕಾಲದವರೆಗೆ ರಾಜ್ಯಭಾರ ಮಾಡುತ್ತಿದ್ದಂತೆ ತಿಳಿಸುತ್ತದೆ. ಇವೇ ಇವನ ಕೊನೆಯ ಕಾಲದ ಶಾಸನಗಳು. ಶ್ರೀಪುರುಷನಿಗೆ ಪೃಥ್ವೀಕೊಂಗಣಿ, ಕೊಂಕಣಿ ಮುತ್ತರಸ, ಪೆರ್ಮಾನಡಿ, ಶ್ರೀವಲ್ಲಭ, ಕಡ್ಡಾಣೆ ಭೀಮಕೋಪ ಮತ್ತು ರಣಭಾಜನ ಎಂಬ ವಿಶೇಷಣಗಳಿದ್ದವು. ಇವನು ಗಂಗ ಅರಸರಲ್ಲಿ ಬಹುದೀರ್ಘಕಾಲ ರಾಜ್ಯಭಾರ ಮಾಡಿದ ಅರಸು. ಇವನು ಆಳುತ್ತಿದ್ದ ರಾಜ್ಯಕ್ಕೆ ಶ್ರೀರಾಜ್ಯ ಎಂಬ ವಿಶೇಷಣವೂ ಇತ್ತು. ಮುಂದಿನ ಗಂಗ ಅರಸರ ಅನೇಕ ಶಾಸನಗಳಲ್ಲಿ ಶ್ರೀರಾಜ್ಯ ಎಂಬ ಉಲ್ಲೇಖ ಮತ್ತು ದಾನಕ್ಕೆ ಸಾಕ್ಷಿ ನೀಡುವಾಗ ಶ್ರೀಪುರುಷನ ಹೆಸರನ್ನು ಸಾಕ್ಷಿಯಾಗಿ ಬಳಸಿಕೊಂಡಿರುವುದನ್ನು ಗಮನಿಸಿದಾಗ ಇವನ ಪ್ರಭಾವವನ್ನು ತಿಳಿಯಬಹುದು. ಇವನು ಪಟ್ಟಕ್ಕೆ ಬಂದ ಮೊದಲ 40 ವರ್ಷಗಳಲ್ಲಿ ದೊಡ್ಡ ಯುದ್ಧಗಳಾಗುವುದಿಲ್ಲ. ಹೀಗಾಗಿ ದೇವಾಲಯ, ಕೆರೆಗಳ ನಿರ್ಮಾಣದ ಜೊತೆಗೆ, ಬ್ರಾಹ್ಮಣರಿಗೆ ಸಾಕಷ್ಟು ದಾನ ನೀಡಿರುವ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಮುಂದಿನ 22 ವರ್ಷಗಳ ಕಾಲ ಇವನು ವಿಷಮ ಪರಿಸ್ಥಿತಿಯನ್ನು ಎದುರಿಸಿದ. ಮುಖ್ಯವಾಗಿ ಶಾಸನಗಳಲ್ಲಿ ಮತ್ತು ಪಲ್ಲವರೊಡನೆ ನಡೆದ ಯುದ್ಧಗಳಲ್ಲಿ ತನ್ನ ಮಕ್ಕಳಲ್ಲಿ ಇಬ್ಬರನ್ನು ಕಳೆದುಕೊಂಡಿದ್ದು ರಾಜ್ಯದ ಶಾಂತಿ ಹಾಳಾಗಿ ಬಹಳ ಜನ ಸಾಮಂತರು ಸತ್ತ ದುರಂತಗಳನ್ನು ಕಂಡ. ಆದರೂ ಲೋಕೋತ್ತರ ವೀರನಂತೆ ರಾಷ್ಟ್ರಕೂಟರಿಗೆ ಬಾಗದೆ ಯುದ್ಧವನ್ನೇ ಮುಂದುವರೆಸಿದ. ಹೀಗಾಗಿ ಇವನು ನೀಡಿರುವ ದಾನ, ಕಟ್ಟಿಸಿದ ಕೆರೆ, ದೇಗುಲಗಳಿಂದಲೂ ಯುದ್ಧದಲ್ಲಿ ಮೆರೆದ ಶೌರ್ಯದಿಂದಲೂ ಇವನ ಹೆಸರು ಗಂಗರ ಇತಿಹಾಸದಲ್ಲಿ ಅಜರಾಮರವಾಗಿದೆ.

2ನೆಯ ಶಿವಮಾರ ತನ್ನ ತಂದೆಯ ಕಾಲದಲ್ಲೇ ಕುಣಿಗಲು ನಾಡನ್ನು ಆಳುತ್ತಿದ್ದು, ತಂದೆಯ ಜೊತೆಯಲ್ಲಿ ರಾಷ್ಟ್ರಕೂಟರ ಮೇಲೆ ನಡೆದ ಯುದ್ಧಗಳಲ್ಲಿ ಭಾಗವಹಿಸಿದ್ದ. ನವಿಲೆಶಾಸನ ಇವನ ಆಳ್ವಿಕೆಯ ಮೂರನೆಯ ವರ್ಷದ್ದಾಗಿದು, ಬಾಣರು ಗಂಗರ ಮೇಲೆ ದಂಡೆತ್ತಿ ಬಂದಂತೆ ತಿಳಿಸುತ್ತದೆ. ಇವನ ಕಾಲದಲ್ಲೂ ರಾಷ್ಟ್ರಕೂಟರ ಮತ್ತು ಗಂಗರ ಯುದ್ಧಗಳು ಮುಂದುವರೆದವು. 780 ರಲ್ಲಿ ಪಟ್ಟಕ್ಕೆ ಬಂದ ಧ್ರುವನು ಹೈಹಯ, ಚಳುಕ್ಯ, ರಾಷ್ಟ್ರಕೂಟರಿಂದ ಕೂಡಿದ ಸೈನ್ಯದೊಂದಿಗೆ ಗಂಗವಾಡಿಗೆ ಬಂದಾಗ ಅವರನ್ನು ಮುದುಗುಂದೂರಿನಲ್ಲಿ ಶಿವಮಾರ ಸೋಲಿಸಿದಂತೆ ಗಂಗ ಶಾಸನವೊಂದು ತಿಳಿಸುತ್ತದೆ. ಆದರೆ ರಾಷ್ಟ್ರಕೂಟರ ಶಾಸನಗಳಲ್ಲಿ ಇದಕ್ಕೆ ವಿರುದ್ಧವಾದ ಹೇಳಿಕೆಗಳಿವೆ. ಯಾರಿಂದಲೂ ಸೋಲಿಸಲಾಗದ ಗಂಗರಾಜನನ್ನು ಧ್ರುವನು ಸೋಲಿಸಿದಂತೆ,ಅವನ ಮಗನಾದ ಮೂರನೆಯ ಗೋವಿಂದನ ತಾಮ್ರಪಟಗಳಿಂದ ತಿಳಿಯುತ್ತದೆ. ಆದರೂ 791ರ ಶಾಸನದಲ್ಲಿ ಶಿವಮಾರ ತಲಕಾಡಿನಲ್ಲಿದ್ದಂತೆ ಉಲ್ಲೇಖ ಬರುವುದರಿಂದ ಬಹುಶಃ ಮಣ್ಣೆಯನ್ನು ಇವರು ಕಳೆದು ಕೊಂಡಿದ್ದಿರಬಹುದು. ರಾಷ್ಟ್ರಕೂಟರು ತಾವು ಗೆದ್ದ ಗಂಗವಾಡಿ ಪ್ರದೇಶಕ್ಕೆ ರಣಾವಲೋಕ ಕಂಬಯ್ಯನನ್ನು ಅಧಿಕಾರಿಯಾಗಿ ನೇಮಿಸಿದರು. 791ರ ಅನಂತರ ನಡೆದ ಯುದ್ಧದಲ್ಲಿ ಶಿವ ಮಾರ ಸೆರೆಸಿಕ್ಕಿರಬೇಕು. ರಾಷ್ಟ್ರಕೂಟರಲ್ಲಿ ನಡೆದ ಒಳಜಗಳವೊಂದರ ಪರಿಣಾಮ ವಾಗಿ ಮುಂದೆ ಗೋವಿಂದನು ಶಿವ ಮಾರನನ್ನು ಬಿಡುಗಡೆ ಮಾಡಿದ. ಆದರೆ ಈ ಬಿಡುಗಡೆ ಅನತಿ ಕಾಲದಲ್ಲೇ ಕೊನೆಗೊಂಡಿತು. ಮತ್ತೆ ಗೋವಿಂದನು ಶಿವಮಾರ ತನ್ನ ಮಾಡಿಗೆ ತಪ್ಪಿದ್ದನ್ನು ಕಂಡು ಅವನನ್ನು ಸೋಲಿಸಿ ಸೆರೆಹಿಡಿ ದಿರಬೇಕು. ಈ ಘಟನೆ 800ರಲ್ಲಿ ನಡೆದಿರಬಹುದು. ಏಕೆಂದರೆ 802ರಲ್ಲಿ ಗಂಗಮಂಡಲ ರಾಷ್ಟ್ರಕೂಟರ ವಶದ ಲ್ಲಿತ್ತು. 802ರಲ್ಲಿ ಚಾಕಿರಾಜ ಗಂಗ ಮಂಡಲವನ್ನು ಆಳುತ್ತಿದ್ದಂತೆ ಉಲ್ಲೇಖ ವಿದೆ. 814ರಲ್ಲಿ ರಾಷ್ಟ್ರಕೂಟರ ರಾಜ ನಾಗಿ ಅಮೋಘವರ್ಷ ಪಟ್ಟಕ್ಕೆ ಬರುತ್ತಾನೆ. ಕಲ್ಬಾವಿ ಶಾಸನದಲ್ಲಿ ಅಮೋಘವರ್ಷನು ಶಿವಮಾರನನ್ನು ತನ್ನ ಮಾಂಡಲೀಕನೆಂದು ಹೇಳಿ ಕೊಂಡಿದ್ದಾನೆ. ಶಿವಮಾರ ರಾಷ್ಟ್ರಕೂ ಟರ ಸೆರೆಯಲ್ಲಿದ್ದಾಗ ಅವನ ಮಗ ಮಾರಸಿಂಹ ಯುವರಾಜನಾಗಿ ರಾಜ್ಯಭಾರ ಮಾಡುತ್ತಿದ್ದ.



ಪಾರ್ಶ್ವನಾಥ, ತಲಕಾಡು

ಶಿವಮಾರ ಕೇವಲ ರಾಷ್ಟ್ರಕೂಟರನ್ನೇ ಅಲ್ಲದೆ ಪೂರ್ವಭಾಗದಲ್ಲಿ ಪಲ್ಲವರನ್ನೂ ಎದುರಿಸುತ್ತಾನೆ. ತಿಜ್ಜಣಿಯ ಕದನದಲ್ಲಿ ಇದರ ಸೂಚನೆ ಬರುತ್ತದೆ. ಉತ್ತರದಲ್ಲಿ ಸಂದಿಯ ಭಾಗಗಳು ರಾಷ್ಟ್ರಕೂಟರ ವಶವಾಗಿದ್ದವು. ಕೋಲಾರದ ಪಶ್ಚಿಮ ಭಾಗಗಳು ಮೈಸೂರಿನ ಭಾಗಗಳು ಶಿವಮಾರನ ವಶದಲ್ಲಿದ್ದವು. ಆದರೆ ಕೋಲಾರದ ಪೂರ್ವಭಾಗ ಪಲ್ಲವರ ವಶದಲ್ಲಿತ್ತು. ಕಂದಳ್ಳಿಯಲ್ಲಿ ಇವನಿಗೂ ಕಾಡುವೆಟ್ಟಿಗೂ ಯುದ್ಧವಾಯಿತು. ಒಟ್ಟಿನಲ್ಲಿ ಇವನ ಆಳ್ವಿಕೆಯು ಸಂಪೂರ್ಣವಾಗಿ ಯುದ್ಧಗಳಲ್ಲಿ ಕಳೆಯಿತು. ಇವನ ಮಗನಾದ ಮಾರಸಿಂಹನೂ ರಾಷ್ಟ್ರಕೂಟರೊಡನೆ ಯುದ್ಧ ಮಾಡುತ್ತಾ ಸತ್ತಿರಬೇಕು. ಹೀಗಾಗಿ ಗಂಗರ ಶಾಸನದಲ್ಲಿ ಹೇಳಿರುವಂತೆ ಶಿವಮಾರನ ಅನಂತರ ಅವನ ಅಣ್ಣನ ಮಗನಾದ ರಾಚಮಲ್ಲನು ಪಟ್ಟಕ್ಕೆ ಬಂದ. ಶಿವಮಾರನು ತನ್ನ ರಾಜ್ಯವನ್ನು ತಮ್ಮ ತಮ್ಮನಾದ ವಿಜಯಾದಿತ್ಯನಿಗೆ ನೀಡಲು ಬಯಸಿದಾಗ ಆತ ಅದನ್ನು ಬೇಡವೆಂದಂತೆಯೂ ಆಗ ಶಿವಮಾರನು ಅದನ್ನು ವಿಜಯಾದಿತ್ಯನ ಮಗನಾದ ರಾಚಮಲ್ಲನಿಗೆ ನೀಡಿದಂತೆಯೂ ಶಾಸನಗಳು ಹೇಳುತ್ತವೆ. ಆದರೆ ಗಂಗರ ಅನೇಕ ಶಾಸನಗಳಲ್ಲಿ ವಿಜಯಾದಿತ್ಯನನ್ನು ಎಳ ಅರಸ ಎಂದು ಕರೆದಿರುವುದ ರಿಂದ ಇವನು ಶ್ರೀ ಪುರುಷನ ಹಿರಿಯ ಮಗನಾಗಿರುವ ಸಾಧ್ಯತೆಗಳಿವೆ. ಹೀಗಾಗಿ ಇವನ ಮಗನಾದ ರಾಚಮಲ್ಲ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ. ಇದೇ ಕಾರಣಕ್ಕೆ ಮಾರಸಿಂಹ ತನ್ನನ್ನು ಯುವರಾಜನೆಂದು ಮಾತ್ರ ಕರೆದುಕೊಂಡಿದ್ದು ಸು.819 ರವರೆಗೆ ಶಿವಮಾರ ಬದುಕಿದ್ದಿರಬಹುದು. ಶಿವಮಾರನಿಗೆ ಸೈಗೊಟ್ಟ ಎಂಬ ಹೆಸರಿದ್ದಂತೆಯೂ ಗಜಾಷ್ಟಕವನ್ನು ಈತ ರಚಿಸಿದ್ದಂತೆಯೂ ಶಾಸನಗಳು ತಿಳಿಸುತ್ತವೆ.

ಶಿವಮಾರನಿಗೆ ಮಾರಸಿಂಹ, ಎರೆಯಪ್ಪ ಮತ್ತು ಪೃಥ್ವೀಪತಿಯೆಂಬ ಮೂವರು ಮಕ್ಕಳಿದ್ದರು. ಶಿವಮಾರ ರಾಷ್ಟ್ರಕೂಟರ ಸೆರೆಯಲ್ಲಿದ್ದಾಗ ರಾಜ್ಯಕ್ಕೆ ಸಮರ್ಥ ವಾರಸುದಾರ ರಿರಲಿಲ್ಲ. ಅಂತಹ ಸಮಯದಲ್ಲಿ ಮಾರಸಿಂಹ ತನ್ನನ್ನು ಯುವರಾಜನೆಂದು ಘೋಷಿಸಿ ಕೊಂಡಿರಬೇಕು. 802ರ ವೇಳೆಗೆ ಮಣ್ಣೆ ರಾಷ್ಟ್ರಕೂಟರ ವಶವಾಗಿತ್ತು. ಪ್ರಭೂತವರ್ಷ (792–824) ಮಣ್ಣೆಯಲ್ಲಿನ ಜಿನಬಸದಿಗೆ ದಾನ ನೀಡಿದ ಉಲ್ಲೇಖವಿದೆ. 806ರಲ್ಲಿ ಕೈವಾರ ಬಾಣರ ವಶದಲ್ಲಿರುತ್ತದೆ. 808ರ ಶಾಸನದಲ್ಲಿ ಗಂಗರವಂಶವೆಂದು ಹೇಳಿಕೊಳ್ಳುವ ಶಾಖೆಯೊಂದು ನಂದಿಯಲ್ಲಿ ಕಂಡುಬರುತ್ತದೆ. ಈ ವಂಶಾವಳಿಯಲ್ಲಿ ಉಲ್ಲೇಖಗೊಂಡಿರು ವವರಲ್ಲಿ ಕೆಲವರು ಈ ಹಿಂದಿನ ಶಾಸನಗಳಲ್ಲಿ ಕಾಣಸಿಗುತ್ತಾರೆ. ಪರಮಕುಳನು ಶ್ರೀಪುರುಷನ ಶಾಸನವೊಂದರಲ್ಲಿ ಉಕ್ತನಾಗಿದ್ದರೆ, ಕಣ್ಣಕುರಿ ರಾಜನು ನಗರಗೆರೆ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದು, ಗಂಗರು ಬಲ್ಲಹರ (ರಾಷ್ಟ್ರಕೂಟರ) ಮೇಲೆ ಯುದ್ಧ ಸಾರಿದಾಗ ಅದರಲ್ಲಿ ಭಾಗವಹಿಸಿದ್ದ.

808ರಲ್ಲಿ ರಾಷ್ಟ್ರಕೂಟ ಕಂಬನು ತಲವನ ನಗರದಲ್ಲಿದ್ದ. ಅಂದರೆ ಈ ಕಾಲಕ್ಕೆ ಗಂಗವಾಡಿಯು ಗಂಗರ ಕೈ ತಪ್ಪಿದಂತೆ ಕಾಣುತ್ತದೆ. 813ರ ಪ್ರಭೂತವರ್ಷನ ಶಾಸನದಲ್ಲಿ ಮಾನ್ಯಪುರವು ರಾಷ್ಟ್ರಕೂಟರ ಆಳ್ವಿಕೆಯಲ್ಲಿದ್ದು, ಚಾಕಿರಾಜ ಗಂಗಮಂಡಲವನ್ನು ಆಳುತ್ತಿದ್ದ. ಈ ಶಾಸನದಲ್ಲಿ ಸಾಕ್ಷಿಗಳಾಗಿ ರಾಚಮಲ್ಲ ಗಾಮುಣ್ಣ, ಗಂಗಗಾಮುಣ್ಡ, ಮಾರಯ, ಕುಣಿಂಗಲಯ್ಯೂರ್ಬರು ಉಕ್ತರಾಗಿದ್ದಾರೆ. ರಾಚಮಲ್ಲಗಾಮುಣ್ಡ ಬಹುಶಃ ಗಂಗರ ಒಂದನೆಯ ರಾಚಮಲ್ಲನಾಗಿದ್ದಿರಬಹುದು. ಗಂಗರು ರಾಷ್ಟ್ರಕೂಟರ ಸಾಮಂತಿಕೆಯನ್ನು ಒಪ್ಪಿಕೊಂಡಿದ್ದನ್ನು ಇದು ಸೂಚಿಸುತ್ತದೆ. ಮಾರಸಿಂಹನ ಅನಂತರ ಗಂಗ ಸಾಮ್ರಾಜ್ಯ ಎರಡು ಹೋಳಾಗಿ ಒಂದು ಶಾಖೆ ರಾಚಮಲ್ಲನ ಆಳಿಕೆಯಲ್ಲಿ ತಲಕಾಡನ್ನು ರಾಜಧಾನಿ ಯನ್ನಾಗಿ ಮಾಡಿಕೊಂಡು ಆಳುತ್ತಿದ್ದರೆ, ಇನ್ನೊಂದು ಶಾಖೆ 2ನೆಯ ಶಿವಮಾರನ ಮಗ ಒಂದನೆಯ ಪೃಥ್ವೀಪತಿಯ ನಾಯಕತ್ವದಲ್ಲಿ ತಮಿಳುನಾಡಿನಲ್ಲಿ ಪ್ರಾರಂಭವಾಗುತ್ತದೆ. ಈ ತಮಿಳುನಾಡಿನ ಶಾಖೆಯು ಅಲ್ಲಿನ ಅರಸರಾದ ಬಾಣ, ಪಲ್ಲವ, ಚೋಳ ಅರಸರೊಡನೆ ಉತ್ತಮ ಸಂಬಂಧ ಹೊಂದಿತ್ತು.

ಒಂದನೆಯ ರಾಚಮಲ್ಲ: ಇವನು ಶಿವಮಾರನ ಮತ್ತು ಯುವರಾಜ ಮಾರಸಿಂಹನ ತರುವಾಯದಲ್ಲಿ ಪಟ್ಟಕ್ಕೆ ಬಂದ. ರಾಷ್ಟ್ರಕೂಟರ ಮೇಲಿನ ಯುದ್ಧದಲ್ಲಿ ಶಿವಮಾರ, ಮಾರಸಿಂಹರೊಡನೆ ಈತ ಭಾಗವಹಿಸಿರಬೇಕು. 819ರ ಸಾಲಿಗ್ರಾಮದ ಶಾಸನ ಒಂದನೆಯ ರಾಚಮಲ್ಲನ ಮೊದಲ ವರ್ಷದ ಶಾಸನವಾಗಿದೆ. 820ರ ಸುಮಾರಿಗೆ ಗಂಗರ ಕೈತಪ್ಪಿದ ಮರುಗೆರೆ ವಿಷಯ ಇವನ ವಶಕ್ಕೆ ಬಂದಿರುತ್ತದೆ. ಇವನ ಕಾಲದಲ್ಲೂ ರಾಷ್ಟ್ರಕೂಟರ ಮೇಲೆ ಯುದ್ಧಗಳು ನಡೆಯುತ್ತವೆ. ಈ ಬಾರಿ ಅಮೋಘವರ್ಷನ ಪರವಾಗಿ ಬಂಕೇಯ ದಕ್ಷಿಣಕ್ಕೆ ದಂಡೆತ್ತಿ ಬರುತ್ತಾನೆ. ಇವನು ಗಂಗವಾಡಿಗೆ ನುಗ್ಗಿದಂತೆ ಕೆಲವು ಶಾಸನಗಳು ತಿಳಿಸುತ್ತವೆ. ಕೆಂಬೊಲಲು, ವಿಗೆವೂರು, ಮರಲಿಗೆ ಮುಂತಾದ ಊರುಗಳಲ್ಲಿ ಯುದ್ಧಗಳು ನಡೆದವು. ಗಂಗರ ಶಾಸನಗಳಲ್ಲಿ ವಿಷ್ಣು ವರಾಹಾವತಾರವನ್ನು ತಾಳಿ ಭೂಮಿಯನ್ನು ಉದ್ಧರಿಸಿದಂತೆ, ರಾಚಮಲ್ಲನು ಬಹಳ ಕಾಲ ರಾಷ್ಟ್ರಕೂಟರ ಕೈವಶವಾಗಿದ್ದ ಗಂಗರಾಜ್ಯವನ್ನು ಪಡೆದುಕೊಂಡ ಎಂದಿದೆ. ಇದಕ್ಕೆ ವಿರುದ್ಧವಾದ ಹೇಳಿಕೆಗಳು ರಾಷ್ಟ್ರಕೂಟರ ಶಾಸನಗಳಲ್ಲಿ ದೊರೆಯುತ್ತವೆ. ಬಂಕೇಯನು ಗಂಗರ ಮೇಲೆ ಯುದ್ಧಮಾಡಿ ನೀತಿಮಾರ್ಗ ರಣವಿಕ್ರಮನನ್ನು ಯುದ್ಧದಲ್ಲಿ ಕೊಂದಂತೆ ಹೇಳಿಕೊಂಡಿದ್ದಾನೆ. ಗಂಗರ ಶಾಸನಗಳಲ್ಲಿ ನೀತಿಮಾರ್ಗನು ರಾಜರಾಮಡು ಎಂಬಲ್ಲಿ ರಾಷ್ಟ್ರಕೂಟರನ್ನು ಎದುರಿಸಿದಂತೆ ಹೇಳಿದೆ. ಬಂಕೇಯನು ಗಂಗರಾಜನನ್ನು ಕಾವೇರಿಯಿಂದ ಆಚೆಗೆ ಓಡಿಸಿದಂತೆ ಹೇಳಿಕೊಂಡಿದ್ದಾನೆ.

ಹೆಂಜೇರಿನ ನೊಳಂಬ ಅರಸರು ಇವನ ಕಾಲದಿಂದೀಚೆಗೆ ಸ್ವಲ್ಪ ಸ್ವಲ್ಪವಾಗಿ ಅರಸೊತ್ತಿಗೆಗೆ ಏರುತ್ತ ಬಂದರು. ಶಾಸನವೊಂದರಲ್ಲಿ ನೊಳಂಬ ಬಲಚೋರನ ಉಲ್ಲೇಖವಿದೆ. ಈತ ಈ ರಾಚಮಲ್ಲನ ಅಳಿಯನಾದ ಪೊಳಲ್‌ಚೋರನೇ. ಈತ ಗಂಗ ರಾಜ್ಯದ ಪೂರ್ವಭಾಗವನ್ನು ನೋಡಿಕೊಳ್ಳುತ್ತಿದ್ದ. ಇದೇ ಸಮಯದಲ್ಲಿ ಪೂರ್ವ ದಿಕ್ಕಿನಲ್ಲಿ ಪಲ್ಲವರೊಡನೆ ಯುದ್ಧ ಮಾಡಬೇಕಾಯಿತು. ಹೀಗಾಗಿ ಗಂಗರು ಕಂಚಿಯ ಮೇಲೆ ಯುದ್ಧ ಸಾರಿದರು. ಈ ಯುದ್ಧದಲ್ಲಿ ಗಂಗರು, ಏರಿಗಲ್ವಾಡಿಯ ಚೋಳ, ನೊಳಂಬರೊಡಗೂಡಿ ಯುದ್ಧ ಮಾಡಿದರು. ಪಲ್ಲವರು ಬಾಣರೊಡಗೂಡಿ ಸಮಸ್ತ ಬಲದೊಡನೆ ಬಂದರು. ಈ ಯುದ್ಧದ ಪರಿಣಾಮವಾಗಿ ಗಂಗರು ಹಿಮ್ಮೆಟ್ಟಬೇಕಾಗಿ ಬಂದು ಬಾಣರ ಮತ್ತು ಪಲ್ಲವರ ಕೈ ಮೇಲಾಯಿತು. ಇದರಿಂದ ಗಂಗ 6000 ಬಾಣರ ವಶವಾಯಿತು. ಒಂದನೆಯ ರಾಚಮಲ್ಲನ ಅಂತ್ಯಕಾಲಕ್ಕೆ ತರೀಕೆರೆವರೆಗಿನ ಭಾಗಗಳು ಮತ್ತೆ ಇವನ ವಶಕ್ಕೆ ಬರುತ್ತವೆ. ರಾಚಮಲ್ಲನು 853ರ ವರೆಗೆ ಆಳಿದ.

ಒಂದನೆಯ ನೀತಿಮಾರ್ಗ: ರಾಚಮಲ್ಲನ ತರುವಾಯ ಅವನ ಮಗನಾದ ಈತ ಪಟ್ಟಕ್ಕೆ ಬಂದ. 837ರ ಶಾಸನವೊಂದು ಅಮೋಘವರ್ಷನ ಮಗಳು ರೇವಕ್ಕ ನಿರ್ಮಡಿ ಎಂಬುವವಳನ್ನೂ, ಎರಗಂಗ ವಕ್ಷಸ್ಥಳ ನಿವಾಸಿ ಎಂದು ಕರೆದಿದ್ದ, ಈ ಎರಗಂಗನು

ಒಂದನೆಯ ನೀತಿಮಾರ್ಗನಿರಬೇಕು. ಇವನು ಯುವರಾಜನಾಗಿದ್ದಾಗ ಈ ಮದುವೆ ನಡೆದಿರಬಹುದು. ಎಡೊರೆಯ (ರಾಯಚೂರು ಜಿಲ್ಲೆ) ಕೆಲವು ಭಾಗಗಳನ್ನು ಈಕೆ ಆಳುತ್ತಿದ್ದಳು. ರಾಷ್ಟ್ರಕೂಟ ಗಂಗರ ಯುದ್ಧಗಳು ನೀತಿಮಾರ್ಗನ ಕಾಲದಲ್ಲಿ ಮುಂದುವರೆದವು. ಒಂದನೆಯ ರಾಚಮಲ್ಲನ ಕಾಲದಲ್ಲೇ ಈತ ತಂದೆಯ ಸಂಗಡ ಯುದ್ಧಗಳಲ್ಲಿ ಭಾಗವಹಿಸಿದ್ದ. ಈತ ಸು.853ರಲ್ಲಿ ಪಟ್ಟಕ್ಕೆ ಬಂದು 870 ರವರೆಗೂ ರಾಜ್ಯಭಾರ ಮಾಡಿರಬಹುದೆಂದು ತಿಳಿಯುತ್ತದೆ. ಈ ನೀತಿಮಾರ್ಗನಿಗೆ ಎರಡನೆಯ ರಾಚಮಲ್ಲ ಮತ್ತು ಬೂತುಗ ಎಂಬ ಇಬ್ಬರು ಮಕ್ಕಳಿದ್ದರು.



ಶ್ರೀಪುರುಷನ ಶಾಸನ, ತಲಕಾಡು

ಎರಡನೆಯ ರಾಚಮಲ್ಲ 870ರಲ್ಲಿ ಪಟ್ಟಕ್ಕೆ ಬಂದ. ಬಹು ದೀರ್ಘಕಾಲ ತನ್ನ ತಮ್ಮನೊಂದಿಗೆ ಅನಂತರ ತನ್ನ ತಮ್ಮನ ಮಗನೊಂದಿಗೆ ರಾಜ್ಯಭಾರ ಮಾಡಿದ. ಇವನಿಗೆ ಸತ್ಯವಾಕ್ಯ ಎಂಬ ಬಿರುದಿತ್ತು. ಇವನ ಕಾಲದಲ್ಲಿಯೂ ಬಾಣ, ನೊಳಂಬ, ರಾಷ್ಟ್ರಕೂಟರೊಂದಿಗೆ ಯುದ್ಧಗಳು ಮುಂದುವರೆಯುತ್ತವೆ. ರಾಷ್ಟ್ರಕೂಟ ಅಮೋಘವರ್ಷ ಬೂತುಗನಿಗೆ ತನ್ನ ಮಗಳಾದ ಚಂದ್ರೊಬ್ಬಲಬ್ಬೆಯನ್ನು ಕೊಟ್ಟು ವೈವಾಹಿಕ ಸಂಬಂಧ ಬೆಳೆಸುವುದರೊಂದಿಗೆ ಸುಮಾರು ನೂರು ವರ್ಷಗಳಿಂದ ಮತ್ತು ನಾಲ್ಕೈದು ತಲೆಮಾರುಗಳಿಂದ ನಡೆಯುತ್ತಿದ್ದ ಯುದ್ಧಕ್ಕೆ ತೆರೆಬೀಳುತ್ತದೆ. 837ರ ಶಾಸನವೊಂದು ಅಮೋಘವರ್ಷ ರೇವಕ್ಕನಿಮ್ಮಡಿಯನ್ನು ಎರೆಗಂಗನಿಗೆ ನೀಡಿದಂತೆ ಹೇಳಿದೆ. ಈ ಎರೆಗಂಗನು ಒಂದನೆಯ ನೀತಿಮಾರ್ಗ. ಅನಂತರ ನೀತಿಮಾರ್ಗನ ಮಗನಿಗೆ ಮತ್ತೆ ತನ್ನ ಇನ್ನೊಬ್ಬ ಮಗಳನ್ನು ನೀಡಿದ ವಿವರ ಚರ್ಚೆಯ ವಿಷಯವಾಗಿದೆ. ಈ ಶಾಸನದಲ್ಲಿ ಪ್ರಿಯಾತ್ಮಜೆ, ಯೆರೆಗಂಗ ವಕ್ಷಸ್ಥಲ ನಿವಾಸಿ ಎಂದು ಕರೆದಿದೆ. ಒಂದನೆಯ ಬೂತುಗನಿಗೆ ಯೆರೆಗಂಗ ಎಂಬ ಹೆಸರಿರಲಿಲ್ಲ. ಯೆರೆಗಂಗನು ರೇವಕ್ಕ ನಿಮ್ಮಡಿಯನ್ನು ಮದುವೆಯಾದ ವಿಷಯವನ್ನು ಗಂಗರ ಯಾವ ತಾಮ್ರಶಾಸನವೂ ಉಲ್ಲೇಖಿಸುವುದಿಲ್ಲ. ಪ್ರಿಯಾತ್ಮಜೆ ಎಂಬುದನ್ನು ಪ್ರಿಯಾನುಜೆ ಎಂದು ತಿದ್ದಿಕೊಂಡಲ್ಲಿ ಸರಿಹೋಗಬಹುದಾದರೂ ಚಂದ್ರೊಬ್ಬಲಬ್ಬೆಯನ್ನು ಹೆಸರಿಸುವ ಶಾಸನಗಳು ಈಕೆಯನ್ನು ಏಕೆ ಹೆಸರಿಸುವುದಿಲ್ಲವೆಂಬುದು ಅರ್ಥವಾಗದ ವಿಷಯ. ಈ ಮದುವೆಯ ಸಂಬಂಧವನ್ನು ಗಂಗರ ಇತಿಹಾಸದಲ್ಲಿ ಪ್ರಮುಖ ಘಟನೆಯಾಗಿ ಪರಿಗಣಿಸಬೇಕಾಗಿದೆ. ಈ ಗಂಗರಿಗೂ ಈ ಬಾಂಧವ್ಯ ತಮ್ಮ ರಾಜ್ಯದ ವಿಸ್ತಾರವೇ ಅಲ್ಲದೆ ಯುದ್ಧೇತರ ಚಟುವಟಿಕೆಗಳ ಕಡೆ ಗಮನ ಕೊಡಲು ಸಹಾಯಕವಾಗುತ್ತದೆ. ಹಿಂದೆಂದೂ ಇರದಷ್ಟು ವಿಸ್ತಾರವಾದ ರಾಜ್ಯವನ್ನು ಗಳಿಸುತ್ತಾರೆ. ಇವರು ದಕ್ಷಿಣದ ಪ್ರಮುಖ ಮಾಂಡಲಿಕ ರಾಜರಲ್ಲಿ ಒಬ್ಬರಾಗಿ, ಮುಂದೆ ಸು.150 ವರ್ಷಗಳ ಕಾಲ ಸ್ಥಿರತೆಯನ್ನು ಕಾಪಾಡಿಕೊಳ್ಳಲು ನೆರವಾಯಿತು.

ರಾಚಮಲ್ಲ ರಾಜನಾಗಿದ್ದಾಗ ಇವನ ತಮ್ಮ ಬೂತುಗ ಯುವರಾಜನಾಗಿ ಕೊಙ್ಗಳ್ನಾಡು ಮತ್ತು ಪೂನಾಡಿಗೆ ಒಡೆಯನಾಗಿದ್ದ. ಬೆಂಪೂರು ಸೀಮೆಯನ್ನು ನಾಗತ್ತರನೆಂಬುವನು ನೋಡಿಕೊಳ್ಳುತ್ತಿದ್ದ. ಈ ನಾಗತ್ತರನ ಕೈ ಕೆಳಗೆ ಇರ್ವುಲಿಯೂರೆಡೆಯ ಇರುಗನಿದ್ದು, ಇವನು ಈಗಿನ ಬೆಂಗಳೂರು ನಗರದ ಅಗರದ ಕೆರೆಕಟ್ಟಿಸಿದ. ರಾಚಮಲ್ಲ ಪಟ್ಟಕ್ಕೆ ಬಂದ ಹೊಸದರಲ್ಲಿ ಪೂರ್ವಭಾಗದಲ್ಲಿ ರಾಜಕೀಯ ಕ್ಷೋಭೆಯಿದ್ದು, ಕಾಡುವೆಟ್ಟಿ ಕಲಹಕ್ಕೆ ಬಂದಂತೆ ತಿಳಿಯುತ್ತದೆ. ಪಲ್ಲವರಸ ಗಂಗರ ಮೇಲೆ ಯುದ್ಧಕ್ಕೆ ಬಂದು ಪೆರ್ಮಾವಿಯಾನೆಯನ್ನು ಸುಟ್ಟು ಪುಲಿನಾಡನ್ನು ಮುತ್ತಿದ. ಈ ಯುದ್ಧದಲ್ಲಿ ಭಾಗವಹಿಸಿದ ಪಲ್ಲವರಸನು ದಂತಿವರ್ಮನೆಂದು ಹಿಂದೂಪುರ ತಾಲೂಕಿನ ಶಾಸನದಿಂದ ತಿಳಿಯುತ್ತದೆ. ಈ ಯುದ್ಧವು ರಾಷ್ಟ್ರಕೂಟರು ಪಲ್ಲವರ ಮೇಲೆ ಯುದ್ಧಕ್ಕೆ ಬಂದ ವೇಳೆಯಲ್ಲಿ ನಡೆದಿರಬಹುದು. ಗಂಗರು ನೊಳಂಬ, ವೈದುಂಬ, ಸಂಯುಕ್ತ ದಂಡಿನೊಡನೆ ಕೂಡಿ ಪಲ್ಲವರ ಮೇಲೆ ಯುದ್ಧ ಮಾಡಿದರು. ಈ ಯುದ್ಧದಲ್ಲಿ ಪಲ್ಲವರಿಗೆ ಸೋಲುಂಟಾಗಿ ಈ ಯುದ್ಧಕ್ಕೆ ಮೊದಲು ಬಾಣರ ವಶದಲ್ಲಿದ್ದ ಗಂಗರ 6000ಭಾಗವನ್ನು ನೊಳಂಬರು ಪಡೆದರು.

880ರಿಂದಾಚೆಗೆ ಒಂದನೆಯ ಬೂತುಗನ ಮಗನಾದ 2ನೆಯ ನೀತಿಮಾರ್ಗನ ಶಾಸನಗಳು ಸಿಗುತ್ತವೆ. ಬೂತುಗ ಬಹುಶಃ ಹಿಂದೆಯೇ ತೀರಿ ಹೋಗಿದ್ದಿರಬಹುದು. ಇವನು ರಾಜನಾಗುವುದಕ್ಕೆ ಮೊದಲು ನುಗುನಾಡ ನವಿಲೆನಾಡಿನ ಅಧಿಕಾರಿಯಾಗಿದ್ದ. ಆಗ ಬಯಲ್ನಾಡನೊಡನೆ ಜಗಳವಾದಂತೆ ತಿಳಿಯುತ್ತದೆ. ಕೂರಗಲ್ಲಿನ 880 ರ ಶಾಸನದ ಪ್ರಕಾರ ಈತ ಕೊಙ್ಗಲ್ನಾಡನ್ನು ಆಳುತ್ತಿದ್ದ. ಆಗ ಅವನ ತಾಯಿ ಪರಮಬ್ಬೆ ಕೂರ್ಗ್ಗಲ್ಲನ್ನು ಆಳುತ್ತಿದ್ದಳು. 886 ರಲ್ಲಿ 2ನೆಯ ನೀತಿಮಾರ್ಗನಿಗೆ ಪಟ್ಟಗಟ್ಟಲಾಯಿತು. ನೀತಿಮಾರ್ಗ ಕಲಿವೂರಿನಲ್ಲಿ ಕಾಳಗ ಮಾಡಿ ವಿಜಯದಂಕಕಾರನೆನಿಸಿಕೊಂಡ. 892 ರಲ್ಲಿ ಗಂಗರು ನೊಳಂಬರೊಡನೆ ಹೋರಾಡಿದ ಉಲ್ಲೇಖವಿದೆ. ಇವನ ಕಾಲದಲ್ಲಿ ಗಂಗ- ನೊಳಂಬರ ತಿಕ್ಕಾಟಗಳು ಪ್ರಾರಂಭವಾದವು. 895ರ ಸುಮಾರಿನಲ್ಲಿ ಕಳಿಕಟ್ಟೆಯಲ್ಲಿ ಅಯ್ಯಪನೆಂಬುವವನು ತನ್ನ ಬಲದ ಸಮೇತ ಬೀಡುಬಿಟ್ಟಂತೆ ತಿಳಿಯುತ್ತದೆ. ಈ ಕಳಿಕಟ್ಟೆ ಯುದ್ಧವು ನೊಳಂಬರೊಡನೆ ಗಂಗರು ನಡೆಸಿದ ಯುದ್ಧವಾಗಿದ್ದು, ಎರೆಯಪ್ಪರಸನ ಕಾಲದಲ್ಲಿ ನಡೆಯಿತು. ನೊಳಂಬ ನೊಳಿಪಯನೂ ಈ ಯುದ್ಧದಲ್ಲಿ ಭಾಗವಹಿಸಿದ. ನೊಳಂಬರು ಈ ಯುದ್ಧದಲ್ಲಿ ನಿರತರಾಗಿದ್ದಾಗ ದಕ್ಷಿಣದಲ್ಲಿ ತಗಡೂರು ಬಾಣರ ವಶವಾಯಿತು. ನೊಳಂಬರು ಗಂಗರ ರಾಜ್ಯದ ಮೇಲೆ ದಾಳಿ ಮಾಡಿದ ಉಲ್ಲೇಖವನ್ನು ಇನ್ನೂ ಕೆಲವು ಶಾಸನಗಳು ತಿಳಿಸುತ್ತವೆ. ಗಂಗ-ನೊಳಂಬ- ಬಾಣರು ಪರಸ್ಪರ ಕಿತ್ತಾಡುತ್ತಿದ್ದರೂ ನೊಳಂಬ ಮತ್ತು ಬಾಣವಂಶದ ವ್ಯಕ್ತಿಗಳು ಗಂಗರ ಅಧೀನದಲ್ಲಿ ಅಲ್ಲಲ್ಲಿ ಅಧಿಕಾರಿಗಳಾಗಿದ್ದರು.

900ರಲ್ಲಿ ಬಾಣ- ನೊಳಂಬರಿಗೂ, ವೈದುಂಬ-ನೊಳಂಬರಿಗೂ ಯುದ್ಧಗಳಾದವು. ಕೆಲವು ವರ್ಷ ಗಂಗ-6000 ಬಾಣರ ವಶಕ್ಕೆ ಬಂದಿತು. ಈ ಅವಧಿಯಲ್ಲಿ ಬಾಣರು ನಂದಿಯನ್ನು ವಶಪಡಿಸಿಕೊಂಡಿದ್ದರು. ಬೆಂಗಳೂರಿನ ಕೋಟೆ ಕಾಳಗ ಇದೇ ಸುಮಾರಿಗೆ ನಡೆದು ಅದರಲ್ಲಿ ನಾಗತ್ತರನ ಮಗ ಸಾಯುತ್ತಾನೆ. 905ರ ಅನಂತರ ತುಂಬೆಪಾಡಿಯಲ್ಲಿ ನೊಳಂಬರಿಗೂ ಗಂಗರಿಗೂ ಯುದ್ಧವಾಗಿ ನಾಗತ್ತರ ಮರಣಹೊಂದಿದ. ಈ ಯುದ್ಧದಲ್ಲಿ ನಾಗತ್ತರ ಸತ್ತರೂ ಗಂಗರಿಗೆ ಜಯವಾಯಿತು. ಮಾಲೂರು ತಾಲ್ಲೂಕಿನ ಶಾಸನವೊಂದು ನೊಳಂಬರ ರಾಜ್ಯಕ್ಕೆ ಗಂಗಸೇನೆ ನುಗ್ಗಿದಂತೆ ತಿಳಿಸುತ್ತದೆ. 907 ರ ಶಾಸನವೇ ಸತ್ಯವಾಕ್ಯನ ಉಲ್ಲೇಖದ ಕಡೆಯ ಶಾಸನ. ನೀತಿಮಾರ್ಗ ಮತ್ತು ರಾಚಮಲ್ಲರಿಬ್ಬರೂ ಒಟ್ಟಿಗೆ ದಾನ ನೀಡಿದ ವಿಷಯ ಇದರಲ್ಲಿದೆ. ಇದೇ ವರ್ಷ ರಾಚಮಲ್ಲ ಕೊಂಬಾಳೆಯಲ್ಲಿ ಕೊನೆಯುಸಿರೆಳೆದ. 919-920 ರಲ್ಲಿ ನೀತಿಮಾರ್ಗ ಮೃತಪಟ್ಟ. ಇವನು ಸತ್ತಾಗ ಬಬಿಯಮ್ಮ ಕಿಚ್ಚು ಹೋಗುತ್ತಾನೆ.

ಈ ನೀತಿಮಾರ್ಗ ತನ್ನ ದೊಡ್ಡಪ್ಪನೊಂದಿಗೆ ಸು. 30 ವರ್ಷಗಳ ಕಾಲ ರಾಜ್ಯಭಾರ ಮಾಡಿದ. ತಾನು ಸ್ವತಂತ್ರವಾಗಿ ಸು. 12 ವರ್ಷ ರಾಜ್ಯಭಾರ ಮಾಡುತ್ತಾನೆ. ಈ ಅವಧಿಯಲ್ಲಿ ಗಂಗರು, ಬಾಣ, ನೊಳಂಬ, ಪಲ್ಲವರೊಡನೆ ಅನೇಕ ಯುದ್ಧಗಳನ್ನು ನಡೆಸಿದರೂ ಅನೇಕ ದೇವಾಲಯಗಳ, ಕೆರೆಕಟ್ಟೆಗಳ ನಿರ್ಮಾಣ ಮಾಡುತ್ತಾರೆ. ರಾಷ್ಟ್ರಕೂಟರ ಮೈತ್ರಿಯಿಂದ ರಾಜ್ಯದ ಪಶ್ಚಿಮ ಮತ್ತು ಉತ್ತರದಲ್ಲಿ ಸ್ಥಿರತೆ ನೆಲೆಸಿತ್ತು. ಇವನ ಕಾಲದಲ್ಲಿ ನೊಳಂಬರು ಹೆಚ್ಚಿನ ಅಧಿಕಾರ ಪಡೆದು ರಾಜ್ಯವನ್ನು ವಿಸ್ತಾರ ಮಾಡಿ ದಕ್ಷಿಣ ಭಾರತದ ಪ್ರಮುಖ ಸಣ್ಣ ರಾಜರೆನಿಸಿದರು. 2ನೆಯ ನೀತಿಮಾರ್ಗನಿಗೆ ನರಸಿಂಹ (ಸತ್ಯವಾಕ್ಯ ಬೀರ ಪೆರ್ಮಾನಡಿ), ರಾಚಮಲ್ಲ (ನೀತಿಮಾರ್ಗ), ಪಾಂಬಬ್ಬೆ, 2ನೆಯ ಬೂತುಗ (ಸತ್ಯವಾಕ್ಯ) ಎಂಬ ನಾಲ್ವರು ಮಕ್ಕಳು. 920ರ ನೀತಿಮಾರ್ಗನ ಶಾಸನದಲ್ಲಿ ಸತ್ಯವಾಕ್ಯಪೆರ್ಮಾನಡಿಯ ಉಲ್ಲೇಖವಿದ್ದು ಈತ ನೀತಿಮಾರ್ಗನ ಮಗನಾಗಿದ್ದು, ತಂದೆಯ ಅಂತ್ಯಕಾಲದಲ್ಲಿ ಅಧಿಕಾರಕ್ಕೆ ಬಂದಿರಬಹುದು. ಇಲ್ಲಿಂದ ಸು.930 ರವರೆಗೆ ಗಂಗರ ಚಟುವಟಿಕೆಗಳ ಚಿತ್ರ ಸ್ಪಷ್ಟವಾಗಿ

ಕಾಣಿಸುವುದಿಲ್ಲ. ಬಹುಶಃ ಸಿಂಹಾಸನದ ಉತ್ತರಾಧಿಕಾರಕ್ಕಾಗಿ ಕಚ್ಚಾಟ ನಡೆಸಿರಬಹುದು. ನೊಳಂಬರಲ್ಲಿ ಈ ಕಾಲಕ್ಕೆ ಅಯ್ಯಪ್ಪ ರಾಜನಾಗಿರುತ್ತಾನೆ. 930 ರಲ್ಲಿ ಸತ್ಯವಾಕ್ಯನ ರಾಜ್ಯಭಾರದ ಕಾಲದಲ್ಲಿ ಇಮ್ಮಡಿ ಬೂತರಸ ಯುದ್ಧವೊಂದರಲ್ಲಿ ಭಾಗವಹಿಸಿದಂತೆ ತಿಳಿಯುತ್ತದೆ. ಮುಂದೆ ಮೂರನೆಯ ರಾಚಮಲ್ಲ ರಾಜನಾಗುತ್ತಾನೆ. ರಾಷ್ಟ್ರಕೂಟ ಕೃಷ್ಣನ ಬೆಂಬಲದೊಡನೆ ಗಂಗ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಲು ಪ್ರಯತ್ನಿಸುತ್ತಾನೆ. ಮೂರನೇ ರಾಚಮಲ್ಲನ ವಿರುದ್ಧ ಬಂಡೆದ್ದು, ಬೂತುಗ ತಾನೇ ರಾಜ್ಯದ ಉತ್ತರಾಧಿಕಾರಿ ಎಂಬಂತೆ ಸಾಮಂತರಿಗೆ ಕಪ್ಪವನ್ನು ಕೊಡುವಂತೆ ಹೇಳಿ ಕಳುಹಿಸುತ್ತಾನೆ. ಆದರೆ ಅಯಾಮನ್ತರು, ಬಯಲ್ನಾಡರು ಹಾಗೂ ಹೆಗ್ಗಡೆಗಳು ಇದನ್ನು ಮಾಗುಣ್ಣಿಯಲ್ಲಿ ಪ್ರತಿಭಟಿಸುತ್ತಾರೆ.

ಮುಂದೆ ರಾಚಮಲ್ಲನಿಗೂ ಇಮ್ಮಡಿ ಬೂತುಗನಿಗೂ ಯುದ್ಧವಾದಾಗ, ರಾಷ್ಟ್ರಕೂಟರ ದೊರೆ ಮೂರನೆಯ ಕೃಷ್ಣ ತನ್ನ ಭಾವ ಬೂತುಗನ ಪರವಾಗಿ ನಿಂತು, ರಾಚಮಲ್ಲನನ್ನು ಸೋಲಿಸಿದ. ಹೀಗಾಗಿ ಬೂತುಗ 936ರಲ್ಲಿ ಪಟ್ಟಕ್ಕೆ ಬಂದ. ಪಟ್ಟಕ್ಕೆ ಬರುವ ಸಮಯದಲ್ಲಿ ತಮಿಳುನಾಡಿನ ಗಂಗರ ಶಾಖೆ ನೊಳಂಬರ ಸೇನೆಯೊಂದಿಗೆ ಗಂಗವಾಡಿಗೆ ಪ್ರವೇಶಿಸಿತ್ತು. ಅವರನ್ನೆದುರಿಸಿ ತಲಕಾಡು ಗಂಗರು ಮಾಡಿದ ಯುದ್ಧದಲ್ಲಿ ಮಣಲೇರನೆಂಬುವನು ಭಾಗವಹಿಸಿದ್ದ. ಈತ ಸಗರ ವಂಶಕ್ಕೆ ಸೇರಿದವನು. 949ರಲ್ಲಿ ಚೋಳರ ವಿರುದ್ಧ ರಾಷ್ಟ್ರಕೂಟರು ನಡೆಸಿದ ಯುದ್ಧದಲ್ಲಿಯೂ ಭಾಗವಹಿಸಿದ್ದ. ರಾಷ್ಟ್ರಕೂಟರಿಗೂ ಚೋಳರಿಗೂ ನಡೆದ ಯುದ್ಧದಲ್ಲಿ ನೊಳಂಬರು ಗಂಗರು ರಾಷ್ಟ್ರಕೂಟರ ಪರ ಹೋರಾಡಿದರು. ಬಿಜಯಿತಮಂಗಲದ ಬಳಿ ನಡೆದ ಕದನದಲ್ಲಿ ನೊಳಂಬ ಅರಸನೊಬ್ಬ ಮೃತನಾದ. ಈ ನೊಳಂಬರಸನು ದಿಲೀಪನ ಮಗನಿರಬಹುದು. 950 ರ ಆತಕೂರು ಶಾಸನದಲ್ಲಿ ಈ ಯುದ್ಧದ ವಿಷಯವಾಗಿ ಹೆಚ್ಚಿನ ವಿಷಯಗಳು ದೊರೆಯುತ್ತವೆ. ಬೂತುಗನು ತಕ್ಕೋಲಂ ಎಂಬಲ್ಲಿ ಚೋಳ ರಾಜಾದಿತ್ಯನನ್ನು ಆನೆಯ ಅಂಬಾರಿ ಯುದ್ಧದಲ್ಲಿ ಕತ್ತಿಯಲ್ಲಿ ತಿವಿದು ಸಾಯಿಸಿದ. ಆಗ ಕೃಷ್ಣನು, ಬೂತುಗನಿಗೆ ಬೆಳವೊಳ 300, ಪುರಿಗೆರೆ 300, ಕಿಸುಕಾಡು 70, ಬಾಗೆನಾಡು 70, ಬನವಾಸೆ 12000 ವನ್ನು ಬಳುವಳಿಯಾಗಿ ನೀಡಿದ. ಆತಕೂರು ಶಾಸನ ಯುದ್ಧೋತ್ತರ ಶಾಸನವಾಗಿರುವುದರಿಂದ ಈ ಯುದ್ಧ 948–949 ರಲ್ಲಿ ನಡೆದಿರಬಹುದು. ಈ ಯುದ್ಧದ ಪರಿಣಾಮವಿದು:

1. ಗಂಗವಾಡಿ ಎಲ್ಲೆಗಳು ತುಂಗಭದ್ರಾ ನದಿಯ ಉತ್ತರದವರೆಗೂ ಇವೆ. ದೂರದ ಧಾರವಾಡದಂತಹ ಪ್ರದೇಶಗಳೂ ಗಂಗವಾಡಿಗೆ ಸೇರುತ್ತವೆ.

2. ರಾಷ್ಟ್ರಕೂಟರು ಚೋಳರು ಬಹುತೇಕ ಪ್ರದೇಶಗಳನ್ನು ಮುಖ್ಯವಾಗಿ ತೊಂಡೈಮಂಡಲವನ್ನು ತಮ್ಮ ಆಳಿಕೆಗೆ ತೆಗೆದುಕೊಳ್ಳುವಂತಾಯಿತು. 977ರವರೆಗೆ ಅಂದರೆ ಸುಮಾರು ಮೂವತ್ತು ವರ್ಷ ಈ ಭಾಗ ಇವರ ಆಳಿಕೆಗೆ ಸೇರಿತು.

3. ಗಂಗರ ಮೇಲೆ ದ್ವೇಷ ಸಾಧಿಸಿ ಗಂಗವಾಡಿಯ ಮೇಲೆ ಚೋಳರು ಆಕ್ರಮಣ ಮಾಡಲು ಈ ಘಟನೆ ಪ್ರಚೋದನೆ ನೀಡಿತು.

ಮುಂದೆ ತಮಿಳುನಾಡಿನ ಗಂಗರೂ ರಾಷ್ಟ್ರಕೂಟರ ಆಳಿಕೆಯನ್ನು ಮನ್ನಿಸಿರಬಹುದು. 958 ರಲ್ಲಿ ತಿರುಮಲೈನಲ್ಲಿ ಕನ್ನರದೇವ ಗಂಗ ಪೃಥ್ವೀರಾಯನ ಪತ್ನಿಯಾದ ಮಹಾದೇವಿಯ ಸೇವಕಿ ಪಳ್ಳತನಂಗೈಯಾರ್ ಅಲ್ಲಿನ ಯಕ್ಷಭಟಾರರಿಗೆ ನಂದಾದೀವಿಗೆ ಅರ್ಪಿಸಿದಳು. ಶಿವಮೊಗ್ಗ, ರೋಣ, ಗದಗ, ರಾಯಚೂರು ಜಿಲ್ಲೆ ಮುಂತಾದ ಕಡೆ ಬೂತುಗನ ಶಾಸನಗಳು ದೊರೆಯುತ್ತವೆ.ಬೂತುಗನಿಗೆ ರೇವಕನಿಮ್ಮಡಿ ಹಾಗೂ ಕಲ್ಲಬ್ಬರಸಿ ಎಂಬ ಪತ್ನಿಯೂ ಇದ್ದರು. ಈತ 963 ರವರೆಗೆ ರಾಜ್ಯವಾಳಿದ. ಇವನ ಆಳಿಕೆಯ ಶಾಸನಗಳಲ್ಲಿ ಇವನ ಮಾಂಡಲೀಕರಾಗಿ ಶಾಂತರರು ಮತ್ತು ಹೊಯ್ಸಳರು ಕಾಣಸಿಗುತ್ತಾರೆ.

ಮಾರಸಿಂಹ: 963ರಲ್ಲಿ ಬೂತುಗ ಸತ್ತ ಮೇಲೆ, ಅವನ ಮೊದಲನೆಯ ಹೆಂಡತಿ ರೇವಕನಿಮ್ಮಡಿಯ ಮಗ ಮರುಳ ರಾಜನಾದ. ಈತ 3ನೆಯ ಕೃಷ್ಣನ ಅಳಿಯ. ಆದರೆ ಅದೇ ವರ್ಷ ಈತ ಸತ್ತಿರಬೇಕು. ಮುಂದೆ ಬೂತುಗನ ಎರಡನೆಯ ಹೆಂಡತಿ ಕಲ್ಲಬ್ಬರಸಿಯ ಮಗ ಮಾರಸಿಂಹ ಪಟ್ಟಕ್ಕೆ ಬಂದಿರಬೇಕು. ಇವನು ರಾಜ್ಯವಾಳುವ ವೇಳೆಗೆ ನೊಳಂಬರಲ್ಲಿ ಪೊಳಲ್ಚೋರ ರಾಜನಾಗುತ್ತಾನೆ. ಈ ಮಾರಸಿಂಹನಿಗೆ ನೊಳಂಬಕುಲಾಂತಕ, ಕದನ ಕಂಠೀರವ, ಮೊದಲಾದ ಬಿರುದುಗಳಿರುತ್ತವೆ. ಮತ್ತು ಕಚ್ಚೆಯ ಗಂಗ ಎಂಬ ಬಿರುದೂ ಇತ್ತು. ಗಚ್ಚೆಗ ಎಂದೂ ಇವನನ್ನು ಕರೆದಿದ್ದು ಇದು ಕಚ್ಚೆಗ ಎಂಬುದರ ರೂಪವಿರಬಹುದು. ಇವನ ಮೂರನೆಯ ವರ್ಷದಲ್ಲಿ 966 ಕೆಲ್ಲೂರು, ಕಬ್ಬೂರು ಹೆಮ್ಮಾನೆ ಮುಂತಾದ ಕಡೆ ನೊಳಂಬನ ದಾಳಿಯಾಯಿತು. ಬಹುಶಃ ಇದೇ ಕಾರಣಕ್ಕೆ ಗಂಗ ಮಾರಸಿಂಹ ನೊಳಂಬರ ಮೇಲೆ ಯುದ್ಧ ಮಾಡಿದ. ಇಲ್ಲಿಯೂ ಗಂಗರು ಚೋಳರಾಜಾದಿತ್ಯನನ್ನು ಕೊಲ್ಲಲು ಅನುಸರಿಸಿದ ತಂತ್ರವನ್ನೇ ಅನುಸರಿಸಿದರು. 971ರಲ್ಲಿ ಬೂತುಗನ ಅಕ್ಕ, ರಾಷ್ಟ್ರಕೂಟ ದೊರೆ ಧಾರಾವರ್ಷನ ಪತ್ನಿಯಾದ ಪಾಂಬಬ್ಬೆಯು ಜೈನವ್ರತ ಹಿಡಿದು ಮೃತ ಪಟ್ಟಳು.ಇದೇ ವರ್ಷದಲ್ಲಿ ರಾಜಾದಿತ್ಯನ ಮೇಲೆ ಯುದ್ಧ ಮಾಡಿದಂತೆ ಹೇಳಿದೆ. ಉತ್ತರ ಕರ್ನಾಟಕದಲ್ಲಿ ಮಾರಸಿಂಹನ ಶಾಸನಗಳು ಕಿತ್ತೂರು, ಕೋಳಿವಾಡ, ಹಿರೇಹಂದಿಗೋಳ ಮುಂತಾದ ಕಡೆಗಳಲ್ಲಿ ದೊರೆಯುತ್ತವೆ. ಹಿರೇಹಂದಿಗೋಳದ ಶಾಸನದಲ್ಲಿ ಕೊಟ್ಟಿಗನ ಪಾದಪದ್ಮೋಪಜೀವಿ ಎಂದು ಕರೆದಿದೆ. ಮಾರಸಿಂಹ ರಾಷ್ಟ್ರಕೂಟ ಕೊಟ್ಟಿಗನಿಗೆ ಸಹಾಯ ಮಾಡಲು ಉತ್ತರ ದೇಶಗಳನ್ನು ಗೆಲ್ಲಲು ಹೊರಟ. ಅಲ್ಲಿಂದ ಹಿಂತಿರುಗಿ ಬರುವಾಗ, ತನ್ನ ಮರಣಕಾಲ ಸಮೀಪಿಸಿದ್ದನ್ನು ತಿಳಿದು ಬಂಕಾಪುರದಲ್ಲಿದ್ದ ಅಜಿತಸೇನಾಚಾರ್ಯರ ಸನ್ನಿಧಿಯಲ್ಲಿ 977ರಲ್ಲಿ ಸಮಾಧಿ ಮರಣ ಹೊಂದಿದ. ಈತನ ಕಾಲಕ್ಕೆ ಉತ್ತರದಲ್ಲಿ ರಾಷ್ಟ್ರಕೂಟರ ಮಾಂಡಲಿಕರಾಗಿದ್ದ ಚಾಳುಕ್ಯರು ಪ್ರಬಲರಾಗುತ್ತಿದ್ದರು. ದಕ್ಷಿಣದಲ್ಲಿ ಗಂಗರ ವೈರಿಗಳಾಗಿದ್ದ ನೊಳಂಬರು ಪ್ರಬಲರಾಗುತ್ತಿದ್ದರು.

ಅಕ್ಕ ಜೈನಮತೀಯಳಾಗಿದ್ದರೂ ಬೂತುಗ ವೈದಿಕ ಧರ್ಮೀಯ. ಆದರೆ ಮಾರಸಿಂಹ ಮತ್ತು ಅವನ ಅನಂತರದ ಅರಸರು ಸ್ಪಷ್ಟವಾಗಿ ಜೈನಧರ್ಮಕ್ಕೆ ಸೇರಿದವರು. ಹೀಗಾಗಿ ಗಂಗ ಮನೆತನವು ಜೈನಧರ್ಮೀಯರೆಂಬ ಭಾವನೆ ಉಂಟಾಗಲು ಕಾರಣವಾಯಿತು. ಹೊಯ್ಸಳರ ಕೆಲವು ಶಾಸನಗಳಲ್ಲಿ ಮುನ್ನಿನ ಗಂಗರಾಜರ ಬಸದಿಗಳನ್ನು ಜೀರ್ಣೋದ್ಧಾರ ಮಾಡಿದ ಉಲ್ಲೇಖಗಳಿವೆ. ರನ್ನನೂ ತನ್ನ ಅಜಿತನಾಥ ಪುರಾಣದಲ್ಲಿ ಗಂಗ ಅರಸರು ಜೈನಧರ್ಮವನ್ನು ಎತ್ತಿ ಹಿಡಿದವರೆಂದು ಹೇಳುತ್ತಾನೆ. ಮಾರಸಿಂಹನ ದಿಗ್ವಿಜಯಗಳಲ್ಲಿ ಗಂಗ ಸೇನಾನಿ ಚಾವುಂಡರಾಯ ಭಾಗವಹಿಸಿದ. ಈತ 979 ರಲ್ಲಿ ಗೊಮ್ಮಟ ಶಿಲ್ಪವನ್ನು ಶ್ರವಣಬೆಳಗೊಳದಲ್ಲಿ ಕೆತ್ತಿಸಿದ. ಈ ಕಾಲಕ್ಕೆ ಜೈನಧರ್ಮ ರಾಷ್ಟ್ರಕೂಟರ ಮತ್ತು ಅವರ ಸಂಬಂಧ ಹೊಂದಿದ ಗಂಗರ ವೈಯಕ್ತಿಕ ಧರ್ಮವಾಗಿತ್ತು. ಬಂಕಾಪುರ ಜೈನಧರ್ಮದ ಪ್ರಮುಖ ಕೇಂದ್ರವಾಯಿತು. ಮಾರಸಿಂಹ ತನ್ನ ಅಂತ್ಯ ಕಾಲವನ್ನು ಬಂಕಾಪುರದಲ್ಲಿ ಕಳೆದ. ತರುವಾಯದ ಅರಸರು ಜೈನಧರ್ಮದ ಏಳಿಗೆಗೆ ಶ್ರಮಿಸಿದರು. ಇದಕ್ಕೂ ಹಿಂದಿನ ಅರಸರು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರೂ ಜೈನಧರ್ಮೀಯರಾಗಿರಲಿಲ್ಲ.

**ನಾಲ್ಕನೆಯ ರಾಚಮಲ್ಲ:** 977–998. ರಾಚಮಲ್ಲನು ಪಟ್ಟಕ್ಕೆ ಬಂದ. 978ರಲ್ಲಿ ಬೆದ್ದೊರೆಗೆರೆಯನ್ನು ರಕ್ಕಸನು ಆಳುತ್ತಿದ್ದ ವಿಷಯ ತಿಳಿದುಬರುತ್ತದೆ. ಇದರಿಂದ ರಾಚಮಲ್ಲನಿಗೆ ರಕ್ಕಸನೆಂಬ ಹೆಸರಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಕಾಲಕ್ಕೆ ಅಕಾಲವರ್ಷನು ರಾಷ್ಟ್ರಕೂಟ ರಾಜನಾಗಿದ್ದ. ಈ ಸಮಯದಲ್ಲಿ ಗಂಗರ ಪರಂಪರಾಗತ ಆಳಿಕೆಯ ಪ್ರದೇಶದಲ್ಲಿ ಸಾಂತರರ ಗೋವಿಂದರಸ ಆಳುತ್ತಿದ್ದ. ನೊಳಂಬ ರಾಜ್ಯದ ಪಶ್ಚಿಮ ಭಾಗ ಅಥವಾ ದಕ್ಷಿಣ ಭಾಗ ಗಂಗರ ವಶವಾಗಿದ್ದು, ಇದನ್ನು ಗಂಗರ ಪರವಾಗಿ ಪುಳಿಗನೆಂಬುವವನು ಆಳುತ್ತಿದ್ದ. ಇಲ್ಲಿಂದಾಚೆಗಿನ ಶಾಸನಗಳಲ್ಲಿ ನೀತಿಮಾರ್ಗ, ಸತ್ಯವಾಕ್ಯ ಎಂಬ ಬಿರುದುಗಳನ್ನು ಒಬ್ಬರಿಗೇ ನೀಡಿರುವುದನ್ನು ಕಾಣುತ್ತೇವೆ. ಅಲ್ಲದೆ ಗೋವಿಂದನಿಗೆ ರಕ್ಕಸಗಂಗ ಎಂದು ಕರೆದಿರುವುದನ್ನು ಕಾಣುತ್ತೇವೆ. ಬೂತುಗನ ನೆಚ್ಚಿನ ಬಂಟನಾಗಿದ್ದ, ಮಣಲೇರ ಬೇವೂರು ಸುತ್ತಮುತ್ತಲ ಪ್ರದೇಶವನ್ನು ಆಳುತ್ತಿದ್ದ. ಈ ವೇಳೆಗೆ ಕೋಲಾರದ ಭಾಗಗಳನ್ನು ತಂಜಾವೂರಿನ ಚೋಳರು ಹಿಡಿದಿದ್ದರು. ರಾಷ್ಟ್ರಕೂಟ ಕೃಷ್ಣನ ಸಾವಿನ ಸುದ್ದಿಯೊಂದಿಗೆ ಚೋಳರು ಗಂಗವಾಡಿಗೆ ನುಗ್ಗಲು ಹವಣಿಸಿರಬೇಕು. ಹೀಗಾಗಿ ಚೋಳರು ಒಮ್ಮೆಗೇ ಗಂಗವಾಡಿಯನ್ನು ಹಿಡಿಯುವುದಿಲ್ಲ. ಮೊದಲು ಗಡಿನಾಡಿನ ರಾಜರನ್ನೆಲ್ಲ ತಮ್ಮ ಅಧೀನ ಮಾಡಿಕೊಂಡು, ಅನಂತರ ಗಂಗವಾಡಿಯ ಮೇಲೆ ನುಗ್ಗಿರುವಂತೆ ಕಾಣುತ್ತದೆ. 986– 987 ರಲ್ಲಿ ಬಲ್ಲಪ ಗಂಗವಾಡಿಗೆ ಬಂದ ಉಲ್ಲೇಖವಿದೆ.

ಕಲಿಯುಗ ಭೀಮನೆಂಬ ಬಿರುದು ಮಾರಸಿಂಹನಿಗೆ ಇತ್ತು. ಇದೇ ಬಿರುದು ರಾಜಮಲ್ಲನಿಗೂ ಇತ್ತು. ಈ ಅವಧಿಯಲ್ಲಿ ಗಂಗರಿಗೂ ಸಾಂತರ ಅರಸರಿಗೂ ಭೇದಗಳನ್ನು ಕಾಣುವುದು ಕಡಿಮೆ. ಗಂಗರೊಡನೆ ಸಾಂತರರು ಬೆಳೆಸಿದ ವೈವಾಹಿಕ ಸಂಬಂಧದ ಫಲವಾಗಿ ಈ ಬಗೆಯ ಭೇದವಿಲ್ಲದೆ ಗಂಗರೊಡನೆ ಸಹಕರಿಸಿದ್ದಿರಬಹುದು. ಪ್ರಬಲರಾಗುತ್ತಿದ್ದ ರಾಷ್ಟ್ರಕೂಟರ ಸಾಮಂತರಾಗಿದ್ದ ಗಂಗರನ್ನು ಸದೆಬಡಿಯುವಲ್ಲಿ ಚೋಳರೊಡನೆ ಮೈಸೂರು ಪ್ರದೇಶದಲ್ಲಿ ಆಳುತ್ತಿದ್ದ ಚಾಲುಕ್ಯರೂ ಸೇರಿದ್ದಿರಬಹುದು. 1001 ರಲ್ಲಿ ಚೋಳರ ಆಡಳಿತದಲ್ಲಿ ಶ್ರೀಧರ ನಾಯಕ ದಂಡನಾಯಕನಾಗಿದ್ದ. ಕುಕ್ಕರಹಳ್ಳಿ ಶಾಸನದಲ್ಲಿನ ಚಾಳುಕ್ಯ ಜಯಸಿಂಹ ಯಾವ ಅರಸನನ್ನೂ ಸ್ಮರಿಸದಿರುವುದನ್ನು ಗಮನಿಸಿದಾಗ ಗಂಗರು ಈ ಕಾಲಕ್ಕೆ ಪೂರ್ಣವಾಗಿ ದುರ್ಬಲರಾಗಿದ್ದರು. ಜೈನಧರ್ಮೀಯರೂ ಆಗಿದ್ದುದರಿಂದ ಇತರರ ಒಲವನ್ನೂ ಕಳೆದುಕೊಂಡಿದ್ದಿರಬಹುದು. ಹೀಗಾಗಿ ಸುಲಭವಾಗಿ ಚೋಳರು ಗಂಗವಾಡಿಯನ್ನು ಪ್ರವೇಶಿಸಿದರು.

ತಲಕಾಡು ಗಂಗರು ಆಗ ತಾನೇ ಪ್ರಬಲಿಸುತ್ತಿದ್ದ ಹೊಯ್ಸಳರ ಮೊರೆಹೋಗಿ ಅವರಲ್ಲಿ ದಂಡನಾಯಕರಾಗಿ, ಮಂತ್ರಿಗಳಾಗಿ ರಾಜ್ಯಭಾರದಲ್ಲಿ ತೊಡಗಿದರು. ಬಮ್ಮರಸನು ತನ್ನನ್ನು ಗಂಗವಂಶದವನೆಂದು ಹೇಳಿಕೊಂಡಿದ್ದಾನೆ. ತಲಕಾಡನ್ನು ಕೆಲವು ಕಾಲ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜರಾಜ ಚೋಳನು ಅದಕ್ಕೆ ರಾಜರಾಜಪುರವೆಂದು ಹೆಸರನ್ನು ನೀಡುತ್ತಾನೆ.

ಗಂಗರ ಸೋಲಿನಿಂದ, ಚೋಳರ ಆಗಮನದಿಂದ ಕರ್ನಾಟಕದ ಮೇಲೆ ಈ ಕೆಳಕಂಡ ಪ್ರಭಾವಗಳಾದವು: ಶ್ರೀವೈಷ್ಣವ ಧರ್ಮದ ಆಗಮನ; ಜೈನಧರ್ಮಕ್ಕೆ ಆಘಾತವಾಗಿ ಅದರ ಅವನತಿ ಪ್ರಾರಂಭವಾಯಿತು; ಪೆರಿಯ ಪುರಾಣದ ಮತ್ತು ತಮಿಳು ಶೈವಭಕ್ತರ ಪ್ರಭಾವ ಉತ್ತರದ ಚಾಳುಕ್ಯ ರಾಜ್ಯದ ಶೈವರ ಮೇಲೆ ಪರಿಣಾಮ ಬೀರಿ ವೀರಶೈವವೆಂಬ ಶೈವಧರ್ಮದ ಪ್ರಭೇದವೊಂದು ಹುಟ್ಟಲು ಕಾರಣವಾಯಿತು; ಮಲೆಸೀಮೆ ಮತ್ತದರ ಅಂಚಿನಲ್ಲಿ ಹೊಯ್ಸಳರ ಸಾಮ್ರಾಜ್ಯ ಉದಿಸಿ ಮುಂದೆ, ಚೋಳರನ್ನು ಕರ್ನಾಟಕದ ಗಡಿಯಿಂದ ಆಚೆಗೆ ಓಡಿಸುವಂತಾಯಿತು.

**ಗಂಗರ ವಂಶಾವಳಿ**




*

**ಆಡಳಿತ ವ್ಯವಸ್ಥೆ:** ಗಂಗರ ಆಡಳಿತ ಪ್ರದೇಶವನ್ನು ಗಂಗವಾಡಿ 9600 ಎಂದು ಶಾಸನಗಳು ನಿರ್ದೇಶಿಸುತ್ತವೆ. ಸಂಸ್ಕೃತ ಶಾಸನಗಳಲ್ಲಿ ಷಣ್ಣವತಿ ಸಹಸ್ರವೆಂದೂ ಕನ್ನಡ ಶಾಸನಗಳಲ್ಲಿ ತೊಂಬತ್ತಾರು ಸಾಸಿರವೆಂದೂ ಕರೆಯಲಾಗಿದೆ. ರಾಜ್ಯ ವಿಸ್ತಾರವಾದಾಗಲೂ ರಾಜ್ಯದ ವಿಸ್ತಾರ ಕುಗ್ಗಿದಾಗಲೂ ಈ ಸಂಖ್ಯೆಯನ್ನೇ ಬಳಸಿರುತ್ತಾರೆ. ಇವರ ಶಾಸನಗಳನ್ನು ಗಮನಿಸಿದಾಗ ಅನೇಕ ಕಡೆಗಳಲ್ಲಿ ಬೇರೆ ಬೇರೆ ಶಬ್ದಗಳನ್ನು ಒಂದೇ ಅರ್ಥದಲ್ಲಿ ಬಳಸಿರುವುದನ್ನು ಕಾಣಬಹುದು. ಉದಾಹರಣೆಗೆ ರಾಷ್ಟ್ರ, ವಿಷಯ, ದೇಶ, ಜನಪದನಾಡು ಈ ಪದಗಳನ್ನು ಒಂದೇ ಅರ್ಥವ್ಯಾಪ್ತಿಯಲ್ಲಿ ಬಳಸಲಾಗಿದೆ.

ಪುದಲ್‌ನಾಡರಾಷ್ಟ್ರ, ಪುದೋಲಿ ವಿಷಯ; ಮರುಗೆರೆಯ ರಾಷ್ಟ್ರ, ಮರುಗೆರೆ ವಿಷಯ, ಮರುಗೆರೆನಾಡು; ಸೇಂದ್ರಕ ವಿಷಯ, ಸೇಂದ್ರಕ ದೇಶ; ತಗರೆ ಜನಪದ, ತಗರೆನಾಡು; ಕೊಡಗೂರು ವಿಷಯ, ಕೊಡಗೂರುನಾಡು. ಈ ವಿಭಾಗವನ್ನು ಸೂಚಿಸುವ ಪದಗಳಲ್ಲಿ 8ನೆಯ ಶತಮಾನದ ಅನಂತರ ನಾಡು ಎಂಬ ಶಬ್ದ ಪ್ರಧಾನವಾಗಿ ನಿಲ್ಲುತ್ತದೆ. ಉಳಿದವುಗಳ ಬಳಕೆ ಕಡಿಮೆಯಾಗುತ್ತದೆ. ಇದಕ್ಕೆ ಕನ್ನಡ ಶಾಸನಗಳ ಹೆಚ್ಚಳವೂ ಕಾರಣವಿರಬಹುದು. ಕೆಲವು ಶಾಸನಗಳಲ್ಲಿ ವಿಷಯ ದೊಡ್ಡದು, ದೇಶ ಚಿಕ್ಕದೆಂಬಂತೆ ಹೇಳಲಾಗಿದೆ. ದೊಡ್ಡನಾಡಿನಲ್ಲಿ ಸಣ್ಣನಾಡುಗಳು ಸೇರಿತ್ತೆಂಬುದನ್ನು ಸಂಖ್ಯೆಯಲ್ಲಿ ಉಲ್ಲೇಖಿಸಿರುವುದರ ಮೂಲಕ ತೋರಿಸಿದ್ದಾರೆ. ಉದಾ. ಪೂನಾಡು 6000, ಅದರಲ್ಲಿ ಎಡೆನಾಡು 70 ಎಂಬುದು ಚಿಕ್ಕ ಭಾಗ. ಇಲ್ಲಿ ನಾಡು ಎಂಬುದು ಆಡಳಿತದ ಅನುಕೂಲಕ್ಕಾಗಿ ಬಳಸಿದ ಪ್ರಯೋಗವಾಗಿದೆ.

ಭೋಗ ಎಂಬ ಶಬ್ದವನ್ನು ವಿಷಯ ಅಥವಾ ನಾಡಿಗಿಂತ ಚಿಕ್ಕ ವಿಭಾಗವೆಂಬಂತೆ ತೋರಿಸಿದ್ದಾರೆ. ಉದಾಹರಣೆಗೆ ಪೆರಟಿಭೋಗ, ಕೋರಿಕುಂದ ಭೋಗ ಇತ್ಯಾದಿ. ಒಂದೆರಡು ಶಾಸನಗಳಲ್ಲಿ ಭೋಗ ಎಂಬುದನ್ನು ಊರುಗಳ ಸಣ್ಣಗುಂಪು ಎಂಬರ್ಥದಲ್ಲಿ ಬಳಸಿದ್ದಾರೆ. ಈ ಶಬ್ದವೂ ಏಳು ಮತ್ತು ಎಂಟನೆಯ ಶತಮಾನದ ಅನಂತರ ಶಾಸನಗಳಲ್ಲಿ ಕಾಣೆಯಾಗುತ್ತದೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ದೇಶ ವಿಭಾಗಗಳ ಪದಗಳನ್ನು ಬಳಸುವಲ್ಲಿ ಒಂದು ನಿರ್ದಿಷ್ಟತೆಯನ್ನು ಅನುಸರಿಸಿಲ್ಲವೆಂಬುದು ತಿಳಿಯುತ್ತದೆ. ಗಂಗರ ತಮಿಳು ಶಾಸನಗಳಲ್ಲಿಯೂ ನಾಡು ಎಂಬ ಪದವನ್ನೇ ಬಳಸಿದ್ದಾರೆ. ಹೀಗಾಗಿ ನಾಡಿನ ಜೊತೆಯಲ್ಲಿ ಬಂದಿರುವ ಸಂಖ್ಯೆಯ ಆಧಾರದಿಂದ ಆ ನಾಡಿನ ಗಾತ್ರವನ್ನು ಅರಿಯಬಹುದು. ಬೇಗೂರಿನ ಶಾಸನದಲ್ಲಿ ಬೆಂಪೂರು 12 ಎಂದಿದ್ದು 12 ಊರುಗಳ ಹೆಸರನ್ನೂ ನೀಡಲಾಗಿದೆ. ಗಂಗವಡಿ 96000 ಪ್ರದೇಶ ಸು.50 ಉಪ ವಿಭಾಗಗಳನ್ನು ಹೊಂದಿದ್ದು ಈ ಉಪ ವಿಭಾಗಗಳಲ್ಲಿದ್ದ ಚಿಕ್ಕ ವಿಭಾಗಗಳನ್ನು ಶಾಸನಗಳಲ್ಲಿ ಗುರುತಿಸಬಹುದು.

ಗಂಗರ ಸಾಮಾಜಿಕ ಕೊಡುಗೆಗಳಲ್ಲಿ ಕೆರೆಗಳ ನಿರ್ಮಾಣ ಮುಖ್ಯವಾದುದು. ಗಂಗರು ಪ್ರಾರಂಭದಲ್ಲಿ ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಯ ಪ್ರದೇಶಗಳನ್ನು ಆಳುತ್ತಿದ್ದು ಅನಂತರ ಕ್ರಮ ಕ್ರಮವಾಗಿ ರಾಜ್ಯ ವಿಸ್ತರಿಸುತ್ತಾ ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲದೆ ತಮಿಳುನಾಡಿನ ಧರ್ಮಪುರಿ, ಸೇಲಂ, ಉತ್ತರ ಆರ್ಕಾಟ್ ಜಿಲ್ಲೆಗಳವರೆಗೂ ವಿಸ್ತರಿಸುತ್ತಾರೆ. ಈ ಪ್ರದೇಶಗಳಲ್ಲೆಲ್ಲ ಇವರ ಆಳ್ವಿಕೆಯ ಕುರುಹಾಗಿ ಶಾಸನಗಳು ದೊರೆತಿವೆ. ಗಂಗರ ಆರಂಭದ ಶಾಸನಗಳು ತಾಮ್ರಶಾಸನಗಳಾಗಿದ್ದು ಅವು ಬ್ರಾಹ್ಮಣರಿಗೆ ನೀಡಿದ ಭೂ ದಾನದ ಉಲ್ಲೇಖವನ್ನು ಮಾಡುತ್ತವೆ. ಹೀಗೆ ನೀಡಿದ ಭೂದಾನವು ಹೆಚ್ಚಾಗಿ ಗದ್ದೆಯೇ ಆಗಿರುತ್ತಿತ್ತು. ಹೀಗಾಗಿ ದಾನ ನೀಡಿದ ಗದ್ದೆಯು ಯಾವ ಊರಿನ ಕೆರೆಯ ಕೆಳಗಿತ್ತು, ಗದ್ದೆಗಳ ವರ್ಗಕ್ಕನುಗುಣವಾಗಿ ಇದ್ದ ಹೆಸರು ಮುಂತಾದ ವಿವರಗಳು ಕಂಡುಬರುತ್ತವೆ. ಹೀಗಾಗಿ ಆರಂಭದ ಕಾಲಕ್ಕಾಗಲೇ ಅವರ ರಾಜ್ಯಾರಂಭದ ಪ್ರದೇಶದಲ್ಲಿ ಕೆರೆಗಳು ಅಸ್ತಿತ್ವದಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ಗಂಗರ ಕಾಲದಲ್ಲಿ ನಿರ್ಮಿತವಾದ ಕೆರೆಗಳಲ್ಲಿ ಮುಕ್ಕಾಲು ಪಾಲು ಕೆರೆಗಳು ಇಂದಿಗೂ ಅಸ್ತಿತ್ವದಲ್ಲಿರುವುದು ಅವುಗಳ ಮಹತ್ತ್ವವನ್ನು ಸೂಚಿಸುತ್ತವೆ. ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಿಸಿರುವ ಇವುಗಳನ್ನು ಕಾಲದಿಂದ ಕಾಲಕ್ಕೆ ಸರಿಯಾಗಿ ನೋಡಿಕೊಳ್ಳಲು ಬಂಡಿ ನಡೆಸುವ ಏರ್ಪಾಟನ್ನು ಮಾಡಿದ್ದರು. ಬೆಂಗಳೂರು ನಗರದ ಪೂರ್ವಭಾಗದಲ್ಲಿರುವ ಬೇಗೂರು, ಅಗರ, ವರ್ತೂರು ಮುಂತಾದ ಕೆರೆಗಳು ಗಂಗರ ಕಾಲದವಾಗಿವೆ. ಇದರಲ್ಲಿ ಅಗರದ ಕೆರೆಗೆ ಎರಡು ತೂಬುಗಳನ್ನು ಅಂದೇ ಇರಿಸಿದ್ದ ಬಗ್ಗೆಯೂ ಉಲ್ಲೇಖವಿದೆ. ಇಂದು ಗಂಗರ ಶಾಸನ ದೊರೆಯುವ ಗ್ರಾಮಗಳಲ್ಲಿನ ಕೆರೆಗಳು ಅಂದು ಗಂಗ ಅರಸರು ರಚಿಸಿದ ಕೆರೆಗಳೆಂದರೆ ತಪ್ಪಾಗಲಾರದು. ಕೋಲಾರ ಜಿಲ್ಲೆಯ ಕೋಲಾರ, ಅರಾಬಿಕೊತ್ತನೂರು, ಗುಮ್ಮರೆಡ್ಡಿಪುರದ ಬಳಿ ಇರುವ ನೆತ್ತರಚೆರುವು (ರಕ್ತತಟಾಕ), ಹೆಬ್ಬಟ, ಪರಗಿ, ಸುಗಟೂರು ಮೊದಲಾದ ಕೆರೆಗಳು, ಕೋಲಾರ ಜಿಲ್ಲೆಯಲ್ಲಿ ಕೆರೆಗಳ ಜಾಲ ಹರಡಲು ಸಹಾಯಕವಾಗಿವೆ. ಬೆಂಗಳೂರು ಜಿಲ್ಲೆಯ ರಾಜಘಟ್ಟ, ಹೆಬ್ಬಾಳ, ಜಿಗಣಿ, ಮೊರಸೂರು, ಹೆಬ್ಬಗೋಡಿ ಮೊದಲಾದ ಕೆರೆಗಳು ತುಮಕೂರು ಜಿಲ್ಲೆಯ ಕುಣಿಗಲ್ ಕೆರೆ, ತುಮಕೂರು ಕೆರೆ ಮುಂತಾದವು ಗಂಗರ ಕೊಡುಗೆಗಳೆಂಬುದರಲ್ಲಿ ಸಂಶಯವಿಲ್ಲ. ಈ ಬಗೆಯ ಕೆರೆಗಳ ರಚನೆ ಈ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಶಿರಹಟ್ಟಿ ತಾಲ್ಲೂಕಿನ ಹೆಬ್ಬಾಳದಲ್ಲಿ ಗಂಗ ಬೂತುಗನ ಪತ್ನಿ ಕೆರೆಯನ್ನು ಕಟ್ಟಿಸಿ ಬಿಲವನ್ನು (ತೂಬು) ಇರಿಸಿದ ಉಲ್ಲೇಖವಿದೆ. ದೇವಾಲಯ ರಚನೆ ನೀಡಿದ ಮಹತ್ತ್ವವನ್ನೇ ಕೆರೆಗಳ ರಚನೆಗೂ ನೀಡಿರುವುದು ಇದರಿಂದ ತಿಳಿಯುತ್ತದೆ. (ಡಿ.ಇ.ಕೆ.ಆರ್.)

**ವಾಸ್ತು ಶಿಲ್ಪ:** ಗಂಗರ ವಾಸ್ತುಶಿಲ್ಪದ ಬಗ್ಗೆ ಚರ್ಚಿಸುವ ಮೊದಲು ಅವರ ಸಮಕಾಲೀನ ವಾಸ್ತು ರಚನೆಗಳ ಸ್ವರೂಪವನ್ನು ಅರಿತುಕೊಳ್ಳುವುದು ಅವಶ್ಯ. ಗಂಗರ ಆಳಿಕೆ ಸು.350ರಲ್ಲಿ ಪ್ರಾಂಭವಾಗಿ ಸು.1004ಕ್ಕೆ ಕೊನೆಯಾಗುತ್ತದೆ. ಗಂಗರು ಚಳುಕ್ಯ, ರಾಷ್ಟ್ರಕೂಟ, ಪಲ್ಲವ ಮತ್ತು ಚೋಳರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಿದ್ದರು. ಗಂಗರ ಬಗ್ಗೆ

ಅಭ್ಯಾಸ ನಡೆಸಿರುವ ಬಹುತೇಕ ವಿದ್ವಾಂಸರು ಅವರನ್ನು ಜೈನರೆಂದೇ ಗುರುತಿಸಿ ಜೈನಧರ್ಮದ ಪೋಷಕರೆಂಬಂತೆ ಪರಿಗಣಿಸಿರುತ್ತಾರೆ. ಗಂಗರ ಅಂತ್ಯಕಾಲದ ಅರಸರು ಅದರಲ್ಲೂ ಇಮ್ಮಡಿ ಬೂತುಗನ ತರುವಾಯದ ಅರಸರು ಜೈನಧರ್ಮಕ್ಕೆ ಪ್ರೋತ್ಸಾಹಕರೇ ಅಲ್ಲದೆ ಜೈನಧರ್ಮೀಯರೂ ಆಗಿದ್ದರು. ಈ ಅರಸರ ಹಾಗೂ ಅನಂತರದ ಕಾಲದಲ್ಲಿ ಬಂದ ಶಾಸನಗಳಲ್ಲಿ ಇಡೀ ಗಂಗ ವಂಶದ ರಾಜರನ್ನು ಜೈನ ಮತಾವಲಂಬಿಗಳೆಂದು ಗುರುತಿಸಲು ಕಾರಣವಾಗಿದೆ. ಪಲ್ಲವರ ಪ್ರಭಾವದಲ್ಲಿದ್ದಾಗ ಭಾಗವತ ಮತಕ್ಕೂ ಚಳುಕ್ಯರ ಅಧೀನದಲ್ಲಿದ್ದಾಗ ಭಾಗವತ ಮತ್ತು ಶೈವಧರ್ಮಕ್ಕೂ, ರಾಷ್ಟ್ರಕೂಟರ ಅಧೀನದಲ್ಲಿದ್ದಾಗ ಶೈವ ಮತ್ತು ವೈಷ್ಣವ, ಶಾಕ್ತಮತಗಳಿಗೂ ಇವರು ಪ್ರೋತ್ಸಾಹ ನೀಡಿದರು. ಜೈನಧರ್ಮಕ್ಕೆ ಎಲ್ಲ ಕಾಲದಲ್ಲೂ ಪ್ರೋತ್ಸಾಹ ನೀಡಿದರು. ಇವರ ರಚನೆಗಳನ್ನು ಗಮನಿಸಿದಾಗ ಶೈವ ಮತ್ತು ವೈಷ್ಣವ ದೇವಾಲಯಗಳು, ಜೈನಬಸದಿಗಳು ಅನಂತರದ ಸ್ಥಾನವನ್ನು ಪಡೆಯುತ್ತವೆ. ಇವರ ಆರಂಭದ ಕಾಲದ ದೇವಾಲಯಗಳು ಈಗ ಉಳಿದುಬಂದಿಲ್ಲ. ಕೂಡಲೂರಿನಲ್ಲಿ ರಚಿತವಾದ ಬೌದ್ಧವಿಹಾರವಾಗಲೀ ನೊಣಮಂಗಲದಲ್ಲಿನ ಬಸದಿಗಳಾಗಲೀ ಈಗ ಇಲ್ಲ. ಆದರೆ ನೊಣಮಂಗಲದಲ್ಲಿ ಭೂ ಸಮತಟ್ಟದ ಅವಶೇಷಗಳಲ್ಲಿ ಇಟ್ಟಿಗೆಗಳು ದೊರೆತಿರುವುದರಿಂದ ಇವೆಲ್ಲ ಇಟ್ಟಿಗೆ ದೇವಾಲಯಗಳಾಗಿದ್ದವೆಂದು ತೀರ್ಮಾನಿಸಬಹುದು. ಇತ್ತೀಚೆಗೆ ರಾಜಘಟ್ಟದಲ್ಲಿ ದೊರೆತಿರುವ ಇಟ್ಟಿಗೆಯ ಬೌದ್ಧಾವಶೇಷಗಳು 6ನೆಯ ಶತಮಾನಕ್ಕೆ ಸೇರಿದವು. ಶ್ರೀವಿಕ್ರಮನ ಕಾಲದಿಂದ ಗಂಗವಾಡಿಯಲ್ಲಿ ಶಿಲಾಶಾಸನಗಳು ಕಾಣಬರುತ್ತವೆ. ಅಲ್ಲಿಯವರೆಗೆ ಗಂಗರ ಕಾಲದ ಶಾಸನಗಳೆಲ್ಲ ತಾಮ್ರಶಾಸನಗಳಾಗಿದ್ದವು. ಮುಂದೆ ಬಂದ ಒಂದನೆಯ ಶಿವಮಾರನ ಕಾಲದಿಂದ ಶಿಲೆ ಹಾಗೂ ಇಟ್ಟಿಗೆ ನಿರ್ಮಿತ ದೇವಾಲಯಗಳು ದೊರೆಯುತ್ತವೆ. ದೇಬೂರು ಮುಂತಾದ ಕಡೆ ಇವನ ರಚನೆಗಳಿವೆ. ಇವನ ಅನಂತರ ರಾಜ್ಯವಾಳಿದ ಶ್ರೀಪುರುಷನ ಕಾಲದಿಂದ ದೇವಾಲಯಗಳು ಹೆಚ್ಚಿಗೆ ಸಿಗುತ್ತವೆ. ಇವು ಇಟ್ಟಿಗೆ ಹಾಗೂ ಶಿಲೆ ಎರಡರಲ್ಲೂ ರಚಿತವಾಗಿವೆ.

ಈ ಮೇಲೆ ಹೆಸರಿಸಿದ ಅರಸರ ಕಾಲದಲ್ಲಿ ರಚಿತವಾದ ದೇವಾಲಯ ರಚನೆಗಳು ಗಂಗ ಅರಸರ ಕಾಲದಲ್ಲಿ ನಿರ್ಮಾಣವಾದ ದೇವಾಲಯ ರಚನೆಗಳ ಮೇಲೆ ಸ್ವಲ್ಪಮಟ್ಟಿನ ಪ್ರಭಾವ ಬೀರಿವೆ. ಇನ್ನೊಂದು ಪ್ರಭಾವವನ್ನು ಗಂಗರ ದೇವಾಲಯಗಳ ರಚನೆಗಳಲ್ಲಿ ಕಾಣಬಹುದು. ಅದೇ ಹಿಂದಿನಿಂದಲೂ ರೂಢಿಯಲ್ಲಿದ್ದ ಸಮಾಧಿ ರಚನೆಗಳು.

ಗಂಗರ ದೇವಾಲಯಗಳೆಂದು ಗುರುತಿಸುವ ಅನೇಕ ದೇವಾಲಯಗಳನ್ನು (ಬಸದಿಗಳನ್ನು ಬಿಟ್ಟು) ಚೋಳ ಪ್ರತಿಷ್ಠೆ ಅಥವಾ ಚೋಳ ಅರಸರು ಒಂದೇ ದಿನದಲ್ಲಿ ನಿರ್ಮಿಸಿದ ಕಟ್ಟಡಗಳು ಎಂದು ಸ್ಥಳೀಯರು ನಂಬುತ್ತಾರೆ. ವಿದ್ವಾಂಸರೂ ಇವನ್ನು ಚೋಳರ ಕಾಲದ್ದೆಂದೇ ಹೇಳುವುದುಂಟು. ಚೋಳರ ಪ್ರತಿಷ್ಠೆ ಎಂಬ ಹೇಳಿಕೆ ಜನಮನದಲ್ಲಿ ಬಲವಾಗಿ ಬೇರೂರಲು ಕಾರಣವೇನೆಂಬುದನ್ನು ವಿಶ್ಲೇಷಿಸುವುದು ಉಚಿತ.

ಚೋಳರು ಗಂಗವಾಡಿಯ ಪೂರ್ವಭಾಗವನ್ನು ಸು. 150 ವರ್ಷಗಳ ಕಾಲ ಆಳಿದರು. ರಾಜ್ಯವನ್ನು ಪಡೆದ ಚೋಳರು ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬೇಕಿತ್ತು. ಹೀಗಾಗಿ ಹಿಂದು ದೇವಾಲಯಗಳಿಗೆ ದಾನಗಳನ್ನು ಕೊಡುವುದರ ಜೊತೆಗೆ, ದೇವಾಲಯಗಳ ಅಧಿಷ್ಠಾನ, ಗೋಡೆ ಮುಂತಾದ ಕಡೆ ಶಾಸನಗಳನ್ನು ಬರೆಸಿದರು. ಚೋಳರ ಅನಂತರ ಬಂದ ಹೊಯ್ಸಳರ ಕಾಲದಲ್ಲಿ ಅರಸರು ಬದಲಾದರೇ ಹೊರತು, ಅಧಿಕಾರಿಗಳು ಚೋಳರ ಕಾಲದಲ್ಲಿ ತಮಿಳುನಾಡಿನಿಂದ ಬಂದವರೇ ಆಗಿದ್ದರು. ಹೊಯ್ಸಳರ ಅನಂತರ ಬಂದ ವಿಜಯನಗರದ ಅರಸರ ಕಾಲದಲ್ಲಿ ಆರಂಭದ ಅಧಿಕಾರಿಗಳು ಈ ಭಾಗದಲ್ಲಿ ತಮಿಳರೇ ಆಗಿದ್ದರು. ಈ ಕಾರಣಗಳಿಂದ ಚೋಳ ಪ್ರತಿಷ್ಠೆ ಎಂಬ ನೆನಪು ಜನರ ಬಾಯಿಂದ ಬಾಯಿಗೆ ಬಂದು, ಅದೇ ಜನಮನದಲ್ಲಿ ಬೇರೂರಿಬೇಕು. 18ನೆಯ ಶತಮಾನದ ಶಾಸನವೊಂದರಲ್ಲಿ ಚೋಳ ಪ್ರತಿಷ್ಠೆ ಎಂಬ ಉಲ್ಲೇಖ ಬಂದಿದೆ. ಹೊಸ ಶಾಸನಗಳು ದೊರೆತು ಇವು ಗಂಗರ ರಚನೆಗಳೆಂದರೂ ಜನ ನಂಬುವುದಿಲ್ಲ. ಸಾಮಾನ್ಯರು ಚೋಳ ಪ್ರತಿಷ್ಠೆ ಎಂಬ ಮಾತನ್ನು ಪ್ರಾಚೀನವಾದದ್ದು ಎಂಬ ಅರ್ಥಕ್ಕೆ ಪರ್ಯಾಯವಾಗಿ ಬಳಸಿದ್ದಾರೆ.

ಗಂಗರ ದೇವಾಲಯಗಳನ್ನು ಕುರಿತಂತೆ ಎ.ವಿ. ನರಸಿಂಹಮೂರ್ತಿ, ಜಿ.ಡಂಕನ್, ಎಂ. ಡೆರೆಟ್, ಹನುಮಂತರಾವ್, ಸೌಂದರರಾಜನ್ ಮೊದಲಾದವರು ತಮ್ಮ ಅಭಿಪ್ರಾಯವನ್ನು ಬೇರೆ ಬೇರೆ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಪ್ರಸಿದ್ಧವಾಗಿದ್ದ, ಗಂಗರದೆಂದು ಗುರುತಿಸಿದ್ದ ದೇವಾಲಯಗಳನ್ನು ಆಧಾರವಾಗಿಟ್ಟುಕೊಂಡು ಹೇಳಿದ ಅಭಿಪ್ರಾಯಗಳು ಇವರವು.

ಬೇರೆ ಬೇರೆ ರಾಜವಂಶಗಳ ಅರಸರದೇ ಆದ ವಾಸ್ತುಶಿಲ್ಪ ಕೇಂದ್ರಗಳು ಉಳಿದಿರುವಂತೆ ಗಂಗರದೇ ಆದ ಯಾವುದೇ ವಾಸ್ತುಶಿಲ್ಪ ಕೇಂದ್ರ ಉಳಿದುಬಂದಿಲ್ಲ. ಇವರ ರಾಜಧಾನಿಗಳಾಗಿದ್ದ ತಲಕಾಡು ಮತ್ತು ಮಣ್ಣೆಗಳಲ್ಲಿ ಇದ್ದ ಅವಶೇಷಗಳು ನಾಶವಾಗಿವೆ. ಇವರ ವಾಸ್ತುಶಿಲ್ಪದ ಬಗ್ಗೆ ಅಭ್ಯಾಸ ಮಾಡಬೇಕಾದರೆ ಇಡಿಯಾಗಿ ಗಂಗರ ದೇವಾಲಯಗಳನ್ನೆಲ್ಲ ಪರಿಶೀಲಿಸ ಬೇಕಾಗುತ್ತದೆ.

ಗಂಗರ ದೇವಾಲಯಗಳನ್ನು ಸ್ಥೂಲವಾಗಿ ಗುರುತಿಸುವ ಪ್ರಮುಖ ಲಕ್ಷಣಗಳು ಹೀಗಿವೆ: 1. ಯಾವುದೇ ಬಗೆಯ ದೇವಾಲಯವಾಗಿರಲೀ ಅಗಲ ಮತ್ತು ಉದ್ದ ಕಡಿಮೆಯಾಗಿದ್ದು ಚಿಕ್ಕದಾಗಿರುವುದು. 2. ಚಿಕ್ಕದಾದ ಗರ್ಭಗೃಹವನ್ನು ಹೊಂದಿರುವುದು. 3. ತೆರೆದ ಅಂತರಾಳವನ್ನು ಹೊಂದಿರುವುದು. 4. ಎತ್ತರ ಕಡಿಮೆಯಿರುವುದು. 5. ದೇವಾಲಯದ ಎತ್ತರ ಕಡಿಮೆಯಾಗಿರು ವುದರಿಂದ ಬಾಗಿಲ ಎತ್ತರ ಕಡಿಮೆ ಇರುವುದು. 6. ಈ ದೇವಾಲಯಗಳ ಪ್ರಾಚೀನತೆಯನ್ನು ಗುರುತಿಸುವಲ್ಲಿ ಚೋಳರು ಪತ್ರಿಷ್ಠೆ ಮಾಡಿದ್ದೆಂದು ಗುರುತಿಸಿರುವುದು. 7. ಕಡಿಮೆ ಅಲಂಕಾರ ಹೊಂದಿರುವುದು ಹಾಗೂ ದೇವಾಲಯಗಳೆಲ್ಲ ಬಹುತೇಕ ಊರ ಹೊರಗೆ ಇರುವುದು. 8. ಇದರ ಬಳಿ ಗಂಗರ ಕಾಲದ ಶಾಸನಗಳು ಅಥವಾ ವೀರಗಲ್ಲುಗಳು ಕಾಣಬರುವುದು. 9. ಶಿವ ದೇವಾಲಯಗಳಾದಲ್ಲಿ ಸೋಮೇಶ್ವರ, ಅರ್ಕೇಶ್ವರ, ರಾಮೇಶ್ವರ ಮುಂತಾದ ಹೆಸರುಗಳಿಂದ ಪರಿಚಿತವಿರುವುದು. ಇವು ಗಂಗರ ದೇವಾಲಯಗಳನ್ನು ಸ್ಥೂಲವಾಗಿ ಗುರುತಿಸಲು ಮುಖ್ಯ ಲಕ್ಷಣಗಳಾಗಿವೆ. ಗಂಗರ ದೇವಾಲಯಗಳನ್ನು ಅವುಗಳ ರಚನೆಯ ರೀತಿಯನ್ನುಸರಿಸಿ 1. ಅಧಿಷ್ಠಾನ ರಹಿತ ದೇವಾಲಯ ಮತ್ತು 2. ಅಧಿಷ್ಠಾನ ಸಹಿತ ದೇವಾಲಯಗಳೆಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಈ ಎರಡೂ ರೀತಿಯ ರಚನೆಗಳೂ ಒಂದರಿಂದ ಇನ್ನೊಂದು ಭಿನ್ನವಾಗಿರುವುದನ್ನು ಹೊರ ನೋಟಕ್ಕೆ ಕಾಣಬಹುದಾಗಿದೆ. ಅಧಿಷ್ಠಾನ ಸಹಿತ ದೇವಾಲಯಗಳಲ್ಲಿ ದೇವಾಲಯದ ಬೆಳವಣಿಗೆ ಮತ್ತು ಎತ್ತರಕ್ಕೆ ತಕ್ಕಂತೆ, ಮೇಲಿನ ಭಾರವನ್ನು ಹೊರಲು ಆವಶ್ಯಕವಾದ ತಳಪಾಯ ವನ್ನು ಕಾಣುತ್ತೇವೆ. ಆದರೆ ಅಧಿಷ್ಠಾನ ರಹಿತ ದೇವಾಲಯಗಳಲ್ಲಿ ಇವು ಕಾಣದಿರುವುದೇ ವಿಶೇಷವಾಗಿದೆ. ಮೇಲಿನ ಎರಡು ರೀತಿಯವಲ್ಲದೆ ಇನ್ನೊಂದು ಬಗೆಯ ದೇವಾಲಯಗ ಳಾದ ಇಟ್ಟಿಗೆಯ ದೇವಾಲಯಗಳಿದ್ದು ಅವುಗಳನ್ನು ಪ್ರತ್ಯೇಕವಾಗಿ ವರ್ಗೀಕರಿ ಸದೆ ಅಧಿಷ್ಠಾನ ಸಹಿತ ದೇವಾಲಯಗಳ ವರ್ಗದಲ್ಲೇ ಸೇರಿಸಲಾಗಿದೆ. ರಚನೆ ಯಲ್ಲಿ ಅಧಿಷ್ಠಾನ ಸಹಿತ ದೇವಾಲಯ ಗಳನ್ನು ಎಲ್ಲ ರೀತಿಯಲ್ಲಿ ಅನುಸರಿಸು ವುದೇ ಇದಕ್ಕೆ ಕಾರಣ. ಇವರ ಕಾಲಕ್ಕೆ ಸೇರುವಂತಹ ಗುಹಾ ದೇವಾಲಯ ಗಳೂ ಕೆಲವಿವೆ.

ಮಹಿಷಮರ್ದಿನಿ, ತಲಕಾಡು

**ಅಧಿಷ್ಠಾನ ರಹಿತ ದೇವಾಲಯ ಗಳು:** ಈ ಅಧಿಷ್ಠಾನ ರಹಿತ ದೇವಾಲ ಯಗಳು ಭೂ ಸಮಾನಾಂತರವಾಗಿ ಗರ್ಭಗೃಹ, ಚಿಕ್ಕ ಅಂತರಾಳ, ನವ ರಂಗಗಳನ್ನು ಹೊಂದಿವೆ. ಕೆಲವೊಮ್ಮೆ ಈ ಎಲ್ಲ ಭಾಗಗಳೂ ಇಲ್ಲದೆ ಒಂದೇ ಅಂಕಣದ ಮಂಟಪಗಳಿರುವುದೂ ಉಂಟು. ಇವು ಮೈಸೂರು ಜಿಲ್ಲೆಯಲ್ಲಿ ಹೆಚ್ಚಾಗಿಯೂ ಅಪರೂಪಕ್ಕೆ ಬೆಂಗ ಳೂರು ಜಿಲ್ಲೆಯಲ್ಲಿಯೂ ಕಾಣುಬರು ತ್ತವೆ. ಈ ದೇವಾಲಯಗಳು ಯಾವುದೇ ವಾಸ್ತುಗ್ರಂಥದಲ್ಲಿ ಹೇಳಿರುವ ಲಕ್ಷಣ ಗಳಿಗೆ ಒಳಪಡುವುದಿಲ್ಲ. ಇವು ಬಹುತೇಕ ಹಳೆಯ ಶಿಲಾಸಮಾಧಿಗಳ ರಚನೆಗಳಂತಹ ನಿರ್ಮಾಣಗಳನ್ನು ಅನುಸರಿಸಿ ಕಟ್ಟಿದಂಥವು. ಕಣ್ವ ಜಲಾಶಯದ ಕಟ್ಟೆಯ ಕೆಳಗೆ ಈಗ ಉಳಿದಿರುವ ಶಿಲಾಯುಗದ ಸಮಾಧಿಯೊಂದು ಸರಿಸುಮಾರಾಗಿ ಇಂತಹ ದೇವಾಲಯವನ್ನೇ ಹೋಲುತ್ತದೆ. ಈ ಬಗೆಯ ಶಿಲಾ ಸಮಾಧಿಗಳಲ್ಲಿ ಅಗಲವಾದ ಬೃಹತ್ತಾದ ಚಪ್ಪಡಿಗಳನ್ನು ಬಳಸಿರುವುದು ಕಂಡುಬರುತ್ತದೆ. ಕೆಲಸೂರಿನ ಕೆರೆಕಟ್ಟೆ ತೋಟದಲ್ಲಿನ ಸಪ್ತಮಾತೃಕಾ ದೇವಾಲಯದ ಎದುರಿಗೆ ಇಂತಹ ಶಿಲಾಸಮಾಧಿ ಯೊಂದಿದ್ದು ತಳಗಡೆ ಗೋಡೆಗೆ ಕೆಲವು ಚಪ್ಪಡಿಗಳನ್ನು ನಿಲ್ಲಿಸಿದೆ ಹಾಗೂ ಮೇಲೆ ಹಾಸಲು ಉದ್ದವಾದ ಒಂದು ಚಪ್ಪಡಿ ಬಳಸಿದೆ. ಒಳಗೆ ಒಬ್ಬ ಮನುಷ್ಯ ಕುಳಿತುಕೊಳ್ಳುವಷ್ಟು ಎತ್ತರವಾಗಿದೆ. ಅದೇ ಊರಿನ ಇನ್ನೊಂದು ಕಡೆಯಲ್ಲಿ ಈಶ್ವರ ದೇವಾಲಯದ ಬಳಿಯಲ್ಲಿಯೂ ಇಂತಹ ಸಮಾಧಿಯಿದ್ದು ಒಂದು ವಿಶಾಲವಾದ ಚಪ್ಪಡಿಯನ್ನು ಮೇಲೆ ಹಾಸಿದೆ. ಇವನ್ನು ಅನುಕರಿಸಿ ಕಟ್ಟಿದ ಕಟ್ಟಡಗಳು ಸಾಧಾರಣವಾಗಿ ಹೀಗೆಯೇ ಇದ್ದು ಅಲ್ಪ ಸ್ವಲ್ಪ ವ್ಯತ್ಯಾಸಗಳೊಡನೆ ದೇವಾಲಯ ರಚನೆಗಳೆನಿಸಿ ಕೊಂಡಿವೆ. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಹಳ್ಳದಮಾದಹಳ್ಳಿ, ತೊಂಡವಾಡಿ, ಹೊರೆಯಾಲ, ಶಿವಪುರ, ಸಂಪಿಗೆಪುರ, ಚಿಕ್ಕಕಾಟಿ, ಹಸುಗೂಲಿ, ಬೆಂಗಳೂರು ಜಿಲ್ಲೆಯ ಖಾಜಿಹೊಸಹಳ್ಳಿ, ತೋಟಗೆರೆ, ಶಿವಗಂಗೆ, ಮುತ್ತಾನಲ್ಲೂರು, ಕೋಲಾರ ಜಿಲ್ಲೆಯ ದೊಡ್ಡಶಿವಾರ, ಮಡಿವಾಳ, ಹಾಸನ ಜಿಲ್ಲೆಯ ನೇರ್ಲಿಗೆ, ಧರ್ಮಪುರಿ ಜಿಲ್ಲೆಯ ಕೊಂದಗಪಟ್ಟಿ, ಕಟ್ಟರಸಂಪಟ್ಟಿ, ಬೆಳ್ಳೂರು ಮುಂತಾದ ಕಡೆಗಳಲ್ಲಿ ಇಂತಹ ರಚನೆಗಳಿವೆ.

ಗರ್ಭಗೃಹ ನಾಲ್ಕು ಚಪ್ಪಡಿಗಳಲ್ಲಿ ನಿರ್ಮಾಣವಾಗಿದ್ದು, ಮೂರು ಕಡೆಗಳಲ್ಲಿ ಚಪ್ಪಡಿಗಳಿದ್ದು ಮೇಲೆ ಮುಚ್ಚಲು ಒಂದೇ ಚಪ್ಪಡಿಯನ್ನು ಬಳಸಿದೆ. ಹೀಗೆ ಚಪ್ಪಡಿಗಳನ್ನು ಬಳಸುವಾಗ ಭೂಮಿಯಲ್ಲಿ ಕಾಲುವೆಯಂತೆ ಕಿರಿದಾಗಿ ಸ್ವಲ್ಪ ಆಳವಾಗಿ ತೋಡಿ ಅದರಲ್ಲಿ ಚಪ್ಪಡಿಯನ್ನು ನಿಲ್ಲಿಸುತ್ತಿದ್ದರು. ಹೀಗಾಗಿ ಇದಕ್ಕೆ ಅಧಿಷ್ಠಾನದ ಆವಶ್ಯಕತೆಯಿಲ್ಲ. ಗರ್ಭಗೃಹಕ್ಕೆ ಪ್ರವೇಶದ್ವಾರ

ನಿರ್ಮಿಸಲು ಕೆಲವೊಮ್ಮೆ ಎರಡು ಚಪ್ಪಡಿಗಳನ್ನೇ ಅಡ್ಡವಾಗಿ ನಿಲ್ಲಿಸಿ ಮಧ್ಯೆ ಕಿರಿದಾದ ಜಾಗ ಬಿಡುವುದರ ಮೂಲಕ ಬಾಗಿಲನ್ನು ರಚಿಸಿದ್ದಾರೆ. ಈ ಬಾಗಿಲ ಭಾಗಕ್ಕೆ ಯಾವುದೇ ಬಗೆಯ ಅಲಂಕಾರವೂ ಇರುತ್ತಿರಲಿಲ್ಲ.

ಗಂಗರ ಈ ಬಗೆಯ ದೇವಾಲಯಗಳಲ್ಲಿ ಸಾಮಾನ್ಯವಾಗಿ ತೆರೆದ ಅಂತರಾಳವೇ ಇರುತ್ತದೆ. ಅನೇಕ ಕಡೆ ಈ ಭಾಗದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ಮೇಲೆ ಮುಚ್ಚಿಗೆಯಲ್ಲಿ ಯಾವುದೇ ಶಿಲ್ಪವಿರುವುದಿಲ್ಲ. ತೊಲೆಗಳೂ ಈ ಭಾಗದಲ್ಲಿ ಬಂದಿರುವುದಿಲ್ಲ. ಗೋಡೆಯಂತೆ ನಿಂತಿರುವ ಎರಡು ಚಪ್ಪಡಿಗಳೇ ಮೇಲಿನ ಮುಚ್ಚಿಗೆಯ ಚಪ್ಪಡಿಗೆ ಆಧಾರವಾಗಿರುತ್ತವೆ.

ನವರಂಗ ಮಂಟಪ ಗರ್ಭಗೃಹ ಮತ್ತು ಅಂತರಾಳ ಮಂಟಪಗಳೆರಡಕ್ಕಿಂತಲೂ ವಿಶಾಲವಾಗಿರುತ್ತದೆ. ಈ ನವರಂಗದ ವೈಶಾಲ್ಯಕ್ಕೆ ತಕ್ಕಂತೆ ಇದರ ಮಧ್ಯದಲ್ಲಿ ಎರಡು ಅಥವಾ ನಾಲ್ಕು ಕಂಬಗಳು ಬಂದಿರುವುದುಂಟು. ಇಲ್ಲಿಯೂ ಯಾವುದೇ ಅಲಂಕಾರ ಕಂಡುಬರುವುದಿಲ್ಲ. ಈ ಬಗೆಯ ದೇವಾಲಯಗಳಲ್ಲಿ ಪರಿವಾರ ದೇವತೆಗಳನ್ನು ಇರಿಸಿರುತ್ತಾರೆ. ನಾಲ್ಕು ಕಂಬಗಳು ಬಂದಿರುವ ಕಡೆ ಮುಚ್ಚಿಕೆಯಲ್ಲಿ ಕಮಲದ ಹೂ ಬಂದಿರಬಹುದು. ಮೇಲಿನ ಚಪ್ಪಡಿಗಳ ಭಾರವನ್ನು ಹೊರಲು ಬಳಸಿರುವ ತೊಲೆಗಳಿಗೆ ನವರಂಗದ ಒಳಗಿನ ಕಂಬಗಳು ಆಧಾರವಾದರೆ ಅಂಚುಗಳಲ್ಲಿ ಕಂಬಗಳನ್ನು ನಿಲ್ಲಿಸದೆ ನಿಲುವು ಚಪ್ಪಡಿಯಲ್ಲಿಯೇ ರಂಧ್ರ ಕೊರೆದು ಸೇರಿಸಲಾಗಿದೆ.



ಜೈನ ಚೈತ್ಯಾಲಯ, ಚಿಕ್ಕಹನಸೋಗೆ

ನವರಂಗಕ್ಕೆ ಹೊರಗಿನಿಂದ ಪ್ರವೇಶಿಸಲು ಕಿರಿದಾದ ದ್ವಾರವನ್ನು ನಿರ್ಮಿಸಿರುತ್ತಾರೆ. ಈ ದ್ವಾರಬಂಧದ ಎರಡೂ ಕಡೆ ನಿಲ್ಲಿಸಿರುವ ನಿಲುವುಗಳು ಸರಳವಾಗಿದ್ದು ಯಾವುದೇ ಕೆತ್ತನೆಯ ಅಲಂಕಾರ ಹೊಂದಿರುವುದಿಲ್ಲ. ಈ ಬಗೆಯ ದೇವಾಲಯಗಳಿಗೆ ಶಿಖರವಿರುವುದಿಲ್ಲ. ಇದಕ್ಕೆ ಕಾರಣ ಶಿಖರದ ತೂಕವನ್ನು ಹೊರಲು ಇವು ಸಮರ್ಥವಾಗಿಲ್ಲದಿರುವುದು.

ಈ ದೇವಾಲಯಗಳಲ್ಲಿ ಬಳಸಿರುವ ಕಂಬಗಳು ಬಹುತೇಕ ಚೌಕ, ಅಷ್ಟಮೂಲೆ ಚೌಕಾಕಾರವನ್ನೇ ಹೊಂದಿದ್ದು ಸು.4–5 ಅಡಿಗಳ ಎತ್ತರವಿರುತ್ತವೆ. ಕೆಲವು ಕಡೆ ಬೋದಿಗೆ ಸೇರಿ 5 ಅಡಿ ಎತ್ತರವಿರುತ್ತವೆ. ಕಂಬಗಳ ಮೇಲೆ ಉಬ್ಬು ಕೆತ್ತನೆಗಳಾಗಲೀ ಮತ್ತಾವುದೇ ಬಗೆಯ ಅಲಂಕಾರವಾಗಲೀ ಇರುವುದಿಲ್ಲ. ಹೊರಗೋಡೆ ಕಡೆಯಿಂದ ಹಾದು ಬಂದಿರುವ ತೊಲೆಯ ಭಾರವನ್ನು ಹೊರುವುದೇ ಈ ಕಂಬಗಳ ಏಕೈಕ ಉದ್ದೇಶ. ಈ ಕಂಬಗಳ ಕೆಳಗೆ ಪೀಠವಿರುವುದಿಲ್ಲ.

ಗಂಗರ ಅಧಿಷ್ಠಾನ ದೇವಾಲಯಗಳನ್ನು ಭೂ ಸಮಾನಾಂತರದಲ್ಲಿ (ತಿರ್ಯಙ್ಮುಖ) ಗರ್ಭಗೃಹ, ಅಂತರಾಳ ಮಂಟಪ, ನವರಂಗ ಮಂಟಪ ಮತ್ತು ಮುಖ ಮಂಟಪಗಳೆಂದೂ ಊರ್ಧ್ವ ಮುಖದಲ್ಲಿ ಅಧಿಷ್ಠಾನ, ಭಿತ್ತಿ ಪ್ರಸ್ತರ, ಗ್ರೀವ, ಸ್ತೂಪಿ ಮತ್ತು ಕಲಶವೆಂದೂ ಸ್ಥೂಲವಾಗಿ ವಿಂಗಡಿಸುತ್ತೇವೆ. ಮತ್ತೆ ಈ ಒಂದೊಂದು ವಿಭಾಗದಲ್ಲೂ ಒಳ ವಿಭಾಗಗಳಿವೆ. ಇದೇ ಅಲ್ಲದೆ ದೇವಾಲಯ ಹೊಂದಿರಬಹುದಾದ ತಳ(ಅಂತಸ್ತು)ಗಳ ಮೇಲೂ ಅನೇಕ ಭಾಗಗಳು ಸೇರ್ಪಡೆಯಾಗುತ್ತವೆ.

ಗಂಗರ ಅಧಿಷ್ಠಾನಸಹಿತ ದೇವಾಲಯಗಳನ್ನು ಏಕತಲ ದೇವಾಲಯಗಳು ಮತ್ತು ಬಹುತಲ ದೇವಾಲಯಗಳೆಂದು ಸ್ಥೂಲವಾಗಿ ಎರಡು ವಿಧವಾಗಿ ವಿಂಗಡಿಸಬಹುದು. ಏಕತಲ ದೇವಾಲಯಗಳು ಸಾಮಾನ್ಯವಾಗಿ ಬಹುಚಿಕ್ಕ ರಚನೆಗಳಾಗಿರುತ್ತವೆ. ಕಮ್ಮಸಂದ್ರದ ಸೋಮೇಶ್ವರ ದೇವಾಲಯ, ಗಂಗವಾರದ ಸೋಮೇಶ್ವರ, ಚಂದಪ್ಪನಹಳ್ಳಿಯ ತಬ್ಬಿಂಗೇಶ್ವರ, ಹುನುಗುಂದದ ಸೋಮೇಶ್ವರ, ಚೌಡೇಶ್ವರಿ, ಕೋಲಾರದ ಕೋಲಾರಮ್ಮನ ದೇವಾಲಯ, ಹಳೇಬೆಳ್ಗೊಳದ ಬಸದಿ, ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿ ಮುಂತಾದವುಗಳನ್ನು ಉದಾಹರಣೆಯಾಗಿ ನೀಡಬಹುದಾಗಿದೆ. ಏಕತಲ ದೇವಾಲಯಗಳಲ್ಲಿ ಅಧಿಷ್ಠಾನವು ಜಗತಿ ಮೇಲೆ ತ್ರಿಪಟ್ಟ ಕುಮುದ, ಗಳ, ಪಟ್ಟಿಯನ್ನು ಪಡೆದಿರುತ್ತದೆ. ಈ ಭಿತ್ತಿಯ ಮೇಲೆ ಪ್ರಸ್ತರದ ಭಾಗ ಬಂದಿದ್ದು, ಇದು ಉತ್ತರ, ವಾಜನ, ವಲಭಿ, ಕಪೋತ ಭಾಗಗಳನ್ನು ಹೊಂದಿರುತ್ತದೆ. ಏಕತಲ ದೇವಾಲಯಗಳಲ್ಲಿ ಕೆಲವು ಇಲ್ಲಿಗೆ ಮುಕ್ತಾಯವಾಗುತ್ತವೆ. ಶಿಖರವನ್ನು ಹೊಂದಿರುವ ದೇವಾಲಯಗಳಲ್ಲಿ ಕಪೋತವಾದ ಮೇಲೆ ಪ್ರತಿಮುಖ ಬಂದು ಅದರ ಮೇಲೆ ವೇದಿ ಬರುತ್ತದೆ. ಈ ವೇದಿಯ ಮೇಲೆ ಗ್ರೀವ ಬಂದು ಗ್ರೀವದ ಮೇಲೆ ಶಿಖರವಿರುತ್ತದೆ. ಶಿಖರದ ಅಂತ್ಯದಲ್ಲಿ ಮಹಾಪದ್ಮ ಬಂದಿದ್ದು ಆ ಪದ್ಮದ ಮಧ್ಯೆ ಕಲಶ ಅಥವಾ ಸ್ತೂಪಿ ಬರುತ್ತದೆ. ಒಂದೇ ತಳ ಬಂದಿರುವುದರಿಂದ ಅಲಂಕಾರಗಳು ಹೆಚ್ಚಿಗೆ ಇರುವುದಿಲ್ಲ. ಗ್ರೀವದ ಬಳಿ ಬಸವನ ಅಥವಾ ಸಿಂಹದ ಶಿಲ್ಪ ಬಂದಿರುವುದುಂಟು. ಭಿತ್ತಿಯಲ್ಲಿ ಅಪರೂಪಕ್ಕೆ ಪರಿವಾರ ದೇವತೆಗಳ ಶಿಲ್ಪ ಬಿಡಿಸಿರುತ್ತಾರೆ. ಈ ದೇವಾಲಯಗಳ ಗರ್ಭಗೃಹವೂ ಚಿಕ್ಕದಾಗಿದ್ದು ದೇವಾಲಯವಾಗಿರುವುದರಿಂದ ಭಿತ್ತಿ ಬಹು ಮಂದವಾಗಿದ್ದು, ಗರ್ಭಗೃಹ ಇಕ್ಕಟ್ಟಾಗಿರುತ್ತದೆ.

ಬಹುತಲ ದೇವಾಲಯಗಳಲ್ಲಿ ದೇವಾಲಯದ ಭಾರವನ್ನು ಹೊರಬೇಕಾಗಿರುವುದರಿಂದ ಅಧಿಷ್ಠಾನವೂ ಬಲವಾಗಿರಬೇಕು. ಜೊತೆಗೆ ದೇವಾಲಯ ಎತ್ತರವಾಗಿ ಕಾಣಬೇಕಾಗಿರುವುದರಿಂದ ಏಕತಲ ದೇವಾಲಯಕ್ಕಿಂತ ಸ್ವಲ್ಪ ಭಿನ್ನವಾದ ಅಧಿಷ್ಠಾನವನ್ನು ಹೊಂದಿರಬೇಕಾಗಿತ್ತು. ಚಾಲುಕ್ಯರ ದೇವಾಲಯಗಳಲ್ಲಿ ಕಾಣುವಂತೆ ಸಾಧಾರಣ ರೀತಿಯ ಗರ್ಭಗೃಹ ಇಲ್ಲಿ ಕಾಣಬರುವುದಿಲ್ಲ. ಆದರೆ ಮೇಲಿನ ಶಿಖರದ ಭಾರವನ್ನು ಹೊರಲು ಶಕ್ತವಾಗುವಂತೆ ಗೋಡೆ ದಪ್ಪವಾಗಿರುತ್ತಿತ್ತು. ಗೋಡೆಯ ದಪ್ಪವಿಲ್ಲದಿದ್ದಾಗ ಗರ್ಭಗೃಹದ ಗೋಡೆಗಿಂತ ಮುಂದಕ್ಕೆ ನಾಲ್ಕು ಮೂಲೆಗಳಲ್ಲಿಯೂ ಪ್ರತ್ಯೇಕ ಕಂಬಗಳನ್ನು ನಿಲ್ಲಿಸಿರುವುದು ಕಂಡುಬರುತ್ತದೆ.

ಅಧಿಷ್ಠಾನ ಬಲವಾಗಿರಬೇಕಾಗಿರುವುದರಿಂದ ಇದಕ್ಕಾಗಿ ವಿಶೇಷ ಕ್ರಮವನ್ನು ಕೈಗೊಳ್ಳುತ್ತಿದ್ದರು. ಇಂತಹ ಕಡೆ ಭೂಮಿಯ ಒಳಗೆ ಒರಟು ಕಲ್ಲುಗಳನ್ನಿಟ್ಟು ಭೂಕುಸಿತವನ್ನು ತಪ್ಪಿಸಿ ಈ ಒರಟು ಕಲ್ಲುಗಳ ಮೇಲೆ ಭೂಮಟ್ಟದ ಹಂತದಿಂದ ಮೇಲೆ ಸುಂದರವಾದ ತಳಪಾಯವನ್ನು ನಿರ್ಮಿಸಿರುತ್ತಾರೆ. ಈ ಅಧಿಷ್ಠಾನ ಏಕತಲ ಅಧಿಷ್ಠಾನದಂತೆ ಪ್ರಾರಂಭವಾದರೂ ಮೇಲಕ್ಕೆ ಹೋದಂತೆ ಕೆಲವು ಸೇರ್ಪಡೆಗಳನ್ನು ಮಾಡಿಕೊಳ್ಳುತ್ತಿತ್ತು. ಜಗತಿ, ಕುಮುದ, ಗಳ, ಕಂಪ ಹಾಗೂ ಪಟ್ಟಿಯನ್ನು ಹೊಂದಿರುತ್ತದೆ. ಈ ಪಟ್ಟಿಯ ಮೇಲಿನಿಂದ ಭಿತ್ತಿ ಪ್ರಾರಂಭವಾಗುತ್ತದೆ. ಕೆಲವು ದೇವಾಲಯಗಳಲ್ಲಿ ಭಿತ್ತಿಯಲ್ಲಿ ಕೋಷ್ಠಗಳನ್ನು (ಗೂಡು) ರಚಿಸಿ ಪರಿವಾರ ದೇವತೆಗಳನ್ನು ಸ್ಥಾಪಿಸಿರುತ್ತಾರೆ. ಭಿತ್ತಿಯಲ್ಲಿ ಉಬ್ಬು ಕಂಬಗಳನ್ನು ಬಿಡಿಸಿದ್ದು ಈ ಕಂಬಗಳಾದ ಮೇಲೆ ಉತ್ತರ, ವಾಜನ, ವಲಭಿ, ಕಪೋತ ಭಾಗಗಳು ಬರುತ್ತವೆ. ಕೆಲವು ದೇವಾಲಯಗಳ ವಲಭಿ ಭಾಗದಲ್ಲಿ ಪ್ರಾಣಿಪಕ್ಷಿಗಳ, ಮನುಷ್ಯರ, ಕುಬ್ಜರ ಅಲಂಕಾರದ ಸಣ್ಣಶಿಲ್ಪಗಳು ಸುತ್ತಲೂ ಬರುವುದುಂಟು. ಕಪೋತದ ಮೇಲೆ ಪ್ರತಿಮುಖ ಬರುತ್ತದೆ. ಇದರ ಮೇಲೆ ವೇದಿ ಬಂದು, ಇಲ್ಲಿಂದ ಮೇಲೆ ತಳಗಳು ಪ್ರಾರಂಭವಾಗುತ್ತವೆ. ಒಂದೊಂದು ತಳದಲ್ಲೂ ಪಂಜರ, ನಾಸಿಕೋಷ್ಠ, ಕರ್ಣಕೂಟ, ಶಾಲಾ, ಹುಸಿಕಂಬಗಳು ಬರುತ್ತವೆ. ಇವು ಒಂದೊಂದು ತಲಕ್ಕೂ ಮೇಲೆ ಹೋದಂತೆ ಗಾತ್ರದಲ್ಲಿ ಚಿಕ್ಕದಾಗುತ್ತವೆ. ದೇವಾಲಯದ ಭಿತ್ತಿಯ ಅನಂತರ ಬರಬಹುದಾದ ಭಾಗಗಳೆಲ್ಲಾ ಚಿಕ್ಕದಾಗಿ ಇಲ್ಲಿ ಮೂಡುತ್ತವೆ. ಕೊನೆಯ ತಳದ ವೇದಿಯಲ್ಲಿ ಆ ದೇವಾಲಯದ ದೇವತೆಯ ವಾಹನಗಳ ಸ್ಥಾಪನೆಯಾಗಿರುತ್ತದೆ. ಈ ಸ್ಥಳದಲ್ಲಿ ಓಡಾಡಲು ಸ್ವಲ್ಪ ಸ್ಥಳವಿರುತ್ತದೆ. ಮೂಲ ದೇವತೆಯ ರೂಪಗಳು ಅಥವಾ ಪರಿವಾರ ಶಿಲ್ಪಗಳ ಪ್ರತಿಷ್ಠೆ ಕೂಡ ಈ ಭಾಗದಲ್ಲಿ ಆಗಿ ಇವಕ್ಕೆ ನೆರಳಿನಂತೆ ಮಹಾನಾಸಿಯ ಗೂಡು ಮೇಲೆ ಬಂದಿರುತ್ತದೆ. ಈ ಭಾಗದ ವೇದಿಯ ಮೇಲೆ ಗ್ರೀವ ಬಂದು ಇದರ ಮೇಲೆ ಸ್ತೂಪಿ ಬರುತ್ತದೆ. ಈ ಸ್ತೂಪಿಯು ವೃತ್ತಾಕಾರ, ಚೌಕಾಕಾರ ಅಥವಾ ಅಷ್ಟ ಮೂಲೆಯಾಕಾರದಲ್ಲಿರಬಹುದು. ಈ ಗುಮ್ಮಟದ ಮೇಲೆ ಮಹಾಪದ್ಮ ಬಂದು ಅದರ ನಡುವೆ ಕಲ್ಲಿನ ಕಲಶವಿರುತ್ತದೆ. ಇದು ದೇವಾಲಯದ ಊರ್ಧ್ವಮುಖದ ಸ್ವರೂಪ. ಏಕತಲ ದೇವಾಲಯಗಳು ಅನೇಕ ವೇಳೆ ಮಂಟಪದಂತಿದ್ದು ಅಧಿಷ್ಠಾನ, ಭಿತ್ತಿ, ಪ್ರಸ್ತರಗಳನ್ನು ಮಾತ್ರ ಹೊಂದಿರುತ್ತವೆ.

ಗಂಗರ ಕಾಲದ ದೇವಾಲಯಗಳ ಅಧಿಷ್ಠಾನವನ್ನು ಗಮನಿಸಿದಾಗ ಇವು ತಮ್ಮ ಸಮಕಾಲೀನರಾದ ಚಾಳುಕ್ಯರಿಂದಾಗಲೀ ಪಲ್ಲವರಿಂದಾಗಲೀ ಪೂರ್ಣ ಪ್ರಭಾವಿತರಾಗದೆ ಇಲ್ಲಿಯೇ ಇದ್ದಿರಬಹುದಾದ ವಾಸ್ತು ಪ್ರಕಾರವನ್ನು ಬಳಸಿರುವುದು ಸ್ಪಷ್ಟವಾಗಿದೆ. ಬೇಗೂರಿನ ನಾಗೇಶ್ವರ ದೇವಾಲಯದ ಕಪೋತಬಂಧ ಅಧಿಷ್ಠಾನ ಬಾದಾಮಿ ಚಳುಕ್ಯರಿಂದ ಪ್ರಭಾವಿತವಾಗಿದ್ದರೂ ಇಂತಹ ಅಧಿಷ್ಠಾನಗಳು ಕಡಿಮೆಯೇ. ಸಂಕೀರ್ಣ ಅಧಿಷ್ಠಾನಗಳಿರುವಲ್ಲಿ ಈ ಬಗೆಯ ಅಧಿಷ್ಠಾನಗಳು ಕಾಣಬರುತ್ತವೆಯೆಂಬುದು ಗಮನಿಸಬೇಕಾದ ಅಂಶ. ಗಂಗರ ಸರಳ ಅಧಿಷ್ಠಾನವನ್ನು ಚಳುಕ್ಯರಾಗಲೀ ಪಲ್ಲವರಾಗಲೀ ಹೆಚ್ಚಿಗೆ ಬಳಸಿರುವುದು ಕಂಡುಬರುವುದಿಲ್ಲ. ಚಳುಕ್ಯರದ್ದು ಕಪೋತ ಬಂಧ ಅಧಿಷ್ಠಾನ. ಹೀಗಾಗಿ ಗಂಗರು ಹೆಚ್ಚಾಗಿ ಬಳಸಿರುವ ಪಾದಬಂಧ ಅಧಿಷ್ಠಾನವು ಇವರ ವಿಶಿಷ್ಟ ಮಾದರಿಯಾಗಿದೆ.

ಗಂಗರ ಅನೇಕ ದೇವಾಲಯಗಳಲ್ಲಿ ವಲಭಿ ಭಾಗದಲ್ಲಿ ಕುಬ್ಜರ, ಹಂಸಗಳ, ಪ್ರಾಣಿಗಳ, ಪಂಚತಂತ್ರದ ಶಿಲ್ಪಗಳನ್ನು ಬಿಡಿಸಿರುವುದನ್ನು ಕಾಣುತ್ತೇವೆ. ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿ, ಕಂಬದಹಳ್ಳಿ ಮುಂತಾದ ಕಡೆ ಹಂಸಮಾಲಾ ಬಂದರೆ ಕೋಲಾರ, ಗಂಗವಾರ, ನಂದಿ, ಮಳೂರುಪಟ್ಣ, ಅರಳುಗುಪ್ಪೆಗಳಲ್ಲಿ ಕುಬ್ಜರ, ಹಂಸಗಳ, ಪ್ರಾಣಿಗಳ ಶಿಲ್ಪಸಾಲುಗಳಿವೆ. ನರಸಮಂಗಲದಲ್ಲಿ ದೇವಾಲಯದ ಒಳಭಾಗದ ತೊಲೆಗಳಲ್ಲಿ ಈ ಶಿಲ್ಪವನ್ನು ಬಿಡಿಸಿದೆ. ವರುಣದ ಮಹಾಲಿಂಗೇಶ್ವರದಲ್ಲಿ ರಾಮಾಯಣದ ಕಥಾಭಾಗವನ್ನು ಕೆತ್ತಿದೆ.

ಗಂಗರ ದೇವಾಲಯಗಳ ಕಪೋತದಲ್ಲಿ ಕ್ಷುದ್ರನಾಸಿಗಳು ಇರಲೇಬೇಕೆನ್ನುವಷ್ಟರ ಮಟ್ಟಿಗೆ ಬಳಸಲಾಗಿದೆ. ಉಬ್ಬು ಕಂಬಗಳು ಬಂದಿರುವೆಡೆಯಲ್ಲೆ ಈ ಕ್ಷುದ್ರನಾಸಿಗಳನ್ನು ಅವುಗಳ ನೇರಕ್ಕೆ ಕಪೋತದಲ್ಲಿ ಬಿಡಿಸಲಾಗಿದೆ. ಚಾವುಂಡರಾಯ ಬಸದಿ, ಕಂಬದ ಹಳ್ಳಿ, ಚಂದ್ರಗುಪ್ತ ಬಸದಿ, ವರುಣದ ಮಹಾಲಿಂಗೇಶ್ವರ, ನರಸಮಂಗಲದ ರಾಮೇಶ್ವರ, ಕಮ್ಮಸಂದ್ರದ ಸೋಮೇಶ್ವರ, ಬೇಗೂರಿನ ನಾಗೇಶ್ವರ, ಮದಗೊಂಡನಹಳ್ಳಿಯ ಅರ್ಕೇಶ್ವರ, ಕೋಲಾರದ ಕೋಲಾರಮ್ಮನ ದೇವಾಲಯ, ಯಲಹಂಕದ ಅಳ್ಳಳ್ಳಪ್ಪನ ದೇವಾಲಯ, ಗಂಗವಾರದ ಸೋಮೇಶ್ವರ, ಮಳೂರು ಪಟ್ಟಣದ ಅರ್ಕೇಶ್ವರ, ಹೇಮಾವತಿಯ ಎಲ್ಲ ದೇವಾಲಯಗಳಲ್ಲಿ, ಅವನಿಯ ಲಕ್ಷ್ಮಣೇಶ್ವರ, ಧರ್ಮಪುರಿ, ಕಾಮಾಕ್ಷಿ ದೇವಾಲಯ, ನಂದಿಯ ಭೋಗನಂದೀಶ್ವರ ದೇವಾಲಯಗಳಲ್ಲಿ ಈ ನಾಸಿಗಳು ಕಾಣಬರುತ್ತವೆ. ಉದಾಹರಣೆಗಳನ್ನು ಗಮನಿಸಿದಾಗ ಗಂಗರು ಈ ನಾಸಾಲಂಕಾರವನ್ನು ಕಪೋತದಲ್ಲಿ ಹೆಚ್ಚಾಗಿ ಬಳಸಿ ಇತರರಿಗೆ ಮೇಲ್ಪಂಕ್ತಿಯಾದ ರೆಂದು ಹೇಳಬಹುದು.

ಇದುವರೆಗೂ ದೊರೆತಿರುವ ಗಂಗರ ದೇವಾಲಯಗಳು ಮೂರು ತಲಗಳಿಗಿಂತ ಮೇಲೆ ಹೋಗಿಲ್ಲ. ಈ ತಳಗಳಲ್ಲಿ ಬರುವ ಗ್ರೀವ ದೇವತೆಗಳಲ್ಲಿ ವ್ಯತ್ಯಾಸವಿರುತ್ತದೆ. ಚಾವುಂಡರಾಯ ಬಸದಿಯಂತಹ ಜೈನ ಬಸದಿಯಲ್ಲಿ ತೀರ್ಥಂಕರರ ಅಥವಾ ಜಿನನ ಶಿಲ್ಪ ಬಂದಿದ್ದರೆ ವೈದಿಕ ದೇವಾಲಯಗಳಲ್ಲಿ ಪರಿವಾರ ದೇವತೆಗಳ ಮತ್ತು ಮೂಲದೇವತೆಯ ಅವತಾರಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಬಿಡಿಸಿದೆ. ಮಧ್ಯೆ ಜಾಗವಿರುವೆಡೆಯಲ್ಲಿ ಯಕ್ಷರ, ಮನುಷ್ಯರ ಶಿಲ್ಪವನ್ನು ಬಿಡಿಸಿದೆ.

ಗಂಗರ ದೇವಾಲಯಗಳಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗ ಮಂಟಪಗಳು ಮಾತ್ರ ಕಾಣಬರುತ್ತವೆ. ಒಂದೆರಡು ದೇವಾಲಯಗಳಲ್ಲಿ ಮುಖಮಂಟಪ ಮತ್ತು ಸುತ್ತಾಲಯ ಗಳಿರುವುದು ಕಾಣಬರುತ್ತದೆ. ಉಳಿದಂತೆ ಬರುವ ಬಲಿಪೀಠ, ಧ್ವಜಸ್ತಂಭ, ಪ್ರವೇಶಗೋಪುರಗಳು ಇವುಗಳಲ್ಲಿ ಕಾಣುವುದಿಲ್ಲ. ಗರ್ಭಗೃಹ ಸಾಮಾನ್ಯವಾಗಿ ಚೌಕಾಕಾರದಲ್ಲಿರುತ್ತದೆ. ಸಪ್ತಮಾತೃಕೆ ಯರ ದೇವಾಲಯದಲ್ಲಿ, ಗರ್ಭಗೃಹ ಆಯತಾಕಾರದಲ್ಲಿರುತ್ತದೆ. ಇಂತಹ ಕಡೆ ಗರ್ಭಗೃಹದ ಮಧ್ಯದಲ್ಲಿ ಎರಡು ಕಂಬಗಳನ್ನು ನಿಲ್ಲಿಸಿ ಅಡ್ಡತೊಲೆಯೊಂದನ್ನು ಇಡಲಾಗಿದೆ. ಇಂತಹ ರಚನೆಗಳು ಹುನಗುಂದ, ಹೆಬ್ಬಟ, ಸಂತೆಕಲ್ಲಹಳ್ಳಿ, ಕೆಲಸೂರು, ಬೇಗೂರು, ನರಸಮಂಗಲ ಮುಂತಾದ ಕಡೆಯ ಸಪ್ತಮಾತೃಕಾ ದೇವಾಲಯಗಳಲ್ಲಿ ಕಂಡುಬರುತ್ತವೆ. ಸಪ್ತಮಾತೃಕಾ ದೇವಾಲಯಗಳ ಮೇಲೆ ಶಿಖರ ಬಂದಲ್ಲಿ ಅದು ಶಾಲಾ ಶಿಖರವಾಗಿರುತ್ತದೆ. ಇಂತಹ ಶಿಖರವೊಂದು ಕೋಲಾರಮ್ಮನ ದೇವಾಲಯದ ಮೇಲೆ ಇದೆ.

ಅಂತರಾಳ ಭಾಗ ಅಧಿಷ್ಠಾನ ರಹಿತ ಮತ್ತು ಅಧಿಷ್ಠಾನ ಸಹಿತ ದೇವಾಲಯಗಳೆರಡರಲ್ಲಿಯೂ ಕಾಣುತ್ತದೆ. ಇದು ಅಗಲ ಮತ್ತು ಉದ್ದದಲ್ಲಿ ಕಡಿಮೆಯಿದ್ದು, ಇದಕ್ಕೂ ನವರಂಗಕ್ಕೂ ಮಧ್ಯೆ ಬಾಗಿಲು ಇರುವುದಿಲ್ಲ. ಕೆಲವು ದೇವಾಲಯಗಳಲ್ಲಿ ಮೇಲಿನ ಭಾರವನ್ನು ಹೊರಲು ಅನುವಾಗುವಂತೆ ಎರಡು ಕಂಬಗಳನ್ನು ನೆಟ್ಟಿರುವುದನ್ನು ಕಾಣಬಹುದು. ಮದಗೊಂಡಹಳ್ಳಿ, ಮೊರಸೂರು ಮಡಿವಾಳ, ಅವನಿ, ಧರ್ಮಪುರಿಯ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಇದನ್ನು ಕಾಣಬಹುದು. ಕೆಲವು ಶಿವ ದೇವಾಲಯಗಳಲ್ಲಿ ಈ ಭಾಗದಲ್ಲಿ ನಂದಿ ಇರುವುದುಂಟು.

ಗಂಗರ ನವರಂಗ ಮಂಟಪ ಚಿಕ್ಕದಾಗಿದ್ದು ಮಧ್ಯೆ ನಾಲ್ಕು ಕಂಬಗಳು ಮಾತ್ರವಿದ್ದು ಅಗಲ ಚಿಕ್ಕದಾಗಿರುತ್ತದೆ. ಈ ಭಾಗದಲ್ಲಿಯೇ ದೇವಾಲಯದ ಹೊರಗೆ ದೇವಕೋಷ್ಠಗಳಲ್ಲಿ ಸ್ಥಾಪಿಸಬಹುದಾದ ಪರಿವಾರ ದೇವತೆಗಳನ್ನು ಒಳಗೆ ಸ್ಥಾಪಿಸಲಾಗಿರುತ್ತದೆ. ಇಡೀ ದೇವಾಲಯದಲ್ಲಿ ಅಲಂಕಾರವನ್ನು ತರಬೇಕಾದಲ್ಲಿ ಶಿಲ್ಪಿಗೆ ಅವಕಾಶ ದೊರೆಯುವುದು ಈ ನವರಂಗದಲ್ಲಿ ಬರುವ ಕಂಬಗಳಲ್ಲಿ ಮಾತ್ರ. ಒಳ ಉಬ್ಬು ಕಂಬಗಳು, ಮುಚ್ಚಿಗೆ ಮುಂತಾದ ಭಾಗಗಳನ್ನು ಆದಷ್ಟು ಅಲಂಕಾರಗೊಳಿಸಿ ಆಕರ್ಷಕವನ್ನಾಗಿ ಮಾಡಿರುತ್ತಾನೆ.

ಗಂಗರ ಕೆಲವು ದೇವಾಲಯಗಳಲ್ಲಿ ನಾಲ್ಕು ಕಂಬಗಳ ನಡುವಣ ಮುಚ್ಚಿಗೆಯಲ್ಲಿ ಕಮಲ ಪುಷ್ಪದ ವೃತ್ತ ಅಥವಾ ಅಷ್ಟದಿಕ್ಪಾಲಕರ ಸಮೇತವಿರುವ ಉಮಾಮಹೇಶ್ವರ ಅಥವಾ ನಟರಾಜನ ಶಿಲ್ಪವಿದೆ. ಬೋದಿಗೆಗಳ ಮೇಲೆ ಬರುವ ತೊಲೆಗಳಲ್ಲಿ ಕುಬ್ಜರ, ಪ್ರಾಣಿಗಳ, ಉಬ್ಬುಶಿಲ್ಪಗಳಿರುತ್ತವೆ. ಇಂತಹ ಲಕ್ಷಣಗಳನ್ನು ಬೇಗೂರಿನ ನಾಗೇಶ್ವರ ದೇವಾಲಯದ ಆವರಣದಲ್ಲಿರುವ ಎಲ್ಲ ದೇವಾಲಯಗಳಲ್ಲೂ ಅದೇ ಊರಿನ ಚೌಡೇಶ್ವರಿ, ಧರ್ಮಪುರಿಯ ಮಲ್ಲಿಕಾರ್ಜುನ, ಅರಳುಗುಪ್ಪೆಯ ಕಲ್ಲೇಶ್ವರ, ಹಳೇ ಆಲೂರಿನ ಅರ್ಕೇಶ್ವರ, ಹೊಂಗನೂರಿನ ಅರ್ಕೇಶ್ವರ, ನರಸಮಂಗಲದ ರಾಮೇಶ್ವರ, ಆವನಿಯ ಲಕ್ಷ್ಮಣೇಶ್ವರ ಮೊದಲಾದ ದೇವಾಲಯ ಗಳಲ್ಲಿ ಕಾಣಬಹುದಾಗಿದೆ. ಕಂಬಗಳು ಕಡಿಮೆ ಬಂದಿರುವುದರಿಂದ ವಿಶಾಲತೆ ಕಡಿಮೆ. ಗಂಗರ ಅನೇಕ ದೇವಾಲಯಗಳಲ್ಲಿನ ಮುಚ್ಚಿಗೆಯಲ್ಲಿನ ಶಿಲ್ಪಗಳು ಎರಡು ರೀತಿಯಲ್ಲಿವೆ: 1. ತಾವರೆಯ ಮುಚ್ಚಿಗೆಯನ್ನು ಹೊಂದಿರುವುದು; 2. ಅಷ್ಟದಿಕ್ಪಾಲಕರ ಸಮೇತ ನಾಟ್ಯಶಿವ ಅಥವಾ ಉಮಾಮಹೇಶ್ವರ ಶಿಲ್ಪವಿರುವುದು. ಬಸದಿಗಳಾದಲ್ಲಿ ಧರಣೇಂದ್ರ ಅಥವಾ ಜಿನಶಿಲ್ಪವಿರುವುದು; ತಾವರೆಯ ಹೂವನ್ನು ಬಿಡಿಸಿರುವ ಮುಚ್ಚಿಗೆಯಲ್ಲಿ ಮುಚ್ಚಿಗೆಯ ಮಧ್ಯದ ಕಲ್ಲಿನಲ್ಲಿ ಚೌಕಾಕಾರದ ಮನೆ ಬಿಡಿಸಿ ಅದರ ಮಧ್ಯೆ ವೃತ್ತಾಕಾರದ ಎಂಟು ದಳದ ತಾವರೆ ಹೂವನ್ನು ಬಿಡಿಸಲಾಗಿರುತ್ತದೆ. ಕೆಲವು ದೇವಾಲಯಗಳಲ್ಲಿ ವೃತ್ತಾಕಾರವನ್ನು ಬಿಡಿಸಿ ಅದರಲ್ಲಿ ಎಂಟು ದಳದ ವೃತ್ತಾಕಾರದ ತಾವರೆ ಹೂವನ್ನು ಬಿಡಿಸಲಾಗಿರುತ್ತದೆ. ಎರಡನೆಯ ಬಗೆಯ ಮುಚ್ಚಿಗೆಯಲ್ಲಿ ಮಧ್ಯದಲ್ಲಿ ದೇವಾಲಯದಲ್ಲಿನ ಗರ್ಭಗೃಹದಲ್ಲಿನ ಮೂಲಮೂರ್ತಿಗೆ ಸಂಬಂಧಿಸಿದ ಶಿಲ್ಪವನ್ನೂ ಅದರ ಸುತ್ತಲೂ ಅಷ್ಟದಿಕ್ಪಾಲಕರು ತಮ್ಮ ಪತ್ನಿಯರೊಂದಿಗೆ ವಾಹನವನ್ನೇರಿ ಸಾಗುತ್ತಿರುವುದನ್ನೂ ಬಿಡಿಸಲಾಗಿರುತ್ತದೆ.

ಗಂಗರ ಕಂಬಗಳು ಅವರ ಸಮಕಾಲೀನ ಅರಸರ ಕಾಲದಲ್ಲಿ ರಚಿತವಾದ ದೇವಾಲಯದ ಕಂಬಗಳಿಗಿಂತ ಭಿನ್ನವಾಗಿರುವುದನ್ನು ಈ ಅಂಶಗಳಿಂದ ಗುರುತಿಸಬಹುದು: 1. ಕುಳ್ಳಾಗಿರುವುದು 2. ಸಣ್ಣಗಿರುವುದು 3. ಹೆಚ್ಚು ಭಾಗಗಳನ್ನು ಹೊಂದಿರುವುದು. ಇತರ ರಾಜವಂಶೀಯರಿಂದ ನಿರ್ಮಿತವಾದ ದೇವಾಲಯಗಳಲ್ಲಿ ಕಂಬಗಳು ದಪ್ಪವಾಗಿ ಎತ್ತರವಾಗಿರುತ್ತವೆ. ಯಾರೇ ಆಗಲಿ ಎರಡು ಮೂರು ಗಂಗರ ದೇವಾಲಯಗಳಲ್ಲಿನ ಕಂಬಗಳನ್ನು ಗಮನಿಸಿದ ಅನಂತರ ಬೇರೆಡೆಯಲ್ಲಿ ಅಂತಹದೇ ದೇವಾಲಯವನ್ನು ಗಂಗರದೆಂದು ಸುಲಭವಾಗಿ ಗುರುತಿಸ ಬಹುದಾಗಿದೆ.

ಇವರ ಕಾಲದ ದೇವಾಲಯಗಳ ನವರಂಗದ ಕಂಬಗಳನ್ನು ಗಮನಿಸಿದಾಗ ಇವನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದಾಗಿದ್ದು ಇವನ್ನು 1. ಚೌಕಾಕಾರದಲ್ಲಿ ಕೆತ್ತಿರುವ ಕಂಬಗಳು 2. ಅಷ್ಟಕೋನ ಮೂಲೆಯುಳ್ಳ ಕಂಬಗಳು 3. ಗುಂಡಗಿರುವ ಕಂಬಗ ಳೆಂದು ವರ್ಗೀಕರಿಸಬಹುದು. ಈ ಬಗೆಯ ಕಂಬಗಳಲ್ಲಿ ಕೆಲವು ಒಳಪ್ರಭೇದಗಳೂ ಇವೆ.

ಒಂದೆರಡು ದೇವಾಲಯಗಳಲ್ಲಿ ಪಲ್ಲವರ ಪ್ರಭಾವ ಕಾಣುತ್ತದೆ. ಗಂಗವಾರದ ಸೋಮೇಶ್ವರ ಮುಖಮಂಟಪದಲ್ಲಿ ಪಲ್ಲವ ದೇವಾಲಯಗಳಲ್ಲಿ ಕಾಣಬರುವ ಸಿಂಹಪೀಠ ಸ್ತಂಭಗಳಿವೆ. ಕಂಬ ಕುಳ್ಳಾಗಿದ್ದು ತಳಭಾಗದಲ್ಲಿ ಕುಳಿತ ಸಿಂಹವನ್ನು ಬಿಡಿಸಿದೆ. ಅದರ ಮೇಲ್ಭಾಗ ವೃತ್ತಾಕಾರದ ದಂಡವನ್ನು ಹೊಂದಿದೆ. ಆದರೆ ಕಂಬದ ಶಲಾಕಾ ಭಾಗದ ಮೇಲೆ ಮುಚ್ಚಳ, ಪದ್ಮಫಲಕ ಇತ್ಯಾದಿಗಳಿಲ್ಲದೆ ಬೋದಿಗೆ ಬರುತ್ತದೆ. ಮಣ್ಣೆಯಲ್ಲಿನ ಅಕ್ಕತಂಗಿ ದೇವಾಲಯದಲ್ಲಿನ ಗರ್ಭಗೃಹದ ಹೊರಭಾಗದ ನಾಲ್ಕು ಮೂಲೆಗಳಲ್ಲಿ ಅಪೂರ್ಣವಾದ ಉಬ್ಬು ಕಂಬಗಳಿದ್ದು ಅವುಗಳ ಕೆತ್ತನೆ ಅಪೂರ್ಣವಾಗಿದೆ. ಇದೇ ಊರಿನಲ್ಲಿ ಇನ್ನೆರಡು ಸಿಂಹಪೀಠದ ಬಿಡಿಕಂಬಗಳಿದ್ದು ಅವು ತಳಭಾಗದಲ್ಲಿ ಸಿಂಹವು ಕುಳಿತಿರುವಂತೆಯೂ ಮೇಲಿನ ಭಾಗ ಎಂಟು ಮೂಲೆಯುಳ್ಳವಾಗಿಯೂ ಇವೆ. ಗಂಗವಾರದ ಕಂಬಕ್ಕಿಂತ ಈ ಕಂಬಗಳು ಎತ್ತರವಾಗಿವೆ. ಹೆಗ್ಗಡೆದೇವನ ಕೋಟೆಯ ಕಿತ್ತೂರಿನ ಕಂಬವೊಂದರ ಪೀಠಭಾಗ ಮಾತ್ರ ದೊರೆತಿದ್ದು ಸಿಂಹ ನಾಲ್ಕು ಕಾಲುಗಳಲ್ಲಿ ಕುಳಿತಿರುವಂತೆ ಬಿಡಿಸಿದೆ. ಮೇಲ್ಭಾಗ ಒಡೆದಿರುವುದರಿಂದ ಉಳಿದ ವಿವರಗಳು ಕಾಣಬರುವುದಿಲ್ಲ.

ಸಾಮಾನ್ಯವಾಗಿ ಕಂಬಗಳ–ಅವು ಚತುರಸ್ರವಾಗಿರಲೀ ವೃತ್ತಾಕಾರವಾಗಿರಲೀ – ಕೆಳಗೆ ಪೀಠವಿದ್ದು, ಅರ್ಧ ಅಡಿ ಎತ್ತರವಾಗಿರುತ್ತವೆ. ಈ ಪೀಠಗಳು ನಾಲ್ಕು ಮೂಲೆಯ ಕಲ್ಲಾಗಿರಬಹುದು ಅಥವಾ ಆಲಂಕಾರಿಕ ಪೀಠಗಳಾಗಿರಬಹುದು. ಅರಳುಗುಪ್ಪೆಯ ಪೀಠದ ಕಪೋತ ಭಾಗದಲ್ಲಿ ಕ್ಷುದ್ರನಾಸಿಗಳನ್ನು ಆಲಂಕಾರಿಕವಾಗಿ ಬಿಡಿಸಿದೆ. ಈ ಪೀಠದಲ್ಲಿ ಜಗತಿ, ಗಳ, ಕಪೋತ ಭಾಗಗಳನ್ನು ಕಾಣಬಹುದು. ಗಂಗರಲ್ಲಿ ಮಾತ್ರ ಈ ಪೀಠಗಳು ಕಂಡುಬರುವುದು ಗಮನಾರ್ಹ. ಗಂಗರ ದೇವಾಲಯಗಳಲ್ಲಿ ಮುಖ್ಯವಾಗಿ ಎರಡು ರೀತಿಯ ಬೋದಿಗೆಗಳು ಕಾಣಬರುತ್ತವೆ. ಒಂದನೆಯದು ತರಂಗ ಬೋದಿಗೆ, ಎರಡನೆಯದು ಸಾದಾ ಬೋದಿಗೆ (ಸರಳ ಬೋದಿಗೆ).

ತರಂಗ ಬೋದಿಗೆಯ ತಳಭಾಗ ಚಿಕ್ಕದಾಗಿದ್ದು ಮೇಲಕ್ಕೆ ಹೋದಂತೆ ಮುಂಚಾಚಿರುತ್ತದೆ. ಇಳಿಜಾರಾಗಿ ಮುಂಚಾಚಿರುವ ಭಾಗದಲ್ಲಿ ಸುರುಳಿಗಳನ್ನು ಅಥವಾ ತರಂಗಗಳನ್ನು ಬಿಡಿಸಿರುವುದರಿಂದ ಇವನ್ನು ತರಂಗಬೋದಿಗೆಗಳೆಂದು ಕರೆಯಲಾಗಿದೆ. ಕೆಲವೊಮ್ಮೆ ಈ ತರಂಗಗಳನ್ನು ಭೇದಿಸಿದಂತೆ ಮಧ್ಯಬಂಧ ಪಟ್ಟಿ ಬಂದಿರುತ್ತದೆ. ಕೆಲವೆಡೆ ಈ ಮಧ್ಯಬಂಧದಲ್ಲಿ ಲತಾಲಂಕಾರವನ್ನು ಬಿಡಿಸಿದೆ. ಈ ಬಗೆಯ ಬೋದಿಗೆಗಳನ್ನು ಬೇಗೂರು, ತಲಕಾಡು, ಹೊಂಗನೂರು, ಕಿತ್ತೂರು, ಧರ್ಮಪುರಿ, ಹಳೇ ಆಲೂರು, ಮದ್ದೂರು, ನರಸಮಂಗಲ, ಚಾವುಂಡರಾಯ ಬಸದಿ, ಹಿರೇಮಗಳೂರು, ಆವನಿ, ಶ್ರವಣಬೆಳಗೊಳ, ಕೋಲಾರಗಳಲ್ಲಿ ಕಾಣುತ್ತೇವೆ. ಕೆಲವು ದೇವಾಲಯಗಳಲ್ಲಿ ಬೋದಿಗೆಯ ತಳಭಾಗ ಸಮತಲವಾಗಿದ್ದು ಮೇಲಕ್ಕೆ ಇಳಿಜಾರಾಗಿ ಮುಂದುವರಿದ ಭಾಗದಲ್ಲಿ ಮಾತ್ರ ತರಂಗಗಳಿರುತ್ತವೆ. ಇಂಥವು ಬೇಗೂರು, ಕಿತ್ತೂರು, ಹಿರೇಮಗಳೂರಿನ ದೇವಾಲಯಗಳಲ್ಲಿವೆ.

ಸರಳ ಬೋದಿಗೆ ತರಂಗ ಬೋದಿಗೆಗಿಂತ ಭಿನ್ನವಾಗಿರುತ್ತದೆ. ಅಂದರೆ ತಳಭಾಗದಿಂದ ಮೇಲಕ್ಕೆ ಇಳಿಜಾರಾಗಿ ಮುಂಚಾಚಿದ್ದು ಅನಂತರ ಮೇಲಕ್ಕೆ ನೇರವಾಗಿ ಸಾಗುತ್ತದೆ. ಕೆಲವು ಸರಳಬೋದಿಗೆಗಳಲ್ಲಿ ತರಂಗ ಬೋದಿಗೆಗಳಲ್ಲಿರುವಂತೆ ಪಟ್ಟಿ ಬಂದಿದ್ದರೂ ಅವುಗಳಲ್ಲಿ ಅಲಂಕಾರವಿರುವುದಿಲ್ಲ. ಸರಳ ಬೋದಿಗೆಗಳೇ ಅತ್ಯಂತ ಜನಪ್ರಿಯವಾಗಿದ್ದುವೆಂದು ತೋರುತ್ತದೆ. ಈ ಸರಳಬೋದಿಗೆಗಳು ಸ್ಥಳೀಯವಾಗಿದ್ದು ಅವುಗಳನ್ನು ಗಂಗರು ತಮ್ಮದಾಗಿಸಿಕೊಂಡರು; ಇವು ಗಂಗರ ಕೊಡುಗೆ ಎಂಬುದು ಸ್ಪಷ್ಟ.

ಗಂಗರ ಕಾಲದ ದೇವಾಲಯಗಳಲ್ಲಿ ಮುಖಮಂಟಪ ಮುಂತಾದ ಭಾಗಗಳು ಕಾಣುವುದು ಅಪರೂಪ. ಹೀಗಾಗಿ ನವರಂಗದ ಪ್ರವೇಶದ್ವಾರವೇ ಕೊನೆಯ ಭಾಗವಾಗಿತ್ತು. ನವರಂಗದ ಬಾಗಿಲು ಅಲಂಕೃತವಾಗಿರುತ್ತಿತ್ತು. ಈ ಬಗೆಯ ಅಲಂಕಾರ ಕೆಲವು ದೇವಾಲಯಗಳಲ್ಲಿ ಕಾಣಬರುತ್ತದೆ. ಗಂಗರ ದೇವಾಲಯಗಳ ಬಾಗಿಲುಗಳು ಸಾಮಾನ್ಯವಾಗಿ ಕಿರಿದಾಗಿರುತ್ತವೆ. ಕೆಲವು ದೇವಾಲಯಗಳಲ್ಲಿ ಇವು ಸು. 3½ ಅಡಿ ಎತ್ತರ ಮತ್ತು 2½ ಅಡಿ ಅಗಲವಿರುತ್ತವೆ. ಹುನಕುಂದ, ಬೇಗೂರು, ಕೆಲಸೂರು, ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿ, ಮೊರಸೂರು, ಮಡಿವಾಳ ಮತ್ತು ಅಧಿಷ್ಠಾನ ರಹಿತ ದೇವಾಲಯಗಳಲ್ಲಿ ಇಂತಹ ಚಿಕ್ಕ ಬಾಗಿಲುಗಳಿವೆ. ಅರಳುಗುಪ್ಪೆಯ ಕಲ್ಲೇಶ್ವರ, ನರಸಮಂಗಲದ ರಾಮೇಶ್ವರ, ಶ್ರವಣಬೆಳಗೊಳದ ಚಾವುಂಡರಾಯ

ಬಸದಿ, ಮಣ್ಣೆಯ ಕಪಿಲೇಶ್ವರ ಮುಂತಾದವುಗಳಲ್ಲಿ ಸ್ವಲ್ಪ ಎತ್ತರದ ಮತ್ತು ಅದಕ್ಕೆ ತಕ್ಕ ಅಗಲವಾದ ದ್ವಾರಗಳನ್ನು ಕಾಣುತ್ತೇವೆ. ಈ ದೇವಾಲಯಗಳ ಬಾಗಿಲವಾಡಗಳಲ್ಲಿ ಅಲಂಕಾರ ರಹಿತವಾದ ಮತ್ತು ಅಲಂಕಾರಸಹಿತವಾದ ಬಾಗಿಲುವಾಡಗಳನ್ನು ಕಾಣಬಹುದು.

ಅಲಂಕಾರ ರಹಿತ ದೇವಾಲಯಗಳಲ್ಲಿನ ಬಾಗಿಲವಾಡದಲ್ಲಿ ಎರಡು ತೋಳೆಗಳನ್ನು ತಳಭಾಗದ ಅಡ್ಡತೊಲೆ ಅಥವಾ ಹೊಸ್ತಿಲು ಕಲ್ಲಿನ ಮೇಲೆ ಮೇಲ್ಮುಖವಾಗಿ ನಿಲುವಿನಲ್ಲಿ ನಿಲ್ಲಿಸಿ ಇವುಗಳ ಮೇಲೆ ಅಡ್ಡಲಾಗಿ ಒಂದು ಕಲ್ಲನ್ನು ಇಟ್ಟಿರುತ್ತಾರೆ. ಈ ಅಡ್ಡಗಲ್ಲನ್ನು ರೂಢಿಯಲ್ಲಿ ದ್ವಾರಬಂಧವೆಂದು ಕರೆಯುತ್ತಾರೆ. ನಿಲುವಿನಲ್ಲಿ ನಿಲ್ಲಿಸಿದ ಕಂಬಗಳು ಸಮತಲವಾಗಿದ್ದು ಯಾವುದೇ ಅಲಂಕರಣವಿರುವುದಿಲ್ಲ. ದ್ವಾರಬಂಧದಲ್ಲಿ ಗಜಲಕ್ಷ್ಮಿ ಶಿಲ್ಪವಿರುತ್ತದೆ. ಕೆಲವು ಕಡೆಗಳಲ್ಲಿ ಅಷ್ಟಮಂಗಲ ಚಿಹ್ನೆಗಳಾದ ಜೋಡಿ ಮೀನು, ಪೂರ್ಣಕುಂಭ, ಬಸವ, ಚಾಮರ, ದೀಪಮಾಲೆಕಂಬ, ಸೂರ್ಯಚಂದ್ರರು ಹಾಗೂ ಕೆಲವೆಡೆ ಶಂಖ ಚಕ್ರಗಳನ್ನೂ ಬಿಡಿಸಲಾಗಿರುತ್ತದೆ. ಆದರೆ ತಗಡೂರಿನ ಜನಾರ್ದನ ದೇವಾಲಯದ ಆವರಣದಲ್ಲಿ ದೇವಾಲಯದ ಬಲಪಕ್ಕದಲ್ಲಿ ನೆಲದಲ್ಲಿ ಹೂತುಹೋಗಿರುವ ಶಿಲ್ಪವೊಂದರಲ್ಲಿ ಈ ಮಂಗಲ ಚಿಹ್ನೆಗಳ ಜೊತೆಗೆ ಶಂಖ, ಸ್ವಸ್ತಿಕ ಮುಂತಾದವನ್ನು ಕಾಣಬಹುದು. ಆವನಿಯ ಶತ್ರುಘ್ನೇಶ್ವರದಲ್ಲಿ ದ್ವಾದಶಮಂಗಲಗಳಿವೆ.

ಎರಡನೆಯ ರೀತಿಯದಾದ ಆಲಂಕಾರಿಕ ಬಾಗಿಲವಾಡಗಳ ರಚನೆಗೂ ಹೆಚ್ಚು ಗಮನ ನೀಡಲಾಗಿದೆ. ದ್ವಾರದ ನಿಲುವಿನ ಕೆಳಭಾಗದಲ್ಲಿ ಪೂರ್ಣಕುಂಭದ ಶಿಲ್ಪವನ್ನು ಬಿಡಿಸಿದ್ದು ಅದರ ಮೇಲಿನಿಂದ ಬಳ್ಳಿಯ ಅಲಂಕಾರವನ್ನು ಎರಡೂ ಕಡೆ ಬಿಡಿಸಲಾಗಿರುತ್ತದೆ. ಮೇಲೆ ದ್ವಾರಬಂಧದ ಮಧ್ಯದಲ್ಲಿ ಎರಡೂ ಕಡೆಯಿಂದ ಹಬ್ಬಿ ಬಂದ ಬಳ್ಳಿಗಳು ಸಂಧಿಸುತ್ತವೆ. ಗಜಲಕ್ಷ್ಮಿಯ ಶಿಲ್ಪವಿರುವುದಿಲ್ಲ. ಕೆಲಸೂರು ಚೌಡೇಶ್ವರಿ, ಚಂದ್ರನಾಥ ಬಸದಿ, ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿಗಳ ತಳಭಾಗದ ನಿಲುವಿನಲ್ಲಿ ಚಿಕ್ಕದಾಗಿ ವಿಸ್ಮಯಹಸ್ತವನ್ನು ಹೊಂದಿರುವ ದ್ವಾರಪಾಲಕರನ್ನು ಬಿಡಿಸಿದೆ. ಅರಳು ಗುಪ್ಪೆಯ ದ್ವಾರದ ತಳಭಾಗದಲ್ಲಿ ಶಂಖ ಮತ್ತು ಪದ್ಮನಿಧಿಗಳನ್ನು ಬಿಡಿಸಿರುವುದಲ್ಲದೆ ಶಂಖದ ಮತ್ತು ಪದ್ಮದ ರೂಪವನ್ನೂ ಪ್ರತ್ಯೇಕವಾಗಿ ಬಿಡಿಸಿದೆ. ಮಣ್ಣೆಯ ಕಪಿಲೇಶ್ವರದಲ್ಲಿ ಬಾಗಿಲ ಎರಡೂ ಕಡೆ ಆಳೆತ್ತರದ ದ್ವಾರಪಾಲಕ ಶಿಲ್ಪಗಳಿವೆ.

ಗಂಗರ ಕಾಲದಲ್ಲಿ ಒಂದೆರಡು ಗುಹಾ ದೇವಾಲಯಗಳು ರಚಿತವಾಗಿವೆ. ಅರೆತಿಪ್ಪೂರಿನಲ್ಲಿ ಗುಹಾಲಯ ಇದ್ದ ಗುರುತು ಕಾಣುತ್ತದೆ. ಮೇಲುಕೋಟೆಯಲ್ಲಿರುವ ಗುಹಾಲಯ ಎರಡು ಹಂತಗಳನ್ನು ಹೊಂದಿದೆ. ಬಂಡೆಯ ಕಡಿದಾದ ಪ್ರದೇಶವನ್ನು ಆರಿಸಿಕೊಂಡು ಕೆತ್ತಿರುವ ಈ ಗುಹಾಲಯ ಅಪೂರ್ಣವಾಗಿದೆ. ಕೆಳಗಡೆಯ ಗುಹೆಯು ಅಗಲವಾಗಿದ್ದು, ಗೋಡೆಯ ಕಡೆಯ ಕಂಬಗಳು ಸೇರಿ ಆರು ಕಂಬಗಳನ್ನು ಉಳ್ಳದ್ದಾಗಿದ್ದು ಸು. 50 ಅಡಿ ಉದ್ದವಾಗಿದೆ. ಮುಂದಿನ ಕಂಬಗಳನ್ನು ಮಾತ್ರ ಬಿಡಿಸಿದೆ. ಒಳಗೆ ಕೆತ್ತನೆಗಳಿಲ್ಲ. ಮೇಲಿನ ಗುಹೆ ಇದಕ್ಕಿಂತ ಚಿಕ್ಕದಾಗಿದೆ. ಗೋಡೆಯ ಕಡೆಯ ಕಂಬಗಳೂ ಸೇರಿ ನಾಲ್ಕು ಕಂಬಗಳನ್ನು ಒಳಗೊಂಡಿದ್ದು, ಗುಹಾಲಯದ ಒಳಗೆ ಮೂರು ಕಂಬಗಳು ಇರಬಹುದಾದಷ್ಟು ಸ್ಥಳವನ್ನು ಬಿಡಲಾಗಿದೆ. ಇದೂ ಅಪೂರ್ಣವಾಗಿದೆ. ಗುಹಾಲಯದ ಎಡಪಕ್ಕಕ್ಕೆ ಮೆಟ್ಟಿಲುಗಳಿವೆ. ಮುಂದೆ ಇರುವ ಸ್ಥಳವನ್ನು ಸಮತಟ್ಟಾಗಿ ಮಾಡಿದೆ. ಕಂಬಗಳು ದಪ್ಪವಾಗಿವೆ. ಆದರೆ ಕೆಳಗಿನ ಗುಹಾಲಯಕ್ಕಿಂತ ಇದರ ಕೆಲವು ಭಾಗಗಳು ಪೂರ್ಣವಾಗಿವೆ. ಯಾವುದೇ ಮೂರ್ತಿ ಶಿಲ್ಪಗಳಿಲ್ಲ. ಆದರೂ ಇದನ್ನು ಜೈನಗುಹೆಗಳೆಂದೇ ವಿದ್ವಾಂಸರು ಗುರುತಿಸುತ್ತಾರೆ. ಕೆಳಗಿನ ಗವಿಯ ತಳಪಾಯದಲ್ಲಿ ಒಂದು ಅಕ್ಷರ ಮಾತ್ರ ಕಾಣುತ್ತದೆ. ಅದು ಚ ಅಥವಾ ಎ. ಈ ಅಕ್ಷರದ ರೀತಿ ಸು.7–8ನೆಯ ಶತಮಾನಕ್ಕೆ ಸೇರಿದುದಾದ್ದರಿಂದ ಈ ಗವಿಗಳ ಕಾಲವನ್ನು ನಾವು 7–8ನೆಯ ಶತಮಾನಕ್ಕೆ ಸೇರಿಸಬಹುದು. ಕಲ್ಲತ್ತಿಪುರದ ವೀರಭದ್ರ ದೇವಾಲಯ ಗುಹಾದೇವಾಲಯವಾಗಿದ್ದು ಇದು ದುಗ್ಗಮಾರನ ಕಾಲಕ್ಕೆ, ಅಂದರೆ 8ನೆಯ ಶತಮಾನದ ಉತ್ತರಾರ್ಧಕ್ಕೆ ಸೇರುತ್ತದೆ.

ವಿಳ್ಳಿಮಲೆ ಅಥವಾ ವಳ್ಳಿಮಲೆಯಲ್ಲಿನ ಸಹಜ ಗುಹೆಯೊಂದರಲ್ಲಿ ಒಂದನೆಯ ರಾಚಮಲ್ಲ ಕೆಲವು ಜೈನ ಶಿಲ್ಪಗಳನ್ನು ಮಾಡಿಸಿದ. ಇದಕ್ಕೆ ಅವನೇ ಹಾಕಿಸಿರುವ ಶಾಸನಗಳಿವೆ. ಈ ಉದಾಹರಣೆಗಳ ಜೊತೆಗೆ ಹುನಗುಂದ, ಶ್ರವಣಬೆಳಗೊಳ, ಶಿವಗಂಗೆ, ಹೆಗ್ಗುಂದ ಮುಂತಾದ ಕಡೆಗಳಲ್ಲಿನ ಸಹಜ ಗುಹಾಲಯಗಳನ್ನು ಬಹುಶಃ ಗಂಗರು ಬಳಸಿಕೊಂಡಿರುವ ಸಾಧ್ಯತೆ ಇದೆ. ಹುನಗುಂದದ ಈಶ್ವರ ದೇವಾಲಯದ ಪಕ್ಕದ ವಿಶಾಲವಾದ ಸಹಜ ಗುಹೆಯಲ್ಲಿ ದುರ್ಗೆಯ ಶಿಲ್ಪವಿದೆ. ಶಿಲ್ಪಗಳನ್ನು ಕೆತ್ತಲು ಇಲ್ಲಿ ಪ್ರಯತ್ನಿಸಲಾಗಿದೆ. ನಂದಿಯ ಬಳಿಯ ಗೋಪೀನಾಥ ಗುಡ್ಡದ ಜೈನಶಾಸನವಿರುವ ಈ ಸ್ಥಳ ಕೊರೆದ ಗುಹೆಯಾಗಿದ್ದು ಹಿಂದೆ ಜೈನ ಬಸದಿಯಾಗಿದ್ದಿರಬೇಕು.

**ಜೈನವಾಸ್ತು:** ಗಂಗವಾಡಿ ಪ್ರದೇಶದ ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿ, ಕತ್ತಲೆ ಬಸದಿ, ಎರಡುಕಟ್ಟೆ ಬಸದಿ, ಚಾವುಂಡರಾಯ ಬಸದಿ, ಚಂದ್ರಪ್ರಭ ಬಸದಿ, ಸುಪಾರ್ಶ್ವನಾಥ ಬಸದಿ, ಕಂಬದಹಳ್ಳಿ ಬಸದಿಗಳು, ಕೆಲಸೂರ ಚಂದ್ರಪ್ರಭ ಬಸದಿ, ಹೊಸಹಳ್ಳಿಯ ಜಕ್ಕಲಮ್ಮನ ಶಿಲ್ಪ, ಮಲೆಯೂರ ಬಸದಿ, ಅಂಗಡಿಯ ನೇಮಿನಾಥ ಬಸದಿ ಇವು ಜೈನವಾಸ್ತುವಿಗೆ ಪ್ರಮುಖ ಉದಾಹರಣೆಗಳು. ನೊಣಮಂಗಲ, ತಲಕಾಡು, ಆಲ್ಗೋಡು ಮುಂತಾದ ಕಡೆಯ ಬಸದಿಗಳನ್ನು ಗಮನಿಸಿದಾಗ ಅವು ವೈದಿಕ ದೇವಾಲಯಗಳನ್ನೇ ಅನುಸರಿಸಿ ರಚನೆಯಾಗಿರುವುದನ್ನು ಕಾಣಬಹುದು. ಚಂದ್ರಗುಪ್ತ ಬಸದಿಯು ಚಂದ್ರಗುಪ್ತಮುನಿಯ ಹೆಸರಿನಲ್ಲಿ ರಚಿತವಾಗಿದ್ದು ಬಹುಶಃ ಶ್ರವಣಬೆಳಗೊಳದ ರಚನೆಗಳಲ್ಲೆಲ್ಲಾ ಹಳೆಯದೆಂಬಂತೆ ಕಾಣಬರುತ್ತದೆ. ಮೂರು ಸಮಾನಾಂತರ ಗರ್ಭಗೃಹಗಳನ್ನು ಹೊಂದಿದ್ದು ಕೊನೆಯ ಎರಡರ ಮೇಲೆ ಶಿಖರಗಳಿವೆ. ಚಂದ್ರಗುಪ್ತ ಬಸದಿಯ ವಲಭೀ ಭಾಗದಲ್ಲಿ ಬಂದಿರುವ ಹಂಸಮಾಲಾ ಪಲ್ಲವರಿಗಿಂತ ಭಿನ್ನವಾಗಿದೆ. ತಲಕಾಡಿನಲ್ಲಿರುವ ಬಸದಿಯಂತೆಯೇ ತಳಪಾಯವನ್ನು ಹೊಂದಿತ್ತು. ತಲಕಾಡಿನ ಬಸದಿಯ ಮುಂದೆ ವಿಶಾಲ ಹಜಾರವಿತ್ತು. ಇದು ಇಟ್ಟಿಗೆಯ ರಚನೆ. ಶ್ರವಣಬೆಳಗೊಳದಲ್ಲಿ ಚಾವುಂಡರಾಯ ಬಸದಿ ಮತ್ತು ಚಂದ್ರಗುಪ್ತ ಬಸದಿಗಳನ್ನು ಬಿಟ್ಟರೆ ಉಳಿದವೆಲ್ಲಾ ಇಟ್ಟಿಗೆಯ ಬಸದಿಗಳಾಗಿದ್ದವು. ಮಣ್ಣೆ, ಕೆಲಸೂರು, ಅರೆತಿಪ್ಪೂರು ಬಸದಿಗಳೂ ಇಟ್ಟಿಗೆಯ ರಚನೆಗಳಾಗಿದ್ದವು. ಕತ್ತಲೆ ಬಸದಿ ಸಾಧಾರ ಬಸದಿಯಾಗಿದ್ದರೆ, ಉಳಿದವು ನಿರಾಧಾರ ಬಸದಿಗಳಾಗಿವೆ. ಅವುಗಳಿಗೆ ದಪ್ಪ ಗೋಡೆಗಳನ್ನು ಕಟ್ಟಿದೆ. ಹೊರಗಡೆ ವಿಶಾಲವಾಗಿ ಕಂಡರೂ ಒಳಗಡೆ ಗರ್ಭಗೃಹ ಚಿಕ್ಕದಾಗಿವೆ. ಅಂದರೆ ಉಳಿದ ಭಾಗ ಮೇಲಿನ ಭಾರ ಹೊರಲು ಸಾಧ್ಯವಾಗುವಂತೆ ಭಿತ್ತಿ ಇರುತ್ತದೆ. ಚಂದ್ರಗುಪ್ತ ಬಸದಿಯಲ್ಲಿ ಮೂರು ಗರ್ಭಗೃಹಗಳಿದ್ದು ಮಧ್ಯದ ಗರ್ಭಗೃಹ ದೊಡ್ಡದಾಗಿದೆ; ಗರ್ಭಗೃಹಗಳ ಮುಂದೆ ಇರುವ ಅಂತರಾಳ ಮಂಟಪದಂತಹ ರಚನೆ ಕಿರಿದಾಗಿದ್ದು ಉದ್ದವಾಗಿದೆ. ಬಾಗಿಲವಾಡ ಸುಂದರವಾಗಿ ಕಪೋತದಂತಹ ದ್ವಾರಬಂಧವನ್ನೂ ಹೊಂದಿದೆ. ದ್ವಾರದ ಎರಡೂ ಪಕ್ಕದಲ್ಲಿನ ಜಾಲಂಧ್ರ ರಾಷ್ಟ್ರಕೂಟರ ಹಳೆಯ ಶಿಲ್ಪಗಳಲ್ಲಿ ಈಗ ಮಾತಂಗ ಯಕ್ಷನ ಶಿಲ್ಪ ಮಾತ್ರ ಉಳಿದಿದೆ. ಪಾದಬಂಧ ಅಧಿಷ್ಠಾನವನ್ನು ಹೊಂದಿದೆ. ಚಾವುಂಡರಾಯ ಬಸದಿಯು ಗರ್ಭಗೃಹ, ಅಂತರಾಳ, ಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಪಾದಬಂಧ ಅಧಿಷ್ಠಾನ, ತ್ರಿತಳ ವಿಮಾನ, ವಿಷ್ಣುಬಂಧ ಶಿಖರವನ್ನು ಹೊಂದಿದೆ. ಇಡೀ ದೇವಾಲಯ ಆಯತಾಕಾರದ ತಳಪಾಯ ಹೊಂದಿದ್ದರೂ ಒಳಭಾಗದಲ್ಲಿ ಚಿಕ್ಕದಾದ ಗರ್ಭಗೃಹ, ಹದಿನಾರು ಕಂಬಗಳನ್ನು ಹೊಂದಿರುವ ವಿಶಾಲ ನವರಂಗ ಮಂಟಪವಿದೆ. ದೇವಾಲಯದ ಪ್ರವೇಶದಲ್ಲಿ ಎತ್ತರವಾದ ಮುಖಮಂಟಪ ಇವೆ. ದಪ್ಪ ಗೋಡೆಯನ್ನು ಹೊಂದಿದೆ. ಮೊದಲ ತಳದ ಪ್ರಸ್ತರ ಭಾಗ ಬಹು ಸುಂದರವಾಗಿದ್ದು, ಸುಂದರವಾದ ನಾಸಿಗಳಿಂದ ಕಪೋತಗಳಿಂದ ಅಲಂಕೃತಗೊಂಡಿದೆ. ಕೂಟ, ನಾಸಿ ಮತ್ತು ಶಾಲಾಗಳ ಕೆಳಗೆ ಯಕ್ಷರ, ಭಕ್ತರ, ಜಿನಬಿಂಬಗಳ ಉಬ್ಬು ಶಿಲ್ಪಗಳಿವೆ. ಎರಡನೆಯ ತಳದಲ್ಲಿ ಮೊದಲಿನಷ್ಟು ಅಲಂಕಾರ ವಿಲ್ಲದಿದ್ದರೂ ಅದರ ಅನುಕರಣೆ ಕಾಣುತ್ತದೆ. ಮೂರನೆಯ ತಳದಲ್ಲಿ ಈ ಅಲಂಕಾರಗಳೇನೂ ಇಲ್ಲದೆ ಸ್ತಂಭಗಳ ಅಲಂಕಾರ ಮಾತ್ರವಿದೆ. ಅಷ್ಟಮೂಲೆಯ ವೇದಿ ಇದ್ದು ಗ್ರೀವ ಚಿಕ್ಕದಾಗಿದೆ. ಮೇಲೆ ಎಂಟು ಮೂಲೆ ಶಿಖರವಿದೆ. ಈ ಬಸದಿಯನ್ನು ವಿದ್ವಾಂಸರು ಗಂಗರ ಅಂತ್ಯಕಾಲದ ಮತ್ತು ಅತ್ಯುತ್ತಮವಾದ ದೇವಾಲಯದವೆಂದು ಕರೆದಿದ್ದಾರೆ.

ಕಂಬದಹಳ್ಳಿ ಬಸದಿ ಪಂಚಕೂಟ ಬಸದಿಯಾಗಿದ್ದು ಮೂರು ಗರ್ಭಗೃಹಗಳು ತ್ರಿಕೂಟದಲ್ಲೂ ಉಳಿದ ಎರಡು ಮುಂಭಾಗದಲ್ಲಿ ಎದುರು ಬದುರಾಗಿಯೂ ಇವೆ. ಬಸದಿಗಳಲ್ಲಿ ಚೌಕ, ಅಷ್ಟಕೋನ ಮತ್ತು ವೃತ್ತಾಕಾರದ ಶಿಖರಗಳಿವೆ. ಗಂಗರ ಅಂತಿಮ ರಚನೆ ಇದಾಗಿದೆ.

ವಿಜಯಮಂಗಲ ಚಂದ್ರಪ್ರಭ ಬಸದಿಯ ಬಳಿ ಚಾವುಂಡರಾಯನ ತಂಗಿಯಾದ ಪುಳಿಯಬ್ಬೆಯ ನಿಶಿಧಿ ಸಿಕ್ಕಿದೆ. ವೀರಸಂಘದ ಜೈನರು ಈ ದೇವಾಲಯವನ್ನು ನಿರ್ಮಿಸಿರಬಹುದು. ಇದರ ಕಾಲ 10ನೆಯ ಶತಮಾನದ ಉತ್ತರಾರ್ಧ ಇರಬಹುದು. ಇದು ಇಟ್ಟಿಗೆಯ ದೇವಾಲಯವಾಗಿದ್ದು, ಗರ್ಭಗೃಹ, ಅರ್ಧಮಂಟಪಗಳಿವೆ. ಪ್ರತಿಭದ್ರ ಅಧಿಷ್ಠಾನ, ವಿಷ್ಣುಬಂಧ ಶಿಖರಗಳಿವೆ. ಚಾವುಂಡರಾಯನ ತಂಗಿ ಪುಳಿಯಬ್ಬೆ ಇಲ್ಲಿ ನಿಶಿಧಿಯಾದಂತೆ ತಿಳಿಯುವುದರಿಂದ ಚಾವುಂಡರಾಯನ ಕಾಲಕ್ಕೆ ಈ ದೇವಾಲಯ ನಿರ್ಮಾಣವಾಗಿರಬೇಕು. ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರಿನ ಬಸದಿಯೂ ಮೊದಲು ಇಟ್ಟಿಗೆಯ ಗೋಡೆಗಳನ್ನು ಪಡೆದಿದ್ದಿರಬೇಕು. ಇದು ಒಳಗೆ ಗರ್ಭಗೃಹ, ಅಂತರಾಳ, ನವರಂಗ, ಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿದೆ. ಇವುಗಳಲ್ಲಿ ಮುಖಮಂಟಪ ಅಥವಾ ಎರಡನೆಯ ನವರಂಗದಂತಹ ರಚನೆ ಗಂಗರ ಕಾಲದ್ದು. ನವರಂಗದಲ್ಲಿ ಚತುರಸ್ರ ಗುಂಡಗಿನ ಕುಳ್ಳಗಿನ ಕಂಬಗಳನ್ನು ಕಾಣಬಹುದು. ಮೂಲ ಮೂರ್ತಿ ಮಣ್ಣಿನದಾಗಿದ್ದು, ಎತ್ತರವಾದ ವೇದಿಕೆಯ ಮೇಲೆ ಇರಿಸಲಾಗಿದೆ. ಯಕ್ಷ ಯಕ್ಷಿಯರ ವಿಗ್ರಹಗಳು ಮಣ್ಣಿನವಾಗಿವೆ. ನವರಂಗದ ಹೊರಗಿನ ದ್ವಾರಬಂಧ ಸುಂದರವಾಗಿದೆ. ಪಾದಬಂಧ ಅಧಿಷ್ಠಾನವನ್ನು ಹೊಂದಿದೆ.

ವಳ್ಳಿಮಲೈಯಲ್ಲಿನ ಒಂದು ಸಹಜ ಗುಹೆಯನ್ನು ಒಂದನೆಯ ರಾಚಮಲ್ಲನು ವಸತಿಯನ್ನಾಗಿ ಪರಿವರ್ತಿಸಿದ. ಅಲ್ಲಿ ಸುಪಾರ್ಶ್ವನಾಥ ಮತ್ತಿತರ ತೀರ್ಥಂಕರರಲ್ಲದೆ ಕೆಲವು ಶಾಸನ ದೇವತೆಗಳನ್ನು ಕೆತ್ತಿದೆ. ಇಲ್ಲಿನ ಕನ್ನಡ, ತಮಿಳು ಶಾಸನಗಳಲ್ಲಿ ಅಜ್ಜನಂದಿಯ ಹೆಸರು ಪ್ರಮುಖವಾಗಿ ಕಾಣಿಸಿಕೊಂಡಿದೆ. ರಾಷ್ಟ್ರಕೂಟ ಮೂರನೆಯ ಕೃಷ್ಣನ ಶಾಸನಗಳಲ್ಲಿ ತಿರುಮಲೈನ ಉಲ್ಲೇಖ ಬಂದಿದ್ದು 957ರಲ್ಲಿ ಪಂಗಳನಾಡಿನ ಮುಖ್ಯಸ್ಥನಾದ ಕನ್ನರದೇವ ಪೃಥ್ವೀಗಂಗರಾಯನ ಹೆಂಡತಿಯಾದ ಗಂಗಮಹಾದೇವಿಯ ಸೇವಕಿ ಅಲ್ಲಿಯ ಯಕ್ಷನ ಮುಂದೆ ಉರಿಸಲು ನಂದಾದೀವಿಗೆಗೆ ದಾನ ನೀಡಿದಳೆಂದು ತಿಳಿದುಬರುತ್ತದೆ. ಈ ಜಿನಾಲಯಕ್ಕೆ ಕುಂದವ್ವೆ ಜಿನಾಲಯವೆಂಬ ಹೆಸರೂ ಇದೆ.

**ಶಿಲ್ಪಕಲೆ:** ಗಂಗ ಮೂರ್ತಿಶಿಲ್ಪಗಳು ಒಂದನೆಯ ಶಿವಮಾರನ ಕಾಲದಿಂದ ಕಾಣಬರುತ್ತವೆಯಾದರೂ ಅವುಗಳ ಸಂಖ್ಯೆ ತೀರ ಕಡಿಮೆ. ಮೂರನೆಯ ಮಾಧವನ ಕಾಲದಲ್ಲಿ ವಿಷ್ಣು ವಿಗ್ರಹವನ್ನು ಕಂಚಿನ ಪಾತ್ರೆಗಳ ಸಮೇತ ದಾನ ಮಾಡಿದ ಉಲ್ಲೇಖವಿದ್ದರೂ

ಆ ಸ್ಥಳವನ್ನು ಈಗ ಗುರುತಿಸುವುದು ಸಾಧ್ಯವಾಗಿಲ್ಲ. ದುರ್ವಿನೀತನನ್ನು ಕಾತ್ಯಾಯನಿ ಕಮಲೋದರನ ಭಕ್ತನೆಂದು ಶಾಸನದಲ್ಲಿ ಉಲ್ಲೇಖಿಸಿದ್ದರೂ ಇವನ ಕಾಲದ ದೇವಾಲಯಗಳು ದೊರೆತಿಲ್ಲ. ಒಂದನೆಯ ಶಿವಮಾರನು ಕಟ್ಟಿಸಿದ ಕೆಲ್ಲಿಪೂಸೂರ ಬಸದಿಯ ವಿಗ್ರಹಗಳು ಗಾರೆಯವಾಗಿರುವುದು ವಿಶೇಷ. ಬಹುಶಃ ಬಸದಿಯ ಜೀರ್ಣೋದ್ಧಾರದ ಕಾಲದಲ್ಲಿ ಬಿಂಬಗಳು ಅನೇಕ ಬಾರಿ ಜೀರ್ಣೋದ್ಧಾರಗೊಂಡಿರುವ ಸಾಧ್ಯತೆಗಳಿವೆ. ಗರ್ಭಗೃಹದಲ್ಲಿ ಚಂದ್ರನಾಥ, ಹೊರಗಡೆ ಯಕ್ಷ ಯಕ್ಷಿಯರ ಬಿಂಬಗಳಿವೆ. ಶಿವಮಾರನ ಮೊಮ್ಮಗನಾದ ಶ್ರೀಪುರುಷನ ಕಾಲದಿಂದ ಹೆಚ್ಚಿಗೆ ಶಿಲಾವಿಗ್ರಹಗಳು ಕಾಣಬರುತ್ತವೆ. ಮುಂದೆ ಗಂಗರ ವಂಶ ಅವನತಿ ಹೊಂದುವ ಕಾಲದವರೆಗೆ ಅವರ ಆಳಿಕೆಯ ಪ್ರದೇಶಗಳಲ್ಲಿ ಶಿಲಾ ಹಾಗೂ ಗಾರೆಯ ಶಿಲ್ಪಗಳು ರಚಿತವಾಗಿವೆ.

ಗಂಗರ ವಾಸ್ತು ಹಾಗೂ ಮೂರ್ತಿಶಿಲ್ಪ ಚಾಳುಕ್ಯ, ಪಲ್ಲವ, ರಾಷ್ಟ್ರಕೂಟರ ಶಿಲ್ಪಗಳಿಂದ ಸ್ವಲ್ಪಮಟ್ಟಿಗೆ ಪ್ರಭಾವಿತವಾಗಿದೆ. ತಲಕಾಡು, ಮಣ್ಣೆ ಮುಂತಾದ ಕಡೆ ದೊರೆತಿರುವ ಶಿಲ್ಪಗಳಲ್ಲಿ ಈ ಅಂಶವನ್ನು ಗುರುತಿಸಬಹುದು. ಬಾದಾಮಿ ಚಳುಕ್ಯರ ಆಡಳಿತದ ಅವಧಿಯಲ್ಲಿ ಗಂಗವಾಡಿಯಲ್ಲಿ ಶಿಲ್ಪಗಳು ದೊರೆಯದಿರಲು ಬಹುಶಃ ಇಟ್ಟಿಗೆಯ ವ್ಯಾಪಕ ಬಳಕೆ ಮತ್ತು ವಿಗ್ರಹಗಳೂ ಮಣ್ಣಿನವಾಗಿದ್ದು ಕಾರಣವಿರಬೇಕು. ಒಂದನೆಯ ಶಿವಮಾರನ ಕಾಲದ ಕೆಲಸೂರ ಬಸದಿಯಲ್ಲಿ ಇಂದಿಗೂ ಮೂಲ ವಿಗ್ರಹ ಮಣ್ಣಿನದೇ. ಗಂಗರ ರಾಜಧಾನಿಯಾಗಿದ್ದ ಕೋಲಾರದ ಸಪ್ತಮಾತೃಕೆ ಶಿಲ್ಪಗಳೂ ಮಣ್ಣಿನವು. ಕೂಡಲೂರಿನಲ್ಲಿಯೂ ಇದೇ ರೀತಿಯ ಮಣ್ಣಿನ ವಿಗ್ರಹಗಳು ದೊರೆಯುತ್ತವೆ. ಈ ಮೇಲೆ ಹೆಸರಿಸಿದ ಮೂರು ದೇವಾಲಯಗಳೂ ಇಟ್ಟಿಗೆಯ ರಚನೆಯಾಗಿದ್ದುವೆಂಬುದು ಗಮನಾರ್ಹ. ಒಂದನೆಯ ಶಿವಮಾರ ಮತ್ತು ಅವನ ಅನಂತರದ ಗಂಗ ಅರಸರು ದೇವಾಲಯ ನಿರ್ಮಾಣ ಮಾಡಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದರ ಬಗ್ಗೆ ಸ್ಪಷ್ಟ ಆಧಾರಗಳು ದೊರೆಯುತ್ತವೆ. ಗಂಗರ ಮೂರ್ತಿಶಿಲ್ಪಗಳೂ ದೊರೆಯಲಾರಂಭಿಸುತ್ತವೆ. ದೇವಾಲಯಗಳು ಚಿಕ್ಕವಾದುದರಿಂದ ಮೂರ್ತಿಗಳು ಬಹಳ ದೊಡ್ಡವೇನಲ್ಲ ಮತ್ತು ಬಹುತೇಕ ವಿಗ್ರಹಗಳು ದೇವಾಲಯದ ನವರಂಗದಲ್ಲಿಯೇ ಪ್ರತಿಷ್ಠಾಪಿತವಾಗಿವೆ. ಇವರ ಶಿಲ್ಪಗಳಲ್ಲಿ ಬಹಳಷ್ಟಿರುವುದು ಶಿವಲಿಂಗ, ವಿಷ್ಣು, ಸೂರ್ಯ, ಸಪ್ತಮಾತೃಕೆಯರು, ಗಣಪತಿ, ನಂದಿ, ದುರ್ಗಾ ಮತ್ತು ಮಹಿಷಮರ್ದಿನಿ ಶಿಲ್ಪಗಳು. ಉಳಿದಂತೆ ಭೈರವ, ಬ್ರಹ್ಮ, ಕುಮಾರ, ನಾಗರಶಿಲ್ಪಗಳು ಅಪರೂಪಕ್ಕೆ ಕಾಣಬರುತ್ತವೆ. ವೀರಗಲ್ಲುಗಳು ಇನ್ನೊಂದು ಬಗೆಯ ವಿಶೇಷ ಶಿಲ್ಪಗಳು. ಕೆಲವು ಶಾಸನಶಿಲ್ಪಗಳೂ ಕಂಡು ಬರುತ್ತವೆ.

ಗಂಗರ ಶಿಲ್ಪದ ಮುಖ್ಯ ಲಕ್ಷಣಗಳನ್ನು ಈ ಅಂಶಗಳ ಮೂಲಕ ಗುರುತಿಸಬಹುದು: ಗಂಗರ ಕಾಲದ ಶಿಲ್ಪಗಳನ್ನು ಗಮನಿಸಿದಾಗ–ಅವು ಶಿವಲಿಂಗ, ಜಿನಬಿಂಬ ಅಥವಾ ಪರಿವಾರ ದೇವತೆಗಳ ಶಿಲ್ಪವೇ ಆಗಿರಲಿ–ಬಹುತೇಕ ಮೂರ್ತಿಗಳು ಗಟ್ಟಿಯಾದ ಕಪ್ಪು ಕಲ್ಲಿನಿಂದ ಮಾಡಿದವಾಗಿವೆ. ಶಿಲ್ಪಗಳು ಕಲ್ಲಿನ ಅಳತೆಗೆ ಸರಿಯಾಗಿ ಮಾಡಿದಂತಿವೆ. ಕಲ್ಲಿನಲ್ಲಿ ಶಿಲ್ಪ ಕೆತ್ತುವಾಗ ಅನೇಕ ವೇಳೆ ಕಲ್ಲು ಎಲ್ಲಿಯಾದರೂ ಮುಕ್ಕಾಗಿದ್ದರೆ ಅಷ್ಟಕ್ಕೆ ಅಲ್ಲಿ ಬರಬೇಕಾಗಿದ್ದ ಶಿಲ್ಪದ ಮುಂದುವರಿಕೆ ಮೊಟಕಾಗಿರುತ್ತಿತ್ತು. ಪಾದದಿಂದ ಶಿರೋಭಾಗದವರೆಗೆ ವಿವರವಾಗಿ ಬಿಡಿಸಿದ್ದರೂ ಕೈಗಳನ್ನು ಹಾಗೂ ಕೈಗಳಲ್ಲಿನ ಆಯುಧ ಅಥವಾ ಮುದ್ರೆಗಳನ್ನು ಬಿಡಿಸುವಾಗ ಕಲ್ಲು ವಿಶಾಲವಾಗಿದ್ದರೆ ವಿವರವಾಗಿ ಬಿಡಿಸಲಾಗಿರುತ್ತದೆ. ಕಲ್ಲು ಸಾಕಾಗದಿದ್ದಲ್ಲಿ ಇಲ್ಲಿರುವಷ್ಟು ಜಾಗದಲ್ಲಿಯೇ ಎಲ್ಲವನ್ನು ಬಿಡಿಸಲಾಗಿರುತ್ತದೆ. ಹೀಗಾಗಿ ಅನೇಕ ವಿಗ್ರಹಗಳಲ್ಲಿ ಆಯುಧಗಳು ಬಾಗಿರುವಂತೆ, ವಿವರವಾಗಿ ಬಿಡಿಸಲು ಸಾಧ್ಯವಾಗದಂತೆ ಆಗಿರುತ್ತದೆ. ಕೆಲವು ಸಪ್ತಮಾತೃಕಾ ಶಿಲ್ಪಗಳನ್ನು ತಲಕಾಡಿನ ವಿಷ್ಣುಕುಣಿಗಲ್ಲಿನ ದುರ್ಗಾ ಮುಂತಾದವುಗಳಲ್ಲಿ ಗಮನಿಸಬಹುದು. ಅಂಗಾಂಗಗಳನ್ನು ಬಿಡಿಯಾಗಿ ಬಿಡಿಸದೆ ಉಬ್ಬುಶಿಲ್ಪಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಲಾಗಿರುತ್ತದೆ. ಬಿಡಿ ಶಿಲ್ಪಗಳು ಕಡಿಮೆ. ಶಿವಲಿಂಗ, ಜಿನಬಿಂಬದಂತಹವನ್ನು ಬಿಟ್ಟರೆ ಉಳಿದವು ಉಬ್ಬುಶಿಲ್ಪವಾಗಿಯೇ ಬಂದಿವೆ. ಕಲ್ಲಿನ ಮುಂಭಾಗದಲ್ಲೇ ವಿಗ್ರಹದ ವಿವರಗಳು ಬರುತ್ತವೆ. ಹಿಂಬದಿಯಲ್ಲಿ ಯಾವ ಕೆತ್ತನೆಯೂ ಇರುವುದಿಲ್ಲ. ಅನೇಕ ಚಿಕ್ಕ ಚಿಕ್ಕ ಶಿಲ್ಪಗಳ ಕೆತ್ತನೆಗೆ ಗಂಗ ಶಿಲ್ಪಗಳು ಅನುಸರಿಸಿರುವ ವಿಧಾನವೆಂದರೆ ಅಂಡಾಕಾರದ, ವೃತ್ತಾಕಾರದ ಕಲ್ಲನ್ನು ಮಧ್ಯಕ್ಕೆ ಎರಡು ಭಾಗ ಮಾಡಿ ಉಬ್ಬು ಭಾಗದ ಕಡೆಯಲ್ಲಿ ಶಿಲ್ಪವನ್ನು ಬಿಡಿಸುವುದು. ಹೀಗಾಗಿ ಶಿಲ್ಪಗಳು ಉಬ್ಬಾಗಿ ಬರಲು ಸಹಾಯಕವಾಗಿರುವುದರ ಜೊತೆಗೆ ಕಲ್ಲನ್ನು ಪೂರ್ಣವಾಗಿ ಕಡೆಯುವುದು ತಪ್ಪಿದೆ. ದುರ್ಗೆ, ಮಹಿಷಮರ್ದಿನಿ, ವಿಷ್ಣು ಮುಂತಾದ ಶಿಲ್ಪಗಳನ್ನು ಗಮನಿಸಿದಾಗ ಶಿಲ್ಪಗಳು ಕಾರ್ಯಕ್ಕೆ ತಕ್ಕ ಮುಖಭಾವವನ್ನು ಬಿಡಿಸಿರುವುದನ್ನು ಗಮನಿಸಬಹುದು. ವಿಷ್ಣು ಮೊದಲಾದ ವಿಗ್ರಹಗಳು ನಗೆಮೊಗದಿಂದ ಕೂಡಿರುವಂತೆ ಬಿಡಿಸಿದರೆ ಮಹಿಷಮರ್ದಿನಿ ಮುಂತಾದ ಸಂಹಾರ ಶಿಲ್ಪಗಳ ಮುಖಭಾವವು ಉಗ್ರವಾಗಿದ್ದು, ದೃಷ್ಟಿಯನ್ನು ದುಷ್ಟಸಂಹಾರದ ಮೇಲೆ ಕೇಂದ್ರೀಕರಿಸಿರುವಂತೆ ಬಿಡಿಸಿದೆ. ಉದಾ: ದೇವರಹಳ್ಳಿ, ತಲಕಾಡು, ಚನ್ನಪಟ್ಟಣ ಮುಂತಾದ ಕಡೆಯ ಮಹಿಷಮರ್ದಿನಿ ಶಿಲ್ಪಗಳು. ವೀರಗಲ್ಲು ಮುಂತಾದ ಶಿಲ್ಪಗಳು ಹಲವಾರು ಸನ್ನಿವೇಶಗಳನ್ನು ಒಂದೇ ಚೌಕಟ್ಟಿನಲ್ಲಿ ಬಿಡಿಸಲು ಪ್ರಯತ್ನಿಸಲಾಗಿದೆ.

ಗಂಗರ ಕಾಲದ ವಿಗ್ರಹಗಳಲ್ಲಿ ಶಿವಲಿಂಗ, ವಿಷ್ಣು, ದುರ್ಗಾ, ಮಹಿಷಮರ್ದಿನಿ, ಸೂರ್ಯ, ಗಣಪತಿ, ನಂದಿ, ಉಮಾಮಹೇಶ್ವರ, ಸಪ್ತಮಾತೃಕಾ ಶಿಲ್ಪಗಳು, ಜೈನಮೂರ್ತಿ ಶಿಲ್ಪಗಳು ಮುಖ್ಯವಾದವು. ಈ ಶಿಲ್ಪಗಳಲ್ಲಿ ಶಿವಲಿಂಗಗಳು ಮಾನವ ನಿರ್ಮಿತ ಹಾಗೂ ಉದ್ಭವ ರೀತಿಯವು ದೊರೆಯುತ್ತವೆ. 8–10ನೆಯ ಶತಮಾನದ ಅಂತ್ಯದವರೆಗೆ ಶಿವಲಿಂಗಗಳು ದೊರೆಯುತ್ತವೆ. ವಿಗ್ರಹಗಳಲ್ಲಿ ಹೆಚ್ಚಾಗಿ ದೊರೆಯುವುದು ವಿಷ್ಣು, ದುರ್ಗಾ, ಮಹಿಷಮರ್ದಿನಿ ಮತ್ತು ಸೂರ್ಯಶಿಲ್ಪಗಳು. ಇವುಗಳ ಆಭರಣ, ಕಿರೀಟ ಮಕುಟ ಒಂದೇ ತೆರನಾಗಿವೆ. ವಿಷ್ಣು ಶಿಲ್ಪಗಳು ಶಿವಪಂಚಾಯತನಕ್ಕೆ ಸೇರಿದವೇ ಹೊರತು ಸ್ವತಂತ್ರ ದೇವಾಲಯವನ್ನು ಹೊಂದಿದ ಶಿಲ್ಪಗಳಲ್ಲವೆಂಬುದು ಗಮನಾರ್ಹ. ಕೆಲವು ವಿಷ್ಣು ಶಿಲ್ಪಗಳಲ್ಲಿ ಚಕ್ರವು ಧಾರಕ ಮುದ್ರೆಯಲ್ಲಿದ್ದರೆ ಕೆಲವು ಶಿಲ್ಪಗಳಲ್ಲಿ ಪ್ರಯೋಗ ಚಕ್ರವಾಗಿದೆ. ಹೆಚ್ಚಿಗೆ ಶಂಖ, ಚಕ್ರ, ಗದೆ, ವರದ ಮುದ್ರೆಗಳಿಂದ ವಿಷ್ಣು ವಿಗ್ರಹವಿದ್ದರೂ ಕೆಲವು ಶಿಲ್ಪಗಳ ಕೈಯಲ್ಲಿ ಫಲವನ್ನು ಬಿಡಿಸಿ ಜನಾರ್ದನ ರೂಪದಂತೆ ಬಿಡಿಸಿರುವುದುಂಟು. ವಿಷ್ಣು, ಸೂರ್ಯ, ದುರ್ಗಾ ಮತ್ತು ಮಹಿಷಮರ್ದಿನಿ ಶಿಲ್ಪಗಳ ಪ್ರಾಚೀನತೆಯನ್ನು ಅವುಗಳು ಧರಿಸಿರುವ ಬಟ್ಟೆಗಳ ಅಲಂಕಾರ ದಿಂದ ಗುರುತಿಸಬಹುದಾಗಿದೆ. ವಿಷ್ಣುವಿನ ಶಿಲ್ಪದ ಅನಂತರ ಹೆಚ್ಚಿಗೆ ಕಾಣಿಸಿಕೊಳ್ಳುವ ಶಿಲ್ಪವೆಂದರೆ ಸೂರ್ಯನದು. ಸೂರ್ಯಶಿಲ್ಪಗಳು ಎರಡು ಕೈಯನ್ನು ಮಾತ್ರ ಹೊಂದಿದ್ದು, ಸಾಮಾನ್ಯವಾಗಿ ಲಿಂಗಕ್ಕೆ ಎದುರಾಗಿ ಪಶ್ಚಿಮಾಭಿಮುಖವಾಗಿ ದೇವಾಲಯದ ಹೊರಗೆ ಪ್ರತಿಷ್ಠಾಪಿಸಲಾಗಿರುತ್ತದೆ. ಇವು ಕೆಲವೆಡೆ ಸ್ಥಾನಪಲ್ಲಟವಾಗಿರುವುದುಂಟು. ಕೈಗಳಲ್ಲಿ ಕಮಲದ ಮೊಗ್ಗಿನ ದಂಟುಗಳನ್ನು ಬಿಗಿಯಾಗಿ ಎದೆಗವುಚಿ ಹಿಡಿದುಕೊಂಡಿರುವಂತೆ ಕೆತ್ತನೆ ಇರುತ್ತದೆ. ಉಳಿದಂತೆ ಅಲಂಕಾರದಲ್ಲಿ ವಿಷ್ಣು ವಿಗ್ರಹವನ್ನು ಹೋಲುತ್ತದೆ. ಕರ್ನಾಟಕದಲ್ಲಿ ಮಣ್ಣೆಯಲ್ಲಿ ಸೂರ್ಯದೇವಾಲಯವಿದ್ದ ಉಲ್ಲೇಖ ಬರುತ್ತದೆ. ಈಗ ಆ ದೇವಾಲಯ ಉಳಿದಿಲ್ಲ. ಆದರೆ ಬಿಂಬ ಮಾತ್ರ ಉಳಿದಿದೆ. ಸೂರ್ಯಶಿಲ್ಪ ಪರಿವಾರ ದೇವತೆಯಾಗಿ ಬಂದಿದೆ; ಸೂರ್ಯಬಿಂಬದ ಸ್ವತಂತ್ರ ಆರಾಧನೆ ಗಂಗವಾಡಿ ಪ್ರದೇಶದಲ್ಲಿ ಇಲ್ಲ. ಪಿರಿಯಾಪಟ್ಟಣ ತಾಲ್ಲೂಕಿನ ಕಂಪಲಾಪುರದ ಸೂರ್ಯವಿಗ್ರಹ ಗಂಗವಾಡಿ ಪ್ರದೇಶದಲ್ಲಿ ದೊರೆತಿರುವ ಪ್ರಾಚೀನ ಸೂರ್ಯವಿಗ್ರಹ. ತಲಕಾಡಿನ ಮರಳೇಶ್ವರದಲ್ಲಿನ ಸೂರ್ಯ ಶಿಲ್ಪ ಸುಂದರವಾದದ್ದು. ಪಾದಗಳನ್ನು ವಿವರವಾಗಿ ಬಿಡಿಸಿದ್ದು, ಇವು ದಾಕ್ಷಿಣಾತ್ಯ ರೀತಿಗೆ ಸೇರಿದ್ದೆಂಬುದನ್ನು ತಿಳಿಸುತ್ತವೆ.

ದುರ್ಗಾದೇವಿಯ ವಿಗ್ರಹಗಳು ಗಂಗವಾಡಿಯ ದಕ್ಷಿಣಭಾಗದಲ್ಲಿ ಪ್ರಧಾನವಾಗಿ ಕಾಣಬರುತ್ತಿದ್ದು ಕೋಣನ ತಲೆಯ ಮೇಲೆ ಸಮಪಾದದಲ್ಲಿ ನಿಂತು ಶಂಖ, ಚಕ್ರ, ಅಭಯ ಮತ್ತು ಕಟಿಹಸ್ತವನ್ನು ಹೊಂದಿರುವಂತೆ ಬಿಡಿಸಲಾಗಿದೆ. ಸಾಮಾನ್ಯವಾಗಿ ನಿಂತು ಶಂಖ, ಚಕ್ರ, ಅಭಯ ಮತ್ತು ಕಟಿಹಸ್ತವನ್ನು ಹೊಂದಿರುವಂತೆ ಬಿಡಿಸಲಾಗಿದೆ. ಸಾಮಾನ್ಯವಾಗಿ ನಾಲ್ಕು ಕೈಗಳಿದ್ದರೂ ಚನ್ನಪಟ್ಟಣದ ಕೂಡಲೂರು ವಿಗ್ರಹದಲ್ಲಿ ಎಂಟು ಕೈಗಳಿವೆ. ಈ ದುರ್ಗಾ ವಿಗ್ರಹ ದೇವಾಲಯದಲ್ಲಿ ಪಂಚಾಯತನದ ವಿಗ್ರಹವಾಗಿ ಇಲ್ಲವೇ ಸ್ವತಂತ್ರ ವಿಗ್ರಹವಾಗಿ ಇರುತ್ತದೆ. ಗಂಗವಾರದ ಬಳಿಯ ಕೆರೆ ಕಟ್ಟೆ ಮೇಲೆ ಇರುವ ದುರ್ಗಾಶಿಲ್ಪದ ಮೇಲೆ ಪಲ್ಲವರ ಪ್ರಭಾವವಿದೆ. ಕುಣಿಗಲು ಮತ್ತು ಇತರ ಒಂದೆರಡು ಸ್ಥಳಗಳಲ್ಲಿ ಸಿಂಹ ಮತ್ತು ಜಿಂಕೆಯ ಶಿಲ್ಪಗಳಿವೆ.

ಮಹಿಷಮರ್ದಿನಿ ಶಿಲ್ಪಗಳೂ ಗಂಗವಾಡಿಯಲ್ಲೆಲ್ಲ ದೊರೆಯುತ್ತವೆ. ಇವು ಬಿಡಿ ಬಿಡಿಯಾಗಿ, ಸ್ವತಂತ್ರ ಶಿಲ್ಪಗಳಾಗಿ ಕಾಣಬರುತ್ತವೆ. ಬಹಳಷ್ಟು ವಿಗ್ರಹಗಳಲ್ಲಿ ಯಜ್ಞೋಪವೀತ ವಿಲ್ಲ. ಕೆಲವು ವಿಗ್ರಹಗಳಲ್ಲಿ ರುಂಡಮಾಲೆ ಇದೆ. ಒಂದೆರಡರಲ್ಲಿ ಚೆನ್ನವೀರವಿದೆ. ಕೆಲವು ವಿಗ್ರಹಗಳಲ್ಲಿ ಮಹಿಷಮರ್ದಿನಿಯು ಮಹಿಷನನ್ನು ಮೆಟ್ಟಿನಿಂತು ಶೂಲದಲ್ಲಿ ತಿವಿಯುತ್ತಿರುವಂತೆ ಇರುವ ಅಂಶವನ್ನು ಬಿಟ್ಟರೆ, ಉಳಿದ ವಿವರಗಳನ್ನು ಬಿಡಿಸುವುದರಲ್ಲಿ ಶಿಲ್ಪಿ ಸ್ವಾತಂತ್ರ್ಯ ವಹಿಸಿದ್ದಾನೆ. ಸಾಮಾನ್ಯವಾಗಿ ಮಹಿಷಮರ್ದಿನಿ ವಿಗ್ರಹಗಳಲ್ಲಿ ದೇವಿಯು ಬಲಗಾಲನ್ನು ನೆಲದ ಮೇಲೆ ಊರಿ ನಿಂತು ಎಡಗಾಲನ್ನು ಕೋಣನ ಮೇಲೆ ಇಟ್ಟು ಬೆನ್ನಿಗೆ ಶೂಲದಿಂದ ತಿವಿಯುತ್ತಿರುವಂತಿದೆ. ಈ ಕೋಣನ ರೂಪಿನ ಮಹಿಷನು ಪೂರ್ಣ ಮಾನವ ರೂಪದಲ್ಲಿರು ವಂತೆ, ಕೆಲವೊಮ್ಮೆ ಪೂರ್ಣ ಮಾನವ ರೂಪದಲ್ಲಿ, ಕೋಣನ ಕತ್ತರಿಸಿದ ಕತ್ತಿನಿಂದ ಹೊರಬರುತ್ತಿರುವಂತೆ ಎಡಪಕ್ಕಕ್ಕೆ ಬಿಡಿಸಿರುವುದುಂಟು. ಎಂಟು ಕೈಗಳನ್ನು ಹೊಂದಿದ್ದು ಇವುಗಳಲ್ಲಿ ಶಂಖ, ಚಕ್ರ, ಶೂಲ ಪ್ರಧಾನವಾಗಿರುತ್ತವೆ. ಉಳಿದ ಆಯುಧಗಳು ಸಾಂಕೇತಿಕ ವಾಗಿರುತ್ತವೆ. ಮಹಿಷಮರ್ದಿನಿಯ ವಾಹನವಾದ ಸಿಂಹ ಶಿಲ್ಪದ ಬಲಭಾಗದಲ್ಲಿದ್ದು ಮಹಿಷನ ಹಿಂಬದಿಗೆ ಬಾಯಿ ಹಾಕಿರುವಂತೆ ಬಿಡಿಸಲಾಗಿರುತ್ತದೆ. ಚನ್ನಪಟ್ಟಣ ತಾಲ್ಲೂಕಿನ ಕೂಡಲೂರು ಹಾಗೂ ತಲಕಾಡು ವೈದ್ಯನಾಥೇಶ್ವರ ದೇವಾಲಯದ ಹಿಂಬದಿ ಶಿಲ್ಪಗಳು ಪಲ್ಲವ ಶಿಲ್ಪಗಳ ಪ್ರಭಾವವನ್ನು ತೋರಿಸುತ್ತಿದ್ದು ಸಿಂಹವಾಹಿನಿಯರಾಗಿ ಬಲಗಡೆಗೆ ಸಾಗುತ್ತಿರುವಂತೆ ಬಿಡಿಸಲಾಗಿದೆ. ಮಹಿಷನನ್ನು ಮನುಷ್ಯರೂಪದಲ್ಲಿ ಬಿಡಿಸಿ ಓಡಿಹೋಗುತ್ತಿರು ವಂತೆ ಬಿಡಿಸಲಾಗಿದೆ. ಮಹಿಷಮರ್ದಿನಿ ಶಿಲ್ಪಗಳು ಸಾಮಾನ್ಯವಾಗಿ ಶಿವಪಂಚಾಯತನದ ವಿಗ್ರಹಗಳಾಗಿ ದೇವಾಲಯಗಳಲ್ಲಿ ಬಂದಿವೆ.

ಸಪ್ತಮಾತೃಕಾ ಶಿಲ್ಪಗಳು ಗಂಗವಾಡಿಯ ಎಲ್ಲ ದೇವಾಲಯಗಳಲ್ಲಿ ಪಂಚಾಯನತನದ ಭಾಗವಾಗಿ ಇಲ್ಲವೆ ಸ್ವತಂತ್ರವಾದ ಗ್ರಾಮದೇವತಾ ದೇವಾಲಯಗಳಲ್ಲಿ ಪೂಜೆಗೊಳ್ಳುತ್ತಿರುವುದು ವಿಶೇಷ. ಇವುಗಳನ್ನು ಮೂರ್ತ, ಅಮೂರ್ತ ರೂಪಗಳೆರಡರಿಂದಲೂ ಪೂಜಿಸುತ್ತಾರೆ. ಮೂರ್ತರೂಪಗಳಲ್ಲಿ ಇವು ಒಟ್ಟಾಗಿ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಾ ಎಂಬ ರೂಪಗಳಲ್ಲಿ ಕಂಡುಬರುತ್ತವೆ. ಈ ಶಿಲ್ಪಗಳ ಜೊತೆಗೆ ಆರಂಭದಲ್ಲಿ ವೀಣಾಧರ ಶಿವ ಅಂತ್ಯದಲ್ಲಿ ಗಣಪತಿ ಶಿಲ್ಪವನ್ನು ಬಿಡಿಸಲಾಗಿರುತ್ತದೆ. ಒಂಬತ್ತು ಶಿಲ್ಪಗಳನ್ನು ಒಂದೇ ಕಲ್ಲಿನಲ್ಲಿ ಪಟ್ಟಿಕೆಯಂತೆ ಬಿಡಿಸಿರುವುದುಂಟು. ಒಂದೊಂದನ್ನೇ ಬಿಡಿಬಿಡಿಯಾಗಿ ಬಿಡಿಸಿರುವುದೂ ಉಂಟು. ಎಲ್ಲ ವಿಗ್ರಹಗಳೂ ಒಂದೇ ಎತ್ತರದಲ್ಲಿದ್ದರೂ

ಚಾಮುಂಡಿ ವಿಗ್ರಹವನ್ನು ಮಾತ್ರ ಸ್ವಲ್ಪ ಎತ್ತರವಾಗಿ ಬಿಡಿಸಲಾಗಿರುತ್ತದೆ. ಅನೇಕ ಗ್ರಾಮಗಳಲ್ಲಿ ಈ ಚಾಮುಂಡಿಯೇ ಪ್ರಧಾನ ದೈವವಾಗಿ, ಊರಿನ ದೇವತೆಯ ಹೆಸರಿನಲ್ಲಿ ಇಂದಿಗೂ ಪೂಜೆಗೊಳ್ಳುತ್ತಿದ್ದಾಳೆ. ಕೆಲವು ಗ್ರಾಮಗಳಲ್ಲಿ ವಿಗ್ರಹಗಳ ಸಾಲಿನ ಮಧ್ಯೆ ವೈಷ್ಣವಿ ಬರುವುದರಿಂದ ಆ ದೇವತೆಯನ್ನೇ ಗ್ರಾಮದೇವತೆಯಾಗಿ ಪೂಜಿಸುತ್ತಿರುವುದುಂಟು. ಈ ಸಪ್ತಮಾತೃಕೆಯರು ಯಾರ ಶಕ್ತಿಯನ್ನು ಪಡೆದು ರೂಪಗೊಂಡರೋ ಆ ಮೂಲ ಶಕ್ತಿಯ ಆಯುಧ ಮತ್ತು ವಾಹನಗಳನ್ನೇ ಹೊಂದಿರುತ್ತಾರೆ. ಈ ದೇವತೆಗಳಿಗೆ ನಾಲ್ಕು ಕೈಗಳಿದ್ದರೆ ಚಾಮುಂಡಿ ಶಿಲ್ಪಕ್ಕೆ ಮಾತ್ರ ಎಂಟು ಕೈಗಳನ್ನು ನೀಡಿ ವಿಕಾರ ರೂಪವನ್ನು ಬಿಡಿಸಿ ಶವ ಅಥವಾ ನರಿ ವಾಹನೆಯಾಗಿರುತ್ತಾಳೆ. ಕೋಲಾರ, ಬೆಂಗಳೂರನಗರ ಮತ್ತು ಗ್ರಾಮಾಂತರ ಜಿಲ್ಲೆ, ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ಈ ಸಪ್ತಮಾತೃಕೆಯರ ಸ್ವತಂತ್ರ ದೇವಾಲಯಗಳನ್ನು ಕಾಣಬಹುದು. ಚಾಮರಾಜನಗರ ತಾಲ್ಲೂಕಿನ ನರಸಮಂಗಲ ಗ್ರಾಮದ ಸಪ್ತಮಾತೃಕಾ ಶಿಲ್ಪಗಳು ಬಹು ಸುಂದರವಾಗಿವೆ.

ಈ ದೇವಾಲಯಗಳು ಸ್ವತಂತ್ರವಾಗಿರುವೆಡೆಯಲ್ಲಿ ಸಾಮಾನ್ಯವಾಗಿ ಭೈರವನ ವಿಗ್ರಹಗಳು ಕಂಡುಬರುತ್ತವೆ. ಇವನ್ನು ಬೇರೆ ಬೇರೆ ಹೆಸರುಗಳಿಂದ ಸ್ಥಳೀಯವಾಗಿ ಕರೆಯುವುದುಂಟು. ಅಮೂರ್ತ ರೂಪದ ಸಪ್ತಮಾತೃಕಾ ಶಿಲ್ಪಗಳು ಪೂಜೆಯ ಸಂದರ್ಭದಲ್ಲಿ ಮಾತ್ರ ಬಳಸುವಂತಹವು. ಇವನ್ನು ಕೆರೆಗಳ ಬಳಿ ಪೂಜಿಸುವಾಗ ಅಲ್ಲಿ ದೊರೆಯುವ ತ್ರಿಕೋಣಾಕಾರದ ಕಲ್ಲುಗಳನ್ನು ಆಯ್ದು ಮಣ್ಣಿನಲ್ಲಿ ವೇದಿಕೆ ರಚಿಸಿ ಅದರ ಮೇಲೆ ಪ್ರತಿಷ್ಠಾಪಿಸಿ ಪೂಜಿಸುವುದು ರೂಢಿ. ಕಲಿಹಿತ್ತಗಿರಿಯ ಗುಹಾಲಯದ ಮುಂದೆ ಹುಟ್ಟುಗಲ್ಲಿನಲ್ಲಿ ಇಂತಹ ಏಳುಕಲ್ಲುಗಳನ್ನು ಸಾಲಾಗಿ ಕೆತ್ತಿ ಬಿಡಿಸಲಾಗಿದೆ.

ಗಣಪತಿ ಅಥವಾ ವಿನಾಯಕ ಶಿಲ್ಪ ಬಹುತೇಕ ಗಂಗರ ಎಲ್ಲ ದೇವಾಲಯಗಳಲ್ಲಿ ಕಾಣಬರುವ ಶಿಲ್ಪ. ಪಿರಿಯಾಪಟ್ಟಣ ತಾಲ್ಲೂಕಿನ ಕಂಪಲಾಪುರದ ಶಿಲ್ಪ ರೂಪದಲ್ಲಿ ಸ್ವಲ್ಪಮಟ್ಟಿಗೆ ಗೋಕರ್ಣದ ಶಿಲ್ಪಕ್ಕೆ ಹತ್ತಿರವಾಗಿದೆ. ಉಳಿದಂತೆ ಎಲ್ಲ ಗಣಪತಿ ಶಿಲ್ಪಗಳೂ ಒಂದೇ ತೆರನಾಗಿವೆ. ಕೆಲವೆಡೆ ಎಡಮುರಿ ಇದ್ದರೆ, ಕೆಲವೆಡೆ ಬಲಮುರಿ ಇದೆ. ಅಪರೂಪಕ್ಕೆ ಕಾಣಬರುವ ಶಿಲ್ಪಗಳಲ್ಲಿ ಕಾರ್ತಿಕೇಯ, ಉಮಾಮಹೇಶ್ವರ ಶಿಲ್ಪಗಳು ಪ್ರಮುಖವಾದವು. ಇವುಗಳಲ್ಲಿ ಸ್ಕಂದ ಅಥವಾ ಕಾರ್ತಿಕೇಯನ ವಿಗ್ರಹ ಗಂಗರ ಅನೇಕ ದೇವಾಲಯಗಳಲ್ಲಿ ಕಂಡುಬಂದಿದೆ. ಪ್ರಾಚೀನ ಶಿಲ್ಪಗಳಲ್ಲಿ ಎರಡು ಕೈಗಳಿದ್ದು ಭಲ್ಲೆ ಮತ್ತು ಫಲವನ್ನು ಹಿಡಿದಿರುವಂತೆ ಬಿಡಿಸಿದೆ. ಅನಂತರದ ಕಾಲದವುಗಳಲ್ಲಿ ಟಂಕ, ಅಕ್ಷಮಾಲೆ, ಕಟಿಹಸ್ತ ಮತ್ತು ಅಭಯ ಹಸ್ತಗಳನ್ನು ಬಿಡಿಸಿರುತ್ತಾರೆ. ತಲಕಾಡು, ಕಂಪಲಾಪುರ, ಕಲ್ಲತ್ತಗಿರಿ ದೇವನಹಳ್ಳಿ ಮುಂತಾದ ಕಡೆ ಈ ಶಿಲ್ಪಗಳು ಕಂಡುಬರುತ್ತವೆ.

ಉಮಾಮಹೇಶ್ವರಿ ಶಿಲ್ಪಗಳು ಅಪರೂಪಕ್ಕೆ ಗಂಗರ ದೇವಾಲಯಗಳಲ್ಲಿ ಕಂಡುಬರುತ್ತವೆ. ಗುಂಡ್ಲುಪೇಟೆ ತಾಲ್ಲೂಕಿನ ಕಂದಗಾಲ, ತಿಪಟೂರು ತಾಲ್ಲೂಕಿನ ಅರಳುಗುಪ್ಪೆ ಮತ್ತು ಮೈಸೂರು ತಾಲ್ಲೂಕಿನ ವರುಣದಲ್ಲಿ ಇವು ಕಂಡುಬಂದಿವೆ. ಕಂದಗಾಲದ ಶಿಲ್ಪ ಚಿಕ್ಕದಾಗಿದ್ದರೂ ಉಳಿದ ಶಿಲ್ಪಗಳಿಗಿಂತ ಪ್ರಾಚೀನವಾದುದು. ಉಳಿದವು 10ನೆಯ ಶತಮಾನಕ್ಕೆ ಸೇರಿದವು. ಅಲಂಕಾರದಲ್ಲಿ ಅರಳುಗುಪ್ಪೆಯ ಶಿಲ್ಪ ಬಹು ಸುಂದರವಾದದ್ದು. ಕಂದಗಾಲ ಶಿಲ್ಪದಲ್ಲಿ ಪಾರ್ವತಿಯು ತನ್ನ ಬಲಗೈಯನ್ನು ಶಿವನ ತೊಡೆಯ ಮೇಲಿಟ್ಟು ಊರಿನ ಪಕ್ಕಕ್ಕೆ ತಿರುಗಿಕೊಂಡು ಕುಳಿತಿರುವಂತೆ ಬಿಡಿಸಿದೆ. ಈ ಕಾಲದ ನಂದಿಶಿಲ್ಪಗಳನ್ನು ಹಿಂದಿನ ಕಾಲುಗಳನ್ನು ಮಡಚಿ, ಮುಂದಿನ ಕಾಲುಗಳಲ್ಲಿ ಬಲಗಾಲನ್ನು ಮುಂದಕ್ಕೆ ಚಾಚಿ ತಲೆತಗ್ಗಿಸಿ ವಿನೀತ ಭಾವದಿಂದ ಕುಳಿತಿರುವಂತೆ ಬಿಡಿಸಲಾಗಿದೆ.

ಈ ವೈದಿಕ ಶಿಲ್ಪಗಳಲ್ಲಿ ಈಗ ದುರ್ಗೆ ಮತ್ತು ಮಹಿಷಮರ್ದಿನಿ ಶಿಲ್ಪಗಳಿಗೆ ನಿರ್ದಿಷ್ಟ ಪೂಜೆಗಳಿಲ್ಲ. ಸಪ್ತಮಾತೃಕಾ ವಿಗ್ರಹಗಳು ಊರದೇವತೆಯ ಪ್ರತೀಕವಾಗಿರುವುದರಿಂದ ಇವಕ್ಕೆ ನಿಗದಿತ ಪೂಜೆ ಇದೆ. ಬಹಳಷ್ಟು ಕಡೆ ಇವನ್ನು ಪೂಜಿಸುವವರು ಶಿವದ್ವಿಜರು (ತಮ್ಮಡಿ). ಹೀಗಾಗಿ ಅಲ್ಲೆಲ್ಲ ಇವಕ್ಕೆ ಸಾತ್ತ್ವಿಕ ಆಹಾರ ನೈವೇದ್ಯವಿದೆ. ಇವರ ಕೈ ತಪ್ಪಿರುವ ಕಡೆಗಳಲ್ಲಿ ತಾಮಸಪೂಜೆ ನಡೆಯುತ್ತದೆ.

**ಜೈನಶಿಲ್ಪ:** ಗಂಗರ ಕಾಲದ ಜೈನಾವಶೇಷಗಳು ಹಾಳಾಗಿದ್ದು ಕೆಲವೆಡೆ ಉಳಿದುಕೊಂಡಿವೆ. ಜಿನಮೂರ್ತಿಗಳಲ್ಲಿ ಪಾರ್ಶ್ವನಾಥ, ಸುಪಾರ್ಶ್ವನಾಥ ಶಿಲ್ಪಗಳನ್ನು ಬಿಟ್ಟರೆ ಉಳಿದಂತೆ ಇರುವ ಜಿನಶಿಲ್ಪಗಳನ್ನು ಗುರುತಿಸುವುದು ಕಷ್ಟ. ಅಲ್ಪಸ್ವಲ್ಪ ವ್ಯತ್ಯಾಸವೆಂದರೆ ನಿಂತ ಹಾಗೂ ಆಸೀನ ಶಿಲ್ಪಗಳು ಎರಡೂ ತರಹದ ಶಿಲ್ಪಗಳನ್ನು ಕಾಣಬಹುದು. ಆಸೀನ ಶಿಲ್ಪಗಳೇ ಹೆಚ್ಚು. ಜಿನನು ಪದ್ಮಾಸನದಲ್ಲಿ ಧ್ಯಾನಸ್ಥನಾಗಿ ಕುಳಿತಿರುವಂತೆ ಕೆತ್ತಲಾಗಿರುತ್ತದೆ. ತಲಕಾಡು ಮುಂತಾದ ಕೆಲವು ಕಡೆ ನಿಂತಿರುವ ಪಾರ್ಶ್ವನಾಥ ಶಿಲ್ಪಗಳನ್ನು ಕಾಣುತ್ತೇವೆ. ಗೊಮ್ಮಟಶಿಲ್ಪಗಳನ್ನು ನಿಂತಂತೆ ಕೆತ್ತಲಾಗಿದೆ. ಅಲಂಕಾರವಿಲ್ಲದ ನಗ್ನಶಿಲ್ಪಗಳ ಕಾಲ ನಿಗದಿ ಮಾಡುವುದು ಕಷ್ಟ. ಆದರೂ ಅಲಂಕಾರವಿರುವ ಚಾಮರಧಾರಿ ಶಿಲ್ಪಗಳ ಸಹಾಯದಿಂದ ಕಾಲನಿರ್ಣಯಿಸಬಹುದು.

ಜಿನಬಿಂಬಗಳ ಬಳಿ ಇರುವ ಯಕ್ಷ ಯಕ್ಷಿ ಹಾಗೂ ಚಾಮರಧಾರಿ ಶಿಲ್ಪಗಳಿಗೆ ಅಲಂಕರಣವಿದೆ. ಶ್ರವಣಬೆಳಗೊಳ, ಕಂಬದಹಳ್ಳಿ, ತಲಕಾಡು ಮುಂತಾದ ಕಡೆ ಇಂತಹ ಶಿಲ್ಪಗಳು ದೊರೆತಿವೆ. ಆರಂಭದಲ್ಲಿ ಪಾರ್ಶ್ವನಾಥನ ತಲೆಯ ಮೇಲೆ ಛತ್ರಿ ಹಿಡಿದ ಪದ್ಮಾವತಿ ಶಿಲ್ಪ ಎರಡು ಕೈ ಮಾತ್ರ ಹೊಂದಿತ್ತು. ಇದೇ ಬೆಳವಣಿಗೆ ಯಕ್ಷ ಶಿಲ್ಪಗಳಲ್ಲಿಯೂ ಕಾಣುತ್ತೇವೆ. ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿಯಲ್ಲಿರುವ ಯಕ್ಷ ಶಿಲ್ಪ ಪ್ರಾಚೀನವಾದುದಾಗಿದ್ದು, ಅದರಲ್ಲಿ ಎರಡೇ ಕೈಗಳಿದ್ದು ಕುಬ್ಜ ರೂಪದಿಂದ ಆನೆಯ ತಲೆಯ ಮೇಲೆ ನಿಂತಂತೆ ಬಿಡಿಸಲಾಗಿದೆ ಮತ್ತು ಅತಿ ಹೆಚ್ಚಿನ ಅಲಂಕಾರವನ್ನು ಹೊಂದಿದೆ. ಗಂಗರ ಕಾಲದ ಜೈನಶಿಲ್ಪಗಳು ಹೆಗ್ಗಡದೇವನಕೋಟೆ, ಕೊಳ್ಳೇಗಾಲ, ಸಾಲಿಗ್ರಾಮ, ಮಲೆಯೂರು, ಶ್ರವಣಬೆಳಗೊಳ, ಹಳೇಬೆಳಗೊಳ, ದೊಡ್ಡ ಬೇಗೂರು, ಮಣ್ಣೆ, ಕಂಬದಹಳ್ಳಿ, ಚಿಕ್ಕ ಹನಸೋಗೆ, ಆಲಗೋಡು, ಅರಾಬಿಕೊತ್ತನೂರು, ವರುಣ, ಮೂಗೂರು ಮುಂತಾದ ಕಡೆ ದೊರೆತಿವೆ.

ಜಿನಶಿಲ್ಪಗಳಲ್ಲಿ ಮೇರು ಕೃತಿ ಎಂದರೆ ಶ್ರವಣಬೆಳಗೊಳದ ಗೊಮ್ಮಟಶಿಲ್ಪ. ಈ ಶಿಲ್ಪವನ್ನು ಅನುಸರಿಸಿ ಕರ್ನಾಟಕದಲ್ಲಿ ಅನೇಕ ಗೊಮ್ಮಟಶಿಲ್ಪಗಳು ರಚನೆಗೊಂಡಿವೆ. ಚಾವುಂಡರಾಯ ಮಾಡಿಸಿದ 18ಮೀ ಎತ್ತರವಿರುವ ಈ ಶಿಲ್ಪ ಉತ್ತರಾಭಿಮುಖವಾಗಿ ನಿಂತಿದೆ. ಕಾಯೋತ್ಸರ್ಗದಲ್ಲಿ ನಿಂತು ಧ್ಯಾನಿಸುತ್ತಿರುವ ಬಾಹುಬಲಿಗೆ ಪಕ್ಕದ ಹುತ್ತಗಳಿಂದ ಬೆಳೆದಿರುವ ಬಳ್ಳಿಗಳು ಹಬ್ಬಿ ತೋಳಿನವರೆಗೆ ಬಂದಿವೆ. ಹುತ್ತದಿಂದ ಕುಕ್ಕುಟ ಸರ್ಪಗಳು ಹೊರಬಂದಿವೆ. ವಿಶಾಲವಾದ ಎದೆ, ಬಾಲಮುಗ್ಧ ಮುಗುಳುನಗೆ, ಸಣ್ಣನಡು ಹೊಂದಿರುವ ಪೂರ್ಣಶಿಲ್ಪವಿದು. ಹುಬ್ಬಿನ ರೇಖೆ, ಕಣ್ಣು, ಕಣ್ಣಿನ ಪಾಪೆ ಇವುಗಳನ್ನು ಆಳವಾಗಿ ಕೆತ್ತಲು ಹೋಗಿಲ್ಲ. ಮೂಗು, ಬಾಯಿ, ತುಟಿಗಳನ್ನು ಎದ್ದು ಕಾಣುವಂತೆ ಕೆತ್ತಲಾಗಿದೆ. ಶಿಲ್ಪದಲ್ಲಿ ಪ್ರಶಾಂತ ಭಾವವನ್ನು ತರುವಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ. ಈ ಮೂರ್ತಿಯ ಸೌಂದರ್ಯವನ್ನು ಬೊಪ್ಪಣ್ಣ ಎಂಬ ಕವಿ ತನ್ನ ಗೊಮ್ಮಟಸ್ತುತಿಯಲ್ಲಿ ಬಣ್ಣಿಸಿದ್ದಾನೆ.

ಗಂಗರ ಕಾಲದ ಸ್ಮಾರಕ ಶಿಲೆಗಳ ಬಗ್ಗೆ ಹೇಳುವಾಗ ಮೂರ್ತಿಶಿಲ್ಪಗಳಿಗೆ ಹೇಳಿದ ಮಾತನ್ನೇ ಹೇಳಬೇಕಾಗುತ್ತದೆ. ಅದೇಂದರೆ ಅವುಗಳ ಕ್ರಿಯಾಶೀಲತೆ. ಆರ್.ಶೇಷಶಾಸ್ತ್ರಿಯವರು ಇವುಗಳನ್ನು ಗುರುತಿಸುವ ಬಗ್ಗೆ ಹೇಳುತ್ತಾ ಉತ್ತಮ ವಿವರಣಾತ್ಮಕ ಶಿಲ್ಪವನ್ನು ಹೊಂದಿದೆ ಎನ್ನುತ್ತಾರೆ. ಕೇವಲ ವಿವರಣೆಯೊಂದೇ ಅಲ್ಲದೆ ಅವು ಕ್ರಿಯಾತ್ಮಕವೂ ಆಗಿವೆ ಎಂದು ಹೇಳಬೇಕಾಗುತ್ತದೆ. ವೀರಗಲ್ಲುಗಳ ಶಿಲ್ಪ ಸರಳವಾದ ನಿರೂಪಣೆಯಾಗಿದೆ. ಅಗತ್ಯವಾದ ಅಂಶಗಳನ್ನು ಸಾಂಕೇತಿಕವಾಗಿ ನಿರೂಪಿಸುವ ಕೌಶಲ್ಯವನ್ನು ಶಿಲ್ಪಿ ತೋರಿಸಿದ್ದಾನೆ. ಸ್ಮಾರಕ ಶಿಲೆಗಳ ವೈಶಿಷ್ಟ್ಯವೆಂದರೆ ವೈವಿಧ್ಯತೆ.

**ಶಾಸನಶಿಲ್ಪ:** ದೇವಾಲಯದ ಮೂರ್ತಿಶಿಲ್ಪಗಳಿಗೂ ಸ್ಮಾರಕ ಶಾಸನ ಶಿಲ್ಪಗಳ ಕೆತ್ತನೆಗೂ ಬಹಳ ಅಂತರವಿದೆ. ಮೂರ್ತಿಶಿಲ್ಪಕ್ಕೆ ನಿರ್ದಿಷ್ಟವಾದ ಶ್ಲೋಕ ಮತ್ತು ಕಥಾ ಹಿನ್ನೆಲೆ ಇರುತ್ತದೆ. ಅದರಂತೆ ಶಿಲ್ಪಿ ಅದನ್ನು ಕೆತ್ತುತ್ತಾನೆ. ಆದರೆ ವೀರಗಲ್ಲುಗಳ ಸೃಷ್ಟಿಗೆ ಇಂತಹ ಧ್ಯಾನ ಶ್ಲೋಕವಾಗಲೀ ಪಾರಂಪರಿಕ ಕಥಾ ಹಿನ್ನೆಲೆಯಾಗಲೀ ಇರುವುದಿಲ್ಲ. ವೀರನ ಸಾಮಯಿಕ ಸಾಹಸವನ್ನು ಮಾತ್ರ ಶಿಲ್ಪಿ ಕೇಳಿರುತ್ತಾನೆ. ಉಳಿದದ್ದು ಶಿಲ್ಪಿಯ ಅಭಿವ್ಯಕ್ತಿಗೆ ಬಿಟ್ಟಿದ್ದು. ಅಂದರೆ ಇಲ್ಲಿ ವೀರಗಲ್ಲುಗಳನ್ನು ಕೆತ್ತುವ ಶಿಲ್ಪಿಗೆ ಮೂರ್ತಿಶಿಲ್ಪವನ್ನು ರೂಪಿಸುವ ಶಿಲ್ಪಿಗಿಂತ ಹೆಚ್ಚಿನ ಸ್ವಾತಂತ್ರ್ಯವಿದೆ. ಅವನು ಹಲವಾರು ಕಟ್ಟುಪಾಡುಗಳಿಂದ ಮುಕ್ತನಾಗಿರುವುದರಿಂದ ಶಾಸನ ಶಿಲ್ಪಗಳಲ್ಲಿ ಎದ್ದು ಕಾಣುವಂತಹ ಮತ್ತು ಅಪರೂಪವಾದ ಸ್ಮಾರಕ ಶಿಲ್ಪಗಳು ಮೂಡಿಬರಲು ಕಾರಣವಾಗಿದೆ. ಹಿರೇಗುಂಡಗಲ್ಲು, ಶ್ರವಣಗುಡಿ, ನಗರಗೆರೆ, ಹುನಗುಂದ ಮುಂತಾದ ಕಡೆ ಗುಂಪು ಗುಂಪಾಗಿ ವೀರಗಲ್ಲುಗಳು ದೊರೆತರೆ ಉಳಿದೆಡೆ ಬಿಡಿಯಾಗಿ ಸ್ಮಾರಕ ಶಿಲೆಗಳು, ಶಾಸನಗಳು ದೊರೆತಿವೆ.

ಗಂಗರ ದಾನ ಶಾಸನಗಳಲ್ಲಿ ಹಸು–ಕರು ಶಿಲ್ಪವಿರುತ್ತದೆ. ಕೆಲವು ಶಾಸನಗಳಲ್ಲಿ ಗಂಗರ ಲಾಂಛನವಾದ ಆನೆಯನ್ನೇ ಬಿಡಿಸಿದೆ. ವೀರಗಲ್ಲು ಶಿಲ್ಪಗಳು ಬಹುತೇಕ ಏಕವ್ಯಕ್ತಿ ಪ್ರಧಾನವಾದುವು. ವೀರನೊಬ್ಬ ಖಡ್ಗವನ್ನೋ ಬಿಲ್ಲನ್ನೋ ಹಿಡಿದಿರುವಂತೆ ಬಿಡಿಸಿ, ಆತನ ಕಣಕಾಲು, ನಡು, ಕತ್ತು ಮತ್ತು ತಲೆಯ ಬಳಿ ಬಾಣಗಳು ನಾಟಿರುವಂತೆ ಬಿಡಿಸಿರುತ್ತಾರೆ. ಶತ್ರುವಿನ ಶಿಲ್ಪವನ್ನು ಬಿಡಿಸಿರುವುದಿಲ್ಲ. ವೀರ ಆರೂಢ ಭಂಗಿಯಲ್ಲಿ ಮುನ್ನುಗ್ಗುತ್ತಿರುವಂತೆ ಬಿಡಿಸಿರುತ್ತಾರೆ.

ಕೋಲಾರಮ್ಮನ ದೇವಾಲಯದ ವೀರಗಲ್ಲು ಮತ್ತು ಬೇಗೂರಿನ ವೀರಗಲ್ಲುಗಳಲ್ಲಿ ಯುದ್ಧದ ವಿವರಗಳನ್ನೆಲ್ಲಾ ಒಂದೇ ಫಲಕದಲ್ಲಿ ತರುವ ಪ್ರಯತ್ನವನ್ನು ಶಿಲ್ಪಿ ಯಶಸ್ವಿಯಾಗಿ ಮಾಡಿದ್ದಾನೆ. ಯುದ್ಧಕ್ಕೆ ಮೊದಲು ಯುದ್ಧಕ್ಷೇತ್ರ, ಯುದ್ಧಾನಂತರ ಘಟನೆಗಳನ್ನು ಒಂದೇ ಫಲಕದಲ್ಲಿ ಕಾಣಬಹುದಾಗಿದೆ. ತುಂಡಾದ ಕೈಕಾಲುಗಳು ಇದರ ಜೊತೆಗೆ ಸತ್ತ ವ್ಯಕ್ತಿಗಳ ಮಾಂಸದಾಸೆಗೆ ಬಂದಿರುವ ನಾಯಿ, ನರಿ, ಪಕ್ಷಿಗಳು ಹೆಣಗಳನ್ನು ತಿನ್ನಲು ಹಾಗೂ ರಕ್ತ ಕುಡಿಯಲು ಶಾಕಿನಿ ಡಾಕಿನಿಯರು, ಗಾಯಾಳುಗಳನ್ನು ಸಾಗಿಸುತ್ತಿರುವ ವ್ಯಕ್ತಿ ಚಿತ್ರಗಳು ಇವುಗಳಲ್ಲಿ ಮೂಡಿಬಂದಿದ್ದು ಅಪೂರ್ವವಾದ ಶಾಸನಶಿಲ್ಪವಾಗಿದೆ.

ಗಂಗರ ಕಾಲದ ಮೂರು ಹಂತವಿರುವ ವೀರಗಲ್ಲುಗಳಲ್ಲಿ ಮೊದಲ ಹಂತದಲ್ಲಿ ಯುದ್ಧದ ದೃಶ್ಯ, ಎರಡನೆಯ ಹಂತದಲ್ಲಿ ವೀರನನ್ನು ಸ್ವರ್ಗಕ್ಕೆ ಒಯ್ಯುತ್ತಿರುವುದು, ಮೂರನೆಯ ಹಂತದಲ್ಲಿ ವೀರನು ವೀರಸ್ವರ್ಗದಲ್ಲಿ ಕುಳಿತಿರುವಂತೆ ಬಿಡಿಸಲಾಗಿರುತ್ತದೆ. ಆತ್ಮಾಹುತಿ ಕಲ್ಲುಗಳಲ್ಲಿ ದೊಡ್ಡಹುಂಡಿ, ಸಾಕಮ್ಮನ ಜೋಡಿಹೊಸಹಳ್ಳಿ ವೀರಗಲ್ಲುಗಳು ಮುಖ್ಯವಾದವು. ಇವು ಒಂದೇ ಹಂತದಲ್ಲಿವೆ. ದೊಡ್ಡಹುಂಡಿ ಶಾಸನ ರಾಜನ ಮರಣದ ಸಮಯದಲ್ಲಿ ಅಗರಯ್ಯ ತನ್ನನ್ನು ಇರಿದುಕೊಳ್ಳುತ್ತಿರುವಂತೆ ಕೆತ್ತಿದ್ದು, ಅಗರಯ್ಯನ ಮರಣದ ಅನಂತರ ರಾಜ ಮತ್ತು ಅಗರಯ್ಯ ಇಬ್ಬರನ್ನೂ ಸುಟ್ಟಂತೆ ಶಿಲೆಯ ಸುತ್ತಲೂ ಬಿಡಿಸಿರುವ ಜ್ವಾಲೆಗಳಿಂದ ತಿಳಿದುಬರುತ್ತದೆ. ಸಾಕಮ್ಮನ ಜೋಡಿಹೊಸಹಳ್ಳಿ ಶಿಲ್ಪದಲ್ಲಿ ಸಿಡಿತಲೆ ಕೊಡುವ ವ್ಯಕ್ತಿ ಭಕ್ತಿಭಾವದಲ್ಲಿ ಧ್ಯಾನಮಗ್ನನಾಗಿ ಕುಳಿತಿದ್ದು, ಬಿದಿರಿನ ಗಳವನ್ನು ನೆಲದಲ್ಲಿ ಹೂತು, ಅದನ್ನು ಬಾಗಿಸಿ ಜಡೆಯನ್ನು ಅದಕ್ಕೆ ಕಟ್ಟಿರುತ್ತಾರೆ. ಇನ್ನೊಬ್ಬ ವ್ಯಕ್ತಿ ಆತನ ತಲೆಯನ್ನು ಕತ್ತರಿಸುತ್ತಿರುವಂತೆ ಬಿಡಿಸಿದೆ. ಈ ಶಿಲ್ಪದಲ್ಲಿ ಎರಡು ಹಂತಗಳನ್ನು ಒಂದೇ ಹಂತದಲ್ಲಿ ಬಿಡಿಸಿರುವ ಜಾಣ್ಮೆ

ಇದೆ. ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿ ಕುಳಿತಿರುವ ವ್ಯಕ್ತಿಯ ಪಕ್ಕದಲ್ಲಿ ಇಬ್ಬರು ಚಾಮರಧಾರಿಯರನ್ನು ಬಿಡಿಸಿದ್ದು, ಆತ ಸ್ವರ್ಗ ಸೇರಿದನೆಂಬ ಕಲ್ಪನೆಯನ್ನೂ ನೀಡುತ್ತದೆ. ನೆನಪಿನ ಕಲ್ಲುಗಳಲ್ಲಿ ಆತಕೂರು, ಮೇಲಾಗಾಣಿ, ಯಲಹಂಕ, ಹೊಸಕೋಟೆ ತಾಲ್ಲೂಕಿನ ಕೋಡಿಹಳ್ಳಿ, ಮುಳಬಾಗಿಲ ತಾಲ್ಲೂಕಿನ ತಾವರೆಕೆರೆ, ಶ್ರವಣಗುಡಿ ಮುಂತಾದ ಸ್ಥಳಗಳಲ್ಲಿ ಪ್ರಾಣಿಗಳನ್ನು ಮಾತ್ರ ಚಿತ್ರಿಸಿ ಅವುಗಳ ಮೂಲಕ ಮಾನವ ತನಗೆ ಬೇರೆ ಬೇರೆ ಕಾರ್ಯಗಳಲ್ಲಿ ಸಹಾಯಕವಾಗಿದ್ದ ಮೆಚ್ಚಿನ ಪ್ರಾಣಿಗಳ ನೆನಪಿನಲ್ಲಿ ಕಲ್ಲು ಹಾಕಿಸಿದ್ದಾನೆ. ಇಂತಹವು ಬೇಟೆ ನಾಯಿಗಳ ನೆನಪಿನಲ್ಲಿ ಹಾಕಿಸಿರುವುದಾದರೂ ಇಲ್ಲಿ ವೀರ ಮಡಿದ ಚಿತ್ರವಿಲ್ಲ. ಈ ವೀರಗಲ್ಲು ಶಿಲ್ಪಗಳಲ್ಲಿ ಬಲಿಷ್ಠವಾದ ಹಂದಿ ಅಥವಾ ಹುಲಿಯೊಡನೆ ನಾಯಿ ಹೋರಾಡುತ್ತಿರುವಂತೆ ಕೆತ್ತಲಾಗಿದೆ. ನೇರ್ಲಿಗೆಯ ಶಿಲ್ಪದಲ್ಲಿ ಎರಡು ಆನೆಗಳು ಒಂದನ್ನೊಂದು ಸೊಂಡಿಲಿನಲ್ಲಿ ಬೆಸೆದುಕೊಂಡಿವೆ. ಮುಂದೆ ಇರುವ ಮಾವಟಿಗ ಎದುರು ಆನೆಯ ಮಾವಟಿಗನನ್ನು ಕೊಂದಿದ್ದಾನೆ. ವೀರನೊಬ್ಬ ವೈರಿ ಆನೆಯ ಮೇಲಿನ ಅಂಬಾರಿಗೆ ಧಾವಿಸಿ ವೈರಿಯನ್ನು ಕೊಲ್ಲುತ್ತಿರುವಂತೆ ಬಿಡಿಸಲಾಗಿದೆ. ಇಷ್ಟು ವಿವರಗಳೂ ಒಂದೇ ಹಂತದಲ್ಲಿ ಮೂಡಿರುತ್ತವೆ. ಇನ್ನೊಂದು ಬಗೆಯ ಸ್ಮಾರಕ ಶಿಲೆಯನ್ನು ಗಮನಿಸಬೇಕು. ಅವು ಸ್ತ್ರೀಯರ ಸ್ಮಾರಕ ಶಿಲೆಗಳು. ಕೋಲಾರ ಜಿಲ್ಲೆಯ ಸಾವಿನಿರ್ಮಾಡಿ ಮತ್ತು ಶ್ರವಣಬೆಳಗೊಳದ ಸಾವಿಯಬ್ಬೆ ಸ್ಮಾರಕಗಳು ಮುಖ್ಯವಾದವು. ಪುರುಷ ಹೋರಾಡಿ ಮಡಿದರೆ ಅಪ್ಸರೆಯರು ಅವನನ್ನು ಎತ್ತಿಕೊಂಡು ಹೋಗುತ್ತಾರೆ. ಆದರೆ ಸ್ತ್ರೀ ಸ್ವರ್ಗ ಸೇರಬೇಕಾದರೆ ಪುರುಷರು ಹೊತ್ತುಕೊಂಡು ಹೋಗುವಂತಿಲ್ಲ. ಇಂತಹ ಸನ್ನಿವೇಶದಲ್ಲಿ ಶಿಲ್ಪಿ ತನ್ನ ಸಮಕಾಲೀನ ಸಮಾಜದ ನಿಯಮಗಳಿಗೆ ಬೆಲೆ ನೀಡಿರುವುದನ್ನು ಕಾಣುತ್ತೇವೆ. ಸಾವಿನಿರ್ಮಡಿಯು ಹಸ್ತಪ್ರತಿಯೊಂದನ್ನು ಹಿಡಿದುಕೊಂಡಿರುವಂತೆ ಬಿಡಿಸಿದ್ದಾನೆ. ಉಳಿದ ಹಂತಗಳನ್ನು ಬಿಡಿಸುವ ಕಾರ್ಯಕ್ಕೆ ಕೈಹಾಕಲಿಲ್ಲ. ಸಾವಿಯಬ್ಬೆ ಸ್ಮಾರಕದಲ್ಲಿ ಜಿನ ಪದವಿ ಹೊಂದಿದಂತೆ ಬಿಡಿಸಿದ್ದಾನೆ. ಯಲ್ಲೂರು, ಹರಳಕುಂಟೆ, ತಾವರೇಕೆರೆ ಮುಂತಾದ ಕಡೆಯ ಆರಕ್ಕೂ ಹೆಚ್ಚಿನ ವೀರಗಲ್ಲುಗಳ ಶಿಲ್ಪ ಗಮನಾರ್ಹ. (ಡಿ.ಇ.ಕೆ.ಆರ್.)

**ಗಜಪತಿ ಮನೆತನ:** 15–16ನೆಯ ಶತಮಾನಗಳಲ್ಲಿ ಒರಿಸ್ಸದಲ್ಲಿ ಸ್ವತಂತ್ರವಾಗಿ ಆಳಿದ ರಾಜಮನೆತನಗಳಲ್ಲಿ ಒಂದು. ಈ ರಾಜಮನೆತನ ಅಸ್ತಿತ್ವಕ್ಕೆ ಬರುವ ಮೊದಲು ಪೂರ್ವದ ಗಂಗರು ಒರಿಸ್ಸದಲ್ಲಿ ಅಧಿಪತಿಗಳಾಗಿದ್ದರು. ಆ ವಂಶದ ಕೊನೆಯ ಅರಸನಾದ ನಾಲ್ಕನೆಯ ಭಾನುದೇವ, ರಾಜಮಹೇಂದ್ರದ ರೆಡ್ಡಿ ಮನೆತನಕ್ಕೆ ಸೇರಿದ ವೇಮಾರೆಡ್ಡಿ ಮತ್ತು ವೀರಭದ್ರಾರೆಡ್ಡಿಯವರ ವಿರುದ್ಧ ದಂಡೆತ್ತಿಹೋಗಿ ಅವರಿಂದ ಸೋಲಿಸಲ್ಪಟ್ಟ (ಸು.1430).ಆದರೆ ಆತನಿಗೆ ಸ್ವರಾಜ್ಯಕ್ಕೆ ಹಿಂದಿರುಗಿ ಬರಲು ಆಸ್ಪದವಿರಲಿಲ್ಲ. ಇದಕ್ಕೆ ಗಜಪತಿ ವಂಶದ ಕಪಿಲೇಶ್ವರನೇ ಕಾರಣ. ಈತ ಭಾನುದೇವನ ಮಂತ್ರಿಗಳಲೊಬ್ಬನಾಗಿದ್ದ. ಅರಸ ರಾಜ್ಯದ ಹೊರಗಡೆ ಕದನ ನಿರತನಾಗಿದ್ದಾಗ, ಈತ ಕಳಿಂಗದಲ್ಲಿ ತನ್ನ ಅನುಯಾಯಿಗಳ ಸಹಾಯದಿಂದ ದಂಗೆಯನ್ನೆಬ್ಬಿಸಿ, ಗಂಗರ ರಾಜ್ಯಕ್ಕೆ ತಾನೇ ಅಧಿಪತಿಯೆಂದು ಸಾರಿಕೊಂಡ. ಭಾನುದೇವನ ಗತಿ ಏನಾಯಿತು ಎಂಬುದು ತಿಳಿಯದು. ಮಾದಲಾಪಾಂಜಿ ಎಂಬ ಪ್ರಾಚೀನ ಕವಿತೆಯಲ್ಲಿ ಕಪಿಲೇಶ್ವರನನ್ನು ಕುರಿತು ಕೆಲವು ವಿವರಗಳಿವೆ. ಈತ ಅನಾಥ ಬಾಲಕನಾಗಿದ್ದನೆಂದೂ ಮಕ್ಕಳಿಲ್ಲದ ಭಾನುದೇವನಿಗೆ ವಿಮಲಾಲಯದ ಸಮೀಪದಲ್ಲಿ ದೊರೆತನೆಂದೂ ಈತನನ್ನು ಭಾನುದೇವ ಪೋಷಿಸಿದನೆಂದೂ ಭಾನುದೇವನ ಅನಂತರ ಸಹಜವಾಗಿಯೇ ಇವನು ರಾಜನಾದನೆಂದೂ ಹೇಳಿದ. ಆದರೆ ಇದನ್ನು ನಂಬಲು ಆಧಾರಗಳಿಲ್ಲ. ಕಪಿಲೇಶ್ವರ ಮೊಮ್ಮಗನಾದ ಪ್ರತಾಪರುದ್ರ ಬರೆದನೆನ್ನಲಾದ ಸರಸ್ವತೀವಿಲಾಸದಲ್ಲೂ ಈ ವಂಶದ ಅರಸರ ಶಾಸನಗಳಲ್ಲೂ ಹೇಳಿರುವ ವಿವರಗಳು ಇದಕ್ಕಿಂತ ಭಿನ್ನವಾದಂಥವು. ಅವುಗಳ ಪ್ರಕಾರ ಈ ಮನೆತನದ ಅರಸರು ಸೂರ್ಯವಂಶಕ್ಕೆ ಸೇರಿದವರು. ಕಪಿಲೇಶ್ವರ ತಂದೆ ಜಾಗೇಶ್ವರ. ತಾತ ಕಪಿಲೇಶ್ವರ. ಕಪಿಲೇಶ್ವರನಿಗೆ ಬಲರಾಮನೆಂಬ ಹಿರಿಯ ಮತ್ತು ಪರಶುರಾಮನೆಂಬ ಕಿರಿಯ ಸೋದರರಿದ್ದರು. ಪರಶುರಾಮನ ಮಗ ರಘುದೇವನರೇಂದ್ರ ಕುಮಾರ. ಈತನ 1456ರ ತಾಮ್ರ ಶಾಸನವೊಂದು ಇತ್ತೀಚೆಗೆ ದೊರಕಿದೆ. ಇವುಗಳ ಆಧಾರದಿಂದ ಈ ವಂಶಾವಳಿಯನ್ನು ಹೀಗೆ ರಚಿಸಲಾಗಿದೆ:




ಈ ಮನೆತನದ ಮೂಲಪುರುಷನಾದ ಕಪಿಲೇಶ್ವರ ಉತ್ಕಲದೇಶದ ಒಬ್ಬ ನಾಯಕನಾಗಿದ್ದ. ಅಂತೆಯೇ ತಂದೆಯಾದ ಜಾಗೇಶ್ವರ ಸಹ ಮಹಾಪರಾಕ್ರಮಶಾಲಿಯಾಗಿದ್ದ. ಇವರ ಅನುಯಾಯಿಗಳ ಬೆಂಬಲದಿಂದ ಭಾನುದೇವ ರಾಜಧಾನಿಯಲ್ಲಿಲ್ಲದ ಸಮಯವನ್ನು ಸಾಧಿಸಿ ಕಪಿಲೇಶ್ವರ ರಾಜ್ಯವನ್ನು ಕಸಿದುಕೊಂಡನೆಂದು ತೋರುತ್ತದೆ. ಅಧಿಕಾರಕ್ಕೆ ಬಂದ ಆರಂಭದಲ್ಲಿ ಭಾನುದೇವನ ಸಹಾಯಕ್ಕೆ ಬಂದ ಪೂರ್ವ ಚಾಳುಕ್ಯ ವಂಶದ ವಿಷ್ಣುವರ್ಧನ ಮುಂತಾದವರನ್ನು ಹಿಮ್ಮೆಟ್ಟಿಸಿ, ದಂಡೆತ್ತಿಬಂದ ಬಂಗಾಲದ ಸುಲ್ತಾನನನ್ನು ಹೊಡೆದೋಡಿಸಿ, ತನ್ನ ಅಧಿಕಾರವನ್ನು ಬಲಪಡಿಸಿಕೊಂಡ.

ಆರಂಭದಲ್ಲಿಯ ಈ ತೊಂದರೆಗಳನ್ನು ನೀಗಿಕೊಂಡ ಬಳಿಕ ಕಪಿಲೇಶ್ವರ ದಕ್ಷಿಣದಲ್ಲಿ ವಿಜಯಯಾತ್ರೆಗೆ ಹೊರಟ. 1444ರಲ್ಲಿ ವಿಶಾಖಪಟ್ಟಣದ ಸಮೀಪದ ಕೊರುಕೊಂಡ ದುರ್ಗವನ್ನು ವಶಪಡಿಸಿಕೊಂಡನಾದರೂ ರೆಡ್ಡಿಗಳು ಅವನನ್ನು ಧೈರ್ಯದಿಂದ ಎದುರಿಸಿ ಹಿಮ್ಮೆಟ್ಟಿಸಿದರು. ವಿಜಯನಗರದ ಇಮ್ಮಡಿ ದೇವರಾಯ ರಾಜಮಹೇಂದ್ರದ ರೆಡ್ಡಿಗಳಿಗೆ ಆಗ ಸಹಾಯ ನೀಡಿದ್ದ. ಇದೇ ಸಮಯದಲ್ಲಿ ಜೋನ್‌ಪುರದ ಟರ್ಕಿ ಸುಲ್ತಾನನಾದ ಮಹಮ್ಮದ್ ಷಹ ಕಳಿಂಗದ ಮೇಲೆ ದಂಡೆತ್ತಿದುದು ಸಹ ಕಪಿಲೇಶ್ವರ ಹಿಮ್ಮೆಟ್ಟಲು ಒಂದು ಕಾರಣವಾಗಿತ್ತು. ದೇವರಾಯನ ಮರಣದಿಂದ (1446) ರೆಡ್ಡಿಗಳ ಶಕ್ತಿ ಕುಗ್ಗಿತು. ಇದರ ಫಲವಾಗಿ ಕಳಿಂಗಾಧಿಪತಿ ಇನ್ನೊಮ್ಮೆ ರೆಡ್ಡಿಗಳ ಮೇಲೇರಿ ಹೋಗಿ ರಾಜಮಹೇಂದ್ರವನ್ನು ಆಕ್ರಮಿಸಿದ. ಇದರಲ್ಲಿ ಇವನ ಮಗ ಹಂಮಿರ ಹಾಗೂ ಸೋದರನ ಮಗ ರಘುದೇವಕುಮಾರ ಮಹತ್ವವಾದ ಪಾತ್ರ ವಹಿಸಿದರು. ಹೊಸದಾಗಿ ಆಕ್ರಮಿಸಲಾದ ರಾಜಮಹೇಂದ್ರ ಪ್ರದೇಶದ ಅಧಿಕಾರಿಯಾಗಿ ರಘುದೇವ ನೇಮಕ ಹೊಂದಿದ. ಕಪಿಲೇಶ್ವರ ಅನಂತರ ಸುಮಾರು ಹತ್ತು ವರ್ಷಗಳವರೆಗೂ ಶಾಂತಿಯಿಂದ ರಾಜ್ಯಪಾಲನೆ ಮಾಡಿಕೊಂಡಿದ್ದು 1455ರಲ್ಲಿ ಪುನಃ ದಕ್ಷಿಣದ ಕಡೆ ಹೊರಟು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಕೊಂಡವೀಡು ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿ ಗಣದೇವನನ್ನು ತನ್ನ ಪ್ರತಿನಿಧಿಯಾಗಿ ನೆಲೆಗೊಳಿಸಿದ. ಈತ ಈ ಸಂದರ್ಭದಲ್ಲಿ ಹಂಪೆಯನ್ನು ಸೂರೆಮಾಡಿದನೆಂದು ಗಂಗಾಧರನ ಗಂಗಾದಾಸ ಪ್ರತಾಪ ವಿಲಾಸದಲ್ಲಿ ಹೇಳಿದೆ.

ಬಹಮನಿ ರಾಜ್ಯದಲ್ಲಿ ಇವನ ಸಮಕಾಲೀನ ಹುಮಾಯುನ್ ಷಹ. ಆತನ ಕಾಲದಲ್ಲಿ ರಾಜ್ಯದಲ್ಲಿ ತಲೆ ಎತ್ತಿದ ವಿಪ್ಲವದಿಂದಾಗಿ ಹಂಮಿರ ತೆಲಂಗಾಣವನ್ನು ಆಕ್ರಮಿಸಲು ಎಡೆ ದೊರಕಿತು. ಬಹಮನಿಯ ವಶದಲ್ಲಿದ್ದ ಒರುಗಲ್ಲು ಕೋಟೆ 1460ರಲ್ಲಿ ಇವನ ವಶವಾಯಿತು. 1461ರಲ್ಲಿ ಹುಮಾಯುನ ಮರಣ ಹೊಂದಿದ. ಮರುವರ್ಷ ಹಂಮಿರ ಬಿದರೆಯನ್ನು ಮುತ್ತಿದನಾದರೂ ಮಹಮೂದ್ ಗಾವಾನ ಇವನನ್ನು ಎದುರಿಸಿ ಓಡಿಸಿದ. ಅಲ್ಲಿಂದ ಹಿಂದಿರುಗಿದ ಹಂಮಿರ ವಿಜಯನಗರದ ಮೇಲೆ ದಂಡೆತ್ತಿದ. ಇವನನ್ನು ವಿರೋಧಿಸುವ ಸಾಮರ್ಥ್ಯ ಮಲ್ಲಿಕಾರ್ಜುನನಿಗೆ ಇರಲಿಲ್ಲ. ಉದಯಗಿರಿ, ಚಂದ್ರಗಿರಿ ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡು ತಿರುಚಿರಾಪಳ್ಳಿಯ ಶ್ರೀರಂಗದವರೆಗೂ ತಡೆಯಿಲ್ಲದೆ ನಡೆದ ಹಂಮಿರ ರಕ್ತಸಿಕ್ತವಾದ ಖಡ್ಗಗಳನ್ನು ದಕ್ಷಿಣ ಸಮುದ್ರದಲ್ಲಿ ತೊಳೆದನೆಂದು ಶಾಸನಗಳು ಅವನನ್ನು ಹೊಗಳಿವೆ. ಈ ವಿಜಯಗಳ ಫಲವಾಗಿ ಕಪಿಲೇಶ್ವರ ಗಜಪತಿ ಗೌಡೇಶ್ವರ ನವಕೋಟಿ ಕರ್ಣಾಟಕಲು ಬರಿಗೇಶ್ವರನೆಂಬ ಬಿರುದನ್ನು ಧರಿಸಿದ (1464).

ಇಷ್ಟೆಲ್ಲ ವಿಜಯಗಳಿಂದ ಕಳಿಂಗ ರಾಜ್ಯವನ್ನು ಬಲಪಡಿಸಿ ಅದರ ಕೀರ್ತಿ ಹರಡುವಂತೆ ಮಾಡಿದ ಕಪಿಲೇಶ್ವರ ತನ್ನ ಅಂತಿಮ ಕಾಲದಲ್ಲಿ ಉತ್ತರಾಧಿಕಾರಿಯನ್ನು ಕುರಿತು ಚಿಂತಿಸಬೇಕಾಯಿತು. ಹಿರಿಯನಾದ ಹಂಮಿರನಂತೆಯೇ ಕಿರಿಯನಾದ ಪುರುಷೋತ್ತಮ ಪರಾಕ್ರಮಶಾಲಿಯಾಗಿದ್ದ. ಬಹುಶಃ ರಾಜನ ಒಲವು ಪುರುಷೋತ್ತಮನ ಮೇಲೆ ಹೆಚ್ಚಾಗಿತ್ತು. ಅವನಿಗೇ ಯುವರಾಜ ಪದವಿ ನೀಡಬೇಕೆಂದು ಜಗನ್ನಾಥದೇವರು ಇವನಿಗೆ ಸ್ವಪ್ನದಲ್ಲಿ ಸೂಚಿಸಿದನೆಂದು ಪ್ರತೀತಿ. ಹಂಮಿರ ದಂಗೆ ಏಳಲು ಇದು ನಿಮಿತ್ತವಾಯಿತು. ಈ ಅಂತಃ ಕಲಹದ ಸುಸಂಧಿಯನ್ನು ಸಾಧಿಸಿ ಚಂದ್ರಗಿರಿ ಮುಂತಾದ ಪ್ರದೇಶಗಳನ್ನು ಹಂಮಿರನಿಂದ ಮುಕ್ತಗೊಳಿಸಿ, ವಿಜಯನಗರಕ್ಕೆ ಸೇರಿದ ಇತರ ಕೋಟೆಗಳನ್ನೂ ಹಿಂದಕ್ಕೆ ಪಡೆಯಲು ಸಾಳುವ ನರಸಿಂಹ ಹವಣಿಸಿದ. ಪುರುಷೋತ್ತಮನಿಗೆ ಬೆಂಬಲವಾಗಿ ಕಪಿಲೇಶ್ವರ ಸೈನ್ಯವನ್ನು ಒಯ್ದು ಕೃಷ್ಣಾತೀರದಲ್ಲಿ ಬೀಡುಬಿಟ್ಟ. ಅಲ್ಲಿಯೇ ಮಗನಿಗೆ ಅಧಿಕಾರ ವಹಿಸಿದ. ರಣಾಂಗಣದಲ್ಲಿಯೇ ಕಪಿಲೇಶ್ವರ ತೀರಿಕೊಂಡ (1468).

ಪುರುಷೋತ್ತಮ ಅಧಿಕಾರಕ್ಕೆ ಬಂದಮೇಲೆ 8 ವರ್ಷಗಳ ಕಾಲ ಅಣ್ಣನಾದ ಹಂಮಿರನೊಡನೆ ಹೋರಾಡಬೇಕಾಯಿತು. ಮೊದಲ ಬಹಮನಿ ಸುಲ್ತಾನರ ಸಹಾಯ ದೊಡನೆ ಹಂಮಿರ ಇವನಿಗೆ ಪ್ರತಿಕೂಲವಾಗಿದ್ದ. ಬಹಮನಿ ಸುಲ್ತಾನರ ಸಹಾಯದೊಡನೆ ಹಂಮಿರ ಇವನನ್ನು ಸೋಲಿಸಿದ. ಆದರೆ ಅನಂತರ ಪುರುಷೋತ್ತಮನ ಸ್ಥಿತಿ ಸುಧಾರಿಸಿತು. ಪುರಷೋತ್ತಮ ದೈವಾಂಶಸಂಭೂತನೆಂಬ ಭಾವನೆ ಪ್ರಜೆಗಳಲ್ಲಿ ತಲೆದೋರಿದ್ದು ಸಹ ಇವನಿಗೆ ಅನುಕೂಲವಾಯಿತು. ಬಹಮನಿ ರಾಜ್ಯದಲ್ಲೂ ಕಲಹಗಳುಂಟಾಗಿ ಅದರ ಸಹಾಯ ಹಂಮಿರನಿಗೆ ದೊರಕದೆ ಇದ್ದದ್ದೂ ಒಂದು ಕಾರಣ. ಇವುಗಳ ಲಾಭ ಪಡೆದ ಪುರುಷೋತ್ತಮ ಅಣ್ಣನನ್ನು ಸೋಲಿಸಿ ರಾಜ್ಯವನ್ನು ಹಿಂದಕ್ಕೆ ಪಡೆದ.

ವಿಜಯನಗರ ರಾಜ್ಯಕ್ಕೆ ಸೇರಿದ್ದು ಶತ್ರುವಶವಾಗಿದ್ದ ಅನೇಕ ಪ್ರಾಂತಗಳನ್ನು ಸಾಳುವ ನರಸಿಂಹ ಈ ಸಮಯದಲ್ಲಿ ಪುನಃ ಪಡೆದುಕೊಂಡು ಮಚಲೀಪಟ್ಟಣದವರೆಗೂ ತನ್ನ ಅಧಿಕಾರವನ್ನು ವಿಸ್ತರಿಸಿದ. ಆದರೆ ಪುರುಷೋತ್ತಮ ದೊಡ್ಡ ಸೈನ್ಯದೊಡನೆ ಆಂಧ್ರಪ್ರದೇಶದ

ಉತ್ತರ ಭಾಗಗಳನ್ನು ವಶಪಡಿಸಿಕೊಳ್ಳಲು ಬಂದ. ಬಹಮನಿಯ ಮಹಮ್ಮದ್ ಷಾನೂ ರಾಜ ಮಹೇಂದ್ರರೆದ ಕೋಟೆಯನ್ನು ರಕ್ಷಿಸಲು, ನಿಜಾಂ ಉಲ್ ಮುಲ್ಕನ ಸಹಾಯಕ್ಕೆ ಧಾವಿಸಿದ. ಈ ಸೈನ್ಯಗಳು ಮುನ್ನುಗ್ಗಿದರೆ ತನಗೆ ಅನುಕೂಲವಾಗದೆಂಬುದನ್ನು ಅರಿತ ನರಸಿಂಹ ಅಲ್ಲಿಂದ ಹಿಂದಿರುಗಿದ. ಪುರುಷೋತ್ತಮನನ್ನು ಮಹಮ್ಮದ್ ಷಾ ಸೋಲಿಸಿದ ನೆಂದು ಫರಿಷ್ತ ಬರೆದಿದ್ದಾನೆ. ಆದರೆ ಮಹಮ್ಮದ್ ಷಾನ ಬಳಿಕ ಬಹಮನಿ ರಾಜ್ಯದಲ್ಲಿ ಅರಾಜಕತೆ ತಲೆದೋರಿ ಆದಿಲ್ ಷಾ, ನಿಜಾಂ ಷಾ ಮುಂತಾದ ಪ್ರಾಂತ್ಯಾಧಿಕಾರಿಗಳು ಸ್ವತಂತ್ರರಾದರು. ಇದರಿಂದಾಗಿ ವಿಜಯನಗರದ ವಿರುದ್ಧ ದಂಡೆತ್ತಿ ಹೋಗಲು ಪುರುಷೋತ್ತಮ ನಿಗೆ ಅವಕಾಶ ಒದಗಿತು. ಸಾಳುವ ನರಸಿಂಹ ಉದಯಗಿರಿ ಕೋಟೆಯನ್ನು ಕಳೆದುಕೊಂಡ.

ಪುರುಷೋತ್ತಮ 1497ರ ವರೆಗೆ ರಾಜ್ಯವಾಳಿದ. ಈತ ಸ್ವತಃ ಪಂಡಿತನೂ ಕವಿಯೂ ಆಗಿದ್ದ. ಇವನು ಅಭಿನವಗೀತಗೋವಿಂದ, ಆಗಮ ಕಲ್ಪತರು, ನಾಮ ಮಾಲಿಕಾ, ಗೋಪಾಲಾರ್ಚನಾವಿಧಿ ಮುಂತಾದ ಗ್ರಂಥಗಳ ಕರ್ತೃವೆಂದು ಹೇಳಲಾಗಿದೆ. ಇವನ ಕಾಲದಲ್ಲಿ ಸಂಸ್ಕೃತ ಹಾಗೂ ಒರಿಯ ಭಾಷೆಗಳಿಗೆ ಅಮಿತವಾದ ಪ್ರೋತ್ಸಾಹ ದೊರಕಿತು.

ಪುರುಷೋತ್ತಮನ ಅನಂತರ ಪ್ರತಾಪರುದ್ರ ಆಳಿದ (1497–1538). ಸರಸ್ವತೀ ವಿಲಾಸದಲ್ಲಿ ಇವನಿಗೆ ಗೌಡೇಂದ್ರ ಮಾನಮರ್ದನ, ಯಮುನಾಪುರಾಧೀಶ್ವರ, ಹಸೇನುಷಾಹಿ ಸುರತ್ರಾಣ ಶರಣರಕ್ಷಣ ಎಂಬ ಬಿರುದುಗಳನ್ನು ಕೊಡಲಾಗಿದೆ. ವಿಜಯನಗರದ ಸಾಳುವ ನರಸಿಂಹನಾಗಲೀ ತುಳುವ ನರಸನಾಯಕನಾಗಲೀ ಕೊಂಡವೀಡು, ಉದಯಗಿರಿ ಕೋಟೆಗಳನ್ನು ಹಿಂದಕ್ಕೆ ಪಡೆಯಲಾರದೆ ಹೋದರು. ಪ್ರತಾಪರುದ್ರ ಅವುಗಳನ್ನು ರಕ್ಷಿಸಿದನಲ್ಲದೆ ಬಹಮನಿ ಸುಲ್ತಾನರ ವಿರುದ್ಧ ಹೋರಾಡಿ ಓರಂಗಲ್ಲು, ಖಂಬಂಮೆಟ್ಟು ಮುಂತಾದ ದುರ್ಗಗಳನ್ನು ಅವರಿಂದ ಕಸಿದುಕೊಂಡ. ಜೌನ್‍ಪುರದ ಟರ್ಕಿ ಸುಲ್ತಾನನಾದ ಹುಸೇನ್‍ಷಾ ಉತ್ಕಲದ ಮೇಲೆ ದಾಳಿ ನಡೆಸಿದಾಗ ಪ್ರತಾಪರುದ್ರ ಅವನನ್ನು ಸೋಲಿಸಿ ಓಡಿಸಿದ. ಆದರೆ ಪ್ರತಾಪರುದ್ರ ಮೇಲಿಂದ ಮೇಲೆ ವಿಜಯನಗರದ ವಿರುದ್ಧ ನಡೆಸಿದ ದಾಳಿಗಳಿಂದಾಗಿ ಅದರ ಅರಸರು ಇವನ ಪ್ರಬಲ ವೈರಿಗಳಾದರು. 1509ರಲ್ಲಿ ಕೃಷ್ಣದೇವರಾಯ ಪಟ್ಟಕ್ಕೆ ಬಂದಾಗ ಉದಯಗಿರಿ ಮುಂತಾದ ಕೋಟೆಗಳನ್ನು ಹಿಂದಕ್ಕೆ ಪಡೆಯುವುದೇ ಅಲ್ಲದೆ ಗಜಪತಿಗಳನ್ನು ಸಂಪೂರ್ಣವಾಗಿ ನಾಶಗೊಳಿಸಬೇಕೆಂಬ ಆಶಯದಿಂದ ಅವರ ವಿರುದ್ಧ ಸುವ್ಯವಸ್ಥಿತವಾದ ರೀತಿಯಲ್ಲಿ ವಿಜಯಯಾತ್ರೆ ಕೈಗೊಂಡ. 1512ರಲ್ಲಿ ಉದಯಗಿರಿ ಅವನ ವಶವಾಯಿತು. ಪ್ರತಾಪರುದ್ರನ ಚಿಕ್ಕಪ್ಪನಾದ ರಘುದೇವರಾಯ ಸೆರೆಸಿಕ್ಕ. ಅನಂತರ ಕೃಷ್ಣದೇವರಾಯ ಕೊಂಡವೀಡನ್ನೂ ಆಕ್ರಮಿಸಿಕೊಂಡ. ಇಲ್ಲಿ ಪ್ರತಾಪರುದ್ರ ಸೋತು ಕೊಂಡಪಲ್ಲಿಗೆ ಓಡಿದ. ಅವನ ಮಗನಾದ ವೀರಭದ್ರನೂ ಇತರ ನಾಯಕರೂ ಬಂಧಿತರಾದರು. ಕೊಂಡಪಲ್ಲಿ, ರಾಜಮಹೇಂದ್ರ, ಸಿಂಹಾಚಲ, ಪೋಟ್ನೂರುಗಳು ಒಂದೊಂದಾಗಿ ಕೃಷ್ಣದೇವರಾಯನ ವಶವಾದವು. ಈ ಮಧ್ಯೆ ವೀರಭದ್ರ ಸೆರೆಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ. ಇದು ಪ್ರತಾಪರುದ್ರ ಧೈರ್ಯವನ್ನು ಉಡುಗಿಸಿತು. ಕಳಿಂಗ ಯಾತ್ರೆಯ ಕೊನೆಯ ಘಟ್ಟದಲ್ಲಿ ಕೃಷ್ಣದೇವರಾಯನ ಸೈನ್ಯ ಕಳಿಂಗ ರಾಜಧಾನಿಯನ್ನಾಕ್ರಮಿಸಿತು. ಪ್ರತಾಪರುದ್ರ ಇದನ್ನೆದುರಿಸಲಾರದೆ ಸೋಲೊಪ್ಪಿ ಕೃಷ್ಣದೇವರಾಯನಿಗೆ ಕಪ್ಪಕಾಣಿಕೆ ಸಲ್ಲಿಸಿದನಲ್ಲದೆ ತನ್ನ ಮಗಳಾದ ಭದ್ರದೇವಿಯನ್ನು ಅವನಿಗೆ ವಿವಾಹ ಮಾಡಿಕೊಟ್ಟ. ಕೃಷ್ಣಾನದಿ ಈ ಎರಡು ರಾಜ್ಯಗಳ ನಡುವಣ ಮೇರೆಯಾಗಿರ ತಕ್ಕದೆಂದು ಕೃಷ್ಣದೇವರಾಯ ಗೊತ್ತುಮಾಡಿ, ಗಜಪತಿಗೆ ಅವನ ರಾಜ್ಯವನ್ನು ಹಿಂದಕ್ಕೆ ಕೊಟ್ಟು ತಾನು ರಾಜಧಾನಿ ಹಿಂದಿರುಗಿದ.

ಆಗ ಈ ರಾಜ್ಯಕ್ಕೆ ಕೊಂಡಪಲ್ಲಿ ರಾಜಧಾನಿಯಾಗಿತ್ತು. ಕೃಷ್ಣದೇವರಾಯನ ಮರಣಾನಂತರ ಗಜಪತಿ ಪುನಃ ಪ್ರಬಲಿಸಲು ಯತ್ನಿಸಿದನಾದರೂ ಅಚ್ಯುತದೇವರಾಯ ಇವನನ್ನು ಎದುರಿಸಿ ಹಿಮ್ಮೆಟ್ಟಿಸಿದರಿಂದಲೂ ಕುತುಬ್‍ಷಹ ಇವನ ವಿರುದ್ಧ ದಂಡೆತ್ತಿ ಇವನನ್ನು ಸೋಲಿಸಿದ್ದರಿಂದಲೂ ಇವನ ಆಕಾಂಕ್ಷೆಗಳಿಗೆ ತಡೆ ಬಿತ್ತು. ಅಷ್ಟೇ ಅಲ್ಲ, ಇದು ಗಜಪತಿ ರಾಜ್ಯದ ಅವನತಿಗೆ ಕಾರಣವಾಯಿತು. ಅಧಿಕಾರದಲ್ಲಿದ್ದಷ್ಟು ವರ್ಷಗಳೂ ಸೋಲನ್ನನುಭವಿಸಿ ನಿರಾಶೆ ಹೊಂದಿದ ಅರಸ ಆ ವೇಳೆಗೆ ಪುರಿಗೆ ಬಂದಿದ್ದ ಸ್ವಾಮಿ ಚೈತನ್ಯರ ಶಿಷ್ಯನಾಗಿ ತನ್ನ ಕೊನೆಯ ವರ್ಷಗಳನ್ನು ಕಳೆದ. ಇವನಿಗೆ ಉತ್ತರಾಧಿಕಾರಿಗಳಿರಲಿಲ್ಲ. ಮಕ್ಕಳಾದ ವೀರಭದ್ರ ಮತ್ತು ರಾಮಚಂದ್ರರು ಇವನ ಕಾಲದಲ್ಲೇ ಮರಣ ಹೊಂದಿದ್ದರು. ಈ ಪರಿಸ್ಥಿತಿಯಲ್ಲಿ ಇವನ ಮಂತ್ರಿಯಾದ ಗೋವಿಂದ ವಿದ್ಯಾಧರ ಕುಟಿಲೋಪಾಯಗಳಿಂದ ರಾಜ್ಯವನ್ನು ವಶಪಡಿಸಿಕೊಂಡ. ಇದರೊಂದಿಗೆ ಗಜಪತಿ ವಂಶ ಮರೆಯಾಯಿತು.

ಪ್ರತಾಪರುದ್ರ ಹಿರಿಯ ವಿದ್ವಾಂಸನಾಗಿದ್ದ. ಕೌತುಕ ಚಿಂತಾಮಣಿ, ನಿರ್ಣಯ ಸಂಗ್ರಹ, ಸರಸ್ವತೀವಿಲಾಸ ಇತ್ಯಾದಿ ಗ್ರಂಥಗಳನ್ನು ರಚಿಸಿದ. ತತ್ತ್ವ ಚಿಂತಾಮಣಿ, ಅದ್ವೈತ ಮಕರಂದ ಮುಂತಾದ ಗ್ರಂಥಗಳಿಗೆ ವ್ಯಾಖ್ಯಾನವನ್ನು ಬರೆದ. ನವ್ಯನ್ಯಾಯವಿಶಾರದನೆಸಿದ ವಾಸುದೇವ ಸಾರ್ವಭೌಮ ಭಟ್ಟಚಾರ್ಯ, ಲೋಲ್ಲಲಕ್ಷೀಧರ , ಭಕ್ತಿಭಾಗವತ ಮಹಾಕಾವ್ಯದ ಕರ್ತೃವಾದ ಜೀವದೇವಾಚಾರ್ಯ, ನಾಟಕವನ್ನು ಬರೆದ ರಾಮಾನಂದರಾಯ ಮುಂತಾದವರು ಇವನ ಆಸ್ಥಾನದಲ್ಲಿದ್ದರು. ಗಜಪತಿಗಳು ಅಧಿಕಾರಕ್ಕೆ ಬರುವ ಮೊದಲು ಕಳಿಂಗದಲ್ಲಿ ಒರಿಯ ಭಾಷೆಗೆ ಹೆಚ್ಚಿನ ಪ್ರೋತ್ಸಾಹವಿರಲಿಲ್ಲ. ಸಂಸ್ಕೃತ ಅವರ ರಾಜಭಾಷೆಯಾಗಿತ್ತು. ಆದರೆ ಗಜಪತಿಗಳ ಕಾಲದಲ್ಲಿ ಒರಿಯ ಭಾಷೆಗೆ ವಿಪುಲವಾದ ಪ್ರೋತ್ಸಾಹ ದೊರಕಿತು. ರಾಮಾಯಣ ಮಹಾಭಾರತಗಳೂ ಪುರಾಣಗಳೂ ಒರಿಯ ಭಾಷೆಗೆ ಅನುವಾದವಾದುವು. ಸ್ವಾಮಿ ಚೈತನ್ಯರು ಗಜಪತಿಗಳ ರಾಜ್ಯಕ್ಕೆ ಬಂದಾಗ ಜನಸಾಮಾನ್ಯರಿಗೆ ಅರ್ಥವಾಗುವಂತೆ ತಮ್ಮ ತತ್ತ್ವಗಳನ್ನು ದೇಶಭಾಷೆಯಲ್ಲಿ ತಿಳಿಸಿಹೇಳಿದ್ದು ಸಹ ಇದಕ್ಕೊಂದು ಕಾರಣ. ತೆಲುಗು ಭಾಷೆಗೂ ಇವರು ಅಷ್ಟೇ ಅಲ್ಪಸ್ವಲ್ಪ ಪ್ರೋತ್ಸಾಹ ಕೊಟ್ಟರೆಂದು ಹೇಳಲಾಗದು. ಆದರೂ ರೆಡ್ಡಿಗಳ ರಾಜ್ಯದಲ್ಲಿ ಸಾಮಂತರು ಆ ಭಾಷೆಯನ್ನು ಪೋಷಿಸಿದರು. ಪೂಸಪಾಟಿ ಬಸವ ಭೂಪಾಲ, ತೆಲುಗು ಪಂಚತಂತ್ರವನ್ನು ರಚಿಸಿದ ದೂಬಗುಂಟ ನಾರಾಯಣ ಕವಿ, ನಂದಿ ಮಲ್ಲಯ್ಯ, ಘಂಟ ಸಿಗ್ಗಯ್ಯ ಮುಂತಾದವರು ಈ ಕಾಲದ ತೆಲುಗು ಸಾಹಿತಿಗಳು.

ಚೈತನ್ಯಗೆ ಆಶ್ರಯವಿತ್ತ ಗಜಪತಿಗಳು ವೈದಿಕಧರ್ಮ ಸಂಪ್ರದಾಯಗಳನ್ನು ಪೋಷಿಸಿದರು. ಭಕ್ತಿ ಸಂಕೀರ್ತನೆಗಳು ನಾಡಿನಲ್ಲೆಲ್ಲ ಹರಡಿದುವು. ಇದು ಜನರಲ್ಲಿ ಹೊಸ ಚೈತನ್ಯವನ್ನು ಮೂಡಿಸಿತು. (ಬಿ.ಆರ್.ಜಿ.)

**ಗಣೇಶ್ವರ:** ರಾಜಸ್ತಾನ ರಾಜ್ಯದ ಸೀಕರ್ ಜಿಲ್ಲೆಯ ನೀಮ್–ಕ–ಥಾಣ ತಾಲ್ಲೂಕಿನಲ್ಲಿರುವ ಪ್ರಾಚೀನ ನೆಲೆ. ಇಲ್ಲಿ ದೊರೆತ ಪ್ರಾಚ್ಯಾವಶೇಷಗಳು ವಿಭಿನ್ನವೂ ವಿಶಿಷ್ಟವೂ ಆಗಿವೆ. ಇಲ್ಲಿ ಪ್ರತಿನಿಧಿತವಾದ ಸಂಸ್ಕೃತಿಯನ್ನು ಗಣೇಶ್ವರ ಸಂಸ್ಕೃತಿ ಎಂಬ ಹೆಸರಿನಿಂದ ಕರೆಯಲಾಗಿದೆ. ಗಣೇಶ್ವರದ ಸುತ್ತಮುತ್ತ ನಡೆಸಿದ ಸರ್ವೇಕ್ಷಣೆಯಲ್ಲಿ ಹಾಗೂ ಗಣೇಶ್ವರದಲ್ಲಿ ನಡೆದ ಉತ್ಖನನದಲ್ಲಿ ಸು. 1000 ತಾಮ್ರದ ಉಪಕರಣಗಳು ಸಿಕ್ಕವು. ಭಾರತದ ಇತರ ಯಾವ ಪುರಾತತ್ತ್ವ ನೆಲೆಯಲ್ಲೂ ಈ ಸಂಖ್ಯೆಯಲ್ಲಿ ತಾಮ್ರೋಪಕರಣಗಳು ದೊರೆತಿಲ್ಲ. ಇದೇ ಗಣೇಶ್ವರ ನೆಲೆಯ ಮತ್ತು ಸಂಸ್ಕೃತಿಯ ವಿಶೇಷತೆ. ಈ ಸಂಸ್ಕೃತಿ 70ರ ದಶಕದಲ್ಲಿ ಬೆಳಕಿಗೆ ಬಂದಿತು. ZÀ¥ÀÁÀiÀÄ ÀPÉqÀA, ಬಾಣದ ಮೊನೆ, ಭರ್ಜಿಯ ಮೊನೆ, ಅಲಗು, ಮೀನಿನ ಗಾಳದ ಕೊಕ್ಕೆ, ತಂತಿ, ಮೊಳೆ, ಉಳಿ–ಹೀಗೆ ಹಲವಾರು ಬಗೆಯ ಉಪಕರಣಗಳು ಈ ಸಂಸ್ಕೃತಿಯ ನೆಲೆಗಳಲ್ಲಿ ದೊರೆತಿವೆ. ಇವುಗಳಲ್ಲಿ ಅಲಗು, ಬಾಣದ ಮೊನೆ, ಗಾಳದ ಕೊಕ್ಕೆ ಮುಂತಾದ ನಮೂನೆಗಳು ಹರಪ್ಪ ಸಂಸ್ಕೃತಿಯ ನೆಲೆಗಳಲ್ಲೂ ಸಾಮಾನ್ಯವಾಗಿ ಕಂಡುಬರುತ್ತವೆ. ಮೀನುಗಾರಿಕೆ ಮತ್ತು ಬೇಟೆ ಗಣೇಶ್ವರ ಸಂಸ್ಕೃತಿಯ ಜೀವನಾಧಾರಗಳಾಗಿದ್ದವೆಂಬುದು ಉಪಕರಣಗಳ ನಮೂನೆಗಳಿಂದ ಸೂಚಿತವಾಗುತ್ತದೆ. ಈ ಸಂಸ್ಕೃತಿಯನ್ನು ಯಾವ ಸಮಕಾಲೀನ ಸಂಸ್ಕೃತಿಗೆ–ತಾಮ್ರಶಿಲಾ, ತಾಮ್ರೋಪಕರಣ ಗುಡ್ಡೆ ಅಥವಾ ಹರಪ್ಪ–ಸೇರಿಸ ಬೇಕೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಗಣೇಶ್ವರದ ಉಪಕರಣಗಳಿಗೂ ಗಂಗಾ–ಯಮುನ ನದಿಬಯಲಿನಲ್ಲಿ ದೊರೆಯುವ ತಾಮ್ರೋಪಕರಣ ಗುಡ್ಡೆ ಸಂಸ್ಕೃತಿಯ ಉಪಕರಣಗಳಿಗೂ ಯಾವುದೇ ಸಾಮ್ಯವಿಲ್ಲ ಎಂಬುದು ಗಮನಿಸಬೇಕಾದ ವಿಷಯ. ಬ್ರಿಜೆಟ್ ಮತ್ತು ರೇಮಂಡ್ ಅಲ್ಚಿನ್ ಅವರ ಪ್ರಕಾರ ಗಣೇಶ್ವರ ಮತ್ತು ಅಹಾರ್ ಸಂಸ್ಕೃತಿಗಳು ಸ್ವತಂತ್ರ ಪ್ರಾದೇಶಿಕ ಸಂಸ್ಕೃತಿಗಳಾಗಿದ್ದವು. ಆದರೆ ಇವು ನಗರೀಕೃತ ಹರಪ್ಪ ಸಂಸ್ಕೃತಿಯೊಂದಿಗೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದವು. ಗಣೇಶ್ವರದ ಸಿದ್ಧ ಉಪಕರಣಗಳನ್ನು ಹರಪ್ಪ ಮತ್ತು ಅಹಾರ್ ಸಂಸ್ಕೃತಿಯ ವಸತಿಗಳು ಪ್ರಾಯಶಃ ತರಿಸಿಕೊಳ್ಳುತ್ತಿದ್ದವು. ಗಣೇಶ್ವರ ಮತ್ತು ಕಾಲಿಬಂಗನ್ ನಡುವೆ ಹರಪ್ಪ ಪೂರ್ವ ಮತ್ತು ಹರಪ್ಪ ಕಾಲಗಳಲ್ಲಿದ್ದ ಸಂಪರ್ಕಕ್ಕೆ ಸಾಕಷ್ಟು ಪುರಾವೆಗಳಿವೆ.

ಗಣೇಶ್ವರ ಖೇತ್ರಿ ತಾಮ್ರಗಣಿಗಳಿಂದ 75ಕಿಮೀ ದೂರದಲ್ಲಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಗಣೇಶ್ವರ ಸಂಸ್ಕೃತಿಗೆ ಸೇರುವ 5,000ಕ್ಕೂ ಹೆಚ್ಚು ತಾಮ್ರ ಉಪಕರಣಗಳು ಈ ವಲಯದಿಂದ ಲಭಿಸಿವೆ. ಆರ್.ಸಿ.ಅಗ್ರವಾಲರ ಅಭಿಪ್ರಾಯದಲ್ಲಿ ಗಣೇಶ್ವರ ಸಂಸ್ಕೃತಿಯ ಜನರೇ ಖೇತ್ರಿ ಪ್ರದೇಶದ ಮೂಲ ನಿವಾಸಿಗಳು. ಗಣೇಶ್ವರ ಸಂಸ್ಕೃತಿಯ ನಿವೇಶನಗಳು ಖೇತ್ರಿ ಗಣಿಗಳನ್ನು ಆರ್ಥಿಕವಾಗಿ ಅವಲಂಬಿಸಿದ್ದವು ಎಂಬುದನ್ನು ಅಲ್ಚಿನ್ ದಂಪತಿಗಳೂ ಸಮರ್ಥಿಸುತ್ತಾರೆ.

ತಾಮ್ರ ಉಪಕರಣಗಳ ಜತೆಗೆ ಮಣ್ಪಾತ್ರೆಗಳೂ ಈ ನಿವೇಶನಗಳಲ್ಲಿ ಸಿಕ್ಕಿವೆ. ಇವನ್ನು ಗಣೇಶ್ವರ ಪಾತ್ರೆಗಳೆಂದೇ ಹೇಳಲಾಗುತ್ತದೆ. ಇವು ಹೆಚ್ಚಾಗಿ ಸೀಕರ್ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಗಣೇಶ್ವರ ಸಂಸ್ಕೃತಿ ಪ್ರ.ಶ.ಪೂ.3000–2800ರ ಅವಧಿಯಲ್ಲಿ ಆರಂಭವಾಗಿರಬೇಕೆಂದು ಮಣ್ಪಾತ್ರೆಗಳ ತೌಲನಿಕ ಅಧ್ಯಯನದಿಂದ ತಿಳಿದುಬಂದಿದೆ. ಈ ಮಣ್ಪಾತ್ರೆಗಳು ಇಲ್ಲಿಂದ 40 ಕಿಮೀ ದೂರದಲ್ಲಿರುವ ಜೋಧಪುರದಲ್ಲಿ ದೊರೆತ ಕಾವಿಬಣ್ಣದ ಮಣ್ಪಾತ್ರೆಗಳನ್ನು ಹೋಲುತ್ತವೆ. ಜೋಧಪುರದ ಪಾತ್ರೆಗಳು ಇಂಗಾಲ 14ರ ಕಾಲನಿರ್ಣಯಕ್ಕೆ ಒಳಗಾಗಿವೆ. ಈ ಕಾಲಮಾನವನ್ನು ನಿರ್ಣಯಿಸಿದ ಡಿ.ಪಿ.ಅಗ್ರವಾಲರು ಇದೇ ಆಧಾರದ ಮೇಲೆ ಗಣೇಶ್ವರ ಸಂಸ್ಕೃತಿ ಪ್ರ.ಶ.ಪೂ.3000ದ ಆಸುಪಾಸಿನಲ್ಲಿ ಪ್ರಾರಂಭವಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ. (ಪಿ.ಎಸ್.ಜಿ.)

**ಗಯ:** ಬಿಹಾರ ರಾಜ್ಯದ ಪಟಣ ವಿಭಾಗದ ಒಂದು ನಗರ. ಅದೇ ಹೆಸರಿನ ಜಿಲ್ಲೆಯ ಕೇಂದ್ರ. ಪೂರ್ವ ರೈಲ್ವೆಯ ಮುಖ್ಯ ಮಾರ್ಗದಲ್ಲಿ ಪಟಣ ನಗರಕ್ಕೆ 90 ಕಿಮೀ ದೂರದಲ್ಲಿ ಫಲ್ಗು ನದಿಯ ಪಶ್ಚಿಮ ದಂಡೆಯ ಉದ್ದಕ್ಕೂ ಬಹುತೇಕ ಹಬ್ಬಿರುವ ಈ ನಗರದ ವಿಸ್ತೀರ್ಣ 17.24 ಚ.ಕಿಮೀ. ಗಯೆಯ ಸುತ್ತಲೂ ಛೋಟಾನಾಗಪುರ ಪ್ರಸ್ಥಭೂಮಿಯ ಅಂಚಿನ ಬೆಟ್ಟಗಳಿವೆ. ವರ್ಷದಲ್ಲಿ ಬಹುಕಾಲ ಬರಡಾಗಿರುವ ಫಲ್ಗು ನದಿಯ ಮರಳು ಬಿಸಿಲಿನಿಂದ ಕಾಯುವುದರಿಂದ ಗಯ ನಗರ ಬಹಳ ಬಿಸಿ. ಗಯ ನಗರ ಛೋಟಾನಾಗಪುರ ಪ್ರಸ್ಥಭೂಮಿಯೂ ಗಂಗಾ ನದಿಯ ಬಯಲೂ ಕೂಡುವ ಎಡೆಯಲ್ಲಿರುವುದರಿಂದ ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಅಲ್ಲದೆ ಇದೊಂದು ಯಾತ್ರಾಸ್ಥಳ. ಪ್ರತಿ ವರ್ಷವೂ ಲಕ್ಷಗಟ್ಟಲೆ ಯಾತ್ರಾರ್ಥಿ

ಗಳು ಗಯಕ್ಕೆ ಬರುತ್ತಾರೆ. ಗಯ ನಗರದ ಅನೇಕ ದೇವಸ್ಥಾನಗಳಲ್ಲಿ ರಾಣಿ ಅಹಲ್ಯಾಬಾಯಿ ಹೋಳ್ಕರ್ ಕಟ್ಟಿಸಿದ (1787) ವಿಷ್ಣುಪಾದ ದೇವಸ್ಥಾನ ಮುಖ್ಯವಾದದ್ದು. ಈ ಕ್ಷೇತ್ರದ ಒಂದು ಭಾಗವಾದ ಬ್ರಹ್ಮಗ ಹಿಂದುಗಳ ಯಾತ್ರಾಸ್ಥಳವಾದರೆ ಇನ್ನೊಂದು ಭಾಗವಾದ ಬೋಧಗಯ ಪ್ರಪಂಚದ ಬೌದ್ಧರ ಯಾತ್ರಾಸ್ಥಳ.

ಬೋಧಗಯ: ಬ್ರಹ್ಮಗಯಕ್ಕೆ ಸು.9 ಕಿಮೀ ದೂರದಲ್ಲಿದೆ. ಸಮೀಪದಲ್ಲಿಯೇ ಸು.2,400 ವರ್ಷಗಳಿಗೂ ಹಳೆಯದೆಂದು ಹೇಳಲಾದ ಬೋಧಿವೃಕ್ಷವಿದೆ. ಇಲ್ಲಿಯೇ ಶಾಕ್ಯವಂಶದ ಸಿದ್ಧಾರ್ಥ ಆರು ವರ್ಷಗಳ ಕಾಲ ಕಠಿಣ ತಪಸ್ಸನ್ನಾಚರಿಸಿ ತನ್ನ 35ನೆಯ ವಯಸ್ಸಿನಲ್ಲಿ ಜ್ಞಾನೋದಯ ಪಡೆದು ಬುದ್ಧನಾದದ್ದು. ಬುದ್ಧನ ಸಂದೇಶವನ್ನು ಪಡೆದ ಮೊದಲಿಗರಲ್ಲಿ ಗಯ ನಿವಾಸಿಗಳೂ ಸೇರಿದ್ದಾರೆ. ಇಲ್ಲಿಯ ಗುಹೆಯೊಂದರಲ್ಲಿ ಅಶೋಕನ ಶಾಸನವಿದೆ. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಇಲ್ಲಿಯ ಬೋಧಿವೃಕ್ಷದ ಸಮೀಪದಲ್ಲಿ ಅಶೋಕ ಕಟ್ಟಿಸಿದ್ದ ದೊಡ್ಡ ವಿಹಾರವೊಂದರ ಅವಶೇಷಗಳನ್ನು ಇಂದಿಗೂ ಕಾಣಬಹುದು. ಈಗ



ಬುದ್ಧ ದೇವಾಲಯ, ಬೋಧಗಯ

ಇಲ್ಲಿರುವ ದೇವಮಂದಿರ 48ಮೀ ಚೌಕವಾಗಿದ್ದು 15ಮೀ ಎತ್ತರವಾಗಿದೆ. ಒಳಗಡೆ ಬುದ್ಧನ ದೊಡ್ಡ ವಿಗ್ರಹವಿದೆ. ಮೇಲಿನ ಅಂತಸ್ತಿನಲ್ಲಿ ಸಿದ್ಧಾರ್ಥನ ತಾಯಿ ಮಾಯಾದೇವಿಯ ವಿಗ್ರಹವಿದೆ. 7ನೆಯ ಶತಮಾನದಲ್ಲಿ ಚೀನಿಯಾತ್ರಿಕ ಯುವಾನ್‌ಚಾಂಗ್ ಇಲ್ಲಿಗೆ ಬಂದಿದ್ದನೆಂದು ಹೇಳಲಾಗಿದೆ. (ಸಿ.ಕೆ.ವೈ.ಡಿ.;ಜಿ.ಎಚ್.)

ತರದಿಹ್ (ಬೋಧಗಯ): ಇಲ್ಲಿನ ಉತ್ಖನನದಲ್ಲಿ ಅನುಕ್ರಮವಾಗಿ ನವಶಿಲಾಯುಗ ಹಂತದಿಂದ ಪಾಲಿ ಅರಸು ಮನೆತನದ ಹಂತದವರೆಗೆ ಒಟ್ಟು ಏಳು ಸಾಂಸ್ಕೃತಿಕ ಹಂತಗಳು ಪತ್ತೆಯಾಗಿವೆ. ನವಶಿಲಾಯುಗದ ಆದಿಹಂತದಲ್ಲಿ ಕೈಯಿಂದ ಮಾಡಿದ ಮಣ್ಪಾತ್ರೆಗಳು ಮತ್ತು ಅಂತ್ಯ ಉಪಹಂತದಲ್ಲಿ ಉಜ್ಜಿದ ಹೊಳಪಿನ ಬೂದುಬಣ್ಣದ ಮಡಕೆಗಳು ವಿಶೇಷವಾಗಿವೆ. ಎರಡನೆಯ ಹಂತದಲ್ಲಿ ತಿಗುರಿಯ ಮೇಲೆ ಮಾಡಿದ ಮಡಕೆ, ತಾಮ್ರದ ಉಪಕರಣಗಳು ಹಾಗೂ ಕಪ್ಪು ಮತ್ತು ಬೂದುಬಣ್ಣದ ಮಡಕೆಗಳಿವೆ. ಮೂರನೆಯ ಹಂತದಲ್ಲಿ ಆದಿ ಕಬ್ಬಿಣಯುಗದ ಕಪ್ಪು, ಕೆಂಪು–ಕಪ್ಪು ದ್ವಿವರ್ಣ ಮಡಕೆಗಳು, ಕಬ್ಬಿಣದ ಬಾಣದ ಮೊನೆ, ಈಟಿ ಮೊನೆ, ಉಳಿ, ಮೊಳೆ ಕಲ್ಲಿನ ಮಣಿಗಳು, ಚಿಕ್ಕ ಅಲಗುಗಳು ಮುಂತಾದವು ದೊರೆತಿವೆ. ನಾಲ್ಕನೆಯ ಹಂತದಲ್ಲಿ ಪ್ರಥಮ ಬಾರಿಗೆ ಔತ್ತರೇಯ ಮೆರುಗಿನ ಕಪ್ಪುಬಣ್ಣದ ಮಡಕೆಗಳು, ಎಲುಬು, ಕಲ್ಲಿನ ಉಪಕರಣಗಳು, ಸುಡಾವೆ ಮಣ್ಣಿನ ಗೊಂಬೆಗಳು, ತಾಮ್ರದ ಮಣಿ, ಎರಕ ಹೊಯ್ದ ನಾಣ್ಯಗಳ ಜೊತೆಗೆ ಕಾಣಿಸಿಕೊಳ್ಳುತ್ತವೆ. ಐದನೆಯ ಹಂತದಲ್ಲಿ ಕುಷಾಣರ ಕಾಲದ ಕೆಂಪುವರ್ಣದ ಮಡಕೆ, ಕಲ್ಲಿನ, ಗಾಜಿನ, ಸುಡಾವೆ ಮಣ್ಣಿನ ಹಾಗೂ ತಾಮ್ರದ ಮಣಿಗಳು ಮುಖ್ಯವಾದವು. ಆರನೆಯ ಮತ್ತು ಏಳನೆಯ ಹಂತಗಳಲ್ಲಿ ಕ್ರಮವಾಗಿ ಗುಪ್ತರ ಕಾಲದ ಮತ್ತು ಪಾಲರ ಕಾಲದ ಪ್ರಾಚ್ಯಾವಶೇಷಗಳು ದೊರಕಿವೆ. (ಎ.ಎಸ್.;ಎನ್.ಎಲ್.)

ಬ್ರಹ್ಮಗಯ: ಹಿಂದುಗಳ ಪುಣ್ಯಕ್ಷೇತ್ರವಾದ ಇದು ಸು.5ನೆಯ ಶತಮಾನದಿಂದಲೂ ಪ್ರಸಿದ್ಧವಾಗಿದೆ. ಪುರಾಣಗಳಲ್ಲಿ ಗಯದ ಉಲ್ಲೇಖವಿರುವುದಾದರೂ ಋಗ್ವೇದದಲ್ಲಿ ಇದು ಒಬ್ಬ ಋಷಿಯ ಹೆಸರು. ಈ ಕ್ಷೇತ್ರದಲ್ಲಿ ಯಾಗವನ್ನು ಕೈಗೊಂಡ ಧಾರ್ಮಿಕ ದೊರೆಯೊಬ್ಬನ ಪ್ರಸ್ತಾಪ ಮಹಾಭಾರತದಲ್ಲಿ ಬಂದಿದೆ. ಈತ ಚಿನ್ನದಿಂದಲೇ ಯಜ್ಞವೇದಿಕೆಯನ್ನು ನಿರ್ಮಿಸಿ ಕೊನೆಯಲ್ಲಿ ಆ ವೇದಿಕೆಯನ್ನು ಬ್ರಾಹ್ಮಣರಿಗೆ ಹಂಚಿಕೊಟ್ಟನೆಂದೂ ಈತ ಅಪಾರವಾಗಿ ಶೇಖರಿಸಿದ್ದ ಘೃತ ಮತ್ತು ಮಧುವನ್ನು ಯಜ್ಞ ಮುಗಿದ ಬಳಿಕ ಅಗ್ನಿಯ ಅನುಗ್ರಹ ದಿಂದ ಘೃತಕುಲ್ಯಾ ಎಂಬ ಹೆಸರಿನಿಂದ ನದಿಗಳ ರೂಪದಲ್ಲಿ ಹರಿಯಬಿಟ್ಟನೆಂದೂ ಹೇಳಲಾಗಿದೆ.

ಹುಟ್ಟಿದ ಮಕ್ಕಳಲ್ಲಿ ಒಬ್ಬನಾದರೂ ಗಯದಲ್ಲಿ ಶ್ರಾದ್ಧಮಾಡಿ ತನ್ನ ತಂದೆಗೆ ಸ್ವರ್ಗ ಪ್ರಾಪ್ತಿಯಾಗುವಂತೆ ಮಾಡಬೇಕೆಂದು ರಾಮಾಯಣದಲ್ಲಿ ಹೇಳಿದೆ. ಈ ಕ್ಷೇತ್ರದಲ್ಲಿ ಶ್ರಾದ್ಧ ನಡೆಸಿದವನ ವಂಶದ ನೂರು ಜನ ಪಿತೃಗಳಿಗಲ್ಲದೆ ಅವನಿಗೂ ಶಾಶ್ವತ ಸ್ವರ್ಗ ಪ್ರಾಪ್ತಿಯಾಗುತ್ತದೆಂದು ಸ್ಥಳಪುರಾಣ ತಿಳಿಸುತ್ತದೆ. ಈ ನಂಬಿಕೆಗೆ ಹಿನ್ನಲೆಯಾಗಿರುವ ಕಥೆ ಗಯ ಮಹಾತ್ಮ್ಯೆಯಲ್ಲಿ ಹೀಗಿದೆ: ವಿಷ್ಣುವಿನ ಪರಮ ಭಕ್ತನಾದ ಗಯನೆಂಬ ಅಸುರ ಒಮ್ಮೆ ಕೋಲಾಹಲ ಪರ್ವತದ ಮೇಲೆ ಕಠಿಣ ತಪಸ್ಸನ್ನಾಚರಿಸಿದ. ಇದರಿಂದ ದೇವತೆಗಳೆಲ್ಲ ಖಿನ್ನರಾಗಿ ವಿಷ್ಣು ಮಹೇಶ್ವರರ ಬಳಿಗೆ ಹೋದರು. ವಿಷ್ಣು ದೇವತೆಗಳೊಡನೆ ಗಯಕ್ಕೆ ಬಂದು ಗಯ ಪರಿಶುದ್ಧನೆಂಬ ವಿಚಾರ ತಿಳಿದು, ಅವನನ್ನು ಸ್ಪರ್ಶಿಸಿದವರು ವೈಕುಂಠವನ್ನು ಸೇರಲಿ ಎಂಬುದಾಗಿ ವರ ನೀಡಿದ. ಅಂದಿನಿಂದ ಜನ ಗಯನನ್ನು ಸ್ಪರ್ಶಿಸಿ ಸ್ವರ್ಗಲಾಭ ಪಡೆಯತೊಡಗಿದರು. ಇದರಿಂದ ಯಮನ ರಾಜ್ಯ ಬರಿದಾಗಿ ಅವನಿಗೆ ಕೆಲಸವಿಲ್ಲದಂತಾಯಿತು. ಅನಂತರ ವಿಷ್ಣುವಿನ ಸಲಹೆಯಂತೆ ಬ್ರಹ್ಮ ಗಯನನ್ನು ಸಮೀಪಿಸಿ ಅವನ ಪವಿತ್ರ ದೇಹದ ಮೇಲೆ ಯಾಗ ಮಾಡಬೇಕೆಂಬ ಸಂಕಲ್ಪವನ್ನು ಅವನಲ್ಲಿ ವಿಜ್ಞಾಪನೆ ಮಾಡಿಕೊಂಡ. ಇದಕ್ಕೆ ಗಯ ಮರುಮಾತನಾಡದೆ ಸಮ್ಮತಿಯನ್ನಿತ್ತ. ಯಾಗಕರ್ಮಗಳನ್ನು ನಡೆಸಲು ಬ್ರಹ್ಮ ಋತ್ವಿಜರಾಜರಾದ ಮಾನಸಪುತ್ರರನ್ನು ಸೃಷ್ಟಿಸಿದ. ಅವರು ಗಯನ ಶಿರ ಉತ್ತರದ ಕಡೆಗಿರುವಂತೆಯೂ ಪಾದಗಳು ದಕ್ಷಿಣದ ಕಡೆಗಿರುವಂತೆಯೂ ಮಾಡಿ ಅವನ ದೇಹದ ಮೇಲೆ ಯಜ್ಞವನ್ನು ವಿಜೃಂಭಣೆಯಿಂದ ನಡೆಸಿದರು. ಯಜ್ಞಸಮಾರಂಭದ ಕೊನೆಯಲ್ಲಿ ಗಯನ ತಲೆ ಅಲುಗಾಡತೊಡಗಿತು. ವಿಶೇಷವಾದ ಧರ್ಮಶಿಲೆಯೊಂದನ್ನು ತಂದು ಗಯನ ತಲೆಯ ಬಳಿ ಇಡಬೇಕೆಂದು ಆಗ ಬ್ರಹ್ಮ ಯಮನಿಗೆ ಸೂಚಿಸಿದ. ಆದರೂ ಗಯ ನಿಶ್ಚಲನಾಗಲಿಲ್ಲ. ದೇವತೆಗಳೆಲ್ಲ ಶಿಲೆಯ ಬಳಿ ನಿಂತರೂ ತಲೆಯ ಅಲುಗಾಟ ನಿಲ್ಲಲಿಲ್ಲ. ಕೊನೆಗೆ ವಿಷ್ಣುವೇ ಗದಾಧಾರಿಯಾಗಿ ಗಯನ ಶಿರದ ಬಳಿ ಪ್ರತ್ಯಕ್ಷನಾದಾಗ ತಲೆ ಅಲುಗಾಡುವುದು ನಿಂತಿತು. ಮಹಾವಿಷ್ಣುವಿನ ದರ್ಶನ ಲಾಭದಿಂದ ಕೃತಾರ್ಥನಾದ ಗಯ ತನಗೆ ವಿಷ್ಣುವಿನ ಆಜ್ಞೆಯೊಂದೇ ಸಾಕಾಗಿತ್ತೆಂದೂ ಅಷ್ಟು ಜನ ದೇವತೆಗಳು ಚಿತ್ರಹಿಂಸೆ ಕೊಡಬಾರದಾಗಿತ್ತೆಂದು ಭಿನ್ನೈಸಿಕೊಂಡ. ಗಯನ ಭಕ್ತಿಗೆ ಮೆಚ್ಚಿದ ವಿಷ್ಣು ಅವನಿಗೆ ವರಪ್ರಸಾದವನ್ನು ನೀಡಿ ತಾನೇ ಮೊದಲ್ಗೊಂಡು ಸಮಸ್ತ ದೇವತೆಗಳಿಗೂ ಅವನ ಶಿರದ ಬಳಿ ಶಾಶ್ವತವಾಗಿ ನಿಂತಿರುವಂತಾಗಿ ಆ ಸ್ಥಳ ಗಯನ ಹೆಸರಿನಿಂದ ಶೋಭಿಸಲೆಂದು ಅನುಗ್ರಹಿಸಿದ. ಅಂದಿನಿಂದ ಅದು ಗಯ ಕ್ಷೇತ್ರವೆಂದು ಪ್ರಸಿದ್ಧವಾಯಿತು. ಭಾರತ ಭಾಗವತಾದಿಗಳಲ್ಲೆಲ್ಲಿಯೂ ಕಾಣದ, ಜನನಿತವಾದ, ಗಯೋಪಾಖ್ಯಾನವೆಂಬ ಹೆಸರಿನ ಒಂದು ಕಥೆಯಿದೆ. ಈ ಕಥೆಯ ವಿವರಗಳು ಹೀಗಿವೆ: ಶಿವಭಕ್ತ ಸಂಪನ್ನನಾದ ಗಯನೆಂಬ ಒಬ್ಬ ಗಂಧರ್ವ ಒಮ್ಮೆ ಶಿವಪೂಜೆಗಾಗಿ ಕೈಲಾಸಕ್ಕೆ ಹೋಗಿ ಮಡದಿಮಕ್ಕಳೊಂದಿಗೆ ಹಿಂದಿರುಗಿ ವಿಮಾನದಲ್ಲಿ ಕುಳಿತು ಬರುವಾಗ ಬಾಯ ತಂಬುಲವನ್ನು ಉಗುಳಿದ. ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತ ಕಣ್ಣುಚ್ಚಿ ನಿಂತಿದ್ದ ಶ್ರೀಕೃಷ್ಣನ ಬೊಗಸೆಯಲ್ಲಿ ಅದು ಬಿತ್ತು. ಕೈಲಿದ್ದ ನೀರು ಕೆಂಪಾಗಿದ್ದುದನ್ನು ಕಂಡು ಕೋಪಗೊಂಡ ಕೃಷ್ಣ ಆ ಅಪರಾಧ ಎಸಗಿದವನನ್ನು ಕೊಲ್ಲದೆ ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಇದರಿಂದ ಭೀತಿಗೊಂಡ ಗಯ ದೇವತೆಗಳಲ್ಲಿ ಮೊರೆಯಿಟ್ಟ. ಯಾರೂ ಅಭಯ ನೀಡಲಿಲ್ಲ. ಕೊನೆಗೆ ನಾರದರ ಸೂಚನೆಯ ಮೇರೆಗೆ ಅರ್ಜುನನ ಮೊರೆಹೊಕ್ಕ. ಅರ್ಜುನ ಹಿಂದುಮುಂದು ನೋಡದೆ ಅಭಯಪ್ರದಾನ ಮಾಡಿದ. ಅನಂತರ ವಿಷಯ ತಿಳಿದು ತನ್ನ ಅವಿವೇಕವನ್ನು ಕಂಡು ವಿಷಾದಿಸಿದ. ಕಡೆಗೆ ಮೊರೆಹೊಕ್ಕವರನ್ನು ಕಾಪಾಡಬೇಕೆಂಬ ಧರ್ಮಕ್ಕೆ ಕಟ್ಟುಬಿದ್ದು ಗಯನಿಗಾಗಿ ಅರ್ಜುನ ಕೃಷ್ಣನನ್ನು ಇದಿರಿಸಿ ಯುದ್ಧದಲ್ಲಿ ತೊಡಗಿದ. ಆಗ ದೇವತೆಗಳು ಮಧ್ಯೆ ಪ್ರವೇಶಿಸಿ ಗಯನನ್ನು ಶ್ರೀಕೃಷ್ಣನ ಚರಣಗಳಿಗೆ ಅಡ್ಡಬೀಳಿಸಿ ಕೃಷ್ಣನಿಂದಲೇ ಗಯನಿಗೆ ಅಭಯಪ್ರದಾನ ಮಾಡಿಸಿದರು.

ಭಾರತದ ಎಲ್ಲ ಕಡೆಗಳಿಂದಲೂ ಹಿಂದುಗಳು ಗಯಕ್ಕೆ ಹೋಗಿ ಫಲ್ಗು ನದಿಯಲ್ಲಿ ಸ್ನಾನ ಮಾಡಿ ಪಿತೃಗಳಿಗೆ ತರ್ಪಣವನ್ನೂ ಪಿಂಡವನ್ನೂ ಅರ್ಪಿಸಿ ವಿಷ್ಣುಪಾದೋದಕವನ್ನು ಪ್ರೋಕ್ಷಿಸಿಕೊಳ್ಳುವ ಪದ್ಧತಿ ಬಹು ಹಿಂದಿನಿಂದ ನಡೆದುಬಂದಿದೆ. ಈ ಕ್ಷೇತ್ರದ ಮುಖ್ಯಸ್ಥರು ಇಲ್ಲಿ ಸಂಸ್ಕಾರ ನಡೆಸಿದವರ ಹೆಸರು ಕುಲಗೋತ್ರಗಳನ್ನು ಹಿಂದಿನಿಂದಲೂ ಬರೆದು ಇಟ್ಟಿದ್ದಾರೆ. ಈ ಕ್ಷೇತ್ರದ ಯಾತ್ರೆ ಪೂರ್ಣವಾಗಬೇಕಾದರೆ ಸಮೀಪದಲ್ಲಿರುವ ಐದು

ಸ್ಥಳಗಳಿಗೆ ಹೋಗಿ ಅಲ್ಲಿಯ ಯಮದೇವತೆಗೂ ಆತನ ದೂತನಿಗೂ ಪೂಜೆ ಸಲ್ಲಿಸಬೇಕು. ಇವುಗಳಲ್ಲಿ ಮುಖ್ಯವಾದವು ರಾಮಶಿಲಾ ಮತ್ತು ಪ್ರೇತಶಿಲಾ ಗುಡ್ಡಗಳು. ಪ್ರೇತಶಿಲಾದಲ್ಲಿ ಯಮನನ್ನು ಪ್ರಾರ್ಥಿಸಿಯಾದ ಮೇಲೆ ಪಿತೃಯಾನದ ಕಾವಲು ನಾಯಿಗಳಿಗೂ ಪೂಜೆ ಸಲ್ಲಿಸುವುದು ವಾಡಿಕೆ. (ಸಿ.ಕೆ.ವೈ.ಡಿ;ಜಿ.ಎಚ್.)

**ಗಾಂಧಿ, ಮೋಹನ್‌ದಾಸ್ ಕರಮ್‌ಚಂದ್:** 1869–1948. ಭಾರತದ ಸ್ವಾತಂತ್ರ್ಯ ಶಿಲ್ಪಿ. ಅಹಿಂಸಾತ್ಮಕ ಕ್ರಾಂತಿಯಿಂದ ಬ್ರಿಟಿಷರ ಚಕ್ರಾಧಿಪತ್ಯವನ್ನು ಭಾರತದಲ್ಲಿ ಕೊನೆಗೊಳಿಸಿದ ಕಾರಣಪುರುಷ. ಇಡೀ ಬಾಳನ್ನು ಸತ್ಯಶೋಧನೆಗಾಗಿ ಮುಡಿಪಿಟ್ಟ ಮಹಾತ್ಮ. ಹಲವಾರು ಶತಮಾನಗಳಿಂದ ನಿಸ್ಸತ್ತ್ವಯುತವೂ ನಿರ್ವೀರ್ಯವೂ ವಿವಕ್ತವೂ ಆಗಿ ಪರಿಣಮಿಸಿದ್ದ ಭಾರತೀಯ ಸಮಾಜವನ್ನು ಮಹತ್ತಾದ ಪರಿವರ್ತನೆಗಳಿಗೆ ಒಳಪಡಿಸಿದ ದ್ರಷ್ಟಾರ. 1869ರ ಅಕ್ಟೋಬರ್ 2ರಂದು ಪೋರ್‌ಬಂದರಿನಲ್ಲಿ ಜನಿಸಿದರು. ತಂದೆ ಕರಮ್‌ಚಂದ್ ಗಾಂಧಿ ರಾಜಕೋಟೆಯಲ್ಲೂ ವಾಂಕನೇರಿನಲ್ಲೂ ದಿವಾನರಾಗಿದ್ದರು. ಅವರು ಸ್ವಾಮಿಭಕ್ತ, ಸತ್ಯನಿಷ್ಠ, ಧೈರ್ಯಶಾಲಿ ಹಾಗೂ ಉದಾರಿ. ತಾಯಿ ಪುತಲಿಬಾಯಿ. ಅನುಪಮ ಧರ್ಮಶ್ರದ್ಧೆಯುಳ್ಳವರು. ಇವರ ಪ್ರಭಾವ ಗಾಂಧಿಯವರ ಮೇಲೆ ಅತ್ಯಧಿಕವಾಗಿತ್ತು.

ಇವರ ವಿದ್ಯಾಭ್ಯಾಸ ಪೋರ್‌ಬಂದರ್ ಮತ್ತು ರಾಜಕೋಟೆಗಳಲ್ಲಿ ನಡೆಯಿತು. ಶಾಲೆಯಲ್ಲಿ ಇವರು ಸಾಮಾನ್ಯ ವಿದ್ಯಾರ್ಥಿಯಾಗಿದ್ದರು. ಎಲ್ಲ ಬಾಲಕರಂತೆ ಇವರೂ ಕೆಟ್ಟ ಸಹವಾಸ ಸೇರಿ ಹೊಗೆ ಸೇದಿದರು, ಕಳ್ಳತನವನ್ನೂ ಮಾಡಿದರು, ಮಾಂಸ ತಿಂದರು. ಆದರೆ ಇವು ಮಾಡಬಾರದ ಕೃತ್ಯಗಳೆಂದು ಬಹಳ ಬೇಗ ಅರಿತುಕೊಂಡರು. ಪಶ್ಚಾತ್ತಾಪಪಟ್ಟು ಇವನ್ನು ತ್ಯಜಿಸಿದರು. ಇವರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಹದಿಮೂರನೆಯ ವಯಸ್ಸಿನಲ್ಲಿ, ಕಸ್ತೂರ ಬಾ ಅವರೊಡನೆ ವಿವಾಹವಾಯಿತು. ಕಸ್ತೂರ ಬಾ ಅವರಿಗೂ ಗಾಂಧಿಯವರಿಗಾಗಿದ್ದಷ್ಟೇ ವಯಸ್ಸಾಗಿತ್ತು. ಮುಂದೆ ಇವರಿಗೆ ನಾಲ್ವರು ಗಂಡುಮಕ್ಕಳಾದರು. ಇವರ ಎಳೆಮನಸ್ಸಿನ ಮೇಲೆ ಅದ್ಭುತ ಪರಿಣಾಮ ಬೀರಿದ ನಾಟಕ ಹರಿಶ್ಚಂದ್ರ. ಇದು ಇವರಿಂದ ಸತ್ಯಸಂಧರಾಗಬೇಕೆಂಬ ಸಂಕಲ್ಪವನ್ನು ಮಾಡಿಸಿತು. ಇವರಿಗೆ ರಾಮನಾಮ ಕಲಿಸಿದ ದಾದಿ ರಂಭಾ. ಸತ್ಯ, ರಾಮನಾಮ ಇವೆರಡೂ ಇವರ ಜೀವನದ ಪರಮ ಆದರ್ಶಗಳಾಗಿದ್ದುವು.

ಇವರು 18ನೆಯ ವಯಸ್ಸಿನಲ್ಲಿ ರಾಜಕೋಟೆಯ ಆಲ್ಫ್ರೆಡ್ ಪ್ರೌಢಶಾಲೆಯಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿದರು. ಅನಂತರ ಇವರು ಕಾಲೇಜು ಸೇರಿದರಾದರೂ ಇವರ ವಿದ್ಯಾಭ್ಯಾಸ ಚೆನ್ನಾಗಿ ಆಗಲಿಲ್ಲ. ಆಗ ಹಿತೈಷಿಗಳೊಬ್ಬರ ಸಲಹೆಯಂತೆ ಇವರು ಇಂಗ್ಲೆಂಡಿಗೆ ಹೋಗಿ ನ್ಯಾಯಶಾಸ್ತ್ರ ವ್ಯಾಸಂಗ ಮಾಡಿಬರಬೇಕೆಂದು ನಿರ್ಧಾರವಾಯಿತು. ವಿದೇಶದಲ್ಲಿರುವಾಗ ಮದ್ಯಪಾನ, ಪರಸ್ತ್ರೀಸಂಗ, ಮಾಂಸಾಹಾರಸೇವನೆ ಮಾಡುವುದಿಲ್ಲವೆಂದು ತಾಯಿಗೆ ವಚನವಿತ್ತು, 1888ರ ಸೆಪ್ಟೆಂಬರ್ 4ರಂದು ಇವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಮೋಢ್ ಬನಿಯ ಜಾತಿಯಲ್ಲಿ ಮೊಟ್ಟಮೊದಲು ಸಮುದ್ರಯಾನ ಮಾಡಿದವರು ಇವರೇ. ಇದು ಜಾತಿಪದ್ಧತಿಗೆ ನಿಷಿದ್ಧವೆಂದು ಮುಖಂಡರು ಇವರಿಗೆ ಬಹಿಷ್ಕಾರ ಹಾಕಿದರು. ಆಗ ಇವರಿಗೆ 19 ವರ್ಷ. ಕಸ್ತೂರ ಬಾ ಆ ವೇಳೆಗೆ ಒಂದು ಗಂಡು ಮಗುವಿನ ತಾಯಿಯಾಗಿದ್ದರು.

ಇವರು ಲಂಡನ್ನಿನಲ್ಲಿ ಮೂರು ವರ್ಷಗಳ ಕಾಲ ಇದ್ದರು. ಅಪ್ಪಟ ಆಂಗ್ಲ ಗೃಹಸ್ಥನಂತೆ ಆಗಬೇಕೆಂಬುದು ಆರಂಭದಲ್ಲಿ ಇವರ ಪ್ರಯತ್ನವಾಗಿತ್ತು. ನೃತ್ಯ, ಫ್ರೆಂಚ್, ಉಪನ್ಯಾಸ ಕಲೆ ಇವನ್ನು ಅಭ್ಯಸಿಸಬೇಕೆಂದು ಪ್ರಯತ್ನಿಸಿ, ಅವು ತಮಗೆ ಸಾಧ್ಯವಿಲ್ಲವೆಂದು ಕೈಬಿಟ್ಟರು. ಕರ್ತವ್ಯದ ಕಡೆ ಚೆನ್ನಾಗಿ ಗಮನವಿಟ್ಟು ವ್ಯಾಸಂಗ ಮಾಡಿದರು.

ಇವರು ತಮ್ಮ ತಾಯಿಗೆ ಕೊಟ್ಟಿದ್ದ ವಚನಗಳನ್ನು ಈಡೇರಿಸಲು ಬಹಳ ಶ್ರಮಪಟ್ಟರು. ಮಾಂಸಾಹಾರ ಸೇವಿಸದೆ ಲಂಡನಿನಲ್ಲಿ ಇರುವುದಾದರೂ ಹೇಗೆ ಎಂದು ಸಂಶಯ ಪಡುತ್ತಿದ್ದವರಿಗೆ ಇವರು ಒಂದು ನಿದರ್ಶನವಾದರು. ಮೊದಮೊದಲು ಶಾಕಾಹಾರದ ಭೋಜನ ಗೃಹಗಳಲ್ಲಿ ಊಟಮಾಡುತ್ತಿದ್ದರು. ಕೊನೆಗೆ ತಾವೇ ಅಡುಗೆ ಮಾಡಿಕೊಳ್ಳಲಾರಂಭಿಸಿ ಸಸ್ಯಾಹಾರಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಯೋಗಗಳನ್ನು ಮಾಡಿದರು. ರುಚಿಯ ಅಧಿಷ್ಠಾನ ಮನಸ್ಸೇ ಹೊರತು ನಾಲಗೆಯಲ್ಲವೆಂಬುದು ಇವರ ಅರಿವಿಗೆ ಬಂತು. ಅಸ್ವಾದ ಇವರ ಜೀವನದ ಒಂದು ನಿಯಮವಾಯಿತು. ನೀತಿ ತಪ್ಪುವಂಥ ಪ್ರಸಂಗವೂ ಒಮ್ಮೆ ಇವರಿಗೆ ಬರುವುದರಲ್ಲಿತ್ತು. ಲಂಡನಿನಲ್ಲಿದ್ದಾಗಲೇ ಇವರು ಭಗವದ್ಗೀತೆಯನ್ನು ಮೊದಲನೆಯ ಬಾರಿಗೆ ಓದಿದ್ದು. ಆ ಮಹಾಗ್ರಂಥ ಇವರ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಬೀರಿತು. ಇವರು ಬೈಬಲಿನ ಹೊಸ ಒಡಂಬಡಿಕೆಯನ್ನು ಓದಿದ್ದೂ ಅದೇ ಕಾಲದಲ್ಲಿ. ಕೆಡುಕಿಗೆ ಕೆಡುಕನ್ನು ಮಾಡಬೇಡ ಎಂಬ ಸೂಕ್ತ ಇವರಿಗೆ ಬಹಳ ಹಿಡಿಸಿತು. ಇವರು ಚಿಕ್ಕವರಿದ್ದಾಗ ಓದಿದ್ದ, ಗುಜರಾತಿ ಕವಿ ಶಾಮಲಾಲ್ ಭಟ್ಟನ ಒಂದು ಸೀಸಪದ್ಯದ ಉದಾತ್ತ ಭಾವಗಳನ್ನು ಅದು ಸಮರ್ಥಿಸಿತು.

ಇವರು ಇಂಗ್ಲೆಂಡಿನಲ್ಲಿ ವ್ಯಾಸಂಗ ಮುಗಿಸಿ ಬ್ಯಾರಿಸ್ಟರ್ ಪದವಿ ಪಡೆದು 1891ರ ಜೂನ್ 12ರಂದು ಭಾರತಕ್ಕೆ ಹಿಂದಿರುಗಿ ಎರಡು ವರ್ಷಕಾಲ ಮುಂಬಯಿ ರಾಜಕೋಟೆಗಳಲ್ಲಿ ವಕೀಲ ವೃತ್ತಿ ಮಾಡಿದರು. ಆದರೆ ಇವರಿಗೆ ಯಶಸ್ಸು ದೊರಕಲಿಲ್ಲ. ಇವರಲ್ಲಿ ಆತ್ಮವಿಶ್ವಾಸ, ವಾದಚಾತುರ್ಯ ಇರಲಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದ ಮುಸ್ಲಿಂ ವರ್ತಕರೊಬ್ಬರಿಂದ ಇವರಿಗೆ ಅನಿರೀಕ್ಷಿತವಾಗಿ ಬೇಡಿಕೆಯೊಂದು ಬಂತು. ತಮ್ಮ ಐರೋಪ್ಯ ವಕೀಲರಿಗೆ ಸಹಾಯಕರಾಗಬೇಕೆಂದು ಆ ವರ್ತಕರು ಬಯಸಿದರು. ಇದು ಇವರ ಬಾಳಿನ ಒಂದು ಮುಖ್ಯ ತಿರುವಾಗಿ ಪರಿಣಮಿಸಿತು. 1893ರ ಮೇ ತಿಂಗಳಿನಲ್ಲಿ ಡರ್ಬನಿನಲ್ಲಿ ಬಂದು ಇಳಿದ ಒಂದು ವಾರದ ಮೇಲೆ ಇವರು ಅಲ್ಲಿಯ ನ್ಯಾಯಾಲಯಕ್ಕೆ ಹೋದಾಗ ಇವರು ತಲೆಗೆ ಸುತ್ತಿದ್ದ ಪೇಟವನ್ನು ತೆಗೆಯಬೇಕೆಂದು ನ್ಯಾಯಾಧೀಶ ಆಜ್ಞೆ ಮಾಡಿದ. ಅಲ್ಲಿಯ ಬಿಳಿಯರು ಭಾರತೀಯರನ್ನು ಕಾಣುತ್ತಿದ್ದ ರೀತಿ ಎಂಥದೆಂಬುದು ಇವರಿಗೆ ಪ್ರಥಮವಾಗಿ ಅರಿವಿಗೆ ಬಂತು. ಇದಕ್ಕಿಂತ ಅತ್ಯಂತ ತೀವ್ರತರವಾದ ಆಘಾತವೊಂದು ಇವರಿಗೆ ಕಾದಿತ್ತು. ಇವರು ಡರ್ಬನಿನಿಂದ ಪ್ರಿಟೋರಿಯಕ್ಕೆ ರೈಲಿನ ಮೂಲಕ ಒಂದನೆಯ ತರಗತಿಯ ಡಬ್ಬಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿತು. ಮಾರಿಸ್‌ಬರ್ಗ್‌ನಲ್ಲಿ ಬಿಳಿಯನೊಬ್ಬ ಆ ಡಬ್ಬಿಯನ್ನು ಹೊಕ್ಕ. ಇವರ ಬಳಿ ಒಂದನೆಯ ತರಗತಿಯ ಟಿಕೆಟ್ ಇದ್ದರೂ ಆತ ಇವರನ್ನು ಹೊರತಳ್ಳಿಸಿದ. ವರ್ಣೀಯರು ಒಂದನೆಯ ತರಗತಿಯಲ್ಲಿ ಬಿಳಿಯರೊಂದಿಗೆ ಪ್ರಯಾಣಮಾಡುವುದಕ್ಕೆ ನಿಷೇಧವಿತ್ತು. ಕತ್ತಲು ತುಂಬಿದ ವಿಶ್ರಾಂತಿಮಂದಿರದಲ್ಲಿ ಇವರು ಚಳಿಯಿಂದ ನಡುಗುತ್ತ ರಾತ್ರಿ ಕಳೆಯಬೇಕಾಯಿತು. 'ನನ್ನ ಗಂಟುಮೂಟೆ ಎಲ್ಲಿತ್ತೆಂಬುದು ನನಗೆ ಗೊತ್ತಿರಲಿಲ್ಲ. ಅದು ಎಲ್ಲಿದೆಯೆಂದು ಯಾರನ್ನಾದರೂ ಕೇಳುವ ಧೈರ್ಯವೂ ನನಗಿರಲಿಲ್ಲ. ಹಾಗೆ ಮಾಡಿದರೆ ಮತ್ತೆ ಅವಮಾನ ಹಲ್ಲೆಗಳಿಗೆ ಗುರಿಯಾಗಬೇಕಾಗುತ್ತಿತ್ತು. ನಿದ್ದೆ ಮಾಡುವ ಪ್ರಶ್ನೆಯೇ ಇರಲಿಲ್ಲ. ನನ್ನ ಮನಸ್ಸು ಸಂಶಯದ ಪ್ರಭುತ್ವಕ್ಕೆ ಒಳಗಾಯಿತು. ಭಾರತಕ್ಕೆ ಓಡಿಹೋಗುವುದು ಹೇಡಿತನವೆಂದು ಸರಿರಾತ್ರಿಯಲ್ಲಿ ತೀರ್ಮಾನಕ್ಕೆ ಬಂದೆ' ಎಂದು ಇವರು ಬರೆದುಕೊಂಡಿದ್ದಾರೆ. ನನ್ನ ಕರ್ತವ್ಯವೇನೆಂದು ನನ್ನನ್ನು ನಾನೇ ಕೇಳಿಕೊಂಡೆ. ನಾನು ಭಾರತಕ್ಕೆ ಮರಳಬೇಕೆ ಅಥವಾ ದೇವರು ನೆರವಿಗಿರುವನೆಂದು ನಂಬಿ, ಮುಂದುವರಿದು, ಅನುಭವಿಸಬೇಕಾದ್ದನ್ನೆಲ್ಲ ಅನುಭವಿಸಲೆ ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಂಡು ಅಲ್ಲೇ ಉಳಿದು ಕಷ್ಟ ಅನುಭವಿಸಬೇಕೆಂದು ತೀರ್ಮಾನಿಸಿದರು. ಇವರ ಕ್ರಿಯಾತ್ಮಕ ಅಹಿಂಸೆ ಆರಂಭವಾದದ್ದು ಅಂದಿನಿಂದ.

ದಕ್ಷಿಣ ಆಫ್ರಿಕದಲ್ಲಿ ಭಾರತೀಯ ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸಬೇಕೆಂದು ನಿರ್ಧರಿಸಿದ ಇವರು ಈ ಉದ್ದೇಶಕ್ಕಾಗಿ 1894ರಲ್ಲಿ ನಟಾಲ್ ಇಂಡಿಯನ್ ಕಾಂಗ್ರೆಸ್ ಎಂಬ ಪಕ್ಷ ಸ್ಥಾಪಿಸಿದರು. ಬ್ರಿಟಿಷ್ ಚಕ್ರಾಧಿಪತ್ಯದ ಒಳ್ಳೆಯತನದಲ್ಲಿ ಇವರಿಗೆ ಆಗ ನಂಬಿಕೆಯಿತ್ತು. ದಕ್ಷಿಣ ಆಫ್ರಿಕ ಯುದ್ಧದಲ್ಲೂ (1899–1902) ಝುಲು ದಂಗೆಯಲ್ಲೂ ಇವರು ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಸ್ವಯಂಸೇವಕ ದಳವೊಂದನ್ನು ನಿರ್ಮಿಸಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಮನಃಪೂರ್ವಕವಾಗಿ ನೆರವು ನೀಡಿದರು. ಇದಕ್ಕೆ ಬ್ರಿಟಿಷ್ ಸರ್ಕಾರದ ಮೆಚ್ಚುಗೆ ಲಭಿಸಿತಾದರೂ ಭಾರತೀಯರ ಬಗ್ಗೆ ಅವರ ಧೋರಣೆ ಬದಲಾಗಲಿಲ್ಲ. ಪ್ರತಿಯಾಗಿ ಇನ್ನೂ ಕ್ರೂರವಾಯಿತು. ಈ ವೇಳೆಗೆ ಇವರು ವಕೀಲಿಯಲ್ಲಿ ವಿಶೇಷವಾದ ಕೀರ್ತಿಯನ್ನೂ ಯಶಸ್ಸನ್ನೂ ಗಳಿಸಿದ್ದರು. ಜೀವನದ ಬಗ್ಗೆ, ತಾವು ನಿರ್ವಹಿಸಬೇಕಾದ ಕರ್ತವ್ಯದ ಬಗ್ಗೆ ಇವರ ಮನಸ್ಸು ಹೆಚ್ಚು ಹೆಚ್ಚು ಖಚಿತಗೊಂಡಿತು. ಈ ನಡುವೆ ಇವರು ಭಾರತಕ್ಕೂ ಹೋಗಿ ಬರುತ್ತಿದ್ದರು. ಗೋಪಾಲಕೃಷ್ಣ ಗೋಖಲೆಯವರ ಪರಿಚಯವಾಗಿ ಅದು ಗಾಢ ಸ್ನೇಹವಾಗಿ ಪರಿಣಮಿಸಿತು. ಗೋಖಲೆಯವರನ್ನು ಇವರು ತಮ್ಮ ರಾಜಕೀಯ ಗುರುವೆಂದೇ ಭಾವಿಸಿದರು. ಭಾರತೀಯ ನೆಲಸುಗಾರರ ಹಕ್ಕುಗಳಿಗಾಗಿ ಹೋರಾಟ ನಡೆಸಲು ಇಂಡಿಯನ್ ಒಪೀನಿಯನ್ ಎಂಬ ಪತ್ರಿಕೆಯೊಂದು 1904ರಲ್ಲಿ ಪ್ರಾರಂಭವಾಯಿತು.

ಪ್ರತಿಯೊಬ್ಬ ಭಾರತೀಯನೂ ತನ್ನ ಬೆರಳ ಗುರುತುಗಳನ್ನು ನೋಂದಾಯಿಸಬೇಕೆಂದು ವಿಧಿಸುವ ಮಸೂದೆಯೊಂದಕ್ಕೆ ಟ್ರಾನ್ಸ್‌ವಾಲ್ ಸರ್ಕಾರ 1906ರಲ್ಲಿ ಅನುಮೋದನೆ ನೀಡಿದಾಗ ಹೋರಾಟ ಬಿರುಸಾಯಿತು. ಸ್ತ್ರೀಪುರಷರೆಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಅನ್ವಯಿಸುತ್ತಿದ್ದ ಈ ಕಾನೂನಿನಂತೆ ನಡೆಯದವರು ದಂಡ ಕಾರಾಗೃಹವಾಸಗಳ ಶಿಕ್ಷೆಗೆ ಒಳಗಾಗಬೇಕಾಗುತ್ತಿತ್ತು. ಅಪಮಾನಕರವಾದ ಈ ಕಾನೂನಿಗೆ ವಿಧೇಯತೆ ತೋರಿಸಬಾರದೆಂದು ಇವರು ಭಾರತೀಯರಿಗೆ ಹೇಳಿದರು. ಇವರ ನಾಯಕತ್ವದಲ್ಲಿ 2,000 ಸ್ತ್ರೀಯರು ಪ್ರತಿಭಟನೆಯ ಮೆರವಣಿಗೆ ನಡೆಸಿದರು. ಜೈಲಿಗೂ ನಡೆದರು.

ಇವರು ಆರಂಭಿಸಿದ ಸತ್ಯಾಗ್ರಹದಲ್ಲಿ ಅನೇಕ ಭಾರತೀಯ ವರ್ತಕರೂ ವಕೀಲರೂ ಸಾಮಾನ್ಯರೂ ಭಾಗವಹಿಸಿ ಕಾರಾಗೃಹವಾಸ ಅನುಭವಿಸಿದರು. ಗಡೀಪಾರು, ಆರ್ಥಿಕ ಒತ್ತಾಯ ಮುಂತಾದ ಯಾವುದಕ್ಕೂ ಸತ್ಯಾಗ್ರಹಿಗಳು ಜಗ್ಗಲಿಲ್ಲ. ಇವರ ನಾಯಕತ್ವದಲ್ಲಿ ಅವರ ನಂಬಿಕೆ ಅಷ್ಟು ಅಗಾಧವಾಗಿತ್ತು. 1912ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ದಕ್ಷಿಣ ಆಫ್ರಿಕಕ್ಕೆ ಭೇಟಿಯಿತ್ತುದರ ಪರಿಣಾಮವಾಗಿ ವರ್ಣಭೇದನೀತಿ ನಿಲ್ಲುವುದೆಂದೂ ಭಾರತೀಯರು ತೆರಬೇಕಾಗಿದ್ದ ತೆರಿಗೆ ರದ್ದಾಗುವುದೆಂದೂ ಆಸೆ ಹುಟ್ಟಿತ್ತಾದರೂ ಅದು ಭಗ್ನವಾಯಿತು. ಕ್ರೈಸ್ತ ವಿವಾಹಪದ್ಧತಿಗನುಗುಣವಾಗಿ ವಿವಾಹ ದಾಖಲಾತಿ ಹೊಂದದ ಎಲ್ಲ ಹಿಂದು, ಮುಸ್ಲಿಂ ಮತ್ತು ಪಾರ್ಸಿ ವಿವಾಹಗಳೂ ನ್ಯಾಯಬದ್ಧವಲ್ಲವೆಂಬುದು ಶ್ರೇಷ್ಠ ನ್ಯಾಯಾಲಯವಿತ್ತ ಒಂದು ತೀರ್ಪಿನ ಫಲ. ಇದು ಭಾರತೀಯರ ಆತ್ಮಗೌರವವನ್ನು ಪೂರ್ಣವಾಗಿ ನಾಶಮಾಡಿತು. ಸತ್ಯಾಗ್ರಹ ಚಳವಳಿಗೆ ಇದರಿಂದ ಪುಟವಿಟ್ಟಂತಾಯಿತು. ಈ ಸತ್ಯಾಗ್ರಹ ಹೋರಾಟದಲ್ಲಿ ಪುರುಷರ ಜೊತೆಗೆ ಸ್ತ್ರೀಯರೂ ಭಾಗವಹಿಸಿದರು. ಶಾಸನವನ್ನು ಉಲ್ಲಂಘಿಸಿ ನಟಾಲಿನಿಂದ ಟ್ರಾನ್ಸ್‌ವಾಲಿಗೆ ಪ್ರವೇಶಿಸುವುದೇ ಆಗಿನ ಸತ್ಯಾಗ್ರಹದ

ಕ್ರಮ. 1913ರ ನವೆಂಬರ್ 6ರಂದು ನಡೆದ ಶಾಸನೋಲ್ಲಂಘನ ಯಾತ್ರೆಯಲ್ಲಿ ಅಸಂಖ್ಯ ಹೆಂಗಸರೂ ಗಂಡಸರೂ ಮಕ್ಕಳೂ ಭಾಗವಹಿಸಿದರು. ದಕ್ಷಿಣ ಆಫ್ರಿಕ ಸರ್ಕಾರ ಸತ್ಯಾಗ್ರಹಿಗಳ ಮೇಲೆ ನಡೆಸಿದ ಅತ್ಯಾಚಾರ ಬಹಳ ಹೇಯವಾದದ್ದು. ಕೊನೆಗೆ ಇವರು ಮತ್ತು ಜನರಲ್ ಸ್ಮಟ್ಸರ ನಡುವೆ ಮಾತುಕತೆ ನಡೆದು ಒಂದು ಒಪ್ಪಂದವಾಯಿತು. 8 ವರ್ಷಗಳ ಸತ್ಯಾಗ್ರಹ ಕೊನೆಗೊಂಡಿತು. ಭಾರತೀಯರ ಬೇಡಿಕೆಗಳು ಸ್ವೀಕೃತವಾಗಿ ತೆರಿಗೆ ರದ್ದಾಯಿತು. ಭಾರತೀಯ ಸಂಪ್ರದಾಯದ ಪ್ರಕಾರ ನಡೆದ ವಿವಾಹಗಳು ಶಾಸನಬದ್ಧವೆಂದು ಘೋಷಿತವಾದುವು. ಇದರಿಂದ ದಕ್ಷಿಣ ಆಫ್ರಿಕದ ಭಾರತೀಯರ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕದಿದ್ದರೂ ಭಾರತೀಯರು ಆತ್ಮಗೌರವಕ್ಕಾಗಿ ಹೋರಾಡುವ ಶಕ್ತಿಯನ್ನು ಕಂಡುಕೊಂಡರು. ಅಲ್ಲದೆ ಈ ಹೋರಾಟದ ನಾಯಕತ್ವ ವಹಿಸಿದ್ದರಿಂದ ಇವರು ಅಪಾರ ಅನುಭವ ಪಡೆದರು. ಸಾಮಾಜಿಕ, ರಾಜಕೀಯ ಚಳವಳಿಗಳನ್ನು ನಡೆಸಲು ಹೊಸದೊಂದು ತಂತ್ರವೇ ಇವರಿಂದ ಸೃಷ್ಟಿಯಾಗಿತ್ತು. ಇವರು ಹೂಡಿದ ಈ ಹೋರಾಟವನ್ನು ಮೊದಲು ನಿಶ್ಶಸ್ತ್ರ ಪ್ರತಿಭಟನೆ ಎಂದೇ ಕರೆಯಲಾಗುತ್ತಿತ್ತು. ಅನಂತರ ಇವರು ಇದನ್ನು ಸದಾಗ್ರಹವೆಂದೂ ಕೊನೆಗೆ ಸತ್ಯಾಗ್ರಹ ಎಂದೂ ಕರೆದರು. 1906ರಿಂದ 1914ರ ವರೆಗೆ ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ ಚಳವಳಿ ನಡೆಯಿತು.

ತಮ್ಮ ವಕೀಲಿಯಿಂದ ಚೆನ್ನಾಗಿ ಸಂಪಾದನೆ ಮಾಡುತ್ತಿದ್ದ ಇವರು ಕ್ರಮೇಣ ಅದನ್ನೂ ಬಿಟ್ಟುಕೊಟ್ಟರು. ತಮ್ಮ ವೇಳೆಯನ್ನೆಲ್ಲ ಇವರು ತಮ್ಮ ಮುಂದಿರಿಸಿಕೊಂಡಿದ್ದ ಉದ್ದೇಶಕ್ಕಾಗಿಯೇ ಮೀಸಲಾಗಿರಿಸಿದರು. ಜೀವನದ ಬಗ್ಗೆ ಇವರ ಧೋರಣೆ ಶೀಘ್ರವಾಗಿ ಬದಲಾಗುತ್ತಿತ್ತು.



ಗೀತೆ, ಉಪನಿಷತ್ತು, ಕುರಾನ್, ಬೈಬಲ್‌ಗಳನ್ನು ಆಳವಾಗಿ ಅಭ್ಯಾಸ ಮಾಡಿದರು. ಗೀತೆಯಂತೂ ಬಾಯಿ ಪಾಠವಾಗಿತ್ತು. ಅದು ಇವರ ಜೀವನ ಧರ್ಮಸೂತ್ರ. ಇವರ ಮೇಲೆ ಮಹತ್ತ್ವದ ಪರಿಣಾಮ ಬೀರಿದ ಮತ್ತೊಂದು ಪುಸ್ತಕವೆಂದರೆ ಜಾನ್ ರಸ್ಕಿನ್ನನ ಅನ್ ಟು ದಿ ಲಾಸ್ಟ್. ಎಲ್ಲರ ಒಳಿತಾದಾಗಲೇ ವ್ಯಕ್ತಿಯ ಒಳಿತು; ದುಡಿಮೆಯ ಬಾಳೇ ಸಾರ್ಥಕವಾದ್ದು ಎಂಬುದು ಇವರು ಗ್ರಹಿಸಿದ ತತ್ತ್ವ. ಬ್ರಹ್ಮಚರ್ಯವನ್ನು ಇವರು ಅನುಷ್ಠಾನಕ್ಕೆ ತಂದರು. ತಮ್ಮ ಸಂಸಾರದೊಂದಿಗೂ ಸ್ನೇಹಿತರೊಂದಿಗೂ ಇವರು ಫೀನಿಕ್ಸ್ ಆಶ್ರಮವನ್ನೂ ಟಾಲ್‌ಸ್ಟಾಯ್ ಆಶ್ರಮವನ್ನೂ ಸ್ಥಾಪಿಸಿದರು. ದೇಹ ಮನಸ್ಸುಗಳೆರಡರ ಸಾಮರಸ್ಯ ಸಾಧಿಸಿದರು. ಗುಡಿಸುವುದು, ಬಟ್ಟೆ ಹೊಲಿಯುವುದು, ಕೃಷಿ, ಮುದ್ರಣ–ಹೀಗೆ ಎಲ್ಲ ಬಗೆಯ ಕೆಲಸಗಳನ್ನೂ ಮಾಡಿದರು. ಯಾವ ಕೆಲಸವೂ ತುಚ್ಛವಲ್ಲ, ಯಾವುದೂ ದೊಡ್ಡದಲ್ಲ ಎಂಬುದು ಇವರು ಸ್ವತಃ ಕಲಿತ, ಕಲಿಸಿದ ಪಾಠ. ಇವರೊಬ್ಬ ವಸ್ತುನಿಷ್ಠ ಆದರ್ಶವಾದಿ.

ಇವರು ದಕ್ಷಿಣ ಆಫ್ರಿಕದಲ್ಲಿ 21 ವರ್ಷಗಳ ಕಾಲವಿದ್ದದರಿಂದ ಇದು ಇವರಿಗೊಂದು ಪ್ರಯೋಗಶಾಲೆಯಾಯಿತು. ಇವರ ವ್ಯಕ್ತಿತ್ವ ವಿಕಾಸ ಹೊಂದಿದ್ದಲ್ಲದೆ, ಇವರ ಜೀವನತತ್ತ್ವದ ವಿಕಾಸವೂ ಆಯಿತು. ನೈತಿಕ ಪ್ರಶ್ನೆಗಳ ಬಗ್ಗೆ ಜಿಜ್ಞಾಸೆ ಇವರ ಬಾಲ್ಯದಿಂದಲೇ ಮುಂದುವರಿದಿದ್ದರೂ ಅದನ್ನು ಆಗ ವ್ಯವಸ್ಥಿತ ರೂಪದಲ್ಲಿ ನಡೆಸಿದರು. ಗೀತಾಧ್ಯಯನದಿಂದ ಇವರು ಅಸಂಗ್ರಹದ–ಐಚ್ಛಿಕ ದಾರಿದ್ರ್ಯದ–ಆದರ್ಶವನ್ನು ರೂಢಿಸಿಕೊಂಡರು. ನಿಷ್ಕಾಮಸೇವೆ, ಬ್ರಹ್ಮಚರ್ಯ ಇವು ಇವರ ಸಾರ್ವಜನಿಕ ಜೀವನಕ್ಕೆ ಶಕ್ತಿಯನ್ನು ನೀಡಿದವು. ಟಾಲ್‌ಸ್ಟಾಯಿಯ ಗ್ರಂಥಗಳ ಅಧ್ಯಯನ ಇವರ ಅಭಿಪ್ರಾಯಗಳನ್ನು ಮತ್ತಷ್ಟು ದೃಢಪಡಿಸಿತು. ಇವರು ಕಾಯಕದ ಪ್ರಭಾವವನ್ನು ಅರಿತರು. ಟಾಲ್‌ಸ್ಟಾಯಿಯೊಂದಿಗೆ ಇವರು ಪತ್ರವ್ಯವಹಾರ ಬೆಳೆಸಿದರು. ಸತ್ಯಾಗ್ರಹ ವಿಶ್ವವ್ಯಾಪಕವಾಗುವಷ್ಟು ಪ್ರಾಮುಖ್ಯವುಳ್ಳ ಒಂದು ಪರಿಕಲ್ಪನೆ ಎಂದು ಟಾಲ್‌ಸ್ಟಾಯ್ ಹೊಗಳಿದರು. ಇವರು ಒಂದು ನೂತನ ಜೀವನದರ್ಶನವನ್ನೇ ಕಂಡುಕೊಂಡು ಅದಕ್ಕೆ ತಮ್ಮ ಬಾಳನ್ನು ಮುಡುಪಾಗಿಟ್ಟರು. ಇದನ್ನು ಸರ್ವೋದಯ–ಸರ್ವರ ಕ್ಷೇಮ–ಎಂದು ಕರೆದರು. ಇವರು ದಕ್ಷಿಣ ಆಫ್ರಿಕದಲ್ಲಿದ್ದಾಗ ತಮ್ಮ ಮನಸ್ಸಿನಲ್ಲಿ ರೂಪುಗೊಂಡ ಭಾವನೆಗಳನ್ನೆಲ್ಲ ಅಭಿವ್ಯಕ್ತಿಸಿ ಬರೆದ ಪುಸ್ತಕ ಹಿಂದ್ ಸ್ವರಾಜ್ ಅಥವಾ ಇಂಡಿಯನ್ ಹೋಂ ರೂಲ್ (1909). ಇದು ಇವರ ಚಿಂತನದ ಸಾರದಂತಿದೆ. ಸಾಮಾನ್ಯ ವ್ಯಕ್ತಿಯ ಹಕ್ಕುಗಳಿಗೆ ಮಾನ್ಯತೆ ಇರುವ, ಅವನ್ನು ಅವನು ರಕ್ಷಿಸಿಕೊಳ್ಳಲು ಅವಕಾಶವಿರುವ, ಶೋಷಣೆರಹಿತವಾದ ಸಮಾಜವೇ ತಮ್ಮ ಗುರಿಯೆಂದು ಇದರಲ್ಲಿ ಪ್ರತಿಪಾದಿಸಿದ್ದಾರೆ. ಯಂತ್ರ ನಾಗರಿಕತೆಯನ್ನು ಇಲ್ಲಿ ಖಂಡಿಸಿರುವ ರೀತಿ ಅನುಪಮವಾದುದ್ದು. ಟಾಲ್‌ಸ್ಟಾಯ್‌ಗೆ ಈ ಪುಸ್ತಕ ಬಹಳ ಪ್ರಿಯವಾಯಿತು.

ಇವರು 1915ರ ಜನವರಿಯಲ್ಲಿ ಭಾರತಕ್ಕೆ ಹಿಂತಿರುಗಿದಾಗ ರವೀಂದ್ರನಾಥ ಠಾಕೂರರು ಇವರನ್ನು ಮಹಾತ್ಮ ಎಂದು ಕರೆದರು. ಗೋಪಾಲಕೃಷ್ಣ ಗೋಖಲೆಯವರ ಸಲಹೆಯಂತೆ ಇವರು ಒಂದು ವರ್ಷ ಕಾಲ ಯಾವ ಸಾರ್ವಜನಿಕ ಕಾರ್ಯದಲ್ಲೂ ತೊಡಗದೆ ಭಾರತದ ಪರಿಸ್ಥಿತಿಯ ಅಧ್ಯಯನವನ್ನು ಆರಂಭಿಸಿದರು. 1915ರ ಮೇ ತಿಂಗಳಿನಲ್ಲಿ ಅಹಮದಾಬಾದಿನ ಬಳಿ ಸತ್ಯಾಗ್ರಹ ಆಶ್ರಮ ಆರಂಭವಾಯಿತು. ಆಶ್ರಮವಾಸಿಗಳು ಖಾದಿ ಧರಿಸಬೇಕಾಗಿತ್ತು. ಸತ್ಯ ಅಹಿಂಸೆ ಬ್ರಹ್ಮಚರ್ಯಗಳನ್ನು ಪಾಲಿಸುತ್ತ, ಅಸ್ಪೃಶ್ಯತಾ ನಿವಾರಣೆ, ಮಾತೃಭಾಷೆಯ ಮೂಲಕ ಶಿಕ್ಷಣ ಮುಂತಾದ ಕಾರ್ಯಗಳಲ್ಲಿ ಪ್ರವೃತ್ತರಾಗುವುದಾಗಿ ಇವರು ವ್ರತ ತೊಟ್ಟಿದ್ದರು.

ಇವರು ಎರಡು ವರ್ಷಗಳ ಕಾಲ ಭಾರತದಲ್ಲಿ ಸಂಚಾರ ಮಾಡಿದರು. ಒಂದನೆಯ ಮಹಾಯುದ್ಧ ಅಂತಿಮಘಟ್ಟ ಮುಟ್ಟಿದ್ದ ಆ ಕಾಲದಲ್ಲಿ ಬಿಹಾರದ ಚಂಪಾರಣ್‌ನ ರೈತರ ಕರುಣಾಜನಕ ಸ್ಥಿತಿ ಇವರ ಗಮನ ಸೆಳೆಯಿತು. ಅಲ್ಲಿಯ ರೈತರು ದೀರ್ಘಕಾಲದಿಂದ ಐರೋಪ್ಯ ಮತ್ತು ಭಾರತೀಯ ಭೂಮಾಲೀಕರ ಶೋಷಣೆಗೆ ಒಳಗಾಗಿದ್ದರು. ರಾಜೇಂದ್ರಪ್ರಸಾದರೊಂದಿಗೆ ಇವರು ಅಲ್ಲಿಯ ರೈತರ ಸ್ಥಿತಿಯನ್ನು ಕುರಿತ ವಿಚಾರಣೆಯಲ್ಲಿ ತೊಡಗಿದರು. ಬ್ರಿಟಿಷ್ ಸರ್ಕಾರ ಇದನ್ನು ಸಹಿಸದೆ ಇವರು ಆ ಜಿಲ್ಲೆಯಿಂದ ಹೊರಗೆ ಹೋಗಬೇಕೆಂಬ ಆಜ್ಞೆಯನ್ನು ಜಾರಿಗೊಳಿಸಿದಾಗ ಅದನ್ನು ಉಲ್ಲಂಘಿಸಿದರು. ಭಾರತದಲ್ಲಿ ಮೊಟ್ಟಮೊದಲನೆಯ ಸತ್ಯಾಗ್ರಹವಿದು. ನ್ಯಾಯಾಲಯದಲ್ಲಿ ಇವರ ವಿಚಾರಣೆಯಾಯಿತು. ತಾವು ಆಜ್ಞೋಲ್ಲಂಘನ ಮಾಡಿದ್ದುಂಟೆಂದು ಒಪ್ಪಿಕೊಂಡರು. ಗವರ್ನರ್ ನಡುವೆ ಪ್ರವೇಶಿಸಿ, ವಿಚಾರಣಾ ಸಮಿತಿಯೊಂದನ್ನು ನೇಮಕ ಮಾಡಿದರು. ಇವರೂ ಸದಸ್ಯರಾಗಿದ್ದ ಆ ಸಮಿತಿಯ ಶಿಫಾರಸುಗಳ ಮೇರೆಗೆ ಚಂಪಾರಣ್ ರೈತರ ಸುಧಾರಣೆಗಾಗಿ ಕಾಯಿದೆ ಜಾರಿಗೆ ಬಂತು. ಅನಂತರ ಇವರ ಗಮನ ಅಹಮದಾಬಾದಿನ ಗಿರಿಣಿ ಕಾರ್ಮಿಕರತ್ತ ಹರಿಯಿತು. ಅವರಿಗೆ ನ್ಯಾಯವಾದ ವೇತನ ದೊರಕಬೇಕೆಂದು ಇವರು ಇಪ್ಪತ್ತೊಂದು ದಿನಗಳ ಮುಷ್ಕರವನ್ನು ಸಂಘಟಿಸಿದರು. ಅದೂ ಫಲಪ್ರದವಾಯಿತು.

ಬ್ರಿಟಿಷ್ ನ್ಯಾಯದಲ್ಲಿ ವಿಶೇಷ ನಂಬಿಕೆ ಇಟ್ಟಿದ್ದ ಇವರು ವೈಸ್‌ರಾಯ್ ಲಾರ್ಡ್ ಚೆಲ್ಮ್ಸ್‌ಫರ್ಡನ ಅಪೇಕ್ಷೆಯಂತೆ ಒಂದನೆಯ ಮಹಾಯುದ್ಧದಲ್ಲಿ ಬ್ರಿಟನ್ನಿಗೆ ತಮ್ಮ ಬೆಂಬಲ ನೀಡಿದರು. ಆದರೆ ಇವರ ಈ ನಂಬಿಕೆ ಅಲುಗುವಂಥ ಘಟನೆಯೊಂದು ಅಷ್ಟರಲ್ಲಿ ಸಂಭವಿಸಿತು. ಜನರ ರಾಜಕೀಯ ಆಶೋತ್ತರಗಳನ್ನು ಸರ್ಕಾರ ಈಡೇರಿಸುವ ಬದಲು ಅವನ್ನು ಹತ್ತಿಕ್ಕುವ ಕ್ರಮ ಕೈಗೊಂಡಿತು. ಬ್ರಿಟಿಷ್ ಸರ್ಕಾರಕ್ಕೆ ವಿರುದ್ಧವಾದ ಕಲಾಪಗಳಲ್ಲಿ ತೊಡಗಿರುವರೆಂಬ ಸಂಶಯಕ್ಕೆ ಒಳಗಾದವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಲು ಸರ್ಕಾರಕ್ಕೆ ಅಧಿಕಾರ ನೀಡುವ ರೌಲತ್ ಕಾಯಿದೆ ಜಾರಿಗೆ ಬಂದಾಗ ಇವರು ಅದನ್ನು ಪ್ರತಿಭಟಿಸಿದರು. ಏಪ್ರಿಲ್ 6ರಂದು ಹರತಾಳವನ್ನಾಚರಿಸಬೇಕೆಂದು ಕರೆ ಇತ್ತರು. ಇವರು ದೆಹಲಿಗೆ ಹೋಗುತ್ತಿದ್ದಾಗ ಹಾದಿಯಲ್ಲಿ ದಸ್ತಗಿರಿಯಾದರು. ಇದರಿಂದ ಮುನಿದ ಜನ ಹಿಂಸಾಚರಣೆ ಮಾಡಿದರು. ಇವರು ಸತ್ಯಾಗ್ರಹವನ್ನು ನಿಲ್ಲಿಸಬೇಕಾಯಿತು. ಅದೇ ಸಮಯದಲ್ಲಿ ಇನ್ನೊಂದು ಮಹಾ ದುರ್ಘಟನೆ ನಡೆಯಿತು. ಅಮೃತಸರದ ಜಲಿಯನ್‌ವಾಲಾಬಾಗಿನಲ್ಲಿ ಸೇರಿದ್ದ ನಿಶ್ಶಸ್ತ್ರ ಜನರ ಮೇಲೆ ಸರ್ಕಾರ ಗುಂಡಿನ ಮಳೆಗರೆದಾಗ ನೂರಾರು ಜನ ಅಸುನೀಗಿದರು. ಪಂಜಾಬಿನಲ್ಲಿ ಲಷ್ಕರಿ ಕಾನೂನು ಜಾರಿಗೆ ಬಂತು. ಇದರಿಂದ ಇಡೀ ಭಾರತದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಕ್ರೋಧ ಹಬ್ಬಿತು. ಈ ಸಮಯದಲ್ಲಿ ಇವರು ಜನರಿಗೆ ಅಹಿಂಸೆಯನ್ನೂ ನಿರ್ಭಯವನ್ನೂ ಬೋಧಿಸಿದರು. ಇದಕ್ಕಾಗಿಯೇ ಯಂಗ್ ಇಂಡಿಯ ಎಂಬ ಪತ್ರಿಕೆಯೂ ಗುಜರಾತಿಯಲ್ಲಿ ನವಜೀವನ ಎಂಬ ಪತ್ರಿಕೆಯೂ ಆರಂಭವಾದುವು (1919).

1920ರಲ್ಲಿ ಆರಂಭವಾದ ಒಂದು ಮುಖ್ಯ ಚಳವಳಿ ಖಿಲಾಫತ್. ತುರ್ಕಿಯ ಕಲೀಫನ ಅಧಿಕಾರಕ್ಕೆ ಚ್ಯುತಿ ಬಾರದಂತೆ ಬ್ರಿಟನ್ನಿಗೆ ಒತ್ತಾಯ ಹಾಕಲು ಭಾರತೀಯ ಮುಸ್ಲಿಮರು ಆರಂಭಿಸಿದ್ದ ಚಳವಳಿಯಿದು. ಮುಸ್ಲಿಮರ ಮನಸ್ಸನ್ನು ಕಲಕಿದ್ದ ಈ ಚಳವಳಿಯಲ್ಲಿ ಹಿಂದುಗಳು ಸಹಾನುಭೂತಿಯಿಂದ ಪಾಲ್ಗೊಳ್ಳಬೇಕೆಂಬುದು ಇವರ ಅಭಿಮತವಾಗಿತ್ತು. ಹಿಂದು ಮುಸ್ಲಿಂ ಐಕ್ಯ ಸಾಧನೆ ಇದರ ಉದ್ದೇಶ. ಬ್ರಿಟಿಷ್ ಸಾಮ್ರಾಜ್ಯಾಧಿಕಾರದ ಸಂಕೇತವಾದ ಎಲ್ಲ ಬಿರುದುಗಳನ್ನೂ ಗೌರವಗಳನ್ನೂ ಭಾರತೀಯರು ಹಿಂದಕ್ಕೊಪ್ಪಿಸಬೇಕು. ಶಾಲೆ ಕಾಲೇಜು ನ್ಯಾಯಾಲಯ ವಿಧಾನಸಭೆಗಳನ್ನು ಬಹಿಷ್ಕರಿಸಬೇಕು–ಎಂದು ಇವರು ಕರೆ ಕೊಟ್ಟರು. ತಮಗೆ ಬ್ರಿಟಿಷ್ ಸತ್ತೆಯಿಂದ ದತ್ತವಾಗಿದ್ದ ಪದಕವೇ ಮುಂತಾದವನ್ನು ಜನರು ಹಿಂದಿರುಗಿಸಿದರು. ಸತ್ಯಾಗ್ರಹ ಆರಂಭವಾಯಿತು. ಭಾರತದ ಜನರನ್ನು ಇವರು ಅಹಿಂಸಾತ್ಮಕ ಹೋರಾಟದ ಪಥದಲ್ಲಿ ಕೊಂಡೊಯ್ಯಲು ಸತತವಾಗಿ ಯತ್ನಿಸಿದರು. ಚರಕ ಇವರ ಸ್ವರಾಜ್ಯದ ಪ್ರತೀಕವಾಯಿತು. ನಿರುದ್ಯೋಗಿಗಳಿಗೆ ಇದರಿಂದ ಉದ್ಯೋಗ ದೊರಕುವಂತಾಯಿತು. ಭಾರತವನ್ನು ಲಂಕಾಷೈರಿನ ಯಂತ್ರದ ಹಿಡಿತದಿಂದ ಬಿಡಿಸಲು ಇದೊಂದೇ ಮಾರ್ಗ. ಬೇರೆಲ್ಲ ವಿದೇಶೀ ವಸ್ತುಗಳನ್ನು ಬಹಿಷ್ಕರಿಸಿದರೂ ವಸ್ತ್ರಕ್ಕಾಗಿ ಅನ್ಯರನ್ನು ಅವಲಂಬಿಸಬೇಕಾದ ಪರಿಸ್ಥಿತಿಯನ್ನು ತಪ್ಪಿಸಲಿಕ್ಕಾಗಿ ಇದು ಅಗತ್ಯ ಎಂಬುದು ಇವರ ವಾದ. ಅಸಂಖ್ಯಾತ ಜನರಿಗೆ ತಮ್ಮ ಹರಿದ ಬಟ್ಟೆಯ ಬದಲು ಖಾದಿ ಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದ್ದದ್ದನ್ನು ಕಂಡು ಇವರ ಮನಸ್ಸು ಬಲು ನೊಂದಿತು. ಅಂಥವರಿಗೆ ಒಂದು ತುಂಡು ದಟ್ಟಿಯಿದ್ದರೂ ಸಾಕಿತ್ತು. ಹಾಗಿರುವಾಗ ತಾವಾದರೂ ಹೇಗೆ ಮೈ ತುಂಬ ಬಟ್ಟೆ ತೊಟ್ಟುಕೊಂಡಾರು. 1921ರಲ್ಲಿ ಇವರು ತುಂಡುಪಂಚೆಧಾರಿಯಾದರು. ಅಸಹಕಾರ ಚಳವಳಿಯನ್ನು ಬಲಪಡಿಸಿದರು. ಅಸಹಕಾರ ಧಾರ್ಮಿಕ ಹಾಗೂ ನೈತಿಕ ಚಳವಳಿಯಾದರೂ ಸರ್ಕಾರವನ್ನು ಉರುಳಿಸುವುದೇ ಅದರ ಧ್ಯೇಯ ಎಂದು ಸಾರಿದರು. ಬ್ರಿಟಿಷ್ ಚಕ್ರಾಧಿಪತ್ಯವನ್ನು ಸೈತಾನನ ಪ್ರಭುತ್ವವೆಂದು ಕರೆದರು.

1922ರಲ್ಲಿ ಇವರು ಗುಜರಾತಿನ ಬಾರ್ಡೋಲಿ ಜಿಲ್ಲೆಯಲ್ಲಿ ಸಾಮೂಹಿಕ ಕರನಿರಾಕರಣೆಯ ಚಳವಳಿಯ ನಾಯಕತ್ವ ವಹಿಸಲು ನಿರ್ಧರಿಸಿದರು. ಆದರೆ ಆ ಸಮಯಕ್ಕೆ ಸರಿಯಾಗಿ ಉತ್ತರ ಪ್ರದೇಶದ ಚೌರಿಚೌರಾದಲ್ಲಿ ಜನರು ಹಿಂಸಾಕಾರ್ಯದಲ್ಲಿ ತೊಡಗಿದರು. ಪೊಲೀಸರ ಮೇಲೆ ಹಲ್ಲೆ ಮಾಡಿದರು. ಜನರಿನ್ನೂ ಅಹಿಂಸಾತ್ಮಕ ಚಳವಳಿಗೆ ಸಿದ್ಧರಾಗಿಲ್ಲವೆಂದು ಇವರಿಗೆ ಮನವರಿಕೆಯಾಗಿ ಸಾಮೂಹಿಕ ಚಳವಳಿಯನ್ನು ನಿಲ್ಲಿಸಿದರು. ಇವರ ಈ ನಿರ್ಣಯವನ್ನು ಅನೇಕರು ಒಪ್ಪಲಿಲ್ಲ. ಇವರು ಇದರ ಪ್ರಾಯಶ್ಚಿತ್ತರೂಪವಾಗಿ ಐದು ದಿನಗಳ ಉಪವಾಸ ಕೈಗೊಂಡರು. 1922ರ ಮಾರ್ಚ್ 13ರಂದು ಸರ್ಕಾರ ಇವರನ್ನು ಬಂಧಿಸಿತು. ಯಂಗ್ ಇಂಡಿಯ ಪತ್ರಿಕೆಯಲ್ಲಿ ಬರೆದಿದ್ದ ಲೇಖನಗಳು ರಾಜದ್ರೋಹಾತ್ಮಕವೆಂದು ಅದು ಆಪಾದಿಸಿತು. ನ್ಯಾಯಾಲಯ ಇವರಿಗೆ ಆರು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿತು. ಪುಣೆಯ ಕಾರಾಗೃಹದಲ್ಲಿ ಎರಡು ವರ್ಷ ಕಳೆದ ಮೇಲೆ ಇವರಿಗೆ ಹರ್ನಿಯ ವ್ಯಾಧಿಗಾಗಿ ಶಸ್ತ್ರಚಿಕಿತ್ಸೆ ನಡೆಯಬೇಕಾಗಿದ್ದುದರಿಂದ ಇವರು ಬಿಡುಗಡೆ ಹೊಂದಿದರು.

ಆ ವೇಳೆಗೆ ಖಿಲಾಫತ್ ಚಳವಳಿ ವಿಫಲವಾಗಿತ್ತು. ವಿಧಾನ ಮಂಡಲಗಳನ್ನು ಪ್ರವೇಶಿಸಿ ಅಲ್ಲಿಂದ ಸರ್ಕಾರವನ್ನು ವಿರೋಧಿಸಬೇಕೆಂಬವರು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದ್ದರು. ವಿಧಾನಮಂಡಲ ಪ್ರವೇಶ ಮಾಡಬೇಕೆಂಬುದು ಕಾಂಗ್ರೆಸಿನ ಬಹುಮತಾಭಿಪ್ರಾಯವಾಗಿತ್ತಾದರೂ ಇವರು ರಾಜಕೀಯದಿಂದ ದೂರವಾದರು. ಖಾದಿ ಪ್ರಚಾರಕ್ಕೆ ಇವರು ಹೆಚ್ಚು ಗಮನ ನೀಡಿದರು. 1924ರಲ್ಲಿ ಬೆಳಗಾಂವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಇವರು ಅಧ್ಯಕ್ಷರಾಗಿದ್ದರು.

1927ರಲ್ಲಿ–ಇರ್ವಿನ್ ವೈಸ್‌ರಾಯ್ ಆಗಿದ್ದಾಗ–ಭಾರತದ ರಾಜ್ಯಾಂಗ ಸುಧಾರಣೆಗಳಿಗಾಗಿ ಸರ್ ಜಾನ್ ಸೈಮನ್ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಆಯೋಗವನ್ನು ನೇಮಿಸಿತು. ಒಬ್ಬನಾದರೂ ಭಾರತೀಯ ಸದಸ್ಯನಿಲ್ಲದ ಆ ಆಯೋಗವನ್ನು ಭಾರತೀಯರು ವಿರೋಧಿಸಿದರು. ಕಾಂಗ್ರೆಸ್ ಬಹಿಷ್ಕಾರ ಹಾಕಿತು. ಭಾರತದ ರಾಜಕೀಯ ಭವಿಷ್ಯವನ್ನು ನಿರ್ಧರಿಸಲು ಬ್ರಿಟಿಷ್ ಮತ್ತು ಭಾರತೀಯ ಪ್ರತಿನಿಧಿಗಳನ್ನೊಳಗೊಂಡ ದುಂಡುಮೇಜಿನ ಪರಿಷತ್ತೊಂದು ನಡೆಯುವುದಾಗಿ ಪ್ರಕಟನೆ ಹೊರಬಿತ್ತು. ಭಾರತಕ್ಕೆ ಅಧಿರಾಜ್ಯ ಸ್ಥಾನವನ್ನು (ಡೊಮಿನಿಯನ್ ಸ್ಟೇಟಸ್) ನೀಡುವುದಾಗಿ ಪರಿಷತ್ತು ತೀರ್ಮಾನಿಸುವ ಬಗ್ಗೆ ವೈಸ್‌ರಾಯನಿಂದ ಭರವಸೆ ಬರಲಿಲ್ಲ. ಸಂಪೂರ್ಣ ಸ್ವರಾಜ್ಯವೇ ತನ್ನ ಗುರಿಯೆಂದು ಕಾಂಗ್ರೆಸ್ ಘೋಷಿಸಿತು. ಮತ್ತೊಂದು ಮಹಾ ಚಳವಳಿಗಾಗಿ ಸಿದ್ಧತೆಗಳು ನಡೆದುವು. 1930ರ ಮಾರ್ಚ್ 12ರಂದು ಇವರು ತಮ್ಮ ಸುಪ್ರಸಿದ್ಧ ಉಪ್ಪಿನ ಸತ್ಯಾಗ್ರಹವನ್ನಾರಂಭಿಸಿದರು. 78 ಮಂದಿ ಅನುಯಾಯಿಗಳೊಂದಿಗೆ ಇವರು ಅಹಮದಾಬಾದಿನಿಂದ 384ಕಿಮೀ ದೂರದ ಸಮುದ್ರ ದಂಡೆಯಲ್ಲಿರುವ ದಂಡಿಗೆ ಹೊರಟರು. ಉಪ್ಪಿನ ತಯಾರಿಕೆಯಲ್ಲಿ ಸರ್ಕಾರ ಹೊಂದಿದ್ದ ಏಕಸ್ವಾಮ್ಯವನ್ನು ವಿರೋಧಿಸಿ ಕಾನೂನು ಭಂಗ ಮಾಡುವುದು ಇವರ ಉದ್ದೇಶ. ಏಪ್ರಿಲ್ 6ರಂದು ಇವರು ದಂಡಿಯನ್ನು ತಲುಪಿ, ಸಮುದ್ರಸ್ನಾನ ಮಾಡಿ ನೈಸರ್ಗಿಕ ಉಪ್ಪನ್ನು ಕೈಯಲ್ಲಿ ಹಿಡಿದರು. ನಾಡಿನಾದ್ಯಂತ ಜನರು ಇವರ ಕರೆಯಂತೆ ಸತ್ಯಾಗ್ರಹವನ್ನಾಚರಿಸಿದರು. ಸುಮಾರು ಒಂದು ಲಕ್ಷ ಜನ ದಸ್ತಗಿರಿಯಾದರು. ಮೇ 4ರಂದು ಇವರ ದಸ್ತಗಿರಿಯಾಯಿತು. 1931ರ ಜನವರಿ 26ರ ವರೆಗೂ ಸರ್ಕಾರ ಇವರನ್ನು ಸೆರೆಯಲ್ಲಿಟ್ಟಿತ್ತು. ಸತ್ಯಾಗ್ರಹವನ್ನು ಅಂತ್ಯಗೊಳಿಸುವ ಬಗ್ಗೆ ಮಾರ್ಚ್ 5ರಂದು ಗಾಂಧಿ–ಇರ್ವಿನ್ ಒಪ್ಪಂದಕ್ಕೆ ಸಹಿಯಾಯಿತು. ಸತ್ಯಾಗ್ರಹಿಗಳು ಬಿಡುಗಡೆಯಾದರು. ಕೆಲವೊಂದು ಮಿತಿಗಳೊಳಗೆ, ಸ್ವಂತ ಉಪಯೋಗಕ್ಕಾಗಿ ಉಪ್ಪನ್ನು ತಯಾರಿಸಲು ಅವಕಾಶ ಲಭ್ಯವಾಯಿತು.

1931ರಲ್ಲಿ ಲಂಡನ್ನಿನಲ್ಲಿ ನಡೆದ ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಪ್ರಯಾಣ ಬೆಳೆಸಿದರು. ಇವರ ಭೇಟಿಯಿಂದಾಗಿ ಇಂಗ್ಲೆಂಡ್–ಭಾರತಗಳ ಸಾಮಾನ್ಯ ಜನರ ನಡುವೆ ಹೆಚ್ಚು ನಿಕಟ ಬಾಂಧವ್ಯ ಬೆಳೆಯಿತು. ಆದರೆ ಸಮ್ಮೇಳನದಲ್ಲಿ ಅಲ್ಪಸಂಖ್ಯಾತರಿಗೆ ಸರ್ಕಾರ ವಿಶೇಷ ಪ್ರಾಮುಖ್ಯ ನೀಡಿತು. ಭಾರತೀಯರಿಗೆ ಸ್ವಯಮಾಡಳಿತ ನೀಡುವುದಕ್ಕಿಂತ ಇದಕ್ಕೇ ಆದ್ಯ ಗಮನ ನೀಡುವುದಕ್ಕೆ ಇವರು ಒಪ್ಪಲಿಲ್ಲ. ಸರ್ಕಾರ ಅನಾವಶ್ಯಕವಾಗಿ ಭಾರತೀಯರಲ್ಲಿ ಕೋಮುವಾರು ಭೇದಭಾವವನ್ನು ಬೆಳೆಸುತ್ತಿದೆಯೆಂಬ ವಿಷಯ ಇವರಿಗೆ ಮನವರಿಕೆಯಾಯಿತು. ಬ್ರಿಟನ್ ತನ್ನ ಅಧಿಕಾರವನ್ನು ಹಿಂದೆಗೆದುಕೊಂಡರೆ ಕೋಮುವಾರು ಸಮಸ್ಯೆಗಳೆಲ್ಲ ತಾವಾಗಿಯೇ ಬಗೆಹರಿದಾವೆಂಬುದು ಇವರ ಭಾವನೆ. ಆದರೆ ಇವರ ವಾದ ಫಲಿಸಲಿಲ್ಲ. ಸಮ್ಮೇಳನದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಎತ್ತಿ ಹಿಡಿಯುವವರ ಸಂಖ್ಯೆಯೇ ಹೆಚ್ಚಾಗಿರುವಂತೆ ಸರ್ಕಾರ ತಂತ್ರ ಹೂಡಿತ್ತು. 1931ರ ಕೊನೆಯಲ್ಲಿ ಇವರು ಹಿಂದಿರುಗಿದಾಗ ಭಾರತದ ರಾಜಕೀಯ ಪರಿಸ್ಥಿತಿ ತೀವ್ರವಾಗಿತ್ತು. ಹಲವು ನಾಯಕರು ಬಂಧಿತರಾಗಿದ್ದರು. ನಿಷೇಧಾಜ್ಞೆಗಳು ಜಾರಿಯಲ್ಲಿದ್ದುವು. ಆಗ ವೈಸ್‌ರಾಯ್ ಆಗಿದ್ದ ವೆಲಿಂಗ್ಟನನಿಗೆ ಇವರು ಪತ್ರ ಬರೆದರು. ಪರಿಸ್ಥಿತಿ ಕೈಮೀರದಂತೆ ಯತ್ನಿಸಬೇಕೆಂದೂ ಅನಿವಾರ್ಯವಾದರೆ ಕಾಂಗ್ರೆಸ್ಸು ಸತ್ಯಾಗ್ರಹ ಹೋರಾಟವನ್ನು ಮತ್ತೆ ಆರಂಭಿಸುತ್ತದೆಂದೂ ಎಚ್ಚರಿಸಿದರು. ಆದರೆ ಸರ್ಕಾರ ಲಕ್ಷಿಸಲಿಲ್ಲ. 1932ರ ಜನವರಿ 4ರಂದು ಇವರು ದಸ್ತಗಿರಿಯಾದರು. ಪಟೇಲರನ್ನೂ ಇವರನ್ನೂ ಸರ್ಕಾರ ಎರವಾಡ ಸೆರೆಮನೆಯಲ್ಲಿಟ್ಟಿತು. ಹರಿಜನರನ್ನು ಪ್ರತ್ಯೇಕಗೊಳಿಸಲು ಸರ್ಕಾರ ಕೈಗೊಳ್ಳಲಿದ್ದ ಕ್ರಮವೊಂದನ್ನು ವಿರೋಧಿಸಿ ಭಾರತ ಕಾರ್ಯದರ್ಶಿಗೆ ಇವರು ಪತ್ರ ಬರೆದರು. ಇವರ ಅಭಿಪ್ರಾಯಗಳನ್ನು ಸರ್ಕಾರ ಕಡೆಗಣಿಸಿತು. ಸೆಪ್ಟೆಂಬರ್ 20ರಂದು ಉಪವಾಸ ಆರಂಭಿಸಿದರು. ಅನೇಕ ದೇವಸ್ಥಾನಗಳು ಹರಿಜನರಿಗೆ ತೆರೆದುವು. ಐದು ದಿನಗಳ ಅನಂತರ ಹಲವರ ಒತ್ತಾಯದಂತೆ ತಮ್ಮ ಉಪವಾಸವನ್ನು ಕೊನೆಗೊಳಿಸಿದರು. ಅಸ್ಪೃಶ್ಯರೆನಿಸಿಕೊಂಡ ಹರಿಜನರ ಹಿತಸಾಧನೆಗೆ ಪಣತೊಟ್ಟರು. 1933ರಲ್ಲಿ ಇವರು ಹರಿಜನ ಎಂಬ ಹೆಸರಿನ ವಾರಪತ್ರಿಕೆಯೊಂದನ್ನು ಸ್ಥಾಪಿಸಿದರು. ಮುಂದೆ ಇದು ಹತ್ತು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ವರ್ಧಾದಲ್ಲಿ ಸ್ಥಾಪಿಸಿದ ಆಶ್ರಮದಲ್ಲಿ ಸ್ವಲ್ಪಕಾಲ ವಿಶ್ರಾಂತಿ ಪಡೆದರು. ಆದರೆ ಆ ಜೀವ ದೀರ್ಘಕಾಲ ವಿಶ್ರಾಂತಿ ಬಯಸಲಿಲ್ಲ. ಹರಿಜನೋದ್ಧಾರಕ್ಕಾಗಿ ದೇಶಾದ್ಯಂತ ಸಂಚಾರ ಕೈಗೊಂಡು ಹಣ, ಒಡವೆ, ಸಂಗ್ರಹಿಸಿದರು.

ಕಾಂಗ್ರೆಸಿನ ಹಾದಿಯ ಬಗ್ಗೆ ಇವರಿಗೆ ಆ ವೇಳೆಗಾಗಲೇ ಅತೃಪ್ತಿ ಮೂಡಿತ್ತು. ಇವರ ದೃಷ್ಟಿಯಲ್ಲಿ ಅಹಿಂಸೆ ಒಂದು ವ್ರತ. ಆದರೆ ಕಾಂಗ್ರೆಸ್ಸು ಅದನ್ನು ಹಾಗೆಂದು ಪರಿಗಣಿಸಿರಲಿಲ್ಲ. ಅದರ ದೃಷ್ಟಿಯಲ್ಲಿ ಅದೊಂದು ಉಪಾಯ; ಸ್ವಾತಂತ್ರ್ಯ ಗಳಿಸಲು ಅದೊಂದು ಸಾಧನ ಮಾತ್ರ. ಇವರು ಕಾಂಗ್ರೆಸಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಗ್ರಾಮೋದ್ಧಾರ ಕಾರ್ಯಕ್ಕೇ ತಮ್ಮ ಸಮಯವನ್ನು ಮುಡಿಪಾಗಿಟ್ಟರು. ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘ ಸ್ಥಾಪಿತವಾಯಿತು. ಇವರು ವಾರ್ಧಾ ಬಳಿಯ ಸೇವಾಗ್ರಾಮದಲ್ಲಿ ನೆಲಸಿದರು.

1935ರ ಕಾಯಿದೆಯ ಪ್ರಕಾರ 1937ರಲ್ಲಿ ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಚುನಾವಣೆಗಳು ನಡೆದು ಕಾಂಗ್ರೆಸ್ ಬಹುಮತ ಗಳಿಸಿತು. 11 ಪ್ರಾಂತ್ಯಗಳ ಪೈಕಿ ಒಂಬತ್ತರಲ್ಲಿ ಕಾಂಗ್ರೆಸ್ ಸರ್ಕಾರಗಳು ಸ್ಥಾಪಿತವಾದುವು. ಪಾನನಿರೋಧ, ಮೂಲ ಶಿಕ್ಷಣ, ರೈತರ ಋಣ ಪರಿಹಾರ, ಗ್ರಾಮಹಿತರಕ್ಷಣೆ–ಇವು ಕಾಂಗ್ರೆಸ್ ಸರ್ಕಾರಗಳ ಮುಂದೆ ಇವರು ಇಟ್ಟ ಗುರಿಗಳು.

1939ರ ಸೆಪ್ಟೆಂಬರಿನಲ್ಲಿ ಎರಡನೆಯ ಮಹಾಯುದ್ಧ ಆರಂಭವಾದಾಗ ಬ್ರಿಟಿಷ್ ಸರ್ಕಾರಕ್ಕೆ ತಮ್ಮ ನೈತಿಕ ಬೆಂಬಲ ನೀಡಲು ಸಿದ್ಧವಾಗಿದ್ದರು. ಈ ಬಿಕ್ಕಟ್ಟಿನ ಕಾಲದಲ್ಲಿ ಬ್ರಿಟನ್ನನ್ನು ತೊಡಕಿಗೆ ಸಿಲುಕಿಸುವ ಯಾವ ಕ್ರಮಕ್ಕೂ ಇವರು ಸಿದ್ಧವಿರಲಿಲ್ಲ. ಜಪಾನ್ ಜರ್ಮನಿಗಳ ಸೈನಿಕ ನೆರವು ಪಡೆದು ಭಾರತದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕೆಂಬ ಸುಭಾಷ್ ಚಂದ್ರ ಭೋಸರ ವಾದ ಇವರಿಗೆ ಒಪ್ಪಿಗೆಯಾಗಲಿಲ್ಲ. ಆದರೆ ಯುದ್ಧ ಮುಗಿದ ಮೇಲೆ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಾಗಿ ಭರವಸೆ ನೀಡಿದರೆ ಮಾತ್ರ ಬ್ರಿಟನ್ನಿನ ಯುದ್ಧಕಾರ್ಯಕ್ಕೆ ಸಹಕಾರ ನೀಡುವುದೆಂಬುದು ಕಾಂಗ್ರೆಸ್ ಅಭಿಪ್ರಾಯವಾಗಿತ್ತು. ಬ್ರಿಟಿಷ್ ಸರ್ಕಾರದಿಂದ ಅಂಥ ಭರವಸೆಯೇನೂ ಬರಲಿಲ್ಲ.

1940ರಲ್ಲಿ ಇವರು ವೈಯಕ್ತಿಕ ಸತ್ಯಾಗ್ರಹವನ್ನಾರಂಭಿಸಿದರು. ಇವರ ಕರೆಯಂತೆ ಸತ್ಯಾಗ್ರಹ ಮಾಡಿ ಕಾರಾಗೃಹ ಹೊಕ್ಕವರ ಪೈಕಿ ವಿನೋಬಾ ಭಾವೆ ಮೊದಲಿಗರು. 1941ರ ಅಂತ್ಯದ ವೇಳೆಗೆ ಯುದ್ಧದಲ್ಲಿ ಬ್ರಿಟನ್ನಿನ ಸ್ಥಿತಿ ಆತಂಕಕಾರಿಯಾಗಿ ಪರಿಣಮಿಸಿತ್ತು. ಜಪಾನೀಯರ ಆಕ್ರಮಣಕಾರ್ಯ ತೀವ್ರವಾಗಿತ್ತು. ಸರ್ಕಾರ ಸತ್ಯಾಗ್ರಹಿಗಳನ್ನು ಸೆರೆಯಿಂದ ಬಿಟ್ಟಿತು. ಭಾರತದ ರಾಜಕೀಯ ಸಮಸ್ಯೆಯ ಇತ್ಯರ್ಥ ಮಾಡುವುದು ಬ್ರಿಟನ್ನಿನ ಹಿತದಿಂದಲೇ ಅವಶ್ಯವಾಗಿತ್ತು. ಬ್ರಿಟಿಷ್ ಸಚಿವ ಸ್ಟ್ಯಾಫರ್ಡ್ ಕ್ರಿಪ್ಸ್ 1942ರ ಮಾರ್ಚ್ ತಿಂಗಳಿನಲ್ಲಿ ಭಾರತಕ್ಕೆ ಸಲಹೆಯೊಂದನ್ನು ತಂದ. ಅದು ಇವರಿಗೆ ಪರಿಶೀಲನಯೋಗ್ಯವೆನಿಸಲಿಲ್ಲ. ಭಾರತ ಬಿಟ್ಟು ತೊಲಗಿ ಎಂಬ ಚಳವಳಿಯ ಪರಿಕಲ್ಪನೆ ಇವರಲ್ಲಿ ಮೂಡಿಬಂತು. ಹರಿಜನದಲ್ಲಿ ಈ ಬಗ್ಗೆ ಲೇಖನಗಳು ಪ್ರಕಟವಾದವು. ಆ ವರ್ಷ ಆಗಸ್ಟ್ 8ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈ ಚಳವಳಿಯನ್ನು ಹೂಡಲು ನಿರ್ಣಯ ಮಾಡಿತು. ಮರುದಿನ ಸರ್ಕಾರ ಇವರನ್ನೂ ಇವರ ಅನುಯಾಯಿಗಳನ್ನೂ ಕಾಂಗ್ರೆಸ್ಸಿನ ಎಲ್ಲ ಮುಖಂಡರನ್ನೂ ದಸ್ತಗಿರಿ ಮಾಡಿತು. ಇವರ ಕಾರ್ಯದರ್ಶಿ ಮಹಾದೇವ ದೇಸಾಯಿ, ಪತ್ನಿ ಕಸ್ತೂರ ಬಾ ಮೊದಲಾದವರು ಇವರೊಂದಿಗೆ ಪುಣೆಯಲ್ಲಿ ಬಂಧನಕ್ಕೊಳಪಟ್ಟರು. ಇವರಿಬ್ಬರೂ ಸೆರೆಮನೆಯಲ್ಲೇ ತೀರಿಕೊಂಡರು. 1943ರ ಜನವರಿಯಲ್ಲಿ ಇವರು ವೈಸ್‌ರಾಯ್ ಲಿನ್‌ಲಿತ್‌ಗೋಗೆ ಒಂದು ಪತ್ರ ಬರೆದು, ಸರ್ಕಾರದ ಹಿಂಸಾಚಾರವನ್ನು ಖಂಡಿಸಿದರು. ಫೆಬ್ರುವರಿ 10 ರಿಂದ ಆರಂಭಿಸಿ 21 ದಿನಗಳ ಕಾಲ ಉಪವಾಸ ಕೈಗೊಂಡರು. 1944ರ ಮೇ 6ರಂದು ಸರ್ಕಾರ ಇವರನ್ನು ಆರೋಗ್ಯನಿಮಿತ್ತ ಬಿಡುಗಡೆ ಮಾಡಿತು.

1946ರಲ್ಲಿ ಎರಡನೆಯ ಮಹಾಯುದ್ಧ ಮುಗಿಯಿತು. ಬ್ರಿಟನ್ನಿನಲ್ಲಿ ಕಾರ್ಮಿಕ ಸರ್ಕಾರ ಸ್ಥಾಪಿತವಾಯಿತು. ಸಂಪುಟ ನಿಯೋಗವೊಂದು ಭಾರತಕ್ಕೆ ಬಂತು. ಪಾಕಿಸ್ತಾನದ ನಿರ್ಮಾಣವಾಗಬೇಕೆಂಬುದು ಮಹಮ್ಮದ್ ಆಲಿಜಿನ್ನಾ ಬೇಡಿಕೆಯಾಗಿತ್ತು. ದ್ವಿರಾಷ್ಟ್ರ ಸಿದ್ಧಾಂತವನ್ನು ಇವರು ಪ್ರಬಲವಾಗಿ ವಿರೋಧಿಸಿದರು. ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಕೊನೆಗೊಳಿಸುವರೆಂದು ಆ ನಿಯೋಗ ಸಾರಿತು. ಅಖಂಡ ಭಾರತ ಸರ್ಕಾರ ಸ್ಥಾಪನೆಯಾಗಬೇಕೆಂಬುದು ಇವರ ಸಲಹೆ. ಮುಸ್ಲಿಂ ಲೀಗ್ ಈ ಸಲಹೆಗೆ ತನ್ನ ಬೆಂಬಲ ನೀಡಲು ನಿರಾಕರಿಸಿತು. ನೇರ ಕಾರ್ಯಾಚರಣೆ ಕೈಗೊಳ್ಳಲು ತೀರ್ಮಾನಿಸಿತು. ಅಂತೂ ಕೊನೆಗೆ 1946ರ ಸೆಪ್ಟೆಂಬರ್ 2ರಂದು ನೆಹರೂ ಅವರ ನಾಯಕತ್ವದಲ್ಲಿ ತಾತ್ಕಾಲಿಕ ಸರ್ಕಾರವೊಂದು ಸ್ಥಾಪಿತವಾಯಿತು. ಮುಸ್ಲಿಂ ಲೀಗ್ ಆಗಸ್ಟ್ 16ರಂದು ನೇರ ಕಾರ್ಯಾಚರಣೆ ಆರಂಭಿಸಿದ್ದರ ಪರಿಣಾಮವೆಂದರೆ ಕೋಮು ಗಲಭೆ. ಹಲವು ಎಡೆಗಳಿಗೆ ಗಲಭೆಗಳು ಹಬ್ಬಿದುವು. 1946ರ ಕೊನೆಯಲ್ಲಿ ಇವರು ಪೂರ್ವ ಬಂಗಾಲದ ಹಳ್ಳಿಗಳಲ್ಲಿ ಸಂಚರಿಸುತ್ತ ಜನಕ್ಕೆ ಪ್ರೀತಿ ಅಹಿಂಸೆಗಳ ಸಂದೇಶವನ್ನು ಸಾರಿದರು. ಬಿಹಾರದಲ್ಲೂ ಇವರು ಸಂಚಾರ ಕೈಗೊಂಡರು.

1947ರ ಜೂನ್ 3ರಂದು ಬ್ರಿಟನ್ ಭಾರತವಿಭಜನೆಯ ಯೋಜನೆಯನ್ನು ಘೋಷಿಸಿತು. ಕಾಂಗ್ರೆಸ್–ಮುಸ್ಲಿಂ ಲೀಗ್‌ಗಳು ಅದನ್ನೊಪ್ಪಿದುವು. ಆದರೆ ಇವರು ಅದನ್ನೊಂದು ದುರಂತವೆಂದು ಕರೆದರು. ಮೂವತ್ತೆರಡು ವರ್ಷಗಳ ಕಾರ್ಯವೆಲ್ಲ ವ್ಯರ್ಥವಾಯಿತೆಂಬುದು ಇವರ ಭಾವನೆ. ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದಾಗ ಇವರು ಕಲ್ಕತ್ತದಲ್ಲಿ ಹಿಂಸೆಯಿಂದ ನೊಂದ ಜನರ ನಡುವೆ ಇದ್ದರು. ಅಶಾಂತಿಯನ್ನು ಕಂಡು ಇವರು ಪರಿತಪಿಸುತ್ತಿದ್ದರು. ಆ ದಿನವಿಡೀ ಇವರು ಉಪವಾಸ ಪ್ರಾರ್ಥನೆಗಳಲ್ಲಿ ನಿರತರಾಗಿದ್ದರು. ಇವರು ಅಂದು ದೇಶಕ್ಕೆ ಯಾವ ಸಂದೇಶವನ್ನೂ ನೀಡಲಿಲ್ಲ. ಕೆಲವು ದಿನಗಳಲ್ಲಿ ಕಲ್ಕತ್ತದಲ್ಲಿ ಮತ್ತೆ ಭೀಕರ ಗಲಭೆಗಳು ಸಂಭವಿಸಿದುವು. ಗಾಂಧಿಯವರು ಅನಿರ್ದಿಷ್ಟ ಕಾಲ ಉಪವಾಸ ಕೈಕೊಂಡರು. ಗಲಭೆಗಳು ನಿಂತುವು.

ಆದರೂ ಪರಿಸ್ಥಿತಿ ಶಾಂತವಾಗಿರಲಿಲ್ಲ. ಭಾರತ–ಪಾಕಿಸ್ತಾನಗಳಲ್ಲಿಯ ಅಲ್ಪಸಂಖ್ಯಾತರಿಗೆ ನೆಮ್ಮದಿಯಿರಲಿಲ್ಲ. ಭೀತರಾದ ಹಿಂದು ಮುಸ್ಲಿಂ ನಿರಾಶ್ರಿತರು ಅಗಾಧ ಸಂಖ್ಯೆಯಲ್ಲಿ ಗಡಿ ದಾಟುತ್ತಿದ್ದರು. ಅಲ್ಪ ಸಂಖ್ಯಾತರ ಹಿತ ರಕ್ಷಿಸುವುದು ಉಭಯ ರಾಷ್ಟ್ರಗಳ ಹೊಣೆಯೆಂದು ಇವರು ಹೇಳಿದರು. 1948ರ ಜನವರಿ 13ರಂದು ಇವರು ಇನ್ನೊಮ್ಮೆ ಉಪವಾಸ ಆರಂಭಿಸಿದರು. ಮತೀಯ ಸೌಹಾರ್ದ ಬೆಳೆಸುವುದಾಗಿ ಮುಖಂಡರು ಒಪ್ಪಂದ ಮಾಡಿಕೊಂಡಾಗಲೇ ಇವರು ಉಪವಾಸವನ್ನು ಕೊನೆಗೊಳಿಸಿದ್ದು. ಇವರ ದೃಷ್ಟಿಯಿಂದ ಅತೃಪ್ತರಾದ ಕೆಲವರು ಇವರ ಕೊಲೆಗೆ ಪ್ರಯತ್ನಿಸುತ್ತಿದ್ದರು. ಜನವರಿ 20ರಂದು ಅವರ ಪ್ರಾರ್ಥನಾಸಭೆಯಲ್ಲಿ ಒಬ್ಬ ಯುವಕ ಬಾಂಬೊಂದನ್ನು ಎಸೆದನಾದರೂ ಪ್ರಾಣಾಪಾಯ ವಾಗಲಿಲ್ಲ. ಆ ಯುವಕನ ವಿಚಾರದಲ್ಲಿ ದ್ವೇಷ ವ್ಯಕ್ತಪಡಿಸಲಿಲ್ಲ. 1948ರ ಜನವರಿ 30ರಂದು ಇವರು ಎಂದಿನಂತೆ ಪ್ರಾರ್ಥನಾಸಭೆಯ ಮೆಟ್ಟಿಲು ಹತ್ತುತ್ತಿದ್ದಾಗ ನಾಥುರಾಂ ವಿನಾಯಕ ಗೋಡ್ಸೆಯೆಂಬ ಯುವಕ ಗುಂಪಿನಿಂದ ಮುನ್ನುಗ್ಗಿ ಗಾಂಧಿಯವರತ್ತ ಮೂರು ಬಾರಿ ಗುಂಡು ಹಾರಿಸಿದ. ಇವರ ಇಹಲೋಕ ಯಾತ್ರೆ ಕೊನೆಗೊಂಡಿತು. ಸಮಕಾಲೀನ ಪ್ರಪಂಚದ ಮೇಲೆ ಮಾತ್ರವಲ್ಲದೆ ಭವಿಷ್ಯತ್ತಿನ ಮೇಲೆ ಕೂಡ ತಮ್ಮ ಪ್ರಭಾವದ ಮುದ್ರೆಯೊತ್ತಿದ್ದರು. ಇವರು ಸತ್ಯ ಅಹಿಂಸೆಗಳ ಪ್ರವಾದಿ. ಗುರಿ ಶುದ್ಧವಾಗಿದ್ದರೆ ಸಾಲದು; ಅದನ್ನು ನಿಲುಕುವ ಮಾರ್ಗವೂ ಶುದ್ಧವಾಗಿರಬೇಕು–ಎಂದು ಇವರು ಹೇಳಿದರು. ಮಾರ್ಗವೆಂತೋ ಗುರಿಯಂತು–ಎಂದರು. ಜನರು ತಮ್ಮ ಹಕ್ಕುಗಳಿಗಾಗಿ ಹೊಡೆದಾಡುವಾಗ ಜೀವನದ ಬಗ್ಗೆ ಅಗೌರವದಿಂದ ವರ್ತಿಸಬಾರದು–ಎಂಬುದು ಇವರ ಬೋಧನೆ.

ಜನತೆಯ ನಾಯಕರಾದ ಇವರು ರಾಜಕೀಯ ಸಾಮಾಜಿಕ ಬಂಡಾಯಗಾರರೂ ಹೌದು. ತಮ್ಮ ದೇಶವನ್ನು ಸ್ವಾತಂತ್ರ್ಯದ ಗುರಿ ಮುಟ್ಟಿಸುವ ಪ್ರಯತ್ನವೇ ಇವರ ಅಭಿವ್ಯಕ್ತಿಗೆ ಮಾಧ್ಯಮವಾಯಿತು. ತನ್ಮೂಲಕವಾಗಿ ಇವರು ಇಡೀ ಮಾನವತೆಯನ್ನೇ ಪ್ರೀತಿಸಿದರು.

ಜೈನ, ವೈಷ್ಣವ ಧರ್ಮಗಳಿಂದ ಇವರು ಬಹಳ ಪ್ರಭಾವಿತರಾಗಿದ್ದರು. ಮಾರ್ಕ್ಸ್, ಡಾರ್ವಿನ್ ಸಿದ್ಧಾಂತಗಳು ಅತ್ಯಂತ ಪ್ರಚಾರದಲ್ಲಿದ್ದ ಕಾಲದಲ್ಲಿ ಇವರು ಲಂಡನ್ನಿನಲ್ಲಿ ವಿದ್ಯಾರ್ಥಿಯಾಗಿದ್ದರು. ಎಪ್ಪತ್ತೈದರ ಪ್ರಾಯದಲ್ಲಿ ಇವರು ಕಾರ್ಲ್‌ಮಾರ್ಕ್ಸ್‌ನ ಕ್ಯಾಪಿಟಲ್ ಉದ್ಗ್ರಂಥ ಬೋಧಿಸಿದರೂ ಇವರು ಮೂಲತಃ ಹಿಂದುವಾಗಿ ಉಳಿದರು. ಸನಾತನಧರ್ಮದ ಉತ್ಕೃಷ್ಟ ಉತ್ಪನ್ನವಾದ ಇವರು ತಮ್ಮ ಇಡೀ ಬಾಳನ್ನೇ ತಮ್ಮ ವಿಚಾರದ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡು ಸ್ವಂತ ಅನುಭವದಿಂದ ಕಂಡುಕೊಳ್ಳದ ಯಾವುದನ್ನೂ ಬೋಧಿಸಲಿಲ್ಲ. ದೇವರು ಸತ್ಯ ಮಾತ್ರವಲ್ಲ, ಸತ್ಯವೇ ದೇವರು ಎಂದು ಇವರು ಪ್ರತಿಪಾದಿಸಿದರು. ಇಷ್ಟಾದರೂ ಇವರು ಅತ್ಯಂತ ವಿನಯಶೀಲರು. ತಮಗೆ ಯಾವ ದೈವಿಕ ಶಕ್ತಿಯೂ ಇಲ್ಲವೆಂದೇ ಸಾರಿದರು. ಇವರು ಕಣ್ಮರೆಯಾದರೂ ಇವರ ವಿಚಾರಗಳ ಪ್ರಭಾವ ಮಾತ್ರ ನಿಧಾನವಾದರೂ ಖಂಡಿತವಾಗಿಯೂ ಅಗೋಚರವಾಗಿಯೂ ಪ್ರಪಂಚವನ್ನೆಲ್ಲ ವ್ಯಾಪಿಸುತ್ತಿದೆ. ದೇಶವಿದೇಶಗಳಲ್ಲಿ ಇವರ ಬೋಧನೆಯನ್ನು ನಂಬಿ ನಡೆವ ಹಲವಾರು ಮಂದಿ ಇದ್ದಾರೆ. (ಜಿ.ವಿ.ಎಸ್.)

**ಗಾಂಧಿ ತತ್ತ್ವದರ್ಶನ:** ಗಾಂಧಿಯವರ ವಿಪುಲವಾದ ಬರೆವಣಿಗೆ, ಮಾತುಕತೆ, ಭಾಷಣಗಳು, ಸತ್ಯಾನ್ವೇಷಣೆಗಾಗಿ ಮುಡುಪಿಟ್ಟ ಅವರ ಜೀವನ– ಇವುಗಳಲ್ಲಿ ಸ್ಫುರಿಸುವ ಇವರ ತತ್ತ್ವದರ್ಶನವನ್ನು ಇಲ್ಲಿ ಸಂಗ್ರಹವಾಗಿ ತಿಳಿಸಿದೆ. ಗಾಂಧಿಯವರ ತತ್ತ್ವದೃಷ್ಟಿ ಕೇವಲ ತಾತ್ತ್ವಿಕವಾಗಿರದೆ ಅತ್ಯಂತ ಪ್ರಾಯೋಗಿಕವಾಗಿದೆ. ಜೀವನವನ್ನು ಕುರಿತ ಸತ್ಯಾನ್ವೇಷಣೆ ಮತ್ತು ಅತ್ಯುನ್ನತ ಆದರ್ಶಗಳಿಂದ ಪ್ರಭಾವಿತವಾದ ಇವರ ದರ್ಶನವನ್ನು ಪ್ರಾಯೋಗಿಕ ಧ್ಯೇಯವಾದವೆನ್ನಬಹುದು. ಸತ್ಯಶೀಲತೆ, ಅಹಿಂಸಾ ಪಾಲನೆ, ಅಪರಿಗ್ರಹ, ಸ್ವದೇಶೀ ಭಾವನೆ ಇತ್ಯಾದಿ ಆರು ನಿಯಮಗಳನ್ನು ಪ್ರತಿಯೊಬ್ಬನೂ ಪಾಲಿಸುವುದು ಅಗತ್ಯ. ಮಾನವನ ಮಾನವತ್ವದ ಆಧಾರ ಸತ್ಯ, ಅಹಿಂಸೆಗಳು. ಸಹಬಾಳ್ವೆಯ ಸಹಾನುಭೂತಿಯ ಆವಿಷ್ಕಾರವೇ ಮಾನವ ಜೀವನದ ವೈಶಿಷ್ಟ್ಯ. ಸರ್ವೋದಯವೇ ಮಾನವನ ಸಾಮಾಜಿಕ ಜೀವನದ ಸಾರಸರ್ವಸ್ವ. ಸರ್ವೋದಯ ಸರ್ವರ ಉದಯ ಮತ್ತು ಎಲ್ಲ ವ್ಯಕ್ತಿಗಳ ಸಮಗ್ರ ಉದಯ. ಅವನ್ನು ಸಾಧನೆ ಮಾಡುವ ದಾರಿಯೂ ಕ್ರಮವೂ ಅಷ್ಟೇ ಉದಾತ್ತವಾದುದಾಗಿರಬೇಕು. ಗೃಹಸ್ಥನ ಕುಟುಂಬ ಜೀವನ ಬಹಳ ಪವಿತ್ರವಾದುದು. ಮದುವೆ ಅಂಥ ಜೀವನದ ಒಂದು ಪವಿತ್ರ ಪ್ರಾರಂಭ. ಸಂತಾನಕ್ಕಾಗಿ ಮಾತ್ರ ಸಂಭೋಗ. ಉಳಿದಂತೆ ಎಲ್ಲರಿಗೂ ಸಂಯಮ, ಬ್ರಹ್ಮಚರ್ಯ ಅಗತ್ಯ. ದೇವರ ನಾಮಸ್ಮರಣೆ, ಪ್ರಾರ್ಥನೆ, ಕಾಯಕ, ಪರೋಪಕಾರ–ಇವು ಮಾನವನ ಏಳಿಗೆಯ ಸಾಧನಗಳು–ಇದು ಗಾಂಧೀದರ್ಶನದ ಬಹುಮುಖ್ಯ ಸಂದೇಶ. ಗಾಂಧಿಯವರ ದೃಷ್ಟಿಯಲ್ಲಿ ಜೀವನ ಅಖಂಡವಾದುದು. ಇದರಲ್ಲಿ ಒಂದನ್ನು ಒಂದರಿಂದ ಪ್ರತ್ಯೇಕಗೊಳಿಸುವುದು ಅಸಾಧ್ಯ. ಮಾನವನ ಮನಸ್ಸು, ಮಾನವನ ಸಮಾಜ ಇವುಗಳಲ್ಲಿ ಪ್ರತ್ಯೇಕವಾದ ವಿಭಾಗಗಳಿಲ್ಲ. ಸಾಮಾಜಿಕ ರಾಜಕೀಯ ಮತ್ತು ಧಾರ್ಮಿಕ ಎನ್ನುವ ವಿಭಾಗಗಳಲ್ಲಿ ಇವುಗಳದು ಅನ್ಯೋನ್ಯಾಶ್ರಯ. (ಎಂ.ವೈ.;ಜಿ.ವಿ.ಎಸ್.)

**ಗಾಂಧಿಯವರ ರಾಜನೀತಿ:** ಗೋಪಾಲಕೃಷ್ಣ ಗೋಖಲೆಯವರು ಗಾಂಧಿಯವರ ರಾಜಕೀಯ ಗುರು. ಅಧ್ಯಾತ್ಮದಿಂದ ರಾಜಕಾರಣ ಪವಿತ್ರಗೊಳ್ಳಬೇಕು ಎಂಬುದು ಗೋಖಲೆ ಯವರ ಅಭಿಮತವಾಗಿತ್ತು. ಗಾಂಧಿಯವರದೂ ಇದೇ ಧೋರಣೆ. ಧರ್ಮವನ್ನು ಬಿಟ್ಟರೆ ರಾಜಕಾರಣದಲ್ಲಿ ಉಳಿದುದೆಲ್ಲ ಕಸವೆಂದು ಇವರ ನಂಬಿಕೆ. ರಾಷ್ಟ್ರಗಳ ಪ್ರಜೆಗಳೆಲ್ಲರ ಯೋಗಕ್ಷೇಮ ಸಾಧನೆಯೆಂದರೆ ಧರ್ಮಸಾಧನೆ. ಧರ್ಮ ಕಾಮಿತಾರ್ಥವನ್ನು ಕೊಡುತ್ತದೆ; ಧರ್ಮ ನೀಡಲಾಗದ ಯಾವುದಕ್ಕೂ ಯಾವ ಬೆಲೆಯೂ ಇಲ್ಲ. ಧರ್ಮವೆಂದರೆ ಕುರುಡು ನಂಬಿಕೆಯಲ್ಲ, ಪರಮತ ದ್ವೇಷವಲ್ಲ. ಎಲ್ಲ ಪ್ರಾಣಿಗಳನ್ನೂ ತನ್ನಂತೆಯೇ ಭಾವಿಸಿ, ನಡೆದು ಕೊಳ್ಳುವುದು; ಎಲ್ಲ ಮತಗಳನ್ನೂ ಸಹಿಷ್ಣುತೆಯಿಂದ ಕಾಣುವ ಔದಾರ್ಯ. ಪ್ರತಿಯೊಬ್ಬ ರಾಜಕಾರಣಿಯೂ ಆಸ್ತಿಕನೂ ಸತ್ಯಶೋಧಕನೂ ಆಗಬೇಕು. ದೇವರಲ್ಲಿ ನಂಬಿಕೆ ಇಟ್ಟು ನಡೆಯುವ ಸತ್ವವನ್ನು ಆಶ್ರಯಿಸಿರುವ ಪ್ರಜೆ ರಾಜಕಾರಣಿಯಾದಾಗ ಆ ದೇಶದ ಭಾಗ್ಯ ತೆರೆಯುತ್ತದೆ. ಇಂಥ ರಾಜಕಾರಣಿಗಳಿರುವ ದೇಶದಲ್ಲಿ ಸರ್ಕಾರದ ಅತಿಯಾದ ಪಾರುಪತ್ಯಕ್ಕೆ, ವಿಪರೀತ ಸರ್ಕಾರಕ್ಕೆ ಕಾರಣವೇ ಇರುವುದಿಲ್ಲ.

ಗಾಂಧಿಯವರು ಪ್ರಜಾತಂತ್ರವಾದಿ; ಪ್ರಾಪ್ತವಯಸ್ಕರೆಲ್ಲ ಮತದಾನ ಮಾಡಿ ನಿರ್ಮಿಸಿದ ವಿಧಾನ ಸಭೆಗಳ ಮೂಲಕ ಮಂತ್ರಿಮಂಡಲಗಳನ್ನು ರಚಿಸುವ, ಆಡಳಿತ ನಡೆಸುವ, ಸಂಯಮಪೂರಿತ ವಿವೇಕಯುತ ಪ್ರಜಾತಂತ್ರದ ಪ್ರತಿಪಾದಕರವರು. ಪ್ರಜಾತಂತ್ರ ಹಿಂಸೆಯಿಂದ ಮುಕ್ತವಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವೂ ಸುರಕ್ಷಿತವಾಗಬೇಕಾದರೆ ಪ್ರಜಾತಂತ್ರ ಶುದ್ಧ ಅಹಿಂಸಾತ್ಮಕವಾಗಿರಲೇಬೇಕು. ಆಗ ಮಾತ್ರ ಬಲಶಾಲಿ, ದುರ್ಬಲ ಇಬ್ಬರಿಗೂ ಸಮಾನಾವಕಾಶವೂ ಸಮಾನಾಧಿಕಾರವೂ ಇರುತ್ತವೆ. ಸ್ನೇಹದಿಂದ, ಮಧುರಮಾರ್ಗದಿಂದ ಅಲ್ಪಸಂಖ್ಯಾತರನ್ನು ಒಲಿಸಿಕೊಳ್ಳಬೇಕು; ಬೇರೆ ದಾರಿ ಇಲ್ಲ. ಬಹುಮತ ವಾದ ಅಸಹನೀಯ ಹಿಂಸೆಗೆ ಮೂಲ. ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯವನ್ನು ತಾನು ಪಾಲಿಸಿದಾಗ ಅವನ ಪಾಲಿನ ಹಕ್ಕು ಅವನಿಗೆ ಕ್ರಮವಾಗಿಪ್ರಾಪ್ತವಾಗುತ್ತದೆ–ಎಂದು ಗಾಂಧಿಯವರು ಹೇಳಿದ್ದಾರೆ. ಪ್ರಜಾತಂತ್ರವೆಂದರೆ ಪ್ರಜೆಗಳು ಸದಾ ವಿಧೇಯರಾಗಿ ವರ್ತಿಸುವುದಲ್ಲ. ಬಹುಸಂಖ್ಯಾತರಿಂದ ಭಿನ್ನವಾದ ಅಭಿಪ್ರಾಯ ಉಳ್ಳವರಾಗಿ ವರ್ತಿಸುವ ಹಕ್ಕು ಅಲ್ಪಸಂಖ್ಯಾತರಿಗೆ ಉಂಟೆಂದು ವಾದ. ವ್ಯಕ್ತಿ ಗಣನೆಗೆ ಬಾರದೆ ಹೋದರೆ ಸಮಾಜದಲ್ಲಿ ಏನೂ ಉಳಿಯದು. ವ್ಯಕ್ತಿಗೆ ಸ್ವಾತಂತ್ರ್ಯವಿದ್ದಾಗ ಮಾತ್ರ ಅವನು ತಾನಾಗಿ ತಾನೇ ಸಮಾಜದ ಅನುವರ್ತಿಯಾಗುತ್ತಾನೆ; ಅದಕ್ಕೆ ಸೇವೆ ಸಲ್ಲಿಸುತ್ತಾನೆ. ಆ ಸ್ವಾತಂತ್ರ್ಯವನ್ನು ಅವನಿಂದ ಕಸಿದುಕೊಂಡರೆ ಅವನು ಬರಿಯ ಯಂತ್ರವಾಗುತ್ತಾನೆ; ಸಮಾಜ ಹಾಳಾಗುತ್ತದೆ. ವ್ಯಕ್ತಿ ಎಲ್ಲಿ ಸ್ವಾತಂತ್ರ್ಯದಿಂದ ವಂಚಿತನಾಗುತ್ತಾನೊ ಅಲ್ಲಿ ಸಮಾಜವ್ಯವಸ್ಥೆ ಸಾಧ್ಯವಿಲ್ಲ. ಆದರೆ ವ್ಯಕ್ತಿಯೂ ತಾನು ಸಂಘಜೀವಿಯೆಂಬುದನ್ನು ನೆನಪಿನಲ್ಲಿಡಬೇಕು. ಸಮಾಜಪ್ರಗತಿಗೆ ಹೊಂದಿಕೊಂಡು ವ್ಯಕ್ತಿ ನೆಮ್ಮದಿಯ ಜೀವನ ನಡೆಸಬೇಕು. ಅವನು ಸ್ವಾತಂತ್ರ್ಯ ಬಯಸುವುದಾದರೂ ಸ್ವಸುಖಕ್ಕಾಗಿ ಅಲ್ಲ. ಸಕಲರ ಸುಖಕ್ಕಾಗಿ; ಸಕಲರ ಹಿತಕ್ಕಾಗಿ. ವ್ಯಕ್ತಿಸ್ವಾತಂತ್ರ್ಯವೆಂದರೆ ಒಬ್ಬ ಇನ್ನೊಬ್ಬನ ಮೇಲೆ ಸವಾರಿ ಮಾಡುವ ಅವಕಾಶವಲ್ಲ. ಗಾಂಧಿಯವರು ಸಂಕುಚಿತ ರಾಷ್ಟ್ರವಾದಿಗಳಲ್ಲ. ಇಡೀ ಪ್ರಪಂಚವೇ ಒಂದು ಕುಟುಂಬ ಎಂಬುದೇ ಇವರ ಆದರ್ಶ.

ಪ್ರಪಂಚಕ್ಕೆಲ್ಲ ಒಂದು ಪ್ರಭುತ್ವವಿರಬೇಕೆಂಬುದು ಗಾಂಧಿಯವರ ಆದರ್ಶ. 'ಸೇವಾಗ್ರಾಮದ ಪರ್ಣಕುಟಿಯಲ್ಲಿ ಕೂತಿರುವಾಗಲೇ ನಾನು ಇಡೀ ಜಗತ್ತಿನೊಂದಿಗೆ ಸಂಪರ್ಕವನ್ನಿಟ್ಟುಕೊಂಡು, ಅಷ್ಟೇ ಏಕೆ, ಬ್ರಹ್ಮಾಂಡದೊಂದಿಗೆ ಸಂಪರ್ಕವನ್ನಿಟ್ಟುಕೊಂಡು, ಸುರಸವಾಗಿ ಬಾಳನ್ನು ನಡೆಸಲು ಬಯಸುತ್ತೇನೆ' ಎಂದು ಇವರು ಬರೆದಿದ್ದಾರೆ. ಇವರು ವಿಶ್ವ ಒಕ್ಕೂಟ ಸ್ಥಾಪಿಸುವ ವಿಚಾರ ಮಾಡಿದ್ದರು. ಇದನ್ನು ಇವರು ಅಹಿಂಸೆ, ಅಂತಾರಾಷ್ಟ್ರೀಯ ಸಹಕಾರ–ಇವುಗಳ ಅಸ್ತಿಭಾರದ ಮೇಲೆ ರಚಿಸುವ ಆಲೋಚನೆ ಮಾಡಿದ್ದರು. ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಚತುರಂಗ ಬಲಗಳನ್ನು ಕೊನೆಗೊಳಿಸಬೇಕು; ಸಂಪೂರ್ಣ ಶಸ್ತ್ರನಿರಾಕರಣ ನೀತಿಯನ್ನು ಪರಿಪಾಲಿಸಬೇಕು. ರಾಷ್ಟ್ರಗಳ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಸ್ನೇಹದಿಂದ, ಸಂಧಾನದಿಂದ ಪರಿಹರಿಸಿಕೊಳ್ಳಬೇಕು. ವಿಶ್ವಶಾಂತಿಯ ಪಾಲನೆಗಾಗಿ ವಿಶ್ವ ಒಕ್ಕೂಟ ಮಾತ್ರ ತಕ್ಕಷ್ಟು ಸೇನಾಬಲವನ್ನು ಇಟ್ಟುಕೊಳ್ಳಬಹುದು; ಶಸ್ತ್ರಧಾರಣ ಮಾಡಬಹುದು–ಎಂದು ಇವರು ಭಾವಿಸಿದ್ದರು. (ಟಿ.ಟಿ.ಎಸ್.)

**ಗಾಂಧಿ ಸಮಾಜದರ್ಶನ:** ಗಾಂಧೀಜಿ ಭಾರತಕ್ಕೆ ಸ್ವಾತಂತ್ರ್ಯ ತಂದರೂ ಪ್ರಪಂಚದ ಪ್ರಜೆಯಾಗಿ, ಪ್ರಪಂಚದ ಕಲ್ಯಾಣವನ್ನು ತಮ್ಮ ಬೋಧನೆಯಿಂದ ಸಾಧಿಸಿದ ಧಾರ್ಮಿಕ ಪುರುಷರೂ ಆಧ್ಯಾತ್ಮಸಾಧಕರೂ ಆಗಿದ್ದರು. ಇವರ ರಾಜಕೀಯ ಹೋರಾಟವೂ ಸೇರಿದಂತೆ, ಎಲ್ಲ ಚಟುವಟಿಕೆಗಳೂ ಸತ್ಯ ಧರ್ಮ ಅಹಿಂಸೆಯ ಮೇಲೆಯೇ ಆಧಾರಿತವಾಗಿದ್ದುವು. ವ್ಯಕ್ತಿಯ ರಾಷ್ಟ್ರದ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಕಾರ್ಯಗಳನ್ನು ನಿರ್ದೇಶಿಸುವ ಮೂಲಪ್ರೇರಣೆ ಸತ್ಯ ಮತ್ತು ಅಹಿಂಸೆಯಾಗಿರಬೇಕೆಂದು ಇವರು ಬಯಸಿದರು ಅಂಥ ಸಮಾಜವನ್ನು ರೂಪಿಸುವುದು ಇವರ ಉದ್ದೇಶವಾಗಿತ್ತು.

ಗಾಂಧೀಜಿಯವರ ಕಲ್ಪನೆಯ ಸಮಾಜರಚನೆಯಲ್ಲಿ ವ್ಯಕ್ತಿಯೇ ಪರಮಗಣ್ಯ. ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡ ಸಮಾಜದಲ್ಲಿ ಮಾತ್ರ ಶಾಂತಿ ಸುಖ ಸಮತೆ ಇರಬಲ್ಲದು. ಸಮಾಜ ಸೇವೆಗೆ ಅರ್ಪಿಸಿಕೊಳ್ಳುವ ಸ್ಫೂರ್ತಿಯನ್ನು ನೀಡಬಲ್ಲದು. ವ್ಯಕ್ತಿ ತನ್ನ ಪೂರ್ಣತೆಗೆ ಬೆಳೆದು, ತನ್ನ ಶಕ್ತಿಗಳನ್ನೆಲ್ಲ ಸಾಧಿಸಿಕೊಂಡು ಅದರ ಎಲ್ಲ ಫಲಗಳನ್ನೂ ಸಮಾಜಕ್ಕೆ ಹಿಂದಿರುಗಿಸುವುದೇ ನಿಜವಾದ ವ್ಯಕ್ತಿ ಸ್ವಾತಂತ್ರ್ಯದ ಅರ್ಥ. ಇಂಥ ಸಮಾಜದಲ್ಲಿ ಬಡತನವಿರದು, ಯುದ್ಧವಿರದು, ಕ್ರಾಂತಿಯಿರದು, ರಕ್ತಪಾತವಿರದು.

ಹಳ್ಳಿಗಳು ಸಮಾಜ ಜೀವನದ ಕೇಂದ್ರಬಿಂದುಗಳಾಗಬೇಕು. ಪ್ರತಿ ಹಳ್ಳಿಯೂ ವ್ಯವಸಾಯ, ಗ್ರಾಮೋದ್ಯೋಗ, ಮೂಲಶಿಕ್ಷಣಶಾಲೆ, ಆಟದ ಬಯಲು, ಪ್ರಕೃತಿ ಚಿಕಿತ್ಸಾಲಯ, ಸಹಕಾರ ಸಂಘ, ಶಿಶುವಿಹಾರ, ಒಳ್ಳೆಯ ಕುಡಿಯುವ ನೀರು, ಮಕ್ಕಳಿಗೆ ಹಾಲು–ಇವೆಲ್ಲ ದೊರೆಯುವ ಘಟಕವಾಗಬೇಕು. ಹಳ್ಳಿ ಪಟ್ಟಣಿಗರ ಅಥವಾ ಇತರರ ಲೂಟಿಗೆ ತುತ್ತಾಗದೆ ಸ್ವಾವಲಂಬಿಯಾಗಬೇಕು. ಆಗಲೆ ಭಾರತದ ಪ್ರತಿಹಳ್ಳಿಯೂ ಗಣರಾಜ್ಯವಾಗಿ ಯಾವುದೂ ಶ್ರೇಷ್ಠವೂ ಕನಿಷ್ಠವೂ ಆಗದೆ ಕಡೆಯದೂ ಮೊದಲಿನದೂ ಆಗದೆ ಎಲ್ಲವೂ ಸಮಾನವಾಗಿರುತ್ತವೆ. ಇಂಥ ಸಮಾಜದಲ್ಲಿ ಸರ್ಕಾರದ ಸಂಪರ್ಕ ಹಳ್ಳಿಗಳೊಂದಿಗೆ ಎಷ್ಟು ಕಡಿಮೆ ಇದ್ದರೆ ಅಷ್ಟು ಒಳ್ಳೆಯದು. ಶ್ರೀಮಂತರು ಧರ್ಮದ ಪಾರುಪತ್ಯಗಾರರಾಗಬೇಕು. ಅನಾಸಕ್ತರಾದ ಯಜಮಾನರಾಗಬೇಕು–ಎಂಬ ಮಾತಿನಲ್ಲಿ ಗಾಂಧೀಜಿ ಈ ಮಾರ್ಗವನ್ನು ವಿವರಿಸಿದರು. ಸರ್ವಸಮಭಾಗ ಎಂಬ ಮಾತಿಗೆ ಗಾಂಧೀಜಿಯ ದೃಷ್ಟಿಯಲ್ಲಿ ಹೀಗೆ ಅರ್ಥ: ಸರ್ವಸಮಭಾಗವೆಂದರೆ ಪ್ರಪಂಚದ ಸಂಪತ್ಸಾಮಗ್ರಿಯನ್ನೆಲ್ಲ ಯಾರೋ ಒಬ್ಬರು ಕೂತು ತಮ್ಮ ಮನಸ್ಸಿಗೆ ಬಂದ ಹಾಗೆ ಹಂಚಿಹಾಕುವುದಲ್ಲ. ಪ್ರತಿಯೊಬ್ಬನಿಗೂ ತನತನಗೆ ಸಹಜವಾಗಿ ಎಷ್ಟು ಬೇಕೋ ಅಷ್ಟು ಸಾಮಗ್ರಿ ದೊರೆಯಬೇಕು. ಒಂದು ಕವಡೆಯೂ ಹೆಚ್ಚಾಗಿ ಯಾರಿಗೂ ಸಿಗಬೇಕಾದ್ದಿಲ್ಲ.

ಮಾನವಕುಟುಂಬದ ಪ್ರತಿಯೊಬ್ಬ ಪುರುಷನಿಗೂ ಮಹಿಳೆಗೂ ಅವರೆಷ್ಟೇ ಅಶಕ್ತರಾಗಿದ್ದರೂ ತಮ್ಮ ಆತ್ಮಗೌರವ ಮತ್ತು ಸ್ವಾತಂತ್ರ್ಯಗಳ ರಕ್ಷಣೆ ಮಾಡಿಕೊಳ್ಳಬೇಕೆಂಬ ಮನೋದಾರ್ಢ್ಯ ವನ್ನುಂಟುಮಾಡುವುದು ಅಗತ್ಯ. ವಿಕೇಂದ್ರೀಕರಣ ಕ್ರಮದಿಂದ ಸರ್ಕಾರ ಉತ್ಪಾದನೆಯ ಬಹುಭಾಗವನ್ನು ಜನತೆಗೆ ವಹಿಸಿ ವ್ಯಕ್ತಿಸ್ವಾತಂತ್ರ್ಯ ಸಾಮಾಜಿಕ ಅಪಾಯವಾಗುವ ಸ್ಥಿತಿಗೆ ಮುಟ್ಟಿದಾಗ ಮಾತ್ರ ತಾನು ಕೈಹಾಕಬೇಕು. ಈ ವ್ಯವಸ್ಥೆಯಿಂದ ಬಹುಮಟ್ಟಿಗೆ ನಿರುದ್ಯೋಗವೂ ಪೈಪೋಟಿಯೂ ಕಡಿಮೆಯಾಗುವುದು. ಗಾಂಧೀಜಿ ಸೂಚಿಸಿದ ಈ ಸಮಾಜ ವ್ಯವಸ್ಥೆ ಪ್ರಪಂಚದ ಹಿತದೃಷ್ಟಿಯಿಂದ ರೂಪಿತವಾದುದು. ಇವರು ಹಿಂದು ಸಮಾಜದಲ್ಲಿ ಜನಿಸಿದುದರಿಂದ ಹಿಂದು ಸಮಾಜದ ಗುಣದೋಷಗಳು, ಅವುಗಳ ನಿವಾರಣೆ–ಇವನ್ನು ಕುರಿತು ಯೋಚಿಸುವುದು ಇವರಿಗೆ ಅನಿವಾರ್ಯವಾಯಿತು. ಹಿಂದು ಸಮಾಜದಲ್ಲಿ ಅನೇಕ ಲೋಪದೋಷಗಳಿದ್ದರೂ ತಾನು ಹಿಂದು ಧರ್ಮವನ್ನೇ ಪ್ರೀತಿಸುತ್ತೇನೆಂದು ಗಾಂಧೀಜಿ ಹೇಳಿಕೊಂಡಿದ್ದಾರೆ. ಭಾರತ ತನ್ನ ಪ್ರಾಚ್ಯ ಸಂಸ್ಕೃತಿಯ ಆಧಾರದಮೇಲೆ ಮಾತ್ರವೆ, ತನ್ನ ಸುಂದರವಾದ ರೀತಿ ನೀತಿಗಳಿಂದ ಬೆಳೆದು, ಭಾರತೀಯ ಸತ್ತ್ವಕ್ಕನುಗುಣವಾಗಿ ಇತರ ಪ್ರಾಚ್ಯ ಮತ್ತು ಪಾಶ್ಚಾತ್ಯದೇಶಗಳ ಸ್ನೇಹಸಂಬಂಧವನ್ನು ಸ್ಥಾಪಿಸಿಕೊಳ್ಳಬಲ್ಲದು. ಏಷ್ಯ ಖಂಡದವರು ಪಾಶ್ಚಾತ್ಯರಿಂದ ಬರುವುದೆಲ್ಲವನ್ನೂ ತಾರತಮ್ಯವಿಲ್ಲದೆ ವಿಚಾರಶೂನ್ಯತೆಯಿಂದ ಅನುಕರಿಸಬಾರದು. ಭಾರತ ತನ್ನ ನಾಗರಿಕತೆಯ ಮೇಲೆ ಅನ್ಯಾಯವಾಗಿ ಆಗುತ್ತಿರುವ ದಾಳಿಗಳನ್ನು ಶಾಂತಿಮಾರ್ಗದಿಂದ ಪ್ರತಿಭಟಿಸಬೇಕು. ಹಿಂದು ಸಮಾಜ ಧಾರ್ಮಿಕ ತಳಹದಿಯಮೇಲೆ ರಚಿತವಾಗಿದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಹಿಂದು ಧರ್ಮ, ಪಶ್ಚಿಮ ದೇಶಗಳವರು ಭೌತ ವಿಷಯಗಳಲ್ಲಿ ಮಾಡಿರುವುದಕ್ಕಿಂತ ಹೆಚ್ಚು ಶೋಧನೆ ಗಳನ್ನು ಮಾಡಿದೆ. ನಿಜವಾದ ಹಿಂದು ಭಾವನೆಯನ್ನು ಜನ ತಮ್ಮಲ್ಲಿ ಉಂಟುಮಾಡಿಕೊಳ್ಳಬೇಕು. ಹಿಂದು ಧರ್ಮ ಒಂದು ಅಧಿಕೃತ ಧರ್ಮವಲ್ಲ. ಅದು ಅದರ ಸುದೈವ. ಮತ್ತು ದುರ್ದೈವ. ಅದಕ್ಕೆ ಇತರ ಮತಗಳಿಗಿರುವಂತೆ (ಬೈಬಲ್, ಕುರಾನ್, ಝೆಂಡ್ ಅವೆಸ್ತಗಳಂತೆ) ಒಂದು ಗ್ರಂಥವಿಲ್ಲ. ಆದರೆ ಭಗವದ್ಗೀತೆಯನ್ನು ಹಿಂದು ಧರ್ಮದ ಆಧಾರ ಗ್ರಂಥವೆಂದು ಭಾವಿಸಬಹುದು. ಅಹಿಂಸಾ ಸಾಧನಗಳ ಮೂಲಕ ಸತ್ಯವನ್ನು ಹುಡುಕುವುದೇ ಹಿಂದು ಧರ್ಮದ ಉದ್ದೇಶ. ಸತ್ಯದ ಕಠೋರ ಶೋಧನವೇ ಹಿಂದುತ್ವ. ಹಿಂದು ಧರ್ಮ ಅತ್ಯಂತ ಸಹಿಷ್ಣು ಧರ್ಮ, ಸಮದರ್ಶಿ ಧರ್ಮ, ಸರ್ವಗ್ರಾಹಿಧರ್ಮ. ಈ ಸರ್ವಗ್ರಾಹಿತ್ವವೇ ಅದರ ವಿಶಿಷ್ಟಸೌಂದರ್ಯ. ಬೇರೆ ಧರ್ಮಗಳಲ್ಲಿ ಇರುವುದೆಲ್ಲವನ್ನೂ ಹಿಂದು ಧರ್ಮದಲ್ಲಿ ಕಾಣಬಹುದು. ಯಾವ ಮತದ ಯೋಗ್ಯತೆಯೂ ಬರಿಯ ಸಂಖ್ಯಾಬಲವಲ್ಲ. ಮತಾನುಯಾಯಿಗಳೆಲ್ಲ ತಮ್ಮ ಧರ್ಮದ ತಿರುಳನ್ನು ಅರಿತು ಅದರಂತೆ ಆಚರಿಸುವುದು ಆ ಧರ್ಮದ ಶಕ್ತಿ. ಹಿಂದು ಸಮಾಜದ ಜಾತಿಪದ್ಧತಿ, ಅಸ್ಪೃಶ್ಯತೆ, ಮೂಢನಂಬಿಕೆ, ಬಾಲ್ಯವಿವಾಹ, ವಿಧವೆಯರ ಕಷ್ಟಸ್ಥಿತಿ, ಸ್ತ್ರೀಸ್ವಾತಂತ್ರ್ಯ ಇವನ್ನೆಲ್ಲ ತಿದ್ದಲು ಸುಧಾರಣೆ ಅವಶ್ಯಕವೆಂಬುದು ಗಾಂಧೀಜಿಯವರ ಅಭಿಮತ.

ಆದರ್ಶ ಸಮಾಜದಲ್ಲಿ ಸ್ತ್ರೀಪುರುಷರಲ್ಲಿ ಮೇಲು–ಕೀಳೆಂಬ ಭೇದವಿಲ್ಲ. ಅವರು ವಿವಾಹದಲ್ಲಿ ಗೆಳೆಯರಾಗಿ ಸಮಾನರಾಗಿ ಕೂಡುತ್ತಾರೆ. ಪತಿಗೆ ಪತ್ನಿ ನೆರವೀವ ಸಂಗಾತಿ. ಜೀವನದ ಕಾರ್ಯವನ್ನು ಮತ್ತು ಕರ್ತವ್ಯಗಳನ್ನು ಎಸಗುವುದರಲ್ಲಿ ಒಬ್ಬರು ಮತ್ತೊಬ್ಬರ ಜೊತೆ ಸಹಕರಿಸುವರು. ಒಬ್ಬರ ಅಭಿವೃದ್ಧಿ ಮಾರ್ಗದಲ್ಲಿ ಒಬ್ಬರು ಅಡ್ಡಿಯಾಗರು. ವಿವಾಹ, ಗಂಡು ಹೆಣ್ಣು ಇಬ್ಬರಿಗೂ ಒಂದು ಪವಿತ್ರ ಸಂಸ್ಕಾರ. ಸತಿಪತಿಯರ ಸಂಯೋಗ, ಬರಿಯ ದೈಹಿಕ ಸಂಯೋಗವಲ್ಲ; ಅದು ಎರಡು ಆತ್ಮಗಳ ನಿಜಸಂಯೋಗ. ಇಂಥ ಗೃಹಸ್ಥಾಶ್ರಮ ಉಳಿದ ಎಲ್ಲ ಆಶ್ರಮಗಳಿಗಿಂತ ಉತ್ತಮ. ವಿವಾಹದ ಗುರಿ ಸಂತಾನಾಪೇಕ್ಷೆಗಾಗಿ ಮಾತ್ರ. ಸಂತಾನಾಪೇಕ್ಷೆಯಿಲ್ಲದಿದ್ದರೆ ವಿವಾಹ ಖಂಡಿತ ಕೂಡದು. ಸಂತಾನ ಹೊಂದಬೇಕೆಂಬ ಆಸೆ ಸ್ವಾಭಾವಿಕವಾದುದು. ಅದು ತೃಪ್ತಿಯಾದ ಕೂಡಲೇ ಸಂಭೋಗವೇ ಕೂಡದು. ಕಾಮತೃಪ್ತಿಯ ವಿಷಯದಲ್ಲಿ ಸ್ತ್ರೀ ಪುರುಷರು ಒಬ್ಬರನ್ನೊಬ್ಬರು ಬಲಾತ್ಕರಿಸಬಾರದು. ಸಂತಾನಾಪೇಕ್ಷೆ ಮುಗಿದ ಕೂಡಲೇ ಕಾಮರಹಿತ ವಿವಾಹಜೀವನವನ್ನು ನಡೆಸಬೇಕು. ಸಮಾಜಸೇವೆಯನ್ನು ಆಜೀವ ಪರ್ಯಂತ ಮಾಡುವ ದೃಷ್ಟಿಯಿಂದ ಕೆಲವು ಮಹಿಳೆಯರು ಅವಿವಾಹಿತರಾಗಿಯೇ ಉಳಿಯಲು ಬಯಸಬಹುದು. ಅಂಥವರೂ ವಿವಾಹಿತರಾಗಿ ಪತಿಪತ್ನಿಯರಿಬ್ಬರೂ ಪರಸ್ಪರ ಸಹಾಯಕರಾಗಿ ಸಮಾಜಸೇವೆಯನ್ನು ನಡೆಸುವುದು ಉತ್ತಮ.

ಗಾಂಧೀಜಿಯ ದೃಷ್ಟಿಯಲ್ಲಿ ಬ್ರಹ್ಮಚರ್ಯವೆಂಬುದು ಮನುಷ್ಯನಿಗೆ ದೊರಕಿರುವ ಅತ್ಯಮೂಲ್ಯ ವಸ್ತು. ಭಾರತೀಯ ಸಮಾಜವಿಜ್ಞಾನ ಪ್ರಪಂಚಕ್ಕೆ ಕೊಟ್ಟಿರುವ ಶುಕ್ರಸಮಪ್ರಕಾಶಮಾನವಾದ ತೇಜೋನಿಧಿ. ಅಹಿಂಸೆ, ಸತ್ಯ, ಅಸ್ತೇಯ (ಇತರರದನ್ನು ಅಪಹರಿಸದಿರುವುದು), ಬ್ರಹ್ಮಚರ್ಯ, ಅಪರಿಗ್ರಹ, ಕಾಯಕ, ಜಿಹ್ವಾ ನಿಗ್ರಹ, ಅಭಯ, ಸರ್ವಧರ್ಮಸಮನ್ವಯ, ಸ್ವದೇಶಿ ಮತ್ತು ಅಸ್ಪೃಶ್ಯತಾ ನಿವಾರಣೆ ಈ ಎಲ್ಲ ನಿಯಮಗಳನ್ನೂ ತಪ್ಪದೆ ಆಚರಿಸುವವನು ಮಾತ್ರ ಬ್ರಹ್ಮಚಾರಿ. ಸಂತತಿನಿಯಂತ್ರಣದ ವಿಷಯದಲ್ಲಿ ಗಾಂಧೀಜಿ ಸ್ಪಷ್ಟವಾದ ಮತ್ತು ಖಚಿತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಜನನವನ್ನು ನಿಯಂತ್ರಿಸಬೇಕೆಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಪ್ರಾಚೀನಕಾಲದಿಂದಲೂ ಇದಕ್ಕಾಗಿ ಅನುಸರಿಸಿದ ಮಾರ್ಗ ಬ್ರಹ್ಮಚರ್ಯ ಅಥವಾ ಸಂಯಮ. ಸಂತತಿ ನಿಯಂತ್ರಕರು (ಸರ್ಕಾರವೇ ಆಗಲಿ, ಅದರ ಪ್ರಚಾರಕರೇ ಆಗಲಿ) ಕೃತಕ ಉಪಾಯಗಳನ್ನು ಹುಡುಕುವ ಬದಲು ಆತ್ಮನಿಗ್ರಹದ ಸಾಧನಗಳನ್ನು ಶೋಧಿಸಿದರೆ ಮಾನವ ಕುಲವೇ ಅವರಿಗೆ ಋಣಿಯಾಗಿರುವುದು. (ಜಿ.ಆರ್.ಎ.)

ಮಹಾತ್ಮ ಗಾಂಧಿಯವರು ಅರ್ಥಶಾಸ್ತ್ರದ ಮೇಲೆ ಯಾವ ಉದ್ಗ್ರಂಥವನ್ನೂ ಬರೆಯಲಿಲ್ಲ. ಸಾಂಪ್ರದಾಯಿಕವಾಗಿ ಅರ್ಥಶಾಸ್ತ್ರದ ಅಧ್ಯಯನ ಮಾಡಿ ಯಾವ ಪದವಿಯನ್ನು ಪಡೆದಿರಲಿಲ್ಲ. ಆದರೆ ಇವರು ಜೀವನದ ಬಹುಮುಖ ಸಮಸ್ಯೆಗಳನ್ನು ಅರಿತಿದ್ದು ಅವಕ್ಕೆ ತಮ್ಮವೇ ಆದ ಪರಿಹಾರಗಳನ್ನು ಮೊದಲು ಅವನ್ನು ತಮ್ಮ ಜೀವನದ ಮೇಲೆ ಪ್ರಯೋಗ ಮಾಡಿಕೊಂಡು ಅನಂತರ ಭಾಷಣಗಳು ಹಾಗೂ ಲೇಖನಗಳ ಮೂಲಕ ಪ್ರಸಿದ್ಧಪಡಿಸುತ್ತಿದ್ದರು. ಮಾನವನ ಆರ್ಥಿಕ ಸಮಸ್ಯೆಗಳ ಬಗ್ಗೆ ಅವರು ಆಗಿಂದಾಗ್ಗೆ ಆಡುತ್ತಿದ್ದ ಮಾತುಗಳನ್ನು ಮತ್ತು ಲೇಖನಗಳನ್ನು ಸುಸಂಬದ್ಧವಾಗಿ ಸಂಕಲನ ಮಾಡಿದರೆ ಒಂದು ಆರ್ಥಿಕ ಸಿದ್ಧಾಂತವೇ ರೂಪು ತಳೆಯುತ್ತದೆ.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ವಿಚಾರಪೂರ್ವಕ, ನಿಷ್ಠಾವಂತ ಅನ್ವಯವೇ ಅವರ ಸಿದ್ಧಾಂತದ ಮೂಲಸೂತ್ರ ಎನ್ನಬಹುದು. ಅರ್ಥವನ್ನು ಧರ್ಮ ನೀತಿಗಳಿಂದ ಬೇರ್ಪಡಿಸಿ, ಕೇವಲ, ಸಂಪತ್ತಿನ ಉತ್ಪಾದನೆ ವಿತರಣೆಗಳ ದೃಷ್ಟಿಯಿಂದ ಅರ್ಥಶಾಸ್ತ್ರದ ವ್ಯಾಖ್ಯೆ ಮಾಡುವುದನ್ನು ಗಾಂಧಿಯವರು ವಿರೋಧಿಸುತ್ತಿದ್ದರು. ಇವರ ದೃಷ್ಟಿಯಲ್ಲಿ ನೀತಿಬಾಹಿರವಾದ ಅರ್ಥಶಾಸ್ತ್ರ ಪಾಶವೀಶಾಸ್ತ್ರವೇ ಎನಿಸಿತು. ಮನುಷ್ಯ ತನ್ನ ಆತ್ಮವಿಕಾಸವನ್ನೇ ಧ್ಯೇಯವನ್ನಾಗಿಟ್ಟುಕೊಂಡು ಜೀವನ ನಿರ್ವಾಹಕ್ಕೆ ಅತ್ಯಗತ್ಯವಾಗಿ ಎಷ್ಟು ಬೇಕೋ ಅಷ್ಟೇ ವಸ್ತುಗಳನ್ನು ಉಪಯೋಗಿಸಬೇಕು. ಹಾಗೆ ತನಗೆ ಬೇಕಾಗುವ ಅಗತ್ಯವಸ್ತುಗಳನ್ನು ಪಡೆಯಲು ಪ್ರತಿಯೊಬ್ಬನೂ ಶ್ರಮನಿಷ್ಠ ಜೀವನವನ್ನು ನಡೆಸಬೇಕು. ಕೂಡಿಟ್ಟ ಹಣದ ಬಲದಿಂದಲೋ ಬೇರೊಬ್ಬರ ಶ್ರಮದ ಶೋಷಣೆಯಿಂದಲೊ ಲೋಲುಪ್ತಿಯ ಜೀವನ ನಡೆಸುವುದು ಚೌರ್ಯಕ್ಕೆ ಸಮಾನ. ಸ್ವದೇಶೀವ್ರತ ಗಾಂಧೀ ಅರ್ಥವಿಚಾರದ ಅವಿಭಾಜ್ಯ ಅಂಗ, ಸ್ವದೇಶೀ ಎಂದರೆ ತನ್ನ ನೆರೆಹೊರೆಯವರ, ಹಳ್ಳಿಯ, ರಾಜ್ಯದ ಅಥವಾ ದೇಶದ ಸಂಘಸಂಸ್ಥೆಗಳ ಬಗ್ಗೆ ಅಭಿಮಾನ ಮತ್ತು ಸ್ವದೇಶೀ ವಸ್ತುಗಳ ಉಪಯೋಗ, ಸ್ವದೇಶೀಗಳ ಬಗ್ಗೆ ಅಭಿಮಾನ ಮತ್ತು ಸ್ವದೇಶಿ ವಸ್ತುಗಳ ಉಪಯೋಗ. ಸ್ವದೇಶೀ ದೀಕ್ಷೆ ತನ್ನ ನೆರೆಹೊರೆಯವರ ಹಿತಚಿಂತನೆಯಿಂದಲೆ ಆರಂಭವಾಗುತ್ತದೆ. ನೆರೆಹೊರೆಯವರು ತಯಾರಿಸಿದ ವಸ್ತುಗಳನ್ನು ಕೊಳ್ಳಬೇಕು. ಸ್ಥಳೀಯ ಮತ್ತು ದೇಶೀಯ ಉದ್ಯಮಗಳಿಗೆ ಉತ್ತೇಜನ ನೀಡಬೇಕು. ಅವುಗಳನ್ನವಲಂಬಿಸಿರುವ ಜನರ ಹಿತವನ್ನು ಈ ಮೂಲಕ ರಕ್ಷಿಸಬೇಕು. ಇದು ಸ್ವದೇಶೀ ಧರ್ಮದ ಕಟ್ಟಲೆ. ಯಾವುದೇ ನೆರೆಹೊರೆಯಲ್ಲಿ ಸ್ಥಳೀಯವಾಗಿ ಅಥವಾ ಸ್ವದೇಶದಲ್ಲಿ ಸಿಕ್ಕುವುದಿಲ್ಲವೋ ಅದನ್ನು ಬೇರೆಡೆಯಿಂದ, ಪರದೇಶಗಳಿಂದ ತರಿಸಿಕೊಳ್ಳಲು ಅಭ್ಯಂತರವಿಲ್ಲ. ಸಂಖ್ಯಾಬಾಹುಳ್ಯವುಳ್ಳ ಗ್ರಾಮಾಧಾರಿತ ಭಾರತ ಪಾಶ್ಚಾತ್ಯ ರಾಷ್ಟ್ರಗಳ ಆರ್ಥಿಕ ಪದ್ಧತಿಯನ್ನು ಅನುಸರಿಸುವುದು ಸಾಧುವಲ್ಲ.

ಹಳ್ಳಿಗಳ ದೇಶವಾದ ಭಾರತದ ಅರ್ಥವ್ಯವಸ್ಥೆ ಗ್ರಾಮಸ್ವಾವಲಂಬನೆಯ ಆಧಾರದ ಮೇಲೆ ನಿರ್ಮಾಣವಾಗಬೇಕು. ಪ್ರತಿ ಹಳ್ಳಿಯೂ ಅದಕ್ಕೆ ಅಗತ್ಯವಾದ ವಸ್ತುಗಳನ್ನು ಉತ್ಪಾದನೆ ಮಾಡಿಕೊಳ್ಳಬೇಕು. ಗ್ರಾಮ ಅರ್ಥವ್ಯವಸ್ಥೆ ಕೃಷಿ ಮತ್ತು ಕುಟೀರ ಉದ್ಯಮಗಳ ಆಧಾರದ ಮೇಲೆ ನಿಲ್ಲಬೇಕು. ಗ್ರಾಮಕ್ಕೆ ಅಗತ್ಯವಾದ ಆಹಾರ, ಧಾನ್ಯ, ಹತ್ತಿ, ಎಣ್ಣೆಕಾಳುಗಳು, ತರಕಾರಿ, ದನಗಳಿಗೆ ಮೇವು ಎಲ್ಲವನ್ನೂ ಗ್ರಾಮದಲ್ಲೇ ಉತ್ಪಾದನೆ ಮಾಡಿಕೊಳ್ಳಬೇಕು. ಹತ್ತಿ ನೂತು ಬಟ್ಟೆಯನ್ನು ನೆಯ್ದುಕೊಳ್ಳಬೇಕು. ಕೃಷಿ ಗ್ರಾಮೋದ್ಯೋಗಗಳಿಗೆ ಬೇಕಾದ ಉಪಕರಣಗಳು ಗ್ರಾಮದಲ್ಲೇ ತಯಾರಾಗಬೇಕು. ಆರೋಗ್ಯರಕ್ಷಣೆ ನೈರ್ಮಲ್ಯ ಗ್ರಾಮರಕ್ಷಣೆ ಎಲ್ಲವೂ ಹಳ್ಳಿಯವರದೇ ಜವಾಬ್ದಾರಿ. ಈ ರೀತಿಯಲ್ಲಿ ವ್ಯವಸ್ಥೆಯಾದರೆ ಪ್ರತಿಗ್ರಾಮವೂ ಸ್ವಾವಲಂಬಿ

ಘಟಕವಾಗುತ್ತದೆ. ಭಾರತ ಸ್ವಾವಲಂಬಿ ಗ್ರಾಮ ಘಟಕಗಳ ಅಜೇಯ ಗಣರಾಜ್ಯವಾಗುತ್ತದೆ. ಉತ್ಪಾದನೆಯ ಗುರಿ ಲಾಭಸಂಪಾದನೆಯಾಗಿರಬಾರದು; ಸಾಮಾಜಿಕ ಹಿತ ಸಾಧನೆಯಾಗಿರಬೇಕು, ಉತ್ಪಾದನೆಯ ವ್ಯವಸ್ಥೆ ಜನರ ಅಗತ್ಯಗಳನ್ನು ಪೂರೈಸುವ ಶಕ್ತಿ ಪಡೆದಿರುವುದರ ಜೊತೆಗೆ, ಅದು ಶೋಷಣರಹಿತವೂ ಪರಮಾವಧಿ ಉದ್ಯೋಗಕಾರಕವೂ ಆಗಿರಬೇಕು. ಲಕ್ಷಾಂತರ ಗ್ರಾಮಗಳ ಕೋಟಿಕೋಟಿ ಕುಟೀರಗಳಲ್ಲಿ ಅನುಭೋಗ ವಸ್ತುಗಳ ತಯಾರಿಕೆ ಸಮೃದ್ಧಿಯಾಗಿ ಆಗಬೇಕು. ಇಂಥ ವ್ಯವಸ್ಥೆಯಲ್ಲಿ ಪರಮಾವಧಿ ಉದ್ಯೋಗ, ಹೇರಳ ಉತ್ಪಾದನೆ, ಸ್ಥಳೀಯ ವಿತರಣೆ, ಶೋಷಣರಹಿತ, ಕೆಲಸಗಾರನಿಗೆ ತಕ್ಕ ಕೌಶಲದ ಔನ್ನತ್ಯದ ಸಾಧನೆ ಮತ್ತು ತಾನೇ ಉತ್ಪಾದಿಸಿದೆನೆಂಬ ಸಂತೋಷ ಎಲ್ಲವೂ ಲಭ್ಯವಾಗುತ್ತವೆ. ಇಂಥ ಉತ್ಪಾದನೆಯ ವ್ಯವಸ್ಥೆಯಲ್ಲಿ ಯಂತ್ರಗಳ ಸ್ಥಾನ ಆದಷ್ಟು ಕಡಿಮೆಯಾಗಿರತಕ್ಕದ್ದು. ಯಾವ ಯಾವ ಕ್ಷೇತ್ರಗಳಲ್ಲಿ ಕೇವಲ ಅನಿವಾರ್ಯವಾಗಿ ಯಂತ್ರೋಪಕರಣಗಳ ಸಹಾಯದಿಂದ ದೊಡ್ಡ ಉದ್ಯಮಗಳೂ ರೈಲ್ವೆ ಸಾರಿಗೆ ಮುಂತಾದವು ಇರಲೇಬೇಕೋ ಅಂಥ ಎಡೆಗಳಲ್ಲಿ ಅವುಗಳ ಒಡೆತನ ಸರ್ಕಾರಕ್ಕೆ ಸೇರಿರಬೇಕು. ಬಂಡವಾಳವಾದ, ಸಾಮ್ಯವಾದ, ಸಮಾಜವಾದ ಇವುಗಳ ಬಗ್ಗೆ ಇವರ ಅಭಿಪ್ರಾಯ ಸ್ಪಷ್ಟವೂ ಖಚಿತವೂ ಆಗಿತ್ತು. ಕೆಲಸಗಾರರ ವರ್ಗದಲ್ಲಿ ಸಂಘಟನೆ ಆಗಿ ಅದರ ಶಕ್ತಿಯ ಅರಿವಾದರೆ ಅದನ್ನು ಬಂಡವಾಳವರ್ಗ ಶೋಷಣೆ ಮಾಡಲು ಸಾಧ್ಯವೇ ಇಲ್ಲ. ಎಲ್ಲಿ ಶೋಷಣೆ, ಅನ್ಯಾಯ ತಲೆದೋರುತ್ತದೋ ಅಲ್ಲಿ ಕಾರ್ಮಿಕರು ಶೋಷಕರೊಡನೆ ಅಹಿಂಸಾತ್ಮಕವಾಗಿ ಅಸಹಕರಿಸುವುದರ ಮೂಲಕ ಮುಕ್ತರಾಗಬಹುದು. ಉದ್ಯಮದ ಒಡೆಯರು ತಾವು ತಮ್ಮ ಸ್ವತ್ತಿನ ಧರ್ಮದರ್ಶಿಗಳೆಂದು ಮನಗಾಣಬೇಕು. ಕೆಲಸಗಾರರನ್ನೂ ಉದ್ಯಮದ ಪಾಲುದಾರರೆಂದು ಭಾವಿಸಬೇಕು. ಯೋಗ್ಯ ವೇತನ ಮತ್ತು ಕೆಲಸದ ಭದ್ರತೆಯ ಭರವಸೆಯನ್ನು ಕೆಲಸಗಾರಿಗೆ ದೊರಕಿಸಿಕೊಡಬೇಕು. ಅವರ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಪ್ರಗತಿಗೆ ಸೌಕರ್ಯಗಳನ್ನು ಒದಗಿಸತಕ್ಕದ್ದು. ಸಮಾಜವಾದವನ್ನು ಸರಿಯಾದ ರೀತಿಯಲ್ಲಿ ಅನ್ವಯಿಸಿದ್ದಾದರೆ ಅದೊಂದು ಅತ್ಯುಚ್ಚ ತತ್ತ್ವವೇ ಸರಿ. ಆದರೆ ಅದನ್ನು ಬಲವಂತವಾಗಿ ಹಿಂಸಾಮಾರ್ಗದಲ್ಲಿ ಅನ್ವಯಿಸಲು ಹೋದರೆ ಅದೊಂದು ಪಾಶವಿಪ್ರಯೋಗವಾಗುತ್ತದೆ. ನಿಜವಾದ ಸಮಾಜವಾದವೆಂದರೆ ಅಮೂಲ್ಯವಾದ ಅಪರಿಗ್ರಹತತ್ತ್ವವನ್ನು ಸಮಾಜಕ್ಕೆ ಅನ್ವಯಿಸುವುದು. ವ್ಯಕ್ತಿಗಳು ತಮ್ಮ ಆಸೆ ಅಪೇಕ್ಷೆಗಳನ್ನು ಕಡಿಮೆ ಮಾಡಿಕೊಂಡು, ಇರುವ ವಸ್ತುಗಳು ಸರ್ವರ ಉಪಯೋಗಕ್ಕೂ ಹಂಚಿಕೆಯಾಗಬೇಕೆಂಬ ಅಂತಃಕರಣದಿಂದ ಕೂಡಿ, ತಮಗೆ ಅತ್ಯಗತ್ಯವಾದಷ್ಟು ಮಾತ್ರವೇ ಆವಶ್ಯಕ ವಸ್ತುಗಳನ್ನು ಮಾತ್ರ ಬಳಸಬೇಕು. ಸಮಾಜದ ಸಂಪತ್ತನ್ನು ಹೆಚ್ಚಿಸಲು ಹಿತವನ್ನು ಸಂವರ್ಧಿಸಲು ತಮ್ಮ ಸಕಲ ಶಕ್ತಿ ಸಾಮರ್ಥ್ಯಗಳನ್ನೂ ವಿನಿಯೋಗಿಸುವ ಮನೋಭಾವವನ್ನು ಅವರು ಹೊಂದಿರಬೇಕು. ಮೇಲಾಗಿ ಜಗತ್ತಿನಲ್ಲಿರುವ ಸರ್ವಸ್ವವೂ ಈಶ್ವರನದೆಂಬ ಸತ್ಯವನ್ನು ಅರಿತು ತಮ್ಮಲಿರುವುದನ್ನೆಲ್ಲ ಜನತಾ–ಜನಾರ್ಧನನ ಸೇವೆಗಾಗಿ ವಿನಿಯೋಗಿಸಬೇಕು. (ಬಿ.ಆರ್.ಪಿ.)

**ಗಾಂಧಿಯವರ ಶಿಕ್ಷಣ ತತ್ತ್ವದೃಷ್ಟಿ:** ಇವರು ತಮ್ಮ ಜೀವನದ ದೃಷ್ಟಿಯನ್ನು ಆಧಾರಮಾಡಿಕೊಂಡು ರೂಪಿಸಿದ ನೂತನ ಶಿಕ್ಷಣಪದ್ಧತಿ ಭಾರತದಲ್ಲಿ ಜೀವನಶಿಕ್ಷಣ, ಮೂಲಶಿಕ್ಷಣ, ನಯೀ ತಾಲೀಂ (ನೂತನ ಶಿಕ್ಷಣ) ಇತ್ಯಾದಿ ಹೆಸರುಗಳಿಂದ ಪ್ರಚಾರಕ್ಕೆ ಬಂದಿದೆ. ಗಾಂಧೀಜಿ ತಮ್ಮ ಶಿಕ್ಷಣಪದ್ಧತಿಯನ್ನು ರೂಪಿಸುವ ವೇಳೆಗೆ ಶಿಕ್ಷಣಪ್ರಪಂಚದಲ್ಲಿ ನಿಸರ್ಗವಾದ, ಆದರ್ಶವಾದ, ಯಥಾರ್ಥವಾದ, ಫಲಪರಿಣಾಮಾನುಮೇಯವಾದಗಳು ಪ್ರಚಲಿತವಾಗಿದ್ದುವು. ಸಮಗ್ರತೆ; ನಿಸರ್ಗ ಸಮಸ್ತ ಪದಾರ್ಥಸ್ವರೂಪ; ನಿಸರ್ಗಕ್ಕೆ ಅನ್ವಯಿಸುವ ವಿಧಾನಗಳನ್ನು ಅನ್ವಯಿಸಲು ಆಗದ ಯಾವ ಜ್ಞಾನ ಅಥವಾ ಅನುಭವದ ಕ್ಷೇತ್ರವೂ ಇಲ್ಲ; ಅಸ್ತಿತ್ವಕ್ಕೆ ಅತಿಮಾನುಷ ಅಥವಾ ಆಧ್ಯಾತ್ಮಿಕ ಪ್ರಪಂಚವೊಂದರ ಕೈವಾಡವಿಲ್ಲ. ಹಾಗೆಯೇ ಎಲ್ಲ ಪ್ರಕ್ರಿಯೆಗಳನ್ನೂ ಪದಾರ್ಥದ ಚಲನೆಯ ರೂಪದಲ್ಲಿ ವಿವರಿಸುವ ಭೌತ ಅಥವಾ ಯಂತ್ರಕೌಶಲವಾದವೂ ಸರಿಯಲ್ಲ–ಎಂದು ಪ್ರತಿಪಾದಿಸುತ್ತದೆ ಆಧುನಿಕ ನಿಸರ್ಗವಾದ. ಇದನ್ನು ಮೊದಲು ರೂಸೋ ಅನಂತರ ಪೆಸ್ಟಲಾಜಿ, ಹರ್ಬಾರ್ಟ್, ಸ್ಟಾನ್ಲಿ ಹಾಲ್, ಜಾನ್ ಡ್ಯೂಯಿ ಇವರು ಆಧಾರಮಾಡಿಕೊಂಡು ಶಿಕ್ಷಣ ಕ್ಷೇತ್ರಕ್ಕೆ ಅಳವಡಿಸಿಕೊಂಡರು.

ಗಾಂಧೀಜಿಯ ಶಿಕ್ಷಣ ಧೋರಣೆ ಈ ನಾಲ್ಕು ತತ್ತ್ವಪಂಥಗಳಲ್ಲಿ ಯಾವ ಒಂದು ಪಂಥವನ್ನು ಆಧಾರಮಾಡಿಕೊಳ್ಳದಿದ್ದರೂ ಅವುಗಳಲ್ಲೊಂದೊಂದರ ಹಲಕೆಲವು ಅಂಶಗಳನ್ನು ಒಳಗೊಂಡಿದೆ ಎಂದ ಮಾತ್ರಕ್ಕೆ ಆ ನಾಲ್ಕರಿಂದಲೂ ಆಯ್ದ ತತ್ತ್ವದೃಷ್ಟಿಗಳ ಆಧಾರದ ಮೇಲೆ ಅವರು ತಮ್ಮ ದೃಷ್ಟಿಯನ್ನು ರೂಪಿಸಿದರೆಂದು ಭಾವಿಸುವಹಾಗಿಲ್ಲ. ಗಾಂಧಿಯವರು ರೂಪಿಸಿದ ಮೂಲಶಿಕ್ಷಣ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ಅನ್ವಯವಾಗುವಂಥದು. ಭಾರತದ ಜನತೆಯ ಶೇ.80 ಭಾಗ ಗ್ರಾಮಗಳಲ್ಲಿ ಜೀವಿಸುವುದರಿಂದ ಭಾರತದಲ್ಲಿ ರೂಪಿಸುವ ಯಾವ ರಾಷ್ಟ್ರೀಯ ಶಿಕ್ಷಣ ಯೋಜನೆಯೇ ಆಗಲಿ ಪ್ರಥಮತಃ ಅವರ ಹಿತದೃಷ್ಟಿಗೆ ಒಪ್ಪುವಂತೆ ರೂಪಗೊಳ್ಳಬೇಕೆಂಬುದು ಸ್ವಾಭಾವಿಕ. ಅನ್ಯಭಾಷೆಯೊಂದರ ಮೂಲಕ ಅನ್ಯಸಂಸ್ಕೃತಿಯೊಂದನ್ನು ಕುರಿತ ವಿದ್ಯೆ ಕಲಿಯುವುದು ನಮ್ಮವರಿಗೆ ಅಸ್ವಾಭಾವಿಕವೆಂದು ಬಗೆದು ಇಲ್ಲಿನವರ ಶಿಕ್ಷಣ, ಇಲ್ಲಿನ ಜನತೆಯ ಜೀವನಕ್ಕೆ ಸಂಬಂಧಿಸಿದಂತೆ ನಡೆಯಬೇಕು; ಅವರ ಮಾತೃಭಾಷೆಯಲ್ಲಿ ನಡೆಯಬೇಕು; ಇಲ್ಲಿನವರ ಜೀವನ ವಿಧಾನದಲ್ಲಿ ನಡೆಯಬೇಕು ಹಾಗೂ ಬಡತನದ ಈ ವಿಶಾಲ ದೇಶದಲ್ಲಿ ಅಷ್ಟಾಗಿ ಧನದ ಅಗತ್ಯವಿರದೆ ನಡೆಯಬೇಕು. ಸಮಾಜದಲ್ಲಿ ಜೀವನೋಪಾಯಕ್ಕಾಗಿ ಜನತೆ ಅನುಸರಿಸುತ್ತಿರುವ ಕಸಬೊಂದನ್ನು ಕೇಂದ್ರವಾಗಿ ಮಾಡಿಕೊಂಡು ಅದನ್ನು ಕಲಿಯಲು ಅಗತ್ಯವೆನಿಸುವ ಜ್ಞಾನ, ಕೌಶಲ, ಮನೋಭಾವ ಇವುಗಳನ್ನು ಕಲಿಸುವ ಯತ್ನಫಲ ಪರಿಣಾಮಾನುಮೇಯವಾದದ ಮುಖ್ಯ ಅಂಶವನ್ನು ಅಳವಡಿಸಿಕೊಂಡಿದೆ ಹಾಗೂ ಅನುಭವಗಳ ಮೂಲಕ ಶಿಕ್ಷಣ ದೊರಕಿಸಬೇಕೆಂಬ ಆ ತತ್ತ್ವಪಂಥದ ವಿಧಾನವನ್ನು ಅನುಸರಿಸುತ್ತದೆ. ಸದ್ಯದಲ್ಲಿ ಎಲ್ಲ ದೇಶಗಳಲ್ಲೂ ಫಲ ಪರಿಣಾಮವಾದಕ್ಕೆ ಪ್ರಾಶಸ್ತ್ಯ ದೊರಕುತ್ತಿದೆ. ಅದನ್ನು ಆಧಾರಮಾಡಿಕೊಂಡು ಮೊಟ್ಟಮೊದಲು ಈ ಶತಮಾನದ ಆದಿಯಲ್ಲಿ ಜಾನ್ ಡ್ಯೂಯಿಯವರು ಉದ್ಯಮ ಶಾಲೆಗಳನ್ನು ಅಮೆರಿಕದಲ್ಲಿ ಆರಂಭಿಸಿದರು. ಅವರ ತತ್ತ್ವದೃಷ್ಟಿಯನ್ನು ಪ್ರಪಂಚದಾದ್ಯಂತ ಪುರಸ್ಕರಿಸಲಾಯಿತು. ಇಪ್ಪತ್ತನೆಯ ಶತಮಾನದ ಪ್ರಧಾನ ತತ್ತ್ವಚಿಂತಕರೆನಿಸಿರುವ ಅವರು ಮೂಲಶಿಕ್ಷಣ ಪದ್ಧತಿಯನ್ನು ಕುರಿತು ಅದು ನನ್ನ ಶಿಕ್ಷಣಪದ್ಧತಿಗಿಂತಲೂ ಒಂದು ಹಂತ ಮುಂದೆ ಸಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಇಂಥ ಅನೇಕ ಪ್ರಗತಿಪರ ಅಂಶಗಳನ್ನೊಳಗೊಂಡ ಗಾಂಧೀಜಿಯವರ ಶಿಕ್ಷಣದೃಷ್ಟಿ ಆಕಸ್ಮಿಕವಾಗಿ ರೂಪಗೊಂಡದ್ದಲ್ಲ. ಅವರ ಜೀವನದರ್ಶನ ಬೆಳೆದು ಪಕ್ವಗೊಂಡಂತೆ ಇವರ ಶಿಕ್ಷಣತತ್ತ್ವವೂ ರೂಪುಗೊಂಡಿತು. ಅದನ್ನಿವರು ಪ್ರತ್ಯೇಕವಾಗಿ ರೂಪುಗೊಳಿಸಲಿಲ್ಲ. ಇವರ ಜೀವನ ದರ್ಶನದ ಕಾರ್ಯಸ್ವರೂಪವಾಗಿ ಅವರ ಶಿಕ್ಷಣ ಪದ್ಧತಿ ಮೈದಾಳಿತು.

ಗಾಂಧೀಜಿಯವರ ತತ್ತ್ವದೃಷ್ಟಿಯನ್ನು ಯಾವೊಂದು ಸಾಂಪ್ರದಾಯಿಕ ಹೆಸರಿನಿಂದಲೂ ಕರೆಯುವಂತಿಲ್ಲ. ಅದನ್ನು ಗಾಂಧೀವಾದವೆನ್ನುವುದು ಸೂಕ್ತ. ಅವರ ಈ ತತ್ತ್ವದೃಷ್ಟಿಯನ್ನು ಪೋಷಿಸಿದ್ದು ರಸ್ಕಿನ್ನರ ಅನ್ ಟು ದಿ ಲಾಸ್ಟ್ ಎಂಬ ಕೃತಿ. ಒಬ್ಬ ನ್ಯಾಯವಾದಿಯ ಕೆಲಸ ಒಬ್ಬ ಕ್ಷೌರಿಕನ ಕೆಲಸದಷ್ಟೇ ಅಮೂಲ್ಯವಾದುದು. ಉಳುವ ರೈತನ, ದುಡಿಯುವ ಕಾರ್ಮಿಕನ ಜೀವನ ಅಷ್ಟೇ ಯೋಗ್ಯ ಜೀವನ ಎಂಬ ನಂಬಿಕೆಯನ್ನು ಆ ಗ್ರಂಥಪಠನ ಅವರಲ್ಲಿ ಮೂಡಿಸಿತು. ಹಾಗೆಯೇ ಗೀತೆಯ ಪಠನದಿಂದ ಆತ್ಮವತ್ ಸರ್ವಭೂತೇಷು ಎಂಬ ದೃಷ್ಟಿಯನ್ನು ಆಗಲೇ ಅವರು ಅಂತರ್ಗತ ಮಾಡಿಕೊಂಡಿದ್ದರು. ತಮ್ಮ ಈ ಭಾವನೆಗಳನ್ನವರು ಒಟ್ಟಾರೆ ಸರ್ವೋದಯ ಎಂದು ಕರೆದರು.

ತಮ್ಮ ಸರ್ವೋದಯ ತತ್ತ್ವವನ್ನು ಪ್ರಯೋಗಿಸಿ ನೋಡಲು ಗಾಂಧೀಜಿ ಹಲವು ಪ್ರಯೋಗಗಳನ್ನು ನಡೆಸಿದರು. ಆ ಒಂದೊಂದು ಪ್ರಯೋಗವೂ ಒಂದೊಂದು ಶಿಕ್ಷಣಯೋಜನೆಯೆನ್ನಬಹುದು. ಫೀನಿಕ್ಸ್ ಆಶ್ರಮ, ಟಾಲ್‌ಸ್ಟಾಯ್ ಆಶ್ರಮ, ಸತ್ಯಾಗ್ರಹಾಶ್ರಮ, ಸೇವಾಗ್ರಾಮ ಆಶ್ರಮ ಇವೇ ಮೊದಲಾದವು ಸತ್ಯ – ಅಹಿಂಸಾ ಶಿಕ್ಷಣದ ಕೇಂದ್ರಗಳೆನಿಸಿದವು. ಟಾಲ್‌ಸ್ಟಾಯ್ ಆಶ್ರಮದಲ್ಲಿ ಇವರೇ ಶಿಕ್ಷಕರಾಗಿದ್ದರು. ತಮ್ಮ ಮತ್ತು ಇತರ ಮಕ್ಕಳಿಗೆ ಜೀವನೋಪಾಯದ ಕಸಬೊಂದರ ಮೂಲಶಿಕ್ಷಣ ಕೊಡಲು ತಾವೇ ಚಮ್ಮಾರನ ಕೆಲಸವನ್ನು ಕಲಿತರು. ಇದು ಇವರು ದಕ್ಷಿಣ ಆಫ್ರಿಕದಲ್ಲಿದ್ದಾಗ ನಡೆಸಿದ ಪ್ರಯೋಗ. ಅನಂತರ ಇವರು ಮಾತೃಭೂಮಿಗೆ ಹಿಂದಿರುಗಿದ ಮೇಲೆ ಅಹಮದಾಬಾದಿನ ಬಳಿ ಆಶ್ರಮವನ್ನು ಮಾಡಿಕೊಂಡು ಅಲ್ಲಿ ನೂಲುವುದು, ನೇಯುವುದು ಮತ್ತು ಅವಕ್ಕೆ ಸಂಬಂಧಿಸಿದ ಇತರ ಕಾರ್ಯಗಳನ್ನೂ ಜೀವನೋಪಾಯದ ಕಸಬನ್ನಾಗಿ ಆರಿಸಿಕೊಂಡು ಅದರ ಆಧಾರದ ಮೇಲೆ ಶಿಕ್ಷಣವೀಯುವ ಬಗ್ಗೆ ಸತತವಾಗಿ ಪ್ರಯತ್ನ ನಡೆಸಿದರು.

**ರಾಷ್ಟ್ರೀಯ ಶಿಕ್ಷಣ ಮತ್ತು ಸರ್ವೋದಯ:** ಒಂದೂ ಕಾಲು ಶತಮಾನಕ್ಕೂ ಹೆಚ್ಚು ಕಾಲ ಪಾಶ್ಚಾತ್ಯ ಶಿಕ್ಷಣಪದ್ಧತಿ ಭಾರತದಾದ್ಯಂತ ಅಸ್ತಿತ್ವದಲ್ಲಿದ್ದರೂ ಅದು ಇಲ್ಲಿನವರ ಅಗತ್ಯಗಳನ್ನು ಪೂರೈಸಿರಲಿಲ್ಲ; ಆಶೋತ್ತರಗಳನ್ನು ಈಡೇರಿಸಿರಲಿಲ್ಲ. ರಾಷ್ಟ್ರದ ಅಂದಿನ ತೀವ್ರ ಸಮಸ್ಯೆಗಳನ್ನೂ ನಿವಾರಿಸಿ ತಮ್ಮ ಕನಸಿನ ಸರ್ವೋದಯ ಸಮಾಜವನ್ನು ರಚಿಸಬಲ್ಲ ಆ ಪದ್ಧತಿಯಲ್ಲಿ ಗ್ರಾಮೋದ್ಯೋಗಗಳಿಗೆ ಪ್ರಾಧಾನ್ಯವಿರಬೇಕೆಂದು ಭಾವಿಸಿದರು. ಏಕೆಂದರೆ, ಇಲ್ಲಿನ ಶೇ. 80 ರಷ್ಟು ಜನತೆ ಗ್ರಾಮವಾಸಿಗಳಾಗಿದ್ದರು. ರಾಷ್ಟ್ರದ ಪ್ರಧಾನ ಸಮಸ್ಯೆಗಳನ್ನೂ ಪರಿಹರಿಸಿ ಸಮಾಜದಲ್ಲಿ ಪರಿವರ್ತನೆ ಮಾಡಬಲ್ಲ ಆ ಶಿಕ್ಷಣವನ್ನು ಇವರು ಗ್ರಾಮೀಣ ರಾಷ್ಟ್ರೀಯ ಶಿಕ್ಷಣ ಎಂದು ಕರೆದರು. ಇದು ಗ್ರಾಮೀಣ. ಏಕೆಂದರೆ ಉನ್ನತ ಅಥವಾ ಇಂಗ್ಲಿಷ್ ಶಿಕ್ಷಣವನ್ನು ತ್ಯಜಿಸಿರುತ್ತದೆ; ಸತ್ಯ, ಅಹಿಂಸೆ, ಗ್ರಾಮೋದ್ಯೋಗಗಳ ಮೂಲಕ (ಎಂದರೆ ಅದನ್ನು ಕಲಿಸುವ ಅಧ್ಯಾಪಕರು ಮಕ್ಕಳಿಗೆ ತಾವು ಆರಿಸಿಕೊಂಡ ಕಸಬಿನ ಮೂಲಕ) ಯಾವ ನಿರ್ಬಂಧ ಹಸ್ತಕ್ಷೇಪಗಳೂ ಇಲ್ಲದೆ ಅವರ ಸರ್ವಸಾಮರ್ಥ್ಯಗಳೂ ವಿಕಸಿಸುವಂತೆ ಮಾಡುವುದು.

ವ್ಯಕ್ತಿಯ ಸರ್ವತೋಮುಖವಾದ ಬೆಳೆವಣಿಗೆಯಾಗಲು ಸಾಧ್ಯವಾದಮಟ್ಟಿಗೆ ಎಲ್ಲ ಶಿಕ್ಷಣವನ್ನೂ ಒಂದು ಲಾಭದಾಯಕ ಕಸಬಿನ ಮೂಲಕ ಒದಗಿಸಬಹುದೆಂದು ಗಾಂಧೀಜಿ ತಮ್ಮ ಪ್ರಯೋಗಗಳಿಂದ ಸ್ಪಷ್ಟವಾಗಿ ಅರಿತುಕೊಂಡಿದ್ದರು. ಶಿಕ್ಷಣದ ಕೇಂದ್ರವನ್ನಾಗಿ ಮಾಡಿಕೊಳ್ಳಲು ಆರಿಸಿಕೊಳ್ಳುವ ಕಸಬು ವಿದ್ಯಾರ್ಥಿಯ ದೃಷ್ಟಿಯಲ್ಲಿ ಮೂರು ಉದ್ದೇಶಗಳನ್ನು ಸಾಧಿಸಬೇಕು: ಮೊದಲನೆಯದಾಗಿ, ತನ್ನ ಶಿಕ್ಷಣದ ವೆಚ್ಚವನ್ನು ತನ್ನ ದುಡಿಮೆಯ ಫಲವಾದ ಉತ್ಪನ್ನದಿಂದ ಗಳಿಸಿಕೊಳ್ಳುವಂತಾಗಬೇಕು; ಎರಡನೆಯದಾಗಿ, ತನ್ನ ವ್ಯಕ್ತಿತ್ವದ ಎಲ್ಲ ಮುಖಗಳನ್ನು ಬೆಳೆಸಲು ಅದು ನೆರವಾಗಬೇಕು; ಮೂರನೆಯದಾಗಿ, ಮುಂದೆ ಅದು ತನ್ನ ಜೀವನೋಪಾಯಕ್ಕಾಗಿ ಅನುಸರಿಸಬಹುದಾದ ಉದ್ಯೋಗವೂ ಆಗಬೇಕು. ಹತ್ತಿ, ಉಣ್ಣೆ, ರೇಷ್ಮೆ–ಇವುಗಳ ಬಳಕೆಗೆ ಸಂಬಂಧಿಸಿದಂತೆ ಸಂಗ್ರಹ, ಶುದ್ಧೀಕರಣ, ಬೀಜ ತೆಗೆಯುವುದು (ಹತ್ತಿಯ ವಿಷಯದಲ್ಲಿ ಮಾತ್ರ), ಎಕ್ಕುವುದು, ನೂಲುವುದು, ಬಣ್ಣಕಟ್ಟುವುದು, ಗಂಜಿಕಟ್ಟುವುದು, ಹಾಸುಮಾಡುವುದು, ಇಮ್ಮಡಿ ನುಲಿಕೆ, ಮಾದರಿ ರಚನೆ ಮತ್ತು ನೇಯ್ಗೆ

–ಇತ್ಯಾದಿಯಾದ ಎಲ್ಲ ಕೆಲಸಗಳೂ ಕಸೂತಿ, ಹೊಲಿಗೆ, ಕಾಗದ ತಯಾರಿಕೆ, ಪುಸ್ತಕಕ್ಕೆ ರಟ್ಟು ಕಟ್ಟುವುದು, ಮರಗೆಲಸ, ಆಟಿಕೆಗಳ ತಯಾರಿಕೆ, ಮನೆಕಟ್ಟುವುದು–ಇವೆಲ್ಲ ಸರಾಗವಾಗಿ ಕಲಿಯಬಹುದಾದ ಹಾಗೂ ಅಷ್ಟಾಗಿ ಬಂಡವಾಳ ಬೇಡದ ಕಸಬುಗಳು. ಪ್ರಾಥಮಿಕ ಕಲಿಕೆ ಬಾಲಕಬಾಲಕಿಯರಿಗೆ ಜೀವನೋಪಾಯಕ್ಕೆ ನೆರವಾಗಬಲ್ಲ ಶಿಕ್ಷಣ ಒದಗಿಸಬೇಕು. ಅವರು ಕಲಿತಿರುವ ಕಸಬಿಗೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಸರ್ಕಾರ ಆಶ್ವಾಸನೆ ನೀಡಬೇಕು ಅಥವಾ ಅವರು ತಯಾರಿಸುವ ಉತ್ಪನ್ನಗಳನ್ನು ಸೂಕ್ತ ಬೆಲೆಗೆ ಕೊಂಡುಕೊಳ್ಳಬೇಕು. ಆಗ ಶಿಕ್ಷಣ ವ್ಯಕ್ತಿಗೂ ಸಮಾಜಕ್ಕೂ ಅನುಕೂಲವಾಗುವುದಲ್ಲದೆ ಆರ್ಥಿಕವಾಗಿ ಸ್ವಾವಲಂಬಿಯೂ ಆಗಿರಬಲ್ಲದು. ಇವು ಗಾಂಧೀಜಿಯವರ ಮನಸ್ಸಿನಲ್ಲಿ ಈ ಶತಮಾನದ ಆದಿಯಿಂದಲೂ ಶಿಕ್ಷಣದ ಬಗ್ಗೆ ಪುಟಗೊಳ್ಳುತ್ತಿದ್ದ ಭಾವನೆಗಳು.

1937ರಲ್ಲಿ ಪ್ರಾಂತೀಯ ಸ್ವಾತಂತ್ರ್ಯ ಆಚರಣೆಗೆ ಬಂತು. ಪ್ರಾಂತ್ಯಗಳಲ್ಲಿ ಜನನಾಯಕರು ಶಿಕ್ಷಣ ಸಚಿವರಾಗಿ ಜನತೆಯ ಆಶೋತ್ತರಗಳನ್ನು ಈಡೇರಿಸುವಂತೆ ಶಿಕ್ಷಣ ವ್ಯವಸ್ಥೆ ಮಾಡಲು ಸಿದ್ಧರಾದರು. ಆ ಸಮಯದಲ್ಲಿ ಗಾಂಧೀಜಿ ಅಷ್ಟಾಗಿ ಹಣದ ವೆಚ್ಚವಿಲ್ಲದೆ ರಾಷ್ಟ್ರವ್ಯಾಪಕವಾಗಿ ಆಚರಣೆಗೆ ತರಬಹುದಾದ ತಮ್ಮ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಜನತೆಯ ಮುಂದಿಟ್ಟರು. ಅಂದಿಗಾಗಲೇ ಇವರ ಶಿಕ್ಷಣ ಪದ್ಧತಿಗೆ ತಕ್ಕಷ್ಟು ಪ್ರಚಾರ ದೊರೆತಿದ್ದು, ಬೇಕಾದ ಹಾಗೆ ಖಂಡನೆ ಮಂಡನೆಗಳು ಪ್ರಕಟವಾಗಿದ್ದುವು.

1937ರ ಅಕ್ಟೋಬರ್ 23ರಂದು ವಾರ್ಧಾದಲ್ಲಿ ರಾಷ್ಟ್ರೀಯ ಶಿಕ್ಷಣ ಸಮ್ಮೇಳನ ನಡೆಯಿತು. ಗಾಂಧೀಜಿ ಹರಿಜನ ಪತ್ರಿಕೆಯ ಮೂಲಕ ಪ್ರಕಟಿಸಿದ್ದ ಶಿಕ್ಷಣ ಪದ್ಧತಿಯ ಬಗ್ಗೆ ಟೀಕೆಗಳು ಬರಹತ್ತಿದ್ದುವು. ಆ ಪದ್ಧತಿಯನ್ನು ಸಮ್ಮೇಳನ ಚೆನ್ನಾಗಿ ಪರಿಶೀಲಿಸಿತು. ಸಮ್ಮೇಳನದಲ್ಲಿ ಅಂದು ಕಾಂಗ್ರೆಸ್ ಅಧಿಕಾರದಲ್ಲಿದ್ದ ಏಳು ಪ್ರಾಂತ್ಯಗಳ ಶಿಕ್ಷಣ ಸಚಿವರೂ ರಾಷ್ಟ್ರೀಯ ಶಿಕ್ಷಣದಲ್ಲಿ ಆಸಕ್ತಿಯಿದ್ದ ಶಿಕ್ಷಣತಜ್ಞರೂ ಇತರರೂ ಇದ್ದರು. ಗಾಂಧೀಜಿಯ ಶಿಕ್ಷಣಯೋಜನೆಯ ಮೇಲೆ ತೀವ್ರರೀತಿಯಲ್ಲಿ ಚರ್ಚೆ ನಡೆಯಿತು. ಕಡೆಗೆ ಸಮ್ಮೇಳನ ಈ ಕೆಲವು ತೀರ್ಮಾನಗಳನ್ನು ಕೈಕೊಂಡಿತು: 1 ರಾಷ್ಟ್ರವ್ಯಾಪಕವಾಗಿ ಏಳು ವರ್ಷಗಳ ಉಚಿತ ಕಡ್ಡಾಯ ಶಿಕ್ಷಣವನ್ನು ದೊರಕಿಸಬೇಕು; 2 ಬೋಧನಮಾಧ್ಯಮ ಮಾತೃಭಾಷೆಯಾಗಿರಬೇಕು; 3 ಈ ಕಾಲಾವಧಿಯ ಶಿಕ್ಷಣ ಗಾಂಧೀಜಿ ಸಲಹೆ ಮಾಡಿರುವಂತೆ, ಒಂದು ಉತ್ಪನ್ನದಾಯಕ ಕೈಕಸಬನ್ನು ಕೇಂದ್ರಮಾಡಿಕೊಂಡಿರಬೇಕು. ಮಕ್ಕಳಲ್ಲಿ ಮೂಡಿಸಬೇಕಾದ ಮಿಕ್ಕೆಲ್ಲ ಸಾಮರ್ಥ್ಯಗಳೂ ಕೊಡಬೇಕಾದ ತರಬೇತೂ ಸಾಧ್ಯವಾದ ಮಟ್ಟಿಗೆ ಮಗುವಿನ ಸನ್ನಿವೇಶದಿಂದ ಆರಿಸಿಕೊಂಡ ಆ ಕೈಕಸಬಿನೊಡನೆ ಸಂಬಂಧಿಸಿರಬೇಕು; 4 ಈ ಶಿಕ್ಷಣ ಪದ್ಧತಿ ಕ್ರಮಕ್ರಮವಾಗಿ ಅಧ್ಯಾಪಕರ ಸಂಭಾವನೆಯ ಬಗ್ಗೆ ಸ್ವಯಂಪೂರ್ಣವಾಗಬೇಕು ಎಂದು ಸಮ್ಮೇಳನ ಆಶಿಸುವುದು. ಈ ತೀರ್ಮಾನಗಳನ್ನು ಆಧಾರ ಮಾಡಿಕೊಂಡು ಗಾಂಧೀಜಿ ಶಿಕ್ಷಣ ಯೋಜನೆಗೆ ಒಂದು ಶಾಸ್ತ್ರೀಯ ಚೌಕಟ್ಟನ್ನು ಕೊಡಬೇಕಾಗಿತ್ತು.; ಅದಕ್ಕಾಗಿ ಸಮ್ಮೇಳನ ಜಾಕೀರ್ ಹುಸೇನ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿ ಎರಡು ತಿಂಗಳೊಳಗಾಗಿ ಈ ಕಾರ್ಯವನ್ನು ಪೂರೈಸಿ ವಾರ್ಧಾ ಶಿಕ್ಷಣ ಯೋಜನೆ ಎಂಬ ಹೆಸರಿನ ವರದಿಯನ್ನು ಸಲ್ಲಿಸಿತು. ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಇದೊಂದು ಪ್ರಧಾನ ದಾಖಲೆ. ಅನಂತರ 1938 ರಲ್ಲಿ ಹರಿಪುರದಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಅಧಿವೇಶನ ಅದಕ್ಕೆ ತನ್ನ ಒಪ್ಪಿಗೆ ನೀಡಿತು. ಕಾಂಗ್ರೆಸ್ ಅಧಿಕಾರದಲ್ಲಿದ್ದ ಏಳು ಪ್ರಾಂತ್ಯಗಳಲ್ಲೂ ಯೋಜನೆ ಮೂಲಶಿಕ್ಷಣ (ಬೇಸಿಕ್ ಎಜುಕೇಷನ್) ಎಂಬ ಹೆಸರಿನಲ್ಲಿ ಅನುಷ್ಠಾನಕ್ಕೆ ಬಂತು.

**ಮೂಲಶಿಕ್ಷಣದ ಶಾಸ್ತ್ರೀಯ ಸ್ವರೂಪ:** ಮೂಲಶಿಕ್ಷಣವನ್ನು ರೂಪಿಸಿದ ಗಾಂಧೀಜಿ ಮೂಲತಃ ಶಿಕ್ಷಣವೇತ್ತರಲ್ಲ. ಇವರು ಅದನ್ನು ಶಿಕ್ಷಣಶಾಸ್ತ್ರದ ಬೆಳಕಿನಲ್ಲಿ ರೂಪಿಸುವ ಯತ್ನವನ್ನೂ ಮಾಡಿದವರಲ್ಲ. ಆದರೂ ಇವರ ಯೋಜನೆಯಲ್ಲಿ ಶಿಕ್ಷಣಶಾಸ್ತ್ರ ಎತ್ತಿಹಿಡಿಯುವ ಹಲವು ಸಲ್ಲಕ್ಷಣಗಳನ್ನು ಗುರುತಿಸಬಹುದು. ಉತ್ಪನ್ನದಾಯಕ ಚಟುವಟಿಕೆಯೊಂದರ ಮೂಲಕ ಮಕ್ಕಳಿಗೆ ಶಿಕ್ಷಣವೀಯಲು ನಿಯೋಜಿಸಿರುವ ಇವರ ಯೋಜನೆ ಎಲ್ಲ ಆಧುನಿಕ ತತ್ತ್ವಗಳಿಗೂ ಒಪ್ಪುವಂತಿದೆ. ಮಕ್ಕಳ ಸಮಗ್ರವೂ ಸರ್ವತೋಮುಖವೂ ಆದ ವಿಕಾಸಕ್ಕೆ ಅದು ಪರಿಣಾಮಕಾರಿ ವಿಧಾನವೆಂಬುದನ್ನು ಎಲ್ಲ ಶಿಕ್ಷಣತತ್ತ್ವಗಳೂ ಒಪ್ಪುತ್ತವೆ.

ಗಾಂಧೀಜಿ ಗ್ರಾಂಥಿಕ ಶಿಕ್ಷಣವನ್ನೇನೂ ವಿರೋಧಿಸಲಿಲ್ಲ. ಆದರೆ ಪುಸ್ತಕದ ಓದು ಕಲಿಸುವುದಕ್ಕಾಗಿಯೇ ಕೋಟಿಗಟ್ಟಲೆ ಹಣ ತಿನ್ನುವ ಪ್ರಾಥಮಿಕ ಶಿಕ್ಷಣ ಮಕ್ಕಳ ಮನಶ್ಶಕ್ತಿಯನ್ನು ಶೋಷಿಸದಿರಬೇಕೆಂದು ಇವರ ಆಶಯವಾಗಿತ್ತು. ತಕಲಿ ಮುಂತಾದ ಉಪಕರಣಗಳಿಂದ ಕೆಲಸ ಮಾಡುವುದು ಮಕ್ಕಳಿಗೊಂದು ಆಟದ ರೂಪದಲ್ಲಿದ್ದು ಅಂಥ ಶೋಷಣೆಯಿಂದ ಅವರನ್ನು ವಿಮುಕ್ತಿಮಾಡುವುದೆಂದು ಇವರು ಪ್ರತಿಪಾದಿಸುತ್ತಿದ್ದರು.

ಮೂಲಶಿಕ್ಷಣ ನಿಜವಾಗಿ, ಯಾವುದಾದರೂ ಕೈಗಾರಿಕೆಯ ಮಾಧ್ಯಮದ ಮೂಲಕ ಇಡೀ ಶಿಕ್ಷಣವನ್ನು ದೊರಕಿಸಿ, ವೃತ್ತಿಶಿಕ್ಷಣದ ಮೂಲಕ ಮಕ್ಕಳ ವ್ಯಕ್ತಿತ್ವವನ್ನೇ ರೂಪಿಸುವ ಒಂದು ಯೋಜನೆ. ಪ್ರಾಥಮಿಕ ಶಿಕ್ಷಣದಂತೆ ಆ ಮೂಲಕ ಉನ್ನತ ಶಿಕ್ಷಣದಲ್ಲೂ ಕ್ರಾಂತಿಕಾರಕ ಬದಲಾವಣೆಗಳಾಗಬೇಕೆಂಬುದು ಇವರ ಅಭಿಪ್ರಾಯವಾಗಿತ್ತು. ಅದು ರಾಷ್ಟ್ರೀಯ ಅವಶ್ಯಕತೆಗಳನ್ನು ಆಧಾರಮಾಡಿಕೊಂಡು ವ್ಯವಸ್ಥೆಗೊಳ್ಳಬೇಕು; ಯಂತ್ರ ಪರಿಣಿತರು, ತಾಂತ್ರಿಕ ತಜ್ಞರು, ವಿವಿಧ ವೃತ್ತಿನಿಪುಣರು–ಇತ್ಯಾದಿಯವರನ್ನು ಸಿದ್ಧಪಡಿಸಲು ವೃತ್ತಿಶಿಕ್ಷಣ ವ್ಯವಸ್ಥೆಯೂ ಇದ್ದೇ ಇರಬೇಕು ಎಂದು ಇವರು ಭಾವಿಸಿದ್ದರು. ಆದರೆ ಔದ್ಯೋಗಿಕ ಶಿಕ್ಷಣ ಆಯಾ ಉದ್ಯೋಗಕ್ಕೆ ಹೊಂದಿಕೊಂಡಂತಿದ್ದು ಅಲ್ಲಿಗೆ ಅಗತ್ಯವಾಗುವ ಪದವೀಧರರ ಶಿಕ್ಷಣವನ್ನು ಆ ಉದ್ಯೋಗ ಕ್ಷೇತ್ರವೇ ನಿರ್ವಹಿಸಬೇಕೆಂದು ಇವರು ಪ್ರತಿಪಾದಿಸಿರುವರು. ಅದರ ಪ್ರಕಾರ ಟಾಟಾ ಔದ್ಯೋಗಿಕ ಸಂಸ್ಥೆಗಳಂಥವು ರಾಷ್ಟ್ರದ ಮೇಲ್ವಿಚಾರಣೆಯಲ್ಲಿ ಎಂಜಿನಿಯರಿಂಗ್ ಕಾಲೇಜೊಂದನ್ನು ನಡೆಸಬಹುದು. ಗಿರಣಿ ಕೆಲಸಗಾರರು ತಮ್ಮ ಉದ್ಯೋಗಗಳಿಗೆ ಬೇಕಾಗುವ ತಾಂತ್ರಿಕ ಪದವೀಧರರಿಗೆ ಶಿಕ್ಷಣವೀಯಲು ಕಾಲೇಜುಗಳನ್ನು ನಡೆಸಬಹುದು; ವಾಣಿಜ್ಯಕ್ಷೇತ್ರ ವಾಣಿಜ್ಯಕಾಲೇಜುಗಳನ್ನೂ ನಡೆಸಬಹುದು; ವೈದ್ಯವೃತ್ತಿ ಧನಿಕರ ಆಸಕ್ತಿಯನ್ನು ಗಳಿಸಿರುವುದರಿಂದ ಖಾಸಗಿ ಅಂಗೀಕೃತ ಕಾಲೇಜುಗಳಲ್ಲಿ ಆ ಶಿಕ್ಷಣವನ್ನು ವ್ಯವಸ್ಥೆಗೊಳಿಸಬಹುದು. ಇವೆಲ್ಲ ಸರ್ಕಾರದ ಧನಸಹಾಯವಿಲ್ಲದಿದ್ದರೂ ಆರ್ಥಿಕವಾಗಿ ಸ್ವಾವಲಂಬಿಯಾಗಿ ಕೆಲಸಮಾಡಬಲ್ಲವು. (ಎನ್.ಎಸ್.ಎಸ್.ಪಿ.)

**ಗಾಂಧಿ ದೃಷ್ಟಿಯಲ್ಲಿ ಸ್ವರಾಜ್ಯ:** ಭಾರತದ ಸ್ವಾತಂತ್ರ್ಯಕ್ಕಾಗಿ ಅಪ್ರತಿಮವಾಗಿ ಹೋರಾಟ ನಡೆಸಿದ ಗಾಂಧೀಜಿಯವರು ಕೇವಲ ರಾಜಕೀಯ ಸ್ವಾತಂತ್ರ್ಯ ಗುರಿ ಇಟ್ಟುಕೊಂಡಿರಲಿಲ್ಲ. ಪೂರ್ಣ ಸ್ವರಾಜ್ಯದ ಸ್ಥಾಪನೆಗೆ ರಾಜಕೀಯ ಸ್ವಾತಂತ್ರ್ಯ ಮೊದಲ ಮೆಟ್ಟಲೆಂದು ಮಾತ್ರ ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ಸ್ವರಾಜ್ಯವೆಂದರೆ ಪರಿಪೂರ್ಣವಾದ ಪ್ರಜಾರಾಜ್ಯ. ಈ ವ್ಯವಸ್ಥೆಯಲ್ಲಿ ಸಾರ್ವಭೌಮಾಧಿಕಾರವಿರುವುದು ಪ್ರಜೆಗಳಲ್ಲೇ ಹೊರತು ಪ್ರಭುತ್ವದಲ್ಲಿ ಅಲ್ಲ. ಪ್ರಜೆಗಳ ಸಾರ್ವಭೌಮತ್ವಕ್ಕೆ ಬುನಾದಿ ನೈತಿಕ ಅಧಿಕಾರ; ದಂಡಿನ ಬಲವಲ್ಲ. ಸತ್ಯ, ಅಹಿಂಸೆ, ಸ್ವಾತಂತ್ರ್ಯ, ಸಮಾನತೆ–ಈ ಮೌಲ್ಯಗಳ ಸಾಕ್ಷಾತ್ಕಾರವೇ ಪ್ರಜೆಗಳ ಗುರಿ. ಈ ಮೌಲ್ಯಗಳು ಹೆಚ್ಚುಹೆಚ್ಚಾಗಿ ಅನುಷ್ಠಾನಕ್ಕೆ ಬಂದಂತೆ ವ್ಯಕ್ತಿಗಳ ವಿಕಾಸದ ಹಾಗೂ ಸಮಾಜದ ಮೇಲ್ಮೆಯ ಸಾಧನೆಯಾಗುತ್ತ ಹೋಗುತ್ತದೆ. ಅಂಥ ಪ್ರಜಾರಾಜ್ಯ ಶೋಷಣೆರಹಿತ ವರ್ಗರಹಿತ ರಾಜ್ಯವಾಗಿರುತ್ತದೆ. ಪೂರ್ಣ ಸ್ವರಾಜ್ಯ ಏರ್ಪಟ್ಟಾಗ ಯಾವುದೇ ರೀತಿಯ ಸರ್ಕಾರಿ ಅಂಕುಶವಿರುವುದಿಲ್ಲ. ಈ ವ್ಯವಸ್ಥೆಯಲ್ಲಿ ಜನತೆಗೆ ಪೂರ್ಣವಾಗಿ ಸಾಮಾಜಿಕ ನ್ಯಾಯ, ಆರ್ಥಿಕ ನೆಮ್ಮದಿ ಹಾಗೂ ವ್ಯಕ್ತಿಸ್ವಾತಂತ್ರ್ಯ ಇರುತ್ತವೆ. ಇಂಥ ಪ್ರಜಾರಾಜ್ಯವನ್ನು ಗಾಂಧಿಯವರು ರಾಮರಾಜ್ಯವೆಂದು ಕರೆದರು; ಪ್ರಬುದ್ಧ ಅರಾಜಕತೆ (ಎನ್‌ಲೈಟನ್ಡ್ ಆನಾರ್ಕಿ) ಎಂದರು.

ಭಾರತದಲ್ಲಿ ಕೇವಲ ಕೆಲವು ಜನತಾಪ್ರತಿನಿಧಿಗಳು ಅಧಿಕಾರಸೂತ್ರ ವಹಿಸಿಕೊಂಡರೆ ನಿಜವಾದ ಸ್ವರಾಜ್ಯವಾಗಲಾರದು. ಸರ್ಕಾರ ತಪ್ಪು ಮಾಡಿದಾಗ ಅದನ್ನು ತಡೆಗಟ್ಟುವ ಸಾಮರ್ಥ್ಯ ಪ್ರತಿಯೊಬ್ಬ ಪ್ರಜೆಗೂ ಬಂದಾಗಲೇ ನಿಜವಾದ ಸ್ವರಾಜ್ಯಪ್ರಾಪ್ತಿ ಎಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು. ಪ್ರತಿ ಗ್ರಾಮವೂ ಸ್ವಾಯತ್ತತೆಯ ಘಟಕವಾಗಬೇಕು. ಇದು ಇವರು ದೇಶದ ಮುಂದಿಟ್ಟ ಗ್ರಾಮಸ್ವರಾಜ್ಯದ ಚಿತ್ರ.

ಗ್ರಾಮ ಗಣರಾಜ್ಯಗಳ ಮಹಾ ಒಕ್ಕೂಟವೇ ಭಾರತರಾಷ್ಟ್ರ. ಅಸಂಖ್ಯ ಹಳ್ಳಿಗಳುಳ್ಳ ಈ ರಚನೆಯಲ್ಲಿ ಸದಾ ವ್ಯಾಪಕವೃತ್ತಗಳಿರುತ್ತವೆ; ಆರೋಹಣ ವೃತ್ತಗಳಿರುವುದಿಲ್ಲ. ಬದುಕು ಪಿರಮಿಡಿನಂತಿರುವುದಿಲ್ಲ. ಅದು ಸಾಗರ ಸಮವೃತ್ತದಂತೆ. ಅದರ ಕೇಂದ್ರಬಿಂದು ವ್ಯಕ್ತಿ. ಆತ ತನ್ನ ಹಳ್ಳಿಗಾಗಿ ಅಳಿಯಲೂ ಸಿದ್ಧ. ಗ್ರಾಮಗಳ ಸಮೂಹಕ್ಕಾಗಿ ಹಳ್ಳಿ ನಾಶವಾಗಲು ಸಿದ್ಧ.

ಗಾಂಧಿಯವರ ಸ್ವರಾಜ್ಯದ ಕಲ್ಪನೆ ಕೇವಲ ಭಾರತಕ್ಕೆ ಸೀಮಿತವಾಗಿರದೆ ಇಡೀ ಮಾನವ ಜನಾಂಗಕ್ಕೆ ಅನ್ವಯಿಸುತ್ತದೆ. ದೊಡ್ಡವು, ಚಿಕ್ಕವು ಎಂಬ ಭೇದವಿಲ್ಲದೆ ಎಲ್ಲ ರಾಜ್ಯಗಳೂ ಸರಿಸಮಾನವಾದವು. ಎಲ್ಲ ದೇಶಗಳಲ್ಲೂ ರಾಜ್ಯವ್ಯವಸ್ಥೆ ಸತ್ಯ ಅಹಿಂಸೆ, ವಿಕೇಂದ್ರಿಕರಣ ಇವುಗಳ ಆಧಾರದ ಮೇಲೆ ರಚಿತವಾದರೆ ವಿಶ್ವಶಾಂತಿ ಶಾಶ್ವತವಾಗಿರುತ್ತದೆ. ಮಾನವ ಸ್ವಾತಂತ್ರ್ಯದ ದಿಗಂತ ವಿಸ್ತಾರವಾಗುತ್ತದೆ. (ಬಿ.ಆರ್.ಪಿ.)

**ಗಾಂಧಿ ದೃಷ್ಟಿಯಲ್ಲಿ ಸತ್ಯಾಗ್ರಹ:** ಮಹಾತ್ಮ ಗಾಂಧಿಯವರು ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ವಿಮೋಚನೆಗೊಳಿಸಿದ ರಾಷ್ಟ್ರನಾಯಕರು. 19ನೆಯ ಶತಮಾನದ ಯುರೋಪಿನ ಕೈಗಾರಿಕಾ ಕ್ರಾಂತಿ ಹಾಗೂ ಸಾಮ್ರಾಜ್ಯಶಾಹಿ ರಾಜಕೀಯ ವಿಸ್ತರಣಗಳ ಪರಿಣಾಮವಾಗಿ ಏಷ್ಯ, ಆಫ್ರಿಕ ಖಂಡಗಳಲ್ಲಿಯ ಬಹು ಭಾಗ ದಾಸ್ಯಕ್ಕೆ ಒಳಗಾಗಿತ್ತು. ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯ ವರ್ತಕರ ವಕೀಲರಾಗಿ ಅಲ್ಲಿಗೆ ಹೋಗಿದ್ದ ಗಾಂಧಿಯವರು ಅಲ್ಲಿಯ ಬ್ರಿಟಿಷ್ ಸಾಮ್ರಾಜ್ಯ ಶಾಹಿ ವರ್ಣೀಯರನ್ನು ಅತ್ಯಂತ ಹೀನದಾಸ್ಯಕ್ಕೆ ಗುರಿಮಾಡಿ ಅವರ ನಾಗರಿಕ ಹಕ್ಕುಗಳನ್ನೆಲ್ಲ ದಮನ ಮಾಡಿದ್ದನ್ನು ಕಂಡು ಮೊದಲ ಬಾರಿಗೆ ಪ್ರತಿಭಟಿಸಿ ನಿಲ್ಲುವ ಸಾಹಸ ಮಾಡಿದರು. ಅಸಂಖ್ಯಾತ ಬಡ ಕೂಲಿಗಾರರ ಸಮೂಹವನ್ನು ಸಂಘಟಿಸಿ, ಅಲ್ಲಿ ನೆಲೆಸಿದ್ದ ಇತರಬುದ್ಧಿಜೀವಿಗಳ ನೆರವನ್ನೂ ಪಡೆದ ನಿಶ್ಶಸ್ತ್ರ ಸಾಮೂಹಿಕ ಪ್ರತಿಭಟನಾಸಮರವೊಂದನ್ನು ಪ್ರಾರಂಭಿಸಿದರು. ಮಾನವನ ನೈತಿಕಶಕ್ತಿಗಳನ್ನು ಜಾಗೃತಗೊಳಿಸಿ ಆತ್ಮಗೌರವದ ನಿಷ್ಠೆಯನ್ನು ಉಜ್ವಲಗೊಳಿಸಿ ಸಾಮಾನ್ಯ ಜನತೆ ಪ್ರಬಲ ಸಶಸ್ತ್ರ ಸಾಮ್ರಾಜ್ಯ ಸರ್ಕಾರದ ಅನ್ಯಾಯ ದುರಾಡಳಿತಗಳನ್ನು ಪ್ರತಿಭಟಿಸಿ ನಿಲ್ಲುವಂತೆ ಪ್ರೇರೇಪಿಸಿದರು. ಅವಮಾನಕರ ಕಾನೂನುಗಳನ್ನು ಸವಿನಯವಾಗಿ ಉಲ್ಲಂಘಿಸಿ ದಬ್ಬಾಳಿಕೆಯ ಶಿಕ್ಷೆಯನ್ನನುಭವಿಸುತ್ತ ಸತತವಾಗಿ ನ್ಯಾಯಕ್ಕಾಗಿ ಹೋರಾಡುವ ಕ್ರಮವನ್ನು ರೂಪಿಸಿದರು. ಮೊದಲು ಸದಾಗ್ರಹ ಎಂದೂ ಅನಂತರ ಸತ್ಯಾಗ್ರಹ ಎಂದೂ ಅದಕ್ಕೆ ಹೆಸರಿಟ್ಟರು. ರಸ್ಕಿನ್, ಟಾಲ್‌ಸ್ಟಾಯ್, ಥಾರೋ, ಮತ್ತು ರಾಯಿಚಂದಭಾಯಿ ಅವರ ಬರೆಹಗಳಿಂದಲೂ ಗೀತೆ, ಉಪನಿಷತ್, ಕುರಾನ್, ಬೈಬಲ್‌ಗಳ ಮೂಲ ತತ್ತ್ವಗಳ ಅಧ್ಯಯನ ಅನುಷ್ಠಾನಗಳಿಂದಲೂ ಪ್ರೇರಣೆ ಪಡೆದು ಸತ್ಯಾಗ್ರಹ ಚಳವಳಿಯನ್ನು 1906ರಲ್ಲಿ ಪ್ರಾರಂಭಿಸಿದರು. 1917ರಲ್ಲಿ ಭಾರತಕ್ಕೆ ಬಂದು ಸಾಬರಮತಿಯ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿ, ಭಾರತದ ಸ್ವಾತಂತ್ರ್ಯ ಸಮರದ ನಾಯಕತ್ವ ವಹಿಸಿಕೊಂಡರು.

ಇವರ ಇಡೀ ಜೀವನವೇ ಅಲ್ಲಿಂದಾಚೆಗೆ ಸತ್ಯಾಗ್ರಹಪಥವನ್ನು ಹಿಡಿದು ನಡೆಯಿತು. ಜೀವನದ ಯಾವ ಕ್ಷೇತ್ರದಿಂದಲೂ ವಿಮುಖವಾಗದೆ, ಆದರ್ಶದ ಒರೆಗಲ್ಲಿಗೆ ಸಕಲ ಕರ್ಮಗಳನ್ನೂ ನಿಷ್ಠುರವಾಗಿ ಉಜ್ಜಿನೋಡಿ, ಸತ್ಯದ ಅರಿವಾದೊಡನೆ ನಿರ್ಭಯವಾಗಿ ಅದನ್ನನುಸರಿಸಿ ಮುನ್ನಡೆಯಲು ವ್ಯಕ್ತಿಗಾಗಲೀ, ಸಮಾಜಕ್ಕಾಗಲೀ, ರಾಷ್ಟ್ರಕ್ಕಾಗಲೀ ಅಹಿಂಸಾಮಾರ್ಗವೊಂದೇ ಸಾಧನ, ಅದೇ ಸತ್ಯಾಗ್ರಹ. ಇದು ಗಾಂಧಿಯವರು ಕಂಡುಕೊಂಡ ಸಿದ್ಧಾಂತ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಚಲಿತವಿರುವ ಯುದ್ಧವಿರೋಧೀ ಚಳವಳಿ, ಸಾತ್ತ್ವಿಕ ಪ್ರತಿಭಟನೆ, ಶಾಸನೋಲ್ಲಂಘನೆ, ಕರನಿರಾಕರಣೆ ಮುಂತಾದ ನಿಶ್ಶಸ್ತ್ರ ಪ್ರತಿಭಟನಾಕ್ರಮಕ್ಕೂ ಸತ್ಯಾಗ್ರಹಕ್ಕೂ ಒಂದು ಮೂಲಭೂತ ವ್ಯತ್ಯಾಸವುಂಟು. ಅವನ್ನು ನಡೆಸುವವರು ಆಯುಧ ದೊರಕದ್ದರಿಂದ ತಾವು ದುರ್ಬಲರೆಂದು ತಿಳಿದು ಆ ಚಳವಳಿಗಳಲ್ಲಿ ಹಿಂಸೆಯನ್ನು ವರ್ಜಿಸುತ್ತಾರೆ. ಅವಕಾಶ ಒದಗಿದಾಗ ಹಿಂಸೆಯನ್ನು ಉಪಯೋಗಿಸಲು ಅವರು ಹಿಂದೆಗೆಯುವುದಿಲ್ಲ. ಅಲ್ಲದೆ ರಾಷ್ಟ್ರ ರಕ್ಷಣೆಗಾಗಿ ಶಸ್ತ್ರಾಸ್ತ್ರ ಸಂಗ್ರಹಣೆ ಅತ್ಯಗತ್ಯ ಎಂದು ನಂಬಿ ಅದನ್ನು ಬೆಂಬಲಿಸುತ್ತಾರೆ. ಗಾಂಧಿಯವರು ರೂಪಿಸಿಕೊಟ್ಟ ಸತ್ಯಾಗ್ರಹಕ್ರಮದಲ್ಲಿ ಹಿಂಸೆಗೆ ಯಾವ ಸಂದರ್ಭದಲ್ಲೂ ಅವಕಾಶವೇ ಇರಲಿಲ್ಲ. ಸತ್ಯಾಗ್ರಹದಲ್ಲಿ ಸತ್ಯ ಮತ್ತು ಅಹಿಂಸೆ ಪ್ರಬಲ ರಾಷ್ಟ್ರವೂ ಶಸ್ತ್ರ ನಿರಾಕರಣೆಯನ್ನು ಅಂಗೀಕರಿಸುವುದು ಸತ್ಯಾಗ್ರಹಮಾರ್ಗ. ಸತ್ಯವನ್ನು ಹಿಂಸಾವೃತ್ತಿಯಿಂದ ಪಡೆಯುವುದು ಅಸಾಧ್ಯ. ಅಹಿಂಸೆ ಒಂದು ಸಶಕ್ತ ಆತ್ಮಶಕ್ತಿಯ ಪ್ರಕಟಿತರೂಪ; ಅದಕ್ಕೆ ಶಸ್ತ್ರದ ಅವಲಂಬನೆ ಯಾವ ಸಂದರ್ಭದಲ್ಲೂ ಅನಾವಶ್ಯಕ; ಈ ಶಕ್ತಿ ಸಮರದಿಂದ ಸಮರಕ್ಕೆ ವೃದ್ಧಿಯಾಗುತ್ತ ವೈರವನ್ನು ಸಂಪೂರ್ಣವಾಗಿ ತೊಡೆದುಹಾಕುತ್ತದೆ. ಸತ್ಯಾಗ್ರಹ ಕ್ರಮದಲ್ಲಿ ವೈರಿಯನ್ನು ಸಾಂಪ್ರದಾಯಿಕ ದೃಷ್ಟಿಯಿಂದ ಹತ್ಯಾಯೋಗ್ಯ ಪಾಪಿ ಎಂದು ಪರಿಗಣಿಸಲಾಗುವುದಿಲ್ಲ. ಅವನಲ್ಲಿ ತಾತ್ಕಾಲಿಕವಾಗಿ ಸುಪ್ತವಾಗಿರುವ ವಿವೇಕಪೂರ್ಣ ಸಾತ್ತ್ವಿಕತೆಯನ್ನು ಎಚ್ಚರಗೊಳಿಸಿ ಅವರು ತನ್ನ ತಪ್ಪನ್ನು ತಾನೇ ಅರಿಯುವಂತೆ ಮಾಡುವ ಪ್ರಕ್ರಿಯೆ ಸತ್ಯಾಗ್ರಹ.

ಗಾಂಧೀಜಿಯವರ ಜೀವನದರ್ಶನದಲ್ಲಿ ಸತ್ಯಕ್ಕೆ ಪ್ರಥಮ ಸ್ಥಾನವಾದರೆ ಅಹಿಂಸೆಗೆ ದ್ವಿತೀಯ ಸ್ಥಾನ. ಸತ್ಯಶೋಧನೆಯಲ್ಲಿ ತೊಡಗಿದ ಇವರು ಅನುಸರಿಸಿದ ಏಕೈಕ ಮಾರ್ಗವೇ ಅಹಿಂಸೆ. ಗಾಂಧೀಜಿ ಕಂಡಂತೆ, ಅಹಿಂಸೆಯ ಆಚರಣೆಯಲ್ಲಿ ಪ್ರೇಮ, ತ್ಯಾಗ, ಸಹನೆ ಮತ್ತು ಧೈರ್ಯ ಎಂಬ ಮೂಲಧಾತುಗಳು ಅಡಗಿವೆ.

**ಅಹಿಂಸೆಯ ದಾರ್ಶನಿಕ ಸ್ವರೂಪ:** ಅಹಿಂಸೆ ಎಂಬುದು ಒಂದು ಆತ್ಮಶಕ್ತಿ. ಅಹಿಂಸೆಯ ಆಚರಣೆಯಿಂದ ಶತ್ರು ಮಿತ್ರನಾಗುತ್ತಾನೆ. ದ್ವೇಷಿಸುವವ ಪ್ರೀತಿಸಲು ಕಲಿಯುತ್ತಾನೆ. ನಿಂದಕನಲ್ಲಿ ಪಶ್ಚಾತ್ತಾಪ ಮೂಡುತ್ತದೆ. ಜೀವಂತ ನಿದರ್ಶನವಿಲ್ಲದಿದ್ದಾಗ ಈ ಮಾತು ಕೇವಲ ಕಲ್ಪನೆಯಂತೆ ಕಾಣಬಹುದು. ಅಹಿಂಸೆಯನ್ನು ನಂಬಿ ತುಸು ದೂರ ಆ ಮಾರ್ಗದಲ್ಲಿ ನಡೆದ ಭಾರತರಾಷ್ಟ್ರಕ್ಕೆ ಸ್ವಾತಂತ್ರ್ಯ ಕೊಟ್ಟಾಗಲೂ ಅನಂತರವೂ ಬ್ರಿಟಿಷ್ ಸಾಮ್ರಾಜ್ಯ ಹಾಗೂ ಅಲ್ಲಿನ ವಿಚಾರವಂತ ಜನರಲ್ಲಿ ಕಂಡ ಪ್ರೇಮ ಮತ್ತು ಮೈತ್ರಿಗಳು ವಿಶ್ವದ ಇತಿಹಾಸದಲ್ಲಿಯೇ ಕಂಡರಿಯದ ಒಂದು ವಿನೂತನ ಅನುಭವ.

ಪೂರ್ಣ ಅಹಿಂಸೆ ಸಾಧ್ಯವೇ, ನೂರಕ್ಕೆ ನೂರರಷ್ಟು ಅಹಿಂಸೆಯ ಆಚರಣೆ ಮಾನವ ಮಾನವನಾಗಿರುವವರೆಗೂ ಸಾಧ್ಯವಾಗದೆಂಬುದೇ ಗಾಂಧೀಜೀಯವರ ಮತ. ಪೋಲಿಸಿನವರಿಂದ ತಮ್ಮ ಹೆಂಡತಿ ಮಕ್ಕಳ ಮಾನಭಂಗವಾದದ್ದನ್ನು ಅಹಿಂಸಾಚರಣೆಯ ಹೆಸರಿನಲ್ಲಿ ಮೂಕ ಪ್ರೇಕ್ಷಕರಂತೆ ನೋಡಿ ಬಂದ ಬೆಟ್ಟಿಯ ಎಂಬ ಗ್ರಾಮದ ಜನರ ನಡತೆಯನ್ನು ಇದು ಕೇವಲ ಅಹಿಂಸೆಯ ದುರುಪಯೋಗ ಎಂದು ಗಾಂಧೀಜಿಯವರೇ ಖಂಡಿಸಿದ್ದರು. ಅಹಿಂಸೆ ಸಾಧ್ಯವಾಗದಿದ್ದಾಗ ಹಿಂಸೆಯಿಂದಲಾದರೂ ಮಾನರಕ್ಷಣೆ ಮಾಡಬೇಕು ಎಂಬುದು ಗಾಂಧೀಜಿಯವರ ಅಭಿಮತ.

**ಅಹಿಂಸೆ ಹಾಗೂ ಸತ್ಯಾಗ್ರಹ:** ಅಸತ್ಯದೊಡನೆ ಮಾಡುವ ಅಸಹಕಾರವನ್ನು ಅಥವಾ ಸತ್ಯಕ್ಕಾಗಿ ಎಸಗುವ ಆಗ್ರಹವನ್ನು ಗಾಂಧೀಜಿ ಸತ್ಯಾಗ್ರಹ ಎಂದು ಕರೆದರು. ಈ ಅಸಹಕಾರ ಯಾವ ಕಾರಣದಿಂದಲೂ ಅಹಿಂಸೆಗೆ ವಿರುದ್ಧವಾಗುವಂತಿಲ್ಲ. ಅದು ಹಿಂಸಾತ್ಮಕವಾದರೆ ಆಗ ಅದು ದುರಾಗ್ರಹವೆನಿಸುತ್ತದೆ. ಆದ್ದರಿಂದಲೇ ಸತ್ಯಾಗ್ರಹಿ ಪೂರ್ಣ ಅಹಿಂಸವಾದಿಯಾಗ ಬೇಕೆಂಬ ನಿಯಮ. ಗಾಂಧೀಜಿಯವರು ತಾವೆಸಗಿದ ಎಲ್ಲ ಸತ್ಯಾಗ್ರಹಗಳಿಗೂ ಮುನ್ನ ಅದರ ಕ್ರಮ ಮತ್ತು ಉದ್ದೇಶಗಳನ್ನು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿ ಅವರಿಗೆ ಯಾವ ರೀತಿಯ ಇಕ್ಕಟ್ಟೂ ಆಗದಂತೆ ನೋಡಿಕೊಳ್ಳುತ್ತಿದ್ದರು. ಗಾಂಧೀಜಿಯವರ ಅಭಿಪ್ರಾಯ ಅಹಿಂಸಾಚರಣೆಯ ಹೊಣೆಗಾರಿಕೆ ಮಿಕ್ಕೆಲ್ಲ ರಾಷ್ಟ್ರಗಳಿಗಿಂತಲೂ ಭಾರತಕ್ಕೆ ಹೆಚ್ಚು–ಎಂದು, ಅನೇಕ ಶತಮಾನಗಳ ದಾರ್ಶನಿಕ ಪರಂಪರೆಯನ್ನು ಹೊಂದಿರುವ ಭಾರತ ಅಹಿಂಸಾಚರಣೆಯಲ್ಲಿ ಮಿಕ್ಕ ರಾಷ್ಟ್ರಗಳಿಗಿಂತಲೂ ಮುಂದೆ ಹೋಗಿ ಪ್ರಪಂಚಕ್ಕೆ ಅಹಿಂಸೆಯ ಸಂದೇಶ ನೀಡು ವಂತಾಗಬೇಕು. (ಎ.ಎಲ್.ಎಸ್.)

ಗಾಂಧೀಜಿಯವರು ತಮ್ಮ ಧ್ಯೇಯ ಸಾಧನೆಗಾಗಿಅಗತ್ಯ ಕಂಡಾಗಲೆಲ್ಲ ಕೆಲವು ಆಶ್ರಮ ಗಳನ್ನು ಸ್ಥಾಪಿಸಿ, ಅಲ್ಲಿ ತಮ್ಮ ಸಹಚರರೊಂದಿಗೆ ಇದ್ದು ನಿಯಮಬದ್ಧವಾದ ಸಾತ್ತ್ವಿಕ ಜೀವನವನ್ನು ನಡೆಸುತ್ತ ಇಹಪರಗಳೆರಡರ ಸಾಧನೆಗೆ ತೊಡಗಿದ್ದು ಇವರ ಸಮಾಜೋದ್ಧಾರ ಕಾರ್ಯದ ಒಂದು ಮುಖ್ಯ ವಿಷಯ. ಕ್ರಮೇಣ ತಾವು ಕೈಗೊಂಡ ಸಾರ್ವಜನಿಕ ಕಾರ್ಯಗಳಿಗೂ ಸತ್ಯಾಗ್ರಹ ಆಂದೋಲನಗಳಿಗೂ ಈ ಆಶ್ರಮಗಳೇ ಶಿಕ್ಷಣ ಕ್ಷೇತ್ರಗಳಾಗಿಯೂ ಪರಿಣಮಿಸಿದವು.

**ಫೀನಿಕ್ಸ್ ವಸತಿ:** ಗಾಂಧೀಜಿಯವರು ಸ್ಥಾಪಿಸಿದ ಆಶ್ರಮಗಳಲ್ಲಿ ಮೊದಲನೆಯದು. ದಕ್ಷಿಣಆಫ್ರಿಕದ ನಟಾಲಿನಲ್ಲಿ 1904ರಲ್ಲಿ ಸ್ಥಾಪನೆಗೊಂಡಿತು. ಆ ವರ್ಷ ಜೋಹಾನ್ಸ್ ಬರ್ಗಿನಿಂದ ಡರ್ಬನಿಗೆ ಕೈಗೊಂಡ 24 ಗಂಟೆಯ ರೈಲು ಪ್ರಯಾಣದಲ್ಲಿ ಹೊತ್ತು ಕಳೆಯಲು ಅವರ ಮಿತ್ರರಾದ ಪೋಲಕ್ ಅವರಿಂದ ಪಡೆದ ಅನ್ ಟು ದಿ ಲಾಸ್ಟ್ ಎಂಬ ರಸ್ಕಿನ್ನನ ಪುಸ್ತಕ ಅವರ ಮೇಲೆ ಉಂಟುಮಾಡಿದ ಅದ್ಭುತ ಪ್ರಭಾವವೇ ಈ ಫೀನಿಕ್ಸ್ ವಸತಿ ನಿರ್ಮಾಣಕ್ಕೆ ಮುಖ್ಯ ಕಾರಣವಾಯಿತು. ಈ ಮೊದಲೇ ಅವರು ಅಂತರ್ಮುಖಿಗಳಾಗಿ ಜೀವನದ ಧ್ಯೇಯಗಳ ಬಗೆಗೆ ವಿಚಾರ ನಡೆಸಿ ಆದಷ್ಟು ಸರಳವೂ ನಿಯಮಿತವೂ ಆದ ಜೀವನವನ್ನು ನಡೆಸುತ್ತಿದ್ದುದರಿಂದ ಅವರ ಚಿತ್ತ ಹದಗೊಂಡಿತ್ತು. ರಸ್ಕಿನ್ನನ ಪುಸ್ತಕದಲ್ಲಿ ಪ್ರತಿಪಾದಿಸಿರುವ ತತ್ತ್ವಗಳು ಅವರ ಮನಸ್ಸನ್ನು ಸೂರೆಗೊಂಡವು. ಎಲ್ಲ ಕಸುಬುಗಳೂ ಸಮಾನವಾದ ಆದರವನ್ನು ಪಡೆಯಬೇಕು ಮತ್ತು ಶ್ರಮಜೀವನ ಅಥವಾ ಕಾಯಕ ಎಲ್ಲಕ್ಕಿಂತಲೂ ಯೋಗ್ಯವಾದ ಜೀವನ ವಿಧಾನ–ಈ ತತ್ತ್ವಗಳನ್ನು ಅನುಷ್ಠಾನಕ್ಕೆ ತರಲು ಅವರು ಈಗ ಸ್ಥಿರ ಸಂಕಲ್ಪವನ್ನು ಕೈಗೊಂಡರು. ಈ ಫೀನಿಕ್ಸ್ ವಸತಿ ರೈಲ್ವೆ ನಿಲ್ದಾಣದಿಂದ 4ಕಿಮೀ. (ಇದೇ ಅದರ ಹೆಸರಿಗೆ ಕಾರಣ) ಮತ್ತು ಡರ್ಬನ್ನಿನಿಂದ 22.4ಕಿಮೀ ದೂರದಲ್ಲಿತ್ತು. ಇಲ್ಲಿ ವಾಸಕ್ಕೆ ಬಂದವರಲ್ಲಿ ಆಲ್ಬರ್ಟ್ ವೆಸ್ಟ್, ಪೋಲಕ್, ಗಾಂಧಿಯವರ ಚಿಕ್ಕಪ್ಪನ ಮಗ ಛಗನಲಾಲ್ ಗಾಂಧಿ ಮತ್ತು ಆತನ ಕುಟುಂಬ ಹಾಗೂ ಗಾಂಧಿಯವರಿಗೆ ಬಲಗೈಯಂತಿದ್ದ ಅವರ ಸೋದರಳಿಯ ಮದನ್‌ಲಾಲ್ ಗಾಂಧೀ ಉಲ್ಲೇಖನೀಯರು. ಹೆಂಗಸರೂ ಮಕ್ಕಳೂ ಇದ್ದರು. ಎಲ್ಲರೂ ಶಕ್ತ್ಯಾನುಸಾರ ಶ್ರಮಜೀವನ ನಡೆಸಬೇಕು. ಪ್ರತಿಯೊಬ್ಬರಿಗೂ ತಿಂಗಳಿಗೆ 3 ಪೌಂಡು ಸಮಾನವಾದ ವೇತನ. ವ್ಯವಸಾಯ ಮಾಡಲು ಪ್ರತಿಯೊಬ್ಬರಿಗೂ 3 ಎಕರೆ ಹಂಚಲಾಗಿತ್ತು. ಒಟ್ಟು ಇಲ್ಲಿ ಇದ್ದ 100 ಎಕರೆಗಳನ್ನು 100 ಪೌಂಡುಗಳಿಗೆ ಕೊಳ್ಳಲಾಗಿತ್ತು. ಸತ್ಯಾಗ್ರಹ ಆಂದೋಲನ ನಡೆದಾಗ ಸೆರೆಮನೆಗೆ ಹೋಗಿ ಬಂದವರು ಬೇರೆ ಮನೆಗಳಿಲ್ಲದಿದ್ದರೆ ಇಲ್ಲಿಗೆ ಬಂದು ತಂಗುತ್ತಿದ್ದರು. ಬೇರೆ ಬೇರೆ ಮತಧರ್ಮಗಳಿಗೆ ಸೇರಿದವರು ಇಲ್ಲಿ ಸಾಮೂಹಿಕ ಜೀವನವನ್ನು ನಡೆಸುತ್ತಿದ್ದರು. ಅಲ್ಲಿದ್ದ ಮಕ್ಕಳಿಗೆ ಗಾಂಧಿಯವರೇ ಮುಖ್ಯ ಶಿಕ್ಷಕರು. ಅಚ್ಚಾದ ಇಂಡಿಯನ್ ಒಪಿನಿಯನ್ ಪತ್ರಿಕೆಗಳನ್ನು ಚಂದಾದಾರರಿಗೆ ರವಾನಿಸುವ ಕಾರ್ಯದಲ್ಲಿ ಮಕ್ಕಳು ಬಹಳ ಉತ್ಸಾಹದಿಂದ ನೆರವಾಗುತ್ತಿದ್ದರು.

**ಟಾಲ್‌ಸ್ಟಾಯ್ ಆಶ್ರಮ:** ಮಹಾತ್ಮ ಗಾಂಧಿಯವರು ಸ್ಥಾಪಿಸಿದ ಎರಡನೆಯ ಆಶ್ರಮ. ಟ್ರಾನ್ಸ್‌ವಾಲ್ ಪ್ರಾಂತ್ಯದಲ್ಲಿ ಲಾಲಿ ಎಂಬ ರೈಲ್ವೆ ನಿಲ್ದಾಣದಿಂದ 1.5ಕಿಮೀ, ಜೊಹಾನ್ಸ್‌ಬರ್ಗ್ ಪಟ್ಟಣದಿಂದ 33 ಕಿಮೀ ದೂರದಲ್ಲಿದೆ. ಟ್ರಾನ್ಸ್‌ವಾಲಿನಲ್ಲಿ ಭಾರತೀಯರ ಮೇಲೆ ವಿಧಿಸಿದ್ದ ಮೂರು ಪೌಂಡ್ ತಲೆಗಂದಾಯದ ವಿರುದ್ಧ ಗಾಂಧಿಯವರು ಹೂಡಿದ ಸತ್ಯಾಗ್ರಹ ಚಳವಳಿಯ ಕಾಲದಲ್ಲಿ ಸ್ಥಾಪಿಸಿದ ಆಶ್ರಮವಿದು (30 ಮೇ 1910). ಸೆರೆಮನೆ ಸೇರಿದ ಕುಟುಂಬದವರ ವಸತಿಗೆಂದು ಮುಖ್ಯವಾಗಿ ಇದ್ದು ಸ್ಥಾಪಿತವಾಯಿತು. ಇದಕ್ಕೆ 1100 ಎಕರೆಯ ಜಮೀನು ಮತ್ತು ತೋಟವಿದ್ದು ಅದರಲ್ಲಿ ಸು. 1000 ಹಣ್ಣಿನ ಗಿಡಗಳಿದ್ದವು. ಇದರ ಮಾಲೀಕ ಗಾಂಧಿಯವರ ಮಿತ್ರನೂ ಅನುಯಾಯಿಯೂ ಆದ ಕ್ಯಾಲೆನ್ ಬ್ಯಾಕ್ ಎಂಬ ಜರ್ಮನ್ ಗೃಹಸ್ಥ (ಬಾಡಿಗೆ ಇಲ್ಲದೆ ಈ ಕ್ಷೇತ್ರವನ್ನು ಭಾರತೀಯರಿಗಾಗಿ ಆತ ಬಿಟ್ಟು ಕೊಟ್ಟ). ಗೃಹಶಿಲ್ಪ ಮತ್ತು ಅದಕ್ಕೆ ಸಂಬಂಧಿಸಿದ ಕಸುಬುಗಳಲ್ಲಿ ಪರಿಣತನಾದ ಆತ ಪಾದರಕ್ಷೆಗಳನ್ನು ಹೊಲಿಯುವುದನ್ನು ತಾನು ಕಲಿತು ಗಾಂಧಿಯವರಿಗೂ ಕಲಿಸಿದ. ಈ ಆಶ್ರಮದಲ್ಲಿ ಆರಂಭದಲ್ಲಿಯೇ ಸು.70 ಜನರಿದ್ದರು. ಸದಸ್ಯತ್ವಕ್ಕೆ ವಯಸ್ಸಿನ, ಮತಧರ್ಮದ ಯಾವ ಮಿತಿಯೂ ಇರಲಿಲ್ಲ. ವಾಸಕ್ಕಾಗಿ ಕಟ್ಟಡಗಳು ಅಲ್ಲಿನ ನಿವಾಸಿಗಳ ಶ್ರಮದಾನದಿಂದಲೇ ಬಹುಮಟ್ಟಿಗೆ ಸಿದ್ಧವಾದಂಥವು. ಇದರ ಮೇಲ್ವಿಚಾರಣೆಯೆಲ್ಲ ಕ್ಯಾಲೆನ್ ಬ್ಯಾಕನದೇ. ಒಂದೇ ಅಡಿಗೆಯ ಮನೆ ಇತ್ತು. ಅದರ ನಿರ್ವಹಣೆ ಅಲ್ಲಿದ್ದ ಮಹಿಳೆಯರದಾಗಿತ್ತು. ಸಸ್ಯಾಹಾರ ಸೇವನೆಯೇ ಅಲ್ಲಿನ ಪದ್ಧತಿ. ಧೂಮ ಮತ್ತು ಸುರಾಪಾನಗಳು ನಿಷೇಧಿಸಲ್ಪಟ್ಟಿದ್ದವು. ಸಾಮೂಹಿಕ ಪ್ರಾರ್ಥನೆ ಮತ್ತು ಭೋಜನ ರೂಢಿಯಲ್ಲಿದ್ದುವು. ನೈರ್ಮಲ್ಯ ರಕ್ಷಣೆಗೆ ಒಳ್ಳೆಯ ಏರ್ಪಾಡಿತ್ತು. ಜಲಮಲಗಳ ವಿಸರ್ಜನೆಗಾಗಿ ಮಾಡಿದ ಗುಂಡಿಗಳು ಕಾಲಾನಂತರ ಉತ್ತಮ ಗೊಬ್ಬರವನ್ನೊದಗಿಸುತ್ತಿದ್ದವು. ಖಾಸಗಿ ಕೆಲಸಕ್ಕಾಗಿ ಜೊಹಾನ್ಸ್‌ಬರ್ಗಿಗೆ ಹೋಗುವವರು 21 ಮೈಲಿ ದೂರವನ್ನು ಕಾಲುನಡಿಗೆಯಲ್ಲೇ ನಿರ್ವಹಿಸುತ್ತಿದ್ದರು.

**ಸತ್ಯಾಗ್ರಹಾಶ್ರಮ, ಸಬರಮತಿ:** 1915ರ ಜನವರಿಯಲ್ಲಿ ಗಾಂಧಿಯವರು ಭಾರತಕ್ಕೆ ಹಿಂತಿರುಗಿದ ಮೇಲೆ ಇಲ್ಲಿಯೂ ಆಶ್ರಮವಾಸವನ್ನು ಕೈಗೊಳ್ಳಬೇಕೆಂದು ಅವರಿಗೆ ತೋರಿತು. ಅಂತೆಯೇ ಮೇ ತಿಂಗಳಲ್ಲಿ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದರು. ಇವರೊಂದಿಗೆ ಹಿಂತಿರುಗಿದ ಇವರ ಬಂಧುವರ್ಗದವರು ಮತ್ತು ಅನುಯಾಯಿಗಳು ಸು.25 ಮಂದಿ ಆಶ್ರಮವಾಸಿ ಗಳಾದರು. ಆಶ್ರಮ ಆರಂಭವಾದದ್ದು ಅಹಮದಾಬಾದಿಗೆ ಸೇರಿದ ಕೊಚರಾಬ್ ಹಳ್ಳಿಯಲ್ಲಿ ಒಂದು ಬಾಡಿಗೆ ಬಂಗಲೆಯಲ್ಲಿ, ಸ್ವಲ್ಪ ಕಾಲವಾದ ಮೇಲೆ ಸಾಬರಮತಿ ನದೀತೀರಕ್ಕೆ ಆಚೆ ಸು.150 ಎಕರೆಯ ನಿವೇಶನಕ್ಕೆ ಆಶ್ರಮವನ್ನು ಬದಲಾಯಿಸಲಾಯಿತು. ಹಳ್ಳಿಯ ಮಾದರಿಯ ಮನೆಗಳೂ ಕಟ್ಟಡಗಳೂ ಸಿದ್ಧವಾದವು. ಕೃಷಿ, ತೋಟಗಾರಿಕೆ ಮತ್ತು ಪಶುಪಾಲನೆಗೆ ಅವಕಾಶ ಮಾಡಲಾಯಿತು. ಆಶ್ರಮವಾಸಿಗಳು ಕೆಲವು ನಿಯಮಗಳನ್ನು ಪಾಲಿಸಿ ಸಾಮೂಹಿಕವಾದ ಧಾರ್ಮಿಕ ಜೀವನವನ್ನು ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. ಅಸ್ತ್ಯ, ಅಹಿಂಸೆ, ಬ್ರಹ್ಮಚರ್ಯ, ನಾಲಗೆಯ ರುಚಿಯ ಮೇಲೆ ಹತೋಟಿ, ಅಸ್ತೇಯ,

ಅಸಂಗ್ರಹ ಇವು ಮೂಲಭೂತವಾದ ನಿಯಮಗಳು. ಇವೇ ಅಲ್ಲದೆ ಸ್ವದೇಶಿ, ನಿರ್ಭಯತ್ವ, ಕಾಯಕ, ಅಸ್ಪೃಶ್ಯತಾ ನಿವಾರಣೆ-ಇವನ್ನೂ ವ್ಯಾವಹಾರಿಕ ಜೀವನದಲ್ಲಿ ಪಾಲಿಸಬೇಕು. ನಿತ್ಯ ಪ್ರಾರ್ಥನೆಯೊಂದಿಗೆ ಈ ಏಕಾದಶವ್ರತಗಳ ಹೆಸರನ್ನೊಳಗೊಂಡ ಒಂದು ಶ್ಲೋಕವನ್ನು ಹೇಳುವುದು ರೂಢಿಯಾಗಿತ್ತು.

ಆಶ್ರಮದ ನಿತ್ಯಜೀವನದಲ್ಲಿ ಬೆಳಗ್ಗೆ 5 ಗಂಟೆಗೆ ಮತ್ತು ಸಂಜೆ 5 ಗಂಟೆಗೆ ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ಎಲ್ಲರೂ ಭಾಗವಹಿಸಬೇಕು. ಈ ಪ್ರಾರ್ಥನೆಯಲ್ಲಿ ಕೆಲವು ಉಪನಿಷತ್ತಿನ ಮಂತ್ರಗಳು. ಸ್ತೋತ್ರಗಳು, ಭಗವದ್ಗೀತೆಯ ಶ್ಲೋಕಗಳು, ತುಲಸೀದಾಸ ರಾಮಾಯಣ ಇವೇ ಅಲ್ಲದೆ ಅನ್ಯ ಧರ್ಮಾವಲಂಬಿಗಳಿದ್ದಾಗ ಅವರ ಧರ್ಮಗಳಿಂದ ಆಯ್ದ ಭಾಗಗಳೂ ಸಾಮೂಹಿಕ ಭಜನೆ, ರಾಮನಾಮ-ಇವು ರೂಢಿಯಲ್ಲಿದ್ದವು. ಮಸಾಲೆ ಪದಾರ್ಥಗಳನ್ನು ದೂರ ಮಾಡಿ ಭೋಜನಕ್ಕೆ ಕೇವಲ ಸಾತ್ತ್ವಿಕ ಆಹಾರ ಬಳಸಲಾಗುತ್ತಿತ್ತು. ಸಂಜೆಯ ಭೋಜನ ಸೂರ್ಯಾಸ್ತಮದೊಳಗಾಗಿ ಮುಗಿಯಬೇಕು ಮತ್ತು ರಾತ್ರಿ 9 ಗಂಟೆಗೆ ಎಲ್ಲರೂ ವಿಶ್ರಮಿಸಬೇಕು ಎಂಬುದು ಒಂದು ಮುಖ್ಯ ಕಟ್ಟಳೆ. ಎಲ್ಲ ಆಶ್ರಮವಾಸಿಗಳೂ ಸಫಾಯಿ-ಝಾಡಮಾಲಿಯ ಮತ್ತು ಭಂಗಿಯ-ಕೆಲಸಗಳನ್ನು ಮಾಡಲು ಮೊದಲು ಶಿಕ್ಷಣ ಪಡೆಯುತ್ತಿದ್ದರು. ಎಲ್ಲರೂ ಒಂದಲ್ಲ ಒಂದು ಕಾಯಕವನ್ನು ಕೈಗೊಳ್ಳಬೇಕಾಗಿತ್ತು (ಅವುಗಳಲ್ಲಿ ರಾಟೆಯಿಂದ ನೂಲುವುದು ಅನಿವಾರ್ಯ). ಕೃಷಿ, ತೋಟಗಾರಿಕೆ, ಬಡಗಿ ಕೆಲಸ, ನೇಯ್ಗೆ, ಗೋಪಾಲನೆ ಇತ್ಯಾದಿ ಉಚ್ಚ ನೀಚವೆಂಬ ಭಾವನೆಯನ್ನು ತೊಡೆದು ಹಾಕಲಾಗಿತ್ತು.

ಸತ್ಯಾಗ್ರಹ ಆಶ್ರಮದ ದಿನಗಳಲ್ಲಿಯೇ ಹರಿಜನ ಕುಟುಂಬ ಒಂದನ್ನು ಆಶ್ರಮಕ್ಕೆ ಸೇರಿಸಿಕೊಂಡಿದ್ದರಿಂದ ದಾನಿಗಳು ತಮ್ಮ ಸಹಾಯವನ್ನು ನಿಲ್ಲಿಸಿದರು. ಆಶ್ರಮ ಉಳಿಯುವುದೇ ಒಂದು ಸಮಸ್ಯೆಯಾಯಿತು. ಅಹಮದಾಬಾದಿನ ಪ್ರಸಿದ್ಧ ಗಿರಣಿ ಮಾಲೀಕರಾದ ಅಂಬಾಲಾಲ್ ಸಾರಾಭಾಯಿ ಆಗತಾನೇ ಹುಟ್ಟಿದ ಕರುವಿನೊಂದಿಗೆ ಅಪ್ರಾರ್ಥಿತವಾಗಿ ಆಶ್ರಮಕ್ಕೆ ಮಾಡಿದ 1300 ರೂಪಾಯಿಗಳ ಉದಾರ ದಾನದಿಂದ ಆಶ್ರಮದ ಕೆಲಸ ಕಾರ್ಯಗಳು ಮುಂದೆ ಸಾಗಿದವು.

1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಆಶ್ರಮದ ಚಟುವಟಿಕೆಗಳೂ ಅಲ್ಲಿದ್ದವರ ಸಂಖ್ಯೆಯೂ ಹಿಂದೆ ಎಂದೂ ಇಲ್ಲದ ಪ್ರಮಾಣದಲ್ಲಿದ್ದವು. ತರಪೇತನ್ನು ಪಡೆದ 87 ಮಂದಿ ಸತ್ಯಾಗ್ರಹಿಗಳೊಡನೆ ಭಜನೆ ಹಾಡುತ್ತ ಗಾಂಧಿಯವರು ಸು.384ಕಿಮೀ ದಕ್ಷಿಣದಲ್ಲಿ ಸಮುದ್ರತೀರದಲ್ಲಿರುವ ದಂಡಿ ಎಂಬ ಗ್ರಾಮಕ್ಕೆ ಕಾಲು ನಡಿಗೆಯಿಂದ ಹೋಗಲು ಆಶ್ರಮದಿಂದ ಹೊರಬಿದ್ದರು. ಸ್ವರಾಜ್ಯಪ್ರಾಪ್ತಿಯಾಗದೆ ಆಶ್ರಮಕ್ಕೆ ಹಿಂತಿರುಗುವುದಿಲ್ಲ ವೆಂದು ಪ್ರತಿಜ್ಞೆ ತೊಟ್ಟರು. ಗಾಂಧೀಜಿಯಿಂದ ದೂರವಾದ ಅನಂತರ ಸಾಬರಮತಿ ಆಶ್ರಮದ ವರ್ಚಸ್ಸು ಕಳೆಗುಂದಿತು.

**ಸೇವಾಗ್ರಾಮ:** ವಾರ್ಧಾ ನಗರಕ್ಕೆ ಸು.7ಕಿಮೀ ದೂರದಲ್ಲಿ ಶೇಗಾಂವ್ ಎಂಬ ಹಳ್ಳಿಯ ಬಳಿಯಲ್ಲಿ ಗಾಂಧಿಯವರ ಪ್ರಿಯ ಶಿಷ್ಯರಾದ ಸೇಠ್ ಜಮನಾಲಾಲ್ ಬಜಾಜ್ ಅವರ ಜಮೀನಿನಲ್ಲಿ ಹಾಕಿದ ಒಂದು ಗುಡಿಸಲಿನಲ್ಲಿ 1936ರಲ್ಲಿ ಗಾಂಧಿಯವರು ನೆಲೆಸಿದರು. ಅನಂತರ ಇದನ್ನು ಸೇವಾಗ್ರಾಮವೆಂದು ಕರೆಯಲಾಯಿತು. ಸಕ್ರಿಯ ರಾಜಕೀಯದಿಂದ ಈ ವೇಳೆಗೆ ಗಾಂಧಿಯವರು ನಿವೃತ್ತರಾಗಿ ಹರಿಜನೋದ್ಧಾರ, ಗ್ರಾಮೋದ್ಯೋಗ, ನೂತನ ಶಿಕ್ಷಣ, ಗೋಸೇವಾ ಮುಂತಾದ ಕಾರ್ಯಗಳಲ್ಲಿ ಮಗ್ನರಾಗಿದ್ದರು. ಅನಂತರ ಇತರ ಕಾರ್ಯಕರ್ತರೂ ಅಲ್ಲಿಗೆ ತರಬೇತಿಗೆ ಬಂದ ವಿದ್ಯಾರ್ಥಿಗಳೂ ಸಾಬರಮತಿ ಆಶ್ರಮದಂತೆ ಅಲ್ಲದಿದ್ದರೂ ಸರಳವೂ ನಿಯಮಿತವೂ ಸಾಮೂಹಿಕವೂ ಆದ ಜೀವನವನ್ನು ಇಲ್ಲಿ ನಡೆಸಿದರು. ಸೇವಾಗ್ರಾಮದಲ್ಲಿ ಗಾಂಧಿಯವರು ವಾಸವಾಗಿದ್ದ ಗುಡಿಸಲು ಈಗ ಇವರ ಸ್ಮಾರಕವಾಗಿ ಜೀರ್ಣೋದ್ಧಾರಗೊಂಡು ಒಂದು ಯಾತ್ರಾಸ್ಥಳವಾಗಿ ಪರಿಣಮಿಸಿದೆ. (ಕೆ.ಎಸ್.ಜಿ.ಆರ್.)

**ಗಾಂಧಿ-ಇರ್ವಿನ್ ಒಪ್ಪಂದ:** ಭಾರತದ ವೈಸ್‌ರಾಯ್ ಇರ್ವಿನ್ ಮತ್ತು ಮಹಾತ್ಮ ಗಾಂಧಿ ಇವರ ನಡುವೆ 1931 ಮಾರ್ಚ್ 5ರಂದು ಆದ ಒಪ್ಪಂದ. ಆಧುನಿಕ ಭಾರತದ ಇತಿಹಾಸದಲ್ಲಿ ಇದು ಒಂದು ಮುಖ್ಯ ಘಟನೆ. ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿ ವೈಸ್‌ರಾಯನಿಗೂ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ರಾಷ್ಟ್ರೀಯ ಕಾಂಗ್ರೆಸಿನ ನೇತಾರರಾದ ಗಾಂಧಿಯವರಿಗೂ ಪ್ರಥಮ ಬಾರಿಗೆ ಸಮಾನ ಅಂತಸ್ತಿನಲ್ಲಿ ವಿಚಾರವಿನಿಮಯ ನಡೆದು ಅದು ಈ ಒಪ್ಪಂದದಲ್ಲಿ ಪರ್ಯವಸಾನವಾಯಿತು. ಇದರಿಂದ ಕಾಂಗ್ರೆಸ್ಸಿಗೆ ಪ್ರಾಮುಖ್ಯ ಅಧಿಕವಾಗಿ ಅದರ ಕೀರ್ತಿಯೂ ಹೆಚ್ಚಿತು. ದುಂಡುಮೇಜಿನ ಪರಿಷತ್ತಿನ ಎರಡನೆಯ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸಲು ಅವಕಾಶವಾಯಿತು.

1930 ಏಪ್ರಿಲ್ 6ರಂದು ಗಾಂಧಿಯವರು ಆರಂಭಿಸಿದ ಕಾನೂನು ಭಂಗ ಚಳವಳಿಯ ಪ್ರತಿಭಟನೆಯನ್ನು ಹತ್ತಿಕ್ಕಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಸರ್ಕಾರ ಪ್ರಯತ್ನಿಸುತ್ತಿತ್ತು. ಭಾರತೀಯ ಜನರ ಮೇಲೆ ಕಾಂಗ್ರೆಸ್ ಹೊಂದಿದ್ದ ಪ್ರಭಾವವನ್ನು ಸರ್ಕಾರ ಸರಿಯಾಗಿ ಅರಿತಿರಲಿಲ್ಲ. ಕಾಂಗ್ರೆಸಿನಷ್ಟು ಪ್ರಭಾವಶಾಲಿಯಲ್ಲದ, ಪ್ರತಿಗಾಮಿಯಾಗಿದ್ದ ಹಲವಾರು ಸಣ್ಣಪುಟ್ಟ ಪಕ್ಷಗಳಿಗೆ ಅದು ವಿಶೇಷವಾಗಿ ಉತ್ತೇಜನ ನೀಡಲು ಯತ್ನಿಸಿತು. ಸರ್ಕಾರದ ದಮನನೀತಿಯಿಂದ ಸ್ವಾತಂತ್ರ್ಯ ಹೋರಾಟ ಇನ್ನೂ ಬಿರುಸಾಯಿತು. ಭಾರತದ ರಾಜಕೀಯ ಭವಿಷ್ಯದ ಬಗ್ಗೆ ಸಮಾಲೋಚಿಸಲು 1930 ನವೆಂಬರಿನಲ್ಲಿ ಸಮಾವೇಶಗೊಂಡಿದ್ದ ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪ್ರತಿನಿಧಿ ಯಾರೂ ಇರಲಿಲ್ಲ. ಕಾಂಗ್ರೆಸ್ ಇಲ್ಲದ ಯಾವ ಸಮಾಲೋಚನೆಯೂ ಫಲಪ್ರದವಾಗುವಂತಿರಲಿಲ್ಲ. ಪರಿಷತ್ತಿನ ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸುವುದೆಂಬುದು ಬ್ರಿಟಿಷ್ ಪ್ರಧಾನಿಯ ಆಶಯವಾಗಿತ್ತು. 1931 ಫೆಬ್ರವರಿ 17ರಂದು ಗಾಂಧಿ ಇರ್ವಿನರ ನಡುವೆ ಮಾತುಕತೆಗಳು ಆರಂಭವಾಗಿ ಮಾರ್ಚ್ 5ರಂದು ಒಪ್ಪಂದಕ್ಕೆ ಸಹಿಯಾಯಿತು.

ಇರ್ವಿನರ ಅಭಿಲಾಷೆಗಳು ಪ್ರಾಮಾಣಿಕವಾಗಿವೆಯೆಂದು ಗಾಂಧಿಯವರಿಗೆ ಖಚಿತವಾಗಿತ್ತು. ಲಿಬರಲ್ ಪಕ್ಷದ ನಾಯಕರಾದ ತೇಜ್‌ಬಹದ್ದೂರ್ ಸಪ್ರು, ಎಂ.ಆರ್.ಜಯಕರ್, ವಿ.ಎಸ್.ಶ್ರೀನಿವಾಸಶಾಸ್ತ್ರಿ ಇವರು ಸಂಧಾನ ಫಲಪ್ರದವಾಗಲು ಪ್ರಮುಖ ಪಾತ್ರ ವಹಿಸಿದ್ದರು. ಜವಾಹರಲಾಲನೆಹರು, ವಲ್ಲಭಭಾಯಿ ಪಟೇಲ್ ಮೊದಲು ಒಪ್ಪದೆ ಅನಂತರ ಒಪ್ಪಿಗೆ ಸೂಚಿಸಿದರು.

ದಬ್ಬಾಳಿಕೆಯ ತುರ್ತು ಸುಗ್ರೀವಾಜ್ಞೆಗಳನ್ನೂ ಇತ್ಯರ್ಥ ವಾಗದ ಆಪಾದನೆಗಳನ್ನೂ ಹಿಂದೆಗೆದುಕೊಳ್ಳಲೂ ಹಿಂಸೆಯಲ್ಲಿ ತೊಡಗಿದ್ದವರನ್ನು ಬಿಟ್ಟು ಉಳಿದ ಎಲ್ಲ ಸತ್ಯಾಗ್ರಹಿ ಬಂಧಿಗಳ ಬಿಡುಗಡೆ, ಅವರ ವಿರುದ್ಧ ನಡೆಯುತ್ತಿದ್ದ ಮೊಕದ್ದಮೆಗಳ ವಾಪಸಾತಿ, ಸತ್ಯಾಗ್ರಹದಲ್ಲಿ ಭಾಗವಹಿಸಿ ಆಸ್ತಿ ಕಳೆದುಕೊಂಡಿದ್ದವರಿಗೆ ಅದನ್ನು ಹಿಂದಿರುಗಿಸಲೂ ಮದ್ಯ ಮತ್ತು ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಶಾಂತಿಯುತ ನಿರೋಧಕಾರ್ಯ ನಡೆಸುವುದಕ್ಕೆ ಮತ್ತು ಸಮುದ್ರತೀರದಿಂದ ನಿಯಮಿತ ದೂರದಲ್ಲಿ ವಾಸಿಸುವ ಜನ ತೆರಿಗೆಯಿಲ್ಲದೆ ಉಪ್ಪು ತಯಾರಿಸುವುದಕ್ಕೆ ಅವಕಾಶ ಕೊಡಲೂ ಸರ್ಕಾರದ ಪರವಾಗಿ ಇರ್ವಿನ್ ಒಪ್ಪಿಕೊಂಡ. ಪೊಲೀಸ್ ದೌರ್ಜನ್ಯ ಕುರಿತು ವಿಚಾರಣೆಗೆ ಒತ್ತಾಯಿಸದಿರಲೂ ಕಾನೂನುಭಂಗ ಚಳವಳಿ ನಿಲ್ಲಿಸಲೂ ಜವಾಬ್ದಾರಿ ಸರ್ಕಾರ ಸ್ಥಾಪನೆ, ಸಾಂವಿಧಾನಿಕ ಸರ್ಕಾರದ ಯೋಜನೆಯನ್ನು ಪರಿಶೀಲಿಸುವುದು. ರಕ್ಷಣೆ, ವಿದೇಶಿ ವ್ಯವಹಾರ, ಅಲ್ಪಸಂಖ್ಯಾತರ ಸ್ಥಿತಿ, ಭಾರತದ ಹಣಕಾಸಿನ ಸಾಲ ಹಾಗೂ ಕರ್ತವ್ಯಪಾಲನೆ ಮುಂತಾದವುಗಳ ಬಗ್ಗೆ ಮೀಸಲಾತಿ ಅಥವಾ ಭದ್ರತ ವ್ಯವಸ್ಥೆಗಳು ಸಹ ಮುಖ್ಯಾಂಶಗಳು ಮತ್ತು ಭಾರತ ಹಿತರಕ್ಷಣೆಯ ಆಧಾರದ ಮೇಲೆ ಸಾಂವಿಧಾನಿಕ ಸುಧಾರಣೆಗಳ ಯೋಜನೆಯ ದುಂಡುಮೇಜಿನ ಪರಿಷತ್ತಿನ ಎರಡನೆಯ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸಲೂ ಬಹಿಷ್ಕಾರವನ್ನೆಲ್ಲ ನಿಲ್ಲಿಸಲೂ ಗಾಂಧಿಯವರು ಕಾಂಗ್ರೆಸಿನ ಪರವಾಗಿ ಸಮ್ಮತಿಸಿದರು. (ವಿ.ಕೆ.)

**ಗಾರಿಬಾಲ್ಡಿ, ಜೋಸೆಪ್ಪೆ:** 1807-82. ಇಟಲಿಯ ರಾಷ್ಟ್ರಪ್ರೇಮಿ, ಹೋರಾಟಗಾರ, ಗಣರಾಜ್ಯವಾದಿ, ನಾಡಿನ ಏಕೀಕರಣವನ್ನು ಸಾಧಿಸಲು ಕಾರಣರಾದವರಲ್ಲೊಬ್ಬ. 1807ರ ಜುಲೈ 4ರಂದು ಫ್ರಾನ್ಸಿನ ನೀಸ್ ನಗರದಲ್ಲಿ ಜನಿಸಿದ. 1815-60ರಲ್ಲಿ ಇದು ಸಾರ್ದೆ ನ್ಯಾಪೈಮಾಂತೆ ರಾಜ್ಯಕ್ಕೆ ಒಳಪಟ್ಟಿತ್ತು. ಮಗ ಪಾದ್ರಿಯಾಗಬೇಕೆಂಬುದು ತಂದೆತಾಯಿಯರ ಅಭಿಲಾಷೆಯಾಗಿತ್ತು. ಆದರೆ ಇವನನ್ನು ಕಡಲು ಆಕರ್ಷಿಸಿತು. ಇವನು ವ್ಯಾಪಾರ ಹಡಗೊಂದ ರಲ್ಲಿ ಬಹುಕಾಲ ನಾವಿಕನಾಗಿದ್ದ. ಇಟಲಿಯ ಕ್ರಾಂತಿ ನಾಯಕ ಜೂಸೆಪ್ಪೆ ಮಾಟ್ಸೀನಿಯ ಪ್ರಭಾವಕ್ಕೊಳಗಾಗಿ ಅವನ ಯುವ ಇಟಲಿ ಸಂಘದ ಸದಸ್ಯನಾದ. ಪೈಮಾಂತೆಯಲ್ಲಿ ಜನಪರ ಬಂಡಾಯವನ್ನೆಬ್ಬಿಸುವ ಸಂಚೊಂದರಲ್ಲಿ ಭಾಗವಹಿಸಿದ್ದನೆಂಬುದು(1834) ಬಯಲಾದಾಗ ಇವನು ತಪ್ಪಿಸಿಕೊಂಡು ದಕ್ಷಿಣ ಅಮೆರಿಕ ತಲುಪಿ, ಅಲ್ಲಿ 1836ರಿಂದ 1848ರವರೆಗೆ ಅಲೆದಾಡಿದ. ಇವನ ಗೈರುಹಾಜರಿಯಲ್ಲಿ ಇವನ ಮೇಲೆ ಮರಣದಂಡನೆಯ ಶಿಕ್ಷೆ ಹೊರಿಸಲಾಯಿತು.

ದಕ್ಷಿಣ ಅಮೆರಿಕದಲ್ಲೂ ಇವನು ಸುಮ್ಮನಿರಲಿಲ್ಲ; ಬ್ರೆಜಿಲ್ ವಿರುದ್ಧ ಬಂಡೆದ್ದಿದ್ದ ರೀಯೊ ಗ್ರಾಂಡೆ ದೂ ಸೂಲ್ ಪರವಾಗಿ ಕಡಲುಗಳ್ಳನಾಗಿ ಕಾರ್ಯಾಚರಣೆ ನಡೆಸಿದ. ಅರ್ಜೆಂಟೈನದ ವಿರುದ್ಧ ಉರುಗ್ವೆಯ ಪರವಾಗಿ ಹೋರಾಡಿದ. ಇವನ ನೆರವಿನಿಂದ 1843ರಲ್ಲಿ ಇಟಾಲಿಯನ್ ಸೈನ್ಯದಳವೊಂದನ್ನು(ಕೆಂಪಂಗಿಗಳು) ನಿರ್ಮಿಸಲಾಯಿತು. ಗೆರಿಲ್ಲಾ ಯುದ್ಧಕಾರ್ಯಾಚರಣೆಯಲ್ಲಿ ಇವನು ವಿಶೇಷಾನುಭವವನ್ನು ಸಂಪಾದಿಸಿದ್ದು ಈ ದಳದೊಂದಿಗೆ ಇದ್ದಾಗ. 1839ರಲ್ಲಿ ಇವನು ಆನ ಮೇರಿಯ ರಿಬೇರೊದ ಸಿಲ್ವ ಎಂಬವಳನ್ನು ಎತ್ತಿಕೊಂಡು ಹೋಗಿ, ಆಕೆಯ ಮೊದಲ ಗಂಡ ತೀರಿಕೊಂಡ ಮೇಲೆ ಮದುವೆಯಾದ(1842). ಗಾರಿಬಾಲ್ಡಿಯ ಹೋರಾಟ ಗಳಲ್ಲಿ ಅವಳೂ ಇವನೊಡನೆ ಇರುತ್ತಿದ್ದಳು. ಆಕೆ 1849ರಲ್ಲಿ ತೀರಿಕೊಂಡಳು.

ಇಟಲಿಯಲ್ಲಿ ಕ್ರಾಂತಿ ಪರಿಸ್ಥಿತಿ ಏರ್ಪಟ್ಟಿದೆಯೆಂಬ ಸುದ್ದಿ ಕೇಳಿ ಇವನು ತನ್ನ ಕೆಲವು ಅನುಯಾಯಿಗಳೊಂದಿಗೆ 1848ರಲ್ಲಿ ತನ್ನ ನಾಡಿಗೆ ಹಿಂದಿರುಗಿದ. ಇಟಲಿಯ ಎಲ್ಲ ರಾಜ್ಯಗಳಲ್ಲೂ ಬಂಡಾಯಸ್ಥಿತಿಯಿತ್ತು. ಸಾರ್ದೆನ್ಯಾ ಆಸ್ಟ್ರಿಯಗಳ ನಡುವೆ ಯುದ್ಧ ಆರಂಭವಾಗಿತ್ತು. ಇವನು ಗಣತಂತ್ರವಾದಿಯಾಗಿದ್ದರೂ ಸಾರ್ದೆನ್ಯಾದ ದೊರೆಗೆ ನೆರವು ನೀಡಲು ಮುಂದೆ ಬಂದ. ಆದರೆ ದೊರೆ ಇದರಲ್ಲಿ ಉತ್ಸಾಹ ತೋರಲಿಲ್ಲ. ಆದ್ದರಿಂದ ಇವನು ಮಿಲಾನಿನ ನೆರವಿಗೆ ಹೋದ. ಸಾರ್ದೆನ್ಯಾ ಮಿಲಾನ್‌ಗಳು ಸೋತವು. ಮಿಲಾನ್ ಶರಣಾಗತವಾಯಿತು. ಸಣ್ಣ ಪಡೆಯೊಂದಿಗೆ ಬೆಟ್ಟಗಾಡು ಸೇರಿ ಆಸ್ಟ್ರಿಯನರಿಗೆ ಕಿರುಕುಳ ಕೊಡಲು ಯತ್ನಿಸಿದ. ಆದರೆ ವಿಫಲನಾಗಿ, ಗಡಿ ದಾಟಿ ಸ್ವಿಟ್ಜರ್ಲೆಂಡಿಗೆ ಹೋಗಿ ಅಲ್ಲಿಂದ ನೀಸ್ ತಲುಪಿದ.

ಇಟಲಿಯಲ್ಲಿ ಆಗ ಇನ್ನೂ ಕ್ರಾಂತಿಕಾರಿ ಸರ್ಕಾರಗಳು ಉಳಿದಿದ್ದವು. ಆದರೆ ಅವು ಯಾವುವೂ ಇವನ ನೆರವನ್ನು ಬಯಸಲಿಲ್ಲ. 1848ರ ನವೆಂಬರಿನಲ್ಲಿ 9ನೆಯ ಪೋಪ್ ಪಯಸ್ ರೋಮಿನಿಂದ ಓಡಿಹೋದಾಗ ಇವನು ರೋಮಿನ ಜನರಿಂದ ಆಹ್ವಾನಿತನಾಗಿ

ಅದನ್ನು ಪ್ರವೇಶಿಸಿ ಫ್ರೆಂಚರ ಆಕ್ರಮಣವನ್ನೆದುರಿಸಿದ. ಆಗ ಇವನ ಧೈರ್ಯ ಸಾಹಸಗಳೂ ನಾಯಕತ್ವಗುಣವೂ ಸಂಘಟನೆಯ ಚಾತುರ್ಯವೂ ಪ್ರಕಾಶಕ್ಕೆ ಬಂದುವು. ಆದರೂ ಕೊನೆಗೆ ಆ ನಗರ ಶತ್ರುಗಳ ವಶವಾಯಿತು. ಫ್ರಾನ್ಸ್, ಆಸ್ಟ್ರಿಯ, ಸ್ಪೇನ್, ನೇಪಲ್ಸ್ ಪಡೆಗಳು ಇವನನ್ನು ಬೆನ್ನಟ್ಟಿದರೂ ಹೆದರದೆ, ಶರಣಾಗದೆ ಹಿನ್ನಡೆದು ತಪ್ಪಿಸಿಕೊಂಡು ಅಮೆರಿಕಕ್ಕೆ ಹೋದ. ಸ್ವಾತಂತ್ರ್ಯ ಯೋಧನೆಂದೂ ಎರಡು ಪ್ರಪಂಚಗಳ ವೀರನೆಂದೂ ಪ್ರಖ್ಯಾತನಾದ. 1854ರಲ್ಲಿ ಇಟಲಿಗೆ ಹಿಂದಿರುಗಲು ಇವನಿಗೆ ಅವಕಾಶ ದೊರಕಿತು. ಕಾರ್ಸಿಕ ಸಾರ್ಡೀನ್ಯಾಗಳ ನಡುವಣ ಕಾಪ್ರೇರಾ ದ್ವೀಪದ ಒಂದು ಭಾಗವನ್ನು ಕೊಂಡ. ಅಲ್ಲೆ ನೆಲೆಸುವುದು ಇವನ ಉದ್ದೇಶವಾಗಿತ್ತು. ಅಷ್ಟರಲ್ಲಿ ಮತ್ತೆ ಹೋರಾಟಕ್ಕೆ ಕರೆ ಬಂತು. ಸಾರ್ಡೀನ್ಯಾಗೆ ಆಗ ಕಾವೂರ್ ಪ್ರಧಾನಿಯಾಗಿದ್ದ. ಆಸ್ಟ್ರಿಯಾದ ವಿರುದ್ಧವಾಗಿ ಮಾಡಲಿದ್ದ ಯುದ್ಧದಲ್ಲಿ ಇವನ ನೆರವು ಬಯಸಿದ. ಅಲ್ಲಿಯ ದೊರೆಗೆ ನೆರವು ನೀಡಲು ಇವನು ಸಿದ್ಧನಿದ್ದನಾದರೂ ದೇಶಭ್ರಷ್ಟನೆನಿಸಿದ್ದ ಇವನಿಗೆ ಮನ್ನಣೆ ನೀಡುವುದು ಕಷ್ಟವಾಗಿತ್ತು. ಅಲ್ಲದೆ ಕಾವೂರ್ ಹಾಗೂ ಇವನ ಉದ್ದೇಶಗಳು ಪರಸ್ಪರ ಭಿನ್ನವಾಗಿದ್ದುವು. ಆದರೂ ಕೊನೆಗೆ ಅವರ ನಡುವೆ ಒಪ್ಪಂದವಾಯಿತು. ದೊರೆ ವಿಕ್ಟರ್ ಇಮ್ಯಾನ್ಯುಯೆಲ್‌ನ ಅಡಿಯಲ್ಲಿ ಇವನು ಮೇಜರ್ ಜನರಲ್ ಆದ. ಇವನ ಸ್ವಯಂಯೋಧರ ಪಡೆ ಆಸ್ಟ್ರಿಯನ್ ಸೇನೆಯ ಹಾದಿ ತಪ್ಪಿಸಿ ಕಾದಿ ಅದನ್ನು ಸೋಲಿಸಿತು. ಆಲ್ಪ್ ಪ್ರದೇಶ ವಿಮೋಚನೆಗೊಂಡಿತು. ಶಾಂತಿ ಕೌಲು ಏರ್ಪಟ್ಟಿತು. ಅನಂತರ ಇವನು ಟಸ್ಕನಿಯ ಕ್ರಾಂತಿಕಾರಿ ಸರ್ಕಾರಕ್ಕೆ ಸಹಾಯ ಮಾಡಿದ. ಪೋಪ್ ರಾಜ್ಯದ ಮೇಲೂ ಏರಿಹೋಗಲು ಇವನು ಸಿದ್ಧನಾದ. ಅಷ್ಟರಲ್ಲಿ ದೊರೆ ಇಮ್ಯಾನ್ಯುಯೆಲನಿಂದ ತಡೆ ಬಂತು. ಇವನು ಮೇಜರ್ ಜನರಲ್ ಹುದ್ದೆಗೆ ರಾಜೀನಾಮೆ ನೀಡಿದ. ಸವಾಯನ್ನೂ ಇವನ ಜನ್ಮ ಸ್ಥಳವಾದ ನೀಸನ್ನೂ ಸಾರ್ಡೀನ್ಯಾ ಸರ್ಕಾರ ಫ್ರಾನ್ಸಿಗೆ ಒಪ್ಪಿಸಿದ್ದರಿಂದ ಕೋಪಗೊಂಡು, ಅಲ್ಲಿಯ ಪಾರ್ಲಿಮೆಂಟನ್ನು ಪ್ರವೇಶಿಸಿ ಈ ಕ್ರಮವನ್ನು ಪ್ರತಿಭಟಿಸಿದ.

ನೇಪಲ್ಸ್ ಸಿಸಿಲಿಗಳ ರಾಜನಾಗಿದ್ದ ಎರಡನೆಯ ಫ್ರಾನ್ಸಿಸನ ವಿರುದ್ಧ ಸಿಸಿಲಿಯ ಪ್ರಜೆಗಳು ಬಂಡಾಯ ಹೂಡಿದ್ದರು. 1860ರ ಮೇ ತಿಂಗಳಲ್ಲಿ ಸಿಸಿಲಿಯ ದಂಡಯಾತ್ರೆಗೆ ಎರಡು ಹಡಗುಗಳಲ್ಲಿ ಸು.1150 ಸ್ವಯಂ ಯೋಧರ ಮುಂದಾಳಾಗಿ ಜಿನೀವದಿಂದ ಹೊರಟ. ಅನಂತರ ಇವರು ಸಹಸ್ರಾರು ಎಂದು ಪ್ರಸಿದ್ಧರಾದರು. ಕೆಂಪಂಗಿ ಇವರ ಸಮವಸ್ತ್ರ. ವಿಕ್ಟರ್ ಎಮ್ಮಾನ್ಯುಯೆಲ್‌ನ ಹೆಸರಿನಲ್ಲಿ ಸಿಸಿಲಿ ದ್ವೀಪದ ಸರ್ವಾಧಿಕಾರಿಯೆಂದು ಇವನು ಘೋಷಿತನಾದ. ಸಿಸಿಲಿಯಲ್ಲಿದ್ದ ಫ್ರಾನ್ಸಿಸನ 24,000 ಸೈನಿಕರನ್ನು ದಿಟ್ಟ ಹೋರಾಟದಿಂದ ಸೋಲಿಸಿದ. ಅನಂತರ ನೇಪಲ್ಸಿನ ಆಕ್ರಮಣಕ್ಕೆ ಹೋದ. ಅದೂ ಬಹುತೇಕ ಇವನ ವಶವಾಯಿತು. ವಿಕ್ಟರ್ ಎಮ್ಮಾನ್ಯುಯೆಲ್ ನೇಪಲ್ಸ್ ಪ್ರವೇಶಿಸಿದಾಗ ಅವನೊಂದಿಗೆ ಇವನೂ ಇದ್ದ. ಆದರೆ ದೊರೆಯ ಸನ್ಮಾನವನ್ನು ಸ್ವೀಕರಿಸಲೊಲ್ಲದೆ ಕಾಪ್ರೇರಾಗೆ ಹಿಂದಿರುಗಿದ.

ಅಧಿಕಾರದ ಆಸೆ ಇವನಿಗೆ ಸ್ವಲ್ಪವೂ ಇರಲಿಲ್ಲವಾದರೂ ಇವನ ಬಗ್ಗೆ ಇಟಲಿಯ ಸರ್ಕಾರ ಎಂದಿಗೂ ನೆಮ್ಮದಿಯಾಗಿರಲಿಲ್ಲ. ತನ್ನ ಅನುಯಾಯಿಗಳನ್ನು ಸರ್ಕಾರ ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದ್ದದ್ದು ಇವನಿಗೆ ಕೋಪವನ್ನುಂಟುಮಾಡಿತು. ತಾನು ಗೆದ್ದ ಪ್ರಾಂತ್ಯಗಳ ಆಡಳಿತ ಸಮರ್ಪಕವಾಗಿರಲಿಲ್ಲವಾದ್ದರಿಂದ ಇವನು ಸರ್ಕಾರವನ್ನು ಕಟುವಾಗಿ ಟೀಕಿಸುತ್ತಿದ್ದ. ಇಟಲಿಯ ಏಕೀಕರಣ ಕಾರ್ಯವನ್ನು ಪೂರ್ಣಗೊಳಿಸುವುದು ಇವನ ಇಚ್ಛೆಯಾಗಿತ್ತು. ರೋಂ ವೆನಿಸ್‌ಗಳ ವಿರುದ್ಧ ಕಾರ್ಯಾಚರಣೆಯಲ್ಲಿ ಇಟಲಿಯ ಸರ್ಕಾರ ಇವನಿಗೆ ಹೆಚ್ಚಿನ ನೆರವು ನೀಡಲಿಲ್ಲ. ಇವನನ್ನೂ ಇವನ ಅನುಯಾಯಿಗಳನ್ನೂ ಅದು ಬಂಧಿಸಿ ವಿಮೋಚನೆಗೊಳಿಸಿತು. 1864ರಲ್ಲಿ ಲಂಡನ್ನಿಗೆ ಹೋದಾಗ ಇವನಿಗೆ ಅದ್ಭುತವಾದ ಸ್ವಾಗತ ದೊರಕಿತು. 1867ರಲ್ಲಿ ಇವನು ಇನ್ನೊಮ್ಮೆ ರೋಮಿನ ಮೇಲೆ ಏರಿ ಹೋದ. ಸರ್ಕಾರ ಇವನನ್ನು ದಸ್ತಗಿರಿ ಮಾಡಿ ಕಾಪ್ರೇರಾಗೆ ಕಳುಹಿಸಿಕೊಟ್ಟಿತು. ಇಟಲಿಯ ಸರ್ಕಾರ ಇವನಿಗೆ ದಿಗ್ಬಂಧನ ವಿಧಿಸಲು ಹವಣಿಸುತ್ತಿದಾಗ ಇವನು ತಪ್ಪಿಸಿಕೊಂಡು ರೋಮ್ ಪ್ರದೇಶವನ್ನು ಹೊಕ್ಕ. ಇವನ ಪಡೆಗಳಿಗೆ ಸೋಲಾಯಿತು. ಇವನು ಇಟಲಿಯ ಎಲ್ಲೆಯನ್ನು ದಾಟಿ ಬಂದಾಗ ಸರ್ಕಾರ ಇವನನ್ನು ಮತ್ತೆ ದಸ್ತಗಿರಿ ಮಾಡಿ ಕಾಪ್ರೇರಾಗೆ ಕಳುಹಿಸಿತು. 1870ರಲ್ಲಿ ಇನ್ನೊಂದು ಸೇನೆಯನ್ನು ಸಜ್ಜುಗೊಳಿಸಿದ. ಫ್ರಾನ್ಸ್-ಜರ್ಮನಿ ಯುದ್ಧದಲ್ಲಿ ಪರ್ಷಿಯ ವಿರುದ್ಧ ಫ್ರಾನ್ಸಿಗೆ ನೆರವು ನೀಡುವುದು ಉದ್ದೇಶವಾಗಿತ್ತು. ಇವನ ನೆರವು ತುಂಬ ಉಪಯುಕ್ತವೆನಿಸಿತು. ಬಾರ್ಡೋದ ರಾಷ್ಟ್ರೀಯ ಸಭೆಗೆ ಇವನು ಆಯ್ಕೆ ಹೊಂದಿದ. ಆದರೆ ಅದರಲ್ಲಿರಲಾರದೆ ರಾಜೀನಾಮೆ ಕೊಟ್ಟ. ಅನಂತರ ಇವನು ರಾಜಕೀಯದಲ್ಲಿ ವಿಶೇಷವಾದ ಪಾತ್ರ ವಹಿಸಲಿಲ್ಲ. 1882ರ ಜೂನ್ 2ರಂದು ನಿಧನನಾದ.

ಇವನು ಆವೇಶ ಭರದಲ್ಲಿ ಪರಸ್ಪರ ವಿರುದ್ಧವಾದ ಭಾವನೆಗಳನ್ನು ಬೋಧಿಸುತ್ತಿದ್ದದ್ದುಂಟು. ಶಾಸನಸಭೆಗಳಲ್ಲಿ ಇವನಿಗೆ ಹೆಚ್ಚಿನ ನಂಬಿಕೆ ಇರಲಿಲ್ಲ ಹಾಗೂ ಇವನು ಚಿಂತನಪರನಾಗಿರಲಿಲ್ಲ. ಶಾಸನಸಭೆಗಳಲ್ಲಿ ಇವನು ಹೆಚ್ಚು ಕಾಲ ಇರುತ್ತಿರಲಿಲ್ಲ. ಕೆಲವು ವಿಷಯಗಳು ಇವನಿಗೆ ಅರ್ಥವಾಗುತ್ತಿರಲಿಲ್ಲ. ಯುರೋಪಿನಲ್ಲಿ ಶೀಘ್ರವಾಗಿ ಸಂಭವಿಸುತ್ತಿದ್ದ ರಾಜಕೀಯ ಬದಲಾವಣೆಗಳನ್ನು ಇವನು ಅರಿತುಕೊಳ್ಳಲಾರದೆ ಹೋದ. ಇವನು ಮೂಲತಃ ಯೋಧ, ಅಧಿಕಾರಕ್ಕೆ ಆಸೆ ಪಡದೆ ಇಟಲಿಯ ಏಕೀಕರಣ ಸಾಧನೆಗಾಗಿ ನಿರಂತರವಾಗಿ ಶ್ರಮಿಸಿ ಬಹುಮಟ್ಟಿಗೆ ಸಫಲನಾದ ಇವನಿಗೆ ಇಟಲಿಯ ಇತಿಹಾಸದಲ್ಲಿ ಹಿರಿಯ ಸ್ಥಾನವಿದೆ.

ಇವನು ತನ್ನ ಸಾಹಸಮಯ ಬದುಕಿನ ಕಥೆಯನ್ನು ಹೇಳಲು ಒಮ್ಮೆ ಕಾವ್ಯವನ್ನು, ಇನ್ನೊಮ್ಮೆ ಗದ್ಯವನ್ನು ಮಾಧ್ಯಮವಾಗಿ ಬಳಸಿದ. ಇವನು 1862ರಲ್ಲಿ ಕಾಪ್ರೇರಾ ದ್ವೀಪದಲ್ಲಿದ್ದಾಗ ಬರೆದ ಆತ್ಮವೃತ್ತಾಂತವನ್ನು ತಿಳಿಸುವ ದಿ ಪೊಯೆಮ ಆಟೊಬಯೋಗ್ರಾಫಿಕೊ ಎಂಬ ನೀಳ್ಗವನದಲ್ಲಿ ತನ್ನ ಹಲವು ವೈಯಕ್ತಿಕ ಅನುಭವಗಳನ್ನು ತೋಡಿಕೊಂಡಿದ್ದಾನೆ.

(ಎ.ವಿ.ವಿ.;ಎಚ್.ಕೆ.ಆರ್.)

**ಗಾರೆಶಿಲ್ಪ:** ನೋಡಿ-ಮೂರ್ತಿಶಿಲ್ಪ

**ಗಾಹದ್ವಾಲ ಮನೆತನ:** 11ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಭಾರತದ ಕನೌಜಿನಲ್ಲಿ ಅಧಿಕಾರಕ್ಕೆ ಬಂದ ಒಂದು ರಾಜಮನೆತನ. ಇದು ರಾಷ್ಟ್ರಕೂಟರ ಅಥವಾ ರಾಥೋರರ ವಂಶದ ಒಂದು ಶಾಖೆ ಎಂಬುದು ಕೆಲವರ ಅಭಿಪ್ರಾಯವಾದರೂ ಇದಕ್ಕೆ ಸಾಕಷ್ಟು ಆಧಾರಗಳಿಲ್ಲ. ಕಳಚುರಿ ಲಕ್ಷ್ಮೀ ಕರ್ಣನ ಮಾಂಡಲಿಕನಾಗಿದ್ದ ಯಶೋವಿಗ್ರಹ ಈವರೆಗೆ ತಿಳಿದುಬಂದಿರುವ ಮೊದಲ ದೊರೆ. ಇವನ ಮಗ ಮಹೀಚಂದ್ರ. ಇವನಿಗೆ ಮಹೀತಲ, ಮಹೀಯಲ ಎಂಬ ಹೆಸರುಗಳೂ ಇದ್ದವು. ಈತ ಉತ್ತರ ಪ್ರದೇಶದ ಕೆಲವು ಭಾಗಗಳನ್ನಾಳುತ್ತಿದ್ದ. ಮಹೀಚಂದ್ರನ ಅನಂತರ ಪಟ್ಟಕ್ಕೆ ಬಂದವನು ಅವನ ಮಗ ಚಂದ್ರದೇವ. ಉತ್ತರ ಭಾರತದಲ್ಲಿ ಪ್ರಬಲರಾಗಿದ್ದ ಪರಮಾರ ಭೋಜ ಮತ್ತು ಕಳಚುರಿ ಕರ್ಣರ ಕಾಲದಲ್ಲಿ ಆಕ್ರಮಣ ಮಾಡಲು ಹೆದರಿ ಹಿಂದೆಗೆಯುತ್ತಿದ್ದ ಮುಸ್ಲಿಮರು ಅವರ ಅನಂತರ ಮತ್ತೆ ತಮ್ಮ ಧಾಳಿಗಳನ್ನಾರಂಭಿಸಿದರೆಂದೂ ಪಂಜಾಬಿನ ರಾಜ್ಯಪಾಲನಾಗಿದ್ದ ಮಹಮೂದ 1086-90ರಲ್ಲಿ ಕನೌಜ್, ಕಾಲಂಜರ ಮತ್ತು ಉಜ್ಜಯನಿಗಳನ್ನು ಲೂಟಿ ಮಾಡಿದನೆಂದೂ ಆಗ ಕನೌಜಿನಲ್ಲಿ ಚಂದರಾಯ್ ಎಂಬವನು ಇವನ ಮಿತ್ರನಾಗಿದ್ದನೆಂದೂ ತಿಳಿದುಬರುತ್ತದೆ. ಚಂದ್ರದೇವನೇ ಈ ಚಂದರಾಯನಾಗಿರಬಹುದು. ಮಹಮೂದ ತನ್ನ ದಂಡಯಾತ್ರೆಯಿಂದ ಹಿಂದಿರುಗಿದಾಗ ಉದ್ಭವಿಸಿದ ಅನಿಶ್ಚಯ ಪರಿಸ್ಥಿತಿಯನ್ನು ಚಂದ್ರದೇವ ಉಪಯೋಗಿಸಿಕೊಂಡು ಕನೌಜನ್ನು ಪಂಚಾಲದ ರಾಷ್ಟ್ರಕೂಟ ದೊರೆ ಗೋಪಾಲನಿಂದ ಕಿತ್ತುಕೊಂಡ. ಚಂದ್ರದೇವ, ಗಜಪತಿ, ನರಪತಿ, ತ್ರಿಶಂಕುಪತಿ-ಇವರನ್ನು ಸೋಲಿಸಿದ. ಈತ ಕುಶಿಕ, ಕಾಶಿ, ಉತ್ತರ ಕೋಸಲಗಳನ್ನು ರಕ್ಷಿಸಿದುದಾಗಿ ಹೇಳಿಕೊಂಡಿದ್ದಾನೆ. ಪೂರ್ವದಲ್ಲಿ ಇವನ ಮುನ್ನಡೆಗೆ ಮಗಧದ ದೊರೆ ಭೀಮಯಶನಿಂದ ತಡೆ ಬಿತ್ತು. ಅಲಹಾಬಾದಿನಿಂದ ವಾರಾಣಸಿ ಅಯೋಧ್ಯೆಗಳವರೆಗಿನ ಸೀಮೆಯೆಲ್ಲ ಚಂದ್ರದೇವನ ವಶವಾಗಿದ್ದುವು. ವಾರಾಣಸಿ ಗಾಹದ್ವಾಲರ ಎರಡನೆಯ ರಾಜಧಾನಿಯಾಗಿತ್ತು. ಚಂದ್ರದೇವನ ರಾಜ್ಯ ಪಶ್ಚಿಮದಲ್ಲಿ ಇಂದ್ರಪ್ರಸ್ಥದವರೆಗೂ ವಿಸ್ತರಿಸಿತ್ತೆಂದು ಕೆಲವರ ಅಭಿಪ್ರಾಯ. ಆದರೆ ಆಗ ದೆಹಲಿಯಲ್ಲಿ ಬೇರೆ ರಾಜಮನೆತನ ಆಳುತಿತ್ತು. ಚಂದ್ರದೇವನ ವಶದಲ್ಲಿದ್ದ ಇಂದ್ರಸ್ಥಾನವೆಂಬುದು ಇಂದ್ರಪ್ರಸ್ಥವಾಗಿದ್ದಿರಲಾರದೆಂದು, ಅದು ಈಗಿನ ಇಂದೂರ್ ಆಗಿರಬಹುದೆಂದೂ ಹೇಳಲಾಗಿದೆ.

ಚಂದ್ರದೇವನ ಅನಂತರ ರಾಜ್ಯವಾಳಿದವನು ಮದನಚಂದ್ರ. ಈತನ 1104-09ರ ಶಾಸನಗಳು ದೊರೆತಿವೆ. ವಾರಾಣಸಿ, ಬಿಹಾಮುರ ಉಪವಿಭಾಗ, ಹಿಂದಿನ ಪಂಚಾಲ ರಾಜ್ಯದ ಒಂದು ಭಾಗ-ಇವು ಈತನ ಅಧೀನದಲ್ಲಿದ್ದುವು. ಮೂರನೆಯ ಅಲಾವುದ್ದೌಲಾ ಮಸೂದ ಈ ಸಮಯದಲ್ಲಿ ಕನೌಜಿನ ಮೇಲೆ ದಂಡೆತ್ತಿ ಬಂದಿದ್ದನೆಂದೂ ಅಲ್ಲಿಯ ದೊರೆಯಾದ ಮಲ್ಹಿ ಎಂಬುವನನ್ನು ಸೆರೆಹಿಡಿದನೆಂದೂ ಆತ ವಿಪುಲವಾಗಿ ಹಣ ತೆತ್ತು ವಿಮೋಚನೆ ಪಡೆದನೆಂದೂ ಮುಸ್ಲಿಂ ಇತಿವೃತ್ತಕಾರರು ಹೇಳುತ್ತಾರೆ. ಮದನಚಂದ್ರನೇ ಈ ಮಲ್ಹಿ ಎಂದು ಭಾವಿಸಲಾಗಿದೆ.

ಮದನಚಂದ್ರನ ಮಗ ಗೋವಿಂದಚಂದ್ರ, ಗಾಹದ್ವಾಲ ವಂಶದ ಸಮರ್ಥ ದೊರೆಗಳಲ್ಲೊಬ್ಬ. ಈತ ತನ್ನ ತಂದೆ ಬದುಕಿದ್ದ ಕಾಲದಲ್ಲೇ ಮುಸ್ಲಿಮರನ್ನು ಸೋಲಿಸಿದನೆಂದು ಕೆಲವು ದಾಖಲೆಗಳಿಂದ ಗೊತ್ತಾಗುತ್ತದೆ. ಮುಸ್ಲಿಮರು ತನ್ನ ತಂದೆಯನ್ನು ಸೆರೆಯಿಂದ ಬಿಡುಗಡೆ ಮಾಡುವಂತೆ ಈತ ಒತ್ತಡ ತಂದಿದ್ದಿರಬಹುದು. ಹೀಗಾಗಿ ಮುಂದೆ ಮದನಚಂದ್ರ ಹೆಸರಿಗೆ ದೊರೆಯಾಗಿದ್ದರೂ ವಾಸ್ತವವಾಗಿ ಗೋವಿಂದಚಂದ್ರನೇ ಆಡಳಿತ ನಡೆಸುತ್ತಿದ್ದಿರಬೇಕು. ಈ ಕಾಲದಲ್ಲಿ ದಂಡೆತ್ತಿ ಬಂದ ಗೌಡ ರಾಮಪಾಲನನ್ನು ಇವನು ಸೋಲಿಸಿ ಹಿಮ್ಮೆಟ್ಟಿಸಿದ. ಈತ 1114ರಲ್ಲಿ ಪಟ್ಟಕ್ಕೆ ಬಂದ. ಅಂದಿನಿಂದ 1154ರವರೆಗೆ ಈತ ಬರೆಸಿದ 42 ಶಾಸನಗಳು ಇದುವರೆಗೆ ದೊರಕಿವೆ. ವಾರಾಣಸಿ, ಫತೇಪುರ, ಕಾನ್ಪುರ, ಕನೌಜ್, ಗೊಂಡಾ, ಗೋರಖಪುರ, ದಿನಾಪುರ, ಪಾಟ್ನಗಳವರೆಗೆ ಈತನ ರಾಜ್ಯ ವಿಸ್ತರಿಸಿತ್ತೆಂಬುದು ಈ ಶಾಸನಗಳಿಂದ ಗೊತ್ತಾಗುತ್ತದೆ. 1143ರ ಅನಂತರ ಈತ ಪಾಲದೊರೆ ಮದನನನ್ನು ಸೋಲಿಸಿ ಮಾಂಘೀರ್‌ವರೆಗಿನ ಎಲ್ಲ ನೆಲವನ್ನೂ ಗೆದ್ದುಕೊಂಡ. ಆದರೆ 1158ರ ವೇಳೆಗೆ ಮಾಂಘೀರನ್ನು ಮತ್ತೆ ಅವನಿಗೆ ಒಪ್ಪಿಸಬೇಕಾಯಿತು. ಗೊಂಡಾ ಜಿಲ್ಲೆಯನ್ನು 1129ಕ್ಕೂ ಹಿಂದೆಯೇ ರಾಷ್ಟ್ರಕೂಟ

ಮದನಪಾಲನಿಂದಲೋ ಅವನ ಅನಂತರ ಬಂದ ದೊರೆಯಿಂದಲೋ ಗೆದ್ದುಕೊಂಡಿರಬೇಕೆಂದು ಊಹಿಸಲಾಗಿದೆ. ಗೌಡ, ವಂಗ, ಕಳಿಂಗ, ತೆಲಂಗ, ಮಹಾರಾಷ್ಟ್ರ, ಸೌರಾಷ್ಟ್ರ, ಚಂಪಾರಣ್ಯ, ನೇಪಾಲ, ಭೋಟ, ಚೀನ, ಲೊಹಾವರ (ಲಾಹೋರ್), ಓಡ್ರ, ಮಾಳವಗಳ ದೊರೆಗಳ ವಿರುದ್ಧ ಗೋವಿಂದಚಂದ್ರ ಸೆಣಸಾಡಿ ಗೆದ್ದನೆಂದು ಹೇಳಲಾಗಿದೆ. ಕಳಿಂಗ ಒರಿಸ್ಸಗಳ ದೊರೆಯಾಗಿದ್ದ ಅನಂತವರ್ಮನ್ ಚೋಡಗಂಗನ ಪಶ್ಚಿಮದ ಕಡೆಯ ವಿಸ್ತರಣವನ್ನು ಗೋವಿಂದಚಂದ್ರ ತಡೆಗಟ್ಟಿರಬೇಕು. ಮಿಥಿಲೆಯ ನಾನ್ಯದೇವ ಗೋವಿಂದಚಂದ್ರನ ನೆರೆರಾಜ್ಯದ ದೊರೆಯಾಗಿದ್ದ. ಈ ಇಬ್ಬರ ನಡುವೆ ಕದನ ಸಂಭವಿಸಿದ್ದಿರಬೇಕು. ಮಗಧದ ಮೇಲೆ ದಂಡೆತ್ತಿ ಹೋಗಿದ್ದ ಚಾಳುಕ್ಯದೊರೆ ಸೋಮೇಶ್ವರನೂ ಗೋವಿಂದಚಂದ್ರನೊಂದಿಗೆ ಕಾದಿದ ಸಂಭವವುಂಟು. ಅಂತೆಯೇ ಇತರ ಹಲವು ರಾಜರ ವಿರುದ್ಧ ಗೋವಿಂದಚಂದ್ರ ತನ್ನ ಶೌರ್ಯಪ್ರದರ್ಶನ ಮಾಡಿದನೆನ್ನಬಹುದು. ಆದರೆ ಈತ ನೇಪಾಲ, ಚೀನ, ಟಿಬೆಟ್‌ಗಳ ಮೇಲೆ ಆಕ್ರಮಣ ನಡೆಸಿದನೆನ್ನುವುದು ಉತ್ಪ್ರೇಕ್ಷೆಯೆಂದು ಭಾವಿಸಲಾಗಿದೆ. ಗೋವಿಂದಚಂದ್ರನಿಗೆ ಸಂಬಂಧಿಸಿದ ಚಿನ್ನ ಮತ್ತು ತಾಮ್ರದ ನಾಣ್ಯಗಳು ಸಿಕ್ಕಿವೆ. ಗೋವಿಂದಚಂದ್ರ ಅನೇಕ ಕಲೆಗಳನ್ನು ಬಲ್ಲವನಾಗಿದ್ದ. ಇವನಿಗೆ ಅನೇಕ ರಾಣಿಯರಿದ್ದರು. ಇವರ ಪೈಕಿ ಒಬ್ಬಳು ಕುಮಾರದೇವಿ. ಈಕೆ ಬೌದ್ಧೆ, ದೇವ ರಕ್ಷಿತನ ಮಗಳು. ಗೋವಿಂದಚಂದ್ರನಿಗೆ ಆಸ್ಫೋಟಕಚಂದ್ರ, ವಿಜಯಚಂದ್ರ, ರಾಜ್ಯಪಾಲ ಎಂಬ ಮೂವರು ಮಕ್ಕಳಿದ್ದರು. ಬಹುಶಃ ಗೋವಿಂದಚಂದ್ರನ ಅನಂತರ 1154ರಿಂದ ಈಚೆಗೆ, ವಿಜಯಚಂದ್ರ ದೊರೆಯಾಗಿದ್ದ. ವಿಜಯಚಂದ್ರ ಮುಸ್ಲಿಮರ ದಂಡಯಾತ್ರೆಯೊಂದನ್ನು ಹಿಮ್ಮೆಟ್ಟಿಸಿದ. ಇವನಿಂದ ಸೋತ ಮುಸ್ಲಿಂ ಆಕ್ರಮಣಕಾರ ಬಹುಶಃ ಖುಸ್ರಾವ್ ಖಾನ್ ಇರಬೇಕು.

ವಿಜಯಚಂದ್ರನ ಅನಂತರ ಸಿಂಹಾಸನವನ್ನೇರಿದವನು ಜಯಚಂದ್ರ(1170). ದೋಆಬ್, ಅಲಹಾಬಾದ್, ವಾರಾಣಸಿ, ಪಾಟ್ನ, ಗಯ–ಇವು ಈತನ ವಶದಲ್ಲಿದ್ದುವು. ಈತ ಪೂರ್ವದಲ್ಲಿ ಸೇನ ದೊರೆಯೊಂದಿಗೆ ಘರ್ಷಣೆ ನಡೆಸಿದನೆಂದು ಹೇಳಲಾಗಿದೆ. ಜಯಚಂದ್ರನ ಮಗಳು ಸಂಯುಕ್ತೆಯನ್ನು ಅಜ್ಮೀರದ ಚಾಹಮಾನ 3ನೆಯ ಪೃಥ್ವೀರಾಜ ಪ್ರೇಮಿಸಿ ಅಪಹರಿಸಿಕೊಂಡು ಹೋದನೆಂಬ ಕಥೆಯೊಂದುಂಟು. ಇದು ನಿಜವೆಂಬುದಕ್ಕೆ ಆಧಾರಗಳಿಲ್ಲ. ಜಯಚಂದ್ರ ಕವಿಗಳಿಗೆ ಆಶ್ರಯ ನೀಡಿದ. ನೈಷಧಚರಿತದ ಕರ್ತೃವಾದ ಶ್ರೀಹರ್ಷ ಈತನ ಆಸ್ಥಾನದಲ್ಲಿದ್ದನೆಂದು ಹೇಳಲಾಗಿದೆ. ಜಯಚಂದ್ರ ಎರಡು ದಶಕಗಳಿಗೂ ಹೆಚ್ಚು ಕಾಲ ಶಾಂತಿಯಿಂದ ರಾಜ್ಯವಾಳಿದ. ಆದರೆ ಈತನ ಆಡಳಿತದ ಕೊನೆಯಲ್ಲಿ ಮಹಾ ದುರಂತವೊಂದು ಸಂಭವಿಸಿತು. ಮುಯಿಜ಼್‌ಉದ್ದೀನ್ ಮಹಮ್ಮದ್ ಘೋರಿ ದೆಹಲಿ–ಅಜ್ಮೀರಗಳನ್ನು ಜಯಿಸಿ ದೊಡ್ಡ ಸೇನೆಯೊಂದಿಗೆ ಜಯಚಂದ್ರನ ರಾಜ್ಯದ ಮೇಲೆ ಏರಿಬಂದ (1193). ಜಯಚಂದ್ರ ತನ್ನೆಲ್ಲ ಸೇನಾಬಲದೊಡನೆ ಅವನನ್ನು ಚಂದವರದಲ್ಲಿ ಎದುರಿಸಿ ಹೋರಾಡಿದ. ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದ ಜಯಚಂದ್ರ ಸಾವಿಗೆ ಈಡಾದ. ಗಾಹಡ್ವಾಲ ಸೇನೆ ಸಂಪೂರ್ಣವಾಗಿ ಸೋತುಹೋಯಿತು. ವಿಜಯೀ ಮುಸ್ಲಿಂ ಸೇನೆ ವಾರಾಣಸಿಗೆ ನುಗ್ಗಿ ಅಲ್ಲಿದ್ದ ಸಂಪತ್ತನ್ನೆಲ್ಲ ಸೂರೆಮಾಡಿತು. ಮಹಮ್ಮದ್ ಘೋರಿ ಗೆದ್ದ ಪ್ರದೇಶದ ಆಡಳಿತವನ್ನು ತನ್ನ ಕಡೆಯ ಅಧಿಕಾರಿಯೊಬ್ಬನಿಗೆ ಒಪ್ಪಿಸಿ ಸೇನೆಯೊಂದಿಗೆ ಹಿಂದಿರುಗಿದ. ಆದರೆ ಆ ಪ್ರದೇಶದ ಮೇಲೆ ಬಹಳ ಕಾಲ ಮುಸ್ಲಿಮರು ಹತೋಟಿ ಹೊಂದಲಾಗಲಿಲ್ಲ. ಜಯಚಂದ್ರ ಮರಣ ಹೊಂದಿದಾಗ ಅವನ ಮಗ ಹರಿಶ್ಚಂದ್ರನಿಗೆ 18 ವರ್ಷ ವಯಸ್ಸಾಗಿತ್ತು. ಈತ ಮುಸ್ಲಿಮರಿಂದ ತನ್ನ ತಂದೆಯ ರಾಜ್ಯದ ಕೆಲವು ಭಾಗಗಳನ್ನು ಬಹುಶಃ ಬಿಡಿಸಿಕೊಂಡಿರಬೇಕು. ಇವನು ಕನೌಜ್, ಜೌನ್‌ಪುರ, ಮಿರ್ಜಾಪುರಗಳನ್ನಾಳುತ್ತಿದ್ದ. ಚಂದೇಲ ದೊರೆ ತ್ರೈಲೋಕ್ಯವರ್ಮನ್ ಹರಿಶ್ಚಂದ್ರನ ಮೇಲೆ ಯುದ್ಧಮಾಡಿ ಇವನನ್ನು ಸೋಲಿಸಿದನೆಂದು ತಿಳಿದುಬರುತ್ತದೆ.

ಹರಿಶ್ಚಂದ್ರನ ಅನಂತರ ರಾಜ್ಯವಾಳುತ್ತಿದ್ದ ಗಾಹದ್ವಾಲ ದೊರೆ ಅಡಕ್ಕಮಲ್ಲನೆಂದು ಹೇಳಲಾಗಿದೆ. ಕನೌಜನ್ನು ಅಂತಿಮವಾಗಿ ಇಲ್ತಮಿಷ್ ಗೆದ್ದುಕೊಂಡ (1226). ರಾಜ್ಯ ಕಳೆದುಕೊಂಡ ಅಡಕ್ಕಮಲ್ಲ ಮಧ್ಯಭಾರತದ ನಾಗೋಡ್ ಸಂಸ್ಥಾನದಲ್ಲಿ ನೆಲೆಸಿದನೆಂದು ತಿಳಿದುಬರುತ್ತದೆ. ಅಲ್ಲಿ ಅಡಕ್ಕಮಲ್ಲನ ಸಾಮಂತನೊಬ್ಬ ಆಳುತ್ತಿದ್ದ.

ಗಾಹಾದ್ವಾಲ ದೊರೆಗಳು ವಿಷ್ಣುಭಕ್ತರು. ಇವರ ಶಾಸನಗಳು ಲಕ್ಷ್ಮಿಯ ಸ್ತುತಿಯೊಂದಿಗೆ ಆರಂಭವಾಗುತ್ತವೆ. ಇವರು ಶಿವ ಇತ್ಯಾದಿ ದೇವತೆಗಳನ್ನೂ ಪೂಜಿಸುತ್ತಿದ್ದರು. ಇವರನ್ನು ಪರಮ ಮಹೇಶ್ವರರೆಂದೂ ಕರೆಯಲಾಗುತ್ತಿತ್ತು. ಗಾಹದ್ವಾಲ ದೊರೆಗಳು ಕಟ್ಟಿಸಿದ್ದ ಅನೇಕ ಮಂದಿರಗಳು ಮುಸ್ಲಿಮರ ಧಾಳಿಗೆ ತುತ್ತಾಗಿ ನಾಶವಾದವು. (ಎಚ್.ಎಂ.ಎನ್.ಆರ್.)

**ಗಿಡ್ಡಲೂರು:** ಆಂಧ್ರಪ್ರದೇಶ ರಾಜ್ಯದ ಕರ್ನೂಲ್ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಪ್ರಪ್ರಥಮ ಬಾರಿಗೆ ಕಮಿಯಡೆ ಶಿಲಾಯುಗ ಕಾಲದ ಉಪಕರಣಗಳನ್ನು ಸಂಗ್ರಹಿಸಿದ. ಇದನ್ನು ಬರ್ಕಿಟ್ ಪರೀಕ್ಷಿಸಿದ. ಈ ಉಪಕರಣಗಳನ್ನು ಗಿಡ್ಡಲೂರು ಮತ್ತು ಗುಂಡಲ–ಬ್ರಹ್ಮೇಶ್ವರಂ ಬೆಟ್ಟದ ಬಳಿ ಗುಂಡ್ಲಕಮ್ಮ ನದಿಯ ಗರಸು ಮಣ್ಣಿನ ಪದರದಲ್ಲಿ ಮತ್ತು ಯರ್ರಕೊಂಡಪಾಲೆಮ್ ಪ್ರದೇಶಗಳಿಂದ ಸಂಗ್ರಹಿಸಲಾಗಿತ್ತು. ಈ ಎರಡು ಪ್ರದೇಶಗಳು ನಲ್ಲಮಲೈ ಬೆಟ್ಟದ ಡೊರ್‌ನಾಲ–ಅತಮ್‌ಕುರ್‌ನ ಕಣಿವೆಯ ಆಚೆ–ಈಚೆ ಅಂಚಿನಲ್ಲಿವೆ. ಶಿಲಾಯುಗದ ನಾಲ್ಕು ಸಂಸ್ಕೃತಿಗಳನ್ನು ಬರ್ಕಿಟ್ ಗುರುತಿಸಿದ. ಇವು ಆದಿ ಹಳೆಶಿಲಾಯುಗದ ಕೈಗೊಡಲಿ ಹಂತದಿಂದ ಸೂಕ್ಷ್ಮಶಿಲಾಯುಗದ ಅಗೇಟ್ ಮತ್ತು ಬೆಣಚುಕಲ್ಲಿನ ಉಪಕರಣಗಳ ಸಂಸ್ಕೃತಿಯ ಹಂತದವರೆಗಿನವು. ಪದರ ವಿಶ್ಲೇಷಣೆಯಿಂದ ಇವುಗಳ ನಡುವಿನ ಹಂತಗಳನ್ನೂ ಗುರುತಿಸಲಾಗಿದೆ. ಈ ಹಂತಗಳು ಡಿಟೆರ್ರ ಮತ್ತು ಪ್ಯಾಟರ್‌ಸನ್ ಸೂಚಿಸಿರುವ ಹಿಮಯುಗದ ಹಿಮಘಟ್ಟಗಳು ಮತ್ತು ಇವುಗಳ ನಡುವಿನ ಘಟ್ಟಗಳಿಗೆ ಹೊಂದಿಕೆಯಾಗುತ್ತವೆ.

ಎಫ್.ಈ. ಜ಼ಾಯನರ್, ವಿ.ಡಿ. ಕೃಷ್ಣಸ್ವಾಮಿ ಮತ್ತು ಸೌಂದರರಾಜನ್ ಗಿಡ್ಡಲೂರು ಸುತ್ತಮುತ್ತಲ ನೆಲೆಗಳಲ್ಲಿ ಇನ್ನಷ್ಟು ಸಂಶೋಧನೆ ನಡೆಸಿದರು. ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಶಿಲೋಪಕರಣಗಳನ್ನು ಇವರು ಸಂಗ್ರಹಿಸಿದರು. ಭೂಮಿಯ ಮೇಲ್ಪದರದಲ್ಲಿ ಅಶೂಲಿಯನ್ ಮಾದರಿಯ ಒಂದು ಕೈಗೊಡಲಿ ಮತ್ತೊಂದು ಚೌಕೋನದ ಕಡಿಗತ್ತಿ ದೊರೆತವು. ಇಲ್ಲಿಯ ಅತ್ಯಂತ ಕೆಳಸ್ತರದ ಸಿಮೆಂಟಿನಂತಹ ಗರಸು ಮಣ್ಣಿನ ಪದರ, ಇದರ ಮೇಲೆ ಜೇಡಿಮಣ್ಣಿನ ಪದರ ಮತ್ತು ಇದರ ಮೇಲೆ ಸಡಿಲವಾದ ಬೆಣಚುಕಲ್ಲಿನಿಂದ ಕೂಡಿದ ಪದರವಿದ್ದು ಒಟ್ಟಾಗಿ 3.5 ಮೀ ನಷ್ಟಿದೆ. ಈ ರೀತಿ ಪದರಗಳು ಎಸ್.ಪಿ.ಜಿ. ಮೆಷಿನ್ ಬಂಗಲೋ, ಗಿಡ್ಡಲೂರು ರಸ್ತೆಯ 86 ಮತ್ತು 87 ನೆಯ ಮೈಲಿಗಲ್ಲು, ರೈಲ್ವೆ ಲೈನ್ ಮತ್ತು ಗಿಡ್ಡಲೂರು ರಸ್ತೆ ಹಾಗೂ ನದಿಯ ನಡುವಿನ ಪ್ರದೇಶಗಳಲ್ಲಿಯೂ ಕಂಡುಬರುತ್ತವೆ.

ಗಿಡ್ಡಲೂರು–1 ಮತ್ತು ಗಿಡ್ಡಲೂರು–2ರಲ್ಲಿ ಆದಿ ಲೆವಾಲ್ವ ಮಾದರಿಯ ಉಪಕರಣಗಳಿವೆ. ಗಿಡ್ಡಲೂರು–1ರಲ್ಲಿ ಮುಖ್ಯವಾಗಿ ಆದಿ ಹಳೆಶಿಲಾಯುಗದ ಎಲ್ಲ ಪ್ರಕಾರಗಳ ಉರುಟು ಕಲ್ಲಿನ ಉಪಕರಣಗಳಿಂದ ಹಿಡಿದು ಕ್ಲಾಕ್ಟೊನ್ ಮಾದರಿಯ ಹೆರೆಯುವ ಚಕ್ಕೆಗಳು, ಕೊಕ್ಕಿನಾಕೃತಿಗಳು, ಅಂಡಾಕೃತಿಯ ಉಪಕರಣಗಳು ದೊರಕಿದರೆ ಗಿಡ್ಡಲೂರು–2ರಲ್ಲಿ, ಗಿಡ್ಡಲೂರು–1ರಲ್ಲಿ ಸಿಕ್ಕಿರುವ ಉಪಕರಣ ಮಾದರಿಗಳು ಕಂಡುಬರದಿದ್ದರೂ ಸಮಾನಾಂತರ ಅಂಚಿನ ನೀಳಚಕ್ಕೆಗಳು, ಕೊರೆಯುಳಿಗಳು ಇತ್ಯಾದಿ ದೊರಕಿವೆ. ಗಿಡ್ಡಲೂರಿನಲ್ಲಿ ಸಂಗ್ರಹಿಸಿದ 240 ಉಪಕರಣಗಳನ್ನು ಪರೀಕ್ಷಿಸಲಾಗಿ ಬರ್ಕಿಟ್ ಹೇಳಿರುವಂತೆ ಇವು ಆಫ್ರಿಕ ದೇಶದ ಉಪಕರಣಗಳಿಗೆ ಹೋಲಿಕೆಯಾಗುತ್ತವೆ. ಆದರೆ ಆಫ್ರಿಕ ಮತ್ತು ಗಿಡ್ಡಲೂರುಗಳಿಗೆ ಯಾವುದೇ ರೀತಿಯ ನೇರವಾದ ಜನಾಂಗ–ಸಂಸ್ಕೃತಿಯ ಸಂಪರ್ಕವಿರಲಿಲ್ಲ. ಗಿಡ್ಡಲೂರಿನ ಮೊದಲ ಎರಡು ಸಂಸ್ಕೃತಿಗಳ ಉಪಕರಣಗಳನ್ನು ತಿಳಿಗಂದು ಬಣ್ಣದ ಬೆಣಚು ಕಲ್ಲಿನ ರೂಪಾಂತರದಿಂದಾದ ಶಿಲೆಯಿಂದ ತಯಾರಿಸಲಾಗಿದೆ.

ಗಿಡ್ಡಲೂರು–2ರ (ನರಸಿಂಹಕೊಂಡ) ಸೂಕ್ಷ್ಮಶಿಲಾಯುಗ ಉಪಕರಣಗಳನ್ನು ನಸುಹಸುರು ಬಣ್ಣದ ಬೆಣಚು ಕಲ್ಲು ರೂಪಾಂತರ ಶಿಲೆ, ನಾಳರಚನೆಯುಳ್ಳ ಬೆಣಚುಕಲ್ಲು, ಸ್ಫಟಿಕ, ಯಡಿನೈಟ್, ಅಗೇಟ್ ಮತ್ತು ಚಕಮಕಿ ಕಲ್ಲುಗಳಿಂದ ತಯಾರಿಸಲಾಗಿದೆ. ಹರಿತವಾದ ಇಬ್ಬದಿ ಅಲಗುಗಳು ಮತ್ತು ಸುತ್ತಲೂ ಹರಿತವಾಗಿರುವ ನೀಳಚಕ್ಕೆ, ಅರ್ಧಚಂದ್ರಾಕೃತಿ, ಹೆರೆಚಕ್ಕೆ, ಬೈರಿಗೆ, ಮೊನೆ, ಕೊರೆಯುಳಿ ಇತ್ಯಾದಿ ದೊರಕಿವೆ. ಇವೆಲ್ಲ ಸಾಮಾನ್ಯವಾಗಿ ಸೂಕ್ಷ್ಮಶಿಲಾಯುಗದ ಉಪಕರಣಗಳಾಗಿವೆ. (ಆರ್.ಎಸ್.ಎಸ್.)

**ಗಿಬ್ಬನ್, ಎಡ್ವರ್ಡ್:** 1737–94. ಆಂಗ್ಲ ಇತಿಹಾಸಕಾರ. ದಿ ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್ (ರೋಮ್ ಚಕ್ರಾಧಿಪತ್ಯದ ಅವನತಿ ಮತ್ತು ಪತನ) ಎಂಬ ಆರು ಸಂಪುಟಗಳ ಇತಿಹಾಸ ಗ್ರಂಥದ ಕರ್ತೃ. ಈತ ಜನಿಸಿದುದು ಸರ್ರೆ ಕೌಂಟಿಯ ಪುಟ್ನಿಯಲ್ಲಿ. ಇವನ ತಂದೆ ಎಡ್ವರ್ಡ್, ತಾಯಿ ಜೂಡಿತ್ ಪೋರ್ಟನ್. ಈತ 10 ವರ್ಷದವನಾಗಿದ್ದಾಗ ಆಕೆ ನಿಧನ ಹೊಂದಿದಳು (1747). ಇವನನ್ನು ಚಿಕ್ಕಮ್ಮ ಕ್ಯಾಥರೀನ್ ಪೋರ್ಟನ್ ಸಾಕಿ ವಿದ್ಯಾಭ್ಯಾಸಕ್ಕೆ ತೊಡಗಿಸಿದಳು. ಮುಂದೆ ತಾನು ಬುದ್ಧಿಜೀವಿಯಾಗಲು ಈಕೆಯ ಪ್ರೋತ್ಸಾಹವೇ ಕಾರಣವೆಂದು ತನ್ನ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾನೆ. ಈತ ತನ್ನ 14ನೆಯ ವಯಸ್ಸಿಗೆ ಕೆಲವು ವಿಷಯಗಳಲ್ಲಿ ಅಸಾಧಾರಣ ಪಾಂಡಿತ್ಯ ಸಂಪಾದಿಸಿಕೊಂಡಿದ್ದರೂ ಇತರ ವಿಷಯಗಳಲ್ಲಿ ಸಣ್ಣ ಶಾಲಾ ಬಾಲಕನೂ ನಾಚುವಂಥ ಅಜ್ಞಾನಿಯಾಗಿದ್ದನೆಂದು ಇವನೇ ಹೇಳಿಕೊಂಡಿದ್ದಾನೆ.

ಈತ 15ನೆಯ ವಯಸ್ಸಿನಲ್ಲಿ ಆಕ್ಸ್‌ಫರ್ಡಿನ ಮ್ಯಾಗ್ಡಲೀನ್ ಕಾಲೇಜು ಸೇರಿಸಿದ. ಆದರೆ ಅಲ್ಲಿ ಈತ ಇದ್ದದ್ದು ಕೇವಲ 14 ತಿಂಗಳು. ಆ ಸಮಯದಲ್ಲಿ ಈತ ಕ್ರೈಸ್ತಮತವನ್ನು ಕುರಿತು ಹೆಚ್ಚಿನ ಅಭ್ಯಾಸದಲ್ಲಿ ತೊಡಗಿದ್ದ; ಅದರ ಪರಿಣಾಮವೆಂಬಂತೆ 1753ರ ರೋಮನ್ ಕೆಥೊಲಿಕ್ ಚರ್ಚಿನ ಸದಸ್ಯನಾಗಿ ಜೂನ್ 8ರಂದು ಲಂಡನ್ ನಗರದ ಒಂದು ಚರ್ಚಿನಲ್ಲಿ ಪುರೋಹಿತನಾದ. ಆದರೆ ಇದು ಇವನ ತಂದೆಗೆ ಸರಿಬರಲಿಲ್ಲ. ಕುಪಿತನಾದ ತಂದೆ ಇವನನ್ನು ಲಾಸ್ಯಾನ್ ನಗರದಲ್ಲಿ ಕಾಲ್ವಿನ್ ಪಂಗಡಕ್ಕೆ ಸೇರಿದ ಪೆವಿಲಿಯಾನ ಬಳಿ ಬಿಟ್ಟ. ಇಲ್ಲಿ ಇವನು ಸುಮಾರು ಐದು ವರ್ಷಗಳನ್ನು ಕಳೆದ. ಆಗ ಇವನಿಗೆ ಲ್ಯಾಟಿನ್ ಮತ್ತು ಫ್ರೆಂಚ್ ಭಾಷೆ ಸಾಹಿತ್ಯಗಳಲ್ಲೂ ಗಣಿತ ತರ್ಕಶಾಸ್ತ್ರಗಳಲ್ಲೂ ಕ್ರಮಬದ್ಧವಾದ ಶಿಕ್ಷಣ ದೊರಕಿತು. ಪೆವಿಲಿಯಾನ ಪ್ರಭಾವದಿಂದ 1754ರಲ್ಲಿ ಇವನು ಕೆಥೊಲಿಕ್ ಪಂಗಡವನ್ನು ತ್ಯಜಿಸಿ ಪ್ರಾಟೆಸ್ಟಂಟ್ ಆಗಿ ಮತಾಂತರಗೊಂಡ. ಕ್ರಮೇಣ ಇವನು ಸಾಮಾಜಿಕ ಚಟುವಟಿಕೆ ಗಳಲ್ಲೆಲ್ಲ ಭಾಗವಹಿಸಲಾರಂಭಿಸಿದ. ಇವನ ಹಿರಿಯ ಸಮಕಾಲೀನನಾಗಿದ್ದ ವಾಲ್ಟೇರ್ ಏರ್ಪಡಿಸುತ್ತಿದ್ದ ಸತ್ಕಾರ ಸಮಾರಂಭಗಳಲ್ಲಿಯೂ ಲಾಸ್ಯಾನ್ ನಗರದ ಪ್ರತಿಷ್ಠಿತ ಸಮಾಜದಲ್ಲಿಯೂ ಈತ ಕಾಣಿಸಿಕೊಳ್ಳತೊಡಗಿದ. (ಎ.ಎಂ.)

ಪ್ರಾಪ್ತವಯಸ್ಕನಾದಾಗ ಇವನ ತಂದೆ ಈತನಿಗೆ ವಾರ್ಷಿಕವಾಗಿ 300 ಪೌಂಡುಗಳ ಆದಾಯ ಬರುವಂತೆ ವ್ಯವಸ್ಥೆ ಮಾಡಿದ (1758). ಇದು ಇವನಿಗೆ ಹೆಚ್ಚು ಸ್ವಾತಂತ್ರ್ಯ ದೊರಕಿಸಿಕೊಟ್ಟಿತು. ಸುಸೇನ್ ಚರ್ಚೋಡಳೊಂದಿಗೆ ಇವನ ಸ್ನೇಹ ಬೆಳೆಯಿತು. ಅವಳನ್ನು

ಮದುವೆಯಾಗಬೇಕೆಂಬುದು ಇವನ ಅಪೇಕ್ಷೆಯಾಗಿತ್ತು. ಆದರೆ ಈತನ ತಂದೆ ಇವರ ಮದುವೆಗೆ ಅನುಮತಿ ನೀಡಲಿಲ್ಲವಾದ ಕಾರಣ ಇವರ ಸಂಬಂಧ ಮುರಿಯಿತು. ಈ ಕಹಿ ಪ್ರಸಂಗದ ಫಲವಾಗಿ ಇವನು ಮುಂದೆ ಅವಿವಾಹಿತನಾಗಿಯೇ ಉಳಿಯುವಂತಾಯಿತು. ಇದನ್ನು ಮರೆಯಲೋಸುಗ ಮುಂದಿನ ಐದು ವರ್ಷಗಳ ಕಾಲ ಪುನಃ ಅಧ್ಯಯನದಲ್ಲಿ ನಿರತನಾದ. ಇವನ ಮೊದಲ ಪ್ರಬಂಧ 1761ರಲ್ಲಿ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಯಿತು. ಅನಂತರ ಇದನ್ನೇ ಇಂಗ್ಲಿಷ್ ಭಾಷೆಯಲ್ಲೂ ಪ್ರಕಟಿಸಿದ. ಅಷ್ಟರಲ್ಲಿ ಏಳು ವರ್ಷಗಳ ಯುದ್ಧ ಆರಂಭವಾಯಿತು (1757–64). ಈ ಕದನದಲ್ಲಿ ಇವನೂ ಪಾಲ್ಗೊಂಡು ಕ್ಯಾಪ್ಟನ್ ಆಗಿ ನಾಡಿಗೆ ಸೇವೆ ಸಲ್ಲಿಸಿದ (1760–62). ಸೇನೆಯಿಂದ ನಿವೃತ್ತಿ ಹೊಂದಿದ ಮೇಲೆ 1763ರ ಅನಂತರ ಪುನಃ ಲಾಸ್ಯಾನ್ ನಗರಕ್ಕೆ ಹಿಂದಿರುಗಿದಾಗ ಇವನಿಗೆ ಜಾನ್‌ಬೇಕರ್ ಹಾಲ್ರಾಯ್ (ಮುಂದೆ ಲಾರ್ಡ್ ಷೆಫೀಲ್ಡ್) ಎಂಬವನ ಸ್ನೇಹ ದೊರಕಿತು. ಆತನೇ ಇವನ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದ.

1764ರಲ್ಲಿ ಇಟಲಿಗೆ ಹೋಗಿ ಅಲ್ಲಿಯ ಪುರಾತನ ಅವಶೇಷಗಳನ್ನು ಕೂಲಂಕಷವಾಗಿ ಪರಿಶೀಲಿಸಿದ. ಅವನತಿಗೀಡಾದ ರೋಮ್ ಚಕ್ರಾಧಿಪತ್ಯದ ಇತಿಹಾಸ ಇವನು ಲ್ಯಾಟಿನ್ ಸಾಹಿತ್ಯದ ಪರಿಚಯ ಪಡೆದಾಗಲೇ ಮನಸೆಳೆದಿತ್ತು. ಮರುವರ್ಷವೇ ನೇಪಲ್ಸ್ ಮುಖಾಂತರ ಮನೆಗೆ ಹಿಂದಿರುಗಿದ. ಮುಂದಿನ ಐದು ವರ್ಷಗಳನ್ನು ವ್ಯರ್ಥವಾಗಿ ಕಳೆದ. ಫ್ರಾನ್ಸಿನಲ್ಲಿದ್ದಾಗ ಅಲ್ಲಿ ಇವನ ಮಿತ್ರರಲ್ಲೊಬ್ಬನಾದ ಜಾರ್ಜಿಸ್ ಡೇವೆರ್ಡನ್‌ನೊಡಗೂಡಿ ಮೆಮ್ವಾರ್ಸ್ ಲಿಟರೇರಿಸ್ ದ ಲಾ ಗ್ರಾಂಡ್ ಬ್ರೆಟಾನ್ ಎಂಬ ಗ್ರಂಥವನ್ನು ಬರೆದ (1768–69). 1770ರಲ್ಲಿ ಕ್ರಿಟಿಕಲ್ ಆಬ್ಸರ್ವೇಷನ್ಸ್ ಆನ್ ದಿ ಸಿಕ್ಸ್ತ್ ಬುಕ್ ಆಫ್ ದಿ ಏನೀಡನ್ನು ಪ್ರಕಟಿಸಿದ.

1770ರಲ್ಲಿ ಈತ ತಂದೆಯ ನಿಧನಾನಂತರ ಲಂಡನ್ ನಗರಕ್ಕೆ ಬಂದು ನೆಲಸಿದ. ನಗರ ಜೀವನದಲ್ಲಿ ಮೈಮರೆತು ವೈಭವೋಪೇತ ಕ್ಲಬ್‌ಗಳ ಸದಸ್ಯನಾದ. ಜಾನ್ಸನ್ ಕ್ಲಬ್ ಸದಸ್ಯನಾಗಿ ಚುನಾಯಿತನಾದ. ಸಾಹಿತಿ ಜಾನ್ಸನನ ಹಾಗೂ ಬಾಸ್ವೆಲನ ಟೀಕೆಗಳಿಗೆ ಗುರಿಯಾದ. ಇವನು 1774ರಲ್ಲಿ ಪಾರ್ಲಿಮೆಂಟಿನ ಸದಸ್ಯನಾದ. ಆ ವೇಳೆಗೆ ನಿಧಾನವಾಗಿ ತನ್ನ ಮುಖ್ಯಗ್ರಂಥವನ್ನು ಬರೆಯಲು ತೊಡಗಿದ. ಇವನ ಆ ಗ್ರಂಥದ ಮೊದಲ ಸಂಪುಟ 1776ರ ಫೆಬ್ರುವರಿ 16ರಂದು ಪ್ರಕಟವಾಯಿತು. ಇದು ಇವನಿಗೆ ಹೆಸರನ್ನೂ ಪ್ರಸಿದ್ಧಿಯನ್ನೂ ತಂದಿತು. ಈ ಗ್ರಂಥ ಅನೇಕರ ಶ್ಲಾಘನೆಗೂ ಕಟುಟೀಕೆಗೂ ಒಳಗಾಯಿತು. ಇದರ 15, 16ನೆಯ ಅಧ್ಯಾಯಗಳು ಕ್ರೈಸ್ತಧರ್ಮದ ಉಗಮವನ್ನು ಕುರಿತವು. ಇವನ ಗ್ರಂಥದ ಪ್ರಚಾರಕ್ಕೆ ಇದೂ ಒಂದು ಕಾರಣ.

ಲಾರ್ಡ್ ನಾರ್ತ್ ಇಂಗ್ಲೆಂಡಿನ ಪ್ರಧಾನಿಯಾದಾಗ 1779 ಇವನಿಗೆ ಲಾಭದಾಯಕವಾದ ಹುದ್ದೆ ದೊರಕಿತು. ಅನ್ ಮೆಮ್ವಾರ್ ಜಸ್ಟಿಫಿಕೇಟಿವ್ ಎಂಬ ಶೀರ್ಷಿಕೆಯಲ್ಲಿ ಒಂದು ರಾಜ್ಯಪತ್ರವನ್ನು ಹೊರಡಿಸಿ ಬ್ರಿಟಿಷ್ ಸರ್ಕಾರದ ಅಮೆರಿಕ ನೀತಿಯನ್ನು ಸಮರ್ಥಿಸಿದ. 1782ರಲ್ಲಿ ನಾರ್ತ್‌ನ ಸರ್ಕಾರ ಬಿದ್ದಾಗ ಈತನೂ ತನ್ನ ಹುದ್ದೆ ಕಳೆದುಕೊಂಡ. ಅನಂತರ ಈತ ಲಾಸ್ಯಾನ್ ನಗರಕ್ಕೆ ಹಿಂತಿರುಗಿ ಇವನ ಇತಿಹಾಸದ 2, 3ನೆಯ ಸಂಪುಟಗಳು 1781ರಲ್ಲೂ 4, 5 ಮತ್ತು 6ನೆಯ ಸಂಪುಟಗಳು 1787ರಲ್ಲೂ ಬಂದುವು. ಕೊನೆಯ 6ನೆಯ ಸಂಪುಟ ಪ್ರಕಟವಾದ್ದು ಇವನ 51ನೆಯ ಹುಟ್ಟುಹಬ್ಬದಂದು. ಇವನ ಆಪ್ತಮಿತ್ರ ಜಾರ್ಜಿಸ್ 1789ರಲ್ಲಿ ನಿಧನನಾದ. ಅವನ ಅಗಲಿಕೆ ಇವನಿಗೆ ತೀವ್ರ ಆಘಾತವಾಯಿತು. ಈ ಘಟನೆಯಿಂದ ಇವನು ಅನಾರೋಗ್ಯಕ್ಕೀಡಾಗಿ 1794 ಜನವರಿ 16ರಂದು ನಿಧನನಾದ.

ರೋಮ್ ಚಕ್ರಾಧಿಪತ್ಯದ ಅವನತಿ ಕುರಿತು ಬರೆದ ಗ್ರಂಥ ಇಂದಿಗೂ ಮೇರು ಕೃತಿಯಾಗಿದೆ. ಇತಿಹಾಸಕ್ಕೆ–ಅದರ ನಿರೂಪಣೆಗೆ–ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ಇತಿಹಾಸಕಾರರ ಮುಂದೆ ಇಡುವುದರ ಮೂಲಕ ಇವನು ಇತಿಹಾಸದ ಅಧ್ಯಯನಕ್ಕೆ ವಿಶಿಷ್ಟವಾದ ಕಾಣಿಕೆ ನೀಡಿದ್ದಾನೆ. ಇತಿಹಾಸಕ್ಕೆ ಇವನು ನೀಡುವ ಅರ್ಥ ನಿಷ್ಠುರವಾದ್ದು. ಮಾನವ ಎಸಗಿದ ಘೋರ ಅನ್ಯಾಯಗಳ, ಪಾತಕಗಳ ದುರದೃಷ್ಟದ ವರದಿಯೇ ಇತಿಹಾಸ ಎಂದಿದ್ದಾನೆ.

ಅನೇಕ ಪರಿಮಿತಿಗಳಿದ್ದರೂ ಇವನ ಬರೆವಣಿಗೆಯ ಶೈಲಿ ಉತ್ತಮವಾದುದು. ಇವನು ಕೆಲವು ಘಟನೆಗಳನ್ನು ಕುರಿತು ಮಾಡಿರುವ ಅನೇಕ ನಿರ್ಣಯಗಳು ಇತ್ತೀಚಿನ ಶೋಧನೆಗಳಿಂದ ಖಚಿತಗೊಂಡಿವೆ. ತನ್ನ ಗ್ರಂಥವನ್ನು ಬರ್ಬರತೆ ಹಾಗೂ ಮತದ ವಿಜಯೋತ್ಸವದ ದಾಖಲೆ ಎಂದು ಹೇಳಿಕೊಂಡಿದ್ದಾನೆ. ಪ್ರ. ಶ. ಎರಡನೆಯ ಶತಮಾನದಿಂದ ಆರಂಭವಾಗುವ ರೋಂ ಚಕ್ರಾಧಿಪತ್ಯದ ಇತಿಹಾಸದ ಮೊದಲನೆಯ ಅರ್ಧ 480ರ ವರೆಗಿನ ಘಟನೆಗಳಿಗೆ ಮೀಸಲಾಗಿದೆ. ಉಳಿದರ್ಧದಲ್ಲಿ 1453ರಲ್ಲಿ ಸಂಭವಿಸಿದ ಕಾನ್‌ಸ್ಟಾಂಟಿನೋಪಲ್ ಪತನದವರೆಗಿನ ಕಥೆ ಇದೆ. ಉತ್ತಮ ನಾಗರಿಕ ಸಂಸ್ಕೃತಿಯನ್ನು ಹೊಂದಿದ್ದ ರೋಮ್‌ನ ನೈತಿಕ ಪತನವೇ ಆ ಚಕ್ರಾಧಿಪತ್ಯದ ಅಳಿವಿಗೆ ಮೂಲ ಕಾರಣ ಎಂದು ಹೇಳಿದ್ದಾನೆ. ಆಂಟೊನೈನ್ ಯುಗ ರೋಮ್ ಇತಿಹಾಸದ ಸುವರ್ಣಯುಗ. ಅನಂತರ ಕಾಣುವುದು ಅದರ ಪತನ ಎಂಬುದು ಇವನ ವಾದದ ರೀತಿ. ಇವನ ಆತ್ಮಕಥೆ ಈತನ ನಿಧನಾನಂತರ ಪ್ರಕಟವಾಯಿತು. (ಬಿ.ಆರ್.ಜಿ.)

**ಗುಡ್ನಾಪುರ:** ಉತ್ತರಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನಲ್ಲಿ ಬನವಾಸಿಯ ವಾಯವ್ಯಕ್ಕೆ ಸು. 5 ಕಿಮೀ ದೂರದಲ್ಲಿರುವ ಗ್ರಾಮ. ಕದಂಬರ ಕಾಲದಲ್ಲಿ ಇದು ಬನವಾಸಿ ರಾಜಧಾನಿಯ ಭಾಗವಾಗಿದ್ದಂತೆ ತೋರುತ್ತದೆ. ಇಲ್ಲಿಯ ವೀರಭದ್ರ ದೇವಾಲಯದ ಬಳಿ ಸು. 6 ಮೀ ಎತ್ತರದ ಭಗ್ನವಾದ ಒಂದು ಶಾಸನ ಕಂಬವಿದೆ. ಕಂಬದ ಮೇಲ್ಭಾಗ ಒಡೆದು ಹೋಗಿರುವುದರಿಂದ ಇಡೀ ಕಂಬದ ಉದ್ದ ಎಷ್ಟಿತ್ತೆಂದು ಹೇಳಲಾಗದು. ಕಂಬದ ನಾಲ್ಕೂ ಮುಖಗಳಲ್ಲಿ ಶಾಸನವೊಂದನ್ನು ಕೆತ್ತಿದೆ. ಇದು ಕದಂಬ ರವಿವರ್ಮನ (ಸು.485–519) ಶಾಸನ. ಇದರಿಂದ ಕದಂಬ ಮಯೂರಶರ್ಮನ ತಂದೆ ಬಂಧುಷೇಣ, ತಾತ ವೀರಶರ್ಮ ಎಂಬ ಹೊಸ ವಿಷಯಗಳು ತಿಳಿದುಬಂದಿವೆ. ಶಾಸನದಲ್ಲಿ ರವಿವರ್ಮ ಮನ್ಮಥನಿಗಾಗಿ ಆಲಯವೊಂದನ್ನು ಕಟ್ಟಿಸಿದನೆಂದು ಹೇಳಿದೆ. ಜಿನಾಲಯವೆಂದು ಓದಿದಲ್ಲಿ ಆಲಯ ಬಾಹುಬಲಿಯದೆಂದು, ಬಾಹುಬಲಿಯ ಕಲ್ಪನೆ ಮತ್ತು ಒಂದು ದೇವಾಲಯ 6ನೆಯ ಶತಮಾನದಲ್ಲಿಯೇ ಇತ್ತು ಎಂದು ಧೃಢವಾಗುತ್ತದೆ. ಪ್ರಸ್ತುತ ಶಾಸನದಲ್ಲಿ ಗುಡ್ನಾಪುರವನ್ನು ಗುಡ್ಡತಟಾಕ ಎಂದು ಕರೆಯಲಾಗಿದೆ. ಈಗಲೂ ಗುಡ್ನಾಪುರಕ್ಕೆ ಹೊಂದಿದಂತೆ ಆ ಭಾಗದಲ್ಲಿಯ ವಿಸ್ತಾರವಾದ ದೊಡ್ಡಕೆರೆಯನ್ನು ಶಾಸನೋಲ್ಲೇಖಿತ ಗುಡ್ಡ ತಟಾಕವೆಂದು ಗುರುತಿಸಬಹುದು.



ಕದಂಬ ರವಿವರ್ಮನ ಕಾಲದ ಅರಮನೆ ಸಂಕೀರ್ಣದ ನಕ್ಷೆ

ಈ ಶಾಸನದಲ್ಲಿ ಗಮನಾರ್ಹವಾದ ಅನೇಕ ಸಂಗತಿಗಳನ್ನು ಪ್ರಸ್ತಾಪಿಸಿದೆ. ಶಾಸನ ಹತ್ತಿರದಲ್ಲಿ ಅರಸರ ಅರಮನೆಯಿದ್ದು ಅದರ ಬದಿಯಲ್ಲಿ ನಾಟ್ಯಶಾಲೆಯಿರುವ ವಿಷಯ, ಕಲ್ಲಿಲ್ಲಿ ಎಂಬ ಗ್ರಾಮದಲ್ಲಿ ಪದ್ಮಾವತಿ ಚೈತ್ಯಾಲಯವಿರುವ ವಿಷಯ, ಪದ್ಮಾವತಿ ಪಾರ್ಶ್ವನಾಥ ತೀರ್ಥಂಕರ ಯಕ್ಷಿ ವಿಷಯ (ಇದುವರೆಗೆ ತಿಳಿದಮಟ್ಟಿಗೆ ಈ ಪದ್ಮಾವತಿ ಯಕ್ಷಿಯ ಪ್ರತ್ಯೇಕ ಚೈತ್ಯಾಲಯ ಅತ್ಯಂತ ಪ್ರಾಚೀನವಾದದ್ದು ಇದೊಂದೆ) ದಾಖಲಾಗಿದೆ. ಈ ಶಾಸನದಲ್ಲಿ 1–10ರವರೆಗಿನ ಸಂಖ್ಯೆಗಳು ಉಲ್ಲೇಖಗೊಂಡಿವೆ. (ಬಿ.ಆರ್.ಜಿ.)

ಈ ನೆಲೆಯ ಅಂಚಿನಲ್ಲಿದ್ದ ಒಂದು ಬಂಡೆಯ ಮೇಲೆ ಕುತೂಹಲಕರವಾದ ರೇಖಾಚಿತ್ರಗಳಿವೆ. ಅವು ವಜ್ರ, ನಾಲ್ಕು ಸಮಬಾಹು ಚತುರ್ಭುಜವುಳ್ಳ ಒಂದು ಆಯಾತಾಕೃತಿ, ಕೊನೆಯಿಲ್ಲದ ನಾಲ್ಕು ಗಂಟನಾಕೃತಿ, ಅಕ್ಕಪಕ್ಕದಲ್ಲಿ ಚಕ್ರಗಳು. ನಾಲ್ಕು ಗಂಟನಾಕೃತಿ ಚಿತ್ರ ಮೊಹೆಂಜೋದಾರೊದಲ್ಲಿಯ ಹರಪ್ಪ ನಾಗರಿಕತೆಯ ಎರಡು ತಾಮ್ರದ ಬಿಲ್ಲೆಗಳ ಮೇಲೂ ಇದೆ. ಪ್ರಾಯಶಃ ಶ್ರೀವತ್ಸ ಚಿಹ್ನೆ ಸೂಕ್ಷ್ಮ ಸಂಕೇತವೆಂದು ಕಾಣುತ್ತದೆ.

ಉತ್ಖನನ: ಅಂತಃಪುರದ ಸಹಿತ ಅರಮನೆ, ನಾಟ್ಯಶಾಲೆ, ಮನ್ಮಥ ದೇವಾಲಯ/ಜಿನಾಲಯ ಮುಂತಾದವುಗಳ ಶಾಸನದ ಉಲ್ಲೇಖಗಳನ್ನು ಗಮನಿಸಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವಿಭಾಗ ಶಾಸನವಿದ್ದ ನೆಲೆಯಲ್ಲಿ 1994–96ರಲ್ಲಿ ಉತ್ಖನನ ನಡೆಸಿತು. ಸ್ವಾರಸ್ಯವೆಂದರೆ ಶಾಸನದಲ್ಲಿ ಉಲ್ಲೇಖಗೊಂಡಿರುವಂತೆ ವ್ಯವಸ್ಥಿತವಾಗಿ ಇಟ್ಟಿಗೆಯಿಂದ ನಿರ್ಮಿಸಿದ ಪ್ರದಕ್ಷಿಣಾಪಥ, ಸಭಾಮಂಟಪ ಮತ್ತು ಗರ್ಭಗೃಹವುಳ್ಳ ಮನ್ಮಥ ಆಲಯ, ಅರಮನೆ ಮತ್ತು ನಾಟ್ಯಶಾಲೆ ಮುಂತಾದ ಅಪರೂಪದ ವಾಸ್ತುಶಿಲ್ಪ ವಿಶೇಷಗಳು ಹಾಗೂ ಇತಿಹಾಸ ಕಾಲದ ಲೌಕಿಕ ಕಟ್ಟಡಗಳಿದ್ದುದ್ದು.

ಇಲ್ಲಿ ಕೆಲವು ಅಪೂರ್ವ ವಿಗ್ರಹಗಳು ದೊರೆತಿವೆ. ಕೆರೆಯ ಸಮೀಪದಲ್ಲಿ ಕೆಸರಿನಲ್ಲಿ ಹುದುಗಿಹೋಗಿದ್ದ ಸು. 12ನೆಯ ಶತಮಾನದ ಒಂದು ಜಿನವಿಗ್ರಹ ಮತ್ತು ಪ್ರಾಯಶಃ ಕುಳಿತ ಭಂಗಿಯಲ್ಲಿಯ ಯಕ್ಷ–ಯಕ್ಷಿಯರ ಚೆಲುವಾದ ಶಿಲಾಮೂರ್ತಿಗಳಿವೆ. ಜಿನಮೂರ್ತಿ ಸಿದ್ಧಾಸನದಲ್ಲಿದೆ. ಆದರೆ ಅದರ ಶಿರ ಮತ್ತು ಬಾಹುಗಳು ಒಡೆದು ಹೋಗಿವೆ. ಯಕ್ಷ ವಿಗ್ರಹ ಕುಸುರಿನ ಕೆತ್ತನೆಯುಳ್ಳ ಕಿರೀಟ ಹಾಗೂ ಹಾರಗಳನ್ನು ಧರಿಸಿದೆ. ಇದರಂತೆಯೇ ಯಕ್ಷಿ ವಿಗ್ರಹವೂ ಇವಲ್ಲದೆ ಊರೊಳಗೆ ಸು. 2ನೆಯ ಶತಮಾನದ ಕುಬ್ಜ ಯಕ್ಷ ಶಿಲಾಮೂರ್ತಿಯಿದೆ. ಕುಬ್ಜವಿಗ್ರಹ ಸ್ಥೂಲವಾದ ದುಂಡುಶರೀರದ ಪುರುಷನದು. ಉಬ್ಬಿದ ಹೊಟ್ಟೆ, ಕುತ್ತಿಗೆ ಕಾಣಿಸದೆ ದೇಹಕ್ಕೆ ಅಂಟಿದಂತಿರುವ ಶಿರ, ಹೊಟ್ಟೆ ಮೊಣಕಾಲವರೆಗೂ ಜೋತು ಬಿದ್ದಂತಿದ್ದು, ಕಾಲುಗಳು ಪ್ರತ್ಯೇಕವಾಗಿ ಕಾಣಿಸದಿರುವುದು, ಮೇಲಕ್ಕೆತ್ತಿ ಕಟ್ಟಿದ ಗುಂಗುರುಕೂದಲು, ಕಚ್ಚೆ ಹಾಕಿ ಧೋತರ ಉಟ್ಟು ಹಲವು ಎಳೆಗಳ ಹಾರದಿಂದ ಅಲಂಕೃತವಾಗಿದೆ. ಈ ವಿಗ್ರಹಗಳು ಕಲ್ಯಾಣ ಚಾಳುಕ್ಯ ಕಾಲದ ಶಿಲ್ಪಗಳನ್ನು ಹೋಲುತ್ತವೆ. ಇದೇ ಗ್ರಾಮದಲ್ಲಿ

ಒಂದೇ ಕಲ್ಲಿನಲ್ಲಿ ಕೆತ್ತಿದ ರತಿಮನ್ಮಥರ ವಿಗ್ರಹ ವೀರಭದ್ರ ದೇವಾಲಯದಲ್ಲಿ ದೊರೆತಿದ್ದು, ಮನ್ಮಥನ ಕೈಯಲ್ಲಿ ಕಬ್ಬಿನ ಜಲ್ಲೆ, ರತಿಯ ಕೈಯಲ್ಲಿ ಕಮಲದ ದಂಟು ಕಾಣಿಸುತ್ತದೆ. ಇದು ಸು. 11–12ನೆಯ ಶತಮಾನದ ವಿಗ್ರಹ. (ಎಸ್.ಜಿ.ಎಸ್.)

**ಗುತ್ತರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಗುಪ್ತ, ಪರಮೇಶ್ವರಿಲಾಲ್:** 1914–2001. ಭಾರತದ ಹೆಸರಾಂತ ನಾಣ್ಯಶಾಸ್ತ್ರ ತಜ್ಞರು. ಭಾರತೀಯ ನಾಣ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ಸಂಸ್ಥಾಪಕರು. ಉತ್ತರ ಪ್ರದೇಶದ ಆಜ಼ಮ್‍ಗಡ್‍ನಲ್ಲಿ ಜನಿಸಿದರು. 8ನೆಯ ತರಗತಿಯಲ್ಲಿದ್ದಾಗ ಜವಹರಲಾಲ್ ನೆಹರು ಬಂಧಿತರಾದಾಗ ಶಾಲೆಯನ್ನು ಬಹಿಷ್ಕರಿಸಿದರು. ಶಾಲೆ ಇವರಿಗೆ ದಂಡವನ್ನು ವಿಧಿಸಿತು. ಆದರೆ ಇವರು ದಂಡವನ್ನು ಕೊಡಲು ನಿರಾಕರಿಸಿದಾಗ ಇವರನ್ನು ಶಾಲೆಯಿಂದ ಹೊರಹಾಕಲಾಯಿತು. ಅನಂತರ ಇವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿ ಕಾನೂನು ಭಂಗ ಚಳವಳಿಯ ನೇತೃತ್ವ ವಹಿಸಿದರು. ಇದರ ಪರಿಣಾಮವಾಗಿ ತಮ್ಮ ಪ್ರದೇಶದಲ್ಲಿ ಆಜ಼ಮ್‍ಗಟ್–ಕ–ನೆಹರು ಎಂದು ಪ್ರಸಿದ್ಧರಾದರು. ಸ್ವಾತಂತ್ರ್ಯ ಬಂದ ಅನಂತರ ರಾಜಕೀಯ ದಿಂದ ದೂರಸರಿದು ಶಾಸ್ತ್ರೀಯ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1948ರಿಂದ (18 ವರ್ಷಗಳ ಅನಂತರ) ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು. ಬಾಹ್ಯವಿದ್ಯಾರ್ಥಿಯಾಗಿ ಪದವಿ ಹಾಗೂ ಎಂ.ಎ. ಪದವಿಯನ್ನು ಮೊದಲ ಶ್ರೇಣಿ ಯಲ್ಲಿ ಪಡೆದರು. ಪಂಚ್ ಮಾರ್ಕ್ಡ್ ಕಾಯಿನ್ಸ್ ಇನ್ ಏನ್ಷೆಂಟ್ ಇಂಡಿಯ– ಇವರ ಪಿಎಚ್.ಡಿ. ಪ್ರಬಂಧ. ಈ ಸಂಶೋಧನೆ ಇವರಿಗೆ ಒಳ್ಳೆಯ ಹೆಸರನ್ನು ತಂದಿತು. 1953ರಲ್ಲಿ ಬೊಂಬಾಯಿನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿ ಶಾಸನತಜ್ಞರಾಗಿ ನೇಮಕಗೊಂಡರು. 1962ರ ತನಕ ಅಲ್ಲಿ ಕೆಲಸ ಮಾಡಿದರು. 6 ತಿಂಗಳು ಬ್ರಿಟಿಷ್ ಮ್ಯೂಸಿಯಂನಲ್ಲಿ ಕೆಲಸ ಮಾಡಿದರು. 1963ರಲ್ಲಿ ಪಾಟ್ನ ವಸ್ತುಸಂಗ್ರಹಾಲಯದ ನಿರ್ದೇಶಕರಾದರು. 1972ರಲ್ಲಿ ನಿವೃತ್ತಿ ಹೊಂದಿದರು. ಇವರ ಪ್ರಶಂಸನೀಯ ಕಾರ್ಯವೆಂದರೆ ನಾಸಿಕದಲ್ಲಿಯ ಅಂಜನೇರಿ ಬಳಿ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ರಿಸರ್ಚ್ ಇನ್ ನ್ಯೂಮಿಸ್‍ಮ್ಯಾಟಿಕ್ ಸ್ಟಡೀಸ್ ಸಂಸ್ಥೆಯನ್ನು ತನ್ನ ಶಿಷ್ಯ ಕೆ.ಕೆ.ಮಹೇಶ್ವರಿಯವರನ್ನು ಪ್ರೇರೇಪಿಸಿ ಸ್ಥಾಪನೆ ಮಾಡಿದ್ದು. ಇದಕ್ಕೆ ತಮ್ಮ ಗ್ರಂಥ ಭಂಡಾರವನ್ನು ದಾನ ಮಾಡಿದರು. ಶಿಷ್ಯನ ಕೋರಿಕೆಯ ಮೇರೆಗೆ ಈ ಸಂಸ್ಥೆಯ ಮುಖ್ಯಸ್ಥರಾದರು. ಅನಾರೋಗ್ಯದಿಂದ 1989ರಲ್ಲಿ ಈ ಜವಾಬ್ದಾರಿಯಿಂದ ಬಿಡುಗಡೆ ಹೊಂದಿದರು. 2001 ಜುಲೈ 27ರಂದು ನಿಧನರಾದರು.



ಇವರು ನಾಣ್ಯಗಳನ್ನು ಕುರಿತು ಸು. 250ಕ್ಕೂ ಹೆಚ್ಚು ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. ರಾಷ್ಟ್ರೀಯ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಕಾಯಿನ್ಸ್ ಇವರ ಒಂದು ಮುಖ್ಯ ಕೃತಿ. ಇವರಿಗೆ ಯು.ಕೆ.ಯ ದಿ ರಾಯಲ್ ನ್ಯೂಮಿಸ್‍ಮ್ಯಾಟಿಕ್ ಸೊಸೈಟಿಯ ಲೋಟ್ಕ ಪಾರಿತೋಷಕ (1969), ಅಮೆರಿಕದ ನ್ಯೂಮಿಸ್‍ಮ್ಯಾಟಿಕ್ ಸೊಸೈಟಿಯ ಹಂಟಿಂಗ್‍ಟನ್ ಪ್ರಶಸ್ತಿ, ಭಾರತದ ನ್ಯೂಮಿಸ್‍ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯದ ಚಕ್ರವಿಕ್ರಮ ಪದಕ (1954), ಏಷ್ಯಾಟಿಕ್ ಸೊಸೈಟಿ ಆಫ್ ಕಲ್ಕತ್ತ ಸಂಸ್ಥೆಯ ಜದುನಾಥ್ ಸರ್ಕಾರ್ ಪದಕ ಮೊದಲಾದ ಪ್ರತಿಷ್ಠಿತ ಪ್ರಶಸ್ತಿ ಪದಕಗಳು ಲಭಿಸಿವೆ. 1969–86ರ ವರೆಗೆ ಹಲವಾರು ಪ್ರತಿಷ್ಠಿತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಇವರಿಗೆ ವಿಶಿಷ್ಟ ಪದಕಗಳನ್ನು ನೀಡಿ, ತಮ್ಮ ತಮ್ಮ ಸಂಸ್ಥೆಗಳ ಗೌರವ ಸದಸ್ಯರನ್ನಾಗಿ ಮಾಡಿಕೊಂಡವು. (ಎ.ಎಸ್.)

**ಗುಪ್ತ ವಂಶ:** ಪ್ರ.ಶ.4–6ನೆಯ ಶತಮಾನಗಳಲ್ಲಿ ಉತ್ತರ ಭಾರತದಲ್ಲಿ ಆಳುತ್ತಿದ್ದ ಒಂದು ಪ್ರಮುಖ ರಾಜವಂಶ. ಗುಪ್ತರ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳೂ ನಾಣ್ಯಗಳೂ ಸಾಹಿತ್ಯಕ ಆಧಾರಗಳೂ ದೊರೆಯುವುದರಿಂದ ಇವರ ಕಾಲದ ಇತಿಹಾಸವನ್ನು ಕುರಿತ ಅನೇಕ ವಿವರಗಳು ತಿಳಿದುಬಂದಿವೆ. ಗುಪ್ತರ ಕಾಲವನ್ನು ಭಾರತ ಇತಿಹಾಸದ ಸುವರ್ಣಯುಗವೆಂದು ವರ್ಣಿಸಲಾಗಿದೆ.

ಗುಪ್ತವಂಶಕ್ಕೆ ಸೇರಿದ 1ನೆಯ ಚಂದ್ರಗುಪ್ತನಿಗೂ (320–35) ಹಿಂದಿನ ಅರಸರ ವಿಷಯ ಹೆಚ್ಚಿಗೆ ತಿಳಿದಿಲ್ಲ. ಶುಂಗ ಮತ್ತು ಸಾತವಾಹನರ ಕಾಲಕ್ಕೆ ಸಂಬಂಧಿಸಿದಂತೆ ಗುಪ್ತ ಎಂದು ಕೊನೆಗೊಳ್ಳುತ್ತಿದ್ದ ಹಲವು ಅಧಿಕಾರಿಗಳ ಹೆಸರುಗಳು ಲಭ್ಯವಾಗಿವೆ. ಆದರೆ ಇವು ಗುಪ್ತ ಎಂಬ ವಂಶವನ್ನು ಸೂಚಿಸುತ್ತವೆ ಎಂದು ಹೇಳಲಾಗದು. ಒಂದನೆಯ ಚಂದ್ರಗುಪ್ತನ ತಾತ ಮಹಾರಾಜ ಶ್ರೀಗುಪ್ತ, ತಂದೆ ಮಹಾರಾಜ ಘಟೋತ್ಕಚ, ಇವರಿಗೆ ಕೇವಲ ಮಹಾರಾಜ ಎಂಬ ಬಿರುದಿತ್ತು. ಆದರೆ ಶಾಸನಗಳಲ್ಲಿ ಘಟೋತ್ಕಚನ ಮಗನನ್ನು ಮಹಾರಾಜಾಧಿರಾಜ ಚಂದ್ರಗುಪ್ತನೆಂದು ವರ್ಣಿಸಲಾಗಿದೆ. ಚಂದ್ರಗುಪ್ತ ತನ್ನ ಪೂರ್ವಿಕರಿಗಿಂತ ಹೆಚ್ಚಿನ ಪ್ರಾಬಲ್ಯವನ್ನು ಹೊಂದಿದ್ದನೆಂಬುದನ್ನು ಬಹುಶಃ ಇದು ಸೂಚಿಸುತ್ತದೆ. ಮಗಧದೇಶದ ಮೃಗಶಿಖಾವನದಲ್ಲಿ ಮಹಾರಾಜ ಚೆಲಿಕಿ ತೋ ಎಂಬವನು ಯಾತ್ರಿಕರಿಗಾಗಿ ದೇವಾಲಯ ವೊಂದನ್ನು ಕಟ್ಟಿಸಿದನೆಂದು ಚೀನ ದೇಶದ ಯಾತ್ರಿಕನಾದ ಇತ್ಸಿಂಗ್ ಹೇಳಿದ್ದಾನೆ. ಇವನು ಗುಪ್ತವಂಶದ ಮಹಾರಾಜ ಶ್ರೀಗುಪ್ತ ಎಂದು ಊಹಿಸಲಾಗಿದೆ. ಶ್ರೀಗುಪ್ತನೂ ಆತನ ಮಗನಾದ ಘಟೋತ್ಕಚನೂ ಬಂಗಾಲದ ಕೆಲವು ಭಾಗಗಳಲ್ಲಿ ಆಳುತ್ತಿದ್ದಿರಬೇಕು.

ಗುಪ್ತವಂಶ ಪ್ರಾಮುಖ್ಯತೆಗೆ ಬಂದದ್ದು ಘಟೋತ್ಕಚನ ಮಗನಾದ 1ನೆಯ ಚಂದ್ರಗುಪ್ತನ ಕಾಲದಲ್ಲಿಯೇ. ಶಾಸನಗಳಲ್ಲಿ ಇವನಿಗೆ ಮಹಾರಾಜಾಧಿರಾಜನೆಂಬ ಬಿರುದಿದ್ದದ್ದು ಕಂಡು ಬರುತ್ತದೆ. ಅಲ್ಲದೆ ಇವನು ಅಚ್ಚುಹಾಕಿಸಿದ ಚಿನ್ನದ ನಾಣ್ಯಗಳೂ ದೊರೆತಿವೆ. ಇವನು ಲಿಚ್ಛವಿ ವಂಶಕ್ಕೆ ಸೇರಿದ ಕುಮಾರದೇವಿಯನ್ನು ಮದುವೆಯಾಗಿದ್ದ. ಆ ವೇಳೆಗೆ ಬಿಹಾರ ಪ್ರಾಂತ್ಯದ ಉತ್ತರ ಭಾಗದಲ್ಲಿ ವೈಶಾಲಿ ಮತ್ತು ನೇಪಾಲಗಳ ನಡುವಣ ಪ್ರದೇಶ ಲಿಚ್ಛವಿಯರ ಆಳ್ವಿಕೆಗೆ ಒಳಪಟ್ಟಿತ್ತು. ಈ ಪ್ರದೇಶ ಗುಪ್ತರು ಆಳುತ್ತಿದ್ದಿರಬಹುದಾದ ಪ್ರದೇಶಕ್ಕೆ ಹೊಂದಿದಂತಿತ್ತು. ಈ ವಂಶಕ್ಕೆ ಉತ್ತರಾಧಿಕಾರಿಗಳಿಲ್ಲದ ಕಾರಣ ಲಿಚ್ಛವಿ ರಾಜ್ಯವೂ ಸ್ವಾಧೀನಕ್ಕೆ ಬಂದಿತು. ಕುಮಾರದೇವಿಯನ್ನು ಮದುವೆಯಾದದ್ದು ಚಂದ್ರಗುಪ್ತನ ಜೀವನದ ಗತಿಯನ್ನೇ ಬದಲಾಯಿಸಿ ತೆನ್ನಬಹುದು. ಇದರ ಪರಿಣಾಮವಾಗಿ ಇವನ ರಾಜ್ಯ ವಿಸ್ತಾರ ಗೊಂಡಿತು; ಪ್ರಾಬಲ್ಯ ಹೆಚ್ಚಿತು. ಇವನ ತಂದೆ ಮಹಾರಾಜನೆನಿಸಿಕೊಂಡಿದ್ದ. ಈಗ ಇವನು ಮಹಾರಾಜಾಧಿರಾಜ ನೆಂದು ಬಿರುದಾಂಕಿತನಾದ. ಕವಯಿತ್ರಿ ಚಾಳುಕ್ಯ ಚಂದ್ರಾದಿತ್ಯನ ಪತ್ನಿ ವಿಜ್ಜಿಕಾ ಅಥವಾ ಕಿಸೋರಿಕ ಬರೆದಳೆನ್ನಲಾದ ಕೌಮುದೀಮಹೋತ್ಸವವೆಂಬ ನಾಟಕ ಮಗಧರಾಜ್ಯದ ಅರಸನಾದ ಸುಂದರವರ್ಮನ ದತ್ತುಪುತ್ರನಾದ ಚಂಡಸೇನನನ್ನು ಕುರಿತದ್ದು. ಈತ ಲಿಚ್ಛವಿಯ ರೊಡಗೂಡಿ ಸುಂದರವರ್ಮನನ್ನು ಕೊಂದು ಮಗಧರಾಜ್ಯವನ್ನು ಆಕ್ರಮಿಸಿದನೆಂಬುದು ನಾಟಕದ ಕಥಾವಸ್ತು. ಇದರಲ್ಲಿಯ ಚಂಡಸೇನನೇ 1ನೆಯ ಚಂದ್ರಗುಪ್ತನೆಂದು ಜಯಸ್ವಾಲ್ ಮುಂತಾದ ಕೆಲವು ವಿದ್ವಾಂಸರು ಊಹಿಸಿದ್ದಾರೆ. ಆದರೆ ಇದರಲ್ಲಿ ಸತ್ಯವಿದ್ದಂತೆ ಕಾಣುವುದಿಲ್ಲ. ಚಂದ್ರಗುಪ್ತ ಲಿಚ್ಛವಿಯರೊಡನೆ ಮಾಡಿದ ಸಂಬಂಧ ಅವನಿಗೆ ಲಾಭದಾಯಕವಾಯಿತೆಂಬುದು ನಿಜ. ಲಿಚ್ಛವಿ ವಂಶದೊಡನೆ ತನ್ನ ಪ್ರಾಮುಖ್ಯತೆಯನ್ನು ಸೂಚಿಸಲೆಂಬಂತೆ ಇವನು ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದ. ಸಮುದ್ರಗುಪ್ತ ತನ್ನ ಶಾಸನದಲ್ಲಿ ತಾನು ಲಿಚ್ಛವಿ ದೌಹಿತ್ರನೆಂದು ಹೆಮ್ಮೆಯಿಂದ ಕರೆದುಕೊಂಡಿದ್ದಾನೆ. ಇದನ್ನು ಗಮನಿಸಿದಾಗ ಚಂದ್ರ ಗುಪ್ತ ಲಿಚ್ಛವಿಯರಿಂದಲೆ ಉನ್ನತಿಯನ್ನು ಪಡೆದನೆಂದು ಬಂದನೆಂಬ ಅಂಶ ಸ್ಪಷ್ಟವಾಗುತ್ತದೆ.

ಚಂದ್ರಗುಪ್ತ ಆಳ್ವಿಕೆಗೆ ಬಂದ ವರ್ಷವಾದ 320ರಿಂದ ಗುಪ್ತರ ಹೆಸರಿನಲ್ಲಿ ಒಂದು ಶಕೆಯನ್ನು ಗಣನೆಗೆ ತರಲಾಯಿತು. ಗುಪ್ತ ಶಕೆಯನ್ನು ಸಮುದ್ರಗುಪ್ತನ ಆಳ್ವಿಕೆಯ ಮೊದಲ ವರ್ಷದಿಂದ ಗಣಿಸಲಾಯಿತೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಚಂದ್ರಗುಪ್ತನ ಆಳ್ವಿಕೆಯ ಮೊದಲ ವರ್ಷದಿಂದಲೇ ಆರಂಭವಾಯಿತೆಂದು ಒಪ್ಪಲಾಗಿದೆ. ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನದಲ್ಲಿ ಚಂದ್ರಗುಪ್ತನ ಆಸ್ಥಾನದ ವರ್ಣನೆ ಇದೆ. ತನ್ನ ಆಳ್ವಿಕೆಯ ಕೊನೆಯ ಕಾಲದಲ್ಲಿ ಸಮುದ್ರಗುಪ್ತನೇ ಸಮರ್ಥನಾದ ತನ್ನ ಉತ್ತರಾಧಿಕಾರಿಯೆಂದು ಯೋಚಿಸಿ, ಆಸ್ಥಾನಿಕರ ಸಮ್ಮುಖದಲ್ಲಿ ಚಂದ್ರಗುಪ್ತ ಸಮುದ್ರಗುಪ್ತನನ್ನು ತನ್ನ ಅನಂತರ ರಾಜನಾಗಿ ಆಳಲು ಆರಿಸಿದನೆಂದು ಹೇಳಿದೆ. ಇದರಿಂದ ಬಹುಶಃ ಸಮುದ್ರಗುಪ್ತ ಆತನ ಹಿರಿಯ ಮಗನಾಗಿರದೆ ಅವನ ಹಿರಿಯ ಸೋದರನೊಬ್ಬನಾಗಿದ್ದರೂ ಇರಬಹುದೆಂದು ಊಹೆ ಮಾಡಲಾಗಿದೆ. ಸಮುದ್ರಗುಪ್ತನ ನಾಣ್ಯಗಳನ್ನು ಹೋಲುವ, ಕಚಗುಪ್ತನೆಂಬವನ ಚಿನ್ನದ ನಾಣ್ಯಗಳು ದೊರೆತಿವೆ. ಇವುಗಳ ಆಧಾರದ ಮೇಲೆ ಕಚಗುಪ್ತ ಸಮುದ್ರಗುಪ್ತನ ಹಿರಿಯ ಸೋದರನಾಗಿದ್ದಿರಬೇಕೆಂದು ಹಲವರು ಸೂಚಿಸಿದ್ದಾರೆ. ಈ ವಿಷಯದಲ್ಲಿ ನಿಶ್ಚಯವಾಗಿ ಏನನ್ನೂ ಹೇಳಲಿಕ್ಕಾಗುವುದಿಲ್ಲ.

ಸಮುದ್ರಗುಪ್ತನ (335–75) ಆಯ್ಕೆ ಅನೇಕ ಸಾಮಂತರಿಗೆ ಸಂತೃಪ್ತಿಯನ್ನುಂಟು ಮಾಡಿತಾದರೂ ಕೆಲವರು ಇದರಿಂದ ಅಸೂಯೆಗೊಂಡರು. ಇವರಲ್ಲಿ ಅಚ್ಯುತ ಮತ್ತು ನಾಗಸೇನರೂ ಕೋಟಾ ಕುಲದ ಒಬ್ಬ ಸಾಮಂತನೂ ಪ್ರಮುಖರು. ಆದರೆ ಅಧಿಕಾರಕ್ಕೆ ಬಂದ ಕೂಡಲೇ ಸಮುದ್ರಗುಪ್ತ ಇವರೆಲ್ಲರನ್ನೂ ಸೋಲಿಸಿದ. ಇವರು ಸಮುದ್ರಗುಪ್ತನ ವಿರುದ್ಧವಾಗಿ ಇವನ ಹಿರಿಯ ಸಹೋದರನ ಹಕ್ಕನ್ನು ಎತ್ತಿ ಹಿಡಿದರೆಂದು ಹೇಳಲಾಗಿದೆ. ಆದರೆ ಈ ವಿಷಯಗಳನ್ನು ತಿಳಿಸುವ ಶಾಸನದ ಭಾಗ ಹಾಳಾಗಿರುವುದರಿಂದ ಈ ಬಗ್ಗೆ ಯಾವ ನಿರ್ಣಯವನ್ನೂ ನುಡಿಯುವಂತಿಲ್ಲ.

ತದನಂತರ ಸಮುದ್ರಗುಪ್ತ ಉತ್ತರದ ದಿಗ್ವಿಜಯಯಾತ್ರೆ ಕೈಗೊಂಡ. ಈ ಸಂದರ್ಭದಲ್ಲಿ ಇವನು ವಿಶಿಷ್ಟವಾದ ನೀತಿಯನ್ನು ಅವಲಂಬಿಸಿದ. ವಿಶಾಲ ಭಾರತದ ಎಲ್ಲ ಭಾಗಗಳನ್ನೂ ತನ್ನ ನೇರವಾದ ಆಡಳಿತಕ್ಕೊಳಪಡಿಸುವುದು ಕಷ್ಟಸಾಧ್ಯವೆಂಬುದನ್ನು ಅವನು ಅರಿತಿದ್ದಂತೆ ತೋರುತ್ತದೆ. ಆದ್ದರಿಂದಲೇ ಆತ ಉತ್ತರದಲ್ಲಿ ಆಳುತ್ತಿದ್ದ ಅರಸರನ್ನು ಸೋಲಿಸಿ ಅವರ ರಾಜ್ಯಗಳನ್ನು ಮಾತ್ರ ತನ್ನದಕ್ಕೆ ಸೇರಿಸಿಕೊಂಡ. ದಕ್ಷಿಣಾಪಥದ ಅರಸರನ್ನು ಸೋಲಿಸಿದರೂ ಅವರನ್ನು ಬಂಧನದಿಂದ ಮುಕ್ತಗೊಳಿಸಿ ಅವರ ರಾಜ್ಯವನ್ನು ಅವರಿಗೆ ಹಿಂದಿರುಗಿಸಿ, ತನ್ಮೂಲಕ ಅವರು ತನ್ನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ವಿಧೇಯರಾಗಿರುವಂತೆ ಮಾಡಿದ. ಇವನ ಶಕ್ತಿಸಾಮರ್ಥ್ಯಗಳನ್ನು ಕಂಡ ನೆರೆಹೊರೆಯ ಅರಸರು ಇವನಿಗೆ ಕಪ್ಪಕಾಣಿಕೆ ಗಳನ್ನು ಸಲ್ಲಿಸಿ ಇವನ ಸ್ನೇಹಕ್ಕಾಗಿ ತಮ್ಮ ಕೈಚಾಚಿದರು.

ಕವಿ ಹರಿಷೇಣ ಅಲಹಾಬಾದ್ ಶಾಸನದಲ್ಲಿ ಸಮುದ್ರಗುಪ್ತನ ದಿಗ್ವಿಜಯಕ್ಕೆ ಸಂಬಂಧಿಸಿದ ಹಲವಾರು ವಿವರಣೆಗಳನ್ನು ನೀಡಿದ್ದಾನೆ. ಅದರಂತೆ ಇವನು ಆರ್ಯಾವರ್ತದ ರುದ್ರದೇವ, ಮತಿಲ, ನಾಗದತ್ತ, ಚಂದ್ರವರ್ಮ, ಗಣಪತಿನಾಗ, ನಾಗಸೇನ, ಅಚ್ಯುತ, ನಂದಿ ಮತ್ತು ಬಲವರ್ಮ ಎಂಬ ಅರಸರನ್ನು ಸೋಲಿಸಿ ಅವರ ರಾಜ್ಯವನ್ನು ಸ್ವಾಧೀನಪಡಿಸಿ ಕೊಂಡ. ಈ ಅರಸರು ಯಾರು, ಇವರು ಆಳುತ್ತಿದ್ದ ರಾಜ್ಯಗಳಾವುವು ಎಂಬುದು ತಿಳಿಯದು. ಇವರ ವಂಶ ಮತ್ತು ಇವರು ಆಳುತ್ತಿದ್ದ ರಾಜ್ಯಗಳನ್ನು ಕುರಿತು ಇತಿಹಾಸಕಾರರು ಹಲವು ಊಹೆಗಳನ್ನು ಮಾಡಿದ್ದಾರೆ. ಇವು ಹೇಗೇ ಇರಲಿ, ಇವರನ್ನು ಸೋಲಿಸಿದ ಪರಿಣಾಮವಾಗಿ ಸಮುದ್ರಗುಪ್ತ ಉತ್ತರಪ್ರದೇಶ, ಮಧ್ಯಭಾರತ, ಪೂರ್ವದಲ್ಲಿ ಬಂಗಾಲ, ಬಿಹಾರ ಮುಂತಾದ ಪ್ರದೇಶಗಳನ್ನೊಳಗೊಂಡ ಉತ್ತರ ಭಾರತದ ವಿಸ್ತಾರಪ್ರದೇಶದ ಸಾಮ್ರಾಟನಾದ.

ಅನಂತರ ಸಮುದ್ರಗುಪ್ತ ದಕ್ಷಿಣಾಪಥದ ಕಡೆಗೆ ದಿಗ್ವಿಜಯಕ್ಕಾಗಿ ಹೊರಟ. ಅದಕ್ಕೆ ಮೊದಲು ದಾರಿಯಲ್ಲಿದ್ದ ಎಲ್ಲ ಆಟವಿಕ ರಾಜರನ್ನೂ ತನ್ನ ಅಧೀನರನ್ನಾಗಿ ಮಾಡಿಕೊಂಡ. ಬಹುಶಃ ವಿಂಧ್ಯ ಪರ್ವತದ ಪೂರ್ವಕ್ಕೆ ಬಾಘೇಲಖಂಡ, ರೇವಾ ಮತ್ತು ಛೋಟಾನಾಗಪುರಗಳನ್ನೊಳಗೊಂಡ ಅಡವಿ ಪ್ರದೇಶದಲ್ಲಿ ಈ ರಾಜರು ಆಳುತ್ತಿದ್ದು ಬಹಳ ಕಿರುಕುಳ ನೀಡುತ್ತಿದ್ದಿರಬೇಕು.

ದಕ್ಷಿಣಾಪಥದ ಅರಸರ ವಿಷಯದಲ್ಲಿ ಸಮುದ್ರಗುಪ್ತನದು ಗ್ರಹಣ, ಮೋಕ್ಷ ಮತ್ತು ಅನುಗ್ರಹ ನೀತಿಯಾಗಿತ್ತು. ಮೇಲೆ ಹೇಳಿದಂತೆ ಅವರ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳದೆ, ಅವರನ್ನು ಸೋಲಿಸಿದ ಬಳಿಕ ಬಿಡುಗಡೆ ಮಾಡಿ, ಅವರ ರಾಜ್ಯದಲ್ಲಿ ಅವರನ್ನು ಪುನಃ ಸ್ಥಾಪಿಸಿ ಅವರನ್ನು ತನ್ನ ವಿಧೇಯರಾದ ಸಾಮಂತರನ್ನಾಗಿ ಮಾಡಿಕೊಂಡ. ಇದು ಇವನ ರಾಜನೀತಿ ಚತುರತೆಯನ್ನು ಸೂಚಿಸುತ್ತದೆ. ಈ ವಿಷಯವನ್ನು ಪ್ರಸ್ತಾಪಿಸುವಾಗ ಕವಿಗಳು ಸಮುದ್ರಗುಪ್ತ ಸೋಲಿಸಿದ ರಾಜರ ಹೆಸರುಗಳನ್ನೇ ಅಲ್ಲದೆ ಅವರು ಆಳುತ್ತಿದ್ದ ರಾಜ್ಯಗಳ ಹೆಸರುಗಳನ್ನೂ ಸೂಚಿಸಿದ್ದಾರೆ. ಅವರು ಹನ್ನೆರಡು ಮಂದಿ ಅರಸರು. ಹರಿಷೇಣನ ಶಾಸನದಲ್ಲಿ

**ಗುಪ್ತಕಾಲದ ವಿಷ್ಣುದೇವಾಲಯ, ಗೋಪ್**

ಹೇಳಿರುವ ಪ್ರಕಾರ ಅವರ ಹೆಸರು ಮತ್ತು ರಾಜ್ಯಗಳು ಹೀಗಿವೆ; ಕೋಸಲದ ಮಹೇಂದ್ರ, ಮಹಾಕಾಂತಾರದ ವ್ಯಾಘ್ರರಾಜ, ಕೌರಾಲದ ಮಂಟರಾಜ, ಪಿಷ್ಟಪುರದ ಮಹೇಂದ್ರಗಿರಿ ಕೊಟ್ಟೂರಿನ ಸ್ವಾಮಿದತ್ತ, ಏರಂಡಪಲ್ಲಿಯ ದಮನ, ಕಂಚಿಯ ವಿಷ್ಣುಗೋಪ, ಅವಮುಕ್ತದ ನೀಲರಾಜ, ವೆಂಗಿಯ ಹಸ್ತಿವರ್ಮ, ಪಾಲಕ್ಕದ ಉಗ್ರಸೇನ, ದೇವರಾಷ್ಟ್ರದ ಕುಬೇರ ಮತ್ತು ಕೌಸ್ಥಲಪುರದ ಧನಂಜಯ. ಇಲ್ಲಿ ಹೆಸರಿಸಿರುವ ರಾಜ್ಯಗಳಲ್ಲಿ ಮಹಾಕಾಂತಾರ, ಅವಮುಕ್ತ, ಕೌಸ್ಥಲಪುರ ರಾಜ್ಯಗಳು ಯಾವುವು ಎಂಬುದು ಇನ್ನೂ ತಿಳಿದಿಲ್ಲ. ಕೌರಾಳ ಎಂಬುದನ್ನು ಕೇರಲ ಎಂದು ಓದಿ, ಮಂಟರಾಜನನ್ನು ಕೇರಳದ ದೊರೆಯಾಗಿರಬಹುದೆಂದು ಕೆಲವರು ಅನುಮಾನಪಟ್ಟಿದ್ದಾರೆ. ಪಾಲಕ್ಕ ಎಂಬುದು ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಪಾಲಕ್ಕಡ ಎಂದು ಕೆಲವರೂ ಕೇರಳದ ಪಾಲಕ್ಕಾಡು ಎಂದು ಮತ್ತೆ ಕೆಲವರು ಸೂಚಿಸಿದ್ದಾರೆ. ಅಂತೆಯೇ ದೇವರಾಷ್ಟ್ರ ವಿಶಾಖಪಟ್ಟಣದ ಎಲಮಂಚಲಿ ಎಂದು ಕೆಲವರೆಂದರೆ, ಇನ್ನು ಕೆಲವರು ಇದನ್ನು ಮಹಾರಾಷ್ಟ್ರವೆನ್ನುತ್ತಾರೆ. ಏರಂಡಪಲ್ಲಿ ಸಹ ವಿಶಾಖಪಟ್ಟಣ ಜಿಲ್ಲೆಯ ಅದೇ ಹೆಸರಿನ ಗ್ರಾಮ. ಆದರೆ ಇದು ಮಹಾರಾಷ್ಟ್ರದ ಖಾನ್‌ದೇಶ ಜಿಲ್ಲೆಯ ಏರಂಡೋಲ್ ಎಂದು ಕೆಲವು ಇತಿಹಾಸಕಾರರು ವಾದಿಸಿದ್ದಾರೆ. ಇಲ್ಲಿ ಸೂಚಿಸಿರುವ ರಾಜ್ಯಗಳೆಲ್ಲ ಪೂರ್ವತೀರದಲ್ಲಿಯೇ ಇದ್ದ ಪ್ರದೇಶಗಳು ಎನ್ನುವುದಾದಲ್ಲಿ ಸಮುದ್ರಗುಪ್ತ ಕೇವಲ ಪೂರ್ವ ತೀರದ ತುದಿಯವರೆಗೂ ಬಂದು, ಅದೇ ಮಾರ್ಗವಾಗಿ ಹಿಂದಿರುಗಿದನೆಂದು ಹೇಳ ಬೇಕಾಗುತ್ತದೆ. ಆದರೆ ಇನ್ನು ಕೆಲವರು ಸೂಚಿಸಿರುವಂತೆ ಈ ರಾಜ್ಯಗಳಲ್ಲಿ ಕೆಲವು ಕೇರಳ ಮತ್ತು ಈಗಿನ ಮಹಾರಾಷ್ಟ್ರಗಳಲ್ಲಿಯೂ ಇದ್ದುವು ಎನ್ನುವ ಪಕ್ಷದಲ್ಲಿ ಸಮುದ್ರಗುಪ್ತ ಪೂರ್ವ ತೀರದ ರಾಜ್ಯಗಳಿಂದಾರಂಭಿಸಿ ದಕ್ಷಿಣದ ತುದಿಯಲ್ಲಿದ್ದ ಚೇರರ ರಾಜ್ಯದಲ್ಲಿ ತನ್ನ ಸಾರ್ವಭೌಮತ್ವವನ್ನು ಸ್ಥಿರೀಕರಿಸಿ ಪಶ್ಚಿಮಕ್ಕೆ ತಿರುಗಿ ಮಹಾರಾಷ್ಟ್ರದ ಮೂಲಕ ತನ್ನ ರಾಜಧಾನಿಗೆ ಹಿಂದಿರುಗಿದನೆಂದು ಊಹಿಸಬೇಕಾಗುತ್ತದೆ.

ಇವನ ಈ ದಿಗ್ವಿಜಯದಿಂದ ಭೀತಿಗೊಂಡು ಸರಹದ್ದಿನ ಸಮತಟ, ಡವಾಕ, ಕಾಮರೂಪ, ನೇಪಾಲ ಮತ್ತು ಕರ್ತೃಪುರದ ಅರಸರು ಶರಣಾದರೆಂದು ಶಾಸನ ಹೇಳುತ್ತದೆ. ಡವಾಕ ಮತ್ತು ಕರ್ತೃಪುರಗಳನ್ನು ಗುರುತಿಸಲಾಗಿಲ್ಲ. ಉಳಿದ ಪ್ರದೇಶಗಳು ಈಗಿನ ಬಂಗಾಲ, ಅಸ್ಸಾಮಿನ ಉತ್ತರಭಾಗ ಮತ್ತು ನೇಪಾಲ ಪ್ರದೇಶಗಳನ್ನೊಳಗೊಂಡಿದ್ದುವು. ಇವಲ್ಲದೆ ಮಾಲವ, ಅರ್ಜುನಾಯನ, ಯೌಧೇಯ, ಮಾದ್ರಕ, ಅಭೀರ, ಪ್ರಾರ್ಜುನ, ಸನಕಾನೀಕ, ಕಾಕ ಮತ್ತು ಖರಪರಿಕ ಎಂಬ ಸಮುದಾಯಗಳ ಅಧಿಪತಿಗಳು ಸಹ ತಮ್ಮ ವಿಧೇಯತೆಯನ್ನು ಸೂಚಿಸಿದರು. ಇವುಗಳಿಂದೆಲ್ಲ ನಮಗೆ ಸ್ಥೂಲವಾಗಿ ಸಮುದ್ರಗುಪ್ತನ ರಾಜ್ಯದ ವೈಶಾಲ್ಯ ತಿಳಿದುಬರುತ್ತದೆ. ಪಶ್ಚಿಮದಲ್ಲಿ ಪಂಜಾಬಿನಿಂದ ಪೂರ್ವದಲ್ಲಿ ಬಂಗಾಲದವರೆಗೂ ಉತ್ತರದ ಹಿಮಾಲಯದಿಂದ ದಕ್ಷಿಣದ ವಿಂಧ್ಯ ಪರ್ವತದವರೆಗೂ ಸ್ಥೂಲವಾಗಿ ಸಕಲ ಉತ್ತರಾಪಥ ಸಮುದ್ರಗುಪ್ತನ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಅಳಿದುಳಿದ ಕುಷಾಣ, ಶಕ, ಮುರುಂಡ ಮುಂತಾದ ಜನಾಂಗಗಳಿಗೆ ಸೇರಿದವರೂ ಸಿಂಹಳದ ಅರಸನೂ ತಮ್ಮ ಕಪ್ಪಕಾಣಿಕೆಗಳನ್ನು ಸಲ್ಲಿಸಿದರು.

ಅಲಹಾಬಾದ್ ಶಾಸನದಲ್ಲಿ ಸಮುದ್ರಗುಪ್ತ ಅಶ್ವಮೇಧಯಾಗವನ್ನು ಮಾಡಿದ ಬಗ್ಗೆ ಉಲ್ಲೇಖವಿಲ್ಲ. ಸಮುದ್ರಗುಪ್ತನ ಕೀರ್ತಿ ಭೂಮಿಯನ್ನೆಲ್ಲ ವ್ಯಾಪಿಸಿ ಸ್ವರ್ಗಕ್ಕೂ ಏರಿತು ಎಂದು ಸೂಚಿಸುವ ಶಾಸನಪದ್ಯದ ಆಧಾರದಿಂದ ಈ ಶಾಸನ ಸಮುದ್ರಗುಪ್ತನ ಮರಣಾನಂತರ ಅಸ್ತಿತ್ವಕ್ಕೆ ಬಂತೆಂದು ಒಂದು ಕಾಲದಲ್ಲಿ ಊಹಿಸಲಾಗಿತ್ತು. ಆದರೆ ಅದು ಸರಿಯಲ್ಲವೆಂದು ಈಗ ಸ್ಥಿರಪಟ್ಟಿದೆ. ಸಮುದ್ರಗುಪ್ತ ಅಶ್ವಮೇಧಯಾಗ ಮಾಡಿದ ಕುರುಹಾಗಿ ನಾಣ್ಯವೊಂದನ್ನು ಅಚ್ಚುಹಾಕಿಸಿದ. ಬಹಳ ದಿನಗಳಿಂದ ನಿಂತುಹೋಗಿದ್ದ ಈ ಯಜ್ಞಯಾಗಾದಿಗಳನ್ನು ಪುನರಾರಂಭಿಸಿದ ಕೀರ್ತಿ ಇವನಿಗೂ ಇವನ ಅನಂತರದವರಿಗೂ ಸಲ್ಲುತ್ತದೆಂದು ಗುಪ್ತರ ಶಾಸನದಲ್ಲಿಯೇ ಹೇಳಲಾಗಿದೆ. ಅಂದಮೇಲೆ ಅಲಾಹಾಬಾದ್ ಸ್ತಂಭಶಾಸನ ಸಮುದ್ರಗುಪ್ತನ ದಿಗ್ವಿಜಯದ ಅನಂತರ, ಆದರೆ ಅಶ್ವಮೇಧಯಾಗ ಮಾಡುವ ಮೊದಲು ಕೆತ್ತಿಸಿದ್ದಿರಬೇಕು. ಈ ಶಾಸನವನ್ನು ಕಾವ್ಯವೆಂದು ವರ್ಣಿಸಲಾಗಿದೆ. ಇದರ ಕರ್ತೃ ಮಹಾದಂಡನಾಯಕ ಧ್ರುವಭೂತಿಯ ಮಗ ಸಂಧಿವಿಗ್ರಹಿ ಕುಮಾರಾಮಾತ್ಯ, ಮಹಾದಂಡನಾಯಕ ಹರಿಷೇಣ. ಸಮುದ್ರಗುಪ್ತ ಸ್ವತಃ ಅನೇಕ ಕಾವ್ಯಗಳನ್ನು ರಚಿಸುವುದರ ಮೂಲಕ ಕವಿರಾಜನೆಂಬ ಪ್ರಶಸ್ತಿಗೆ ಅರ್ಹನಾಗಿದ್ದನೆಂದೂ ಸಂಗೀತಶಾಸ್ತ್ರದಲ್ಲಿ ತುಂಬುರುರನ್ನು ಮೀರಿಸಿದ್ದನೆಂದೂ ಶಾಸನದಲ್ಲಿ ಹೇಳಿದೆ. ಆದರೆ ಇವನ ಯಾವ ಕಾವ್ಯಗಳು ಲಭ್ಯವಾಗಿಲ್ಲ. ಆದರೆ ಇವನು ಸಂಗೀತ ಶಾಸ್ತ್ರಜ್ಞನೆಂಬ ವಿಷಯವನ್ನು ಅವನು ಅಚ್ಚು ಹಾಕಿಸಿದ ಕೆಲವು ನಾಣ್ಯಗಳು ಸಮರ್ಥಿಸುತ್ತವೆ. ಸಮುದ್ರಗುಪ್ತ ತಾನೇ ವೀಣೆಯನ್ನು ನುಡಿಸುತ್ತಿರುವಂತೆ ಈ ನಾಣ್ಯಗಳಲ್ಲಿ ಚಿತ್ರಿಸಲಾಗಿದೆ.

ಸಮುದ್ರಗುಪ್ತನನ್ನು ಕೆಲವು ಇತಿಹಾಸಕಾರರು ಭಾರತದ ನೆಪೋಲಿಯನ್ ಎಂದು ಕರೆದಿದ್ದಾರೆ. ಆದರೆ ಈ ಹೋಲಿಕೆ ಸಮಂಜಸವಾಗಿಲ್ಲ. ನೆಪೋಲಿಯನನಿಗೆ ಅತೀವವಾದ ರಾಜ್ಯದಾಹವಿತ್ತು. ತನ್ನ ಹಿರಿಮೆಯಲ್ಲಿ ಬಹಳವಾದ ನಂಬಿಕೆಯಿತ್ತು. ಆದರೆ ಸಮುದ್ರಗುಪ್ತನ ಕೈಗೊಂಡ ದಿಗ್ವಿಜಯ ಯಾತ್ರೆಯನ್ನು ಗಮನಿಸಿದಾಗ, ಅದರಲ್ಲಿಯೂ ಅವನು ದಕ್ಷಿಣಾಪಥದ ಅರಸುಗಳ ವಿಷಯದಲ್ಲಿ ಅನುಸರಿಸಿದ ನೀತಿಯನ್ನು ಕಂಡಾಗ ಅವನಿಗೆ ರಾಜ್ಯದಾಹವಿರಲಿಲ್ಲ ವೆಂಬುದು ಸ್ಪಷ್ಟವಾಗುತ್ತದೆ. ಸಮುದ್ರಗುಪ್ತ ಸು. 375ರ ವರೆಗೂ ಆಳಿದ. ಗುಪ್ತ ಶಕೆಯನ್ನು 1ನೆಯ ಚಂದ್ರಗುಪ್ತನ ಆಳ್ವಿಕೆಯಿಂದ ಗಣಿಸಿದಲ್ಲಿ ಸಮುದ್ರಗುಪ್ತನ ಬಹುಶಃ 335ರ ವೇಳೆಗೆ ಪಟ್ಟಕ್ಕೆ ಬಂದನೆಂದು ಗೊತ್ತಾಗುತ್ತದೆ. ಇವನು ಸು. 35–40 ವರ್ಷಗಳ ಕಾಲ ಆಳಿದ.

ಸಮುದ್ರಗುಪ್ತನ ಅನಂತರ 2ನೆಯ ಚಂದ್ರಗುಪ್ತ (375–415) ಪಟ್ಟಕ್ಕೆ ಬಂದ. ಇವನಿಗೆ ರಾಮಗುಪ್ತನೆಂಬ ಹಿರಿಯ ಸಹೋದರನಿದ್ದನೆಂದೂ ಸಮುದ್ರಗುಪ್ತನ ಅನಂತರ ಅವನೇ ಒಂದೆರಡು ವರ್ಷ ಆಳಿದನೆಂದು ಆದರೆ ಅವನ ಕಾಲದಲ್ಲಿ ಸಾಮ್ರಾಜ್ಯ ಶಕರ ಧಾಳಿಗೆ ತುತ್ತಾಗಿ ಅವನು ಸೋಲನ್ನು ಅನುಭವಿಸಬೇಕಾಗಿ ಬಂದಾಗ ಅವನಿಗಿಂತ ಹೆಚ್ಚು ದಕ್ಷನೂ ಪರಾಕ್ರಮಶಾಲಿಯೂ ಅವನಿಗಿಂತ ಕಿರಿಯನೂ ಆದ ಚಂದ್ರಗುಪ್ತ ದೇಶದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡು ಶಕರನ್ನು ಹೊರದೂಡಿದನೆಂದೂ ಕೆಲವು ಇತಿಹಾಸಕಾರರು ಹೇಳಿದ್ದಾರೆ. ರಾಮಗುಪ್ತನೆಂಬ ಅರಸನ ನಾಣ್ಯಗಳು ದೊರೆತಿರುವುದೂ ವಿಶಾಖದತ್ತ ಬರೆದುದೆನ್ನಲಾದ ದೇವೀಚಂದ್ರಗುಪ್ತ ಎಂಬ ನಾಟಕದ ಕಥೆಯೂ ಈ ಊಹೆಗೆ ಪ್ರಮುಖ ಆಧಾರಗಳಾಗಿವೆ. ಇತ್ತೀಚೆಗೆ ರಾಮಗುಪ್ತನ ಎರಡು ಶಾಸನಗಳು ಲಭ್ಯವಾಗಿವೆ. ಈ ಶಾಸನ ಗಳಿಂದ ಅವನು ಗುಪ್ತವಂಶಕ್ಕೆ ಸೇರಿದವನೆಂಬುದಾಗಿ ಹೇಳಲಾಗಿದೆ. ರಾಮಗುಪ್ತನ ಆಳ್ವಿಕೆಯ ಬಗೆಗೆ ಈಗಲೂ ಸಂದೇಹವಿದ್ದೇ ಇದೆಯಾದರೂ ಇವನ ಅಸ್ತಿತ್ವವಂತೂ ಖಚಿತವಾಗಿದೆ.

ಎರಡನೆಯ ಚಂದ್ರಗುಪ್ತನ ಆಳ್ವಿಕೆಯ ಕಾಲದಲ್ಲಿ ಗುಪ್ತರ ಸಾಮ್ರಾಜ್ಯ ಔನ್ನತ್ಯಕ್ಕೆ ಏರಿತು. ಇವನ ತಾಯಿ ದತ್ತಾದೇವಿ. ಇವನಿಗೆ ದೇವಗುಪ್ತ, ದೇವರಾಜ, ದೇವಶ್ರೀ ಎಂಬ ಬಿರುದುಗಳು ಇದ್ದುವು. ಇವನಿಗೆ ಇಬ್ಬರು ಪತ್ನಿಯರು; ಧ್ರುವದೇವಿ ಮತ್ತು ಕುಬೇರನಾಗ. 375ರ ವೇಳೆಗೆ ರಾಜ್ಯವಾಳತೊಡಗಿದ ಈತನೂ ಸು.40 ವರ್ಷಗಳಷ್ಟು ಕಾಲ ಆಳಿದ. ಇವನ ತಂದೆಯ ಕಾಲದಲ್ಲಿ ಶಕ ಮತ್ತು ಕುಷಾಣ ವಂಶಗಳಿಗೆ ಸೇರಿದ ಕೆಲವು ಸಾಮಂತರು ಸಮುದ್ರಗುಪ್ತನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಿದರೆಂದು ಮೇಲೆ ಹೇಳಿದೆ. ಈ ವಂಶದ ಅರಸರನ್ನು ಸಂಪೂರ್ಣವಾಗಿ ಸೋಲಿಸಿ, ಹೊಡೆದೋಡಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ತಂದೆಯಂತೆಯೇ ಇವನೂ ಕದನಗಳಲ್ಲಿ ಚತುರ. ತಂದೆಯಿಂದ ಪಡೆದ ರಾಜ್ಯವನ್ನು ಇವನು ಮತ್ತಷ್ಟು ವಿಸ್ತಾರಗೊಳಿಸಿ, ತನ್ನ ಸಾಮ್ರಾಜ್ಯದಲ್ಲಿ ಸುಭದ್ರವಾದ ಆಡಳಿತವಿರುವಂತೆ ಮಾಡಿದ. ಗುಜರಾತ್ ಮತ್ತು ಕಾಥೇವಾಡದ ಶಕ ಅರಸು ಇವನ ಮುಖ್ಯ ಶತ್ರು. ಇವನನ್ನು

ಸೋಲಿಸಿ ಇವನ ರಾಜ್ಯವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಇವನು ಪ್ರಾರಂಭದಿಂದಲೂ ವಿಸ್ತೃತವಾದ ಯೋಜನೆಯನ್ನು ಹಾಕಿಕೊಂಡ. ಅದಕ್ಕೆಂದೇ ಇವನು ಇತರ ಹಿಂದು ಅರಸುಮನೆತನಗಳೊಡನೆ ರಕ್ತಸಂಬಂಧ ಬೆಳೆಸಿದ. ಇವನ ಪತ್ನಿಯಾದ ಕುಬೇರನಾಗಳು ನಾಗವಂಶಕ್ಕೆ ಸೇರಿದವಳು. ಇವಳಿಂದ ಇವನಿಗೆ ಪ್ರಭಾವತೀಗುಪ್ತಳೆಂಬ ಮಗಳು ಹುಟ್ಟಿದಳು. ಇವಳನ್ನು ವಾಕಾಟಕ ವಂಶದ 2ನೆಯ ರುದ್ರಸೇನನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಭೌಗೋಳಿಕವಾಗಿ ವಾಕಾಟಕರ ಮತ್ತು ನಾಗರ ರಾಜ್ಯಗಳು ಇವನ ರಾಜ್ಯದ ಮೇರೆಗಳಾಗಿದ್ದುವು. ಶಕರೊಡನೆ ಇವನು ಕಾದುವಾಗ ವಾಕಾಟಕರ ಬೆಂಬಲವಿಲ್ಲದಿದ್ದಲ್ಲಿ ನಾಗರು ಸುಲಭವಾಗಿ ಇವನ ರಾಜ್ಯದ ಮೇಲೆ ನುಗ್ಗಬಹುದಾಗಿತ್ತು. ಎಂತಲೇ ವಾಕಾಟಕರೊಡನೆ ಸ್ನೇಹ ಇವನಿಗೆ ಬಹಳವಾಗಿ ಬೇಕಾಗಿತ್ತು.

ಇವನ ಅಳಿಯನಾದ ರುದ್ರಸೇನ ಬಹುಕಾಲ ಆಳದೆ ಮರಣ ಹೊಂದಿದ. ಇವನಿಗೆ ದಿವಾಕರಸೇನ ಮತ್ತು ದಾಮೋದರಸೇನ ಎಂಬ ಇಬ್ಬರು ಮಕ್ಕಳಿದ್ದರು. ಇವರು ಇನ್ನೂ ಕಿರಿಯರಾಗಿದ್ದ ಕಾರಣ ಚಂದ್ರಗುಪ್ತನ ಸಲಹೆಯ ಮೇರೆಗೆ ಪ್ರಭಾಪತೀಗುಪ್ತಳು ತನ್ನ ಮಕ್ಕಳ ಹೆಸರಿನಲ್ಲಿ ತಾನೇ ರಾಜ್ಯಭಾರ ಮಾಡತೊಡಗಿದಳು. ಈ ಸಂದರ್ಭದಲ್ಲಿ ವಾಕಾಟಕರ ರಾಜ್ಯವನ್ನು ಚಂದ್ರಗುಪ್ತ ಸ್ವಾಧೀನಪಡಿಸಿಕೊಳ್ಳಬಹುದಿತ್ತು. ಆದರೆ ಅದರಿಂದ ಶಕರನ್ನು ಹೊಡೆದಟ್ಟುವ ಅವನ ಮನೋರಥ ಈಡೇರುತ್ತಿರಲಿಲ್ಲ. ಕರ್ನಾಟಕದಲ್ಲಿಯ ಕದಂಬ ವಂಶದ ಕಾಕುಸ್ಥವರ್ಮ ತನ್ನ ಹೆಣ್ಣು ಮಕ್ಕಳನ್ನು ಗುಪ್ತರಿಗೂ ಇತರ ಅರಸರಿಗೂ ಮದುವೆ ಮಾಡಿಕೊಟ್ಟಿದ್ದುದಾಗಿ ಇವನ ಒಂದು ಶಾಸನದಲ್ಲಿ ಹೇಳಿದೆ. ಈ ರಾಜಕುಮಾರಿ ಇಮ್ಮಡಿ ಚಂದ್ರಗುಪ್ತನನ್ನೋ ಅವನ ಮಗನನ್ನೋ ಬಹುಶಃ ಮದುವೆಯಾಗಿರಬೇಕು. ಇಷ್ಟೆಲ್ಲ ಪೂರ್ವ ಸಿದ್ಧತೆಗಳ ಬಳಿಕ ಚಂದ್ರಗುಪ್ತ ಶಕರ ಮೇಲೆ ದಂಡೆತ್ತಿ ಹೋದ. ಈಗ ಇವನ ಉದ್ದೇಶ ಈಡೇರಿ ಮಾಳವ, ಗುಜರಾತ್, ಕಾಠೇವಾಡ ಪ್ರದೇಶಗಳು ಇವನ ಸ್ವಾಧೀನಕ್ಕೆ ಬಂದುವು. ಈತನಿಗೆ ಶಕಾರಿ ಎಂಬ ಬಿರುದಿರುವುದು ಗಮನಾರ್ಹ.

ದೆಹಲಿಯ ಬಳಿಯ ಮೆಹರೋಲಿ ಗ್ರಾಮದಲ್ಲಿರುವ ಕಬ್ಬಿಣದ ಸ್ತಂಭಶಾಸನದಲ್ಲಿ ಚಂದ್ರನೆಂಬ ಅರಸನೊಬ್ಬ ಸಿಂಧೂ ನದಿಯನ್ನು ದಾಟಿ ವಾಲ್ಹಿಕ ದೇಶವನ್ನು ಸ್ವಾಧೀನಪಡಿಸಿಕೊಂಡನೆಂದೂ ವಂಗ ದೇಶದಲ್ಲಿಯ ಶತ್ರುಗಳನ್ನು ಸೋಲಿಸಿದನೆಂದೂ ಹೇಳಲಾಗಿದೆ. ವಾಲ್ಹಿಕ ಎಂಬುದು ಬ್ಯಾಕ್ಟ್ರಿಯ ದೇಶ. ವಂಗ ಪೂರ್ವ ಬಂಗಾಲ. ಇದನ್ನೇ ಸಮತಟ ಎಂದು ಕರೆಯಲಾಗಿತ್ತು. ಇಲ್ಲಿಯ ಅರಸರು ಸಮುದ್ರಗುಪ್ತನಿಗೆ ಕಪ್ಪವನ್ನು ಕೊಡುತ್ತಿದ್ದರೆಂದು ಹಿಂದೆಯೇ ಹೇಳಿದೆ. ಮೆಹರೋಲಿ ಶಾಸನದ ಅರಸನಾದ ಚಂದ್ರ ಯಾರು ಎಂಬ ಬಗೆಗೆ ವಿವಾದಗಳಿವೆ. ಆದರೆ ಇವನು ಗುಪ್ತವಂಶದ 2ನೆಯ ಚಂದ್ರಗುಪ್ತನೆಂದು ಈಗ ಸಾಮಾನ್ಯವಾಗಿ ಒಪ್ಪಲಾಗಿದೆ. ಇದು ನಿಜವಿದ್ದಲ್ಲಿ ಸಮಗ್ರ ಉತ್ತರ ಭಾರತ ಚಂದ್ರಗುಪ್ತನ ಸ್ವಾಧೀನಕ್ಕೆ ಬಂದಿತೆಂಬುದರಲ್ಲಿ ಸಂದೇಹವಿಲ್ಲ.

ಗುಪ್ತ ಸಾಮ್ರಾಜ್ಯಕ್ಕೆ ಭದ್ರವಾದ ಅಡಿಪಾಯ ಹಾಕಿದವನು ಸಮುದ್ರಗುಪ್ತನಾದರೆ, ಆ ತಳಹದಿಯ ಮೇಲೆ ಭವ್ಯವಾದ ಕಟ್ಟಡ ಕಟ್ಟಿದವನು 2ನೆಯ ಚಂದ್ರಗುಪ್ತ. ಇವನ ಕಾಲದಲ್ಲಿ ಪಾಟಲೀಪುತ್ರವೇ ರಾಜಧಾನಿಯಾಗಿದ್ದರೂ ಉಜ್ಜಯಿನಿಯೂ ಅಷ್ಟೇ ಪ್ರಾಮುಖ್ಯ ಪಡೆಯಿತು. ವಿಕ್ರಮಾದಿತ್ಯನೆಂದು ಬಿರುದಾಂಕಿತನಾದ ಈ ಚಂದ್ರಗುಪ್ತನೇ ಪೌರಾಣಿಕ ಖ್ಯಾತಿಯನ್ನು ಪಡೆದ ಉಜ್ಜಯಿನಿಯ ಅರಸನಾದ ವಿಕ್ರಮಾದಿತ್ಯನೆಂದು ಹೇಳಲಾಗಿದೆ. ಚಂದ್ರಗುಪ್ತನ ಶಾಸನಗಳಲ್ಲಿ ಬಹುಭಾಗ ದೊರೆತಿರುವುದು ಮಾಳವ ದೇಶದಲ್ಲಿ. ಬಹುಶಃ ಉಜ್ಜಯಿನಿಯಲ್ಲಿಯೇ ಈ ಅರಸ ಹೆಚ್ಚುಕಾಲ ವಾಸಿಸಿರಬಹುದು. ಅಯೋಧ್ಯೆ ಸಹ ಇವನ ಮತ್ತೊಂದು ನೆಲೆವೀಡಾಗಿತ್ತು. ತಂದೆಯಿಂದ ಪಡೆದ ರಾಜ್ಯವನ್ನು ವಿಸ್ತರಿಸಿದ ಶ್ರೇಯಸ್ಸು ಈತನಿಗೆ ಸಲ್ಲುತ್ತದೆ. ಶಕರನ್ನು ಹಿಮ್ಮೆಟ್ಟಿಸಿ ಶಕಾರಿ ಎಂಬ ಅನ್ವರ್ಥ ನಾಮವನ್ನು ಪಡೆದ 2ನೆಯ ಚಂದ್ರಗುಪ್ತನ ರಾಜ್ಯದಲ್ಲಿ ಶಾಂತಿ, ಸುಭಿಕ್ಷೆ ನೆಲಸಿದ್ದುವು. ಎಂತಲೇ ಈತ ಸಾಹಿತಿಗಳಿಗೂ ಕವಿಗಳಿಗೂ ಕಲಾಕಾರರಿಗೂ ಆಶ್ರಯದಾತನಾಗಿದ್ದ 2ನೆಯ ಚಂದ್ರಗುಪ್ತ 375ರಿಂದ 415ರವರೆಗೆ ಸು. 40 ವರ್ಷಗಳ ಕಾಲ ಆಳಿದ.

ಚಂದ್ರಗುಪ್ತನ ಬಳಿಕ ಅವನ ಮಗನಾದ 1ನೆಯ ಕುಮಾರಗುಪ್ತ (415–55) ಪಟ್ಟಕ್ಕೆ ಬಂದ. ಈತ ಪಟ್ಟಮಹಿಷಿಯಾದ ಧ್ರುವದೇವಿಯ ಮಗ. ಸು.415ರಲ್ಲಿ ಪಟ್ಟಕ್ಕೆ ಬಂದ ಈತ ನಲವತ್ತು ವರ್ಷಗಳ ಕಾಲ, ಸು.455ರವರಗೆ ರಾಜ್ಯವಾಳಿದ. ಕುಮಾರಗುಪ್ತನದು ಶಾಂತಿ ಸುಭಿಕ್ಷೆಗಳ ಕಾಲ. ದೀರ್ಘಕಾಲ ಆಳಿದ ಈತ ಪೂರ್ವಜರಿಂದ ಪಡೆದ ವಿಸ್ತಾರವಾದ ರಾಜ್ಯವನ್ನು ಕಾಪಾಡಿಕೊಂಡು ಬಂದ. ಇದಕ್ಕೆ ಇವನ ದಕ್ಷ ಆಡಳಿತವೂ ಕಾರಣ. ಮಹೇಂದ್ರಾದಿತ್ಯನೆಂಬ ಬಿರುದು ಹೊಂದಿದ್ದ ಈತ ಅಶ್ವಮೇಧಯಾಗ ಮಾಡಿದ. ಸ್ವಾಮಿ ಕಾರ್ತಿಕೇಯನ ಚಿತ್ರವುಳ್ಳ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದ. ಬೆಳ್ಳಿಯ ನಾಣ್ಯಗಳ ಮೇಲೆ ಗರುಡನ ಚಿತ್ರಕ್ಕೆ ಬದಲು ನವಿಲಿನ ಚಿತ್ರವನ್ನು ಅಚ್ಚುಹಾಕಿಸಿದ. ಇವನ ಅಧೀನದಲ್ಲಿದ್ದ ಅನೇಕ ಮಾಂಡಲಿಕರ ಹಾಗೂ ಇತರ ಅಧಿಕಾರಿಗಳ ವಿವರಗಳು ತಿಳಿದಿವೆ.

ಆದರೆ ಇವನ ರಾಜ್ಯಭಾರಕಾಲದ ಕೊನೆಯ ವರ್ಷಗಳಲ್ಲಿ ರಾಜ್ಯಕ್ಕೆ ಶತ್ರುಬಾಧೆಯಿಂದ ಗಂಡಾಂತರವೊದಗಿತು. ಆ ಶತ್ರುಗಳು ಯಾರು ಎಂಬುದನ್ನು ಕುರಿತು ವಿವಾದಗಳಿವೆ. ಅವರು ಯಾರೇ ಆಗಿದ್ದಿರಲಿ, ಅವರಿಂದ ರಾಜ್ಯಕ್ಕೆ ತೀವ್ರವಾದ ಹಾನಿಯುಂಟಾಯಿತು. ಆದರೂ ಇಂಥ ಸಂದರ್ಭದಲ್ಲಿ ರಾಜಕುಮಾರ ಸ್ಕಂದಗುಪ್ತ ಶತ್ರುವನ್ನು ಧೈರ್ಯದಿಂದ ಎದುರಿಸಿ ಹಿಮ್ಮೆಟ್ಟಿಸಿದ. ಗುಪ್ತ ಸಾಮ್ರಾಜ್ಯವನ್ನು ರಕ್ಷಿಸುವುದರಲ್ಲಿ ಸ್ಕಂದಗುಪ್ತ ವಿಶಿಷ್ಟ ಪಾತ್ರವಹಿಸಿದ. ಸ್ಕಂದಗುಪ್ತ ಶತ್ರುಗಳನ್ನೋಡಿಸುತ್ತಿದ್ದಾಗಲೇ ಕುಮಾರಗುಪ್ತ ಮರಣಹೊಂದಿದ.

ಕುಮಾರಗುಪ್ತನ ಅನಂತರ ಸ್ಕಂದಗುಪ್ತ 455ರಲ್ಲಿ ಪಟ್ಟಕ್ಕೆ ಬಂದ. ಸ್ಕಂದಗುಪ್ತನ ಶಾಸನಗಳಲ್ಲಿ ತಾತ, ಮುತ್ತಾತನನ್ನು ನೆನೆಯುವಾಗ ಅವರ ಪಟ್ಟದರಸಿಯರ ಉಲ್ಲೇಖವೂ ಇದೆ. ಆದರೆ ಇತನ ತಾಯಿಯ ಉಲ್ಲೇಖವೇ ಇಲ್ಲ. ಅಲ್ಲದೆ ಸ್ಕಂದಗುಪ್ತನ ಅನಂತರ ಬಂದ ಅರಸರ ಶಾಸನಗಳಲ್ಲಿರುವ ಗುಪ್ತರ ವಂಶಾವಳಿಯಲ್ಲಿ ಸ್ಕಂದಗುಪ್ತನ ಹೆಸರೇ ಇಲ್ಲದಿರುವುದು ಆಶ್ಚರ್ಯಕರವಾಗಿದೆ. ಇವುಗಳನ್ನು ಗಮನಿಸಿ ಕೆಲವು ವಿದ್ವಾಂಸರು ಸ್ಕಂದಗುಪ್ತ ಕುಮಾರಗುಪ್ತನ ಪಟ್ಟದ ಮಗನಾಗಿರಲಿಕ್ಕಿಲ್ಲವೆಂದೂ ಆತ ಸಿಂಹಾಸನವನ್ನೇರುವ ಮೊದಲು ತನ್ನ ಪ್ರತಿಸ್ಪರ್ಧಿಗಳೊಡನೆ ಹೋರಾಡಬೇಕಾಯಿತೆಂದೂ ಊಹಿಸಿದ್ದಾರೆ. ಶತ್ರುಗಳನ್ನು ಹಿಮ್ಮೆಟ್ಟಿಸುವ ಸಲುವಾಗಿ ಇವನು ರಣರಂಗದಲ್ಲಿದ್ದಾಗ ಇವನ ಮಲತಾಯಿಯ ಮಗನಾದ ಪುರುಗುಪ್ತ ಸಿಂಹಾಸನವನ್ನೇರಿದನೆಂದೂ ಆದರೆ ಅತಿ ಶೀಘ್ರದಲ್ಲೇ ಸ್ಕಂದಗುಪ್ತ ಇವನನ್ನು ಸೋಲಿಸಿ ಪಟ್ಟಕ್ಕೆ ಬಂದನೆಂದೂ ಊಹಿಸಲಾಗಿದೆ. ಇದರಿಂದ ಸ್ಕಂದಗುಪ್ತನ ಆಳ್ವಿಕೆ ವಿಪತ್ತುಗಳಿಂದ ಕೂಡಿತ್ತೆಂದು ಸ್ಪಷ್ಟವಾಗುತ್ತದೆ. ಶತ್ರುಗಳ ಬಾಧೆಯಿಂದ ಸ್ಕಂದಗುಪ್ತನಿಗೆ ಶಾಂತಿಯಿರದೆ ಹೋಯಿತು. ಈ ಶತ್ರುಗಳಾದರೂ ಯಾರೆಂದು ತಿಳಿಯದು. ಅವರನ್ನು ಮ್ಲೇಂಛರೆಂದು ವರ್ಣಿಸಲಾಗಿದೆ.

ಆದರೆ ಎಲ್ಲಕ್ಕಿಂತ ಮಿಗಿಲಾಗಿ, ಅನಾಗರಿಕರಾದ ಹೂಣರೊಡನೆ ಸೆಣಸಾಡಬೇಕಾಗಿ ಬಂದುದು ಸ್ಕಂದಗುಪ್ತನ ದುರದೃಷ್ಟವಾಗಿತ್ತು. ಬಿಳಿಯ ಹೂಣರು ಅಥವಾ ಎಪ್ತಲೈಟ್ಸ್ ಎನಿಸಿದ ಇವರು 5ನೆಯ ಶತಮಾನದ ಮಧ್ಯಭಾಗದಲ್ಲಿ ಆಕ್ಸಸ್ ಕೊಳ್ಳದಿಂದ ಇಳಿದು

ಪಾರ್ವತಿ ದೇವಾಲಯ, ನಾಚನಕುಠಾರ

ಪರ್ಷಿಯ ಹಿಂದೂಸ್ತಾನಗಳ ಮೇಲೆ ಧಾಳಿ ಮಾಡಿದರು. ಗಾಂಧಾರವನ್ನು ಆಕ್ರಮಿಸಿದ ಇವರು ಅಲ್ಲಿಂದ ಪೂರ್ವಾಭಿಮುಖವಾಗಿ ಮುಂದುವರಿದು ಗುಪ್ತಸಾಮ್ರಾಜ್ಯದ ಮೇಲೆರಗಿದರು. ಇವರ ಧಾಳಿ ರಾಜ್ಯದಲ್ಲಿ ಕೋಲಾಹಲವನ್ನುಂಟು ಮಾಡಿ, ರಾಜ್ಯದ ಆರ್ಥಿಕ ಸ್ಥಿತಿಯನ್ನು ಹದಗೆಡಿಸಿತು. ಸ್ಕಂದಗುಪ್ತನ ಬಂಗಾರದ ನಾಣ್ಯಗಳು ಅತಿ ವಿರಳವೂ ಅವುಗಳ ಚಿನ್ನದ ಪರಿಶುದ್ಧತೆ ಕಡಿಮೆಯೂ ಆಗಿರುವುದು ಆಗಿನ ನಿರಂತರ ಯುದ್ಧಗಳು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಎಷ್ಟರಮಟ್ಟಿಗೆ ಹದಗೆಡಿಸಿದ್ದುವು ಎಂಬುದನ್ನು ಸೂಚಿಸುತ್ತದೆ.

ಇಂಥ ವಿಪತ್ಕಾಲದಲ್ಲೂ ಅರಸ ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ ಸದಾ ಸನ್ನದ್ಧನಿದ್ದನೆಂಬುದು ಗಿರ್ನಾರದಲ್ಲಿ ದೊರೆತ ಸ್ಕಂದಗುಪ್ತ ಶಾಸನದಿಂದ ವ್ಯಕ್ತವಾಗುತ್ತದೆ. ಇಲ್ಲಿಯ ಸುದರ್ಶನ ತಟಾಕವನ್ನು ಮೌರ್ಯವಂಶದ ಚಂದ್ರಗುಪ್ತ ಕಟ್ಟಿಸಿದ. ಕ್ಷತ್ರಪ ರುದ್ರದಾಮನ ಕಾಲದಲ್ಲಿ ಆ ಕೆರೆ ಒಡೆದಾಗ, ಅದನ್ನು ಜೀರ್ಣೋದ್ಧಾರ ಮಾಡಿಸಲಾಯಿತು. ಇದರ ಏರಿ ಮತ್ತೊಮ್ಮೆ ಸ್ಕಂದಗುಪ್ತನ ಕಾಲದಲ್ಲಿ, ಬಹುಶಃ ಆತನ ಆಳ್ವಿಕೆಯ ಮೊದಲನೆಯ ವರ್ಷದಲ್ಲಿಯೆ, ಮುರಿದುಬಿತ್ತು. ಆಗ ಆ ಪ್ರಾಂತ್ಯದ ಅಧಿಕಾರಿಯಾಗಿದ್ದ ಪರ್ಣದತ್ತನೂ ಆತನ ಮಗನಾದ ಚಕ್ರಪಾಲಿತನೂ ಪುನಃ ಆ ಕೆರೆಯ ದುರಸ್ತಿಗೆ ಸೂಕ್ತ ಏರ್ಪಾಡುಗಳನ್ನು ಮಾಡಿದರು. ಅತಿ ಕ್ಲಿಷ್ಟಕಾಲದಲ್ಲೂ ಧೈರ್ಯಗೆಡದೆ ಶತ್ರುಗಳನ್ನು ಸದೆಬಡಿದು ರಾಜ್ಯವನ್ನು ರಕ್ಷಿಸಿದ ಸ್ಕಂದಗುಪ್ತನ ಆಳ್ವಿಕೆಯದು ಗುಪ್ತರ ಇತಿಹಾಸದಲ್ಲಿ ಒಂದು ಪ್ರಮುಖ ಕಾಲ. ಇವನ ರಾಜ್ಯ ಅರಬ್ಬೀ ಸಮುದ್ರದಿಂದ ಬಂಗಾಲ ಕೊಲ್ಲಿಯ ವರೆಗಿನ ಇಡಿಯ ಉತ್ತರಾಪಥವನ್ನು ಒಳಗೊಂಡಿತ್ತು. ಒಂದನೆಯ ಚಂದ್ರಗುಪ್ತ ರಾಜ್ಯವಾಳತೊಡಗಿದಂದಿನಿಂದ 150 ವರ್ಷಗಳಿಗೂ ಹೆಚ್ಚು ಕಾಲ ಗುಪ್ತರು ಭಾರತವನ್ನು ಭದ್ರವಾಗಿ ಕಾಪಾಡಿಕೊಂಡರು.

ಸ್ಕಂದಗುಪ್ತನ ತರುವಾಯ ಆಳಿದ ಗುಪ್ತವಂಶದ ಅರಸರ ವಿಷಯ ವಿಶೇಷವಾಗಿ ತಿಳಿದಿಲ್ಲ. ಸ್ಕಂದಗುಪ್ತನ ಬಳಿಕ ಅವನ ಮಲಸಹೋದರನಾದ ಪುರುಗುಪ್ತ ಸ್ವಲ್ಪ ಕಾಲ ರಾಜ್ಯವಾಳಿದ. ಈತನ ತಾಯಿ ಅನಂತಾದೇವಿ. ಇವರ ಮಕ್ಕಳು ಬುಧಗುಪ್ತ ಮತ್ತು ನರಸಿಂಹ ಗುಪ್ತ. 2ನೆಯ ಕುಮಾರಗುಪ್ತ 474ರಲ್ಲಿ ರಾಜನಾಗಿದ್ದನೆಂದು ಸೂಚಿಸುವ ಆಧಾರಗಳಿವೆ. ಇವನಾರು ಎಂಬುದು ಗೊತ್ತಿಲ್ಲ. ಬಹುಶಃ ಸ್ಕಂದಗುಪ್ತನ ಮಗನೋ ಬುಧಗುಪ್ತನ ಸೋದರನೋ ಆಗಿದ್ದಿರಬೇಕು.

477ರಲ್ಲಿ ಪಟ್ಟಕ್ಕೆ ಬಂದ ಬುಧಗುಪ್ತ 20 ವರ್ಷಗಳ ಕಾಲ ರಾಜ್ಯವಾಳಿದ. ಈತನ ತಾಯಿ ಚಂದ್ರಾದೇವಿ. ಇವನ ಕಾಲದಲ್ಲಿ ಹೊರನೋಟಕ್ಕೆ ಗುಪ್ತ ಸಾಮ್ರಾಜ್ಯ ಸುಭದ್ರವಾಗಿದ್ದಂತೆ ಕಂಡುಬಂದರೂ ಒಳಗಿಂದೊಳಗೇ ಬಿರುಕುಗಳುಂಟಾಗಿದ್ದುವು. ಗುಜರಾತಿನ ಕಾಠೇವಾಡದಲ್ಲಿ ವಲ್ಲಭಿನಗರವನ್ನು ರಾಜಧಾನಿಯಾಗಿ ಹೊಂದಿದ್ದ ಮೈತ್ರಕವಂಶದ ಅರಸರು, ಬುಂದೇಲ

ಖಂಡದ ಬಳಿ ಪರಿವ್ರಾಜಕ ವಂಶದ ಹಸ್ತಿನ, ಸಮೀಪದಲ್ಲಿ ಪಾಂಡುವಂಶದ ಉದಯನ, ಮಾಹಿಷ್ಮತಿಯ ಮಹಾರಾಜ ಸುಬಂಧು, ಇವರೆಲ್ಲ ತೋರಿಕೆಗಾಗಿ ಗುಪ್ತವಂಶದ ಅಧೀನದಲ್ಲಿದ್ದಂತಿದ್ದರೂ, ಸ್ವತಂತ್ರವಾದ ರಾಜ್ಯಗಳನ್ನು ಸ್ಥಾಪಿಸುವ ಹವಣಿಕೆಯಲ್ಲಿದ್ದರು. ಕುಮಾರಗುಪ್ತನ ಮರಣಾನಂತರ ರಾಜ್ಯಕ್ಕಾಗಿ ಅರಸರಲ್ಲಿ ನಡೆದ ಪರಸ್ಪರ ವೈಷಮ್ಯಗಳಲ್ಲದೆ, ಮತ್ತೊಮ್ಮೆ ಪರಕೀಯರ ಧಾಳಿಗೆ ಈ ಸಾಮ್ರಾಜ್ಯ ತುತ್ತಾಯಿತು. ಇದು ಗುಪ್ತರಾಜ್ಯದ ಅವನತಿಗೆ ಒಂದು ಕಾರಣವಾಯಿತು.

ವಾಕಾಟಕ ವಂಶದ ನರೇಂದ್ರಸೇನ ಕೋಸಲ ಮತ್ತು ಮಾಳವ ದೇಶಗಳನ್ನು ಈ ವೇಳೆಗೆ ತನ್ನ ಅಧೀನದೊಳಗೆ ತಂದುಕೊಂಡಿದ್ದ. ಇವು ಗುಪ್ತ ಸಾಮ್ರಾಜ್ಯದ ಭಾಗಗಳಾಗಿದ್ದುವು. ನರೇಂದ್ರಸೇನ ಇವುಗಳನ್ನು ಬಹುಶಃ ಬಲಪ್ರಯೋಗ ಮಾಡಿಯೇ ಪಡೆದಿರಬೇಕು.

ಬುಧಗುಪ್ತನ ಅನಂತರ ಇವನ ಸಹೋದರನಾದ ನರಸಿಂಹಗುಪ್ತನೂ ಇವನ ತರುವಾಯ ಇವನ ಮಗನಾದ 3ನೆಯ ಕುಮಾರಗುಪ್ತನೂ (ವಿಕ್ರಮಾದಿತ್ಯ) ಮೊಮ್ಮಗನಾದ ವಿಷ್ಣುಗುಪ್ತನೂ (ಚಂದ್ರಾದಿತ್ಯ) ಕ್ರಮವಾಗಿ 500 ರಿಂದ 570ರ ಒಂದು ಶಾಸನದಲ್ಲಿ ವೈನ್ಯಗುಪ್ತನೆಂಬ ಅರಸನೂ 510ರ ಶಾಸನದಲ್ಲಿ ಭಾನುಗುಪ್ತನೆಂಬ ಇನ್ನೊಬ್ಬ ಅರಸನೂ ಹೆಸರಿಸಲ್ಪಟ್ಟಿದ್ದಾರೆ. ಇವರಿಬ್ಬರ ನಡುವಣ ಸಂಬಂಧವಾಗಲಿ ಇವರ ಮತ್ತು ನರಸಿಂಹಗುಪ್ತನ ನಡುವಣ ಸಂಬಂಧವಾಗಲಿ ತಿಳಿಯದು. ಬುಧಗುಪ್ತನ ಅನಂತರ ಗುಪ್ತಮನೆತನದಲ್ಲಿ ಅಂತಃಕಲಹಗಳೇರ್ಪಟ್ಟು ಈ ಮೂವರೂ ತಾವು ಅಧಿಕಾರದಲ್ಲಿದ್ದು ಪ್ರದೇಶಗಳಲ್ಲಿಯೇ ಸ್ವತಂತ್ರವಾಗಿ ಕೆಲಕಾಲ ಆಳಿದಂತೆ ತೋರುತ್ತದೆ. ಇವರಲ್ಲಿ ಭಾನುಗುಪ್ತ ತನ್ನ ಸಾಮಂತನಾದ ಗೋಪರಾಜನೊಡಗೂಡಿ ಏರಾಣದಲ್ಲಿ ನಡೆದ ಕದನದಲ್ಲಿ ಹೋರಾಡಿದನೆಂದು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಆಗ ಧಾಳಿ ಮಾಡಿದ ಹೂಣರ ನಾಯಕ ತೋರಮಾನನೊಡನೆ ಬಹಶಃ ಇವರಿಬ್ಬರೂ ಹೋರಾಡಿರಬಹುದು.

ಇದರಂತೆಯೇ ನರಸಿಂಹಗುಪ್ತನೂ ಹೂಣವಂಶದ ಮಿಹಿರಕುಲನೊಡನೆ ಕಾದಾಡಿ ಅವನನ್ನು ಸೋಲಿಸಿದ. ಈತ ಬಾಲಾದಿತ್ಯನೆಂಬ ಬಿರುದನ್ನು ಪಡೆದಿದ್ದ. ಯುವಾನ್‌ಚಾಂಗ್ ಹೇಳಿಕೆಯನ್ನು ಗಮನಿಸಿದರೆ ನರಸಿಂಹಗುಪ್ತ ಬಾಲಾದಿತ್ಯ ಮೊದಲು ಮಿಹಿರಕುಲನಿಂದ ಸೋಲನ್ನನುಭವಿಸಿ ಅವನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಿದರೂ ಕೊನೆಗೆ ಅವನನ್ನು ಪರಾಭವಗೊಳಿಸಿದನೆಂದು ತೋರುತ್ತದೆ.

ನರಸಿಂಹಗುಪ್ತನೇ ಗುಪ್ತವಂಶದ ಕೊನೆಯ ಅರಸನೆಂದು ಹೇಳಬಹುದು. ಇವನ ಅನಂತರ ಮಗನಾದ 3ನೆಯ ಕುಮಾರಗುಪ್ತನೂ ಮೊಮ್ಮಗನಾದ ವಿಷ್ಣುಗುಪ್ತನೂ 535ರಿಂದ 570ರ ವರೆಗೆ ಕ್ರಮವಾಗಿ ಆಳಿದರು. ಆ ವೇಳೆಗಾಗಲೇ ಹೂಣರ ಧಾಳಿಯಿಂದ ಅಂತಃಕಲಹಗಳಿಂದ ಜರ್ಝರಿತವಾಗಿದ್ದ ಗುಪ್ತ ಸಾಮ್ರಾಜ್ಯ ಸು.570ರ ವೇಳೆಗೆ ಅಸ್ತಂಗತವಾಯಿತು.

(ಬಿ.ಆರ್.ಜಿ.)

**ಗುಪ್ತರ ವಂಶಾವಳಿ**

ಮಹಾರಾಜ ಶ್ರೀಗುಪ್ತ
|
ಮಹಾರಾಜ ಘಟೋತ್ಕಚಗುಪ್ತ
|
ಚಂದ್ರಗುಪ್ತ I (ಹೆಂಡತಿ ಕುಮಾರದೇವಿ) (ಸು.320–35)
|
ಕಾಚಗುಪ್ತ(?) — ಸಮುದ್ರಗುಪ್ತ (ಹೆಂಡತಿ: ದತ್ತಾದೇವಿ) (335–75)

ಸಮುದ್ರಗುಪ್ತನ ಮಕ್ಕಳು: ರಾಮಗುಪ್ತ — ಚಂದ್ರಗುಪ್ತ II (ಹೆಂಡತಿಯರು: ಧ್ರುವದೇವಿ ಮತ್ತು ಕುಬೇರನಾಗ)(375–415)
|
ಕುಮಾರಗುಪ್ತ (415–55) (ಹೆಂಡತಿಯರು: ಅನಂತಾದೇವಿ ಮತ್ತು ದೇವಕಿ)
|
ಸ್ಕಂದಗುಪ್ತ (ಸು.455–67) — ಪುರುಷಗುಪ್ತ (ಸು.467–72)

ಸ್ಕಂದಗುಪ್ತ → ಕುಮಾರಗುಪ್ತ II (473–76)

ಪುರುಷಗುಪ್ತ → ಬುಧಗುಪ್ತ (477–97) — ನರಸಿಂಹಗುಪ್ತ (472–73)

ನರಸಿಂಹಗುಪ್ತ → ಕುಮಾರಗುಪ್ತ III (473–500)
|
ವಿಷ್ಣುಗುಪ್ತ

**ವಾಸ್ತು ಮತ್ತು ಶಿಲ್ಪಕಲೆ:** ಗುಪ್ತರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ದೇಗುಲ ವಾಸ್ತು ಉದಾಹರಣೆ ಗಳು ಉತ್ತರ ಭಾರತದ ಕೆಲವೆಡೆ ಮಾತ್ರ ಉಳಿದುಬಂದಿವೆ. ಇವಾವುದನ್ನೂ ಗುಪ್ತ ಅರಸರ ನೇರ ಪ್ರೋತ್ಸಾಹದಿಂದ ರಚಿತವಾದುದೆಂಬುದಾಗಿ ಗುರುತಿಸುವಂತಿಲ್ಲ. ಇವು ಇಟ್ಟಿಗೆ ಇಲ್ಲವೆ ಶಿಲೆಯಿಂದ ನಿರ್ಮಿತವಾಗಿವೆ. ಕಲ್ಲಿನ ನಿಕ್ಷೇಪಗಳ ಕೊರತೆಯಿರುವ ಮಧ್ಯದೇಶದಲ್ಲಿ (ಉತ್ತರ ಪ್ರದೇಶ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ) ಇಟ್ಟಿಗೆಯ ದೇಗುಲಗಳು ನಿರ್ಮಾಣವಾದವು. ಇವುಗಳಲ್ಲಿ ಕೆಲವೇ ಕೆಲವು ಮಾತ್ರ ಉಳಿದಿವೆ. ಸಾಮ್ರಾಜ್ಯದ ದಕ್ಷಿಣ ಭಾಗದಲ್ಲಿ ಶಿಲಾನಿಕ್ಷೇಪಗಳು ಸಮೃದ್ಧವಾಗಿವೆ. ಆದುದರಿಂದ ಈ ಪ್ರದೇಶದಲ್ಲಿ ಕೆಲವು ಶಿಲಾ ದೇಗುಲ ವಾಸ್ತು ಉದಾಹರಣೆಗಳು ಲಭ್ಯವಾಗಿವೆ. ಆದರೆ ಇವುಗಳಲ್ಲಿ ಗುಪ್ತರ ಕಾಲದ ಉತ್ತರಾರ್ಧದ ಉದಾಹರಣೆಗಳೇ ಹೆಚ್ಚು. ಕಟ್ಟಡ ಅಥವಾ ರಚನ ವಾಸ್ತುವಿಗೆ ಈ ಕಾಲದಲ್ಲಿ ಪ್ರಾಧಾನ್ಯ ಬಂದು ದೇಗುಲಗಳಿಗೆ ಶಿಲಾಮಾಧ್ಯಮದ ಬಳಕೆ ಹೆಚ್ಚಾಯಿತು. ಹೀಗಾಗಿ ಮುಂಚಿನ ಕಟ್ಟಿಗೆಯ ವಾಸ್ತುವಿನ ಉದಾಹರಣೆಗಳ ಅನುಕರಣೆಯ ಬದಲು ವಾಸ್ತು ಶಿಲ್ಪಗಳು ದೃಢತೆ, ಪ್ರಮಾಣ ಮತ್ತು ಸಮತೋಲನದ ಸಮಸ್ಯೆಗಳ ಬಗ್ಗೆ ಹೆಚ್ಚು ಲಕ್ಷ್ಯವಹಿಸಿದ್ದು ಕಾಣುತ್ತದೆ.

ಗುಪ್ತರ ಕಾಲದ ದೇವಾಲಯಗಳು ಸ್ವರೂಪದಲ್ಲಿ ವೈವಿಧ್ಯಮಯವಾಗಿವೆ. ಈಗ ಉಳಿದುಬಂದಿರುವ ತೀರ ಸರಳ ಮತ್ತು ಜನಪ್ರಿಯ ರೀತಿಯ ದೇಗುಲಗಳಿಗೆ ಚೌಕ ವಿನ್ಯಾಸವುಳ್ಳ, ಸಮತಟ್ಟಾದ ಚಾವಣಿಯುಳ್ಳ ಗರ್ಭಗೃಹವಿದೆ. ಇದಕ್ಕೆ ಅಂಟಿಕೊಂಡಂತೆ ಮುಂದುಗಡೆ ಚಿಕ್ಕಗಾತ್ರದ ಕುಳ್ಳಗಿನ ತೆರೆದ ಮುಖಮಂಟಪವಿದೆ. ಗರ್ಭಗೃಹಕ್ಕೆ

ದೇವಾಲಯ, ಸಾಂಚಿ

ಮುಖಮಂಟಪದ ಮೂಲಕ ಒಂದೇ ಪ್ರವೇಶವಿದ್ದು ಕಿಂಡಿಗಳಿರುವುದಿಲ್ಲ. ಮುಖಮಂಟಪದ ಕಂಬದ ಕೆಳಭಾಗ ಚೌಕವೂ ಅಲಂಕಾರರಹಿತವೂ ಆಗಿದ್ದು ಪೀಠದ ಅಭಾಸ ನೀಡುತ್ತದೆ. 8 ಇಲ್ಲವೇ 16 ಮುಖಗಳಿರುವ ಕಂಬದ ಕಾಂಡಭಾಗ ದುಂಡಗಿನ ದಂಡದಂತಹ ರೂಪು ಪಡೆದಿದೆ. ಕಾಂಡದ ಮೇಲ್ಗಡೆ ಘಟಪಲ್ಲವ ಅಲಂಕರಣವಿದ್ದು ಅದರ ಮೇಲಿರುವ ಗುರುತರ ಫಲಕ ಸಿಂಹಬೋದಿಗೆಯನ್ನು ಹೊತ್ತಿರುತ್ತದೆ. ಮುಖಮಂಟಪದ ಮುಖದಲ್ಲಿರುವ ನಾಲ್ಕು ಕಂಬಗಳ ಸಾಲಿನಲ್ಲಿ ಮಧ್ಯದ ಜೋಡಿಯ ನಡುವಿನ ಅಂತರ ಪಾರ್ಶ್ವದ ಜೋಡಿಗಳ ನಡುವಿನ ಅಂತರಕ್ಕಿಂತ ಹೆಚ್ಚಾಗಿರುತ್ತದೆ. ಸಾಲಂಕೃತ ದ್ವಾರಬಂಧದ ಮೇಲ್ಗಡೆ ಉತ್ತರಾಂಗವಿರುತ್ತದೆ. ಇಂತಹ ಸರಳ ವಿನ್ಯಾಸದ ವಾಸ್ತುವಿನಿಂದ ಕ್ರಮೇಣ ಭಾರತೀಯ ದೇಗುಲವಾಸ್ತು ಸಂಕೀರ್ಣರೂಪದ್ದಾಗಿ ಅಭಿವೃದ್ಧಿಹೊಂದಿದೆ. ಎತ್ತರವಾದ ಜಗತಿ, ಪ್ರದಕ್ಷಿಣಾಪಥದ ಸೇರ್ಪಡೆ ಮತ್ತು ಶಿಖರ ರಚನೆಗಳು ಮೊದಲ ಮಾರ್ಪಾಡುಗಳು. ಅನಂತರದ ಬೆಳವಣಿಗೆಯಲ್ಲಿ ಮೂಲ ದೇಗುಲದ ಸುತ್ತ ಉಪದೇಗುಲಗಳನ್ನು ರಚಿಸಲಾಗಿದೆ.

ಗುಪ್ತರ ಕಾಲದ ದೇಗುಲಗಳ ಬಹು ಅಲಂಕೃತ ಭಾಗವೆಂದರೆ ದ್ವಾರಬಂಧ. ಇದು ರೋಮನ್ (ಲ್ಯಾಟಿನ್) ಲಿಪಿಯ ಟಿ ಆಕಾರದಲ್ಲಿರುವುದು ಸಾಮಾನ್ಯ. ದ್ವಾರಬಂಧದ ಭುಜಗಳನ್ನು ಅನೇಕ ಶಾಖೆಗಳಾಗಿ ಅಲಂಕರಿಸಿದೆ. ಪ್ರಾಣಿ, ಹೂಬಳ್ಳಿ, ಮಿಥುನ, ಗಣ, ದೇವತೆಗಳ ಸಾಲುಗಳು ಶಾಖೆಗಳ ಅಲಂಕರಣಕ್ಕೆ ಬಳಕೆಯಾಗಿವೆ. ದ್ವಾರಬಂಧದ ಮೇಲ್ಭಾಗದ ಪಾರ್ಶ್ವಗಳಲ್ಲಿ ಇಲ್ಲವೇ ಭುಜಗಳ ಕೆಳ (ಪೇದ್ಯಾ) ಭಾಗದಲ್ಲಿ ಗಂಗಾ ಮತ್ತು ಯಮುನಾ ನದೀದೇವತೆಗಳ ವಿಗ್ರಹಗಳಿರುವುದು ಸಾಮಾನ್ಯವಾಗಿ ಈ ಕಾಲದ ದೇವಾಲಯಗಳ ವಿಶೇಷ ಲಲಾಟದಲ್ಲಿ ದೇವತೆಯ ಬಿಂಬವನ್ನು ಅಳವಡಿಸಲಾಗಿರುತ್ತದೆ. ದೇಗುಲಗಳ ಸುತ್ತ ಬಿಡಿಯಾಗಿ ದೊರೆತಿರುವ ಜಾಲಂಧ್ರಗಳು, ಪ್ರನಾಲಗಳು, ಆಮಲಕಗಳು, ಅಲಂಕಾರಪೂರಿತ ವಾಸ್ತುಭಾಗಗಳು ಶುದ್ಧ ಗುಪ್ತ ಶೈಲಿಯ ಅಲಂಕಾರ ವಿನ್ಯಾಸದ ಪ್ರಮುಖ ಲಕ್ಷಣಗಳು. ಕೆಲವು ದೇವಾಲಯಗಳ ಗೋಡೆಗಳಲ್ಲಿ ಮಾತ್ರ ಕೋಷ್ಠಗಳಿದ್ದು ಇವು ದೊಡ್ಡ ಗಾತ್ರದ

ದೇವತಾ ಶಿಲ್ಪಗಳನ್ನೊಳಗೊಂಡಿವೆ. ಇವುಗಳಲ್ಲಿ ಟಿ ಆಕಾರದ ದ್ವಾರಬಂಧ, ದ್ವಾರಬಂಧದ ಭುಜಗಳನ್ನು ಶಾಖೆಗಳಾಗಿ ಅಲಂಕರಿಸುವ ಪದ್ಧತಿ, ಹೂ–ಎಲೆ–ಬಳ್ಳಿಗಳ ವಿನ್ಯಾಸ, ಚೌಕಖಾನೆಗಳ ವಿನ್ಯಾಸ ಕ್ರಮ ಮುಂತಾದ ಹಲವು ಅಂಶಗಳ ಮೂಲವನ್ನು ಕುಷಾಣಕಾಲೀನ ಮಥುರ ಮತ್ತು ಗಾಂಧಾರ ಶಿಲ್ಪ ಪರಂಪರೆಯಲ್ಲಿ ಕಾಣಬಹುದು.

ಈ ಹಿನ್ನೆಲೆಯಲ್ಲಿ ಗುಪ್ತರ ಕಾಲದ ದೇಗುಲಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು: 1. ಸಮತಟ್ಟಾದ ಚಾವಣಿಯುಳ್ಳ, ಚೌಕ ಗರ್ಭಗೃಹವಿರುವ, ಚಿಕ್ಕ ಮುಖಮಂಟಪವನ್ನೊಳಗೊಂಡ ದೇಗುಲಗಳು. ಇದಕ್ಕೆ ಸಾಂಚಿಯ 17ನೆಯ ಗುಡಿ ಮತ್ತು



ಶಿವದೇವಾಲಯ, ಭೂಮರಾ

ತಿಗಾವದ ಕಂಕಾಲೀ ದೇವಿ ಗುಡಿ ಉದಾಹರಣೆಗಳು. 2. ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥ ವಿರುವ ದೇಗುಲಗಳು. ಇದಕ್ಕೆ ನಾಚ್ನಾ ಕುತಾರದ ಪಾರ್ವತಿ ದೇವಾಲಯ ಹಾಗೂ ಭೂಮರಾದ ಶಿವ ದೇವಾಲಯ ಒಳ್ಳೆಯ ಉದಾಹರಣೆಗಳು. 3. ಗರ್ಭಗೃಹದ ಮೇಲೆ ಕುಳ್ಳ ಶಿಖರವುಳ್ಳ ದೇವಾಲಯಗಳು. ಭಿತರಗಾಂವದಲ್ಲಿರುವ ಇಟ್ಟಿಗೆಯ ದೇಗುಲ ಹಾಗೂ ದೇವಗಢದಲ್ಲಿರುವ ದಶಾವತಾರ ದೇವಾಲಯ ಇದಕ್ಕೆ ಉದಾಹರಣೆಗಳು.

ಸಾಂಚಿಯ 17ನೆಯ ಗುಡಿ ಮತ್ತು ತಿಗಾವದ ಕಂಕಾಲೀ ದೇವಿ ಗುಡಿಗಳನ್ನು ಗುಪ್ತರ ಕಾಲಾವಧಿಯ ಪ್ರಾಚೀನತಮದೇಗುಲಗಳೆಂದು ಗುರುತಿಸಲಾಗಿ. ಸಾಂಚಿಯ 17ನೆಯ ಗುಡಿ ಚಿಕ್ಕಗಾತ್ರದ, ಸಮತಟ್ಟಾದ ಚಾವಣಿಯುಳ್ಳ ಗರ್ಭಗೃಹ ಮತ್ತು ಚಿಕ್ಕ ಮುಖಮಂಟಪ ವನ್ನೊಳಗೊಂಡ ತೀರ ಸರಳ ದೇಗುಲ. ಮುಖಮಂಟಪದ ಮುಖದಲ್ಲಿ ಒಂದೇ ಸಾಲಿನಲ್ಲಿ ನಾಲ್ಕು ಕಂಬಗಳಿದ್ದು ನಡುವಣ ಜೋಡಿಯ ಅಂತರ ಪಾರ್ಶ್ವಗಳಿಗಿಂತ ಹೆಚ್ಚಾಗಿದೆ. ಗರ್ಭಗೃಹ ದ್ವಾರದ ಪಾರ್ಶ್ವಗಳಲ್ಲಿ ಅರ್ಧಗಂಬಗಳಿವೆ. ವಿಶೇಷ ಅಲಂಕಾರ ಕಂಬಗಳಿಗಷ್ಟೇ ಸೀಮಿತವಾಗಿದೆ. ಕಂಬಗಳು ಕೆಳಭಾಗದಲ್ಲಿ ಚೌಕವಾಗಿದ್ದು, ಅವುಗಳ ಕಾಂಡದ ಕೆಳಭಾಗ 8 ಮುಖವುಳ್ಳದ್ದಾಗಿ, ಮೇಲ್ಭಾಗ 16 ಮುಖವುಳ್ಳದ್ದಾಗಿದೆ. ಇದರ ಮೇಲೆ ಘಂಟಾಕೃತಿಯ (ಮಗುಚಿಹಾಕಿದ ಪದ್ಮದ) ಅಲಂಕಾರವಿದೆ. ಇದಾದ ತರುವಾಯ ದಪ್ಪನೆಯ ಫಲಕ ಹಾಗೂ ಇದರ ಮೇಲೆ ಕುಳಿತ ಸಿಂಹಗಳ ಬೋದಿಗೆ ಇದೆ. ಇದು ಮೌರ್ಯ ಸ್ತಂಭಗಳ ಪರಂಪರೆಯಿಂದ ಉಳಿದು ಬಂದಿರುವ ಲಕ್ಷಣವೆಂದು ಭಾವಿಸಲಾಗಿದೆ. ಉತ್ತರಾಂಗದಲ್ಲಿರುವ ಒಂದು ಮಡಿಕೆ ಇಡೀ ದೇವಾಲಯದ ಸುತ್ತ ಪಟ್ಟಿಯಂತೆ ಸಾಗಿದೆ.

ತಿಗಾವದ ಕಂಕಾಲೀದೇವಿ ಗುಡಿ (ಜಬಲಪುರ ಜಿಲ್ಲೆ) ಬಹುಶಃ ನಿಜ ಗುಪ್ತಶೈಲಿಯ ಪ್ರಾಚೀನ ಉದಾಹರಣೆಯಾಗಿದೆ. ಇದರ ಮುಖಮಂಟಪದ ಕಂಬಗಳಲ್ಲಿ ಘಂಟಾಕೃತಿಯ ಬದಲು ಪೂರ್ಣಘಟ ಅಲಂಕಾರವನ್ನು ಅಳವಡಿಸಿದೆ. ಈ ಲಕ್ಷಣ ಅನಂತರದ ಭಾರತೀಯ ದೇಗುಲ ವಾಸ್ತುವಿನ ಆಕರ್ಷಕ ಭಾಗವಾಗಿ ಅಭಿವೃದ್ಧಿ ಹೊಂದಿತು. ಫಲಕದ ಮುಂದೆ ಸಿಂಹ ಶಿಲ್ಪಗಳಿವೆ. ದ್ವಾರಬಂಧ ಕಟ್ಟಿಗೆಯ ದ್ವಾರಗಳ ಅಲಂಕಾರ ವಿನ್ಯಾಸವನ್ನು ನೆನಪಿಸುತ್ತದೆ. ಟಿ ಆಕಾರದ ಚೌಕಟ್ಟಿನ ಮೇಲ್ಭಾಗದ ಪಾರ್ಶ್ವಗಳಲ್ಲಿ ಮೊಸಳೆಯ ಮೇಲೆ ನಿಂತಿರುವ ಗಂಗಾ ಮತ್ತು ಆಮೆಯ ಮೇಲೆ ನಿಂತಿರುವ ಯಮುನೆಯ ಶಿಲ್ಪಗಳಿವೆ. ಲಲಾಟದಲ್ಲಿ ದೇವತಾ ಬಿಂಬವಿರುವುದು ಉಲ್ಲೇಖಾರ್ಹವಾಗಿದೆ. ಇವೆರಡೂ ದೇಗುಲಗಳಿಗೆ ಈಗ ಸಮತಟ್ಟಾದ ಚಾವಣಿಯಿದೆ. ಆದರೆ ಮೂಲದಲ್ಲಿ ಶಿಖರ ರಚನೆಯಿತ್ತೋ ಇಲ್ಲವೋ ತಿಳಿಯದು. ಹೆಚ್ಚಿನ ವಿದ್ವಾಂಸರು ಈಗಿರುವ ರೀತಿಯಲ್ಲಿಯೇ ದೇಗುಲ ಸ್ವರೂಪವನ್ನು ಅರ್ಥೈಸಿದ್ದಾರೆ. ಆದರೆ ಶಿಖರ ಮತ್ತು ಕಲಶ ರಹಿತ ದೇಗುಲವಾಸ್ತು ಕಲ್ಪನೆ ಭಾರತೀಯ ಪರಂಪರೆಗೆ ತೀರ ಹೊರತಾದುದೆಂದೂ ಮೂಲತಃ ಈ ಗುಡಿಗಳಿಗೆ ಶಿಖರ ರಚನೆ ಇದ್ದೇ ಇದ್ದಿರಬೇಕೆಂದೂ ಈಚೆಗೆ ಕೆಲವು ವಿದ್ವಾಂಸರು ವಾದಿಸಿದ್ದಾರೆ. ಇವೆರಡರ ಕಾಲ ಸು.4ನೆಯ ಶತಮಾನ.

ನಾಚ್ನಾ ಕುತಾರದ (ಪನ್ನ ಜಿಲ್ಲೆ) ಪಾರ್ವತಿ ದೇವಾಲಯ ಎತ್ತರವಾದ ಜಗತಿ ಮೇಲಿದೆ. ಇಲ್ಲಿಯೂ ಗರ್ಭಗೃಹದ ಮುಂದೆ ಚಿಕ್ಕ ಮುಖಮಂಟಪವಿದೆ. ಮುಖಮಂಟಪಕ್ಕೆ ಏರಿಹೋಗಲು ಸೋಪಾನಗಳಿವೆ. ಪ್ರದಕ್ಷಿಣಾಪಥವನ್ನು ಅಳವಡಿಸಿರುವುದು ಈ ದೇವಾಲಯದ ವೈಶಿಷ್ಟ್ಯವಾಗಿದೆ. ಪ್ರದಕ್ಷಿಣಾಪಥದ ಬೆಳಕುಗಾಳಿಯ ಒಡನಾಟಕ್ಕೆ ಗರ್ಭಗೃಹದ ಹೊರಗೋಡೆ ಯಲ್ಲಿ ಮೂರು ದಿಕ್ಕುಗಳಲ್ಲಿ ಜಾಲಂಧ್ರಗಳಿವೆ. ಗರ್ಭಗೃಹದ ಒಳಗೋಡೆಗೂ ಪಾರ್ಶ್ವದ ಎರಡು ಗೋಡೆಗಳಿಗೂ ಜಾಲಂಧ್ರಗಳನ್ನು ಅಳವಡಿಸಿದೆ. ದ್ವಾರಬಂಧವನ್ನು ಸಮೃದ್ಧವಾಗಿ ಶಿಲ್ಪಗಳಿಂದ ಅಲಂಕರಿಸಿದೆ. ಗರ್ಭಗೃಹದ ಮೇಲ್ಗಡೆ ಪ್ರದಕ್ಷಿಣಾಪಥದ ಗೋಡೆಯಿಂದ ಹಿಂದೆ ಸರಿದಂತೆ ಮೇಲಣ ಭೂಮಿಯನ್ನು ರಚಿಸಿರುವುದು ಈ ದೇವಾಲಯದ ಇನ್ನೊಂದು ವೈಶಿಷ್ಟ್ಯ. ಈ ದೇವಾಲಯದ ಮೈಯನ್ನು ಬಂಡೆ ಗುಹೆಗಳನ್ನೊಳಗೊಂಡ ಬೆಟ್ಟದಂತೆ ಪ್ರಾಣಿಗಳಿಂದೊಡಗೂಡಿ ಅಲಂಕರಿಸಿರುವುದು ಕುತೂಹಲಕಾರಿಯಾಗಿದೆ. ಈ ಮೂಲಕ ದೇವಾಲಯವನ್ನು ಪರ್ವತಕ್ಕೆ ಹೋಲಿಸುವ ಹಾಗೂ ಶಿವನು ಕೈಲಾಸವಾಸನೂ ಕಾಡು–ಬೆಟ್ಟಗಳ ಯೋಗಿಯೂ ಆಗಿದ್ದಾನೆಂಬುದನ್ನು ಚಿತ್ರಿಸುವ ಪ್ರಯತ್ನ ಇಲ್ಲಿದೆ. ಇದರ ಕಾಲ ಸು.5ನೆಯ ಶತಮಾನ.

ಭೂಮರಾದಲ್ಲಿರುವ (ಪನ್ನ ಜಿಲ್ಲೆ) ಶಿವದೇವಾಲಯದಲ್ಲಿ ತಲವಿನ್ಯಾಸದ ಮತ್ತಷ್ಟು ಬೆಳವಣಿಗೆಯನ್ನು ಕಾಣಬಹುದು. ಎತ್ತರ ಜಗತಿ ಮೇಲೆ ನಿರ್ಮಿತವಾಗಿರುವ ಈ ಸಾಂಧಾರ ದೇವಾಲಯ ಬಹಳ ಜೀರ್ಣಗೊಂಡಿದೆ. ಮುಖಮಂಟಕ್ಕೆ ಕೊಂಡೊಯ್ಯುವ ಸೋಪಾನಗಳ ಇಕ್ಕೆಲಗಳಲ್ಲಿ ಒಂದೊಂದರಂತೆ ಎರಡು ಚಿಕ್ಕ ಉಪದೇಗುಲಗಳನ್ನು ರಚಿಸಿರುವುದು ಗಮನಾರ್ಹ.

ದೇವಗಡದ (ಝಾಂಸಿ ಜಿಲ್ಲೆ) ದಶಾವತಾರ ದೇವಾಲಯ ಗುಪ್ತರ ಅಂತ್ಯಕಾಲದಲ್ಲಿ ಹಿಂದು ದೇವಾಲಯದ ಒಂದು ಪ್ರಕಾರದ ಮಾದರಿಯಾಗಿದೆ. ನಾಲ್ಕೂ ದಿಕ್ಕುಗಳಿಂದ ಸೋಪಾನಗಳಿರುವ ಎತ್ತರವಾದ ವಿಶಾಲ ಜಗತಿ ಮಧ್ಯದಲ್ಲಿ ನಿಂತಿರುವ ಈ ದೇಗುಲಕ್ಕೆ ಮೂರು ಪ್ರಮುಖ ವೈಶಿಷ್ಟ್ಯಗಳಿವೆ. ಗರ್ಭಗೃಹದ ಮೇಲ್ಗಡೆ ಶಿಖರವಿರುವುದು ಮೊದಲ ವೈಶಿಷ್ಟ್ಯ. ಈವರೆಗೆ ಉಳಿದುಬಂದಿರುವ ಶಿಖರವುಳ್ಳ ಪ್ರಾಚೀನತಮ ದೇಗುಲವಿದು. ಗರ್ಭಗೃಹದ ನಾಲ್ಕೂ ಬದಿಗಳಲ್ಲಿ, ಸಮತಟ್ಟಾದ ಚಾವಣಿಯುಳ್ಳ ಮುಖಮಂಟಪವನ್ನು ರಚಿಸಿರುವುದು ಎರಡನೆಯ ವೈಶಿಷ್ಟ್ಯ. ಜಗತಿಯ ನಾಲ್ಕೂ ಮೂಲೆಗಳಲ್ಲಿ, ಕೆಳಗಡೆ ಒಂದೊಂದರಂತೆ ನಾಲ್ಕು ಉಪ ದೇಗುಲಗಳಿರುವುದು ಮೂರನೆಯ ವೈಶಿಷ್ಟ್ಯ. ನಮಗೆ ತಿಳಿದಿರುವ ಪಂಚಾಯತನ ಮಾದರಿಯ ದೇಗುಲದ ಪ್ರಾಚೀನತಮ ಉದಾಹರಣೆ ಇದಾಗಿದೆ. ಮೂಲ ಶಿಖರ ಆಮಲಕ, ಕರ್ಣಾಮಲಕ, ಕಲಶ ಮುಂತಾದ ಅಲಂಕಾರಗಳಿಂದ ಕೂಡಿದ್ದು, ಔತ್ತರೇಯ ರೇಖಾನಾಗರ ಸಂಪ್ರದಾಯ ಇಲ್ಲಿ ನಿಖರತೆಯನ್ನು ಪಡೆಯಿತೆಂದು ಭಾವಿಸ ಬಹುದು. ಗರ್ಭಗೃಹದ ದ್ವಾರಬಂಧ ಬಹು ಸಮೃದ್ಧವಾಗಿ ಅಲಂಕೃತವಾಗಿದ್ದು ಲಲಾಟದಲ್ಲಿ ಅನಂತಾಸೀನ ವಿಷ್ಣುವಿನ ಬಿಂಬವಿದೆ. ಬಾಹುಗಳ ಕೆಳ ಭಾಗದಲ್ಲಿ ಆಯುಧಪುರುಷರು, ಗಣಗಳು, ದ್ವಾರಪಾಲಕರು, ಸ್ತ್ರೀಯರು ಮುಂತಾದ ಸುಂದರ ಶಿಲ್ಪಗಳಿವೆ. ಶಾಖೆಗಳಲ್ಲಿ ಲತಾ, ಪುಷ್ಪ, ಮಿಥುನ, ಸ್ತಂಭಗಳಿವೆ. ದ್ವಾರಬಂಧದ ತೊಲೆಯ ಹೆಚ್ಚುವರಿ ಪ್ರದೇಶದಲ್ಲಿ ಗಂಗಾ ಮತ್ತು ಯಮುನೆಯ ಶಿಲ್ಪಗಳಿವೆ. ಗರ್ಭಗೃಹದ ಉಳಿದ ಗೋಡೆಗಳಲ್ಲಿ ನರನಾರಾಯಣ, ಅನಂತಶಯನ ಹಾಗೂ ಗಜೇಂದ್ರಮೋಕ್ಷವನ್ನು ಚಿತ್ರಿಸಿರುವ ಮೂರು ಸುಂದರವಾದ ದೊಡ್ಡ ಶಿಲ್ಪಫಲಕಗಳನ್ನು ಅಳವಡಿಸಿದೆ. ದೇವಾಲಯದ ಅಲಂಕಾರಕ್ಕೆ ಸಾಕಷ್ಟು ಲಕ್ಷ್ಯಕೊಟ್ಟಿರುವುದನ್ನು ಈ ಉದಾಹರಣೆ ಯಲ್ಲಿ ಕಾಣಬಹುದು. ಇದು ಸು.5ನೆಯ ಶತಮಾನದ ಅಂತ್ಯ ಇಲ್ಲವೇ 6ನೆಯ ಶತಮಾನದ ಪೂರ್ವಾರ್ಧದದ್ದಿರಬೇಕು.

ಈ ಕಾಲದಲ್ಲಿ ಇತರ ರೀತಿಯ ತಲವಿನ್ಯಾಸಗಳುಳ್ಳ ಶಿಲಾದೇಗುಲಗಳೂ ನಿರ್ಮಾಣವಾಗಿವೆ. ಬಿಹಾರಿನ ಮುಂಡೇಶ್ವರಿಯಲ್ಲಿರುವ ದೇಗುಲಕ್ಕೆ ಅಷ್ಟಕೋಣಾಕೃತಿಯ ವಿನ್ಯಾಸವನ್ನಳ ವಡಿಸಿದೆಯಾದರೆ ರಾಜಗೀರ್‍ದಲ್ಲಿರುವ ಮಣಿಯರ್ ಮಠ್ ದೇಗುಲ ವೃತ್ತಾಕಾರವಾಗಿದೆ. ಪ್ರಯೋಗ ರೂಪದವು. ಮಹಾರಾಷ್ಟ್ರದ ತೇರ್‍ದಲ್ಲಿರುವ ತ್ರಿವಿಕ್ರಮ ದೇಗುಲ ಈ ಮಾದರಿಯದು. ಆದರೆ ಈ ಕೊನೆಯ ಮಾದರಿಗಳು ಗುಪ್ತ ಸಾಮ್ರಾಜ್ಯದ ಹೊರಗಡೆ ಇವೆ.

ಗುಪ್ತರ ಕಾಲದ ಇಟ್ಟಿಗೆಯ ದೇಗುಲಗಳೂ ಗಮನಾರ್ಹವಾಗಿವೆ. ಇವುಗಳಲ್ಲಿ ಭಿತರಗಾಂವ್‍ದಲ್ಲಿರುವ ಕಾನ್‍ಪೂರ ದೇವಾಲಯ, ಬೋಧಗಯದಲ್ಲಿರುವ ಮೂಲ ಮಹಾಬೋಧಿ ದೇವಾಲಯ ಹಾಗೂ ಸಿರಪುರದಲ್ಲಿರುವ (ರಾಯಪುರ ಜಿಲ್ಲೆ) ಲಕ್ಷ್ಮಣ ದೇವಾಲಯ ಉಲ್ಲೇಖನೀಯವಾಗಿವೆ. ಭೀತರಗಾಂವ್ ದೇವಾಲಯಕ್ಕೆ ಎಲ್ಲ ನಾಲ್ಕು ದಿಕ್ಕುಗಳಲ್ಲಿಯ ಗೋಡೆಯ ಮಧ್ಯಭಾಗ ಮುಂಚಾಚಿದ್ದು ತ್ರಿರಥ ವಿನ್ಯಾಸವಿದೆ. ಇಟ್ಟಿಗೆಯ ಜಗತಿ ಮೇಲೆ ನಿಂತಿರುವ ಈ ದೇವಾಲಯಕ್ಕೆ ದೃಢವಾದ, ಮಡಿಕೆಗಳುಳ್ಳ ಅಧಿಷ್ಠಾನವಿದೆ. ಅದರ ಮೇಲೆ ಗೋಡೆಯಲ್ಲಿ ಜೋಡಿ ಅರ್ಧಗಂಬಗಳ ಮಧ್ಯಂತರದಲ್ಲಿ ಸುಟ್ಟಮಣ್ಣಿನ ವಿಗ್ರಹ ಫಲಕಗಳಿವೆ. ಮೇಲ್ಗಡೆ ಎರಡು ಕಪೋತಗಳಿದ್ದು ಅವುಗಳ ನಡುವಣ ಪ್ರದೇಶದಲ್ಲಿ ಗುಪ್ತರ ಶಿಲ್ಪಶೈಲಿಯ ಸುಂದರ ಉಬ್ಬುಶಿಲ್ಪಗಳ ಪಟ್ಟಿಕೆಯಿದೆ. ಕಪೋತದ ಮೇಲಿರುವ ಶಿಖರ ಬಹಳ ಜೀರ್ಣವಾಗಿದೆ. ಆದರೆ ಮೇಲಕ್ಕೆ ಹೋದಂತೆ ಹಿಂಬಾಗಿದೆ. ಭೂಮಿಗಳಲ್ಲಿ ಮುಖಗಳನ್ನು ತೋರಿಸುವ ಗವಾಕ್ಷಗಳು, ದೇವತಾ ವಿಗ್ರಹಗಳು ಇತ್ಯಾದಿಗಳಿವೆ. ಗೋಡೆಯ ರಥ ವಿನ್ಯಾಸ ಶಿಖರದಲ್ಲಿಯೂ ಮುಂದುವರಿದಿದೆ. ಶಿಖರದ ಮೂಲ ಸ್ವರೂಪದ ಚಿತ್ರ ಈಗ ದೊರೆಯುತ್ತಿಲ್ಲ. ಇದು ಸು.5ನೆಯ ಶತಮಾನದ ದೇಗುಲ.

ಬೋಧಗಯದ ಮೂಲ ಮಹಾಬೋಧಿ ದೇವಾಲಯ ಭೀತರಗಾಂವ್ ಇಟ್ಟಿಗೆ ದೇವಾಲಯವನ್ನು ಕೆಲವು ವಾಸ್ತು ಅಂಶಗಳಲ್ಲಿ ಹೋಲುತ್ತಿತ್ತು. ಈಗಿರುವ ದೇಗುಲಕ್ಕೆ ಅನಂತರ ಕಾಲದ ಜೀರ್ಣೋದ್ಧಾರ ಮತ್ತು ಸೇರ್ಪಡೆಗಳಾಗಿವೆ. ಪಂಚರಥ ವಿನ್ಯಾಸವುಳ್ಳ ಪಿರಿಮಿಡ್ಡಿನಾಕಾರದ ಶಿಖರ 55 ಮೀ ಎತ್ತರವಿದ್ದು, ಆಮಲಕಗಳಿರುವ 7 ಭೂಮಿಗಳಿವೆ. ವಿಶಾಲವಾದ ಕಮಾನುಳ್ಳ ದ್ವಾರ ಪೂರ್ವದಿಕ್ಕಿನಿಂದ ದೇವಾಲಯದೊಳಕ್ಕೆ ಪ್ರವೇಶ ಒದಗಿಸುತ್ತದೆ. ಎತ್ತರವಾದ ಜಗತಿಯ ನಾಲ್ಕು ಮೂಲೆಗಳಲ್ಲಿರುವ ಕಿರಿಶಿಖರಗಳು ಅನಂತರದ ಸೇರ್ಪಡೆಗಳು.

ಸಿರಪುರದ ಲಕ್ಷ್ಮಣ ದೇವಾಲಯ ಎತ್ತರವಾದ ಅಧಿಷ್ಠಾನವುಳ್ಳ, ಗರ್ಭಗೃಹ ಮತ್ತು ಮುಖಮಂಟಪವಿರುವ ಪೂರ್ಣ ಬೆಳವಣಿಗೆ ಹೊಂದಿರುವ ಅತ್ಯಂತ ಶ್ರೇಷ್ಠ ಮಾದರಿ ಇಟ್ಟಿಗೆ ದೇವಾಲಯ. ಇದರ ಗೋಡೆಯ ಮುಂಚಾಚುಗಳಿಂದಾಗಿ ಬೆಳಕು ನೆರಳಿನ ಚೆಲ್ಲಾಟ ಪರಿಣಾಮ ಕಾರಿಯಾಗಿವೆ. ಶಿಖರ ರೇಖಾನಾಗರ ರೀತಿಯದಾಗಿದ್ದು, ನಾಚ್ನಾ ಕುಠಾರದ ಮಹಾದೇವ ದೇವಾಲಯದಲ್ಲಿರುವಂತೆ ಇದ್ದಿರಬೇಕು. ಇವೆರಡೂ ಸು. 7ನೆಯ ಶತಮಾನದ ಗುಡಿಗಳು.



ಗಜೇಂದ್ರ ಮೋಕ್ಷ

**ಶಿಲ್ಪಕಲೆ:** ಗುಪ್ತರ ಕಾಲದ ದೇಗುಲ ವಾಸ್ತುವಿನಲ್ಲಿ ಕಾಣುವ ವೈವಿಧ್ಯತೆಗೆ ತದ್ವಿರುದ್ಧವಾಗಿ ಶಿಲ್ಪಶೈಲಿಯ ಲಕ್ಷಣಗಳು ಸಾರೂಪ್ಯವಾಗಿರುವುದು ವಿಶಿಷ್ಟವಾಗಿದೆ. ಕೆಲವು ಪ್ರಾದೇಶಿಕ ವೈವಿಧ್ಯಗಳಿದ್ದಾಗ್ಯೂ ಸಾಮ್ರಾಜ್ಯದ ಉದ್ದಗಲಕ್ಕೂ ಶೈಲಿಯ ಮೂಲಭೂತ ಲಕ್ಷಣಗಳಲ್ಲಿ ಇದು ಗುಪ್ತರ ಕಾಲದ್ದು ಎಂದು ಗುರುತಿಸುವಷ್ಟು ಮಟ್ಟಿಗೆ ಅನನ್ಯತೆ ಕಾಣುತ್ತದೆ. ಕುಷಾಣರ ಕಾಲದ ಗಟ್ಟಿಮುಟ್ಟಾದ ಮೈಕಟ್ಟಿನ ಭಾರ ವ್ಯಕ್ತಿತ್ವದ ಚಕ್ರವರ್ತಿ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಮೂಡಿದ ಶಿಲ್ಪಗಳು ಗುಪ್ತರ ಕಾಲದಲ್ಲಿ ಲಾವಣ್ಯಯುತ ರೇಖಾರೂಪದ ಪರಿಣಾಮಕಾರಿ ಶಿಲ್ಪಗಳಾಗಿ ವಿಕಾಸ ಹೊಂದಿವೆ. ಆಕರ್ಷಕ ಆದರ್ಶ ಶಾರೀರಿಕ ಸೌಂದರ್ಯ ಆಧ್ಯಾತ್ಮಿಕ ಸೌಂದರ್ಯದ ಸಂಕೇತವಾಗಿ, ಚಕ್ರವರ್ತಿಯ ಪರಿಕಲ್ಪನೆ ಮಹಾಯೋಗಿಯ ಪರಿಕಲ್ಪನೆಯಲ್ಲಿ ಲೀನವಾಗಿ, ನೂರಾರು ಸೃಜನಶೀಲ ಶಿಲ್ಪಗಳಾಗಿ ಅರಳಿದೆ. ಮನುಷ್ಯರೂಪವನ್ನು ನಿಸರ್ಗದ ರೂಪಗಳೊಂದಿಗೆ ಗುರುತಿಸುವ ಪ್ರಕ್ರಿಯೆಯೂ ಈ ಕಾಲದಲ್ಲಿ ಕಾಣುತ್ತದೆ. ನದೀ ದೇವತೆಗಳು, ನಿಧಿಗಳು, ಕುಬ್ಜಗಣಗಳ ಶರೀರದಿಂದ ಉದ್ಭವಿಸಿರುವ ಸಸ್ಯಲೋಕ, ಆಯುಧಪುರುಷರು ಮುಂತಾದವುಗಳಲ್ಲಿ ಇದನ್ನು ಗುರುತಿಸಬಹುದು. ಹಾಗೆಯೇ ಮನುಷ್ಯಶರೀರದ ಭಾಗಗಳನ್ನು ನಿಸರ್ಗದ ಅಂಶಗಳೊಂದಿಗೆ ಹೋಲಿಸುವ ಸಾಹಿತ್ಯಿಕ ಪರಿಪಾಠವೂ (ಚಂದ್ರವದನ, ಕಮಲನೇತ್ರ, ಕಂಬುಗ್ರೀವ ಇತ್ಯಾದಿ) ಶಿಲ್ಪಗಳಲ್ಲಿ ಪ್ರತಿಫಲಿತವಾಗಿರುವುದು ಕಾಣುತ್ತದೆ. ಗುಪ್ತರ ಕಾಲದ ಶಿಲ್ಪಶೈಲಿಯ ರೂಪಣದಲ್ಲಿ ಕುಷಾಣರ ಕಾಲದ ಗಾಂಧಾರ ಮತ್ತು ಮಥುರ ಶೈಲಿಗಳ ಪಾತ್ರವಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಗುಪ್ತರ ಶೈಲಿಯ ಮೊದಲ ಕಾಲನಿರ್ಣೀತ ಶಿಲ್ಪ ಉದಾಹರಣೆಗಳು ವಿದಿಶಾ ಮತ್ತು ಅದರ ಸಮೀಪದಲ್ಲಿರುವ ಉದಯಗಿರಿಯ ಗುಹಾಲಯಗಳಲ್ಲಿವೆ. ಉದಯಗಿರಿಯ ಗುಹಾಲಯಗಳಲ್ಲಿ 2ನೆಯ ಚಂದ್ರಗುಪ್ತನ (380–414) ಅಮಾತ್ಯನ ಹಾಗೂ 402ರ ಶಾಸನಗಳಿವೆ. ಇವೆಲ್ಲವೂ ಹಿಂದು ಗುಹಾಲಯಗಳು. ವಾಸ್ತು ದೃಷ್ಟಿಯಿಂದಲ್ಲದಿದ್ದರೂ ಶಿಲ್ಪಕಲಾ ದೃಷ್ಟಿಯಿಂದ ಇವು ಮಹತ್ತ್ವದ್ದಾಗಿವೆ. ಸಮಪಾದದಲ್ಲಿರುವ, ವೃತ್ತದಂಡಾಕಾರದ ಕಿರೀಟಧರಿಸಿರುವ, ಚತುರ್ಭುಜ ವಿಷ್ಣು ವಿಗ್ರಹಗಳು, ಭೂವರಾಹ, ದುಂಡುಭುಜವುಳ್ಳ ಶಕ್ತಿಯುತ ಕುಮಾರನ ವಿಗ್ರಹಗಳು, ಭಯಂಕರ ಶಕ್ತಿಯ ಪ್ರತಿನಿಧಿಗಳಾಗಿರುವ ಮಹಿಷಮರ್ದಿನಿಯ ವಿಗ್ರಹಗಳು, ದ್ವಾರಪಾಲಕರ ವಿಗ್ರಹಗಳು, ಮುಖಲಿಂಗ ಮುಂತಾದವು ಇಲ್ಲಿವೆ. ವಿಷ್ಣುವಿನ ಆಯುಧಗಳಾದ ಚಕ್ರ ಮತ್ತು ಗದೆಯನ್ನು ಮನುಷ್ಯರೂಪಿನ ಆಯುಧಪುರುಷರಾಗಿ ತೋರಿಸಿರುವುದು ಒಂದು ಶಿಲ್ಪದಲ್ಲಿದೆ. ಆಯುಧಪುರುಷ ಕಲ್ಪನೆ ಗುಪ್ತರ ಕಾಲದ ಅತ್ಯಾಕರ್ಷಕ ಸೃಷ್ಟಿಯಾಗಿದೆ.

ಉದಯಗಿರಿಯ ಗುಹೆಗಳ ಶಿಲ್ಪಗಳಲ್ಲಿ ಭೂವರಾಹ ಶಿಲ್ಪ ಉಲ್ಲೇಖನೀಯವಾಗಿದೆ. ಸು. 6.60×3.90 ಮೀ ವಿಶಾಲವಾಗಿರುವ ಈ ಉಬ್ಬುಶಿಲ್ಪ ವರಾಹರೂಪದ ವಿಷ್ಣುವಿನ ಉಳಿದುಬಂದಿರುವ ಅತ್ಯಂತ ಪ್ರಾಚೀನ ಶಿಲ್ಪದ ಉದಾಹರಣೆಯಾಗಿದೆ. ಮನುಷ್ಯಶರೀರದಿಂದೊಡಗೂಡಿರುವ ವರಾಹಮುಖದ ವಿಷ್ಣು ತನ್ನ ಬಲಕೋರೆಯಿಂದ ಸ್ತ್ರೀರೂಪದ ಭೂದೇವಿಯನ್ನು ರಸಾತಲದಿಂದ ಎತ್ತಿಹಿಡಿದಿರುವ ದೃಶ್ಯ ಅದ್ಭುತರಮ್ಯವಾಗಿದೆ.

ದುರ್ಗಾ ಮಹಿಷಮರ್ದಿನಿಯ ಶಿಲ್ಪ ಉದಯಗಿರಿಯಲ್ಲಿ ಮೂರೆಡೆಗಳಲ್ಲಿವೆ. 4ನೆಯ ಗುಹೆಯ ಶಿಲ್ಪದಲ್ಲಿ ಆಲೀಢಭಂಗಿಯಲ್ಲಿ ಬಲಗಾಲನ್ನು ಮಹಿಷದ ಶಿರದ ಮೇಲಿರಿಸಿ, ಎಡಗೈಯಿಂದ ಅದರ ಬಾಲವನ್ನು ಹಿಡಿದೆತ್ತಿ, ತ್ರಿಶೂಲದಿಂದ ತಿವಿಯುತ್ತಿರುವ ದೇವಿಯು ಬಾಣ, ವಜ್ರ, ಖಡ್ಗ, ಖೇಟಕಗಳನ್ನು ಧರಿಸಿ, ಮೇಲಿನ ಎರಡು ಕೈಗಳಿಂದ ತನ್ನ ಜಟೆಯನ್ನು ಎತ್ತಿ ಹಿಡಿದಿದ್ದಾಳೆ. ದೇವಿಯ ಶಕ್ತಿ ಇಲ್ಲಿ ಅದ್ಭುತವಾಗಿ ಪ್ರಕಟವಾಗಿದೆ. 4ನೆಯ ಗುಹೆಯಲ್ಲಿರುವ ಏಕಮುಖಲಿಂಗ ದುಂಡುಮುಖವುಳ್ಳ ಜಟಾಧಾರಿ ಶಿವನ ಮನೋಬಲದ ಕಾಂತಿಯನ್ನು ಪ್ರಕಟಿಸುತ್ತದೆ.

ಗುಪ್ತರ ಕಾಲದ ಇತರ ವಿಗ್ರಹಗಳಲ್ಲಿ ಏರಣ (ಪ್ರಾಚೀನ ಐರಿಕಿಣ)ದಲ್ಲಿರುವ ಪೂರ್ತಿ ಪ್ರಾಣಿರೂಪದಲ್ಲಿರುವ ವರಾಹ ವಿಗ್ರಹ ಉಲ್ಲೇಖನೀಯವಾಗಿದೆ. ಹೂಣ ದೊರೆ ತೋರಮಾನನ ಮೊದಲನೆಯ ವರ್ಷದ ಶಾಸನ ಇದಕ್ಕಿದ್ದು ಮೈತುಂಬ ಋಷಿಮುನಿದೇವತೆಗಳ ಉಬ್ಬುಶಿಲ್ಪಗಳನ್ನೊಳಗೊಂಡಿದೆ. ಇಲ್ಲಿಯೇ ದೊರೆತ ಆದರೆ ಈಗ ಸಾಗರ ವಿಶ್ವವಿದ್ಯಾಲಯದ ಸಂಗ್ರಹಾಲಯದಲ್ಲಿರುವ ಇನ್ನೊಂದು ಶಾಸನಸಹಿತ ಬೃಹತ್ ದ್ವಿಭುಜ ಭೂವರಾಹನ ದುಂಡುಶಿಲ್ಪವೂ ಉಲ್ಲೇಖನೀಯ. ಇದರಲ್ಲಿ ಭೂದೇವಿ ಬೃಹತ್ ವರಾಹನ ಬಲ ಕೋರೆಯನ್ನು ಆಧರಿಸಿ ಜೋತು ಬಿದ್ದಿರುವಂತೆ ತೋರಿಸಿದೆ. ವರಾಹನ ದೈಹಿಕ ಬಲಶಕ್ತಿಗಳು ಈ ಶಿಲ್ಪದಲ್ಲಿ ಅದ್ಭುತವಾಗಿ ವ್ಯಕ್ತವಾಗಿವೆ.

ಬೆಸನಗರದಲ್ಲಿ ದೊರೆತ ಶಿಲ್ಪಗಳಲ್ಲಿ ವಿಷ್ಣುವಿನ ಶಿರೋಭಾಗ ಮತ್ತು ಸಪ್ತಮಾತೃಕೆಯರ ವಿಗ್ರಹಗಳು ಗಮನಾರ್ಹವಾಗಿವೆ. ಮೈಮಾಟವನ್ನು ಚಿದಾನಂದತ್ವದ ಪ್ರತಿನಿಧಿಯಾಗಿ ಬಳಸಿರುವ ವಿಷ್ಣು ಶಿಲ್ಪದಲ್ಲಿ ಆತ್ಮತೃಪ್ತಿಯ ನಸುನಗು ಸೂಸುತ್ತಿದೆ. ರೂಪಸಂಸ್ಕರಣ ಅದ್ಭುತವಾಗಿದೆ. ಕಿರೀಟ ಸರಳ ಕೀರ್ತಿಮುಖ ಅಲಂಕಾರ ಹೊಂದಿದೆ. ಸಪ್ತಮಾತೃಕೆಯರ ವಿಗ್ರಹಗಳು ದುಂಡುಶಿಲ್ಪಗಳು. ಪ್ರಾಚೀನ ಗುಪ್ತಶೈಲಿಯ ಲಕ್ಷಣಗಳಿರುವ ಈ ಶಿಲ್ಪಗಳಲ್ಲಿ ಮಾತೃಕೆಯರು ಮಕ್ಕಳೊಂದಿಗೆ ಪ್ರಲಂಬಪಾದ ರೀತಿಯಲ್ಲಿ ಕುಳಿತಿದ್ದಾರೆ. ಬೌದ್ಧರ ಕುಷಾಣಕಾಲೀನ ಹಾರೀತಿ ವಿಗ್ರಹಗಳನ್ನಿವು ನೆನಪಿಸುತ್ತವೆ.

ಗುಪ್ತಾಂತ್ಯ ಹಂತದ ಹಿಂದು ಶಿಲ್ಪಗಳಲ್ಲಿ ಪ್ರತಿಮಾವಿಧ್ಯ, ಅದ್ಭುತ ಮೈಮಾಟ, ಆಧ್ಯಾತ್ಮಿಕ ಸಂತೃಪ್ತಿಯನ್ನು ಸೂಸುವ ದೇವಗಡದ ದಶಾವತಾರ ದೇಗುಲದ ಶಿಲ್ಪಗಳನ್ನು ಹೆಸರಿಸಲೇಬೇಕು. ನರನಾರಾಯಣ ಶಿಲ್ಪಫಲಕದಲ್ಲಿ ಅನಾದಿ ಋಷಿಗಳೆನಿಸಿದ ನರನಾರಾಯಣರನ್ನು ಬದರೀ ವೃಕ್ಷದ ಕೆಳಗೆ ಕುಳಿತಿರುವಂತೆ ಚಿತ್ರಿಸಿದೆ. ನಾರಾಯಣನ ಕೈಗಳು ಅಕ್ಷಮಾಲೆ, ಚಿನ್ಮುದ್ರೆ, ಕಮಂಡಲು ಧರಿಸಿವೆ. ಪ್ರಾಯಶಃ ನಾರಾಯಣನು ತನ್ನ ತೊಡೆಯಿಂದ ಊರ್ವಶಿಯನ್ನು ಸೃಜಿಸುವ ಚಿತ್ರವಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಇನ್ನೊಂದು ಫಲಕದಲ್ಲಿ ಯೋಗನಿದ್ರೆಯಲ್ಲಿರುವ ಅನಂತಶಯನ ಸೃಷ್ಟಿಕಾರ್ಯವನ್ನು ಕಲ್ಪಿಸುತ್ತಿರುವ ಅದ್ಭುತ ಪ್ರಭಾವೀ ಶಿಲ್ಪವಿದೆ. ಇದರ ಕೆಳಭಾಗದಲ್ಲಿ ವಿಷ್ಣುವಿನ ಆಯುಧಗಳಾದ ಚಕ್ರ, ಶಂಖ, ಖಡ್ಗ, ಗದಾ ಮುಂತಾದವನ್ನು ಆಯುಧಪುರುಷರಾಗಿ ಚಿತ್ರಿಸಿರುವುದು ಗಮನೀಯ. ಖಡ್ಗಪುರುಷನು ಮಧುಕೈಟಭರನ್ನು ಅಟ್ಟಿಸುವಂತೆ ತೋರಿಸಿದೆ. ಮೂರನೆಯ ಶಿಲ್ಪಫಲಕದಲ್ಲಿ ಗಜೇಂದ್ರಮೋಕ್ಷ ಕಥೆಯನ್ನು ಚಿತ್ರಿಸಿದ್ದು, ಗಜರಾಜನ ಕಾಲನ್ನು ಹಿಡಿದಿರುವ ಪ್ರಾಣಿ ಮೊಸಳೆಯಾಗಿರದೆ ಹೆಬ್ಬಾವಾಗಿರುವುದು ಕುತೂಹಲಕಾರಿ.



ಪದ್ಮಾಸನದಲ್ಲಿರುವ ಬುದ್ಧ

ಗುಪ್ತರ ಕಾಲದ ಅಂತ್ಯಕಾಲಕ್ಕೆ ಅನ್ವಯಿಸಬಹುದಾದ ಬುದ್ಧನ ಶಿಲ್ಪಗಳು ಅತ್ಯಾಕರ್ಷಕ ವಾಗಿದ್ದು ಪ್ರಪಂಚಪ್ರಸಿದ್ಧ. ಇವುಗಳನ್ನು ಮಥುರ ಮತ್ತು ಸಾರನಾಥ ಉಪಶೈಲಿಗಳಲ್ಲಿ ಗುರುತಿಸಬಹುದು. ಕುಷಾಣರ ಕಾಲದಲ್ಲಿ ಅಭಿವೃದ್ಧಿ ಕಂಡ ಮಥುರ ಶೈಲಿ ಕೆಲವು ಗಂಧಾರ ಶೈಲಿಯ ಲಕ್ಷಣಗಳನ್ನು ಮೇಳೈಸಿಕೊಂಡು ಗುಪ್ತರ ಕಾಲದಲ್ಲಿ ನಿಂತ ಮತ್ತು ಕುಳಿತ ಬಹು ಸುಂದರ ಬುದ್ಧನ ಶಿಲ್ಪಗಳಾಗಿ ಅರಳಿತು. ಅಂಡಾಕಾರದ ಸುಂದರ ಹಸನ್ಮುಖ, ಗುಂಗುರು ಕೂದಲು, ಅರ್ಧನಿಮೀಲಿತ ಕಣ್ಣುಗಳು, ಎರಡು ಭುಜಗಳನ್ನು ಮುಚ್ಚುವಂತೆ ಹಾಗೂ ಮೈಯ ಏರಿಳಿತಗಳನ್ನು ಬಿಂಬಿಸುವಂತೆ ಹೊದ್ದಿರುವ ಸಂಘಾಟಿ, ಸುಲಲಿತವಾಗಿ ಸಾಗುವ ದಾರದಂತೆ ಸಾಗುವ ಸಂಘಾಟಿಯ ಮಡಿಕೆಗಳು, ಶಾಂತ ಕರುಣಾಮಯ ಭಾವ ಇವೇ ಮುಂತಾದ ಲಕ್ಷಣಗಳು ಈ ಕಾಲದ ಮಥುರ ಶಿಲ್ಪಗಳಲ್ಲಿ ಸ್ಫುಟವಾಗಿವೆ. ನವದೆಹಲಿಯ ರಾಷ್ಟ್ರೀಯ ಸಂಗ್ರಹಾಲಯದಲ್ಲಿರುವ ನಿಂತ ಬುದ್ಧನ ವಿಗ್ರಹ ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಹಾಗೆಯೇ ಸುಂದರ ಮೈಮಾಟದಿಂದ ಕೂಡಿರುವ ಸಾರನಾಥದ ಬುದ್ಧ ವಿಗ್ರಹಗಳು, ಪಾರದರ್ಶಕ ವಸ್ತ್ರಧರಿಸಿರುವ ಶಾಂತ

ಯೋಗಿಯ ಶರೀರದ ಮೃದುತ್ವ ಕಾಂತಿಗಳನ್ನು ಸೂಸುತ್ತವೆ. ಸಾಮಾನ್ಯವಾಗಿ ವಸ್ತ್ರದ ಮಡಿಕೆಗಳನ್ನು ತೋರಿಸುವ ಕ್ರಮ ಇಲ್ಲಿ ಕಾಣದು. ಇವೆರಡೂ ಶೈಲಿಗಳಲ್ಲಿ ಅಲಂಕಾರವು ಬುದ್ಧನ ಪ್ರಭಾಮಂಡಲಕ್ಕೆ ಮಾತ್ರ ಸೀಮಿತವಾಗಿದೆ. ಒಂದು ಕಾಲನ್ನು ತುಸು ಬಾಗಿಸಿ ಅಭಯಹಸ್ತದಲ್ಲಿ ನಿಂತಿರುವ ಹಾಗೂ ಸಾರನಾಥದ ಮೊದಲ ಉಪದೇಶವನ್ನು ಪ್ರತಿನಿಧಿಸುವ ಧರ್ಮಚಕ್ರಪ್ರವರ್ತನ ಮುದ್ರೆಯಲ್ಲಿರುವ ಪದ್ಮಾಸನದಲ್ಲಿ ಕುಳಿತಿರುವ ಬುದ್ಧನ ವಿಗ್ರಹಗಳು ಈ ಶೈಲಿಯ ಅತ್ಯದ್ಭುತ ಶಿಲ್ಪಗಳೆನಿಸಿವೆ. ಸಾರನಾಥದ ಪುರಾತತ್ತ್ವ ಸಂಗ್ರಹಾಲಯದಲ್ಲಿರುವ ಇಂತಹ ಒಂದು ಪ್ರಪಂಚಪ್ರಸಿದ್ಧ ವಿಗ್ರಹದಲ್ಲಿ ಬುದ್ಧನ ಮೈಮಾಟ, ಬಲ, ತೇಜಸ್ಸು, ಕಾಂತಿಗಳನ್ನು ಮೇಳೈಸಲಾಗಿದೆ. ಬಿಲ್ಲಿನಂತಿರುವ ಹುಬ್ಬುಗಳು, ಅರ್ಧನಿಮೀಲಿತ ಕಮಲನೇತ್ರಗಳು, ಅಂಡಾಕಾರದ ಮುಖ, ಕೂದಲುಗಳು, ಉಷ್ಣೀಶ, ಇಳಿಬಿದ್ದಿರುವ ಕಿವಿ, ಮುಖದ ಶಾಂತ ತೇಜಸ್ಸು ಇತ್ಯಾದಿಗಳು ಈ ವಿಗ್ರಹದ ಸುಂದರ ಕರುಣಾ ಭಾವ ಮತ್ತು ಆಧ್ಯಾತ್ಮಿಕ ಅಭಿವ್ಯಕ್ತಿಯ ಔನ್ನತ್ಯಕ್ಕೆ ಮೆರಗು ಕೊಟ್ಟಿವೆ. ಅಜಂತದ ಗುಹೆಗಳಲ್ಲಿ ಗುಪ್ತರಿಗೆ ಸಮಕಾಲೀನರಾದ ವಾಕಾಟಕರು ನಿರ್ಮಿಸಿದ ಶಿಲ್ಪಗಳು ಸಹ ಗುಪ್ತಶೈಲಿಯ ಆಂತರ್ಯದ ಛಾಪನ್ನು ಪ್ರಕಟಿಸುತ್ತವೆ. (ಎಸ್.ವಿ.ಪಿ.)

**ಗುಫ್‌ಕ್ರಾಲ್:** ಕಾಶ್ಮೀರ ರಾಜ್ಯದ ಪುಲ್‌ವಾಮ ಜಿಲ್ಲೆಯ ತ್ರಾಲ್ ತಹಸೀಲ್‌ನಲ್ಲಿರುವ ನವಶಿಲಾಯುಗ ಸಂಸ್ಕೃತಿಯ ನೆಲೆ. ಇದು ಸು. 35ಮೀ ದಪ್ಪದ ಕರೇವ ನಿಕ್ಷೇಪದ ಮೇಲಿದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎ.ಕೆ. ಶರ್ಮರ ನಿರ್ದೇಶನದಲ್ಲಿ ಇಲ್ಲಿ ಉತ್ಖನನ ನಡೆಯಿತು (1981). 3 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ. ಇವು– ನವಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಆದಿಚಾರಿತ್ರಿಕ ಕಾಲ. ನವಶಿಲಾಯುಗವನ್ನು 3 ಉಪಹಂತಗಳಾಗಿ ವಿಂಗಡಿಸಲಾಗಿದೆ. ಇವು ಮಣ್ಪಾತ್ರೆರಹಿತ ಹಂತ ಹಾಗೂ ಆದಿ ಮತ್ತು ಅಂತ್ಯ ಮಣ್ಪಾತ್ರೆಸಹಿತ ಹಂತಗಳು.

ನವಶಿಲಾಯುಗದ ಮಣ್ಪಾತ್ರೆರಹಿತ ಉಪಹಂತದ ಕೆಳಸ್ತರಗಳಲ್ಲಿ ಬೂರ್ಜಹೋಮ್ **(ನೋಡಿ)** ನಲ್ಲಿರುವಂತೆ ವೃತ್ತಾಕಾರದ ವಸತಿಗುಂಡಿಗಳಿವೆ. ಗುಂಡಿಗಳ ವ್ಯಾಸ 1.5–3.8 ಮೀ; ಇವು 20–30 ಸೆಂಮೀ ಆಳವಾಗಿವೆ. ಭೂಮಟ್ಟದಲ್ಲಿ ಗುಂಡಿಗಳ ಸುತ್ತ ಆಯತಾಕಾರದ ಮಣ್ಣಿನ ಒಲೆ, ಧಾನ್ಯ ಶೇಖರಣ ಗುಳಿ ಮತ್ತು ಇವೆಲ್ಲವನ್ನು ಸುತ್ತುವರಿದ ಆಧಾರಕಂಬಗಳ ಗುಳಿಗಳಿವೆ. ಹಾಗಾಗಿ ಗುಂಡಿಗಳ ಮೇಲೆ ಮರದ ಕೊಂಬೆಗಳಿಂದ ರಚಿತವಾದ ಮಾಡು ಇದ್ದಿರಬಹುದು. ಗುಂಡಿಗಳೊಳಗಿನ ನೆಲ ಮತ್ತು ಗುಂಡಿಗಳ ಗೋಡೆಗೆ ಕೆಮ್ಮಣ್ಣಿನ ದಪ್ಪ ಲೇಪವನ್ನು ಸವರಲಾಗಿದೆ. ಕೆಲವೊಂದು ವಸತಿಗುಂಡಿಗಳನ್ನು ಕಾಲಕ್ರಮೇಣ ವಿಸ್ತರಿಸಿ ಸತತವಾಗಿ ಬಳಸಲಾಗಿದೆ. ಅನಂತರ ಕಾಲದಲ್ಲಿ ಹೆಚ್ಚು ಆಳವಿಲ್ಲದ ಗುಳಿಕೋಣೆಗಳನ್ನೂ ಜನ ಕಟ್ಟತೊಡಗಿದರು. ಆಯತಾಕಾರದ ಒಲೆಗಳ ಜೊತೆಗೆ ಗೋಲಾಕಾರದ ಒಲೆಗಳೂ ಬಳಕೆಗೆ ಬಂದವು. ನೆಲಗಳ ಮೇಲೆ ಕೆಂಪುಬಣ್ಣದ ಲೇಪನವನ್ನು ಹಚ್ಚುವ ಪದ್ಧತಿ ನಿಂತುಹೋಯಿತು. ಬೂರ್ಜಹೋಮ್‌ನಂತೆ ಈ ಉಪಹಂತದ ಜನರು ಚಳಿಗಾಲದಲ್ಲಿ ವಸತಿಗುಂಡಿಗಳೊಳಗೆ ಮತ್ತು ಬೇಸಗೆಯಲ್ಲಿ ಹೊರಗೆ ವಾಸಿಸುತ್ತಿದ್ದಿರಬೇಕು. ಆದರೆ ಅಡುಗೆ ಕಾರ್ಯ ಮಾತ್ರ ವರ್ಷದುದ್ದಕ್ಕೂ ಹೊರಗೆ ನಡೆಯುತ್ತಿತ್ತು; ಏಕೆಂದರೆ ಗುಂಡಿಗಳೊಳಗೆ ಒಲೆಯಾಗಲೀ ಅಗ್ಗಿಷ್ಟಿಕೆಯಾಗಲೀ ಕಂಡುಬಂದಿಲ್ಲ. ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಗಳು, ಮೊನೆ, ತೂತಿರುವ ವರ್ತುಲಾಕಾರದ ಕಲ್ಲು, ಅರೆಯುವ ಕಲ್ಲು ಮತ್ತು ಕುಟ್ಟಾಣಿ ಈ ಉಪಹಂತದಲ್ಲಿರುವ ಕಲ್ಲಿನ ಉಪಕರಣಗಳು. ಅರೆಯುವ ಕಲ್ಲೊಂದರಲ್ಲಿ ಕೆಂಪುಬಣ್ಣದ ಗೊಜ್ಜಿನ ಪಳೆಯುಳಿಕೆ ಹಾಗೇ ಅಂಟಿಕೊಂಡಿತ್ತು. ಮೂಳೆಯ ಉಪಕರಣಗಳಲ್ಲಿ ಮೊನೆ ಮತ್ತು ಬಾಣದ ಮೊನೆ ಹೆಚ್ಚಿನ ಸಂಖ್ಯೆಯಲ್ಲಿವೆ. ಸೂಜಿ, ದಬ್ಬಣ, ಹೆರೆಚಕ್ಕೆ, ಕೊರೆಯುಳಿ ಇತರ ಬಗೆಗಳು. ಈ ಉಪಕರಣಗಳನ್ನು ಸಂಪೂರ್ಣವಾಗಿ ಅಥವಾ ತುದಿಯಲ್ಲಿ ಮಾತ್ರ ಉಜ್ಜಿ ನಯಗೊಳಿಸಲಾಗಿದೆ. ಅಲ್ಲದೆ ತುದಿಯನ್ನು ಸುಟ್ಟು ಗಟ್ಟಿಗೊಳಿಸಲಾಗಿದೆ. ಮೂಳೆಯ ಒಂದು ಮಣಿ, ಸ್ಟಿಯಟೈಟಿನ 2 ಮಣಿಗಳು, ಮಣ್ಣಿನ ಗೋಲಿಯೊಂದು ಈ ಸ್ತರಗಳಿಂದ ದೊರೆತಿವೆ. ಪ್ರಾಣಿಮೂಳೆಗಳು ಮತ್ತು ಆಹಾರಧಾನ್ಯಗಳು ಈ ಉಪಹಂತದ ಮತ್ತೊಂದು ಮುಖ್ಯ ಅನ್ವೇಷಣೆ. ಹೆಚ್ಚಿನ ಮೂಳೆಗಳು ಕಾಡುಪ್ರಾಣಿಗಳದ್ದಾಗಿದ್ದು ಬೇಟೆ ಪ್ರಧಾನವಾಗಿತ್ತೆಂದು ಕಾಣುತ್ತದೆ. ಕಾಡುಕುರಿ, ಕಾಡುಮೇಕೆ, ಕಾಡು ದನ, ಕೆಂಪುಜಿಂಕೆ, ತೋಳ, ಹಿಮಾಲಯದ ಕಾಡುಹೋತ ಮತ್ತು ಕರಡಿಯ ಮೂಳೆಗಳನ್ನು ಗುರುತಿಸಲಾಗಿದೆ. ಪಶುಪಾಲನೆ ಪ್ರಾರಂಭಿಕ ಹಂತದಲ್ಲಿದ್ದುದನ್ನು ಸಾಕುಪ್ರಾಣಿಗಳಾದ ಕುರಿ ಮತ್ತು ಮೇಕೆಯ ಮೂಳೆಗಳಿಂದ (ಶೇ. 3–5) ತಿಳಿಯಬಹುದಾಗಿದೆ. ಬೇಟೆ ಮತ್ತು ಪಶುಪಾಲನೆಯೊಂದಿಗೆ ಆಹಾರ ಸಂಗ್ರಹಣೆ/ಉತ್ಪಾದನೆಯೂ ಈ ಸಮಯದಲ್ಲಿ ನಡೆಯುತ್ತಿತ್ತು. ಜವೆ, ಗೋದಿ, ಕೆಂಪು ತೊಗರಿ ಬೇಳೆ ಮುಂತಾದ ಧಾನ್ಯಗಳು ಈ ಸ್ತರಗಳಲ್ಲಿ ಸಿಕ್ಕಿದ್ದು ಇವುಗಳನ್ನು ಸಂಗ್ರಹಿಸುತ್ತಿದ್ದಿರಬೇಕು ಅಥವಾ ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಿದ್ದಿರಬಹುದು.

ನವಶಿಲಾಯುಗದ 2ನೆಯ ಉಪಹಂತದಲ್ಲಿ (ಆದಿ ಮಣ್ಪಾತ್ರೆ ಸಹಿತ) ತಿಗುರಿಯನ್ನು ಉಪಯೋಗಿಸದೆ ಮಾಡಿದ ಮಣ್ಪಾತ್ರೆಗಳು ಕಂಡುಬರುತ್ತವೆ. ಬೂದುಬಣ್ಣದ ಪಾತ್ರೆಗಳು ಸಾಮಾನ್ಯ; ಪೇಲಗೆಂಪು ಬಣ್ಣದ ಪಾತ್ರೆಗಳು ಬೆರಳೆಣಿಕೆಯಷ್ಟಿವೆ. ದೊಡ್ಡ ಜಾಡಿ, ಬಟ್ಟಲು, ಬೋಗುಣಿ ಹೆಚ್ಚಾಗಿ ಕಾಣಸಿಗುವ ಆಕಾರಗಳು. ಇವುಗಳ ತಳದಲ್ಲಿ ಚಾಪೆಯ ಅಥವಾ ಹಗ್ಗದ ಗುರುತಿದೆ. ಕುತ್ತಿಗೆಯ ಮೇಲೆ ಚಿವುಟಿ ಮಾಡಿದ ಅಥವಾ ಗೀರಿನ ವಿನ್ಯಾಸವಿದೆ. ಸು. 5–7 ಸೆಂಮೀ ದಪ್ಪದ ಹಳದಿಬಣ್ಣದ ಸುಣ್ಣಮಿಶ್ರಿತ ಮಣ್ಣಿನ ವಿಸ್ತಾರವಾದ ನೆಲಗಟ್ಟನ್ನು ಈ ಉಪಹಂತದಲ್ಲಿ ಹೊರತೆಗೆಯಲಾಗಿದೆ. ಈ ನೆಲವನ್ನು ಕೆಲವೊಂದು ಭಾಗಗಳಲ್ಲಿ ಐದಾರು ಬಾರಿ ಸರಿಪಡಿಸಲಾಗಿದೆ. ನೆಲದ ಮೇಲೆ ಗಟ್ಟಿಮಣ್ಣಿನ ಮತ್ತು ಕಲ್ಲು–ಮಣ್ಣಿನ ಹೆಂಟೆಯ ಗೋಡೆಗಳ ಅವಶೇಷಗಳಿವೆ. ಕೆಂಡ ಮತ್ತು ಕರಕಲಾದ ಮರದ ತುಂಡುಗಳ ಗುಪ್ಪೆಯೊಂದು ಈ ಅವಶೇಷಗಳ ನಡುವೆ ಕಂಡುಬಂದಿದೆ. ಈ ಉಪಹಂತದಲ್ಲಿ ಹಿಂದಿನ ಹಂತಗಳಲ್ಲಿದ್ದಂತೆ ವಸತಿಗುಂಡಿಗಳ ಉಪಯೋಗ ಕಂಡುಬರುವುದಿಲ್ಲ. ಸಾಂಸ್ಕೃತಿಕ ಅವಶೇಷಗಳಲ್ಲಿ ಕಲ್ಲಿನ ಮೊನೆ ಮತ್ತು ತೂತಿರುವ ವರ್ತುಲಾಕಾರದ ಕಲ್ಲು, ಮೂಳೆಯ ಮೊನೆ, ಕೊರೆಯುಳಿ, ಹೆರೆಚಕ್ಕೆ ಮತ್ತು ಸಟ್ಟುಗಗಳಿವೆ. ಸಾಕುಪ್ರಾಣಿಗಳಾದ ಕುರಿ, ಮೇಕೆ ಮತ್ತು ಜಾನುವಾರಿನ ಮೂಳೆಗಳ ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ನಾಯಿ ಮತ್ತೊಂದು ಸಾಕುಪ್ರಾಣಿಯಾಗಿದ್ದಿತ್ತು. ಕಾಡುಕುರಿ, ಕಾಡುಮೇಕೆ, ಕೆಂಪುಜಿಂಕೆ, ಕಾಡುಹೋತ ಮತ್ತು ಕರಡಿ ಪ್ರತಿನಿಧಿತವಾದ ಕಾಡುಪ್ರಾಣಿಗಳು. ಹೆಚ್ಚಿನ ಮೂಳೆಗಳ ಮೇಲೆ ಕಚ್ಚು ಗುರುತಿದೆ. ಆಹಾರಧಾನ್ಯಗಳಲ್ಲಿ ಗೋದಿ, ಜವೆ ಮತ್ತು ಕೆಂಪು ತೊಗರಿಬೇಳೆಗಳಿವೆ.



ಮಡಕೆಕುಡಿಕೆಗಳು ಮತ್ತು ತಕಲಿಗಳು

3ನೆಯ ಉಪಹಂತದಲ್ಲಿ (ಅಂತ್ಯ ಮಣ್ಪಾತ್ರೆ ಸಹಿತ) 3 ರೀತಿಯ ಮನೆಗಳಿವೆ. ಇವು ವೃತ್ತ ವಿನ್ಯಾಸದ ವಸತಿಗುಂಡಿಗಳು, ಮಣ್ಣಿನ ಗೋಡೆಗಳುಳ್ಳ ವರ್ತುಲ ಗುಡಿಸಲುಗಳು ಮತ್ತು ಆಧಾರಕಂಬಗಳ ಗುಳಿಗಳಿಂದ ಸುತ್ತುವರೆದ ಮಣ್ಣು ಅಥವಾ ಕಲ್ಲಿನ ಗೋಡೆಗಳುಳ್ಳ ಗುಡಿಸಲುಗಳು. ವಸತಿಗುಂಡಿಗಳೊಳಗೆ ಧಾನ್ಯ ಸಂಗ್ರಹ ಗುಳಿ ಮತ್ತು ಒಲೆಗಳಿವೆ. ಗುಂಡಿಗಳ ಮೇಲೆ ಬೊಂಬು ಮತ್ತು ಮರದ ಮುಚ್ಚಿಗೆ ಇದ್ದಿರಬೇಕು.

ಮುಂಚಿನ ಹಂತಗಳ ಕಲ್ಲಿನ ಉಪಕರಣಗಳು ಮುಂದುವರೆಯುತ್ತವೆ. ಎರಡು ತೂತಿರುವ ಕೊಯ್ಲಿನ ಉಪಕರಣಗಳು ವಿಶೇಷವಾದುವು. ಈ ಹೊತ್ತಿಗೆ ಕೃಷಿ ವ್ಯಾಪಕವಾಗಿತ್ತೆಂದು ತೋರುತ್ತದೆ. ಸುಟ್ಟಮಣ್ಣಿನ ಮತ್ತು ಕಲ್ಲಿನ ತಕ್ಕಲಿ (ಕದಿರಣಿಗೆ–ಗುಂಡಿಗಳು) ಉಣ್ಣೆಬಟ್ಟೆ ಉತ್ಪಾದನೆಯ ಸಾಧನಗಳಾಗಿವೆ. ಮಣ್ಣಿನ ಬಳೆಗಳು, ಮಂದಗೆಂಪುಕಲ್ಲಿನ ಮಣಿಗಳು, ಕವಡೆ, ಗೀರುಚಿತ್ರವುಳ್ಳ ಮಡಕೆ ಚೂರುಗಳು ಇತರ ಸಾಂಸ್ಕೃತಿಕ ವಸ್ತುಗಳು. ಇಲ್ಲಿ ಸಿಕ್ಕ ಒಂದು ಬದಿ ಸುರುಳಿ ಸುತ್ತಿದ ತಲೆಗೂದಲಿಗೆ ಸಿಕ್ಕಿಸುವ ತಾಮ್ರದ ಕೇಶ ಸೂಜಿ ದಕ್ಷಿಣದ ಮುಂದುವರೆದ ಬಯಲು ಸಂಸ್ಕೃತಿಗಳೊಂದಿಗಿನ ಸಂಪರ್ಕ ಸೂಚಕವಾಗಿದೆ. ಮೂಳೆಯ ಉಪಕರಣಗಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಉಪಹಂತದಲ್ಲಿ ಸಿಕ್ಕಿವೆ. ಇವುಗಳಲ್ಲಿ ಹೆಚ್ಚಿನವು ಉಜ್ಜಿ ನಯಗೊಳಿಸಿದ ಮೊನೆಗಳು. ದಬ್ಬಣ, ಈಟಿಗಾಳ, ಸಟ್ಟುಗ, ಬಾಣದ ಮೊನೆ ಇತರ ನಮೂನೆಗಳು.

ಈ ಹೊತ್ತಿಗಾಗಲೇ ಪಶುಪಾಲನೆ ಮತ್ತು ಸಂಗೋಪನೆ ಪೂರ್ಣಪ್ರಮಾಣದಲ್ಲಿ ಸ್ಥಾಪಿತವಾಗಿತ್ತು. ನಾಯಿ, ಕುರಿ, ಮೇಕೆ, ಜಾನುವಾರುಗಳನ್ನು ಸಾಕಲಾಗುತ್ತಿತ್ತು. ಹಂದಿ, ಮೊಲ, ಹೆಗ್ಗಣ, ನೀರನಾಯಿ, ಮೀನು ಇವುಗಳ ಮೂಳೆಗಳು ಮೊದಲಬಾರಿಗೆ ಕಂಡುಬರುತ್ತವೆ. ಜಿಂಕೆ ಮತ್ತು ಕಾಡುಹೋತಗಳನ್ನು ಮಾತ್ರ ಒಮ್ಮೊಮ್ಮೆ ಬೇಟೆಯಾಡಲಾಗುತ್ತಿತ್ತು.

ಈ ಹಂತದ ನವಶಿಲಾಯುಗ ಜನರು ಸ್ಥಾಯಿ ಜೀವನಶೈಲಿಯನ್ನು ಅಳವಡಿಸಿಕೊಂಡಿದ್ದರೆಂಬುದು ಮೇಲಿನ ಅಂಶಗಳಿಂದ ಸ್ಪಷ್ಟಪಡುತ್ತದೆ. ಕೃಷಿ, ಪಶು ಸಂಗೋಪನೆ, ಉಣ್ಣೆ ಬಟ್ಟೆಯ ನೇಯ್ಗೆ, ಹೊರ ಜಗತ್ತಿನೊಂದಿಗಿನ ಸಂಪರ್ಕ ಇವೆಲ್ಲವೂ ಈ ಸಮುದಾಯದ ಮುಖ್ಯ ಕಸುಬುಗಳಾಗಿದ್ದವು.

2ನೆಯ ಸಾಂಸ್ಕೃತಿಕ ಹಂತ ಬೃಹತ್‌ಶಿಲಾಯುಗದ್ದು. ಈ ಹಂತದ ಪ್ರಮುಖ ಲಕ್ಷಣ ನಿಲಸುಗಲ್ಲುಗಳು. ಬುಡದಲ್ಲಿ ಸಣ್ಣ ಕಲ್ಲುಗಳನ್ನು ಒತ್ತಾಗಿ ತುಂಬಿ ಇವುಗಳನ್ನು ನಿಲ್ಲಿಸಿದಂತೆ ಕಾಣುತ್ತದೆ. ಈ ಹಂತದಲ್ಲಿ 10 ಸೆಂಮೀ ದಪ್ಪದ ವಿಸ್ತಾರವಾದ ನೆಲಗಟ್ಟಿದೆ. ನೆಲದಲ್ಲಿ ಅಲ್ಲಲ್ಲಿ ಗುಳಿಗಳನ್ನು ಅಗೆಯಲಾಗಿದೆ. ಕೆಲವೊಂದು ಗುಳಿಗಳು ಆಳವಾಗಿದ್ದು ಮಣ್ಪಾತ್ರೆ


ಮೂಳೆ ಉಪಕರಣಗಳು

ಮತ್ತು ಪ್ರಾಣಿಮೂಳೆಗಳಿಂದ ತುಂಬಿವೆ. ಹಿಂದಿನ ಹಂತದ ಬೂದುಬಣ್ಣದ ಪಾತ್ರೆ ಇನ್ನೂ ಬಳಕೆಯಲ್ಲಿರುವುದು ಕಂಡುಬರುತ್ತದೆ. ಆದರೆ ತಿಗುರಿಯಿಂದ ತಯಾರಾದ ಪಾತ್ರೆಗಳು ಅಗಾಧ ಪ್ರಮಾಣದಲ್ಲಿವೆ. ಈ ಬಗೆಯಲ್ಲಿ ಪೇಲಗೆಂಪುಬಣ್ಣದ ಪಾತ್ರೆಗಳು ಮೊದಲ ಬಾರಿಗೆ ಕಾಣಬರುತ್ತವೆ. ಉದ್ದ ಕತ್ತಿನ ಅಥವಾ ಕತ್ತಿಲ್ಲದ ಜಾಡಿಗಳು, ಬಟ್ಟಲು, ಬೋಗುಣಿ, ಕಾಲಿರುವ ತಟ್ಟೆ ಮತ್ತು ಮಡಕೆಗಳು ಸಾಮಾನ್ಯವಾಗಿವೆ. ಚಿವುಟಿ ಮಾಡಿದ ಮತ್ತು ಗೀರಿನ ವಿನ್ಯಾಸಗಳು, ದೊರಕಾಗಿಸಿದ ಹೊರಮೈ ಇಲ್ಲಿ ಕಂಡುಬರುವ ಅಲಂಕರಣೆಯ ವಿಧಾನಗಳು. ವರ್ತುಲಾಕಾರದ ತೂತು ಕಲ್ಲುಗಳು, ಕುಟ್ಟಾಣಿ, ತಾಮ್ರದ ಒಂದು ಮೊನೆ, ಮರದ ಒಂದು ಮಣಿ, ತಕಲಿ, ಕವಡೆ, ಕಬ್ಬಿಣದ ಉಪಕರಣಗಳು ಮುಖ್ಯ ಸಾಂಸ್ಕೃತಿಕ ಅವಶೇಷಗಳು. ಈ ಹಂತದಲ್ಲಿ ಮೂಳೆಯ ಉಪಕರಣಗಳ ಉಪಯೋಗ ಕಡಿಮೆಯಾಯಿತು. ಹೊಸ ಬಗೆಯ ಮೂಳೆಯ ಹಿಡಿಗಳು ತಯಾರಾದವು. ಹಿಂದಿನ ಹಂತದಲ್ಲಿರುವ ಆಹಾರಧಾನ್ಯಗಳ ಜೊತೆಗೆ ಅಕ್ಕಿ ಮತ್ತು ರಾಗಿಯ ಕೃಷಿ ದಾಖಲಾಗಿದೆ. ಜಾನುವಾರು, ಕುರಿ, ಮೇಕೆ, ನಾಯಿ, ಹಂದಿ, ಕಾಡುಹೋತ ಮತ್ತು ಕಾಡುಕೋಳಿ ದಾಖಲಾದ ಪ್ರಾಣಿ-ಪಕ್ಷಿಗಳು.

3ನೆಯ ಹಂತದಲ್ಲಿ ಚಾರಿತ್ರಿಕ ಕಾಲಕ್ಕೆ ಸೇರುವ ಅವಶೇಷಗಳಿವೆ. ಬಿಳಿಮಣ್ಣಿನಿಂದ ಮಾಡಿದ ಗಟ್ಟಿ ನೆಲಗಟ್ಟು ಗಮನಾರ್ಹ. ಕಲ್ಲು-ಮಣ್ಣಿನ ಹೆಂಟೆಯ ದಪ್ಪ ಗೋಡೆಗಳ ಅವಶೇಷಗಳು ಈ ಹಂತದಲ್ಲಿವೆ. ತಿಗುರಿಯ ಸಹಾಯದಿಂದ ಮತ್ತು ಕೈಯಿಂದ ಮಾಡಿದ ಮಣ್ಪಾತ್ರೆಗಳು ಕಂಡುಬರುತ್ತವೆ. ಬಟ್ಟಲು, ಹಣತೆ, ತಟ್ಟೆ, ದಾನಿ, ಸಣ್ಣ ಮಡಕೆ, ಹಿಡಿಯಿರುವ ಮುಚ್ಚಳ, ಬಟ್ಟಲಿನಂತಿರುವ ಮುಚ್ಚಳ ಮತ್ತು ಮಡಕೆ ಹೊಳಪುಳ್ಳ ಕೆಂಪುಬಣ್ಣದ ಪಾತ್ರೆಬಗೆಯಲ್ಲಿ ಕಾಣಸಿಗುವ ಸಾಮಾನ್ಯ ಆಕಾರಗಳು. ಕಲ್ಲಿನ ಬಟ್ಟಲುಗಳೂ ಇವೆ. ಕಪ್ಪುಬಣ್ಣದ ಚಿತ್ರ ಮತ್ತು ಅಚ್ಚೊತ್ತಿದ ವಿನ್ಯಾಸವುಳ್ಳ ಕೆಂಪುಮಣ್ಪಾತ್ರೆಗಳ ಕೆಲವೊಂದು ಭಾಗಗಳು ಸಿಕ್ಕಿವೆ. ಬಾಣದ ಮೊನೆ ಮತ್ತು ಹಿಡಿ, ವರ್ತುಲಾಕಾರದ ತೂತು ಕಲ್ಲು, ಕುಟ್ಟಾಣಿ, ಕಲ್ಲಿನ ಮೊನೆಗಳು ಈ ಸ್ತರಗಳಿಂದ ದೊರೆತ ಹಲವು ವಸ್ತುಗಳು. ಹಿಂದಿನ ಹಂತದ ಎಲ್ಲ ಆಹಾರಧಾನ್ಯಗಳು ಇಲ್ಲಿ ಸಿಕ್ಕಿವೆ. ಜಾನುವಾರು, ಕುರಿ, ಮೇಕೆ, ನಾಯಿ, ಬೆಕ್ಕು, ಹಂದಿ, ಕಾಡುಕೋಳಿ ಮತ್ತು ಹೆಗ್ಗಣದ ಮೂಳೆಗಳನ್ನು ಗುರುತಿಸಲಾಗಿದೆ.

ಗುಫ್‌ಕ್ರಾಲಿನ ವಿಶೇಷತೆಯೆಂದರೆ ಇಲ್ಲಿ ದಾಖಲಾಗಿರುವ ಮಣ್ಪಾತ್ರೆರಹಿತ ನವಶಿಲಾಯುಗ ಹಂತದ ಅವಶೇಷಗಳು. ಇಂಗಾಲ 14ರ ಕಾಲನಿರ್ಣಯದ ಪ್ರಕಾರ ಈ ಹಂತ ಪ್ರ.ಶ.ಪೂ. 2470±110ರ ಅನಂತರ ಕೊನೆಗೊಂಡಿತು. ಪ್ರ.ಶ.ಪೂ.2100ರ ಹೊತ್ತಿಗೆ ತಿಗುರಿಯ ಸಹಾಯವಿಲ್ಲದೆ ಮಡಕೆಗಳನ್ನು ತಯಾರಿಸುವ ವಿಧಾನವನ್ನು ಇಲ್ಲಿ ಕಂಡುಕೊಳ್ಳಲಾಯಿತು. ಉತ್ತರ ಚೀನ ಮತ್ತು ದಕ್ಷಿಣದ ಬಯಲು ಸಂಸ್ಕೃತಿಗಳೊಂದಿಗೆ ಪ್ರ.ಶ.ಪೂ. 1500ರ ಆಸುಪಾಸಿನಲ್ಲಿ ಸಂಪರ್ಕವೇರ್ಪಟ್ಟಿತು. ಬೃಹತ್‌ಶಿಲಾಯುಗ ಮತ್ತು ಕಬ್ಬಿಣದ ಬಳಕೆ ಪ್ರ.ಶ.ಪೂ. 1400ರ ಹೊತ್ತಿಗೆ ಪ್ರಾರಂಭವಾಯಿತು. ಇಲ್ಲಿಯ ಅವಶೇಷಗಳ ಇಂಗಾಲ 14ರ ಇತರ ಕಾಲಮಾನಗಳು ಇಂತಿವೆ : ಮಣ್ಪಾತ್ರೆರಹಿತ ನವಶಿಲಾಯುಗ– 3130±100; ಮಣ್ಪಾತ್ರೆಸಹಿತ ಆದಿ ನವಶಿಲಾಯುಗ– 3570±100; 3470±100 ; 3980 ± 120; ಮಣ್ಪಾತ್ರೆಸಹಿತ ಅಂತ್ಯ ನವಶಿಲಾಯುಗ–3340 ±100; 2790±110;3570±100. (ವಿ.ಎಸ್.)

**ಗುರುನಾನಕ್: ನೋಡಿ–ನಾನಕ್, ಗುರು**

**ಗುಲಾಬಿ ಯುದ್ಧಗಳು:** 1455–1487. 6ನೆಯ ಹೆನ್ರಿ, 4ನೆಯ ಎಡ್ವರ್ಡ್ ಮತ್ತು 3ನೆಯ ರಿಚರ್ಡರ ಆಳ್ವಿಕೆಯಲ್ಲಿ ನಡೆದ ಅಂತರ್ಯುದ್ಧಗಳು. ಇವು ಬಿಳಿ ಗುಲಾಬಿ ಲಾಂಛನದ ಯಾರ್ಕ್ ಮನೆತನದವರಿಗೂ, ಕೆಂಪು ಗುಲಾಬಿ ಲಾಂಛನದ ಲ್ಯಾಂಕಾಸ್ಟರ್ ಮನೆತನದವರಿಗೂ ನಡೆದ ಯುದ್ಧಗಳಾದ್ದರಿಂದ ಈ ಯುದ್ಧಗಳು ನಡೆದ ಹಲವು ವರ್ಷಗಳ ಅನಂತರ ಇವಕ್ಕೆ ಗುಲಾಬಿ ಯುದ್ಧಗಳೆಂಬ ಹೆಸರು ಬಂತು. ಇವು ಇಂಗ್ಲೆಂಡಿನ ಸಿಂಹಾಸನಕ್ಕಾಗಿ ನಡೆದ ಕದನಗಳೆಂದು ಹೇಳಲಾಗಿದೆಯಾದರೂ ಮೂಲತಃ ಇವು ಸರ್ಕಾರದ ದೌರ್ಬಲ್ಯದ ಮತ್ತು ಆ ಕಾಲದ ಸಾಮಾಜಿಕ ಪರಿಸ್ಥಿತಿಗಳ ಪರಿಣಾಮ. ನೂರು ವರ್ಷಗಳ ಯುದ್ಧದ ಕೊನೆಯ ವೇಳೆಗೆ ಸರ್ಕಾರದ ದೌರ್ಬಲ್ಯ ವ್ಯಕ್ತವಾಗಿತ್ತು. ದೊಡ್ಡ ಪ್ರಭುಗಳು ಕರಾರಿನ ಮೇಲೆ ಖಾಸಗಿ ಸೈನ್ಯಗಳನ್ನು ನೇಮಿಸಿಕೊಳ್ಳುವ ಪದ್ಧತಿ ಬೆಳೆದದ್ದು ಆ ಯುದ್ಧದ ಫಲ. ಇದು ಇಬ್ಬಂದಿ ಊಳಿಗಮಾನಪದ್ಧತಿ ಎಂದು ಹೆಸರಾಗಿದೆ. ಇದರಿಂದಾಗಿ ಖಾಸಗಿ ಯುದ್ಧಗಳು ಅನಿವಾರ್ಯವಾಗಿದ್ದವು. ಇಂಗ್ಲೆಂಡಿನಲ್ಲೆಲ್ಲ ಅತಿ ಬಲಿಷ್ಠ ಪ್ರಜೆಗಳು ತುಂಬಿದ್ದರು. ಅರಾಜಕತೆ ಬೆಳೆಯುತ್ತಿದೆಯೆಂಬಂತೆ ತೋರುತ್ತಿತ್ತು. ಲ್ಯಾಂಕಾಸ್ಟ್ರಿಯನರಿಂದ ಕಾನೂನು ಮತ್ತು ಶಿಸ್ತುಪಾಲನೆಯ ಕಾರ್ಯವಾಗದಿದ್ದರೆ ಯಾರ್ಕಿಸ್ಟರು ಅದನ್ನು ಸಾಧಿಸಬಲ್ಲರೆಂದು ಭಾವಿಸಲಾಗಿತ್ತು. ಹೀಗಾಗಿ 1455 ರಿಂದ 1485ರ ವರೆಗೆ ಇಂಗ್ಲೆಂಡು ಶಾಂತಿ ಸುರಾಜ್ಯ ಭಾರಗಳಿಗಾಗಿ ಅನ್ವೇಷಣೆ ನಡೆಸಿತು. ಈ ಮೂವತ್ತು ವರ್ಷಗಳ ಅವಧಿಯಲ್ಲಿ ಆಗಾಗ ಹೋರಾಟ ನಡೆಯುತಿತ್ತು. ಗುಲಾಬಿ ಯುದ್ಧಗಳ ಕದನಗಳು ಮುಖ್ಯವಾಗಿ ಸಣ್ಣವು. ಈ ಯುದ್ಧಗಳಲ್ಲಿ ನಿರತರಾಗಿದ್ದ ಸೈನಿಕರ ಮತ್ತು ಸಾವುನೋವುಗಳ ಬಗ್ಗೆ ಸಮಕಾಲೀನ ಸುದ್ದಿಗಾರರು ಕೊಡುವ ಅಂಕಿ ಅಂಶಗಳು ಉತ್ಪ್ರೇಕ್ಷೆಯಿಂದ ಕೂಡಿವೆ.

ಗುಲಾಬಿ ಯುದ್ಧಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. 1455ರಲ್ಲಿ ಸೇಂಟ್ ಅಲ್ಬನ್ಸ್‌ನಲ್ಲಿ 6ನೆಯ ಹೆನ್ರಿಯ ಸೈನ್ಯದ ಮೇಲೆ ಯಾರ್ಕಿನ ಡ್ಯೂಕನ ಸೈನ್ಯ ಎರಿಹೋದಾಗ ಮೊದಲನೆಯ ಭಾಗ ಆರಂಭವಾಗುತ್ತದೆ. ಎರಡು ಪಕ್ಷಗಳೂ ಕೆಲಕೆಲವು ಕದನಗಳಲ್ಲಿ ವಿಜಯ ಗಳಿಸಿದವು. ಯಾರ್ಕಿನ ಡ್ಯೂಕ್ 1460ರಲ್ಲಿ ಮೃತಪಟ್ಟ. ಮರುವರ್ಷ ಯಾರ್ಕ್ ಮನೆತನದವರಿಗೆ ದೊರಕಿದ ವಿಜಯಗಳಿಂದಾಗಿ ಅವನ ಮಗ ನಾಲ್ಕನೆಯ ಎಡ್ವರ್ಡ್ ಎಂಬ ಹೆಸರಿನಿಂದ ಸಿಂಹಾಸನವನ್ನೇರಿದ. ಗುಲಾಬಿ ಯುದ್ಧಗಳ ಎರಡನೆಯ ಘಟ್ಟ ಇಂಗ್ಲೆಂಡಿನ ಉತ್ತರಭಾಗಕ್ಕೆ ಸೀಮಿತವಾಗಿತ್ತು. ಅಲ್ಲಿ 1464ರಲ್ಲಿ ಲ್ಯಾಂಕಾಸ್ಟ್ರಿಯನರು ಎರಡು ಕಡೆಗಳಲ್ಲಿ ಸೋತರು. ಮೂರನೆಯ ಅವಧಿಯಲ್ಲಿಯ ಯುದ್ಧಗಳು ನಡೆದದ್ದು 1469–1471ರಲ್ಲಿ 4ನೆಯ ಎಡ್ವರ್ಡ್ ಮತ್ತು ವಾರ್ವಿಕ್ ನಡುವೆ ನಡೆದದ್ದು. ಮೊದಲು ವಾರ್ವಿಕ್‌ಗೆ ಜಯ ಲಭಿಸಿತು. ಎಡ್ವರ್ಡ್ ಪದಚ್ಯುತನಾದ. ಆರನೆಯ ಹೆನ್ರಿ ಸ್ವಲ್ಪಕಾಲ ಮತ್ತೆ ದೊರೆಯಾಗಿದ್ದ. 1471ರಲ್ಲಿ ಎಡ್ವರ್ಡ್ ಹಿಂದಿರುಗಿ ಬಂದು ಎರಡು ಎಡೆಗಳಲ್ಲಿ ವಾರ್ವಿಕನನ್ನು ಸೋಲಿಸಿ ಮತ್ತೆ ಸಿಂಹಾಸನವನ್ನೇರಿದ. ಮೂರನೆಯ ರಿಚರ್ಡ್‌ನ ವಿರುದ್ಧ ಬಕಿಂಗ್‌ಹ್ಯಾಮ್ ನಡೆಸಿದ ಬಂಡಾಯದಿಂದ ಗುಲಾಬಿ ಯುದ್ಧಗಳ ಕೊನೆಯ ಘಟ್ಟ ಆರಂಭವಾಯಿತು. ಲ್ಯಾಂಕಾಸ್ಟ್ರಿಯನ್ ಮನೆತನದವನಾದ ರಿಚ್ಮಂಡಿನ ಹೆನ್ರಿ ತನಗಿದ್ದ ಸಿಂಹಾಸನದ ಹಕ್ಕನ್ನು ಸಾಧಿಸಿಕೊಳ್ಳುವುದಕ್ಕಾಗಿ ಮಿಲ್ಫರ್ಡ್ ಹೇವನಿನ ಆಕ್ರಮಣ ನಡೆಸಿ, ಬಾಸ್ವರ್ತ್ ಫೀಲ್ಡಿನಲ್ಲಿ ರಿಚರ್ಡನನ್ನು 1485ರಲ್ಲಿ ಸೋಲಿಸಿದಾಗ ಗುಲಾಬಿ ಯುದ್ಧಗಳು ಮುಗಿದುವು. ಇವನು 7ನೆಯ ಹೆನ್ರಿಯಾಗಿ ಸಿಂಹಾಸನಾರೋಹಣ ಮಾಡಿದ. ಟ್ಯೂಡರ್ ಮನೆತನದ ಆಳಿಕೆ ಪ್ರಾರಂಭವಾಯಿತು.

ಗುಲಾಬಿ ಯುದ್ಧಗಳು ಅಷ್ಟೇನೂ ದೊಡ್ಡವಾಗಿರಲಿಲ್ಲವಾದರೂ ಅವುಗಳಲ್ಲಿ ನಿರತವಾಗಿದ್ದ ಪಕ್ಷಗಳು ಬಲು ಘೋರವಾಗಿ ಕಾದಾಟ ನಡೆಸಿದವು. ಕದನಗಳಲ್ಲಿ ವಿಜಯ ಗಳಿಸಿದ ಪಕ್ಷಗಳು ಉನ್ಮತ್ತವಾಗಿ ವರ್ತಿಸುತ್ತಿದ್ದುದುಂಟು. ಅತ್ಯಂತ ಕ್ರೂರವಾದ ರೀತಿಯಲ್ಲಿ ಮರಣದಂಡನೆ ವಿಧಿಸುತ್ತಿದ್ದುದುಂಟು. ಆದರೆ ಆಸ್ತಿಗಳಿಗೆ ಅಷ್ಟೇನೂ ಧಕ್ಕೆ ಒದಗಿದಂತೆ ಕಾಣುವುದಿಲ್ಲ. ಯುದ್ಧಗಳಿಂದ ವ್ಯಾಪಾರೋದ್ಯಮಿಗಳಿಗೆ ತೊಂದರೆಯಾದದ್ದುಂಟು. ಶ್ರೀಮಂತ ಪ್ರಭುಗಳು ಮತ್ತು ಯುದ್ಧಕ್ಕಾಗಿ ಅವರಿಂದ ನೇಮಕವಾದವರು ಮಾತ್ರ ಯುದ್ಧದಲ್ಲಿ ನಿರತರಾಗಿದ್ದರು. ಯುದ್ಧಕ್ಕೆ ಕಾರಣವಾದ ಅರಾಜಕತೆಯಿಂದ ಲಾಭ ಪಡೆದಿದ್ದವರು ಈ ವರ್ಗದವರೇ. ಗ್ರಾಮದ ಶ್ರೀಮಂತರೂ ಇವರನ್ನೇ ಅನುಸರಿಸಿದರು. ಯುದ್ಧದಿಂದ ಅತಿಯಾಗಿ

ನೊಂದವರು ಈ ಜನರೇ. ಗುಲಾಬಿಗಳ ಯುದ್ಧದಿಂದ ಹಳೆಯ ಶ್ರೀಮಂತ ವರ್ಗ ಅಳಿಸಿ ಹೋಯಿತೆನ್ನುವುದು ಸರಿಯಲ್ಲ. ಟ್ಯೂಡರ್ ದೊರೆಗಳ ಉತ್ತಮ ಆಳಿಕೆಯ ಕಾಲದಲ್ಲಿ ಮಧ್ಯಮವರ್ಗ ಬೆಳೆಯಿತು. ಆಡಳಿತದಲ್ಲಿ ಅವರು ಹೆಚ್ಚು ಹೆಚ್ಚಾಗಿ ಪ್ರಭಾವ ಬೀರತೊಡಗಿದರು.

(ಎ.ಎ.ಎ.)

**ಗುಲಾಮಿ ಸಂತತಿ:** ಮಹಮ್ಮದ್ ಘೋರಿಯ ಗುಲಾಮನೂ ನೆಚ್ಚಿನ ಸೇನಾನಿಯೂ ಆಗಿದ್ದ ಕುತುಬ್-ಉದ್-ದೀನ್ ಐಬಕನಿಂದ ಭಾರತದಲ್ಲಿ ಸ್ಥಾಪಿತವಾದ ಮುಸ್ಲಿಂ ರಾಜವಂಶ. ಇವನು ಘೋರಿಯ ಭಾರತ ದಂಡಯಾತ್ರೆಯಲ್ಲಿ ಪಾಲ್ಗೊಂಡಿದ್ದನಲ್ಲದೆ, ಅವನಿಗೆ ಸೇರಿದ ಪ್ರದೇಶಗಳ ಮೇಲ್ವಿಚಾರಕನೂ ಆಗಿದ್ದ. ಮಹಮ್ಮದ್ ಘೋರಿ 1206ರಲ್ಲಿ ನಿಧನನಾದಾಗ ಕುತುಬ್-ಉದ್-ದೀನ್ ಸ್ವತಂತ್ರನಾಗಿ ದೆಹಲಿ ಸುಲ್ತಾನನೆಂದು ಘೋಷಿಸಿಕೊಂಡ. ಇವನು ಮೊದಲು ಗುಲಾಮನಾಗಿದ್ದುದರಿಂದ ಇವನಿಂದ ಮೊದಲಾದ ರಾಜ ಪರಂಪರೆಗೆ ಗುಲಾಮೀ ಸಂತತಿಯೆಂದು ಕರೆಯಲಾಯಿತು. ಆದರೆ ಈ ವಂಶವನ್ನು ಗುಲಾಮೀ ಸಂತತಿ ಎಂದು ಕರೆಯುವುದರ ಔಚಿತ್ಯ ಪ್ರಶ್ನಾರ್ಹವಾದದ್ದು. ಏಕೆಂದರೆ ಈ ಸಂತತಿಯಲ್ಲಿ ಆಳಿದ ಸುಲ್ತಾನರಲ್ಲಿ ಮೂವರು ಮಾತ್ರ ಕುತುಬ್-ಉದ್-ದೀನ್-ಐಬಕ್, ಇಲ್ತಮಷ್, ಬಲ್ಬನ್-ಮೊದಲು ಗುಲಾಮರಾಗಿದ್ದರು. ಇವರಲ್ಲಿ ಕುತುಬ್-ಉದ್-ದೀನ್ ಸುಲ್ತಾನ ಪದವಿ ಪಡೆಯುವ ವೇಳೆಗೆ ಗುಲಾಮಗಿರಿಯಿಂದ ಬಿಡುಗಡೆ ಹೊಂದಿದ. ಇಲ್ತಮಷ್ ಹಾಗೂ ಬಲ್ಬನ್ ತಮ್ಮ ಬಾಳಿನಲ್ಲಿ ಮೊದಲೇ ಗುಲಾಮಗಿರಿಯಿಂದ ಬಿಡುಗಡೆ ಹೊಂದಿದ್ದರು. ವಾಸ್ತವವಾಗಿ ಗುಲಾಮರು ಯಾರೂ ಆಗ ಆಳಿದ್ದಿಲ್ಲ. ಮಧ್ಯಯುಗದ ಚರಿತ್ರಕಾರರು ಇವರನ್ನು ಮಮ್ಲೂಕ ರೆಂದು ಕರೆದಿದ್ದಾರೆ. ಅದೇ ಅವರಿಗೆ ಸರಿಯಾದ ಹೆಸರೆಂದು ವಾದಿಸಲಾಗಿದೆ.

ಕುತುಬ್-ಉದ್-ದೀನ್ ಐಬಕ್: ಸುಲ್ತಾನನಾದ ಮೇಲೆ (1206-10) ರಾಜ್ಯದ ಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಪ್ರಭುತ್ವಸೂಚಕವಾದ ಯಾವ ಬಿರುದನ್ನೂ ಈತ ಧರಿಸಲಿಲ್ಲ. ತನ್ನ ಹೆಸರಿನಲ್ಲಿ ನಾಣ್ಯವನ್ನು ಹೊರಡಿಸಲಿಲ್ಲ. ಆದರೆ ತಾನು ಸ್ವತಂತ್ರ ಸುಲ್ತಾನನೆಂದು ಪ್ರಕಟಿಸಿದ್ದು, ಇವನ ರಾಜ್ಯ ಘಜ್ನಿಯಿಂದ ತನ್ನ ಸಂಬಂಧ ತೊಡೆದುಹಾಕಿತೆಂ ಬುದನ್ನು ಸೂಚಿಸುತ್ತದೆ. ಈ ಕ್ರಮದಿಂದ ವಿರೋಧ ಉಂಟಾಗಬಹುದೆಂದು ಶಂಕಿಸಿ, ಆ ಕಡೆಯಿಂದ ಬರಬಹುದಾದ ಧಾಳಿಯನ್ನು ಎದುರಿಸಲು ತನ್ನ ಸೇನೆಯೊಡನೆ ಬಹುಕಾಲ ಈತ ಲಾಹೋರಿನಲ್ಲಿಯೇ ಉಳಿದಿದ್ದ. ಭಾರತದಲ್ಲಿ ಹಿಂದೂ ರಾಜರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ. ಈತನ ಮರಣಾನಂತರ ಇವನ ಮಗ ಆರಾಂ ಲಾಹೋರಿನಲ್ಲಿ ಸಿಂಹಾಸನವನ್ನೇರಿದ. ಇವನ ಅಳಿಯನೂ ದಕ್ಷ ಆಡಳಿತಗಾರನೂ ಬದಾನಿನ ರಾಜ್ಯಪಾಲನೂ ಆಗಿದ್ದ ಇಲ್ತಮಷ್‌ನ ಪಕ್ಷವನ್ನು ದೆಹಲಿಯಲ್ಲಿದ್ದ ಒಂದು ಶಕ್ತಿಯುತ ಪಕ್ಷ ಎತ್ತಿ ಹಿಡಿಯಿತು. ಆ ಜಗಳ ಸುಮಾರು ಎಂಟು ತಿಂಗಳುಗಳ ಕಾಲ ಮುಂದುವರಿಯಿತು. ಆರಾಂ ತನ್ನ ಸೇನೆಯೊಡನೆ ದೆಹಲಿಗೆ ಬರುತ್ತಿದ್ದಾಗ, ಮಾರ್ಗದಲ್ಲಿ ನಿಧನನಾದಾಗ ಇಲ್ತಮಷ್ ಸುಲ್ತಾನನಾದ

ಇಲ್ತಮಷ್: ದೆಹಲಿಯ ಸುಲ್ತಾನರ ಆಡಳಿತದ ನಿಜವಾದ ಸ್ಥಾಪಕ(1211 -36). ಇವನು ದಕ್ಷ ಸೇನಾನಿಯಾಗಿದ್ದ. 1221ರಲ್ಲಿ ಮಂಗೋಲರ ಧಾಳಿಯನ್ನು ಅಡಗಿಸಿ 1225ರಲ್ಲಿ ಬಂಗಾಲವನ್ನು ವಶಪಡಿಸಿಕೊಂಡ. ಕುತುಬ್-ಉದ್-ದೀನ್ ಕೈಬಿಟ್ಟಿದ್ದ ರಣತಂಭೋರ್ 1226ರಲ್ಲಿ ಇವನ ಕೈವಶವಾಯಿತು. ಬಾಗ್ದಾದಿನ ಕಲೀಫ ಇವನನ್ನು ಭಾರತದ ಸುಲ್ತಾನನೆಂದು ಮಾನ್ಯ ಮಾಡಿದ. ಇದರಿಂದ ಸಂತೋಷಗೊಂಡ ಇಲ್ತಮಷನು ಕಲೀಫನ ಹೆಸರನ್ನು ತನ್ನ ನಾಣ್ಯಗಳಲ್ಲಿ ಸೇರಿಸಿದ. 1232ರಲ್ಲಿ ಗ್ವಾಲಿಯರನ್ನು ವಶಪಡಿಸಿಕೊಂಡ. ಈತ 1236ರಲ್ಲಿ ಮರಣ ಹೊಂದಿದ. ಕುತುಬ್-ಉದ್-ದೀನನ ಆಳಿಕೆಯಲ್ಲಿ ಪ್ರಾರಂಭವಾದ ಕುತುಬ್ ಮಿನಾರ್ ಇವನ ಕಾಲದಲ್ಲಿ ಪೂರ್ಣವಾಯಿತು.

ತನ್ನ ಹಿರಿಯ ಮಗ ಅನಿರೀಕ್ಷಿತವಾಗಿ ಮರಣ ಹೊಂದಿದಾಗ ಹಿರಿಯ ಮಗಳಾದ ರಜ್ಜಿಯಾಳನ್ನು ಉತ್ತರಾಧಿಕಾರಿಣಿಯಾಗಿ ಇಲ್ತಮಷ್ ನೇಮಿಸಿದ್ದ. ಆದರೆ ಸಾಯುವ ಮುನ್ನ ಇವನು ಮನಸ್ಸು ಬದಲಿಸಿದನೆಂದು ಬದುಕಿದ್ದ ಪುತ್ರರ ಪೈಕಿ ಹಿರಿಯನಾಗಿದ್ದ ಫಿರೂಜ್ ತನ್ನ ಅನಂತರ ಸಿಂಹಾಸನವನ್ನೇರಬೇಕೆಂಬುದು ಇವನ ಅಭಿಲಾಷೆಯಾಗಿತ್ತೆಂದೂ ಹೇಳಲಾಗಿದೆ. ಅಂತೂ ಫಿರೂಜ್ ಪಟ್ಟಕ್ಕೆ ಬಂದ. ಆದರೆ ಭೋಗಾಸಕ್ತನಾಗಿದ್ದ ಅವನು ಕೊಲೆಯಾದ. ಅನಂತರ ರಜ್ಜಿಯಾ ಅಧಿಕಾರಕ್ಕೆ ಬಂದಳು. ರಜ್ಜಿಯಾ ಬುದ್ಧಿವಂತೆ. ಇಲ್ತಮಷ್‌ನ ಮರಣಾನಂತರ ರಾಜ್ಯದಲ್ಲಿ ತಲೆದೋರಿದ್ದ ಗಲಭೆಗಳನ್ನು ಅವಳು ಅಡಗಿಸಿ ದೇಶದಲ್ಲಿ ಶಾಂತಿ ಸ್ಥಾಪಿಸಿದಳು. ಅವಳು ಗಂಡಸಿನಂತೆ ಉಡಿಗೆ ತೊಡಿಗೆ ಧರಿಸಿ, ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದಳು. ಆದರೆ ಆಕೆ ಸ್ತ್ರೀಯಾಗಿದ್ದದ್ದರಿಂದಲೂ ಅಧಿಕಾರದ ಹುದ್ದೆಗಳಿಗೆ ಅವಳು ಮಾಡಿದ ನೇಮಕಗಳಿಂದ ಕೆಲವರಲ್ಲಿ ಅತೃಪ್ತಿ ಉಂಟಾದ್ದರಿಂದಲೂ ಅವಳು ಕೊಲೆಗೆ ಈಡಾದಳು. ಅವಳ ಮೂರು ವರ್ಷಗಳ ಆಳಿಕೆ ಕೊನೆಗೊಂಡಿತು. ಅನಂತರ ಇಲ್ತಮಷ್‌ನ ಕಿರಿಯ ಮಗ ನಾಸಿರುದ್ದೀನ್ ಮಹಮದ ಸುಲ್ತಾನನಾದ (1246).

ನಾಸಿರುದ್ದೀನ್: (1246-66). ಈತ ಸೌಜನ್ಯ ಮತ್ತು ಶ್ರದ್ಧಾಭಕ್ತಿಗಳ ಪ್ರತಿರೂಪವಾಗಿದ್ದ. ಇವನು ಸಾಹಿತ್ಯಪೋಷಕನೂ ಹೌದು. ಆದರೆ ರಾಜ್ಯಭಾರದಲ್ಲಿ ಆಸಕ್ತಿಯಿರಲಿಲ್ಲ. ಸ್ವಾತಂತ್ರ್ಯಕ್ಕಾಗಿ ಹವಣಿಸುತ್ತಿದ್ದ ಹಿಂದು ರಾಜರು ದಂಗೆ ಎದ್ದು ಆಡಳಿತ ಶಿಥಿಲವಾಯಿತು. ಮಂಗೋಲರ ಧಾಳಿಗೆ ಎಡೆ ದೊರಕಿತು. ಈತ ಅಶಕ್ತನಾದರೂ ಅದೃಷ್ಟವಂತ. ಇವನ ಮಾವ ಘಿಯಾಸುದ್ದೀನ್ ಬಲ್ಬನ್ ರಾಜ್ಯದ ಸುಭದ್ರತೆಗೆ ಶ್ರಮಿಸಿ ಅದು ಛಿದ್ರವಾಗುವುದನ್ನು ತಪ್ಪಿಸಿದ. ನಾಸಿರುದ್ದೀನನ ಮರಣಾನಂತರ ಅವನೇ ಸುಲ್ತಾನನಾದ.

ಘಿಯಾಸುದ್ದೀನ್ ಬಲ್ಬನ್: (1266-86). ಈ ವಂಶದ ಸುಲ್ತಾನರಲ್ಲಿ ಪ್ರಸಿದ್ಧ. ಇವನು ಸುಲ್ತಾನನಾದ ಮೇಲೆ ದುರ್ದಮ್ಯವೂ ಕಠಿಣವೂ ಆದ ಸಮಸ್ಯೆಗಳನ್ನು ಎದುರಿಸ ಬೇಕಾಯಿತು. ರಾಜ್ಯದ ಆಡಳಿತ ವ್ಯವಸ್ಥೆ, ಮಂಗೋಲರ ದಾಳಿಯನ್ನು ಅಡಗಿಸುವ ಏರ್ಪಾಡು -ಇವುಗಳಿಗೆ ಇವನು ತ್ವರಿತವಾಗಿ ಗಮನ ಹರಿಸಬೇಕಾಯಿತು. ಉಗ್ರವಾದ ಶಿಕ್ಷೆ ಹಾಗೂ ಕಾನೂನಿನ ಸಹಾಯದಿಂದ ಸುವ್ಯವಸ್ಥೆ ಸ್ಥಾಪಿಸಿದ. ನಾಸಿರುದ್ದೀನನ ಆಳಿಕೆಯಲ್ಲಿ ತಾನೇ ಆಡಳಿತವನ್ನು ನಿರ್ವಹಿಸುತ್ತಿದ್ದುದರಿಂದ ಈತ ಅಪಾರ ಅನುಭವಗಳನ್ನು ಪಡೆದಿದ್ದ. ಸುಭದ್ರ ಸರ್ಕಾರಕ್ಕೆ ವ್ಯವಸ್ಥಿತ ಸೇನೆ ಆವಶ್ಯಕವೆಂದು ಮನಗಂಡು ಸುಸಜ್ಜಿತ ಅಶ್ವಸೇನೆ ಮತ್ತು ಕಾಲಾಳು ಪಡೆಗಳನ್ನು ನಿರ್ಮಿಸಿ, ನುರಿತ ಹಾಗೂ ನಿಷ್ಠರಾದ ಸೇನಾಧಿಕಾರಿಗಳಿಗೆ ಒಪ್ಪಿಸಿದ. ರಾಜ್ಯದ ಸಮಸ್ತ ಅಧಿಕಾರವೂ ಇವನಲ್ಲಿತ್ತು. ಮುಖ್ಯ ಪ್ರಾಂತ್ಯಾಧಿಕಾರಿಗಳಾಗಿದ್ದ ಇವನ ಮಕ್ಕಳಿಗೂ ಹೆಚ್ಚಿನ ಅಧಿಕಾರವಿರಲಿಲ್ಲ. ನ್ಯಾಯಾಡಳಿತದಲ್ಲಿ ಇವನ ಬಂಧುಗಳಿಗೆ ಕೂಡ ಪಕ್ಷಪಾತ ತೋರುತ್ತಿರಲಿಲ್ಲ. ನ್ಯಾಯಾಡಳಿತವನ್ನು ಸಮರ್ಪಕಗೊಳಿಸಲು ಗೂಢಚಾರರನ್ನು ನೇಮಿಸಿದ್ದ. ಇವರು ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ವಿಶಿಷ್ಟ ವಿಚಾರಗಳನ್ನು ಇವನ ಗಮನಕ್ಕೆ ತರುತ್ತಿದ್ದರು. ಗೂಢಚಾರರು ಅಪರಾಧಗಳನ್ನು ತಡೆಗಟ್ಟುತ್ತಿದ್ದರಲ್ಲದೆ, ನಿರಪರಾಧಿಗಳನ್ನು ಅಧಿಕಾರಿಗಳ ಸ್ವೇಚ್ಛಾಪ್ರವೃತ್ತಿಯಿಂದ ಪಾರು ಮಾಡುತ್ತಿದ್ದರು. ತನ್ನ ಕಡೆಯ ದಿವಸಗಳಲ್ಲಿ ಸುಲ್ತಾನ ದೊಡ್ಡ ವಿಪತ್ತನ್ನು ಎದುರಿಸಬೇಕಾಯಿತು. ತೈಮೂರನ ಮುಖಂಡತ್ವದಲ್ಲಿ ಮಂಗೋಲರು 1285ರಲ್ಲಿ ಪಂಜಾಬನ್ನು ಮುತ್ತಿದರು. ವೃದ್ಧನಾದ ಸುಲ್ತಾನ ತನ್ನ ಹಿರಿಯ ಮಗನನ್ನು ಸೇನೆಯೊಡನೆ ಕಳುಹಿಸಿದ. ಅವನು ಲಾಹೋರಿಗೆ ಸೇನೆಯೊಡನೆ ಹೋಗುತ್ತಿದ್ದಾಗ, ಹೊಂಚು ಹಾಕುತ್ತಿದ್ದ ಮಂಗೋಲರು ಅವನನ್ನು ಕೊಂದರು (1286). ಎಂಬತ್ತು ವರ್ಷದ ಬಲ್ಬನ್ ಈ ಅನಿರೀಕ್ಷಿತ ವಿಪತ್ತನ್ನು ಎದುರಿಸಲಾರದವನಾದ.

ಬಲ್ಬನನ ಎರಡನೆಯ ಮಗ ಬುಘ್ರಾಖಾನನ ಮಗ ಕೈಕುಬಾದನನ್ನು ಆಸ್ಥಾನಿಕರು ಸುಲ್ತಾನನನ್ನಾಗಿ ಮಾಡಿದರು. ವಿಷಯಾಸಕ್ತನಾಗಿದ್ದ ಈತ ಅಧಿಕಾರ ಕಳೆದುಕೊಂಡ. ಇವನ ಮೂರು ವರ್ಷದ ಮಗನನ್ನು ಸುಲ್ತಾನನನ್ನಾಗಿ ಘೋಷಿಸಿದರು. ಈ ವ್ಯವಸ್ಥೆ ಬಹುಕಾಲ ಉಳಿಯಲಿಲ್ಲ. ಆಸ್ಥಾನಿಕರಲ್ಲಿ ಒಳಜಗಳ ಪ್ರಾರಂಭವಾಯಿತು. ಸುಲ್ತಾನನ ಹೆಸರಿನಲ್ಲಿ ಅವರು ತಮ್ಮ ಹಗೆಗಳನ್ನು ನಿರ್ಮೂಲ ಮಾಡಲು ಪ್ರಯತ್ನಿಸಿದರು. ಇದು ಅಶಾಂತಿಗೆ ಎಡೆ ಕೊಟ್ಟಿತು. ಬಾಲ ಸುಲ್ತಾನನನ್ನು ಖಿಲ್ಜಿ ವಂಶದ ಸ್ಥಾಪಕನಾದ ಮಾಲಿಕ್ ಫಿರೂಜ್ ಅಪಹರಿಸಿ, ಅವನ ಹೆಸರಿನಲ್ಲಿ ಮೂರು ತಿಂಗಳು ರಾಜ್ಯಭಾರ ಮಾಡಿದ. ಈ ಹುಡುಗನ ಅಂತ್ಯ ಹೇಗಾಯಿತೆಂಬುದು ತಿಳಿಯದು. ಫಿರೂಜ್ 1290ರಲ್ಲಿ ಸುಲ್ತಾನ್ ಜಲಾಲುದ್ದೀನ್ ಖಿಲ್ಜಿಯೆಂದು ಘೋಷಿಸಿಕೊಂಡು ಖಿಲ್ಜಿ ವಂಶದ ಆಳಿಕೆಯನ್ನು ಪ್ರಾರಂಭಿಸಿದ. ಇದರೊಂದಿಗೆ ಗುಲಾಮಿ ಸಂತತಿಯ ಆಳಿಕೆ ಕೊನೆಗೊಂಡಿತು.

ಗುಲಾಮಿ ಸಂತತಿಯವರು ತಮ್ಮ ಉತ್ತರಾಧಿಕಾರಿಗಳ ಆಯ್ಕೆಯ ವಿಚಾರದಲ್ಲಿ ಸೂಕ್ತ ನಿಯಮಗಳನ್ನು ರೂಪಿಸುವಲ್ಲಿ ವಿಫಲರಾದರು. ಇದರಿಂದಾಗಿ ಪದೇ ಪದೇ ಸಿಂಹಾಸನಕ್ಕಾಗಿ ಕಾದಾಟ ನಡೆಯುತ್ತಿತ್ತು. ಸುಲ್ತಾನರು ದೇಶದ ರಕ್ಷಣೆ ಹಾಗೂ ಆಡಳಿತಕ್ಕೆ ಗಮನ ಕೊಡುವುದರ ಬದಲು ತಮ್ಮ ಸ್ಥಾನ ಭದ್ರತೆಗೆ ಹೆಚ್ಚಿನ ಗಮನ ಕೊಡಬೇಕಾಯಿತು. ಇದರಿಂದ ಆಡಳಿತದಲ್ಲಿ ದಕ್ಷತೆ ಇಲ್ಲವಾಯಿತು. ಆಸ್ಥಾನಿಕರು ಮತ್ತು ಶ್ರೀಮಂತ ವರ್ಗದವರಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ಪೈಪೋಟಿ, ಮಂಗೋಲರ ಧಾಳಿಗಳು, ಹಿಂದು ರಾಜರು ತಮ್ಮ ಸ್ವಾತಂತ್ರ್ಯವನ್ನು ಗಳಿಸಲು ನಡೆಸುತ್ತಿದ್ದ ಪ್ರಯತ್ನ, ತುರ್ಕಿ ಜನಾಂಗದವರ ಬಗ್ಗೆ ತೋರುತ್ತಿದ್ದ ಪಕ್ಷಪಾತ ಇವು ಇವರ ರಾಜ್ಯ ಕ್ಷೀಣಿಸಲು ಕಾರಣ. ಇವರು ಭಾರತದಲ್ಲಿ ಮತೀಯ ಪ್ರಭುತ್ವವನ್ನು ಸ್ಥಾಪಿಸಿದರು. ಇವರ ರಾಜ್ಯಾಂಗ ಕುರಾನಿನ ನಿಯಮಗಳ ಮೇಲೆ ರೂಪುಗೊಂಡಿತ್ತು. ಸುಲ್ತಾನನನ್ನು ದೇವರ ಪ್ರತಿನಿಧಿ ಎಂದು ಪರಿಗಣಿಸಲಾಗಿತ್ತು. ಮೌಲ್ವಿಗಳು ನಿರೂಪಿಸಿದ ಇಸ್ಲಾಮಿನ ವಿಧಿಗಳಿಗೆ ರಾಜ ಬಾಧ್ಯನಾಗಿದ್ದ. ಆದರೆ ಈ ಕಟ್ಟು ಪಾಡಿಗೆ ಒಪ್ಪಲು ಬಲ್ಬನ್ ನಿರಾಕರಿಸಿದ. ಇವನೇ ಇಸ್ಲಾಂ ರಾಜ್ಯಾಂಗ ವಿಧಿಗಳನ್ನು ಕಡೆಗಣಿಸಿದ್ದಲ್ಲದೆ, ರಾಜತ್ವ ದೇವರ ಕೊಡುಗೆ ಮತ್ತು ರಾಜ ಅಸದೃಶ ಪುರುಷ ಎಂದು ಹೇಳಿದ. ಈ ಅರಸರ ಪ್ರಭುತ್ವಕ್ಕೆ ಸೈನ್ಯಶಕ್ತಿ ಅಡಿಪಾಯವಾಗಿತ್ತು. ಅಂತೆಯೇ ಸೈನ್ಯವ್ಯವಸ್ಥೆ ಅನಿವಾರ್ಯ ವಾಯಿತು. ಆದರೆ ಹಿಂದು ರಾಜರಂತೆ ಮಂತ್ರಿಮಂಡಲವನ್ನು ಸ್ಥಾಪಿಸದಿದ್ದುದು ಸುಲ್ತಾನರ ನಿರಂಕುಶ ಪ್ರಭುತ್ವಕ್ಕೆ ಎಡೆ ಮಾಡಿಕೊಟ್ಟಿತು. ಇವರ ರಾಜ್ಯದಲ್ಲಿ ಹಿಂದುಗಳು ಎರಡನೆಯ ದರ್ಜೆಯ ಪ್ರಜೆತನದಲ್ಲಿ ತೃಪ್ತಿ ಪಟ್ಟುಕೊಳ್ಳಬೇಕಾಗಿತ್ತು. ಹಿಂದು-ಮುಸ್ಲಿಂ ಸಾಮರಸ್ಯ ಇಲ್ಲವಾಯಿತು. ಆರ್ಥಿಕ ಸ್ಥಿತಿ ಕ್ಷೀಣಿಸತೊಡಗಿತು. ಕೃಷಿ, ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಸರ್ಕಾರದ ಪ್ರೋತ್ಸಾಹ ಅವಶ್ಯಕವೆಂದು ಸುಲ್ತಾನರು ಪರಿಗಣಿಸಲಿಲ್ಲ. ಶ್ರೀಮಂತ ಹಾಗೂ ಬಡಜನರ ಅಂತರ ದಿನೇ ದಿನೇ ಬೆಳೆಯುತ್ತಿತ್ತು. ದೇಶದಲ್ಲಿ ಆಗಾಗ್ಗೆ ಕ್ಷಾಮಗಳು ಸಂಭವಿಸುತ್ತಿದ್ದವು.

ವಾಸ್ತುಶಿಲ್ಪ ಕ್ಷೇತ್ರದಲ್ಲಿ ಇವರು ಹೊಸ ಶೈಲಿಯನ್ನು ರೂಪಿಸಿದಂತೆ ತೋರುವುದಿಲ್ಲ. ಇವರು ಹಿಂದು ದೇವಾಲಯಗಳನ್ನು ನಾಶ ಮಾಡಿ ಅವುಗಳ ಸಾಮಗ್ರಿಗಳಿಂದ ಮಸೀದಿಗಳನ್ನು ಕಟ್ಟಿಸಿದರು. ಇವರ ಕಟ್ಟಡಗಳು ಹಿಂದು ಶೈಲಿಯನ್ನು ಹೋಲುತ್ತವೆ ಎಂದು ಹಾವೆಲ್ ಹೇಳಿದ್ದಾರೆ. ಆ ಕಾಲದ ಪ್ರಸಿದ್ಧ ಸ್ಮಾರಕಗಳೆಂದರೆ ಕುವ್ವತ್-ವುಲ್-ಇಸ್ಲಾಂ ಮಸೀದಿ ಮತ್ತು ಕುತುಬ್ ಮಿನಾರ್. ಕುವ್ವತ್-ವುಲ್-ಇಸ್ಲಾಂ ಅನ್ನು ಕುತುಬ್-ಉದ್-ದೀನ್ ಕಟ್ಟಿಸಿದ. ಅದರ ಅಂಗಣವನ್ನು ಇಲ್ತಮಷ್ ವಿಸ್ತರಿಸಿದ. ಅದರ ಹೊರ ಆವರಣದಲ್ಲಿ ಕುತುಬ್ ಮಿನಾರ್ ಇದೆ.

(ಎಚ್.ವಿ.ಎಸ್.ಎಂ.)

**ನಾಣ್ಯಗಳು:** ಗುಲಾಮಿ ಸಂತತಿಯ ಅರಸರ ನಾಣ್ಯಗಳು ಬಹುಪಾಲು ಚಿನ್ನ ಬೆಳ್ಳಿಗಳ ಟಂಕಗಳು, ಮಿಶ್ರಲೋಹದ ಜಿಕಾಲುಗಳು ಅಥವಾ ದೆಹಲಿವಾಲಾಗಳು ಮತ್ತು ಕಡಿಮೆ ಮೌಲ್ಯದ ತಾಮ್ರದ ನಾಣ್ಯಗಳು. ಈ ನಾಣ್ಯಗಳ ಮುಂಬದಿಯಲ್ಲಿ ಸಾಮಾನ್ಯವಾಗಿ ಇಸ್ಲಾಂ ಮತ ಸಂದೇಶಗಳೂ ಹಿಂಬದಿಯಲ್ಲಿ ಸುಲ್ತಾನನ ಹೆಸರು, ಮುದ್ರಿತ ಸ್ಥಳ, ಇಸವಿ ಮತ್ತು ಬೆಳ್ಳಿ ಟಂಕಗಳು ಒಂದೇ ತೂಕದವಾಗಿರುತ್ತವೆ. ಈ ಸಂತತಿಯ ಚಿನ್ನದ ನಾಣ್ಯಗಳು ಬಹಳ ವಿರಳ. ಚಿನ್ನದ ಟಂಕಗಳು ಸು.170 ಗ್ರೇನ್ ತೂಗುತ್ತವೆ. ಇವು ಆಕಾರದಲ್ಲಿ ಗುಂಡಾಗಿದ್ದು ಎರಡು ಪ್ರರೂಪಗಳಲ್ಲಿ ದೊರೆತಿವೆ. 1 ಅಶ್ವಾರೋಹಿ ಪ್ರರೂಪ ಮತ್ತು 2 ಖಲೀಫ ಪ್ರರೂಪ. ಅಶ್ವಾರೋಹಿ ಪ್ರರೂಪ ನಾಣ್ಯದ ಮುಂಬದಿಯ ವೃತ್ತದದೊಳಗೆ ಕೈಯಲ್ಲಿ ದಂಡ ಅಥವಾ ಗದೆಯನ್ನು ಹಿಡಿದಿರುವ ಅಶ್ವಾರೋಹಿಯ ಚಿತ್ರವೂ ಹಿಂಬದಿಯಲ್ಲಿ ಸುಲ್ತಾನನ ಹೆಸರು, ಮುದ್ರಿಸಿದ ಸ್ಥಳ, ಇಸವಿ ಮತ್ತು ಇತರ ವಿವರಗಳೂ ಇವೆ. ಖಲೀಫ ಪ್ರರೂಪ ನಾಣ್ಯದ ಮುಂಬದಿಯಲ್ಲಿ ಅರಬ್ಬೀ ಲಿಪಿಯಲ್ಲಿ ಖಲೀಫನ ಹೆಸರೂ ಹಿಂಬದಿಯಲ್ಲಿ ಅಶ್ವಾರೋಹಿ ಪ್ರರೂಪಿ ನಾಣ್ಯದಲ್ಲಿರುವಂತೆಯೇ ಸುಲ್ತಾನನ ಹೆಸರು ಮತ್ತು ಇತರ ವಿವರಗಳೂ ಇವೆ. ಇಲ್ತಮಷ್, ಅಲಾವುದ್ದೀನ್, ಮಸೂದ್, ಷಹ, ನಾಸಿರುದ್ದೀನ್ ಮಹಮ್ಮದ್ ಮತ್ತು ಘಿಯಾಸುದ್ದೀನ್ ಬಲ್ಬನ್ ಇವರ ಸುವರ್ಣ ನಾಣ್ಯಗಳು ಮಾತ್ರ ಇದುವರೆಗೆ ದೊರೆತಿವೆ. ಚಿನ್ನದ ಟಂಕಗಳಲ್ಲದೆ ಇದೇ ಬಗೆಯ ಬೇರೆಬೇರೆ ಮೌಲ್ಯಗಳ ನಾಣ್ಯಗಳು ಚಲಾವಣೆಯಲ್ಲಿದ್ದುವು. ಚಿನ್ನದ ಟಂಕಗಳಂತೆಯೇ ಬೆಳ್ಳಿಯ ಟಂಕಗಳೂ ಗಾತ್ರ ಮತ್ತು ತೂಕಗಳಲ್ಲಿ ಸಮನಾಗಿದ್ದುವು. ಇವು ಚಿನ್ನದ ನಾಣ್ಯಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ದೊರೆತಿವೆ. ಇಲ್ತಮಷ್‌ನ ಬೆಳ್ಳಿಯ ಟಂಕಗಳು ಮಾತ್ರ ಖಲೀಫ ಮತ್ತು ಅಶ್ವಾರೋಹಿ ಪ್ರರೂಪಗಳಲ್ಲಿ ಮಾತ್ರ ದೊರೆತಿವೆ. ಉಳಿದ ಸುಲ್ತಾನರ ಬೆಳ್ಳಿಯ ಟಂಕಗಳು ಖಲೀಫ ಪ್ರರೂಪದಲ್ಲಿ ಮಾತ್ರ ದೊರೆತಿವೆ. ಕುತುಬ್–ಉದ್–ದೀನನ ಬೆಳ್ಳಿಯ ನಾಣ್ಯಗಳು ಇದುವರೆಗೆ ದೊರೆತಿಲ್ಲ.

ಮಿಶ್ರಲೋಹದ ನಾಣ್ಯಗಳು: ಈ ನಾಣ್ಯಗಳನ್ನು ಚಿನ್ನ ಅಥವಾ ಬೆಳ್ಳಿಯ ಅಂಶವಿರುವ ಮಿಶ್ರಲೋಹದಿಂದ ಮಾಡಲಾಗಿದೆ. ಆ ಕಾಲದ ಜಿಕಾಲುಗಳು ಈ ಲೋಹದವು. ಇವುಗಳ ತೂಕ 45–55 ಗ್ರೇನ್. ಇವನ್ನು ಮುಸ್ಲಿಂ ದೊರೆಗಳು ಮುದ್ರಿಸಿರುವರಾದರೂ ಇವುಗಳಲ್ಲಿ ಭಾರತೀಯ ನಾಣ್ಯಗಳ ಪರಂಪರೆಯನ್ನುಳಿಸಿಕೊಂಡು ಬಂದಿರುವುದು ವಿಶೇಷ ಸಂಗತಿ. ಏಕೆಂದರೆ ಇವು ಅತ್ಯಂತ ಹೆಚ್ಚಾಗಿ ಚಲಾವಣೆಯಲ್ಲಿದ್ದ ನಾಣ್ಯಗಳು. ಸಾಮಾನ್ಯವಾಗಿ ಇವುಗಳ ಮುಂಬದಿಯಲ್ಲಿ ಶಿವನ ವಾಹನವಾದ ನಂದಿಯ ಚಿತ್ರವೂ ದೇವನಾಗರೀ ಲಿಪಿಯಲ್ಲಿ ಸುಲ್ತಾನನ ಹೆಸರೂ ಇವೆ. ಹಿಂಬದಿಯಲ್ಲಿ ಚೌಹಾನ್ ಅಶ್ವಾರೋಹಿಯ ಚಿತ್ರವೂ ಸುಲ್ತಾನನ ಬಿರುದುಗಳೂ (ಉದಾ: ಶ್ರೀ ಹಮೀರ, ಶ್ರೀಪೃಥ್ವೀರಾಜದೇವ) ದೇವನಾಗರೀ ಲಿಪಿಯಲ್ಲಿವೆ. ಇವುಗಳಲ್ಲಿ ಇದೇ ಬಗೆಯ ಆದರೆ ಅರಬ್ಬೀ ಲಿಪಿಯಲ್ಲಿ ವಿವರಗಳನ್ನು ಕೊಟ್ಟಿರುವ ನಾಣ್ಯಗಳೂ ಉಂಟು.

ತಾಮ್ರದ ನಾಣ್ಯಗಳು: ಇವು ಕಡಿಮೆ ಆಕಾರ ಮತ್ತು ಮೌಲ್ಯಗಳ ನಾಣ್ಯಗಳು. ಇವುಗಳ ತೂಕ 12–70 ಗ್ರೇನ್‌ಗಳು. ಇವುಗಳಲ್ಲಿ ಬಹು ಸಂಖ್ಯೆಯ ನಾಣ್ಯಗಳ ಮೇಲೆ ಎರಡೂ ಬದಿಗಳಲ್ಲಿ ಅರಬ್ಬೀ ಲಿಪಿಯಲ್ಲಿ ವಿವರಗಳಿವೆಯಾದರೂ ದೇವನಾಗರೀ ಲಿಪಿಯಲ್ಲಿ ವಿವರಗಳುಳ್ಳ ಮತ್ತು ಮುಂಬದಿಯಲ್ಲಿ ಗೂಳಿಯ ಚಿತ್ರವಿರುವ ನಾಣ್ಯಗಳೂ ಉಂಟು. (ಎಂ.ಎಸ್.ಕೆ.)

**ಗುಲಿಸ್ತಾನ್ ಒಪ್ಪಂದ:** ಈಗಿನ ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತದಲ್ಲಿ, ಕ್ವೆಟ್ಟದ ವಾಯವ್ಯಕ್ಕೆ 65 ಕಿಮೀ ದೂರದಲ್ಲಿರುವ ಗುಲಿಸ್ತಾನ ಎಂಬ ಗ್ರಾಮದ ಬಳಿ ರಷ್ಯ ಮತ್ತು ಪರ್ಷಿಯಗಳು 1813 ಅಕ್ಟೋಬರ್ 12ರಂದು ಮಾಡಿಕೊಂಡ ಒಪ್ಪಂದ. ಸು.12 ವರ್ಷಗಳ ಕಾಲ ಸತತವಾಗಿ ಯುದ್ಧಮಾಡಿ ಮೊದಮೊದಲು ಒಂದೆರಡು ಕಡೆ ಜಯ ಗಳಿಸಿದರೂ ಆಮೇಲೆ ಸೋಲಿನ ಪರಂಪರೆಯನ್ನೇ ಅನುಭವಿಸಬೇಕಾಗಿ ಬಂದ ಪರ್ಷಿಯ ರಷ್ಯದೊಡನೆ ಈ ಶಾಂತಿಕೌಲನ್ನು ಮಾಡಿಕೊಂಡಿತು. ಈ ಒಪ್ಪಂದದ ತೀರ್ಮಾನಗಳಿವು: 1. ಡರ್ಬೆಂಟ್, ಬಾಕೂ, ಷಿರ್ವಾನ್, ಷಾಕಿ, ಕಾರಾಬಾಗ್ ಮತ್ತು ತಾಲಿಷ್‌ನ ಕೆಲವು ಭಾಗಗಳನ್ನು ರಷ್ಯಕ್ಕೆ ಪರ್ಷಿಯ ವಹಿಸಿಕೊಡಬೇಕು. 2. ಜಾರ್ಜಿಯ, ದಾಗೆಸ್ತಾನ್, ಮಿಂಗ್ರೇಲಿಯ, ಇಮರಿಷಿಯ, ಅಬ್ಖೇಷಿಯ ಇವುಗಳ ಮೇಲಿನ ಸಾರ್ವಭೌಮಾಧಿಕಾರವನ್ನು ರಷ್ಯಕ್ಕೆ ಪರ್ಷಿಯ ವರ್ಗಾಯಿಸಿ ಕೊಡಬೇಕು. 3. ಕ್ಯಾಸ್ಪಿಯನ್ ಸಮುದ್ರದಲ್ಲಿ ಪರ್ಷಿಯ ತನ್ನ ನೌಕಾಬಲವನ್ನು ಇಡಕೂಡದು. 4. ಇದಕ್ಕೆ ಪ್ರತಿಫಲವಾಗಿ ರಷ್ಯ ಪರ್ಷಿಯದ ದೊರೆ ಫತೆ ಅಲಿ ಷಹನ ಉತ್ತರಾಧಿಕಾರಿ ಅಬ್ಬಾಸ್ ಮಿರ್ಜಾನಿಗೆ ಪರ್ಷಿಯ ದೇಶದ ಗಾದಿಯನ್ನು ದೊರಕಿಸಿಕೊಡಲು ಸಹಾಯ ಮಾಡತಕ್ಕದ್ದು.

ಮಧ್ಯಪ್ರಾಚ್ಯದಲ್ಲಿ ಪ್ರಬಲ ಶಕ್ತಿಯಾಗಿದ್ದ ಪರ್ಷಿಯದ ರಾಜಕೀಯ ಚಿತ್ರವನ್ನೇ ಈ ಕೌಲು ಬದಲಾಯಿಸಿತು. ಮೇಲುನೋಟಕ್ಕೆ ಪ್ರಬಲವಾಗಿ ಕಂಡರೂ ರಷ್ಯಕ್ಕೆ ನೆಪೋಲಿಯನನ ದಂಡಯಾತ್ರೆಗಳ ಭಯ ತಪ್ಪಿರಲಿಲ್ಲ. ಇದಕ್ಕಾಗಿಯೇ ಅದು ಇಂಗ್ಲೆಂಡಿನೊಡನೆ 1812ರಲ್ಲಿ ಕೌಲೊಂದನ್ನು ಮಾಡಿಕೊಂಡಿತ್ತು. ದಕ್ಷಿಣದ ಪ್ರಬಲ ರಾಷ್ಟ್ರವಾದ ಪರ್ಷಿಯದೊಡನೆ ಹೇಗಾದರೂ ಶಾಂತಿ ಕೌಲು ಮಾಡಿಕೊಳ್ಳಬೇಕೆಂಬ ಅದರ ಉದ್ದೇಶ ಗುಲಿಸ್ತಾನ್ ಕೌಲಿನಿಂದ ಫಲಿಸಿತು. ಆಗ ಅದು ತನ್ನ ಗಮನವನ್ನು ಪಶ್ಚಿಮದತ್ತ ಹರಿಸಲು ಅನುಕೂಲವಾಯಿತು. ಮೊದಲೇ ಉತ್ತರಾಧಿಕಾರಕ್ಕಾಗಿ ಅಂತಃಕಲಹದಲ್ಲಿ ತೊಡಗಿದ್ದ ಅಬ್ಬಾಸ್ ಮಿರ್ಜಾ ಮತ್ತು ಸೋದರರು ತಮ್ಮ ರಾಷ್ಟ್ರದ ಹಿತಾಸಕ್ತಿಯನ್ನು ಕಡೆಗಣಿಸಿದರು. ಅಬ್ಬಾಸ್ ಮಿರ್ಜಾ ಪ್ರಬಲವಾಗಿ ರಷ್ಯದೊಡನೆ ಮಾಡಿಕೊಂಡ ಒಪ್ಪಂದ ಪರ್ಷಿಯಕ್ಕೆ ಮಾರಕವಾಯಿತು. ಕಳೆದುಕೊಂಡಿದ್ದ ಭಾಗಗಳನ್ನು ಮತ್ತೆ ಬ್ರಿಟಿಷರ ಸಹಾಯದಿಂದ ಗಳಿಸಿಕೊಳ್ಳುವೆನೆಂಬ ಅವನ ಆಸೆ ಹಗಲುಗನಸಾಯಿತು. ಅಂತೂ ಗುಲಿಸ್ತಾನ್ ಕೌಲು ಮುಂದೆ ಹತ್ತು ಹನ್ನೆರಡು ವರ್ಷಗಳ ಶಾಂತಿಗೆ ಕಾರಣವಾಯಿತು. 1826ರ ತನಕ ಪರ್ಷಿಯ – ರಷ್ಯಗಳ ಮಧ್ಯೆ ಯುದ್ಧವಾಗದಿದ್ದರೂ 1814ರಲ್ಲಿ ಬ್ರಿಟಿಷರು ಟೆಹರಾನ್ ಕೌಲು ಮಾಡಿಕೊಂಡು ಮತ್ತೆ ಪರ್ಷಿಯದ ಸ್ನೇಹಿತರಾದರು. ಇದರಿಂದ ಪರ್ಷಿಯ ರಷ್ಯದೊಡನೆ ತನ್ನ ರಾಜಕೀಯ ಸಂಬಂಧ ಕಡಿದುಕೊಳ್ಳಬೇಕಾಯಿತು. ಮತ್ತಾವ ಐರೋಪ್ಯ ರಾಷ್ಟ್ರವೂ ಬ್ರಿಟಿಷರ ಅನುಮತಿಯಿಲ್ಲದೆ ಪರ್ಷಿಯವನ್ನು ಪ್ರವೇಶಿಸದಂತಾಯಿತು. ಪೂರ್ವದ ಅಫ್ಘಾನಿಸ್ತಾನದೊಡನೆ ಪರ್ಷಿಯ ಆಗಾಗ್ಗೆ ಸಣ್ಣ ಪುಟ್ಟ ಕದನಗಳನ್ನು ಮಾಡುವಲ್ಲಿ ತನ್ನ ಗಮನವನ್ನು ಕೇಂದ್ರೀಕರಿಸಿತು. (ಸಿ.ಜಿ.ಪಿ.)

**ಗುಲ್ಬರ್ಗ, ಬಿದರೆಯ ಸ್ಮಾರಕಗಳು:** ಭಾರತದ ಮುಸ್ಲಿಂ ಕೇಂದ್ರಗಳ ವಾಸ್ತುಗಿಂತ ಭಿನ್ನವಾಗಿ 14–17ನೆಯ ಶತಮಾನಗಳ ನಡುವೆ ದಖನ್ನಿನಲ್ಲಿ ಇಸ್ಲಾಮಿಕ್ ವಾಸ್ತುಶೈಲಿ ಬೆಳವಣಿಗೆಯಾಯಿತು. ಗುಲ್ಬರ್ಗ ಮತ್ತು ಬಿದರೆಯ ಬಹಮನಿ–ಶಾಹಿಗಳ ಸ್ಮಾರಕಗಳು ಇಸ್ಲಾಮಿಕ್ ವಾಸ್ತುಶೈಲಿಗೆ ತಮ್ಮ ಕೊಡುಗೆ ನೀಡಿವೆ.

ಆದಿ ಬಹಮನಿಯರ ಸ್ಮಾರಕಗಳಲ್ಲಿ ತುಗಲಕ್ ಶೈಲಿಯ ಇಳಿಜಾರು ಗೋಡೆಗಳು, ಚಪ್ಪಟೆಯಾಕಾರದ ಗುಮ್ಮಟಗಳು ಮತ್ತು ಕಂಬದಂತಹ ಬುರುಜುಗಳಿವೆ. ಈ ಲಕ್ಷಣಗಳು ದೆಹಲಿ ಸುಲ್ತಾನರ ಕಾಲದ ವಾಸ್ತು ಲಕ್ಷಣಗಳನ್ನು ಹೋಲುತ್ತವೆ. ಉದಾ: ಗುಲ್ಬರ್ಗದ ಷಾಹ ಬಜಾರಿನ ಮಸೀದಿ ಮೊಹಮ್ಮದ್‌ಷಾನ ಆಳಿಕೆಯ ಕಾಲದ್ದಾಗಿದೆ. ಇದರ ಮಹಾದ್ವಾರ ಸುಲ್ತಾನ ಕಟ್ಟಿಸಿದ ಗೋರಿಯನ್ನು ಹೋಲುತ್ತದೆ. ಹಸನ್‌ಗಂಗು ಬಹಮನಿಯ ಗೋರಿ ಸ್ಮಾರಕದಲ್ಲಿ ಮತ್ತು ಇವನ ಮಗ ಒಂದನೆಯ ಮಹಮ್ಮದ್‌ಷಾನ ಸ್ಮಾರಕದಲ್ಲಿ ಇಳಿಜಾರು ಗೋಡೆಗಳು, ಚಪ್ಪಟೆ ಗುಂಬಜ಼್ ಮತ್ತು ಕಂಬಾಕಾರದ ಬುರುಜುಗಳಿವೆ.

ಕೋಟೆಯೊಳಗಿನ ಮಸೀದಿಗಳು

ಫಿರೋಜ್‌ಷಾನ ಆಳಿಕೆಯ ಕಾಲದಲ್ಲಿ ಪರ್ಷಿಯ ಮತ್ತು ತುರ್ಕಿಸ್ತಾನದ ಕಡೆಗಳಿಂದ ವಾಸ್ತುಶಿಲ್ಪಿಗಳನ್ನು ಕರೆಸಲಾಯಿತು. ಫಿರೋಜ್‌ಷಾನ ಸ್ಮಾರಕ ಗುಂಬಜ಼್ ಒಳಭಾಗದಲ್ಲಿ ಪರ್ಷಿಯನ್ ಶೈಲಿಯ ಗಾರೆ ಅಲಂಕರಣ ಮತ್ತು ವರ್ಣಚಿತ್ರಗಳಿವೆ. ಇದೇ ಸ್ಮಾರಕದಲ್ಲಿ ಕಲ್ಯಾಣ ಚಾಳುಕ್ಯ ಕಾಲದ ಕಪ್ಪು ಶಿವದ್ವಾರಗಳ ಪಟ್ಟಿಕೆಗಳನ್ನು ಮತ್ತು ಚಾಚು ಪೀಠಗಳನ್ನು ನೋಡಬಹುದು.

1425ರಲ್ಲಿ ಬಹಮನಿ ರಾಜಧಾನಿ ಬಿದರೆಗೆ ವರ್ಗಾವಣೆಯಾದ ಬಳಿಕ ದೆಹಲಿಯ ಪ್ರಭಾವದಿಂದ ದೂರವಾಯಿತು. ಬಿದರೆ ಹತ್ತಿರದ ಅಷ್ಟೂರಿನ ಸುಲ್ತಾನರ ಗುಂಬಜ಼್‌ಗಳು ವಿನೂತನ ವಾಸ್ತು ಅಂಶವನ್ನು ಪ್ರತಿಬಿಂಬಿಸುತ್ತವೆ. ಇವುಗಳಲ್ಲಿ ಗುಮ್ಮಟಗಳು ಗಡ್ಡೆಯಾಕಾರದಲ್ಲಿವೆ ಮತ್ತು ಎತ್ತರದ ಮದ್ದಲೆಗಳಿವೆ.

ಗೋರಿಗಳು: ಭಾರತದಲ್ಲಿ ಮುಸ್ಲಿಮರ ಗೋರಿಯ ಸ್ಮಾರಕದಲ್ಲಿ ಸಾಮಾನ್ಯವಾಗಿ ಒಂದು ಗೊಮ್ಮಟವುಳ್ಳ ಕೋಣೆ ಇರುತ್ತದೆ. ಇದನ್ನು ಹುಜ್ರ ವೆಂದೂ ಇದರ ನಡುವಿನ ಸಮಾಧಿಯನ್ನು ಡರಿ ಎಂದೂ ಕೆಳಗಡೆ ನಡುವೆ ಶವದ ಕೋಣೆಯಿರುವುದಕ್ಕೆ ಮಕ್‌ಬರಾ ಎಂದೂ ಕರೆಯುವರು. ಚಿಕ್ಕ ಸ್ಮಾರಕಗಳಿಗೆ ಪಶ್ಚಿಮ ಗೋಡೆಯಲ್ಲಿ ಒಂದು ಗೂಡಿರುತ್ತದೆ. ಇದನ್ನು ಮಿಹರಬ್ ಎನ್ನುವರು. ದೊಡ್ಡ ಸ್ಮಾರಕಗಳಿಗೆ ಪಕ್ಕದಲ್ಲಿ ಪ್ರತ್ಯೇಕವಾಗಿ ಮಸೀದಿಗಳನ್ನೂ ನಿರ್ಮಿಸಲಾಗಿದೆ. ಬಹಮನಿಯರ ಸ್ಮಾರಕ ಗುಮ್ಮಟಗಳಲ್ಲಿ ಅತ್ಯಂತ ಪ್ರಾಚೀನವೆಂದರೆ ಹಸನ್‌ಗಂಗು ಬಹಮನಿ ಮತ್ತು ಆತನ ಮಗ ಒಂದನೆಯ ಮಹಮ್ಮದ್‌ಷಾನದ್ದಾಗಿವೆ. ಇದೇ ರೀತಿ ಮುಜರದ್‌ಕಮ ಅಥವಾ ದರ್ಗಾ ಆದಿ ಬಹಮನಿ ವಾಸ್ತುಶೈಲಿಯಲ್ಲಿವೆ.

ತದನಂತರ ಬಹಮನಿ ಸುಲ್ತಾನರ ಗೋರಿ ಸ್ಮಾರಕ ಗುಮ್ಮಟಗಳನ್ನು ಹಾಫ್ತಗುಂಬಜ಼್ ಸಂಕೀರ್ಣದಲ್ಲಿ ಕಟ್ಟಲಾಗಿದೆ. ಷಾಮುಜಾಹಿದ್‌ನ ಸ್ಮಾರಕ ಗುಮ್ಮಟ ಮೊದಲಿನ ಸ್ಮಾರಕ ಗುಮ್ಮಟಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಅದರ ಅಳತೆ ಮತ್ತು ನಮೂನೆ ದಾವುದ್ ಸುಲ್ತಾನನ ಸ್ಮಾರಕದಂತಿದೆ. ಇದರ ಗುಮ್ಮಟ ಅಪರೂಪದ ನಮೂನೆಯಲ್ಲಿದೆ. ಬೀದರ್‌ನ 15ನೆಯ ಶತಮಾನದ ಫಿರೋಜ್‌ಷಾ ಬಹಮನಿಯ ಸ್ಮಾರಕ ಗೋರಿ ಗುಮ್ಮಟದಲ್ಲಿ ಮೊಟ್ಟಮೊದಲು ಎರಡು ಅಂತಸ್ತಿನ ಕಟ್ಟಡ ಕಾಣಿಸಿಕೊಳ್ಳುತ್ತದೆ. ಕಲ್ಬುರ್ಗಿಯ ಚೋರಗುಂಬಜ಼್ ಮತ್ತು ಚಿಸ್ತಿ ಸಾಧು ಹಜರತ್ ಗೀಸುದರಜ್ ಗೋರಿ ಗುಮ್ಮಟ ಸ್ಮಾರಕಗಳಲ್ಲಿ ಈ ವಾಸ್ತು ಅಂಶಗಳಿವೆ.

ಬಿದರೆಯಲ್ಲಿ ಬಹಮನಿಯರ ಗೋರಿಗಳನ್ನು ಚೌಕಾಕಾರದ ಗುಮ್ಮಟ ಕೋಣೆಗಳಲ್ಲಿ ನಿರ್ಮಿಸುವುದು ಮುಂದುವರೆಯಿತು. ಅಹಮದ್‌ಷಾ ಬಹಮನಿಯ ಗೋರಿ ಈ ನಮೂನೆಯಲ್ಲಿದೆ. ಬಿದರೆಯ ಸೂಫಿ ಸಂತ ನಿಮತ್ ಅಲ್ಲಾನ ಮಗನ ಗೋರಿ ಅಷ್ಟಭುಜ ವಿನ್ಯಾಸದಲ್ಲಿದೆ. ಈ ರೀತಿ ಗುಮ್ಮಟದಲ್ಲಿ ಈ ಪ್ರಕಾರದ ವಿನ್ಯಾಸ 16ನೆಯ ಶತಮಾನದ ಪೂರ್ವದಲ್ಲಿ ಕಂಡುಬರುವುದಿಲ್ಲ.

16ನೆಯ ಶತಮಾನದಲ್ಲಿ ಬಹಮನಿಯರು ತುಂಡು ತುಂಡಾಗಿ ಹಂಚಿಹೋದ ಬಳಿಕ ನೇರ ಉತ್ತರಾಧಿಕಾರಿಗಳಾಗಿ ಬಿದರೆಯಲ್ಲಿ ಬರೀದ್ ಸುಲ್ತಾನರ ಆಳಿಕೆ ಆರಂಭವಾಯಿತು. ಎರಡನೆಯ ಬರೀದಿ ಅರಸ ಅಮೀರನ ಶವವನ್ನು ಇವನ ಸ್ಮಾರಕದಲ್ಲಿಡಲಿಲ್ಲ.



ಗೋರಿ, ಬೀದರ್

ಈ ಸ್ಮಾರಕ ಅಪೂರ್ಣ ಮತ್ತು ಗುಮ್ಮಟವಿರುವುದಿಲ್ಲ. ಅಮೀರನ ಸಹೋದರ ಖಾನ್‌ಜಹಾನ್ ಬರೀದ್‌ನ ಎತ್ತರದ ಚೌಕಾಕಾರದ ಸ್ಮಾರಕ ಗೋರಿಯನ್ನು ಜಗತಿಯ ಮೇಲೆ ನಿರ್ಮಿಸಲಾಗಿದೆ. ಈ ಗೋರಿಯ ಎರಡು ಅಂತಸ್ತಿನ ನಡುವಿನ ಪಟ್ಟಿಕೆಗಳಲ್ಲಿ ಕುರಾನ್ ಬರೆಯಲಾಗಿದೆ. ಈ ಸ್ಮಾರಕಕ್ಕೆ ಮಸೀದಿಯಿದೆ. ಇದನ್ನು ಖಾನಖಾ ಅಥವಾ ವಿಶ್ರಾಂತಿಗೃಹವೆನ್ನುವರು. ಸ್ಮಾರಕಗಳಿಗೆ ಜಗತಿಯನ್ನು ನಿರ್ಮಿಸುವ ಪರಂಪರೆ ಆದಿಲ್‌ಶಾಹಿ ಗೋರಿ ಸ್ಮಾರಕಗಳಲ್ಲಿಯೂ ಉತ್ತರದ ಮೊಗಲರ ಗೋರಿ ಸ್ಮಾರಕಗಳಲ್ಲೂ ಕಂಡುಬರುತ್ತದೆ.

16ನೆಯ ಶತಮಾನದ ಕೊನೆಯಲ್ಲಿ ಬಿದರೆ ವಾಸ್ತುರಚನೆಯಲ್ಲಿ ಕುತೂಹಲಕಾರಿ ಅಂಶಗಳು ಆರಂಭವಾದವು. ಬರೀದ್ ಸುಲ್ತಾನರು ತಮ್ಮ ಗೋರಿಗಳನ್ನು ಸಂತರ ಗೋರಿಗಳ ಸಮೀಪ ಕಟ್ಟತೊಡಗಿದರು. ಇವುಗಳ ಸುತ್ತಲೂ ತೋಟಗಳನ್ನು ನಿರ್ಮಿಸಲಾಯಿತು. ಈ ವಿನ್ಯಾಸ-ಲಕ್ಷಣಗಳನ್ನು ಬಾಬರನ ಗೋರಿ, ನಾಯಿ ಗೋರಿ, ಹೆಸರಿಲ್ಲದ ಗೋರಿ ಮತ್ತು ಹಬ್‌ಶ್ಶಿಕೋಟ್‌ನ ಮುಖ್ಯ ಗೋರಿಗಳಲ್ಲಿ ಕಾಣಬಹುದು.

ಇಲ್ಲಿಯ ಮಸೀದಿಗಳು ಮುಸ್ಲಿಮರ ಪ್ರಾರ್ಥನಾ ಮಂದಿರ ನ್ಯಾಯಾಲಯ ಮತ್ತು ಧಾರ್ಮಿಕ ಹಾಗೂ ಲೌಕಿಕ ಜೀವನದ ಕೇಂದ್ರಗಳಾಗಿವೆ. ಸುತ್ತಲೂ ಗೋಡೆಯಿಂದ ಸುತ್ತುವರಿದ ಮಸೀದಿ ಒಳಗಡೆ ಮೆಕ್ಕ ಕಡೆಗೆ ಮುಖಮಾಡಿರುವ ಒಂದು ಗೋಡೆಯಿದ್ದು ಅದರ ಮಧ್ಯಭಾಗವನ್ನು ಕಿಬ್ಲ ಎಂದೂ ಪ್ರಾರ್ಥನಾದಿಕ್ಕನ್ನು ತೋರಿಸುವ ಗೂಡೊಂದನ್ನು ಮಿಹರಬ್ ಎಂದೂ ಕರೆಯುತ್ತಾರೆ.

ಗುಲ್ಬರ್ಗದಲ್ಲಿ ಮೊಟ್ಟಮೊದಲನೆಯ ಷಾಹಬಜಾರನ ಮಸೀದಿಯಲ್ಲಿ 84 ಶಿಲಾಕಂಬಗಳ 90 ಚೌಕ ಅಂಗಳಗಳನ್ನು ಆರು ಸಾಲುಗಳಲ್ಲಿ ವಿಭಜಿಸಲಾಗಿದ್ದು ಮುಸ್ಲಿಮರ ಸಾಂಪ್ರದಾಯಿಕ ಆದಿಭಾಗದ ಮಸೀದಿಗಳಿಗಿಂತ ಭಿನ್ನವಾಗಿದೆ. ಗುಲ್ಬರ್ಗ ಜಿಲ್ಲೆಯ ಅಕ್ಕಲಕೋಟೆಯ ಚೋಟಿ ಮಸೀದಿಗೆ ಒಂದೇ ಅಂಕಣಕ್ಕೆ ಒಂದು ತೆರೆದ ಕಮಾನುಳ್ಳ ಪ್ರವೇಶವಿರುವುದು ಅಪರೂಪದ್ದಾಗಿದೆ.

ಗುಲ್ಬರ್ಗದ ಜಾಮೀ ಮಸೀದಿ ದಖನ್ನಿನ ಮಸೀದಿ ರಚನೆಯ ಇತಿಹಾಸದಲ್ಲಿ ಒಂದು ಪರಿವರ್ತನೆಯ ಹಂತವೆನಿಸಿದೆ. ಈ ಮಸೀದಿಯನ್ನು 136ರಲ್ಲಿ ಮೊದಲನೆಯ ಮಹಮ್ಮದ್‌ಷಾನ ಆಳಿಕೆಯ ಕಾಲದಲ್ಲಿ ಪರ್ಷಿಯದ ವಾಸ್ತುತಜ್ಞ ರಫೀ ಎಂಬುವವನು ಕಟ್ಟಿದನೆಂದು ಇಲ್ಲಿಯ ಒಂದು ಶಾಸನದಿಂದ ತಿಳಿದುಬರುತ್ತದೆ. ಇದು ದಖನ್ನಿನಲ್ಲೇ ಅಪರೂಪದ ಕಟ್ಟಡ. ಅನೇಕ ಹೊಸ ಲಕ್ಷಣಗಳನ್ನುಳ್ಳ ಅಪರೂಪದ ಎರಡು ನಮೂನೆಯ ಕಮಾನುಗಳನ್ನು ಒಂದು ತೆಳುವಾದ ಕಮಾನಿನಾಕಾರದ ಗುಮ್ಮಟ ಇನ್ನೊಂದು ಶಾಲಾಮಾದರಿಯ ಗುಮ್ಮಟ ಹೊಂದಿದೆ. ಕಮಾನುಗಳ ಮೇಲೆ ಕೂಡಿಕೊಂಡಿರುವ 63 ಕಿರಿದಾದ ಗುಂಬಜ್‌ಗಳು ಇಲ್ಲಿವೆ. ಮುಂದೆ 14ನೆಯ ಶತಮಾನದ ಮಧ್ಯದಲ್ಲಿ ದಖನ್ನಿನ ಮಸೀದಿಯನ್ನು ಸಾಮಾನ್ಯವಾಗಿ ಒಂದೇ ತಳಪಾಯದಲ್ಲಿ ಕಟ್ಟಲಾಗಿದೆ.

ಸುನ್ನಿ ಪಂಥದ ವಿಧಿವಿಧಾನಗಳನ್ನು ಬೋಧಿಸಲು ಮದರಸಗಳೆಂಬ ಶಿಕ್ಷಣ ಕೇಂದ್ರಗಳು ಆರಂಭವಾದವು. ದಖನ್ನಿನಲ್ಲಿ ಪ್ರಥಮ ಬಾರಿಗೆ ಒಂದು ಮದರಸ ಬಿದರೆಯಲ್ಲಿ ಪ್ರ.ಶ. 9-10ರಲ್ಲಿ ಆರಂಭವಾಯಿತು. ಇದನ್ನು ನಿರ್ಮಿಸಿದವನು ಮಹಮೂದ್‌ಗಾವಾನ್. ಇದರ ಚೌಕೋನ ಆವರಣದಲ್ಲಿ ಒಂದೊಂದು ಬದಿಯು 34 ಮೀ ಇದ್ದು ಇದಕ್ಕೆ ನಾಲ್ಕು ಪ್ರವೇಶಗಳಿವೆ. ಈಗ ಮದರಸದ ಉಳಿದಿರುವ ಕೋಣೆ ಬಹುಶಃ ಮಸೀದಿಯಿರಬೇಕು. ಏಕೆಂದರೆ ಇದರ ಪಶ್ಚಿಮ ಗೋಡೆಗೆ ಮಿಹರಬ್ ಇದೆ. ಈಗ ಉಳಿದಿರುವ ಪಡಸಾಲೆಯ ಭಾಗ ಮಹಮ್ಮದ್ ಗವಾನನ ಗ್ರಂಥಾಲಯವಿರಬೇಕು.

ಇಸ್ಲಾಂಧರ್ಮದಲ್ಲಿ ಸೂಫಿಗಳು ಒಂದು ಪ್ರತ್ಯೇಕ ವರ್ಗವಾಗಿದ್ದು ಇದರ ಮಾರ್ಗದರ್ಶಕನನ್ನು ಪೀರ್ ಅಥವಾ ಷಯ್ಖ್ ಎನ್ನುವರು. ಈ ಸೂಫಿಗಳು ಮುಸ್ಲಿಂ ಸೈನ್ಯದೊಂದಿಗೆ ಖೈಬರ್ ಪಾಸ್ ಮುಖಾಂತರ ಭಾರತಕ್ಕೆ ಬಂದರೆನ್ನಲಾಗಿದೆ. ಇಸ್ಲಾಂಧರ್ಮದಲ್ಲಿ ಚಿಸ್ತಿ ಮತ್ತು ಕಾದಿರಿಗುಂಪುಗಳು ಗುಲ್ಬರ್ಗ, ಬಿದರೆ ಮತ್ತು ಬಿಜಾಪುರದಲ್ಲಿ ಪ್ರಸಿದ್ಧರಾಗಿದ್ದಾರೆ. 1325ರಲ್ಲಿ ಮಹಮ್ಮದ್ ಬಿನ್ ತುಗಲಕ್ ತನ್ನ ಎರಡನೆಯ ರಾಜಧಾನಿಯಾಗಿದ್ದ ದೇವಗಿರಿಗೆ ದೆಹಲಿಯಿಂದ ಸೂಫಿ ವರ್ಗದವರನ್ನು ಸರ್ಕಾರದ ಅಧಿಕಾರಿಗಳ ಜೊತೆಗೆ ಕರೆತಂದ. ಹೀಗೆ ಅನೇಕರು ಕ್ರಮೇಣ ದಕ್ಷಿಣಕ್ಕೆ ಬಂದರು. ಬಹಮನಿ ಸುಲ್ತಾನ ಹಸನ್‌ಗಂಗು ಸೂಫಿ ಸಂತರನ್ನು ತನ್ನ ರಾಜ್ಯದಲ್ಲಿ ಹೊಸ ಆಡಳಿತವನ್ನು ಒಟ್ಟುಗೂಡಿಸಲು ಮತ್ತು ಭದ್ರಪಡಿಸಲು ಕರೆಸಿಕೊಂಡ. ಇದನ್ನು ಆತನ ಉತ್ತರಾಧಿಕಾರಿಗಳು ಅನುಸರಿಸಿದರು. ಗುಲ್ಬರ್ಗ, ಬಿದರೆ ಮತ್ತು ಬಿಜಾಪುರಗಳಲ್ಲಿ ಸೂಫಿ ಮಂದಿರಗಳಿವೆ. ಆದರೆ ಇಲ್ಲಿ ಮಠಗಳು ಅಥವಾ ಖಾನ್ಕಾಹಗಳು ಬಿಜಾಪುರದಲ್ಲಿ ಇರಲಿಲ್ಲ. ಆದರೆ ಬಿದರೆಯಲ್ಲಿ ಇವು ಸಾಮಾನ್ಯ.

ದರ್ಗಾಗಳು: ಒಬ್ಬ ಸೂಫಿ, ಪೀರ್, ಷಯ್ಖ್ ಸತ್ತ ಬಳಿಕ ಆತನನ್ನು ಒಂದು ಗೋರಿಯಲ್ಲಿ ಹೂಳುವ ಪರಂಪರೆಯಿದ್ದಿತು. ಈ ಸ್ಥಳವನ್ನೇ ದರ್ಗಾ ಎನ್ನುವರು. ಗುಲ್ಬರ್ಗದಲ್ಲಿ ಹಸನ್‌ಗಂಗು ಮತ್ತು ಆತನ ಮಗ ಒಂದನೆಯ ಮಹಮ್ಮದ್‌ಷಾ ಬಹಮನಿಯ ಗುರುಷಯ್ಖ್ ಜುನಯ್ದಿಯ ದರ್ಗಾಕ್ಕೆ ಆದಿಲ್‌ಶಾಹಿ ರಾಜ್ಯದ ರಚನೆಯೂ ಸೇರಿದೆ. 16ನೆಯ ಶತಮಾನದಲ್ಲಿ ಯೂಸುಫ್ ಆದಿಲ್‌ಷಾ (ಮೊದಲನೆಯ ಸುಲ್ತಾನ) ಜುನಯ್ದಿಯ ದರ್ಗಾಕ್ಕೆ ಷಯ್ಖ್‌ರಜ್ವ ಮಹಾದ್ವಾರವನ್ನು ನಿರ್ಮಿಸಿದ.

ಸಂತರ ದರ್ಗಾಗಳು ಸುಲ್ತಾನರ ಗೋರಿಗಳಿಗಿಂತ ಸ್ವಲ್ಪ ಮೇಲ್ಭಾಗದಲ್ಲಿವೆ. ದರ್ಗಾಗಳ ಪಶ್ಚಿಮಕ್ಕೆ ಮಸೀದಿಯಿರುತ್ತದೆ. ದರ್ಗಾಗಳಲ್ಲಿ ಸಾಮಾನ್ಯವಾಗಿ ಸಂತರ ಗೋರಿ ಮತ್ತು ಅವರ ಉತ್ತರಾಧಿಕಾರಿಗಳ ಗೋರಿಗಳಿರುತ್ತವೆ. ಬಿದರೆಯಲ್ಲಿ ಹಜರತ್ ಖಲೀಲ್ ಅಲ್ಲಾನ ಚೌಖಂದೀಯು ಎತ್ತರದ ಜಗತಿ ಮೇಲೆ ಕಟ್ಟಲಾಗಿದೆ. ಸುಲ್ತಾನರ ಗೋರಿಗಳು ಅವರ ದರ್ಗಾಗಳಿಗಿಂತ ಕೆಳಭಾಗದಲ್ಲಿ ಕಟ್ಟಲಾಗಿದೆ.

ಖಾನ್ಕಾಹಗಳು: ಮುಸ್ಲಿಮ್ ಪೀರರ ಮನೆಗಳು, ಖಾನ್ಕಾಹಗಳ ಕೇಂದ್ರಗಳಾದವು. ಬಿದರೆಯ ಖಾದ್ರಿವರ್ಗ ಮಹಬೂಬ್ ಸುಭಾನಿ ದೊಡ್ಡ ಖಾನ್ಕಾಹ ಬಹಮನಿಯರ ಕಾಲದ್ದಾಗಿದೆ. ಮತ್ತೊಂದು ಮಹಬೂಬ್ ಸುಭಾನಿಯದು (1644-45) ಮೊಗಲರ ಕಾಲದ್ದಾಗಿದೆ.

ಷಿಯರಿಗೆ ಸಂಬಂಧಿಸಿದ ಸ್ಮಾರಕಗಳನ್ನು ಅಷೂರ್‌ಖಾನ್‌ಗಳೆನ್ನುವರು. ಗುಲ್ಬರ್ಗದಲ್ಲಿ ಅಷೂರ್‌ಖಾನಗಳಿದ್ದ ಪುರಾವೆಗಳಿಲ್ಲ. ಬಿದರೆಯ ಬರೀದ್‌ಶಾಹಿ ಸುಲ್ತಾನರು ಸುನ್ನಿವರ್ಗಕ್ಕೆ



ಹಫ್ತ್ ಗುಂಬಜ್ ಗೋರಿಗಳು, ಕಲ್ಬುರ್ಗಿ

ಸೇರಿದವರಾಗಿದ್ದು, ಅವರ ಸ್ಮಾರಕಗಳಿಗೆ ಷಿಯ ಹಬ್ಬಗಳನ್ನು ಜೋಡಿಸಲು ತಿರಸ್ಕರಿಸಿದ್ದರು. ಆದರೆ ಬಿಜಾಪುರದ ಆದಿಲ್‌ಶಾಹಿಗಳು ಷಿಯಾ ಆಚರಣೆಗೆ ಒತ್ತು ನೀಡಿದ್ದರು.

ತಾಲೀಮ್: ತಾಲೀಮ್ ಎಂದರೆ ಅಂಗಸಾಧನೆ. ಇದನ್ನು ಮಾಡುವ ಗರಡಿಯಂತಹ ಸ್ಥಳ. ಇಲ್ಲಿ ಸೈನಿಕರಿಗೆ ಮತ್ತು ಯುವಕರಿಗೆ ಯುದ್ಧ ತರಬೇತಿ ನೀಡುತ್ತಿದ್ದರು. ಬಿದರೆಯಲ್ಲಿ ಈ ಬಗೆಯ ಕಟ್ಟಡಗಳನ್ನು ಮಸೀದಿಯ ಪಕ್ಕದಲ್ಲಿ ಪ್ರತ್ಯೇಕವಾಗಿ ನಿರ್ಮಿಸುತ್ತಿದ್ದರು.

ಮುಸ್ಲಿಮರ ಕಾಲದ ಗಮನ ಸೆಳೆಯುವ ಕಟ್ಟಡಗಳಲ್ಲಿ ದೆಹಲಿಯ ಕುತುಬ್ ಮಿನಾರ್ ಒಂದು. 14-15ನೆಯ ಶತಮಾನದಲ್ಲಿ ಯಾವುದೇ ಮಿನರೆಟ್ಸ್‌ಗಳನ್ನು ಗುಲ್ಬರ್ಗ ಮತ್ತು ಬಿದರೆಯಲ್ಲಿ ನಿರ್ಮಿಸಲಿಲ್ಲವಾದರೂ ಬಿದರೆಯ ಮಹಮೂದ್ ಗಾವಾನನ ಮದರಸದ ಪ್ರವೇಶದ ಬದಿಗಳಲ್ಲಿ ದುಂಡಾಕಾರದ ಎರಡು ಎತ್ತರದ ಮಿನರೆಟ್ಸ್‌ಗಳಿವೆ. ಇದರ ಜೊತೆಗೆ ಚೌಬಾರ ಎಂದು ಕರೆಯುವ ಒಂದು ವೃತ್ತಾಕಾರದ ಕಟ್ಟಡ ಬಿದರೆಯ ಮಧ್ಯದಲ್ಲಿದೆ.

ಬಿದರೆಯ ಅಲಿಬರೀದ್‌ನ ಗೋರಿ ಮಸೀದಿಯ ಮೇಲೆ ಮಿನರೆಟ್ಸ್‌ಗಳಿವೆ. ಇವು ಮೂರು ಅಂತಸ್ತಿನ ದುಂಡು ಆಕೃತಿಯ ದಂಡವುಳ್ಳವು. ಮೇಲಿನ ಭಾಗ ಬೀದರ್‌ನ ಮಹಮೂದ್ ಗಾವಾನನ ಮದರಸದ ಗೋಪುರದಂತಿವೆ.

ಗುಲ್ಬರ್ಗದಲ್ಲಿ ಆದಿಲ್‌ಶಾಹಿ ಸುಲ್ತಾನ ಯೂಸುಫ್ ಆದಿಲ್‌ಷಾ ಎತ್ತರದ ಮಿನರೆಟ್ಟುಗಳನ್ನು ಪ್ರವೇಶ ಗೋಡೆಗಳ ಬದಿಯಲ್ಲಿ ಕಟ್ಟಿ ಅವುಗಳಲ್ಲಿ ಸಂತರ ಸ್ಮಾರಕಗಳನ್ನು ವೈಭವೀಕರಿಸಲು ಪ್ರಯತ್ನಪಟ್ಟ. ಗುಲ್ಬರ್ಗದ ಅಫಜಲ್‌ಖಾನ್ ಮಸೀದಿಯ ಮಿನರೆಟ್‌ಗಳಿಗೆ ಎಂಟು ಮುಖಗಳಿವೆ.

ಗುಲ್ಬರ್ಗ ಮತ್ತು ಬಿದರೆಯ ಬಹಮನಿ ಸುಲ್ತಾನರು ತಮ್ಮ ಸ್ಮಾರಕಗಳ ಮಾಳಿಗೆಯ ನಾಲ್ಕು ಮೂಲೆಗಳಲ್ಲಿ ಕಳಸಗಳನ್ನಿಡುವ ಮಾದರಿಗಳ ನಿರ್ಮಾಣ ಸಾಮಾನ್ಯವಾಗುತ್ತಾ ಬಂತು. ಈ ಬಗೆಯ ಕಳಸಗಳು ಗುಲ್ಬರ್ಗದ ಹಸನ್‌ಗಂಗು ಗೋರಿ, ಷಾಹಬಜಾರ್‌ನ ಮಸೀದಿ, ದಾವುದ್ ಸ್ಮಾರಕ, ಘಿಯಾತ್ ಅಲ್‌ದ್ದೀನ್, ಇಮ್ಮಡಿ ಮಹಮ್ಮದ್‌ಷಾ ಬಹಮನಿ ಸ್ಮಾರಕ, ಫಿರೋಜ್‌ಷಾ ಬಹಮನಿ ಸ್ಮಾರಕಗಳಲ್ಲಿ ಮತ್ತು ಗುಲ್ಬರ್ಗದ ಜಾಮೀ ಮಸೀದಿ ಮಾಳಿಗೆಯ ಮೇಲಿವೆ.



ಮಹಮೂದ್ ಗಾವಾನ್ ಮದರಸಾ

15ನೆಯ ಶತಮಾನದ ಮಧ್ಯದಲ್ಲಿ ಗುಲ್ಬರ್ಗದ ಗೀಸುದರಜ್ ದರ್ಗಾದಲ್ಲಿ ಎರಡು ಅಂತಸ್ತಿನ ಕಳಸ ಮೊದಲು ಕಾಣಸಿಗುವುದು. ಇಲ್ಲಿಯ ಲಂಗರ್‌ಕೀ ಮಸೀದಿಯಲ್ಲಿ ನಮೂನೆಯ ಕುಂಭದ ದುಂಡಾದ ಕಳಸಗಳಿವೆ. ಇಲ್ಲಿಯ ಸೀದಿ ಅಂಬರ್ ಸ್ಮಾರಕದಲ್ಲಿ ಅನೇಕ ಅಲಂಕೃತ ಕಳಸಗಳಿವೆ. ಬಿದರೆಯಲ್ಲಿ ಅಲಾವುದ್ದೀನ್ ಸ್ಮಾರಕದ ಮೇಲೂ ಕಳಸಗಳಿವೆ. ಮಹಮ್ಮದ್‌ನ ಸ್ಮಾರಕಕ್ಕೆ ಮೂರು ಅಂತಸ್ತುಗಳಲ್ಲಿ 16 ಕಳಸಗಳಿವೆ. ಇವುಗಳಿಗೆ ಸ್ವಲ್ಪ ಭಿನ್ನವಾದ ಗುಲ್‌ದಸ್ತಾಕ್ಕೆ ಸರಳ ದಿಂಡಿರುತ್ತದೆ. ಇದನ್ನು ಬಿದರೆಯ ಅಲಿಬರೀದ್ ಸ್ಮಾರಕದ ನಾಲ್ಕು ಮೂಲೆಗಳ ಮೇಲೆ ಮತ್ತು ಇದೇ ಬಗೆಯ 24 ಗುಲ್‌ದಸ್ತಾಗಳು ಗೊಮ್ಮಟದ ಮೇಲೆ ಇವೆ ಹಾಗೂ ಇತರ ಸ್ಮಾರಕಗಳ ಗೊಮ್ಮಟಗಳ ಮೇಲೆ ಗುಲ್‌ದಸ್ತಾಗಳನ್ನು ಕಾಣಬಹುದು. ಇವುಗಳ ಜೊತೆಗೆ ಸಣ್ಣ ಹೆಡೆಯಾಕಾರದ ಛತ್ರಿಗಳನ್ನು ಬಹಮನಿ ಮತ್ತು ಆದಿಲ್‌ಶಾಹಿಗಳು ಮಸೀದಿ ಮತ್ತು ಗೋರಿ ಸ್ಮಾರಕಗಳ ಅಲಂಕರಣಕ್ಕೆ ಬಳಸಿದ್ದಾರೆ. ಡೆಕ್ಕನ್‌ನಲ್ಲಿ ಮೊಟ್ಟಮೊದಲ ಬಾರಿಗೆ ಹೆಡೆಯಾಕಾರದ ಛತ್ರಿಬಳಸಿದ ಸ್ಮಾರಕವೆಂದರೆ ಗುಲ್ಬರ್ಗದ ಚೋರ್ ಗುಂಬಜ್.

ಗೋಡೆಗಳ ಮೇಲೆ ತುರಾಯಿಗಳ ಅಲಂಕಾರ ಪೂರ್ವ ಮತ್ತು ಪಶ್ಚಿಮದಲ್ಲಿ ಒಲವನ್ನು ತೋರಿಸುತ್ತದೆ. ಭಾರತದಲ್ಲಿ ದೆಹಲಿಯ ಮಸೀದಿ ಮತ್ತು ಗೋರಿ ಸ್ಮಾರಕ ಗೋಡೆಗಳ ಮೇಲಿನ ತುರಾಯಿ ಕೆಲಸ ಬಳಕೆಗೆ ಬಂದು ಹೆಸರಾದವು. ಗುಲ್ಬರ್ಗದಲ್ಲಿ ಗೋಡೆಗಳ ಮೇಲೆ ಸರಳ ಕಮಾನಿನ ತುರಾಯಿ ಬಳಕೆ ಪ್ರಾಚೀನ ಸುಲ್ತಾನರ ಗೋರಿ ಸ್ಮಾರಕಗಳಲ್ಲಿ, ಷಾಹ ಬಜಾರಿನ ಮಸೀದಿ ಮತ್ತು ಗೋಲ್ಕೊಂಡದಲ್ಲಿನ ಮಸೀದಿಗಳಲ್ಲಿದೆ. 14ನೆಯ ಶತಮಾನದ ಮಧ್ಯದಲ್ಲಿನ ಕೆಲವು ಸ್ಮಾರಕಗಳಿಗೆ ಗೋಡೆ ತುರಾಯಿ ಅಲ್ಲದೇ ಕಮಾನು–ತಲೆ ತುರಾಯಿ ಗೊಮ್ಮಟದ ಸುತ್ತಲಿವೆ.

ತ್ರಿಪತ್ರಾಲಂಕಾರ ತುರಾಯಿ ಗುಲ್ಬರ್ಗದ ಮುಜರ್ರದ್ ಕಾಮಲ್ ದರ್ಗಾದಲ್ಲಿನ ಮಸೀದಿಯಲ್ಲಿ ಮತ್ತು ಜಾಮೀಮಸೀದಿಯಲ್ಲಿ ಮೊಟ್ಟ ಮೊದಲು ಬಳಸಲಾಯಿತು. 15ನೆಯ ಶತಮಾನದಲ್ಲಿ ಬಿದರೆಯ ಅಲಾವುದ್ದೀನ್ ಬಹಮನಿಯ ಗೋರಿಯ ಸ್ಮಾರಕದಲ್ಲಿ ತ್ರಿಪತ್ರಾಲಂಕಾರ ತುರಾಯಿಯನ್ನು ಗುಮ್ಮಟ ಮತ್ತು ಗೋಡೆಗಳ ಮೇಲೆ ಅಲಂಕರಿಸಲಾಗಿದೆ. ಕಮಾನು–ತಲೆ ತುರಾಯಿಗಳನ್ನು ಅಲಿಬರೀದ್ ಗೋರಿಯ ಮಸೀದಿ ಮತ್ತು ಬಾಬರನ ಗೋರಿ ಸ್ಮಾರಕದಲ್ಲಿ ಬಳಸಲಾಗಿದೆ. ಇಬ್ರಾಹಿಂ ಗೋರಿಯ ಸ್ಮಾರಕಕ್ಕೆ ಹೊಸ ನಮೂನೆಯ ಎಲೆಯ ಅಲಂಕಾರ ಬಳಸಲಾಗಿದೆ.

ಗುಮ್ಮಟಗಳು: 14ನೆಯ ಶತಮಾನದ ಕೊನೆಯಲ್ಲಿ ದಖನ್‌ನಲ್ಲಿ ಕಟ್ಟಿದ ಎಲ್ಲ ಗುಮ್ಮಟಗಳು ದೆಹಲಿ ಫಿರೋಜ್‌ಷಾ ತುಗಲಕ್‌ನ ಕಾಲದ ಕಟ್ಟಡಗಳನ್ನು ಹೋಲುತ್ತವೆ. ಈ ಗುಮ್ಮಟಗಳು ಚಪ್ಪಟೆಯಾಗಿದ್ದು ಅಷ್ಟಮುಖ ವೇದಿಕೆಯ ಮೇಲೆ ನಿಂತಿವೆ. 14ನೆಯ ಶತಮಾನದ ಕೊನೆಯಲ್ಲಿ ದುಂಡಾಕಾರದ ಎತ್ತರಿಸಿದ ಗುಮ್ಮಟಗಳನ್ನು ಕಟ್ಟಲಾಗಿದೆ. ಇಂಥವುಗಳನ್ನು ಇಮ್ಮಡಿ ಮಹಮ್ಮದ್‌ಷಾನ ಸ್ಮಾರಕದಲ್ಲಿ ಕಾಣಬಹುದು. ಮುಂದೆ ಜೋಡು ಗುಮ್ಮಟಗಳ ನಿರ್ಮಾಣವೂ ಆಯಿತು. ಹಾಗೇ ಅನೇಕ ಸಣ್ಣ ಗುಮ್ಮಟಗಳ ನಿರ್ಮಾಣ ಮತ್ತು ಬಳಕೆ ಬಂತು. ಇಂತಹ ಸಣ್ಣಗುಮ್ಮಟಗಳನ್ನು ಜಾಮೀಮಸೀದಿಯಲ್ಲಿ ಕಾಣಬಹುದು. ಗುಲ್ಬರ್ಗದಲ್ಲಿ ಅತ್ಯಂತ ಹಳೆಯ ಕಮಾನುಗಳು ಎತ್ತರ ಜೋಡು ಕಂಬಗಳ ಮೇಲಿದ್ದು, ಕಡಿಮೆ ಅಗಲವಾಗಿವೆ. ಇವು ಗುಲ್ಬರ್ಗದ ಷಾಹಬಜಾರ್ ಮಸೀದಿ, ಜಾಮೀ ಮಸೀದಿ, ಹಳೆಯ ಸುಲ್ತಾನರ ಗೋರಿಗಳು ಮತ್ತು ಫಿರೋಜ್‌ಷಾ ಬಹಮನಿಯ ಗೋರಿ ಸ್ಮಾರಕಗಳಲ್ಲಿ ಕಮಾನುಗಳನ್ನು ಕಾಣಬಹುದು. ಜಾಮೀ ಮಸೀದಿಯಲ್ಲಿ ತ್ರಿಪತ್ರಾಲಂಕಾರದ ಕಮಾನುಗಳು ಮಿಹರಬ್ ಮತ್ತು ಕಮಾನು ಚಾವಣಿಯ ಮೂಲೆಯಲ್ಲಿ ಬಳಸಲಾಗಿವೆ. ಇಲ್ಲಿನ ಅನೇಕ ಸುರುಳಿ ಕಮಾನುಗಳಲ್ಲಿ ಹಿಂದು ವಾಸ್ತುಶಿಲ್ಪ ಲಕ್ಷಣದ ಪ್ರಭಾವವಿದೆ.

ಮಿಹರಬ್‌ಗಳು: ಪ್ರತಿಯೊಂದು ಮುಸ್ಲಿಂ ಸ್ಮಾರಕಕ್ಕೆ ಮೆಕ್ಕ ಕಡೆಗೆ ಮುಖಮಾಡಿರುವ ಜೋಡು ಸ್ತಂಭಗಳ ಮೇಲೆ ಕಮಾನಿರುವ ಮಿಹರಬ್ ಎಂಬ ಪ್ರಾರ್ಥನಾ ಗೂಡುಗಳಿರುತ್ತವೆ. ಎರಡನೆಯ ಮಹಮ್ಮದ್‌ಷಾ ಬಹಮನಿಯ ಗೋರಿಯ ಮಿಹರಬ್‌ನಲ್ಲಿ ಜೋಡು ಹಿಂಚಾಚು –ಮುಂಚಾಚುಳ್ಳ ಕಮಾನಿವೆ.

ವರ್ಣಚಿತ್ರಗಳು: ಚೋರ್‌ಗುಂಬಜ್ ಮತ್ತು ಫಿರೋಜ್‌ಖಾನ್ ಬಹಮನಿ ಗೋರಿಯ ಸ್ಮಾರಕಗಳ ಗುಂಬಜ್ ಒಳಗಡೆ ವಿವಿಧ ವರ್ಣಚಿತ್ರಗಳಿವೆ. (ಆರ್.ಎಂ.ಎಸ್.)

**ಗುಹಾ ವಾಸ್ತುಶಿಲ್ಪ:** ಕಲ್ಲು ಬಂಡೆಗಳಿಂದ ಕೂಡಿದ ಬೆಟ್ಟಗಳಲ್ಲಿ ಸ್ವಾಭಾವಿಕವಾಗಿಯೋ ಇಲ್ಲ ಮಾನವ ನಿರ್ಮಿತವಾಗಿಯೋ ಬಂಡೆಗಳ ಒಳಗಡೆ ಇರುವ ಸ್ಥಳವೇ ಗುಹೆ. ದೊಡ್ಡ ಬಂಡೆಯ ಅಥವಾ ಬೆಟ್ಟದ ಕಡಿದಾದ ಮುಖದಲ್ಲಿ ಒಳಭಾಗಕ್ಕೆ ತೋರುವ ಆವರಣವನ್ನೂ ಗುಹೆ ಎನ್ನುವರು. ವಾಸ್ತು ಎಂಬ ಪದ ಮಾನವನಿರ್ಮಿತ ಕೃತಿಗಳಿಗೆ ಮೀಸಲಾಗಿರುವುದರಿಂದ ಗುಹಾ ವಾಸ್ತು ಸಹ ಕೃತಕ ರಚನೆಗಳಿಗೆ ಮಾತ್ರ ಅನ್ವಯಿಸುತ್ತದೆ. ತಂತ್ರ ಮತ್ತು ಉದ್ದಿಶ್ಯದಲ್ಲಿ ಗುಹಾವಾಸ್ತುವನ್ನೇ ಹೋಲುವ ಕೆಲವು ಕೃತಿಗಳನ್ನು, ಅವು ಸ್ವರೂಪದಲ್ಲಿ ಒಳ ಆವರಣವುಳ್ಳ ಗುಹೆಗಳನ್ನು ಹೋಲದಿದ್ದರೂ ಇದೇ ಪದದ ಚೌಕಟ್ಟಿನಲ್ಲಿ ಅಳವಡಿಸುವುದು ಕಲಾ ಇತಿಹಾಸತಜ್ಞರ ರೂಢಿ. ಈ ವಿಸ್ತೃತ ಅರ್ಥವನ್ನು ಒಳಗೊಳ್ಳುವಂತೆ ಗುಹಾ ವಾಸ್ತುವೆಂದರೆ ಶಿಲೆಯಲ್ಲಿ ಕಂಡರಿಸಿದ ವಾಸ್ತು ಎಂದು ಪರ್ಯಾಯವಾಗಿ ಪರಿಗಣಿಸುವ ವಾಡಿಕೆ ಈಚೆಗೆ ಬೆಳೆದಿದೆ.

ಗುಹಾ ವಾಸ್ತು ರಚನಾತಂತ್ರ ಕಟ್ಟಡ ರಚನಾತಂತ್ರಕ್ಕೆ ವ್ಯತಿರಿಕ್ತವಾದದ್ದು. ಕಟ್ಟಡ ನಿರ್ಮಾಣದಲ್ಲಿ ಬಿಡಿ ವಸ್ತುಗಳನ್ನು ಪೂರ್ವ ನಿಷ್ಕರ್ಷಿತ ವಿನ್ಯಾಸದಲ್ಲಿ ಜೋಡಿಸಿ ಒಂದು ಇಡೀ ರಚನೆಯನ್ನಾಗಿಸುವ ತಂತ್ರವಿದ್ದರೆ, ಗುಹಾ ವಾಸ್ತುವಿನಲ್ಲಿ ಇಡಿಯಾದ ಒಂದು ಬಂಡೆಯನ್ನು ಭೇದಿಸಿ ಆವರಣವನ್ನು ಸೃಷ್ಟಿಸುವುದು ಪದ್ಧತಿ. ಮೊದಲನೆಯದರ ಮೂಲಸೂತ್ರ ಸಂಕಲನ, ಎರಡನೆಯದರದು ವ್ಯವಕಲನ. ಗುಹಾ ವಾಸ್ತು ಈ ದೃಷ್ಟಿಯಿಂದ ಶಿಲ್ಪತಂತ್ರಕ್ಕೆ ಸಮೀಪವಾಗಿದೆ. ಭೇದನ ಕ್ರಿಯೆ ಎರಡರಲ್ಲೂ ಸಾಮಾನ್ಯ. ಆದರೆ ಶಿಲ್ಪದಲ್ಲಿ ಈ ಕ್ರಿಯೆಯ ಪರಿಣಾಮ ಘನ; ಗುಹಾ ವಾಸ್ತುವಿನಲ್ಲಿ ಇದು ಶೂನ್ಯಾವರಣ. ಈ ವಿಕೃತ ಸಂಬಂಧದಿಂದಾಗಿ ಗುಹಾ ವಾಸ್ತುವನ್ನು ಋಣವಾಸ್ತು ಅಥವಾ ಋಣಶಿಲ್ಪ ಎಂದು ಕರೆಯುವುದು ರೂಢಿ.

ಗುಹಾ ವಾಸ್ತು ಕೃತಿಗಳಲ್ಲಿ ಇತರ ವಾಸ್ತುಗಳಲ್ಲಿರುವಂತೆಯೇ ಒಳ ಆವರಣವಿದ್ದರೂ ಮುಮ್ಮುಖವೊಂದನ್ನು ಬಿಟ್ಟು ಬೇರೆ ಹೊರಮೈಯ ಅಭಾವವಿರುವುದರಿಂದ, ಶಿಲ್ಪಾಲಂಕರಣವೆಲ್ಲ ಒಳ ಮತ್ತು ಮುಮ್ಮುಖಗಳಿಗಷ್ಟೇ ಸೀಮಿತವಾಗುತ್ತದೆ. ಈ ಶಿಲ್ಪಗಳು ಗುಹಾ ವಾಸ್ತುವಿನ ಮುಖ್ಯ ಉದ್ದಿಶ್ಯವಾದ ಒಳ ಆವರಣಕ್ಕೆ ಬಾಧೆಯಾಗದಂತೆ ಇರಬೇಕಾಗಿರುವುದರಿಂದ, ಗುಹಾ ವಾಸ್ತುವಿನಲ್ಲಿ ಶಿಲ್ಪವಿದ್ದರೆ ಅದು ಅಲಂಕರಣವಾಗಿ ಸಹಯೋಗಿಯಾಗಿ ಮಾತ್ರ ಇರುತ್ತದೆ.

ಗುಹೆಗಳು ಶಿಲಾಯುಗದ ಕಾಲದಿಂದಲೇ ಮಾನವನ ವಾಸಸ್ಥಾನಗಳಾಗಿದ್ದರೂ ಈ ರೂಢಿಗೂ ಗುಹಾ ವಾಸ್ತುವಿಗೂ ಯಾವ ಸಂಬಂಧವೂ ಇಲ್ಲ. ಗುಹಾ ವಾಸ್ತುವನ್ನು ರಚಿಸಲು ಗಟ್ಟಿಕಲ್ಲನ್ನು ಭೇದಿಸಬೇಕಾದರೆ ಲೋಹದ ಆಯುಧಗಳು ಆವಶ್ಯಕವಾಗುತ್ತವೆ. ಲೋಹದ ಜ್ಞಾನ ಬೆಳೆದದ್ದು ಮಾನವನ ಇತಿಹಾಸದಲ್ಲಿ ಕೇವಲ ಸು.5,000 ವರ್ಷಗಳ ಹಿಂದೆ; ಆ ಹೊತ್ತಿಗೆ ಮಾನವ ಸಮಾಜದ ವ್ಯವಸ್ಥೆ ಶಿಲಾಯುಗದ ಸ್ಥಿತಿಯಿಂದ ಬಹಳಷ್ಟು ಬದಲಾಗಿ ಗ್ರಾಮ ಮತ್ತು ನಗರಗಳು ಬೆಳೆದಿದ್ದು, ಗುಹಾವಾಸ ಪದ್ಧತಿ ನಾಗರಿಕ ಸಮಾಜದಲ್ಲಿ ತೊರೆದುಹೋಗಿದ್ದಿತಲ್ಲದೆ, ನವಸಮಾಜವ್ಯವಸ್ಥೆಗೆ ಅನುಕೂಲವಾಗುವ ಅನೇಕ ರೀತಿಯ ಹೊಸ ವಾಸ್ತು ಪದ್ಧತಿಗಳು ಬಳಕೆಗೆ ಬಂದಿದ್ದುವು. ಸಹಜವಾಗಿ ಈ ಕಾಲದಲ್ಲಿ ಪ್ರಾರಂಭವಾದ ಗುಹಾ ವಾಸ್ತುವೂ ರೂಪ, ಉದ್ದಿಶ್ಯಗಳಲ್ಲಿ ತತ್ಕಾಲೀನ ರಚನಾವಾಸ್ತುವನ್ನೇ ಅನುಸರಿಸುತ್ತದೆ.

**ಪ್ರಪಂಚ:** ಈಜಿಪ್ಟ್ ದೇಶದಲ್ಲಿ ಸುಲಭವಾಗಿ ಕೊರೆಯಲು ಅನುಕೂಲವಾದ ಬಂಡೆಗಳು ಇದ್ದು, ಲೋಹದ ಉಪಯೋಗವೂ ಬಹು ಮುಂಚೆ ಹರಡಿದ್ದುದರಿಂದ ಪ್ರಪಂಚದ ಮೊಟ್ಟಮೊದಲ ಗುಹಾ ವಾಸ್ತು ಕೃತಿಗಳೆಲ್ಲ ಈ ದೇಶದಲ್ಲಿ ಇವೆ. ಈ ಪ್ರಾಚೀನ ಕೃತಿಗಳೆಲ್ಲ ಸಮಾಧಿಗಳು. ತತ್ಪೂರ್ವ ನಾಗರಿಕ ಸಮಾಜದಲ್ಲಿ ಭೇದನದಿಂದ ನಿರ್ಮಿಸಲಾದ ಆವರಣದ ಉಪಯೋಗ ಶವಸಂಸ್ಕಾರಕ್ಕೆ ಮಾತ್ರ ಮೀಸಲಾಗಿತ್ತು. ಹೆಣ ಹೂಳಲು ಗಟ್ಟಿ ನೆಲದಲ್ಲಿ ಹಳ್ಳಗಳನ್ನು ತೋಡುತ್ತಿದ್ದ ಪದ್ಧತಿ ನ್ಯೂಬಿಯ, ಫಯೂಮ್ ಮುಂತಾದೆಡೆಗಳಲ್ಲಿ ಪ್ರ.ಶ.ಪೂ. 4ನೆಯ ಸಹಸ್ರಮಾನದಲ್ಲೆ ಇತ್ತು. ಈ ಭೇದಿತ ಶವಗುಳಿಗಳೇ ಈಜಿಪ್ಟಿನ ಗುಹಾ ವಾಸ್ತುವಿನ ಮೊದಲ ಘಟ್ಟವಾಗಿರಬಹುದೆಂದು ಈ ಎರಡೂ ರೀತಿಯವುಗಳ ಉದ್ದಿಶ್ಯ ಶವಸಂಸ್ಕಾರವೇ ಆಗಿರುವುದರಿಂದ ಊಹಿಸಬಹುದಾಗಿದೆ. ಗುಹಾ ವಾಸ್ತು ರಚನೆ ಸಾಮಾನ್ಯ ಸಮಾಧಿಗಳಿಗಿಂತ ಹೆಚ್ಚು ಶ್ರಮದಾಯಕವೂ ಅಧಿಕ ವೆಚ್ಚದ್ದೂ ಆದ್ದರಿಂದ ಇಂಥ ಕೃತಿಗಳು ರಾಜನ ಅಥವಾ ಶ್ರೀಮಂತ ಆಸ್ಥಾನಿಕರ ಸ್ವತ್ತಾಗಿದ್ದುವು. ಜೊತೆಗೆ ಮೃತನಾದವನು ಬದುಕಿದ್ದಾಗ ಇಹದಲ್ಲಿ

ಅನುಭವಿಸುತ್ತಿದ್ದ ಸಮಸ್ತ ಅನುಕೂಲಗಳೂ ಇಲ್ಲಿಯ ರೀತಿಯ ವಾಸಸ್ಥಾನವೂ ಮರಣಾನಂತರವೂ ಅವನಿಗೆ ಬೇಕಾಗುತ್ತವೆ ಎಂಬ, ತತ್ಕಾಲೀನ ಈಜಿಪ್ಟಿನಲ್ಲಿ ಹರಡಿದ್ದ, ಮರಣೋತ್ತರ ಸ್ಥಿತಿಯನ್ನು ಕುರಿತು, ನಂಬಿಕೆಗಳು ಗುಹಾ ವಾಸ್ತುರಚನೆಯನ್ನು ಪ್ರೋತ್ಸಾಹಿಸಿದವು. ಈ ಸಂಪ್ರದಾಯ ಪ್ರ.ಶ.ಪೂ.ಸು.6ನೆಯ ಶತಮಾನದವರೆಗೂ ಅಲ್ಲಿ ನಡೆದು ಬಂದದ್ದಲ್ಲದೆ, ಇದರ ಪ್ರಭಾವ ಸುತ್ತಲಿನ ದೇಶಗಳಿಗೂ ಹರಡಿ ಗುಹಾ ವಾಸ್ತು ರಚನೆಗೆ ಉತ್ತೇಜನ ದೊರೆಯಿತು. ಆಫ್ರಿಕ ಮತ್ತು ಏಷ್ಯದ ಹಲವೆಡೆಗಳಲ್ಲಿ ಈ ಗುಹಾ ವಾಸ್ತು ಸಂಪ್ರದಾಯ ಪ್ರ.ಶ. 16–17ನೆಯ ಶತಮಾನದವರೆಗೂ ನಡೆದು ಬಂತು. ಆದರೆ ಕ್ರಮೇಣ ಗುಹಾ ವಾಸ್ತು ಸಮಾಧಿಗಳಿಗಷ್ಟೇ ಮೀಸಲಾಗದೆ, ದೇಶ ಕಾಲ ಪ್ರಭಾವದಿಂದಾಗಿ ಇತರ ಅನೇಕ ಧಾರ್ಮಿಕ ಅವಶ್ಯಕತೆಗಳಿಗೂ ಬಳಕೆಯಾಯಿತು.



ಡೇರಿಯಸ್ ಗುಹಾಸಮಾಧಿ

ಗುಹಾ ವಾಸ್ತುವಿನಲ್ಲಿ ಅತ್ಯಂತ ಪ್ರಾಚೀನವಾದ ಕೃತಿ (ಪ್ರ.ಶ.ಪೂ.ಸು.2500) ನೈಲ್ ನದಿಯ ಕೆಳಕಣಿವೆಯಲ್ಲಿ ಮೆದುಮ್ ಎಂಬಲ್ಲಿದೆ. ಇದು ಅತೆತ್ ಎಂಬ ರಾಜ್ಯಾಧಿಕಾರಿಯ ಸಮಾಧಿ. ಇದರ ವಿನ್ಯಾಸ ಶಿಲುಬೆಯಾಕಾರದಲ್ಲಿದೆ. ಒಂದು ನೇರ ಸುರಂಗವೂ ಅದನ್ನು ಮಧ್ಯದಲ್ಲಿ ಕತ್ತರಿಸುವ ಅಡ್ಡವಾದ ಕೋಚು ಅಂಕಣವೂ ಇವೆ. ಶವಕೋಣೆ ಪ್ರವೇಶದ್ವಾರದ ನೇರ ಎದುರಿನಲ್ಲಿ ಹಿಂಗೋಡೆಯಲ್ಲಿದೆ. ಈ ಸಮಾಧಿ ವಿನ್ಯಾಸದಲ್ಲಿ ಸರಳವೂ ಗಾತ್ರದಲ್ಲಿ ಚಿಕ್ಕದೂ ಆಗಿರುವುದಲ್ಲದೆ, ನೈಲ್ ಮುಖಜಭೂಮಿಯ ಬೃಹತ್ ಪಿರಮಿಡ್ಡುಗಳು ಅಥವಾ ಬೃಹತ್ ದೇವಾಲಯಗಳ ಅಡಿಯಲ್ಲಿರುವ ಭೂಗತ ಸಮಾಧಿ ಕೋಣೆಗಳ ವಿನ್ಯಾಸವನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ಈ ಸಮಾಧಿಯಲ್ಲಿ ಅಲಂಕರಣವಿಲ್ಲ. ಆದರೆ ಆ ಸುಮಾರಿನಲ್ಲೆ ಶಿಲ್ಪಾಲಂಕರಣವೂ ಪ್ರಾರಂಭವಾಗಿರಬೇಕೆಂಬುದರ ಕುರುಹು ಗೀಜ ಬಳಿಯಲ್ಲಿರುವ ರಾಣಿ 3ನೆಯ ಮೆರೆಸಂಖಳ ಸಮಾಧಿಯ ಭಾಗವಾಗಿರುವ, ಶಿಲೆಯಿಂದ ಕಂಡರಿಸಿದ ಕೋಣೆಯ ಶಿಲ್ಪಗಳೆಂದು ತಿಳಿಯುತ್ತದೆ.

ಈಜಿಪ್ಟಿನ ಹೆಚ್ಚಿನ ಗುಹಾ ಸಮಾಧಿಗಳು ಮೇಲಣ ಈಜಿಪ್ಟ್ ಪ್ರದೇಶದಲ್ಲಿವೆ. ಇವು ಬಹುವಾಗಿ ಅಲ್ಲಿಯ ಮಾಗಣೆಗಾರರವು (ಪ್ರಾಂತಾಧಿಕಾರಿಗಳು). ಹಳೆಯ ರಾಜ್ಯ ಕಾಲದ ಗುಹಾವಾಸ್ತುವಿನ ಉದಾಹರಣೆಗಳಾಗಿ ಎಲ್ ಬೆರ್ಷೇ ಮತ್ತು ಎಲ್ ಷೀಕ್ ಸ ಇದ್ ನ ಸಮಾಧಿಗಳನ್ನು ಹೆಸರಿಸಬಹುದು. ಇವು ಪ್ರ.ಶ.ಪೂ. 2300ರ ಸುಮಾರಿನಲ್ಲಿ ಈಜಿಪ್ಟಿನ 15ನೆಯ ಮಾಗಣೆಯಲ್ಲಿ ಆಳುತ್ತಿದ್ದವರ ಸಮಾಧಿಗಳು. ಇವು ಮೂಲವಿನ್ಯಾಸದಲ್ಲಿ ಮೆದುಮ್ ಸಮಾಧಿಯನ್ನೇ ಹೋಲುತ್ತವೆಯಾದರೂ ಈ ಕಾಲಕ್ಕೆ ಅಲ್ಪಸ್ವಲ್ಪ ಬದಲಾವಣೆಗಳೂ ರೂಢಿಗೆ ಬಂದಿದ್ದುವು. ಇದೇ ಮೂಲ ವಿನ್ಯಾಸವೇ ಮತ್ತಷ್ಟು ಬದಲಾವಣೆಗಳೊಡನೆ ಮಧ್ಯಕಾಲದ (ಪ್ರ.ಶ.ಪೂ.2000–1200) ಗುಹಾ ವಾಸ್ತು ಕೃತಿಗಳಲ್ಲೂ ಕಂಡುಬರುತ್ತದೆ. ಆದರೆ ಈ ಕಾಲದಲ್ಲಿ ಬರಿಯ ಸುರಂಗದ ಬದಲು, ಕಂಬಗಳ ಸಾಲುಗಳನ್ನೂ ಅನೇಕ ಸಣ್ಣ ಕೋಣೆಗಳನ್ನೂ ಅಳವಡಿಸುವ ಪದ್ಧತಿ ಸಾಮಾನ್ಯವಾಗಿತ್ತಲ್ಲದೆ ಈ ಸಮಾಧಿಗಳು ಗಾತ್ರದಲ್ಲೂ ದೊಡ್ಡವಾಗಿರುತ್ತಿದ್ದವು. ಮಧ್ಯ ಕಾಲದ ಅನೇಕ ಗುಹಾ ಸಮಾಧಿಗಳು, ಬೇನೀ ಹಸನ್, ದೀರ್ ಎಲ್ ಬಹರಿ, ಆಸ್ಯೂತ್ ಮುಂತಾದೆಡೆಗಳಲ್ಲಿವೆ. ಬೇನೀ ಹಸನ್‌ನಲ್ಲಿ ಪಖ್ತ್‌ದೇವತೆಗಾಗಿ ಮಾಡಿದ ಒಂದು ಗುಹಾ ದೇವಾಲಯವೂ ಇದೆ. ಈ ಕಾಲದ ಸಮಾಧಿಗಳು ಮತ್ತು ದೇವಾಲಯಗಳಲ್ಲಿ ವರ್ಣಚಿತ್ರಾಲಂಕರಣ ಮತ್ತು ಶಿಲ್ಪಾಲಂಕರಣ ವಿಶೇಷವಾಗಿ ಕಂಡುಬರುತ್ತವೆ.

ಬಿಬನ್ ಎಲ್ ಮುಲುಕ್‌ನಲ್ಲಿರುವ 1ನೆಯ ಸೆಟಿ ದೊರೆಯ ಕಾಲದ ಸಮಾಧಿ (ಪ್ರ.ಶ.ಪೂ.ಸು. 1250), ಬೇನೀ ಹಸನ್ ಮತ್ತು ದೀರ್ ಎಲ್ ಬಹರಿಗಳಲ್ಲಿರುವ ಈ ಕಾಲದ ಸಮಾಧಿಗಳು ಉತ್ತಮ ಶಿಲ್ಪಕ್ಕೆ ಪ್ರಸಿದ್ಧವಾಗಿವೆ. ಇವುಗಳಲ್ಲಿ ತತ್ಕಾಲೀನ ದೇವರುಗಳು, ಧಾರ್ಮಿಕ ದೃಶ್ಯಗಳೇ ಅಲ್ಲದೆ, ಮೃತರ ಮತ್ತು ಅವರ ಸಂಬಂಧಿಕರ ಮೂರ್ತಿಗಳು, ಆ ವ್ಯಕ್ತಿಗಳ ಸ್ವಂತ ಸಾಧನೆಗಳು ಮುಂತಾದುವೆಲ್ಲ ಶಿಲ್ಪಿತವಾಗಿವೆ. ಇಲ್ಲಿಯ ಕೆಲವು ಶಿಲ್ಪಗಳ ಜೊತೆಯಲ್ಲಿ ಶಿಲಾಶಾಸನಗಳೂ ಇದ್ದು, ಇವು ಚರಿತ್ರೆಯ ಪುನರ್ರಚನೆಗೆ ಬಹು ಉಪಯುಕ್ತವಾಗಿವೆ.

ಇದೇ ವಾಸ್ತುಶಿಲ್ಪ ಸಂಪ್ರದಾಯ ನವಪ್ರಭುತ್ವ ಕಾಲದಲ್ಲೂ (ಪ್ರ.ಶ.ಪೂ.ಸು. 1200–1000) ಮುಂದುವರಿಯಿತು. ಶಿಲ್ಪದ ದೃಷ್ಟಿಯಿಂದ, 18ನೆಯ ರಾಜವಂಶದ ಅರಸರ ದಿಗ್ವಿಜಯಗಳನ್ನು ರೂಪಿಸಿರುವ ದೀರ್ ಎಲ್ ಬಹರಿಯಲ್ಲಿರುವ ರಾಣಿ ಹ್ಯಾಷೆಪ್‌ಸೂತ್‌ಳ ಸಮಾಧಿ ಬಹಳ ಮುಖ್ಯವಾದದ್ದು. ಆದರೆ ಇದು ಭಾಗಶಃ ಗುಹೆ, ಮುಂಭಾಗವೆಲ್ಲ ಕಟ್ಟಡ. ಈಜಿಪ್ಟಿನ ಗುಹಾ ವಾಸ್ತು ಸಂಪ್ರದಾಯದ ಮೇರುಕೃತಿ ಅಬು ಸಿಂಬೆಲ್‌ನಲ್ಲಿರುವ 2ನೆಯ ರ್‍ಯಾಮ್ಸೆಸ್ ದೊರೆಯ ದೇವಾಲಯ. ಇದು ಗುಹಾ ದೇವಾಲಯಗಳಲ್ಲಿ ಅತಿ ದೊಡ್ಡದು. ಅಲ್ಲದೆ, ಮುಂಭಾಗದಲ್ಲಿ ಬೃಹದಾಕಾರದ ರಾಜರ ಮೂರ್ತಿಗಳಿಂದಲೂ ಒಳಗೆ ಕಲಾತ್ಮಕವೂ ಚರಿತ್ರೆಯ ದೃಷ್ಟಿಯಿಂದ ಅಮೂಲ್ಯವೂ ಆದ ಶಿಲ್ಪಗಳಿಂದಲೂ ಅಲಂಕೃತವಾಗಿದೆ (**ನೋಡಿ–ಅಬುಸಿಂಬೆಲ್**). ಗೆಬೆಲ್ ಸಿಲ್‌ಸಿಲೇಯ ಗುಹಾ ದೇವಾಲಯಗಳೂ ಥೀಬ್ಸ್ ಪ್ರದೇಶದಲ್ಲಿರುವ ಮುನ್ನೂರಕ್ಕೂ ಹೆಚ್ಚು ರಾಜ್ಯಾಧಿಕಾರಿಗಳ ಸಮಾಧಿಗಳೂ ಇದೇ ಕಾಲಕ್ಕೆ ಸೇರಿದವು.

ಈಜಿಪ್ಟಿನ ನವಪ್ರಭುತ್ವದ ಅವನತಿಯ ಅನಂತರ ಆ ದೇಶದ ಆಳ್ವಿಕೆ ಪರದೇಶದವರ ಕೈಸೇರಿದ್ದರಿಂದ ಗುಹಾ ವಾಸ್ತು ಸಂಪ್ರದಾಯ ಕೆಲಕಾಲ ಕಡಿದು ಹೋಯಿತು. ಆದರೆ ಪುನಃ ಅಲ್ಲಿಯ 26ನೆಯ ರಾಜವಂಶದ ಕಾಲದಲ್ಲಿ (ಪ್ರ.ಶ.ಪೂ.663–525), ಥೀಬ್ಸ್ ಪ್ರದೇಶದಲ್ಲಿ ಕೆಲವು ಗುಹಾ ಸಮಾಧಿಗಳನ್ನು ಕೊರೆಯಲಾಯಿತು. ಆದರೆ ಇವು ಚಿಕ್ಕವೂ ಅನುಕರಣೆಗಳೂ ಆಗಿದ್ದು, ಈಜಿಪ್ಟಿನ ಗುಹಾ ವಾಸ್ತು ಸಂಪ್ರದಾಯದ ಅವನತಿಯನ್ನು ಸೂಚಿಸುತ್ತವೆ.

**ಮೆಡಿಟರೇನಿಯನ್ ಪ್ರದೇಶ ಮತ್ತು ಪಶ್ಚಿಮ ಏಷ್ಯ :** ಮೆಡಿಟರೇನಿಯನ್ ಸಮುದ್ರದ ದ್ವೀಪಗಳಲ್ಲೂ ಸುತ್ತಲಿನ ಪ್ರದೇಶಗಳಲ್ಲೂ ಈಜಿಪ್ಟಿನಲ್ಲಿದ್ದಂಥ ಮರಣೋತ್ತರ ಸ್ಥಿತಿಯನ್ನು ಕುರಿತ ನಂಬಿಕೆಗಳು ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಹರಡಿದ್ದಂತೆ ಕಾಣುತ್ತದೆ. ಇವು ಗುಹಾ ವಾಸ್ತುವಿನ ಬೆಳೆವಣಿಗೆಗೆ ಸಹಕಾರಿಯಾಗಿದ್ದರೂ ಪ್ರಾಯಶಃ ಅಲ್ಲಿಯ ಭೌಗೋಳಿಕ ಪರಿಸ್ಥಿತಿಯಿಂದಾಗಿ ಉತ್ತಮ ಗುಹಾ ವಾಸ್ತುಕೃತಿಗಳೇನೂ ಕಂಡುಬರುವುದಿಲ್ಲ. ಕ್ರೀಟ್ ದ್ವೀಪದಲ್ಲಿ ಪ್ರ.ಶ.ಪೂ. 1700–1400ರ ಕಾಲದಲ್ಲಿ ನೆಲದ ಮಟ್ಟಕ್ಕಿಂತ ಕೆಳಗೆ ಬಂಡೆಗಳಲ್ಲಿ ದುಂಡು ಕೋಣೆಗಳನ್ನು ಕೊರೆದು ಅವಕ್ಕೆ ನೇರವಾದ ತೆರೆದ ಹಾದಿಯನ್ನು ರೂಪಿಸಿ ಸಮಾಧಿಗಳನ್ನು ನಿರ್ಮಿಸುವ ರೂಢಿ ಬೆಳೆಯಿತು. ಇವನ್ನು ಥೋಲೋಸ್ ಸಮಾಧಿಗಳೆಂದು ಕರೆಯುತ್ತಾರೆ. ಇವು ಭಾಗಶಃ ಶಿಲೆಯಲ್ಲಿ ಕಂಡರಿಸಿದ ಕೃತಿಗಳಾಗಿದ್ದರೂ ಗುಹಾ ವಾಸ್ತುವೆಂದೆನಿಸಿಕೊಳ್ಳುವುದಿಲ್ಲ. ಆದರೆ ಇದೇ ಸಂಪ್ರದಾಯದ ವ್ಯತ್ಯಸ್ತ ರೂಪದಲ್ಲಿ ನಾಸಸ್‌ನಲ್ಲಿ ಪ್ರಸಿದ್ಧ ಅರಮನೆಯ ದಕ್ಷಿಣದಲ್ಲಿ ಒಂದು ರಾಜಸಮಾಧಿಯಿದೆ. ಇದರಲ್ಲಿ ಗೋರಿ ಕೋಣೆ ಮಾತ್ರ ಪೂರ್ಣವಾಗಿ ಗುಹಾರೂಪದ್ದು. ಇತರ ಭಾಗಗಳು ಶಿಲೆಯಲ್ಲಿ ಕೊರೆದವಾದರೂ ಗೋಡೆ ಮತ್ತು ಚಾವಣಿಗಳನ್ನೂ ರಚಿಸಲಾಗಿದೆ. ಥೋಲೋಸ್ ರೀತಿಯ ಸಮಾಧಿಗಳು ಪ್ರಶ.ಪೂ.ದ ಪ್ರಾರಂಭದವರೆಗೂ ಕ್ರೀಟ್‌ನಲ್ಲಿ ಬಳಕೆಯಲ್ಲಿದ್ದುವಲ್ಲದೆ ಇದೇ ರೀತಿಯವು ಗ್ರೀಸಿನಲ್ಲಿ ಸಹ ಮೈಸೀನಿಯನ್ ಸಂಸ್ಕೃತಿಯ ಕಾಲದಲ್ಲಿ ಕಂಡುಬರುತ್ತವೆ. ಇಟಲಿಯ ಎಟ್ರೂರಿಯ ಪ್ರದೇಶದಲ್ಲೂ ಅನೇಕ ಭೂಗರ್ಭ ಗುಹಾಸಮಾಧಿಗಳಿವೆ. ಇವು ಪ್ರ.ಶ.ಪೂ. ಸು.6–3ನೆಯ ಶತಮಾನಕ್ಕೆ ಸೇರಿದವು. ಇವು ವಿನ್ಯಾಸದಲ್ಲಿ ಸಮಕಾಲೀನ ವಾಸ್ತುವನ್ನೇ ಅನುಕರಿಸುತ್ತವೆ. ಇವುಗಳ ಒಳಗೆ ಉತ್ತಮ ವರ್ಣಗಳಿದ್ದುವಲ್ಲದೆ, ಮೃತನ ಉಪಯೋಗಕ್ಕಾಗಿ ಅವಶ್ಯಕ ವ್ಯವಸ್ಥೆಗಳನ್ನೂ ಮಾಡಲಾಗಿರುತ್ತಿತ್ತು.

ಇಟಲಿಯ ರೋಮ್ ಮತ್ತು ಸುತ್ತಣ ಪ್ರದೇಶದಲ್ಲಿ ಅನೇಕ ಸುರಂಗ ಸಮಾಧಿಗಳು ಇವೆ. ಭೂಗರ್ಭದಲ್ಲಿ ಮೈಲಿಗಟ್ಟಲೆ ಅಂಕುಡೊಂಕಾಗಿ ಹರಡುವ ಸುರಂಗಗಳನ್ನು ತೋಡಿ, ಅವುಗಳ ಪಕ್ಕದಲ್ಲಿ ಗೋಡೆಗಳಲ್ಲಿ ಸಣ್ಣ ಕೋಷ್ಠಗಳನ್ನು ನಿರ್ಮಿಸಿ, ಶವ ಅಥವಾ ಶವಾವಶೇಷಗಳನ್ನು ಸಂಸ್ಕರಿಸಲಾಗುತ್ತಿತ್ತು. ಇಂಥ ಸುರಂಗ ಸಮಾಧಿಗಳು ಒಂದು ಕುಟುಂಬ ಅಥವಾ ಜನಾಂಗಕ್ಕೆ ಮೀಸಲಾಗಿರುತ್ತಿದ್ದವು. ಬಂಡೆಯಲ್ಲಿ ಕೊರೆದ ಈ ಸುರಂಗಗಳಲ್ಲಿ ಹೆಚ್ಚಿನ ವಾಸ್ತು ಅಂಶಗಳಾಗಲೀ ಶಿಲ್ಪಾಲಂಕರಣವಾಗಲೀ ಕಂಡುಬರುವುದಿಲ್ಲ. ಈ ರೀತಿಯ ಸುರಂಗ ಸಮಾಧಿಗಳು ಮೆಡಿಟರೇನಿಯನ್ ಸಮುದ್ರದ ಆಗ್ನೇಯ ದಂಡೆಯ ಫಿನಿಷಿಯ ಮತ್ತು ಸುತ್ತಣ ಪ್ರದೇಶಗಳಲ್ಲಿ ಪ್ರ.ಶ.ಪೂ.1ನೆಯ ಸಹಸ್ರಮಾನದಲ್ಲೇ ಪ್ರಚಲಿತವಾಗಿದ್ದ ಗುಹಾಸಮಾಧಿಗಳಿಂದ ರೂಢಿಗತವಾದಂತೆ ಕಾಣುತ್ತದೆ. ಈ ಕಾಲದ ಹಲವು ಗುಹಾಸಮಾಧಿಗಳು ಇಸ್ರೇಲಿನ ಬೆತ್‌ಶಿಯರಿಂ ಎಂಬಲ್ಲಿ ಕಂಡುಬಂದಿವೆ. ಬೆಟ್ಟದ ಇಳಿಜಾರಿನಲ್ಲಿ ತೋಡಲಾದ ಈ ಸುರಂಗ ಸಮಾಧಿಗಳಲ್ಲಿ ಸಾಮಾನ್ಯವಾಗಿ ಒಂದೇ ಒಂದು ನೇರ ಸುರಂಗದಂಥ ಗುಹೆಯಿದ್ದು ಅದರ ಪಕ್ಕದ ಗೋಡೆಗಳಲ್ಲಿ ಶವಗೂಡುಗಳಿರುತ್ತವೆ. ಇಸ್ರೇಲಿನ ಫಿನಿಷಿಯ ಕರಾವಳಿಯಲ್ಲಿರುವ ಎಲ್‌ಜಿಬ್ ಎಂಬಲ್ಲಿ ಪ್ರಶ.ಪೂ.8ನೆಯ ಶತಮಾನದ ಗುಹಾ ಸಮಾಧಿಗಳೂ ಜೋರ್ಡಾನ್ ನದಿ ಕಣಿವೆಯ ಹಜೋರ್ ಎಂಬಲ್ಲಿ ಭೂಗರ್ಭ ಸುರಂಗ ಸಮಾಧಿಗಳು ಹಾಗೂ ಗುಹಾ ಸಮಾಧಿಗಳೂ ಬೆಳಕಿಗೆ ಬಂದಿವೆ. ಹಜೋರ್‌ನ ಸುರಂಗ ಸಮಾಧಿಗಳು ಪ್ರ.ಶ.ಪೂ.1500ರ ಸುಮಾರಿನವೆಂದು ಊಹಿಸಲಾಗಿದೆ. ಇದರ ಮುಂಭಾಗದಲ್ಲಿ ಎರಡು ಕಂಬಗಳಲ್ಲದೆ ಒಳಗೆ ವಿಶಾಲವಾದ ಹಜಾರವಿದೆ. ಇದು ಪ್ರಶ.ಪೂ.9ನೆಯ ಶತಮಾನದ್ದು.

ಮೆಡಿಟರೇನಿಯನ್ ಸಮುದ್ರಕ್ಕೆ ಹೊಂದಿಕೊಂಡಂತಿರುವ ತುರ್ಕಿ ದೇಶದ ಪಶ್ಚಿಮ ಭಾಗದಲ್ಲೂ (ಏಷ್ಯ ಮೈನರ್) ಗುಹಾ ವಾಸ್ತು ಶಿಲ್ಪನಿರ್ಮಾಣಗಳಿವೆ. ಇಲ್ಲಿಯ ಫ್ರಿಜಿಯ ಪ್ರದೇಶದ ಎಸ್ಕಿಷೆಹಿರ್, ಅಫ್ಯೋನ್, ಕರಹಿಸಾರ್, ಅರ್ಸ್ಲನ್ ಕಾಯ, ಯಾಜಿಲಿಕಾಯ ಮುಂತಾದೆಡೆಗಳಲ್ಲಿರುವ ಕೃತಿಗಳು ಪ್ರಸಿದ್ಧವಾದವು. ಇಲ್ಲಿಯ ಗುಹಾವಾಸ್ತು ನಿರ್ಮಾಣಗಳು ಪ್ರ.ಶ.ಪೂ.6–ಪ್ರ.ಶ. 3ನೆಯ ಶತಮಾನ ಕಾಲಕ್ಕೆ ಸೇರಿದವು.

ಫ್ರಿಜಿಯದ ನಿರ್ಮಾಣಗಳಲ್ಲಿ ಸಮಾಧಿಗಳಲ್ಲದೆ ದೇವಾಲಯಗಳೂ ಇವೆ. ಇವೆಲ್ಲದರಲ್ಲೂ ಮುಮ್ಮುಖ ಮಾತ್ರವೇ ವಿಶಾಲವಾಗಿ ಸುಂದರವಾಗಿ ಕೊರೆಯಲಾಗಿದ್ದು ಒಳ ಆವರಣ ಕೇವಲ ಸಮಾಧಿ ಕೋಣೆ ಅಥವಾ ಚಿಕ್ಕ ದೇವಕೋಷ್ಠಕ್ಕೆ ಸೀಮಿತವಾಗಿರುತ್ತದೆ. ಫ್ರಿಜಿಯದ ಸಮಾಧಿಗಳು ಸ್ವರೂಪದಲ್ಲಿ ಲಿಸಿಯ ಪ್ರದೇಶದ ಮರದ ಕಟ್ಟಡಗಳನ್ನು ಅನುಕರಿಸುತ್ತವೆಯೆಂದು ವಿದ್ವಾಂಸರ ಅಭಿಪ್ರಾಯ. ಇವುಗಳಲ್ಲಿ ಮಟ್ಟ ಚಾವಣಿಯವು, ಇಪ್ಪಾರು ಚಾವಣಿಯವು ಮತ್ತು ಗ್ರೀಕ್ ಸ್ತಂಭರೀತಿಗಳನ್ನು ಅನುಕರಿಸಿರುವಂತಹವು ಎಂದು ಮೂರು ಬಗೆಗಳಿದ್ದು ಈ ಬಗೆಗಳು ಕಾಲಾನುಕ್ರಮವಾಗಿ ಮೇಲೆ ಸೂಚಿಸಿರುವ ಕ್ರಮದಲ್ಲೇ ಬಳಕೆಗೆ ಬಂದಂತೆ ತೋರುತ್ತದೆ. ಹೆಚ್ಚಿನವು ಎರಡನೆಯ ಬಗೆಗೆ ಸೇರಿದವು. ಬುಯುಕ್ ಅರ್ಸ್ಲನ್ ತಾಷ್ ಮತ್ತು ದಿಲಿಕಿ ತಾಷ್ ನ ಸಮಾಧಿಗಳು ಮೊದಲನೆಯ ಬಗೆಗೆ ಉದಾಹರಣೆಗಳು. ಅಲ್ಲದೆ ಇವು ಅತ್ಯಂತ ಪ್ರಾಚೀನವಾದವು. ಯಾಜಿಲಿಕಾಯದ ಸಮಾಧಿ ಎರಡನೆಯ ಬಗೆಯದು. ಕಲೆಕಪಿ (ಪ್ರ.ಶ.ಪೂ.5ನೆಯ ಶತಮಾನ) ಮತ್ತು ಕಸ್ತಮೊನು (ಪ್ರ.ಶ.ಪೂ.4ನೆಯ ಶತಮಾನ) ಮೂರನೆಯ ವರ್ಗದ ಮೊದಲ ನಿರ್ಮಾಣಗಳು. ಇದೇ ಪ್ರದೇಶದಲ್ಲಿರುವ ಸೋಲನ್ ಎಂಬವನ ಸಮಾಧಿ ರೋಮನ್ ಸಾಮ್ರಾಜ್ಯ ಕಾಲಕ್ಕೆ ಸೇರಿದ್ದು, ಇದನ್ನು ಮೂರನೆಯ ಬಗೆಯಲ್ಲಿ ಸುಮಾರು ಕೊನೆಯ ನಿರ್ಮಾಣ ಎಂದು ಪರಿಗಣಿಸಬಹುದು. ಫ್ರಿಜಿಯದ ಸಮಾಧಿಗಳ ಮುಮ್ಮುಖ ಅಲಂಕರಣದಲ್ಲಿ ಗ್ರೀಕ್ ಅಲ್ಲದೆ ಅಖಮೇನಿಯನ್ ಮತ್ತು ಹಿಟ್ಟೈಟ್ ಶಿಲ್ಪ ಸಂಪ್ರದಾಯದ ಪ್ರಭಾವವೂ ಕಂಡುಬರುತ್ತದೆ.

ಇಲ್ಲಿಯ ದೇವಾಗಾರಗಳೂ ಸಮಾಧಿಗಳಂತೆಯೇ ಕಾಣುತ್ತವೆ. ಆದರೆ ಇಲ್ಲಿ ಸಮಾಧಿ ಕೋಣೆಯ ಬದಲು ವಿಗ್ರಹ ಅಥವಾ ಪವಿತ್ರ ವಸ್ತುವನ್ನಿಡುವ ಕೋಷ್ಠವಿರುತ್ತದೆ. ಈ ದೇವಾಗಾರಗಳಲ್ಲಿ ಬಹಳ ಮುಖ್ಯವಾದವು ಆರ್ಸ್ಲನ್ ಕಾಯ (ಪ್ರಶ.ಪೂ.6ನೆಯ ಶತಮಾನ), ಯಾಜಿಲಿಕಾಯ, ಬಖ್ಷಿಸ್ (ಪ್ರ.ಶ.ಪೂ.5ನೆಯ ಶತಮಾನ)–ಈ ಸ್ಥಳಗಳಲ್ಲಿವೆ. ಇಂಥ ದೇವಾಗಾರಗಳು ಪ್ರಶ.ಪೂ.6–5ನೆಯ ಶತಮಾನಗಳಲ್ಲಷ್ಟೇ ಪ್ರಚಲಿತವಾಗಿದ್ದುವು. ಅರೆಜಸ್ಟಿಸ್ ಎಂಬಲ್ಲಿಯ ದೇವಾಲಯದಲ್ಲಿ ಸಿಬೆಲೀ ದೇವತೆಯ ಒಂದು ಸುಂದರ ಮೂರ್ತಿಯಿದೆ. ಇವಲ್ಲದೆ ಬಂಡೆಯಲ್ಲಿ ಮೆಟ್ಟಲುಗಳನ್ನು ಕಡಿದು ಮೇಲೆ ಸಿಂಹಾಸನದಂತೆ ವೇದಿಕೆಯನ್ನು ನಿರ್ಮಿಸಿರುವ ತೆರೆದ ದೇವಾಗಾರಗಳೂ ಫ್ರಿಜಿಯ ಪ್ರದೇಶದಲ್ಲಿದ್ದವು. ಇಂಥ ಒಂದು ಉತ್ತಮ ವಾಸ್ತುನಿರ್ಮಾಣ ಮೈದಾಸ್ ನಗರದಲ್ಲಿ ಇದೆ. ಇದು ಹಿಂದೆ ಸಿಬೆಲೀ ದೇವತೆಗಾಗಿ ಮೀಸಲಾಗಿತ್ತು.

ಫ್ರಿಜಿಯದ ಪಕ್ಕದ ಲಿಸಿಯ ಮತ್ತು ಕಾರಿಯ ಪ್ರದೇಶಗಳಲ್ಲಿ ಸಹ ಬಂಡೆಯಲ್ಲಿ ಕೊರೆದ ಕೆಲವು ನಿರ್ಮಾಣಗಳಿವೆ. ಆದರೆ ಇವು ರಚನಾನಿರ್ಮಾಣಗಳಂತೆಯೇ ಹೊರಮೈಯನ್ನೂ ಪೂರ್ಣವಾಗಿ ಕೊರೆದು ಮಾಡಿದವಾದ್ದರಿಂದ ಗುಹೆಗಳೆನಿಸಿಕೊಳ್ಳುವುದಿಲ್ಲ. ಇವೆಲ್ಲ ಸಮಾಧಿಗಳು. ಲಿಸಿಯದ ಇಂಥ ಮತ್ತು ಕಾರಿಯದ ಇದಿಮಗಳಲ್ಲಿ ಈ ವಾಸ್ತುರೀತಿಯ ಒಳ್ಳೆಯ ಉದಾಹರಣೆಗಳಿವೆ.

ಸಿರಿಯದ ಉತ್ತರ ಗಡಿಯಲ್ಲಿರುವ ಅರ್ಸ್ಲನ್ ತಾಷ್‌ನಲ್ಲೂ ಫ್ರಿಜಿಯದ ರೀತಿಯ ಒಂದು ಸಮಾಧಿಯಿದೆ. ಪಶ್ಚಿಮ ಏಷ್ಯದ ಇರಾಕ್ ಪ್ರದೇಶದ ಶಿರಿ ಮಲಿಕ್ತದಲ್ಲಿ ಅಸ್ಸೀರಿಯನ್ ದೊರೆಯೊಬ್ಬ ದೇವ ಚಿಹ್ನೆಗಳೆದುರು ಪ್ರಾರ್ಥಿಸುತ್ತಿರುವ ಮತ್ತು ಮಲ್ತಾಯ್ ಎಂಬಲ್ಲಿ ಸೆನ್ನಾ ಚೆರಿಬ್ ದೊರೆ ಇದೇ ರೀತಿ ಪ್ರಾರ್ಥನೆ ಸಲ್ಲಿಸುತ್ತಿರುವ ಶಿಲ್ಪಗಳು ಮತ್ತು ಅಲ್ಲಿಯ ಕುರ್ದಿಸ್ತಾನ ಪ್ರದೇಶದಲ್ಲಿರುವ, ಪ್ರ.ಶ.ಪೂ.6ನೆಯ ಶತಮಾನದ ಒಂದೆರಡು ಗುಹಾ ಸಮಾಧಿಗಳು–ಇವನ್ನು ಬಿಟ್ಟರೆ ಆ ದೇಶದಲ್ಲಿ ಹೆಚ್ಚಿನ ಗುಹಾ ವಾಸ್ತು ಶಿಲ್ಪಗಳಿಲ್ಲ. ಜೋರ್ಡಾನಿನ ಪೆಟ್ರ ಮತ್ತು ಅರೇಬಿಯದ ಹೆಜ್ರಾಫ್‌ಗಳಲ್ಲಿ ಕೇವಲ ಒಂದು ಹಜಾರ ಮಾತ್ರ ಇರುವ ಗುಹಾದೇವಾಲಯಗಳಿವೆ. ಇವು ಇಸ್ಲಾಂ ಧರ್ಮಕ್ಕೆ ಹಿಂದಿದ್ದ ಸ್ಥಳೀಯ ಅರಬ್ಬಿ ಧರ್ಮಪಂಥಗಳ ದೇವಾಲಯಗಳೆಂದೂ ಪ್ರಾಯಶಃ ಪ್ರ.ಶ.ಪೂ.2–1ನೆಯ ಶತಮಾನದ ವೆಂದೂ ಊಹಿಸಲಾಗಿದೆ. ಇರಾನ್ ದೇಶದ ಅಜ಼ರ್‌ಬೈಜಾನ್ ಪ್ರಾಂತ ಫಖ್ರಿಕ, ಕರ್ದಿಸ್ತಾನ್ ವಿಭಾಗದಲ್ಲಿರುವ ದುಕ್ಕಾನ್–ಇ–ದಾವೂದ್, ಕೆರ್ಮನ್ ಷಾ ಪ್ರದೇಶದಲ್ಲಿರುವ ಸಖ್ನ–ಇಲ್ಲಿ ಮಿಡಿಯ ರಾಜ್ಯದ ಕಾಲದ (ಪ್ರಶ.ಪೂ.7–6ನೆಯ ಶತಮಾನ) ಗುಹಾಸಮಾಧಿಗಳಿವೆ. ಫಖ್ರಿಕದ ಗುಹೆಯ ಮುಂಭಾಗದಲ್ಲಿ ಎರಡು ಕಂಬಗಳಿಂದೆತ್ತಿದ ವರಾಂಡವೂ ಅದರ ಹಿಂದೆ ಮೂರು ಕಂಬಗಳಿರುವ ಸಮಾಧಿ ಕೋಣೆಯೂ ಇದ್ದು ಇದರಲ್ಲಿ ಮೂರು ಸಮಾಧಿಗಳಿವೆ. ದುಕ್ಕಾನ್–ಇ–ದಾವೂದ್ ಮತ್ತು ಸಖ್ನದ ಗುಹೆಗಳು ಕೂಡ ವಿನ್ಯಾಸದಲ್ಲಿ ಸ್ಥೂಲವಾಗಿ ಮೇಲಿನ ರೀತಿಯಿವೆ. ದುಕ್ಕಾನ್–ಇ–ದಾವೂದ್, ಕೀಲ್–ಇ–ದಾವೂದ್ ಎಂದು ಕರೆಯುವ ಧಾರ್ಮಿಕ ಶಿಲ್ಪಗಳಿರುವ ಭಿತ್ತಿ, ಸಖ್ನದ ಗುಹೆಯ ಮೇಲಿರುವ ಅಹುರ್‌ಮಜ್ದನ ಚಿಹ್ನೆ ಇವು ಉತ್ತಮ ಶಿಲ್ಪಗಳೆಂದು ಪರಿಗಣಿತವಾಗಿವೆ.

ಪರ್ಷಿಯನ್ ಸಾಮ್ರಾಜ್ಯ ಕಾಲಕ್ಕೆ ಸೇರಿದ ಬಹುಮುಖ್ಯವಾದ ಗುಹಾ ವಾಸ್ತು ನಿರ್ಮಾಣಗಳು ಇರಾನಿನ ಪರ್ಸೆಪಲಿಸ್ ಬಳಿ ಇವೆ. ಇವುಗಳಲ್ಲಿ ಅತ್ಯಂತ ಹಳೆಯವು ನಕ್ಷೆ–ಇ–ರಸ್ತುಂ ಎಂಬಲ್ಲಿವೆ. ಇವು 1ನೆಯ ಡೇರಿಯಸ್ (ಪ್ರ.ಶ.ಪೂ.521–485), 1ನೆಯ ಜ಼ರ್ಕ್ಸೀಸ್ (ಪ್ರ.ಶ.ಪೂ.485–465), 1ನೆಯ ಆರ್ಟಗ್ಸರ್‌ಕ್ಸೀಸ್ (ಪ್ರ.ಶ.ಪೂ.465–424) ಮತ್ತು 2ನೆಯ ಡೇರಿಯಸ್ (ಪ್ರ.ಶ.ಪೂ.424–405) ದೊರೆಗಳ ಸಮಾಧಿಗಳು. ಈ ಸಮಾಧಿಗಳಲ್ಲಿ ಶಿಲುಬೆಯಾಕಾರದಲ್ಲಿ ಕೊರೆದ ವಿಶಾಲವಾದ ಮುಮ್ಮುಖವಿದ್ದು ಮುಂದಿನ ಅಡ್ಡಪಟ್ಟಿಯಲ್ಲಿ ಪರ್ಸೆಪಲಿಸ್ ರೀತಿಯವೆಂದು ಕರೆಯುವ ನಾಲ್ಕು ಕಂಬಗಳಿಂದ ಎತ್ತಿದ ವರಾಂಡವೂ ಅದರ ಹಿಂದೆ ಸಮಾಧಿಕೋಣೆಯೂ ಇರುತ್ತವೆ. 1ನೆಯ ಡೇರಿಯಸನ ಸಮಾಧಿಯ ಮೇಲೆ ಅಹುರ್‌ಮಜ್ದ ದೇವತೆಯ ಚಿಹ್ನೆಯೂ ರಾಜನ ಸಿಂಹಾಸನವೂ ಸದೆಬಡಿದ ರಾಷ್ಟ್ರಗಳಿಂದ ಎತ್ತಿಹಿಡಿಯಲ್ಪಟ್ಟಂತೆ ಕೆತ್ತಲ್ಪಟ್ಟಿವೆ. ಪರ್ಸೆಪಲಿಸ್ ಬಳಿಯಲ್ಲೇ ಕೂಹ್–ಎ–ರಹ್ಮತ್ ಬೆಟ್ಟದ ಬುಡದಲ್ಲಿ ಮುಂದಿನ ಪರ್ಷಿಯನ್ ಚಕ್ರಾಧಿಪತಿಗಳಾದ 2ನೆಯ ಆರ್ಟಗ್ಸರ್‌ಕ್ಸೀಸ್ (ಪ್ರ.ಶ.ಪೂ.404–359) ಮತ್ತು 3ನೆಯ ಆರ್ಟಗ್ಸರ್‌ಕ್ಸೀಸ್‌ರ (ಪ್ರ.ಶ.ಪೂ.359–338) ಸಮಾಧಿಗಳಿವೆ. ಇವು ವಿನ್ಯಾಸದಲ್ಲಿ ನಕ್ಷ್–ಎ–ರುಸ್ತುಮ್ ಸಮಾಧಿಗಳನ್ನೇ ಹೋಲುತ್ತವೆ. ಇವುಗಳಲ್ಲಿ ಈ ದೊರೆಗಳು ಅಹುರ್‌ಮಜ್ದ ದೇವತೆಯನ್ನು ಪೂಜಿಸುವ ಉತ್ತಮ ಉಬ್ಬುಶಿಲ್ಪಗಳಿವೆ. ಪ್ರಶ. 4–5ನೆಯ ಶತಮಾನಕ್ಕೆ ಸೇರಿದ ಸಸ್ಸೇನಿಯ ಅರಸರ ಶಿಲ್ಪಗಳನ್ನೊಳಗೊಂಡ ಭಿತ್ತಿಗಳು ಮತ್ತು ಗುಹೆಗಳು ಇರಾನಿನ ತಖ್ತ್–ಎ–ಜಮಷಿದ್ ಎಂಬಲ್ಲಿವೆ.

**ಭಾರತದ ಪ್ರಭಾವ:** ಈಜಿಪ್ಟ್, ಪಶ್ಚಿಮ ಏಷ್ಯ ಮತ್ತು ಮೆಡಿಟರೇನಿಯನ್ ಪ್ರದೇಶಗಳಲ್ಲಿ ಹರಡಿದ್ದ ಗುಹಾ ವಾಸ್ತು ಹೆಚ್ಚು ಮಟ್ಟಿಗೆ ಸಮಾಧಿವಾಸ್ತು ಎಂಬುದು ಮೇಲಿನ ಉದಾಹರಣೆಗ ಳಿಂದ ವ್ಯಕ್ತವಾಗುತ್ತದೆ. ಇವುಗಳಲ್ಲಿ ಕೆಲವು ದೇವಾಗಾರಗಳಾಗಿದ್ದರೂ ಅಂಥವುಗಳ ಸಂಖ್ಯೆ ಅತ್ಯಲ್ಪ. ಆದರೆ ಗುಹಾವಾಸ್ತು ಪ್ರಕಾರ ಪ್ರ.ಶ.ಪೂ.3ನೆಯ ಶತಮಾನದಲ್ಲಿ ಭಾರತದಲ್ಲಿ ಪ್ರಚಲಿತವಾದ ಮೇಲೆ ಅದರ ಸ್ವರೂಪ ಮತ್ತು ಉದ್ದಿಶ್ಯಗಳೇ ಬದಲಾದವು. ಇದರ ಸಮಾಧಿ ಸಂಬಂಧ ಕ್ಷೀಣವಾಗಿ ಗುಹಾವಾಸ್ತುವಿನಲ್ಲಿ ಸ್ಥಳೀಯ ರಚನಾ ವಾಸ್ತುಸ್ವರೂಪವನ್ನು ಅಳವಡಿಸಿ ಕೊಂಡು ಈ ನಿರ್ಮಾಣಗಳು ಹೆಚ್ಚಾಗಿ ದೇವಾಗಾರಗಳಾಗಿಯೋ, ಭಿಕ್ಷು–ಸಂನ್ಯಾಸಿಗಳ ವಾಸಸ್ಥಾನಗಳಾಗಿಯೋ ವಿಜೃಂಭಿಸುತ್ತವೆ. ಈ ಹೊಸ ಸ್ವರೂಪದ ಗುಹಾ ವಾಸ್ತುಶಿಲ್ಪ ಭಾರತೀಯ ಸಂಸ್ಕೃತಿಯ, ಅದರಲ್ಲೂ ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾದ ಹಲವು ದೇಶಗಳಲ್ಲಿ ಹರಡಿತು.

**ಆಫ್ಘಾನಿಸ್ತಾನ:** ಆಫ್ಘಾನಿಸ್ತಾನದಲ್ಲಿ ಸು.20ಕ್ಕೂ ಹೆಚ್ಚು ಸ್ಥಳಗಳಲ್ಲಿ ಬೌದ್ಧ ಗುಹಾ ವಾಸ್ತು ಶಿಲ್ಪದ ಅವಶೇಷಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ದರುತಾ, ಕುಂದುಜ಼್, ಹೈಬಕ್ ಮತ್ತು ಬಾಮಿಯನ್ ಮುಖ್ಯವಾದವು. ದರುತದಲ್ಲಿ ಹಲವು ಬೌದ್ಧ ಸಂಘಾರಾಮ ಗಳನ್ನು ಬೆಟ್ಟದ ತಪ್ಪಲಿನಲ್ಲಿ ಕಡಿಯಲಾಗಿದೆಯಲ್ಲದೆ ಇಲ್ಲಿ ಕೆಲವು ಸ್ತೂಪಗಳೂ ಇವೆ. ಕುಂದುಜ಼್‌ನಲ್ಲಿಯೂ ಒಂದು ವಿಶಾಲವಾದ ವಿಹಾರವಿದೆ. ಇಲ್ಲಿ ಭಿಕ್ಷುಗಳು ವಾಸಿಸುವ ಕೋಣೆಗಳು ಚಚ್ಚೌಕವಾಗಿದ್ದರೂ ಚಾವಣಿ ಮಾತ್ರ ಗುಮ್ಮಟಾಕಾರದಲ್ಲಿರುವುದು ವಿಶೇಷ. ಬೆಟ್ಟದಲ್ಲಿ ಕಡೆದ ಸು.24ಮೀ ವ್ಯಾಸದ ಸ್ತೂಪವೊಂದು ಹೈಬಕ್‌ನಲ್ಲಿ ಇದೆ. ಇದರ ಬಳಿಯೇ ಅರ್ಧ ಕೆತ್ತಿ ಬಿಟ್ಟಿರುವ ಇನ್ನೊಂದು ವಿಶಾಲವಾದ ವಿಹಾರವೂ ಸಮೀಪದಲ್ಲಿ ಕೆಲವು ಚೈತ್ಯಾಗಾರಗಳೂ ಇವೆ. ಇಲ್ಲಿಯ ಇನ್ನೊಂದು ಗುಹೆಯಲ್ಲಿ ಬೌದ್ಧಭಿಕ್ಷುಗಳ ವಾಸಕ್ಕಾಗಿ ಮಾಡಿದ ವಿಹಾರದಲ್ಲಿ ದೊಡ್ಡ ಹಜಾರವೂ ಸುತ್ತಲೂ ಕೋಣೆಗಳೂ ಅಲ್ಲದೆ ಒಳಗೆ ಬುದ್ಧ ಮೂರ್ತಿಯುಳ್ಳ ಒಂದು ಗರ್ಭಗುಡಿಯೂ ಇದೆ. ಇಲ್ಲಿಯ ಕಂಬಗಳು ಅರೆ ಅಯೋನಿಕ್ ಶೈಲಿಯಲ್ಲಿರುವುವಲ್ಲದೆ ಗರ್ಭಗುಡಿಯ ಮೇಲಿನ ಚಾವಣಿ ಸಣ್ಣ ಅರೆಕಮಾನುಗಳ ಮೇಲೆತ್ತಿದ ಗುಮ್ಮಟದಂತಿದ್ದು ಈ ವಾಸ್ತುವಿನ್ಯಾಸದಲ್ಲಿ ಸಸ್ಸೇನೀಯ ಪ್ರಭಾವವನ್ನು ಕಾಣಬಹುದಾಗಿದೆ. ಈ ವಿಹಾರ 4–5ನೆಯ ಶತಮಾನದ್ದು. ಬಾಮಿಯನ್ ಪ್ರಪಂಚ ಪ್ರಸಿದ್ಧವಾದ ಕಲಾಕೇಂದ್ರ. ಇಲ್ಲೂ ಹಲವು ಸಂಘಾರಾಮಗಳೂ ಶಿಲ್ಪಿತ ಚೈತ್ಯಾಲಯಗಳೂ ಇವೆ. ಆದರೆ ಕಡಿದಾದ ಬಂಡೆಯಲ್ಲಿ ಉಬ್ಬುಶಿಲ್ಪದಂತೆ ಕಡೆದಿರುವ ಎರಡು ಬೃಹತ್ ಬೌದ್ಧ ಮೂರ್ತಿಗಳು ಇಲ್ಲಿಯವುಗಳಲ್ಲಿ ಬಹುಮುಖ್ಯವಾದವು. ಇವು ಪ್ರಪಂಚದಲ್ಲೇ ಅತಿ ಎತ್ತರದ ಪ್ರತಿಮೆಗಳೆಂದು ಪ್ರಸಿದ್ಧವಾಗಿವೆ. ದೊಡ್ಡ ಬುದ್ಧನ ಪ್ರತಿಮೆ 53.34ಮೀ ಎತ್ತರವೂ ಚಿಕ್ಕದು 36.57ಮೀ ಎತ್ತರವೂ ಇವೆ. ಶಿಲ್ಪನಿರೂಪಣೆಯಲ್ಲಿ ಗುಪ್ತ, ಸಸ್ಸೇನೀಯ ಮತ್ತು ಇರಾನಿ ಶಿಲ್ಪಗಳ ಪ್ರಭಾವ ಕಂಡುಬರುವುದರಿಂದ ಇವು 4–5ನೆಯ ಶತಮಾನದವುಗಳೆಂದು ಊಹಿಸಲಾಗಿದೆ. ಇತ್ತೀಚೆಗೆ ಇಸ್ಲಾಂ ಉಗ್ರವಾದಿಗಳು ಈ ಎರಡೂ ಬುದ್ಧ ವಿಗ್ರಹಗಳನ್ನು ನಾಶ ಮಾಡಿದ್ದುಂಟು. ಆಫ್ಘಾನಿಸ್ತಾನದ ಗುಹಾವಾಸ್ತುಶಿಲ್ಪದ ಅಧ್ಯಯನ ಹೆಚ್ಚು ನಡೆದಿಲ್ಲ. ಆದರೂ ಈಗ ಸಿಗುವ ಮಾಹಿತಿಗಳಿಂದ ಈ ಸಂಪ್ರದಾಯ ಪ್ರಶ.ಪೂ.1 ರಿಂದ ಪ್ರಶ.5–6ನೆಯ ಶತಮಾನಗಳವರೆಗೂ ನಡೆದು ಬಂತು ಎಂದು ಹೇಳಬಹುದು.

**ಮಧ್ಯ ಏಷ್ಯ:** ಮಧ್ಯ ಏಷ್ಯದ ಈಗಿನ ಖೋಟಾನ್ ಪ್ರದೇಶದಲ್ಲಿ ಅನೇಕ ಬೌದ್ಧ ಗುಹಾಲಯಗಳು 4–8ನೆಯ ಶತಮಾನಗಳ ಅವಧಿಯಲ್ಲಿ ಸ್ಥಳೀಯ ರಾಜರಿಂದ ನಿರ್ಮಿತವಾದುವು. ಕಿಜ಼ಿಲ್ ಮತ್ತು ಕುಂತುರದ ಬೌದ್ಧಾಲಯಗಳು ಶಿಲ್ಪ ಮತ್ತು ಭಿತ್ತಿ ಚಿತ್ರಗಳಿಗೆ ಹೆಸರಾಗಿವೆ. ಇವೆಲ್ಲದರಲ್ಲಿಯೂ ಬೌದ್ಧ ಸಂಘಾರಾಮಗಳೂ ಚೈತ್ಯಾಲಯಗಳೂ ಇವೆ. ಮುಂದೆ ಒಂದು ಮೊಗಸಾಲೆ, ಹಿಂದೆ ಒಂದೋ ಎರಡೇ ಕೋಣೆಗಳುಳ್ಳ ಚೈತ್ಯಾಲಯಗಳು ಸಾಮಾನ್ಯ. ಇವಕ್ಕೆ ಅರೆಪೀಪಾಯಿಯ ಅಥವಾ ಗುಮ್ಮಟದ ಆಕಾರದ ಚಾವಣಿ ಇರುತ್ತದೆ. ಇಲ್ಲಿಯ ಶಿಲ್ಪದ ವಸ್ತು ಪೂರ್ಣವಾಗಿ ಭಾರತೀಯ ಮಹಾಯಾನ ಬೌದ್ಧಧರ್ಮಕ್ಕೆ ಸಂಬಂಧಿಸಿದ್ದಾದರೂ ನಿರೂಪಣೆಯಲ್ಲಿ ಇರಾನಿ, ಸಸ್ಸೇನಿ ಮತ್ತು ಚೀನಿ ಶೈಲಿಗಳ ಮಿಶ್ರಣ ಕಂಡುಬರುತ್ತದೆ.

**ಚೀನ:** ಚೀನ ದೇಶಕ್ಕೆ ಮಹಾಯಾನ ಬೌದ್ಧಪಂಥ ಪ್ರವೇಶಿಸಿದ ಕಾಲದಿಂದ ಅದಕ್ಕೆ ಪೋಷಣೆ ಮತ್ತು ಪ್ರೋತ್ಸಾಹ ಮುಂದುವರಿದವರೆಗೂ ಅಲ್ಲಿ ಅಸಂಖ್ಯಾತ ಬೌದ್ಧ ಗುಹಾಲಯಗಳು ನಿರ್ಮಿತವಾದವು. ಗುಹಾಲಯಗಳ ಸಂಖ್ಯಾಬಾಹುಳ್ಯದಲ್ಲಿ ಚೀನ ಭಾರತವನ್ನು ಮೀರಿಸುತ್ತದೆ. ಆದರೆ ಭಾರತದಲ್ಲಿರುವಷ್ಟು ವೈವಿಧ್ಯ ಇಲ್ಲಿ ಕಾಣುವುದಿಲ್ಲ. ಭಾರತದ ಗುಹಾ ವಾಸ್ತು ಶಿಲ್ಪ ಕಾಲಕಾಲಕ್ಕೆ ಹೊಸ ವಸ್ತು, ಭಾವ ವಿನ್ಯಾಸಗಳ ಅಳವಡಿಕೆಯಿಂದಾಗಿ ವಿಕಾಸ ಹೊಂದಿದೆ. ಆದರೆ ಚೀನದ ಕೃತಿಗಳು ಬಹುಮಟ್ಟಿಗೆ ಸಂಪ್ರದಾಯ ಬದ್ಧವಾಗಿ ಅನುಕರಣಾತ್ಮಕವಾಗಿಯೇ ಮುಂದುವರಿದವು.

ಚೀನದ ಮೊದಲ ಗುಹಾಲಯಗಳು ಕಾನ್ಸೂ ಪ್ರಾಂತದಲ್ಲಿ ಇವೆ. ಪಕ್ಕದ ಮಧ್ಯ ಏಷ್ಯದ ಬೌದ್ಧಾಲಯಗಳೇ ಇಲ್ಲಿಯವಕ್ಕೂ ಮಾದರಿ. ಸ್ಥಳೀಯ ಸಾಹಿತ್ಯಕ ಆಧಾರಗಳ ಪ್ರಕಾರ ಪ್ರ.ಶ. 4ನೆಯ ಶತಮಾನದಲ್ಲೆ ಇಲ್ಲಿ ಗುಹಾನಿರ್ಮಾಣ ಪ್ರಾರಂಭವಾಯಿತೆಂದು ತಿಳಿದರೂ ಇದುವರೆಗೆ ಸಿಕ್ಕಿರುವ ಕೃತಿಗಳಲ್ಲಿ ಯಾವುವೂ 5ನೆಯ ಶತಮಾನಕ್ಕೆ ಮುಂಚಿನವಲ್ಲ. ಕಾನ್ಸೂವಿನ ಒಂದು ಮುಖ್ಯ ಗುಹಾವಾಸ್ತು ಕೇಂದ್ರ ತುನ್‍ಹ್ವಾಂಗ್. ಈ ಒಂದೇ ಸ್ಥಳದಲ್ಲಿ ಸು.480 ಗುಹೆಗಳಿವೆ. ಅತ್ಯಂತ ಪ್ರಾಚೀನವಾದವು ವೇ ರಾಜವಂಶದ ಕಾಲಕ್ಕೆ (4–6ನೆಯ ಶತಮಾನಗಳು) ಸೇರಿದವು. ಇತ್ತೀಚಿನವೆಂದರೆ ಯು ಆನ್ ಅರಸರ (13–14ನೆಯ ಶತಮಾನಗಳು) ಕಾಲದವು. ಹೆಚ್ಚಿನವು ಟಾಂಗ್ (618–707) ಮತ್ತು ಸುಂಗ್ (960–1126) ರಾಜವಂಶಗಳ ಕಾಲದವು. ತುನ್ ಹ್ವಾಂಗ್‍ನ ಗುಹೆಗಳ ವಿನ್ಯಾಸ ಬಹು ಸರಳ. ದೇವಾಲಯಗಳಲ್ಲಿ ಹಲವು ಭಿಕ್ಷು ಕೋಣೆಗಳಿವೆ. ದೇವಗೃಹ ಮತ್ತು ಭಿಕ್ಷು ಕೋಣೆಗಳು ಜೊತೆಯಾಗಿ ಇರುವುದೇ ಹೆಚ್ಚು. ಇಲ್ಲಿಯ ಗುಹೆಗಳು ತಮ್ಮ ವಾಸ್ತುರೂಪ ಕ್ಕಿಂತಲೂ ಇವುಗಳಲ್ಲಿರುವ ಶಿಲ್ಪಗಳು ಮತ್ತು ವರ್ಣಚಿತ್ರಗಳಿಂದ ಹೆಚ್ಚು ಹೆಸರಾಗಿವೆ. ಇಲ್ಲಿಯ ಶಿಲ್ಪಗಳಲ್ಲಿ ಮಹಾಯಾನ ಬೌದ್ಧಪಂಥದ ಮೂರ್ತಿಗಳಾದ ವಿವಿಧ ರೀತಿಯ ಬುದ್ಧ ಅವಲೋಕಿತೇಶ್ವರ ಮತ್ತು ಉಪದೇವತೆಗಳ ಮೂರ್ತಿಗಳು ಕಂಡುಬರುತ್ತವೆ. ಕಾನ್ಸೂ ಪ್ರಾಂತದ ಯು–ಲಿನ್–ಕು, ತೀನ್–ತಿ–ಷಾನ್, ಯುಂಗ್–ಚಿಂಗ್, ಮೇ–ಚಿ–ಷಾನ್‍ಗಳಲ್ಲೂ ಗುಹಾಲಯಗಳಿವೆ. ಮೇ–ಚಿ–ಷಾನ್‍ನ ಕೆಲವು ಚೈತ್ಯಾಲಯಗಳು ಸು. 5ನೆಯ ಶತಮಾನಕ್ಕೆ ಸೇರಿದವು. ತೀನ್–ಷಾನ್‍ನ ಒಂದು ಬಂಡೆಯಲ್ಲಿರುವ 25.90ಮೀ ಎತ್ತರದ ಕುಳಿತ ಬುದ್ಧಮೂರ್ತಿ, ಯುಂಗ್–ಚಿಂಗ್ ನಲ್ಲಿರುವ ಅನೇಕ ಸ್ತೂಪಗಳ ಉಬ್ಬು ಶಿಲ್ಪಗಳು ಮತ್ತು 24.38ಮೀ ಎತ್ತರದ ಬುದ್ಧ ಮೂರ್ತಿ ಹೆಸರಾಂತ ಶಿಲ್ಪಗಳು. ಮಂಚೂರಿಯ ಪ್ರಾಂತದ ವನ್–ಪೊ–ತಾಂಗ್‍ನಲ್ಲೂ ವೇ ರಾಜವಂಶದ ಕಾಲದ ಪ್ರಾಚೀನ ಗುಹಾ ವಾಸ್ತುಕೃತಿಗಳಿವೆ.

ಷಾನ್ಸಿ ಪ್ರಾಂತದಲ್ಲಿರುವ ಯುನ್ ಕಾಂಗ್‍ನಲ್ಲಿ ಸು.40 ಗುಹೆಗಳಿವೆ. ಈ ಗುಹೆಗಳಲ್ಲಿಯ ರಚನಾತಂತ್ರ ಬಾಮಿಯನವನ್ನು ಅನುಸರಿಸುತ್ತದೆ. 16.76ಮೀ ಎತ್ತರವಿರುವ ಇಲ್ಲಿಯ ಒಂದು ಆಸೀನ ಬುದ್ಧ ಮೂರ್ತಿ ಸುಂದರ ಶಿಲ್ಪ. ತಿಯೆನ್–ಲುಂಗ್–ಷಾನ್‍ನ ಕೆಲವು ಗುಹೆಗಳಲ್ಲಿ ಮನಸೆಳೆಯುವಂಥ ಅಪ್ಸರೆಯರ ಉಬ್ಬು ಶಿಲ್ಪಗಳಿವೆ. ಷಾನ್–ತುಂಗ್ ಪ್ರಾಂತದ ಚಿಯೆನ್–ಪೊ–ಯ್ಯೆ ಎಂಬಲ್ಲಿಯ ಒಂದು ದೊಡ್ಡ ಬಂಡೆ ಸಹಸ್ರ ಬುದ್ಧರ ಬಂಡೆ ಎಂದು ಹೆಸರಾಗಿದೆ. ಇಲ್ಲಿ ಐದು ಗುಹೆಗಳೂ ಸು. 70 ಕ್ಕೂ ಹೆಚ್ಚು ಮೂರ್ತಿ ಕೋಷ್ಠಗಳೂ ಇವೆ. 618ರಲ್ಲಿ ಮಾಡಿದ ಎರಡನೆಯ ಗುಹೆಯಲ್ಲಿರುವ ಬುದ್ಧ ತ್ರಿಮೂರ್ತಿಗಳ ವಿಗ್ರಹಗಳು (ಬುದ್ಧ, ಅಮಿತಾಭ ಮತ್ತು ಶಾಕ್ಯಮುನಿ) ಉತ್ತಮ ಶಿಲ್ಪಗಳು.

ಸಿಂಕಿಯಾಂಗ್ ಪ್ರಾಂತದ ಕೂಚದ ಗುಹೆಗಳು ಸಣ್ಣವಾದರೂ ಭಿತ್ತಿಗಳ ಮೇಲಿರುವ ವರ್ಣಚಿತ್ರಗಳಿಂದಾಗಿ ಗಮನಾರ್ಹವಾದವು. ಇದೇ ಪ್ರಾಂತದ ತತ್ತು ಎಂಬಲ್ಲಿ 195ಮೀ ಉದ್ದ ಮತ್ತು 19.5ಮೀ ಎತ್ತರದ ವಿಶಾಲ ಬಂಡೆಯ ಮೈಯಲ್ಲಿ ಬುದ್ಧನ ಜೀವನ ಕಥೆಗಳು, ಪರಿನಿರ್ವಾಣ, ಜಾತಕಕಥೆಗಳು ಮುಂತಾದ ಅಸಂಖ್ಯಾತ ಶಿಲ್ಪಗಳನ್ನು ಕಂಡರಿಸಲಾಗಿದೆ. ಕೆಲವಕ್ಕೆ ವಿವರಣಾತ್ಮಕ ಶಾಸನಗಳೂ ಇವೆ.

ಹೋಪೇ ಪ್ರಾಂತ್ಯದ ಗುಹಾ ವಾಸ್ತು ಕೇಂದ್ರಗಳಲ್ಲಿ ಸಿಯಾಂಗ್–ತಂಗ್–ಷಾನ್ ಮುಖ್ಯವಾದದ್ದು. ಇಲ್ಲಿಯ 6ನೆಯ ಶತಮಾನದ ಶಿಲ್ಪಗಳು ಜೀವಭರಿತವಾಗಿರುವಂತೆ ಕಾಣುವ ಶ್ರೇಷ್ಠ ಶಿಲ್ಪಗಳು. ಇವನ್ನು ಬಂಡೆಯಲ್ಲಿ ಉಬ್ಬುಶಿಲ್ಪದಂತೆ ಕಡೆದಿದ್ದರೂ ಪೂರ್ಣ ಶಿಲ್ಪದಂತೆಯೇ ಇವು ಬಹಳ ಮೇಲೆದ್ದಿವೆ. ಇವುಗಳಲ್ಲಿ ಮೂರನೆಯ ಗುಹೆಯಲ್ಲಿರುವ ಬುದ್ಧಮೂರ್ತಿ ಸಮೂಹ ಹೆಚ್ಚು ಹೆಸರಾಗಿದೆ. ಈ ಶಿಲ್ಪದಲ್ಲಿ ಮಧ್ಯದಲ್ಲಿ ಬುದ್ಧ, ಎರಡೂ ಕಡೆ ಇಬ್ಬರು ಲೋಹನ್‍ರು (ಬೋಧಿಸತ್ತ್ವ) ಮತ್ತು ಇಬ್ಬರು ಪ್ರತ್ಯೇಕ ಬುದ್ಧರನ್ನು ಕೆತ್ತಲಾಗಿದೆ. 16ನೆಯ ಶತಮಾನದ ಕೆಲವು ಗುಹೆಗಳೂ ಇಲ್ಲಿವೆ.

ಹೋನಾನ್ ಪ್ರಾಂತದ ಹಲವು ಸ್ಥಳಗಳಲ್ಲಿರುವ ಗುಹೆಗಳು ಶ್ರೇಷ್ಠ ಶಿಲ್ಪಗಳಿಗೂ ನಾಜೂಕಿನ ವಾಸ್ತುನಿರೂಪಣೆಗೂ ಪ್ರಸಿದ್ಧವಾಗಿವೆ. ಲಂಗ್–ಮೇನ್‍ನಲ್ಲಿ ಯೀ ನದಿಯ ಎರಡೂ ಕಡೆಗಳ ಕಡಿದಾದ ದಡಗಳಲ್ಲಿ ಗುಹೆಗಳನ್ನು ಕಲಾತ್ಮಕವಾಗಿ ಕಡಿಯಲಾಗಿದೆ. ಈ ಗುಹೆಗಳು 5–8ನೆಯ ಶತಮಾನಗಳ ಕಾಲಕ್ಕೆ ಸೇರಿದವು. ಇಲ್ಲಿಯ ಕುನ್ವಂಗ್ ಗುಹೆ (493–525) ಆಯಾಕಾರವಾಗಿದ್ದರೂ ಇದಕ್ಕೆ ಪೀಪಾಯಿಯ ಆಕಾರದ ಚಾವಣಿ ಇದೆ. ಇಲ್ಲಿಯ ಪಿನ್ಯಂಗ್ ಗುಹೆಯಲ್ಲಿ (523) ಇಕ್ಕೆಲಗಳಲ್ಲಿ ಆನಂದ–ಮಹಾಕಶ್ಯಪ ಮತ್ತು ಇಬ್ಬರು ಬೋಧಿಸತ್ವರನ್ನು ಹೊಂದಿರುವ ಬುದ್ಧಮೂರ್ತಿಯೂ ಬೌದ್ಧತ್ರಿಮೂರ್ತಿಗಳ ವಿಗ್ರಹಗಳೂ ಚೀನದ ವೇ ಶಿಲ್ಪ ಸಂಪ್ರದಾಯದ ಉತ್ತಮ ಉದಾಹರಣೆಗಳೆಂದು ಪರಿಗಣಿತವಾಗಿವೆಯಲ್ಲದೆ, ಇವೇ ಜಪಾನಿನ ತೋರಿ ಶಿಲ್ಪ ಸಂಪ್ರದಾಯಕ್ಕೆ ಮೂಲ ಮಾದರಿಗಳನ್ನು ಒದಗಿಸಿದುವೆಂದು ತಿಳಿಯಲಾಗಿದೆ. ಲುಂಗ್–ಮೇನ್‍ನ ಇತರ ಗುಹೆಗಳಲ್ಲಿರುವ ಹಾರುತ್ತಿರುವ ಅಪ್ಸರೆಯರಿಂದ ಸುತ್ತುವರಿದ ಕಮಲಪುಷ್ಪ (520) ಮತ್ತು 15ಮೀ ಎತ್ತರದ ವೈರೋಚನನ ವಿಗ್ರಹ (ಸು.675) ಬಹು ಪರಿಣಾಮಕಾರಿ ಶಿಲ್ಪಕೃತಿಗಳು.

ಚೀನದಲ್ಲಿ ಬೌದ್ಧರಲ್ಲದೆ ತಾವೊ ಸಂಪ್ರದಾಯದವರು ಸಹ ಗುಹಾವಾಸ್ತು ರೀತಿಯನ್ನು ಅಪರೂಪವಾಗಿ ಬಳಸಿಕೊಂಡಿದ್ದಾರೆ. ಷಾನ್ಸಿ ಪ್ರಾಂತದ ಲುಂಗ್–ಷಾನ್‍ನಲ್ಲಿ 1234 – 39ರಲ್ಲಿ ಕೊರೆಯಲಾದ ಎರಡು ಗುಹೆಗಳು ತಾವೋ ಧರ್ಮೀಯರದು. ಇವುಗಳಲ್ಲಿ ಆ ಸಂಪ್ರದಾಯದ ಪೌರಾಣಿಕ ವ್ಯಕ್ತಿಗಳಾದ ಷೇನ್–ನುಂಗ್, ಹ್ವಾಂಗ್–ತಿ ಮತ್ತು ಪು–ಹ್ಸಿ ಇವರ ವಿಗ್ರಹಗಳಿವೆ. ಸಿಂಕಿಯಾಂಗ್ ಪ್ರಾಂತದ ತತ್ತುವಿನಲ್ಲೂ ತಾವೋ ಸಂಪ್ರದಾಯದವರ ಶಿಲ್ಪಗಳೂ, ಚೈತ್ಯಾಲಯಗಳು, ವಿಹಾರಗಳೂ ಇವೆ.

**ಶ್ರೀಲಂಕ, ಕಾಂಬೋಡಿಯ:** ಶ್ರೀಲಂಕದಲ್ಲಿ ಪ್ರ.ಶ.ಪೂ. 3ನೆಯ ಶತಮಾನದಲ್ಲೇ ಬೌದ್ಧಧರ್ಮ ಪಸರಿಸಿ ಇಂದಿಗೂ ಅಲ್ಲಿಯ ಪ್ರಧಾನ ಧರ್ಮವಾಗಿರುವುದಾದರೂ ಅಲ್ಲಿ ಹೆಚ್ಚಿನ ಗುಹಾ ವಾಸ್ತುಕೃತಿಗಳಿಲ್ಲ. ಇದು ಕೊರೆಯಲು ಕಠಿಣವಾದ ಗಟ್ಟಿ ಬಂಡೆಗಳ ಪ್ರದೇಶವಾಗಿರುವುದೇ ಇದಕ್ಕೆ ಕಾರಣವಿರಬಹುದು. ಪ್ರ.ಶ.ಪೂ.3–2ನೆಯ ಶತಮಾನಕ್ಕೆ ಸೇರಿದ ಕೆಲವು ಭಿಕ್ಷು ವಾಸ ಗುಹೆಗಳು ಶಾಸನ ಸಹಿತ ಇಲ್ಲಿ ಕಂಡುಬಂದಿವೆಯಾದರೂ ಇವು ವಾಸ್ತುಶಿಲ್ಪ ದೃಷ್ಟಿಯಿಂದ ಮುಖ್ಯವಾದುವಲ್ಲ. ಇವೆಲ್ಲ ಸಾಮಾನ್ಯವಾಗಿ ಸ್ವಾಭಾವಿಕ ಗುಹೆಗಳು. ಭಿಕ್ಷುಗಳ ಮಂಚಗಳು ಮತ್ತು ಸ್ವಲ್ಪಮಟ್ಟಿಗೆ ಚಾವಣಿಯನ್ನು ಮಾತ್ರ ಕೆತ್ತಲಾಗಿದೆ. ಸಿಂಹಳದ ಗುಹಾ ವಾಸ್ತುವಿನಲ್ಲಿ ಮುಖ್ಯವಾದದ್ದು ಒಂದನೆಯ ಪರಾಕ್ರಮ ಬಾಹುವಿನ ಆಳಿಕೆಯಲ್ಲಿ (12ನೆಯ ಶತಮಾನ) ಪೊಲೊನ್ನರುವ ಬಳಿ ಕೊರೆಯಲಾಗಿರುವ ಗಲ್ ವಿಹಾರ. ಇಲ್ಲಿ ಎರಡು ಆಸೀನವಾದ ಒಂದು ನಿಂತಿರುವ ಮತ್ತು ಮತ್ತೊಂದು ಮಲಗಿರುವ ಬುದ್ಧಮೂರ್ತಿಗಳನ್ನು ಕೆತ್ತಲಾಗಿದೆ. ವೆಲಿಗಮ ಮತ್ತು ಇಸುರುಮುನಿಯ ಎಂಬಲ್ಲೂ ಶಿಲೆಯಲ್ಲಿ ಕಂಡರಿಸಿದ ಕೆಲವು ಶಿಲ್ಪಗಳಿವೆ.

ಬೌದ್ಧಧರ್ಮ ಹರಡಿದ್ದ ಕಾಂಬೋಡಿಯ ದೇಶದಲ್ಲೂ ಈ ವಾಸ್ತುಶಿಲ್ಪ ಸಂಪ್ರದಾಯ ಸ್ವಲ್ಪ ಮಟ್ಟಿಗೆ ಪ್ರಚಲಿತವಾಗಿತ್ತು. ಅಲ್ಲಿಯ ಪನಾಮ್ ಕುಲೇನ್ ಎಂಬಲ್ಲಿ ಹಲವು ಭಿಕ್ಷುಗೃಹಗಳೂ ಶಿಲ್ಪಗಳೂ ಶಾಸನಗಳೂ ಇವೆ ಎಂಬ ಹೇಳಿಕೆಯಿದ್ದರೂ ಇವುಗಳ ಬಗ್ಗೆ ಹೆಚ್ಚು ಅಧ್ಯಯನ ನಡೆದಿಲ್ಲ.

**ಇಥಿಯೋಪಿಯ:** ಗುಹಾ ವಾಸ್ತು ಸಂಪ್ರದಾಯದ ಕೆಲವು ಕುತೂಹಲಕರ ಕೃತಿಗಳು ಇಲ್ಲಿವೆ. ಇವೆಲ್ಲ ಕ್ರೈಸ್ತಧರ್ಮಕ್ಕೆ ಸಂಬಂಧಿಸಿದವು. ಉತ್ತರ ಇಥಿಯೋಪಿಯದ ವೆಕ್ರೊ, ಅಂಬ ಮೈಕೆಲ್, ಮುಗ್ಗ, ದಾವೆಂತ್ ಎಂಬ ಸ್ಥಳಗಳಲ್ಲಿ ಗುಹಾ ಇಗರ್ಜಿಗಳಿವೆ. ಇವುಗಳಲ್ಲಿ ಸಾಮಾನ್ಯವಾಗಿ ಕಂಬಗಳುಳ್ಳ ಅಥವಾ ಇಲ್ಲದಿರುವ ಒಂದು ಹಜಾರವಷ್ಟೇ ಇರುತ್ತದೆ. ಇವುಗಳ ಕಾಲನಿಷ್ಕರ್ಷೆ ಕಷ್ಟ. ಆದರೆ 8–12ನೆಯ ಶತಮಾನಗಳವಾಗಿರಬಹುದೆಂದು ಊಹಿಸಲಾಗಿದೆ. ಈ ಗುಹಾ ಇಗರ್ಜಿಗಳಿಂದಲೇ ಸ್ಫೂರ್ತಿಗೊಂಡು ಬೆಳೆದ ಪೂರ್ಣವಾಗಿ ಶಿಲೆಯಲ್ಲಿ ಕೊರೆದ ಅನೇಕ ಇಗರ್ಜಿಗಳು ಲಾಲಿಬಾಲ, ದಾರಸ್ಗೆ, ಅಬ್ರಹ, ಆಸ್ಬೇನ ಮುಂತಾದೆಡೆಗಳಲ್ಲಿವೆ. ಲಾಲಿಬಾಲ ಒಂದರಲ್ಲೇ ಹತ್ತು ಇಗರ್ಜಿಗಳಿವೆ. ಇವೆಲ್ಲ ಸ್ಥಳೀಯ ಕ್ರೈಸ್ತಸಂತ ಮತ್ತು ದೊರೆ ಲಾಲಿಬಾಲ (12ನೆಯ ಶತಮಾನ) ಕಟ್ಟಿಸಿದವೆಂದು ನಂಬಿಕೆ. ಇವುಗಳಲ್ಲಿ ಇಗರ್ಜಿಗಳಲ್ಲಿ ಸಾಮಾನ್ಯವಾಗಿರುವಂತೆ ಪ್ರಾರ್ಥನಾ ಹಜಾರ, ಪವಿತ್ರ ಕೋಷ್ಠ ಅಥವಾ ವೇದಿಕೆ ಮತ್ತು ಪಕ್ಕ ಹಜಾರಗಳು ಇರುತ್ತವೆ. ಲಾಲಿಬಾಲದ ಗಿಯೋರ್ಗಿಸ್ ಇಗರ್ಜಿಯ ತಳವಿನ್ಯಾಸ ಸಮಾನ ಅಳತೆ ತೋಳುಗಳುಳ್ಳ ಗ್ರೀಕ್ ಶಿಲುಬೆಯ ಆಕಾರದಲ್ಲಿವೆ. ಇವುಗಳ ಮೇಲ್ಚಾವಣಿಯೂ ಕಲ್ಲಿನ ಬಂಡೆಯೇ ಆದರೂ ಒಳಗೆ ಮರದ ಭಾಗಗಳನ್ನು ಆಲಂಕಾರಿಕವಾಗಿ ಅಳವಡಿಸಿರುವುದೂ ಉಂಟು. ಇಂಥ ಕೆಲವು ಇಗರ್ಜಿಗಳಲ್ಲಿ ವರ್ಣಚಿತ್ರಗಳೂ ಇವೆ. ಪ್ರ.ಶ.6–10ನೆಯ ಶತಮಾನಗಳ ನಡುವೆ ಕೊರೆಯಲಾಗಿರುವ ದಾಬ್ರ ದಾಮ್ಮೊದಲ್ಲಿಯ ಕ್ರೈಸ್ತ ಇಗರ್ಜಿ ಇಥಿಯೋಪಿಯದ ಮುಖ್ಯ ವಾಸ್ತುಕೃತಿಗಳಲ್ಲೊಂದು. ಇದರ ತಳ ವಿನ್ಯಾಸ ಸಿರಿಯದ ಬ್ಯಾಸಿಲಿಕಗಳಂತೆ ಮಧ್ಯ ಮತ್ತು ಪಕ್ಕ ಹಜಾರಗಳು. ಮಧ್ಯ ಹಜಾರದ ಹಿಂದೆ ಅರೆವೃತ್ತಾಕಾರದ ಒಳನಡೆ ಇವೆ. ಇದು ಎರಡು ಅಂತಸ್ತುಗಳಲ್ಲಿದೆ. ಮೊದಲ ಅಂತಸ್ತಿನ ಕ್ರೈಸ್ತ ಗುರುಗಳಿಗಾಗಿ ಕೋಣೆಗಳಿವೆ. ದಾಬ್ರ ದಾಮ್ಮೊದ ಈ ವಿಹಾರದಲ್ಲಿ ಉತ್ತಮ ಅಲಂಕರಣ ಶಿಲ್ಪಗಳು ಸಹ ಇವೆ. ಇಥಿಯೋಪಿಯದ ರಾಜಧಾನಿಯಾದ ಆಡಿಸ್ ಆಬಾಬದಲ್ಲೂ ಶಿಲೆಯಲ್ಲಿ ಕೊರೆದ ಒಂದು ಇಗರ್ಜಿ ಇದೆ. ಆದರೆ ಈಗ ಇದು ಬಹು ಶಿಥಿಲಾವಸ್ಥೆಯಲ್ಲಿದೆ. ಇಲ್ಲಿಂದ ಸು.32 ಕಿಮೀ ಪಶ್ಚಿಮದಲ್ಲಿರುವ ಆಡದಿ ಮರ್ಯಾಮ್ ಇಗರ್ಜಿ ಭೂಗರ್ಭದಲ್ಲಿ ಕೊರೆಯಲಾಗಿರುವ ಒಂದು ಗುಹೆ. ಇದನ್ನು ಲಾಲಿಬಾಲದ ಕಾಲದ ಅನಂತರ ಮತ್ತು 16ನೆಯ ಶತಮಾನಕ್ಕೆ ಮುಂಚೆ ಯಾವುದೋ ಕಾಲದಲ್ಲಿ ಕೊರೆದಿರಬೇಕೆಂದು ಊಹಿಸಲಾಗಿದೆ.

**ಭಾರತ:** ಭಾರತದ ಗುಹಾ ವಾಸ್ತು–ಶಿಲ್ಪ ಇತಿಹಾಸ ಪ್ರಾರಂಭವಾಗುವುದು ಪ್ರ.ಶ.ಪೂ. 3ನೆಯ ಶತಮಾನದಲ್ಲಿ, ಮೌರ್ಯ ಸಾಮ್ರಾಟ ಅಶೋಕನ ಕಾಲದಲ್ಲಿ ಬಿಹಾರ ರಾಜ್ಯದ ಗಯ ಬಳಿ ಇರುವ ಬರಾಬರ್ ಬೆಟ್ಟಗಳಲ್ಲಿ ಏಳು ಗುಹೆಗಳು ಇವೆ. ಹಾಗೆಯೇ ಸಮೀಪದ

ರಾಜಗಿರ್ (ಪ್ರಾಚೀನ ಮಗಧ ಸಾಮ್ರಾಜ್ಯದ ರಾಜಧಾನಿ ರಾಜಗೃಹ) ಬಳಿಯ ಬೆಟ್ಟಗಳಲ್ಲಿ ನಾಲ್ಕು ಗುಹೆಗಳಿವೆ. ಇವುಗಳ ಮೂರು ಗುಹೆಗಳಲ್ಲಿ ಅಶೋಕನ ಶಾಸನಗಳೂ ಒಂದರಲ್ಲಿ ಅವನ ಮೊಮ್ಮಗ ದಶರಥನ ಶಾಸನವೂ ಇದ್ದು, ಇವುಗಳ ಕಾಲದ ಬಗ್ಗೆ ಖಚಿತ ಮಾಹಿತಿಯನ್ನು ಒದಗಿಸುತ್ತವೆ. ಇವೆಲ್ಲ ಬಹಳ ಚಿಕ್ಕವೂ ಸಾಮಾನ್ಯ ಸ್ವರೂಪದವೂ ಆಗಿದ್ದು, ಭಾರತದ ಗುಹಾ ವಾಸ್ತುಶಿಲ್ಪದ ಆರಂಭ ಹಂತವನ್ನು ಸೂಚಿಸುತ್ತವೆ.

ಬರಾಬರ್ ಬೆಟ್ಟಗಳಲ್ಲಿರುವ 2 ಗುಹೆಗಳು ಗುಹಾ ವಾಸ್ತು-ಶಿಲ್ಪ ಇತಿಹಾಸದ ದೃಷ್ಟಿಯಿಂದ ಗಮನಾರ್ಹ. ಮೊದಲನೆಯದು ಸುಧಾಮ ಗುಹೆ. ಎತ್ತರದ ಬಂಡೆಯೊಂದರಲ್ಲಿ ಸು.1.21 ಮೀ ಅಗಲ, 1.82 ಮೀ ಎತ್ತರದ ಆಯಾಕಾರದ ಒಂದು ದ್ವಾರವನ್ನು ಕೊರೆದು, ಅದರ ಒಳಗೆ ಸು. 10 ಮೀ ಉದ್ದ, 3.64 ಮೀ ಅಗಲದ ಆಯಾಕಾರದ ಒಂದು ದೊಡ್ಡ ಕೋಣೆಯನ್ನೂ ಅದರ ಒಂದು ಪಕ್ಕದ ಕೊನೆಯಲ್ಲಿ ವೃತ್ತಾಕಾರದ ಒಂದು ಕೋಣೆಯನ್ನೂ



ಲೋಮಸ್ ಋಷಿ ಗುಹಾಲಯದ ಮುಂಭಾಗ

ನಿರ್ಮಿಸಲಾಗಿದೆ. ದೊಡ್ಡ ಕೋಣೆಯ ಮೇಲ್ಭಾಗವನ್ನು ಅರ್ಧ ಕಮಾನಿನಾಕೃತಿಯಲ್ಲೂ ವೃತ್ತಾಕಾರದ ಕೋಣೆಯ ಮೇಲ್ಭಾಗವನ್ನು ಅರ್ಧ ಗೋಳಾಕಾರದಲ್ಲೂ ಕೆತ್ತಿ ಛತ್ತನ್ನು ರೂಪಿಸಲಾಗಿದೆ. ಲೋಮಸ ಋಷಿ ಗುಹೆ ಎಂದು ಕರೆಯಲಾಗುವ ಇನ್ನೊಂದರ ವಿನ್ಯಾಸ ಸಹ ಇದೇ ರೀತಿಯಲ್ಲೇ ಇದೆ. ಆದರೆ ಒಳ ಹೋಗುವ ದ್ವಾರದ ಮುಂಬದಿಯ ಚೈತ್ಯ ಕಮಾನಿನಾಕೃತಿಯಲ್ಲಿದ್ದು, ಸುಂದರ ಅಲಂಕರಣದಿಂದ ಕೂಡಿದೆ.

ಶಿಲಾಶಿಲ್ಪದ ತಂತ್ರಗಾರಿಕೆ ಪರ್ಷಿಯ ದೇಶದಲ್ಲಿ ಪ್ರಚಲಿತವಾಗಿದ್ದು ಅಲ್ಲಿಂದ ಭಾರತಕ್ಕೆ ಬಂತೆಂಬುದು ಇತಿಹಾಸಜ್ಞರ ಅಭಿಪ್ರಾಯ (ಆದರೆ ಕೇರಳ-ಕರ್ನಾಟಕದ ಕಡಲ ತೀರದ ಪ್ರದೇಶದಲ್ಲಿ ಪ್ರ.ಶ.ಪೂ. ಸು.5-4 ಶತಮಾನಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಜಂಬಿಟ್ಟಿಗೆಯ ಶಿಲಾ ಸಮತಟ್ಟಿನಲ್ಲಿ ಕೊರೆದು ಸೃಷ್ಟಿಸಿದ ಬಾಗಿಲು ಚೌಕಟ್ಟು ಸಹಿತ ಅರ್ಧ ಗೋಳಾಕೃತಿಯ ಹಲವಾರು ನೆಲಮಾಳಿಗೆಗಳಿವೆ. ಕೆಲವು ಎರಡು ನಾಲ್ಕು ಕೋಣೆಗಳಿಂದಲೂ ಕೂಡಿವೆ. ಇದಕ್ಕೂ ಪೂರ್ವದಲ್ಲಿ ಆದಿ ಹರಪ್ಪ ನಾಗರಿಕತೆಯ ನೆಲೆಯಾದ ಧೋಲಾವೀರದಲ್ಲಿ ಮಳೆಯ ನೀರನ್ನು ಸಂಗ್ರಹಿಸಲು ಕೆಂಪು ಮರಳು ಕಲ್ಲಿನ ಸಮತಟ್ಟಿನಲ್ಲಿ ಕೊರೆದು ಮಾಡಿದ ದೊಡ್ಡ ದೊಡ್ಡ ತೊಟ್ಟಿಗಳಿದ್ದುದು ಬೆಳಕಿಗೆ ಬಂದಿವೆ. ಈ ತಂತ್ರಜ್ಞಾನ ಪರಂಪರೆ ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿಯೂ ಸುಧಾರಿತಗೊಂಡು ಮುಂದುವರೆದಿರುವ ಸಾಧ್ಯತೆ ಇದೆ). ಆದರೆ ಪರ್ಷಿಯ ದೇಶ ಹಾಗೂ ಇತರ ಪಶ್ಚಿಮ ಏಷ್ಯ ಪ್ರದೇಶದಲ್ಲಿ ಗುಹಾ ವಾಸ್ತು ಮೃತರಿಗೆ ಸಂಬಂಧಪಟ್ಟಂತೆ ಮಾತ್ರ ಉಪಯೋಗವಾಗುತ್ತಿತ್ತು. ಭಾರತದ ಈ ಮೊದಲ ಗುಹೆಗಳು ಧಾರ್ಮಿಕ ಆಚರಣೆಗೆ ಸಂಬಂಧಿಸಿದವು. ಹೆಚ್ಚಿನವೆಲ್ಲ ಪ್ರ.ಶ.ಪೂ. ಕಾಲದಲ್ಲಿ ಪ್ರಚಲಿತವಾಗಿದ್ದ ಚೈತ್ಯಾಲಯದ ಮಾದರಿಯಲ್ಲಿದ್ದು, ಬಹುಶಃ ಇವು ಬೌದ್ಧ ಅಥವಾ ಇನ್ನಾವುದೋ ಧರ್ಮಕ್ಕೆ ಸಂಬಂಧಿಸಿದ ಪೂಜಾಗೃಹವಾಗಿರಬಹುದು. ಸುಧಾಮ ಗುಹೆಯನ್ನು ಅಶೋಕ ಆಜೀವಿಕರಿಗೆ ಮಾಡಿಸಿಕೊಟ್ಟನೆಂದು ಅಲ್ಲಿರುವ ಅವನ ಶಾಸನ ತಿಳಿಸುತ್ತದೆ.

ಮೌರ್ಯ ಸಾಮ್ರಾಜ್ಯದ ಸ್ಥಾಪನೆಯೊಡನೆ ಒದಗಿ ಬಂದ ಶಾಂತ ರಾಜಕೀಯ ಪರಿಸ್ಥಿತಿ, ವ್ಯಾಪಾರಿಗಳ ಅಭಿವೃದ್ಧಿ, ಇವುಗಳ ಜೊತೆಗೆ ಜೈನ-ಬೌದ್ಧ ಧರ್ಮಗಳು ಭಾರತಾದ್ಯಂತ ಹಬ್ಬಲು ದೊರಕಿದ ಅವಕಾಶ, ಇವುಗಳಿಂದಾಗಿ ಉತ್ತರ ಭಾರತದ ಅದರಲ್ಲೂ ಮಗಧ ಪ್ರದೇಶದ ಅನೇಕ ರೀತಿ ನೀತಿ ಆಚಾರಗಳು ಭಾರತಾದ್ಯಂತ ಹರಡಲಾರಂಭಿಸಿದವು. ಇದರ ಜೊತೆಯಲ್ಲೇ ಗುಹಾ ವಾಸ್ತು-ಶಿಲ್ಪ ಸಹ ಭಾರತದ ವಿವಿದೆಡೆಗಳಲ್ಲಿ ಕಾಣಿಸಿಕೊಂಡಿತು. ತಮಿಳುನಾಡಿನ ಮಧುರೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕಂಡು ಬರುವ ಚಿಕ್ಕ ಗುಹೆಗಳು ಪ್ರ.ಶ.ಪೂ. 2ನೆಯ ಶತಮಾನದವಾಗಿದ್ದು. ಪ್ರಾರಂಭಿಕ ಘಟ್ಟವನ್ನು ಸೂಚಿಸುತ್ತವೆ. ಇವುಗಳಲ್ಲಿ ಸಾಮಾನ್ಯವಾಗಿ ಒಂದು ಸ್ವಾಭಾವಿಕ ಗುಹೆಯನ್ನೇ ಉಪಯೋಗಿಸಿಕೊಂಡು ಹಿಂಭಾಗದಲ್ಲಿ ಒಬ್ಬರು ಮಲಗಬಹುದಾದ ಒಂದು ಶೈಯ್ಯಾಸನವನ್ನು ನಿರ್ಮಿಸಿ ತೆರೆದ ಮುಂಭಾಗದಲ್ಲಿ ಛತ್ತಿನ ಮೇಲೆ ಸ್ವಲ್ಪ ಮಟ್ಟ ಮಾಡಿರಲಾಗುತ್ತದೆ. ಇವುಗಳ ಜೊತೆಯಲ್ಲಿ ದೊರಕಿರುವ ಕೆಲವು ಶಾಸನಗಳಿಂದ ಇವು ಜೈನ ಸಂನ್ಯಾಸಿಗಳ ವಸತಿಗಾಗಿ ಮಾಡಿದವು ಎಂದು ತಿಳಿಯುತ್ತದೆ. ಹಾಗೆಯೇ ಒರಿಸ್ಸದ ಭುವನೇಶ್ವರದ ಸಮೀಪದಲ್ಲೇ ಇರುವ ಉದಯಗಿರಿ-ಖಂಡಗಿರಿ ಬೆಟ್ಟಗಳಲ್ಲಿ ಕೆಲವು ಗುಹೆಗಳನ್ನು ನಿರ್ಮಿಸಲಾಗಿದ್ದು, ಇವುಗಳ ಮುಂಭಾಗದಲ್ಲಿ ಒಂದು ತೆರೆದ ಹಜಾರ, ಒಳಗೆ ನಾಲ್ಕಾರು ಕೋಣೆಗಳನ್ನು ಕೊರೆಯಲಾಗಿದೆ. ಕೆಲವು ಗುಹೆಗಳಲ್ಲಿ ಹಜಾರದ ಭಾಗದಲ್ಲಿ ಬಾಗಿಲವಾಡದ ಸುತ್ತ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಗುಹಾ ಸಮೂಹದಲ್ಲಿರುವ ರಾಣಿಗುಂಫ, ಅನಂತ ಗುಂಫ, ಹಾಥಿಗುಂಫ ಇವು ಪ್ರಸಿದ್ಧವಾಗಿವೆ. ಹಾಥಿಗುಂಫದಲ್ಲಿ ದೊರಕಿರುವ ಶಾಸನವೊಂದರ ಆಧಾರದಿಂದ ಹಾಗೂ ಇದರ ಸಾಂದರ್ಭಿಕ ಸಾಕ್ಷ್ಯಗಳಿಂದ ಈ ಗುಹಾ ಸಮೂಹ ಜೈನ ಯತಿಗಳಿಗಾಗಿ ನಿರ್ಮಿಸಲ್ಪಟ್ಟಿರಬೇಕು ಎಂದು ತರ್ಕಿಸಲಾಗಿದೆ. ಇವುಗಳ ರಚನೆಯ ಕಾಲ ಪ್ರ.ಶ.ಪೂ.ಸು 2ನೆಯ ಶತಮಾನದಿಂದ 1ನೆಯ ಶತಮಾನದವೆನ್ನಲಾಗಿದೆ.

ಗುಹಾ ದೇವಾಲಯಗಳಿಗೆ ಅತ್ಯಂತ ಪ್ರಸಿದ್ಧವಾಗಿರುವುದು ಪಶ್ಚಿಮ ಭಾರತ, ಅದರಲ್ಲೂ ಮಹಾರಾಷ್ಟ್ರದ ಪಶ್ಚಿಮ ಭಾಗದಲ್ಲಿ ಹಬ್ಬಿರುವ ಸಹ್ಯಾದ್ರಿ ಪರ್ವತ ಶ್ರೇಣಿ ಮತ್ತು ಅದರ ಕಿರುಬೆಟ್ಟಗಳ ಪ್ರದೇಶ. ಪಶ್ಚಿಮ ಭಾರತ ಅಶೋಕನ ಸಾಮ್ರಾಜ್ಯದ ಭಾಗವಾಗಿತ್ತು ಎಂಬುದು ಮುಂಬೈ ಬಳಿಯ ಸೋಪಾರದಲ್ಲಿ ದೊರಕಿರುವ ಅವನ ಶಾಸನಗಳಿಂದಷ್ಟೇ ಅಲ್ಲದೆ, ಅಶೋಕನು ಬೌದ್ಧಧರ್ಮ ಪ್ರಚಾರಕ್ಕಾಗಿ ಈ ಪ್ರದೇಶಕ್ಕೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿದ್ದ ನೆಂಬುದಕ್ಕೂ ಸಾಕ್ಷ್ಯಾಧಾರಗಳಿವೆ. ಸಹಜವಾಗಿ, ಅಶೋಕನು ಗಯ ಪ್ರದೇಶದಲ್ಲಿ ಪ್ರಾರಂಭಿಸಿದ ಗುಹಾ ವಾಸ್ತುಶಿಲ್ಪ ಕಲೆ ಸಹ ಬಹು ಮುಂಚೆಯೇ ಇಲ್ಲಿಗೂ ಹರಡಿತು. ಈ ಪ್ರದೇಶದಲ್ಲಿ ಹಬ್ಬಿರುವ ಕರಿವರ್ಣದ ಶಿಲೆಯ ಬೆಟ್ಟಗಳು ಗುಹಾ ವಾಸ್ತುಶಿಲ್ಪ ಇಲ್ಲಿ ವಿಶಿಷ್ಟ ರೀತಿಯಲ್ಲಿ ಬೆಳೆಯುವುದಕ್ಕೆ ಕಾರಣವಾಯಿತು. ಈ ಪ್ರದೇಶದಲ್ಲಿ ಸು. 60ಕ್ಕೂ ಹೆಚ್ಚು ಗುಹಾ ವಾಸ್ತುಕೇಂದ್ರಗಳು ಇದ್ದು ಒಟ್ಟಾರೆಯಾಗಿ ಸು. 1000 ಕ್ಕೂ ಹೆಚ್ಚು ಗುಹಾ ವಾಸ್ತುಶಿಲ್ಪ ಕೃತಿಗಳು ಕಂಡುಬರುತ್ತವೆ.

ಹೊಸ ವಾಸ್ತು ಸಂಪ್ರದಾಯದ ಅಳವಡಿಕೆಯ ಮೊದಲ ಪ್ರಯೋಗಗಳು ಎನ್ನಬಹುದಾದ ಚಿಕ್ಕ ಚಿಕ್ಕ ವಾಸ್ತು ರಚನೆಗಳು ಮುಂಬೈ ಬಳಿಯ ಜೀವದನ್ ವಿಹಾರ, ಕನ್ಹೇರಿ, ಪುಣೆ ಜಿಲ್ಲೆಯಲ್ಲಿರುವ ಭಾಜ, ಜುನ್ನರ್ ಇತ್ಯಾದೆಡೆಗಳಲ್ಲಿವೆ. ಪ್ರ.ಶ.ಪೂ. 2ನೆಯ ಶತಮಾನದ ಪ್ರಾರಂಭದ ಆಸುಪಾಸಿಗೆ ಸೇರಿದ ಇವೆಲ್ಲ ಬೌದ್ಧಧರ್ಮಕ್ಕೆ ಸಂಬಂಧಿಸಿದವು. ಪ್ರಾರಂಭದ ಘಟ್ಟದಲ್ಲಿ ಬೌದ್ಧ ಭಿಕ್ಷುಗಳ ಆಚರಣೆಯಲ್ಲಿ ಇದ್ದ ವಸ್ಸಾವಾಸ (ವರ್ಷಾವಾಸ) ಸಂಪ್ರದಾಯಕ್ಕೆ ಅನುಕೂಲವಾಗುವಂತೆ ರಚಿತವಾದವು. ಬೌದ್ಧ ಭಿಕ್ಷುಗಳು ವರ್ಷಾಕಾಲದ ಅಂದರೆ ಮಳೆಗಾಲದ ನಾಲ್ಕು ತಿಂಗಳ ಕಾಲ ಒಂದೇ ಪ್ರದೇಶದಲ್ಲಿ ನೆಲೆಸಿರಬೇಕು ಎಂಬುದು ಈ ಸಂಪ್ರದಾಯದ ಆಚರಣೆ. ಇದಕ್ಕಾಗಿ ಬುದ್ಧನ ಕಾಲದಲ್ಲಿಯೇ ವಿಹಾರಗಳ ರಚನೆ ಪ್ರಾರಂಭವಾಗಿತ್ತು. ಈ ಪ್ರದೇಶದಲ್ಲಿ ಕಾಣಬರುವ ಗುಹಾ ವಾಸ್ತು ಸಮುದಾಯಗಳು ಬೌದ್ಧ ವಿಹಾರಗಳೇ. ಅತ್ಯಂತ ಪ್ರಾಚೀನ ವಿಹಾರ ಕೇಂದ್ರಗಳಲ್ಲಿ ಚಿಕ್ಕ ಚಿಕ್ಕ ಕೋಣೆಗಳನ್ನು ಸಾಲಾಗಿ ಬೆಟ್ಟದ ಬದಿಯಲ್ಲಿ ಕೊರೆದಿದ್ದು ಅವುಗಳ ಉದ್ದೇಶ ಬೌದ್ಧ ಭಿಕ್ಷುಗಳು ಮಳೆಯಿಂದ ರಕ್ಷಣೆ ಪಡೆಯಲು ಸಾಧ್ಯವಾಗುವುದಕ್ಕಷ್ಟೇ ಸೀಮಿತವಾಗಿದೆ. ಒಂದೆರಡು ಕಡೆಗಳಲ್ಲಿ ಭಿಕ್ಷುಗಳ ಪೂಜಾ ಅವಶ್ಯಕತೆ ಗಳಿಗಾಗಿ ಚಿಕ್ಕ ಸ್ತೂಪಗಳುಳ್ಳ ಚೈತ್ಯಾಲಯಗಳೂ ಇವೆ. ಯಾವ ನಾಜೂಕಿನ ಅಲಂಕರಣವಾಗಲಿ ಇವುಗಳಲ್ಲಿ ಇರುವುದಿಲ್ಲ. ಆದರೆ ಈ ಚೈತ್ಯಾಲಯಗಳು ಅಂದಿನ ದಿನಗಳಲ್ಲಿ ಉತ್ತರ ಭಾರತದಲ್ಲಿ ಪ್ರಚಲಿತವಾಗಿದ್ದ ಚೈತ್ಯಗಳ ವಿನ್ಯಾಸ ಮತ್ತು ಸ್ವರೂಪದ ಅನುಕರಣೆಗಳೇ ಆಗಿದ್ದವು. ಭಾಜದಲ್ಲಿರುವ ಅತಿ ಪ್ರಾಚೀನ ಗುಹೆ ಸು. 1.80 ಮೀ ವ್ಯಾಸದ ವೃತ್ತಾಕಾರದ ಕೋಣೆಯಾಗಿದ್ದು ಅದರ ಮಧ್ಯದಲ್ಲಿ ಒಂದು ಚಿಕ್ಕ ಸ್ತೂಪವನ್ನು ಕೆತ್ತಲಾಗಿದೆ. ಹಾಗೆಯೇ ಕನ್ಹೇರಿಯಲ್ಲಿರುವ ಅತಿ ಪ್ರಾಚೀನ ಗುಹೆ 3.8 ಮೀ ಅಗಲದ ಚೌಕಾಕಾರವಾಗಿದ್ದು, ಅದರ ಒಂದು ಕೊನೆಯಲ್ಲಿ ಸರಳಾಕಾರದ ಸ್ತೂಪವನ್ನು ಕೆತ್ತಲಾಗಿದೆ. ಜುನ್ನರ್ ಮತ್ತು ಜೀವದನ್ ವಿಹಾರಗಳಲ್ಲಿ ಬೌದ್ಧ ಭಿಕ್ಷುಗಳ ವರ್ಷಾವಾಸಕ್ಕಾಗಿ ಬಹು ಚಿಕ್ಕದಾದ (ಸು. 1.8 ಮೀ, 2.1 ಮೀ) ಆಯಾಕಾರದ ಕೋಣೆಗಳನ್ನು ನಿರ್ಮಿಸಲಾಗಿದೆ. ಚಿಕ್ಕವೂ ಸರಳವೂ ಆಗಿರುವ ಈ ಕಟ್ಟಡಗಳು ಸಹಜವಾಗಿ ಹೊಸ ತಂತ್ರಜ್ಞಾನದ ಅಳವಡಿಕೆಯ ಪ್ರಾರಂಭಿಕ ಹೆಜ್ಜೆಗಳು.

ಉತ್ತರ ಭಾರತದಲ್ಲಿ ಪ್ರಚಲಿತವಾಗಿದ್ದ ಮರದ ಕಟ್ಟಡಗಳ ಸಂಪ್ರದಾಯವನ್ನು ನಿರೂಪಿಸುವ ಅತ್ಯಂತ ಪ್ರಾಚೀನ ಗುಹಾ ವಾಸ್ತು ಕೃತಿಗಳು ಪುಣೆ ಜಿಲ್ಲೆಯ ಭಾಜ, ಕೊಂಡಾನೆ, ಔರಂಗಾಬಾದ್ ಜಿಲ್ಲೆಯ ಅಜಂತ ಮತ್ತು ಪೀತಲ್‍ಖೋರಾಗಳಲ್ಲಿ ಇವೆ. ಇವುಗಳಲ್ಲೆಲ್ಲ ವಾಸ್ತು ಇತಿಹಾಸ ಕಾರರಲ್ಲಿ ವಿಶೇಷ ಗಮನ ಸೆಳೆದಿರುವುದು ಭಾಜಾದಲ್ಲಿರುವ ಚೈತ್ಯಾಲಯ. ಸು.17.70 ಮೀ ಉದ್ದ, 11.70 ಮೀ ಅಗಲವಿರುವ ಗಜಪೃಷ್ಠಾಕೃತಿಯ ತಳವಿನ್ಯಾಸ ಇರುವ ಈ ಚೈತ್ಯಾಲಯದ ಒಳ ಎತ್ತರ 9ಮೀ ಹಜಾರದ ಮಧ್ಯಭಾಗ ಆಯಾಕಾರವಿದ್ದು ಅದರ ಎರಡೂ ಕಡೆ ಕಂಬಸಾಲು ಮತ್ತು ಕಂಬ ಸಾಲಿಗೂ ಪಕ್ಕದ ಗೋಡೆಗಳಿಗೂ ಮಧ್ಯೆ ಪಕ್ಷಪಥ ಇದ್ದು ಇವೆಲ್ಲ ಹಿಂಭಾಗದಲ್ಲಿ ಅರ್ಧ ವೃತ್ತವಿನ್ಯಾಸದಲ್ಲಿ ಸೇರುತ್ತವೆ. ಮಧ್ಯದ ಹಜಾರದ ಹಿಂಬದಿಯಲ್ಲಿ ಸರಳ ಆಕಾರದ 3.6 ಮೀ ವ್ಯಾಸ ಮತ್ತು ಸುಮಾರು ಅಷ್ಟೇ ಎತ್ತರದ

ಬೃಹತ್ ಸ್ತೂಪ ಇದೆ. ಭಾಜದ ಚೈತ್ಯ ಗೃಹದ ವಾಸ್ತು ವೈಶಿಷ್ಟ್ಯವೆಂದರೆ, ಇದು ಪ್ರಾಚೀನ ಮರದ ಕಟ್ಟಡಗಳ ಪ್ರಾಮಾಣಿಕ ಅನುಕರಣೆ. ಆದರೆ ಇಲ್ಲಿಯ ಶಿಲ್ಪಿಗಳು ಶಿಲಾ ಮಾಧ್ಯಮದ ವೈಶಿಷ್ಟ್ಯ, ಗುಹಾ ವಾಸ್ತು ತಂತ್ರಜ್ಞಾನದ ಮಿತಿ–ಸಾಧ್ಯತೆಗಳನ್ನು ಅರ್ಥಮಾಡಿಕೊಂಡು ಪರಿಣಿತರಾಗುತ್ತಿದ್ದಂತೆ, ಅನಂತರದ ಕಾಲದಲ್ಲಿ ಮರದ ರಚನೆಗಳ ಅನುಕರಣೆಯನ್ನು ಕ್ರಮೇಣ ಕೈಬಿಡಲಾಯಿತು.

ಹೀಗೆ ಬೆಳೆಯುತ್ತಿದ್ದ ಗುಹಾಲಯಗಳ ರಚನಾ ಇತಿಹಾಸವನ್ನು ಅನುಕ್ರಮವಾಗಿ ಪಶ್ಚಿಮ ಭಾರತ ಪ್ರದೇಶದ ಅಜಂತದ ಹತ್ತನೆಯ ಗುಹೆ, ಪೀತಲ್‌ಖೋರಾ, ಕೊಂಡಾನೆ ಇಲ್ಲಿರುವ ಚೈತ್ಯಾಲಯಗಳು ಅನಂತರ ಅಜಂತದ ಒಂಬತ್ತನೆಯ ಗುಹೆ, ಬೇಡ್ಸ ಮತ್ತು ಕಾರ್ಲೆ ಚೈತ್ಯಾಲಯಗಳು, ಕನ್ಹೇರಿಯ ಚೈತ್ಯಾಲಯ ಇವುಗಳಲ್ಲಿ ಗುರ್ತಿಸಬಹುದು. ಈ ಘಟ್ಟಗಳಲ್ಲಿ ಇಲ್ಲಿಯ ವಾತಾವರಣ, ಅವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆ ಹೊಸ ಮಾರ್ಪಾಡುಗಳಾದವು. ಉದಾಹರಣೆಗೆ ಭಾಜ, ಪೀತಲ್‌ಖೋರ ಇತ್ಯಾದಿ ಆರಂಭ ನಿರ್ಮಿತ ಚೈತ್ಯಾಲಯದಲ್ಲಿ ತೆರೆದ ಮುಂಭಾಗ ಇರುತ್ತಿತ್ತು. ಆದರೆ, ಅಜಂತ ಒಂಬತ್ತನೆಯ ಗುಹೆಯಲ್ಲಿ ಚೈತ್ಯಾಲಯದ ಮುಂಭಾಗದಲ್ಲಿ ಒಂದು ಅಡ್ಡ ಗೋಡೆಯನ್ನು ನಿರ್ಮಿಸಿ ಅದರಲ್ಲಿ ಮಧ್ಯದ ಬಾಗಿಲನ್ನು ಎರಡೂ ಪಕ್ಕಗಳಲ್ಲಿ ಚಿಕ್ಕ ಬಾಗಿಲನ್ನೂ ನಿರ್ಮಿಸಲಾಗಿದೆ. ಅದೇ ಮುಂದೆ ಬಂದ ಬೇಡ್ಸ ಚೈತ್ಯಾಲಯದಲ್ಲಿ ಈ ಘಟಕಗಳ ಮುಂದೆ ಎರಡು ದೊಡ್ಡ ಕಂಬಗಳು ಮತ್ತು ಎರಡು ಅರೆಗಂಬಗಳ ಮೇಲೆ ಎತ್ತಿದಂತೆ ಇರುವ ಎತ್ತರವಾದ ಮುಂಚಾವಡಿಯನ್ನು ನಿರ್ಮಿಸಲಾಗಿದೆ. ಇದಕ್ಕೆ ಮುಂದಿನ ಕಾರ್ಲೆ ಚೈತ್ಯಾಲಯದಲ್ಲಿ ಇದರ ಮುಂಭಾಗದಲ್ಲಿ ಸಹ ಇನ್ನೊಂದು ಗೋಡೆಯನ್ನು ತೆರೆಯಂತೆ ನಿರ್ಮಿಸಲಾಗಿದೆ. ಅಲ್ಲದೆ ಬೇಡ್ಸ ಮತ್ತು ಕಾರ್ಲೆ ಚೈತ್ಯಾಲಯಗಳಲ್ಲಿ ಕುಂಭಪೀಠ ಅಷ್ಟಕೋನಾಕೃತಿಯ ಕಂಬ ಮೇಲೆ ಪದ್ಮದಳಗಳಿಂದ ಅಲಂಕೃತವಾದ ಕುಂಭ ಅದರ ಮೇಲೆ ಆನೆ ಅಥವಾ ಕುದುರೆಯ ಸವಾರಿಯಲ್ಲಿರುವ ದಂಪತಿಗಳು ಇತ್ಯಾದಿಗಳನ್ನು ಒಳಗೊಂಡಿರುವ ಹೊಸ ಮಾದರಿಯ ಕಂಬಗಳು ಮೊಟ್ಟಮೊದಲು ಕಾಣಬರುತ್ತವೆ. ಹೀಗೆ ಬೆಳೆದಿರುವ ಪಶ್ಚಿಮ ಭಾರತದ ಗುಹಾ ವಾಸ್ತು–ಶಿಲ್ಪದ ಸರಣಿಯಲ್ಲಿ ಪ್ರಪಂಚ ಪ್ರಸಿದ್ಧವಾಗಿರುವುದು ಕಾರ್ಲೆಯ ಚೈತ್ಯಾಲಯ. 36 ಮೀ ಉದ್ದ, 24.0 ಮೀ ಅಗಲ, 18.0 ಮೀ ಎತ್ತರವಿರುವ ಈ ಗುಹಾಲಯ ಗಜ ಪೃಷ್ಠಾಕಾರದ ವಿನ್ಯಾಸದಲ್ಲಿದ್ದು ಒಳ ಆವರಣವನ್ನು ಎರಡು ಕಂಬ ಸಾಲುಗಳಿಂದ ಮಧ್ಯದ ಹಜಾರ ಮತ್ತು ಎರಡು ಪಕ್ಕಗಳಲ್ಲಿ ಕಿರಿದಾದ ಪಕ್ಷಪಥವನ್ನಾಗಿ ವಿಂಗಡಿಸಲಾಗಿದೆ. ಈ ಕಂಬ ಸಾಲುಗಳು ಹಿಂಭಾಗದಲ್ಲಿ ಗಜ ಪೃಷ್ಠಾಕಾರ ವಿನ್ಯಾಸದಲ್ಲೇ ಕೂಡಿಕೊಳ್ಳುತ್ತವೆ. ಮಧ್ಯ ಹಜಾರದ ಹಿಂಭಾಗದಲ್ಲಿ ಎತ್ತರವಾದ ಶಿಲಾ ಸ್ತೂಪವನ್ನು ಕಂಡರಿಸಲಾಗಿದೆ. ಮೇಲ್ಛಾವಣಿ ಕಮಾನು ಆಕೃತಿಯಲ್ಲಿ ಇದ್ದು ಅಲ್ಲಿ ಕಮಾನು ಆಕೃತಿಯಲ್ಲೇ ಬಾಗುವ ಮರದ ಜಂತಿಗಳನ್ನು ಅಳವಡಿಸಲಾಗಿದೆ. ಕುಂಭಪೀಠ, ಅಷ್ಟಕೋನಾಕೃತಿಯ ಕಂಬದ ಮೇಲೆ ಪುನಃ ಕುಂಭ, ಮತ್ತು ಆನೆಯ ಮೇಲೆ ಕುಳಿತ ದಂಪತಿ ಶಿಲ್ಪಗಳಿಂದ ಅಲಂಕೃತವಾಗಿದ್ದು ಇಲ್ಲಿಯ ಒಟ್ಟಾರೆ ದೃಶ್ಯ ಮನಮೋಹಕವಾಗಿದೆ. ಸ್ತೂಪದ ಮೇಲೆ ಸು. 2 ಸಾವಿರದಷ್ಟು ವರ್ಷಗಳ ಹಿಂದೆಯೇ ನಿಲ್ಲಿಸಿದ್ದ ಮರದ ಛತ್ರಿ ಇನ್ನೂ ಇದೆ. ಮುಂಭಾಗದಲ್ಲಿ ಅಶೋಕ ಸ್ತಂಭದ ರೀತಿಯ ಸು.12.0 ಮೀ ಎತ್ತರದ ಎರಡು ಸ್ತಂಭಗಳನ್ನು ಎರಡೂ ಪಕ್ಕಗಳಲ್ಲಿ ರೂಪಿಸಲಾಗಿದೆ. ಈ ಚೈತ್ಯಾಲಯವನ್ನು ಇದು ಜಂಬೂ ದ್ವೀಪದಲ್ಲೇ ಉತ್ತಮವಾದುದು ಎಂದು ಇದರಲ್ಲಿಯ ಆ ಕಾಲದ ಒಂದು ಶಾಸನ ವರ್ಣಿಸುತ್ತದೆ. ಈ ಗುಹಾಲಯವನ್ನು ಮಾಡಿಸಿದವನು ವೈಜಯಂತಿಯ (ಕರ್ನಾಟಕ ಉತ್ತರ ಕನ್ನಡ ಜಿಲ್ಲೆಯ ಬನವಾಸಿ) ಶ್ರೇಷ್ಠಿ ಭೂತಪಾಲ ಎಂಬುವವನು. ಕಾಲ ಪ್ರ.ಶ.ಪೂ.1ನೆಯ ಶತಮಾನದ ಆರಂಭ.

ಚೈತ್ಯಾಲಯಗಳ ರೀತಿಯಲ್ಲೇ ಭಿಕ್ಷುಗಳ ಆವಾಸಗಳಾಗಿ ರೂಪಿಸುತ್ತಿದ್ದ ಲೇಣಗಳಲ್ಲಿ ಸಹ ಹೊಸ ವಿನ್ಯಾಸಗಳ ಅಳವಡಿಕೆಯನ್ನು ಕ್ರಮೇಣ ಕಾಣಬಹುದು. ನಾಸಿಕದಲ್ಲಿರುವ ಪ್ರ.ಶ.ಪೂ 2ನೆಯ ಶತಮಾನದ ಆದಿಭಾಗಕ್ಕೆ ಸೇರಿದ ಗೌತಮೀಪುತ್ರ ಸಾತಕರ್ಣಿಯ ಲೇಣ ಈ ಬೆಳವಣಿಗೆಗಳಲ್ಲಿ ಗುರ್ತಿಸಬಹುದಾದ ಒಂದು ಮುಖ್ಯ ಘಟ್ಟವನ್ನು ಸೂಚಿಸುತ್ತದೆ. ಇದರ ವಿಶೇಷವೆಂದರೆ ಇದು ವಿನ್ಯಾಸದಲ್ಲಿ, ಆಕಾರದಲ್ಲಿ ಬಹಳ ನಿಖರವಾಗಿ ಕಂಡರಿಸಲಾಗಿರುವ ಬೃಹತ್ ಲೇಣ. ಚತುಶ್ಶಾಲೆಯ ಮಾದರಿಯ ಈ ಲೇಣದ ಒಳ ಹಜಾರದಲ್ಲಿ ಹಿಂಬದಿಯ ಗೋಡೆಯ ಮೇಲೆ ಒಂದು ಸ್ತೂಪದ ಅರೆ ಉಬ್ಬು ಶಿಲ್ಪ ಸಹ ಕಂಡುಬರುತ್ತದೆ. ಈ ಹಿಂದೆ ಭಿಕ್ಷುಗಳ ವಸತಿ (ಲೇಣ) ಮತ್ತು ಪೂಜಾಗೃಹ (ಚೈತ್ಯಾಲಯ) ಇವು ಬೇರೆ ಬೇರೆಯಾಗಿ ಇರುತ್ತಿದ್ದರೆ ಈ ಗೌತಮೀಪುತ್ರ ಗುಹೆಯಲ್ಲಿ ಲೇಣದ ಒಳಗೆ ಪೂಜಾಸ್ಥಾನವನ್ನು ನಿರ್ಮಿಸಿರುವುದು ಒಂದು ವೈಶಿಷ್ಟ್ಯ. ಹೀಗೆ ಪ್ರಾರಂಭವಾದ ಕ್ರಮ ಮುಂದೆ ಅಜಂತ, ಎಲ್ಲೋರ ಇತ್ಯಾದೆಡೆಗಳಲ್ಲಿ ವಿಶಿಷ್ಟ ರೂಪವನ್ನು ತಾಳಿವೆ.

ಪಶ್ಚಿಮ ಭಾರತದ ಪ್ರದೇಶವಲ್ಲದೆ ಇದೇ ರೀತಿಯ ಪ್ರಾಚೀನ ಮಾದರಿಯ ಚೈತ್ಯಾಲಯ ಲೇಣ ವಿಹಾರಗಳು ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿರುವ ಗುಂಟುಪಲ್ಲಿಯಲ್ಲಿ ಸಹ ಕಂಡುಬಂದಿವೆ. ಆದರೆ ಇವೆಲ್ಲ ಪರಿಮಾಣದಲ್ಲಾಗಲೀ ಸೌಂದರ್ಯದಲ್ಲಾಗಲೀ ಪಶ್ಚಿಮ ಭಾರತದ ಗುಹಾಲಯಗಳಿಗೆ ಸರಿಸಾಟಿಯಾಗಿ ನಿಲ್ಲುವಂತಹವಲ್ಲ. ಆದರೆ ಗುಜರಾತ್‌ನ ಜುನಾಗಡ್‌ನಲ್ಲಿ 30ಕ್ಕೂ ಹೆಚ್ಚು ಗುಹಾಲಯಗಳು ಬೇರೆ ಬೇರೆ ಗುಂಪುಗಳಲ್ಲಿವೆ. ಕೆಲವು ಲೇಣಗಳು ವಿನ್ಯಾಸಾಲಂಕರಣಗಳಲ್ಲಿ, ಮಹಾರಾಷ್ಟ್ರದ ಗುಹಾಲಯಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ತಲಾಜ ಗುಂಪಿನಲ್ಲಿ ಎರಡು ಅಂತಸ್ತುಳ್ಳ ಒಂದು ಬೃಹತ್ ಲೇಣ ಇದೆ. ಇವೆಲ್ಲ 2–3 ನೆಯ ಶತಮಾನದಲ್ಲಿ ಶಕ ಕ್ಷತ್ರಪರ ಕಾಲದಲ್ಲಿ ರಚನೆಯಾದವು.

ಪಶ್ಚಿಮ ಭಾರತದ ಬೌದ್ಧ ಗುಹಾಲಯವನ್ನು ಹೀನಯಾನ ಮತ್ತು ಮಹಾಯಾನ ಗುಹೆಗಳೆಂದು ವಿಂಗಡಿಸಿ ಹೀನಯಾನ ಗುಹೆಗಳು ಪ್ರ.ಶ.ಪೂ. 2–1ನೆಯ ಶತಮಾನದಿಂದ 2–3 ನೆಯ ಶತಮಾನದವರೆವಿಗೂ ಮುಂದೆ ಕೆಲವು ಶತಮಾನಗಳ ಅನಂತರ ಅಂದರೆ 4–7 ನೆಯ ಶತಮಾನಗಳಲ್ಲಿ ಮಹಾಯಾನ ಗುಹೆಗಳು ರಚಿತವಾದವೆಂದೂ ಹೀನಯಾನ ಗುಹೆಗಳಲ್ಲಿ ಬುದ್ಧನ ವಿಗ್ರಹಗಳನ್ನು ಮಾಡುವ ಸಂಪ್ರದಾಯ ಇರಲಿಲ್ಲವೆಂದು ಮಹಾಯಾನ ಗುಹೆಗಳಲ್ಲಿ ಬುದ್ಧ ಅವಲೋಕಿತೇಶ್ವರ ಇತ್ಯಾದಿ ಅನೇಕ ದೇವ ದೇವತೆಗಳ ವಿಗ್ರಹಗಳು ಕಾಣುವವೆಂದು ಸಾಮಾನ್ಯವಾಗಿ ತಿಳಿಯಲಾಗಿತ್ತು. ಆದರೆ ಪಶ್ಚಿಮ ಭಾರತದ ಗುಹಾ ಬೆಳವಣಿಗೆಯನ್ನು ಆಳವಾಗಿ ಅವಲೋಕಿಸಿದಾಗ ಈ ರೀತಿಯ ವಿಂಗಡಣೆಯಾಗಲೀ ಗುಹಾ ಸಂಪ್ರದಾಯದಲ್ಲಿ ಕೆಲವು ಶತಮಾನಗಳ ವಿಚ್ಛಿನ್ನತೆ ಇತ್ತೆಂಬುದಾಗಲೀ ಸರಿಯಲ್ಲ

**7ನೆಯ ಗುಹಾಲಯದ ಬೋದಿಗೆಶಿಲ್ಪ, ಬೇಡ್ಸ**

ಎಂದು ಕಂಡುಬರುವುದು. 1–2ನೆಯ ಶತಮಾನದ ಹೊತ್ತಿಗಾಗಲೇ ಭಾರತದ ಇತರೆಡೆಗಳಲ್ಲಿ ಕಂಡುಬರುವಂತೆ ಇಲ್ಲಿಯೂ ಬುದ್ಧ ವಿಗ್ರಹ ರೂಪಣೆ ಪ್ರಾರಂಭಿಕವಾಗಿರಬೇಕು ಎಂಬುದಕ್ಕೆ ಕನ್ಹೇರಿಯ ಚೈತ್ಯಾಲಯದಲ್ಲಿ ಇರುವ ಒಂದು ಚಿಕ್ಕ ಬುದ್ಧ ವಿಗ್ರಹ ಸಾಕ್ಷಿಯಾಗಿದೆ.

5–6 ನೆಯ ಶತಮಾನದ ಹೊತ್ತಿನಲ್ಲಿ ರಚಿತವಾದ ಅಜಂತ ಸಮೀಪದ ಹರಿಶ್ಚಂದ್ರಗಢ, ಮಧ್ಯಪ್ರದೇಶದ ಬಾಘ್ ಗುಹೆಗಳು ಮುಂದೆ 7–8ನೆಯ ಶತಮಾನದಲ್ಲೂ ಮುಂದುವರೆಯುವ ಎಲ್ಲೋರದ ಮತ್ತು ಔರಂಗಾಬಾದ್‌ನ ಕೆಲವು ಗುಹೆಗಳು ಬೌದ್ಧ ಗುಹಾ ವಾಸ್ತು ಶಿಲ್ಪದ ಮುನ್ನಡೆಯನ್ನು ಸೂಚಿಸುತ್ತವೆ. ಅಜಂತದ ಗುಹೆಗಳಲ್ಲಿ ಮುಂದೆ ಮೊಗಸಾಲೆ, ಮಧ್ಯದಲ್ಲಿ ಹಜಾರ, ಹಿಂಭಾಗದಲ್ಲಿ ಬುದ್ಧ ವಿಗ್ರಹವಿರುವ ಗರ್ಭಗೃಹ, ಹಜಾರದ ಹಿಂಭಾಗ ಮತ್ತು ಪಕ್ಕದ ಗೋಡೆಗಳಲ್ಲಿ ಮಾಡಿರುವ ಭಿಕ್ಷುಗಳ ವಸತಿ ಕೋಣೆಗಳು ಇರುವುದು ಸಾಮಾನ್ಯ. ಆದರೆ ಅಜಂತ ಪ್ರಸಿದ್ಧವಾಗಿರುವುದು ಅಲ್ಲಿಯ ಶಿಲ್ಪಕಲೆ ಹಾಗೂ ಕೆಲವು ಗುಹೆಗಳಲ್ಲಿ ಇರುವ ಅಪೂರ್ವ ಸುಂದರ ಭಿತ್ತಿ ವರ್ಣಚಿತ್ರಗಳಿಂದ. ಅದರಲ್ಲೂ ಅಜಂತದ 1, 2 ಮತ್ತು 17 ನೆಯ ಗುಹೆಗಳಲ್ಲಿ ಮನಮೋಹಕವಾದ ಭಿತ್ತಿ ಚಿತ್ರಗಳು ಉಳಿದುಬಂದಿವೆ. ಇವುಗಳಲ್ಲಿ ಬುದ್ಧನ ಜೀವನ ಮತ್ತು ಜಾತಕ ಕಥೆಗಳ ನಿರೂಪಣೆ ಇವೆ. ಇವೆಲ್ಲ 5–6 ನೆಯ ಶತಮಾನಕ್ಕೆ ಸೇರಿದವು. ಇದೇ ಕಾಲಕ್ಕೆ ಸೇರಿದ ಅಜಂತಾದ 16ನೆಯ ಗುಹೆ ಹಳೆಯ ಸಂಪ್ರದಾಯದ ಗಜಪೃಷ್ಠಾಕಾರದ ವಿನ್ಯಾಸ ಹಾಗೂ ಕಮಾನಿನಾಕೃತಿಯ ಛತ್ತು ಇತ್ಯಾದಿಗಳನ್ನು ಒಳಗೊಂಡಿದೆ. ಆದರೆ ಮಧ್ಯದ ಹಜಾರದ ಹಿಂಬದಿಯಲ್ಲಿರುವ ಸ್ತೂಪದ ಮೇಲೆ ಬುದ್ಧನ ವಿಗ್ರಹವನ್ನು ಕೆತ್ತಲಾಗಿದೆ. ಸ್ತೂಪ ಕಂಬಗಳು ಮೇಲ್ಛಾವಣಿ ಮುಂಭಾಗ ಮೊಗಸಾಲೆ ಈ ಎಲ್ಲ ಭಾಗಗಳು ಶಿಲ್ಪಭರಿತವಾಗಿದ್ದು ಚೈತ್ಯಾಲಯ ಭವ್ಯವಾಗಿ ಕಾಣುತ್ತದೆ. ಮಧ್ಯ ಪ್ರದೇಶದ ಬಾಘ್ ಗುಹೆಗಳು ಸಹ ಸುಮಾರು ಇದೇ ಕಾಲದವು. ಅವು ಬಹು ಶಿಥಿಲವಾಗಿದ್ದರೂ ಇಲ್ಲಿ ಉಳಿದುಬಂದಿರುವ ಭಿತ್ತಿಚಿತ್ರಗಳಿಗಾಗಿ ಪ್ರಸಿದ್ಧವಾಗಿವೆ.

ಸು.7–8ನೆಯ ಶತಮಾನಕ್ಕೆ ಸೇರುವ ಎಲ್ಲೋರದ ಬೌದ್ಧಾಲಯಗಳು ಅಲಂಕರಣಕ್ಕಿಂತ ಹೆಚ್ಚಾಗಿ ಅವುಗಳ ಪರಿಮಾಣದಿಂದ ಗಮನ ಸೆಳೆಯುತ್ತವೆ. ಅಲ್ಲಿಯ ದೋತಲ್, ತೀನ್‌ತಲ್ ಗುಹೆಗಳು 2–3 ಅಂತಸ್ತುಗಳನ್ನು ಹೊಂದಿದ್ದು ಸು. 36 ಮೀ ವಿಸ್ತಾರವಾಗಿಯೂ ಸು. 21 ಮೀ ಎತ್ತರವಾಗಿಯೂ ಇವೆ. ಆದರೆ ಇವುಗಳಲ್ಲಿ ಹೆಚ್ಚು ಶಿಲ್ಪಾಲಂಕರಣ ಇರುವುದಿಲ್ಲ. ಎಲ್ಲೋರದಲ್ಲಿರುವ ವಿಶ್ವಕರ್ಮ ಗುಹೆ (10 ನೆಯ ಸಂಖ್ಯೆಯ ಗುಹೆ) ಒಂದು ಚೈತ್ಯಾಲಯ.

8ನೆಯ ಶತಮಾನಕ್ಕೆ ಸೇರಿದ ಈ ಚೈತ್ಯಾಲಯ ಪಶ್ಚಿಮ ಭಾರತದ ಚೈತ್ಯಾಲಯದ ನಿರ್ಮಾಣದ ಕೊನೆಯ ಸೃಷ್ಟಿ. ಔರಂಗಾಬಾದ್ ಸಮೀಪದ ಬೆಟ್ಟದ ಮೇಲೆ ಸುಮಾರು ಕ್ರಿಸ್ತಶಕಾರಂಭದ ಕೆಲವು ಗುಹೆಗಳಲ್ಲದೆ, ಸು. 7–8ನೆಯ ಶತಮಾನದಲ್ಲಿ ರಚಿತವಾದ ಕೆಲವು ಗುಹಾಲಯಗಳು ಇವೆ. ಅನೇಕ ದೇವದೇವತೆಗಳ ಶಿಲ್ಪಗಳಿರುವ ಇವು ವಜ್ರಯಾನ ಬೌದ್ಧಪಂಥಕ್ಕೆ ಸಂಬಂಧಿಸಿದವು ಎಂದು ತಿಳಿಯುತ್ತದೆ.

ಪ್ರಾಚೀನ ಕಾಲದಲ್ಲಿ ಬೌದ್ಧ–ಜೈನ ಪಂಥಗಳು ಗುಹಾ ವಾಸ್ತುಕಲೆಯನ್ನು ಬೆಳೆಸಿದ್ದು, ವಿಶೇಷವಾಗಿ ಆ ಪಂಥದ ಭಿಕ್ಷು, ಯತಿಗಳ ನಿವಾಸಸ್ಥಾನಗಳ ರಚನೆಯಲ್ಲಿ. ಆದರೆ ಕಾಲಕ್ರಮೇಣ ಅವು ಧಾರ್ಮಿಕ ಕೇಂದ್ರಗಳಾಗಿ, ಪೂಜಾ ಸ್ಥಾನಗಳಾಗಿ ಕೂಡ ಬದಲಾವಣೆಗೊಂಡವು.

ಹಿಂದು ಪಂಥಕ್ಕೆ ಸಂಬಂಧಪಟ್ಟಂತೆ ಸಹ ಕಾಲಕ್ರಮೇಣ ಗುಹಾದೇವಾಲಯಗಳು ರಚಿತವಾಗಲಾರಂಭಿಸಿದವು. ಈಗ ತಿಳಿದಿರುವಂತೆ ಅಂಥ ಅತ್ಯಂತ ಪ್ರಾಚೀನ ಹಿಂದು ಗುಹಾ ದೇವಾಲಯ ಮಧ್ಯಪ್ರದೇಶದ ಭೂಪಾಲ್‌ನಿಂದ ಸು. 60 ಕಿಮೀ ದೂರದಲ್ಲಿರುವ ಉದಯಗಿರಿ ಎಂಬಲ್ಲಿದೆ. ಶಾಸನಗಳ ಪ್ರಕಾರ ಈ ವೈಷ್ಣವ ದೇವಾಲಯದ ನಿರ್ಮಾಣ



ಬೌದ್ಧ ಚೈತ್ಯಾಲಯ, ಕಾರ್ಲೆ

4ನೆಯ ಶತಮಾನದಲ್ಲಿ ಗುಪ್ತ ಸಾಮ್ರಾಜ್ಯದ 2ನೆಯ ಚಂದ್ರಗುಪ್ತ ಕಟ್ಟಿಸಿದ್ದು. ಸಾಲಾಗಿ ಕೆಲವು ಕೋಣೆಗಳನ್ನು ಕೆತ್ತಲಾಗಿದ್ದು ಗೋಡೆಗಳ ಮೇಲೆ ವಿಷ್ಣು, ನರಸಿಂಹ, ತ್ರಿವಿಕ್ರಮ, ವರಾಹ ಮೊದಲಾದ ಅವತಾರಗಳನ್ನೂ ದ್ವಾರಪಾಲಕ ಇತ್ಯಾದಿ ಶಿಲ್ಪಗಳನ್ನೂ ಕೆತ್ತಲಾಗಿದೆ.

ಪ್ರಾಚೀನ ಹಿಂದು ದೇವಾಲಯಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವುದು ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಗುಹಾ ದೇವಾಲಯಗಳು ವಿಶಾಲವೂ ಸುಂದರವೂ ಆದ ಇವೆಲ್ಲ ಬಾದಾಮಿ ಚಳುಕ್ಯರ ಕಾಲದ 6ನೆಯ ಶತಮಾನದ ರಚನೆಗಳು. ಇವುಗಳಲ್ಲಿ ಬಹು ಪ್ರಾಚೀನವಾದುದು ಐಹೊಳೆಯಲ್ಲಿರುವ ರಾವಳಫಡಿ ಗುಹೆ. ಇದು ಚಿಕ್ಕ ಗುಹೆಯಾಗಿದ್ದರೂ ದಕ್ಷಿಣ ಭಾರತದಲ್ಲಿ ಹಿಂದು ಗುಹಾ ದೇವಾಲಯ ರಚನೆಯ ಪ್ರಥಮ ಪ್ರಯತ್ನ. ಇಲ್ಲಿ ಹಿಂಗೋಡೆಯ ಮೇಲೆ ನೆಲದಿಂದ ಚಾವಣಿಯವರೆಗೂ (2.70 ಮೀ) ಹಬ್ಬಿನಿಂತಿರುವ ನಟರಾಜ ವಿಗ್ರಹ ಬಹು ಪ್ರಭಾವಶಾಲಿ ಶಿಲ್ಪ. ಆದರೆ ಹೆಚ್ಚು ಪ್ರಸಿದ್ಧವಾಗಿರುವುವು ಇಲ್ಲಿಯ ಚಳುಕ್ಯರ ರಾಜಧಾನಿಯಾಗಿದ್ದ ಬಾದಾಮಿಯಲ್ಲಿರುವ ಮೇಣ ಬಸ್ತಿಗಳು.

ಊರಿನ ದಕ್ಷಿಣದ ಬೆಟ್ಟದ ಬೆನ್ನಲ್ಲಿ ನಾಲ್ಕು ಗುಹೆಗಳನ್ನು ಕೊರೆದು ನಿರ್ಮಿಸಲಾಗಿದೆ. ವಿನ್ಯಾಸದಲ್ಲಿ ದೊಡ್ಡ ಮಂಟಪದ ಮಾದರಿಯಲ್ಲಿ ಇವೆ. ಮುಂಭಾಗದಲ್ಲಿ ಬಾಗಿಲಾಗಲೀ ತೆರೆ ಗೋಡೆಗಳಾಗಲೀ ಇಲ್ಲ. ಮುಂಭಾಗದಲ್ಲಿ ಮೊಗಸಾಲೆ, ಅದರ ಹಿಂದೆ ಅನೇಕ ಕಂಬಗಳುಳ್ಳ ಆಯಾಕಾರದ ಸಭಾಂಗಣ, ಹಿಂಬದಿಯ ಗೋಡೆಯಲ್ಲಿ ಒಂದು ಚಿಕ್ಕ ಗರ್ಭಗೃಹ ಇವೆ. ಈ ನಾಲ್ಕರಲ್ಲಿ ಮೊದಲನೆಯದು ಶೈವ, ಎರಡು ಮೂರನೆಯದು ವೈಷ್ಣವ, ನಾಲ್ಕನೆಯದು ಜೈನ ದೇವಾಲಯ. ಈ ನಾಲ್ಕು ಗುಹೆಗಳಲ್ಲಿ ಭವ್ಯ ಶಿಲ್ಪಗಳಿವೆ. ಪ್ರಮಾಣ, ಭಾವ, ಸೌಂದರ್ಯ ಎಲ್ಲವೂ ಮೇಳೈಸಿ ಆಯಾ ದೇವತೆಗಳ ಸ್ವಭಾವ ಇತಿವೃತ್ತವನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತವೆ. ಒಂದನೆಯ ಗುಹೆಯ ಮುಂಭಾಗದಲ್ಲಿರುವ 18 ಕೈಗಳ ನಟರಾಜಮೂರ್ತಿ ಒಂದು ಗಮನಾರ್ಹ ಶಿಲ್ಪ. ಮೂರನೆಯ ಗುಹೆಯಲ್ಲಿರುವ ನರಸಿಂಹ, ವರಾಹ ಇತ್ಯಾದಿ ಬೃಹತ್ ಶಿಲ್ಪಗಳು ದಕ್ಷಿಣ ಭಾರತದ ಹಿಂದುಮೂರ್ತಿ ಶಿಲ್ಪಗಳ ಪ್ರಥಮ ನಿರ್ಮಾಣ ವೆನಿಸುತ್ತವೆ. ನಾಲ್ಕನೆಯದಾದ ಜೈನ ಗುಹೆ ಸಹ ಅದೇ ರೀತಿಯಲ್ಲಿ ಶಿಲ್ಪಾಲಂಕೃತವಾಗಿವೆ. ಇಲ್ಲಿ ಮಹಾವೀರ, ಬಾಹುಬಲಿ, ತೀರ್ಥಂಕರರು, ಯಕ್ಷಯಕ್ಷಿಯರು ಇವುಗಳ ಸಮೂಹವೇ ಇದೆ. ಇವು ಸಹ ದಕ್ಷಿಣ ಭಾರತದಲ್ಲಿ ಜೈನಮೂರ್ತಿ ಶಿಲ್ಪದ ಪ್ರಥಮ ನಿರ್ಮಾಣವೆನ್ನಬಹುದು. ಮೂರನೆಯ ಗುಹೆಯಲ್ಲಿರುವ ಒಂದು ಶಾಸನದಿಂದ ಇದನ್ನು ಬಾದಾಮಿ ಚಳುಕ್ಯ ರಾಜ ಮಂಗಳೇಶ 578ರಲ್ಲಿ ನಿರ್ಮಿಸಿದನೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಮೊದಲ ಎರಡು ಗುಹೆಗಳು ಇದಕ್ಕಿಂತ ಸ್ವಲ್ಪ ಪ್ರಾಚೀನ. ಜೈನ ಗುಹಾಲಯ ಅನಂತರದ್ದು. ದಕ್ಷಿಣ ಭಾರತದಲ್ಲಿ ಬಾದಾಮಿಯಲ್ಲಿ ಪ್ರಾರಂಭವಾದ ಹಿಂದು ಗುಹಾ ದೇವಾಲಯಗಳ ನಿರ್ಮಾಣ ಅದೇ ಬಾದಾಮಿ ಚಳುಕ್ಯರ ಆಳಿಕೆಗೆ ಒಳಪಟ್ಟಿದ್ದ ಮಹಾರಾಷ್ಟ್ರ ಪ್ರದೇಶದಲ್ಲಿ ಹೆಚ್ಚು ನಿರ್ಮಾಣಕ್ಕೆ ಕಾರಣವಾಯಿತು. ಇವುಗಳಲ್ಲಿ ಮುಖ್ಯವಾಗಿ ಹೆಸರಿಸಬೇಕಾದುದು ಮುಂಬೈ ಬಳಿಯ ಎಲಿಫೆಂಟ ದ್ವೀಪದಲ್ಲಿ ಇರುವ ಗುಹಾಲಯಗಳು ಮತ್ತು ಅಲ್ಲಿಯ ತ್ರಿಮುಖ ಬೃಹತ್ ಮಹೇಶಮೂರ್ತಿಯ ಮುಖ್ಯ ಗುಹೆ. ಇದು ಕೇವಲ ಒಂದು ವಾಸ್ತುಕೃತಿಯಲ್ಲ. ನೆರಳು–ಬೆಳಕುಗಳ ಸಂಯೋಜನೆಯನ್ನು ಪರಿಣಾಮಕಾರಿಯಾಗಿ ಸಾಧಿಸುವ ವಿನ್ಯಾಸ. ಬೃಹತ್ತಾದರೂ ಕಲಾತ್ಮಕವಾಗಿ ಅರ್ಥಪೂರ್ಣವಾಗಿ ಭಿತ್ತಿಯಂಕರಣಗಳಲ್ಲಿ ನಿರ್ಮಿಸಿರುವ ಪೌರಾಣಿಕ ಕಥಾ ಶಿಲ್ಪಗಳು, ಶಕ್ತಿಶಾಲಿ ದ್ವಾರಪಾಲಕ ವಿಗ್ರಹಗಳು, ತ್ರಿಮುಖೀ ಮಹೇಶ ಶಿಲ್ಪದ ಒಂದೊಂದು ಮುಖವೂ ಸತ್ವ ರಜಸ್ ತಮೋಗುಣಗಳನ್ನು ಬಿಂಬಿಸುತ್ತಿದ್ದು ಒಟ್ಟಾರೆಯಾಗಿ ಇದು ಶಿವನ ಸರ್ವತತ್ತ್ವಾತ್ಮಕ ಸ್ವರೂಪವನ್ನು ನಿರೂಪಿಸುವ ಅಪರೂಪ ಸುಂದರ ಶಿಲ್ಪ. ಈ ಗುಹಾ ದೇವಾಲಯ ಲಕುಲೀಶ ಶೈವಪಂಥದ ರೀತ್ಯಾ ಶಿವನ ಗುಣ ವೈಭವಗಳನ್ನು ನಿರೂಪಿಸುವ ಒಬ್ಬ ತಪಸ್ವಿ ಶಿಲ್ಪಿಯ ಅದ್ಭುತ ರಚನೆ. ಈ ಗುಹಾಲಯ ನಿರ್ಮಾಣ ಕಾಲದ ಬಗ್ಗೆ ಭಿನ್ನ ಅಭಿಪ್ರಾಯಗಳು ಇದ್ದರೂ ಇದು ಗುಹಾವಾಸ್ತುಶಿಲ್ಪದ ಬೆಳೆವಣಿಗೆಯ ದೃಷ್ಟಿಯಲ್ಲಿ ನೋಡಿದರೆ ಬಹುಶಃ 7ನೆಯ ಶತಮಾನದಲ್ಲಿ ರಚಿತವಾಗಿರಬೇಕು. ಗುಣಮಟ್ಟದಲ್ಲಿ ಇದಕ್ಕೆ ಸಾಟಿಯಾಗದಿದ್ದರೂ ಇದೇ ಮುಂಬೈಯಲ್ಲಿರುವ ಜೋಗೇಶ್ವರಿ ಈ ಕಾಲ ಘಟ್ಟಕ್ಕೆ ಸೇರಿದುದು.

ಹಿಂದು ಗುಹಾ ದೇವಾಲಯಗಳ ಬೃಹದ್ ರಚನೆಗಳು ಮತ್ತು ಹೊಸ ರೀತಿಯ ಪ್ರಯೋಗಗಳು ಕಂಡು ಬರುವುದು ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯಲ್ಲಿರುವ ಎಲ್ಲೋರದಲ್ಲಿ. ಇವೆಲ್ಲ ರಾಷ್ಟ್ರಕೂಟರ ಕಾಲದ 8–9 ನೆಯ ಶತಮಾನದ ರಚನೆಗಳು. ಈ ಎಲ್ಲ ರಚನೆಗಳಲ್ಲೂ ಒಂದಲ್ಲ ಒಂದು ರೀತಿಯ ನಾವೀನ್ಯತೆಯನ್ನು ಕಂಡರಿಸುವ ಪ್ರಯೋಗಗಳು ಕಾಣುತ್ತವೆ. ಇಲ್ಲಿಯ ರಾಮೇಶ್ವರ, ಡೂಮರ್ ಲೇಣ, ಸೀತಾಸಹಾನಿ ಇತ್ಯಾದಿಗಳು ಒಳ ಆವರಣ ಮಾತ್ರ ಇರುವ ಗುಹೆಗಳಂತೆ ಕೆತ್ತಲಾಗಿದ್ದರೂ ಇವು ಸ್ಪಷ್ಟವಾಗಿ ಗರ್ಭಗುಡಿ, ಸಭಾಂಗಣ, ಮೊಗಸಾಲೆ ಇವೆಲ್ಲವುಗಳನ್ನೊಳಗೊಂಡ ದೇವಾಲಯದಂತೆ ನಿರ್ದಿಷ್ಟ ರೀತಿಯಲ್ಲಿ ರಚನೆಗೊಂಡಿವೆ. ಈ ಎಲ್ಲ ದೇವಾಲಯಗಳಲ್ಲೂ ಬೃಹದಾಕಾರದ ಶೃಂಗಾರ ವೀರಾದಿ ನಾನಾ ರಸಗಳನ್ನು ಶಕ್ತಿಯುತವಾಗಿ ಪ್ರತಿಬಿಂಬಿಸುವ ಶಿವನ ಲೀಲೆಗಳು, ನಟರಾಜ, ವಿಷ್ಣುವಿನ ದಶಾವತಾರ, ಗಣೇಶ, ದುರ್ಗ, ಗಂಗಾ ಯಮುನಾ ಇತ್ಯಾದಿ ದೇವತಾ ಶಿಲ್ಪಗಳು ಕಂಡುಬರುತ್ತವೆ.

ಎಲ್ಲೋರದ ಹಿಂದು ದೇವಾಲಯಗಳಲ್ಲಿ ಬೃಹತ್ ಆದುದೂ ವಿಶಿಷ್ಟವಾದುದೂ ಇಲ್ಲಿಯ ಕೈಲಾಸ ದೇವಾಲಯ. ಇದರ ವೈಶಿಷ್ಟ್ಯ ಇರುವುದು ವಿನ್ಯಾಸ ಮತ್ತು ನಿರೂಪಣೆಯಲ್ಲಿ ಕಂಡುಬರುವ ನವನವೀನ ಕಲ್ಪನಾ ವಿಲಾಸದಲ್ಲಿ. ಇಲ್ಲಿ ಮಧ್ಯದಲ್ಲಿ ಸು. 45 ಮೀ ಉದ್ದ 24.0 ಮೀ ಅಗಲವಿರುವ ಬೊಡ್ಡೆ ಮಧ್ಯಭಾಗದಲ್ಲಿ ಉಳಿಯುವಂತೆ ಇದರ ಎರಡು ಪಕ್ಕಗಳಲ್ಲಿ ಸು. 81 ಮೀ ಉದ್ದ 12 ಮೀ ಅಗಲದ ಬೃಹತ್ತಾದ ಬಾವಿಯಂತಿರುವ ಕುಳಿಗಳನ್ನು ಬೆಟ್ಟದ ನೆತ್ತಿಯಿಂದ 32.10 ಮೀ ಆಳದವರೆಗೆ ತೋಡಿದ್ದಾರೆ. ಇದೇ ರೀತಿ ಹಿಂಭಾಗದಲ್ಲಿ ಇವೆರಡನ್ನೂ ಕೂಡಿಸುವಂತೆ ಸು. 45 ಮೀ ಉದ್ದ, 12.0 ಮೀ ಅಗಲದ ಕುಳಿಯನ್ನು ತೋಡಲಾಗಿದೆ. ಇವುಗಳ ಮಧ್ಯದಲ್ಲಿ ಇರುವ ಬಂಡೆಯನ್ನೇ ದೇವಾಲಯವನ್ನಾಗಿ ಕೆತ್ತಿದ್ದಾರೆ. ಇದು ಹಿಂದಿನ ಒಳ ಆವರಣ ಮಾತ್ರ ಇರುವ ಗುಹಾಲಯವಾಗಿರದೆ, ಇದರಲ್ಲಿ ಒಳ–ಹೊರ ಎಲ್ಲ ಭಾಗಗಳೂ ಶಿಲಾ ಕಟ್ಟಡ ರಚನಾ ಶೈಲಿಯಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಂತೆ ನಿರ್ಮಾಣವಾಗಿವೆ. ಇದನ್ನು ಗುಹಾ ವಾಸ್ತು–ಶಿಲ್ಪ ಎಂಬುವುದಕ್ಕಿಂತ ಏಕಶಿಲಾವಾಸ್ತು ಎಂದು ಕರೆಯುವುದು ಸಮಂಜಸವೆನಿಸುತ್ತದೆ (ಈ ರೀತಿಯ ಏಕಶಿಲಾ ವಾಸ್ತುವಿನ ಮೊದಲ ಕಿರು ಪ್ರಯೋಗಗಳು 5ನೆಯ ಶತಮಾನದಲ್ಲೇ ವಿದರ್ಭ ಪ್ರದೇಶದಲ್ಲಿ ವಾಕಾಟಕ ಅರಸನ ಕಾಲದಲ್ಲಿ ನಡೆದಿತ್ತು ಎಂದು ಈಚಿನ ಸಂಶೋಧನೆಯಿಂದ ತಿಳಿಯುತ್ತದೆ). ಇದರಲ್ಲೂ ಎರಡು ಅಂತಸ್ತುಗಳನ್ನು ಮಾಡಲಾಗಿದ್ದು ಮೇಲಿನ ಅಂತಸ್ತಿನಲ್ಲಿ ಗರ್ಭಗೃಹ, ಅಂತರಾಳ, ಸಭಾಂಗಣ, ನಂದಿಮಂಟಪ ಎಲ್ಲವನ್ನು ಕೊರೆದು ನಿರ್ಮಿಸಿರುವುದಲ್ಲದೆ ಗರ್ಭಗುಡಿಯ ಮೇಲೆ ದೊಡ್ಡ ಶಿಖರವನ್ನು ಹಾಗೂ ಸುತ್ತಲಿನ ಪರಿವಾರ ದೇವತೆಗಳ ಗುಡಿಗಳ ಮೇಲೆ ಕೂಟ ಶಿಖರಗಳನ್ನು ಕಡೆದಿದ್ದಾರೆ. ರಾಷ್ಟ್ರಕೂಟ ಅರಸ ಒಂದನೆಯ ಕೃಷ್ಣ ಇದರ ಸೃಷ್ಟಿಗೆ ಕಾರಣ. ಈ ದೇವಾಲಯ ಶಿಲ್ಪಗಳಿಂದ ಅಲಂಕೃತವಾಗಿದ್ದು ಪ್ರಪಂಚದ ವಾಸ್ತು ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದುಕೊಂಡಿದೆ.

ಇದೇ ರೀತಿಯಲ್ಲಿ ಎಲ್ಲೋರದಲ್ಲಿ ಇರುವ ನಾಲ್ಕು ಜೈನ ದೇವಾಲಯಗಳು ಸಹ ವಿನ್ಯಾಸ ಮತ್ತು ಶಿಲ್ಪಾಲಂಕಾರಗಳಿಂದ ಮನಮೋಹಕವಾಗಿವೆ. ಇವೂ ರಾಷ್ಟ್ರಕೂಟರ ಕಾಲದಲ್ಲಿ ಸು 9–10 ನೆಯ ಶತಮಾನದಲ್ಲಿ ನಿರ್ಮಾಣವಾದವು.

ಪಶ್ಚಿಮ ಭಾರತದ ಗುಹಾ ವಾಸ್ತುಶಿಲ್ಪ ಕೇಂದ್ರಗಳಲ್ಲಿ ಎಲ್ಲೋರವೇ ಮುಖ್ಯವಾದ ಕೊನೆಯ ಸಾಹಸ. ಅನಂತರ ಕೆಲವು ಚಿಕ್ಕಪುಟ್ಟ ಕೇಂದ್ರಗಳಲ್ಲಿ ಈ ಕಾರ್ಯ ಸು. 12–13ನೆಯ ಶತಮಾನದವರೆಗೆ ಮುಂದುವರೆದಿದ್ದರೂ ವಿಶೇಷವಾಗಿ ಯಾವುದೂ ಎದ್ದು ಕಾಣುವುದಿಲ್ಲ. ಆದರೂ ಪುಣೆ ನಗರದ ಮಧ್ಯದಲ್ಲೇ ಇರುವ ಪಾತಾಳೇಶ್ವರ, ಉಸ್ಮಾನಾಬಾದ್ ಜಿಲ್ಲೆಯ ಧಾರಾಸಿಂಹ, ಔರಂಗಾಬಾದ್‌ಜಿಲ್ಲೆಯ ಅಂಕೈ ತಂಕೈಯ ಜೈನ ದೇವಾಲಯ ಈ ಘಟ್ಟದ ಗುಹಾ ದೇವಾಲಯಗಳ ವಾಸ್ತುವಿನ ಪ್ರತಿನಿಧಿಯಾಗಿವೆ ಎಂದು ಸೂಚಿಸಬಹುದು.

7–8ನೆಯ ಶತಮಾನಗಳಲ್ಲಿ ತಮಿಳುನಾಡಿನ ತೊಂಡೈನಾಡು ಪ್ರದೇಶದಲ್ಲಿ ಗುಹಾ ವಾಸ್ತು–ಶಿಲ್ಪ ಹಾಗೂ ಏಕಶಿಲಾವಾಸ್ತು ರಚನೆಗಳು ಕಾಂಚಿಯ ಪಲ್ಲವರ ಪೋಷಣೆಯಲ್ಲಿ ಪ್ರಾರಂಭವಾದವು. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಚೆನ್ನೈಯಿಂದ ಸು. 40 ಕಿಮೀ

ದಕ್ಷಿಣಕ್ಕಿರುವ ಮಹಾಬಲಿಪುರಂ. ಇದು ಪಲ್ಲವರ ಕಾಲದಲ್ಲಿ ಒಂದು ಮುಖ್ಯ ಸಮುದ್ರ ಬಂದರಾಗಿತ್ತು. ಇಲ್ಲಿಯ ಕಣ ಶಿಲೆಯ ಬೃಹತ್ ಬಂಡೆಗಳಲ್ಲಿ ಅನೇಕ ಗುಹಾಲಯಗಳನ್ನು ಕೊರೆದಿದ್ದಾರೆ. ಈ ಗುಹಾಲಯಗಳಲ್ಲಿ ಹೆಚ್ಚಿನವೆಲ್ಲ ಮುಂಭಾಗ ತೆರೆದಂತಿದ್ದು ಮುಂದುಗಡೆ ಮಾತ್ರ ಒಂದು ಕಂಬ ಸಾಲು ಇರುವ ಆಯಾಕಾರದ ಮಂಟಪಗಳು. ಇದರ ಹಿಂಬದಿಯಲ್ಲಿ ಗರ್ಭಗೃಹವಿದೆ. ಪರಿಮಾಣ, ವಿನ್ಯಾಸ ಮತ್ತು ಶಿಲ್ಪಗಳಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳು ಮಾತ್ರ ಕಂಡುಬಂದರೂ ಈ ಗುಹೆಗಳನ್ನು ಮಹೇಂದ್ರವರ್ಮ ಶೈಲಿ, ರಾಜಸಿಂಹ ಶೈಲಿ ಹೀಗೆ ವಾಸ್ತುಶಾಸ್ತ್ರಜ್ಞರು ವಿಂಗಡಿಸುತ್ತಾರೆ. ಇವುಗಳಲ್ಲಿ ಮಹಿಷಾಸುರಮರ್ದಿನಿ ಗುಹೆ, ರಾಮಾನುಜ ಗುಹೆ, ತ್ರಿಮೂರ್ತಿ ಗುಹೆ ಇವು ಗಮನಾರ್ಹವಾಗಿವೆ. ಹಾಗೆಯೇ ತಿರುಚಿರಾಪಳ್ಳಿಯಲ್ಲಿರುವ ಗಣೇಶ ಗುಹೆ, ಮಹಾಬಲಿಪುರಂ ಸಮೀಪದಲ್ಲೇ ಇರುವ ದಳವನೂರು, ಸಾಳುವಂಕುಪ್ಪಂ ಗುಹೆಗಳು ಪ್ರಸಿದ್ಧವಾಗಿವೆ. ಸಾಳುವಂಕುಪ್ಪಂ ಗುಹಾ ಮುಂಭಾಗ ಹುಲಿಯ ತೆರೆದ ಬಾಯಿಯಂತೆ ನಿರ್ಮಿಸಲಾಗಿದೆ.

ಮಂಗಲೀಶನ ವಿಷ್ಣುಲಯಣ, ಬಾದಾಮಿ

ಮಹಾಬಲಿಪುರಂ ಮತ್ತಷ್ಟು ಪ್ರಸಿದ್ಧವಾಗಿರುವುದು ಅಲ್ಲಿಯ ರಥಗಳಿಂದ. ಪಂಚಪಾಂಡವರ ಹೆಸರಲ್ಲಿರುವ ಧರ್ಮರಾಯ ರಥ, ಭೀಮರಥ, ಅರ್ಜುನರಥ, ನಕುಲಸಹದೇವ ರಥ ಹಾಗೂ ದ್ರೌಪದಿಯ ರಥ ಒಂದೇ ಗುಂಪಿನಲ್ಲಿವೆ. ಇವೆಲ್ಲ ಏಕಶಿಲಾವಾಸ್ತುವಿನ ರಚನೆಗಳು. ಎಲ್ಲದರಲ್ಲೂ ಹೊರಮೈಯನ್ನು ಸ್ಪಷ್ಟವಾಗಿ ದೇವಾಲಯ ರೀತಿಯಲ್ಲಿ ಕಡೆದಿದ್ದರೂ ಇವುಗಳಲ್ಲಿ ಉಪಯೋಗಿಸಬಹುದಾದ ಒಳ ಆವರಣ ಇಲ್ಲ. ವಾಸ್ತುರಚನಾರೀತಿಯಲ್ಲಿ ಚೌಕ, ಆಯಾ ಇತ್ಯಾದಿ ರೀತಿಯ ಶಿಖರಗಳನ್ನು ಹೊಂದಿದ್ದು ಪ್ರತಿಯೊಂದೂ ಒಂದಕ್ಕಿಂತ ಒಂದು ಭಿನ್ನವಾಗಿವೆ. ಒಂದೊಂದೂ ಆ ಕಾಲದಲ್ಲಿ ಪ್ರಚಲಿತವಾಗಿದ್ದ ದೇವಾಲಯ ವಾಸ್ತುರೀತಿಗಳ ಮಾದರಿಯಂತೆ ಕಾಣುತ್ತವೆ. ಈ ಪಂಚಪಾಂಡವ ರಥಗಳಲ್ಲದೆ ಇನ್ನು ಎರಡು ರಥಗಳು ಸಹ ಮಹಾಬಲಿಪುರಂನಲ್ಲಿ ಇವೆ. ಇದಲ್ಲದೆ ಮಹಾಬಲಿಪುರಂನಲ್ಲಿರುವ ಬಯಲ ಬಂಡೆಯ ಮೇಲಿನ ಗಂಗಾವತರಣ ಮತ್ತು ಗೋವರ್ಧನಗಿರಿಧಾರಿಯ ಉಬ್ಬುಶಿಲ್ಪಗಳು ಬೃಹತ್ ರಚನೆಗಳೂ ಆಕರ್ಷಕವಾಗಿವೆ.

ತೊಂಡೈನಾಡಿನಲ್ಲಿ ಪ್ರಾರಂಭವಾದ ಗುಹಾವಾಸ್ತುಶೈಲಿ ಮುಂದೆ ಪಾಂಡ್ಯನಾಡಿನಲ್ಲಿ ಪ್ರಚಾರಕ್ಕೆ ಬಂದಿತು. ಮಧುರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವು ಗುಹಾ ಹಾಗೂ ಏಕಶಿಲಾದೇವಾಲಯಗಳು ಇವೆ. ಇವುಗಳಲ್ಲಿ ಪುದುಕೋಟೈ ಬಳಿ ಇರುವ ಸಿತ್ತನವಾಸಲ್ ಗುಹೆ ಸು. 7–8 ನೆಯ ಶತಮಾನದ್ದು. ಇದು ಸರಳ ರಚನೆಯಾಗಿದ್ದು ಇದರ ಗೋಡೆಗಳ ಮೇಲೆ ಆ ಕಾಲದ ವರ್ಣಚಿತ್ರಗಳು ಇನ್ನೂ ಉಳಿದು ಬಂದಿವೆ. ಮಧುರೆ ಪ್ರದೇಶದ ಕಳುಗುಮಲೈ ಎಂಬಲ್ಲಿರುವ ವೇಟ್ಟುವನ್ ಕೋಯಿಲ್ ಪಾಂಡ್ಯ ಮಂಡಲದ ಏಕಶಿಲಾ ವಾಸ್ತುವಿಗೆ ಒಳ್ಳೆಯ ಉದಾಹರಣೆ. ದ್ರಾವಿಡ ಶೈಲಿಯ ದೇವಾಲಯಗಳಂತೆ ಇದನ್ನು ಕಡೆದಿದ್ದರೂ, ಇದರಲ್ಲಿ ಎಲ್ಲೋರಾದ ಕೈಲಾಸದ ರಚನಾ ಪ್ರಭಾವವನ್ನು ಗುರುತಿಸಬಹುದು.

ಗುಹಾ ವಾಸ್ತು–ಶಿಲ್ಪ ರಚನೆಗೆ ಆಶ್ರಯವಾದದ್ದು ಶಿಲಾಶ್ರೇಣಿಗಳು ಹಬ್ಬಿರುವ ಭೂಪ್ರದೇಶ. ಅದರಲ್ಲೂ ಸುಲಭವಾಗಿ ಕೊರೆಯಬಹುದಾದ ಹಾಗೂ ಶಾಶ್ವತವಾಗಿ ಉಳಿದುಬರಬಲ್ಲ ಶಿಲಾವರ್ಗಗಳಲ್ಲಿ ಈ ಪ್ರಯತ್ನಗಳು ಕಾಣುತ್ತವೆ. ಈ ದೃಷ್ಟಿಯಿಂದ ನೋಡಿದರೆ ಸಹಜವಾಗಿ ಇಡೀ ಉತ್ತರ ಭಾರತ ಗುಹಾ ವಾಸ್ತು ರಚನೆಗೆ ತಕ್ಕುದಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಗುಹಾ ವಾಸ್ತು–ಶಿಲ್ಪ ರಚನೆಗಳು ಕಂಡುಬರುವುದಿಲ್ಲ. ಹೀಗಿದ್ದರೂ ಹಿಮಾಲಯದ ಗಡವಾಲ್ ಮತ್ತು ಹಿಮಾಚಲ ಪ್ರದೇಶದ ಭಾಗಗಳಲ್ಲಿ ಕೆಲವು ಪ್ರಯತ್ನಗಳು ನಡೆದಿದ್ದರೂ ಅಲ್ಲಿಯ ಶಿಲೆ ಬಹಳ ಶಿಥಿಲವಾದದ್ದರಿಂದ ಯಾವುವೂ ಸರಿಯಾಗಿ ಉಳಿದುಬಂದಿಲ್ಲ. ಉತ್ತರ ಭಾರತದಲ್ಲಿ ವಿಶಿಷ್ಟವಾಗಿ ಎದ್ದು ಕಾಣುವ ಒಂದು ಗುಂಪು ರಾಜಸ್ತಾನದಲ್ಲಿ ಕೋಟ ನಗರದಿಂದ ಸು. 125 ಕಿಮೀ ದಕ್ಷಿಣದಲ್ಲಿರುವ ಧಮ್ನಾರ್ ಎಂಬಲ್ಲಿದೆ. ಇವು ಎರಡು ಕಾಲ ಘಟ್ಟಗಳಲ್ಲಿ ರಚಿತವಾದವು. ಮೊದಲನೆಯ ಗುಂಪು ಬೌದ್ಧ, ಸು. 3–7 ನೆಯ ಶತಮಾನಕ್ಕೆ ಸೇರಿದವು. ಎರಡನೆಯದು ಎಲ್ಲೋರದ ಕೈಲಾಸದ ಮಾದರಿಯಲ್ಲೇ ಕಂಡರಿಸಲಾಗಿರುವ ವಿಷ್ಣು ದೇವಾಲಯ. ಇದು ಎಲ್ಲೋರದಷ್ಟು ದೊಡ್ಡದಲ್ಲವಾದರೂ ರಚನಾ ತಂತ್ರದಲ್ಲಿ ಅದನ್ನೇ ಹೋಲುತ್ತದೆ. ಆದರೆ ಇಲ್ಲಿಯ ದೇವಾಲಯ ಉತ್ತರ ಭಾರತದ ರೇಖಾನಾಗರದ ರೀತಿಯದು ಕಾಲ ಸು.10ನೆಯ ಶತಮಾನ. ಮಧ್ಯ ಪ್ರದೇಶದ ಗ್ವಾಲಿಯರ್ ನಗರದಲ್ಲೇ ಇರುವ ಬೆಟ್ಟದಲ್ಲಿ ಕೆಲವು ಗುಹಾಲಯಗಳಿವೆ. ಇವು ವಿಶೇಷವಾದ ವಾಸ್ತುರಚನೆಗಳಾಗಿರದೆ ಬಂಡೆಯಲ್ಲಿ ಕೊರೆದ ಸಾಮಾನ್ಯ ಆವರಣಗಳು. ಇವೆಲ್ಲ ಜೈನ ಸು. 8–15ನೆಯ ಶತಮಾನಕ್ಕೆ ಸೇರುವ ಈ ಗುಹೆಗಳಲ್ಲಿ ಅನೇಕ ತೀರ್ಥಂಕರರ ವಿಗ್ರಹಗಳನ್ನು ಕೆತ್ತಲಾಗಿದೆ. ಈ ಶಿಲಾ ಕೆತ್ತನೆಗಳಲ್ಲಿ ಗಮನ ಸೆಳೆಯುವಂತಹದು ಗ್ವಾಲಿಯರ್ ಕೋಟೆಯ ಉರ್ವೈದ್ವಾರದ ಬಳಿ ಬಂಡೆಯ ಮೇಲೆ ಕೆತ್ತಿರುವ 17.10 ಮೀ ಎತ್ತರದ ಆದಿನಾಥ ತೀರ್ಥಂಕರನ ಉಬ್ಬು ಶಿಲ್ಪ.

ಗುಹಾ ವಾಸ್ತು–ಶಿಲ್ಪ ಸಂಪ್ರದಾಯದ ಈ ಅಂತಿಮಘಟ್ಟ ಸು. 12–13ನೆಯ ಶತಮಾನ ಎಂದು ಹೇಳಬಹುದು. ಆದರೆ ಈ ಅನಂತರದ ಕಾಲದಲ್ಲೂ ಇತ್ತೀಚೆಗೆ 18–19ನೆಯ ಶತಮಾನದವರೆಗೂ ಬಂಡೆಗಳನ್ನು ಕೊರೆದು ಆವರಣಗಳಲ್ಲಿ ನಿರ್ಮಿಸುವ ಕೆಲಸ ಕರ್ನಾಟಕ, ತಮಿಳುನಾಡು, ಆಂಧ್ರ ಈ ಪ್ರದೇಶಗಳಲ್ಲಿ ಅಲ್ಲಲ್ಲಿ ಕಂಡುಬರುವುದುಂಟು. ಆದರೆ ಇವುಗಳು ವಿನ್ಯಾಸದಲ್ಲಾಗಲಿ, ಸೌಂದರ್ಯದಲ್ಲಾಗಲಿ ಯಾವ ವೈಶಿಷ್ಟ್ಯ ಇಲ್ಲದ ಬಹಳ ಸರಳ ಅಥವಾ ಅರೆಬರೆ ರಚನೆಗಳು. ಇಂಥ ರಚನೆಗಳು ಕರ್ನಾಟಕದ ಗವಿ ರಂಗಾಪುರ, ಆಂಧ್ರದ ಸಿಂಗರಾಯಕೊಂಡ ಮೊದಲಾದೆಡೆ ಕಾಣುತ್ತವೆ. (ಎಸ್.ಎನ್.)

**ಗುಹಿಲರು:** ಉತ್ತರಭಾರತದ ರಾಜಸ್ತಾನ, ಪಂಜಾಬ್ ಮತ್ತು ಕಾಠಿಯವಾಡ ಪ್ರದೇಶಗಳನ್ನು ಆಳಿದ ಒಂದು ರಾಜವಂಶ. ಈ ವಂಶದವರನ್ನು ಗುಹಿಲಪುತ್ರರು, ಗುಹಿಲೋತರು, ಗುಹಿಲೋಟರು, ಗೋಭಿಲಪುತ್ರರು, ಗುಹಿಲಗೋತ್ರರು ಎಂದೂ ಈ ವಂಶವನ್ನು ಗುಹಿಲಾಂಗಜ, ಗೆಹಲೊಟ ಎಂದೂ ಕರೆಯಲಾಗಿದೆ. ಇವರ ಚರಿತ್ರೆಯ ಪ್ರಾರಂಭದ ಪುಟಗಳು ಇನ್ನೂ ಅನೇಕ ವಿವಾದಯುತ ವಿಷಯಗಳಿಂದಲೇ ಕೂಡಿವೆ. ವಿಕ್ರಮ ಸಂವತ್ 1034ರಲ್ಲಿದ್ದ (977) ಈ ವಂಶದ ಅರಸನಾದ ಶಕ್ತಿಕುಮಾರನ ಆತಪುರ ಶಾಸನದಿಂದ ಇವರು ಮೂಲತಃ ಆನಂದಪುರದ ವಿಪ್ರಕುಲದವರೆಂದು ಮತ್ತು ಶ್ರೀಗುಹದತ್ತ ಈ ವಂಶದ ಮೊದಲ ರಾಜನೆಂದು ತಿಳಿದುಬಂದಿದೆ. ಇವರು ಸೂರ್ಯವಂಶದವರೆಂದೂ ರಾಮನ ವಂಶದವರೆಂದೂ ರಾಜಸ್ತಾನದ ಜನಪದ ಗೀತೆ ಹಾಗೂ ಕಥಾನಕಗಳಿಂದ ತಿಳಿದುಬರುತ್ತದೆ. ಇವರು ಮೇವಾಡ ಸಂಸ್ಥಾನದ ಅಧಿಪತಿಗಳಾಗಿದ್ದರು. ಆದರೆ ಪ್ರಾರಂಭದಲ್ಲಿ ಇವರು ಚಿತ್ತೋಡ (ಚಿತೋಡಗಡ), ಮೌರ್ಯ(ಮೋರಿ) ರಾಜರ, ಕನೌಜದ ಪ್ರತಿಹಾರರ, ಅಣಿಹಲ ಪಟ್ಟಣದ ಚಾಳುಕ್ಯರ, ಮಾಲವದ ಪರಮಾರರ ಮತ್ತು ಶಾಕಂಬರಿಯ ಚಾಹಮಾನರ ಮಾಂಡಲಿಕರಾಗಿದ್ದರು. ಈ ಚಾಳುಕ್ಯ, ಪರಮಾರ ಮತ್ತು ಚಾಹಮಾನರ ಸಾರ್ವಭೌಮತ್ವ ಗುಹಿಲವಂಶಜರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿತ್ತು. ಬಿಜಾಪುರ(ರಾಜಸ್ತಾನ) ಶಾಸನದಿಂದ ಪರಮಾರ ಮುಂಜ, ಚಿರವಾ ಶಾಸನದಿಂದ ಪರಮಾರ ಭೋಜ ಮತ್ತು ಚಿತ್ತೋಡ ಶಾಸನದಿಂದ ಚಾಳುಕ್ಯ ಕುಮಾರಪಾಲ ಇವರು ಈ ಪ್ರದೇಶಕ್ಕೆ ಒಡೆಯರಾಗಿದ್ದರೆಂಬುದು ಸ್ಪಷ್ಟವಿದೆ. ಪೃಥ್ವೀರಾಜ ವಿಜಯ ಗ್ರಂಥದಿಂದ ಚಾಹಮಾನರ 2ನೆಯ ವಾಕ್ಪತಿ ರಾಜನ ಕಾಲಕ್ಕೆ ಗುಹಿಲರ ರಾಜ್ಯ ಚಾಹಮಾನರ ಅಧೀನತೆಗೊಳಗಾಗಿತ್ತೆಂದು ತಿಳಿದುಬರುತ್ತದೆ. ಪೃಥ್ವೀರಾಜನ ತರುವಾಯ ಮುಸಲ್ಮಾನ ರಾಜರ ಕಾಲದಲ್ಲಿ ಇವರು ವಿಶೇಷ ಪ್ರಸಿದ್ಧಿ ಪಡೆದರು. ಗುಹಿಲವಂಶದ ಬಳ್ಳಿ ಅನೇಕ ಮನೆತನಗಳಾಗಿ ಹಬ್ಬಿಕೊಂಡು ಬೆಳೆದಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ : 1. ಮೇದಾಪಾಟದ (ಮೇವಾಡ) ಗುಹಿಲಪುತ್ರರದು 2. ಚಟ್ಸು ಮತ್ತು ದಬೋಕದ ಗುಹಿಲಪುತ್ರರದು 3. ಸೌರಾಷ್ಟ್ರದ ಗುಹಿಲಪುತ್ರರದು 4. ಆಸಿಕದ ಗುಹಲಪುತ್ರರದು 5. ನಡೂಲಡಾಗಿಕದ ಗುಹಿಲಪುತ್ರರದು 6. ಸೆಸೋದಿಯಾದ ಗುಹಿಲಪುತ್ರರದು ಮತ್ತು 7. ದುಂಗಪುರ ಹಾಗೂ ವಾಗ್ದಾದ ಗುಹಿಲಪುತ್ರರದು. ಇವುಗಳಲ್ಲಿ ಮೇವಾಡದ ಮನೆತನವೇ ಮೂಲ ಹಾಗೂ ಮುಖ್ಯವಾದದ್ದು. ನಾಗಹ್ರದ, ಚಿತ್ತೋಡ, ಆತಪುರ (ಆಹರ)– ಇವು ಇವರಿಗೆ ರಾಜಧಾನಿಗಳಾಗಿದ್ದವು.

ಪ್ರಾರಂಭದಲ್ಲಿ ಆಳಿದ ರಾಜರ ವಿಷಯ ಆತಪುರ ಶಾಸನದಿಂದ ಈ ರೀತಿ ತಿಳಿದು ಬರುತ್ತದೆ: ಗುಹದತ್ತ–ಭೋಜ–ಮಹೇಂದ್ರ I –ನಾಗ–ಶೀಲ–ಅಪರಾಜಿತ–ಮಹೇಂದ್ರ I –ಕಾಲಭೋಜ–ಖೊಮ್ಮಾಣ I–ಭರ್ತೃಪಟ್ಟ I–ಸಿಂಹ–ಖೊಮ್ಮಾಣ II – ಮಹಾಯಕೋ – ಖೊಮ್ಮಾಣ III–(936) –ಭರ್ತೃಪಟ್ಟ II – ಅಲ್ಲಟ (951) – ನರವಾಹನ (971)– ಶಾಲಿವಾಹನ–ಶಕ್ತಿಕುಮಾರ (977). ಶಕ್ತಿಕುಮಾರನಿಗೆ ಮೇವಾಡರಾಷ್ಟ್ರದ ಆತಪುರ ರಾಜಧಾನಿಯಾಗಿತ್ತು. ತತ್ಪೂರ್ವದಲ್ಲಿ ಚಿತ್ತೋಡ ರಾಜಧಾನಿಯಾಗಿತ್ತು. ಈ ಅರಸರಲ್ಲಿ ಬಾಪ್ಪನೆಂಬವನು ಬಹಳ ಪ್ರಸಿದ್ಧಿ ಹೊಂದಿದ್ದಾನೆ. ಬಾಪ್ಪನನ್ನು ಗುರುತಿಸುವುದು ಉಪಲಬ್ಧ ಸಾಮಗ್ರಿಯಿಂದ ಸಾಧ್ಯವಿಲ್ಲ. ಏಕೆಂದರೆ ಇವರಲ್ಲಿ ಗುಹದತ್ತನನ್ನು ಬಾಪ್ಪನೆಂದು, ಸಿ.ವಿ. ವೈದ್ಯರು ಕಾಲಭೋಜನನ್ನು ಬಾಪ್ಪನೆಂದು, ಜಿ.ಎಚ್. ಓಝಾ ಮತ್ತು 1ನೆಯ ಖೊಮ್ಮಾಣನನ್ನು ಬಾಪ್ಪನೆಂದು ಡಿ. ಆರ್. ಭಂಡಾರ್ಕರ್ – ಹೀಗೆ ಭಿನ್ನಭಿನ್ನವಾಗಿ ಗುರುತಿಸಿದ್ದಾರೆ. 1ನೆಯ

ಖೊಮ್ಮಾಣನ ಕಾಲಕ್ಕೆ ಅರಬರು ಮೇವಾಡದವರೆಗೆ ಬರಲು ಅವರನ್ನು ಹಿಂದಕ್ಕೆ ಅಟ್ಟಿದುದರಿಂದ ಆತನನ್ನೇ ಬಾಪ್ಪನೆಂದು ಜನ ಕರೆದಿರಬಹುದು ಮತ್ತು ಖೊಮ್ಮಾಣ ರಾಸೊ ಗ್ರಂಥ ಆತನ ಪ್ರಶಸ್ತಿಯನ್ನು ಸೂಚಿಸುತ್ತದೆಂಬುದು ಭಂಡಾರ್ಕರರ ಅಭಿಪ್ರಾಯ. ಇದು ಗಮನಾರ್ಹವಾದದ್ದು.

ಅಲ್ಲಟನ ಕಾಲದ ಪ್ರಾರಂಭದಲ್ಲಿ ಮೇವಾಡ ಗೂರ್ಜರ ಪ್ರತಿಹಾರರ ಅಧೀನದಲ್ಲಿತ್ತು. ಇವನು ಅದನ್ನು ಅವರಿಂದ ಪ್ರತಿಹಾರರ ದೇವಪಾಲನ ಕಾಲದಲ್ಲಿ ಸ್ವತಂತ್ರವನ್ನಾಗಿ ಮಾಡಿದ. ಇವನ ಕಾಲದಲ್ಲಿ ಮೇವಾಡ ಸಂಪತ್‌ಸಮೃದ್ಧಿಯಿಂದ ಕೂಡಿತ್ತೆಂದು ಸಾರಣೇಶ್ವರ ಶಿಲಾಶಾಸನದಿಂದ ತಿಳಿದುಬರುತ್ತದೆ. ಮುಂದೆ ಅಂಬಾಪ್ರಸಾದನ ಕಾಲಕ್ಕೆ ಇವರ ರಾಜ್ಯ ಚಹಮಾನ 2ನೆಯ ವಾಕ್ಪತಿರಾಜನ ಹಸ್ತಗತವಾಯಿತು. ಅನಂತರ ಮೇವಾಡ ಸ್ವಲ್ಪ ಅರಾಜಕತೆಗೆ ಒಳಗಾಯಿತು.

ಸು.1108–16ರ ಸಮಯಕ್ಕೆ ವಿಜಯಸಿಂಹನೆಂಬವನು ರಾಜ್ಯವಾಳುತ್ತಿದ್ದ ಬಗ್ಗೆ ತಿಳಿದುಬಂದಿದೆ. ಇವನಿಗೆ ರಾಣಿಯಾದ ಶಾಮಲದೇವಿಯ ಹೊಟ್ಟೆಯಲ್ಲಿ ಹುಟ್ಟಿದ ಅಲ್ಹಣದೇವಿಯೆಂಬ ಮಗಳಿದ್ದಳು. ಆಕೆಯನ್ನು ಕಳಚುರಿಯಕರ್ಣನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಸು. 1168ರಲ್ಲಿದ್ದ ರಣಸಿಂಹನ ಇಬ್ಬರು ಮಕ್ಕಳಾದ ಕ್ಷೇಮಸಿಂಹ ಮತ್ತು ರಾಹಪ ಇವರಿಂದ ಈ ಮನೆತನ ಎರಡಾಯಿತು. ಕ್ಷೇಮಸಿಂಹನ ವಂಶಜರು ರಾವಲ ಎಂದೂ ರಾಹಪನ ವಂಶಜರು ರಾಣಾ ಎಂದೂ ಪ್ರಸಿದ್ಧರಾದರು. ರಾಹಪನ ಮನೆತನದವರನ್ನು ಸೆಸೋದಿಯಾ ಮನೆತನದವರೆಂದೂ ಹೇಳಲಾಗುತ್ತದೆ. ಕ್ಷೇಮಸಿಂಹನಿಗೆ ಸಾಮಂತಸಿಂಹ ಮತ್ತು ಕುಮಾರಸಿಂಹ ಎಂಬ ಇಬ್ಬರು ಮಕ್ಕಳಿದ್ದರು. ಚಹಮಾನ ಕುಮಾರಪಾಲ ಮೇವಾಡವನ್ನು ಆಕ್ರಮಿಸಲು ಸಾಮಂತಸಿಂಹ ದುಂಗರಪುರ ಪ್ರದೇಶಕ್ಕೆ ಹೋಗಿ ಬನ್ಸವಾರದಲ್ಲಿ (ವಾಗ್ದಾ) ನೆಲಸಿದ. ಮುಂದೆ ದುಂಗರಪುರದ ವಂಶ ಬೇರೆಯಾಗಿ ಬೆಳೆಯಿತು. ಆದರೆ ಸಾಮಂತಸಿಂಹನ ತಮ್ಮ ಕುಮಾರಸಿಂಹ ಚಹಮಾನರನ್ನು ಸೋಲಿಸಿ ಮೇವಾಡಕ್ಕಧಿ ಪತಿಯಾದ. ಇವನ ಮೊಮ್ಮಗನಾದ ಚೈತ್ರಸಿಂಹನ ಕಾಲಕ್ಕೆ (1213–56) ಗುಲಾಮಸಂತತಿಯ ಬಾದಶಹನಾದ ಇಲ್ತುಮಷ್ ಈ ರಾಜ್ಯದ ಮೇಲೆ ಧಾಳಿಮಾಡಿದ್ದ. ಈತನ ಅನಂತರ ತೇಜಸಿಂಹ, ಸಮರಸಿಂಹ ಮತ್ತು ರತನಸಿಂಹ ರಾಜ್ಯವನ್ನಾಳಿದರು.

ರತನಸಿಂಹನ ಕಾಲಕ್ಕೆ ಅಲಾವುದ್ದೀನ್ ಖಿಲ್ಜಿ ರಾಜ್ಯದ ವಿಸ್ತರಣಕ್ಕೋ ರತನಸಿಂಹನ ಪತ್ನಿ ಪದ್ಮಿನಿಯ ಮೇಲಿನ ಮೋಹಕ್ಕೋ ಚಿತ್ತೋಡದ ಮೇಲೆ ಧಾಳಿ ಮಾಡಿ ಆ ದುರ್ಗವನ್ನು ವಶಪಡಿಸಿಕೊಂಡ. ಅಲಾವುದ್ದೀನನ ಧಾಳಿಯ ಬಗ್ಗೆ ಅಮೀರ್ ಖುಸ್ರು, ಬಾರನೀ– ಇವರು ಒಬ್ಬೊಬ್ಬರು ಒಂದೊಂದು ಬಗೆಯ ಅಭಿಪ್ರಾಯಗಳನ್ನು ಬರೆದಿದ್ದಾರೆ. ಇಬ್ಬರೂ ಸಮಕಾಲೀನರೇ ಆಗಿದ್ದುದರಿಂದ ಈ ವಿಷಯ ಹೀಗೆ ಎಂದು ಸದ್ಯದಲ್ಲಿ ಹೇಳುವಂತಿಲ್ಲ. ಅಲಾವುದ್ದೀನ ಚಿತ್ತೋಡವನ್ನು 1303ರಲ್ಲಿ ವಶಪಡಿಸಿಕೊಂಡ. ಅದಕ್ಕೆ ಖಿಜ಼ರಾಬಾದ್ ಎಂದು ಹೆಸರಿಟ್ಟು ಆ ಪ್ರಾಂತದ ಆಡಳಿತವನ್ನು ತನ್ನ ಪುತ್ರ ಖಿಜ಼ರ್‌ಖಾನನಿಗೆ ವಹಿಸಿಕೊಟ್ಟ. ದಬ್ಬಾಳಿಕೆ, ಗೊಂದಲಗಳು ಹೆಚ್ಚಾಗಲು ಖಿಜ಼ರ್‌ಖಾನನಿಂದ ರಾಜ್ಯಾಡಳಿತವನ್ನು ರಜಪೂತ ಸೋನಿಗರ ವಂಶದ ಮಾಲದೇವನಿಗೆ ವಹಿಸಿಕೊಟ್ಟ. ಮುಂದೆ ಕೆಲವು ವರ್ಷಗಳಲ್ಲಿ ರತನಸಿಂಹನ ವಂಶದವನೇ ಆದ, ರಾಹಪನ ಸೆಸೋದಿಯ ಮನೆತನದ ರಾಣಾ ಹಮೀರ್ ಹಾಗೂ ಆತನ ಪುತ್ರ ಕ್ಷೇತ್ರಸಿಂಹ ಇವರು ಚಿತ್ತೋಡವನ್ನು ಪುನಃ ಗೆದ್ದುಕೊಂಡರು. ಈ ತಂದೆ ಮಕ್ಕಳ ರಾಜ್ಯ ಮೇವಾಡಕ್ಕೆ ಮತ್ತೆ ಸುಕಾಲವನ್ನು ತಂದಿತು. ಸಂಪತ್‌ಸಮೃದ್ಧಿಯಿಂದ ಜನ ಸಂತೋಷಭರಿತರಾದರು. ಪುನರುಜ್ಜೀವನ ಹೊಂದಿದ ಮೇವಾಡದ ವೈಭವ ಕ್ಷೇತ್ರಸಿಂಹನ ತರುವಾಯ ರಾಜ್ಯವಾಳಿದ ಲಾಖ ಮತ್ತು ಮೋಕಲ್– ಇವರ ಸಮಯದಲ್ಲಿ ಸ್ಥಿರವಾಯಿತು. ಮುಂದೆ ಮಹಾರಾಣಾ ಕುಂಭನ ಕಾಲಕ್ಕೆ ಅದು ಇನ್ನಷ್ಟು ವರ್ಧಮಾನವಾಯಿತು. ಆತ ಮುಸಲ್ಮಾನರ ಹಸ್ತಗತವಾಗಿದ್ದ ಅನೇಕ ರಜಪೂತ ರಾಜ್ಯಗಳನ್ನು ಮತ್ತೆ ಗೆದ್ದುಕೊಂಡ. ಹೀಗೆ ಆತನ ಆಡಳಿತಕ್ಕೊಳಪಟ್ಟ ರಾಜ್ಯಗಳೆಂದರೆ; ಬುಂದೇಲ್‌ಖಂಡ, ಮಾಂಡಲಗಡ, ಶಾಗರೋನ್, ಸಾರಂಗಪುರ, ಚಾಟುಸ್, ರಣಥಂಭೋರ್, ಖಾಟೂ, ಅಜಮೇರ್ ಮತ್ತು ನಾಗೋರ್. ಹಿರಿಮೆಗರಿಮೆಗಳ ಕುರುಹಾಗಿ ಆತನ ವಿಜಯ ಸ್ತಂಭ ಚಿತ್ತೋಡದಲ್ಲಿ ಇಂದಿಗೂ ನಿಂತಿದೆ. ಕುಂಭಸಿಂಹ ಶೂರನೂ ಧೀರನೂ ರಸಿಕನೂ ಕಲಾಪ್ರಿಯನೂ ಆಗಿದ್ದ. ಈತನ ಮೊಮ್ಮಗನೇ ರಾಣಾ ಸಾಂಗ.

ರಾಣಾ ಸಾಂಗನ ಮೂಲ ಹೆಸರು ರಾಣಾ ಸಂಗ್ರಾಮಸಿಂಹ. ಇವನು ಗುಜರಾತ್ ಹಾಗೂ ಮಾಲವದ ಸುಲ್ತಾನರನ್ನು ಸೋಲಿಸಿದ. ದಿಲ್ಲಿಯ ಸುಲ್ತಾನ ಇಬ್ರಾಹಿಂ ಲೋದಿಯನ್ನು ಹತ್ತಿಕ್ಕಿದ. ಇವನ ಕಾಲದಲ್ಲಿ ಮೊಗಲರ ಮೂಲಪುರುಷನಾದ ಬಾಬರ್ ಭಾರತದ ಮೇಲೆ ದಂಡೆತ್ತಿಬಂದ. ಬಾಬರ್ ಹಾಗೂ ರಾಣಾ ಸಾಂಗಾ ಇವರ ಮಧ್ಯೆ ಖಾನುವ ಎಂಬ ಸ್ಥಳದಲ್ಲಿ ಯುದ್ಧ ಜರುಗಿತು. ಇದರಲ್ಲಿ ರಾಣಾ ಸೋತ. ಈ ಸೋಲಿನಿಂದ ರಜಪೂತ ರಾಜ್ಯದ ಮೇಲೆ ಅಳಿಸಲಾಗದ ಪರಿಣಾಮವುಂಟಾಯಿತು. 1568ರಲ್ಲಿ ಅಕ್ಬರನ ಕಾಲಕ್ಕೆ ಮೊಗಲರು ಮೇವಾಡವನ್ನು ಪೂರ್ತಿ ಗೆದ್ದುಕೊಂಡರು. ಈ ಸಮಯದಲ್ಲಿ ರಾಜನಾಗಿದ್ದ ರಾಣಾ ಪ್ರತಾಪ ಚಿತ್ತೋಡ ಹಾಗೂ ಉದಯಪುರಗಳನ್ನು ಬಿಟ್ಟು ಭಿಲ್ಲರ ಸೈನ್ಯವನ್ನು ಕಟ್ಟಿಕೊಂಡು ಕಾಡುಮೇಡುಗಳಲ್ಲಿ ಅಲೆಯುವ ಪ್ರಸಂಗ ಬಂದರೂ ಮೊಗಲರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲಿಲ್ಲ; ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಿಲ್ಲ. ಈತ ಪ್ರಾರಂಭದಲ್ಲಿ ಕಷ್ಟಪಟ್ಟರೂ ಕಳೆದುಕೊಂಡ ರಾಜ್ಯದ ಎಷ್ಟೋ ಭಾಗವನ್ನು ಪುನಃ ಗೆದ್ದುಕೊಂಡ. ರಾಣಾ ಪ್ರತಾಪನ ಜೀವನಚರಿತ್ರೆ ರೋಮಾಂಚಕಾರಿಯಾಗಿದೆ. ಆತ ಸ್ವಾತಂತ್ರ್ಯಕ್ಕಾಗಿ ಕೊನೆಯವರೆಗೂ ಹೋರಾಡಿದ. ಅದಕ್ಕಾಗಿ ಹುಲ್ಲಿನ ಮೇಲೆ ಮಲಗುವ ಶಪಥ ಮಾಡಿದ್ದ. ಆತನ ತರುವಾಯ ಮೊಗಲರ ಜಹಾಂಗೀರನ ಕಾಲದ ವೇಳೆಗೆ, ಆ ಮನೆತನ ಮೊಗಲರಿಗೆ ಸಂಪೂರ್ಣ ಶರಣಾಗತವಾಯಿತು. ಮುಂದೆ ಎಂದೂ ಅದು ಹಿಂದಿನ ವೈಭವದಿಂದ ಮೆರೆಯಲಿಲ್ಲ.

ಸು.5–6 ಶತಮಾನದಿಂದ ರಾಜ್ಯಭಾರವನ್ನು ನಿರ್ವಹಿಸಿದ ಗುಹಿಲ ಪುತ್ರರು ರಜಪೂತರ 36 ಮನೆತನಗಳಲ್ಲಿ ಬಹು ಶ್ರೇಷ್ಠಮನೆತನದವರೆಂದು ಪರಿಗಣಿತರಾಗಿದ್ದಾರೆ. ರಾಜಸ್ತಾನದ ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಚಿತ್ರಕಲೆ ಎಲ್ಲವೂ ವೈಶಿಷ್ಟ್ಯಪೂರ್ಣವಾಗಿ ಬೆಳೆಯಲು ಇವರು ಬಹಳಮಟ್ಟಿಗೆ ಕಾರಣ. ಭಕ್ತೆ ಮೀರಾಬಾಯಿ ಈ ಮನೆತನದವಳು. ಶಿವಾಜಿಯೂ ಈ ವಂಶದವನೆಂದೇ ಹೇಳುವುದಿದೆ. ಆದರೆ ಅದು ನಿರ್ಧರಿಸಲಾಗದಿರುವ ವಿಷಯ. ಇವರ ಮನೆತನದವರು ಅಲ್ಲಲ್ಲಿ ಚಿಕ್ಕ ಸಂಸ್ಥಾನಾಧೀಶರಾಗಿ ಉಳಿದಿದ್ದರು. ಇವರ ಪ್ರದೇಶಗಳು 1947ರ ಅನಂತರ ಸ್ವತಂತ್ರಭಾರತದಲ್ಲಿ ವಿಲೀನವಾದುವು. (ಎಸ್.ಜೆವಿ.)

**ಗೂಢಚರ್ಯೆ:** ವೇಷ ಮರೆಸಿಕೊಂಡು ಶತ್ರು ಶಿಬಿರಗಳಿಗಾಗಲೀ ಶತ್ರು ದೇಶಗಳಿಗಾಗಲೀ ಹೋಗಿ ಅಲ್ಲಿನ ರಕ್ಷಣಾ ವ್ಯವಸ್ಥೆಗಳು, ಚಲನವಲನಗಳು, ರಾಜಕೀಯ ರಹಸ್ಯಗಳು ಮುಂತಾದವನ್ನು ಗುಟ್ಟಿನಲ್ಲಿ ಪತ್ತೆ ಮಾಡುವ ಕಾರ್ಯ (ಸ್ಪೈಯಿಂಗ್), ಬೇಹುಗಾರಿಕೆ ಇದರ ಪರ್ಯಾಯ ಪದ. ಗೂಢಚರ್ಯೆ ವೃತ್ತಿ ಮಾಡುವುದಕ್ಕೂ ಗುಪ್ತಚಾರರನ್ನು ಉಪಯೋಗಿಸುವ ವ್ಯವಸ್ಥೆಗೂ ಫ್ರೆಂಚ್ ಭಾಷೆಯ ಎಸ್ಪಿಯೋನೇಜ್ ಎಂಬ ಹೆಸರು ಈಗ ರೂಢಿಯಲ್ಲಿದೆ. ಎಲ್ಲ ಗೂಢಚಾರರಲ್ಲೂ ಇರಬೇಕಾದ ದಿಟ್ಟತನ, ಧೈರ್ಯ, ಸಾಹಸ ಪ್ರವೃತ್ತಿ, ಅಸಾಮಾನ್ಯವಾದ ವ್ಯವಹಾರ ಜ್ಞಾನ, ದೀರ್ಘಕಾಲದವರೆಗೂ ತಾಳಿಕೊಂಡಿರಬಲ್ಲ ಸಹನಶಕ್ತಿ, ಸಮರ್ಥ ವರದಿಗಳನ್ನು ಗುಪ್ತವಾಗಿ ರವಾನಿಸಬಲ್ಲ ಕೌಶಲ, ನಿರ್ಧರಣ ಸಾಮರ್ಥ್ಯ ಇತ್ಯಾದಿ. ತಮ್ಮತನವನ್ನು ಸದಾ ಉಳಿಸಿಕೊಂಡು ಇತರರೊಡನೆ ಸಮರಸವಾಗಿ ಬೆರೆತು ಅವರಿಂದ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸುವ ವ್ಯವಹಾರಚತುರರಿರುವರು.

ಗೂಢಚರ್ಯೆಯನ್ನು ವಿಶಾಲವಾಗಿ ಎರಡು ವಿಭಾಗಗಳಾಗಿ ಮಾಡಿ ಅಭ್ಯಸಿಸುವುದುಂಟು: ರಾಜಕೀಯ ಬೇಹುಗಾರಿಕೆ, ಸೇನಾ ಬೇಹುಗಾರಿಕೆ, ದೇಶದ ರಾಜಕೀಯ ವಿಷಯಗಳಿಗೂ ವ್ಯಕ್ತಿಗಳಿಗೂ ಸಂಬಂಧಿಸಿದ ಮಾಹಿತಿಗಳು, ವಾಣಿಜ್ಯ, ಆರ್ಥಿಕ ವ್ಯವಹಾರಗಳು, ಸರ್ಕಾರದ ಇತರ ಚಟುವಟಿಕೆಗಳು, ಯಂತ್ರ ಸ್ಥಾವರಗಳಿಗೆ ಸಂಬಂಧಿಸಿದ ವಿವರಗಳು ಇವೇ ಮುಂತಾದ 'ವನ್ನು ಸಂಗ್ರಹಿಸುವ ಬೇಹುಗಾರಿಕೆ ರಾಜಕೀಯ ಗೂಢಚರ್ಯೆಯ ಕಕ್ಷೆಯಲ್ಲಿ ಬರುತ್ತವೆ. ಪ್ರತಿಯೊಂದು ದೇಶದಲ್ಲೂ ಇಂಥ ವ್ಯವಸ್ಥೆ ಸರ್ಕಾರದ ಅಧೀನದಲ್ಲಿಯೇ ಇರುವುದು ಸಾಮಾನ್ಯ. ಅಲ್ಲದೆ ಖಾಸಗಿ ವ್ಯವಸ್ಥೆಗಳೂ ಆಯಾ ಹಿತಾಸಕ್ತಿಗಳ ಬೆಂಬಲಕ್ಕಾಗಿ ಇರುವುದು ಉಂಟು. ಯುದ್ಧ ಹಾಗೂ ಶಾಂತಿ ಕಾಲಗಳಲ್ಲಿ ನೇರವಾಗಿ ಯುದ್ಧ ಸಂಬಂಧ ವಿಷಯಗಳ ಮಾಹಿತಿ ಪಡೆಯುವುದು ಸೇನಾ ಗೂಢಚರ್ಯೆಯ ಪ್ರಧಾನೋದ್ದೇಶ.

ನಾನಾ ಸ್ವಭಾವಗಳ ವ್ಯಕ್ತಿಗಳು ನಾನಾ ಉದ್ದೇಶಗಳಿಂದ ಗೂಢಚರ್ಯೆವೃತ್ತಿಗೆ ಸೇರುತ್ತಾರೆ. ಅಪಾಯಗಳನ್ನು ಎದುರಿಸಬೇಕೆಂಬ ಇಚ್ಛೆ. ಸಾಹಸಗಳನ್ನು ಸಾಧಿಸುವ ಪ್ರವೃತ್ತಿಯುಳ್ಳವರು; ತಮ್ಮ ದೇಶದ ವಿರುದ್ಧ ಅತೃಪ್ತಿ, ಕೋಪವುಳ್ಳವರು; ಪಾತಕಗಳ ಚರಿತ್ರೆಯುಳ್ಳವರು; ರಾಷ್ಟ್ರೀಯ ಭಾವನೆ, ರಾಜನಿಷ್ಠೆಗಳಿಲ್ಲದೆ ಹೆಚ್ಚು ಹಣ ಬರುವ ಕಡೆ ಸೇರಿಕೊಳ್ಳುವ ಗೀಳಿರುವವರು; ದುಡ್ಡನ್ನು ಶೀಘ್ರವಾಗಿ ಗಳಿಸಲು ಯಾವುದಕ್ಕೂ ಹೇಸದೆ, ಏನುಬೇಕಾದರೂ ಮಾಡಲು ಸಿದ್ಧರಾಗಿರುವವರು ಮುಂತಾದವರಿರುತ್ತಾರೆ. ಸೇನಾ ಇಲಾಖೆಯಲ್ಲಿ ಶಿಕ್ಷಣ ಪಡೆದವರು ತಾವಾಗಿಯೇ ಮುಂದೆ ಬರುತ್ತಾರೆ. ಕೆಲವರು ಇಮ್ಮಡಿ ಬೇಹುಕಾರರಾಗಿ (ಡಬ್ಬಲ್ ಸ್ಪೈಸ್ ಅಥವಾ ಡಬಲ್ ಕ್ರಾಸ್) ಮಿತ್ರ ಮತ್ತು ಶತ್ರು ಎರಡು ಪಕ್ಷಗಳಲ್ಲೂ ಕೆಲಸಮಾಡುತ್ತಾರೆ. ಕಾರ್ಲ್ ಷೂಲ್ ಮೆಯ್ಸ್‌ಟರ್ ಎಂಬ ಚರಿತ್ರೆಯ ಅತ್ಯಂತ ಪ್ರಖ್ಯಾತ ಇಮ್ಮಡಿ ಬೇಹುಕಾರ. ಫ್ರಾನ್ಸಿನ ಚಕ್ರವರ್ತಿ ಮೊದಲನೆಯ ನೆಪೋಲಿಯನ್ ಮತ್ತು ಫ್ರಾನ್ಸಿನ ಶತ್ರು ಆಸ್ಟ್ರಿಯದ ಹ್ಯಾಪ್ಸ್‌ಬರ್ಗ್ ಇಬ್ಬರಿಂದಲೂ ಸಂಬಳ ಪಡೆಯುತ್ತಿದ್ದ. ಕೆಲವರು ದೇಶಾಭಿಮಾನದಿಂದ ತಮ್ಮ ದೇಶದವರಿಗೆ ಸಹಾಯ ಮಾಡಬೇಕೆಂಬ ಘನವಾದ ಉದ್ದೇಶದಿಂದ ಗೂಡಚರ್ಯೆಗೆ ಸೇರಿ ಶತ್ರುಗಳಿಗೆ ಬಲಿಯಾಗುವುದುಂಟು. ಬ್ರಿಟಿಷ್ ನರ್ಸ್ ಈಡಿತ್ ಕೇವಲ್ ಎಂಬಾಕೆ ತನ್ನ ದೇಶದವರು ಶತ್ರುಗಳಿಂದ ಪಾರಾಗುವಂತೆ ಸಹಾಯ ಮಾಡಿದಳು. ಇದಕ್ಕಾಗಿ ಜರ್ಮನರು ಅವಳನ್ನು ಗುಂಡಿಕ್ಕಿ ಕೊಂದರು. ಲೂಯಿ ಬೆಟ್ಟಿಗ್‌ನಿಯರ್ ಎಂಬ ಫ್ರೆಂಚ್ ದೇಶಭಕ್ತಳಿಗೂ ಅದೇ ಗತಿಯಾಯಿತು. ಅಮೆರಿಕನ್ ಕ್ರಾಂತಿಯಲ್ಲಿ ಧರ್ಮನಿಷ್ಠನೂ ದೇಶಭಕ್ತನೂ ಆಗಿದ್ದ ನಾಥನ್ ಹೇಲ್ ಎಂಬ ಅಮೆರಿಕನನ್ನು ಬ್ರಿಟಿಷರು ಹಿಡಿದು ಗಲ್ಲಿಗೇರಿಸಿದರು. ಕೆಲವು ಕೃಪಣರು ದುಡ್ಡಿನಾಸೆಗೆ ಶತ್ರುಪಕ್ಷದ ಗೂಢಚಾರರಾಗಿ ವರ್ತಿಸಿ ತಮ್ಮ ದೇಶಕ್ಕೆ ದ್ರೋಹ ಮಾಡಿದ್ದೂ ಉಂಟು. ನಾರ್ವೆಯಲ್ಲಿ ಉನ್ನತ ಸೇನಾ ಹುದ್ದೆಯಲ್ಲಿದ್ದ ಕ್ವಿಸ್ಲಿಂಗ್ ಎಂಬಾತ ತನ್ನ ದೇಶಕ್ಕೆ ವಿಶ್ವಾಸಘಾತಕನಾಗಿ ಜರ್ಮನರಿಗೆ ರಹಸ್ಯಗಳನ್ನು ತಿಳಿಸಿದ್ದರಿಂದ ಅವನಿಗೆ ಮರಣದಂಡನೆಯಾಯಿತು. ಇಂಥ ದ್ರೋಹಿಗಳನ್ನು ಇಂದು ಇಂಗ್ಲಿಷಿನಲ್ಲಿ ಕ್ವಿಸ್ಲಿಂಗ್ ಎಂದೇ ಕರೆಯುವುದುಂಟು. ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಯ ಅಡ್ಮಿರಲ್ ವಿಲ್‌ಹೆಲ್ಮ್ ಕ್ಯಾನರಿಸ್ ಎಂಬಾತ ಬ್ರಿಟಿಷರೊಡನೆ ಸೇರಿಕೊಂಡು ಹಿಟ್ಲರನ್ನು ಕೊಲ್ಲಲು

ನಡೆಸಿದ ಒಳಸಂಚಿಗಾಗಿ ಗಲ್ಲಿಗೇರಿಸಲ್ಪಟ್ಟ. ಇಂಗ್ಲೆಂಡಿನಲ್ಲಿ ಅತಿಗೋಪ್ಯ ಪರಮಾಣು ಶೋಧನೆಗಾಗಿ ನೇಮಿಸಲ್ಪಟ್ಟ ಕ್ಲಾಸ್‌ಫುಚ್ಸ್ ಮತ್ತು ಆಲನ್ ಮೇ ಎಂಬುವರು 1945ರಲ್ಲಿ ರಹಸ್ಯಗಳನ್ನು ರಷ್ಯನರಿಗೆ ತಿಳಿಸಿದರು. ಅಮೆರಿಕದ ಜೂಲಿಯಸ್ ಮತ್ತು ಎಥೆಲ್ ರೋಜೆನ್‌ಬರ್ಗ್ ಎಂಬುವರು ಪರಮಾಣು ರಹಸ್ಯಗಳನ್ನು 1951ರಲ್ಲಿ ರಷ್ಯದ ಸರ್ಕಾರಕ್ಕೆ ತಿಳಿಸಿದ್ದಕ್ಕಾಗಿ ವಧಿಸಲ್ಪಟ್ಟರು. ರಷ್ಯದ ಏಜೆಂಟ್ ವಾಲ್ಡಿಮಿರ್ ಪೆಟ್ರೋವ್ ಮತ್ತು ಆತನ ಹೆಂಡತಿ ಆಸ್ಟ್ರೇಲಿಯಾದಲ್ಲಿ ರಷ್ಯನ್ ರಾಯಭಾರಿ ಇಲಾಖೆಯಲ್ಲಿದ್ದವರು ರಷ್ಯವನ್ನು ತ್ಯಜಿಸಿ ಆಸ್ಟ್ರೇಲಿಯ ಸರ್ಕಾರದ ಆಶ್ರಯವನ್ನು ಪಡೆದರು. ಬ್ರಿಟನ್ನಿನ ರಸಲ್ ಫಿಲ್ಬಿ ಮತ್ತು ಇನ್ನಿಬ್ಬರು ರಷ್ಯದ ಏಜೆಂಟರುಗಳಾಗಿ ಗುಪ್ತ ಕೆಲಸ ಮಾಡಿದರೆಂದು ಹಿಡಿಯಲ್ಪಟ್ಟಾಗ ಅವರು ತಪ್ಪಿಸಿಕೊಂಡು ರಷ್ಯಕ್ಕೆ ಪಲಾಯನ ಮಾಡಿದರು.

ಪ್ರಪಂಚಾದ್ಯಂತ ಗೂಢಚಾರರಿಗಾಗಿ ಪ್ರತಿವರ್ಷವೂ ಕೋಟ್ಯಂತರ ರೂಪಾಯಿಗಳು ಖರ್ಚಾಗುತ್ತವೆ. ಕೆಲವು ಸಂದರ್ಭಗಳಲ್ಲಿ ಅವರಿಗಾಗಿ ಗುಪ್ತನಿಧಿಯನ್ನೂ ಶೇಖರಿಸಲಾಗುತ್ತದೆ. ಗೂಢಚರ್ಯೆಯಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಟ್ಟಳೆಗಳಿವೆ. ಒಂದು ರಾಷ್ಟ್ರದಲ್ಲಿ ಶತ್ರುದೇಶದ ಗೂಢಚಾರರು ನಡೆಸುವ ಪ್ರಯತ್ನಗಳನ್ನೂ ಏರ್ಪಾಡುಗಳನ್ನೂ ಮುರಿದುಹಾಕಲು ಆ ರಾಷ್ಟ್ರದ ಗೂಢಚಾರರು ಪ್ರತಿಕ್ರಿಯೆ ಕ್ರಮಗಳನ್ನು ಆಚರಿಸುತ್ತಾರೆ. ಈ ಪ್ರತಿವಿಧಾನದ ಗೂಢಚಾರರು ಶತ್ರು ಗೂಢಚಾರರನ್ನು ಅವರ ಸಂಧಾನಗಳನ್ನು ಗುಟ್ಟಿನಲ್ಲಿ ಶೋಧಿಸುತ್ತಾ ಅವನ್ನು ಪ್ರತಿಕೂಲ ಕ್ರಮಗಳಿಂದ ನಿರ್ಮೂಲ ಮಾಡುತ್ತಾರೆ. ಈ ವ್ಯವಸ್ಥೆಗೆ ಪ್ರತಿಗೂಢಚರ್ಯೆ (ಕೌಂಟರ್-ಸ್ಪೈಯಿಂಗ್) ಎಂದು ಹೆಸರು. ಒಂದನೆಯ ಮಹಾಯುದ್ಧದ ಆರಂಭದಲ್ಲಿ ಬ್ರಿಟಿಷ್ ಗೂಢಚಾರರು ಇಂಗ್ಲೆಂಡಿನಲ್ಲಿದ್ದ ಎಲ್ಲ ಶತ್ರು ಏಜೆಂಟರನ್ನು ಹಿಡಿದು ಬಂಧಿಸಿದರು. ಜರ್ಮನರು ಇಂಗ್ಲೆಂಡಿನಲ್ಲಿ ಹೂಡಿದ್ದ ಗುಪ್ತ ಚಳವಳಿಗಳಿಗೆ ನಾಯಕನಾಗಿದ್ದ ಅರ್ನ್ಸ್ ಎಂಬ ಹಜಾಮನನ್ನು ಸೆರೆ ಹಿಡಿದ ಬಳಿಕ ಆ ಉಪದ್ರವ ಅಡಗಿತು. ಅಮೆರಿಕದಲ್ಲಿ ವಿದೇಶಿ ಬೇಹುಗಾರರ 33 ತಂಡಗಳು ಕಂಡುಹಿಡಿಯಲ್ಪಟ್ಟವು.

ಗೂಢಚರ್ಯೆ ಪ್ರಪಂಚದ ಅತ್ಯಂತ ಪುರಾತನ ಕಸಬುಗಳಲ್ಲೊಂದು. ಅದು ಬಲು ಹಿಂದಿನಿಂದಲೂ ಯುದ್ಧತಂತ್ರದ ಒಂದು ಅಂಗವಾಗಿದೆ. ಪ್ರಾಚೀನ ಈಜಿಪ್ಟರು ಗೂಢಚರ್ಯೆಯ ಇಲಾಖೆಯನ್ನೇ ಸ್ಥಾಪಿಸಿದ್ದರು. ಅವರು ಗೂಢಚಾರರನ್ನು ಹಿಟ್ಟಿನ ಚೀಲಗಳಲ್ಲಿ ಬಚ್ಚಿಟ್ಟು ಅವನ್ನು ತಾವು ಹಿಡಿದುಕೊಳ್ಳಬೇಕೆಂದಿದ್ದ ಹಡಗುಗಳಲ್ಲಿ ಇಡುತ್ತಿದ್ದರು. ಅಲೆಗ್ಸಾಂಡರ್ ತನ್ನ ಕೈಕೆಳಗಿನ ಅಧಿಕಾರಿಗಳಲ್ಲಿ ನಂಬಿಕಸ್ಥರಾರೆಂಬುದನ್ನು ಒಂದು ತಂತ್ರದಿಂದ ಪತ್ತೆ ಮಾಡುತ್ತಿದ್ದ. ಪರ್ಷಿಯಕ್ಕೆ ದಂಡಯಾತ್ರೆ ಹೋದಾಗ ಅಧಿಕಾರಿಗಳ ಸಂದೇಶಗಳನ್ನು ಊರಿಗೆ ಒಯ್ಯಲು ವಿಶಿಷ್ಟದೂತನನ್ನು ಕಳಿಸುವೆನೆಂದೂ ಎಲ್ಲರೂ ಸಂದೇಶಗಳನ್ನು ದೂತನಿಗೆ ಕೊಡಬಹುದೆಂದೂ ತಿಳಿಸಿ ಎಲ್ಲರೂ ಕಾಗದಗಳನ್ನು ಹರಿಕಾರನಿಗೆ ಕೊಟ್ಟ ಬಳಿಕ ಅಲೆಗ್ಸಾಂಡರ್ ಅವನ್ನು ಗುಟ್ಟಾಗಿ ಓದಿಕೊಂಡು ಯಾರು ಯಾರು ರಾಜದ್ರೋಹಿಗಳೆಂಬುದನ್ನು ಅರಿಯುತ್ತಿದ್ದ. ಗ್ರೀಕರು ಬೇಹುಗಾರರ ತಂತ್ರದಿಂದ ಶತ್ರುಗಳ ರಕ್ಷಣಾಕ್ಷೇತ್ರವನ್ನು ಭೇದಿಸಿ ಟ್ರೋಜನ್ ಕುದುರೆಯನ್ನು ಹಿಡಿದರು. ಪರ್ಷಿಯದಲ್ಲಿ ನಿರ್ಬಂಧದಲ್ಲಿದ್ದ ಹಿಸಿಯಾಸ್ ಎಂಬಾತ ಗ್ರೀಕರಿಗೆ ಸುದ್ದಿ ಕಳಿಸಲು ಒಬ್ಬ ಗುಲಾಮನ ತಲೆಕೂದಲನ್ನು ಬೋಳಿಸಿ ಚರ್ಮದ ಮೇಲೆ ಬರೆದು, ಕೂದಲು ಬೆಳೆದ ಅನಂತರ ಅವನನ್ನು ಗ್ರೀಕರ ಬಳಿಗೆ ಕಳಿಸಿದ; ಗ್ರೀಕರು ಅವನ ಕೂದಲನ್ನು ಬೋಳಿಸಿ ಸುದ್ದಿಯನ್ನು ಓದಿಕೊಂಡರು. ಭಾರತದಲ್ಲಿ ಎಲ್ಲ ರಾಜ್ಯಗಳಲ್ಲೂ ಗೂಢಚಾರರ ವ್ಯವಸ್ಥೆ ಪ್ರಬಲವಾಗಿತ್ತು; ಅದು ಚಾಣಕ್ಯನ ಮುಖ್ಯ ತಂತ್ರ. ಕೆನಾನ್ ಪ್ರಾಂತದ ಸೈನಿಕ ರಹಸ್ಯಗಳನ್ನು ಪತ್ತೆ ಮಾಡಲು ಮೋಸೆಸ್ 12 ಗೂಢಚಾರರನ್ನು ಕಳಿಸಿದನೆಂದು ಬೈಬಲಿನಲ್ಲಿ ಉಲ್ಲೇಖವಿದೆ. ಸೇನಾಪತಿ ಸಿಪಿಯೋ ಆಫ್ರಿಕಾನಸ್ ಪ್ರ.ಶ.ಪೂ. 200ರಲ್ಲಿ ಹ್ಯಾನಿಬಾಲ್‌ನನ್ನು ಪ್ಯೂನಿಕ್ ಯುದ್ಧದಲ್ಲಿ ಸೋಲಿಸಿದ್ದು ಅವನ ಬೇಹುಕಾರರು ಆಫ್ರಿಕದಲ್ಲಿ ಹೊಗೆಯ ಸಂಕೇತಗಳಿಂದ ಶತ್ರುವಿನ ಚಲನವಲನಗಳನ್ನು ತಿಳಿಸಿದ್ದರಿಂದ ಗೂಢಚಾರರ ಸಹಕಾರವಿಲ್ಲದೆ ಸಿಪಿಯೋ ಯುದ್ಧಪರಂಪರೆಯನ್ನು ಗೆಲ್ಲಲಾಗುತ್ತಿರಲಿಲ್ಲ. 17ನೆಯ ಶತಮಾನದಲ್ಲಿ ಬ್ರಿಟಿಷ್ ನೌಕಾಧಿಕಾರಿ ಸ್ಯಾಮ್ಯುಯೆಲ್ ಪೆಪಿಸ್ ಎಂಬಾತ ನಿದ್ರೆ ಮಾಡುತ್ತಿದ್ದ ಒಬ್ಬ ಡಚ್ ರಾಯಭಾರಿಯ ಜೇಬಿನಿಂದ ಬೀಗದ ಕೈಯನ್ನು ಕದ್ದುಕೊಂಡು, ಅವನ ಬೀರುವಿನ ಬೀಗವನ್ನು ತೆರೆದು, ಡಚ್‌ರಾಜ್ಯದ ಬಹು ರಹಸ್ಯದ ಕಾಗದ ಪತ್ರಗಳನ್ನು ತೆಗೆದು ತನ್ನ ರಾಜ ಎರಡನೆಯ ಚಾರ್ಲ್ಸ್‌ಗೆ ಕೊಟ್ಟ.

ಮಧ್ಯಯುಗದಲ್ಲಿ ಚರ್ಚಿನ ಅಧಿಕಾರಿಗಳು ಗುಪ್ತ ಏಜೆಂಟರಾಗಿ ಯುರೋಪಿನಾದ್ಯಂತ ಇದ್ದರು. 14ನೆಯ ಶತಮಾನದಲ್ಲಿ ಮೂರನೆಯ ಎಡ್ವರ್ಡ್ ರಾಜ ಪೋಪನ ಆಸ್ಥಾನದ ರಹಸ್ಯಗಳನ್ನು ತಿಳಿಸಲು ಕೌಂಟ್ ನಿಕೋಲಿನೋ ಡೆಲ್‌ಫಿಸ್ಕೋ ಎಂಬ ಏಜೆಂಟರನ್ನು ನೇಮಿಸಿದ್ದ. ಸ್ವರಾಷ್ಟ್ರಕಲಹ, ಕ್ರಾಂತಿ, ಮತಸಂಬಂಧ ಉಪದ್ರವಗಳಲ್ಲಿ ಗುಪ್ತ ಏಜೆಂಟರ ಪಾತ್ರ ಹಿರಿದಾದದ್ದು. ಇಂಗ್ಲೆಂಡಿನ ಒಂದನೆಯ ಎಲಿಜಬೆತ್ ರಾಣಿಯ ಆಳಿಕೆಯಲ್ಲಿ ಬರ್ಲಿ ಮತ್ತು ವಾಲ್ಸಿಂಗ್ ಹಾಮ್‌ರು ಬಹು ಚಾತುರ್ಯದಿಂದ ಗೂಢಚಾರರನ್ನು ಉಪಯೋಗಿಸಿದರು. ಫ್ರಾನ್ಸಿನಲ್ಲಿ 13 ಮತ್ತು 15ನೆಯ ಲೂಯಿಗಳು ಗೂಢಚಾರರಿಂದ ಅಪಾರ ಪ್ರಯೋಜನವನ್ನು ಪಡೆದರು. ಗೂಢಚರ್ಯೆ 17ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಕ್ರಾಮ್‌ವೆಲ್‌ನಿಂದಲೂ ಫ್ರಾನ್ಸಿನಲ್ಲಿ ಕಾರ್ಡಿನಲ್ ರಿಚಲುನಿಂದಲೂ ವ್ಯವಸ್ಥಿತ ಪದ್ಧತಿಯಾಯಿತು. ರಿಷಿಲೂ ಅದನ್ನು ಪೂರ್ಣಗೊಳಿಸಿದ. ವೆನಿಸ್ ಪ್ರಜಾಧಿಪತ್ಯದ ಸ್ಬಿರ್ರಿ ಎಂಬ ಗುಪ್ತಸಂಸ್ಥೆಯೂ ರಷ್ಯದ ಒಖಾನಾ ಎಂಬ ಗುಪ್ತ ಪೋಲೀಸ್ ಸಿಬ್ಬಂದಿಯೂ ಫ್ರಾನ್ಸಿನ ಕ್ರಾಂತಿಯ ಕಾಲದ ಗುಪ್ತ ಪೋಲೀಸರೂ ರಷ್ಯದ ಜ಼ಾರ್ ಚಕ್ರವರ್ತಿಗಳ ಆಡಳಿತದಲ್ಲಿದ್ದ ಗುಪ್ತ ಏಜೆಂಟರೂ ಜರ್ಮನಿಯ ನಾಟ್ಸಿಗಳ ಗೆಸ್ಟಾಪೋ ಎಂಬ ಗುಪ್ತ ಸುದ್ದಿಗಾರರೂ ಎಲ್ಲ ದರ್ಜೆಗಳ ಜನರೊಡನೆ ಬೆರೆತು ಅವರ ಮರ್ಮ ಒಳಸಂಚುಗಳನ್ನು ಅರಿತು ವರದಿ ಮಾಡುತ್ತಿದ್ದರು.

18ನೆಯ ಶತಮಾನದಲ್ಲಿ ಪ್ರಷ್ಯದ ಫ್ರೆಡರಿಕ್ ಮಹಾಶಯ ಬೇಹುಗಾರರ ತಂಡಗಳಿಂದ ನೆರವು ಪಡೆದ. ನೆಪೋಲಿಯನ್ ಬೇಹುಗಾರರನ್ನು ಬಹಳ ಉಪಯೋಗಿಸಿದ. ಅವನ ಯುದ್ಧಗಳಲ್ಲಿ ಗೂಢಚರ್ಯೆ ಕ್ರಮ ಬಹು ಸಮರ್ಥವಾಗಿತ್ತು. ಪೋಲೀಸ್ ಮಂತ್ರಿಯಾಗಿದ್ದ ಫೌಚೆಯ ಗೂಢಚಾರರು ಜಾಕೊಬಿನ್ನರು, ರಾಯಲಿಸ್ಟರು ಮುಂತಾದ ಅನೇಕ ಪಂಗಡದವರ ಒಳಸಂಚುಗಳನ್ನು ಪತ್ತೆ ಮಾಡಿದರು. ವಾಟರ್ಲೂ ಯುದ್ಧಕ್ಕೆ ಮುಂಚೆ ಡ್ಯೂಕ್ ಆಫ್ ವೆಲ್ಲಿಂಗ್ಟನ್ ಫ್ರಾನ್ಸಿನಲ್ಲಿದ್ದ ತನ್ನ ಗುಪ್ತ ಏಜಂಟರುಗಳಿಂದ ನೆಪೋಲಿಯನ್ನನ ಯೋಜನೆಯ ವಿವರಗಳನ್ನು ತಿಳಿದುಕೊಂಡಿದ್ದ. ರಷ್ಯ, ಆಸ್ಟ್ರಿಯ ಮತ್ತು ಪ್ರಷ್ಯ ರಾಷ್ಟ್ರಗಳು ಒಟ್ಟಿಗೆ ಪವಿತ್ರಮೈತ್ರಿ ಎಂಬ ಒಪ್ಪಂದವನ್ನು ಮಾಡಿಕೊಂಡ ಬಳಿಕ ಆ ಸಂಸ್ಥೆಯ ಗೂಢಚಾರರು, ಸುದ್ದಿಗಾರರು, ಗುಪ್ತ ಏಜೆಂಟರು ಯುರೋಪಿನಾದ್ಯಂತ ತಂಡೋಪತಂಡವಾಗಿ ಹರಡಿಕೊಂಡರು.

19ನೆಯ ಶತಮಾನದಲ್ಲಿ ಪ್ರಷ್ಯದ ಬಿಸ್‌ಮಾರ್ಕ್‌ನ ಬೇಹುಗಾರರು ಬಲೆಗಳಂತೆ ಹರಡಿಕೊಂಡಿದ್ದರು. ಆ ಗೂಢಚಾರರ ಇಲಾಖೆಯ ನಾಯಕನಾಗಿದ್ದ ವಿಲಿಯಮ್ ಸ್ಟೈಬರ್ ಎಂಬಾತ ಜರ್ಮನರ ಗೂಢಚರ್ಯೆಯನ್ನು ಬಹಳ ಚೆನ್ನಾಗಿ ವ್ಯವಸ್ಥೆ ಗೊಳಿಸಿದ್ದ. ಅವನು ವೇಷಪಲ್ಲಟ ಮಾಡಿಕೊಂಡು ನಾನಾ ಕಪಟರೂಪಗಳಲ್ಲಿ ಬೊಹೀಮಿಯಕ್ಕೆ ಹೋಗಿ ತನ್ನ ಗೂಢಚಾರರ ನೆರವಿನಿಂದ ಪ್ರಷ್ಯದ ಸೇನೆ 1866ರಲ್ಲಿ ಬೊಹೀಮಿಯ ಕದನದಲ್ಲಿ ಗೆಲ್ಲುವಂತೆ ಮಾಡಿದ. 1870ರಲ್ಲಿ ನಡೆದ ಫ್ರೆಂಚ್-ಪ್ರಷ್ಯನ್ ಯುದ್ಧಕ್ಕೆ ಸಿದ್ಧವಾಗಲು ಅವನು ಗೂಢಚರ್ಯೆ ತಯಾರಿಕೆಯನ್ನು ಬಹು ಪರಿಷ್ಕೃತವಾಗಿ ಮಾಡಿಕೊಂಡು ಫ್ರಾನ್ಸಿಗೆ 30,000 ಮಂದಿ ಗೂಢಚಾರರನ್ನು ಕಳುಹಿಸಿದ್ದ. ಈ ಪ್ರಚಂಡ ಗೂಢತಂತ್ರದಿಂದ ಪ್ರಷ್ಯಕ್ಕೆ ಗೆಲುವಾಯಿತು.

ಅಮೆರಿಕದ ಕ್ರಾಂತಿಯಲ್ಲಿ ಪ್ರಖ್ಯಾತ ಗೂಢಚಾರರಿದ್ದರು. ಬ್ರಿಟಿಷರ ಬೇಹುಗಾರ ಮೇಜರ್ ಜಾನ್ ಅಂಡ್ರೆಯನ್ನು ಅಮೆರಿಕನ್ನರು ಹಿಡಿದು ಗಲ್ಲಿಗೇರಿಸಿದರು. ಅಮೆರಿಕದ ಸ್ವರಾಷ್ಟ್ರಕಲಹದಲ್ಲಿ ಸ್ತ್ರೀಬೇಹುಕಾರರು ಎರಡು ಪಕ್ಷಗಳಲ್ಲೂ ಇದ್ದರು. ರೋಸ್ ಗ್ರೀನ್‌ಹೌ ಮತ್ತು ಬೆಲ್ಲೆ ಬಾಯ್ ಎಂಬ ಮಹಿಳಾ ಗೂಢಚಾರರು ಅಮೂಲ್ಯ ಸಂಗತಿಗಳನ್ನು ಶೇಖರಿಸಿ ರಾಷ್ಟ್ರಮಂಡಲಿಗೆ ಕಳಿಸುತ್ತಿದ್ದರು. ಇವು ಮಂಡಲಿಗೆ ವಿಜಯವನ್ನು ತಂದುವು. ಪಾಲಿನ್ ಕಷ್‌ಮನ್ ಎಂಬ ನಟಿ ಮತ್ತು ಎಮ್ಮಾ ಎಡ್ಮಂಡ್ಸ್ ಎಂಬ ಮಹಿಳೆ ಯೂನಿಯನ್ ಕಡೆ ಗೂಢಚಾರರಾಗಿದ್ದರು. ಎಲಿಜಬೆತ್ ಲ್ಯೂ ಎಂಬ ಯುವತಿ ಸಂಬಳವನ್ನು ತೆಗೆದುಕೊಳ್ಳದೆ ತನ್ನ ಸ್ವಂತ ಖರ್ಚಿನಿಂದಲೇ ಗುಪ್ತ ಏಜೆಂಟಳಾಗಿದ್ದಳು. ಮಂಡಲಿಯ ಬೇಹುಗಾರ ಕ್ರಮ ಎಷ್ಟು ಸಮರ್ಥವಾಗಿತ್ತೆಂದರೆ ಅಧ್ಯಕ್ಷ ಅಬ್ರಹಾಮ್ ಲಿಂಕನ್ನನ ಆಲೋಚನಾಸಭೆಯ ವೃತ್ತಾಂತಗಳೂ ಇತರ ರಹಸ್ಯಗಳೂ 49 ಗಂಟೆಗಳೊಳಗೆ ಮಂಡಲಿಯ ಮುಖಂಡರಿಗೆ ತಿಳಿದುಬರುತ್ತಿತ್ತು. ಬೆಲ್ಲೆ ಬಾಯ್ ಎಂಬ ಯುವತಿ ಬಂದೂಕು ಹಾರುತ್ತಿದ್ದಾಗಲೂ ಮುನ್ನುಗ್ಗಿ ಜನರಲ್ ಜಾಕ್ಸನ್‌ಗೆ ರಹಸ್ಯಸುದ್ದಿಗಳನ್ನು ತಿಳಿಸಿದಳು. ಇದರಿಂದ ಮಂಡಲಿಗೆ ಗೆಲುವಾಯಿತು. ಜಪಾನಿಯರು 1904-05ರಲ್ಲಿ ಮಂಚೂರಿಯವನ್ನು ಧಾಳಿಮಾಡುವುದಕ್ಕೆ ಮೊದಲು ರಷ್ಯದ ಚಲನವಲನಗಳನ್ನು ತಮ್ಮ ಗೂಢಚಾರರಿಂದ ಚೆನ್ನಾಗಿ ಅರಿತಿದ್ದರು.

ಒಂದನೆಯ ಮಹಾಯುದ್ಧಕ್ಕೆ ತಯಾರಾಗಲು ಜರ್ಮನ್ನರು ನಾನಾ ದೇಶಗಳಲ್ಲಿದ್ದ ತಮ್ಮ ಗೂಢಚಾರರಿಂದ ರಹಸ್ಯ ಸುದ್ದಿಗಳನ್ನು ತರಿಸಿದ್ದರು. ಅಮೆರಿಕ ತನ್ನ ಮಿತ್ರ ರಾಷ್ಟ್ರಗಳಿಗೆ ನೀಡುತ್ತಿದ್ದ ನೆರವನ್ನು ಮುರಿಯಲು ಜರ್ಮನಿ ಕ್ಯಾಪ್ಟನ್ ರಿಂಟೆಲೆನ್ ಎಂಬ ಗುಪ್ತಚಾರರನ್ನು 1915ರಲ್ಲಿ ಅಮೆರಿಕಕ್ಕೆ ಕಳಿಸಿತು. ಆ ಕಾಲದಲ್ಲಿ ಫ್ರಾನ್ಸಿನಲ್ಲಿದ್ದ ರೈತರು, ಚಾಕರರು, ಹಜಾಮರು, ವ್ಯಾಪಾರ ಪ್ರವಾಸಿಗಳು, ಉಪಾಧ್ಯಾಯರುಗಳಲ್ಲಿ ಅನೇಕರು ಜರ್ಮನರಾಗಿದ್ದರು. ಅವರು ತಾವು ಜರ್ಮನರೆಂದು ತಿಳಿಸದೆ ಇತರ ಜನಾಂಗದವರೆಂದು ಹೇಳಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ಜರ್ಮನಿಯ ಗೂಢಚಾರರಾಗಿ ವರ್ತಿಸಿದರು. ಜರ್ಮನಿಯ ನೌಕೆಯಲ್ಲಿ ಹಿಂದೆ ಕ್ಯಾಪ್ಟನ್ ಆಗಿದ್ದ ಆಲ್‌ಫ್ರೆಡ್ ವೆಹ್ರಿಂಗ್ ಎಂಬಾತ ಆಲ್ಬರ್ಟ್ ಓಟೆಲ್ ಎಂಬ ಮಿಥ್ಯನಾಮದಲ್ಲಿ ಜರ್ಮನಿಯ ಏಜೆಂಟಾಗಿ ಸ್ಕಾಟ್ಲೆಂಡಿನಲ್ಲಿ ಬಹಳ ವರ್ಷ ನೆಲೆಸಿ 1938ರಲ್ಲಿ ಜರ್ಮನಿಗೆ ಬ್ರಿಟಿಷ್ ನೌಕೆಯ ರಹಸ್ಯಗಳನ್ನು ಹ್ರಸ್ವತರಂಗ ಪ್ರೇಷಕದಲ್ಲಿ (ಷಾರ್ಟ್ ವೇವ್ ಟ್ರಾನ್ಸ್‌ಮೀಟರ್) ಕಳಿಸಿದ್ದರಿಂದ ಜರ್ಮನರು ಬ್ರಿಟಿಷ್ ಯುದ್ಧ ಹಡಗು ರಾಯಲ್ ಓಕನ್ನು ಮುಳುಗಿಸಲು ಸಾಧ್ಯವಾಯಿತು.

ಬ್ರಿಟಿಷರ ಗುಪ್ತ ಏಜೆಂಟುಗಳು ಜರ್ಮನಿಯಲ್ಲೂ ಜರ್ಮನಿ ವಶಪಡಿಸಿಕೊಂಡ ದೇಶಗಳಲ್ಲೂ ನಡೆಯುತ್ತಿದ್ದ ಸಂಗತಿಗಳನ್ನು ಬ್ರಿಟನ್ನಿಗೆ ವರದಿ ಮಾಡುತ್ತಿದ್ದರು. ತರಬೇತಾದ ಏಜೆಂಟರುಗಳನ್ನು ಅಮೆರಿಕನ್ನರು ಪ್ಯಾರಾಶೂಟ್‌ಗಳಿಂದ ಫ್ರಾನ್ಸಿನಲ್ಲಿ ಇಳಿಸಿದರು. ಅವರು ಜರ್ಮನರ ಐದು ಡಿವಿಜ಼ನ್‌ಗಳು ಕೆಲಸ ಮಾಡದಂತೆ ತಂತ್ರ ನಡೆಸಿದರು. ರಷ್ಯದ ಗೂಢಚಾರ ರಿಚರ್ಡ್ ಸೋರ್ಜ್ ಎಂಬಾತ ಜಪಾನಿನಲ್ಲಿ ನಿಂತು ತಾನು ಜರ್ಮನ್ ಪಕ್ಷದ ಸುದ್ದಿಗಾರನೆಂದು ನಟಿಸಿ ಜರ್ಮನರ ರಹಸ್ಯಗಳನ್ನು ರಷ್ಯಕ್ಕೆ ತಿಳಿಸುತ್ತಿದ್ದ. ಜರ್ಮನರ 170 ಡಿವಿಜ಼ನ್‌ಗಳು ಸೋವಿಯತ್ ಸರಹದ್ದಿನಲ್ಲಿದ್ದವೆಂದೂ ಅವು ಐದು ವಾರಗಳಲ್ಲಿ ಮಾಸ್ಕೋ ಕಡೆಯಲ್ಲಿ ಧಾಳಿಮಾಡುವುವೆಂದೂ ರಷ್ಯಕ್ಕೆ 1941ರಲ್ಲಿ ತಿಳಿಸಿದ. ಜಪಾನರು ಅವನನ್ನು ಹಿಡಿದು ವಧಿಸಿದರು.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಗರ್ಟ್ರೂಡ್ ಮಾರ್ಗರೇಟ್ ಜೆಲ್ಲಾ ಎಂಬ ಬಹು ಸುಂದರ ಡಚ್ ನರ್ತಕಿ ಜರ್ಮನಿಯ ಬೇಹುಗಾರಳಾಗಿ ಮಾತಾಹಾರಿ ಎಂಬ ಹೆಸರಿನಲ್ಲಿ ಪ್ಯಾರಿಸಿನಲ್ಲಿ ನೆಲೆಸಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ರಹಸ್ಯಗಳನ್ನು ಜರ್ಮನಿಗೆ ನೀಡುತ್ತಿದ್ದಳು. ತಕ್ಕು, ಬೆಡಗು, ಬಿನ್ನಾಣಗಳಿಂದ ಇವಳು ಅನೇಕ ಉನ್ನತ ಫ್ರೆಂಚ್ ಸೇನಾಧಿಕಾರಿಗಳನ್ನು ಮರಳುಮಾಡಿ ತನ್ನ ಬಲೆಯಲ್ಲಿ ಸಿಕ್ಕಿಸಿ, ಅಮಲೇರಿಸುವ ಮಾದಕಗಳಿಂದ ಮೈಮರೆಯುವಂತೆ ಮಾಡಿ, ಅವರಿಂದ ಸೇನಾ ರಹಸ್ಯಗಳನ್ನು ಸೆಳೆಯುತ್ತಿದ್ದಳು. ಇವಳು ತಿಳಿಸಿದ ಒಂದು ಸುದ್ದಿ 75,000 ಮಂದಿ ಫ್ರೆಂಚ್ ಸೈನಿಕರ ಕೊಲೆಯಾಗುವಂತೆ ಮಾಡಿತು. 1917ರಲ್ಲಿ ಫ್ರೆಂಚ್ ಅಧಿಕಾರಿಗಳು ಇವಳನ್ನು ಗುಂಡಿಕ್ಕಿ ಕೊಂದರು.

ಅಮೆರಿಕ, ಗ್ರೇಟ್ ಬ್ರಿಟನ್ ಮತ್ತು ಕೆನಡಗಳಲ್ಲಿ ಪರಮಾಣು ವಿಜ್ಞಾನದ ರಹಸ್ಯಗಳನ್ನು ಚೌರ್ಯ ಮಾಡಲು ರಷ್ಯನ್ ಗೂಢಚಾರರ ಅನೇಕ ತಂಡಗಳಿದ್ದವು. ಅಮೆರಿಕದಲ್ಲಿ ರಷ್ಯದ ಗೂಢಚಾರಿಯಾಗಿ ವರ್ತಿಸುತ್ತಿದ್ದ ಕರ್ನಲ್ ರುಡಾಲ್ಫ್ ಐವನೋವಿಚ್ ಏಬೆಲ್‌ಗೆ 1957ರಲ್ಲಿ 30 ವರ್ಷ ಕಾರಾಗೃಹ ಶಿಕ್ಷೆಯಾಯಿತು. ಇಂಗ್ಲೆಂಡಿನಲ್ಲಿ 1953 ರಿಂದಲೂ ರಷ್ಯದ ಏಜೆಂಟಾಗಿದ್ದ ಜಾರ್ಜ್ ಬೇಕ್‌ಗೆ 42 ವರ್ಷಗಳ ಕಾರಾಗೃಹ ಶಿಕ್ಷೆಯಾಯಿತು. ಇಟಲಿಯ ಕೈಗಾರಿಕಾಮಂಡಲಿಯೊಂದು ಅಮೆರಿಕದ ಒಂದು ಮಳಿಗೆಯಲ್ಲಿ ತನ್ನ ಕೆಲವು ರಸಾಯನವಿಜ್ಞಾನಿಗಳನ್ನು ಕೆಲಸಕ್ಕೆ ಸೇರಿಸಿ ಅವರ ಮೂಲಕ ಅರಿಯೋಮೈಸಿನ್ ಎಂಬ ಔಷಧಿ ತಯಾರಿಯ ಸೂತ್ರವನ್ನು ಕಳವು ಮಾಡಿ, ಅದನ್ನು ಯುರೋಪಿನ ಅಂಗಡಿಗಳಲ್ಲಿ ಮಾರಿ ಯಥೇಚ್ಛ ಹಣವನ್ನು ಸಂಪಾದಿಸಿತು. ರಷ್ಯನ್ನರು ಮಾಸ್ಕೋ ಪಟ್ಟಣದ ಅಮೆರಿಕನ್ ರಾಯಭಾರಿ ಕಚೇರಿಯಲ್ಲಿ ಒಂದು ಗುಪ್ತ ಮೈಕ್ರೊಫೋನನ್ನು ಬಚ್ಚಿಟ್ಟು ಅನೇಕ ವರ್ಷ ಕಾಲ ಅಮೆರಿಕನ್ನರ ಸಂದೇಶಗಳನ್ನು ಮರೆಯಲ್ಲಿ ಕೇಳುತ್ತಿದ್ದರು.

ಎರಡನೆಯ ಮಹಾಯುದ್ಧ ಕಾಲದಲ್ಲಿ ಅನೇಕ ದೇಶಗಳ ಗೂಢಚಾರರು ವಿಶಿಷ್ಟ ಶಿಕ್ಷಣ ಕೇಂದ್ರಗಳಲ್ಲಿ ತರಬೇತಿ ಪಡೆದರು. ರೇಡಿಯೋ ಪ್ರೇಷಕಗಳನ್ನು ರಚಿಸುವುದು; ಆಕಾಶವಿಮಾನ, ಹಡಗುಗಳನ್ನು ವರ್ಗೀಕರಿಸಿ ಸರಿಯಾಗಿ ವರ್ಣಿಸುವುದು; ಫಿಲ್ಮಿನ ಮೇಲೆ ಬಹು ಸಣ್ಣ ಅಕ್ಷರಗಳಲ್ಲಿ ಬರೆದ ಸಂದೇಶಗಳಿರುವ ಸೂಕ್ಷ್ಮಗುರುತುಗಳನ್ನು (ಮೈಕ್ರೊಡಾಟ್ಸ್) ಉಪಯೋಗಿಸುವ ಕ್ರಮ; ಗುಪ್ತ ಲಿಪಿ, ಗುಪ್ತ ಬರವಣಿಗೆ, ಅದೃಶ್ಯ ಶಾಯಿಯ ಉಪಯೋಗ; ವಿದೇಶೀ ಭಾಷೆ, ಪದ್ಧತಿ, ಚರಿತ್ರೆಗಳಿಗೆ ಅನುಸಾರವಾಗಿ ವರ್ತಿಸುವುದು; ಹೊಸಬರೊಡನೆ ಗೆಳೆತನ ಬೆಳೆಸುವುದು; ಕಪಟ ವೇಷಗಳನ್ನು ಧರಿಸುವುದು; ರಾಸಾಯನಿಕಗಳಿಂದ ದ್ರಾವಣ ಮಾಡುವುದು; ಗುಪ್ತ ಸಂಕೇತಗಳು ಮುಂತಾದವನ್ನು ಕಲಿತರು. ಬೇಹುಗಾರರು ಸಮಾಚಾರಗಳನ್ನು ಸಂಗ್ರಹಿಸಲು ನಾನಾವಿಧಗಳನ್ನು ಅನುಸರಿಸುತ್ತಾರೆ–ಕಾಗದಪತ್ರಗಳು, ನಕ್ಷೆ, ಮ್ಯಾಪ್, ಏಕಸ್ವ ಮುಂತಾದವನ್ನು ಕದಿಯುವುದು; ಫೋಟೊ ತೆಗೆಯುವುದು; ಲಂಚ ಕೊಡುವುದು; ಸುಲಭವಾಗಿ ಬಚ್ಚಿಟ್ಟು ಕೈಯಲ್ಲಿ ಒಯ್ಯುವಂಥ ನಿಸ್ತಂತು ಯಂತ್ರಗಳನ್ನು (ವೈರ್‌ಲೆಸ್ ಸೆಟ್ಸ್) ಉಪಯೋಗಿಸುವುದು; ಎಕ್ಸ್‌ಕಿರಣ ಸಲಕರಣೆ, ಮೈಕ್ರೊಫೋನುಗಳಿಂದ ಗೋಡೆಯಾಚೆ ನಡೆಯುವ ಮಾತುಗಳನ್ನು ಹೊಂಚಿ ಕೇಳುವುದು; ವಾಯು ತರಂಗಗಳಲ್ಲಿನ ಗುಪ್ತ ಸಂದೇಶಗಳನ್ನು ಹಿಡಿಯುವುದು ನಿಸ್ತಂತುವಿನಿಂದ ಕದ್ದು ಕೇಳುವುದು ಇತ್ಯಾದಿ. ನೀರಿನೊಳಗೆ ಹುದುಗಿಕೊಂಡು ಮೇಲಿರುವ ಹಡಗುಗಳಲ್ಲಾಗುವ ಸಂಗತಿಗಳನ್ನು ಕೇಳಲೂ ಶತ್ರುವಿನ ಹೊಸ ನಮೂನೆಯ ಹಡಗುಗಳನ್ನು ಅನ್ವೇಷಿಸಲೂ ಸಾಧ್ಯವಾಗುವಂತೆ ನೂತನ ಸಲಕರಣೆಗಳನ್ನು ಕಂಡುಕೊಳ್ಳಲಾಗಿದೆ. ಉಪಗ್ರಹಗಳನ್ನು ಅಂತರಿಕ್ಷಕ್ಕೆ ಹಾರಿಸಿ ಅವು ಭೂಮಿಯನ್ನು ಸುತ್ತುತ್ತಿರುವಾಗ ಇತರ ದೇಶಗಳ ಭೂಸ್ಥಿತಿ, ಸೇನಾರಚನೆಗಳನ್ನು ಚಿತ್ರಿಸಿ, ಆ ಚಿತ್ರಗಳನ್ನು ಭೂಮಿಗೆ ಕಳಿಸುವ ವಿಧಗಳೂ ಬಂದಿವೆ. ಬ್ರಿಟನ್ನಿನ ಸ್ಕಾಟ್ಲೆಂಡ್ ಯಾರ್ಡ್, ಫ್ರಾನ್ಸಿನ ಡುಕ್ಸೆಮಿ ಬ್ಯುರೋ ಮತ್ತು ರಷ್ಯದ ಕೆ.ವಿ.ಡಿ. ಸಂಸ್ಥೆಗಳಲ್ಲಿ ಗೂಢಚರ್ಯೆಯ ಇಲಾಖೆಗಳೇ ಇವೆ. ಚೀನದ ಗೂಢಚಾರರಂತೂ ಪ್ರಪಂಚದಾದ್ಯಂತ ಹರಡಿಕೊಂಡಿದ್ದಾರೆ.

(ಎಂ.ಜಿ.ಕೆ.ಎಂ.)

**ಗೂರ್ಜರ ವಂಶ:** ಸು.6ನೆಯ ಶತಮಾನದಲ್ಲಿ ಗುಪ್ತ ಸಾಮ್ರಾಜ್ಯ ಅಳಿದ ಮೇಲೆ ಜೋಧಪುರ್ ವ್ಯಾಪ್ತಿಯಲ್ಲಿ ಅಸ್ತಿತ್ವಕ್ಕೆ ಬಂದ ಒಂದು ಸಣ್ಣ ರಾಜ್ಯದ ಅರಸರ ವಂಶ. ಈಗಿನ ರಾಜಸ್ತಾನದ ಬಹುಭಾಗ ಹಿಂದೆ ಗೂರ್ಜರಾತ್ರ ಅಥವಾ ಗುಜರಾತವೆಂದೇ ಕರೆಯಲ್ಪಡುತ್ತಿತ್ತು. ಗೂರ್ಜರರು ನೆಲಸಿದ ಸ್ಥಳವಾದ ಕಾರಣ ಇದಕ್ಕೆ ಗೂರ್ಜರಾತ್ರವೆಂದು ಹೆಸರಾಯಿತು. ಗೂರ್ಜರರಿಗೆ ಸಂಬಂಧಿಸಿದುದೆಂಬಂತೆ ಪಂಜಾಬಿನಲ್ಲಿ ಗುಜ್ರಾನ್‌ವಾಲ, ಗುಜರಾತ್, ಗುಜರ್‌ಖಾನ್ ಎಂಬ ಹೆಸರಿನ ಸ್ಥಳಗಳಿವೆ. ಅಲ್ಲಿಯ ಸಹಾರನ್‌ಪುರ ಜಿಲ್ಲೆಗೆ ಹಿಂದೆ ಗುಜರಾತ ಎಂದೇ ಹೆಸರಿತ್ತು. ಗೂರ್ಜರರು ಹಿಮಾಲಯದ ಪಶ್ಚಿಮ ಪ್ರದೇಶ, ಪಂಜಾಬು, ಉತ್ತರ ಪ್ರದೇಶ, ಪಶ್ಚಿಮ ರಾಜಪುಟಾಣ ಮತ್ತು ಸಿಂಧೂ ನದಿಯ ಆಚೆಗಿರುವ ಗುಡ್ಡಗಾಡುಗಳಲ್ಲೆಲ್ಲ ತಮ್ಮ ನೆಲೆಗಳನ್ನು ಏರ್ಪಡಿಸಿಕೊಂಡಿದ್ದರು. (ಬಿ.ಎಸ್.ಕೆ.)

ಗೂರ್ಜರರು ಹೂಣರೊಡನೆ ಭಾರತಕ್ಕೆ ವಲಸೆ ಬಂದ ಒಂದು ಸಮುದಾಯದವರೆಂದೂ ಇವರು ಬಂದಾಗ ಬೀಡು ಬಿಟ್ಟಿದ್ದ ಸ್ಥಳಗಳಿಗೆ ಇವರ ಹೆಸರೇ ಬಂತೆಂದೂ ಕೆಲವು ಇತಿಹಾಸಕಾರರ ಅಭಿಪ್ರಾಯ. ಗೂರ್ಜರ ಎಂಬುದು ಒಂದು ಪ್ರದೇಶದ ಹೆಸರಾಗಿದ್ದು, ಅಲ್ಲಿಯ ಜನರು ಗೂರ್ಜರರೆನಿಸಿಕೊಂಡರು.

**ಗೂರ್ಜರ ಪ್ರತೀಹಾರರು:** ಆರನೆಯ ಶತಮಾನದಲ್ಲಿ ಮೊದಲು ಸ್ಥಾಪಿತವಾದ ಗೂರ್ಜರ ರಾಜ್ಯದ ಮೂಲಪುರುಷ ಹರಿಚಂದ್ರ. ವೇದವಿದ್ಯಾಪಾರಂಗತನಾಗಿದ್ದ ಇವನಿಗೆ ಇಬ್ಬರು ಪತ್ನಿಯರಿದ್ದರು. ಬ್ರಾಹ್ಮಣ ಪತ್ನಿಯಲ್ಲಿ ಜನಿಸಿದ ಮಕ್ಕಳು ಪ್ರತೀಹಾರ ಬ್ರಾಹ್ಮಣರೆನಿಸಿಕೊಂಡರು. ಕ್ಷತ್ರಿಯ ಕುಲದ ಪತ್ನಿಯ ಹೆಸರು ಭದ್ರಾ. ಮಾಲವದ ಯಶೋಧರ್ಮನ ರಾಜ್ಯ ಅಳಿದ ಬಳಿಕ ಉಂಟಾದ ರಾಜಕೀಯ ಅವ್ಯವಸ್ಥೆಯನ್ನು ನಿವಾರಿಸಲು ಶಾಸ್ತ್ರಪಾರಂಗತನಾಗಿದ್ದ ಹರಿಚಂದ್ರ ಶಸ್ತ್ರವನ್ನು ಹಿಡಿದು ರಾಜ್ಯವೊಂದನ್ನು ಕಟ್ಟಿದ. ಈತನ ರಾಣಿಯಾದ ಭದ್ರಾದೇವಿಗೆ ಭೋಗಭಟ, ಕಕ್ಕಲ, ರಜ್ಜಿಲ ಮತ್ತು ದದ್ದ ಎಂಬ ನಾಲ್ವರು ಮಕ್ಕಳಾದರು. ಅವರು ಮಾಂಡವ್ಯಪುರವನ್ನು ಗೆದ್ದು, ಅಲ್ಲಿ ಪ್ರಬಲವಾದ ಕೋಟೆಯನ್ನು ಕಟ್ಟಿದರು. ಇವರಲ್ಲಿ ಹಿರಿಯರಾದ ಇಬ್ಬರನ್ನು ಕುರಿತು ಹೆಚ್ಚಿನದೇನೂ ತಿಳಿಯದು. ಮೂರನೆಯವನಾದ ರಜ್ಜಿಲನ ಅನಂತರ ಕ್ರಮವಾಗಿ ಅವನ ಮಗ ನರಭಟ ಮತ್ತು ಮೊಮ್ಮಗ ನಾಗಭಟ ಆಳಿದರು. ಹರಿಚಂದ್ರನಿಂದ ಆರಂಭಿಸಿ ಇವರೆಲ್ಲ 550 ರಿಂದ 640ರ ವರೆಗೂ ಆಳಿದರು.



ಮಹಾದೇವ ದೇವಾಲಯ, ಬಚೌರ

ನಾಗಭಟನ ಮಗನ ಹೆಸರು ತಾತ. ಗೂರ್ಜರ ಅರಸ ಬೌದ್ಧಧರ್ಮಾವಲಂಬಿಯಾಗಿದ್ದು, ಜ್ಞಾನಿಯೂ ಶೂರನೂ ಆಗಿದ್ದನೆಂದು ಯುವಾನ್‌ಚಾಂಗ್ ಬರೆದಿದ್ದಾನೆ. ಈ ಅರಸ ನಾಗಭಟನ ಮಗನಾದ ತಾತನಾಗಿರಬಹುದೆಂದು ಹಲವರು ಊಹಿಸಿದ್ದಾರೆ. ಇವನ ರಾಜಧಾನಿ ಪಿಲೊ ಮೊಲೊ ಎಂದು ಹೇಳಿದೆ. ಇದು ಭಿಲ್ಲಮಾಲ (ಈಗಿನ ಭಿನ್‌ಮಾಲ) ಆಗಿರಬಹುದು. ತಾತನ ಬಳಿಕ ನಾಲ್ವರು ಅರಸರು ಆಳಿದರು. ಇವರಲ್ಲಿ ಕಡೆಯವನು ಶೀಲುಕ. ಈತನ ಕಾಲದಲ್ಲಿ ಅರಬರು ಗುಜರಾತನ್ನು ಮುತ್ತಿ ಉಜ್ಜಯಿನಿಯವರೆಗೂ ಬಂದು ಜೋಧಪುರದ ಗೂರ್ಜರ ರಾಜ್ಯವನ್ನು ಆಕ್ರಮಿಸಿದರು. ಆದರೆ ಆ ವೇಳೆಗೆ ಆವಂತಿಯಲ್ಲಿ ಆಳುತಿದ್ದ ಗೂರ್ಜರರ ಇನ್ನೊಂದು ಮನೆತನದ ನಾಗಭಟ ಅರಬರ ವಿರುದ್ಧ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದ.

ಈ ಕುಲದ ಭಿನ್ನ ಭಿನ್ನ ಶಾಖೆಗಳಿಗೆ ಸೇರಿದ ಸಣ್ಣ ಅರಸು ಮನೆತನಗಳು 6–7ನೆಯ ಶತಮಾನಗಳ ಬಳಿಕ ತಲೆ ಎತ್ತಿದ್ದವು. ಅವುಗಳಲ್ಲಿ ಭರುಕಚ್ಛದ ಗೂರ್ಜರರದೊಂದು ಶಾಖೆ. ಇವರನ್ನು ನಾಂದೀಪುರಿಯ ಗೂರ್ಜರರೆಂದೂ ಕರೆಯಲಾಗಿದೆಯಾದರೂ ಅದು ಸಮಂಜಸವಲ್ಲವೆಂದು ಇತ್ತೀಚೆಗೆ ಸಂಶೋಧಕರೊಬ್ಬರು ಹೇಳಿದ್ದಾರೆ. ಇವರು ಸ್ವತಂತ್ರವಾಗಿ ಆಳದೆ ಕೇವಲ ಮಾಂಡಲಿಕರಾಗಿದ್ದರಾದರೂ ಇವರ ಸಾರ್ವಭೌಮ ಯಾರು ಎಂಬುದು ಖಚಿತಗೊಂಡಿಲ್ಲ. ಈ ಮನೆತನದ ಮೊದಲ ಅರಸ ದದ್ದ. ಈತ ಹರಿಚಂದ್ರನ ಕೊನೆಯ ಮಗನಾದ ದದ್ದನೇ ಇರಬಹುದು. ಸು. 580 ರಿಂದ 605ರ ವರೆಗೆ ಆಳಿದ ಈತನ ಅನಂತರ ಕ್ರಮವಾಗಿ ಜಯಭಟ (ಶ್ರೀವೀತರಾಗ, 605–29), ಇಮ್ಮಡಿ ದದ್ದ (ಪ್ರಶಾಂತರಾಗ, 629–

54), ಇಮ್ಮಡಿ ಜಯಭಟ (654–79), ಮುಮ್ಮಡಿ ದದ್ದ (ಬಾಹುಸಹಾಯ, 679–704) ಇವರು ಆಳಿದರು. ಅನಂತರ ಪಟ್ಟಕ್ಕೆ ಬಂದವನು ಮುಮ್ಮಡಿ ಜಯಭಟ (705–35). ಈತನ ಕಾಲದಲ್ಲಿ ಖಲೀಫನ ಸೇನಾನಿಯಾದ ಜುನೈದ ತನ್ನ ದಂಡಿನೊಡನೆ ಭರುಕಚ್ಛವನ್ನು ಮುತ್ತಿದ. ಇದು ಈ ಗೂರ್ಜರರಿಗೆ ತೀವ್ರವಾದ ಪೆಟ್ಟಾಗಿ ಇವರು ಕಣ್ಮರೆಯಾದರು.

ಇವರಲ್ಲದೆ ಮೇವಾರದ ಗುಹಿಲಪುತ್ರರು, ಅಣಹಿಲಪಾಟಕದ (ಈಗಿನ ಪಾಟಣ್) ಚಾಪೋತ್ಕಟರು ಸಹ ಇದೇ ಕುಲಕ್ಕೆ ಸೇರಿದವರು.

**ಅವಂತಿಯ ಗೂರ್ಜರ ಪ್ರತೀಹಾರರು:** ನಾಗಭಟನ ಆಳಿಕೆಯ ಕಾಲ ನಿರ್ದಿಷ್ಟವಾಗಿ ತಿಳಿಯದು. 8ನೆಯ ಶತಮಾನದ ಮಧ್ಯದಲ್ಲಿ ಈತನ ಮನೆತನ ಖ್ಯಾತಿ ಪಡೆಯಿತು. ನಾಗಭಟನ ಪೂರ್ವಿಕರ ವಿಷಯವಾಗಿ ನಮಗೇನೂ ತಿಳಿಯದು. ಗೂರ್ಜರ ಅರಸನನ್ನು ರಾಷ್ಟ್ರಕೂಟರ ದಂತಿದುರ್ಗ ಸೋಲಿಸಿ ತಾನು ಹಿರಣ್ಯಗರ್ಭದಾನವನ್ನು ಮಾಡುವ ಸಮಯದಲ್ಲಿ ಈತನನ್ನು ಪ್ರತೀಹಾರ ಎಂದರೆ ದ್ವಾರಪಾಲಕನಾಗಿ ನೇಮಿಸಿದನೆಂದು ಶಾಸನ ಗಳಲ್ಲಿ ಹೇಳಿದೆ. ಈತ ಲಾಟ (ದಕ್ಷಿಣ ಗುಜರಾತ್) ಮತ್ತು ಸಿಂಧ್ ಪ್ರದೇಶಗಳನ್ನು ಆಕ್ರಮಿಸಿದ. ದಂತಿದುರ್ಗ 755 ರವರೆಗೆ ಆಳಿದನೆಂದು ನಮಗೆ ತಿಳಿದಿದೆ. ಪ್ರತೀಹಾರ ನಾಗಭಟ ತನ್ನ ಸಾರ್ವಭೌಮನೆಂದು 756ರಲ್ಲಿ ಭರುಕಚ್ಛದ ಅರಸ ಹೇಳಿಕೊಂಡಿರುವ ವಿಷಯ ನಮಗೆ ಇತರ ಮೂಲಗಳಿಂದ ತಿಳಿದಿದೆ. ಆದಕಾರಣ ನಾಗಭಟ 756–58ರ ನಡುವೆ ದಂತಿದುರ್ಗ ನಿಂದ ಸೋಲಿಸಲ್ಪಟ್ಟಿರಬೇಕು. ಅಂದರೆ ಈತ ಸು. 730–52ರ ವರೆಗೆ ಆಳಿದನೆಂದು ಊಹಿಸಬಹುದು.

ವತ್ಸರಾಜ: ದಂತಿದುರ್ಗನ ವಿಜಯ ಅಲ್ಪಕಾಲದ್ದಾಗಿತ್ತು. ಆತ ಸ್ವದೇಶಕ್ಕೆ ಮರಳಿದೊಡನೆ ಪ್ರತೀಹಾರರು ಪುನಃ ಸ್ವತಂತ್ರರಾದರು. ನಾಗಭಟನ ಅನಂತರ ಆತನ ಸೋದರನ ಮಕ್ಕಳಾದ ಕಕ್ಕುಕ ಮತ್ತು ದೇವರಾಜರು ಕೆಲಕಾಲ ಆಳಿದರು. ಬಳಿಕ ಪಟ್ಟಕ್ಕೆ ಬಂದ ದೇವರಾಜನ ಮಗನಾದ ವತ್ಸರಾಜ ಪ್ರತೀಹಾರ ರಾಜ್ಯವನ್ನು ಬಲಪಡಿಸಿದ. 778ರಲ್ಲಿ ರಚಿತವಾದ್ದೆಂದು ಹೇಳಲಾದ ಕುವಲಯಮಾಲಾ ಎಂಬ ಜೈನಗ್ರಂಥದ ಕರ್ತೃ ಅದನ್ನು ಜಾವಾಲಿಪುರದಲ್ಲಿ (ಜಾಲೋರ) ರಣಹಸ್ತಿನ್ ವತ್ಸರಾಜ ಆಳುತ್ತಿದ್ದಾಗ ರಚಿಸಿದ್ದಾಗಿ ಹೇಳಿಕೊಂಡಿದ್ದಾನೆ. ಈ ವತ್ಸರಾಜ ಪ್ರತೀಹಾರ ವತ್ಸರಾಜನೆಂದು ಸಾಮಾನ್ಯವಾಗಿ ಒಪ್ಪಲಾಗಿದೆ. ಈತ 778ರಲ್ಲೇ ಪಟ್ಟಕ್ಕೆ ಬಂದ. ಮಾಳವ ಮತ್ತು ಪೂರ್ವ ರಾಜಪುತಾನಗಳನ್ನೊಳಗೊಂಡ ಇವನ ರಾಜ್ಯ ಕ್ರಮೇಣ ವಿಸ್ತಾರವಾಯಿತು. ಉತ್ತರ ಭಾರತದ ಹಲವು ಪ್ರದೇಶಗಳು ಈತನ ಆಳಿಕೆಗೊಳಪಟ್ಟವು. ಪೂರ್ವಾಭಿಮುಖವಾಗಿ ರಾಜ್ಯವನ್ನು ವಿಸ್ತರಿಸುತ್ತಿದ್ದ ಈತ ಸಹಜವಾಗಿಯೇ ಬಂಗಾಲದ ಪಾಲವಂಶದ ಧರ್ಮಪಾಲನನ್ನು ರಣರಂಗದಲ್ಲಿ ಎದುರಿಸಬೇಕಾಯಿತು. ಪಶ್ಚಿಮಾಭಿಮುಖ ವಾಗಿ ನುಗ್ಗುತ್ತಿದ್ದ ಧರ್ಮಪಾಲ ವತ್ಸರಾಜನಿಂದ ಸೋತ. ಆದರೆ ಅಷ್ಟರಲ್ಲೇ ರಾಷ್ಟ್ರಕೂಟ ಧ್ರುವ ಉತ್ತರದತ್ತ ದಂಡೆತ್ತಿ ಬಂದ. ಇದು ತ್ರಿಕೋಣ ಸ್ಪರ್ಧೆಯಾಗಿ ಮಾರ್ಪಟ್ಟಿತು.

ಈ ವೇಳೆಗೆ ಕನೌಜ್ ಉತ್ತರಭಾರತದ ರಾಜಕೀಯದಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಹರ್ಷನ ಕಾಲದಲ್ಲಿ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಈ ನಗರವನ್ನು ಕೈವಶ ಮಾಡಿಕೊಳ್ಳುವುದು ಅಂದಿನ ಅರಸರಿಗೆ ಹೆಮ್ಮೆಯ ವಿಷಯವೆನಿಸಿತ್ತು. ಕನೌಜಿನಲ್ಲಿ 8ನೆಯ ಶತಮಾನದ ಉತ್ತರಾರ್ಧದಲ್ಲಿ ಆಯುಧ ಎಂದು ಅಂತ್ಯವಾಗುವ ಹೆಸರಿನ ಅರಸರು ಆಳುತ್ತಿದ್ದರು. 783ರಲ್ಲಿ ಇಂದ್ರಾಯುಧ ಇಲ್ಲಿಯ ಅರಸನಾಗಿದ್ದ. ಬಹುಶಃ ಈತನ ಸೋದರ ಸಂಬಂಧಿಯಾಗಿದ್ದ ಚಕ್ರಾಯುಧ ಇವನ ಪ್ರತಿಸ್ಪರ್ಧಿಯಾಗಿದ್ದ. ಇವರಿಬ್ಬರ ನಡುವಣ ವಿರಸದ ಪ್ರಯೋಜನವನ್ನು ಪಡೆದು ವತ್ಸರಾಜ ಇಂದ್ರಾಯುಧನನ್ನು ಸೋಲಿಸಿದ. ಆದರೂ ಆತನನ್ನು ತನ್ನ ಮಾಂಡಲಿಕನಾಗಿ ಕನೌಜಿನ ಸಿಂಹಾಸನದ ಮೇಲೆ ಕುಳ್ಳಿರಿಸಿದ. ಅಷ್ಟರಲ್ಲಿ ಧರ್ಮಪಾಲ ವತ್ಸರಾಜನ ಮೇಲೇರಿ ಬಂದ. ವತ್ಸರಾಜ ಅವನನ್ನು ಸೋಲಿಸಿದ. ಇವನಿಗೆ ಶಾಕಂಭರಿಯ ಚಾಹಮಾನ ವಂಶದ ದುರ್ಲಭರಾಜ ಸಹಾಯಕನಾಗಿ ನಿಂತು ಬಂಗಾಲ ದವರೆಗಿನ ಪ್ರದೇಶವನ್ನು ಆಕ್ರಮಿಸಿದನೆಂದು ಸಾಹಿತ್ಯದ ಆಧಾರಗಳಿಂದ ತಿಳಿದು ಬರುತ್ತದೆ. ಆದರೆ ಆತ ಈ ವಿಜಯವನ್ನು ದೃಢಪಡಿಸಿಕೊಳ್ಳುವುದರೊಳಗಾಗಿಯೇ ರಾಷ್ಟ್ರಕೂಟ ಧ್ರುವ ಉತ್ತರಕ್ಕೆ ದಂಡೆತ್ತಿ ಬಂದು, ವತ್ಸರಾಜನನ್ನು ಸಂಪೂರ್ಣವಾಗಿ ಸೋಲಿಸಿದ. ತಾನು ಆಕ್ರಮಿಸಿದ್ದ ಪ್ರದೇಶಗಳನ್ನೆಲ್ಲ ಬಿಟ್ಟುಕೊಟ್ಟು ತನ್ನ ಮೂಲಸ್ಥಾನವನ್ನು ಉಳಿಸಿಕೊಳ್ಳಲು ವತ್ಸರಾಜ ಬಹಳ ಶ್ರಮಪಟ್ಟ. ಈ ಸಮಯದಲ್ಲಿ ಧರ್ಮಪಾಲ ಸಹ ಸೋಲನ್ನನುಭವಿಸಿದ ನಾದರೂ, ಅವನಿಗೆ ಹೆಚ್ಚಿನ ಹಾನಿಯುಂಟಾಗಲಿಲ್ಲ. ಅಲ್ಲದೆ, ಧ್ರುವ ಹಿಂದಿರುಗಿದ ಕೂಡಲೇ ಧರ್ಮಪಾಲ ಕನೌಜಿನ ಸಿಂಹಾಸನವನ್ನು ಕಳೆದುಕೊಂಡ. ಚಕ್ರಾಯುಧ ಧರ್ಮಪಾಲನ ಪ್ರತಿನಿಧಿಯಾಗಿ ಆ ಸ್ಥಾನವನ್ನು ಪಡೆದ.

ಇಮ್ಮಡಿ ನಾಗಭಟ: ಧ್ರುವನಿಂದ ಸೋತ ಅನಂತರ ವತ್ಸರಾಜನ ಗತಿ ಏನಾಯಿತೆಂಬುದು ತಿಳಿಯದು. ರಾಜಪುಟಾಣದ ಕೆಲವು ಭಾಗಗಳನ್ನು ಮಾತ್ರ ಉಳಿಸಿಕೊಳ್ಳಲು ಶಕ್ತನಾದ ಈತ ಕೆಲವು ವರ್ಷಗಳವರೆಗೆ ಆಳಿರಬೇಕು. ಆದರೆ ಅವನ ಮಗನಾದ ಇಮ್ಮಡಿ ನಾಗಭಟ ಪುನಃ ತನ್ನ ರಾಜ್ಯವನ್ನು ಅಭಿವೃದ್ಧಿಗೊಳಿಸಿದ. ಈತನ ಮೊಮ್ಮಗನಾದ ಭೋಜನ ಗ್ವಾಲಿಯರ್ ಶಾಸನದಲ್ಲಿ ಈತ ಚಕ್ರಾಯುಧನನ್ನೂ ವಂಗಾಧಿಪತಿಯನ್ನೂ ಸೋಲಿಸಿದನೆಂದೂ ಆಂಧ್ರ, ಸೈಂಧವ, ವಿದರ್ಭ ಮತ್ತು ಕಳಿಂಗ ದೇಶಗಳ ಅರಸರು ಈತನಿಗೆ ಶರಣಾದರೆಂದೂ ಹೇಳಿದೆ. ಇವನ ಸಾಮಂತ ಅರಸರ ಶಾಸನಗಳಲ್ಲಿಯ ಹೇಳಿಕೆಗಳು ಈ ಸಂಗತಿಗಳನ್ನು ಬಹಳಮಟ್ಟಿಗೆ ದೃಢಪಡಿಸುತ್ತವೆ. ಆನರ್ತ, ಮಾಳವ, ಕಿರಾತ, ತುರುಷ್ಕ, ವತ್ಸ ಮತ್ತು ಮತ್ಸ್ಯಾಧಿಪತಿಗಳಿಗೆ ಸೇರಿದ ಗಿರಿದುರ್ಗಗಳನ್ನು ಈತ ಕಸಿದುಕೊಂಡನೆಂದು ಹೇಳಲಾಗಿದೆ. ಬಹುಶಃ ಇವು ನಾಗಭಟನ ಆಳಿಕೆಯ ಮೊದಲ ವರ್ಷಗಳ ಸಾಧನೆಗಳಾಗಿರಬಹುದು. ಅನಂತರ ಈತ ಕನೌಜಿನ ಮೇಲೆ ಧಾಳಿಯಿಟ್ಟ. ಚಕ್ರಾಯುಧನನ್ನು ಸೋಲಿಸಿ ಕನೌಜನ್ನು ಸ್ವಾಧೀನಪಡಿಸಿ ಕೊಂಡ. ಅಂದಿನಿಂದ ಕನೌಜ್ ಪ್ರತೀಹಾರರ ರಾಜಧಾನಿಯಾಯಿತು. ಇದು ಧರ್ಮಪಾಲ ನೊಡನೆ ಯುದ್ಧಕ್ಕೆ ನಾಂದಿಯಾಯಿತು. ಈ ಸಲ ನಾಗಭಟನಿಗೆ ವಿಜಯ ದೊರಕಿತು.

ಆದರೆ ನಾಗಭಟನ ಅದೃಷ್ಟವೂ ಸರಿಯಾಗಿರಲಿಲ್ಲ. ಹಿಂದಿನ ತ್ರಿಕೋಣ ಸ್ಪರ್ಧೆಯಲ್ಲಿ ಭಾಗಿಗಳಾಗಿದ್ದ ರಾಷ್ಟ್ರಕೂಟರು ಪುನಃ ಉತ್ತರಭಾರತದ ರಾಜಕೀಯದಲ್ಲಿ ತಲೆಹಾಕಿದರು. ಪ್ರತೀಹಾರರನ್ನರಂತೂ ಅವರು ಆಜನ್ಮಶತ್ರುಗಳಂತೆಯೆ ಕಂಡರು. ಮುಮ್ಮಡಿ ಗೋವಿಂದ ಪಟ್ಟಕ್ಕೆ ಬಂದಾಗ ಸು.794–95ರಲ್ಲಿ ಒಂದು ಬಾರಿ ನಾಗಭಟ ರಾಷ್ಟ್ರಕೂಟರನ್ನು ಕೆಣಕಿದ. ದಕ್ಷಿಣದಲ್ಲಿಯ ತಲಕಾಡಿನ ಗಂಗರೊಡನೆ ಕಾದುತ್ತಿದ್ದ ಗೋವಿಂದನ ಪ್ರತಿನಿಧಿಗಳಾಗಿದ್ದ ಗುಜರಾತಿನ ರಾಷ್ಟ್ರಕೂಟ ಇಂದ್ರ ಮತ್ತು ಅವನ ಮಗ ಕರ್ಕರು ನಾಗಭಟನನ್ನೆದುರಿಸಿದರು. ಇದರಲ್ಲಿ ಯಾರು ವಿಜಯಿಗಳಾದರೆಂದು ಹೇಳುವುದು ಕಷ್ಟ. ಆದರೆ ರಾಷ್ಟ್ರಕೂಟರು ಪ್ರತೀಹಾರರನ್ನು ತಡೆಯುವುದರಲ್ಲಿ ಯಶಸ್ವಿಗಳಾದರೆನ್ನುವುದು ಸ್ಪಷ್ಟ.

ಪರಿಸ್ಥಿತಿ ಅನುಕೂಲಕರವಾದ ಕೂಡಲೆ, ಸು. 809–10ರಲ್ಲಿ ರಾಷ್ಟ್ರಕೂಟ ಗೋವಿಂದ ಉತ್ತರಕ್ಕೆ ಧಾಳಿಯಿಟ್ಟ. ಧರ್ಮಪಾಲ ಹಾಗೂ ಚಕ್ರಾಯುಧರು ತಾವಾಗಿಯೇ ಇವನಿಗೆ ಶರಣಾದರು. ಬಹುಶಃ ಇವರಿಬ್ಬರೂ ಗೋವಿಂದನನ್ನು ನಾಗಭಟನ ವಿರುದ್ಧ ಕದನಕ್ಕೆ ಆಹ್ವಾನಿಸಿದಂತೆ ತೋರುತ್ತದೆ. ಈ ಸಲ ನಾಗಭಟ ಸೋತ. ಸಾಮ್ರಾಜ್ಯ ಸ್ಥಾಪಕನಾಗಬೇಕೆಂಬ ಅವನ ಕನಸು ಛಿದ್ರವಾಯಿತು. ಆದರೆ ಯಥಾಪ್ರಕಾರ ಗೋವಿಂದ ರಾಜ್ಯಕ್ಕೆ ಹಿಂದಿರುಗಲೇ ಬೇಕಾಯಿತು. ಇದರ ಪ್ರಯೋಜನವನ್ನು ಪಡೆದು ಧರ್ಮಪಾಲ ಹಾಗೂ ಅವನ ಮಗ ದೇವಪಾಲರು ಪುನಃ ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡರು. ಸ್ವಲ್ಪ ಕಾಲದವರೆಗೆ ಪ್ರತೀಹಾರರ ಪ್ರತಿಷ್ಠೆ ಕುಂದಿತು. ಆದರೆ ಕನೌಜ್, ಕಾಲಂಜರ ಕೋಟೆ, ಗ್ವಾಲಿಯರ್‌ಗಳನ್ನೊಳಗೊಂಡ ಪ್ರದೇಶಗಳೆಲ್ಲ ನಾಗಭಟನ ವಶದಲ್ಲೇ ಉಳಿದವು.

ಭೋಜ: ನಾಗಭಟ 833 ರವರೆಗೆ ಆಳಿದನೆಂದು ಊಹಿಸಲಾಗಿದೆ. ಇವನ ಮಗನಾದ ರಾಮಭದ್ರ ಕೇವಲ 3 ವರ್ಷಗಳ ಕಾಲ ಆಳಿದ. ಈತನ ಕಾಲದಲ್ಲಿ ರಾಜ್ಯ ಶತ್ರುಗಳ ಧಾಳಿಗೆ ಈಡಾಗಿ ದುಸ್ಥಿತಿಗೆ ಬಂತು. ಬಂಗಾಲದ ದೇವಪಾಲ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದ್ದೂ ಅವನಿಗೆ ಸಮಾನವಾದ ಶಕ್ತಿ ಇವನಲ್ಲಿಲ್ಲದ್ದೂ ಇದಕ್ಕೆ ಕಾರಣಗಳು. ರಾಮಭದ್ರನ ಮಗ ಭೋಜ. ಭಗವತೀ ಭಕ್ತನಾದ ಈತನಿಗೆ ಪ್ರಭಾಸ, ಆದಿ ವರಾಹ ಮತ್ತು ಮಿಹಿರ ಎಂಬ ಹೆಸರುಗಳು ಇದ್ದವು. ಇವನು 836ರಲ್ಲಿ ಪಟ್ಟಕ್ಕೆ ಬಂದು 882ರವರೆಗೆ ಆಳಿದ. ಈತನ ಆಳಿಕೆಯ ಮೊದಲ ಭಾಗದಲ್ಲಿ ವಿಜಯದ ಸುಖವನ್ನೂ ಸೋಲಿನ ಕಹಿಯನ್ನೂ ಉಂಡ. ಇವನ ಯೋಜನೆಗಳು ಮಿಶ್ರಫಲವನ್ನು ನೀಡಿದವು. ರಾಮಭದ್ರನ ಸಡಿಲವಾದ ಆಳಿಕೆಯಿಂದಾಗಿ ಜೋಧಪುರದ ಪ್ರತೀಹಾರರು ಸ್ವತಂತ್ರರಾದರು. ಹಿಂದೆ ಇಮ್ಮಡಿ ನಾಗಭಟನಿಗೆ ಈ ಮನೆತನದ ಕಕ್ಕ ನೆರವಾಗಿದ್ದನಾದರೂ ಈಗ ಸ್ವತಂತ್ರವಾಗಿ ಆಳತೊಡಗಿದ್ದ. 837ರ ಜೋಧಪುರದ ಶಾಸನದಲ್ಲಿ ಈತನ ಪತ್ನಿಯನ್ನು ಮಹಾರಾಜ್ಞಿ ಎಂದು ಕರೆಯಲಾಗಿದೆ. ಇವನ ಮಗನಾದ ಬಾಉಕ ಸಹ ಸ್ವತಂತ್ರನಾಗಿ ಸ್ವಲ್ಪಕಾಲ ಆಳಿದಂತೆ ತೋರುತ್ತದೆ. ಆದರೆ 843ರ ವೇಳೆಗೆ ಗೂರ್ಜರಾತ್ರದ ಮೇಲೆ ಭೋಜ ತನ್ನ ಅಧಿಕಾರವನ್ನು ಸ್ಥಾಪಿಸಿದ. ಇದು ಅವನ ಮುಖ್ಯ ಸಾಧನೆಗಳಲ್ಲಿ ಒಂದು.

ಮುಂದೆ ಅನುವಂಶಿಕ ಶತ್ರುಗಳೆನಿಸಿದ್ದ ರಾಷ್ಟ್ರಕೂಟರ ವಿರುದ್ಧ 860ಕ್ಕೆ ಮೊದಲು ಇವನು ದಂಡೆತ್ತಿಹೋಗಿ ರಾಷ್ಟ್ರಕೂಟರ ಧ್ರುವನಿಗೆ ಸೋತ. ಇದಕ್ಕೂ ಮೊದಲು ಪಾಲರ ದೇವಪಾಲನೂ ಇವನನ್ನು ಕದನದಲ್ಲಿ ಸೋಲಿಸಿದ್ದ. ಇದರಂತೆಯೇ ಕಳಚುರಿ ಮನೆತನದ ಕೊಕ್ಕಲನಿಂದಲೂ ಇವನು ಸೋಲನ್ನನುಭವಿಸಿದ. ಜೋಧಪುರದ ಪ್ರತೀಹಾರರೂ ಪುನಃ ಗೂರ್ಜರಾತ್ರದ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರೆಂದು 861ನೆಯ ವರ್ಷದ ಆ ಮನೆತನದ ಕಕ್ಕುಕನ ಎರಡು ಶಾಸನಗಳಿಂದ ವ್ಯಕ್ತವಾಗುತ್ತದೆ.

ತನ್ನ ಆಳಿಕೆಯ ದ್ವಿತೀಯ ಭಾಗದಲ್ಲಿ ಭೋಜನಿಗೆ ಕ್ರಮೇಣ ವಿಜಯಲಕ್ಷ್ಮಿ ಒಲಿದಳು. ಪಾಲರ ದೇವಪಾಲನ ಮರಣ ಇವನ ಹಾದಿಯನ್ನು ಸುಗಮಗೊಳಿಸಿತು. ದೇವಪಾಲನ ಅನಂತರ ಆಳಿದ ಇಬ್ಬರು ಅರಸರು ಅವನಷ್ಟು ಬಲಯುತರಾಗಿರಲಿಲ್ಲ. ಕರ್ನಾಟಕದಲ್ಲಿಯ ರಾಷ್ಟ್ರಕೂಟ ಅಮೋಘವರ್ಷ ಶಾಂತಿಪ್ರಿಯನಾಗಿದ್ದರೂ, ವೆಂಗಿಯನ್ನು ಜಯಿಸಿದ ಬಳಿಕ ಪಾಲರ ವಿರುದ್ಧ ದಂಡೆತ್ತಿಹೋದದ್ದು ಭೋಜನಿಗೆ ಮತ್ತಷ್ಟು ಸಹಾಯಕವಾಯಿತು. ಅವರ ದುಸ್ಥಿತಿಯನ್ನು ಲಕ್ಷಿಸಿ ಬಂಗಾಲದ ಮೇಲೆ ದಂಡೆತ್ತಿ ಹೋಗಿ ನಾರಾಯಣ ಪಾಲನನ್ನು ಸೋಲಿಸಿ, ಅವನ ರಾಜ್ಯಕ್ಕೆ ಸೇರಿದ್ದ, ಪಶ್ಚಿಮ ಭಾಗದ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡ.

ಭೋಜ ರಾಷ್ಟ್ರಕೂಟ ಧ್ರುವನ ಕೈಯಲ್ಲಿ ಸೋಲನ್ನು ಅನುಭವಿಸಿದ್ದರೂ ಅವನ ಅನಂತರ ಬಂದ ಇಮ್ಮಡಿ ಕೃಷ್ಣನ ಕಾಲದಲ್ಲಿ ಪುನಃ ಅವರ ವಿರುದ್ಧ ದಂಡೆತ್ತಿ ಹೋಗಿ ನರ್ಮದಾ ನದಿತೀರದಲ್ಲಿ ನಡೆದ ಕದನದಲ್ಲಿ ಅವರನ್ನು ಸೋಲಿಸಿ, ಮಾಳವ ಹಾಗೂ ಗುಜರಾತಿನ ಖೇಟಕವನ್ನು (ಈಗಿನ ಖೈರಾ ಜಿಲ್ಲೆ) ವಶಪಡಿಸಿಕೊಂಡ. ಇವೆರಡೂ ಬಹಳ

ಕಾಲ ಇವನ ಅಧೀನದಲ್ಲಿ ಉಳಿಯದಿದ್ದರೂ ಕಾಠಿಯವಾಡದ ಪ್ರದೇಶ ಮಾತ್ರ ಸಂಪೂರ್ಣವಾಗಿ ಸ್ವಾಧೀನವಾಯಿತು. ಪಶ್ಚಿಮದ ಕಡೆ ಪಂಜಾಬಿನವರೆಗೂ ಪೂರ್ವದಲ್ಲಿ ಅವಧದವರೆಗೂ ಹಬ್ಬಿದ ಇವನ ರಾಜ್ಯ ಉತ್ತರ ಭಾರತದಲ್ಲಿ ಆಗ ಪ್ರಬಲವೂ ವಿಸ್ತಾರವೂ ಆದ ಸಾಮ್ರಾಜ್ಯವೆನಿಸಿಕೊಂಡಿತು. ಕನೌಜ್ ಈ ರಾಜ್ಯದ ರಾಜಧಾನಿಯಾಗಿ ಮೆರೆಯಿತು. ಈ ರಾಜ್ಯ ಸಮೃದ್ಧಿಯಿಂದೊಡಗೂಡಿತ್ತೆಂದು ಸುಲೇಮಾನನೆಂಬ ಅರಬ್ ಲೇಖಕ ತನ್ನ ವರದಿಯಲ್ಲಿ ವರ್ಣಿಸಿ, ಇದರ ಅರಸ ಮಹಮ್ಮದೀಯರ ಪ್ರಬಲ ವಿರೋಧಿಯೆಂದು ತಿಳಿಸಿದ್ದಾನೆ. ಭೋಜ ರಾಜ್ಯವನ್ನು ಪರಕೀಯರ ಧಾಳಿಯಿಂದ ರಕ್ಷಿಸಿದನೆಂಬುದನ್ನು ಇದು ಸೂಚಿಸುತ್ತದೆ.

ಅನಂತರದ ಅರಸರು: 885ರಲ್ಲಿ ಭೋಜನ ಮಗ ನಾಗ ಮಹೇಂದ್ರಪಾಲ ರಾಜ್ಯಭಾರ ಮಾಡತೊಡಗಿದ. ಈತನಿಗೆ ನಿರ್ಭಯರಾಜ, ಮಹೇಂದ್ರಾಯುಧ ಎಂಬ ಹೆಸರುಗಳೂ ಇದ್ದುವು. ಪಿತ್ರಾರ್ಜಿತವಾದ ರಾಜ್ಯವನ್ನು ಕಾಪಾಡಿದ್ದಲ್ಲದೆ ಈತ ಅದನ್ನು ವಿಸ್ತರಿಸಿದ. ಮಗಧ ಹಾಗೂ ಉತ್ತರ ಬಂಗಾಲದ ಹಲವು ಭಾಗಗಳು ಇವನ ವಶವಾದುವು. ಈತನ ಸಮಕಾಲೀನನಾದ ರಾಜಶೇಖರ ಪ್ರಸಿದ್ಧನಾದ ನಾಟಕಕರ್ತೃವೂ ಕಾವ್ಯಶಾಸ್ತ್ರಜ್ಞನೂ ಆಗಿದ್ದ. ಬಾಲರಾಮಾಯಣ, ಬಾಲಭಾರತ, ವಿದ್ಧಶಾಲಭಂಜಿಕಾ, ಕರ್ಪೂರ ಮಂಜರೀ ಇವು ಇವನು ರಚಿಸಿದ ನಾಟಕಗಳು. ಭುವನಕೋಶವೆಂಬುದು ಭೂಗೋಳಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಈ ಗ್ರಂಥಗಳು ಅಂದಿನ ರಾಜಕೀಯ ಪರಿಸ್ಥಿತಿಗಳನ್ನು ತಿಳಿಯಲು ಸಹಾಯಕವಾಗದಿದ್ದರೂ ಆ ಕಾಲದ ಸಾಮಾಜಿಕ ಪರಿಸ್ಥಿತಿಗಳ ಮೇಲೆ ಬೆಳಕು ಬೀರುತ್ತವೆ. ಕನೌಜ್ ನಗರದ ಅಂದಿನ ವೈಭವವನ್ನು ಸಾರುತ್ತವೆ. ಕಾವ್ಯ ಮೀಮಾಂಸೆಯನ್ನು ರಚಿಸಿದ ರಾಜಶೇಖರನ ಪತ್ನಿ ಆವಂತಿಸುಂದರಿ ಚಾಹಮಾನ ಕುಲಕ್ಕೆ ಸೇರಿದವಳು. ಕವಿ ನಿರ್ಭಯ ಅಥವಾ ಮಹೇಂದ್ರಪಾಲನ ಗುರುವಾಗಿದ್ದನೆಂದು ಹೇಳಿದೆ. ಈತ ಪ್ರತೀಹಾರ ಮಹೇಂದ್ರಪಾಲನೆಂದು ಗುರುತಿಸಲಾಗಿದೆ. ಬಾಲಭಾರತ ಆತನ ಮಗನಾದ ಮಹೀಪಾಲನಿಗಾಗಿ ರಚಿತವಾಯಿತು.

ಮಹೇಂದ್ರಪಾಲನಿಗೆ ಇಬ್ಬರು ಪತ್ನಿಯರಿದ್ದರು. ಹಿರಿಯಳ ಮಗ ಇಮ್ಮಡಿ ಭೋಜ. ಕಿರಿಯಳ ಮಗ ವಿನಾಯಕಪಾಲ. ಈತನಿಗೆ ಮಹೀಪಾಲನೆಂಬ ಇನ್ನೊಂದು ಹೆಸರೂ ಇತ್ತೆಂದು ಹಲವರು ಸೂಚಿಸಿದ್ದಾರೆ. ಇವರಿಬ್ಬರೂ ಭಿನ್ನರೆಂಬ ವಾದವೂ ಉಂಟು. ಮಹೇಂದ್ರಪಾಲನ ಬಳಿಕ ಸೋದರರಲ್ಲಿ ಅಧಿಕಾರಕ್ಕಾಗಿ ಜಗಳಗಳಾದುವು. 912ರಲ್ಲಿ ಮಹೀಪಾಲ ಸಿಂಹಾಸನವನ್ನೇರಿದ. ಈತ ಮುರಲ, ಮೇಕಲ, ಕಳಿಂಗ, ಕೇರಳ, ಕುಂತಲ ಮುಂತಾದವರನ್ನು ಸೋಲಿಸಿದನೆಂದು ರಾಜಶೇಖರ ಹೇಳಿದ್ದಾನೆ. ಇದು ಉತ್ಪ್ರೇಕ್ಷೆಯಾಗಿದ್ದಿರಬಹುದಾದರೂ ಈತ ತನಗೆ ಸ್ವಾಧೀನವಾದ ರಾಜ್ಯವನ್ನು ರಕ್ಷಿಸಿ, ಅದನ್ನು ಸ್ವಲ್ಪ ಮಟ್ಟಿಗಾದರೂ ವಿಸ್ತರಿಸಿರಬಹುದು. ಆದರೆ ಈತನ ಕಾಲದಲ್ಲೇ ರಾಷ್ಟ್ರಕೂಟರು ಪುನಃ ದಂಡೆತ್ತಿ ಬಂದು ಪ್ರತೀಹಾರ ಸಾಮ್ರಾಜ್ಯದ ಅಳಿವಿಗೆ ಕಾರಣರಾದರು. ರಾಷ್ಟ್ರಕೂಟ ಇಮ್ಮಡಿ ಕೃಷ್ಣ ಹಾಗೂ ಮುಮ್ಮಡಿ ಇಂದ್ರರು ಉತ್ತರದಲ್ಲಿಯ ರಾಜ್ಯಗಳ ಮೇಲೆ ಏರಿ ಹೋದರು. ಇಂದ್ರ ಮಾಳವದೇಶದ ಮೂಲಕ ಹಾಯ್ದು ಯಮುನಾ ನದಿಯನ್ನು ದಾಟಿ ಕನೌಜನ್ನು ಮುತ್ತಿ ಆ ನಗರವನ್ನು ಧ್ವಂಸ ಮಾಡಿದನೆಂದು ಶಾಸನವೊಂದರಲ್ಲಿ ಹೇಳಿದೆ. ಕನ್ನಡ ಕವಿ ಪಂಪ ಭಾರತದಲ್ಲಿ ತನ್ನ ಸ್ವಾಮಿಯಾದ ಮಹೀಪಾಲನನ್ನು. ರಾಷ್ಟ್ರಕೂಟರ ಸಾಮಂತನಾದ ಚಾಳುಕ್ಯ ನರಸಿಂಹ ಸೋಲಿಸಿ ಗಂಗೆಯವರೆಗೂ ಅಟ್ಟಿಸಿಕೊಂಡು ಹೋದನೆಂದು ಹೇಳಿದ್ದಾನೆ.

ಇಷ್ಟಾದರೂ ಮಹೀಪಾಲ ಧೃತಿಗೆಡಲಿಲ್ಲ. ರಾಷ್ಟ್ರಕೂಟರು ಸ್ವದೇಶಕ್ಕೆ ಮರಳಿದ ಕೂಡಲೇ ಚೇತರಿಸಿಕೊಂಡು ತಾನು ಕಳೆದುಕೊಂಡಿದ್ದ ಪ್ರದೇಶದಲ್ಲಿಯ ಅನೇಕ ಭಾಗಗಳನ್ನು ಮರಳಿ ಪಡೆದ. 931ರ ವೇಳೆಗೆ ಅವನ ರಾಜ್ಯ ಪಶ್ಚಿಮದಲ್ಲಿ ಸೌರಾಷ್ಟ್ರ, ಪೂರ್ವದಲ್ಲಿ ವಾರಾಣಸಿ ಮತ್ತು ದಕ್ಷಿಣದಲ್ಲಿ ಚಂದೇರಿಯವರೆಗೂ ಹಬ್ಬಿತ್ತು. ಮಾಳವವೂ ಈ ರಾಜ್ಯದ ಭಾಗವಾಗಿತ್ತು. ಆದರೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಇನ್ನೊಮ್ಮೆ ಪ್ರತೀಹಾರರನ್ನು ಸೋಲಿಸಿದಂತೆ ಕಾಣುತ್ತದೆ. ಅಲ್ಲದೆ ಅದುವರೆಗೆ ಸಾಮಂತರಾಗಿದ್ದ ಚಂದೇಲ, ಚೇದಿ (ಅಥವಾ ಕಳಚುರಿ) ಮತ್ತು ಪರಮಾರರು 940ರ ವೇಳೆಗೆ ಸ್ವತಂತ್ರರಾದರು. ಇದು ಪ್ರತೀಹಾರ ರಾಜ್ಯಕ್ಕೆ ಬಲವಾದ ಪೆಟ್ಟಾಗಿ ಆ ರಾಜ್ಯದ ಅಳಿವಿಗೆ ಕಾರಣವಾಯಿತು. ಮಹೀಪಾಲನ ಬಳಿಕ ಪುನಃ ಸೋದರರಲ್ಲಿ ಅಂತಃಕಲಹಗಳೇರ್ಪಟ್ಟವು. ಇದರ ಪರಿಣಾಮವಾಗಿ ರಾಜ್ಯ ಛಿದ್ರವಾಯಿತು. ಕೃಷ್ಣ 963ರ ಸುಮಾರಿಗೆ ಉತ್ತರಕ್ಕೆ ದಂಡೆತ್ತಿ ಬಂದು ಅಳಿದುಳಿದ ಗೂರ್ಜರರನ್ನು ಸೋಲಿಸಿದ. ಇದರೊಂದಿಗೆ ಪ್ರತೀಹಾರ ರಾಜ್ಯ ಕಣ್ಮರೆಯಾಯಿತು. (ಬಿ.ಆರ್.ಜಿ.)

***ಗೆಟಿಸ್‌ಬರ್ಗ್ ಕದನ:*** ಅಮೆರಿಕನ್ ಅಂತರ್ಯುದ್ಧದಲ್ಲಿ ನಿರ್ಧಾರಕ ಘಟ್ಟವೆಂದು ಪರಿಗಣಿಸಲಾದ ಒಂದು ಕದನ. ಅಮೆರಿಕ ಸಂಯುಕ್ತ ಸಂಸ್ಥಾನದ ದಕ್ಷಿಣ ಪೆನ್ಸಿಲ್ವೇನಿಯದಲ್ಲಿರುವ ಗೆಟಿಸ್‌ಬರ್ಗಿನಲ್ಲಿ, ಉತ್ತರದ ಒಕ್ಕೂಟ ರಾಜ್ಯಗಳಿಗೂ ಪ್ರತ್ಯೇಕಗೊಂಡಿದ್ದ ದಕ್ಷಿಣದ ರಾಜ್ಯಗಳಿಗೂ ಈ ಕದನ 1863 ಜುಲೈ 1 ರಿಂದ 3 ವರೆಗೆ ನಡೆಯಿತು. ಆ ವರ್ಷದ ಮೇ ತಿಂಗಳಲ್ಲಿ ಚಾನ್ಸೆಲರ್ಸ್‌ವಿಲ್‌ನಲ್ಲಿ ಒಕ್ಕೂಟ ಪಡೆಗಳಿಗೂ ಪ್ರಸಂಧಿ ಪಡೆಗಳಿಗೂ ಕದನ ನಡೆದ ಮೇಲೆ ಸು. 2 ತಿಂಗಳುಗಳ ಕಾಲ ವರ್ಜೀನಿಯದಲ್ಲಿ ಅನುಕೂಲಸ್ಥಾನಕ್ಕಾಗಿ ಯೋಜನೆ ಮಾಡುತ್ತಿದ್ದುವು. ಪ್ರಸಂಧಿ ಸೇನೆಯ ಅಧಿಪತಿ ಜನರಲ್ ಲೀ ಉತ್ತರಕ್ಕೆ ನುಗ್ಗುವ ಸಲುವಾಗಿ ತನ್ನ ಸೈನ್ಯವನ್ನು ಸಾಂದ್ರೀಕರಿಸುತ್ತಿದ್ದ. ಲಾಂಗ್‌ಸ್ಟ್ರೀಟ್, ಎವೆಲ್ ಮತ್ತು ಹಿಲ್‌ಗಳ ನಾಯಕತ್ವದಲ್ಲಿದ್ದ ಪಡೆಗಳನ್ನು ಜೂನ್ ತಿಂಗಳಲ್ಲಿ ಮುನ್ನುಗ್ಗಿಸಿದ. ಒಕ್ಕೂಟ ಪಡೆಗಳ ಅಧಿಪತಿ ಜೋಸೆಫ್ ಹೂಕರ್ ಇವರನ್ನು ಅನುಸರಿಸಿ ಸಾಗಿದ. ಲೀಯ ಸೈನ್ಯಕ್ಕೂ ವಾಷಿಂಗ್ಟನ್ನಿಗೂ ನಡುವೆಯೇ ತನ್ನ ಸೈನ್ಯ ಇರುವಂತೆ ಎಚ್ಚರ ವಹಿಸಿದ. ಜೂನ್ 27ರಂದು ಅಧ್ಯಕ್ಷ ಲಿಂಕನ್ ಹೂಕರನನ್ನು ತೆಗೆದು ಅವನ ಸ್ಥಾನದಲ್ಲಿ ಜಾರ್ಜ್ ಜಿ. ಮೀಡನನ್ನು ಅಧಿಪತಿಯಾಗಿ ನೇಮಿಸಿದ. ಲೀಯ ಕಡೆಯ ಅಶ್ವ ಪಡೆ ಬೇರೆ ಆಕ್ರಮಣಕಾರ್ಯವೊಂದರಲ್ಲಿ ಭಾಗವಹಿಸಿದ್ದರಿಂದ ಸಮಯಕ್ಕೆ ಸರಿಯಾಗಿ ಬರಲಿಲ್ಲ.ಆದ್ದರಿಂದ ತನ್ನ ಶತ್ರುಗಳ ಸ್ಥಾನವನ್ನು ಲೀ ಅರಿಯಲಾಗಲಿಲ್ಲ. ಅವನ ಪಡೆಗಳು ಗೆಟಿಸ್‌ಬರ್ಗ್ ಬಳಿಗೆ ಧಾವಿಸಿದುವು. ಪ್ರಸಂಧಿ ಪಡೆಗಳೂ ಒಕ್ಕೂಟ ಪಡೆಗಳೂ ಗೆಟಿಸ್‌ಬರ್ಗಿನ ಹೊರಗೆ ಜುಲೈ 1ರಂದು ಪರಸ್ಪರ ಎದುರಾಗಿ ಘರ್ಷಿಸಿದುವು. ಅಧಿಕ ಸಂಖ್ಯೆಯಲ್ಲಿದ್ದ ಲೀ ಪಡೆಯನ್ನು ತಡೆಗಟ್ಟುವ ಯತ್ನದಲ್ಲಿ ಒಕ್ಕೂಟ ಪಡೆಯ ನಾಯಕ ಜನರಲ್ ರೇನಾಲ್ಡ್ಸ್ ಸಾವಿಗೀಡಾದ. ಮೀಡನ ಸೈನ್ಯದ ಮುಖ್ಯ ಭಾಗ ರಾತ್ರಿಯಲ್ಲಿ ಆ ಎಡೆಗೆ ಬಂದು ಗೆಟಿಸ್‌ಬರ್ಗಿಗೆ ದಕ್ಷಿಣದಲ್ಲಿದ್ದ ಸಿಮೆಟರಿ ರಿಜ್ ಮೇಲೆ ನೆಲೆಗೊಂಡಿತು. ಲೀಯ ಪಡೆ ಪಶ್ಚಿಮದ ಸೆಮಿನರಿ ರಿಜ್ ಮೇಲೆ ನಿಂತಿತು. ಜುಲೈ 2 ರಂದು ಮಧ್ಯಾಹ್ನ ಮತ್ತೆ ಕದನ ಆರಂಭವಾಯಿತು. ಲೀಯ ಪಡೆಗಳು ಒಕ್ಕೂಟ ಪಡೆಗಳನ್ನು ರೌಂಡ್ ಟಾಪ್ ಮತ್ತು ಲಿಟ್ಲ್‌ರೌಂಡ್ ಟಾಪ್ ಎಂಬ ಎರಡು ಗುಡ್ಡಗಳ ಮೇಲಿಂದ ಕದಲಿಸಲು ಯತ್ನಿಸಿದುವು. ಒಕ್ಕೂಟ ಪಡೆಗಳಿಂದ ಕಲ್ಪ್ಸ್ ಹಿಲ್ ಎಂಬ ಗುಡ್ಡವನ್ನು ಹಿಡಿದು ಕೊಂಡುವು, ಆದರೆ ಮರುದಿನ ವಿಜಯ ಬದಲಾಯಿತು. ಒಕ್ಕೂಟ ಪಡೆಗಳು ಕಲ್ಪ್ಸ್ ಹಿಲ್ಲನ್ನು ಮತ್ತೆ ಗೆದ್ದುಕೊಂಡವು. ಅಂದು ಮಧ್ಯಾಹ್ನ ಲೀಯ ಸೇನೆ ಒಕ್ಕೂಟ ಸೇನೆಯೊಂದಿಗೆ ಫಿರಂಗಿ ಧಾಳಿ ಮಾಡಿತು. ಒಕ್ಕೂಟ ಸೇನೆ ಪ್ರತಿಯಾಗಿ ಧಾಳಿ ನಡೆಸಿತು. ಲೀಯ ಮದ್ದುದಾಸ್ತಾನು ಮುಗಿದುಹೋಗಿದ್ದರಿಂದ ಅಶ್ವಪಡೆ ಮುನ್ನುಗ್ಗಲು ಆಜ್ಞಾಪಿಸಬೇಕಾಯಿತು. ಜನರಲ್ ಪಿಕೆಟ್ ತನ್ನ 15,000 ಯೋಧರೊಂದಿಗೆ ಫಿರಂಗಿಯ ಮಳೆಯ ನಡುವೆ ನುಗ್ಗಿದ. ಆದರೆ ಅವನಿಗೆ ಸಾಕಷ್ಟು ಬೆಂಬಲ ಇಲ್ಲದ್ದರಿಂದ ಹಿನ್ನಡೆಯಬೇಕಾಯಿತು. ಪ್ರಸಂಧಿ ಸೇನೆ ಜರ್ಝರಿತವಾಗಿ ಹಿಂದಕ್ಕೆ ಸರಿದು, ಮತ್ತೆ ಮುನ್ನುಗ್ಗಲು ಸಮಯ ಕಾಯುತ್ತಿತ್ತು. ಆದರೆ ಅದು ಸಾಧ್ಯವಾಗಲೇ ಇಲ್ಲ. ಮರುದಿನ ಎರಡೂ ಕಡೆಯ ಸೈನ್ಯಗಳು ಇದಿರುಬದಿರಾಗಿ ನಿಂತೇ ಇದ್ದುವು. ಕದನ ಮುಂದುವರಿಯಲಿಲ್ಲ. ಜುಲೈ 5 ರಂದು ಲೀ ಸೈನ್ಯ ಹಿಂದಕ್ಕೆ ಪೊಟೊಮ್ಯಾಕ್ ಕಡೆಗೆ ಸರಿಯಲಾರಂಭಿಸಿತು. ಜುಲೈ 13 ರಂದು ಅದನ್ನು ದಾಟಿ ಹೋಯಿತು. ಲೀಯ ಸೈನ್ಯದ ದುರ್ಬಲಸ್ಥಿತಿಯ ಉಪಯೋಗ ಪಡೆದುಕೊಂಡು ಅದರ ಮೇಲೆ ಮೀಡ್‌ನ ಪಡೆಗಳೇ ಆಕ್ರಮಣ ನಡೆಸಬೇಕಾಗಿತ್ತೆಂದೂ ಅವನು ಹಾಗೆಮಾಡದೆ ಹೋದದ್ದು ತಪ್ಪೆಂದೂ ಮೀಡ್ ಟೀಕೆಗೆ ಒಳಗಾದ. ಗೆಟಿಸ್‌ಬರ್ಗಿನ ಮೂರು ದಿನಗಳ ಕದನದಲ್ಲಿ ಪ್ರಸಂಧಿ ಪಕ್ಷದ ಕಡೆ 28,000 ಸೈನಿಕರೂ ಒಕ್ಕೂಟ ಪಕ್ಷದ ಕಡೆ 23,000 ಸೈನಿಕರೂ ಸತ್ತರು. ಪ್ರಸಂಧಿ ಪಕ್ಷದವರಿಗೆ ಗೆಟಿಸ್‌ಬರ್ಗ್‌ನ ಕದನದಲ್ಲಿ ಸೋಲಾದ ದಿನವೇ ಅವರಿಗೆ ಮಿಸಿಸಿಪಿ ನದಿಯ ದಂಡೆಯ ಮೇಲೆ ವಿಕ್ಸ್‌ಬರ್ಗ್‌ನಲ್ಲಿ ನಡೆದ ಕದನದಲ್ಲೂ ಸೋಲುಂಟಾಯಿತು. ಪ್ರಸಂಧಿಯ ಅಂತ್ಯ ಆಗ ಆರಂಭವಾಯಿತೆನ್ನಬಹುದು.

ಆ ಕದನದಲ್ಲಿ ಸತ್ತ ಸೈನಿಕರ ರಾಷ್ಟ್ರೀಯ ಸ್ಮಾರಕವಾಗಿ ಗೆಟಿಸ್‌ಬರ್ಗ್ ರಣರಂಗವನ್ನು ರಾಷ್ಟ್ರಕ್ಕೆ ಅರ್ಪಿಸುವ ಸಮಾರಂಭದಲ್ಲಿ (1863 ನವೆಂಬರ್ 19) ಭಾಗವಹಿಸಿದ ಅಬ್ರಹಾಂ ಲಿಂಕನ್ ಮಾಡಿದ ಪುಟ್ಟ ಭಾಷಣ ಅತ್ಯುತ್ತಮ ಸಾಹಿತ್ಯವೆಂದೂ ಪ್ರಜಾಪ್ರಭುತ್ವದ ಶ್ರೇಷ್ಠತೆಯ ಅತ್ಯಂತ ಸಮರ್ಥ ಪ್ರತಿಪಾದನೆಯೆಂದೂ ಪ್ರಸಿದ್ಧವಾಗಿದೆ. ಅಮೆರಿಕದ ಪ್ರಖ್ಯಾತ ವಾಗ್ಮಿಯಾಗಿದ್ದ ಎಡ್ವರ್ಡ್ ಎವರೆಟ್ಟನ ಎರಡು ಗಂಟೆಗಳ ಭಾಷಣದ ಅನಂತರ ಮಾಡಿದ ಆ ಭಾಷಣ ಆಗ ಶ್ರೋತೃಗಳ ಗಮನ ಸೆಳೆಯಲಿಲ್ಲ. ಲಿಂಕನನಿಗೂ ಸಮಾಧಾನವೆನಿಸಿರಲಿಲ್ಲ. ಆದರೆ ಅಚ್ಚಾದಾಗ ಅದರ ಪ್ರಭಾವ ಎಷ್ಟೆಂಬುದು ಎಲ್ಲರಿಗೂ ತಿಳಿಯಿತು. ಎವರೆಟ್ಟನೂ ಅದನ್ನು ಹೊಗಳಿದ. ಲಿಂಕನ್ ಭಾಷಣಮಾಡಿದ ಸ್ಥಳದಲ್ಲಿ ಸ್ಮಾರಕವೊಂದಿದೆ. (ಆರ್.ಜಿ.ಎಸ್.)

**ಗ್ರೈಡಿನ್ಲಿ:** ಕಚ್ಚಾನಾಗಾ ಜನರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆ. ಈಕೆ 1915ರಲ್ಲಿ ಜನಿಸಿದಳು. ಮಣಿಪುರ, ಕಾಚಾರ್ ಹಾಗೂ ನಾಗಾ ಜಿಲ್ಲೆಗಳಲ್ಲಿ ಹಂಚಿಹೋಗಿದ್ದ ಕಚ್ಚಾನಾಗಾ ಜನರನ್ನು ಸಂಘಟಿಸಿದಳು (1931–32). 1925ರ ವೇಳೆಗೆ ಕಚ್ಚಾನಾಗಾ ಜನರಲ್ಲಿ ಹರಿದು ಹಂಚಿಹೋಗಿದ್ದ ತಮ್ಮನ್ನೆಲ್ಲ ಒಂದುಗೂಡಿಸಲು ಹೊಸ ನಾಗರಾಜನೆಂಬ ದೈವ ಪುರುಷನೊಬ್ಬ ಬರುತ್ತಾನೆಂದೂ ಅವನು ಬ್ರಿಟಿಷರನ್ನು ಓಡಿಸುತ್ತಾನೆಂದೂ ನಂಬಿಕೆ ಮನೆಮಾಡಿತ್ತು. ಜಾಡೋನಾಂಗ್ ಎಂಬುವವನು ಕಚ್ಚಾನಾಗಾಗಳ ರಕ್ಷಕನೆಂದು ಹೇಳಿಕೊಂಡು ಅವರನ್ನು ಸಂಘಟಿಸಿದ (1929). ಅಲ್ಲದೆ ಅವರಲ್ಲಿದ್ದ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದುಹಾಕಿ ಎಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಿದ. ಹಾಗಾಗಿ ಕಚ್ಚಾನಾಗಾಗಳು ತಮ್ಮದೇ ಆದ ಸ್ವತಂತ್ರ ನಾಗಾರಾಜ್ಯವನ್ನು ರೂಪಿಸಿಕೊಂಡರು. ಇದರಿಂದ ಕಳವಳಗೊಂಡ ಬ್ರಿಟಿಷ್ ಸರ್ಕಾರ ಜಾಡೋನಾಂಗ್‌ನನ್ನು ಬಂಧಿಸಿ ನೇಣು ಹಾಕಿತ್ತು (1931). ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಜಾಡೋನಾಂಗ್‌ನ ದೂರದ ಸಂಬಂಧಿಯಾದ ಗ್ರೈಡಿನ್ಲಿಯು ಕಚ್ಚಾನಾಗಾ ಜನರ ನೆರವಿಗೆ ಬಂದಳು. ಇವಳು ಕಚ್ಚಾನಾಗಾ ಜನ ವಾಸಮಾಡುತ್ತಿದ್ದ ಪ್ರದೇಶಗಳಲ್ಲೆಲ್ಲ ಸುತ್ತಾಡಿ, ಅವರನ್ನೆಲ್ಲ ಸಂಘಟಿಸಿ ಹೋರಾಟದ ಮನೋಭಾವನೆ ಮೂಡಿಸಿದಳು. ಈಕೆ ಅಸ್ಸಾಮಿನ ಕ್ರಾಂತಿಕಾರಿಗಳ ಸಂಪರ್ಕ ಪಡೆದು ಕ್ರಾಂತಿಕಾರಿ ಚಳವಳಿಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದಳು. ಅಂತಿಮವಾಗಿ ಸರ್ಕಾರದ ವಿರುದ್ಧ ದಂಗೆಯೇಳುವಂತೆ ಪ್ರಚೋದಿಸಿ, ಸರ್ಕಾರಕ್ಕೆ ಕಂದಾಯ ಸಲ್ಲಿಸದಂತೆ, ಬಲವಂತ ದುಡಿಮೆ ಮಾಡದಂತೆ ಕರೆನೀಡಿದಳು. ಬ್ರಿಟಿಷ್ ಸರ್ಕಾರ ಇವಳನ್ನು ಬಂಧಿಸಲು

ಪ್ರಯತ್ನಿಸಿದಾಗ ತಪ್ಪಿಸಿಕೊಂಡಳು. ಆಗ ಇವಳ ಹೆಸರಿನ ಎಲ್ಲಾ ತರುಣಿಯರನ್ನು ಬಂಧಿಸಿ ಪ್ರಶ್ನಿಸಲಾರಂಭಿಸಿದರು. 1932ರ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಗೈಡಿನ್ಲಿಯ ಅನುಯಾಯಿಗಳಿಗೂ ಬ್ರಿಟಿಷ್ ಸರ್ಕಾರಿ ಪಡೆಗಳಿಗೂ ನಡುವೆ ಕದನ ನಡೆಯಿತು. ಈಕೆಯ ಬೆಂಬಲಿಗರ ಹಳ್ಳಿಗಳಿಗೆ ಬೆಂಕಿ ಹಚ್ಚಲಾಯಿತು. ಈಕೆ ತನ್ನ ಬೆಂಬಲಿಗರ ರಕ್ಷಣೆಗಾಗಿ ಪುಲೋಮಿ ಎಂಬ ಗ್ರಾಮದಲ್ಲಿ ಬಿದಿರು ಕೋಟೆಯೊಂದನ್ನು ನಿರ್ಮಿಸಿದಳು. ಇದು 4,000 ಮಂದಿಗೆ ಆಶ್ರಯ ಕೊಡುವಂತಿತ್ತು. ಈ ನೆಲೆಯಿಂದ ಸರ್ಕಾರದ ವಿರುದ್ಧ ಕ್ರಾಂತಿಕಾರಕ ಚಟುವಟಿಕೆಗಳನ್ನು ರೂಪಿಸತೊಡಗಿದಳು. ಆದರೆ ಅನಿರೀಕ್ಷಿತವಾಗಿ ನಾಗಾ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ತನ್ನ ಸೈನಿಕ ಪಡೆಯೊಂದಿಗೆ ಧಾಳಿ ಮಾಡಿ ಗೈಡಿನ್ಲಿಯನ್ನೂ ಇವಳ ಅನುಯಾಯಿಗಳನ್ನೂ ಬಂಧಿಸಿದ. ಈಕೆಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಆದರೆ 1947ರಲ್ಲಿ ಭಾರತ ಸ್ವತಂತ್ರವಾದ ಮೇಲೆ ಬಿಡುಗಡೆಯಾದಳು. ಜವಾಹರಲಾಲ್ ನೆಹರೂ ಅವರು ಈಕೆಯನ್ನು ನಾಗಾರಾಣಿ ಎಂದು ಕರೆದ ಕಾರಣ ಈಕೆ ರಾಣಿಗೈಡಿನ್ಲಿ ಎಂದೇ ಪ್ರಸಿದ್ಧಳಾಗಿದ್ದಳು. (ಕೆ.ಎಸ್‌ಡಿ.)

**ಗೊಬೆಕ್ಲಿ ತೆಪೆ:** ತುರ್ಕಿ ದೇಶದ ಆಗ್ನೇಯ ಭಾಗದಲ್ಲಿ ಇತ್ತೀಚೆಗೆ ಶೋಧಿಸಲ್ಪಟ್ಟ ಪ್ರ.ಶ.ಪೂ.9,000–8,000 ಅವಧಿಯ ನವಶಿಲಾಯುಗದ ನೆಲೆ. ಇಲ್ಲಿ ಕ್ಲಾಸ್‌ಸ್ಮಿಡ್ ನೇತೃತ್ವದಲ್ಲಿ ಜರ್ಮನ್ ಆರ್ಕಿಯಲಾಜಿಕಲ್ ಇನ್‌ಸ್ಟಿಟ್ಯೂಟ್ ನಡೆಸಿದ ಉತ್ಖನನಗಳಲ್ಲಿ ಪ್ರ.ಶ.ಪೂ.ಸು.9000ದಲ್ಲಿ ಕೊನೆಗೊಂಡ ಮಣ್ಪಾತ್ರೆ ರಹಿತ ನವಶಿಲಾಯುಗ ಸಾಂಸ್ಕೃತಿಕ ಹಂತದಲ್ಲಿ ಪ್ರಾಯಶಃ ಪ್ರಪಂಚದಲ್ಲಿಯ (ಭಿನ್ನ ಸಂಸ್ಕೃತಿಯ ಮತ್ತು ರೀತಿಯ ಇಂಗ್ಲೆಂಡಿನ ಸ್ಟೋನ್ ಹೆಂಜ್ ಹೊರತುಪಡಿಸಿ) ಅತ್ಯಪೂರ್ವವಾದ ಒಂದು ಭವ್ಯ ಶಿಲಾಸ್ಮಾರಕ ಶೋಧವಾಗಿದೆ. ಸು.13 ಹೆ.ನಷ್ಟು ಸ್ಥಳದಲ್ಲಿ 9–30 ಮೀ ವ್ಯಾಸದ 7 ಏಕಕೇಂದ್ರ ವೃತ್ತಗಳ ಈ ಸ್ಮಾರಕದ ಪ್ರಮುಖ ಭಾಗ ಪ್ರ.ಶ.ಪೂ.ಸು.10,000 ವರ್ಷಗಳಷ್ಟು ಹಿಂದೆ ನಿರ್ಮಿಸಲ್ಪಟ್ಟಿದೆಯೆಂದು ತರ್ಕಿಸಲಾಗಿದೆ. ಇದರ ಮೂರು ವೃತ್ತಗಳನ್ನು ಉತ್ಖನನ ಮಾಡಲಾಗಿದೆ. ಇವುಗಳಲ್ಲಿ ಸುಟ್ಟ ಸುಣ್ಣ ಮತ್ತು ಮಣ್ಣಿನ ಮಿಶ್ರಣದ ನೆಲವಿತ್ತು. ಇದರ ಮೇಲೆ 2.70 ಮೀ ಎತ್ತರದಲ್ಲಿ ಚಾವಣಿಯಿದ್ದಿತ್ತೆಂದು ಕಾಣುತ್ತದೆ. ವೃತ್ತಗಳಲ್ಲಿ ಲ್ಯಾಟಿನ್ ಲಿಪಿಯ 'ಟಿ' ಆಕಾರದ ಚಪ್ಪಟೆ ಕಂಬಗಳಿದ್ದು ಇವುಗಳ ಮೇಲೆ ಗೂಳಿ, ನರಿ, ಕೊಕ್ಕರೆ, ಸಿಂಹ, ಬಾತುಕೋಳಿ, ಕೊಂಡಿಚೇಳು, ಇರುವೆ, ಜೇಡ, ಹಾವು ಮೊದಲಾದ ಜೀವರಾಶಿಗಳ ಶಿಲ್ಪವಿರುವುದು ಅತಿ ಅಪರೂಪ. ಈ ಕಂಬಗಳನ್ನು ಆವರಿಸಿ ಸುತ್ತಲೂ ಸು.1.8 ಮೀ ಎತ್ತರದ ಕಲ್ಲಿನ ಗೋಡೆಯಿದೆ. ಉತ್ಖನನದಲ್ಲಿ ಮನುಷ್ಯನ ಮೂರ್ತಿ, ಕರಡಿ ಮತ್ತು ಹದ್ದಿನ ತಲೆಯ ಶಿಲ್ಪಗಳು ಸಿಕ್ಕಿವೆ. ಇದನ್ನು ಎರಡು ಘಟ್ಟಗಳಲ್ಲಿ ಕಟ್ಟಲಾಗಿದ್ದು ಮೊದಲನೆಯ ಘಟ್ಟ ನವಶಿಲಾಯುಗ ಎ ಮತ್ತು ಕೊನೆಯ ಘಟ್ಟವನ್ನು ನವಶಿಲಾಯುಗ ಬಿ ಹಂತದಲ್ಲಿ ಪೂರೈಸಲಾಯಿತು. ಟಿ ಆಕಾರದ ಸ್ತಂಭಗಳು ಮತ್ತು ಪ್ರಾಣಿಶಿಲ್ಪಗಳು ಮೊದಲನೆಯ ಹಂತಕ್ಕೆ ಸೇರಿವೆ. ಸು.10–50 ಟನ್ ತೂಕದ ಕಂಬಗಳನ್ನು ಸು.0.5 ಕಿಮೀ ದೂರದ ಬೆಟ್ಟದ ಕಣಿವೆಯಲ್ಲಿ ಸಿದ್ಧಮಾಡಿ, ನಿಗದಿತ ಸ್ಥಳಕ್ಕೆ ಸಾಗಿಸಲಾಗಿದೆ. ಈ ಸ್ಮಾರಕದ ನಿರ್ಮಾಣ ಕಾರ್ಯದಲ್ಲಿ ಸು.500 ಜನರು ಕೆಲಸ ಮಾಡಿರಬೇಕೆಂದು ಅಂದಾಜು ಮಾಡಲಾಗಿದೆ.

ಈ ಬೃಹತ್ ಶಿಲಾಸ್ಮಾರಕದ ಹತ್ತಿರದ ಬೆಟ್ಟದ ಮೇಲೆ ಹಲವಾರು ಪ್ರಾಚೀನ ಸಮಾಧಿಗಳಿವೆ. ಇವು ಪ್ರಾಯಶಃ ಈ ಸ್ಮಾರಕದ ಮೊದಲನೆಯ ಘಟ್ಟದ ಕಾಲದ್ದಾಗಿರಬಹುದೆಂಬ ಅಭಿಪ್ರಾಯ. ಬೃಹತ್ ಶಿಲಾಸ್ಮಾರಕದ ಉತ್ಖನನದಲ್ಲಿ ಪ್ರಾಯಶಃ ಬಲಿಕೊಟ್ಟ ಜಿಂಕೆ, ಕರಡಿ, ಹೋತ, ಕುರಿ, ಎತ್ತು ನಾನಾ ಜಾತಿಯ ಹದ್ದುಗಳು ಮೊದಲಾದ ಕಾಡುಪ್ರಾಣಿಗಳ ಅಸ್ಥಿ ಅವಶೇಷಗಳು ದೊರೆತಿವೆ. ಇವೆಲ್ಲವನ್ನೂ ಗಮನಿಸಿ ಪ್ರಾಯಶಃ ಈ ಬೃಹತ್ ಶಿಲಾಸ್ಮಾರಕ ಹಿಂದಿನ ತಲೆಮಾರಿನ ಪಿತೃಗಳ ಆರಾಧನೆಗೆ ಸಂಬಂಧಿಸಿದೆಯೆಂದು ತರ್ಕಿಸಲಾಗಿದೆ. (ಎ.ಎಸ್.)

**ಗೋಪಾಲ ಕೃಷ್ಣ ಗೋಖಲೆ:** 1866–1915. ಭಾರತದ ಸ್ವರಾಜ್ಯ ಸ್ಥಾಪನೆಗಾಗಿ ನಿಷ್ಠೆಯಿಂದಲೂ ನಿಸ್ವಾರ್ಥಮನೋಭಾವದಿಂದಲೂ ವಿಧಾಯಕಮಾರ್ಗದಲ್ಲಿ ಶ್ರಮಿಸಿದ ಅಪ್ರತಿಮ ದೇಶಭಕ್ತ. 1866 ಮೇ 9ರಂದು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಚಿಪ್ಲೂನ್ ತಾಲ್ಲೂಕಿನ ಕೋತಳೂಕ ಗ್ರಾಮದಲ್ಲಿ ಜನಿಸಿದರು. ತಂದೆ ಕೃಷ್ಣರಾಯರು ಚಿತ್ಪಾವನ ಬ್ರಾಹ್ಮಣರು, ಅವರೊಬ್ಬ ಸಣ್ಣ ನೌಕರರಾಗಿದ್ದರು. ತಮ್ಮ ಹತ್ತನೆಯ ವರ್ಷದವರೆಗೂ ಗೋಖಲೆಯವರು ಹಳ್ಳಿಯಲ್ಲೇ ವಿದ್ಯಾಭ್ಯಾಸ ಪಡೆದರು. ಹಳ್ಳಿಯ ಜೀವನ, ರೈತರ ದಾರಿದ್ರ್ಯ ಇವುಗಳ ಪರಿಚಯ ಆ ಕಾಲದಲ್ಲಿ ಇವರಿಗೆ ಚೆನ್ನಾಗಿ ಉಂಟಾಯಿತು. ಅನಂತರ ತಮ್ಮ ಅಣ್ಣನಾದ ಗೋವಿಂದರಾಯರೊಂದಿಗೆ ವಿದ್ಯಾಭ್ಯಾಸ ಮುಂದುವರಿಸಲು ಕೊಲ್ಲಾಪುರಕ್ಕೆ ಹೋದರು. ಮೂರು ವರ್ಷಗಳ ಅನಂತರ ತಂದೆ ತೀರಿಕೊಂಡರು. ಗೋವಿಂದರಾಯರು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿ ಒಂದು ಸಣ್ಣ ನೌಕರಿಗೆ ಸೇರಿ ಸಂಸಾರದ ನಿರ್ವಹಣೆಯ ಭಾರ ಹೊರಬೇಕಾಯಿತು. ಆದರೆ ತಮ್ಮನ ವಿದ್ಯಾಭ್ಯಾಸ ನಿಲ್ಲಬಾರದೆಂಬ ಉದ್ದೇಶದಿಂದ ತಮ್ಮ ಅಲ್ಪ ಸಂಪಾದನೆಯಲ್ಲಿ ಅದಕ್ಕಾಗಿ ಮೀಸಲಿಡುತ್ತಿದ್ದರು. ಬಡ ವಿದ್ಯಾರ್ಥಿಗಳ ಕಷ್ಟಗಳೇನೆಂಬುದು ಗೋಖಲೆಯವರಿಗೆ ಚೆನ್ನಾಗಿ ಅರಿವಾಯಿತು. ಅಣ್ಣನ ತ್ಯಾಗವನ್ನೂ ಉಪಕಾರವನ್ನೂ ಇವರು ಎಂದೂ ಮರೆಯಲಿಲ್ಲ. 1881ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅನಂತರ ಕೊಲ್ಲಾಪುರದ ರಾಜಾರಾಂ ವಿದ್ಯಾಶಾಲೆಯಲ್ಲಿ ಎಫ್. ಎ. ಮುಗಿಸಿ, ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ 1884ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ವೇಳೆಗೆ ಇವರಿಗೆ ತಿಂಗಳಿಗೆ 20 ರೂಪಾಯಿ ವಿದ್ಯಾರ್ಥಿವೇತನ ದೊರೆಯುತ್ತಿದ್ದುದರಿಂದ ಇವರ ಅಣ್ಣನವರ ಹೊರೆ ಬಹಳಮಟ್ಟಿಗೆ ಹಗುರವಾಗಿತ್ತು.

ವಿದ್ಯಾಭ್ಯಾಸ ಮುಗಿದ ಮೇಲೆ ಗೋಖಲೆಯವರು ಹೆಚ್ಚಿನ ಧನಾರ್ಜನೆಯ ಸರ್ಕಾರಿ ಉದ್ಯೋಗವನ್ನು ಸೇರದೆ, ಡೆಕ್ಕನ್ ಎಜ್ಯುಕೇಷನ್ ಸೊಸೈಟಿಯ ಫರ್ಗ್ಯುಸನ್ ಕಾಲೇಜಿನ ಅಧ್ಯಾಪಕರಾದರು. ದಕ್ಷತೆಯಿಂದಲೂ ಮೇಧಾಶಕ್ತಿ ಮತ್ತು ಸ್ಮರಣ ಶಕ್ತಿಗಳಿಂದಲೂ ಸೌಜನ್ಯದಿಂದಲೂ ಶ್ರೇಷ್ಠ ಪ್ರಾಧ್ಯಾಪಕರೆಂಬ ಕೀರ್ತಿ ಸಂಪಾದಿಸಿದರು. ಕಾಲೇಜಿನಲ್ಲಿ ಇಂಗ್ಲಿಷ್, ಗಣಿತ, ಚರಿತ್ರೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ವಿಷಯಗಳನ್ನು ಬೋಧಿಸುತ್ತಿದ್ದರು.

1887ರಲ್ಲಿ ಗೋಖಲೆಯವರಿಗೆ ಮಹಾದೇವ ಗೋವಿಂದ ರಾನಡೆಯವರ ಸಂಪರ್ಕವುಂಟಾಯಿತು. ಅವರು ಪುಣೆಯಲ್ಲಿ ನ್ಯಾಯಾಧೀಶರಾಗಿದ್ದರು. ತಮ್ಮ ಪಾಂಡಿತ್ಯ, ದೇಶಭಕ್ತಿ, ಸರಳ ಜೀವನ, ಆಧ್ಯಾತ್ಮಿಕಪ್ರವೃತ್ತಿಗಳಿಂದ ಅವರು ಮಹಾರಾಷ್ಟ್ರದಲ್ಲಿ ಮಾತ್ರವಲ್ಲದೆ ದೇಶದಲ್ಲೇ ಅತ್ಯಂತ ಪ್ರಭಾವಶಾಲಿಗಳಲ್ಲೊಬ್ಬರೆನಿಸಿದ್ದರು. ಪುಣೆಯಲ್ಲಿ ಅವರ ಸತ್ಪ್ರೇರಣೆಯಿಂದ ಸೇವೆ ಸಲ್ಲಿಸುತ್ತಿದ್ದ ಒಂದು ಸಂಘವಿತ್ತು, ಅದೇ ಸಾರ್ವಜನಿಕ ಸಭಾ. ಜನರ ಕುಂದುಕೊರತೆಗಳನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸಿ ಅವುಗಳ ಬಗ್ಗೆ ಸರ್ಕಾರಕ್ಕೆ ಮನವಿಗಳನ್ನೊಪ್ಪಿಸುವುದು ಈ ಸಭೆಯ ಕಾರ್ಯಭಾರಗಳಲ್ಲೊಂದು. ಈ ಸಭೆ ಒಂದು ಪತ್ರಿಕೆಯನ್ನೂ ನಡೆಸುತ್ತಿತ್ತು.

ಗೋಖಲೆಯವರು ಈ ಸಭೆಯ ಕಾರ್ಯದರ್ಶಿಯಾಗಿಯೂ ತ್ರೈಮಾಸಿಕೆಯ ಸಂಪಾದಕರಾಗಿಯೂ ನಿಯುಕ್ತರಾದರು. ಸಂಘದ ಮನವಿಗಳನ್ನು ಸಿದ್ಧಪಡಿಸುವುದರಲ್ಲಿ, ಪತ್ರಿಕೆಯ ಸಂಪಾದನ ಕಾರ್ಯದಲ್ಲಿ ರಾನಡೆಯವರು ಗೋಖಲೆಯವರಿಗೆ ಒಳ್ಳೆಯ ತರಬೇತನ್ನು ಕೊಟ್ಟರು. ಗೋಖಲೆಯವರ ಜೀವನದ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ ವ್ಯಕ್ತಿ ದಾದಾಬಾಯಿ ನೌರೋಜಿ. ಅವರು 1893ರಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಲು ಇಂಗ್ಲೆಂಡಿನಿಂದ ಬಂದಿದ್ದರು. ಅವರು ಆ ಸಂದರ್ಭದಲ್ಲಿ ಪುಣೆಗೂ ಭೇಟಿ ಕೊಟ್ಟಾಗ ಅವರ ಸ್ವಾಗತ ಸಮಾರಂಭದಲ್ಲಿ ಮುಖ್ಯ ಪಾತ್ರ ವಹಿಸಿದ ಗೋಖಲೆಯವರು ಅವರನ್ನು ಪ್ರಥಮವಾಗಿ ಸಂದರ್ಶಿಸಿದರು. ಅವರಿಂದಲೂ ಸ್ಫೂರ್ತಿಯನ್ನೂ ಪಡೆದರು.

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ಗೋಖಲೆಯವರ ಸಂಪರ್ಕ 1889ರಲ್ಲಿ ಏರ್ಪಟ್ಟಿತು. ತಮ್ಮ ವಾಕ್ಪಟುತ್ವದಿಂದಲೂ ವಿಷಯ ಪ್ರತಿಪಾದನ ಕೌಶಲದಿಂದಲೂ ಇವರು ಎಲ್ಲರ ಮೆಚ್ಚುಗೆ ಗಳಿಸಿದರು. ಮುಂಬಯಿ ಪ್ರಾಂತೀಯ ಸಮ್ಮೇಳನದ ಕಾರ್ಯದರ್ಶಿಯಾಗಿ 1893 ಮತ್ತು 1894ರಲ್ಲಿ ಸೇವೆ ಸಲ್ಲಿಸಿದರು. 1895ರಲ್ಲಿ ಪುಣೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಕಾರ್ಯದರ್ಶಿಯಾಗಿ ನೇಮಕಗೊಂಡರು.

ಭಾರತದ ರಾಜ್ಯಾದಾಯದ ವ್ಯಯ ಹೇಗಾಗುತ್ತಿದೆಯೆಂಬುದನ್ನು ಪರಿಶೀಲಿಸಿ ಅದರಲ್ಲಿ ಸುಧಾರಣೆಗಳನ್ನು ಸೂಚಿಸಲು ಬ್ರಿಟಿಷ್ ಸರ್ಕಾರ 1896ರಲ್ಲಿ ಲಾರ್ಡ್ ವೆಲ್ಬಿಯ ನೇತೃತ್ವದಲ್ಲಿ ಒಂದು ಆಯೋಗವನ್ನು ಲಂಡನ್ನಿನಲ್ಲಿ ನೇಮಿಸಿತು. ಇದರ ಮುಂದೆ ಸಾಕ್ಷ್ಯ ನೀಡಲು ಭಾರತೀಯ ಮುಖಂಡರನ್ನೂ ಸಂಸ್ಥೆಗಳನ್ನೂ ಆಹ್ವಾನಿಸಿತು. ಗೋಖಲೆಯವರಿಗೂ ಆಹ್ವಾನ ಬಂದಿತ್ತು. ಇವರು ಇಂಗ್ಲೆಂಡಿಗೆ ತೆರಳಬೇಕೆಂದು ರಾನಡೆಯವರು ಸಲಹೆಯಿತ್ತರು. ಗೋಖಲೆಯವರು ಸಾಕ್ಷ್ಯಕ್ಕೆ ಬೇಕಾದ ಅಂಕಿಅಂಶಗಳನ್ನು ಸಂಗ್ರಹಿಸಿ, ಭಾರತದ ಹಣಕಾಸಿನ ಸ್ಥಿತಿಯನ್ನೂ ಅದರಲ್ಲಿ ಮಾಡಬೇಕಾದ ಸುಧಾರಣೆಗಳನ್ನೂ ಆಯೋಗಕ್ಕೆ ವಿವರಿಸಿ ಎಲ್ಲರ ಪ್ರಶಂಸೆಗೂ ಪಾತ್ರರಾದರು.

ಗೋಖಲೆಯವರು 1897ರಲ್ಲಿ ಇಂಗ್ಲೆಂಡಿನಲ್ಲಿದ್ದಾಗ ಪುಣೆಯಲ್ಲಿ ಪ್ಲೇಗ್ ಜಾಡ್ಯ ಕಾಣಿಸಿಕೊಂಡಿತು. ಜನರನ್ನು ಶಿಬಿರಗಳಿಗೆ ಸಾಗಿಸಿ, ಆಗ ತೀರ ಅಪರಿಚಿತವಾಗಿದ್ದ ಇನಾಕ್ಯುಲೇಷನ್ ಮಾಡಿಸುವ ಏರ್ಪಾಡು ಮಾಡಲಾಯಿತು. ಇದು ವಿಳಂಬವಿಲ್ಲದೆ ನಡೆಯಬೇಕಾಗಿದ್ದ ಕಾರ್ಯ. ಸರ್ಕಾರ ಈ ವ್ಯವಸ್ಥೆಯನ್ನೆಲ್ಲ ಸೈನ್ಯಕ್ಕೆ ಒಪ್ಪಿಸಿತು. ಇದರಿಂದ ಕೆಲವು ಅಚಾತುರ್ಯಗಳಾದುವು. ಜನರ ಆಚಾರ ವ್ಯವಹಾರಗಳನ್ನು ಅರಿಯದ ಕೆಲವು ಸೈನಿಕರು ದರ್ಪದಿಂದ ವರ್ತಿಸಿದರೆಂಬ ದೂರು ಕೇಳಿಸಿತು. ಅತ್ಯಾಚಾರಗಳೂ ಆದುವೆಂದು ಜನರಲ್ಲಿ ಹಾಹಾಕಾರವೆದ್ದಿತು. ಇದೇ ಸಂದರ್ಭದಲ್ಲಿ ಒಬ್ಬ ಮಹಾರಾಷ್ಟ್ರ ಯುವಕ ಒಬ್ಬ ಸೈನ್ಯಾಧಿಕಾರಿಯನ್ನು ಗುಂಡಿಟ್ಟು ಕೊಂದ. ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಇದಕ್ಕೆಲ್ಲ ಟಿಳಕರೇ ಮುಂತಾದ ತೀವ್ರವಾದಿಗಳು ಕಾರಣರೆಂಬುದಾಗಿ ಸರ್ಕಾರ ಆಪಾದಿಸಿತು. ದೇಶೀಯ ಪತ್ರಿಕೆಗಳು ಅದರ ಆಗ್ರಹಕ್ಕೆ ಪಾತ್ರವಾದುವು. ಗೋಖಲೆಯವರಿಗೆ ಈ ವಿದ್ಯಮಾನಗಳು ತಿಳಿದು ಸೈನಿಕರ ವರ್ತನೆಯನ್ನೂ ಸರ್ಕಾರದ ಧೋರಣೆಯನ್ನೂ ಖಂಡಿಸಿ ಇಂಗ್ಲಿಷ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. ಇವರು ಭಾರತಕ್ಕೆ ಮರಳಿದ ಮೇಲೆ ತಮ್ಮ ಆಕ್ಷೇಪಣೆಗಳಿಗೆ ರುಜುವಾತು ಒದಗಿಸಬೇಕಾಗಿ ಬಂದಾಗ ಇಂಗ್ಲೆಂಡಿನಲ್ಲಿದ್ದಾಗ ತಮಗೆ ಈ ಬಗ್ಗೆ ದೂರುಕೊಟ್ಟಿದ್ದ ಮಿತ್ರರು ಸಾಕ್ಷ್ಯ ನೀಡಲೊಲ್ಲದೆ ಹೋದರು. ತಾವು ಸತ್ಯವನ್ನರಿಯದೆ ವೃಥಾ ಅಧಿಕಾರಿಗಳ ಮೇಲೆ

ಅಪವಾದ ಹೊರಿಸಿದುದಾಗಿ ಗೋಖಲೆಯವರಿಗೆ ವಿಷಾದವಾಯಿತು. ಇವರು ತಮ್ಮಿಂದಾದ ಪ್ರಮಾದದ ಬಗ್ಗೆ ಮೌನ ತಳೆದಿದ್ದರೂ ಆಗುತ್ತಿತ್ತು. ಆದರೆ ಸತ್ಯಪ್ರಿಯರಾದ ಇವರಿಗೆ ಅದು ಉಚಿತವೆನಿಸಲಿಲ್ಲ. ಆಗ ಇವರು ಬೇಷರತ್ತಾಗಿ ಸರ್ಕಾರಕ್ಕೆ ತಮ್ಮ ಪಶ್ಚಾತ್ತಾಪ ಸಲ್ಲಿಸಿ, ನೊಂದ ಅಧಿಕಾರಿಗಳ ಕ್ಷಮಾಪಣೆ ಕೇಳಿದರು. ಇವರ ಈ ವರ್ತನೆಯನ್ನು ಹಲವರು ಟೀಕಿಸಿದರು. ಇವರ ಸಹನೆಗೆ ಇದೊಂದು ಪರೀಕ್ಷೆಯಾಯಿತು. ಆದರೆ ತಮ್ಮ ಆತ್ಮಸಾಕ್ಷಿಗನು ಸಾರವಾಗಿ ನಡೆದದ್ದಾಗಿ ಇವರಿಗೆ ಸಮಾಧಾನವಾಗಿತ್ತು.

1899ರಲ್ಲಿ ಮುಂಬಯಿ ವಿಧಾನಸಭೆಯಲ್ಲಿ ತೆರವಾದ ಸ್ಥಾನಕ್ಕೆ ಗೋಖಲೆಯವರನ್ನು ಕಳಿಸಬೇಕೆಂದು ಮಿತ್ರರು ನಿಶ್ಚಯಿಸಿದರು. ಆಗ ವಿಧಾನ ಸಭೆಗಳಲ್ಲಿ ಸರ್ಕಾರದ ಅಧಿಕಾರಿಗಳೂ ನಾಮಕರಣ ಸದಸ್ಯರೂ ಬಹುಸಂಖ್ಯೆಯಲ್ಲಿದ್ದರು ಚುನಾವಣಾ ಕ್ಷೇತ್ರಗಳು ಸಂಕುಚಿತವಾಗಿದ್ದುವು. ಪೌರಸಭಾ ಸದಸ್ಯರ ಕ್ಷೇತ್ರದಿಂದ ಗೋಖಲೆಯವರು ಚುನಾಯಿತ ರಾದರು. ತಮ್ಮ ಅಧ್ಯಯನಶೀಲತೆಯಿಂದಲೂ ವಾದದ ರೀತಿಯಿಂದಲೂ ಇವರು ಜನತೆಯ ಪ್ರತಿನಿಧಿಗಳು ಹೇಗೆ ವಾದಿಸಬೇಕೆಂಬುದಕ್ಕೆ ಉತ್ತಮ ನಿದರ್ಶನ ನೀಡಿದರು. 1902ರಲ್ಲಿ ಮುಂಬಯಿ ವಿಧಾನಮಂಡಲದಿಂದ ಒಬ್ಬ ಪ್ರತಿನಿಧಿಯನ್ನು ಕೇಂದ್ರ ವಿಧಾನಸಭೆಗೆ ಆರಿಸುವ ಅವಕಾಶವೊದಗಿದಾಗ ಗೋಖಲೆಯವರೇ ಆಯ್ಕೆಯಾದರು. ಕಲ್ಕತ್ತ ಭಾರತದ ಆಗಿನ ರಾಜಧಾನಿ. ಗೋಖಲೆಯವರು ಕೇಂದ್ರ ವಿಧಾನಸಭೆಗೆ ಪ್ರತಿಸಲವೂ ಚುನಾಯಿತರಾಗಿ ತಮ್ಮ ಅಂತಿಮ ಕಾಲದವರೆಗೂ ಸದಸ್ಯರಾಗಿದ್ದು ಉತ್ತಮ ಸೇವೆ ಸಲ್ಲಿಸಿದರು. ಸರ್ಕಾರದ ಆಯವ್ಯಯದ ಬಗ್ಗೆ ಗೋಖಲೆಯವರು ನೀಡುತ್ತಿದ್ದ ಟೀಕೆಗಳೂ ಸಲಹೆಗಳೂ ಪ್ರಸಿದ್ಧವಾದುವು. ಅನೇಕ ವಿಧೇಯಕಗಳ ಬಗ್ಗೆ ಇವರು ಮಾಡಿದ ಭಾಷಣಗಳೂ ಜನರ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಲು ಅಂಕಿ ಅಂಶಗಳ ಆಧಾರದೊಂದಿಗೆ ಇವರು ಮಾಡುತ್ತಿದ್ದ ವಾದವೂ ಸರ್ಕಾರದ ಮೆಚ್ಚುಗೆ ಗಳಿಸಿದುವು. ಇವರು ವಿಶೇಷವಾಗಿ ಪ್ರಸ್ತಾಪಿಸಿದ ವಿಷಯಗಳೆಂದರೆ ಉಪ್ಪಿನ ತೆರಿಗೆ, ಸೈನ್ಯ ಶಾಖೆಯ ವೆಚ್ಚ, ಜವಳಿ ಗಿರಣಿಗಳ ಮೇಲಣ ಸುಂಕ, ವಿದ್ಯಾಪ್ರಸಾರ, ಸರ್ಕಾರದ ಉನ್ನತ ಉದ್ಯೋಗಗಳಿಗೆ ಭಾರತೀಯರ ನೇಮಕ, ದಕ್ಷಿಣ ಆಫ್ರಿಕದಲ್ಲಿ ನೆಲೆಸಿದ ಭಾರತೀಯರ ಕಷ್ಟಗಳು ಮುಂತಾದವು.

ಈ ಸಭೆಗಳ ಕಲಾಪಗಳಿಗಾಗಿ ಇವರು ಬಹಳ ಕಾಲವನ್ನು ವಿನಿಯೋಗಿಸಬೇಕಾದ್ದರಿಂದ ಇವರು ತಮ್ಮ ಪ್ರಾಧ್ಯಾಪಕ ವೃತ್ತಿಯಿಂದ, ಹದಿನೆಂಟು ವರ್ಷಗಳು ಸೇವೆ ಸಲ್ಲಿಸಿದ ಅನಂತರ, ನಿವೃತ್ತರಾದರು. ಅಂದಿನಿಂದ ಪೂರ್ಣವಾಗಿ ಸಾರ್ವಜನಿಕ ಸೇವೆಗಾಗಿಯೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಈ ಬಗೆಯ ಸೇವೆಗೆ ಭಾರತದ ಸುಶಿಕ್ಷಿತರಾದ ನಿಸ್ವಾರ್ಥ ಸೇವಕರನ್ನು ಸಿದ್ಧಮಾಡಿ ಸಂಘಟಿಸಲು ಅಗತ್ಯವಿದೆಯೆಂದು ಇವರು ಬಗೆದು 1905ರಲ್ಲಿ ಭಾರತ ಸೇವಕ ಸಂಘವನ್ನು ಸ್ಥಾಪಿಸಿದರು. ಅದೇ ವರ್ಷ ಇವರು ಇಂಗ್ಲೆಂಡಿಗೆ ಪ್ರಯಾಣ ಮಾಡಿ ರಾಷ್ಟ್ರೀಯ ಕಾಂಗ್ರೆಸ್ಸಿನ ಪರವಾಗಿ ಪ್ರಚಾರ ಕೈಗೊಂಡರು. ಆ ವರ್ಷದ ಕೊನೆಯ ವಾರದಲ್ಲಿ ಕಾಶಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಲಾರ್ಡ್ ಕರ್ಜ಼ನನ ಸರ್ವಾಧಿಕಾರಿ ಆಡಳಿತವನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿದರು.

**ಗೋಖಲೆಯವರ ಶೈಕ್ಷಣಿಕ ಮಸೂದೆ:** 1912ರಲ್ಲಿ ಭಾರತದ ಕೇಂದ್ರ ಶಾಸನ ಸಭೆಯಲ್ಲಿ ಗೋಖಲೆಯವರು, ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಶಿಕ್ಷಣದ ತತ್ತ್ವವನ್ನು ಕ್ರಮಕ್ರಮವಾಗಿ ಆಚರಣೆಗೆ ತರಬೇಕೆಂದು ಸೂಚಿಸಿ ಮಂಡಿಸಿದ ಒಂದು ಮಸೂದೆ (ವಿಧಾಯಕ). ಅಂದಿನ ವೈಸರಾಯಾಗಿದ್ದ ಕರ್ಜ಼ನ್ 1905ರಿಂದ ಪ್ರಾಥಮಿಕ ಶಿಕ್ಷಣ ಸೌಲಭ್ಯವನ್ನು ಏಕಪ್ರಕಾರವಾಗಿ ವಿಸ್ತರಿಸುತ್ತ ಬಂದಿದ್ದರೂ ಶಿಕ್ಷಣದ ಆಡಳಿತಾಧಿಕಾರಿಗಳು ಆ ಮಟ್ಟದ ಶಿಕ್ಷಣವನ್ನು ವಿಸ್ತರಿಸುವುದರ ಬದಲು ಅದರ ಗುಣಮಟ್ಟವನ್ನು ಉತ್ತಮಪಡಿಸುವ ಕಡೆ ಗಮನ ಕೊಡಬೇಕೆಂದು ಒತ್ತಿ ಹೇಳಲಾರಂಭಿಸಿದ್ದರು. ಆದರೆ ರಾಷ್ಟ್ರದ ನಾಯಕರು ಈ ಪ್ರವೃತ್ತಿಯನ್ನು ವಿರೋಧಿಸಿ, ರಾಷ್ಟ್ರದಲ್ಲಿ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರಲು ಒತ್ತಾಯ ಹಾಕುತ್ತಿದ್ದರು. ಈ ನಡುವೆ, ಎಂದರೆ 1906ರಲ್ಲಿ ಬರೋಡದ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಕಡ್ಡಾಯ ಶಿಕ್ಷಣವನ್ನು ಶಾಸನಬದ್ಧವಾಗಿ ಆಚರಣೆಗೆ ತಂದುಬಿಟ್ಟರು. ಆದ್ದರಿಂದ ಬ್ರಿಟಿಷರ ನೇರ ಆಡಳಿತದಲ್ಲಿದ್ದ ಪ್ರಾಂತ್ಯಗಳಲ್ಲಿ ಅದನ್ನು ಏಕೆ ಆಚರಣೆಗೆ ತರಬಾರದೆಂದು ಚಳವಳಿ ಆರಂಭವಾಯಿತು. ಈ ಚಳವಳಿಯ ಮುಖಂಡರಲ್ಲೊಬ್ಬರಾದ ಗೋಖಲೆಯವರು 1910ರಲ್ಲಿ ಕೇಂದ್ರಶಾಸನ ಸಭೆಯಲ್ಲಿ ದೇಶಾದ್ಯಂತ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರಲು ಆರಂಭಿಸಬೇಕೆಂದೂ ಆ ಬಗ್ಗೆ ಅಗತ್ಯ ಸಲಹೆ ನೀಡಲು ಅಧಿಕಾರಿಗಳನ್ನೂ ಇತರರನ್ನೂ ಒಳಗೊಂಡ ಆಯೋಗವೊಂದನ್ನು ರಚಿಸಬೇಕೆಂದೂ ಸೂಚಿಸಿ ಒಂದು ಠರಾವನ್ನು ಮಂಡಿಸಿದ್ದರು. ಆದರೆ ಆ ಸಮಸ್ಯೆಯನ್ನು ಎಚ್ಚರಿಕೆಯಿಂದ ಪರಿಶೀಲಿಸುವುದಾಗಿ ಸರ್ಕಾರ ನೀಡಿದ ಆಶ್ವಾಸನೆಯ ಮೇಲೆ ಅದನ್ನು ಹಿಂತೆಗೆದುಕೊಂಡಿದ್ದರು. ಮತ್ತೆ 1911ರಲ್ಲಿ ತಮ್ಮ ಆ ಅಭಿಪ್ರಾಯವನ್ನೊಳಗೊಂಡಂತೆ ಪ್ರಾಥಮಿಕ ಸೌಲಭ್ಯವನ್ನು ವಿಸ್ತರಿಸಲು ಇನ್ನೂ ಉತ್ತಮ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುವ ಮಸೂದೆಯೊಂದನ್ನು ಮಂಡಿಸಿದರು. ಅಂದಿಗಾಗಲೆ ಪ್ರಚಾರಕ್ಕೆ ಇಂಗ್ಲೆಂಡಿನ 1870ರ ಕಡ್ಡಾಯ ಶಿಕ್ಷಣದ ಶಾಸನವನ್ನು ಆಧಾರ ಮಾಡಿಕೊಂಡು ತಮ್ಮ ಈ ಮಸೂದೆಯನ್ನು ಅವರು ರಚಿಸಿದ್ದರು. ಅದರ ಪ್ರತಿಯನ್ನು ಮೊದಲು ಸದಸ್ಯರ ಅಭಿಪ್ರಾಯಕ್ಕಾಗಿ ಹಂಚಲಾಯಿತು. ಅನಂತರ 1912ರ ಮಾರ್ಚ್ 17ರಂದು ಸಭೆಯಲ್ಲಿ ಅದು ಚರ್ಚೆಗೆ ಬಂತು. ಗೋಖಲೆಯವರು ಮಸೂದೆಯ ಅವಶ್ಯಕತೆಯನ್ನು ಕುರಿತು ಯುಕ್ತವಾಗಿ ವಾದಿಸಿದರು. ಅದನ್ನು ತಜ್ಞರ ಸಮಿತಿಗೆ ವರದಿಗಾಗಿ ಹೆಚ್ಚು ಮತಗಳು ಬಂದು ಅದರ ಮುಂದಿನ ನಡವಳಿಕೆಗೆ ಅವಕಾಶವಾಗಲಿಲ್ಲ. ಆದರೂ ಗೋಖಲೆಯವರು ಉತ್ಸಾಹಗುಂದಲಿಲ್ಲ. ಮತ್ತೆ ಮತ್ತೆ ಅದಕ್ಕಾಗಿ ಶ್ರಮಿಸುವುದಾಗಿ ಪಣತೊಟ್ಟರು.

ಭಾರತದ ಶಿಕ್ಷಣದ ಇತಿಹಾಸದಲ್ಲಿ ಗೋಖಲೆಯವರ ಈ ಮಸೂದೆ ವಿಶಿಷ್ಟ ಸ್ಥಾನ ಪಡೆದಿದೆ. ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವಲ್ಲಿ ಅದೇ ಮೊದಲ ಯತ್ನವಾಯಿತು. 1912ರಿಂದ 1917ರ ವರೆಗೆ ಆ ಕ್ಷೇತ್ರದಲ್ಲಿ ಸರ್ಕಾರ ತೋರಿದ ಆಸಕ್ತಿಗೆ ಆ ಮಸೂದೆ ನೀಡಿದ ಪ್ರಚೋದನೆಯೇ ಕಾರಣವೆಂದು ಹೇಳಬಹುದು. 1913ರ ಫೆಬ್ರುವರಿ 21ರಂದು ಹೊರಡಿಸಿದ ಸರ್ಕಾರದ ಶೈಕ್ಷಣಿಕ ನೀತಿಯ ನಿರೂಪಣೆಯಲ್ಲೂ ಆ ಮಟ್ಟದ ಶಿಕ್ಷಣ ಸೌಲಭ್ಯವನ್ನು ಹೆಚ್ಚಿಸುವ ಬಗ್ಗೆ ಅಗತ್ಯ ಆಶ್ವಾಸನೆಯನ್ನು ನೀಡಲಾಯಿತೆಂಬುದು ಮುಖ್ಯ ಸಂಗತಿ. (ಕೆ.ಎಸ್.ಜಿ.ಆರ್.)

ದೇಶಾದ್ಯಂತ ಪ್ರಾಥಮಿಕ ವಿದ್ಯಾಭ್ಯಾಸ ವ್ಯಾಪಿಸಿ ಜನಸಾಮಾನ್ಯರ ತಿಳಿವಳಿಕೆ ಮತ್ತು ದಕ್ಷತೆ ಹೆಚ್ಚುವುದರಿಂದಲೇ ದೇಶದ ಸರ್ವತೋಮುಖವಾದ ಅಭ್ಯುದಯವಾದೀತೆಂಬುದು ಗೋಖಲೆಯವರ ದೃಢ ನಂಬಿಕೆ. ಇದಕ್ಕಾಗಿ ಇವರು ಕೇಂದ್ರ ವಿಧಾನ ಮಂಡಲದಲ್ಲಿ ಶೈಕ್ಷಣಿಕ ವಿಧೇಯಕವೊಂದನ್ನು ಮಂಡಿಸಿದರು. ಸ್ಥಳೀಯ ಆಡಳಿತ ಪ್ರದೇಶಗಳಲ್ಲಿ ಕಡ್ಡಾಯವೂ ಉಚಿತವೂ ಆದ ಪ್ರಾಥಮಿಕ ವಿದ್ಯಾಭ್ಯಾಸವನ್ನೊದಗಿಸುವ ಅವಕಾಶ, ಇದರ ವೆಚ್ಚದಲ್ಲಿ ಮೂರನೆಯ ಎರಡು ಅಂಶವನ್ನು ಸರ್ಕಾರ ಒದಗಿಸಬೇಕೆಂಬ ನಿರ್ಬಂಧ ಇವೇ ಮುಂತಾದ ಸಲಹೆಗಳು ಈ ವಿಧೇಯಕದಲ್ಲಿದ್ದುವು. ಆದರೆ ಆಗಿನ ಸರ್ಕಾರ ಇದಕ್ಕೆ ಮನ್ನಣೆ ಕೊಡಲಿಲ್ಲ.

ಗಾಂಧೀಜಿಯವರ ಅಪೇಕ್ಷೆಯ ಮೇರೆಗೆ ಗೋಖಲೆಯವರು 1912ರಲ್ಲಿ ದಕ್ಷಿಣ ಆಫ್ರಿಕಕ್ಕೆ ಭೇಟಿಕೊಟ್ಟರು. ಅಲ್ಲಿದ್ದ ಭಾರತೀಯರು ಅನುಭವಿಸುತ್ತಿದ್ದ ತೊಂದರೆಗಳನ್ನು ಪ್ರತ್ಯಕ್ಷವಾಗಿ ಕಂಡರು. ಅಲ್ಲಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಭಾರತೀಯರ ಕಷ್ಟಗಳ ಪರಿಹಾರಕ್ಕಾಗಿ ಬಹಳ ಪ್ರಯತ್ನ ಮಾಡಿದರು. ಗಾಂಧೀಜಿಯವರೊಂದಿಗೆ ಮೊದಲೇ ಇದ್ದ ಇವರ ಸಂಬಂಧ ಮತ್ತಷ್ಟು ಗಾಢವಾಯಿತು. ಗೋಖಲೆಯವರನ್ನು ಗಾಂಧಿಯವರು ತಮ್ಮ ರಾಜಕೀಯ ಗುರುವೆಂದು ಭಾವಿಸಿದರು.

ವಿದ್ಯಾವಂತ ಭಾರತೀಯರಿಗೆ ಆಡಳಿತದಲ್ಲಿ ಹೆಚ್ಚು ಅವಕಾಶವನ್ನು ಕಲ್ಪಿಸುವ ಪ್ರಶ್ನೆ ಪರಿಶೀಲಿಸಿ ವರದಿ ನೀಡಲು ಬ್ರಿಟಿಷ್ ಸರ್ಕಾರದಿಂದ ನೇಮಿತವಾದ ಇಸ್ಲಿಂಗ್‌ಟನ್ ಆಯೋಗ ದಲ್ಲಿ ಗೋಖಲೆಯವರೂ ಒಬ್ಬ ಸದಸ್ಯರಾಗಿದ್ದರು. ದೇಶದ ಮುಖ್ಯ ಪಟ್ಟಣಗಳಲ್ಲಿ ಸಂಚರಿಸಿ ಸಾಕ್ಷ್ಯವನ್ನು ಸಂಗ್ರಹಿಸಿದ ಈ ಆಯೋಗದ ಕಾರ್ಯದಲ್ಲಿ ಗೋಖಲೆಯವರು ಮುಖ್ಯಪಾತ್ರ ವಹಿಸಿದರು. (ಕೆ.ಎಸ್.)

ರಾಜಕಾರಣದಲ್ಲಿ ಉದಾರಮತವಾದಿಯಾಗಿದ್ದ ಗೋಖಲೆಯವರು ತಮ್ಮ ವಿಚಾರಪ್ರತಿಪಾದನೆಗಾಗಿ ಪತ್ರಿಕಾ ಮಾಧ್ಯಮವನ್ನು ಇವರ ಸಮಕಾಲೀನ ಧುರೀಣ ಲೋಕಮಾನ್ಯ ಟಿಳಕರಷ್ಟು ಪ್ರಭಾವಯುತವಾಗಿ ಬಳಸಲಿಲ್ಲ. ಆದರೂ ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳ ಮೇಲೆ ಅಸಾಧಾರಣ ಪ್ರಭುತ್ವ ಹೊಂದಿದ್ದ ಇವರು ಪ್ರಮುಖ ಪತ್ರಿಕೆಗಳಿಗೆ ಪ್ರೌಢ ವಿಚಾರಪೂರ್ಣ ಲೇಖನಗಳನ್ನು ಬರೆಯುವುದರೊಂದಿಗೆ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ಲೋಕಮಾನ್ಯ ಟಿಳಕರ ಇಂಗ್ಲಿಷ್ ಸಾಪ್ತಾಹಿಕ ಮರಾಠಾದಲ್ಲಿ 1886–87ರಲ್ಲಿ ಯುರೋಪಿನ ಯುದ್ಧದವಿಷಯದಲ್ಲಿ ಇವರು ಬರೆದ ಲೇಖನಮಾಲೆ ಬಹಳ ಪ್ರಶಂಸೆ ಪಡೆಯಿತು. ಮರಾಠಾ. ಲೋಕಮಾನ್ಯ ಮರಾಠಿ ಪತ್ರಿಕೆಯಾದ ಕೇಸರಿ, ಇವುಗಳ ಪ್ರಾರಂಭಿಕ ವರ್ಷಗಳಲ್ಲಿ ಅವಕ್ಕಾಗಿ ಸಾಕಷ್ಟು ದುಡಿದರು. ಮಹಾರಾಷ್ಟ್ರದ ಪ್ರಸಿದ್ಧ ಸಮಾಜಸುಧಾರಕ ಗೋಪಾಲ ಗಣೇಶ ಅಗರಕರರು ಸುಧಾರಕ ಪತ್ರಿಕೆಯನ್ನು ಪ್ರಾರಂಭಿಸಿದಾಗ (1888) ಅದರ ಇಂಗ್ಲಿಷ್ ವಿಭಾಗದ ಸಂಪಾದಕತ್ವವನ್ನು ಗೋಖಲೆಯವರಿಗೆ ವಹಿಸಿಕೊಟ್ಟರು. ಅದೇ ವರ್ಷ ಸಾರ್ವಜನಿಕ ಸಭೆಯ ಕಾರ್ಯದರ್ಶಿಯಾಗಿ ನಿಯುಕ್ತರಾದ ಇವರು ಅದರ ತ್ರೈಮಾಸಿಕದ ಸಂಪಾದಕರೂ ಆದರು. ಮುಂದೆ ಎಂಟು ವರ್ಷಗಳ ಕಾಲ ಇವರು ಅದನ್ನು ನಿರ್ವಹಿಸಿದರು. 1895ರಲ್ಲಿ ರಾಷ್ಟ್ರ ಸಭಾ ಸಮಾಚಾರ ಪತ್ರಿಕೆಯ ಸಂಪಾದಕರೂ ಆಗಿದ್ದರು. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸು ತನ್ನ ನಿಲುವನ್ನು ಬ್ರಿಟಿಷ್ ಜನತೆಗೆ ಪರಿಣಾಮಕಾರಿಯಾಗಿ ತಿಳಿಸುವ ಉದ್ದೇಶದಿಂದ 1905ರಲ್ಲಿ ಇಂಡಿಯ ಎಂಬ ನಿಯತಕಾಲಿಕೆಯನ್ನು ಇಂಗ್ಲೆಂಡಿನಲ್ಲಿ ಪ್ರಕಟಿಸುತ್ತಿತ್ತು. ಅದರಲ್ಲಿ ಆಗ ಕಾಂಗ್ರೆಸ್ಸಿನ ಜೊತೆ ಕಾರ್ಯದರ್ಶಿಯಾಗಿದ್ದ ಗೋಖಲೆಯವರ ಪಾತ್ರ ಹಿರಿದಾಗಿತ್ತು.

ಭಾರತದ ಕೇಂದ್ರ ವಿಧಾನಮಂಡಲದ ಲೋಕನಿಯುಕ್ತ ಸದಸ್ಯರಾಗಿದ್ದಾಗ ಗೋಪಾಲಕೃಷ್ಣ ಗೋಖಲೆಯವರು ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮಹತ್ತ್ವಪೂರ್ಣ ಕಾರ್ಯ ನಿರ್ವಹಿಸಿದರು. 1910ರಲ್ಲಿ ಸರ್ಕಾರ ಪತ್ರಿಕಾ ವಿಧೇಯಕವನ್ನು ಮಂಡಿಸಿದಾಗ ಗೋಖಲೆಯವರು ಅದನ್ನು ಪ್ರತ್ಯಕ್ಷವಾಗಿ ವಿರೋಧಿಸಲಿಲ್ಲವಾದರೂ ತಮ್ಮ ವರ್ಚಸ್ಸನ್ನು ಉಪಯೋಗಿಸಿ, ಮೂಲತಃ ಅದರಲ್ಲಿ ಅಡಕವಾಗಿದ್ದ ಕಠಿಣಕ್ರಮಗಳು ಸೌಮ್ಯಗೊಳ್ಳುವಂತೆ ಮತ್ತು ಭಾರತೀಯರ ಒಡೆತನಕ್ಕೆ ಸೇರಿದ್ದ ಪತ್ರಿಕೆಗಳಿಗೆ ಮಾತ್ರ ಸೀಮಿತವಾಗಿದ್ದ ಅದರ ವ್ಯಾಪ್ತಿ ಬ್ರಿಟಿಷ್ ಒಡೆತನದಲ್ಲಿದ್ದವುಗಳನ್ನೂ ಒಳಗೊಂಡು ಎಲ್ಲ ಪತ್ರಿಕೆಗಳಿಗೂ ವಿಸ್ತರಿಸುವಂತೆ ಪ್ರಯತ್ನಿಸಿ ಯಶಸ್ವಿಯಾದರು. ಇವರು 1915 ಫೆಬ್ರವರಿ 19ರಂದು ಪುಣೆಯಲ್ಲಿ ನಿಧನರಾದರು.

(ಎಂ.ಎನ್.ಎಂ.ಎ.)

**ಗೋಲ್ಕೊಂಡ:** ಹೈದರಾಬಾದ್ ನಗರದ ಪಶ್ಚಿಮಕ್ಕೆ 8 ಕಿಮೀ ದೂರದಲ್ಲಿರುವ ಒಂದು ಸ್ಥಳ. 1518–1687ರಲ್ಲಿ ಇದು ಗೋಲ್ಕೊಂಡ ರಾಜ್ಯದ ರಾಜಧಾನಿಯಾಗಿತ್ತು. ಆಗಿನ ಕೋಟೆಗಳು ಕೆಲವು ಅರಮನೆಗಳು ಮಸೀದಿಗಳು ಈಗಲೂ ಇವೆ. ಗ್ರಾನೈಟ್ ಗುಡ್ಡವೊಂದರ ಮೇಲೆ ಕಟ್ಟಲಾದ ಕೋಟೆಯ ಸುತ್ತಳತೆ ಸು. 4.8 ಕಿಮೀ. ಅದರೊಳಗಿನ ಕೆಲವು ಕಟ್ಟಡಗಳು ಜೀರ್ಣಸ್ಥಿತಿಯಲ್ಲಿ ಉಳಿದಿವೆ. ಕೋಟೆಗೆ ಸ್ವಲ್ಪ ದೂರದಲ್ಲಿ ಗೋಲ್ಕೊಂಡ ರಾಜ್ಯವನ್ನಾಳಿದ ಕುತುಬ್ ಶಾಹಿ ದೊರೆಗಳ ಗೋರಿಗಳಿವೆ.

ಕೋಟೆ

ಗೋದಾವರಿ ನದಿಯ ಕೆಳದಂಡೆಯ ಪ್ರದೇಶದಲ್ಲಿ ಬಂಗಾಲ ಕೊಲ್ಲಿಯವರೆಗೆ ವ್ಯಾಪಿಸಿದ್ದ ರಾಜ್ಯಕ್ಕೆ ಗೋಲ್ಕೊಂಡವೆಂಬ ಹೆಸರಿತ್ತು. ಕಾಕತೀಯರ ರಾಜ್ಯದ ಭಾಗವಾಗಿದ್ದ ಈ ಪ್ರದೇಶವನ್ನು ಅಲಾವುದ್ದೀನ್ ಖಿಲ್ಜಿ 1310ರಲ್ಲಿ ಆಕ್ರಮಿಸಿಕೊಂಡಿದ್ದ. ಆದರೂ ಇದು 1424–25ರ ವರೆಗೂ ಸ್ವತಂತ್ರ ಅಸ್ತಿತ್ವ ಹೊಂದಿದಾಗ ಬಹಮನಿಗಳ ವಶವಾಯಿತು. ಬಹಮನಿ ರಾಜ್ಯದ ಪೂರ್ವ ಪ್ರಾಂತಕ್ಕೆ ವಾರಂಗಲ್ ರಾಜಧಾನಿಯಾಗಿತ್ತು. ಈ ಪ್ರಾಂತದ ಅಧಿಕಾರಿಯಾಗಿದ್ದ ಕುಲಿ ಕುತುಬ್ ಷಾ 1518ರಲ್ಲಿ ಸ್ವತಂತ್ರ ಸುಲ್ತಾನನಾದ. ಗೋಲ್ಕೊಂಡ ಇವನ ರಾಜಧಾನಿಯಾಯಿತು. 1687ರಲ್ಲಿ ಈ ರಾಜ್ಯವನ್ನು ಔರಂಗ್‌ಜೇಬ್ ಗೆದ್ದುಕೊಂಡ. ಗೋಲ್ಕೊಂಡ ಮೊಗಲ್ ಚಕ್ರಾಧಿಪತ್ಯದ ಭಾಗವಾಯಿತು. ಗೋಲ್ಕೊಂಡದ ಬಳಿ ಸಿಕ್ಕುತ್ತಿದ್ದ ವಜ್ರಗಳಿಂದಾಗಿ ಇದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. (ಜಿ.ಆರ್.ಆರ್.)

**ಗೋವ:** ಭಾರತದ ಒಂದು ರಾಜ್ಯ. ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವ ಮತ್ತು ದಕ್ಷಿಣದಲ್ಲಿ ಕರ್ನಾಟಕ ರಾಜ್ಯ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಇದನ್ನು ಸುತ್ತುವರೆದಿವೆ. ಇದರ ರಾಜಧಾನಿ ಪಣಜಿ. ಸಹ್ಯಾದ್ರಿಯ ಸೆರಗಿನಲ್ಲಿರುವ ಗೋವದ ಪೂರ್ವಭಾಗ ಮಲೆನಾಡು. ಪೂರ್ವದಿಂದ ಪಶ್ಚಿಮಕ್ಕೆ ಹಲವಾರು ನದಿ ತೊರೆಗಳು ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ಮುಖ್ಯವಾದುವು ಮಾಂಡವಿ, ಜುವಾರಿ (ಅಘನಾಶಿನಿ), ತೇರೇಖೋಲ್, ಚಪೋರ್ ಮತ್ತು ಬೆತುಲ್ ಇವುಗಳಿಂದ ಒಟ್ಟು ಸು. 270 ಕಿಮೀ ಜಲಮಾರ್ಗಗಳು ಏರ್ಪಟ್ಟಿವೆ. ಸಹ್ಯಾದ್ರಿಯ ಕವಲುಗಳು ಗೋವದಲ್ಲಿವೆ. ಇವುಗಳಲ್ಲಿ ಪೂರ್ವಕ್ಕಿರುವ ಸೊಂಸೋಗಡ ಬೆಟ್ಟ ಪ್ರಸಿದ್ಧವಾಗಿದೆ. ಅದರ ಉತ್ತರಕ್ಕೆ ಸತ್ತರೀ ಮಹಾಲಯದಲ್ಲಿ ವಾಘೇರಿ ಬೆಟ್ಟವಿದೆ. ಇನ್ನೊಂದು ಬೆಟ್ಟ ಮೋರ್ಲೆಗಡ. ಸಮಪಾತಳಿಯ ಮೇಲೆ ಇರುವ ಚಂದ್ರನಾಥ ಬೆಟ್ಟ ಸೃಷ್ಟಿ ಸೌಂದರ್ಯ ವೀಕ್ಷಣೆಗೆ ಪ್ರಸಿದ್ಧವೆನಿಸಿದೆ. 100 ಕಿಮೀ ಉದ್ದದ ಕರಾವಳಿಯಿರುವ ಗೋವದ ಮುಖ್ಯ ಬಂದರು ಮರ್ಮಗೋವ. ಮುಂಬಯಿ, ಕೊಚ್ಚಿನ್‌ಗಳ ನಡುವಣ ದೊಡ್ಡ ರೇವು ಇದು. ಗೋವದ ಆಯಾತ–ನಿರ್ಯಾತಗಳಲ್ಲಿ ಶೇ. 90ಕ್ಕಿಂತಲೂ ಹೆಚ್ಚು ಭಾಗ ಈ ಬಂದರಿನ ಮೂಲಕ ಸಾಗುತ್ತದೆ. ಚಪೋರ, ಪಣಜಿ, ಬೇತುಲ್, ತಲ್ಪೋರ– ಇವು ನೈಸರ್ಗಿಕ ಬಂದರುಗಳು.

ಮಾಂಡವಿ ನದಿಯ ಎಡದಂಡೆಯ ಮೇಲಿರುವ ಪಣಜಿಯ ವಿಸ್ತೀರ್ಣ 3.37 ಚ.ಕಿಮೀ. ಹಿಂದೆ ಇದು ಮೀನು ಹಿಡಿಯುವವರ ಹಳ್ಳಿಯಾಗಿತ್ತು. ಈಗ ಇದೊಂದು ಸುಂದರ ನಗರ. ಹಳೆ ಗೋವ ಬಹುಮಟ್ಟಿಗೆ ಪಾಳು ಬಿದ್ದ ನಗರ. ಗತಕಾಲದ ಸ್ಮಾರಕಗಳಾಗಿ ಕೆಲವು ಇಗರ್ಜಿ, ಕ್ರೈಸ್ತ ಸಂನ್ಯಾಸಿನಿಯರ ವಸತಿ ಶಾಲೆಗಳು, ಕಟ್ಟಡಗಳು ಇಲ್ಲಿ ಉಳಿದಿವೆ. 1511ರಲ್ಲಿ ಕಟ್ಟಿ 1623ರಲ್ಲಿ ಜೀರ್ಣೋದ್ಧಾರವಾದ ಕ್ರೈಸ್ತ ಆರಾಧನ ಮಂದಿರ, ಸೇಂಟ್ ಫ್ರಾನ್ಸಿಸ್ ಕ್ರೈಸ್ತ ಸನ್ಯಾಸಿನಿಯರ ಮಠ, ಪ್ರಸಿದ್ಧವೂ ಸುಂದರವೂ ಆದ ಸೇಂಟ್ ಫ್ರಾನ್ಸಿಸನ ಬಾಮ್ ಜೀಸಸ್ ಸಂತನ ಸಮಾಧಿ ಭವನ, 17ನೆಯ ಶತಮಾನದ ಸೇಂಟ್ ಮೊನಿಕಾ ಕ್ರೈಸ್ತ ಸನ್ಯಾಸಿನಿಯರ ಮಠ (1606–27), ಶಿಥಿಲಾವಸ್ಥೆಯಲ್ಲಿರುವ ಸೇಂಟ್ ಪಾಲ್ ಕಾಲೇಜು – ಇವು ಮುಖ್ಯವಾದವು. ಮಾರ್ಗೋವ ದಕ್ಷಿಣ ಗೋವದ ಮುಖ್ಯ ವಾಣಿಜ್ಯ ಕೇಂದ್ರ. ಮಡಗಾಂವ್ ಒಂದು ಒಳ್ಳೆಯ ಬಂದರು. ಮಾಪ್ಸ ಉತ್ತರ ಗೋವದಲ್ಲಿದೆ.

ಪ್ರಪಂಚದಲ್ಲೇ ಅತ್ಯಂತ ಸುಂದರವಾದ ಕೆಲವು ಬೀಚುಗಳು ಗೋವದಲ್ಲಿದೆ. ಕಲಾಂಗೂಟೆ, ಕೋಲ್ವ, ದೋನಾ, ಪಾಲಾ, ಸಿರಿದಾವೊ, ವಾಗತೋರ, ಮಾಂದ್ರೇ ಮತ್ತು ಗೋರ್ಜಿ ಬೀಚುಗಳಿಗೆ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಹಳೆಯ ಗೋವದಲ್ಲಿ ಕ್ರೈಸ್ತರು ಹೆಚ್ಚು; ಹೊಸ ಗೋವದಲ್ಲಿ (ನವ ಗೋವ) ಹಿಂದುಗಳು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಪೋರ್ಚುಗೀಸರ ಅಂತರ ವಿವಾಹಗಳಿಂದ ಸ್ವಲ್ಪಮಟ್ಟಿಗೆ ಸಮ್ಮಿಶ್ರ ಜನಾಂಗದವರಿದ್ದಾರೆ. ಇಲ್ಲಿಯ ಜನರ ಮಾತೃಭಾಷೆ ಕೊಂಕಣಿ. ಗೋವ ರಾಜ್ಯವನ್ನು ಉತ್ತರ ಗೋವ, ದಕ್ಷಿಣ ಗೋವ ಎಂದು ಎರಡು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಪಣಜಿ ಉತ್ತರ ಗೋವದ ಆಡಳಿತ ಕೇಂದ್ರವಾದರೆ ಮಡಗಾಂವ್ ದಕ್ಷಿಣ ಗೋವದ ಆಡಳಿತ ಕೇಂದ್ರ. ರಾಜ್ಯ ಭೂ ದಾಖಲೆಯನ್ನು ಗಣಕೀಕೃತಗೊಳಿಸಿದ ಭಾರತದ ಪ್ರಥಮ ರಾಜ್ಯವಾಗಿದೆ.

ಗೋವದಲ್ಲಿ ಹಿಂದು, ಕ್ರೈಸ್ತ ಧರ್ಮಗಳು ಆಚರಣೆಯಲ್ಲಿವೆ. ಕದಂಬರ ಕಾಲದ ಸಪ್ತಕೋಟೇಶ್ವರ ದೇವಾಲಯ, ಪೋರ್ಚುಗೀಸರ ಕಾಲದಲ್ಲಿ ಸೇಂಟ್ ಫ್ರಾನ್ಸಿಸ್ ಜೇವಿಯರನ ಸಮಾಧಿಭವನ ಪ್ರಸಿದ್ಧವಾದವು. ಸಂತ ಜೇವಿಯರನ ಪಾರ್ಥಿವ ಶರೀರವನ್ನು ಭಕ್ತರಿಗೆ ಹತ್ತು ವರ್ಷಗಳಿಗೊಮ್ಮೆ ಪ್ರದರ್ಶಿಸಲಾಗುತ್ತದೆ. ಹಳೆಯ ಗೋವದಲ್ಲಿ ಲೆಂಟ್ ಉಪವಾಸ ದಿನಗಳಲ್ಲಿ ಸಂತರ ವಿಗ್ರಹಗಳನ್ನು ಮೆರವಣಿಗೆ ಮಾಡಲಾಗುತ್ತದೆ.

ಪೋರ್ಚುಗೀಸರು ಬಂದಮೇಲೆ ಗೋವದಲ್ಲಿ ಕ್ರೈಸ್ತಧರ್ಮ ಪ್ರಚಾರವಾಯಿತು. ಡಾಮಿನಿಕ್ ಪಂಥದ ಕ್ರೈಸ್ತ ಸನ್ಯಾಸಿಗಳು ಗೋವಕ್ಕೆ ಬಂದದ್ದು 1510ರಲ್ಲಿ. 1517ರಲ್ಲಿ ಬಂದ ಫ್ರಾನ್ಸಿಸ್ಕನ್ ಪಾದ್ರಿ ಕ್ರೈಸ್ತಧರ್ಮ ಪ್ರಚಾರವನ್ನು ಆರಂಭಿಸಿದರು. ಫ್ರಾನ್ಸಿಸ್ ಪಂಥದ ಸನ್ಯಾಸಿ ಜೊವಾನ್ ದ ಆಲ್ಬುರ್ಕರ್ಕ್ 1538ರಲ್ಲಿ ಗೋವದ ಪ್ರಥಮ ಬಿಷಪ್ ಆಗಿ ನೇಮಕವಾದ. 1542ರಲ್ಲಿ ಫ್ರಾನ್ಸಿಸ್ ಜೇವಿಯರ್ ಸ್ಥಳೀಯ ಮತಪ್ರಚಾರಕರಿಗೆ ತರಬೇತು ನೀಡುವ ಸಾಂತಾಫಿ ಕಾಲೇಜಿನ ಮೇಲ್ವಿಚಾರಕನಾದ. ತರುವಾಯ ಈ ಕಾಲೇಜಿಗೆ ಸೇಂಟ್ ಪಾಲ್ ಕಾಲೇಜು ಎಂದು ಹೆಸರಾಯಿತು. ಪೋಪ್ 1557 ಫೆಬ್ರುವರಿ 4ರಲ್ಲಿ ಹೊರಡಿಸಿದ ಆಜ್ಞೆಯ ಪ್ರಕಾರ ಗೋವ ಆರ್ಚ್‌ಬಿಷಪನ ಅಧಿಕಾರವ್ಯಾಪ್ತಿಯ ಹಾಗೂ ಪ್ರಾಚ್ಯ ಪ್ರಾಂತಗಳ ರೋಮನ್ ಕೆಥೊಲಿಕ್ ಪಾದ್ರಿಗಳ ಕೇಂದ್ರವಾಯಿತು. 20ನೆಯ ಶತಮಾನದಲ್ಲಿ ಪೋಪ್ ಧರ್ಮಪ್ರಭು ಹೊರಡಿಸಿದ ಅಧಿಕೃತ ನಿಯಮಗಳ ಪ್ರಕಾರ ಗೋವದ ಆರ್ಚ್‌ಬಿಷಪ್ ಅಧಿಕಾರ ಇಡೀ ಪೋರ್ಚುಗೀಸ್ ಭಾರತಕ್ಕೆ ಅನ್ವಯಿಸಿತು (1953). (ವಿ.ಜಿ.ಕೆ.)

**ಪ್ರಾಗಿತಿಹಾಸ:** ಮಹಾಭಾರತ ಮತ್ತು ಪುರಾಣಗಳಲ್ಲಿ ಗೋಮಾಂತ್ ಮತ್ತು ಗೋಮಾಂಚಲ ಎಂದೂ ಇತಿಹಾಸದಲ್ಲಿ ಗೋವರಾಷ್ಟ್ರ ಮತ್ತು ಗೋಪರಾಷ್ಟ್ರ ಎಂದೂ ಉಲ್ಲೇಖಗೊಂಡಿರುವ ಗೋವವನ್ನು ಬ್ರಿಟಿಷರು ಪೂರ್ವದ ರೋಮ್ ಹಾಗೂ ಸುವರ್ಣಗೋವ ಮುಂತಾಗಿ ಕರೆಯುತ್ತಿದ್ದರು.

ಮೊತ್ತಮೊದಲಬಾರಿಗೆ ಶಿಗಾವೊದಲ್ಲಿ ಹಳೆಶಿಲಾಯುಗದ ಕಲ್ಲಿನ ಮಚ್ಚುಗತ್ತಿಯೊಂದನ್ನು ಸಾಲ್ ಸಂಗ್ರಹಿಸಿದ. ಅಶೋಕ್ ಮರಾಠೆ, ಗೌಡೆಲ್ಲರ್ ಹಾಗೂ ಕೋರಿಶೆಟ್ಟರ್ ಅವರು ಶಿಗಾವೊ, ಕೊಲ್ಲೆಮ್, ಸೊನಾವಲಿ, ಬಿಂಬಾಲ್ ಮತ್ತು ತಾಂಬ್ದಿಸುರ್ಲಗಳಲ್ಲಿ ಮಚ್ಚುಗತ್ತಿಗಳಲ್ಲದೆ ಅನೇಕ ಅಶೂಲಿಯನ್ ಉಪಕರಣಗಳನ್ನು ಸಂಗ್ರಹಿಸಿದರು. ತಾಂಬ್ದಿಸುರ್ಲ ಬಿಟ್ಟು ಉಳಿದ ಹಳೆಶಿಲಾಯುಗದ ನೆಲೆಗಳು ದೂಧ್‌ಸಾಗರ್ ನದಿತೀರದಲ್ಲಿ ಸು.16 ಚ.ಕಿಮೀ ವ್ಯಾಪ್ತಿಯ ಒಳಗಿವೆ. ಈಚೆಗೆ ಈ ಪ್ರದೇಶದಲ್ಲಿ ನಡೆದ ಶೋಧನೆಗಳಿಂದ ಶಿಗಾವೊ ಶಿಲೋಪಕರಣಗಳ ತಯಾರಿಕೆಯ ನೆಲೆಯಾಗಿರಬಹುದೆಂದು ತರ್ಕಿಸಲಾಗಿದೆ. ಸಮುದ್ರತೀರ ಪ್ರದೇಶದಲ್ಲಿ ಹಾಗೂ ಉತ್ತರದಲ್ಲಿ ಹಳೆಶಿಲಾಯುಗದ ನೆಲೆಗಳು ಕಂಡುಬಂದಿಲ್ಲ. ಪ್ರಾಯಶಃ ಬೆಳಗಾವಿಯಿಂದ ದೂಧ್‌ಸಾಗರ್ ಕಣಿವೆಗೆ ಅಲ್ಪಸಂಖ್ಯೆಯಲ್ಲಿ ಆದಿಮಾನವ ವಲಸೆಬಂದುದೇ ಇದಕ್ಕೆ ಕಾರಣವಿರಬೇಕು. ದೂಧ್‌ಸಾಗರ್ ಕಣಿವೆ ಹಾಗೂ ಬೆಳಗಾವಿ ಇವು ತಾಂಬ್ದಿಸುರ್ಲ ಕಣಿವೆ ಪ್ರದೇಶದ ಎರಡು ತುದಿಗಳಲ್ಲಿವೆ. ಇಲ್ಲಿಯ ಗಿರಿಶ್ರೇಣಿಗಳ ಎತ್ತರ ಕಡಿಮೆ (900 ಮೀ). ಆದರೆ ಗೋವದ ಉತ್ತರ ಮತ್ತು ದಕ್ಷಿಣ ಭಾಗಗಳ ಪರ್ವತಗಳು ಎತ್ತರವಾಗಿವೆ (900–1200 ಮೀ).

ದೂಧ್‌ಸಾಗರ್ ನೆಲೆಯಲ್ಲಿ ಅಶೂಲಿಯನ್ ಮಾದರಿಯ ಕೈಕೊಡಲಿಗಳೂ ಕಡಿಗತ್ತಿಗಳೂ ದೊರೆತಿವೆ. ಬೆಣಚುಕಲ್ಲಿನ ಈ ಉಪಕರಣಗಳು ಕರ್ನಾಟಕದ ಘಟಪ್ರಭೆ–ಮಲಪ್ರಭ ಕಣಿವೆ ಪ್ರದೇಶಗಳಲ್ಲಿ ದೊರೆತ ಆದಿ ಹಳೆಶಿಲಾಯುಗದ ಉಪಕರಣಗಳನ್ನು ಹೋಲುತ್ತವೆ.

ಗೋವದ ಮಧ್ಯ ಹಳೆಶಿಲಾಯುಗದ ನೆಲೆಗಳಲ್ಲಿ ಅನಖನೆ (ಪೆರ್ನಮ್ ತಾಲ್ಲೂಕು), ಶಿಗಾವೊ (ಸಂಗ್ಯುಯೆಮ್), ಫರ್ಮಗುಡಿ (ಪೋಂಡ), ಅಲೋರ್ನ ಹಾಗೂ ಮೊಲಂಗ್ಯುಯಿನಿಮ್ (ಸಲ್ಸೆ) ಮುಖ್ಯವಾದುವು. ಕೊನೆಯದು ಗುಹಾನೆಲೆ. ಆದಿ ಹಳೆಶಿಲಾಯುಗ ಹಾಗೂ ಮಧ್ಯ ಹಳೆಶಿಲಾಯುಗ ನಡುವಣ ಸ್ಥಿತ್ಯಂತರ ಹಂತ ಮತ್ತು ಅಂತ್ಯ ಹಳೆಶಿಲಾಯುಗದಿಂದ ಸೂಕ್ಷ್ಮಶಿಲಾಯುಗದ ಉದಯದ ಹಂತ–ಇವುಗಳಿಗೂ ಈ ನೆಲೆಗಳು ಉದಾಹರಣೆಯಾಗಿವೆ. ಆದರೂ ಗೋವದಲ್ಲಿ ಅಂತ್ಯ ಹಳೆಶಿಲಾಯುಗದ ಸ್ಪಷ್ಟ ಆಧಾರಗಳು ದೊರಕಿಲ್ಲ.

ಸೂಕ್ಷ್ಮಶಿಲಾಯುಗದ ನೆಲೆಗಳು ಹೆಚ್ಚಾಗಿ ಮಧ್ಯಗೋವದಲ್ಲಿ, ವಿಶೇಷವಾಗಿ ಮಾಂಡವಿ ಹಾಗೂ ಚಪೋರ ನದಿಬಯಲುಗಳಲ್ಲಿ ಲಭ್ಯವಾಗಿವೆ. ದಕ್ಷಿಣ ಗೋವದಲ್ಲಿ ನೆಲೆಗಳು ರಚೋಲ್ ನದಿತೀರದಲ್ಲಿಯೂ ಉತ್ತರ ಗೋವದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಗಡಿ ಪ್ರದೇಶಗಳಲ್ಲಿಯೂ ಇವೆ. ಇದರಿಂದ ಪಶ್ಚಿಮ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರಗಳ ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಗೋವದಲ್ಲಿ ಹರಡಿದ್ದುದು ತಿಳಿದುಬರುತ್ತದೆ.

ತಾಂಬ್ದಿಸುರ್ಲದ ಸಮೀಪ ನವಶಿಲಾಯುಗದ ಉಜ್ಜಿ ನಯಮಾಡಿದ ಕೊಡಲಿಯ ಭಾಗವನ್ನು ಮತ್ತು ಅಲಗು ತೆಗೆದ ಗುರುತುಳ್ಳ ಕ್ಯಾಲ್ಸೆಡನಿ ತಿರುಳುಗಲ್ಲನ್ನು ಮೊತ್ತಮೊದಲಿಗೆ ಅ.ಸುಂದರ ಅವರು ಸಂಗ್ರಹಿಸಿದರು. ಸಾಲ್‌ನದಿಯ ಮುಖಜಭೂಮಿಯಲ್ಲಿರುವ ಅರಾಲಿಯಲ್ಲಿ ಬ್ಯಾನರ್ಜಿ ಅವರಿಗೆ ನವಶಿಲಾಯುಗದ ಮೂರು ಉಪಕರಣಗಳೂ ಸಾಲಿ ಅವರಿಗೆ ಚಿಕಲಿಮ್ ಎಂಬಲ್ಲಿ ಒಂದು ಶಿಲೋಪಕರಣವೂ ದೊರಕಿದವು. ಹಳೆಯ ಗೋವದ ಸೇಂಟ್ ಕಜೆಟನ್

ಚರ್ಚ್ ಸಂಕೀರ್ಣದ ಒಳಗೆ 1984ರಲ್ಲಿ ಇಂತಹದೇ ಇನ್ನೊಂದು ನವಶಿಲಾಯುಗದ ಉಪಕರಣ ಸಿಕ್ಕಿತು. ಇವೆಲ್ಲ ಚಿಕ್ಕ ಗಾತ್ರದವಾಗಿವೆ. ಗೋವ–ಕರ್ನಾಟಕಗಳ ನಡುವಿನ ಗಡಿ ಪ್ರದೇಶದಲ್ಲಿ ಅನ್‌ಮೋಡ್ ನೆಲೆ ಮುಖ್ಯವಾದುದು. ಇಲ್ಲಿ ನವಶಿಲಾಯುಗದ ದೊಡ್ಡ ಕೊಡಲಿ ದೊರೆತಿದೆ. ಫತೋರ್ಪ್‌ದಲ್ಲಿ ದೊರೆತ ಬೂದುಬಣ್ಣದ ಏಕೈಕ ಪಾತ್ರೆ ನವಶಿಲಾಯುಗದ್ದಾಗಿರಬಹುದು. ನವಶಿಲಾಯುಗದಲ್ಲಿ ಕೆಳಗಿನ ಹಾಗೂ ಮೇಲಿನ ಘಟ್ಟ ಪ್ರದೇಶಗಳ ನಡುವೆ ಸಂಚರಿಸಲು ಅನ್‌ಮೋಡ್–ತಾಂಬ್ಡಿಸುರ್ಲ ಕಣಿವೆಯನ್ನು ಜನರು ಬಳಸಿದ್ದಿರಬಹುದು. ದಕ್ಷಿಣಕನ್ನಡ ಜಿಲ್ಲೆಯ ಸೀತಾನದಿ ಬಯಲಿನಲ್ಲಿಯೂ ಕೆಲವು ನವಶಿಲಾಯುಗ ನೆಲೆಗಳು ಕಂಡು ಬಂದಿವೆ. ಉದಾ: ಕೋಟತಟ್ಟು, ಬಂಡಿಮಠ, ಹಾರಾಡಿ, ನದರು ಇತ್ಯಾದಿ. ಕೇರಳದ ಚಿತ್ರಾರಿ ಕೊಡುವಳ್ಳಿ, ಖತಿರೂರು ಮತ್ತು ಮಂತ್ರೊತುರುಟ್ಟುಗಳಲ್ಲಿ ನವಶಿಲಾ ಯುಗದ ಉಜ್ಜಿದ ಬೂದುಬಣ್ಣದ ಮಣ್ಪಾತ್ರೆ ಹಾಗೂ ಕೈಕೊಡಲಿಗಳುಸಿ ಕ್ಕಿವೆ. ಈ ಅವಶೇಷಗಳು ನವಶಿಲಾ ಯುಗದ ವಸತಿ ನೆಲೆಗಳಿಂದ ಲಭ್ಯವಾ ದುವಲ್ಲ. ಇವು ಆಕಸ್ಮಿಕ ಶೋಧಗಳು.

ಕುರ್ಡಿ, ಫತೋರ್ಪ್, ಇಬ್ರಾಹಿಮ್‌ಪುರ, ಬಾಂಬೋಲಿಮ್ ಮತ್ತು ದಿವಡಿಗಳಲ್ಲಿ ಬೃಹತ್‌ಶಿಲಾ ಸಂಸ್ಕೃತಿಯ ನೆಲದಡಿಯ ಕಲ್ಗುಹೆಗಳು ಪತ್ತೆಯಾಗಿವೆ. ದಿವಡಿ ಹಾಗೂ ಫತೋರ್ಪ್‌ಗಳಲ್ಲಿ ಕೆಲವು ಕಲ್ಲುವೃತ್ತಗಳೂ ಸಿಕ್ಕಿವೆ. ಇವುಗಳಿಗೆ ದಿವಡಿಯಲ್ಲಿ ಜಂಬುಕಲ್ಲನ್ನು ಬಳಸಿದ್ದರೆ ಫತೋರ್ಪ್‌ದಲ್ಲಿ ಕ್ಲೋರಿಟಿಕ್ ಪದರಗಲ್ಲನ್ನು ಬಳಸಲಾಗಿದೆ. ಚಿಕಲಿಮ್, ನ್ಯೂರ ಮತ್ತು ಅಲ್ಡೋನಗಳಲ್ಲಿಯೂ ನೆಲದಡಿಯ ಕಲ್ಗುಹೆಗಳು ಕಂಡುಬಂದಿದ್ದು ಇವು ವರ್ತುಲ ವಿನ್ಯಾಸದಲ್ಲಿವೆ. ಈ ಕಲ್ಗುಹೆಗಳು 1.5 ಮೀ ಆಳವಿದ್ದು ಇವುಗಳ ವ್ಯಾಸ ತಳದಲ್ಲಿ 1.20 ಮೀ ಹಾಗೂ ಮೇಲೆ 40 ಸೆಂಮೀ ಇದೆ. ಚಿಕಲಿಮ್‌ನ ಒಂದು ಚಿಕ್ಕ ಕಲ್ಗುಹೆಯಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳ ತುಂಡುಗಳಲ್ಲದೆ ನವಶಿಲಾಯುಗದ ಒಂದು ಕೊಡಲಿಯೂ ಕಬ್ಬಿಣದ ಕೊಂಡಿಯೂ ಕಂಡುಬಂದಿವೆ. ದಕ್ಷಿಣಕನ್ನಡ ಮತ್ತು ಕೇರಳದಲ್ಲಿ ಕಂಡುಬಂದಿರುವ ನೆಲದಡಿಯ ಕಲ್ಗುಹೆಗಳು ಗಾತ್ರದಲ್ಲಿ ದೊಡ್ಡವಾಗಿವೆ. ಪುತ್ತೂರು, ಬಡಗಕಜೇಕಾರು, ಬೇಲೂರು, ಪೆರಂಪಳ್ಳಿ, ಕೊಟ್ಟ, ಮುಡನಿಡುಂಬೂರು, ಸಾಂತೂರು ಮುಖ್ಯ ನೆಲೆಗಳು.

ವಿಷ್ಣು (12ನೆಯ ಶತಮಾನ), ಗೋವ ಕದಂಬ ಶೈಲಿ

ಉಸ್‌ಗಾಲಿ ಮೊಲಿಗೆ ಸೇರಿದ ಪನ್ಸಾಯಿಮೋಲ್ ಸಮೀಪದ ಕುಶಾವತಿ ನದಿಯ ದಂಡೆಯಲ್ಲಿ ರೇಖಾಗೀರು ಚಿತ್ರಗಳೂ ಜಂಬುಕಲ್ಲಿನ ಕೆತ್ತನೆಗಳೂ ಸು. 60X60 ಮೀ ವಿಸ್ತಾರವಾದ ಪ್ರದೇಶದಲ್ಲಿ ವ್ಯಾಪಿಸಿವೆ. ಇಲ್ಲಿ ಈವರೆಗೆ 27 ಚಿತ್ರಗಳು ಸಿಕ್ಕಿವೆ. ವಿವಿಧ ಭಂಗಿಗಳಲ್ಲಿರುವ ಮಾನವ, ಎತ್ತು, ಆನೆ, ಜಿಂಕೆಗಳು, ನವಿಲು, ತಾಯಿ ಮತ್ತು ಮಗು (?) ಚಿತ್ರಗಳಲ್ಲದೆ ಹೆಜ್ಜೆಗುರುತುಗಳಿವೆ. ಚಕ್ರವ್ಯೂಹದಂಥ ಕೋಟೆ ಮುಂತಾದ ಚಿತ್ರಗಳಿವೆ. ಮಾನವರ ಚಿತ್ರಗಳಲ್ಲಿ ನೇರವಾಗಿ ನಿಂತ ಹಾಗೂ ಕೈಗಳನ್ನು ಎತ್ತಿಕೊಂಡ, ಆಲಂಕಾರಿಕ ಶಿರಸ್ತ್ರಾಣತೊಟ್ಟ ವ್ಯಕ್ತಿ ಗಮನಾರ್ಹ.

ಕಜ್ಹೂರ್‌ನಲ್ಲಿ ಒಂದೇ ರೀತಿಯ ಎತ್ತುಗಳ ಎರಡು ಸಾಲುಗಳನ್ನು ಒಂದರ ಮೇಲೊಂದು ಚಿತ್ರಿಸಿದ್ದಾರೆ. ಇವು ಗೀರು ರೇಖಾಚಿತ್ರಗಳು. ಎತ್ತುಗಳ ಕೋಡುಗಳಲ್ಲಿ ಕನಿಷ್ಠ ಮೂರು ಪ್ರಕಾರಗಳನ್ನು ಗುರುತಿಸಬಹುದು. ಇವುಗಳ ಕೋಡು ಎದುರು–ಬದರಾಗಿರುವ ಎರಡು ಕಂಸಗಳಂತಿವೆ. ಮೇಲಿನ ಸಾಲಿನ ಕೆಲವು ಎತ್ತುಗಳ ಕಾಲುಗಳು ಕೆಳಗಿನ ಸಾಲಿನ ಎತ್ತುಗಳ ಕೋಡುಗಳಿಗೆ ಕೂಡಿರುವುದು ಕುತೂಹಲಕಾರಿಯಾಗಿವೆ.

ದಕ್ಷಿಣಕನ್ನಡದ ಗಾವಳಿ (ಕುಂದಾಪುರ ತಾಲ್ಲೂಕು), ಉತ್ತರಕನ್ನಡದ ಶಿರಸಿ ತಾಲ್ಲೂಕಿನ ಸೋಂದ, ಶಿವಮೊಗ್ಗದ ಹೊಳಲೂರು, ಹೊಳೆಹಟ್ಟಿ, ಹೊಳೆ ಹನ್ಯವಾಡಿ ಮುಂತಾದೆಡೆಗಳಲ್ಲಿ ಇಂಥ ಹಲವಾರು ಗೀರು ರೇಖಾಚಿತ್ರಗಳಿವೆ. ಗಾವಳಿಯ ಸಮೀಪದ ಕಕ್ಕುಂಜೆಯಲ್ಲಿ ಬೃಹತ್ ಶಿಲಾಯುಗದ ಕಂಡಿಕೋಣೆ ಗೋರಿಗಳಿವೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಜೆ.ವಿ.ಪಿ.ರಾವ್ ಅವರ ಅನ್ವೇಷಣೆಯಲ್ಲಿ ವೊಲ್ಪೋಯ್ ತಾಲ್ಲೂಕಿನ ಮೌರ್‍ಯೆಯಲ್ಲಿ ಎತ್ತು, ನಾಯಿ(?) ಹಾಗೂ ತ್ರಿಶೂಲದ ಗೀರು ರೇಖಾಚಿತ್ರಗಳು ಪತ್ತೆಯಾಗಿವೆ. ಸು.15–20 ವರ್ಷಗಳ ಹಿಂದೆ ಕುಡ್ನೆಂ ಎಂಬಲ್ಲಿ ಜಂಬಿಟ್ಟಿಗೆ ಸಮತಟ್ಟಿನಲ್ಲಿ ಸು.13–14 ಮೀ ಎತ್ತರದ ಸ್ಫುಟವಾಗಿ ಕೆತ್ತಿದ ಒಂದು ಅಪರೂಪದ ಸರಳ ಸ್ತ್ರೀ ಮೂರ್ತಿಯನ್ನು ಶೋಧಿಸಲಾಗಿದೆ. ಇದು ಪ್ರಾಯಶಃ ಬೃಹತ್ ಶಿಲಾ ಸಂಸ್ಕೃತಿಯದ್ದಾಗಿರಬಹುದು.

(ಆರ್‌ಬ.)

**ಶಾಸನಗಳು:** ಅರ್ವಾಲೆಮ್ ಗುಹೆಗಳಲ್ಲಿರುವ ಎರಡು ಶಾಸನಗಳು ಲಿಪಿಶೈಲಿ, ಲಕ್ಷಣಗಳ ಆಧಾರದ ಮೇಲೆ 5ನೆಯ ಶತಮಾನಕ್ಕೆ ಸೇರಿವೆ. ಇವುಗಳ ಶಿರಪೇಟಿಕಾ ಲಿಪಿ ಬನವಾಸಿ ಮತ್ತು ಗುಡ್ನಾಪುರಗಳಲ್ಲಿ ದೊರೆತ ಆದಿ ಕದಂಬ ಶಾಸನಗಳ ಲಿಪಿಯನ್ನು ಹೋಲುತ್ತದೆ. ಚಂದೋರದ ಪ್ರಾಚೀನ ಕನ್ನಡ ಬಂಡೆಗಲ್ಲು ಶಾಸನದ ಉಳಿದಿರುವ ಭಾಗ ಇದನ್ನು ಕೆತ್ತಿದ ಲಿಪಿಕಾರನಾದ ದೇಶಲೋಜನ ಹೆಸರನ್ನು ದಾಖಲಿಸಿದೆ. ಇದು 6ನೆಯ ಶತಮಾನದ್ದೆಂದು ಲಿಪಿಯ ಆಧಾರದ ಮೇಲೆ ಹೇಳಬಹುದು. ಈ ಪ್ರದೇಶದಲ್ಲಿಯೂ 6–7ನೆಯ ಶತಮಾನಗಳಷ್ಟು ಹಿಂದೆಯೇ ಕನ್ನಡ ಮಾತನಾಡುತ್ತಿದ್ದರೆಂದು ಸೂಚಿಸುವ ಈ ಶಾಸನ ಮಹತ್ತ್ವದ್ದಾಗಿದೆ. ಚಳುಕ್ಯರ 610ರ ಒಂದು ಶಾಸನ ಗೋವವನ್ನು ಕೊಂಕಣವಿಷಯವೆಂದು ಕರೆದರೆ ದಕ್ಷಿಣ ಶಿಲಾಹಾರರ ರಟ್ಟರಾಜನ ಶಾಸನ ಲಂಕ ಎಂದು ಕರೆದಿದೆ. ಆದಿಲ್‌ಶಾಹಿ ಸಾಮ್ರಾಜ್ಯದ ಒಂದು ಶಾಸನ ಇದನ್ನು ಗುವೆಯೆಂದು ಉಲ್ಲೇಖಿಸಿದೆ. ಚಾಳುಕ್ಯರ ರಾಜ್ಯಾಭಾರದ ಕಾಲದಲ್ಲಿ ಗೋವ ಪ್ರಾಯಃ ಸ್ವಾಮಿಕರಾಜನೆಂಬುವನ ಆಡಳಿತಕ್ಕೆ ಒಳಪಟ್ಟಿತ್ತು. ಅನಂತರ ಸತ್ಯಾಶ್ರಯ ಧ್ರುವರಾಯನೆಂಬ ರಾಜನ ಆಳಿಕೆಯಲ್ಲಿದ್ದ ಇರ್‍ರಿದಿಗೆ ವಿಷಯ ಗೋವದ ಒಂದು ಭಾಗವಾಗಿರಬಹುದು. ಸು. 765ರಲ್ಲಿ ಗೋವ ದಕ್ಷಿಣ ಶಿಲಾಹಾರರ ಸ್ವಾಧೀನಕ್ಕೆ ಒಳಪಟ್ಟು ಅನಂತರ ರಾಷ್ಟ್ರಕೂಟರ ಆಳಿಕೆಗೆ ಸೇರಿತು. ಗೋಪಾಲಕ ಪಟ್ಟಣ ಇವರ ರಾಜಧಾನಿಯಾಯಿತು. ಇತಿಹಾಸಕಾಲದಲ್ಲಿ ಗೋವ ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಕರ್ನಾಟಕದ ಒಂದು ಭಾಗವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.

**ಇತಿಹಾಸ:** ಹಲವು ಪುರಾಣಗಳಲ್ಲೂ ಶಾಸನಗಳಲ್ಲೂ ಗೋವದ ಉಲ್ಲೇಖಗಳಿವೆ. ಪರಶುರಾಮ ಮಿಥಿಲೆಯಿಂದ ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ಇಲ್ಲಿ ನೆಲೆಗೊಳಿಸಿದನೆಂಬ ಪ್ರತೀತಿಯಿದೆ. ಮೌರ್ಯ ಸಾಮ್ರಾಜ್ಯ ಒಡೆದು ಹೋದಾಗ ಗೋವದ ಅನೇಕ ಪ್ರದೇಶಗಳು ಸ್ವತಂತ್ರವಾದುವು. ಮೌರ್ಯರ ಒಂದು ಶಾಖೆ ಗೋವ ಪ್ರದೇಶದಲ್ಲಿ ರಾಜ್ಯ ಸ್ಥಾಪಿಸಿ ಆಳಲಾರಂಭಿಸಿತು. ಈ ಶಾಖೆಯ ಅರಸರಿಗೆ ಕೊಂಕಣದ ಮೌರ್ಯರೆಂದು ಹೆಸರು. ದಖಿನಿನಲ್ಲಿ ಸಾಮ್ರಾಜ್ಯ ಸ್ಥಾಪಿಸಿ ದೀರ್ಘಕಾಲ ಆಳಿದ ಸಾತವಾಹನರು ತಮ್ಮ ಸಾರ್ವಭೌಮತ್ವವನ್ನು ಗೋವದ ಮೇಲೂ ಸ್ಥಾಪಿಸಿದ್ದರು. ರೋಮನ್ ಸಾಮ್ರಾಜ್ಯಕ್ಕೂ ದಖಿನ್ ಪ್ರದೇಶಕ್ಕೂ ವ್ಯಾಪಾರ ಸಂಪರ್ಕವಿತ್ತು. ಗೋವ ಪಟ್ಟಣ ವ್ಯಾಪಾರ ಕೇಂದ್ರ ಪ್ರಮುಖವೂ ಮುಖ್ಯ ಬಂದರೂ ಆಗಿತ್ತು. ಸಾತವಾಹನರ ಅನಂತರ ಕ್ರಮೇಣ ತಲೆಯೆತ್ತಿದ ಬನವಾಸಿ ಕದಂಬ ಮನೆತನ ಗೋವದ ಹೆಚ್ಚು ಪ್ರದೇಶದ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿತು. 6ನೆಯ ಶತಮಾನದ ಕೊನೆಯಲ್ಲಿ ಬಾದಾಮಿ ಚಳುಕ್ಯರ ಒಂದನೆಯ ಕೀತಿವರ್ಮ ಕದಂಬರನ್ನು ಸೋಲಿಸಿ ಕೊಂಕಣದ ಹಲವು ಪ್ರದೇಶಗಳ ಮೇಲೆ ಅಧಿಕಾರ ಸ್ಥಾಪಿಸಿದ. ಇಮ್ಮಡಿ ಪುಲಕೇಶಿ ತನ್ನ ದಿಗ್ವಿಜಯ ಕಾಲದಲ್ಲಿ ಕೊಂಕಣ ಪ್ರದೇಶವನ್ನು ಪೂರ್ಣವಾಗಿ ಜಯಿಸಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಇವನು ಗೋವದ ಉತ್ತರ ಪ್ರದೇಶದಲ್ಲಿ ಆಳುತ್ತಿದ್ದ ಮೌರ್ಯ ಶಾಖೆಯ ರಾಜನನ್ನು ಸೋಲಿಸಿದ ಸಂಗತಿ ಐಹೊಳೆ ಶಾಸನದಿಂದ ತಿಳಿದುಬರುತ್ತದೆ. ಅನಂತರ ಗೋವ ಪ್ರದೇಶ ಕೊನೆಗಾಲದವರೆಗೂ ಬಾದಾಮಿ ಚಳುಕ್ಯ ಸಾಮ್ರಾಜ್ಯದ ಭಾಗವಾಗಿತ್ತು. ಅನಂತರ ಇದು ರಾಷ್ಟ್ರಕೂಟ ಸಾಮ್ರಾಜ್ಯದ ಭಾಗವಾಯಿತು. ಚಳುಕ್ಯ ಮತ್ತು ರಾಷ್ಟ್ರಕೂಟ ಕಾಲದಲ್ಲಿ ಅರೇಬಿಯ, ಪರ್ಷಿಯ ಮತ್ತು ದಖಿನ್‌ಗಳ ನಡುವೆ ವ್ಯಾಪಾರ ಸಂಪರ್ಕ ವಿಶೇಷವಾಗಿ ಅಭಿವೃದ್ಧಿಹೊಂದಿತು. ವಿದೇಶಿ ಹಡಗುಗಳು ಗೋವ ಬಂದರಿಗೆ ಬರುತ್ತಿದ್ದವು. ಗೋವಪಟ್ಟಣ ಪಶ್ಚಿಮತೀರದ ಮುಖ್ಯ ವ್ಯಾಪಾರ ಕೇಂದ್ರಗಳಲ್ಲೊಂದಾಗಿತ್ತು.

ರಾಷ್ಟ್ರಕೂಟರ ಕೊನೆಗಾಲದಲ್ಲಿ ಇಲ್ಲಿ ಕದಂಬರು ರಾಜ್ಯ ಸ್ಥಾಪಿಸಿದರು. ಇವರಿಗೆ ಗೋವೆಯ ಕದಂಬರೆಂದೇ ಹೆಸರು. ಇದು ಬನವಾಸಿ ಕದಂಬ ಮನೆತನದ ಉಪಶಾಖೆಗಳಲ್ಲೊಂದು. ಗೋವದ ಸಮೀಪದ ಚಂದ್ರಪುರ (ಇಂದಿನ ಚಂದೂರು) ಇವರ ರಾಜಧಾನಿಯಾಗಿತ್ತು. ಈ ಶಾಖೆಯ ಆರಂಭ ಕಾಲದ ಕಂಟಕಾಚಾರ್ಯ, ನಾಗವರ್ಮ, 1ನೆಯ ಗುಹಲದೇವ ಮೊದಲಾದವರು ಅಷ್ಟು ಪ್ರಬಲರಾಗಿರಲಿಲ್ಲ. 1ನೆಯ ಷಷ್ಠದೇವ ಅಥವಾ ಚತುರ್ಭುಜನೆಂಬ ರಾಜ 970ರ ಸುಮಾರಿನಲ್ಲಿ ಪ್ರಬಲನಾಗಿದ್ದುದಲ್ಲದೆ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಕೊನೆಗಾಣಿಸುವಲ್ಲಿ ಕಲ್ಯಾಣ ಚಾಳುಕ್ಯ ತೈಲಪನಿಗೆ ಸಹಾಯ ಮಾಡಿದ. 11ನೆಯ ಶತಮಾನದ ಪ್ರಾರಂಭದಲ್ಲಿ ಆಳುತ್ತಿದ್ದ 2ನೆಯ ಗುಹಿಲದೇವನ ಕಾಲದಲ್ಲಿ ಗೋವ ಪ್ರಸಿದ್ಧ ವಾಣಿಜ್ಯಕೇಂದ್ರವೂ ರೇವುಪಟ್ಟಣವೂ ಆಗಿತ್ತೆಂದೂ ಆ ವೇಳೆಗೆ ಅರಬ್ ವರ್ತಕರು ಗೋವೆಯಲ್ಲಿ ನೆಲೆಸಿದ್ದರೆಂದೂ ತಿಳಿದುಬರುತ್ತದೆ. ಅನಂತರ ಆಳಿದ 2ನೆಯ ಷಷ್ಠದೇವ ಇಡೀ ಕೊಂಕಣ ಪ್ರದೇಶದ ಮೇಲೆ ತನ್ನ ಆಳಿಕೆ ಸ್ಥಾಪಿಸಿದ. ಇವನಿಗೆ ಚಟ್ಟಲ ಮತ್ತು ಚಟ್ಟಯ್ಯ ಎಂಬ ಹೆಸರುಗಳಿದ್ದುವು. ಚಾಳುಕ್ಯ ಜಯಸಿಂಹನ ಆಶ್ರಿತನಾಗಿದ್ದ ಇವನ ಆಳಿಕೆಯಲ್ಲಿ ಗೋವ ಪಟ್ಟಣ ವಾಣಿಜ್ಯಕೇಂದ್ರವಾಗಿ ವಿಶೇಷ ಪ್ರಸಿದ್ಧಿ ಪಡೆದಿತ್ತು. ಗೋವ ರೇವು ಪಟ್ಟಣ ಭವ್ಯಭವನಗಳಿಂದಲೂ ಇಬ್ಬದಿಯ ದೊಡ್ಡಮಳಿಗೆಗಳಿಂದ ಕೂಡಿದ ವಿಶಾಲವಾದ ಬೀದಿಗಳಿಂದಲೂ ಉದ್ಯಾನವನಗಳಿಂದಲೂ ಕಂಗೊಳಿಸುತ್ತಿತ್ತೆಂದು ಆ ಕಾಲದ ಶಾಸನಗಳಲ್ಲಿ ವರ್ಣಿತವಾಗಿದೆ.

ಷಷ್ಠದೇವನ ಅನಂತರ ಅವನ ಮಗನಾದ 1ನೆಯ ಜಯಕೇಶಿ ಗೋವದ ರಾಜನಾದ. ಗೋವ ರಾಜ್ಯ ಇವನ ಆಳಿಕೆಯ ಕಾಲದಲ್ಲಿ ಕಪಾರ್ಡಿಕ ದ್ವೀಪ, ಕೊಂಕಣ, ಹೈವೆ, ಹಲಸಿಗೆ ಮುಂತಾದ ಪ್ರದೇಶಗಳನ್ನೊಳಗೊಂಡಿತ್ತು. ಪರಾಕ್ರಮಿಯೂ ದೂರದರ್ಶಿಯೂ ಆದ ಇವನು ಕಲ್ಯಾಣ ಚಾಳುಕ್ಯ ವಿಕ್ರಮಾದಿತ್ಯನಿಗೆ ತನ್ನ ಒಬ್ಬ ಮಗಳನ್ನೂ ಅನಿಲ್‌ವಾಡದ

ಚಾಳುಕ್ಯ ಕರ್ಣನಿಗೆ ಮತ್ತೊಬ್ಬ ಮಗಳನ್ನೂ ವಿವಾಹ ಮಾಡಿಕೊಟ್ಟು ತನ್ನ ಸಂತತಿಯ ಪ್ರಭಾವ ವಿಸ್ತರಿಸಿದ. ಇವನ ರಾಜಧಾನಿಯಾಗಿದ್ದ ಗೋವದ ರಾಜಮಾರ್ಗಗಳಲ್ಲಿ ಪಂಡಿತರೂ ಶ್ರೀಮಂತರೂ ಧನಕನಕ ಐಶ್ವರ್ಯಾದಿಗಳೂ ಕಣ್ಮನಗಳಿಗೆ ಹಬ್ಬವನ್ನುಂಟುಮಾಡುತ್ತ ನಗರ ಅಮರಪುರಿಯಂತೆ ಕಂಗೊಳಿಸುತ್ತದೆ ಎಂದು ಹಲವು ಶಾಸನಗಳಲ್ಲಿ ವರ್ಣಿಸಲಾಗಿದೆ. ಇವನ ಪ್ರಧಾನಮಂತ್ರಿಯಾಗಿದ್ದ ಅರಬ್ ಮೂಲದ ಸದನೋ ಎಂಬುವನು ಗೋವ ನಗರದ ಮತ್ತು ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷವಾಗಿ ಶ್ರಮಿಸಿದ. ಗೋವ ಬಂದರನ್ನು ಅಭಿವೃದ್ಧಿಪಡಿಸಿ ಸಾಗರೋತ್ತರ ವ್ಯಾಪಾರವನ್ನು ಪ್ರೋತ್ಸಾಹಿಸಿದ; ಬಡಬಗ್ಗರ ಸಹಾಯಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ; ನಿರ್ಗತಿಕರಿಗೂ ಅಂಗವಿಕಲರಿಗೂ ಉಚಿತ ಊಟ ವಸತಿಯನ್ನು ಒದಗಿಸಿದ. ಈ ಸಂಸ್ಥೆಯ ವೆಚ್ಚಕ್ಕಾಗಿ ಹೊರಗಿನಿಂದ ಗೋವ ಬಂದರಿಗೆ ಬರುತ್ತಿದ್ದ ವ್ಯಾಪಾರಿ ಹಡಗುಗಳ ಮೇಲೆ ಸುಂಕ ವಿಧಿಸಿದ. ಅಲ್ಲದೆ ರಾಜ್ಯದಲ್ಲಿ ಸಂತಾನವಿಲ್ಲದೆ ಮರಣಹೊಂದಿದ ಶ್ರೀಮಂತರ ಆಸ್ತಿ ಈ ಸಂಸ್ಥೆಗೆ ಸೇರತಕ್ಕದ್ದೆಂದು ಕಾನೂನು ಜಾರಿಗೆ ತಂದ. ಈ ಸಂಸ್ಥೆಯ ಆದಾಯ ಹೇರಳವಾಗಿತ್ತು. ಒಂದನೆಯ ಜಯಕೇಶಿಯ ಅನಂತರ 3ನೆಯ ಗುಹಿಲದೇವ ಮತ್ತು ವಿಜಯಾದಿತ್ಯ ಎಂಬುವರು ಅನುಕ್ರಮವಾಗಿ ಆಳಿದರು.

ವಿಜಯಾದಿತ್ಯನ ಮರಣಾನಂತರ ಅವನ ಮಗನಾದ 2ನೆಯ ಜಯಕೇಶಿ ರಾಜನಾಗಿ 1104–1148ರ ವರೆಗೆ ಆಳಿದ. ಈತನ ಆಳಿಕೆಯಲ್ಲಿ ಗೋವ ರಾಜ್ಯ ಉನ್ನತಿಯ ಶಿಖರ ಮುಟ್ಟಿತು. ವಿವೇಕಿಯೂ ಪರಾಕ್ರಮಿಯೂ ಆದ ಜಯಕೇಶಿ ಕಲ್ಯಾಣ ಚಾಳುಕ್ಯರ ಅಧೀನತೆ



ಬಾಮ್ ಜೀಸಸ್ ಚರ್ಚ್, ಹಳೆಗೋವ

ಯಿಂದ ಸ್ವತಂತ್ರನಾಗಲು ಹವಣಿಸಿ ಕೊಂಕಣ ಚಕ್ರವರ್ತಿ ಎಂಬ ಬಿರುದನ್ನು ಧರಿಸಿದ. ಚಾಳುಕ್ಯ ಸಾರ್ವಭೌಮ 6ನೆಯ ವಿಕ್ರಮಾದಿತ್ಯ ತನ್ನ ಮಗಳನ್ನು ಜಯಕೇಶಿಗೆ ವಿವಾಹ ಮಾಡಿಕೊಟ್ಟು ಗೋವ ಮತ್ತು ಕಲ್ಯಾಣ ಮನೆತನಗಳ ಮಧ್ಯೆ ಮಧುರ ಬಾಂಧವ್ಯವನ್ನು ಬೆಳೆಸಿದ. ವಿಕ್ರಮಾದಿತ್ಯನ ಮರಣಾನಂತರ ದೋರಸಮುದ್ರದ ಹೊಯ್ಸಳ ವಿಷ್ಣುವರ್ಧನ ಚಾಳುಕ್ಯ ಮಾಂಡಲೀಕರನ್ನು ಸೋಲಿಸಿ ಕೃಷ್ಣ ನದಿಯವರೆಗೂ ದಂಡೆತ್ತಿ ಹೋದ. ಇವನು ಜಯಕೇಶಿಯನ್ನು ಸೋಲಿಸಿ ಹಾನಗಲ್, ಹಲಸಿಗೆ ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡ. ಆದರೆ 1142ರಲ್ಲಿ ವಿಷ್ಣುವರ್ಧನ ಮರಣ ಹೊಂದಿದ ಅನಂತರ ಜಯಕೇಶಿ ತಾನು ಕಳೆದುಕೊಂಡಿದ್ದ ಪ್ರದೇಶವನ್ನು ಪುನಃ ವಶಪಡಿಸಿಕೊಂಡ. ಜಯಕೇಶಿಯ ಆಳಿಕೆಯಲ್ಲಿ ಗೋವ ರಾಜ್ಯದಲ್ಲಿ ವ್ಯವಸ್ಥಿತವಾದ ಆಡಳಿತವಿದ್ದು ಜನರು ನೆಮ್ಮದಿಯಿಂದಿದ್ದರು. ಇವನ ಅನೇಕ ಶಾಸನಗಳಲ್ಲಿ ಗೋವದ ಆಡಳಿತ, ಸಾಮಾಜಿಕ ಜೀವನ ಮತ್ತು ಆರ್ಥಿಕ ಪುರೋಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಗಳಿವೆ. 2ನೆಯ ಜಯಕೇಶಿಯ ಮರಣಾನಂತರ ಇವನ ಮಗ ಪೆರ್ಮಾಡಿದೇವ ರಾಜನಾದ. ಇವನಿಗೆ ಶಿವಚಿತ್ತ, ವಿಷ್ಣುಚಿತ್ತ ಎಂಬ ಹೆಸರುಗಳೂ ಇದ್ದವು. ಇವನ ರಾಣಿಯಾದ ಕಮಲಾದೇವಿ ಗೋವದಲ್ಲಿ ಅನೇಕ ಅಗ್ರಹಾರಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದಲ್ಲದೆ ದೇಗಾಯಲ್ಲಿ ಕಮಲನಾರಾಯಣ ಮತ್ತು ಮಹಾಲಕ್ಷ್ಮಿ ದೇವಾಲಯಗಳನ್ನು ಕಟ್ಟಿಸಿದಳು.

ಗೋವ ಕದಂಬ ರಾಜರು 1156ರ ವರೆಗೂ ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದರು. ಕಲ್ಯಾಣದಲ್ಲಿ ರಾಜ್ಯ ವಿಪ್ಲವ ನಡೆದು ಕಳಚುರಿ ಬಿಜ್ಜಳ ಚಕ್ರವರ್ತಿಯಾದ ಅನಂತರ ಗೋವದ ರಾಜ ಸ್ವತಂತ್ರನಾದ. ಕಳಚುರಿಗಳ ಪ್ರಭಾವ ಕುಂದಿತು. ಹೊಯ್ಸಳ ವೀರಬಲ್ಲಾಳ 1182ರಲ್ಲಿ ಗೋವದ ರಾಜನನ್ನು ಸೋಲಿಸಿ ಕಪ್ಪಕಾಣಿಕೆ ಸ್ವೀಕರಿಸಿ ಆಶ್ರಿತ ರಾಜನನ್ನಾಗಿ ಮಾಡಿಕೊಂಡ. ಅನಂತರ ಸೇವುಣರಿಗೂ ಹೊಯ್ಸಳರಿಗೂ ದಖನಿನ ಸಾರ್ವಭೌಮತ್ವಕ್ಕಾಗಿ ಹೋರಾಟ ನಡೆಯಿತು. 1214ರ ಅನಂತರ ಗೋವದ ರಾಜನಾದ 3ನೆಯ ಜಯಕೇಶಿ ದೇವಗಿರಿಯ ಸಿಂಘಣನ ಆಶ್ರಿತ ರಾಜನಾದ. 1310ರಲ್ಲಿ ಮಲ್ಲಿಕ್ ಕಾಫರನ ದಂಡಯಾತ್ರೆಯಿಂದ ದೇವಗಿರಿ ಸೇವುಣರ ಆಡಳಿತ ಕೊನೆಗೊಂಡಿತು. ಗೋವದ ರಾಜ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ. ಆದರೆ ಮಲ್ಲಿಕ್ ಕಾಫರನು ಗೋವ ರಾಜ್ಯವನ್ನು ಸೂರೆಮಾಡಿ ರಾಜಧಾನಿಯನ್ನು ಆಕ್ರಮಿಸಿದ. ಇವನು ಹಿಂದಿರುಗಿದ ಅನಂತರ ಗೋವದ ರಾಜ ಚಂದ್ರಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಲು ತೊಡಗಿದ. 1350ರ ವೇಳೆಗೆ ಮಹಮದ್ ಬಿನ್ ತುಗಲಕನ ದಳಪತಿಯೊಬ್ಬ ಚಂದ್ರಪುರವನ್ನು ಮುತ್ತಿ ನಾಶಮಾಡಿದ. ಸಹಸ್ರಾರು ಮಂದಿ ಹಿಂದು ಸೈನಿಕರೂ ರಾಜಪರಿವಾರದವರೂ ಮರಣ ಹೊಂದಿದ್ದಾಗಿ ಇಬ್ನ್ ಬತೂತನ ಬರೆವಣಿಗೆಯಿಂದ ತಿಳಿದುಬರುತ್ತದೆ. ಸು.350 ವರ್ಷಗಳ ಗೋವ ಕದಂಬ ಮನೆತನ ಕೊನೆಗೊಂಡಿತು.

ಗೋವ ರಾಜ್ಯ ಬಹುಕಾಲ ಮಹಮದೀಯರ ಆಳಿಕೆಯಲ್ಲಿ ಉಳಿಯಲಿಲ್ಲ. ವಿಜಯನಗರದ ಹರಿಹರ ಮತ್ತು ಬುಕ್ಕರು ಇದನ್ನು ಮಹಮದೀಯರ ಆಳಿಕೆಯಿಂದ ವಿಮೋಚನೆಗೊಳಿಸಿ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. 1470ರ ವರೆಗೂ ಗೋವ ವಿಜಯನಗರ ಸಾಮ್ರಾಜ್ಯದ ಭಾಗವಾಗಿತ್ತು. ಅನಂತರ ಬಿಜಾಪುರದ 2ನೆಯ ಮಹಮ್ಮದನ ಮಂತ್ರಿಯಾದ ಮಹಮ್ಮದ್ ಗವಾನ್ ಇದನ್ನು ಗೆದ್ದು ಬಿಜಾಪುರ ರಾಜ್ಯಕ್ಕೆ ಸೇರಿಸಿಕೊಂಡ. ಸ್ವಲ್ಪಕಾಲ ಆದಿಲ್‌ಶಾಹಿ ಆಡಳಿತ ಮುಂದುವರಿಯಿತು. ಅನಂತರ ಇದು ಪೋರ್ಚುಗೀಸರ ವಶವಾಯಿತು. ಆಲ್ಬುಕರ್ಕ್ 1510ರ ಗೋವವನ್ನು ಪೋರ್ಚುಗೀಸರ ವಸಾಹತಾಗಿ ಮಾರ್ಪಡಿಸಿದ. ಆದರೆ ಅದೇ ವರ್ಷ ಆಗಸ್ಟ್ 15ರ ಸಮಯಕ್ಕೆ ಬಿಜಾಪುರದ ಯೂಸುಫ್ ಆದಿಲ್‌ಷಾ ಇವನನ್ನು ಸೋಲಿಸಿದ. ಪುನಃ ಆಲ್ಬುಕರ್ಕ್ ಗೋವವನ್ನು ವಶಪಡಿಸಿಕೊಂಡು ಪೋರ್ಚುಗೀಸರ ಆಡಳಿತವನ್ನು ಸ್ಥಾಪಿಸಿದ. ಅಂದಿನಿಂದ ಇದು ಪೋರ್ಚುಗೀಸರ ವಸಾಹತಾಯಿತು. ಕ್ರಮೇಣ ದೀವ್ ಮತ್ತು ದಮನ್‌ಗಳ ಮೇಲೂ ಪೋರ್ಚುಗೀಸರು ಅಧಿಕಾರ ಸ್ಥಾಪಿಸಿದರು.

ಮರಾಠರು ಹಲವು ಸಾರಿ ಗೋವವನ್ನು ಮುತ್ತಿದರೂ ಇಲ್ಲಿ ಪೋರ್ಚುಗೀಸರ ಆಡಳಿತ 450 ವರ್ಷಗಳ ಕಾಲ ಮುಂದುವರಿಯಿತು. ಇಲ್ಲಿ ಕ್ರೈಸ್ತಧರ್ಮ ವಿಶೇಷವಾಗಿ ಪ್ರಚಾರವಾಯಿತು. 17ನೆಯ ಶತಮಾನದಲ್ಲಿ ಗೋವವನ್ನು ಸಂದರ್ಶಿಸಿದ ಪಾಶ್ಚಾತ್ಯ ಪ್ರವಾಸಿಯೊಬ್ಬ ಇದು ಕ್ರೈಸ್ತ ದೇವಾಲಯಗಳಿಂದಲೂ ಮಠಗಳಿಂದಲೂ ಸುಂದರವಾದ ಭವನಗಳಿಂದಲೂ ಐಶ್ವರ್ಯದಿಂದಲೂ ತುಂಬಿತುಳುಕುವ ನಗರಗಳಲ್ಲೊಂದಾಗಿದೆಯೆಂದು ಪ್ರಶಂಸಿದ್ದಾನೆ.

ಪೋರ್ಚುಗೀಸರ ದಬ್ಬಾಳಿಕೆಯ ವಿರುದ್ಧವಾಗಿ ಇಲ್ಲಿಯ ಜನ ಹಲವಾರು ಸಂದರ್ಭಗಳಲ್ಲಿ ದಂಗೆಯೆದ್ದಿದ್ದರು. ಆದರೆ ಪೋರ್ಚುಗೀಸ್ ಸರ್ಕಾರ ದಂಗೆಯನ್ನು ಉಗ್ರವಾಗಿ ಹತ್ತಿಕ್ಕಿತು. 19ನೆಯ ಶತಮಾನದಲ್ಲಿ ಪ್ರಾರಂಭವಾದ ರಾಷ್ಟ್ರೀಯ ಚಳವಳಿ ಗೋವವನ್ನೂ ಕ್ರಮೇಣ ಪ್ರವೇಶಿಸಿತು. ಮಹಾತ್ಮ ಗಾಂಧಿ ಭಾರತ ರಾಷ್ಟ್ರೀಯ ಚಳವಳಿಯ ನಾಯಕತ್ವವನ್ನು ವಹಿಸಿದ ಕೂಡಲೇ ಗೋವದಲ್ಲೂ ಚಳವಳಿಗೆ ಕರೆಕೊಟ್ಟರು. 1920ರಲ್ಲಿ ಇಲ್ಲಿ ಸ್ವಾತಂತ್ರ್ಯ ಚಳವಳಿಗಾಗಿ ಸಮಿತಿಯೊಂದು ಸ್ಥಾಪಿತವಾಯಿತು. 1930ರಲ್ಲಿ ಗೋವ ಕಾಂಗ್ರೆಸ್ ಸಮಿತಿ ಯನ್ನು ಸ್ಥಾಪಿಸಲಾಯಿತು. ಪೋರ್ಚುಗೀಸ್ ಸರ್ಕಾರ ಗೋವದಲ್ಲಿ ಚಳವಳಿಗಳನ್ನು ಉಗ್ರವಾಗಿ ಹತ್ತಿಕ್ಕಿತು.

1947ರಲ್ಲಿ ಭಾರತ ಸ್ವತಂತ್ರವಾದ ಅನಂತರ ಭಾರತ ಸರ್ಕಾರ ಗೋವ ಪ್ರದೇಶದಿಂದ ಪೋರ್ಚುಗಲ್ ತನ್ನ ಆಡಳಿತವನ್ನು ತೆರವು ಮಾಡಬೇಕೆಂದು ಸೂಚಿಸಿತು. ಆದರೂ ಪೋರ್ಚುಗೀಸ್ ಸರ್ಕಾರ ಬಿಗಿಮುಷ್ಟಿಯ ವಸಾಹತು ನೀತಿಯನ್ನು ಮುಂದುವರಿಸಿತು. ದೆಹಲಿ ಮತ್ತು ಲಿಸ್ಬನ್‌ಗಳ ನಡುವೆ ಅನೇಕ ಸುತ್ತಿನ ಮಾತುಕತೆಗಳು ನಡೆದರೂ ಪ್ರಯೋಜನವಾಗಲಿಲ್ಲ. 1947ರಿಂದ 1954ರ ವರೆಗೆ ನಡೆದ ವಿಮೋಚನಾ ಹೋರಾಟದ ಮುಖಂಡರನ್ನು ಪೋರ್ಚುಗೀಸ್ ಸರ್ಕಾರ ವರ್ಣನಾತೀತವಾದ ಶಿಕ್ಷೆಗಳಿಗೆ ಗುರಿ ಮಾಡಿತು. ಪೋರ್ಚುಗಲ್ ಮತ್ತು ಭಾರತದ ಮಧ್ಯೆ ರಾಜತಾಂತ್ರಿಕ ಸಂಬಂಧ 1955ರಲ್ಲಿ ಕಡಿದುಬಿತ್ತು. ಇದೇ ವರ್ಷ ಗೋವ ವಿಮೋಚನೆಗಾಗಿ ಶಾಂತಿಯುತ ಚಳವಳಿ ಪ್ರಾರಂಭವಾಯಿತು. ಚಳವಳಿ 1961ರ ವರೆಗೂ ಸತತವಾಗಿ ಮುಂದುವರಿಯಿತು. ಪೋರ್ಚುಗಲ್ ಸರ್ಕಾರ ಅನೇಕ ಸತ್ಯಾಗ್ರಹಿಗಳನ್ನು ಗುಂಡಿಟ್ಟು ಕೊಂದಿತು. ಮುಖಂಡರನ್ನು ನಾನಾ ಬಗೆಯ ಚಿತ್ರಹಿಂಸೆಗಳಿಗೆ ಗುರಿಪಡಿಸಿತು. ಸರ್ಕಾರದ ಉಗ್ರನೀತಿ ಮತ್ತು ದಂಡನೆಗಳು ಮುಂದುವರಿದುವು. ಸ್ವಾತಂತ್ರ್ಯಾನಂತರ 14 ವರ್ಷಗಳ ಕಾಲದ ಭಾರತ ಸರ್ಕಾರದ ಸಂಯಮವನ್ನು ಪೋರ್ಚುಗಲ್ಲಿನ ವಸಾಹತು ನೀತಿ ಅಲುಗಿಸಿತು. ಪೋರ್ಚುಗೀಸ್ ಸೈನಿಕರು ಗೋವದ ಗಡಿಯಲ್ಲಿ ಭಾರತದ ಹಳ್ಳಿಗಳನ್ನು ಲೂಟಿ ಮಾಡಲು ಉಪಕ್ರಮಿಸಿದರು. ಕೊನೆಗೆ 1961 ಡಿಸೆಂಬರ್ 17–18ರ ಮಧ್ಯರಾತ್ರಿಯ ವೇಳೆಗೆ ಪೋರ್ಚುಗೀಸರ ಆಡಳಿತಕೇಂದ್ರವಾಗಿದ್ದ ಪಣಜಿಯನ್ನು ಭಾರತ ಸೈನ್ಯ ಸುತ್ತುಗಟ್ಟಿತು. ಅಲ್ಲಿದ್ದ ಪೋರ್ಚುಗೀಸ್ ದಳಗಳು ಭಾರತದ ಸೈನ್ಯಕ್ಕೆ ಶರಣಾಗತವಾದವು. ಕೇವಲ 36 ಗಂಟೆಗಳಲ್ಲಿ ಹೋರಾಟ ಕೊನೆಗೊಂಡಿತು. ಪೋರ್ಚುಗೀಸ್ ಆಳಿಕೆಯಿಂದ ಗೋವ ವಿಮೋಚನೆಗೊಂಡಿತು. ಡಿಸೆಂಬರ್ 20 ರಂದು ಗೋವ ಭಾರತದಲ್ಲಿ ವಿಲೀನವಾಯಿತು.

(ಜಿ.ಆರ್.ಆರ್.)

**ವಾಸ್ತುಶಿಲ್ಪ:** ಪಶ್ಚಿಮ ಕರಾವಳಿಯಲ್ಲಿದ್ದು ಭೌಗೋಳಿಕವಾಗಿಯೂ ಚಾರಿತ್ರಿಕವಾಗಿಯೂ ವಿಶಿಷ್ಟ ಸ್ಥಾನ ಪಡೆದಿರುವ ಗೋವದ ವಾಸ್ತುಶಿಲ್ಪ ದೇಶಿ ಮತ್ತು ವಿದೇಶಿ ಪ್ರಭಾವಗಳಿಗೆ ಒಳಗಾಗಿರುವುದು ಸ್ವಾಭಾವಿಕ. ಇಲ್ಲಿಯ ವಾಸ್ತುಶಿಲ್ಪ ಬೆಳೆವಣಿಗೆಯ ಕುರುಹುಗಳು ಅತಿ ಪ್ರಾಚೀನಕಾಲದಿಂದಲೂ ಕಂಡುಬರುತ್ತವೆ. ಪೋರ್ಚುಗೀಸರಿಂದ ನಾಶವಾದ 16ನೆಯ ಶತಮಾನದ ಕೆಲವು ದೇವಾಲಯಗಳ ಮೂಲಮೂರ್ತಿಗಳನ್ನು ಬೇರೆಡೆಗೆ ಕೊಂಡೊಯ್ದು

ಅವುಗಳಿಗಾಗಿ ಕಟ್ಟಿಸಿದ ದೇವಾಲಯಗಳು ಗೋವದಲ್ಲಿ ಈಚೆಗೆ ಬೆಳೆದುಬಂದ ವಾಸ್ತು ಮಾದರಿಯನ್ನು ಸೂಚಿಸುತ್ತವೆ. ಇಸ್ಲಾಂ ಶೈಲಿಯ ಕೆಲವು ಕಟ್ಟಡಗಳನ್ನು ಆದಿಲ್‌ಶಾಹಿ ಮನೆತನದವರು ಕಟ್ಟಿಸಿದರಾದರೂ ಪೋರ್ಚುಗೀಸರು ಹಲವು ಕಟ್ಟಡಗಳನ್ನು ನಾಶಮಾಡಿ ಮತ್ತೆ ಕೆಲವನ್ನು ಮಾರ್ಪಡಿಸಿ ಸಚಿವಾಲಯಗಳನ್ನಾಗಿ, ಕಚೇರಿಗಳನ್ನಾಗಿ ಮಾಡಿಕೊಂಡರು. ಪೋರ್ಚುಗೀಸರು ಕಟ್ಟಿಸಿದ ಕೆಲವು ಚರ್ಚುಗಳು ಮತ್ತು ಇತರ ಕಟ್ಟಡಗಳು ಸುಂದರವಾಗಿದ್ದು ಗೋವದ ಪ್ರೇಕ್ಷಣೀಯ ಸ್ಮಾರಕಗಳಾಗಿವೆ.

ಪ್ರ. ಶ. ಆದಿಕಾಲದಲ್ಲೇ ಗೋವದಲ್ಲಿ ವಾಸ್ತುಶಿಲ್ಪ ಆರಂಭವಾದದ್ದನ್ನು ಕಾಣಬಹುದು. ಅರ್ವಾಲೆಮ್ ಎಂಬಲ್ಲಿ ಗುಡ್ಡವನ್ನು ಕೊರೆದು ನಿರ್ಮಿಸಿರುವ ಗುಹೆಗಳಿವೆ. ಇಲ್ಲಿರುವ ಬ್ರಾಹ್ಮಿಲಿಪಿಯ ಶಾಸನ 5ನೆಯ ಶತಮಾನಕ್ಕೆ ಸೇರಿದ್ದು. ಇದು ಗೋವದ ಅತ್ಯಂತ ಪ್ರಾಚೀನ ಶಾಸನ. ಈ ಪ್ರಾಂತದಲ್ಲಿ ಬೌದ್ಧಧರ್ಮ ಇದ್ದದಕ್ಕೆ ಕುರುಹಾಗಿ ಕೋಲ್ವಲೆಯ ಬಳಿ ಸು. 2ನೆಯ ಶತಮಾನದ ಬುದ್ಧಮೂರ್ತಿಯೊಂದು ದೊರೆತಿದೆ. ಚಂದ್ರವರ್ಮನೆಂಬ ರಾಜ ಶಿವಪುರದಲ್ಲಿಯ ಬೌದ್ಧ ಮಹಾವಿಹಾರವೊಂದಕ್ಕೆ ದತ್ತಿ ಬಿಟ್ಟುದಾಗಿ 5ನೆಯ

ಸಂತ ಕಜೆತಾನ್ ಚರ್ಚ್, ಹಳೆ ಗೋವ

ಶತಮಾನದ ಶಾಸನವೊಂದು ತಿಳಿಸುತ್ತದೆ. ರಾಷ್ಟ್ರಕೂಟರ ಸಾಮಂತರಾಗಿ ವಲಿಪುರದಿಂದ ಆಳುತ್ತಿದ್ದ ಶಿಲಾಹಾರರು ನೆತ್ರ್ಲೆ ಎಂಬಲ್ಲಿ ಮಹಾಲಕ್ಷ್ಮಿಯ ದೇವಾಲಯವನ್ನು ನಿರ್ಮಿಸಿದರು. ಗೋವ ಕದಂಬರೂ ಇಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿರುವರು. ಸವಾಯ್‌ವೆರೆ ಎಂಬಲ್ಲಿ ಮೂರ್ತಿನಾರಾಯಣನ ದೇವಾಲಯ, ಗೋವಾಪುರಿಯಲ್ಲಿ ಸರಸ್ವತಿ ದೇವಾಲಯ, ದೇಗಾವೆಯಲ್ಲಿ ಕಮಲನಾರಾಯಣ ಮತ್ತು ಮಹಾಲಕ್ಷ್ಮಿ ದೇವಾಲಯಗಳು ಇವು ಇವರ ಕಾಲದಲ್ಲಿ ನಿರ್ಮಿತವಾದುವು. ಸೇವುಣರ ಕಾಲದಲ್ಲಿ ಚಾಳುಕ್ಯ ಮಾದರಿಯ ಹಲವು ದೇವಾಲಯಗಳನ್ನು ಇಲ್ಲಿ ಕಟ್ಟಿದ್ದಿರಬೇಕು. ತಾಂಬ್ಡಿಸುರ್ಲದಲ್ಲಿ ದಟ್ಟವಾದ ಕಾಡಿನ ನಡುವೆ ಇರುವ ಮಹಾದೇವ ದೇವಾಲಯ ಪ್ರಾಯಶಃ ಈ ಕಾಲದ್ದಿರಬೇಕು. ಚಾಳುಕ್ಯಶೈಲಿಯಲ್ಲಿ ಕಟ್ಟಿರುವ ವೇಸರ ಮಾದರಿಯ ಈ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪ ಮತ್ತು ಸಭಾಮಂಟಪಗಳೂ ಎರಡು ತಳಗಳ ಶಿಖರವೂ ಇವೆ. ಕೇರಿಯ ಬೇತಾಳ ದೇವಾಲಯ ದಲ್ಲಿರುವ ಗಜಲಕ್ಷ್ಮಿ, ಪರ್ಸೆಯಲ್ಲಿರುವ ಬ್ರಹ್ಮನ ಮೂರ್ತಿ, ಕೇರಿವೆರೆ ಕಾಡಿನಲ್ಲಿರುವ ನಾರಾಯಣನ ವಿಗ್ರಹ, ಕುಡ್ನೆಯಲ್ಲಿರುವ ಸೂರ್ಯಬಿಂಬ, ಉಮಾಸಹಿತನಾದ ಶಿವ, ಸೇಂಟ್ ಫ್ರಾನ್ಸಿಸ್ ಕೆಥಿಡ್ರಲ್ಲಿನ ವಸ್ತುಸಂಗ್ರಹಾಲಯದಲ್ಲಿರುವ ಕೆಲವು ಮೂರ್ತಿಗಳು ಈ ಕಾಲದ ಶಿಲ್ಪಗಳಾಗಿವೆ. ಬೆಳಗಾವಿ ಜಿಲ್ಲೆಯ ದೇಗಾವೆಯಲ್ಲಿರುವ ಸುಂದರವಾದ ಕಮಲನಾರಾಯಣ ದೇವಾಲಯವನ್ನು ಬಿಟ್ಟರೆ ಈ ಕಾಲದ ಬೇರೆ ದೇವಾಲಯಗಳು ಉಳಿದುಬಂದಿಲ್ಲ. ಸಪ್ತಕೋಟೀಶ್ವರ ಈ ರಾಜರ ಆರಾಧ್ಯದೇವತೆ. ಶ್ರೀಸಪ್ತಕೋಟೀಶಲಬ್ಧವರ ಪ್ರಸಾದ ಎಂಬುದು ಇವರ ಬಿರುದುಗಳಲ್ಲೊಂದು. ದೀವರ್ ದ್ವೀಪದ ಬಳಿ ನಾರ್ವೆಯಲ್ಲಿ ಇವರು ಸಪ್ತಕೋಟೀಶ್ವರ ದೇವಾಲಯವನ್ನು ಕಟ್ಟಿಸಿದ್ದರು. ವಿಜಯನಗರದ ಮಾಧವ ಮಂತ್ರಿ ಈ ದೇವಾಲಯದ ಜೀರ್ಣೋದ್ಧಾರ ಮಾಡಿದ್ದ. ಪೋರ್ಚುಗೀಸರಿಂದ ಇದು ನಾಶವಾದ ಮೇಲೆ ಸಪ್ತಕೋಟೀಶ್ವರಲಿಂಗವನ್ನು ಬಿಳಿಚೋಂಲಲ್ಲಿಯ ನಾರ್ವೆಯಲ್ಲಿ ಪ್ರತಿಷ್ಠಾಪಿಸ ಲಾಯಿತು. ಈಗ ಇಲ್ಲಿರುವ ದೇವಾಲಯವನ್ನು ನಿರ್ಮಿಸಿದವನು ಶಿವಾಜಿ. ಕದಂಬ ಜಯಕೇಶಿಯ ಆಳಿಕೆಯಲ್ಲಿ ಮಂತ್ರಿಯಾಗಿದ್ದ ಛದಮ ಎಂಬ ಅರಬ್ ವ್ಯಾಪಾರಿ ಗೋವಾಪುರಿ ಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ್ದ.

ಪೋರ್ಚುಗೀಸರು ನಾಶಮಾಡಿದ ದೇವಾಲಯಗಳಿಂದ ಮೂರ್ತಿಗಳನ್ನು ಬೇರೆ ಕಡೆಗೆ ಸಾಗಿಸಿ ಕಟ್ಟಿರುವ 16ನೆಯ ಶತಮಾನದಿಂದೀಚಿನ ಕಟ್ಟಡಗಳಲ್ಲಿ ಕುಶಸ್ಥಲಿಯಲ್ಲಿದ್ದ ಪ್ರಿಯೋಲಿಗೆ ವರ್ಗಾಯಿಸಿದ ಮಂಗೇಶದೇವಾಲಯ, ಕದಲಿವನದಿಂದ ಕವಲೆಗೆ ಬದಲಾಯಿಸಿದ ಶಾಂತದುರ್ಗ ದೇವಾಲಯ, ನಾರ್ವೆಯಲ್ಲಿರುವ ಸಪ್ತಕೋಟೀಶ್ವರ, ಮರ್ದೋಲಿನ ಮಹಾಲಸದೇವಿಯ ಆಲಯ, ಕೊಲ್ವದಲ್ಲಿದ್ದು ಬಾಂದೋರಕ್ಕೆ ಬದಲಾಯಿಸಿದ ಮಹಾಲಕ್ಷ್ಮಿ ದೇವಾಲಯಗಳನ್ನು ಹೆಸರಿಸಬಹುದು. ಹಲವು ಶೈಲಿಗಳ ಸಮ್ಮಿಶ್ರಣವನ್ನು ಈ ಕಟ್ಟಡಗಳಲ್ಲಿ ಕಾಣಬಹುದು. ಜಗತಿಯ ಒಳಭಾಗದಲ್ಲಿ ಹಲವು ಕಂಬಗಳಿರುವ ಭೋಗಮಂಟಪ, ದೇವಾಲಯದ ಒಳಗೂ ಸುತ್ತಲೂ ಹಾಸುಗಲ್ಲುಗಳನ್ನು ಹಾಕಿಸುವುದು ಮುಂತಾದವುಗಳಲ್ಲಿ ವಿಜಯನಗರ ಶೈಲಿಯ ಪ್ರಭಾವ ಕಂಡುಬಂದರೆ ಹಲವು ದೇವಾಲಯಗಳ ಹೊರಭಾಗದಲ್ಲಿ ಭಾರತೀಯ ಶೈಲಿಯ ಪ್ರಭಾವ ಎದ್ದುಕಾಣುತ್ತದೆ. ಕೆಲವು ದೇವಾಲಯಗಳನ್ನು ಇವುಗಳ ಮೇಲಿನ ಕಲಶಗಳಿಂದ ಮಾತ್ರ ದೇವಾಲಯಗಳೆಂದು ಗುರುತಿಸಬಹುದಾಗಿದೆ. ಗೋವದ ದೇವಾಲಯಗಳಲ್ಲಿ ವಸಾಹತು ಶೈಲಿಯ ಪ್ರಭಾವವನ್ನೂ ವಿಶೇಷವಾಗಿ ಕಾಣಬಹುದು. ದೇವಸ್ಥಾನಗಳ ಮುಂದೆ ಹಲವು ಅಂತಸ್ತುಗಳಲ್ಲಿ ನೇರವಾಗಿ ಮೇಲೆದ್ದಿರುವ ಭವ್ಯವಾದ ಗೋಪುರಗಳಿರುವುದು ಇಲ್ಲಿಯ ದೇವಾಲಯಗಳ ಒಂದು ವಿಶೇಷ. ಮರಾಠ ರಾಜನಾದ ಸಾತಾರದ ಸಾಹುರಾಜ ಕಟ್ಟಿಸಿದ ಶಾಂತದುರ್ಗ ದೇವಾಲಯದ ಕಂಬಗಳು ಮತ್ತು ಒಳಭಾಗದ ಅಲಂಕರಣಗಳು ಸುಂದರವಾಗಿವೆ. 17ನೆಯ ಶತಮಾನದ ಆದಿಭಾಗದಲ್ಲಿ ಮರ್ದೋಲಿನಲ್ಲಿ ಕಟ್ಟಿರುವ ಮಹಾಲಸದೇವಿಯ ಆಲಯದಲ್ಲಿರುವ ಮರದಲ್ಲಿ ಕೆತ್ತಿರುವ ಶಿಲ್ಪ ಅತ್ಯಂತ ಸುಂದರವಾಗಿದೆ.

ಭಾರತೀಯ-ಇಸ್ಲಾಂ ಶೈಲಿಯ ಕಟ್ಟಡಗಳಲ್ಲಿ ಅತ್ಯಂತ ಭವ್ಯವಾಗಿರುವುದು ಆದಿಲ್‌ಷಾ ಕಟ್ಟಿಸಿದ ರಾಜವಾಡೆ. ಕೆಲವು ಮಾರ್ಪಾಟುಗಳನ್ನು ಹೊಂದಿ ಡಿ-ಪಲೇಶಿಯೊ-ಇದಾಲ್ಕಿಯೊ ಎಂಬ ಹೆಸರಿಂದ ಇಂದಿಗೂ ಇದು ಉಪಯೋಗದಲ್ಲಿದೆ. ಕೆಲವು ಮಸೀದಿಗಳು ಚರ್ಚುಗಳಾಗಿ ಮಾರ್ಪಟ್ಟಿವೆ.

ಸೆ ಪ್ರಿಮೇಶಿಯಲ್ ಡಿ ಗೋವ ಅಥವಾ ಸೆ ಕೆಥಿಡ್ರಲ್ ಎಂಬುದು ಗೋವದ ಚರ್ಚುಗಳಲ್ಲಿ ಪುರಾತನ ಹಾಗೂ ಭವ್ಯವಾದುದು. ಅಲ್ಬುಕರ್ಕ್ ಹಳೆಯ ಗೋವವನ್ನು ಗೆದ್ದಾಗ ಸೇಂಟ್ ಕ್ಯಾಥರಿನ್ ನೆನಪಿಗಾಗಿ ಕಟ್ಟಲು ಆಲೋಚಿಸಿದ್ದ ಚರ್ಚು ಇದು. ಇದನ್ನು ಕಟ್ಟಿ ಪೂರೈಸಲು 75 ವರ್ಷಗಳಿಗೂ ಹೆಚ್ಚು ಕಾಲವಾಯಿತು. ಭವ್ಯತೆಯಲ್ಲಿ ಇದನ್ನು ಮೀರಿಸಿದ ಕಟ್ಟಡ ಗ್ರೇಟ್ ಬ್ರಿಟನ್ನಿನಲ್ಲಿ ಕೂಡ ಇಲ್ಲವೆನ್ನಲಾಗಿದೆ. ಹೊರಭಾಗ ಟಸ್ಕನ್ ಮತ್ತು ಡೋರಿಕ್ ಶೈಲಿಗಳಲ್ಲೂ ಒಳಭಾಗ ಕಾರಿಂತಿಯನ್ ಶೈಲಿಯಲ್ಲೂ ನಿರ್ಮಿತವಾಗಿರುವ ಈ ಕಟ್ಟಡ ಗಾತ್ರ ಮತ್ತು ಅಳತೆಗೆ ಹೆಸರುವಾಸಿಯಾಗಿದೆ. ಇದರ ಒಂದು ಭಾಗದ ಗೋಪುರ ಈಗ ಬಿದ್ದು ಹೋಗಿದೆ. ಈ ಚರ್ಚಿನ ಒಳಭಾಗ ಅತ್ಯಂತ ರಮಣೀಯವಾಗಿದೆ. ಇಷ್ಟೇ ಸುಂದರವೂ ಭವ್ಯವೂ ಆಗಿರುವ ಸೇಂಟ್ ಕೆಸರನ್ ಚರ್ಚು ರೋಮಿನಲ್ಲಿರುವ ಸೇಂಟ್ ಪೀಟರನ ಬೆಸಿಲಿಕದಂತಿದೆ; ಇದು ಕಾರಿಂತಿಯನ್ ಶೈಲಿಯಲ್ಲಿದೆ. ಹಳೆಯ ಗೋವದಲ್ಲಿರುವ ಬಾಮ್ ಜೀಸಸ್ ಚರ್ಚು ಅತ್ಯಂತ ಪ್ರಸಿದ್ಧವಾದ್ದು. ಇಲ್ಲೇ ಸೇಂಟ್ ಜೇವಿಯರನ ಸಮಾಧಿಯಿದೆ. ಇಲ್ಲಿಯ ಕಂಚಿನ ಕೆತ್ತನೆ ಆಕರ್ಷಕವಾಗಿದೆ. ಇದರ ಭಿತ್ತಿಯ ಮೇಲೆ ಜೇವಿಯರನ ಜೀವನಕ್ಕೆ ಸಂಬಂಧಿಸಿದ ಹಲವು ಚಿತ್ರಗಳಿವೆ. ಗಾತಿಕ್ ಶೈಲಿಯಲ್ಲಿ ಕಟ್ಟಿರುವ ಅದ್ಭುತವಾದ ವಾಸ್ತು ಇದು. 1517ರಲ್ಲಿ ಫ್ರಾನ್ಸಿಸ್ಕನರು ಕಟ್ಟಿಸಿದ ಸೇಂಟ್ ಫ್ರಾನ್ಸಿಸ್ ಕೆಥಿಡ್ರಲ್ ಮೆನುಲಿನ್ ಶೈಲಿಯ ಉತ್ಕೃಷ್ಟ ಶಿಲ್ಪವನ್ನೊಳಗೊಂಡಿದೆ. ಹಿಂದೆ ಪೋರ್ಚುಗೀಸರು ಭಗ್ನಗೊಳಿಸಿದ್ದ ದೇವಾಲಯಗಳಿಂದ ತಂದಿಟ್ಟಿರುವ ಮೂರ್ತಿಗಳು ಈ ಕಟ್ಟಡದಲ್ಲಿವೆ. ಇದು ಒಂದು ವಸ್ತುಸಂಗ್ರಹಾಲಯವಾಗಿ ಮಾರ್ಪಟ್ಟಿದೆ. ಗೋವದ ಅತ್ಯಂತ ಎತ್ತರವಾದ ಕಟ್ಟಡ ಸೇಂಟ್ ಮೋನಿಕ ಕಾನ್ವೆಂಟ್. ಮೂರು ಅಂತಸ್ತುಗಳಿರುವ ಇದರ ಗೋಡೆಗಳ ಮೇಲೆ ಬೈಬಲಿನ ಅನೇಕ ಪ್ರಸಂಗಗಳನ್ನು ಭಿನ್ನ ವರ್ಣಗಳಲ್ಲಿ ಚಿತ್ರಿಸಲಾಗಿದೆ. ಗೋವ ವೆಲ್ಹಾದ ಗುಡ್ಡವೊಂದರ ಮೇಲೆ ಪಿಲಾರ್ ಮೊನಾಸ್ಟರಿ ಇದೆ. ಇದರ ವಿಶಾಲವಾದ ಒಳ ಅಂಗಳದಲ್ಲಿ ಸುಂದರವಾಗಿ ಕಂಡರಿಸಿರುವ ಕಂಬವೊಂದಿದೆ. 1541ರಲ್ಲಿ ನಿರ್ಮಿಸಿದ ಉನ್ನತವಾದ ಸೇಂಟ್ ಪಾಲ್ಸ್ ಕಾಲೇಜಿನ ಒಂದು ಭಾಗ ಮಾತ್ರ ಈಗ ಉಳಿದಿದೆ.

ಇಲ್ಲಿಯ ಮನೆಗಳಲ್ಲೂ ಲ್ಯಾಟಿನ್ ಶೈಲಿಯ ಪ್ರಭಾವ ಗುರುತಿಸಬಹುದು. ಈ ನಗರ ಲ್ಯಾಟಿನ್ ನಗರದಂತೆಯೇ ಕಾಣುತ್ತದೆ. (ಎಂ.ಎಚ್.)

**ಗೋವಿಂದ ಸಖಾರಾಮ್ ಸರ್‌ದೇಸಾಯಿ:** 1865-1959. ಭಾರತೀಯ ಇತಿಹಾಸಕಾರ. ಮಹಾರಾಷ್ಟ್ರದ ರತ್ನಗಿರಿಯಲ್ಲಿ 1865 ಮೇ 17ರಂದು ಜನಿಸಿದರು. ಪುಣೆ ಹಾಗೂ ಮುಂಬಯಿಯಲ್ಲಿ ಪದವಿ ಶಿಕ್ಷಣ ಪಡೆದು 1889ರಲ್ಲಿ ಬರೋಡ ಸಂಸ್ಥಾನದಲ್ಲಿ ವೃತ್ತಿಜೀವನ ಆರಂಭಿಸಿದರು. ಜೊತೆಗೆ ಮಹಾರಾಜ 3ನೆಯ ಸಯಾಜಿರಾವ್ ಗಾಯಕವಾಡರ ಖಾಸಗಿ ಗುಮಾಸ್ತರೂ ಆಗಿದ್ದರು. ಅನಂತರ ರಾಜಮನೆತನದ ಮಕ್ಕಳಿಗೆ ಖಾಸಗಿ ಬೋಧಕರಾಗಿ ನೇಮಿಸಲ್ಪಟ್ಟರು. ಇತಿಹಾಸದಲ್ಲಿ ಇವರಿಗೆ ಆಸಕ್ತಿ ಬೆಳೆಯಲು ಕಾರಣ ಮಕ್ಕಳಿಗೆ ಇವರು ಹೇಳುತ್ತಿದ್ದ ಮನೆಪಾಠ. ಮುಂದೆ ಮಹಾರಾಜರ ಪ್ರೋತ್ಸಾಹದಿಂದ ಹಾಗೂ ರಾಜಗ್ರಂಥಾಲಯ ದಲ್ಲಿ ಲಭ್ಯವಿದ್ದ ನೂರಾರು ಚಾರಿತ್ರಿಕ ಪುಸ್ತಕಗಳ ನೆರವಿನಿಂದ ಮರಾಠಿಯಲ್ಲಿ ಹಲವು ಕೃತಿಗಳನ್ನು ರಚಿಸಿದರು. ಮರಾಠಿ ರಿಯಾಸತ್ (8 ಸಂಪುಟ), ಮುಸಲ್ಮಾನಿ ರಿಯಾಸತ್

(3 ಸಂಪುಟ) ಹಾಗೂ ಬ್ರಿಟಿಷ್ ರಿಯಾಸತ್ (2 ಸಂಪುಟ) ಸಂಪುಟಗಳಲ್ಲಿ ಭಾರತದ 1000 ವರ್ಷಗಳ ಇತಿಹಾಸವನ್ನು ನಿರೂಪಿಸಿರುವುದು ಇವರ ಸಾಧನೆ. 1925ರಲ್ಲಿ ನಿವೃತ್ತರಾದ ಅನಂತರ ಮುಂಬಯಿ ಸರ್ಕಾರದ ಕೋರಿಕೆಯ ಮೇರೆಗೆ ರಾಜ್ಯ ದಾಖಲೆಗಳನ್ನು ಸಂಪಾದಿಸುವ ಕಾರ್ಯ ಕೈಗೊಂಡರು. ಮೋಡಿ ಮರಾಠಿ, ಇಂಗ್ಲಿಷ್, ಪಾರ್ಸಿ ಹಾಗೂ ಗುಜರಾತಿ ಭಾಷೆಗಳಲ್ಲಿರುವ ಸು.34,972 ದಾಖಲೆಗಳನ್ನು ಸಂಗ್ರಹಿಸಿ ಈ ಪೈಕಿ 8650 ದಾಖಲೆಗಳನ್ನು ಪೇಶ್ವ ದಫ್ತಾರ್ ಎಂಬ ಶೀರ್ಷಿಕೆಯಲ್ಲಿ 45 ಸಂಪುಟಗಳಲ್ಲಿ ಪ್ರಕಟಿಸಿದರು. ಮತ್ತಷ್ಟು ದಾಖಲೆಗಳನ್ನು ಸರ್ಕಾರ್‌ರೊಂದಿಗೆ ಪೂನಾ ರೆಸಿಡೆನ್ಸಿ ಕರೆಸ್ಪಾಂಡೆನ್ಸ್ ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದರು. 80ರ ಇಳಿವಯಸ್ಸಿನಲ್ಲಿ ಇವರು ಪ್ರಕಟಿಸಿದ ದಿ ನ್ಯೂ ಹಿಸ್ಟರಿ ಆಫ್ ಮರಾಠಾಸ್‌ನ 3 ಸಂಪುಟಗಳು ಮರಾಠ ಇತಿಹಾಸದ ಆಕರಗ್ರಂಥಗಳಾಗಿವೆ. ಇವರಿಗೆ ರಾವ್ ಬಹಾದ್ದೂರ್ (1937) ಹಾಗೂ ಇತಿಹಾಸ ಮಾರ್ತಾಂಡ್ (1946) ಎಂಬ ಬಿರುದುಗಳು ಪ್ರಾಪ್ತವಾಗಿದ್ದವು. ಪುಣೆ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿತ್ತು (1951). ಭಾರತ ಸರ್ಕಾರ 1957ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಸನ್ಮಾನಿಸಿತ್ತು. ಇವರು 1959 ನವೆಂಬರ್ 29ರಂದು ನಿಧನರಾದರು. (ವಿ.ಎಸ್.)

**ಗೌಡ ದೇಶ:** ಪಶ್ಚಿಮ ಮತ್ತು ವಾಯವ್ಯ ಬಂಗಾಲ ಪ್ರದೇಶಕ್ಕೆ ಹಿಂದೆ ಇದ್ದ ಹೆಸರು. ಈ ಪ್ರದೇಶದ ರಾಜಧಾನಿಯಾಗಿದ್ದ ಗೌಡ ನಗರದಿಂದಾಗಿ ಇದಕ್ಕೆ ಗೌಡದೇಶವೆಂಬ ಹೆಸರು ಬಂದಿರಬಹುದು. ಗೌಡ ಎಂಬುದು ಗೊನರ್ದ ಎಂಬುದರ ಅಪಭ್ರಂಶವಿರ ಬಹುದೆಂಬುದು ಕನ್ನಿಂಗ್‌ಹ್ಯಾಮನ ಅಭಿಪ್ರಾಯ. ಗೌಡ ಎಂಬ ಶಬ್ದ ದೇಶ ಹಾಗೂ ಜನ ವಾಚಕವಾಗಿ ಬಳಕೆಯಲ್ಲಿತ್ತು. ಪಾಣಿನಿ, ಕೌಟಿಲ್ಯ ಮುಂತಾದವರು ಈ ಎರಡೂ ಅರ್ಥಗಳಲ್ಲಿ ಈ ಶಬ್ದವನ್ನು ಬಳಸಿದ್ದಾರೆ. ಶ್ರಾವಸ್ತಿಯ ದಕ್ಷಿಣಕ್ಕೆ 72ಕಿಮೀ ದೂರದಲ್ಲಿರುವ ಇಂದಿನ ಗೋಂಡದ ಸುತ್ತಮುತ್ತಲಿನ ಪ್ರದೇಶವೇ ಗೌಡದೇಶವೆಂದು ಕೂರ್ಮಲಿಂಗ ಪುರಾಣಗಳಿಂದ ತಿಳಿದುಬರುತ್ತದೆ. ಹಿತೋಪದೇಶದ ಪ್ರಕಾರ ಕೌಶಾಂಬಿನಿ ಕೂಡ ಗೌಡ ದೇಶದಲ್ಲಿತ್ತು. ವಂಗದೇಶದಿಂದ ಹಿಡಿದು ಭುವನೇಶದ (ಒರಿಸ್ಸದ ಭುವನೇಶ್ವರ) ವರೆಗಿನ ಪ್ರದೇಶ ಗೌಡದೇಶವೆಂದು ಸ್ಕಾಂದಪುರಾಣದಲ್ಲಿ ವರ್ಣಿತವಾಗಿದೆ. ಬಾಣಭಟ್ಟನ ಹರ್ಷ ಚರಿತೆಯಲ್ಲೂ ಇದರ ಉಲ್ಲೇಖವುಂಟು. ಕಲ್ಹಣನ ರಾಜತರಂಗಿಣಿಯಲ್ಲಿ ಪಂಚಗೌಡ ಎಂಬ ಶಬ್ದ ಬರುತ್ತದೆ. ಬಂಗಾಲ, ಸಾರಸ್ವತ, ಕನ್ಯಾಕುಬ್ಜ, ಗೌಡ, ಉತ್ಕಲ, ಮೈಥಿಲ – ಇವು ದೇಶಗಳಾಗಿದ್ದುವೆಂದು ತಿಳಿದುಬರುತ್ತದೆ. ಗೌಡದೇಶ ಗುಪ್ತಸಾಮ್ರಾಜ್ಯದ ಅಂಗವಾಗಿದ್ದರೂ ಸಮುದ್ರಗುಪ್ತನ ಅಲಹಾಬಾದ್ ಶಾಸನ ಆ ಕುರಿತು ಏನನ್ನೂ ಸ್ಪಷ್ಟವಾಗಿ ಹೇಳಿದಂತಿಲ್ಲ. ಬಹುಶಃ ಗುಪ್ತ ಸಾಮ್ರಾಜ್ಯದ ಪತನಾನಂತರ ಗೌಡದೇಶ ಪ್ರಸಿದ್ಧಿಗೆ ಬಂದಿರಬಹುದು. ಗೌಡದೇಶದ ಉಲ್ಲೇಖ ಪ್ರಥಮತಃ ಬಂದಿರುವುದು ಹರಾಹಾ ಶಿಲಾಶಾಸನದಲ್ಲಿ (554) ಎಂದು ತಿಳಿಯಲಾಗಿದೆ. ಈಗಿನ ಗೊಂಡ್ವಾನದ ಹತ್ತಿರದ ಪ್ರದೇಶಗಳನ್ನೂ ಗೌಡ ದೇಶವೆಂದು ಕರೆಯುತ್ತಿದ್ದರೆಂದು ಚೇದಿರಾಜರ ತಾಮ್ರಪತ್ರದಿಂದ ತಿಳಿದುಬರುತ್ತದೆ.

ಗೌಡ ದೇಶವನ್ನು ಆಳಿದ ಅನೇಕ ಸ್ಥಳೀಯ ಅರಸರಲ್ಲಿ ಗೋಪಚಂದ್ರ, ಸಮಯಾಚಾರ ದೇವ–ಇವರು ಪ್ರಸಿದ್ಧರು. ಇವರು ಗೌಡ ದೇಶದ ಶಕ್ತಿಯನ್ನು ವೃದ್ಧಿಸಿದರು. 7ನೆಯ ಶತಮಾನದಲ್ಲಿ ಗೌಡ ರಾಜನಾದ ಶಶಾಂಕನಿಗೂ ಥಾಣೇಶ್ವರದ ಹರ್ಷವರ್ಧನನಿಗೂ ಯುದ್ಧ ನಡೆದಿತ್ತು. ಶಶಾಂಕನ ಮರಣಾನಂತರ ಸುಮಾರು ಒಂದು ಶತಮಾನ ಕಾಲ ಗೌಡದೇಶ ಪರಕೀಯರ ಆಕ್ರಮಣ, ಆಂತರಿಕ ಅಶಾಂತಿಗಳಿಗೆ ಒಳಗಾಗಿತ್ತು. 750 ರಲ್ಲಿ ಪಾಲ ವಂಶದ ಅರಸು ಅಧಿಕಾರಕ್ಕೆ ಬಂದಾಗಿನಿಂದ ಪರಿಸ್ಥಿತಿ ಸುಧಾರಿಸಿತು. ಪಾಲ ಅರಸರು ಗೌಡೇಶ್ವರ ಎಂಬ ಬಿರುದಿನಿಂದ ರಾಜ್ಯವಾಳಿದರು. ಧರ್ಮಪಾಲ (ಸು.752–810) ಮತ್ತು ದೇವಪಾಲನ ಕಾಲದಲ್ಲಿ ಸು. (810–49) ಗೌಡದೇಶ ಇಡೀ ಉತ್ತರ ಭಾರತದಲ್ಲೇ ಒಂದು ಪ್ರಬಲ ಶಕ್ತಿಯಾಗಿತ್ತು. ಕಾಲಕ್ರಮದಲ್ಲಿ ಗೌಡದೇಶ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಗೌಡ ನಗರದ ರೂಪದಲ್ಲಿ ಮುಂದುವರಿಯಿತು. ಮುಂದೆ ದೆಹಲಿ ಸುಲ್ತಾನರು ಈ ಪ್ರದೇಶವನ್ನಾಕ್ರಮಿಸಿಕೊಂಡರು. (ಎಚ್.ಆರ್.ಆರ್.ಬಿ.)

**ಗೌತಮ ಬುದ್ಧ:** ಪ್ರ.ಶ.ಪೂ.ಸು.6ನೆಯ ಶತಮಾನ. ಬೌದ್ಧಧರ್ಮ ಸ್ಥಾಪಕ. ಇವನ ಜನ್ಮಸ್ಥಳ ಈಗ ನೇಪಾಲ ತರಾಯ್ ಎನಿಸಿಕೊಳ್ಳುವ ಪ್ರದೇಶ. ಉತ್ತರ ಪ್ರದೇಶದ ಮೇಲ್ಭಾಗದ ಅಂಚಿನಲ್ಲಿ ದಕ್ಷಿಣ ನೇಪಾಲಕ್ಕೆ ಸೇರಿದಂತಿರುವ ಈ ಸ್ಥಳ 2600 ವರ್ಷಗಳ ಹಿಂದೆ ಕೋಸಲ ರಾಜ್ಯಕ್ಕೆ ಸೇರಿತ್ತು. ಇಲ್ಲಿದ್ದ ಶಾಕ್ಯ ಕ್ಷತ್ರಿಯರಿಗೆ ಕಪಿಲವಸ್ತು ರಾಜಧಾನಿಯಾಗಿತ್ತು. ಇವರ ಜನಪದಕ್ಕೆ ಶುದ್ಧೋದನ ರಾಜ. ಇಕ್ಷ್ವಾಕು ವಂಶಕ್ಕೆ ಸೇರಿದ ಈ ರಾಜನದು ಆದಿತ್ಯ ಕುಲ, ಗೌತಮ ಗೋತ್ರ. ಶುದ್ಧೋದನನ ಹೆಂಡತಿ ಮಾಯಾದೇವಿ ದೇವದಹದ ಸುಪ್ರಬುದ್ಧನ ಮಗಳು. ಈಕೆ ಗರ್ಭತಳೆದು ಕಪಿಲವಸ್ತುವಿನಿಂದ ತನ್ನ ತೌರೂರಾದ ದೇವದಹಕ್ಕೆ ಹೊರಟಿದ್ದಳು. ದಾರಿ ಮಧ್ಯ ಲುಂಬಿಣಿ ಎಂಬ ಉಪವನದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಪ್ರಸವ ವೇದನೆಯ ಸಮಯದಲ್ಲಿ ಈಕೆ ಅಶೋಕ ವೃಕ್ಷದ ರೆಂಬೆಯೊಂದನ್ನು ಹಿಡಿದು ನಿಂತಿದ್ದಾಗ ಗಂಡುಮಗುವೊಂದು ಜನಿಸಿತಂತೆ. ಆ ಮಗುವೇ ಮುಂದೆ ಬುದ್ಧನೆಂದು ಪ್ರಸಿದ್ಧನಾದುದು.

ಬುದ್ಧನ ಜನ್ಮವಾದ ಈ ಸ್ಥಳವನ್ನು ಪ್ರಾಕ್ತನಶಾಸ್ತ್ರಜ್ಞರು ಈಗ ನೇಪಾಲ ತರಾಯದ ರುಮಿಂದ್ಯೆ ಎಂದು ನಿರ್ದೇಶನ ಮಾಡಿದ್ದಾರೆ. ಇಲ್ಲಿ ಅಶೋಕನ ಸ್ತಂಭಶಾಸನವಿದೆ. ಇದರಲ್ಲಿ 'ಹಿದ ಬುಧೇ ಜಾತೇ ಶಕ್ಯ ಮುನೀತಿ' (ಇಲ್ಲಿ ಶಾಕ್ಯಮುನಿ ಬುದ್ಧ ಹುಟ್ಟಿದ) ಎಂಬ ಮಾತಿದೆ. ಮಗು ಹುಟ್ಟಿದೊಡನೆ ಮಾಯಾದೇವಿ ತೀರಿಕೊಂಡಳು. ಮುಂದೆ ಮಗುವನ್ನು ಮಲತಾಯಿ ಮಹಾಪ್ರಜಾಪತಿ ಗೌತಮಿ ಸಾಕಿ ಬೆಳೆಸಿದಳು. ಅಸಿತ ಎಂಬ ಋಷಿ ಈ ಮಗುವನ್ನು ನೋಡಿ ಈತ ಮುಂದೆ ಚಕ್ರವರ್ತಿಯಾಗುತ್ತಾನೆ, ಇಲ್ಲವೆ ಪರಿವ್ರಾಜಕನಾಗುತ್ತಾನೆ ಎಂದು ಭವಿಷ್ಯ ನುಡಿದಿದ್ದ. ಮಗುವಿಗೆ ಸಿದ್ಧಾರ್ಥ ಎಂದು ಹೆಸರಿಟ್ಟರು. ಗೌತಮ ವಂಶದ ಹೆಸರು; ಶಾಕ್ಯಪುತ್ರ ಎಂಬುದು ಕುಲನಾಮ. ಎಳೆಯ ವಯಸ್ಸಿನಲ್ಲೇ ಬುದ್ಧನ ಅಲೌಕಿಕ ಪ್ರಸಕ್ತಿ ವ್ಯಕ್ತವಾಗಿತ್ತು. ಹುಡುಗನಾಗಿದ್ದ ಗೌತಮ ಒಮ್ಮೆ ಉತ್ಸವ ಸಂದರ್ಭದಲ್ಲಿ ಜಂಬೂವೃಕ್ಷದ ಅಡಿಯಲ್ಲಿ ಕುಳಿತಿದ್ದವ ಹಾಗೆಯೇ ಸಮಾಧಿವಶನಾದ. ಇದನ್ನು ಕಂಡು ಕಾತರನಾದ ತಂದೆ ಮಗನಿಗೆ ಮದುವೆ ಮಾಡಿದರೆ ಸರಿ ಹೋದೀತೆಂದು ಬಗೆದು ಯಶೋಧರೆಯೆಂಬ ಸುಂದರಿಯನ್ನು ತಂದು ಮದುವೆ ಮಾಡಿದ. ಆಕೆಗೆ ಭದ್ದಾ ಕಚ್ಚಾನಾ, ಗೋಪಾ, ಬಿಂಬಾ, ಸುಭದ್ರಿಕಾ, ಯಶೋದಾ ಎಂದು ಮುಂತಾದ ಹೆಸರುಗಳಿದ್ದವು. ಸಿದ್ಧಾರ್ಥನಿಗೆ ಮದುವೆಯಾದಾಗ ಹದಿನಾರು ವರ್ಷ ಗಳೆಂದೂ ಮದುವೆಯಾದ ಹನ್ನೆರಡು ವರ್ಷಾನಂತರ ರಾಹುಲನೆಂಬ ಗಂಡುಮಗು ಹುಟ್ಟಿದನೆಂದೂ ಕಥೆ ಹೇಳುತ್ತದೆ. ಒಮ್ಮೆ ಸಿದ್ಧಾರ್ಥ ರಥಾರೂಢನಾಗಿ ನಗರ ಪ್ರದಕ್ಷಿಣೆ ಹೋದಾಗ ಒಬ್ಬ ರೋಗಿ, ಒಬ್ಬ ವೃದ್ಧ, ಒಂದು ಹೆಣ ಇವನ್ನು ನೋಡಿ ಜೀವನದಲ್ಲಿ ತುಂಬಾ ಜಿಗುಪ್ಸೆ ಪಟ್ಟ. ಅಂದೇ ರಾತ್ರಿ ಎಲ್ಲರೂ ಮಲಗಿದ್ದಾಗ ಸಿದ್ಧಾರ್ಥ ತನ್ನ ನೆಚ್ಚಿನ ಬಂಟ ಚೆನ್ನನೊಂದಿಗೆ ತನ್ನ ಕುದುರೆಯಾದ ಕಂಥಕವನ್ನೇರಿ ಮನೆ ಬಿಟ್ಟು ಹೊರಟು ಹೋದ. ಸಿದ್ಧಾರ್ಥ ಮನೆಬಿಟ್ಟು ಕಪಿಲವಸ್ತುವಿನ ಗಡಿಯನ್ನು ರಾತ್ರಿಯೇ ದಾಟಿ ಅನೋಮಾ ನದಿಯನ್ನು ದಾಟಿ ಹನ್ನೆರಡು ಯೋಜನ ದೂರದಲ್ಲಿ ವಿವಿಕ್ತವಾದ ಮಾವಿನ ತೋಪೊಂದರಲ್ಲಿ ಏಳು ದಿನ ಕಳೆದ. ಅನಂತರ ಗಂಗಾ ನದಿ ದಾಟಿ ಗಿರಿವ್ರಜಕ್ಕೆ ಬಂದ. ಅಲ್ಲಿಂದ ಹೊರಟು ರಾಜ ಗೃಹದ ಬಳಿ ಗೃಧ್ರಕೂಟದಲ್ಲಿ ತಪಶ್ಚರ್ಯೆ ಮಾಡುತ್ತ ನಿಂತ. ಅಲ್ಲಿಯ ಜನ ಇವನನ್ನು ಮಹಾಶ್ರಮಣನೆಂದರು. ಮನಸ್ಸಿಗೆ ಸಮಾಧಾನವಾಗದೆ ಆರಾಢಕಾಲಾಮ, ರುದ್ರಕ ರಾಮಪುತ್ರ ಎಂಬಿಬ್ಬ ಪ್ರಖ್ಯಾತ ತಾಪಸಿಗಳ ಬಳಿ ಕೆಲಕಾಲ ಶಿಷ್ಯವೃತ್ತಿ ಮಾಡಿದ. ಅವರ ಸಮಾಪತ್ತಿಗಳನ್ನೆಲ್ಲ ಮಾಡಿದರೂ ಬೋಧಿ ದೊರೆಯಲಿಲ್ಲವಾಗಿ ಇದು ದಾರಿಯಲ್ಲೆಂದು ಬಗೆದು ಅವರನ್ನು ಬಿಟ್ಟು ಉರುವಿಲ್ವದ ಕಾಡಿನಲ್ಲಿ ಕಠೋರ ತಪಶ್ಚರ್ಯೆ ನಡೆಸಿದ. ಇಲ್ಲಿ ನೇರಂಜರಾ ನದಿಯ ದಂಡೆಯ ಮೇಲೆ ಐದು ಬ್ರಾಹ್ಮಣ ತಪಸ್ವಿಗಳು ಇವನನ್ನು ಸೇರಿದರು. ಕೌಂಡಿಣ್ಯ, ಅಶ್ವಜಿತ್, ವಾಪ್ಪ, ಮಹಾನಾಮ, ಭದ್ರಕ–ಈ ಐವರು ಬುದ್ಧನಿಗೆ ತುಂಬ ಉಪಕಾರ ಮಾಡಿದರು. ಶಾಕ್ಯವಂಶದ ಈ ಶ್ರಮಣ ಬುದ್ಧನಾಗುವನೆಂಬ ವಿಶ್ವಾಸ ಅವರಿಗಿದ್ದಿತು. ಆದರೆ ಕಠೋರವಾದ ತಪಶ್ಚರ್ಯೆ ಯಿಂದ ಆಧ್ಯಾತ್ಮಿಕ ಸಂಪತ್ತು ಲಭಿಸದೆಂದು ನಿಶ್ಚಯಿಸಿ ತಪಶ್ಚರ್ಯೆಯ ಬಿಗಿಯನ್ನು ಸಡಲಿಸಿದ. ಇವನೊಂದಿಗಿದ್ದ ಐವರು ಭಿಕ್ಷುಗಳಿಗೆ (ಪಂಚವಗ್ಗೀಯಾ ಭಿಕ್ಖೂ) ಇದು ಸರಿದೋರಲಿಲ್ಲ. ಶ್ರಮಣಗೋತಮ ಪ್ರಧಾನ ವಿಭ್ರಾಂತನಾಗಿ ಭೋಗಕ್ಕಿಳಿದನೆಂದು ಅವರು ಬಗೆದು ಇವನನ್ನು ಬಿಟ್ಟು ವಾರಾಣಸಿಗೆ ತೆರಳಿದರು.

ಗಾಂಧಾರ ಶೈಲಿ

ಗೋತಮ ತಪಶ್ಚರ್ಯೆ ಬಿಡಲಿಲ್ಲ. ಮುಂದೆ ಈತ ಸೇನಾನಿಯ ಗ್ರಾಮಕ್ಕೆ ಹೋಗಿ ಅಲ್ಲಿ ನ್ಯಗ್ರೋಧ ಮರದಡಿಯಲ್ಲಿ ಕುಳಿತು ಧ್ಯಾನಾರೂಢನಾದ. ಆ ಊರಿನ ಹೆಗ್ಗಡೆ ಸೇನನೆಂಬವನ ಮಗಳು ಸುಜಾತಾ (ನಂದಬಾಲಾ ಅವಳ ಇನ್ನೊಂದು ಹೆಸರು) ಈ ಶ್ರಮಣನಿಗೆ ಪಾಯಸ ಒಪ್ಪಿಸಿದಳಂತೆ. ಆ ದಿನ ಶ್ರಮಣಗೋತಮ ಏಕಾಂಗಿಯಾಗಿ ಸಾಲುಮರಗಳ ತೋಪಿನಲ್ಲಿ

ಕಾಲ ಕಳೆದ. ಸಂಜೆ ಮೂಡಿದಾಗ ಅರಳೀಮರದ ಬಳಿ ಹೋಗಿ ಅದರ ನೆರಳಿನಲ್ಲಿ ಪೂರ್ವಕ್ಕೆ ಮುಖಮಾಡಿ ಕುಳಿತ. ಅದೇ ಈಗ ಬೋಧಿವೃಕ್ಷವೆಂದು ಪ್ರಖ್ಯಾತವಾಗಿರುವ ಮರ. ಬೋಧಿವೃಕ್ಷದ ಅಡಿಯಲ್ಲೇ ಏಳು ದಿನ ತಾನು ಕಂಡ ಸಂಬೋಧಿಯ ಅರ್ಥವನ್ನು ವಿಚಾರ ಮಾಡುತ್ತ ಕಳೆದ. ಮೂರನೆಯ ವಾರವನ್ನು ಬೋಧಿವೃಕ್ಷ ಮತ್ತು ನ್ಯಗ್ರೋಧ ವೃಕ್ಷಗಳ ನಡುವೆ ಓಡಾಡುತ್ತ ಕಳೆದ. ನಾಲ್ಕನೆಯ ವಾರ ಅಭಿಧಮ್ಮನ ಆಳವಾದ ಚಿಂತನೆಗಳಲ್ಲಿ ಕಳೆಯಿತು. ಹೀಗೆ ನಲವತ್ತೊಂಬತ್ತು ದಿನಗಳ ಕಾಲ ಬುದ್ಧ ನಿದ್ರಾಹಾರ ಬಿಟ್ಟು ಸ್ಥಿತಪ್ರಜ್ಞನಾಗಿ ಜಾಗೃತನಾಗಿ ದರ್ಶನ ಸಮೀಕ್ಷೆಮಾಡಿದ. ಅನಂತರ ತನಗೆ ಉರುವಿಲ್ವದಲ್ಲಿ ತುಂಬ ನೆರವಾಗಿದ್ದ (ಬಹೂಪಕರಾ) ಐವರು ತಪಸ್ವಿಗಳಿಗೆ ತನ್ನ ಬೋಧಿಯ ವಿಚಾರ ತಿಳಿಸುತ್ತೇನೆಂದು ಮನಸ್ಸು ಮಾಡಿದ. ಅವರು ಆ ಕಾಲದಲ್ಲಿ ವಾರಾಣಸಿಯ ಉಪವನವಾದ ಮೃಗದಾವ (ಮಿಗದಾಯ) ಎಂಬಲ್ಲಿ ಇರುತ್ತಿದ್ದರೆಂದು ತಿಳಿದು ಗಯೆಯಿಂದ ಬುದ್ಧ ಅಲ್ಲಿಗೆ ತೆರಳಿದ್ದ.

ವಾರಾಣಸಿಯ ಋಷಿಪತ್ತನ (ಇಸಿಪತನ) ಎಂಬಲ್ಲಿ ಆ ಐವರು ಭಿಕ್ಷುಗಳನ್ನು ಕಂಡು ಅವರಿಗೆ ತನ್ನ ಸಂಬೋಧಿಯ ಅನುಭವ ನಿರೂಪಿಸಿದ. ತನಗೆ ಅಮೃತ ಅಧಿಗತ ವಾದುದನ್ನು ತಿಳಿಸಿದ. ಮೊದಲು ಸಂದೇಹಪಟ್ಟರೂ ಆ ಐವರು ಈತನ ಪ್ರವಚನವನ್ನು ಕುತೂಹಲದಿಂದ ಆಲಿಸಿದರು. ಮೊತ್ತ ಮೊದಲ ಪ್ರವಚನ ಧರ್ಮಚಕ್ರ ಪ್ರವರ್ತನ ಸೂತ್ರ (ಧಮ್ಮಚಕ್ಕಪ್ಪವತ್ತನಸುತ್ತ) ಎಂದು ಪ್ರಸಿದ್ಧವಾಯಿತು. ಆ ಐವರು ಭಿಕ್ಷುಗಳು ಈತನ ಉಪದೇಶ ಸರಿಯೆಂದು ಒಪ್ಪಿಕೊಂಡು ಶಿಷ್ಯರಾದರು. ಸಂಬೋಧಿಯ ಅರ್ಥವನ್ನು ಅವರಲ್ಲಿ ಒಬ್ಬನಾದ ಕೌಂಡಿಣ್ಯ ಒಡನೆಯೇ ಗ್ರಹಿಸಿದನಾಗಿ ಅವನಿಗೆ ಆಜ್ಞಾತ ಕೌಂಡಿಣ್ಯ ಎಂಬ ಉಪನಾಮ ಒದಗಿ ಬಂದಿತು. ಮೊತ್ತಮೊದಲ ಈ ಪ್ರವಚನ ನಡೆದ ಸ್ಥಳ ಈಗ ಸಾರನಾಥ್ ಎನಿಸಿಕೊಳ್ಳುತ್ತದೆ. ಇಲ್ಲಿ ಚಕ್ರವರ್ತಿ ಅಶೋಕ ಈ ಸಂದರ್ಭದ ನೆನಪಿಗೆ ಸ್ತೂಪವನ್ನು ನಿರ್ಮಿಸಿದ ಸ್ತೂಪದ (ಧಮೇಕ್ ಸ್ತೂಪ) ಅವಶೇಷಗಳು ಇಂದಿಗೂ ಇವೆ.

ಬುದ್ಧ ಐವರು ಭಿಕ್ಷುಗಳೊಂದಿಗೆ ವಾರಾಣಸಿಯಲ್ಲೇ ಬೀಡು ಬಿಟ್ಟಿದ್ದಾಗ ಯಶನೆಂಬ ಧನಿಕ ಯುವಕ ದುಃಖಾರ್ತನಾಗಿ ಬುದ್ಧನ ಬಳಿ ಬಂದು ಇವನ ಉಪದೇಶ ಆಲಿಸಿ ಸಂಘ ಸೇರಿದ. ಹೀಗೆ ವಾರಾಣಸಿಯ ಐವತ್ತು ಮಂದಿ ಶ್ರೀಮಂತ ತರುಣರು ಬುದ್ಧನ ಅನುಯಾಯಿಗಳಾದರು. ತಪಸ್ವಿಗಳೆಂದು ಪ್ರಸಿದ್ಧರಾಗಿದ್ದ ಉರುವೇಲ ಕಾಶ್ಯಪ, ಗಯಾಕಾಶ್ಯಪ, ನದೀಕಾಶ್ಯಪ ಎಂಬ ಮೂವರು ಸಹೋದರರ ಆಸಕ್ತಿ ಸೆಳೆಯಿತು. ಅವರು ಶಿಷ್ಯರಾದೊಡನೆ ಅವರ ಅಪಾರ ಭಕ್ತಸಮುದಾಯವೆಲ್ಲ ಬುದ್ಧನ ಶಿಷ್ಯತ್ವ ಪಡೆಯಿತು. ಮಗಧದ ಅರಸನಾದ ಬಿಂಬಸಾರನ ಆಹ್ವಾನ ಮನ್ನಿಸಿ ಬುದ್ಧ ತನ್ನ ಸಂಘದೊಂದಿಗೆ ರಾಜಗೃಹಕ್ಕೆ ತೆರಳಿ ಅಲ್ಲಿ ರಾಜನಿಗೆ ಉಪದೇಶ ನೀಡಿದ. ರಾಜಗೃಹದಲ್ಲಿ ಬುದ್ಧ ತಂಗಿದ್ದಾಗ ಸಾರಿಪುತ್ರ, ಮೌದ್ಗಲ್ಯಾಯನ ಎಂಬ ಇಬ್ಬರು ಪ್ರತಿಭಾವಂತ ಬ್ರಾಹ್ಮಣರು ಭಿಕ್ಷುಗಳಾಗಿ ಸೇರಿದರು. ಇವರಿಂದ ಬುದ್ಧನ ಧರ್ಮ ವಿಶೇಷವಾಗಿ ದೃಢವಾಯಿತು; ಇವರನ್ನು ಬುದ್ಧನೇ ಧರ್ಮಸೇನಾಪತಿಗಳು ಎಂದು ಗೌರವಿಸಿದ. ಸುದತ್ತ (ಅನಾಥಪಿಂಡಿಕ) ಎಂಬ ಶ್ರೇಷ್ಠಿ ಬುದ್ಧನ ವ್ಯಕ್ತಿತ್ವಕ್ಕೆ ಮಾರುಹೋಗಿ ಉಪಾಸಕನಾದ. ಬುದ್ಧನ ಬಾಳಿನಲ್ಲಿ ಮತ್ತೆ ಮತ್ತೆ ದಾನಿಯಾಗಿ ಧರ್ಮದ ಪ್ರಸಾರಕ್ಕೆ ಆಸರೆಯಾಗಿ ಬರುವ ವ್ಯಕ್ತಿ ಈತ. ಈತ ಬುದ್ಧನನ್ನು ಶ್ರಾವಸ್ತಿಗೆ ಆಹ್ವಾನಿಸಿ ಅಲ್ಲಿ ಜೇತುಕುಮಾರನಿಂದ ಕೊಂಡ ಭವ್ಯ ಆರಾಮವನ್ನು ಬುದ್ಧನ ಸಂಘಕ್ಕೆ ದಾನ ಮಾಡಿದ. ಜೇತಕುಮಾರ ರಾಜ ಪ್ರಸೇನಜಿತನ ಮಗ, ಅವನೂ ಬುದ್ಧನನ್ನು ಸನ್ಮಾನಿಸುತ್ತಿದ್ದವ. ಶ್ರಾವಸ್ತಿಯಲ್ಲೇ ವಿಶಾಖೆ ಎಂಬಾಕೆ ಪೂರ್ವಾರಾಮ (ಪುಬ್ಬಾರಾಮ) ಎಂಬ ಮತ್ತೊಂದು ಆರಾಮನನ್ನು ದಾನ ಮಾಡಿದಳು. ಕೋಸಲದ ಅರಸ ಪ್ರಸೇನಜಿತನ ಮಂತ್ರಿ ಮೃಗಧರನ ಸೊಸೆಯಾದ ಈಕೆಯನ್ನು ತಾಯಿ ಎಂದು ಕರೆಯುತ್ತಿದ್ದನಂತೆ. ಹೀಗಾಗಿ ಈಕೆಗೆ ಮಿಗಾರಮಾತಾ ಎಂಬ ಹೆಸರಿದ್ದಿತು.

ಅನಂತರ ಬುದ್ಧ ತನ್ನ ಊರಾದ ಕಪಿಲ ವಸ್ತುವಿಗೆ ಬಂದು ಶುದ್ಧೋದನನನ್ನು ಸಂದರ್ಶಿಸಿದ. ತಂದೆಯನ್ನು ಅಗಲಿ ಏಳು ವರ್ಷಗಳಾಗಿದ್ದುವು; ಈಗ ಶುದ್ಧೋದನನೂ ಬುದ್ಧನ ಉಪದೇಶ ಕೇಳಿ ಉಪಾಸಕನಾದ. ಅಷ್ಟೇ ಅಲ್ಲ ಮಗನ ಸಂಘಕ್ಕೆಂದು ಸೊಗಸಾದ ನ್ಯಗ್ರೋಧಮರಗಳ ಆರಾಮ ದಾನ ಮಾಡಿದ ಕೂಡ. ಕಪಿಲವಸ್ತುವಿಗೆ ಬುದ್ಧ ಬಂದಾಗಲೇ ಈತನ ಹಲವಾರು ತರುಣ ಬಂಧುಗಳು ಸಂಘ ಸೇರಿದರು. ಅನಿರುದ್ಧ, ದೇವದತ್ತ, ಭದ್ರಕ (ಭದ್ದಿಯ), ರೇವತ, ಆನಂದ ಇವರು ಪ್ರಮುಖರು. ಮಗನಾದ ರಾಹುಲನೂ ತಂದೆಯ ಪರಿವ್ರಾಜ್ಯ ಸಂಪತ್ತಿಗೆ ಉತ್ತರಾಧಿಕಾರಿಯಾಗಬೇಕೆಂದು ಬಯಸಿ ಭಿಕ್ಷುವಾದ. ಮುಂದೆ ಶುದ್ಧೋದನ ತೀರಿಕೊಂಡಾಗ ಅವನ ಹೆಂಡತಿಯಾದ ಮಹಾಪ್ರಜಾಪತೀ ಗೌತಮಿ (ಬುದ್ಧನ ಸಾಕುತಾಯಿ) ತನ್ನ ಪರಿವಾರದೊಂದಿಗೆ ಬುದ್ಧನ ಸಂಘ ಸೇರಿದಳು. ಹೀಗಾಗಿ ಭಿಕ್ಷುಸಂಘವಲ್ಲದೆ ಭಿಕ್ಷುಣೀ ಸಂಘವೂ ರೂಪಗೊಂಡಿತು.

ಮಗಧದ ರಾಜ ಬಿಂಬಸಾರ, ಅವನ ರಾಣಿ ಕ್ಷೇಮ, ಮಗ ಅಜಾತಶತ್ರು ಎಲ್ಲರೂ ಉಪಾಸಕರಾಗಿ ನಿಂತರು. ಕೋಸಲದ ರಾಜ ಪ್ರಸೇನಜಿತ (ಪಸೇನದಿ), ವತ್ಸರಾಜನಾದ ಉದಯನ (ಉದೇನ), ಆವಂತಿಯ ರಾಜ ಪ್ರದ್ಯೋತ (ಪಜ್ಜೋತ), ಶುಂಶೂಮಾರಗಿರಿಯ ಭರ್ಗಪ್ರಾಂತ್ಯದ ಒಡೆಯ ಭರ್ಗ ಇವರುಗಳೂ ಬುದ್ಧನ ಉಪಾಸಕರಾದರು. ಉದಯನ ಕೌಶಾಂಬಿಯಲ್ಲಿ ಘೋಷಿತರಾಮವೆಂಬ ಉದ್ಯಾನವನ್ನು ಸಂಘಕ್ಕೆ ದಾನ ಮಾಡಿದ. ಬಿಂಬಸಾರನ ವೈದ್ಯನಾದ ಜೀವಕನೂ ಬುದ್ಧನ ಉಪಾಸಕನಾದ. ಹೀಗೆ ರಾಜರು, ಶ್ರೀಮಂತರು ಮಾತ್ರವಲ್ಲದೆ ಸಾಮಾನ್ಯ ಜನರೂ ನಿಕೃಷ್ಟವಾದದ್ದೆಂದು ಬಗೆದ ವೃತ್ತಿಗಳಲ್ಲಿದ್ದವರೂ ಸಂಘ ಸೇರಿದರು. ಉಪಾಸಕರಾಗಿ ನಿಂತರು. ಈ ಶಿಷ್ಯರಲ್ಲಿ ಒಬ್ಬನಾದ ಉಪಾಲಿ ಕ್ಷೌರಿಕ. ಆಳವಿಯಲ್ಲಿ ಬುದ್ಧನಿಂದ ಸನ್ಮಾನಿತನಾಗಿ ಸುನೀತ ಜಾಡಮಾಲಿ. ಅಂಗುಳಿಮಾಲ ಕಾಡಿನಲ್ಲಿ ವಾಸಿಸುತ್ತಿದ್ದ ದರೋಡೆಕೋರನು. ಶಿಷ್ಯೆಯರಲ್ಲಿ ಪ್ರಸಿದ್ಧಳಾದ ಆಮ್ರಪಾಲಿ (ಅಂಬಪಾಲಿ) ಮೊದಲಿಗೆ ವೇಶ್ಯೆ. ಸುಪ್ರಬುದ್ಧನೆಂಬ ಇನ್ನೊಬ್ಬ ಉಪಾಸಕ ತೊನ್ನು ಬಂದು ಎಲ್ಲರಿಂದಲೂ ತಿರಸ್ಕೃತನಾಗಿದ್ದವ. ವೈದಿಕ ಧರ್ಮದಲ್ಲೇ ಅನುರಕ್ತಿಯಿದ್ದ ಬ್ರಾಹ್ಮಣರೂ ಬುದ್ಧನ ಧರ್ಮಪ್ರಸಾರ ಕಾರ್ಯದಲ್ಲಿ ನೆರವಾದರು. ಅಗ್ನಿ ಹೋತ್ರಿಗಳಾದ ಉರುವಿಲ್ವಕಾಶ್ಯಪ, ನದೀ ಕಾಶ್ಯಪ, ಗಯಾಕಾಶ್ಯಪ, ಶಾರಿಪುತ್ರ, ಮೌದ್ಗಲ್ಯಾಯನ (ಮೊಗ್ಗಲ್ಲಾನ) ಕೌಂಡಿನ್ಯ ಮತ್ತು ಅವನ ನಾಲ್ವರು ಸಹಚರರು, ಮಹಾಕಾತ್ಯಾಯನ, ಪೋಕ್ಖರಸಾದಿ, ಸೋಣದಂಡ, ಮಾಲುಂಕ್ಯಪುತ್ರ, ಸುಂದರಿಕ ಭಾರದ್ವಾಜ, ಕೃಷಿ ಭಾರದ್ವಾಜ ಮೊದಲಾದವರೆಲ್ಲ ಬ್ರಾಹ್ಮಣರು, ಬುದ್ಧನ ಹಿರಿಮೆಯನ್ನು ಪ್ರಕಟ ಮಾಡಿದವರಲ್ಲಿ ಕೌಂಡಿಣ್ಯ, ಶಾರಿಪುತ್ರ, ಮೌದ್ಗಲ್ಯಾಯನ ಇವರುಗಳು ಪ್ರಮುಖರು. ಬುದ್ಧನ ತತ್ತ್ವಕ್ಕೆ ಅಭಿಧರ್ಮದ ಮೆರುಗನ್ನು ಕೊಟ್ಟವ ಸಾರಿಪುತ್ರ ಎಂದು ಹೇಳಲಾಗುತ್ತದೆ. ಸಾರಿಪುತ್ರ ಮೌದ್ಗಲ್ಯಾಯನ ಇವರು ಈಗಿನ ಬಿಹಾರ್ ರಾಜ್ಯದ ನಾಲಂದದಲ್ಲಿ ಇರುತ್ತಿದ್ದರು. ಇವರು ಬುದ್ಧ ಬದುಕಿದ್ದಾಗಲೇ ತೀರಿಕೊಂಡರು. ಇವರ ಅವಶೇಷಗಳ ಮೇಲೆ ಕಟ್ಟಿದ ಸ್ತೂಪವೇ ಇಂದು ಪ್ರಸಿದ್ಧವಾಗಿರುವ ಸಾಂಚೀಸ್ತೂಪ. ಇದು ಭೂಪಾಲದ ಬಳಿಯಿರುವ ಗುಡ್ಡದ ಮೇಲೆ ರಮ್ಯ ಶಿಲ್ಪಗಳನ್ನು ಮೂಡಿಸಿ ಮಾಡಿದ ಮಂದಿರ. ಪ್ರಾಚೀನವಾಗಿದ್ದ ಸಣ್ಣ ಸ್ತೂಪವನ್ನು ಅಶೋಕ ಹಿಗ್ಗಿಸಿದ. ಬುದ್ಧ ತೀರಿಕೊಂಡ ಅನಂತರ ರಾಜಗೃಹದಲ್ಲಿ ನಡೆದ ಸಂಗೀತಿಯಲ್ಲಿ ಪ್ರಮುಖ ಪಾತ್ರ ವಹಿಸಿ ಬುದ್ಧ ವಚನವನ್ನೆಲ್ಲ ತ್ರಿಪಿಟಕಗಳಲ್ಲಿ ಮೂಡಿಸಿದವನೇ ಮಹಾ ಕಾತ್ಯಾಯನ. ಹೀಗೆ ಬುದ್ಧನ ಧರ್ಮಪುನರುಜ್ಜೀವನ ಕಾರ್ಯದಲ್ಲಿ ಇಡೀ ನಾಡೇ ನೆರವಾಯಿತು.

ಬುದ್ಧನಿಗೆ 56 ವರ್ಷ ವಯಸ್ಸಾದಾಗ ದೇಹದಲ್ಲಿ ದೌರ್ಬಲ್ಯದ ಚಿಹ್ನೆಗಳು ಕಾಣಿಸಿಕೊಂಡುವು. ಸತತವಾದ ತಿರುಗಾಟದಿಂದ ತನ್ನ ಕೆಲಸಗಳನ್ನು ತಾನೇ ತೀರಿಸಿಕೊಳ್ಳಲು ತೊಂದರೆಯಾಯಿತು. ಆಗ ಇವನ ಪರಿಚಾರಿಕೆಗೆ ಆನಂದನೆಂಬ ಜ್ಞಾತಿ ಶಿಷ್ಯ ನಿಯಮಿತನಾದ. ಬುದ್ಧ ಹೋದಲ್ಲೆಲ್ಲ ಜೊತೆಗಿದ್ದು ದಿನದಿನದ ಅಗತ್ಯಗಳನ್ನು ನೋಡಿಕೊಂಡು ಸೇವೆ ಮಾಡಿ ಕೃತಾರ್ಥನಾದ. ಬುದ್ಧ 79 ವರ್ಷಗಳು ದಾಟಿದ ಸಮಯದಲ್ಲಿ ವೈಶಾಲಿಯಿಂದ ವಜ್ಜಿ ರಾಜ್ಯದಲ್ಲಿದ್ದ ಬೆಲುವಗ್ರಾಮಕ್ಕೆ ಆನಂದನೊಡಗೂಡಿ ಹೊರಟ. ಅಲ್ಲಿ ಬುದ್ಧನಿಗೆ ಅಸ್ವಾಸ್ಥ್ಯ ತಲೆದೋರಿತು. ಕಡೆಗಾಲ ಸಮೀಪಿಸುತ್ತಿರುವಂತೆ ತೋರಿತು. ಆದರೆ ಆರೋಗ್ಯ ಸ್ವಲ್ಪ ಸುಧಾರಿಸಿದೊಡನೆ ಅಲ್ಲಿಂದ ಪಾವಾನಗರಿಗೆ ಹೊರಟ. ಆನಂದನ ಜೊತೆಯಲ್ಲಿ ಆಮ್ರಗ್ರಾಮ, ಜಂಬುಗ್ರಾಮ, ಭಂಡಗ್ರಾಮ, ಹಸ್ತಿ ಗ್ರಾಮ, ಭೋಗನಗರಗಳನ್ನು ದಾಟಿ ಮಲ್ಲರ ರಾಜ್ಯಕ್ಕೆ ಬಂದ. ಅದರ ಉಪವರ್ತನದಲ್ಲಿಯ ಕುಶೀನಗರಕ್ಕೆ ಹೋಗಲು ಹಿರಣ್ಯವತೀ ನದಿ ದಾಟಿ ಸಾಲುಮರಗಳ ತೋಪಿಗೆ ಬಂದ. ಆ ವೇಳೆಗೆ ಬುದ್ಧನಿಗೆ ಅತಿಯಾದ ಭಾದೆಯಿಂದ ಆಯಾಸವಾಗಿತ್ತು. ಎರಡು ಮರಗಳ ನಡುವೆ ಹಾಸಿಗೆ ಹರಡುವಂತೆ ಆನಂದನಿಗೆ ಹೇಳಿ ಹಾಸಿಗೆ ಸಿದ್ಧವಾದಾಗ ಬಲಪಾರ್ಶ್ವದಲ್ಲಿ ಬಲತೋಳಿನ ಮೇಲೆ ತಲೆ ಇಟ್ಟು ಮಲಗಿದ. ಸ್ಥಿತ ಪ್ರಜ್ಞನಾಗಿ ಧ್ಯಾನ ಸಮಾಧಿಯಲ್ಲಿ ಮುಳುಗಿ ತೀರಿಕೊಂಡ. ಬುದ್ಧನ ನಿಧನವನ್ನು ಮಹಾಪರಿನಿರ್ವಾಣ ಎಂದು ಕರೆಯಲಾಗುತ್ತದೆ.

ಬುದ್ಧನ ಪರಿನಿರ್ವಾಣವಾದದ್ದು ವೈಶಾಖ ಪೂರ್ಣಿಮೆಯಂದು. ಈ ದಿನದಲ್ಲೇ ಬುದ್ಧನ ಜನ್ಮ, ಜ್ಞಾನ ಪ್ರಾಪ್ತಿ ಮತ್ತು ಪರಿನಿರ್ವಾಣ ಈ ಮೂರು ಘಟನೆಗಳು ಜರುಗಿದ್ದು. ಬುದ್ಧ ತೀರಿಕೊಂಡಾಗ ಇವನಿಗೆ 80 ವರ್ಷ; ಈ ವರ್ಷ ಪ್ರ.ಶ.ಪೂ. ಸು. 483 ಎಂದು ಪಂಡಿತರು ಊಹೆ ಮಾಡಿದ್ದಾರೆ; ಇದಕ್ಕೆ ಸರಿಯಾಗಿ ಬುದ್ಧನ ಜನ್ಮದ ವರ್ಷ ಪ್ರ.ಶ.ಪೂ. ಸು.563 ಆಗುತ್ತದೆ. ಬುದ್ಧ ತೀರಿಕೊಂಡದ್ದು ಮಲ್ಲರ ರಾಜ್ಯದಲ್ಲಿ. ಆದ್ದರಿಂದ ಮಲ್ಲ ನಾಯಕರೇ ಇವನ ಅಂತ್ಯ ಕ್ರಿಯೆಯ ವ್ಯವಸ್ಥೆ ಮಾಡಿದರು. ಚಿತೆಯಿಂದ ಅವಶೇಷಗಳನ್ನು ಕುಶೀನಗರದ ಮಲ್ಲರು ಸಂಚಯನ ಮಾಡಿ ತಾವೇ ಅದರ ಮೇಲೆ ಸ್ತೂಪ ಕಟ್ಟಿಸುವ ಸಂಕಲ್ಪ ಮಾಡಿದರು. ಆದರೆ ಅಲ್ಲಿ ನೆರೆದಿದ್ದ ಇತರರು ತಮಗೂ ಅವಶೇಷದಲ್ಲಿ ಪಾಲು ಬೇಕೆಂದು ಬಲವಂತ ಮಾಡಿದರು. ದ್ರೋಣ ಎಂಬ ಬ್ರಾಹ್ಮಣ ಬೇಡಿದ ಎಲ್ಲರಿಗೂ ಭಾಗ ಮಾಡಿ ಕೊಡುವುದು ಯುಕ್ತವೆಂದು ಸಲಹೆ ಮಾಡಿದ. ಮಲ್ಲರು ಇದಕ್ಕೊಪ್ಪಿ ತಾವು ಸಂಚಯನ ಮಾಡಿದ್ದ ಅವಶೇಷವನ್ನೆಲ್ಲ ಅವನ ಕೈಗಿತ್ತು ಅವನಿಗೇ ಹಂಚುವ ಹೊಣೆ ವಹಿಸಿದರು. ದ್ರೋಣ ಎಲ್ಲರಿಗೂ ಸಮನಾಗಿ ಹಂಚಿದ. ಹೀಗೆ ಅವಶೇಷದಲ್ಲಿ ಹತ್ತು ಭಾಗವಾಗಿ ಒಂದೊಂದು ಭಾಗದ ಮೇಲೂ ಒಂದೊಂದು ಸ್ತೂಪ ನಿರ್ಮಾಣವಾಯಿತು. ಈ ಹತ್ತು ಸ್ತೂಪಗಳೆ ಮೊದಲಿಗೆ ಬೌದ್ಧ ಶ್ರದ್ಧಾಳುಗಳ ಯಾತ್ರಾಸ್ಥಾನಗಳಾಗಿ ಪರಿಣಮಿಸಿದವು. ಮೌರ್ಯದೊರೆ ಅಶೋಕ ಈ ಸ್ತೂಪಗಳನ್ನೆಲ್ಲ ಸಂದರ್ಶಿಸಿ ಸ್ತಂಭ ಶಾಸನಗಳನ್ನು ನೆಡಿಸಿದನೆಂಬ ನಂಬಿಕೆಯಿದೆ.

ಐತಿಹಾಸಿಕ ವ್ಯಕ್ತಿಯಾದ ಬುದ್ಧ ಸಾಮಾನ್ಯ ವ್ಯಕ್ತಿಯಂತೆ ಹುಟ್ಟಿ ಬೆಳೆದು ತನ್ನ ಪ್ರತಿಭೆಯಿಂದಲೂ ಪ್ರಯತ್ನದಿಂದಲೂ ಲೋಕೋತ್ತರ ಜ್ಞಾನ ಪಡೆದು ಬುದ್ಧನಾದ ಎಂದು ಹಳೆಯ ಥೇರವಾದದವರ ಕಲ್ಪನೆ. ಅವರ ದೃಷ್ಟಿಯಲ್ಲಿ ಬುದ್ಧ ಗುರುವಷ್ಟೆ (ಸತ್ಥಾ, ಶಾಸ್ತ್ರ).

ಇವನನ್ನು ಪೂಜಿಸುವಾಗ ಅವರ ಶ್ರದ್ಧೆ ತಮ್ಮ ಧರ್ಮದ ಪ್ರವರ್ತಕ ಪುರುಷನೆಂಬುದು ಮಾತ್ರ. ಇದರಲ್ಲಿ ದೈವತ್ವದ ಕಲ್ಪನೆಯಿಲ್ಲ. ಬುದ್ಧ ಬೋಧಿವೃಕ್ಷದ ಅಡಿಯಲ್ಲಿ ಸಂಬೋಧಿ ಪಡೆದಾಗಲೇ ನಿರ್ವಾಣ ಸಿದ್ಧಿಸಿತು, ಮುಕ್ತನಾದ.

ಬುದ್ಧನ ನಾಲ್ಕು ತತ್ತ್ವಗಳು: ಜೀವನವು ದುಃಖಮಯ; ದುಃಖದ ಕಾರಣ ಆಸೆ, ಅತ್ಯಾಸೆ; ಆಸೆ, ಅತ್ಯಾಸೆಗಳನ್ನು ತ್ಯಜಿಸಿದರೆ ದುಃಖ ನಿವಾರಣೆಯಾಗುತ್ತದೆ. ಆಸೆ, ಅತ್ಯಾಸೆಗಳನ್ನು ತ್ಯಜಿಸಲು ಸಾಧುಮಾರ್ಗವಿದೆ. (ಎಸ್.ಕೆ.ಆರ್.)

**ಗ್ಲಿನ್, ಎಡ್ಮಂಡ್ ಡೇನಿಯಲ್:** 1914–86. ಯುರೋಪ್ ಖಂಡದ ನವ ಶಿಲಾಯುಗ ಸಂಸ್ಕೃತಿ ಅಧ್ಯಯನ ಕ್ಷೇತ್ರದಲ್ಲಿ ಹೆಸರಾಂತ ವೇಲ್ಸ್ ಪುರಾತತ್ತ್ವ ಶಾಸ್ತ್ರಜ್ಞ, ಆಕಾಶವಾಣಿ, ದೂರದರ್ಶನಗಳ ಮೂಲಕ ಪುರಾತತ್ತ್ವ ವಿಷಯವನ್ನು ಪ್ರಚುರಪಡಿಸಿದವನು. ದಕ್ಷಿಣ ವೇಲ್ಸ್‌ನ ಬ್ಯಾರಿಯಲ್ಲಿ 1914 ಏಪ್ರಿಲ್ 23ರಂದು ಜನಿಸಿದ. ಈತ ಕಾರ್ಡಿಫ್ ವಿಶ್ವವಿದ್ಯಾಲಯದಲ್ಲಿ ಭೂವಿಜ್ಞಾನವನ್ನೂ ಅನಂತರ ಕೇಂಬ್ರಿಜ್‌ನಲ್ಲಿ ಪುರಾತತ್ತ್ವ ಮತ್ತು ಮಾನವಶಾಸ್ತ್ರಗಳನ್ನೂ ಅಧ್ಯಯನ ಮಾಡಿದ. 2ನೆಯ ಮಹಾಯುದ್ಧ ಸಮಯದಲ್ಲಿ ಪುರಾತತ್ತ್ವ ನೆಲೆಗಳ ವ್ಯೋಮ ಛಾಯಾಚಿತ್ರಗಳನ್ನು ಅರ್ಥೈಸುವುದರಲ್ಲಿ ತನ್ನ ಕೌಶಲ್ಯ ತೋರಿಸಿದ. ರಾಯಲ್ ಏರ್‌ಫೋರ್ಸ್ ವಿಭಾಗದಲ್ಲಿ ಇವನ ಕೆಲಸವಾಗಿತ್ತು. ಅನಂತರ ಕೇಂಬ್ರಿಜ್‌ನಲ್ಲಿ ಪುರಾತತ್ತ್ವ ವಿಷಯದ ಡಿಸ್ನಿ ಪ್ರಾಧ್ಯಾಪಕನಾಗಿ ತನ್ನ ಅಧ್ಯಯನ ಮುಂದುವರಿಸಿದ. 1958–85ರ ವರೆಗೆ ಪ್ರತಿಷ್ಠಿತ ಆಂಟಿಕ್ವಿಟಿ ನಿಯತಕಾಲಿಕೆಗೆ ಕೆಲಸಮಾಡಿದ. ನವಶಿಲಾಯುಗ ಸಂಸ್ಕೃತಿಯ ಬೃಹತ್ ಶಿಲಾಗೋರಿಗಳ ಅಧ್ಯಯನ ಇವನ ಪ್ರಧಾನ ವಿಷಯ. ಪುರಾತತ್ತ್ವ ಬೆಳವಣಿಗೆ, ಇತಿಹಾಸ ಮತ್ತು ಪುರಾತತ್ತ್ವ ಚಿಂತನೆ ಈ ವಿಷಯಗಳ ಮೇಲೆ ಗ್ರಂಥಗಳನ್ನು ಬರೆದಿದ್ದಾನೆ. ದಿ ಪ್ರೀ ಹಿಸ್ಟಾರಿಕ್ ಚೇಂಬರ್ ಟೂಂಬ್ಸ್ ಆಫ್ ಫ್ರಾನ್ಸ್ (1960), ದಿ ಮೆಗಲಿಥ್ ಬಿಲ್ಡರ್ಸ್ ಆಫ್ ವೆಸ್ಟರ್ನ್ ಯುರೋಪ್(1963), 150 ಇಯರ್ಸ್ ಆಫ್ ಆರ್ಕಿಯಾಲಜಿ – ಇವು ಇವನ ಪ್ರಮುಖ ಗ್ರಂಥಗಳು. ಕುತೂಹಲಕಾರಿ ವಿಷಯವೆಂದರೆ ಇವನು ದಿಲ್‌ವ್ಯನ್ ರೀಸ್ ಎಂಬ ಗುಪ್ತನಾಮದಲ್ಲಿ ದಿ ಕೇಂಬ್ರಿಜ್ ಮರ್ಡರರ್ಸ್, ವೆಲ್‌ಕಂ ಡೆತ್ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾನೆ. (ಎ.ಎಸ್.;ಎನ್.ಎಲ್)

**ಗ್ಯಾರಿಸನ್, ವಿಲಿಯಮ್ ಲಾಯ್ಡ್ :** 1805–79. ಅಮೆರಿಕದಲ್ಲಿ ಗುಲಾಮಗಿರಿಯ ವಿರುದ್ಧ ಹೋರಾಟ ನಡೆಸಿದವನು. ಇವನು ಮೆಸಾಚುಸೆಟ್ಸ್‌ನ ನ್ಯೂಬರಿಪೋರ್ಟಿನಲ್ಲಿ 1805ರ ಡಿಸೆಂಬರ್ 12ರಂದು ಜನಿಸಿದ. ತಂದೆ ಅಬಿಜಾ ಒಬ್ಬ ಹಡಗು ಚಾಲಕ, ಕುಡುಕ. ವಿಲಿಯಂ ಮಗುವಾಗಿದ್ದಾಗಲೇ ತಂದೆ ಮನೆ ತೊರೆದ. ತಾಯಿ ಸುಶೀಲೆ, ಲಕ್ಷಣವಂತೆ. ವಿಲಿಯಮನಿಗೆ ಹೆಚ್ಚು ಶಿಕ್ಷಣವೇನೂ ದೊರೆಯಲಿಲ್ಲ. ಆದರೆ ತನಗೆ ದೊರೆತ ಅವಕಾಶಗಳನ್ನೆಲ್ಲ ಅವನು ಸದುಪಯೋಗಪಡಿಸಿಕೊಂಡ. ನ್ಯೂಬರಿಫೋರ್ಟ್ ಮತ್ತು ಬಾಲ್ಟಿಮೋರ್‌ನಲ್ಲಿ ಪಾದರಕ್ಷೆ ತಯಾರಿಕೆಯನ್ನು ಕಲಿಯಲು ಇವನನ್ನು ಸೇರಿಸಲಾಗಿತ್ತು. ಅನಂತರ ಇವನು ಅಲಮಾರು ತಯಾರಕನೊಬ್ಬನಲ್ಲಿ ಅಭ್ಯಾಸಿಯಾಗಿದ್ದ. ನಡುವೆಯೇ ಇವನು ಓಡಿಹೋದ. ನ್ಯೂಬರಿಫೋರ್ಟ್ ಹೆರಾಲ್ಡ್ ಪತ್ರಿಕೆಯಲ್ಲಿ ಮೊಳೆ ಜೋಡಿಸುವ ಕೆಲಸ ಕಲಿಯಲು ಇವನನ್ನು ಹಚ್ಚಲಾಯಿತು. ಅದರಲ್ಲೇ ಇವನು ತುಂಬ ಪಳಗಿದ. ಅನಂತರ ಆ ಪತ್ರಿಕೆಗಾಗಿ ಅಜ್ಞಾತವಾಗಿ ಲೇಖನಗಳನ್ನು ಬರೆದು ಸಂಪಾದಕನ ಮೆಚ್ಚುಗೆ ಗಳಿಸಿದ. ಇತರ ಅನೇಕ ಪತ್ರಿಕೆಗಳಿಗೂ ಲೇಖನ ಬರೆದ. ಮೊಳೆ ಜೋಡಿಸುವ ಕೆಲಸದಲ್ಲೂ ಪರಿಣತಿ ಪಡೆದ ಈತನಿಗೆ ಮೇಸ್ತ್ರಿಯ ಹುದ್ದೆ ದೊರಕಿತು. ಬರವಣಿಗೆಯಲ್ಲಿ ಇವನು ಗಳಿಸಿದ ಸಾಮರ್ಥ್ಯ ಸಾಮಾನ್ಯವಲ್ಲ. ಸಂಪಾದಕ ಸ್ವಲ್ಪಕಾಲ ತನ್ನ ಕೆಲಸ ನಿರ್ವಹಿಸಲಾಗದಾಗ ಪತ್ರಿಕೆ ನಡೆಸುವ ಹೊಣೆ ಇವನದಾಗಿತ್ತು. 1826ರಲ್ಲಿ ಇವನ ಅಭ್ಯಾಸ ಅವಧಿ ಮುಗಿಯಿತು. ತಾನೇ ಫ್ರೀ ಪ್ರೆಸ್ ಎಂಬ ಪತ್ರಿಕೆಯೊಂದನ್ನಾರಂಭಿಸಿದ. ಸ್ವದೇಶಾಭಿಮಾನವನ್ನು ಬೆಳೆಸುವುದೇ ಇವನ ಪತ್ರಿಕೆಯ ಮುಖ್ಯೋದ್ದೇಶ. ಆದರೆ ಆ ಸ್ಥಳಕ್ಕೆ ಇವನ ಪತ್ರಿಕೆ ಅತ್ಯಂತ ತೀವ್ರಗಾಮಿ ಯೆನಿಸಿತು. ಪತ್ರಿಕೆ ಮುಚ್ಚಿಹೋಯಿತು. ಅನಂತರ ಈತ ಬಾಸ್ಟನ್ನಿಗೆ ಹೋಗಿ ಮುದ್ರಣ ಕಾರ್ಯಗಾರ (ಜರ್ನಿಮನ್) ಆದ. ನ್ಯಾಷನಲ್ ಫಿಲಾಂತ್ರಪಿಸ್ಟ್ ಎಂಬ ಪತ್ರಿಕೆಯೊಂದು ಇವನ ಸಂಪಾದಕತ್ವ ದಲ್ಲಿ ಹೊರಡುತ್ತಿತ್ತು. ಮದ್ಯಪಾನವನ್ನು ವರ್ಜಿಸಬೇಕೆಂಬ ಉದ್ದೇಶವಿದ್ದ ಪ್ರಥಮ ಅಮೆರಿಕನ್ ಪತ್ರಿಕೆಯಿದು. ಆ ವರ್ಷದ ಕೊನೆಯೊಳಗೆ ಪತ್ರಿಕೆಯ ಒಡೆತನ ಬದಲಾದ್ದರಿಂದ ಈತ ಇದನ್ನು ಬಿಡಬೇಕಾಯಿತು. 1828ರಲ್ಲಿ ಬೆನಿಂಗ್ಟನಿನಲ್ಲೊಂದು ಪತ್ರಿಕೆ ತೆರೆದ. ಆ ಪತ್ರಿಕೆಯೂ ಒಂದು ವರ್ಷದೊಳಗೆ ಪರಿಸಮಾಪ್ತಿ ಹೊಂದಿತು.

ಗುಲಾಮಗಿರಿ ನಿರ್ಮೂಲವಾಗಬೇಕೆಂದು ಪ್ರಚಾರ ನಡೆಸುತ್ತಿದ್ದ ಬೆಂಜಮಿನ್ ಲಂಡಿಯ ಪರಿಚಯ ಇವನಿಗೆ ಆಯಿತು. ಇವನಿಗೂ ಈ ವಿಷಯದಲ್ಲಿ ಆಸಕ್ತಿ ಬೆಳೆಯಿತು. ಗುಲಾಮರ ವಿಮೋಚನೆ ಕ್ರಮಕ್ರಮವಾಗಿ ಆಗಬೇಕೆಂಬ, ವಿಮೋಚನೆಗೊಂಡ ಗುಲಾಮರನ್ನು ಅಮೆರಿಕ ಸಂಯುಕ್ತಸಂಸ್ಥಾನಗಳಿಂದಾಚೆ ಎಲ್ಲಾದರೂ ನೆಲೆಗೊಳಿಸಬೇಕೆಂಬ ಲಂಡಿಯ ಅಭಿಪ್ರಾಯಕ್ಕೆ ಪ್ರಾರಂಭದಲ್ಲಿ ಗ್ಯಾರಿಸನನ ವಿರೋಧವೇನೂ ಇರಲಿಲ್ಲ. ಲಂಡಿ ಪ್ರಕಟಿಸುತ್ತಿದ್ದ ಜೀನಿಯಸ್ ಆಫ್ ಯೂನಿವರ್ಸಲ್ ಇಮಾನ್ಸಿಪೇಷನ್ ಎಂಬ ಪತ್ರಿಕೆಯ ಸಂಪಾದನ ಕಾರ್ಯದಲ್ಲಿ ಲಂಡಿ ಸಹಾಯ ನೀಡಬೇಕೆಂಬ ಆಹ್ವಾನವನ್ನೊಪ್ಪಿಕೊಂಡು ಅವನೊಂದಿಗೆ ಕೆಲಸ ಆರಂಭಿಸಿದ ಮೇಲೆ ಗ್ಯಾರಿಸನನ ಭಾವನೆಗಳು ಕ್ರಮೇಣ ಬದಲಾದವು. ಗುಲಾಮಗಿರಿ ಕೂಡಲೇ ರದ್ದಾಗಬೇಕೆಂದು ಗ್ಯಾರಿಸನ್ ಪ್ರತಿಪಾದಿಸಿದ. ತನ್ನ ಭಾವನೆಗಳ ಪ್ರಚಾರಕ್ಕೆ ಅವನು ಜೀನಿಯಸ್ ಪತ್ರಿಕೆಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡ. ಗುಲಾಮರ ಒಡೆಯರು ಪತ್ರಿಕೆಯನ್ನೂ ಗ್ಯಾರಿಸನನನ್ನೂ ದ್ವೇಷಿಸತೊಡಗಿದರು. ಗುಲಾಮರ ಸಾಗಣೆಯ ಹಡಗೊಂದರ ಯಜಮಾನ ಹೂಡಿದ ಮಾನನಷ್ಟ ಮೊಕದ್ದಮೆಯಲ್ಲಿ ಇವನಿಗೆ 50 ಡಾಲರುಗಳ ದಂಡ ವಿಧಿಸಲಾಯಿತು. ಈತ ದಂಡ ತೆರಲಾರದೆ ಕಾರಾಗೃಹಕ್ಕೆ ಹೋಗಿ ಶಿಕ್ಷೆಯನ್ನು ಭಾಗಶಃ ಅನುಭವಿಸಿದ ಮೇಲೆ ಅಭಿಮಾನಿಯೊಬ್ಬ ದಂಡದ ಹಣ ನೀಡಿದ್ದರಿಂದ ಬಿಡುಗಡೆ ಆಯಿತು. ಲಂಡಿ–ಗ್ಯಾರಿಸನರ ಸಹಯೋಗ ಕೊನೆಗೊಂಡಿತು. ತನ್ನದೇ ಪತ್ರಿಕೆಯೊಂದನ್ನು ಬಾಸ್ಟನಿನಲ್ಲಿ ಆರಂಭಿಸಲು ಗ್ಯಾರಿಸನ್ ಮನಸ್ಸು ಮಾಡಿದ. ಉತ್ತರದ ಪ್ರಮುಖ ಸ್ಥಳಗಳಲ್ಲಿ ಪ್ರಚಾರೋಪನ್ಯಾಸ ಮಾಡಬೇಕೆಂದು ನಿಶ್ಚಯಿಸಿದ. ಬಾಸ್ಟನಿನಲ್ಲಿ ಇದಕ್ಕಾಗಿ ಸ್ಥಳವೊಂದನ್ನು ಕಷ್ಟಪಟ್ಟು ಸಂಪಾದಿಸಿಕೊಂಡ. ಐಸಾಕ್ ನ್ಯಾಪ್ ಎಂಬುವನೊಂದಿಗೆ ಕೂಡಿ ಲಿಬರೇಟರ್ ಎಂಬ ಪತ್ರಿಕೆ ಹೊರಡಿಸಿದ. ಆರಂಭದಲ್ಲಿ ಅದಕ್ಕೆ ಬಂಡವಾಳವಾಗಲಿ ಒಬ್ಬನಾದರೂ ಚಂದಾದಾರನಾಗಲಿ ಇರಲಿಲ್ಲ. ತನ್ನ ಮಾತುಗಳನ್ನು ಜನ ಆಲಿಸುವವರೆಗೂ, ಗುರಿ ಸಾಧಿಸುವವರೆಗೂ ನಿಲ್ಲಿಸುವುದಿಲ್ಲ ವೆಂಬುದು ಅವನ ಛಲವಾಗಿತ್ತು.

ಗ್ಯಾರಿಸನ್ 1832ರಲ್ಲಿ ನ್ಯೂ ಇಂಗ್ಲೆಂಡ್ ಗುಲಾಮಗಿರಿ ವಿರೋಧಿ ಸಂಘ ಸ್ಥಾಪಿಸಿದ. ಈತನ ಥಾಟ್ಸ್ ಆನ್ ಆಫ್ರಿಕನ್ ಕಾಲೊನೈಸೇಷನ್ ಎಂಬ ಪುಸ್ತಕ ಪ್ರಕಟವಾದದ್ದು ಅದೇ ವರ್ಷ. ಅಮೆರಿಕನ್ ವಸಾಹತು ನಿರ್ಮಾಣ ಸಂಘ ಗುಲಾಮಗಿರಿಯ ಸಾಧನೆಗಾಗಿ ಸ್ಥಾಪಿತವಾಗಿರುವ ಸಂಘವೆಂದು ಈತ ವಾದಿಸಿದ. ತನ್ನ ಸಂಘದ ಪ್ರತಿನಿಧಿಯಾಗಿ ಈತ 1833ರಲ್ಲಿ ಇಂಗ್ಲೆಂಡಿಗೆ ಹೋಗಿದ್ದಾಗ ಅಮೆರಿಕನ್ ವಸಾಹತು ನಿರ್ಮಾಣ ಸಂಘದ ದುರುದ್ದೇಶಗಳನ್ನು ಬಯಲಿ ಗೆಳೆಯುವುದಕ್ಕಾಗಿ, ಅಲ್ಲಿಯ ಗುಲಾಮಗಿರಿ ವಿರೋಧಿಗಳು ಗ್ಯಾರಿಸನನ್ನು ಪ್ರೀತ್ಯಾದರಗಳಿಂದ ಸ್ವಾಗತಿಸಿದರಲ್ಲದೆ ಇವನ ಯತ್ನಗಳಿಗೆ ತಮ್ಮ ಬೆಂಬಲ ಸೂಚಿಸಿದರು. 1839–40ವರೆಗೂ ಅಮೆರಿಕದ ಗುಲಾಮಗಿರಿ ನಿರ್ಮೂಲವಾದಿಗಳಲ್ಲಿ ಒಗ್ಗಟ್ಟಿತ್ತು. ಅನಂತರ ಇದು ಒಡೆಯಿತು. ಗ್ಯಾರಿಸನ್ ತನ್ನ ಉದ್ದೇಶ ಸಾಧನೆಗಾಗಿ ಸ್ತ್ರೀಯರ ನೆರವನ್ನೂ ಪಡೆದುಕೊಂಡಿದ್ದ. ಸ್ತ್ರೀಪುರುಷರಿಬ್ಬರೂ ಸಮಾನರೆಂಬುದು ಇವನ ನಂಬಿಕೆಯಾ ಗಿತ್ತು. ಸ್ತ್ರೀಸ್ವಾತಂತ್ರ್ಯವನ್ನು ವಿರೋಧಿಸುತ್ತಿದ್ದವರ ವಿರೋಧವನ್ನು ಇದರಿಂದ ಕಟ್ಟಿಕೊಳ್ಳ ಬೇಕಾಯಿತು. 1840ರ ವೇಳೆಗೆ ಈತ ಸಂಪ್ರದಾಯಗಳನ್ನು ಕಿತ್ತೊಗೆಯುವಂತ ತೀವ್ರವಾದಿ ಯಾದ. ಧರ್ಮ ಗುರುಗಳೂ ಎದುರುಬಿದ್ದರು. ಏಕೆಂದರೆ ಚರ್ಚನ್ನೂ ಇವನು ಟೀಕಿಸಿದ್ದ. 1840ರಲ್ಲಿ ಹೊಸದೊಂದು ಗುಲಾಮಗಿರಿ ವಿರೋಧ ಸಂಘವೂ ಲಿಬರ್ಟಿ ಪಕ್ಷವೂ ಸ್ಥಾಪಿತವಾದವು. ಲಂಡನ್ನಿನಲ್ಲಿ ಆ ವರ್ಷ ನಡೆಯಲ್ಲಿದ್ದ ಗುಲಾಮಗಿರಿ ವಿರೋಧಿಗಳ ಸಮಾವೇಶಕ್ಕೆ ಈ ಎರಡು ಸಂಸ್ಥೆಗಳೂ ಪ್ರತಿನಿಧಿಗಳನ್ನು ಕಳುಹಿಸಿದವು. ಆ ಸಮಾವೇಶದಲ್ಲಿ ಸ್ತ್ರೀ ಪ್ರತಿನಿಧಿ ಗಳಿಗೆ ಅವಕಾಶವಿರಲಿಲ್ಲವೆಂಬ ಕಾರಣದಿಂದಾಗಿ ಗ್ಯಾರಿಸನ್ ಅದರಲ್ಲಿ ಭಾಗವಹಿಸಲೊಪ್ಪಲಿಲ್ಲ.

ಅಮೆರಿಕ ಸಂಯುಕ್ತಸಂಸ್ಥಾನಗಳ ಸಂವಿಧಾನ ಗುಲಾಮಗಿರಿಯ ಪರವಾಗಿದೆಯೆಂಬ ಕಾರಣದಿಂದ ಗ್ಯಾರಿಸನ್ ಅದನ್ನೂ ಟೀಕಿಸಿದ. ಸಂವಿಧಾನಕ್ಕೆ ಬೆಂಬಲ ನೀಡುವ ಪ್ರತಿಜ್ಞಾ ವಚನ ಸ್ವೀಕರಿಸುವುದು ಪಾಪಕರವೆಂಬುದು ಇವನ ಭಾವನೆ. ಸಂವಿಧಾನದ ಪ್ರತಿಯನ್ನು ಇವನು ಸುಟ್ಟ, ಒಕ್ಕೂಟವನ್ನು ಒಡೆಯಬೇಕೆಂದೂ ಇವನು ಪ್ರಚಾರ ಮಾಡತೊಡಗಿದ. 1861ರಲ್ಲಿ ದಕ್ಷಿಣ ಸಂಸ್ಥಾನಗಳು ಪ್ರತ್ಯೇಕವಾದವು. ಒಕ್ಕೂಟದ ವಿರುದ್ಧ ಹೋರಾಟ ಆರಂಭಿಸಿದ. ಈ ಸಂಘರ್ಷದ ಪರಿಣಾಮವಾಗಿ ಗುಲಾಮಗಿರಿ ವಿಧಿಗಳು ಸಂವಿಧಾನದಿಂದ ತೊಡೆದು ಹೋಗುವುದೆಂಬುದು ಇವನಿಗೆ ಮನವರಿಕೆಯಾಯಿತು. ಲಿಂಕನ್ ಇವನನ್ನು ಗೌರವಿಸಿದ. ಗುಲಾಮಗಿರಿಯ ವಿರೋಧವಾಗಿ ಇವನ ನಿರ್ಭಯಹೋರಾಟವನ್ನು ಹಲವರು ಮೆಚ್ಚಿಕೊಂಡರು. ಗ್ಯಾರಿಸನ್ ಕೆಲವು ಪದ್ಯಗಳನ್ನು ಬರೆದಿದ್ದಾನೆ. ಅವು 1843ರಲ್ಲಿ ಸಂಕಲನರೂಪದಲ್ಲಿ ಪ್ರಕಟವಾದವು. ಇವನ ಆಯ್ದ ಲೇಖನೋಪನ್ಯಾಸಗಳ ಸಂಪುಟವೊಂದು ಬೆಳಕಿಗೆ ಬಂದದ್ದು 1852ರಲ್ಲಿ.

ಅಮೆರಿಕನ್ ಅಂತರ್ಯುದ್ಧ ಕೊನೆಗೊಂಡು ಗುಲಾಮಗಿರಿ ರದ್ದಾದಾಗ, 1865ರಲ್ಲಿ ಗುಲಾಮಗಿರಿ ನಿರ್ನಾಮವಾಗಿ ತನ್ನ ಕರ್ತವ್ಯ ತೀರಿತೆಂದು ಗ್ಯಾರಿಸನ್ ಘೋಷಿಸಿದ. ಅಮೆರಿಕನ್ ಗುಲಾಮಗಿರಿ ವಿರೋಧಿ ಸಂಘವನ್ನು ವಿಸರ್ಜಿಸಬೇಕೆಂಬುದು ಈತ ಸಲಹೆ ಮಾಡಿದ. ವಿಮೋಚನೆಗೊಂಡ ಗುಲಾಮರ ಸ್ವಾತಂತ್ರ್ಯದ ರಕ್ಷಣೆಗಾಗಿ ಪ್ರತ್ಯೇಕವಾದ ಯಥೋಚಿತವಾದ ಸಂಸ್ಥೆಗಳ ಸ್ಥಾಪನೆಯಾಗಲೆಂದು ಸೂಚಿಸಿದ. ಈತ ನಡೆಸುತ್ತಿದ್ದ ಲಿಬರೇಟ್ ಪತ್ರಿಕೆ 35 ವರ್ಷಗಳ ಅನಂತರ ನಿಂತಿತು. 1846ರಲ್ಲೂ 1867ರಲ್ಲೂ ಗ್ಯಾರಿಸನ್ ಇಂಗ್ಲೆಂಡಿಗೆ ಭೇಟಿ ನೀಡಿದಾಗ ಪ್ರಜಾಸಮೂಹವೂ ಸರ್ಕಾರವೂ ಇವನಿಗೆ ವೀರೋಚಿತ ಸ್ವಾಗತ ನೀಡಿದವು. ಅನಂತರ ಇವನು ಮುಕ್ತ ವ್ಯಾಪಾರಕ್ಕಾಗಿ ಚಳವಳಿ ಹೂಡಿದ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಎಲ್ಲ ಬಗೆಯ ಸುಂಕಗಳೂ ರದ್ದಾಗಬೇಕೆಂಬುದು ಇವನ ವಾದ. 1869ರಲ್ಲಿ ಈತ ಮುಕ್ತ ವ್ಯಾಪಾರ ಸಂಘದ ಅಧ್ಯಕ್ಷನಾದ. ಈತ 1879ರ ಮೇ 24ರಂದು ನಿಧನನಾದ. (ಎಂ.ಆರ್.ಎಲ್.)

**ಗ್ವಾಲಿಯರ್:** ಭಾರತದ ಮಧ್ಯಪ್ರದೇಶ ರಾಜ್ಯದ ಒಂದು ಜಿಲ್ಲೆ, ಆಡಳಿತ ವಿಭಾಗ; ಆಡಳಿತ ಕೇಂದ್ರ ನಗರ. ಮೂರು ಬದಿಗಳಲ್ಲಿ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟಿರುವ ಈ ನಗರ ಹಿಂದೆ ಗ್ವಾಲಿಯರ್ ಸಂಸ್ಥಾನದ ರಾಜಧಾನಿಯಾಗಿತ್ತು. ಗ್ವಾಲಿಯರಿನ ಹಳೆಯ ನಗರ ಪ್ರದೇಶ ಇರುವುದು ಸು.91.44 ಮೀ ಎತ್ತರದ ಬಂಡೆಯೊಂದರ ಮೇಲೆ. ಇದರ ಸುತ್ತು ಕೋಟೆಯೊಂದಿದೆ. ಇದು ಭಾರತದ ಹಳೆಯ ಕೋಟೆಗಳಲ್ಲೊಂದು. 525ರ

ಶಾಸನವೊಂದರಲ್ಲಿ ಇದರ ಉಲ್ಲೇಖವುಂಟು. 9–9.60 ಮೀ ಎತ್ತರದ ಕೋಟೆಯ ಒಳಗಡೆ ಎಂಟು ಕೊಳಗಳೂ ಆರು ಅರಮನೆಗಳೂ ಆರು ದೇವಸ್ಥಾನಗಳೂ ಒಂದು ಮಸೀದಿಯೂ ಹಲವಾರು ಕಟ್ಟಡಗಳೂ ಇವೆ. 11ನೆಯ ಶತಮಾನದ ತೇಲೀಕ ಮಂದಿರ, ಅತ್ತೆ–ಸೊಸೆಯರ ದೇಗುಲ, 15ನೆಯ ಶತಮಾನದಲ್ಲಿ ನಿರ್ಮಿತವಾದ ಮಾನ್ ಮಂದಿರ – ಇವು ಹಿಂದು ವಾಸ್ತುಶಿಲ್ಪದ ಉತ್ತಮ ನಿದರ್ಶನಗಳು, ಕರಣ್ ಅರಮನೆ ಇಂಡೋ–ಮುಸ್ಲಿಂ ಶಿಲ್ಪಕ್ಕೆ ಹೆಸರಾದ್ದು. ಗೀಲಿಕ ಮಂದಿರ ಅತ್ಯುನ್ನತ ಕಟ್ಟಡ. ಅದರ ಗೋಪುರದ ಎತ್ತರ 30.17 ಮೀ. ಗ್ವಾಲಿಯರಿನ ಹೊರವಲಯದಲ್ಲಿ ಬಂಡೆಗೋಡೆಗಳಲ್ಲಿ ಕೊರೆಯಲಾದ ಹಲವಾರು ಜೈನಮೂರ್ತಿಗಳುಂಟು. ಅವುಗಳ ಪೈಕಿ 22.86 ಮೀ ಎತ್ತರದ ಆದಿನಾಥಮೂರ್ತಿ ಪ್ರಮುಖವಾದದ್ದು. ಕೋಟೆಯ ಹೊರಗಡೆ ಇರುವ ಕಟ್ಟಡಗಳಲ್ಲಿ ಮಹಮ್ಮದ್ ಗೌಸ್ ಮತ್ತು ತಾನಸೇನ್ ಗೋರಿಗಳು ಮುಖ್ಯವಾದುವು.

ಗ್ವಾಲಿಯರ್‌ಗೆ ಆ ಹೆಸರು ಬರಲು ಇಲ್ಲಿ ವಾಸಿಸುತ್ತಿದ್ದ ಗ್ವಾಲಿಪ ಎಂಬ ತಪಸ್ವಿ ಕಾರಣವೆಂಬುದು ಸ್ಥಳಪುರಾಣ. ಕುಷ್ಠರೋಗದಿಂದ ನರಳುತ್ತಿದ್ದ ಸೂರಜ್ ಸೇನ್ ಎಂಬ ಅರಸನ ರೋಗವನ್ನು ಆ ಸನ್ಯಾಸಿ ಗುಣಪಡಿಸಿದನೆಂದು ಪ್ರತೀತಿ. ಆತನ ಹೆಸರಾಗಿ ಆ ದೊರೆ ಗ್ವಾಲಿಯರ್ ಕೋಟೆಯನ್ನು ಕಟ್ಟಿಸಿದನೆಂದೂ ಗ್ವಾಲಿಪನ ಸೂಚನೆಯಂತೆ ತನ್ನ ಮುಂದೆ ಪಾಲ ಎಂಬ ಹೆಸರನ್ನು ಸೇರಿಸಿಕೊಂಡನೆಂದೂ ಈತನ ವಂಶದ ಅರಸನೊಬ್ಬ ತನ್ನನ್ನು ಪಾಲನೆಂದು ಕರೆದುಕೊಳ್ಳದಿದ್ದಾಗ ಪತನ ಹೊಂದಿದನೆಂದೂ ಹೇಳಲಾಗಿದೆ. ಗ್ವಾಲಿಯರಿಗೆ ಸಂಬಂಧಿಸಿದ ಶಾಸನಗಳಲ್ಲಿ ಈ ಬೆಟ್ಟವನ್ನು ಗೋಪಗಿರಿ, ಗೋಪಾದ್ರಿ, ಗೋಪಾಚಲ ಎಂದು ಕರೆಯಲಾಗಿದೆ. ಇತಿಹಾಸದ ಪ್ರಕಾರ ಗ್ವಾಲಿಯರಿನ ಪ್ರಥಮ ಒಡೆಯರೆಂದರೆ ಹೂಣ ದೊರೆ ತೋರಮಾನ ಮತ್ತು ಆತನ ಮಗ ಮಿಹಿರಗುಲ. ಕೋಟೆಯಲ್ಲಿರುವ 525ರ ಶಾಸನವೊಂದರಿಂದ ಈ ವಿಷಯ ತಿಳಿದುಬರುತ್ತದೆ. 9ನೆಯ ಶತಮಾನದಲ್ಲಿ ಕನೌಜಿನ ಗೂರ್ಜರ–ಪ್ರತೀಹಾರ ದೊರೆ ಭೋಜನಿಗೆ ಸೇರಿತ್ತು. ಇದು 1232ರ ವರೆಗೂ ಹಿಂದು ದೊರೆಗಳ ವಶದಲ್ಲೇ ಮುಂದುವರೆಯಿತು. 1021ರಲ್ಲಿ ಸುಲ್ತಾನ್ ಮಹಮ್ಮದ್ ಇದನ್ನು ರಜಪೂತರಿಂದ ಕಿತ್ತುಕೊಳ್ಳಲು ಯತ್ನಿಸಿದ. 1232ರಲ್ಲಿ ಸುಲ್ತಾನ ಇಲ್ತಮಷ್ ಇದನ್ನು ಗೆದ್ದುಕೊಂಡ. 1398ರಲ್ಲಿ ಇದು ಮತ್ತೆ ರಜಪೂತರ ವಶಕ್ಕೆ ಬಂದು 1518ರ ವರೆಗೂ ಅವರ ಅಧೀನದಲ್ಲೇ ಇತ್ತು. ಈ ದೊರೆಗಳ ಪೈಕಿ ಪ್ರಸಿದ್ಧನಾದವನು ಮಾನಸಿಂಗ್ (1456–1517). ಅವನು ಸುಂದರವಾದ ಅರಮನೆಯೊಂದನ್ನು ಕಟ್ಟಿಸಿದ. ಅವನ ರಾಣಿ ಮೃಗನಯನಾ ಎಂಬುವಳು ಕಲೆಗೆ ವಿಶೇಷ ಪ್ರೋತ್ಸಾಹ ನೀಡಿದಳು. ಗ್ವಾಲಿಯರ್ ಸಂಗೀತ ಕಲಾ ಕೇಂದ್ರವಾಯಿತು. ತಾನಸೇನ್ ಗ್ವಾಲಿಯರಿನ ಆಸ್ಥಾನದಲ್ಲಿದ್ದ. ಆತ ಕೊನೆಯುಸಿರೆಳೆದದ್ದೂ ಗ್ವಾಲಿಯರ್‌ನಲ್ಲೇ.

ಗ್ವಾಲಿಯರ್ ಕೋಟೆ 1542ರಲ್ಲಿ ಷೇರ್‌ಷಹನ ವಶವಾಯಿತು. ಅವನ ವಂಶಜರಿಂದ 1559ರಲ್ಲಿ ಅಕ್ಬರ್ ಇದನ್ನು ಗೆದ್ದುಕೊಂಡ. ಮೊಗಲ್ ಚಕ್ರವರ್ತಿಗಳು ಇದನ್ನು ರಾಜಕೀಯ ಬಂದಿಗಳನ್ನಿಡಲು ಬಳಸುತ್ತಿದ್ದರು. ಈ ಕೋಟೆ ಮರಾಠರ ವಶವಾದದ್ದು 1751ರಲ್ಲಿ. 1777ರಲ್ಲಿ ಇದು ಸಿಂಧ್ಯ ಮನೆತನದ ದೊರೆಗಳ ರಾಜಧಾನಿಯಾಯಿತು. 1780ರಲ್ಲಿ ಇದನ್ನು ಬ್ರಿಟಿಷರು ವಶಪಡಿಸಿಕೊಂಡರು. ಅವರಿಂದ 1783ರಲ್ಲಿ ಇದನ್ನು ಮರಾಠರ ಕೈಗೆ ಹೋಗಿದ್ದ ಈ ಕೋಟೆಯನ್ನು ಬ್ರಿಟಿಷರು ಮತ್ತೆ 1804ರಲ್ಲಿ ಗೆದ್ದುಕೊಂಡು 1805ರಲ್ಲಿ ಸಿಂಧ್ಯ ಮನೆತನಕ್ಕೆ ಕೊಟ್ಟರು. 1844ರಲ್ಲಿ ಬ್ರಿಟಿಷ್ ಸೇನೆ ಇಲ್ಲಿ ನೆಲಸಿತು. 1853ರಲ್ಲಿ ಇದನ್ನು ಸಿಂಧ್ಯ ರಾಜನಿಗೆ ಮತ್ತೆ ಮರಳಿಸಲಾಯಿತು. 1857ರಲ್ಲಿ ಸಂಭವಿಸಿದ ಬಂಡಾಯದಲ್ಲಿ ಗ್ವಾಲಿಯರ್ ಪ್ರಧಾನ ಪಾತ್ರವಹಿಸಿತ್ತು. ಇದು ಬಂಡಾಯಗಾರರ ಕೊನೆಯ ನೆಲೆಯಾಗಿತ್ತು. 1858ರಲ್ಲಿ ಇದನ್ನು ಬ್ರಿಟಿಷರು ಮತ್ತೆ ವಶಪಡಿಸಿಕೊಂಡಿದ್ದು, 1886ರಲ್ಲಿ ಝಾನ್ಸಿಗೆ ಪ್ರತಿಯಾಗಿ ಇದನ್ನು ಸಿಂಧ್ಯನಿಗೆ ಕೊಟ್ಟರು. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ದೇಶೀಯ ಸಂಸ್ಥಾನಗಳು ಭಾರತ ಒಕ್ಕೂಟದಲ್ಲಿ ವಿಲೀನಗೊಂಡಾಗ ಗ್ವಾಲಿಯರ್ ಮಧ್ಯ ಪ್ರದೇಶದಲ್ಲಿ ಸೇರಿತು. (ಕೆ.ಆರ್.)

ಗ್ವಾಲಿಯರ್ ಸಂಸ್ಥಾನ: ಈ ಸಂಸ್ಥಾನದ ಸ್ಥಾಪಕ ರಾಣೋಜಿ ಸಿಂಧ್ಯ. ಮರಾಠಾ ಪೇಷ್ವೆಗಳ ಸೇನಾಧಿಕಾರಿಯಾಗಿದ್ದ ಸಿಂಧ್ಯ 18ನೆಯ ಶತಮಾನದಲ್ಲಿ ಸ್ವತಂತ್ರವಾದ ನೀತಿ ಅನುಸರಿಸತೊಡಗಿದ. ಈತ ತೀರಿಕೊಂಡದ್ದು 1745ರಲ್ಲಿ. 1761ರಲ್ಲಿ ಪಾಣಿಪಟ್ ಯುದ್ಧದಲ್ಲಿ ಪೇಷ್ವೆಗಳು ಸೋತಾಗ ಗ್ವಾಲಿಯರ್‌ನಲ್ಲಿ ಆಳುತ್ತಿದ್ದ ಮಹಾದಾಜಿ ಸಿಂಧ್ಯ ಬಲಿಷ್ಠನಾದ. ಹೆಸರಿಗೆ ಇವನು ಪೇಷ್ವೆಗಳ ಅಧೀನನಾಗಿದ್ದರೂ ಮಧ್ಯಭಾರತ ಮತ್ತು ಸುತ್ತಮುತ್ತಣ ವಿಶಾಲವಾದ ಪ್ರದೇಶವನ್ನಾಳುತ್ತಿದ್ದ. 1785ರಲ್ಲಿ ದೆಹಲಿಯ ಸಿಂಹಾಸನದ ಮೇಲೆ ಷಾ ಆಲಮನನ್ನು ಕೂರಿಸಿದ್ದನಲ್ಲದೆ, ಅನೇಕ ರಜಪೂತ ದೊರೆಗಳಿಂದ ಕಪ್ಪಕಾಣಿಕೆ ವಸೂಲು ಮಾಡುತ್ತಿದ್ದ. 1794ರಲ್ಲಿ ಗ್ವಾಲಿಯರ್ ಸಿಂಹಾಸನವನ್ನೇರಿದ ದೌಲತ್‌ರಾವ್ ಬ್ರಿಟಿಷರಿಗೆ ಸೋತು ತನ್ನ ಸಂಸ್ಥಾನದ ಹಲವು ಭಾಗಗಳನ್ನು ಕಳೆದುಕೊಳ್ಳಬೇಕಾಯಿತು. 1857ರಲ್ಲಿ ಸಂಭವಿಸಿದ ಬಂಡಾಯದಲ್ಲಿ ಗ್ವಾಲಿಯರ್ ಸಂಸ್ಥಾನಾಧೀಶ ಬ್ರಿಟಿಷರಿಗೆ ವಿಧೇಯನಾಗಿದ್ದನಾದರೂ ಆ ನಗರದ ಕೋಟೆಯಲ್ಲಿ ಬಂಡಾಯದ ವೀರರು ಸೇರಿಕೊಂಡು ಕೊನೆಯ ತನಕ ಹೋರಾಡಿದರು.

ಗ್ವಾಲಿಯರ್ ಸಂಸ್ಥಾನದ ಆಡಳಿತ ಕೇಂದ್ರವಾಗಿದ್ದುದು ಲಷ್ಕರ್. ಚಂಬಲ್ ನದಿಯ ದಕ್ಷಿಣಕ್ಕೆ ಭೂಪಾಲ್ ಸಂಸ್ಥಾನದ ಎಲ್ಲೆಯವರೆಗಿನ ಪ್ರದೇಶ, ವಿಂಧ್ಯ ಪರ್ವತದ ಉತ್ತರಕ್ಕೆ ಕಾಲಿಸಿಂಧ್ ನದಿಯ ಉಗಮದ ಪ್ರದೇಶ, ಇದಕ್ಕೆ ಪಶ್ಚಿಮದಲ್ಲಿರುವ ಪ್ರದೇಶಗಳು, ನರ್ಮದಾ ನದಿಯ ಉತ್ತರ ಪ್ರದೇಶ –ಇವು ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ್ದ ಭಾಗಗಳು. ಪ್ರಾಚೀನ ಉಜ್ಜಯಿನಿ, ಭಿಲ್ಸಾ, ಬೆಸ್ನಗರ್, ಉದಯಗಿರಿ, ಬಾಗ್–ಇವು ಹಿಂದಿನ ಗ್ವಾಲಿಯರ್ ಸಂಸ್ಥಾನ ಪ್ರದೇಶದಲ್ಲಿವೆ. ಚಂದೇರಿ, ಮಂಡಸೋರ್, ಗೋಹುದ್ – ಈ ಸ್ಥಳಗಳಲ್ಲಿ ಅನೇಕ ಐತಿಹಾಸಿಕ ಸ್ಮಾರಕಗಳಿವೆ. ಗ್ವಾಲಿಯರ್ ನಗರದ ಬಳಿಯಲ್ಲಿರುವ ಆಂಟ್ರಿಯಲ್ಲಿ ಅಬುಲ್ ಫಜ್ಲ್ ಅಲ್ಲಾಮಿಯ ಗೋರಿಯಿದೆ. ನಳಮಹಾರಾಜನ ರಾಜಧಾನಿ ಶಿವಪುರ ಜಿಲ್ಲೆಯಲ್ಲಿತ್ತೆಂದು ಪ್ರತೀತಿ. ನಾರ್ವಾರ್ ಕೋಟೆ ಅವನದೆನ್ನಲಾಗಿದೆ. ಇದು ಮೊಗಲ್ ವಾಸ್ತುಶಿಲ್ಪಕ್ಕೆ ಉತ್ತಮ ನಿದರ್ಶನ.

ಗ್ವಾಲಿಯರ್ ಸಂಸ್ಥಾನ 1948ರ ಮೇ 28ರಂದು ಮಧ್ಯಭಾರತದಲ್ಲಿ ವಿಲೀನಗೊಂಡಿತು. 1956ರ ನವೆಂಬರ್ 1ರಂದು ಮಧ್ಯಪ್ರದೇಶದ ಭಾಗವಾಯಿತು. (ಎಚ್.ಜಿ.ಆರ್.)

**ಗ್ರಹಾಂ ಕ್ಲಾರ್ಕ್:** 1907–95. ಬ್ರಿಟಿಷ್ ಪುರಾತತ್ತ್ವಜ್ಞ. ಪೂರ್ಣ ಹೆಸರು ಸರ್ ಜಾನ್ ಗ್ರಹಾಂ ಡಗ್ಲಸ್ ಕ್ಲಾರ್ಕ್. ಲಂಡನ್ನಿನ ಬ್ರೋಮ್ಲೆಯಲ್ಲಿ 1907 ಜುಲೈ 28ರಂದು ಜನಿಸಿದ. ಕೇಂಬ್ರಿಜ್‌ನ ಮಾರ್ಲ್‌ಬರೊ ಮತ್ತು ಪೀಟರ್‌ಹೌಸ್‌ನಲ್ಲಿ ಶಿಕ್ಷಣ ಪೂರೈಸಿದ. 2ನೆಯ ಮಹಾಯುದ್ಧದ ಅವಧಿಯಲ್ಲಿ ಸ್ಕ್ವಾಡ್ರನ್ ಲೀಡರ್ ಆಗಿದ್ದ ಇವನು ತನ್ನ ವೃತ್ತಿಜೀವನವನ್ನು ರೂಪಿಸಿಕೊಂಡದ್ದು ಪೀಟರ್‌ಹೌಸ್‌ನಲ್ಲಿ. 1950ರಲ್ಲಿ ಬ್ರಿಟಿಷ್ ಅಕಾಡೆಮಿಯ ಫೆಲೊ ಆಗಿ ನೇಮಕಗೊಂಡು ಎರಡು ವರ್ಷಗಳ ಅನಂತರ ಡಿಸ್ನೆ ಪ್ರಾಧ್ಯಾಪಕ ಹುದ್ದೆಗೇರಿದ. 1956ರಲ್ಲಿ ಪುರಾತತ್ತ್ವ–ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥನಾದ. 1973–80ರವರೆಗೆ ಪೀಟರ್‌ಹೌಸ್‌ನ ಮಾಸ್ಟರ್ ಆಗಿ ಕಾರ್ಯ ನಿರ್ವಹಿಸಿದ. ಜೊತೆಗೆ ಪ್ರೊಸೀಡಿಂಗ್ಸ್ ಆಫ್ ದಿ ಪ್ರೀ ಹಿಸ್ಟಾರಿಕ್ ಸೊಸೈಟಿಯ ಸಂಪಾದಕನಾಗಿಯೂ ಅಧ್ಯಕ್ಷನಾಗಿಯೂ (1958–62) ಕೆಲಸ ಮಾಡಿದ.

ಸೂಕ್ಷ್ಮಶಿಲಾಯುಗ ಹಾಗೂ ಪುರಾ ಆರ್ಥಿಕತೆಯ (ಪೇಲಿಯೊ ಎಕಾನಮಿ) ವಿಷಯಗಳಲ್ಲಿ ಇವನಿಗೆ ಹೆಚ್ಚಿನ ಪರಿಶ್ರಮವಿತ್ತು. ಉತ್ತರ ಯುರೋಪಿನ ಸೂಕ್ಷ್ಮಶಿಲಾಯುಗದ ಬಗೆಗಿನ ಇವನ ಅಧ್ಯಯನ ಗಮನಾರ್ಹ. ಪ್ರಸಿದ್ಧ ನೆಲೆಯಾದ ಸ್ಟಾರ್‌ಕಾರ್‌ನಲ್ಲಿ 1949–51ರವರೆಗೆ ಉತ್ಖನನ ನಡೆಸಿ ಮಹತ್ತ್ವಪೂರ್ಣ ಮಾಹಿತಿಗಳನ್ನು ಬೆಳಕಿಗೆ ತಂದ. ಪ್ರೀ ಹಿಸ್ಟಾರಿಕ್ ಯುರೋಪ್: ದಿ ಎಕನಾಮಿಕ್ ಬೇಸಿಸ್ (1952) ಎಂಬ ಕೃತಿಯಲ್ಲಿ ಪ್ರಾಚೀನ ಸಮಾಜಗಳ ಆರ್ಥಿಕ ತಳಪಾಯವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾದ ಅಗತ್ಯವನ್ನು ಕುರಿತು ಚರ್ಚಿಸಿದ್ದಾನೆ. ಪ್ರಪಂಚ ಪ್ರಾಗಿತಿಹಾಸವನ್ನು ನಿರೂಪಿಸುವ ಇವನ ಅನೇಕ ಬರೆಹಗಳಿವೆ.

ಬ್ರಿಟಿಷ್ ಸರ್ಕಾರ ಇವನಿಗೆ 1971ರಲ್ಲಿ ಸಿಬಿಇ ಹಾಗೂ 1992ರಲ್ಲಿ ನೈಟ್‌ಹುಡ್ ಪದವಿಯನ್ನು ನೀಡಿ ಗೌರವಿಸಿತು. ಪ್ರಾಗಿತಿಹಾಸಕ್ಕೆ ಇವನು ನೀಡಿದ ಕೊಡುಗೆಗಾಗಿ 1990ರಲ್ಲಿ ಎರಾಸ್ಮಸ್ ಪ್ರಶಸ್ತಿ ದೊರೆಯಿತು. (ವಿ.ಎಸ್.)

**ಗ್ರೀಕ್ ವಾಸ್ತುಶಿಲ್ಪ: ನೋಡಿ–ಯುರೋಪ್**

# ಘ

**ಘಿಯಾಸುದ್ದೀನ್ ಬಲ್ಬನ್:** 1266–97. ದೆಹಲಿಯ ಸುಲ್ತಾನರಲ್ಲೊಬ್ಬ. ಇಲ್ತಮಷನ ವಂಶದ ನಾಸಿರ್–ಉದ್–ದೀನ್ ತೀರಿಕೊಂಡಾಗ ಪಟ್ಟಕ್ಕೆ ಬಂದ. ಇವನಿಗೆ ಹಿಂದೆ ದೆಹಲಿಯನ್ನಾಳಿದ ಸುಲ್ತಾನರಂತೆ ಇವನು ತುರ್ಕಿಸ್ತಾನದ ಇಲ್ಬರೀ ಪಂಗಡದವನು. ಇವನು ತರುಣನಾಗಿದ್ದಾಗ ಮಂಗೋಲರು ದಂಡಯಾತ್ರೆ ನಡೆಸಿ ಇವನನ್ನು ಹಿಡಿದು ಬಾಗ್ದಾದಿಗೆ ಕೊಂಡೊಯ್ದಿದ್ದರು. ಬಸೋರದ ಖ್ವಾಜಾ ಜಮಾಲ್–ಉದ್–ದೀನ್ ಇವನನ್ನು ಕೊಂಡು ತನ್ನ ಇತರ ಗುಲಾಮರೊಂದಿಗೆ ದೆಹಲಿಗೆ ಕರೆತಂದ (1232). ಸುಲ್ತಾನ್ ಇಲ್ತಮಿಷ ಇವನನ್ನು ಕೊಂಡ; ಇವನನ್ನು ತನ್ನ ಖಾಸ್‌ದಾರನಾಗಿ ನೇಮಿಸಿಕೊಂಡ. ಬಹಾಉದ್ದೀನ್ ಬಲ್ಬನ್ ಎಂಬುದು ಇವನ ಮೊದಲ ಹೆಸರು. ಸ್ವಸಾಮರ್ಥ್ಯದಿಂದ ಇವನು ಸುಲ್ತಾನನ ಪ್ರೀತಿಗಳಿಸಿ ಕ್ರಮಕ್ರಮವಾಗಿ ಮೇಲೇರಿದ. ಕೊನೆಗೆ ನಾಸಿರ್–ಉದ್–ದೀನನ ಪ್ರತಿನಿಧಿಯಾದ. 1249ರಲ್ಲಿ ಇವನ ಮಗಳನ್ನು ಸುಲ್ತಾನನಿಗೆ ಕೊಟ್ಟು ಮದುವೆಯಾಯಿತು. ನಾಸಿರ್–ಉದ್–ದೀನ್ ಗಂಡು ಸಂತಾನವಿಲ್ಲದೆ ತೀರಿಕೊಂಡಾಗ ಇವನು ಆಸ್ಥಾನಿಕರ ಮತ್ತು ಅಧಿಕಾರಿಗಳ ಸಮ್ಮತಿಯೊಡನೆ ಸಿಂಹಾಸನವೇರಿದ. ಆಗ ಈತ ತಳೆದ ಹೆಸರು ಘಿಯಾಸ್–ಉದ್–ದೀನ್. ನಾಸಿರ್–ಉದ್–ದೀನ್ ಇವನನ್ನೆ ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ್ದನೆಂದು ತಿಳಿದುಬರುತ್ತದೆ.

ಇಲ್ತಮಷನ ಮರಣಾನಂತರ ದೆಹಲಿಯ ಆಡಳಿತ ಹದಗೆಟ್ಟಿತ್ತು. ಖಜಾನೆ ಬರಿದಾಗಿತ್ತು. ದೆಹಲಿಯ ಸುಲ್ತಾನನ ಅಧಿಕಾರ ಮತ್ತು ಗೌರವವನ್ನು ಪುನಃ ಸ್ಥಾಪಿಸುವುದೇ ಬಲ್ಬನ್ ಕೈಗೊಂಡ ಮೊದಲನೆಯ ಕ್ರಮ. ದೆಹಲಿಯ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮತ್ತು ದೋಆಬ್‌ನಲ್ಲಿ ಶಾಂತಿ ಸ್ಥಾಪನೆ ಜರೂರಾಗಿತ್ತು. ವ್ಯಾಪಾರ ಮಾರ್ಗಗಳಲ್ಲಿ ಭದ್ರತೆ ಏರ್ಪಡಿಸ

ಬೇಕಾಗಿತ್ತು. ಈ ವಿಚಾರಗಳಿಗಲ್ಲದೆ, ಪದೇಪದೇ ಸಂಭವಿಸುತ್ತಿದ್ದ ಮಂಗೋಲರ ಧಾಳಿಗಳನ್ನು ಎದುರಿಸಿ ದಂಗೆಕೋರರನ್ನು ಅಡಗಿಸುವುದರ ಕಡೆಗೂ ಬಲ್ಬನ್ ಲಕ್ಷ್ಯ ನೀಡಿದ. ಈತ ರಾಜ್ಯದಲ್ಲಿ ಶಾಂತಿಸ್ಥಾಪನೆ ಮಾಡಲು ಕೈಗೊಂಡ ಕ್ರಮಗಳನ್ನು ಬರನೀ ಎಂಬ ಇತಿಹಾಸಕಾರ ವಿವರಿಸಿದ್ದಾನೆ.

ಬಲ್ಬನ್ ಸಿಂಹಾಸನವನ್ನೇರಿದ ಕೂಡಲೇ ಸೈನ್ಯವನ್ನು ಸುವ್ಯವಸ್ಥಿತಗೊಳಿಸಿದ. ದೆಹಲಿಯ ನೆರೆಯ ಕಾಡುಗಳಲ್ಲಿದ್ದ ಮೆವಾಟಿಗಳನ್ನು ಓಡಿಸಿದ, ಹಲವರನ್ನು ಕೊಂದ. ದೆಹಲಿಯ ಸುತ್ತಮುತ್ತಲಿನ ಅಡವಿಗಳನ್ನು ನಿರ್ನಾಮ ಮಾಡಿದ. ಮುಂದೆ ದಂಗೆಯಾಗದಂತೆ ತಡೆಗಟ್ಟಲು ಗೋಪಾಲ್‌ಗಿರ್‌ನಲ್ಲಿ ಒಂದು ಕೋಟೆಯನ್ನು ಕಟ್ಟಿಸಿದನಲ್ಲದೆ, ದೆಹಲಿಯ ಬಳಿ ಅನೇಕ ಠಾಣೆಗಳನ್ನು ಸ್ಥಾಪಿಸಿ ಅವಕ್ಕೆ ಆಫ್ಘನರನ್ನು ನೇಮಿಸಿದ. ದೋಆಬ್‌ನ ದಂಗೆಕೋರರನ್ನು ಅಡಗಿಸಿ, ಪ್ರಯಾಣ ಸುರಕ್ಷಿತವಾಗುವ ಹಾಗೆ ಮಾಡಿದ. ಕಟೆಹರ್‌ನಲ್ಲಿ ದಂಗೆಯನ್ನಡಗಿಸಿದ. ಜೂದ್ ಪರ್ವತಪ್ರದೇಶವಾಸಿಗಳನ್ನೂ ಮಣಿಸಲಾಯಿತು. ದೋಆಬ್‌ನಲ್ಲಿ ಭೂಹಿಡುವಳಿಯನ್ನು ಸುಧಾರಿಸಲು ಯತ್ನಿಸಿದನಾದರೂ ಹಿಂದಿನಿಂದ ಬಂದಿದ್ದ ದುಷ್ಪದ್ಧತಿಗಳನ್ನು ಸರಿಪಡಿಸಲಾಗಲಿಲ್ಲ.

ದೇಶದಲ್ಲಿ ಭದ್ರತೆ, ನೆಮ್ಮದಿಗಳು ನೆಲಸುವ ಹಾಗೆ ಮಾಡಿದ ಮೇಲೆ ಬಲ್ಬನನ ಗಮನ ವಾಯವ್ಯ ಗಡಿ ಪ್ರದೇಶದ ಕಡೆಗೆ ಹರಿಯಿತು. ಮಂಗೋಲರು ಘಜ್ನಿ ಮತ್ತು ಟ್ರಾನ್ಸಾಕ್ಸಿಯಾನದಲ್ಲಿ ನೆಲೆಯೂರಿ, ಬಾಗ್ದಾದನ್ನು ಹಿಡಿದುಕೊಂಡು, ಪಂಜಾಬ್ ಮತ್ತು ಸಿಂಧ್ ಪ್ರದೇಶಕ್ಕೆ ನುಗ್ಗಿದ್ದರು. ಬಲ್ಬನ್ 1271ರಲ್ಲಿ ಲಾಹೋರಿಗೆ ಸೇನೆಯೊಂದಿಗೆ ಹೋಗಿ ಅಲ್ಲಿಯ ಕೋಟೆಯನ್ನು ಸರಿಪಡಿಸಿದ. ಭಟಿಂಡ, ಭಟ್ನೇರ್, ಸಾಮಾನ ಮತ್ತು ಸುನಾಮ್‌ಗಳನ್ನಾಳುತ್ತ ಮಂಗೋಲರನ್ನು ಬಲವಾಗಿ ಎದುರಿಸುತ್ತಿದ್ದ ಷೇರ್ ಖಾನ್ ಅನಿರೀಕ್ಷಿತವಾಗಿ ತೀರಿಕೊಂಡ. ಅವನು ಬಲ್ಬನನ ದಾಯಾದಿ. ಸಂಶಯದಿಂದ ಬಲ್ಬನನೇ ಅವನನ್ನು ಕೊಲ್ಲಿಸಿದನೆಂದು ಬರನೀ ಹೇಳುತ್ತಾನೆ. ಷೇರ್ ಖಾನನ ಮರಣದಿಂದ ಮಂಗೋಲರು ತಮಗಿದ್ದ ಆತಂಕ ತಪ್ಪಿತೆಂದು ಭಾವಿಸಿ ಗಡಿ ಪ್ರದೇಶದ ಮೇಲೆ ಧಾಳಿ ಮಾಡತೊಡಗಿದರು. ಇವರನ್ನೆದುರಿಸಲು ಬಲ್ಬನ್ ತನ್ನ ಹಿರಿಯ ಮಗ ಮಹಮ್ಮದನನ್ನು ಮುಲ್ತಾನಿನ ರಾಜ್ಯಪಾಲನಾಗಿ ನೇಮಿಸಿದ. ಸಾಮಾನ ಮತ್ತು ಸುನಾಮ್‌ಗಳ ರಕ್ಷಣೆಯ ಹೊಣೆ ಎರಡನೆಯ ಮಗನಾದ ಬುಘ್ರಾಖಾನನದಾಯಿತು. 1279 ರಲ್ಲಿ ಮಂಗೋಲರು ಬಹಳ ಮುಂದುವರಿದು ಸಟ್ಲೆಜ್ ನದಿಯನ್ನು ದಾಟಿದರು. ಮಹಮ್ಮದ್ ಮತ್ತು ಬುಘ್ರಾ ಖಾನರ ಸೇನೆಗಳೂ ದೆಹಲಿಯಿಂದ ಬಂದ ಸೇನೆಯೂ ಕೂಡಿ ಹೋರಾಡಿ ಮುಂಗೋಲರನ್ನು ಪೂರ್ಣವಾಗಿ ಸೋಲಿಸಿದುವು. ಅವರ ಹಾವಳಿ ನಿಂತಿತು.

ಆ ವೇಳೆಗೆ ಬಂಗಾಲ ಪ್ರಾಂತದ ಅಧಿಪತಿಯಾಗಿದ್ದ ತುಘ್ರಿಲ್ ಖಾನ್ ದಂಗೆ ಎದ್ದ; ಅಲಪ್ತಗೀನನ ನಾಯಕತ್ವದಲ್ಲಿ ಬಲ್ಬನ್ ಕಳಿಸಿದ ಸೇನೆ ಪರಾಜಯ ಹೊಂದಿತು. ಕುಪಿತನಾದ ಸುಲ್ತಾನ ಅಲಪ್ತಗೀನನನ್ನು ದೆಹಲಿಯ ಕೋಟೆಯ ಬಾಗಿಲಿಗೆ ನೇಣುಹಾಕಿಸಿ ಕೊಲ್ಲಿಸಿದ. 1280 ರಲ್ಲಿ ತುಘ್ರಿಲ್ ಖಾನನನ್ನು ಹತ್ತಿಕ್ಕಲು ಇನ್ನೊಂದು ಸೇನೆ ಹೋಯಿತು. ಅದಕ್ಕೂ ಸೋಲು ಕಾದಿತ್ತು. ಕೊನೆಗೆ ಸುಲ್ತಾನನೇ ಮಗನಾದ ಬುಘ್ರಾ ಖಾನನೊಂದಿಗೆ ಲಖ್‌ನಾವತಿಗೆ ದಂಡೆತ್ತಿ ಹೋದ. ಪಲಾಯನ ಮಾಡಿದ ತುಘ್ರಿಲ್‌ಖಾನನನ್ನು ಸುಲ್ತಾನ ಅಟ್ಟಿಸಿಕೊಂಡು ಹೋಗಿ ಅವನನ್ನು ಕೊಂದು ಅವನ ಬಂಧುಗಳನ್ನೂ ಅನುಯಾಯಿಗಳನ್ನೂ ಘೋರವಾಗಿ ಶಿಕ್ಷಿಸಿ, ಬುಘ್ರಾ ಖಾನನನ್ನು ಪ್ರಾಂತ್ಯಾಧಿಪತಿಯಾಗಿ ನೇಮಿಸಿದ.

ಮುಂದೆ ಸುಲ್ತಾನನಿಗೆ ಮಹಾ ಆಘಾತವೊಂದು ಒದಗಿತು. ಮಂಗೋಲರು ಪಂಜಾಬಿನ ಮೇಲೆ ಮತ್ತೆ ಎರಗಿದರು (1285). ಸುಲ್ತಾನನ ಹಿರಿಯ ಮಗ ಮಹಮ್ಮದ್ ಅವರನ್ನೆದುರಿಸುತ್ತಿದ್ದಾಗ ಶತ್ರುಗಳು ಮರೆಯಿಂದ ಅವನನ್ನು ಕೊಂದರು. ಆಗ ಬಲ್ಬನನಿಗೆ ಎಂಬತ್ತು ವರ್ಷ ವಯಸ್ಸಾಗಿತ್ತು. ಪುತ್ರಶೋಕದಿಂದ ಕೊರಗಿ ನಿಧನನಾದ (1287).

ರಾಜತ್ವ ದೈವದತ್ತವೆಂದು ಬಲ್ಬನ್ ಪರಿಗಣಿಸಿದ್ದ. ತಾನು ಪಟ್ಟಕ್ಕೆ ಬಂದಿದ್ದು ದೈವೇಚ್ಛೆ ಎಂದು ಪ್ರಚಾರ ಮಾಡಿದ. ರಾಜ ದೇವರ ಮರ್ತ್ಯ ಪ್ರತಿನಿಧಿಯೆಂಬುದು ಇವನ ಭಾವನೆಯಾಗಿತ್ತು. ರಾಜತ್ವಕ್ಕೆ ಬಾಹ್ಯ ಘನತೆಯೂ ಆವಶ್ಯಕವೆಂದು ನಂಬಿದ್ದ ಈತ ಸಾಮಾನ್ಯ ಜನರೊಂದಿಗೆ ಸಂಪರ್ಕ ಬೆಳೆಸಲು ನಿರಾಕರಿಸುತ್ತಿದ್ದ. ಇವನು ಆಸ್ಥಾನದಲ್ಲಿ ಪರ್ಷಿಯನ್ ಪದ್ಧತಿಯನ್ನು ಜಾರಿಗೆ ತಂದ. ಪ್ರಜೆಗಳಿಗೆ ನಿಷ್ಪಕ್ಷಪಾತದಿಂದ ನ್ಯಾಯ ವಿತರಣೆ ಮಾಡುತ್ತಿದ್ದನೆಂದು ತಿಳಿದುಬರುತ್ತದೆ. ಆದರೆ ಪ್ರಜೆಗಳ ಮತ್ತು ಸರ್ಕಾರದ ನಡುವಿನ ವ್ಯಾಜ್ಯ ಕುರಿತ ವಿಷಯಗಳಲ್ಲಿ ಹಾಗಿರಲಿಲ್ಲ. ಈತ ತುರ್ಕಿ ಶ್ರೀಮಂತರನ್ನು ಕಠಿಣವಾಗಿ ಕಾಣುತ್ತಿದ್ದ. ಅವರಲ್ಲಿ ಬಲಿಷ್ಠ ಶ್ರೀಮಂತರನ್ನು ಕೊಲ್ಲಿಸಿದ. ನಲ್ವತ್ತು ಜನರ ಪ್ರಭಾವಿ ಗುಂಪು ನಿರ್ನಾಮವಾಯಿತು. ಸೈನ್ಯ ವ್ಯವಸ್ಥಿತವಾಯಿತು. ಸೈನ್ಯ ಕಾರ್ಯಾಚರಣೆಯಲ್ಲಿ ಬಡವರಿಗೆ ಮತ್ತು ಅಸಹಾಯಕರಿಗೆ ಯಾವ ಅಪಾಯವೂ ಆಗದಂತೆ ಬಲ್ಬನ್ ನೋಡಿಕೊಳ್ಳುತ್ತಿದ್ದ. ಸೈನ್ಯದ ಮೇಲ್ವಿಚಾರಣೆಗೆ ಪ್ರಾಮಾಣಿಕರನ್ನು ಮತ್ತು ನಿಷ್ಠೆಯುಳ್ಳವರನ್ನು ನೇಮಿಸಿದ. ಅಧಿಕಾರ ಕೇಂದ್ರೀಕೃತವಾಯಿತು. ಮುಖ್ಯ ನೇಮಕಗಳನ್ನು ಇವನೇ ನೇರವಾಗಿ ಮಾಡುತ್ತಿದ್ದ ಅಥವಾ ಅವಕ್ಕೆ ಇವನ ಒಪ್ಪಿಗೆ ಅವಶ್ಯವಾಗಿತ್ತು. ದಕ್ಷತೆ ನಿಷ್ಠೆಗಳೇ ನೇಮಕದಲ್ಲಿ ಪರಿಗಣಿಸಲಾಗುತ್ತಿದ್ದ ನಿಯಮಗಳು. ಪ್ರಾಂತಾಧಿಕಾರಿಗಳು ಆಗಾಗ್ಗೆ ವರದಿಗಳನ್ನು ಸಲ್ಲಿಸಬೇಕಾಗಿತ್ತು. ಗೂಢಚಾರ ಇಲಾಖೆ ತುಂಬ ಸಮರ್ಥವಾಗಿ ಕೆಲಸ ಮಾಡುತ್ತಿತ್ತು. ಬಲ್ಬನ್ ತನ್ನ ಗುರಿಸಾಧನೆಗಾಗಿ ಅಳವಡಿಸಿಕೊಂಡ ಆಡಳಿತ ನೀತಿಗಳು ಬ್ಲಡ್ ಅಂಡ್ ಐರನ್ ನೀತಿಗಳೆಂದು ಪ್ರಸಿದ್ಧಿಯಾಗಿವೆ. ಇಲ್ತಮಷ್ ಭಾರತದಲ್ಲಿ ಮುಸ್ಲಿಂ ಆಡಳಿತಕ್ಕೆ ರೂಪುರೇಷೆಗಳನ್ನು ಹಾಕಿಕೊಟ್ಟರೆ, ಬಲ್ಬನ್ ತನ್ನ ಆಡಳಿತ ನೀತಿಯ ಮೂಲಕ ಅದಕ್ಕೆ ಜೀವ ತುಂಬಿದ. ಬಲ್ಬನ್ ಆಡಳಿತ ಪದ್ಧತಿ ಮುಂದೆ ಖಿಲ್ಜಿ ರಾಜ್ಯವ್ಯವಸ್ಥೆಗೆ ತಳಹದಿಯಾಯಿತು.

(ಎ.ಎ.ಎ.)

**ಘೋರಿ ಸುಲ್ತಾನರು:** ಆಫ್ಘಾನಿಸ್ತಾನದಲ್ಲಿ ಹೆರಾತಿನ ಆಗ್ನೇಯದ ಘೋರ್ ಸಂಸ್ಥಾನವನ್ನಾಳುತ್ತಿದ್ದು, ಕ್ರಮೇಣ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡು ಆಳಿದ ಸುಲ್ತಾನರು. ಇವರು ಆಫ್ಘನರೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಪೂರ್ವ ಪರ್ಷಿಯನರ ಮೂಲದವರೆಂದು ಮತ್ತೆ ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವರು ಮೊದಲು ಘಜ್ನಿ ಸಾಮ್ರಾಜ್ಯಕ್ಕೆ ಅಧೀನರಾಗಿದ್ದರು. ಅದರ ಅವನತಿಯ ಅನಂತರ ಘೋರಿಗಳು ಪ್ರಬಲರಾದರು. ಇವರಿಗೂ ಘಜ್ನಿಗಳಿಗೂ ಘರ್ಷಣೆ ಆರಂಭವಾಯಿತು. ಘಜ್ನಿಯ ಬಹ್ರಾಂ ಷಾ ಎಂಬವನು ಘೋರಿ ಸುಲ್ತಾನ ಕುತ್ಬ್–ಉದ್–ದೀನ್ ಮಹಮ್ಮದನನ್ನೂ ಅವನ ತಮ್ಮ ಸೈಫ್–ಉದ್–ದೀನನನ್ನೂ ಕೊಲ್ಲಿಸಿದ. ಇವರಿಬ್ಬರ ಸೋದರ ಅಲಾ–ಉದ್–ದೀನ್ ಹುಸೇನ್ ಈ ಕೊಲೆಯ ಸೇಡು ತೀರಿಸಿಕೊಳ್ಳಲು ಘಜ್ನಿಯ ಮೇಲೆ ಏರಿಹೋಗಿ ಅದನ್ನು ಕೊಳ್ಳೆ ಹೊಡೆದು ನಗರಕ್ಕೆ ಬೆಂಕಿ ಹಚ್ಚಿದ. ಈ ಕೃತ್ಯಕ್ಕಾಗಿ ಅವನಿಗೆ ಜಹಾನ್ಸೂಜ್ ಅಥವಾ ಪ್ರಪಂಚ ಭಸ್ಮಕ ಎಂಬ ಹೆಸರು ಬಂತು. ಬಹ್ರಾಮನ ಮಗ ಖುಸ್ರಾವ್ ಷಾನನ್ನು ಘುಜ್ಜ್ ತುರ್ಕ್‌ಮನರು ಘಜ್ನಿಯಿಂದ ಹೊಡೆದೋಡಿಸಿದರು. ಇವನು ಪಂಜಾಬಿಗೆ ಓಡಿಹೋದ. ಘಜ್ನಿ ಹತ್ತು ವರ್ಷಗಳ ಕಾಲ ಘುಜ್ಜ್ ತುರ್ಕ್‌ಮನರ ವಶದಲ್ಲಿತ್ತು.

ಘೋರಿ ಸುಲ್ತಾನರು ಮತ್ತೆ ಪ್ರಬಲರಾಗಿ ಘಜ್ನಿಯನ್ನು ಹಿಡಿದರು. ಅಲಾಉದ್ದೀನ್ ಹುಸೇನನ ಮಗ ಸೈಫ್ ಉದ್ದೀನ್ ಮುಹಮ್ಮದ್ ಘುಜ್ ತುರ್ಕ್‌ಮನರೊಂದಿಗೆ ಯುದ್ಧಮಾಡುತ್ತಿದ್ದಾಗ ಸತ್ತಿದ್ದ. ಅವನ ದಾಯಾದಿಯೂ ಉತ್ತರಾಧಿಕಾರಿಯೂ ಆದ ಘಿಯಾಸ್ ಉದ್ದೀನ್ ಮುಹಮದ್ ಘುಜ್ಜ್ ತುರ್ಕ್‌ಮನರನ್ನು ಓಡಿಸಿದ. ಇವನ ತಮ್ಮನಿಗೆ ಷಿಹಾಬ್ ಉದ್ದೀನನಿಗೆ ಮುಯಿಜ್ಜ್ ಉದ್ದೀನ ಮುಹಮ್ಮದ್ ಬಿನ್ ಸಾಮ್ ಎಂಬ ಹೆಸರು ಇದೆ. ಘೋರಿ ಮುಹಮ್ಮದ್ ಎಂದು ಜನರಲ್ಲಿ ಪ್ರಸಿದ್ಧನಾದವನು ಈತನೆ.

ಘೋರಿ ಮುಹಮ್ಮದ್ 1175ರಲ್ಲಿ ಮೊದಲ ಬಾರಿಗೆ ಭಾರತದ ಮೇಲೆ ದಂಡಯಾತ್ರೆ ಕೈಗೊಂಡು ಮುಲ್ತಾನಿನ ಇಸ್ಮೇಲರನ್ನು ಸೋಲಿಸಿದ. ಉಚ್ ಕೋಟೆ ಇವನ ವಶವಾಯಿತು. 1178ರಲ್ಲಿ ಗುಜರಾತಿನ ಮೇಲೆ ನಡೆಸಿದ ಆಕ್ರಮಣ ವಿಫಲವಾಯಿತು. ಮರುವರ್ಷ ಪೆಷಾವರಿನ ಮೇಲೆ ಏರಿ ಹೋದ. ಅದು ಇವನ ವಶವಾಯಿತು. ಪಂಜಾಬಿಗೆ ದಂಡೆತ್ತಿಹೋಗಿ ಘಜ್ನವೀಡ ವಂಶದ ಕೊನೆಯ ದೊರೆಯನ್ನು ಸೋಲಿಸಿ ಸೆರೆ ಹಿಡಿದುಕೊಂಡ. ಈ ಗೆಲುವಿನಿಂದ ಭಾರತದ ಮೇಲೆ ದಂಡಯಾತ್ರೆ ಮುಂದುವರಿಸಲು ಘೋರಿ ಮುಹಮ್ಮದನಿಗೆ ಹೆಚ್ಚು ಅನುಕೂಲವಾಯಿತು. ಭಾರತದಲ್ಲಿ ಇವನು ಗಳಿಸಿದ ಜಯಗಳಲ್ಲಿ ಪೃಥ್ವೀರಾಜ್ ಚೌಹಾನನನ್ನು ಸೋಲಿಸಿದ್ದು ಮುಖ್ಯವಾದ್ದು. ಪೃಥ್ವೀರಾಜನ ವಿರುದ್ಧ ಥಾನೇಶ್ವರದ ಬಳಿಯಲ್ಲಿ ತರ್ರೈನ್‌ನಲ್ಲಿ ನಡೆದ ಕದನದಲ್ಲಿ (1190–91) ಮುಹಮ್ಮದ್ ಅನೇಕ ಸೈನಿಕರನ್ನು ಕಳೆದುಕೊಂಡು ಸೋತು ಗಾಯಗೊಂಡು ಪಲಾಯನ ಮಾಡಿದ. ಎರಡನೆಯ ತರ್ರೈನ್ ಕದನದಲ್ಲಿ (1192) ಪೃಥ್ವೀರಾಜನನ್ನು ಸೋಲಿಸಿ ಕೊಂದ. ಈ ವಿಜಯದ ಅನಂತರ ದೆಹಲಿಯನ್ನು ಗೆದ್ದು, ಅಲ್ಲೂ ಅಜ್ಮೀರದಲ್ಲೂ ಹಿಂದು ಸಾಮಂತರನ್ನು ನೇಮಿಸಿ ಅನಂತರ ಸೈನಿಕ ನೆಲೆಗಳಾದ ಹಾಂಸೀ, ಕುಹ್‌ರಾಮ್, ಸುರ್‌ಸೂತಿ ಮತ್ತು ಸಿರ್‌ಹಿಂದ್‌ಗಳನ್ನು ಹಿಡಿದು ಭದ್ರಪಡಿಸಿದ. ಭಾರತದ ಈ ಪ್ರದೇಶಗಳನ್ನು ತನ್ನ ನೆಚ್ಚಿನ ಸೇವಕ ಕುತ್ಬ್ ಉದ್ದೀನ್ ಐಬಕ್‌ನ ವಶಕ್ಕೊಪ್ಪಿಸಿ ಘಜ್ನಿಗೆ ಮರಳಿದ.

1193ರಲ್ಲಿ ಮುಹಮ್ಮದ್ 50,000 ಅಶ್ವಸೇನೆಯೊಡನೆ ಮತ್ತೆ ಭಾರತಕ್ಕೆ ಬಂದ. ಈ ಬಾರಿ ಕನೌಜಿನ ಗಾಹಡ್ವಾಲ ಮನೆತನದ ದೊರೆ ಜಯಚಂದ್ರನಿಗೆ ಸೋಲು ಕಾದಿತ್ತು. ಮುಹಮ್ಮದ್ ಅನೇಕ ದೇವಾಲಯಗಳ ಮೇಲೆ ಧಾಳಿ ಮಾಡಿದ. ಕಾಶಿಯೊಂದರಲ್ಲೇ ಸುಮಾರು ಒಂದು ಸಾವಿರ ದೇವಾಲಯಗಳು ನೆಲಸಮವಾದುವು. ಮಸೀದಿಗಳು ಎದ್ದುವು. ಜನರು ಹಿಂಸೆ ಮತ್ತು ಲೂಟಿಗಳಿಗೆ ತುತ್ತಾದರು. ಗಾಹಡ್ವಾಲರ ಬೊಕ್ಕಸ ಅವನ ಕೈಸೇರಿತು. ಅಂತ್ಯದಲ್ಲಿ ಗಾಹಡ್ವಾಲರು ತಮ್ಮ ರಾಜ್ಯದ ಕೆಲವು ಭಾಗಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಾದರೂ ಅವರ ಐಶ್ವರ್ಯ ಮುಹಮ್ಮದನದಾಯಿತು. ಈತ ಈ ಐಶ್ವರ್ಯದ ರಾಶಿಯೊಂದಿಗೆ ತನ್ನ ದೇಶಕ್ಕೆ ಮರಳಿದ ಮೇಲೆ ಎದ್ದ ದಂಗೆಗಳನ್ನು ಐಬಕ್ ಹತ್ತಿಕ್ಕಿ, ಘೋರಿ ರಾಜ್ಯವನ್ನು ಭದ್ರಪಡಿಸಿದ. ಅಲ್ಲದೆ ಸು.27 ಹಿಂದು ಮತ್ತು ಜೈನದೇವಾಲಯಗಳ ಸಾಮಗ್ರಿಯಿಂದ ದೆಹಲಿಯಲ್ಲಿ ಕುವ್ವತ್–ಉಲ್–ಇಸ್ಲಾಂ ಮಸೀದಿಯನ್ನು 1194ರಲ್ಲಿ ಕಟ್ಟಿಸಿದ. ಅಜ್ಮೀರದಲ್ಲಿ ವಿಶಾಲದೇವ ಕಟ್ಟಿಸಿದ್ದ ಸಂಸ್ಕೃತ ಪಾಠಶಾಲೆಯ ಮೇಲೂ ಎರಡು ವರ್ಷಗಳ ಅನಂತರ ಒಂದು ಮಸೀದಿ ಎದ್ದಿತು.

ಮುಹಮ್ಮದ್ ಮತ್ತೆ ಭಾರತಕ್ಕೆ ಬಂದು ಗ್ವಾಲಿಯರ್ ಕೋಟೆಗೆ ಮುತ್ತಿಗೆ ಹಾಕಿದ. ಕೋಟೆಯನ್ನು ಜಯಿಸುವುದು ಸುಲಭವಾಗಲಿಲ್ಲ. ಸಲ್ಲಕ್ಷಣರಾಜ ಮುತ್ತಿಗೆಯನ್ನು ಹಿಂತೆಗೆಯುವಂತೆ ಕೇಳಿಕೊಂಡಾಗ ಅದಕ್ಕೆ ಒಪ್ಪಿ, ಬಹಾವುದ್ದೀನ್ ತುಘ್ರಿಲ್‌ನನ್ನು ಶಾಂತಿ

ಮಾತುಕತೆಗೆ ನೇಮಿಸಿ ಹಿಂದಿರುಗಿದ. ಕಾಲಾನುಕ್ರಮದಲ್ಲಿ ಗ್ವಾಲಿಯರ್ ದೆಹಲಿ ಸುಲ್ತಾನರ ಆಡಳಿತಕ್ಕೊಳಪಟ್ಟಿತು. ಮುಹಮ್ಮದ್ ಗೆದ್ದ ಪ್ರದೇಶಗಳನ್ನು ಐಬಕ್ ಭದ್ರಪಡಿಸಿದನಲ್ಲದೆ ಅವನ ಸಾಮ್ರಾಜ್ಯಕ್ಕೆ ಹೊಸ ಪ್ರದೇಶಗಳನ್ನೂ ಸೇರಿಸಿದ.

ಸ್ವದೇಶದಲ್ಲಿ ಘೋರಿ ಸಾಮ್ರಾಜ್ಯ ವಿಸ್ತರಣೆಗೆ ಖಾರಜ್ ಮಿಯನ್ ಮನೆತನ ಅಡ್ಡಿಯಾಗಿತ್ತು. ಅದರ ನಾಯಕ ತಕಷ್ ಸತ್ತ ಅನಂತರ ಉಂಟಾದ ಯಾದವೀ ಕಲಹದಲ್ಲಿ ಘೋರಿಗಳು ಮುಖ್ಯ ನಗರಗಳಾದ ನಿಷಾಪರ್, ತುಸ್, ಮೆರ್ವ್‌ಗಳನ್ನು 1201ರಲ್ಲಿ ವಶಪಡಿಸಿಕೊಂಡರು. ತಕಷನ ಅನಂತರ ಅಲಾಉದ್ದೀನ್ ಪಟ್ಟಕ್ಕೆ ಬಂದ. ಅವನು ಹೆರಾತ್‌ವರೆಗಿನ ಪ್ರದೇಶಗಳನ್ನು ಘೋರಿಗಳಿಂದ ವಶಪಡಿಸಿಕೊಂಡ.

ಮುಹಮ್ಮದನ ಅಣ್ಣ ಘಿಯಾಸ್ ಉದ್ದೀನ್ 1203ರಲ್ಲಿ ತೀರಿಕೊಂಡಾಗ ಘೋರಿ ಮುಹಮ್ಮದ್ ಘಜ್ನಿ, ಘೋರ್ ಮತ್ತು ದೆಹಲಿಗಳ ಸುಲ್ತಾನನೆಂದು ಘೋಷಿಸಿಕೊಂಡ. ಖ್ವಾರಜ್ ಮಿಯನ್ ಮನೆತನದವರೊಡನೆ ಹಗೆತನ ಮುಂದುವರಿಯಿತು. ಅವರಿಂದ ಮುಹಮ್ಮದ್ 1205ರಲ್ಲಿ ಅನುಭವಿಸಿದ ಸೋಲು ಅವನ ಗೌರವಕ್ಕೆ ಭಾರಿ ಪೆಟ್ಟು ಕೊಟ್ಟಿತು. ಖೊಕಾರರು ಮತ್ತು ಭಾರತದ ಇತರ ಗಿರಿಜನರು ಬಂಡೆದ್ದು ಮುಲ್ತಾನಿನ ರಾಜ್ಯಪಾಲನನ್ನು ಸೋಲಿಸಿದರು. ಅವರು ಲಾಹೋರನ್ನು ಲೂಟಿ ಮಾಡಿದರಲ್ಲದೆ ಲಾಹೋರ್-ಘಜ್ನಿ ರಸ್ತೆಯನ್ನು ಮುಚ್ಚಿದರು. ಇವರನ್ನು ಅಡಗಿಸುವುದು ಐಬಕನಿಗೆ ಸಾಧ್ಯವಾಗದಿದ್ದುದರಿಂದ, ಮುಹಮ್ಮದನೇ ಘಜ್ನಿಯಿಂದ ಬಂದು, ಇವರನ್ನು ಸೋಲಿಸಿದ. ಅನಂತರ ಲಾಹೋರಿಗೆ ತೆರಳಿ ಅಲ್ಲಿಯ ಪರಿಸ್ಥಿತಿಯನ್ನು ತಹಬಂದಿಗೆ ತಂದ. ಘಜ್ನಿಗೆ ಹಿಂದಿರುಗುತ್ತಿದ್ದಾಗ ದಾರಿಯಲ್ಲಿ ಮುಹಮ್ಮದ್ ಕೊಲೆಗೆ ಈಡಾದ (1206). ಅವನ ಅನಂತರ ಘೋರಿ ಸಾಮ್ರಾಜ್ಯ ಬಹಳ ಕಾಲ ಉಳಿಯಲಿಲ್ಲ. ಘೋರಿ ಮುಹಮ್ಮದನಿಗೆ ಗಂಡುಮಕ್ಕಳಿರಲಿಲ್ಲ. ಇವನ ಅನಂತರ ಘೋರಿ ರಾಜ್ಯದ ಬಹುಭಾಗ ಖ್ವಾರಜ್ ಮಿಯನ್ ಮನೆತನದ ಒಡೆತನಕ್ಕೆ ಬಂದಿತು. ಸ್ವಲ್ಪ ಕಾಲದವರೆಗೆ ಘಜ್ನಿಯನ್ನು ಕಿರ್ಮಾನಿನ ರಾಜ್ಯಪಾಲ ತಾಜ್ ಉದ್ದೀನ್ ಯಿಲ್ದಿಜ್ ಆಳುತ್ತಿದ್ದ. ಅವನು ಪದಚ್ಯುತನಾದ ಮೇಲೆ (1215) ಮಧ್ಯ ಏಷ್ಯದಲ್ಲಿ ಘೋರಿ ರಾಜ್ಯ ಕೊನೆಗೊಂಡಿತು. ಭಾರತದಲ್ಲಿ ಘೋರಿ ರಾಜ್ಯಕ್ಕೆ ಐಬಕ್ ಉತ್ತರಾಧಿಕಾರಿಯಾದ. (ಎಚ್.ವಿ.ಎಸ್.ಎಂ.)

**ಘೋಷ್, ಅಮಲಾನಂದ:** 1910-81. ಪ್ರಸಿದ್ಧ ಪುರಾತತ್ತ್ವವಿದ ಹಾಗೂ ದಕ್ಷ ಆಡಳಿತಗಾರ. ಉತ್ತರಪ್ರದೇಶ ವಾರಾಣಸಿಯಲ್ಲಿ 1910 ಮಾರ್ಚ್ 3ರಂದು ಜನಿಸಿದರು. ಉಪೇಂದ್ರನಾಥ ಘೋಷ್ ಮತ್ತು ಬಿಜೋಯ್ ಭಾಷಿಣೀ ದಂಪತಿಗಳ ಪುತ್ರರಾದ ಇವರು ಅಲಹಾಬಾದ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಸ್ನಾತಕೋತ್ತರ ಪದವೀಧರರು (1931). ಪ್ರಕಾಂಡ ಪಂಡಿತರಾದ ಕ್ಷೇತ್ರೇಶ ಚಟ್ಟೋಪಾಧ್ಯಾಯರ ಮೇಧಾವಿ ಶಿಷ್ಯರಲ್ಲೊಬ್ಬರು. ಆಧುನಿಕ ವೈಜ್ಞಾನಿಕ ಪುರಾತತ್ತ್ವೀಯ ಅಧ್ಯಯನಗಳಿಗೆ ಸಂಬಂಧಪಟ್ಟಂತೆ ಲಂಡನ್ನಿನ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿಯಲ್ಲಿ ತರಬೇತಿ ಪಡೆದ ಬೆರಳೆಣಿಕೆಯ ಭಾರತೀಯರಲ್ಲಿ ಒಬ್ಬರು (1948-49).

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯಲ್ಲಿ ಸಹಾಯಕ ಅಧೀಕ್ಷಕರಾಗಿ (1937) ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು ಅನುಕ್ರಮವಾಗಿ ಬಡ್ತಿ ಪಡೆದು ಅತ್ಯುನ್ನತ ಹುದ್ದೆಯಾದ ಮಹಾ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿ ವಿಶ್ರಾಂತರಾದರು (1968).

ಸಂಸ್ಕೃತ ಸಾಹಿತ್ಯ, ಇತಿಹಾಸ, ಶಾಸನ ಹಾಗೂ ನಾಣ್ಯಶಾಸ್ತ್ರಗಳಲ್ಲಿ ಪಾರಂಪರಿಕ ಪಾಂಡಿತ್ಯ ಮತ್ತು ಪುರಾತತ್ತ್ವಶಾಸ್ತ್ರದಲ್ಲಿನ ಆಧುನಿಕ ವೈಜ್ಞಾನಿಕ ವಿಧಾನಗಳಲ್ಲಿ ಪರಿಣತಿಯನ್ನೂ ಸಮನ್ವಯವನ್ನೂ ಸಾಧಿಸಿದ್ದ ಇವರು ಸ್ವಾತಂತ್ರ್ಯೋತ್ತರ ಭಾರತದ ಪುರಾತತ್ತ್ವೀಯ ಅಧ್ಯಯನಗಳಿಗೆ ಹೊಸ ಆಯಾಮವನ್ನು ನೀಡಿದವರು. ಘಗ್ಗರ್ ಕಣಿವೆಯಲ್ಲಿ ಸಿಂಧೂ ಸಂಸ್ಕೃತಿಯ ನೆಲೆಗಳ ವಿಶೇಷ ಪರಿಶೋಧನೆಯನ್ನು ಕೈಗೊಂಡು, ಸರಸ್ವತಿ-ದೃಷದ್ವತಿ ಬಯಲುಗಳಲ್ಲಿ ಇವರು ಬೆಳಕಿಗೆ ತಂದ ಹಲವು ನೆಲೆಗಳು ಭಾರತದ ಪೂರ್ವ ಭಾಗದಲ್ಲಿ ಸಿಂಧೂ ಸಂಸ್ಕೃತಿಯ ಪ್ರಸರಣವನ್ನು ನಿರ್ಣಾಯಕವಾಗಿ ವಿಸ್ತರಿಸಿದುವು. ಅತ್ಯಂತ ಕ್ಲಿಷ್ಟ ಕಾಲದಲ್ಲಿ ಇಲಾಖೆಯ ಅತ್ಯುನ್ನತ ಪದವಿಯಲ್ಲಿದ್ದ ಇವರ ದೂರದೃಷ್ಟಿ, ದಕ್ಷ ಆಡಳಿತದಿಂದಾಗಿ ಭೋಪಾಲ್, ಚೆನ್ನೈಗಳಲ್ಲಿ ದೇವಾಲಯ ಸರ್ವೇಕ್ಷಣ ಯೋಜನೆಯ ಕಾರ್ಯಾಲಯಗಳು; ನಾಗಪುರದಲ್ಲಿ ಪ್ರಾಗಿತಿಹಾಸ ವಿಭಾಗ ಹಾಗೂ ಅರಬ್ಬಿ ಮತ್ತು ಪಾರ್ಸಿ ಶಾಸನಾಧ್ಯಯನಗಳ ವಿಭಾಗಗಳ ಕಾರ್ಯಾಲಯಗಳು ಪ್ರಾರಂಭವಾಗಿ, ಇಲಾಖೆಯ ಸರ್ವತೋಮುಖ ಅಭಿವೃದ್ಧಿ ಹಾಗೂ ಸಂಶೋಧನ ಕಾರ್ಯಗಳ ವಿಸ್ತರಣೆಗೆ ಕಾರಣವಾಯಿತು.

ಇವರ ವಿದ್ವತ್ತನ್ನು ಪರಿಗಣಿಸಿದ ವಿಶ್ವಸಂಸ್ಥೆ ಖತಾರ್(1968), ಬಹರೇನ್(1970), ಸೌದಿ ಅರೇಬಿಯ (1968-69) ಹಾಗೂ ಯೆಮನ್ ಅರಬ್ ಗಣರಾಜ್ಯಗಳಿಗೆ (1970)

ಇವರನ್ನು ಅಧಿಕೃತ ಪುರಾತತ್ತ್ವ ಸಲಹೆಗಾರರನ್ನಾಗಿ ನಿಯೋಜಿಸಿತು. ಸಿಮ್ಲಾದ ಭಾರತೀಯ ಉನ್ನತಾಧ್ಯಯನ ಸಂಸ್ಥೆಯ (1969-70) ಫೆಲೋ ಆಗಿಯೂ ಜಕಾರ್ತ, ಇಂಡೊನೇಷ್ಯ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗ ಮತ್ತು ನವದೆಹಲಿಯ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತುಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಇವರು ಕಾರ್ಯನಿರ್ವಹಿಸಿದರು. ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಆಂಟಿಕ್ವಿಟೀಸ್, ಬರ್ಲಿನ್‌ನ ಜರ್ಮನ್ ಆರ್ಕಿಯಲಾಜಿಕಲ್ ಇನ್‌ಸ್ಟಿಟ್ಯೂಟ್ ಸಂಸ್ಥೆಗಳ ಗೌರವ ಸದಸ್ಯರೂ ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯಗಳ ಸಂಸ್ಥೆಯ ರಾಷ್ಟ್ರಸಮಿತಿಯ ಸಲಹೆಗಾರರೂ ಆಗಿ ಇವರ ಕೊಡುಗೆ ಮಹತ್ತ್ವದ್ದು.

ನಾಲಂದ (1938), ರಾಜಗೀರ್ (1938) ಮತ್ತು ಇತಿಹಾಸಾರಂಭ ಕಾಲದ ಜನಪದ/ನಗರ (1973) ಗಳನ್ನು ಕುರಿತಂತೆ ಮೂರು ಮುಖ್ಯ ಗ್ರಂಥಗಳನ್ನು ರಚಿಸಿದ್ದಾರೆ. ಜೊತೆಗೆ ಪುರಾತತ್ತ್ವ, ಇತಿಹಾಸ, ಸಂಸ್ಕೃತಿ, ಕಲೆ, ಶಾಸನ, ನಾಣ್ಯಶಾಸ್ತ್ರ, ಸಂಸ್ಕೃತ ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತಂತೆ 75ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ದೇಶವಿದೇಶಗಳ ವಿದ್ವತ್ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಇವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ ಎರಡು ನಿಯತಕಾಲಿಕೆಗಳೂ ಉದ್ಗ್ರಂಥಗಳೂ ಮಹತ್ತ್ವದ್ದೆನಿಸಿವೆ. ಏನ್ಷಿಯೆಂಟ್ ಇಂಡಿಯದ 14 ಸಂಚಿಕೆಗಳಲ್ಲಿ (ಸಂ.8-21) ಸಂಗ್ರಹವಾಗಿರುವ ಆಯಾ ಕಾಲದ ಪ್ರಮುಖ ಶೋಧ, ಉತ್ಖನನ ವರದಿ, ಸ್ಮಾರಕ ಸಂರಕ್ಷಣೆಗಳನ್ನು ಕುರಿತ ಲೇಖನಗಳೂ ತಾಂತ್ರಿಕ ಟಿಪ್ಪಣಿಗಳೂ ಅತ್ಯಂತ ಮೌಲಿಕವಾಗಿವೆ. ಇವರೇ ಪ್ರಾರಂಭಿಸಿದ (1953-54) 'ಇಂಡಿಯನ್ ಆರ್ಕಿಯಾಲಜಿ: ಎ ರಿವ್ಯೂ' ವಾರ್ಷಿಕ ಸಂಚಿಕೆಗಳು ಪುರಾತತ್ತ್ವೀಯ ಸಂಶೋಧನೆ, ಸಂರಕ್ಷಣೆಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳ ಬಗೆಗೆ ಸಮಗ್ರ ಮಾಹಿತಿಯನ್ನು ಒಳಗೊಂಡಿದ್ದು, ಇಂದಿಗೂ ಇಲಾಖೆಯ ಅಧಿಕೃತ ಮುಖವಾಣಿಯಾಗಿ ಮುಂದುವರೆದಿದೆ. ಉದ್ಗ್ರಂಥಗಳಾದ ಭಾರತೀಯ ಪುರಾತತ್ತ್ವ ವಿಶ್ವಕೋಶ (2 ಸಂಪುಟಗಳು, 1989) ಮತ್ತು ಜೈನ ಕಲೆ ಮತ್ತು ವಾಸ್ತು ಶಿಲ್ಪ (3 ಸಂಪುಟಗಳು, 1984-85) ಮೇರುಕೃತಿಗಳೆನಿಸಿವೆ.

ಪುರಾತತ್ತ್ವೀಯ ಅಧ್ಯಯನಗಳ ಪುರೋಭಿವೃದ್ಧಿಗೆ ಇವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಿತು (1962). ಕೋಲ್ಕೊತದ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಸ್.ಸಿ. ಚಕ್ರವರ್ತಿ ಸ್ವರ್ಣಪದಕವನ್ನು ನೀಡಿ ಗೌರವಿಸಿತು (1978). ಇವರು 1981 ಆಗಸ್ಟ್ 25ರಂದು ನಿಧನರಾದರು. (ಎಂ.ವಿ.ವಿ.)

## ಚ

**ಚಂಡೀಗಡ:** ಹರಿಯಾಣ ಮತ್ತು ಪಂಜಾಬ್ ರಾಜ್ಯಗಳ ಆಡಳಿತ ಕೇಂದ್ರನಗರ ಹಾಗೂ ಕೇಂದ್ರಾಡಳಿತ ಪ್ರದೇಶ. ಚಂಡೀಗಡ ರಾಜಧಾನಿ.

ವ್ಯಾಪಾರಿ ಮಳಿಗೆಗಳ ಸಂಕೀರ್ಣದ ನಿರ್ಮಾಣಕ್ಕಾಗಿ 1969ರಲ್ಲಿ 17ಸಿ ವೃತ್ತಖಂಡದಲ್ಲಿ ಪಾಯ ತೋಡುತ್ತಿದ್ದ ಸಂದರ್ಭದಲ್ಲಿ ಸು.1 ರಿಂದ 2 ಮೀ ಆಳದಲ್ಲಿ ನೆರೆಮಣ್ಣಿನ ಅಡಿಯಲ್ಲಿ ಹರಪ್ಪ ಸಂಸ್ಕೃತಿಯ ಸಮಾಧಿ ನೆಲೆ ಬೆಳಕಿಗೆ ಬಂದಿತು. ಈ ನೆಲೆಯಲ್ಲಿ ಪಂಜಾಬ್ ವಿಶ್ವವಿದ್ಯಾಲಯ ಉತ್ಖನನವನ್ನು ಕೈಗೊಂಡು, ಒಂದು ಸ್ಮಶಾನವನ್ನು ಗುರುತಿಸಿದೆ. ಇದರ ಮರು ವರ್ಷದಲ್ಲಿ ಈ ನೆಲೆಯ ಸು.100 ಮೀ ಪೂರ್ವಕ್ಕೆ ನೆಲಮಾಳಿಗೆಯ ಕಟ್ಟಡವೊಂದರ ನಿರ್ಮಾಣಕ್ಕಾಗಿ ಭೂಮಿಯನ್ನು ಅಗೆಯುವ ಸಮಯದಲ್ಲಿ ಹರಪ್ಪ ಕಾಲದ ಮಣ್ಣಿನ ಪಾತ್ರೆಗಳು, ಬೀಸುವ ಕಲ್ಲು, ಕುಟ್ಟಣಿ ಮತ್ತು ಕೆಲವು ದಿನಬಳಕೆಯ ಅವಶೇಷಗಳು ದೊರೆತವು. ಹರಪ್ಪ, ರೋಪರ್ ಮತ್ತು ಕಾಲಿಬಂಗನ್ ಮತ್ತು ಇತರ ನಿವೇಶನಗಳಲ್ಲಿ ವಾಸಸ್ಥಳಗಳು ಸ್ಮಶಾನದ ಪೂರ್ವಕ್ಕಿರುವುದರಿಂದ ಇಲ್ಲಿಯೂ ಸಮಾಧಿ ನೆಲೆಯ ಪಶ್ಚಿಮಕ್ಕೆ ವಾಸ್ತವ್ಯ ನೆಲೆ ದೊರೆಯಬಹುದೆಂಬ ಉದ್ದೇಶದಿಂದ ಏಳು ಗುಂಡಿಗಳನ್ನು ಕ್ರಮಬದ್ಧವಾಗಿ ಅಗೆಯಲಾಯಿತು. ವಸತಿ ಪದರಗಳು ಕಂಡುಬರದಿದ್ದರೂ ಅವಶೇಷಗಳು ಬೆಳಕಿಗೆ ಬಂದಿವೆ. ಕಂದುಬಣ್ಣದ ಮಣ್ಪಾತ್ರೆಗಳ ಚೂರುಗಳು ಮತ್ತು ನೀರಿನ ಹರಿವಿನಿಂದ ಸವೆದ ಉರುಟು ಕಲ್ಲುಗಳು ಇದ್ದುವು.

ಇಲ್ಲಿ ದೊರೆತ ಮಣ್ಪಾತ್ರೆಗಳು ಮೂರು ಸಾಂಸ್ಕೃತಿಕ ವರ್ಗಗಳನ್ನು ಪ್ರತಿನಿಧಿಸುತ್ತವೆ. ಇವು: ಸೋಥಿ / ಕಾಲಿಬಂಗನ್-I, ಹರಪ್ಪ ಮತ್ತು ಬಾರ. ಇಲ್ಲಿ ದೊರೆತ ಮಣ್ಪಾತ್ರೆಗಳು ಹರಪ್ಪ ಮಾದರಿಯ ಮುಕ್ಕಾಲಿನ ಬಟ್ಟಲು, ಎಕ್ಕಾಲಿನ ತಟ್ಟೆ, ಚುಳ್ಳಿಯ ಪಾನಪಾತ್ರೆ, ಗುಂಡಿಯಾಕಾರದ ತಳವುಳ್ಳ ಪಾನಪಾತ್ರೆ, ಬಟ್ಟಲುಗಳು, ದೊಡ್ಡ ಬಟ್ಟಲುಗಳು, ಸಣ್ಣ ಸಣ್ಣ

ಧಾನ್ಯ ಪಾತ್ರೆ, ಲಾಳಿಕೆಯಾಕಾರದ ಪಾತ್ರೆ. ಎರಡು ಮಣ್ಪಾತ್ರೆ ಚೂರುಗಳ ಮೇಲೆ ಹರಪ್ಪ ನಮೂನೆಯ ಅಕ್ಷರಗಳು ಕಂಡುಬಂದಿವೆ. ಹಿಡಿಯಿರುವ ಸಣ್ಣಗಾತ್ರದ ಕುಂಭ, ಹಿಡಿಕೆ ಮುಚ್ಚಳ ಹರಪ್ಪ ಸಂಸ್ಕೃತಿಯ ಮಾದರಿಗಳನ್ನು ಹೋಲುತ್ತವೆ. ತ್ರಿಕೋನ, ತಿರುವು, ಎಲೆ, ಕೊಂಬೆ, ಸುರುಳಿ ಮುಂತಾದ ಗಿಡಗಳ ವರ್ಣಚಿತ್ರಗಳು ಅಥವಾ ನಾರುಬಟ್ಟೆಯ ಲಕ್ಷಣವುಳ್ಳ ಬಣ್ಣದ ಅಲಂಕಾರಗಳನ್ನು ಸೋಥಿ ಮಣ್ಪಾತ್ರೆಗಳಲ್ಲಿ ಕಾಣಬಹುದು. ಈ ನೆಲೆಯ ವಾಯವ್ಯ ಭಾಗದಲ್ಲಿ ನವಶಿಲಾಯುಗದ ಜನರು ಉಪಯೋಗಿಸುತ್ತಿದ್ದ ಮಣ್ಪಾತ್ರೆಗಳು ಮತ್ತು ಹೊಳಪಿನ ಕಂದು ಬಣ್ಣದ ಮಣ್ಪಾತ್ರೆಗಳ ಕೆಲವು ಚೂರುಗಳು ದೊರೆತಿವೆ. ಪ್ರಾಣಿ ಮೂಳೆಯ ಉಪಕರಣ ಬೂರ್ಜಹೋಮ್‌ನಲ್ಲಿ ದೊರೆತಿರುವ ಮೂಳೆ ಉಪಕರಣವನ್ನು ನೆನಪಿಗೆ ತರುತ್ತವೆ. ಗೂಳಿಯ ಗೊಂಬೆ, ಮಣಿ, ಆಟದ ಎತ್ತಿನ ಗಾಡಿ, ಬಳೆ, ಮಣ್ಣಿನಲ್ಲಿ ಸಿದ್ಧಪಡಿಸಿದ ಚಕ್ರ, ಪಿಂಗಾಣಿಯ ಮತ್ತು ತಾಮ್ರದ ಬಳೆ, ಕಣಕ ಮತ್ತು ಅಗೇಟಿನ ಮಣಿ, ಬೀಸುವ ಕಲ್ಲು, ಕುಟ್ಟಣಿ, ಎಸೆಯುವ ಗುಂಡುಗಳು ಇಲ್ಲಿ ದೊರೆತ ಇತರ ಅವಶೇಷಗಳು. (ಎಸ್.ಸಿ.ಎಸ್.)

**ಚಂದೇಲರು:** 9ನೆಯ ಶತಮಾನದಲ್ಲಿ ಪ್ರತೀಹಾರ ಚಕ್ರಾಧಿಪತ್ಯದ ಪತನದ ಅನಂತರ ಉತ್ತರ ಭಾರತದ ಮಧ್ಯಭಾಗದಲ್ಲಿ ಪ್ರಸಿದ್ಧಿ ಪಡೆದ ಬುಂದೇಲಖಂಡದ ಒಂದು ರಾಜಮನೆತನ. ತಾವು ಚಂದ್ರವಂಶಕ್ಕೆ ಸೇರಿದ ಋಷಿ ಚಂದ್ರಾತ್ರೇಯನಿಂದ ಜನಿಸಿದವರೆಂದು ಹೇಳಿಕೊಂಡಿದ್ದಾರೆ. 36 ಪ್ರಸಿದ್ಧ ರಾಜಪುತ್ರ ವಂಶಗಳಲ್ಲಿ ಚಂದೇಲರದು ಒಂದು–ಎಂದು ಅವರ ಆಸ್ಥಾನ ಕವಿಗಳು ಹೇಳಿದ್ದಾರೆ. ಅವರ ಅತಿಪ್ರಾಚೀನವೆನಿಸಿದ, 954ರ ಶಾಸನದಲ್ಲಿ ಆ ಅರಸರು ಚಂದ್ರಾತ್ರೇಯ ವಂಶದವರೆಂದು ಹೇಳಿದೆ. 1098ರ ಕೀರ್ತಿವರ್ಮನ ದೇವಗಡದ ಶಾಸನದಲ್ಲಿ ಚಂದೆಲ್ಲ ಎಂಬ ಹೆಸರೂ ಕಾಣಸಿಗುತ್ತದೆ. ಚಂದೇಲರು ಆಳುತ್ತಿದ್ದ ಪ್ರದೇಶವನ್ನು ಜೇಜಭುಕ್ತಿ, ಜೇಜಕಭುಕ್ತಿ, ಜೇಜಕಭುಕ್ತಿ ಮಂಡಲ ಎಂದು ಶಾಸನಗಳಲ್ಲಿ ಹೆಸರಿಸಿವೆ. ಇದು ಅನಂತರ ಬುಂದೇಲ ಖಂಡವೆನಿಸಿಕೊಂಡಿತು. 10–13ನೆಯ ಶತಮಾನದವರೆಗೆ ಇವರ ರಾಜ್ಯ ಖಜುರಾಹೊ, ಕೌಲಂಜರ, ಮಹೊಬಾ ಹಾಗೂ ಅಜಯ್‌ಗಡಗಳನ್ನೊಳಗೊಂಡಿತ್ತು.

9ನೆಯ ಶತಮಾನದ ಆದಿಭಾಗದಲ್ಲಿ ನನ್ನುಕ ಚಂದೇಲನೆಂಬವನು ಖಜರಾಹೊ ಎಂಬಲ್ಲಿ ಚಂದೇಲರಾಜ್ಯದ ಸ್ಥಾಪನೆ ಮಾಡಿದ. ಬಹುಶಃ ಚಂದ್ರವರ್ಮನೆಂಬ ಬಿರುದನ್ನು ಹೊಂದಿದ್ದ ಈತ ಪ್ರತೀಹಾರ ನಾಗಭಟನ ಸಾಮಂತನಾಗಿ ಆಳಿದ ಈತನ ಅನಂತರ ಅಧಿಕಾರಕ್ಕೆ ಬಂದ ವಾಕ್ಪತಿ, ಆತನ ಇಬ್ಬರು ಮಕ್ಕಳಾದ ಜಯಶಕ್ತಿ ಮತ್ತು ವಿಜಯಶಕ್ತಿ, ವಿಜಯಶಕ್ತಿಯ ಮಗ ರಾಹಿಲ–ಇವರು ಪ್ರತೀಹಾರರಿಗೆ ಸಾಮಂತರಾಗಿ ಆಳಿದರು.

ರಾಹಿಲನ ಮಗ ಹರ್ಷನ (900–25) ಕಾಲದಲ್ಲಿ ಚಂದೇಲ ರಾಜ್ಯಶಕ್ತಿ ಬೆಳೆಯಿತು. ರಾಷ್ಟ್ರಕೂಟರ 3ನೆಯ ಇಂದ್ರನಿಂದ ಪದಚ್ಯುತಗೊಳಿಸಲ್ಪಟ್ಟ ಪ್ರತೀಹಾರ ಮಹೀಪಾಲ ತನ್ನ ಸಿಂಹಾಸನವನ್ನು ಮರಳಿ ಪಡೆಯಲು ಹರ್ಷ ಸಹಾಯ ಮಾಡಿದ. ಹರ್ಷನ ಮಗನಾದ ಯಶೋವರ್ಮನ ಕಾಲದಲ್ಲಿ ಪ್ರತೀಹಾರರು ತಮ್ಮೆಲ್ಲ ಶಕ್ತಿಯನ್ನೂ ಕಳೆದು ಕೊಂಡು ಹೆಸರಿಗೆ ಮಾತ್ರ ಅರಸರಾಗಿ ಉಳಿದಿದ್ದರು. ಎಂತಲೇ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನಿಂದ ಇನ್ನೊಮ್ಮೆ ಪ್ರತೀಹಾರ ರಾಜ್ಯವನ್ನು ಹಿಂದಕ್ಕೆ ಪಡೆಯುವ ಸಂದರ್ಭದಲ್ಲಿ ಯಶೋವರ್ಮ ಕಾಲಂಜರ ಮುಂತಾದ ಕೋಟೆಗಳನ್ನು ತನ್ನ ಆಳಿಕೆಗೆ ಒಳಪಡಿಸಿಕೊಂಡ. ಇದಲ್ಲದೆ ಈತ ಕಳಚುರಿ ವಂಶದ ಯುವರಾಜದೇವನನ್ನು, ಪರಮಾರ ಮನೆತನದ ಸೀಯಕನನ್ನು ಮತ್ತು ಬಂಗಾಲದ ಪಾಲಮನೆತನದ ವಿಗ್ರಹಪಾಲನನ್ನು ಸೋಲಿಸಿ ಕೀರ್ತಿಗಳಿಸಿದ. ಯಶೋವರ್ಮ ದಕ್ಷ ಸೇನಾಪತಿಯಾಗಿದ್ದಂತೆ ದೈವಭಕ್ತನೂ ಆಗಿದ್ದ. ಇವನ ಕಾಲದಲ್ಲಿ ಕಟ್ಟಲು ಆರಂಭಿಸಲಾದ ಖಜುರಾಹೊದ ಚತುರ್ಭುಜ ದೇವಾಲಯ ಧಂಗನ ಆಳಿಕೆಯ ಕಾಲದಲ್ಲಿ ಪೂರ್ಣ ಗೊಂಡಿತು.

ಯಶೋವರ್ಮನ ಮಗನಾದ ಧಂಗ (950–1008) ಚಂದೇಲರ ಪ್ರಸಿದ್ಧ ಅರಸರಲ್ಲಿ ಒಬ್ಬನೆಂದು ಎಣಿಸಲ್ಪಟ್ಟಿದ್ದಾನೆ. ಪ್ರತೀಹಾರ ಅರಸರೊಡನೆ ಎಲ್ಲ ಸಂಬಂಧಗಳನ್ನೂ ಕಡಿದುಕೊಂಡು ಸ್ವತಂತ್ರನಾಗಿ ಆಳಿದ ಈತ ಕಾಲಂಜರ ಕೋಟೆಯನ್ನಲ್ಲದೆ, ಗೋಪಗಿರಿ (ಗ್ವಾಲಿಯರ್), ಕೌಶಿಕ (ವಾರಾಣಸಿ) ಹಾಗೂ ಪ್ರಯಾಗಗಳನ್ನು ತನ್ನ ಅಧೀನಕ್ಕೆ ತಂದು ಕೊಂಡಿದ್ದ. ಇದರಿಂದ ಉತ್ತರಭಾರತದಲ್ಲಿ ಪ್ರತೀಹಾರರು ಪಡೆದಿದ್ದ ಸಾರ್ವಭೌಮತ್ವ ಈಗ ಚಂದೇಲರದಾಯಿತು. ಅಂಗ (ಉತ್ತರಬಂಗಾಲ), ರಾಧ (ಬಂಗಾಲದ ಬುರ್ದವಾನ್ ಹಾಗೂ ಬೀರ್‌ಭಮ್ ಜಿಲ್ಲೆಗಳು), ಕೋಸಲ, ಆಂಧ್ರ, ಕುಂತಲ ಮತ್ತು ಸಿಂಹಲ ದೇಶಾಧೀಶ್ವರ ರೊಡನೆ ಇವನು ಹೋರಾಡಿದನೆಂದು ಖಜುರಾಹೊ ಶಾಸನವೊಂದು ತಿಳಿಸುತ್ತದೆಯಾದರೂ ಅದರಲ್ಲಿ ಸ್ವಲ್ಪ ಮಟ್ಟಿನ ಉತ್ಪ್ರೇಕ್ಷೆ ಇದೆ. ಅದರಲ್ಲಿಯೂ ಆಂಧ್ರ, ಸಿಂಹಲ ಹಾಗೂ ಕುಂತಲ ದೇಶದ ಅರಸರೊಡನೆ ಈತ ಕದನಹೂಡಿದನೆಂಬ ಹೇಳಿಕೆ ಸಂದೇಹಾಸ್ಪದವಾಗಿದೆ. ಭಟಿಂಡದ ಷಾಹಿ ಅರಸರಾದ ಜಯಪಾಲ ಹಾಗೂ ಆನಂದ ಪಾಲರು ಕ್ರಮವಾಗಿ ಸುಲ್ತಾನ ಸಬಕ್ತಗೀನ ಮತ್ತು ಸುಲ್ತಾನ ಮಹಮ್ಮದನನ್ನು ಯುದ್ಧರಂಗ ದಲ್ಲಿ ಎದುರಿಸಬೇಕಾಗಿ ಬಂದ ಸಂದರ್ಭದಲ್ಲಿ ಧಂಗ ಸಹ ಅವರಿಬ್ಬರಿಗೆ ನೆರವಾಗಿ ನಿಂತಂತೆ ತೋರುತ್ತದೆ. ಆದರೆ 989 ಹಾಗೂ 1008ರಲ್ಲಿ ನಡೆದ ಈ ಎರಡೂ ಕದನಗಳು ಫಲಪ್ರದವಾಗಲಿಲ್ಲ. ಧಂಗ ತನ್ನ ರಾಜ್ಯದಲ್ಲಿ ನೂರಾರು ದೇವಾಲಯಗಳನ್ನು ಕಟ್ಟಿಸಿದ. ನ್ಯಾಯಶಾಸ್ತ್ರ ಪ್ರವೀಣನಾದ ಪ್ರಭಾಸ ಇವನ ಮುಖ್ಯಮಂತ್ರಿಯಾಗಿದ್ದ. ಸು.60 ವರ್ಷಗಳ ಕಾಲ ಆಳಿದ, 100 ವರ್ಷಗಳ ಕಾಲ ಬದುಕಿದ ಈತ ಪ್ರಯಾಗದಲ್ಲಿ ಜಲಸಮಾಧಿ ಹೊಂದಿದನೆಂದು ಅನಂತರದ ಶಾಸನವೊಂದು ತಿಳಿಸುತ್ತದೆ.

ಇವನ ಅನಂತರ ಇವನ ಮಗ ಗಂಡ ಮತ್ತು ಮೊಮ್ಮಗ ವಿದ್ಯಾಧರರು ಕ್ರಮವಾಗಿ 9 ಹಾಗೂ 12 ವರ್ಷಗಳ ಕಾಲ ಆಳಿದರು. ವಿದ್ಯಾಧರನ ಆಳಿಕೆಯಲ್ಲಿ ಭಾರತದ ಮೇಲೆ ಘಜ್ನಿ ಮಹಮೂದನ ದಂಡಯಾತ್ರೆಗಳು ನಡೆದುವು. ಪ್ರತೀಹಾರ ಮನೆತನದ ರಾಜ್ಯಪಾಲ ಮಹಮೂದನೊಡನೆ ಯುದ್ಧ ಮಾಡದೆ ಶರಣಾಗತನಾದನೆಂಬ ಕಾರಣದಿಂದ ಅವನನ್ನು ಕೊಂದು ಅವನ ಮಗ ತ್ರಿಲೋಚನಪಾಲನನ್ನು ಪಟ್ಟಕ್ಕೇರಿಸಿದ. ಕನೌಜಿನ ಷಾಹಿ ಅರಸನಾದ ಆನಂದಪಾಲನ ಮಗ ತ್ರಿಲೋಚನಪಾಲನನ್ನು ಅವನ ಪೂರ್ವಜರ ರಾಜ್ಯದಲ್ಲಿ ನೆಲೆಗೊಳಿಸಲು ಸಹಾಯ ಮಾಡುವುದಾಗಿ ಒಪ್ಪಿದ. ಇವುಗಳಿಂದ ಕ್ರುದ್ಧನಾದ ಘಜ್ನಿ ಮಹಮೂದ ಕಾಲಿಂಜರದ ಮೇಲೆ 1019 ಮತ್ತು 1022 ರಲ್ಲಿ ಏರಿ ಬಂದಾಗ ಅವನೊಡನೆ ಯುದ್ಧ ಮಾಡುವುದು ವಿನಾಶಕರವೆಂದು ತಿಳಿದ ವಿದ್ಯಾಧರ ಮುಹಮೂದನಿಗೆ ಹಣ ಕೊಟ್ಟು ಸಂಧಿ ಮಾಡಿಕೊಂಡ. ಕಚ್ಛಪಘಾತ ಮನೆತನದ ಅರ್ಜುನ ವಿದ್ಯಾಧರನ ಸಾಮಂತನಾಗಿ, ಪ್ರತೀಹಾರ ರಾಜ್ಯಪಾಲನನ್ನು ಹತ ಮಾಡುವುದರಲ್ಲಿ ಆತನಿಗೆ ಸಹಾಯ ಮಾಡಿದ. ಪರಮಾರ ಭೋಜ ಮತ್ತು ಕಳಚುರಿಯ ಗಾಂಗೇಯ ದೇವ, ಇವರು ಸಹ ವಿದ್ಯಾಧರನ ಸಾರ್ವಭೌಮತ್ವವನ್ನು ಒಪ್ಪಿಕೊಂಡಂತೆ ತೋರುತ್ತದೆ.

ವಿದ್ಯಾಧರನ ಮಗ ವಿಜಯಪಾಲ 1030ರಿಂದ ಸು.20 ವರ್ಷಗಳ ಕಾಲ ಆಳಿದ. ಅನಂತರ ಆತನ ಮಗ ದೇವವರ್ಮ 1060ರ ವರೆಗೂ ಆ ಬಳಿಕ ಆತನ ಸೋದರ ಕೀರ್ತಿವರ್ಮ 1100ರ ವರೆಗೂ ಕ್ರಮವಾಗಿ ಆಳಿದರು. ಇವರ ಕಾಲದಲ್ಲಿ ಚಂದೇಲರ ಪ್ರಾಬಲ್ಯ ಕ್ಷೀಣಿಸಿತು. ವಿಜಯಪಾಲ ಆಳುವಾಗ ಕಳಚುರಿ ಗಾಂಗೇಯ ಚಂದೇಲರ ಸಾರ್ವಭೌಮತ್ವವನ್ನು ಕಿತ್ತೊಗೆದು ಅವರಿಂದ ಪ್ರಯಾಗವನ್ನು ಕಸಿದುಕೊಂಡ. ಕಚ್ಛ ಪ ಘಾತರೂ ಸ್ವತಂತ್ರರಾದರು. ವಿಜಯಪಾಲನ ಅನಂತರ ದೇವವರ್ಮ ಹಾಗೂ ಕೀರ್ತಿ ವರ್ಮನ ನಡುವೆ ಸಿಂಹಾಸನಕ್ಕಾಗಿ ಕಲಹಗಳುಂಟಾದುವು. ದೇವವರ್ಮನನ್ನು ಕಳಚುರಿ ಲಕ್ಷ್ಮೀಕರ್ಣ ಸೋಲಿಸಿದ. ಅನಂತರ ಆಳತೊಡಗಿದ ಕೀರ್ತಿವರ್ಮ ತನ್ನ ಸಾಮಂತನಾದ ಗೋಪಾಲನ ಸಹಾಯದಿಂದ ಕರ್ಣನನ್ನು ಸೋಲಿಸಿ ರಾಜ್ಯವನ್ನು ಉಳಿಸಿಕೊಂಡ. ಚಂದೇಲ ಅರಸರೊಡನೆ ಪರಮಾರ ಚೌಳುಕ್ಯ, ಪಾಲ ಮತ್ತು ಚಾಳುಕ್ಯ ಅರಸರೂ ಕೂಡಿ ಕರ್ಣನ ಶೌರ್ಯವನ್ನು ಮುರಿದಂತೆ ತೋರುತ್ತದೆ. ಇದರಿಂದ ಚಂದೇಲರು ಪುನಃ ಚೇತರಿಸಿಕೊಂಡರು. ಪ್ರಬೋಧಚಂದ್ರೋದಯವೆಂಬ ಕಾವ್ಯ ಬರೆಯಲ್ಪಟ್ಟದ್ದು ಈತನ ಕಾಲದಲ್ಲೇ. ಈತನ ಮಗ ಸಲ್ಲಕ್ಷಣವರ್ಮ 5 ವರ್ಷಗಳ ಆಳಿಕೆಯ ಬಳಿಕ ಸಿಂಹಾಸನ ವನ್ನು ತನ್ನ ಚಿಕ್ಕಪ್ಪನಿಗೆ ಬಿಟ್ಟುಕೊಟ್ಟ. ಪೃಥ್ವೀವರ್ಮ ಸು.10 ವರ್ಷಗಳ ಕಾಲ ಆಳಿದ ಮೇಲೆ ಅವನ ಮಗ ಮದನವರ್ಮ ಪಟ್ಟಕ್ಕೆ ಬಂದ (1129–62). ಈತ ಮಾಳವೆಯ ಭಿಲಸಾ ಪ್ರದೇಶವನ್ನು ಗೆದ್ದನಲ್ಲದೆ, ಚೇದಿ ಅರಸರನ್ನು ಸೋಲಿಸಿ, ತನ್ನ ಮೇಲೆ ಯುದ್ಧಕ್ಕೆ ಬಂದ ಗುಜರಾತಿನ ಜಯಸಿಂಹ–ಸಿದ್ಧರಾಜನಿಂದ ಬುಂದೇಲಖಂಡವನ್ನು ರಕ್ಷಿಸಿದ. ಇವನ ಬಳಿಕ ಬಹುಶಃ ಒಂದೆರಡು ವರ್ಷಗಳ ಕಾಲ ಈತನ ಮಗ ಯಶೋವರ್ಮ ಅಧಿಕಾರದಲ್ಲಿದ್ದ. ಅನಂತರ ಅವನ ಮಗ ಪರಮರ್ದಿ (1165–1202) ಪಟ್ಟಕ್ಕೆ ಬಂದ. ಚಂದೇಲರಲ್ಲಿ ಇವನೊಬ್ಬ ಪ್ರಸಿದ್ಧ ಅರಸ. ಇವನು ವೀರಯೋಧನಾಗಿದ್ದ; ಗುಜರಾತಿನ ಚೌಳುಕ್ಯ ಅರಸರಿಂದ ದಶಾರ್ಣವನ್ನು (ಭಿಲಸ) ತಿರುಗಿ ಗೆದ್ದುಕೊಂಡ. ಆದರೆ 1182ರಲ್ಲಿ ಮೂರನೆಯ ಪೃಥ್ವೀರಾಜನಿಂದಲೂ 1202ರಲ್ಲಿ ಘೋರಿ ಮಹಮದನ ಸೇನಾಪತಿ ಕುತ್ಬ್–ಉದ್–ದೀನನಿಂದಲೂ ಸೋಲಿಸಲ್ಪಟ್ಟ. ಮುಸ್ಲಿಮರೊಡನೆ ಸಂಧಿಮಾಡಿಕೊಂಡ ನೆಂದು ಪರಮರ್ದಿಯನ್ನು ಅವನ ಮಂತ್ರಿ ಅಜಯದೇವ ಕೊಂದ. ಕುತ್ಬ್–ಉದ್–ದೀನ್ ಮತ್ತೆ ಬುಂದೇಲಖಂಡದ ಮೇಲೆ ಧಾಳಿ ಮಾಡಿ ಕಾಲಿಂಜರ, ಮಹೋಬಾ ಪಟ್ಟಣಗಳನ್ನು ಲೂಟಿ ಮಾಡಿ, ಒಬ್ಬ ಮುಸ್ಲಿಮ ಸರದಾರನನ್ನು ರಾಜ್ಯಪಾಲನನ್ನಾಗಿ ನೇಮಿಸಿದ. ಸ್ವಲ್ಪ ಕಾಲದಲ್ಲೇ ಪರಮರ್ದಿಯ ಮಗ ತ್ರೈಲೋಕ್ಯಮಲ್ಲ ಮುಸ್ಲಿಮರನ್ನು ಸೋಲಿಸಿ, ಸಮಗ್ರ ಬುಂದೇಲಖಂಡವನ್ನು ತಿರುಗಿ ಗೆದ್ದುಕೊಂಡ. ಈತ ಸು.10 ವರ್ಷಗಳ ಕಾಲ (1202–10) ಆಳಿದ. ಅನಂತರ ಈತನ ಮಗ ವೀರವರ್ಮ ಸಿಂಹಾಸನಾರೂಢನಾದ. ಈತ ಸು.35 ವರ್ಷಗಳ ಕಾಲ ಸು.1250–86ರವರೆಗೆ ಆಳಿದ. ವೀರವರ್ಮನ ಬಳಿಕ ಅನುಕ್ರಮವಾಗಿ ಭೋಜವರ್ಮ ಹಾಗೂ ಹಮ್ಮೀರವರ್ಮರು ಆಳಿದರು. ಅಲ್ಲಿಂದ ಮುಂದೆ ಚಂದೇಲ ರಾಜ್ಯ ಅನೇಕ ಮುಸ್ಲಿಂ ರಾಜರುಗಳ ಧಾಳಿಗೆ ಸಿಕ್ಕಿ ಪತನದ ಹಾದಿ ಹಿಡಿಯಿತು. ಕಾಲಕ್ರಮದಲ್ಲಿ ಚಂದೇಲರು ತಮ್ಮ ಪ್ರಭುತ್ವ ಶಕ್ತಿಯನ್ನು ಕಳೆದುಕೊಂಡು ಕಣ್ಮರೆಯಾದರು. ಹಮ್ಮೀರವರ್ಮನ ಅನಂತರವೂ ಕಾಲಿಂಜರ ಪ್ರದೇಶದಲ್ಲಿ ಚಂದೇಲರು ಆಳುತ್ತಿದ್ದರೆಂದು ಹೇಳಬಹುದಾದರೂ ಉತ್ತರ ಭಾರತದ ಇತಿಹಾಸದಲ್ಲಿ ಇವರಿಗೆ ಯಾವ ಗಣನೀಯ ಸ್ಥಾನವೂ ಇಲ್ಲದೆ ಹೋಯಿತು. (ಕೆ.ವಿ.ಎಸ್‌ಯು.;ಬಿ.ಆರ್.ಜಿ.)

**ವಾಸ್ತು ಮತ್ತು ಶಿಲ್ಪಕಲೆ:** ಖಜುರಾಹೊ, ಕಾಲಂಜರ, ಮಹೋಬ ಮತ್ತು ಅಜಯಗಡ ಚಂದೇಲರ ಚಟುವಟಿಕೆಯ ಪ್ರಮುಖ ಕೇಂದ್ರಗಳಾಗಿದ್ದವು. ಆದರೆ ಇವರ ವಾಸ್ತು ಮತ್ತು ಶಿಲ್ಪಕಲೆಯನ್ನು ಪ್ರತಿನಿಧಿಸುವ ಮಹತ್ತ್ವದ ಅಂಶಗಳು ಖಜುರಾಹೊದಲ್ಲಿ ಉಳಿದುಬಂದಿವೆ.

ರಾಷ್ಟ್ರಕೂಟರ ಧಾಳಿಗಳಿಂದ ತತ್ತರಿಸಿದ್ದ ಪ್ರತಿಹಾರ ಮಹೀಪಾಲನನ್ನು 917ರಲ್ಲಿ ಕನೌಜದ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಹರ್ಷನು ಚಂದೇಲರ ಮೊದಲ ಗಮನಾರ್ಹ ದೊರೆ. ಇವನ ಮಗ ಯಶೋವರ್ಮ ಅಥವಾ ಲಕ್ಷವರ್ಮ ಪ್ರತಿಹಾರರನ್ನು ರಾಷ್ಟ್ರಕೂಟರು ಮತ್ತು ಪಾಲರ ಧಾಳಿಗಳಿಂದ ರಕ್ಷಿಸಿದ. ಇವನು

940ರಲ್ಲಿ ಕಾಲಂಜರದ ಕೋಟೆಯನ್ನು ರಾಷ್ಟ್ರಕೂಟರಿಂದ ಗೆದ್ದು ಚಂದೇಲರು ಸ್ವಾತಂತ್ರ್ಯದ ಮೊದಲ ಹೆಜ್ಜೆ ಇಡುವಂತೆ ಮಾಡಿದ. ಖಜುರಾಹೊದ ಲಕ್ಷ್ಮಣ (ವಿಷ್ಣು) ದೇವಾಲಯದ ನಿರ್ಮಾತೃ ಈತನೇ. ಇವನ ಮಗ ಧಂಗ (ಸು.950–1002) ಸ್ವತಂತ್ರನಾಗಿ ದಿಗ್ವಿಜಯಗಳಿಂದ ಚಂದೇಲ ರಾಜ್ಯವನ್ನು ಮಧ್ಯ ಭಾರತದ ಅತಿ ಬಲಶಾಲಿ ರಾಜ್ಯವಾಗಿಸಿದ. ಖಜುರಾಹೊದ ವಿಶ್ವನಾಥ ಮತ್ತು ಪಾರ್ಶ್ವನಾಥ ದೇವಾಲಯಗಳು ಇವನ ಕಾಲದವು. ಧಂಗನ ಮಗ ಗಂಡನ (1002–04). ತರುವಾಯ ಗಂಡನ ಮಗ ವಿದ್ಯಾಧರನ ಆಳಿಕೆ ಯಲ್ಲಿ (1004–35) ಚಂದೇಲರ ಅಧಿಕಾರ ಉತ್ತುಂಗತೆಯನ್ನು ತಲುಪಿತು. ಖಜುರಾಹೊದ ಜಗದಂಬಿ,

ಖಂಡಾರಿಯ ಮಹಾದೇವ ದೇವಾಲಯ, ಖಜುರಾಹೊ

ಚಿತ್ರಗುಪ್ತ ಮತ್ತು ಚಂದೇಲರ ಮೇರುಕೃತಿಯೆಂದು ಪರಿಗಣಿಸಲಾಗುವ ಖಂಡಾರಿಯ ಮಹಾದೇವ ದೇವಾಲಯಗಳು ವಿದ್ಯಾಧರನ ಕಾಲದ್ದಾಗಿವೆ. ವಿದ್ಯಾಧರನ ತರುವಾಯ ಚಂದೇಲರ ಇಳಿಗಾಲ ಆರಂಭವಾಯಿತು. ಕಳಚುರಿಗಳ ಮತ್ತು ಮುಸ್ಲಿಮರ ಧಾಳಿಗಳಿಂದಾಗಿ ಚಂದೇಲರು ಮಹೋಬ, ಅಜಯಗಡ ಮತ್ತು ಕಾಲಂಜರ ಗಿರಿದುರ್ಗಗಳ ಮೇಲೆ ಗಮನ ಕೇಂದ್ರೀಕರಿಸಿದ್ದರಿಂದ ಖಜುರಾಹೊ ತುಸು ನಿರ್ಲಕ್ಷ್ಯಕ್ಕೊಳಗಾಯಿತು. ಇಬ್ನ್‌ಬತೂತನ ಪುರಾವೆಯ ಪ್ರಕಾರ 1335ರವರೆಗೂ ಖಜುರಾಹೊ ತನ್ನ ಪ್ರಾಮುಖ್ಯ ವನ್ನು ಉಳಿಸಿಕೊಂಡಿದ್ದಾಗಿ ತಿಳಿಯುತ್ತದೆ. ವಾಮನ, ಆದಿನಾಥ, ಜವರಿ, ಚತುರ್ಭುಜ ಮತ್ತು ದುಲಾದೇವ ಮುಂತಾದ ಚಿಕ್ಕ ಆಕರ್ಷಕ ದೇಗುಲಗಳು ಈ ಕಾಲಘಟ್ಟದಲ್ಲಿ ನಿರ್ಮಾಣವಾದವು.

ಖಜುರಾಹೊ ದೇವಾಲಯಗಳು ಔತ್ತರೇಯ ನಾಗರ ಪ್ರಕಾರದ ದೇವಾಲಯಗಳಾಗಿದ್ದರೂ ಚಂದೇಲ ವಾಸ್ತುವಿನ ವೈಶಿಷ್ಟ್ಯಗಳಿಗೂ ಉದಾಹರಣೆಗಳಾಗಿವೆ. ಇವು ಶೈವ, ವೈಷ್ಣವ ಮತ್ತು ಜೈನ ದೇಗುಲಗಳಾಗಿವೆ. ಇವು ಮಧ್ಯ ಭಾರತದ ವಾಸ್ತುಶೈಲಿಯ ಪರಾಕಾಷ್ಠತೆಯ ಹೆಗ್ಗುರುತುಗಳಾಗಿವೆ. ತಲವಿನ್ಯಾಸ ಮತ್ತು ಏರುನೋಟದಲ್ಲಿ ಇವು ಕೆಲವು ವಿಶಿಷ್ಟತೆಗಳನ್ನು ಪ್ರಕಟಿಸುತ್ತವೆ. ಇವು ಎತ್ತರವಾದ ಜಗತಿಯ ಮೇಲೆ ನಿಂತಿರುವ ಅಚ್ಚುಕಟ್ಟಾದ ಎತ್ತರವಾದ ಗುಡಿಗಳು. ಜಗತಿ ಸುತ್ತಣ ಪರಿಸರದಿಂದ ದೇಗುಲವನ್ನು ಎತ್ತರಿಸಿ ತೋರಿಸುವುದರೊಂದಿಗೆ ದೇಗುಲದ ಸುತ್ತ ತೆರೆದ ಪ್ರದಕ್ಷಿಣಾಪಥವಾಗಿ ವರ್ತಿಸುತ್ತದೆ. ಮುಖಮಂಟಪ, ಗೂಢಮಂಡಪ, ಅಂತರಾಳ ಮತ್ತು ಗರ್ಭಗೃಹ–ಇವು ವಿನ್ಯಾಸದ ಪ್ರಮುಖ ಘಟಕಗಳು. ಪೂರ್ವದಿಂದ ಪಶ್ಚಿಮದೆಡೆಗೆ ಒಂದೇ ಸಾಲಿನಲ್ಲಿ ಸಾಗುವ ಈ ಎಲ್ಲ ಘಟಕಗಳೂ ಒಳಗಿನಿಂದಲೂ ಹೊರಗಿನಿಂದಲೂ ಒಂದಕ್ಕೊಂದು ಹೊಂದಿಕೊಂಡು ಸುಸಂಘಟಿತವಾಗಿವೆ. ದೊಡ್ಡ ದೇಗುಲಗಳಲ್ಲಿ ಗೂಢಮಂಟಪದ ಪಾರ್ಶ್ವಗಳಿಗೆ ವಿಶಾಲ ಗವಾಕ್ಷಿಗಳಿವೆ. ಹಾಗೆಯೇ ದೊಡ್ಡ ದೇಗುಲಗಳಲ್ಲಿ ಒಳ ಪ್ರದಕ್ಷಿಣಪಥವೂ ಇದ್ದು, ಗರ್ಭಗೃಹದ ಪಾರ್ಶ್ವ ಮತ್ತು ಹಿಂಗೋಡೆಗಳಿಗೂ ಗವಾಕ್ಷಿಯಂತಿರುವ ಕಿಂಡಿ ಇರುತ್ತವೆ. ಇವು ಗಾಳಿ–ಬೆಳಕಿನ ಒಡನಾಟಕ್ಕೆ ಅನುಕೂಲಕರವಾಗಿವೆ. ಹೀಗಾಗಿ ದೊಡ್ಡ ಸಾಂಧಾರ (ಒಳ ಪ್ರದಕ್ಷಿಣಾಪಥವಿರುವ) ದೇಗುಲಗಳ ತಲವಿನ್ಯಾಸ ಎರಡು ಅಡ್ಡ ಭುಜಗಳುಳ್ಳ ಶಿಲುಬೆಯಾಕಾರದ, ನಿರಂಧಾರ ದೇಗುಲಗಳು ಒಂದೇ ಅಡ್ಡ ಭುಜವುಳ್ಳ ಶಿಲುಬೆಯನ್ನು ಹೋಲುತ್ತವೆ. ಕೆಲವು ದೊಡ್ಡ ದೇಗುಲಗಳ ಜಗತಿಯ ವೇದಿಕೆಯ ನಾಲ್ಕೂ ಮೂಲೆಗಳಲ್ಲಿ ಉಪದೇಗುಲಗಳಿದ್ದು ಪಂಚಾಯತನದ (ಐದು ಗುಡಿಗಳ ಸಮುಚ್ಚಯ) ಮಾದರಿಯೊದಗಿಸುತ್ತವೆ.

ತಲವಿನ್ಯಾಸದಂತೆ ಏರುನೋಟದಲ್ಲಿಯೂ ವೈಶಿಷ್ಟ್ಯಗಳಿವೆ. ಎತ್ತರ ಜಗತಿಯ ವೇದಿಕೆಯ ಮೇಲೆ ನಿಂತಿರುವ ಗುಡಿಗೆ ಹಲವು ಅಲಂಕಾರಯುತ ಪೀಠ ಮತ್ತು ವೇದಿಬಂಧಗಳ ಮಡಿಕೆಗಳುಳ್ಳ, ಕೆಳಕ್ಕೆ ಸಾಗಿದಂತೆ ಹೊರಚಾಚುತ್ತ ಇಳಿಜಾರಾಗಿ ಸಾಗುವ ಎತ್ತರವಾದ ಅಧಿಷ್ಠಾನವಿರುತ್ತದೆ. ಇದು ಗುಡಿಗೆ ಭದ್ರ ಆಧಾರವನ್ನೊದಗಿಸುವುದರೊಂದಿಗೆ ಬೆಳಕು ನೆರಳಿನ ಚೆಲ್ಲಾಟಕ್ಕೂ ಪೂರಕವಾಗಿದೆ. ಈ ಅಲಂಕೃತ ಅಧಿಷ್ಠಾನದ ಮೇಲೆ ಜಂಘಾ (ಗೋಡೆ) ನಿಂತಿರುತ್ತದೆ. ಗವಾಕ್ಷಿಯುಳ್ಳ ವಿಶಾಲ ಕಿಂಡಿಗಳು ಮೇಲ್ಗಡೆ ಕಪೋತ ಹೊಂದಿದ್ದು, ಒಳ ಭಾಗಗಳಿಗೆ ಬೆಳಕು ಒದಗಿಸುತ್ತವೆ. ಗೋಡೆಗಳಲ್ಲಿ ಎರಡು ಅಥವಾ ಮೂರು ಅಡ್ಡ ಸಾಲುಗಳಲ್ಲಿರುವ, ಸೌಂದರ್ಯ ಲಾವಣ್ಯಗಳಿಗೆ ಹೆಸರಾದ ಆಕರ್ಷಕ ಮೂರ್ತಿಶಿಲ್ಪಗಳಿರುತ್ತವೆ. ಇಡೀ ದೇಗುಲ ಸಂಯೋಜನೆ ಮತ್ತು ಅದರ ಶಿಲ್ಪಪಟ್ಟಿಕೆಗಳ ಮೇಲೆ ಬೀಳುವ ದಟ್ಟ ನೆರಳು ಬೆಳಕುಗಳ ಚೆಲ್ಲಾಟ ಏರಿಳಿತ ಮತ್ತು ಉಬ್ಬು ತಗ್ಗುಗಳನ್ನನುಸರಿಸಿ ನೋಡುಗನ ಮೇಲೆ ಅದ್ಭುತ ಸುದರ್ಶನೀಯ ಪರಿಣಾಮ ಬೀರುತ್ತದೆ. ಗರ್ಭಗೃಹದ ಈ ಗೋಡೆಯ ಮೇಲೆ ಅನೇಕಾಂಡಗಳುಳ್ಳ ಎತ್ತರವಾದ ಶೇಖರಿ ಮಾದರಿಯ ಶಿಖರವಿರುತ್ತದೆ. ದೇಗುಲದ ಇತರ ಘಟಕಗಳಿಗೂ ಶಿಖರಗಳಿದ್ದು ಅವು ಮುಖಮಂಟಪದಿಂದ ಗರ್ಭಗೃಹದೆಡೆಗೆ ಹೆಚ್ಚು ಹೆಚ್ಚು ಎತ್ತರವಾಗುತ್ತ ಲಯಬದ್ಧವಾಗಿ ಸಾಗುತ್ತವೆ. ಇವುಗಳ ಶಿಖರಗಳು ಫಾಂಸನ ರೀತಿಯಲ್ಲಿವೆ.

ಮುಖಮಂಟಪದ ಪ್ರವೇಶದಲ್ಲಿ ಕುಶಲಪೂರ್ಣ ಕುಸುರಿನ ಕೆತ್ತನೆಗಳುಳ್ಳ ಮಕರತೋರಣವಿರುತ್ತದೆ. ಮುಖಮಂಟಪ ಆಯತಾಕಾರವಿದ್ದು ಇದರ ಹಿಂಭಾಗದಲ್ಲಿ ತುಸು ಹೆಚ್ಚು ಅಗಲವುಳ್ಳ ಮಂಟಪವಿರುತ್ತದೆ. ಇವು ಮೂರು ಕಡೆ ತೆರೆದಿದ್ದು ಕಕ್ಷಾಸನ ದಿಂಡೊಡಗೂಡಿವೆ. ಕುಳ್ಳ ಕಂಬಗಳು ಚಾವಣಿಯನ್ನು ಎತ್ತಿಹಿಡಿದಿವೆ. ಗೂಢಮಂಟಪ ಪಾರ್ಶ್ವಗಳಲ್ಲಿ ಮುಚ್ಚಿರುವ ಸಭಾಗೃಹದಂತಿದೆ. ದೊಡ್ಡ ದೇಗುಲಗಳ ಗೂಢಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು ಉತ್ತರಾಂಗ ಚೌಕಟ್ಟನ್ನು ಎತ್ತಿ ಹಿಡಿದಿವೆ. ವಿತಾನ ಏಕಕೇಂದ್ರೀಯ ವೃತ್ತಾಕಾರದ ಸಾಲುಗಳಿಂದ ಅಲಂಕೃತವಾಗಿರುತ್ತದೆ. ದೇವಾಲಯದ ಒಳಭಾಗದ ದ್ವಾರಬಂಧಗಳು, ಉತ್ತರಾಂಗಗಳು, ವಿತಾನಗಳು ಶಿಲ್ಪಾಲಂಕಾರದಿಂದ ಸಮೃದ್ಧವಾಗಿವೆ. ಅಪ್ಸರೆಯರ, ಶಾಲಭಂಜಿಕೆಯರ ಮದನಕೆ ವಿಗ್ರಹಗಳು, ಭೂತಗಣಗಳು, ಕುಸುರಿನ ಕೆಲಸ ಮುಂತಾದವು ಮಧ್ಯಯುಗೀನ ಶಿಲ್ಪಕಲೆಯ ಮೇರುಕೃತಿಗಳೆನಿಸಿವೆ.

ಖಜುರಾಹೊದ ದೇವಾಲಯದ ಸಪ್ತರಥ ವಿನ್ಯಾಸವುಳ್ಳ ಗರ್ಭಗೃಹ ಭಾರತೀಯ ದೇಗುಲ ವಾಸ್ತುವಿನ್ಯಾಸದ ಉತ್ತುಂಗ ಬೆಳವಣಿಗೆಯೆನಿಸಿದೆ. ಏರುನೋಟದ ಪ್ರಮುಖ ಮುಂಚಾಚು ಹಿಂಚಾಚುಗಳು ತಲವಿನ್ಯಾಸವನ್ನು ಅನುಸರಿಸಿದ್ದು, ಬೆಳಕು ನೆರಳಿನ ಚೆಲ್ಲಾಟಕ್ಕೆ ಪೂರಕವಾಗಿವೆ. ಇವೆಲ್ಲವೂ ಅಂತಿಮವಾಗಿ ಶಿಖರದಲ್ಲಿ ಸೇರುತ್ತವೆ. ಲಯಬದ್ಧ ಏರುಸಾಗು ಹಾಗೂ ಶಿಲ್ಪ ಮತ್ತು ವಾಸ್ತುವಿನ ಮೇಳೈಸುವಿಕೆ ಖಜುರಾಹೊ ದೇವಾಲಯಗಳ ಹೆಗ್ಗುರುತು ಎನಿಸಿದೆ.

ಖಜುರಾಹೊದಲ್ಲಿ ದೇವಾಲಯಗಳ ನಿರ್ಮಾಣ ಸು.9ನೆಯ ಶತಮಾನದಿಂದ ಆರಂಭವಾಗಿ 12ನೆಯ ಶತಮಾನದವರೆಗೂ ಮುಂದುವರಿಯಿತು. ಕಾಲ ಮತ್ತು ಶೈಲಿ ದೃಷ್ಟಿಯಿಂದ ಇಲ್ಲಿ ಎರಡು ಗುಂಪುಗಳನ್ನು ಗುರುತಿಸಬಹುದು. ಚೌಸಟ್ ಯೋಗಿನಿ, ಬ್ರಹ್ಮ, ಲಾಲಗುಣ ಮಹಾದೇವ, ವರಾಹ ಮತ್ತು ಮಾತಂಗೇಶ್ವರ ದೇವಾಲಯಗಳು ಮೊದಲ ಗುಂಪಿನವು. ಉಳಿದೆಲ್ಲ ದೇವಾಲಯಗಳು ಎರಡನೆಯ ಗುಂಪಿನವು. ಎರಡನೆಯ ಗುಂಪಿನ ದೇವಾಲಯಗಳು ಶೈಲಿಸಾಮ್ಯತೆಯನ್ನಷ್ಟೇ ಅಲ್ಲದೆ ಚಂದೇಲ ಶೈಲಿಯ ವಿಕಾಸದ ಉದಾಹರಣೆಗಳನ್ನೂ ಒದಗಿಸುತ್ತವೆ.

ಈಗ ಉಳಿದಿರುವ ಮೊದಲನೆಯ ಹಂತದ ದೇವಾಲಯಗಳಲ್ಲಿ 9ನೆಯ ಶತಮಾನದ ಉತ್ತರಾರ್ಧದ ಚೌಸಟ್ ಯೋಗಿನಿ ದೇವಾಲಯ ಪ್ರಾಚೀನತಮವಾದುದು. ಕಣಶಿಲೆಯಿಂದ (ಗ್ರ್ಯಾನೈಟ್) ಕಟ್ಟಿರುವ ಈ ದೇವಾಲಯ ಆಯತಾಕಾರದ ಎತ್ತರವಾದ ಜಗತಿಯ ಮೇಲೆ ನಿಂತಿದೆ. ಜಗತಿ ಅಂಚಿನುದ್ದಕ್ಕೂ ಒಳಮುಖವಾಗಿರುವ ಚಿಕ್ಕ ಗುಡಿಗಳಿದ್ದು ಇವುಗಳ ಮುಂಭಾಗ ಆಕಾಶಕ್ಕೆ ತೆರೆದುಕೊಂಡಿರುವ ಬಯಲಿನಂತಿದೆ. ಈ ಗುಡಿಗಳು ಸರಳ, ನಿರಲಂಕೃತ ರೇಖಾಶಿಖರಗಳನ್ನು ಹೊತ್ತಿವೆ. ದೇವಾಲಯದ ಪ್ರವೇಶಕ್ಕೆ ಎದುರಾಗಿ ರುವ ಗುಡಿ ಮಾತ್ರ ಇತರ ಗುಡಿಗಳಿಗಿಂತ ದೊಡ್ಡದಾಗಿದೆ. ಇದು 64 ಯೋಗಿನಿಯರಿಗೆ ಮುಡಿಪಾಗಿರುವ ದೇಗುಲ. ಸಾಮಾನ್ಯವಾಗಿ ಚೌಸಟ್ ಯೋಗಿನಿಯರ ದೇಗುಲಗಳು ವೃತ್ತಾಕಾರವಾಗಿರುತ್ತವೆ. ಖಜುರಾಹೊ ದೇವಾಲಯ ಆಯತಾಕಾರವಾಗಿದೆ ಎಂಬುದು ವಿಶೇಷ. ಅಪ್ರಬುದ್ಧ ಒರಟಾದ ದೇಗುಲವೆನಿಸಿದರೂ ಖಜುರಾಹೊ ಶೈಲಿಯಲ್ಲಿ ಗುರುತಿಸಲಾಗುವ ಎತ್ತರ ಜಗತಿ, ಜಂಘಾವನ್ನು (ಗೋಡೆ) ಎರಡು ಹಂತಗಳಾಗಿ ವಿಂಗಡಿಸುವ ಕ್ರಮ ಮುಂತಾದವು ಈ ದೇವಾಲಯದಲ್ಲಿ ಆಗಲೇ ಕಂಡಿವೆ ಎಂಬುದು ಉಲ್ಲೇಖನೀಯ.

ಮೊದಲ ಗುಂಪಿನ ಇತರ ದೇಗುಲಗಳು ಸಾಮಾನ್ಯವಾಗಿ ಗ್ರ್ಯಾನೈಟ್ ಮತ್ತು ಮರಳುಶಿಲೆಗಳೆರಡನ್ನೂ ಬಳಸಿ ನಿರ್ಮಾಣವಾಗಿವೆ. ಬ್ರಹ್ಮ ದೇವಾಲಯ ಇದಕ್ಕೆ ಒಳ್ಳೆಯ ಉದಾಹರಣೆಯಾಗಿದೆ. 9ನೆಯ ಶತಮಾನದ ಈ ದೇವಾಲಯ ಎತ್ತರವಾದ ಜಗತಿಯ ಮೇಲೆ ನಿಂತಿದ್ದು, ಈಗ ಚೌಕಾಕಾರದ ಗರ್ಭಗೃಹ ಮತ್ತು ಚಿಕ್ಕ ಅಂತರಾಳವನ್ನೊಳಗೊಂಡಿದೆ. ತ್ರಿರಥ ವಿನ್ಯಾಸವುಳ್ಳ ಗರ್ಭಗೃಹದ ಹಿಂಗೋಡೆ ಮತ್ತು ಪಾರ್ಶ್ವಗೋಡೆಗಳ ಭದ್ರಗಳಲ್ಲಿ ಜಾಲವಾತಾಯನಗಳಿವೆ. ಗರ್ಭಗೃಹದ ಶಿಖರ ಫಾಂಸನ ಮಾದರಿಯದು. ಮಾತಂಗೇಶ್ವರ ದೇವಾಲಯದಲ್ಲಿ ತೆರೆದ ಮುಖಮಂಟಪವೂ ಉಳಿದುಕೊಂಡಿದೆ. ಎತ್ತರವಾದ ಜಗತಿ, ಗೋಡೆಯನ್ನು ಎರಡು ಇಲ್ಲವೇ ಮೂರು ಹಂತಗಳಾಗಿ ವಿಂಗಡಿಸುವ ಕ್ರಮ ಹಾಗೂ ಶಿಖರದಲ್ಲಿ ಎರಡೆರಡು ಆಮಲಸಾರಕಗಳನ್ನು ತೋರಿಸಿರುವುದು ಮುಂತಾದ ಲಕ್ಷಣಗಳು ಇಲ್ಲಿ ಕಾಣುವ ಖಜುರಾಹೊ ಶೈಲಿಯ ಲಕ್ಷಣಗಳೆಂದು ಗುರುತಿಸಬಹುದು.

ಎರಡನೆಯ ಗುಂಪಿನ ದೇವಾಲಯಗಳು ಪೂರ್ತಿ ಮರಳುಶಿಲೆಯಿಂದ ರಚಿತವಾಗಿದೆ. ಬಹಳಷ್ಟು ವಿಕಾಸವಾಗಿರುವ ತಲವಿನ್ಯಾಸ ಮತ್ತು ಅಲಂಕಾರ ವಿನ್ಯಾಸಗಳು ಈ ಗುಡಿಗಳನ್ನು ಮುಂಚಿನ ಗುಂಪಿನ ಗುಡಿಗಳಿಂದ ಭಿನ್ನವಾಗಿಸಿವೆ. ಲಕ್ಷ್ಮಣ, ಪಾರ್ಶ್ವನಾಥ, ವಿಶ್ವನಾಥ ಮತ್ತು ಖಂಡಾರಿಯ ಮಹಾದೇವ ದೇವಾಲಯಗಳು ಈ ಗುಂಪಿನ ಪ್ರಮುಖ ಉದಾಹರಣೆಗಳು.

ಶಿಲ್ಪ ಮತ್ತು ವಾಸ್ತುಶೈಲಿಯ ಆಧಾರದ ಮೇಲೆ ಎರಡನೆಯ ಹಂತದ ಲಕ್ಷ್ಮಣ ದೇವಾಲಯ ಪ್ರಾಚೀನತಮವಾದುದು. ಸು.950ರಲ್ಲಿ ಚಂದೇಲ ಯಶೋವರ್ಮನಿಂದ ರಚಿಸಲ್ಪಟ್ಟ ಈ ದೇಗುಲ ಪಂಚಾಯತನ ಮಾದರಿಯ ವೈಷ್ಣವ ದೇವಾಲಯ. ಇದರ ಎಲ್ಲ ಮಂಟಪಗಳ ಶಿಖರಗಳು ದೊಡ್ಡ ಘಂಟಾ ಭಾಗವನ್ನು ಹೊಂದಿದ್ದು ಫಾಂಸನ ಪ್ರಕಾರದವಾಗಿವೆ. ಗರ್ಭಗೃಹ ಕೇವಲ ಪಂಚರಥ ವಿನ್ಯಾಸ ಹೊಂದಿದೆ. ಇದರ ಶಿಖರ ಅಂಗಶಿಖರಗಳಿಂದ ಕೂಡಿದ್ದು ಶೇಖರೀ ಪ್ರಕಾರದ್ದಾಗಿದೆ. ಅಧಿಷ್ಠಾನದ ಮಡಿಕೆಗಳಲ್ಲಿ ಆನೆ ಸಾಲುಗಳಿವೆ. ಜಂಘಾ ಭಾಗ ಎರಡು ಹಂತಗಳಲ್ಲಿರುವ ಸುಂದರ ಶಿಲ್ಪಗಳಿಂದ ಅಲಂಕೃತವಾಗಿದೆ. ಇವುಗಳಲ್ಲಿ ಮೇಲಣ ಹಂತದಲ್ಲಿ ಕುಬ್ಜೆಯಿಂದ ಸುಗಂಧ ಸ್ವೀಕಾರ, ಕಾಲಿಯದಮನ, ಕುವಲಯಾಪೀಡದಮನ, ಚಾಣೂರಮರ್ದನ, ಪೂತನಾವಧ ಮುಂತಾದ ಕೃಷ್ಣಲೀಲೆಯ ದೃಶ್ಯಗಳಿವೆ. ಮುಖ್ಯ ದೇವಕೋಷ್ಠಗಳಲ್ಲಿ ಭೂವರಾಹ, ನರಸಿಂಹ ಮತ್ತು ಹಯಗ್ರೀವ ಶಿಲ್ಪಗಳಿವೆ. ಮುಖಮಂಟಪದ ಪ್ರವೇಶದಲ್ಲಿರುವ ಮಕರತೋರಣ ಎರಡೇ ಬಾಗುಗಳನ್ನೊಳಗೊಂಡಿದ್ದು ಸರಳವಾಗಿದೆ. ಗೂಢಮಂಟಪದ ಕಂಬಗಳ ಅಲಂಕಾರ ಉಬ್ಬುಶಿಲ್ಪ ಮಾದರಿಯಲ್ಲಿದ್ದು ಗುಪ್ತರ ಶೈಲಿಯನ್ನು ನೆನಪಿಸುತ್ತದೆ. ವಿತಾನಗಳನ್ನು ಬಹು ಸುಂದರವಾಗಿ ಸಸ್ಯವಿನ್ಯಾಸಗಳಿಂದ ಅಲಂಕರಿಸಿದೆ. ಗರ್ಭಗೃಹದ ದ್ವಾರಬಂಧ ಸಪ್ತಶಾಖಾ ಮಾದರಿಯದು. ಇವುಗಳಲ್ಲಿ ಮಧ್ಯದ ಶಾಖೆಯಲ್ಲಿ ವಿಷ್ಣುವಿನ ಅವತಾರಗಳ ಚಿತ್ರಗಳಿವೆ. ಲಲಾಟಬಿಂಬದಲ್ಲಿ ಲಕ್ಷ್ಮಿಯ ಶಿಲ್ಪವಿದ್ದು ಇಕ್ಕೆಲಗಳಲ್ಲಿ ಬ್ರಹ್ಮ ಮತ್ತು ವಿಷ್ಣು ಹಾಗೂ ಮೇಲ್ಗಡೆ ನವಗ್ರಹಗಳ ಕೆತ್ತನೆಗಳಿವೆ. ಗರ್ಭಗೃಹದಲ್ಲಿ ಮೂರು ಶಿರಗಳುಳ್ಳ (ಮುಖ್ಯಮುಖ ಮಾನುಷ ರೂಪದ್ದು, ಪಾರ್ಶ್ವ ಮುಖಗಳು ವರಾಹ ಮತ್ತು ಸಿಂಹ ರೂಪದವು) ಚತುರ್ಭುಜ ವೈಕುಂಠವಿಷ್ಣುವಿನ ನಿಂತ ವಿಗ್ರಹವಿದೆ. ಖಜುರಾಹೊದಲ್ಲಿ ಸುಸ್ಥಿತಿಯಲ್ಲಿರುವ ಪಂಚಾಯತನ ಮಾದರಿಯ ಸುಂದರ ದೇಗುಲ ಇದಾಗಿದೆ.

ಇಲ್ಲಿಯ ಪಾರ್ಶ್ವನಾಥ ಜಿನಾಲಯ ಧಂಗನ ಆಳ್ವಿಕೆಯ ಪ್ರಾರಂಭಿಕ ಘಟ್ಟದಲ್ಲಿ 10ನೆಯ ಶತಮಾನದ ಉತ್ತರಾರ್ಧದಲ್ಲಿ ರಚಿತವಾಗಿದೆ. ಲಕ್ಷ್ಮಣ ದೇವಾಲಯದ ಕೆಲವು ಲಕ್ಷಣಗಳು ಇಲ್ಲಿ ತುಸು ವಿಕಸಿತವಾಗಿವೆ. ಉದಾಹರಣೆಗೆ ಕೃಷ್ಣಚರಿತೆಯ ದೃಶ್ಯಗಳನ್ನೂ ಒಳಗೊಂಡಂತೆ ವೈಷ್ಣವ ಶಿಲ್ಪಗಳಿಗೆ ಈ ಜಿನಾಲಯದಲ್ಲಿ ಪ್ರಾಧಾನ್ಯ ನೀಡಲಾಗಿದೆ. ಶಿಲ್ಪ ಸಂಸ್ಕರಣ, ಭಂಗಿ ಪ್ರಮಾಣ ಇತ್ಯಾದಿಗಳಲ್ಲಿ ಪ್ರಗತಿ ಕಾಣುತ್ತದೆ. ಖಜುರಾಹೊ ದೇಗುಲಗಳ ವೈಶಿಷ್ಟ್ಯವೆನಿಸುವ ಗವಾಕ್ಷಿಗಳು ಇಲ್ಲಿ ಇಲ್ಲದಿರುವುದು ಉಲ್ಲೇಖಾರ್ಹವಾಗಿದೆ. ಗೋಡೆಯ ಏಕತಾನತೆಯನ್ನು ಮೂರು ಹಂತಗಳಲ್ಲಿರುವ ಶಿಲ್ಪಗಳು ಕಾಣದಂತೆ ಮಾಡಿವೆ.

ಖಜುರಾಹೊದ ವಿಶ್ವನಾಥ ದೇವಾಲಯ ಕಾಲಾನುಕ್ರಮದಲ್ಲಿ ಲಕ್ಷ್ಮಣ ಮತ್ತು ಖಂಡಾರಿಯ ಮಹಾದೇವ ದೇವಾಲಯಗಳ ಮಧ್ಯದಲ್ಲಿ ಬರುತ್ತದೆ. ಖಂಡಾರಿಯ ಮಹಾದೇವ ದೇವಾಲಯದಲ್ಲಿ ಕಾಣುವ ತಲವಿನ್ಯಾಸ, ಅಲಂಕಾರ ವಿನ್ಯಾಸ ಇತ್ಯಾದಿಗಳನ್ನು ವಿಶ್ವನಾಥ ದೇವಾಲಯದಲ್ಲಿ ಪೂರ್ವಭಾವಿಯಾಗಿ ಗುರುತಿಸಬಹುದು. ಅಧಿಷ್ಠಾನದ ಮಡಿಕೆಗಳು, ಶಿಲ್ಪ ವ್ಯವಸ್ಥೆ, ಗೋಡೆಯಲ್ಲಿ ಮೂರು ಹಂತಗಳಲ್ಲಿ ಶಿಲ್ಪಗಳನ್ನು ಕಂಡರಿಸಿರುವುದು, ಕೆಳ ಭಾಗದಲ್ಲಿರುವ 9 ಪ್ರಮುಖ ದೇವಕೋಷ್ಠಗಳಲ್ಲಿ ನರ್ತಿಸುತ್ತಿರುವ ಸಪ್ತಮಾತೃಕೆಯರು ಮತ್ತು ಗಣೇಶ ಹಾಗೂ ವೀರಭದ್ರ ಶಿಲ್ಪಗಳನ್ನಿರಿಸಿರುವುದು, ಶಿಖರ ಸ್ವರೂಪ ಮುಂತಾದವುಗಳಲ್ಲಿ ಖಂಡಾರಿಯ ಮಹಾದೇವ ದೇವಾಲಯವನ್ನು ಇದು ಬಹಳಷ್ಟು ಹೋಲುತ್ತದೆ. ಇದರಲ್ಲಿ ದೊರೆತ ಶಿಲಾಶಾಸನದ ಪ್ರಕಾರ ಈ ಮರಕತೇಶ್ವರ ದೇವಾಲಯವನ್ನು ಚಂದೇಲ ದೊರೆ ಧಂಗ 1002ರಲ್ಲಿ ನಿರ್ಮಿಸಿದ. ಮೂಲತಃ ಒಂದು, ಮರಕತದ (ಪಚ್ಚೆಶಿಲೆಯ) ಹಾಗೂ ಇನ್ನೊಂದು, ಕಲ್ಲಿನ ಲಿಂಗಗಳನ್ನು ಇದರಲ್ಲಿ ಪ್ರತಿಷ್ಠಾಪಿಸಲಾಗಿತ್ತು.

ಖಂಡಾರಿಯ ಮಹಾದೇವ ದೇವಾಲಯ ಖಜುರಾಹೊದ ದೇವಾಲಯಗಳಲ್ಲಿ ಅತಿ ದೊಡ್ಡ ಮತ್ತು ಅತಿ ಎತ್ತರದ ದೇವಾಲಯವಾಗಿದೆ. ಜಗತಿಯನ್ನು ಹೊರತುಪಡಿಸಿ ಇದು ಸು.30.48 ಮೀ ಉದ್ದ ಹಾಗೂ 20.12 ಮೀ ಅಗಲವಿದೆ. ಈ ದೇವಾಲಯಕ್ಕೆ ವಿಕಾಸಹೊಂದಿದ ಖಜುರಾಹೊ ದೇವಾಲಯದ ಎಲ್ಲ ಭಾಗಗಳಿವೆ. ಸಪ್ತರಥ ವಿನ್ಯಾಸವುಳ್ಳ ಗರ್ಭಗೃಹ ಸಾಂಧಾರ ರೀತಿಯದಾಗಿದ್ದು, ಇದರ ಮೂರು ದಿಕ್ಕುಗಳಿಗೆ ಗವಾಕ್ಷಿಗಳಿವೆ. ಗೂಢಮಂಟಪಕ್ಕೂ ಇದೇ ರೀತಿಯ ಪಾರ್ಶ್ವ ಗವಾಕ್ಷಿಗಳಿವೆ. ಒಳಗಡೆ ಸು.200 ಸುಂದರ ಶಿಲ್ಪಗಳಿವೆ. ಖಜುರಾಹೊದ ದೇವಾಲಯಗಳಲ್ಲೇ ಹೆಚ್ಚು ಎತ್ತರವಿರುವ ಅಧಿಷ್ಠಾನ ಇದಕ್ಕಿದ್ದು, ಇದರ ಮಡಿಕೆಗಳನ್ನು ಸ್ಫುಟವಾಗಿರುವ ಕೆತ್ತನೆಗಳಿಂದ ಅಲಂಕರಿಸಿದೆ. ಆನೆ, ಕುದುರೆಗಳ ಸಾಲುಗಳು, ಯೋಧರ, ಬೇಟೆಯಾಡುವವರ, ನರ್ತಕರ, ಸಂಗೀತಗಾರರ, ಭಕ್ತರ, ಮಿಥುನಗಳ ಸಾಲುಗಳು ಈ ಮಡಿಕೆಗಳನ್ನು ತುಂಬಿಕೊಂಡಿವೆ. ಜಂಘಾ ಭಾಗದಲ್ಲಿ ಮೂರು ಹಂತಗಳಲ್ಲಿ ಹೆಚ್ಚು ಶಿಲ್ಪಗಳಿದ್ದು, ಗೋಡೆಯ ಮುಂಚಾಚುಗಳಲ್ಲಿ ದೇವ ದೇವಿಯರ, ಮೈಥುನದಲ್ಲಿರುವ ಮಿಥುನಗಳ, ನಾಯಿಕೆಯರ, ಅಪ್ಸರೆಯರ ಶಿಲ್ಪಗಳಿವೆ. ಹಿಂಚಾಚುಗಳಲ್ಲಿ ವ್ಯಾಳಗಳು ಮತ್ತು ನಾಗಿಣಿಯರ ಶಿಲ್ಪಗಳಿವೆ. ಶಿಲ್ಪಗಳು ಎತ್ತರವೂ ಸಪೂರ ಮೈಕಟ್ಟಿನವೂ ಆಗಿದ್ದು ವಿವಿಧ ವಿಚಲಿತ ಭಂಗಿಗಳಲ್ಲಿರುವ, ಜೀವಕಳೆಯಿಂದೊಡಗೂಡಿರುವ ಅಪ್ಸರೆಯರ ಹಲವು ಪ್ರಕಾರಗಳ ಉದಾಹರಣೆಗಳನ್ನೊದಗಿಸುತ್ತವೆ. ಸು.600 ಶಿಲ್ಪಗಳು ಗೋಡೆಯಲ್ಲಿವೆ. ಗರ್ಭಗೃಹದ ಗೋಡೆಯ ಮೇಲ್ಗಡೆ ಇದರ ಚಾಚುಗಳನ್ನು ಅನುಸರಿಸಿ ಮೂಲ ರೇಖಾಶಿಖರದ ಸುತ್ತ 84 ಚಿಕ್ಕ ರೇಖಾಶಿಖರಗಳ ಗುಂಪನ್ನು (ಅಂಗಶಿಖರ) ನಿರ್ಮಿಸಲಾಗಿದೆ. ಗರ್ಭಗೃಹದ ಮೇಲಿನ ಶೇಖರೀ ಶಿಖರ, ಕಪಿಲಿಯ ಮೇಲೆ ಚಾಚಿರುವ ಸುಕನಾಸಿ, ಮಂಟಪಗಳ ಮೇಲಿರುವ ಫಾಂಸನ ಶಿಖರಗಳು ಇವೆಲ್ಲವುಗಳ ಏರಿಳಿತಗಳು ಬಹುಲಯಬದ್ಧವಾಗಿವೆ. ದೇವಾಲಯಕ್ಕೆ ಇದು ಅದ್ಭುತ ಮತ್ತು ಪರಿಣಾಮಕಾರಿ ನೋಟವನ್ನೊದಗಿಸಿದೆ. ವಿಶ್ವನಾಥ ದೇವಾಲಯವನ್ನು ಬಹಳಷ್ಟು ಹೋಲುವ ಈ ದೇವಾಲಯ ಪ್ರೌಢ ತಲವಿನ್ಯಾಸ, ಗಾತ್ರ, ಶಿಲ್ಪಾಲಂಕಾರ ಮತ್ತು ವಾಸ್ತು ವಿವರಗಳ ದೃಷ್ಟಿಯಿಂದ ಮಧ್ಯಭಾರತದ ದೇವಾಲಯ ವಾಸ್ತುವಿನ ಹಾಗೂ ಭಾರತೀಯ ದೇಗುಲ ವಾಸ್ತುವಿನ ಅತ್ಯುತ್ಕೃಷ್ಟ ಸೃಷ್ಟಿಯೆಂದರೆ ತಪ್ಪಾಗದು. ಬಹುಶಃ ಇದು ವಿದ್ಯಾಧರನ ಆಳ್ವಿಕೆಯ (ಸು.1025–35) ಉತ್ತರಾರ್ಧದಲ್ಲಿ ರಚಿತವಾಗಿರಬೇಕು.

ಖಜುರಾಹೊದ ಇನ್ನಿತರ ಮರಳು ಶಿಲೆಯ ದೇವಾಲಯಗಳು ನಿರಂಧಾರ ರೀತಿಯ ಚಿಕ್ಕ ದೇಗುಲಗಳು. ದೊಡ್ಡ ದೇವಾಲಯಗಳಂತೆ ವಿವಿಧ ಮುದ್ರೆ–ಭಂಗಿಗಳಲ್ಲಿರುವ ಅಪ್ಸರೆಯರ ಅತ್ಯಾಕರ್ಷಕ ಶಿಲ್ಪಗಳಿಂದಾಗಿ ಜಗದಂಬಿ, ಚಿತ್ರಗುಪ್ತ, ವಾಮನ, ಜವರಿ ಮತ್ತು ಆದಿನಾಥ ದೇವಾಲಯಗಳು ಗಮನಾರ್ಹವಾಗಿವೆ. ಇವುಗಳಲ್ಲಿ ಜಗದಂಬಿ (ವೈಷ್ಣವ) ಮತ್ತು ಚಿತ್ರಗುಪ್ತ (ಸೂರ್ಯ) ದೇವಾಲಯಗಳಿಗೆ ಗರ್ಭಗೃಹ, ಕಪಿಲಿ, ಗೂಢಮಂಟಪ ಮತ್ತು ಮುಖಮಂಟಪ ಗಳಿದ್ದು 11ನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿ ರಚಿತವಾದವುಗಳು. ಜಗದಂಬಿ ದೇವಾಲಯದ ಗೋಡೆಯಲ್ಲಿರುವ ಮೈಥುನ ಶಿಲ್ಪಗಳು ಖಜುರಾಹೊ ಶಿಲ್ಪಗಳಲ್ಲಿಯೇ ಅತ್ಯುತ್ಕೃಷ್ಟವೆನಿಸಿವೆ. ವಾಮನ ದೇವಾಲಯದ ತಲವಿನ್ಯಾಸ ಜಗದಂಬಿ ದೇಗುಲದಂತೆಯೇ ಇದೆಯಾದರೂ ಗೋಡೆಯಲ್ಲಿ ಎರಡು ಹಂತಗಳಲ್ಲಿ ಮಾತ್ರ ಶಿಲ್ಪಗಳಿವೆ. ಗೂಢಮಂಟಪದ ಮೇಲಿರುವ ಸಂವರಣ ರೀತಿಯ ಚಾವಣಿ ಉಲ್ಲೇಖಾರ್ಹ. ಜವರಿ ದೇವಾಲಯದ ಭಾಗಗಳೆಲ್ಲ ಮೂಲದಲ್ಲಿರುವಂತೆ ಉಳಿದುಬಂದಿದ್ದು ಗೋಡೆಯಲ್ಲಿ ಮೂರು ಹಂತಗಳಲ್ಲಿ ಶಿಲ್ಪಗಳಿರುವುದು, ಅವುಗಳಲ್ಲಿ ಮೇಲಣ ಹಂತದಲ್ಲಿ ಸಕ್ರಿಯವಾಗಿ ಹಾರುತ್ತಿರುವ ವಿದ್ಯಾಧರರ ಮತ್ತು ವಿದ್ಯಾಧರಿಯರ ಶಿಲ್ಪಗಳು ಗಮನೀಯವಾಗಿವೆ.

ದುಲಾದೇವ ದೇವಾಲಯ ಸಪ್ತರಥ ವಿನ್ಯಾಸದ ದೇಗುಲಗಳಲ್ಲಿ ಬಹಳಷ್ಟು ಪ್ರಗತಿಯ ಉದಾಹರಣೆಯಾಗಿದೆ. ಇದರ ವಿಶಾಲ ಗೂಢಮಂಟಪದ ವಿತಾನದಲ್ಲಿ 20 ಅಪ್ಸರೆಯರ ಮದನಿಕೆ ವಿಗ್ರಹಗಳಿವೆ. ಗೋಡೆಯಲ್ಲಿರುವ ಒಂದೇ ತೆರನಾಗಿ ಕಾಣುವ ಶಿವ–ಪಾರ್ವತಿಯರ ನೂರಾರು ವಿಗ್ರಹಗಳು ಸಾಂಪ್ರದಾಯಿಕ ಭಂಗಿ ಅಲಂಕಾರಗಳಿಂದೊಡಗೂಡಿ ಶಿಲ್ಪಶೈಲಿಯ ಅವನತಿಯ ಸಂಕೇತಗಳಾಗಿವೆ. ಸು.12ನೆಯ ಶತಮಾನದ ಈ ದೇಗುಲ ಖಜುರಾಹೊದಲ್ಲಿ ಚಂದೇಲ ಶೈಲಿಯ ಅಂತಿಮ ಚಿಂಗಾರಿಯೆಂದು ಭಾವಿಸಿದರೆ ತಪ್ಪಾಗದು. ಗೂರ್ಜರ–ಪ್ರತೀಹಾರ ಶೈಲಿ ಮುಂದುವರೆದು ಚಂದೇಲ ಶೈಲಿಯಲ್ಲಿ ಪರಿಪೂರ್ಣತೆ ಕಂಡಿತೆಂದು ಭಾವಿಸಬಹುದು. (ಎಸ್.ವಿ.ಪಿ.)

**ಚಂದ್ರಗುಪ್ತ ಮೌರ್ಯ:** ಪ್ರ.ಶ.ಪೂ.324–298. ಪ್ರಾಚೀನ ಭಾರತದ ಪ್ರಸಿದ್ಧ ದೊರೆ. ಮೌರ್ಯ ಸಂತತಿಯ ಮೂಲಪುರುಷ. ಸಣ್ಣ–ಪುಟ್ಟ ರಾಜ್ಯಗಳನ್ನು ಒಂದುಗೂಡಿಸಿ, ನೆರೆಯ ಪ್ರದೇಶಗಳನ್ನು ಗೆದ್ದು ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದ. ಇವನ ಆಳಿಕೆ ಕಾಲದಿಂದ ಭಾರತದ ಇತಿಹಾಸವನ್ನು ಕ್ರಮಬದ್ಧವಾಗಿ ಅರಿಯುವುದು ಸಾಧ್ಯ. ಚಂದ್ರಗುಪ್ತನ ಇತಿಹಾಸ ಭಾರತದ ರಾಜನೈತಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಐಕ್ಯದ ಸಂಗತಿಯಾಗಿದೆ.

ಭಾರತವನ್ನು ಮ್ಯಾಸಿಡೋನಿಯನರಿಂದ ಮುಕ್ತಗೊಳಿಸಿ ಅದರ ಬಹು ಭಾಗವನ್ನು ರಾಜಕೀಯವಾಗಿ ಒಂದೇ ಆಡಳಿತಕ್ಕೆ ಒಳಪಡಿಸಿದ ಚಂದ್ರಗುಪ್ತನ ಸಾಧನೆ ಬಹಳ ದೊಡ್ಡದು. ಇವನಿಗೆ ಸಿಂಹಾಸನ ಪಿತ್ರಾರ್ಜಿತವಾಗಿ ಬಂದದ್ದಲ್ಲ. ಇವನ ಜನನ ಬಾಲ್ಯಗಳ ಬಗ್ಗೆ ಸ್ಪಷ್ಟ ಮಾಹಿತಿ ದೊರಕುವುದಿಲ್ಲ. ಇವನು ಬಡ ಸಂಸಾರದಲ್ಲಿ ಹುಟ್ಟಿದವನೆಂದು ಗ್ರೀಕ್ ಲೇಖಕ ಜಸ್ಟಿನ್ ಹೇಳುತ್ತಾನೆ. ಜೈನ ಸಂಪ್ರದಾಯದ ಪ್ರಕಾರ ಈತನ ತಾಯಿ ಹಳ್ಳಿಯ ಮುಖಂಡನೊಬ್ಬನ ಮಗಳು. ಮಯೂರ ಪೋಷಕರಿಂದ ಆ ಹಳ್ಳಿ ಕೂಡಿತ್ತು. ಅವನ ಜೀವನದ ಹೆಚ್ಚು ವಿವರಗಳು ಬ್ರಾಹ್ಮಣಿಕ ಮತ್ತು ಬೌದ್ಧ ಬರೆಹಗಳಿಂದ ತಿಳಿದುಬರುತ್ತದೆ. ಪುರಾಣಗಳಲ್ಲಿ ಇವನ ಬಗ್ಗೆ ಹೆಚ್ಚು ಮಾಹಿತಿಯಿಲ್ಲ. ಕೌಟಿಲ್ಯನೆಂಬ ಮೇಧಾವಿ ನಂದರನ್ನು ಸಿಂಹಾಸನದಿಂದ ಕೆಳಗಿಳಿಸಿ ಚಂದ್ರಗುಪ್ತನನ್ನು ಅದರ ಮೇಲೆ ಕುಳ್ಳಿರಿಸಿದನೆಂದು ಹೇಳುವರು. ವಿಷ್ಣುಪುರಾಣದ ಭಾಷ್ಯಕಾರನೊಬ್ಬ ಮೊಟ್ಟ ಮೊದಲಿಗೆ ಚಂದ್ರಗುಪ್ತನನ್ನು ಹೀನಕುಲಜನೆಂದು ಹೇಳುತ್ತಾನೆ. ಕೊನೆಯ ನಂದದೊರೆ ಉಪ ಪತ್ನಿಯಾಗಿದ್ದಳೆನ್ನಲಾದ ಮುರಾ ಎಂಬುವಳ ಮಗನಿವನೆಂಬುದು ಅವನ ಹೇಳಿಕೆ. ಇದು ನಿಜವೆನ್ನಲು ಆಧಾರಗಳಿಲ್ಲ. ಮುರಾ ಶೂದ್ರಸ್ತ್ರೀ ಎಂಬುದೂ ಅವಳು ದೊರೆಯ ಉಪಪತ್ನಿಯಾಗಿದ್ದಳೆಂಬುದೂ ಅನಂತರದ ಸೃಷ್ಟಿ.

ವಿಶಾಖದತ್ತನ ಮುದ್ರಾರಾಕ್ಷಸ ನಾಟಕದಲ್ಲಿ ಚಂದ್ರಗುಪ್ತನನ್ನು ವೃಷಲ, ಕುಲಹೀನ ಎಂದು ಕರೆಯಲಾಗಿದೆ. ಆದರೆ ಕುಲಹೀನ ಎಂದರೆ ಬಡ ಕುಟುಂಬದಲ್ಲಿ ಹುಟ್ಟಿದವ. ವೃಷಲ ಎಂಬುದನ್ನು ವೃಷ ಅಥವಾ ದೊರೆಗಳಲ್ಲಿ ಮುಖ್ಯನೆಂದು ಅರ್ಥ ಮಾಡಬೇಕು ಎಂದು ಕೆಲವರು ಸೂಚಿಸಿದ್ದಾರೆ. ಮುದ್ರಾರಾಕ್ಷಸದ ಆಮೇಲಿನ ಟೀಕಾಕಾರನೊಬ್ಬ ಚಂದ್ರಗುಪ್ತನನ್ನು ಮೌರ್ಯನ ಮಗನೆಂದು ಹೇಳಿದ್ದಾನೆ. ಅವನ ತಾಯಿ ಮುರಾ. ಅವನು ಮೌರ್ಯಪುತ್ರ, ಅವನ ವಂಶ ನಂದವಂಶದ ಒಂದು ಶಾಖೆ.

ಬೌದ್ಧ ಬರೆಹಗಳ ಪ್ರಕಾರ ಚಂದ್ರಗುಪ್ತ ಕ್ಷತ್ರಿಯ. ಮೋರಿಯ ವಂಶದವ. ಈ ಹೆಸರಿನ ವಂಶವೊಂದು ಬುದ್ಧನ ಕಾಲದಲ್ಲೂ ಇದ್ದುದು ಖಚಿತ. ಚಂದ್ರಗುಪ್ತ ಈ ವಂಶದವನೆಂಬುದು ನಿಜವಿರಬಹುದೆಂದು ಕಾಣುತ್ತದೆ. ಚಂದ್ರಗುಪ್ತನ ತಂದೆ ಪಿಪ್ಪಲಿವನದ ರಾಜನಾಗಿದ್ದಾಗ

ಯುದ್ಧವೊಂದರಲ್ಲಿ ಮರಣಹೊಂದಿದ. ಚಂದ್ರಗುಪ್ತನ ತಾಯಿ ದೂರದ ಪುಷ್ಪಪುರ ಅಥವಾ ಕುಸುಮಪುರ ಅಥವಾ ಪಾಟಲಿಪುತ್ರಕ್ಕೆ ಬಂದು ಆಶ್ರಯ ಪಡೆದಳು. ಚಂದ್ರಗುಪ್ತ ಜನಿಸಿದ್ದೂ ಅಲ್ಲಿಯೇ. ಹಳ್ಳಿಗರ ನಡುವೆ ಬೆಳೆಯುತ್ತಿದ್ದ ಹುಡುಗನಿಂದ ಚಾಣಕ್ಯ ಆಕರ್ಷಿತನಾಗಿ ಇವನನ್ನು ತನ್ನ ಸ್ಥಳವಾದ ತಕ್ಷಶಿಲೆಗೆ ಕರೆದೊಯ್ದು ಸಕಲ ಕಲೆ ಶಾಸ್ತ್ರಗಳಲ್ಲಿ ಪಾರಂಗತನನ್ನಾಗಿ ಮಾಡಿದ. ವಿದೇಶಿಯರ ಆಕ್ರಮಣದಿಂದ ದೇಶವನ್ನು ವಿಮೋಚನೆಗೊಳಿಸುವುದೂ ಚಾಣಕ್ಯನಿಗೆ ಅವಮಾನಮಾಡಿದ್ದ ನಂದ ದೊರೆಯ ದುರಾಡಳಿತದಿಂದ ಅದನ್ನು ಪಾರು ಮಾಡುವುದೂ ಇವನಿಗೆ ವಹಿಸಲಾದ ಕರ್ತವ್ಯ. ಚಾಣಕ್ಯನ ನೆರವಿನಿಂದ ಇವನು ಈ ಕರ್ತವ್ಯವನ್ನು ಚೆನ್ನಾಗಿ ನೆರವೇರಿಸಿದ, ಚಂದ್ರಗುಪ್ತ ಪಂಜಾಬಿನಲ್ಲಿ ಅಲೆಗ್ಸಾಂಡರನನ್ನು ಸಂಧಿಸಿದ್ದನೆಂಬುದಾಗಿ ಕೆಲವು ಅಭಿಜಾತ ಕೃತಿಗಳು ಹೇಳುತ್ತವೆ. ಅವನಿಗೆ ಕೋಪ ಬರುವಂತೆ ಚಂದ್ರಗುಪ್ತ ವರ್ತಿಸಿದನೆಂದೂ ಇವನನ್ನು ಕೊಲ್ಲಬೇಕೆಂದು ಅಲೆಗ್ಸಾಂಡರ್ ಆಜ್ಞೆ ನೀಡಿದನೆಂದೂ ಚಂದ್ರಗುಪ್ತ ಅಲ್ಲಿಂದ ತಪ್ಪಿಸಿಕೊಂಡು ಹೋದನೆಂದೂ ಹೇಳಲಾಗಿದೆ. ಅಲೆಗ್ಸಾಂಡರನ ವಿರುದ್ಧ ಹೋರಾಡಿ ರಕ್ತ ಚೆಲ್ಲಿದ ಪಂಜಾಬಿನ ಜನಪದಗಳ ಯುದ್ಧಶಕ್ತಿಗಳನ್ನೂ ಅವು ಸೂಕ್ತ ಸಂಘಟನೆ ಮತ್ತು ನಾಯಕತ್ವ ಇಲ್ಲದ್ದರಿಂದ ಕುಸಿದುಬಿದ್ದದ್ದನ್ನೂ ಚಂದ್ರಗುಪ್ತ ಅರಿತುಕೊಂಡಿದ್ದಿರಬೇಕು. ಇದು ಈತನ ಅನಂತರದ ಮಹತ್ಕಾರ್ಯಕ್ಕೆ ಬುನಾದಿಯಾಗಿದ್ದಿರಬಹುದು.

ತಾನು ಸಂಘಟಿಸಿದ ಸೈನ್ಯದ ನೆರವಿನಿಂದ ಮೊದಲು ಸಿಂಹಾಸನವನ್ನೇರಿ ಅನಂತರ ಅಲೆಗ್ಸಾಂಡರನ ಪ್ರಾಂತಾಧಿಕಾರಿಗಳೊಡನೆ ಹೋರಾಡಿ ಅವರನ್ನು ಸೋಲಿಸಿ, ಹಲವರನ್ನು ಕೊಂದು ದೇಶವನ್ನು ವಿಮೋಚನಗೊಳಿಸಿದನೆಂದು ಜಸ್ಟಿನ್ ಹೇಳಿದ್ದಾನೆ. ಅವನು ಹೆಸರಿಸಿರುವ ಸಂದ್ರಕೋಟಸ್ ಎಂಬುವನು ಚಂದ್ರಗುಪ್ತನೇ ಇರಬೇಕು. ಇದುವರೆಗೆ ಲಭ್ಯವಿರುವ ಎಲ್ಲ ಪುರಾವೆಗಳಿಂದ ಚಂದ್ರಗುಪ್ತ ಪ್ರ.ಶ.ಪೂ.ಸು.324ರಲ್ಲಿ ಸಿಂಹಾಸವನ್ನೇರಿರಬಹುದೆಂದು ನಿರ್ಧರಿಸಬಹುದಾಗಿದೆ. ಪಂಜಾಬ್ ಮತ್ತು ಸಿಂಧ್ ಪ್ರದೇಶಗಳ ಮೇಲೆ ಒಡೆತನ ಸ್ಥಾಪಿಸಿದ ಮೇಲೆ ದೊರೆ ನಂದನ ದುರಾಡಳಿತವನ್ನು ಕೊನೆಗೊಳಿಸುವ ಕಾರ್ಯದಲ್ಲಿ ಚಂದ್ರಗುಪ್ತ ಉದ್ಯುಕ್ತನಾದನೆಂದು ಹೇಳಲಾಗಿದೆ. ಆದರೆ ಚಂದ್ರಗುಪ್ತ ಮಗಧ ರಾಜ್ಯವನ್ನು ಗೆದ್ದ ಬಗ್ಗೆ ಖಚಿತವಾದ ವಿವರಗಳು ಲಭ್ಯವಿಲ್ಲ. ಸುತ್ತಣ ರಾಜ್ಯವನ್ನು ಗೆಲ್ಲದೆ ದೇಶದ ಹೃದಯಭಾಗಕ್ಕೇ ಇವನು ದಂಡೆತ್ತಿಹೋದದ್ದು ಪ್ರಮಾದವಾಯಿತೆಂದು ಕೆಲವು ಕೃತಿಗಳ ಅಭಿಪ್ರಾಯ. ಚಂದ್ರಗುಪ್ತ ಗಡಿ ಪ್ರದೇಶಗಳಿಂದ ಆರಂಭಿಸಿ ಹಾದಿಯಲ್ಲಿ ಹಲವು ರಾಷ್ಟ್ರಗಳನ್ನೂ ಜನಪದಗಳನ್ನೂ ಜಯಿಸಿದನೆಂದೂ ಆದರೆ ತಾನು ಜಯಿಸಿದ ಪ್ರದೇಶಗಳ ತುದಿಭಾಗಗಳ ರಕ್ಷಣೆಗೆ ಸೈನ್ಯ ನೇಮಿಸಲಿಲ್ಲವಾದ್ದರಿಂದ ಅವು ಆಕ್ರಮಣಕ್ಕೊಳಗಾದುವೆಂದೂ ಬೌದ್ಧಸಂಪ್ರದಾಯದ ಬರೆವಣಿಗೆಗಳು ಹೇಳುತ್ತವೆ. ಕೊನೆಗೆ ಅವನು ಪಾಟಲಿಪುತ್ರವನ್ನು ಆಕ್ರಮಿಸಿ, ದುರಾಡಳಿತದಿಂದ ಜನಪ್ರಿಯತೆಯನ್ನು ಕಳೆದು ಕೊಂಡಿದ್ದ ಧನನಂದನನ್ನು ಕೊಂದನೆಂದು ತಿಳಿಸುತ್ತವೆ. ಚಾಣಕ್ಯನೇ ಈ ಮಹಾಸಾಧನೆಯ ಕರ್ತೃವೆಂಬುದು ಕೆಲವು ಕೃತಿಗಳ ನಂಬಿಕೆ. ಚಂದ್ರಗುಪ್ತನ ಸಮರಚಾತುರ್ಯಕ್ಕೆ ಚಾಣಕ್ಯನ ರಾಜತಂತ್ರ ಸೇರಿಕೊಂಡಿತೆಂದು ಹೇಳಬಹುದು.

ಪಾಟಲಿಪುತ್ರದಲ್ಲಿ ಮೌರ್ಯರ ಆಳಿಕೆ ಆರಂಭವಾಯಿತು. ಕೌಟಿಲ್ಯನನ್ನು ಚಂದ್ರಗುಪ್ತ ತನ್ನ ಪ್ರಧಾನಮಂತ್ರಿಯನ್ನಾಗಿ ಮಾಡಿಕೊಂಡು, ಚಕ್ರವರ್ತಿಯಾಗಿ ನಂದರ ಸೈನ್ಯವನ್ನೆಲ್ಲ ಪಡೆದು, ವಾಯವ್ಯ ಸೈನ್ಯವನ್ನು ಅದಕ್ಕೆ ಸೇರಿಸಿ ಅದು ದಕ್ಷತೆಯಿಂದ ಕೂಡಿರುವಂತೆ ಮಾಡಿದ. ಈ ಸೈನ್ಯದ ಸಹಾಯದಿಂದ ಕೆಲವೇ ವರ್ಷಗಳಲ್ಲಿ ಇವನು ಸಾಮ್ರಾಜ್ಯ ವಿಸ್ತರಿಸಿದ. ಅವನ ವಿಜಯಗಳಿಗೆ ಮುಖ್ಯವಾಗಿ ಅವನ ಪ್ರತಿಭೆಯೇ ಕಾರಣವಾಗಿತ್ತು. ಅವನು ಸ್ಥಾಪಿಸಿದ ಸಾಮ್ರಾಜ್ಯ ಹಿಂದಿನ ರಾಜ್ಯಗಳಿಗಿಂತ ವಿಸ್ತಾರವಾಗಿತ್ತು. ರಾಜ್ಯವಿಸ್ತರಣಕಾರ್ಯ ಮುಗಿದ ಮೇಲೆ ಸಂಘಟನೆಯ ಕೆಲಸ ಆರಂಭವಾಯಿತು. ಕೌಟಿಲ್ಯ ಉತ್ತಮ ಆಡಳಿತ ವ್ಯವಸ್ಥೆಯನ್ನು ರೂಪಿಸಿದ. ಅದರಲ್ಲಿ ಅಧಿಕಾರವೆಲ್ಲ ರಾಜನಲ್ಲಿಯೇ ಕೇಂದ್ರೀಕೃತವಾಗಿತ್ತು. ಭಾರತ ಹಿಂದಿನಂತೆ ಅಂತರ್ಯುದ್ಧಗಳಿಗೆ ಒಳಗಾದ ಸಣ್ಣ ಸಣ್ಣ ರಾಜ್ಯಗಳಿಂದ ಕೂಡಿರಲಿಲ್ಲ. ಅದರ ಬದಲು ಏಕತೆಯಿಂದ ಕೂಡಿದ ದಕ್ಷ ರಾಜ್ಯವಾಗಿದ್ದು ಪರಕೀಯರ ಧಾಳಿಯನ್ನು ಎದುರಿಸುವ ಶಕ್ತಿ ಹೊಂದಿತ್ತು

ಅಲೆಕ್ಸಾಂಡರನ ಮರಣಾನಂತರ ಅವನ ದಳಪತಿಗಳಲ್ಲಿ ಒಬ್ಬನಾದ ಸೆಲ್ಯೂಕಸ್ ತನ್ನ ವೈರಿಗಳ ಮೇಲೆ ಜಯಗಳಿಸಿ ಅಲೆಕ್ಸಾಂಡರನ ಸಾಮ್ರಾಜ್ಯದ ಪೂರ್ವಭಾಗಗಳಲ್ಲಿ ಹಲವನ್ನು ಗೆದ್ದು, ಪ್ರಬಲನಾಗಿ, ಅಲೆಕ್ಸಾಂಡರ್ ಭಾರತದಲ್ಲಿ ಆಕ್ರಮಿಸಿಕೊಂಡಿದ್ದು ಕೈತಪ್ಪಿ ಹೋಗಿದ್ದ ಪ್ರದೇಶಗಳನ್ನು ಹಿಂದಕ್ಕೆ ಪಡೆಯುವ ಉದ್ದೇಶದಿಂದ ಪ್ರ.ಶ.ಪೂ.305ರಲ್ಲಿ ಭಾರತದ ಮೇಲೆ ಧಾಳಿ ಮಾಡಿದ. ಸೆಲ್ಯೂಕಸನನಿಗೂ ಚಂದ್ರಗುಪ್ತ ಮೌರ್ಯನಿಗೂ ಯುದ್ಧ ನಡೆಯಿತು. ಯುದ್ಧದಲ್ಲಿ ಚಂದ್ರಗುಪ್ತ ಸೆಲ್ಯೂಕಸನನ್ನು ಪೂರ್ಣವಾಗಿ ಸೋಲಿಸಿದ. ಸೆಲ್ಯೂಕಸ್ ಒಪ್ಪಂದ ಮಾಡಿಕೊಂಡು ಏರಿಯ, ಆರಾಕೋಸಿಯ, ಪರೋಪನಿಸಿಡೀ ಪ್ರದೇಶಗಳನ್ನು ಚಂದ್ರಗುಪ್ತನಿಗೆ ಒಪ್ಪಿಸಬೇಕಾಯಿತು. ಈಗಿನ ಹೀರತ್ ಕಂದಹಾರ್ ಮತ್ತು ಕಾಬೂಲ್‌ಗಳು ಅವುಗಳ ರಾಜಧಾನಿಗಳಾಗಿದ್ದುವು. ಜಿಡ್ರೋಷಿಯದ (ಬಲೂಚಿಸ್ತಾನ) ಕೆಲವು ಭಾಗಗಳೂ ಚಂದ್ರಗುಪ್ತನ ವಶವಾಗಿದ್ದವು. ಪ್ರತಿಯಾಗಿ ಚಂದ್ರಗುಪ್ತ ಅವನಿಗೆ 500 ಯುದ್ಧದ ಆನೆಗಳನ್ನು ಕೊಟ್ಟ. ಇವರಿಬ್ಬರ ನಡುವೆ ವಿವಾಹ ಬಾಂಧವ್ಯ ಬೆಳೆಯಿತು. ಸೆಲ್ಯೂಕಸನ ಮಗಳನ್ನು ಚಂದ್ರಗುಪ್ತ ಮದುವೆಯಾದನೆಂದು ಭಾವಿಸಲಾಗಿದೆ. ಇವರಿಬ್ಬರ ಸಖ್ಯದ ಗುರುತಿಗಾಗಿ ಮೆಗಸ್ತಾನೀಸ್ ಎಂಬ ರಾಯಭಾರಿಯನ್ನು ಸೆಲ್ಯೂಕಸ್ ಚಂದ್ರಗುಪ್ತನ ಆಸ್ಥಾನಕ್ಕೆ ಕಳಿಸಿದ. ಮೆಗಾಸ್ತಾನೀಸ್ ಪಾಟಲಿಪುತ್ರದಲ್ಲಿ ಬಹಳ ಕಾಲ ಇದ್ದ. ಭಾರತದ ಬಗ್ಗೆ ಇಂಡಿಕಾ ಎಂಬ ಪುಸ್ತಕವೊಂದನ್ನು ಬರೆದ. ಅದು ನಷ್ಟವಾಗಿದೆ. ಅದರ ಹಲವು ಭಾಗಗಳು ಇತರ ಲೇಖಕರಿಂದ ದೀರ್ಘವಾಗಿ ಉದ್ಧೃತವಾಗಿವೆ.

ಚಂದ್ರಗುಪ್ತನ ಸಾಮ್ರಾಜ್ಯ ವಿಸ್ತಾರವಾಗಿತ್ತೆಂಬುದು ನಿಸ್ಸಂದೇಹ. 6 ಲಕ್ಷ ಸೈನಿಕರಿಂದ ಕೂಡಿದ ಇವನ ಸೇನೆ ಇಡೀ ಭಾರತವನ್ನು ಗೆದ್ದಿತೆಂದು ಫ್ಲೂಟಾರ್ಕ್ ಹೇಳಿದ್ದಾನೆ. ಇವನ ಸಾಮ್ರಾಜ್ಯದ ವಿಸ್ತಾರವೆಷ್ಟಿತ್ತೆಂಬುದು ಪರೋಕ್ಷವಾದ ಮಾಹಿತಿಗಳಿಂದ ಗೊತ್ತಾಗುತ್ತದೆ. ಇವನ ಮೊಮ್ಮಗನಾದ ಅಶೋಕ ಕಳಿಂಗವೊಂದನ್ನು ಬಿಟ್ಟು ಬೇರೆ ಯಾವ ಪ್ರದೇಶವನ್ನೂ ಗೆದ್ದಂತೆ ಕಾಣುವುದಿಲ್ಲ. ಬಿಂದುಸಾರ ಯಾವುದೇ ರಾಜ್ಯವನ್ನು ಗೆದ್ದ ಬಗ್ಗೆ ಉಲ್ಲೇಖಗಳಿಲ್ಲ. ಅಶೋಕ ಬಹುತೇಕ ಚಂದ್ರಗುಪ್ತ ಮೌರ್ಯನ ಸಾಮ್ರಾಜ್ಯವನ್ನೇ ಆಳುತ್ತಿದ್ದನೆಂಬುದು ಸ್ಪಷ್ಟ. ದಕ್ಷಿಣದಲ್ಲಿ ಕರ್ನಾಟಕದವರೆಗೂ ವಾಯವ್ಯದಲ್ಲಿ ಪರ್ಷಿಯದ ಎಲ್ಲೆಯವರೆಗೂ ಅವನ ಸಾಮ್ರಾಜ್ಯ ಹಬ್ಬಿತ್ತು. ವಂಬ ಮೋರಿಯರು ದಕ್ಷಿಣದ ಮೇಲೆ ದಂಡೆತ್ತಿ ಬಂದಿದ್ದರೆಂದು ಕೆಲವು ತಮಿಳು ಕೃತಿಗಳಲ್ಲಿ ಹೇಳಲಾಗಿದೆ. ಇವರು ಚಂದ್ರಗುಪ್ತನ ಸೇನೆಯ ಜನರೇ ಇರಬೇಕು. ತಿನ್ನವೆಲ್ಲಿ ಜಿಲ್ಲೆಯವರೆಗೂ ಇವನ ಸೇನೆ ಬಂದಿತ್ತೆಂದು ಹೇಳಲಾಗಿದೆ. ಜುನಾಗಡದಲ್ಲಿರುವ ಒಂದನೆಯ ರುದ್ರದಾಮನ ಶಾಸನದ ಪ್ರಕಾರ ಸೌರಾಷ್ಟ್ರ ಚಂದ್ರಗುಪ್ತ ಸಾಮ್ರಾಜ್ಯದ ಒಂದು ಪ್ರಾಂತವಾಗಿತ್ತು. ಅದನ್ನು ಪುಷ್ಯಗುಪ್ತನೆಂಬ ಪ್ರಾಂತಾಧಿಕಾರಿ ಆಳುತ್ತಿದ್ದ.

ಚಂದ್ರಗುಪ್ತ ತನ್ನ ಜೀವಮಾನದ ಉಳಿದ ಬಹುಭಾಗವನ್ನು ಚೈತ್ರಯಾತ್ರೆಯಲ್ಲಿ ಮತ್ತು ಸಾಮ್ರಾಜ್ಯ ಸಂಘಟನೆಯಲ್ಲಿ ಕಳೆದ. ಅವನು ಪ್ರ.ಶ.ಪೂ.300ರ ವರೆಗೆ ಆಳಿರಬೇಕು. ಆ ಬಗ್ಗೆ ವಿವರಗಳು ದೊರಕುವುದಿಲ್ಲ. ಚಂದ್ರಗುಪ್ತ ಜೈನಧರ್ಮವನ್ನವಲಂಬಿಸಿ, ಎಲ್ಲ ಭೋಗಭಾಗ್ಯಗಳನ್ನೂ ತ್ಯಜಿಸಿ, ರಾಜ್ಯವನ್ನು ಮಗನಾದ ಬಿಂದುಸಾರನಿಗೆ ವಹಿಸಿಕೊಟ್ಟು, ಗುರುವಾದ ಭದ್ರಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನ ವ್ರತಮಾಡಿ ದೇಹತ್ಯಾಗಮಾಡಿದನೆಂಬುದು ಜೈನರ ನಂಬಿಕೆ. ಚಂದ್ರಗುಪ್ತನ ರಾಜಧಾನಿ ಪಾಟಲಿಪುತ್ರ ವಿಶಾಲನಗರವಾಗಿತ್ತು. ಅದರ ಮಧ್ಯೆ ಸುಂದರವಾದ ಉಪವನಗಳಿಂದ ಆವೃತವಾದ ಅರಮನೆಯಿತ್ತು.

ರಾಜ್ಯಭಾರ: ಚಂದ್ರಗುಪ್ತ ತನ್ನ ವಿಶಾಲ ಸಾಮ್ರಾಜ್ಯವನ್ನು ಆಳಲು ಸುಲಭವಾಗುವಂತೆ ಅದನ್ನು ಹಲವು ಪ್ರಾಂತಗಳಾಗಿ ವಿಂಗಡಿಸಿ ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿದ್ದ. ಪೂರ್ವ ಮತ್ತು ಮಧ್ಯಭಾಗಗಳನ್ನು ನೇರವಾಗಿ ಅವನೇ ಆಳುತ್ತಿದ್ದ. ಗ್ರಾಮಾಡಳಿತ ಗ್ರಾಮಸಭೆಯಿಂದ ನಡೆಯುತ್ತಿತ್ತು. ಬಹಳಮಟ್ಟಿಗೆ ಅಧಿಕಾರದ ವಿಕೇಂದ್ರೀಕರಣ ಜಾರಿಯಲ್ಲಿತ್ತು. ಸಚಿವರುಗಳಿಂದ ಕೂಡಿದ ಮಂತ್ರಿಪರಿಷತ್ತು ಆಡಳಿತದಲ್ಲಿ ರಾಜನಿಗೆ ಸಹಾಯಕವಾಗಿತ್ತು. ಗೂಢಚಾರರ ಮೂಲಕ ದೇಶದ ಆಗುಹೋಗುಗಳನ್ನು ರಾಜ ತಿಳಿಯುತ್ತಿದ್ದ.

ಮೆಗಾಸ್ತನೀಸ್ ಸ್ಥಳೀಯಾಡಳಿತದ, ಅದರಲ್ಲೂ ಪಾಟಲೀಪುತ್ರದ ಪೌರಾಡಳಿತದ ವಿಷಯವಾಗಿ ತನ್ನ ಇಂಡಿಕಾ ಗ್ರಂಥದಲ್ಲಿ ವಿಶೇಷ ಮಾಹಿತಿ ನೀಡಿದ್ದಾನೆ. ಅದರ ಆಡಳಿತ ಆಧುನಿಕ ಪೌರಸಭೆಯ ಆಡಳಿತದಂತಿತ್ತು. ನಗರಪಾಲಕನ ನೇತೃತ್ವದಲ್ಲಿ ಐವರು ಸದಸ್ಯರ ಆರು ಸಮಿತಿಗಳಿದ್ದುವು. ಪ್ರತಿ ಸಮಿತಿಗೂ ಒಂದೊಂದು ಕೆಲಸವನ್ನು ವಹಿಸಲಾಗಿತ್ತು. ಮೊದಲ ಸಮಿತಿ ನಗರದ ಔದ್ಯೋಗಿಕ ಕಾರ್ಯಗಳನ್ನು ನೋಡಿಕೊಳ್ಳುತ್ತಿತ್ತು. ಎರಡನೆಯ ಸಮಿತಿ ನಗರದ ವಿದೇಶೀಯರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿತ್ತು. ಜನನಮರಣ ದಾಖಲೆಗಳನ್ನು ಇಡುವುದು ಮೂರನೆಯದರ ಕೆಲಸ. ನಾಲ್ಕನೆಯದು ವ್ಯಾಪಾರದ ತೂಕ ಮತ್ತು ಅಳತೆಗಳನ್ನು ನೋಡಿಕೊಳ್ಳುತ್ತಿತ್ತು. ಐದನೆಯದು ಕೈಗಾರಿಕಾವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ನೋಡಿಕೊಳ್ಳುತ್ತಿತ್ತು. ಮಾರಾಟವಾದ ಸರಕುಗಳ ಬೆಲೆಯ ಹತ್ತನೆಯ ಒಂದು ಭಾಗವನ್ನು ವಸೂಲು ಮಾಡುವುದು ಆರನೆಯ ಸಮಿತಿಯ ಕಾರ್ಯಭಾರ. ಕೃಷಿ, ನೀರಾವರಿ, ಲೋಕೋಪಯೋಗಿ ಕೆಲಸಗಳು, ಮಾರುಕಟ್ಟೆ, ಬಂದರು, ದೇವಸ್ಥಾನಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ವ್ಯವಸ್ಥೆಯಿತ್ತು. ರಕ್ಷಣಾಡಳಿತವೂ ಉತ್ತಮವಾಗಿತ್ತು. ಉತ್ತಮ ತರಬೇತಿ ಪಡೆದು ದಕ್ಷತೆಯಿಂದ ಕೂಡಿದ್ದ ಸೈನ್ಯವಿತ್ತು. ಸೈನ್ಯದಲ್ಲಿ 6 ಲಕ್ಷ ಸೈನಿಕರು, 30 ಸಾವಿರ ಕುದುರೆಗಳು 9 ಸಾವಿರ ಆನೆಗಳು ಮತ್ತು 8 ಸಾವಿರ ರಥಗಳಿದ್ದುವು. ರಾಜನೇ ಸೈನ್ಯದ ಮುಖ್ಯ ದಂಡ ನಾಯಕನಾಗಿದ್ದ. ಅದರ ಆಡಳಿತ, ಹತ್ತೊಟಿ 30 ಸದಸ್ಯರನ್ನೊಳಗೊಂಡ ಸಮಿತಿಯು ನಿರ್ವಹಿಸುತ್ತಿತ್ತು.. ಅದರಲ್ಲಿ ಆರು ಮಂಡಳಿಗಳಿದ್ದುವು.

ಭೂಕಂದಾಯವೇ ರಾಜ್ಯದ ಮುಖ್ಯ ಆದಾಯ. ಉದ್ಯೋಗಗಳು, ಗಣಿ, ವಸ್ತುಗಳ ಮೇಲೆ ತೆರಿಗೆ ಅರಣ್ಯೋತ್ಪನ್ನಗಳು ಮತ್ತು ಸಾಮಂತರಾಜರ ಕಪ್ಪಕಾಣಿಕೆಗಳೂ ಇತರ ಆದಾಯಗಳು. ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಸಮಾಹರ್ತ ಎಂಬ ಅಧಿಕಾರಿಯಿದ್ದ. ಚಂದ್ರಗುಪ್ತ ಮೌರ್ಯ ವ್ಯವಸಾಯಕ್ಕೆ ಪ್ರೋತ್ಸಾಹ ನೀಡಿದ. ಇವನ ಆಸ್ಥಾನದ ವೈಭವವನ್ನೂ ಅರಮನೆಯನ್ನೂ ಮೆಗಾಸ್ತನೀಸ್ ವಿವರಿಸಿದ್ದಾನೆ. ಉದ್ಯಾನಗಳಲ್ಲಿ ನವಿಲುಗಳೂ ಇತರ ಹಲವು ಪಕ್ಷಿಗಳೂ ಇದ್ದುವು. ಅರಮನೆಯ ತಟಾಕಗಳಲ್ಲಿ ಬಣ್ಣಬಣ್ಣದ ಮೀನುಗಳಿದ್ದುವು. ಗ್ರೀಕ್ ಚರಿತ್ರಕಾರರು ಸಾಮಾನ್ಯ ಜನರ ಜೀವನದ ವಿಚಾರವಾಗಿಯೂ ಕೆಲವು ಮಾಹಿತಿ ಒದಗಿಸಿದ್ದಾರೆ. ರಾಜ್ಯ ಸುಭಿಕ್ಷದಿಂದಿತ್ತು. ಜನರಲ್ಲಿ ನೆಮ್ಮದಿ ಇತ್ತು. ಅವರು ಕುಶಲಕಲೆ ಮತ್ತು ಇತರ ಉದ್ಯೋಗಗಳಲ್ಲಿ ಪರಿಶ್ರಮ ಹೊಂದಿದ್ದವರಾಗಿದ್ದರು. ಜನ ಪ್ರಾಮಾಣಿಕರಾಗಿದ್ದರು. ಕಳ್ಳತನ ಮತ್ತು ದರೋಡೆಗಳು ವಿರಳವಾಗಿದ್ದುವು. ಜನತೆಯ ರಕ್ಷಣೆಗಾಗಿ ಒಂದು ಪೊಲೀಸ್ ಪಡೆಯಿತ್ತು. ದಂಡನೀತಿ ಕಠಿಣವಾಗಿತ್ತು. (ವಿ.ಕೆ.)

**ಚಂದ್ರಪುರ:** ದಕ್ಷಿಣಗೋವದ ಜಿಲ್ಲಾ ಕೇಂದ್ರದಿಂದ 11 ಕಿಮೀ ದೂರದಲ್ಲಿರುವ ಒಂದು ಸಣ್ಣ ಹಳ್ಳಿ, ಜುವರಿ ನದಿಯ ಉಪನದಿ ಕುಶಾವತಿ ನದಿ ತಟದಲ್ಲಿ, ಸಮುದ್ರ ತೀರದಿಂದ 30ಕಿಮೀ ದೂರದಲ್ಲಿದೆ. ಕೋಟೆಯಿಂದ ಸುತ್ತುವರೆಯಲ್ಪಟ್ಟ ಈ ಸ್ಥಳದ ಪ್ರಚಲಿತ ನಾಮ ಕೋಟ್ಟೆ ಚಾಂದೋರ. ಈ ಸ್ಥಳದ ಇತಿಹಾಸ ಸಾತವಾಹನರಿಂದ ಆರಂಭವಾಗುತ್ತದೆ. ತದನಂತರ ಭೋಜರು, ಬಾದಾಮಿ ಚಳುಕ್ಯರು, ಶಿಲಾಹಾರರು, ರಾಷ್ಟ್ರಕೂಟರು, ಗೋವೆಯ ಕದಂಬರು ಮೊದಲಾದವರ ಆಳಿಕೆಯಲ್ಲಿತ್ತೆಂಬುದಕ್ಕೆ ಆಧಾರಗಳಿವೆ. ಅನಂತರ ಮಹಮ್ಮದ್ ಬಿನ್ ತುಗಲಕ್‌ನ ಧಾಳಿಯಿಂದ ತತ್ತರಿಸಿದ ಚಾಂದೋರ ತನ್ನ ಪೂರ್ವಸ್ಥಿತಿಗೆ ಮರಳಲೇ ಇಲ್ಲ. 4ನೆಯ ಶತಮಾನದಿಂದ ಮಧ್ಯಯುಗೀನ ಕಾಲದವರೆಗಿನ ಕೆಲವು ಶಿಲಾಶಾಸನಗಳಲ್ಲಿ ಚಂದ್ರಪುರದ ವರ್ಣನೆಯಿದೆ. ಚಂದ್ರಪುರ ಬಹುಕಾಲದವರೆಗೆ ಗೋವೆಯ ರಾಜಧಾನಿಯಾಗಿದ್ದುದರಿಂದ ಸ್ಥಳೀಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳನ್ನು ನಿರೂಪಿಸುವ ಅನೇಕ ಮಹತ್ತ್ವದ ಮಾಹಿತಿಗಳು ಇಲ್ಲಿ ದೊರೆತಿವೆ.



ಮಾಹದೇವ ಮಂದಿರ

ಸಾತವಾಹನ ಕಾಲದ ಮಣ್ಪಾತ್ರೆ ಚೂರುಗಳು ಹಾಗೂ ನಾಣ್ಯಗಳು ದೊರಕಿರುವುದರಿಂದ ಸು.2–3 ನೆಯ ಶತಮಾನದಲ್ಲಿ ಈ ಪ್ರದೇಶ ಇವರ ಆಳಿಕೆಗೆ ಒಳಪಟ್ಟಿರಬಹುದು. ಭೋಜರು 4ನೆಯ ಶತಮಾನದಿಂದ ಈ ಪ್ರದೇಶದಲ್ಲಿ ರಾಜ್ಯಭಾರ ಮಾಡಿದರೆಂದು ಶಿರೋಡ ಶಾಸನದಿಂದ ತಿಳಿಯುತ್ತದೆ. 580–750 ರವರೆಗೆ ಬಾದಾಮಿ ಚಳುಕ್ಯರು ಈ ಪಟ್ಟಣವನ್ನು ತಮ್ಮ ಹಿಡಿತಕ್ಕೆ ಒಳಪಡಿಸಿದರು. ಮುಂದೆ ಇಲ್ಲಿ ಶಿಲಾಹಾರರು, ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದ ಕದಂಬರು 13ನೆಯ ಶತಮಾನದವರೆಗೆ ಆಳಿಕೆ ಮಾಡಿದರು. ಆದರೆ ಗೋವೆಯ ಕದಂಬರು ಪ್ರಾಬಲ್ಯಕ್ಕೆ ಬಂದ ಅನಂತರ ರಾಜಧಾನಿಯನ್ನು ಚಾಂದೋರದಿಂದ ಗೋಪಕ ಪಟ್ಟಣಕ್ಕೆ ವರ್ಗಾಯಿಸಿದರು. ತದನಂತರದಲ್ಲಿ ರಾಜಧಾನಿಯನ್ನು ಚಾಂದೋರಕ್ಕೆ ಮರುವರ್ಗಾಯಿಸಿದರೂ ಚಾಂದೋರ ತನ್ನ ಮೊದಲಿನ ಸ್ಥಿತಿಗೆ ಬರಲಿಲ್ಲ.

ಈ ನೆಲೆಯಲ್ಲಿ ಇದುವರೆಗೆ ಮೂರು ಬಾರಿ ಉತ್ಖನನ ಕಾರ್ಯ ನಡೆಸಲಾಗಿದೆ. ಮುಂಬೈಯ ಸೇಂಟ್ ಜೇವಿಯರ್ ಇತಿಹಾಸ ಮತ್ತು ಸಾಂಸ್ಕೃತಿಕ ಸಂಸ್ಥೆಯ ಫಾದರ್ ಹೇರಾಸ್ ಅವರು ಮೊದಲ ಬಾರಿ ಉತ್ಖನನ ನಡೆಸಿದಾಗ ಹಿಂದು ಮತ್ತು ಜೈನ ತೀರ್ಥಂಕರ, ಸಪ್ತಮಾತೃಕಾ ಮತ್ತು ಸತಿ ಸ್ಮಾರಕ ಮತ್ತು ಕದಂಬರ ಕಾಲದ ಬಂಗಾರದ ನಾಣ್ಯಗಳು ದೊರೆತವು. ಎರಡನೆಯ ಬಾರಿ ಎಸ್.ಆರ್. ರಾವ್ ನೇತೃತ್ವದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1974ರಲ್ಲಿ ಉತ್ಖನನ ಕಾರ್ಯ ನಡೆಸಿ ಎರಡು ಕಾಲಾವಧಿಯ ಇಟ್ಟಿಗೆ ಕಟ್ಟಡದ ಅವಶೇಷಗಳನ್ನು ಬೆಳಕಿಗೆ ತಂದಿತು. ಉತ್ಖನನದಲ್ಲಿ ದೊರೆತ ಮಡಕೆಯ ಚೂರುಗಳಿಂದ ಮೊದಲಿನ ಕಟ್ಟಡ ಸು. 3–4ನೆಯ ಶತಮಾನದ್ದೆಂದು ಗುರುತಿಸಲಾಗಿದೆ. 1999–2003ರವರೆಗೆ ಸತತವಾಗಿ 4 ವರ್ಷ ಜೆ.ವಿ.ಪಿ.ರಾವ್ ಅವರ ನಿರ್ದೇಶನದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಉತ್ಖನನ ಕೈಗೊಂಡಿತು. ಮಂದಿರ ಸ್ಥಳದಲ್ಲಿ ಮತ್ತು ಕೋಟೆಯ ಪ್ರವೇಶದ್ವಾರದ ಒಳ–ಹೊರ ಬದಿಗಳಲ್ಲಿ ಮತ್ತು ಐತಿಹಾಸಿಕ ಹಾಗೂ ಪುರಾಣೋಕ್ತ ಆಧಾರದ ಮೇಲೆ ಆಯ್ದ ಕೆಲವು ಭಾಗಗಳಲ್ಲಿ ಉತ್ಖನನ ಕಾರ್ಯವನ್ನು ಕೈಗೊಳ್ಳಲಾಯಿತು. ಇದರ ಫಲವಾಗಿ ಮಂದಿರ ಕೇವಲ ಎರಡು ಹಂತಗಳಲ್ಲಿ ಕಟ್ಟಿದ ಕಟ್ಟಡವಾಗಿರದೆ ಐದು ಹಂತಗಳಲ್ಲಿ ನಿರ್ಮಾಣವಾಗಿದೆ ಎಂದು ತಿಳಿದು ಬಂದಿತು. ಮಂದಿರ ಸ್ಥಳದ ಉತ್ಖನನದಲ್ಲಿ ಪ್ರಾಚೀನವಾದ ಒಂದು ಇಟ್ಟಿಗೆ ದೇವಾಲಯದ ಕುರುಹುಗಳು ದೊರೆತವು. ತ್ರಿಕೂಟ ವಿನ್ಯಾಸದ ಈ ಇಟ್ಟಿಗೆ ದೇವಾಲಯ ವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿತ್ತು. ಇದರ ಗೋಡೆಯ ಒಳಹೊರ ಮುಖಗಳನ್ನು ಅಚ್ಚುಕಟ್ಟಾದ ಇಟ್ಟಿಗೆಗಳಿಂದ ನಿರ್ಮಿಸಿ, ಮಧ್ಯಭಾಗವನ್ನು ಇಟ್ಟಿಗೆ ಚೂರುಗಳಿಂದ ಒತ್ತೊತ್ತಾಗಿ ತುಂಬಲಾಗಿತ್ತು. ಜೇಡಿಮಣ್ಣಿನ ಗಾರೆಯಿಂದ ಇಟ್ಟಿಗೆಗಳನ್ನು ಜೋಡಿಸಲಾಗಿತ್ತು. ಮಂದಿರದ ಹಜಾರದಲ್ಲಿ ಹದಿನಾಲ್ಕು ಕಂಬಗಳ ಅಡಿಗಲ್ಲುಗಳು ದೊರೆತವು. ಮಂದಿರದ ಸುತ್ತಲೂ ಪ್ರಾಕಾರದ ಅವಶೇಷಗಳಿವೆ. ಮಂದಿರದ ನಾಲ್ಕನೆಯ ಹಂತದ ನಿರ್ಮಾಣದಲ್ಲಿ ಜಂಬಿಟ್ಟಿಗೆಯನ್ನು ಬಳಸಲಾಗಿದೆ. ಮುಖ್ಯದೇವಾಲಯದ ಆಗ್ನೇಯ ದಿಕ್ಕಿನಲ್ಲಿ ಆಯತಾಕಾರದ ಚಿಕ್ಕ ಗುಹೆಯೊಂದರ ನೆಲಗಟ್ಟು ದೊರೆತಿದೆ. ಇಟ್ಟಿಗೆಯ ಈ ಗುಡಿಗೆ ತ್ರಿಪಟ್ಟಕುಮುದ ಅಧಿಷ್ಠಾನವಿದೆ. ಪ್ರಾಕಾರದ ಗೋಡೆಯ ಅವಶೇಷದ ಮೇಲ್ಭಾಗಕ್ಕೂ ವಿಸ್ತರಿಸಿರುವ ಈ ಗುಡಿ, ಅನಂತರದ ಕಾಲದ್ದೆಂದು ಹೇಳಬಹುದು.

ಸಾಂತಿಯಾಗೂ ಚಾಪೆಲ್: ಸಾಂತಿಯಾಗೂ ಚಾಪೆಲ್‌ನ ಸುತ್ತಲಿನ ಜಾಗವನ್ನು ಕೋಟೆಯ ಪ್ರವೇಶದ್ವಾರದ ಜಾಗವೆಂದು ಗುರುತಿಸಲಾಗಿದೆ. ಇಲ್ಲಿಯ ಉತ್ಖನನದಲ್ಲಿ ಇಟ್ಟಿಗೆಯ ಚೂರುಗಳು ಮತ್ತು ಕೆಂಪು ವರ್ಣದ ಮಣ್ಪಾತ್ರೆಗಳು ದೊರಿತಿದ್ದು, ಮೂರು ಹಂತದ ನಿರ್ಮಾಣಕಾರ್ಯವನ್ನು ಸೂಚಿಸುತ್ತವೆ. ಚಾಪೆಲ್‌ನ ಮುಂದೆ ಉತ್ತರದಿಂದ ದಕ್ಷಿಣಕ್ಕೆ ವಿವಿಧ ಗಾತ್ರಗಳ ಇಟ್ಟಿಗೆಯಿಂದ ನಿರ್ಮಿತವಾದ ಗೋಡೆ ಇದ್ದದ್ದು ಕಂಡುಬಂದಿದೆ.

ಕೋಟೆಯ ಗೋಡೆ: ಈ ಕೋಟೆಯನ್ನು ಮೂರು ಹಂತಗಳಲ್ಲಿ ನಿರ್ಮಿಸಲಾಗಿದೆ ಎಂಬುದನ್ನು ಉತ್ಖನನ ಸಾಬೀತುಪಡಿಸುತ್ತದೆ. ಈ ಮೂರು ಹಂತಗಳನ್ನು ಕ್ರಮವಾಗಿ ಮಂದಿರದ 1, 2 ಮತ್ತು 3ನೆಯ ಹಂತಗಳಿಗೆ ಸಮೀಕರಿಸಬಹುದು. ಈ ಕೋಟೆ 8 ರಿಂದ 10 ಮೀ ಅಗಲವಾಗಿದ್ದು 6 ರಿಂದ 8 ಮೀ ಎತ್ತರವಿದೆ. ಇದು ಈಗ ಶಿಥಿಲಾವಸ್ಥೆಯಲ್ಲಿದೆ.

ಮಡಕೆ ಕುಡಿಕೆಗಳು: 1ರಿಂದ 4ನೆಯ ಹಂತಗಳಲ್ಲಿ ವಿವಿಧ ಛಾಯೆಯ ಕೆಂಪು ಮತ್ತು ಕಪ್ಪುಬಣ್ಣದ ಮಣ್ಪಾತ್ರೆಗಳಿವೆ. ವಿವಿಧ ಬಣ್ಣದ ಗಾಜಿನ ಚೂರುಗಳು ಕಂಡುಬಂದಿವೆ. 5ನೆಯ ಹಂತದಲ್ಲಿ ಮುಖ್ಯವಾಗಿ ಪಿಂಗಾಣಿ ಪಾತ್ರೆಗಳು, ಪೋರ್ಚುಗೀಸ್ ಮತ್ತು ಚೀನಿ ಹಾಗೂ ಬಿಜಾಪುರ ಆದಿಲ್‌ಶಾಹಿ ಕಾಲದ ಹಲವು ರೀತಿಯ ಗಾಜಿನ ತುಣುಕುಗಳು ದೊರೆತಿವೆ.

ಮೆದುಕಲ್ಲಿನ ನಾಗಮೂರ್ತಿ ಮೊದಲನೆಯ ಹಂತದ ನಿರ್ಮಾಣಕಾರ್ಯಕ್ಕೆ ಸಂಬಂಧಪಟ್ಟದ್ದಾಗಿದೆ. ಇದರ ಮೇಲುಭಾಗ ಭಗ್ನವಾಗಿದೆ. ಸಾಂತಿಯಾಗೊ ಚಾಪೆಲ್ ಪ್ರದೇಶದ ಉತ್ಖನನದಲ್ಲಿ ದೊರೆತ ಒಂದು ಮಹತ್ತ್ವದ ವಸ್ತುವೆಂದರೆ ತ್ರಿಕೋನಾಕಾರದ ಬಸಾಲ್ಟ್ ಕಲ್ಲಿನ ಮೇಲಿನ ಸು. 4ನೆಯ ಶತಮಾನದ ಮೂರು ಅಕ್ಷರಗಳುಳ್ಳ ಶಾಸನ, ಇದನ್ನು ಸೆಪ್ಪ ಎಂದು ಓದಲಾಗಿದೆ. ಇದು ಬಹುಶಃ ವ್ಯಕ್ತಿಯ ಇಲ್ಲವೆ ಸಂಘದ ಹೆಸರಾಗಿರಬಹುದು. ಈ ತ್ರಿಕೋನಾಕಾರ ಕಲ್ಲಿನ ಇನ್ನೊಂದು ಬದಿಯಲ್ಲಿ ಚತುರ್ಭುಜದ ಶಿಲ್ಪವಿದೆ ಮತ್ತು ಸ್ಫಟಿಕಾಕೃತಿಯ ರೇಖಾ ಚಿತ್ರವಿದೆ. ಇದನ್ನು ನಿಖರವಾಗಿ ಏನೆಂದು ಹೇಳಲಾಗದು. ಇದರ ಇನ್ನೊಂದು ಭಾಗದಲ್ಲಿ ಸುಂದರವಾದ ಹಂಸವನ್ನು ಕೊರೆಯಲಾಗಿದೆ. ಇದೇ ರೀತಿಯ ಹಂಸದ ಚಿತ್ರವನ್ನು ಸಿರೊಡಾ ತಾಮ್ರಶಾಸನದಲ್ಲೂ ಕಾಣಬಹುದಾಗಿದೆ. ಇದು ಭೋಜರ ಕಾಲದ್ದಾಗಿದ್ದು ಲಿಪಿಯ ಆಧಾರದ ಮೇಲೆ 4ನೆಯ ಶತಮಾನದ್ದೆಂದು ಊಹಿಸಲಾಗಿದೆ.

ನಾಣ್ಯಗಳು: 1–4ನೆಯ ಹಂತದವರೆಗಿನ ಯಾವುದೇ ನಾಣ್ಯಗಳು ಉತ್ಖನನದಲ್ಲಿ ದೊರೆತಿಲ್ಲ. ಕೇವಲ ಪೋರ್ಚುಗೀಸ್ ಕಾಲದ ಕೆಲವೊಂದು ನಾಣ್ಯಗಳು ದೊರೆತಿವೆ.

ವಿವಿಧ ಬಣ್ಣದ ಗಾಜಿನ ಬಳೆಗಳು, ಮುತ್ತುಗಳು, ಕಾಂತಿಯುಕ್ತ ಕಲ್ಲಿನ ಆಭರಣಗಳು ಬಂಗಾರದ, ಗಾಜಿನ, ಮಣ್ಣಿನ, ತಾಮ್ರದ ಉಂಗುರಗಳು ಹಾಗೂ ಕಾಲುಂಗುರಗಳು ಇಲ್ಲಿ ದೊರೆತಿರುವ ಮುಖ್ಯ ಆಭರಣಗಳಾಗಿವೆ. ಇವಲ್ಲದೆ ತಾಮ್ರ ಮತ್ತು ಕಬ್ಬಿಣ ಮುಳ್ಳುಗಳು, ತೆಳುವಾದ ಅಲಗು ಹಾಗೂ ಚಾಣಗಳು ದೊರೆತಿವೆ.

ಕಾಲನಿರ್ಣಯ: ಇಲ್ಲಿ ದೊರೆತ ಅವಶೇಷಗಳನ್ನು ಆಧರಿಸಿ ಕಾಲಮಾನವನ್ನು ಹೀಗೆ ಗುರುತಿಸಲಾಗಿದೆ: 1ನೆಯ ಹಂತ 3–4ನೆಯ ಶತಮಾನ; 2ನೆಯ ಹಂತ 5–6ನೆಯ ಶತಮಾನ; 3ನೆಯ ಹಂತ 8–9ನೆಯ ಶತಮಾನ; 4ನೆಯ 11–14ನೆಯ ಶತಮಾನ; 5ನೆಯ ಹಂತ 18ನೆಯ ಶತಮಾನದ ಅನಂತರ. (ಜಿಬಿ.)

**ಚಂದ್ರವಳ್ಳಿ: ನೋಡಿ–ಚಿತ್ರದುರ್ಗ**

**ಚಂಪನೇರ್: ಪಾವಗಡ ಪುರಾತತ್ತ್ವ ಉದ್ಯಾನವನ:** ಗುಜರಾತ್ ರಾಜ್ಯದಲ್ಲಿರುವ ಈ ನೆಲೆಯಲ್ಲಿ ಇಂದಿಗೂ ಜನವಸತಿಯಿರುವ ಐತಿಹಾಸಿಕ ಕಟ್ಟಡಗಳು, ತಾಮ್ರ–ಶಿಲಾಯುಗದ ನೆಲೆಗಳು, ಪ್ರಾಚೀನ ಹಿಂದು ರಾಜ್ಯದ ರಾಜಧಾನಿ, ಗಿರಿದುರ್ಗ ಮತ್ತು 16 ನೆಯ ಶತಮಾನದ ಗುಜರಾತ್‌ನ ರಾಜಧಾನಿಯ ಅವಶೇಷಗಳು ವಿಸ್ತಾರವಾಗಿ ಹರಡಿವೆ. 8–14 ನೆಯ ಶತಮಾನಗಳ ಕೋಟೆಗೋಡೆ, ಅರಮನೆ, ಧಾರ್ಮಿಕ ಕಟ್ಟಡಗಳು, ವಾಸಗೃಹಗ ಳಿರುವ ಪ್ರದೇಶ, ವ್ಯವಸಾಯಕ್ಕೆ ಸಂಬಂಧಿಸಿದ ಕಟ್ಟಡ ಮತ್ತು ನೀರು ಪೂರೈಕೆಯ ಅವಶೇಷಗಳು ಅಲ್ಲಲ್ಲಿವೆ. ಪಾವಗಡ ಬೆಟ್ಟದ ಮೇಲಿನ ಕಾಳಿಮಾತೆಯ ದೇವಾಲಯ ವರ್ಷದುದ್ದಕ್ಕೂ ಭಕ್ತಾದಿಗಳನ್ನು ಆಕರ್ಷಿಸುವ ಪ್ರಮುಖ ಧಾರ್ಮಿಕ ಕೇಂದ್ರ. ಇಲ್ಲಿ ಮೊಗಲರ ಕಾಲಕ್ಕಿಂತ ಮುಂಚಿನ, ಪೂರ್ಣವಾಗಿ ಉಳಿದುಕೊಂಡಿರುವ ಒಂದು ಇಸ್ಲಾಮಿಯ ನಗರವಿದೆ. ಕರನ್ ಗ್ರೋವರ್ ಎಂಬ ವಾಸ್ತುಶಿಲ್ಪಿ ಈ ನಗರವನ್ನು ಸಂರಕ್ಷಿಸಿ ಮೂಲ ಸ್ವರೂಪಕ್ಕೆ ತರಲು ಮತ್ತು ಭಾರತೀಯ ಪರಂಪರೆಯ ಕಟ್ಟಡಗಳನ್ನು ಸಂರಕ್ಷಿಸಲು ಬಹಳಷ್ಟು ಪ್ರಯತ್ನಿಸಿದ. ಇದನ್ನು ವಿಶ್ವ ಪರಂಪರೆ ನೆಲೆಯೆಂದು 2004 ರಲ್ಲಿ ಘೋಷಿಸಲಾಯಿತು.

(ಎ.ಎಸ್.;ಎನ್.ಎಲ್.)

**ಚಂಪಾರಣ್ ಸತ್ಯಾಗ್ರಹ:** ಪಶ್ಚಿಮ ಬಿಹಾರದ ಚಂಪಾರಣ್‌ನಲ್ಲಿ 1917ರಲ್ಲಿ ಬ್ರಿಟಿಷ ವಿರುದ್ಧ ನಡೆದ ಚಳವಳಿಯಲ್ಲಿ ನೀಲಿ ಬೆಳೆಗಾರರು ನಡೆಸಿದ ಸತ್ಯಾಗ್ರಹ. ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ ಚಳವಳಿಗೆ ದುಮುಕಿ ಅಗ್ರಗಾಮಿ ದೂತನಾದ ಮೇಲೆ ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ಒಂದು ಹೊಸ ಶಕೆ ಆರಂಭವಾಯಿತು. ಇದರ ಪರಿಣಾಮವಾಗಿ ಬ್ರಿಟಿಷರ ಆಡಳಿತ ನಿರರ್ಥಕವಾಯಿತು. ಚಂಪಾರಣ್ ಸತ್ಯಾಗ್ರಹ ಕೆಳವರ್ಗದವರಿಂದ ಮೇಲ್ವರ್ಗದವರ ವಿರುದ್ಧ ನಡೆದ ಚಳವಳಿಯಾಗಿತ್ತು. ಇದು ಬ್ರಿಟಿಷರಿಗೆ ಒಂದು ರೀತಿಯ ಒತ್ತಡವನ್ನು ಹಾಕಿತು. ಈ ಚಳವಳಿಯಲ್ಲಿ ನಗರ ಪ್ರದೇಶದ ಬುದ್ಧಿಜೀವಿಗಳಾದ ರಾಜೇಂದ್ರ ಪ್ರಸಾದ್, ಜೆ.ಬಿ.ಕೃಪಲಾನಿ ಮೊದಲಾದವರು ಭಾಗವಹಿಸಿದ್ದು ಗಾಂಧೀಜಿಯವರನ್ನು ಆಕರ್ಷಿಸುವಂತೆ ಮಾಡಿತು. ಶ್ರೀಮಂತ ವರ್ಗದವರು ಜಮೀನನ್ನು ಕೊಂಡು ಹೆಚ್ಚಿನ ಪ್ರಮಾಣದಲ್ಲಿ ಸೇರಿ ನೀಲಿ ಬೆಳೆಯನ್ನು ಬೆಳೆಯಲಾರಂಭಿಸಿದರು. ಆದರೆ ಕೆಳವರ್ಗದ ಶ್ರೀಮಂತ ಮತ್ತು ಮಧ್ಯಮವರ್ಗದ ರೈತರು ಸ್ಥಳೀಯ ಮಹಾರಾಜ ಮತ್ತು ವ್ಯಾಪಾರಿಗಳು ಭೂಮಾಲೀಕರ ವಿರುದ್ಧ ದಂಗೆ ಎದ್ದರು. ಏಕೆಂದರೆ ಭೂಮಾಲೀಕರು, ವ್ಯಾಪಾರಿಗಳು ಮತ್ತು ಹಣದ ಲೇವಾದೇವಿಗಾರರ ವಿರುದ್ಧ ಸ್ಪರ್ಧೆಗಿಳಿದರು. ಗಾಂಧೀಜಿ ಯವರು ಈ ಜಿಲ್ಲೆಗೆ ಯಾವುದೇ ಕಾರಣಕ್ಕೂ ಬಾರದಂತೆ ತಡೆಯುವ ಪ್ರಯತ್ನ ಮಾಡುತ್ತಿದ್ದರು. ಆದರೆ ಈ ಸಮಸ್ಯೆಯನ್ನು ಸರಿಪಡಿಸಲು ಚಂಪಾರಣ್‌ಗೆ ಭೇಟಿ ನೀಡುವಂತೆ ಗಾಂಧೀಜಿಯವರನ್ನು ರೈತರು ಕೇಳಿಕೊಂಡರು. ಜೆ.ಬಿ.ಕೃಪಲಾನಿ, ಬ್ರಿಜ್ ಕಿಶೋರ್ ಪ್ರಸಾದ್, ರಾಜ್‌ಕುಮಾರ್ ಶುಕ್ಲ ಮತ್ತು ಇತರರ ಜೊತೆಗೂಡಿ ಗಾಂಧೀಜಿಯವರು ಹಳ್ಳಿಗೆ ಭೇಟಿ ನೀಡಿ ಕಡುಬಡ ರೈತರನ್ನು ಪತ್ತೆ ಹಚ್ಚಿ ಕೃಷಿಕರ ದುರವಸ್ಥೆ, ಭೂಮಾಲೀಕರು ಕಾನೂನುಬಾಹಿರವಾಗಿ ಭೂಮಿಯನ್ನು ವಿಸ್ತರಿಸಿಕೊಂಡಿರುವುದು ಮತ್ತು ರೈತರನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಿದ್ದುದನ್ನು ಕಂಡು ಆಶ್ಚರ್ಯಚಕಿತರಾದರು.

ಚಂಪಾರಣ್‌ದಲ್ಲಿ ನಿಷ್ಕೃಷ್ಟ ರೀತಿಯ ಆಚರಣೆಯೆಂದರೆ ರೈತರು 20 ರಿಂದ 30 ವರ್ಷಗಳ ಕಾಲ ನಿಗದಿಪಡಿಸಿದ ಬೆಲೆಗೆ ನೀಲಿಯನ್ನು ಬಲವಂತದಿಂದ ಬೆಳೆಯಬೇಕಾಗಿತ್ತು. ಇವರ ಜೀವನ ವ್ಯವಸ್ಥೆ ತೀನ್‌ಕಾತೀಯ ಪದ್ಧತಿ ಎಂದು ಪರಿಚಿತವಾಗಿತ್ತು. ಇದರ ಅರ್ಥವೇನೆಂದರೆ ಬೆಳೆಗಾರರು ಹೊಂದಿದ್ದ ಫಲವತ್ತಾದ ಭೂಮಿಯ 3/20 ಭಾಗದಲ್ಲಿ ನೀಲಿ ಬೆಳೆಯನ್ನು ಬೆಳೆದು ತೋಟದ ಮಾಲೀಕ ನಿಗದಿಪಡಿಸಿದ ಬೆಲೆಯಲ್ಲಿ ಮಾರಾಟ ಮಾಡಬೇಕಾಗಿತ್ತು. ಸರ್ಕಾರ ಹಣ ಸಂದಾಯದಲ್ಲಿ ವಿಳಂಬ ಮಾಡುತ್ತಿದ್ದುದಲ್ಲದೆ ಅಕ್ರಮ ಕಾನೂನು ಪದ್ಧತಿಗಳಿಂದ ರೈತರ ಆದಾಯಕ್ಕೆ ಪೆಟ್ಟು ಬಿದ್ದು ಅದನ್ನು ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸರ್ಕಾರದ ಕಾನೂನುಗಳು ಶ್ರೀಮಂತ ತೋಟದ ಮಾಲೀಕರ ಪರವಾಗಿದ್ದು ಸಣ್ಣ ತೋಟಗಾರರು ಕಷ್ಟಕ್ಕೆ ಸಿಲುಕಿಕೊಂಡರು. ದೊಡ್ಡ ಗೇಣಿದಾರರು ಭೂಮಾಲೀಕರು ಸರ್ಕಾರದೊಂದಿಗೆ ಒಟ್ಟಿಗೆ ಸೇರಿ ನೀಲಿಬೆಳೆಯನ್ನು ಹೆಚ್ಚು ಬೆಳೆಯುವಂತೆ ಒತ್ತಾಯ ಮಾಡುತ್ತಿದ್ದರು. ಸರ್ಕಾರ ಹೆಚ್ಚು ಬೆಲೆಯನ್ನು ತಮ್ಮ ಪರವಿದ್ದ ದೊಡ್ಡ ತೋಟದ ಮಾಲೀಕರಿಗೆ ನೀಡುತ್ತಿತ್ತು.

ವಿಶೇಷವಾಗಿ 1900ರ ಅನಂತರ ರೈತರ ಪರಿಸ್ಥಿತಿ ತುಂಬಾ ಶೋಚನೀಯ ಮತ್ತು ಸಹಿಸಲಸಾಧ್ಯವಾಗಿತ್ತು. ಯಾವಾಗ ಜರ್ಮನಿಯಲ್ಲಿ ಕೃತಕ ಬಣ್ಣವನ್ನು ಕಂಡುಹಿಡಿಯ ಲಾಗಿತ್ತೋ ಆಗ ದೇಶೀಯ ನೀಲಿಬಣ್ಣ ಸಂಪೂರ್ಣವಾಗಿ ನಷ್ಟ ಹೊಂದಿತು. ಒಂದನೆಯ ಮಹಾಯುದ್ಧದ ಸಮಯದಲ್ಲಿ ಕೃತಕ ಬಣ್ಣವನ್ನು ಯುರೋಪಿನಿಂದ ಒದಗಿಸುವುದನ್ನು ನಿಲ್ಲಿಸಲಾಗಿತ್ತು. ಆಗ ನೀಲಿ ಬಣ್ಣಕ್ಕೆ ಬೆಲೆ ಹೆಚ್ಚಾಗಿ ಎಲ್ಲಾ ಆದಾಯವೂ ತೋಟದ ಮಾಲೀಕನಿಗೆ ಸಲ್ಲುತ್ತಿತ್ತು. ರೈತರ ದುಃಖವನ್ನು ಕೇಳಿದ ಅನಂತರ ಗಾಂಧೀಜಿ ನೀಲಿ ಬೆಳೆ ಬೆಳೆಯುವುದನ್ನು ನಿಲ್ಲಿಸುವಂತೆ ರೈತರನ್ನು ಕೇಳಿಕೊಂಡರು. ಪೊಲೀಸರಿಗೆ ಹೆದರದಂತೆ ಕರೆಯಿತ್ತರು. ಅನೇಕ ಪ್ರತಿಭಾವಂತ ವಕೀಲರು ಮತ್ತಿತರರು ಸತ್ಯಾಗ್ರಹಕ್ಕೆ ಸೇರಿಕೊಂಡರು. 1917 ಮೇ 2 ರಂದು ಗಾಂಧೀಜಿ ಸತ್ಯಾಗ್ರಹ ಪ್ರಾರಂಭಿಸಿದ ಮೇಲೆ ಅದನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಅರ್ಧದಷ್ಟು ಪ್ಲಾಂಟರುಗಳನ್ನು ಜಿಲ್ಲೆಯಿಂದ ಕಿತ್ತೆಸೆಯಲು ಸಿದ್ಧರಿರಬೇಕು ಎಂದು ಹೇಳಿದರು.

ಗಾಂಧೀಜಿಯವರು ಕಾರ್ಯನಿರ್ವಾಹಕ ಸದಸ್ಯರ ಸಮಿತಿಯನ್ನು ಮತ್ತು ರಾಂಚಿಯ ಲೆಫ್ಟಿನೆಂಟ್ ಗವರ್ನರ್‌ರನ್ನು ಭೇಟಿ ಮಾಡಿ ಮನವಿಪತ್ರ ನೀಡಿದರು. ಗಾಂಧೀಜಿಯವರ ಮನವಿಗೆ ಸ್ಪಂದಿಸಿದ ಸರ್ಕಾರ 1917ರಲ್ಲಿ ಅವರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಚಂಪಾರಣ್ ಆಗ್ರಹ ವಿಚಾರಣಾ ಸಮಿತಿಯನ್ನು ನೇಮಿಸಿತು. ಈ ಸಮಿತಿ ಗಾಂಧೀಜಿ ಯವರನ್ನು ಭೇಟಿಮಾಡಿ ಸಮಿತಿಯಲ್ಲಿ ಅವರೂ ಒಬ್ಬ ಸದಸ್ಯರಾಗಿರಬೇಕೆಂದು ಕೇಳಿಕೊಂಡಿತು. ಸಮಿತಿ ಚಂಪಾರಣ್ ಪ್ರದೇಶದ ವಿಚಾರಣೆ ನಡೆಸಿ ರೈತರ ಪರವಾದ ವರದಿಯನ್ನು ಸಲ್ಲಿಸಿತು. ಇದರ ಫಲದಿಂದಾಗಿ ತೀನ್‌ಕಾತೀಯ ಪದ್ಧತಿಯ ಬೇಸಾಯ ರದ್ದುಗೊಂಡಿತು. ಪ್ಲಾಂಟರ್ ಬಾಡಿಗೆಯನ್ನು 1/4ಭಾಗದಷ್ಟು ಹೆಚ್ಚಿಸಲಾಯಿತು ಮತ್ತು ಸರ್ಕಾರ ಕೊಡುತ್ತಿದ್ದ ಮೊತ್ತದ ಜೊತೆಗೆ ಅರ್ಧವನ್ನು ಬ್ರಿಟಿಷರು ಮತ್ತು ಪ್ಲಾಂಟರ್‌ಗಳು ಭರಿಸುವಂತಾಯಿತು. ಮುಂದೆ ಗೇಣಿದಾರರು ತಮ್ಮ ಭೂಮಿಯನ್ನು ಹೊಂದಲು ಮತ್ತೆ ಒಪ್ಪಂದರಹಿತವಾಗಿ ನೀಲಿ ಬೆಳೆಯಲು ಅವಕಾಶ ಮಾಡಿಕೊಟ್ಟರು. ಮುಂದಿನ ಒಪ್ಪಂದಗಳಿಗೆ ಅನಾವಶ್ಯಕವಾಗಿ ತಡೆಯೊಡ್ಡದಂತೆ ರೈತರು ಮತ್ತು ತೋಟದ ಮಾಲೀಕರ ನಡುವೆ ನ್ಯಾಯವುಂಟಾಗುವಂತೆ ಮಾಡುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

ಈ ಚಳವಳಿ ಫಲ ರೈತರಿಗೆ ದೊಡ್ಡ ವಿಜಯ ಲಭಿಸಿತು. ಗಾಂಧೀಜಿ ಅವರ ನಾಯಕತ್ವ ಮತ್ತು ಮಾರ್ಗದರ್ಶನದಿಂದ ಸತ್ಯಾಗ್ರಹ ಹೊಸ ಉತ್ಸಾಹದೊಂದಿಗೆ ಹೊಸ ಜೀವ ಪಡೆಯಿತು. ಈ ಚಳವಳಿ ಬಿಹಾರದಾದ್ಯಂತ ಜನಸಾಮಾನ್ಯರ ಹೋರಾಟವಾಯಿತು. ಗಾಂಧೀಜಿಯವರು ಈ ಚಳವಳಿಯಲ್ಲಿ ಅನುಸರಿಸಿದ ವಿಧಾನಗಳಿಂದ ಬಹುಬೇಗ ರೈತರಿಗೆ ಉಪಯೋಗವಾಯಿತು. ಈ ಚಂಪಾರಣ್ ಚಳವಳಿ ರಾಷ್ಟ್ರೀಯತೆಯ ಬೆಳವಣಿಗೆಗೆ ಸಹಾಯ ವಾಯಿತೆಂಬುದು ಇ.ಎಂ.ಎಸ್. ನಂಬೂದ್ರಿಪಾದ್ ಅಭಿಪ್ರಾಯ. (ಎಂ.ಎಸ್.)

**ಚರಕ:** ಭಾರತೀಯ ವೈದ್ಯಪದ್ಧತಿಯ ಸುಪ್ರಸಿದ್ಧ ಆಯುರ್ವೇದ ಶಾಸ್ತ್ರಜ್ಞ ಮತ್ತು ವೈದ್ಯ. ಈತ ರಚಿಸಿದ ಶಾಸ್ತ್ರಗ್ರಂಥ ಚರಕಸಂಹಿತೆ. ಪ್ರಾಚೀನ ಭಾರತದಲ್ಲಿ ಚರಕ ಎಂಬ ಪದ ವೃತ್ತಿಸೂಚಕವಾಗಿದ್ದಿತ್ತೆಂದು ತೋರುತ್ತದೆ. ಕೃಷ್ಣ ಯಜುರ್ವೇದ ಶಾಖೆಯ ವೈದಿಕರು, ಸಂಚರಣಶೀಲ ಶಾಸ್ತ್ರಬೋಧಕರು, ವ್ಯಾಯಾಮ ನಿಪುಣರು, ಗೂಢಚಾರರು ಮೊದಲಾದವರನ್ನು ಚರಕರೆಂದು ಕರೆಯಲಾಗುತ್ತಿತ್ತು. ಮುಖ್ಯವಾಗಿ ವ್ಯಾಕರಣ, ಜ್ಯೋತಿಷ್ಯ, ಆಯುರ್ವೇದ, ಧನುರ್ವೇದ ಮುಂತಾದ ಶಾಸ್ತ್ರಗಳಲ್ಲಿ ನಿಷ್ಣಾತರಾಗಿ ಶಿಷ್ಯರಿಗೆ ಅವನ್ನು ಬೋಧಿಸುತ್ತ ಸಂಚರಿಸುತ್ತಿದ್ದ ಋಷಿ, ಮುನಿಗಳನ್ನು ಚರಕಾಚಾರ್ಯರೆಂದೇ ಕರೆದಿದ್ದಿರಬಹುದೆಂದು ಊಹಿಸಲಾಗಿದೆ. ಇಂಥವರಲ್ಲಿ ಆಯುರ್ವೇದ ಶಾಸ್ತ್ರದ ಅತಿಮುಖ್ಯ ಗ್ರಂಥವನ್ನು ರಚಿಸಿದಾತ ಒಬ್ಬ ಚರಕಾಚಾರ್ಯ. ಇವನ ಜನ್ಮಸ್ಥಳ, ವಂಶವೃತ್ತಾಂತ, ಕಾಲ ಮುಂತಾದ ವಿವರಗಳಾವೂವೂ ನಿರ್ದಿಷ್ಟವಾಗಿ ತಿಳಿದಿಲ್ಲ. ಪುರಾಣಗ್ರಂಥಗಳಲ್ಲಿ ಇವನನ್ನು ಆದಿಶೇಷನ ಅವತಾರವೆಂದು ವರ್ಣಿಸಲಾಗಿದೆ. ವಾಗ್ಭಟಾಚಾರ್ಯ ಮತ್ತು ಭಾವಮಿಶ್ರರು ಇವನನ್ನು ಮುನಿ ಎಂದು ತಿಳಿಸುತ್ತಾರೆ. ಪಾಣಿನಿಯ ವ್ಯಾಕರಣದ ಮೇಲಿನ ಮಹಾಭಾಷ್ಯದ ಕರ್ತೃವಾದ ಪತಂಜಲಿ ಋಷಿಯೇ ಚರಕಾಚಾರ್ಯನೆಂದೂ ಪತಂಜಲಿ ಆದಿಶೇಷನ ಅವತಾರವೆಂದೂ ವಿಜ್ಞಾನಭಿಕ್ಷು ಮತ್ತು ಭೋಜ ಎಂಬುವರು ವರ್ಣಿಸಿದ್ದಾರೆ. ಚಕ್ರಪಾಣಿದತ್ತನೆಂಬ ವ್ಯಾಖ್ಯಾನಕಾರ ಚರಕ ಸಂಹಿತೆಗೆ ಪತಂಜಲಿಯೇ ಪ್ರಥಮ ಭಾಷ್ಯಕಾರನೆಂದು ಸ್ತುತಿಸಿದ್ದಾನೆ. ಚೀನದೇಶದಲ್ಲಿ ದೊರೆತ ಬೌದ್ಧ ತ್ರಿಪಿಟಿಕ ಗ್ರಂಥಗಳಲ್ಲಿ ಇಂಡೋಸಿಥಿಯನ್ ದೊರೆ ಕಾನಿಷ್ಕನ ಆಸ್ಥಾನದಲ್ಲಿ ಚರಕನೆಂಬ ವೈದ್ಯಾಚಾರ್ಯನಿದ್ದ ನೆಂದು ತಿಳಿಸಲಾಗಿದೆ. ಚರಕಸಂಹಿತೆಯ ಆಂತರಿಕ ಲಕ್ಷಣ, ಭಾಷಾಶೈಲಿ, ಚಾರಿತ್ರಿಕ ಹಿನ್ನೆಲೆ ಮುಂತಾದ ಆಧಾರಗಳೆಲ್ಲವನ್ನೂ ವಿಮರ್ಶಿಸಿರುವ ಪ್ರಾಚ್ಯವಿದ್ಯಾಸಂಶೋಧಕರ ಅಭಿಪ್ರಾಯದಲ್ಲಿ ಅದರ ಕರ್ತೃವೂ ಮಹಾಭಾಷ್ಯದ ಕರ್ತೃ ಪತಂಜಲಿಯೂ ಭಿನ್ನವ್ಯಕ್ತಿಗಳು; ಕಾನಿಷ್ಕನ ಆಸ್ಥಾನದ ವಸುಮಿತ್ರ ಅಶ್ವಘೋಷ, ನಾಗಾರ್ಜುನ ಮೊದಲಾದವರ ಗ್ರಂಥಗಳಲ್ಲಿ ಕಂಡುಬರುವಂಥ ಬೌದ್ಧಮತೀಯ ವಿಷಯಗಳು ಚರಕಸಂಹಿತೆಯಲ್ಲಿ ಕಾಣದಿರುವುದು ಮತ್ತು ಚರಕ ಸಂಹಿತೆಯ ಶೈಲಿಯ ಭಿನ್ನತೆಗಳು ಚರಕ ಸಂಹಿತೆಯ ಕರ್ತೃವೂ ರಾಜವೈದ್ಯ ಚರಕನೂ ಭಿನ್ನ ವ್ಯಕ್ತಿಗಳೆಂದು ದೃಢಪಡಿಸುತ್ತವೆ ಮತ್ತು ಚರಕಸಂಹಿತೆಯ ಕಾಲ ಪ್ರ.ಶ.ಪೂ.1 ಅಥವಾ 2ನೆಯ ಶತಮಾನಕ್ಕೇ ಸರಿಯಾಗಬಲ್ಲುದು. ಭಾರತದ ವಿಜ್ಞಾನಿಗಳ ರಾಷ್ಟ್ರೀಯ ಸಂಸ್ಥೆ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸ್ ಆಫ್ ಇಂಡಿಯ) ನಡೆಸಿದ ಸಮೀಕ್ಷೆಯ ಪ್ರಕಾರ ಚರಕ ಸಂಹಿತೆಯ ರಚನೆಯ ಕಾಲ 100 ಎಂದಿದೆ. ಚರಕ ಸಂಹಿತೆಯ ಕರ್ತೃ ಚರಕಾಚಾರ್ಯ ಪ್ರ.ಶ.ಪೂ.2ನೆಯ ಶತಮಾನದಲ್ಲಿದ್ದ ಪ್ರಸಿದ್ಧ ಲೋಹಶಾಸ್ತ್ರಜ್ಞ ಪತಂಜಲಿ ಎಂಬಾತ, ಕನಿಷ್ಕನ (2ನೆಯ ಶತಮಾನ) ರಾಜವೈದ್ಯ ಚರಕನ ನಾಮ ಸಾದೃಶ್ಯವುಳ್ಳ ಅನಂತರಕಾಲೀನ ವ್ಯಕ್ತಿ ಎಂಬ ಅಭಿಪ್ರಾಯ ಈಗ ಮಾನ್ಯತೆ ಪಡೆದಿದೆ.

ಚರಕಸಂಹಿತೆ ಚರಕಾಚಾರ್ಯನ ಸ್ವತಂತ್ರಕೃತಿಯಲ್ಲ. ಪ್ರ.ಶ.ಪೂ.7ನೆಯ ಶತಮಾನದ ಮಹರ್ಷಿ ಕೃಷ್ಣಾತ್ರೇಯ ಬೋಧಿಸಿದ ಸಿದ್ಧಾಂತಗಳನ್ನು ಆತನ ಶಿಷ್ಯೋತ್ತಮನಾದ ಅಗ್ನಿವೇಷ ಋಷಿ ಗ್ರಂಥವನ್ನಾಗಿ ರಚಿಸಿದ. ದೇವತೆಗಳಿಂದಲೂ ಶ್ಲಾಘಿಸಲ್ಪಟ್ಟ ಈ ಅಗ್ನಿವೇಶ ಸಂಹಿತೆ ಆಯುರ್ವೇದ ಅಧ್ಯಯನ ಅಧ್ಯಾಪನಾದಿಗಳಿಗೆ ಆಧಾರಗ್ರಂಥವಾಗಿ ಮುಂದಿನ ಶತಮಾನಗಳಲ್ಲಿ ಮಾನ್ಯತೆ ಪಡೆಯಿತು. ದೇಶದಲ್ಲಿ ಉಂಟಾದ ರಾಜಕೀಯ ಕ್ಷೋಭೆ, ಪರಕೀಯರ ಆಕ್ರಮಣ ಮುಂತಾದ ಹಲವಾರು ಕಾರಣಗಳಿಂದ ಈ ಅಗ್ನಿವೇಶ ಸಂಹಿತೆ ಪ್ರ.ಶ.ಪೂ. 2ನೆಯ ಶತಮಾನದ ವೇಳೆಗೆ ದುಷ್ಪ್ರಾಪ್ಯವೂ ಅಸಮಗ್ರವೂ ಆಗಿದ್ದುದನ್ನು ಕಂಡು ಅದನ್ನು ಪುನಃ ಸಂಪಾದಿಸಿ ಪರಿಷ್ಕರಿಸಿ ಅಧ್ಯಯನಯೋಗ್ಯವನ್ನಾಗಿ ಮಾಡಿದ ಕೀರ್ತಿ ಚರಕಾಚಾರ್ಯನಿಗೆ ಸಲ್ಲುತ್ತದೆ. ಪ್ರತಿಸಂಸ್ಕಾರಾನಂತರ ಈ ಗ್ರಂಥ ಚರಕಸಂಹಿತೆಯೆಂದೇ ಖ್ಯಾತಿ ಪಡೆಯಿತು. ಮುಂದಿನ ಮೂರು ಶತಮಾನಗಳು ಕಳೆಯುವುದರೊಳಗೆ ಇದು ಕೂಡ ಅಸಂಪೂರ್ಣವಾಗಿ ದೊರೆಯುವಂತಾಯಿತು. ಕಾಶ್ಮೀರದ ಪಂಚನಪುರವೆಂಬಲ್ಲಿ 4ನೆಯ ಶತಮಾನದಲ್ಲಿದ್ದ ಕಪಿಲಬಲನೆಂಬುವನ ಪುತ್ರನಾದ ದೃಢಬಲನೆಂಬಾತ ಚರಕ ಸಂಹಿತೆಯನ್ನು ಪುನಃ ಪರಿಷ್ಕರಿಸಿ ಅಂತ್ಯ 41 ಅಧ್ಯಾಯಗಳನ್ನು ತಾನೇ ರಚಿಸಿ ಗ್ರಂಥಕ್ಕೆ ಸೇರಿಸಿ ಅದನ್ನು ಸಂಪೂರ್ಣಗೊಳಿಸಿದ. ಇದೇ ನಮಗೆ ಇಂದು ದೊರೆತಿರುವ ಚರಕಸಂಹಿತೆ– ಮಹರ್ಷಿ ಕೃಷ್ಣಾತ್ರೇಯನ ಬೋಧನೆಗಳುಳ್ಳ, ಅಗ್ನಿವೇಶ ಋಷಿಪ್ರಣೀತವಾದ, ಚರಕಾಚಾರ್ಯ ನಿಂದ ಪ್ರತಿ ಸಂಸ್ಕೃತವಾದ ದೃಢಬಲನಿಂದ ಸಂಪೂರ್ಣಗೊಳಿಸಲ್ಪಟ್ಟ ಆಯುರ್ವೇದ ಶಾಸ್ತ್ರದ ಅತ್ಯಮೂಲ್ಯ ಆಧಾರ ಗ್ರಂಥ.

5ನೆಯ ಶತಮಾನದ ಈಶಾನದೇವ, ಭಟ್ಟಾರ ಹರಿಶ್ಚಂದ್ರರಿಂದ ಪ್ರಾರಂಭಿಸಿ ವಾಪ್ಯಚಂದ್ರ, ಬತುಳತರ, ಭೀಮದತ್ತ, ನರದತ್ತ, ಜೇಜ್ಜಟ, ಗುಣಾಕಾರ, ಚಕ್ರಪಾಣಿದತ್ತ, ಸ್ವಾಮಿಕುಮಾರ, ಶಿವದಾಸಸೇನ, ಗಂಗಾಧರರಾಯ ಮತ್ತು ಇಪ್ಪತ್ತನೆಯ ಶತಮಾನದ ಯೋಗೇಂದ್ರನಾಥ ಸೇನರವರೆಗೆ ಅನೇಕ ಪಂಡಿತರ ವ್ಯಾಖ್ಯಾನಗಳಿವೆ. ಇವುಗಳ ಪೈಕಿ 11ನೆಯ ಶತಮಾನದಲ್ಲಿ

ಬಂಗಾಲದ ಗೌಡದೇಶದ ರಾಜ ನಯಪಾಲನ ಆಸ್ಥಾನವೈದ್ಯನೂ ಪಾಕಶಾಲಾಧ್ಯಕ್ಷನೂ ಆಗಿದ್ದ ಚಕ್ರಪಾಣಿದತ್ತ ರಚಿಸಿರುವ ಆಯುರ್ವೇದದ ದೀಪಿಕಾ ವ್ಯಾಖ್ಯಾನ ಅತ್ಯಂತ ವಿದ್ವತ್ಪೂರ್ಣವಾಗಿದ್ದು ಕರ್ತೃವಿಗೆ ಚರಕ ಚತುರಾನನ ಎಂಬ ಪ್ರಶಸ್ತಿಯನ್ನು ಗಳಿಸಿಕೊಟ್ಟಿತು. ಈಗ ಸಮಗ್ರವಾಗಿ ಲಭ್ಯವಾಗಿರುವ ವ್ಯಾಖ್ಯಾನಗಳಲ್ಲಿ ಇದೇ ಪ್ರಾಚೀನವಾದುದಾಗಿದ್ದು ಇದರ ಮಹತ್ತ್ವವನ್ನು ಮತ್ತಷ್ಟು ಹೆಚ್ಚಿಸಿದೆ. ಚರಕ ಸಂಹಿತೆಯ ಖ್ಯಾತಿ ಅನ್ಯದೇಶಗಳಿಗೂ ಹರಡಿದ್ದು 8ನೆಯ ಶತಮಾನದಲ್ಲೇ ಇದರ ಅರಬ್ಬೀ ಮತ್ತು ಪರ್ಷಿಯನ್ ಭಾಷಾಂತರಗಳು ದೊರೆಯುತ್ತಿದ್ದುವಂತೆ. ಈಚೆಗೆ ಇದರ ಆಂಗ್ಲಭಾಷಾನುವಾದವೂ ರಚಿತವಾಗಿದೆ.

ಚರಕನ ಹೆಸರ ಜೊತೆ ಸುಶ್ರುತ **(ನೋಡಿ)** ಹೆಸರು ಸಹ ವೈದ್ಯಕೀಯ ಪ್ರಪಂಚದಲ್ಲಿ ಪ್ರಸಿದ್ಧ. (ಕೆ.ಆರ್.ಎಸ್.)

**ಚರ್ಚಿಲ್, ವಿನ್‌ಸ್ಟನ್:** 1874–1965. ಬ್ರಿಟಿಷ್ ರಾಜನೀತಿಜ್ಞ, ಎರಡನೆಯ ಮಹಾಯುದ್ಧದಲ್ಲಿ ತನ್ನ ದೇಶವನ್ನು ವಿಜಯದ ಹಾದಿಯಲ್ಲಿ ಕೊಂಡೊಯ್ದ ಮಹಾನಾಯಕ. 1874 ನವೆಂಬರ್ 30ರಂದು ಆಕ್ಸ್‌ಫರ್ಡ್‌ಷೈರ್‌ನ ಬ್ಲೆನ್‌ಹೀಂ ಅರಮನೆಯಲ್ಲಿ ಜನಿಸಿದ. ತಂದೆ ಲಾರ್ಡ್ ರ‍್ಯಾಂಡಾಲ್ಫ್ ಚರ್ಚಿಲ್, ತಾಯಿ ಜೇನೆಟ್ ಜೆರೋಂ, ಅಮೆರಿಕದ ಉದ್ಯಮಿಯೊಬ್ಬನ ಮಗಳು. ಪ್ರಾರಂಭಿಕ ವಿದ್ಯಾಭ್ಯಾಸವಾದ ಮೇಲೆ ಚರ್ಚಿಲ್ ಹ್ಯಾರೊದಲ್ಲಿ ಸ್ವಲ್ಪ ಕಾಲ ವಿದ್ಯಾಭ್ಯಾಸ ನಡೆಸಿದ. ಸ್ಯಾಂಡ್‌ಹರ್ಸ್ಟ್‌ನ ರಾಯಲ್ ಮಿಲಿಟರಿಶಾಲೆಗೆ ಸೇರಿ(1893) ಯಶಸ್ವಿಯಾಗಿ ವಿದ್ಯಾಭ್ಯಾಸ ಮುಗಿಸಿದ. 1894ರಲ್ಲಿ ತಂದೆ ನಿಧನಗೊಂಡ ಅನಂತರ ಚರ್ಚಿಲ್ 4ನೆಯ ಹುಸ್ಸಾರ್ ಪಡೆ ಸೇರಿ, ಎರಡು ತಿಂಗಳ ಕಾಲ ಕ್ಯೂಬದಲ್ಲಿದ್ದು ಲಂಡನ್ನಿನ ಡೇಲಿ ಗ್ರಾಫಿಕ್ ಪತ್ರಿಕೆಗೆ ಆ ದೇಶದ ಸ್ವಾತಂತ್ರ್ಯ ಸಂಗ್ರಾಮ ಕುರಿತು ವರದಿಗಳನ್ನು ಕಳುಹಿಸುತ್ತಿದ್ದ.

1896 ತಮ್ಮ ರೆಜಿಮೆಂಟಿನೊಂದಿಗೆ ಭಾರತಕ್ಕೆ ಬಂದು, ವಾಯವ್ಯ ಗಡಿನಾಡಿನಲ್ಲಿ ನಡೆಯುತ್ತಿದ್ದ ಯುದ್ಧವನ್ನು ಕುರಿತ ವರದಿಗಳನ್ನು ಬರೆಯುವುದರ ಜೊತೆಗೆ, ತತ್ತ್ವಜ್ಞಾನ, ಇತಿಹಾಸ, ಅರ್ಥಶಾಸ್ತ್ರಗಳನ್ನೂ ಅಧ್ಯಯನ ಮಾಡಿದ. ಇವನ ವರದಿಗಳು ಜನಪ್ರಿಯ ವಾದವು. ಅಲ್ಲಿಂದ ಮುಂದೆ ಇವನ ಒಂದು ಪ್ರಮುಖ ಹವ್ಯಾಸ ಬರೆವಣಿಗೆಯಾಯಿತು. ರಾಜಕೀಯ ಪ್ರವೇಶ ಮಾಡುವ ಉದ್ದೇಶದಿಂದ ಸೈನಿಕ ಹುದ್ದೆಗೆ ರಾಜೀನಾಮೆ ನೀಡಿದ ಚರ್ಚಿಲ್ ಕನ್ಸರ್ವೇಟಿವ್ ಪಕ್ಷದ ಪರವಾಗಿ ಓಲ್ಡ್ ಹ್ಯಾಂನಿಂದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದ (1899). ಜಯ ಲಭಿಸಲಿಲ್ಲ. ಆದರೆ ನಿರಾಶನಾಗದೆ ಮತ್ತೆ ಲಂಡನ್ನಿನ ಮಾರ್ನಿಂಗ್ ಪೋಸ್ಟ್ ಪತ್ರಿಕೆಗಾಗಿ ದಕ್ಷಿಣ ಆಫ್ರಿಕದ ಯುದ್ಧದ ವರದಿಗಾರನಾಗಿ ಕೆಲಸ ಮಾಡಿದ. ಬೋಯರರಿಗೆ ಸೆರೆಸಿಕ್ಕಿ ಶಿಬಿರದಿಂದ ತಪ್ಪಿಸಿಕೊಂಡು ಬ್ರಿಟನ್‌ಗೆ ಹಿಂದಿರುಗಿದಾಗ ಚರ್ಚಿಲ್ ವೀರನೆಂದು ಖ್ಯಾತಿ ಗಳಿಸಿದ. ಅನಂತರ ಓಲ್ಡ್ ಹ್ಯಾಂ ಚುನಾವಣೆಗಳಲ್ಲಿ ಇವನಿಗೆ ಜಯ ಲಭಿಸಿತು (1900). ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಉಪನ್ಯಾಸ ಪ್ರವಾಸಮಾಡಿ ತನ್ನ ಮುಂದಿನ ರಾಜಕೀಯ ಜೀವನಕ್ಕಾಗಿ ಹಣ ಸಂಪಾದಿಸುವುದರಲ್ಲಿ ಯಶಸ್ವಿಯಾದ.

ಚರ್ಚಿಲ್ ಟೋರಿ ಪಕ್ಷದವನಾಗಿದ್ದರೂ ಆ ಪಕ್ಷದ ನೀತಿಯನ್ನು ಅನೇಕ ವೇಳೆ ಟೀಕಿಸುತ್ತಿದ್ದ. ಬೋಯೆರರ ಬಗ್ಗೆ ಇವನದು ಉದಾರನೀತಿಯಾಗಿತ್ತು. 1904ರಲ್ಲಿ ಇವನು ಆ ಪಕ್ಷವನ್ನು ತ್ಯಜಿಸಿ ಲಿಬರಲ್ ಪಕ್ಷವನ್ನು ಸೇರಿದ. 1906ರಲ್ಲಿ ಓಲ್ಡ್‌ಹ್ಯಾಂ ಚುನಾವಣೆಯಲ್ಲಿ ಸೋಲಾಯಿತಾದರೂ ಮ್ಯಾಂಚೆಸ್ಟರಿನಿಂದ ಜಯಗಳಿಸಿದ. ಹೊಸದಾಗಿ ಸ್ಥಾಪಿತವಾದ ಲಿಬರಲ್ ಸರ್ಕಾರದಲ್ಲಿ ಇವನಿಗೆ ವಸಾಹತುಗಳ ಅಧೀನ ಕಾರ್ಯದರ್ಶಿಯ ಅಧಿಕಾರ ಲಭಿಸಿತು. 1908ರಲ್ಲಿ ಬೋರ್ಡ್ ಆಫ್ ಟ್ರೇಡ್‌ನ ಅಧ್ಯಕ್ಷನಾದ. ಆ ವರ್ಷ ನಡೆದ ಚುನಾವಣೆಗಳಲ್ಲಿ ಮ್ಯಾಂಚೆಸ್ಟರಿನಲ್ಲಿ ಸೋತ. ಆದರೆ ಡಂಡೀಯಲ್ಲಿ ಇವನಿಗೆ ಜಯ ಲಭಿಸಿತು. ಇವನಿಗೆ ಆ ವರ್ಷವೇ ವಿವಾಹವಾಯಿತು. ಪತ್ನಿ ಕ್ಲೆಮೆಂಟೀನ್. ಬೋರ್ಡ್ ಆಫ್ ಟ್ರೇಡ್‌ನ ಅಧ್ಯಕ್ಷನಾಗಿ ಕಾರ್ಮಿಕರ ಸ್ಥಿತಿಯನ್ನು ಉತ್ತಮ ಪಡಿಸುವ ಅನೇಕ ಕ್ರಮಗಳನ್ನು ಈತ ಜಾರಿಗೆ ತಂದ. 1910ರಲ್ಲಿ ಗೃಹಸಚಿವನಾಗಿ ಕಾರಾಗೃಹ ಸುಧಾರಣೆ ಯಲ್ಲಿ ವಿಶೇಷ ಆಸಕ್ತಿ ವಹಿಸಿದ. ಆಗ ಸಂಭವಿಸಿದ ಕೈಗಾರಿಕ ಅಶಾಂತಿಯಲ್ಲಿ ಈತ ವಹಿಸಿದ ಪಾತ್ರದಿಂದ ತೀವ್ರವಾದಿಗಳನೇಕರ ಬೆಂಬಲ ತಪ್ಪಿಹೋಯಿತು. 1911ರಲ್ಲಿ ಇವನು ಅಡ್ಮಿರಾಲ್ಟಿಯ ಮುಖ್ಯಸ್ಥನಾದ. ನೌಕಾದಳವನ್ನು ಸಜ್ಜುಗೊಳಿಸುವ ಕಾರ್ಯದಲ್ಲಿ ಯಶಸ್ಸು ಗಳಿಸಿ ಒಂದನೆಯ ಮಹಾಯುದ್ಧ ಆರಂಭವಾದಾಗ ನೌಕಾಕಾರ್ಯಾಚರಣೆಯ ನಿರ್ದೇಶನದ ಹೊಣೆ ಹೊತ್ತ ಡಾರ್ಡನಲ್ಸ್ ಕಾರ್ಯಾಚರಣೆ ವಿಫಲವಾಗಿ, ಸಚಿವ ಸಂಪುಟಕ್ಕೂ ಇವನಿಗೂ ಭಿನ್ನಾಭಿಪ್ರಾಯಗಳು ಉದ್ಭವಿಸಿದಾಗ ಇವನು ರಾಜೀನಾಮೆ ನೀಡಿ ಸರ್ಕಾರ ದಿಂದ ಹೊರಬಂದು ಯೋಧನಾಗಿ ಯುದ್ಧದಲ್ಲಿ ಭಾಗವಹಿಸಿದ. 1915ರಲ್ಲಿ ಪಾರ್ಲಿಮೆಂಟ್‌ಗೆ ಹಿಂದಿರುಗಿ 1917ರಲ್ಲಿ ಲಾಯ್ಡ್ ಜಾರ್ಜ್ ಸರ್ಕಾರದಲ್ಲಿ ಯುದ್ಧಸಾಮಗ್ರಿ ಸಚಿವನಾಗಿ ಹುದ್ದೆಗೆ ಸೇರಿದ. 1919ರಲ್ಲಿ ಯುದ್ಧ ಸಚಿವನಾದ. ರಷ್ಯನ್ ಕ್ರಾಂತಿ ಸಂಭವಿಸಿದಾಗ ಬಾಲ್ಷೆವಿಕರ ವಿರುದ್ಧ ಬಿಳಿಯ ರಷ್ಯನರಿಗೆ ನೆರವು ನೀಡುವುದು ಇವನ ಉದ್ದೇಶವಾಗಿತ್ತು. 1920ರಲ್ಲಿ ಪೋಲೆಂಡ್ ಉಕ್ರೇನಿನ ಮೇಲೆ ಆಕ್ರಮಣ ನಡೆಸಿದಾಗ ಪೋಲೆಂಡಿಗೆ ನೆರವು ನೀಡಿದ. ಈ ಎಲ್ಲ ಕ್ರಮಗಳಿಂದಾಗಿ ಬ್ರಿಟಿಷ್ ಕಾರ್ಮಿಕ ಪಕ್ಷ ಇವನನ್ನು ಕಟುವಾಗಿ ಟೀಕಿಸಿತು. 1921ರಲ್ಲಿ ವಸಾಹತು ಕಚೇರಿಯ ಮುಖ್ಯಸ್ಥನಾಗಿ ಐರ್ಲೆಂಡ್‌ಗೆ ಸ್ವಯಮಾಡಳಿತ ನೀಡುವ ಸಂಧಾನಗಳಲ್ಲಿ ಪ್ರಮುಖ ಪಾತ್ರವಹಿಸಿದ.

1923ರ ಚುನಾವಣೆಯ ಅನಂತರ ಇವನು ಲಿಬರಲ್ ಪಕ್ಷವನ್ನು ತ್ಯಜಿಸಿದ. ಆಗ ಲೇಬರ್ ಪಕ್ಷ ಅಧಿಕಾರದಲ್ಲಿತ್ತು. ಇವನಿಗೆ ಮುಂದಿನ ಚುನಾವಣೆಯಲ್ಲಿ ಬಾಲ್ಡ್‌ವಿನ್ ಗೆದ್ದುಬಂದಾಗ ಚರ್ಚಿಲನೂ ಸಂವಿಧಾನವಾದಿಯಾಗಿ ಎಸೆಕ್ಸ್‌ನ ಎಪಿಂಗ್ ವಿಭಾಗದಿಂದ ಜಯ ಗಳಿಸಿದ. ಅದುವರೆಗೂ ಪ್ರತಿಪಾದಿಸುತ್ತಿದ್ದ ಮುಕ್ತ ವ್ಯಾಪಾರನೀತಿಯನ್ನು ಇವನು ತೊರೆದ. ಇವನು ವಿತ್ತ ಸಚಿವನಾಗಿ (ಚಾನ್ಸಲರ್ ಆಫ್ ದಿ ಎಕ್ಸ್‌ಚೆಕರ್) ಮತ್ತೆ ಕನ್ಸರ್ವೇಟಿವ್ ಪಕ್ಷಕ್ಕೆ ಪುನರಾಗಮಿಸಿದ. ಬ್ರಿಟನಿನಲ್ಲಿ ಸುವರ್ಣ ಪ್ರಮಿತಿಯನ್ನು ಪುನಃ ಸ್ಥಾಪಿಸಿದ್ದು ಇವನು ಅನುಸರಿಸಿದ ದೊಡ್ಡ ಅವಿವೇಕದ ಕ್ರಮವೆಂದು ಟೀಕಿಸಲಾಗಿದೆ. ಈ ಕ್ರಮದ ಫಲವಾಗಿ ದೇಶದಲ್ಲಿ ಬೆಲೆಗಳು ಇಳಿದು ಉತ್ಪಾದನೆ ತಗ್ಗಿ ನಿರುದ್ಯೋಗ ಹೆಚ್ಚಿತು. ಕಾರ್ಮಿಕರು ಭಾರಿ ಸಂಪು ಹೂಡಿದರು. ಆ ಸಂದರ್ಭದಲ್ಲಿ ಚರ್ಚಿಲ್ ತಳೆದ ನಿರ್ದಯ ಧೋರಣೆಯಿಂದಾಗಿ ಕಾರ್ಮಿಕವರ್ಗದ ವಿರೋಧಕ್ಕೆ ಗುರಿಯಾದ.

1929ರಲ್ಲಿ ನಡೆದ ಚುನಾವಣೆಗಳಲ್ಲಿ ಕನ್ಸರ್ವೇಟಿವ್ ಪಕ್ಷಕ್ಕೆ ಬಹುಮತ ಲಭಿಸಲಿಲ್ಲ. ಕಾರ್ಮಿಕ ಪಕ್ಷ ಲಿಬರಲ್ ಪಕ್ಷದ ಬೆಂಬಲದಿಂದ ಮತ್ತೆ ಅಧಿಕಾರಕ್ಕೆ ಬಂತು. ಮುಂದಿನ ಹತ್ತು ವರ್ಷಗಳ ಕಾಲ ಚರ್ಚಿಲ್ ಸ್ವತಂತ್ರವಾದ ಹಾಗೂ ಜನಪ್ರಿಯವಲ್ಲದ ಮಾರ್ಗ ಅನುಸರಿಸಿದ. ಭಾರತ ಸುಧಾರಣಾ ಮಸೂದೆಯನ್ನು ತೀವ್ರವಾಗಿ ವಿರೋಧಿಸಿದ. ಆ ಮಸೂದೆಯನ್ನು ತರುವುದರಿಂದ ಗಾಂಧಿಯವರಿಗೆ ಮಣಿದಂತಾದೀತೆಂಬುದು ಇವನ ವಾದ. ಎಂಟನೆಯ ಎಡ್ವರ್ಡ್ ದೊರೆ ತನ್ನ ಪ್ರೇಯಸಿಗಾಗಿ ರಾಜ್ಯವನ್ನೇ ತೊರೆಯಬೇಕಾಗಿ ಬಂದ ಪ್ರಸಂಗದದಲ್ಲಿ ಆಗಿನ ಪ್ರಧಾನಿ ಬಾಲ್ಡ್ವಿನರ ನೀತಿಯನ್ನು ಚರ್ಚಿಲ್ ವಿರೋಧಿಸಿದ. ಆ ಸಮಯದಲ್ಲಿ ಜರ್ಮನಿ ಹಿಟ್ಲರನ ನೇತೃತ್ವದಲ್ಲಿ ಶಾಂತಿಗೆ ಮಾರಕವಾಗಿ ಬೆಳೆಯುತ್ತಿತ್ತು. ಮೊದಲಿನಿಂದಲೂ ಚರ್ಚಿಲ್ ಈ ಅಪಾಯದ ಬಗ್ಗೆ ಎಚ್ಚರಿಕೆ ನೀಡುತ್ತಲೇ ಇದ್ದ. ಹಿಟ್ಲರನ್ನು ತಣಿಸುವ ನೀತಿಯನ್ನು ವಿರೋಧಿಸುತ್ತಲೇ ಇದ್ದ. ಆದರೆ ಇವನ ಮಾತನ್ನು ಸರ್ಕಾರ ಕೇಳಲಿಲ್ಲ. ಜರ್ಮನ್ ಪುನಶ್ಶಸ್ತ್ರೀಕರಣದ ಬಗ್ಗೆ ಇವನು ನೀಡಿದ ಅಂಕಿಅಂಶ ಗಳನ್ನು ಇವನ ಪಕ್ಷದವರೇ ಸುಳ್ಳೆಂದು ಸಾರಿದರು. ನಾಜ಼ಿಗಳೂ ಇವನನ್ನು ಅವಹೇಳನಕ್ಕೆ ಗುರಿಪಡಿಸಿದರು. ಆದರೆ ಬ್ರಿಟನ್ನಿನಲ್ಲಿ ಹಲವರು ಇವನನ್ನು ಮಹತ್ವಾಕಾಂಕ್ಷಿಯೆಂದು ಹೊಗಳಿದರು. ಆದರೂ ಜನಪ್ರಿಯತೆ ಕಳೆದುಕೊಂಡು ಬಹುತೇಕ ಏಕಾಂಗಿಯಾಗಿ ಉಳಿಯಬೇಕಾಯಿತು.

ಚೆಕೊಸ್ಲೊವಾಕಿಯದ ಸುಡೆಟನ್‌ಲ್ಯಾಂಡನ್ನು ಹಿಟ್ಲರ್ ವಶಪಡಿಸಿಕೊಳ್ಳಲು ಬ್ರಿಟನ್ ಒಡಂಬಡಿಕೆ ನೀಡಬೇಕಾಗಿ ಬಂದಾಗ ದೇಶಕ್ಕೆ ಅಪಾಯದ ಅರಿವು ಸ್ವಲ್ಪ ಮಟ್ಟಿಗೆ ಉಂಟಾಯಿತು. ರಷ್ಯ–ಅಮೆರಿಕಗಳೊಂದಿಗೆ ಬ್ರಿಟನ್ ಸ್ನೇಹದ ಒಪ್ಪಂದ ಮಾಡಿಕೊಂಡು ಹಿಟ್ಲರನ ಆಕ್ರಮಣಕಾರಿ ಪ್ರವೃತ್ತಿಗೆ ತಡೆ ಒಡ್ಡಬೇಕೆಂಬುದು ಇವನ ಅಭಿಪ್ರಾಯವಾಗಿತ್ತು. 1939 ಸೆಪ್ಟೆಂಬರ್ 3ರಂದು ಎರಡನೆಯ ಮಹಾಯುದ್ಧ ಆರಂಭವಾಯಿತು. ಆಗ ಮತ್ತೆ ನೌಕಾಬಲದ ಪ್ರಥಮ ಲಾರ್ಡ್ ಆಗಿ ಈತ ನೇಮಕಗೊಂಡ. ಕ್ರಮಕ್ರಮವಾಗಿ ಇವನ ಖ್ಯಾತಿ ಅಧಿಕವಾಯಿತು. ಆಗ ಬ್ರಿಟನ್ನಿನ ಪ್ರಧಾನಿಯಾಗಿ ದುರ್ಬಲ ನೀತಿ ಅನುಸರಿಸುತ್ತಿದ್ದ ಚೇಂಬರ್ಲಿನನ ಖ್ಯಾತಿ ಹೆಚ್ಚಿತು. ಜರ್ಮನರ ನಾರ್ವೆ ಆಕ್ರಮಣದಿಂದ ಬ್ರಿಟನ್ನಿಗಾದ ಪರಾಭವದ ಪರಿಣಾಮವಾಗಿ ಚೇಂಬರ್ಲಿನ್ ರಾಜೀನಾಮೆ ನೀಡಿದ. ಆಗ ಪ್ರಧಾನಿಯಾಗ ಬಹುದಾಗಿದ್ದ ಏಕೈಕ ವ್ಯಕ್ತಿಯೆಂದರೆ ಚರ್ಚಿಲ್. ಆ ವೇಳೆಗೆ ಸರ್ಕಾರದ ಎಲ್ಲ ಮುಖ್ಯ ಶಾಖೆಗಳ ಅನುಭವವನ್ನೂ ಪಡೆದಿದ್ದ ಇವನು ಮೇ 10ರಂದು ಹಿಟ್ಲರನ ಸೇನೆಗಳು ಹಾಲೆಂಡಿನ ಆಕ್ರಮಣದಲ್ಲಿ ತೊಡಗಿದಂದು–ಪ್ರಧಾನಿಯಾದ. ಧೈರ್ಯದಿಂದ ಕೈಗೊಂಡ ತೀರ್ಮಾನಗಳೇ ವಿವೇಕಪೂರ್ಣವಾದ ತೀರ್ಮಾನಗಳು ಎಂಬುದು ಇವನ ಬಲವಾದ ನಂಬಿಕೆ. ವಿಜಯ, ಏನೇ ಆಗಲಿ ವಿಜಯ ಎಂಬುದು ಇವನ ಧ್ಯೇಯವಾಕ್ಯ. ಈ ಸಂದರ್ಭದಲ್ಲಿ ಇವನ ದೃಢನಿಲುವು, ದಿಟ್ಟತನ ನಾಯಕಗುಣ ಅತ್ಯಂತ ಅಧಿಕವಾಗಿ ಪ್ರಕಾಶಕ್ಕೆ ಬಂದುವು.

ಅಮೆರಿಕವೂ ರಷ್ಯವೂ ಯುದ್ಧದಲ್ಲಿ ಬ್ರಿಟನ್ನಿನೊಂದಿಗೆ ಕೂಡಿಕೊಳ್ಳಬೇಕೆಂಬುದು ಆರಂಭದ ದಿನಗಳಲ್ಲಿ ಚರ್ಚಿಲ್ ಹೊಂದಿದ್ದ ಆಕಾಂಕ್ಷೆ. 1941ರಲ್ಲಿ ಹಿಟ್ಲರನ ಸೇನೆ ರಷ್ಯವನ್ನಾಕ್ರಮಿಸಿದಾಗ, ಜಪಾನ್ ಪರ್ಲ್ ಹಾರ್ಬರಿನ ಮೇಲೆ ಧಾಳಿ ಮಾಡಿದಾಗ ಅವೆರಡೂ ದೇಶಗಳು ಯುದ್ಧಪ್ರವೇಶ ಮಾಡಿದುವು. ಕಮ್ಯೂನಿಸಂ ಅನ್ನು ಹಿಂದೆ ಕಟುವಾಗಿ ಟೀಕಿಸಿದ್ದ ಚರ್ಚಿಲನೇ ಈಗ ಆ ಬಗ್ಗೆ ಒಂದು ಚಕಾರವನ್ನೂ ಎತ್ತದೆ ರಷ್ಯಕ್ಕೆ ಎಲ್ಲ ಬಗೆಯ ನೆರವನ್ನೂ ನೀಡುವುದಾಗಿ ಘೋಷಿಸಿದ. ಆ ಎರಡೂ ದೇಶಗಳು ಯುದ್ಧ ಪ್ರವೇಶ ಮಾಡಿದ್ದರಿಂದ ಈಗ ವಿಜಯ ಸಿದ್ಧವಾದಂತೆ ಎಂದು ಚರ್ಚಿಲ್ ಬಗೆದ. ಆದರೂ ಕಷ್ಟದ ದಿನಗಳು

ಮುಗಿದಿರಲಿಲ್ಲ. ಚರ್ಚಿಲ್ ಪದೇ ಪದೇ ಅಟ್ಲಾಂಟಿಕನ್ನು ದಾಟಿ ಅಮೆರಿಕ, ಕೆನಡಗಳ ಸಮಾಲೋಚನೆ ಮತ್ತು ಸಹಕಾರಗಳಿಗಾಗಿ ಆದೇಶಗಳಿಗೆ ಭೇಟಿ ನೀಡುತ್ತಿದ್ದ. ಅದೇ ಸಮಯದಲ್ಲಿ ಯಾವುದಾದರೊಂದು ಪರಾಜಯದ ಘಟನೆ ಕಾದಿರುತ್ತಿತ್ತು. ಚರ್ಚಿಲ್ ಟೀಕೆಗೆ ಒಳಗಾದ. ಆದರೆ ಇವನ ನಾಯಕತ್ವದಲ್ಲಿ ನಂಬಿಕೆಯನ್ನು ಸಡಿಲಗೊಳಿಸುವಂಥ ವಿರೋಧವೇನೂ ಇರಲಿಲ್ಲ. ಚರ್ಚಿಲ್ ಎರಡು ಬಾರಿ ನ್ಯುಮೋನಿಯಕ್ಕೆ ತುತ್ತಾದರೂ ಛಲ ಬಿಡದೆ ತನ್ನ ಕಾರ್ಯವನ್ನು ಮುಂದುವರಿಸಿದ.

1942ರಲ್ಲಿ ಮಿತ್ರಸೇನೆಗಳು ಮೇಲುಗೈ ಸ್ಥಾಪಿಸಿದವು. ಅಮೆರಿಕದಲ್ಲಿ ಇಂಗ್ಲೆಂಡ್–ಅಮೆರಿಕಗಳ ಕಾರ್ಯಾಚರಣೆ ಆರಂಭವಾಯಿತು. ರಷ್ಯನರು ವೀರಾವೇಶದಿಂದ ಸ್ಟಾಲಿನ್‌ಗಾರ್ಡ್ ರಕ್ಷಣೆಗಾಗಿ ಹೋರಾಡಿದರು. ಪಶ್ಚಿಮಯುರೋಪಿನಲ್ಲಿ ಜರ್ಮನಿಯ ವಿರುದ್ಧ ಇನ್ನೊಂದು ಯುದ್ಧ ನಡೆಯಬೇಕೆಂಬುದು ರಷ್ಯದ ಬೇಡಿಕೆಯಾಗಿತ್ತು. ಅಮೆರಿಕವೂ ಇದಕ್ಕೆ ಒಡಂಬಡುತ್ತಿದ್ದರೂ ಕೂಡಲೇ ಅದನ್ನಾರಂಭಿಸಲು ಚರ್ಚಿಲ್ ಒಪ್ಪಲಿಲ್ಲ. 1944ರಲ್ಲಿ ನಾರ್ಮಂಡಿನಲ್ಲಿ ಮಿತ್ರ ಸೇನೆಗಳ ಆಕ್ರಮಣ ಆರಂಭವಾಯಿತು. 1945 ಏಪ್ರಿಲ್ ಅಂತ್ಯದ ವೇಳೆಗೆ ಜರ್ಮನಿಯ ಪತನ ಸಂಪೂರ್ಣಗೊಂಡಿತು.

1951ರಲ್ಲಿ ನಡೆದ ಚುನಾವಣೆಗಳಲ್ಲಿ ಕನ್ಸರ್ವೇಟಿವ್ ಪಕ್ಷ ವಿಜಯ ಗಳಿಸಿತು. ಚರ್ಚಿಲ್ ಮತ್ತೆ ಪ್ರಧಾನಿಯಾದ. 1953ರಲ್ಲಿ ಎರಡನೆಯ ಎಲಿಜಬೆತ್ ರಾಣಿಯ ಪಟ್ಟಾಭಿಷೇಕದ ವರ್ಷದಲ್ಲಿ, ಚರ್ಚಿಲ್‌ಗೆ ಸಾಹಿತ್ಯಕ್ಕಾಗಿ ನೊಬೆಲ್ ಪಾರಿತೋಷಿಕವೂ ನೈಟ್ ಪದವಿಯ ಅತ್ಯುನ್ನತ ಶ್ರೇಣಿಯ (ಗಾರ್ಟರ್) ಗೌರವವೂ ಪ್ರಾಪ್ತವಾದವು. ಪಶ್ಚಿಮ ಯುರೋಪ್ ಒಕ್ಕೂಟವನ್ನು ಸ್ಥಾಪಿಸಲು ಇವನೇ ಕಾರಣ. 1955ರಲ್ಲಿ ಜಲಜನಕ ಬಾಂಬಿನ ತಯಾರಿಕೆಗೆ ಚರ್ಚಿಲ್ ಆದೇಶ ನೀಡಿದ. ನಾಲ್ಕುರಾಷ್ಟ್ರಗಳ ಶೃಂಗ ಸಭೆ ನಡೆಸಿ ವಿಶ್ವ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಬೇಕೆಂಬುದು ಇವನ ಯೋಜನೆಯಾಗಿತ್ತು. ಆದರೆ ಆ ಕೆಲಸ ಮಾಡಲಾಗಲಿಲ್ಲ. 1955 ಏಪ್ರಿಲ್ 5ರಂದು ಇವನು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ. ಅಧಿಕಾರ ತ್ಯಜಿಸಿದರೂ ಕಾಮನ್ಸ್ ಸಭೆಯ ಸದಸ್ಯತ್ವವನ್ನು ಬಿಡದೆ ಅದರ ಪಿತೃ ಎನಿಸಿದ.

1959ರ ಚುನಾವಣೆಯಲ್ಲೂ ಜಯ ಗಳಿಸಿದ. 1963ರಲ್ಲಿ ಅಮೆರಿಕ ಗೌರವ ಪ್ರಜೆಯೆಂದು ಅಲ್ಲಿಯ ಕಾಂಗ್ರೆಸ್ ಇವನಿಗೆ ವಿಶೇಷವಾದ ಮನ್ನಣೆ ನೀಡಿತು. ಈತ 1965 ಜನವರಿ 24ರಂದು ನಿಧನನಾದ. (ಜಿ.ವಿ.ಎನ್.;ಎಚ್.ಕೆ.ಆರ್.)

**ಚಲ್ಲಕೇತನ ಮನೆತನ: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಚಾಂದ್‌ಬೀಬಿ:** ಪ್ರಸಿದ್ಧ ವೀರಾಗ್ರಣಿ. ಬಿಜಾಪುರದ ಸುಲ್ತಾನ ಅಲಿ ಆದಿಲ್ ಷಾನ (1558–80) ಪತ್ನಿ. ಅಹಮದ್‌ನಗರದ ಸುಲ್ತಾನ ಹುಸೇನ್ ನಿಜಾಮ್ ಷಾನ ಪುತ್ರಿ. ಅಲಿ ಆದಿಲ್ ಷಾ ತೀರಿಕೊಂಡಾಗ, ರಾಣಿ ಚಾಂದ್‌ಬೀಬಿ ತನ್ನ ಗಂಡನ ತಮ್ಮನ ಮಗನಾದ ಇಬ್ರಾಹಿಮನಿಗೆ ಪಟ್ಟಕಟ್ಟಿ ತಾನೇ ಆಡಳಿತಸೂತ್ರ ವಹಿಸಿದಳು. ಈಕೆಯ ಆಳಿಕೆ ಜನಪ್ರಿಯವಾಯಿತು. ಆದರೆ ಅಂದಿನ ಸ್ಥಿತಿಯಲ್ಲಿ ರಾಜ್ಯದ ವಜೀರರು ಪ್ರಬಲರಾಗಿದ್ದರು. ಕಮಾಲ್‌ಖಾನ್ ಎಂಬ ವಜೀರ ರಾಜ್ಯಾಡಳಿತವನ್ನು ತನ್ನ ಕೈಗೇ ತೆಗೆದುಕೊಳ್ಳುವ ಪ್ರಯತ್ನ ನಡೆಸಿದ್ದ. ಚಾಂದ್‌ಬೀಬಿ ಕಿನ್ವರ್‌ಖಾನ್ ಎಂಬುವನನ್ನು ನಿಯೋಜಿಸಿ ಕಮಾಲ್‌ಖಾನನನ್ನು ಕೊಲೆ ಮಾಡಿಸಿದಳು. ಕಿನ್ವರ್‌ಖಾನನಾದರೋ ಅಧಿಕಾರದಾಹಿಯಾಗಿ ಚಾಂದ್‌ಬೀಬಿಯನ್ನೇ ಸೆರೆಹಿಡಿದು ಸಾತಾರಾದ ಸೆರೆಗಟ್ಟಿದ. ಆದರೆ ರಾಜ್ಯದಲ್ಲಿದ್ದ ಅಬಿಸೀನಿಯದ ಸೈನಿಕರು ಚಾಂದ್‌ಬೀಬಿಯನ್ನು ಸೆರೆಯಿಂದ ಬಿಡಿಸಿದರು. ಕಿನ್ವರ್‌ಖಾನ್ ಓಡಿಹೋದ. ಕೆಲಕಾಲಾನಂತರ ಚಾಂದ್‌ಬೀಬಿ ಬಿಜಾಪುರವನ್ನು ಬಿಟ್ಟು ತನ್ನ ತವರೂರಾದ ಅಹಮದ್‌ನಗರಕ್ಕೆ ತೆರಳಿದಳು. ಅಲ್ಲಿ ಆಗ ಈಕೆಯ ಸೋದರನಾದ ಬುರ್ಹಾನ್ ಷಾ ಅಹಮದ್ ನಗರದ ಸುಲ್ತಾನನಾಗಿದ್ದ. ಆತ ತನ್ನ ಮಗ ಇಬ್ರಾಹಿಂನನ್ನು ತನ್ನ ಉತ್ತರಾಧಿ ಕಾರಿಯೆಂದು ನೇಮಿಸಿದಾಗ, ಆ ಆಯ್ಕೆಯನ್ನು ಅವನ ಸೇನಾನಾಯಕ ವಿರೋಧಿಸಿದ. ಪರಿಣಾಮವಾಗಿ ಅವರ ನಡುವೆ ತೀವ್ರ ಹೋರಾಟಗಳುಂಟಾದುವು.

ಬುರ್ಹಾನ್ ಷಾನ ಮರಣಾನಂತರ ಇಬ್ರಾಹಿಮ್ ತನ್ನ ಅತ್ತೆಯಾದ ಚಾಂದ್‌ಬೀಬಿಯ ಸಹಾಯದಿಂದ ಅಧಿಕಾರ ರೂಢನಾದರೂ ಬಿಜಾಪುರದ ಆದಿಲ್‌ಷಾನೊಡನೆ ನಡೆದ ಒಂದು ಕದನದಲ್ಲಿ ಮಡಿದ(1595). ಈತನ ಮಗ ಬಹಾದೂರ್‌ನನ್ನು ರಾಜ್ಯದ ವಾರಸುದಾರನೆಂದು ಚಾಂದ್‌ಬೀಬಿ ಘೋಷಿಸಿ ಆತನಿಗೆ ಬೆಂಬಲವಾಗಿ ನಿಂತಳು. ಆದರೆ ಅಹಮದ್ ಎಂಬಾತ ಇದನ್ನು ತಿರಸ್ಕರಿಸಿ ಯುದ್ಧಕ್ಕೆ ಅಣಿಯಾದ. ಅಹಮದ್‌ನಗರದ ಈ ಆಂತರಿಕ ಕಲಹಗಳ ಉಪಯೋಗ ಪಡೆದು ಮೊಗಲ್ ರಾಜಕುಮಾರ ಮುರಾದ ಅಹಮದ್‌ನಗರದ ಮೇಲೆ ಏರಿ ಹೋದ. ಆಗ ಚಾಂದ್‌ಬೀಬಿ ಸ್ವತಃ ರಣರಂಗಕ್ಕೆ ಇಳಿದಳು. ಕಲಿತನದಿಂದ ಕಾದಾಡಿ ಮೊಗಲ್ ಸೈನ್ಯದ ಒತ್ತಡವನ್ನು ಹಿಮ್ಮೆಟ್ಟಿಸಿದಳು. ಕೋಟೆಯನ್ನು ಭೇದಿಸಲು ಶತ್ರುಗಳು ಹೂಡಿದ ತಂತ್ರಗಳನ್ನು ನಾಶಗೊಳಿಸಿದಳಲ್ಲದೆ, ತನ್ನ ನಂಬುಗೆಯ ಸೇನಾಪತಿಗಳಾದ ಷಾ ಅಲಿ ಮತ್ತು ಅಭಂಗ್‌ಖಾನರ ನೆರವಿನಿಂದ ಮೊಗಲರ ಸೈನ್ಯದ ಮೇಲೆ ಆಕ್ರಮಣ ಮಾಡಿದಳು. ಈ ವೇಳೆಗೆ ಬಿಜಾಪುರದ ಸೈನ್ಯವೂ ಈಕೆಯ ಸಹಾಯಕ್ಕೆ ಧಾವಿಸಿತು. ಇನ್ನು ಕದನ ಹೂಡಿ ಫಲವಿಲ್ಲವೆಂದು ಬಗೆದ ಮುರಾದ ಒಪ್ಪಂದಕ್ಕೆ ಹಾತೊರೆದ. ಚಾಂದ್‌ಬೀಬಿಯೂ ಇದಕ್ಕೆ ಸಿದ್ಧಳಾಗಿದ್ದುದರಿಂದ ತಾತ್ಕಾಲಿಕವಾಗಿ ಇಬ್ಬರ ನಡುವಣ ಹೋರಾಟಗಳು ಕೊನೆಗೊಂಡವು. ಆದರೆ ಬೀರಾರ್ ಕೋಟೆಯನ್ನು ಈಕೆ ಮೊಗಲರಿಗೆ ಒಪ್ಪಿಸಬೇಕಾಯಿತು.

ಶತ್ರುವಿನ ಮುತ್ತಿಗೆಯ ಕಾಲದಲ್ಲಿ ಅಹಮದ್‌ನಗರದ ರಾಜಮನೆತನದವರ ಅಂತಃಕಲಹಗಳು ಸ್ವಲ್ಪಕಾಲ ನಿಂತಿದ್ದುವಾದರೂ ಈ ಕದನ ನಿಲುಗಡೆ ಒಪ್ಪಂದವೇರ್ಪಟ್ಟ ಕೂಡಲೇ ಹಳೆಯ ವೈಮನಸ್ಯಗಳು ಪುನಃ ತಲೆ ಎತ್ತಿದುವು. ಮೊಗಲರ ಕಾಟದಿಂದ ದೂರವಿರಲು ಈಕೆ ರಾಜಧಾನಿಯನ್ನು ಜುನ್ನರ್‌ಗೆ ಸ್ಥಳಾಂತರಿಸಬಯಸಿದಳು. ಆದರೆ ಮಹಮದ್‌ನಗರವನ್ನು ಈಕೆ ಮೊಗಲರಿಗೆ ಹಸ್ತಾಂತರಿಸಿದ್ದಾಳೆಂದು ಈಕೆಯ ವಿರೋಧಿಗಳು ಅಪಪ್ರಚಾರ ಆರಂಭಿಸಿ, ಪ್ರಜೆಗಳು ಇವಳಲ್ಲಿರಿಸಿದ್ದ ನಂಬುಗೆ ಸಡಿಲಗೊಳ್ಳುವಂತೆ ಮಾಡಿದರು. ನೆಹಂಗ್ ಖಾನ್ ಎಂಬ ಈಕೆಯ ವಿರೋಧಿ ನಾಯಕ ಈಕೆ ಮೊಗಲರೊಡನೆ ಏರ್ಪಡಿಸಿಕೊಂಡಿದ್ದ ಒಪ್ಪಂದವನ್ನು ಉಲ್ಲಂಘಿಸಿ, ಇವಳ ಆಜ್ಞೆಯನ್ನು ಬದಿಗೆ ಸರಿಸಿ ಬೀರಾರಿಗೆ ಮುತ್ತಿಗೆ ಹಾಕಿದ. ಆದರೆ ಮೊಗಲರ ಸೈನ್ಯ ಇವನನ್ನು ಸೋಲಿಸಿ ಹಿಮ್ಮೆಟ್ಟಿಸಿತು.

ಇಷ್ಟಾದರೂ ಚಾಂದ್‌ಬೀಬಿಯ ವಿರೋಧಿಗಳು ಇವಳನ್ನು ದ್ವೇಷಿಸುತ್ತಲೇ ಇದ್ದರು. ರಾಜ್ಯದ ಹಿತಕ್ಕೆ ಮೊಗಲರೊಡನೆ ಸ್ನೇಹ ಆವಶ್ಯಕವೆಂಬ ಇವಳ ಅಭಿಪ್ರಾಯವನ್ನು ಈಕೆಯ ವಿರೋಧಿಗಳು ಅಲ್ಲಗಳೆದರು. 1600ರಲ್ಲಿ ಅಕ್ಬರನ ಸೈನ್ಯ ಅಹಮದ್‌ನಗರವನ್ನು ಮುತ್ತಿದಾಗ, ಈಕೆ ಒಪ್ಪಂದ ಮಾಡಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದಳು. ಇದಕ್ಕೆ ಇವಳ ಪ್ರತಿಪಕ್ಷದವರ ವಿರೋಧವಿತ್ತು. ಕೋಟೆಯನ್ನು ಶತ್ರುಗಳಿಂದ ಕಾಪಾಡಲು ಇವಳು ಎಲ್ಲ ಜಾಗರೂಕತೆಯನ್ನೂ ವಹಿಸಿ ಹೋರಾಡುತ್ತಿದ್ದಾಗ, ಈಕೆಯ ಪಕ್ಷದವನೇ ಆದ ಜಿಲ್ಲಾಖಾನನೂ ಅವನ ಅನುಯಾಯಿಗಳೂ ಇವಳನ್ನು ಮೋಸದಿಂದ ಕೊಂದರು. ಇದರ ಫಲವಾಗಿ ಅಹಮದ್‌ನಗರ ಮೊಗಲರ ಕೈಸೇರಿತು.

ಅಲಿ ಆದಿಲ್‌ಷಾ ಇವಳ ಹೆಸರಿನಲ್ಲಿ ಕಟ್ಟಿಸಿದ ಬಿಜಾಪುರದ ಚಾಂದ್ ಬಾವಡಿ, ಇವಳೇ ಕಟ್ಟಿಸಿದ ಗುಲ್ಬರ್ಗದ ಹೀರಾಪುರ ಮಸೀದಿ ಚಾಂದ್‌ಬೀಬಿಯ ನೆನೆಪಿನಲ್ಲಿ ಕರ್ನಾಟಕದಲ್ಲಿ ಉಳಿದಿವೆ. (ಬಿ.ಆರ್.ಜಿ.)

**ಚಾರ್ವಾಕ:** ನಾಸ್ತಿಕ ಸಿದ್ಧಾಂತಗಳಲ್ಲಿ ಮುಖ್ಯವಾದುದು. ಇದು ದರ್ಶನಗಳಲ್ಲೆಲ್ಲ ಮೊದಲನೆಯದು ಮತ್ತು ಸರ್ವ ದರ್ಶನಗಳಿಗೆ ಪ್ರತಿಕಕ್ಷಿಯಾದುದು. ಚಾರು + ವಾಕ್ = ಚಾರ್ವಾಕ್ ; ಚಾರ್ವಾಕ ಎಂದರೆ ಮನಸ್ಸಿಗೆ ಹಿಡಿಸುವ ಮಾತು ಎಂದರ್ಥ. ಲೋಕಾಯತ, ಲೋಕಾಯತನ, ಲೌಕಾಯ ಇತ್ಯಾದಿ ಹೆಸರುಗಳಿಂದ ಈ ಮತವನ್ನು ಕರೆಯಲಾಗಿದೆ. ದೇವರ ಅಸ್ತಿತ್ವವನ್ನು ಒಪ್ಪುವುದಿಲ್ಲವಾದ ಕಾರಣ ಇದು ನಾಸ್ತಿಕ ಮತ. ಉಳಿದೆಲ್ಲ ದರ್ಶನಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಆತ್ಮನೆಂಬ ವಸ್ತುವನ್ನು ಒಪ್ಪುವವರಾದ ಕಾರಣ ಅವರೆಲ್ಲ ಆಸ್ತಿಕರು. ಚಾರ್ವಾಕರು ದೇಹಕ್ಕಿಂತಲೂ ಬೇರೆಯಾದ ಆತ್ಮನನ್ನೂ ಪಾಪಪುಣ್ಯಗಳನ್ನೂ ಪರಲೋಕಗಳನ್ನೂ ಒಪ್ಪುವುದಿಲ್ಲ. ಇವರದು ಶುದ್ಧ ಭೌತಿಕ ವಾದ. ಈ ಸಿದ್ಧಾಂತದಲ್ಲಿ ಪ್ರತ್ಯಕ್ಷದಿಂದ ತಿಳಿಯುವ ವಸ್ತುಗಳೇ ನಿಜವಾದವು. ಅವು ನಾಲ್ಕು. ಪೃಥ್ವಿ, ನೀರು, ಅಗ್ನಿ, ಗಾಳಿ. ಇಂದ್ರಿಯಗಳಿಗೆ ಗೋಚರವಲ್ಲದ ವಸ್ತುಗಳನ್ನು ನಂಬಬೇಕಾಗಿಲ್ಲ. ಸುಖದುಃಖಗಳಿಗೆ ವಸ್ತುಸ್ವಭಾವವೇ ಕಾರಣ. ನಾಲ್ಕು ಭೂತಗಳ ಸಂಯೋಗವೇ ದೇಹರೂಪವಾಗಿ ಬರುತ್ತದೆ. ಈ ಸಂಯೋಗವಿಶೇಷದಲ್ಲಿಯೇ ಬುದ್ಧಿ, ಜ್ಞಾನ ಎಂಬ ಚೈತನ್ಯಶಕ್ತಿ ಹೊರಬೀಳುತ್ತದೆ. ಈ ಚೈತನ್ಯಶಕ್ತಿ ಭೌತ ಶಕ್ತಿಯೇ ಹೊರತು ಬೇರೆಯಲ್ಲ. ಆದಕಾರಣ ಶರೀರವಿರುವವರೆಗೆ ಆತ್ಮಶಕ್ತಿಯಿದ್ದು ಶರೀರದೊಂದಿಗೆ ಅದೂ ನಷ್ಟವಾಗುತ್ತದೆ.

ಮುಖ್ಯವಾಗಿ ಚಾರ್ವಾಕರಿಗೆ ಪ್ರತ್ಯಕ್ಷವೇ ಪ್ರಮಾಣ. ಅನುಮಾನಗಳಿಂದ ಸಿದ್ಧವಾಗುವ ಅನುಭವಗಳು ಕೇವಲ ಸಂದೇಹ ಮತ್ತು ಸಂಭಾವ್ಯತೆಯ ಮಟ್ಟಿಗೆ ತಲುಪಿಸುವ ಕಾರಣ ಖಚಿತಜ್ಞಾನಕ್ಕೆ ಅನುಮಾನ ಪ್ರಮಾಣವಾಗಲಾರದೆಂದು ಇವರ ಅಭಿಮತ. ವಸ್ತುಸ್ವಭಾವವೇ ಕಾರಣಶಕ್ತಿ, ಆದ್ದರಿಂದಲೇ ಪರಿಣಾಮ ಪ್ರತ್ಯಕ್ಷವಾಗುವುದಾದ ಕಾರಣ ಇವರು ಸ್ವಭಾವವಾದಿಗಳು. ಇದಕ್ಕೆ ಯಾದೃಚ್ಛಿಕವಾದವೆಂದೂ ಹೇಳುತ್ತಾರೆ. ಏಕೆಂದರೆ ಒಬ್ಬನ ಇಚ್ಛಾಶಕ್ತಿಯ ನಿಮಿತ್ತ ಕಾರಣದಿಂದ ಪರಿಣಾಮ ಪರಂಪರೆ ಉಂಟಾಗುವಂತೆ ಕಂಡು ಬರುವುದಿಲ್ಲ. ನಮ್ಮ ಬಯಕೆಯಿಲ್ಲದೆ ನಮಗೆ ತಿಳಿಯದೆಯೇ ಸುಖದುಃಖಗಳ ಅನುಭವ ಬರುವ ಕಾರಣ ಇದಕ್ಕೆ ಪ್ರಾಸಂಗಿಕವಾದವೆಂದೂ ಹೇಳುತ್ತಾರೆ.

ಚಾರ್ವಾಕರಲ್ಲಿ ಕೆಲವು ಪಂಗಡದವರು ನೇತಿವಾದಿಗಳು ಅಂದರೆ ನಿಹಿಲಿಸ್ಟ್ ಅಥವಾ ನೆಗೆಟಿವಿಸ್ಟ್, ಪ್ರಪಂಚ ನಿತ್ಯವಲ್ಲ, ಸತ್ಯವಲ್ಲ ಎಂಬುದು ಇವರ ಮತ. ಭಾರತೀಯ ತತ್ತ್ವಜ್ಞಾನಗಳಲ್ಲಿ ಆಸ್ತಿಕರು, ನಾಸ್ತಿಕರು, ಅದ್ವಯವಾದಿಗಳು–ಹೀಗೆ ಮೂರು ವಿಧ

ವಿಭಾಗಿಸಿರುವುದನ್ನು ನೋಡಿದರೆ ನಾಸ್ತಿಕರಿಗೆ ಇರುವ ಪ್ರಾಧಾನ್ಯ ತಿಳಿಯುತ್ತದೆ. ಈ ಆಸ್ತಿ, ನಾಸ್ತಿ ಮತಗಳಲ್ಲಿ ಯಾವುದು ಮೊದಲೆಂದು ಹೇಳುವುದು ಸುಲಭವಲ್ಲ. ಆಸ್ತಿಕ ಮತದಲ್ಲಿ ನಾಸ್ತಿಕ ಮತದ ಖಂಡನೆಯೂ ನಾಸ್ತಿಕ ಮತದಲ್ಲಿ ಆಸ್ತಿಕ ಮತದ ಖಂಡನೆಯೂ ಕಾಣುವುದರಿಂದ ಅನಾದಿಕಾಲದಿಂದ ಎರಡೂ ಬಗೆಯ ಅಭಿಪ್ರಾಯಗಳು ಇದ್ದುವೆಂದು ಕಾಣುತ್ತದೆ. ಪ್ರತ್ಯಕ್ಷವೊಂದೇ (ಇಂದ್ರಿಯ ಪ್ರತ್ಯಕ್ಷ) ಪ್ರಮಾಣ; ಅನುಮಾನವೆಂದರೆ ಸಂದೇಹ; ಆಗಮವೆಂಬುದು ಕೇಳಿದುದು, ನೋಡಿದುದಲ್ಲ ಎಂಬ ಚಾರ್ವಾಕವಾದವನ್ನು ಶಂಕರಾಚಾರ್ಯರೇ ಆದಿಯಾಗಿ ಎಲ್ಲ ಮತಾಚಾರ್ಯರೂ ಖಂಡಿಸುತ್ತಾರೆ. ಪ್ರತ್ಯಕ್ಷವೇ ಕೆಲವು ವೇಳೆ ಆಭಾಸವಾಗುವುದು, ಅನುಮಾನವಿಲ್ಲದೆ ವ್ಯವಹಾರವೇ ಸಾಗಲಾರದು–ಎಂದು ವೇದಾಂತಿಗಳ ವಾದ. ಸುಶಿಕ್ಷಿತ ಚಾರ್ವಾಕರೆಂಬ ಕೆಲವರು ಅನುಮಾನ ಆಗಮಗಳನ್ನು ಆಂಶಿಕವಾಗಿ ಒಪ್ಪುತ್ತಾರೆ. ಪ್ರತ್ಯಕ್ಷಕ್ಕೆ ಗೋಚರವಾಗತಕ್ಕ ವಿಷಯಗಳಲ್ಲಿ ಅನುಮಾನ(ಯುಕ್ತಿ) ಆಗಮಗಳಿಗೆಅವಕಾಶವುಂಟೆನ್ನುತ್ತಾರೆ. ತಾರ್ಕಿಕರು ಯುಕ್ತಿಯಿಂದಲೇ ಅತ್ಯಂತ ಪರೋಕ್ಷವನ್ನು ನಂಬಿದರೆ ವೈದಿಕರು ಶಾಸ್ತ್ರದಿಂದ ಅಂಥ ವಿಷಯಗಳನ್ನು ನಂಬುತ್ತಾರೆ. ಚಾರ್ವಾಕೇತರ ದರ್ಶನಗಳಲ್ಲಿಯೇ ಪರಸ್ಪರ ವೈಚಿತ್ರ್ಯಗಳಿರುವುದರಿಂದ ಚಾರ್ವಾಕರಲ್ಲಿ ಈ ವಿಚಾರಗಳಿರುವುದರಲ್ಲಿ ಆಶ್ಚರ್ಯವಿಲ್ಲ. ಚಾರ್ವಾಕಮತಕ್ಕೆ ತಾರ್ಕಿಕರು ಹೇಳಿರುವ ಕೊನೆಯ ಸಮಾಧಾನ ಕುತೂಹಲಕರವಾಗಿದೆ: ಜೀವಾತ್ಮ, ಪರಮಾತ್ಮರನ್ನೂ ಪುಣ್ಯಪಾಪಗಳನ್ನೂ ನಂಬಿರುವ ನಮಗೆ ಅವೆಲ್ಲ ಇಲ್ಲದಿದ್ದರೂ ಏನೂ ನಷ್ಟವಿಲ್ಲ. ಆದರೆ ಅವು ಒಂದು ವೇಳೆ ಇದ್ದುದಾದರೆ ಇಲ್ಲವೆಂದು ಸಾಧಿಸುವ ನಿಮ್ಮ ಗತಿ ಏನು; ಆದುದರಿಂದ ಸಂದೇಹ ಮಾರ್ಗವಾದರೂ ಆಸ್ತಿಕಮಾರ್ಗವೇ ಯುಕ್ತ.

ಚಾರ್ವಾಕಮತದ ಗುಣಾಂಶವನ್ನು ಹೇಳುವುದಾದರೆ ಮೂಲತಃ ವಸ್ತುಸ್ವಭಾವದಿಂದ ಸುಖದುಃಖಾದಿಗಳುಂಟಾಗುವ ಕಾರಣ, ಮತ್ತೊಬ್ಬ ಪುರುಷನ ಪ್ರಯತ್ನದಿಂದ ಬರುವುದಿಲ್ಲವಾದ ಕಾರಣ ಪರರಲ್ಲಿ ದ್ವೇಷವೆಂಬುದಕ್ಕೆ ಅವಕಾಶವಿಲ್ಲ. ಪರರಲ್ಲಿನ ರಾಗದ್ವೇಷಗಳನ್ನು ಅಡಗಿಸುವುದಕ್ಕಿಂತ ಹೆಚ್ಚಿನ ದರ್ಶನೋದ್ದೇಶ ಯಾವುದು? ಬದುಕಿರುವವರೆಗೆ ಚೆನ್ನಾಗಿ ಬದುಕು, ಚೆನ್ನಾಗಿ ಬದುಕುವಂತೆ ಪರಿಸರ ನಿರ್ಮಿಸಿಕೊಂಡು ಬದುಕು ಎನ್ನುವ ತತ್ತ್ವಜ್ಞಾನ ಯಾರಿಗೆ ಬೇಕಿಲ್ಲ? ಇದರಲ್ಲಿ ನಿಷಿದ್ಧವಾದುದೇನಿದೆ? ಇವು ಚಾರ್ವಾಕ ಮತ ನಮ್ಮೆದುರಿಗಿಟ್ಟ ಪ್ರಶ್ನೆಗಳು. ಧರ್ಮ ಅಥವಾ ಸಮಾಜವ್ಯವಸ್ಥೆಗೆ ವಿರೋಧವಾಗದ ಕಾಮನೆಗಳು ಗ್ರಾಹ್ಯವೆಂಬ ಮಾತು ಭಗವದ್ಗೀತೆಯಲ್ಲಿಯೂ ಕಾಣುತ್ತದೆ. ಮಹಾಭಾರತ ಯುದ್ಧವಾದ ಮೇಲೆ ಧರ್ಮರಾಜ ಪಟ್ಟಾಭಿಷಿಕ್ತನಾದ ಅನಂತರ ಒಂದು ದಿನ ಚಾರ್ವಾಕನೆಂಬಾತ (ಈತನೊಬ್ಬ ರಾಕ್ಷಸನೆನ್ನಲಾಗಿದೆ) ತುಂಬಿದ ರಾಜಸಭೆಗೆ ಬಂದು ರಾಜನನ್ನು ದೂಷಿಸುವ ಒಂದು ಕಥೆ ಇದೆ. ಕೇವಲ ರಾಗಾಂಧನಾಗಿ, ರಾಜ್ಯಭೋಗದ ಲಾಲಸೆಯಿಂದ, ಸ್ತ್ರೀ ಬಾಲಶೇಷವಾಗಿ ಲಕ್ಷಾನುಗಟ್ಟಲೆ ಜನರ ನಾಶಮಾಡಿ, ಸತ್ತವರಿಗೆ ಸ್ವರ್ಗ ಬರುವುದೆಂದು ಸಾಯುವುದಕ್ಕೆ ಪ್ರೋತ್ಸಾಹಿಸಿದ ಮಹಾಪಾಪಿಷ್ಠನೆಂದು ಧರ್ಮರಾಜ ನನ್ನು ಆ ಚಾರ್ವಾಕ ದೂಷಿಸುತ್ತಾನೆ. ಅನಂತರ ಅಲ್ಲಿದ್ದ ಬ್ರಾಹ್ಮಣರು ಈ ರಾಕ್ಷಸನನ್ನು ಶಾಪದಿಂದ ಕೊಂದುಬಿಡುತ್ತಾರೆ. ಇದು ಭಾರತದಲ್ಲಿ ಬರುವ ಕಥೆ. ಇದರಿಂದ ಎರಡು ಅಂಶಗಳ ಮೇಲೆ ಬೆಳಕು ಬೀಳುತ್ತದೆ. ಪ್ರಪಂಚವನ್ನು ಸುಖವಾಗಿಟ್ಟುಕೊಂಡು ತಾವೂ ಸುಖವಾಗಿರಬೇಕು. ಕೇವಲ ತಮ್ಮ ಸುಖಕ್ಕೋಸ್ಕರವೇ ಪ್ರಪಂಚವನ್ನು ಹಿಂಸಿಸಬಾರದು ಎಂಬ ಪ್ರಪಂಚಾನುಗ್ರಹ ದೃಷ್ಟಿಯೇ ಚಾರ್ವಾಕಮತದ ಮುಖ್ಯ ಧ್ಯೇಯವಾಗಿತ್ತೆಂಬು ದೊಂದು. ಇನ್ನೊಂದು, ಮತೀಯ ಸಹಿಷ್ಣುತೆಗೆ, ವೈಚಾರಿಕ ಸ್ವಾತಂತ್ರ್ಯಕ್ಕೆ ಹೆಸರಾಗಿದ್ದ ಭಾರತೀಯ ಪರಂಪರೆಯಲ್ಲಿಯೂ ವಿರೋಧಾಭಿಪ್ರಾಯಕ್ಕೆ ಅಸಹನೆ, ಅವುಗಳ ದಮನ, ನಾಶಗಳಂಥ ಅವೈಚಾರಿಕ ಕ್ರಮಕ್ಕೆ ಕ್ವಚಿತ್ತಾಗಿಯಾದರೂ ಅವಕಾಶವಿತ್ತೆಂಬುದಕ್ಕೆ ಚಾರ್ವಾಕ ದರ್ಶನದಂಥ ಕೆಲವು ನಿದರ್ಶನಗಳಿದ್ದುವು.

(ಜಿ.ಆರ್.ಪಿ.)

**ಚಾವುಂಡರಾಯ:** ಪಶ್ಚಿಮ ಗಂಗರಾಜ 2ನೆಯ ಮಾರಸಿಂಹ (963–74) ಮತ್ತು 4ನೆಯ ರಾಚಮಲ್ಲ (974–99) ಇವರ ಸೇವೆಯಲ್ಲಿ ಯೋಧಾಗ್ರಣಿಯೂ ಮಂತ್ರಿಯೂ ಆಗಿದ್ದವ. ಈತ ಚಾವುಂಡರಾಯ ಪುರಾಣವೆಂದು ಪ್ರಸಿದ್ಧವಾಗಿರುವ ಕನ್ನಡ ಮಹಾಪುರಾಣವನ್ನು ರಚಿಸಿದ್ದಾನೆ. ಜೈನಧರ್ಮೀಯನಾದ ಈತನ ತಾಯಿ ತಂದೆಗಳು ಯಾರೆಂದು ತಿಳಿದುಬಂದಿಲ್ಲ. ಪಂಚಬಾಣನೆಂಬ ಕನ್ನಡ ಕವಿ ತನ್ನ ಭುಜಬಲಿ ಚರಿತೆಯಲ್ಲಿ (ಸು.1614) ಚಾವುಂಡರಾಯನ ತಾಯಿ ಕಾಳಲದೇವಿಯೆಂದೂ ಪತ್ನಿ ಅಜಿತಾದೇವಿಯೆಂದೂ ಹೇಳಿದ್ದಾನೆ. ಇದಕ್ಕೆ ಆಧಾರವೇನೋ ತಿಳಿಯದು. ಆದರೆ ಶ್ರವಣಬೆಳಗೊಳದಲ್ಲಿ ಜಿನಗೃಹವೊಂದನ್ನು ಮಾಡಿಸಿದ ಜಿನದೇವಣ ಚಾವುಂಡರಾಯನ ಮಗನೆಂಬುದಕ್ಕೆ ಶಾಸನಾಧಾರವಿದೆ. ಆರ್ಯಸೇನ ಅಥವಾ ಆರ್ಯನಂದಿಯ ಶಿಷ್ಯನಾದ ಅಜಿತಸೇನಾಚಾರ್ಯ ಈತನ ಗುರು. ಗೊಮ್ಮಟಸಾರದ ಕರ್ತೃ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಇವನ ಇನ್ನೊಬ್ಬ ಗುರು.

ಚಾವುಂಡರಾಯನಿಗೆ ನೇಮಿತೀರ್ಥಂಕರನ ಯಕ್ಷಿಯ ಹೆಸರಾದ ಚಾಮುಂಡಿ ಎಂಬುದರಿಂದ ಆ ಹೆಸರು ಬಂದಿರಬಹುದು. ಹೀಗೆಯೆ ಈತನಿಗೆ ಗೊಮ್ಮಟ, ಗೊಮ್ಮಟರಾಯ ಎಂಬ ಹೆಸರುಗಳು ನೇಮಿತೀರ್ಥಂಕರನ ಯಕ್ಷಿ ಕೂಷ್ಮಾಂಡಿ(ನಿ)ಯನ್ನು ಯಾವುದೋ ವಿಶೇಷ ಸಂದರ್ಭದಲ್ಲಿ ಹರಸಿಕೊಂಡದ್ದಕ್ಕಾಗಿಯೋ ಆಕೆಯ ವಿಶೇಷ ಪ್ರಸಾದಕ್ಕೆ ಪಾತ್ರನಾದದ್ದಕ್ಕಾಗಿಯೋ ಆ ಯಕ್ಷಿಯ ಪ್ರಾಕೃತ ರೂಪದ ಹೆಸರು ಗುಮ್ಮಡಿಯ ಮೂಲಕವಾಗಿ ಬಂದಿರಬೇಕು ಎಂದು ಊಹೆ. ದೊಡ್ಡಯ್ಯ, ಅನಂತಕವಿ, ದೇವಚಂದ್ರ ಇವರ ಕೃತಿಗಳಲ್ಲಿ ದೊರೆಯುವ ಚಾವುಂಡರಾಯ ಪರವಾದ ವೃತ್ತಾಂತದಲ್ಲಿ ಈತ ಈ ಕೂಷ್ಮಾಂಡಿ ಯಕ್ಷಿಯ ವಿಶೇಷ ಕೃಪೆಗೆ ಪಾತ್ರನಾಗಿಯೇ ಬಾಹುಬಲಿ ಮೂರ್ತಿಯನ್ನು ನಿಲ್ಲಿಸಿದನೆಂದು ಹೇಳಿರುವುದು ಕಂಡುಬರುತ್ತದೆ. ಚಾವುಂಡರಾಯ ಆ ಯಕ್ಷಿಯ ಆರಾಧಕನಾಗಿದ್ದಿರಬೇಕೆಂದೂ ಬಾಹುಬಲಿ ನಿರ್ಮಾಣ ಮೊದಲಾದ ಕಾರ್ಯಗಳಲ್ಲಿ ಆಕೆಯಿಂದ ಪ್ರೇರಣೆ ಪಡೆದನೆಂಬ ವಾರ್ತೆ ಜನಜನಿತವಾಗಿತ್ತೆಂದೂ ತೋರುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯ. ನೇಮಿಚಂದ್ರಯತಿ ಚಾವುಂಡರಾಯನ ಪ್ರತಿಭೋಧನಾರ್ಥವಾಗಿ ಬರೆದು, ಈತನ ನಾಮಾಂತರವಾದ ಗೊಮ್ಮಟ ಎಂಬುದರಿಂದಾಗಿಯೇ ಗೊಮ್ಮಟ ಸಾರ ಎಂದು ತನ್ನ ಗ್ರಂಥಕ್ಕೆ ಹೆಸರು ಕೊಟ್ಟನೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಚಾವುಂಡರಾಯನಿಗೆ ರಾಯ, ಅಣ್ಣ ಎಂಬ ಬಿರುದುಗಳಿದ್ದು ರಾಯ ಎಂಬುದು ಶ್ರವಣಬೆಳಗೊಳದಲ್ಲಿ ಗೊಮ್ಮಟಮೂರ್ತಿಯನ್ನು ಪ್ರತಿಷ್ಠಾಪಿಸಿದ್ದು ಮುಂತಾದ ಮಹಾಕಾರ್ಯಗಳಿಗೆ ಮೆಚ್ಚಿ ರಾಚಮಲ್ಲ ಈತನಿಗೆ ಕೊಟ್ಟ ಬಿರುದು ಎಂದು ತಿಳಿಯುತ್ತದೆ.

ಚಾವುಂಡರಾಯ ಇಮ್ಮಡಿ ಮಾರಸಿಂಹನ ಸಹಪಾಠಿಯೂ ಆತನ ವಿಶ್ವಾಸಪಾತ್ರನಾದ ಯೋಧನೂ ಆಗಿದ್ದು, ಅವನ ಅನೇಕ ವಿಜಯಗಳಲ್ಲಿ ಪ್ರಾಯಃ ಸೇನಾನಿಯಾಗಿ ಹೋರಾಡಿದಂತೆ ತೋರುತ್ತದೆ. ನಾಲ್ವಡಿ ರಾಚಮಲ್ಲನಲ್ಲಿ ಈತ ಮಂತ್ರಿಯಾಗಿದ್ದುದು ನಿಶ್ಚಯ (ಸ್ಥಿರ ಜಿನಶಾಸನೋದ್ಧರಣರಾದಿಯೊಳಾರೆನೆ ರಾಚಮಲ್ಲಭೂವರ ವರಮಂತ್ರಿರಾಯನೆ...). ರಕ್ಕಸಗಂಗನ ಆಳಿಕೆಯ ಅವಧಿಯಲ್ಲಿಯೂ ಈತ ಇದ್ದಿರಬಹುದಾದರೂ ರಾಜ್ಯಾರಂಭದ ಕೆಲವು ವರ್ಷಗಳವರೆಗೆ ಮಾತ್ರ ಆತನ ಸೇವೆಯಲ್ಲಿದ್ದು ಪ್ರಾಯಃ 990ರ ವೇಳೆಗೆ ತೀರಿಕೊಂಡಿರಬೇಕು ಎಂಬುದಾಗಿ ಊಹಿಸಲಾಗಿದೆ. ರಕ್ಕಸಗಂಗನ ಕಾಲದವನಾದ ಕವಿ 1ನೆಯ ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಚಾವುಂಡರಾಯ ತನ್ನ ಪೋಷಕನೆಂಬುದಾಗಿಯೂ ಅಜಿತಸೇನಾಚಾರ್ಯ ಆಚಾರ್ಯನೆಂಬುದಾಗಿಯೂ ಹೇಳಿಕೊಂಡಿರುವುದು ಹೀಗೆ ತಿಳಿಯಲು ಅವಕಾಶ ಮಾಡಿಕೊಡುತ್ತದೆ.

ಚಾವುಂಡರಾಯ ಇಮ್ಮಡಿ ಮಾರಸಿಂಹನ ವಿಜಯೋದ್ಯಮಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಗಳಿಸಿದ್ದು, ಚಾವುಂಡರಾಯ ಪುರಾಣದ ಆದ್ಯಂತ ಭಾಗಗಳ ಉಲ್ಲೇಖಗಳಿಂದಲೂ ಶ್ರವಣಬೆಳಗೊಳದ ಸು.983ರ ಒಂದು ಶಾಸನದಿಂದಲೂ ತಿಳಿದುಬರುತ್ತದೆ. ಗಂಗರಾಜ್ಯದ ವ್ಯವಸ್ಥೆ, ವಿಸ್ತರಣೆ, ಆಕ್ರಮಣಕಾರರ ವಿಧ್ವಂಸನ, ಅನ್ಯಕ್ರಾಂತ ದೇಶಭಾಗಗಳ ಸ್ವಾಧೀನತೆ ಇವುಗಳ ಸಾಧನೆಗೆ ಈತ ಪ್ರಮುಖ ಸಹಾಯಕನಾದನೆಂದು ಆ ವಿವರಣೆಗಳಿಂದ ತಿಳಿಯುತ್ತದೆ. ಶ್ರವಣಬೆಳಗೊಳದ ಶಾಸನದಲ್ಲಿಯೂ ಮೇಲಿನ ಸಾಹಸಗಳಲ್ಲಿ ಒಂದೆರಡು ಉಲ್ಲೇಖವಾಗಿವೆ. ಇಲ್ಲಿ ಈತನ ಪೌರುಷದ ಆಲಂಕಾರಿಕ ವರ್ಣನೆಯೇ ಹೆಚ್ಚು. ಈತ ಹೋರಾಡಿದ ವ್ಯಕ್ತಿಗಳ ಹಾಗೂ ಸ್ಥಳಗಳ ವಿಚಾರ ವಿಶದವಾಗಿ ಇತಿಹಾಸದಿಂದ ತಿಳಿದುಬಂದಿಲ್ಲ. ವಜ್ಜಳದೇವನೆಂಬುವನು ಮುಮ್ಮಡಿ ಕೃಷ್ಣನ ಮಾಂಡಲಿಕನಾಗಿ ಪುಲಿನಾಡನ್ನು ಆಳುತ್ತಿದ್ದು ಬಳಿಕ ಪರಮಾರರ ಪಕ್ಷಕ್ಕೆ ಸೇರಿಕೊಂಡವನಿರಬಹುದು. ಇಲ್ಲಿನ ನೊಳಂಬ ಬಹುಶಃ 2ನೆಯ ಪೊಳಲ್ಚೋರನೋ ವೀರಮಹೇಂದ್ರನೋ ಆಗಿರಬೇಕು, ಚಾಳುಕ್ಯ ವಂಶದ ರಾಜಾದಿತ್ಯ ಇಲ್ಲಿಯ ರಾಜಾಯ್ತ ಇರಬಹುದು ಮುಂತಾಗಿ ಊಹಿಸಲಾಗಿದೆ.

ಈತನ ಧರ್ಮಶ್ರದ್ಧೆಯ ಸಾಕ್ಷ್ಯಗಳನ್ನು ಶ್ರವಣಬೆಳಗೊಳದಲ್ಲಿ ಇಂದೂ ಕಾಣಬಹುದಾಗಿದೆ. ಇಲ್ಲಿಯ ಇಂದ್ರಗಿರಿಯ ಬೆಟ್ಟದ ಮೇಲೆ ಪ್ರತಿಷ್ಠಾಪಿಸಿರುವ ಮಹೋನ್ನತ ಗೊಮ್ಮಟವಿಗ್ರಹ ಈತನ ಕೀರ್ತಿಗೆತ್ತಿದ ಕಳಸವಾಗಿದೆ. ಈ ವಿಗ್ರಹದ ಉಭಯ ಪಾರ್ಶ್ವಗ ಳಲ್ಲಿಯೂ ಹತ್ತದ ಮೇಲೆ ಕನ್ನಡ, ತಮಿಳು ಮತ್ತು ಮರಾಠಿ ಭಾಷೆಗಳಲ್ಲಿ, ಚಾವುಂಡರಾಯ ಆ ಮೂರ್ತಿಯನ್ನು ಮಾಡಿಸಿದ್ದಾಗಿ ತಿಳಿಸುವ ಶಿಲಾಲೇಖಗಳಿವೆ. ಬೊಪ್ಪಣಪಂಡಿತನ ಗೊಮ್ಮಟಸ್ತುತಿ ಶಾಸನದಲ್ಲಿಯೂ ನೇಮಿಚಂದ್ರ ಯತಿಯ ಗೊಮ್ಮಟಸಾರದಲ್ಲಿಯೂ ಈ ಸಂಗತಿಯನ್ನು ಘೋಷಿಸಿದೆ. ಪೌದನಪುರದಲ್ಲಿ ಭರತಚಕ್ರವರ್ತಿನಿರ್ಮಿತವಾದ ಬಾಹುಬಲಿಮೂರ್ತಿಯನ್ನು ನೋಡಬೇಕೆಂದು ಚಾವುಂಡರಾಯನಿಗೆ ಅಭಿಲಾಷೆಯುಂಟಾಗಿ ಅಲ್ಲಿಗೆ ಹೊರಡಲು ಸಿದ್ಧನಾದಾಗ ತಿಳಿದವರು ಅದು ಈತನ ಶಕ್ತಿಗೆ ಮೀರಿದ್ದೆಂದು ಹೇಳಿದರು. ಆಗ ಅದೇ ರೀತಿಯ ಮೂರ್ತಿಯನ್ನು ತಾನು ಮಾಡಿಸಬೇಕೆಂದು ನಿಶ್ಚಯಿಸಿ ಶ್ರವಣಬೆಳಗೊಳದ ಬೆಟ್ಟದ ಮೇಲೆ ಈ ಗೊಮ್ಮಟಮೂರ್ತಿಯನ್ನು ಯತ್ನ ಪೂರ್ವಕವಾಗಿ ಮಾಡಿಸಿದ. ಇದು ಬೊಪ್ಪಣಪಂಡಿತನ ವಿವರಣೆಯ ಸಾರ. ಇದೇ ವಿಷಯ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ದೊಡ್ಡಯ್ಯನ ಭುಜಬಲಿಶತಕ (ಸು.1550), ಪಂಚಬಾಣನ ಭುಜಬಲಿ ಚರಿತೆ (ಸು.1614) ಮುಂತಾದವುಗಳಲ್ಲಿಯೂ ಬಂದಿದೆ. ಚಾವುಂಡರಾಯ ಬಾಹುಬಲಿ ವಿಗ್ರಹವನ್ನು ಪ್ರತಿಷ್ಠಾಪಿಸಿ ಅಭಿಷೇಕ ಮಾಡಿದ್ದನ್ನೂ ಅದರ ಪೂಜಾವ್ಯವಸ್ಥೆಗಾಗಿ ಹಲವಾರು ಗ್ರಾಮಗಳನ್ನು ದತ್ತಿ ಬಿಟ್ಟಿದ್ದು ದೊಡ್ಡಬೆಟ್ಟದ ಕೆಳಗೆ ಗ್ರಾಮವೊಂದನ್ನು ಕಟ್ಟಿಸಿಕೊಟ್ಟದ್ದು ಇಂಥ ಧರ್ಮಕಾರ್ಯವನ್ನು ನಡೆಸಿದ್ದಕ್ಕೆ ಸುಪ್ರೀತನಾದ ರಾಜಮಲ್ಲ ದೊರೆ ಚಾವುಂಡರಾಯನಿಗೆ ರಾಯನೆಂಬ ಬಿರುದು ಕೊಟ್ಟಿದ್ದನ್ನೂ ಭುಜಬಲಿ ಚರಿತೆಯಲ್ಲಿ ಹೇಳಿದೆ. ಗೊಮ್ಮಟಸಾರದ (ಸು.960) ಕರ್ಮಕಾಂಡದ ಕೆಲವು ಗಾಥೆಗಳು ಈತನ ಗುಣಾತಿಶಯದ ಸಂಕೀರ್ತನೆಯನ್ನು ಒಳಗೊಂಡಿವೆ. ಇದರ 968ನೆಯ ಗಾಥೆ, ನೇಮಿಚಂದ್ರ ನಿಂದ ಗೊಮ್ಮಟಸಾರವನ್ನು ಬರೆಸಿದ್ದು, ಚಾವುಂಡರಾಯ ಬಸದಿಯಲ್ಲಿ ನೇಮಿನಾಥ ಜಿನಬಿಂಬವನ್ನು ಪ್ರತಿಷ್ಠಾಪಿಸಿದ್ದು ಹಾಗೂ ಭವ್ಯವಾದ ಗೊಮ್ಮಟೇಶ್ವರ ವಿಗ್ರಹವನ್ನು ಸ್ಥಾಪಿಸಿದ್ದನ್ನು ಸೂಚಿಸುತ್ತದೆಂದು ವಿದ್ವಾಂಸರು ಭಾವಿಸಿದ್ದಾರೆ. 969ನೆಯ

ಗಾಥೆಯಲ್ಲಿಯೂ ಗೊಮ್ಮಟಮೂರ್ತಿ ನಿರ್ಮಾಣದ ಪ್ರಸ್ತಾಪವಿದೆ. 970–71ನೆಯ ಗಾಥೆಗಳಲ್ಲಿ ಆತನಿಂದಾದ ಈಷತ್ಪ್ರಾಗ್ಭಾರ ಜಿನಭವನದ ಹಾಗೂ ಸ್ತಂಭದ ಉಲ್ಲೇಖವಿದೆ. ಇವು ಚಾವುಂಡರಾಯ ಬಸದಿ ಮತ್ತು ತ್ಯಾಗದ ಬ್ರಹ್ಮದೇವರ ಕಂಬ ಇವನ್ನು ಕುರಿತಿವೆಯೆಂದು ಅಭಿಪ್ರಾಯಪಡಲಾ ಗಿದೆ. ಅಖಂಡ ಬಾಗಿಲು ಮತ್ತು ಗುಳ್ಳಕಾಯಜ್ಜಿ ಪ್ರತಿಮೆ ಇವೂ ಚಾವುಂಡರಾಯಕೃತ ವೆಂದು ಪ್ರತೀತಿಯಿದೆ.

ಯುದ್ಧವೀರನೂ ಧರ್ಮವೀರನೂ ಆಗಿದ್ದ ಚಾವುಂಡರಾಯ ಕವಿಯೂ ಕವಿಜನ ಪೋಷಕನೂ ಆಗಿ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸ್ಮರಣೀಯನಾಗಿದ್ದಾನೆ. ರನ್ನ ಮೊದಲು ಅಜಿತಸೇನಾಚಾರ್ಯರಲ್ಲಿ ಚಾವುಂಡರಾಯನೊಡಗೂಡಿ ವಿದ್ಯಾಭ್ಯಾಸ ಮಾಡಿ, ಅನಂತರ ಸ್ವಲ್ಪಕಾಲ ಈತನ ಆಶ್ರಯದಲ್ಲಿದ್ದಿರಬಹುದು ಎಂದು ತೋರುತ್ತದೆ. ಚಾವುಂಡರಾಯನ ಶೌರ್ಯ ಔದಾರ್ಯಗಳನ್ನು ಅಜಿತಪುರಾಣದಲ್ಲಿಯೂ ಗದಾಯುದ್ಧ ದಲ್ಲಿಯೂ ಸ್ಪಷ್ಟವಾಗಿ ಕೀರ್ತಿಸಿದೆ. ಶ್ರವಣಬೆಳಗೊಳದ ಹೆಬ್ಬಂಡೆಯ ಮೇಲೆ ಈ ಇಬ್ಬರ ಹೆಸರುಗಳನ್ನೂ ಒಂದೆಡೆಗೆ ಒಟ್ಟಿಗೆ ಕೆತ್ತಿರುವುದು, ರನ್ನ 989ರಲ್ಲಿ ಹುಟ್ಟಿದ್ದ ತನ್ನ ಮಗನಿಗೆ ಚಾವುಂಡರಾಯನ ರಾಯ ಎಂಬ ಹೆಸರನ್ನಿಟ್ಟುದು ಇವರ ಮಧುರ ಮೈತ್ರಿಯ ದ್ಯೋತಕ ವಾಗಿದೆ. ರನ್ನನ ಅನುಪಲಬ್ಧಕೃತಿಗಳಾದ ಚಕ್ರೇಶ್ವರಚರಿತ, ಪರಶುರಾಮಚರಿತಗಳಲ್ಲಿ ಯಾವುದಾದರೂ ಚಾವುಂಡರಾಯಪರವಾದುದಾಗಿರಬೇಕು ಎಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. 1ನೆಯ ನಾಗವರ್ಮನೂ ಛಂದೋಂಬುಧಿಯಲ್ಲಿ ಚಾವುಂಡರಾಯನ ಆಶ್ರಯವನ್ನು ಹೇಳಿಕೊಂಡಿದ್ದಾನೆ. ನೇಮಿಚಂದ್ರಯತಿ ಚಾವುಂಡರಾಯನ ಪ್ರೇರಣೆಯಿಂದ ಆತನ ಪ್ರತಿಬೋಧನಾರ್ಥವಾಗಿಯೇ ಗೊಮ್ಮಟಸಾರ, ತ್ರಿಲೋಕಸಾರ ಎಂಬ ಗ್ರಂಥಗಳನ್ನು ಬರೆದುದಾಗಿ ಆ ಗ್ರಂಥಗಳ ಟೀಕಾಕರ್ತರು ಹೇಳಿದ್ದಾರೆ. (ಜಿ.ಎಸ್.ಎಸ್‌ಐ.;ಟಿ.ವಿ.ವಿ.;ಕೆ.ಎಸ್.ಎಸ್.)

**ಚಾಳುಕ್ಯ ವಂಶ:** ಕರ್ನಾಟಕದಲ್ಲಿ ಆಳಿದ ಒಂದು ಪ್ರಖ್ಯಾತ ರಾಜಮನೆತನ. ಈ ಮನೆತನದ ಅರಸರು ಸತ್ತ್ವಯುತ ಸಾಮ್ರಾಜ್ಯವನ್ನು ಕಟ್ಟಿ, ನಾಲ್ಕು ಶತಮಾನಗಳಿಗೂ ಹೆಚ್ಚು ಕಾಲ ಕನ್ನಡ ನಾಡಿನ ಇತಿಹಾಸ ರೂಪಿಸಿ ಅಜೇಯವಾದ ಕೀರ್ತಿ ಪಡೆದರು. ಕರ್ನಾಟಕದ ಸಾಹಿತ್ಯ ಕಲೆಗಳಿಗೆ ಅಮಿತವಾದ ಪ್ರೋತ್ಸಾಹ ನೀಡಿದರು. ಇವರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ವಿಶಿಷ್ಟವಾದ ವಾಸ್ತು ಹಾಗೂ ಶಿಲ್ಪಕಲೆ ರೂಪುಗೊಂಡಿತು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ ಈ ಅರಸು ಮನೆತನ ಭಾರತದ ಪ್ರಬಲ ಅರಸು ಮನೆತನಗಳಲ್ಲೊಂದೆಂದು ಪರಿಗಣಿತವಾಗಿದೆ. ಕನ್ನಡಿಗರಾದ ಇವರು ತಮ್ಮ ಪ್ರಭಾವವನ್ನು ಕರ್ನಾಟಕದ ಹೊರಗೂ ವಿಸ್ತರಿಸಿದರು. ಭಾರತದಾದ್ಯಂತವಲ್ಲದೆ ಆಗ್ನೇಯ ಏಷ್ಯವೇ ಮುಂತಾದ ಇತರ ಕಡೆಗಳಿಗೂ ಕನ್ನಡ ನಾಡಿನ ಸಂಸ್ಕೃತಿ ಹರಡುವಂತೆ ಮಾಡಿದರು. ಈ ಮನೆತನದ ನಾನಾ ಶಾಖೆಗಳಲ್ಲಿ ಬಾದಾಮಿ, ಕಲ್ಯಾಣ, ವೆಂಗಿ, ವೇಮುಲವಾಡ ಪ್ರಸಿದ್ಧವಾದವು. ಈ ಶಾಖೆಗಳ ಅರಸರಲ್ಲದೆ ಇನ್ನೂ ನಾನಾ ಶಾಖೆಗಳವರು ಕರ್ನಾಟಕದ ಹೊರಗೂ ಆಳಿದರು.

ಈ ವಂಶದ ಹೆಸರು ಬಾದಾಮಿಯ ಶಾಖೆಗೆ ಸಂಬಂಧಿಸಿದಂತೆ ಚಳುಕ್ಯ ಎಂದೂ ಕಲ್ಯಾಣದ ಶಾಖೆಗೆ ಸಂಬಂಧಿಸಿದಂತೆ ಚಾಳುಕ್ಯ ಎಂದೂ ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡುಬರುತ್ತದೆ. ಅಲ್ಲದೆ ಚಳ್ಕಿ, ಚಲುಕಿ, ಚಳುಕ್ಯ, ಚಾಲುಕ್ಯ ಎಂಬ ರೂಪಗಳೂ ಪ್ರಚಾರದಲ್ಲಿವೆ. ಇವೆಲ್ಲದರ ಮೂಲಪದದ ಅರ್ಥವೇನು ಎಂಬುದು ಸ್ಪಷ್ಟವಾಗಿಲ್ಲ. ಇದೊಂದು ವ್ಯಕ್ತಿನಾಮ ವಾಗಿರಬಹುದು ಅಥವಾ ದ್ರಾವಿಡರ ಒಂದು ಪಂಗಡದ ಜನಾಂಗದ ಹೆಸರಾಗಿರಬಹುದು. 3ನೆಯ ಶತಮಾನಕ್ಕೆ ಸೇರಿದ ನಾಗಾರ್ಜುನಕೊಂಡದಲ್ಲಿ ದೊರೆತ ಶಾಸನವೊಂದರಲ್ಲಿ ಖಂದಚಲಿಕಿ ರೆಮ್ಮಣಕನೆಂಬ ಹೆಸರು ಕಂಡುಬಂದಿದೆ. ಇವನಿಗೂ ಚಳುಕ್ಯರಿಗೂ ಯಾವ ಸಂಬಂಧವನ್ನೂ ಕಲ್ಪಿಸಲಾಗದಾದರೂ ಚಳುಕ್ಯ ಎಂಬ ಹೆಸರಿನ ಪ್ರಾಚೀನ ರೂಪವಿದು ಎಂಬ ಒಂದು ಊಹೆ ಇದೆ. 11ನೆಯ ಶತಮಾನದಲ್ಲಿ ಮತ್ತು ಅನಂತರ ಹುಟ್ಟಿದ ಶಾಸನಗಳು ಈ ಹೆಸರಿನ ವ್ಯುತ್ಪತ್ತಿಯನ್ನು ಕುರಿತು ಹಲವಾರು ಕಥೆಗಳನ್ನು ಹೆಣೆದಿವೆ. ಚುಲುಕ ಎಂಬ ಸಂಸ್ಕೃತ ಪದದಿಂದ ಚಲುಕ್ಯ ಬಂತೆಂಬುದು ಒಂದು ಹೇಳಿಕೆ. ಚುಲುಕ ಎಂದರೆ ಎರಡು ಅಂಗೈಗಳನ್ನು ಕೂಡಿಸಿದರೆ ಉಂಟಾಗುವ ಬೊಗಸೆ. ಬಿಲ್ಹಣ ತನ್ನ ವಿಕ್ರಮಾಂಕ ದೇವಚರಿತದಲ್ಲಿ ಈ ಕುರಿತು ಒಂದು ಕಥೆ ಹೇಳಿದ್ದಾನೆ. ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಸಂರಕ್ಷಿಸಲು ನಾಡಿಗೆ ಒಬ್ಬ ಮಹಾಪುರುಷನ ಆವಶ್ಯಕತೆ ಇದೆ ಎಂಬ ಕಾರಣದಿಂದ, ಅಂಥ ಒಬ್ಬ ಪುರುಷನನ್ನು ಸೃಷ್ಟಿಸಬೇಕೆಂದು ಬ್ರಹ್ಮನನ್ನು ಇಂದ್ರ ಪ್ರಾರ್ಥಿಸಿದ. ಇದಕ್ಕೆ ಒಪ್ಪಿದ ಬ್ರಹ್ಮ ಸಂಧ್ಯಾಕಾಲದಲ್ಲಿ ಅರ್ಘ್ಯ ಬಿಡುವಾಗ ತನ್ನ ಚುಲುಕದಲ್ಲಿದ್ದ ನೀರನ್ನು ದೃಷ್ಟಿಸಿದ. ಆಗ ಬೊಗಸೆಯಿಂದ ವೀರನೊಬ್ಬ ಉದಯಿಸಿದ, ಚುಲುಕದಿಂದ ಬಂದವನಾದ್ದರಿಂದ ಇವನೇ ಚಲುಕ್ಯ, ಚಾಲುಕ್ಯ, ಚಾಳುಕ್ಯ ಎನಿಸಿಕೊಂಡ.

ಈ ಕಾಲದ ಶಾಸನಗಳಲ್ಲಿ ಇವರನ್ನು ಕುರಿತ ಇನ್ನೊಂದು ಹೇಳಿಕೆ ಇದೆ. ಇವರು ಅಯೋಧ್ಯೆಯಿಂದ ದಕ್ಷಿಣಕ್ಕೆ ಬಂದವರು. ಈ ವಂಶದ ಹದಿನಾರು ಅರಸರು ದಕ್ಷಿಣಾ ಪಥದಲ್ಲಿ ಆಳಿದ ಮೇಲೆ ಸ್ವಲ್ಪ ಕಾಲ ಇವರು ಸತ್ತ್ವಹೀನರಾಗಿದ್ದರು. ಈ ವಂಶದ ಜಯಸಿಂಹ ಪುನಃ ಬಲಸಂವರ್ಧನೆ ಮಾಡಿಕೊಂಡು ರಾಷ್ಟ್ರಕೂಟ ಮನೆತನದ ಕೃಷ್ಣನ ಮಗನಾದ ಇಂದ್ರನನ್ನು ಸೋಲಿಸಿ ಚಾಳುಕ್ಯ ರಾಜ್ಯ ಸ್ಥಾಪನೆಗೆ ಕಾರಣನಾದ ಎಂದು ಹೇಳಲಾಗಿದೆ. ಆದರೆ ಈ ರಾಷ್ಟ್ರಕೂಟರು ಯಾರೆಂಬುದು ತಿಳಿಯದು. ಅಂಥವರಾರೂ ಕರ್ನಾಟಕದಲ್ಲಿ ಆ ಕಾಲದಲ್ಲಿ ಇದ್ದಂತಿಲ್ಲ. ಜಯಸಿಂಹನಿಗೆ ಹಿಂದೆ, ಚಾಳುಕ್ಯರು ಸತ್ತ್ವಹೀನರಾಗಿದ್ದ ಕಾಲಕ್ಕೂ ಮೊದಲು 16 ಜನ ದಕ್ಷಿಣಾಪಥದಲ್ಲಿ ಆಳಿದರೆಂಬ ಮಾತನ್ನು ನಂಬುವುದಾದರೆ ದಕ್ಷಿಣಾಪಥದಲ್ಲಿ ಇವರ ಆಳಿಕೆ ಸು. 130ರ ವೇಳೆಗೆ ಆರಂಭವಾಯಿತೆನ್ನ ಬೇಕು. ಆದ್ದರಿಂದ ಈ ಹೇಳಿಕೆಯನ್ನು ನಂಬಲಾಗುವುದಿಲ್ಲ.

ಚಾಳುಕ್ಯರ ಮೂಲನಾಮ ಚಲುಕಿ, ಚಲ್ಕಿ, ಸಲುಕಿ ಅಥವಾ ಸಲ್ಕಿ ಎಂಬ ಕನ್ನಡ ಪದ ಎಂದು ಊಹಿಸುವುದು ಹೆಚ್ಚು ಸಮಂಜಸ. ಇದು ಹಾರೆಯಂಥ ಕೃಷಿ ಉಪಕರಣದ ಹೆಸರು. ಈ ಮನೆತನದ ಮೂಲಪುರುಷ ಇದನ್ನು ತನ್ನ ಅಂಕಿತನಾಮವಾಗಿ ಸ್ವೀಕರಿಸಿರ ಬೇಕು. ಕೃಷಿ ಉಪಕರಣದ ಹೆಸರಿನ ಜೊತೆಗೆ ಅಪ್ಪ ಎಂಬ ಗೌರವ ಪದ ಜೋಡಿಸಿ ಹೆಸರಿಟ್ಟುಕೊಳ್ಳುವ ರೂಢಿ ಕರ್ನಾಟಕದಲ್ಲಿ ಈಗಲೂ ಇದೆ (ಉದಾ: ಸಲ್ಕೆಪ್ಪ, ಗುದ್ಲೆಪ್ಪ), ಚಾಳುಕ್ಯರು ಮೂಲತಃ ಬಾದಾಮಿಯ ಕೆಲಬಲದಲ್ಲಿ ವಾಸಿಸುವ ಒಕ್ಕಲಿಗರ ಬಣಕ್ಕೆ ಸೇರಿದವರಿರಬೇಕು. ಬರಬರುತ್ತ ಪ್ರಬಲವಾಗಿ ವಿಶಾಲ ಪ್ರದೇಶಗಳನ್ನು ಆಳಲು ಪ್ರಾರಂಭಿಸಿ ದಾಗ ಇವರ ಮನೆತನಕ್ಕೆ ಪೌರಾಣಿಕತೆಯನ್ನೂ ಪಾವಿತ್ರ್ಯವನ್ನೂ ಕೊಡುವುದಕ್ಕಾಗಿ ದಂತಕತೆ ಹುಟ್ಟಿಕೊಂಡಿರಬೇಕು.

ಬಾದಾಮಿಯ ಚಳುಕ್ಯರ ಸಮಕಾಲೀನ ಶಾಸನಗಳಲ್ಲಿ ಮೇಲೆ ಹೇಳಿದ ಕಥೆಗಳಾವುವೂ ಕಾಣಬರುವುದಿಲ್ಲ. ಆದರೆ ಇವರು ಮೂಲತಃ ಕನ್ನಡಿಗರೇ ಎಂಬ ವಿಷಯ ಅವುಗಳಿಂದ ತಿಳಿದುಬರುತ್ತದೆ. ಕದಂಬರಂತೆ ಇವರೂ ಹಾರೀತಿ ಪುತ್ರರು, ಮಾನವ್ಯಸ ಗೋತ್ರರು. ವರಾಹ ಇವರ ಲಾಂಛನ. ಈ ಅರಸರ ಪುಲಕೇಶಿ, ಬಿಟ್ಟರಸ ಮುಂತಾದ ಹೆಸರುಗಳನ್ನೂ ನೋಡುತ್ತ ಗೆಲ್ವೋಂ, ಪ್ರಿಯಗಳ್ಳ ಇತ್ಯಾದಿ ಬಿರುದುಗಳನ್ನೂ ಇವರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಿಗೆ ಕೊಟ್ಟ ಪ್ರೋತ್ಸಾಹವನ್ನೂ ಆ ಭಾಷೆ ಹಾಗೂ ಲಿಪಿಗಳಲ್ಲಿ ಇವರು ಕೆತ್ತಿಸಿದ ಶಾಸನಗಳನ್ನೂ ಗಮನಿಸಿದರೆ ಇವರಿಗೆ ಆ ಭಾಷೆಯ ಮೇಲೆ ಲಿಪಿಯ ಮೇಲೆ ಇದ್ದ ಒಲವು ಅರ್ಥವಾಗುತ್ತದೆ. ಈ ಕಾಲದಿಂದ ಕನ್ನಡ ಶಾಸನಸಾಹಿತ್ಯ ಹೆಚ್ಚು ಪ್ರೌಢವಾಗು ತ್ತದೆ. ಕನ್ನಡದಲ್ಲಿ ಶಾಸನಗಳನ್ನು ಬರೆಸುವ ರೂಢಿ ಪ್ರಬಲವಾಗುತ್ತದೆ. ಇವರ ಅನಂತರ ಆಳಿದ ರಾಷ್ಟ್ರಕೂಟರು ಇವರ ಸೇನೆಯನ್ನು ಕರ್ನಾಟಕಬಲ ಎಂದು ಕರೆದಿರುವುದನ್ನು ಇಲ್ಲಿ ಗಮನಿಸಬಹುದು. 8ನೆಯ ಶತಮಾನದಲ್ಲಿ ಪಾಂಡ್ಯರು ಕರ್ನಾಟಕದ ಈ ಅರಸರೊಂದಿಗೆ ಸಂಬಂಧ ಬೆಳೆಸಿದ್ದರು. ಪಾಂಡ್ಯ ವಂಶದ ನೆಡುಂಜಡೈಯನ ಅಜ್ಜನಾದ ಶಡೈಯನನ್ನು ಮಧುರ ಕರುಣಾಟಕನ್ ಎಂದು ವರ್ಣಿಸಿರುವುದು ಪಾಂಡ್ಯರು ಕರ್ನಾಟಕದವ ರೊಡನೆ, ಚಳುಕ್ಯರೊಡನೆ ಹೊಂದಿದ್ದ ಮಧುರವಾದ ಸಂಬಂಧದ ದ್ಯೋತಕವಾಗಿದೆ. ವಿಷ್ಣುವರ್ಧನ ರಾಜ ಎಂಬ ಹೆಸರಿನ ಕನ್ನಡ ರೂಪವಾದ ಬಿಟ್ಟರಸ ಎಂಬುದನ್ನು ಒಂದು ತಾಮ್ರ ಶಾಸನದ ಮೊಹರಿನ ಮೇಲೆ ಕತ್ತಲಾಗಿದೆ. ಈ ವಂಶದ ಬುದ್ಧರಸನ ಬಿರುದು ಮದನಂಗಾಶ್ರಯ ಎಂದಿತ್ತು ಎಂಬ ವಿಷಯ ಇನ್ನೊಂದು ಶಾಸನದಿಂದ ತಿಳಿದಿದೆ. ಇದು ಸುಸ್ಪಷ್ಟವಾಗಿ ಕನ್ನಡದ ಬಿರುದು. ಈ ಎಲ್ಲ ಮಾಹಿತಿಗಳಿಂದ ಚಾಳುಕ್ಯರು ಮೂಲತಃ ಕನ್ನಡಿಗರೇ ಎಂಬುದೂ ಇವರು ಉತ್ತರದ ಅಯೋಧ್ಯೆಯಿಂದ ಬಂದವರೆಂಬುದು ಅನಂತರ ಹೆಣೆಯಲಾದ ಕಥೆಯೆಂಬುದೂ ಸ್ಪಷ್ಟ. (ಬಿ.ಆರ್.ಜಿ.)

**ಬಾದಾಮಿಯ ಚಳುಕ್ಯರು:** ರಾಜಕೀಯ ಇತಿಹಾಸ: 6ನೆಯ ಶತಮಾನದಲ್ಲಿ ವಾತಾಪಿ ಅಥವಾ ಬಾದಾಮಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಇವರು ಸು.2 ಶತಮಾನಗಳ ಕಾಲ ರಾಜ್ಯವಾಳಿದರು. ಭಾರತದ ನಾನಾ ಪ್ರಾಂತಗಳಲ್ಲಿ ಆಳಿದ ಚಳುಕ್ಯ ವಂಶಗಳಲ್ಲಿ ಬಾದಾಮಿ ಶಾಖೆಯೇ ಪ್ರಾಚೀನತಮವಾದುದು. ಬಾದಾಮಿಯ ಚಳುಕ್ಯರನ್ನು ಹಾರೀತಿಪುತ್ರರು, ಮಾನವ್ಯಸ ಗೋತ್ರಕ್ಕೆ ಸೇರಿದವರು, ಸಪ್ತಮಾತೃಕೆಯರಿಂದ ಪೋಷಿತರು ಹಾಗೂ ಕಾರ್ತಿಕೇಯನ ಆರಾಧಕರು, ನಾರಾಯಣ ಅನುಗ್ರಹಿಸಿದ ವರಾಹಲಾಂಛನರು ಎಂದು ಇವರ ಶಾಸನಗಳು ವರ್ಣಿಸುತ್ತವೆ.

ಸಾಹಿತ್ಯ ಹಾಗೂ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಮೊದಲ ಚಳುಕ್ಯ ದೊರೆ ಜಯಸಿಂಹ, ಈತ ಕದಂಬರ ಅಧೀನದಲ್ಲಿ ಒಬ್ಬ ಅಧಿಕಾರಿಯೋ ಮಾಂಡಲಿಕನೋ ಆಗಿದ್ದನೆಂದು ತೋರುತ್ತದೆ. ಮಾನ್ಯಪುರ ಶಾಖೆಯ ರಾಷ್ಟ್ರಕೂಟ ಅರಸ ಅಭಿಮನ್ಯುವಿನ ಮಾಂಡಲಿಕ ಜಯಸಿಂಹನೆಂಬುವನ ಹೆಸರು ಶಾಸನೋಕ್ತವಾಗಿದೆ. ಇವನೇ ಚಳುಕ್ಯ ಜಯಸಿಂಹನಾಗಿದ್ದಿರಬಹುದೆಂದು ಊಹಿಸಲು ಅವಕಾಶವಿದೆ. ಆದರೆ ಖಚಿತವಾದ ಆಧಾರಗಳಿಲ್ಲ. ಜಯಸಿಂಹ 500–520ರವರೆಗೆ ರಾಜ್ಯವಾಳಿರಬಹುದು. ಇವನ ಮಗ ರಣರಾಗ (ಸು. 520–40). ಇವನ ಬಗ್ಗೆ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ.

ರಣರಾಗನ ಮಗ ಒಂದನೆಯ ಪುಲಕೇಶಿ (540–66). ಈತ ಇತಿಹಾಸದ ದೃಷ್ಟಿಯಿಂದ ಸಾಮ್ರಾಜ್ಯದ ಸ್ಥಾಪಕ, ಕದಂಬರನ್ನು ಅಧಿಕಾರದಿಂದ ಪದಚ್ಯುತಗೊಳಿಸಿ ಸ್ವತಂತ್ರ ರಾಜ್ಯವೊಂದರ ನಿರ್ಮಾಣಕ್ಕೆ ಅಡಿಪಾಯ ಹಾಕಿದ. ಬಾದಾಮಿಯನ್ನು ಚಳುಕ್ಯ ರಾಜ್ಯದ ರಾಜಧಾನಿಯಾಗಿ ಸ್ಥಾಪಿಸಿದ. ಅನಂತರ ಒಂದನೆಯ ಕೀರ್ತಿವರ್ಮ (566–96) ಚಳುಕ್ಯ ರಾಜ್ಯವನ್ನು ಸುಭದ್ರ ಗೊಳಿಸಿದ. ನಳ, ಮೌರ್ಯ ಹಾಗೂ ಕದಂಬರಿಗೆ ಕಾಳರಾತ್ರಿ ಸ್ವರೂಪನಾ ಗಿದ್ದು, ಸೇಂದ್ರಕರನ್ನೂ ತನ್ನ ಅಧೀನರನ್ನಾಗಿ ಮಾಡಿಕೊಂಡು ರಾಜ್ಯವನ್ನು ವಿಸ್ತರಿಸಿದ.

ಕೀರ್ತಿವರ್ಮನ ಮರಣಾನಂತರ ಅವನ ಮಗನಾದ ಇಮ್ಮಡಿ ಪುಲಕೇಶಿ ರಾಜ್ಯವಾಳಲು ಪ್ರಾಪ್ತವಯಸ್ಕನಾಗಿರಲಿಲ್ಲವಾಗಿ ಕೀರ್ತಿವರ್ಮನ ತಮ್ಮ ಮಂಗಲೀಶ (596–619) ರಾಜ್ಯಸೂತ್ರ ಗಳನ್ನು ವಹಿಸಿಕೊಂಡ. ಸು.602ರಲ್ಲಿ ಕಳಚುರಿ ಬುದ್ಧರಾಜ, ಕೊಂಕಣದ ರೇವತೀ

ದ್ವೀಪದ ಸ್ವಾಮಿರಾಜ ಇವರನ್ನು ಸೋಲಿಸಿ ಚಳುಕ್ಯ ರಾಜ್ಯವನ್ನು ಮತ್ತಷ್ಟು ವಿಸ್ತರಿಸಿದ. ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದಿಂದ ಈತನ ಸೈನ್ಯ ಪೂರ್ವ–ಪಶ್ಚಿಮ ಸಮುದ್ರಪರ್ಯಂತ ಕಾರ್ಯನಿರತವಾಗಿತ್ತೆಂಬ ಸೂಚನೆ ಇರುವುದರಿಂದ ಬಹುಶಃ ಒಂದು ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿದ್ದ ರಾಜ್ಯವನ್ನು ವಿಸ್ತಾರವಾದ ಸಾಮ್ರಾಜ್ಯವಾಗಿ ಬೆಳೆಸಿದ ಕೀರ್ತಿ ಈತನದಾಗಿರಬೇಕು. ಆದರೆ ಸಿಂಹಾಸನದ ಹಕ್ಕುದಾರನಾದ ಕೀರ್ತಿವರ್ಮನ ಮಗ ಇಮ್ಮಡಿ ಪುಲಕೇಶಿ ವಯಸ್ಕನಾದಾಗಲೂ ಅವನಿಗೆ ರಾಜ್ಯವನ್ನು ಕೊಡಲು ಇಷ್ಟಪಡದೆ ರಾಜ್ಯತನ್ನವಶದಲ್ಲೇ ಮುಂದುವರಿಯಬೇಕೆಂಬ ಆಸಕ್ತಿಯನ್ನು ಹೊಂದಿದ್ದನಾಗಿ ಇವರಿಬ್ಬರಲ್ಲಿ ವಿರಸ ಮೂಡಿ ಕೊನೆಗೆ ನಡೆದ ಘರ್ಷಣೆಯಲ್ಲಿ ಮಂಗಲೀಶ ಸತ್ತ (ಸು.610).



ಹುಚ್ಚಿಮಲ್ಲಿ ಗುಡಿ, ಐಹೊಳೆ

ಇಮ್ಮಡಿ ಪುಲಕೇಶಿ (610–42): ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ ಪ್ರಾಚೀನ ಭಾರತೀಯ ಇತಿಹಾಸದಲ್ಲೇ ಕಂಡುಬರುವ ಅಪ್ರತಿಮ ಸಾರ್ವಭೌಮರಲ್ಲೊಬ್ಬ. ಸಾಮ್ರಾಜ್ಯ ನಿರ್ಮಾತೃವಿನಲ್ಲಿರಬೇಕಾದ ರಾಜಕೀಯ ನೈಪುಣ್ಯ, ಮಹತ್ವಾಕಾಂಕ್ಷೆ, ದಕ್ಷತೆ ಹಾಗೂ ದೂರದೃಷ್ಟಿ ಇವನಲ್ಲಿದ್ದವು. ಅಧಿಕಾರಕ್ಕೆ ಬಂದ ಹೊಸದರಲ್ಲಿ ಉಂಟಾಗಿದ್ದ ರಾಜಕೀಯ ಅಸ್ತವ್ಯಸ್ತತೆಯ ಲಾಭವನ್ನು ಹೊಂದಲಪೇಕ್ಷಿಸಿದ ರಾಷ್ಟ್ರಕೂಟರ ಅಪ್ಪಾಯಿಕ ಮತ್ತು ಗೋವಿಂದ ಎಂಬುವರನ್ನೂ ನಿಗ್ರಹಿಸುವುದು ಮೊದಲಾದ ಕಾರ್ಯಗಳಿಂದ ಮೊದಲು ತನ್ನ ರಾಜ್ಯವನ್ನು ಸುಭದ್ರವಾಗಿಸಿ, ಅನಂತರ ದಿಗ್ವಿಜಯವನ್ನು ಕೈಕೊಂಡ. ಐಹೊಳೆಯಲ್ಲಿ ರುವ ಇವನ ಶಾಸನದಲ್ಲಿನ ವಿವರಗಳ ಪ್ರಕಾರ ಮೊದಲು ಕದಂಬ ರಾಜಧಾನಿ ಬನವಾಸಿಯನ್ನು ಆಕ್ರಮಿಸಿದ. ಇವನ ಸಾಮರ್ಥ್ಯವನ್ನು ಮನಗಂಡ ದಕ್ಷಿಣ ಕನ್ನಡ ಜಿಲ್ಲೆಯ ಆಳುಪರು ಹಾಗೂ ತಲಕಾಡಿನ ಗಂಗರು ಇವನಿಗೆ ಬೆಂಬಲ ನೀಡಿ ಸಾರ್ವಭೌಮತ್ವವನ್ನು ಒಪ್ಪಿಕೊಂಡರು.

ಅನಂತರ ಕೊಂಕಣದತ್ತ ಮುಂದುವರಿದು ಮೌರ್ಯರನ್ನು ನೌಕಾಯುದ್ಧದಲ್ಲಿ ಸದೆಬಡಿದ. ಮುಂದೆ ಉತ್ತರಾಭಿಮುಖವಾಗಿ ಹೊರಟು ಲಾಟ, ಮಾಳವ ಮತ್ತು ಗೂರ್ಜರ ರನ್ನು ಸೋಲಿಸಿ ಮಾಹೀ ನದಿಯವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಪುಲಕೇಶಿಯ ಈ ದಿಗ್ವಿಜಯ ಹರ್ಷನನ್ನು ಎಚ್ಚರಿಸಿರಬೇಕು. ಇದರಿಂದ ಉತ್ತರ ಮತ್ತು ದಕ್ಷಿಣ ಭಾರತಗಳ ಶ್ರೇಷ್ಠ ಸಾರ್ವಭೌಮರಿಬ್ಬರಿಗೂ ನರ್ಮದಾ ತೀರದಲ್ಲಿ ಯುದ್ಧವಾಯಿತು. ಪುಲಕೇಶಿ ಜಯಿಸಲಸಾಧ್ಯವಾದ ಶತ್ರು ಎಂಬುದನ್ನು ಹರ್ಷ ಮನಗಾಣಬೇಕಾಯಿತು. ಅವನ ಗಜಸೈನ್ಯಕ್ಕೆ ಅಪಾರ ನಷ್ಟವುಂಟಾಯಿತು. ಈ ವಿಜಯದ ನೆನಪಾಗಿ ಪುಲಕೇಶಿ ಪರಮೇಶ್ವರನೆಂಬ ಬಿರುದನ್ನು ಧರಿಸಿದ (ಸು.612). ಈ ವಿಷಯಗಳಿಂದ ಪುಲಕೇಶಿ ತೊಂಬತ್ತೊಂಬತ್ತು ಸಹಸ್ರ ಗ್ರಾಮಗಳಿಂದ ಕೂಡಿದ ಮಹಾರಾಷ್ಟ್ರ ತ್ರಯಗಳ ಪ್ರಭುವಾದ. ಅನಂತರ ಪುಲಕೇಶಿ ದಕ್ಷಿಣಾಪಥದ ಪೂರ್ವದೇಶಗಳನ್ನು ಜಯಿಸಲು ಹೊರಟ. ಕೋಸಲ ಮತ್ತು ಕಳಿಂಗದ ಅರಸರು ಪುಲಕೇಶಿಯ ಸೈನ್ಯಾಗಮನದಿಂದಲೇ ಭೀತರಾಗಿ ಇವನಿಗೆ ಶರಣಾಗತರಾದರು. ಮುಂದೆ ಸಾಗಿದ ಪುಲಕೇಶಿ ಪಿಷ್ಟಪುರವನ್ನು (ಗುಂಟೂರು ಜಿಲ್ಲೆಯ ಪಿಠಾಪುರಂ) ವಶಮಾಡಿ ಕೊಂಡ. ಅನಂತರ ಕುನಾಲ (ಎಲ್ಲೂರಿನ ಬಳಿಯ ಕೊಲ್ಲೇರು) ಪ್ರದೇಶವನ್ನು ಜಯಿಸಿದ. ಮತ್ತೆ ದಕ್ಷಿಣದತ್ತ ಮುಂದುವರಿದು ಪಲ್ಲವ ಒಂದನೆಯ ಮಹೇಂದ್ರವರ್ಮನ ರಾಜ್ಯವನ್ನು ಆಕ್ರಮಿಸಿದ. ಪಲ್ಲವ ರಾಜಧಾನಿ ಕಂಚಿಗೆ ಸಮೀಪದಲ್ಲಿರುವ ಪುಲ್ಲಲೂರಿನಲ್ಲಿ ನಡೆದ ಈ ಯುದ್ಧದಲ್ಲಿ ಪಲ್ಲವ ಅರಸ ಸೋತ. ಪಲ್ಲವ ರಾಜ್ಯದ ಉತ್ತರ ಭಾಗಗಳು ಪುಲಕೇಶಿಯ ವಶವಾದವು. ಹಲವು ಶತಮಾನಗಳವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖವಾಗಿ ಕಂಡುಬರುವ ಕನ್ನಡ ನಾಡಿನ ಹಾಗೂ ತಮಿಳು ನಾಡಿನ ಅರಸರ ವೈಷಮ್ಯಕ್ಕೆ ಈ ಘಟನೆಯೇ ನಾಂದಿಯಾಯಿತೆಂದರೆ ತಪ್ಪಾಗಲಾರದು. ಪಲ್ಲವರನ್ನು ಸೋಲಿಸಲು ಕಾತುರರಾಗಿದ್ದ ಚೋಳ, ಪಾಂಡ್ಯ ಹಾಗೂ ಕೇರಳದ ಅರಸರು ಚಳುಕ್ಯರ ಸ್ನೇಹವನ್ನು ಸಂಪಾದಿಸಿಕೊಂಡರು.

ಹೀಗೆ ಎಲ್ಲೆಡೆಗಳಲ್ಲಿಯೂ ವಿಜಯಗಳನ್ನ ಸಂಪಾದಿಸಿದ ಪುಲಕೇಶಿ ವಾತಾಪಿಗೆ ಹಿಂದಿರುಗಿದ. ಲೋಹನೇರ ಶಾಸನ ಇವನನ್ನು ಪೂರ್ವಾಪರಸಮುದ್ರಾಧಿಪತಿ ಎಂದು ವರ್ಣಿಸಿರುವುದರಿಂದ ಇವನ ಸಾಮ್ರಾಜ್ಯ ಪೂರ್ವಸಮುದ್ರದಿಂದ ಪಶ್ಚಿಮ ಸಮುದ್ರದವರೆಗೆ ಹಬ್ಬಿತ್ತೆಂದು ಹೇಳಬಹುದು. ಪುಲಕೇಶಿ ತಾನು ಗೆದ್ದ ಪ್ರದೇಶಗಳಲ್ಲಿ ರಾಜ್ಯಭಾರ ನಡೆಸಲು ಅನುಕೂಲವಾಗುವಂತೆ ಏರ್ಪಾಡುಗಳನ್ನು ಮಾಡಿದ. ನಾಸಿಕ ಪ್ರದೇಶದಲ್ಲಿ ಧರಾಶ್ರಯ ಜಯಸಿಂಹನೆಂಬ ಸೋದರನನ್ನು ಮತ್ತು ವೆಂಗಿ ದೇಶದಲ್ಲಿ ಇನ್ನೊಬ್ಬ ಸೋದರನಾದ ಕುಬ್ಜ ವಿಷ್ಣುವರ್ಧನನನ್ನು ರಾಜ್ಯಪಾಲರಾಗಿ ನೇಮಿಸಿದ.

ಪುಲಕೇಶಿ ಒಬ್ಬ ಉತ್ತಮ ಯೋಧ, ಶ್ರೇಷ್ಠ ದಿಗ್ವಿಜಯಿ, ದಕ್ಷ ಆಡಳಿತಗಾರ. ಆದರೆ ಇವನಿಗೆ ಒದಗಿಬಂದ ಅಂತ್ಯ ಮಾತ್ರ ದುರದೃಷ್ಟಕರವಾದುದು. ಪಲ್ಲವ ಮಹೇಂದ್ರವರ್ಮನ ಮಗ ಒಂದನೆಯ ನರಸಿಂಹ ಪುಲಕೇಶಿಯಿಂದ ತನ್ನ ತಂದೆಗೆ ಒದಗಿದ್ದ ಸೋಲಿನ ಅವಮಾನದ ಸೇಡನ್ನು ತೀರಿಸಿಕೊಳ್ಳಲು ನಿರ್ಧರಿಸಿ, ಅಪಾರ ಸೈನ್ಯ ಸಹಿತವಾಗಿ ವಾತಾಪಿಯತ್ತ ಮುನ್ನುಗ್ಗಿ ವಾತಾಪಿಯನ್ನು ಸುಟ್ಟು ತನ್ನ ವಶ ಮಾಡಿಕೊಂಡ; ವಾತಾಪಿಕೊಂಡ ಎಂಬ ಬಿರುದನ್ನು ಧರಿಸಿದ. ಈ ಘಟನೆ ಸು.642ರಲ್ಲಿ ನಡೆಯಿತೆಂದು ತೋರುತ್ತದೆ. ಪುಲಕೇಶಿ ಪ್ರಾಯಶಃ ಈ ಯುದ್ಧದಲ್ಲಿ ಮಡಿದಿರಬೇಕು.

ಪುಲಕೇಶಿಯ ಮರಣಾನಂತರ ಸು.13 ವರ್ಷಗಳ ವರೆಗಿನ ಕಾಲ ಚಳುಕ್ಯ ಇತಿಹಾಸ ದಲ್ಲಿ ಕತ್ತಲೆಯ ಕಾಲ. ಸು.655ರಲ್ಲಿ ಪಲ್ಲವರ ವಶವಾಗಿದ್ದ ಚಳುಕ್ಯ ಸಾಮ್ರಾಜ್ಯವನ್ನು ಸ್ವಸಾಮರ್ಥ್ಯದಿಂದ ಸ್ವತಂತ್ರಗೊಳಿಸಿ ಒಂದನೆಯ ವಿಕ್ರಮಾದಿತ್ಯ ಪಟ್ಟಕ್ಕೆ ಬಂದ. ಚಳುಕ್ಯ ಸಾಮ್ರಾಜ್ಯ ದುರ್ದೆಶೆಯಲ್ಲಿದ್ದಾಗ ಹಲವಾರು ಸಾಮಂತರು ಸ್ವತಂತ್ರರಾಗತೊಡಗಿದರು. ಅವರನ್ನೆಲ್ಲ ನಿಗ್ರಹಿಸಿ ಪುನಃ ಸಾರ್ವಭೌಮತ್ವವನ್ನು ಸ್ಥಾಪಿಸಿದ ವಿಕ್ರಮಾದಿತ್ಯನು ಪರಮೇಶ್ವರ ಎಂಬ ಬಿರುದನ್ನು ಪಡೆದನೆಂದು ಹೇಳಲಾಗಿದೆ. ಆದರೆ ಇವನ ವಿಜಯಗಳ ವಿವರಗಳು ಮಾತ್ರ ಲಭ್ಯವಾಗಿಲ್ಲ. ದತ್ತಮಂಡಲ ಹಾಗೂ ನೆಲ್ಲೂರು ಪ್ರದೇಶ ಮುಂತಾದ ಇತರ ಪ್ರಾಂತ್ಯಗಳನ್ನು ವಿಕ್ರಮಾದಿತ್ಯ ಜಯಿಸಿದ. ಪುಲಕೇಶಿಯ ಕಾಲದಲ್ಲಿ ಪೂರ್ವಚಳುಕ್ಯ ಶಾಖೆ ಆರಂಭವಾದಂತೆ, ಇವನ ಕಾಲದಲ್ಲಿ ಗುಜರಾತಿನ ಶಾಖೆ ಆರಂಭವಾಯಿತು. ಇವನು ಪಲ್ಲವರನ್ನು ಜಯಿಸಿದ ಸಂಗತಿಯನ್ನು ಧರಾಶ್ರಯನ ನವಸಾರಿ ಶಾಸನವೇ ತಿಳಿಸುತ್ತದೆ. 670–71ರಲ್ಲಿ ವಿಕ್ರಮಾದಿತ್ಯ ಕಂಚಿಯ ಸಮೀಪದ ಮಲ್ಲಿಯೂರಿನಲ್ಲಿ ಸೈನ್ಯದೊಂದಿಗೆ ಬೀಡುಬಿಟ್ಟಿದ್ದ. 674ರಲ್ಲಿ ಕಾವೇರಿ ನದಿಯ ದಕ್ಷಿಣ ತೀರದ ಚೋಳಿಕ ವಿಷಯದ ಉರಗಪುರದಲ್ಲಿ ಇದ್ದ. 674ರ ಹೊತ್ತಿಗೆ ಪೆರುವಳನಲ್ಲೂರು ಎಂಬಲ್ಲಿ ಚಳುಕ್ಯರು ಮತ್ತು ಪಲ್ಲವರಿಗೆ ಯುದ್ಧ ನಡೆದಂತೆ ತೋರುತ್ತದೆ. ಈ ಬಗ್ಗೆ ವಿವರಗಳು ತಿಳಿದುಬಂದಿಲ್ಲ. ಒಟ್ಟಿನಲ್ಲಿ ವಿಕ್ರಮಾದಿತ್ಯ ತನ್ನ ಆಳಿಕೆಯ ಅಂತ್ಯದ ಹೊತ್ತಿಗೆ ತನ್ನ ರಾಜ್ಯವನ್ನು ಭದ್ರಪಡಿಸಿ ಕೊಂಡಿದ್ದನಲ್ಲದೆ ರಾಜ್ಯದ ಶತ್ರುಗಳನ್ನು ನಿಗ್ರಹದಲ್ಲಿ ಒಂದೇ ಸಮನೆ ಶ್ರಮಿಸಿ ಸಫಲನಾಗಿದ್ದ. ವಿಕ್ರಮಾದಿತ್ಯನ ವಿಜಯಗಳಲ್ಲಿ ಅವನ ಮಗ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯ ಗಮನೀಯವಾದ ಪಾತ್ರ ವಹಿಸಿದ್ದರು.

681ರಲ್ಲಿ ಒಂದನೆಯ ವಿಕ್ರಮಾದಿತ್ಯನ ಆಳಿಕೆ ಕೊನೆಗೊಂಡು, ಅನಂತರ ಯುವರಾಜ ನಾಗಿದ್ದ ವಿನಯಾದಿತ್ಯ ರಾಜ್ಯವನ್ನು ವಹಿಸಿಕೊಂಡ. ಇವನ ಕಾಲದಲ್ಲಿ ಸುಖಶಾಂತಿಗಳು ನೆಲೆಸಿದ್ದವು. ಕ್ರಮೇಣ ಪಾರಸಿಕ ಮತ್ತು ಸಿಂಹಳದ ಅರಸರನ್ನು ಈತ ಜಯಿಸಿದನೆಂದು ಶಾಸನಗಳು ತಿಳಿಸುತ್ತವೆ. ಆಳುಪರು ಹಾಗೂ ಸೇಂದ್ರಕರು ಇವನಿಗೆ ವಿಧೇಯರಾಗಿ ಸಾಮಂತರಾಗಿದ್ದರು. ಉತ್ತರ ಭಾರತದ ರಾಜನೊಬ್ಬನನ್ನು ಬಹುಶಃ ಕನೌಜಿನ ಯಶೋವರ್ಮ ಅಥವಾ ವಜ್ರಟನನ್ನು ಸೋಲಿಸಿ ಗಂಗಾ, ಯಮುನಾ ಹಾಗೂ ಪಾಳಿಧ್ವಜದ ಚಿಹ್ನೆಯನ್ನು ಇವನು ವಶಮಾಡಿಕೊಂಡನೆಂದು ಕೆಲವು ಶಾಸನಗಳಲ್ಲಿ ಹೇಳಿದೆ.

ಮುಂದೆ ವಿನಯಾದಿತ್ಯನ ಮಗ ವಿಜಯಾದಿತ್ಯ (696–733) ರಾಜನಾದ. ಇವನ ಆಳಿಕೆ ದೀರ್ಘವೂ ಶಾಂತಿಯುತವೂ ಆಗಿತ್ತು. ಇವನ ಕಾಲದಲ್ಲಿಯೂ ಪಲ್ಲವರ ಮೇಲೆ ಯುದ್ಧ ನಡೆಯಿತು. ಉಳ್ಳಾಲ ಶಾಸನದ ಪ್ರಕಾರ ಯುವರಾಜ ಎರಡನೆಯ ವಿಕ್ರಮಾದಿತ್ಯನ ನಾಯಕತ್ವದಲ್ಲಿ ಚಳುಕ್ಯ ಸೈನ್ಯ ಕಾಂಚೀಪುರಕ್ಕೆ ಧಾಳಿ ಇಟ್ಟು ಎರಡನೆಯ ಪರಮೇಶ್ವರ ವರ್ಮನನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ಪಡೆಯಿತು.

ಅನಂತರ ಪಟ್ಟಕ್ಕೆ ಬಂದವನು ಇವನ ಮಗನಾದ ಎರಡನೆಯ ವಿಕ್ರಮಾದಿತ್ಯ (733–45). ರಾಜ್ಯ ವಹಿಸಿಕೊಂಡ ಅನತಿ ಕಾಲದಲ್ಲೇ ಇವನು ಅರಬ್ಬರ ಆಕ್ರಮಣವನ್ನು ಎದುರಿಸಬೇಕಾಯಿತು. ತಾಜಿಕರು ಅಥವಾ ಅರಬ್ಬರು ಸೈಂಧವ, ಕಚ್ಛೇಲ, ಸೌರಾಷ್ಟ್ರ, ಮೌರ್ಯ ಮೊದಲಾದವರನ್ನು ನಿರ್ನಾಮಗೊಳಿಸಿ ದಕ್ಷಿಣಾಪಥವನ್ನು ಪ್ರವೇಶಿಸಲಪೇಕ್ಷಿಸಿ ನವಸಾರಿಕಾ ಪ್ರಾಂತ್ಯವನ್ನು ವಶಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ಪ್ರಯತ್ನ ಸಫಲವಾಗಲಿಲ್ಲ. ಆ ಪ್ರಾಂತ್ಯದ ಅಧಿಕಾರಿಯಾಗಿದ್ದ ಚಾಳುಕ್ಯ ಶಾಖೆಯ ಅವನಿಜನಾಶ್ರಯ ಪುಲಕೇಶಿ ಅರಬ್ಬರನ್ನು ಹಿಮ್ಮೆಟ್ಟಿಸಿದ. ಇದರಿಂದ ಸಂತೋಷಗೊಂಡ ವಿಕ್ರಮಾದಿತ್ಯ ಅವನಿಗೆ ಅನೇಕ ಬಿರುದುಗಳನ್ನು ನೀಡಿದನೆಂದು ತಿಳಿದುಬರುತ್ತದೆ. ವಿಕ್ರಮಾದಿತ್ಯ ತನ್ನ ಕುಲವೈರಿಗಳಾದ ಪಲ್ಲವರೊಡನೆ ನಡೆಸಿದ ಯುದ್ಧ ಈ ಕಾಲದ ಇನ್ನೊಂದು ಪ್ರಮುಖ ಘಟನೆ. ಇವನು ಮೂರು ಬಾರಿ ಕಂಚಿಯನ್ನು ಜಯಿಸಿದನೆಂದು ಇವನ ಪತ್ನಿ ಲೋಕಮಹಾದೇವಿಯ ಪಟ್ಟದಕಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಇವನು ಒಂದು ಯುದ್ಧದಲ್ಲಿ ಕಟುಮುಖವಾದಿತ್ರ, ಸಮುದ್ರಘೋಷ ಹಾಗೂ ಖಟ್ವಾಂಗಧ್ವಜಗಳನ್ನು ಪಲ್ಲವರರಸನಿಂದ ಕಿತ್ತುಕೊಂಡ. ಪಲ್ಲವರಸನ ಗಜಸೈನ್ಯವೂ ಅಪಾರ ಧನಸಂಪತ್ತು ಇವನ ವಶವಾಯಿತು. ಈ ಕಾಲದಲ್ಲಿ ಪಲ್ಲವ ಸಿಂಹಾಸನದಲ್ಲಿದ್ದವನು ಎರಡನೆಯ ದೇವಾಲಯಗಳಿಗೆ ಅಪಾರ ಸಂಪತ್ತನ್ನು ದಾನವಾಗಿ

ನೀಡಿ ತನ್ನ ಔದಾರ್ಯವನ್ನೂ ದೈವಭಕ್ತಿಯನ್ನೂ ಪ್ರದರ್ಶಿಸಿದ. ಪಲ್ಲವ ನರಸಿಂಹವರ್ಮ ಬಾದಾಮಿಯಲ್ಲಿ ಕೆತ್ತಿಸಿದ ತಮಿಳು ಶಾಸನಕ್ಕೆ ಪ್ರತಿಯಾಗಿ ಕಂಚಿಯ ರಾಜಸಿಂಹೇಶ್ವರ ದೇವಾಲಯದ ಸ್ತಂಭವೊಂದರ ಮೇಲೆ ಕನ್ನಡ ಶಾಸನವನ್ನು ಕೆತ್ತಿಸಿದ. ಕಂಚಿಯುಂಗೊಂಡ ಎಂಬ ಬಿರುದನ್ನೂ ಧರಿಸಿದ.

ವಿಕ್ರಮಾದಿತ್ಯನ ಅನಂತರ ಅವನ ಮಗ ಇಮ್ಮಡಿ ಕೀರ್ತಿವರ್ಮ (745–57) ಆಳಿದ. ಇವನು ತನ್ನ ತಂದೆಯ ಜೀವಿತ ಕಾಲದಲ್ಲಿಯೇ ಯುವರಾಜನಾಗಿದ್ದು ಕಂಚಿಯನ್ನು ಆಕ್ರಮಿಸಿದ ವೀರ. ಇವನ ಆಳಿಕೆಯೂ ಶಾಂತಿಯುತವಾಗಿತ್ತು. ಆದರೆ ಚಳುಕ್ಯ ಬಲ ಕುಗ್ಗುತ್ತಿತ್ತು. ರಾಷ್ಟ್ರಕೂಟ ದಂತಿದುರ್ಗ 754ರ ಹೊತ್ತಿಗೆ ತನ್ನನ್ನು ಮಹಾರಾಜಾಧಿರಾಜ ನೆಂದೂ ಪಲ್ಲವರನ್ನು ನಿರ್ನಾಮಗೊಳಿಸಿದ ವೀರನೆಂದೂ ಕರೆದುಕೊಳ್ಳುವ ಮಟ್ಟಕ್ಕೆ ಬಂದಿದ್ದ. ಕೀರ್ತಿವರ್ಮನಿಗೆ ದಂತಿದುರ್ಗನ ಪ್ರಾಬಲ್ಯವನ್ನು ತಡೆಗಟ್ಟುವುದು ಸಾಧ್ಯವಾಗಲಿಲ್ಲ. 757 ರವರೆಗೂ ಕೀರ್ತಿವರ್ಮ ಅರಸನಾಗಿ ಮುಂದುವರೆದರೂ ಕೊನೆಗೆ ಆ ವರ್ಷ ರಾಷ್ಟ್ರಕೂಟ ಕೃಷ್ಣನಿಂದ ಸೋಲಿಸಲ್ಪಟ್ಟ. ಕೀರ್ತಿವರ್ಮನ ಅಂತ್ಯದೊಂದಿಗೆ ಬಾದಾಮಿಯ ಚಳುಕ್ಯರ ಆಳಿಕೆ ಮುಕ್ತಾಯ ಹೊಂದಿತು. ಇವರ ಸ್ಥಾನವನ್ನು ರಾಷ್ಟ್ರಕೂಟರು ಆಕ್ರಮಿಸಿದರು. (ಎ.ವಿ.ಎನ್.)

ಶಾಸನಗಳ ಆಧಾರದಿಂದ **ಬಾದಾಮಿ ಚಳುಕ್ಯರ ವಂಶಾವಳಿ**ಯನ್ನು ಈ ರೀತಿ ನಿರೂಪಿಸಬಹುದು:

ಜಯಸಿಂಹ (ಸು.500–20)
|
ರಣರಾಗ (ಸು.520–40)
|
ಪುಲಕೇಶಿ (ಸು.540–66)
ಪೂಗವರ್ಮ | ಕೀರ್ತಿವರ್ಮ I (566–96) | ಮಂಗಲೀಶ (596–610)
ಕೀರ್ತಿವರ್ಮ I → ಪುಲಕೇಶಿ II (610–42) | ಕುಬ್ಜವಿಷ್ಣುವರ್ಧನ | ಧರಾಶ್ರಯ ಜಯಸಿಂಹ | ಬುದ್ಧವರಸ
ಪುಲಕೇಶಿ II → ಆದಿತ್ಯವರ್ಮ | ಚಂದ್ರಾದಿತ್ಯ | ರಣರಾಗ | ವಿಕ್ರಮಾದಿತ್ಯ I (655–81) | ಜಯಸಿಂಹ
ಆದಿತ್ಯವರ್ಮ → ಅಭಿನವಾದಿತ್ಯ
ವಿಕ್ರಮಾದಿತ್ಯ I → ವಿನಯಾದಿತ್ಯ (681–96)
|
ವಿಜಯಾದಿತ್ಯ (696–733)
|
ವಿಕ್ರಮಾದಿತ್ಯ (733–45)
|
ಕೀರ್ತಿವರ್ಮ II (745–57)

**ಆಡಳಿತವ್ಯವಸ್ಥೆ:** ರಾಜಪ್ರಭುತ್ವ ಈ ಕಾಲದಲ್ಲಿ ಆಚರಣೆಯಲ್ಲಿದ್ದ ರಾಜ್ಯ ಪದ್ಧತಿ. ರಾಜ್ಯದ ಆಡಳಿತದಲ್ಲಿ ರಾಜ ಸ್ವತಃ ಪಾಲುಗೊಂಡು ಪ್ರಮುಖ ಪಾತ್ರ ವಹಿಸುತ್ತಿದ್ದ. ರಾಜ್ಯ ಆನುವಂಶಿಕವಾಗಿ ತಂದೆಯಿಂದ ಹಿರಿಯ ಮಗನಿಗೆ ಬರುತ್ತಿತ್ತು. ಉತ್ತರಾಧಿಕಾರಿ ಅಪ್ರಾಪ್ತ ವಯಸ್ಕನಾಗಿದ್ದಾಗ ರಾಜ್ಯದ ಹೊಣೆ ಅರಸನ ತಮ್ಮನ ಮೇಲೆ ಬೀಳುತ್ತಿತ್ತು. ಮಂಗಲೀಶ ಇಮ್ಮಡಿ ಪುಲಕೇಶಿ ಪರವಾಗಿ ಆಳಿದುದನ್ನು ಇಲ್ಲಿ ಗಮನಿಸಬೇಕು. ಅಂತೆಯೇ ಉತ್ತರಾಧಿಕಾರಿ ಅಶಕ್ತನಾಗಿದ್ದಾಗ ರಾಜ್ಯ ಮಕ್ಕಳಲ್ಲಿ ಸಮರ್ಥನಾದವನ ವಶವಾಗುತ್ತಿತ್ತು. ಇಮ್ಮಡಿ ಪುಲಕೇಶಿಯ ಅನಂತರ ಕುಸಿದಿದ್ದ ರಾಜ್ಯವನ್ನು ಮೇಲೆತ್ತಿ ಪುನಃ ಶಕ್ತಿಯುತವ ನ್ನಾಗಿ ಮಾಡಲು ಸಮರ್ಥನಾದ ವಿಕ್ರಮಾದಿತ್ಯ ಪುಲಕೇಶಿಯ ಉತ್ತರಾಧಿಕಾರಿಯಾದುದು ಸಹಜವೆಂದೆನಿಸಿತು. ಸತ್ಯಾಶ್ರಯ, ಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಪರಮಭಟ್ಟಾರಕ – ಇವು ಈ ಅರಸರು ಸಾಮಾನ್ಯವಾಗಿ ಧರಿಸಿದ್ದ ಬಿರುದುಗಳು. ಧಾರ್ಮಿಕ ಪ್ರವೃತ್ತಿಯನ್ನನುಸರಿಸಿ ಪರಮಮಾಹೇಶ್ವರ, ಪರಮಭಾಗವತ ಎಂಬ ಬಿರುದುಗಳನ್ನೂ ಇವರು ಧರಿಸಿದ್ದರು.

ರಾಜ್ಯವನ್ನು ಹಲವಾರು ವಿಷಯಗಳಾಗಿ ವಿಂಗಡಿಸಲಾಗಿತ್ತೆಂದು ತೋರುತ್ತದೆ. ವಿಷಯ ಎಂಬುದು ಈಗಿನ ಜಿಲ್ಲೆ ಅಥವಾ ಅದಕ್ಕೂ ಹಿರಿದಾದ ಆಡಳಿತ ಪ್ರದೇಶ. ಬಾಣರಾಜ ವಿಷಯ, ಚೋಳಿಕ ವಿಷಯ, ಬೆಳ್ವಲ ವಿಷಯ, ಪಳಯಟ್ಟಾಣ ವಿಷಯ, ಪೆಡೆಕಲ್ಲು ವಿಷಯ ಇತ್ಯಾದಿಗಳ ಉಲ್ಲೇಖ ಶಾಸನಗಳಲ್ಲಿ ಬಂದಿವೆ. ಬಾಣರಾಜ ವಿಷಯ, ಚೋಲಿಕ ವಿಷಯ, ನಳವಾಡಿ ವಿಷಯಗಳು ಬಾಣ, ಚೋಳ, ನಳ ಮೊದಲಾದ ಸಾಮಂತರ ಸ್ವಾಧೀನದಲ್ಲಿದ್ದ ವಿಷಯಗಳಾಗಿದ್ದು, ಅನಂತರ ಸಾಮ್ರಾಜ್ಯಕ್ಕೆ ಸೇರಿಹೋದ ಪ್ರದೇಶಗಳಿದ್ದಂತೆ ತೋರುತ್ತದೆ. ಈ ಎಲ್ಲ ವಿಷಯಗಳಿಗೂ ಅಧಿಪತಿಗಳಿದ್ದು ಅವರನ್ನು ವಿಷಯಾಧಿಪತಿ, ವಿಷಯಾಧಿಕರಣ, ಮಂಡಲಾಧಿಪತಿ ಎಂದು ಕರೆಯಲಾಗಿತ್ತು. ಈ ದೃಷ್ಟಿಯಲ್ಲಿ ವಿಷಯ ಮತ್ತು ಮಂಡಲ ಸಮಾನಾರ್ಥಕ ಪದಗಳು.

ಕೇಂದ್ರಾಧಿಕಾರಿಗಳು ಮತ್ತು ಅವರ ಕಾರ್ಯಕ್ಷೇತ್ರಗಳ ವಿವರಗಳು ಹೆಚ್ಚಾಗಿ ತಿಳಿದುಬಂದಿಲ್ಲ. ತಾಮ್ರ ಶಾಸನಗಳಲ್ಲಿ ಅರಸ ತಾನು ಮಾಡಿದ ದಾನಕ್ಕೆ ಸಂಬಂಧಿಸಿದ ಆಜ್ಞೆಯನ್ನು ವಿಷಯಪತಿ, ಸಾಮಂತ, ಗ್ರಾಮಭೋಗಿಕ, ಮಹತ್ತರ ಮುಂತಾದ ಅಧಿಕಾರಿ ಗಳು ತಿಳಿಯತಕ್ಕದ್ದು ಎಂದು ಹೇಳುವುದರಿಂದ ಇವು ಅಧಿಕಾರಿಗಳ ಹೆಸರುಗಳೆಂಬುದು ತಿಳಿಯುತ್ತದೆ. ಮಹಾಸಂಧಿವಿಗ್ರಹಿ, ಮಹಾಕ್ಷಪಟಲಾಧಿಕೃತ ಮೊದಲಾದವರು ಇತರ ಅಧಿಕಾರಿಗಳು. ಇವರು ಅರಸರ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ರಾಜನ ಆಜ್ಞೆಗಳನ್ನೂ ನೀಡಿದ ದಾನಗಳನ್ನೂ ಬರೆಹರೂಪಕ್ಕೆ ಇಳಿಸಿ, ಕಾರ್ಯಗತ ಮಾಡುವ ಹೊಣೆಗಾರಿಕೆ ಇವರದಾಗಿತ್ತು. ಪುಣ್ಯವಲ್ಲಭರೆಂಬ ಕುಲಕ್ಕೆ ಸೇರಿದ ಇಂಥ ನಾಲ್ವರು ಅಧಿಕಾರಿಗಳ ಹೆಸರುಗಳು ಶ್ರೀರಾಮ, ಅನಿರವದ್ಯ, ಅನಿವಾರಿತ, ಧನಂಜಯ ಶಾಸನಗಳಿಂದ ತಿಳಿದುಬಂದಿದೆ. ಶಾಸನಗಳನ್ನು ಬರೆಯಲು ಸಹ ಅಧಿಕಾರಿಗಳಿದ್ದರು. ಮಹೇಂದ್ರ ಪಲ್ಲವಾಚಾರಿ, ಸಿಂಗುಟ್ಟಿ, ಈಶಾನ ಮೊದಲಾದವರು ಇಂಥ ಲೇಖಕರು. ಕೇಂದ್ರ ಆಡಳಿತ ಕಾರ್ಯಗಾರವೊಂದಿದ್ದು ಅಲ್ಲಿ ವ್ಯವಸ್ಥಿತ ರೀತಿಯಲ್ಲಿ ದಾಖಲೆಗಳನ್ನು ಇಡಲಾಗಿದ್ದಿತೆಂದು ಊಹಿಸಬಹುದಾಗಿದೆ. ಹಿಂದೆ ಮಾಡಲಾದ ಶಾಸನಗಳನ್ನು ಉಲ್ಲೇಖಿಸಿ ಅದಕ್ಕೆ ಮತ್ತಷ್ಟನ್ನು ಸೇರಿಸಿಯೋ ಅಥವಾ ಲುಪ್ತವಾಗಿದ್ದಲ್ಲಿ ಅವುಗಳನ್ನು ಪುನರುಜ್ಜೀವನಗೊಳಿಸಿಯೋ ನೀಡಲಾದ ದಾನಶಾಸನಗಳಿವೆ.

ಆಡಳಿತದ ಘಟಕಗಳಲ್ಲಿ ಅತಿ ಸಣ್ಣದು ಗ್ರಾಮ. ಇದರ ಮುಖ್ಯಸ್ಥ ಗಾಮುಂಡ. ಕರಣ (ಗ್ರಾಮಭೋಗಿಕ) ಎಂಬುವನು ಇನ್ನೊಬ್ಬ ಗ್ರಾಮಾಧಿಕಾರಿ. ಈತ ಲೆಕ್ಕಪತ್ರಗಳ ವಹಿವಾಟನ್ನು ನಡೆಸುತ್ತಿದ್ದ. ಅರಸನಿಗೂ ಇತರ ಹಿರಿಯ ಆಡಳಿತಾಧಿಕಾರಿಗಳಿಗೂ ಇವರು ಆಡಳಿತದಲ್ಲಿ ಪ್ರಮುಖವಾದ ಕೊಂಡಿಗಳೂ ಆಗಿದ್ದರು. ಅಗ್ರಹಾರ ಗ್ರಾಮಗಳಲ್ಲಿ ಗ್ರಾಮದ ಹಿರಿಯರೆಲ್ಲ ಕೂಡಿದ ಮಹಾಜನ ಎಂಬ ಒಂದು ಸಮುದಾಯ ಇರುತ್ತಿತ್ತು. ಸಾಂಘಿಕ ಜೀವನಕ್ಕೆ ಸಂಬಂಧಿಸಿದಂತೆ ಕಟ್ಟುಪಾಡುಗಳನ್ನು ರೂಪಿಸುವ, ಗ್ರಾಮಸ್ಥರ ಯೋಗಕ್ಷೇಮವನ್ನು ವಹಿಸುವ, ಸಾಮಾಜಿಕ ವ್ಯವಸ್ಥೆ ಕಾಪಾಡುವ ಕರ್ತವ್ಯ ಮಹಾಜನರದು. ಅನೇಕ ಸಂದರ್ಭ ಗಳಲ್ಲಿ ಇವರ ಅಪ್ಪಣೆಯನ್ನು ಪಡೆದೆ ಅರಸರೂ ದಾನಧರ್ಮಾದಿ ಕಾರ್ಯಗಳನ್ನು ಮಾಡಬೇಕಿತ್ತು.

**ಆರ್ಥಿಕ–ಸಾಮಾಜಿಕ ಸ್ಥಿತಿ:** ವ್ಯವಸಾಯ ಜನರ ಮುಖ್ಯ ಕಸುಬಾಗಿತ್ತು. ಭೂಮಿಯನ್ನೂ ಅದರ ಉತ್ಪತ್ತಿಗೆ ಅನುಗುಣವಾಗಿ ಅವು ಪಡೆದಿದ್ದ ನೀರಿನ ಆಸರೆಗನುಗುಣವಾಗಿ ವಿಂಗಡಿಸ ಲಾಗಿತ್ತು. ಬತ್ತ, ಕಬ್ಬು, ನವಣೆ, ಸಾಮೆ, ಗೋದಿ ಅಂದಿನ ಮುಖ್ಯ ಬೆಳೆಗಳು. ದೇಶದಲ್ಲಿ ಬೇಸಾಯಗಾರರು ಹೇರಳವಾಗಿದ್ದು ದೇಶ ದವಸಧಾನ್ಯಗಳಿಂದ ಸಮೃದ್ಧವಾಗಿತ್ತು. ಅರಸರು ತಟಾಕುಗಳನ್ನು ರಾಜ್ಯದಲ್ಲಿ ಕಟ್ಟಿಸಿ ಬೇಸಾಯಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ನೇಕಾರಿಕೆ ಕಸುಬುಗಳಲ್ಲಿ ಮುಖ್ಯವಾದುದಾಗಿತ್ತು. ಈ ಪ್ರದೇಶ ಹತ್ತಿ ಬೆಳೆಗೆ ಅನುಕೂಲವಾದ ವಾತಾವರಣ ವನ್ನು ಪಡೆದಿದ್ದುದರಿಂದ ಹತ್ತಿ ಇಲ್ಲಿ ವಿಶೇಷವಾಗಿ ಬೆಳೆಯುತ್ತಿದ್ದು ಹತ್ತಿಯ ಬಟ್ಟೆಗಳನ್ನು ಇಲ್ಲಿ ನೇಯುತ್ತಿದ್ದಿರಬೇಕು. ಅಲ್ಲದೆ ರೇಷ್ಮೆ ಬಟ್ಟೆಗಳನ್ನು ತಯಾರಿಸಲಾಗುತ್ತಿತ್ತು. ಪಟ್ಟಗಾಜಿರ ಉಲ್ಲೇಖ ಶಾಸನಗಳಲ್ಲಿ ಬಂದಿದೆ. ವ್ಯಾಪಾರ ಈ ಕಾಲದಲ್ಲಿ ಚೆನ್ನಾಗಿ ವ್ಯವಸ್ಥಿತ ವಾಗಿತ್ತು. ಆಂತರಿಕ ವ್ಯಾಪಾರವಲ್ಲದೆ ಪರದೇಶಗಳೊಡನೆ, ಪ್ರಮುಖವಾಗಿ ಪರ್ಷಿಯ ದೇಶದೊಡನೆ ಕರ್ನಾಟಕ ವಾಣಿಜ್ಯ ಸಂಬಂಧಗಳನ್ನು ಹೊಂದಿತ್ತೆನಿಸುತ್ತದೆ. ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಘಗಳಿದ್ದವು. ಅಯ್ಯಾವೊಳೆ ಐನೂರ್ವ್ವರದು ಒಂದು ಪ್ರಮುಖ ವಣಿಕ ಸಂಘ. ಇದಕ್ಕೆ ಸ್ವತಂತ್ರವಾದ ಸ್ಥಾನಮಾನವಿದ್ದಂತೆ ತೋರುತ್ತದೆ. ನಗರ ಎಂಬ ವರ್ತಕರ ಶ್ರೇಣಿ ಸಹ ಇತ್ತು. ಅಲ್ಲದೆ ಕಂಚುಗಾರರು, ತೆಲ್ಲಿಗರು ಇತ್ಯಾದಿ ಇತರ ವೃತ್ತಿಗಳಿಗೆ ಸಂಬಂಧಿಸಿದವರು ತಮ್ಮದೇ ಆದ ಶ್ರೇಣಿಗಳನ್ನು ರೂಪಿಸಿಕೊಳ್ಳುತ್ತಿದ್ದರು.

ಸಮಾಜದಲ್ಲಿ ವರ್ಣಾಶ್ರಮ ಪದ್ಧತಿ ಇತ್ತು. ಬ್ರಾಹ್ಮಣರು ವಿದ್ಯಾವಿನಯಸಂಪನ್ನರಾಗಿದ್ದು ಅಧ್ಯಯನ ಅಧ್ಯಾಪನಗಳಲ್ಲಿ ನಿರತರಾಗಿದ್ದರು. ಅರಸರಿಂದ ಗೌರವಿಸಲ್ಪಟ್ಟು ಅವರಿಗೆ ರಾಜನೀತಿಯಲ್ಲೂ ಸಲಹೆಗಳನ್ನು ನೀಡುತ್ತಿದ್ದರು. ಇಮ್ಮಡಿ ಪುಲಕೇಶಿಗೆ ನಾಗವರ್ಧನಾ ಚಾರ್ಯನೆಂಬಾತ, ಇಮ್ಮಡಿ ವಿಕ್ರಮಾದಿತ್ಯನಿಗೆ ಸುದರ್ಶನಾಚಾರ್ಯನೆಂಬಾತ ಗುರುವಾಗಿ ದ್ದರು. ಇಮ್ಮಡಿ ಕೀರ್ತಿವರ್ಮನ ಆಡಳಿತದಲ್ಲಿ ವ್ಯಾಘ್ರಸ್ವಾಮಿ ಎಂಬ ವೇದವೇದಾಂಗ ಪಾರಂಗತನೂ ನೀತಿಶಾಸ್ತ್ರವಿಶಾರದನೂ ಆದ ಬ್ರಾಹ್ಮಣನೊರ್ವ ಮಹೋಪಕಾರಕನಾಗಿದ್ದ.

ಅರಸನಿಗೆ ಬಾಲ್ಯದಿಂದಲೂ ಶಸ್ತ್ರಾಸ್ತ್ರಗಳಲ್ಲಿ, ರಾಜನೀತಿಯಲ್ಲಿ ಉಚಿತವಾದ ಉತ್ತಮ ವಾದ ತರಬೇತಿಯನ್ನು ನೀಡಲಾಗುತ್ತಿತ್ತು. ಮಂಗಲೀಶ ಕೋಟೆ ಕೊತ್ತಳಗಳ ರಚನೆಯಲ್ಲಿ ಪರಿಣತನೆಂದು ಮಹಾಕೂಟದ ಶಾಸನ ಅವನನ್ನು ಹೊಗಳಿದೆ. ತನ್ನ ಮಗನಾದ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯರಿಗೆ ವಿಕ್ರಮಾದಿತ್ಯ ಸೂಕ್ತ ತರಬೇತಿ ನೀಡಿದ್ದನೆಂಬುದು ತಿಳಿದಿದೆ. ವಾತಾಪಿ ಚತುರ್ದಶವಿದ್ಯೋಪಲಸಿತರಾದ ಅನೇಕ ಸಹಸ್ರ ದ್ವಿಜರಿಂದ ಶೋಭಿಸುತ್ತಿತ್ತೆಂಬ ಶಾಸನದ ಹೇಳಿಕೆಯನ್ನು ಗಮನಿಸಿದರೆ ಅಂದು ಅಂಥ ವಿದ್ಯೆಗಳನ್ನು ಕಲಿಸುವ ವಿದ್ಯಾಸಂಸ್ಥೆಗಳಿದ್ದುವೆಂಬುದು ಸ್ಪಷ್ಟವಾಗುತ್ತದೆ.

ಸಮಾಜದಲ್ಲಿ ಸ್ತ್ರೀಯರಿಗೆ ಗಣ್ಯವಾದ ಸ್ಥಾನವಿತ್ತು. ಅವರು ಆಡಳಿತದಲ್ಲಿಯೂ ಪಾಲುಗೊಳ್ಳುತ್ತಿದ್ದರು. ಚಂದ್ರಾದಿತ್ಯನ ರಾಣಿ ವಿಜಯ ಭಟ್ಟಾರಿಕಾ ತನ್ನ ಹೆಸರಿನಲ್ಲಿ ಎರಡು ದತ್ತಿಗಳನ್ನು ನೀಡಿದಳು. ವಿನಯಾದಿತ್ಯನ ಪತ್ನಿ ವಿನಯವತಿ ರಾಜಧಾನಿಯಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಮೂರ್ತಿಗಳನ್ನು ಸ್ಥಾಪಿಸಿದಳು. ಲೋಕತಿನಿಮ್ಮಡಿ ಎಂಬಾಕೆ ಕುರ್ತಕೋಟಿ ಗ್ರಾಮವನ್ನು ಆಳುತ್ತಿದ್ದಳು. ವಿನಯಾದಿತ್ಯನ ಮಗಳಾದ ಕುಂಕುಮ ಮಹಾದೇವಿ ತನ್ನ ಸೋದರ ವಿಜಯಾದಿತ್ಯನೊಡನೆ ಕುಹುಂಡಿನಗರವೆಂಬ ಸ್ಕಂಧಾವಾರದಲ್ಲಿದ್ದಳು. ಸ್ತ್ರೀಯರಿಗೆ ವಿದ್ಯಾಭ್ಯಾಸದ ಸೌಲಭ್ಯಗಳು, ಅವಕಾಶಗಳು ಇದ್ದವು. ಸ್ತ್ರೀಯರು ಉತ್ತಮ ಗೃಹಿಣಿಯರು ಮಾತ್ರವಲ್ಲದೆ ಅಧಿಕಾರಿಗಳೂ ಕಲಾಜೀವಿಗಳೂ ಆಗಿದ್ದರು. ವಿಜಯಾದಿತ್ಯನ ಪ್ರಾಣವಲ್ಲಭೆ ಎನಿಸಿಕೊಂಡ ವಿನಾಪೋಟಿ ಎಂಬ ಸೂಳೆ ಮಕುಟೇಶ್ವರ ದೇವರಿಗೆ ರತ್ನ ಹಾಗೂ ಬೆಳ್ಳಿಯ ಪೀಠಗಳನ್ನು ದಾನಮಾಡಿದಳೆಂದು ತಿಳಿದಿದೆ. ಈಕೆ ಕೂಚಿಪೋಟಿಯ ಮಗಳು. ಬಾಲಬ್ಬೆ ಮೊದಲಾದ ಇತರ ವಾರಾಂಗನೆಯರ ಹೆಸರುಗಳೂ ಈ ಕಾಲದ ಶಾಸನಗಳಲ್ಲಿ ಲಭಿಸಿವೆ. ಈ ಕಾಲದಲ್ಲಿ ದೇವದಾಸಿ ಪದ್ಧತಿ ಅಸ್ತಿತ್ವದಲ್ಲಿತ್ತು.

ಮಹಿಷಮರ್ದಿನಿ ಶೈವಲಯಣ, ಐಹೊಳೆ

**ಲಲಿತಕಲೆ ಸಾಹಿತ್ಯ:** ಈ ಕಾಲದಲ್ಲಿ ಶಿಲ್ಪಕಲೆ, ಗಾಂಧರ್ವಕಲೆ ಮುಂತಾದ ಕಲೆಗಳನ್ನು ಬೋಧಿಸುವ ಸಂಸ್ಥೆಗಳು ಇದ್ದಿರಬಹುದಾಗಿದೆ. ಐಹೊಳೆ, ಬಾದಾಮಿ, ಪಟ್ಟದಕಲ್ಲು ಹಾಗೂ ಮಹಾಕೂಟಗಳಲ್ಲಿ ಚಳುಕ್ಯ ವಾಸ್ತು ಶಿಲ್ಪ ಶೈಲಿಯು ಆರಂಭವಾಯಿತು. ಐಹೊಳೆ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಒಂದು ತರಬೇತಿ ಕೇಂದ್ರದಂತಿತ್ತು. ಅನಿವಾರಿತಾಚಾರಿ ಗುಣ್ಡನೆಂಬ ಶಿಲ್ಪಿಗೆ ಪೃಥ್ವಿಯ ಬಿನ್ನಾಣಿಗಳು ತ್ರಿಭುವನಾಚಾರಿ ಎಂಬ ಬಿರುದನ್ನಿತ್ತಿದ್ದರು. ಸರ್ವಸಿದ್ಧಿ ಆಚಾರ್ಯ ಎಂಬವ ಪಟ್ಟದಲ್ಲಿನ ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯಗಳನ್ನು ಕಟ್ಟಿದ ಸೂತ್ರಧಾರಿ. ಅನೇಕ ರೂಪವಾಸ್ತು ಪಿತಾಮಹನೆಂದೂ ವಾಸ್ತು ಪ್ರಾಸಾದಯಾನಾಸನಶಯನ ಮಣಿಮಕುಟರತ್ನ ಚೂಡಾಮಣಿಯೆಂದೂ ಶಾಸನ ಇವನನ್ನು ವರ್ಣಿಸಿರುವುದನ್ನು ಗಮನಿಸಿದರೆ ಈತ ಹಲವಾರು ನಗರಗಳನ್ನು ಯೋಜಿಸಿದನೆಂದೂ ಅರಮನೆಗಳು ಸಿಂಹಾಸನಾದಿ ಪೀಠೋಪಕರಣಗಳನ್ನು ರೂಪಿಸಿದನೆಂದೂ ಊಹಿಸ ಬಹುದು. ಈತನ ಚಟ್ಟ ರೇವಡಿವಜ್ಜರ್. ಈತನನ್ನು ತೆಂಕಣ ದಿಶೆಯ ಸೂತ್ರಧಾರಿ ಎಂದು ವರ್ಣಿಸಲಾಗಿದೆ. ಶಿವವದ್ದನ ಮಾನ, ಆತನ ಮಗ ಶಿವ, ಮೊಮ್ಮಗ ಶುಭದೇವ ಮೂವರು ಈ ಕಾಲದ ಖ್ಯಾತ ಶಿಲ್ಪಿಗಳು. ಬಲದೇವ, ಆರ್ಯ, ಪುಲ್ಲಪ್ಪನ್ ನಿರ್ಮಾಣದೇವನ್, ಆರ್ಯಮಿಙ್ಚಿ ಉಪಾಧ್ಯಾಯ, ಏರಂಡರ ಗಣಚ, ದೋಣಸಾಮಿ, ಅಯ್ಯಸಾಮಿ, ಕುಲ್ಲುಕ್ಕಟ್ಟೆ, ಕೊಟ್ಟಮಙ್ಚಿ ಎಂಬ ಹಲವಾರು ಶಿಲ್ಪಿಗಳ ಹೆಸರು ಸಮಕಾಲೀನ ಶಾಸನಗಳಿಂದ ತಿಳಿದಿದೆ. ಇನ್ನೊಬ್ಬ ಶಿಲ್ಪಿ ನರಸೊಬ್ಬನಿಗೆ ಜಂಬೂದ್ವೀಪದಲ್ಲಿಯೇ ಸರಿಸಮಾನರು ಯಾರೂ ಇರಲಿಲ್ಲವೆಂಬುದು ಒಂದು ಶಾಸನದ ಉದ್ಗಾರ. ಗಂಧರ್ವದ ಪ್ರಸ್ತಾಪ ಇನ್ನೊಂದು ಶಾಸನದಲ್ಲಿದೆ. ಅಚಲನೆಂಬ ನಟನ ಗರ್ಜನೆಯನ್ನು ಕೇಳಿದೊಡನೆ ಉಳಿದೆಲ್ಲ ನಟರು ತಮ್ಮ ಅಹಂಕಾರವನ್ನು ಅಡಗಿಸಿಕೊಳ್ಳುತ್ತಿದ್ದರು ಎಂದು ಪಟ್ಟದಕಲ್ಲಿನ ಶಾಸನದಲ್ಲಿ ಹೇಳಿದೆ.

ಈ ಕಾಲದಲ್ಲಿ ಅರಸರ ಪೋಷಣೆಗೆ ಒಳಪಟ್ಟು ಸಂಸ್ಕೃತ ಸಾಹಿತ್ಯ ಕೃತಿಗಳು ರಚಿತವಾದವು. ಸಂಸ್ಕೃತ ಭಾಷೆಯಲ್ಲಿನ ಶಾಸನಗಳು ಸಹ ಅಂದಿನ ಸಾಹಿತ್ಯಕ್ಕೆ ಕೈಗನ್ನಡಿಗಳಾಗಿವೆ. ಮಂಗಲೀಶನ ಮಹಾಕೂಟಸ್ತಂಭ ಶಾಸನದಲ್ಲಿ ಕಾಳಿದಾಸನ ರಘುವಂಶ ಹಾಗೂ ರಾಮಾಯಣ ಮತ್ತು ಅರ್ಥಶಾಸ್ತ್ರಗಳಿಂದ ಅನೇಕ ಪದಗಳನ್ನೂ ಪದಪುಂಜಗಳನ್ನೂ ಎತ್ತಿಕೊಂಡಿರುವುದು ಕಂಡುಬರುತ್ತದೆ. ಶಾಸನದಲ್ಲಿನ ಗದ್ಯ ಬಾಣನ ಶೈಲಿಯನ್ನು ನೆನಪಿಗೆ ತರುತ್ತದೆ. ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದ ಕರ್ತೃ ರವಿಕೀರ್ತಿ. ತಾನು ಕಾಳಿದಾಸ ಭಾರವಿಗಳಷ್ಟೇ ಖ್ಯಾತನೆಂದು ಹೇಳಿಕೊಂಡಿರುವುದು ಉತ್ಪ್ರೇಕ್ಷೆಯೆನಿಸಿದರೂ ಅವರ ಶೈಲಿಯ ಪ್ರಭಾವ ಶಾಸನದಲ್ಲಿ ಕಾಣುತ್ತದೆ. ಚಂದ್ರಾದಿತ್ಯನ ಪತ್ನಿ ವಿಜಯ ಭಟ್ಟಾರಿಕೆಯು ವಿಜ್ಜಿಕಾ ಎಂಬ ಕವಯಿತ್ರಿಯಾಗಿದ್ದಳೆಂದು ಊಹಿಸಲಾಗಿದೆ. ಆದರೆ ಈ ಕಾಲದ ಕನ್ನಡ ಸಾಹಿತ್ಯ ಕೃತಿಗಳು ಯಾವುವೂ ದೊರೆತಿಲ್ಲ. ವಿಮಲ, ಉದಯ (ವಿಮಲೋದಯ), ನಾಗಾರ್ಜುನ, ಜಯಬಂಧು, ದುರ್ವಿನೀತರೆಂಬ ಗದ್ಯಕವಿಗಳು, ಶ್ರೀವಿಜಯ, ಕವೀಶ್ವರ ಪರಮ ಶ್ರೀವಿಜಯ ಅಥವಾ ಶ್ರೀವಿಜಯ ಕವೀಶ್ವರ ಪಂಡಿತ, ಚಂದ್ರ ಮತ್ತು ಲೋಕಪಾಲ ಎಂಬ ಪದ್ಯಕವಿಗಳನ್ನು ಕವಿರಾಜಮಾರ್ಗಕಾರ ತನಗೂ ಹಿಂದಿನವರೆಂದು ಹೆಸರಿಸಿದ್ದಾನೆ. ಇವರ ಯಾವ ಕೃತಿಗಳೂ ಲಭಿಸಿಲ್ಲ. ಆದರೆ ಸಮಕಾಲೀನ ಶಾಸನ ಸಾಹಿತ್ಯವನ್ನು ಗಮನಿಸಿದಾಗ ಈ ವೇಳೆಗೆ ಕನ್ನಡ ಭಾಷೆಯಲ್ಲಿ ವಿಸ್ತಾರವಾದ ಸಾಹಿತ್ಯ ಗ್ರಂಥಗಳೂ ಇದ್ದಿರಬಹುದೆನಿಸುತ್ತದೆ. ಇಂಥ ಹಲವಾರು ಶಾಸನಗಳು ಬಾದಾಮಿ, ಐಹೊಳೆ ಮುಂತಾದೆಡೆಗಳಲ್ಲಿ ದೊರೆತಿವೆ. ಕಪ್ಪೆ ಅರಭಟ್ಟನ ಶಾಸನದಲ್ಲಿ ಕನ್ನಡ ಛಂದಸ್ಸಿನಲ್ಲಿ ಪ್ರಾಚೀನವಾದ ತ್ರಿಪದಿಯ ವೃತ್ತಗಳ ಉಪಯೋಗ ಕಂಡುಬಂದಿದೆ. ಚತ್ತಾಣ, ಬೆದಂಡೆ, ಗದ್ಯ ಕಥೆಗಳಂಥ ಕಾವ್ಯ ಪ್ರಕಾರಗಳು, ಪದ, ಮೆಲ್ವಾಡು, ಪಾಡು ಮುಂತಾದ ಸಾಹಿತ್ಯ ರೂಪಕಗಳು, ಪಗರಣವೆಂಬ ದೃಶ್ಯವಿಧಾನಗಳು ಈ ಕಾಲದ ಸಾಹಿತ್ಯದ ಪ್ರಮುಖ ವೈಶಿಷ್ಟ್ಯಗಳಾಗಿ ಬೆಳೆದಿದ್ದಿರಬಹುದು. (ಬಿ.ಆರ್.ಜಿ.)

**ಚಿತ್ರಕಲೆ:** ಈ ಕಾಲದ ಚಿತ್ರಕಲೆಯ ಅವಶೇಷಗಳು ಬಾದಾಮಿಯ 3ನೆಯ ಗುಹೆಯಲ್ಲಿ ಕಂಡುಬಂದಿವೆ. 578ರಲ್ಲಿ ನಿರ್ಮಿತವಾದ ಈ ಗುಹೆ ಪ್ರಾಯಶಃ ಪೂರ್ಣವಾಗಿ ಚಿತ್ರಾಲಂಕೃತವಾಗಿದ್ದಿರಬೇಕೆಂದು ಅನೇಕ ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಬಹುದು. ಈಗ ಉಳಿದಿರುವುವು ಕಪೋತದ ಒಳಭಾಗದಲ್ಲಿರುವ ಕೆಲವು ತುಣುಕುಗಳು ಮಾತ್ರ. ಈ ಭಿತ್ತಿಚಿತ್ರಗಳು ಅಜಂತದ ಚಿತ್ರ ಸಂಪ್ರದಾಯವನ್ನು ಹೋಲುತ್ತವೆ. ಆದರೂ ಅಜಂತದ ಚಿತ್ರಗಳ ಗುಣಮಟ್ಟ ಇವುಗಳಲ್ಲಿಲ್ಲ ಎಂಬುದು ಕಲಾಭಿಜ್ಞರ ಅಭಿಪ್ರಾಯ. ಇವುಗಳ ಬಣ್ಣಗಳು ಬಹಳವಾಗಿ ಮಾಸಿ ಹೋಗಿರುವುದರಿಂದ ಇವು ಸ್ಪಷ್ಟವಾಗಿಲ್ಲ. ರಾಜರಾಣಿಯರು ಆಸ್ಥಾನದಲ್ಲಿ ತಮ್ಮ ಪರಿವಾರ ಮತ್ತು ಭೃತ್ಯವರ್ಗದೊಡನೆ ನೃತ್ಯವೀಕ್ಷಣೆ ಮಾಡುತ್ತಿರುವುದು, ಇಂದ್ರನ ಆಸ್ಥಾನ, ಆಕಾಶದಲ್ಲಿ ಸಂಚರಿಸುತ್ತಿರುವ ವಿದ್ಯಾಧರ ದಂಪತಿಗಳು ಮುಂತಾದ ಚಿತ್ರಗಳಿದ್ದಂ ತಿವೆ. ರಚನೆಯಲ್ಲಿ ಅಥವಾ ಅವು ಉಳಿದಿರುವ ಸ್ಥಿತಿಯಲ್ಲಿ ಈ ಚಿತ್ರಗಳು ಬಹು ಉತ್ತಮ ವಾಗಿ ಕಾಣದಿದ್ದರೂ ಭಾರತದಲ್ಲಿ ಕಂಡುಬಂದಿರುವ ಹಿಂದು ದೇವಾಲಯದ ಭಿತ್ತಿ ಚಿತ್ರ ಸರಣಿಯಲ್ಲಿ ಇವೇ ಪ್ರಾಚೀನವಾದವೆಂಬ ಕಾರಣದಿಂದ ಇವಕ್ಕೆ ಪ್ರಾಮುಖ್ಯವಿದೆ. (ಎಸ್.ಎನ್.)

**ಶಾಸನಗಳು:** ಬಾದಾಮಿಯ ಚಳುಕ್ಯರ ಶಾಸನಗಳಲ್ಲಿ ಹೆಚ್ಚಿನವು ತಾಮ್ರ ಶಾಸನಗಳು. ಇವುಗಳ ಭಾಷೆ ಸಂಸ್ಕೃತ, ಲಿಪಿ ಕನ್ನಡ. ಆಲಂಪುರದಲ್ಲಿ ದೊರೆತ ಸಿದ್ಧಮಾತೃಕಾ ಲಿಪಿಯ ಶಾಸನ ಮತ್ತು ವಿನಯಾದಿತ್ಯನ ನಾಗರೀ ಲಿಪಿಯ ಶಾಸನ ಇಂಥ ಒಂದೆರಡನ್ನು ಹೊರತುಪಡಿಸಿ ಶಿಲಾ ಶಾಸನಗಳೆಲ್ಲವೂ ಕನ್ನಡ ಲಿಪಿಯಲ್ಲಿದ್ದು ಹೆಚ್ಚಿನವು ಕನ್ನಡ ಭಾಷೆಯಲ್ಲಿವೆ.

ಸಾಮಾನ್ಯವಾಗಿ ತಾಮ್ರ ಶಾಸನಗಳಲ್ಲಿ ಮಂಗಳವಾಕ್ಯ, ರಾಜಪ್ರಶಸ್ತಿ, ದಾನಕ್ಕೆ ಸಂಬಂಧಿಸಿದ ವಿವರಗಳು ಹಾಗೂ ಕೊನೆಯಲ್ಲಿ ಶಾಪರೂಪದ ಶ್ಲೋಕಗಳು ಇರುತ್ತವೆ. ವರಾಹಾವತಾರದ ವಿಷ್ಣುವನ್ನು ಸ್ತುತಿಸುವ ಜಯತ್ಯಾವಿಷ್ಕೃತಂ ವಿಷ್ಣೋಃ ವಾರಾಹಂ ಕ್ಷೋಭಿತಾರ್ಣವಂ ಎಂದು ಆರಂಭವಾಗುವ ಶ್ಲೋಕ ಮೊದಲಲ್ಲಿದ್ದು ಅನಂತರ ಚಳುಕ್ಯರು ಮಾನವ್ಯಸ ಗೋತ್ರದವರು ಹಾರೀತಿಪುತ್ರರು ಸಪ್ತಮಾತೃಗಳಿಂದಲೂ ಕಾರ್ತಿಕೇಯನಿಂದಲೂ ರಕ್ಷಿಸಲ್ಪಟ್ಟು ಕಲ್ಯಾಣವಂತರಾಗಿ ಭಗವನ್ನಾರಾಯಣನ ಪ್ರಸಾದದಿಂದ ವರಾಹಲಾಂಛನವನ್ನು ಪಡೆದು ಅನೇಕ ರಾಜರನ್ನು ಗೆದ್ದವರು ಎಂದು ಹೇಳಲಾಗಿರುತ್ತದೆ. ಶಿಲಾ ಶಾಸನಗಳಲ್ಲಿ ಇಂಥ ಪ್ರಶಸ್ತಿಗಳು ಕಾಣಿಸುವುದಿಲ್ಲ. ವಿಷಯವನ್ನು ಚುಟುಕಾಗಿ ಹೇಳುವ ಸಣ್ಣ ಶಾಸನ ಗಳಿವು. ಇವುಗಳಲ್ಲಿ ನೇರವಾಗಿ ರಾಜನ ಆಳಿಕೆಯ ಪ್ರಸ್ತಾಪವಿದ್ದು ಅರಸನ ಹೆಸರನ್ನು ಉಲ್ಲೇಖಿಸಿದ ಅನಂತರ ಸತ್ಯಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಎಂಬ ಬಿರುದುಗಳಿರುತ್ತವೆ.

ಇವರ ಶಾಸನಗಳಲ್ಲಿ ಕಾಲನಿರ್ದೇಶನವಿರುವುದು ಒಂದು ವೈಶಿಷ್ಟ್ಯ. ಒಂದನೆಯ ಪುಲಕೇಶಿ ಮತ್ತು ಕೀರ್ತಿವರ್ಮರ ಬಾದಾಮಿಯ ಶಾಸನಗಳು, ಮಂಗಲೀಶನ ಮಹಾಕೂಟದ ಶಾಸನ, ಇಮ್ಮಡಿ ಪುಲಕೇಶಿಯ ಐಹೊಳೆಯ ಶಾಸನ ಮುಂತಾದ ಶಿಲಾಶಾಸನಗಳಲ್ಲಿ ಕಾಲಕ್ಕೆ ಸಂಬಂಧಿಸಿದ ಶಕವರ್ಷ ಹಾಗೂ ಇತರ ವಿವರಗಳಿವೆ. ಆದರೆ ಶಿಲಾಶಾಸನಗಳಿಗಿಂತ ಹೆಚ್ಚಾಗಿ ತಾಮ್ರ ಶಾಸನಗಳಲ್ಲಿ ಈ ವಿವರಗಳು ಸಾಮಾನ್ಯ ವಾಗಿ ಕಂಡುಬರುತ್ತವೆ. ಅದರಲ್ಲಿಯೂ ವಿನಯಾದಿತ್ಯನ ಹಾಗೂ ಅನಂತರ ಆಳಿದ ಅರಸರ ತಾಮ್ರ ಶಾಸನಗಳಲ್ಲಿ ಇವು

ಸಾಮಾನ್ಯವಾಗಿವೆ. ಮೊದಲ ಅರಸರ ತಾಮ್ರ ಶಾಸನಗಳಲ್ಲಿ, ಶಕವರ್ಷದ ಪ್ರಸ್ತಾಪ ಕೆಲವು ಶಾಸನಗಳಲ್ಲಿ ಮಾತ್ರ ಇವೆ. ರಾಜನ ಆಳಿಕೆಯ ವರ್ಷಗಳನ್ನು ಈ ಶಾಸನಗಳು ಸಾಮಾನ್ಯವಾಗಿ ಸೂಚಿಸಿವೆ. ಸಂವತ್ಸರದ ಹೆಸರುಗಳು ಅಪರೂಪವಾಗಿ ಉಲ್ಲೇಖಿಸಲ್ಪಟ್ಟಿವೆ. ತಿಂಗಳು, ಪಕ್ಷ, ತಿಥಿಗಳ ವಿವರಗಳಿದ್ದರೂ ವಾರ ದಿನದ ಪ್ರಸ್ತಾಪ ಮಾತ್ರ ಇರುವುದಿಲ್ಲ. ಕನ್ನಡ ಭಾಷೆಯ ದಾನ ಶಾಸನಗಳಲ್ಲಿ ಇದ್ದತ್ತಿಯಾನಮಿದೋನ್ವಾರಣಾಸಿಯೊಳ್ ಸಾಸಿರ್ವಪಾರ್ವ್ವರುಮಾನ್ ಸಾಸಿರ ಕವಿಲೆಯುಮಾನ್ಕೊನ್ದಲೋಕಕ್ಕೆ ಸನ್ದೋನಕ್ಕು ಮುಂತಾದ ಅದೇ ಭಾಷೆಯ ಶಾಪ ವಾಕ್ಯಗಳು ಕಾಣಸಿಗುತ್ತವೆ. ದಾನಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಈ ಶಾಸನಗಳಲ್ಲಿ ಕಾಣಲಾಗದು. ಶಾಸನ ಬರೆದ ಆಚಾರಿಯ ಹೆಸರುಗಳನ್ನು ಕೆಲವು ಸಂದರ್ಭಗಳಲ್ಲಿ ಕೊಟ್ಟಿದೆ.

(ಬಿ.ಆರ್.ಜಿ)

**ನಾಣ್ಯಗಳು:** ಬಾದಾಮಿ ಚಳುಕ್ಯರ ಲಾಂಛನ ವರಾಹವಾಗಿದ್ದಿತ್ತು. ಆದುದರಿಂದ ವರಾಹದ ಚಿತ್ರವನ್ನುಳ್ಳ ಮತ್ತು ಬರೆಹವಿಲ್ಲದಿರುವ ಚಿನ್ನದ ನಾಣ್ಯಗಳು ಬಾದಾಮಿ ಚಳುಕ್ಯರ ನಾಣ್ಯಗಳೆಂದು ವಿದ್ವಾಂಸರು ಭಾವಿಸಿದ್ದಾರೆ. ಸು.50–60 ಗ್ರೇನ್ ತೂಕದ ಚಿನ್ನದ ನಾಣ್ಯಗಳ ಮೇಲೆ ಬಾದಾಮಿ ಚಳುಕ್ಯರ ವರಾಹ ಚಿತ್ರವನ್ನು ಮುದ್ರಿಸಲಾಗಿದೆ. ಕಾಲಕ್ರಮದಲ್ಲಿ ವರಾಹ ಚಿಹ್ನೆ ಇಲ್ಲದಿದ್ದರೂ ಈ ತೂಕದ ನಾಣ್ಯಗಳ ಮೇಲೆ ಬಾದಾಮಿ ಚಳುಕ್ಯರ ವರಾಹ ಚಿತ್ರವನ್ನು ಮುದ್ರಿಸಲಾಗಿದೆ. ಕಾಲಕ್ರಮದಲ್ಲಿ ವರಾಹ ಚಿಹ್ನೆ ಇಲ್ಲದಿದ್ದರೂ ಈ ತೂಕದ ನಾಣ್ಯಗಳಿಗೆ ವರಹ ಎಂದು ಹೆಸರಾಯಿತು. ನಾಣ್ಯಗಳಿಗೆ ವರಹ ಎಂಬ ಹೆಸರು ಬರಲು ಬಾದಾಮಿ ಚಳುಕ್ಯರ ವರಾಹ ಚಿಹ್ನೆಯೇ ಕಾರಣವೆಂದು ಎಲ್ಲ ವಿದ್ವಾಂಸರೂ ಒಪ್ಪಿದ್ದಾರೆ.

ಬಾದಾಮಿ ಚಳುಕ್ಯರ ನಾಣ್ಯಗಳು ಅಚ್ಚಿನಿಂದ ಮಾಡಿದವುಗಳು. ಇವರ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಈವರೆಗೆ ಬೆಳಕಿಗೆ ಬಂದಿವೆ. ಒಂದನೆಯ ವಿಕ್ರಮಾದಿತ್ಯನ ಚಿನ್ನದ ನಾಣ್ಯಗಳು 117 ಗ್ರೇನ್ ತೂಕ ಉಳ್ಳದ್ದಾಗಿವೆ. ವೃತ್ತಾಕಾರದ ಈ ನಾಣ್ಯಗಳ ವ್ಯಾಸ 0.76. ಇವುಗಳ ಮುಮ್ಮುಖದಲ್ಲಿ ಬಲಭಾಗಕ್ಕಿರುವ ವರಾಹವಿದೆ. ಇದರ ಮೇಲೆ ಸೂರ್ಯ ಮತ್ತು ಚಂದ್ರ, ಮುಂಭಾಗದಲ್ಲಿ ದೀಪಸ್ತಂಭ ಇವೆ. ವರಾಹದ ಕೆಳಭಾಗದಲ್ಲಿ ಶ್ರೀವಿಕ್ರಮ ಎಂಬ ಕನ್ನಡ ಲಿಪಿಯ ಬರೆಹವಿದೆ. ಈ ನಾಣ್ಯದ ಹಿಮ್ಮುಖದಲ್ಲಿ ನಿಂತಿರುವ ಮನುಷ್ಯನ ಚಿತ್ರವೂ ಸಣ್ಣ ವರಾಹವೂ ಎಡಭಾಗದಲ್ಲಿ ವಿಕ್ರಮ ಎಂಬ ಬರೆಹವೂ ಇವೆ. ಇದೇ ರಾಜನ ಚಿನ್ನ (ಶೇ.30) ಮತ್ತು ಬೆಳ್ಳಿ (ಶೇ.70) ಮಿಶ್ರಲೋಹದ ನಾಣ್ಯವೂ ದೊರಕಿದೆ. ಇದರ ತೂಕ 153 ಗ್ರೇನ್, ಇದು ಚಿನ್ನದ ನಾಣ್ಯದ ಮಾದರಿಯಲ್ಲೇ ಇದ್ದರೂ ಕೆಲ ಬದಲಾವಣೆಗಳನ್ನು ತೋರಿಸುತ್ತದೆ. ಮುಮ್ಮುಖದಲ್ಲಿ ಶ್ರೀ ವಿಕ್ರಮರಾಜ ಎಂಬ ಬರವಣಿಗೆಯಿದೆ. ಹಿಮ್ಮುಖದಲ್ಲಿ ಶ್ರೀವಿಕ್ರಮ ಮಹಾರಾಜ ಎಂಬ ಕನ್ನಡ ಲಿಪಿಯ ಬರೆಹವೂ ನವಿಲುಗರಿಯನ್ನು ಧರಿಸಿರುವ ಮನುಷ್ಯನ ಚಿತ್ರವೂ ಇವೆ. ಈ ಎರಡು ನಾಣ್ಯಗಳು ಖಚಿತವಾಗಿ ಬಾದಾಮಿ ಚಳುಕ್ಯರಿಗೆ ಸೇರಿದವು. 50–60 ಗ್ರೇನ್ ತೂಕಕ್ಕಿಂಥ ಭಿನ್ನವಾಗಿ ರುವ ಈ ನಾಣ್ಯಗಳ ತೂಕ ಗಮನಾರ್ಹವಾದುದು. ಈ ತೂಕ ಗುಪ್ತರ ಚಿನ್ನದ ನಾಣ್ಯಗಳಿಗೆ ಸಮೀಪವಾಗಿದೆ.

ಎಂ.ಎಚ್.ಕೃಷ್ಣ ಅವರು ಚಿನ್ನದ ನಾಣ್ಯವೊಂದನ್ನು ಒಂದನೆಯ ಪುಲಕೇಶಿಯದೆಂದು ಭಾವಿಸುತ್ತಾರೆ. ಇದರ ತೂಕ 57.2 ಗ್ರೇನ್ ಮತ್ತು ವ್ಯಾಸ 0.55". ಇದರ ಮುಮ್ಮುಖದಲ್ಲಿ ಅಲಂಕೃತ ವರಾಹವಿದೆ. ಅದರ ಮೇಲೆ ಸೂರ್ಯ ಮತ್ತು ಚಂದ್ರ, ಹಿಮ್ಮುಖದಲ್ಲಿ ಅಷ್ಟದಳ ಪದ್ಮವಿದೆ. ಈ ಪದ್ಮ ಕದಂಬರ ಚಿಹ್ನೆಯೆಂದು ಭಾವಿಸಿ ಕದಂಬರನ್ನು ಸೋಲಿಸಿದುದರ ನೆನಪಾಗಿ ಈ ನಾಣ್ಯಗಳನ್ನು ಪುಲಕೇಶಿ ಅಚ್ಚುಮಾಡಿಸಿರಬೇಕೆಂದು ಕೃಷ್ಣ ಅವರು ಭಾವಿಸುತ್ತಾರೆ. ಆದರೆ ಇದರಲ್ಲಿ ಖಚಿತತೆಯಿಲ್ಲ. ಎಲಿಯಟ್ ಅವರು 66 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಬಾದಾಮಿ ಚಳುಕ್ಯರ ನಾಣ್ಯಗಳೆಂದು ಭಾವಿಸುತ್ತಾರೆ. ಒಂದು ನಾಣ್ಯದ ಮುಮ್ಮುಖದಲ್ಲಿ ಅಲಂಕೃತವಾದ ವರಾಹವಿದೆ. ಹಿಮ್ಮುಖದಲ್ಲಿ ಎಂಟು ದಳದ ಪದ್ಮದ ಚಿತ್ರವಿದೆ. ಮತ್ತೊಂದು ನಾಣ್ಯದಲ್ಲಿ ಅಲಂಕಾರವಿಲ್ಲದಿರುವ ವರಾಹ, ಹಿಮ್ಮುಖದಲ್ಲಿ ಪುಷ್ಪದ ನಮೂನೆಗಳಿವೆ. ಇವುಗಳಲ್ಲಿ ಬರೆವಣಿಗೆ ಇಲ್ಲದೆ ಇರುವುದರಿಂದ ಇವು ಯಾವ ರಾಜರ ನಾಣ್ಯಗಳು ಎಂಬುದು ತಿಳಿದಿಲ್ಲ. ಆದರೆ ವರಾಹ ಚಿತ್ರವಿರುವುದರಿಂದ ಇವು ಬಾದಾಮಿ ಚಳುಕ್ಯರ ನಾಣ್ಯಗಳೆಂದು ಊಹಿಸಬಹುದು. ಶ್ರೀರಣವಿಕ್ರಮ ಹಾಗೂ ಶ್ರೀಪೃಥಿವೀ ಎಂಬ ಬರೆಹವಿರುವ ನಾಣ್ಯಗಳನ್ನು ಒಂದನೆಯ ಪುಲಕೇಶಿಗೆ ಅನ್ವಯಿಸಲಾಗಿದೆ. ಹಾಗೆಯೇ ಶ್ರೀಕೃತರಾಜ ಎಂಬ ಬರೆಹವಿರುವ ನಾಣ್ಯವನ್ನು ಒಂದನೆಯ ಕೀರ್ತಿವರ್ಮನದೆಂದು ಭಾವಿಸಲಾಗಿದೆ. ಇಮ್ಮಡಿ ಪುಲಕೇಶಿಯ ತಾಮ್ರದ ನಾಣ್ಯಗಳು ಈಚೆಗೆ ಎಲಿಫೆಂಟ ದ್ವೀಪದಲ್ಲಿ ದೊರೆತಿದ್ದು, ಅವುಗಳ ಮುಮ್ಮುಖದಲ್ಲಿ ಶ್ರೀ ಸತ್ಯಾಶ್ರಯ ಎಂಬ ಬರೆಹ ಹಾಗೂ ಹಿಮ್ಮುಖದಲ್ಲಿ ವೃಷಭ ಚಿತ್ರಗಳಿವೆ. ಶ್ರೀ ವಿಕ್ರಮ ಎಂಬ ಬರೆಹವಿರುವ ಚಿನ್ನದ ನಾಣ್ಯ ಮೊದಲನೆಯ ವಿಕ್ರಮಾದಿತ್ಯನದೆಂದು ಪರಿಗಣಿಸಲಾಗಿದೆ.

(ಎ.ವಿ.ಎನ್.)

**ವಾಸ್ತು ಮತ್ತು ಮೂರ್ತಿಶಿಲ್ಪ:** 543 ರಿಂದ 757ರ ವರೆಗೆ ಆಳಿದ ಚಳುಕ್ಯರು ತಮ್ಮ ರಾಜಧಾನಿ ಬಾದಾಮಿಯಲ್ಲಿ ಮತ್ತು ಅದರ ಸಮೀಪದ ಮಹಾಕೂಟ, ಪಟ್ಟದಕಲ್ಲು, ಐಹೊಳೆ, ನಾಗರಾಳ ಹಾಗೂ ಕೆಲೂರು ಅಲ್ಲದೆ ಆಂಧ್ರಪ್ರದೇಶದ ಮೆಹಬೂಬ ನಗರ ಜಿಲ್ಲೆಯ ಆಲಂಪುರ, ಕೂಡವೇಲಿ, ಕರ್ನೂಲು ಜಿಲ್ಲೆಯ ಸತ್ಯವೋಲು ಮತ್ತು ಮಹಾನಂದಿ ಮುಂತಾದೆಡೆ ಮುಖ್ಯ ವಾಸ್ತು ಕೃತಿಗಳನ್ನು ನಿರ್ಮಿಸಿದರು. ಇವರ ಕಾಲದ ರಚನೆಗಳನ್ನು ಕ್ಷಾತ್ರವಾಸ್ತು ಮತ್ತು ಧಾರ್ಮಿಕವಾಸ್ತು ಎಂದು ವಿಂಗಡಿಸಬಹುದು.

ಕ್ಷಾತ್ರವಾಸ್ತು: ಕ್ಷಾತ್ರವಾಸ್ತುವಿನ ಅವಶೇಷಗಳು ಬಾದಾಮಿ ಮತ್ತು ಐಹೊಳೆಯಲ್ಲಿವೆ. ಬಾದಾಮಿಯ ಉತ್ತರ ಕೋಟೆಯ ಮೂಲ ಭಾಗಗಳನ್ನು ರಚಿಸಿದವರು ಚಳುಕ್ಯರೇ. ಕಾಲಾನುಕ್ರಮದಲ್ಲಿ ವಿಜಯನಗರೋತ್ತರ ಕಾಲದವರೆಗೂ ಅದು ಸಾಕಷ್ಟು ಜೀರ್ಣೋದ್ಧಾರ ಕಂಡಿದೆ. ಮೂಲ ಕೋಟೆ ಗಿರಿದುರ್ಗದಂತಿದ್ದು ಎತ್ತರವಾಗಿ ಎದ್ದು ನಿಂತಿರುವ ಬೃಹತ್ ಬಂಡೆಗಳ ನಡುವಣ ಅಂತರಗಳನ್ನು ಮತ್ತು ಬಿರುಕುಗಳನ್ನು ಘನಾಕೃತಿಯ ಕಲ್ಲುಗಳಿಂದ ಗೋಡೆ ಕಟ್ಟಿ ತುಂಬಲಾಗಿದೆ. ಗೋಡೆಯ ರಚನೆಯಲ್ಲಿ ಬಂಧಕ ಸಾಮಗ್ರಿಯ ಬಳಕೆಯಾಗಿಲ್ಲ. ಮೇಲಿನಿಂದಲೂ ಕೆಳಗಿನಿಂದಲೂ ಬಾದಾಮಿಯ ದುರ್ಗ ಅಭೇದ್ಯವಾಗಿತ್ತೆಂದು ಅಲ್ಲಿಯ ಶಾಸನದಲ್ಲಿ ಹೇಳಿರುವುದರಿಂದ ಈ ಕೋಟೆಗೆ ಕೆಳಭಾಗ ಮತ್ತು ಮೇಲ್ಭಾಗಗಳೆರಡರಲ್ಲೂ ಸುತ್ತುಗಳಿದ್ದಿರಬೇಕು. ಐಹೊಳೆಯಲ್ಲಿಯೂ ಕೋಟೆಯ ಕೆಲಭಾಗಗಳು ಮೂಲತಃ ಚಳುಕ್ಯರ



ಕೆಳಗಿನ ಶಿವಾಲಯ

ಕಾಲದ್ದಿರಬಹುದಾದರೂ ಈಗಿರುವ ಸ್ವರೂಪದಲ್ಲಿ ಅದು 9–10ನೆಯ ಶತಮಾನದ್ದು. ಇದನ್ನೂ ಯಾವುದೇ ಬಂಧಕ ಸಾಮಗ್ರಿಯನ್ನು ಬಳಸದೇ ಆಯತಾಕಾರ / ಚೌಕೋನ ದೊಡ್ಡ ದೊಡ್ಡ ಗಟ್ಟಿ ಕಲ್ಲುಗಳಿಂದ ರಚಿಸಲಾಗಿದೆ. ನಿರ್ದಿಷ್ಟ ಅಂತರಗಳಲ್ಲಿ ಚೌಕಾಕಾರದ ಬುರುಜುಗಳಿವೆ. ಸುತ್ತಲೂ ಕಂದಕವಿದ್ದಿರಬೇಕು.

ದೇಗುಲ ವಾಸ್ತು: ಚಳುಕ್ಯರ ಕಾಲದಿಂದ ಉಳಿದುಬಂದಿರುವ ಧಾರ್ಮಿಕವಾಸ್ತು ಉದಾಹರಣೆಗಳು ಅಪಾರ. ಸಂಖ್ಯೆ ಮತ್ತು ವೈಶಿಷ್ಟ್ಯಗಳಿಂದಾಗಿ ಇವು ವಿಶ್ವಾದ್ಯಂತ ಕಲಾಪ್ರೇಮಿಗಳ ಮನಸೆಳೆದಿವೆ. ಹೀಗಾಗಿ ಸಾಕಷ್ಟು ಪ್ರಮಾಣದಲ್ಲಿ ಅವುಗಳ ಬಗ್ಗೆ ಸಂಶೋಧನೆಗಳಾಗಿವೆ ಮತ್ತು ಸಾಹಿತ್ಯ ಪ್ರಕಟವಾಗಿದೆ. ಇವುಗಳನ್ನು ಗುಹೆಗಳು (ಲಯಣಗಳು, ಕಲ್ಮನೆಗಳು) ಮತ್ತು ಕಟ್ಟಡಗಳು ಎಂದು ವರ್ಗೀಕರಿಸಬಹುದು.

ಗುಹಾಲಯಗಳು: ಬಾದಾಮಿಯಲ್ಲಿ ಮೇಣಬಸ್ತಿಗಳೆಂದು ಕರೆಯಲಾಗುವ ನಾಲ್ಕು ಗುಹಾದೇಗುಲಗಳು ಹಾಗೂ ಐಹೊಳೆಯಲ್ಲಿ ರಾವಳಫಡಿ ಶೈವಗುಹೆ ಮತ್ತು ಇನ್ನೆರಡು ಜೈನಗುಹೆಗಳು ಇವೆ. ಇವಲ್ಲದೆ ಬೌದ್ಧಧರ್ಮಕ್ಕೆ ಸಂಬಂಧಿಸಿದ ಒಂದು ನೈಸರ್ಗಿಕ ಗುಹೆ ಬಾದಾಮಿಯ ಎರಡನೆಯ ಮತ್ತು ಮೂರನೆಯ ಗುಹೆಗಳ ಮಧ್ಯಂತರದಲ್ಲಿ ಇದೆ. ಐಹೊಳೆಯ ಮೇಗುಟಿ ಬೆಟ್ಟದ ಉತ್ತರ ಮುಖದಲ್ಲಿ ಭಾಗಶಃ ಬಂಡೆಯಲ್ಲಿ ಕೊರೆದಿರುವ ಭಾಗಶಃ ಕಟ್ಟಡರೀತಿಯಲ್ಲಿ ರಚಿಸಿದ ಬೌದ್ಧ ಚೈತ್ಯಾಲಯವಿದೆ. ಇವೆಲ್ಲವೂ ನಸುಗೆಂಪು ಮರಳುಗಲ್ಲು ಗುಡ್ಡಗಳ ಕಡಿದಾದ ಮುಖದೊಳಕ್ಕೆ ಕೊರೆಯಲ್ಪಟ್ಟಿವೆ. ಬಾದಾಮಿಯ ನಾಲ್ಕು ಗುಹಾಲಯಗಳಲ್ಲಿ ಮೊದಲನೆಯದು ಶೈವ, ಎರಡು ಮತ್ತು ಮೂರನೆಯವು ವೈಷ್ಣವ

ಹಾಗೂ ನಾಲ್ಕನೆಯದು ಜೈನ ಸಂಪ್ರದಾಯಕ್ಕೆ ಸೇರಿವೆ. ಎಲ್ಲವೂ ಹೆಚ್ಚುಕಡಿಮೆ ಉತ್ತರಾಭಿಮುಖವಾಗಿವೆ. ಇವು ವಿನ್ಯಾಸದಲ್ಲಿ ಸುಮಾರು ಒಂದೇ ಪ್ರಕಾರದ್ದಾ ಗಿವೆ. ಮುಖಮಂಟಪ, ಸಭಾಮಂಟಪ ಮತ್ತು ತುಸು ಎತ್ತರಮಟ್ಟದಲ್ಲಿ ಹಿಂಗೋಡೆಯಲ್ಲಿ ಕೊರೆದಿರುವ ಚಿಕ್ಕ ಗರ್ಭಗೃಹ ಇವು ಮುಖ್ಯ ಭಾಗಗಳು. ಬಾದಾಮಿಯ ಮೊದಲ ಮೂರು ಗುಹೆಗಳು ಗಾತ್ರದಲ್ಲಿ ವ್ಯತ್ಯಾಸಪೂರಿತವಾಗಿದ್ದರೂ ಒಂದೇ ವಿನ್ಯಾಸಕ್ಕೆ ಬದ್ಧವಾಗಿವೆ. ನಾಲ್ಕನೆಯ ಗುಹೆಯಲ್ಲಿ ಮಾತ್ರ ಸಭಾಮಂಟಪವಿಲ್ಲ; ಆ ಸ್ಥಾನದಲ್ಲಿ ಮುಖಮಂಟಪದಷ್ಟೇ ಅಗಲವುಳ್ಳ ಚಿಕ್ಕ ಅಂತರಾಳವಿದೆ. ಮೊದಲನೆಯ ಗುಹೆಯ ಪಶ್ಚಿಮಪಾರ್ಶ್ವದಲ್ಲಿ ದುರ್ಗಾ–ಗಣೇಶ–ಕಾರ್ತಿಕೇಯರಿಗಾಗಿ ಒಂದು ಚಿಕ್ಕ ಕೋಣೆಯನ್ನು ಕೊರೆದಿದೆ. ಈ ಎಲ್ಲ ಗುಹಾಲಯಗಳ ಮುಖಮಂಟಪದ ಮತ್ತು ಅದರಿಂದ ತುಸು ಮುಂಚಾಚಿರುವ ಪಾರ್ಶ್ವಗಳ ಗೋಡೆಗಳು ದೊಡ್ಡಗಾತ್ರದ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿವೆ. ಹಾಗೆಯೇ ಕಂಬಗಳ ಮುಖಗಳು, ಬೋದಿಗೆಗಳು, ಚಾವಣಿಗಳು ಸುಂದರ ಶಿಲ್ಪಗಳಿಂದ ಆವೃತವಾಗಿವೆ. ಅತಿ ದೊಡ್ಡದಾಗಿರುವ ಮೂರನೆಯ ಗುಹಾಲಯದಲ್ಲಿ ದೇವದಂಪತಿಗಳ, ಮಿಥುನಗಳ ಬೋದಿಗೆ ಶಿಲ್ಪಗಳಿರುವುದು ಉಲ್ಲೇಖನೀಯ. ಮೊದಲ ಮೂರು ಗುಹಾಲಯಗಳ ಜಂತಿಯಲ್ಲಿ ಸಮುದ್ರಮಥನ, ಕೃಷ್ಣಚರಿತ, ಪಾರ್ವತೀ ಕಲ್ಯಾಣ ಮುಂತಾದ ಪೌರಾಣಿಕ ಕಥಾನಿರೂಪಕ ಶಿಲ್ಪಗಳಿವೆ. ಶಿಲ್ಪಗಳೇ ಈ ಗುಹಾಲಯಗಳ ಅತ್ಯಾಕರ್ಷಕ ಅಂಶಗಳು.

ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ದೇವಾಲಯ (ವೇಸರ ಮಾದರಿಯ ಆರಂಭಿಕ ಹಂತ)

ಬಾದಾಮಿಯ ನಾಲ್ಕು ಗುಹಾಲಯಗಳಲ್ಲಿ ಕಾಲನಿರ್ಣೀತವಾಗಿರುವುದೆಂದರೆ ಮೂರನೆಯ ವೈಷ್ಣವ ಗುಹೆ ಮಾತ್ರ. ಇದು ಮುಂದುಗಡೆ ವಿಶಾಲ ಅಂಗಳವನ್ನು ರೂಪಿಸಿರುವ ವಿಶಿಷ್ಟ ಪ್ರಾಕಾರ, ದ್ವಾರವಿರುವ ಏಕಮೇವ ಗುಹಾಲಯವಾಗಿದೆ. ಇದರಲ್ಲಿರುವ ಒಂದನೆಯ ಕೀರ್ತಿವರ್ಮನ ಆಳ್ವಿಕೆಯ 12ನೆಯ ವರ್ಷದಲ್ಲಿ ಮಂಗಲೀಶನು ಕೊರೆಸಿರುವ ಶಾಸನವನ್ನು 578ರಲ್ಲಿ ಪ್ರಕಟಿಸಲಾಯಿತು. ಇದರಲ್ಲಿ ಈ ಗುಹಾಲಯವನ್ನು ಮಹಾವಿಷ್ಣುಗೃಹ ಎಂದು ಕರೆದಿದೆಯಲ್ಲದೆ ಮಂಗಲೀಶ ಇದನ್ನು ನಿರ್ಮಿಸಿದನೆಂದು ಹೇಳುತ್ತದೆ. ಶಾಸನದಲ್ಲಿರುವ ವರ್ಣನೆಯನ್ನನುಲಕ್ಷಿಸಿದರೆ ಇದನ್ನು ಪೂರ್ತಿಗೊಳಿಸುವಾಗ ಆಗಲೇ ಪರಿಸರದಲ್ಲಿ ಇತರ ಗುಹಾಲಯಗಳಿದ್ದವೆಂಬ ಸೂಚನೆ ಕಾಣುತ್ತದೆ. ಈ ಆಧಾರದ ಮೇಲೆ ಮತ್ತು ಅವುಗಳಿರುವ ಮಟ್ಟ ಹಾಗೂ ಶಿಲ್ಪಶೈಲಿ ವೈವಿಧ್ಯದ ಆಧಾರದ ಮೇಲೆ ಬಾದಾಮಿಯ ಗುಹಾಲಯಗಳು 1, 2, 3 ಮತ್ತು 4 ಕ್ರಮದಲ್ಲಿ ಕೊರೆಯಲ್ಪಟ್ಟಿರುವ ಸಾಧ್ಯತೆ ಹೆಚ್ಚು. ಕೆಲವು ವಿದ್ವಾಂಸರು 3ನೆಯ ಗುಹಾಲಯವೇ ಮೊದಲು ನಿರ್ಮಾಣವಾಯಿತೆಂದೂ ಇನ್ನು ಕೆಲವರು 4, 3, 2, 1 ಕ್ರಮದಲ್ಲಿ ಇವು ನಿರ್ಮಾಣವಾಗಿವೆಯೆಂದೂ ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಭಾರತದ ಗುಹಾವಾಸ್ತು ಪರಂಪರೆಯಲ್ಲಿ ಬಹುಶಃ ಚಳುಕ್ಯ ಗುಹಾಲಯಗಳೇ ಪ್ರಾಚೀನತಮವಾದವುಗಳು ಎಂಬ ಅಭಿಪ್ರಾಯವಿದೆ.

ಐಹೊಳೆಯ ರಾವಳಫಡಿ ಶೈವಗುಹೆಯ ವಿನ್ಯಾಸ ಬೇರೆ ರೀತಿಯದು. ಮೆಟ್ಟಿಲು ಏರಿದರೆ ನೇರವಾಗಿ ಚೌಕ ಮಂಟಪದೊಳಗೆ ಪ್ರವೇಶವಾಗುತ್ತದೆ. ಇದರ ಎಡ ಬಲಗಳಲ್ಲಿ ಮಂಟಪಗಳಿವೆ. ಅಂತರಾಳ ಗರ್ಭಗೃಹಗಳು ದ್ವಾರದ ಎದುರುಗಿದೆ. ಪಾರ್ಶ್ವಗೋಡೆಗಳಲ್ಲಿ ದುರ್ಗಾಭಗವತಿ ಮತ್ತು ಭೂವರಾಹ ಉಬ್ಬು ಶಿಲ್ಪಗಳಿವೆ. ಅದರಂತೆ ಮಧ್ಯಮಂಟಪದ ಗೋಡೆಗಳಲ್ಲಿ ಅರ್ಧನಾರೀಶ್ವರ, ಗಂಗಾಧರ, ಹರಿಹರ, ಶಿವದ್ವಾರಪಾಲ ಮುಂತಾದ ದೊಡ್ಡ ಶಿಲ್ಪಗಳಿವೆ. ಪಾರ್ಶ್ವಮಂಟಪದಲ್ಲಿರುವ ಪಾರ್ವತೀಸಹಿತನಾಗಿ ಸಪ್ತಮಾತೃಕೆಯರೊಂದಿಗೆ ನರ್ತಿಸುತ್ತಿರುವ ದಶಭುಜ ನಟರಾಜನ ಶಿಲ್ಪ ಅಪೂರ್ವವಾದುದು. ಚಾವಣಿಯ ಅಲಂಕಾರವು ಹಂದರದ ಚಾವಣಿಬಟ್ಟೆಯ ಚಿತ್ರವಿನ್ಯಾಸವನ್ನು ನೆನಪಿಸುತ್ತದೆ. ಈ ಗುಹಾಲಯದ ಶಿಲ್ಪಗಳೆಲ್ಲ ನಿರ್ದಿಷ್ಟ ಶೈಲಿಗೆ ಬದ್ಧವಾಗಿವೆ. ಗುಹಾಲಯದ ಮುಂದುಗಡೆ ಅನತಿ ದೂರದಲ್ಲಿ ನಂದಿಯಿದ್ದು ಅದಾದನಂತರ ಮಹಾಕೂಟದಲ್ಲಿ ಮಂಗಲೀಶನು 597ರಲ್ಲಿ ನಿಲ್ಲಿಸಿದ (ಈಗ ಬಿಜಾಪುರದ ಗೋಳಗುಮ್ಮಟದ ಮುಂದಿರುವ ಪುರಾತತ್ತ್ವ ವಸ್ತುಸಂಗ್ರಹಾಲಯದಲ್ಲಿರುವ) ಧರ್ಮಜಯಸ್ತಂಭವನ್ನು ಹೋಲುವ ಸ್ತಂಭವನ್ನು ನಿಲ್ಲಿಸಲಾಗಿದೆ.

ಐಹೊಳೆಯ ಜೈನಗುಹೆ ಮೂಲತಃ ಮುಂಭಾಗ ತೆರೆದುಕೊಂಡಿರುವ ಮುಖಮಂಟಪ, ಚೌಕ ಮಧ್ಯಮಂಟಪ, ಅದರ ಎಡ ಬಲಗಳಲ್ಲಿ ಅಧಿಷ್ಠಾನದ ಮೇಲಿರುವ ಮಂಟಪಗಳು, ಹಿಂಭಾಗದಲ್ಲಿ ಅಧಿಷ್ಠಾನದ ಮೇಲಿರುವ ಗರ್ಭಗೃಹ ಭಾಗಗಳನ್ನೊಳಗೊಂಡಿದೆ. ಅನಂತರದ ಕಾಲದಲ್ಲಿ ಮುಖಮಂಟಪದ ತೆರೆದ ಮುಂಭಾಗವನ್ನು ಕಟೆದ ಘನಾಕೃತಿಯ ದೊಡ್ಡ ಕಲ್ಲುಗಳನ್ನು ಪೇರಿಸಿ ಮುಚ್ಚಲಾಗಿದೆ. ಮುಖಮಂಟಪದ ಗೋಡೆಗಳಲ್ಲಿ ಬಾಹುಬಲಿ ಮತ್ತು ಕಮಠೋಪಸರ್ಗ ಪಾರ್ಶ್ವನಾಥ ಶಿಲ್ಪಗಳಿವೆ. ಮಧ್ಯಮಂಟಪದ ಒಂದು ಪಾರ್ಶ್ವದಲ್ಲಿರುವ ಚಿಕ್ಕ ಮಂಟಪದಲ್ಲಿ ಪಾರ್ಶ್ವನಾಥನ ಕೇವಲಜ್ಞಾನ ಕಲ್ಯಾಣದ ಸಂಕ್ಷಿಪ್ತ ನಿರೂಪಣೆಯಿದೆ. ಗರ್ಭಗೃಹದಲ್ಲಿ (ಗಂಧಕುಟಿಯಲ್ಲಿ) ಧ್ಯಾನಮುದ್ರೆಯಲ್ಲಿ ಜಿನಶಾಸನವನ್ನರುಹುವ ಜಿನನ ಶಿಲ್ಪವಿದೆ. ಈ ಗುಹೆಯ ಚಾವಣಿಯ ಶಿಲ್ಪಾಲಂಕಾರವೂ ಹಂದರದ ಚಾವಣಿಬಟ್ಟೆಯ ವಿನ್ಯಾಸವನ್ನು ನೆನಪಿಸುತ್ತದೆ. ಮುಖಮಂಟಪವನ್ನು ಹೊರತುಪಡಿಸಿದರೆ ಈ ಜಿನಾಲಯದ ವಿನ್ಯಾಸ ರಾವಳಫಡಿ ಶೈವಗುಹೆಯನ್ನೇ ಹೋಲುತ್ತದೆ. ಮಹಾದಿವ್ಯ ಉತುಣ ಎಂಬವನು ಈ ಗುಹಾಲಯದ ಸ್ಥಪತಿ–ಶಿಲ್ಪಿಗಳಲ್ಲಿ ಒಬ್ಬನೆಂದು ಈ ಪರಿಸರದ ಶಾಸನದಿಂದ ತಿಳಿಯುತ್ತದೆ.

ಐಹೊಳೆಯ ಮೇಗುಟಿ ಬೆಟ್ಟದ ಉತ್ತರಮುಖದಲ್ಲಿರುವ ಬೌದ್ಧಚೈತ್ಯಾಲಯ ಅರೆಗುಹಾಮಾದರಿಯ ರಚನೆ. ಹಿಂಭಾಗವನ್ನು ಬಂಡೆಕೊರೆದು ನಿರ್ಮಿಸಲಾಗಿದ್ದರೂ ಮುಂಭಾಗವನ್ನು ಮಾತ್ರ ಎರಡು ಮಹಡಿಯಲ್ಲಿ ಕಟ್ಟಿ ನಿರ್ಮಿಸಲಾಗಿದೆ. ಇದರಲ್ಲಿ ಪ್ರತಿಷ್ಠಾಪಿಸಲಾಗಿದ್ದ ಬೌದ್ಧವಿಗ್ರಹಗಳಲ್ಲಿ ಒಂದು. ಈ ಕಟ್ಟಡದ ಸಮೀಪ, ಮತ್ತೊಂದು ಐಹೊಳೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿವೆ. ಮೇಲ್ಮಹಡಿಯ ಚಾವಣಿಯಲ್ಲಿ ಸಿದ್ಧಾಸನಸ್ಥಿತ, ಮುಕ್ಕೊಡೆಯಡಿಯಲ್ಲಿ ಅರ್ಧಪರ್ಯಂಕಾಸನದಲ್ಲಿರುವ ವ್ಯಾಖ್ಯಾನ ಬುದ್ಧನ ಅಪರೂಪದ ಉಬ್ಬುಶಿಲ್ಪವಿದೆ. ಈ ಚೈತ್ಯಾಲಯದ ದ್ವಾರಬಂಧದ ತೋಳುಗಳಲ್ಲಿ ಬುದ್ಧನ ಜೀವನದ ಘಟನೆಗಳು, ಜಾತಕ ಕಥೆಗಳು ಮುಂತಾದವುಗಳ ಚಿಕಣಿಶಿಲ್ಪಗಳಿವೆ.

ಐಹೊಳೆಯ ಗುಹಾಲಯಗಳ ಕಾಲನಿರ್ಣಯ ಸಮಸ್ಯಾದಾಯಕವಾಗಿದೆ. ರಾವಳಫಡಿ ಗುಹೆಯ ರಚನೆ ಮತ್ತು ಶಿಲ್ಪಗಳಲ್ಲಿ ಪ್ರಾಚೀನತೆಯ ಲಕ್ಷಣಗಳಿದ್ದು, ಬಹುಶಃ ಇದು ಬಾದಾಮಿಯ ಶೈವಗುಹೆಯಷ್ಟೇ ಹಳೆಯದಿರಬಹುದು; ಕೆಲವು ವಿದ್ವಾಂಸರು ಚಳುಕ್ಯ ಗುಹೆಗಳಲ್ಲಿ ಇದೇ ಪ್ರಾಚೀನತಮವೆಂದು ಅಭಿಪ್ರಾಯಿಸಿದ್ದಾರೆ. 6ನೆಯ ಶತಮಾನವೆಂದರೆ ತಪ್ಪಾಗದು. ಜೈನಗುಹೆ ಮಾತ್ರ ಸು.7–8ನೆಯ ಶತಮಾನದ್ದಿರಬೇಕು. ಬೌದ್ಧಚೈತ್ಯಾಲಯ 7ನೆಯ ಶತಮಾನದ ಮಧ್ಯಾವಧಿಯದಿರಬೇಕು.

ಗುಹಾಲಯಗಳಂತೆ ಕಟ್ಟಡ ದೇಗುಲಗಳಿಗೂ ಚಳುಕ್ಯ ಸ್ಥಪತಿಗಳು ಆ ಪ್ರದೇಶದಲ್ಲಿ ದೊರೆಯುವ ನಸುಗೆಂಪು ಮರಳುಗಲ್ಲನ್ನೇ ಬಳಸಿದ್ದಾರೆ. ಸಾಕಷ್ಟು ದೊಡ್ಡ ಗಾತ್ರದ ಕುಶಲಕರ್ಮ ನೀಡಿರುವ ಚಪ್ಪಡಿಯಂತಹ ಕಲ್ಲುಗಳನ್ನು ಬಂಧಕ ಸಾಮಗ್ರಿಯನ್ನು ಉಪಯೋಗಿಸದೆ ಒಂದರಮೇಲೊಂದರಂತೆ ಪೇರಿಸಿ ಗೋಡೆಗಳನ್ನು ನಿರ್ಮಿಸಿದ್ದಾರೆ. ಅದರಂತೆ ದಪ್ಪನೆಯ ಒಂದೊಂದೇ ಕಲ್ಲುಗಳನ್ನು ಒಂದೊಂದು ಚೌಕಾಕಾರದ (ರುಚಕ) ಕಂಬಗಳಿಗೆ ಮತ್ತು ತೊಲೆಗಳಿಗೆ ಬಳಸಿದ್ದಾರೆ. ಚಾವಣಿಗಾಗಿ ದೊಡ್ಡ ಚಪ್ಪಡಿಗಳನ್ನು ತಯಾರಿಸಿ ಕವುಚಿದ್ದಾರೆ. ಇವು ಈ ಕಾಲದ ವಾಸ್ತುನಿರ್ಮಾಣ ತಂತ್ರದ ಸಾಮಾನ್ಯ ಲಕ್ಷಣಗಳಾಗಿ ಗೋಚರಿಸುತ್ತವೆ. ಮುಂಚೆ ಗುಹಾವಾಸ್ತುವಿನಲ್ಲಿ ಬಿಟ್ಟರೆ ಕಲ್ಲನ್ನು ದೊಡ್ಡ ಪ್ರಮಾಣದಲ್ಲಿ ದೇಗುಲ ಕಟ್ಟಡಗಳಿಗೆ ಬಳಸುವ ಕ್ರಮವಿರಲಿಲ್ಲವಾದ್ದರಿಂದ ಮತ್ತು ಕಟ್ಟಡಗಳಿಗೆ ಮರ, ಇಟ್ಟಿಗೆ, ಗಾರೆಯ ಬಳಕೆ ಸಾಮಾನ್ಯವಾಗಿದ್ದುದರಿಂದ ಈ ರೀತಿ ಅಗತ್ಯಕ್ಕಿಂತ ದಪ್ಪವಿರುವ ಕಲ್ಲುಗಳನ್ನು ಭದ್ರತೆಗೋಸ್ಕರ ಉಪಯೋಗಿಸಿದ್ದಾರೆಂದು ಕೆಲವರು ವ್ಯಾಖ್ಯಾನಿಸಿದ್ದಾರೆ. ಈ ದೃಷ್ಟಿಯಿಂದ ಇದು ಶಿಲಾ ಕಟ್ಟಡ ಕಲೆಯ ಶೈಶವಾವಸ್ಥೆಯ ಕುರುಹೆಂದು ಇವರ ಭಾವನೆ. ಅದೇನಿದ್ದರೂ ದೇಗುಲ ನಿರ್ಮಾಣಕ್ಕೆ ದೊಡ್ಡ ಪ್ರಮಾಣದಲ್ಲಿ ಕಲ್ಲಿನ ಬಳಕೆ, ವಿವಿಧ ಶೈಲಿಗಳ ದೇಗುಲ ನಿರ್ಮಾಣ, ಅವುಗಳ ಶೈಲಿ ಮಿಶ್ರಣ ಪ್ರಯೋಗಗಳು ಚಳುಕ್ಯರ ದೇಶ–ಕಾಲದಲ್ಲಿ ನಡೆಯಿತೆಂಬುದರ ಬಗ್ಗೆ ಎರಡು ಮಾತಿಲ್ಲ. ಅಲ್ಲದೇ ಪ್ರಾದೇಶಿಕ ವೈಶಿಷ್ಟ್ಯವುಳ್ಳ ದೇಗುಲ ಶೈಲಿಲಕ್ಷಣ ಗಳನ್ನು ರೂಪಿಸಿದ್ದು ಅವರ ಮಹತ್ತ್ವದ ಕೊಡುಗೆಯಾಗಿದೆ.

ಚಳುಕ್ಯರ ಕಟ್ಟಡ ಮಾದರಿಯ ದೇಗುಲಗಳನ್ನು ಮುಖ್ಯವಾಗಿ ಐದು ಗುಂಪುಗಳಾಗಿ ವರ್ಗೀಕರಿಸಬಹುದು: 1. ದಕ್ಷಿಣ ಭಾರತ ಮಾದರಿಯ ಅಥವಾ ದ್ರಾವಿಡ ಮಾದರಿ ದೇವಾಲಯಗಳು, 2. ಉತ್ತರ ಭಾರತ ಮಾದರಿಯ ಅಥವಾ ನಾಗರ ರೇಖಾ (ಲತಿನ) ಮಾದರಿ ದೇವಾಲಯಗಳು, 3. ಫಾಂಸನ ಮಾದರಿಯ (ಮುಂಚೆ ಕದಂಬ ನಾಗರ ಶೈಲಿ ಎಂದು ಕರೆಯಲಾಗುತ್ತಿದ್ದ) ದೇವಾಲಯಗಳು, 4. ಮಂಟಪ ರೀತಿಯ ದೇವಾಲಯಗಳು, 5. ಚಾಪಾಕಾರ ವಿನ್ಯಾಸದ ಅಥವಾ ಗಜಪೃಷ್ಠ ಪ್ರಕಾರದ ದೇವಾಲಯಗಳು.

**1. ದ್ರಾವಿಡ ಮಾದರಿಯ ದೇವಾಲಯಗಳು:** ವಾಸ್ತುಗ್ರಂಥಗಳಲ್ಲಿ ದ್ರಾವಿಡ ಮಾದರಿಯ ದೇವಾಲಯಗಳು ಕೆಲವು ಲಕ್ಷಣಗಳಿಂದ ಗುರುತಿಸಲ್ಪಡುತ್ತವೆ. ಇವುಗಳ ಮುಖ್ಯ ಭಾಗ ವಿಮಾನ. ಇದು ಗರ್ಭಗೃಹದ ಹೊರ ನೋಟ. ಊರ್ಧ್ವ ರಚನೆಯಲ್ಲಿ (ಕೆಳಗಿನಿಂದ ಮೇಲಕ್ಕೆ) ಸಾಮಾನ್ಯವಾಗಿ ಇದಕ್ಕೆ ಆರು ಭಾಗಗಳಿರುತ್ತವೆ: ಅಧಿಷ್ಠಾನ (ಪಾಯ), ಪಾದ (ಗೋಡೆ), ಪ್ರಸ್ತರ (ಛತ್ತಿನ ಮಟ್ಟದ ರಚನೆ), ಗ್ರೀವ (ಕುತ್ತಿಗೆ), ಶಿಖರ (ಗಂಟೆಯಂತಿರುವ ರಚನೆ) ಮತ್ತು ಸ್ತೂಪಿ (ಕಲಶವನ್ನೊಳಗೊಂಡ ತುದಿ). ಅಧಿಷ್ಠಾನದ ತೀರ ಕೆಳಗಿನ ಸ್ತರ ಉಪಾನ. ಉಪಾನದಿಂದ ಸ್ತೂಪಿಯವರೆಗಿನ ರಚನೆಯೇ ವಿಮಾನ. ಈ ಆರು ಭಾಗಗಳಿರುವುದರಿಂದಲೇ

ದ್ರಾವಿಡ ದೇಗುಲಕ್ಕೆ ಷಡ್ವರ್ಗ ದೇವಾಲಯ ಎಂದು ಕರೆಯುವರು. ಅನೇಕ ಮಡಿಕೆಗಳುಳ್ಳ ಅಧಿಷ್ಠಾನ (ಅಥವಾ ಪೀಠ), ಗೋಡೆಯಲ್ಲಿರುವ ಕುಡ್ಯಸ್ತಂಭಗಳು, ಕಪೋತ, ಪ್ರಸ್ತರದ ಮೇಲಿನ ಹಾರ, ಇವು ಇನ್ನಿತರ ಲಕ್ಷಣಗಳು. ಕೋನಗಳಲ್ಲಿರುವ ಮುಂಚಾಚು ಕರ್ಣಭದ್ರ, ಕರ್ಣಭದ್ರಗಳ ನಡುವಣ ಭಾಗದಲ್ಲಿರುವ ಮುಂಚಾಚುಗಳು ಭದ್ರಗಳು. ಇವುಗಳ ನಡುವಣ ಹಿಂಚಾಚು ಸಲಿಲಾಂತರ. ಭದ್ರಗಳ ಕೋನಗಳಲ್ಲಿ ಕುಡ್ಯಸ್ತಂಭಗಳಿರುತ್ತವೆ. ಈ ಪ್ರಕಾರದ ಮುಂಚಾಚು ಹಿಂಚಾಚುಗಳು ಅಧಿಷ್ಠಾನದ ವಿನ್ಯಾಸದಲ್ಲೂ ಪ್ರಸ್ತರದ ವಿನ್ಯಾಸದಲ್ಲೂ ಕಾಣುತ್ತವೆ. ಕರ್ಣಭದ್ರಕ್ಕೆ ಸ್ಪಂದಿಯಾಗಿ ಹಾರದಲ್ಲಿ ನಾಲ್ಕೂ ಕಡೆ ಇಳಿಜಾರಾದ ಛಾವಣಿಯಿ ರುವ (ಶಿಖರ) ಚೌಕ ಗುಡಿಸಲಿನಂತೆ ಕಾಣುವ ಕೂಟವಿರುತ್ತದೆ. ಅಧಿಷ್ಠಾನ, ಪಾದ, ಪ್ರಸ್ತರ, ಗ್ರೀವ, ಕೂಟಶಿಖರದಿಂದೊಡಗೂಡಿ ಇದು ಸರಳ ಏಕತಲ (ತಳದ) ಕೂಟಾಕಾರದ ಗುಡಿಯ ಪ್ರತಿನಿಧಿಯಾಗುತ್ತದೆ. ಅದೇರೀತಿ ಕೂಟಗಳ ನಡುವಣ ಅಂತರದಲ್ಲಿ ಭದ್ರಗಳಿಗೆ ಸ್ಪಂದಿಯಾಗಿ ಕಮಾನಿನಾಕಾರ ಛಾವಣಿಯಿರುವ ಆಯತಾಕಾರದ ಗುಡಿಸಲಿನಂತೆ ಕಾಣುವ ಶಾಲವಿರುತ್ತದೆ. ಅಧಿಷ್ಠಾನ, ಪಾದ, ಪ್ರಸ್ತರ, ಗ್ರೀವ, ಶಾಲಶಿಖರದಿಂದೊಡಗೂಡಿ ಇದು ಸರಳ ಏಕತಲ ಶಾಲಾಕಾರ ಗುಡಿಯ ಪ್ರತಿನಿಧಿಯಾಗುತ್ತದೆ. ತುಸು ವಿಕಸಿತ ವಿಮಾನಗಳಲ್ಲಿ ಶಾಲ ಕೂಟಗಳ ನಡುವೆ ಗಜಪೃಷ್ಠಾಕಾರದ (ಚಾಪಾಕಾರ ವಿನ್ಯಾಸವುಳ್ಳ) ಗುಡಿಯ ಪ್ರತಿನಿಧಿಯಿದ್ದು, ಅದನ್ನು ಪಂಜರವೆಂದು ಕರೆಯುತ್ತಾರೆ. ಶಾಲ–ಕೂಟ–ಪಂಜರಗಳಿಂದ ಕೂಡಿರುವ ಹಾರವು ಆಯಾಯ ಮಹಡಿಯ ಅಂತ್ಯದ ಸೂಚಕವಾಗಿದೆ. ಮತ್ತೆ ಎರಡನೆಯ ಮಹಡಿಗೆ ಪಾದ, ಪ್ರಸ್ತರ, ಹಾರ ಭಾಗಗಳಿರುತ್ತವೆ. ಈ ವ್ಯವಸ್ಥೆ ಪ್ರತಿಯೊಂದು ಮಹಡಿಗೂ ಮುಂದುವರಿಯುತ್ತದೆ. ವಿಕಸಿತ ವಿಮಾನಗಳಲ್ಲಿ ಕೊನೆಯ ಮಹಡಿಗೆ ಹಾರದ ರಚನೆ ಇರಬೇಕಾಗಿಲ್ಲ. ಮಹಡಿಯ (ತಲಗಳ) ರಚನೆ ಮುಗಿದ ಮೇಲೆ ಕುತ್ತಿಗೆಯಂತೆ ಕಾಣುವ ಗ್ರೀವವಿರುತ್ತದೆ. ಇದರ ಮೇಲೆ ಘಂಟಾಕಾರದ ಶಿಖರವಿರುತ್ತದೆ. ಶಿಖರದ ತುದಿಯಲ್ಲಿ ಕಲಶ ಮತ್ತು ಸೂಚಿ ಇರುವದು.

ಶಿಖರದ ವಿನ್ಯಾಸ ಚೌಕ, ಅಷ್ಟಕೋನ ಇಲ್ಲವೆ ವೃತ್ತಾಕಾರವಾಗಿ ಇರಬಹುದು. ಚೌಕಾಕಾರವಿದ್ದರೆ ಆ ಗುಡಿಯನ್ನು ನಾಗರ ವಿಮಾನವೆಂದು, ಅಷ್ಟಕೋಣಾಕಾರವಿದ್ದರೆ ದ್ರಾವಿಡ ವಿಮಾನವೆಂದು, ವೃತ್ತಾಕಾರವಾಗಿದ್ದರೆ ವೇಸರ ವಿಮಾನವೆಂದು ಶಿಲ್ಪಶಾಸ್ತ್ರಗಳು ಹೆಸರಿಸುತ್ತವೆ. ಈ ಮೂರೂ ಪ್ರಕಾರದ ಶಿಖರವುಳ್ಳ ದ್ರಾವಿಡ ದೇವಾಲಯಗಳು ಚಲುಕ್ಯರ ಕಾಲದಲ್ಲಿ ಉದಾಹೃತವಾಗಿವೆ ಎಂಬುದು ಉಲ್ಲೇಖನೀಯ. ಇದಲ್ಲದೇ ತಳದಿಂದ ತುದಿಯವರೆಗೆ ಆಯತ, ವೃತ್ತ, ಅರ್ಧವೃತ್ತ (ಚಾಪಾಕಾರ) ವಿನ್ಯಾಸವುಳ್ಳ ರಚನೆಯೂ ಸಾಧ್ಯ. ಆಯತವಾಗಿರುವದನ್ನು ಶಾಲ ವಿಮಾನ, ವೃತ್ತ ಅಥವಾ ಚಾಪಾಕಾರ (ಗಜಪೃಷ್ಠ) ವಿರುವುದನ್ನು ವೇಸರ ವಿಮಾನ ಎಂಬುದಾಗಿಯೂ ಹೆಸರಿಸಿರುವುದಿದೆ.

ವಿಮಾನದಲ್ಲಿ ಒಳಗಡೆ ಗರ್ಭಗೃಹಕ್ಕೆ ಪ್ರದಕ್ಷಿಣೆ ಬರಲು ವ್ಯವಸ್ಥೆ ಇದ್ದರೆ ಅದು ಸಾಂಧಾರ ವಿಮಾನವೆನಿಸುತ್ತದೆ. ಅದಿಲ್ಲದಿದ್ದರೆ, ಅದು ನಿರಂಧಾರ ವಿಮಾನವಾಗುವದು. ಚಲುಕ್ಯರು ನೇರವಾಗಿ ಪೋಷಿಸಿ ನಿರ್ಮಿಸಿದ ಗುಡಿಗಳು ಸಾಂಧಾರ ಪ್ರಕಾರದ್ದಾಗಿವೆ. ಅವರ ಕಾಲದಲ್ಲಿ ಇತರರು ನಿರ್ಮಿಸಿದವುಗಳು ನಿರಂಧಾರವಾಗಿವೆ.

ಬಾದಾಮಿಯಲ್ಲಿರುವ ದೇವಾಲಯಗಳು ದಕ್ಷಿಣ ಭಾರತ ಮಾದರಿಯ ವಿಮಾನಗಳಿಗೆ ಉತ್ತಮ ಪ್ರಾರಂಭಿಕ ಉದಾಹರಣೆಗಳನ್ನು ಒದಗಿಸುತ್ತವೆ. ಉತ್ತರ ಕೋಟೆಯ ಬೆಟ್ಟದ ನೆತ್ತಿಯಲ್ಲಿರುವ ಮೇಲಣ ಶಿವಾಲಯ ಮೂಲತಃ ವಿಷ್ಣು ದೇವಾಲಯ. ಮೊದಲನೆಯ ಪುಲಕೇಶಿಯು ನಿರ್ಮಿಸಿದ ಕೋಟೆಯ ಒಳಗಿರುವುದರಿಂದ ಚಳುಕ್ಯ ಅರಸರಿಗೋಸ್ಕರ ಕಟ್ಟಲ್ಪಟ್ಟಿದೆ ಎಂಬುದು ವಾಸ್ತವ. ಅದರ ಸಾಂಧಾರ ವಿನ್ಯಾಸವೂ ಇದನ್ನೇ ಸೂಚಿಸುತ್ತದೆ. ಚಳುಕ್ಯರು ಪ್ರಾರಂಭದಲ್ಲಿ ಪರಮಭಾಗವತರಾಗಿದ್ದರಿಂದ ಸಹಜವಾಗಿಯೇ ಈ ವಿಷ್ಣುದೇವಾಲಯ ಕೋಟೆಯೊಳಗಡೆ ನಿರ್ಮಾಣವಾಗಿದೆ. ವಾಸ್ತು ಲಕ್ಷಣ ದೃಷ್ಟಿಯಿಂದ ಇದನ್ನು ಸಾಂಧಾರ ತ್ರಿತಲ ನಾಗರ ವಿಮಾನ ಎಂದು ವರ್ಣಿಸಬಹುದು. ಮೇಲ್ಕಟ್ಟಡದ ರಚನೆಯಲ್ಲಿ ಕೆಲವು ವಿಕಸಿತವಲ್ಲದ ಲಕ್ಷಣಗಳನ್ನು ಈ ಗುಡಿ ಪ್ರಕಟಿಸುತ್ತದೆ. ಮೊದಲ (ಆದಿ) ತಲಕ್ಕೆ ಹಾರ ಸ್ಪಷ್ಟವಿದೆ. ಇದು ವಿಮಾನ ಭಾಗದ ಮೇಲೆ ಅಷ್ಟೇ ಅಲ್ಲದೆ ಗೂಢ ಮಂಟಪದ ಮೇಲೂ ಮುಂದುವರಿದಿತ್ತು. ಈಗ ಭಾಗಶಃ ಹಾಳಾಗಿದೆ. ಎರಡನೆಯ ತಲವು ಸಾಕಷ್ಟು ಎತ್ತರವಾಗಿದೆ. ಮೂರನೆಯ ತಲ ಅದರ ಅರ್ಧದಷ್ಟು ಕುಳ್ಳದಾಗಿವೆ. ಎರಡನೆಯ ಮತ್ತು ಮೂರನೆಯ ತಲಗಳ ಕಪೋತದ ಮೇಲ್ಗಡೆ ವ್ಯಾಳಮಾಲಾ ಮತ್ತು ವೇದಿ ಭಾಗಗಳು ಮಾತ್ರವಿದ್ದು ಶಾಲ–ಕೂಟಗಳ ಹಾರ ರಚನೆಯಿಲ್ಲ. ಶಿಖರ ಚೌಕ (ನಾಗರ) ಪ್ರಕಾರದ್ದಿದ್ದು, ಪ್ರತಿಯೊಂದು ಮುಖದಲ್ಲಿ ನಾಸಿ ಅಲಂಕಾರವಿದೆ. ಸ್ತೂಪಿ ಬಿದ್ದುಹೋಗಿದೆ.

ಅಧಿಷ್ಠಾನದ ರಚನೆಯಲ್ಲಿ ಉಪಾನ, ಜಗತಿ, ಗಲ (ಕಂಠ), ಕಪೋತಗಳಿವೆ. ಗಲಭಾಗದಲ್ಲಿ ರಾಮಾಯಣ ಮತ್ತು ಕೃಷ್ಣಚರಿತೆಯ ಕಥಾನಿರೂಪಣೆ ಇದೆ. ಪಾದದಲ್ಲಿ ಕುಡ್ಯಸ್ತಂಭಗಳು, ದೇವಕೋಷ್ಠಗಳು ಇವೆ. ಇವುಗಳಲ್ಲಿ ಗೋವರ್ಧನಧಾರಿ ಕೃಷ್ಣ, ಕಾಲಿಯದಮನ ಕೃಷ್ಣ, ಹಿರಣ್ಯಕಶ್ಯಪನೊಂದಿಗೆ ದ್ವಂದ್ವಯುದ್ಧದಲ್ಲಿ ತೊಡಗಿರುವ ನರಸಿಂಹ ಮುಂತಾದವು ಆಕರ್ಷಕವಾಗಿವೆ.

ಗರ್ಭಗೃಹದ ದ್ವಾರಬಂಧದ ಶಾಖೆಗಳ ಅಲಂಕಾರ ಅಪೂರ್ಣವಾಗಿದೆ. ಮುಂದೆ, ಉಳಿದ ದೇಗುಲಗಳಲ್ಲಿ ಸಾಮಾನ್ಯವಾಗಿ ಗೋಚರಿಸುವ ಗರುಡ–ನಾಗಶಾಖಾ ಅಲಂಕಾರ ಇಲ್ಲಿಲ್ಲ. ಕಂಬಗಳು ಈಗ ಉಳಿದಿಲ್ಲವಾದರೂ ಅವು ರುಚಕ (ಚೌಕ, ಬ್ರಹ್ಮಕಾಂತ) ಮಾದರಿಯವಾಗಿದ್ದವೆಂಬುದರ ಸೂಚನೆ ಇದೆ. ಈ ಎಲ್ಲ ಅಂಶಗಳನ್ನು ಗಮನಿಸಿದರೆ, ಮೇಲಣ ಶಿವಾಲಯ 6ನೆಯ ಶತಮಾನದ, ಪ್ರಾಯಶಃ ಒಂದನೆಯ ಪುಲಕೇಶಿ ಇಲ್ಲವೇ ಒಂದನೆಯ ಕೀರ್ತಿವರ್ಮನ ಕಾಲದ ನಿರ್ಮಾಣವಿರಬಹುದು.

ಅದೇ ಕೋಟೆಯಲ್ಲಿ, ಮೇಲಣ ಶಿವಾಲಯಕ್ಕಿಂತ ತುಸು ಕೆಳಮಟ್ಟದಲ್ಲಿ ರಚಿತ ವಾಗಿರುವ ಕೆಳಗಣ ಶಿವಾಲಯದ ವಿಮಾನ ಭಾಗ ಮಾತ್ರ ಉಳಿದುಬಂದಿದೆ. ಇದಕ್ಕೆ ಅಷ್ಟಕೋನಾಕಾರದ ಅಂದರೆ, ದ್ರಾವಿಡ ಶಿಖರವಿದೆ. ಇದು ಸಾಂಧಾರ ದ್ವಿತಲ ದ್ರಾವಿಡ ವಿಮಾನ. ಹೊರಗೋಡೆ ನಶಿಸಿಹೋಗಿರುವದರಿಂದ ಆದಿ ತಲದ ವಿವರಗಳು ಲಭ್ಯವಿಲ್ಲ. ಎರಡನೆಯ ತಲದ ಪಾದದ ಕರ್ಣ–ಭದ್ರಗಳು ಮತ್ತು ಹಾರದ ವಿವರಗಳು ಸ್ಪಷ್ಟವಾಗಿವೆ. ಎರಡನೆಯ ತಲವು ಮುಗಿದ ಮೇಲೆ ಗ್ರೀವ ಮತ್ತು ಶಿಖರವನ್ನು ಅಷ್ಟಕೋನ ರೀತಿಯಲ್ಲಿ ರಚಿಸಲಾಗಿದೆ. ಗ್ರೀವ ಶಿಖರಗಳ ಮುಖ್ಯ ದಿಕ್ಕುಗಳಲ್ಲಿ ನಾಸಿ ಅಲಂಕಾರವಿದೆ. ಉಪದಿಕ್ಕು ಗಳಲ್ಲಿ ಕೂಟಗಳನ್ನು ಶಿಖರದ ಅರ್ಧದಷ್ಟು ಎತ್ತರದವರೆಗೆ ರಚಿಸಿರುವದು ವಿಶೇಷ. ಈ ಲಕ್ಷಣವು ಮಹಾಕೂಟದ ಮಹಾಕೂಟೇಶ್ವರ ದೇವಾಲಯದಲ್ಲಿಯೂ ಮರುಕಳಿಸಿದೆ. ಶಿಖರದ ಮೇಲಿರುವ ಸ್ತೂಪಿ ವಿಜಯನಗರ ಕಾಲದ್ದು. ಶಿಖರದ ನಾಲ್ಕು ಮೂಲೆಗಳಲ್ಲಿರುವ

**ಜೈನ ದೇವಾಲಯ, ಪಟ್ಟದಕಲ್ಲು**

ಕೂಟಗಳಲ್ಲಿರುವ ಗಾರೆಯ ಶಿಲ್ಪಗಳೂ ವಿಜಯನಗರ ಕಾಲದವು. ಅಧಿಷ್ಠಾನದ ವಿವರಗಳು ಕಾಣುತ್ತಿಲ್ಲವಾದರೂ ಮೇಲಣ ಶಿವಾಲಯದಲ್ಲಿರುವಂತೆಯೇ ಇದ್ದಿರಬಹುದಾದ ಸೂಚನೆ ಗಳಿವೆ. ಅಧಿಷ್ಠಾನದ ಗಲ ಭಾಗದಲ್ಲಿ ಕೃಷ್ಣಚರಿತೆಯ ನಿರೂಪಣೆಗಳಿದ್ದವು. ಇವು ಈಗ ಬಾದಾಮಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿವೆ. ಈ ದೇವಾಲಯದ ದ್ವಾರಬಂಧದ ಶಾಖೆಗಳು ವಿವಿಧ ರೀತಿಯಲ್ಲಿ ಅಲಂಕೃತವಾಗಿವೆ. ಗರುಡ–ನಾಗಶಾಖಾ ವಿನ್ಯಾಸದ ಬಳಕೆ ಇಲ್ಲ. ಗರ್ಭಗೃಹದಲ್ಲಿ ದೀರ್ಘವೃತ್ತಾಕಾರದ ಪದ್ಮಪೀಠವಿದೆ. ಮೂಲದೇವತೆ ಯಾವುದೆಂದು ಸ್ಪಷ್ಟವಿಲ್ಲವಾದರೂ ವೈಷ್ಣವ ದೇಗುಲವಾಗಿರುವ ಸಾಧ್ಯತೆ ಇದೆ. ಪ್ರಾಚೀನ ಲಕ್ಷಣಗಳ ಹಿನ್ನೆಲೆಯಲ್ಲಿ ಇದನ್ನುಮೇಲಣ ಶಿವಾಲಯಕ್ಕಿಂತ ತುಸು ಅನಂತರದ, ಬಹುಶಃ ಮಂಗಲೀಶನ ಆಳ್ವಿಕೆಯ ಕಾಲದ ನಿರ್ಮಾಣವೆಂದು ಪರಿಗಣಿಸಬಹುದು.

ಮಾಲಗಿತ್ತಿ ಶಿವಾಲಯ ಬಾದಾಮಿಯಲ್ಲಿರುವ ಮೂರನೆಯ ಪ್ರಾಚೀನ ಕಟ್ಟಡ ಮಾದರಿಯ ದೇವಾಲಯ. ಉತ್ತಮ ಸ್ಥಿತಿಯಲ್ಲಿ ಉಳಿದಿರುವ ಇದು ಆರ್ಯಮಞ್ಚಿ ಉಪಾಧ್ಯಾಯನೆಂಬ ವಾಸ್ತುಶಿಲ್ಪಿ ನಿರ್ಮಿಸಿದ ನಿರಂಧಾರ ಸೂರ್ಯ ದೇಗುಲ. ಗರ್ಭಗೃಹ, ಚಿಕ್ಕ ಅಂತರಾಳ, ಗೂಢಮಂಟಪ ಮತ್ತು ಮುಖಮಂಟಪ ಇದರ ತಲವಿನ್ಯಾಸದ ಅಂಗಗಳು. ಅಧಿಷ್ಠಾನದ ಕಂಠದಲ್ಲಿ ಗಣಗಳ ಆಕರ್ಷಕ ಉಬ್ಬುಶಿಲ್ಪಗಳಿವೆ. ಪಾದದಲ್ಲಿ ಕರ್ಣ–ಭದ್ರಗಳಿದ್ದು ಕುಡ್ಯಸ್ತಂಭಗಳು ಗಮನೀಯವಾಗಿವೆ. ಕಪೋತದ ವಲಭೀಯಲ್ಲಿ ಗಣ–ಹಂಸಗಳ ಮಾಲೆ ಇದೆ. ಆದಿ ತಲದ ಹಾರವು ಗೂಢಮಂಟಪದ ಮೇಲೂ ಸಾಗಿದೆ. ತಲಗಳ ರೂಪು ಹೆಚ್ಚು ಸ್ಪಷ್ಟವಾಗಿದೆ. ಗ್ರೀವ–ಶಿಖರದ ಉಪದಿಕ್ಕುಗಳಲ್ಲಿ ಚಿಕ್ಕ ಕೂಟಗಳು ರಚಿತವಾಗಿವೆ. ಶಿಖರವು ಅಷ್ಟಕೋನಾಕಾರದಲ್ಲಿದೆ ಇದು ನಿರಂಧಾರ ದ್ವಿತಲ ದ್ರಾವಿಡ ವಿಮಾನ.

ಗರ್ಭಗೃಹದ ದ್ವಾರಬಂಧದ ಅಲಂಕೃತ ಶಾಖೆಗಳಲ್ಲಿ ಗರುಡ–ನಾಗಶಾಖಾ ವಿನ್ಯಾಸ ವಿರುವದು ಹೊಸ ಲಕ್ಷಣ. ಅಂತರಾಳದಂತೆ ಕಾಣುವ ಭಾಗದಲ್ಲಿ ಎಡಗಡೆ ಸೂರ್ಯನು ಛಾಯಾದೇವಿಯನ್ನು ದಂಡಿಸುತ್ತಿರುವ ಉಬ್ಬುಶಿಲ್ಪವಿದೆ. ಗೂಢಮಂಟಪದ ವಿತಾನದಲ್ಲಿ ಗರುಡಾರೂಢ ವಿಷ್ಣುವಿನ ಶಿಲ್ಪವಿದೆ. ಅದರಂತೆ ಗೂಢಮಂಟಪದ ಗೋಡೆಗಳಲ್ಲಿ ಸ್ಥಾನಕ ಶಿವ (ದಕ್ಷಿಣ ದಿಕ್ಕು) ಮತ್ತು ಸ್ಥಾನಕ ವಿಷ್ಣು (ಉತ್ತರ ದಿಕ್ಕು) ಶಿಲ್ಪಗಳು ವಿಶಿಷ್ಟ ಪ್ರಕಾರದವು. ಗುಪ್ತರ ಅಂತ್ಯಕಾಲದ ಶಿಲ್ಪಶೈಲಿಯ ಲಕ್ಷಣಗಳು ಇಲ್ಲಿವೆ. ಗರುಡ–ನಾಗಶಾಖಾ ವಿನ್ಯಾಸ ಮತ್ತು ಗುಪ್ತರ ಅಂತ್ಯಕಾಲದ ಶಿಲ್ಪಶೈಲಿಯ ಪ್ರಭಾವ ಇವೆರಡೂ ವೈಶಿಷ್ಟ್ಯಗಳು ದ್ರಾವಿಡ ದೇಶದ ವಾಸ್ತು ಮಾದರಿಯಲ್ಲಿ ಔತ್ತರೇಯ ಲಕ್ಷಣಗಳು ನುಸುಳುತ್ತಿರುವದನ್ನು ಸೂಚಿಸುತ್ತವೆ. ಈ ದೇವಾಲಯ ಅದೇ ಬೆಟ್ಟದಲ್ಲಿದ್ದರೂ ಮೂಲ ಕೋಟೆಯ ಹೊರ ವಲಯದಲ್ಲಿದೆ. ಬಹುಶಃ ಇದು ಇಮ್ಮಡಿ ಪುಲಕೇಶಿಯ ಆಳ್ವಿಕೆಯ ಕಾಲದಲ್ಲಿ ಇದು ನಿರ್ಮಾಣವಾಗಿರುವ ಸಾಧ್ಯತೆ ಹೆಚ್ಚು.

ಬಾದಾಮಿಯ ಅಗಸ್ತ್ಯತೀರ್ಥ ಹೊಂಡದ ಪೂರ್ವ ತಟದಲ್ಲಿ ಭೂತನಾಥ ದೇವಾಲಯವಿದೆ. ಭೂತೇಶ್ವರನಿಗೆ ಮುಡುಪಾಗಿರುವ ಇದು ಇಲ್ಲಿ ಚಳುಕ್ಯರ ಕಾಲದಲ್ಲಿ ರಚಿತವಾದ ದಕ್ಷಿಣ ಭಾರತ ಶೈಲಿಯ ದೇವಾಲಯಗಳಲ್ಲಿ ಬಹುಶಃ ಕೊನೆಯದು. ನಿರಂಧಾರ ಪ್ರಕಾರದ ಈ ದೇಗುಲಕ್ಕೆ ಗರ್ಭಗೃಹ, ಅಂತರಾಳ, ಗೂಢಮಂಟಪ ಮತ್ತು ಮುಖಮಂಟಪ ಇವೆ. ಮುಖಮಂಟಪವನ್ನು 11–12ನೆಯ ಶತಮಾನದಲ್ಲಿ ಹೆಚ್ಚು ವಿಶಾಲವಾದ ತೆರೆದ ಮಂಟಪವನ್ನಾಗಿ ವಿಸ್ತರಿಸಲಾಗಿದೆ. ಇದು ತ್ರಿತಲ ನಾಗರ ವಿಮಾನ; ಇದನ್ನು 700–30ರ ಅವಧಿಗೆ ಅನ್ವಯಿಸಬಹುದು.

ಮಹಾಕೂಟದಲ್ಲಿ ನಿರ್ಮಾಣಗೊಂಡ ದೇಗುಲಗಳಲ್ಲಿ ಬಾಣಂತಿ ಗುಡಿ, ಮಹಾಕೂಟೇಶ್ವರ ಗುಡಿ ಮತ್ತು ಮಲ್ಲಿಕಾರ್ಜುನ ಗುಡಿ ಉಲ್ಲೇಖನೀಯವಾಗಿವೆ. ಬಾಣಂತಿ ಗುಡಿ ಗರ್ಭಗೃಹ ಮತ್ತು ಮುಖಮಂಟಪ ಮಾತ್ರ ಇರುವ ಏಕತಲ ರಚನೆ. ಇದನ್ನು ನಿರಂಧಾರ ಪ್ರಕಾರದ ನಾಗರ ಅಲ್ಪ ವಿಮಾನ ಎಂದು ವರ್ಣಿಸಬಹುದು. ತಕ್ಕ ಮಟ್ಟಿಗೆ ಬಾದಾಮಿಯ ಮೇಲಣ ಶಿವಾಲಯವನ್ನು ನೆನಪಿಸುತ್ತದೆ. ಇದರ ಕಾಲ 6ನೆಯ ಶತಮಾನದ ಉತ್ತರಾರ್ಧವಿರಬಹುದು.



ಬಾದಾಮಿ ದೇವಾಲಯಗಳ ವಿಹಂಗಮ ನೋಟ

ಮಹಾಕೂಟೇಶ್ವರ ಮತ್ತು ಮಲ್ಲಿಕಾರ್ಜುನ ದೇಗುಲಗಳು ಕೆಲವು ಸಾಮಾನ್ಯ ಲಕ್ಷಣಗಳಿಂದ ಕೂಡಿವೆ. ಇವೆರಡೂ ಮಧ್ಯಮ ಗಾತ್ರದ ದ್ವಿತಲ ಸಾಂಧಾರ ದ್ರಾವಿಡ ವಿಮಾನಗಳು. ಮಹಾಕೂಟೇಶ್ವರ ದೇವಾಲಯದ ಅಧಿಷ್ಠಾನದ ಕಂಠವು ಎತ್ತರವಿದ್ದು ಅದರಲ್ಲಿ ಕಥಾನಿರೂಪಕ ಶಿಲ್ಪಗಳಿವೆ. ಮಧ್ಯಭಾಗದಲ್ಲಿ ಗೋಡೆ ರಥರೀತಿಯಲ್ಲಿ ಭದ್ರ–ಉಪಭದ್ರಗಳಾಗಿ ಮುಂಚಾಚಿದೆ. ಸುಭದ್ರದಲ್ಲಿ ಶಿವನ ವಿಗ್ರಹವಿದೆ. ಎರಡನೆಯ ತಲದ ನಿರೂಪಣೆ ಹೆಚ್ಚು ವ್ಯವಸ್ಥಿತವಾಗಿದೆ. ಮಂಗಲೇಶನ ಶಾಸನದಲ್ಲಿ ಉಲ್ಲೇಖಿತ ಮಕುಟೇಶ್ವರನಾಥ ದೇವಾಲಯ ಇದೇ ಆಗಿದ್ದರೆ, ಇದರ ಕಾಲ 597ಕ್ಕಿಂತ ಮುಂಚೆ ಹೋಗುತ್ತದೆ.

ಐಹೊಳೆಯಲ್ಲಿ ಉಳಿದುಬಂದಿರುವ ದಕ್ಷಿಣ ಭಾರತದ ಮಾದರಿಯ ದೇಗುಲಗಳಲ್ಲಿ ಮೇಗುಟಿ ಜಿನೇಂದ್ರಭವನ ಉಲ್ಲೇಖನೀಯವಾಗಿದೆ. ದುರದೃಷ್ಟವಶಾತ್ ಇದರ ಮೇಲಣ ತಲಗಳ ವಿವರಗಳು ಲಭ್ಯವಿಲ್ಲ. ಇದು ವಿಶಾಲ ಪ್ರದಕ್ಷಿಣಾಪಥವುಳ್ಳ ಸಾಂಧಾರ ವಿಮಾನ. ಮೂಲ ವಿನ್ಯಾಸದಲ್ಲಿ ಇದಕ್ಕೆ ಸಾಂಧಾರ ಗರ್ಭಗೃಹ, ವಿಮಾನಕ್ಕಿಂತ ತುಸು ಕಿರಿದಾದ ಮಂಟಪ ಮಾತ್ರ ಇದ್ದವು. ಅನಂತರ, ಚಳುಕ್ಯರ ಕಾಲದಲ್ಲಿಯೇ ಮುಖಚತುಷ್ಕಿಯನ್ನು ಸೇರಿಸಲಾಯಿತು. ತದನಂತರದಲ್ಲಿ ಮುಖಚತುಷ್ಕಿಯನ್ನು ಒಳಗೊಂಡು ವಿಶಾಲ ತೆರೆದ ಮಂಟಪವನ್ನು ರಚಿಸಲಾಗಿದೆ. ಮೂಲ ವಿಮಾನದ ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮುದ, ಕಂಠ ಮತ್ತು ಕಪೋತ ಇವೆ. ಎರಡನೆಯ ತಲದಲ್ಲಿ ಇನ್ನೊಂದು ಗರ್ಭಗೃಹವಿದೆ. ಈ ಲಕ್ಷಣ ಹಳ್ಳೂರು, ಪಟ್ಟದಕಲ್ಲು, ಲಕ್ಕುಂಡಿ ಮುಂತಾದೆಡೆ ಇರುವ ಕೆಲವು ಜಿನಾಲಯಗಳಲ್ಲಿ ಕಂಡುಬರುತ್ತದೆ. ಮೇಲ್ಕಟ್ಟಡದ ಇತರ ಭಾಗ ಉಳಿದುಬಂದಿಲ್ಲ. ರವಿಕೀರ್ತಿಯಿಂದ ರಚಿತ ಇಮ್ಮಡಿ ಪುಲಕೇಶಿಯ ಪ್ರಶಸ್ತಿ ಶಾಸನ ಈಗ ಜಿನಾಲಯದ ಗೋಡೆಯಲ್ಲಿ ಸೇರಿಸಲ್ಪಟ್ಟಿದೆ. ರವಿಕೀರ್ತಿ ಇದರ ನಿರ್ಮಾತೃ. ಜಿನಾಲಯದ ಮೂಲ ಭಾಗಗಳು ಶಾಸನದ ಕಾಲಕ್ಕೆ ಅಂದರೆ 634ಕ್ಕೆ ಸೇರುತ್ತದೆ. ಮುಖಚತುಷ್ಕಿ ಮತ್ತು ಅದನ್ನೊಳಗೊಂಡ ತೆರೆದ ಮಂಟಪ ಅನಂತರದ ಕಾಲದವು.

ಚಳುಕ್ಯರ ಉತ್ತರಾರ್ಧ ಕಾಲದ ದಕ್ಷಿಣ ಭಾರತದ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಗಮನಾರ್ಹ ದೇಗುಲಗಳು ಪಟ್ಟದಕಲ್ಲಿನಲ್ಲಿವೆ. ಇವುಗಳಲ್ಲಿ ಪ್ರಾಚೀನತಮವಾದುದು ಸಂಗಮೇಶ್ವರ ದೇವಾಲಯ. ವಿಜಯಾದಿತ್ಯ (696–733) ಪ್ರಾರಂಭಿಸಿದ ಈ ದೇಗುಲ ಕೆಲವು ಅಂಶಗಳಲ್ಲಿ ಅಪೂರ್ಣವಾಗಿದೆ. ವಿಜಯಾದಿತ್ಯನ ಹೆಸರಿನಲ್ಲಿ ಪ್ರತಿಷ್ಠಾಪಿತ ವಿಜಯೇಶ್ವರನಿಗೆ ಮುಡಿಪಾದ ಈ ದೇಗುಲ ಸಾಂಧಾರ ದ್ವಿತಲ ನಾಗರ ವಿಮಾನ. ಗರ್ಭಗೃಹ, ಪ್ರದಕ್ಷಿಣಾಪಥ, ತೆರೆದ ಅಗ್ರಮಂಟಪಗಳನ್ನೊಳಗೊಂಡಿರುವ ಈ ಗುಡಿಯ ಮಂಟಪಕ್ಕೆ ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಂದ ಪ್ರವೇಶವಿದೆ. ಗರ್ಭಗೃಹದ ಮುಂಭಾಗದಲ್ಲಿ ಮಂಟಪದಲ್ಲಿ ಎರಡು ಚಿಕ್ಕ ಗುಡಿಗಳಿರುವುದು ವೈಶಿಷ್ಟ್ಯ. ಇವು ಗಣೇಶ (ದಕ್ಷಿಣ) ಮತ್ತು ದುರ್ಗಾಭಗವತಿ (ಉತ್ತರ) ದೇವತೆಗಳಿಗೆ ಮುಡಿಪಾಗಿವೆ. ಈ ಲಕ್ಷಣ ಪ್ರಾಯಶಃ ಶೈವಧರ್ಮದ ಸ್ವರೂಪದಲ್ಲಾದ ಹೊಸ ಬದಲಾವಣೆಯ ಕುರುಹಾಗಿದೆ.

ಚಳುಕ್ಯ ವಾಸ್ತುಶಿಲ್ಪಿಗಳ ಬಹು ಮಹಾತ್ವಾಕಾಂಕ್ಷಿ ನಿರ್ಮಾಣಗಳಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ಗುಡಿಗಳು ಸೇರಿವೆ. ಇವೆರಡೂ ಬಹುಶಃ ಏಕಕಾಲಕ್ಕೆ ಪ್ರಾರಂಭಗೊಂಡು ಪೂರ್ತಿಯಾದವು. ಇಮ್ಮಡಿ ವಿಕ್ರಮಾದಿತ್ಯನ ಇಬ್ಬರು ಹೈಹಯವಂಶೀಯ ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯಮಹಾದೇವಿ ಇವುಗಳ ನಿರ್ಮಾತೃಗಳು. ವಿರೂಪಾಕ್ಷ ದೇವಾಲಯದ ಮೂಲ ಹೆಸರು ಲೋಕೇಶ್ವರ. ಇದು ಸಾಂಧಾರ ಚತುಸ್ತಲ ನಾಗರ ವಿಮಾನ. ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಂದ ಮುಖಮಂಟಪಗಳ ಮೂಲಕ ಪ್ರವೇಶವಿರುವ ವಿಶಾಲ ಗೂಢಮಂಟಪ ಇದರ ಭಾಗಗಳು. ಗೂಢ ಮಂಟಪದಲ್ಲಿ ಸಂಗಮೇಶ್ವರ ಗುಡಿಯಲ್ಲಿರು ವಂತೆ ಗಣೇಶ ಮತ್ತು ದುರ್ಗಾಭಗವತಿಗಾಗಿ ಎರಡು ಗುಡಿಗಳಿವೆ. ಅಂತರಾಳಕ್ಕೆ ಸ್ಪಂದಿಯಾಗಿ ಮೇಲ್ಗಡೆ ಪೂರ್ವದಿಕ್ಕಿಗೆ ಚಾಚಿರುವ ಶುಕನಾಸವಿದೆ. ಇದು ನಾಲ್ಕನೆಯ ತಲದ ವೇದಿಯ ಮಟ್ಟದವರೆಗೆ ಎದ್ದು ನಿಂತಿದೆ. ಶುಕನಾಸ ದಾಕ್ಷಿಣಾತ್ಯ ಲಕ್ಷಣವಲ್ಲ; ಔತ್ತರೇಯ ಲಕ್ಷಣ. ಅದರಂತೆ ಮುಖಮಂಟಪಗಳಲ್ಲಿ ಕಕ್ಷಾಸನ ಇರುವದನ್ನೂ ಗಮನಿಸ ಬೇಕು; ಇದೂ ಔತ್ತರೇಯ ಲಕ್ಷಣವೇ. ವಿರೂಪಾಕ್ಷದೇವಾಲಯದಲ್ಲಿ ಬಹು ಆಕರ್ಷಕವಾಗಿ ಉತ್ತರ ಭಾರತದ ದೇಗುಲ ಮಾದರಿಯ ಲಕ್ಷಣಗಳನ್ನು ದಕ್ಷಿಣ ಭಾರತದ ಮಾದರಿಯ ದೇಗುಲದಲ್ಲಿ ಬೆಸೆದಿದ್ದಾರೆ. ಇದು ಮುಂದೆ ಕರ್ನಾಟಕ ದ್ರಾವಿಡ ಮಾದರಿಯ ದೇವಾಲಯ ಗಳ ವೈಶಿಷ್ಟ್ಯವಾಗಿ ಮುಂದುವರಿಯಿತು. ದೇವಾಲಯದ ಮುಂದುಗಡೆ ನಂದಿಮಂಟಪವಿದೆ. ಸುತ್ತಲೂ ಪ್ರಾಕಾರವಿದ್ದು ಅದರ ಒಳ ಮುಖದಪೂರ್ತಿ ಪರಿವಾರ ದೇಗುಲಗಳಿವೆ. ಪೂರ್ವದಿಶೆಯಲ್ಲಿ ಪ್ರಾಕಾರಕ್ಕೆ ಚಿಕ್ಕ ಶಾಲಾ ಗೋಪುರವುಳ್ಳ ಪ್ರವೇಶವಿದೆ. ಪ್ರಾಕಾರ, ಗೋಪುರ, ನಂದಿಮಂಟಪ ಇತ್ಯಾದಿ ಲಕ್ಷಣಗಳು ಪಲ್ಲವ ರಾಜಸಿಂಹನಿಂದ ನಿರ್ಮಾಣ ಗೊಂಡ ಕಾಂಚಿಯ ರಾಜಸಿಂಹೇಶ್ವರ (ಕೈಲಾಸನಾಥ) ದೇವಾಲಯವನ್ನು ನೆನಪಿಸುತ್ತವೆ. ವಿಕ್ರಮಾದಿತ್ಯನು ಕಾಂಚಿಯನ್ನು ಮೂರು ಬಾರಿ ಗೆದ್ದು, ಅಲ್ಲಿಯ ರಾಜಸಿಂಹೇಶ್ವರ ದೇವಾಲಯದ ಧನವನ್ನು ಪರಿಶೀಲಿಸಿ ಮರಳಿ ಆ ದೇವರಿಗೇ ಕೊಟ್ಟನೆಂಬ ವಿಚಾರ ಅವನ ಶಾಸನಗಳಿಂದ ತಿಳಿದಿದೆ. ಆದರೆ ಗರ್ಭಗೃಹ, ಅಂತರಾಳ, ಗೂಢಮಂಟಪಗಳ ರಚನೆಯಲ್ಲಿ ಕೈಲಾಸನಾಥ ದೇವಾಲಯಕ್ಕೆ ಯಾವುದೇ ನೇರ ಹೋಲಿಕೆಯಿಲ್ಲ. ದೇವಾಲಯದ ಹೊರಮೈಯಲ್ಲಿ ಶಿವನ ಲಿಂಗೋದ್ಭವ, ಚಂದ್ರಶೇಖರ, ಭೈರವ, ನಟೇಶ, ರಾವಣಾನುಗ್ರಹ ಮುಂತಾದ ಮೂರ್ತಿಗಳು, ರಾಮಾಯಣದ ಆಯ್ದ ಕಥಾನಿರೂಪಕ ದೃಶ್ಯಗಳು, ಗಜೇಂದ್ರಮೋಕ್ಷ, ವರಾಹ, ತ್ರಿವಿಕ್ರಮ ಮುಂತಾದ ವಿಷ್ಣುವಿಗ್ರಹ ಗಳು ಇವೆ. ಒಳಗಡೆ ರಾಮಾಯಣ, ಮಹಾಭಾರತ, ಭಾಗವತ, ಪಂಚತಂತ್ರ ಮುಂತಾದ ಕೃತಿಗಳಿಂದ ಸ್ಫೂರ್ತಿಪಡೆದ ಆಕರ್ಷಕ ಕಥಾನಕ ಶಿಲ್ಪಗಳಿವೆ. ಅಲ್ಲದೆ ಗೋಡೆಯ ಗುಂಟದ ಅರ್ಧಗಂಬಗಳ ಮುಖದಲ್ಲಿ ಸುಂದರ ದಂಪತಿಗಳ ವಿಗ್ರಹಗಳಿವೆ. ಗುಂಡ ಅನಿವಾರಿತಾ ಚಾರಿ ಮತ್ತು ಸರ್ವಸಿದ್ಧಿ ಆಚಾರಿ ಈ ದೇವಾಲಯದ ಮುಖ್ಯ ಸೂತ್ರಧಾರಿಗಳು. ಅವರ ಅದ್ಭುತಸಾಧನೆಗೆ ಮೆಚ್ಚಿ ಮೂರು ಬಾರಿ ಅವರಿಗೆ 'ಪೆರ್ಜೆರಪ್ಪು' ಸನ್ಮಾನ ಮಾಡಲಾಯಿತಲ್ಲದೆ, ತ್ರಿಭುವನಾಚಾರಿ ಎಂಬ ಬಿರುದು ನೀಡಲಾಯಿತು. ಸರ್ವಸಿದ್ಧಿ ಆಚಾರಿ ಲೋಕೇಶ್ವರ ಗುಡಿಯ ದಕ್ಷಿಣ ಭಾಗದ ಸೂತ್ರಧಾರಿ. ಗುಂಡ ಅನಿವಾರಿತಾಚಾರಿ ಬಹುಶಃ ಆ ಗುಡಿಯ ಉತ್ತರ ಭಾಗದ ಸೂತ್ರಧಾರಿ ಇದ್ದಿರಬೇಕು. ವಿರೂಪಾಕ್ಷ ದೇವಾಲಯ ಕರ್ನಾಟಕ ದ್ರಾವಿಡ ವಾಸ್ತುಶೈಲಿಯ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲು.

ಹೆಚ್ಚು ಕಡಿಮೆ ಇದೇ ವಿನ್ಯಾಸವನ್ನನುಸರಿಸಿ ತುಸು ಕಡಿಮೆ ಗಾತ್ರದ ಮಲ್ಲಿಕಾರ್ಜುನ ದೇಗುಲವನ್ನು ನಿರ್ಮಿಸಲಾಗಿದೆ. ಇದರ ಮೂಲ ಹೆಸರು ತ್ರೈಲೋಕ್ಯೇಶ್ವರ. ನಿರ್ಮಿಸಿದಾಕೆ ತ್ರೈಲೋಕ್ಯ ಮಹಾದೇವಿ. ತಲವಿನ್ಯಾಸವು ವಿರೂಪಾಕ್ಷದಂತೆಯೇ ಇದೆ. ಶಿಲ್ಪಾಲಂಕಾರವೂ ಅದನ್ನೇ ಅನುಸರಿಸಿದೆ. ಆದರೆ ಇದರ ಶಿಖರ ವೃತ್ತಾಕಾರವಾಗಿದೆ. ಇದು ದಾಕ್ಷಿಣಾತ್ಯ ಸಾಂಧಾರ ತ್ರಿತಲ ವೇಸರ ವಿಮಾನದ ಪ್ರತಿನಿಧಿಯಾಗಿದೆ. ಈ ರೀತಿಯ ರಚನೆಗೆ ಚಳುಕ್ಯರ ಸಂದರ್ಭದಲ್ಲಿ ಇದೊಂದೇ ಉದಾಹರಣೆ. ಇಲ್ಲಿಯೂ ಔತ್ತರೇಯ ಲಕ್ಷಣವೆನಿಸಿದ ಸುಕನಾಸದ ರಚನೆಯಿರುವದು ಗಮನೀಯ. ಸ್ಪಷ್ಟ ಪುರಾವೆ ಇಲ್ಲದಿದ್ದರೂ ಗುಂಡ ಅನಿವಾರಿತಾಚಾರಿ ಮತ್ತು ಸರ್ವಸಿದ್ಧಿ ಆಚಾರಿ ಈ ದೇಗುಲದ ಸೂತ್ರಧಾರಿಗಳಾಗಿರುವ ಸಾಧ್ಯತೆಯಿದೆ. ಇದರ ಕಾಲವೂ ಸು.733–44.

2. ನಾಗರ ರೇಖಾ ಪ್ರಾಸಾದಗಳು (ಲತಿನ ಪ್ರಾಸಾದಗಳು): ಎರಡನೆಯ ಗುಂಪಿನ ದೇವಾಲಯಗಳು ಉತ್ತರ ಭಾರತದ ಮಾದರಿಯ ಪ್ರತಿನಿಧಿಗಳಾದ ನಾಗರ ರೇಖಾ ಅಥವಾ ಲತಿನ ಪ್ರಾಸಾದಗಳು. ಒಳ ರಚನೆಯಲ್ಲಿ ಈ ಕಾಲದ ದ್ರಾವಿಡ ಶೈಲಿಯ ದೇಗುಲಗಳಿಗಿಂತ ಭಿನ್ನವಾಗಿರದಿದ್ದರೂ ಬಾಹ್ಯ ವಿವರಗಳಲ್ಲಿ ವ್ಯತ್ಯಾಸಗಳಿವೆ. ಊರ್ಧ್ವ ರಚನೆಯಲ್ಲಿ ಅಧಿಷ್ಠಾನ (ಪೀಠ), ಜಂಘಾ (ಗೋಡೆ), ಶಿಖರ, ಗಲ (ಕುತ್ತಿಗೆ), ಆಮಲಸಾರಕ (ಆಮಲಶಿಲಾ, ನೆಲ್ಲಿಕಾಯಿಯನ್ನು ಹೋಲುವ ಅಂಗ) ಮತ್ತು ಕಲಶ ಇವು ಇದರ ಮುಖ್ಯ ಭಾಗಗಳು. ಐಹೊಳೆಯಲ್ಲಿ ಕಾಣುವಂತೆ ಇವುಗಳ ಪೀಠ ಸಾಮಾನ್ಯವಾಗಿ ಸರಳವಾಗಿದೆ. ಪದ್ಮ, ಕಂಠ ಮತ್ತು ಕಪೋತ ಅದರ ಪ್ರಮುಖ ಭಾಗಗಳು. ಆದರೆ ಪಟ್ಟದಕಲ್ಲಿನ ಗುಡಿಗಳ ಪೀಠದಲ್ಲಿ

ಅನೇಕ ಮಡಿಕೆಗಳಿವೆ. ಪದ್ಮ, ಕುಂಭ, ಕಂಠ ಮತ್ತು ಕಪೋತಗಳು ಸಾಮಾನ್ಯ; ಕೆಲವು ದೇಗುಲಗಳಲ್ಲಿ ಕುಂಭದ ಸ್ಥಾನ ಕುಮುದದಿಂದ ಆಕ್ರಮಿತವಾಗಿದೆ. ಮೂಲ ಪ್ರಾಸಾದದ ಪೀಠ ಪ್ರತಿಯೊಂದು ಪಾರ್ಶ್ವದ ಮಧ್ಯದಲ್ಲಿ ಮುಂಚಾಚಿನಿಂದ ಕೂಡಿರುತ್ತದೆ. ಇದಕ್ಕೆ ಸ್ಪಂದಿಯಾಗಿ ಸರಳ ಗೋಡೆಯ (ಜಂಘಾ) ಮಧ್ಯದಲ್ಲಿ ಒಂದು ಮುಂಚಾಚು (ರಥ) ಇರುತ್ತದೆ. ಹೀಗೆ ಚಳುಕ್ಯರ ಎಲ್ಲ ನಾಗರ ರೇಖಾ ಪ್ರಾಸಾದಗಳು ತ್ರಿರಥ ವಿನ್ಯಾಸ ವುಳ್ಳವಾಗಿವೆ. ಕೆಲವು ಸಲ ಇದನ್ನು ಕೇವಲ ದೇವಕೋಷ್ಠದ ರಚನೆಗೆ ಸೇರಿಸಿರುವ ಜೋಡು ಕಂಬಗಳಿಂದ ಸೂಚಿಸಲಾಗಿದೆ. ಶಿಖರ ಚೌಕ ವಿನ್ಯಾಸವುಳ್ಳದ್ದಾಗಿದ್ದು ನಾಲ್ಕೂ ಪಾರ್ಶ್ವಗಳಲ್ಲಿ ಮೇಲೇರಿದಂತೆ ಕ್ರಮೇಣ ಒಳಕ್ಕೆ ಬಾಗುತ್ತ ಸಾಗಿರುತ್ತದೆ. ಆದುದರಿಂದಲೇ ರೇಖಾ ನಾಗರ ಎಂಬ ಹೆಸರು ಇದಕ್ಕೆ ಅನ್ವಯವಾಗುತ್ತದೆ. ಶಿಖರದ ನಾಲ್ಕೂ ಪಾರ್ಶ್ವಗಳ ಮಧ್ಯದಲ್ಲಿ, ರಥ ಮುಂಚಾಚಿಗೆ ಸ್ಪಂದಿಯಾಗಿ ಗವಾಕ್ಷ, ಅರ್ಧಗವಾಕ್ಷಗಳಿಂದಾದ ಲತಾ ಅಲಂಕಾರವಿರುತ್ತದೆ. ಇದರ ಶಿಖರದ ಕೋನಗಳಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಭೂಮಿಯನ್ನು (ಮಹಡಿಯನ್ನು) ಸೂಚಿಸುವ ಕರ್ಣ ಆಮಲಕಗಳಿರುತ್ತವೆ. ದೇವಾಲಯಕ್ಕೆ ಅಂತರಾಲ (ಕಪಿಲಿ) ಇದ್ದರೆ, ದೇವಾಲಯ ಮುಖಮಾಡಿರುವ ದಿಶೆಯಲ್ಲಿ ಶಿಖರಕ್ಕೆ ಮುಂಚಾಚು ಇರುತ್ತದೆ. ಇದು ಸುಕನಾಸಿ. ಸುಕನಾಸಿಯ ಮುಖಪಟ್ಟಿಯಲ್ಲಿ ದೊಡ್ಡ ಗವಾಕ್ಷವಿದ್ದು ಅದರ ನಡುವೆ ಗರ್ಭಗೃಹದಲ್ಲಿ ಪ್ರತಿಷ್ಠಾಪಿತ ದೇವತೆಯ ಮೂರ್ತಿ ಇರುತ್ತದೆ. ಉದಾಹರಣೆಗೆ, ಶಿವ ದೇವಾಲಯವಿದ್ದರೆ, ಸುಕನಾಸದ ಮುಖಪಟ್ಟಿಯಲ್ಲಿ ನಟರಾಜ ವಿಗ್ರಹವಿರುವದು ಸಾಮಾನ್ಯ. ಅಂತರಾಲವಿರದಿರುವ ದೇಗುಲಗಳ ಶಿಖರದಲ್ಲಿ ಶುಕನಾಸವಿರಬೇಕಾದ ಭಾಗದಲ್ಲಿ ಕೇವಲ ಮುಖಪಟ್ಟಿಯನ್ನು ಇರಿಸಲಾಗಿರುತ್ತದೆ (ಉದಾ: ಐಹೊಳೆಯ ಹುಚ್ಚಿಮಲ್ಲಿ ಗುಡಿ). ಶಿಖರದ ಮೇಲ್ಭಾಗ ಸಮತಟ್ಟಾಗಿದ್ದು ಅದರ ಮಧ್ಯದಲ್ಲಿ ಗಲವನ್ನು ಪ್ರತಿನಿಧಿಸುವ ದುಂಡುಗಲ್ಲು ಇರುತ್ತದೆ. ಇದರ ಮೇಲ್ಗಡೆ ಕ್ರಮವಾಗಿ ಆಮಲಶಿಲಾ ಮತ್ತು ಕಲಶ ಇರುತ್ತವೆ. ಮುಖಮಂಟಪದ ಪಾರ್ಶ್ವ ಅಂಚಿನುದ್ದಕ್ಕೂ ಕಕ್ಷಾಸನ ಇರುವುದು ಸಾಮಾನ್ಯ. ದ್ರಾವಿಡ ಮಾದರಿಯ ದೇಗುಲಗಳಲ್ಲಿ ಕಾಣುವಂತೆ ಲತಿನ ಪ್ರಾಸಾದಗಳಲ್ಲಿಯೂ ಸಾಂಧಾರ ಮತ್ತು ನಿರಂಧಾರ ರಚನೆಗಳು ಕಾಣುತ್ತವೆ. ಸಾಂಧಾರ ದೇಗುಲಗಳು ರಾಜ ಪ್ರೋತ್ಸಾಹದಿಂದ ರಚಿತವಾಗಿವೆ.

ಈ ಮಾದರಿಯ ಪ್ರಾರಂಭಿಕ ಶಿಲಾದೇಗುಲಗಳು ಐಹೊಳೆಯಲ್ಲಿವೆ. ಹುಚ್ಚಿಮಲ್ಲಿ ಗುಡಿ ಸಾಂಧಾರ ರೀತಿಯ, ಗರ್ಭಗೃಹ, ಗೂಢಮಂಟಪ ಹಾಗೂ ಮುಖಮಂಟಪವ ನ್ನೊಳಗೊಂಡು ಪಶ್ಚಿಮಕ್ಕೆ ಮುಖಮಾಡಿರುವ ರೇಖಾ ಪ್ರಾಸಾದ. ಇದರ ಪೀಠ ಸಾಕಷ್ಟು ಎತ್ತರವಿದ್ದರೂ ಪದ್ಮ, ಕಂಠ ಮತ್ತು ಕಪೋತ ಅಂಗಗಳಿಂದಾಗಿದೆ. ಜಂಘಾ ಭಾಗವು ಸರಳವೂ ನಿರಲಂಕೃತವೂ ಆಗಿದ್ದು ಗರ್ಭಗೃಹವಿರುವ ಸ್ಥಾನದಲ್ಲಿ ಪ್ರದಕ್ಷಿಣಾಪಥಕ್ಕೆ ಬೆಳಕು ಒದಗಿಸಲು ಜಾಲವಾತಾಯನಗಳಿವೆ. ಶಿಖರದ ರೇಖಾ ರಚನೆ ಅಷ್ಟು ಬಲವಾಗಿಲ್ಲ. ಕರ್ಣಾಮಲಕಗಳು ದುಂಡಾಗಿವೆ. ಅಂತರಾಲವಿಲ್ಲದಿರುವುದರಿಂದ ಶಿಖರದ ಪಶ್ಚಿಮ ಮುಖದಲ್ಲಿ ನಟರಾಜನ ಉಬ್ಬುಶಿಲ್ಪವಿರುವ ಮುಖಪಟ್ಟಿಯನ್ನಿರಿಸಲಾಗಿದೆ. ಮುಂಚೆ ಬಿದ್ದು ಹೋಗಿದ್ದ ಆಮಲಶಿಲೆಯನ್ನು ಮತ್ತು ಕಲಶವನ್ನು ಈಗ ಪುನರ್ಸ್ಥಾಪಿಸಲಾಗಿದೆ. ಮುಖಮಂಟಪದ ಪಾರ್ಶ್ವಗಳಲ್ಲಿ ಕಕ್ಷಾಸನಗಳಿವೆ. ಗೂಢಮಂಟಪದ ಕಂಬಗಳು ಚೌಕವಿದ್ದು ಮೇಲ್ಭಾಗದಲ್ಲಿ ಅರ್ಧವೃತ್ತಗಳನ್ನು ಎದುರುಬದಿರಾಗಿರುವಂತೆ ಹಾಗೂ ಮೂಲೆಗಳಲ್ಲಿ ಪಲ್ಲವಗಳು ಚಾಚಿರುವಂತೆ ಅಲಂಕರಿಸಿದೆ. ಬೋದಿಗೆ ಪ್ರಕಾರದಲ್ಲಿವೆ. ಛತ್ತು (ವಿತಾನ) ಮಧ್ಯದಲ್ಲಿ ಸಮತಲವಿದ್ದು ಬ್ರಹ್ಮ, ವಿಷ್ಣು, ಶಿವ ಮತ್ತು ಇಂದ್ರರು ತಮ್ಮ ತಮ್ಮ ವಾಹನಗಳ ಮೇಲೆ ಸಾಗುತ್ತಿರುವ ಶಿಲ್ಪವಿದೆ. ಈ ಎತ್ತರಿಸಿದ ವಿತಾನದ ಪಾರ್ಶ್ವಗಳಲ್ಲಿ ಸಣ್ಣ ಕಿಂಡಿಗಳಿದ್ದು ವಿತಾನದ ಶಿಲ್ಪಗಳಮೇಲೆ ಬೆಳಕು ಬೀರುತ್ತವೆ. ಗೂಢಮಂಟಪದ ಪಾರ್ಶ್ವದ ಛತ್ತುಗಳು ಇಳಿಜಾರಾಗಿವೆ. ಗೂಢಮಂಟಪದ ಹೊರಗೋಡೆಯಲ್ಲಿರುವ ವಿಜಯಾದಿತ್ಯನ ಶಾಸನ ರಾಜಪ್ರೋತ್ಸಾಹವನ್ನು ಪ್ರಕಟಿಸುತ್ತದೆ. ಮುಖಮಂಟಪದ ವಿತಾನದಲ್ಲಿರುವ ತಾರಕಾಸುರ ನನ್ನು ವಧಿಸುತ್ತಿರುವ ಕಾರ್ತಿಕೇಯನ ಶಿಲ್ಪ ಒಂದು ಉತ್ತಮ ಕೃತಿ. ವಿಶಿಷ್ಟ ಸರಳ ಲಕ್ಷಣಗಳ ಹಿನ್ನೆಲೆಯಲ್ಲಿ ಹುಚ್ಚಿಮಲ್ಲಿಗುಡಿಯನ್ನು 7ನೆಯ ಶತಮಾನಕ್ಕೆ ಅನ್ವಯಿಸಬಹುದು.

ಐಹೊಳೆಯ ಚಕ್ರಗುಡಿ ನಿರಂಧಾರ ರೇಖಾ ಪ್ರಾಸಾದದ ಇನ್ನೊಂದು ಪ್ರಾಚೀನ ಉದಾಹರಣೆ. ಮೂಲ ಪ್ರಾಸಾದ ತ್ರಿರಥ ಮಾದರಿಯಲ್ಲಿದೆ. ಗರ್ಭಗೃಹ ಒಳಗಡೆ ಆಯತ ವಿನ್ಯಾಸದಲ್ಲಿರುವದರಿಂದ ಇದು ದುರ್ಗಾಭಗವತಿಯ ಗುಡಿ ಇರಬೇಕು. ಅನಂತರದ ಕಾಲದಲ್ಲಿ ಈ ಗುಡಿಗೆ ಸಾಕಷ್ಟು ಸೇರ್ಪಡೆಗಳಾಗಿವೆ. ಇದರ ಪರಿಸರದಲ್ಲಿ ಯುವರಾಜ ಮೊದಲನೆಯ ವಿಕ್ರಮಾದಿತ್ಯನ ಶಾಸನ ದೊರೆತಿದೆ. ಆದುದರಿಂದ ಈ ಗುಡಿ 7ನೆಯ ಶತಮಾನದ ಮಧ್ಯಾವಧಿಯಲ್ಲಿ ನಿರ್ಮಾಣವಾಗಿರಬಹುದು.

ಐಹೊಳೆಯಲ್ಲಿರುವ ಹುಚ್ಚಪ್ಪಯ್ಯ ಗುಡಿ ನಿರಂಧಾರ ರೇಖಾ ಪ್ರಾಸಾದದ ಇನ್ನೊಂದು ಉದಾಹರಣೆ. ಇದು ಶಿವಾಲಯ. ವಿನ್ಯಾಸದಲ್ಲಿ ಗರ್ಭಗೃಹ, ಗೂಢಮಂಟಪ ಮತ್ತು ಕಕ್ಷಾಸನಸಹಿತ ಮುಖಮಂಟಪಗಳನ್ನೊಳಗೊಂಡಿದೆ. ಕಂಬಗಳು ಸರಳ ರುಚಕ ಮಾದರಿಯಲ್ಲಿದ್ದು ಅವುಗಳ ಬೋದಿಗೆಗಳೂ ಸರಳವಾಗಿವೆ. ಗೂಢಮಂಟಪ ಮತ್ತು ಗರ್ಭಗೃಹಗಳ ದ್ವಾರಬಂಧಗಳು ಮೇಲ್ತುದಿಯಲ್ಲಿ ಹೊರಚಾಚಿದ್ದು, ಅವುಗಳ ಅಲಂಕಾರಕ್ಕೆ ಔತ್ತರೇಯ ವಿನ್ಯಾಸಗಳನ್ನೇ ಬಳಸಲಾಗಿದ್ದರೂ ಉತ್ತರಾಂಗದಲ್ಲಿ ಒಂದೆಡೆ ಆಕಸ್ಮಿಕ ಎನ್ನುವಂತೆ ದಾಕ್ಷಿಣಾತ್ಯ ಶಾಲಾ ಶಿಖರ ಮಾದರಿಯ ಬಳಕೆಯಾಗಿರುವದು ಗಮನಾರ್ಹ. ಗರ್ಭಗೃಹದ ದ್ವಾರದ ಪಾರ್ಶ್ವಗಳಲ್ಲಿರುವ ಕಂಬಗಳ ಪೂರ್ವಮುಖದಲ್ಲಿ ಶೈವ ದ್ವಾರಪಾಲರಿದ್ದಾರೆ. ಅಲ್ಲದೆ ದಕ್ಷಿಣ ಪಾರ್ಶ್ವದ ಕಂಬದ ಉತ್ತರ ಮುಖದಲ್ಲಿ ದುರ್ಗಾಭಗವತಿ ಮತ್ತು ಉತ್ತರ ಪಾರ್ಶ್ವದ ಕಂಬದ ದಕ್ಷಿಣಮುಖದಲ್ಲಿ ಗಣೇಶ ಶಿಲ್ಪಗಳಿವೆ. ಗೂಢಮಂಟಪದ ಉತ್ತರಾಂಗಗಳಲ್ಲಿ ವರಾಹ, ತ್ರಿವಿಕ್ರಮ ಮುಂತಾದ ಚಿಕಣಿ ಶಿಲ್ಪಗಳಿವೆ. ಗೂಢಮಂಟಪದ ದ್ವಾರದ ಒಳ ಮುಖದಲ್ಲಿ, ಗರ್ಭಗೃಹಕ್ಕೆ ಮುಖಮಾಡಿ ಗಜಲಕ್ಷ್ಮಿಯ ಸುಂದರ ಬೃಹತ್ ಶಿಲ್ಪವಿದೆ. ಮುಖಮಂಟಪದ ಕಂಬಗಳ ಹೊರ ಮುಖಗಳಲ್ಲಿ ವಿವಿಧ ಭಂಗಿಗಳಲ್ಲಿ ಮಿಥುನಗಳ ಶಿಲ್ಪಗಳಿವೆ. ಈ ದೇವಾಲಯದ ಅಧಿಷ್ಠಾನ, ಜಂಘಾ ಸರಳವಾಗಿವೆ. ಕಂಬಗಳ ಜೋಡಿಯನ್ನು ದೇವಕೋಷ್ಠ ರಚನೆಗೆ ಬಳಸುವ ಮೂಲಕ ಮೂಲಪ್ರಾಸಾದದ ತ್ರಿರಥ ವಿನ್ಯಾಸವನ್ನು ರೂಪಿಸಲಾಗಿದೆ. ಹಿಂಗೋಡೆಯ ದೇವಕೋಷ್ಠದಲ್ಲಿ ಉಗ್ರನರಸಿಂಹನ ಶಿಲ್ಪವಿದೆ. ಶಿಖರದ ಪೂರ್ವಮುಖದಲ್ಲಿ ನಟರಾಜನ ಉಬ್ಬುಶಿಲ್ಪವಿರುವ ಮುಖಪಟ್ಟಿಯಿದೆ. ಈ ದೇಗುಲವನ್ನು ನಿರ್ಮಿಸಿದ ಸೂತ್ರಧಾರಿ ನರಸೊಬ್ಬ. ಮುಖಮಂಟಪದಲ್ಲಿರುವ ಕಂಬದಲ್ಲಿ ಇವನು ಬರೆದಿರುವ ಶಾಸನದಲ್ಲಿ ಜಂಬೂದ್ವೀಪದಲ್ಲಿ ವಾಸ್ತುಪ್ರಾಸಾದ ನಿರ್ಮಾಣಕಲೆಯಲ್ಲಿ ನರಸೊಬ್ಬನನ್ನು



**ಕಾಶಿ ವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು**

ಮೀರಿಸುವಾತ ಹಿಂದೆ ಆಗಿಲ್ಲ, ಮುಂದೆ ಆಗುವದಿಲ್ಲ ಎಂಬುದಾಗಿ ಹೊಗಳಿದೆ. ಹುಚ್ಚಪ್ಪಯ್ಯ ಗುಡಿಯ ಇನ್ನೊಬ್ಬ ಶಿಲ್ಪಿ ಗನಸೊಬ್ಬ. ಇವರು ಕನ್ನಡ ನೆಲದವರೆಂದು ಅವರ ಹೆಸರುಗಳಿಂದ ಗುರುತಿಸಬಹುದು. ಔತ್ತರೇಯ ಶೈಲಿಯ ರೇಖಾ ಪ್ರಾಸಾದವನ್ನು ರಚಿಸುವ ಇವರ ಪ್ರಯತ್ನ ಶ್ಲಾಘನೀಯ; ಕೆಲವು ದಾಕ್ಷಿಣಾತ್ಯ ಅಂಶಗಳು ತಿಳಿದೋ ತಿಳಿಯದೆಯೋ ಈ ರಚನೆಯಲ್ಲಿ ನುಸುಳಿರುವದು ಅಚ್ಚರಿಯಲ್ಲ. ಪ್ರತಿಮಾಲಕ್ಷಣ, ಲಿಪಿ ಲಕ್ಷಣ, ವಾಸ್ತುವಿವರಗಳ ಹಿನ್ನೆಲೆಯಲ್ಲಿ ಈ ದೇಗುಲ 8ನೆಯ ಶತಮಾನದ ಪೂರ್ವಾರ್ಧದ್ದು.

ಐಹೊಳೆಯ ತಾರಬಸಪ್ಪ ಗುಡಿಯು ರೇಖಾ ಪ್ರಾಸಾದದ ಇನ್ನೊಂದು ಉದಾಹರಣೆ. ಹುಚಪ್ಪಯ್ಯ ಗುಡಿಯಂತೆ ಇದು ಕೂಡ ನಿರಂಧಾರ ಶಿವಾಲಯ. ಗರ್ಭಗೃಹ, ಗೂಢಮಂಟಪ, ಮುಖಚತುಷ್ಕಿ ಇದರ ತಲವಿನ್ಯಾಸದ ಅಂಗಗಳು. ಮೂಲಪ್ರಾಸಾದದ ಅಧಿಷ್ಠಾನದ ಮಡಿಕೆಗಳಲ್ಲಿ ದಾಕ್ಷಿಣಾತ್ಯ ಲಕ್ಷಣಗಳ ಬಳಕೆ, ಜಂಘಾ ಭಾಗದಲ್ಲಿ ಕುಡ್ಯಸ್ತಂಭಗಳಿರುವದು, ಮುಖಚತುಷ್ಕಿಯಲ್ಲಿ ಕಕ್ಷಾಸನ ಇಲ್ಲದಿರುವದು, ಈ ದೇಗುಲದ ಉಲ್ಲೇಖನೀಯ ವಿಶಿಷ್ಟ್ಯಗಳಾ ಗಿವೆ. ಕನ್ನಡ ನೆಲದ ಸೂತ್ರಧಾರಿಯ ಕೈಚಳಕ ಇಲ್ಲಿ ಸ್ಪಷ್ಟವಾಗಿಯೇ ಇದೆ. ದುರದೃಷ್ಟವಶಾತ್ ಸೂತ್ರಧಾರಿಯಾರೆಂದು ತಿಳಿದಿಲ್ಲ. ಇದು ಕೂಡ 8ನೆಯ ಶತಮಾನದ ಪೂರ್ವಾರ್ಧದ ದೇಗುಲ.

ಗೌಡರಗುಡಿ ಐಹೊಳೆಯಲ್ಲಿರುವ ದೇಗುಲಗಳಲ್ಲಿ ವೈಶಿಷ್ಟ್ಯಪೂರ್ಣವಾದುದು. ತುಸು ಆಯತ ವಿನ್ಯಾಸದ ಗರ್ಭಗುಡಿಯಲ್ಲಿ ಮೂಲತಃ ದುರ್ಗಾಭಗವತಿಯ ವಿಗ್ರಹವಿತ್ತು. ದ್ವಾರಬಂಧ ಔತ್ತರೇಯ ಲಕ್ಷಣಗಳಿಂದ ಕೂಡಿದೆ. ಗರ್ಭಗೃಹದ ಸುತ್ತಲೂ ವಿಶಾಲವಾ ಗಿರುವ ತೆರೆದ ಪ್ರದಕ್ಷಿಣಾಪಥವಿದ್ದು, ಅಂಚಿನಗುಂಟ ಕಕ್ಷಾಸನವಿದೆ. ಸುತ್ತಲಿನ ಚಾವಣಿ ಇಳಿಜಾರಾಗಿದೆ.

ಗರ್ಭಗೃಹದ ಮೇಲೆ ಮೂಲತಃ ರೇಖಾ ಶಿಖರವಿದ್ದಿರಬೇಕು. ದುರ್ಗಾಭಗವತಿಗೆ ನೀಡಲಾದ ದಾನವನ್ನು ಉಲ್ಲೇಖಿಸುವ ಇಲ್ಲಿಯ ಜಂತಿಯಲ್ಲಿರುವ ಕನ್ನಡ ಶಾಸನ 8ನೆಯ ಶತಮಾನದ್ದು. ದೇಗುಲವಾದರೂ ಅದೇ ಕಾಲದ್ದು.

ನಾಗರ ರೇಖಾ ಪ್ರಾಸಾದದ ಬಹು ಉತ್ತಮ ಉದಾಹರಣೆಗಳು ಪಟ್ಟದಕಲ್ಲಿನಲ್ಲಿವೆ. ಇಲ್ಲಿ ಈ ಮಾದರಿಯ ಅನೇಕ ಚಿಕ್ಕ ನಿರಂಧಾರ ದೇಗುಲಗಳಿವೆಯಲ್ಲದೆ ಗಳಗನಾಥ ಮತ್ತು ಪಾಪನಾಥ ಎಂದು ಕರೆಯಲಾಗುವ ಎರಡು ಪ್ರಮುಖ ಬೃಹತ್ ಗಾತ್ರದ ಸಾಂಧಾರ ರೇಖಾ ಪ್ರಾಸಾದಗಳಿವೆ. ಇವುಗಳಲ್ಲಿ ಗಳಗನಾಥ ದೇಗುಲ ಶುದ್ಧ ನಾಗರ ರೇಖಾ ಮಾದರಿಯ ಅದ್ಭುತ ನಿರ್ಮಾಣ. ಇದರ ಮಂಟಪ ಭಾಗ ಮತ್ತು ಪ್ರದಕ್ಷಿಣಾಪಥದ ಹೊರಗೋಡೆಯ ಕೆಲವು ಭಾಗಗಳು ಬಿದ್ದು ಹೋಗಿವೆಯಾದರೂ ಉಳಿದ ಭಾಗ ಉತ್ತಮ ಸ್ಥಿತಿಯಲ್ಲಿದೆ. ಗರ್ಭಗೃಹದ ಅಧಿಷ್ಠಾನದಲ್ಲಿರುವ 'ಕುಂಭ' ಮಡಿಕೆ, ರಥ ಭಾಗದ ಅಧಿಷ್ಠಾನದಲ್ಲಿ ಕಾಣುವ ತುಲಾಪೀಠ ವಿನ್ಯಾಸ, ಸರಳ ಅಲಂಕಾರರಹಿತ ಜಂಘಾ, ಶಿಖರದ ಮನಮೋಹಕ ಬಾಗುರೇಖೆ, ಚೌಕ ದಿಂಬಿನಂತೆ ಚಪ್ಪಟೆಯಾಗಿ ಕಾಣುವ ಕರ್ಣಾಮಲಕಗಳು, ಲತಾ ಭಾಗದ ಗವಾಕ್ಷ ಅಲಂಕಾರದ ಕ್ರಮ, ಸ್ಫುಟವಾಗಿ ಸುಂದರವಾಗಿ ಕಾಣುವ ಆಮಲಶಿಲಾ ಮತ್ತು ಕಲಶ, ಘನದ್ವಾರದ ಮಂಟಪದಲ್ಲಿರುವ ಘಟಪಲ್ಲವ ಅಲಂಕೃತ ಚೌಕ ಕಂಬಗಳು, ಸಂಹಾರಮೂರ್ತಿ ಶಿವನ ವಿಗ್ರಹಗಳು, ಗರ್ಭಗೃಹದ ಟಿ–ಆಕಾರದ ದ್ವಾರಬಂಧ ಇವೆಲ್ಲವೂ ನೋಡುಗನ ಮೇಲೆ ಗಂಭೀರ ಪ್ರಭಾವವನ್ನು ಬೀರುವುದಲ್ಲದೇ ಸೂತ್ರಧಾರನು ರೇಖಾ ಪ್ರಾಸಾದದ ಒಳಹೊರ ವಿವರಗಳ ಸ್ಪಷ್ಟ ಪರಿಕಲ್ಪನೆ ಹೊಂದಿರುವುದನ್ನು ಸೂಚಿಸುತ್ತಿವೆ. ಸುಕನಾಸಿ ಈಗ ಬಿದ್ದು ಹೋಗಿದೆ. ಒಟ್ಟಾರೆ ನೋಡಿದಾಗ ಈ ದೇಗುಲ ಆಂಧ್ರಪ್ರದೇಶದ ಮೆಹಬೂಬನಗರ ಜಿಲ್ಲೆಯಲ್ಲಿ ಚಳುಕ್ಯರ ಕಾಲದಲ್ಲಿ ನಿರ್ಮಾಣ ಗೊಂಡ ಆಲಂಪುರದ ರೇಖಾ ಪ್ರಾಸಾದ ಮಾದರಿಯ ದೇವಾಲಯಗಳ ಲಕ್ಷಣಗಳಿಗೆ ತೀರ ಹತ್ತಿರವಾಗಿದೆ. ಆಲಂಪುರದಲ್ಲಿ ಕೆಲಸ ಮಾಡುತ್ತಿದ್ದ ಸ್ಥಪತಿ–ಶಿಲ್ಪಿಗಳೇ ಇದನ್ನು ನಿರ್ಮಿಸಿದ್ದರೆ ಆಶ್ಚರ್ಯವಿಲ್ಲ. ಇದನ್ನು ವಿಜಯಾದಿತ್ಯನ ಆಳ್ವಿಕೆಯ ಉತ್ತರಾರ್ಧಕ್ಕೆ, ಅಂದರೆ ಸು.720–33ರ ಕಾಲಾವಧಿಗೆ ಅನ್ವಯಿಸಬಹುದು.

ಪಟ್ಟದಕಲ್ಲಿನ ಪಾಪನಾಥ ದೇವಾಲಯ ಹಂತ ಹಂತಗಳಲ್ಲಿ ನಿರ್ಮಾಣವಾಗಿರುವ ಸಾಂಧಾರ ರೇಖಾ ಪ್ರಾಸಾದ. ಗರ್ಭಗೃಹ, ಗೂಢಮಂಟಪ, ಇನ್ನೊಂದು ನಂದಿಸಹಿತ ಗೂಢಮಂಟಪ ಮತ್ತು ಮುಖಮಂಟಪ ಇದರ ಮುಖ್ಯ ಭಾಗಗಳು. ಹೊರ ವಿವರಗಳಲ್ಲಿ ಅನೇಕ ಗಮನಾರ್ಹ ಅಂಶಗಳಿವೆ. ಅಧಿಷ್ಠಾನದಲ್ಲಿ ದ್ರಾವಿಡ ಮಾದರಿಯ ಅಧಿಷ್ಠಾನದ ಮಡಿಕೆಗಳಿವೆ. ಜಂಘಾದಲ್ಲಿ ಕುಡ್ಯಸ್ತಂಭಗಳಿವೆ. ಆದಿತಲದ ಮೇಲಂಚಿನುದ್ದಕ್ಕೂ ಕೂಟ–ಶಾಲಗಳ ಹಾರವಿದೆ. ಇವೆಲ್ಲ ದಾಕ್ಷಿಣಾತ್ಯ ವಾಸ್ತು ಲಕ್ಷಣಗಳು. ಆದರೆ ಜಂಘಾದ ಕೋಷ್ಠ ಪಂಜರಗಳ ಉದ್ಗಮಗಳು ಔತ್ತರೇಯ ರೀತಿಯಲ್ಲಿವೆ. ಮೂಲಪ್ರಾಸಾದದ ಮೂರು ಗೋಡೆಗಳಲ್ಲಿ ಘನದ್ವಾರಗಳಿವೆ. ಗರ್ಭಗೃಹದ ಮೇಲಿರುವ ಶಿಖರ ಮಾತ್ರ ರೇಖಾ ನಾಗರ ಪ್ರಕಾರದ್ದಾಗಿದೆ. ಇವೆಲ್ಲ ಔತ್ತರೇಯ ಲಕ್ಷಣಗಳು. ಹೀಗೆ ಈ ದೇವಾಲಯ ಪ್ರಾಥಮಿಕವಾಗಿ ಔತ್ತರೇಯ ಮಾದರಿಯಲ್ಲಿದ್ದರೂ ದಾಕ್ಷಿಣಾತ್ಯ ಅಂಶಗಳನ್ನು ಮೇಳೈಸಿಕೊಂಡಿದೆ. ಆದರೆ ಈ ಮಿಶ್ರಣ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ಗುಡಿಗಳಲ್ಲಿಯ ಮನಮೋಹಕ ಪ್ರಭಾವ ಬೀರುವದಿಲ್ಲ. ಆ ಕಾರಣದಿಂದಲೋ ಏನೋ, ಇಂತಹ (ಔತ್ತರೇಯಕ್ಕೆ ದಾಕ್ಷಿಣಾತ್ಯವನ್ನು ಜೋಡಿಸುವ) ಪ್ರಯತ್ನ ಮುಂದೆ ಕರ್ನಾಟಕದಲ್ಲಿ ಕಾಣುತ್ತಿಲ್ಲ. ರಾಮಾಯಣದ (ಶಾಸನ ಸಹಿತ) ಮತ್ತು ಕಿರಾತಾರ್ಜುನೀಯದ ಕಥಾ ನಿರೂಪಕ ದೃಶ್ಯಗಳು ಜಂಘಾ ಭಾಗವನ್ನು ಅಲಂಕರಿಸಿವೆ. ಇದರ ಸೂತ್ರಧಾರಿಗಳಲ್ಲಿ ಸರ್ವಸಿದ್ಧಿ ಆಚಾರಿಯ ಶಿಷ್ಯ ರೇವಡಿ ಓವಜನು ಪ್ರಮುಖ. ಬಲದೇವ ಮೊದಲಾದವರೂ ಇಲ್ಲಿ ಕೆಲಸ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಇದು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ಈಗಿನ ಸ್ವರೂಪವನ್ನು ಪಡೆಯಿತೆಂದು ಹೇಳಬಹುದು.

ಚಳುಕ್ಯರ ಕಾಲದ ಪಟ್ಟದಕಲ್ಲಿನ ಇತರ ಔತ್ತರೇಯ ರೇಖಾ ಮಾದರಿಯ ದೇವಾಲಯಗಳಲ್ಲಿಯೂ ಕೆಲವು ದಾಕ್ಷಿಣಾತ್ಯ ಅಂಶಗಳು (ಉದಾ: ಅಧಿಷ್ಠಾನದಲ್ಲಿ ತ್ರಿಪಟ್ಟಕುಮುದ, ಜಂಘಾ ಭಾಗದಲ್ಲಿ ಕುಡ್ಯಸ್ತಂಭಗಳು, ಕಪೋತದ ಮೇಲೆ ವ್ಯಾಲವರಿಯ ರಚನೆ ಇತ್ಯಾದಿ) ನುಸುಳಿರುವುದು ಕಾಣುತ್ತದೆ. ಇದನ್ನು ಪ್ರಯೋಗದ ಪರಿಣಾಮವೆಂದು ಕರೆಯಬೇಕೋ ಅಥವಾ ಅವುಗಳನ್ನು ನಿರ್ಮಿಸಿದ ಸ್ಥಪತಿಗಳಿಗಿದ್ದ ಔತ್ತರೇಯ ರೇಖಾ ಪ್ರಾಸಾದ ವಾಸ್ತು ಅಂಗಗಳ ಅಸ್ಪಷ್ಟ ಚಿತ್ರದ ಪರಿಣಾಮವೆಂದು ಹೇಳಬೇಕೋ ತಿಳಿಯದು.

3. ಫಾಂಸನ ಶೈಲಿಯ ದೇವಾಲಯಗಳು: ಮುಂಚೆ ಕದಂಬನಾಗರ ಎಂದು ಸಂಬೋಧಿಸಲಾಗುತ್ತಿದ್ದ ವಾಸ್ತುಮಾದರಿಯನ್ನು ಈಗ ಫಾಂಸನ ಮಾದರಿ ಎಂಬುದಾಗಿ ಗುರುತಿಸಲಾಗುತ್ತಿದೆ. ಈ ಮಾದರಿಯ ದೇವಾಲಯಗಳು ಸಾಮಾನ್ಯವಾಗಿ ಐಹೊಳೆ ಮತ್ತು ಮಹಾಕೂಟದಲ್ಲಿ ಇವೆ. ವಿವರಗಳಲ್ಲಿ ಸರಳವಾಗಿರುವ ಈ ಮಾದರಿಯ ದೇಗುಲ ಬಹುಶಃ ರೇಖಾ ಪ್ರಾಸಾದ ಮಾದರಿಯಿಂದ ಮೂಡಿದಂತಿದೆ; ಅಥವಾ, ರೇಖಾ ನಾಗರ ಶೈಲಿಯ ಪೂರ್ವಭಾವಿ ರೂಪವಾಗಿದ್ದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಗೂಢಮಂಟಪ, ಮುಖಮಂಟಪ ಇದರ ಭಾಗಗಳು. ಎಲ್ಲವೂ ನಿರಂಧಾರ ದೇಗುಲಗಳು. ಊರ್ಧ್ವ ರಚನೆಯಲ್ಲಿ ಪದ್ಮ, ಕಂಠ, ಕಪೋತ ಮಡಿಕೆಗಳುಳ್ಳ ಸರಳ ಅಧಿಷ್ಠಾನವಿರುತ್ತದೆ. ಜಂಘಾ ಭಾಗಕ್ಕೆ ಅಲಂಕಾರವಿರುವದಿಲ್ಲ. ಶಿಖರ ಮೇಲಕ್ಕೆ ಹೋದಂತೆ ಕ್ರಮೇಣ ಕಿರಿದಾಗುತ್ತ ಸಾಗುವ, ಒಂದರ ಮೇಲೊಂದರಂತೆ ರಚಿತವಾಗಿರುವ ಕಪೋತ ಮತ್ತು ಕಿರಿದಾದ ಜಂಘಾಗಳ ಸಾಲಿನಿಂದಾದ ಭೂಮಿಗಳನ್ನು ಹೊಂದಿರುತ್ತದೆ. ಶಿಖರದ ಈ ಜಂಘಾಗಳಲ್ಲಿ ಸಾಲಾಗಿ ಜೋಡು ಕಂಬಗಳ ವಿನ್ಯಾಸ ಗೋಚರಿಸುತ್ತದೆ. ಶಿಖರಾಂತ್ಯ ಸಮತಟ್ಟಾಗಿದ್ದು ಅದರ ಮೇಲೆ ವೃತ್ತಾಕಾರದ ಗಲ, ಆಮಲಶಿಲಾ, ಕಲಶಗಳು ಒಂದರ ಮೇಲೊಂದರಂತೆ ಇರಿಸಲ್ಪಟ್ಟಿರುತ್ತವೆ. ದೇವಾಲಯ ಮುಖ ಮಾಡಿರುವ ದಿಕ್ಕಿಗೆ ಶಿಖರಕ್ಕೆ ಗವಾಕ್ಷ ಅಲಂಕಾರದಲ್ಲಿ ದೇವತೆಯ ಶಿಲ್ಪವುಳ್ಳ ಮುಖಪಟ್ಟಿ ಇರುತ್ತದೆ.

ಐಹೊಳೆಯ ಮಲ್ಲಿಕಾರ್ಜುನ ಗುಡಿ 7ನೆಯ ಶತಮಾನದ ಉತ್ತರಾರ್ಧಕ್ಕೆ ಅನ್ವಯಿಸಬಹುದಾದ ಗುಡಿ. ಇದು ಫಾಂಸನ ಮಾದರಿಯಲ್ಲಿದೆ. ಮೇಲೆ ಹೇಳಿದ ಲಕ್ಷಣಗಳೆಲ್ಲ ಈ ಗುಡಿಯಲ್ಲಿ ಕಾಣುತ್ತವೆ. ಇನ್ನೊಂದು ಫಾಂಸನಾ ಮಾದರಿಯ ಗಮನೀಯ ಗುಡಿಯೆಂದರೆ ಐಹೊಳೆಯ ಗಳಗನಾಥ ದೇವಾಲಯ. ಇದರ ಶಿಖರದ ಕೊನೆಯ ಭೂಮಿಯ ಕರ್ಣಗಳಲ್ಲಿ ಚಿಕ್ಕ ಆಮಲಕಗಳನ್ನಿರಿಸಲಾಗಿದೆ. ಈ ಲಕ್ಷಣ ಫಾಂಸನ ಶೈಲಿಯು ರೇಖಾ ಪ್ರಾಸಾದ ಶೈಲಿಗೆ ಹೊಂದಿರುವ ಸಂಬಂಧದ ಸೂಚಕವಾಗಿದೆ. ಈ ದೇವಾಲಯದ ವಿತಾನದಲ್ಲಿದ್ದ ಗರುಡಾರೂಢ ವಿಷ್ಣುವಿನ ಶಿಲ್ಪ ಔತ್ತರೇಯ ಪ್ರತಿಮಾ ಲಕ್ಷಣ ಮತ್ತು ಶಿಲ್ಪಶೈಲಿಯಲ್ಲಿರುವುದು ಉಲ್ಲೇಖನೀಯ.

ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯಲ್ಲಿ ಪರಿಕಲ್ಪಿಸಲಾದ ದ್ರಾವಿಡ ವಿಮಾನದಂತೆ ಫಾಂಸನ ಶೈಲಿಯೂ ತನ್ನ ಅಸ್ತಿತ್ವವನ್ನು ಕರ್ನಾಟಕದಲ್ಲಿ ಉಳಿಸಿಕೊಂಡಿತು. ಆದರೆ ಕೆಲವು ಪ್ರಾದೇಶಿಕ ಬದಲಾವಣೆಗಳು ಪರಿಚಯಿಸಲ್ಪಟ್ಟವು. ಉದಾಹರಣೆಗೆ ಭೂಮಿಗಳ ಅಂತ್ಯದಲ್ಲಿ ಆಮಲಶಿಲಾದ ಬದಲಿಗೆ ಘಂಟಾಕಾರದ ಚೌಕ ಭಾಗವನ್ನು ಅಳವಡಿಸಲಾಯಿತು. ಚಾಳುಕ್ಯ ಮತ್ತು ಹೊಯ್ಸಳರ ಕಾಲದ ಅನೇಕಾನೇಕ ದೇವಾಲಯಗಳು ಈ ಪರಿವರ್ತಿತ ಫಾಂಸನ ಶೈಲಿಯಲ್ಲಿ ರಚಿತವಾಗಿವೆ.

4. ಮಂಟಪ ಗುಡಿಗಳು: ಮಂಟಪ ಗುಡಿಗಳು ಐಹೊಳೆಯಲ್ಲಿ ಮಾತ್ರ ಕಾಣದೊರೆಯುತ್ತವೆ. ಕಂಬಗಳುಳ್ಳ ತುಸು ವಿಶಾಲ ರಚನೆಗಳಿವು. ಮಂಟಪ ಚೌಕ ಇಲ್ಲವೇ ಆಯತಾಕಾರದಲ್ಲಿರಬಹುದು. ಗರ್ಭಗೃಹ ಹಿಂಗೋಡೆಯ ಮಧ್ಯಭಾಗದಿಂದ ಮಂಟಪದೊಳಕ್ಕೆ ಚಾಚಿರುತ್ತದೆ. ಕೆಲವು ಉದಾಹರಣೆಗಳಲ್ಲಿ ಮುಖಮಂಟಪ ಇರುವುದುಂಟು. ಇವುಗಳಿಗೆ ಶಿಖರವಿರುವದಿಲ್ಲ. ಮಧ್ಯದ ಚಾವಣಿ ಸಮತಟ್ಟಾಗಿದ್ದು, ಸುತ್ತಲೂ ಇಳಿಜಾರಾಗಿರುತ್ತದೆ.

ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು

ಐಹೊಳೆಯ ಲಾಡಖಾನ ಗುಡಿ ಮಂಟಪ ಮಾದರಿಯ ಗುಡಿಗಳಲ್ಲಿ ಅತಿ ದೊಡ್ಡದು. ಇದು ಕಂಬಗಳುಳ್ಳ ವಿಶಾಲವಾದ ಚೌಕ ಮಂಟಪ ಸುತ್ತ ಗೋಡೆ ಮತ್ತು ಜಾಲವಾತಾಯನಗಳಿವೆ. ಪೂರ್ವ ಪ್ರವೇಶದಲ್ಲಿ ವಿಶಾಲ ಮುಖಮಂಟಪವೂ ಇದೆ. ಆಯತಾಕಾರದ ಗರ್ಭಗೃಹ ಚಿಕ್ಕದಾಗಿದ್ದು ಹಿಂಗೋಡೆಯ ಮಧ್ಯದಿಂದ ಮಂಟಪದೊಳಕ್ಕೆ ಚಾಚಿಕೊಂಡಿದೆ. ಈಗ ಲಿಂಗವಿದೆಯಾದರೂ ಮೂಲತಃ ಸೂರ್ಯ ಇಲ್ಲವೇ ಬೇರೆ ದೇವತೆಯ ವಿಗ್ರಹ ಇದ್ದಿರಬಹುದು. ಮಂಟಪದ ಚಾವಣಿ ಮಧ್ಯಭಾಗದಲ್ಲಿ ಸಮತಟ್ಟಾಗಿದ್ದು, ಸುತ್ತ ನಾಲ್ಕೂ ಪಾರ್ಶ್ವಗಳಲ್ಲಿ ಎರಡು ಹಂತಗಳಲ್ಲಿ ಇಳಿಜಾರಾಗಿದೆ. ಮಂಟಪದ ಮಧ್ಯದ ನಾಲ್ಕು ಕಂಬಗಳ ನಡುವೆ ದೊಡ್ಡ ನಂದಿಯನ್ನಿರಿಸಲಾಗಿದೆ. ಈ ಕಂಬಗಳಿರುವ ಸ್ಥಾನದಲ್ಲಿ ಮೇಲ್ಗಡೆ ಒಂದು ಚೌಕ ಗರ್ಭಗೃಹವಿದೆ. ಬಹುಶಃ ಇದರಲ್ಲಿ ಸೂರ್ಯವಿಗ್ರಹವಿತ್ತು. ಇದರ ಗೋಡೆಯಲ್ಲಿರುವ ಕೋಷ್ಠಗಳು ವಿಷ್ಣು, ಸೂರ್ಯ ಮತ್ತು ಅರ್ಧನಾರೀಶ್ವರ ಉಬ್ಬುಶಿಲ್ಪಗಳನ್ನೊಳಗೊಂಡಿವೆ. ಇದರ ಚಾವಣಿ ಸಮತಟ್ಟಾಗಿದೆ. ಮೇಲಿನ ಗರ್ಭಗೃಹವನ್ನು ತಲುಪಲು ಮುಖ ಮಂಟಪದಲ್ಲಿ ಕಲ್ಲಿನ ಏಣಿಯಿದೆ. ಮುಖಮಂಟಪದ ಅಂಚಿನಗುಂಟ ಕಕ್ಷಾಸನವಿದೆ. ಇದರ ಕಂಬಗಳ ಹೊರಮುಖಗಳು ಗಂಗಾ, ಯಮುನಾ, ಮಿಥುನ ಮುಂತಾದ ಸುಂದರ ಶಿಲ್ಪಗಳಿಂದ ಅಲಂಕೃತವಾಗಿವೆ. ಒಂದು ಕಂಬದ ಮುಖದಲ್ಲಿ ಚಲುಕ್ಯ ರಾಜರ ವರಾಹ ಲಾಂಛನವಿದೆ. ಚಾವಣಿಯನ್ನು ನಿರ್ಮಿಸಲು ಜೋಡಿಸಲಾಗಿರುವ ಕಲ್ಲಿನ ಹಲಗೆಗಳು ಸೇರುವಲ್ಲಿ ನೀರು ಕಟ್ಟಡದೊಳಕ್ಕೆ ಒಸರದಂತೆ ಕೊರಡಿನಂತೆ ಕಾಣುವ ಕಲ್ಲಿನ ದಿಂಡುಗಳನ್ನಿರಿಸಲಾಗಿದೆ. ಒಟ್ಟಾರೆ

ನೋಡಿದಾಗ ಈ ಗುಡಿಯು ಪ್ರಾಚೀನ ಸಾಹಿತ್ಯದಲ್ಲಿ ಉಲ್ಲಿಖಿತ ಆದಿಮ ಸಂತಾಗಾರವನ್ನು (ಹಳ್ಳಿಯ ಚಾವಡಿ) ನೆನಪಿಸುತ್ತದೆ. ಈ ಕಾರಣದಿಂದ ಕಸೆನ್ಸ್, ಪರ್ಸಿ ಬ್ರೌನ್ ಮೊದಲಾದವರು ಇದೊಂದು ಬಹು ಪ್ರಾಚೀನ ಕಟ್ಟಡವೆಂದೂ 450ರ ಸುಮಾರಿನ ರಚನೆಯಿರಬೇಕೆಂದೂ ಮಂಡಿಸಿದ್ದರು. ಆದರೆ ಕಂಬ, ಶಿಲ್ಪಶೈಲಿ ಮುಂತಾದ ವಿವರಗಳನ್ನು ಪರಿಗಣಿಸಿದಾಗ ಇದು ಸು.7ನೆಯ ಶತಮಾನದ ಅಂತ್ಯ ಇಲ್ಲವೆ 8ನೆಯ ಶತಮಾನದ ಪ್ರಾರಂಭದ ಕಟ್ಟಡವೆಂಬುದು ಸ್ಪಷ್ಟವಿದೆ. ಈಚಿನ ವಿದ್ವಾಂಸರೆಲ್ಲ ಈ ಅಭಿಪ್ರಾಯವನ್ನೇ ಬೆಂಬಲಿಸಿದ್ದಾರೆ. ಅದರ ಪ್ರಾಚೀನ ಸ್ವರೂಪ ಬಹುಶಃ ಅದರ ನಿರ್ಮಾಣದ ಉದ್ದೇಶದಲ್ಲಿ ಅಡಗಿದೆ. ಮುಖ್ಯವಾಗಿ ಕಂಬ ಮತ್ತು ಬೋದಿಗೆಗಳು ಬಾದಾಮಿಯಲ್ಲಿ ವಿಜಯಾದಿತ್ಯ 699ರಲ್ಲಿ ನಿರ್ಮಿಸಿದ ಜಂಬುಲಿಂಗ ಗುಡಿಯಲ್ಲಿರುವಂತೆಯೇ ಇವೆ. ಲಾಡಖಾನ ಗುಡಿಯ ಗೋಡೆಯಲ್ಲಿರುವ 8ನೆಯ ಶತಮಾನದ ಶಾಸನವೊಂದರಲ್ಲಿ ಅನ್ನಪ್ರಾಶನ, ಉಪನಯನ, ಮದುವೆ ಮುಂತಾದ ಸಂಸ್ಕಾರಗಳಿಗೆ ನಿರ್ದಿಷ್ಟ ಹಣವನ್ನು ನಿಗದಿಪಡಿಸಲಾಗಿದ್ದು, ಅಂತಹ ಸಾಮಾಜಿಕ-ಧಾರ್ಮಿಕ ಕಾರ್ಯಗಳು ಇಲ್ಲಿ ನಡೆಯುತ್ತಿದ್ದ ವೆಂಬುದನ್ನು ಸೂಚಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಲು ಅನುಕೂಲವಾಗುವಂತೆ ಲಾಡಖಾನ ದೇವಾಲಯವನ್ನು ವಿಶಾಲ ಮುಖಮಂಟಪ ಸಹಿತವಾಗಿ ಮಂಟಪ ರೀತಿಯಲ್ಲಿ ಕಟ್ಟಿರುವದು ಸಾಧ್ಯ.



ಸ್ವರ್ಗ ಬ್ರಹ್ಮ ದೇವಾಲಯ, ಆಲಂಪುರ

ಮಂಟಪ ಮಾದರಿಯ ಇನ್ನಿತರ ಕೆಲವು ಉದಾಹರಣೆಗಳು ಕೊಂತಿಗುಡಿ ಗುಂಪಿನಲ್ಲಿವೆ. ಇವುಗಳಲ್ಲಿ ವಾಯವ್ಯದಲ್ಲಿರುವ ಗುಡಿಯನ್ನು ಪ್ರಾಚೀನವಾದುದೆಂದು ಗುಪ್ತೆ ಮುಂತಾದ ಕೆಲವು ವಿದ್ವಾಂಸರು ಮಂಡಿಸಿದ್ದರು. ಆದರೆ ಇದು ಸ್ಪಷ್ಟವಾಗಿ ರಾಷ್ಟ್ರಕೂಟರ ಕಾಲದ್ದಾಗಿದೆ. ಈ ಗುಂಪಿನಲ್ಲಿ ನೈರುತ್ಯಕ್ಕಿರುವ ಗುಡಿ ಚಳುಕ್ಯರ ಅಂತ್ಯಕಾಲದ್ದು. ಪೂರ್ವಾಭಿಮುಖ ವಾಗಿರುವ ಈ ಗುಡಿಗೆ ದಕ್ಷಿಣೋತ್ತರವಾಗಿ ಚಾಚಿರುವ ಆಯತಾಕಾರದ ವಿಶಾಲ ಮಂಟಪವಿದೆ. ಎರಡು ಸಾಲು ಕಂಬಗಳು ಮಧ್ಯದ ಸಮತಟ್ಟಾದ ಛತ್ತಿಗೆ ಆಧಾರವೊದಗಿಸಿವೆ. ಹಿಂದಿನ ಗೋಡೆ ಮತ್ತು ಮುಂದಿನ ಕಂಬಗಳ ಸಾಲಿನ ಆಧಾರದ ಮೇಲೆ ಹಿಂದುಗಡೆ ಮುಂದುಗಡೆ ಛಾವಣಿಯನ್ನು ಇಳಿಜಾರಾಗಿ ರಚಿಸಲಾಗಿದೆ. ಮುಂಭಾಗ ತೆರೆದುಕೊಂಡಿದೆ. ಹಿಂಗೋಡೆಯ ಮಧ್ಯದಿಂದ ಚಿಕ್ಕ ಆಯತಾಕಾರದ ಗರ್ಭಗೃಹ ಮಂಟಪದೊಳಕ್ಕೆ ಚಾಚಿಕೊಂಡಿದೆ. ಸಮತಟ್ಟಾದ ಛತ್ತಿನಲ್ಲಿ ಬ್ರಹ್ಮ, ಶಿವ ಮತ್ತು ಅನಂತಶಯನ ವಿಷ್ಣುವಿನ ಸುಂದರ ಶಿಲ್ಪಗಳಿವೆ. ಮುಂದುಗಡೆಯ ಕಂಬಗಳ ಹೊರಮೈ ಶಿಲ್ಪಲಕ್ಷಣಗಳೂ ಒಳಗೊಂಡಂತೆ ಈ ದೇಗುಲದ ವಿವರಗಳು ಸು. 8ನೆಯ ಶತಮಾನದ್ದಾಗಿವೆ. ಇದಾದರೂ ವಿಶಿಷ್ಟ ಉದ್ದೇಶದಿಂದಾಗಿ (ಬಹುಶಃ ಶಾಲೆಯಂತೆ ವರ್ತಿಸಲು) ಅಪರೂಪದ ವಾಸ್ತು ಲಕ್ಷಣವನ್ನು ಪಡೆದಿದೆ.

5. ಚಾಪಾಕಾರ ವಿನ್ಯಾಸದ ಗಜಪೃಷ್ಠ ದೇವಾಲಯಗಳು: ತಲವಿನ್ಯಾಸದಲ್ಲಿ ಚಾಪಾಕಾರ ವಾಗಿರುವ (ಅಂದರೆ ಬಿಲ್ಲನ್ನು ಹೋಲುವ, ಇಂಗ್ಲಿಷ್ ಯು-ಆಕಾರದ) ಚಳುಕ್ಯರ ಕಾಲದ ಗುಡಿಗಳು ಐಹೊಳೆ ಮತ್ತು ಚಿಕ್ಕ ಮಹಾಕೂಟದಲ್ಲಿವೆ. ಆಯತಾಕಾರಕ್ಕೆ ಹಿಂಭಾಗದಲ್ಲಿ ಅರ್ಧವೃತ್ತವನ್ನು ಸೇರಿಸಿದಾಗ ಈ ವಿನ್ಯಾಸ ರೂಪುಗೊಳ್ಳುತ್ತದೆ. ಹೊರ ನೋಟದಲ್ಲಿ ಈ ವಿನ್ಯಾಸದ ದೇಗುಲಗಳು ಹಿಂಭಾಗವಾಗಿ ನಿಂತ ಆನೆಯನ್ನು ಹೋಲುತ್ತವೆ ಯಾದ್ದರಿಂದ ಗಜಪೃಷ್ಠ ಎಂಬ ಹೆಸರೂ ಅದಕ್ಕೆ ಅನ್ವಯವಾಗುತ್ತದೆ. ಹೆಚ್ಚು ಸುರಕ್ಷಿತವಾಗಿ ಉಳಿದುಬಂದಿರುವ ಚಾಪಾಕಾರ ವಿನ್ಯಾಸದ ದೇಗುಲವೆಂದರೆ ಐಹೊಳೆಯ ದುರ್ಗಾ ಗುಡಿ. ಇದರ ಪ್ರತೋಲಿ ಯಲ್ಲಿರುವ ಶಾಸನ ಇಮ್ಮಡಿ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ದೇವಾಲಯ ಆದಿತ್ಯಭಟನಿಗೆ (ಸೂರ್ಯ ದೇವತೆ) ಮುಡುಪಾಗಿತ್ತೆಂದೂ ಇದರ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದವನು ಕೊಮರಸಿಂಗನೆಂದೂ ತಿಳಿಸುತ್ತದೆ. ಆದುದರಿಂದ ಇದು ಮೂಲತಃ ಸೂರ್ಯನ ಗುಡಿ. ಇದರಲ್ಲಿ ಹಲವು ವೈಶಿಷ್ಟ್ಯಗಳಿವೆ. ಒಳಗಡೆ ಚಾಪಾಕಾರದ ಗೂಢಮಂಟಪ ದಲ್ಲಿರಿಸಿರುವ ಅರ್ಧವೃತ್ತಾಕೃತಿಯ ಸಾಂಧಾರ ಗರ್ಭಗೃಹ, ಗೂಢಮಂಟಪದ ಮುಂದುಗಡೆ ಕಕ್ಷಾಸನಸಹಿತ ಮುಖಮಂಟಪ. ಈ ಇಡಿ ಸಮೂಹ ಎತ್ತರ, ವಿಶಾಲವಾದ ಇದೇ ವಿನ್ಯಾಸದ ಮಂಟಪದೊಳಗೆ ಇರಿಸಲ್ಪಟ್ಟಂತಿದೆ. ಮುಖ ಮಂಟಪದ ಮಟ್ಟಕ್ಕೇರಲು ಎರಡೂ ಪಾರ್ಶ್ವಗ ಳಿಂದ ಮೆಟ್ಟಿಲುಗಳಿರುವ ದ್ವಿರದ ಸೋಪಾನ ವಿದೆ. ಗೂಢಮಂಟಪದ ಮಧ್ಯ ಛಾವಣಿ ಸಮತಟ್ಟಾಗಿದೆ. ಇದರ ಸುತ್ತಲೂ ಇಳಿಜಾರಾದ ಛಾವಣಿ ಇದೆ. ಗರ್ಭಗೃಹದ ಮೇಲ್ಗಡೆ ತುಸು ಜೀರ್ಣವಾಗಿರುವ ರೇಖಾ ಶಿಖರವಿದೆ. ವಾಸ್ತುಗ್ರಂಥಗಳ ಪ್ರಕಾರ ಚಾಪಾಕಾರದ ಗುಡಿಗಳಿಗೆ ಇದೇ ಆಕಾರದ ಇಲ್ಲವೆ ವೃತ್ತಾಕಾರದ ಶಿಖರವಿರಬೇಕು. ಇಲ್ಲಿ ರೇಖಾ ಶಿಖರವನ್ನು ಮಾಡಿರುವದು ಪ್ರಯೋಗ ವೆಂದು ಭಾವಿಸ ಬಹುದು. ವಾಸ್ತು ವೈಶಿಷ್ಟ್ಯದಿಂದೊಡಗೂಡಿರುವ ಈ ದೇವಾಲಯದಲ್ಲಿ ಹಲವಾರು ಮನಮೋಹಕ ಶಿಲ್ಪಗಳಿವೆ. ದೇವಕೋಷ್ಠಗಳಲ್ಲಿ ಕೆಲವು ದಾಕ್ಷಿಣಾತ್ಯ ಕಂಬ, ಉದ್ಗಮಗಳನ್ನು ನಿರೂಪಿಸಿವೆಯಾದರೆ ಇನ್ನು ಕೆಲವು ಔತ್ತರೇಯ ಸ್ವರೂಪದ್ದಾಗಿವೆ. ಶಿಲ್ಪಗಳಲ್ಲಿ ಕೆಲವು ಗುಪ್ತಾನಂತರದ ಮಾಲವ ಶೈಲಿಯನ್ನು ಇನ್ನು ಕೆಲವು ಉತ್ತರ ದಖ್ಖನಿನ ಶೈಲಿಯನ್ನು ಪ್ರತಿನಿಧಿಸಿವೆ. ಜಿನಾಲಯನೆಂಬ ಕನ್ನಡ ಶಿಲ್ಪಿ, ಸುರೇಂದ್ರಪಾದನೆಂಬ ಬಹುಶಃ ಉತ್ತರ ದಖ್ಖನಿನ ಪ್ರದೇಶದ ಶಿಲ್ಪಿ ತಮ್ಮ ಹೆಸರುಗಳನ್ನು ಬರೆದಿದ್ದಾರೆ. ರೇಖಾ ಶಿಖರ ಅಷ್ಟಾಗಿ ಹೊಂದುತ್ತಿಲ್ಲವಾದರೂ ದುರ್ಗಾ ಗುಡಿ ಇದರ ಆಕಾರ, ಶಿಲ್ಪಸಂಪತ್ತಿನಿಂದಾಗಿ ಐಹೊಳೆಯ ಚಳುಕ್ಯ ದೇವಾಲಯಗಳಲ್ಲಿಯೇ ಅತ್ಯಾಕರ್ಷಕ ವಾಗಿದೆ. ಚಾಪಾಕಾರ ವಿನ್ಯಾಸದಿಂದಾಗಿ ಕೆಲವರು ಇದು ಮೂಲತಃ ಬೌದ್ಧ ಚೈತ್ಯಾಲಯ ವಾಗಿದ್ದಿರಬೇಕೆಂದು ಸೂಚಿಸಿದ್ದಾರೆ. ಆದರೆ ಚಾಪಾಕಾರ ವಿನ್ಯಾಸವು ಹಲವು ವಾಸ್ತು ವಿನ್ಯಾಸಗಳಲ್ಲಿ ಒಂದಾಗಿದ್ದು ಬೌದ್ಧ, ಜೈನ, ಹಿಂದು ದೇವಾಲಯಗಳಿಗೆಲ್ಲ ಪ್ರಾಚೀನ ಕಾಲದಿಂದಲೇ ಬಳಕೆಯಾಗಿದೆ. ಆದುದರಿಂದ ಇದು ಮೂಲದಲ್ಲಿ ಬೌದ್ಧ ಚೈತ್ಯಾಲಯವೆಂಬ ಅಭಿಪ್ರಾಯವನ್ನು ಒಪ್ಪಲಾಗದು.

ಐಹೊಳೆಯ ಚಿಕ್ಕಿಗುಡಿಯ ಪರಿಸರದಲ್ಲಿ ಜೀರ್ಣವಾಗಿರುವ ಚಾಪಾಕಾರದ ಶಿವ ದೇವಾಲಯದ ಅವಶೇಷಗಳಿವೆ. ದುರ್ಗಾ ಗುಡಿಯ ರಚನೆಯನ್ನು ಇದಾದರೂ ತಕ್ಕ ಮಟ್ಟಿಗೆ ಹೋಲುತ್ತಿತ್ತು. ಈಗ ತಲವಿನ್ಯಾಸ, ಗರ್ಭಗೃಹದಲ್ಲಿರುವ ವೃತ್ತಾಕಾರದ ಪೀಠಸಹಿತ ಲಿಂಗ ಮತ್ತು ಮುಂದುಗಡೆ ಒಂದು ಜೋಡು ಅರೆಗಂಬಗಳು ಮಾತ್ರ ಉಳಿದಿವೆ. ಇದರಲ್ಲೂ ಔತ್ತರೇಯ ಲಕ್ಷಣಗಳು ಹೆಚ್ಚಾಗಿದ್ದುದರ ಸೂಚನೆಗಳಿವೆ. ಇನ್ನೊಂದು ಗಜಪೃಷ್ಠ ದೇಗುಲವನ್ನು ಚಿಕ್ಕ ಮಹಾಕೂಟದಲ್ಲಿ ಕಾಣಬಹುದು.

ತಲವಿನ್ಯಾಸ ದೃಷ್ಟಿಯಿಂದ ಚಳುಕ್ಯರ ದೇಗುಲಗಳ ಬೆಳೆವಣಿಗೆಯಲ್ಲಿ ಕೆಲವು ಬದಲಾವಣೆ ಗಳನ್ನು ಗಮನಿಸಬಹುದು. ತೀರ ಸರಳ ದೇವಾಲಯಗಳಲ್ಲಿ-ಉದಾಹರಣೆಗೆ ಮಹಾಕೂಟದ ಬಾಣಂತಿಗುಡಿಯಲ್ಲಿ-ಗರ್ಭಗೃಹ ಮತ್ತು ಮುಖಮಂಟಪ ಮಾತ್ರ ಇವೆ. ತುಸು ದೊಡ್ಡ ದೇಗುಲದಲ್ಲಿ ಗರ್ಭಗೃಹ, ಗೂಢಮಂಟಪ ಮತ್ತು ಮುಖಮಂಟಪ ಇವೆ. ಸಾಂಧಾರ ದೇಗುಲಗಳಲ್ಲಿ ಮಂಟಪವನ್ನು ಆಯತಾಕಾರದಲ್ಲಿ ವಿಶಾಲವಾಗಿ ರಚಿಸಿ, ಗರ್ಭಗೃಹವನ್ನು ಅದರೊಳಗೆ ಹಿಂಭಾಗದಲ್ಲಿ ಇರಿಸಿದೆ. ಬಹುದೊಡ್ಡ ದೇಗುಲಗಳಲ್ಲಿ ಮಂಟಪಕ್ಕೆ ಪಾರ್ಶ್ವಗಳಿಂದ ಪ್ರವೇಶವಿರಿಸಲಾಗಿದೆ. ವಿಜಯಾದಿತ್ಯನಿಂದ 699ರಲ್ಲಿ ರಚಿತವಾದ ಬಾದಾಮಿಯ ಜಂಬುಲಿಂಗ ಗುಡಿ ಬ್ರಹ್ಮ, ಮಹೇಶ್ವರ ಮತ್ತು ವಿಷ್ಣು ದೇವತೆಗಳಿಗೆ ಮುಡುಪಾಗಿರುವುದು. ಇದಕ್ಕೆ ತ್ರಿಕೂಟ ಪ್ರಕಾರದ ತಲವಿನ್ಯಾಸವಿರುವದು ವೈಶಿಷ್ಟ್ಯ. ವಿಶಾಲ ಮುಖಮಂಟಪ, ವಿಶಾಲ ಗೂಢಮಂಟಪ ಮತ್ತು ಇದರ ಮೂರು ಪಾರ್ಶ್ವಗಳಲ್ಲಿ ಒಂದೊಂದರಂತೆ ಮೂರು ಗರ್ಭಗೃಹಗಳು ಇದರ ವಿನ್ಯಾಸದ ಭಾಗಗಳು. ದುರದೃಷ್ಟವಶಾತ್ ಮೂಲ ಶಿಖರಗಳು ನಶಿಸಿವೆ. ಒಂದು ಗರ್ಭಗೃಹದ ಮೇಲಿರುವ ಇಟ್ಟಿಗೆ ಮತ್ತು ಗಾರೆಯ ಶಿಖರ ವಿಜಯನಗರ ಕಾಲದ್ದು. ಗೂಢಮಂಟಪದ ಛತ್ತಿನಲ್ಲಿರುವ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಶಿಲ್ಪಗಳು ಸುಂದರವಾಗಿವೆ. ಕರ್ನಾಟಕದ ಮೊದಲ ತ್ರಿಕೂಟ ದೇವಾಲಯವೆಂಬ ಹೆಗ್ಗಳಿಕೆ ಇದಕ್ಕಿದೆ.

ಆಂಧ್ರ ಪ್ರದೇಶದಲ್ಲಿ ಬಾದಾಮಿ ಚಳುಕ್ಯರ ಕಾಲದ ಕಟ್ಟಡ ದೇಗುಲಗಳು: ಮೊದಲನೆಯ ಕೀರ್ತಿವರ್ಮನ ಕಾಲದಿಂದಲೇ (566-91) ತುಂಗಭದ್ರ-ಕೃಷ್ಣ ಹರಿದಿರುವ ಆಂಧ್ರ ಪ್ರದೇಶದ ಕರ್ನೂಲು-ಮೆಹಬೂಬ್‌ನಗರ ಜಿಲ್ಲಾ ಪ್ರದೇಶಗಳು ಚಳುಕ್ಯರ ನೇರ ಹಿಡಿತಕ್ಕೆ ಬಂದಿದ್ದವು. ಇದನ್ನು ಚಾಳುಕ್ಯ ವಿಷಯ ಎಂದೇ ಕರೆಯಲಾಗುತ್ತಿತ್ತು. 7ನೆಯ ಶತಮಾನದಿಂದ ಇಲ್ಲಿ ಶಿಲಾದೇಗುಲಗಳು ನಿರ್ಮಾಣವಾಗತೊಡಗಿದವು. ಆಲಂಪುರ, ಕೂಡವೇಲಿ ಸಂಗಮೇಶ್ವರ, ಮಹಾನಂದಿ, ಸತ್ಯವೋಲು ಮುಂತಾದವು ಪಾಶುಪತ ಶೈವ ಧರ್ಮದ ಗಾಢ ಪ್ರಭಾವವಿದ್ದ ಸ್ಥಾನಗಳಾಗಿದ್ದವು. ಈ ಸ್ಥಳಗಳಲ್ಲಿ ಚಳುಕ್ಯರ ನೇರ ಪ್ರೋತ್ಸಾಹದೊಂದಿಗೆ ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ಶೈವ ದೇವಾಲಯಗಳ ನಿರ್ಮಾಣ ಆಯಿತು.

ದ್ರಾವಿಡ ಸಂಪ್ರದಾಯದ ದೇಗುಲಗಳು: ಈ ಪ್ರದೇಶ ನಾಗರ ಪರಂಪರೆಯಾಗಿದ್ದರೂ ದ್ರಾವಿಡ ವಾಸ್ತು ಲಕ್ಷಣವುಳ್ಳ ಕೆಲವು ಗಮನೀಯ ದೇವಾಲಯಗಳು ಇಲ್ಲಿವೆ. ಆಲಂಪುರದ ನವಬ್ರಹ್ಮೇಶ್ವರ ದೇಗುಲಗಳ ಗುಂಪಿನಲ್ಲಿ ತಾರಕಬ್ರಹ್ಮ ದೇಗುಲ ಈ ದೃಷ್ಟಿಯಿಂದ ಗಮನಾರ್ಹ.

ಗರ್ಭಗೃಹದ ಮೇಲೆ ಶಿಥಿಲವಾದ ದ್ವಿತಲವಿಮಾನವಿದೆ. ಮರಳು ಶಿಲೆಯಿಂದ ಕಟ್ಟಲಾಗಿರುವ ಈ ಗುಡಿಗೆ ಚೌಕ ಗರ್ಭಗೃಹ, ಅಂತರಾಳ ಸಹಿತ ಮುಖಮಂಟಪ ಇವೆ. ಈ ದೇಗುಲವನ್ನು ಇದರ ಲಕ್ಷಣಗಳ ದೃಷ್ಟಿಯಿಂದ ಒಂದನೆಯ ವಿಕ್ರಮಾದಿತ್ಯನ ಆಡಳಿತಾವಧಿಗೆ ಅನ್ವಯಿಸಲಾಗಿದೆ.

**ನಾಗರ ಸಂಪ್ರದಾಯದ ಲತಿನ ದೇಗುಲಗಳು:** ಚಳುಕ್ಯ ಆಂಧ್ರದಲ್ಲಿ ನಾಗರ ಸಂಪ್ರದಾಯದ ದೇಗುಲಗಳ ಬೆಳವಣಿಗೆಗೆ ಅವಿಸ್ಮರಣೀಯ ಕೊಡುಗೆಯಿತ್ತಿದ್ದಾರೆ. ಆಲಂಪುರ, ಕೂಡವೇಲಿ, ಕಡಮಾರ ಕಾಳವ, ಪಾಣ್ಯಂ, ಮಹಾನಂದಿ, ಸತ್ಯವೋಲು (ಮೆಹಬೂಬ ನಗರ, ಕರ್ನೂಲು ಮತ್ತು ಪ್ರಕಾಶಮ್ ಜಿಲ್ಲೆಗಳಲ್ಲಿವೆ) ಮುಂತಾದೆಡೆ ಇರುವ ಈ ಕಾಲದ ನಾಗರ ದೇವಾಲಯಗಳು ಪ್ರಸಿದ್ಧವಾಗಿವೆ. ಅನೇಕ ದೇಗುಲಗಳು ಚಳುಕ್ಯ ಅರಸರ ಅಥವಾ ಅವರ ಪರಿವಾರದವರ ನೇರ ಪ್ರೋತ್ಸಾಹದಿಂದಾಗಿವೆ. ಶಾಸನಗಳು ಹಾಗೂ ಶೈಲಿಯ ಹಿನ್ನೆಲೆಯಲ್ಲಿ ಈ ದೇವಾಲಯಗಳನ್ನು ಎರಡು ಹಂತಗಳನ್ನಾಗಿ ವರ್ಗೀಕರಿಸಿದೆ. ಮೊದಲನೆಯ ಹಂತದ ದೇಗುಲಗಳನ್ನು ಮೊದಲನೆಯ ವಿಕ್ರಮಾದಿತ್ಯನ ಆಡಳಿತಾವಧಿಯವು. ಆಲಂಪುರದ ಕುಮಾರ ಬ್ರಹ್ಮ, ತಾರಕಬ್ರಹ್ಮ, ವೀರಬ್ರಹ್ಮ ಮತ್ತು ಬಾಲಬ್ರಹ್ಮ ದೇಗುಲಗಳು, ಕೂಡವೇಲಿಯ ಸಂಗಮೇಶ್ವರ ದೇಗುಲ ಹಾಗೂ ಕಡಮಾರ ಕಾಳವದ ಶಿವನಂದೀಶ್ವರ ದೇಗುಲ ಇವು ಮೊದಲ ಹಂತದವು. ಎರಡನೆಯ ಹಂತದ ದೇಗುಲಗಳು ವಿನಯಾದಿತ್ಯ, ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯ ಹಾಗು ಕೀರ್ತಿವರ್ಮ ಇವರ ಕಾಲದವು.

ಒಂದನೆಯ ವಿಕ್ರಮಾದಿತ್ಯನ ಪ್ರೋತ್ಸಾಹದಲ್ಲಿ ನಿರ್ಮಾಣವಾದ ಮೊದಲ ಹಂತದ ದೇಗಲುಗಳಲ್ಲಿ ಕುಮಾರಬ್ರಹ್ಮ ದೇಗುಲ ಮೊದಲನೆಯದು. ಸಾಂಧಾರ ಪ್ರಕಾರದ ಈ ದೇವಾಲಯಕ್ಕೆ ಮುಖಚತುಷ್ಕಿ, ಗೂಢಮಂಟಪ ಮತ್ತು ಗರ್ಭಗೃಹ ಇವೆ. ತಲವಿನ್ಯಾಸದಲ್ಲಿ ಐಹೊಳೆಯ ಹುಚ್ಚಿಮಲ್ಲಿಗುಡಿ ಮತ್ತು ಚಿಕ್ಕಿಗುಡಿಯನ್ನು ಇದು ಹೋಲುತ್ತದೆ. ಆದರೆ ಇವುಗಳಿಗಿಂತ ಹೆಚ್ಚು ಪ್ರಮಾಣಬದ್ಧವಾಗಿದೆ. ಈ ದೇಗುಲದ ನಾಗರ ರೇಖಾ ಶಿಖರದಲ್ಲಿ ಮೂರು ಭೂಮಿಗಳಿವೆ. ಶಿಖರದಲ್ಲಿ ವೇಣುಕೋಶ ಹಾಗೂ ಲತೆ ಇದ್ದು ಇವುಗಳ ನಡುವೆ ಬಾಲಪಂಜರ ಇದೆ. ಲತೆಯನ್ನು ಚಂದ್ರಶಾಲಾಗಳ ಜೋಡಣೆಯಿಂದ ರೂಪಿಸಿದೆ. ಐಹೊಳೆಯ ದೇಗುಲಗಳಲ್ಲಿ ಬಾಲಪಂಜರ ಇಲ್ಲ. ಶಿಖರದ ಮೇಲೆ ಗ್ರೀವ ಮತ್ತು ಆಮಲಕ ಇವೆ. ಶುಕನಾಸವು ಇಲ್ಲದಿರುವುದು ಗಮನಾರ್ಹ. ದ್ವಾರಬಂಧದ ಮೇಲ್ಭಾಗದಲ್ಲಿ ಸಾಲಾಗಿ ಎಂಟು ಕಿರೀಟಧಾರಿ ಮುಖಗಳಿದ್ದು ಅಷ್ಟಗ್ರಹಗಳೆಂದು ಗುರುತಿಸಲ್ಪಟ್ಟಿವೆ. ಗೂಢ ಮಂಟಪ ಮತ್ತು ಮುಖಚತುಷ್ಕಿಯ ವಿತಾನದಲ್ಲಿ ಪದ್ಮಮಂಡಲ ಮತ್ತು ನಾಗರಾಜ ಶಿಲ್ಪಗಳಿವೆ. ಗರ್ಭಗೃಹದ ದ್ವಾರಬಂಧದ ಪೇದ್ಯಾಭಾಗ ದಲ್ಲಿ ಗಂಗಾ–ಯಮುನೆಯರ ಶಿಲ್ಪಗಳಿವೆ. ಈ ದೇವಾಲಯದ ಒಟ್ಟಾರೆ ಅಲಂಕಾರ ವಿನ್ಯಾಸವು ಗುಪ್ತ–ವಾಕಾಟಕ ಪರಂಪರೆಯನ್ನು ನೆನಪಿಸುತ್ತದೆ. ಅರ್ಕಬ್ರಹ್ಮ ದೇಗುಲ ಮೊದಲನೆಯ ವಿಕ್ರಮಾದಿತ್ಯನ ಕಾಲದ್ದು. ಆದರೆ ಇಲ್ಲಿ ಮಧ್ಯದೇಶದ ಗುಪ್ತ–ವಾಕಾಟಕ ಸಂಪ್ರದಾಯಗಳು ಇದರಲ್ಲಿ ಬಲವಾಗಿವೆ. ಎತ್ತರವಾದ ಜಗತಿಯ ಮೇಲೆ ನಿಂತಿರುವ ಈ ಸಾಂಧಾರ ದೇಗುಲಕ್ಕೆ ಗರ್ಭಗೃಹ ಮತ್ತು ಗೂಢಮಂಟಪ ಮಾತ್ರ ಇವೆ. ಗೋಡೆಯ ಮೇಲಿರುವ ಕಪೋತಾಲಿಯು ನಾಗರ ಸಂಪ್ರದಾಯದ್ದು. ಈ ದೇಗುಲದ ಶಿಖರ ನಷ್ಟವಾಗಿದೆ. ಗರ್ಭಗೃಹವನ್ನು ಈಚೆಗೆ ಪುನಾರಚಿಸಲಾಗಿದೆ.

ವೀರಬ್ರಹ್ಮ ದೇಗುಲ ಇದೇ ತಲವಿನ್ಯಾಸದಿಂದ ಕೂಡಿದೆ. ಈ ದೇವಾಲಯದ ನಾಗರ ರೇಖಾ ಶಿಖರಕ್ಕೆ ನಾಲ್ಕು ಭೂಮಿಗಳಿದ್ದು ಶುಕನಾಸವಿದೆ. ದೇವಕೋಷ್ಠಗಳ ಅರ್ಧಗಂಬಗಳು ಘಟಪಲ್ಲವ ಪ್ರಕಾರದವು. ಇವುಗಳ ಮೇಲಿರುವ ಉದ್ಗಮಗಳು ಸಂಕೀರ್ಣಸ್ವರೂಪದ್ದಾಗಿದವೆ. ಭದ್ರಾವಲೋಕನ ಹಾಗೂ ವಾತಾಯನಗಲ ಜಾಲಿಗಳ ಅಲಂಕಾರ ಸುಂದರವಾಗಿದೆ.

ಬಾಲಬ್ರಹ್ಮ ದೇವಾಲಯ ವಿನ್ಯಾಸದಲ್ಲಿ ವೀರಬ್ರಹ್ಮ ದೇವಾಲಯದಂತೆಯೇ ಇದೆ. ದೇಗುಲದ ಪೂರ್ವದಿಕ್ಕಿನ ಎರಡು ಮೂಲೆಗಳಲ್ಲಿರುವ ಪರಿವಾರದೇಗುಲಗಳು ಮೂಲ ವಿನ್ಯಾಸದ ಅಂಗವಾಗಿವೆ. ಉಳಿದ ಎರಡು ಗುಡಿಗಳು ತದನಂತರ ಸೇರಿಸಲ್ಪಟ್ಟವು.

ಕುಮಾರಬ್ರಹ್ಮ, ಅರ್ಕಬ್ರಹ್ಮ, ವೀರಬ್ರಹ್ಮ ಮತ್ತು ಬಾಲಬ್ರಹ್ಮ ದೇವಾಲಯಗಳು ಮೊದಲನೆಯ ವಿಕ್ರಮಾದಿತ್ಯನ ಕಾಲದಲ್ಲಿ ಆಲಂಪುರವು ನಾಗರ ಸಂಪ್ರದಾಯಕ್ಕೆ ಹೆಚ್ಚು ಒತ್ತು ನೀಡಿದ್ದ ಶಿಲಾವಸ್ತು ಕಲೆಯ ಪ್ರಮುಖ ಕೇಂದ್ರವಾಗಿತ್ತೆಂಬುದನ್ನು ಸೂಚಿಸುತ್ತವೆ.

ಕುಡವೇಲಿ ಸಂಗಮೇಶ್ವರ ದೇವಾಲಯ ಮೊದಲನೇ ವಿಕ್ರಮಾದಿತ್ಯನ ಕಾಲದ ಇನ್ನೊಂದು ಸುಂದರ ಸೃಷ್ಟಿ. ಈಗ ಇದನ್ನು ಆಲಂಪುರಕ್ಕೆ ಸ್ಥಳಾಂತರಿಸಲಾಗಿದೆ. ಸಾಂಧಾರ ರೀತಿಯ ಈ ದೊಡ್ಡ ದೇಗುಲದಲ್ಲಿ ಗೂಢಮಂಟಪ, ಅಂತರಾಳ ಮತ್ತು ಗರ್ಭಗೃಹ ಇವೆ. ಅಧಿಷ್ಠಾನವು ಮಂಚಬಂಧ ರೀತಿಯದು. ಬಾಲಬ್ರಹ್ಮದಲ್ಲರುವಂತೆಯೇ ಇದೆಯಾದರೂ ಶುಕನಾಸವಿಲ್ಲ.

ಮೂಲ ದೇವಾಲಯದ ಆಗ್ನೇಯ ದಿಕ್ಕಿಗೆ ಆಯತ ವಿನ್ಯಾಸದ ಶಾಲಾಕಾರ ವಿಮಾನ ಮಾದರಿಯ ಸಂಗಮೇಶ್ವರ ದೇವಾಲಯವಿದೆ. ಇದರ ಪ್ರಕಾರ ಒಂದು ಶ್ರೇಷ್ಠ ಕಲಾಕೃತಿ. 4.5 ಮೀ ಎತ್ತರದ ಪ್ರಾಕಾರದಲ್ಲಿ ಪೀಠ, ಭಿತ್ತಿ, ಹಾರಗಳಿವೆ. ಗೋಡೆಯಲ್ಲಿ ವಿದ್ಯಾಧರರು, ದಿಕ್ಪಾಲರು, ಗಂಧರ್ವರು, ಗಜಗಳು, ತಾಯಿ–ಮಗು, ಗಣಗಳು, ಮಿಥುನಗಳು, ಗಣೇಶ, ಶಿವನಟೇಶ, ವೀಣಾಧರ ಶಿವ ಇತ್ಯಾದಿ ಉಬ್ಬುಶಿಲ್ಪಗಳು ಇವೆ. ಮೇಲ್ಗಡೆ ಕೂಟ, ಶಾಲ, ಪಂಜರಗಳನ್ನೊಳಗೊಂಡ ಹಾರವಿದೆ. ಗೋಪುರ ನಷ್ಟವಾಗಿದೆ. ಈ ದೇವಾಲಯ ದಲ್ಲಿ ದ್ರಾವಿಡ ಸಂಪ್ರದಾಯದ ಪ್ರಭಾವ ಗಮನೀಯವಾಗಿದೆ, ಐಹೊಳೆಯ ದುರ್ಗಾಗುಡಿಯ ಕೆಲವು ಶಿಲ್ಪಗಳನ್ನು ಈ ದೇಗುಲದ ಶಿಲ್ಪಗಳಿಗೆ ಹೋಲಿಸಬಹುದು.

ಕಡಮಾರಕಾಳವದಲ್ಲಿರುವ ಶಿವನಂದೀಶ್ವರೇಶ್ವರ ದೇಗುಲ ಅರ್ಕಬ್ರಹ್ಮ ದೇವಾಲಯವನ್ನು ನೆನಪಿಸುತ್ತದೆ. ಆದರೆ ಕೆಲವು ಪ್ರಾದೇಶಿಕ ವೈಶಿಷ್ಟ್ಯಗಳು ಇದರಲ್ಲಿವೆ. ಈ ದೇಗುಲದ ಆಗ್ನೇಯ ದಿಕ್ಕಿಗೆ ಒಂದು ತ್ರಿಭೂಮಿ ಲತಿನ ಪ್ರಾಸಾದವೂ ಉತ್ತರಕ್ಕೆ ಐದು ಫಾಂಸನ ಗುಡಿಗಳೂ 20 ಕಿರು ದೇಗುಲ ಮಾದರಿಗಳೂ ಇವೆ. ಶೈಲಿಯ ಆಧಾರದ ಮೇಲೆ ಇವು ಒಂದನೆಯ ವಿಕ್ರಮಾದಿತ್ಯನ ಕಾಲದವು.

ಆಲಂಪುರದ ಸ್ಥಪತಿಗಳ ಹೊಸ ವಾಸ್ತು ರೂಪಣಗಳ ಉದಾಹರಣೆಯನ್ನು ಸ್ವರ್ಗಬ್ರಹ್ಮ ದೇವಾಲಯದಲ್ಲಿ ಕಾಣಬಹುದು. ಇದು ವಿನಯಾದಿತ್ಯನ ಕಾಲದಲ್ಲಿ ಇವನ ರಾಣಿಗಾಗಿ ನಿರ್ಮಾಣವಾಯಿತೆಂದು ಶಾಸನದಿಂದ ತಿಳಿಯುತ್ತದೆ. ಈ ಸಾಂಧಾರ ದೇಗುಲಕ್ಕೆ ಮುಖಚತುಷ್ಕಿ, ಗೂಢಮಂಟಪ, ಅಂತರಾಳ ಮತ್ತು ಗರ್ಭಗೃಹಗಳಿವೆ. ಮುಖ್ಯ ದಿಕ್ಕುಗಳ ಗೋಡೆಯಲ್ಲಿ ಭದ್ರ ಗವಾಕ್ಷಗಳಿವೆ. ಈ ಲಕ್ಷಣವು ಪಟ್ಟದಕಲ್ಲಿನ ಗಳಗನಾಥ ಮತ್ತು ಪಾಪನಾಥ ಗುಡಿಗಳಲ್ಲಿಯೂ ಗೋಚರಿಸುತ್ತದೆ. ಮಧ್ಯದೇಶದ ಗುಪ್ತ–ವಾಕಾಟಕ ಪರಂಪರೆಯಲ್ಲಿ ಕಾಣುವಂತೆ ವೇದಿಬಂಧ ಪೀಠದಲ್ಲಿ ತುಲಾಪೀಠವನ್ನು ಅಳವಡಿಸಿದೆ.



ವಿಶ್ವ ಬ್ರಹ್ಮ, ಆಲಂಪುರ

ನಾಲ್ಕು ಭೂಮಿಗಳಿರುವ ರೇಖಾ ಶಿಖರ ಸಹ ವಿಶಿಷ್ಟವಾಗಿದೆ. ಮಧ್ಯಲತೆಯನ್ನು ಆಳವಾಗಿ ಕಟೆದಿದ್ದು ತಳದಲ್ಲಿ ಇದು ಬಾಲಪಂಜರವನ್ನು ಬಳಸಿಕೊಂಡಿದೆ. ಸುಕನಾಸ ಎರಡನೆಯ ಭೂಮಿಯವರೆಗೆ ಮೇಲೇರಿದೆ. ಶಿಖರದ ಮೇಲ್ಗಡೆ ಗ್ರೀವ, ಆಮಲಕ, ದ್ವಿಕಲಶ ಹಾಗೂ ಆಕಾಶ ಲಿಂಗಗಳಿವೆ. ಶುಕನಾಸದ ಮುಖಪಟ್ಟಿಯಲ್ಲಿ ನಟೇಶ ಮೂರ್ತಿಯಿದೆ. ಮುಖಚತುಷ್ಕಿ ಮತ್ತು ಗೂಢಮಂಟಪಗಳಿಗೆ ಘಟಪಲ್ಲವ ಕಂಬಗಳನ್ನು ಬಳಸಲಾಗಿದೆ. ಈ ಕಂಬಗಳ ತಳ ಮತ್ತು ಮೇಲ್ಭಾಗಗಳಲ್ಲಿ ಪೂರ್ಣಘಟಗಳಿದ್ದು ಕಾಂಡದ ಮಧ್ಯವು ಅಷ್ಟಕೋನಾಕಾರದಲ್ಲಿದೆ. ಇವು ತಾಲಪತ್ರ ಬೋದಿಗೆಯನ್ನು ಹೊತ್ತಿವೆ. ಗರ್ಭಗೃಹದೊಳಗೆ ನಾಲ್ಕು ಕಂಬಗಳಿವೆ. ಹೀಗೆ ಸ್ವರ್ಗಬ್ರಹ್ಮ ದೇವಾಲಯ ಚಳುಕ್ಯ ಕಾಲೀನ ನಾಗರ ಸಂಪ್ರದಾಯದ ವಾಸ್ತು ವಿಕಾಸದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ. ಇದರ ಪ್ರಭಾವವನ್ನು ಪಾಣ್ಯಂನಲ್ಲಿರುವ ಪಾಣಿಕೇಶ್ವರ ದೇಗುಲದಲ್ಲಿ ಗುರುತಿಸಬಹುದು.

ಮಹಾನಂದಿಯಲ್ಲಿರುವ (ಕರ್ನೂಲು ಜಿಲ್ಲೆ) ಮಹಾನಂದೀಶ್ವರ ದೇವಾಲಯ ತಲವಿನ್ಯಾಸದಲ್ಲಿ ಮಂಟಪ, ಅಂತರಾಳ ಮತ್ತು ಗರ್ಭಗೃಹವಿರುವ ಸಾಂಧಾರ ರಚನೆ, ಇದರ ತಳ ಭಾಗದಲ್ಲಿ ಭದ್ರಗವಾಕ್ಷದ ಮುಂಚಾಚು ಇದೆಯಾದರೆ ಇದಕ್ಕೆ ಸ್ಪಂದಿಯಾಗಿ ಗೋಡೆಯಲ್ಲಿ ತೆರೆದ ಕಂಬಗಳಿವೆ. ಶಿಖರ ನಾಲ್ಕು ಭೂಮಿಗಳಿಂದಾಗಿದ್ದು ಆಲಂಪುರದ ಬಾಲಬ್ರಹ್ಮ ದೇಗುಲದ ಶಿಖರವನ್ನು ಹೋಲುತ್ತದೆ. ಐಹೊಳೆಯ ನಾಗರ ಮಾದರಿಯ ಕೆಲವು ದೇವಾಲಯಗಳ ರೂಪ ಇಲ್ಲಿ ಹೆಚ್ಚು ಕಾಣುತ್ತದೆ. ಬಹುಶಃ ಇದು ವಿನಯಾದಿತ್ಯನ ಕಾಲದ್ದು.

ವಿಜಯಾದಿತ್ಯನ ಕಾಲದಲ್ಲಿ ಆಲಂಪುರದ ಗರುಡಬ್ರಹ್ಮ ಮತ್ತು ವೀರಬ್ರಹ್ಮ ದೇವಾಲಯ ಗಳು ನಿರ್ಮಾಣಗೊಂಡವು. ಪ್ರಾಯಶಃ ಸತ್ಯವೊಲುವಿನಲ್ಲಿರುವ ರಾಮಲಿಂಗೇಶ್ವರ ಮತ್ತು ಭೀಮಲಿಂಗೇಶ್ವರ ದೇಗುಲಗಳೂ ಇವನ ಕಾಲದವೇ ಆಗಿವೆ. ಗರುಡಬ್ರಹ್ಮ ದೇಗುಲ ಸ್ವರ್ಗಬ್ರಹ್ಮ ದೇಗುಲದಂತೆಯೇ ಇದೆ. ಗರ್ಭಗೃಹದ ಗೋಡೆಗೆ ಆಳವಾದ ಮುಂಚಾಚು ಹಿಂಚಾಚುಗಳಿರುವುದು, ವಿಶಾಲವಾದ ಗೂಢಮಂಟಪ ಇವು ಗಮನಾರ್ಹವಾಗಿವೆ. ಅಧಿಷ್ಠಾನ ವೇದಿಬಂಧ ಮಾದರಿಯದು.

ಗೋಡೆಯಲ್ಲಿ ಅನೇಕ ಕೋಷ್ಠಗಳಿದ್ದು ಅವುಗಳಿಗೆ ಕಿರುಗಂಬಗಳನ್ನು ಅಳವಡಿಸಿರು ವುದು ಚಳುಕ್ಯ ಶೈಲಿಯ ವಿಶಿಷ್ಟ ಲಕ್ಷಣವೆನಿಸಿದೆ. ಗೋಡೆಯಲ್ಲಿ ಶಿಲ್ಪಗಳಾಗಲಿ ಉದ್ಗಮಗ ಳಾಗಲಿ ಇಲ್ಲ. ಆದರೆ ಗೋಡೆಯ ಮೇಲಂಚಿನುದ್ದಕ್ಕೂ ಘಂಟಾಮಾಲೆ–ವಿದ್ಯಾಧರ ಶಿಲ್ಪಗಳು

ಅದ್ಭುತವಾಗಿವೆ. ರೇಖಾ ನಾಗರ ಶಿಖರ ನಾಲ್ಕು ಭೂಮಿಗಳನ್ನೊಳಗೊಂಡಿದ್ದು ಸ್ವರ್ಗಬ್ರಹ್ಮ ದೇವಾಲಯವನ್ನು ಹೋಲುತ್ತಿದೆ. ಇದರ ವಿಶಾಲ ಪ್ರಮಾಣಬದ್ಧ ಗೂಢಮಂಟಪದಲ್ಲಿ ನಾಲ್ಕು ಸಾಲು ಕಂಬಗಳಿವೆ. ಇವುಗಳಿಗೆ ಬೆನ್ನಿಗೆ ಬೆನ್ನು ಹಾಕಿ ಕುಳಿತಿರುವ ನಾಲ್ಕು ಸಿಂಹಗಳ ಪೀಠವಿರುವುದು ಚಳುಕ್ಯ ವಾಸ್ತುಶಿಲ್ಪದಲ್ಲಿಯೇ ಅಪೂರ್ವವೆನಿಸಿದೆ. ಚಳುಕ್ಯ ಪ್ರದೇಶದಲ್ಲಿ ಇಂತಹ ಇನ್ನೊಂದು ಉದಾಹರಣೆ ಇಲ್ಲ. ಅಜಂತದ 17ನೆಯ ಗುಹೆಯಲ್ಲಿರುವ ಕಂಬಗಳನ್ನು ಇದು ಬಹಳ ಹೋಲುತ್ತದೆ.

ಸತ್ಯವೊಲುವಿನಲ್ಲಿರುವ ರಾಮಲಿಂಗೇಶ್ವರ ಮತ್ತು ಭೀಮಲಿಂಗೇಶ್ವರ ಸಾಂಧಾರ ದೇಗುಲಗಳನ್ನು ವಿಜಯಾದಿತ್ಯನ ಕಾಲದ ಇತರ ದೇಗುಲಗಳಿಗೆ ಹೋಲಿಸಿದರೆ, ಪ್ರಾದೇಶಿಕ ಲಕ್ಷಣಗಳು ಹೆಚ್ಚು ಬಿಂಬಿತವಾಗಿರುವುದು ಕಾಣಿಸುತ್ತದೆ. ಅದರೊಂದಿಗೆ ಕೆಲವು ಹೊಸ ವಾಸ್ತು ಲಕ್ಷಣಗಳೂ ಇಲ್ಲಿ ಪ್ರಕಟವಾಗಿವೆ. ಒರಟು ರೀತಿಯ ನಿರ್ಮಾಣ, ವಿವರಗಳಲ್ಲಿ ಸೂಕ್ಷ್ಮ ಕುಶಲತೆಯ ಕೊರತೆ, ಮಡಿಕೆಗಳನ್ನು ದಿಟ್ಟವಾಗಿ ಕೊರೆದಿರುವ ರೀತಿ ಹಾಗೂ ದ್ರಾವಿಡ ಸಂಪ್ರದಾಯದೆಡೆಗೆ ಒಲವು ಇತ್ಯಾದಿಗಳು ಕರ್ನೂಲು ಪ್ರದೇಶದ ದೇಗುಲವಾಸ್ತುವಿನ ವೈಶಿಷ್ಟ್ಯಗಳಾಗಿ ಇಲ್ಲಿಯೂ ಗೋಚರಿಸುತ್ತಿವೆ.

ಗಂಗಾಧರ ಶಿವ–ಕಾಶಿ ವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು

ಭೀಮಲಿಂಗೇಶ್ವರ ದೇಗುಲ ಮಂಟಪ ಮತ್ತು ಗರ್ಭಗೃಹಗಳನ್ನೊಳಗೊಂಡಿರುವ ಮಧ್ಯಮ ಗಾತ್ರದ ರಚನೆಯಾಗಿದೆ. ಎರಡು ಭೂಮಿಗಳಿರುವ ರೇಖಾ ಶಿಖರಕ್ಕೆ ಶುಕನಾಸ ವಿದ್ದು, ಇದು ರಾಮಲಿಂಗೇಶ್ವರ ದೇಗುಲವನ್ನು ಹೋಲುತ್ತದೆ. ಆದರೆ ತಳಭಾಗದಲ್ಲಿ ವ್ಯಾಳವರಿಯನ್ನು ಪ್ರಯೋಗಿಸಿರುವದು ದ್ರಾವಿಡ ಸಂಪ್ರದಾಯದ ಪ್ರಭಾವವೆನಿಸಿದೆ.

ಆಲಂಪುರದ ಪದ್ಮಬ್ರಹ್ಮ ದೇವಾಲಯದ ಶಿಖರ ನಷ್ಟವಾಗಿದೆ. ಅಲ್ಲದೆ ಹಲವು ವಿವರಗಳು ಅಪೂರ್ಣವಾಗಿವೆ. ತಲವಿನ್ಯಾಸದಲ್ಲಿ ಇದು ವಿಶ್ವಬ್ರಹ್ಮ ದೇಗುಲದಂತೆ ಇದೆ. ಶೈಲಿಯ ಆಧಾರದ ಮೇಲೆ ಇದನ್ನು ಇಮ್ಮಡಿ ಕೀರ್ತಿವರ್ಮನ ಕಾಲಕ್ಕೆ ಅನ್ವಯಿಸಬಹುದು.

ಹೀಗೆ ಚಳುಕ್ಯನಾಗರ ಸಂಪ್ರದಾಯದ ದೇಗುಲಗಳು ಆಂಧ್ರ ಪ್ರದೇಶದಲ್ಲಿ ಸಾಂಧಾರ ವಿನ್ಯಾಸ, ಜಗತಿ, ಭದ್ರಾವಲೋಕನ, ಇಳಿಜಾರಿನ ಪಾರ್ಶ್ವಛಾವಣಿಗಳು, ರುಚಕ ಕಂಬಗಳು, ಅಲಂಕೃತ ದ್ವಾರಬಂಧಗಳು ಇತ್ಯಾದಿಗಳ ದೃಷ್ಟಿಯಿಂದ ಪ್ರಾರಂಭಿಕವಾಗಿ ಐಹೊಳೆಯ ಸಂಪ್ರದಾಯದಿ ಸ್ಫೂರ್ತಿ ಪಡೆದಿರಬಹುದು. ಆದರೆ ಕ್ರಮೇಣ ಆಲಂಪುರದ ವಾಸ್ತುಶಿಲ್ಪಿಗಳು ಕೆಲವು ಸೃಜನಶೀಲ ಪ್ರವೃತ್ತಿಗಳನ್ನು ಪ್ರಕಟಿಸಿದ್ದಾರೆ. ಗೋಡೆಯಲ್ಲಿ ಕೋಷ್ಠಗಳ ಅಳವಡಿಕೆ, ಉದ್ಗಮಗಳು, ಘಂಟಾಮಾಲೆ, ಘಟಪಲ್ಲವ ರೀತಿಯ ಕಂಬಗಳು, ತಾಲಪತ್ರ ಬೋದಿಗೆಗಳು, ತುಲಾಪೀಠಗಳು, ವೇದಿಬಂಧದ ಬಳಕೆ, ಇತ್ಯಾದಿಗಳು ನಾಗರ ಸಂಪ್ರದಾಯದ ಶುದ್ಧಲಕ್ಷಣ ಗಳಾಗಿದ್ದು ಅವುಗಳನ್ನು ಹೆಚ್ಚು ಹೆಚ್ಚು ಬಳಸಿರುವದು ಇಲ್ಲಿ ಕಾಣುತ್ತದೆ. ಕೆಲವು ಪ್ರಾದೇಶಿಕ ಲಕ್ಷಣಗಳೂ ಇಲ್ಲದಿಲ್ಲ. ಕ್ರಮೇಣ ಆಲಂಪುರದ ವಾಸ್ತುಶಿಲ್ಪಿಗಳು ಸ್ವರ್ಗಬ್ರಹ್ಮ ದೇವಾಲಯ ದಂತಹ ಅದ್ಭುತ ವಾಸ್ತುವಿನ್ಯಾಸಗಳನ್ನು ರೂಪಿಸುವಲ್ಲಿ ಸಫಲರಾದರು. ಶುದ್ಧ ನಾಗರ ಸಂಪ್ರದಾಯದ ಎಲ್ಲ ಲಕ್ಷಣಗಳನ್ನು ಅವರು ಪೂರ್ತಿಯಾಗಿ ಬಳಸಿಕೊಂಡು ತಮ್ಮ ಕೈಚಳಕವನ್ನೂ ತೋರಿಸಿದರು.

ಚಳುಕ್ಯರ ಕಾಲದ ಕಟ್ಟಡ ವಾಸ್ತು ಉದಾಹರಣೆಗಳು ಹಲವು ದೃಷ್ಟಿಕೋನಗಳಿಂದಾಗಿ ಮಹತ್ತ್ವದ್ದಾಗಿವೆ. ಇವು ದಕ್ಷಿಣ ಭಾರತದಲ್ಲಿ ಉಳಿದು ಬಂದಿರುವ ಪ್ರಾಚೀನ ಶಿಲಾದೇಗುಲ ಗಳು. ವಿವಿಧೆಡೆಗಳಿಂದ ಬಂದ ಶಿಲ್ಪಿಗಳ ತಂಡಗಳು ಇವುಗಳ ನಿರ್ಮಾಣದಲ್ಲಿ ಕೆಲಸ ಮಾಡಿವೆ. ಆ ಕಾರಣದಿಂದ ಭಾರತದ ವಿವಿಧ ದೇಗುಲ ವಾಸ್ತು ಶೈಲಿಗಳು ಪ್ರಯೋಗಗಳು ಇಲ್ಲಿ ಆಗಿವೆ. ದ್ರಾವಿಡ, ರೇಖಾನಾಗರ ಮತ್ತು ಫಾಂಸನ ಶೈಲಿಗಳು ಸ್ಪಷ್ಟ ಲಕ್ಷಣಗಳನ್ನು ಆಗಲೇ ಪಡೆದಿದ್ದವು. ಆದರೆ ಚಳುಕ್ಯ ಪ್ರದೇಶದಲ್ಲಿ ಇವುಗಳ ಕೆಲ ಅಂಶಗಳನ್ನು ಮಿಶ್ರಗೊಳಿಸುವ ಪ್ರಯತ್ನ–ಪ್ರಯೋಗಗಳು ಆದವು. ಕರ್ನಾಟಕ ದ್ರಾವಿಡ ಶೈಲಿ ಕೆಲವು ಔತ್ತರೇಯ ಲಕ್ಷಣಗಳನ್ನು ಮೈಗೂಡಿಸಿಕೊಂಡು ಸ್ವಂತಿಕೆಯನ್ನು ರೂಪಿಸಿಕೊಂಡಿತು. ಅದು ಕಲ್ಯಾಣದ ಚಾಳುಕ್ಯ, ದೋರಸಮುದ್ರದ ಹೊಯ್ಸಳರ ಕರ್ನಾಟಕ ದ್ರಾವಿಡ ಶೈಲಿಗೆ ಪಾಯ ಹಾಕಿಕೊಟ್ಟಿತು. ಫಾಂಸನ ಶೈಲಿ ಕೂಡ ಕರ್ನಾಟಕದಲ್ಲಿ ವೈಶಿಷ್ಟ್ಯಗಳನ್ನು ಮೇಳೈಸಿ ಕೊಂಡು ಬೆಳೆಯಲು ಸಾಧ್ಯವಾಯಿತು.

**2. ಶಿಲ್ಪಕಲೆ: ಗುಹಾಲಯಗಳ ಶಿಲ್ಪ:** ಚಳುಕ್ಯ ಗುಹಾಲಯಗಳ ಅತ್ಯಾಕರ್ಷಕ ಘಟಕಗಳೆಂದರೆ ಅವುಗಳಲ್ಲಿರುವ ದೊಡ್ಡ ಮತ್ತು ಚಿಕ್ಕ ಗಾತ್ರದ ವೈವಿಧ್ಯಮಯ ಶಿಲ್ಪಗಳು. ಪ್ರತಿಮಾಲಕ್ಷಣ, ಶಿಲ್ಪತಂತ್ರ, ಶೈಲಿ, ರೂಪಕರ್ಮ ಹೀಗೆ ಅನೇಕ ದೃಷ್ಟಿಕೋನಗಳಿಂದ ಇವು ವಿಶಿಷ್ಟವಾಗಿದ್ದು, ಅಧ್ಯಯನ ಯೋಗ್ಯವಾಗಿವೆ.

ಬಾದಾಮಿಯ ಶೈವ ಗುಹಾಲಯದ ಮುಂದುಗಡೆಯ ಅಂಗಳದಲ್ಲಿ ನಿಂತರೆ ಪಶ್ಚಿಮ ಪಾರ್ಶ್ವದಲ್ಲಿ ಹದಿನೆಂಟು ಕೈಗಳುಳ್ಳ ಶಿವನಟರಾಜನ ಅಪೂರ್ವ ಶಿಲ್ಪವಿದೆ. ಬಹುಶಃ ಭಾರತದಲ್ಲಿ ಇಷ್ಟು ಕೈಗಳುಳ್ಳ ಪ್ರಾಚೀನ ನಟರಾಜನ ವಿಗ್ರಹ ಇನ್ನೊಂದಿಲ್ಲ. ಕಲಾ ದೃಷ್ಟಿಯಿಂದಲೂ ಇದು ಅದ್ಭುತ ಕೃತಿಯೆಂದು ಮೆಚ್ಚುಗೆ ಗಳಿಸಿದೆ. ವೃತ್ತಾಕಾರದ ಪರಿಧಿಯನ್ನನುಸರಿಸಿ ಈ ಶಿಲ್ಪ ಸಂಯೋಜಿತವಾಗಿದೆ. ಬಲಗಾಲನ್ನು ಪದ್ಮಪೀಠದ ಮೇಲೆ ಭದ್ರವಾಗಿ ಊರಿ ಚತುರ ನಾಟ್ಯ ಭಂಗಿಯಲ್ಲಿರುವ ಜಟಾಧಾರಿ ನಟರಾಜ–ಶಿವನ ಕೈಗಳು ಏಕಕೇಂದ್ರೀಯ ವಾಗಿ ಗಡಿಯಾರದ ಮುಳ್ಳಿನಂತೆ ಬಲದಿಂದ ಎಡಕ್ಕೆ ವೃತ್ತಾಕಾರದಲ್ಲಿ ಚಲಿಸುತ್ತಿರುವಂತೆ ಭಾಸವಾಗುತ್ತದೆ. ಮೂರು ಬಲ ಕೈಗಳು ಅಕ್ಷಮಾಲೆ, ಪಾಶ (?) ಹಾಗೂ ಡಮರುಗಳನ್ನು, ಮೇಲೆತ್ತಿರುವ ಒಂದು ಬಲ ಎಡ ಕೈ ಬಿಡಿಸಿ ಹಿಡಿದಿರುವ ಸರ್ಪವನ್ನು, ಒಂದು ಎಡಕ್ಕೆ ತ್ರಿಶೂಲವನ್ನು ಹಾಗೂ ಇನ್ನೆರಡು ಎಡ ಕೈಗಳು ತಂತುವಾದ್ಯವನ್ನು ಹಿಡಿದಿವೆ; ಇನ್ನುಳಿದ ಕೈಗಳು ಅಭಯ ಹಸ್ತ, ತ್ರಿಪತಾಕ, ವಿಸ್ಮಯ (?) ಮುಂತಾದ ನಾಟ್ಯ ಮುದ್ರೆಗಳಲ್ಲಿ ಬೀಸು ಚಾಲನೆಯಲ್ಲಿವೆ. ನಟರಾಜನ ಭಂಗಿ ಹಾಗೂ ಕೈಗಳ ಆಯುಧ, ವಸ್ತು, ಮುದ್ರೆಗಳು ಇಲ್ಲಿ ಚಲನೆ ಮತ್ತು ಸಮತೋಲನ ಭಾವದ ಅಭಿವ್ಯಕ್ತಿಗೆ ಪೂರಕವಾಗಿವೆ. ನಟರಾಜನ ಹಿಂದಿರುವ ನಂದಿಯಮುಖ ದ್ವಿಭುಜ ಬಾಲಗಣೇಶ ಶಿವನ ನಾಟ್ಯವನ್ನು ಅನುಕರಣೆ ಮಾಡುತ್ತಿದ್ದಾನೆ. ಇವನ ಎಡಪಕ್ಕದಲ್ಲಿ ಒಬ್ಬನು ಮೃದಂಗ ಬಾರಿಸುವದರಲ್ಲಿ ಮಗ್ನನಾಗಿದ್ದಾನೆ. ಒಟ್ಟಾರೆ ಸೀಮಿತ ಆಭರಣ, ಶಿರದ ಹಿಂದಿರುವ ದೀರ್ಘವೃತ್ತಾಕಾರದ ಅಸ್ಪಷ್ಟ ಪ್ರಭಾಮಂಡಲ, ಆಕರ್ಷಕ ಭಂಗಿ ಮುಂತಾದವುಗಳೊಂದಿಗೆ ಇಲ್ಲಿ ಶಿಲ್ಪ ಸಂಯೋಜನೆ ಸಹಜವಾಗಿಯೇ ಚಿತ್ತಾಕರ್ಷಕವಾಗಿದೆ.

ಮುಖಮಂಟಪದಲ್ಲಿ ಪೂರ್ವ ಪಾರ್ಶ್ವದ ಗೋಡೆಯಲ್ಲಿರುವ ಲಕ್ಷ್ಮೀ–ಪಾರ್ವತೀ ಸಹಿತ ಹರಿಹರ ಶಿಲ್ಪ ಈ ಗುಹಾಲಯದ ಇನ್ನೊಂದು ಮಹತ್ತ್ವದ ಕಲಾಕೃತಿ. ಹರಿಹರನ ಬಲ ಅರ್ಧಭಾಗ ಶಿವನ ಮೂರ್ತಿ ಲಕ್ಷಣಗಳೊಂದಿಗೂ ವಾಮಾರ್ಧ ಭಾಗ ವಿಷ್ಣುವಿನ ಮೂರ್ತಿ ಲಕ್ಷಣಗಳೊಂದಿಗೂ ಮೂಡಿದೆ.

ಮುಖಮಂಟಪದಲ್ಲಿ ಪಶ್ಚಿಮ ಪಾರ್ಶ್ವದ ಗೋಡೆಯಲ್ಲಿರುವ ಅರ್ಧನಾರೀಶ್ವರ ಶಿಲ್ಪ ಈ ಗುಹಾಲಯದ ಮೇರು ಕೃತಿ. ಉಳಿದವುಗಳಂತೆ ಇದು ಕೂಡ ವೃತ್ತ ಪರಿಧಿಯನ್ನನು ಸರಿಸಿ ಸಂಯೋಜಿತವಾಗಿದೆ. ಇಲ್ಲಿ ಬಲ ಶಿವನದು ಹಾಗೂ ಎಡ ಭಾಗ ಪಾರ್ವತಿಯದು. ಬಲಗಡೆ, ಶಿವನ ಪಕ್ಕದಲ್ಲಿ ಮುಖ ಚಾಚಿರುವ ಬಸವ ಜೀವಕಳೆಯಿಂದ ಕೂಡಿದ್ದು, ನಿಂತಿದೆ. ಅದರ ಬಲಪಕ್ಕದಲ್ಲಿ ಅಸ್ಥಿ ಪಂಜರದಂತೆ ಕೃಶದೇಹದ ಭೃಂಗಿ ಕೈ ಮುಗಿದು ನಿಂತಿದ್ದಾನೆ. ಅರ್ಧನಾರೀಶ್ವರನ ಎಡಪಾರ್ಶ್ವದಲ್ಲಿ ಧಮ್ಮಿಲ್ಲ ರೀತಿಯ ವಿಶಿಷ್ಟ ಕೇಶಾಲಂ ಕಾರದಿಂದೊಡಗೂಡಿದ, ಎಡಗೈಯಲ್ಲಿ ಪ್ರಸಾಧನ ಪಟ್ಟಿಗೆಯನ್ನು ಹೊತ್ತಿರುವ ಪ್ರಸಾದಿತೆ (ಪಾರ್ವತಿಯ ಸೇವಕಿ) ನಿಂತಿದ್ದಾಳೆ. ಮೇಲ್ಮೂಲೆಗಳಲ್ಲಿ ಹಾರಗಳನ್ನು ಹಿಡಿದು ಹಗುರವಾಗಿ ಆಕಾಶದಲ್ಲಿ ಹಾರುತ್ತ ಸಾಗಿವೆ. ನೋಡುಗನ ದೃಷ್ಟಿ ನೇರವಾಗಿ ಕೇಂದ್ರ ಪಾತ್ರದ ಅರ್ಧನಾರೀಶ್ವರ ಮೂರ್ತಿಯೆಡೆಗೆ ಸೆಳೆಯುವುದರಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ; ಉಳಿದ ಪಾತ್ರಗಳು ಸಂಯೋಜನೆಗೆ ಪೂರಕವಾಗಿ ಮಾತ್ರ ಮಹತ್ತ್ವ ಪಡೆದಿವೆ.

ಮುಮ್ಮುಖದ ಪಶ್ಚಿಮ ಪಾರ್ಶ್ವದಲ್ಲಿ ಪೂರ್ವಾಭಿಮುಖವಾಗಿರುವ ದುರ್ಗಾಭಗವತಿಯ ಮಂಟಪದಲ್ಲಿಯ ಮುಖ್ಯ ಶಿಲ್ಪ ದುರ್ಗಾಭಗವತಿಯದು. ದೇವಿಯನ್ನು ಹಸನ್ಮುಖಿಯಾಗಿಯೂ ದುಂಡುದುಂಡಾದ ಅಂಗಾಂಗ ಹಾಗೂ ತುಂಬು ಕುಚದ್ವಯಗಳಿಂದೊಡಗೂಡಿಯೂ ತೋರಿಸಲಾಗಿದೆ.

ಮುಖಮಂಟಪದ ಭಿತ್ತಿನಲ್ಲಿ ಐದು ಹೆಡೆಯ ನಾಗರಾಜ ಮತ್ತು ವಿದ್ಯಾಧರ ದಂಪತಿಗಳ ಆಕರ್ಷಕ ಶಿಲ್ಪಗಳಿವೆ. ಕೆಲವು ಕಥಾ ನಿರೂಪಕ ಶಿಲ್ಪಪಟ್ಟಿಕೆ ಮುಖಮಂಟಪದ ಜಂತಿಯ ಒಳಪಾರ್ಶ್ವದಲ್ಲಿವೆ. ಇವುಗಳಲ್ಲಿ ಪಾರ್ವತೀ ಕಲ್ಯಾಣ, ಕಾಮಕೇಳಿಯಲ್ಲಿರುವ ಸ್ತ್ರೀ ಪುರುಷರು, ನರ್ತಿಸುತ್ತಿರುವ ಗಣಗಳು ಸೇರಿವೆ.

ಮೊದಲನೆಯ ಗುಹಾಲಯದ ಶಿಲ್ಪ ತಂತ್ರದಲ್ಲಿ ಕೆಲವು ಸಾಮಾನ್ಯ ಲಕ್ಷಣಗಳನ್ನು ಕಾಣಬಹುದು. ಉದಾ: ಹಿರಿಗಾತ್ರದ ಉಬ್ಬು ಶಿಲ್ಪಗಳ ಕೆಳಗೆ ವಿವಿಧ ಭಾವಭಂಗಿಗಳಲ್ಲಿರುವ ಗಣರ ಶಿಲ್ಪಪಟ್ಟಿಕೆ ಇರುವುದು; ಹೆಚ್ಚಿನ ಶಿಲ್ಪಗಳು ಆಯತಾಕಾರದ ಚೌಕಟ್ಟಿನಲ್ಲಿ ರೂಪಿತವಾಗಿ ದ್ದರೂ ವೃತ್ತ ಪರಿಧಿಯನ್ನು ಅನುಸರಿಸಿ ಪಾತ್ರಗಳ ಸಂಯೋಜನೆ ರೂಪಿಸಿರುವುದು; ಉಡುಗೆ–ತೊಡುಗೆಗಳಲ್ಲಿ ಸಾಮ್ಯವಿರುವುದು; ರೂಪಕರ್ಮ ರೀತಿ ಹೆಚ್ಚುಕಡಿಮೆ ಒಂದೇ

ರೀತಿಯಾಗಿರುವುದು ಇತ್ಯಾದಿ. ಇದಲ್ಲದೆ ಎಲ್ಲ ದೊಡ್ಡ ಶಿಲ್ಪಗಳಲ್ಲಿಯೂ ಹುಬ್ಬುಗಳು, ತೆರೆದ ಕಣ್ಣುಗಳು, ಎರಡು ಸ್ಪಷ್ಟಗೆರೆಗಳಿಂದ ಮೀನಿನಾಕಾರದಲ್ಲಿ ಸೂಚಿತವಾಗಿರುವ ಕಣ್ಣೆವೆಗಳು ಕಂಡುಬರುತ್ತವೆ.

ಆದರೆ ಮುಖಮಂಟಪ ಭಿತ್ತಿನಲ್ಲಿರುವ ವಿದ್ಯಾಧರ ದಂಪತಿಗಳ ಶಿಲ್ಪಗಳು ಭಿನ್ನ ಶೈಲಿಯವು. ಇಲ್ಲಿ ಮುಖ, ಅಸ್ಪಷ್ಟ ಹುಬ್ಬು ಹಾಗೂ ಮುಚ್ಚು ಕಣ್ಣುಗಳಿರುವುದು ಎರಡನೇ ಗುಹಾಲಯದ ಶಿಲ್ಪಗಳನ್ನು ನೆನಪಿಸುತ್ತವೆ. ಅಂತಾಗಿ ಇವು ಉತ್ತರ ದಖನ್ನಿನ ಶಿಲ್ಪಶೈಲಿಗೆ ಸಾಮ್ಯ ಹೊಂದಿವೆ. ಇದೇ ರೀತಿಯ ಸಾಮ್ಯವನ್ನು ವೃತ್ತಾಕಾರದ ಮೆತ್ತೆಯಂತಹ ಕಲಶ ಭಾಗವುಳ್ಳ ಕಂಬಗಳು, ಸರಳ ಅನಲಂಕೃತ ದೀರ್ಘ ವೃತ್ತಾಕೃತಿಯ ಪ್ರಭಾಮಂಡಲ, ಕಥಾವಸ್ತು ಮುಂತಾದವುಗಳಲ್ಲಿ ಗಮನಿಸಬಹುದು.

ಈ ಗುಹಾಲಯದಲ್ಲಿ ಕೆಲಸಮಾಡಿದರೆನ್ನಬಹುದಾದ ಅಯ್ಚಸ್ವಾಮಿ, ಕಲ್ಕುಟ್ಟಿ, ದೋಣಸಾಮಿ, ನಾಕೆಯ್ಯ, ಮಾರುತಿಸಾಮಿ, ಶ್ರೀಸೋಪಕಾರಿ, ಉಮಾಭಟ, ಅಜ್ಜ, ಗಣಸಾಮಿ, ಮಲ್ಲಿಸಾಮಿ, ಕೊಳಿಮಜ್ಜೆ ಮೊದಲಾದ ಶಿಲ್ಪಿಗಳ ಹೆಸರುಗಳು ನಮಗೆ ತಿಳಿದಿವೆ. ಈ ಹೆಸರುಗಳು 6ನೆಯ ಶತಮಾನದ ಕನ್ನಡ ಅಕ್ಷರಗಳಲ್ಲಿವೆ. ಈ ಗುಹೆಯ ಪಕ್ಕದ ಬಿಲದ ಭಿತ್ತಿನಲ್ಲಿ ಕೆಲವು ಇದೇ ಕಾಲದ ಸಿದ್ಧಮಾತೃಕಾ ಲಿಪಿಯಲ್ಲಿ ಬರೆದಿರುವ ಹೆಸರುಗಳಿವೆ. ಇದರಿಂದ ಶಿಲ್ಪಶೈಲಿ ಹಾಗೂ ಶಿಲ್ಪಗಳ ಹೆಸರುಗಳು ಇಲ್ಲಿ ಕೆಲಸ ಮಾಡಿದ ಶಿಲ್ಪಿಗಳ ಸಮೂಹ ಸಂಕೀರ್ಣ ಸ್ವರೂಪದ್ದಾಗಿತ್ತೆಂಬುದನ್ನು ಸೂಚಿಸುತ್ತವೆ. ಹೆಚ್ಚು ಆಂಧ್ರ–ಕರ್ನಾಟಕ ಶಿಲ್ಪಿಗಳೂ ಕೆಲವೇ ಮಹಾರಾಷ್ಟ್ರ ಪ್ರದೇಶದ ಶಿಲ್ಪಿಗಳೂ ಈ ಗುಹಾಲಯ ನಿರ್ಮಾಣದಲ್ಲಿ ಪಾತ್ರವಹಿಸಿದ್ದಾರೆಂದು ಭಾವಿಸಿದರೆ ತಪ್ಪಾಗದು.

ಬಾದಾಮಿಯ ಎರಡನೆಯ ಗುಹಾಲಯದ ಮುಖ್ಯ ಶಿಲ್ಪಗಳೆಲ್ಲವೂ ಭೂತಗಣಗಳ ಸಾಲುಳ್ಳ ಪಟ್ಟಿಕೆಯ ಮೇಲ್ಗಡೆ ರಚಿತವಾಗಿವೆ. ದ್ವಾರಪಾಲರು, ವರಾಹ, ವಾಮನ–ತ್ರಿವಿಕ್ರಮ– ಇವು ಹಿರಿಯ ಶಿಲ್ಪಗಳು. ದ್ವಾರಪಾಲರು ದ್ವಿಭುಜರಾಗಿದ್ದು, ಅವರ ಪಕ್ಕದಲ್ಲಿ ಸ್ತ್ರೀ ಸೇವಕಿಯನ್ನು ತೋರಿಸಿದೆ. ಅಭಂಗದಲ್ಲಿ ಕರ್ತರಿ ಹಸ್ತರಾಗಿ ದ್ವಾರಪಾಲರು ನಿಂತಿದ್ದಾರೆ.

ಮುಖಮಂಟಪದಲ್ಲಿ ಪೂರ್ವ ಪಾರ್ಶ್ವ ಗೋಡೆಯಲ್ಲಿ ಭೂವರಾಹದ ದೊಡ್ಡ ಶಿಲ್ಪವಿದೆ. ವರಾಹನು ಚತುರ್ಭುಜನಾಗಿದ್ದು, ಎಡಗೈಯಿಂದ ಪದ್ಮದ ಮೇಲೆ ನಿಂತಿರುವ ಭೂದೇವಿಗೆ ಆಧಾರವೊದಗಿಸಿದ್ದಾನೆ. ಅವಳ ಬಲಗೈ ವರಾಹನ ಮುಖದ ಮೇಲೆ ಇರಿಸಲ್ಪಟ್ಟಿದ್ದು ಎಡಗೈ ಇಳಿಬಿಟ್ಟಿದೆ. ವರಹಾನ ಬಲಗೈ ಕಟಿಬಂಧದ ಮೇಲಿದೆ. ಮೇಲಿನ ಮೂಲೆಗಳಲ್ಲಿ ವಿದ್ಯಾಧರ ದಂಪತಿಗಳಿದ್ದಾರೆ. ವರಾಹನ ಶಿರದ ಮೇಲ್ಗಡೆ ಪೂಜಕ ಮುನಿಗಳಿದ್ದಾರೆ.

ಮುಖಮಂಟಪದ ಪಶ್ಚಿಮ ಗೋಡೆಯಲ್ಲಿ ವಾಮನಾವತಾರದ ಕಥಾರೂಪಕ ಶಿಲ್ಪವಿದೆ. ವಿರಾಟರೂಪದ ತ್ರಿವಿಕ್ರಮನ ಎಡಬದಿಗೆ ಕೆಳಗಡೆ ಅಸುರ ಬಲಿಚಕ್ರವರ್ತಿಯ ಪುರೋಹಿತ ಶುಕ್ರಾಚಾರ್ಯನು ವಟುರೂಪದಲ್ಲಿರುವ ವಾಮನರೂಪಿ ವಿಷ್ಣುವಿಗೆ ಅರ್ಘ್ಯ ನೀಡುತ್ತಿದ್ದಾನೆ. ಚೌಕಾಕಾರದ ಈ ದೃಶ್ಯ ಸಂಯೋಜನೆಯಲ್ಲಿ ಬಳಸದೆ ಉಳಿದ ಸ್ಥಳಾವಕಾಶ ತೀರ ಕಡಿಮೆಯಾದ್ದರಿಂದ ಹೆಚ್ಚು ವ್ಯಕ್ತಿ ಪಾತ್ರಗಳನ್ನು ತುಂಬಿರುವಂತೆ ಅನುಭವವಾಗುತ್ತದೆ. ನಾಟಕೀಯ ಭಾವ ಉತ್ಕೃಷ್ಟವಾಗಿದೆ.

ಈ ಗುಹಾಲಯದ ಜಂತಿಗಳ ಒಳ ಪಾರ್ಶ್ವದಲ್ಲಿರುವ ಕಥಾನಿರೂಪಕ ಶಿಲ್ಪಪಟ್ಟಿಕೆಗಳ ಬಗ್ಗೆ ಒಂದೆರಡು ವಿಷಯಗಳನ್ನು ಇಲ್ಲಿ ಹೇಳಬಹುದು. ಅನಂತಶಾಯಿ ವಿಷ್ಣುವಿನ ಪಕ್ಕದಲ್ಲಿ ಅವನ ಆಯುಧಗಳಾದ ಖಡ್ಗ (ನಂದಕ), ಗದೆ (ಕೌಮೋದಕಿ), ಶಂಖ (ಪಾಂಚಜನ್ಯ), ಚಕ್ರ (ಸುದರ್ಶನ) ಇವುಗಳನ್ನು ಮನುಷ್ಯಾಕಾರದಲ್ಲಿ ಅಂದರೆ ಆಯುಧಪುರುಷರ ರೂಪದಲ್ಲಿ ಮಧುಕೈಟಭ ರಾಕ್ಷಸರನ್ನೆದುರಿಸುತ್ತಿರುವಂತೆ ತೋರಿಸಿರುವುದು ಗಮನೀಯ. ಉಳಿದ ಪಟ್ಟಿಕೆಗಳಲ್ಲಿ ಸಮುದ್ರ ಮಥನ, ಭಾಗವತ ಇತ್ಯಾದಿ ಕಥಾನಕಗಳಿವೆ.

ಈ ವೈಷ್ಣವ ಗುಹಾಲಯದ ಶಿಲ್ಪಗಳು ಮೊದಲ ಗುಹಾಲಯಕ್ಕಿಂತ ಭಿನ್ನ ಶೈಲಿಯಲ್ಲಿ ರುವೆ. ಭಂಗಿಗಳ ಆಯ್ಕೆ ಮಕುಟ, ಆಭರಣ, ಪ್ರಭಾಮಂಡಲ, ವೇಷಭೂಷಣಗಳ ರಚನೆ, ಮುಖಭಾವ, ರೂಪಕರ್ಮ ಮುಂತಾದವುಗಳಲ್ಲಿ ಈ ವೈಶಿಷ್ಟ್ಯವನ್ನು ಗುರುತಿಸಬಹುದು. ಹಿರಿಯ ಶಿಲ್ಪಗಳಷ್ಟೇ ಅಲ್ಲದೆ ಅಧಿಕತರ ಕಿರುಶಿಲ್ಪಗಳು ಕೂಡ ಒಂದೇ ಶೈಲಿಗನುಗುಣವಾಗಿ ರಚಿತವಾಗಿರುವುದರಿಂದ, ಇಲ್ಲಿಯ ಹೆಚ್ಚಿನ ಹಿರಿಕಿರಿಯ ಶಿಲ್ಪಗಳೆಲ್ಲ ಒಂದೇ ಶಿಲೆಗೆ ಬದ್ಧವಾಗಿವೆ. ದ್ವಾರಪಾಲ ಶಿಲ್ಪಗಳಂತೂ ಉತ್ತರ ದಖನ್ನಿನ ಎಲ್ಲೋರ, ಎಲಿಫಂಟದ ಗುಹಾಲಯಗಳ ಶಿಲ್ಪಗಳನ್ನು ಶೈಲಿ, ಭಾವ, ಅಭಿವ್ಯಕ್ತಿಗಳಲ್ಲಿ ನೆನಪಿಸುತ್ತವೆ. ಇವನ್ನು ಮಾಡಿದವರು ಆ ಪ್ರದೇಶದಿಂದ ಬಂದ ಶಿಲ್ಪಿಗಳಾಗಿರಬೇಕು. ಇದಲ್ಲದೆ ಈ ಗುಹಾಲಯದ ಪರಿಸರದಲ್ಲಿ ಶಾಂತಿಮೂರ್ತಿ, ದುಟ್ಟೋಜ, ದೋಣ, ಗೊಟ್ಟಿಮೊರ್ಕ, ನಿದ್ದೆಗ, ಬುರು, ವಚ್ಛ, ಅಳಗೆರೆಯ, ಕೇಸವ, ದ್ವಿತ, ಭೀಮ, ದುರ್ವಿಟ ಇತ್ಯಾದಿ ಶಿಲ್ಪಿಗಳ ಹೆಸರುಗಳಿವೆ. ಇವೆಲ್ಲ ಕನ್ನಡ–ತೆಲುಗು ಲಿಪಿಯಲ್ಲಿವೆ. ವಚ್ಛನ ಹೆಸರನ್ನು ಒಮ್ಮೆ ಸಿದ್ಧಮಾತೃಕಾಲಿಪಿಯಲ್ಲಿಯೂ ಬರೆದಿದೆ. ಇದಲ್ಲದೆ ಭಾರತಚಂದ್ರ, ಶರಣಚಂದ್ರ, ಭಮಚಂದ್ರ, ಸಿವಪುತ್ರ, ಯಶದೇವ, ದೇವದಾಸ, ಗಂಗೋಸ್ವಾಮಿ, ಮಹಾರಾಟೆ ಮೊದಲಾದವರ ಹೆಸರುಗಳು ಸಿದ್ಧಮಾತೃಕಾ ಲಿಪಿಯಲ್ಲಿ ಗುಹಾಲಯದ ಪಕ್ಕದ ಬಿಲದ ಭಿತ್ತಿನಲ್ಲಿವೆ. ಹೀಗೆ ಶಿಲ್ಪಶೈಲಿ ಮತ್ತು ಸಿದ್ಧಮಾತೃಕಾ ಲಿಪಿಯ ಬಳಕೆ ಉತ್ತರ ದಖನ್ ಪ್ರದೇಶದ ಶಿಲ್ಪಿಗಳು ಇಲ್ಲಿ ಭಾಗವಹಿಸಿದ್ದನ್ನು ಪುಷ್ಟೀಕರಿಸುತ್ತವೆ.

ಮೂರನೆಯ ಗುಹಾಲಯದ ಅಧಿಷ್ಠಾನದ ಪೂರ್ವಪಾರ್ಶ್ವದ ಗೋಡೆಯಲ್ಲಿ ಅಷ್ಟಭುಜ ವಿಷ್ಣುವಿನ ಬೃಹತ್ ಶಿಲ್ಪವಿದೆ. ಸಮಪಾದದಲ್ಲಿರುವ ವಿಷ್ಣು ತನ್ನ ಬಲ ಕೈಗಳಲ್ಲಿ ಖಡ್ಗ, ಗದೆ, ಬಾಣ, ಚಕ್ರವನ್ನೂ, ಎಡಕೈಯಲ್ಲಿ ಶಂಖ, ಡಾಲು, ಬಿಲ್ಲನ್ನೂ ಧರಿಸಿ ಕಟ್ಯವಲಂಬಿತ ಹಸ್ತನಾಗಿದ್ದಾನೆ. ಕಿರೀಟಮಕುಟದ ಮೇಲೆ ನರಸಿಂಹನು ಚಕ್ರ, ಶಂಖಗಳನ್ನು ಧರಿಸಿ ಮುಂದಣ ಎರಡು ಕೈಗಳನ್ನು ಇರಿಸಿರುವಂತೆ ತೋರಿಸಲಾಗಿರುವುದು ವೈಶಿಷ್ಟ್ಯ. ಶಿರಶ್ಚಕ್ರವು ಬಿಚ್ಚಿದ ಬೀಸಣಿಗೆಯಂತಿದೆ. ಹುಬ್ಬುಗಳನ್ನು ಮತ್ತು ಗದ್ದವನ್ನು ಸ್ಫುಟವಾಗಿ ತೋರಿಸಿದೆ.

ಇದಕ್ಕೆ ಎದುರಾಗಿ, ಪಶ್ಚಿಮ ಪಾರ್ಶ್ವದ ಗೋಡೆಯಲ್ಲಿ ವಾಮನಾವತಾರ ಕಥಾನಿರೂಪಕ ಅದ್ಭುತ ಶಿಲ್ಪವಿದೆ. ತ್ರಿವಿಕ್ರಮನ ಎಡಪಕ್ಕದಲ್ಲೆ ವಟುರೂಪದ ವಾಮನ, ವಿಷ್ಣು, ಮಡದಿ ಸಮೇತನಾದ ಬಲಿಚಕ್ರವರ್ತಿಯಿಂದ ಪುರೋಹಿತ ಶುಕ್ರಾಚಾರ್ಯನ ಮೂಲಕ ದಾನ ಸ್ವೀಕರಿಸುತ್ತಿರುವ ದೃಶ್ಯವಿದೆ. ಶುಕ್ರಾಚಾರ್ಯನನ್ನು ಬುದ್ಧನಂತೆ ತೋರಿಸಿರುವುದು ಗಮನಾರ್ಹ. ಸಂಯೋಜನೆಯ ಕೇಂದ್ರವಸ್ತು ತ್ರಿವಿಕ್ರಮ ರೂಪ ತಾಳಿರುವ ಅಷ್ಟಭುಜ ವಿಷ್ಣು: ಖಡ್ಗ, ಗದೆ, ಬಾಣ, ಚಕ್ರ, ಶಂಖ, ಬಿಲ್ಲು, ಡಾಲು ಧರಿಸಿ, ಎಡಗೈಯನ್ನು ಮೇಲೆತ್ತಿರುವ ಎಡಗಾಲಿಗೆ ಸಮಾನಾಂತರವಾಗಿ ಹಿಡಿದು ಬೆರಳನ್ನು ಮುಖವಾಡದಂತಹ ರಾಹುವಿನ ಮುಖದೆಡೆಗೆ ತೋರಿಸುತ್ತಿದ್ದಾನೆ. ಸಿಲಿಂಡರಿನಾಕಾರದ ಕಿರೀಟವನ್ನು ಆಕರ್ಷಕವಾಗಿ ಅಲಂಕರಿಸಿದೆಯಲ್ಲದೆ ಶಿರಶ್ಚಕ್ರವನ್ನು ಬಿಚ್ಚಿದ ಬೀಸಣಿಗೆಯಂತೆ ತೋರಿಸಿದೆ. ಹುಬ್ಬು, ಕಣ್ಣೆವೆಗಳು, ಗದ್ದ, ಆಭರಣಾದಿ ಗಳು ಸ್ಫುಟವಾಗಿವೆ. ಬಲಿಯ ಮಗ ನಮುಚಿ ಬಲಪಕ್ಕದಲ್ಲಿ ತ್ರಿವಿಕ್ರಮನ ಕಾಲನ್ನು ಹಿಡಿದು ಅವನನ್ನು ತಡೆಯುವ ವ್ಯರ್ಥ ಪ್ರಯತ್ನದಲ್ಲಿದ್ದಾನೆ. ಮೇಲ್ಗಡೆ ಜಾಂಬವನ್, ಗರುಡ ಹಾಗೂ ಚಂದ್ರರನ್ನು ಪತಾಕಹಸ್ತದಲ್ಲಿ ಕೈಯೆತ್ತಿ ಹಾರುತ್ತಿರುವಂತೆ ತೋರಿಸಿದೆ. ಈ ಶಿಲ್ಪ ಸಂಯೋಜನೆ ನಾಟಕೀಯ ಸನ್ನಿವೇಶವನ್ನು ಅದ್ಭುತಾಶ್ಚರ್ಯ ರೀತಿಯಲ್ಲಿ ಮೂರ್ತಗೊಳಿಸು ವಲ್ಲಿ ಯಶಸ್ವಿಯಾಗಿದೆ.



ಕಥಾನಕ ಶಿಲ್ಪ, ಪಟ್ಟದಕಲ್ಲು

ಮುಖಮಂಟಪದ ಪೂರ್ವ ಗೋಡೆಯಲ್ಲಿರುವ ಅನಂತಾಸೀನ ವಿಷ್ಣು ಶಿಲ್ಪ ಸಂಗೀತ, ನೃತ್ಯಗಳಲ್ಲಿ ತಲ್ಲೀನನಾಗಿರುವ ಗಣಗಳ ಪಟ್ಟಿಕೆಯ ಮೇಲಿದೆ. ಸುಖಾಸೀನನಾಗಿ ಐದು ಹೆಡೆಗಳ ಸರ್ಪದ ಮೇಲೆ ಕುಳಿತಿರುವ ಚತುರ್ಭುಜ ವಿಷ್ಣು, ಬಲಗೈಯಲ್ಲಿ ಫಲವನ್ನು ಹಿಡಿದು, ಎಡಗೈಯನ್ನು ತೊಡೆಯಮೇಲಿರಿಸಿದ್ದಾನೆ. ಮೇಲಣ ಕೈಗಳು ಚಕ್ರ ಮತ್ತು ಶಂಖ ಧರಿಸಿವೆ. ತಲೆಯ ಹಿಂದೆ ಸರಳವಾದ, ದೀರ್ಘವೃತ್ತಾಕೃತಿಯ ಪ್ರಭಾಮಂಡಲ ವಿದೆ. ಕಣ್ಣುಹುಬ್ಬುಗಳನ್ನು ತೋರಿಸಿದೆ. ಇವನ ಅಕ್ಕಪಕ್ಕದಲ್ಲಿ ನಾಗಕನ್ನಿಕೆಯರು ನಿಂತಿದ್ದಾರೆ. ಸರ್ಪಾಸನದ ಬಲಪಾರ್ಶ್ವದಲ್ಲಿ ಗರುಡನು ಕೈಕಟ್ಟಿಕೊಂಡು ತನ್ನ ಸ್ವಾಮಿಯ ಆದೇಶಕ್ಕಾಗಿ ಕಾಯ್ದು ಕುಳಿತಿದ್ದಾನೆ. ಎಡಪಾರ್ಶ್ವದಲ್ಲಿ ಸ್ತ್ರೀಯೊಬ್ಬಳು ಆತುಕೊಂಡು ಕುಳಿತಿದ್ದಾಳೆ. ವೇಷಭೂಷಣಗಳ ಕೂಲಂಕಷ ವಿವರಗಳುಳ್ಳ ಈ ಶಿಲ್ಪ ಪ್ರಮಾಣಬದ್ಧತೆ, ದೈವೀ ವ್ಯಕ್ತಿತ್ವ, ನಿರೂಪಣೆ, ಗಾಂಭೀರ್ಯಾಭಿವ್ಯಕ್ತಿ ಸಂಯೋಜನಾಚಾತುರ್ಯ, ರೂಪಕರ್ಮ ಮುಂತಾದವು ಗಳಿಂದ ಮನಸೆಳೆಯುವ ಅದ್ಭುತ ಕೃತಿ. ಉಬ್ಬು ಶಿಲ್ಪವಾಗಿದ್ದರೂ ದುಂಡುಶಿಲ್ಪದ ಅಭಾಸ ನೀಡಬಲ್ಲ ಸಾಮರ್ಥ್ಯ ಈ ಶಿಲ್ಪಕ್ಕಿದೆ.

ಇದರ ಪಕ್ಕದಲ್ಲಿ ಗಣಗಳ ಪಟ್ಟಿಕೆಯ ಮೇಲ್ಗಡೆ, ಬೃಹದಾಕಾರದ ಭೂವರಾಹ ಉಬ್ಬುಶಿಲ್ಪವಿದೆ. ಸಾಗರದಾಳವನ್ನು ಸೂಚಿಸುವ ಸರ್ಪದ ದೇಹದ ಸುರುಳಿಯ ಮೇಲೆ ಎಡ ಕಾಲಿರಿಸಿ ನಿಂತಿರುವ ಭೂವರಾಹನು ಚತುರ್ಭುಜನಾಗಿದ್ದಾನೆ. ಬಲಗೈ ಕಟ್ಯವಲಂಬಿತ ವಾಗಿದೆ. ಎಡಗೈ ಪದ್ಮದ ಮೇಲೆ ನಿಂತಿರುವ ಭೂದೇವಿಗೆ ಆಧಾರವೊದಗಿಸಿದೆ. ಪೃಥ್ವಿವಲ್ಲಭರಾದ

ಚಲುಕ್ಯರ ರಾಜಲಾಂಛನವೆನಿಸಿರುವ ವರಾಹನಿಗೆ ರಾಜಪ್ರತಿಷ್ಠೆಯ ನಿರ್ಮಿತಿಯೆನಿಸುವ ಈ ಗುಹಾಲಯದಲ್ಲಿ ಮಹದಾಕಾರದ ಸ್ಥಾನ ಔಚಿತ್ಯಪೂರ್ಣವಾಗಿದೆ. ಮುಖಮಂಟಪದ ಪಶ್ಚಿಮ ಗೋಡೆಯಲ್ಲಿ ಅಪರೂಪದ ಭಂಗಿಯಲ್ಲಿರುವ ಚತುರ್ಭುಜ ಸ್ಥಾನಕ ನರಸಿಂಹ ವಿಗ್ರಹವಿದೆ. ನರಸಿಂಹನ ಮುಖ್ಯ ಬಲಗೈ ಕಟಕಮುದ್ರೆಯಲ್ಲಿದೆ; ಎಡಗೈ ಗದೆಯ ಮೇಲಿದೆ. ಮೇಲಣ ಕೈಗಳಲ್ಲಿ ಆಯುಧ ಪುರುಷರು ಸುದರ್ಶನ ಮತ್ತು ಪಾಂಚಜನ್ಯ ಶಂಖ ಇದ್ದಾರೆ. ಸಿಂಹಮುಖದ ಶಿರೋಭಾಗದಲ್ಲಿ ಅರಳಿದ ಪದ್ಮವಿದೆ. ನರಸಿಂಹನ ಬಲ ಪಾರ್ಶ್ವದಲ್ಲಿ ಕುಬ್ಜಾಕಾರದ ಪ್ರಹ್ಲಾದನಿದ್ದಾನೆ. ಅಸುರನೆಂದು ಸೂಚಿಸಲು ಇವನ ಕೂದಲುಗಳನ್ನು ಗುಂಗುರು ಗುಂಗುರಾಗಿ ತೋರಿಸಿದೆ. ಎಡಪಾರ್ಶ್ವದಲ್ಲಿ ಗದೆಯ ಪಕ್ಕದಲ್ಲಿ, ಕಟ್ಯವಲಂಬಿತನಾಗಿ ಗರುಡ ನಿಂತಿದ್ದಾನೆ. ಮೇಲ್ಗಡೆ ಮಾಲಾವಾಹಕರಾಗಿ ಎರಡು ಜೋಡಿ ವಿದ್ಯಾಧರ ದಂಪತಿಗಳು ತೇಲುತ್ತಿದ್ದಾರೆ.

ಇದರ ಪಕ್ಕದಲ್ಲಿ ಹರಿಹರ ಶಿಲ್ಪವಿದೆ. ಬಲಗೈಗಳಲ್ಲಿ ಫಲ, ಪರಶು ಹಾಗೂ ಎಡಗೈಗಳಲ್ಲಿ ಶಂಖ ಮತ್ತು ಕಟ್ಯವಲಂಬಿತ ಹಸ್ತವಿರುವ ಈ ದೇವತೆಯ ಮಕುಟ ಎತ್ತರವಾಗಿದೆ; ತಲೆಯ ಹಿಂದಿರುವ ಶಿರಶ್ಚಕ್ರ ಬಿಚ್ಚಿದ ಬೀಸಣಿಕೆಯಂತಿದೆ. ಕಣ್ಣು ಹುಬ್ಬನ್ನು ಸ್ಪಷ್ಟವಾಗಿ ಸೂಚಿಸಿದ್ದರೂ ಕಣ್ಣೆವೆಗಳನ್ನು ಏರಿಳಿತಗಳ ಮೂಲಕ ಮಾತ್ರ ತೋರಿಸಿದ್ದಾರೆ. ತುಟಿ, ಗದ್ದ ಸ್ಪಷ್ಟವಾಗಿವೆ. ಇತರ ಶಿಲ್ಪಗಳಲ್ಲಿರುವಂತೆ ವಿವಿಧ ಆಭರಣಗಳು ಅವನ ದೇಹವನ್ನು ಅಲಂಕರಿಸಿವೆ.


ವಿಷ್ಣು-ದುರ್ಗ ದೇವಾಲಯ, ಐಹೊಳೆ

ಮೇಲೆ ವರ್ಣಿಸಿರುವ ಶಿಲ್ಪಗಳಲ್ಲಿ ಅನಂತಾಸೀನ ವಿಷ್ಣು ಮತ್ತು ವರಾಹ ವಿಗ್ರಹಗಳು ಮಾತ್ರ ಮೂಲ ವಿಗ್ರಹಗಳೆಂದೂ ಉಳಿದವುಗಳು ತದನಂತರ ಪಲ್ಲವ ನರಸಿಂಹವರ್ಮನು ಬಾದಾಮಿಯನ್ನಾಕ್ರಮಿಸಿದ್ದಾಗ ರೂಪಿತವಾಗಿವೆಯೆಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ಶಿಲ್ಪಗಳಿಗೆ ವಿಜಯನಗರ ಕಾಲದಲ್ಲಿ ತುಸು ಸಂಸ್ಕಾರ ನೀಡಲಾಗಿದೆ.

ಮೂರನೆಯ ಗುಹಾಲಯದಲ್ಲಿ ಮನಸೂರೆಗೊಳ್ಳುವ ಇತರ ಶಿಲ್ಪಗಳೆಂದರೆ ಕಂಬಗಳನ್ನಲಂಕರಿಸಿರುವ ಬೋದಿಗೆ ವಿಗ್ರಹಗಳು. ಎತ್ತರದಲ್ಲಿರುವುದರಿಂದ ಇವು ಹಾಳಾಗದೆ ಉಳಿದು ಬಂದಿವೆ. ತುಸು ಎತ್ತರವಾದ ನೀಳ ಮೈಕಟ್ಟಿನ ವ್ಯಕ್ತಿಗಳು ಇಲ್ಲಿ ಕಂಡುಬರುತ್ತಿವೆ. ಸಾಮಾನ್ಯ ವಾಗಿ ಕಂಬಗಳ ಪೂರ್ವ, ಪಶ್ಚಿಮ ಪಾರ್ಶ್ವಗಳಲ್ಲಿ ಮಿಥುನಗಳು, ದಕ್ಷಿಣ ಪಾರ್ಶ್ವದಲ್ಲಿ ಪ್ರಿಯಕರನಿಗಾಗಿ ಹಾತೊರೆಯುತ್ತ ನಿಂತಿರುವ ನಾಯಿಕೆಯರು ರೂಪಿತರಾಗಿದ್ದಾರೆ. ಇವುಗಳಲ್ಲಿ ನಾಗ-ನಾಗಿಣೀ ದಂಪತಿ, ಕಾಪಾಲೀ ಶಿವ ಮತ್ತು ಪಾರ್ವತಿ, ಅರ್ಧನಾರೀ, ಕಾಮ-ರತಿ, ಶಿವ-ಪಾರ್ವತಿ, ದರ್ಪಣಸುಂದರಿ, ಪ್ರಿಯಕರನಿಗೆ ಪತ್ರ ಬರೆಯಲು ಉದ್ಯುಕ್ತಳಾಗುತ್ತಿರುವ ಅಥವಾ ಬರೆದು ಮುಗಿಸಿರುವ ನಾಯಿಕೆ, ಕಾಮಸೂತ್ರದ ಸನ್ನಿವೇಶಗಳನ್ನು ಉದಾಹರಿಸುವ ಮಿಥುನಗಳು ಮನೋಹರವಾಗಿವೆ. ಇವೆಲ್ಲವುಗಳು ವಿವಿಧ ವೃಕ್ಷಗಳ ಹಿನ್ನೆಲೆಯಲ್ಲಿ ಪ್ರತೀಹಾರ-ಪ್ರತೀಹಾರಿಯರೊಂದಿಗೆ ಚಿತ್ರಿತವಾಗಿವೆ.

ಕಪೋತದಲ್ಲಿರುವ ಗರ್ಭಗೃಹಕ್ಕೆ ಮುಖ ಮಾಡಿ ಹಾರುತ್ತಿರುವ ಗರುಡನ ಬೃಹತ್ ಶಿಲ್ಪ ಇಲ್ಲಿಯ ಇನ್ನೊಂದು ಅದ್ಭುತ ಕೃತಿ. ಹುಬ್ಬುಗಳನ್ನೇರಿಸಿ ಕಣ್ಣುಗಳನ್ನು ತೆರೆದು ಕುಬ್ಜ ಮೈಕಟ್ಟಿನೊಂದಿಗೆ ಬಲಗೈಯಲ್ಲಿ ಹಾವನ್ನು ಹಿಡಿದು ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿರುವ ಗರುಡನ ಇಬ್ಬದಿಗಳಲ್ಲಿ ಖಡ್ಗ-ಢಾಲು ಹಿಡಿದು ಕಂಠಾಶ್ಲೇಷ ರೀತಿಯಲ್ಲಿ ಹಾರುತ್ತಿರುವ ವಿದ್ಯಾಧರ ದಂಪತಿಗಳಿದ್ದಾರೆ. ಇದು ನೆಲವರ್ಕೆ ಎಂಬ ಶಿಲ್ಪಿಯ ಕೃತಿ. ಕಪೋತದ ಒಳಮುಖದುದ್ದಕ್ಕೂ ವರ್ಣಚಿತ್ರಗಳಿದ್ದವು. ಈಗ ಹಾಳಾಗಿವೆ.

ಮುಖಮಂಟಪದ ತೊಲೆಗಳ ಒಳಪಾರ್ಶ್ವಗಳುದ್ದಕ್ಕೂ ಮಹಾಭಾರತ, ಹರಿವಂಶ, ವಿಷ್ಣುಪುರಾಣಗಳಿಂದ ಆಯ್ದ ಪೌರಾಣಿಕ ಕಥಾನಿರೂಪಕ ಶಿಲ್ಪಪಟ್ಟಿಕೆಗಳಿವೆ. ಸಮುದ್ರ ಮಥನದ, ಪಾರಿಜಾತಾಹರಣ, ಗಜಲಕ್ಷ್ಮಿ ಹಾಗೂ ಹಿರಣ್ಯಕಶಿಪು ವಧೆ, ಕೃಷ್ಣಚರಿತ ಇತ್ಯಾದಿ ದೃಶ್ಯಗಳಿವೆ.

ಒಂದು ಮತ್ತು ಎರಡನೆಯ ಗುಹಾಲಯಗಳಲ್ಲಿ ವಿಭಿನ್ನ ಶಿಲ್ಪಪರಂಪರೆಯಲ್ಲಿ ತರಬೇತಾಗಿದ್ದ ಶಿಲ್ಪಿಗಳೇ ಮೂರನೆಯ ಗುಹಾಲಯದಲ್ಲಿ ಸಮಪ್ರಾಣದಲ್ಲಿ ಕಾರ್ಯಪ್ರವೃತ್ತರಾಗಿದ್ದರೆಂದು ಅನಿಸುತ್ತದೆ. ಅನಂತಾಸೀನ ವಿಷ್ಣು ಮತ್ತು ವರಾಹ ಶಿಲ್ಪಗಳ ರೂಪಕರ್ಮ ವಿವರಗಳು ಎರಡನೆಯ ಗುಹಾಲಯದ ಶಿಲ್ಪಪರಂಪರೆಯ ಮುಂದುವರಿಕೆಯ ಸೂಚನೆಗಳನ್ನೊಳಗೊಂಡಿವೆ. ಅಷ್ಟಭುಜ ವಿಷ್ಣು, ಹರಿಹರ ಮತ್ತು ತ್ರಿವಿಕ್ರಮ ಶಿಲ್ಪಗಳು ಮೊದಲ ಗುಹಾಲಯದ ಶಿವ-ದ್ವಾರಪಾಲನ ಶಿಲ್ಪ ರೀತಿಯನ್ನು ನೆನೆಪಿಸುತ್ತವೆ. ಅನಂತಾಸೀನ ವಿಷ್ಣು, ವರಾಹ, ಅಷ್ಟಭುಜ ವಿಷ್ಣು, ತ್ರಿವಿಕ್ರಮ, ನರಸಿಂಹ ಶಿಲ್ಪಗಳಲ್ಲಿ ಮೂಲ ವಿಗ್ರಹಗಳ ಮುಖಗಳಿಗೆ ವಿಜಯನಗರ ಕಾಲದಲ್ಲಿ ಸಂಸ್ಕಾರನೀಡಿರುವುದು ಸ್ಪಷ್ಟವಿದೆ. ಈ ಗುಹಾಲಯದ ಶಿಲ್ಪಗಳ ಕೆತ್ತನೆ ಆಳವಾಗಿರುವುದರಿಂದ ಈ ಶಿಲ್ಪಗಳು ಉಬ್ಬುಶಿಲ್ಪಗಳಾಗಿದ್ದರೂ ದುಂಡು ಶಿಲ್ಪಗಳಂತೆ ಕಾಣುತ್ತವೆ.

ಈ ಗುಹಾಲಯಕ್ಕೆ ಸಂಬಂಧಿಸಿದಂತೆ ಕೆಲವು ಶಿಲ್ಪಿಗಳ ಹೆಸರುಗಳಿವೆ. ಕಪೋತದಲ್ಲಿಯ ಗರುಡನ ಉಬ್ಬುಶಿಲ್ಪ ನೆಲವರ್ಕೆಯ ಶ್ರೇಷ್ಠ ಕೃತಿ. ಕೊಣ್ಣಿಮಞ್ಚಿ, ವಸುದೇವ, ಶಕುಲ ಅಯ್ಯ, ಪಞ್ಚಿಣ, ಚೋಳ ದೇವರೆಯ ಕಲ್ಕುಟ್ಟಿಗ, ಗುಣಪಾಲ, ಅಜ, ಆಚಾರಸಿದ್ಧಿ, ರೂಪಶೇಖರ, ಅರ್ಯ್ಯಚಟ್ಟ, ಕೋಳಿಮಞ್ಚಿ, ಪಲಮಞ್ಚಿ, ವಿಮಲ, ದೋಣ, ಕೊಟ್ಟಲ, ಕಾನ್ತಿಮಞ್ಚಿ, ಸಾಮಿಚನ್ದ, ಬಿಜಯ ಓವಜ ಮೊದಲಾದವರಲ್ಲದೆ ನಾಲ್ಕನೆಯ ಗುಹಾಲಯದಲ್ಲಿಯೂ ಕೆಲಸ ಮಾಡಿರಬಹುದಾದ ಇನ್ನಿತರರು ಪ್ರಮುಖರಾಗಿದ್ದರೆ, ಅವಮೂರ್ಧ್ನ (ಶಂಕು) ಲಿಪಿಯಲ್ಲಿ ಬರೆದಿರುವ ಕೆಲವು ಹೆಸರುಗಳಿವೆಯಾದರೂ ಇವುಗಳನ್ನು ಓದುವುದಾಗಿಲ್ಲ. ವಿಪ್ರಮನೋಹರ ಎಂಬಾತನು ಈ ಗುಹೆಯ ಕೆಲವು ವರ್ಣಚಿತ್ರಗಳನ್ನು ರಚಿಸಿದಾತ; ಬಣ್ಣದಿಂದ ಬರೆದಿರುವ ಈತನ ಹೆಸರು ಕಪೋತದಲ್ಲಿ ಕಾಣಸಿಗುತ್ತದೆ.

ನಾಲ್ಕನೆಯ ಜೈನಗುಹೆಯಲ್ಲಿರುವ ಶಿಲ್ಪಗಳಲ್ಲಿ ಬಾದಾಮಿ ಚಳುಕ್ಯರ ಕಾಲಕ್ಕೆ ಅನ್ವಯಿಸಬಹುದಾದವುಗಳು ಮೂರು ಮಾತ್ರ: ಗರ್ಭಗೃಹದಲ್ಲಿರುವ ಜಿನ; ಮುಖಮಂಟಪದಲ್ಲಿರುವ ಪಾರ್ಶ್ವನಾಥ ಹಾಗೂ ಬಾಹುಬಲಿ: ಗರ್ಭಗೃಹದ ಹಿಂಗೋಡೆಯಲ್ಲಿ ಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜಿನನ ಕೈಗಳು ಧ್ಯಾನಮುದ್ರೆಯಲ್ಲಿವೆ. ತಲೆಯ ಹಿಂದೆ ಪ್ರಭಾಮಂಡಲವಿದೆ. ಮೇಲ್ಗಡೆ ಮುಕ್ಕೊಡೆ ಹಾಗೂ ಅಶೋಕವೃಕ್ಷದ ಹಿನ್ನೆಲೆಯಿದೆ. ಇದು ಮಹಾವೀರನು ಸಮವಸರಣ ಮಂಟಪದಲ್ಲಿ ದಿವ್ಯಧ್ವನಿಯಿಂದ ಪ್ರಥಮೋಪದೇಶ ನೀಡುವ ಸಂದರ್ಭವಾಗಿದೆ.

ಮುಖಮಂಟಪದ ಪೂರ್ವಗೋಡೆಯಲ್ಲಿ ಬಾಹುಬಲಿ (ಗೊಮ್ಮಟ) ಕಾಯೋತ್ಸರ್ಗ ಮುದ್ರೆಯಲ್ಲಿ ಕಾಯೋತ್ಸರ್ಗದಲ್ಲಿ ನಿಂತಿದ್ದಾನೆ. ಅವನ ಕೂದಲುಗಳು ಜಡೆಗಟ್ಟಿವೆ. ಕೈಕಾಲುಗಳಿಗೆ ಮಾಧವೀಲತೆಗಳು ಸುತ್ತಿಕೊಂಡಿವೆ. ಕಾಲ ಹತ್ತಿರ ಬೆಳೆದಿರುವ ಹುತ್ತಗಳಿಂದ ನಾಗರಹಾವುಗಳು ಹೊರಬಂದಿದೆ. ವಿದ್ಯಾಧರಿಯರು ಅವನ ಕೈಕಾಲುಗಳಿಗೆ ಸುತ್ತಿಕೊಂಡಿರುವ ಮಾಧವೀಲತೆಗಳನ್ನು ಬಿಡಿಸುತ್ತ ನಿಂತಿದ್ದಾರೆ.

ಪಶ್ಚಿಮ ಗೋಡೆಯಲ್ಲಿರುವ ಕಮಠೋಪಸರ್ಗ ದೃಶ್ಯದಲ್ಲಿ ಪಾರ್ಶ್ವನಾಥನು ಐದು ಹೆಡೆಯ ಹಾವಿನ (ಧರಣೇಂದ್ರ ಯಕ್ಷನ) ಕೆಳಗೆ ಕಾಯೋತ್ಸರ್ಗದಲ್ಲಿ ನಿಂತಿದ್ದಾನೆ. ಅವನ ಬಲ ಮತ್ತು ಎಡ ಪಾರ್ಶ್ವಗಳಲ್ಲಿ ಅಪೂರ್ಣ ಶಿಲ್ಪಗಳಿವೆ. ಬಲಪಕ್ಕದಲ್ಲಿರುವ ಪದ್ಮಾವತಿ ಯಕ್ಷಿ ಪಾರ್ಶ್ವನಾಥನ ಮೇಲಿನ ಹಾವಿನ ಹೆಡೆಗಳ ಮೇಲೆ ಬರುವಂತೆ ವಜ್ರಕೊಡೆ ಹಿಡಿದಿದ್ದಾಳೆ. ಮೇಲ್ಗಡೆ ಪಾರ್ಶ್ವನಾಥನ ಜನ್ಮಜನ್ಮಾಂತರಗಳ ವೈರಿಯಾಗಿದ್ದ ಉಗ್ರಮುಖದ ಕಮಠನು ಎರಡೂ ಕೈಗಳಿಂದ ಬಂಡೆಯನ್ನು ಎಸೆಯಲು ಪ್ರಯತ್ನಿಸುತ್ತಿರುವಂತಿದೆ. ಕೆಳಗಡೆ ಸೋತ ಕಮಠನು ಬಲಗೈಯನ್ನು ವಿಸ್ಮಯಮುದ್ರೆಯಲ್ಲಿ ಎತ್ತಿ ಕುಳಿತಿದ್ದಾನೆ.

ಇಲ್ಲಿರುವ ಕೆಲವೇ ಶಿಲ್ಪಗಳು ಮೂರನೆಯ ಗುಹಾಲಯದ ಶಿಲ್ಪ ಪರಂಪರೆಯನ್ನು ನೆನಪಿಸುತ್ತವೆ. ಗುಹಾಲಯದ ಪರಿಸರದಲ್ಲಿ ಅನೇಕ ಶಿಲ್ಪಿಗಳ ಹೆಸರುಗಳಿವೆ ಕಾನ್ತಿಮಞ್ಚಿ, ಕಣ್ನು, ಪೆಲಮಞ್ಚಿ, ಸಿಗಮಞ್ಚಿ, ಹರಿಕೆ, ಭವಸ್ವಾಮಿ ಆರ್ಯ್ಯ, ಉದಗ್ರ, ಕೇಸವ, ಪಞ್ಚಿಣ, ವಿಜಾಮ್ಮ, ಪ್ರಸನ್ನ ಬುದ್ಧಿ, ಆರಿಕ್ಕೆ, ಭಾದುಕ್ಕೆ, ಸಿರಿಗೆರೆಯ, ಕೋಳಿಮಞ್ಚಿ, ಕದ್ರಸ್ವಾಮಿ, ಮಾರ್ಗಜ, ಶ್ರೀನಿಧಿದೇವ, ಅನನ್ತಮಞ್ಚಿ ಮುಂತಾದವು ಉಲ್ಲೇಖಾರ್ಹ.

ಸಭಾಮಂಟಪದಲ್ಲಿರುವ ಶಿಲ್ಪಗಳು ವಿಶಿಷ್ಟ ಪ್ರತಿಮಾಲಕ್ಷಣಗಳಿಂದೊಡಗೂಡಿ ಆಕರ್ಷಕವಾಗಿವೆ. ವಾಯವ್ಯ ಬದಿಯಲ್ಲಿರುವ ಅರ್ಧನಾರೀಶ್ವರ ಬಲಗೈಯಲ್ಲಿ ಎತ್ತರವಾದ ತ್ರಿಶೂಲ, ಎಡಗೈಯಲ್ಲಿ ಕುರುಳನ್ನು ಸ್ತ್ರೀ ಸಹಜ ಲಾವಣ್ಯದಿಂದ ಹಿಡಿದಿದ್ದಾನೆ. ವೇಷಭೂಷಣ ಹಾಗೂ ದೇಹ ವಿವರಗಳಲ್ಲಿ ಶಿವ ಮತ್ತು ಪಾರ್ವತಿ ಭಾಗಗಳ ಅಂತರವನ್ನು ಸೂಚಿಸಲಾಗಿದೆ. ತ್ರಿಶೂಲದ ಕೆಳಗಡೆ ಶಿವಗಣನನ್ನು ಹಾಗೂ ನಾರೀ ಭಾಗದ ಕೆಳಗಡೆ ಸಿಂಹವನ್ನು ಚಿತ್ರಿಸಿದೆ. ಮಕುಟವು ಎತ್ತರವಾಗಿದ್ದು, ಶಿರದ ಹಿಂಗಡೆ ಬಿಚ್ಚಿದ ಬೀಸಣಿಕೆಯಂತಹ ಶಿರಶ್ಚಕ್ರವಿದೆ. ಮೈಮಾಟ ಮುಖಭಾವ ಮತ್ತು ಭಂಗಿ ಆಕರ್ಷಕವಾಗಿವೆ.

ಆಗ್ನೇಯ ಬದಿಯ ದ್ವಾರಪಾಲನ ಪಕ್ಕದಲ್ಲಿ ಹರಿಹರನ ಶಿಲ್ಪವಿದೆ. ಸಮಪಾದನಾಗಿ ನಿಂತಿರುವ ಈತನ ಬಲಗೈಗಳಲ್ಲಿ ರುದ್ರಾಕ್ಷಿಮಾಲೆ ಹಾಗೂ ಸರ್ಪ ಇವೆ; ಎಡ ಕೈಗಳಲ್ಲಿ ಮೇಲಿನದು ಶಂಖವನ್ನು ಧರಿಸಿದ್ದು, ಕೆಳಗಿನದನ್ನು ಕಟ್ಯವಲಂಬಿತ ರೀತಿಯಲ್ಲಿದ್ದಾನೆ.

ಈ ಶಿಲ್ಪಕ್ಕೆ ಎದುರಾಗಿ ನೈರುತ್ಯ ಬದಿಯಲ್ಲಿ ಗಂಗಾಧರ ಶಿವನ ಅಪರೂಪದ ಶಿಲ್ಪವಿದೆ. ಚತುರ್ಭುಜನಾಗಿ ಸಮಪಾದದಲ್ಲಿ ನಿಂತಿರುವ ಶಿವನ ಮುಖ್ಯ ಬಲಗೈ ಕಟಕಹಸ್ತದಲ್ಲಿದೆ; ಎಡಗೈ ಕಟ್ಯವಲಂಬಿತವಾಗಿದೆ. ಉಳಿದೆರಡು ಮೇಲಣ ಕೈಗಳಿಂದ ಆತ ಗಂಗೆಯನ್ನು ಧರಿಸುವುದಕ್ಕಾಗಿ ಜಟೆಗಳನ್ನು ಬಿಡಿಸಿ ಹಿಡಿದಿದ್ದಾನೆ. ಮೇಲ್ಗಡೆ ಗಂಗೆ ಸ್ತ್ರೀರೂಪದಲ್ಲಿ, ತ್ರಿಪಥಗಾಮಿನಿಯಾಗಿ ಕೈಮುಗಿದು ಇಳಿದುಬರುತ್ತಿದ್ದಾಳೆ. ಶಿವನ ಬಲಪಾರ್ಶ್ವದಲ್ಲಿ ಕೈಗಳನ್ನು ಮೇಲಕ್ಕೆ ಎತ್ತಿ ಒಂಟಿಗಾಲ ಮೇಲೆ ತಪಸ್ಸು ಮಾಡುತ್ತಿರುವ ಭಗೀರಥನಿದ್ದಾನೆ. ಎಡಪಾರ್ಶ್ವದಲ್ಲಿ ಪಾರ್ವತಿ ಬಲಗೈಯನ್ನು ಗದ್ದದ ಮೇಲೆ ಇರಿಸಿ ಆಶ್ಚರ್ಯ ಸೂಚಿಸುತ್ತಿದ್ದಾಳೆ.

ಸಭಾಮಂಟಪದ ಉತ್ತರ ಪಾರ್ಶ್ವದಲ್ಲಿರುವ ನಟರಾಜ ಮಂಟಪದಲ್ಲಿ ದಶಭುಜ ನಟರಾಜ ಶಿವ ಸಮಚತುರ ಸ್ಥಿತಿಯಲ್ಲಿ ಸಪ್ತಮಾತೃಕೆಯರೊಂದಿಗೆ ನೃತ್ಯದಲ್ಲಿ ತೊಡಗಿದ್ದಾನೆ. ಮೇಲಣ ಎರಡು ಕೈಗಳು ಸರ್ಪವನ್ನು ಎತ್ತಿ ಬಿಡಿಸಿ ಹಿಡಿದಿವೆ. ಬಲಗೈಗಳಲ್ಲಿ ಒಂದು ಪರಶು ಹಾಗೂ ಇನ್ನೊಂದು ಡಮರುಗ ಧರಿಸಿವೆ. ಉಳಿದ ಕೈಗಳು ವಿವಿಧ ನಾಟ್ಯಮುದ್ರೆಗಳಲ್ಲಿವೆ. ಶಿವನ ಬಲಬದಿಗೆ ಕುಳ್ಳ ಬಾಲ ಗಣೇಶ ಮೂಲಕನ್ದ ಹಾಗೂ ಮೋದಕ ಪಾತ್ರೆ ಹಿಡಿದು ನಿಂತಿದ್ದಾನೆ; ಎಡಗಡೆ ಕುಮಾರನಿದ್ದಾನೆ. ಶಿವನ ಎಡಪಕ್ಕದಲ್ಲಿ ಪಾರ್ವತಿ ವಿಶಿಷ್ಟ ತ್ರಿಭಂಗಿಯಲ್ಲಿದ್ದು, ಬಲಗೈಯನ್ನು ಭುಜದ ಹತ್ತಿರ ಇರಿಸಿ ಎಡಗೈಯನ್ನು ಲೋಲಹಸ್ತದಲ್ಲಿ ಇಳಿಬಿಟ್ಟಿದ್ದಾಳೆ. ನರ್ತಿಸುತ್ತಿರುವ ಸಪ್ತಮಾತೃಕೆಯರಲ್ಲಿ ಕೆಲವರು ಕಾಲಮಂಡಿಯವರೆಗೆ, ಇನ್ನು ಕೆಲವರು ಪಾದದವರೆಗೆ ವಸ್ತ್ರ ತೊಟ್ಟಿದ್ದು ಎತ್ತರವಾದ ಮಕುಟ ಮತ್ತು ಬೀಸಣಿಕೆಯಾಕಾರದ ಶಿರಶ್ಚಕ್ರ ಧರಿಸಿದ್ದಾರೆ.

ಅಂತರಾಳದ ಉತ್ತರ ಗೋಡೆಯಲ್ಲಿ ಭೂವರಾಹನ ಶಿಲ್ಪವಿದೆ. ವರಾಹನು ಎಡಗೈಯನ್ನು ಮಡಿಚಿ ಎತ್ತಿದ್ದು ಅದರ ಮೇಲ್ಗಡೆ ಭೂದೇವಿ ಎರಡು ಕಾಲುಗಳನ್ನು ಇಳಿಬಿಟ್ಟು ಕುಳಿತಿದ್ದಾಳೆ. ವರಾಹನ ಇನ್ನೊಂದು ಎಡಗೈ ಅವಳ ಕಾಲುಗಳಿಗೆ ಆಧಾರವೊದಗಿಸಿದೆ. ಸಂಯೋಜನೆ ಮತ್ತು ವಿವರಗಳಲ್ಲಿ ಈ ಶಿಲ್ಪ ಬಾದಾಮಿಯ ವರಾಹ ಶಿಲ್ಪಗಳಿಗಿಂತ ಭಿನ್ನವಾದುದು.

ಈ ಶಿಲ್ಪಕ್ಕೆ ಎದುರಾಗಿ ಅಂತರಾಳದ ದಕ್ಷಿಣ ಗೋಡೆಯಲ್ಲಿ ದುರ್ಗಾಭಗವತಿ ಶಿಲ್ಪವಿದೆ. ಅಷ್ಟಭುಜಳಾಗಿ ಶಿಲ್ಪಿತಳಾಗಿರುವ ದೇವಿ ಪೂರ್ಣ ಪ್ರಾಣಿರೂಪದ ಮಹಿಷದ ಮೋರೆಯನ್ನು ಎಡಗೈಯಿಂದ ಒತ್ತಿಹಿಡಿದು, ಮಡಚಿದ ತನ್ನ ಎಡಗಾಲ ಮುಂಡಿಯಿಂದ ಕುತ್ತಿಗೆಯನ್ನು ಅದುಮಿ, ಬಲಗೈಯಲ್ಲಿರುವ ತ್ರಿಶೂಲದಿಂದ ಬೆನ್ನಲ್ಲಿ ತಿವಿದಿದ್ದಾಳೆ. ಉಳಿದ ಬಲಗೈಗಳಲ್ಲಿ ಖಡ್ಗ, ಲೀಲಾ ಶುಕ (ಗಿಳಿ), ಚಕ್ರವನ್ನೂ ಎಡಗೈಗಳಲ್ಲಿ ಶಂಕ, ಖೇಟಕ ಮತ್ತು ಬಿಲ್ಲನ್ನೂ ಹಿಡಿದಿದ್ದಾಳೆ. ಅವಳ ಎಡಪಾರ್ಶ್ವದಲ್ಲಿ ಸಿಂಹವನ್ನು ಚಿತ್ರಿಸಿದೆ.

ಶಿಲ್ಪರೂಪಣ ಮತ್ತು ರೂಪಕರ್ಮ ವಿವರಗಳಲ್ಲಿ ಹಲವು ಸಾಮಾನ್ಯ ಲಕ್ಷಣಗಳನ್ನು ರಾವಳಫಡಿಯ ಶಿಲ್ಪಗಳಲ್ಲಿ ಗುರುತಿಸಬಹುದು. ಎತ್ತರವಾದ ನೀಳ ಜಾಡಿಯಾಕಾರದ ಮಕುಟ, ಬಿಚ್ಚು ಬೀಸಣಿಕೆಯಂತಹ ಶಿರಶ್ಚಕ್ರ, ತೆರೆದ ಕಣ್ಣುಗಳು, ಸ್ಪಷ್ಟ ಹುಬ್ಬು ಮತ್ತು ಕಣ್ಣೆವೆಗಳು, ಕಟಿವಸ್ತ್ರವನ್ನು ಹೆಚ್ಚಾಗಿ ಮಂಡಿಯವರೆಗೆ ಧೋತರದಂತೆ ಬಿಗಿದಿರುವುದು, ವಸ್ತ್ರದ ಮಡಿಕೆಗಳನ್ನು ಕೊರೆದ ಗೆರೆಗಳಿಂದ ಸೂಚ್ಯವಾಗಿ ತೋರಿಸಿರುವುದು, ಚರ್ಮಾಂಬರದ ಅಂಚನ್ನು ತರಂಗ ರೂಪದಲ್ಲಿ ಚಿತ್ರಿಸಿರುವುದು, ಮುಕ್ತಾಯಜ್ಞೋಪವೀತ ಮತ್ತು ಅದರಿಂದಲೇ ಹೊರಟು ಸರಪಳಿಯಂತೆ ಪಾದದವರೆಗೆ ಇಳಿಬಿದ್ದಿರುವ ಶೃಂಖಲಾ ಯಜ್ಞೋಪವೀತ, ಮೈಕಟ್ಟು, ಮುಖ–ದೇಹಗಳ ಪ್ರಮಾಣ ಮುಂತಾದವೆಲ್ಲ ಈ ಶಿಲ್ಪಗಳು ನಿರ್ದಿಷ್ಟ ಹಿನ್ನೆಲೆಯಲ್ಲಿ ತರಬೇತಾದ ಶಿಲ್ಪಿಗಳ ಗುಂಪನ್ನು ಸೂಚಿಸುತ್ತವೆ. ಬಾದಾಮಿಯ ಒಂದನೆಯ ಗುಹಾಲಯದ ಶೈವ ದ್ವಾರಪಾಲ, ಮೂರನೆಯ ಗುಹಾಲಯದ ಹರಿಹರ, ತ್ರಿವಿಕ್ರಮ, ಅಷ್ಟಭುಜ ವಿಷ್ಣು ಶಿಲ್ಪಗಳಿಗೆ ಇವು ತಕ್ಕಮಟ್ಟಿಗೆ ಸಾಮ್ಯಹೊಂದಿವೆಯಾದರೂ ಹಲವು ವ್ಯತ್ಯಾಸಗಳೂ ಇಲ್ಲದಿಲ್ಲ. ವರಾಹ ಶಿಲ್ಪದಲ್ಲಿ ಶಂಖವನ್ನು ಹಿನ್ನೆಲೆಯಲ್ಲಿ ತೇಲುತ್ತಿರುವಂತೆ ತೋರಿಸಿರುವುದು ಸ್ಥಳೀಯ ವೈಶಿಷ್ಟ್ಯವಾಗಿದೆ. ದುರ್ಗಾಗುಡಿಯಲ್ಲಿರುವ ವರಾಹ ಶಿಲ್ಪದಲ್ಲಿ ಕೂಡ ಈ ಲಕ್ಷಣವನ್ನು ಗುರುತಿಸಬಹುದು. ಭೂದೇವಿಯನ್ನು ವರಾಹನ ಮೊಣಕೈ ಮೇಲೆ ಕುಳಿತಿರುವಂತೆ ತೋರಿಸಿರುವುದು ಭೂ–ವರಾಹ ಪ್ರತಿಮಾ ಲಕ್ಷಣದ ಪ್ರಗತಿಯ ದ್ಯೋತಕವೆಂದು ಭಾವಿಸಬಹುದು. ದೇವತೆಗಳ ಎತ್ತರೆತ್ತರವಾದ ಮಕುಟಗಳು ಅವರ ದೇಹದ ಪ್ರಮಾಣಕ್ಕೆ ತುಸು ಹೆಚ್ಚೆನಿಸಿದರೂ ವೈಶಿಷ್ಟ್ಯವೊದಗಿಸಿವೆ. ಕೆಲವು ವಿದ್ವಾಂಸರ ಪ್ರಕಾರ ಇದು ಪಲ್ಲವ ಶಿಲ್ಪಶೈಲಿಯ ಪ್ರಭಾವ. ಆದರೆ ಈ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಶಿಲ್ಪಿಗಳ ಹೆಸರನ್ನು ಸೂಚಿಸುವ ಶಾಸನಗಳು ರಾವಳಫಡಿ ಗುಹಾಲಯದ ಪರಿಸರದಲ್ಲಿಲ್ಲ. ನಟರಾಜ ಮಂಟಪದ ಅಧಿಷ್ಠಾನದಲ್ಲಿ ರಣವಿ(ಕ್ರಾನ್ತ) ಹೆಸರನ್ನು ಬರೆದಿದೆ. ಇದು ಒಂದನೆಯ ಅಥವಾ ಇಮ್ಮಡಿ ಪುಲಕೇಶಿಯ ಬಿರುದು ಆಗಿರುವ ಸಾಧ್ಯತೆಯಿದೆ.

ಐಹೊಳೆಯ ಜೈನ ಗುಹಾಲಯದ ಪೂರ್ವ ಪಾರ್ಶ್ವಗೋಡೆಯಲ್ಲಿ ಬಾಹುಬಲಿಯ (ಗೊಮ್ಮಟನ) ದೊಡ್ಡ ಶಿಲ್ಪವಿದೆ.

ಮುಖಮಂಟಪದ ಪಶ್ಚಿಮ ಪಾರ್ಶ್ವಗೋಡೆಯಲ್ಲಿ ಕಾಯೋತ್ಸರ್ಗ ಮುದ್ರೆಯಲ್ಲಿ ದಿಗಂಬರನಾಗಿ ನಿಂತಿರುವ ಪಾರ್ಶ್ವನಾಥನ ಶಿಲ್ಪವಿದೆ. ಇವನ ಶಿರದ ಮೇಲ್ಗಡೆ ಐದು ಹೆಡೆಯ ಹಾವಿನ ಆಸರೆಯಿದೆ. ಪಾರ್ಶ್ವನಾಥನ ಬಲಪಕ್ಕದಲ್ಲಿ ಶಿರದ ಮೇಲೆ ನಾಗ ಹೆಡೆಯಿರುವ ಇಬ್ಬರು ವ್ಯಕ್ತಿಗಳು ನಿಂತಿದ್ದಾರೆ. ಒಬ್ಬಳ ಬಲಗೈಯಲ್ಲಿ ಪದ್ಮವಿದೆ. ಇನ್ನೊಬ್ಬಳು ಪದ್ಮಾವತಿ. ತನ್ನೆರಡೂ ಕೈಗಳಿಂದ ವಜ್ರಕೊಡೆಯ ಕೋಲನ್ನು ಹಿಡಿದಿದ್ದಾಳೆ. ಮೇಲ್ಗಡೆ ಎಡಮೂಲೆಯಲ್ಲಿ ಎರಡೂ ಕೈಗಳನೆತ್ತಿ ಬಂಡೆಯನ್ನು ಎಸೆಯಲು ಪ್ರಯತ್ನಿಸುತ್ತಿರುವ ಕಮಠನಿದ್ದಾನೆ. ಪಾರ್ಶ್ವನಾಥನ ತಪೋಭಂಗಮಾಡಲು ಅಸಮರ್ಥನಾದ ಕಮಠನನ್ನು ಎಡಪಕ್ಕದಲ್ಲಿ ಅಂಜಲಿ ಮುದ್ರೆಯಲ್ಲಿ ತೋರಿಸಲಾಗಿದೆ.

ಗರ್ಭಗೃಹದಲ್ಲಿರುವ ತೀರ್ಥಂಕರನು ಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಹಿಂಗಡೆ ದಿಂಬಿನ ಪಾರ್ಶ್ವಗಳನ್ನು ಮಕರಗಳಿಂದ ಅಲಂಕರಿಸಿದೆ.

ರಾವಳಫಡಿ ಶೈವ ಗುಹಾಲಯವನ್ನು ತಲವಿನ್ಯಾಸ, ಭಿತ್ತಿನ ಶಿಲ್ಪ ವಿವರ ಇತ್ಯಾದಿಗಳಲ್ಲಿ ಈ ಜೈನ ಗುಹಾಲಯ ತಕ್ಕಮಟ್ಟಿಗೆ ಹೋಲುತ್ತಿದೆಯಾದರೂ ಶಿಲ್ಪನಿರೂಪಣೆ ಮತ್ತು ರೂಪಕರ್ಮ ವಿವರಗಳಲ್ಲಿ ವ್ಯತ್ಯಾಸಗಳಿವೆ. ಐಹೊಳೆಯ ಜೈನ ಗುಹಾಲಯದ ಶಿಲ್ಪಿಗಳು ತಮ್ಮ ಶೈಲಿ ವೈಶಿಷ್ಟ್ಯವನ್ನು ತೋರಿದ್ದಾರೆ. ಗುಹಾಲಯದ ಸಮೀಪದಲ್ಲಿ ಶ್ರೀ ಅ(ಜ)ವಿಕ್ಕರಕ, ಶ್ರೀ ಅಜಕಸಿ, ಶ್ರೀ ಪದ್ಮಸ್ವಾಮೀ ಮಹಾದಿವ್ಯ ಉತುಣನ್, ಪ್ರಿಯತ್ತಮ ಉತ್ತಣನ್ ಎಂಬ ಸು.7ನೆಯ ಶತಮಾನದ ಅಕ್ಷರಗಳಲ್ಲಿ ಬರೆದ ಹೆಸರುಗಳಿವೆ. ಇದರಂತೆ ಮೇಗುಟಿಯಿಂದ ಬೆಟ್ಟದ ಮೇಲಿನಿಂದ ಈ ಗುಹಾಲಯಕ್ಕೆ ತಲುಪುವ ಹಾದಿಯಲ್ಲಿ ಶ್ರೀಯನ್, ಮನವಶನ್, ಚಿತ್ರನ್, ಶ್ರೀಮಾರ್ಗನ್, ಸುರತನ್ ಇತ್ಯಾದಿ ಹೆಸರುಗಳಿವೆ. ಚಿತ್ರನ್, ಮಾರ್ಗನ್ ಎಂಬ ಹೆಸರುಗಳು ಬಾದಾಮಿಯಲ್ಲಿರುವ ಕೆಲವು ಹೆಸರುಗಳನ್ನು ನೆನಪಿಸುತ್ತವೆ. ಆದ್ದರಿಂದ ಇವುಗಳಲ್ಲಿ ಕೆಲವಾದರೂ ಈ ಗುಹಾಲಯದಲ್ಲಿ ಕೆಲಸ ಮಾಡಿದ ಶಿಲ್ಪಿಕಲ್ಲುಕುಟ್ಟಿಗರ ಹೆಸರುಗಳೆಂದು ಭಾವಿಸಬಹುದು.

ಗುಹಾಲಯ ಶಿಲ್ಪಗಳ ಶೈಲಿಯ ಕುರಿತು ಚರ್ಚಿಸುವಾಗ ಕೆಲವು ಪ್ರಮುಖ ರೂಪಕರ್ಮ ವ್ಯತ್ಯಾಸಗಳನ್ನು ಸೂಚಿಸಲಾಯಿತು. ಶಿಲ್ಪಿಗಳ ಕೆಲವು ಹೆಸರುಗಳು ಸಿದ್ಧಮಾತೃಕಾ ಲಿಪಿಯಲ್ಲಿಯೂ ಹೆಚ್ಚಿನವು ಅಂದಿನ ಕನ್ನಡ ಲಿಪಿಯಲ್ಲಿಯೂ ಬರೆದಿರುವುದನ್ನು ಕೂಡ ಗಮನಿಸಲಾಯಿತು. ಸಿದ್ಧಮಾತೃಕಾ ಲಿಪಿ ಉತ್ತರ ದಖ್ಖಿನ ಮತ್ತು ಅದರಾಚೆಯ ಪ್ರದೇಶದಲ್ಲಿ ಹೆಚ್ಚು ಪ್ರಚಲಿತವಿದ್ದ ಲಿಪಿ. ಈ ಪ್ರದೇಶದಲ್ಲಿ ಗುಹಾವಾಸ್ತು ಪರಂಪರೆ ಪ್ರ.ಶ. ಪೂರ್ವ ಕಾಲದಿಂದಲೂ ರೂಢಿಯಲ್ಲಿದ್ದುದು ಸರ್ವವಿದಿತ. ಶಿಲ್ಪ–ಶೈಲಿ ಮುಖ್ಯವಾಗಿ ಬಾದಾಮಿಯ 2ನೆಯ ಗುಹಾಲಯದಲ್ಲಿ ಎಲ್ಲೋರ–ಎಲಿಫಂಟ ಶೈಲಿಯನ್ನು ಹೋಲುತ್ತದೆ ಎಂಬುದನ್ನು ಕಂಡಿದ್ದೇವೆ. ಆದುದರಿಂದ ಗುಹಾ ವಾಸ್ತುರಚನಾ ಪರಂಪರೆ ಹಾಗೂ ಕೆಲಮಟ್ಟಿಗೆ ಶಿಲ್ಪಶೈಲಿ ಆ ಪ್ರದೇಶದಿಂದ ವಲಸೆ ಬಂದ ಅಥವಾ ಕರೆಸಲ್ಪಟ್ಟ ವಾಸ್ತು–ಶಿಲ್ಪಿಗಳ ಇರವನ್ನು ಸೂಚಿಸುತ್ತದೆ. ಹೆಚ್ಚಿನ ಶಿಲ್ಪಿಗಳ ಹೆಸರುಗಳು ಕನ್ನಡ ಲಿಪಿಯಲ್ಲಿ ಇವೆಯೆಂಬುದೂ ಗಮನಾರ್ಹ. ನೃಪತುಂಗನ ಕಾಲದಲ್ಲಿ ಕಾವೇರಿಯಿಂದ ಗೋದಾವರಿವರೆಗಿನ ಪ್ರದೇಶ ಕನ್ನಡದ ಪ್ರದೇಶವಾಗಿತ್ತು; ಅವನಿಗಿಂತ ಹಿಂದೆ ಉತ್ತರದಲ್ಲಿ ಇನ್ನೂ ಹೆಚ್ಚಿನ ಪ್ರದೇಶದಲ್ಲಿ ಕನ್ನಡ ಪ್ರಚಲಿತವಾಗಿದ್ದರೆ ಆಶ್ಚರ್ಯವೇನಲ್ಲ. ಈ ವಿಶಾಲ ಕನ್ನಡ ಪ್ರದೇಶದಿಂದ ರಾಜಾಶ್ರಯವನ್ನು ಅರಸಿ ಬಂದಿದ್ದ ಅನೇಕ ಶಿಲ್ಪಿಗಳು ಬಾದಾಮಿ ಮತ್ತು ಐಹೊಳೆಯಲ್ಲಿದ್ದರೆಂದು ತಿಳಿಯಬಹುದು.

ಮಞ್ಚಿ ಎಂದು ಅಂತ್ಯಗೊಳ್ಳುವ ಕೋಳಿಮಞ್ಚಿ, ಸಿಂಗಮಞ್ಚಿ ಮುಂತಾದ ಹೆಸರುಗಳು ಗಮನೀಯ. ಆಂಧ್ರದಲ್ಲಿ ಎಲ್ಲೇಶ್ವರಂ ಎಂಬಲ್ಲಿ ಇದೇ ಕಾಲದ 'ಮಞ್ಚಿ' ನಾಮಾಂತ್ಯವುಳ್ಳ ಹೆಸರುಗಳು ಕಂಡುಬಂದಿವೆ. ಅಲ್ಲದೆ ಇಂದಿಗೂ 'ಮಞ್ಚಿ' ಎಂದು ಅಂತ್ಯಗೊಳ್ಳುವ ವ್ಯಕ್ತಿನಾಮಗಳು ರೂಢಿಯಲ್ಲಿವೆ. ಈ ಕಾರಣದಿಂದ ಆಂಧ್ರಪ್ರದೇಶದಿಂದಲೂ ವಲಸೆ ಬಂದಿದ್ದ ರೂವಾರಿ ಸೂತ್ರಧಾರಿಗಳು ಬಾದಾಮಿಯ ಗುಹಾಲಯ ಶಿಲ್ಪರಚನೆಯಲ್ಲಿ ಪಾತ್ರವಹಿಸಿದ್ದಾರೆಂದು ತಿಳಿಯಬೇಕಾಗುತ್ತದೆ. ಅಮರಾವತಿ, ನಾಗಾರ್ಜುನ ಕೊಂಡದ ಶಿಲ್ಪ ಶೈಲಿಯ ಛಾಯೆ ಗುಹಾಲಯದ ಅನೇಕ ಅಲಂಕರಣ ವಿನ್ಯಾಸಗಳಲ್ಲಿ ಉದಾ: ಮೂರನೆಯ ಮತ್ತು ನಾಲ್ಕನೆಯ ಗುಹಾಲಯಗಳ ಮುಖಮಂಟಪದ ಎದುರುಗಂಬಗಳಲ್ಲಿರುವ ತಟ್ಟೆಯಾಕಾರದ ಪದ್ಮವಿನ್ಯಾಸ, ಅವುಗಳೊಳಗಿನ ಮಿಥುನಗಳು ಇತ್ಯಾದಿ ಕಂಡುಬರುವು ದೆಂಬುದು ಈ ಹಿನ್ನೆಲೆಯಲ್ಲಿ ಚಿಂತನೀಯವಾಗಿದೆ.

ಕಟ್ಟಡ ದೇಗುಲಗಳ ಶಿಲ್ಪಕಲೆ: ಗುಹಾಶಿಲ್ಪಗಳ ಶೈಲಿ, ಪ್ರತಿಮಾಲಕ್ಷಣ ಇತ್ಯಾದಿ ವೈವಿಧ್ಯಗಳನ್ನು ದೇಗುಲ ಶಿಲ್ಪಗಳಲ್ಲೂ ಗಮನಿಸಬಹುದು. ಕೆಲವನ್ನು ಮಾತ್ರ ಪರಿಶೀಲಿಸಲಾಗಿದೆ.

ಬಾದಾಮಿಯಲ್ಲಿರುವ ಮೇಲಣ ಶಿವಾಲಯ (ವಿಷ್ಣುದೇವಾಲಯ) ಹಾಗೂ ಮಾಲಗಿತ್ತಿ ಶಿವಾಲಯ (ಸೂರ್ಯ ದೇವಾಲಯ) ಚಳುಕ್ಯರ ಪ್ರಾಚೀನ ರಾಚನಿಕ ಶಿಲಾದೇಗುಲಗಳು. ದಕ್ಷಿಣ ಗೋಡೆಯಲ್ಲಿರುವ ಗೋವರ್ಧನಧಾರಿ ಕೃಷ್ಣನ ಉಬ್ಬುಶಿಲ್ಪ ಬಹಳಷ್ಟು ಹಾಳಾಗಿದೆ ಯಾದರೂ ಬಹು ಸುಂದರ ಮತ್ತು ಅಪರೂಪದ ಕೃತಿ. ಇದೇ ದೇವಾಲಯದ ಉತ್ತರ ಗೋಡೆಯ ನರಸಿಂಹ ಶಿಲ್ಪದಲ್ಲಿ ಹಿರಣ್ಯಕಶ್ಯಪು ನರಸಿಂಹನ ಮೇಲೆ ಪ್ರಹಾರ ಮಾಡುವುದಕ್ಕಾಗಲೀ ಅವನಿಂದ ತಪ್ಪಿಸಿಕೊಳ್ಳಲಿಕ್ಕಾಗಲೀ ವ್ಯರ್ಥ ಪ್ರಯತ್ನ ಮಾಡುತ್ತಿರುವುದು ಆಕರ್ಷಕವಾಗಿದೆ. ತೊಡೆಯ ಮೇಲಿರಿಸಿ ಹಿರಣ್ಯ ಕಶ್ಯಪುವಿನ ಹೊಟ್ಟೆಯನ್ನು ನರಸಿಂಹನು ಬಗೆಯುತ್ತಿದ್ದಾನೆ. ಭಗವಂತನ ಲೀಲಾ ನಾಟಕ ಇಲ್ಲಿ ಬಹು ಸುಂದರವಾಗಿ ಮೂಡಿಬಂದಿದೆ.

ಮಾಲಗಿತ್ತಿ ಶಿವಾಲಯದ ಗೋಡೆಯಲ್ಲಿರುವ ಹಿರಿ ಶಿಲ್ಪಗಳ ಶೈಲಿ ಹಾಗೂ ಪ್ರತಿಮಾಲಕ್ಷಣ ದೃಷ್ಟಿಯಿಂದ ಗಮನೀಯವಾಗಿವೆ. ದಕ್ಷಿಣ ಗೋಡೆಯಲ್ಲಿರುವ ಚತುರ್ಭುಜ ಸಮಸ್ಥಾನಕ ಶಿವನ ಶಿಲ್ಪ ಬಹು ಸುಂದರ ಕಲಾಕೃತಿ, ಫಲ, ಸರ್ಪ, ತ್ರಿಶೂಲಗಳನ್ನು ಹಿಡಿದು ಕಟ್ಯವಲಂಬಿತ ಹಸ್ತನಾಗಿ ನಿಂತಿರುವ ಶಿವನ ಇಕ್ಕೆಲಗಳಲ್ಲಿ ಒಬ್ಬೊಬ್ಬನಂತೆ ಋಷಿಗಳು ಧ್ಯಾನದಲ್ಲಿ ನಿರತರಾಗಿದ್ದಾರೆ. ಸರಳ ಹಿತಮಿತ ಆಭರಣಾದಿಗಳಿರುವ ಈ ಶಿಲ್ಪದಲ್ಲಿ ರೂಪಕರ್ಮ ರೀತಿ ಅತ್ಯಾಕರ್ಷಕವಾಗಿದೆ. ಶಿವನ ಜಟಾಭಾರದ ಸ್ವರೂಪ ಹಾಗೂ ಅಂತರ್ಮುಖೀಭಾವ ಮಾಲವ ಪ್ರದೇಶದ ಗುಪ್ತರ ಅಂತ್ಯಕಾಲದ, ಕೊಂಕಣ ಮತ್ತು ಉತ್ತರ ದಖ್ಖಿನ (ಎಲಿಫಂಟ–ಎಲ್ಲೋರ) ಗುಹಾಲಯಗಳ ಶಿಲ್ಪಗಳನ್ನು ನೆನಪಿಸುತ್ತವೆ.

ಈ ದೇವಾಲಯದ ಉತ್ತರ ಗೋಡೆಯ ಸಮಸ್ಥಾನಕ ಚತುರ್ಭುಜ ವಿಷ್ಣು ಶಿಲ್ಪ ಕೂಡ ಇಂತಹುದೇ ಶೈಲಿ ಲಕ್ಷಣಗಳಿಂದೊಡಗೂಡಿದೆ. ಫಲ, ಚಕ್ರ, ಶಂಖ ಹಿಡಿದು ಕಟ್ಯವಲಂಬಿತನಾಗಿ, ಅಂತರ್ಮುಖಿ ಭಾವದೊಂದಿಗೆ ನಿಂತಿರುವ ವಿಷ್ಣುವಿನ ಬಲ ಮಗ್ಗುಲಲ್ಲಿ ಗದಾ ಕೌಮೋದಕೀ ತ್ರಿಭಂಗಿಯಲ್ಲಿದ್ದಾಳೆ. ಎಡಮಗ್ಗುಲಲ್ಲಿ ಕುಳ್ಳ ಗರುಡನಿದ್ದಾನೆ. ಗದಾದೇವಿ ನಿಂತಿರುವ ರೀತಿ ದೇವಗಡದ (ಮಧ್ಯಪ್ರದೇಶ) ಗುಪ್ತರ ಅಂತ್ಯಕಾಲೀನ ದಶಾವತಾರ ದೇವಾಲಯದ ಅನಂತಶಯನ ಶಿಲ್ಪದ ಕೆಳಗಡೆ ಇರುವ ಗದಾದೇವಿಯನ್ನು ನೆನಪಿಸುತ್ತದೆ.

ಈ ರೀತಿ ಆಯುಧ ಪುರುಷರನ್ನು ವಿಷ್ಣುವಿನ ಪಾರ್ಶ್ವದಲ್ಲಿ ತೋರಿಸುವ ಪರಂಪರೆ ಗುಪ್ತರ ಕಾಲದಿಂದ ಮುಂದುವರಿದು ಬಂದ ಬಳುವಳಿಯೆಂದು ಕಾಣುತ್ತದೆ. ಮಾಲವ ಪ್ರದೇಶದ ಉತ್ತರ ಗುಪ್ತಕಾಲೀನ ಶಿಲ್ಪಶೈಲಿಯ ಪ್ರಭಾವ, ಪ್ರತಿಬಿಂಬಗಳನ್ನು ಇದರಲ್ಲಿ ಕಂಡವರಿದ್ದಾರೆ.

ಅಂತರ್ಮುಖಿ ಭಾವ, ಸುಂದರ ಆಕರ್ಷಕ ಮೈಮಾಟ, ಸಂಯೋಜನೆಯಲ್ಲಿ ಫಲಕದ ನಾಲ್ಕು ಮೂಲೆಗಳಲ್ಲಿ ಒಬ್ಬೊಬ್ಬ ಗಣ ಇಲ್ಲವೆ ಪೂರಕ ವ್ಯಕ್ತಿಗಳನ್ನು ತೋರಿಸುವುದು, ಹಿತಮಿತ ಅಲಂಕರಣ, ನಗ್ನಾಭಾಸ ಮೂಡಿರುವ ರೂಪಕರ್ಮ ರೀತಿ ಇವೆಲ್ಲ ಮಾಲಗಿತ್ತಿ ಶಿವಾಲಯದ ಹಿರಿ ಶಿಲ್ಪಗಳ ಸಾಮಾನ್ಯ ಲಕ್ಷಣಗಳಾಗಿ ಒಡೆದು ಕಾಣುತ್ತಿವೆ. ದೇಗುಲ ದ್ರಾವಿಡ ಶೈಲಿಯದಾಗಿದ್ದು, ಇದರ ವಾಸ್ತುಶಿಲ್ಪಿ ಆರ್ಯಮಜ್ಞಿ ಉಪಾಧ್ಯಾಯ. ಈ ಹೆಸರು ಆಂಧ್ರದ ಶಿಲ್ಪಿಗಳನ್ನು ನೆನಪಿಸುತ್ತದೆ. ಹೀಗಿದ್ದೂ ಗೋಡೆಯ ಶಿಲ್ಪಗಳು ಮಾಲವ–ಕೊಂಕಣ–ಉತ್ತರ ಡೆಕ್ಕನ್ ಪ್ರದೇಶದ ಶಿಲ್ಪ ಲಕ್ಷಣಗಳನ್ನು ಸಾಕಷ್ಟು ಹೋಲುತ್ತವೆ ಎಂಬ ಸಂಗತಿ ಈ ಪ್ರದೇಶದ ಶಿಲ್ಪಿಗಳು ಇಲ್ಲಿ ಭಾಗವಹಿಸಿದ್ದಾರೆಂಬುದನ್ನು ಸೂಚಿಸುತ್ತದೆ.

ಮೇಲೆ ಗಮನಿಸಿದ ಶಿಲ್ಪಗಳು 650ಕ್ಕಿಂತ ಮುಂಚಿನವು. ಐಹೊಳೆಯ ಚಿಕ್ಕಿಗುಡಿಯ ಛತ್ತಿನಲ್ಲಿರುವ ಶಿಲ್ಪಗಳು ಇದೇ ಕಾಲಾವಧಿಯ ಪ್ರತಿಮಾಲಕ್ಷಣಕ್ಕನುಗುಣವಾಗಿವೆ. ಇಲ್ಲಿಯ ಅನಂತಶಯನ ಮತ್ತು ವಾಮನ–ತ್ರಿವಿಕ್ರಮ ಶಿಲ್ಪಗಳು ಬಾದಾಮಿಯ ಗುಹಾಶಿಲ್ಪಗಳು ಪ್ರತಿಮಾಲಕ್ಷಣ ಕ್ರಮವನ್ನನುಸರಿಸಿವೆ. ವೈಖಾನಸಾಗಮದಲ್ಲಿ ಹೇಳಿರುವ ಭೋಗಶಯನ ಮೂರ್ತಿಯ ವಿವರಕ್ಕೆ ಇದು ಹೊಂದುತ್ತದೆ.

ಚಳುಕ್ಯರ ಆಡಳಿತದ ಉತ್ತರಾರ್ಧಕ್ಕನ್ವಯಿಸುವ ದೇವಾಲಯಗಳು, ಐಹೊಳೆಯ ಮಹಾಕೂಟ, ಪಟ್ಟದಕಲ್ಲು ಮತ್ತು ಕೆಲ್ಲೂರಿನಲ್ಲಿವೆ. ಐಹೊಳೆಯ ಹುಚ್ಚಿಮಲ್ಲಿಗುಡಿಯ ಮುಖಮಂಟಪದ ಮೇಲ್ಗಂಡಿನಲ್ಲಿ ನವಿಲೇರಿರುವ ಕಾರ್ತಿಕೇಯನ ಉಬ್ಬುಶಿಲ್ಪವಿದೆ. ಕಾರ್ತಿಕೇಯನ ಭಂಗಿ ಮತ್ತು ಮುಖಭಾವ ಐಹೊಳೆಯ ದುರ್ಗಾಗುಡಿಯ ಮುಖಮಂಟಪದ ಛತ್ತಿನಲ್ಲಿರುವ ನಾಗರಾಜನನ್ನು ಹೋಲುತ್ತದೆ. ಹುಚ್ಚಿಮಲ್ಲಿ ಗುಡಿಯ ಕಾರ್ತಿಕೇಯ ಶಿಲ್ಪದ ನಿರ್ಮಾತೃ 'ಕೃಚುಜ್ಞ'.

ಐಹೊಳೆಯ ಲಾಡಖಾನ್, ಹುಚ್ಚಪ್ಪಯ್ಯನ ಮಠ ಹಾಗೂ ಹುಚ್ಚಪ್ಪಯ್ಯ ಗುಡಿಗಳ ಮುಖಮಂಟಪದ ಕಂಬಗಳ ಮುಖದಲ್ಲಿ ಗಂಗಾ, ಯಮುನಾ, ಮಿಥುನ, ಕಾಮರತಿ, ಅಶ್ವಮುಖಿ ಮುಂತಾದ ಶಿಲ್ಪಗಳನ್ನು ಬಹು ಸುಂದರವಾಗಿ ಕಟೆದಿದೆ.

ಈ ಶೈಲಿಯನ್ನು ಐಹೊಳೆಯ ದುರ್ಗಾಗುಡಿಯ ಕೆಲವು ಸ್ತಂಭ ಶಿಲ್ಪಗಳಲ್ಲಿ ಗುರುತಿಸ ಬಹುದು. ಆದರೆ ಈ ದೇಗುಲದ ವಿಪುಲ ಶಿಲ್ಪಗಳಲ್ಲಿ ಇತರ ವಿವಿಧ ಶೈಲಿಗಳನ್ನೂ ಗುರುತಿಸಲಾಗಿದೆ. ಸೂರ್ಯನು ಛಾಯಾದೇವಿಯನ್ನು ದಂಡಿಸುತ್ತಿರುವದು, ಅಶ್ವಮುಖಿ ಯಕ್ಷಿ ಮತ್ತು ಬ್ರಹ್ಮಚಾರಿ, ಬ್ರಹ್ಮಚಾರಿಯನ್ನು ಸೆಳೆದುಕೊಳ್ಳುತ್ತಿರುವ ಯಕ್ಷಿ, ದ್ವಾರಪಾಲಕ ಇತ್ಯಾದಿ ಶಿಲ್ಪಗಳು ಹೆಚ್ಚು ಕಡಿಮೆ ಲಾಡ್‌ಖಾನ್ ಮುಖ ಮಂಟಪದ ಶಿಲ್ಪ ಶೈಲಿಯಲ್ಲಿವೆ. ಆದರೆ ದುರ್ಗಾಗುಡಿಯ ಉತ್ತರ ಪಾರ್ಶ್ವದ ಕಂಬಗಳಲ್ಲಿ ಮಿಥುನಗಳ ಶೈಲಿ ಬೇರೆಯದು, ಇವುಗಳ ಅಲಂಕರಣ ರೀತಿ, ವೇಷಭೂಷಣ, ಕೇಶಾಲಂಕಾರ, ಕಿರೀಟ ಸ್ವರೂಪ, ಭಂಗಿ, ಅಂತರ್ಯದೊಳಕ್ಕೆ ನೋಡುವ ಮುಚ್ಚುಗಣ್ಣುಗಳು ಇವೆಲ್ಲ ಔರಂಗಾಬಾದ ಗುಹಾಲಯಗಳ ಕೆಲವು ಶಿಲ್ಪಗಳನ್ನು ಕಣ್ಮುಂದೆ ತರುತ್ತವೆ. ಅಂತಾಗಿ ಇದು ಉತ್ತರ ದಖನ್ನಿನ ಶೈಲಿಯ ಕುರುಹು ಎಂಬುದರಲ್ಲಿ ಸಂಶಯಕ್ಕೆಡೆಯಿಲ್ಲ. ದೇಗುಲದ ಈ ಪಾರ್ಶ್ವದ ಕಂಬವೊಂದರ ಮೇಲೆ ಸುರೇಂದ್ರ ಪಾದಃ ಎಂಬ ಸಿದ್ಧಮಾತೃಕಾ ಲಿಪಿಯಲ್ಲಿರುವ ಶಿಲ್ಪಿಯ ಹೆಸರು ಈ ದೃಷ್ಟಿಯಿಂದ ಗಮನಾರ್ಹ.

ದುರ್ಗಾಗುಡಿಯ ದೇವಕೋಷ್ಠ ಶಿಲ್ಪಗಳು ಶೈಲಿ ವೈವಿಧ್ಯದ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ. ವೃಷಭಾಂತಿಕ ಶಿವ, ಸ್ಥಾನಕ ಕೇವಲ ನರಸಿಂಹ, ಕರಿವರದ ವಿಷ್ಣು, ನೃವರಾಹ, ದುರ್ಗಾಮಹಿಷಮರ್ದಿನಿ ಮತ್ತು ಹರಿಹರ–ಇವು ಆಕರ್ಷಕ ಶಿಲ್ಪಗಳು. ಈಗ ಪುರಾತತ್ತ್ವ ಸಂಗ್ರಹಾಲಯದಲ್ಲಿರುವ ಭಿಕ್ಷಾಟನ ಶಿವನಮೂರ್ತಿ ಕೂಡ ಮೂಲತಃ ಈ ದೇಗುಲದ ದೇವಕೋಷ್ಠಶಿಲ್ಪವೇ. ಇವುಗಳಲ್ಲಿ ವೃಷಭಾಂತಿಕ ಶಿವ, ಕರಿವರದ ವಿಷ್ಣು, ದುರ್ಗಾಮಹಿಷಮರ್ದಿನಿ ಶಿಲ್ಪಗಳು ಒಂದೇ ನಿರ್ದಿಷ್ಟ ಶೈಲಿಯಲ್ಲಿವೆ. ಇವುಗಳ ಸಂಯೋಜನೆ, ಅಲಂಕರಣ ಮತ್ತು ರೂಪಕರ್ಮ ರೀತಿಯಲ್ಲಿ ಸ್ಫುಟ ಸಾಮ್ಯವಿದೆ.

ಇದೇ ಶೈಲಿಯ ಬಹುಶಃ ಇದೇ ಶಿಲ್ಪಿ ರಚಿಸಿರಬಹುದಾದ ಇನ್ನೊಂದು ಶ್ರೇಷ್ಠ ಕೃತಿ ದುರ್ಗಾಭಗವತಿಯದು. ಅಷ್ಟಭುಜೆಯಾದ ದೇವಿ ತನ್ನ ಬಲಗಾಲನ್ನು ದೃಢವಾಗಿ ಊರಿ ಖಡ್ಗ, ವಜ್ರ, ಪ್ರಯೋಗ ಚಕ್ರ, ತ್ರಿಶೂಲ, ಘಂಟಾ, ಶಂಖ ಇತ್ಯಾದಿಗಳನ್ನು ಧರಿಸಿ, ಎಡಗಾಲಿನಿಂದ ಕೋಣನ ರೂಪದಲ್ಲಿರುವ ರಾಕ್ಷಸನ ಬೆನ್ನ ಮೇಲೆ ರಭಸಪೂರ್ಣವಾಗಿ ತುಳಿದಿದ್ದಾಳೆ. ಕೋಣದ ಕುತ್ತಿಗೆಯೊಳಕ್ಕೆ ಹೊಕ್ಕಿರುವ ತ್ರಿಶೂಲದ ಮೊನೆ ಆಕ್ರಂದನ ದೊಂದಿಗೆ ಅದು ಮೋರೆ ಮೇಲೆತ್ತುವಂತೆ ಮಾಡಿದೆ. ಬಲಗಡೆ ಸಿಂಹ ಈ ದೃಶ್ಯವನ್ನು ನೋಡುತ್ತಲಿದೆ. ಹಲವು ಆಭರಣಗಳೊಂದಿಗೆ, ದುಂಡು ಕುಚದ್ವಯಗಳೊಂದಿಗೆ ಜಯಶೀಲದೇವಿ ಹಸನ್ಮುಖಿಯಾಗಿದ್ದಾಳೆ. ಪ್ರಭಾಮಂಡಲದಲ್ಲಿರುವ ಪುಷ್ಪ, ಶಿರಶ್ಚಕ್ರ ಕರಿವರದ ಶಿಲ್ಪದಲ್ಲಿರುವಂತೆಯೇ ಇದೆ. ಚಳುಕ್ಯ ಕಾಲದ ದುರ್ಗಾಭಗವತಿಯ ಶಿಲ್ಪಗಳಲ್ಲಿ ಇದೊಂದು ಉತ್ಕೃಷ್ಟ ಕೃತಿ.

ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ಪಟ್ಟದಕಲ್ಲಿನಲ್ಲಿ ನಿರ್ಮಾಣಗೊಂಡ ವಿರೂಪಾಕ್ಷ (ಲೋಕೇಶ್ವರ) ಮತ್ತು ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ದೇವಾಲಯಗಳ ಶಿಲ್ಪಗಳು ವಸ್ತು ವೈವಿಧ್ಯ ದೃಷ್ಟಿಯಿಂದ ಮಹತ್ತ್ವದ್ದಾಗಿವೆ. ಶಿಲ್ಪ ರೂಪಣದಲ್ಲಿ ಇವು ಚಳುಕ್ಯರ ಕೊನೆಯ ಹಂತದವು. ಶೈಲಿ ವೈವಿಧ್ಯ ಇಲ್ಲಿ ಅಷ್ಟಾಗಿಲ್ಲ. ಅಂದರೆ ಕರ್ನಾಟ ಕಲಾಶೈಲಿ ಹರಳುಗಟ್ಟುವೆಡೆ ಹೆಜ್ಜೆ ಇಡುತ್ತಿರುವುದನ್ನು ಇಲ್ಲಿ ಗುರುತಿಸಬಹುದು. ಕಾಂಚಿಯ ರಾಜಸಿಂಹೇಶ್ವರ (ಕೈಲಾಸನಾಥ) ದೇವಾಲಯದಿಂದ ಪ್ರಭಾವಿತವಾಗಿ ಪಟ್ಟದಕಲ್ಲಿನ ಈ ಜೋಡು ದೇಗುಲಗಳು ನಿರ್ಮಿತವಾದವೆಂಬ ಅಭಿಪ್ರಾಯ ಪ್ರಚಲಿತವಿದೆ. ಆದರೆ ನಿಜ ಸಂಗತಿ ಇದಕ್ಕೆ ವ್ಯತಿರಿಕ್ತವಾಗಿದೆ. ಪಟ್ಟದಕಲ್ಲಿನ ಪ್ರತಿಮೆಗಳ ಲಕ್ಷಣ–ಶೈಲಿಗಳೆರಡನ್ನೂ ಆಲಂಪುರದ (ಆಂಧ್ರಪ್ರದೇಶ) ದೇಗುಲಗಳ ಶಿಲ್ಪಗಳಲ್ಲಿ ಗುರುತಿಸಬಹುದು. ಆದ್ದರಿಂದ ಆಲಂಪುರ ಪರಿಸರದಲ್ಲಿ ರೂಢಿಗೊಂಡ ಶೈಲಿ ಕ್ರಮೇಣ ಪಟ್ಟದಕಲ್ಲಿಗೆ ಪ್ರೌಢವಾಗಿ ಸಾಗಿ ಬಂದಿದೆ ಎಂದು ತಿಳಿಯುವುದು ಸರಿ. ಶೈವ ಶಿಲ್ಪಗಳಿಗೆ ಇಲ್ಲಿ ಮಹತ್ತ್ವ ನೀಡಲಾಗಿದೆ ಯಾದರೂ ಉಳಿದ ದೇವತೆಗಳ ಬಿಂಬಗಳಿಗೆ ಇಲ್ಲಿ ಕೊರತೆಯಿಲ್ಲ. ಚೆಂಗಮ್ಮ, ಪುಲ್ಲಪ್ಪ, ಬಲದೇವ ಮುಂತಾದ ಶಿಲ್ಪಿಗಳು ಇಲ್ಲಿ ತಮ್ಮ ಕಲಾಕೌಶಲ್ಯವನ್ನು ತೋರಿದ್ದಾರೆ.

ಅಪಸ್ಮಾರನ ಮೇಲೆ ವಿವಿಧ ನಾಟ್ಯ ಭಂಗಿಗಳಲ್ಲಿ ಕುಣಿಯುತ್ತಿರುವ ನಟರಾಜ ಶಿವನ ಬಿಂಬಗಳು ಇಲ್ಲಿ ಬಹಳ ಇವೆ. ಇಲ್ಲಿಯ ಎಲ್ಲ ನಟರಾಜ ಶಿಲ್ಪಗಳಲ್ಲಿ ಕಾಲಡಿ ಅಪಸ್ಮಾರ ಪುರುಷನಿರುವುದು ಗಮನೀಯ. ಗುಹಾಶಿಲ್ಪಗಳಲ್ಲಿ ಈ ಲಕ್ಷಣವಿಲ್ಲ.

ದಕ್ಷಿಣ ಮುಖಮಂಟಪದ ಕಂಬವೊಂದರಲ್ಲಿರುವ ರಾವಣ ಕೈಲಾಸವನ್ನೆತ್ತುವ ಶಿಲ್ಪ ಇಲ್ಲಿಯ ಆಕರ್ಷಕ ಶಿಲ್ಪಗಳಲ್ಲೊಂದು. ದಶಾನನ ರಾವಣ ಆಲೀಢ ಭಂಗಿಯಲ್ಲಿ ಕುಳಿತು ತನ್ನ ಇಪ್ಪತ್ತು ಬಾಹುಗಳಿಂದ ಕೈಲಾಸ ಪರ್ವತವನ್ನು ಎತ್ತುತ್ತಿರುವ ದೃಶ್ಯ ಬಹು ನಾಟಕೀಯ ವಾಗಿದೆ. ಅಲುಗಾಡುತ್ತಿರುವ ಕೈಲಾಸದ ಮೇಲೆ ಭಯವಿಗಳಿತಳಾಗಿ ಪಾರ್ವತಿ ಶಿವನ ಆಸರೆಯನ್ನು ಬಯಸಲುದ್ಯುಕ್ತಳಾಗಿರುವ ರೀತಿ ಶಿಲ್ಪಿಯ ಕಲ್ಪನಾ ಚಾತುರ್ಯವನ್ನು ಪ್ರತಿಬಿಂಬಿಸುತ್ತದೆ.

ವಿರೂಪಾಕ್ಷ ದೇಗುಲದ ಪೂರ್ವ ಗೋಡೆಯಲ್ಲಿ ಲಿಂಗೋದ್ಭವ ಮೂರ್ತಿಯ ಶಿಲ್ಪ ವಸ್ತು ದೃಷ್ಟಿಯಿಂದ ಅಪರೂಪದ್ದು. ಚಾಳುಕ್ಯ ಸಂದರ್ಭದಲ್ಲಿ ಆಲಂಪುರ ಮತ್ತು ಪಟ್ಟದಕಲ್ಲಿನ ಶೈವ ದೇವಾಲಯಗಳಲ್ಲಿ ಮಾತ್ರ ಈ ಶಿಲ್ಪ ಕಂಡುಬಂದಿದೆ.

ವೈಷ್ಣವ ಶಿಲ್ಪಗಳಲ್ಲಿ ಗಜೇಂದ್ರಮೋಕ್ಷ ಹಾಗೂ ತ್ರಿವಿಕ್ರಮ ಶಿಲ್ಪಗಳು ಉಲ್ಲೇಖನೀಯ. ಗರುಡನ ಮೇಲೆ ಕುಳಿತ ಭಕ್ತವತ್ಸಲ ವಿಷ್ಣು ಪ್ರಯೋಗ ಚಕ್ರದೊಂದಿಗೆ ಧಾವಿಸಿ ಗಜೇಂದ್ರ ನನ್ನು ಗ್ರಾಹದ ಹಿಡಿತದಿಂದ ಮುಕ್ತಗೊಳಿಸುತ್ತಿರುವ ದೃಶ್ಯ, ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇಗುಲಗಳ ಉತ್ತರ ಮುಖಮಂಟಪದ ಕಂಬಗಳ ಮೇಲಿವೆ. ಇಲ್ಲಿ ಗ್ರಾಹವನ್ನು ಆಮೆಯಾಗಿ ಚಿತ್ರಿಸಿರುವುದು ವೈಶಿಷ್ಟ್ಯ. ಈ ರೂಢಿ ದಖನ್ನಿನಲ್ಲಿ ಪ್ರಚಲಿತವಿತ್ತು.

ವಿರೂಪಾಕ್ಷ ದೇಗುಲದಲ್ಲಿರುವ ದುರ್ಗಾಭಗವತಿಯ ದುಂಡುಶಿಲ್ಪ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿದೆ. ಅಷ್ಟಭುಜೆಯಾದ ಸುಂದರ ಮೈಮಾಟದ ದೇವಿ ತನ್ನ ಎಡಗಾಲನ್ನು ಮನುಷ್ಯರೂಪದ ದೈತ್ಯದ ತಲೆಯ ಮೇಲೆ ಇರಿಸಿ ಕೊಲ್ಲುತ್ತಿದ್ದಾಳೆ. ಮಿತ ವೇಷಭೂಷಣ, ಚಟುವಟಿಕೆಯಿಂದ ಕೂಡಿದ ಅಂಗಾಂಗಗಳು, ವಿಶಿಷ್ಟ ಭಂಗಿ, ಸಮತೋಲನ, ಕೌಶಲ್ಯಪೂರ್ಣ ರೂಪಕರ್ಮ–ಇವೆಲ್ಲ ಸೇರಿ ಚಾಳುಕ್ಯ ದುರ್ಗಾಭಗವತಿಯ ಶಿಲ್ಪಗಳಲ್ಲೆಲ್ಲ ಇದನ್ನು ಅತೀ ಶ್ರೇಷ್ಠ ಕೃತಿಯನ್ನಾಗಿಸಿವೆ.

ಪಟ್ಟದಕಲ್ಲಿನ ಈ ದೇಗುಲಗಳ ಉಲ್ಲೇಖಾರ್ಹ ಶಿಲ್ಪಗಳಲ್ಲಿ ದ್ವಾರಪಾಲಕ ಶಿಲ್ಪಗಳು ಮಹತ್ತ್ವದವು. ಮುಖಮಂಟಪಗಳಲ್ಲಿ ಆಳೆತ್ತರವಾಗಿ ಕಂಡುಬರುವ ಈ ವ್ಯಕ್ತಿಗಳು ಭಾರವಾದ ಗದೆಯ ಮೇಲೆ ವಿಶಿಷ್ಟ, ಸಹಜ, ಅನುಕೂಲಕರ ಭಂಗಿಗಳಲ್ಲಿ ನಿಂತಿದ್ದಾರೆ. ವಿಕಾರ ಕಣ್ಣುಗಳು, ಕೋರೆಗಳು ನೋಡುಗರ ಮನ ನಡುಗಿಸುವದರಲ್ಲಿ ಯಶಸ್ವಿಯಾಗುತ್ತವೆ. ಇವು ಶಿವನ ಆಯುಧ ಪುರುಷ ಶಿಲ್ಪಗಳೇ ಆಗಿವೆ. ದಾಕ್ಷಿಣಾತ್ಯ ಎನ್ನಬಹುದಾದ ಈ ಭೀಕರ ದ್ವಾರಪಾಲಕರ ಬಿಂಬಗಳು ಕೆಲವು ಸಲ ದುಂಡು ಶಿಲ್ಪವೆನ್ನುವಷ್ಟು ಮಟ್ಟಿಗೆ ರೂಪಕರ್ಮ ಪಡೆದಿವೆ. ಬಾದಾಮಿಯ ಮೊದಲ ಶೈವ ಗುಹಾಲಯದ ಸೌಮ್ಯ ದ್ವಾರಪಾಲಕರಿಗೆ ಹೋಲಿಸಿ ದಾಗ ಈ ರೌದ್ರರೂಪದ ದ್ವಾರಪಾಲಕರು ಬದಲಾದ ಧಾರ್ಮಿಕ ಭಾವಗಳ ಪ್ರತಿನಿಧಿಗಳಾಗಿ ಕಾಣುತ್ತಾರೆ.

ಒಟ್ಟಾರೆ ನೋಡಿದಾಗ, ಚಳುಕ್ಯ ರಾಚನಿಕ ದೇಗುಲಗಳ ಶಿಲ್ಪಗಳು ಕೊನೆಯ ಹಂತದ ವರೆಗೆ ಪ್ರತಿಮಾಲಕ್ಷಣ ವೈವಿಧ್ಯ ಮತ್ತು ಶೈಲಿ ವೈವಿಧ್ಯವನ್ನು ನಿರೂಪಿಸುತ್ತವೆ. ಈ ದೃಷ್ಟಿ ಯಿಂದ ಗುಹಾಶಿಲ್ಪ ಶೈಲಿಯಲ್ಲಿ ಕಂಡುಬರುವ ವೈವಿಧ್ಯತೆಯನ್ನು ಇಲ್ಲಿಯೂ ಗಮನಿಸ ಬಹುದು. ಮೊದಮೊದಲು ಔತ್ತರೇಯ, ಉತ್ತರ ದಖನ್ ಶಿಲ್ಪಪರಂಪರೆಯ ಪ್ರಾತಿನಿಧ್ಯವಿದೆ ಯಾದರೆ, ಕ್ರಮೇಣ ದಾಕ್ಷಿಣಾತ್ಯವೆನ್ನಬಹುದಾದ ಶೈಲಿ ರೂಢವಾಗಿಬಿಟ್ಟಿದೆ. ಹೀಗಿದ್ದರೂ ಪ್ರತಿಯೊಂದು ಹಂತದಲ್ಲಿ, ಪ್ರತಿಯೊಂದು ಪ್ರತಿಮೆಯಲ್ಲಿ ಶಿಲ್ಪಿಯ ಸ್ವತಂತ್ರ ಕಲ್ಪನಾ ಶಕ್ತಿ, ಸ್ವತಂತ್ರ ಅಭಿವ್ಯಕ್ತಿ ಚಾತುರ್ಯ ಅಡಿಗಡಿಗೂ ಕಾಣುತ್ತದೆ. ಇದರೊಟ್ಟಿಗೆ ಬದಲಾಗು ತ್ತಿರುವ ಧಾರ್ಮಿಕ ಭಾವನೆಗಳೂ ಪ್ರಕಟಗೊಂಡಿವೆ. ದೇವಾಲಯ ರೂಪಭೇದಗಳಲ್ಲಿ ಕಂಡುಬರುವ ಪ್ರಯೋಗಶೀಲ ಗುಣ ಶಿಲ್ಪಗಳಲ್ಲಿಯೂ ಪ್ರತಿಬಿಂಬಿತವಾಗಿದೆ. ಕೊನೆಯಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇಗುಲದಲ್ಲಿ ಹರಳುಗಟ್ಟಿದ್ದ ಕರ್ನಾಟಕ ಪ್ರಾಸಾದ ಲಕ್ಷಣ ವೈಶಿಷ್ಟ್ಯ ಅಲ್ಲಿಯ ಶಿಲ್ಪಗಳಲ್ಲಿ ಕೂಡ ನಿರ್ದಿಷ್ಟ ಶೈಲಿಯಾಗಿ ಹರಳುಗಟ್ಟಿದೆ. (ಎಸ್.ವಿ.ಪಿ.)

ನಾಟ್ಯ ಶಿವ ಶಿಲ್ಪಗಳು: ನೃತ್ಯ ಭಂಗಿಯಲ್ಲಿ ಅಭಿವ್ಯಕ್ತವಾಗಿರುವ ಸಮಗ್ರ ದೇವತಾ ಮೂರ್ತಿಗಳಲ್ಲಿ ಪರಶಿವನ ನಾಟ್ಯಭಂಗಿಗಳು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿವೆ. ನೃತ್ಯಶಿವನನ್ನು ರೂಪಿಸುವಾಗ ಧಾರ್ಮಿಕ, ಆಧ್ಯಾತ್ಮಿಕ, ಕಲಾತ್ಮಕ ಮತ್ತು ತಾತ್ತ್ವಿಕಾಂಶಗಳು ಹೃದ್ಯವಾಗಿರುತ್ತವೆ. ಅನೇಕ ಸಂಖ್ಯೆಯಲ್ಲಿ, ಭಂಗಿಯಲ್ಲಿ ಲಭ್ಯವಾಗಿರುವ ನೃತ್ಯಶಿವನನ್ನು ನೋಡುತ್ತಿದ್ದರೆ ಶಿವನು ನಾನಾ ಕಾರಣಕ್ಕಾಗಿ ನರ್ತನಗೈಯ್ಯುತ್ತಲೇ ಇದ್ದಾನೆಂದು ವೇದ್ಯವಾಗುತ್ತದೆ. ಪೌರಾಣಿಕ ಕಥೆಗಳನ್ನಾಧರಿಸಿ ರೂಪಿತವಾಗುವ ಪರಶಿವನ ವಿವಿಧ ರೂಪಗಳ ಪರಿಕಲ್ಪನೆಗಳು ಸೃಜನಶೀಲ ಶಿಲ್ಪಿಗಳ ಕೈ ಚಳಕದಲ್ಲಿ ಕಲಾತ್ಮಕ ಪ್ರಪಂಚವನ್ನೇ ಸೃಷ್ಟಿಸಿವೆ. ಈ ರೀತಿ ಪ್ರಾರಂಭಿಕ ಹಂತದಲ್ಲಿ ಸೃಷ್ಟಿಸಲಾದ ನೃತ್ಯಶಿವನ ಪ್ರತಿರೂಪ ಮುಂದೆ ಭಾರತದಾದ್ಯಂತ ಪ್ರಚಲಿತವಾಗಿ ಆ ಭಂಗಿಗಳಿಂದಲೇ ಶಿಲ್ಪಕಲಾ ಶೈಲಿಯನ್ನು ಗುರುತಿಸುವ ಮಟ್ಟಕ್ಕೆ ಶಿವನ ನೃತ್ಯ ಭಂಗಿಗಳು ಮುಖ್ಯವಾಗುತ್ತವೆ. ಒಂದೊಂದು ಘಟ್ಟದಲ್ಲಿಯೂ ಒಂದೊಂದು ಪ್ರಮಾಣದಲ್ಲಿಯೂ ಒಂದೊಂದು ವಿನೂತನ ಭಂಗಿಯಲ್ಲಿಯೂ ರಚಿತವಾದ ಈ ಶಿವನ ನಾಟ್ಯಭಂಗಿಗಳು ಭಾರತೀಯ ಶಿಲ್ಪಕಲಾರಂಗದ ಮೇರುಕೃತಿಗಳ ಶ್ರೇಣಿಗೆ ಸೇರಿ ಭಾರತೀಯ

ಶಿವದೇವಾಲಯ, ಮಹಾಕೂಟ

ಸಂಸ್ಕೃತಿಯ ಸಂಕೇತಗಳಾಗಿ ಬೆಳೆದು ನಿಂತಿವೆ. ಶಿವನನ್ನು ದಿವ್ಯ ನರ್ತಕನಾಗಿ ಶಿಲ್ಪಿ ಕಲ್ಪಿಸಿಕೊಳ್ಳುವಾಗ ಸತ್ತ್ವಯುತ ಚಲನ ಮಾಧ್ಯಮದ ಮಾರ್ದನಿಗೆ ಒತ್ತು ನೀಡಿ ತನ್ನ ಮನ ಮತ್ತು ಕೈ ಚಳಕವನ್ನು ನಿರ್ದೇಶಿಸುತ್ತಾನೆ. ಶಿವನ ನೃತ್ಯ ವ್ಯೋಮಾತ್ಮಕ ಚಟುವಟಿಕೆಗಳಲ್ಲಿ ಪ್ರತಿಧ್ವನಿತವಾಗಿವೆ. ಈ ಚಿರಂತನ ನರ್ತನದಲ್ಲಿ ದುಷ್ಟಶಕ್ತಿಗಳ ಮೇಲೆ ಜಯದ ಸಾಧನೆ, ಮಾಯೆಯ ನಿರ್ಮೂಲನೆ, ಅನಂತದಲ್ಲಿ ಜೀವ ಲೀನವಾಗುವಿಕೆ ಮುಂತಾದ ಸಂದೇಶಗಳು ಮಾರ್ದನಿಗೊಳ್ಳುತ್ತವೆ. ಜೀವನದ ಸುಖದುಃಖಗಳನ್ನು ನಿಯಂತ್ರಿಸುತ್ತಾ ಸೃಷ್ಟಿ ಲಯಗಳ ಸಾಮರಸ್ಯವನ್ನು ಬೆಸೆಯುತ್ತಾ ಶಿವನು ತನ್ನ ಈ ಅಗೋಚರ ನರ್ತನ ಪ್ರಕ್ರಿಯೆಯಲ್ಲಿ ಇಡಿ ಸಂಸಾರವನ್ನೇ ಲೀನಗೊಳಿಸುತ್ತಾನೆ. ಪುರಾಣಗಳ ದಾರ್ಶನಿಕ ರೂಪಕಗಳು ಶಿವನ ಇಂತಹ ಪರಿಕಲ್ಪನೆಗಳ ಸುತ್ತ ಹೆಣೆದ ಲಯಬದ್ಧ ದಿವ್ಯರಚನೆಗಳು.

ಇಂತಹ ನೂರಾರು ಕಥಾನಕಗಳು ಕರ್ನಾಟಕದ ದೇವಾಲಯಗಳ ವಿವಿಧ ಭಾಗಗಳಲ್ಲಿ ಸಾಂದರ್ಭಿಕವಾಗಿ ಸಾದೃಶ್ಯಗೊಂಡಿವೆ. ಭಾರತದ ಇನ್ನಾವ ಪ್ರಾಂತದಲ್ಲೂ ಕರ್ನಾಟಕದ ದೇವಾಲಯಗಳಲ್ಲಿ ಕಾಣುವಷ್ಟು ಶಿವನ ನೃತ್ಯಭಂಗಿಗಳ ಸಂಖ್ಯೆ ಮತ್ತು ವೈವಿಧ್ಯ ಕಂಡುಬರುವುದಿಲ್ಲ. ಕರ್ನಾಟಕದ ರೂವಾರಿಗಳ ಕಲಾತ್ಮಕ ದೃಷ್ಟಿ ಅವರ ರಚನಾ ಕೌಶಲ ಅವರಿಗೆ ದೊರೆತ ಧಾರ್ಮಿಕ ಪರಿಸರ ಮತ್ತು ಚಿತ್ರಿಸುವ ಸ್ವಾತಂತ್ರ್ಯ– ಈ ಅಂಶಗಳು ಶಿವನ ನೃತ್ಯ ಶಿಲ್ಪಗಳ ಸಂಯೋಜನೆಯಲ್ಲಿ ಆರ್ದ್ರವಾಗಿ ಹರಿದು ಬಂದಿದೆ.

ಕರ್ನಾಟಕದಲ್ಲಿ ಶಿವನ ಆರಾಧನೆಗಾಗಿ ನಿರ್ಮಿಸಿರುವ ನೂರಾರು ಮಹಾನ್ ದೇವಾಲಯಗಳಿವೆ. ಗರ್ಭಗುಡಿಯಲ್ಲಿ ಲಿಂಗರೂಪಿಯಾಗಿ ಆರಾಧನೆಗೊಳ್ಳುವ ಶಿವ ಅದೇ ದೇವಾಲಯದ ಭಿತ್ತಿಯಲ್ಲಿ ವಿವಿಧ ರೂಪಗಳಿಂದ ರಾರಾಜಿಸುತ್ತಾನೆ. ಹಲವು ಮೂರ್ತಿ ಶಿಲ್ಪಶಾಸ್ತ್ರ ಆಧಾರದಿಂದ ರಚಿತವಾಗಿದ್ದರೆ ಇನ್ನು ಹಲವು ನಾಟ್ಯಶಾಸ್ತ್ರ ಆಧಾರದಿಂದ ರಚಿತವಾಗಿರುತ್ತವೆ. ಹೀಗಾಗಿ ಶಿವನ ವಿವಿಧ ರೂಪಗಳ ಪರಿಚಯ ಅದಕ್ಕೆ ಸಂಬಂಧಪಟ್ಟ ಘಟನೆಗಳು ಪ್ರೇಕ್ಷಕರನ್ನು ಪೌರಾಣಿಕ ಸತ್ಯದೆಡೆಗೆ ಯೋಚಿಸಲು ಹಚ್ಚುತ್ತವೆ. ಶೈವಪುರಾಣಗಳು ರಚಿತವಾಗುತ್ತಿದ್ದ ಕಾಲದಿಂದ ಹಿಡಿದು ಶೈವ ಪಂಗಡಗಳ, ಕೃತಿಗಳ, ಆಗಮಗಳ ಬೆಳವಣಿಗೆಯ ಉದ್ದಕ್ಕೂ ಆಯಾ ನೆಲೆಯ ಹಿನ್ನೆಲೆಯಲ್ಲಿ ನಿರ್ಮಿಸಿದ ವಾಸ್ತುರಚನೆ ಶಿವನ ಶಿಲ್ಪಗಳ ಪ್ರತಿಪಾದನೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿವೆ. ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಹೊಯ್ಸಳ, ನೊಳಂಬ ಹಾಗೂ ವಿಜಯನಗರ ಕಾಲದ ವಾಸ್ತುರಚನೆಗಳಲ್ಲಿ ನಾಟ್ಯ ಶಿವನ ಪ್ರತಿಪಾದನೆ ಬೇರೆಲ್ಲಾ ನಾಟ್ಯಶಿಲ್ಪಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮೂಡಿಬಂದಿದೆ. ಧಾರ್ಮಿಕ, ಆಧ್ಯಾತ್ಮಿಕ, ಕಲಾತ್ಮಕ ಮತ್ತು ತಾತ್ತ್ವಿಕ ಅಭಿವ್ಯಕ್ತತೆ ಈ ಶಿಲ್ಪಗಳನ್ನು ಕಂಡರಿಸುವಾಗ ಶಿಲ್ಪಿ ಗಮನದಲ್ಲಿರಿಸಿದ ಮೂಲ ಅಂಶವಾಗಿದೆ.

6ನೆಯ ಶತಮಾನದ ಚಳುಕ್ಯ ಶಿಲ್ಪಶೈಲಿಯ ಮೇರುಕೃತಿಗಳಲ್ಲಿ ಅಗ್ರಪಂಕ್ತಿಯಲ್ಲಿ ಬಾದಾಮಿಯ ನಟೇಶ ಶಿಲ್ಪ ಮೆರೆಯುತ್ತದೆ. ಬಾದಾಮಿಯ ನಾಲ್ಕು ಗುಹಾಂತರ ರಚನೆಗಳಲ್ಲಿ ಮೊತ್ತ ಮೊದಲ ಶಿಲ್ಪ ಇದಾಗಿದೆ. ಭಾರತೀಯ ಚಾರಿತ್ರಿಕ ಆಧಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನಾಟ್ಯಾಗಮವನ್ನು ಸಮಗ್ರವಾಗಿ ರೂಪಿಸಿರುವ ಪೂರ್ಣಪ್ರಮಾಣದ ನಟೇಶನ ಶಿಲ್ಪ ಪ್ರಪ್ರಥಮ ಉದಾಹರಣೆಯಾಗಿ ನಿಲ್ಲುತ್ತದೆ. ಚಾರಿತ್ರಿಕ ಅರಿವಿನ ಕೊರತೆಯಿಂದ ಅನೇಕ ಲೇಖಕರು ಚೋಳನಾಟ್ಯಶಿಲ್ಪವನ್ನೇ (ನಟರಾಜನೆಂದು ಪ್ರಖ್ಯಾತವಾಗಿರುವ) ಪ್ರಥಮವೆಂದು ತಿಳಿದು ಮತ್ತು ನಾಟ್ಯದ ಬೆಳವಣಿಗೆ ಆಗಿನಿಂದಲೇ ಆಗಿದೆಯೆಂದು ಭಾವಿಸುತ್ತಾರೆ. ಆದರೆ ಅವರು ಆಧರಿಸಿರುವ ಸಾಕ್ಷಿ ಹನ್ನೊಂದನೆಯ ಶತಮಾನದ್ದು.

ಕಲಾವಿಶ್ಲೇಷಣೆಯ ಎಲ್ಲ ಭೌತಿಕ ಅಂಶಗಳನ್ನು ಈ ಶಿಲ್ಪವು ಒಳಗೊಂಡಿದೆ. ರಚನಾ ತಂತ್ರದ ಅಂಶಗಳೂ ಪ್ರಮಾಣಬದ್ಧತೆಯ ನೈಪುಣ್ಯದೆಡೆಗೆ ಬೆರಳುಮಾಡಿ ತೋರಿಸುತ್ತದೆ. ಸಂಯೋಜನಾ ತಂತ್ರದ ವಾಸ್ತವಿಕಾಂಶಗಳಾದ ರೇಖಾವಿನ್ಯಾಸ, ಅಂಗಾಂಗಳ ಸಮತೋಲನ, ಲಂಬತೆ ಮತ್ತು ಅಡ್ಡ ಅವುಗಳ ಪ್ರಮಾಣದಲ್ಲಿ 18 ಕೈಗಳನ್ನು ಸಂಯೋಜಿಸಿರುವ ರೀತಿ, ಕೆಳಭಾಗದಲ್ಲಿ ಅಡ್ಡ ವಿನ್ಯಾಸದಲ್ಲಿ ಗಣೇಶ ಮತ್ತು ವಾದ್ಯಗಾರನ ಚಿತ್ರಣ ಮುಂತಾದ ಅಂಶಗಳು ಮುಖ್ಯವಾಗುತ್ತವೆ. ಅರ್ಧ ಉಬ್ಬು ತಂತ್ರವನ್ನು ಶಿಲ್ಪರಚನೆಗಾಗಿ ಬಳಸಿರುವುದರಿಂದ ಈ ಶಿಲ್ಪ ಗುಹಾಂತರ ವಾಸ್ತುವಿನ ತಂತ್ರತೆಯ ಚೌಕಟ್ಟಿನಲ್ಲಿ ಸಮರ್ಪಕವಾಗಿ ನಿಲ್ಲುತ್ತದೆ.

ಭರತನ ನಾಟ್ಯಶಾಸ್ತ್ರ ಸಂಪ್ರದಾಯವನ್ನು ಆಧರಿಸಿ ಚಳುಕ್ಯ ಶಿಲ್ಪಗಳು ಐಹೊಳೆಯ ಹುಚ್ಚಪ್ಪಯ್ಯ ಮಠ, ಪಟ್ಟದಕಲ್ಲಿನ ವಿರೂಪಾಕ್ಷ, ಸಂಗಮೇಶ್ವರ ಮತ್ತು ಪಾಪನಾಥ ದೇವಾಲಯಗಳಲ್ಲಿ ಊರ್ಧ್ವಜಾನು, ಚತುರ, ಅರ್ಧ ಮತ್ತಲಿ, ರೇಚಿತ ನಿಕುಟ್ಟಿತ, ಅರ್ಧಸೂಚಿ, ಪೃಷ್ಠಸ್ವಸ್ತಿಕ ಮುಂತಾದ ಕರಣಗಳಲ್ಲಿ ನಾಟ್ಯಶಿವನ ಶಿಲ್ಪಗಳನ್ನು ಕಲಾತ್ಮಕವಾಗಿ ರಚಿಸಿದ್ದಾರೆ. ರಾಷ್ಟ್ರಕೂಟರ ಕಾಲದ ಶಿವನ ನಾಟ್ಯಶಿಲ್ಪಗಳನ್ನು ಎಲ್ಲೋರದ ದಶಾವತಾರ ಮತ್ತು ಕೈಲಾಸ ಗುಹಾಂತರ ದೇವಾಲಯಗಳಲ್ಲಿ ಕಾಣುತ್ತೇವೆ. ಪೌರುಷಯುತವಾಗಿ ತೋರುವ ಈ ಶಿಲ್ಪಗಳು ರಸಭರಿತ ಕಲಾಕೃತಿಗಳು. ಮಾನವಾಕೃತಿಗೆ ಮೀರಿ ಭಾವನಾತ್ಮಕ ಚಲನೆಯಲ್ಲಿ ಆಲೀಢಸ್ಥಾನ, ಊರ್ಧ್ವಜಾನು ಮತ್ತು ಭುಜಂಗ ತ್ರಾಸಿತ ಕರಣಗಳಲ್ಲಿ ಶಿವನು ಇಲ್ಲಿ ನರ್ತಿಸುತ್ತಾನೆ. ಕಲ್ಯಾಣ ಚಾಳುಕ್ಯರ ಕಾಲದ ನಾಟ್ಯಶಿವನ ಶಿಲ್ಪಗಳು ಪ್ರಮಾಣದಲ್ಲಿ ಚಿಕ್ಕವಾದರೂ ಒಂದು ಕರಣದಿಂದ ಇನ್ನೊಂದು ಕರಣಕ್ಕೆ ಸಾಗುವ ಚಲನೆಗಳನ್ನು ಸ್ಪಷ್ಟವಾಗಿ ಸೂಸುವ ರಚನೆಗಳು. ಲಕ್ಕುಂಡಿ, ಇಟಗಿಯ ದೇವಾಲಯಗಳಲ್ಲಿ ಹಲವು ಅಪರೂಪದ ನಾಟ್ಯ ಶಿವನ ಶಿಲ್ಪಗಳಿವೆ. ಹೊಯ್ಸಳರ ಕಾಲದ ನರ್ತನಶಿವನ ಶಿಲ್ಪಗಳಲ್ಲಿ ಮೊದಲಿನ ಸತ್ತ್ವ ಕಾಣದೆ ಆಭರಣಗಳ ಅಲಂಕಾರಗಳಿಂದ ಜಗ್ಗಿ ನರ್ತಿಸುವ ಭಾವ ತೋರುವುದು. ಹಳೇಬೀಡಿನ ಜೋಡಿ ದೇವಾಲಯಗಳ ಭಿತ್ತಿಗಳಲ್ಲಿ ಹಾಗೂ ಲಲಾಟ ಬಿಂಬಗಳಲ್ಲಿ ಊರ್ಧ್ವಜಾನು ಕರಣಗಳಲ್ಲಿ ನರ್ತಿಸುವ ಶಿವನ ರಚನೆಗಳನ್ನು ಕಾಣಲು ಸಾಧ್ಯ. ಈ ಹೊತ್ತಿಗೆ ಶಿವನ ನಾಟ್ಯಭಂಗಿಗಳಲ್ಲಿ ವೈವಿಧ್ಯ ಕಡಿಮೆಯಾಗಿರುವುದನ್ನು ಗಮನಿಸಬಹುದು. ವಿಜಯನಗರ ಕಾಲದಲ್ಲಿ ನಾಟ್ಯಶಿವನ ಶಿಲ್ಪಗಳು ವಿರಳವಾಗುತ್ತವೆ. ಲೋಹ ಶಿಲ್ಪಗಳು ನಟರಾಜನ ರೂಪದಲ್ಲಿ ಕಂಡುಬರುತ್ತವೆ. ಈ ವೇಳೆಗೆ ಚೋಳರ ಕಾಲದ ನಾದಾಂತ ಭಂಗಿಯಲ್ಲಿರುವ ನಟರಾಜ ಶಿವನ ಮೂರ್ತಿ ಹೆಚ್ಚು ಜನಪ್ರಿಯತೆ ಗಳಿಸಿದ್ದು ದೇವಾಲಯ ಭಿತ್ತಿಗಳಲ್ಲಿ ಶಿಲೆಯಲ್ಲಿ ಹಾಗೂ ಲೋಹ ಮಾಧ್ಯಮದಲ್ಲಿ ಶಿವನ ಆನಂದ ತಾಂಡವ ಮೂರ್ತಿ ಚಿರಸ್ಥಾಯಿಯಾಗಿ ಉಳಿಯುವಂತಾಯಿತು. ಭಾರತೀಯ ತಾತ್ತ್ವಿಕನೆಲೆಯನ್ನು ಪ್ರತಿಪಾದಿಸುವ ಒಂದು ಅದ್ವಿತೀಯ ಮೇರು ರಚನೆ ಈ ನಟರಾಜ ಶಿಲ್ಪವಾಗಿದೆ. (ಸಿ.ಎಂ.ಎನ್.)

**ಕುಬ್ಜಗಣ ಶಿಲ್ಪಗಳು:** ಬಾದಾಮಿ ಚಳುಕ್ಯರ ಕಾಲದ ಶಿಲ್ಪಗಳನ್ನು ಮೂರು ರೀತಿಯಾಗಿ ವಿಂಗಡಿಸಬಹುದು 1. ಅತಿಎತ್ತರವಾದ ಶಿಲ್ಪಗಳು. 2. ಸಾಮಾನ್ಯ ಎತ್ತರದ ಶಿಲ್ಪಗಳು. 3.ಅತಿಕುಳ್ಳಗಿನ ಶಿಲ್ಪಗಳು. ಶಿಲ್ಪಶಾಸ್ತ್ರಗಳಲ್ಲಿ ಮುಖ್ಯವಾಗಿ ಮೂರು ವಿಧವಾದ ರಚನೆಗಳಾಗಬೇಕೆಂಬ ನಿಯಮವಿದೆ. 1. ಉತ್ತಮ ದಶತಾಲ. 2. ಮಧ್ಯಮ ದಶತಾಲ. 3. ಅಧಮ ದಶತಾಲ. ಸಾಮಾನ್ಯವಾಗಿ ದಶತಾಲಪ್ರಮಾಣದ ಅನ್ವಯ ರೂಪುಗೊಳ್ಳುವ ಮೂರ್ತಿಗಳ ವಿವರ ಹೀಗಿದೆ: ಉತ್ತಮ ದಶತಾಲದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಅರ್ಧನಾರೀಶ್ವರ, ದತ್ತಾತ್ರೇಯ, ಬುದ್ಧ, ಅರ್ಹಂತ, ವಾಸುದೇವ, ಭಕ್ತಮೂರ್ತಿಗಳ (ಸಾಯುಜ್ಯ) ರಚನೆಯಾಗುತ್ತವೆ. ಮಧ್ಯಮ ದಶತಾಲದಲ್ಲಿ ಸರಸ್ವತಿ, ಲಕ್ಷ್ಮಿ, ಉಮಾ, ದುರ್ಗೆ, ಭೂದೇವಿ, ನೀಳಾದೇವಿ, ಸಪ್ತಮಾತೃಕೆಯರು, ಭಕ್ತಮೂರ್ತಿಗಳು, ಶ್ರೀರಾಮ ಪರಿವಾರದ ಮೂರ್ತಿಗಳು (ಸಾರೂಪ್ಯ) ರಚನೆಯಾಗುತ್ತವೆ. ಅಧಮ ದಶತಾಲದಲ್ಲಿ ಇಂದ್ರ, ಅಗ್ನಿ, ವರುಣ, ಅಶ್ವಿನಿದೇವತೆಗಳು, ಸ್ಕಂದ, ವೀರಭದ್ರ ಕ್ಷೇತ್ರಪಾಲಕ, ಈಶಾನ, ಸೂರ್ಯ, ಚಂದ್ರ, ಯಮ, ವಾಯು, ಚಂಡಿಕೇಶ್ವರ, ಆದಿತ್ಯರು, ಏಕಾದಶ ರುದ್ರರು, ಮಹರ್ಷಿಗಳು, ಭೃಗು, ಮಾರ್ಕಂಡೇಯ, ಆರ್ಯಮ, ಲಕ್ಷ್ಮಣ, ಭಕ್ತಮೂರ್ತಿ (ಸಾಮೀಪ್ಯ) ರಚನೆಯಾಗುತ್ತವೆ.

ಈ ಹಿನ್ನೆಲೆಯಲ್ಲಿ ಬಾದಾಮಿ ಚಳುಕ್ಯ ಶಿಲ್ಪಗಳನ್ನು ಗಮನಿಸಿದಾಗ ಉತ್ತಮ ದಶತಾಲದಲ್ಲಿ ವಿಷ್ಣುವಿನ ವಿವಿಧ ಅವತಾರಗಳಿಗೆ ಸಂಬಂಧಿಸಿದಂತಹ ಶಿಲ್ಪಗಳು, ಅರ್ಧನಾರೀಶ್ವರ, ಶಿವನ ನೃತ್ಯಶಿಲ್ಪಗಳು ರಚನೆಯಾಗಿವೆ. ಮಧ್ಯಮ ದಶತಾಲದಲ್ಲಿ ಲಕ್ಷ್ಮಿ, ಉಮಾ, ದುರ್ಗೆ, ಭೂದೇವಿ, ಸಪ್ತಮಾತೃಕೆಯರ ಶಿಲ್ಪಗಳು ನಿರ್ಮಿತವಾಗಿವೆ. ಅಧಮ ದಶತಾಲದಲ್ಲಿ ಏಕಾದಶರುದ್ರರು ಎಂದು ಹೇಳಲ್ಪಟ್ಟ ಶಿಲ್ಪಗಳು ಹೆಚ್ಚಾಗಿ ನಿರ್ಮಿತವಾಗಿವೆ. ಅಲ್ಲದೆ ವೀರಭದ್ರ, ಸ್ಕಂದ ಇತರ ದೇವತೆಗಳು ಗಂಧರ್ವರು. ಅಧಮ ದಶತಾಲದಲ್ಲಿ ನಿರ್ಮಿತರಾಗಿದ್ದಾರೆ.

ಋಗ್ವೇದದಲ್ಲಿ 33ದೇವತೆಗಳ ವಿವರಣೆ ಹೀಗಿದೆ: 33 ದೇವತೆಗಳಲ್ಲಿ ಭೂ ಸ್ಥಾನೀಯ ದೇವತೆಗಳು, ಅಂತರಿಕ್ಷಸ್ಥಾನೀಯ ದೇವತೆಗಳು ಹಾಗೂ ದ್ಯುಸ್ಥಾನೀಯ ಆಕಾಶ ದೇವತೆಗಳು ಎಂದು ಮೂರು ರೀತಿಯ ದೇವತೆಗಳಿದ್ದಾರೆ. ಅಂದರೆ ಭೂಮಿ, ಅಂತರಿಕ್ಷ ಹಾಗೂ ಆಕಾಶ ಎಂಬ ಮೂರು ಸ್ತರಗಳಲ್ಲಿ ದೇವತೆಗಳು ನೆಲೆಸಿರುತ್ತಾರೆ. ಭೂಮಿಯಲ್ಲಿ ಅಷ್ಟವಸುಗಳು (8 ಭೂದೇವತೆಗಳು) ಅಂತರಿಕ್ಷದಲ್ಲಿ ಏಕಾದಶರುದ್ರರು (11 ರುದ್ರರು) ಮತ್ತು ಆಕಾಶದಲ್ಲಿ ದ್ವಾದಶ ಆದಿತ್ಯರು (12 ಆದಿತ್ಯರು) ನೆಲೆಸಿರುತ್ತಾರೆ. ಇವರಲ್ಲದೆ ಅದಿತಿ ಮತ್ತುಪ್ರಜಾಪತಿ ಎಂಬ ಅನಿರ್ದಿಷ್ಟಸ್ಥಾನೀಯ ದೇವತೆಗಳೂ ಇದ್ದಾರೆ. ಈ 33 ದೇವತೆಗಳಿಗೆ ಇಂದ್ರನೇ ಅಧಿಪತಿ. ಇವರೆಲ್ಲರೂ ವಿವಿಧ ಹೆಸರುಗಳಿಂದ ಉಲ್ಲೇಖಿತರಾಗಿ ಪ್ರಖ್ಯಾತರಾಗಿದ್ದಾರೆ.

ಏಕಾದಶರುದ್ರರ ಅಧಿಪತಿ ರುದ್ರ, ಅಗ್ನಿಯ ಎರಡು ರೂಪಗಳಲ್ಲಿ ಅಂದರೆ ಶಿವ ಮತ್ತು ರುದ್ರರಲ್ಲಿ ರುದ್ರನು ಪ್ರಕೃತಿ ವಿಕೋಪಗಳ ದೇವತೆಯಾಗಿ ಪರಿಗಣಿತನಾಗಿದ್ದರಿಂದ ಅವನ ಅನುಚರರನ್ನು ಸ್ತುತಿಸುವ ಅವರನ್ನು ಪ್ರಸನ್ನರನ್ನಾಗಿಸಿ ಸೃಷ್ಟಿಯ ಸಮತೋಲನವನ್ನು ಕಾಪಾಡುವ ರೂಢಿ ಇದ್ದಿತು. ಹೀಗೆ ಇವರು ಇಂದ್ರನ ಆತ್ಮೀಯರಾಗಿ ಮಹಾದೇವನ ಅನುಚರರಾಗಿ, ವರುಣನ ನಿಕಟವರ್ತಿಗಳಾಗಿ ಭೂಮಿತಾಯಿಯ ಮಕ್ಕಳಾಗಿ, ಅಂತರಿಕ್ಷ ದೇವತೆಗಳಾಗಿ ವಿವಿಧ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ಆದ್ದರಿಂದ ಇವರನ್ನು ಮುಂದೆ ಪುರಾಣಯುಗದಲ್ಲಿ ಗಂಧರ್ವರು (ಕಿನ್ನರರು, ಕಿಂಪುರುಷರು), ಗಣಗಳು, ಯಕ್ಷರು ಭಾರವಾಹಕರು ಎಂದೂ ಅಷ್ಟೈಶ್ವರ್ಯ ಸಂಪತ್ತನ್ನು ನೀಡುವವರಾದ್ದರಿಂದ ಕುಬೇರನ ಮಕ್ಕಳೆಂದೂ ಪರಿಗಣಿತರಾಗಿ ಬಹು ವಿಧವಾಗಿ ಪೂಜಿಸಲ್ಪಟ್ಟಿದ್ದಾರೆ. ಕಾಲಾಂತರದಲ್ಲಿ ಭೂಮಿ ಮತ್ತು ಆಕಾಶ ಮಧ್ಯದಲ್ಲಿ ಬರುವ ಈ 11 ಅಂತರಿಕ್ಷ ದೇವತೆಗಳನ್ನು ಮನುಷ್ಯನು ಪೂಜಿಸಿದಾಗ ಬಹು ಬೇಗ ಪ್ರಸನ್ನರಾಗುವರೆಂದೂ ಸಂಪತ್ತು, ಐಶ್ವರ್ಯ, ಸುಖಭೋಗಗಳನ್ನು ನೀಡುವಂತಹ ದೇವತೆಗಳೆಂಬ ನಂಬಿಕೆ–ಪ್ರತೀತಿ ನೆಲೆಯೂರಿ ಇವರನ್ನು ವಿಶೇಷವಾಗಿ ಪೂಜಿಸುವ ಸ್ಮರಿಸುವ ಪ್ರವೃತ್ತಿ, ಸಂಸ್ಕೃತಿ ಪ್ರಾಚೀನ ಭಾರತದಲ್ಲಿತ್ತು. ಇತಿಹಾಸದ ಆರಂಭಕಾಲಕ್ಕೆ ಇವರು ಹೆಚ್ಚಾಗಿ ಯಕ್ಷರೂಪದಿಂದ ಪೂಜೆಗೊಂಡು ಜೈನ–ಬೌದ್ಧಪರಂಪರೆಯಲ್ಲಿ ವಿಶೇಷ ಪ್ರಾಶಸ್ತ್ಯವನ್ನು ಪಡೆದುಕೊಂಡಿದ್ದಾರೆ. ಯಕ್ಷಶಿಲ್ಪಗಳು ನಮಗೆ ಬಾರ್ಹುತ್ ಹಾಗೂ ಸಾಂಚಿಸ್ತೂಪಗಳಲ್ಲಿ ಕಾಣಸಿಗುತ್ತವೆ. ಶಿವನ ಅನುಚರರಾದ ಶಿವಗಣಗಳಾಗಿ ಇವರಿಗೆ ವಿಶೇಷ ಮಾನ್ಯತೆ ಇದ್ದುದು ಸ್ಪಷ್ಟ (ಉದಾ: 5ನೆಯ ಶತಮಾನದ ಭೂಮಾರ ದೇವಾಲಯ). ಈ ಎಲ್ಲ ಹಿನ್ನೆಲೆಗಳಿಂದ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ರೀತಿಯಾಗಿ ಮಾನ್ಯತೆಗೊಳಗಾದ ಏಕಾದಶರುದ್ರರು ಮತ್ತು ಅನುಚರರನ್ನು ಬಾದಾಮಿ ಚಳುಕ್ಯರ ಕಾಲದಲ್ಲಿ ಬಹಳ ವೈಶಿಷ್ಟ್ಯಪೂರ್ಣವಾಗಿ ಗಂಧರ್ವರಾಗಿ, ಗಣಗಳಾಗಿ, ಯಕ್ಷರಾಗಿ, ರಾಕ್ಷಸ ಗಣಗಳಾಗಿ, ನಿರೂಪಿಸಲ್ಪಟ್ಟಿರುವುದನ್ನು ಗಮನಿಸಬಹುದು.

ಕುಬ್ಜಶಿಲ್ಪಗಳು: ಈ ಶಿಲ್ಪಗಳನ್ನು ನಿರ್ಮಿಸುವಾಗ ಅಧಮ ದಶತಾಲದ ಪ್ರಮಾಣವನ್ನು ಇನ್ನೂ ಸಂಕುಚಿತಗೊಳಿಸಿ ಅಂದರೆ ಇರುವ ಪ್ರಮಾಣವನ್ನು ಮತ್ತಷ್ಟು ಇಳಿಸಿ ರೂಪಿಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಅಧಮ ದಶತಾಲದಲ್ಲಿ ಗೋಪಾಲಕೃಷ್ಣ, ಸ್ಕಂದ ಹಾಗೂ ಇತರ ದೇವತೆಗಳಿದ್ದರೂ ಯಕ್ಷ, ಕಿನ್ನರ, ಕಿಂಪುರುಷ, ಗಣ, ರಾಕ್ಷಸಗಣಗ ಳನ್ನು ನಿರ್ಮಿಸುವಾಗ ಇನ್ನೂ ಕುಂಚಿಸಿ, ಸಂಕೋಚಗೊಳಿಸಿ ನಿರ್ಮಿಸುವುದರಿಂದ ಇವುಗಳು ಕುಬ್ಜಶಿಲ್ಪಗಳು ಎಂದು ಕರೆಯಲ್ಪಟ್ಟಿವೆ. ವಾಸ್ತುಶಾಸ್ತ್ರದ ಹಿನ್ನೆಲೆಯಲ್ಲಿ ಇವರನ್ನು ಆಲಂಕಾರಿಕವಾಗಿ ಬಳಸಬಹುದು ಎಂಬ ವಿವರಣೆ ಮಾತ್ರ ದೊರಕುತ್ತದೆ. ಇವರಿಗೆ ನಿರ್ದಿಷ್ಟವಾದ ಸ್ಥಾನವಾಗಲಿ, ನಿರ್ದಿಷ್ಟ ಅಳತೆಯಾಗಲಿ ಇರಬೇಕೆಂಬ ನಿಯಮವಿಲ್ಲ. ಸಾಮಾನ್ಯ ಶಿಲ್ಪದಲ್ಲಿ ಒಂದು ಭಾಗವಾಗಿ ಮತ್ತು ದೇಹ ಕೈಕಾಲುಗಳನ್ನು ಸಂಕುಚಿಸಿ ಮಾಡಬೇಕೆಂಬ ನಿಯಮ ಮಾತ್ರವೇ ಇರುವುದರಿಂದ ಬಾದಾಮಿ ಚಳುಕ್ಯರ ಶಿಲ್ಪಿಗಳು ಈ ಶಿಲ್ಪಗಳನ್ನು ಆಲಂಕಾರಿಕವಾಗಿ ಮಾತ್ರವಲ್ಲದೆ ವೈದಿಕ ಹಿನ್ನಲೆಯಲ್ಲಿ ಶಿಲ್ಪಶಾಸ್ತ್ರ, ವಾಸ್ತುಶಾಸ್ತ್ರ, ಪುರಾಣಗಳ ಹಿನ್ನೆಲೆಯಲ್ಲಿ ಹಾಗೆಯೇ ಸಮಕಾಲೀನ ಸಂಸ್ಕೃತಿಯ ನಿರೂಪಣೆಗಾಗಿ ಅತ್ಯಂತ ಸೂಕ್ತರೀತಿಯಲ್ಲಿ ಬಳಸಿಕೊಂಡಿದ್ದಾರೆ.

ಚಳುಕ್ಯರ ಕಾಲದ ಪ್ರಾರಂಭಿಕ ಹಂತದ ರಾವಳಫಡಿ ಗುಹಾದೇವಾಲಯದಿಂದ 10ನೆಯ ಶತಮಾನದ ಗಳಗನಾಥ ಶಿಲ್ಪಗಳ ಸಂಕೀರ್ಣಗಳವರೆಗೆ ಎಲ್ಲ ವಾಸ್ತುರಚನೆಗಳಲ್ಲಿ ಅಂದರೆ ಗುಹಾ ದೇವಾಲಯಗಳ ಅಧಿಷ್ಠಾನ ಪಟ್ಟಿಕೆಗಳಲ್ಲಿ, ದೇವಮೂರ್ತಿಗಳ ಕೆಳಗಿನ ಪಟ್ಟಿಕೆಗಳಲ್ಲಿ, ದೇವಾಲಯಗಳ ಅಧಿಷ್ಠಾನಗಳಲ್ಲಿ, ಕಂಬಗಳಲ್ಲಿ, ಕಂಬಗಳ ಮಣಿಪಟ್ಟಿಕೆಗಳಲ್ಲಿ, ದ್ವಾರಬಂಧಗಳಲ್ಲಿ ಭಿತ್ತಿನ ಸಾಲುಗಳಲ್ಲಿ ಹೀಗೆ ಎಲ್ಲೆಲ್ಲಿ ಇವರನ್ನು ನಿರೂಪಿಸಲು ಸಾಧ್ಯವಿದೆಯೋ ಎಲ್ಲ ಕಡೆಗೂ ಇವರನ್ನು ನಿರೂಪಿಸಿ ಅವರ ಪ್ರಾಶಸ್ತ್ಯವನ್ನು ತೋರಿಸಿ ಕೊಟ್ಟಿದ್ದಾರೆ.

ಶಿಲ್ಪ ಲಕ್ಷಣಗಳು: ಅತಿ ಚಿಕ್ಕ ಶಿಲ್ಪಗಳಾಗಿ ನಿರ್ಮಿಸಲ್ಪಟ್ಟಿರುವ ಇವುಗಳಲ್ಲಿ ಕುಬ್ಜವೂ ಸ್ಥೂಲವೂ ಆದ ದೇಹ, ಮೋಟಾದ ಕೈಕಾಲುಗಳು ಅಗಲವಾದ ಮುಖ ಮುಂತಾದವು ಮುಖ್ಯ ಲಕ್ಷಣಗಳಾಗಿವೆ. ವೇಷಭೂಷಣದಲ್ಲಿ ಸಣ್ಣದಾದ ಲಂಗೋಟಿಯಂತಹ ವಸ್ತ್ರವನ್ನು ಸೊಂಟದಿಂದ ಕೆಳಗೆ ಕಚ್ಚೆಯಾಗಿ, ಕೆಲವೊಮ್ಮೆ ಹೊಟ್ಟೆಯ ಮೇಲೆ ಇಳಿಬಿದ್ದಿರುವಂತೆ, ಭಾರದ ಹೊಟ್ಟೆಯನ್ನು ಎತ್ತಿ ಹಿಡಿದು ಕಟ್ಟಿರುವಂತೆ, ಸೊಂಟದ ಪಟ್ಟಿಯನ್ನು ಬಿಗಿದು ಕಟ್ಟಿರುವಂತೆ, ಕೈಯಲ್ಲಿ ಕಡಗ, ಕಾಲಿನಲ್ಲಿ ಕಡಗ, ದುಂಡಾದ, ದಪ್ಪ ಕೊರಳಲ್ಲಿ ಅಡ್ಡಿಕೆಯಂತಹ ಆಭರಣ, ಅಗಲವೂ ನೀಳವೂ ಆದ ಬಳೆಯಂತಹ ಕಿವಿಯೋಲೆ ಇತ್ಯಾದಿಗಳು ಇವುಗಳ ಮುಖ್ಯ ಅಲಂಕರಣಗಳಾಗಿವೆ. ತಲೆಗೂದಲು ಹೆಚ್ಚು ಒತ್ತೊತ್ತಾಗಿ, ಗುಂಗುರು ಕೂದಲು ಕೆಲವೊಮ್ಮೆ ಇಳಿಬಿದ್ದಂತೆ, ಮಧ್ಯೆ ಬೈತಲೆ ತೆಗೆದು ಎರಡು ಭಾಗ ಮಾಡಿ ಇಳಿಬಿಟ್ಟಂತೆ, ಎಲ್ಲ ಕೂದಲನ್ನು ಸೇರಿಸಿ ನೆತ್ತಿಯ ಮೇಲೆ ಜಡೆಯನ್ನು ಕಟ್ಟಿದಂತೆ ಚಿತ್ರ ವಿಚಿತ್ರರೀತಿಯ ಕೇಶವಿನ್ಯಾಸಗಳಲ್ಲಿ ನಿರೂಪಿತವಾಗಿವೆ. ಅಗಲವಾದ ದುಂಡು ಮುಖ, ಅಗಲವಾದ ಕಣ್ಣು, ತುಂಬುಗೆನ್ನೆ ಅಗಲವೂ ಹಾಗೂ ಕೆಲವೊಮ್ಮೆ ನೀಳವೂ ಆದ ಕಿವಿ, ದಪ್ಪನೆಯ ಕೆಳದುಟಿ, ಮುಖದಲ್ಲಿ ಮುಗ್ಧಮಂದಹಾಸ; ಇವು ಕುಬ್ಜಗಣಗಳ ಮುಖಲಕ್ಷಣಗಳಾಗಿವೆ. ಒಟ್ಟಾರೆ ಈ ಕುಬ್ಜಶಿಲ್ಪಗಳನ್ನು ನೋಡಿದಾಕ್ಷಣ ಪುಟ್ಟ ಮುಗ್ಧ ಮಕ್ಕಳನ್ನು ನೋಡುತ್ತಿರುವಂತೆ ಭಾಸವಾಗುತ್ತದೆ. ಮುಖದಲ್ಲಿನ ಮುಗ್ಧಸ್ಮಿತ ನೋಡುಗರ ಮನಸ್ಸನ್ನು ಸೆಳೆಯುತ್ತದೆ.

ಕುಬ್ಜಗಣಗಳು ಹೆಚ್ಚಾಗಿ ನೃತ್ಯ–ಸಂಗೀತಗಳ ನಿರೂಪಣೆಯಲ್ಲಿ ಬಳಕೆಯಾಗಿವೆ. ಬಾದಾಮಿಯ ಗುಹಾ ದೇವಾಲಯಗಳಲ್ಲಿ, ಮಾಲಗಿತ್ತಿ ದೇವಾಲಯದಲ್ಲಿ ರೂಪಿತವಾಗಿರುವ ಶಿಲ್ಪಗಳಿಗೂ ಪಟ್ಟದಕಲ್ಲು, ಐಹೊಳೆಯ ದೇವಾಲಯಗಳಲ್ಲಿ ರೂಪಿತವಾಗಿರುವ ಶಿಲ್ಪಗಳಿಗೂ ಬಹಳ ವ್ಯತ್ಯಾಸವಿದೆ. ಶೈಲಿ, ಆಕಾರ, ಅಳತೆ, ರೂಪಿತವಾಗಿರುವ ಸ್ಥಳ, ಅವುಗಳನ್ನು ಬಳಸಿಕೊಂಡು ಹೇಳಲು ಹೊರಟಿರುವ ವಿಷಯ–ಹೀಗೆ ಎಲ್ಲದರಲ್ಲೂ ವ್ಯತ್ಯಾಸಗಳಿವೆ.

ಬಾದಾಮಿಯ ಗುಹಾ ದೇವಾಲಯಗಳಲ್ಲಿ ಹೊರಗಿನ ಅಧಿಷ್ಠಾನ ಪಟ್ಟಿಕೆಗಳಲ್ಲಿ ಕಂಡುಬರುವ ಕುಬ್ಜಗಣಗಳಿಗೂ ಒಳಗಿನ ಕುಬ್ಜಗಣಗಳಿಗೂ ವ್ಯತ್ಯಾಸಗಳಿವೆ. ಹೊರಗಿನ ಪಟ್ಟಿಕೆಗಳಲ್ಲಿ ಉತ್ಸವ ಹಾಗೂ ಸಂಭ್ರಮದ ವಾತಾವರಣವಿರುವ ನರ್ತನವು ಕಂಡುಬಂದರೆ ಒಳಗಿನ ದೇವತಾ ಮೂರ್ತಿಗಳ ಕೆಳಗಿನ ಪಟ್ಟಿಕೆಗಳಲ್ಲಿ ನಾಟ್ಯಶಾಸ್ತ್ರದನ್ವಯದಂತೆ ನರ್ತಿಸುತ್ತಿರುವಂತೆ ಮತ್ತು ಅದಕ್ಕೆ ಪೂರಕವಾದ, ವಾದ್ಯಗಳೊಂದಿಗೆ ನಿರೂಪಿತರಾಗಿದ್ದಾರೆ. ಇಲ್ಲಿ ದೇಶೀ ಕರಣವೆಂಬ ಅನೇಕ ನೃತ್ಯ ಬಂಧಗಳನ್ನು ಕಾಣಬಹುದು.

ಮೊದಲನೆಯ ವೈಷ್ಣವ ಗುಹೆಯ ಹೊರ ಅಧಿಷ್ಠಾನದ ಪಟ್ಟಿಕೆಯಲ್ಲಿ ಈ ಶಿಲ್ಪಗಳ ಸುಂದರ ನಿರೂಪಣೆ ಇದೆ. ಗರ್ಭಗೃಹದಿಂದ ಬಲಭಾಗದ ಅಧಿಷ್ಠಾನದಲ್ಲಿ ಅನೇಕ ಕರಣಗಳು ಸುಂದರವಾಗಿ ಕಂಡುಬರುತ್ತವೆ. ಇಕ್ಕೆಲದಲ್ಲಿ ವಾದ್ಯದವರು ಬಹಳ ಸಂಭ್ರಮದಿಂದ ವಾದ್ಯಗಳನ್ನು ನುಡಿಸುತ್ತಿದ್ದರೆ ಮಧ್ಯದ ನಾಲ್ವರು ನರ್ತಕರು ಒಬ್ಬರಿಗೊಬ್ಬರು ಕಡಿಮೆ ಇಲ್ಲವೆಂಬಂತೆ ಬಹಳ ಸಂಭ್ರಮದಿಂದ ನರ್ತಿಸುತ್ತಿದ್ದಾರೆ. ಅವರ ನಗು, ಭಾವ ಅತ್ಯಂತ ಮನೋಹರವಾಗಿ ಬಿಂಬಿತವಾಗಿದೆ.

ಮೂರನೆಯಗುಹೆ (ವೈಷ್ಣವಗುಹೆ) ಎಲ್ಲ ರೀತಿಯಲ್ಲಿಯೂ ಪ್ರಮುಖವಾದುದು. ಇಲ್ಲಿಯ ಕುಬ್ಜಶಿಲ್ಪಗಳು ಹಲವು ಬಗೆಗಳಲ್ಲಿ ನಿರೂಪಿಸಲ್ಪಟ್ಟಿವೆ. ಹೊರಗೋಡೆಯ ಅಧಿಷ್ಠಾನ ಪಟ್ಟಿಕೆಗಳ ಒಂದು ಚೌಕದಲ್ಲಿ ಇಬ್ಬರಂತೆ ಬಹಳ ಇಕ್ಕಟ್ಟಾಗಿ ಶಿಲ್ಪರಚನೆಗಳಿವೆ. ಇವುಗಳಲ್ಲಿ ಚಲನೆ ಇದ್ದರೂ ನರ್ತನದ ಓಘವಾಗಲಿ ಶೈಲಿಯಾಗಲಿ ಸ್ಪಷ್ಟವಾಗುವುದಿಲ್ಲ. ಮುಖವು ಹೆಚ್ಚಾಗಿ ರಾಕ್ಷಸಕಳೆಯಿಂದ ಕೂಡಿರುವಂತೆ ಕಂಡುಬರುತ್ತದೆ. ಇಲ್ಲಿ ಬಹುವಾಗಿ ರಾಕ್ಷಸ ಗಣಗಳೇ ನಿರೂಪಿತರಾಗಿದ್ದಾರೆ. ಒಳಗೆ ದೇವಮೂರ್ತಿಗಳ ಕೆಳಗಿನ ಪಟ್ಟಿಕೆಗಳಲ್ಲಿ ಅತಿ ಸಣ್ಣವರಾಗಿ ಭಾರವಾಹಕರಾಗಿಯೂ ನರ್ತಕರಾಗಿಯೂ ವಾದ್ಯಗಾರರಾಗಿಯೂ ಬಿಂಬಿಸಲ್ಪಟ್ಟಿದ್ದಾರೆ. ಇದೇ ಗುಹಾದೇವಾಲಯದ ಕಂಬಗಳ ಬೋದಿಗೆಯ ಮೇಲೆ ಸಾಲಭಂಜಿಕೆಯರ ಇಕ್ಕೆಲಗಳಲ್ಲಿ (ಅವರ ಕಾಲ ಹತ್ತಿರ) ಯಕ್ಷರಾಗಿಯೂ ಇದ್ದಾರೆ. ಹಾಗೆಯೇ ಕಂಬಗಳ ಮಣಿಪಟ್ಟಿಕೆಗಳಲ್ಲಿ ಅಲಂಕರಣವಾಗಿ ನಿರೂಪಿಸಲ್ಪಟ್ಟಿದ್ದಾರೆ. ಈ ರೀತಿಯ ನಿರೂಪಣೆ ಇನ್ನೆಲ್ಲಿಯೂ ಕಂಡುಬರುವುದಿಲ್ಲ.

ಮಾಲಗಿತ್ತಿ ದೇವಾಲಯದ ನಿರ್ಮಾಣದ ಕಾಲಕ್ಕೆ ಹೊರಗೋಡೆಗಳಲ್ಲಿ ಬಹಳ ಸುಂದರವಾದ ದೇಶೀ ನರ್ತನ, ವಾದನಗಳಲ್ಲದೇ, ಮಲ್ಲಯುದ್ಧ, ದೊಂಬರಾಟ, ಹಾವಾಡಿಗರಾಗಿಯೂ (ಆ ಕಾಲದ) ದೇಶೀಯ ಶೈಲಿಯ ನಿರೂಪಣೆಯಲ್ಲಿದ್ದಾರೆ.

ಐಹೊಳೆಯ ದುರ್ಗಗುಡಿಯ ಅಧಿಷ್ಠಾನದಲ್ಲಿ ಗಣಗಳಾಗಿ ಕಂಡುಬಂದರೂ ಕಂಬಗಳ ಪಟ್ಟಿಕೆಗಳಲ್ಲಿ ಯುದ್ಧ ಸೈನಿಕ ತರಬೇತಿಯನ್ನು ಪಡೆಯುವವರಂತೆ ಕತ್ತಿ, ಗುರಾಣಿ ಹಿಡಿದು ಹೋರಾಡುತ್ತಿರುವಂತೆ ಚಿತ್ರಿತರಾಗಿದ್ದಾರೆ. ವಿರೂಪಾಕ್ಷ ದೇವಾಲಯದಲ್ಲಿ ಒಳಭಾಗದ ಒಟ್ಟು 38 ಕಂಬಗಳಲ್ಲಿ ಅಲಂಕರಣ ಮಣಿಪಟ್ಟಿಕೆಗಳ ಮಧ್ಯದಲ್ಲಿ ನೃತ್ಯ ನಿರತರಾಗಿ, ಸರ್ವಾಲಂಕೃತ ಕಲಾವಿದರಾಗಿ ಚಿತ್ರಣಗೊಂಡಿದ್ದಾರೆ. ಅದೇ ದೇವಾಲಯದ ಗರ್ಭದ್ವಾರದ ಬಲಭಾಗದ ದೊಡ್ಡ ಕಂಬದ ಗೋಡೆಯಲ್ಲಿ ನರ್ತನ ನಿರತರಾದ ಅತಿ ಸಣ್ಣ ಶಿಲ್ಪಗಳ (6–8ಸೆಂಮೀ) ಸಮುಚ್ಚಯವಿದೆ. ಇಲ್ಲಿ ನಿರೂಪಿಸಿರುವ ಶಿಲ್ಪಶೈಲಿ ತುಂಬ ಬೇರೆಯಾಗಿದೆ.

ಪಾಪನಾಥ ದೇವಾಲಯದಲ್ಲಿ ಇವರು ದೇವಾಲಯದ ಚಾವಣಿಯ ಸಾಲಿನಲ್ಲಿ ಅಲಂಕಾರವಾಗಿ ಭಾರವಾಹಕರಾಗಿ ಬಿಂಬಿತರಾಗಿದ್ದಾರೆ. ಮಹಾಕೂಟದ ದೇವಾಲಯದ ಹೊರಗೋಡೆಯ ಪಟ್ಟಿಕೆಯಲ್ಲಿ ಸ್ತ್ರೀ ಕುಬ್ಜಗಣಗಳ ಸಮುಚ್ಚಯವಿದೆ. ಇವರು ಸಹ ನೃತ್ಯವಾದನಗಳಲ್ಲಿ ನಿರತರಾಗಿದ್ದಾರೆ. ಬಾದಾಮಿ ಚಾಳುಕ್ಯರ ಕಾಲದ ಇಡಿಯ ಕುಬ್ಜಗಣಗಳಿಗೆ ಸಂಬಂಧಿಸಿದಂತೆ ಮಹಾಕೂಟದಲ್ಲಿ ಈ ಒಂದು ಜಾಗದಲ್ಲಿರುವ ಐದು ಶಿಲ್ಪಗಳು ಸ್ತ್ರೀ ರೂಪಗಳಾಗಿವೆ.

ಜಂಬುಲಿಂಗ ದೇವಾಲಯದ ಚಾವಣಿಯ ತೋರಣಗಳಲ್ಲಿ ಅಂತರಿಕ್ಷದೇವತೆಗಳಾಗಿ ನರ್ತಿಸುತ್ತಿರುವಂತೆ, ಗಳಗನಾಥ ದೇವಾಲಯದ ದ್ವಾರಬಂಧಗಳ ಪಟ್ಟಿಕೆಗಳಲ್ಲಿ ಆಲಂಕಾರಿಕವಾಗಿ ನೃತ್ಯನಿರತರಾಗಿದ್ದಂತೆ ರೂಪಿತರಾಗಿದ್ದಾರೆ.

ಸಾಮಾನ್ಯವಾಗಿ ಅಳತೆಯಲ್ಲಿ 30–60 ಮೀ ಎತ್ತರ ಹಾಗೂ 1.50–3.30ಮೀ ಉದ್ದ–ಚೌಕಟ್ಟಿನಲ್ಲಿ ಸು.3ರಿಂದ ಹಿಡಿದು 17–20 ಗಣಗಳ ಸಾಲಿನಲ್ಲಿ ಬಿಂಬಿತವಾದ ಶಿಲ್ಪಸಮುಚ್ಚಯವನ್ನು ಕಾಣಬಹುದು.

ಒಟ್ಟಾರೆಯಾಗಿ ಆ ಕಾಲದ ಸಂಪದ್ಭರಿತ ಸಾಂಸ್ಕೃತಿಕ ಇತಿಹಾಸದ ವೈಭವವನ್ನು ಸಾರಲು ತವಕಿಸುತ್ತಿರುವಂತೆ ರೂಪಿತರಾಗಿದ್ದಾರೆ. ಒಂದೊಂದು ಅಧಿಷ್ಠಾನ ಪಟ್ಟಿಕೆಗಳಲ್ಲಿಯೂ ದೇವಾಲಯದ ಹೊರಗೋಡೆಗಳಲ್ಲಿಯೂ ಕಂಬಗಳಲ್ಲಿಯೂ ಬಹಳ ಸೂಕ್ಷ್ಮವಾದ ವ್ಯತ್ಯಾಸಗಳಲ್ಲಿ ನಿರೂಪಿತರಾಗಿದ್ದಾರೆ. ಕೇವಲ ನೃತ್ಯ, ನರ್ತನ, ಸಂಗೀತ, ವಾದ್ಯಗಳಷ್ಟೇ ಅಲ್ಲದೆ ಯುದ್ಧದ ತರಬೇತಿ, ಕಥಾ ನಿರೂಪಣೆ, ಜನಪದ ಹಾಗೂ ಸಮಕಾಲೀನ ಜನಜೀವನ ಹೀಗೆ ಹಲವಾರು ರೀತಿಯಲ್ಲಿ ಪ್ರದರ್ಶಿತರಾಗಿದ್ದಾರೆ. (ಕೆ.ವಿ.)

ಚಳುಕ್ಯ ಕಾಲದ ಕಲ್ಲುಗಣಿ: ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಧಾರವಾಡ ವೃತ್ತ ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನ ಸುತ್ತಮುತ್ತ ಸರ್ವೇಕ್ಷಣೆ ನಡೆಸಿದಾಗ ಶೋಧಿಸಿದ ಆದಿ ಚಳುಕ್ಯ ಕಾಲದ ದೇವಾಲಯಗಳಲ್ಲಿ ಕಲ್ಲಿನ ಗಣಿಗಳು. ಪಟ್ಟದಕಲ್ಲಿನಿಂದ 5 ಕಿಮೀ ಉತ್ತರಕ್ಕಿರುವ ಶಂಕರಗುಂಡಿ ಮತ್ತು ಮೋಟಾರ್ ಮರಡಿ ಎಂಬ ಮರಳುಗಲ್ಲಿನ ಎರಡು ಗುಡ್ಡಗಳ ಸಾಲಿನಲ್ಲಿ ಈ ಗಣಿಗಳನ್ನು ಪತ್ತೆಹಚ್ಚಲಾಗಿದೆ. ಈ ಪ್ರದೇಶದಲ್ಲಿ ಉತ್ಕೃಷ್ಟ ಗುಣ ಮಟ್ಟದ ಕಲ್ಲಿನ ನಿಕ್ಷೇಪವಿದೆ. ಬೃಹತ್ ಪ್ರಮಾಣದಲ್ಲಿ ಕಲ್ಲನ್ನು ಹೊರ ತೆಗೆದ ಕಾರಣ ಈ ಜಾಗಗಳಲ್ಲಿ ಕೃತಕ ಸಮತಟ್ಟುಗಳು ರಚನೆಯಾಗಿವೆ. ನೈಸರ್ಗಿಕ ಮೇಲ್ಮೈಯುಳ್ಳ ಅಥವಾ ಸವೆದ ಮೇಲ್ಮೈಯ ತ್ಯಾಜ್ಯ ಕಲ್ಲು ತುಂಡುಗಳು, ದೊಡ್ಡ ಕಲ್ಲು ತುಂಡುಗಳ ಮೇಲೆ ಮೂಡಿಸಿರುವ ಬೆಣೆ ಗುಳಿಗಳು, ಕಲ್ಲೊಡ್ಡರ/ಮೇಸ್ತ್ರಿಯ ಗುರುತುಗಳು ಹಾಗೂ ಹಾಜರಾತಿ ಗುರುತುಗಳು, ಕಲ್ಲು ಬಂಡೆಗಳ ಮೇಲೆ ಮೂಡಿಸಿರುವ ಪ್ರಾಣಿ ಮತ್ತು ದೇವತೆಗಳ ರೇಖಾ ಚಿತ್ರಗಳು, ವಿವಿಧ ವಾಸ್ತುಭಾಗಗಳಿಗಾಗಿ ನಿರ್ದಿಷ್ಟ ಅಳತೆ–ಆಕಾರಕ್ಕೆ ಅಣಿಗೊಳಿಸಿದ ಕಲ್ಲುಗಳು, ಪುಟ್ಟಪುಟ್ಟ ಶಾಸನಗಳು ಮೊದಲಾದ ಅವಶೇಷಗಳನ್ನು ಮೇಲಿನ ಎರಡೂ ಜಾಗಗಳಲ್ಲಿ ಕಂಡುಹಿಡಿಯಲಾಗಿದೆ. ಇವೆಲ್ಲ 8ನೆಯ ಶತಮಾನಕ್ಕೆ ಸೇರುತ್ತವೆ. ಕಲ್ಲೊಡೆಯುವ ಸಂದರ್ಭದಲ್ಲಿ ಎಬ್ಬಿದ ಚಕ್ಕೆ ಚೂರು ಮತ್ತು ಅನುಪಯೋಗಿ ಸಣ್ಣಪುಟ್ಟ ಕಲ್ಲುಗಳನ್ನು ಗುಡ್ಡದ ಇಳಿಜಾರಿನಲ್ಲಿರುವ ಸ್ವಾಭಾವಿಕ ತಗ್ಗುಗಳಲ್ಲಿ ತುಂಬಲಾಗಿದೆ. ನಿರ್ದಿಷ್ಟ ಅಳತೆಗಳ ಕಲ್ಲುತುಂಡುಗಳು, ಉದಾಹರಣೆಗೆ 2.9x0.9x0.3 ಮೀ, 2.5x0.85x0.3 ಮೀ, 2x1.2x1.2 ಮೀ ಇಲ್ಲಿ ಅನೇಕ ಸಂಖ್ಯೆಯಲ್ಲಿವೆ. ಇವು ಪಟ್ಟದಕಲ್ಲಿನ ದೇವಾಲಯಗಳ ಕಂಬ, ಜಂತಿ, ಧ್ವಜಸ್ತಂಭ, ತೊಲೆ, ಚಾವಣಿಗಳಲ್ಲಿ ಬಳಸಿರುವ ಕಲ್ಲುಗಳ ಅಳತೆಗೆ ಸಮನಾಗಿವೆ. ಸಿದ್ಧ ಕಲ್ಲುಗಳ ಪೂರೈಕೆಯಲ್ಲಿ ಕೊರತೆಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂತಹ ಕಲ್ಲುಗಳನ್ನು ಸಾಗಾಣಿಕೆಗೆ ಅನುಕೂಲವಾಗುವಂತೆ ಜೋಡಿಸಿಕೊಂಡಿರುವುದೂ ಕಾಣುತ್ತದೆ. ಬೇಕಾದ ಗಾತ್ರದಲ್ಲಿ ಕಲ್ಲನ್ನು ಒಡೆದು ತೆಗೆಯಲು ಮರದ ಗೂಟ/ದಿಮ್ಮಿಗಳನ್ನು ಬಳಸಲಾಗುತ್ತಿತ್ತು. ಈ ವಿಧಾನದಲ್ಲಿ ಆಯ್ದ ಬಂಡೆಯ ಮೇಲೆ ಮೊದಲು ಚಿಕ್ಕ ಗುಳಿಗಳನ್ನು ಮಾಡಿಕೊಳ್ಳಲಾಗುತ್ತದೆ. ಗುಳಿಗಳಲ್ಲಿ ಮರದ ಗೂಟಗಳನ್ನು ಹುಗಿದು ಇವನ್ನು ಬಹುಕಾಲ ನೀರಿನಿಂದ ನೆನೆಸಲಾಗುತ್ತದೆ. ನೆನೆದಾಗ ಗೂಟಗಳು ಉಬ್ಬಿಕೊಂಡು ಗುಳಿಗಳ ಸಾಲಿಗನುಗುಣವಾಗಿ ಆ ಭಾಗದಲ್ಲಿ ಕಲ್ಲು ಸೀಳುಬಿಡುತ್ತದೆ. ಅನಂತರ ಬೇರ್ಪಟ್ಟ ಕಲ್ಲಿನ ಭಾಗವನ್ನು ಹೊರತೆಗೆಯಲಾಗುತ್ತದೆ. ಕಲ್ಲುಗಳ ಮೇಲೆ ಕ್ರಮಬದ್ಧವಾಗಿ ಮೂಡಿರುವ ಬೆಣೆ ಗುಳಿಗಳ ಅಳತೆ (10×6 ಸೆಂಮೀ: 8–10 ಸೆಂಮೀ ಆಳ) ಇಲ್ಲಿ ದೊರೆತಿರುವ ಕಬ್ಬಿಣದ ಬೆಣೆಗಳ ಅಳತೆಗೆ ಸರಿಹೊಂದುತ್ತದೆ. ವಾಸ್ತುಶಿಲ್ಪಶಾಸ್ತ್ರಜ್ಞ, ಶಿಲ್ಪಿ ಶ್ರೇಣಿ ಮತ್ತು ಕರಕುಶಲಕಾರರ ಹೆಸರನ್ನು ತಿಳಿಸುವ ಐದು ಸಣ್ಣ ಶಾಸನಗಳು ಶಂಕರಗುಂಡಿಯಲ್ಲಿಯೂ ಮೂರು ಮೋಟಾರ್‌ಮರಡಿಯಲ್ಲಿಯೂ ಪತ್ತೆಯಾಗಿವೆ. 8ನೆಯ ಶತಮಾನಕ್ಕೆ ಸೇರುವ ಈ ಶಾಸನಗಳಲ್ಲಿ ಕೆಲವು ಹೀಗಿವೆ. 1. ಶ್ರೀ ಧರ್ಮ ಸಂಘಟನ ಕಣಿ, ಪಾಪಕೋ/ಅಂಜುವೋ ಪರಮಹೇಶ್ವರ (ಧರ್ಮ ಶ್ರೇಣಿಗೆ ಸೇರುವ ಕಲ್ಲಿನ ಗಣಿ, ಪಾಪಕೋ ಮತ್ತು ಅಂಜುವೋ ಇವರು ಶೈವ ಮತಾನುಯಾಯಿಗಳಾಗಿದ್ದು ಪ್ರಾಯಶಃ ಶ್ರೇಣಿಯ ಸದಸ್ಯರು). 2. ಸ್ವಸ್ತಿ ಶ್ರೀ ನಿಧಿ ಪುರು(ಶಮ್?) ಶ್ರೀ ಒವಜರ (ಸ)ನ್ (ಪ್ರಾಯಶಃ ಮುಖ್ಯ ಕರಕುಶಲಕಾರರ ಹೆಸರು). 3. ಶ್ರೀ–ಇದರೊಂದಿಗೆ ಎರಡು ಬಾಹುಗಳುಳ್ಳ ಗಣೇಶನನ್ನು ರೇಖೆಯಿಂದ ಮೂಡಿಸಲಾಗಿದೆ. 4. ಶ್ರೀ ಶ್ರೀ ಮರುಳನ್ (?) ಶ್ರೀ ಗುಣ ವಿಕ್ರ(ಮನ್). ಕಲ್ಲುನೆಲೆಯಲ್ಲಿರುವ ಮೇಸ್ತ್ರಿ ಅಥವ ಕಲ್ಲೊಡ್ಡರ ಗುರುತುಗಳು ಹಲವು ಬಗೆಯವು–ತ್ರಿಶೂಲವನ್ನು ಹೋಲುವ ಶೈಲೀಕೃತ ಭರ್ಜಿ, ವೃತ್ತದೊಳಗಿರುವ ಕೂಡುವ ಚಿನ್ಹೆ, ಉದ್ದ ಅಥವಾ ಅಡ್ಡ ಗೆರೆಗಳಿಂದ ಭೇದಿಸಲ್ಪಟ್ಟ ವೃತ್ತ ಇತ್ಯಾದಿ. ಈ ಗುರುತುಗಳು ಏನನ್ನು ಸಂಕೇತಿಸುತ್ತವೆ ಎಂಬುದನ್ನು ತಿಳಿಯಲಾಗಿಲ್ಲ. ಇವು ಕಂಬ, ತೊಲೆ, ಜಂತಿ ಮುಂತಾದ ವಿವಿಧ ವಾಸ್ತುಭಾಗಗಳಿಗಾಗಿ ಸಿಡಿಸಿದ ಕಲ್ಲುಗಳನ್ನು ಸುಲಭವಾಗಿ ಗುರುತಿಸಲು ಮಾಡಿದ ಗುರುತುಗಳಿದ್ದರೂ ಇರಬಹುದು. ಏಕೆಂದರೆ ಈ ಪ್ರದೇಶದಲ್ಲಿರುವ ಕೆಲವು ದೇವಾಲಯಗಳ ಕಲ್ಲುಗಳ ಮೇಲೂ ಇಂತಹ ಗುರುತುಗಳಿವೆ. ಉದಾಹರಣೆಗೆ ಇಲ್ಲಿಯ ವಿರೂಪಾಕ್ಷ ದೇವಾಲಯದ ಪ್ರಾಕಾರದಲ್ಲಿ ಬಳಸಿದ ಒಂದು ಕಲ್ಲಿನ ಮೇಲೆ ಕೂಡುವ ಚಿನ್ಹೆಯ ಗುರುತಿದೆ. ಕಲ್ಲು ಗಣಿಗಳಲ್ಲಿರುವ ಮತ್ತೊಂದು ಬಗೆಯ ಗುರುತುಗಳು ನೇರ ಅಥವಾ ಅಡ್ಡಲಾದ ಚಿಕ್ಕ ಸರಳಗೆರೆಗಳ (2.5–3.5 ಸೆಂಮೀ ಉದ್ದ) ಗುಂಪುಗಳು. ಪ್ರತಿ ಗುಂಪಿನಲ್ಲಿಯೂ ಏಳು ಗೆರೆಗಳಿವೆ. ಹಾಗಾಗಿ ಇವು ಹಾಜರಾತಿಯ ಲೆಕ್ಕವಿದ್ದಿರ ಬಹುದು. ಬಾದಾಮಿ ಮತ್ತು ಐಹೊಳೆಯಲ್ಲಿಯೂ ಇಂತಹ ಗೆರೆಗಳ ಗುಂಪು ಕಂಡುಬಂದಿವೆ. ಪ್ರಸ್ತುತ ಕಲ್ಲುಗಣಿಗಳಲ್ಲಿನ ಬಂಡೆಗಳ ಮೇಲೆ ಗಣೇಶ, ಮಹಿಷಮರ್ದಿನಿ, ಒಂಟೆ–ನವಿಲುಗಳಲ್ಲದೆ ವಾಸ್ತುಭಾಗಗಳ ಕೆತ್ತನೆಗಳೂ ಇವೆ. ಕೊನೆಯದಾಗಿ, ಕಲ್ಲುಗಣಿಯ ಕೆಲಸಗಾರರು ಉಪಯೋಗಿಸಿದ ಕಬ್ಬಿಣದ ಸುತ್ತಿಗೆ ಮತ್ತು ದೊಡ್ಡ ಸುತ್ತಿಗೆ ಸಹ ಇಲ್ಲಿ ಲಭಿಸಿವೆ. (ಎಂ.ವಿ.ವಿ.)

**ವೆಂಗಿ ಚಾಳುಕ್ಯರು:** ಬಾದಾಮಿ ಚಳುಕ್ಯವಂಶದ ಪ್ರಮುಖ ಶಾಖೆಗಳಲ್ಲಿ ಒಂದು. ವಿಷ್ಣುವರ್ಧನ ಈ ವಂಶದ ಮೂಲಪುರುಷ. ಇಮ್ಮಡಿ ಪುಲಕೇಶಿ, ಆಂಧ್ರಪ್ರದೇಶವನ್ನು ಗೆದ್ದಾಗ ಪಿಷ್ಟಪುರ (ಇಂದಿನ ಪೀಠಾಪುರಂ) ಪ್ರದೇಶ ಬಹುಶಃ ವಿಷ್ಣುಕುಂಡಿ ಅರಸರ ಕೈಯಲ್ಲಿತ್ತು. ಪುಲಕೇಶಿಯು ಆ ಪ್ರದೇಶವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಈ ದಿಗ್ವಿಜಯದಲ್ಲಿ ಇವನ ತಮ್ಮ ಪೃಥ್ವಿ ದುವರಾಜ (ಯುವರಾಜ) ವಿಷ್ಣುವರ್ಧನನು ಅವನಿಗೆ ಸಮರ್ಥ ರೀತಿಯಲ್ಲಿ ಸಹಕರಿಸಿದ್ದ. ಪುಲಕೇಶಿ ವಿಷ್ಣುವರ್ಧನನಿಗೆ ಯುವರಾಜ ಪಟ್ಟಗಟ್ಟಿ ಹೊಸದಾಗಿ ಗೆದ್ದ ಆಂಧ್ರ ಮತ್ತು ಅದಕ್ಕೆ ಹೊಂದಿಕೊಂಡಿದ್ದ ಮಹಾರಾಷ್ಟ್ರದ ಪ್ರದೇಶವನ್ನು ವಿಷ್ಣುವರ್ಧನನಿಗೆ ಬಿಟ್ಟುಕೊಟ್ಟ. ಇವನೇ ವೆಂಗಿ ಚಾಳುಕ್ಯ ಮನೆತನದ ಮೂಲಪುರುಷನೆನಿಸಿದ. ವೆಂಗಿ ಚಾಳುಕ್ಯರು ತಮ್ಮ ಅತ್ಯುಚ್ಛ್ರಾಯಕಾಲದಲ್ಲಿ ಉತ್ತರದಲ್ಲಿ ಕಳಿಂಗದ ಮಹೇಂದ್ರಗಿರಿಯಿಂದ ಹಿಡಿದು ದಕ್ಷಿಣದಲ್ಲಿ ನೆಲ್ಲೂರಿನ ಸಮೀಪ ಮನ್ನೇರು ನದಿಯವರೆಗೆ, ಪೂರ್ವದಲ್ಲಿ ಆಂಧ್ರದ ಕರಾವಳಿಗುಂಟದಿಂದ ಬಂಗಾಲಕೊಲ್ಲಿವರೆಗೆ, ಪಶ್ಚಿಮದಲ್ಲಿ ಪೂರ್ವಘಟ್ಟಗಳವರೆಗೆ ವಿಶಾಲ ಪ್ರದೇಶದ ಮೇಲೆ ಹಿಡಿತ ಹೊಂದಿದ್ದರು.

617ರ ಸುಮಾರಿಗೆ ವಿಷ್ಣುವರ್ಧನ ಯುವರಾಜ ಪದವಿ ಪಡೆದು ಚಾಳುಕ್ಯ ಸಾಮ್ರಾಜ್ಯದ ಉತ್ತರಭಾಗದ ಉಸ್ತುವಾರಿ ನೋಡತೊಡಗಿದ್ದ. ಆಂಧ್ರದ ಮೇಲೆ ಪುಲಕೇಶಿಯ ಯುದ್ಧ ಮತ್ತೆ ತೀವ್ರಗೊಂಡಾಗ ವಿಷ್ಣುವರ್ಧನನು ನೆಲದುರ್ಗವಾಗಿದ್ದ ಪಿಷ್ಟಪುರ ಕೋಟೆಯನ್ನು ಹಾಗೂ ಜಲದುರ್ಗವಾಗಿದ್ದ ಕುನಾಲ ಕೋಟೆಯನ್ನು ಗೆದ್ದುಕೊಟ್ಟ. ಈ ಸಾಧನೆಗಾಗಿ ಇವನಿಗೆ ವಿಷಮಸಿದ್ಧಿ ಎಂಬ ಬಿರುದು ಲಭ್ಯವಾಯಿತು. ಇವನ ವಿಧೇಯತೆ ಮತ್ತು ಸಾಮರ್ಥ್ಯಗಳಿಗೆ ಮೆಚ್ಚಿದ ಪುಲಿಕೇಶಿಯು ಇವನನ್ನು ಆಂಧ್ರದ ಪೃಥ್ವೀಯುವರಾಜನಾಗಿ ಪಟ್ಟಕಟ್ಟಿದ. ಕೆಲವು ಶಾಸನಗಳು ಈತನನ್ನು ಪರಮಭಾಗವತ (ವಿಷ್ಣುಭಕ್ತ), ಕಲ್ಪವೃಕ್ಷ ಇತ್ಯಾದಿಯಾಗಿ ಹೊಗಳಿವೆ. ಸು.631ರಲ್ಲಿ ಆತ ಮಹಾರಾಜ ಪದವಿಗೇರಿದ. ಇವನು 18 ವರ್ಷ ದಕ್ಷವಾಗಿ ರಾಜ್ಯಭಾರ ಮಾಡಿದ. ಕಳಿಂಗ, ಚಜ್ಜೇರ್ಲ, ಗುಂಟೂರು ಪ್ರದೇಶಗಳು ಇವನ ಅಧೀನದಲ್ಲಿದ್ದವು. ಇವನ ರಾಣಿ ಅಯ್ಯಣಮಹಾದೇವಿ ವಿಜಯವಾಡದಲ್ಲಿ ಜೈನ ಬಸದಿಯನ್ನು ನಿರ್ಮಿಸಿದಳು. ತೆಲುಗು ಪ್ರದೇಶದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದಂತೆ ಇದೇ ಪ್ರಾಚೀನತಮ ಉಲ್ಲೇಖ.

ವಿಷ್ಣುವರ್ಧನನ ತರುವಾಯ ಅವನ ಮಕ್ಕಳಾದ ಮೊದಲನೆಯ ಜಯಸಿಂಹವಲ್ಲಭ ಮತ್ತು ಇಂದ್ರಭಟ್ಟಾರಕ ಎಂಬುವರು ಆಳಿದರು. ಜಯಸಿಂಹ 33 ವರ್ಷ (641–73) ಆಳಿದ. ಇವನು ಆಸನಪುರದಲ್ಲಿ ಘಟಿಕೆಯನ್ನು (ವಿಶ್ವವಿದ್ಯಾಲಯ) ಸ್ಥಾಪಿಸಿದ. ವಿಷ್ಣುಭಕ್ತನಾಗಿದ್ದ ಇವನಿಗೆ ಸರ್ವಸಿದ್ಧಿ ಎಂಬ ಬಿರುದು ಇತ್ತು. ಪ್ರಾಚೀನ ತೆಲುಗು ಶಾಸನಗಳಲ್ಲಿ ಇವನು ಹೊರಡಿಸಿದ ವಿಪ್ಪರ್ಲ ಶಾಸನವೂ ಸೇರಿದೆ. ಜಯಸಿಂಹನ ತಮ್ಮ ಇಂದ್ರಭಟ್ಟಾರಕ 7 ವರ್ಷ ಆಳಿದ. ತ್ಯಾಗಧೇನು ಎನಿಸಿದ್ದ ಇವನನ್ನು ಅಧಿರಾಜನೆಂಬುವನು ಸೋಲಿಸಿದ. ಇವನ ತರುವಾಯ ಇಮ್ಮಡಿ ವಿಷ್ಣುವರ್ಧನನು 9 ವರ್ಷ ಆಳಿದ. ವಿಷಮಸಿದ್ಧಿ ಮತ್ತು ಪ್ರಲಯಾದಿತ್ಯ ಎಂಬ ಬಿರುದುಗಳು ಇವನಿಗಿದ್ದವು. ಇವನ ಮಗ ಮಂಗಿ ಯುವರಾಜನು 682–706 ವರೆಗೆ ರಾಜ್ಯಭಾರ ಮಾಡಿದ. ವಿಜಯಾದಿತ್ಯ ಮತ್ತು ವಿಜಯಸಿದ್ಧಿ ಎಂಬ ಬಿರುದುಗಳಿದ್ದವು.

ವೆಂಗಿ ಯುವರಾಜನ ತರುವಾಯ ಅವನ ಮಗ ಸರ್ವಸಿದ್ಧಿ ಇಮ್ಮಡಿ ಜಯಸಿಂಹನು 706–718 ರವರೆಗೆ (13 ವರ್ಷ) ಆಳಿದ. ಇವನ ಅನಂತರ ಸಿಂಹಾಸನಕ್ಕಾಗಿ ಮಲತಮ್ಮಂದಿರ ನಡುವೆ ಒಳಜಗಳವಾಯಿತು. ಚಿಕ್ಕವನಾಗಿದ್ದ ಕೊಕ್ಕಿಲಿ 6 ತಿಂಗಳು ಸಿಂಹಾಸನವನ್ನು ಹಿಡಿದುಕೊಂಡು ಅನಂತರ ತನ್ನಣ್ಣ ಮುಮ್ಮಡಿ ವಿಷ್ಣುವರ್ಧನನಿಗೆ ಬಿಟ್ಟುಕೊಟ್ಟ. ಕೊಕ್ಕಿಲಿಯ ವಂಶಜರು ಕಳಿಂಗದ ಮಧ್ಯಭಾಗದಲ್ಲಿದ್ದ ಎಲಮಂಚಿ ಪ್ರದೇಶದ ಮೇಲೆ ಸು. 4 ತಲೆಮಾರುಗಳ ಕಾಲ ಆಳಿದರು.

ಮುಮ್ಮಡಿ ವಿಷ್ಣುವರ್ಧನ ತನ್ನ ತಮ್ಮ ಕೊಕ್ಕಿಲಿಯನ್ನು ಹೊಡೆದೋಡಿಸಿದ ಮೇಲೆ 719–755 ರವರೆಗೆ ಆಳಿದನು. ಇವನು ಅನೇಕ ಶಾಸನಗಳನ್ನು ಹೊರಡಿಸಿದ. ವಿಷಮಸಿದ್ಧಿ ಮತ್ತು ತ್ರಿಭುವನಾಂಕುಶ ಎಂಬ ಬಿರುದುಗಳು ಇವನಿಗಿದ್ದವು. ಇವನ ಅಧಿಕಾರಿಯಾಗಿದ್ದ ನಿಷಾದ ಬೋಯ ಪೃಥ್ವೀವ್ಯಾಘ್ರನು ಪಲ್ಲವ ಸೇನಾಪತಿ ಉದಯ ಚಂದ್ರನೊಂದಿಗೆ ಘರ್ಷಣೆಗಿಳಿದ. ಈ ಯುದ್ಧದಲ್ಲಿ ಪಲ್ಲವರಿಗೆ ಜಯವಾಗಿ, ವೆಂಗಿ ಚಾಳುಕ್ಯರ ನೆಲದ ಕೆಲಭಾಗ ಪಲ್ಲವರ ಪಾಲಾಯಿತು. ಮುಮ್ಮಡಿ ವಿಷ್ಣುವರ್ಧನ ವಿಜಯವಾಡದ ಜೈನ ಬಸದಿಗೆ ದಾನ ನೀಡಿದ. ಇವನ ರಾಣಿ ವಿಜಯ ಮಹಾದೇವಿ. ಇವನ ತಂಗಿ–ಮಂಗಿ ಯುವರಾಜನ ಮಗಳು–ಪೃಥ್ವೀ ಪೊರಿಯು ದಾನಿಯಾಗಿ ಶಾಸನವೊಂದರಲ್ಲಿ ಪ್ರಸ್ತಾಪಿತಳಾಗಿದ್ದಾಳೆ.

ಮುಮ್ಮಡಿ ವಿಷ್ಣುವರ್ಧನನ ಮಗ ವಿಜಯಸಿದ್ಧಿ ಮೊದಲನೆಯ ವಿಜಯಾದಿತ್ಯ 772ರವರೆಗೆ ಆಳಿದ. ಈ ಸಮಯದಲ್ಲಿ ಬಾದಾಮಿಯ ಚಳುಕ್ಯರು ರಾಷ್ಟ್ರಕೂಟರಿಂದ ಪರಾಜಿತರಾಗಿದ್ದರು. 769ರ ಹೊತ್ತಿಗೆ ರಾಷ್ಟ್ರಕೂಟ ಯುವರಾಜ ಇಮ್ಮಡಿ ಗೋವಿಂದ ವೆಂಗಿಮಂಡಲದ ಮೇಲೆ ಧಾಳಿಮಾಡಿ ತನ್ನ ಸಾರ್ವಭೌಮತ್ವವನ್ನು ಒಪ್ಪುವಂತೆ ಮಾಡಿದ. ವೆಂಗಿ ಚಾಳುಕ್ಯರ ಮೇಲೆ ಇದು ಹೇಳಿಕೊಳ್ಳುವಂತಹ ಪರಿಣಾಮ ಬೀರಲಿಲ್ಲ. ಒಂದನೆಯ ವಿಜಯಾದಿತ್ಯನ ಮಗ ನಾಲ್ಕನೆಯ ವಿಷ್ಣುವರ್ಧನ 36 ವರ್ಷ (772–808) ಆಳಿದ.

ಇವನು ರಾಷ್ಟ್ರಕೂಟ ಇಮ್ಮಡಿ ಗೋವಿಂದ ಮತ್ತು ಅವನ ತಮ್ಮ ಧ್ರುವನ ನಡುವಿನ ಕಲಹದಲ್ಲಿ ಗೋವಿಂದನ ಪರ ವಹಿಸಿದ. ಆದರೆ ಈ ಕಲಹದಲ್ಲಿ ಧ್ರುವ ವಿಜಯಿಯಾದ. ಸೇಡು ತೀರಿಸಿಕೊಳ್ಳುವುದಕ್ಕಾಗಿ ಅವನು ವೆಂಗಿ ಚಾಳುಕ್ಯರ ಮೇಲೆ ಧಾಳಿಮಾಡಿದ. ವಿಷ್ಣುವರ್ಧನ ಸೋತು ಧ್ರುವನೊಂದಿಗೆ ಸಂಧಿ ಮಾಡಿಕೊಂಡು, ತನ್ನ ಮಗಳು ಶೀಲಮಹಾದೇವಿಯನ್ನು ಧ್ರುವನಿಗೆ ಧಾರೆ ಎರೆದು ಕೊಟ್ಟ. ಇವಳು ಅವನ ಪಟ್ಟಮಹಿಷಿಯಾದಳು. ವೆಂಗಿ ಮುಮ್ಮಡಿ ಗೋವಿಂದನ ಕಾಲದಲ್ಲಿಯೂ ರಾಷ್ಟ್ರಕೂಟರ ಅಧೀನ ರಾಜ್ಯವಾಗಿ ಮುಂದುವರಿಯಿತು. ವಿಷ್ಣುವರ್ಧನನಿಗೆ ಮೂರು ಮಕ್ಕಳಿದ್ದು ಅವರಲ್ಲಿ ಇಮ್ಮಡಿ ವಿಜಯಾದಿತ್ಯ ಮತ್ತು ಭೀಮಸಲುಕಿ ಸಿಂಹಾಸನ ಕ್ಕಾಗಿ ಕಲಹಕ್ಕಿಳಿದರು. ಮೂರನೆಯ ಮಗ ರುದ್ರನು ವಿಜಯಾದಿತ್ಯನ ಪರ ವಹಿಸಿದ.

ಇಮ್ಮಡಿ ವಿಜಯಾದಿತ್ಯ ಮಹಾಯೋಧನಾಗಿದ್ದು ರಾಷ್ಟ್ರಕೂಟರು ಮತ್ತು ಅವರ ಮಿತ್ರಬಲಗಳೊಂದಿಗೆ ಹಲವಾರು ವರ್ಷಗಳ ಕಾಲ ಯುದ್ಧಮಾಡಿದ. ಇವನು ನರೇಂದ್ರ ಮೃಗರಾಜ, ಚಾಳುಕ್ಯರಾಮ, ವಿಕ್ರಮಧವಲ ಎಂಬ ಬಿರುದುಗಳನ್ನು ಧರಿಸಿದ್ದ. ಇವನ ಆಳ್ವಿಕೆಯ 40 ವರ್ಷಗಳು (808–47) ಯುದ್ಧ, ಕಲಹಗಳಿಂದ ಕೂಡಿದ್ದವು. ರಾಷ್ಟ್ರಕೂಟರು

ಶೈವಲಯಣ–ಪಾರ್ವತಿ, ಶಿವ, ಭೃಂಗಿ, ಬಾದಾಮಿ

ಇವನನ್ನು ದಂಗೆಕೋರನೆಂದು ಪರಿಗಣಿಸಿ ಇವನ ತಮ್ಮ ಭೀಮ ಸಲುಕಿಯನ್ನು ಎತ್ತಿಕಟ್ಟಿದರು. ಮುಮ್ಮಡಿ ಗೋವಿಂದ 814ರಲ್ಲಿ ಕಾಲವಾಗುವವರೆಗೂ ರಾಷ್ಟ್ರಕೂಟರ ಹಿಡಿತ ಬಲವಾಗಿತ್ತು. ಅನಂತರ ಒಂದನೆಯ ಅಮೋಘವರ್ಷ ಪಟ್ಟಕ್ಕೇರಿದ ಮೇಲೆ ವಿಜಯಾದಿತ್ಯನ ಕೈ ಮೇಲಾಯಿತು. ಅವನು ಗಂಗರನ್ನು ಸೋಲಿಸಿ, ಭೀಮನನ್ನು ಸಿಂಹಾಸನದಿಂದ ಕೆಳಗಿಳಿಸಿ, ವೆಂಗಿ ರಾಜ್ಯವನ್ನು ಮತ್ತೆ ತನ್ನ ವಶ ಮಾಡಿಕೊಂಡನಲ್ಲದೆ ರಾಷ್ಟ್ರಕೂಟರ ಮೇಲೂ ದಿಗ್ವಿಜಯಿಯಾದ.

ಇಮ್ಮಡಿ ವಿಜಯಾದಿತ್ಯನ ಮಗ ಐದನೆಯ ವಿಷ್ಣುವರ್ಧನ ರಾಷ್ಟ್ರಕೂಟ ರಾಜಕುಮಾರಿ ಶೀಲಮಹಾದೇವಿಯನ್ನು ವರಿಸಿದ. ಆದರೆ ಅವನ ಆಳಿಕೆ ಕೇವಲ ಒಂದೂವರೆ ವರ್ಷ ಮಾತ್ರ ಸಾಗಿತು. ಅವನ ಮಗ ಮುಮ್ಮಡಿ ವಿಜಯಾದಿತ್ಯ ವೆಂಗಿ ಚಾಳುಕ್ಯ ಅರಸರಲ್ಲಿಯೇ ಬಹು ಪ್ರಸಿದ್ಧ ರಾಜ. ಇವನು 44 ವರ್ಷಗಳ ಕಾಲ ದಕ್ಷ ಆಡಳಿತ ನಡೆಸಿ (840–892). ಇವನಿಗೆ ಗುಣಗ ವಿಜಯಾದಿತ್ಯ ಎಂಬ ಇನ್ನೊಂದು ಹೆಸರಿತ್ತು. ಗುಣಕೆ ನಲ್ಲಾತ, ಪರಚಕ್ರರಾಮ, ತ್ರಿಪುರಮರ್ತ್ಯಮಹೇಶ್ವರ, ವಲ್ಲಭ ಮುಂತಾದ ಬಿರುದುಗಳಿದ್ದವು. ಇವನ ಆಳಿಕೆಯ ಅವಧಿಯನ್ನು ಮೂರು ಹಂತಗಳಾಗಿ ಗುರುತಿಸಬಹುದು: ಒಂದನೆಯ ಹಂತದಲ್ಲಿ ಇವನು ತನ್ನ ಪ್ರಸಿದ್ಧ ಸೇನಾಪತಿ ಪಂಡರಂಗನ ಶಕ್ತಿಸಾಮರ್ಥ್ಯಗಳ ಸಹಾಯದಿಂದ ಆಂಧ್ರದ ನೆಲ್ಲೂರು ಪ್ರದೇಶದಲ್ಲಿ ಪ್ರಬಲರಾಗಿದ್ದ ಬೋಯ ಸಮುದಾಯದವರನ್ನು ಸದೆಬಡಿದು ಅವರ ಪ್ರದೇಶವನ್ನು ವೆಂಗಿ ರಾಜ್ಯಕ್ಕೆ ಸೇರಿಸಿಕೊಂಡ. ತದನಂತರ ರಾಹಣ ಎಂಬ ಅರಸನನ್ನು ಸೋಲಿಸಿದ.

ಎರಡನೆಯ ಹಂತದಲ್ಲಿ ವಿಜಯಾದಿತ್ಯ ರಾಷ್ಟ್ರಕೂಟರ ಒಂದನೆಯ ಅಮೋಘವರ್ಷನೊಂದಿಗೆ ಕದನಕ್ಕಿಳಿದ. ರಾಷ್ಟ್ರಕೂಟರ ಹಿಡಿತದಲ್ಲಿದ್ದ ಕರ್ನೂಲು ಜಿಲ್ಲೆಯ ಸ್ತಂಭಪುರವನ್ನು (ಇಂದಿನ ಕಂಬಂ) ವಿಜಯಾದಿತ್ಯ ಧಾಳಿಮಾಡಿ ಧ್ವಂಸಮಾಡಿದ. ಅಮೋಘವರ್ಷ ವಿಜಯಾದಿತ್ಯನ ಮೇಲೆ ಸೈನ್ಯವನ್ನು ಕಳಿಸಿದ. ವಿಂಗಾವಳ್ಳಿ ಎಂಬಲ್ಲಿ ನಡೆದ ಯುದ್ಧದಲ್ಲಿ ವಿಜಯಾದಿತ್ಯ ಸೋತು ಅಮೋಘವರ್ಷನ ಸಾರ್ವಭೌಮತ್ವವನ್ನು ಒಪ್ಪಿಕೊಂಡ. ಮುಂದೆ ರಾಷ್ಟ್ರಕೂಟರ ಪರವಾಗಿ ಯುದ್ಧಗಳಲ್ಲಿ ಪಾಲ್ಗೊಂಡು ನೊಳಂಬ ಮಂಗಿರಾಜನನ್ನೂ ಗಂಗ ನೀತಿಮಾರ್ಗ ಪೆರ್ಮಾನಡಿಯನ್ನೂ ಸೋಲಿಸಿದ.

ಅಮೋಘವರ್ಷ 880ರಲ್ಲಿ ತೀರಿಕೊಂಡಾಗ ವಿಜಯಾದಿತ್ಯನಿಗೆ ಸ್ವತಂತ್ರನಾಗಲು ಅವಕಾಶವಾಯಿತು. ಇಮ್ಮಡಿ ಕೃಷ್ಣ ದಕ್ಷ ಹಾಗೂ ಜನಪ್ರಿಯ ಅರಸನಾಗಿರಲಿಲ್ಲ. ವಿಜಯಾದಿತ್ಯ ಅವನೊಂದಿಗೆ ಕನಿಷ್ಠ ಎರಡು ಬಾರಿ ಯುದ್ಧಮಾಡಿದ. ಕೃಷ್ಣನು ಚೇದಿ ಸಂಕಿಲನ (ಶಂಕರಗಣ) ನೇತೃತ್ವದಲ್ಲಿ ವೆಂಗಿರಾಜ್ಯದ ಮೇಲೆ ದಂಡು ಕಳಿಸಿದ. ರಾಷ್ಟ್ರಕೂಟರ ಸೈನ್ಯ ಇದರಲ್ಲಿ ಸೋತಿದ್ದಲ್ಲದೆ ಡಾಹಲಕ್ಕೆ ಮರಳಬೇಕಾಯಿತು. ವಿಜಯಾದಿತ್ಯ ಈ ಸಂದರ್ಭವನ್ನು ದಿಗ್ವಿಜಯಕ್ಕೆ ಬಳಸಿಕೊಂಡ. ವೆಂಗಿಯಿಂದ ಪ್ರಾರಂಭವಾದ ಈ ದಿಗ್ವಿಜಯ ಸೇನಾನಿ ಪಂಡರಂಗನ ಸಾಮರ್ಥ್ಯದಿಂದ ಕಳಿಂಗದ ಮೂಲಕ ದಕ್ಷಿಣ ಕೋಸಲ ಹಾಗೂ ಮಧ್ಯ ದೇಶಗಳಲ್ಲಿ ಸಾಗಿತು. ರಾಷ್ಟ್ರಕೂಟ ಕೃಷ್ಣ ಸೋತು ಸಂಧಿಗೆ ಒಪ್ಪಿದ. ಅವನು ರಾಷ್ಟ್ರಕೂಟರಿಂದ ಪಾಲಿಧ್ವಜ, ಗಂಗಾ–ಯಮುನಾ ಮುಂತಾದ ರಾಜಸಂಕೇತಗಳನ್ನು ಪಡೆದುಕೊಂಡು, ವಲ್ಲಭ ಎಂಬ ಬಿರುದನ್ನು ಧರಿಸಿದ. ತ್ರಿಕಲಿಂಗ ದಕ್ಷಿಣಾಪಥದ ಸಾರ್ವಭೌಮನೆಂದು ಘೋಷಿಸಿದ. ಸ್ವತಃ ರಾಷ್ಟ್ರಕೂಟ ಕೃಷ್ಣನು ಅವನನ್ನು ಬೇಟಿ ಮಾಡಿ, ತನ್ನ ಅಧೀನತೆಯನ್ನು ಒಪ್ಪಿಕೊಂಡು ಅವನ ಆಯುಧಪೂಜೆ ಮಾಡಿದ. ವಿಜಯಾದಿತ್ಯ ಸಂತುಷ್ಟನಾಗಿ ಅವನ ರಾಜ್ಯವನ್ನು ಅವನಿಗೆ ಮರಳಿಸಿ ವೆಂಗಿಗೆ ಹಿಂದಿರುಗಿದ.

ವೆಂಗಿಯ ಸಿಂಹಾಸನವನ್ನಲಂಕರಿಸಿದ ಅರಸರಲೆಲ್ಲ ಗುಣಗ ವಿಜಯಾದಿತ್ಯ ಸರ್ವಶ್ರೇಷ್ಠ ರಾಜನೆಂದು ಪ್ರಸಿದ್ಧನಾಗಿದ್ದಾನೆ. ಮಹೇಂದ್ರಗಿರಿಯಿಂದ ಪುಲಿಘಾಟಿನವರೆಗಿನ ವಿಶಾಲ ಪ್ರದೇಶದ ಮೇಲೆ ಇವನ ಹಿಡಿತವಿತ್ತು. ಸೇನಾಪತಿ ಪಂಡರಂಗನ ಧೀಶಕ್ತಿಸಾಮರ್ಥ್ಯ ಗಳು ವಿಜಯಾದಿತ್ಯನ ಏಳ್ಗೆಯಲ್ಲಿ ಅಪಾರ ಪಾತ್ರವಹಿಸಿದವು. ವೆಂಗಿ ಸಾಮ್ರಾಜ್ಯವನ್ನು ಉಚ್ಛಸ್ಥಾನಕ್ಕೇರಿಸಿದ ವಿಜಯಾದಿತ್ಯ 892ರಲ್ಲಿ ಕಾಲವಾದ. ಅವನಿಗೆ ಮಕ್ಕಳಿರಲಿಲ್ಲ ವಾದ್ದರಿಂದ ಅವನ ತಮ್ಮ ಭೀಮ ಪಟ್ಟಕ್ಕೇರಿದ. ಅವನ ದಾಯಾದಿ ಒಂದನೆಯ ಯುದ್ಧಮಲ್ಲ ರಾಷ್ಟ್ರಕೂಟ ಕೃಷ್ಣನ ಸಹಾಯ ಕೋರಿದ. ಯುದ್ಧ ನಡೆದು ವೆಂಗಿಯು ಯುದ್ಧಮಲ್ಲನ ವಶವಾಯಿತು. ಭೀಮನನ್ನು ಸೆರೆಹಿಡಿಯಲಾಯಿತಾದರೂ ಅವನು ಬಹುಬೇಗ ಸ್ವತಂತ್ರನಾದುದರಿಂದ ರಾಷ್ಟ್ರಕೂಟರ ಯಶಸ್ಸು ತಾತ್ಕಾಲಿಕವಾಗಿತ್ತು. ಕೃಷ್ಣನ ತರುವಾಯದ ವೆಂಗಿ ದಂಡಯಾತ್ರೆಯೂ ವಿಫಲವಾದುದರಿಂದ ಭೀಮನು ಪಟ್ಟಾಭಿಷಿಕ್ತನಾದ. ಚಾಳುಕ್ಯ ಭೀಮನು ಶಿವಾರಾಧಕನಾಕಾಗಿದ್ದ. ಅವನು ಚಾಳುಕ್ಯ ಭೀಮವರಂ ಮತ್ತು ದ್ರಾಕ್ಷಾರಾಮಗಳಲ್ಲಿ (ಪೂರ್ವ ಗೋದಾವರಿ ಜಿಲ್ಲೆ) ಶಿವದೇವಾಲಯಗಳನ್ನು ನಿರ್ಮಿಸಿದ.

921ರಲ್ಲಿ ಅವನ ಮಗ ನಾಲ್ಕನೆಯ ವಿಜಯಾದಿತ್ಯ ಪಟ್ಟಕೇರಿದ. ಇವನು ಕೇವಲ ಆರು ತಿಂಗಳು ಆಳಿದನಾದರೂ ಕಳಿಂಗದ ಮೇಲೆ ವಿಜಯ ಸಾಧಿಸಿದ. ಇವನು ಕಾಲವಾದ ಅನಂತರ ರಾಜ್ಯದಲ್ಲಿ ಅಂತಃಕಲಹಗಳು ಪ್ರಾರಂಭವಾದವು. ಕೇವಲ 12 ವರ್ಷಗಳ ಅವಧಿಯಲ್ಲಿ ಆರು ಜನ ಅರಸರು ಆಳ್ವಿಕೆ ನಡೆಸಿದರು. ಈ ವಿಷಮ ಪರಿಸ್ಥಿತಿಯು ವೆಂಗಿಯ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಅನುಕೂಲ ಒದಗಿಸಿತು. ಒಂದನೆಯ ಅಮ್ಮ ರಾಜಮಹೇಂದ್ರ (921–27) ರಾಜಮಹೇಂದ್ರಪುರ (ಇಂದಿನ ರಾಜಮಂಡ್ರಿ) ಎಂಬ ಪಟ್ಟಣವನ್ನು ಸ್ಥಾಪಿಸಿ ಅದನ್ನು ರಾಜಧಾನಿಯಾಗಿಸಿದ. ಇವನ ತರುವಾಯ ಅವನ ಅಪ್ರಾಪ್ತವಯಸ್ಸಿನ ಮಗ ಐದನೆಯ ವಿಜಯಾದಿತ್ಯ (ಬೇಟ ಅಥವಾ ಕಂಠಿಕಾ ವಿಜಯಾದಿತ್ಯ) ಸಿಂಹಾಸನವೇರಿದ. ಆದರೆ ಅವನು 15 ದಿನಗಳಲ್ಲಿಯೇ ಸಿಂಹಾಸನ ಕಳೆದುಕೊಂಡು ಪೀಠಾಪುರದಲ್ಲಿ ಆಶ್ರಯ ಪಡೆದ. ಅಲ್ಲಿ ಅವನಿಂದ ಸ್ಥಳೀಯ ಚಾಳುಕ್ಯ ಶಾಖೆಯೊಂದು ಪ್ರಾರಂಭವಾಯಿತು.

ಯುದ್ಧಮಲ್ಲನ ಮಗ ಮೊದಲನೆಯ ತಾಳನು ರಾಷ್ಟ್ರಕೂಟರ ಸಹಾಯದಿಂದ ವೆಂಗಿಯ ರಾಜನಾದ. ಆದರೆ ಕೆಲ ಸಮಯದಲ್ಲಿಯೇ ಇಮ್ಮಡಿ ವಿಕ್ರಮಾದಿತ್ಯ ಅವನ ಮೇಲೆ ಆಕ್ರಮಣ ಮಾಡಿ ಕೊಂದ. ಕೇವಲ 11 ತಿಂಗಳು ಮಾತ್ರ ಆಳಿದ ಇವನು ತ್ರಿಕಲಿಂಗವನ್ನು ಮರಳಿ ವೆಂಗಿಗೆ ಗೆದ್ದುಕೊಟ್ಟ. ಮೊದಲನೆಯ ಅಮ್ಮನ ಮಗ ಭೀಮ ಅವನನ್ನು ಕೊಂದ. ಭೀಮನನ್ನು ತಾಳನ ಮಗ ಎರಡನೆಯ ಯುದ್ಧಮಲ್ಲ ರಾಷ್ಟ್ರಕೂಟ ಇಂದ್ರನ ಸಹಾಯದಿಂದ ಪಟ್ಟದಿಂದಿಳಿಸಿ ತಾನೇ ಅರಸನಾದ. ಆದರೆ ವಾಸ್ತವವಾಗಿ ವೆಂಗಿಯ ಆಡಳಿತ ರಾಷ್ಟ್ರಕೂಟರ ಕೈಯಲ್ಲಿತ್ತು. ಎರಡನೆಯ ಯುದ್ಧಮಲ್ಲ 7 ವರ್ಷ ಆಳಿದ. ವೆಂಗಿಯನ್ನು ಚಾಳುಕ್ಯ ಇಮ್ಮಡಿ ಭೀಮ ಮಾರ್ತಾಂಡ ಅರಾಜಕತೆಯಿಂದ ಮುಕ್ತಗೊಳಿಸಿದ. ಐದು ವರ್ಷಗಳ ಸತತ ಪ್ರಯತ್ನದಿಂದ ರಾಷ್ಟ್ರಕೂಟರನ್ನು ವೆಂಗಿಯಿಂದ ಹೊರದೂಡಿದ. ಇವನು ಹನ್ನೆರಡು ವರ್ಷಗಳ ಕಾಲ ಆಳಿದ. ಅವನು ಊರ್ಜಪಾ ಎಂಬ ಪೂರ್ವಗಂಗ ರಾಜಕುಮಾರಿಯನ್ನು ವರಿಸಿದ್ದ. ಇವಳಿಂದ ದಾನಾರ್ಣವ ಎಂಬ ಮಗನೂ ಲೋಕಾಂಬಾ ಎಂಬ ರಾಜಕುಮಾರಿಯಿಂದ ಅಮ್ಮ ಎಂಬ ಮಗನೂ ಜನಿಸಿದ. ಇಮ್ಮಡಿ ಅಮ್ಮನು ವೆಂಗಿ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ.

ಇಮ್ಮಡಿ ಅಮ್ಮ ಅಧಿಕಾರಕ್ಕೆ ಬಂದಾಗ ಅವನ ರಾಜ್ಯಕ್ಕೆ ಅನೇಕ ಅಡ್ಡಿ ಆತಂಕಗಳಿದ್ದವು (945). ಪಟ್ಟಾಭಿಷಿಕ್ತನಾದಾಗ ಇಮ್ಮಡಿ ಯುದ್ಧಮಲ್ಲನ ಮಕ್ಕಳಾದ ಬಾದಪ ಮತ್ತು ಇಮ್ಮಡಿ ತಾಳರು ರಾಷ್ಟ್ರಕೂಟರಲ್ಲಿ ಆಶ್ರಯ ಪಡೆದಿದ್ದರು. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಸಹಾಯ

ದೊಂದಿಗೆ ಬಾದಪನು ವೆಂಗಿಗೆ ಧಾಳಿ ಮಾಡಿದಾಗ ಅಸಹಾಯಕನಾಗಿದ್ದ ಅಮ್ಮನು ರಾಜ್ಯ ಬಿಟ್ಟು ಹೋಗಬೇಕಾಯಿತು. ಬಾದಪನು ತಾನೇ ವೆಂಗಿಯ ಅರಸನೆಂದು ಘೋಷಿಸಿದ. ಅವನ ತರುವಾಯ ಅವನ ತಮ್ಮನಾದ ಇಮ್ಮಡಿ ತಾಳ ಸಿಂಹಾಸನಾರೂಢನಾದ.

ರಾಜ್ಯದಿಂದ ಪಲಾಯನಗೈದಿದ್ದ ಇಮ್ಮಡಿ ಅಮ್ಮನು ತನ್ನ ಮಾವನಾದ ಕೋಲ, ಅರಸ ನೃಪಕಾನ ಮತ್ತು ಶುಭಚಿಂತಕರ ಸಹಾಯ ಪಡೆದು ವೆಂಗಿಗೆ ದಾಳಿಯಿಟ್ಟು ತಾಳನನ್ನು ಕೊಂದು ಮರಳಿ ತನ್ನ ಅಧಿಕಾರ ಸ್ಥಾಪಿಸಿದ. ಕೆಲಕಾಲ ಶಾಂತಿಯಿಂದ ಆಳಿದ ಅಮ್ಮನು ಮತ್ತೆ 956ರಲ್ಲಿ ರಾಷ್ಟ್ರಕೂಟರೊಂದಿಗೆ ಘರ್ಷಣೆಗೆ ಇಳಿಯಬೇಕಾಯಿತು. ಮಹಾತ್ವಾಕಾಂಕ್ಷಿಯಾಗಿದ್ದ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಇಡೀ ದಕ್ಷಿಣ ಭಾರತದ ಮೇಲೆ ತನ್ನ ಸಾರ್ವಭೌಮತ್ವ ಸ್ಥಾಪಿಸಬೇಕೆಂದು ಯೋಜಿಸಿ ಕಾರ್ಯಕ್ಕಿಳಿದ. 949–50ರಲ್ಲಿ ಚೋಳ ಪರಾಂತಕನನ್ನು ತಕ್ಕೋಲಂ ಯುದ್ಧದಲ್ಲಿ ಸೋಲಿಸಿ ಕಾಂಚೀ ತಂಜಾವೂರುಗಳನ್ನು ಆಕ್ರಮಿಸಿ ತನ್ನ ಸಾಮ್ರಾಜ್ಯಕ್ಕೆ ತೊಂಡೈಮಂಡಲವನ್ನು ಸೇರಿಸಿಕೊಂಡ. ಅನಂತರ ಅಮ್ಮನ ತಮ್ಮ ದಾನಾರ್ಣವನೊಂದಿಗೆ ಸಖ್ಯ ಬೆಳೆಸಿ ವೆಂಗಿಯ ಮೇಲೆ ಸೈನ್ಯವನ್ನು ಕಳಿಸಿದ. ಅಮ್ಮನು ಕಳಿಂಗಕ್ಕೆ ಪಲಾಯನ ಮಾಡಿದ. ದಾನಾರ್ಣವನನ್ನು ವೆಂಗಿಯ ಪಟ್ಟಕೇರಿಸಲಾಯಿತು. ಕೆಲ ಕಾಲದ ತರುವಾಯ ಅಮ್ಮನು ಮತ್ತೆ ವೆಂಗಿ ರಾಜ್ಯವನ್ನು ಗಳಿಸಿ 970ರ ವರೆಗೆ ಆಳಿದ. ಆದರೆ ದಾನಾರ್ಣವ ಮತ್ತೆ ದಂಗೆಯೆದ್ದು ರಾಜ್ಯ ಗಳಿಸಿದನಾದರೂ ಇವನ ಆಳ್ವಿಕೆ ಕೇವಲ ಮೂರು ವರ್ಷ ಸಾಗಿತು. ಈ ಕಾಲಾವಧಿ ಪೆಡಕಲ್ಲಿನ (ಕರ್ನೂಲು ಜಿಲ್ಲೆ) ತೆಲುಗು–ಚೋಡ ಅರಸ ಜಟಾ ಚೋಡ ಭೀಮನೊಂದಿಗೆ ಯುದ್ಧದಲ್ಲಿಯೆ ಕಳೆಯಲಾಯಿತು. ಜಟಾ ಚೋಡ ಭೀಮ ಬಹುಶಃ ತಾಯಿಯ ಕಡೆಯಿಂದ ಚಾಳುಕ್ಯ ಇಮ್ಮಡಿ ಭೀಮ ಅಥವಾ ರಾಜ ಭೀಮನ ಮೊಮ್ಮಗನೆಂದು ಹಾಗೂ ಇಮ್ಮಡಿ ಅಮ್ಮನ ಭಾವನೆಂದು ಕಾಣುತ್ತದೆ. ಈ ಕಾರಣದಿಂದಲೇ ಅವನು ಅಮ್ಮ ತೀರಿಕೊಂಡಾಗ ಸಿಟ್ಟಿನಿಂದ ದಾನಾರ್ಣವನ ಮೇಲೆ ಧಾಳಿ ಮಾಡಿ 973ರಲ್ಲಿ ಅವನನ್ನು ಕೊಂದ.

ತೆಲುಗು ಜಟಾ ಚೋಡ ಭೀಮನ ಪರಾಕ್ರಮದಿಂದ ವೆಂಗಿ ಚಾಳುಕ್ಯರು ಮೊದಲ ಬಾರಿ ತಮ್ಮ ಅಧಿಕಾರವನ್ನು ನಿಜವಾಗಿ ಕಳೆದುಕೊಂಡಂತಾಯಿತು. 27 ವರ್ಷಗಳ ಕಾಲ ಜಟಾ ಭೀಮನು ವೆಂಗಿಯನ್ನು ಆಳಿದ.

ದಾನಾರ್ಣವನಿಗೆ ಮೊದಲನೆಯ ಶಕ್ತಿವರ್ಮ ಮತ್ತು ವಿಮಲಾದಿತ್ಯ ಎಂಬ ಮಕ್ಕಳಿದ್ದರು. ಚಿಕ್ಕ ಮಗ ವಿಮಲಾದಿತ್ಯ ರಾಜರಾಜ ಚೋಳನ ಮಗಳಾದ ಕುಂದವೈಯನ್ನು ಮದುವೆಯಾಗಿದ್ದ. ಜಟಾ ಚೋಡ ಭೀಮ ವೆಂಗಿಯನ್ನಾಕ್ರಮಿಸಿದ್ದರಿಂದ ಸಹಜವಾಗಿ ರೊಚ್ಚಿಗೆದ್ದ ಚೋಳ ರಾಜರಾಜನು ಮೊದಲನೆಯ ಶಕ್ತಿವರ್ಮನ ಪರವಾಗಿ ವೆಂಗಿಯ ಮೇಲೆ ಧಾಳಿ ಮಾಡಿದ. ಯುದ್ಧದಲ್ಲಿ ಚೋಳ–ಚಾಳುಕ್ಯ ಮೈತ್ರಿಗೆ ವಿಜಯವಾಯಿತು. ಚೋಡ ಭೀಮನು ಕಳಿಂಗದ ಗುಡ್ಡಗಾಡುಗಳಲ್ಲಿ ತಲೆಮರೆಸಿಕೊಂಡ. ಶಕ್ತಿವರ್ಮನನ್ನು ರಾಜನೆಂದು ಘೋಷಿಸಿದ ಮೇಲೆ ಚೋಳ ಸೈನ್ಯ ತನ್ನ ನಾಡಿಗೆ ಮರಳಿತು. ಆಗ ಚೋಡ ಭೀಮ ಮತ್ತೆ ವೆಂಗಿಯನ್ನು ಆಕ್ರಮಿಸಿದನಲ್ಲದೆ ತೊಂಡೈಮಂಡಲದವರೆಗೂ ದಂಡಯಾತ್ರೆಗೈದ. ಒಂದನೆಯ ರಾಜರಾಜ ಚೋಳ ಅವನನ್ನು ಹೊರದಬ್ಬಿದ್ದಲ್ಲದೆ, ಆಂಧ್ರದ ಕರಾವಳಿಗುಂಟ ಹಾಗೂ ಕಳಿಂಗದವರೆಗೂ ಸೈನ್ಯಕಳುಹಿಸಿ 1002–03ರಲ್ಲಿ ಜಟಾ ಭೀಮನನ್ನು ಕೊಂದು, ವೆಂಗಿಯಲ್ಲಿ ಶಕ್ತಿವರ್ಮನನ್ನು ಪುನಃ ಅಧಿಕಾರಕ್ಕೆ ತಂದ.

ಶಕ್ತಿವರ್ಮ ಪಟ್ಟಕ್ಕೇರಿದ ಅನಂತರ ವೆಂಗಿಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಚೋಳರ ಸಹಾಯದಿಂದ ರಾಜ್ಯವನ್ನು ಮರಳಿ ಪಡೆದದ್ದರಿಂದ ವೆಂಗಿರಾಜ್ಯದ ಸ್ವಾತಂತ್ರ್ಯವನ್ನು ಬಲಿ ಕೊಟ್ಟು ಚೋಳರ ಸಾರ್ವಭೌಮತ್ವವನ್ನು ಒಪ್ಪಬೇಕಾಯಿತು. ಇದರಿಂದ ದಖನ್ ರಾಜಕೀಯ ಸಮತೋಲನಕ್ಕೆ ಪೆಟ್ಟುಬಿದ್ದಿತು. ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಕಿತ್ತೆಸೆದು ಸ್ವತಂತ್ರರಾಗಿದ್ದ ಕಲ್ಯಾಣದ ಚಾಳುಕ್ಯರು ವೆಂಗಿಯ ಮೇಲೆ ಚೋಳರ ಹಿಡಿತವನ್ನು ಸಹಿಸಲು ಸಿದ್ಧರಿರಲಿಲ್ಲ. ಹೀಗಾಗಿ ವೆಂಗಿಯು ಮುಂದಿನ ಸು. 135 ವರ್ಷಗಳ ಕಾಲ ತಂಜಾವೂರಿನ ಚೋಳರ ಮತ್ತು ಕಲ್ಯಾಣದ ಚಾಳುಕ್ಯರ ನಡುವೆ ನಡೆದ ಯುದ್ಧಗಳಿಗೆ ರಂಗಮಂಚವಾಯಿತು. ವೆಂಗಿ ಚಾಳುಕ್ಯರು ಹೆಸರಿಗೆ ಮಾತ್ರ ಸಿಂಹಾಸನಾರೂಢರಾಗಿದ್ದರು. ಈ ಕಾಲಘಟ್ಟದ ಇತಿಹಾಸ ನಿಜವಾಗಿ ವೆಂಗಿಯ ಹಿಡಿತಕ್ಕಾಗಿ ಚಾಳುಕ್ಯ ಚೋಳರ ನಡುವೆ ನಡೆದ ಕಲಹಗಳ ಇತಿಹಾಸವಾಗಿದೆ.

ಶಕ್ತಿವರ್ಮ 12 ವರ್ಷಗಳ ಕಾಲ ಆಳಿದ. ಇವನ ಆಳ್ವಿಕೆಯ ಆರಂಭದಲ್ಲಿಯೇ 1006ರಲ್ಲಿ ಕಲ್ಯಾಣದ ಚಾಳುಕ್ಯ ಇಮ್ಮಡಿ ತೈಲಪನ ಮಗ ಸತ್ಯಾಶ್ರಯ ವೆಂಗಿಯ ಮೇಲೆ ದಾಳಿಯಿಟ್ಟ. ಅವನ ಸೇನಾನಿ ಬಯಲನಂಬಿ ವೆಂಗಿಯನ್ನಾಕ್ರಮಿಸಿ ಧರಣೀಕೋಟ ಮತ್ತು ಯನಮದಲ ಕೋಟೆಗಳನ್ನು ನಾಶಪಡಿಸಿದ. ಇದಕ್ಕೆ ಪ್ರತಿಯಾಗಿ ಒಂದನೆಯ ರಾಜರಾಜ ಚೋಳ ತನ್ನ ಸೈನ್ಯವನ್ನು ವೆಂಗಿಗೆ ಕಳುಹಿಸಿ ಸತ್ಯಾಶ್ರಯನ ಸೈನ್ಯ ಅಲ್ಲಿಂದ ಕಾಲುಕೀಳುವಂತೆ ಮಾಡಿದ. ಸ್ವಲ್ಪ ಕಾಲದಲ್ಲಿಯೇ ಶಕ್ತಿವರ್ಮ ಸಂತಾನ ವಿಲ್ಲದೆ ತೀರಿಕೊಂಡದ್ದರಿಂದ. ಅವನ ತಮ್ಮ ವಿಮಲಾದಿತ್ಯ 1011ರಲ್ಲಿ ವೆಂಗಿಯ ಪಟ್ಟಕ್ಕೇರಿದ. ಇವನು 1018ರ ವರೆಗೆ ಆಳಿದ. ಮೂಲತಃ ಶೈವನಾಗಿದ್ದ ಇವನು ಜೈನಧರ್ಮವನ್ನು ಸ್ವೀಕರಿಸದನೆಂದು ಶಾಸನಗಳಿಂದ ತಿಳಿಯುತ್ತದೆ. ವಿಮಲಾದಿತ್ಯ ಒಂದನೆಯ ಚೋಳ ರಾಜರಾಜನ ಮಗಳು ಕುಂದವೈಯನ್ನಲ್ಲದೆ ಜಟಾ ಚೋಡ ಭೀಮನ ಮಗಳಾದ ಮೇಲಮ ಎಂಬಾಕೆಯನ್ನು ವರಿಸಿದ್ದ. ಕುಂದವೈಯ ಮಗ ರಾಜರಾಜನನ್ನು ಯುವರಾಜನೆಂದು ಮಾನ್ಯಮಾಡಲಾಯಿತು.

ವಿಮಲಾದಿತ್ಯ 1018ರಲ್ಲಿ ಕಾಲವಾದಾಗ ಸಿಂಹಾಸನಕ್ಕಾಗಿ ಮತ್ತೆ ಅಂತರ್ ಕಲಹವುಂಟಾಯಿತು. ಮೇಲಮಳ ಮಗ ವಿಜಯಾದಿತ್ಯ ಚಾಳುಕ್ಯ ಇಮ್ಮಡಿ ಜಯಸಿಂಹ ಜಗದೇಕಮಲ್ಲನ ಸಹಾಯದಿಂದ ರಾಜರಾಜನನ್ನು ರಾಜ್ಯದಿಂದ ಹೊರಗಟ್ಟಿದ. ರಾಜರಾಜನು ರಾಜೇಂದ್ರ ಚೋಳನ ಸಹಾಯ ಯಾಚಿಸಿದ. ರಾಜೇಂದ್ರ ತನ್ನ ಸೈನ್ಯವನ್ನು ಶೋಳಿಯವರಶನ್ ಎಂಬ ಸೇನಾನಿಯ ನೇತೃತ್ವದಲ್ಲಿ ಅವನ ಸಹಾಯಕ್ಕೆ ಕಳಿಸಿದ್ದಲ್ಲದೆ ಚಾಳುಕ್ಯರ ಪ್ರದೇಶವಾಗಿದ್ದ ರಟ್ಟಪಾಡಿಯ ಮೇಲೆ ಧಾಳಿಯಿಟ್ಟ. ಸೇನಾನಿ ಶೋಳಿಯ ವರಶ ವೆಂಗಿಯನ್ನು ಆಕ್ರಮಿಸಿದ. ಉತ್ತರಕ್ಕೆ ದಂಡಯಾತ್ರೆ ಕೈಗೊಂಡು ಗಂಗಾ ಬಯಲಿನ ವರೆಗೂ ಸಾಗಿದ. ಅವನು ಮರಳುವಾಗ ಉತ್ಕಲದ ಅರಸರಿಂದ ತೊಂದರೆಯಾಗುವುದನ್ನು ಗಮನಿಸಿ ರಾಜೇಂದ್ರ ಸ್ವತಃ ತನ್ನ ಸೈನ್ಯದೊಂದಿಗೆ ಉತ್ಕಲರನ್ನು ದಂಡಿಸಿದ. ರಾಜರಾಜ ನನ್ನು ಮತ್ತೆ 1022ರಲ್ಲಿ ವೆಂಗಿಯ ಸಿಂಹಾಸನಕ್ಕೆ ತರಲಾಯಿತು.

ರಾಜರಾಜ ನರೇಂದ್ರ ತನ್ನ 42 ವರ್ಷಗಳ ಸುದೀರ್ಘ ಆಳ್ವಿಕೆಯಲ್ಲಿ ಸಮಸ್ಯೆಗಳ ಸರಮಾಲೆಯನ್ನೇ ಎದುರಿಸಬೇಕಾಯಿತು ಹಾಗೂ ಕೆಲವು ಸಲ ರಾಜ್ಯ ಬಿಟ್ಟು ಹೋಗಬೇಕಾಯಿತು. ಸಿಂಹಾಸನ ಕಳೆದುಕೊಂಡ ವಿಮಲಾದಿತ್ಯ ಕಲ್ಯಾಣದ ಚಾಳುಕ್ಯರ ಸಹಾಯದೊಂದಿಗೆ 1031ರಲ್ಲಿ ರಾಜಾದಿತ್ಯನನ್ನು ಓಡಿಸಿ ತಾನೆ ಪಟ್ಟಾಭಿಷಿಕ್ತನಾದ. 1035ರ ಸುಮಾರಿಗೆ ರಾಜರಾಜ ಮತ್ತೆ ವೆಂಗಿಯ ಅರಸನಾದ. ಕಲ್ಯಾಣದ ಚಾಳುಕ್ಯ ದೊರೆ ಒಂದನೆಯ ಸೋಮೇಶ್ವರ ಮತ್ತೊಮ್ಮೆ ವೆಂಗಿಯ ಮೇಲೆ ದಾಳಿಯಿಟ್ಟ. ಚೋಳರ ಸಹಾಯ ಬಯಸಿದ ರಾಜರಾಜನಿಗೆ ಬ್ರಹ್ಮಮಹಾರಾಜ ಎಂಬ ಚೋಳ ಸೇನಾನಿಯ ಲಭ್ಯವಾಯಿತು. ಕಾಲದಿಂಡಿ ಎಂಬ ಹಳ್ಳಿಯಲ್ಲಿ ನಡೆದ ಘೋರ ಯುದ್ಧದಲ್ಲಿ ಚಾಳುಕ್ಯ ಮತ್ತು ಚೋಳ ಸೈನ್ಯ ಸಾವನ್ನಪ್ಪಿತು. ಯುದ್ಧದ ಪರಿಣಾಮ ಸ್ಪಷ್ಟವಾಗಲಿಲ್ಲ.

ಚೋಳ ಒಂದನೆಯ ರಾಜಾಧಿರಾಜ ಪಟ್ಟಕ್ಕೇರಿದ ಅನಂತರ ವೆಂಗಿಯ ಮೇಲೆ ಹಿಡಿತ ಸಾಧಿಸಲೆಂದು ಧಾಳಿ ಮಾಡಿದ. ಚಾಳುಕ್ಯ ಆಹವಮಲ್ಲನ ಸೈನ್ಯದೊಂದಿಗೆ ಯುದ್ಧವಾಗಿ ತಾತ್ಕಾಲಿಕವಾಗಿ ರಾಜರಾಜನು ಮತ್ತೆ ವೆಂಗಿಯ ಸಿಂಹಾಸನವನ್ನೇರುವಂತಾಯಿತು. 1047ರಲ್ಲಿ ಚಾಳುಕ್ಯ ಆಹವಮಲ್ಲನು ವೆಂಗಿ ಕಳಿಂಗಗಳ ಮೇಲೆ ಜಯಶಾಲಿಯಾದ. ಚಾಳುಕ್ಯ ಇಮ್ಮಡಿ ಸೋಮೇಶ್ವರ ವೆಂಗಿಪುರವರೇಶ್ವರ ಎಂಬುದಾಗಿ 1049–54 ಶಾಸನ ಗಳಲ್ಲಿ ಉಲ್ಲೇಖಿಸಲಾಗಿದೆ. ಇಷ್ಟು ಹೊತ್ತಿಗೆ ಚೋಳ ರಾಜಾಧಿರಾಜನಿಗೆ ವೆಂಗಿಯ ಮೇಲಿನ ಆಸಕ್ತಿ ಕುಂದಿತ್ತು. ಹೀಗಾಗಿ ವೆಂಗಿಯ ರಾಜರಾಜನು ಚಾಳುಕ್ಯರ ಸಾರ್ವಭೌಮತ್ವನ್ನು ಒಪ್ಪಿದ. ಆಹವಮಲ್ಲನ ಪ್ರಧಾನಿ ನಾರಾಯಣಭಟ್ಟ ವೆಂಗಿ ಚಾಳುಕ್ಯರ ರಾಜಧಾನಿಯ ನಿವಾಸಿಯಾಗಿದ್ದ. ರಾಜರಾಜನ ಆಸ್ಥಾನ ಕವಿಯೂ ಪುರೋಹಿತನೂ ಆಗಿದ್ದ ನನ್ನಯಭಟ್ಟನಿಗೆ ತೆಲುಗು ಮಹಾಭಾರತವನ್ನು ಬರೆಯಲು ಇವನು ಸಹಕರಿಸಿದ. ಇದರಿಂದ ಸಂಪ್ರೀತನಾದ ರಾಜರಾಜ 1051ರಲ್ಲಿ ನಂದಮಪೂಂಡಿ ಗ್ರಾಮವನ್ನು ಅಗ್ರಹಾರವಾಗಿ ಕೊಟ್ಟನೆಂದು ತಿಳಿಯುತ್ತದೆ. ರಾಜರಾಜನು ಚೋಳ ರಾಜೇಂದ್ರನ ಮಗಳು ಅಮ್ಮಗೈಯನ್ನು ಮದುವೆಯಾಗಿ ಅವಳಿಂದ ರಾಜೇಂದ್ರ ಎಂಬ ಮಗನನ್ನು ಪಡೆದ.

ರಾಜರಾಜ 1061ರಲ್ಲಿ ತೀರಿಕೊಂಡ. ಅದುವರೆಗೆ ಕಲ್ಯಾಣದ ಚಾಳುಕ್ಯರಲ್ಲಿ ಸೇವೆಸಲ್ಲಿಸುತ್ತಿದ್ದ ವಿಜಯಾದಿತ್ಯ ವೆಂಗಿಯ ಸಿಂಹಾಸನಕ್ಕೆ ವಾರಸುದಾರನಾದ. ವಿಜಯಾದಿತ್ಯನು ಚಾಳುಕ್ಯರ ಸೇವೆಯಲ್ಲಿ ನೊಳಂಬವಾಡಿಯ ಆಡಳಿತ ನೋಡುತ್ತಿದ್ದುದರಿಂದ ಮೊದಲು ತನ್ನ ಮಗ ಇಮ್ಮಡಿ ಶಕ್ತಿವರ್ಮನನ್ನು ವೆಂಗಿಯ ಅರಸನನ್ನಾಗಿ ಮಾಡಿದ. ಆದರೆ ಶಕ್ತಿವರ್ಮ ಒಂದೇ ವರ್ಷದಲ್ಲಿ ಬಹುಶಃ ಚೋಳ ವೀರರಾಜೇಂದ್ರನ ಆಕ್ರಮಣದಲ್ಲಿ ಮಡಿದ. ವಿಜಯಾದಿತ್ಯ ಅಥವಾ ವಿಷ್ಣುವರ್ಧನ, ಏಳನೆಯ ವಿಜಯಾದಿತ್ಯ ತನ್ನ ಮಗ ಶಕ್ತಿವರ್ಮ ಕಾಲವಾದಾಗ ವೆಂಗಿಯಲ್ಲಿರಲಿಲ್ಲ. ಚೋಳರಿಂದ ಚಾಳುಕ್ಯ ರಾಜ್ಯದ ಆಗ್ನೇಯಭಾಗವನ್ನು ರಕ್ಷಿಸಲೆಂದು ನೊಳಂಬವಾಡಿಯ ಅಧಿಕಾರಿಯಾಗಿ ಅವನನ್ನು ನೇಮಿಸಲಾಗಿತ್ತು. ಚೋಳರ ಮೇಲೂ ಅವನು ದಂಡಯಾತ್ರೆ ಕೈಗೊಂಡ. ಆದರೆ ಚೋಳ ವೀರರಾಜೇಂದ್ರ ವೆಂಗಿಯ ಮೇಲೆ ಚೋಳರ ಹಿಡಿತವನ್ನು ಪುನಃ ಸ್ಥಾಪಿಸುವುದರಲ್ಲಿ ಆಸಕ್ತನಾಗಿದ್ದ. ಇದರಿಂದಾಗಿ ಚಾಳುಕ್ಯ ಒಂದನೆಯ ಸೋಮೇಶ್ವರ ಧಾರಾದ ಜಗನ್ನಾಥನ ನೇತೃತ್ವದಲ್ಲಿ ಸೈನ್ಯ ಕಳಿಸಿ ವಿಜಯವಾಡದಲ್ಲಿ ಬೀಡು ಬಿಡಿಸಿದ. ಚೋಳರ ದಾಳಿ ತಡೆಯಲೆಂದು 1064ರಲ್ಲಿ ವಿಜಯಾದಿತ್ಯನನ್ನು ಚೋಳರ ವಿರುದ್ಧ ದಕ್ಷಿಣಕ್ಕೆ ಕಳುಹಿಸಿದ. ಆದರೆ ಸೋಮೇಶ್ವರ ಮರಣ ಹೊಂದಿದ್ದರಿಂದಾಗಿ ಆರನೆಯ ವಿಕ್ರಮಾದಿತ್ಯ ಹಸ್ತಕ್ಷೇಪಮಾಡಿದ ವಿಜಯಾದಿತ್ಯ ವೀರರಾಜೇಂದ್ರನೊಂದಿಗೆ ಸಂಧಿಮಾಡಿಕೊಂಡು ಚೋಳರ ಸಾರ್ವಭೌಮತ್ವವನ್ನು ಒಪ್ಪುವಂತೆ ಮಾಡಿದ.

1070ರಲ್ಲಿ ಚೋಳ ವೀರರಾಜೇಂದ್ರ ಮಡಿದ ಕೆಲಕಾಲದಲ್ಲಿಯೇ ಅವನ ಮಗ ಅಧಿರಾಜೇಂದ್ರ ಹತನಾದ. ವೆಂಗಿಯ ರಾಜೇಂದ್ರ ಚೋಳ ಒಂದನೆಯ ರಾಜೇಂದ್ರನಿಗೆ ತಾಯಿ ಕಡೆಯಿಂದ ಸಂಬಂಧಿಯಾದ್ದರಿಂದ ಚೋಳರ ಸಿಂಹಾಸನಕ್ಕೆ ವಾರಸುದಾರನಾದ. ಕಳಿಂಗದ ಪೂರ್ವಗಂಗ ದೊರೆ ರಾಜೇಂದ್ರ ವೆಂಗಿಯ ಮೇಲೆ ದಾಳಿಮಾಡಿ ವಿಜಯಾದಿತ್ಯನನ್ನು ಪಟ್ಟಕ್ಕೇರಿಸಿದ. ರಾಜೇಂದ್ರನೂ ಅದಕ್ಕೆ ಮನ್ನಣೆ ನೀಡಿದ. 1073ರಲ್ಲಿ ಡಾಹಲದ ಚೇದಿ ರಾಜ ಯಶಃಕರ್ಣದೇವನು ವೆಂಗಿಯ ಮೇಲೆ ಧಾಳಿಮಾಡಿದ. ಇದಲ್ಲದೆ ಪೂರ್ವ ಗಂಗ ಅರಸ ರಾಜೇಂದ್ರನ ಸೇನಾಪತಿ ಬನಪತಿಯು ವೆಂಗಿಯ ಅರಸನನ್ನು ಮತ್ತೆ ಮತ್ತೆ ಸೋಲಿಸಿದ್ದಾಗಿ 1075ರ ಶಾಸನವೊಂದರಲ್ಲಿ ಹೇಳಿದೆ. ಇದರಿಂದ ಏಳನೆಯ ವಿಜಯಾದಿತ್ಯ ವೆಂಗಿ ರಾಜ್ಯವನ್ನು ಕಳೆದುಕೊಳ್ಳುವಂತಾಯಿತು. 1074–75ರ ಒಂದು ಶಾಸನದಲ್ಲಿ

ಉಲ್ಲೇಖಿಸುತ್ತದೆ–ಅವನು ಕಲ್ಯಾಣದ ಚಾಳುಕ್ಯ ದೊರೆ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಅಧೀನನಾಗಿದ್ದಂತೆ ಪಲ್ಲವಾನ್ವಯ, ಕಾಂಚೀಪುರವರೇಶ್ವರ, ಪಲ್ಲವ ಪೆರ್ಮಾನಡಿ ಮುಂತಾದ ಬಿರುದುಗಳು ಅವನಿಗಿದ್ದವು. ಆದ್ದರಿಂದ ಅವನು ನೊಳಂಬ ವಾಡಿಯ ಅಧಿಕಾರಿಯಾಗಿ ನೇಮಿತವಾಗಿದ್ದನೆಂದು ಸೂಚಿತವಾಗುತ್ತದೆ. ಸು. 1075ರಲ್ಲಿ ಅವನು ಮರಣಹೊಂದುವುದರೊಂದಿಗೆ ವೆಂಗಿಯ ಚಾಳುಕ್ಯರ ಆಳ್ವಿಕೆ ಕೊನೆಗೊಂಡಂತಾಯಿತು. ವೆಂಗಿ ಚೋಳ ಸಾಮ್ರಾಜ್ಯದ ಒಂದು ಭಾಗವಾಯಿತು.

**ವಾಸ್ತು ಮತ್ತು ಶಿಲ್ಪ:** ವೆಂಗಿಯ ಚಾಳುಕ್ಯರು ಗುಹಾವಾಸ್ತು ಮತ್ತು ರಾಚನಿಕ ವಾಸ್ತುನಿರ್ಮಾಣಗಳೆರಡಕ್ಕೂ ಪ್ರೋತ್ಸಾಹ ನೀಡಿದರು. ಅವರ ಕಾಲದ ಗುಹಾ ನಿರ್ಮಿತಿಗಳನ್ನು ವಿಜಯವಾಡದ ಸಮೀಪದಲ್ಲಿರುವ ಉಂಡವಳ್ಳಿಯ ಮೂರು ಮಹಡಿಯ ಗುಹಾಲಯ ಹಾಗೂ ವಿಜಯವಾಡ ನಗರದಲ್ಲಿರುವ ಅಕ್ಕಣ್ಣ–ಮಾದಣ್ಣ ಗುಹೆಗಳು, ಮೊಗಲ್ರಾಜಪುರಂ ಗುಹೆಗಳು, ಭೈರವಕೊಂಡದ ಗುಹಾಲಯಗಳು ಇತ್ಯಾದಿಗಳಲ್ಲಿ ಕಾಣಬಹುದು. ಪೊಂಡಗುಳ, ಬಿಕ್ಕವೊಲು ಮುಂತಾದೆಡೆ ರಾಚನಿಕ ದೇಗುಲಗಳಿವೆ.

ಗುಹಾಲಯಗಳು: ಶಿವರಾಮಮೂರ್ತಿ ಮುಂತಾದ ಕೆಲವು ವಿದ್ವಾಂಸರು ವಿಜಯವಾಡದ ಪರಿಸರದಲ್ಲಿರುವ ಗುಹಾಲಯಗಳನ್ನು ವಿಷ್ಣುಕುಂಡಿ ವಂಶೀಯರ ನಿರ್ಮಾಣಗಳೆಂದು ಭಾವಿಸುತ್ತಾರೆ. ಆದರೆ ಕೆ.ವಿ.ಸೌಂದರರಾಜನ್ ಹಾಗೂ ಮತ್ತಿತರರು ಇವು ವೆಂಗಿ ಚಾಳುಕ್ಯ ನಿರ್ಮಿತಿಗಳೆಂದು ಪರಿಗಣಿಸುತ್ತಿದ್ದು ಇದನ್ನೇ ಹೆಚ್ಚಿನ ವಿದ್ವಾಂಸರು ಬೆಂಬಲಿಸಿದ್ದಾರೆ.

ವಿಜಯವಾಡದಲ್ಲಿರುವ ಗುಹಾಲಯಗಳಲ್ಲಿ ಮೋಗಲ್ರಾಜಪುರಂನಲ್ಲಿರುವ 5 ಗುಹಾದೇಗುಲಗಳು ಪ್ರಾಚೀನತಮವಾದವುಗಳು. ಇವುಗಳಿಗೆ ಮುಖಮಂಟಪವುಳ್ಳ ಒಂದು ಇಲ್ಲವೆ ಮೂರು ಗರ್ಭಗೃಹಗಳಿವೆ. ಈ ಐದರಲ್ಲಿ ಎರಡನೆಯ ಗುಹೆ ಗಮನಾರ್ಹವಾದುದು. ಇದಕ್ಕೆ ತೆರೆದ ಮೊಗಸಾಲೆಯಿದ್ದು, ಅದರ ಹಿಂಭಾಗದಲ್ಲಿ ಮಂಟಪ ಮತ್ತು ಮಂಟಪದ ಹಿಂಗೋಡೆಯಲ್ಲಿ ಮೂರು ಗರ್ಭಗೃಹಗಳು ಇವೆ. ಮಧ್ಯದ ಗರ್ಭಗೃಹ ದೊಡ್ಡದಾಗಿದ್ದು ಪಾರ್ಶ್ವದ ಉಳಿದೆರಡು ಗರ್ಭಗೃಹಗಳು ತುಸು ಚಿಕ್ಕದಾಗಿವೆ. ತೆರೆದ ಮೊಗಸಾಲೆ ಪಾರ್ಶ್ವಗಳು ಇಳಿಜಾರಾಗಿದ್ದು, ಎಡ ಗೋಡೆಯಲ್ಲಿ ಕೊಠಡಿಯಿದೆ. ಇದು ಪಶ್ಚಿಮ ಭಾರತದ ಗುಹಾವಾಸ್ತು ಪರಂಪರೆಯನ್ನು ನೆನಪಿಸುತ್ತವೆ. ಗುಹಾಲಯದ ಮುಖ ಭಾಗದಲ್ಲಿ ಪಾದಬಂಧ ಅಧಿಷ್ಠಾನ, ಎರಡು ಕಂಭಗಳು, ಕಪೋತ ಮತ್ತು ವ್ಯಾಲವರಿ ಇವೆ. ಇದರ ಮೇಲ್ಭಾಗದಲ್ಲಿ ತುಸು ಹಿಂದೆ ಸರಿದಂತೆ ದೊಡ್ಡ ಗಾತ್ರದ ನಟರಾಜನ ಉಬ್ಬುಶಿಲ್ಪವಿದೆ. ಕಂಭಗಳು ಭಾರಿ ಗಾತ್ರದವು. ಇವುಗಳ ತಳ ಮತ್ತು ಮೇಲ್ಭಾಗಗಳು ಚೌಕವಿದ್ದು ನಡುವಿನ ಭಾಗ ಅಷ್ಟಕೋನಾಕಾರದಲ್ಲಿದೆ. ಕಂಭಗಳಲ್ಲಿ ಗಜೇಂದ್ರಮೋಕ್ಷ, ಕೃಷ್ಣಚರಿತ ಮುಂತಾದ ಶಿಲ್ಪಗಳಿವೆ. ಕಪೋತದಲ್ಲಿ ಮೂರು ದೊಡ್ಡ ನಾಸಿಕಗಳಿದ್ದು ಅವುಗಳಲ್ಲಿ ಕ್ರಮವಾಗಿ ಬ್ರಹ್ಮ, ಶಿವಪಾರ್ವತಿ ಮತ್ತು ವಿಷ್ಣು–ಲಕ್ಷ್ಮೀ ದೇವತೆಗಳ ಮುಖವನ್ನು ತೋರಿಸಿದೆ. ಒಳಗಡೆ ಈ ನಾಸಿಕಗಳಿಗೆ ಸ್ಪಂದಿಯಾಗಿರುವ ಗರ್ಭಗೃಹಗಳಲ್ಲಿ ಬ್ರಹ್ಮ, ಶಿವ ಮತ್ತು ವಿಷ್ಣು ಶಿಲ್ಪಗಳಿದ್ದವೆಂದು ಇದರಿಂದ ಸೂಚಿತವಾಗಿದೆ. ವೇದಿ ಭಾಗದಲ್ಲಿ ಸೊಂಡಿಲೆತ್ತಿದ ಆನೆ ಮತ್ತು ಗುಂಗುರು ಬಾಲವುಳ್ಳ ಸಿಂಹದ ಉಬ್ಬುಶಿಲ್ಪಗಳಿವೆ.

ವಿಜಯವಾಡದ ಇಂದ್ರಕೀಲಾದ್ರಿ ಬೆಟ್ಟದಲ್ಲಿರುವ ಅಕ್ಕಣ್ಣ–ಮಾದಣ್ಣ ಗುಹಾಲಯ ಮತ್ತು ಇತರ ಗುಹಾಲಯಗಳೂ ಉಲ್ಲೇಖನೀಯವಾಗಿವೆ. ಮೇಲಣ ಗುಹೆಯು ಶಿವ, ವಿಷ್ಣು ಮತ್ತು ಬ್ರಹ್ಮ ದೇವತೆಗಳಿಗೆ ಮುಡಿಪಾಗಿದೆ. ಇದು ಬಹುಶಃ ಮೂಲತಃ ಸು.2–3 ನೆಯ ಶತಮಾನದಲ್ಲಿ ಬೌದ್ಧ ವಿಹಾರವಾಗಿತ್ತು. ಅನಂತರ ವೆಂಗಿ ಚಾಳುಕ್ಯರ ಕಾಲದಲ್ಲಿ ತ್ರಿಮೂರ್ತಿಗಳ ದೇಗುಲವಾಗಿ ಪರಿವರ್ತಿಸಲ್ಪಟ್ಟಿದೆ. ಇದಕ್ಕೆ ಒಂದು ಮಂಟಪ ಹಾಗು ಹಿಂಗೋಡೆಯಲ್ಲಿ ಮೂರು ಗರ್ಭಗೃಹಗಳು ಇವೆ. ಮೂರು ಸಾಲು ಕಂಭಗಳಿದ್ದು ಮಂಟಪ ವನ್ನು ಅಂಕಣಗಳಾಗಿ ವಿಭಜಿಸಿವೆ. ಅಷ್ಟಕೋನಾಕೃತಿಯ ಕಂಬಗಳು, ಪಾದಬಂಧರೀತಿಯ ಅಧಿಷ್ಠಾನ ಮತ್ತು ಅಂಗಳದಲ್ಲಿ ನಂದಿಯನ್ನಿರಿಸುವುದು ಮುಂತಾದ ಲಕ್ಷಣಗಳು ಅಜಂತ–ಎಲ್ಲೋರದ ವಾಸ್ತು ಸಂಪ್ರದಾಯವನ್ನು ನೆನಪಿಸುತ್ತವೆ.ವಿಜಯವಾಡದಿಂದ ಸು.12 ಕಿಮೀ ದೂರದಲ್ಲಿರುವ ಉಂಡವಳ್ಳಿಯಲ್ಲಿ ಅದ್ಭುತ ಗುಹಾಲಯ ಸಂಕೀರ್ಣವಿದೆ. ಈ ಸಂಕೀರ್ಣದಲ್ಲಿ ಮೂರು ಗುಹಾಲಯಗಳಿವೆ. ಮೊದಲೇ ಗುಹಾಲಯವು ಮಂಟಪ ಮತ್ತು ಗರ್ಭಗೃಹವನ್ನೊಳಗೊಂಡಿದೆ. ಮಂಟಪದ ಮುಖ ಭಾಗದಲ್ಲಿ ಎರಡು ರುಚಕ ಕಂಭಗಳು ಹಾಗೂ ಇನ್ನೆರಡು ಅರ್ಧಗಂಭಗಳು ಇವೆ. ಗರ್ಭಗೃಹದ ದ್ವಾರದ ಪಾರ್ಶ್ವಗಳಲ್ಲಿ ದ್ವಿಭುಜ ಶೈವ ದ್ವಾರಪಾಲಕರಿದ್ದಾರೆ. ಗದೆಯ ಮೇಲೆ ಭಾರ ಊರಿ ನಿಂತಿರುವ ಶೈಲಿ ವೆಂಗಿ ಚಾಳುಕ್ಯರ ಎಲ್ಲ ಗುಹಾಲಯಗಳಲ್ಲಿ ಗೋಚರಿಸುವ ಲಕ್ಷಣವಾಗಿದೆ.

ಎರಡನೆಯದು ಅನಂತಶಯನ ಗುಡಿ ಎಂಬ ಮೂರು ಮಹಡಿಗಳಿರುವ (ನೆಲ ಮಹಡಿಯನ್ನು ಸೇರಿಸಿದರೆ 4 ಮಹಡಿಗಳಿರುವ) ವಿಶಿಷ್ಟ ಗುಹಾಲಯ. ನೆಲ ಮಟ್ಟದಲ್ಲಿರುವ ಮಂಟಪವು ಅಪೂರ್ಣವಾಗಿದೆ. ಇದರಲ್ಲಿ ದೊಡ್ಡ ಗಾತ್ರದ ಕಂಗಳಿವೆ. ಮೊದಲನೆಯ ಮಹಡಿಯಲ್ಲಿ ವಿಶಾಲ ಮಂಟಪವಿದ್ದು ಅದರ ಹಿಂಗೋಡೆಯಲ್ಲಿ ಮೂರು ಗರ್ಭಗೃಹಗಳಿವೆ. ಇಡೀ ಮಂಟಪವನ್ನು ಮೂರು ಬೇರೆ ಬೇರೆ ಗಾತ್ರದ ಘಟಕಗಳಾಗಿ ವಿಂಗಡಿಸಿದೆ. ಮಧ್ಯದ ಘಟಕದಲ್ಲಿ ನಾಲ್ಕು ಸಾಲು ಕಂಭಗಳು ಹಾಗು ಉಳಿದೆರಡು ಪಾರ್ಶ್ವ ಘಟಕಗಳಲ್ಲಿ ಎರಡೆರಡು ಸಾಲು ಕಂಭಗಳು ಇವೆ. ಇದು ತ್ರಿಮೂರ್ತಿಗಳಿಗೆ ರಚಿತವಾದುದೆಂಬುದು ಸ್ಪಷ್ಟವಿದೆ. ಎರಡನೆಯ ಮಹಡಿಯ ದಕ್ಷಿಣ ಗೋಡೆಯಲ್ಲಿ ಒಂದು ಗರ್ಭಗೃಹ ಹಾಗು ಉತ್ತರ ಕೊನೆಯಲ್ಲಿ ವಿಷ್ಣುವಿನ ಯೋಗಶಯನ ಮೂರ್ತಿ ಇದೆ. ಇದರ ಪ್ರತಿಮಾಲಕ್ಷಣಗಳು ಪಲ್ಲವರು ನಿರ್ಮಿಸಿದ ಮಹಾಬಲಿಪುರದ ಮಹಿಷಮರ್ದಿನಿ ಮಂಟಪದಲ್ಲಿರುವ ಯೋಗಶಯನಮೂರ್ತಿಯನ್ನು ನಿಕಟವಾಗಿ ಹೋಲುತ್ತವೆ. ಹಿಂಗೋಡೆಯಲ್ಲಿ ಮಂಟಪವಿರುವ ಮೂರು ಗರ್ಭಗೃಹಗಳಿವೆ. ಮೂರನೆಯ ಮಹಡಿಯು ಅಪೂರ್ಣವಿದ್ದು ಮಂಟಪದಲ್ಲಿ ಮೂರುಗರ್ಭಗೃಹಗಳಿವೆ. ಅನಂತಶಯನ ಗುಡಿಯ ಕಂಬಗಳು ಮೊಗಲ್ರಾಜಪುರದ ಎರಡನೆಯ ಗುಹೆಯ ಕಂಬಗಳನ್ನು ನೆನಪಿಸುತ್ತವೆ. ಪಾದಬಂಧ ಅಧಿಷ್ಠಾನ, ದೊಡ್ಡ ನಾಸಿಕಗಳುಳ್ಳ ಕಪೋತ, ಶಾಲಕೂಟಗಳಿಂದಾದ ಹಾರ, ಗರ್ಭಗೃಹಗಳ ದ್ವಾರಗಳ ಮೇಲ್ಗಡೆ ಮಕರತೋರಣ ವಿರುವುದು ಇತ್ಯಾದಿಗಳು ಗಮನಾರ್ಹ ಲಕ್ಷಣಗಳಾಗಿವೆ. ಕಂಬಗಳಲ್ಲಿ ಗಜೇಂದ್ರಮೋಕ್ಷ, ಲಿಂಗೋದ್ಭವಮೂರ್ತಿ, ಭೂವರಾಹ, ವಾಮನ – ತ್ರಿವಿಕ್ರಮ, ಕೃಷ್ಣ ಚರಿತ, ನರಸಿಂಹ, ಮುಂತಾದ ಉಬ್ಬುಶಿಲ್ಪಗಳಿದ್ದು ಪ್ರತಿಮಾ ಲಕ್ಷಣ ಮತ್ತು ಶೈಲಿಯ ದೃಷ್ಟಿಯಿಂದ ಬಾದಾಮಿಯ ಚಳುಕ್ಯರ ಉತ್ತರಾರ್ಧದವುಗಳಾಗಿವೆ (650 ನಂತರ).ವಿಜಯವಾಡ ಮತ್ತು ಉಂಡವಳ್ಳಿಯ ಗುಹಾಲಯಗಳ ನಿಖರ ಕಾಲನಿರ್ಣಯವಾಗಿಲ್ಲ. ಆದರೆ ಇವುಗಳಿಗೆ ಸಂಬಂಧಿಸಿದಂತೆ ಶ್ರೀ ಉತ್ಪತ್ತಿಪಿಡುಗು ಎಂಬ ಸು. 7–8ನೆಯ ಶತಮಾನದ ಅಕ್ಷರಗಳಲ್ಲಿರುವ ಶಾಸನಗಳು ಕಂಡುಬಂದಿವೆ. ಇದು ಮಾಹೇಶ್ವರ–ಕಾಲಾಮುಖ ಮತದ ಮುನಿಯ ಬಿರುದೆಂದು ಈಚೆಗೆ ಸೂಚಿಸಲಾಗಿದೆ. ಏಕಾಂತವಾಸಿಗಳಾಗಿದ್ದ ಶ್ರಮಣ ಪರಂಪರೆಯ ಕಾಲಾಮುಖರು ಗುಹಾಲಯಗಳಲ್ಲಿ ವಾಸಿಸುತ್ತಿದ್ದರೆಂದು ಕಾಣುತ್ತದೆ. ಇವರ ಪ್ರಭಾವ ಪ್ರಬಲವಾಗಿ ತುಸು ಅವಧಿಯಲ್ಲಿಯೇ ಆಂಧ್ರ ಕರ್ನಾಟಕ ಪ್ರದೇಶದಲ್ಲಿ ಕಾಳಾಮುಖ ಪಂಥವು ಜನಪ್ರಿಯವಾಗಿದ್ದನ್ನು ಕಾಣಬಹುದು

ಶೈವ ದೇವಾಲಯ, ಪಟ್ಟದಕಲ್ಲು

ಭೈರವಕೊಂಡದಲ್ಲಿರುವ ಗುಹಾಲಯಗಳು ಬಹುಶಃ ಇದೇ ಸಂಪ್ರದಾಯದವು. ಪಲ್ಲವರ ತೊಂಡೈಮಂಡಲ ಪ್ರದೇಶಕ್ಕೆ ಹತ್ತಿರವಿದ್ದ ಈ ನೆಲೆಯಲ್ಲಿರುವ ಗುಹಾಲಯಗಳಲ್ಲಿ ಪಲ್ಲವ ಶೈಲಿಯ ಕೆಲವು ಲಕ್ಷಣಗಳಿವೆ. ಇಲ್ಲಿರುವ ಹತ್ತು ಗುಹಾಲಯಗಳು ಕೆಲವು ಸಾಮಾನ್ಯ ಲಕ್ಷಣಗಳನ್ನು ಬಿತ್ತರಿಸುತ್ತವೆ. ಎಲ್ಲವೂ ಒಂದೇ ಗರ್ಭಗೃಹ ವುಳ್ಳವುಗಳು. ಗರ್ಭಗೃಹದಲ್ಲಿ ಲಿಂಗವಿದ್ದು ಹಿಂಗೋಡೆಯಲ್ಲಿ ಮಹೇಶ ಮೂರ್ತಿಯ ಉಬ್ಬುಶಿಲ್ಪವಿದೆ. ಗರ್ಭಗೃಹದ ದ್ವಾರದ ಇಕ್ಕೆಲಗಳಲ್ಲಿ ಬೃಹದ್ಗಾತ್ರದ ದ್ವಾರಪಾಲಕರು ಗದೆಯಮೇಲೆ ಭಾರ ಹಾಕಿ ವಿಶ್ರಾಮ ಸ್ಥಿತಿಯಲ್ಲಿ ನಿಂತಿದ್ದಾರೆ. ಇವರ ಪಾರ್ಶ್ವದಲ್ಲಿ ಬ್ರಹ್ಮ ಮತ್ತು ವಿಷ್ಣು ವಿಗ್ರಹಗಳಿವೆ. ಮಾಮಲ್ಲ ಶೈಲಿಯಲ್ಲಿರುವಂತೆ ಕಂಬಗಳು ಕುಳಿತ ಸಿಂಹಪೀಠದ ಮೇಲೆದ್ದಿವೆ. ಇಲ್ಲಿಯೂ ಶ್ರೀ ಉತ್ಪತ್ತಿ ಪಿಡುಗು ಶಾಸನ ದೊರೆತಿದೆ. ಅಂತಾಗಿ ಭೈರವಕೊಂಡದ ಗುಹಾಲಯಗಳನ್ನು 8–9ನೆಯ ಶತಮಾನಕ್ಕೆ ಅನ್ವಯಿಸಬಹುದು. ಅಲ್ಲದೆ ಇವು ವೆಂಗಿ ಚಾಳುಕ್ಯರ ಸಾಮ್ರಾಜ್ಯದ ದಕ್ಷಿಣ ಭಾಗದ ಪ್ರಾದೇಶಿಕ ಶೈಲಿಯ ಪ್ರತೀಕಗಳೆಂದು ಪರಿಗಣಿಸಬಹುದು.

ರಾಚನಿಕ ದೇಗುಲಗಳು: ವೆಂಗಿಮಂಡಲದ ಪ್ರಾಚೀನ ದೇಗುಲಗಳ ಕೆಲವು ಉದಾಹರಣೆಗಳನ್ನು ಪರಿಶೀಲಿಸುವ ಮೊದಲು ಅವುಗಳ ವೈಶಿಷ್ಟ್ಯವನ್ನು ಗುರುತಿಸುವುದು ಒಳಿತು. ದಾಕ್ಷಿಣಾತ್ಯ ಸಂಪ್ರದಾಯದ ಶಿಲಾ ದೇಗುಲಗಳೇ ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗೋಚರಿಸುತ್ತವೆ. ಕೆಲವು ಲಕ್ಷಣಗಳು ಸಮಕಾಲೀನ ತೊಂಡೈಮಂಡಲದ (ತಮಿಳುನಾಡಿ ನಲ್ಲಿ ಪಲ್ಲವರ ಕೇಂದ್ರಪ್ರದೇಶ) ದೇಗುಲಗಳಿಗಿಂತ ಭಿನ್ನವಾಗಿವೆ. ವಾಸ್ತುವಿವರಗಳಿಗೆ ನೀಡಿರುವ ಒತ್ತಿನಲ್ಲಿ ಹಾಗೂ ಭಿತ್ತಿಯ ಆಲಂಕಾರಿಕ ವಿವರಗಳಲ್ಲಿ ಈ ವ್ಯತ್ಯಾಸ ಸ್ಫುಟವಾಗಿದೆ. ಚೌಕ ಶಿಖರ, ಭಾರವಾದ ಮತ್ತು ಅಗಲವಾದ ಮೇಲ್ಕಟ್ಟಡ, ಶುಕನಾಸ ಇಲ್ಲದಿರುವುದು, ಕೋಷ್ಠಪಂಜರಗಳ ಪರಿಣಾಮಕಾರಿ ಬಳಕೆ, ಪಾದಬಂಧ ಮತ್ತು ಪ್ರತಿಬಂಧ ಅಧಿಷ್ಠಾನ ಮಾದರಿಗಳ ಜಂಟಿ ಬಳಕೆ ಇವು ಇನ್ನು ಕೆಲವು ವಿಶೇಷಗಳು. ಕರ್ಣ, ಭದ್ರ, ಸಲಿಲಾಂತರಗಳ ಮುಂಚಾಚು ಮತ್ತು ಹಿಂಚಾಚುಗಳು ಪ್ರಧಾನ ಅಭಿವ್ಯಕ್ತಿಯನ್ನು ಪಡೆದಿದ್ದು ಸಮಕಾಲೀನ ಕರ್ನಾಟಕದ ದಾಕ್ಷಿಣಾತ್ಯ ದೇಗುಲಗಳಿಂದ ಇವನ್ನು ಬೇರೆಯಾಗಿ ಸಿವೆ. ಮೇಲ್ಕಟ್ಟಡ ಗಿಡ್ಡವಾಗಿರುವುದು ಹಾಗೂ ಚೌಕ (ದಾಕ್ಷಿಣಾತ್ಯ ನಾಗರ) ಶಿಖರಗಳ ಬಳಕೆಗೆ ಒತ್ತು ನೀಡಿರುವುದು ಕೂಡ ವಿಶೇಷವೇ. ಇವೆಲ್ಲವೂ ನಿರಂಧಾರ ದೇಗುಲಗಳು. ಕರ್ನಾಟಕದಲ್ಲಿರು ವಂತೆ ಮುಖಮಂಟಪದ ಮೇಲೆ ಹಾರದ ಮುಂದುವರಿಕೆ ಇಲ್ಲಿ ಕಾಣುವುದಿಲ್ಲ. ಪರಿವಾರ ದೇಗುಲಗಳಾಗಲಿ,

ಪ್ರಾಕಾರಗಳಾಗಲಿ, ಗೋಪುರಗಳಾಗಲಿ ಕಂಡುಬಂದಿಲ್ಲ. ಬಲಿಪೀಠವನ್ನು ದೇಗುಲದ ಎದುರು ಇರಿಸುವ ಸಂಪ್ರದಾಯ ಬಹುತೇಕ ಬಳಕೆಯಲ್ಲಿತ್ತು. ಬಾದಾಮಿಯ ಚಳುಕ್ಯರು ಆಳಿದ ಕೃಷ್ಣೆ–ತುಂಗಭದ್ರೆಯ ನಡುವಣ ಪ್ರದೇಶದಲ್ಲಿ ಕಾಣುವ ಪ್ರತಿಮಾಲಕ್ಷಣಗಳು ಇಲ್ಲಿ ತಕ್ಕಮಟ್ಟಿಗೆ ಗೋಚರಿಸುತ್ತವೆ. ಉದಾಹರಣೆಗೆ ಬಿಕ್ಕವೋಲು ಗೋಲಿಂಗೇಶ್ವರ ದೇಗುಲದಲ್ಲಿ ಕಾಣುವ ಗಣೇಶ, ಕಾರ್ತಿಕೇಯ, ಮಹಿಷಮರ್ದಿನಿ, ದಿಕ್ಪಾಲಕರು, ಸೂರ್ಯ, ವಿಷ್ಣು, ಬ್ರಹ್ಮ, ಶಿವ ಮುಂತಾದ ಪ್ರತಿಮೆಗಳು.

ಕೃಷ್ಣಾ ತೀರದ ಪೊಂಡುಗುಳದಿಂದ (ಗುಂಟೂರು ಜಿಲ್ಲೆ) ಸು. 8 ಕಿಮೀ ದೂರದಲ್ಲಿರುವ ಜಲಪೇಶ್ವರದೇವಾಲಯ ಈ ಪ್ರದೇಶದಲ್ಲಿ ರಾಚನಿಕ ಶಿಲಾದೇಗುಲದ ಪ್ರಥಮ ಉದಾಹರಣೆಯಾಗಿದೆ. ಗರ್ಭಗೃಹ, ಅಂತರಾಳ, ಮುಖಮಂಟಪ ಇದರ ಭಾಗಗಳು. ಮುಖಮಂಟಪ ವಿಶಾಲವಾಗಿರುವುದು ವಿಶೇಷ. ಗರ್ಭಗೃಹದ ಭಿತ್ತಿಯಲ್ಲಿ ಒಂದೇ ಮಾನಸೂತ್ರಕ್ಕೆ ಬದ್ಧವಾಗಿರುವ ಭದ್ರ, ಕರ್ಣ, ಸಲಿಲಾಂತರ ಘಟಕಗಳಿವೆ. ಅಧಿಷ್ಠಾನ ಈ ಪ್ರದೇಶದ ಇತರ ದೇಗುಲಗಳಲ್ಲಿರುವಂತೆ ಪಾದಬಂಧ ಮಾದರಿಯದು. ಉಪಾನ, ಜಗತಿ, ತ್ರಿಪಟ್ಟ ಕುಮುದಗಳ ಪಾದಗಳನ್ನೊಳಗೊಂಡ ಕಂಠ, ಪಟ್ಟಿಕಾ ಮತ್ತು ಪ್ರತಿ ಇವು ಅಧಿಷ್ಠಾನದ ಮಡಿಕೆಗಳು. ಭಿತ್ತಿಯ ಕರ್ಣ ಮತ್ತು ಭದ್ರಗಳಲ್ಲಿ ದೇವಕೋಷ್ಠಗಳಿವೆ. ಸಲಿಲಾಂತರಗಳಲ್ಲಿ ಕೋಷ್ಠಪಂಜರಗಳಿವೆ. ದೇವಕೋಷ್ಠಗಳನ್ನು ಮಕರತೋರಣಗಳು ಅಲಂಕರಿಸಿವೆ. ವಿಮಾನದ ಮೇಲ್ಕಟ್ಟಡವು ಎರಡು ತಲಗಳಲ್ಲಿ ಮೇಲೇರಿದೆ. ಗ್ರೀವ ಮತ್ತು ಚೌಕ ಶಿಖರ ಇತರ ಲಕ್ಷಣಗಳು.

ಮುಖಮಂಟಪ ಮತ್ತು ಅಂತರಾಳದ ಬಾಹ್ಯ ವಿವರಗಳು ಸರಳವಾಗಿವೆ. ಮುಖಮಂಟಪಕ್ಕೆ ಲತಾಶಾಖೆ, ಪತ್ರಶಾಕೆ, ಮತ್ತು ಸ್ತಂಭಶಾಖೆಗಳುಳ್ಳ ತ್ರಿಶಾಖಾ ಮಾದರಿಯ ದ್ವಾರಬಂಧವಿದೆ. ಪೇದ್ಯಾಭಾಗದಲ್ಲಿ ದ್ವಾರಪಾಲಕರಿದ್ದಾರೆ. ಕಂಬಗಳ ಕಾಂಡವು ಕೆಳ ಮತ್ತು ಮೇಲ್ಭಾಗಗಳಲ್ಲಿ ಚೌಕವಿದ್ದು ಮಧ್ಯಂತರದಲ್ಲಿ ಅಷ್ಟಕೋಣವಾಗಿವೆ. ಕಾಂಡದ ಮೇಲ್ಭಾಗದಲ್ಲಿ ಲಶುನ, ಕುಂಭ, ವೀರಕಂಠ ಹಾಗೂ ತರಂಗ ಬೋದಿಗೆ ಇವೆ.

ಬಿಕ್ಕವೋಲು (ಪೂರ್ವ ಗೋದಾವರಿ ಜಿಲ್ಲೆ) ಎಂಬಲ್ಲಿ ಗುಣಗ ವಿಜಯಾದಿತ್ಯನ ಕಾಲದ ಗೋಲಿಂಗೇಶ್ವರ, ರಾಜರಾಜೇಶ್ವರ ಮತ್ತು ಚಂದ್ರಶೇಖರ ದೇಗುಲಗಳ ಗುಂಪು ಇದೆ. ಇವು ಪೊಂದುಗುಲದ ಜಲಪೇಶ್ವರ ದೇಗುಲದ ಕೆಲವು ಲಕ್ಷಣಗಳನ್ನು ಅನುಸರಿಸಿದ್ದರೂ ಇವುಗಳಲ್ಲಿ ಕಳಿಂಗ ಶೈಲಿಯ ಪ್ರಭಾವ ಸ್ಪಷ್ಟ. ಒಂದೇ ಸಾಲಿನಲ್ಲಿ ನಿಂತಿರುವ ಈ ದೇವಾಲಯಗಳಲ್ಲಿ ಮಧ್ಯದಲ್ಲಿರುವ ರಾಜರಾಜೇಶ್ವರ ಗುಡಿಯು ದೊಡ್ಡದು; ಉಳಿದವು ಚಿಕ್ಕವು. ಗೋಲಿಂಗೇಶ್ವರ ದೇಗುಲಕ್ಕೆ ಮುಖಮಂಟಪ, ಅಂತರಾಳ ಮತ್ತು ಗರ್ಭಗೃಹ ಇವೆ. ಗರ್ಭಗೃಹದ ಕರ್ಣ, ಭದ್ರ, ಸಲಿಲಾಂತರಗಳ ಮುಂಚಾಚು ಮತ್ತು ಹಿಂಚಾಚುಗಳು ತೀರ ಸ್ಫುಟವಾಗಿವೆ. ಅಧಿಷ್ಠಾನದಲ್ಲಿ ಪಾದಬಂಧ ಮತ್ತು ಪ್ರತಿಬಂಧ ಮಾದರಿಗಳು ಪ್ರತಿನಿಧಿತವಾಗಿವೆ. ಉಪಾನ, ಪದ್ಮ–ಜಗತಿ, ವೃತ್ತ–ತ್ರಿಪಟ್ಟ ಕುಮುದ, ಕಂಠ, ಕಂಪ, ಪಟ್ಟಿಕಾ ಮತ್ತು ಪ್ರತಿಗಳು ಇದರ ಅಡ್ಡ ಮಡಿಕೆಗಳು. ಭಿತ್ತಿಯಲ್ಲಿರುವ ಎತ್ತರವಾದ ಕುಡ್ಯಸ್ತಂಭಗಳು ಹಾಗೂ ಕೋಷ್ಠಪಂಜರಗಳು ಲಯಬದ್ಧವಾದ ಲಂಬರೇಖೆಗಳ ಪರಿಣಾಮ ಬೀರಿವೆ. ಕೋಷ್ಠಗಳ ಮೇಲಿರುವ ಮಕರತೋರಣಗಳು ಸುಂದರವಾಗಿವೆ. ಕೋಷ್ಠಗಳಲ್ಲಿ ಸೂರ್ಯ, ವಿಷ್ಣು, ಅಗ್ನಿ, ಇಂದ್ರ, ಶಿವ–ಭಿಕ್ಷಾಟನ, ಬ್ರಹ್ಮ, ನಾಗಿಣಿ, ಕುಮಾರ, ಶಿವ–ಏಕಪಾದ, ಚಾಮುಂಡಿ, ಮಹಿಷಮರ್ದಿನಿ, ಅರ್ಧನಾರೀ ಶಿವ ಶಿಲ್ಪಗಳಿವೆ. ವಲಭಿಯಲ್ಲಿ ಹಂಸ ಮತ್ತು ಭೂತಗಣಗಳ ಮಿಶ್ರಣವಿರುವ ಮಾಲೆಯಿದೆ. ಕಪೋತದ ಮುಖದಲ್ಲಿ ಕೀರ್ತಿಮುಖವಿರುವ ನಾಸಿಕಗಳಿವೆ. ವಿಮಾನದ ಮೇಲ್ಕಟ್ಟಡದಲ್ಲಿ ಎರಡು ತಲಗಳಿವೆ. ತುಸು ಕುಳ್ಳವಾಗಿ ಅದು ಕಾಣುತ್ತದೆ. ಎತ್ತರವಾದ, ಸ್ಪಷ್ಟವಾಗಿ ಬೇರ್ಪಟ್ಟು ನಿಂತಿರುವ ಶಾಲ, ಕೂಟ ಮತ್ತು ಪಂಜರಗಳನ್ನೊಳಗೊಂಡ ಹಾರ ಪರಿಣಾಮಕಾರಿಯಾಗಿದೆ. ಗ್ರೀವ, ಚೌಕ ಶಿಖರ ಹಾಗೂ ಮಹಾನಾಸಿಕ ಇವು ಸ್ಫುಟ ಅಭಿವ್ಯಕ್ತಿ ಕಂಡಿವೆ.

ರಾಜರಾಜೇಶ್ವರ ದೇಗುಲಕ್ಕೆ ಗರ್ಭಗೃಹ ಮತ್ತು ಮುಖಮಂಟಪ ಇದ್ದು, ಭಿತ್ತಿ ವಿವರಗಳು ಗೋಲಿಂಗೇಶ್ವರದಲ್ಲಿರುವಂತೆ ಇವೆ. ಅಧಿಷ್ಠಾನದ ಅಷ್ಟಾಶ್ರ ಕುಮುದದ ಹಾಗು ವಲಭಿಯಲ್ಲಿರುವ ಹಂಸಮಾಲಾ ಗಮನಾರ್ಹವಾಗಿವೆ. ಚೌಕ ಶಿಖರವೇ ಮುಂತಾದವು ವೆಂಗಿದೇಶದ ಲಕ್ಷಣಕ್ಕನುಗುಣವಾಗಿವೆ. ಚಂದ್ರಶೇಖರ ದೇವಾಲಯವೂ ಹೆಚ್ಚು ಕಡಿಮೆ ಇದೇ ರೀತಿಯ ವಿವರಗಳನ್ನೊಳಗೊಂಡಿದೆ.

ವೆಂಗಿದೇಶದಲ್ಲಿ ದಾಕ್ಷಿಣಾತ್ಯ ವಿಮಾನಗಳಿಗೆ ಪ್ರಾಶಸ್ತ್ಯ ನೀಡಲಾಗಿದ್ದರೂ ಅಪರೂಪಕ್ಕೆ ಫಾಂಸನಾ ಮಾದರಿಯ ದೇಗುಲಗಳೂ ಕಾಣುತ್ತವೆ. ತೇರಾಲದಲ್ಲಿರುವ (ಗುಂಟೂರು ಜಿಲ್ಲೆ) ಶಿವದೇವಾಲಯ ಈ ಪ್ರಕಾರದ ಪ್ರಾಚೀನ ಉದಾಹರಣೆಯಾಗಿದೆ. ಗರ್ಭಗೃಹ, ಅಂತರಾಳ, ಮುಖಮಂಟಪ ಇರುವ ಈ ದೇಗುಲದ ಫಾಂಸನ ಶಿಖರದ ಭೂಮಿಗಳ ಕಪೋತಗಳಲ್ಲಿ ಹಂಸ ಮತ್ತು ಮಕರಗಳನ್ನೊಳಗೊಂಡ ನಾಸಿಕಗಳಿವೆ. ಶಿಖರದ ಮೇಲೆ ಆಮಲಕವಿದೆ. ಐಹೊಳೆಯ ಗಳಗನಾಥ, ಮಲ್ಲಿಕಾರ್ಜುನ ಮುಂತಾದ ದೇಗುಲಗಳಿಗೆ ಇದನ್ನು ಹೋಲಿಸಬಹುದು.

(ಎಸ್.ವಿ.ಪಿ.)

**ಕಲ್ಯಾಣದ ಚಾಳುಕ್ಯರು:** ರಾಷ್ಟ್ರಕೂಟರ ಅನಂತರ ಉತ್ತರ ಕರ್ನಾಟಕದ ಭಾಗವನ್ನಲ್ಲದೆ ಸುತ್ತಲ ದಕ್ಷಿಣ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಪ್ರದೇಶಗಳ ಬಹುಭಾಗಗಳಲ್ಲಿ ಕಲ್ಯಾಣದ ಚಾಳುಕ್ಯರು ಆಳಿಕೆ ನಡೆಸಿದರು. ಈ ವಂಶದವರ ಆಳಿಕೆ ಪ್ರಾರಂಭವಾದದ್ದು 973ರಲ್ಲಿ. ಆ ವರ್ಷ ರಾಷ್ಟ್ರಕೂಟ ಖೊಟ್ಟಿಗನನ್ನು ಸೋಲಿಸಿ ಚಾಳುಕ್ಯವಂಶದ ಇಮ್ಮಡಿ ತೈಲಪ ಸಿಂಹಾಸನವನ್ನು ಆಕ್ರಮಿಸಿಕೊಂಡ. ಅಲ್ಲಿಂದ ಸು. 2 ಶತಮಾನಗಳವರೆಗೆ ಚಾಳುಕ್ಯರ ಆಳಿಕೆ ಅವ್ಯಾಹತವಾಗಿ ಸಾಗಿ ಅನಂತರ ಇಳಿಮುಖವಾಗಿ 12ನೆಯ ಶತಮಾನದ ಅಂತ್ಯದ ಹೊತ್ತಿಗೆ ಮರೆಯಾಯಿತು.

**ರಾಜಕೀಯ ಇತಿಹಾಸ:** ಬಾದಾಮಿಯ ಚಳುಕ್ಯರ ಆಳ್ವಿಕೆಯನ್ನು ಕೊನೆಗೊಳಿಸಿ ಪ್ರಭುತ್ವವನ್ನು ಸಾಧಿಸಿಕೊಂಡಿದ್ದ ರಾಷ್ಟ್ರಕೂಟವಂಶದವರು ಸು.2 ಶತಮಾನಗಳವರೆಗೆ ರಾಜ್ಯ ನಿರ್ವಹಿಸಿದರೂ ಚಾಳುಕ್ಯವಂಶದ ಅರಸರು ಅಲ್ಲಲ್ಲಿ ಚಿಕ್ಕಮಟ್ಟ ಪ್ರದೇಶಗಳಲ್ಲಿ ಉಳಿದುಕೊಂಡು ಬಂದು ತಮ್ಮ ಪುರಾತನ ವೈಭವದ ನೆನಪನ್ನು ಉಳಿಸಿಕೊಂಡಿದ್ದರೆಂದು ತೋರುತ್ತದೆ. ಈ ನಡುವೆ ಏಳು ತಲೆಮಾರುಗಳ ಜನ ತೆರೆಯ ಮರೆಯಲ್ಲಿ ಬಾಳಿದರೆಂದೂ ಖೊಟ್ಟಿಗನನ್ನು ಇಮ್ಮಡಿ ತೈಲಪ ಸೋಲಿಸಿ ಮಾನ್ಯಖೇಟವನ್ನು ಆಕ್ರಮಿಸಿದಂದಿನಿಂದ ಚಾಳುಕ್ಯರು ಪುನಃ ಪ್ರಕಾಶಕ್ಕೆ ಬಂದರೆಂದೂ ಕಲ್ಯಾಣದ ಚಾಳುಕ್ಯರ ಶಾಸನಗಳು ಹೇಳುತ್ತವೆ. ಗದಾಯುದ್ಧದ ಕರ್ತೃ ರನ್ನ ಸಹ ಇಜೆವಬೆಡಂಗ ಸತ್ಯಾಶ್ರಯನ ವಂಶಾಳಿಯನ್ನು ನಿರೂಪಿಸುವಾಗ ಬಾದಾಮಿಯ ಚಳುಕ್ಯರಿಗೂ ತೈಲಪನಿಗೂ ನಡುವಣ ಆ ವಂಶಜರ ಹೆಸರುಗಳನ್ನು ಉಲ್ಲೇಖಿಸಿದ್ದಾನೆ.

ಈ ನಡುಗಾಲದಲ್ಲಿ ತೆರೆಯ ಮರೆಯಲ್ಲಿದ್ದ **ಚಾಳುಕ್ಯ ಅರಸರ ವಂಶಾವಳಿ** ಹೀಗಿತ್ತೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ:

ವಿಜಯಾದಿತ್ಯ
- ವಿಕ್ರಮಾದಿತ್ಯ II
  - ಕೀರ್ತಿವರ್ಮ V
- ಭೀಮಪರಾಕ್ರಮ
  - ಕೀರ್ತಿವರ್ಮ III
    - ತೈಲಪ I
      - ವಿಕ್ರಮಾದಿತ್ಯ III
        - ಭೀಮ II
          - ಅಯ್ಯಣ
            - ವಿಕ್ರಮಾದಿತ್ಯ IV
              - ತೈಲಪ II

ಆದರೆ ರನ್ನನ ಗದಾಯುದ್ಧ ಕಾವ್ಯದಲ್ಲಿ ಕೊಟ್ಟಿರುವ ವಂಶಾವಳಿ ಇದಕ್ಕಿಂತ ಸ್ವಲ್ಪಮಟ್ಟಿಗೆ ಭಿನ್ನವಾದದ್ದು. ಶಾಸನಗಳಲ್ಲಿ 1ನೆಯ ತೈಲಪನ ಮಗ ಮುಮ್ಮಡಿ ವಿಕ್ರಮಾದಿತ್ಯನೆಂದು ಹೇಳಿದ್ದರೆ, ಕವಿ ಈ ವಿಕ್ರಮಾದಿತ್ಯನನ್ನೂ ಭೀಮನ ಮಗನೆಂದು ಹೇಳಿ ಭೀಮನನ್ನು 1ನೆಯ ತೈಲಪನ ಮಗನೆಂದಿದ್ದಾನೆ. ಪಟ್ಟದಕಲ್ಲಿನಲ್ಲಿ ದೊರೆತ ಶಾಸನವೊಂದರಲ್ಲಿ ಒಬ್ಬ ತೈಲಪನ ಪ್ರಸ್ತಾಪವಿದೆ. ಶ್ರೀ ಪೆರ್ಗ್ಗಡೆ ಮಹಾರಾಜ ತೈಲ ಮಹಾಧಿರಾಜ ಎಂದಿರುವ ಈ ಶಾಸನದಲ್ಲಿನ ತೈಲ ಒಬ್ಬ ಅಧಿಕಾರಿ (ಶ್ರೀ ಪೆರ್ಗ್ಗಡೆ) ಆಗಿದ್ದನೆಂದೂ ಮಹಾರಾಜ, ಮಹಾಧಿರಾಜ ಎಂಬವು ಆತನ ಬಿರುದುಗಳೆಂದೂ ಹೇಳಲಾಗಿದೆ. ಲಿಪಿಶಾಸ್ತ್ರ ದೃಷ್ಟಿಯಿಂದ, ಈ ತೈಲಪ ಚಾಳುಕ್ಯ ಮನೆತನದ ಮುಮ್ಮಡಿ ಕೀರ್ತಿವರ್ಮನ ಮಗನಾದ 1ನೆಯ ತೈಲಪನೆಂದು ಊಹಿಸಲಾಗಿದೆ. ಎರಡನೆಯ ಭೀಮನನ್ನು ಮುಕುಂದಿಯ ಕೊಂದ ಭೀಮ ಎಂದು ಕವಿ ಕರೆದಿದ್ದಾನೆ. ಆದರೆ ಈ ಮುಕುಂದಿ ಯಾರು ಎಂಬುದು ತಿಳಿಯದು. ಕೃಷ್ಣನ ಮಗಳನ್ನು ಇಮ್ಮಡಿ ತೈಲಪನ ಅಜ್ಜನಾದ ಅಯ್ಯಣ ಮದುವೆಯಾದನೆಂದು ಹೇಳಿದೆ. ಈ ಕೃಷ್ಣ ಯಾರೆಂಬುದನ್ನು ಗುರುತಿಸುವಲ್ಲಿ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯವಿಲ್ಲ.

ಅಯ್ಯಣನ ಮಗ ನಾಲ್ವಡಿ ವಿಕ್ರಮಾದಿತ್ಯ ಕಳಚುರಿ ಮನೆತನದ ಲಕ್ಷ್ಮಣರಾಜನ ಮಗಳಾದ ಬೊಂಥಾದೇವಿಯನ್ನು ಈತ ಮದುವೆಯಾಗಿದ್ದ. ಚಾಳುಕ್ಯರು ಕ್ರಮೇಣ ಪ್ರಬಲರಾಗುತ್ತಿದ್ದರೆಂಬುದನ್ನು ಇದು ಸೂಚಿಸುತ್ತದೆ. ಈ ವೇಳೆಗೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ದಿಗ್ವಿಜಯಿಯಾಗಿ, ತನ್ನ ಸಂಬಂಧಿಗಳಾದ ಕಳಚುರಿಗಳನ್ನು ನಿರ್ಲಕ್ಷಿಸುವ ಮನೋಭಾವ ಬೆಳೆಸಿಕೊಂಡಿದ್ದ. ಬಹುಶಃ ಈ ಕಾರಣದಿಂದಲೇ ಚಾಳುಕ್ಯ ವಿಕ್ರಮಾದಿತ್ಯನೊಡನೆ ಕಳಚುರಿಗಳು ಬಾಂಧವ್ಯ ಏರ್ಪಡಿಸಿಕೊಂಡಿರಬಹುದು.

ರಾಷ್ಟ್ರಕೂಟರನ್ನೂ ಇಮ್ಮಡಿ ತೈಲಪ ಹೊರದೂಡುವ ಮುನ್ನ ಅವರ ಸಾಮಂತರಲ್ಲಿ ಒಬ್ಬನಾಗಿದ್ದ. 957ರ ಕಾರ್ಜೋಳ ಶಾಸನದಲ್ಲಿ ಕನ್ನರದೇವನ (ಮುಮ್ಮಡಿ ಕೃಷ್ಣ) ಪಾದಪದ್ಮೋಪಜೀವಿ ಎಂದು ತೈಲಪನನ್ನು ವರ್ಣಿಸಲಾಗಿದೆ. ಆದರೆ 8 ವರ್ಷಗಳ ಅನಂತರ 965ರ ಶಾಸನದಲ್ಲಿ ಸತ್ಯಾಶ್ರಯ ಕುಲತಿಲಕ, ಚಾಲುಕ್ಯರಾಮ, ಆಹವಮಲ್ಲ ಇತ್ಯಾದಿ ಬಿರುದಾಂಕಿತನಾದ ಮಹಾಸಾಮಂತರ ತೈಲಪರಸ ತರ್ದ್ದವಾಡಿಸಾಸಿರದ ಪ್ರಾಂತ್ಯವನ್ನು

ಆಳುತ್ತಿದ್ದನೆಂದು ಹೇಳಿದೆ. ಇದರಲ್ಲಿ ಈತನನ್ನು ಮಹಾಸಾಮಂತನೆಂದು ಕರೆಯಲಾಗಿದೆ. ಇವನು ಪದವಿಯಲ್ಲಿ ಮೇಲೇರಿದ್ದುದನ್ನು ಇದು ಸೂಚಿಸುತ್ತದೆ. ಇದಾದ ಇನ್ನೆಂಟು ವರ್ಷಗಳೊಳಗಾಗಿ ಈತ ರಾಷ್ಟ್ರಕೂಟರನ್ನು ಮಳಖೇಡದಿಂದ ಹೊರದೂಡಿ ಚಾಳುಕ್ಯ ರಾಜ್ಯವನ್ನು ಪುನಃ ಪ್ರತಿಷ್ಠಾಪಿಸಿದ. ಮುಮ್ಮಡಿ ಕೃಷ್ಣನ ಅನಂತರ ಅಶಕ್ತ ಅರಸರು ಅಧಿಕಾರಕ್ಕೆ ಬಂದುದನ್ನೂ ಪರಮಾರ ಸೀಯಕ ಹರ್ಷ ಮಾನ್ಯಖೇಟವನ್ನು ಮುತ್ತಿ ರಾಜಧಾನಿಯನ್ನು ಹಾಳು ಕೆಡವಿದ ಸಂದರ್ಭವನ್ನೂ ತನ್ನ ರಾಜ್ಯ ಸ್ಥಾಪನೆಗೆ ಈತ ಉಪಯೋಗಿಸಿಕೊಂಡ. ಕೃಷ್ಣನ ವಿರೋಧಿಗಳಾಗಿದ್ದವರು ಆಗ ತೈಲಪನ ಸಹಾಯಕ್ಕೆ ಬಂದಂತೆ ತೋರುತ್ತದೆ. ಶ್ರೀಮುಖ ಸಂವತ್ಸರದಲ್ಲಿ (974) ರಾಷ್ಟ್ರಕೂಟ ಕಕ್ಕನನ್ನು ತೈಲಪ ಸೋಲಿಸಿ ಚಾಳುಕ್ಯ ರಾಜ್ಯ ಸ್ಥಾಪಿಸಿ ಅನಂತರ 24 ವರ್ಷಗಳ ಕಾಲ ಆಳಿದನೆಂದು ಗದಗದ 6ನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಹೇಳಿದೆ. ಕಲ್ಯಾಣದ ಚಾಳುಕ್ಯರು ಅಧಿಕಾರಕ್ಕೆ ಬರುವ ಮೊದಲು ವಾರಂಗಲ್ ಬಳಿಯ ಹನುಮಕೊಂಡದಲ್ಲಿ ಇದ್ದರು ಎಂಬುದಕ್ಕೆ ಇಮ್ಮಡಿ ಭೀಮನ ಕಾಜಿಪೇಟ್ ದರ್ಗಾ ಶಾಸನ ಆಧಾರವಾಗಿದೆ ಎಂಬ ಅಭಿಪ್ರಾಯವಿದೆ. ಇದರಿಂದ ರಾಷ್ಟ್ರಕೂಟರ ಅಧೀನದಲ್ಲಿ ಅವರು ಕೃಷ್ಣಾನದಿ ಬಯಲಿನ ವಿವಿಧೆಡೆ ಆಳಿದರೆಂದು ಹೇಳಬಹುದು. ಅವರಿಗೆ ಏತಗಿರಿ, ಪೊಟ್ಟಳಕೆರೆ, ಕೊಳ್ಳಿಪಾಕೆ, ಪ್ರೈತಣ ಕಲ್ಯಾಣ, ಜಯನ್ತಿಪುರ, ಸೆಲೆಹಳ್ಳಿ ಇತ್ಯಾದಿ ರಾಜಧಾನಿಗಳು ಮತ್ತು ನೆಲೆವೀಡುಗಳು ಇದ್ದವೆಂದು ತಿಳಿದುಬಂದಿದೆ.

ಕಕ್ಕನನ್ನು ಸೋಲಿಸಿದ ತೈಲಪ ಮಾನ್ಯಖೇಟವನ್ನು ಆಕ್ರಮಿಸಿದ. ಆದರೆ ರಾಷ್ಟ್ರಕೂಟರ ವಿಧೇಯ ಸಾಮಂತನಾಗಿದ್ದ ಗಂಗ ಮಾರಸಿಂಹ ಮತ್ತು ಅವನ ಮರಣಾನಂತರ ಅವನ ಉತ್ತರಾಧಿಕಾರಿಗಳಾಗಿ ಅಧಿಕಾರಕ್ಕೆ ಬಂದ ಗೋವಿಂದ, ಪಾಂಚಾಲದೇವ ಇವರು ತೈಲಪನನ್ನು ಎದುರಿಸಿದರೂ 977ರ ವೇಳೆಗೆ ಗಂಗ ಮನೆತನದ ಈ ಮಾಂಡಲಿಕರನ್ನು ಸೋಲಿಸಿದ ತೈಲಪ ತನ್ನ ಸಿಂಹಾಸನವನ್ನು ಭದ್ರಪಡಿಸಿಕೊಂಡ. ಈ ಹೊತ್ತಿಗೆ ರಾಷ್ಟ್ರಕೂಟರ ಅವನತಿಯೊಂದಿಗೆ ರಾಜ್ಯ ಸ್ಥಾಪನೆಮಾಡಿಕೊಂಡಿದ್ದ ಚೋಳವಂಶದವರು ರಾಜ್ಯ ವಿಸ್ತರಣಾಕಾಂಕ್ಷಿಗಳಾಗಿದ್ದರು. ಆ ವಂಶದ ರಾಜರಾಜ ಗಂಗವಾಡಿ ನೊಳಂಬವಾಡಿಗಳನ್ನು ವಶಪಡಿಸಿಕೊಳ್ಳಲು ಉದ್ಯುಕ್ತನಾದಾಗ ತೈಲಪ ದಕ್ಷಿಣದ ಕಡೆಗೆ ನುಗ್ಗಿ ಚೋಳ ಅರಸನನ್ನು ಸೋಲಿಸಿದ (1992). ಪರಮಾರ ವಂಶದ ಸೀಯಕ ಹರ್ಷನ ಉತ್ತರಾಧಿಕಾರಿ ಮುಂಜ ಚಾಳುಕ್ಯ ತೈಲಪನನ್ನು 16 ಬಾರಿ ಸೋಲಿಸಿದನೆಂದು ಮೇರುತುಂಗ ತನ್ನ ಪ್ರಬಂಧ ಚಿಂತಾಮಣಿಯಲ್ಲಿ ಹೇಳಿದ್ದಾನೆ. ಆದರೆ ಕೊನೆಯಲ್ಲಿ ಮುಂಜ ತೈಲಪನಿಗೆ ಸೋತು ಸೆರೆಸಿಕ್ಕು, ಬಹುಶಃ ಸೆರೆಮನೆಯಲ್ಲಿ ತೀರಿಕೊಂಡ. ಯುವರಾಜನಾದ ಸತ್ಯಾಶ್ರಯ ಈ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ. ಇವನ ಕಾಲದಲ್ಲಿ ಚಾಳುಕ್ಯ ರಾಜ್ಯ ಸುಮಾರು ವಿಂಧ್ಯ ಪರ್ವತದವರೆಗೂ ಹಬ್ಬಿತ್ತು.

ತೈಲಪನ ಮರಣಾನಂತರ ಪಟ್ಟಕ್ಕೆ ಬಂದ ಇವನ ಮಗ ಇರಿವ ಬೆಡಂಗ ಸತ್ಯಾಶ್ರಯ (997–1008) ಚೋಳ ರಾಜರಾಜ, ಅನಂತರ ರಾಜೇಂದ್ರ ಇವರೊಡನೆ ಕದನಗಳನ್ನು ಮುಂದುವರಿಸಿದ. ಚೋಳ ಸಾಮರ್ಥ್ಯದ ಪರಿಣಾಮವಾಗಿ ಗಂಗವಾಡಿ ಮತ್ತು ನೊಳಂಬವಾಡಿ ಪ್ರದೇಶಗಳು ಅವರ ವಶವಾದವು. ಆದರೆ ಚಾಳುಕ್ಯರ ಬಲ ಕುಂದಲಿಲ್ಲ. ಇತ್ತ ಕೊಂಕಣದ ಮಾಂಡಲಿಕ ಶಿಲಾಹಾರ ಅಪರಾಜಿತನನ್ನು ಸತ್ಯಾಶ್ರಯ ಸೋಲಿಸಿದ. ಗುಜರಾತಿನ ಮೇಲೆ ತನ್ನ ಪ್ರಭಾವವನ್ನುವಿಸ್ತರಿಸಿ ಅಲ್ಲಿದ್ದ ಚಾಳುಕ್ಯಶಾಖೆಯ ಆಳಿಕೆಯ ಮುಂದುವರಿಕೆಗೆ ಕಾರಣನಾದ.

ಸತ್ಯಾಶ್ರಯನೊಂದಿಗೆ ಅವನ ತಮ್ಮ ದಶವರ್ಮನೂ ಆಳುತ್ತಿದ್ದುದಕ್ಕೆ ಯಲಬುರ್ಗಿ ತಾಲ್ಲೂಕಿನ ಕಲ್ಲೂರಿನ ಶಾಸನದಲ್ಲಿ ಉಲ್ಲೇಖವಿದೆ ಎಂದು ಹೇಳಲಾಗಿದೆ. ಸತ್ಯಾಶ್ರಯನಿಗೆ ಗಂಡುಮಕ್ಕಳಿಲ್ಲದ್ದರಿಂದ ಅವನ ತಮ್ಮ ದಶವರ್ಮನ ಮಗನಾದ 5ನೆಯ ವಿಕ್ರಮಾದಿತ್ಯ (1008–15) ಪಟ್ಟಕ್ಕೆ ಬಂದ. ಇವನು ಅಷ್ಟೇನೂ ಪ್ರಭಾವಶಾಲಿಯಾಗಿರಲಿಲ್ಲವಾದ್ದರಿಂದ, ದಕ್ಷಿಣದ ಚೋಳರೂ ಉತ್ತರದ ಪರಮಾರ ಅರಸ ಭೋಜನೂ ಇವನ ರಾಜ್ಯವನ್ನು ಮುತ್ತಿದರು. ರಾಜ್ಯವನ್ನು ಶತ್ರುಗಳಿಂದ ಕಾಪಾಡಿಕೊಳ್ಳುವುದಕ್ಕಾಗಿ ಇವನು ಬಹಳ ಶ್ರಮಿಸಬೇಕಾಯಿತು.

ವಿಕ್ರಮಾದಿತ್ಯನ ಅನಂತರ 1015ರ ಸುಮಾರಿನಲ್ಲಿ ಇವನ ಸೋದರ ಅಯ್ಯಣ ಕೆಲವು ತಿಂಗಳುಗಳ ಕಾಲ ರಾಜ್ಯವಾಳಿ ಅನಂತರ ರಾಜ್ಯವನ್ನು ತೊರೆದಂತೆ ತೋರುತ್ತದೆ. ವಂಶಾವಳಿಗಳಲ್ಲಿ ಇವನ ಉಲ್ಲೇಖವಿಲ್ಲ.

ಅಯ್ಯಣನ ಬಳಿಕ ಇವನ ತಮ್ಮ ಒಂದನೆಯ ಜಗದೇಕಮಲ್ಲ (ಜಯಸಿಂಹ II, 1015–44) ಪಟ್ಟಕ್ಕೆ ಬಂದ. ಇವನು ರಾಜ್ಯವಾಳತೊಡಗಿದಂದಿನಿಂದ ರಾಜ್ಯಕ್ಕೆ ಸೂಕ್ತವಾದ ರಾಜಧಾನಿಯೊಂದನ್ನು ಆರಿಸುವ ಕೆಲಸ ಆರಂಭವಾಯಿತೆನ್ನಬೇಕು. ಈತ ಪಟ್ಟಕ್ಕೆ ಬಂದ ತರುಣದಲ್ಲೇ ಚಾಳುಕ್ಯ ಚೋಳರ ನಡುವಣ ಕದನಗಳಲ್ಲಿ ರಾಜಧಾನಿ ಮಾನ್ಯಖೇಟ ಶತ್ರುಗಳ ವಶಕ್ಕೆ ಸಿಕ್ಕಿ ಅವರು ಅದನ್ನು ನಾಶಗೊಳಿಸಿದ್ದರು. ಅನಂತರ ಏತಗಿರಿ ಈಗಿನ ಯಾದಗಿರಿ, ಹೊ(ಪೊ)ಟ್ಟಳಕೆರೆ (ಈಗಿನ ಆಂಧ್ರಪ್ರದೇಶದ ಪಟನ್‌ಚೆರು ಅಥವಾ ಪೊಟ್ಲಚೆರುವು) ಮತ್ತು ಕೊಳ್ಳಿಪಾಕೆ ಹೈದರಾಬಾದಿಗೆ 72 ಕಿಮೀ ಅಂತರದಲ್ಲಿರುವ ಈಗಿನ ಕೊಲನುಪಾಕ–ಇವು ಕ್ರಮವಾಗಿ ಜಯಸಿಂಹನ ನೆಲೆಗಳಾಗಿದ್ದುವು. ಕಲ್ಯಾಣವನ್ನು ರಾಜಧಾನಿಯಾಗಿ ಆರಿಸಿ ಅದನ್ನು ಅಭಿವೃದ್ಧಿಗೊಳಿಸಿದವನು ಜಯಸಿಂಹನ ಮಗನಾದ ಒಂದನೆಯ ಸೋಮೇಶ್ವರ.

ಜಯಸಿಂಹ ಅಧಿಕಾರಕ್ಕೆ ಬಂದಾಗ ರಾಜ್ಯದ ಎಲ್ಲ ಮೇರೆಗಳಲ್ಲೂ ಶತ್ರುಗಳು ಯುದ್ಧ ಸನ್ನದ್ಧರಾಗಿದ್ದರು. ಪರಮಾರ ಭೋಜ, ಕಳಚುರಿ ಗಾಂಗೇಯ ದೇವ ಹಾಗೂ ದಕ್ಷಿಣದ ರಾಜೇಂದ್ರ ಚೋಳ ಇವರು ಕಲೆತು ಕರ್ನಾಟಕದ ಮೇಲೆ ಎರಗಿದರು. ಭೋಜ ಕೊಂಕಣವನ್ನು ಆಕ್ರಮಿಸಿದ. ರಾಜೇಂದ್ರ ಚೋಳ ಚಾಳುಕ್ಯ ರಾಜಧಾನಿಯನ್ನು ಮುತ್ತಿ ಸುಟ್ಟ. ಆದರೆ ಕೂಡಲೇ ಚೇತರಿಕೊಂಡ ಜಯಸಿಂಹ ಭೋಜನನ್ನು ಸೋಲಿಸಿ ಹಿಂದಕ್ಕೆ ಅಟ್ಟಿದ. ಕೊಂಕಣವನ್ನು ಪುನಃ ಆಕ್ರಮಿಸಿ ಸಪ್ತಕೊಂಕಣಾಧೀಶ್ವರರ ಸಂಪತ್ತನ್ನು ಸೂರೆಗೊಂಡ. ಸೇವುಣರ 3ನೆಯ ಭಿಲ್ಲಮನನ್ನು ಸೋಲಿಸಿದ ಬಳಿಕ ಆತನಿಗೆ ತನ್ನ ಮಗಳಾದ ಅವ್ವಲ್ಲದೇವಿಯನ್ನು ವಿವಾಹ ಮಾಡಿ ಕೊಟ್ಟು ಅವನ ವಿಧೇಯತೆಯನ್ನು ಗಳಿಸಿದ. ರಾಜ್ಯಕ್ಕೊದಗಿದ್ದ ವಿಪತ್ತನ್ನು ಅಧಿಕಾರಕ್ಕೆ ಬಂದ ಕೂಡಲೇ ಹೀಗೆ ಪರಿಹರಿಸಿ ಕೊಂಡ ಜಯಸಿಂಹನಿಗೆ, ಉತ್ತರದ ಅರಸರಿಂದ ಅನಂತರ ಹೆಚ್ಚಿನ ತೊಂದರೆ ಉಂಟಾಗ ಲಿಲ್ಲ. ಆದರೆ ದಕ್ಷಿಣದಲ್ಲಿ ರಾಜೇಂದ್ರ ಚೋಳ ಮಾತ್ರ ತನ್ನ ಆಕ್ರಮಣ ಮನೋಭಾವವನ್ನು ಬಿಡಲಿಲ್ಲ. ವೆಂಗಿಯ ರಾಜಕೀಯ ಇದಕ್ಕೆ ಒಳ್ಳೆಯ ಕಾರಣವನ್ನು ಒದಗಿಸಿ ಚಾಳುಕ್ಯ ಚೋಳ ಯುದ್ಧಗಳು ಇವನ ಕಾಲದಲ್ಲಿ ನಡೆಯುತ್ತಲೇ ಇದ್ದುವು. ಈ ಕದನಗಳಲ್ಲಿ ಜಯಸಿಂಹನಿಗೆ ಆತನ ಅಧಿಕಾರಿಗಳೂ ಸೇನಾನಿಗಳೂ ಆದ ಕುಂದಮರಸ ಮತ್ತು ವಾವಣರಸ ಬಹಳ ಸಹಾಯ ನೀಡಿದರು. ತನ್ನ ಆಳಿಕೆಯ ಉದ್ದಕ್ಕೂ ಯುದ್ಧನಿರತನಾಗಿದ್ದ ಜಯಸಿಂಹ ಸು. 1044ರಲ್ಲಿ ಮೃತನಾದ.

ಜಯಸಿಂಹನ ಬಳಿಕ ಇವನ ಹಿರಿಯ ಮಗ ಒಂದನೆಯ ಸೋಮೇಶ್ವರ ಪಟ್ಟಕ್ಕೆ ಬಂದ. ಜಯಸಿಂಹನ ಕಾಲದಲ್ಲಿದ್ದ ರಾಜಕೀಯ ಪರಿಸ್ಥಿತಿ ಇವನ ಕಾಲದಲ್ಲೂ ಮುಂದುವರಿಯಿತು. ಈತ ಆಳಿದ 25 ವರ್ಷಗಳ ಕಾಲವೂ ದಕ್ಷಿಣ ಭಾರತ ಒಂದು ವಿಶಾಲವಾದ ರಣರಂಗವಾಗಿ ಪರಿವರ್ತಿತವಾಯಿತೆನ್ನಬಹುದು. ಕರ್ನಾಟಕದ ಹಾಗೂ ತಮಿಳುನಾಡಿನ ಎರಡು ಪ್ರಮುಖ ಅರಸುಮನೆತನಗಳ ನಡುವೆ ಈ ವರ್ಷಗಳಲ್ಲಿ ಹಿರಿಮೆಗಾಗಿ ತೀವ್ರವಾದ ಪೈಪೋಟಿಯುಂಟಾಯಿತು.

ಚೋಳ ರಾಜಾಧಿರಾಜ ಮತ್ತು ಸೋಮೇಶ್ವರ ಇವರ ನಡುವೆ ವಿಶೇಷವಾಗಿ ವೆಂಗಿ ಪ್ರದೇಶದ ಆಕ್ರಮಣಕ್ಕಾಗಿ ಐದು ಬಾರಿ ಘರ್ಷಣೆ ಉಂಟಾದವು. ಸು. 1044ರಲ್ಲಿ ದನ್ನಾಡದಲ್ಲಿ (ಆಂಧ್ರಪ್ರದೇಶದ ಧಾನ್ಯಕಟಕ ಅಥವಾ ಅಮರಾವತಿ) ಪುನಃ ಪುಣ್ಣಾದು ಎಂಬಲ್ಲಿ ಅನಂತರ 1054ರಲ್ಲಿ ಕೊಪ್ಪಂನಲ್ಲಿ (ರಾಯಚೂರು ಜಿಲ್ಲೆಯ ಕೊಪ್ಪಳ) ಯುದ್ಧಗಳಾದವು. ಹೆಚ್ಚಿನ ಯುದ್ಧಗಳು ಅನಿರ್ಣಾಯಕವಾಗಿದ್ದಂತೆ ತೋರುತ್ತದೆ. ಚಾಳುಕ್ಯ ಶಾಸನಗಳು ಮತ್ತು ಚೋಳ ಶಾಸನಗಳು ಅವರವರ ಬಲ ಮೇಲುಗೈಯಾಗಿತ್ತೆಂದು ವರ್ಣಿಸುವುದು ಸಾಮಾನ್ಯ. ಆದರೆ ಈ ಯುದ್ಧಗಳಲ್ಲಿ ಚಾಳುಕ್ಯ ಯುವರಾಜ ಜಯಸಿಂಹ ಮತ್ತು ಚೋಳ ರಾಜಾಧಿರಾಜ ಸತ್ತರೆಂಬ ಅಂಶಗಳು ಸ್ಪಷ್ಟ. ಚೋಳ ರಾಜಾಧಿರಾಜನ ಅನಂತರ ಬಂದ ಇಮ್ಮಡಿ ರಾಜೇಂದ್ರ ಹೋರಾಟಗಳನ್ನು ಮುಂದುವರಿಸಿ ಕೊಲ್ಲಾಪುರದ ವರೆಗೂ ಶತ್ರುಸೇನೆಯನ್ನು ಓಡಿಸಿದ. ಈತ ಅಲ್ಲಿ ಜಯಸ್ತಂಭವೊಂದನ್ನು ನೆಡಿಸಿದನೆಂದು ಹಲವು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಇದು ಸಂದೇಹಾಸ್ಪದ. ಮುನ್ನುಗ್ಗುತ್ತಿದ್ದ ರಾಜೇಂದ್ರನನ್ನು ಸೋಮೇಶ್ವರ ತಡೆದು ಅವನನ್ನು ಹಿಂದಕ್ಕೆ ಓಡಿಸಿದ್ದಾಗ ಅವನು ಕುಮ್ಮಟದ ಕೋಟೆಯನ್ನು ಮುತ್ತಿದನೆಂದೂ ಆದರೆ ಅಲ್ಲಿ ಅಧಿಕಾರದಲ್ಲಿದ್ದ ಹೊಯ್ಸಳ ವಿನಯಾದಿತ್ಯನ ನೆರವಿಗೆ ಸೋಮೇಶ್ವರ ಧಾವಿಸಿ ಕುಮ್ಮಟದ ಕೋಟೆಯಂ ನಿಷ್ಕಂಟಕಂ ಮಾಡಿದನೆಂದೂ ಈಚೆಗೆ ದೊರೆತ ಬನ್ನಿಗೊಳದ ಶಾಸನ ಹೇಳುತ್ತದೆ. ಇನ್ನೊಮ್ಮೆ 1059ರಲ್ಲಿ ರಾಜೇಂದ್ರನನ್ನು ಸೋಮೇಶ್ವರ ತುಂಗಭದ್ರಾ ನದಿಯ ತೀರದಲ್ಲಿ ಎದುರಿಸಿ ಸೋಲಿಸಿದ. ಹೀಗೆ ಎರಡೂ ಬಣಗಳ ನಡುವೆ ಹೋರಾಟಗಳು ನಡೆಯುತ್ತಲೇ ಇದ್ದರೂ ಯಾರಿಗೂ ಖಚಿತವಾದ, ಅಂತಿಮವಾದ ಯಶಸ್ಸು ದೊರಕಲಿಲ್ಲ. ಮುಂದೆ ಒಂದು ಸಂದರ್ಭದಲ್ಲಿ ಸೋಮೇಶ್ವರ ವೆಂಗಿಮಂಡಲದಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ಸನ್ನು ಸಂಪಾದಿಸಿದ (ಸು.1061). ಇದರ ಪರಿಣಾಮವಾಗಿ ಚೋಳ ವೀರರಾಜೇಂದ್ರ ಪುನಃ ಸೋಮೇಶ್ವರನನ್ನು ಕೂಡಲಸಂಗಮವೆಂಬ ಸ್ಥಳದಲ್ಲಿ ಎದುರಿಸಿದ. ವೆಂಗಿಯ ಆಂತರಿಕ ರಾಜಕೀಯದಲ್ಲಿ ನಡೆದ ಕೆಲವು ಹೊಂದಾಣಿಕೆಗಳು ಮುಂದೆ ಸ್ವಲ್ಪಮಟ್ಟಿಗೆ ಯುದ್ಧಗಳನ್ನು ತಡೆದವು. ಸೋಮೇಶ್ವರನ ಆಳಿಕೆಯ ಅಂತಿಮ ವರ್ಷಗಳಲ್ಲಿ ನಡೆದ ಈ ಘಟನೆಗಳ ವಿವರಗಳು ಸ್ಪಷ್ಟವಾಗಿಲ್ಲ. ಆದರೆ ಅದುವರೆಗೂ ವಿಜಯಾದಿತ್ಯನ ಹಕ್ಕನ್ನು ನಿರಾಕರಿಸಿದ್ದ ಚೋಳರೂ ಆ ಘಟ್ಟದಲ್ಲಿ ವಿಜಯಾದಿತ್ಯನ ಆಳಿಕೆಯನ್ನು ಮಾನ್ಯಮಾಡಿದರು. ಇದರ ಫಲವಾಗಿ ವಿಜಯಾದಿತ್ಯನ ಮತ್ತು ವೀರರಾಜೇಂದ್ರನ ನಡುವಣ ಬಾಂಧವ್ಯದಲ್ಲಿ ಸ್ಪಷ್ಟವಾದ ಬದಲಾವಣೆಯುಂಟಾಯಿತು.

ಸೋಮೇಶ್ವರ ತನ್ನ ಆಳಿಕೆಯ ಕಾಲದ ಬಹುಭಾಗವನ್ನು ಚೋಳರೊಡನೆ ಕದನಗಳಲ್ಲಿ ಕಳೆದರೂ 1051ರಲ್ಲಿ ಪರಮಾರ ವಂಶದ ಭೋಜನ ಮೇಲೆ ಎರಗಿ ಧಾರಾನಗರವನ್ನು ಸುಟ್ಟು ಮಾಂಡವದ ಕೋಟೆಯನ್ನು ವಶಪಡಿಸಿಕೊಂಡ. ಇನ್ನೊಂದು ಬಾರಿ ಭೋಜ ಇವನ ಮೇಲೇರಿ ಬಂದಾಗ ಸೋಮೇಶ್ವರ ಅವನನ್ನು ಚಾಳುಕ್ಯ ಮನೆತನದ ಭೀಮ ಮತ್ತು ಕಳಚುರಿ ಕರ್ಣರೊಡಗೂಡಿ ಕದನದಲ್ಲಿ ಎದುರಿಸಿದ. ಈ ಕದನದಲ್ಲಿ ಭೋಜ ಹತನಾದಂತೆ ತೋರುತ್ತದೆ.

ಒಂದು ಸಂದರ್ಭದಲ್ಲಿ ರಾಜ್ಯದೊಳಗೆ ದಂಗೆಯ ಸನ್ನಾಹ ನಡೆಸಿದ್ದ ಶಿಲಾಹಾರ ಮನೆತನದ ಕೊಂಕಣದ ಮುಮ್ಮಣಿ ಮತ್ತು ಕರಹಾಡದ ಮಾರಸಿಂಹರನ್ನೂ ಸೇವುಣರ 3ನೆಯ ಭಿಲ್ಲಮನನ್ನೂ ಸೋಲಿಸಿದ. 1068ರಲ್ಲಿ ಸೋಮೇಶ್ವರ ಮಡಿದ. ಆಗ ಸಿಂಹಾಸನ

ವೇರಿದವನು ಆತನ ಹಿರಿಯ ಮಗ ಇಮ್ಮಡಿ ಸೋಮೇಶ್ವರ (1068–1076). ಇವನು ಪಟ್ಟಕ್ಕೆ ಬರುತ್ತಿದ್ದಂತೆಯೇ ಇವನ ಮೇಲೆ ಧಾಳಿಮಾಡಿದ ಚೋಳ ವೀರರಾಜೇಂದ್ರನನ್ನು ಸೋಲಿಸಿದ. ಆದರೆ ಅನಂತರ ಉತ್ತರದಲ್ಲಿ ಪರಮಾರ ಉದಯಾದಿತ್ಯನಿಂದ ಪರಾಜಿತನಾದ. ಇಮ್ಮಡಿ ಸೋಮೇಶ್ವರ ದಕ್ಷನಾದ ಅರಸನಾಗಿರಲಿಲ್ಲ. ತನ್ನ ಆಳಿಕೆಯ ಕೊನೆಯ ದಿನಗಳಲ್ಲಿ ಚಾಳುಕ್ಯ ವೈರಿಗಳಾಗಿದ್ದ ಚೋಳರೊಡನೆ ಸ್ನೇಹ ಬೆಳೆಸಿದ್ದು ಚಾಳುಕ್ಯರ ಆಸಕ್ತಿಯ ಕ್ಷೇತ್ರವಾಗಿದ್ದ ವೆಂಗಿದೇಶ ಚೋಳರ ವಶವಾಗಲು ಅವಕಾಶ ಮಾಡಿಕೊಟ್ಟದ್ದು ಮೊದಲಾದ ಘಟನೆಗಳು ನಡೆದವು. ಅಲ್ಲದೆ ಒಂದನೆಯ ಸೋಮೇಶ್ವರನ ಕಾಲದಿಂದಲೂ ಪ್ರಭಾವಿಯಾಗಿದ್ದ ಇವನ ತಮ್ಮ 6ನೆಯ ವಿಕ್ರಮಾದಿತ್ಯನನ್ನು ಸಂಶಯದೃಷ್ಟಿಯಿಂದ ನೋಡುತ್ತಿದ್ದುದರಿಂದ ಇವರಲ್ಲಿ ವಿರಸ ಮೂಡಿತ್ತು.

ಈ ಪರಿಸ್ಥಿತಿಯಲ್ಲಿ ವಿಕ್ರಮಾದಿತ್ಯ ಅಣ್ಣನನ್ನು ಸಿಂಹಾಸನದಿಂದ ಹೊರದೂಡಲು ನಿಶ್ಚಯಿಸಿದ. ಇವನ ತಮ್ಮ 3ನೆಯ ಜಯಸಿಂಹ ಗೋವೆಯ ಕದಂಬ ಜಯಕೇಶಿ, ಹಾನಗಲ್ಲಿನ ಕದಂಬ ಕೀರ್ತಿವರ್ಮ ಮುಂತಾದವರ ಬೆಂಬಲದಿಂದ ಸೇಮೇಶ್ವರನ ಮೇಲೆ ಜಯಗಳಿಸಿ ತಾನೇ ರಾಜನಾಗಿ ಐವತ್ತು ವರ್ಷಗಳಿಗೂ ಹೆಚ್ಚುಕಾಲ (1076–1127) ಆಳಿಕೆ ನಡೆಸಿದ. ಯುವರಾಜ ಪದವಿಯಲ್ಲಿದ್ದಾಗ ಮಿತಿಮೀರಿದ ಚಟುವಟಿಕೆಗಳಿಂದ ಕೂಡಿದ್ದು, ಸದಾ ಯುದ್ಧಸನ್ನದ್ಧ ನಾಗಿ, ಕದನಗಳಲ್ಲಿ ಪಾಲುಗೊಂಡಿದ್ದ ಈತ ಪಟ್ಟಕ್ಕೆ ಬಂದ ಬಳಿಕ ಹೆಚ್ಚು ಶಾಂತಿಯುತ ಜೀವನ ನಡೆಸಿದ. ಈ ಕಾಲದಲ್ಲಿ ಒಂದು ಕಡೆ ಕುಲೋತ್ತುಂಗನೂ ಮತ್ತೊಂದು ಕಡೆ ವಿಕ್ರಮಾದಿತ್ಯನೂ ಸಮಾನ ಶೂರರಾಗಿದ್ದರು. ತಮ್ಮ ತಮ್ಮ ಶಕ್ತಿಸಾಮರ್ಥ್ಯಗಳನ್ನೂ ಕುಂದು ಕೊರತೆಗಳನ್ನೂ ಪರಸ್ಪರ ಅರಿತಿದ್ದ ಈ ಅರಸರು ರಾಜಕೀಯ ಹೋರಾಟಗಳನ್ನು ಕೊನೆಗಾಣಿಸಿ, ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುವುದು ಹೆಚ್ಚು ಶ್ರೇಯಸ್ಕರವೆಂದು ಭಾವಿಸಿದಂತೆ ತೋರುತ್ತದೆ. ಆಗ ರಾಜ್ಯದಲ್ಲಿ ಶಾಂತಿ ಸುಭಿಕ್ಷೆ ನೆಲಸಿತ್ತು. ನಾಡು ಸರ್ವತೋ ಮುಖ ಅಭಿವೃದ್ಧಿಯನ್ನು ಕಂಡಿತು.

ಆದರೂ ವಿಕ್ರಮಾದಿತ್ಯನ ಆಡಳಿತ ಕಾಲದಲ್ಲೂ ಆಗಿಂದಾಗ್ಗೆ ಕೆಲವು ಘಟನೆಗಳು ಸಂಭವಿಸಿದುವು. ಇವನ ವಿರುದ್ಧ ಇವನ ಸೋದರನಾದ 3ನೆಯ ಜಯಸಿಂಹ ದಂಗೆ ಎದ್ದ. ಆದರೆ 1082ರ ಹೊತ್ತಿಗೆ ನಿಗ್ರಹಿಸಲ್ಪಟ್ಟ. ಕರಹಾಡದ ಶಿಲಾಹಾರ ಭೋಜ ಬಹುಶಃ ಸುಮಾರು ಒಂದು ದಶಕಕ್ಕೂ ಹೆಚ್ಚುಕಾಲ (1089–1100) ವಿಕ್ರಮಾದಿತ್ಯನ ವಿರುದ್ಧ ಬಂಡು ಹೂಡಿದ್ದು ಕೊನೆಗೆ ಸೋತ. ಅಂತೆಯೇ ಆಳುಪರ, ಹೈವೆಯ ನಾಗವರ್ಮನ ಹಾಗೂ ಗೊಗ್ಗಿಯ ಬಂಡಾಯವನ್ನೂ ಅರಸ ಮುರಿದ. ರಾಜ್ಯದ ಉತ್ತರದಲ್ಲಿ ಪರಮಾರರ ವಿರುದ್ಧ ದಂಡೆತ್ತಿ ಉದಯಾದಿತ್ಯನನ್ನು ಸೋಲಿಸಿ (1088) ಆ ವಂಶದ ಜಗದ್ದೇವನಿಗೆ ಆಶ್ರಯ ನೀಡಿದ. ಈ ದಂಡಯಾತ್ರೆಗಳ ಪರಿಣಾಮವಾಗಿ ಚಾಳುಕ್ಯ ರಾಜ್ಯ ನರ್ಮದಾ ನದಿಯವರೆಗೂ ವಿಸ್ತರಿಸಿತು. ಗೂರ್ಜರ ಸಿಂಧುರಾಜನನ್ನೂ ರತ್ನಪುರದ ಕಳಚುರಿ ಜಾಜವಲ್ಲದೇವನನ್ನೂ ತ್ರಿಪುರಿಯ ಯಶಃಕರ್ಣನನ್ನೂ ಒಮ್ಮೆ ಸೋಲಿಸಿದ. ಆಂಧ್ರದಲ್ಲಿ ವೆಂಗಿಮಂಡಲದ ಭಾಗಗಳೂ ಸು.1118ರ ಹೊತ್ತಿಗೆ ಪೂರ್ಣವಾಗಿ ವಿಕ್ರಮಾದಿತ್ಯನ ವಶವಾದವು.

ವಿಕ್ರಮಾದಿತ್ಯನ ಆಳಿಕೆಯ ಕೊನೆಯ ಭಾಗದಲ್ಲಿ ಹೊಯ್ಸಳರಿಂದ ಅನಿರೀಕ್ಷಿತವಾದ ವಿರೋಧ ಎದುರಾಯಿತು. ಹೊಯ್ಸಳ ಒಂದನೆಯ ಬಲ್ಲಾಳ ಮತ್ತು ಅವನ ತಮ್ಮ ವಿಷ್ಣುವರ್ಧನ ಇವರು ಚಾಳುಕ್ಯ ಸಾಮಂತರಾದ ಹಾನಗಲ್ಲಿನ ಕದಂಬರನ್ನೂ ಉಚ್ಚಂಗಿಯ ಪಾಂಡ್ಯರನ್ನೂ ಆಗಿಂದಾಗ್ಗೆ ಕೆಣಕಿ ಅವರ ಅಸ್ತಿತ್ವಕ್ಕೆ ಕುಂದುಂಟುಮಾಡಲಾರಂಭಿಸಿದರು. ಮೊದಮೊದಲು ವಿಕ್ರಮಾದಿತ್ಯ ಇದನ್ನು ತೃಣೀಕರಿಸಿದನಾದರೂ ಅವರ ಕಿರುಕುಳ ಹೆಚ್ಚಿದಾಗ ಧಾರಾನಗರದಿಂದ ತನ್ನೊಡನೆ ಬಂದಿದ್ದ ಪರಮಾರ ಜಗದೇವನ ನೇತೃತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳಿಸಿದ. ಆದರೆ ಆತ ಹೊಯ್ಸಳರಿಂದ ಸೋತ (ಸು.1090). ಪುನಃ 1117–18ರಲ್ಲಿ, ಕಣ್ಣೇಗಾಲದಲ್ಲಿ ನಡೆದ ಕದನದಲ್ಲಿ ಹೊಯ್ಸಳ ಸೇನಾನಿ ಗಂಗರಾಜ ಚಾಳುಕ್ಯ ಸೇನೆಯನ್ನು ಸೋಲಿಸಿದ. ಈ ಸೋಲಿನಿಂದ ವಿಕ್ರಮಾದಿತ್ಯ ಕ್ರುದ್ಧನಾಗಿ ಪ್ರಚಂಡ ಸೈನ್ಯದೊಂದಿಗೆ ನುಗ್ಗಿ ಹೊಯ್ಸಳರನ್ನು ಹಲಸೂರು ಮತ್ತು ಹೊಸವೀಡು ಕದನಗಳಲ್ಲಿ ಸೋಲಿಸಿದ. ವಿಷ್ಣುವರ್ಧನನ ಸೊಕ್ಕು ಇದರಿಂದ ಮುರಿದಂತಾಗಿ ಅವನು ಇನ್ನೂ ಸ್ವಲ್ಪ ಕಾಲ ಮಾಂಡಲಿಕನಾಗಿಯೇ ಮುಂದುವರಿಯುವುದರಲ್ಲಿ ತೃಪ್ತಿಪಟ್ಟುಕೊಳ್ಳಬೇಕಾಯಿತು. ದಿಕ್ಕು ದಿಕ್ಕುಗಳಲ್ಲೂ ಶತ್ರುಗಳನ್ನು ಸಂಹರಿಸಿ ಸಾಮಂತರನ್ನು ಆಜ್ಞಾಧಾರಕರನ್ನಾಗಿ ಮಾಡಿ ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ, ಪ್ರಜಾರಂಜಕನಾಗಿ, ಕಲಾಪೋಷಕನಾಗಿ, ಕವಿಗಳಿಗೂ ವಿದ್ವಾಂಸರಿಗೂ ಆಶ್ರಯದಾತನಾಗಿ, ಶಿಸ್ತಿನಿಂದ ಸೌಹಾರ್ದದಿಂದ ರಾಜ್ಯಭಾರ ಮಾಡಿದ ವಿಕ್ರಮಾದಿತ್ಯ 1127ರಲ್ಲಿ ನಿಧನಹೊಂದಿದ.

ಅನಂತರ ಪಟ್ಟಾಭಿಷಿಕ್ತನಾದವನು ಮುಮ್ಮಡಿ ಸೋಮೇಶ್ವರ (1127–39). ಚಾಳುಕ್ಯ ಇತಿಹಾಸದಲ್ಲಿ ಇವನ ಕಾಲ ಶಾಂತಿ ನೆಲಸಿದ್ದ ಕಾಲ. ಒಂದು ದೃಷ್ಟಿಯಿಂದ ಚಾಳುಕ್ಯಬಲ ಇಳಿಮುಖಗೊಳ್ಳಲು ಆರಂಭವಾದುದೂ ಇವನ ಕಾಲದಲ್ಲೇ ಎಂದು ಹೇಳಬಹುದು. ಇವನ ಆಳಿಕೆಯ ಪ್ರಾರಂಭದಲ್ಲಿಯೇ ವೆಂಗಿಯ ಬಹುಭಾಗ ಚಾಳುಕ್ಯರ ಕೈಬಿಟ್ಟಿತು. ದಕ್ಷಿಣದಲ್ಲಿ ಹೊಯ್ಸಳರು ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿದ್ದರು. ಆದರೂ ಈ ಹಿಂದೆ ಹೊಯ್ಸಳಾಧೀನವಾಗಿದ್ದ ಬನವಾಸಿ ಮತ್ತು ಉಚ್ಚಂಗಿ ಪ್ರಾಂತ್ಯಗಳನ್ನು ಸೋಮೇಶ್ವರ ಪುನಃ ಸಾಧಿಸಿಕೊಂಡಂತೆ ತೋರುತ್ತದೆ (ಸು.1136). ಇದೊಂದೇ ಸೋಮೇಶ್ವರನ ಗಮನಾರ್ಹ ರಾಜಕೀಯ ಸಾಧನೆ.

ಮುಂದಿನ ರಾಜ ಮುಮ್ಮಡಿ ಸೋಮೇಶ್ವರನ ಮಗ ಪೆರ್ಮ ಜಗದೇಕಮಲ್ಲ (1139–49). ಅಶಕ್ತ ದೊರೆಯಾದ ಇವನ ಕಾಲದಲ್ಲಿ ಚಾಳುಕ್ಯ ಸಾಮ್ರಾಜ್ಯ ಸಂಕುಚಿತಗೊಳ್ಳಲಾರಂಭಿಸಿತು. ಆಂಧ್ರಪ್ರದೇಶದ ಕರಾವಳಿ ಭಾಗ ಸ್ವಲ್ಪ ಸ್ವಲ್ಪವಾಗಿ ಇವನ ಹತೋಟಿಯಿಂದ ಜಾರಿತು. ಹೊಯ್ಸಳ ವಿಷ್ಣುವರ್ಧನ ಮತ್ತೆ ದಂಗೆ ಎದ್ದು ಕದಂಬರನ್ನು ಸೋಲಿಸಿದ. ಹಾನಗಲ್ಲು ಬಂಕಾಪುರಗಳು ಅವನ ವಶವಾದುದಲ್ಲದೆ ಬನವಾಸಿ ಪ್ರಾಂತ್ಯದ ಅಧಿಪತ್ಯ ಕೆಲಕಾಲ ಅವನದಾಯಿತು. ಆದರೆ 1143ರ ಸುಮಾರಿನಲ್ಲಿ ಈ ಭಾಗದಲ್ಲಿ ಚಾಳುಕ್ಯ ಬಲ ಸ್ವಲ್ಪ ಚೇತರಿಸಿಕೊಂಡು ಹೊಯ್ಸಳರನ್ನು ಆಕ್ರಮಿತ ಪ್ರದೇಶಗಳಿಂದ ಹೊರಗಟ್ಟಿದ್ದರೂ ಚಾಳುಕ್ಯ ಸಾಮ್ರಾಜ್ಯಕ್ಕೆ ಹೊಯ್ಸಳರು ಪೆಟ್ಟುಕೊಡುವ ಶಕ್ತಿ ಗಳಿಸದಿದ್ದರೆಂಬುದೇ ತತ್ಕಾಲದ ಸ್ಥಿತಿಯ ಸೂಚಕವಾಗಿದೆ. ಅತ್ತ ಕಳಚುರಿ ಮನೆತನದ ಬಿಜ್ಜಳ ಸಹ ಈ ವೇಳೆಗೆ ಪ್ರಬಲವಾಗಿ ಚಾಳುಕ್ಯ ರಾಜ್ಯವನ್ನು ಕಬಳಿಸಲು ಸನ್ನದ್ಧನಾಗುತ್ತಿದ್ದ.

ಇಂಥ ಪರಿಸ್ಥಿತಿಯಲ್ಲಿ ಜಗದೇಕಮಲ್ಲ ಮೃತನಾದಾಗ ಅವನ ಸೋದರ ಮುಮ್ಮಡಿ ತೈಲಪ (1149–62) ರಾಜ್ಯವಾಳತೊಡಗಿದ. ಅಶಕ್ತ ದೊರೆಯಾಗಿದ್ದ ಇವನ ಕಾಲದಲ್ಲಿ ಕಳಚುರಿ ಬಿಜ್ಜಳ ದಂಗೆ ಎದ್ದ, 1153ರ ವೇಳೆಗೆ ತಾನೇ ಚಕ್ರವರ್ತಿ ಎಂದು ಸಾರಿಕೊಂಡ. ರಾಜ್ಯದ ಅನೇಕ ಭಾಗಗಳ ಮೇಲೆ ಚಾಳುಕ್ಯರ ಅಂಕೆ ತಪ್ಪಿತು. ಶಿಲಾಹಾರರೂ ಕಾಕತೀಯರೂ ಹೊಯ್ಸಳರೂ ಈ ಪರಿಸ್ಥಿತಿಯ ಲಾಭ ಪಡೆದು ಸ್ವತಂತ್ರವಾಗಿ ಆಳತೊಡಗಿದರು. ತೈಲಪನ ವಿರುದ್ಧ ಕಾಕತೀಯ ರುದ್ರ ಕದನ ಹೂಡಿ ಜಯಗಳಿಸಿದ. ಈ ತೈಲಪನ ಕೊನೆಗಾಲದಲ್ಲಿ ಆಗ ರಾಜಧಾನಿಯನ್ನು ಅಣ್ಣಿಗೇರಿಗೆ ಮತ್ತೆ ಅಲ್ಲಿಂದ ಬನವಾಸಿಗೆ ವರ್ಗಾಯಿಸಿಕೊಂಡ. ಆಗ ಬನವಾಸಿ ಹಾಗೂ ಸುತ್ತಲಿನ ಪ್ರದೇಶಗಳು ಮಾತ್ರ ಇವನ ಅಧೀನದಲ್ಲಿ ಇದ್ದವು.

ಸಾಯುವ ಮುನ್ನ ತೈಲಪ ತನ್ನ ಮಗ ತ್ರಿಭುವನಮಲ್ಲ 4ನೆಯ ಸೋಮೇಶ್ವರನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ್ದನಾದರೂ ಇನ್ನಿಬ್ಬರು ರಾಜಕುಮಾರರಾದ 3ನೆಯ ಜಗದೇಕಮಲ್ಲ ಮತ್ತು 2ನೆಯ ಭೂಲೋಕಮಲ್ಲರು ಕಲ್ಯಾಣವನ್ನೇ ಬಿಟ್ಟು ಹೊರಗೆ ಹೋಗಬೇಕಾಯಿತು. ಅನಂತಪುರ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಅಧಿಕಾರದಲ್ಲಿದ್ದ ನಿಡುಗಲ್ಲಿನ ಚೋಳರು, ಉಚ್ಚಂಗಿಯ ಪಾಂಡ್ಯರು, ಸಾಂತರರು ಇವರಿಗೆ ಆಶ್ರಯವಿತ್ತರು. ಗೋವೆಯ ಕದಂಬರೂ ಇವರಿಗೆ ಬೆಂಬಲ ನೀಡಿದಂತೆ ತೋರುತ್ತದೆ. ಆದರೆ ಚಾಳುಕ್ಯ ರಾಜ್ಯ ಪೂರ್ಣವಾಗಿ ಕಳಚುರಿಗಳ ವಶವಾಯಿತು. 20 ವರ್ಷಗಳ ಅನಂತರ ಸು.1182ರಲ್ಲಿ ಸೋಮೇಶ್ವರ ತನ್ನ ನಂಬುಗೆಯ ದಂಡನಾಯಕರ ನೆರವಿನಿಂದ ರಾಜ್ಯವನ್ನು ಹಿಂದಕ್ಕೆ ಪಡೆದ. ಆದರೆ ಅವನ ಪ್ರಯತ್ನ ಪೂರ್ಣವಾಗಿ ಸಾರ್ಥಕವಾಗಲಿಲ್ಲ. ಒಂದು ಕಡೆ ಹೊಯ್ಸಳರೂ ಇನ್ನೊಂದು ಕಡೆ ಸೇವುಣರೂ ಮತ್ತೊಂದು ಕಡೆ ಕಾಕತೀಯರೂ ಪ್ರಬಲಿಸಿ ಅವರ ನಡುವಣ ಜಗಳದಲ್ಲಿ ಚಾಳುಕ್ಯರಾಜ್ಯ ಸು. 1189ರ ಹೊತ್ತಿಗೆ ಕರಗಿಹೋಯಿತು.

**ಆಡಳಿತ ವ್ಯವಸ್ಥೆ:** ಕಲ್ಯಾಣದ ಚಾಳುಕ್ಯರ ರಾಜ್ಯ ವಿಸ್ತಾರದಲ್ಲಿ ಹಿಂದಿನ ರಾಜ್ಯಗಳಿಗಿಂತ ಹೆಚ್ಚಾಗಿತ್ತು. ಅತ್ಯುತ್ತಮ ಸ್ಥಿತಿಯಲ್ಲಿ ರಾಜ್ಯ ದಕ್ಷಿಣದ ಕಾವೇರಿಯಿಂದ ನರ್ಮದೆಯ ವರೆಗೂ ಹಬ್ಬಿತ್ತು. ಮಹಾರಾಷ್ಟ್ರದ ದಕ್ಷಿಣದ ಜಿಲ್ಲೆಗಳು, ಆಂಧ್ರಪ್ರದೇಶದ ಪಶ್ಚಿಮದ ಅನಂತಪುರ, ಕಡಪ, ಕರ್ನೂಲು ಮುಂತಾದ ಜಿಲ್ಲೆಗಳು ಇವರ ರಾಜ್ಯದ ಭಾಗವಾಗಿ ಇದ್ದುವು. ಸಹಜವಾಗಿಯೇ ಆಡಳಿತದಲ್ಲಿ ಹೆಚ್ಚು ಸಮಸ್ಯೆಗಳು ಉದ್ಭವಿಸಿದವು. ಅಧಿಕಾರವರ್ಗ ಹೆಚ್ಚಾಯಿತು. ಅರಸನ ಜವಾಬ್ದಾರಿ ಗುರುತರವಾಯಿತು.

ಅರಸನ ಸಹಾಯಕ್ಕೆ ಮಂತ್ರಿಮಂಡಲವೊಂದಿತ್ತು. ಒಬ್ಬ ಮನೆವೆರ್ಗ್ಗಡೆ, ಇಬ್ಬರು ತಂತ್ರಪಾಲರು, ಒಬ್ಬ ತಂತ್ರದ ಸೇನಬೋವ, ಒಬ್ಬ ಪ್ರಧಾನ ಮತ್ತು ಒಬ್ಬ ಹಡಪದ ಇವರು ಒಂದನೆಯ ಸೋಮೇಶ್ವರನ ಮಂತ್ರಿಮಂಡಲದಲ್ಲಿದ್ದರೆಂದೂ ಪ್ರಧಾನರು ಮತ್ತು ಇತರ ಅಧಿಕಾರಿಗಳೊಡಗೂಡಿ ಖಿಲವಾಗಿದ್ದ ನೀತಿ ನಿಯಮಾವಳಿಗಳನ್ನು ರೂಪಿಸಿದರೆಂದು ಸೂಡಿಯ ಶಾಸನವೊಂದರಲ್ಲಿ ಹೇಳಿದೆ. ತಂತ್ರದ ಸೇನಬೋವ ಬಹುಶಃ ಆ ಮಂತ್ರಿಮಂಡಲದ ಕಾರ್ಯದರ್ಶಿಯಾಗಿದ್ದಿರಬಹುದು. ತಂತ್ರಪಾಳರಧಿಷ್ಠಾಯಕ ಎಂಬ ಅಧಿಕಾರಿ ಸಹ ಮಂತ್ರಿಮಂಡಲದ ಒಬ್ಬ ಸದಸ್ಯನಾಗಿದ್ದಂತೆ ತೋರುತ್ತದೆ. ಮಹಾಪ್ರಧಾನ ಎಂಬ ಹೆಸರು ಶಾಸನಗಳಲ್ಲಿ ದೊರಕಿದರೂ ಈತ ಮಂತ್ರಿಮಂಡಲದ ಮುಖ್ಯಸ್ಥನಾಗಿದ್ದಂತೆ ತೋರುವುದಿಲ್ಲ. ಒಂದೇ ಕಾಲದಲ್ಲಿ ಹಲವಾರು ಅಧಿಕಾರಿಗಳು ಈ ಬಿರುದನ್ನು ಹೊಂದಿದ್ದ ವಿಷಯ ತಿಳಿದಿದೆ. ಈ ಅಧಿಕಾರಿಗಳ ಕಾರ್ಯಕ್ಷೇತ್ರ ಯಾವುದಾಗಿತ್ತು, ಆಡಳಿತದ ಯಾವ ಶಾಖೆಗೆ ಅವರು ಮುಖ್ಯರಾಗಿದ್ದರು ಎಂದು ಹೇಳಲೂ ಸಾಧ್ಯವಿಲ್ಲ. ಅಂತಃಪುರ ವೆರ್ಗ್ಗಡೆ ಎಂಬಾತ ಬಹುಶಃ ರಾಜನ ಅರಮನೆಗೆ ಸಂಬಂಧಿಸಿದ ವ್ಯವಹಾರಗಳನ್ನು ಗಮನಿಸುತ್ತಿದ್ದ ಮನೆಯ ಹೆಗ್ಗಡೆ, ಕಡಿತವೆರ್ಗ್ಗಡೆ ಲೆಕ್ಕ ಪತ್ರಗಳ ಅಧಿಕಾರಿ. ಭಂಡಾರಿ, ಹೆಸರೇ ಸೂಚಿಸುವಂತೆ ಬೊಕ್ಕಸದ ಅಧಿಕಾರಿ. ವಡ್ಡರಾವುಳದ ಅಧಿಕಾರಿ ಆ ಹೆಸರಿನ ಸುಂಕವನ್ನು ವಸೂಲು ಮಾಡುವ ಜವಾಬ್ದಾರಿ ಹೊಂದಿದ್ದನೆನ್ನಬಹುದು. ಸೇನಾಧಿಪತಿ, ದಂಡನಾಯಕ, ಸಂಧಿವಿಗ್ರಹಿ, ಹೆರಿಲಾಳ ಕನ್ನಡ ಸಂಧಿವಿಗ್ರಹಿ, ಅಧ್ಯಕ್ಷ, ಸರ್ವಾಧ್ಯಕ್ಷ, ಅಂತಃಪುರಾಧ್ಯಕ್ಷ, ಬಾಹತ್ತರ ನಿಯೋಗಾಧಿಪತಿ, ಪಟ್ಟಸಾಹಣಿ, ಪಟ್ಟಸಾಹಣಧಿಷ್ಠಾಯಕ, ಪಸಾಯಿತ, ಶ್ರೀಕರಣ, ಬಾಣಸವೆರ್ಗ್ಗಡೆ, ಚೂಲಾಯ್ತ, ಪಡಿಹಾರ–ಇವು ಇನ್ನೂ ಕೆಲವು ಅಧಿಕಾರವರ್ಗಗಳು. ಹಲವಾರು ಸಂದರ್ಭಗಳಲ್ಲಿ ಒಬ್ಬನೇ ಹಲವಾರು ಅಧಿಕಾರಗಳನ್ನು ಪಡೆದಿರಬಹುದಾಗಿತ್ತು.

ಆಡಳಿತ ಸೌಕರ್ಯಕ್ಕಾಗಿ ರಾಜ್ಯವನ್ನು ಆ ಮೊದಲಿದ್ದಂತೆಯೇ ಬೇರೆ ಬೇರೆ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಆದರೆ ಈ ಪ್ರಾಂತ್ಯಗಳು ಈಗ ಇನ್ನೂ ಹೆಚ್ಚಿದುವಲ್ಲದೆ ಒಂದೊಂದು ಪ್ರಾಂತ್ಯದಲ್ಲೂ ಸಣ್ಣ ಘಟಕಗಳಿದ್ದುವು. ಬನವಾಸಿ 12000, ನೊಳಂಬವಾಡಿ 32000, ಗಂಗವಾಡಿ 96000, ಸಿಂದವಾಡಿ 1000, ಹಲಸಿಗೆ 12000, ಕೊಲ್ಲಿಪಾಕೆ 5000, ಕೊಂಕಣ 900, ಪಾನುಂಗಲ್ಲು 500, ಬೆಳ್ವೊಲ 300, ಪುರಿಗೆರೆ 400,ಸಬ್ಬಿ 30, ಹೈವೆ 50 ಇತ್ಯಾದಿ ಘಟಕಗಳು ಇದ್ದವು. ರಾಜನ ಕೈಕೆಳಗಿನ ಅಧಿಕಾರಿಗಳು ಕೇಂದ್ರಾಡಳಿತದ ಹೊಣೆಗಾರಿಕೆಯ ಜೊತೆಗೆ ಈ ಪ್ರಾಂತ್ಯಗಳ ಆಡಳಿತಕ್ಕೆ ನೇರವಾಗಿ ಜವಾಬ್ದಾರರಾಗಿರುತ್ತಿದ್ದರು. ಕೆಲವು ಪ್ರಾಂತ್ಯಗಳಲ್ಲಿ ಆನುವಂಶಿಕವಾಗಿ ಆಳುತ್ತಿದ್ದ ಸಾಮಂತರೇ ಅಧಿಕಾರದಲ್ಲಿ ಮುಂದುವರೆಯುತ್ತಿದ್ದರು. ಆದರೂ ಬಹುಶಃ ಅವರ ಮೇಲಿನ ಉಸ್ತುವಾರಿಗಾಗಿ ಅರಸ ಅಧಿಕಾರಿಗಳನ್ನು ತನ್ನ ಪ್ರತಿನಿಧಿಗಳಾಗಿ ಅಂಥ ಪ್ರಾಂತ್ಯಗಳಿಗೆ ನೇಮಿಸುತ್ತಿದ್ದ. ಅಧಿಕಾರಿಗಳನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ವರ್ಗಾಯಿಸುತ್ತಲೂ ಇದ್ದ. ಯುವರಾಜ ಹಾಗೂ ಅರಸನ ಇತರ ಸಂಬಂಧಿಕರು ಸಹ ಹೀಗೆ ಪ್ರಾಂತ್ಯಾಧಿಕಾರಿಗಳಾಗಿ ನೇಮಕಗೊಳ್ಳುತ್ತಿದ್ದರು.

ಗ್ರಾಮ ಆಡಳಿತದ ಅತಿ ಸಣ್ಣ ಘಟಕ. ಇದರ ಆಡಳಿತದ ಸಂಪೂರ್ಣ ಹೊಣೆಗಾರಿಕೆ ಅಲ್ಲಿನ ಮಹಾಜನರದು, ಪ್ರಜೆ ಗೌಡುಗಳದು ಆಗಿತ್ತು. ದೇವಾಲಯಗಳು, ಕೆರೆಗಳು, ಕಾಲುವೆಗಳು ಮುಂತಾದವುಗಳನ್ನು ಕಟ್ಟಿಸುವ, ಜೀರ್ಣೋದ್ಧಾರ ಮಾಡುವ ಮತ್ತು ರಕ್ಷಿಸುವ ಕೆಲಸಗಳು, ವಿದ್ಯಾಸಂಸ್ಥೆ, ಅನ್ನಸತ್ರ ಮುಂತಾದವುಗಳನ್ನು ನೋಡಿಕೊಳ್ಳುವ ಕೆಲಸಗಳೂ ಗ್ರಾಮೀಣ ಆಡಳಿತ ಕಕ್ಷೆಯೊಳಗೆ ಬರುತ್ತಿದ್ದವು. ಅಗ್ರಹಾರ, ಗ್ರಾಮಗಳ ನಿವಾಸಿಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸಂಸ್ಥೆ ಮಹಾಜನರದು. ಗ್ರಾಮದ ವಿಸ್ತೀರ್ಣ, ಜನಸಂಖ್ಯೆಗಳನ್ನು ಆಧರಿಸಿ ಮಹಾಜನರ ಸಂಖ್ಯೆ ಸಹ ನಿರ್ಧಾರವಾಗುತ್ತಿತ್ತು. ಮಹಾಜನರೆಲ್ಲ ಬ್ರಾಹ್ಮಣರೇ ಆಗಿದ್ದರೆಂಬ ವಾದವಿದೆಯಾದರೂ ಅನ್ಯವೃತ್ತಿಕಾರರಿಗೂ ಗ್ರಾಮದ ಆಡಳಿತದಲ್ಲಿ ಪ್ರಾತಿನಿಧ್ಯವಿದ್ದಿತು ಎಂಬುದು ತಿಳಿದಿದೆ. ತಂಬುಲಿಂಗ, ತೆಲ್ಲಿಗ, ಮುಮ್ಮರಿದಂಡ ಮೊದಲಾದವರ ವೃತ್ತಿಸಂಘಗಳು (ಶ್ರೇಣಿ) ಇದ್ದುವು. ವರ್ತಕರು ನಕರಗಳೆಂದೂ ಸೆಟ್ಟಿಗಳೆಂದೋ ಕರೆಯಲ್ಪಡುತ್ತಿದ್ದರು. ಗಾವುಂಡ ಗ್ರಾಮದ ಪ್ರಮುಖ ಅಧಿಕಾರಿ, ಈತ ಆನುವಂಶಿಕವಾಗಿ ಈ ಅಧಿಕಾರವನ್ನು ಪಡೆದಿದ್ದ. ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಗಾವುಂಡನೇ ಇದ್ದರೂ ಒಮ್ಮೊಮ್ಮೆ ಹೆಚ್ಚಿನ ಸಂಖ್ಯೆಯಲ್ಲೂ ಇದ್ದರೆನ್ನಲು ಆಧಾರಗಳಿವೆ. ಗಾವುಂಡನಿಗೆ ನೇರವಾಗಿ ಒಬ್ಬ ಲೆಕ್ಕಿಗ (ಕರಣ) ಅಥವಾ ಸೇನಬೋವ ಇರುತ್ತಿದ್ದ. ಹಲವು ಗ್ರಾಮಗಳು ಕೂಡಿದ ನಾಡಿಗೆ ನಾಳ್ಗಾವುಂಡನೆಂಬಾತ ಅಧಿಕಾರಿ.

ಈ ಅಧಿಕಾರಿಗಳಿಗೆಲ್ಲ ನಿಶ್ಚಿತ ತಲುಬನ್ನು ನೀಡುವ ವ್ಯವಸ್ಥೆ ಇರಲಿಲ್ಲ. ಅದಕ್ಕೆ ಬದಲು ಅವರಿಗೆ ಭೂಮಿಯ ವೃತ್ತಿಗಳನ್ನು ನೀಡಲಾಗುತ್ತಿತ್ತು. ಹಿರಿಯ ಅಧಿಕಾರಿಗಳಿಗೆ ಒಂದೊಂದು ಗ್ರಾಮವನ್ನೇ ಅದರ ಆದಾಯವನ್ನು ಅವರು ಸ್ವಂತಕ್ಕೆ ಬಳಸಲೆಂದು ಕೊಡಲಾಗುತ್ತಿತ್ತು. ರಾಣಿಯರು, ರಾಜಕುಮಾರರು, ಅರಸನ ಇತರ ಸಂಬಂಧಿಕರು ಸಹ ಇಂಥ ವೃತ್ತಿಗಳನ್ನು ಪಡೆದಿದ್ದರು. ಬೀಳವೃತ್ತಿ, ಪತ್ತುಲವೃತ್ತಿ, ಕುಮಾರವೃತ್ತಿ, ಅಣುಗಜೀವಿತ ಮುಂತಾಗಿ ಶಾಸನಗಳಲ್ಲಿ ಕಾಣಬರುವ ಪದಗಳು ಇಂಥ ವೃತ್ತಿಗಳನ್ನು ಸೂಚಿಸುತ್ತವೆ.

**ಆರ್ಥಿಕ–ಸಾಮಾಜಿಕಸ್ಥಿತಿ:** ರಾಜ್ಯ ಆರ್ಥಿಕವಾಗಿ ಬಹಳ ಅಭಿವೃದ್ಧಿಹೊಂದಿದ್ದಿತು. ಪ್ರಜೆಗಳು ತೆರಬೇಕಾಗಿದ್ದ ತೆರಿಗೆಗಳು ಬಹುವಿಧವಾಗಿದ್ದುವು. ಪನ್ನಾಯ, ದಸವಂದ, ಕುಳಿಯ ಸುಂಕ, ದವಸಾಯದ ಸುಂಕ, ಭತ್ತಾಯ, ಸದ್ದಾಯ, ಅರುವಣ, ನೀರುಣಿಸುಂಕ, ತಿಪ್ಪೆಸುಂಕ, ಮನ್ನೆವಣ, ತಳಾಜಿ ಗೂಲಿ ಇತ್ಯಾದಿಗಳು ತೆರಿಗೆಗಳು. ಇವುಗಳು ಬಹುಪಾಲು ವ್ಯವಸಾಯಕ್ಕೆಸಂಬಂಧಪಟ್ಟವುಗಳು. ಪ್ರತಿಯೊಂದು ತೆರಿಗೆಯ ಲಕ್ಷಣವಾಗಲೀ ಅರ್ಥವಾಗಲೀ ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗಿಲ್ಲ. ರಾಜ್ಯದ ಆದಾಯದ ಹೆಚ್ಚಿನ ಪಾಲು ಭೂಕಂದಾಯ ದಿಂದ ಬರುತ್ತಿತ್ತು. ವಾಣಿಜ್ಯ ಮತ್ತು ವೃತ್ತಿಗಳಿಗೆ ಸಂಬಂಧಿಸಿದಂಥ ಪೆರ್ಜುಂಕ, ಸಂತೆವಣ, ಮನೆವಣ, (ಮನೆದೆಜೆ), ಕಿಱುದೆಜೆ, ಹೊಸತಿಲುವಣ, ಸೂಲವಾಣಪಣ, ಕನ್ನಡಿವಣ, ವಡ್ಡರಾವುಳ, ದೊಂಬದೆಜೆ, ಘಾಣದೆಜೆ, ನಾವಿದವಾರಿ, ಬಿಲ್ಲೊಡೆ ಮುಂತಾದ ತೆರಿಗೆಗಳೂ ಇದ್ದುವು. ಸಾಮಾಜಿಕ ತೆರಿಗೆಗಳೆನ್ನಬಹುದಾದ ಮದುವೆಯ ಸುಂಕ, ದಂಡಾಯ ಎಂಬುವುಗಳು ಗಮನಾರ್ಹ. ಮನೆಗಳಲ್ಲಿ ನಡೆಯುವ ಹಬ್ಬ, ಮದುವೆ ಮುಂತಾದವುಗಳಿಗೂ ತೆರಿಗೆ ತೆರಬೇಕಾಗಿತ್ತು ಎಂಬುದು ಇದರಿಂದ ತಿಳಿಯುತ್ತದೆ. ದಂಡಾಯ ಶಿಕ್ಷೆಗೊಳಪಟ್ಟ ಸಮಾಜ ಘಾತುಕರಿಂದ ಗ್ರಾಮೀಣ ಸಂಸ್ಥೆಗಳೋ, ಕೇಂದ್ರಾಧಿಕಾರಿಗಳೋ ವಸೂಲು ಮಾಡುತ್ತಿದ್ದ ಮೊತ್ತ ಸರ್ಕಾರದ ಒಂದು ಆಯವಾಗಿತ್ತು. ಅತಿಕ್ರಮ ಪ್ರವೇಶಕ್ಕೆ 12 ಗದ್ಯಾಣ, ಆಡಿದ ಮಾತನ್ನು ಪೂರ್ಣವಾಗಿ ನಡೆಸದವರಿಗೆ 12 ಪಣ, ಮುರಿದಲ್ಲಿ 12 ಗದ್ಯಾಣ ದಂಡವೆಂದು ಒಂದು ಶಾಸನದಲ್ಲಿ ಹೇಳಿದೆ. ಆಜ್ಞೆಯನ್ನುಲ್ಲಂಘಿಸಿದರೆ 52 ದ್ರಮ್ಮ, ದುರಾಕ್ರಮಣಕ್ಕೆ 12 ದ್ರಮ್ಮ, ಕತ್ತಿಯನ್ನೆಳೆದರೆ 1000 ದ್ರಮ್ಮ, ಇರಿದರೆ 97 ದ್ರಮ್ಮ ದಂಡ ತೆರಬೇಕೆಂದು ಮತ್ತೊಂದು ಶಾಸನದಲ್ಲಿ ಹೇಳಿದೆ. ಇವುಗಳಿಂದ ಅಂದಿನ ಆಡಳಿತವರ್ಗ ಸಮಾಜದಲ್ಲಿ ಶಾಂತಿ ನೆಲಸಲು ಎಂಥ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿತ್ತೆಂದು ಗೊತ್ತಾಗುತ್ತದೆ.

ದ್ರಮ್ಮ, ಗದ್ಯಾಣ, ಪಣ, ಪೊನ್, ಸುವರ್ಣ, ಸಾಹಣಿಕಾಟಿ, ಸಲಿಕೆ, ಗುಲಿಕೆ, ಕಾಗಿಣಿ, ಮಾಡ, ವೀಸ, ಪ್ರತಾಪ, ಧರಣ ಮುಂತಾದ ನಾಣ್ಯಗಳು ಚಲಾವಣೆಯಲ್ಲಿದ್ದುವು. ಗದ್ಯಾಣದಲ್ಲಿಯೇ ಬಹುಶಃ ಅದರ ತೂಕ ಇತ್ಯಾದಿಗಳಿಗನುಸಾರವಾಗಿ ದುಸರ ಗದ್ಯಾಣ, ಕಟಕ ಗದ್ಯಾಣ, ಪೆರ್ಗ್ಗಡೆ ಗದ್ಯಾಣ ಮುಂತಾದ ಬೇರೆ ಬೇರೆ ನಾಣ್ಯಗಳಿದ್ದುವು. ಈ ನಾಣ್ಯಗಳನ್ನು ಅಚ್ಚುಹಾಕಿಸಲು ಕಮ್ಮಟಗಳಿದ್ದುವು. ಲಕ್ಕುಂಡಿಯಲ್ಲಿ ಬೆಳ್ಳಿ ನಾಣ್ಯಗಳನ್ನು ಎರಕಹೊಯ್ಯುತ್ತಿದ್ದ ಬೆಳ್ಳಿಗಮ್ಮಟವಿತ್ತು. ಕುಡತಿನಿಯಲ್ಲಿ ಕಾರ್ತಿಕೇಯದೇವರ ನವಿಲಚ್ಚಿನ ಪೊನ್ನನ್ನು ಎರಕ ಹೊಯ್ಯುತ್ತಿದ್ದರು. ಆಣಿಕಾಱ ಎಂಬ ಅಧಿಕಾರಿ ಇಂಥ ಕಮ್ಮಟದ ಅಧಿಕಾರಿಯಾಗಿದ್ದ.

ಜನರು ಅನೇಕ ರೀತಿಯ ಕರಭಾರವನ್ನು ಹೊರಬೇಕಾದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಅತ್ಯುತ್ತಮವಾಗಿತ್ತೆನ್ನಬಹುದು. ಅರಸರೂ ಅಧಿಕಾರಿಗಳೂ ವ್ಯವಸಾಯೋತ್ಪನ್ನ ಹೆಚ್ಚಲು ಬೇಕಾದ ನೀರಾವರಿ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದರು. ಕಾಡುಗಳನ್ನು ಕಡಿದು ಹೆಚ್ಚಿನ ಭೂಮಿಯನ್ನು ವ್ಯವಸಾಯಕ್ಕೆ ಅಣಿಗೊಳಿಸಲಾಗುತ್ತಿತ್ತು. ಕೆರೆಗಳನ್ನು ಕಟ್ಟಿಸಿ, ಕಾಲುವೆಗಳನ್ನು ತೋಡಿಸುತ್ತಿದ್ದರು. ಇಂಥ ಕೆಲಸವನ್ನು ಅಧಿಕಾರಿಗಳು ಕರ್ತವ್ಯ ವೆಂದೋ ವೈಯಕ್ತಿಕವಾಗಿ ಪುಣ್ಯಪ್ರದ ಕಾರ್ಯವೆಂದೋ ಪರಿಗಣಿಸಿದ್ದರು. ಇದರಿಂದ ಭೂಮಿ ಹೆಚ್ಚು ಫಲವತ್ತಾಗಿ ಉತ್ಪನ್ನ ಹೆಚ್ಚಿತ್ತು.

ಭೂಮಿ ಸಾಮಾನ್ಯವಾಗಿ ವ್ಯಕ್ತಿಗಳ ಒಡೆತನಕ್ಕೆ ಸೇರಿರಲಿಲ್ಲ. ಈ ಕಾಲದ ಶಾಸನಗಳನ್ನು ವಿಶ್ಲೇಷಿದರೆ ಗ್ರಾಮಕ್ಕೆ ಸೇರಿದ ಭೂಮಿ ಗ್ರಾಮಸ್ಥರಿಗೆಲ್ಲ ಒಟ್ಟಾಗಿ ಸೇರಿದ್ದು ಅವಿಭಕ್ತಸ್ವಾಮ್ಯವಾಗಿತ್ತು. ಅಧಿಕಾರಿಗಳಿಗೆ ತಲುಬಿಗೆ ಬದಲಾಗಿ ಕೊಡಲಾದ ಭೂಮಿಯ ವೃತ್ತಿ, ಬ್ರಾಹ್ಮಣರಿಗೆ ದಾನವಾಗಿ ನೀಡಲಾದ ವೃತ್ತಿಗಳು, ನೆತ್ತರುಗೊಡಗೆ ಮುಂತಾದ ವೃತ್ತಿಗಳು ಮಾತ್ರ ವೈಯಕ್ತಿಕ ಸ್ವಾಮ್ಯಕ್ಕೆ ಸೇರಿದ ಆಸ್ತಿಗಳೆಂದು ಭಾವಿಸಬಹುದು. ಅವರಿಗೆ ಸಹ ಈ ಭೂಮಿಯನ್ನು ಪರಭಾರೆ ಮಾಡುವ ಹಕ್ಕು ಇದ್ದಂತೆ ತೋರುವುದಿಲ್ಲ. ಇವು ಹೊರತುಪಡಿಸಿ ಉಳಿದೆಲ್ಲ ಭೂಮಿಯ ಯಜಮಾನಿಕೆ ಗ್ರಾಮದ ಮಹಾಜನರಿಗೆ ಸೇರಿತ್ತು. ಮಹಾಜನ ಸಂಸ್ಥೆಗಳೇ ದಾನಗಳನ್ನು ನೀಡುತ್ತಿದ್ದುವು; ಕರಗಳನ್ನೂ ವಸೂಲು ಮಾಡುತ್ತಿದ್ದುವು. ಭೂಮಿಯ ವೈಯಕ್ತಿಕ ವ್ಯವಹಾರಗಳು ಅಪರೂಪ, ಆದರೆ ವೈಯಕ್ತಿಕ ವೃತ್ತಿಗಳನ್ನು ಪಡೆದ ಅಧಿಕಾರಿಗಳು ಹಾಗೂ ಅದರಿಂದ ಬಂದ ಉತ್ಪನ್ನವನ್ನು ರೂಢಿಸಿ ಕೊಂಡು ಶ್ರೀಮಂತರಾಗಿದ್ದರು. ಕೆರೆಗಳನ್ನೂ ದೇವಾಲಯಗಳನ್ನೂ ಕಟ್ಟಿಸುವ, ಕಾಲುವೆ ತೋಡಿಸುವ, ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವ ಆರ್ಥಿಕ ಶಕ್ತಿ ಅವರಲ್ಲಿತ್ತು. ಎಂತಲೆ ಈ ಕಾಲದಲ್ಲಿ ಅರಸರಿಗಿಂತ ಹೆಚ್ಚಾಗಿ ಶ್ರೀಮಂತ ವರ್ಗದವರು ಈ ಕಾಲಮಾನದಲ್ಲಿ ಇಂಥ ಕಾರ್ಯಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

ಹೀಗೆ ಸಮಾಜದಲ್ಲಿ ಶ್ರೀಮಂತವರ್ಗವೊಂದು ಬೆಳೆಯಿತು. ಆರ್ಥಿಕಾಭಿವೃದ್ಧಿಯಾದರೂ ಅದು ಸಾಮಾನ್ಯವಾಗಿ ಎಲ್ಲರಲ್ಲಿಯೂ ವಿತರಣೆಯಾಗಿರಲಿಲ್ಲವೆಂಬುದೂ ತಿಳಿದುಬರುತ್ತದೆ. ಆದರೆ ದಲಿತವರ್ಗದ ಪರಿಸ್ಥಿತಿ ಅನುಕೂಲಕರವಾಗಿಯೇ ಇದ್ದಿತಾದುದರಿಂದ ಸಮಾಜದಲ್ಲಿ 12ನೆಯ ಶತಮಾನದ ಮಧ್ಯದವರೆಗೂ ಶಾಂತಿ ನೆಲೆಸಿತ್ತು. ಅನಂತರ ತಲೆಎತ್ತಿದ ವೀರಶೈವ ಕ್ರಾಂತಿ ಒಂದು ವಿಧದಲ್ಲಿ ಆರ್ಥಿಕ ಅಸಮಾನತೆಯ ವಿರುದ್ಧ ಎದ್ದ ಕ್ರಾಂತಿಯೂ ಹೌದು. ಅಲ್ಲದೆ ಈ ಶ್ರೀಮಂತ ವರ್ಗದಲ್ಲಿ ಬಹುಭಾಗ ಬ್ರಾಹ್ಮಣ ಧರ್ಮಕ್ಕೆ ಸೇರಿದವರಾಗಿದ್ದರು. ಅರಸರ ಆಡಳಿತಾಧಿಕಾರಿಗಳಲ್ಲಿ ಬಹುಪಾಲು ಬ್ರಾಹ್ಮಣರಾ ಗಿದ್ದರು. ಇದರಿಂದ ಇತರ ಧರ್ಮಾನುಯಾಯಿಗಳಿಗಿಂತಲೂ ಬ್ರಾಹ್ಮಣರಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿತ್ತೆನ್ನಬಹುದು. ವರ್ಣ ಮತ್ತು ಜಾತಿ ವ್ಯವಸ್ಥೆಗಳು ಈಗ ಖಚಿತ ರೂಪವನ್ನು ತಾಳಿದ್ದುದಲ್ಲದೆ ಕಟ್ಟುನಿಟ್ಟಾದ ಜಾತಿನಿಯಮಗಳು ಆಚರಣೆಗೆ ಬಂದಿದ್ದವು. ಆದರೆ ಬ್ರಾಹ್ಮಣರನೇಕರು ಕ್ಷತ್ರಿಯರಂತೆ ಯುದ್ಧಕರ್ಮಿಗಳಾಗಿದ್ದು ದಂಡನಾಯಕ, ಸೇನಾಪತಿ ಮುಂತಾದ ಪದವಿಗಳನ್ನು ಪಡೆದಿದ್ದರು. ಇದು ಎಷ್ಟರಮಟ್ಟಿಗೆ ಮಾನ್ಯವಾಗಿತ್ತು ಎಂಬುದು ಸಂದೇಹಾಸ್ಪದ. ಈ ಪ್ರವೃತ್ತಿ ವ್ಯಾಪಕವಾಗಿದ್ದಂತೆ ತೋರದು. ಜನಸಾಮಾನ್ಯರು ಅರಸನಿಂದ ನಿರೀಕ್ಷಿಸುತ್ತಿದ್ದುದು ದುಷ್ಟಶಿಕ್ಷಣ ಮತ್ತು ಶಿಷ್ಟರಕ್ಷಣ. ಅವರಿಗೆ ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ ಇದ್ದಂತೆ ಕಂಡುಬಾರದು.

ದೇವಾಲಯ ಈಗ ಕಿರಿದಾದ ಸಾಮಾಜಿಕ ಸಂಸ್ಥೆಯೂ ಆಗಿತ್ತು. ಅಲ್ಲದೆ ಅದೊಂದು ವಿದ್ಯಾಕೇಂದ್ರವಾಗಿತ್ತು. ದೇವಸ್ಥಾನಕ್ಕೆ ಸೇರಿದಂತೆ ಒಂದು ಮಠ ಮತ್ತು ಅನ್ನಸತ್ರ ಇರುತ್ತಿತ್ತು. ಮಠದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೆ ಸತ್ರದಲ್ಲಿ ಊಟೋಪಚಾರದ ವ್ಯವಸ್ಥೆ ಇತ್ತು. ತಪೋವನ, ಘಟಿಕಾಸ್ಥಾನಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಧಾರವಾಡ ಜಿಲ್ಲೆಯ ಕಾಡಿಯೂರು, ಬಳ್ಳಾರಿಯ ಮೋಡಿಗೆರೆ, ಗುಲ್ಬರ್ಗದ ನಾಗಾಯಿ, ಬಿಜಾಪುರದ ಕಡಲೆವಾಡ–ಇವು ಇಂಥ ಘಟಿಕಾಸ್ಥಾನಗಳು. ಇಲ್ಲಿ ಘಟಿಕಾಪ್ರಹಾರಿಗಳು (ಕಾಪಿನ ಘಟಿಯಾರಿ), ಖ್ಯಾತ ವಿದ್ವಾಂಸರು ಇರುತ್ತಿದ್ದರು. ಎಲ್ಲ ಚಟುವಟಿಕೆಗಳು ವೇಳಾಪಟ್ಟಿಯಂತೆ ಕ್ರಮವಾಗಿ ನಡೆಯುವಂತೆ ನೋಡಿಕೊಳ್ಳುವ ಹೊಣೆ ಇವರದಾಗಿತ್ತು. ಪರೀಕ್ಷೆಯಲ್ಲಿ ತೇರ್ಗಡೆಯಾ ದವರು ಘಟಿಕಾಸಾಹಣಿಗಳೆನಿಸಿ ಕೊಳ್ಳುತ್ತಿದ್ದರು. ಅಗ್ರಹಾರಗಳು ವಿದ್ಯಾಸಂಪನ್ನ ಬ್ರಾಹ್ಮಣರ ವಾಸಸ್ಥಳಗಳು. ವೇದಾಧ್ಯಾಯಿಗಳೂ ಷಟ್ಕರ್ಮನಿರತರೂ ಆದ ಬ್ರಾಹ್ಮಣರನ್ನು ಬೇರೆ ಬೇರೆ ಕಡೆಗಳಿಂದ ಬರಮಾಡಿಕೊಂಡು ಇಂಥ ಅಗ್ರಹಾರಗಳಲ್ಲಿ ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿ ಅವರಿಂದ ವಿದ್ಯಾಪ್ರಸಾರ ಮಾಡಿಸುವುದು ಅಗ್ರಹಾರಗಳನ್ನು ಸ್ಥಾಪಿಸುವುದರ ಮುಖ್ಯ ಉದ್ದೇಶವಾಗಿತ್ತು. ಈ ಕಾಲದಲ್ಲಿ ಕರ್ನಾಟಕದಲ್ಲಿ ಅಗ್ರಹಾರಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು.

**ಲಲಿತಕಲೆ, ಸಾಹಿತ್ಯ:** ಕಲೆಗಳಿಗೆ ಹೆಚ್ಚಿನ ರಾಜಾಶ್ರಯ, ಜನಾಶ್ರಯ ದೊರಕಿತು. ದೇವಾಲಯಗಳು ನೃತ್ಯ ಸಂಗೀತ ಮುಂತಾದ ಕಲೆಗಳಿಗೆ ಆಶ್ರಯ ನೀಡಿದ್ದವು. ಶಾಸನಗಳಲ್ಲಿ ಇವುಗಳಿಗೆ ಸಂಬಂಧಿಸಿದ ಉಲ್ಲೇಖಗಳಿವೆ. ಅರಸನಾದ ಭೂಲೋಕಮಲ್ಲ ಮುಮ್ಮಡಿ

ಸೋಮೇಶ್ವರನ ಅಭಿಲಷಿತಾರ್ಥಚಿಂತಾಮಣಿಯ ಕರ್ತೃ. ಚಾಳುಕ್ಯ ರಾಣಿಯರಲ್ಲಿ ಹಲವರು ನೃತ್ಯ, ಸಂಗೀತಗಳಲ್ಲಿ ಪರಿಣಿತರಾಗಿದ್ದರು. ನೃತ್ಯ ವಿದ್ಯಾಧರಿ, ಸಂಗೀತ ವಿದ್ಯಾಧರಿಗಳೆನಿಸಿಕೊಂಡಿದ್ದರು. ಚಿತ್ರಕಲೆಗೂ ಪ್ರೋತ್ಸಾಹ ನೀಡಲಾಗಿತ್ತೆನ್ನ ಬಹುದಾದರೂ ಅದಕ್ಕೆ ಗುರುತುಗಳು ಉಳಿದಿಲ್ಲ.

ಸಾಹಿತ್ಯಕ್ಕೆ ಉದಾರವಾದ ರಾಜಾಶ್ರಯ ದೊರೆತ ಕಾರಣ ಸಂಸ್ಕೃತ ಹಾಗೂ ಕನ್ನಡಗಳಲ್ಲಿ ಅನೇಕ ಸಾಹಿತ್ಯ ಕೃತಿಗಳು ಬೆಳಕು ಕಂಡವು. ಇಮ್ಮಡಿ ಜಯಸಿಂಹನ ಆಸ್ಥಾನದಲ್ಲಿದ್ದ ವಾದಿರಾಜ ಎಂಬ ಜೈನಕವಿ ಸಂಸ್ಕೃತದಲ್ಲಿ ಪಾರ್ಶ್ವನಾಥ ಚರಿತ, ಪ್ರಮಾಣ ನಿರ್ಣಯ, ಯಶೋಧರ ಚರಿತ ಇತ್ಯಾದಿ ಗ್ರಂಥಗಳನ್ನು ರಚಿಸಿದ. ದಯಪಾಲ ರೂಪಸಿದ್ಧಿ ಎಂಬ ವ್ಯಾಕರಣ ಗ್ರಂಥದ ಕರ್ತೃ. ಬಿಲ್ಹಣನ ವಿಕ್ರಮಾಂಕದೇವಚರಿತ ಪ್ರಸಿದ್ಧವಾದ ಐತಿಹಾಸಿಕ ಕಾವ್ಯ. ಈ ಕವಿ ಕಾಶ್ಮೀರವಾಸಿ. ದೇಶಪರ್ಯಟನೆ ಮಾಡುತ್ತ ಕರ್ನಾಟಕಕ್ಕೆ ಬಂದು ಇಲ್ಲಿ ರಾಜಾಶ್ರಯ ಪಡೆದು ವಿದ್ಯಾಪತಿ ಎನಿಸಿಕೊಂಡ. ಚಾರುಪಂಚಾಶಿಕ ವೆಂದು ಹೆಸರಾಂತ ಬಿಲ್ಹಣ ಕಾವ್ಯ ಈತನ ಇನ್ನೊಂದು ಕೃತಿ. ಯಾಜ್ಞವಲ್ಕ್ಯಸ್ಮೃತಿಗೆ ವ್ಯಾಖ್ಯಾನ ರೂಪದಲ್ಲಿ ರಚಿಸಿದ ಗ್ರಂಥ ಮಿತಾಕ್ಷರಾ. ಇದರ ಕರ್ತೃ ವಿಜ್ಞಾನೇಶ್ವರ. ಕಾನೂನು ನೀತಿ ಹಾಗೂ ಧರ್ಮಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥವಿದು. ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥಚಿಂತಾಮಣಿಯ ಕರ್ತೃ. ಜಗದಾಚಾರ್ಯ ಪುಸ್ತಕವೆನಿಸಿದ ಇದು ಒಂದು ವಿಶ್ವಕೋಶದಂತಿದೆ. ಈತನದೇ ಇನ್ನೊಂದು ಕೃತಿಯ ಹೆಸರು ವಿಕ್ರಮಾಂಕಾಭ್ಯುದಯ. ವಿಕ್ರಮಾಂಕದೇವಚರಿತವನ್ನೇ ಇದು ಹೋಲುತ್ತದೆಯಾದರೂ ಎರಡರಲ್ಲಿಯೂ ವಿವರಗಳಲ್ಲಿ ವ್ಯತ್ಯಾಸಗಳಿವೆ.

ಕರ್ನಾಟಕ ಕಾದಂಬರಿ ಹಾಗೂ ಛಂದೋಂಬುಧಿಗಳನ್ನು ರಚಿಸಿದ 1ನೆಯ ನಾಗವರ್ಮ ಈ ಕಾಲದವನು. ಅಜಿತತೀರ್ಥಂಕರಪುರಾಣತಿಲಕ ಮತ್ತು ಸಾಹಸಭೀಮ ವಿಜಯಗಳ ಕರ್ತೃವಾದ ಖ್ಯಾತಿವೆತ್ತ ರನ್ನ ಸಹ ಇದೇ ಕಾಲದವನು. ದುರ್ಗಸಿಂಹನಿಂದ ಹೊಗಳಲ್ಪಟ್ಟ ಮಾಳವೀಮಾಧವದ ಕನ್ನವಯ್ಯ, ಮನಸಿಜ, ಚಂದ್ರಭಟ್ಟ, ಗಜಾಂಕುಶ ಹಾಗೂ ಎರಡನೆಯ ನಾಗವರ್ಮ ಹೆಸರಿಸಿದ ವತ್ಸರಾಜ ಚರಿತೆಯನ್ನು ಬರೆದ ನಾಗವರ್ಮ, ಸುಲೋಚನಾಚರಿತದ ನಾಗದೇವ, ಶಂಖವರ್ಮ, ಹರಿಪಾಲ ಮತ್ತು ಕೇಶಿರಾಜ ಉಲ್ಲೇಖಿಸಿರುವ ಹಂಸರಾಜ ಬಹುಶಃ ಈ ಕಾಲದ ಕವಿಗಳು. ಲೋಕೋಪ ಕಾರದ ಕರ್ತೃ ಎರಡನೆಯ ಚಾವುಂಡರಾಯ, ಕರ್ಣಾಟಕ ಪಂಚತಂತ್ರದ ದುರ್ಗಸಿಂಹ, ಕಾವ್ಯಾವಲೋಕನ ಮುಂತಾದ ಶಾಸ್ತ್ರಗ್ರಂಥಗಳ ಮತ್ತು ವರ್ಧಮಾನಪುರಾಣದ ಕರ್ತೃ ಎರಡನೆಯ ನಾಗವರ್ಮ, ಜಾತಕತಿಲಕದ ಶ್ರೀಧರಾಚಾರ್ಯ, ದಿವಾಕರಣಂದಿ, ಸುಕುಮಾರಚರಿತದ ಶಾಂತಿನಾಥ, ಗೋವೈದ್ಯದ ಕೀರ್ತಿವರ್ಮ, ಚಂದ್ರಚೂಡಾಮಣಿ ಶತಕದ ನಾಗವರ್ಮಾಚಾರ್ಯ, ಮಲ್ಲಿನಾಥಪುರಾಣ ಮತ್ತು ರಾಮಚಂದ್ರ ಚರಿತ ಪುರಾಣಗಳನ್ನು ರಚಿಸಿದ ನಾಗಚಂದ್ರ, ಧರ್ಮಾಮೃತದ ನಯಸೇನ, ಮೇಘಚಂದ್ರ, ಉದಯಾದಿತ್ಯ ಹಾಗೂ ಕನ್ನಡ ಸಾಹಿತ್ಯದ ಮೊದಲ ಕವಯಿತ್ರಿಯಾದ ಕಂತಿ ಮೊದಲಾದ ಕವಿಗಳಿಂದ ಈ ಕಾಲದಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು.

**ಶಾಸನಗಳು:** ಕಲ್ಯಾಣ ಚಾಳುಕ್ಯರ ಶಾಸನಗಳು ಇದುವರೆಗೆ ಮೊದಲು ಆಳಿದ ಅರಸುಮನೆತನಗಳವರ ಶಾಸನಗಳಿಗಿಂತ ಸಂಖ್ಯೆಯ ದೃಷ್ಟಿಯಿಂದ ಹೆಚ್ಚು. ಇವುಗಳಲ್ಲಿ ಶಿಲಾಶಾಸನಗಳದೇ ಮೇಲುಗೈ. ತಾಮ್ರಶಾಸನಗಳು ಬಹಳ ಕಡಿಮೆ. ಬಹುತೇಕ ಎಲ್ಲ ಶಿಲಾಶಾಸನಗಳ ಲಿಪಿ ಕನ್ನಡ. ನಾಗರೀ ಲಿಪಿಯ ಶಾಸನಗಳು ವಿರಳ, ಆ ಲಿಪಿಯನ್ನು ತಾಮ್ರಶಾಸನಗಳಲ್ಲಿ ಮಾತ್ರ ಬಳಸಲಾಗಿದೆ. ಈ ಕಾಲದ ಅಕ್ಷರಗಳು ಹೆಚ್ಚು ವರ್ತುಲಾಕಾರವಾಗಿದ್ದು ಅವುಗಳನ್ನು ಸುಂದರವಾಗಿ ಕೊರೆಯಲಾಗಿದೆ. ಗಾತ್ರದಲ್ಲಿ ಅವು ಕಿರಿದು. ಶಿಲಾಶಾಸನಗಳನ್ನು ಕೊರೆಯುವ ಮೊದಲು ಕಲ್ಲನ್ನು ನಯಗೊಳಿಸಲಾಗುತ್ತಿತ್ತು. ಇವರ ಆಳಿಕೆಯ ಆರಂಭಕಾಲದ ಶಾಸನಗಳು ಸರಳವಾದ ಕಿರುಶಾಸನಗಳು. ಆದರೆ ಮೊದಲನೆಯ ಸೋಮೇಶ್ವರ ಮತ್ತು ಅವನ ಅನಂತರ ಆಳಿದ ಅರಸರ ಶಾಸನಗಳು ಹೆಚ್ಚು ವಿಸ್ತಾರವಾಗಿವೆ. ಅನೇಕ ಶಾಸನಗಳ ಭಾಷೆ ಕನ್ನಡವಾದರೂ ಅದು ಬಹುಮಟ್ಟಿಗೆ ಸಂಸ್ಕೃತದಿಂದ ಪ್ರಭಾವಿತ ವಾದುದು. ದಾನ ಶಾಸನಗಳೇ ಹೆಚ್ಚಿನವಾದರೂ ರಣರಂಗದಲ್ಲಿ ಮಡಿದ ವೀರರ, ಆತ್ಮ ಬಲಿಗೈದ ಯೋಧರ, ಸತಿಗಳ, ಸಲ್ಲೇಖನ ವಿಧಿಗಳಿಂದ ಬಾಳನ್ನು ತ್ಯಜಿಸಿದ ಜೈನ ಆಚಾರ್ಯರ ಸ್ಮಾರಕ ಶಾಸನಗಳೂ ಬಹು ಸಂಖ್ಯೆಯಲ್ಲಿವೆ. ಹಲವು ಶಾಸನಗಳು ಸಾಹಿತ್ಯ ಮೌಲ್ಯಗಳನ್ನೊಳಗೊಂಡಿದೆ.

ಪ್ರಾರ್ಥನಾ ಶ್ಲೋಕಗಳಿಂದ ಆರಂಭವಾಗುವ ಈ ಶಾಸನಗಳು ರಾಜಶಾಸನಗಳಾಗಿದ್ದಲ್ಲಿ ಅರಸನ ಪ್ರಶಸ್ತಿ, ಆತನ ಸಾಹಸಗಳ ವರ್ಣನೆ ಹಾಗೂ ಹಲವಾರು ಸಂದರ್ಭಗಳಲ್ಲಿ ಅವನ ವಂಶಾವಳಿಗಳನ್ನು ಒಳಗೊಂಡಿರುತ್ತವೆ. ಅನಂತರ ಆತನ ಸಾಮಂತರಿಗೆ ಅಥವಾ ಪ್ರಾಂತ್ಯಾಧಿಕಾರಿಗಳಿಗೆ ಸಂಬಂಧಿಸಿದ ವಿವರಗಳು, ಅವರ ವರ್ಣನೆಗಳು ಇದ್ದು ಆ ಬಳಿಕ ತೇದಿಯ ಉಲ್ಲೇಖ ಬಂದು ಕೊನೆಗೆ ದಾನದ ವಿವರಗಳು ಕೊಡಲ್ಪಟ್ಟಿರುತ್ತವೆ. ಅರಸನನ್ನು ಸಮಸ್ತ ಭುವನಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣ ಎಂಬ ಬಿರುದುಗಳಿಂದ ಸೂಚಿಸಿದ ಅನಂತರ ಅರಸನ ಹೆಸರನ್ನು ಹೇಳುತ್ತದೆ. ಈ ಅರಸರ ವೈಯಕ್ತಿವೆನ್ನಬಹುದಾದ ಆಹವಮಲ್ಲ, ಜಗದೇಕಮಲ್ಲ, ತ್ರೈಲೋಕ್ಯಮಲ್ಲ, ಭುವನೈಕಮಲ್ಲ, ತ್ರಿಭುವನಮಲ್ಲ, ಭೂಲೋಕಮಲ್ಲ ಮುಂತಾದ ಬಿರುದುಗಳು ಹೆಸರಿನ ಜೊತೆಗೆ ಸೇರಿಸಲ್ಪಟ್ಟಿರುತ್ತವೆ.

ತೇದಿಗಳಲ್ಲಿ ಹೆಚ್ಚಿನ ವಿವರಗಳು ಲಭಿಸುತ್ತವೆ. ಶಕವರ್ಷವನ್ನು ಸಾಮಾನ್ಯವಾಗಿ ಅಂಕಿಗಳಲ್ಲಿ ಸೂಚಿಸಿ ಅನಂತರ ಸಂವತ್ಸರದ ಹೆಸರು, ತಿಂಗಳು, ಪಕ್ಷ, ತಿಥಿ ಮತ್ತು ವಾರ, ದಿನಗಳನ್ನು ಕೊಡುತ್ತವೆ. ಆರನೆಯ ವಿಕ್ರಮಾದಿತ್ಯ ತನ್ನ ಹೆಸರಿನಲ್ಲಿ ಚಾಳುಕ್ಯವಿಕ್ರಮ ಶಕೆಯನ್ನು ಆರಂಭಿಸಿದಾಗಿನಿಂದ ಈ ನೂತನ ಶಕೆಯ ಉಲ್ಲೇಖ ಸಹ ಶಾಸನಗಳಲ್ಲಿ ಕಾಣಿಸಿಕೊಳ್ಳತೊಡಗುತ್ತದೆ. ಮೊದಲಿನ ಶಾಲಿವಾಹನ ಶಕೆಯನ್ನು ಸಾಮಾನ್ಯವಾಗಿ ಕೊಡುವುದಿಲ್ಲ. ಅನಂತರದ ಮುಮ್ಮಡಿ ಸೋಮೇಶ್ವರ, ಪೆರ್ಮಾಡಿ, ಮುಮ್ಮಡಿ ತೈಲ ಮತ್ತು ನಾಲ್ವಡಿ ಸೋಮೇಶ್ವರರು ತಮ್ಮ ತಮ್ಮ ಆಳಿಕೆಯ ವರ್ಷಗಳನ್ನು ಶಾಸನಗಳಲ್ಲಿ ಪ್ರಸ್ತಾಪಿಸುವ ಪದ್ಧತಿಯನ್ನು ಪ್ರಾರಂಭಿಸಿದರು. ಭೂಲೋಕಮಲ್ಲ ವರ್ಷ, ಜಗದೇಕಮಲ್ಲ ವರ್ಷ, ತ್ರೈಲೋಕ್ಯಮಲ್ಲದೇವ ವರ್ಷ ಮತ್ತು ತ್ರಿಭುವನಮಲ್ಲಸೋಮೇಶ್ವರದೇವ ವರ್ಷ ಎಂಬ ಈ ವರ್ಷಗಳನ್ನು ನೀಡುವಾಗ ಇವು ಅವರ ಆಳಿಕೆಯ ವರ್ಷಗಳೆಂದು ಪರಿಗಣಿಸ ಬೇಕು. ಚಾಳುಕ್ಯ ವಿಕ್ರಮ ಶಕೆ ಬಳಕೆಯಲ್ಲಿದ್ದುದು ಕೇವಲ ಒಂದು ಶತಮಾನದಷ್ಟು ಕಾಲ. ಐವತ್ತನೆಯ ವರ್ಷದ ಬಳಿಕ ಇದರ ಉಪಯೋಗ ಕಡಿಮೆಯಾಗುತ್ತ ಹೋಗಿದೆ.

ಈ ಕಾಲದ ಶಾಸನಗಳಲ್ಲಿ ದಾನ ನೀಡಿದವರ ಹಾಗೂ ಪಡೆದವರ ವರ್ಣನೆಗಳೂ ಭೌಗೋಳಿಕ ಪ್ರದೇಶಗಳ, ಗ್ರಾಮಗಳ, ಮಹಾಜನರ ವರ್ಣನೆಗಳೂ ಹೆಚ್ಚು ವಿವರಗಳೊಂದಿಗೆ ಕಾಣಿಸಿಕೊಳ್ಳುತ್ತವೆ.

ಮೊದಲಿನ ಗದ್ಯಶಾಸನಗಳಿಗೆ ಬದಲು ಗದ್ಯ ಪದ್ಯಮಿಶ್ರಿತ ಚಂಪೂ ಶೈಲಿಯ ಹಾಗೂ ಕಾವ್ಯಗುಣಗಳನ್ನು ಪಡೆದ ಶಾಸನಗಳು ಸಂಖ್ಯೆಯಲ್ಲಿ ಹೆಚ್ಚು. ಶಾಸನಗಳು ವಿಷಯ ನಿರೂಪಣೆಯ ವಸ್ತುನಿಷ್ಠ ಮಾಧ್ಯಮಗಳಾಗಿ ಉಳಿಯದೆ ಹೆಚ್ಚು ಕಲಾತ್ಮಕವಾಗಿ ಕಾವ್ಯಗಳಾಗಿವೆ. ರಚನೆಯಲ್ಲಿ ಸುಮಾರು ಒಂದೇ ಕಟ್ಟುಪಾಡಿಗೆ ಒಳಪಟ್ಟ ಈ ಶಾಸನಗಳಲ್ಲಿ ಕೆಲವು ಪ್ರತಿಭಾವಂತ ಕವಿಗಳ ಕೃತಿಗಳಾಗಿವೆ. ಅನ್ಯತ್ರ ತಿಳಿದುಬಾರದ ಅನೇಕ ಶಾಸನಕವಿಗಳು ಈ ಶಾಸನಗಳ ಮೂಲಕ ಬೆಳಕಿಗೆ ಬಂದಿದ್ದಾರೆ. ಕಮಳಾದಿತ್ಯ, ಕಂದರ್ಪ, ಕಪ್ಪಣಭಟ್ಟ, ನಾಗಮಯ್ಯ, ನಾಗವಾರ, ಜಿನವರ್ಮ ಪಂಡಿತ, ಕವಿರಾಜವಲ್ಲಭ, ಗೋವಿಂದ, ಮಲ್ಲಿನಾಥ, ಬಸವಣಯ್ಯ, ರಾಜವಲ್ಲಭ ಕನ್ನಪಯ್ಯ, ರುದ್ರಭಟ್ಟ, ಹರಿಯಣ್ಣ, ವೈಜನಾಥ, ನಾಗದೇವ, ಕರ್ಪರಸ, ಸಂಧಿವಿಗ್ರಹಿ ದಾಮರಾಜ, ಮಾಳಪಯ್ಯ, ಮಾಧವಭಟ್ಟ, ನಾಗಾರ್ಜುನ ಪಂಡಿತ, ಮಲ್ಲ, ಚಂದ್ರಭಟ್ಟ, ಶ್ರೀಕಂಠಸೂರಿ, ಮಲ್ಲಿಕಾರ್ಜುನ ಭಟ್ಟ, ಆಚರಾಜ, ಮಲ್ಲಿದೇವ, ಲಕ್ಷ್ಮಣ, ನಾರಣದೇವ, ಚಟ್ಟಪಾರ್ಯ, ಶಾಂತಿನಾಥ, ಮರ್ದ್ದಿಮಯ್ಯ, ಭಾಸ್ಕರ, ಮಾಕಣ ಪಂಡಿತ, ಸಾಂತ ಮಹಂತ, ಬಲದೇವ, ಸೋಮೇಶ್ವರಭಟ್ಟ, ರೇಚಣಭಟ್ಟ, ಸರ್ವಜ್ಞ ಪಟ್ಟವರ್ಧನ, ಸೂರಿಲಿಯ ಮುಖ್ಯ ಪಂಡಿತ, ಕಲಿದೇವ ಪಂಡಿತ, ಉದಯ ಕಲ್ಪ ಮುಂತಾದ ಅನೇಕ ಶಾಸನ ಕವಿಗಳು ಈ ಕಾಲದವರು.

**ನಾಣ್ಯಗಳು:** ಕಲ್ಯಾಣ ಚಾಳುಕ್ಯರ ಕಾಲಕ್ಕೆ ಭಿನ್ನ ಮೌಲ್ಯಗಳನ್ನುಳ್ಳ ವೈವಿಧ್ಯಮಯ ನಾಣ್ಯಗಳು ಚಲಾವಣೆಯಲ್ಲಿದ್ದುವು. ದ್ರಮ್ಮ, ಗದ್ಯಾಣ, ಪೊನ್, ಪಣ, ಸುವರ್ಣ, ಸಾಹಣಿಕಾಟಿ, ಸಲಿಕೆ, ಗುಲಿಕೆ, ಕಾಹಿಣಿ, ಮಾಡ, ವೀಸ, ಅಡ್ಡ, ಪ್ರತಾಪ, ಧರಣ ಮುಂತಾದ ನಾಣ್ಯಗಳ ಹೆಸರುಗಳು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ದುಸರ ಗದ್ಯಾಣ, ಕಟಕಗದ್ಯಾಣ, ಪೆರ್ಗ್ಗಡೆ ಗದ್ಯಾಣ ಇವುಗಳ ಮೌಲ್ಯಗಳು ಹೆಚ್ಚಿನವಾಗಿದ್ದಿರಬಹುದು. ಲಕ್ಕುಂಡಿಯಲ್ಲೂ ಸೂಡಿಯಲ್ಲೂ ಬೆಳ್ಳಿಗಮ್ಮಟವಿತ್ತು (ಬೆಳ್ಳಿಯ ನಾಣ್ಯಗಳ ಕಮ್ಮಟ). (ಬಿ.ಆರ್.ಜಿ.)

ಗದ್ಯಾಣವೆಂಬುದು ಚಿನ್ನದ ನಾಣ್ಯ. ಗದ್ಯಾಣಗಳಲ್ಲಿ ವಿವಿಧ ರೀತಿಗಳಿದ್ದುವು. ಟಂಕಶಾಲೆಯ ಹೆಸರನ್ನು ಗದ್ಯಾಣದ ಜೊತೆ ಸೇರಿಸುವುದು ಈ ಕಾಲದಲ್ಲಿ ಪ್ರಾರಂಭವಾಯಿತು. ಲೊಕ್ಕಿ ಅಥವಾ ಲೊಕ್ಕಿಗುಂಡಿ ಗದ್ಯಾಣವೆಂಬುದು ಲೊಕ್ಕಿಗುಂಡಿಯಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಾದ ಗದ್ಯಾಣ. ಕಟಕ ಗದ್ಯಾಣ, ಕಟಕ ಪ್ರಿಯ ಗದ್ಯಾಣ, ವರ್ತಕ ಲೊಕ್ಕಿ ಗದ್ಯಾಣ ಮುಂತಾದವುಗಳು ಚಾಳುಕ್ಯರ ಶಾಸನಗಳಲ್ಲಿ ಕಾಣಬರುತ್ತವೆ. ಇದೇ ರೀತಿಯಲ್ಲಿ ನವಿಲಚ್ಚಿನ ಪೊನ್, ಲೊಕ್ಕಿ ಪೊನ್ ಮುಂತಾದ ನಾಣ್ಯಗಳೂ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಇವುಗಳ ಖಚಿತ ಸ್ವರೂಪವೇನೆಂಬುದು ತಿಳಿದಿಲ್ಲ. ಸೂಡಿ ಎಂಬಲ್ಲಿ ಒಂದು ಟಂಕಸಾಲೆ ಇತ್ತು. ಕಮ್ಮಟ, ಕಮ್ಮಟದ ಆಣಿ, ಅಚ್ಚು, ಅಚ್ಚಿನ ಮೊಳೆ, ಉಂಡಿಗೆ ಮುಂತಾದ ಪದಗಳು ಶಾಸನಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. ಇದರಿಂದ ನಾಣ್ಯಗಳನ್ನು ಅಚ್ಚು ಮಾಡುವ ಕಾರ್ಯ ವ್ಯವಸ್ಥಿತವಾಗಿ ಸಾಗುತ್ತಿತ್ತು ಎಂದು ತಿಳಿದುಬರುತ್ತದೆ. ಕಲ್ಯಾಣದ ಚಾಳುಕ್ಯರ ನಾಣ್ಯಗಳು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿವೆ. ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಕೋಡೂರು ಎಂಬಲ್ಲಿ ದೊರಕಿರುವ ಚಾಳುಕ್ಯರ ನಾಣ್ಯರಾಶಿಯೊಂದು ಬಹು ಶ್ರೀಮಂತವಾದುದು. ಇದರಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚು ನಾಣ್ಯಗಳು ಮಡಕೆಯಲ್ಲಿ ದೊರಕಿದವು. ಇದರ ಆಧಾರದ ಮೇಲೆ ಚಾಳುಕ್ಯರ ನಾಣ್ಯಗಳ ವಿಷಯಗಳಲ್ಲಿ ವಿಶೇಷ ಮಾಹಿತಿ ದೊರಕಿವೆ.

ಈ ಕಾಲದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಮಾತ್ರ ಬೆಳಕಿಗೆ ಬಂದಿವೆ. ಇವು ಮೊಳೆಯಿಂದ ಒತ್ತಿದ ಚಿಹ್ನೆಗಳುಳ್ಳ ಪಂಚ್ ನಾಣ್ಯಗಳು. ದುಂಡನೆಯ ಆಕಾರದ ಈ ನಾಣ್ಯಗಳಿಗೆ ಮುಮ್ಮುಖದಲ್ಲಿ ಮಾತ್ರ ಬರೆಹವುಂಟು. ಹಿಮ್ಮುಖ ಖಾಲಿಯಾಗಿ ಇರುತ್ತದೆ. ಸಾಮಾನ್ಯವಾಗಿ ಈ ನಾಣ್ಯಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರ, ರಾಜನ ಹೆಸರು, ಸೂರ್ಯ, ಚಂದ್ರ ಆನೆ, ಸಿಂಹ ಮುಂತಾದವು ಮುದ್ರಿತವಾಗಿರುತ್ತವೆ. ತೆಳುವಾದ ನಾಣ್ಯದ ಮೇಲೆ ಈ ರೀತಿ ಅನೇಕ ಪಂಚ್‌ಗಳು ಮಾಡಲ್ಪಟ್ಟಿರುವುದರಿಂದ ಇವುಗಳು ಬಟ್ಟಲಾಕಾರದಲ್ಲಿರುತ್ತವೆ.

ತ್ರೈಲೋಕ್ಯಮಲ್ಲ ಒಂದನೆಯ ಸೋಮೇಶ್ವರನ ಚಿನ್ನದ ನಾಣ್ಯಗಳು ಸುಮಾರು ಒಂದಂಗುಲ ವ್ಯಾಸದವು. ಇವುಗಳ ತೂಕ 58ಗ್ರೇನ್‌ಗಳು. ಇವುಗಳಲ್ಲಿ ಒಂಬತ್ತು ಪಂಚ್ ಮುದ್ರಿತ ಚಿಹ್ನೆಗಳಿವೆ. ಐದು ಸಿಂಹ, ಎರಡು ಶ್ರೀ ಎಂಬ ಕನ್ನಡ ಅಕ್ಷರ, ಮಿಕ್ಕೆರಡು ತ್ರೇಲೋ ಮತ್ತು ಮಲ್ಲ ಎಂಬ ಕನ್ನಡ ಬರೆಹ. ಇಮ್ಮಡಿ ಸೋಮೇಶ್ವರ ಭುವನೈಕಮಲ್ಲನ ನಾಣ್ಯಗಳಲ್ಲಿಯೂ ಒಂಬತ್ತು ಪಂಚ್‌ಗಳಿವೆ. ಅವುಗಳಲ್ಲಿ ಐದು ಸಿಂಹ, ಎರಡು ಶ್ರೀ ಎಂಬ ಅಕ್ಷರ, ಮಧ್ಯದಲ್ಲಿ ಕಮಲದ ಹೂವು, ಅದರ ಮೇಲೆ ಭುವನೈಕ ಎಂಬ ಬರೆಹ ಕಾಣುತ್ತದೆ. ಎರಡನೆಯ ಜಯಸಿಂಹನ ಚಿನ್ನದ ನಾಣ್ಯಗಳು ಸು. 58 ಗ್ರೇನ್ ತೂಗುತ್ತವೆ. ಇವುಗಳ ವ್ಯಾಸ 0.6 ರಿಂದ 0.8. ಒಂದು ನಮೂನೆಯ ನಾಣ್ಯದಲ್ಲಿ ಒಂಬತ್ತು ಪಂಚ್‌ಗಳಿವೆ. ಇದರಲ್ಲಿ ಐದು ಸಿಂಹ, ಎರಡು ಶ್ರೀ ಅಕ್ಷರ, ಜಯ ಮತ್ತು ದೇವ ಎಂಬ ಕನ್ನಡ ಬರೆಹಗಳಿವೆ. ಇದೇ ರೀತಿಯ ಕೆಲವು ನಾಣ್ಯಗಳಲ್ಲಿ ಸಿಂಹಗಳಿವೆ ಬದಲಾಗಿ ಹಂದಿ ಅಥವಾ ಆನೆ ಇರುವುದೂ ಉಂಟು. 2ನೆಯ ಜಗದೇಕಮಲ್ಲನ ಚಿನ್ನದ ನಾಣ್ಯಗಳು ಅನೇಕ ನಮೂನೆಗಳಲ್ಲಿ ದೊರಕಿವೆ. ಕೋಡೂರು ನಾಣ್ಯರಾಶಿಯಲ್ಲಿ 67–69 ಗ್ರೇನ್ ತೂಕದ ನಾಣ್ಯಗಳಿವೆ. ಇವುಗಳ ಮೇಲೆ ಜಗ, ಜಗದೇ ಅಥವಾ ಜಗದೇಕಮಲ್ಲ ಎಂಬ ಕನ್ನಡ ಲಿಪಿಯ ಬರೆಹಗಳು ಪಂಚ್ ಮಾಡಲ್ಪಟ್ಟಿವೆ. ನಾಣ್ಯದ ಮಧ್ಯಭಾಗದಲ್ಲಿ ದೇವಾಲಯದ ಗೋಪುರದ ಚಿತ್ರವಿದೆ. ಇದರ ಎರಡು ಕಡೆಗಳಲ್ಲಿಯೂ ಶ್ರೀ ಎಂಬ ಅಕ್ಷರವಿದೆ. ಕೆಲವು ನಾಣ್ಯಗಳಲ್ಲಿ ಸ್ವಸ್ತಿಕ, ಚೌರಿ, ಶಂಖಗಳೂ ಕಾಣಬರುತ್ತವೆ.

ಕೋಡೂರು ನಾಣ್ಯರಾಶಿಯಲ್ಲಿ ಕಾಣಬರುವ ನಾಣ್ಯವೊಂದು ಅಯ್ಯಣನಿಗೆ ಸೇರಿದ್ದಿರಬಹುದೆಂದೂ ಊಹೆ. ಇದರಲ್ಲಿ ಯಣ ಎಂಬ ಕನ್ನಡ ಬರೆಹವಿದೆ. ಮತ್ತೊಂದು ನಾಣ್ಯದಲ್ಲಿ ದಶವರ್ಮ ಎಂಬ ಬರೆಹವಿದೆ. ಈ ನಾಣ್ಯ ಚಾಳುಕ್ಯ ರಾಜಕುಮಾರ ದಶವರ್ಮನದ್ದಿರಬೇಕೆಂದು ಹೇಳಬಹುದು. ಆರನೆಯ ವಿಕ್ರಮಾದಿತ್ಯನ ರಾಣಿ ಲಕ್ಷ್ಮಾದೇವಿಯದೆಂದು ಹೇಳಲಾದ ಕೆಲವು ನಾಣ್ಯಗಳು ದೊರಕಿವೆ. ಇವು ಚಾಳುಕ್ಯ ನಾಣ್ಯಗಳಂತೆಯೇ ಇವೆ. ಮಧ್ಯದಲ್ಲಿ ಕಮಲದ ಹೂವು. ಎರಡು ಪಕ್ಕಗಳಲ್ಲಿ ಶ್ರೀ ಎಂಬ ಅಕ್ಷರ, ಕನ್ನಡ ಲಿಪಿಯಲ್ಲಿ ಶ್ರೀ ಲಷುಮಾ ಎಂಬ ಬರೆಹ ಮತ್ತು ಶಂಖ ಈ ನಾಣ್ಯಗಳಲ್ಲಿ ಕಾಣಬರುತ್ತವೆ. ಭುಜಬಲ ಎಂಬ ಬರೆಹವಿರುವ ಕೆಲವು ನಾಣ್ಯಗಳು ಕಲ್ಯಾಣದ ಚಾಳುಕ್ಯರದೆಂದು ಕೆಲವರ ಅಭಿಪ್ರಾಯ.

ರಾಜಗಜಕೇಸರಿ ಮತ್ತು ದಾಯಗಜಕೇಸರಿ ಎಂಬ ಕನ್ನಡ ಬರೆಹವುಳ್ಳ ನಾಣ್ಯಗಳು ವಿಶೇಷವಾಗಿ ಆಂಧ್ರಪ್ರದೇಶದಲ್ಲಿ ದೊರಕಿವೆ. ಇವು ಚಾಳುಕ್ಯ ಸಾಮಂತರ ನಾಣ್ಯಗಳು ಎಂದು ಭಾವಿಸಲಾಗಿದೆ. ರಾಮದುರ್ಗದಲ್ಲಿ ದೊರಕಿದ ಬರಮಭೂಪಾಲನ ನಾಣ್ಯಗಳಲ್ಲಿ ಶ್ರೀ ನಿಗಲಂಕಮಲ್ಲ ದಂಡಿನಗೋವ ಎಂಬ ಬರೆಹವಿದೆ. ಇವನು ಚಾಳುಕ್ಯ ಸಾಮಂತ. ಸಾತಾರಾ ಜಿಲ್ಲೆಯ ವಲ್ಯೆ ಎಂಬಲ್ಲಿ ದೊರಕಿರುವ ನಾಣ್ಯಗಳಲ್ಲಿ ಕನ್ನಡ ಬರೆಹವಿರುವುದರಿಂದ– ಇವು ಚಾಳುಕ್ಯ ಸಾಮಂತರವೆಂದು ಭಾವಿಸಲಾಗಿದೆ. (ಎ.ವಿ.ಎನ್.)

**ವಾಸ್ತುಶಿಲ್ಪ: ಹಿಂದಿನ ಅಧ್ಯಯನಗಳು:** ಕಲ್ಯಾಣ ಚಾಳುಕ್ಯರ ವಾಸ್ತುಶಿಲ್ಪಕಲೆಯ ಅಧ್ಯಯನದ ಪ್ರಾಚೀನತೆ ಸು. 140 ವರ್ಷಕ್ಕೂ ಹಿಂದಕ್ಕೆ ಹೋಗುತ್ತದೆ. ಇಷ್ಟೊಂದು ವರ್ಷಗಳ ಹಿಂದಿನಿಂದ ಈ ಕಾಲದ ವಾಸ್ತುಶಿಲ್ಪ ಮಾಹಿತಿಗಳು ಹೇರಳವಾಗಿ ವಿಭಿನ್ನ ಲೇಖನ, ವರದಿ, ಕೃತಿಗಳಲ್ಲಿ ಪ್ರಕಟವಾಗಿವೆ. ಸರ್ವೇಕ್ಷಣೆ, ಸಂಶೋಧನೆ, ಅಧ್ಯಯನದ ಪರಿಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಇಲ್ಲಿಯವರೆಗೆ ಈ ಕಾಲದ ವಾಸ್ತು–ಶಿಲ್ಪಕಲೆಯ ಬಗ್ಗೆ ಮಹತ್ತ್ವದ ಕೊಡುಗೆಯನ್ನು ಅನೇಕ ವಿದ್ವಾಂಸರು ನೀಡಿದ್ದು, ಅಂಥವರಲ್ಲಿ ಪಿಗಸ್, ನೈಲ್ ಮತ್ತು ಬಿಗ್ಸ್ ಮೊದಲಿಗರಾಗಿ ಕಾಣುವರು (1866). ತದನಂತರದಲ್ಲಿ ಟೇಲರ್ ಮತ್ತು ಜೇಮ್ಸ್ ಫರ್ಗ್ಯೂಸನ್ (1876). ಈ ಕಾಲದ ದೇವಾಲಯ ವಾಸ್ತುಶಿಲ್ಪಕ್ಕೆ ಚಾಳುಕ್ಯವೆಂಬ ಹೆಸರನ್ನು ಕೊಟ್ಟವರೇ ಮೊಟ್ಟ ಮೊದಲು ಫರ್ಗ್ಯೂಸನ್. ಉತ್ತರ ಭಾರತ ಮತ್ತು ದಕ್ಷಿಣ ಭಾರತ ವಾಸ್ತುಶಿಲ್ಪ ಕಲೆಯನ್ನು ಮೊದಲಿಗೆ ವಿಭಾಗಿಸಿದರು. ಮುಂದೆ ವಾಸ್ತುತಜ್ಞ ಅಲೆಗ್ಸಾಂಡರ್ ರಿ (1896), ಹೆನ್ರಿ ಕಸಿನ್ಸ್ (1900–26) ಇವರು ಈ ವಿಷಯದ ಬಗ್ಗೆ ಪ್ರಮುಖ ಕೊಡುಗೆಗಳನ್ನು ನೀಡಿದರು. ಪಿ.ಕೆ.ಆಚಾರ್ಯ (1918), 1931ರ ಅನಂತರ ಗುಲಾಮ್ ಯಾಜ್ದಾನಿ (1941), ಎಂ.ಎಚ್.ಕೃಷ್ಣ (1928–1947), ಸ್ಟೆಲ್ಲಾ ಕ್ರಾಮರಿಷ್ (1946) ಇವರುಗಳದ್ದು ಅಮೋಘ ಕೊಡುಗೆ. ಈ ಕಾಲದ ದೇವಾಲಯ ಮಾದರಿಯನ್ನು ಕ್ರಾಮರಿಷ್ ಅವರು ವೇಸರ ಎಂದು ಹೆಸರಿಸಿದರು. ಎಂ.ಎ.ಢಾಕಿ (1946, 1977), ಅ.ಸುಂದರ (1974–2007), ದೆಗಳೂರಕರ್ (1974), ಪಿ.ಕೆ.ಶರ್ಮ, ಸೌಂದರರಾಜನ್, ಸಿ.ಎಸ್.ಪಾಟೀಲ (1992), ಆಡಂ ಹಾರ್ಡಿ (1995), ಎಸ್.ರಾಜಶೇಖರ, ರು.ಮ.ಷಡಕ್ಷರಯ್ಯ (1985–2007), ಶ್ರೀನಿವಾಸ ಪಾಡಿಗಾರ (1986–2007), ಗೆರಾಲ್ಡ್ ಫಾಕಿಮಾ (2004) ಮುಂತಾದವರ ಕೊಡುಗೆ ಅಮೂಲ್ಯವೆನಿಸಿದೆ. ಎಂ.ಎ.ಢಾಕಿ ಇನ್ನಿತರರ ಸಂಪಾದನೆಯಲ್ಲಿ ಹಿಂದಿನ ಅನೇಕರ ಪ್ರಯತ್ನದಿಂದ ಸುಮಾರು ಎರಡು ನೂರು ದೇವಾಲಯಗಳ ಅಧ್ಯಯನ ಒಂದೆಡೆ ಬರಲು ಕಾರಣವಾಗಿದೆ. ದೇವಾಲಯಗಳ ತಳಪಾಯ, ಶಿಖರದ ಎತ್ತರ, ಅಗಲದ ರಚನೆಯ ವಿಸ್ತಾರದ ಬಗ್ಗೆ ಹೆಚ್ಚು ಮಾಹಿತಿ ನೀಡುವ ಇತ್ತೀಚಿನ ಕೃತಿ ಗೆರಾಲ್ಡ್ ಫಾಕಿಮಾ ಅವರದು. ಅ.ಸುಂದರ, ಷಡಕ್ಷರಯ್ಯ, ಭಟಸೂರಿ, ಶ್ರೀನಿವಾಸ ಪಾಡಿಗಾರ, ರಮೇಶ, ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಬಿ.ಜಯಮ್ಮ, ಮಹಾದೇವ, ವಾಸುದೇವ, ಉಷಾ ಬೆಂಡೆ, ಸಿ.ಎಸ್.ಹಸಬಿ, ಕೋಟೆ ಮಲ್ಲಿಕಾರ್ಜುನ ಮುಂತಾದವರು ಕರ್ನಾಟಕದ ವಿಭಿನ್ನ ಪ್ರದೇಶಗಳ ಈ ಕಾಲದ ಅನೇಕ ದೇವಾಲಯಗಳ ಬಗ್ಗೆ ಅನೇಕ ಬಿಡಿ ಲೇಖನಗಳನ್ನು ಅಥವಾ ಮಹಾಪ್ರಬಂಧಗಳ ಮೂಲಕ ಹೊರತಂದಿರುವರು.

ಶಿಲೆ: ಈ ಕಾಲದ ದೇವಾಲಯಗಳ ನಿರ್ಮಾಣಕ್ಕೆ ಮೂರು ರೀತಿಯ ವಸ್ತುಗಳನ್ನು ಬಳಸಲಾಗಿದೆ: (1) ಇಟ್ಟಿಗೆ, (2) ಕೆಂಪು ಉಸುಕು ಶಿಲೆ (3) ಕಪ್ಪು ಮಿಶ್ರಿತ ನೀಲಿಛಾಯೆಯ ಡಾಲರೈಟ್ ಅಥವಾ ಕ್ಲೋರೇಟ್ ಶಿಷ್ಟ್ ಅಥವಾ ಬಿಳಿಯ ಸುಣ್ಣದ ಶಿಲೆ.

ತಳವಿನ್ಯಾಸ: ತಳವಿನ್ಯಾಸದಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಅರ್ಧಮಂಟಪ ಅಥವಾ ಅಂತರಾಳ ಅಥವಾ ಸುಕನಾಸಿ, ನವರಂಗ ಅಥವಾ ಸಭಾಮಂಟಪ, ಮಹಾಮಂಟಪ ಮತ್ತು ಮುಖಮಂಟಪಗಳು ಒಳಗೊಂಡಿವೆ. ಗರ್ಭಗೃಹಗಳ ಸಂಖ್ಯೆಗಳಿಗನುಗುಣವಾಗಿ ಕೂಟಗಳನ್ನು ಹೆಸರಿಸಲಾಗಿದೆ. ಒಂದು ಗರ್ಭಗೃಹವುಳ್ಳದ್ದನ್ನು ಏಕಕೂಟ ಮತ್ತು ಮೂರು ಗರ್ಭಗೃಹಗಳುಳ್ಳದ್ದನ್ನು ತ್ರಿಕೂಟ ಮಾದರಿಯ ದೇವಾಲಯಗಳೆಂದು ಹೆಸರಿಸಿದ್ದು ಇವು ಹೆಚ್ಚಿನ ಸಂಖ್ಯೆಯಲ್ಲಿವೆ. ಉಳಿದ ಮಾದರಿಯವು ವಿರಳವಾಗಿವೆ. ದ್ವಿಕೂಟ ಮಾದರಿಯಲ್ಲಿ ಎರಡು ಗರ್ಭಗೃಹಗಳನ್ನು ಏಕಸಾಲಿನಲ್ಲಿ (ಮುಧೋಳದ ಮಲ್ಲಿಕಾರ್ಜುನ) ಅಥವಾ ಎದುರು ಬದುರಾಗಿ ಕಟ್ಟಲಾಗಿದೆ (ಲಕ್ಕುಂಡಿ ಕಾಶಿವಿಶ್ವೇಶ್ವರ, ಸವಡಿಯ ನಾರಾಯಣ, ಮಕುಟ ದೇವಾಲಯ). ತ್ರಿಕೂಟ ಮಾದರಿಯಲ್ಲಿ ಮೂರು ಗರ್ಭಗೃಹಗಳನ್ನು ಏಕಸಾಲಿನಲ್ಲಿ ಅಥವಾ ಮೂರು ಗರ್ಭಗೃಹಗಳನ್ನು ಮೂರು ಕಡೆಗಳಲ್ಲಿ ಹೊಂದಿಸಿ ಕಟ್ಟಲಾಗಿರುತ್ತದೆ. ತಲಾ ಒಂದು ಗರ್ಭಗೃಹಕ್ಕೆ ಹೆಚ್ಚಾಗಿ ಅರ್ಧಮಂಟಪ ಅಥವಾ ಅಂತರಾಳ ಅಥವಾ ಶುಕನಾಸಿಗಳಿರುತ್ತವೆ. ನಡುವೆ ಏಕ ಸಭಾಮಂಟಪವಿರುತ್ತದೆ. ಎರಡು ಗರ್ಭಗೃಹಗಳ ನಡುವೆ ಅಂದರೆ ಸಭಾಮಂಟಪದಲ್ಲಿ ಒಂದು ಗರ್ಭಗೃಹ ಅಳವಡಿಸಲಾಗಿದೆ (ದೇಗಾವಿಯ ಕಮಲನಾರಾಯಣ). ತ್ರಿಕೂಟ ಮಾದರಿಯ ದೇವಾಲಯಗಳಲ್ಲಿ ಮೂರು ಗರ್ಭಗೃಹಗಳ ನಡುವೆ ತೆರೆದ ಸಭಾಮಂಟಪವಿರುವ ಮಾದರಿ ವಿರಳವಾಗಿ ಕಾಣುತ್ತದೆ.

ಒಂದೇ ಅಧಿಷ್ಠಾನದ ಮೇಲೆ (ಅಬ್ಬಲೂರಿನ ಬಸವೇಶ್ವರ) ಚತುಷ್ಕೂಟ ಮಾದರಿಯಲ್ಲಿ ಒಂದೊಂದೆ ದಿಕ್ಕಿಗೆ ನಾಲ್ಕು ಗರ್ಭಗೃಹಗಳಿದ್ದು ತಲಾ ಒಂದಕ್ಕೆ ಒಂದು ಅಂತರಾಳ ಅಥವಾ ಅರ್ಧಮಂಟಪವಿದೆ. ಇವೆಲ್ಲಕ್ಕೂ ಕೇಂದ್ರದಲ್ಲಿ ಒಂದು ಸಭಾಮಂಟಪವಿದೆ (ನೀಲಗುಂದ ಭೀಮೇಶ್ವರ). ಪಂಚಕೂಟ ಮಾದರಿಯಲ್ಲಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗರ್ಭಗೃಹಗಳು, ತಲಾ ಒಂದಕ್ಕೆ ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳು ನಡುವಿನಲ್ಲಿ ಒಂದು ಚೌಕೋನದ ಗರ್ಭಗೃಹವಿದೆ (ಶಿರವಾಳದ ಸಿದ್ಧಲಿಂಗೇಶ್ವರ ಮತ್ತು ಕಲ್ಲೂರಿನ ಬಸವೇಶ್ವರ). ಮೂಲ ಗರ್ಭಗೃಹ–ಅಂತರಾಳದ ಮುಂದಿನ ಸಭಾಮಂಟಪದ ಇಕ್ಕೆಲಗಳಲ್ಲಿ ತಲಾ ಒಂದು ಕಡೆ ಎರಡೆರಡು ಗರ್ಭಗೃಹಗಳು ಒಳಗೊಂಡಿವೆ (ಉಜ್ಜಯಿನಿ ಮರುಳಸಿದ್ಧ). ಇನ್ನೊಂದು ಮಾದರಿಯಲ್ಲಿ ಒಂದೇ ಸಾಲಿನಲ್ಲಿ ಮೂರು ಮತ್ತು ಇವುಗಳ ಮುಂದಿನ ಮೂಲೆಗಳಲ್ಲಿ ಒಂದೊಂದು ಗರ್ಭಗೃಹಗಳಿವೆ (ಹುಂಚದ ಪಂಚಕೂಟ ಬಸದಿ). ಷಟ್‌ಕೂಟ ಮಾದರಿಯ ದೇವಾಲಯಗಳು ವಿರಳವಾದರೂ ಇಲ್ಲಿ ಆರು ಗರ್ಭಗೃಹ–ಅಂತರಾಳದ ಮುಂದಿನ ಸಭಾಮಂಟಪದ ಇಕ್ಕೆಲಗಳಲ್ಲಿ ಒಂದು ನಡುವೆ ಮೂಲ ಗರ್ಭಗೃಹವಿದೆ (ಇಂಗಳ್ಗಿ), ನವಕೂಟ ಮಾದರಿಯಲ್ಲಿ ಕುಕ್ಕನೂರಿನ ನವಲಿಂಗೇಶ್ವರ ದೇವಾಲಯವಿದೆ.

ಗರ್ಭಗೃಹದಲ್ಲಿ ಒಂದೇ ಮೂರ್ತಿಯಿರುವುದು ಸಾಮಾನ್ಯ. ಏಕ ಪೀಠದಲ್ಲಿ ತ್ರಿಮೂರ್ತಿಗಳ ಪ್ರತಿಷ್ಠಾಪನೆ ವಿರಳ (ನಾಗಾವಿ ತ್ರೈಪುರುಷ ಇತ್ಯಾದಿ). ಆಯತಾಕಾರದ ಗರ್ಭಗೃಹ ಮತ್ತು ಅಂತರಾಳ ಮತ್ತು ಮುಖಮಂಟಪದ ವಿನ್ಯಾಸವೂ ಅಪರೂಪ (ಬೇವೂರಿನ ತ್ರೈಪುರುಷ). ಗರ್ಭಗೃಹಗಳ ಒಳ ಇಕ್ಕೆಲಗಳಲ್ಲಿ ದೇವಕೋಷ್ಠಗಳಿರುವುದು ವಿರಳ (ನಾಗಾವಿ ತ್ರೈಪುರುಷ, ಕುರವತ್ತಿ ಮಲ್ಲಿಕಾರ್ಜುನ ಇತ್ಯಾದಿ). ಗರ್ಭಗೃಹಕ್ಕೆ ನಾಲ್ಕು ಅಂತರಾಳ ಮತ್ತು ನಾಲ್ಕು ಪ್ರವೇಶದ್ವಾರಗಳು, ನಡುವೆ ಪ್ರದಕ್ಷಿಣಾಪಥವಿರುವ ಅಪರೂಪದ ದೇವಾಲಯವನ್ನು ಸರ್ವತೋಭದ್ರವೆನ್ನುವರು (ಉಣಕಲ್ಲು ಚಂದ್ರಮೌಳೇಶ್ವರ, ಕಾಳಗಿ).

ಬೇವೂರಿನ ರಾಮೇಶ್ವರ ದೇವಾಲಯದಲ್ಲಿ ಆರು ಸಾಲುಗಳಲ್ಲಿ ಒಟ್ಟು 32 ಸ್ತಂಭಗಳುಳ್ಳ ಸಭಾಮಂಟಪದ ನಡುವೆ 1ಮೀ ಆಳದ ಚೌಕಾದ ಗುಂಡಿಯಿದ್ದು ಇದನ್ನು ಯಜ್ಞಕುಂಡ ಎಂದು ತಿಳಿಯಲಾಗಿದೆ. ನಾಗಾವಿಯ ತ್ರೈಪುರುಷ ದೇವಾಲಯದಲ್ಲಿ 64 ಕಂಬಗಳುಳ್ಳ ಸಭಾಮಂಟಪದಲ್ಲಿಯೂ ಇಂತಹ ಒಂದು ಗುಂಡಿಯಿದೆ. ಇದಕ್ಕೆ ನೆಲದಡಿಯಲ್ಲಿ ತೂಬನ್ನು ಅಳವಡಿಸಿರುವಂತೆ ಕಾಣುತ್ತದೆ. ಇಲ್ಲಿ ಎರಡು ಮಾದರಿಯ ಸ್ತಂಭಗಳಿವೆ. ಕೆಲವು ದೇವಾಲಯಗಳಲ್ಲಿ ಸಭಾಮಂಟಪ ಆಯತಾಕಾರದಲ್ಲಿದ್ದು ನಾಲ್ಕು ಸಾಲುಳ್ಳ ಸ್ತಂಭಗಳಿವೆ. ನಡುವಿನ ಎರಡು ಸಾಲುಗಳಲ್ಲಿ 12 ಸ್ತಂಭಗಳಿದ್ದರೆ ಹಿಂದಿನ ಸಾಲುಗಳಲ್ಲಿ ತಲಾ ಒಂದರಲ್ಲಿ ನಾಲ್ಕು ಕಂಬಗಳಿರುವುದು ವಿರಳ (ತಿಳವಳ್ಳಿಯ ಕಾಂತೇಶ್ವರ). ಕೆಲವು ದೇವಾಲಯಗಳ ಗರ್ಭಗೃಹದ ಹೊರ ತಳಪಾಯ ನಕ್ಷತ್ರಾಕಾರದಲ್ಲಿ (ಡಂಬಳದ ದೊಡ್ಡ ಬಸವಣ್ಣ), ಅರೆ ನಕ್ಷತ್ರಾಕಾರ (ನೀಲಗುಂದದ ನೀಲಕಂಠೇಶ್ವರ, ಮಹೇಶ್ವರ ಮಹಾದೇವ, ಚಟ್ಟರಕಿಯ ದತ್ತಾತ್ರೆಯ, ಬಸವನ ಬಾಗೇವಾಡಿಯ ಬಸವೇಶ್ವರ ಇತ್ಯಾದಿ) ದಲಿವೆ. ಬಿಜ್ರಾಪುರದ ಕೊಪ್ಪೇಶ್ವರದ ಎದುರಿನ ಮಂಟಪ ನಕ್ಷತ್ರಾಕಾರದಲ್ಲಿರುವುದು ಗಮನೀಯ. ಕೆಲವು ದೇವಾಲಯಗಳ ಮಹಾ ಮಂಟಪಗಳು ವಿಶಿಷ್ಟ ರೀತಿಯಲ್ಲಿವೆ. ನರೇಗಲ್ಲಿನ ಶಾಂತೇಶ್ವರ

ದೇವಾಲಯದ ಮಹಾಮಂಟಪವು ಸಭಾಮಂಟಪದ ಮುಂದಿದೆ. ಈ ಮಹಾಮಂಟಪದ ಇಕ್ಕೆಲಗಳಲ್ಲಿ ಆಯತಾಕಾರದ ವಿಶಾಲ ಕೋಣೆಗಳಿದ್ದು ತಲಾ ಒಂದಕ್ಕೆ ಎರಡು ಪ್ರವೇಶ ದ್ವಾರಗಳಿವೆ. ಇದಲ್ಲದೆ ತಲಾ ಒಂದರಲ್ಲಿ ಸಾಲಾಗಿ 24 ತೀರ್ಥಂಕರರ ಶಿಲ್ಪಗಳ ಪೀಠಗಳಿವೆ.

ಪ್ರವೇಶ: ದೇವಾಲಯಗಳು ಅಥವಾ ಬಸದಿಗಳು ಸಾಮಾನ್ಯವಾಗಿ ಪೂರ್ವ ಉತ್ತರಕ್ಕೆ ಮುಖವಾಗಿವೆ. ದೇವಾಲಯಗಳಿಗೆ ಪ್ರವೇಶಗಳು ಹೆಚ್ಚಾಗಿ ಒಂದು ಅಥವಾ ಮೂರು ಇರುತ್ತವೆ. ಎರಡು ಪ್ರವೇಶದ್ವಾರಗಳು ಕಡಿಮೆ.

ದ್ವಾರ ಬಂಧ: ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ನವರಂಗದಲ್ಲಿ ಸಾಮಾನ್ಯವಾಗಿ ಮೂರು, ನಾಲ್ಕು, ಐದರಿಂದ ಹನ್ನೊಂದು ಊರ್ಧ್ವ ಶಾಖೆಗಳುಳ್ಳ ದ್ವಾರಗಳಿರುತ್ತವೆ. ದ್ವಾರಶಾಖೆಗಳ ಅಲಂಕರಣೆಯ ಲಕ್ಷಣಗಳನ್ನು ಎರಡು ಕಾಲಘಟ್ಟಗಳಿಗೆ ಸೇರಿವೆ: ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಪರಿವರ್ತನ ಹಂತ; ಕಲ್ಯಾಣ ಚಾಳುಕ್ಯ ಹಂತ. ಮೊದಲ ಹಂತದಲ್ಲಿ ಮುಖ್ಯವಾಗಿ ದ್ವಾರ ಶಾಖೆಗಳು ಸರಳವಾಗಿರುತ್ತವೆ ಹಾಗೂ ಲಲಾಟ ಪಟ್ಟಿಕೆಗಳಲ್ಲೂ ಹರಿದಿರುತ್ತವೆ. ಪಾದದಲ್ಲಿ ಕುಂಭಗಳು ಅಥವಾ ಗಂಗ-ಯಮುನೆಯರು ಇತ್ಯಾದಿ ಚಿತ್ರ ಪಟ್ಟಿಕೆಗಳು ಹಾಗೂ ಉತ್ತರಾಂಗ ಪಟ್ಟಿಕೆಯ ಮೇಲೆ ಹಂಸಗಳ ಸಾಲಿರುತ್ತದೆ. ಇನ್ನೊಂದರ ಹಂತದಲ್ಲಿ ಈ ಲಕ್ಷಣಗಿಂತ ಸ್ವಲ್ಪ ಭಿನ್ನವಾಗಿ ಮತ್ತು ಹೆಚ್ಚು ವಿಸ್ತಾರವಾಗಿ ಹೆಚ್ಚು ಶಾಖೆಗಳು, ತಲಾ ಒಂದರ ಪದದಲ್ಲಿ ದ್ವಾರಪಾಲಕರನ್ನು ಆಯತಾಕಾರದ ಗೂಡು ಗಳಲ್ಲಿ ಅಥವಾ ದ್ವಾರಪಾಲಕರ, ಕಾಮ, ರತಿ ಮತ್ತು ಪರಿಚಾರಕರ ಉಬ್ಬು ಶಿಲ್ಪಗಳ ಅಲಂಕರಣೆಯಿರುತ್ತವೆ. ದ್ವಾರ ಬಂಧದ ಅಕ್ಕ ಪಕ್ಕಗಳಲ್ಲಿ ಭವ್ಯವಾದ ಎತ್ತರದ ದ್ವಾರಪಾಲಕ ಒಂದೊಂದು ವಿಗ್ರಹವನ್ನು ನಿಲ್ಲಿಸಲಾಗಿರುತ್ತದೆ. ಹೊಸ್ತಿಲಗಳ ಬುಡದಲ್ಲಿ, ಉತ್ತರಾಂಗದಲ್ಲಿ ಶಿಲ್ಪ ಪಟ್ಟಿಕೆಗಳಿರುತ್ತವೆ. ದ್ವಾರ ಪಟ್ಟಿಕೆಗಳ ಶಾಖೆಗಳಿಗೆ ಹೊರ ಪಾರ್ಶ್ವಗಳಲ್ಲಿ ಒಮ್ಮೊಮ್ಮೆ ಜಾಲಂಧ್ರಗಳನ್ನು ಜೋಡಿಸಲಾಗಿರುತ್ತದೆ. ಲಲಾಟದಲ್ಲಿ ನಡುವೆ ಸಾಮಾನ್ಯವಾಗಿ ಗಜಲಕ್ಷ್ಮಿಯನ್ನು ಕಂಡರಿಸಲಾಗಿರುತ್ತದೆ. ಜೈನ ಬಸದಿಯಾಗಿದ್ದರೆ ಜಿನಬಿಂಬವಿರುತ್ತದೆ. ಕೆಲವೊಮ್ಮೆ ಅರ್ಧಮಂಟಪದಲ್ಲಿ ಸ್ತಂಭ ತೋರಣ ಶಿಲ್ಪಪಟ್ಟಿಕೆಯನ್ನು ನಿಲ್ಲಿಸಲಾಗಿರುತ್ತದೆ. ಈ ಪರಂಪರೆಯು ಈ ಪೂರ್ವದ ರಾಷ್ಟ್ರಕೂಟರ ದೇವಾಲಯಗಳಲ್ಲಿ ಆರಂಭವಾಗಿದ್ದಿತು.

ಲಲಾಟ: ಕೆಲವೊಮ್ಮೆ ಲಲಾಟ ಪಟ್ಟಿಕೆಯ ನಡುವೆ ತೀರ್ಥಂಕರ ಬದಿಗಳಲ್ಲಿ ಆನೆಗಳನ್ನು (ಬಸವ ಕಲ್ಯಾಣದ ಸದಾನಂದ ಮಠದ ಬಾವಿ ಶಿಲ್ಪ), ಸರಸ್ವತಿಯನ್ನು (ಜಲಸಂಗಿಯ ಮಹದೇವ), ನಟರಾಜನನ್ನು ಚತುರ್ಮುಖ ಶಿವನನ್ನು (ಗದುಗಿನ ಸೋಮೇಶ್ವರ), ಯತಿಗಳನ್ನು (ಉಜ್ಜಯಿನಿ ಮರುಳ ಸಿದ್ದೇಶ್ವರ), ಶಿವಲಿಂಗಗಳಿವೆ (ಕೋಗಳಿಯ ಮಾರುತಿ ಗುಡಿ). ಉಜ್ಜಯಿನಿಯ ಪದ್ಮಾಸನದಲ್ಲಿರುವ ಯೋಗಿಗಳ ಶಿಲ್ಪದಲ್ಲಿ ಒಂದಕ್ಕೆ ಮಾತ್ರ ನಾಲ್ಕು ಕೈಗಳಿವೆ. ಮೇಲಕ್ಕೆತ್ತಿದ ಹಿಂದಿನ ಕೈಗಳನ್ನು ಕೈ ಮುಗಿದ ಭಂಗಿಯಲ್ಲಿ ಕೆಳಗಿನ ಕೈಗಳನ್ನು ಮೋಹಮುದ್ರೆ ಯಲ್ಲಿ ಕೆತ್ತಲಾಗಿದೆ. ಉಳಿದ ಮೋಹಿಶಿಲ್ಪಗಳಲ್ಲಿ ಎರಡು ಕೈಗಳಿದ್ದು ಇವುಗಳು ಮೋಹ ಮುದ್ರೆ ಅಥವಾ ಕೈಮುಗಿದ ಭಂಗಿಯಲ್ಲಿವೆ. ದ್ವಾರಶಾಖೆಗಳಲ್ಲಿ ಪುಷ್ಪಲಂಕಾರ, ಲತಾಸುರುಳಿ, ದಂಪತಿಗಳು, ನೃತ್ಯಗಾರರು, ಸಿಂಹ, ವಾದ್ಯಗಾರರಿಂದ ಅಲಂಕೃತವಾದ ಮತ್ತು ಸ್ತಂಭ ಮಾದರಿಗಳು ಒಳಗೊಂಡಿವೆ (ಗದಗಿನ ಸೋಮೇಶ್ವರ ಇತ್ಯಾದಿ).

ಉತ್ತರಾಂಗ: ಲಲಾಟ ಪಟ್ಟಿಕೆಯ ಮೇಲಿನ ಕಪೋತದ ಮೇಲ್ಭಾಗದ ಪಟ್ಟಿಕೆಯೆ ಉತ್ತರಾಂಗ. ಈ ಪಟ್ಟಿಕೆಯಲ್ಲೂ ಸಾಮಾನ್ಯವಾಗಿ ಮುಖ್ಯ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದ ದೇವರ ವಿಗ್ರಹವನ್ನು ಕಂಡರಿಸಲಾಗಿರುತ್ತದೆ. ಆರಂಭಿಕ ಹಂತದಲ್ಲಿ ಹೆಚ್ಚಾಗಿ ತ್ರಿಮೂರ್ತಿ ಗಳಾದ ಬ್ರಹ್ಮ, ಮಹೇಶ್ವರ (ನಟರಾಜ) ಮತ್ತು ವಿಷ್ಣು ಮೂರ್ತಿಗಳನ್ನು ವೈವಿಧ್ಯಮಯವಾಗಿ ಚಿತ್ರಿಸಲಾಗಿರುತ್ತದೆ. ಇವುಗಳನ್ನು ಮಕರತೋರಣಗಳ ನಡುವೆ ಕೆತ್ತಲಾಗಿರುತ್ತದೆ. ಇವರ ಜೊತೆಯಲ್ಲಿ ವಾದ್ಯಮೇಳ, ನೃತ್ಯಮೇಳ ಮತ್ತು ವಾಹನಗಳನ್ನು ತೋರಿಸಲಾಗಿರುತ್ತದೆ. ಶಿವ-ಪಾರ್ವತಿಯರ ಬದಿಗಳಲ್ಲಿ ಗಣೇಶ ಮತ್ತು ಕಾರ್ತಿಕೆಯರನ್ನು ಚಿತ್ರಿಸಲಾಗಿರುತ್ತದೆ (ಉಜ್ಜಯಿನಿ ಮರುಳ ಸಿದ್ದೇಶ್ವರ, ನೀಲಗುಂದ ಭೀಮೇಶ್ವರ, ಕಾಳಗಿ ಸಿದ್ದೇಶ್ವರ ಇತ್ಯಾದಿ). ಕೆಲವೊಮ್ಮೆ ಅಪರೂಪವಾಗಿ ಏಕಾದಶ ರುದ್ರರನ್ನು (ಲಕ್ಕುಂಡಿ ಕಾಶಿವಿಶ್ವೇಶ್ವರ ಇತ್ಯಾದಿ), ವೀರಭದ್ರ ಮತ್ತು ಗಣೇಶ್ವರ ನಡುವೆ ಸಪ್ತ ಮಾತೃಕೆಯರನ್ನು (ಹಾವೇರಿ ಸಿದ್ದೇಶ್ವರ, ನಾರಾಯಣಪುರದ ಶಿವ ದೇವಾಲಯ) ವಿವಿಧ ರೀತಿಯ ಮೂರು ಶಿಖರಗಳನ್ನು ಕಂಡರಿಸಲಾಗಿದೆ. ಕೆಲವೊಮ್ಮೆ ಈ ಶಿಖರಗಳ ಬದಿಗಳಲ್ಲಿ ಸಿಂಹಗಳನ್ನು ತೋರಿಸಲಾಗಿರು ತ್ತದೆ. ಈ ಶಿಖರ ಮಾದರಿಗಳು ಹೆಚ್ಚಾಗಿ ದ್ರಾವಿಡ, ರೇಖಾನಾಗರ ಮತ್ತು ಫಾಂಸನದ್ದಾಗಿದೆ.

ವೈಷ್ಣವ ದೇವಾಲಯಗಳಾಗಿದ್ದರೆ ಉತ್ತರಾಂಗದಲ್ಲಿ ನರಸಿಂಹ ಮತ್ತು ಭೂವರಾಹ ಗಳನ್ನು ತೋರಿಸಲಾಗಿರುತ್ತದೆ. ಕೆಲವೊಮ್ಮೆ ಆನೆಗಳನ್ನು ಎದುರು ಬದುರಾಗಿ ನಿಂತಿರುವುದನ್ನು ಚಿತ್ರಿಸಲಾಗಿದೆ (ಲಕ್ಕುಂಡಿ ಕುಂಭೇಶ್ವರ). ಕೆಲವೊಮ್ಮೆ ತ್ರಿಮೂರ್ತಿಗಳ ಬದಿಗಳಲ್ಲಿ ಯತಿಗಳನ್ನು ಮತ್ತು ಸೂರ್ಯನ ದೇವಾಲಯವಾಗಿದ್ದರೆ ಉತ್ತರಾಂಗದಲ್ಲಿ ಉಷಾ-ಪ್ರತ್ಯುಷಾ ಚಾಮರಧಾರಿಗಳು, ಸೂರ್ಯ, ಪ್ರತ್ಯುಕ್ಷಾರ ಶಿಲ್ಪಗಳನ್ನು ಕಂಡರಿಸಲಾಗಿದೆ (ಲಕ್ಕುಂಡಿ ಕಾಶಿ ವಿಶ್ವೇಶ್ವರ).

ಸ್ತಂಭತೋರಣಗಳು: ಸಾಮಾನ್ಯವಾಗಿ ದೇವಾಲಯಗಳ ಗರ್ಭಗೃಹದ ಮುಂದಿನ ಅರ್ಧಮಂಟಪದ ತೆರೆದ ಮುಂಬದಿಯಲ್ಲಿ ಎರಡು ಸ್ತಂಭಗಳ ಮೇಲೆ ಮಕರ ಶಿಲ್ಪ ಪಟ್ಟಿಕೆಯನ್ನು ನಿಲ್ಲಿಸಲಾಗಿರುತ್ತದೆ. ಈ ಮಕರ ಪಟ್ಟಿಕೆಯಲ್ಲಿ ನಡುವೆ ಸಾಮಾನ್ಯವಾಗಿ ತ್ರಿಮೂರ್ತಿಗಳ ಚಿತ್ರಗಳನ್ನು ಕೆತ್ತಲಾಗಿದೆ. ಈ ಪರಂಪರೆಯು ಈ ಕಾಲದ ಆರಂಭಿಕ ಹಂತದಲ್ಲಿ ಸಾಮಾನ್ಯ (ಹರೆ ಕಿತ್ತೂರಿನ ಸಂಗಮೇಶ್ವರ, ಕುರುವತ್ತಿ ಮಲ್ಲಿಕಾರ್ಜುನ, ಮುದನೂರಿನ ಲಕ್ಷ್ಮಣತೀರ್ಥದ ಹತ್ತಿರ ಇತ್ಯಾದಿ). ತ್ರಿಮೂರ್ತಿಗಳಲ್ಲಿ ಕೆಲವೊಮ್ಮೆ ಶಿವನ ಬದಲು ನಟರಾಜನನ್ನು ತೋರಿಸಲಾಗಿದೆ. ಸೂರ್ಯನ ದೇವಾಲಯವಾಗಿದ್ದರೆ ಮಕರ ತೋರಣದ ನಡುವೆ ಸೂರ್ಯನನ್ನು ಚಿತ್ರಿಸಲಾಗಿದೆ (ಲಕ್ಕುಂಡಿಯ ವಿರೂಪಾಕ್ಷ, ನಿಡಗುಂದಿಯ ಸೂರ್ಯ ನಾರಾಯಣ).

ಚಂದ್ರಶಿಲಾ: ಚಂದ್ರಶಿಲೆ ಸಾಮಾನ್ಯವಾಗಿ ಸುಕನಾಸಿಯ ಬಾಗಿಲ ಚೌಕಟ್ಟಿನ ಹೊಸ್ತಿಲ (ಉಡಂಬರ) ಮುಂದೆ ನೆಲಕ್ಕೆ ಹಾಸಿದ ಉಡುಂಬರ ಅಥವಾ ಭುರಂಗಮ ಅಥವಾ ಚಂದ್ರಶಿಲಾ ಎನ್ನುವರು. ಈ ಚಂದ್ರಶಿಲೆಯಲ್ಲಿ ಕಮಲಗಳ ಅಲಂಕಾರವಿರುತ್ತದೆ. ಅರ್ಧಚಂದ್ರಾ ಕಾರದ ಉಬ್ಬು ಇದ್ದು ಅಕ್ಕ ಪಕ್ಕಗಳಲ್ಲಿ ಬಳ್ಳಿ ಮತ್ತು ಸುರಳಿಗಳ ಚಿತ್ರಗಳಿವೆ. ಕೆಲವೊಮ್ಮೆ ಸುರಳಿಗಳಲ್ಲಿ ಆನೆ ಮತ್ತು ನವಿಲುಗಳಿವೆ. ಡಂಬಳದ ದೊಡ್ಡ ಬಸಪ್ಪ ಮತ್ತು ಮುಳಗುಂದದ ಬಸದಿಯ ಚಂದ್ರಶಿಲೆ ವೈವಿಧ್ಯಮಯವಾಗಿದೆ.

ಕುಬ್ಜಗಣ, ಬಾದಾಮಿ

ಜಾಲಂಧ್ರಗಳು: ಗರ್ಭಗೃಹ ಅಥವಾ ಅಂತರಾಳ (ಸುಕನಾಸಿ) ದ್ವಾರ ಚೌಕಟ್ಟಿನ ಮತ್ತು ಅರೆ ಗಂಬಗಳ ನಡುವೆ ಜಾಲಂಧ್ರಗಳ ಪಟ್ಟಿಕೆಗಳನ್ನು ಕೂಡಿಸುವುದು ಸಾಮಾನ್ಯ. ಇವುಗಳ ಮೇಲೆ ಕುಸುರಿ ಕೆತ್ತನೆಯಲ್ಲಿ ಮೂರು ಜೊತೆ ನಾಗ-ನಾಗಿಣಿಯರದೇ – ಹೆಣೆದು ಗಂಟು ಹಾಕಿಕೊಂಡ ದೇಹ ಭಾಗ, ವಾದ್ಯಗಾರರ, ನರ್ತಕಿಯರು, ಸುರಳಿಗಳು, ಕೀರ್ತಿಮುಖ, ಪುಷ್ಪಲಂಕಾರ ಇತ್ಯಾದಿಗಳಿವೆ. ಕೆಲವೊಮ್ಮೆ ಕೀರ್ತಿಮುಖಗಳನ್ನು ತೋರಿಸಲಾಗಿದೆ. ಉದಾಹರಣೆಗೆ ಬಳ್ಳಿಗಾವೆಯ ತ್ರಿಪುರಾಂತಕ, ಉಜ್ಜಯಿನಿ ಮರುಳ ಸಿದ್ದೇಶ್ವರ ಇತ್ಯಾದಿ.

ನವರಂಗದ ಗೋಡೆಗಳು (ಒಳಭಾಗ): ದೇವಾಲಯದ ಗರ್ಭಗೃಹದ ಹೊರಬದಿಗಳಲ್ಲಿ ಅಪರೂಪವಾಗಿ ದೇವಕೋಷ್ಠಗಳನ್ನು ತೋರಿಸಿದ ಉದಾಹರಣೆಗಳಿವೆ (ನಾಗಿನಿಯ ತ್ರೈಪುರುಷ, ಕುರುವತ್ತಿಯ ಮಲ್ಲಿಕಾರ್ಜುನ ಇತ್ಯಾದಿ). ಕೆಲವೊಮ್ಮೆ ಅಂತರಾಳದ ಹೊರಬದಿಗಳಲ್ಲಿ ಮತ್ತು ಸಭಾಮಂಟಪದ ಗೋಡೆಗಳಲ್ಲಿ ದೇವಕೋಷ್ಠಗಳಿದ್ದು ವಿವಿಧ ದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ಈ ಸಭಾಮಂಟಪದ ಬಲಬದಿಯ ಹಿಂದಿನ ಮೂಲೆಯಲ್ಲಿಯ ದೇವಕೋಷ್ಠದಲ್ಲಿ ಬಹುತೇಕವಾಗಿ ಸಪ್ತ ಮಾತೃಕೆಯರ ಶಿಲ್ಪ ಗಳನ್ನು ಪ್ರತಿಷ್ಠಾಪಿಸಲಾಗಿದೆ. ಉಳಿದ ದೇವಕೋಷ್ಠಗಳಲ್ಲಿ ಗಣೇಶ, ಮಹಿಷಾಸುರಮರ್ಧಿನಿ, ಭೈರವ, ಕಾರ್ತಿಕೇಯ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಉದಾಹರಣೆಗಳಿವೆ. ದ್ವಾರದ ಬದಿಯಲ್ಲಿ ಕೆಲವೊಮ್ಮೆ ಕಥಾನಕ ದೃಶ್ಯಗಳನ್ನು ಅತಿ ಅಪರೂಪವಾಗಿ ಕಂಡರಿಸಲಾಗಿದೆ. ಉದಾಹರಣೆಗೆ ಅಬ್ಬಲೂರಿನ ಬ್ರಹ್ಮೇಶ್ವರದಲ್ಲಿ ಏಕಾಂತರಾಮಯ್ಯನ ಪವಾಡದ ಚಿತ್ರಗಳಿವೆ. ಇಂಥ ದೇವಕೋಷ್ಠಗಳಿಗೆ ಈ ಅಧಿಷ್ಠಾನ, ಭಿತ್ತಿ, ಪ್ರಸ್ತರ ಶಿಖರಗಳಿದ್ದು ಒಂದು ಚಿಕ್ಕ ದೇವಾಲಯ ದಂತಿರುತ್ತವೆ. ನವರಂಗದಲ್ಲಿ ಒಂಬತ್ತು ಅಂಕಣಗಳುಳ್ಳದ್ದು. ನಡುವಿನ ಅಂಕಣದಲ್ಲಿ ಸ್ವಲ್ಪ ಎತ್ತರದ ಚಚೌಕ ಅಥವಾ ವರ್ತುಲ ವೇದಿಕೆ ಇರುತ್ತದೆ. ಇದರ ನಾಲ್ಕು ಮೂಲೆಗಳಲ್ಲಿ ಒಂದೊಂದು ಕಂಬವಿರುತ್ತದೆ. ಈ ಕೇಂದ್ರ ಕಂಬಗಳು ಛತ್ತಿಯನ್ನು ಹೊತ್ತಿರುತ್ತವೆ. ಮೂಲೆ ಗೋಡೆಗಳಲ್ಲಿ ಹೊಂದಿ ಅರೆಗಂಬಗಳಿರುತ್ತವೆ. ಈ ವೇದಿಕೆಯ ಮೇಲೆ ಕೆಲವೊಮ್ಮೆ ಗರ್ಭಗೃಹದ ಶಿವಲಿಂಗಕ್ಕೆ ಮುಖಮಾಡಿ ನಂದಿಯ ಶಿಲ್ಪವನ್ನು ಇಡಲಾಗಿರುತ್ತದೆ. ಉದಾಹರಣೆಗೆ ತಂಬೂರಿನ ದೊಡ್ಡ ಬಸವೇಶ್ವರ ದೇವಾಲಯ ಇತ್ಯಾದಿ.

ಅನೇಕ ದೇವಾಲಯಗಳ ನವರಂಗದಲ್ಲಿ ಇಲ್ಲವೆ ಮುಖಮಂಟಪದಲ್ಲಿ ಸುತ್ತಲೂ ತೆರೆದ ಕಕ್ಷಾಸನವಿರುತ್ತದೆ. ಕಕ್ಷಾಸನದ ಒರಗು ಪಟ್ಟಿಕೆಯ ಹಿಂಭಾಗದಲ್ಲಿ ಶಿಲ್ಪ ಪಟ್ಟಿಕೆಗಳಿರುತ್ತವೆ. ಇಲ್ಲಿ ಒಂದು/ಎರಡು ಸಾಲುಗಳಲ್ಲಿ ಶಿಖರ ನಮೂನೆಗಳನ್ನು ಅಥವಾ ಗೂಡುಗಳಲ್ಲಿ ಮಿಥುನ, ನರ್ತಕಿ, ಇನ್ನಿತರ ಶಿಲ್ಪಗಳಿರುವುದು ಸಾಮಾನ್ಯ (ಉಮಾಪುರದ ಉಮಾಮಹೇಶ್ವರ ಇತ್ಯಾದಿ). ನವರಂಗದ ಮುಂದೆ ಇದಕ್ಕೆ ಹೊಂದಿಕೊಂಡಂತೆ ಮುಖ ಮಂಟಪಕ್ಕೆ ಬದಲಾಗಿ ಕೆಲವೊಮ್ಮೆ

ಅನೇಕ ಸ್ತಂಭಗಳ ಮಹಾಮಂಟಪವಿರುತ್ತದೆ. ಲಕ್ಷ್ಮೇಶ್ವರದ ಕೆಲವು ದೇವಾಲಯ ಮತ್ತು ಬಸದಿಗಳಲ್ಲಿ ಮತ್ತು ಅಣ್ಣಿಗೇರಿಯ ಅಮೃತೇಶ್ವರ ಇತ್ಯಾದಿ ಕಡೆಗಳಲ್ಲಿ ಕಾಣಬಹುದು. ಆದರೆ ಈ ಮಹಾಮಂಟಪಗಳು ತದನಂತರ ಕಾಲದಲ್ಲಿ ನಿರ್ಮಾಣವಾಗಿವೆ. ಆದರೆ ಇಟಗಿಯ ಮಹದೇವ ದೇವಾಲಯದ ಮಹಾಮಂಟಪ (ಸಭಾಮಂಟಪ)ವು ತೆರೆದಿದೆ.

ವಿತಾನ (ಭುವನೇಶ್ವರಿ): ನವರಂಗದ ನಡುವಿನ ಅಂಕಣದ ಛತ್ತಿನ ಭುವನೇಶ್ವರಿಯಲ್ಲಿ ಕಮಲದ ಅಲಂಕರಣ ಸಾಮಾನ್ಯ. ಅಷ್ಟದಿಕ್ಪಾಲಕರನ್ನು ನಡುವಿನ ಇಲ್ಲವೆ ಆಯಾಯ ದಿಕ್ಕಿಗನುಗುಣವಾಗಿ ಮಧ್ಯದಲ್ಲಿ ನಟರಾಜನ ಇಲ್ಲವೆ ನರಸಿಂಹನ ಮೂರ್ತಿ ಸುತ್ತಲೂ ಅಷ್ಟದಿಕ್ಪಾಲಕರ ಮೂರ್ತಿಗಳನ್ನು ಕಂಡರಿಸಲಾಗಿರುತ್ತದೆ. ಈ ಲಕ್ಷಣ ಬಳ್ಳಿಗಾವೆಯ ಕೇದಾರೇಶ್ವರ ಇತ್ಯಾದಿ ಕಡೆಗಳಲ್ಲಿವೆ. ಇನ್ನೊಂದು ರೀತಿಯ ಈ ಛತ್ತು ಗುಮ್ಮಟಾಕಾರದ್ದಾಗಿವೆ. ಈ ಗುಮ್ಮಟಾಕಾರ ವಿಸ್ತಾರವಾಗಿ ಮತ್ತು ಆಳವಾಗಿರುತ್ತದೆ, ಅರಳಿದ ಕಮಲದಂತಿರುತ್ತದೆ. ಇದರ ಮಧ್ಯದಿಂದ ಇಳಿಬಿದ್ದ ಕೇಸರಿಯಿರುತ್ತದೆ (ಉಜ್ಜಯಿನಿಯ ಮರುಳಸಿದ್ದೇಶ್ವರ) ಅಥವಾ ಶಿಲೆಯ ಸರಪಳಿಯನ್ನು ಇಳಿಬಿಟ್ಟ ಉದಾಹರಣೆಗಳಿವೆ (ಹಾನಗಲ್ಲು ತಾರಕೇಶ್ವರ 32 ಸುತ್ತಳೆಯದ್ದು). ಈ ಗುಮ್ಮಟದ ಅಂಚಿನಲ್ಲಿ ಸಮಾನಾಂತರದಲ್ಲಿ ಅಡ್ಡಪಟ್ಟಿಕೆಗಳಿಗೆ ಹೊಂದಿ ವಾಹನ ಸಮೇತ ಅಷ್ಟದಿಕ್ಪಾಲಕರ ಶಿಲ್ಪಗಳಿರುತ್ತವೆ (ಉಜ್ಜಯಿನಿ ಮರುಳಸಿದ್ದೇಶ್ವರ, ಆನವಟ್ಟಿಯ ಕೈಟಬೇಶ್ವರ). ಆದರೆ, ಉಜ್ಜಯನಿಯ ಮರುಳಸಿದ್ದೇಶ್ವರದ ವೃತ್ತಾಕಾರದ ಗೊಮ್ಮಟ ಭುವನೇಶ್ವರಿಯ ಪಾದ ಹಂತದ ಮೇಲೆ ಕುಳಿತ 100ಕ್ಕೂಹೆಚ್ಚು ಚಿಕಣಿ ಯತಿಗಳನ್ನು ತೋರಿಸಿರುವುದು ಅಪರೂಪವೆನಿಸಿದೆ. ಇಟಗಿಯ ಮಹಾದೇವ ದೇವಾಲಯದಲ್ಲಿ ಭುವನೇಶ್ವರಿಯ ವೃತ್ತಪಟ್ಟಿಕೆ ಯಲ್ಲಿ ಈ ದೇವಾಲಯ ನಿರ್ಮಿಸಿದ ಮಹಾದೇವ ದಂಡನಾಯಕನ ವಂಶಸ್ಥರ ಶಿಲ್ಪ ಗಳನ್ನು ಅಳವಡಿಸಲಾಗಿದೆ. ಕೆಲವೊಮ್ಮೆ ಈ ಭುವನೇಶ್ವರಿಯು ಅಷ್ಟಕೋನಾಕೃತಿಯಲ್ಲಿದ್ದು ಇದರ ನಡುವೆ ನಟರಾಜ, ಬದಿಗಳಲ್ಲಿ ವಿಷ್ಣು ಮತ್ತು ಬ್ರಹ್ಮ ಇವರ ಕಿರುಚಿತ್ರಗಳನ್ನು ಚಿತ್ರಿಸಲಾಗಿದೆ. ಕೆಲವು ದೇವಾಲಯಗಳ ಮಧ್ಯದಲ್ಲಿ ಉಗ್ರನರಸಿಂಹ (ಲಕ್ಕುಂಡಿ ಚಂದ್ರಮೌಳೇಶ್ವರ) ಜೈನ ಬಸದಿಯಲ್ಲಿ ವಿತಾನದಲ್ಲಿ 24 ತೀರ್ಥಂಕರರ ಮತ್ತು ಬಸದಿ ನಿರ್ಮಿಸಿದವರ ಕಿರು ಶಿಲ್ಪಗಳಿವೆ (ಸೇಡಂ).

ಕಕ್ಷಾಸನ: ತೆರೆದ ನವರಂಗದ ಅಥವಾ ಸಭಾಮಂಟಪ ಅಥವಾ ಮಹಾಮಂಟಪದ ಸುತ್ತಲೂ ಅಥವಾ ಮುಖಮಂಟಪದಲ್ಲಿ ಕಕ್ಷಾಸನ ವ್ಯವಸ್ಥೆಯಿರುತ್ತದೆ. ಈ ಕಕ್ಷಾಸನದ ಕಟ್ಟೆಗಳ ಮೇಲೆ ಮತ್ತು ಛತ್ತಿಗೆ ಹೊಂದಿಸಿ ಅಲ್ಲಲ್ಲಿ ಕಿರುಸ್ತಂಭಗಳನ್ನು ನಿಲ್ಲಿಸಲಾಗಿದೆ. ಈ ಸ್ತಂಭಗಳನ್ನು ಭದ್ರಕ ಸ್ತಂಭಗಳೆಂದು ಕರೆಯಲಾಗಿದೆ. ಕಕ್ಷಾಸನದ ಒರಗು ಪಟ್ಟಿಕೆಯ ಹಿಂಬದಿಯಲ್ಲಿ ಮಿಥುನ ಇತ್ಯಾದಿ ಶಿಲ್ಪಗಳನ್ನು ಅಥವಾ ಶಿಖರ ಮಾದರಿಗಳ ಸಾಲನ್ನು ಕಂಡರಿಸಲಾಗಿದೆ (ಲಕ್ಕುಂಡಿ ಬ್ರಹ್ಮಜಿನಾಲಯ, ನಾರಾಯಣಪುರದ ಶಿವದೇವಾಲಯ, ಕಾಳಿಗ ಜೈನಬಸದಿ ಇತ್ಯಾದಿ). ಕೆಲವೊಮ್ಮೆ ಪೂರ್ಣಕುಂಭ ಮತ್ತು ದೊಡ್ಡ ಹೂಗಳಿವೆ. ಅಥವಾ ಸಿಂಹಯಾಳಿ, ರಾಮಾಯಣದ, ಸೇತುಬಂಧನ, ಸಮುದ್ರೋಲಂಘನ, ವಾಲಿ–ಸುಗ್ರೀವ ಇತ್ಯಾದಿ ಚಿತ್ರಗಳು ಇರುತ್ತವೆ.

ಕಂಬಗಳು: ಕಂಬಗಳನ್ನು ಸಾಮಾನ್ಯವಾಗಿ ದೇವಾಲಯದ ಅರ್ಧಮಂಟಪ, ನವರಂಗ (ಸಭಾಮಂಟಪ), ಮಹಾಮಂಟಪ ಮತ್ತು ಮುಖಮಂಟಪಗಳಲ್ಲಿ ನಿಲ್ಲಿಸಲಾಗಿರುತ್ತದೆ. ಇವುಗಳನ್ನು ಕೋಷ್ಠಸ್ತಂಭ, ಶ್ರೀಕಾರಸ್ತಂಭ ಬಹುಕೋನಾಕಾರ ಸ್ತಂಭ ಮತ್ತು ಸಂಯುಕ್ತ ಸ್ತಂಭಗಳೆಂದು ವಿಂಗಡಿಸಬಹುದು. ಈ ಕಂಬಗಳನ್ನು ಸಾಮಾನ್ಯವಾಗಿ ಪೀಠದ ಮೇಲೆ ನಿಲ್ಲಿಸಲಾಗಿದೆ. ಕಾಂಡಭಾಗದ ಪಾದಚೌಕಪಟ್ಟಿಕೆಗಳ ಮೇಲೆ ಉಬ್ಬುಶಿಲ್ಪಗಳ ರಚನೆಯಿವೆ (ಲಕ್ಕುಂಡಿ, ಕಾಶಿವಿಶ್ವೇಶ್ವರ). ಇಲ್ಲಿ ಆನೆ, ಹಂಸ, ಪದ್ಮ ಇತ್ಯಾದಿ ದೇವ–ದೇವತೆಗಳ ಉಬ್ಬು ಶಿಲ್ಪಗಳಿರುತ್ತವೆ. ಗದಗ, ಲಕ್ಕುಂಡಿ ಇತ್ಯಾದಿ ಕಡೆಗಳಲ್ಲಿ ಈ ಮಾದರಿ ಕಂಬಗಳನ್ನು ಮಿಶ್ರಕ ಸ್ತಂಭಗಳೆನ್ನುವರು. ಈ ಕಂಬಗಳನ್ನು ತಿರುಗುಣಿಯಿಂದ ನಿರ್ಮಿಸಿದ್ದು ಇವು ದುಂಡಾಗಿ, ನಯವಾಗಿ ಹೆಚ್ಚು ಮೆರುಗುಳ್ಳ ಘಂಟಾಕಾರದಲ್ಲಿವೆ. ಮೇಲ್ಭಾಗದಲ್ಲಿ ಸಣ್ಣ ವೃತ್ತ ಪಟ್ಟಿಕೆಗಳು, ಕುಂಡಾಕಾರದಲ್ಲಿ ಕುಂಭ ಮತ್ತು ಫಲಕಗಳಿವೆ (ಡಂಬಳದ ದೊಡ್ಡ ಬಸವೇಶ್ವರ, ಗದಗಿನ ಸರಸ್ವತಿ ಇತ್ಯಾದಿ).

ಮೂರನೆಯ ಮಾದರಿಯ ಕಂಬಗಳು ನಕ್ಷತ್ರಾಕಾರದಲ್ಲಿವೆ. ಇವು ಬಹುಕೋನಾ ಕೃತಿಯಲ್ಲಿವೆ (ಗದುಗಿನ ಸರಸ್ವತಿ, ನೀಲಗುಂದ ಭೀಮೇಶ್ವರ ಇತ್ಯಾದಿ). ಕೆಲವೆಡೆಗಳಲ್ಲಿ ಕಂಬಗಳ ಪಾದ ಭಾಗದ ಚೌಕ ಪಟ್ಟಿಕೆಗಳಲ್ಲಿ ಶಿಲ್ಪಗಳನ್ನು ಕೋಷ್ಠಗಳನ್ನು ನಿರ್ಮಿಸಿ ನಾಸಿಯುಕ್ತ ಪಂಜರಗಳನ್ನು ರಚಿಸಲಾಗಿದೆ. ಈ ಮಾದರಿಯ ಕಂಬಗಳನ್ನು ಕೋಷ್ಠಕಂಬ ಗಳೆನ್ನುವರು (ಗದುಗಿನ ಸರಸ್ವತಿ ಇತ್ಯಾದಿ). ಈ ಲಕ್ಷಣ ಹೊಯ್ಸಳರ ದೇವಾಲಯಗಳ ಕಂಬಗಳಲ್ಲಿ ಸಾಮಾನ್ಯ.ಕಂಬಗಳ ಕಾಂಡದ ಕೆಳಗಿನ ಚೌಕಪಟ್ಟಿಕೆಗಳಲ್ಲಿ ಕೆಲವೊಮ್ಮೆ ಕಂಬಗಳು ಉದ್ದವಾಗಿ ಮತ್ತು ನೀಳವಾಗಿವೆ (ನಾರಾಯಣಪುರ ಶಿವದೇವಾಲಯ ಇತ್ಯಾದಿ). ಈ ಕಂಬಗಳ ಮೇಲಿನ ಭಾಗಗಳಲ್ಲಿ ಮುಂಚಾಚಿದ ಬೋದಿಗೆಯನ್ನಾಧರಿಸಿ ಮದನಿಕೆಯರ ಶಿಲ್ಪಗಳನ್ನು ಜೋಡಿಸಲಾಗಿದೆ (ಕುರುವತ್ತಿ ಮಲ್ಲಿಕಾರ್ಜುನ, ನಾರಾಯಣಪುರ ಶಿವ ದೇವಾಲಯ ಇತ್ಯಾದಿ). ಈ ಲಕ್ಷಣವೂ ಹೊಯ್ಸಳ ದೇವಾಲಯದಲ್ಲಿ ಸಾಮಾನ್ಯ.

ಕೆಲವೊಮ್ಮೆ ಕಾಂಡದ ಚೌಕ ಪಟ್ಟಿಕೆಗಳಲ್ಲೂ ಕಥಾನಕ ಶಿಲ್ಪಗಳಿವೆ. ಪೌರಾಣಿಕ, ರಾಮಾಯಣ, ಮಹಾಭಾರತ, ಪಂಚತಂತ್ರ ಇತ್ಯಾದಿ ವಿಷಯಗಳಿಗೆ ಸೇರಿದ ಕತಾನಕ ಚಿತ್ರಗಳಿರುತ್ತವೆ. ಈ ಲಕ್ಷಣಗಳು ರಾಷ್ಟ್ರಕೂಟರ ಕಾಲದಲ್ಲಿ ಕಾಣುತ್ತವೆ. ಈ ಲಕ್ಷಣ ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ.11ನೆಯ ಶತಮಾನದ ಮಧ್ಯಭಾಗದವರೆಗೂ ವಿಸ್ತರಿಸಿದೆ. ಜೈನಬಸದಿಗಳಲ್ಲೂ ಶ್ರೀಕಾರ ಸ್ತಂಭಗಳಿವೆ. ವಿಶೇಷವೆಂದರೆ ಇಲ್ಲಿಯ ಕಂಬಗಳ ಪೀಠಭಾಗದಲ್ಲಿ ದರ್ಪಣ ಸುಂದರಿ, ನರ್ತಕಿ, ತಾಯಿ ಮತ್ತು ಮಗು (ಅಂಬಿಕ), ಕೊಳಲ ನುಡಿಸುವ ಗೋಪಾಲಕೃಷ್ಣ ಇತ್ಯಾದಿ ಶಿಲ್ಪಗಳಿವೆ (ಲಕ್ಕುಂಡಿ ಬ್ರಹ್ಮಜಿನಾಲಯ). ದೇವಾಲಯದ ತಳದಿಂದ ಶಿಖರದ ತುದಿಯ ಕಲಶದವರೆಗೆ ಅಧಿಷ್ಠಾನ, ಭಿತ್ತಿ, ಕಪೋತ, ಪ್ರಸ್ತಾರ, ಹಾರ ಮತ್ತು ಸ್ತೂಪಿ ಎಂದು ಶಿಲ್ಪಗ್ರಂಥಗಳಲ್ಲಿ ವಿಂಗಡಿಸಲಾಗಿದೆ.

ಅಧಿಷ್ಠಾನ: ಈ ಕಾಲದ ಅಧಿಷ್ಠಾನಗಳೂ ಸಾಮಾನ್ಯವಾಗಿ ಎರಡು ನಮೂನೆಗಳಲ್ಲಿವೆ. 1. ಎತ್ತರದ ಅಧಿಷ್ಠಾನ (90ರಿಂದ 1.20 ಸೆಂಮೀ ಎತ್ತರ), 2. ಎತ್ತರದ ಜಗತಿ, ಇದರ ಮೇಲೆ ಅಧಿಷ್ಠಾನದಲ್ಲಿ ಹಿಂಚಾಚು ಮತ್ತು ಮುಂಚಾಚುಗಳು ಸಾಮಾನ್ಯ. ಕೆಲವು ತಳ ವಿನ್ಯಾಸಗಳಲ್ಲಿ ಎಲ್ಲ ಪಾರ್ಶ್ವಗಳಲ್ಲಿ ಏಕಪ್ರಕಾರವಾಗಿ ಮುಂಚಾಚುತ್ತ ಹೋಗುತ್ತದೆ. ಇವುಗಳ ಸಂಖ್ಯೆಗಳಿಗನುಗುಣವಾಗಿ ತಳವಿನ್ಯಾಸವನ್ನು ತ್ರಿರಥ, ಪಂಚರಥ, ಸಪ್ತರಥ ಎಂದು ವರ್ಗೀಕರಿಸಲಾಗಿದೆ. ಈ ಕಾಲದ ದೇವಾಲಯ ಭಿತ್ತಿಗಳು ಹೆಚ್ಚಾಗಿ ತ್ರಿರಥ ಮಾದರಿಯಲ್ಲಿವೆ. ಕೆಲವು ಪಂಚರಥ ಮಾದರಿಯಲ್ಲಿವೆ. ಈ ಹಿಂಚಾಚು–ಮುಂಚಾಚು ಅಧಿಷ್ಠಾನದಿಂದ ಆರಂಭವಾಗಿ ಮೇಲಿನ ಭಿತ್ತಿ ಹಾರ ಇಲ್ಲವೆ ಶಿಖರದ ತುದಿಯವರೆಗೂ ಏರಿಸಲಾಗಿರುತ್ತದೆ. ಇದನ್ನು ಗರ್ಭಗೃಹದ ಹೊರಮೈಯಿಗೆ ಸೀಮಿತವಾಗಿರುತ್ತದೆ. ಇದೇ ಲಕ್ಷಣವು ಅಂತರಾಳ ಮತ್ತು ಸಭಾಮಂಡಪದ ಅಧಿಷ್ಠಾನ–ಹಾರದಲ್ಲಿಯೂ ಕಾಣುತ್ತದೆ.

ಅಧಿಷ್ಠಾನದ ಅಡ್ಡಪಟ್ಟಿಕೆಗಳು ಮಡಿಕೆಗಳನ್ನು ಉಪಾನ, ಜಗತಿ, ಕಂಪ, ಕಂಠ, ಕಪೋತ ಜಟ್ಟಿ ಎಂದು ವಿಂಗಡಿಸಬಹುದು. ಇತ್ತೀಚೆಗೆ ಈ ಹೆಸರುಗಳ ಬದಲಿಗೆ ಖುರಕ, ಪದ್ಮ, ಅಂತರೀತ, ತ್ರಿಪಟ್ಟಕುಮುದ, ವಲ್ಲಿ, ಕುಂಭ, ಕಪೋತ ಮತ್ತು ವೇದಿಗಳಿಂದ ಇನ್ನೂ ನಿಖರವಾದ ಹೆಸರುಗಳಿಂದ ಕರೆಯುವುದು. ದೇವಾಲಯದ ಶಿಖರದ ನಮೂನೆಯನ್ನು ಈಗ ಇಲ್ಲದಿದ್ದರೂ ಅಧಿಷ್ಠಾನದ ಪಟ್ಟಿಕೆ ಲಕ್ಷಣಗಳಿಂದ ಗುರುತಿಸಲು ಸಾಧ್ಯವಾಗುವುದು.

ಈ ಕಾಲದ ಅಧಿಷ್ಠಾನಗಳನ್ನು ಎರಡು ಕಾಲಘಟ್ಟಗಳಲ್ಲಿ ವಿಭಾಗಿಸಬಹುದು. ಒಂದು ಆರಂಭಿಕಹಂತ (ರಾಷ್ಟ್ರಕೂಟ–ಕಲ್ಯಾಣಚಾಳುಕ್ಯರ ಪರಿವರ್ತನ ಹಂತ) ಮೊದಲ ಹಂತದ ಲಕ್ಷಣಗಳಲ್ಲಿ ಅಲಂಕಾರಕ್ಕೆ ಹೆಚ್ಚು ಒತ್ತನ್ನು ನೀಡಿಲ್ಲ. ಆದರೆ ಕಿರುಶಿಲ್ಪಗಳು ಮೊದಲು ಕಾಣುತ್ತವೆ. ನಂತರ ಪುಷ್ಪ ಅಲಂಕರಣವಿರುತ್ತವೆ. ಹಾಗೂ ಜಗತಿಯಿರುವುದು ವಿರಳ. ಎರಡನೆಯ ಹಂತದಲ್ಲಿ ಅಲಂಕರಣೆಗೆ ಹೆಚ್ಚು ಒತ್ತನ್ನು ನೀಡಲಾಗಿದೆ. ಖುರಕದಲ್ಲಿ ಕಲ್ಪಲತಾ ಸುರಳಿ (ಚೌಡದಾನಪುರದ ಮುಕ್ತೇಶ್ವರ), ಪದ್ಮ ಪಟ್ಟಿಕೆಯಲ್ಲಿ ಅಲ್ಲಲ್ಲಿ ಸ್ತಂಭ ಶಿಖರಗಳು ಅಥವಾ ನಾಸಿ, ಕಿರು ಶಿಲ್ಪಗಳಿರುತ್ತವೆ (ನಾರಾಯಣಪುರದ ಶಿವ, ಕಾಳಗಿಯ ರೇವಣಸಿದ್ದೇಶ್ವರ ಇತ್ಯಾದಿ), ಕಪೋತ ಬುಡದ ದಂತಪಂಕ್ತಿ ಅಥವಾ ಮಕರ ಪಂಕ್ತಿ ಸಾಮಾನ್ಯ ಎರಡನೆಯ ಹಂತದಲ್ಲಿ ವ್ಯಾಳ, ಕೀರ್ತ ಮುಖ, ದೇವ–ದೇವತೆಗಳು ಇತ್ಯಾದಿ ಶಿಲ್ಪಲಾಂಕಾರಗಳು ಒಳಗೊಂಡಿರುತ್ತವೆ (ಮಾಗಳದ ವೇಣುಗೋಪಾಲ, ಲಕ್ಷ್ಮೇಶ್ವರ ಶಂಖ ಬಸದಿ, ಇತ್ಯಾದಿ). ಖುರಕ, ಪದ್ಮ ಪತ್ರ, ಅಂತರೀತ, ಕುಮುದ ಮತ್ತು ಗಜತರ, ಅಶ್ವತರ ಮತ್ತು ಯಾಳಿಯಂಥ ಒಳಗೊಂಡಿರುತ್ತವೆ (ಗದಗಿನ ಸೋಮೇಶ್ವರ, ಡಂಬಳದ ದೊಡ್ಡ ಬಸಪ್ಪ ಇತ್ಯಾದಿ). ಈ ಪಟ್ಟಿಕೆಗಳು ಕೆಳಗಿನಿಂದ ಮೇಲಕ್ಕೆ ಹೋದಂತೆ ಹಿಂದಕ್ಕೆ ಸರಿಯುತ್ತ ಹೋದರೆ ಈ ರೀತಿಯ ದೇವಾಲಯವನ್ನು ಔತ್ತರೇಯ (ನಾಗರ) ಮಾದರಿ ಎನ್ನುವರು (ನಾರಾಯಣಪುರ ಶಿವ, ಕಾಳಗಿ ಸಿದ್ದೇಶ್ವರ, ಮಲ್ಲಿಕಾರ್ಜುನ, ಲಕ್ಕುಂಡಿ ಕಾಶಿ ವಿಶ್ವೇಶ್ವರ, ಇತ್ಯಾದಿ). ಈ ಮಾದರಿಯ ಹೆಚ್ಚಿನ ದೇವಾಲಯಗಳು ಬಿಜಾಪುರ, ಗುಲ್ಬರ್ಗ, ಬೆಳಗಾಂವಿ, ಬೀದರ ಜಿಲ್ಲೆಗಳಲ್ಲಿ ಮತ್ತು ದಕ್ಷಿಣದ ಮಹಾರಾಷ್ಟ್ರದಲ್ಲಿ ಕಾಣುತ್ತವೆ. ಗಜಪೀಠದ ಲಕ್ಷಣ ಕರ್ನಾಟಕದಲ್ಲಿ ವಿರಳ. ಇದರ ಉಗಮ ಗುಜರಾತ ಪ್ರದೇಶದಲ್ಲಿ ಕಾಣುತ್ತದೆ. ಕೆಲವು ದೇವಾಲಯಗಳ ಅಧಿಷ್ಠಾನದ ಬುಡದಲ್ಲಿ ಎತ್ತರದ ಜಗತಿಗಳಿವೆ (ಲಕ್ಕುಂಡಿಯ ಲಕ್ಷ್ಮೇಶ್ವರ ಜೈನ ಬಸದಿ). ಜಗತಿಯನ್ನು ನಕ್ಷತ್ರಾಕಾರದಲ್ಲಿ ರಚಿಸಿದ ಅಪರೂಪದ ನಿದರ್ಶನ ಕಾಳಗಿಯ ಮಲ್ಲಿಕಾರ್ಜುನರಲ್ಲಿ ಕಾಣಬಹುದು.

ಭಿತ್ತಿ: ದೇವಾಲಯದ ಗರ್ಭಗುಡಿ ಮತ್ತು ಸಭಾಮಂಟಪದ ಗೋಡೆಗಳ ಮಧ್ಯದ ಹೊರ ಮೈಯಲ್ಲಿ ದೇವಕೋಷ್ಠಗಳಿರಬಹುದು. ಆದ್ದರಿಂದ ಈ ಭಾಗವನ್ನು ಭದ್ರ ಎಂದು ಕರೆಯಲಾಗಿದೆ. ಇದರ ಎಡ–ಬಲ ಬದಿಯಲ್ಲಿ ಸ್ತಂಭ, ಸ್ತಂಭಪಂಜರ ಮತ್ತು ಕೋಷ್ಠ ಪಂಜರಗಳಿರುತ್ತವೆ. ಮುಂಚಾಚುತಳ ಕೋನಗಳಲ್ಲಿ ಕುಡ್ಯ ಸ್ತಂಭಗಳಿವೆ. ಸಲಿಲಾಂತರದಲ್ಲಿ ಅಂದರೆ ಹಿಂಚಾಚುವಿನಲ್ಲಿ ಸ್ತಂಭ ಪಂಜರಗಳಿವೆ. ಮೇಲೆ ಲವನ ಮಾದರಿಯ ಶಿಖರ ಪ್ರತಿಕೃತಿಗಳಿವೆ. ಕೆಲವೆಡೆ ದೇವಕೋಷ್ಠಗಳ ಬದಿಗಳಲ್ಲಿ ಕಥಾನಕ ಉಬ್ಬ ಶಿಲ್ಪಗಳಿವೆ (ಲಕ್ಕುಂಡಿಯ ಕಾಶೀವಿಶ್ವೇಶ್ವರ). ಗರ್ಭಗೃಹದ ಹೊರ ಭಿತ್ತಿಯ ಮೂರು ಕಡೆಗಳಲ್ಲಿ ದೇವಕೋಷ್ಠಗಳು ಸಾಮಾನ್ಯ.

ಈ ಕಾಲದ ಈ ರೀತಿಯ ದೇವಾಲಯಗಳ ಗೋಡೆಗಳು ನಾಲ್ಕು ಮಾದರಿಯಲ್ಲಿವೆ: ಸರಳ ಮಾದರಿ, ಹಿಂಚಾಚು ಮುಂಚಾಚುಗಳ ಮಾದರಿ, ನಕ್ಷತ್ರಾಕಾರ ಮಾದರಿ ಮತ್ತು ಅರೆನಕ್ಷತ್ರಾಕಾರ ಮಾದರಿ. ಈ ಲಕ್ಷಣಗಳನ್ನು ಎರಡು ಕಾಲಮಾನಗಳ ಹಂತಗಳನ್ನಾಗಿ ವಿಂಗಡಿಸಬಹುದು: ರಾಷ್ಟ್ರಕೂಟ–ಕಲ್ಯಾಣ ಚಾಳುಕ್ಯರ ಕಾಲದ ಪರಿವರ್ತನೆಯ ಹಂತ, ಕಲ್ಯಾಣ ಚಾಳುಕ್ಯರ ಕಾಲದ ಹಂತ. ಹಾಗೆಯೇ ಭಿತ್ತಿಯಲ್ಲಿ ತ್ರಿರಥ, ಪಂಚರಥ ಮತ್ತು ಷಟ್ ರಥದಲ್ಲಿಯೂ ಇರುತ್ತವೆ. ಕೆಲವೊಮ್ಮೆ ಸಭಾಮಂಟಪ ಮತ್ತು ಗರ್ಭಗೃಹ ಭಿತ್ತಿ

ತುದಿಯ ಕಪೋತದಲ್ಲಿ ಸುತ್ತಲೂ ಹಂಸ ಪಕ್ಷಿಗಳ ಸಾಲಿದೆ. ಕೆಲ ಭಿತ್ತಿಗಳು ಸರಳವಾಗಿವೆ ಯಾವ ಸ್ತಂಭಗಳಿರುವುದಿಲ್ಲ. ಕೇವಲ ಗರ್ಭಗೃಹದ ಹೊರ ಭಿತ್ತಿಯ ಮೂರು ಮುಖಗಳಲ್ಲಿ ಶಿಖರವುಳ್ಳ ದೇವಕೋಷ್ಠಗಳಿವೆ. ಕೆಲವೊಂದರಲ್ಲಿ ಸರಳ ಭಿತ್ತಿಯ ಮಧ್ಯದಲ್ಲಿ ಅಡ್ಡ ಕಿರುಪಟ್ಟಿಕೆಯಿರುತ್ತದೆ. ತಂಬೂರಿನ ಬಸವೇಶ್ವರ, ಕುಪಟೂರಿನ ರಾಮೇಶ್ವರ ಇತ್ಯಾದಿ. ಕೆಲವೊಮ್ಮೆ ಆಳವಾದ ದೇವಕೋಷ್ಠಗಳ ಬದಲು ಕೇವಲ ಪಂಜರದಂತಹ ಎತ್ತರದ ಕಂಬಗಳ ಮೇಲೆ ಭವ್ಯವಾದ ಶಿಖರವಿರುತ್ತದೆ. ಇಕ್ಕೆಲಗಳ ಹಿಂಚಾಚುಗಳಲ್ಲಿ ಸ್ತಂಭ ಶಿಖರಗಳಿವೆ. ಈ ಶಿಖರಗಳು ದ್ರಾವಿಡ, ನಾಗರ, ರೇಖನಾಗರ, ಶಾಲ ಮತ್ತು ಫಾಂಸನ ಮಾದರಿಯಲ್ಲಿರುತ್ತವೆ. ಇಂಥಹ ಕೆಲವು ನಮೂನೆಗಳಿರುವುದನ್ನು ಬೆಳಗಾಂವಿ ಜಿಲ್ಲೆಯ ಕೊಣ್ಣೂರಿನ ಬಸದಿ, ಕೋಟುಮಚಿಗಿಯ ಸೋಮೇಶ್ವರ, ಕುಕ್ಕನೂರಿನ ನವಲಿಂಗೇಶ್ವರ ಇತ್ಯಾದಿ ಕಡೆಗಳಲ್ಲಿ ಕಾಣಬಹುದು. ಕೆಲವೆಡೆ ಸ್ತಂಭ ಶಿಖರಗಳ ಮೇಲೆ ಉದ್ದವಾದ ಮಕರ ತೋರಣದ ಅಲಂಕರಣವಿದೆ. ಮೇಲ್ಗಡೆ ಕೀರ್ತಿ ಮುಖಗಳಿವೆ (ಲಕ್ಕುಂಡಿ ನಾಗನಾಥ). ಕೆಲವೆಡೆ ಕಥಾನಕ ಅಥವಾ ಪೌರಾಣಿಕ ಶಿಲ್ಪಗಳನ್ನು ಕಂಡರಿಸಲಾಗಿದೆ (ಲಕ್ಕುಂಡಿ, ಗದಗ, ಚೌಡದಾಪುರ).

ಮೂರನೆಯ ಮಾದರಿಯಲ್ಲಿ ಹಿಂಚಾಚು-ಮುಂಚಾಚುಗಳು ಸರಳವಾಗಿವೆ. ಮುಂಚಾಚುಗಳ ಅಂಚುಗಳಲ್ಲಿ ಕಿರು ಪೆಟ್ಟಿಕೆಗಳಿವೆ. ಮುಂಚಾಚು ಹೆಚ್ಚು ಅಗಲವಾಗಿವೆ. ಇವುಗಳ ಮೇಲೆ ಶಿಲ್ಪಗಳು ಅನಂತರ ಅಡ್ಡ ಪೆಟ್ಟಿಕೆಗಳು ಏಕಸಾಲಿನಲ್ಲಿ ಸುತ್ತುವರಿದಿವೆ. ಆದರೆ ಗರ್ಭಗೃಹದ ಹೊರ ಭಿತ್ತಿಯ ಮೂರು ಕಡೆಗಳಲ್ಲಿ ಮೂರು ದೇವಕೋಷ್ಠಗಳು ಕಿರು ದೇವಾಲಯದಷ್ಟು ಎತ್ತರವಿದೆ. ಈ ದೇವಕೋಷ್ಠಗಳ ಮುಂಚಾಚು (ಭದ್ರಭಾಗ)ದಲ್ಲಿ ಯಾವ ಶಿಲ್ಪಗಳಿರುವುದಿಲ್ಲ. ಇಕ್ಕೆಲ ಭಾಗದ ಮುಂಚಾಚು ಹಿಂಚಾಚುಗಳಲ್ಲಿ ದೇವಾನು ದೇವತೆಗಳು, ಆಲಸ ಕನ್ಯೆಯರು, ಅಪ್ಸರೆಯರು ಇತ್ಯಾದಿ ಪೀಠವುಳ್ಳ ಶಿಲ್ಪಗಳಿವೆ. ಈ ಮಾದರಿಯು ಹೆಚ್ಚಾಗಿ ಔತ್ತರೇಯ ಅಥವಾ ಶೇಖರಿ ಮಾದರಿಯ ಸೂಚನೆಗಳಿದ್ದು ಇವುಗಳು ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದಲ್ಲಿವೆ (ನಾರಾಯಣ ಶಿವದೇವಾಲಯ). ಆದರೆ ದಾಕ್ಷಿಣಾತ್ಯ ಮಾದರಿಯಲ್ಲಿ ಅರೆಗಂಬಗಳು ಅಗಲವಾಗಿದೆ. ಮುಂಚಾಚು ಹಿಂಚಾಚುಗಳಲ್ಲಿ ಹೆಚ್ಚಾಗಿ ಪಂಜರ, ಕೋಷ್ಠಪಂಜರ, ಸ್ತಂಭ ಶಿಖರಗಳಿವೆ (ಕುರುವತ್ತಿಮಲ್ಲಿಕಾರ್ಜುನ, ಕುಬಟೂರು ಇತ್ಯಾದಿ). ಕೆಲವೆಡೆ ಭಿತ್ತಿಯಲ್ಲಿ ಸರಳ ಹಿಂಚಾಚು-ಮುಂಚಾಚುಗಳಿದ್ದು ದೇವಕೋಷ್ಠದ ಬದಲು ಕೇವಲ ಕುಡ್ಯಸ್ತಂಭಗಳ ಮೇಲೆ ಶಿಖರಗಳಿವೆ. ಬದಿಗಳಲ್ಲಿ ಶಿಖರವುಳ್ಳ ಅರೆಗಂಬಗಳು ದಪ್ಪವಿದೆ (ಶಿರೂರಿನ ಸಿದ್ಧೇಶ್ವರ). ಕೆಲವೊಮ್ಮೆ ಭಿತ್ತಿಯ ಪಂಜರದ ನಡುವೆ ಆನೆಗಳ ಶಿಲ್ಪಗಳಿವೆ (ಮುಳಗುಂದದ ಜೈನ ಬಸದಿ). ಕೆಲವೆಡೆ ಸರಳ ಭಿತ್ತಿಯ ಅರೆಗಂಬಗಳಲ್ಲಿ ಸಮಾಂತರ ಪಟ್ಟಿಕೆಗಳಿದ್ದು ನಡುವಿನ ಪಟ್ಟಿಕೆಯಲ್ಲಿ ಪದ್ಮಲತೆಯಿದೆ (ಮುತ್ತಿಗಿಯ ವಿಠಲ ಇತ್ಯಾದಿ).

ಶಿಲ್ಪಗಳ ವೈವಿಧ್ಯತೆಯಲ್ಲಿ ಕೆಲವೆಡೆ ಕಾಳಾಮುಖ ಪರಂಪರೆ, ಜೈನ ಪೌರಾಣಿಕ ಅಂಶಗಳು ಇದ್ದರೆ ಕೆಲವೊಮ್ಮೆ ಭಕ್ತರು ಇತ್ಯಾದಿ ಚಿತ್ರಗಳು ಒಳಗೊಂಡಿವೆ. ನೀಲಗುಂದದ ನೀಲಕಂಠೇಶ್ವರ ಭಿತ್ತಿಯಲ್ಲಿ ತೋರಿಸಿದ ಅನೇಕ ದೇವ-ದೇವತೆಗಳಲ್ಲದೆ ಕೈಯಲ್ಲಿ ಕೋಲು ಮತ್ತುಗಿಣಿಯನ್ನು ಹಿಡಿದ, ಕೋಟನ್ನು ಧರಿಸಿದ ಗಡ್ಡಧಾರಿಯ ಶಿಲ್ಪವಿರುತ್ತದೆ. ಸಭಾಮಂಟಪದ ಭಿತ್ತಿಗಳಲ್ಲಿ ವಿವಿಧ ರೀತಿಯ ಜಾಲಂಧ್ರಗಳಿವೆ (ಕಾಳಗಿ ಬಸದಿ, ಮೊಗಳ ವೇಣುಗೋಪಾಲ). ಭಿತ್ತಿಯ ಮೇಲಂಚಿನಲ್ಲಿ ಕಪೋತವೆಂದು ಕರೆಯಲಾದ ಭಿತ್ತಿಯಿಂದ ಮುಂಚಾಚಿದ ಮಾಡು ಇರುತ್ತದೆ. ಒಳಬದಿಯಲ್ಲಿ ಕಪೋತ ಪಕ್ಷಿಗಳ ಸಾಲು ಇರುತ್ತದೆ. ಮಾಡಿನ ಮೇಲೆ ಅಂಚಿನುದ್ದಕ್ಕೂ ಶಾಲಾ-ಕೂಟ-ಸಲಿಲಾಂತರಗಳ ಕಟಾಂಜನವಿರುತ್ತದೆ. ಇದನ್ನು ಹಾರ ಎಂದು ಕರೆಯಲಾಗಿದೆ. ಕಪೋತ ಹಾರದ ನಡುವೆ ಅಡ್ಡ ಫಲಕವಿರುತ್ತದೆ.

ಶಿಖರ: ಗರ್ಭಗೃಹದ ಮೇಲೆರಿಸಿ ಕಟ್ಟಿದ ರಚನೆಗಳು ವಿವಿಧ ಮಾದರಿಯಲ್ಲಿ ಕಂಡು ಬಂದಿವೆ. ಇವುಗಳು ದ್ರಾವಿಡ, ನಾಗರ, ವೇಸರ, ಫಾಂಸನ, ಭೂಮಿಜ, ರೇಖಾನಾಗರ ಮಾದರಿಗಳಾಗಿವೆ. ದ್ರಾವಿಡ ಮಾದರಿಯಲ್ಲಿ ಗರ್ಭಗುಡಿಯ ಮೇಲೆ ಸುತ್ತಲೂ ಸ್ವಲ್ಪ ಸ್ಥಳವನ್ನು ಬಿಟ್ಟು ಒಂದರ ಮೇಲೊಂದರಂತೆ ಕಿರುದಾಗುತ್ತ ಹೋಗುವ ಗರ್ಭಗುಡಿ ಮಾದರಿಯ ಅಂತಸ್ತುಗಳಿರುತ್ತವೆ. ಸಾಮಾನ್ಯವಾಗಿ ಈ ರೀತಿಯ ಎರಡು ಮೂರು ತಳಗಳು (ಮಹಡಿಗಳು) ಇರುತ್ತವೆ. ತುದಿಯಲ್ಲಿ ಸ್ತೂಪಿ ಇಲ್ಲವೆ ಶಿಖರವೆಂದು ಕರೆಯಲಾದ ಘಂಟಾಕೃತಿಯ ಚೌಕೋನ ಇಲ್ಲವೆ ಅಷ್ಟಕೋನ ಇಲ್ಲವೆ ವೃತ್ತಾಕೃತಿಯಿರುತ್ತದೆ. ಸಲಿಲಾಂತರಗಳಲ್ಲಿ ಪ್ರಾಣಿಗಳ ಚಿತ್ರಗಳಿರುತ್ತವೆ (ಕಪಿಗಳು-ಹಂಸಗಳು). ಇನ್ನುಳಿದ ಮಹಡಿಗಳಲ್ಲಿ ಇದೇ ಲಕ್ಷಣಗಳು ಮುಂದುವರಿದಿರುತ್ತವೆ. ಅಂತಸ್ತುಗಳ ಮುಂಭಾಗದಲ್ಲಿ ಗಿಳಿಮೂಗಿನಂಥ ಸುಕನಾಸಿಯೆಂಬ ಗೂಡಿನ ಅಲಂಕರಣೆ ಇರುತ್ತದೆ. ಇದರಲ್ಲಿ ಗರ್ಭಗೃಹದಲ್ಲಿ ಸ್ಥಾಪಿಸಿದ ದೇವರಿಗೆ ಸಂಬಂಧಿಸಿದ ಶಿಲ್ಪವಿರುತ್ತದೆ. ಈ ಮಾದರಿ ಶಿಖರವು ದ್ರಾವಿಡ ಮಾದರಿಯಾಗಿದ್ದರೂ ಕೆಲವು ಭೂಮಿಜ ಶೈಲಿಯ ಲಕ್ಷಣಗಳು ಒಳಗೊಂಡಿರು ತ್ತವೆ (ಲಕ್ಕುಂಡಿ ಕಾಶಿವಿಶ್ವೇಶ್ವರ ಸೂರ್ಯ ದೇವಾಲಯ ಇತ್ಯಾದಿ). ಇದರ ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗೃಹ ನಿರ್ಮಿಸಿರುವುದು ಕೇವಲ ಜೈನ ಬಸದಿಗಳಲ್ಲಿ ಕಾಣುತ್ತವೆ (ಲಕ್ಕುಂಡಿಯ ಬ್ರಹ್ಮ ಜಿನಾಲಯ). ಲಕ್ಷ್ಮೇಶ್ವರದ ಬಸದಿಯ ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗೃಹವಿದೆ.

(ಆರ್.ಎಂ.ಎಸ್.)

**ಇತರ ಚಾಳುಕ್ಯ ಶಾಖೆಗಳು:** ಬಾದಾಮಿಯ ಚಳುಕ್ಯರ ಆಳಿಕೆ ಕೊನೆಗೊಂಡು, ಕರ್ನಾಟಕದಲ್ಲಿ ರಾಷ್ಟ್ರಕೂಟರ ಆಳಿಕೆ ಆರಂಭವಾದಾಗ ಚಾಳುಕ್ಯರು ಸ್ವಲ್ಪ ಕಾಲ ತೆರೆಯ ಮರೆಯಲ್ಲಿದ್ದರು. ಆಗ ಈ ಮನೆತನದ ಹಲವಾರು ಶಾಖೆಗಳು, ಬೇರೆ ಬೇರೆ ಕಡೆ ಸಣ್ಣ ಪುಟ್ಟ ಅಧಿಕಾರಗಳನ್ನು ಹೊಂದಿದ್ದು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವು. ವೆಂಗಿಯ ಚಾಳುಕ್ಯ, ವೇಮುಲವಾಡ ಚಾಳುಕ್ಯ, ಗುಜರಾತಿನ ಚಾಳುಕ್ಯ ವಂಶಗಳು ಸಹ ಈ ಮನೆತನಕ್ಕೆ ನೇರವಾಗಿ ಸಂಬಂಧಿಸಿದವು. ಕನಾಟಕದ ಹೊರಗೆ ಆಳಿದ ಚಾಳುಕ್ಯವಂಶದ ಶಾಖೆಗಳು ಅಲ್ಲದೆ ಕರ್ನಾಟಕದಲ್ಲಿದ್ದ ಕೆಲವು ಚಾಳುಕ್ಯ ಶಾಖೆಗಳು, ವ್ಯಕ್ತಿಗಳು ಶಾಸನಗಳ ಮೂಲಕ ಬೆಳಕಿಗೆ ಬಂದಿದ್ದಾರೆ.

ಚಾಳುಕ್ಯ ವಂಶಕ್ಕೆ ಸೇರಿದ ಪರಹಿತರಾಜನೆಂಬಾತ ಬೆಳಗಾಂವಿ ಜಿಲ್ಲೆಯ ಕೋಟೂರು ಗ್ರಾಮದ ಶಾಸನವೊಂದರಲ್ಲಿ ಕಾಣಿಸಿಕೊಂಡಿದ್ದಾನೆ. ಶಾಸನದ ಕಾಲ ಸು. 9ನೆಯ ಶತಮಾನ. ರಾಷ್ಟ್ರಕೂಟ ಪ್ರಭೂತವರ್ಷನ 812ರ ತಾಮ್ರ ಶಾಸನದಲ್ಲಿ ಚಾಳುಕ್ಯಾನ್ವಯಕ್ಕೆ ಸೇರಿದ ವಿಮಲಾದಿತ್ಯನೆಂಬಾತ ಹೆಸರಿಸಲ್ಪಟ್ಟಿದ್ದಾನೆ. ಈತನ ತಂದೆ ರಾಜನ್ ಎಂದು ಬಿರುದಾಂಕಿತನಾದ ಯಶೋವರ್ಮ; ತಾತ ಬಲವರ್ಮ ನರೇಂದ್ರ. ಗಂಗಮಂಡಲದ ಅಧಿರಾಜನೆನಿಸಿದ ಚಾಕಿರಾಜ ಈತನ ಸೋದರಮಾವ. ಈತ ಕುಣುಂಗಿಲ ದೇಶವನ್ನು ಆಳುತ್ತಿದ್ದ.

ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ 951ರ ಹಿರೇಕೋಗಿಲೂರಿನ ತಾಮ್ರಶಾಸನದಲ್ಲಿ ಅರಸನ ಮಾಂಡಲಿಕನಾಗಿ ಕದಂಬಳಿಗೆ 1000 ಪ್ರಾಂತ್ಯವನ್ನು ಆಳುತ್ತಿದ್ದ ಚಾಳುಕ್ಯ ರಾಜಾದಿತ್ಯನ ವಂಶಾವಳಿಯನ್ನು ಕೊಟ್ಟಿದೆ. ಅದು ಹೀಗಿದೆ: ಮೊದಲನೆಯ ರಾಜಾದಿತ್ಯನು ಕಾಕಲವರ್ಷನ ಮಗಳನ್ನು ಮದುವೆಯಾದನೆಂದಿದೆ. ಈತ ಮೇಡೂರಿನಲ್ಲಿ ದೊರೆತ ಮುಮ್ಮಡಿ ಗೋವಿಂದನ ಶಾಸನದಲ್ಲಿ ಉಕ್ತನಾದ ಪರಮೇಶ್ವರನಿಯೋಗಿ ನನ್ನಿಚಳುಕಿ ಎನಿಸಿಕೊಂಡ ರಾಜಾದಿತ್ಯನಾಗಿರಬಹುದು. ಹೀರೇಕೋಗಿ ಲೂರಿನ ಶಾಸನದಲ್ಲಿ ಇಮ್ಮಡಿ ರಾಜಾದಿತ್ಯನನ್ನು ನನ್ನಿಕ ಎಂದು ವರ್ಣಿಸಲಾಗಿದೆ. ಈ ಶಾಸನದಲ್ಲಿ ಚಾಳುಕ್ಯರ ಮೂಲವನ್ನು ಕುರಿತು ಒಂದು ಪೌರಾಣಿಕ ಕಥೆ ಹೇಳಿದೆ. ದ್ರೋಣನ ಮಗನಾದ ಅಶ್ವತ್ಥಾಮ ಸಂಧ್ಯಾಸಮಯದಲ್ಲಿ ಮಂತ್ರಪೂತವಾದ ಗಂಗಾಜಲವನ್ನು ಬೊಗಸೆಯಿಂದ ಚೆಲ್ಲಿದಾಗ ಚಳುಕಿ ಎಂಬ ವೀರಹುಟ್ಟಿದನೆಂದೂ ಅವನು ಶತ್ರುಗಳನ್ನು ಹೊಡೆದೋಡಿಸಬಲ್ಲವನಾದ ಕಾರಣ (ಚಾಳಯತಿ)ಅವನಿಗೆ ಆ ಹೆಸರು ಬಂತೆಂದೂ ಹೇಳಿದೆ. ಈ ತಾಮ್ರ ಶಾಸನದ ಮುದ್ರೆಯಲ್ಲಿ ವರಾಹದ ಚಿತ್ರವಿದೆ. ಮೈಸೂರು ಜಿಲ್ಲೆಯ ವರುಣ ಗ್ರಾಮದಲ್ಲಿ ದೊರೆತ ಶಾಸನವೊಂದರಲ್ಲಿ ಮಹಾಸಾಮಂತ ನರಸಿಂಹನನ್ನು ಚಾಳುಕ್ಯ ವಂಶಲಲಾಮನೆಂದು ಕರೆದಿದೆ. ಈತನ ಪತ್ನಿ ಗಾವಿಲಬ್ಬರಸಿ. ಇದೇ ಗ್ರಾಮದ ಇನ್ನೂ ಕೆಲವು ಶಾಸನಗಳಲ್ಲಿ ಚಾಳುಕ್ಯಾನ್ವಯಕ್ಕೆ ಸೇರಿದ ಗೊಗ್ಗಿ ಎಂಬಾತನ ಉಲ್ಲೇಖವಿದೆ.

ಚಿತ್ರದುರ್ಗ ಜಿಲ್ಲೆಯ ಬೇವಿನಹಳ್ಳಿಯ ಶಾಸನದಲ್ಲಿ ಚಾಳುಕ್ಯ ಸರ್ವಜ್ಞನೆಂದು ಕರೆಯಲಾದ ಪಂದಿಗನ ವಂಶಾವಳಿ ಈ ರೀತಿ ಇದೆ:




ಇದೇ ಜಿಲ್ಲೆಯ ಇನ್ನೂ 3-4 ಶಾಸನಗಳಲ್ಲಿ ಪಂದಿಗನ ಹೆಸರು ಕಾಣಸಿಗುತ್ತದೆ.

(ಬಿ.ಆರ್.ಜಿ.)

**ಚಿಚಲಿ:** ಮಧ್ಯಪ್ರದೇಶ ರಾಜ್ಯದ ಖರ್ಗಾಂವ್ ಜಿಲ್ಲೆಯ ಖಸ್ರವಾಡ ತಾಲ್ಲೂಕಿನಲ್ಲಿರುವ ತಾಮ್ರ-ಶಿಲಾಯುಗ ಮತ್ತು ಆದಿ ಚಾರಿತ್ರಿಕ ಕಾಲದ ವಸತಿ ನೆಲೆ. ನರ್ಮದಾ ನದಿ ಎಡದಂಡೆಯ ಮೇಲಿರುವ ಈ ನೆಲೆಯಲ್ಲಿ ಎರಡು ಪುರಾತನ ದಿಬ್ಬಗಳಿವೆ. ಮುಖ್ಯ ದಿಬ್ಬ ಕುದುರೆ ಗೊರಸಿನ ಆಕಾರದಲ್ಲಿದ್ದು 100×90 ಮೀ ವಿಸ್ತಾರವಿದೆ. ಮತ್ತೊಂದು ದಿಬ್ಬ ಪಶ್ಚಿಮದಲ್ಲಿ 60ಮೀ ಎತ್ತರವಿದ್ದು 40×30 ಮೀ ವಿಸ್ತೀರ್ಣವಾಗಿದೆ. ಈ ನೆಲೆ

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಅನ್ವೇಷಣೆಯಲ್ಲಿ 1996–97ರಲ್ಲಿ ಬೆಳಕಿಗೆ ಬಂದಿತು. 1998–2000ದರ ನಡುವೆ ಎಸ್.ಕೆ.ಮಿತ್ರ ಅವರ ತಂಡ ಮುಖ್ಯ ದಿಬ್ಬದಲ್ಲಿ ಉತ್ಖನನ ನಡೆಸಿ ಅಲ್ಲಿ ನಾಲ್ಕು ಅನುಕ್ರಮ ಸಾಂಸ್ಕೃತಿಕ ಹಂತಗಳನ್ನು ಗುರುತಿಸಿತು.

ಒಂದನೆಯ ಹಂತದಲ್ಲಿ ಮೊದಲು ನೆಲೆಯೂರಿದವರು ಅಹಾರ್ ಸಂಸ್ಕೃತಿಯವರು. ಇವರ ಮನೆಗಳು 50–70 ಸೆಂಮೀ ದಪ್ಪದ ಮಣ್ಣಿನ ಗೋಡೆಗಳಿಂದ ಕಟ್ಟಿದವಾಗಿದ್ದು ನೆಲವೂ ಮಣ್ಣಿನದೇ ಆಗಿವೆ. ಮನೆಯ ಸುತ್ತಲೂ ಸರಾಸರಿ 55–60ಸೆಂಮೀ ದಪ್ಪದ ಮಣ್ಣಿನ ಗೋಡೆಯ ಪ್ರಾಕಾರವಿತ್ತು, ಸರಾಸರಿ ಅಂತರದಲ್ಲಿ ಪ್ರಾಕಾರಕ್ಕೆ ಆಧಾರವಾಗಿ ಮಣ್ಣಿನ ಕಂಬಗಳನ್ನು ನೆಡಲಾಗಿತ್ತು. ಅಹಾರ್ ಸಂಸ್ಕೃತಿಯ ನೆಲೆಯಲ್ಲಿ ಇಂತಹ ಅವಶೇಷ ಕಂಡುಬಂದಿರುವುದು ಇದೇ ಮೊದಲು. ಪ್ರಾಕಾರದೊಳಗೆ ವೃತ್ತ ಹಾಗೂ ಅಂಡಾಕಾರದ ಸಣ್ಣ ಗುಡಿಸಲುಗಳಿದ್ದುವು. ಗುಡಿಸಲುಗಳು ಒಂದು, ಎರಡು ಹಾಗೂ ಬಹು ಕೋಣೆಗಳನ್ನು ಉಳ್ಳವಾಗಿದ್ದವು. ಅಹಾರ್ ಸಂಸ್ಕೃತಿಗೆ ವಿಶಿಷ್ಟವಾಗಿರುವ ಪಾತ್ರೆಯೆಂದರೆ ಬಿಳಿ ಬಣ್ಣದ ರೇಖಾ ಚಿತ್ರಗಳಿರುವ ಕಪ್ಪು–ಕೆಂಪುಬಣ್ಣದ ಮಣ್ಪಾತ್ರೆಗಳು. ಕೆಂಪು ವರ್ಣದ ಪಾತ್ರೆಗಳೂ ಉಪಯೋಗದಲ್ಲಿದ್ದುವು. ಮೊದಲನೆಯ ಪ್ರಾಕಾರದಲ್ಲಿ ಬಟ್ಟಲು ಮತ್ತು ತಟ್ಟೆಗಳು ಪ್ರಧಾನ. ಪಾತ್ರೆಗಳ ಮೇಲೆ ಆಲಂಕಾರಿಕವಾಗಿ ಚುಕ್ಕೆಗಳು ಮತ್ತು ಸೀಳು ಗೆರೆಗಳನ್ನು ಚಿತ್ರಿಸಲಾಗುತ್ತಿತ್ತು. ಮಾಸಲು ಕಂದು ಬಣ್ಣದ ಪಾತ್ರೆಗಳು ವಿರಳವಾಗಿ ದೊರೆತಿವೆ. ಕೆಂಪು ಬಣ್ಣದ ಪಾತ್ರೆ ಪ್ರಕಾರದಲ್ಲಿ ಬೋಗುಣಿ, ಜಾಡಿ, ದೊಡ್ಡ ತಟ್ಟೆ ಮುಂತಾದ ನಮೂನೆಗಳಿವೆ. ಇತರ ಗಮನಾರ್ಹ ಅವಶೇಷಗಳೆಂದರೆ ಸುಡಾವೆ ಮಣ್ಣಿನ ಗೂಳಿಯ ಗೊಂಬೆ, ಆಲಂಕಾರಿಕ ಮಣಿಗಳು, ಬೆಣಚುಕಲ್ಲು ಹಾಗೂ ಚಿಪ್ಪಿನ ಮಣಿಗಳು, ಒಲೆಗಳು, ಅರೆಯುವ ಕಲ್ಲು, ಬೀಸುವ ಕಲ್ಲು, ತೂತಿರುವ ವೃತ್ತಾಕಾರದ ಚಪ್ಪಟೆ ಬಿಲ್ಲೆ ಮತ್ತು ಕ್ಯಾಲ್ಸೆಡನಿ, ಮಂದಗೆಂಪಿನ ಕಲ್ಲು, ಚರ್ಟ್‌ಗಳಿಂದ ಮಾಡಿದ ಸೂಕ್ಷ್ಮ ಶಿಲೋಪಕರಣಗಳು. ಸೂಕ್ಷ್ಮಶಿಲೋಪಕರಣಗಳಲ್ಲಿ ಅಲಗು, ಗರಗಸದಂತೆ ಅಂಚಿರುವ ಅಲಗು, ಅರ್ಧಚಂದ್ರಾಕೃತಿ ಮತ್ತು ಮೊನೆಗಳಿವೆ. ಅಹಾರ್ ಸಂಸ್ಕೃತಿ ಜನ ಸಮುದಾಯದ ಆಹಾರ ಪದ್ಧತಿಯನ್ನು ಇಲ್ಲಿ ದೊರೆತಿರುವ ಹೆಸರು ಕಾಳು ಹಾಗೂ ತೊಗರಿ ಬೇಳೆಗಳು, ಸುಟ್ಟ ಕರಕಲಾದ ಗೋದಿ ಮತ್ತಿತರ ಧಾನ್ಯಗಳು ಹಾಗೂ ಪ್ರಾಣಿಗಳ ಮೂಳೆಗಳ ಆಧಾರದ ಮೇಲೆ ತಿಳಿಯಬಹುದಾಗಿದೆ.

ಎರಡನೆಯ ಹಂತದಲ್ಲಿ ಮಾಳ್ವ ಸಂಸ್ಕೃತಿಯ ಲಕ್ಷಣಗಳ ಅವಶೇಷಗಳಿವೆ. ಈ ಜನರು ಮಣ್ಣಿನ ಮನೆಗಳನ್ನು ಚೌಕ, ಷಡ್ಭುಜ, ವೃತ್ತ ಹಾಗೂ ಅಂಡಾಕಾರದಲ್ಲಿ ಕಟ್ಟಿ ಕೊಂಡರು. ಈ ಮನೆಗಳಿಗೆ ಬಿದಿರು ಹುಲ್ಲಿನ ಹೊದಿಕೆಯಿದ್ದಿತ್ತು. ಮನೆಗಳೊಳಗೆ ಒಂದು, ಎರಡು ಹಾಗೂ ಮೂರು ಒಲೆಗಳಿರುತ್ತಿದ್ದುವು. ಈ ಹಂತದಲ್ಲಿ ಅನೇಕ ಪ್ರಕಾರದ ಪಾತ್ರೆಗಳು ಉಪಯೋಗದಲ್ಲಿದ್ದುವು. ಕೆಂಪು ಲೇಪನವುಳ್ಳ ವಿಶೇಷ ಹೊಳಪಿನ ಕೆಂಪು ಬಣ್ಣದ ಪಾತ್ರೆಗಳು ಈ ಹಂತಕ್ಕೆ ಮಾತ್ರ ಸೀಮಿತವಾಗಿವೆ. ಇತರ ಪ್ರಕಾರಗಳಲ್ಲಿ ಹಿಂದಿನ ಅವಧಿಗೆ ಸಂಬಂಧಿಸಿದ ಬಿಳಿ ರೇಖಾ ಚಿತ್ರಗಳಿರುವ ಕಪ್ಪು–ಕೆಂಪು ಪಾತ್ರೆಗಳೊಂದಿಗೆ ಬೂದು ಬಣ್ಣದ ಪಾತ್ರೆಗಳು ಹಾಗೂ ಕಡುಗಂದು ಬಣ್ಣದ ಪಾತ್ರೆಗಳು, ಕೆಂಪು ಬಣ್ಣದ ಪಾತ್ರೆಗಳ ಉಪಯೋಗ ಮುಂದುವರೆದಿತ್ತು, ಕಾಲಿರುವ ತಟ್ಟೆ, ಜಾಡಿ, ದಾನಿ, ಗಿಂಡಿ, ಬೋಗುಣಿಗಳು, ಎತ್ತರದ ಕತ್ತಿನ ಪಾತ್ರೆಗಳು ಮುಂತಾದ ನಮೂನೆಗಳಿವೆ. ಅಲೆಗಳು ವಿನ್ಯಾಸದ ಗೆರೆಗಳು, ವಿವಿಧಾಕಾರದ ತ್ರಿಕೋನಗಳು, ಕುಣಿಕೆಗಳು ಮತ್ತು ಕೊಕ್ಕೆಗಳು, ಬಲೆಯ ವಿನ್ಯಾಸಗಳು ಮತ್ತು ವಿರಳವಾಗಿ ಚದುರಂಗದ ಮಣೆ ಹಾಗೂ ಮಾನವಾಕೃತಿಗಳ ವಿನ್ಯಾಸಗಳನ್ನು ಮಣ್ಣಿನ ಪಾತ್ರೆಗಳ ಮೇಲೆ ಕಪ್ಪು ನೇರಳೆ ಬಣ್ಣದಲ್ಲಿ ಚಿತ್ರಿಸಲಾಗಿದೆ. ಒಂದೇ ಒಂದು ಕೆಂಪು ಜಾಡಿಯ ಮೇಲೆ ಗೋಣಿ ಚೀಲದ ಗುರುತು ಮೂಡಿರುವುದು ಕುತೂಹಲಕಾರಿಯಾಗಿದೆ.

ತಾಮ್ರದ ಉಳಿ, ಪರಶು, ಗಾಳದ ಕೊಕ್ಕೆ, ಆ್ಯಂಟಿಮನಿ ಕಡ್ಡಿ ಮತ್ತು ಸೂಜಿಗಳು, ಸುಡಾವೆ ಮಣ್ಣಿನ ಗೊಂಬೆಗಳು, ಬಳಪದ ಕಲ್ಲು, ಅಗೇಟ್, ಚರ್ಟ್, ಕ್ಯಾಲ್ಸೆಡನಿ, ಶಂಖ, ಮೂಳೆಗಳಿಂದ ಮಾಡಿದ ಮಣಿಗಳು, ಶಂಖದ ಬಳೆಗಳು ಮುಂತಾದ ಪ್ರಾಚ್ಯಾವಶೇಷಗಳು ಈ ಹಂತದಲ್ಲಿ ದೊರೆತಿವೆ.

ಮೂರನೆಯ ಹಂತ ಜೋರ್ವೆ ಸಂಸ್ಕೃತಿಯದು. ಹಿಂದಿನ ಜನ ವರ್ಗದಂತೆ ಇವರೂ ಮಣ್ಣಿನ ಗೋಡೆ ಮನೆಗಳನ್ನು ಕಟ್ಟಿಕೊಂಡರು. ಆದರೆ ಈ ಮನೆಗಳು ಸಾಮಾನ್ಯ ಕೆಳದರ್ಜೆಯವು. ಗೋಡೆಯ ಎರಡೂ ಬದಿಗಳಲ್ಲಿ ಗಾರೆ ಮಾಡಲಾಗುತ್ತಿತ್ತು. ಕೆಲವೊಂದು ಗೋಡೆಗಳ ಮೇಲೆ ಸುಣ್ಣ ಲೇಪದ ಕುರುಹುಗಳೂ ಕಂಡು ಬಂದಿದೆ. ಮನೆಯೊಳಗೆ ನೆಲವನ್ನು ಬಡಿದು ಗಟ್ಟಿಮಾಡಲಾಗಿದೆ. ವೃತ್ತ ಹಾಗೂ ಅಂಡಾಕಾರದ ಗುಡಿಸಲುಗಳಲ್ಲಿ ಕಲ್ಲು ಮಣ್ಣಿನ ಹೆಂಟೆ ಚೂರುಗಳನ್ನು ಹಾಸಿ ಮಾಡಿದ ಗಟ್ಟಿ ನೆಲವಿರುತ್ತಿತ್ತು. ಇಂತಹ ಮನೆಗಳಲ್ಲಿ ಚಾವಣಿಗೆ ಆಧಾರವಾಗಿ ಕಂಬಗಳಿದ್ದವು. ಜೋರ್ವೆ ನೆಲೆಯ ಮಾದರಿಯ ಕಪ್ಪು ನೇರಳೆಬಣ್ಣದ ಚಿತ್ರಿತ ಕೆಂಪುಬಣ್ಣದ ಪಾತ್ರೆ, ಕಂದು ಲೇಪನವುಳ್ಳ ಪಾತ್ರೆ, ಬೂದು ಬಣ್ಣದ, ಹೊಳೆಯುವ ಕಪ್ಪುಬಣ್ಣದ ಪಾತ್ರೆಗಳು ಈ ಹಂತದಲ್ಲಿವೆ. ಜಾಡಿ, ಲೋಟ, ಬಟ್ಟಲು, ಬೋಗುಣಿ, ಮುಟ್ಟ ಮಡಕೆ, ಗಿಂಡಿ, ವಿವಿಧ ಗಾತ್ರದ ಪಾತ್ರೆಗಳು ಮತ್ತು ಗುಡಾಣಗಳು ಮುಂತಾದ ಪ್ರಕಾರಗಳಿವೆ. ಕೆಲವು ಪ್ರಕಾರಗಳ ಪಾತ್ರೆಗಳ ಹೊರ ಮೈಯಲ್ಲಿ ಸಮಾನಾಂತರ ಗೆರೆಗಳು, ಸೂರ್ಯನ ಚಿತ್ರ, ಚುಕ್ಕೆಗಳ ಸಾಲು ಮುಂತಾದ ರೇಖಾ ವಿನ್ಯಾಸಗಳನ್ನು ಚಿತ್ರಿಸಲಾಗಿದೆ. ನವದಟೋಲಿಯಂತೆ ಇಲ್ಲಿಯೂ ದೊಡ್ಡ ಜಾಡಿಯೊಂದರ ಮೇಲೆ ವೃತ್ತ ಹಾಗೂ ವಿವಿಧ ಆಕೃತಿಗಳ ಪಟ್ಟಿಗಳನ್ನು ಅಂಟಿಸಿದ ಒತ್ತು ಚಿತ್ರಗಳಿವೆ. ತಾಮ್ರದ ಗಾಳದ ಕೊಕ್ಕೆ, ಸರಳು, ಸೂಜಿ, ಉಂಗುರ, ಸುಡಾವೆ ಮಣ್ಣಿನ ಮಾನವ ಹಾಗೂ ಪ್ರಾಣಿಗಳ ಸಣ್ಣ ಸಣ್ಣ ಗೊಂಬೆಗಳು, ಬಲೆಗೆ ಸಿಕ್ಕಿಸುವ ಕವಣೆ ಕಲ್ಲುಗಳು, ಶಂಖ, ಕ್ಯಾಲ್ಸೆಡನಿ, ಅಗೇಟ್, ಜಾಸ್ಪರ್ ಮತ್ತು ಸ್ಟಿಯಟೈಟಿನ ಮಣಿಗಳು, ಶಂಖದ ಬಳೆಗಳು, ಅರೆಯುವ ಕಲ್ಲು ಹಾಗೂ ಗುಂಡುಗಳು ಈ ಹಂತದಲ್ಲಿಯ ಮುಖ್ಯ ವಸ್ತು ಅವಶೇಷಗಳು. ಜೋರ್ವೆ ವಸತಿ ಭೂಕಂಪನದಿಂದ ಕೊನೆಗೊಂಡಿರುವಂತೆ ತೋರುತ್ತದೆ. ಏಕೆಂದರೆ ಈ ಹಂತದಲ್ಲಿದ್ದ ಮನೆಗಳೆಲ್ಲವೂ ಒಂದೇ ರೀತಿಯಲ್ಲಿ ಕುಸಿದಿವೆ. ಅಲ್ಲದೆ ವಸತಿಯಿದ್ದ ಅಷ್ಟೂ ಜಾಗದಲ್ಲಿ ಸುಟ್ಟ ಚಿಹ್ನೆಗಳೂ ಕಂಡು ಬಂದಿವೆ.

ನಾಲ್ಕನೆಯ ಹಂತ ಇತಿಹಾಸ ಆರಂಭ ಕಾಲದ್ದು. ಈ ಅವಧಿಗೆ ಸಂಬಂಧಿಸಿದ ಅವಶೇಷಗಳಲ್ಲಿ ಮಂದಗೆಂಪಿನ ಕಲ್ಲಿನ ಮಣಿಗಳು, ಅರೆ ಪ್ರಶಸ್ತ ಕಲ್ಲಿನ ಮಣಿಗಳು, ಬಲೆಯಲ್ಲಿ ಬಳಸುವ ಬೆಂಡುಗಳು, ಸುಡಾವೆ ಮಣ್ಣಿನ ಮಣಿಗಳು, ದಂತದ ಬಾಚಣಿಗೆ, ಮೂಳೆಯ ಮೊನೆಗಳು ಮತ್ತು ಕಬ್ಬಿಣದಲ್ಲಿ ಮಾಡಿದ ಕೊಡಲಿ, ಗುದ್ದಲಿ, ಮೊಳೆ, ಬಾಣದ ಮೊನೆಗಳು,ಹಿಡಿಕೆಗಳು ಇತ್ಯಾದಿ ಪ್ರಮುಖವಾಗಿವೆ. ಮೂರು ಹಿಡಿಕೆಗಳುಳ್ಳ, ಕೆಂಪುಬಣ್ಣದ ಮಣ್ಪಾತ್ರೆ ಮತ್ತು ಅಗಲಬಾಯಿಯ ಗುಡಾಣ–ಮುಖ್ಯವಾದ ಮಣ್ಪಾತ್ರೆಗಳ ಪ್ರಕಾರಗಳಾಗಿವೆ. ಈ ಹಂತದಲ್ಲಿ 2–3 ಮೀ ವ್ಯಾಸದ ಗುಡಿಸಲುಗಳ ಅವಶೇಷಗಳಿದ್ದುವು. ಒಂದು ಕಂಬದ ಗುಳಿಯಿಂದ ಸುಣ್ಣದ ಲೇಪನವುಳ್ಳ ಮರದ ಕಂಬದ ಒಂದು ತುಂಡನ್ನು ಹೊರ ತೆಗೆಯಲಾಗಿದೆ.

ಈ ನಾಲ್ಕು ಸಾಂಸ್ಕೃತಿಕ ಹಂತಗಳ ಕಾಲಮಾನ ಇಂತಿವೆ: ಅಹಾರ್ (ಪ್ರಶ.ಪೂ.2000–1800), ಮಾಳ್ವ (ಪ್ರ.ಶ.ಪೂ.1800–1100), ಜೋರ್ವೆ(ಪ್ರ.ಶ.ಪೂ.1100–700) ಮತ್ತು ಆದಿ ಚಾರಿತ್ರಿಕ ಕಾಲ(ಪ್ರ.ಶ.ಪೂ.2ನೆಯ ಶತಮಾನ–ಪ್ರ.ಶ.2–7 ಶತಮಾನ) ಚಿಚಲಿಯಲ್ಲಿ ಸು.1500 ವರ್ಷಗಳ ಕಾಲ ನವ ಶಿಲಾಯುಗದ ಸಂಸ್ಕೃತಿ ಬೆಳೆಯಿತು. ಪಟ್ಟಣವನ್ನು ಹೋಲುವ ಜನವಸತಿ ಇದಾಗಿತ್ತೆಂದು ಸಂಶೋಧನೆಗಳಿಂದ ತಿಳಿದುಬರುತ್ತದೆ. (ಎಸ್.ಕೆ.)

**ಚಿತ್ತಗಾಂಗ್ ಶಸ್ತ್ರಾಗಾರ ಧಾಳಿ:** ಬ್ರಿಟಿಷರ ವಿರುದ್ಧದ ಶಸ್ತ್ರಾಸ್ತ್ರ ಹೋರಾಟಗಳಲ್ಲಿ ಚಿತ್ತಗಾಂಗ್ ಶಸ್ತ್ರಾಗಾರ ಧಾಳಿ ಪ್ರಮುಖ ಕಾರ್ಯಾಚರಣೆಯಾಗಿದೆ. ಇದು ಸೂರ್ಯಸೇನ್ ನೇತೃತ್ವದಲ್ಲಿ ನಡೆಯಿತು. ಸೂರ್ಯಸೇನ್‌ರವರು ಚಿತ್ತಗಾಂಗ್‌ನ ನ್ಯಾಷನಲ್ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು ಅಸಹಕಾರ ಚಳವಳಿಯಲ್ಲಿ ಸಹ ಭಾಗವಹಿಸಿದ್ದರು. ಇವರು ಮಾಸ್ಟರ್‌ದಾ ಎಂದೇ ಪರಿಚಿತರಾಗಿದ್ದು 1926–28ರ ವರೆಗೆ ಸೆರೆಮನೆಯಲ್ಲಿದ್ದರು. ಇವರು ಕಾಂಗ್ರೆಸ್‌ನಲ್ಲೇ ಇದ್ದುಕೊಂಡು ಕ್ರಾಂತಿಕಾರಿ ತಂಡವನ್ನು ಕಟ್ಟಿದರು. ಐತಿಹಾಸಿಕ ಶಸ್ತ್ರಾಗಾರ ಧಾಳಿಯು 18 ಏಪ್ರಿಲ್ 1930ರಂದು ಪೂರ್ವ ಬಂಗಾಲದ ಚಿತ್ತಗಾಂಗ್‌ನಲ್ಲಿ ನಡೆಯಿತು. ರಾತ್ರಿ ವೇಳೆ ನಡೆದ ಈ ಧಾಳಿಯಲ್ಲಿ ಅನಂತಸಿಂಗ್, ಅಂಬಿಕಾ ಚಕ್ರವರ್ತಿ, ಕಲ್ಪನಾದತ್, ಪ್ರೀತಿಲತಾ ವಡೇದಾರ್, ಲೋಕನಾತ್ ಬಾಲ್, ಗಣೇಶ್‌ಗೋಷ್, ಆನಂದ ಗುಪ್ತ, ತೇಗ್ರ ಬಾಲ್ ಮೊದಲಾದ 64 ಜನ ಪ್ರಮುಖರು ಭಾಗವಹಿಸಿದ್ದರು. ಇವರು ಚಿತ್ತಗಾಂಗ್ ಶಸ್ತ್ರಾಗಾರವನ್ನು ನಾಲ್ಕು ಮೂಲೆಗಳಿಂದಲೂ ಧಾಳಿ ನಡೆಸಿ ಶಸ್ತ್ರಾಸ್ತ್ರಗಳನ್ನು ವಶಪಡಿಸಿ ಕೊಂಡರು. ಆದರೆ ಗಡಿಬಿಡಿಯಲ್ಲಿದ್ದ ಕ್ರಾಂತಿಕಾರರು ಮದ್ದುಗುಂಡುಗಳ ನ್ನೊಯ್ಯಲು ಸಾಧ್ಯವಾಗಲಿಲ್ಲ. ಧಾಳಿಯ ಅನಂತರ ಕ್ರಾಂತಿಕಾರಿಗಳು ಗುಡ್ಡಗಾಡುಗಳಲ್ಲಿ ಅಡಗಿಕೊಂಡರು. ಇವರನ್ನು ಸೆರೆಹಿಡಿಯಲು ಬಂದ ಬ್ರಿಟಿಷ್ ಪಡೆ ಹಾಗೂ ಕ್ರಾಂತಿಕಾರಿಗಳ ನಡುವೆ 1930 ಏಪ್ರಿಲ್ 22ರಂದು ಉಗ್ರ ಹೋರಾಟ ನಡೆದು 11 ಕ್ರಾಂತಿಕಾರಿಗಳು ಮಡಿದು, 64 ಬ್ರಿಟಿಷ್ ಸೈನಿಕರು ಕೊಲ್ಲಲ್ಪಟ್ಟರು. ನಾಯಕರಾದ ಸೂರ್ಯಸೇನ್ ಮತ್ತಿತರರು ತಪ್ಪಿಸಿಕೊಂಡು ಚಿಕ್ಕ ಗುಂಪುಗಳಾಗಿ ಹಳ್ಳಿಗಳಲ್ಲಿದ್ದುಕೊಂಡು ಸರ್ಕಾರಿ ಆಸ್ತಿಪಾಸ್ತಿಗಳ ಮೇಲೆ ಧಾಳಿ ಮಾಡಲಾರಂಭಿಸಿದರು. ಸರ್ಕಾರದ ದಮನಕಾರಿ ಮತ್ತು ಧಾಳಿಗಳ ನಡುವೆಯೂ ಮುಸ್ಲಿಂ ಬಹುಸಂಖ್ಯಾತರಿದ್ದ ಹಳ್ಳಿಯವರು ಆಹಾರ, ವಸತಿಗಳನ್ನು ನೀಡಿ ಕ್ರಾಂತಿಕಾರಿಗಳು ಮೂರು ವರ್ಷ ಸತತವಾಗಿ ಹೋರಾಡಲು ಸಹಾಯ ನೀಡಿದರು. ಅಂತಿಮವಾಗಿ ಸೂರ್ಯಸೇನ್ 1933 ಫೆಬ್ರವರಿ 16ರಂದು ಸೆರೆಸಿಕ್ಕಿ ವಿಚಾರಣೆ ನಡೆದು 1934 ಜನವರಿ 12ರಂದು ಗಲ್ಲಿಗೇರಿಸಲಾಯಿತು. ಅವರ ಅನುಯಾಯಿಗಳು ಸೆರೆಸಿಕ್ಕಿ ದೀರ್ಘ ಸೆರೆವಾಸ ಕ್ಕೀಡಾದರು. ಈ ಧಾಳಿಯು ಬಂಗಾಲದ ಕ್ರಾಂತಿಕಾರಿಗಳ ಮೇಲೆ ಪ್ರಭಾವ ಬೀರಿ ಕ್ರಾಂತಿಕಾರಿ ಗುಂಪುಗಳ ಚಟುವಟಿಕೆಗಳನ್ನು ಮತ್ತಷ್ಟು ತೀವ್ರಗೊಳಿಸಲು ಧೈರ್ಯ ತುಂಬಿತು. ಸೂರ್ಯಸೇನರ ನಾಯಕತ್ವದಲ್ಲಿ ಸ್ತ್ರೀಯರು ಸಹ ಹೆಚ್ಚು ಹೆಚ್ಚಾಗಿ ಭಾಗವಹಿಸಿ ಸಂದೇಶಕ ರಾಗಿ, ಶಸ್ತ್ರಾಸ್ತ್ರಗಳನ್ನು ರಕ್ಷಿಸುವ ಮತ್ತು ಬಂದೂಕು ಹಿಡಿದು ಹೋರಾಡುವ ಕಾರ್ಯದಲ್ಲೂ ತೊಡಗಿದ್ದರು. ಇಂತಹ ಧಾಳಿಯ ವೇಳೆಯಲ್ಲಿ ಪ್ರೀತಿಲತಾ ವಡೇದಾರ್ ನಿಧನರಾದರು. ಕಲ್ಪನಾದತ್ ಕೈಬಾಂಬ್ ತಯಾರಿಕೆಯಲ್ಲಿ ಪ್ರಾವೀಣ್ಯತೆ ಪಡೆದಿದ್ದು ಸೂರ್ಯಸೇನರೊಂದಿಗೆ ಸೆರೆಯಾಗಿ ಆಜೀವ ಸೆರೆವಾಸಕ್ಕೀಡಾದರು. ಈ ಧಾಳಿಯ ಅನಂತರ ಸರಣಿಯಾಗಿ ಯುರೋಪಿಯನ್ನರನ್ನು ಕೊಲ್ಲುವ ಮೂಲಕ ಸಾಮ್ರಾಜ್ಯಶಾಹಿ ಆಡಳಿತವನ್ನು ಕುಸಿಯುವಂತೆ ಮಾಡುವುದು ಮತ್ತು ಆಡಳಿತಾಧಿಕಾರಿಗಳಲ್ಲಿ ಭಯವನ್ನು ಉಂಟು ಮಾಡಲು ಪ್ರಯತ್ನಿಸ ಲಾಯಿತು. ಇದಕ್ಕಾಗಿ ಬ್ರಿಟಿಷ್ ಸರ್ಕಾರ 1931 ನವೆಂಬರ್‌ನಲ್ಲಿ ಉಗ್ರಗಾಮಿತ್ವವನ್ನು ತಡೆಗಟ್ಟಲು ತುರ್ತುಪರಿಸ್ಥಿತಿ ಕಾನೂನನ್ನು ಜಾರಿಗೆ ತಂದಿತು. (ಕೆ.ಎಸ್‌ಡಿ.)

**ಚಿತ್ರದುರ್ಗ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ ಹಾಗೂ ಜಿಲ್ಲಾಡಳಿತ ಕೇಂದ್ರ. ಈ ಪಟ್ಟಣವನ್ನು ಚಿತ್ರಹಳ್ಳಿಸೀಮೆ, ಚಿತ್ರಹಳ್ಳಿನಾಡು, ಚಿತ್ರಕಲ್ಲುದುರ್ಗ ಎಂದು ಕರೆಯಲಾಗುತ್ತಿತ್ತು. ಅನಂತರ ಚಿತ್ರದುರ್ಗ ಎಂಬ ಹೆಸರಿನ ಉಲ್ಲೇಖ ಶಾಸನಗಳಲ್ಲಿ ದೊರಕುತ್ತವೆ. ಹಿಂದೆ ಈ ಪ್ರದೇಶ ಹೊಯ್ಸಳ ರಾಜ್ಯದ ಭಾಗವಾಗಿದ್ದಾಗ ಇದಕ್ಕೆ ಬೆಮ್ಮತಕಲ್ಲು ಪಟ್ಟಣ, ಬೆಮ್ಮಚನೂರ, ಬೆಮ್ಮತ್ತನೂರು ಪಟ್ಟಣ, ಮಹಾನಗರ, ಬೆಮ್ಮತ್ತೂರು ಕಲ್ಲು, ಬೆಮ್ಮತ್ತೂರು, ಬ್ರಹ್ಮಮುರಿಗಿರಿ ಎಂದು ವಿವಿಧ ಹೆಸರುಗಳಿದ್ದವು. ಸ್ವಲ್ಪಕಾಲ ಪೆರುಮಾಳೆಪುರ ಎಂಬ ಹೆಸರಿತ್ತು. ಇದಕ್ಕೆ ಕಾರಣ ಈ ಹೆಸರಿನ ಒಬ್ಬ ಹೊಯ್ಸಳ ಪ್ರಾಂತ್ಯಾಧಿಕಾರಿ ಇಲ್ಲಿ ಆಡಳಿತ ನಡೆಸುತ್ತಿದ್ದ. ಇದಕ್ಕೂ ಮೊದಲು ಕಲ್ಯಾಣ ಚಾಳುಕ್ಯರ ಒಬ್ಬ ಮಹಾಮಂಡಲೇಶ್ವರ ಈ ಪ್ರದೇಶವನ್ನು ಆಳುತ್ತಿದ್ದ. ಆಗ ಇದಕ್ಕೆ ಸೂಳಗಲ್ಲೆಯರ ಪಟ್ಟು, ಸೂಳಗತ್ತಿರ ಪಿಟ್ಟು ಎಂದು ಕರೆಯಲಾಯಿತು. ಎಂ. ಎಚ್. ಕೃಷ್ಣ ಅವರ ಅನ್ವೇಷಣೆಯಲ್ಲಿ ಈ ಪಟ್ಟಣದ ಪಶ್ಚಿಮಕ್ಕಿರುವ ಚಂದ್ರವಳ್ಳಿಯಲ್ಲಿ ನವಶಿಲಾಯುಗ ಸಂಸ್ಕೃತಿಯ ಕಲ್ಲಿನ ಉಪಕರಣಗಳನ್ನು ಸಂಗ್ರಹಿಸಿದ್ದರು. ಈ ನಗರದ ಮೂಲಸ್ಥಳ ಬಹುಮಟ್ಟಿಗೆ ಚಂದ್ರವಳ್ಳಿಯ ನಿವೇಶನವೇ ಆಗಿರಬೇಕು. ಈ ನಗರದ

ಚಿತ್ರದುರ್ಗದ ಕೋಟೆಯ ಒಳಗಿರುವ ಗಾಳಿಮಂಟಪ

ಪಶ್ಚಿಮದ ಉಚ್ಚಂಗಿ ದುರ್ಗದ 1045ರ ಒಂದು ಶಾಸನದಲ್ಲಿ ಈ ಪ್ರದೇಶವನ್ನು ಹಿಡಿಂಬವನ ಹಾಗೂ ಹಿಡಿಂಬಪಟ್ಟಣ ಎಂದು ಹೆಸರಿಸಿದೆ. ಇಲ್ಲಿ ಮಹಾಭಾರತದ ಹಿಡಿಂಬಾಸುರನು ಕಲಿದೇವಸ್ವಾಮಿಗೆ ಒಂದು ದೇವಾಲಯ ಕಟ್ಟಿಸಿದನಂತೆ. ಚಂದ್ರವಳ್ಳಿಯ ಪ್ರಾಚೀನ ವಸತಿ ನೆಲೆಯ ಒಂದು ಬದಿಯ ಬೆಟ್ಟದ ಸಾಲಿನಲ್ಲಿರುವ ಅಂಕಲಿಮಠ ಎಂಬ ಒಂದು ಗವಿಯಲ್ಲಿ ಪಂಚಪಾಂಡವ ಮತ್ತು ಹಿಡಿಂಬಾಸುರನ ಹೆಸರಿನಲ್ಲಿ ವಿವಿಧ ಆಕೃತಿಯ, ಬೇರೆ ಬೇರೆ ಕಾಲಗಳಿಗೆ ಸೇರಿದ ಶಿವಲಿಂಗಗಳಿವೆ. ಇವುಗಳಲ್ಲಿ ಹಿಡಿಂಬೇಶ್ವರ ಲಿಂಗ ವಿಶೇಷವಾಗಿದೆ. ಇದರ ಮೇಲೆ ಒಂದು ಬದಿಯ ಸಮನಾಂತರದಲ್ಲಿ ಮೂರು ಊರ್ಧ್ವ ಉಬ್ಬು ರೇಖೆಗಳಿವೆ. ಇದನ್ನು ಎತ್ತರದ ವೃತ್ತಾಕಾರದ ಪೀಠದಲ್ಲಿ ಸ್ಥಾಪಿಸಲಾಗಿದೆ. ಕುತೂಹಲಕಾರಿ ಅಂಶವೆಂದರೆ ಹೆಚ್ಚು ಕಡಿಮೆ ಇದೇ ಲಕ್ಷಣವುಳ್ಳ ಇನ್ನೊಂದು ಲಿಂಗ ಕದಂಬ ಮಯೂರ ವರ್ಮನ ಶಾಸನವುಳ್ಳ ಬಂಡೆಯ ಬುಡದಲ್ಲಿತ್ತು. ಲಿಂಗದ ಮೇಲ್ಭಾಗ ಹಿಡಿಂಬೇಶ್ವರ ಲಿಂಗದಂತಿದೆ. ಈ ಪ್ರದೇಶದ ಅನ್ವೇಷಣೆಯಲ್ಲಿ ತಿಮ್ಮರಾಯನ ಕೆರೆ, ಕೋಟೆಯ ನಾಲ್ಕು ಮತ್ತು ಐದು ಸುತ್ತಿನೊಳಗಿನ ಪ್ರದೇಶ ಮತ್ತು ಚಂದ್ರವಳ್ಳಿ ಬಂಡೆಯ ನೆಲೆಗಳ ಮೇಲೆ ಕೋಣ, ಹೊರಬಾಗಿದ ಕೋಡುಳ್ಳ ಜಿಂಕೆ, ಹುಲಿ ಮೊದಲಾದ ಪ್ರಾಣಿಗಳ ರೇಖಾಚಿತ್ರಗಳು ಬೆಳಕಿಗೆ ಬಂದಿವೆ. ಇವು ಬಹುಮಟ್ಟಿಗೆ ಆದಿ ಕಬ್ಬಿಣಯುಗದ ಬೃಹತ್‌ಶಿಲಾ ಸಂಸ್ಕೃತಿಯ ಕಾಲದ್ದೆಂದು ಕಾಣುತ್ತದೆ. ಚಂದ್ರವಳ್ಳಿಯ ಉತ್ಖನನದಲ್ಲಿ (1928 ಮತ್ತು 1947) ಅನುಕ್ರಮವಾಗಿ ಬೃಹತ್ ಶಿಲಾ ಸಂಸ್ಕೃತಿ ಮತ್ತು ಆದಿ ಇತಿಹಾಸ ಕಾಲದ ಸಂಸ್ಕೃತಿಗಳ ವಿವಿಧ ಅವಶೇಷಗಳು ಮತ್ತು ಅವುಗಳ ಲಕ್ಷಣಗಳು ತಿಳಿದುಬಂದಿವೆ. 1978ರ ಉತ್ಖನನದಲ್ಲಿ ನವ ಶಿಲಾಯುಗ ಹಂತ, ಆದಿಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ ಮತ್ತು ಆದಿ ಇತಿಹಾಸ ಕಾಲದ ಸಂಸ್ಕೃತಿಗಳ ಅನುಕ್ರಮ ಹಂತಗಳನ್ನು ಸ್ಪಷ್ಟವಾಗಿ ಗುರುತಿಸಲಾಯಿತು. ಆದಿಇತಿಹಾಸ ಹಂತದ ಇಟ್ಟಿಗೆ ಕಟ್ಟಡದ ಒಂದು ಗೋಡೆ ಮತ್ತು ಮೌರ್ಯ, ಸಾತವಾಹನ ಹಾಗೂ ರೋಮನ್ ಕಾಲದ ಬೆಳ್ಳಿ ನಾಣ್ಯಗಳು ದೊರತಿವೆ. ನವಶಿಲಾಯುಗ ಹಂತವನ್ನು ಸ್ಪಷ್ಟವಾಗಿ ಗುರುತಿಸಲಾಗಿಲ್ಲ. ಆದರೂ ಹಿಡಿಂಬವನದಿಂದ ಹಿಡಿಂಬಪಟ್ಟಣದವರೆಗಿನ ನಡುವಿನ ಸ್ಥಿತ್ಯಂತರವನ್ನು ಸೂಚಿಸುವುದನ್ನು ಈ ಉತ್ಖನನ ಎತ್ತಿ ಹಿಡಿದಂತೆ ಕಾಣುತ್ತದೆ. ಈ ನೆಲೆಯಲ್ಲಿ ದೊರೆತ ಎರಡು ಕಂಚಿನ ಗೊಂಬೆಗಳು ಗಮನಾರ್ಹ. ಒಂದು ಪ್ರ.ಶ.ಪೂ. 1 ಮತ್ತು 2ನೆಯ ಶತಮಾನದ ಸಾಲಭಂಜಕ, ಇನ್ನೊಂದು ತನ್ನ ಕರುವಿಗೆ ಹಾಲು ಉಣಿಸುತ್ತಿರುವ ಹಸು. ಕಂಚಿನ ಸಾಲಭಂಜಿಕೆ ವಿಗ್ರಹ ದೊರೆಯುತ್ತಿರುವುದು ಇದೇ ಪ್ರಪ್ರಥಮ. ಈ ನೆಲೆಯಲ್ಲಿಯ ಬಂಡೆಯ ಮೇಲಿನ ಮಯೂರವರ್ಮನ ಶಾಸನವನ್ನು ಬಿ. ರಾಜಶೇಖರಪ್ಪ ಅವರು ಸಂಪೂರ್ಣವಾಗಿ ಪುನರ್ವಿಮರ್ಶಿಸಿದ್ದಾರೆ. ಇವರ ಪ್ರಕಾರ ಈ ಶಾಸನದ ಭಾಷೆ ಪ್ರಾಕೃತವಲ್ಲ; ಸಂಸ್ಕೃತ. ಇದರಲ್ಲಿ ಮಯೂರಶರ್ಮನ ಯಾವುದೇ ದಂಡಯಾತ್ರೆಯ ವಿಚಾರಗಳಿಲ್ಲ. ಹಿಂದೆ ಇಲ್ಲಿದ್ದ ಒಂದು ಕೆರೆಯನ್ನು ಆತ ಜೀರ್ಣೋದ್ಧಾರ ಮಾಡಿಸಿದನೆಂದು ಹೇಳಿದೆ. ಈ ಶಾಸನವನ್ನು ಬರೆದವನು ಕುಪಣದ (ಕೊಪ್ಪಳ). ಶಾಸನದಲ್ಲಿ ಮಯೂರಶರ್ಮ ಎಂದಿರದೆ ಮಯೂರವರ್ಮ ಎಂದಿದೆ. ಮಯೂರವರ್ಮ ಪ್ರಾಯಶಃ ಒಂದು ಸಣ್ಣ ದೇವಾಲಯ ನಿರ್ಮಿಸಿದನೆಂಬ ವಿಷಯ ಇದ್ದಂತೆ ಕಾಣುವುದೆಂದು ತಿಳಿಸಿದ್ದಾರೆ. ಈ ಬಂಡೆಯ ಬಳಿ ದೊರೆತ ಅಪರೂಪ ಮಾದರಿಯ ಶಿವಲಿಂಗ ಈ ದೇವಾಲಯದ್ದಿರಬಹುದು ಎಂದು ಹೇಳಿದ್ದಾರೆ.

(ಎಲ್.ಟಿ.;ಎ.ಎಸ್.;ಎನ್.ಎಲ್.)

*ಶಿಲಾ ಚಿತ್ರಕಲೆ:* ಈವರೆಗೆ ಚಿತ್ರದುರ್ಗ ಬೆಟ್ಟ ಪರಿಸರ ಮತ್ತು ಈ ತಾಲ್ಲೂಕಿನ ಇತರ ನಿವೇಶನಗಳಲ್ಲಿ ಕಂಡುಬಂದಿರುವ ಗವಿ/ಕಲ್ಲಾಸರೆಯ ವರ್ಣರೇಖಾಚಿತ್ರಗಳನ್ನು ಕುರಿತು ಅಲ್ಪಸ್ವಲ್ಪ ಮಾಹಿತಿ ದೊರೆತಿದ್ದರೂ ಬಯಲುಬಂಡೆ ರೇಖಾಕೃತಿ ಅಥವಾ ಕೊರೆ ಚಿತ್ರಗಳನ್ನು ಕುರಿತು ಸರಿಯಾದ ಮತ್ತು ಸಮಗ್ರ ಅಧ್ಯಯನ ನಡೆದಿಲ್ಲ. ಈಚಿನ ಕೆಲವು ವರ್ಷಗಳಲ್ಲಿ ಬಯಲು ಬಂಡೆ ರೇಖಾಕೃತಿಗಳನ್ನಷ್ಟೆ ಕುರಿತು ಕೈಗೊಳ್ಳಲಾದ ಶೋಧನಾಕಾರ್ಯದ ಫಲವಾಗಿ ಸಾವಿರಾರು ರೇಖಾಕೃತಿಗಳನ್ನು ಬೆಳಕಿಗೆ ತರಲು ಸಾಧ್ಯವಾಗಿದೆ.

1929ರಲ್ಲಿ ಎಂ.ಎಚ್.ಕೃಷ್ಣ ಮತ್ತು 1978 ರಲ್ಲಿ ಅ.ಸುಂದರ ಈ ಬಗೆಗೆ ಗಮನ ಹರಿಸಿದವರಲ್ಲಿ ಮುಖ್ಯರು. 1983ರ ವೇಳೆಗೆ ಎಚ್. ಶ್ರೀಶೈಲ ಆರಾಧ್ಯರು ಈ ಜಿಲ್ಲೆಯ ಹಲವಾರು ವರ್ಣ ರೇಖಾಚಿತ್ರಗಳೊಡನೆ ಒಂದಷ್ಟು ಬಯಲುಬಂಡೆ ರೇಖಾಕೃತಿಗಳನ್ನು ಪತ್ತೆಹಚ್ಚಿದರು. ಆರಾಧ್ಯರು ಮತ್ತು ಲಕ್ಷಣ ತೆಲಗಾವಿ ತಮ್ಮ ಸಂಶೋಧನೆಯ ಹಾದಿಯಲ್ಲಿ ಎಂಬ ಕೃತಿಯಲ್ಲಿ ಈ ಕುರಿತು ಪ್ರಸ್ತಾಪಿಸಿದ್ದಾರೆ. ಈ ನಿಟ್ಟಿನಲ್ಲಿ ಹೆಚ್ಚುವರಿ ಕೆಲಸ ಮಾಡಿ ಖಚಿತ ನಿರೂಪಣೆ ಮಾಡಿದವರೆಂದರೆ ಅ.ಸುಂದರ.

ಕಳೆದ ಮೂರು ದಶಕಗಳಿಂದ ಲಕ್ಷ್ಮಣ ತೆಲಗಾವಿಯವರು ಚಿತ್ರದುರ್ಗ ಸಂಶೋಧನ ತಂಡದ ಗೆಳೆಯರೊಡನೆ ಕೈಗೊಂಡ ಚಾರಿತ್ರಿಕ ಮತ್ತು ಪುರಾತಾತ್ತ್ವಿಕ ಅಧ್ಯಯನಗಳಲ್ಲಿ ವರ್ಣರೇಖಾ ಚಿತ್ರ ಮತ್ತು ಬಯಲುಬಂಡೆ ರೇಖಾಕೃತಿಗಳ ಶೋಧನೆಗೆ ಆದ್ಯತೆ ನೀಡಿದರು. ಪ್ರಾಗ್ಚಾರಿತ್ರಿಕ ಕಾಲದಿಂದ ಚಾರಿತ್ರಿಕ ಕಾಲದವರೆಗೆ ಇವುಗಳ ವ್ಯಾಪ್ತಿಯೆಂಬುದು ಮುಖ್ಯ. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶೇಷ ಯೋಜನೆಗಾಗಿ ಚಿತ್ರದುರ್ಗ ಪರಿಸರದ ಲೇಖಕರು ಬಯಲುಬಂಡೆ ರೇಖಾಕೃತಿಗಳು ಎಂಬ ಅಧ್ಯಯನ ಕೃತಿಯೊಂದನ್ನು ಸಿದ್ಧಪಡಿಸುವಂತಾಯಿತು.

ಚಿತ್ರದುರ್ಗ ಪ್ರದೇಶದಲ್ಲಿ ಈವರೆಗೆ ಶೋಧಿಸಿದ ಬಯಲುಬಂಡೆ ರೇಖಾಕೃತಿಗಳನ್ನು ಈ ಮುಂದಿನಂತೆ ವಿಭಾಗಿಸಬಹುದು: 1. ಬೂದರದಿಬ್ಬ ಮತ್ತು ಕೋಟೆ ಪರಿಸರ 2.ನಗರ ಮತ್ತು ತಮಟಕಲ್ಲು ಪರಿಸರ 3. ಚೋಳಗುಡ್ಡ–ಕವಾಡಿಗರಹಟ್ಟಿ–ಸೊಲ್ಲಾಪುರ ಪರಿಸರ 4. ಗಂಜಿಗಟ್ಟೆ–ಪಂಢರಹಳ್ಳಿ ಪರಿಸರ 5. ಕುಂಚಿಹನಹಾಳು–ದೊಡ್ಡಸಿದ್ದವ್ವನಹಳ್ಳಿಗುಡ್ಡ ಪರಿಸರ 6. ಸಂಗೇನಹಳ್ಳಿಕೆರೆ ಪರಿಸರ 7. ಬೆಳಗಟ್ಟ ಪರಿಸರ.

1. ಚಿತ್ರದುರ್ಗ ಕೋಟೆ ಮತ್ತು ಅದರ ಆಗ್ನೇಯಕ್ಕಿರುವ ಬೂದರದಿಬ್ಬ ಪ್ರಾಚೀನ ನಿವೇಶನದಲ್ಲಿ ನವಶಿಲಾಯುಗ ಮತ್ತು ಬೃಹತ್‌ಶಿಲಾಸಂಸ್ಕೃತಿಯ ಕುರುಹುಗಳಿವೆ. ಅ.ಸುಂದರ ಅವರು ನಿರ್ಣಯಿಸಿರುವಂತೆ ಈ ಪರಿಸರದಲ್ಲಿ ನೆಲೆಸಿದ್ದ ಸಂಸ್ಕೃತಿಯ ಕಾಲಮಾನ ಪ್ರ.ಶ.ಪೂ.ಸು.900 – 700. ಬಿಳಿ ಮತ್ತು ಕೆಂಪುವರ್ಣರೇಖಾಚಿತ್ರ ಹಾಗೂ ಬಯಲು ಬಂಡೆ ರೇಖಾಕೃತಿಗಳಲ್ಲದೆ, ಈಚಿನ ಶೋಧನೆಗಳಿಂದ ಗೂಳಿ, ಗೂಳಿಸಾಲು, ಮನುಷ್ಯ, ಮನುಷ್ಯ ಪಾದ, ಜ್ಯಾಮಿತಿ ವಿನ್ಯಾಸ ಮೊದಲಾದ ನೂರಾರು ಸಂಖ್ಯೆಯಲ್ಲಿ ಕೊರೆದಚಿತ್ರಗಳು ಬೆಳಕಿಗೆ ಬಂದಿವೆ. ಇವು ಮುಖ್ಯವಾಗಿ ಕೊರೆದ ಮತ್ತು ಕುಟ್ಟಿ ಮೂಡಿಸಿದ ಶೈಲಿಯವು. ಮಂಡಲದಂಥ ಆಕೃತಿಗಳು ಹಾಗೂ ಚಿಕ್ಕ ಗುಳಿಗಳು ಈ ಪರಿಸರದ ಬೃಹತ್ ಬಂಡೆಗಳ ಮೇಲೆ ಸಾಕಷ್ಟು ಸಂಖ್ಯೆಯಲ್ಲಿರುವುದು ವಿಶೇಷ. ಕಠಾರಿಯನ್ನು ಹೋಲುವ ಕೊರೆದಚಿತ್ರಗಳು ಇಲ್ಲಿ ಹಲವಾರಿವೆ. ತಿಮ್ಮಣ್ಣನಾಯಕನಕೆರೆ, ಹಿಮವತ್–ಕೇದಾರ, ಧವಳಪ್ಪನಗುಡ್ಡ ಹಾಗೂ ಚಂದ್ರವಳ್ಳಿ ಪರಿಸರಗಳಲ್ಲಿ ಚಾರಿತ್ರಿಕ ಕಾಲದ ಬಯಲುಬಂಡೆ ರೇಖಾಕೃತಿಗಳು ಅಪಾರ ಸಂಖ್ಯೆಯಲ್ಲಿವೆ. ಗೂಳಿ, ಕುದುರೆ, ಆನೆ, ಒಂಟೆ, ವೀರಪುರುಷ ಮತ್ತು ಸ್ತ್ರೀಯರು, ಗೂಳಿಯನ್ನು ಹೊತ್ತಿರುವ ಪೂರ್ಣ ಪ್ರಮಾಣದ ಮನುಷ್ಯ, ಸೊಂಟದ ಕೆಳಭಾಗವನ್ನು ಮಾತ್ರ ತೋರಿಸಿರುವ ದೊಡ್ಡ ಆಕೃತಿಯ ಮನುಷ್ಯ ಮತ್ತು ಬಲಬದಿಯಲ್ಲಿ ನಾಯಿಯಂತಿರುವ ಪ್ರಾಣಿ, ಬಾಣಹೂಡಿದ ಬಿಲ್ಲು ಸಹಿತ ಮನುಷ್ಯ, ಕೋಟೆಯ ನಕ್ಷೆ, ಯುದ್ಧ ಚಿತ್ರಣ, ಲೈಂಗಿಕ ದೃಶ್ಯ ಮುಂತಾದ ರೇಖಾಕೃತಿಗಳು ವಿಪುಲವಾಗಿವೆ.

ಚಿತ್ರದುರ್ಗ ಬೆಟ್ಟದ ಉತ್ತರಕ್ಕೆ ಬಯಲುಬಂಡೆ ರೇಖಾಕೃತಿಗಳ ಸರಣಿ ಚಂದ್ರವಳ್ಳಿ ಕಣಿವೆ ಪ್ರದೇಶದಿಂದ ತಮಟಕಲ್ಲಿನವರೆಗೆ ಸಾಗುವ ಹಸುರುಶಿಲಾಶ್ರೇಣಿಯ ತನಕ ಮುಂದುವರೆದಿದೆ. ಕೊರೆಯುವುದು, ಕುಟ್ಟುವುದು, ಉಜ್ಜುವುದು–ಈ ಮೂರು ವಿಧಾನಗಳಿಂದಲೂ ಬಿಡಿಸಲಾದ ರೇಖಾಕೃತಿ ಗಳಿವೆ. ಪ್ರಾಗ್ಚಾರಿತ್ರಿಕ/ಆದಿಚಾರಿತ್ರಿಕ ಕಾಲದ ನೆಲೆಯಾದ ತಮಟಕಲ್ಲುಗುಡ್ಡದ ತುದಿಯಲ್ಲಿ ಹಾವಿನ ಹೆಡೆಯಾಕಾರದ ಬಂಡೆಯ ಒಳಪಾರ್ಶ್ವದಲ್ಲಿ ಬಿಳಿ ಮತ್ತು ಕೆಂಪುವರ್ಣಗಳಲ್ಲಿ ಗೂಳಿಗಳ ಮತ್ತು ಮನುಷ್ಯರ ರೇಖಾಚಿತ್ರಗಳಿವೆ.

ಚಿತ್ರದುರ್ಗ ಬೆಟ್ಟದ ಪಶ್ಚಿಮದಿಕ್ಕಿನಲ್ಲಿರುವ ಚೋಳಗುಡ್ಡ–ಜಾಲಿಕಟ್ಟೆ–ಕವಾಡಿಗರ ಹಟ್ಟಿ–ಸೊಲ್ಲಾಪುರ ಪರಿಸರದಲ್ಲಿ ವಿರಳವಾಗಿ ಬಿಳಿವರ್ಣರೇಖಾಚಿತ್ರಗಳು, ವಿಪುಲವಾಗಿ ಮಂಡಲಾಕೃತಿಗಳೊಡನೆ ಜ್ಯಾಮಿತಿಯಾಕೃತಿಗಳು, ಕುಳಿಗಳು, ಕುಳಿವಿನ್ಯಾಸಗಳು ಇವೆ. ಸೊಲ್ಲಾಪುರ–

ಟಗರಿನಹಟ್ಟಿಗಳ ನಡುವೆ ಬಂಡೆಗಳ ಮೇಲೆ ಉಜ್ಜಿ ಮೂಡಿಸಲಾದ ಹಾಗೂ ಕೊರೆದಚಿತ್ರಗಳು ಇವೆ. ಚೋಳಗುಡ್ಡ ಪರಿಸರದಲ್ಲಿ ಚಾರಿತ್ರಿಕ ಕಾಲದ ಆಂಜನೇಯ ಮತ್ತಿತರ ಕೊರೆದಚಿತ್ರಗಳಿದ್ದರೆ, ಸಿದ್ದಾಪುರದ ಬಳಿ ಭೀಮಸಮುದ್ರ ಮಾರ್ಗದಲ್ಲಿ ಕುಳಿಗಳಿಂದ ತುಂಬಿದ ಬೃಹತ್‌ಬಂಡೆ (ಭೀಮನಬಂಡೆ) ಇದೆ. ಇಲ್ಲಿಯ ಕವಾಡಿಗರಹಟ್ಟಿ ಪರಿಸರದಲ್ಲಿ ಮಂಡಲಾಕೃತಿಗಳಿವೆ.

ಚಿತ್ರದುರ್ಗದ ಪಶ್ಚಿಮಕ್ಕೆ ಸು.10 ಕಿಮೀ ದೂರದಲ್ಲಿ ಗಂಜಿಗಟ್ಟಿ–ಪಂಢರಹಳ್ಳಿ ಪರಿಸರ ಮತ್ತೊಂದು ಪ್ರಾಗ್ಚಾರಿತ್ರಿಕ ನೆಲೆ. ಇಲ್ಲಿಯ ಗುಡ್ಡಗಳಲ್ಲಿ ಬಿಳಿ ಮತ್ತು ಕೆಂಪು ವರ್ಣರೇಖಾ ಚಿತ್ರಗಳೊಡನೆ ಕುಟ್ಟಿದ ಹಾಗೂ ಗೀರಿದ ಪ್ರಾಣಿ ರೇಖಾಕೃತಿಗಳ ಸಮೂಹ, ಮುಂಚಾಚಿದ ಕೊಂಬುಗಳುಳ್ಳ ಗೂಳಿಯಾಕೃತಿಗಳು ಹೆಚ್ಚಾಗಿವೆ.

ಚಿತ್ರದುರ್ಗದ ಪೂರ್ವಕ್ಕೆ ಬೆಂಗಳೂರು ರಸ್ತೆಯಲ್ಲಿಯ ಕುಂಚಿಗನಹಾಳು ಗ್ರಾಮದ ಸಣ್ಣಮರಡಿ ಅಥವಾ ಚಿನ್ನಮರಡಿಯಲ್ಲಿ ಗೂಳಿ, ಸ್ತ್ರೀ–ಪುರುಷ, ಜ್ಯಾಮಿತಿಯಾಕೃತಿ, ಕುಳಿ, ಕುಳಿಯಾಕೃತಿಗಳು ವಿಪುಲವಾಗಿವೆ. ಈ ಪ್ರದೇಶದಿಂದ ನೈರುತ್ಯ ದಿಕ್ಕಿಗಿರುವ ಕುರುಬರಮರಡಿಕೆರೆ ನೆಲೆಯಿಂದ ಇಂಗಳಹಾಳು ಮತ್ತು ಕುಂಚಿಗನಹಾಳುವರೆಗಿನ ಗುಡ್ಡಗಳ ಪರಿಸರದಲ್ಲಿ ಬೃಹತ್ ಶಿಲಾಯುಗದ ಕಲ್ಗೋರಿಗಳು ಹರಡಿವೆ. ಇಂಗಳಹಾಳು ಪ್ರದೇಶದಲ್ಲಿ ಪ್ರ.ಶ.ಪೂ. 4–2 ನೆಯ ಶತಮಾನದಿಂದಲೇ ಜನವಸತಿಯಿದ್ದಿತೆಂದು ತಿಳಿಯಲಾಗಿದ್ದು, ಇಲ್ಲಿಯ ತಾಮ್ರದ ಗಣಿಗಾರಿಕೆ ಪ್ರ.ಶ.ಪೂ. 230 ರಿಂದ ಪ್ರ.ಶ.ಪೂ 220 ರ ಕಾಲಾವಧಿಯಲ್ಲಿ, ಸಾತವಾಹನರ ಸಮಯದಲ್ಲಿ ನಡೆಯಿತೆಂಬುದನ್ನು ಈ ಗಣಿಯಲ್ಲಿ ದೊರೆತ ಮರದ ತುಂಡುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ಖಚಿತಪಡಿಸಿಕೊಳ್ಳಲಾಗಿದೆ. ಕುಂಚಿಗನಹಾಳು ಪರಿಸರದಲ್ಲಿ ಕುಟ್ಟಿ ಮೂಡಿಸಿದ ಗೂಳಿಗಳ ಚಿತ್ರಗಳು, ಸಮೀಪದಲ್ಲಿರುವ ಕಣಿವೆಮರಡಿಯಲ್ಲಿ ಕೃಷಿಕರು ಮತ್ತು ಪಶುಪಾಲಕರ ರೇಖಾಚಿತ್ರಗಳೂ ಇವೆ. ಹತ್ತಿರದ ದೊಡ್ಡಸಿದ್ದವ್ವನಹಳ್ಳಿ ಪರಿಸರದ ಎತ್ತರದ ಮಟ್ಟಿ/ಗುಡ್ಡಗಳ, ಬಂಡೆಗಳ ಮೇಲೆ ಕುಟ್ಟಿ ಮೂಡಿಸಿದ ಪ್ರಾಣಿ, ಮನುಷ್ಯ ಇತ್ಯಾದಿ ಆಕೃತಿಗಳಿವೆ. ಬಯಲಿನಲ್ಲಿರುವ ನೆಲಮಟ್ಟದ ಹಾಗೂ ಸಮತಟ್ಟಾದ ವಿಶಾಲ ಬಂಡೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕುಳಿಗಳೂ ಕುಳಿಯಾಕೃತಿಗಳೂ ಇವೆ.

ಸಂಗೇನಹಳ್ಳಿಕೆರೆ ಬಳಿಯ ಬೂದಿದಿಬ್ಬದಲ್ಲಿ ಹುಟ್ಟುಬಂಡೆಗಳ ಮೇಲೆ ನೂರಾರು ಸಂಖ್ಯೆಯಲ್ಲಿ ಕುಟ್ಟಿ ಮತ್ತು ಉಜ್ಜಿ ಮೂಡಿಸಿದ ಪ್ರಾಣಿ, ಮನುಷ್ಯ ಹಾಗೂ ಜ್ಯಾಮಿತಿ ವಿನ್ಯಾಸದ ಆಕೃತಿಗಳಿವೆ. ಈ ಪ್ರದೇಶದಲ್ಲಿ ಬೃಹತ್‌ಶಿಲಾಯುಗ ಮತ್ತು ಆದಿಚಾರಿತ್ರಿಕ ಸಂಸ್ಕೃತಿಯ ಕುರುಹುಗಳಿವೆ. ಚಿತ್ರದುರ್ಗ ತಾಲ್ಲೂಕು ಬೆಳಗಟ್ಟಗ್ರಾಮದ ಬಳಿಯಿರುವ ಎದ್ದುಲುಬಂಡೆಗುಡ್ಡವು ತನ್ನಲ್ಲಿ ಹುದುಗಿಸಿಕೊಂಡಿರುವ ಕಲಾಸಂಪತ್ತು ವಿಸ್ಮಯವನ್ನುಂಟು ಮಾಡುವಂಥದ್ದು. ಪ್ರಾಣಿವರ್ಗದ ರೇಖಾಕೃತಿಗಳು ಈ ಗುಡ್ಡದಲ್ಲಿ ಬೃಹತ್ ಸಂಖ್ಯೆಯಲ್ಲಿ ಕಂಡುಬರುವುದರಿಂದ ಸ್ವಾಭಾವಿಕವಾಗಿಯೇ ಇದನ್ನು ತೆಲುಗಿನಲ್ಲಿ ಎದ್ದುಲು ಬಂಡೆ ಎಂದು ಕರೆಯಲಾಗಿದೆ. ಈ ಗುಡ್ಡದಲ್ಲಿ ಪತ್ತೆಯಾಗಿರುವ ಬಯಲು ಬಂಡೆ ರೇಖಾಕೃತಿಗಳನ್ನು ವಿವಿಧಕಾಲೀನ ಪ್ರಾಣಿವರ್ಗದ (ಗೂಳಿಗಳು) ರೇಖಾಕೃತಿಗಳು, ಮನುಷ್ಯಾಕೃತಿಗಳು, ಖಡ್ಗಗಳನ್ನು ಹಿಡಿದಿರುವ ಕುದುರೆ ಸವಾರರು, ಮಾನವ ಪಾದದ ಆಕೃತಿಗಳು, ಜ್ಯಾಮಿತಿಯಾಕೃತಿಗಳು, ಕುಳಿಗಳು, ಕುಳಿಯಾಕೃತಿಗಳು, ಆಂಜನೇಯ ರೇಖಾಕೃತಿಗಳಾಗಿ ವರ್ಗೀಕರಿಸಬಹುದು. ಈ ಆಕೃತಿಗಳ ವಿನ್ಯಾಸ, ಶೈಲಿ, ಉದ್ದೇಶ, ಸ್ಥಳದ ಆಯ್ಕೆ ಇತ್ಯಾದಿಯನ್ನು ಗಮನದಲ್ಲಿರಿಸಿ ಇವುಗಳನ್ನು ಚರಿತ್ರಾರಂಭಕಾಲ, ಪಾಳೆಯಗಾರರ ಕಾಲ ಮತ್ತು ಆಧುನಿಕ ಕಾಲದವೆಂದು ಸ್ಥೂಲವಾಗಿ ಮೂರು ಹಂತಗಳಾಗಿ ವಿಭಾಗಿಸಬಹುದು. ಬೆಳಗಟ್ಟ ಪರಿಸರದ ಚಿಕ್ಕಜಗಲೂರು, ಬೊಗ್ಗಲರಂಗವ್ವನಹಳ್ಳಿ, ಕೂನಬೇವು, ಹಂಪಯ್ಯನಮಾಳಿಗೆ, ಕಲ್ಲೇನಹಳ್ಳಿ, ವೀರಮದಕೇರಿಪುರ, ಅಜ್ಜನಕಣಿವೆ, ಗೋನೂರು ಮುಂತಾದ ಪ್ರದೇಶಗಳಲ್ಲೂ ಪ್ರಾಗ್ಚಾರಿತ್ರಿಕ ಹಾಗೂ ಮಧ್ಯಕಾಲೀನ ಬಯಲುಬಂಡೆ ರೇಖಾಕೃತಿಗಳು ಬೆಳಕಿಗೆ ಬಂದಿವೆ. ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ ಪರಿಸರ ಈ ಜಿಲ್ಲೆಯ ಪ್ರಸಿದ್ಧ ಪ್ರಾಗ್ಚಾರಿತ್ರಿಕ ನೆಲೆ. ಇದು ಬ್ರಹ್ಮಗಿರಿಯೊಡನೆ ಸಿದ್ದಾಪುರ–ಜಟಂಗರಾಮೇಶ್ವರ ಮತ್ತು ಸನಿಹದ ಇತರ ನಿವೇಶನಗಳನ್ನೂ ಒಳಗೊಳ್ಳುತ್ತದೆ. ಪುರಾತತ್ತ್ವಜ್ಞರೇ ಅಲ್ಲದೆ ಶ್ರೀಶೈಲ ಆರಾಧ್ಯ ಹಾಗೂ ಚಿತ್ರದುರ್ಗ ಸಂಶೋಧನ ತಂಡದವರೂ ಈ ಪ್ರದೇಶದಲ್ಲಿ ಗವಿ ವರ್ಣರೇಖಾಚಿತ್ರಗಳಿಂದ (ಬಿಳಿವರ್ಣದ) ತುಂಬಿರುವ ಹಾಗೂ ನಿಗೂಢ ಎಡೆಗಳಲ್ಲಿರುವ ಹಲವಾರು ಹೊಸ ಗವಿಗಳನ್ನು ಶೋಧಿಸಿದ್ದಾರೆ. ಇಲ್ಲಿರುವ ವರ್ಣರೇಖಾ ಚಿತ್ರಗಳ ಕಾಲವ್ಯಾಪ್ತಿ ಪ್ರಾಗ್ಚಾರಿತ್ರಿಕ ಕಾಲದಿಂದ ಸು.17–18 ನೆಯ ಶತಮಾನ. ಬಯಲುಬಂಡೆಗಳ ಮೇಲೆ ಮಾನವ ಹಾಗೂ ಪ್ರಾಣಿಗಳ ರೇಖಾಕೃತಿಗಳು ಬಹಳಷ್ಟು ಇವೆ. ಇವುಗಳಲ್ಲಿ ಪಾದಾಕೃತಿಗಳ ಸಂಖ್ಯೆ ಸ್ವಲ್ಪ ಹೆಚ್ಚು ಎನ್ನಬಹುದು. ಬಯಲುಬಂಡೆಗಳು ಮಾತ್ರವಲ್ಲದೆ ನಿಲುಸುಗಲ್ಲುಗಳು ಮತ್ತು ನೆಲದಡಿಯ ಕಂಡಿ ಕೋಣೆಗೋರಿಗಳಿರುವುದು ವಿಶೇಷ. ಬ್ರಹ್ಮಗಿರಿ ಅಶೋಕನ ಶಾಸನದ ಸಮೀಪದ ಬಂಡೆಯ ಮೇಲೆ ಉಜ್ಜಿ ಮೂಡಿಸಿದ ದೊಡ್ಡಗಾತ್ರದ ಆನೆಯ ಚಿತ್ರವಿದೆ. ಚಳ್ಳಕೆರೆ ತಾಲ್ಲೂಕಿನ ಗುಡ್ಡದಲ್ಲಿರುವ ಕೊರೆಚಿತ್ರಗಳು ಪಾಳೆಯಗಾರರ ಕಾಲದವು. ಕೃಷಿಕ ಸಮಾಜವನ್ನು ಪ್ರತಿನಿಧಿಸುವ ಪಶುಗಳಿಂದ ಕೂಡಿರುವ ಸಹಸ್ರಸಂಖ್ಯೆಯ ಕೊರೆಚಿತ್ರಗಳು ನೇರಲಗುಂಟೆಯಿಂದ ನನ್ನಿವಾಳದವರೆಗೆ, ಸು. 8–10 ಕಿಮೀಗಳ ವ್ಯಾಪ್ತಿಯಲ್ಲಿಯ ಹುಟ್ಟುಬಂಡೆಗಳ ಮೇಲಿವೆ. ಇದೇ ತಾಲ್ಲೂಕಿನ ಸಿದ್ದೇಶ್ವರನಗುಡ್ಡದಲ್ಲಿ ಪ್ರಾಣಿಚಿತ್ರಗಳೊಡನೆ, ಮಾನವ ಪಾದದ ಆಕೃತಿಗಳು ಗೋಚರಿಸಿವೆ. ತಣಿಗೆಕಲ್ಲಿನಲ್ಲಿ ಎಚ್. ಶ್ರೀಶೈಲ ಆರಾಧ್ಯರು ಕೆಲವು ರೇಖಾಕೆತ್ತನೆ, ವರ್ಣರೇಖಾಚಿತ್ರಗಳ ಬಗೆಗೆ ವರದಿ ಮಾಡಿದ್ದಾರೆ. ಜಾನಕಲ್ಲು ಪರಿಸರದಲ್ಲಿ ಕುಳಿಗಳು, ಕುಳಿವಿನ್ಯಾಸಗಳು ಸಾಕಷ್ಟು ಪ್ರಮಾಣದಲ್ಲಿವೆ. ಹಿರಿಯೂರು ತಾಲ್ಲೂಕಿನ ಸೊಂಡೇಕೆರೆಯಲ್ಲಿ 25ಕ್ಕೂ ಹೆಚ್ಚು ಶಿಲಾವೃತ್ತಗಳು ಪ್ರಾಗ್ಚಾರಿತ್ರಿಕ ನೆಲೆಯನ್ನು ಸೂಚಿಸುತ್ತವೆ. ಬಯಲು ಸಂಸ್ಕೃತಿ ಅಥವಾ ಗ್ರಾಮಜೀವನವನ್ನು ಅಳವಡಿಸಿಕೊಂಡ ಕೃಷಿಕವರ್ಗದವರ ಕಲಾಭಿರುಚಿಯ ಅಭಿವ್ಯಕ್ತಿಯಾಗಿ ಇಲ್ಲಿ ಬಂಡೆಗಳ ಮೇಲೆ ಕೊರೆದಚಿತ್ರಗಳಿವೆ. ಗೂಳಿಗಳ ಆಕೃತಿಗಳೊಡನೆ ಮನುಷ್ಯರ ಚಿತ್ರಗಳೂ ಇವೆ. ಕೆಲವು ಆಕೃತಿಗಳು ಆಳವಾಗಿ ಉಜ್ಜಿ ಮೂಡಿಸಿದ ಶೈಲಿಯಲ್ಲಿವೆ. ಕೆಲವು ಸರಳ ರೇಖಾಕೃತಿಗಳೂ ಇವೆ. ಮಂಡಲವನ್ನು ಹೋಲುವಂಥ ವಿಶಿಷ್ಟ ಆಕೃತಿಯೊಂದು ಇಲ್ಲಿದೆ. ಕುಳಿಗಳು, ಕುಳಿಯಾಕೃತಿಗಳು ಇಲ್ಲಿ ಅಪಾರ ಸಂಖ್ಯೆಯಲ್ಲಿವೆ.

ನವಶಿಲಾಯುಗ ನಿವೇಶನವೆನಿಸಿದ ಮುಳ್ಳಪ್ಪನಗುಡ್ಡ ಉಡವಳ್ಳಿಯಲ್ಲಿಯೂ ನಾನಾ ವಿಧದ ಬಯಲುಬಂಡೆಗಳ ಮೇಲೆ ಪ್ರಾಣಿಗಳ ಮತ್ತು ಸರಳ ರೇಖಾಕೃತಿಗಳಿವೆ. ಮಧ್ಯಕಾಲೀನ ರೇಖಾಕೃತಿಗಳಲ್ಲಿ ಕತ್ತಿ–ಗುರಾಣಿ ಹಿಡಿದು ಹೋರಾಡುತ್ತಿರುವ ಮನುಷ್ಯರ ಚಿತ್ರಗಳೂ ವಿಪುಲವಾಗಿವೆ. ತಾಂತ್ರಿಕ ಮಂಡಲಗಳು, ಕುಳಿಯಾಕೃತಿಗಳು ಇಲ್ಲಿವೆ. ಪ್ರಾಚೀನ ಸಂಸ್ಕೃತಿಯ ಕುರುಹುಗಳು ಇಲ್ಲೆಲ್ಲ ದೊರೆತಿರುವುದು ಗಮನಾರ್ಹ. ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಒಂದು ಪ್ರಾಗ್ಯೈತಿಹಾಸಿಕ ನೆಲೆ. ಈ ಪ್ರದೇಶದ ಘಟ್ಟಿಹೊಸಹಳ್ಳಿ ಮತ್ತಿತರ ಎಡೆಗಳಲ್ಲಿ ವಿರಳವಾಗಿ ಕೆಲವು ರೇಖಾಕೃತಿಗಳಿವೆ. ಚಿತ್ರದುರ್ಗ ಜಿಲ್ಲೆಯ ಬಯಲುಬಂಡೆ ರೇಖಾಕೃತಿಗಳು ವಿಶ್ವದ ಇತರೆಡೆಗಳಲ್ಲಿ ಕಂಡುಬಂದಿರುವ ಈ ಬಗೆಯ ರೇಖಾಕೃತಿಗಳನ್ನು ಹೋಲುವುದು ಕುತೂಹಲಕಾರಿ. (ಎಲ್.ಟಿ.)

**ಚಿಯಾ ಸಿಯಾಂಗ್ ಸೀನ್:** ಚೀನದ ಷಾಂಟಂಗ್ ಪ್ರಾಂತದಲ್ಲಿರುವ ಹ್ಯಾನ್ ರಾಜವಂಶದ ಕಾಲಕ್ಕೆ ಸೇರಿದ ಸಮಾಧಿ ಸ್ಥಳ (ಸು.147–68). ಇಂಥ ಸಮಾಧಿಗಳು ಹೋಪೇ ಮುಂತಾದೆಡೆಗಳಲ್ಲೂ ಇವೆ. ಈ ಸಮಾಧಿಗಳೆಲ್ಲ ನೆಲದ ಅಡಿಯಲ್ಲಿ ಕಟ್ಟಿದಂಥವು. ಆದರೂ ಇಟ್ಟಿಗೆಯ ಕಟ್ಟಡ, ಕಮಾನು, ಅರೆಪೀಪಾಯಿ ಚಾವಣಿ ಮುಂತಾದ ವಾಸ್ತುವೈಶಿಷ್ಟ್ಯಗಳು ಇವುಗಳಲ್ಲಿ ಕಂಡುಬರುತ್ತವೆ. ಈ ಸಮಾಧಿಗಳಲ್ಲಿ ಉತ್ತರ–ದಕ್ಷಿಣವಾಗಿ, ಒಂದಕ್ಕೊಂದು ಹೊಂದಿಕೊಂಡಂತೆ, ಹಬ್ಬಿರುವ ಅನೇಕ ದೊಡ್ಡ ಕೋಣೆಗಳೂ ಇವುಗಳಿಂದ ಪಕ್ಕಕ್ಕೆ ತೆರೆಯುವ ಸಣ್ಣ ಕೋಣೆಗಳೂ ಇವೆ. ಇವುಗಳ ಒಳಗೋಡೆಗಳ ಮೇಲೆ ಪ್ರಾಣಿಗಳು, ಹಕ್ಕಿಗಳು ಮುಂತಾದವೇ ಅಲ್ಲದೆ ಮೃತನಿಗೆ ಅಧೀನರಾಗಿದ್ದ ಕಿರಿ ಅಧಿಕಾರಿಗಳು, ಸೇವಕರು, ಆ ಕಾಲದ ಕಟ್ಟಡಗಳು, ದೋಣಿಗಳು ಮುಂತಾದವುಗಳ ವರ್ಣಚಿತ್ರಗಳು ಅಥವಾ ಅಲ್ಪ ಉಬ್ಬುಶಿಲ್ಪಗಳು ಇವೆ. ತಾವೊ ಮುಂತಾದ ಸಿದ್ಧಾಂತಗಳಿಗೆ ಸಂಬಂಧಿಸಿದ ಚಿತ್ರಗಳೂ ಉಂಟು. ಕನ್‌ಫ್ಯೂಷಿಯನಿಸಂ ಈ ಚಿತ್ರಗಳೂ ಶಿಲ್ಪಗಳೂ ಹ್ಯಾನ್ ರಾಜವಂಶಕಾಲದ ಸಂಸ್ಕೃತಿಯನ್ನು ಅರಿಯಲು ಬಹಳಮಟ್ಟಿಗೆ ಸಹಾಯಕವಾಗಿವೆ. (ಎಸ್.ಎನ್.)

**ಚಿಯಾಂಗ್ ಕೈಷೆಕ್:** 1887–1975. ಚೀನಿ ಯೋಧ, ರಾಜಕಾರಣಿ. 1928–49ರ ವರೆಗೆ ಚೀನೀ ಸರ್ಕಾರದ ಮತ್ತು 1949ರಿಂದ ಫಾರ್ಮೋಸ ದ್ವೀಪದಲ್ಲಿ ದೇಶಭ್ರಷ್ಟ ಸರ್ಕಾರದ ಅಧ್ಯಕ್ಷ. ಜೆಜಿಯಾಂಗ್ ಪ್ರಾಂತ್ಯದ ಪೆಂಗ್ವಾ ಜಿಲ್ಲೆಯ ಚಿಕೋವ್ ಎಂಬ ಗ್ರಾಮದ ವರ್ತಕ ಕೃಷಿಕಾರ ಕುಟುಂಬವೊಂದರಲ್ಲಿ 1887ರ ಅಕ್ಟೋಬರ್ 31ರಂದು ಜನಿಸಿದ. 1906ರಲ್ಲಿ ಉತ್ತರ ಚೀನದ ಪೋಟಿಂಗ್ ಸೈನಿಕ ಅಕಾಡೆಮಿಯಲ್ಲೂ 1907–11ರಲ್ಲಿ ಜಪಾನಿನ ಟೋಕಿಯೊ ಸೈನಿಕ ಕಾಲೇಜಿನಲ್ಲೂ ಶಿಕ್ಷಣ ಪಡೆದ. 1909–11ರಲ್ಲಿ ಜಪಾನಿ ಸೈನ್ಯದಲ್ಲಿ ಕೆಲಸಮಾಡಿದ. ಆಗ ಇವನ ಸಹಪಾಠಿಗಳಿಂದ ಪ್ರಭಾವಿತನಾಗಿ ಚಿಯಾಂಗ್ ಕ್ರಾಂತಿಕಾರಿಯಾದ. ಚೀನವನ್ನು ಮಂಚು ವಂಶದ ಆಡಳಿತದಿಂದ ವಿಮೋಚನೆ ಗೊಳಿಸುವ ಸಂಚಿನಲ್ಲಿ ಇವನೂ ಭಾಗವಹಿಸಿದ. ಸನ್ ಯಾತ್–ಸೆನ್ನರ ವಿಚಾರಗಳಲ್ಲಿ ಇವನಿಗೆ ಆಸಕ್ತಿ ಮೂಡಿತು.

1911ರಲ್ಲಿ ಚೀನದಲ್ಲಿ ಕ್ರಾಂತಿಕಾರಿ ಘಟನೆಗಳು ಸಂಭವಿಸಿದಾಗ ಈತ ಸ್ವದೇಶಕ್ಕೆ ಹಿಂದಿರುಗಿ ಹೋರಾಟದಲ್ಲಿ ನೆರವಾದ. ಮಂಚುಗಳ ಪತನವಾಯಿತಾದರೂ ಯುವಾನ್‌ಷಿ–ಕೈ ಅಧ್ಯಕ್ಷನಾಗಿ, ನಿರಂಕುಶಾಧಿಪತಿಯಾಗಿ ಆಳತೊಡಗಿ, ತನ್ನನ್ನು ಅಧಿಕಾರಕ್ಕೆ ತಂದ ಪಕ್ಷವನ್ನೇ ನಾಶಗೊಳಿಸಲು ಯತ್ನಿಸಿದ. ಆಗ ಕ್ರಾಂತಿಕಾರರು ಅವನ ವಿರುದ್ಧ ಚಳವಳಿ ನಡೆಸಿ ವಿಫಲರಾದರು. ಚಿಯಾಂಗ್ ಜಪಾನಿಗೆ ಓಡಿಹೋಗಿ 1915 ರವರೆಗೂ ಅಲ್ಲೇ ಇದ್ದ. ತಾನೇ ಚಕ್ರವರ್ತಿಯಾಗಲು ಪ್ರಯತ್ನಿಸಿ ಜನವಿರೋಧವನ್ನು ಬೆಳೆಸಿಕೊಂಡ. ಮತ್ತೊಂದು ಕ್ರಾಂತಿಗೆ ಪರಿಸ್ಥಿತಿ ಹದವಾಗಿತ್ತು. ಅದರಲ್ಲಿ ಭಾಗವಹಿಸಲು ಚಿಯಾಂಗ್ ಸ್ವದೇಶಕ್ಕೆಹಿಂದಿರುಗಿದ. ಕ್ರಾಂತಿ ಸಂಭವಿಸಿತು. ಗಣರಾಜ್ಯ ಉಳಿದುಕೊಂಡಿತು. ಯುವಾನನ ಆಶೆ ಮಣ್ಣುಗೂಡಿತು.

ಈತ 1916–17ರಲ್ಲಿ ಷಾಂಗೈನಲ್ಲಿ ಗ್ರೀನ್ ಗ್ಯಾಂಗ್ ಎಂಬ ಗುಪ್ತ ಸಂಘವೊಂದರಲ್ಲಿದ್ದ. ಈ ಸಂಸ್ಥೆ ಹಣಕಾಸಿನ ಕೈವಾಡಗಳಲ್ಲಿ ನಿರತವಾಗಿತ್ತು. 1918ರಲ್ಲಿ ಚಿಯಾಂಗ್ ಮತ್ತೆ ಸಾರ್ವಜನಿಕ ರಂಗ ಪ್ರವೇಶಮಾಡಿದ. ಕುಮಿನ್ ಟಾಂಗ್ (ರಾಷ್ಟ್ರೀಯ ಪಕ್ಷ) ನಾಯಕ ಸನ್ ಯಾತ್–ಸೆನ್‌ರ ಅನುಯಾಯಿಯಾದ. ಯುವಾನನ ಅನಂತರ ಸೇನಾ ಸತ್ರಪರಲ್ಲಿ ಹರಿದು ಹಂಚಿಹೋಗಿದ್ದ ಚೀನವನ್ನು ಒಂದುಗೂಡಿಸಲು ಸನ್ ಯಾತ್–ಸೆನ್ ಪ್ರಯತ್ನಿಸುತ್ತಿದ್ದರು. ರಾಜ್ಯವನ್ನು ವಿಮೋಚನೆಗೊಳಿಸಿ, ಕ್ರಾಂತಿಯನ್ನು ಸಾರ್ಥಕಗೊಳಿಸುವುದು ಅವರ ಉದ್ದೇಶವಾಗಿತ್ತು. ಸನ್ ಯಾತ್–ಸೆನ್ ಸೈನ್ಯವನ್ನು ಕಟ್ಟಲು ಅವರಿಗೆ ಪರಕೀಯರ ಸಹಾಯ ಅವಶ್ಯವಾಗಿತ್ತು. ಅವರು ಸೋವಿಯೆತ್ ದೇಶದ ಸಹಾಯ ಕೋರಿದರು. ಸೋವಿಯೆತ್

ಸಂಘಸಂಸ್ಥೆಗಳನ್ನೂ ಅಲ್ಲಿಯ ಸೈನ್ಯಪದ್ಧತಿಯನ್ನೂ ಅಧ್ಯಯನ ಮಾಡಲು ಚಿಯಾಂಗ್ ರಷ್ಯಕ್ಕೆ ಭೇಟಿಯಿತ್ತ. ಸೋವಿಯೆತ್ ಮಾದರಿಯಲ್ಲಿ, ಕ್ಯಾಂಟನ್ನಿನ ಹತ್ತಿರದ ವಾಂಪೋವ ದಲ್ಲಿ ಸೈನಿಕ ಅಕಾಡೆಮಿ ಸ್ಥಾಪಿತವಾಗಿ ಚಿಯಾಂಗರೇ ಅದಕ್ಕೆ ಅಧಿಪತಿಯಾದ.

ಸೋವಿಯೆತ್ ಸಲಹೆಗಾರರು ಕ್ಯಾಂಟನ್‌ಗೆ ಬಂದರು. ಚೀನಿ ಕಮ್ಯುನಿಸ್ಟರಿಗೂ ಕುಮಿನ್‌ಟಾಂಗ್ ಪಕ್ಷಕ್ಕೂ ಬಾಂಧವ್ಯ ಏರ್ಪಟ್ಟಿತ್ತು. ಚಿಯಾಂಗ್ ಮಾರ್ಕ್ಸ್ ಮತ್ತು ಲೆನಿನರ ಕೃತಿಗಳ ಅಧ್ಯಯನ ಮಾಡಿದ. ಲೆನಿನ್ ಸಿದ್ಧಾಂತಗಳು ಇವನ ಮೇಲೆ ಪ್ರಭಾವ ಬೀರಿದುವು. ಸನ್ ಯಾತ್-ಸೆನ್ನರ ಮರಣಾನಂತರ (1925) ಅಧಿಕಾರಕ್ಕಾಗಿ ಚೀನಿ ಕಮ್ಯುನಿಸ್ಟರಿಗೂ ಚಿಯಾಂಗನಿಗೂ ಸ್ಪರ್ಧೆ ಏರ್ಪಟ್ಟಿತು. ವಾಂಪೋವ ಸೈನ್ಯಪಡೆಯ ಸಹಾಯದಿಂದ ಚಿಯಾಂಗ್ ಅವರನ್ನು ಎದುರಿಸಿದರು. ಶಕ್ತಿಪ್ರದರ್ಶನ ಹಾಗೂ ಸೌಮ್ಯನೀತಿಗಳನ್ನು ಒಂದೊಂದಾಗಿ ಪ್ರದರ್ಶಿಸಿ, ಸೋವಿಯೆತ್ ಸಹಾಯವನ್ನು ಕಳೆದುಕೊಳ್ಳದೆ ಕಮ್ಯುನಿಸ್ಟರನ್ನು ವಿರೋಧಿಸಿದ. 1927ರ ವರೆಗೂ ಸೋವಿಯೆತ್ ದೇಶದ ಸಹಾಯ ಇವನಿಗೆ ದೊರಕುತ್ತಿತ್ತು. 1927ರಲ್ಲಿ ಕ್ಷಿಪ್ರಾಕ್ರಮಣ ನಡೆಸಿ ಚಿಯಾಂಗ್ ಅಧಿಕಾರ ಪಡೆದುಕೊಂಡ. ಕಮ್ಯುನಿಸ್ಟರೊಂದಿಗಿನ ಸಂಬಂಧ ಕೊನೆಗೊಂಡಿತು. ಕ್ರಾಂತಿ ಸೇನೆಯ ದಂಡಾಧಿಕಾರಿಯಾಗಿ ಇವನು ಯುದ್ಧನಾಯಕರೊಂದಿಗೆ ನಡೆಸುತ್ತಿದ್ದ ಯುದ್ಧ 1928ರಲ್ಲಿ ಕೊನೆಗೊಂಡಿತು. ಆ ವರ್ಷ ಇವನು ಪೀಕಿಂಗನ್ನು ಪ್ರವೇಶಿಸಿದ. ಚಿಯಾಂಗನ ನಾಯಕತ್ವದಲ್ಲಿ ಹೊಸ ಕೇಂದ್ರೀಯ ಸರ್ಕಾರ ನ್ಯಾನ್‌ಕಿಂಗ್‌ನಲ್ಲಿ ಸ್ಥಾಪಿತವಾಯಿತು. ಅದೇ ವರ್ಷ ಇವನು ಸೂಂಗ್ ಕುಟುಂಬದ ಕೊನೆಯ ಪುತ್ರಿ ಮೈ-ಲಿಂಗ್‌ಳನ್ನು ವಿವಾಹವಾಗಿ, ಆ ಪ್ರಭಾವದಿಂದಾಗಿ ಕ್ರೈಸ್ತನಾದ. ಆದರೂ ಕ್ರೈಸ್ತಧರ್ಮಕ್ಕಿಂತ ಜಪಾನೀ ಹಾಗೂ ಲೆನಿನ್ ಪ್ರಭಾವವೇ ಇವನ ಮೇಲೆ ಹೆಚ್ಚಾಗಿತ್ತು.

1931ರಲ್ಲಿ ಜಪಾನು ಮಂಚೂರಿಯವನ್ನು ಆಕ್ರಮಿಸಿತು. ಆ ದೇಶದೊಡನೆ ಯುದ್ಧ ಅನಿವಾರ್ಯವಾಯಿತು. ಆದರೆ ಕಮ್ಯುನಿಸ್ಟರನ್ನು ಪರಾಜಯಗೊಳಿಸಿ ಅನಂತರ ಜಪಾನನ್ನು ಎದುರಿಸಬೇಕೆಂಬುದು ಚಿಯಾಂಗನ ಹಂಚಿಕೆಯಾಗಿತ್ತು. ಇದರಿಂದ ಆಂತರಿಕ ವಿರೋಧ ಬೆಳೆಯಲು ಅವಕಾಶ ನೀಡಿದಂತಾಯಿತು. ಧಾರ್ಮಿಕ ಐಕ್ಯ ಸಾಧಿಸುವ ಉದ್ದೇಶದಿಂದ ಇವನು ಕನ್‌ಫ್ಯೂಷಸ್‌ನ ತತ್ತ್ವಗಳನ್ನು ಪ್ರಚಾರ ಮಾಡಿದ. 1936ರಲ್ಲಿ ಅಶಾಂತಿ ಹೆಚ್ಚಿತು. ಕಮ್ಯುನಿಸ್ಟರೊಂದಿಗೆ ಒಪ್ಪಂದ ಮಾಡಿಕೊಂಡು ಜಪಾನಿ ಆಕ್ರಮಣದ ವಿಪತ್ತನ್ನು ಎದುರಿಸಲು ತೀರ್ಮಾನಿಸಲಾಯಿತು. ಇವನ ನೇತೃತ್ವದಲ್ಲಿ ಎಲ್ಲ ಶಕ್ತಿಗಳೂ ಒಟ್ಟುಗೂಡಿದವು. 1937ರಲ್ಲಿ ಜಪಾನಿನೊಂದಿಗೆ ಯುದ್ಧ ಆರಂಭವಾದಾಗ ಇಡೀ ಚೀನಿ ಪಡೆಗೆ ಚಿಯಾಂಗ್ ಮುಖ್ಯ ಸೇನಾನಿಯಾದ. ಅನಂತರ 1941ರ ಡಿಸೆಂಬರ್ 8 ರಂದು ಇಟಲಿ ಮತ್ತು ಜರ್ಮನಿಗಳ ಮೇಲೆ ಚೀನ ಯುದ್ಧ ಘೋಷಿಸಿತು. 1942ರ ಆರಂಭದಲ್ಲಿ ಈತ ಭಾರತಕ್ಕೆ ಭೇಟಿ ನೀಡಿ ಇಲ್ಲಿಯ ರಾಜಕೀಯ ಪರಿಸ್ಥಿತಿಯನ್ನವಲೋಕಿಸಿ, ಬ್ರಿಟಿಷರು ಭಾರತದ ಕಾಂಗ್ರೆಸ್ ನಾಯಕರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದ. ಭಾರತದ ಸಮಸ್ಯೆ ಪರಿಹರಿಸುವುದಕ್ಕೆ ಅಮೆರಿಕದ ಅಧ್ಯಕ್ಷರ ಮೂಲಕ ಬ್ರಿಟಿಷ್ ಪ್ರಧಾನಿಗೆ ಅನೇಕ ಸಲಹೆಗಳನ್ನು ನೀಡಿದ. ಆದರೆ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಅದಕ್ಕೆ ಗಮನ ಕೊಡಲಿಲ್ಲ.

ಎರಡನೆಯ ಮಹಾಯುದ್ಧ ಕೊನೆಗೊಂಡಮೇಲೆ ಚೀನವೂ ವಿಶ್ವಸಂಸ್ಥೆಯಲ್ಲಿ ಐದು ಬೃಹದ್ರಾಷ್ಟ್ರಗಳಲ್ಲಿ ಒಂದೆಂಬ ಮನ್ನಣೆ ಪಡೆಯಿತು. 1948ರ ಮೇ 20ರಂದು ಚಿಯಾಂಗ್ ಚೀನದ ಪ್ರಥಮ ಸಂವಿಧಾನೀಯ ಅಧ್ಯಕ್ಷನಾಗಿ ಪ್ರತಿಜ್ಞಾವಚನ ಸ್ವೀಕರಿಸಿದ. ಆದರೂ ಆಂತರಿಕವಾಗಿ ಚಿಯಾಂಗನ ಸರ್ಕಾರ ಕ್ಷೀಣಿಸಲಾರಂಭವಾಗಿ ಕಮ್ಯುನಿಸ್ಟರೊಡನೆ ಹೋರಾಟ ಮುಂದುವರಿಯಿತು. 1949ರಲ್ಲಿ ಚೀನದ ಮುಖ್ಯ ಪ್ರದೇಶವನ್ನು ಕಮ್ಯುನಿಸ್ಟರು ಸಂಪೂರ್ಣವಾಗಿ ಪಡೆದುಕೊಂಡರು. ಈತ ಫಾರ್ಮೋಸ (ತೈವಾನ್) ದ್ವೀಪದಲ್ಲಿ ನೆಲೆಸಿ ಹೋರಾಟ ಮುಂದುವರಿಸಿದ. ಈತ 1958ರಿಂದ ಮತ್ತು 1966-1972 ರವರೆಗೆ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದರು.

ಚಿಯಾಂಗನ ಪತನಕ್ಕೆ ಇವನ ಸರ್ಕಾರದಲ್ಲಿ ತಾಂಡವವಾಡುತ್ತಿದ್ದ ಲಂಚರುಷುವತ್ತುಗಳೂ ಇವನು ಸಾರ್ವಜನಿಕ ಅಭಿಪ್ರಾಯವನ್ನು ಕಡೆಗಣಿಸಿದ್ದೂ ಬದಲಾದ ಪರಿಸ್ಥಿತಿಗೆ ತಕ್ಕಂತೆ ತನ್ನ ನೀತಿ ಮಾರ್ಪಡಿಸಿಕೊಳ್ಳದೆ ಹೋದದ್ದೂ ಕಾರಣಗಳು. ಈತ ದಕ್ಷತೆಗಿಂತ ನಿಷ್ಠೆಗೂ ಸಂಸ್ಥೆಗಿಂತ ವ್ಯಕ್ತಿಗೂ ಹೆಚ್ಚಿನ ಪ್ರಾಮುಖ್ಯ ನೀಡಿದ. ಚಿಯಾಂಗ್ ಕೈ-ಷೇಕನನ್ನು ಚೀನಿ ಇತಿಹಾಸದ ಪರಿವರ್ತನೆಯ ಕಾಲದಲ್ಲಿ ಸಂಭವಿಸಿದ ಅನಿಶ್ಚಯತೆ ಅವ್ಯವಸ್ಥೆಗಳ ಪ್ರತೀಕವೆನ್ನಬಹುದು. ಇವನು 1975ರಲ್ಲಿ ನಿಧನ ಹೊಂದಿದ. (ಏ.ಕೆ.)

**ಚೀನ:** ಪೂರ್ವ ಏಷ್ಯದ ವಿಶಾಲ ಭೂಭಾಗವನ್ನೊಳಗೊಂಡ ದೇಶ. ಇದರ ಪೂರ್ವ ಚರಿತ್ರೆ ನಾಲ್ಕೈದು ಸಾವಿರ ವರ್ಷಗಳಷ್ಟು ಹಿಂದಿನದಾದರೂ ಅದನ್ನು ನಿರ್ಧರಿಸಲು ಸೂಕ್ತ ಆಧಾರಗಳು ಸಿಕ್ಕಿಲ್ಲ. ಸಿಕ್ಕಿರುವ ಆಧಾರಗಳು ಸಮರ್ಪಕವಾಗಿಲ್ಲ. ಅಲ್ಲಲ್ಲಿ ಸಿಗುವ ಪುರಾವೆಗಳಿಂದ, ಚೀನದ ತತ್ತ್ವಜ್ಞಾನಿ ಕನ್‌ಫ್ಯೂಷಸನ ಬರೆವಣಿಗೆಗಳಿಂದ ಇದರ ಇತಿಹಾಸದ ಆರಂಭಕಾಲದ ಕೆಲವು ಅಂಶಗಳು ತಿಳಿದುಬರುತ್ತದೆ.

ಪ್ರ.ಶ.ಪೂ. ಸು. 5000ದ ವೇಳೆಗೆ ಚೀನದ ಪಶ್ಚಿಮಕ್ಕಿರುವ ಮಧ್ಯ ಏಷ್ಯ ಪ್ರದೇಶ ಫಲವತ್ತಾಗಿದ್ದು ಜನಸಾಂದ್ರತೆಯಿಂದ ಕೂಡಿತ್ತು. ಆದರೆ ಬರಬರುತ್ತ ಮಳೆಯ ಕೊರತೆಯಿಂದ ನೀರಿಗೆ ಅಭಾವ ಉಂಟಾಯಿತು. ವ್ಯವಸಾಯದಿಂದ ಜೀವಿಸುತ್ತಿದ್ದ ಅಲ್ಲಿಯ ಜನ ಬೇರೆ ಪ್ರದೇಶಗಳಿಗೆ ಹೋಗಬೇಕಾಯಿತು. ಇವರ ಪೈಕಿ ಕೆಲವರು ಪಶ್ಚಿಮದ ಪರ್ವತಗಳನ್ನು ದಾಟಿ ಹ್ವಾಂಗ್ ಹೋ ನದಿಯ ಬಯಲಿನಲ್ಲಿ ನೆಲೆಸಿದರು. ಇವರೇ ಚೀನಿಯರ ಮೂಲಪುರುಷರೆಂದು ಪ್ರತೀತಿ. ಇವರು ತಮ್ಮ ಪೈಕಿ ಹಿರಿಯನೊಬ್ಬನನ್ನು ಆರಿಸಿಕೊಂಡು ಅವನ ಆಜ್ಞೆಯಂತೆ ನಡೆಯುತ್ತಿದ್ದರು. ಆಗ ರಾಜರಿರಲಿಲ್ಲ. ಕ್ರಮೇಣ ರಾಜ್ಯಸ್ಥಾಪನೆಯಾಯಿತು. ಯಾವೋ ಎಂಬೊಬ್ಬ ಮುಖಂಡನನ್ನು ಅವರು ತಮ್ಮ ಅಧಿಪತಿಯನ್ನಾಗಿ ಗೊತ್ತು ಪಡಿಸಿ ಕೊಂಡರು. ಮುಂದೆ ಇವನ ಉತ್ತರಾಧಿಕಾರಿಗಳಿಗೆ ವಂಶಾನುಗತವಾಗಿ ಆಳುವ ಅಧಿಕಾರ ಲಭಿಸಿತು. ಅರಸುತನ ಆರಂಭವಾದ್ದು ಪ್ರ.ಶ.ಪೂ. 2356ರಲ್ಲಿ. ಅನಂತರ ಅನೇಕ ವಂಶಗಳು ಚೀನವನ್ನಾಳಿದವು. ಅರಸಾಳಿಕೆಯನ್ನಾರಂಭಿಸಿದ ಯಾವೋಗಳು ಎಲ್ಲ ವಿಧದಲ್ಲೂ ಯೋಗ್ಯರೆನಿಸಿದ್ದರು; ಉತ್ಸಾಹಿಗಳೂ ಶ್ರದ್ಧಾವಂತರೂ ಆಗಿದ್ದರು. ಇವರು ದೇಶವನ್ನು ವಿಸ್ತರಿಸಿ ನ್ಯಾಯವಾಗಿಯೂ ಉತ್ತಮವಾಗಿಯೂ ಆಳಿ ಮುಂದಿನವರಿಗೆ ಮಾರ್ಗದರ್ಶಕರಾದರೆಂದು ತಿಳಿದುಬರುತ್ತದೆ. (ಎ.ಎಸ್.;ಬಿ.ಕೆ.ಜಿ.)

**ಷಾಂಗ್ ವಂಶ:** ಮುಂದೆ ಆಳಿದ ಮುಖ್ಯ ವಂಶಗಳಲ್ಲಿ ಮೊದಲನೆಯದು ಷಾಂಗ್ (ಪ್ರ.ಶ.ಪೂ.ಸು. 1766-1123). ಆದರೆ ಆ ವಂಶದವರಾರೂ ಅರ್ಹರೆನಿಸಲಿಲ್ಲ. ಅವರ ಕಾಲದಲ್ಲಿ ದೇಶ ಪ್ರಗತಿ ಹೊಂದಲಿಲ್ಲ. ಆ ವಂಶ ಕೊನೆಗೊಂಡಿತು. ದೊಡ್ಡದೊಂದು ಕ್ರಾಂತಿಯಿಂದ. ಕೊನೆಯ ಅರಸ ಬಹಳ ಕ್ರೂರಿಯಾಗಿದ್ದ. ಶತ್ರುವಿಗೆ ಸೋತು, ತನ್ನ ಅರಮನೆಯಲ್ಲೇ ಬೆಂಕಿಹೊತ್ತಿಸಿಕೊಂಡು ಸಾವನ್ನಪ್ಪಿದ. ಈ ದುರಂತದಿಂದ ಆ ವಂಶ ಅಳಿಸಿಹೋಯಿತು. ಆ ವಂಶದ ಆಳಿಕೆಯಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ ಕಿತ್ಸೆ ಎಂಬುವನು ತನ್ನ ಅರಸನಿಲ್ಲದ ನಾಡಿನಲ್ಲಿರಲು ಇಷ್ಟಪಡದೆ ಸಾವಿರಾರು ಹಿಂಬಾಲಕರೊಡನೆ ಕೊರಿಯಕ್ಕೆ ಹೋದ. ಆ ಪ್ರದೇಶವನ್ನು ಚೋಸನ್ ಎಂದು ಕರೆದ. ಕ್ರಮೇಣ ಅಲ್ಲಿಗೆ ಚೀನಿಯರು ಹೆಚ್ಚು ಹೆಚ್ಚಾಗಿ ಹೋಗಿ ನೆಲೆಸಲಾರಂಭಿಸಿದರು. ಆ ಪ್ರದೇಶಕ್ಕೆ ಕಿತ್ಸೆ ಅರಸನಾದ. ಅವನ ವಂಶದವರು ಸು.9 ಶತಮಾನಗಳ ಕಾಲ ಅಲ್ಲಿ ಆಳಿದರು. ಚೀನದ ನಾಗರಿಕತೆ ಕೊರಿಯಕ್ಕೂ ಹರಡಿತು.

**ಜೋ ವಂಶ:** ಪ್ರ.ಶ.ಪೂ.ಸು.1122-256. ಈ ವಂಶದ ಅರಸರು ದೇಶವನ್ನು ಅಭಿವೃದ್ಧಿಗೆ ತಂದರು. ನಾಗರಿಕತೆ ಬೆಳೆಯಿತು. ವ್ಯವಸಾಯ ವ್ಯಾಪಕವಾಯಿತು. ವ್ಯಾಪಾರ, ಕೈಗಾರಿಕೆಗಳೂ ಬೆಳೆದವು. ಹತ್ತಿ, ರೇಷ್ಮೆ ಬಟ್ಟೆಗಳೂ ಚರ್ಮದ ಕೆಲಸ, ದಂತ ಕೆತ್ತನೆ, ಒಡವೆ ಮುಂತಾದ ಕುಶಲ ಕಲೆಗಳೂ ಬೆಳೆದವು. ಸಾಹಿತ್ಯ, ವಿಜ್ಞಾನ ಪ್ರಗತಿ ಹೊಂದಿದವು. ಆದರೆ ಈ ಪ್ರಗತಿ ಶಾಶ್ವತವಾಗಿ ಉಳಿಯಲಿಲ್ಲ. ಒಳಜಗಳಗಳು ಮೊದಲಾದವು ದೇಶದ ಸುರಕ್ಷತೆಗೆ ಅಪಾಯ ಒದಗಿಸಿದವು. ಪ್ರ.ಶ.ಪೂ.256ರಲ್ಲಿ ಜೋ ವಂಶ ಕೊನೆಗೊಂಡಿತು.

ಚೀನದ ಸುಪ್ರಸಿದ್ಧ ತತ್ತ್ವಜ್ಞಾನಿಗಳಾದ ಕನ್‌ಫ್ಯೂಷಸ್ ಮತ್ತು ಲಾವೋ ತ್ಸೆ ಈ ವಂಶದ ಆಳಿಕೆಯ ಕಾಲದಲ್ಲಿ ಜನ್ಮವೆತ್ತಿದರು. ಇದು ಚೀನದ ಇತಿಹಾಸದಲ್ಲಿ ಅಪೂರ್ವ ಘಟನೆ ಎಂದೇ ಹೇಳಬೇಕು. ಈ ಇಬ್ಬರು ವ್ಯಕ್ತಿಗಳೂ ಚೀನದ ಸಮಾಜದ ಮೇಲೆ ಅಚ್ಚಳಿಯದಂಥ ಪರಿಣಾಮ ಉಂಟುಮಾಡಿದರು.

**ಚಿನ್ ವಂಶ:** ಪ್ರ.ಶ.ಪೂ.221-207. ಈ ವಂಶದ ಹೆಸರಿನಿಂದಲೇ ಚೀನಕ್ಕೆ ಆ ಹೆಸರು ಬಂದಿತೆಂದು ಹೇಳಲಾಗಿದೆ. 221ರಲ್ಲಿ ಪರಮಾಧಿಕಾರ ಗಳಿಸಿದ ದೊರೆ ತನ್ನನ್ನು ಪ್ರಥಮ ಚಕ್ರಾಧಿಪತಿಯೆಂದು (ಷಿನ್ ಹ್ವಾಂಗ್ ಟೀ) ಕರೆದುಕೊಂಡ. ಇವನು ಸ್ವಾರ್ಥಿ, ಮಹತ್ತ್ವಾಕಾಂಕ್ಷಿ. ತನ್ನ ಹೆಸರು ಶಾಶ್ವತವಾಗಿ ಉಳಿಯಬೇಕು, ತನ್ನ ಆಳಿಕೆಯೇ ಆದಿ ಎನಿಸಬೇಕು-ಎಂಬುದು ಇವನ ಬಯಕೆ. ಹೀಗಾಗಬೇಕಾದರೆ ಹಿಂದಿನವರ ನೆನಪೇ ಸಿಗಬಾರದು, ದಾಖಲೆಗಳಿರಬಾರದು, ಹಿಂದಿನ ಸಂಸ್ಕೃತಿ ಉಳಿದಿರಬಾರದು-ಎಂದು ಇವನು ಯೋಚಿಸಿದ. ಹಿಂದಿನ ದಾಖಲೆಗಳನ್ನೆಲ್ಲ ನಾಶಪಡಿಸಲು ಆಜ್ಞೆ ಮಾಡಿದ. ಹಿಂದಿನವರ ಹಿರಿಮೆಯನ್ನು ಸೂಚಿಸುವ ಯಾವುದೂ ಇರಬಾರದೆಂದು ನಿರೂಪ ಹೊರಡಿಸಿದ. ಅಂತೆಯೇ ಎಷ್ಟೋ ಪ್ರಾಚೀನ ಗ್ರಂಥಗಳು ನಾಶಗೊಂಡವು. ಇವನ್ನು ಒಪ್ಪಿಸಲು ಹಿಂಜರಿದವರು ಮರಣದಂಡನೆಗೆ ಗುರಿಯಾದರು. ನಾನೂರು ವಿದ್ವಾಂಸರು ಜೀವಸಹಿತ ಸಮಾಧಿಯಾದರು. ಇಷ್ಟಾದರೂ ಕನ್‌ಫ್ಯೂಷಿಯಸ್‌ನ ಸಾಹಿತ್ಯ ಮಾತ್ರ ಹೇಗೋ ಉಳಿಯಿತು. ಆದರೂ ಈ ದೊರೆ ಪ್ರತಿಭಾವಂತ, ಸಮರ್ಥ, ಉತ್ತರದಿಂದ ಆಗಾಗ್ಗೆ ದಂಡೆತ್ತಿ ಬರುತ್ತಿದ್ದ ಹೂಣರನ್ನು ಹೊಡೆದಟ್ಟುತ್ತಿದ್ದ. ಹೊರಗಿನ ಶತ್ರುಗಳ ಧಾಳಿಯನ್ನು ತಡೆಯುವ ಉದ್ದೇಶದಿಂದ ಸು.2500 ಕಿಮೀ ಉದ್ದದ ಮಹಾಗೋಡೆಯನ್ನು ಜೀತದ ಆಳುಗಳಿಂದ ನಿರ್ಮಿಸಿದವನು ಇವನೇ ಚೀನದ ಮಹಾಗೋಡೆ (**ನೋಡಿ**) ಎಂದು ಇದು ಪ್ರಸಿದ್ಧವಾಗಿದೆ. ಇವನು ವಿರೋಧಿಗಳನ್ನ ಡಗಿಸಿ ಎಲ್ಲ ಪ್ರಾಂತಗಳನ್ನೂ ತನ್ನ ಅಧೀನಕ್ಕೊಳಪಡಿಸಿಕೊಂಡ. ಇವನ ದಕ್ಷತೆ ಮತ್ತು

ಒಳ್ಳೆಯ ಆಡಳಿತವ್ಯವಸ್ಥೆಯಿಂದ ದೇಶದಲ್ಲಿ ಏಕತೆ ಬೆಳೆಯಿತು. ಇವನು ದೇಶವನ್ನು 36 ಆಡಳಿತ ವಿಭಾಗಗಳನ್ನಾಗಿ ವಿಂಗಡಿಸಿ, ಆಡಳಿತ ಸುಗಮವಾಗಿ ನಡೆಯುವಂತೆ ಮಾಡಿದ. ಏಕರೀತಿಯ ತೂಕ ಮತ್ತು ಅಳತೆಗಳು ಜಾರಿಗೆ ಬಂದವು. ಚೀನದಲ್ಲಿ ಹಲವು ಹೆದ್ದಾರಿಗಳು ನಿರ್ಮಾಣ ವಾದವು. ಈತ ಪ್ರ.ಶ.ಪೂ.210ರಲ್ಲಿ ಮರಣ ಹೊಂದಿದ.

**ಹಾನ್ ವಂಶ:** ಪ್ರ.ಶ.ಪೂ.202–ಪ್ರ.ಶ.221. ಎಂಟು ವರ್ಷಗಳ ತರುವಾಯ ಹಾನ್ ಎಂಬ ವಂಶದ ಆಳಿಕೆ ಆರಂಭವಾಯಿತು. ಚಕ್ರವರ್ತಿ ಷಿಯಾವೋ ವೂ ಟೀ ಪ್ರ.ಶ.ಪೂ. 141–87ರ ವರೆಗೆ ಆಳಿದ. ಇವನ ಅಧಿಕಾರ ಪಶ್ಚಿಮದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೂ ವ್ಯಾಪಿಸಿತ್ತು. ಈ ಕಾಲದಲ್ಲೇ ಪೂರ್ವ ಪಶ್ಚಿಮಗಳ ನಡುವೆ ವ್ಯಾಪಾರ ಆರಂಭವಾದದ್ದು. ಉತ್ತರದಿಂದ ಬಂದು ಪದೇ ಪದೇ ಪೀಡಿಸುತ್ತಿದ್ದ ಟಾರ್ಟರರನ್ನು ಇವನು ಸೋಲಿಸಿ ಓಡಿಸಿದ. ಪ್ರಬಲರಾಗಿದ್ದ ಸಾಮಂತ ರಾಜರನ್ನೂ ಪ್ರಾಂತಾಧಿಕಾರಿಗಳನ್ನೂ ದಂಡಿಸಿ ತನ್ನ ಅಧಿಕಾರಕ್ಕೊಳಪಡುವಂತೆ ಮಾಡಿದ. ದೇಶದ ಎಲ್ಲ ಭಾಗಗಳಲ್ಲೂ ಸುವ್ಯವಸ್ಥಿತ ಆಡಳಿತ ಏರ್ಪಡಿಸಿದ. ಲಂಚ, ಸ್ವಜನಪಕ್ಷಪಾತ ಮುಂತಾದ ದುರ್ವ್ಯಾಪಾರಗಳನ್ನು ನಿಲ್ಲಿಸಿ, ಯೋಗ್ಯರನ್ನು ಪುರಸ್ಕರಿಸಿ, ಅವರಿಗೆ ಅಧಿಕಾರ ವಹಿಸಿದ್ದು ಇವನ ಕೆಲವು ಒಳ್ಳೆಯ ಕ್ರಮಗಳು. ವ್ಯವಸಾಯ,

ಶಾಸನ ಫಲಕ, ಚೀನ

ಕೈಗಾರಿಕೆ, ವ್ಯಾಪಾರ ಇವು ಬೆಳೆದುವು. ಹಿಂದೆಂದೂ ಇಲ್ಲದಿದ್ದಂಥ ಒಗ್ಗಟ್ಟು ಇವನ ಕಾಲದಲ್ಲಿ ಉಂಟಾಯಿತು. ರೋಮ್‌ನೊಂದಿಗೆ ವ್ಯಾಪಾರ ಸಂಪರ್ಕ ಬೆಳೆದದ್ದು ಇವನ ಆಳಿಕೆಯಲ್ಲೇ. ಒಟ್ಟಿನಲ್ಲಿ ಇವನ ಆಳಿಕೆಯಲ್ಲಿ ಜನರು ನೆಮ್ಮದಿಯಿಂದಿದ್ದರು. ಹಾನ್ ವಂಶದಲ್ಲಿ ಚೀನಿ ಪ್ರಭಾವ ಪರ್ಷಿಯ ಮತ್ತು ಹಿಂದೂಸ್ತಾನದವರೆಗೆ ಹಬ್ಬಿತೆಂದು ತಿಳಿದುಬರುತ್ತದೆ. ಷಿಯಾವೋ ವೂ ಟೀ ತರವಾಯ ಪಟ್ಟಕ್ಕೇರಿದ ವಾಂಗ್ ಮಾಂಗ್ ಮೊದಲಾದ ಅರಸರು ಅವನ ಆಡಳಿತದ ಮಾದರಿಯನ್ನೇ ಮುಂದುವರಿಸಿಕೊಂಡು ಬಂದರಲ್ಲದೆ, ಅದನ್ನು ಇನ್ನೂ ಉತ್ತಮಗೊಳಿಸಲು ಯತ್ನಿಸಿದರು, ದೇಶದ ಸಂಪತ್ತಿಗೆ ಎಲ್ಲರೂ ಸಮಭಾಗಿಗಳಾದ್ದರಿಂದ ಬಡತನವಿರುವುದು ಅನ್ಯಾಯ ಎಂಬ ನೀತಿಯ ಅನುಸಾರ ರಾಜ್ಯವ್ಯವಸ್ಥೆಯನ್ನು ರೂಪಿಸಿದರು. ಪ್ರಾಚೀನ ಕಾಲದಲ್ಲಿ ಹೀಗೆ ಸಮತಾವಾದ ತತ್ತ್ವವನ್ನ ಗ್ರಹಿಸಿ ಸುವ್ಯವಸ್ಥಿತ ರೀತಿಯಲ್ಲಿ ಆಚರಣೆಗೆ ತಂದು ಇಡೀ ಜಗತ್ತಿಗೆ ಮಾರ್ಗದರ್ಶಿಯಾದ ದೇಶ ಚೀನ. ಆ ಕಾಲದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿದ್ದ ರೋಮ್ ಚಕ್ರಾಧಿಪತ್ಯ ಕ್ಕಿಂತ ಚೀನದ ಸ್ಥಿತಿ ಉತ್ತಮವಾಗಿತ್ತೆಂದು ತಿಳಿದುಬರುತ್ತದೆ. ರೋಮ್ ಮುಂತಾದ ದೇಶಗಳೊಂದಿಗೆ ನಡೆಯುತ್ತಿದ್ದ ರೇಷ್ಮೆ ವ್ಯಾಪಾರದಿಂದ ಹೊರಗಿನ ದೇಶಗಳೊಂದಿಗೆ ಸಂಪರ್ಕ ಅಧಿಕಗೊಂಡಿತು.

ಭಾರತದ ವಾಯವ್ಯದಲ್ಲಿ ರಾಜ್ಯವಾಳುತ್ತಿದ್ದ ಕುಷಾಣ ಚಕ್ರಾಧಿಪತ್ಯದೊಂದಿಗೆ ಹಾನ್ ವಂಶ ಮೈತ್ರಿಯಿಂದಿತ್ತು. ಬೌದ್ಧಧರ್ಮ ಚೀನದಲ್ಲಿ ಹರಡಲು ಅವಕಾಶವಾದದ್ದು ಈ ಮೈತ್ರಿಯಿಂದಾಗಿ. ಅನೇಕ ದೊರೆಗಳು ಬೌದ್ಧಧರ್ಮವನ್ನಪ್ಪಿದರು. ಚೀನಿ ಯಾತ್ರಿಕರು ಭಾರತಕ್ಕೆ ಹೋಗಿ ಬಂದರು. ಇವರಲ್ಲಿ ಪ್ರಸಿದ್ಧನಾದವನು ಫಾ–ಹಿಯಾನ್. ಒಂದನೆಯ ಶತಮಾನದಲ್ಲಿ ಕಾಗದದ ಉಪಜ್ಞೆಯಾಯಿತು. ಗ್ರಂಥ ಪ್ರಕಟಣೆಗೆ ಇದರಿಂದ ಅನುಕೂಲ ವಾಯಿತು. 100ರಲ್ಲಿ ಷೂ ಯೋ ವೆನ್ ಎಂಬ ನಿಘಂಟು ಪ್ರಕಟವಾಯಿತು. ಪ್ರಪಂಚದಲ್ಲಿ ಇದೇ ಅತ್ಯಂತ ಪ್ರಾಚೀನ ನಿಘಂಟು. ಚೀನದ ಇತಿಹಾಸ ರಚನೆಯ ಪ್ರಥಮ ಪ್ರಯತ್ನ ನಡೆದದ್ದು ಈ ಕಾಲದಲ್ಲಿ, ಇದನ್ನು ರಚಿಸಿದವನು ನುಸ್ಸುಮ ಚಿನ್. ಇದರಲ್ಲಿ ಪುರಾತನ ಚೀನಕ್ಕೆ ಸಂಬಂಧಿಸಿದ ಅನೇಕ ವಿಚಾರಗಳಿವೆ. ವಿಜ್ಞಾನ ಕೂಡ ಬೆಳೆದದ್ದು ಈ ಕಾಲದಲ್ಲೇ, ಗ್ರಹಣಗಳನ್ನು ಕುರಿತಂತೆ ಜನರಲ್ಲಿ ನೆಲೆಸಿದ್ದ ತಪ್ಪು ಭಾವನೆಗಳನ್ನು ದೂರಮಾಡಿ, ಸರಿಯಾದ ಪರಿಕಲ್ಪನೆಯನ್ನುಂಟುಮಾಡಲಾಯಿತು. ಸರಾಸರಿ 180 ದಿನಗಳಿಗೊಮ್ಮೆ ಒಂದು ಚಂದ್ರಗ್ರಹಣವಾಗುತ್ತದೆ. 41–42 ತಿಂಗಳಿಗೊಮ್ಮೆ ಸೂರ್ಯಗ್ರಹಣವಾಗುತ್ತದೆ. ಇವು ಕ್ರಮವಾಗಿ ಜರುಗುವ ಘಟನೆಗಳು. ರಾಜಕೀಯ ಕರ್ಮ ಸಂಯೋಗದಿಂದ ಸಂಭವಿಸತಕ್ಕವಲ್ಲ– ಎಂದು ವಾಂಗ್ ಚುಂಗ್(27–100) ಹೇಳಿದ.

**ಟಾಂಗ್ ವಂಶ:** 618–906. ಅಧಿಕಾರಕ್ಕೆ ಬಂದ ಟಾಂಗ್ ವಂಶ ಪ್ರಬಲವಾಯಿತು. ಇದು ಚೀನದ ಮಧ್ಯಕಾಲದ ಸುವರ್ಣದೆಶೆಯ ಅವಧಿಯೆನ್ನಬಹುದು. ತಾವು ಟಾಂಗ್ ಜನಾಂಗದವರು ಎಂದು ಅನೇಕ ಚೀನೀಯರು ಇಂದಿಗೂ ಹೆಮ್ಮೆಯಿಂದ ಹೇಳಿಕೊಳ್ಳುವುದುಂಟು.

ಟಾಂಗ್ ವಂಶದ ಮೊದಲನೆಯ ಅರಸ ಟೈ ಡ್ಸುಂಗ್. ಇವನು ಶತ್ರುಗಳನ್ನು ಓಡಿಸಿ ಮಧ್ಯ ಏಷ್ಯದ ತರಿಮ್ ಪ್ರಸ್ಥಭೂಮಿಯಲ್ಲಿ ಚೀನದ ಸ್ಥಾನಮಾನಗಳನ್ನು ಬಲಪಡಿಸಿದ. ಅನೇಕ ಆಡಳಿತ ಸುಧಾರಣೆಗಳಾದುವು. ದೊಡ್ಡದೊಡ್ಡ ಭೂಸ್ವಾಮ್ಯಗಳು ಏರ್ಪಡದಂತೆ ತಡೆಗಟ್ಟಲು ಇವನು ಶಾಸನ ಮಾಡಿದ. ರೈತರು ನಾಡಿನ ಪ್ರಗತಿಗಾಗಿ ಕಂದಾಯವನ್ನೂ ದೇಹಶ್ರಮವನ್ನೂ ಸಲ್ಲಿಸುವಂತೆ ಆಜ್ಞೆಹೊರಡಿಸಿದ. ಜನ ನೆಮ್ಮದಿಯಿಂದ ಬಾಳ್ವೆ ನಡೆಸುವಂತಾಯಿತು. ಸಾರಿಗೆ ಸಂಪರ್ಕಕ್ಕಾಗಿ ನಾಲೆಗಳನ್ನು ನಿರ್ಮಿಸಿದುದರಿಂದ ಹೊರದೇಶಗಳೊಂದಿಗೆ ವ್ಯಾಪಾರ ಸಂಬಂಧ ಹೆಚ್ಚಿತು. ಜಪಾನಿನೊಡನೆ ವ್ಯಾಪಾರ ಅಭಿವೃದ್ಧಿ ಹೊಂದಿತು. ಎಂಟನೆಯ ಶತಮಾನದ ಕೊನೆಯಲ್ಲಿ ಯಹೂದಿ, ಅರಬ್ಬೀ, ಕ್ರೈಸ್ತ ಮುಂತಾದ 8,000 ಕುಟುಂಬಗಳು ರಾಜಧಾನಿಯೊಂದರಲ್ಲೇ ನೆಲೆಸಿದ್ದವು. ರಾಜಧಾನಿಯ ಜನಸಂಖ್ಯೆ ಅಂದು ಹತ್ತು ಲಕ್ಷದಷ್ಟಿತ್ತು.

8ನೆಯ ಶತಮಾನ ಚೀನದ ಇತಿಹಾಸದಲ್ಲಿ ಕಾವ್ಯಯುಗವಾಗಿತ್ತೆಂದು ಹೇಳಲಾಗಿದೆ. ಅರಸರ ಆಸ್ಥಾನದಲ್ಲಿ ಲೀ ಬಾ ಮತ್ತು ಡೂ ಫೂ ಎಂಬ ಇಬ್ಬರು ಪ್ರಸಿದ್ಧ ಕವಿಗಳಿದ್ದರು. ಲೀ ಬಾ ಜನಕವಿಯಾಗಿದ್ದ. ಆ ಕಾಲದಲ್ಲಿ ವಿದ್ವನ್ಮಣಿಗಳಿಗೂ ಕಲೆಗಳಿಗೂ ಪ್ರೋತ್ಸಾಹ ಅಪಾರವಾಗಿ ದೊರೆಯಿತು. ಹಿಂದಿನ ಕಾಲದ ಇತಿಹಾಸವನ್ನು ರಚಿಸಲಿಕ್ಕೆ ಅನೇಕ ಪಂಡಿತರು ನೇಮಕವಾಗಿದ್ದರು. ಮುದ್ರಣಕಲೆ ಕಂಡುಹಿಡಿದದ್ದು ಆಗಲೇ. ಟಾಂಗ್ ವಂಶದ ಆಳಿಕೆಯಲ್ಲಿ ನೂತನ ಚೀನದ ಉದಯವಾಯಿತು. ಆದರೆ ಪರಕೀಯರ ಧಾಳಿ, ದೇಶದೊಳಗಿನ ಭ್ರಷ್ಟಾಚಾರ, ಜನರ ಅತೃಪ್ತಿ, ಅಸಂತುಷ್ಟಿ, ಪ್ರಾಂತಾಧಿಪತಿಗಳ ಪ್ರಾಬಲ್ಯ–ಇವುಗಳಿಂದ ಟಾಂಗ್ ವಂಶದ ವರ್ಚಸ್ಸು ಕುಂದಿತು. 906ರಲ್ಲಿ ಅದು ಕೊನೆಗೊಂಡಿತು.

**ಸುಂಗ್ ವಂಶ:** 960–1279. ಅನೇಕ ರಾಜವಂಶಗಳು 907–960ವರೆಗೆ ಅವುಗಳಲ್ಲಿ ಆಳಿದುವು. ಕ್ರಮೇಣ ಪ್ರಬಲವಾದದ್ದು ಸುಂಗ್ ವಂಶ. ವಿವಿಧ ನೀತಿಗಳುಳ್ಳ ರಾಜಕೀಯ ಪಕ್ಷಗಳನ್ನುಳ್ಳ ಆಧುನಿಕ ಸರ್ಕಾರ ಇದರದು. ಆದರೆ ಇದೂ ಹಲವಾರು ಎಡರು ತೊಡರುಗಳನ್ನು ಎದುರಿಸಬೇಕಾಯಿತು. ಉತ್ತರದ ಗಡಿಯಲ್ಲಿ ಆಗಾಗ್ಗೆ ಧಾಳಿ ನಡೆಸುತ್ತಿದ್ದ ಟಾರ್ಟರುಗಳ ಉಪದ್ರವವನ್ನು ನಿವಾರಿಸಿಕೊಳ್ಳಲು ಈ ವಂಶದ ಅರಸರು ಅವರಿಗೆ ವರ್ಷೇವರ್ಷೇ ಕಪ್ಪ ಕೊಡಲು ಒಪ್ಪಿಕೊಂಡಿದ್ದು ಅಹಿತವಾಯಿತು. ಇಷ್ಟರಲ್ಲಿ ಮಂಚೂರಿಯದ ಈಶಾನ್ಯ ಗಡಿಯಿಂದ ಇನ್ನೊಂದು ಶತ್ರು ಗುಂಪು ತಲೆಯೆತ್ತಿತು. ಟಾರ್ಟರುಗಳನ್ನು ಅಡಗಿಸಲು ಈ ಗುಂಪು ಅರಸನಿಗೆ ಸಹಾಯ ಮಾಡಿ ಕಟ್ಟಕಡೆಗೆ 1126ರಲ್ಲಿ ಸುಂಗ್ ರಾಜಧಾನಿಯನ್ನೇ ಆಕ್ರಮಿಸಲು ಯತ್ನಿಸಿತು. ಸುಂಗರಿಗೆ ಯಾಂಗ್‌ಟ್ಸೀ ಕಣಿವೆಯ ಉತ್ತರ ಪ್ರದೇಶದ ಮೇಲೆ ಹತೋಟಿ ತಪ್ಪಿತು. ಇದೆಲ್ಲದರ ಪರಿಣಾಮವಾಗಿ ಮುಂದಿನ ಒಂದು ಶತಮಾನ ಕಾಲ ಚೀನದಲ್ಲಿ ಎರಡು ಚಕ್ರಾಧಿಪತ್ಯಗಳು ಏರ್ಪಟ್ಟವು. ರಾಜಕೀಯ ದೃಷ್ಟಿಯಿಂದ ಸುಂಗ್ ಕಾಲ ದುರಂತದ ಕಾಲ. ಆದರೆ ಇತರ ವಿಚಾರಗಳಲ್ಲಿ ಅದು ತನ್ನ ವೈಶಿಷ್ಟ್ಯ ಉಳಿಸಿಕೊಂಡಿತ್ತು. ಕಲೆ ಬೆಳೆಯಿತು. ಈ ಕಾಲದ ಪಿಂಗಾಣಿ ಕಲೆಯಂತೂ ಇಂದಿಗೂ ಶ್ರೇಷ್ಠವೆನಿಸಿದೆ.

ಸುಂಗ್ ವಂಶ ಕೊನೆಗೊಂಡ ಮೇಲೆ ಮಂಗೋಲರು ಪ್ರಬಲರಾದರು. 12ನೆಯ ಶತಮಾನದಲ್ಲಿ ಚೆಂಗೇಷ್‌ಖಾನ್ (ತೆಮುಜಿನ್) ಎಂಬುವನು ಮಂಗೋಲರನ್ನೆಲ್ಲ ಒಟ್ಟುಗೂಡಿಸಿ ಇಡೀ ಮಂಗೋಲಿಯದ ಮೇಲೆ ತನ್ನ ಪ್ರಭಾವವನ್ನು ಗಳಿಸಿಕೊಂಡ. ಕ್ರಮೇಣ ಇವನ ದೃಷ್ಟಿ ದಕ್ಷಿಣದತ್ತ ಹೊರಳಿತು. ಮೊದಲು ಉತ್ತರದಲ್ಲಿ ಜುರ್‌ಚೆನ್ನರು ಸ್ಥಾಪಿಸಿದ್ದ ರಾಜ್ಯದ ಮೇಲೆ ತನ್ನ ಸೈನಿಕರನ್ನು ನುಗ್ಗಿಸಿದ. 1215ರಲ್ಲಿ ರಾಜಧಾನಿ ಪೀಕಿಂಗಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡು ಅಲ್ಲಿಯ ಜನರನ್ನು ಕೊಲೆಮಾಡಿದ. 1234ರ ವೇಳೆಗೆ ಈ ರಾಜ್ಯದ ಹೆಸರೇ ಇಲ್ಲವಾಯಿತು. 1279ರಲ್ಲಿ ಸುಂಗ್ ರಾಜ್ಯದ ಕೊನೆಯ ಅಧಿಪತಿಯನ್ನು ನಾಮಾವಶೇಷಮಾಡಿದ. ಯುಆನ್ ಎಂಬ ಮಂಗೋಲ್ ವಂಶದ ಅರಸರು ಚೀನದಲ್ಲಿ ಸಂಪೂರ್ಣ ಅಧಿಪತಿಗಳಾದರು. ಮಂಗೋಲ್ ಆಳಿಕೆ ಆರಂಭವಾಯಿತು. ಚೀನ ಈ ತೆರನಾಗಿ ಪರಕೀಯರ ಆಳಿಕೆಗೆ ಒಳಪಟ್ಟಿದ್ದು ಇದೇ ಪ್ರಥಮ.

**ಯುಆನ್ ವಂಶ:** 1280–1368. ಯುಆನ್ ವಂಶದ ಆಳಿಕೆ ಚೀನದಲ್ಲಿ ಮಂಗೋಲ್ ದೊರೆ ಚೆಂಗೇಷ್‌ಖಾನ್‌ನಿಂದ ಆರಂಭವಾಯಿತು. ಈ ವಂಶದ ಅರಸರ ಪೈಕಿ ಕುಬ್ಲೈಖಾನ್ ಅತ್ಯಂತ ಪ್ರಸಿದ್ಧ. ಚೆಂಗೇಷ್‌ಖಾನ್ ಉತ್ತರ ಚೀನವನ್ನು ವಶಪಡಿಸಿಕೊಂಡು ಪೀಕಿಂಗಿನಿಂದ ಆಳತೊಡಗಿದ. ಅಂದು ದೇಶದ ಜನರಲ್ಲಿ ಮಂಗೋಲರು ಅಲ್ಪಸಂಖ್ಯಾತರಾಗಿದ್ದರು. ಆದ್ದರಿಂದ ಅವರ ಸ್ಥಾನಮಾನಗಳು ಪ್ರಮುಖವಾಗಿರುವಂತೆ ಇವನು ಕಾನೂನುಗಳನ್ನು ಜಾರಿಗೆ ತಂದ. ಆದರೂ ಚೀನಿಯರು ತಲೆ ಎತ್ತುವುದನ್ನು ತಡೆಗಟ್ಟಲು ಸಾಧ್ಯವಿಲ್ಲವಾಯಿತು. ಬುದ್ಧಿವಂತನಾದ ಖಾನ್ ದೂರದರ್ಶಿತ್ವ ತೋರಿ, ಚೀನಿಯರ ಶ್ರೇಷ್ಠ ಸಂಸ್ಕೃತಿಯನ್ನು ಅರ್ಥಮಾಡಿಕೊಂಡು ಸಹನೆ ವಿವೇಕಗಳಿಂದ ಆಳಿಕೆ ನಡೆಸುತ್ತಿದ್ದ. ಆದ್ದರಿಂದ ಅನುಕೂಲ ಸ್ಥಿತಿ ನೆಲೆಸಿತು. ದೇಶದಲ್ಲಿ ಅನೇಕ ಪ್ರಜೋಪಯುಕ್ತ ಕಾರ್ಯಗಳು ಆದುವು. ಹೆದ್ದಾರಿಗಳೂ ಕಾಲುವೆಗಳೂ ನಿರ್ಮಾಣವಾದುವು. ದೇಶ ಅಭಾವಕ್ಕೆ ತುತ್ತಾಗದಂತೆ ಹೆಚ್ಚಿನ ಆಹಾರಧಾನ್ಯಗಳನ್ನು ಶೇಖರಿಸಿ ಇಡಲು ಅಲ್ಲಲ್ಲಿ ಕಣಜಗಳನ್ನು ಕಟ್ಟಿಸಿದನಲ್ಲದೆ ದೇಶದ ಪಂಚಾಂಗವನ್ನು ಬದಲಾಯಿಸಿದ ರಾಜಧಾನಿ ಪೀಕಿಂಗನ್ನು ಅಭಿವೃದ್ಧಿಗೊಳಿಸಿದ. ಖಾನನ ಆಳಿಕೆಯ ಕಾಲದಲ್ಲೇ

ಮಾರ್ಕೋಪೋಲೋ ಎಂಬ ಪ್ರವಾಸಿ ಚೀನಕ್ಕೆ ಭೇಟಿಕೊಟ್ಟು, ಅಲ್ಲಿ ತಾನು ಕಂಡ ಉತ್ತಮ ಮಟ್ಟದ ನಾಗರಿಕತೆಯನ್ನು ಪ್ರಪಂಚಕ್ಕೆ ಪರಿಚಯಮಾಡಿಕೊಟ್ಟ. ಅವನು 1275ರಲ್ಲಿ ಬಂದು ತಂದೆ ಮತ್ತು ಚಿಕ್ಕಪ್ಪನೊಡನೆ 17 ವರ್ಷಗಳವರೆಗೆ ಅಲ್ಲಿದ್ದ. ಕುಬ್ಲೈಖಾನನ ತರುವಾಯ ಏಳು ಯುಆನ್ ಅರಸರು ರಾಜ್ಯವಾಳಿದರೂ ಯಾರೂ ಅವನ ಮಟ್ಟಕ್ಕೇರಲಿಲ್ಲ. ಈ ಅರಸರು ಸ್ವಕಾರ್ಯಸಾಧಕರಾದರೇ ವಿನಾ ತಾವು ಆಡಿದಂತೆ ಮಾಡಿ ತೋರಿಸಲಿಲ್ಲ.

**ಮಿಂಗ್ ವಂಶ:** 1368–1644. ಚೀನಿಯರಲ್ಲಿ ಅಸಮಾಧಾನ ಉಂಟಾಯಿತು. ಜನಸಾಮಾನ್ಯರ ಕಷ್ಟ ಹೆಚ್ಚಿತು. ರೈತರ ಬಡತನ ಮಿಗಿಲಾಯಿತು. ಕಡೆಗೆ ದೇಶದಲ್ಲಿ ದಂಗೆಯೆದ್ದು ಒಬ್ಬ ಮಾಜಿ ಬೌದ್ಧ ಸಂನ್ಯಾಸಿ ನಾಯಕನಾದ. ಇವನ ಹೆಸರು ಹಂಗ್‍ವು. ಇವನ ಸೇನೆ 1368ರಲ್ಲಿ ಪೀಕಿಂಗನ್ನು ಮುತ್ತಿ ವಶಪಡಿಸಿಕೊಂಡು ಮಂಗೋಲರ ಆಡಳಿತವನ್ನು ಅಂತ್ಯಗೊಳಿಸಿತು. ಮಿಂಗ್ ವಂಶದ ಆಳಿಕೆಯ ಕಾಲದಲ್ಲಿ ವಿದೇಶಗಳೊಡನೆ ಸಂಪರ್ಕ ಬೆಳೆಯಿತು. ಪೋರ್ಚುಗಲ್ ಚೀನದೊಡನೆ ವ್ಯಾಪಾರ ಸಂಬಂಧ ಆರಂಭಿಸಿತು. ಮುಂದೆ ಯುರೋಪಿನ ರಾಷ್ಟ್ರಗಳು ಒಂದೊಂದಾಗಿ ಚೀನಕ್ಕೆ ಬಂದು ವ್ಯಾಪಾರ ಸಂಬಂಧ ಬೆಳೆಸಿದವು. ಆದರೆ ಅವು ನಡೆದುಕೊಂಡ ಬಗೆ ಸಮರ್ಪಕವಾಗಿರಲಿಲ್ಲ. ಸ್ಥಳೀಯ ಆಚಾರ ವಿಚಾರಗಳನ್ನು ಅವು ಉಪೇಕ್ಷಿಸಿದವು. ದುರಹಂಕಾರದಿಂದಲೂ ಕ್ರೂರತನದಿಂದಲೂ ವರ್ತಿಸಿದವು. ಅಂತೂ ಪೋರ್ಚುಗಲ್ ಬಹಳ ಧೂರ್ತತನದಿಂದ ನಡೆದುಕೊಂಡಿತು. ಕ್ರೈಸ್ತರಲ್ಲದವರ ಬಗ್ಗೆ ದುಷ್ಟತನ ತೋರಿತು. ಅವರ ಆಸ್ತಿಪಾಸ್ತಿಗಳ ಕಡೆ ವಕ್ರ ದೃಷ್ಟಿಹಾಯಿಸಿತು. ಇದರಿಂದ ಚೀನೀಯರು ಕೋಪಗೊಂಡರು. ಪರಿಣಾಮವಾಗಿ ವಿದೇಶಿಯರು ಚೀನದಲ್ಲಿ ಕಾಲಿಡದಂತೆ ಮಾಡಿದರು. ವ್ಯಾಪಾರ ದೃಷ್ಟಿಯಿಂದ ಮಾತ್ರವೇ ಪೋರ್ಚುಗೀಸರಿಗೆ ಮಾಕಾವ್‍ನಲ್ಲಿ ಇರಲು 1557ರಲ್ಲಿ ಅನುಮತಿ ಕೊಡಲಾಯಿತು. ಆದರೆ ಅದಕ್ಕೂ ಹಲವು ನಿರ್ಬಂಧಗಳನ್ನು ವಿಧಿಸಲಾಗಿತ್ತು.

ಪೋರ್ಚುಗೀಸರ ತರುವಾಯ ಚೀನದಲ್ಲಿ ಕಾಲಿಟ್ಟವರು ಕ್ರೈಸ್ತ ಪಾದ್ರಿಗಳು. ಇವರಲ್ಲಿ ಪ್ರಮುಖನಾದವನು ಫ್ರಾನ್ಸಿಸ್ ಝೇವಿಯರ್. ಇವನು ತೀರಿಕೊಂಡ ಮೇಲೆ ಇವನ ಶಿಷ್ಯರು ರಾಜಮನೆತನದವರನ್ನೂ ಪ್ರಾಂತಗಳಲ್ಲಿನ ಮುಖ್ಯಸ್ಥರನ್ನೂ ಮತಾಂತರಗೊಳಿಸಿದರು. ಚೀನದಲ್ಲಿ ಪ್ರಾಬಲ್ಯ ಗಳಿಸಲು ಅನಂತರ ಹೆಣಗಿದ ರಾಷ್ಟ್ರಗಳಲ್ಲಿ ಜಪಾನ್ ಕೂಡ ಮುಖ್ಯವಾಯಿತು. ಚೀನ, ಕೊರಿಯಗಳ ಆಕ್ರಮಣವೇ ಅದರ ಗುರಿ. ಮುಂದೆ ಇದಕ್ಕಾಗಿ ಜಪಾನ್ ಸನ್ನಾಹ ನಡೆಸಿತು. 16ನೆಯ ಶತಮಾನದ ಕೊನೆಯಲ್ಲಿ ಜಪಾನ್ ತನ್ನ ಸೇನೆಯನ್ನು ಕೊರಿಯದಲ್ಲಿ ತಂದಿಳಿಸಿತು. ಈ ಸಂಬಂಧವಾಗಿ ನಡೆದ ಅನೇಕ ಕದನಗಳಲ್ಲಿ ಕೊರಿಯನರಿಗೂ ಚೀನಿಯರಿಗೂ ಪರಾಭವವಾಯಿತು. ಆದರೆ ಸಮುದ್ರದ ಓಣಿಗಳ ಮೇಲೆ ಅವರು ಹತೋಟಿಯನ್ನಿಟ್ಟುಕೊಳ್ಳದ್ದರಿಂದ ಕೊರಿಯದ ನಾವಿಕರು ಅವರ ನೌಕೆಗಳನ್ನೆಲ್ಲ ಧ್ವಂಸ ಮಾಡಿದರು. ಈ ನಿಮಿತ್ತ ಜಪಾನರು ಹಿಮ್ಮೆಟ್ಟಬೇಕಾಯಿತು.

ಮಿಂಗ್ ವಂಶದ ಆಳಿಕೆ ಅನೇಕ ವಿಧಗಳಲ್ಲಿ ವೈಶಿಷ್ಟ್ಯಪೂರ್ಣವಾದದ್ದು. ಕಲಾಕೌಶಲ ಉಚ್ಛ್ರಾಯಸ್ಥಿತಿ ಮುಟ್ಟಿತು. ಪಿಂಗಾಣಿ ಸಾಮಾನುಗಳ ವೈಖರಿ, ಅದರ ವರ್ಣವಿನ್ಯಾಸ, ಸೊಬಗು, ಹೊಳಪು ಅನುಪಮವಾದದ್ದು. ದುರ್ಭೇದ್ಯವಾಗುವಂತೆ ಪೀಕಿಂಗ್ ನಗರದ ನಿರ್ಮಾಣವಾದದ್ದು ಮಿಂಗ್ ವಂಶದ ಆಳಿಕೆಯ ಆದಿಭಾಗದಲ್ಲಿ.

**ಮಾಂಚೂ:** 1644–1912 ಮಾಂಚೂಗಳು ತಮ್ಮ ಆಳಿಕೆಯಲ್ಲಿ ಚೀನಿಯರ ಮೇಲೆ ಬಗೆಬಗೆಯ ಪ್ರಭಾವ ಉಂಟು ಮಾಡಿದರು. ಉಡುಗೆ ತೊಡುಗೆಯಲ್ಲಿ ಹೊಸ ಪದ್ಧತಿಯನ್ನು ಹಾಕಿಕೊಟ್ಟರು. ಈ ವಂಶದ ಅರಸರಲ್ಲಿ ಪ್ರಖ್ಯಾತನಾದವನೆಂದರೆ ಕಾಂಗ್‍ಷೀ (1661–1722). ಈತ ವಿದ್ಯಾಪರಿಣತನೂ ದಕ್ಷಸೇನಾನಿಯೂ ಆಗಿದ್ದ. ಇವನ ನೇತೃತ್ವದಲ್ಲಿ ಚೀನಿ ಭಾಷೆಯ ನಿಘಂಟು ಸಿದ್ಧವಾಯಿತು. ಟಿಬೆಟ್ ಚೀನಕ್ಕೆ ಸೇರುವಂತೆ ಆದದ್ದೂ ಇವನ ಕಾಲದಲ್ಲೇ.

**ವಿದೇಶಿ ಪ್ರಭಾವ:** ವಿದೇಶಗಳೊಡನೆ ಚೀನ ಸಂಪರ್ಕವನ್ನಿಟ್ಟುಕೊಂಡು ಬಂದದ್ದರಿಂದಾಗಿ ಅದು ಮುಂದೆ ಬಹಳ ಕಷ್ಟಕ್ಕೆ ಸಿಲುಕಿತೆಂದು ಇತಿಹಾಸ ಹೇಳುತ್ತದೆ. ಇಷ್ಟವಿಲ್ಲದಿದ್ದರೂ ದೇಶದ ಸ್ಥಿತಿಗತಿಗನುಸಾರವಾಗಿ ಅದು ಸಂಪರ್ಕ ಹೊಂದಬೇಕಾಯಿತು. 16ನೆಯ ಶತಮಾನದಲ್ಲಿ ರಷ್ಯದೊಡನೆ ಚೀನ ಒಂದು ಒಪ್ಪಂದಕ್ಕೆ ಬಂದಿತ್ತು. ಅದಕ್ಕೆ ವ್ಯಾಪಾರದ ರಿಯಾಯಿತಿಯನ್ನು ತೋರಿಸಿತ್ತು. ವ್ಯಾಪಾರ ದೃಷ್ಟಿಯಿಂದ ಹಲವಾರು ವಿದೇಶೀ ರಾಷ್ಟ್ರಗಳು ಚೀನವನ್ನು ಬಯಸಿದ್ದೂ ಆಗಲೇ. ಈ ರಾಷ್ಟ್ರಗಳ ಪೈಕಿ ಮುಖ್ಯವಾದದ್ದು ಬ್ರಿಟನ್, ಈಸ್ಟ್ ಇಂಡಿಯ ಕಂಪನಿ ರಂಗಕ್ಕಿಳಿಯಿತು. ವ್ಯಾಪಾರ ಸಂಪರ್ಕ ಬೆಳೆಸಿಕೊಂಡಿತು. ಆದರೂ ಚೀನ ಅದರ ಮೇಲೆ ನಿರ್ಬಂಧಗಳನ್ನು ಹೇರಿತ್ತು. ವ್ಯಾಪಾರ ಹೆಚ್ಚುತ್ತ ಬಂದಂತೆಲ್ಲ ನಿರ್ಬಂಧಗಳನ್ನು ಸಡಿಲಿಸಬೇಕೆಂದು ಚೀನದ ಮೇಲೆ ಆ ಕಂಪನಿ ಒತ್ತಾಯ ತರುತ್ತಿತ್ತು. ಅದರ ಹಿಂದಿದ್ದ ರಾಜಕೀಯ ಚೀನಕ್ಕೆ ಅರ್ಥವಾಗದಿರಲಿಲ್ಲ. ಕಂಪನಿಯೂ ಸಾಮಾನ್ಯ ವರ್ತಕರಂತೆ ಎಂಬುದು ಅದರ ನಿಲುವು. ಈಸ್ಟ್ ಇಂಡಿಯ ಕಂಪನಿಯ ವ್ಯಾಪಾರದ ಏಕಸ್ವಾಮ್ಯವನ್ನು ಬ್ರಿಟಿಷ್ ಸರ್ಕಾರ ತಪ್ಪಿಸಿ ತನ್ನ ಪ್ರತಿನಿಧಿಯೊಬ್ಬನನ್ನು ಅದಕ್ಕಾಗಿ ನೇಮಕ ಮಾಡಿತು. ಈ ಪ್ರಸಂಗ ನಡೆದದ್ದು 1834ರಲ್ಲಿ. ಈ ಪ್ರಕರಣದಿಂದ ಪರಸ್ಪರ ವಿರಸವುಂಟಾಯಿತು. ಬ್ರಿಟಿಷ್ ಸರ್ಕಾರದ ಬೇಡಿಕೆಯನ್ನು ಚೀನಿ ಅರಸ ಪುರಸ್ಕರಿಸಲಿಲ್ಲ. ಅದರ ಪ್ರತಿನಿಧಿಯ ಒತ್ತಾಯಗಳಿಗೂ ಮಣಿಯಲಿಲ್ಲ. ಕಡೆಗೆ ವ್ಯಾಪಾರ ನಿಲ್ಲುವಂತಾಯಿತು.

ಪೋರ್ಚುಗೀಸರು ಕಾಲಿಡುವುದಕ್ಕೆ ಮೊದಲೇ ಚೀನಿಯರಿಗೆ ಅಫೀಮು ಸೇವನೆಯ ಚಟ ಹೆಚ್ಚಾಗಿತ್ತು. ಇಂಗ್ಲಿಷರು ಅಫೀಮನ್ನು ಚೀನಕ್ಕೆ ಭಾರತದಿಂದ ಆಮದು ಮಾಡುತ್ತಿದ್ದರು. ಇದಕ್ಕೆ ಅಲ್ಲಿದ್ದ ಬೇಡಿಕೆ ಬಹಳ. 15 ವರ್ಷಗಳಲ್ಲಿ ಇದರ ಆಮದು ನಾಲ್ಕು ಪಟ್ಟು ಹೆಚ್ಚಿತು. ಇದರ ಆಮದನ್ನೂ ಉಪಯೋಗವನ್ನೂ ನಿಷೇಧಿಸಿ ಅರಸ ಆಜ್ಞೆ ಮಾಡಿದರೂ ಪ್ರಯೋಜನವಾಗಲಿಲ್ಲ. 1800ರಲ್ಲಿ ಆಫೀಮಿನ ವ್ಯಾಪಾರವನ್ನು ಕಠಿಣವಾಗಿ ನಿರೋಧಿಸಲಾಯಿತು. ಆದರೂ ವ್ಯಾಪಾರ ಚೆನ್ನಾಗಿಯೇ ಸಾಗುತ್ತಿತ್ತು. ಚೀನಿ ಅಧಿಕಾರಿಗಳೇ ಇದಕ್ಕೆ ಬೆಂಬಲವಾಗಿದ್ದರು. 1833ರಲ್ಲಿ ಅರಸ ತನ್ನ ಅಧಿಕಾರಿಯೊಬ್ಬನನ್ನು ಕ್ಯಾಂಟನ್ನಿಗೆ ಕಳುಹಿಸಿ ಅಫೀಮು ನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಆಜ್ಞೆ ಮಾಡಿದ. ಈ ಅಧಿಕಾರಿಯ ಪ್ರಯತ್ನ ನಿರರ್ಥಕವಾಯಿತು. ಸ್ಥಳದ ಜನರಿಂದಲೂ ವಿದೇಶೀಯರಿಂದಲೂ ಪ್ರತಿಭಟನೆಗಳು ಬಂದುವು. ವ್ಯವಹಾರವನ್ನು ತಡೆಗಟ್ಟಲು ನೇಮಕಗೊಂಡ ದೋಣಿಗಳೇ ಕಳ್ಳತನದಲ್ಲಿ ಅದನ್ನು ತಂದು ಹಂಚುವುದರಲ್ಲಿ ಉದ್ಯುಕ್ತವಾಗಿದ್ದವು. 1839 ರಲ್ಲಿ ಬೇರೊಬ್ಬ ಅಧಿಕಾರಿ ನೇಮಕನಾದ. ಈ ಅಧಿಕಾರಿ ಕಠಿಣಕ್ರಮವನ್ನೇ ಅನುಸರಿಸಿದ. ಬ್ರಿಟಿಷರ ವಶದಲ್ಲಿದ್ದ ಅಫೀಮನ್ನೆಲ್ಲ ಒಪ್ಪಿಸಬೇಕೆಂದು ಅಧಿಕಾರಿ ನಿರೂಪ ಹೊರಡಿಸಿ, ಬ್ರಿಟಿಷ್ ಪ್ರಜೆಗಳ ಮೇಲೆ

ಚೀನೀಯ ವರ್ಣಚಿತ್ರ

ನಿರ್ಬಂಧ ಹಾಕಿದ. ಇದರಿಂದ ಅವರಿಗೆ ಕಷ್ಟವಾಯಿತು. ಬ್ರಿಟನ್ನಿನ ಪ್ರತಿನಿಧಿ ಬ್ರಿಟಿಷ್ ವರ್ತಕರ ಬಳಿ ಇದ್ದ ಅಫೀಮನ್ನೆಲ್ಲ ಒಪ್ಪಿಸಿದ. ಇದು ಇಪ್ಪತ್ತು ಸಾವಿರ ಪೆಟ್ಟಿಗೆ ಗಳಿಷ್ಟಿತ್ತು. ಚೀನಿ ಅಧಿಕಾರಿಯ ಆಜ್ಞೆಯಂತೆ ಇದನ್ನೆಲ್ಲ ಸುಡಲಾಯಿತು. ಚೀನಿ ಅಧಿಕಾರಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಬ್ರಿಟಿಷ್ ವರ್ತಕರು ಮುಂದೆ ಅಫೀಮು ವ್ಯಾಪಾರ ನಡೆಸುವುದಿಲ್ಲವೆಂಬ ಭರವಸೆ ನೀಡಬೇಕೆಂದು ಕೇಳಿದ. ಇದನ್ನು ಉಲ್ಲಂಘಿಸಿ ದವರಿಗೆ ಮರಣದಂಡನೆ ವಿಧಿಸುವುದು ಅವನ ಉದ್ದೇಶ. ಎರಡೂ ಪಕ್ಷಗಳಲ್ಲಿ ಯಾವುದೂ ಮಣಿಯಲಿಲ್ಲ. ಸ್ಥಿತಿ ಕೆಡುತ್ತ ಬಂತು. ಯುದ್ಧ ಅನಿವಾರ್ಯವಾಯಿತು. ಬ್ರಿಟಿಷ್ ಹಾಗೂ ಚೀನಿ ಹಡಗುಗಳ ನಡುವೆ ನಡೆದ ಗುಂಡಿನ ಕಾಳಗದಲ್ಲಿ ಚೀನಿ ನೌಕೆಗಳು ಹಿಮ್ಮೆಟ್ಟಿದುವು. ಆದರೂ ಕದನ ನಿಲ್ಲಲಿಲ್ಲ. ಮೂರು ವರ್ಷಗಳ ಕಾಲ ಯುದ್ಧ ನಡೆಯಿತು. ಕೊನೆಗೆ ಜಯ ಲಭಿಸಿದ್ದು ಬ್ರಿಟಿಷರಿಗೆ. ಕೆಲವು ದ್ವೀಪಗಳೂ ಪಟ್ಟಣಗಳೂ ಷಾಂಗ್‍ಹೈ ರೇವೂ ಬ್ರಿಟಿಷರ ವಶವಾದುವು. ಪೀಕಿಂಗ್, ನ್ಯಾನ್ಕಿಂಗ್ ನಗರಗಳಿಗೆ ಅಪಾಯ ಉಂಟಾಯಿತು. ಆಗ ಅರಸ ರಾಜಿಗೆ ಸಮ್ಮತಿಸಿದ.

1842ರಲ್ಲಿ ನ್ಯಾನ್ಕಿಂಗ್ ಕೌಲಿಗೆ ಸಹಿಯಾಯಿತು. ಬ್ರಿಟಿಷರ ಈ ವಿಜಯದಿಂದ ವಿದೇಶೀಯರಿಗೆ ಅನುಕೂಲವಾಯಿತು. ಪಾಶ್ಚಾತ್ಯ ರಾಷ್ಟ್ರವೊಂದರೊಡನೆ ಕೌಲಿನ ಹೆಸರಿನಲ್ಲಿ ಚೀನ ಬಂಧಿಸಲ್ಪಟ್ಟಿದ್ದು ಇದೇ ಪ್ರಥಮ. ಈ ಕೌಲಿನಂತೆ ಬ್ರಿಟನ್ನಿಗೆ ಚೀನ ಹಾಂಗ್‍ಕಾಂಗನ್ನು ಒಪ್ಪಿಸಬೇಕಾಯಿತು. ಅಲ್ಲದೆ ಇನ್ನು ಕೆಲವು ಪ್ರಮುಖ ರೇವುಗಳೂ ಯುರೋಪಿನ ವ್ಯಾಪಾರಕ್ಕಾಗಿ ತೆರೆದವು. ಜೊತೆಗೆ ಚೀನ ಬ್ರಿಟನ್ನಿಗೆ ಎರಡು ಕೋಟಿ ಹತ್ತು ಲಕ್ಷ ಡಾಲರುಗಳಷ್ಟು ತಪ್ಪು ಕಾಣಿಕೆ ತೆರಬೇಕಾಯಿತು. ಎರಡು ವರ್ಷಗಳ ತರುವಾಯ ಅಮೆರಿಕ, ಫ್ರಾನ್ಸುಗಳೂ ಮೂರು ವರ್ಷಗಳ ಮೇಲೆ ನಾರ್ವೆ, ಸ್ವೀಡನ್‍ಗಳೂ ಬ್ರಿಟನ್ ಮಾಡಿಕೊಂಡಿದ್ದ ಮಾದರಿಯಲ್ಲಿ ವ್ಯಾಪಾರದ ಒಡಂಬಡಿಕೆ ಮಾಡಿಕೊಂಡವು.

ಇಷ್ಟಾದರೂ ಸ್ಥಿತಿ ಸುಧಾರಿಸಲಿಲ್ಲ. 1856 ರಲ್ಲಿ ಚೀನ ಮತ್ತೆ ಬ್ರಿಟನ್ನಿನೊಡನೆ ಕಾದಾಡುವ ಪ್ರಸಂಗ ಒದಗಿತು. ಈ ಬಾರಿ ಬ್ರಿಟನ್ನನ್ನು ಫ್ರಾನ್ಸ್ ಕೂಡಿಕೊಂಡಿತು. ಗ್ವಾಂಗ್‍ಸೀಯ ಚೀನಿ ಅಧಿಕಾರಿಗಳು ಫ್ರೆಂಚ್ ಕ್ಯಾತೊಲಿಕ್ ಪಾದ್ರಿಯನ್ನು ಗಲ್ಲಿಗೇರಿಸಿದ್ದು ಇದಕ್ಕೆ ಕಾರಣ. ಈ ಪಾದ್ರಿ ದೊಂಬಿ ಎಬ್ಬಿಸಲು ಸಂಚು ಹೂಡಲು ಯತ್ನಿಸಿದನೆಂಬುದು ಆಪಾದನೆ. ಇದರಿಂದ ಫ್ರೆಂಚ್ ಪ್ರಜೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬಂತೆಂದು ಫ್ರೆಂಚ್ ಪ್ರತಿನಿಧಿ ಪ್ರತಿಭಟನೆ ಸೂಚಿಸಿದ. 1860ರ ವರೆಗೆ ಯುದ್ಧ ನಿಲ್ಲಲಿಲ್ಲ. ಕೊನೆಗೆ ಬ್ರಿಟನ್ ಫ್ರಾನ್ಸ್‌ಗಳು ಒಟ್ಟುಗೂಡಿ ಪೀಕಿಂಗ್

ನಗರವನ್ನು ಹಿಡಿದುವು. ಈ ಯುದ್ಧ ಸ್ವಾಭಾವಿಕವಾಗಿಯೇ ಚೀನದಲ್ಲಿ ಅಸಮಾಧಾನವನ್ನುಂಟು ಮಾಡಿತು. ಅಲ್ಲಲ್ಲಿ ಗಲಭೆ ಎದ್ದಿತು. ಇದಕ್ಕೆ ನಾಯಕನಾಗಿದ್ದವನು ಹುಂಗ್ ಷಿಯೂ ಚ್ಯೂಆನ್. ಇವನ ನೇತೃತ್ವದಲ್ಲಿ ಬಂಡಾಯಗಾರರು ನ್ಯಾನ್ಕಿಂಗ್ ಪಟ್ಟಣವನ್ನು ಹಿಡಿದರು. ಇದನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಆದರೂ ವಿದೇಶಿಯರ ಸಹಾಯ ದಿಂದ ಈ ಬಂಡಾಯವನ್ನು ಅಡಗಿಸಲಾಯಿತು. ಇದು ಟೈಪಿಂಗ್ ಬಂಡಾಯವೆಂದು ಹೆಸರಾಗಿದೆ.

ಹತ್ತು ವರ್ಷಗಳ ಅನಂತರ ಚೀನ ಪುನರುಜ್ಜೀವನಗೊಂಡಿತು. ಆದರೆ 1894ರಲ್ಲಿ ಪುನಃ ಜಪಾನಿನೊಡನೆ ಅದು ಯುದ್ಧ ಮಾಡಬೇಕಾಯಿತು. ಕೊರಿಯದ ಮೇಲೆ ಚೀನ ಸಾರ್ವಭೌಮಾಧಿಕಾರ ಸ್ಥಾಪಿಸಿದ್ದು ಈ ಎರಡೂ ದೇಶಗಳ ಮಧ್ಯೆ ಮನಸ್ತಾಪಕ್ಕೆ ಕಾರಣ. ಈ ಯುದ್ಧದಲ್ಲಿ ಚೀನ ಸಂಪೂರ್ಣ ಪರಾಭವ ಹೊಂದಿತು. 1895ರಲ್ಲಿ ಆದ ಒಪ್ಪಂದದ ಪ್ರಕಾರ ಚೀನ ಜಪಾನಿಗೆ ಫಾರ್ಮೋಸ ದ್ವೀಪವನ್ನೂ ಲಿಯೌಟುಂಗ್ ಪರ್ಯಾಯ ದ್ವೀಪವನ್ನೂ ಪರಿಹಾರ ದ್ರವ್ಯವನ್ನು ಕೊಡಬೇಕಾಯಿತು. ಆದರೆ ಲಿಯೌಟುಂ ಗನ್ನು ಜಪಾನಿಗೆ ಒಪ್ಪಿಸಲು ಯುರೋಪಿನ ರಾಷ್ಟ್ರಗಳು ಸಮ್ಮತಿಸಲಿಲ್ಲ. ರಷ್ಯಕ್ಕೆ ಅದರ ಮೇಲೆ ಕಣ್ಣಿತ್ತು. ಅದು ಫ್ರಾನ್ಸ್ ಮತ್ತು ಜರ್ಮನಿಯ ಸಹಾಯದಿಂದ ಜಪಾನಿನ ಮೇಲೆ ಭಾರಿ ಒತ್ತಡ ತಂದಿತು. ಪರಿಣಾಮವಾಗಿ ಜಪಾನು ಲಿಯೌಟುಂಗ್ ಬಿಟ್ಟುಕೊಟ್ಟು ಫಾರ್ಮೋಸವನ್ನು ಮಾತ್ರ ಉಳಿಸಿಕೊಂಡಿತು. ಲಿಯೌಟುಂಗನ್ನು ಮುಂದೆ ಚೀನದಿಂದ ರಷ್ಯ ಗುತ್ತಿಗೆಗೆ ಪಡೆಯಿತು. ಈ ಮಧ್ಯೆ ಹಲವಾರು ಘರ್ಷಣೆಗಳು ವಿದೇಶೀಯರ ದುರಾಶೆಯ ಫಲವಾಗಿ ಕುಟಿಲತನಗಳೂ ಇವನ್ನೆಲ್ಲ ಮೆಟ್ಟಿನಿಂತು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಚೀನದ ಹೆಣಗಾಟವೂ ಮುಂದುವರಿಯಿತು. ಆದರೆ ಚೀನ ಯಶಸ್ಸುಗಳಿಸಲಿಲ್ಲ. ವಿದೇಶೀಯರಲ್ಲಿ ಉಂಟಾದ ಪರಸ್ಪರ ಅಸೂಯೆಯ ಪರಿಣಾಮದ ಕುಟಿಲೋಪಾಯಗಳಿಗೆ ಅದು ಮಣಿಯಬೇಕಾಯಿತು. ಇತರ ದೇಶಗಳೊಡನೆ ಸಂಧಿ ಮಾಡಿಕೊಂಡು ಹಲವು ರಿಯಾಯಿತಿ ಗಳಿಗೆ ಸಮ್ಮತಿ ನೀಡಿತು. ಒಂದೊಂದು ವಿದೇಶೀ ರಾಷ್ಟ್ರದ ಉದ್ದಿಶ್ಯವೂ ಒಂದೊಂದು ಬಗೆ. ರಷ್ಯಕ್ಕೆ ಮಂಚೂರಿಯವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕೆಂಬ ಆಸೆ. ಜರ್ಮನಿಗೆ ಕಯೋಚೌವನ್ನು ಪಡೆಯಬೇಕೆಂದು ಇಷ್ಟ. ಜೊತೆಗೆ ಷಾಂಟಂಗ್ ಪ್ರದೇಶದಲ್ಲಿದ್ದ ಖನಿಜ ನಿಕ್ಷೇಪಗಳ ಮೇಲೆ ಹತೋಟಿ ಪಡೆಯಬೇಕೆಂಬುದೂ ಅದರ ಉದ್ದೇಶವಾಗಿತ್ತು. ಇಬ್ಬರು ಜರ್ಮನ್ ಪಾದ್ರಿಗಳ ಕೊಲೆಯಾದುದನ್ನು ನೆಪ ಮಾಡಿಕೊಂಡು ಜರ್ಮನಿ ಧಾಳಿಯನ್ನಾರಂಭಿಸಿತು. ಕೊನೆಗೆ ಕಯೋಚೌ ಕೊಲ್ಲಿಯನ್ನು 90 ವರ್ಷಗಳ ಗುತ್ತಿಗೆಯ ಮೇಲೆ ಅದು ಪಡೆದುಕೊಂಡಿತಲ್ಲದೆ ಅದರ ಪಕ್ಕದಲ್ಲಿದ್ದ 518 ಚ.ಕಿಮೀ ವಿಸ್ತೀರ್ಣದ ಪ್ರದೇಶವನ್ನೂ ಪಡೆಯಿತು. ಷಾಂಟಂಗ್ ಪ್ರಾಂತದಲ್ಲಿ ಖನಿಜ ಮತ್ತು ರೈಲ್ವೆ ರಸ್ತೆಯ ಮೇಲೆ ಸಂಪೂರ್ಣ ಅಧಿಕಾರವನ್ನೂ ಹೊಂದಿತು. ಇದೇ ಸಮಯದಲ್ಲಿ ರಷ್ಯ, ಬ್ರಿಟನ್ ಮತ್ತು ಫ್ರಾನ್ಸ್ ತಂತಮ್ಮ ಬೇಡಿಕೆಗಳನ್ನು ಮಂಡಿಸಿದವು. ರಷ್ಯಕ್ಕೆ ಮಂಚೂರಿಯದ ಮೇಲೆ ಪೂರ್ಣ ಹತೋಟಿ ಲಭಿಸಿತು. ಬ್ರಿಟನ್ನಿಗೆ ನೌಕಾ ನೆಲೆಯೊಂದು ಸಿಕ್ಕಿತು. ಹೀಗೇ ವಿದೇಶೀ ರಾಷ್ಟ್ರಗಳು ತಂತಮ್ಮಲ್ಲಿ ಪೈಪೋಟಿ ನಡೆಸುತ್ತ ಚೀನವನ್ನು ದುರ್ಗತಿಗೆ ತಂದುವು. ಮಂಚೂರಿಯ ಮತ್ತು ಮಂಗೋಲಿಯಗಳು ರಷ್ಯದ ಅಧೀನದಲ್ಲೂ ಷಾಂಟಂಗ್ ಪ್ರಾಂತ ಜರ್ಮನಿಯ ಸ್ವಾಧೀನದಲ್ಲೂ ದಕ್ಷಿಣ ಚೀನದ ಬಹುಭಾಗ ಫ್ರಾನ್ಸಿನ ಅಧಿಪತ್ಯದಲ್ಲೂ ಹಾಂಗ್‌ಕಾಂಗ್ ಮತ್ತು ಯಾಂಗ್‌ಟ್ಸೀ ಕಣಿವೆಯ ಭಾಗವೆಲ್ಲ ಬ್ರಿಟನ್ನಿನ ಪ್ರಯೋಜನಕ್ಕಾಗಿಯೂ ಇದ್ದವು.

1899 ರಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾನ್ ಹೇ ಎಂಬುವನು ಚೀನಕ್ಕೆ ಸಂಬಂಧಿಸಿದಂತೆ ತೆರೆದ ಬಾಗಿಲ ನೀತಿಯನ್ನು ಪ್ರತಿಪಾದಿಸಿ, ಈ ಸೂತ್ರವನ್ನು ಚೀನದಲ್ಲಿ ಆಸಕ್ತಿಯುಳ್ಳ ಎಲ್ಲ ರಾಷ್ಟ್ರಗಳೂ ಅನುಮೋದಿಸಬೇಕೆಂದು ಕೇಳಿಕೊಂಡ. ಈ ಸೂತ್ರಕ್ಕೆ ಇಂಗ್ಲೆಂಡ್, ಜರ್ಮನಿ, ರಷ್ಯ ಮತ್ತು ಜಪಾನ್ ಒಪ್ಪಿಕೊಂಡವು. ಇದರ ಪ್ರಕಾರ ಎಲ್ಲ ರಾಷ್ಟ್ರಗಳೂ ಚೀನ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ನಡೆದುಕೊಳ್ಳ ಬೇಕೆಂದು ಮತ್ತು ಚೀನದಲ್ಲಿ ಪ್ರತಿಯೊಂದು ರಾಷ್ಟ್ರಗಳಿಗೂ ಸಮವಾದ ಅವಕಾಶಗಳಿರ ಬೇಕೆಂದು ಎಲ್ಲ ರಾಷ್ಟ್ರಗಳೂ ಒಪ್ಪಿಕೊಂಡವು. ಈ ನೀತಿಯನ್ನೇ ಚೀನದಲ್ಲಿ ಅಮೆರಿಕ 1941ರ ವರೆಗೆ ಎತ್ತಿಹಿಡಿಯಿತು. ಜಪಾನ್ ಈ ನೀತಿಯನ್ನು ಅತಿಕ್ರಮಿಸಿದ್ದಾಗಲೆಲ್ಲ ಅಮೆರಿಕ ಅದನ್ನು ವಿರೋಧಿಸಿತು. ಈ ನೀತಿಯಿಂದ ಒಂದು ರೀತಿಯಲ್ಲಿ ಚೀನ ಪರರಾಷ್ಟ್ರಗಳ ವಸಾಹತಾಗುವು ದನ್ನು ತಪ್ಪಿಸಿತೆಂದೇ ಹೇಳಬಹುದಾದರೂ ಆರ್ಥಿಕವಾಗಿ ಅದು ರಾಷ್ಟ್ರಗಳಿಗೆ ಅಧೀನವಾಯಿತು. ಬಗೆಬಗೆಯ ಪ್ರಭಾವಗಳಿಗೆ ತುತ್ತಾಯಿತು.

ಆಗ ಚೀನ ಎಚ್ಚೆತ್ತುಕೊಂಡು ತನ್ನ ಮುಂದಿದ್ದ ಅಪಾಯಗಳನ್ನು ಗ್ರಹಿಸಿತು. ಜಪಾನಿನಿಂದ ಚೀನ ಪರಾಭವಗೊಂಡದ್ದು ಅಲ್ಲಿ ಯುವ ಪೀಳಿಗೆಯಲ್ಲಿ ರೋಷ ಹುಟ್ಟಿಸಿತು. ಸುಧಾರಣೆಗಾಗಿ ಅವರು ಹಾತೊರೆದರು. ಅರಸನೂ ಇದನ್ನು ಸಹಾನುಭೂತಿಯಿಂದ ಕಂಡು ಆ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ. ನೂರು ದಿನಗಳ ಸುಧಾರಣೆಗಳು ಎಂದು ಇದು ಪ್ರಸಿದ್ಧವಾಗಿದೆ. ಆಧುನಿಕಯುಗಕ್ಕೆ ತಕ್ಕಂತೆ ಪಾಶ್ಚಾತ್ಯ ಮಾದರಿಯ ಶಿಕ್ಷಣ ವ್ಯವಸ್ಥೆ, ರೈಲ್ವೆ ಮತ್ತು ಕೈಗಾರಿಕೆಗಳ ಸ್ಥಾಪನೆ–ಇವು ಅವನು ಕೈಗೊಂಡ ಕ್ರಮಗಳು. ಆದರೆ ಸುಧಾರಣೆಗಳನ್ನು ಅರಸನ ಗುಂಪಿ ನವರೇ ವಿರೋಧಿಸಿದರು. ಬಲಾಢ್ಯವಾದ ಗುಂಪೊಂದು ರಾಜಮಾತೆಯ ನೇತೃತ್ವದಲ್ಲಿ ಹುಟ್ಟಿಕೊಂಡಿತು. ಅವಳು ಅರಸನನ್ನು ಮೂಲೆಗೆ ಕೂಡಿಸಿ ತಾನೇ ಅಧಿಕಾರ ಸ್ವೀಕಾರ ಮಾಡಿದಳು. ಪ್ರಮುಖ ಸುಧಾರಣಾವಾದಿಗಳನ್ನು ಕೊಲ್ಲಿಸಿದಳು.

**ಬಾಕ್ಸರ್ ದಂಗೆ:** ಚೀನದಲ್ಲಿ ಅನೇಕ ಶತಮಾನಗಳಿಂದ ಧಾರ್ಮಿಕ ಅಥವಾ ರಾಜಕೀಯ ಸಂಬಂಧದ ಗುಪ್ತ ಸಂಘಗಳಿದ್ದುವು. ಸುಧಾರಣಾ ಚಳವಳಿಯನ್ನು ಹತ್ತಿಕ್ಕಿದ ಮೇಲೆ ದೇಶದಲ್ಲಿ ಅಶಾಂತಿಯುಂಟಾಯಿತು. ಆಗ ಗುಪ್ತ ಸಂಘಗಳು ಪ್ರಬಲವಾಗಿ ಒಂದುಗೂಡಿದುವು. ಬಾಕ್ಸರ್‌ಗಳೆಂಬುದು ಪಾಶ್ಚಾತ್ಯರು ಈ ಸಂಘದವರಿಗೆ ಕೊಟ್ಟ ಹೆಸರು. ರಾಜಮಾತೆಯ ಪ್ರತಿಗಾಮಿತನವನ್ನು ವಿರೋಧಿಸುತ್ತಿದ್ದ ಈ ಗುಂಪು ಮೊದ ಮೊದಲು ಮ್ಯಾಂಚೂ ವಂಶಕ್ಕೆ ವಿರುದ್ಧವಾಗಿ ವರ್ತಿಸಿತು. 1899ರಲ್ಲಿ ಇದು ವಿದೇಶೀ ರಾಷ್ಟ್ರಗಳ ಮೇಲಿನ ಹಗೆತನದಲ್ಲಿ ಪರ್ಯವಸಾನವಾಯಿತು. ಈ ಗುಂಪಿನವರು ನೇರವಾಗಿಯೇ ಚಳವಳಿಯನ್ನೆಬ್ಬಿಸಿದರು. ಚೀನದಿಂದ ಎಲ್ಲ ಕ್ರೈಸ್ತರನ್ನೂ ವಿದೇಶೀ ಭೂತಗಳನ್ನೂ ಹೊರಡಿಸಬೇಕೆಂಬುದು ಇವರ ಘೋಷಣೆ. ಅನೇಕ ವಿದೇಶೀಯರು ಹತರಾದರು. ಜರ್ಮನ್ ಅಧಿಕಾರಿಯೊಬ್ಬ ಸತ್ತ. ಪೀಕಿಂಗಿನಲ್ಲಿ ರಾಯಭಾರ ವಸತಿಗಳು ಮುತ್ತಿಗೆಗೆ ಒಳಗಾದುವು. ಇಲ್ಲೂ ಬೇರೆ ಸ್ಥಳಗಳಲ್ಲೂ ಇದ್ದ ವಿದೇಶೀಯರು ತಿಂಗಳುಗಟ್ಟಲೆ ಅಪಾಯ ಸ್ಥಿತಿಯಲ್ಲಿದ್ದರು. ಕ್ರೈಸ್ತ ಹಳ್ಳಿಗಳು ನಾಶವಾದವು. ಕ್ರೈಸ್ತರು ರಾಜಧಾನಿಯ ಸಮೀಪದಲ್ಲೇ ಕೊಲೆಗೆ ಒಳಗಾದರು. ಪರಿಸ್ಥಿತಿ ಹದಗೆಟ್ಟಿತು. ಚೀನಿ ಸೈನಿಕರೂ ಬಂಡಾಯ ಎದ್ದರು. ಈ ಘಟನೆಗಳು ಜರುಗಿದ್ದು 1900 ರ ಮಧ್ಯಭಾಗದಲ್ಲಿ. ತಮ್ಮ ಅಸ್ತಿತ್ವಕ್ಕೆ ಸಂಚಾಕಾರವುಂಟಾಯಿತೆಂದು ಪಾಶ್ಚಾತ್ಯ ದೇಶಗಳು ಗಾಬರಿಗೊಂಡು ಸೇನಾಕಾರ್ಯಾಚರಣೆ ನಡೆಸಿದುವು. ರಾಯಭಾರ ವಸತಿಗಳಿದ್ದವರೆಲ್ಲ ಪಾರಾದರು. ವಿದೇಶೀ ರಾಜ್ಯಗಳ ಸೇನೆ ಪೀಕಿಂಗನ್ನು ವಶಪಡಿಸಿಕೊಂಡು ನಗರದೊಳಕ್ಕೆ ನುಗ್ಗಿತು. ರಾಜಪರಿವಾರವೆಲ್ಲ ಪರಾರಿ ಯಾಯಿತು. ಕೆಲವು ಕಾಲದವರೆಗೆ ಲಿ ಹಂಗ್ ಚಂಗ್ ಮತ್ತು ರಾಜಕುಮಾರ ಚಿಂಗ್‌ನೊಡನೆ ಸಂಧಾನ ಜರುಗಿ ಕಡೆಗೊಂದು ಶಾಂತಿ ಒಪ್ಪಂದವಾಯಿತು (1901). ಅರಸ ಇದಕ್ಕೆ ಒಪ್ಪಿಗೆ ಕೊಡಲೇಬೇಕಾಯಿತು. ಜರ್ಮನ್ ಅಧಿಕಾರಿ ಮತ್ತು ಇತರ ರಾಷ್ಟ್ರಗಳ ನೌಕರರ ಕೊಲೆಗಾಗಿ ಚೀನ ಕ್ಷಮಾಪಣೆ ಬೇಡತಕ್ಕದ್ದು; ಪೀಕಿಂಗಿನ ಸುತ್ತಲೂ ವಿದೇಶೀ ರಾಷ್ಟ್ರಗಳು ಪಹರೆ ನಡೆಸತಕ್ಕದ್ದು; ವಿದೇಶಿಗಳಿಗೆ 33 ಕೋಟಿ ಡಾಲರುಗಳಷ್ಟು ನಷ್ಟ ಕಟ್ಟಿಕೊಡತಕ್ಕದ್ದು; ಚೀನ ಅಸ್ತ್ರಶಸ್ತ್ರಗಳನ್ನು ಹೊರಗಿನಿಂದ ತರಿಸುವುದಾಗಲೀ ತಯಾರಿಸುವು ದಾಗಲೀ ಕೂಡದು; ವಿದೇಶೀಯರ ವಿರುದ್ಧ ಬಂಡಾಯ ಏಳುವವರಿಗೆ ಮರಣದಂಡನೆ ವಿಧಿಸತಕ್ಕದ್ದು– ಇವು ಕೌಲಿನ ಕೆಲವು ಷರತ್ತುಗಳು. ಹೀಗೆ ಅಪಮಾನಕರವಾದ ರೀತಿಯಲ್ಲಿ ಚೀನದ ಮೇಲೆ ಒಪ್ಪಂದವನ್ನು ಹೊರಿಸಲಾಯಿತು. ಈ ಸಂದರ್ಭದಲ್ಲಿ ಅಮೆರಿಕ ತನಗೆ ಸಂದಾಯ ವಾಗಬೇಕಿದ್ದ ನಷ್ಟದ ಹಣವನ್ನು ಚೀನಕ್ಕೆ ಬಿಟ್ಟುಕೊಟ್ಟಿತು. ಮುಂದೆ ಚೀನಿ ಯುವಕರು ಅಮೆರಿಕನ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ನಡೆಸಲು ಈ ಹಣವನ್ನು ಚೀನ ಮೀಸಲಾಗಿಸಿತು.

ಅದೇ ವರ್ಷ ವ್ಯುಚಂಗ ಎಂಬಲ್ಲಿ ಮತ್ತೊಂದು ಗಲಭೆ ಉಂಟಾಯಿತು. ಇದನ್ನಡಗಿಸಲು ದೇಶದ ಸೇನೆ ಹೊರಟಿತು. ಮ್ಯಾಂಚೂಗಳ ಮೇಲೆ ದಂಗೆ ಏಳಲು ಸಮಯ ಕಾಯುತ್ತಿದ್ದ ಕ್ರಾಂತಿಕಾರರಿಗೆ ಇದೊಂದು ಅವಕಾಶ. ರಾಜವಂಶವನ್ನುಳಿಸಲು ಗೊತ್ತುಮಾಡಲಾಗಿದ್ದ ಪ್ರಧಾನಿ ಯುಯಾನ್ ಷಿರ್‌ಕೈ ಕ್ರಾಂತಿಕಾರರೊಡನೆ ಸಂಧಾನಕ್ಕಾಗಿ ಕೈ ಹಾಕಿ ವಿಫಲನಾದ. ರಾಜವಂಶದವರೂ ಮ್ಯಾಂಚೂ ಪ್ರಮುಖರು ಪೀಕಿಂಗಿನಿಂದ ಓಡಿಹೋದರು. ಕಡೆಗೆ 1912 ರಲ್ಲಿ ಮ್ಯಾಂಚೂ ವಂಶದವರು ತಮ್ಮ ಹಕ್ಕುಗಳನ್ನೆಲ್ಲ ಬಿಟ್ಟುಕೊಟ್ಟರು. ಮ್ಯಾಂಚೂ ವಂಶದ ಆಡಳಿತ ಕೊನೆಗೊಂಡಿತು.

**ಗಣರಾಜ್ಯ ಸ್ಥಾಪನೆ:** ಇಲ್ಲಿಗೆ ಚೀನದ ಇತಿಹಾಸ ಮಾರ್ಪಟ್ಟು ಹೊಸ ಅಧ್ಯಾಯ ಆರಂಭವಾಯಿತು. ರಾಜಪ್ರಭುತ್ವ ಹೇಳಹೆಸರಿಲ್ಲದಂತಾಗಿ ಪ್ರಜಾಪ್ರಭುತ್ವಕ್ಕೆ ನಾಂದಿಯಾದದ್ದು ಈ ಸಮಯದಲ್ಲೆ. ನವಚೀನದ ನಾಯಕ ಸನ್‌ಯಾತ್‌ಸೆನ್. ಮ್ಯಾಂಚೂ ವಂಶ ನಾಮಾವಶೇಷವಾದ ಸಮಯದಲ್ಲಿ ತನ್ನ ಗುರಿ ಸಾಧಿಸುವ ಅವಕಾಶ ಪಡೆದ. 1911 ರಲ್ಲಿ ರೈಲ್ವೆಗಳ ನಿರ್ಮಾಣಕ್ಕಾಗಿ ವ್ಯವಸ್ಥೆಯಾಗಿದ್ದ ವಿದೇಶೀ ಸಾಲದ ಸಂಬಂಧದಲ್ಲಿ ಒಂದು ಕ್ರಾಂತಿ ಸಂಭವಿಸಿತು. ಎಲ್ಲ ಪ್ರಾಂತಗಳಲ್ಲೂ ಈ ಕ್ರಾಂತಿ ಕಾಡ್ಗಿಚ್ಚಿನಂತೆ ಹರಡಿತು. ಕೆಲವೇ ವಾರಗಳೊಳಗಾಗಿ ಕ್ರಾಂತಿಕಾರರೆಲ್ಲ ನ್ಯಾನ್ಕಿಂಗ್‌ನಲ್ಲಿ ಕಲೆತು ಗಣರಾಜ್ಯ ಸ್ಥಾಪಿಸಿ, ಸನ್ ಯಾತ್‌ಸೇನನನ್ನೇ ಅದಕ್ಕೆ ಪ್ರಥಮ ಅಧ್ಯಕ್ಷನನ್ನಾಗಿ ಮಾಡಿದರು. 1911 ಡಿಸೆಂಬರ್ 28ರಂದು ಕ್ರಾಂತಿ ಸಂಭವಿಸಿದಾಗ ಈತ ಹೊರಗಿದ್ದ. ಇವನು ಸ್ವದೇಶಕ್ಕೆ ಹಿಂದಿರುಗುವುದಕ್ಕೆ ಮುನ್ನವೇ ಕ್ರಾಂತಿಕಾರರು ಅಂದಿನ ಪ್ರಬಲ ವ್ಯಕ್ತಿಯೂ ಸೈನಿಕ ಮುಖಂಡನೂ ಆಗಿದ್ದ ಯುವಾನ್ ಷಿರ್‌ಕೈನೊಡನೆ ಸಂಧಾನ ನಡೆಸಿದ್ದರು. ಮ್ಯಾಂಚೂ ವಂಶದ ಅಂತಿಮ ಕಾಲ ಸನ್ನಿಹಿತವಾಯಿ ತೆಂದು ಇನ್ನೂ ಚಿಕ್ಕವಯಸ್ಸಿನವನಾಗಿದ್ದ ಅರಸನಿಗೆ ತಿಳಿದೊಡನೆಯೇ ರಾಜೀಗೆ ಬರಲು ಸಿದ್ಧನಾದ. 1912 ಫೆಬ್ರವರಿ 12ರಂದು ಅರಸ ಸಿಂಹಾಸನವನ್ನು ತ್ಯಜಿಸಿ ಗಣರಾಜ್ಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ. ಷಿರ್‌ಕೈ ಗಣರಾಜ್ಯ ಸ್ಥಾಪಿಸುವಂತೆ ಅವನಿಗೆ ನಿರೂಪ ಹೋಯಿತು. ಸನ್‌ಯಾತ್‌ಸೆನ್ ಅಧ್ಯಕ್ಷನಾಗಿರಲು ಒಪ್ಪಲಿಲ್ಲ. ಗುಂಪಿನೊಳಗೆ ಒಡಕುಂಟಾಗದಂತೆ ನೋಡುವುದೇ ಅವನ ಉದ್ದೇಶವಾಗಿತ್ತು.

ಯುವಾನ್ ಷಿರ್‌ಕೈ ಬಲಾಢ್ಯ. ಅವನ ಬಳಿ ದೊಡ್ಡ ಸೇನೆ ಇತ್ತು. ಗಣರಾಜ್ಯವಾದಿಗಳ ಬೆಂಬಲವೂ ಇತ್ತು. ಆದರೆ ಅವನಿಗೆ ಉದಾತ್ತ ಧ್ಯೇಯವಿರಲಿಲ್ಲ. ತಾನೇ ಸಾಮ್ರಾಟನಾಗ ಬೇಕೆಂಬುದು ಅವನ ಬಯಕೆ. 1912 ಮಾರ್ಚ್‌ನಲ್ಲಿ ಒಪ್ಪಲಾದ ಸಂವಿಧಾನದಲ್ಲಿ ಪಾರ್ಲಿಮೆಂಟಿನ ವ್ಯಾಪ್ತಿಯೊಳಗೆ ಅಧ್ಯಕ್ಷನಿರಬೇಕೆಂದು ವಿಧಿಸಲಾಗಿತ್ತು. ಮೊದಲಿನ

ಪಾರ್ಲಿಮೆಂಟಿನಲ್ಲಿ ತೀವ್ರ ಪಂಥದವರೇ ಹೆಚ್ಚಾಗಿದ್ದರು. ಆಡಳಿತ ಸುಸೂತ್ರವಾಗಿ ಸಾಗಲಿಲ್ಲ. ಭಿನ್ನಭಿಪ್ರಾಯಗಳು ತಲೆದೋರಿ ತೊಡಕುಗಳುಂಟಾದುವು. 1913ರಲ್ಲಿ ಯುವಾನ್ ಬ್ರಿಟನ್, ಫ್ರಾನ್ಸ್ ಜರ್ಮನಿ ಮತ್ತು ರಷ್ಯದ ಬ್ಯಾಂಕುಗಳೊಡನೆ ಸಾಲದ ಒಪ್ಪಂದ ಮಾಡಿಕೊಂಡು ತನ್ಮೂಲಕ ಸರ್ಕಾರವನ್ನು ಆ ದೇಶದ ಪ್ರಭಾವಕ್ಕೊಳಪಡಿಸಿದಾಗ ಗಡಿಬಿಡಿಯೇ ಆಯಿತು. ದಕ್ಷಿಣದಲ್ಲಿ ತನ್ನವರನ್ನೇ ಅವನು ಸೈನಿಕ ಮುಖಂಡರನ್ನಾಗಿ ನೇಮಕ ಮಾಡಿದ್ದೂ ಅತೃಪ್ತಿಗೆ ಒಂದು ಕಾರಣ. ಮತ್ತೊಂದು ಬಂಡಾಯ ಬಲಿಯುತ್ತಿತ್ತು. ಇದಕ್ಕೆ ಸನ್‍ಯಾತ್‍ಸೆನ್ ಒಪ್ಪಿಗೆಯೂ ಇತ್ತು. ಯುವಾನ್ ಷಿರ್‌ಕೈ ಈ ಬಂಡಾಯವನ್ನು ಯಶಸ್ವಿಯಾಗಿ ಎದುರಿಸಿದ. ಸನ್‍ಯಾತ್‍ಸೆನ್ ಜಪಾನಿಗೆ ಓಡಿಹೋದ. ಯುವಾನ್ ಷಿರ್‌ಕೈ ಮತ್ತೆ ಪ್ರಬಲನಾದ. ಪಾರ್ಲಿಮೆಂಟಿನಲ್ಲಿದ್ದ ಗ್ವೋಮಿನ್‍ಟಾಂಗ್ ಪಕ್ಷದ ಸದಸ್ಯರನ್ನು ಬರ್ತಫ್‍ಮಾಡಿದ. ಕಡೆಗೆ 1914ರಲ್ಲಿ ಪಾರ್ಲಿಮೆಂಟೇ ವಿಸರ್ಜನೆಗೊಂಡಿತು. 1915ರಲ್ಲಿ ಮ್ಯಾಂಚೂ ವಂಶವನ್ನು ಪುನರುಜ್ಜೀವನಗೊಳಿಸಿ ತಾನೇ ಅರಸನೆಂದು ಘೋಷಿಸುವುದ ರಲ್ಲಿದ್ದ. ಆದರೆ ಬಂಡಾಯ ವ್ಯಾಪಕವಾಗಿ ಹಬ್ಬಿತು. ಯುವಾನ್ ಷಿರ್‌ಕೈ ಪ್ರಭಾವ ಅಳಿಯಿತು. ಅವನು 1916ರಲ್ಲಿ ಮೃತಪಟ್ಟ.

ಈ ಘಟನೆಯಾದ ಮೇಲೆ ಸು. 10 ವರ್ಷಗಳ ಕಾಲ ಸರ್ಕಾರದಲ್ಲಿ ಸ್ಥಿರತೆ ಇರಲಿಲ್ಲ. ದೇಶದೊಳಗಿನ ತಿಕ್ಕಾಟ ಮತ್ತು ಹೊರಗೆ ಸಂಭವಿಸುತ್ತಿದ್ದ ಘಟನೆಗಳಿಂದ ಗಣರಾಜ್ಯ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು.

ಯುವಾನ್ ಷಿರ್‌ಕೈ ಅಧ್ಯಕ್ಷತೆಯ ಕಾಲದಲ್ಲಿ ರಷ್ಯ ಮಂಗೋಲಿಯದಲ್ಲಿ, ಬ್ರಿಟನ್ ಟಿಬೆಟ್ಟಿನಲ್ಲಿ ತಮ್ಮ ಹಿತಾಸಕ್ತಿಗಳನ್ನು ಗೌರವಿಸಬೇಕೆಂದು ಒತ್ತಾಯಪಡಿಸುತ್ತಿದ್ದುವು. ಇದರಿಂದ ಮಂಗೋಲಿಯದಲ್ಲಾಗಲೀ ಟಿಬೆಟ್ಟಿನಲ್ಲಾಗಲೀ ಚೀನ ಅಲ್ಪ ಸ್ವಲ್ಪ ಬಿಟ್ಟು ಮಿಕ್ಕ ಸಾರ್ವಭೌಮಾಧಿಕಾರವನ್ನೆಲ್ಲ ಕಳೆದುಕೊಂಡಿತು. ಈ ಮಧ್ಯೆ ಒಂದನೆಯ ಮಹಾಯುದ್ಧ (1914–18) ಸಂಭವಿಸಿತು. ಚೀನ ತಟಸ್ಥ ದೇಶವೆಂದು ಘೋಷಿಸಿದ್ದರೂ ಅದರ ಪ್ರದೇಶಗಳು ಆಕ್ರಮಣಕ್ಕೆ ತುತ್ತಾದುವು. ಯುವಾನ್ ಷಿರ್‌ಕೈ ಗಣರಾಜ್ಯದ ಅಧ್ಯಕ್ಷನಾಗಿದ್ದರೂ ಅವನು ಸರ್ವಾಧಿಕಾರಿಯಾಗಿದ್ದ. ಅವನ ಅನಂತರ ಲುಯಯಾನ್ ಹಂಗ್ ಮತ್ತು ಫಂಗ್‌ಕ್ವೊ ಚಂಗ್ ಎಂಬುವರು ಒಬ್ಬರಾಗುತ್ತ ಲೊಬ್ಬರು ಅಧ್ಯಕ್ಷಸ್ಥಾನಕ್ಕೆ ಬಂದರು. 1918ರಲ್ಲಿ ಹುಸ್ಯು ಷಿ ಚಂಗ್ ಚುನಾಯಿತನಾದ. ಚೀನ ಮಹಾಯುದ್ಧ ಸಮಯದಲ್ಲಿ ತಟಸ್ಥನೀತಿ ತಾಳಿದರೂ ಕೊನೆಗೆ ಮಿತ್ರ ಪಕ್ಷದವರೊಡನೆ ಸೇರಿಕೊಳ್ಳಬೇಕಾಯಿತು. ಯುದ್ಧಾನಂತರ ಷಾಂಟಂಗನ್ನು ಜಪಾನ್ ಸ್ವಾಧೀನ ಪಡಿಸಿಕೊಂಡದ್ದ ರಿಂದ ಚೀನದಲ್ಲಿ ಅಸಂತುಷ್ಟಿಯುಂಟಾಯಿತು. ಜಪಾನ್ ವಿಶ್ವದ ಅಭಿಪ್ರಾಯಕ್ಕೆ ತಲೆಬಾಗಿ ಅದನ್ನು ಚೀನಕ್ಕೆ ಒಪ್ಪಿಸಿತು.

ಚೀನದ ವಿಚಾರದಲ್ಲಿ ಜಪಾನು ಮೊದಲಿಂದಲೂ ಸ್ನೇಹದಿಂದಿರಲಿಲ್ಲ. ಸಮಯ ಸಿಕ್ಕಾಗಲೆಲ್ಲ ಚೀನದ ಮೇಲೆ ತನ್ನ ವಕ್ರದೃಷ್ಟಿ ಬೀರಲು ಯತ್ನಿಸುತ್ತಿತ್ತು. ಅಷ್ಟೇ ಅಲ್ಲ ಅದರ ಪ್ರದೇಶಗಳನ್ನು ಒಂದೊಂದಾಗಿ ವಶಪಡಿಸಿಕೊಳ್ಳಲು ಸಂಚು ನಡೆಸುತ್ತಿತ್ತು. ಕೊರಿಯ ಅದರ ವಶವಾದ್ದು 1910ರಲ್ಲಿ. ಎಲ್ಲಕ್ಕಿಂತ ಆಶ್ಚರ್ಯಕರವಾದ್ದೆಂದರೆ ಅದು 1915 ಜನವರಿಯಲ್ಲಿ ಚೀನೀ ಅಧ್ಯಕ್ಷನಲ್ಲಿ 21 ಬೇಡಿಕೆಗಳನ್ನು ಮಂಡಿಸಿದ್ದು. ಚೀನದಲ್ಲಿ ಇದಕ್ಕೆ ಪ್ರತಿಭಟನೆ ಇತ್ತಾದರೂ ಜಪಾನನ್ನು ಎದುರಿಸಿ ನಿಲ್ಲುವಷ್ಟು ಶಕ್ತಿ ಅದಕ್ಕೆ ಇರಲಿಲ್ಲ. ಅದು 16 ಬೇಡಿಕೆಗಳಿಗೆ ಒಪ್ಪಿಗೆ ಕೊಟ್ಟಿತು. ಜಪಾನಿನ ಈ ಬೇಡಿಕೆಗಳಿಗೆ ಯುರೋಪಿನ ರಾಷ್ಟ್ರಗಳೂ ಸಮ್ಮತಿ ನೀಡಿದವು. ಅಮೆರಿಕ ಮಾತ್ರ ಇವನ್ನು ಬೆಂಬಲಿಸದಿದ್ದರೂ ಚೀನದಲ್ಲಿ ಜಪಾನಿಗೆ ಹಿತಾಸಕ್ತಿ ಇರುವುದನ್ನು ಅಂಗೀಕರಿಸಲೇಬೇಕು ಎಂಬುದು ಅದರ ವಾದ. ಚೀನ ಮಿತ್ರಪಕ್ಷದವರೊಡನೆ ಯುದ್ಧಭಾಗಿಯಾಗಿತ್ತೆಂಬ ಅಂಶವನ್ನು ಅವು ಈ ಸಂದರ್ಭದಲ್ಲಿ ಗಮನಿಸಲೇ ಇಲ್ಲ. ಬರುಬರುತ್ತ ಜಪಾನಿನ ಸಾಮ್ರಾಜ್ಯಾಕಾಂಕ್ಷೆ ಹೆಚ್ಚಿತು. ಚೀನದಲ್ಲಿ ಅದರ ಹಿತಾಸಕ್ತಿಗಳು ಹೆಚ್ಚಿದುವು. ಈ ಪ್ರವೃತ್ತಿಗಳು ಪಾಶ್ಚಾತ್ಯ ರಾಷ್ಟ್ರಗಳ ಗಮನ ಸೆಳೆಯದಿರಲಿಲ್ಲ. ಜಪಾನಿನ ಪ್ರಾಬಲ್ಯವನ್ನು ತಡೆಗಟ್ಟಬೇಕೆಂದು ಅಮೆರಿಕ ಮತ್ತು ಬ್ರಿಟನ್ ನಿರ್ಧರಿಸಿ ಸೂಕ್ತ ಕ್ರಮ ಕೈಗೊಂಡವು. ಚೀನದ ಸ್ವಾತಂತ್ರ್ಯ, ಸಾರ್ವಭೌಮಾಧಿಕಾರ ಇವನ್ನು ಗೌರವಿಸಬೇಕೆಂದು 1922ರಲ್ಲಿ ಒಂಬತ್ತು ರಾಷ್ಟ್ರಗಳ ಒಂದು ಒಪ್ಪಂದವಾಯಿತು. ಆದರೂ ಅದರ ನೀತಿಯನ್ನು ಹತೋಟಿಯಲ್ಲಿಟ್ಟು ಕೊಳ್ಳಲು ಸಾಧ್ಯವಾಗಲಿಲ್ಲ.

ಯುವಾನ್ ಷಿರ್‌ಕೈ ಅಧಿಕಾರಚ್ಯುತಿಯ ಅನಂತರ ಸ್ವಲ್ಪ ಕಾಲ ದೇಶ ಇಬ್ಭಾಗವಾಯಿತು. ಎರಡು ಆಡಳಿತಗಳೇರ್ಪಟ್ಟವು. ಪೀಕಿಂಗಿನಲ್ಲಿ ಒಂದು ಆಡಳಿತವೂ ಕ್ಯಾಂಟನ್ನಿನಲ್ಲಿ ಇನ್ನೊಂದು ಇದ್ದುವು. 1921ರಲ್ಲಿ ಸನ್‍ಯಾತ್‍ಸೆನ್‍ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಲಾ ಯಿತು. ಆದರೆ ಶಾಂತಿ ನೆಲೆಸಲಿಲ್ಲ. ಸರ್ಕಾರ ದುರ್ಬಲವಾಯಿತು. ಗುಂಪುಗುಳಿತನ ಹೆಚ್ಚಿತು. ರಾಜ್ಯದ ಆಡಳಿತಕ್ಕಾಗಿ ಪ್ರಮುಖರೇ ಕಚ್ಚಾಡುವಂತಾಯಿತು.

ಸನ್‍ಯಾತ್‍ಸೆನ್ ಸಮರ್ಥ ಪ್ರಚಾರಕ ಹಾಗೂ ಕ್ರಾಂತಿಕಾರನಾಗಿದ್ದ. ಆದರೆ ದಕ್ಷ ಆಡಳಿತಗಾರನಾಗಿರಲಿಲ್ಲ. ಅವನು ಪ್ರತಿಪಾದಿಸುತ್ತಿದ್ದ ಸಾಮಾಜಿಕ ನೀತಿಗಳು ಮಾತ್ರ ಮುಂದಿನ ದಿನಗಳಲ್ಲಿ ಫಲಕಾರಿಯಾದುವು. ಪೀಕಿಂಗ್ ಆಡಳಿತವನ್ನು ಉರುಳಿಸಲು ಸನ್‍ಯಾತ್‍ಸೆನ್ 1923ರಲ್ಲಿ ಅನ್ಯ ರಾಷ್ಟ್ರಗಳನ್ನು ಕೇಳಿ ವಿಫಲಗೊಂಡ. ಆಗ್ಗೆ ಅವನು ರಷ್ಯದ ಕೆಲವು ನಾಯಕರ ಸಲಹೆಯನ್ನು ಕೇಳಬೇಕಾದ ಪ್ರಸಂಗ ಒದಗಿತು. ರಷ್ಯದ ಈ ನಾಯಕರ ಸಲಹೆ ಮತ್ತು ಬೋಧನೆಗಳ ದೆಸೆಯಿಂದ ಗ್ವೋಮಿನ್‍ಟಾಂಗ್ ಸರ್ಕಾರ ರಷ್ಯದ ಕಮ್ಯೂನಿಸ್ಟ್ ಪಕ್ಷದ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತು. ಅಂದಿನಿಂದ ಅದರ ನಿಲುವೇ ಮಾರ್ಪಾಟಾಯಿತು. ಸನ್‍ಯಾತ್‍ಸೆನ್ 1925ರಲ್ಲಿ ಮೃತಪಟ್ಟ. ಅವನು ಬಿಟ್ಟುಹೋದ ಉಯಿಲು ಮತ್ತು ಕೆಲವು ಗ್ರಂಥಗಳು ದೇಶಕ್ಕೆ ಮಾರ್ಗದರ್ಶಕವಾದುವು. ಈ ಪೈಕಿಯ ಗ್ರಂಥವೊಂದು ಆಡಳಿತದ ಗೀತೆಯಂತಾಯಿತು. ಅದರಲ್ಲಿ ಸೂಚಿತವಾದ ಮೂರು ತತ್ತ್ವಗಳು ಹೀಗಿವೆ: 1. ರಾಷ್ಟ್ರೀಯತೆ–ವಿದೇಶೀಯರ ಆಧಿಪತ್ಯವನ್ನು ಚೀನದಿಂದ ಹೊರಕ್ಕೆ ಅಟ್ಟುವುದು. 2. ಪ್ರಜಾಸತ್ತೆ–ಸರ್ಕಾರ ಜನರಿಂದ, ಜನರಿಗಾಗಿ ; 3. ಜೀವನ–ಎಲ್ಲ ಜನರಿಗೂ ಆರ್ಥಿಕ ಸುರಕ್ಷತೆ.

1926 ರಲ್ಲಿ ಸರ್ಕಾರದ ಸೇನೆಗಳು ಉತ್ತರಾಭಿಮುಖವಾಗಿ ನುಗ್ಗಿ ಕಾರ್ಯಾಚರಣೆ ನಡೆಸಿದುವು. ಇದರ ನಾಯಕ ಚಿಯಾಂಗ್ ಕೈ–ಷೆಕ್. ಇವನ ಸೇನೆಗೆ ಸರಿಯಾದ ಪ್ರತಿಭಟನೆ ಬರಲಿಲ್ಲ. 1927ರ ಆದಿಭಾಗದಲ್ಲಿ ಇದು ಯಾಂಗ್‍ಟ್ಸೀ ಕಣಿವೆಯನ್ನು ಪ್ರವೇಶಿಸಿತು. ಷಾಂಗ್‍ಹೈನಂಥ ಮುಖ್ಯ ನಗರಗಳು ಇದರ ವಶವಾದುವು. ಆದರೆ ಈ ಸರ್ಕಾರದ ಗುಂಪಿನಲ್ಲಿ ಒಳಜಗಳಗಳು ಕಾಣಿಸಿಕೊಂಡುವು. ಮಂದಗಾಮಿಗಳು, ತೀವ್ರಗಾಮಿಗಳೂ ಎಂಬ ಎರಡು ಪಂಗಡಗಳಾದುವು. ಚಿಯಾಂಗರ ನಾಯಕತ್ವದಲ್ಲಿ ಮಂದಗಾಮಿಗಳು ನ್ಯಾನ್ಕಿಂಗಿನಲ್ಲಿ ಸರ್ಕಾರವನ್ನು ಸ್ಥಾಪಿಸಿದರು. ವಾಮಪಕ್ಷದ ಮೇಲೆ ಚಿಯಾಂಗ್ ಬಲಪ್ರಯೋಗ ಮಾಡಿದರು. ಕಮ್ಯೂನಿಸ್ಟ್ ಸಂಬಂಧ ತೊಡೆದುಹಾಕಲು ಉಗ್ರಕ್ರಮಗಳನ್ನು ಅನುಸರಿಸಿದರು. ಕ್ಯಾಂಟನ್‍ನಲ್ಲಿ ಒಂದು ಬಂಡಾಯವೆದ್ದಿತು. ಇದನ್ನು ಅಡಗಿಸಲಾಯಿತು. ಇದರಲ್ಲಿ ಐದು ಸಾವಿರ ಜನ ಬಲಿಯಾದರು. ಕಮ್ಯೂನಿಸ್ಟ್ ಸಲಹೆಗಾರರು ರಷ್ಯಕ್ಕೆ ಹಿಂತಿರುಗಬೇಕಾಯಿತು. ತೀವ್ರಗಾಮಿಗಳನೇಕರು, ಸನ್‍ಯಾತ್‍ಸೆನ್‍ನ ಹೆಂಡತಿ ಕೂಡ, ದೇಶದಿಂದ ಉಚ್ಚಾಟನೆಗೊಂಡರು. ಆದರೆ ನ್ಯಾನ್ಕಿಂಗ್ ಸರ್ಕಾರಕ್ಕೆ ಹಣದ ಕೊರತೆಯುಂಟಾಯಿತು. ಕೊನೆಗೆ ಷಾಂಗ್‍ಹೈನ ವಿದೇಶೀ ಬ್ಯಾಂಕುಗಳ ನೆರವನ್ನು ಅವಲಂಬಿಸಬೇಕಾಯಿತು.

**ಕಂಚುಶಿಲ್ಪಗಳು, ಚೀನ**

1927ರಲ್ಲಿ ಪ್ರಾಪ್ತವಾದ ಒಡಕು ಚೀನದ ಆಧುನಿಕ ಇತಿಹಾಸದಲ್ಲಿ ಅತ್ಯಂತ ಮುಖ್ಯ ಘಟನೆ. ಕ್ರಾಂತಿಕಾರಿ ಚಳವಳಿ ತ್ವರಿತವಾಗಿ ಮಾರ್ಕ್ಸ್ ತತ್ತ್ವಪ್ರತಿಪಾದನೆಯಲ್ಲಿ ತಲ್ಲೀನವಾಯಿತು. ಚಿಯಾಂಗ್ ಸರ್ಕಾರ ವಾಮ ಪಕ್ಷದವರ ಮೇಲೆ ನಡೆಸಿದ ಕಾರ್ಯಾಚರಣೆಗೆ ಪ್ರತಿಯಾಗಿ ತೆತ್ತ ಬೆಲೆ ಅಲ್ಪವಲ್ಲ. ಕೇವಲ ತೀವ್ರಪಂಥದವರು ಮಾತ್ರವಲ್ಲ, ನ್ಯಾಯವಾದ ಸುಧಾರಣೆಗಳು ಬೇಕೆನ್ನುತ್ತಿದ್ದ ಮಂದಗಾಮಿಗಳೂ ವಿರೋಧಿಗಳಾದರು. 1227ರ ತರುವಾಯ ರಾಷ್ಟ್ರೀಯ ಆಡಳಿತ ಕಂದಚಾರದ ನೀತಿಗಳಿಗೆ ಒಳಗಾಗಿ ಜನಸಾಮಾನ್ಯರ ಸಮಸ್ಯೆಗಳನ್ನು ಅರ್ಥಮಾಡಿ ಕೊಳ್ಳಲು ಅಸಮರ್ಥವಾಯಿತು. ಅದರ ಸ್ವರೂಪವೇ ಮಾರ್ಪಟ್ಟಿತು. ಕ್ರಮೇಣ ಅದು ಪಟ್ಟಣಿಗರ, ಉದ್ಯಮಿಗಳ, ವ್ಯಾಪಾರಗಾರರ ಮತ್ತು ಬ್ಯಾಂಕಿಂಗ್ ಗುಂಪಿನ ಕೈಗೊಂಬೆಯಾಯಿತು.

ಕಮ್ಯೂನಿಸ್ಟ್ ಪಕ್ಷ ವ್ಯಾಪಕ ಕ್ರಾಂತಿಗಾಗಿ ಸನ್ನಾಹ ನಡೆಸುತ್ತಿತ್ತು. ಹಲವು ನಾಯಕರು ಸೋವಿಯೆತ್ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದವರು. ಅಂದಿನ ಸರ್ಕಾರದ ಉಪೇಕ್ಷೆಯಿಂದ ಗ್ರಾಮಪ್ರದೇಶಗಳಲ್ಲಿ ಜನಿಸಿದ್ದ ಅಸಂತುಷ್ಟಿಯನ್ನು ಈ ನಾಯಕರು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಯತ್ನಿಸಿದರು. ಮಾರ್ಕ್ಸ್‌ತತ್ತ್ವಗಳನ್ನು ಪ್ರಚಾರ ಮಾಡಲು ಅನುವಾದರು. ಚೀನದ ರಾಷ್ಟ್ರೀಯ ಪಕ್ಷದವರು ಚೀನವನ್ನು ಆಧುನಿಕಗೊಳಿಸಲು ಯತ್ನಿಸಿದರಾದರೂ ಅವರ ಗಮನವೆಲ್ಲ ಪಟ್ಟಣಗಳ ಕಡೆಗೇ ಇದ್ದದ್ದು ಬಾಧಕವೆನಿಸಿತು. ಇದನ್ನೆಲ್ಲ ಮಾವೊ ತ್ಸೆ–ತುಂಗ್ ಚೆನ್ನಾಗಿ ಅರ್ಥಮಾಡಿಕೊಂಡು ಸಮಯ ಕಾಯುತ್ತಿದ್ದ. ಒಟ್ಟಿನಲ್ಲಿ ರೈತರ ಕಷ್ಟಗಳೇನು, ಕಾರ್ಪಣ್ಯಗಳೇನು ಎಂಬುದನ್ನು ಮನನಮಾಡಿದ. ಸುಧಾರಣೆಗೆ ಕೈ ಹಾಕಿದ.

ಇದರಿಂದ ರೈತರಲ್ಲಿ ನವಚೇತನವುಂಟಾಯಿತು. ಆಶೆ ಅಂಕುರಿಸಿತು. ಈ ಕಾರ್ಯದಲ್ಲಿ ಮಾವೊ ಯಶಸ್ವಿಯಾದಾಗ ಚಿಯಾಂಗ್ ಸರ್ಕಾರ ಕಣ್ತೆರೆಯಿತು. 1931ರ ಆರಂಭದಿಂದ ನಾಲ್ಕು ವರ್ಷಗಳವರೆಗೆ ಐದು ಸಾರಿ ಕಮ್ಯೂನಿಸ್ಟರ ಮೇಲೆ ಕಾರ್ಯಾಚರಣೆ ನಡೆಯಿತು. ಜರ್ಮನ್ ಸೈನ್ಯಾಧಿಕಾರಿಗಳ ನೇತೃತ್ವದಲ್ಲಿ ಹತ್ತು ಲಕ್ಷ ಸೈನಿಕರು ನುಗ್ಗಿದರು. ಕಮ್ಯೂನಿಸ್ಟರು ಸೋತು ದಿಕ್ಕಾಪಾಲಾಗಿ ಚದುರಿದರು. ಮಾವೊ ಮತ್ತು ಅವನ ಅನುಯಾಯಿಗಳು, ಸಾವಿರಾರು ಮೈಲಿಗಳ ದೂರ ನಡೆದು ಆಗಾಗ್ಗೆ ಸೈನಿಕ ಪ್ರಹಾರಗಳನ್ನು ಎದುರಿಸುತ್ತ, ಬಹಳ ಕಷ್ಟ ನಷ್ಟ ಅನುಭವಿಸಿದರು. ಕಡೆಗೆ ಕಳೆದುಳಿದಿದ್ದವರು 1935ರ ಅಕ್ಟೋಬರಿನಲ್ಲಿ ಷೆನ್ಸೀ ಪ್ರಾಂತದಲ್ಲಿ ತಂಗಿ ಯನ್ನಾನ್ ನಗರದಲ್ಲಿ ಕಮ್ಯೂನಿಸ್ಟ್ ಸರ್ಕಾರ ಸ್ಥಾಪಿಸಲು ಉದ್ಯುಕ್ತರಾದರು. ಈ ಘಟನೆಗಳು ನಡೆಯುತ್ತಿದ್ದಾಗಲೇ ಜಪಾನ್ ಮತ್ತೊಮ್ಮೆ ಚೀನದ ಮೇಲೆ ಧಾಳಿ ನಡೆಸಿತು. ಚೀನದ ನೈಸರ್ಗಿಕ ಸಂಪತ್ತು ಅಪಾರವಾಗಿದ್ದದ್ದು ಮಾತ್ರವಲ್ಲ. ಅದು ಜಪಾನೀ ಪದಾರ್ಥಗಳಿಗೆ ಒಳ್ಳೆಯ ಮಾರುಕಟ್ಟೆಯೂ ಆಗಿದ್ದುದು ಜಪಾನಿನ ಆಕ್ರಮಣಾಕಾಂಕ್ಷೆಗೆ ಮುಖ್ಯ ಕಾರಣ.

1931 ಸೆಪ್ಟೆಂಬರ್ ತಿಂಗಳಿನಲ್ಲಿ ಜಪಾನ್ ಎಚ್ಚರಿಕೆ ನೀಡದೆ ಮಂಚೂರಿಯಲ್ಲಿದ್ದ ಚೀನಿ ಸೈನಿಕರ ಮೇಲೆ ಬಿತ್ತು. ಜಪಾನಿನ ಧಾಳಿಯನ್ನು ತಡೆಯಲಾರದೆ ರಾಷ್ಟ್ರಗಳ ಕೂಟಕ್ಕೆ (ಲೀಗ್ ಆಫ್ ನೇಷನ್ಸ್) ಚೀನ ವಿನಂತಿ ಮಾಡಿಕೊಂಡಿತು. ಆ ಸಂಸ್ಥೆ ಜಪಾನನ್ನು ಖಂಡಿಸಿತಾದರೂ ಇದಕ್ಕಿಂತ ಹೆಚ್ಚಿನದೇನನ್ನೂ ಮಾಡಲಿಲ್ಲ. ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂಬುದು ಚೀನಕ್ಕೆ ಹೊಳೆಯಲಿಲ್ಲ. ಮಿತ್ರರಿಲ್ಲದ ಸ್ಥಿತಿಗೆ ಬಂದಿತ್ತು. ಜಪಾನೀ ಸರಕುಗಳನ್ನು ಬಹಿಷ್ಕರಿಸಬೇಕೆಂದು ಅದು ದೇಶಕ್ಕೆ ಕರೆಕೊಟ್ಟಿತು (1932). ಇದರ ಪರಿಣಾಮವಾಗಿ ಷಾಂಗ್‌ಹೈ ನಗರಕ್ಕೆ ಅಪಾರ ನಷ್ಟ ಉಂಟಾಯಿತು. ಮಂಚೂರಿಯವನ್ನು ಅದೇ ವರ್ಷದಲ್ಲಿ ಜಪಾನ್ ಆಕ್ರಮಿಸಿ ಅದಕ್ಕೆ ಮಂಚುಕೋ ಎಂದು ನಾಮಕರಣಮಾಡಿತು. ಸಿಂಹಾಸನತ್ಯಾಗ ಮಾಡಿದ್ದ ಮ್ಯಾಂಚೂ ಅರಸ ಹೊಸ ಆಡಳಿತದ ಪ್ರಥಮ ದೊರೆಯಾದ. ಜಪಾನ್ ತನ್ನ ದಂಡಯಾತ್ರೆಯನ್ನು ಮುಂದುವರಿಸಿ ತೀರ ದಕ್ಷಿಣಕ್ಕೆ ನುಗ್ಗಿತು. ಚೀನ ಜಪಾನಿನೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಮಂಚೂರಿಯ ಮತ್ತು ಉತ್ತರ ಚೀನಗಳ ಮೇಲೆ ಜಪಾನು ನಡೆಸಿದ ಆಕ್ರಮಣವನ್ನು ಅದು ಅಂಗೀಕರಿಸಲೇಬೇಕಾಗಿ ಬಂತು.

1933–36ರಲ್ಲಿ ಜಪಾನ್ ಮತ್ತು ಚೀನಗಳ ನಡುವೆ ಶಾಂತಿ ನೆಲೆಸಿತ್ತು. ಉತ್ತರದಲ್ಲಿ ಜಪಾನ್ ತನ್ನ ಸ್ಥಾನಗಳನ್ನು ಭದ್ರಗೊಳಿಸಿಕೊಳ್ಳಲು ಯತ್ನಿಸುತ್ತಿದ್ದಾಗಲೇ ಚೀನದ ರಾಷ್ಟ್ರೀಯ ಸರ್ಕಾರ ಚಿಯಾಂಗರ ನಾಯಕತ್ವದಲ್ಲಿ ಒಳ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುತ್ತಿತ್ತು. ಈ ಸಮಯದಲ್ಲೇ ಚೀನದ ಎರಡು ಪ್ರಬಲ ಗುಂಪುಗಳಿಗೂ ಘರ್ಷಣೆ ಯುಂಟಾಯಿತು. ಕಮ್ಯೂನಿಸ್ಟರನ್ನು ನಾಶಗೊಳಿಸಲು ಚಿಯಾಂಗ್ ಯತ್ನಿಸಿತು. ಇದು ಸಾಧ್ಯವಾಗಲಿಲ್ಲ. ಕಮ್ಯೂನಿಸ್ಟರು ನ್ಯಾನ್ಕಿಂಗ್ ಪ್ರದೇಶದಿಂದ ವಾಯವ್ಯಕ್ಕೆ ಓಡಿಹೋಗಲು ಮಾತ್ರ ಸಾಧ್ಯವಾಯಿತು. ಚಿಯಾಂಗ್ ಕೈ–ಷೆಕ್‌ನಿಗೂ ಕಮ್ಯೂನಿಸ್ಟರಿಗೂ ಧ್ಯೇಯಧೋರಣೆ ಗಳ ಸಂಬಂಧವಾದ ಘರ್ಷಣೆ ಅವ್ಯಾಹತವಾಗಿ ನಡೆಯಿತು. ಕಮ್ಯೂನಿಸ್ಟರ ಆರ್ಥಿಕ ತತ್ತ್ವಗಳನ್ನು ಚಿಯಾಂಗ್ ವಿರೋಧಿಸಿದ. ಚಿಯಾಂಗ್‌ರು ದೇಶೀಯರ ವಿರುದ್ಧ ಕಾದಾಡಲು ನಿಂತಿರುವರೇ ವಿನಾ ಜಪಾನೀ ಧಾಳಿಕೋರರ ವಿರುದ್ಧ ಸೆಣಸಲು ಸಿದ್ಧರಿಲ್ಲ ವೆಂದು ಕಮ್ಯೂನಿಸ್ಟರು ಹೇಳುತ್ತಿದ್ದರು.

1935ರಲ್ಲಿ ಚೀನಿ ಕಮ್ಯುನಿಸ್ಟ್ ಪಕ್ಷದ ಪ್ರಮುಖರು ಜಪಾನಿಯರನ್ನು ಎದುರಿಸಲು ಐಕ್ಯರಂಗವಾಗಬೇಕೆಂದು ಒತ್ತಾಯಪಡಿಸಿದರು. 1936ರ ಡಿಸೆಂಬರ್ 12ರಂದು ಚಿಯಾಂಗ್ ಕೈ–ಷೆಕನನ್ನು ಕಮ್ಯೂನಿಸ್ಟರು ಎರಡು ವಾರಗಳ ಕಾಲ ದಿಗ್ಬಂಧನದಲ್ಲಿಟ್ಟಿದ್ದು, ಶತ್ರುವನ್ನೆ ದುರಿಸುವ ಸಲುವಾಗಿ ಐಕ್ಯರಂಗವೇರ್ಪಡಬೇಕೆಂದೂ ಅವನು ಅದರ ನಾಯಕರಾಗ ಬೇಕೆಂದೂ ಹೇಳಿದರು. ಚಿಯಾಂಗ್ ನ್ಯಾನ್ಕಿಂಗಿಗೆ ಹಿಂದಿರುಗಿದ. ರಾಷ್ಟ್ರೀಯ ಸರ್ಕಾರ ದವರು ಮತ್ತು ಕಮ್ಯೂನಿಸ್ಟರು ಸಹವರ್ತಿಸಿ ಜಪಾನಿನ ಮುಂದಿನ ಧಾಳಿಯನ್ನು ಎದುರಿಸಲು ತಯಾರಾದರು.

ಹೊರಗಿನ ಧಾಳಿಕಾರರನ್ನು ಹಿಮ್ಮೆಟ್ಟಿಸುವುದೇ ಪ್ರಥಮ ಕರ್ತವ್ಯವೆಂದು ಮಾವೊ ಬಗೆದು, ಒಗ್ಗಟ್ಟು ಸಾಧಿಸಲು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳಿಗೆ ಕೈಹಾಕಿದ. ಇದರಲ್ಲಿ ಯಾವ ಸಂಶಯಕ್ಕೂ ಆಸ್ಪದವಿರಬಾರದೆಂಬುದು ಇವನ ಆಶಯ. ಮುಖ್ಯವಾಗಿ ನ್ಯಾನ್ಕಿಂಗ್ ಸರ್ಕಾರದ ವಿರುದ್ಧ ಹೋರಾಡುವುದಿಲ್ಲವೆಂದೂ ಜಪಾನಿನ ವಿರುದ್ಧ ಕಾದಾಡಲು ತಮ್ಮ ಸೇನೆಯನ್ನು ರಾಷ್ಟ್ರೀಯ ಸೇನೆಯೊಡನೆ ವಿಲೀನಗೊಳಿಸುವುದಾಗಿಯೂ ಸಾರಿದರು.

ಜಪಾನ್ ಪುನಃ 1937 ಜುಲೈ 7ರಂದು ಚೀನದ ಮೇಲೆ ಯುದ್ಧ ಸಾರಿತು. ಮೊದಲು ಕದನ ಆರಂಭವಾದದ್ದು ಉತ್ತರದಲ್ಲಿ. ಈ ಮಧ್ಯೆ ದಕ್ಷಿಣದಲ್ಲಿ ಜಪಾನಿಗಳು ಷಾಂಗೈಯನ್ನು ವಶಪಡಿಸಿಕೊಂಡು ನ್ಯಾನ್ಕಿಂಗ್ ಹಿಡಿಯಲು ಯಾಂಗ್ಸ್ಟೀ ಕಣಿವೆಯವರೆಗೆ ರಭಸದಿಂದ ನುಗ್ಗಿದರು. ಚೀನಿಯರು ಶರಣಾಗತರಾಗದೆ ಹಿಮ್ಮೆಟ್ಟಿ ಯಾಂಗ್ಸ್ಟೀ ಮೇಲ್ಭಾಗದ ಚುಂಗ್‌ಕಿಂಗ್ ಎಂಬಲ್ಲಿ ತಮ್ಮ ರಾಜಧಾನಿಯನ್ನು ಸ್ಥಾಪಿಸಿ ಅಲ್ಲಿಂದ ಯುದ್ಧ ಮುಂದು ವರಿಸಿದರು. ಉತ್ತರದಲ್ಲಿ ಚೀನಿ ಸೈನಿಕರು ಹಿಮ್ಮೆಟ್ಟಿದರು. ಕಡೆಗೆ ಜಪಾನಿಯರ ಸರ್ಕಾರ ಪೈಪಿಂಗ್‌ನಲ್ಲಿ ಸ್ಥಾಪಿತವಾಯಿತು. ಯುದ್ಧ ಮುಂದುವರಿಯಿತು. 1941ರ ವೇಳೆಗೆ ಚೀನದ ಟಿನ್‌ಟ್ಸಿನ್ ಮತ್ತು ಪೀಕಿಂಗ್ ಪ್ರಾಂತವೆಲ್ಲ ಜಪಾನಿನ ವಶವಾಯಿತು. ಅಲ್ಲದೆ ಷಾಂಗ್‌ಹೈ, ಹ್ಯಾಂಗ್‌ಚೌ, ನ್ಯಾನ್ಕಿಂಗ್ ಮುಂತಾದ ಪಟ್ಟಣಗಳೂ ರೇವುಗಳೂ ರೈಲ್ವೆಸಾರಿಗೆ ಸಂಪರ್ಕಗಳೂ ಅದರ ವಶವಾದುವು. ಗಣರಾಜ್ಯ ಸರ್ಕಾರ ಪಲಾಯನ ಮಾಡಿತು. ಜಪಾನು ನ್ಯಾನ್ಕಿಂಗ್ ನಲ್ಲಿ ವಾಂಗ್ ಚಿಂಗ್ ಎಂಬುವನ ನೇತೃತ್ವದಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸಿತು.

ಜಪಾನಿನ ಪರಾಜಯದಿಂದ ಚೀನಕ್ಕೆ ಅನುಕೂಲವಾಯಿತು. 50 ವರ್ಷಗಳಲ್ಲಿ ಚೀನದಿಂದ ಜಪಾನು ಗಳಿಸಿದ್ದನ್ನೆಲ್ಲ ಚೀನಕ್ಕೆ ಬಿಟ್ಟುಕೊಡಬೇಕಾಗಿ ಬಂತು. ಕಮ್ಯೂನಿಸ್ಟ್ ಮತ್ತು ರಾಷ್ಟ್ರೀಯ ಚೀನ ಸರ್ಕಾರಗಳ ನಡುವೆ ಒಗ್ಗಟ್ಟು ಸಾಧಿಸಲು ನಡೆಸಿದ ಪ್ರಯತ್ನಗಳೆಲ್ಲ ವ್ಯರ್ಥವಾಗಿ ಇವೆರಡೂ ಮತ್ತೆ ಆಡಳಿತಕ್ಕಾಗಿ ಪರಸ್ಪರ ಸ್ಪರ್ಧಿಸಿದುವು. ಕಮ್ಯೂನಿಸ್ಟ್ ಆಡಳಿತ ದಕ್ಷವೂ ಸುವ್ಯವಸ್ಥಿತವೂ ಶಕ್ತಿಯುತವೂ ಆಗಿತ್ತು. ಕಮ್ಯೂನಿಸ್ಟರ ಕೈ ಮೇಲಾಗಿ 1949ರಲ್ಲಿ ಚಿಯಾಂಗ್ ಕೈ–ಷೆಕ್ ಫಾರ್ಮೋಸಕ್ಕೆ ಓಡಿಹೋಗಬೇಕಾಯಿತು. ಅಲ್ಲಿ ಅಮೆರಿಕನ್ನರ ರಕ್ಷಣೆಯಲ್ಲಿ ರಾಷ್ಟ್ರೀಯ ಸರ್ಕಾರವನ್ನು ಮುಂದುವರಿಸಿದರು. ಆ ವರ್ಷ ಕಮ್ಯೂನಿಸ್ಟರು ಚೀನಿ ಮೂಲ ನಾಡಿನಲ್ಲಿ ಜನತಾ ಗಣರಾಜ್ಯವನ್ನು ಘೋಷಿಸಿ ಅಧಿಕಾರ ಸ್ಥಾಪಿಸಿದರು.

ಅನೇಕ ರಾಷ್ಟ್ರಗಳು ಕಮ್ಯೂನಿಸ್ಟ್ ಚೀನಕ್ಕೆ ಮನ್ನಣೆ ನೀಡಿದುವು. 1950ರಲ್ಲಿ ಕೊರಿಯ ಯುದ್ಧದಲ್ಲಿ ಚೀನ ಭಾಗವಹಿಸಿ, ಉತ್ತರ ಕೊರಿಯಕ್ಕೆ ಬೆಂಬಲ ನೀಡಿತು. ಅದೇ ವರ್ಷ ಚೀನೀ ಸೇನೆ ಟಿಬೆಟನ್ನು ವಶಪಡಿಸಿಕೊಂಡಿತು. 1956ರಲ್ಲಿ ಇಂಡೋನೇಷ್ಯದ ಬಾಂಡುಂಗ್ ನಲ್ಲಿ ನಡೆದ ಏಷ್ಯ–ಆಫ್ರಿಕ ಸಮ್ಮೇಳನದಲ್ಲಿ ಭಾಗವಹಿಸಿತು. 1956ರಲ್ಲಿ ಟಿಬೆಟಿನಲ್ಲಿ ದಲೈಲಾಮಾರನ್ನು ಸರ್ಕಾರದ ಮುಖ್ಯಸ್ಥನನ್ನಾಗಿ ಮಾಡಲಾಯಿತು. ನಿಜವಾದ ಅಧಿಕಾರವೆಲ್ಲ ಕಮ್ಯೂನಿಸ್ಟ್ ಸರ್ಕಾರದ ಕೈಯಲ್ಲೇ ಇತ್ತು. 1959ರಲ್ಲಿ ಚೀನೀಯರ ವಿರುದ್ಧ ಟಿಬೆಟಿನಲ್ಲಿ ದಂಗೆ ನಡೆಯಿತು. ಚೀನಿಯರು ಅದನ್ನು ಹತ್ತಿಕ್ಕಿದರು. ದಲೈ ಲಾಮಾ ಭಾರತಕ್ಕೆ ಓಡಿಹೋದರು. ಪಂಚೆನ್ ಲಾಮಾ ಚೀನಿಯರ ನೆರವಿನಿಂದ ಅಧಿಕಾರಕ್ಕೆ ಬಂದರು. 1965ರಲ್ಲಿ ಮತ್ತೊಬ್ಬ ನನ್ನು ಅಧಿಕಾರಕ್ಕೆ ತರಲಾಯಿತು. 1962ರಲ್ಲಿ ಚೀನಕ್ಕೂ ಭಾರತಕ್ಕೂ ನಡುವೆ ಗಡಿ ಘರ್ಷಣೆ ನಡೆಯಿತು. ಇದರಿಂದ ಈ ಎರಡೂ ದೇಶಗಳ ಪರಸ್ಪರ ಸಂಬಂಧಗಳು ಹದಗೆಟ್ಟುವು. 1954–72ರ ವರೆಗೆ ನಡೆದ ವಿಯೆಟ್ನಾಮ್ ಕಾಳಗದಲ್ಲಿ ಕಮ್ಯೂನಿಸ್ಟ್ ಚೀನ ಉತ್ತರ ವಿಯೆಟ್ನಾಮ್‌ಗೆ ನೆರವು ನೀಡುತ್ತಿತ್ತು. ದಕ್ಷಿಣ ವಿಯೆಟ್ನಾಮ್ ಸರ್ಕಾರದ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದ ಕಮ್ಯೂನಿಸ್ಟ್ ಪಡೆಗಳಿಗೂ ಚೀನಿಯರ ನೆರವು ದೊರಕಿತು. 1949–71ರ ವರೆಗೆ ಚೀನಿ ಜನತಾ ಗಣರಾಜ್ಯಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನವಿರಲಿಲ್ಲ. ಅಮೆರಿಕ ಅದಕ್ಕೆ ಅಡ್ಡಿ ತರುತ್ತಿತ್ತು. ಭಾರತ, ಸೋವಿಯತ್ ದೇಶ ಮುಂತಾದ ಹಲವು ರಾಷ್ಟ್ರಗಳು ಕಮ್ಯೂನಿಸ್ಟ್ ಚೀನಕ್ಕೆ ಸದಸ್ಯತ್ವ ಕೊಡಬೇಕೆಂದು ವಾದಿಸಿ, ಬೆಂಬಲ ನೀಡಿದವು. ಕಮ್ಯೂನಿಸ್ಟ್ ಚೀನಿ ಸರ್ಕಾರದ ಬದಲಾಗಿ ಫಾರ್ಮೋಸ (ತೈವಾನ್) ಸರ್ಕಾರಕ್ಕೆ ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವವಿತ್ತು. ಈ ಬಗ್ಗೆ ಅಮೆರಿಕದ ಧೋರಣೆಯಲ್ಲಿ ಬದಲಾವಣೆ ಯಾದ್ದು 1971ರಲ್ಲಿ. ವಿಶ್ವಸಂಸ್ಥೆಯಲ್ಲಿ ಕಮ್ಯೂನಿಸ್ಟ್ ಚೀನದ ಸದಸ್ಯತ್ವಕ್ಕೆ ಅದು ಬೆಂಬಲ ನೀಡಿತು. 1971ರಲ್ಲಿ ಕಮ್ಯೂನಿಸ್ಟ್ ಚೀನ ವಿಶ್ವಸಂಸ್ಥೆಯ ಭದ್ರತಾ ಸಭೆಯಲ್ಲಿ ಖಾಯಂ ಸ್ಥಾನ ಪಡೆಯಿತು.

1950–60ರಲ್ಲಿ ಕಮ್ಯೂನಿಸ್ಟ್ ಚೀನ–ಸೋವಿಯೆತ್ ಸಂಬಂಧಗಳೂ ಸೌಹಾರ್ದ ಪೂರ್ಣವಾಗಿದ್ದುವು. ಸೋವಿಯೆತ್ ದೇಶ ಚೀನಕ್ಕೆ ಎಲ್ಲ ರೀತಿಯ ಆರ್ಥಿಕ ನೆರವನ್ನೂ ನೀಡಿತು. ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಚೀನಕ್ಕೆ ಬೆಂಬಲ ತೋರಿಸಿತು. ಕ್ರಮೇಣ ಇವುಗಳ ನಡುವಣ ಬಾಂಧವ್ಯಗಳಲ್ಲಿ ವಿರಸವುಂಟಾಯಿತು. ಸೋವಿಯೆತ್ ನೀತಿಯನ್ನು ಚೀನ ವಿರೋಧಿಸಲು ಪ್ರಾರಂಭಿಸಿತು. ಏಷ್ಯ ಭೂಭಾಗದಲ್ಲಿ ತನ್ನ ಮಹತ್ತ್ವವನ್ನು ಸ್ಥಾಪಿಸುವುದು ಚೀನದ ಹವಣಿಕೆ. 1950–71ರ ಅವಧಿಯಲ್ಲಿ ಪರಸ್ಪರ ದ್ವೇಷ ಸಾಧಿಸುತ್ತಿದ್ದ ಚೀನ ಅಮೆರಿಕಗಳು ಪರಸ್ಪರ ಸ್ನೇಹಸಂಬಂಧ ಸ್ಥಾಪಿಸಿಕೊಂಡವು. ಅಮೆರಿಕದ ಅಧ್ಯಕ್ಷ ನಿಕ್ಸನರು ಪೀಕಿಂಗಿಗೆ ಭೇಟಿ ನೀಡಿದರು. ಇತ್ತೀಚೆಗೆ ಚೀನ ಪರಮಾಣು ಬಾಂಬ್ ಸ್ಫೋಟಿಸಿ ತಾನೂ ಪರಮಾಣು ಶಕ್ತಿರಾಷ್ಟ್ರಗಳ ಗುಂಪಿಗೆ ಸೇರಿತು.

ಕಮ್ಯೂನಿಸ್ಟ್ ಸರ್ಕಾರದ ನೇತೃತ್ವದಲ್ಲಿ ಆಂತರಿಕವಾಗಿ ಚೀನದಲ್ಲಿ ಮಹತ್ತರ ಬದಲಾವಣೆ ಗಳಾಗಿವೆ. ಮಾವೋ ತ್ಸೆ ಡುಂಗ್ ಚೀನದ ಮಹಾನಾಯಕ. ಅವನ ವಿಚಾರ ಧಾರೆಯಲ್ಲಿ ಚೀನಿಯರಿಗೆ ಅಪಾರ ವಿಶ್ವಾಸವಿದೆ. ಆರ್ಥಿಕ ಪ್ರಗತಿ ಸಾಕಷ್ಟಾಗಿದೆ. ಆರ್ಥಿಕ ಯೋಜನೆಗಳು ಕಾರ್ಯಗತವಾಗಿವೆ. ಮಾವೋ ಅಧಿಕಾರದ ವಿರುದ್ಧ ತಲೆಯೆತ್ತಿದ್ದ ವ್ಯಕ್ತಿಗಳನ್ನು, ಭಾವನೆ ಗಳನ್ನು ಹತ್ತಿಕ್ಕಲು 1966ರಲ್ಲಿ ಸಾಂಸ್ಕೃತಿಕ ಕ್ರಾಂತಿ ನಡೆಯಿತು. ಮಾವೋ ಪರವಾಗಿ ವಿದ್ಯಾರ್ಥಿಗಳು ರೆಡ್‌ಗಾರ್ಡ್‌ಗಳೆಂಬ ಸಂಘ ರೂಪಿಸಿಕೊಂಡು ಮಾವೋ ವಿರುದ್ಧವಾಗಿದ್ದ ವ್ಯಕ್ತಿಗಳನ್ನು ನಾಶಮಾಡಿದರು. ಎಲ್ಲ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಈಗ ಚೀನದಲ್ಲಿ ಬದಲಾವಣೆಗಳು ಸಂಭವಿಸಿವೆ. ಜಾಗತೀಕರಣದ ಹಿನ್ನಲೆಯಲ್ಲಿ ಚೀನದ ಸಮಾಜಿಕ ಬದುಕು ಬದಲಾವಣೆಗಳಿಗೆ ಒಡ್ಡಿಕೊಂಡಿದೆ. (ಜಿ.ಆರ್.ಆರ್.;ಎಂ.ವಿ.ಕೆ.)

**ಚೀನದ ಮಹಾಗೋಡೆ:** ಹಳದಿ ಸಮುದ್ರದಲ್ಲಿರುವ ಚೀಲೀ ಖಾರಿಯಿಂದ ಲೊಪ್‌ನುರ್ ವರೆಗೆ ಸು.6400 ಕಿಮೀ ದೂರ ಹಬ್ಬಿದ ಬೃಹತ್ ರಕ್ಷಣಾ ಗೋಡೆ. ಮಾನವ ಇದುವರೆಗೂ ಕೈಗೊಂಡಿರುವ ನಿರ್ಮಾಣ ಕಾರ್ಯಗಳಲ್ಲಿ ಅತ್ಯಂತ ದೊಡ್ಡದು. ಚೀನಿ ಚಕ್ರವರ್ತಿ ಚಿನ್ ಷಿ ಹ್ವಾಂಗ್ ಪ್ರಶ.ಪೂ.220–206ರ ಅವಧಿಯಲ್ಲಿ ಇದನ್ನು ನಿರ್ಮಿಸಿದ. ಇವನಿಗೂ ಹಿಂದೆಯೇ, ಕನಿಷ್ಠ 4ನೆಯ ಶತಮಾನದಿಂದಲೇ ಚೀನದ ದೊರೆಗಳು ರಕ್ಷಣೆಗಾಗಿ ಎಲ್ಲೆಗಳ ಬಳಿ ಗೋಡೆಗಳನ್ನು ನಿರ್ಮಿಸಿದ್ದರು. ಚಿನ್ ಇಂಥ ಹಲವಾರು ಗೋಡೆಗಳನ್ನು ಸೇರಿಸಿ ಮಹಾಗೋಡೆಯನ್ನು ನಿರ್ಮಿಸಿದ. ಉತ್ತರದ ಹೂಣರ ಆಕ್ರಮಣವನ್ನು ತಡೆಗಟ್ಟುವುದೇ ಇದರ ನಿರ್ಮಾಣದ ಉದ್ದೇಶ. ಮಣ್ಣು ಮತ್ತು ಕಲ್ಲುಗಳಿಂದ ಇದನ್ನು ನಿರ್ಮಿಸಲಾಗಿತ್ತು. ಇದರ ಪೂರ್ವಭಾಗಗಳು ಇಟ್ಟಿಗೆಯಿಂದ ನಿರ್ಮಿತವಾಗಿದ್ದುವು. ಅನಂತರದ ಶತಮಾನಗಳಲ್ಲಿ

ಇದನ್ನು ಆಗಿಂದಾಗ್ಗೆ ಬದಲಾಯಿಸಲಾಗುತ್ತಿತ್ತು. 15 ಮತ್ತು 16ನೆಯ ಶತಮಾನಗಳಲ್ಲಿ ಇದರ ಆವರಣವನ್ನು ಹಿಂದಿನದಕ್ಕಿಂತ ಕಿರಿದನ್ನಾಗಿಮಾಡಿ ಕಟ್ಟಲಾಯಿತು. ಸು.1200ಮೀ ಎತ್ತರದ ಗುಡ್ಡಗಳ ಮೇಲೂ ಆಳವಾದ ಕಮರಿಗಳಿಗೆ ಅಡ್ಡವಾಗಿಯೂ ಘಟಸರ್ಪದ ಹಾಗೆ ಬಳಸಿ ಸಾಗುವ ಈ ಗೋಡೆಯ ಎತ್ತರ ಸು.9ಮೀ. ಇದು ಕೆಳಗೆ ಸು.5ಮೀ ಮತ್ತು ಮೇಲೆ ಸು.8ಮೀ ಅಗಲವಾಗಿದೆ. ಸೈನಿಕರ ಸಾಲು ಅನಾಯಾಸವಾಗಿ ಇದರ ಮೇಲೆ ಸಾಗಲು ಸಾಧ್ಯವಾಗುವಂತೆ ರಸ್ತೆಯನ್ನೂ ಪ್ರತಿ ಸು.225ಮೀ ದೂರಕ್ಕೆ ಒಂದರಂತೆ 12ಮೀ ಎತ್ತರದ 25,000 ಕಾವಲು ಗೋಪುರಗಳನ್ನೂ ಇವಲ್ಲದೆ 15,000 ಗೋಪುರಗಳನ್ನೂ ಬಹಿರ್ಭಾಗದಲ್ಲಿ 2ಮೀ ಎತ್ತರದ ಕೋಟೆ ತೆನೆಗಳನ್ನೂ ನಿರ್ಮಿಸಲಾಗಿತ್ತು. ಗೋಡೆಯ ಹೊರಗಡೆ ಒಂದಾದ ಮೇಲೊಂದರಂತೆ ಮೂರು ಕಂದಕಗಳಿದ್ದುವು.



---------

ಗೋಡೆಯಲ್ಲಿ 30 ಕೋಟಿ ಸಲೆಗಜ ಕಲ್ಲು ಸೇರಿಸಲಾಗಿದೆಯೆಂದು ಹೇಳಲಾಗಿದೆ. ಬೇರಾವ ಕಾಲದ ಯಾವುದೇ ಕಟ್ಟಡಕ್ಕೂ ಇದಕ್ಕೆ ಬಳಸಿದಷ್ಟು ಸಾಮಗ್ರಿ ಬಳಸಿಲ್ಲ. ಸೈನ್ಯ ಸಾಗಾಣಿಕೆ, ಗಾಡಿಗಳ ಓಡಾಟ, ಕಾವಲು ಠಾಣ್ಯಗಳು, ಸೈನಿಕ ನೆಲೆ, ಅಪಾಯದ ವಿರುದ್ಧ ರಕ್ಷಣೆಗಾಗಿ ಕಂದಕಗಳು, ಉಪಗೋಡೆಗಳು, ಆಹಾರ ಮತ್ತು ಯುದ್ಧಸಾಮಗ್ರಿ ಕೋಠಿ ಮುಂತಾದ ಎಲ್ಲ ವ್ಯವಸ್ಥೆಗಳಿಂದಲೂ ಇದು ಕೂಡಿತ್ತು. (ಎಚ್.ಸಿ.ಕೆ.;ಜಿ.ಆರ್.ಆರ್.)

**ಚುಂಗ್ಲಿಯಿಮ್ತಿ:** ನಾಗಲೆಂಡ್ ರಾಜ್ಯದ ಟ್ಯೂನ್‌ಸಾಂಗ್ ಜಿಲ್ಲೆಯಲ್ಲಿರುವ ನವಶಿಲಾಯುಗ ಸಂಸ್ಕೃತಿಯ ಒಂದು ನೆಲೆ. ಇತ್ತೀಚೆಗೆ ಈ ನೆಲೆಯನ್ನು ನಾಗಲೆಂಡ್ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಮತ್ತು ಪುಣೆಯ ಡೆಕ್ಕನ್ ಕಾಲೇಜ್ ಪೋಸ್ಟ್ ಗ್ರಾಜುಯೇಟ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಹಯೋಗದೊಡನೆ ಶೋಧಿಸಿದೆ. ಈ ನಿವೇಶನದ ಕುತೂಹಲಕಾರಿ ಅಂಶವೆಂದರೆ ನೆಲೆಯ ಸಮೀಪ ಲೋಂಗ್‌ಟ್ರೋರ್‌ನಲ್ಲಿಯ ನೆಲ ಮತ್ತು ನೈಸರ್ಗಿಕ ದೊರಗು ಕೆಂಪು ಮರಳುಕಲ್ಲಿನ ಮೇಲೆ ಮೂಡಿರುವ ಆಳ ಗೀರುಗಳು. ಇವು ಮಾನವ ಪಾದಗಳು ಮತ್ತು ಕಂಬಗಳಿದ್ದ ಗುಳಿಯ ಗುರುತುಗಳೆಂದು ಭಾವಿಸಲಾಗಿದೆ. ಈ ನೆಲೆಯ ಹತ್ತಿರವೇ ಮಹಡಿ ಮೆಟ್ಟಿಲುಗಳೂ ಕಂಡುಬಂದಿವೆ. ಅಲ್ಪಸ್ವಲ್ಪ ಸವೆದು ಹೋದ ಕಲ್ಲಿನ ವಸ್ತುಗಳು, ಅರೆಯುವ ಕಲ್ಲು, ಮಣ್ಪಾತ್ರೆ ಚೂರುಗಳು ಕೂಡ ದೊರೆತಿವೆ. (ಎ.ಎಸ್.)

**ಚೆಂಗಾಳ್ವ ಮನೆತನ:** ಸು.10 ರಿಂದ 17ನೆಯ ಶತಮಾನದವರೆಗೆ ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ ತಾಲ್ಲೂಕುಗಳ ಪ್ರದೇಶದಲ್ಲಿ ಆಡಳಿತ ನಡೆಸಿದ ಸಾಮಂತ ಮನೆತನ. ಚೆಂಗಾಳ್ವರು ಹಾಗೂ ಕೊಂಗಾಳ್ವರು ಒಂದೇ ಮೂಲದವರಾಗಿದ್ದು 13ನೆಯ ಶತಮಾನದಲ್ಲಿ ಚೆಂಗಾಳ್ವರು ಕೊಂಗಾಳ್ವರ ರಾಜ್ಯವನ್ನು ವಶಪಡಿಸಿಕೊಂಡಂತೆ ಕಾಣುತ್ತದೆ. ಚೆಂಗಾಳ್ವರನ್ನು ಹೊಯ್ಸಳರು ಮಲೆಪರೆಂದು ಇವರು ಬೆಟ್ಟಗುಡ್ಡಗಳ ಪ್ರದೇಶವನ್ನು ಆಳುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಇವರ ಮೂಲ ನೆಲೆ ಹುಣಸೂರು ಹಾಗೂ ಅದರ ಸುತ್ತಮುತ್ತಲ ಪ್ರದೇಶ. ಇದನ್ನು ಚಂಗನಾಡು ಎಂದು ಕರೆಯಲಾಗುತ್ತಿತ್ತು. ಇವರ ರಾಜ್ಯದ ಗಡಿ ಉತ್ತರ ದಕ್ಷಿಣಕ್ಕೆ ಹೇಮಾವತಿ ನದಿಯಿಂದ ಕಾವೇರಿಯವರೆಗೆ, ಪೂರ್ವ-ಪಶ್ಚಿಮಕ್ಕೆ ಕಾವೇರಿಯಿಂದ ಕೊಡಗಿನವರೆಗೆ ವ್ಯಾಪಿಸಿತ್ತು. ಇವರು 10ನೆಯ ಶತಮಾನದಲ್ಲಿ ಗಂಗರ ಮಾಂಡಲಿಕರಾಗಿ ಅನಂತರ ಚೋಳ, ಹೊಯ್ಸಳ, ಹಾಗೂ ವಿಜಯನಗರದ ಅರಸರ ಸಾಮಂತರಾಗಿದ್ದರು. ಹಾಲೇರಿ ವಂಶದ ಸಂಬಂಧ ಹಾಗೂ ಕೊಡಗಿನ ರಾಜರ ಸಂಬಂಧಗಳ ದೃಷ್ಟಿಯಿಂದ ಇವರ ಕೊಡಗಿನಾಳಿಕೆ ಮಹತ್ವದ್ದೆನಿ ಸುತ್ತದೆ. ಹಾನಗಲ್ಲುಕದಂಬ ವಂಶಿಕರ ಕೊಡಗಿನಾಳಿಕೆ (ಕೊಡಗಿನ ಕದಂಬರು) ಕೊಡಗಿನ ಉತ್ತರ ಭಾಗದಷ್ಟಕ್ಕೆ ಸೀಮಿತವಾಗಿತ್ತು. 12ನೆಯ ಶತಮಾನದ ಕೊಂಗಾಳ್ವರಿಗೂ ಇವರು ಸಮಕಾಲೀನರು.

16ನೆಯ ಶತಮಾನದ ಹಾಲೇರಿ ವಂಶದ ಮೊದಲ ಅರಸ ವೀರ ಒಡೆಯ, ಚೆಂಗಾಳ್ವ ಸಂತತಿಗೆ ಸೇರಿರಬಹುದು ಎಂದು ರೈಸರು ಊಹಿಸಿದ್ದಾರೆ. ಕೊಡವ ಭಾಷಾ ಕೃತಿಗಳಾದ ಪೊಮ್ಮಾಲೆ ಕೊಡಗ್ ಹಾಗೂ ಪಟ್ಟೋಲೆ ಪಳಮೆ ಇವು ಕೂಡ ವೀರ ಒಡೆಯ ಚೆಂಗಾಳ್ವ ವಂಶಕ್ಕೆ ಸೇರಿದವನೆಂದು ಊಹಿಸಿವೆ. ಇದು ಚೆಂಗಾಳ್ವ ಹಾಗೂ ಹಾಲೇರಿ ಅರಸರ ಕೊಡಗಿ ನಾಳಿಕೆ ದೃಷ್ಟಿಯಿಂದ ಗಮನಾರ್ಹವಾಗುತ್ತದೆ. ಅದಾಗಿ ಚೆಂಗಾಳ್ವರ ಮಹತ್ವವೂ ಗಮನಾರ್ಹ ವಾಗುತ್ತದೆ. ಇವರ ಆಳಿಕೆಯನ್ನು ಮೂರು ಹಂತಗಳಲ್ಲಿ ಪರಿಗಣಿಸಬೇಕಾಗುತ್ತದೆ.

10ನೆಯ ಶತಮಾನದಿಂದ 1300ರವರೆಗಿನ ಚೆಂಗಾಳ್ವರನ್ನು ಮೊದಲ ಚೆಂಗಾಳ್ವರು, 1500-1644ರ ವರೆಗಿನವರನ್ನು ಅನಂತರದ ಚೆಂಗಾಳ್ವರು ಎಂದು ಈ ವರೆಗೆ ಎರಡು ಹಂತದಲ್ಲಿ ಮಾತ್ರ ಪರಿಗಣಿಸಲಾಗುತ್ತಿತ್ತು. ಆದರೆ 1300-1500 ವರೆಗಿನ ಅವಧಿಯಲ್ಲಿ ಕೊಡಗಿನ ದಕ್ಷಿಣಭಾಗದ ನಾಗರಹೊಳೆಯ ಸುತ್ತಮುತ್ತ ಮತ್ತು ನಂಜರಾಜಪಟ್ಟಣ ಪ್ರದೇಶದ ಹೊಳಸಾಲು ಹಳ್ಳಿಗಳಲ್ಲಿ ಚೆಂಗಾಳ್ವ ಶಾಖೆಯವರಿದ್ದರು. ಶಾಸನ ಹಾಗೂ ಸಾಹಿತ್ಯ ಸಾಕ್ಷಿ ಅಂತಾಗಿ ಈ ಅವಧಿಯ ಚೆಂಗಾಳ್ವರನ್ನು ಪೂರ್ವ (ಮೊದಲ) ಚೆಂಗಾಳ್ವ ವಂಶಿ ಮಧ್ಯ ಚೆಂಗಾಳ್ವರೆಂದು ಕರೆಯಬೇಕಾಗುತ್ತದೆ. ಈ ಅವಧಿಯ ಕೊಡಗು ಚೆಂಗಾಳ್ವರ, ಕೆಳದಿ ಅರಸರ ರಾಜವಂಶಿಕ ಸಂಬಂಧಗಳು ರೂಪುಗೊಳ್ಳಲು ಹಾಗೂ ಕೊಡಗಿನ ಹಾಲೇರಿ ವಂಶದ ಸಂಶೋಧನೆಗಳಿಗೆ ಸಗ್ಗಾವತ್ತರಿನ (ವಂಶಭೂತರು) ಬಾಂಧವ್ಯಗಳು ಕೊಂಡಿಯಾಗಲು ಅನುವಾಗಿತ್ತು. ಅದೊಂದು ರೀತಿ ತ್ರಯ ಸಂಗಮ ಸಾವಯವ ವಂಶವಾಹಿ ಬಾಂಧವ್ಯವಾಗಿತ್ತು.

ಚೆಂಗಾಳ್ವರು ಮೂಲತಃ ಜೈನರು. ಚೋಳರ ಮಾಂಡಲೀಕರಾದ (ಸು. 1004) ಮೇಲೆ ಕಾಲಾಂತರದಲ್ಲಿ ಶೈವರಾಗಿ ತೆರೆದುಕೊಂಡರು. ಇವರು ಗಂಗರ ಕಾಲದಿಂದಲೂ ಕೊಡಗಿನ ಭಾಗಗಳನ್ನು ಆಳಿಕೊಂಡು ಬಂದವರೆ. 972ರ ಹಾಸನ ಜಿಲ್ಲೆ ತೊಳಲು ಶಾಸನದಲ್ಲಿ ಶ್ರೀಮತ್ ಚೆಂಗನಾಡ ಗೋವಂ ಹೊಳ್ಳ ಮಾಹೆಯ ಸೊಸೆವೂಹ ಆಳುತ್ತಿದೆ. ಎಂದಿರುವಲ್ಲಿ ಚೆಂಗಾಳ್ವ ಹೊಯ್ಸಳ ರಕ್ತ ಸಂಬಂಧ ಸೂಚಿ ಎಂಬ ಅಭಿಪ್ರಾಯವೂ ಇದೆ. ಗೋವ ಎಂದರೆ ರಕ್ಷಕ ಎಂದರ್ಥವಿದೆ. ಕೊಡಗಿನ ಜನಪರಂಪರೆಯಲ್ಲಿ ಚೆಂಗ ಎಂದರೆ ಸಹಾಯಕ ಎಂದು ಅರ್ಥ. ಹೊಯ್ಸಳ ವಂಶದ ಆರಂಭವನ್ನು 950ರಿಂದಲೇ (ಮುಣ್ಣಪೊಯ್ಸಳ) ಗುರುತಿಸಲಾಗಿದೆ. ತೊಳಲು ಶಾಸನದಿಂದ ಚೆಂಗಾಳ್ವರ ಮೇಲಿನ ಹೊಯ್ಸಳರ ವಿಜಯ ಅವರನ್ನು ಮಂಡಲೀಕರಾಗಿಸಿ ಅಭಿರಾಜರಾಗಿ ರಕ್ಷಣೆ ನೆಪದಲ್ಲಿ ಹೊಂದಿದ್ದ ಬಿರುದಿನ ಸಂಕೇತವಾಗಿ ಚೆಂಗನಾಡ ಗೋವಂ ಶಬ್ದವನ್ನೂ ಪರಿಗಣಿಸಲೂ ಬರುತ್ತದೆ. ಆದರೆ ರಕ್ಷಣೆ ಗರಿಗಟ್ಟದೆ ದಕ್ಷಿಣ ಕೊಡಗಿನ ಭಾಗಗಳತ್ತವೂ ಚೆಂಗಾಳ್ವರು ಚದುರಿ ಗಂಗರ ಮಾಂಡಲೀಕರಾದಂತಿದೆ. ಬೇಲೂರು, ಹುಣಸೂರು, ಪಿರಿಯಾಪಟ್ಟಣ ಇತ್ಯಾದಿ ಕಡೆ ಚೆಂಗಾಳ್ವರ ಶಾಖೆಗಳಿದ್ದವು. ಚೆಂಗಾಳ್ವರು ಚಂದ್ರವಂಶದವರು, ಯಾದವರು ಎಂದು ಹೇಳಿಕೊಳ್ಳುತ್ತಿದ್ದರು. ಮೂಲ ಪುರುಷನ ಹೆಸರು ಚೆಂಗಾಳ್ವನೆಂದಿದ್ದುದರಿಂದ ಚೆಂಗಾಳ್ವರೆಂಬ ಹೆಸರು ಬಂದಿತು. ಇವರ ರಾಜಧಾನಿ ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಹನಸೋಗೆ. ನನ್ನಿಚಂಗಾಳ್ವ ಎಂಬ ಹೆಸರು ಚೆಂಗಾಳ್ವರ ಪೈಕಿ ಮೊದಲಿಗೆ ನಿಶ್ಚಿತವಾಗಿ ಕಂಡುಬರುವ ಹೆಸರಾಗಿದೆ. ಇವನು ರಾಜೇಂದ್ರ ಚೋಳ ಎಂಬ ಉಪಾಧಿಯನ್ನೂ ಸೇರಿಸಿಕೊಂಡ ಹೆಸರಿನವನಾಗಿದ್ದ ಎಂಬುದೂ ತಿಳಿದುಬರುತ್ತದೆ. ಚೆಂಗಾಳ್ವರ ಮೂಲಪುರುಷ ದ್ವಾರಾವತಿಯಲ್ಲಿದ್ದು ಬಿಜ್ಜಳನನ್ನು (!) ಸೋಲಿಸಿ ಆತನ ಬಿರುದನ್ನು ಕಿತ್ತುಕೊಂಡನೆನ್ನಲಾಗಿದೆ. 10ನೆಯ ಶತಮಾನದಲ್ಲಿ ವಿಕ್ರಮರಾಯ ಚೆಂಗಾಳ್ವನು ದ್ವಾರಕೆಯಿಂದ ಬಂದು ಬೆಟ್ಟದ ತುಂಗದಲ್ಲಿ ನೆಲೆಸಿ ಬೆಟ್ಟದಪುರದ ಕೋಟೆ ಕಟ್ಟಿ ಆಳಿದ. ಇವನ ಮಗ ಚಂಗಲರಾಯ ಅದನ್ನು ಸಾಂಸ್ಕೃತಿಕ ಮಹತ್ವದ ಕ್ಷೇತ್ರವನ್ನಾಗಿ ಮಾಡಿ ಆಡಳಿತ ನಡೆಸಿದ. ಚಂಗಾಳ್ವರು 7ನೆಯ ಶತಮಾನದಲ್ಲಿ ಚಾಳುಕ್ಯರ ಅಧೀನರಾಗಿದ್ದು ಆಳುಪರ ಶಾಖೆಯವರಿರಬಹುದು ಎಂಬ ಊಹೆಯೂ ಇದೆ. ಗಂಗರ ಶ್ರೀ ಪುರುಷ ಮಹಾರಾಜದತ್ತಿಯ ವಿಷಯ ಕೊಡಗಿನ 9ನೆಯ ಶತಮಾನದ ಶಾಸನದಲ್ಲಿ ಬರುವ ಕಾರಣ, ಚೆಂಗಾಳ್ವರ ಅಸ್ತಿತ್ವ ಪರಂಪರೆ ಕೊಡಗಿನಲ್ಲಿಯೇ ವಿಶೇಷವಾಗಿ ಕಾಣಬರುವುದರಿಂದ ಶ್ರೀಪುರುಷನ ಕಾಲದಲ್ಲಿಯೇ ಗಂಗರ ಮಾಂಡಲೀಕರಾಗಿ ಮೊದಲ ಚೆಂಗಾಳ್ವರ ಶಾಖೆಯೊಂದು ಇದ್ದಿರುವ ಸೂಚನೆ ಕಾಣುತ್ತದೆ. ಆಗ ಇವರನ್ನು ಚೆಂಗಾಳ್ವರೆಂದು ಕರೆಯುತ್ತಿದ್ದರು.

1001ರ ಹನಸೋಗೆ ಯುದ್ಧದಲ್ಲಿ ಗಂಗರು ಚೋಳರಿಗೆ ಸೋತ ಮೇಲೆ ಚೋಳರ ಮಾಂಡಲಿಕರಾಗಿ ಜೈನಧರ್ಮದ ಚೆಂಗಾಳ್ವರು ಶೈವರಾಗಿ ತೆರೆದುಕೊಂಡರು. 1034ರ ನನ್ನಿ ಚೆಂಗಾಳ್ವ, 1091 ಕಿರುಗೂರು ಶಾಸನದ ಚೆಂಗಾಳ್ವ ದೇವ, 1097ರ ಪಿರಿಯಾಪಟ್ಟಣದ ಶಾಸನೋಕ್ತ ಕುಲೋತ್ತುಂಗ ಚೋಳ ಉದಯಾದಿತ್ಯ, 1090ರ ಮಾದೇವ ಚೆಂಗಾಳ್ವ ಮೊದಲಾದವರ ಹೆಸರುಗಳೂ ಈ ಮಾತಿಗೆ ಪೋಷಕವೆನ್ನುವಂತಿವೆ. ಪ್ರಬಲ ಜೈನಕೇಂದ್ರವಾಗಿ ಕೊಂಗಾಳ್ವರ ಆಳಿಕೆಯಲ್ಲಿದ್ದ ಸಾಲಿಗ್ರಾಮ ನಗರವನ್ನು 1079ರಲ್ಲಿ ಚೆಂಗಾಳ್ವರು ದಾಳಿ ಮಾಡಿ ವಶಪಡಿಸಿಕೊಂಡಿದ್ದರೆಂಬುದು ಸಾಲಿಗ್ರಾಮದ 66ನೆಯ ಶಾಸನದಿಂದ ತಿಳಿಯುತ್ತದೆ. ಆ ಹೊತ್ತಿಗೆ ಶೈವರಾಗಿದ್ದರೆನ್ನಬಹುದು. ಮುಂದಿನ ಶಾಸನಗಳಲ್ಲಿ ಬರುವ ಮಾದೆಯರಸ, ಮಾದೇವ, ಅನ್ನದಾನಿ ಚೆಂಗಾಳ್ವ, ಪೆಮ್ಮವೀರಪ್ಪ, ಸೋಮದೇವ, ಬೊಪ್ಪದೇವ, ಮಲ್ಲಿದೇವ, ಹರಿಹರದೇವ ಮೊದಲಾದ ಚೆಂಗಾಳ್ವ ದೊರೆಗಳ ಹೆಸರು 1300ರ ವರೆಗೂ ಕಾಣಬರುವಲ್ಲಿ ಮೊದಲ ಚೆಂಗಾಳ್ವರು ಅನುಸರಿಸಿದ ಸಾಂಸ್ಕೃತಿಕ ನೆಲೆಯ ಸೂಚಿಯಾಗಿ ಅವು ಇವೆ ಎನ್ನಬೇಕು. ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನದೇವರನ್ನು ತಮ್ಮ ಕುಲದೇವರನ್ನಾಗಿ ಮೊದಲ ಚೆಂಗಾಳ್ವರ ಕಾಲದಲ್ಲಿ ಮಾಡಿಕೊಳ್ಳಲಾಯಿತು. 1116ರ ವೇಳೆಗೆ ಚೋಳರು ಹೊಯ್ಸಳರಿಗೆ ಸೋತರೂ ಮಾಂಡಲಿಕರಾಗಿದ್ದ ಕೊಡಗು ಭಾಗದ ಚೆಂಗಾಳ್ವರು ಹೊಯ್ಸಳರಿಗೆ ಶರಣಾಗಲಿಲ್ಲ. 1145ರ ವೇಳೆಗೆ ಹೊಯ್ಸಳ 1ನೆಯ ನರಸಿಂಹನು ಶಿವಮೊಗ್ಗ ಜಿಲ್ಲೆಯ

ಯುದ್ಧವೊಂದರಲ್ಲಿ ಚೆಂಗಾಳನನ್ನು ಕೊಂದು, ಅವನ ರಾಜ್ಯವನ್ನು ವಶಪಡಿಸಿಕೊಂಡ. ಆಗ ಚೆಂಗಾಳ್ವ ವಂಶಿಕರು ಕೊಡಗಿನ ಮೇಲೆ ದಕ್ಷಿಣ ಭಾಗಗಳಿಗೆ ಆಶ್ರಯಕ್ಕಾಗಿ ಸಾಗಿದರೆಂದು ರೈಸ್‌ರ ಅಭಿಪ್ರಾಯ. 1170ರ ಚಿಕ್ಕನಾಯಕನ ಹಳ್ಳಿ (34) ಹೆಗ್ಗೆರೆ ಶಾಸನದಲ್ಲಿ ಮಲೆರಾಜ ಚೆಂಗಾಳುವನೇರಿದ ಮಾತಂಗದ ಮೊಗದೊಡಿ ನಲಿ ನಂಗರಗುಣ ಗೋವಿಯಿಜೆದ ಎಂದಿದೆ. ಅಂದರೆ ಗೋವಿದೇವ ಮಲೆರಾಜನೆನಿಸಿದ ಕೊಡಗಿನ ಚೆಂಗಾಳ್ವ ರಾಜವಂಶಿಕನೊಬ್ಬನನ್ನೋ ಅಥವಾ ಶಿವಮೊಗ್ಗ ಜಿಲ್ಲೆಯಲ್ಲಿ ಮಲೆಸೀಮೆ ಕೊಡಗಿನಿಂದ ಹೋಗಿ ಇಕ್ಕೇರಿ–ಕೆಳದಿ ಪ್ರದೇಶದಲ್ಲಿದ್ದ ಚೆಂಗಾಳ್ವ ಶಾಖೆಯ ನಾಯಕನನ್ನೋ ಹೆಗ್ಗೆರೆಯ ಶಾಸನದಲ್ಲಿ ಪ್ರಸ್ತಾಪಿಸಿದಂತಿದೆ. ಇದರಿಂದ ಚೆಂಗಾಳ್ವ ಶಾಖೆಗಳು, ಹಾಸನ, ಶಿವಮೊಗ್ಗ, ಚಿಕ್ಕನಾಯಕನಹಳ್ಳಿ ಪ್ರದೇಶಗಳಲ್ಲಿ ಹೋಗಿದ್ದರೂ ಅವರ ಮೂಲ ನೆಲೆ ಕೊಡಗಿನ ಪ್ರದೇಶವೆ ಆಗಿತ್ತು ಎಂಬುದು ದಕ್ಷಿಣ ಕೊಡಗಿಗೆ ಆಶ್ರಯಕ್ಕಾಗಿ ಬಂದ ಸಂಗತಿಯಿಂದ ತಿಳಿಯುತ್ತದೆ. ಇಂಥ ವಲಸೆ ಕೊಡಗು ಮತ್ತು ಶಿವಮೊಗ್ಗದ ನಡುವೆ ಮುಂದೆಯೂ ನಡೆದದ್ದು ವಿಶೇಷ.

ನೀರಗುಂದದ ಮಹಾಸಾಮಂತ ಬೆಟ್ಟನ ಸಾಮಂತ ಮಲ್ಲನು ಚೆಂಗಾಳ್ವ ಅರಸನಿದ್ದ ಆನೆಯನ್ನಿರಿದು ಕೊಂದ ಸಂಗತಿಯನ್ನು ಕಡೂರಿನ 1203ರ ಶಾಸನ ತಿಳಿಸುತ್ತದೆ. ಇವೆಲ್ಲ ಚೆಂಗಾಳ್ವರ ಶಾಖೆಗಳು ಚಿಕ್ಕಮಗಳೂರು, ಅರಕಲಗೂಡು ಸೊರಬದವರೆಗೆ ಹರಡಿದ್ದ ಸೂಚನೆಗಳನ್ನು ತೋರುತ್ತವೆ. ಕೊಡಗಿನಲ್ಲಿ 978ರ ಪೆಗ್ಗೂರು ಶಾಸನೋಕ್ತ ಮಲೆಪರು ಯುದ್ಧ, ವಲಸೆ ಇತ್ಯಾದಿ ಕಾರಣಗಳಿಂದ ಹೋದವರು ಉತ್ತರ ಮಲೆಸೀಮೆಗಳಾದ ಸೊರಬ, ಇಕ್ಕೇರಿ, ಚಿಕ್ಕಮಗಳೂರು, ಚಿಕ್ಕನಾಯಕನ ಹಳ್ಳಿ ಮುಂತಾದ ಕಡೆ ಮಲೆರಾಜ, ಮಲವರು, ಮಲ್ಲವರು ಎಂದು ಕರೆಸಿಕೊಂಡವರು ಚೆಂಗಾಳ್ವರ ಮೂಲದವರೆಂದು ತೋರುತ್ತದೆ.

ಚರಿತ್ರೆಯ ಪ್ರಕಾರ 10ನೆಯ ಶತಮಾನದ ನನ್ನಿಚೆಂಗಾಳ್ವ ಎಂಬ ಹೆಸರು ಚೋಳರಿಗೆ ಮಾಂಡಲಿಕನಾಗಿ ಕಂಡುಬರುವ ಮೊದಲ ಹೆಸರು. 1034ರ ಶಾಸನೋಕ್ತ ನನ್ನಿ ಚೆಂಗಾಳ್ವ ರಾಜೇಂದ್ರ ಚೋಳ ಎಂಬುದನ್ನು ಗಮನಿಸಿದರೆ, ನನ್ನಿ ಚೆಂಗಾಳ್ವ ಅಭಿರಾಜರ ಹೆಸರನ್ನು ತನ್ನ ಹೆಸರಿಗೆ ಲಗತ್ತಿಸಿಕೊಂಡಂತೆ ತೋರುತ್ತದೆ. ಬಹುಶಃ ಇವನ ಪುತ್ರನಾದ ನಂದಿದೇವ ಚೆಂಗಾಳ್ವನು ಬೆಟ್ಟದಪುರದಿಂದ ಕೊಡಗಿನ ಪಾಲ್ಪರೆಗೆ 1034ರ ಸುಮಾರಿಗೆ ಬಂದು ಅಲ್ಲಿ ಪೆದ್ದೊರೆ ಗರೆ ರಾಜ್ಯ (ಲಕ್ಷ್ಮಣ ತೀರ್ಥದ ಸುತ್ತಮುತ್ತಲ ಪ್ರದೇಶ)ವನ್ನು ಕೊಡಗಿನಲ್ಲಿ ಸ್ಥಾಪಿಸಿದ. ಪಾಲ್ಪರೆಯಲ್ಲಿನ ಪೆದ್ದೊರೆಗರೆ ರಾಜ್ಯದಲ್ಲಿ ಆಳಿಕೆಯನ್ನು ಚೆಂಗಾಳ್ವರು ಮುಂದುವರಿಸುವುದರ ಜೊತೆಗೆ 1171ರ ಮುನ್ನ ಯಾವುದೋ ಅವಧಿಯಲ್ಲಿ ಹೊಯ್ಸಳ ದಂಡನಾಯಕ ಬೆಟ್ಟರಸನೊಡನೆ ನಡೆದ ಪಾಲ್ಪರೆಯುದ್ಧದಲ್ಲಿ ಚೆಂಗಾಳ್ವ ಮಹಾದೇವ ತೀರಿಕೊಂಡ. ಅನಂತರ 1171–75ರ ಅವಧಿಯಲ್ಲಿ ಹೊಯ್ಸಳ ಅಧೀನರಾಗಿ, ಪಾಲ್ಪರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಈಗಾಗಲೇ ಹೇಳಿದಂತೆ ಹೊಯ್ಸಳ ನರಸಿಂಹನಿಂದ ಶಿವಮೊಗ್ಗ ಯುದ್ಧದಲ್ಲಿ ಸೋತ ಚೆಂಗಾಳ್ವರು ಕೊಡಗಿನ ತೀರ ದಕ್ಷಿಣಕ್ಕೆ ಅಂದರೆ ದಕ್ಷಿಣ ಕೊಡಗಿನ ಕೆಳ ತುದಿ ಪ್ರದೇಶಗಳಾದ ಕುಂತೂರು (ನಾಗರಹೊಳೆ), ಕುರುಚಿ, ಬಾಡಗಕ್ಕೆ ಆಶ್ರಯಕ್ಕಾಗಿ ಬಂದರು. ಅವರ ವಂಶಿಕರಾಗಿ ಬಾಡಗದ ನಂದಿದೇವ ಕುರುಚಿರ್ಯ ಉದಯಾದಿತ್ಯದೇವರು 1174 ರಲ್ಲಿ ಹೊಯ್ಸಳರ ದಂಡನಾಯಕ ಬೆಟ್ಟರಸನ ವಿರುದ್ಧ ಪಾಲ್ಪರೆಯುದ್ಧಕ್ಕೆ ಚೆಂಗಾಳ್ವ ಪೆಮ್ಮ ವೀರಪ್ಪನ ನೆರವಿಗೆ ವಂಶ ಬಾಂಧವ್ಯದ ಕಾರಣ ಬಂದರು. ಆದರೆ ಯುದ್ಧದಲ್ಲಿ ಸೋತು ಮಾಂಡಲಿಕರಾಗಿಯೇ ಚೆಂಗಾಳ್ವರು ಉಳಿದರು ಎಂಬುದು ಸ್ಪಷ್ಟವಿಲ್ಲ. ಕೊಡಗಿನ 978ರ ಪೆಗ್ಗೂರು ಶಾಸನದಲ್ಲಿ ಪಾವನ್ನಾಲ್ಪಮ್ಮಲೆಪರು ಎಂದಿರುವಲ್ಲಿ ರಕ್ಕಸಗಂಗನ ಕಾಲದಲ್ಲಿ ಅವರು ಚೆಂಗಾಳ್ವರೆಂಬ ಸಾಮಂತ ಮಲೆನಾಯಕರಾಗಿದ್ದ ಸೂಚನೆ ದೊರೆಯುತ್ತದೆ. ದಕ್ಷಿಣ ಕೊಡಗಿನಲ್ಲಿ ಅವರ ಅಸ್ತಿತ್ವವನ್ನು ಸೂಚಿಸುತ್ತದೆ. ಆ ಹೊತ್ತಿಗೆ ಚಂಗನಾಡು ಎಂಬ ಹೆಸರು ಅಸ್ತಿತ್ವದಲ್ಲಿದ್ದು (972ರ ಬೇಲೂರು 540ನೆಯ ಶತಮಾನದ ವಿಕ್ರಮರಾಯನ ಮಗ ಚೆಂಗಲರಾಯನಿಂದಲೂ ಈ ಹೆಸರು ಚಾಲ್ತಿಗೆ ಬಂದಿರಲೂಬಹುದು. ಕೊಡವರಲ್ಲಿ ಚಂಗ ಅಥವಾ ಚೆಂಗ ಎಂದರೆ ಸುಂದರ ಸಹಾಯಕ ಎಂಬ ಅರ್ಥವೂ ಇದೆ. ಈ ದೃಷ್ಟಿಯಿಂದ ಗಂಗರ ಮಲೆ ಮಾಂಡಲಿಕರಾಗಿ ಅರ್ಥಾತ್ ಬೆಟ್ಟದರಸುಗಳಾಗಿ ಇದ್ದರೆನ್ನಬೇಕು. ಇವರು ಮೂಲತಃ ಒಕ್ಕಲಿಗರು ಎಂಬ ಊಹೆಯೂ ಜನಪದ ಕಾವ್ಯದ ಪ್ರಸ್ತಾವನೆಯೊಂದರಲ್ಲಿ ಕಾಣಬರುತ್ತದೆ. 1033ರ ಹಂಪಾಪುರ ಶಾಸನದಲ್ಲಿ ಚೆಂಗಾಳ್ವನ ಹಾಗೂ 1034ರ ಕುರುಬಳ್ಳಿ ಶಾಸನದಲ್ಲಿ (ಕೃನ. 85) ಶ್ರೀ ರಾಜೇಂದ್ರ ಚೋಳ ದೇವರಾಜ್ಯದಿಂ ಚಂಗಾಳ್ವನಾಯ್ಕ ಪೋಗೆ ಚಂಗಳ್ವಗಂ –ಎಂಬ ನಾಮೋಕ್ತಗಳಿರುವಲ್ಲಿ ನನ್ನಿ ಚೆಂಗಾಳ್ವಗೆ ಅನ್ವಯವೇ! ಅಥವಾ ಅವನ ಅನಂತರದ ಚೆಂಗಾಳ್ವನಾಯಕ ಎಂಬ ಇನ್ನೊಬ್ಬ ಚೆಂಗಾಳ್ವ ವಂಶಿಕನಿಗೆ ಅನ್ವಯವೇ ಎಂಬುದು ಸ್ಪಷ್ಟವಾಗದು. ಆದರೂ ಚೆಂಗಾಳ್ವರ ಅಸ್ತಿತ್ವ ವಿವಿಧ ಶತಮಾನಗಳಲ್ಲಿ ಇದ್ದುದರ ದಾಖಲೆಯಾಗಿ ಈ ಶಾಸನಗಳು ಕಂಡುಬರುತ್ತವೆ.

ಶಾಸನವೂ ದಾಖಲಿಸಿರುವಂತೆ 1203ರ ವೇಳೆಗೆ ಕೊಡಗಿನ ಚೆಂಗಾಳ್ವರು ಪೂರ್ಣವಾಗಿ ಹೊಯ್ಸಳರ ಅಧೀನರಾದರು. ನಾಗರಹೊಳೆ–ಕುಂತೂರು ಪ್ರದೇಶದಿಂದ ಕುರ್ಚಿ, ಬಾಡಗ ಸೇರಿದಂತೆ ಪಾಲ್ವರೆಯನ್ನು ರಾಜಧಾನಿ ಮಾಡಿಕೊಂಡು 1245ರ ವರೆಗೂ ಆಳುತ್ತಿದ್ದರು. 1252ರಲ್ಲಿ ರಾಮನಾಥಪುರದ ಬಳಿ ಮೈಲಾತಪುರದಲ್ಲಿ ಹೊಯ್ಸಳ ಸೋಮೇಶ್ವರನನ್ನು ಚೆಂಗಾಳ್ವ ರಾಜಕುಮಾರರಾದ ಬೊಪ್ಪದೇವ, ಸೋಮದೇವ ಅವರು ಎದುರ್ಗೊಂಡರು. ಆಗ ಹೊಯ್ಸಳ ಚಕ್ರವರ್ತಿಯ ಆದೇಶದಂತೆ ನಂಜರಾಜಪಟ್ಟಣ ಪ್ರದೇಶದ ಕೊಡಗು ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಆಳಿದರು (ಅರಕಲಗೂಡು 53). ಸು.1280ರ ವರೆಗೆ ತಮ್ಮ ವಂಶಿಕರಾದ ಮಲ್ಲದೇವರಸ, ಹರಿಹರ ದೇವರಸರು ಆಳಿಕೆಗೆ ಬರುವವರೆಗೆ ಈ ಸೋದರರು ಆಳಿದರೆನ್ನಬೇಕು. ಮಲ್ಲದೇವರಸನ ಹೆಸರು 1296ರ ಮುಳ್ಳೂರು ಶಾಸನದಲ್ಲಿ ಕಾಣಬರದೆ ಹರಿಹರದೇವ ಚೋಳದೇವರ ಹೆಸರು ಮಾತ್ರ ಕಾಣಬರುವಲ್ಲಿ ಆ ಮುಂಚೆ ಅವನು ತೀರಿರುವಂತಿದೆ. ಆದರೆ ಗೋಣಿಮರೂರು ಶಾಸನದಲ್ಲಿ ಆ ಉಭಯ ಅರಸರು ಹಾಗೂ ಚೌಡ್ಲು, ಮುಳ್ಳೂರು ಶಾಸನಗಳಲ್ಲಿ ಹರಿಹರದೇವನ ಹೆಸರು ಕಾಣಬರುವಲ್ಲಿ, ಕೊಡಗು ಶ್ರೀರಂಗಪಟ್ಟಣ ರಾಜಧಾನಿಯಾಗಿ (ಸು.25–30 ಮೈಲಿ ಫಾಸಲೆ ಪ್ರದೇಶ) ಆ ಪ್ರದೇಶಗಳೂ ಅವರ ಆಳಿಕೆಯ ಭಾಗಗ ಳಾಗಿದ್ದವೆನ್ನಬೇಕು ಹಾಗೂ ಪಡಿವಾರ ಬಾನಮ್ಮರಾಜು ಎಂಬುವನು ಇವರ ಕಾಲದಲ್ಲಿ ಮಹಾಪ್ರಧಾನನಾಗಿದ್ದ ಎಂಬ ಸೂಚನೆ ಗಣಗೂರು ಮತ್ತು ಚೌಡ್ಲು (13ನೇ ಶತಮಾನ) ಶಾಸನಗಳ ವಿಷಯಗಳ ಸಹಯೋಗ ಸಂಗತಿಗಳಿಂದ ದೊರೆಯುತ್ತದೆ. ಬಯಲನಾಡು (ವೈನಾಡು) ಮೇಲಿನ ಹಿಡಿತವೂ ಚೆಂಗಾಳ್ವರಿಗಿತ್ತು ಎಂಬ ಸೂಚನೆಯೂ ದೊರೆಯುತ್ತದೆ. ಇವೆಲ್ಲ ಕುಂತೂರು (ನಾಗರಹೊಳೆಗಿದ್ದ ಅಂದಿನ ಹೆಸರು) ಪ್ರದೇಶಕ್ಕೆ ಹೊಂದಿಕೊಂಡ ವೈನಾಡು ಕೂಡ ಈ ವಂಶಿಕರ ಅಂಕೆಯಲ್ಲಿತ್ತೆಂದು ತಿಳಿಯುತ್ತದೆ. 1298ರ (ಕುಧಿಕೋಚ್ಚಾರಿ ಸಂವತ್ಸರ) ನಂಜರಾಜಪಟ್ಟಣದ ಅಪ್ರಕಟಿತ ಶಾಸನದಲ್ಲಿ ಮಹಾಮಂಡಳೇಶ್ವರ ವೀರ ಚೋಳ ದೇವರಸನ ಆಳಿಕೆ ಉಕ್ತವಾಗಿದೆ. ಮುಳ್ಳೂರು 1296ರ ಶಾಸನದಲ್ಲಿ ಹರಿಹರ ದೇವನೊಡನೆ ಉಕ್ತವಾಗಿರುವಲ್ಲಿ ಈ ಚೋಳದೇವರಸ, ಅವನ ಸೋದರನಾಗಿರುವ ಸೂಚನೆ ದೊರೆಯುತ್ತದೆ. ಇದರಿಂದ ಕೊಡಗು ಶ್ರೀರಂಗಪಟ್ಟಣ ರಾಜಧಾನಿಯಿಂದ ಚೆಂಗಾಳ್ವ ಅರಸುದ್ವಯಸೋದರರು ಸಂಯುಕ್ತವಾಗಿ ಆಳಿಕೊಂಡು ಬಂದ ಪದ್ಧತಿ ಬೊಪ್ಪದೇವ ಸೋಮದೇವರಿಂದ ಆರಂಭಗೊಂಡು ಹರಿಹರದೇವ ಚೋಳ ದೇವರಸ ರವರೆಗೂ ಕಾಣಬರುತ್ತದೆ. ಇದು ಮೊದಲ ಚೆಂಗಾಳ್ವರ ಆಳಿಕೆಯಲ್ಲಿ 13 ಶತಮಾನದಲ್ಲಿ ಕಾಣಬರುವ ಅಂಶವಾಗಿದೆ (ಕೊಡಗಿನ ಹಾಲೇರಿ ವಂಶದಲ್ಲಿಯೂ ಇಂಥ ಸಂಯುಕ್ತ ಆಳಿಕೆ ನೆಲದ ಗುಣವೆಂಬಂತೆ ಕಾಣಬರುತ್ತದೆ). ಇವರಿಗೂ ಕೊಡಗಿನ ಪಾಲ್ವರೆ ಹಾಗೂ ಕೊಡಗಿನ ಶ್ರೀರಂಗಪಟ್ಟಣ ರಾಜಧಾನಿ ಆಗಿದ್ದವು. 14ನೆಯ ಶತಮಾನದಲ್ಲಿ ಅಂದರೆ 1310ರ ಸುಮಾರಿನ ಮಲ್ಲಿಕ್‌ಕಫರನ ಧಾಳಿಯಲ್ಲಿ ಸೋತ ಕಾರಣ ಹೊಯ್ಸಳರ ಪ್ರಾಬಲ್ಯ ಕುಸಿದಾಗ, 1315ರವರೆಗೆ ಮೊದಲ ಚೆಂಗಾಳ್ವರ ಕೊನೆಯ ಉಭಯ ಅರಸರು ಕೊಡಗು ಶ್ರೀರಂಗಪಟ್ಟಣ ರಾಜಧಾನಿಯಿಂದ ಆಳಿದರು. ಅನಂತರ ಕೆಲಕಾಲ ಚೆಂಗಾಳ್ವ ವಂಶಿಕರು ಅಜ್ಞಾತರಾದರು. ಈ ಸಮಯದಲ್ಲಿ ಕೊಡಗು ಶ್ರೀರಂಗಪಟ್ಟಣದ ಸುತ್ತಲ ಹೊಳೆ ಸಾಲು ಹಳ್ಳಿಗಳು, ನಾಗರಹೊಳೆ, ಪಾಲ್ವರೆ, ಕುರುಚಿ, ಬಾಡಗ, ಹಾಲೇರಿ, ದೊಡ್ಡಮಳತೆ, ಚೌಡ್ಲು, ಅಬ್ಬಿ–ಮಲಪನಹಳ್ಳಿ, ಉಲುಗುಲಿ, ಮುಳ್ಳೂರು ಇತ್ಯಾದಿ ಕೊಡಗಿನ ದಕ್ಷಿಣ ಮತ್ತು ಉತ್ತರ ಭಾಗಗಳಲ್ಲಿ ಚದುರಿಕೊಂಡಿದ್ದರು. ಇವರ ಮಧ್ಯದಿಂದ ಆಳಿದವರು ಮಧ್ಯಂತರ ಚೆಂಗಾಳ್ವರು ಎನ್ನಬೇಕು.

ವಿಜಯನಗರದ ಆರಂಭಕಾಲದಿಂದ ಒಂದನೆಯ ಬುಕ್ಕನು ಸಾಮ್ರಾಜ್ಯದ ದಕ್ಷಿಣ ಭಾಗದ ಪ್ರಾಂತ್ಯಗಳ ಆಡಳಿತ ನೋಡಿಕೊಳ್ಳುತ್ತಿದ್ದ. ಹಾಗಾಗಿ ಅವನ ದಂಡನಾಯಕರು, ಮಾಂಡಲಿಕರು ಮುಳ್ಳೂರು ಭಾಗವನ್ನು ಅರ್ಥಾತ್ ಚೆಂಗಾಳ್ವರು ವಿಜಯನಗರ ಮಾಂಡಲಿಕರಾಗಿ ಆಳಿಕೆ ನಡೆಸಿದರು. ಇದಕ್ಕೆ ಪೂರಕವಾಗಿ 1390ರ ಮುಳ್ಳೂರು ಶಾಸನ ಇಮ್ಮಡಿ ಹರಿಹರನನ್ನು ಉಲ್ಲೇಖಿಸಿದೆ. ಮುಳ್ಳೂರನ್ನು ಗುಂಡಪ್ಪ ದಂಡನಾಯಕನು ಗೊಂಕಾರೆಡ್ಡಿ ನಾಯಕನಿಗೆ ಕೊಡಮಾಡಿದ ವಿಷಯ ತಿಳಿಸಿದೆ.

ಹಿರೇಮಳಲಿ ಶಾಸನ ಚೆಂಗಾಳ್ವ ವಂಶಾವಳಿಯನ್ನು ಹೇಳುತ್ತ, ಚಂಗಾಳ್ವರನಾಮ ರಾಜಾ.... ಧೀರೋ ನಾಗ.. ಮಹಿಪತಿಃ। ರಂಗಧರಾಧೀಶ... ಪಿರ್ಯಣಭೂಪತಿಃ... ನಂಜಕ್ಷಮಾಪನೆ; ಮಹಾದೇವ ನೃಪತಿಃ .... ।ಎಂದೆಲ್ಲ ಹೆಸರಿಸಿದೆ. ಇತಿಹಾಸದ ತಲೆಮಾರಿನ 20 ವರ್ಷಗಳ ಅಂತರ ಅವಧಿಯನ್ನು ಮಹಾದೇವನಿಂದ ಹಿಂದಕ್ಕೆ ಹಿಡಿದರೆ (ಚೆಂಗಾಳ್ವ→ನಾಗರಾಜ→ರಂಗರಾಜ→ಪರಿಯಣ್ಣ→ನಂಜರಾಜ→ಮಹಾದೇವ) ಚೆಂಗಾಳ್ವ ಹೆಸರಿನ ದೊರೆ 1353–83 ಕಾಲಮಾನದವನಾಗುತ್ತಾನೆ. ಅಂದರೆ 1315–1353ರ ಅನಂತರ ಚೆಂಗಾಳ್ವನು ವಿಜಯನಗರದರಸರ ಕೃಪೆ ಪಡೆದು ಮಾಂಡಲಿಕನಾಗಿ ಮಧ್ಯಂತರ ಚೆಂಗಾಳ್ವ ದೊರೆಗಳ ಪೈಕಿ ಸದ್ಯದ ಆಕರಗಳ ಹಿನ್ನೆಲೆಯಲ್ಲಿ ಮೊದಲ ದೊರೆ ಆಗುತ್ತಾನೆ (ಇವನು ಅಮರನಾಯಕರ ಮೊದಲನೆಯ ವರ್ಗದವನಾಗಿರುವಂತಿದೆ). ಇದು ಚೆಂಗಾಳ್ವರ ಪುನರುತ್ಥಾನ ಕಾಲ. ಶಾಂತಿರಾಜಶಾಸ್ತ್ರಿಗಳ ಕೃತಿ ಆಧರಿಸಿ ಚೆಂಗಾಳ್ವ ಅರಸರ ಸಚಿವ ವಂಶಾವಳಿಯನ್ನು ಗಮನಿಸಿದರೆ 1400ರ ವೇಳೆಗೆ ಮಾಧವರಾಜೇಂದ್ರ (3ನೆಯ ಮಂಗರಸನ ತಾತ) ಸಚಿವನಾಗಿದ್ದುದು ತಿಳಿಯುತ್ತದೆ. 2ನೆಯ ಮಂಗರಾಜನ 1398ರ ನಿಘಂಟುವಿನಲ್ಲಿ ಶಶಿಪುರಾಧಿಮಾಥ ಸೋಮೇಶ್ವರ ಚಾರು ಚರಣಾರವಿಂದ... ಎಂದು ಸ್ತುತಿಸಿರುವಲ್ಲಿ ಅದು ಪಾಲ್ವರೇ (ಪಾಲುಪುರ=ಶಶಿಪುರ)ಗೆ ಕೊಡಗಿನ ಸಂದರ್ಭದಲ್ಲಿ ಹೇಳಿರುವುದಾಗಿದೆ. ಹೀಗಾಗಿ 14ನೆಯ ಶತಮಾನದಲ್ಲಿ ಪಾಲ್ವರೆ ಹಾಗೂ ಕೊಡಗು ಶ್ರೀರಂಗಪಟ್ಟಣವನ್ನು ಚೆಂಗಾಳ್ವರು ರಾಜಧಾನಿಯಾಗಿಸಿ ಕೊಂಡಿದ್ದುದರ ಸೂಚನೆ ದೊರೆಯುತ್ತದೆ ಹಾಗೂ 14ನೆಯ ಶತಮಾನದಲ್ಲಿ ಅವರ ಸಚಿವರ ಅಸ್ತಿತ್ವ, ಹೆಸರುಗಳಿರುವಲ್ಲಿ ಕೊಡಗಿನಲ್ಲಿ ಚೆಂಗಾಳ್ವರ ಅಸ್ತಿತ್ವವಿರಲಿಲ್ಲ ಎಂಬ ಮಾತಿಗೆ ವಿರಾಮ ಹಾಕಿದಂತಾಗುತ್ತದೆ.

ಮಧ್ಯಂತರ ಚೆಂಗಾಳ್ವರ ಪೈಕಿಯ ನಾಗರಾಜ (ಸು. 1385–1425) ಹಾಗೂ ರಂಗರಾಜ (1425–55), ಪೆರಿಯಣ್ಣರಾಜ (1455–85) ಇವರು ಕೊಡಗು ಶ್ರೀರಂಗಪಟ್ಟಣ ವನ್ನು ಆಳಿದವರಾಗಿದ್ದಾರೆ. ವಿಶೇಷತಃ ನಾಗರಾಜ ದಕ್ಷಿಣ ಕೊಡಗಿನ ಪಾರಂಪರಿಕ ಚೆಂಗಾಳ್ವರಾಜಧಾನಿ

ಇದ್ದರೂ ಕುಂತೂರನ್ನು ಹಾಗೂ ಉತ್ತರ ಕೊಡಗಿನ ರಾಜಧಾನಿಯಾಗಿ ಕೊಡಗು, ಶ್ರೀರಂಗಪಟ್ಟಣವನ್ನು ಆಳುತ್ತಿದ್ದುದರ ಚಾರಿತ್ರಿಕ ವಿಚಾರಗಳು ಸ್ಥಳೀಯ ಪರಂಪರೆಯಿಂದ ಗಮನಕ್ಕೆ ಬರುತ್ತವೆ. ನವದಂಣಾಯಕರು 14ನೆಯ ಶತಮಾನದಲ್ಲಿ ತೆರಕಣಾಂಬಿ ಪ್ರದೇಶವನ್ನು ಆಳುತ್ತಿದ್ದ ಗೋಪಾಲಸ್ವಾಮಿ ಬೆಟ್ಟವನ್ನು ಆಕ್ರಮಿಸಿಕೊಂಡು ಮುಂದೆ ದಂಡಯಾತ್ರೆ ಹೊರಟರು. ಈ ದಂಡಯಾತ್ರೆಯಲ್ಲಿ ಕೊಡಗಿನ ದಕ್ಷಿಣ ಗಡಿಯಾದ ದೇವಾಸಿ (ದೇವರ್ಷಿ!) ಬೆಟ್ಟದಿಂದ ಉತ್ತರದ ಗೋವವರೆಗೆ, ಸತ್ಯಮಂಗಲ ದಿಂದ ಪಶ್ಚಿಮದಲ್ಲಿ ಕೊಡಗಿನ ವಾಯವ್ಯ ಇನ್ನೊಂದು ತುದಿ ಬಿಸಿಲೆಘಟ್ಟದವರೆಗೆ ಆಕ್ರಮಿಸಿದರು. ಈ ಯುದ್ಧ 1400–25ರ ನಡುವೆ ನಡೆದು ನಾಗರಹೊಳೆ–ಕುಂತೂರು ರಾಜಧಾನಿಯನ್ನು ದಂಣಾಯಕರು ವಶ ಮಾಡಿಕೊಂಡರು. ಈ ಯುದ್ಧದಲ್ಲಿ ನಾಗರಾಜ ಹೋರಾಡಿ ವೀರ ಮರಣ ಪಡೆದಿರಬೇಕು. ಜೇನುಕುರುಬರು ಬುಡಕಟ್ಟು ಜನಪದರು ಅಲ್ಲಿ ಹರಿಯುವ ನದಿಗೆ ಇವನ ನೆನಪಿಗಾಗಿ ನಾಗನಹೊಳೆ–ನಾಗರಹೊಳೆ ಎಂದು ಹೆಸರು ಇಟ್ಟು ಅಮ್ಮಾಳೆಗುಡಿಯಲ್ಲಿ ಅವನ ವಿಗ್ರಹವಿಟ್ಟು ಇಂದಿಗೂ ವಾರ್ಷಿಕ ಪೂಜೆ ನಡೆಸಿಕೊಂಡು ಬರಲಾಗುತ್ತಿದೆ. ನವದಂಣಾಯಕರು ಸ್ವಶಿಪುರಾಧೀಶ್ವರರು ಎಂದು ಕರೆದು ಕೊಂಡಿದ್ದಾರೆ. ಅದು ಶಶಿಪುರಾಧೀಶ್ವರ ಎಂಬುದಕ್ಕೆ ಅನ್ವಯವೆಂದರೆ ಅವರು ಚೆಂಗಾಳ್ವರ ರಾಜಧಾನಿ ಪಾಲ್ವರೆ (ಪಾಲುಪುರ)ಯನ್ನು ತಮ್ಮ ದಂಡಯಾತ್ರೆಯಲ್ಲಿ ಗೆದ್ದ ಕುರುಹಾಗಿ ಕಾಣುತ್ತದೆ. ಅಮ್ಮಾಳೆ ಗುಡಿಯಲ್ಲಿ ನಾಗರಾಜನ ಆಸ್ಥಾನ ಶಿಲ್ಪಗಳಿವೆ; ನಾಗರಾಜರಸ್ತೆ ಎಂಬ ಫಲಕ ಇದ್ದದ್ದು ಈಗ ಕಾಣೆಯಾಗಿದೆ.

ನಾಗರಾಜನ ಅನಂತರ ರಂಗರಾಜ 1450ರ ವೇಳೆಗೆ ಕೊಡಗು ಶ್ರೀರಂಗಪಟ್ಟಣ ಪ್ರದೇಶದಲ್ಲಿ ಹೊಸರಂಗಪಟ್ಟಣವನ್ನು ಕಟ್ಟಿದ ಪ್ರತೀತಿ ಇದೆ. ಈಗಲೂ ರಂಗಸಮುದ್ರ, ಹೊಸಪಟ್ಟಣ ಎಂಬ ಗ್ರಾಮಗಳ ಸಂಯುಕ್ತ ರೂಪ ಇದಾಗಿದೆ. ಈ ಕಾವೇರಿ ಹೊಳೆಯ ನಡುವಣ ಗುತ್ತಿ ಪ್ರದೇಶದಲ್ಲಿ ಶ್ರೀರಂಗನ ಗುಡಿ ಇದ್ದ ಚಹರೆಗಳೂ ಕಾಣುತ್ತವೆ. ಈಗ ಇಲ್ಲಿ ಗುತ್ತಿ ಮಠ ರೂಪುಗೊಂಡಿದ್ದ ಪಾಲ್ವರೆಯಲ್ಲಿ ಮೊದಲ ಚೆಂಗಾಳ್ವರ ಪೈಕಿಯ ಸೋಮದೇವನ ವಂಶಿಕರು ಇದ್ದರು. ಕೊಡಗು ಶ್ರೀರಂಗಪಟ್ಟಣದಲ್ಲಿ ಬೊಪ್ಪದೇವನ ವಂಶಜರು ಆಳುತ್ತಿದ್ದು, ಪಾಲ್ವರೆಯ ಮೇಲೆ ಅಧಿಕಾರ ಸ್ಥಾಪಿಸಲೆತ್ನಿಸಿದಾಗ ಸಂಘರ್ಷದ ಮೊಳಕೆ ಒಡೆಯಿತು. ರಂಗರಾಜ (ರಂಗಸಮುದ್ರ) ಹೊಸರಂಗಪಟ್ಟಣವನ್ನು ಕಟ್ಟಿದ್ದು ಈ ಸಂಘರ್ಷದ ಕಾರಣವೆ ಆಗಿರಬೇಕು. ಆಗ ಪೂರ್ವ ಚಂಗಾಳ್ವರ ಸಂತತಿ ಸೋಮದೇವನ ವಂಶಜರೂ ಆದ ಮಧ್ಯಂತರ ಚೆಂಗಾಳ್ವರ ಒಂದು ಶಾಖೆ (ಪಾಲ್ವರೆ ಶಾಖೆ), ಸಂಘರ್ಷ ಬೆಳೆಯುತ್ತ ಬಂದ ಕಾರಣವೇನೋ ರಂಗಸಮುದ್ರ ಶಾಖೆಯ ಸಹವಾಸದಿಂದ ದೂರವಾಗಿ ಭವಿಷ್ಯವನ್ನರಸಿ ಕೆಳದಿ ಬಯಲಿನತ್ತ ಸಾಗಿದರು. ಇವರ ಪೂರ್ವಜರಲ್ಲಿ ಕೆಲವರು ಶಿವಮೊಗ್ಗ ಜಿಲ್ಲೆಯಲ್ಲಿದ್ದರೆಂಬ ಅಂಶವೂ ಇವರಿಗೆ ತಿಳಿದಿದ್ದಿರಬೇಕು. ಮಲೆಸೀಮೆಯಿಂದ ಹೋದ ಕಾರಣ ಇವರನ್ನು ಮಲಪರು, ಮಲವರು, ಮಲ್ಲವರು ಎಂದು ಕರೆದಿರಬೇಕು.

ಪಿರ್ಯಣ್ಣ ಅನಂತರ ನಂಜರಾಜ 1500ರ ವೇಳೆಗೆ ಕಾವೇರಿಯ ಪೂರ್ವದಂಡೆಗಿದ್ದ ಕೊಡಗು ಶ್ರೀರಂಗಪಟ್ಟಣ ಪ್ರದೇಶವನ್ನೆಲ್ಲ ಒಗ್ಗೂಡಿಸಿ ತನ್ನ ಹೆಸರಿನಲ್ಲಿ ಕಾವೇರಿಯ ಪಶ್ಚಿಮ ದಂಡೆಯಲ್ಲಿ ನಂಜರಾಜಪಟ್ಟಣವನ್ನು ಕಟ್ಟಿ ರಾಜಧಾನಿಯನ್ನಾಗಿ ಮಾಡಿಕೊಂಡ. ಕೊಡಗು ಶ್ರೀರಂಗಪಟ್ಟಣ ನಂಜರಾಜಪಟ್ಟಣದ ತಾಲ್ಲೂಕು ಭಾಗವಾಗಿ ಉಳಿದು ಬಂದಿದ್ದು ಮುಂದಿನ ಮಡಿಕೇರಿ ಶಾಸನದಿಂದ ಸೂಚಿತವಾಗುತ್ತದೆ. ಅಂದರೆ ಮಧ್ಯಂತರ ಚೆಂಗಾಳ್ವರು ಕೊಡಗು ಶ್ರೀರಂಗಪಟ್ಟಣ, ಪಾಲ್ವರೆ, ಕುಂತೂರು (ನಾಗರಹೊಳೆ), ರಂಗಪಟ್ಟಣ (ರಂಗಸಮುದ್ರ) ದಿಂದ ಆಳಿಕೆ ನಡೆಸಿದ ಸಂಗತಿ ತಿಳಿಯುತ್ತದೆ. ನಂಜರಾಜನು ಹೊಸರಾಜಧಾನಿಯನ್ನು ಕಟ್ಟಿದ ಸಮಯದಲ್ಲಿಯೇ ಕೆಳದಿ ರಾಜ್ಯವನ್ನು ಮಲ್ಲವರ ಚೌಡಪ್ಪನಾಯಕನೂ ಕಟ್ಟಿದ್ದು ಗಮನಾರ್ಹವಾಗಿದೆ. ಹಿರಿಯ ವೆಂಕಟಪ್ಪನಾಯಕನು ತನ್ನ ದಂಡಯಾತ್ರೆಯಕಾಲದಲ್ಲಿ ಪ್ರಸಿದ್ಧಿಯಿದ್ದ ನಂಜರಾಜನ ಪಟ್ಟಣ ಬಿಟ್ಟು, ಪೂರ್ವಜರಾದ ಚೆಂಗಾಳ್ವರ ರಾಜಧಾನಿ ಪಾಲ್ವರೆಯನ್ನು ಸಾಧಿಸಲು ಹೋದದ್ದರ ಕಾರಣ ವಂಶದ ಇತಿಹಾಸದ ಅರಿವು ಅವನಿಗಿದ್ದಿರ ಬೇಕೆನಿಸುತ್ತದೆ. ಹೀಗೆ ಕೊಡಗಿನ ಚೆಂಗಾಳ್ವರ (ಮಲೆಪರು) ಸಂಬಂಧ ಕೆಳದಿಗಾದರೆ, ಕೆಳದಿಯ ರಾಜವಂಶಿಕ ಸಂಬಂಧ 16ನೆಯ ಶತಮಾನದಲ್ಲಿ ಹಾಲೇರಿ ಅರಸರ ಮೂಲಕ ಆಯಿತು.

ನಂಜರಾಜಪಟ್ಟಣ ಕಟ್ಟಿದ ನಂಜರಾಜನಿಂದ ಸು. 1502–30ರ ಅನಂತರದ ಚಂಗಾಳ್ವರು ಎಂಬ ಅಭಿಧಾನವನ್ನು ಚೆಂಗಾಳ್ವರ ಆಳಿಕೆಯ ಮೂರನೆಯ ಮಜಲಿನಿಂದ ಗಮನಿಸಬೇಕಾಗುತ್ತದೆ. ನಂಜರಾಜನ ಅನಂತರ ನಂಜುಂಡರಾಜ, ಶ್ರೀಕಂಠರಾಜ (1544–57), ವೀರರಾಜ (1559–80), ಪೆರಿಯರಾಜದೇವ, ರುದ್ರಗಣ (1586–1607). ನಂಜುಂಡದೇವ, ನಂಜರಾಜದೇವ, ಕೃಷ್ಣರಾಜದೇವ, ನಂಜುಂಡರಸು, ವೀರರಾಜ (1619–44) ಅವರು ಆಳಿದವರಾಗಿದ್ದಾರೆ. ಇವರಲ್ಲದೆ ನಲ್ಲುಕೋಟೆಯ ಹೊಸ ಶಾಸನದ ರೀತ್ಯಾ ವೀರವೀರ ದೇವರಸ (1555–59) ಎಂಬ ಚೆಂಗಾಳ್ವ ದೊರೆ ಪೆರಿಯರಾಜದೇವನಿಗೆ ಹಿರಿಯಸೋದರನಾಗಿದ್ದು, ವಂಶಾವಳಿಗೆ ಸೇರ್ಪಡೆ ಆಗುತ್ತಾನೆ. ರಾಜ್ಯದ ಪೂರ್ವ ಗಡಿಯಲ್ಲಿ ಸಿಂಹಪಟ್ಟಣವೆಂಬ ಊರಿನಲ್ಲಿ ಅನಂತರ ಚೆಂಗಾಳ್ವರ ಪೈಕಿಯ ಐದನೆಯ ಅರಸನು ಮಣ್ಣಿನ ಕೋಟೆ ಕಟ್ಟಿ ಆ ಹೆಸರಿಟ್ಟ, 1590ರಲ್ಲಿ ಪಿರಿಯರಾಜದೇವನು ಸಿಂಹಪಟ್ಟಣದಲ್ಲಿ ಕಲ್ಲಿನ ಕೋಟೆ ಕಟ್ಟಿಸಿ ಪೇಟೆಯನ್ನು ಸ್ಥಾಪಿಸಿ ಆ ಊರಿಗೆ ತನ್ನ ಹೆಸರಾಗಿ ಪಿರಿಯಾಪಟ್ಟಣ ಎಂದು ಕರೆದ. ಇದಲ್ಲದೆ ಈ ಚೆಂಗಾಳ್ವ ಅರಸರು ಉತ್ತರ ಕೊಡಗಿನ ಹಾಲೇರಿ, ಚೌಡ್ಲು, ಚೇರಲಸಿರಿಮಂಗಲ, ದೊಡ್ಡ ಮಳತೆ, ಗುಣಗೂರು, ಉಲುಗುಲಿ, ದಕ್ಷಿಣ ಕೊಡಗಿನ ನಲ್ಲುಕೋಟೆ, ತಿತಿಮತಿ, ಪಾಲ್ವರೆ ಹಾಗೂ ಪೂರ್ವದಿಸೆಯಲ್ಲಿ ಪಿರಿಯಾಪಟ್ಟಣ, ಬೆಟ್ಟದಪುರ– ಇವುಗಳೊಡನೆ ಆಳಿಕೆ ನಡೆಸಿದ್ದುದು ಶಾಸನ ಹಾಗೂ ಇತರ ಇತಿಹಾಸ ದಾಖಲೆಗಳಿಂದ ತಿಳಿಯುತ್ತದೆ. ಇವರೂ ವಿಜಯನಗರ ದರಸರ ಮಾಂಡಲಿಕರಾಗಿದ್ದರು. 1644ರಲ್ಲಿ ಮೈಸೂರು ಸೈನ್ಯ ಪಿರಿಯಾಪಟ್ಟಣವನ್ನು ವಶಪಡಿಸಿಕೊಂಡಾಗ, ದೊರೆ ನಂಜುಂಡ ಅರಸು ತನ್ನ ಕುಟುಂಬ ಸಹಿತವಾಗಿ ಕೊಡಗಿನ ಹಾಲೇರಿ ಅರಸ ಮುದ್ದುರಾಜನ ಆಶ್ರಯದಲ್ಲಿ ನಂಜರಾಜಪಟ್ಟಣದಲ್ಲಿ ಉಳಿದ. ಅಲ್ಲಿ ನಂಜುಂಡೇಶ್ವರ ಗುಡಿ ನಿರ್ಮಾಣಕ್ಕೆ ಹಾಗೂ ಹೊಳೆಯಾಚೆ ಕಿರುವೀರಭದ್ರಗುಡಿ ನಿರ್ಮಾಣಕ್ಕೆ ಕಾರಣನಾದ. ಈ ಮೊದಲು ಊರೊಳಗೆ ಮಧ್ಯಂತರ ಚೆಂಗಾಳ್ವರ ಕಾಲದಲ್ಲಿ ಅನಂತರ ವೀರಭದ್ರಗುಡಿ ನಿರ್ಮಾಣವಾಗಿತ್ತು. ಅದಕ್ಕೂ ಮೊದಲು ನಂಜುಂಡೇಶ್ವರ ಗುಡಿಯ ದಕ್ಷಿಣದ ಹೊಳೆಬದಿಯಲ್ಲಿ ಚೋಳರು ವೀರಭದ್ರಗುಡಿ ನಿರ್ಮಿಸಿದ್ದರು. ಒಟ್ಟಾರೆ ಚೆಂಗಾಳ್ವರನ್ನು ಮೊದಲ ಚೆಂಗಾಳ್ವರು, ಪೂರ್ವ ಚೆಂಗಾಳ್ವರು, ಮಧ್ಯಂತರ ಚೆಂಗಾಳ್ವರು, ಅನಂತರದ ಚೆಂಗಾಳ್ವರು ಎಂದು ವರ್ಗೀಕರಿಸಬಹುದು. ರಾಜಕೀಯವಾಗಿ ಚೆಂಗಾಳ್ವರು ಚೋಳ ಹೊಯ್ಸಳರೊಡನೆ ಕಾದು ಕೊನೆಗೆ ಅವರ ಮಾಂಡಲಿಕರಾದರು. ತಮ್ಮ ಏಳು ಬೀಳಿನ ಅನಂತರ ವಿಜಯನಗರದರಸರ ಮಾಂಡಲಿಕ ರಾದರು. ತಮ್ಮ ಅಂತ್ಯ ಕಾಲದಲ್ಲಿ ಹಾಲೇರಿ ವಂಶದ ಅರಸರ ಆಸರೆಗೆ ಹೋದರು. ಹಾಲೇರಿ ವಂಶದ ಸ್ಥಾಪಕನಾದ ವೀರರಾಜ ಒಡೆಯನ 2ನೆಯ ಮಗ ನಂಜುಂಡ ಅರಸು ಚೆಂಗಾಳ್ವವಂಶಕ್ಕೆ ದತ್ತಾಗಿದ್ದ. ಮೈಸೂರು ಅರಸರಿಂದ ಇವರ ರಾಜ್ಯ ಆಕ್ರಮಿತವಾಯಿತು. ಮೊದಲ ಚೆಂಗಾಳ್ವರ ಪೈಕಿಯ ರಾಜಕುಮಾರರು ಹೊಯ್ಸಳರಿಂದಲೇ ಕೊಡಗು ಶ್ರೀರಂಗಪಟ್ಟಣದ ಆಳಿಕೆಗೆ ಆದೇಶಿತರಾದರು. ನವದಂಣಾಯಕ ರೊಡನೆ ನಡೆದ ಯುದ್ಧದಲ್ಲಿ ಇವರು ಸೋಲುಂಡರು. ವೀರಶೈವ ಮಠಗಳು, ವೀರಭದ್ರದೇಗುಲ ಗಳು, ಮಲ್ಲಿಕಾರ್ಜುನ ಹಾಗೂ ಸಿದ್ದೇಶ್ವರ ದೇಗುಲಗಳು ನಿರ್ಮಿತವಾದುವು. ದಾನ, ದತ್ತಿ, ಪ್ರಚಲಿತವಿದ್ದುವು. ಹೆಣ್ಣು ಮಕ್ಕಳಿಗೆ ಹಾಗೂ ಗಂಡು ಮಕ್ಕಳಿಗೆ ಆಸ್ತಿಯ ಹಕ್ಕನ್ನು ಶಾಸನಬದ್ಧ ಮಾಡಲಾಗಿತ್ತು. ಹರಿಹರ ಭೇದ ಪಾಲನೆಯ ಸಂಕೇತವಾಗಿ ಶ್ರೀರಾಮ ಹಾಗೂ ಶ್ರೀರಂಗನಾಥ, ಸೋಮೇಶ್ವರ ಗುಡಿಗಳನ್ನು ನಿರ್ಮಿಸಿದರು. ಮೊದಲ ಚೆಂಗಾಳ್ವರ ಪೈಕಿಯ ಬೊಪ್ಪದೇವನು ಶ್ರೀರಂಗನ ಭಕ್ತನಾಗಿದ್ದು, ಸೋಮದೇವನು ಪಾಲ್ವರೆಯ ಸೋಮೇಶ್ವರನ ಭಕ್ತನಾಗಿದ್ದ. ಪಾಲ್ವರೆಯಲ್ಲಿ ಶ್ರೀರಂಗನ ಗುಡಿಯೂ ಇತ್ತು. ಸೈನ್ಯದ ತೆರಿಗೆ, ದಂಡಿನ ಕಾಣಿಕೆ, ಮನೆವಾರ್ತೆ, ಬಟ್ಟಚಾರಿಕೆ, ಸದಿಚ್ಛೆ ಜಾರಿಯಲ್ಲಿತ್ತು. ಚೋಳ ಮತ್ತು ಹೊಯ್ಸಳರಲ್ಲಿ ವೈವಾಹಿಕ ಸಂಬಂಧಗಳನ್ನು ಹೊಂದಿದ್ದರು. ಕೊಡಗು ಶ್ರೀರಂಗಪಟ್ಟಣ ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿತ್ತು. ಚೆಂಗಾಳ್ವರ ಒಂದು ಶಾಖೆ ಕೌಟುಂಬಿಕ ವಿರಸದಿಂದಾಗಿ ಕೆಳದಿ ಕಡೆ ಹೋಗಿ ಅಲ್ಲಿನ ರಾಜವಂಶದ ಮೂಲಪುರುಷರಾದರು.

ಇವರ ಕಾಲದ ದೇಗುಲವಾಸ್ತು ಗರ್ಭಗೃಹ, ಸುಖನಾಸಿ, ನವರಂಗದಲ್ಲಿ ಕಡೆದ ಕಂಬಗಳು, ಮುಖಮಂಟಪ ಮತ್ತು ಪಾರ್ಶ್ವಮಂಟಪ ಹೊಂದಿದ್ದ ದ್ರಾವಿಡ ಶೈಲಿಯ ಶಿಲಾಕಟ್ಟಡದಂತೆ ಇತ್ತು. ಆರಂಭಕ್ಕೆ ಜೈನಧರ್ಮಾನುಯಾಯಿಗಳಾಗಿದ್ದವರು ಚೋಳರಿಂದ ಸೋತಮೇಲೆ ಶೈವಧರ್ಮಕ್ಕೆ ತೆರೆದುಕೊಂಡರು. ಕಾಲಾಂತರದಲ್ಲಿ ವೀರಶೈವ ಧರ್ಮವನ್ನು ಅನುಸರಿಸಿದರು. ಮುಂದಿನ ಹಾಲೇರಿ ಅರಸರಿಗೆ ಶೈವಧರ್ಮದ ಪ್ರಭಾವದ ನೆಲೆಯನ್ನು ಪೂರ್ವಭಾವಿಯಾಗಿ ವಿಸ್ತರಿಸಿಕೊಟ್ಟರು; ಪ್ರಪೂರ್ವಜರಾಗಿದ್ದರು. ಚನ್ನರಾಯಪಟ್ಟಣ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ನಾಗಮಂಗಲ, ಹಾಸನ, ಬೇಲೂರು, ಹನಸೋಗೆ, ಕಡೂರು, ಸೊರಬದ ಶಾಸನಗಳಲ್ಲಿ ಇವರ ಸಂಬಂಧದ ಘಟನೆಗಳು ಉಕ್ತವಾಗಿದ್ದು, ಅವರು ಚದುರಿ ಕೊಂಡಿದ್ದ ಪ್ರದೇಶಗಳು ಗಮನಕ್ಕೆ ಬರುತ್ತವೆ ಹಾಗೂ ಕೊಡಗಿನ ಇತಿಹಾಸದ ಜೊತೆ ಹಾಕ್ಕುಹೊಕ್ಕಾಗಿದೆ.

ಇವರ ಕಾಲದ ದೇಗುಲಗಳ ಪೈಕಿ ಹೊಸ ಶಾಸನೋಕ್ತ 1464ರ ಅಬ್ಬಿಜಯ ಮಲ್ಲಿಕಾರ್ಜುನ ಗುಡಿ ಮುಂದೆ ಸ್ತಂಭಗಳಿರುವ ವೇದಿಕೆ ಮೇಲಿನ ಏಕಾಯತನದ್ದು. ಸಪ್ತಮಾತೃಕಾ ಶಿಲ್ಪಗಳನ್ನೂ ಹೊಂದಿರುವಂಥದ್ದು. ಬಹುಶಃ ಸನಿಹದ ಯಕೂಜ ಸುಗ್ಗಿಕಟ್ಟೆ ಹಬ್ಬಕ್ಕೆ ಚೆಂಗಾಳ್ವರ ಕಾಲದಲ್ಲಿಯೇ ಉತ್ತೇಜನ ದೊರಕಿದಂತಿದೆ. ನಂಜರಾಜಪಟ್ಟಣದ ನಂಜುಂಡೇಶ್ವರ ಹಾಗೂ ವೀರಭದ್ರಗುಡಿಯ ವಾಸ್ತು ಹಾಗೂ ಕಲಾತ್ಮಕ ಶಿಲ್ಪಗಳು ಆಕರ್ಷಕವಾಗಿವೆ. 1544ರ ಚೇರಲಸಿರಿಮಂಗಲದ ಶಾಸನ ಮಠದ ಗುರುಗಳಿಗೆ ಸರ್ವಮಾನ್ಯ ಭೂಮಿ ಕೊಟ್ಟ ವಿಷಯ ಹೇಳಿದೆ. ಯುದ್ಧದಲ್ಲಿ ಅವಿವಾಹಿತ ಯೋಧರು ವೀರಮರಣ ಅಪ್ಪಿದರೆ ಅವರಿಗೆ ವೀರಸೇಸೆ ಹಾಕುವ ಪದ್ಧತಿ ಇತ್ತು. ಉಲುಗುಲಿಯ ತುರುಗೋಳ ಶಾಸನ (ಅಕ್ಕಿಕಟ್ಟಿ ವೀಳ್ಯವನ್ನು ನೀಡಿ ಮದುವಣಿಗ ವೇಷಹಾಕುವುದು)ವೈಷ್ಣವ ಸಂಯಮಿಯಾದ ಚೆಂಗಾಳ್ವ ಗೋಕುಲದೇವರಸನ ಆಳಿಕೆಯ ವೀರ ಶಾಸನವಾಗಿದ್ದು, ಮೇಲಿನ ದೇವಹಂತದಲ್ಲಿ ಶಿವಲಿಂಗ ಪೂಜೆಯ ಬಡಾವಣೆಯ ಉಬ್ಬುಶಿಲ್ಪವಿರಲು ಹರಿಹರ ಸಮಯಿಗಳೆನ್ನಲು ಅರ್ಥಾತ್ ಹರಿಹರ ಸಮನ್ವಯ ಪಾಲಕರು ಎಂಬುದಕ್ಕೆ ಸಾಕ್ಷ್ಯ ಸಿಗುತ್ತದೆ. ಕೆರೆಗಳಿಗೆ ತೂಬು ಕಟ್ಟಿಸುವ ವ್ಯವಹಾರಗಳೂ ಇದ್ದು (ದೊಡ್ಡ ಮಳತೆ ಹೊನ್ನಮ್ಮನ ಕೆರೆ) ಕೃಷಿಗೆ ಉತ್ತೇಜನ ನೀಡಿ ಕೊಡಗಿನ ಬಯಲು ಪ್ರದೇಶದಲ್ಲಿ ಅಚ್ಚುಕಟ್ಟು ಗಳನ್ನು ವಿಸ್ತರಿಸಿದ್ದ ವಿಷಯ ಶಾಸ್ತ್ರೋಕ್ತವಾಗಿದೆ. ಇವರ ಕಾಲದಲ್ಲಿ ಹಾಲೇರಿ ವಂಶ ಕೊಡಗಿನಲ್ಲಿ ಉದಿಸಿತು. ಇವರು ಕವಿಜನಾಶ್ರಯದಾತರಾಗಿದ್ದರು. ಮಂಗರಸನ ನಿಘಂಟು, ನಂಜುಂಡ ಕವಿಯ ಕುಮಾರ ರಾಮ ಸಾಂಗತ್ಯ, ದೊಡ್ಡಯ್ಯ ಕವಿಯ ಚಂದ್ರಪ್ರಭಾ ಸಾಂಗತ್ಯ, ಭುಜಬಲಶತಕ ದೇವಪ್ಪ ಕವಿಯ ರಾಮವಿಜಯ ಕಾವ್ಯ, ರಾಮಪ್ಪ ಕವಿಯ ಗೀತರಾಘವ, ಮೂರನೆಯ ಮಂಗರಸನ ಜಯನೃಪ ಕಾವ್ಯ ಮೊದಲಾದ ಕೃತಿಗಳು ಹೊರಬಂದವು.

**ಚೆಂಗಾಳ್ವರ ವಂಶಾವಳಿ (ಕವಲು I)**
**10ನೆಯ ಶತಮಾನದಿಂದ 14ನೆಯ ಶತಮಾನದವರೆಗೆ**

ರಾಜೇಂದ್ರಚೋಳ, ವೀರರಾಜೇಂದ್ರ ನನ್ನಿ ಚೆಂಗಾಳ್ವ (1030–60)
(ಬೆಟ್ಟದಪುರದ ಕೋಟೆ ಕಟ್ಟಿದವನು)

ಚಂಗಲರಾಯ

ನಿಗಳಂಕ ಮಲ್ಲ ಮಾಚೆಯರಸ (ಮಾದೆಯರಸ) ಚೆಂಗಾಳ್ವ (ಸು.1090)

ಚೆಂಗಾಳ್ವ ದೇವ (ಮಹದೇವ, ಮಾದೇವರಸ, ಮಾದೇವಣ್ಣ (ಸು.1091–95)

ಮಹಾಮಂಡಲೇಶ್ವರ ಕುಲೋತ್ತುಂಗ ಚೋಳ ಒಡಿಯಾದಿತ್ಯ (ಸು.1067)

ಚೆಂಗಾಳ್ವ (ಸು.1124–55)

ಮಹದೇವ (1169, 71–73 ಪಾಲ್ಪರೆ ಯುದ್ಧ)

ಕುಲೋತ್ತುಂಗ ಚೋಳ ಚೆಂಗಾಳ್ವ ಪೆಮ್ಮ ವೀರರಸ (1175–83)

ಸೋಮದೇವ ಮತ್ತು ಬೊಪ್ಪದೇವರಸ (1245–52)
(ಕೊಡಗು ಶ್ರೀರಂಗಪಟ್ಟಣದಿಂದ ಆಳಿದವರು)

ಮಲ್ಲದೇವ ಮತ್ತು ಹರಿಹರ (1280–1300)

**ಚೆಂಗಾಳ್ವರ ವಂಶಾವಳಿ (ಕವಲು II)**
**16ನೆಯ ಶತಮಾನದಿಂದ 17ನೆಯ ಶತಮಾನದವರೆಗೆ**

ಚೆಂಗಾಳ್ವ

ನಾಗ

ರಂಗ

ಪಿರಿಯ ಪರಿಯಣ್ಣ

ನಂಜರಾಜ (1502–25) — ಮಹದೇವ

ನಂಜುಂಡರಾಜ (1525–40)
(ಪಿರಿಯಾಪಟ್ಟಣದಲ್ಲಿ ಮಣ್ಣಿನಕೋಟೆ ಕಟ್ಟಿದವನು)

ಶ್ರೀಕಂಠರಾಜಯ್ಯ, ಶ್ರೀಕಂಠರಾಜರಸು, ಚನ್ನಯ್ಯ (1540–60)
(ಕಂಠಾಪುರ ಕಟ್ಟಿದವನು)

ವೀರರಾಜಯ್ಯ, ವೀರರಾಜವೊಡೆಯ, ಚಿಕ್ಕರಾಜಯ್ಯ (1560–85) — ಪಿರಿಯರಾಜಯ್ಯದೇವರುದ್ರಗಣ (ಪಿರಿಯಾಪಟ್ಟಣದಲ್ಲಿ ಕಲ್ಲಿನಕೋಟೆ ಕಟ್ಟಿಸಿದವನು) — ನಂಜರಾಜಯ್ಯದೇವ (ನಂಜುಂಡದೇವ, ಕೃಷ್ಣರಾಜ) (1612–1719)

ವೀರಪರಾಜಯ್ಯ (1585–1620) — ಪಿರಿಯೊಡೆಯ

ಮಲ್ಲಿರಾಜ (ಕೃಷ್ಣರಾಜಯ್ಯದೇವ?) — ವೀರರಾಜ (ಪಿರಿಯಾಪಟ್ಟಣದ ಕಾಳಗದ ನಾಯಕ) — ಚಂದೇಅರಸು

ಚಾಮುಂಡಿ — ವೀರಣ್ಣ

**ಐಗೂರು ಅರಸರು:** ಹಾಸನ ಜಿಲ್ಲೆಯ ಐಗೂರಿನಲ್ಲಿ ಆಡಳಿತ ನಡೆಸಿದ ಸಾಮಂತ ಮನೆತನ. ಇವರನ್ನು ಚೆಂಗಾಳ (ಚೆಂಗಾಳ್ವ) ನೆನಿಸಿದ ಚೆನ್ನಪ್ಪನಾಯಕನ ವಂಶಜರೆನ್ನುವ್ರು ದುಂಟು. ವಿಜಯನಗರ ಕಾಲದಲ್ಲಿ ಐಗೂರು ಪಾಳೆಯಗಾರರ ಪೂರ್ವಜನಾದ ಲಿಂಗಪ್ಪ ನಾಯಕನಿಗೆ 1397ರಲ್ಲಿ ವಿಜಯನಗರದರಸ ಇಮ್ಮಡಿ ಹರಿಹರ 80 ಸಾವಿರ ರೂ ಹುಟ್ಟುವಳಿ ಇಟ್ಟಿದ್ದ (ಮಂಜರಾಬಾದ್). ಇವನು ಸಲ್ಲಿಸಿದ ಸೇವೆಯನ್ನು ಮೆಚ್ಚಿ ಬಲಂ ಪ್ರದೇಶವನ್ನು ಜಹಗೀರು ಆಗಿ ನೀಡಿದನೆಂದು ಎಲ್.ಬಿ. ಬೌರಿಂಗ್ ಹೇಳಿದ್ದಾನೆ. ಇದರಿಂದಾಗಿ ಇವರಿಗೆ ಬಲಂ ನಾಯಕರು ಎಂಬ ಹೆಸರೂ ಬಂದಿತೆನ್ನಲಾಗಿದೆ. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಈ ವಂಶದ ಕೆಲ ಅರಸರು ವೈಷ್ಣವಧರ್ಮವನ್ನು ಅನುಸರಿಸಿದಂತೆ ತೋರುತ್ತದೆ. ಆಗ ಬೇಲೂರು ಸೀಮೆಯ ನಾಯಕತನ ಪಡೆದರೆಂದು ಶಾಸನಗಳಲ್ಲಿ ಹೇಳಿದೆ. ಆದರೆ ಇವರು ಲಿಂಗಪ್ಪ ನಾಯಕನ ವಂಶಿಕರೋ ಅಥವಾ ಅವನಿಂದ ಬೇರೆಯಾದ ಯರಕೃಷ್ಣಪ್ಪ ನಾಯಕರಿಗೆ ಸಂಬಂಧಿಸಿದವರೋ ಎಂಬುದು ಸ್ಪಷ್ಟವಿಲ್ಲ.

ಕೊಡಗಿನ ಜನಜೀವನದಲ್ಲಿ ಚೆಂಗಾಳ್ವ ಪ್ರಭಾವ ಹಾಗೂ ಅವರ ವಂಶಿಕರು ಅಳಿದುಳಿದವರು ಬೆರೆತ ಕಾರಣವೆಂಬಂತೆ ಕೊಡಗಿನ ಮನೆಪೆದಗಳಲ್ಲಿ (ಮನೆತನದ ಹೆಸರು) ಚಂಗಚಂಡ, ಚಂಗಣಮಾಡ, ಚಂಗೇಟಿರ, ಚಂಗೇಪಂಡ ಇತ್ಯಾದಿ ಮನೆಪೆದಗಳು ಕೊಡವರಲ್ಲಿ ಕಂಡುಬರುತ್ತವೆ; ಚಂಗರಿ, ಚಾಂಗನ್ ಎಂಬವು ಗೌಡ ಸಮುದಾಯಗಳಲ್ಲಿ ಕಾಣಬರುತ್ತವೆ. ವ್ಯಕ್ತಿನಾಮವಾಗಿ, ಚಂಗಪ್ಪ ಎಂಬ ಹೆಸರು ಕೊಡಗಿನ ವಿವಿಧ ಸಮುದಾಯಗಳಲ್ಲೂ ಕಾಣಬರುತ್ತದೆ. ಚೆಂಗಾಳ್ವರ ಆಳಿಕೆ 1644ರಲ್ಲಿ ಮುಕ್ತಾಯವಾದರೂ 1653ರ ಹಾಸನ ಜಿಲ್ಲೆ ರಾಗಿಮರೂರು ಶಾಸನದಲ್ಲಿ ಚೆಂಗಾಳ್ವದೊರೆ ಶ್ರೀಕಂಠರಾಜ ಶತಮಾನದ ಶಾಸನಗಳಲ್ಲಿ ಚೆಂಗನಾಡು, ನಂಜರಾಜಪಟ್ಟಣದ ಅರಸು ಶ್ರೀಕಂಠರಾಜ, ಪಿರಿಯರಾಜರನ್ನು ನೆನೆದು ನಾಡಜನತೆ ದಾನ ಶಾಸನಗಳನ್ನೂ ಹಾಕಿಸಿರುವುದು ಅವರ ಜನಪ್ರಿಯತೆಯ ಲಕ್ಷಣವೆನಿಸುತ್ತದೆ. ಈ ಎಲ್ಲ ಸಾಕ್ಷ್ಯಗಳ ಹಿನ್ನಲೆಗಳಲ್ಲಿ ಇವರ ವಂಶಾವಳಿಯನ್ನು ಪುನಾರಚಿಸಬೇಕಾಗಿದೆ.

ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಪುಷ್ಪಗಿರಿ ಸಂಸ್ಥಾನದ ಮಲ್ಲಾಪುರ ಮಠದ ಗುರುಗಳಾಗಿ ಬಂದವರು ಚೆಂಗಾಳ್ವ ದೊರೆ ನಂಜುಂಡ ಅರಸನ (ಹಾಲೇರಿ ವಂಶಸ್ಥಾಪಕ ವೀರ ಒಡೆಯನ ಎರಡನೆಯ ಮಗ) ರಾಜ ಸಂಬಂಧಿಗಳು. ಇವರು ಜಂಗಮಸ್ಥಲದಲ್ಲಿ ನಿಂತು ಈ ಮಠದ ಗುರುಗಳಾದರೆಂದು, 1987ರಲ್ಲಿ ಮಠಾಧಿಪತಿಗಳಾಗಿದ್ದ ಷ.ಬ್ರ. ದೊಡ್ಡ ಚನ್ನಮಲ್ಲಿಕಾರ್ಜುನ ಒಡೆಯರು ತಿಳಿಸಿದ್ದಾರೆ. ಬಾಳೆಹೊನ್ನೂರು ಶಾಖೆಯ ಈ ಮಠಕ್ಕೆ ಬೇಲೂರು ವೆಂಕಟಾದ್ರಿನಾಯಕನು ದಾನ ದತ್ತಿಗಳನ್ನು ನೀಡಿರುವುದು ಮಠದ ತೋಟದಲ್ಲಿರುವ ಶಾಸನದಿಂದ ತಿಳಿಯುತ್ತದೆ. ಬೇಲೂರು ನಾಯಕರಲ್ಲಿಯ ರಾಜಕುವರಿಯರನ್ನು ಕೆಳದಿ ಹಾಗೂ ಹಾಲೇರಿ ವಂಶದ ರಾಜ ಕುವರರೊಡನೆ ಮದುವೆ ಮಾಡಿಕೊಡಲಾಗಿತ್ತು. ಅದಾಗಿ ಬೇಲೂರು ನಾಯಕರಲ್ಲಿ ವೀರಶೈವ ವಂಶಿಕ ಸಂಬಂಧವನ್ನು ಅನುಸರಿಸಿಕೊಂಡು ಬಂದಿದ್ದ ಸಾಕ್ಷಿ ಇದೆನ್ನಿಸುತ್ತದೆ. ಹಾಲೇರಿ ವಂಶದ 1ನೆಯ ಲಿಂಗರಾಜ ಒಡೆಯನು ತನ್ನ ಅಣ್ಣನ ಮಕ್ಕಳೊಡನೆ ಸಿಂಹಾಸನದ ಹಕ್ಕಿನ ಸಂಘರ್ಷದ ಸಮಯದಲ್ಲಿ ಐಗೂರು ವಂಶದರಸರಲ್ಲಿ ಆಶ್ರಯಪಡೆದ. ಲಿಂಗರಾಜನ ಸೋದರಿ ದೇವಮ್ಮಾಜಿಯನ್ನು ಐಗೂರು ವಂಶದ ಬಸಪ್ಪನಿಗೆ ಮದುವೆ ಮಾಡಿಕೊಡಲಾಗಿತ್ತು. ದಾಯಾದಿ ಸಂಘರ್ಷದ ಕಾರಣವೋ ಏನೋ ಐಗೂರು ವಂಶದ ಶೀಲೇಗೌಡನನ್ನು ವೆಂಕಟಾದ್ರಿನಾಯಕ ಕೊಲ್ಲಿಸಿದನೆನ್ನಲಾಗಿದೆ. ಕೊನೆಗೆ ಪಶ್ಚಾತ್ತಾಪಪಟ್ಟು ಮತ್ತೆ ಐಗೂರು ಆಳಿಕೆಗೆ ಹಕ್ಕುದಾರನನ್ನಾಗಿಸಿದನಂತೆ.

ಐಗೂರಪ್ಪನ ವಂಶಿಕರಾಗಿ ಶೀಲೇಗೌಡ, ಬಲವಂತಗೌಡ (ಹಾಡ್ಯ ಗ್ರಾಮ), ಶೀಲೇಗೌಡ ಹಾಗೂ ಹಾಲೇಗೌಡರು ಆಳಿದರು. 19ನೆಯ ಶತಮಾನದಲ್ಲಿ ಮೈಸೂರು ಅರಸರ ಅಂಕಿತಕ್ಕೆ ಹಾಸನ ಜಿಲ್ಲೆ ಬಂದಾಗ ಈ ವಂಶಿಕರು ನಾಡಪಟೇಲರಾಗಿ, ಸಾಂಸ್ಕೃತಿಕ ಆಚರಣೆಗಳ ಮುಖ್ಯಸ್ಥರಾಗಿ ಜನಜೀವನದಲ್ಲಿ ಒಂದಾದರು. ಇವರ ವಂಶಜರು ಇಂದಿಗೂ ಐಗೂರಿನ ದೊಡ್ಡಮನೆಯಲ್ಲಿದ್ದಾರೆ. ಸಂಬಂಧಿಗಳು ಶಾಸಕರೂ ಆಗಿದ್ದಾರೆ.

ಇವರ ನೇತೃತ್ವದ ಸುಗ್ಗಿಕಟ್ಟೆ ದೇವರ ಹಬ್ಬ ಐಗೂರಲ್ಲದೆ ಹಾಸನ ಜಿಲ್ಲೆಯಲ್ಲಿಯೇ ಪ್ರಸಿದ್ಧ. ಉತ್ತರ ಕೊಡಗಿನಲ್ಲಿ ವಿಪುಲವಾಗಿ ಸುಗ್ಗಿಕಟ್ಟೆಗಳಿವೆ(ಸಬತಾಯಿ ಕಟ್ಟೆ, ಸಪ್ತಮಾತೃಕಾ ಆರಾಧನೆ, ಧಾನ್ಯ ಲಕ್ಷ್ಮಿ ಪೂಜೆ ಸಹಿತವಾದವು). ಸುಗ್ಗಿಕಟ್ಟೆ ಹಬ್ಬಗಳು ಪ್ರಾಗೈತಿಹಾಸಿಕ ಸಂಕೇತದ ಹಾಗೂ ಜಾನಪದ ಆಚರಣೆಗಳಿಂದ ಕೂಡಿ ವಿಶೇಷವಾಗಿ ಆಚರಿಸಲ್ಪಡುತ್ತವೆ. ಇವು ವಿಶೇಷತಃ ಚೆಂಗಾಳ್ವದೊರೆಗಳಿದ್ದ ಕಡೆಗಳಲ್ಲಿ ಆಚರಣೆಯಲ್ಲಿದ್ದು, ಇಂದಿಗೂ ಆ ಪರಂಪರೆ ಮುಂದುವರಿದಿದೆ. ಹಾಸನ ಜಿಲ್ಲೆಯ ಅನೇಕ ಕಡೆಗಳಲ್ಲಿ ಇದು ಆಚರಣೆಯಲ್ಲಿದೆ. ಚೆಂಗಾಳ್ವ ಸಂತತಿಯ ಐಗೂರು ಅರಸು ವಂಶಜರು ಇದರ ಆಚರಣೆಯ ನೇತೃತ್ವ ವಹಿಸಿರುವಲ್ಲಿ ಪಾರಂಪರಿಕ ಹಕ್ಕಿನ ಕಾರಣವೆ ಇರಬೇಕು. ಹೀಗೆ ಗುರುಸ್ಥಲದಲ್ಲಿ, ರಾಜಸ್ಥಳದಲ್ಲಿ ಚೆಂಗಾಳ್ವ ವಂಶ ಗುರುತಿಸಿಕೊಂಡದ್ದು ಗಮನಾರ್ಹ. ಹಾಲೇರಿವಂಶಸ್ಥಾಪಕ ವೀರರಾಜ ಒಡೆಯ ಕೊಡಗಿಗೆ ಬಂದದ್ದು ಜಂಗಮವೇಷಧಾರಿಯಾಗಿಯೆ; ಜನಪ್ರಿಯನಾದದ್ದು ಗುರುನಾಯಕನಾಗಿಯೆ ಎಂಬುದು ಈ ಸಂದರ್ಭದಲ್ಲಿ ಗಮನಾರ್ಹವಾಗುತ್ತದೆ. (ಎನ್.ಎಂ.ಜಿ.)

**ಚೆಂಗೇಷ್ ಖಾನ್ (ಚೆಂಗಿಸ್ ಖಾನ್):** 1165–1227. ಮಂಗೋಲ್ ದೊರೆ, ಸಮರ್ಥಯೋಧ. ಮಂಗೋಲ್ ಬಣಗಳನ್ನು ಒಟ್ಟುಗೂಡಿಸಿ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ. ಟೆಮುಜಿನ್ ಎಂಬುದು ಇವನ ಮೊದಲ ಹೆಸರು. ಹದಿಮೂರನೆಯ ವಯಸ್ಸಿನಲ್ಲೇ

ತಂದೆಯ ಉತ್ತರಾಧಿಕಾರಿಯಾಗಿ ತನ್ನ ಬಣದ ನಾಯಕನಾದ. ಬಹುಬೇಗ ತನ್ನ ಶೌರ್ಯ, ನಿರ್ಭಯತೆ ಹಾಗೂ ಕ್ರೌರ್ಯದಿಂದಾಗಿ ಇತರ ಬಣಗಳ ಒಡೆತನ ಸಂಪಾದಿಸಿದ. ಅವುಗಳ ಸಮರ್ಥ ನಾಯಕನಾದ.

1206ರ ವೇಳೆಗೆ ಈತ ಮಂಗೋಲ್ ಸಾರ್ವಭೌಮನಾದ. ಅನಂತರ ಬೇರೆ ಬೇರೆ ಪ್ರದೇಶಗಳನ್ನು ಗೆಲ್ಲಲು ಅಪಾರವಾದ ಸೈನ್ಯವನ್ನು ಕಟ್ಟಿದ. ಈತನ ಸೈನ್ಯದಲ್ಲಿ ತಲಾ 1000 ಯೋಧರಿಂದ ಕೂಡಿದ್ದ 95 ಪಡೆಗಳಿದ್ದುವೆಂದು ಹೇಳಲಾಗಿದೆ. ಆ ಕಾಲದಲ್ಲಿ ಅಷ್ಟು ಶಿಸ್ತು ಮತ್ತು ಶೌರ್ಯದಿಂದ ಕೂಡಿದ್ದ ಸೈನ್ಯವನ್ನು ಪ್ರಪಂಚದ ಯಾವೊಬ್ಬ ರಾಜನೂ ಹೊಂದಿರಲಿಲ್ಲವೆಂದು ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಸೈನ್ಯವನ್ನು ಸಜ್ಜುಗೊಳಿಸಿದ ಅನಂತರ ಈತ ಸಾಮ್ರಾಜ್ಯ ವಿಸ್ತರಣೆಗೆ ತೊಡಗಿದ. 1213ರಲ್ಲಿ ಚೀನದ ಉತ್ತರ ಭಾಗಗಳನ್ನು ಆಕ್ರಮಿಸಿ ಪೀಕಿಂಗ್‌ವರೆಗೂ ನುಗ್ಗಿ ವಿಶೇಷ ಐಶ್ವರ್ಯವನ್ನು ವಶಪಡಿಸಿಕೊಂಡ. 1218ರಲ್ಲಿ ಕೊರಿಯವನ್ನು ಆಕ್ರಮಿಸಿದ. ಅನಂತರ ಈತನ ದೃಷ್ಟಿ ಮಧ್ಯ ಏಷ್ಯದತ್ತ ತಿರುಗಿತು. ತನ್ನ ದೂತರನ್ನು ತುರ್ಕಿ ರಾಜನೊಬ್ಬ ತಿರಸ್ಕಾರದಿಂದ ಕಂಡನೆಂಬ ನೆಪದಿಂದ ತುರ್ಕಿ ಮತ್ತು ಸುತ್ತುಮುತ್ತಿನ ಪ್ರದೇಶಗಳ ಮೇಲೆ ದಂಡೆತ್ತಿಹೋದ. ಮುಸ್ಲಿಂ ಸಾಮ್ರಾಜ್ಯಗಳು ಈತನ ಧಾಳಿಗೆ ಸಿಕ್ಕು ಸೋತು ಉರುಳಿದುವು. ತುರ್ಕಿ, ಇರಾಕ್ ಮತ್ತು ಇರಾನ್ ಪ್ರದೇಶಗಳು ಖಾನನ ವಶವಾದವು. ಮುಸ್ಲಿಂ ಸಂಸ್ಕೃತಿಯ ಕೇಂದ್ರಗಳಾಗಿದ್ದ ಅನೇಕ ಪ್ರಸಿದ್ಧ ಪಟ್ಟಣಗಳು ಪಾಳುಬಿದ್ದುವು. ಸಹಸ್ರಾರು ಸಂಖ್ಯೆಯಲ್ಲಿ ಜನರು ಕೊಲೆಯಾದರು. ಅನಂತರ ಪೂರ್ವ ಯುರೋಪಿನ ಅನೇಕ ಭಾಗಗಳನ್ನು ಈತ ವಶಪಡಿಸಿಕೊಂಡ.



ಇವನಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರು. ಮೊದಲನೆಯವನಾದ ಜೂಜಿಖಾನ್ ತಂದೆ ಬದುಕಿದ್ದಾಗಲೇ ಮರಣಹೊಂದಿದ. ಎರಡನೆಯವನಾದ ಜಗತ್ಯೆಖಾನ್ ತುರ್ಕಿಯಲ್ಲಿ ತನ್ನ ಸಂತತಿಯ ಆಳಿಕೆಯನ್ನು ಸ್ಥಾಪಿಸಿದ. ಮೂರನೆಯವನಾದ ಬಗ್ಡೈಖಾನ್ ತಂದೆಯ ಉತ್ತರಾಧಿಕಾರಿಯಾದ. ಕೊನೆಯವನಾದ ಟುಲೈಖಾನನ ಮಕ್ಕಳಾದ ಮಂಗುಖಾನ್, ಕುಬ್ಲೈಖಾನ್ ಮತ್ತು ಹಲಗು ಖಾನರು ಅನಂತರ ಮಂಗೋಲ್ ಸಾಮ್ರಾಜ್ಯವನ್ನು ಕ್ರಮವಾಗಿ ಆಳಿದರು. ಶತ್ರುಗಳನ್ನು ಧ್ವಂಸಗೊಳಿಸುವುದರಲ್ಲಿ ಚೆಂಗೇಷ್‌ಖಾನ್ ನಿಷ್ಕರುಣಿಯಾಗಿದ್ದ. ಈತನ ಧಾಳಿಗೆ ಒಳಗಾದ ಪಟ್ಟಣಿಗರು ಸಾಮಾನ್ಯವಾಗಿ ಕಗ್ಗೊಲೆಗೆ ಒಳಗಾಗುತ್ತಿದ್ದರು. ಸೈನಿಕ ಕಾರ್ಯಾಚರಣೆ ಹಾಗೂ ತರಬೇತಿಯಲ್ಲಿ ಈತ ಅದ್ವಿತೀಯನಾಗಿದ್ದ. ಮಂಗೋಲರು ಈತನ ಕಾಲದಲ್ಲಿ ಇಸ್ಲಾಂ ಧರ್ಮೀಯರಾಗಿರಲಿಲ್ಲ. ಆಕಾಶವನ್ನು ದೇವರೆಂದು ನಂಬಿದ್ದ ಇವರ ಧರ್ಮಕ್ಕೆ ಷಿಮಾ ಎಂಬ ಹೆಸರಿತ್ತು. ಚೆಂಗೇಷ್‌ಖಾನ್ ಮತಾಂಧನಾಗಿರಲಿಲ್ಲ. ತನ್ನ ಹತ್ತಿರದ ಸಂಬಂಧಿಗಳು ಇಸ್ಲಾಂ ಅಥವಾ ಕ್ರೈಸ್ತಧರ್ಮವನ್ನು ಸ್ವೀಕರಿಸಲು ಈತ ಅಡ್ಡಿಪಡಿಸಲಿಲ್ಲ. (ಜಿ.ಆರ್.ಆರ್.)

**ಚೆನ್ನಮ್ಮಾಜಿ:** 1671–97. ಕೆಳದಿ ಸಂಸ್ಥಾನವನ್ನು ಆಳಿದ ರಾಣಿ. ಒಂದನೆಯ ಸೋಮಶೇಖರನಾಯಕನ (1663–71) ಪತ್ನಿ. ಸೋಮಶೇಖರ ನಾಯಕ ದುಷ್ಟತಗಳಿಗೆ ಬಲಿಯಾಗಿ ಮರಣಹೊಂದಿದಾಗ ಉತ್ತರಾಧಿಕಾರಿ ಇರಲಿಲ್ಲವಾಗಿ ಸಿಂಹಾಸನವನ್ನು ಆಕ್ರಮಿಸುವ ಸಂಚೊಂದು ನಡೆದು ಶಿವಪ್ಪನಾಯಕ ಎಂಬುವನೊಬ್ಬನನ್ನು ರಾಜನೆಂದು ಸಾರಲಾಯಿತು. ಅದೇ ಸಮಯದಲ್ಲಿ ಬಿಜಾಪುರದ ಸುಲ್ತಾನ ಇನ್ನೂ ಹಲವು ಪಾಳೆಯಗಾರರೊಡನೆ ಕೆಳದಿ ರಾಜ್ಯದ ಮೇಲೆ ದಂಡೆತ್ತಿ ಬಂದ. ಈ ಸಂದರ್ಭದಲ್ಲಿ ಚೆನ್ನಮ್ಮಾಜಿ ರಾಜ್ಯವನ್ನು ಶತ್ರುಗಳಿಂದ ರಕ್ಷಿಸಲು ನಿರ್ಧರಿಸಿ ರಾಜಧಾನಿಯಿಂದ 1871ರಲ್ಲಿ ತಪ್ಪಿಸಿಕೊಂಡು ಹೋಗಿ ಭುವನಗಿರಿಯನ್ನು ತಲುಪಿ ಅಲ್ಲಿ ತನ್ನ ಆಪ್ತರಾದ ತಿಮ್ಮಣ್ಣನಾಯಕ ಮತ್ತು ಸಬ್ಬನೀಸ ಕೃಷ್ಣಪ್ಪಯ್ಯ ಎಂಬುವರ ಸಹಾಯದಿಂದ ಶಿವಪ್ಪನಾಯಕನನ್ನು ಕೊಲ್ಲಿಸಿದಳು. ಅನಂತರ ರಾಜಧಾನಿಗೆ ಬಂದು ಅಧಿಕಾರವನ್ನು ವಹಿಸಿಕೊಂಡು ಪಿತೂರಿಗಾರರನ್ನು ಅಡಗಿಸಿದಳು. ಕೆಳದಿ ರಾಜ್ಯದ ಆಕ್ರಮಣದಲ್ಲಿ ತೊಡಗಿದ್ದ ಬಿಜಾಪುರದ ಸುಲ್ತಾನ ಮತ್ತು ಬಿಳಗಿ, ಸೋದೆ ಮೊದಲಾದ ಪಾಳೆಯಗಾರರ ಸೈನ್ಯವನ್ನು ಸೋಲಿಸಿದಳು. ಪರಾಕ್ರಮದಿಂದ ಹೋರಾಡಿ ಹೊರಗಿನ ಶತ್ರುಗಳ ಭೀತಿಯಿಂದ ರಾಜ್ಯವನ್ನು ರಕ್ಷಿಸಿದುದಲ್ಲದೆ ರಾಜ್ಯದಲ್ಲಿ ಮೂಡಿದ್ದ ಅನಾಯಕತ್ವವನ್ನು ಹೋಗಲಾಡಿಸಿದಳು.

1690ರ ವೇಳೆಗೆ ಈಕೆಯ ಕ್ಷಾತ್ರಸತ್ವವನ್ನು ಪರೀಕ್ಷಿಸುವ ಘಟನೆಯೊದಗಿತು. ಔರಂಗಜೇಬನ ಸೈನ್ಯದಿಂದ ಪರಾಜಿತನಾದ ಶಿವಾಜಿಯ ಎರಡನೆಯ ಮಗ ರಾಜಾರಾಮ ಆಶ್ರಯವನ್ನು ಹುಡುಕುತ್ತ ದಕ್ಷಿಣದತ್ತ ಧಾವಿಸಿ ಬಂದು ಚೆನ್ನಮ್ಮಾಜಿಯ ರಕ್ಷಣೆ ಕೋರಿದ. ಶತ್ರುವಿನ ಮತ್ತು ತನ್ನ ಬಲಾಬಲದ ಮಿತಿಯ ಅರಿವಿದ್ದರೂ ಚೆನ್ನಮ್ಮಾಜಿ ರಾಜಾರಾಮನಿಗೆ ರಕ್ಷಣೆ ನೀಡಿದಳು. ಇದರಿಂದ ಕುಪಿತಗೊಂಡ ಔರಂಗಜೇಬ ಕೆಳದಿ ರಾಜ್ಯವನ್ನು ಮುತ್ತಲು ಸೈನ್ಯ ಕಳುಹಿಸಿದ. ಮೊಗಲ್ ಸೈನ್ಯಕ್ಕೂ ಬಿದನೂರಿನ ಪಡೆಗಳಿಗೂ ಯುದ್ಧ ನಡೆದು ಔರಂಗಜೇಬನ ಸೈನ್ಯ ಸೋತು ಹಿಂದಿರುಗಿತು. ಔರಂಗಜೇಬನಂಥ ಮಹಾಪರಾಕ್ರಮಿಯ ಸೈನ್ಯವನ್ನು ಸೋಲಿಸಿದ ಚೆನ್ನಮ್ಮನ ಕೀರ್ತಿ ವಿಶೇಷವಾಗಿ ಹರಡಿತು. ಈ ಸಂಗತಿಯನ್ನು ಕುರಿತಾದ ಕನ್ನಡ ಜನಪದ ಗೀತೆಗಳು ಇಂದಿಗೂ ಜನಜನಿತವಾಗಿವೆ.

ಅನಂತರ ಈಕೆ ಬಸವಾಪಟ್ಟಣವನ್ನೂ ಹುಲಿಕೆರೆ ಕೋಟೆಯನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಂಡಳು. ಹುಲಿಕೆರೆಗೆ ಚೆನ್ನಗಿರಿ ಎಂದು ಹೆಸರಿಟ್ಟಳು. ಮೈಸೂರಿನ ಅರಸರಿಗೂ ಬಿದನೂರು ರಾಜ್ಯಕ್ಕೂ ವೈಮನಸ್ಯವಿದ್ದದ್ದರಿಂದ 1695ರ ವೇಳೆಗೆ ಯುದ್ಧಗಳು ಪ್ರಾರಂಭವಾದವು. ಪ್ರಾರಂಭದಲ್ಲಿ ಬಿದನೂರಿನ ಸೈನ್ಯ ಪರಾಕ್ರಮದಿಂದ ಹೋರಾಡಿತು. ಆದರೆ ಅರಕಲಗೂಡಿನ ಬಳಿ ನಡೆದ ಕದನದಲ್ಲಾದ ಸೋಲಿನಿಂದ ಕೆಳದಿ ಸಂಸ್ಥಾನದ ಕೆಲವು ಭಾಗ ಕೈಬಿಟ್ಟಿತು.

ಚೆನ್ನಮ್ಮಾಜಿಗೆ ಮಕ್ಕಳಿರಲಿಲ್ಲವಾದ್ದರಿಂದ ಬಾಲಕನೊಬ್ಬನನ್ನು ದತ್ತು ಸ್ವೀಕರಿಸಿ ಬಸವಭೂಪಾಲ ಎಂದು ನಾಮಕರಣ ಮಾಡಿದಳು. ತನ್ನ ಪತಿಯ ಹೆಸರಿನಲ್ಲಿ ಅನೇಕ ಅಗ್ರಹಾರಗಳನ್ನು ನಿರ್ಮಿಸಿದಳು. ಬ್ರಾಹ್ಮಣರಿಗೂ ಜಂಗಮರಿಗೂ ದಾನದತ್ತಿಗಳನ್ನು ನೀಡಿದಳು. ಕೆಳದಿಯ ವೀರಭದ್ರ ದೇವಾಲಯದ ಮುಂಭಾಗದಲ್ಲಿ ಧ್ವಜಸ್ತಂಭವನ್ನು ಸ್ಥಾಪಿಸಿದಳು. ಉದಾರ ಮತೀಯ ನೀತಿಯನ್ನನುಸರಿಸಿದ ಈಕೆ ತನ್ನ ರಾಜ್ಯದ ತೀರಪ್ರದೇಶದ ಪಟ್ಟಣಗಳಲ್ಲಿ ಚರ್ಚುಗಳನ್ನು ನಿರ್ಮಿಸಿಕೊಳ್ಳಲು ಪೋರ್ಚುಗೀಸರಿಗೆ ಅನುಮತಿ ನೀಡಿದಳು. ಈಕೆ ಮೂಕಾಂಬಿಕಾ ದೇವಾಲಯಕ್ಕೆ ಭೂಮಿದಾನ ಮಾಡಿದ್ದಲ್ಲದೆ ತನ್ನ ಹೆಸರಿನಲ್ಲಿ ಚೆನ್ನಾಂಬಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿದಳು. ಇವಳ ದತ್ತುಪುತ್ರನಾದ ಬಸವಪ್ಪನಿಗೆ ಆಡಳಿತದಲ್ಲಿ ತರಬೇತಿ ನೀಡಿ ಸು.1696–97ರಲ್ಲಿ ಅವನಿಗೆ ಪಟ್ಟ ಕಟ್ಟಿ ತಾನು ಅಧಿಕಾರದಿಂದ ನಿವೃತ್ತಳಾದಳು. ಇವಳು 1698ರಲ್ಲಿ ನಿಧನಳಾದಂತೆ ತಿಳಿದುಬರುತ್ತದೆ. (ಜಿ.ಆರ್.ಆರ್.)

**ಚೇರಮಾಂಗಾಡು:** ಕೇರಳ ರಾಜ್ಯದ ತ್ರಿಶೂರ್ ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗದ ಗೋರಿ ನೆಲೆ. ಇಲ್ಲಿ ಟೋಪಿಕಲ್ಲು, ಹೆಡೆ ಶಿಲೆ, ಕಲ್ಲುವೃತ್ತ ಮುಂತಾದ ಪ್ರಕಾರಗಳ ಕಲ್ಗೋರಿಗಳಿವೆ. ಪ್ರತಿಯೊಂದು ಪ್ರಕಾರದ ಒಂದೊಂದು ಗೋರಿಯನ್ನು 1990–91ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬಿ.ನರಸಿಂಹಯ್ಯನವರ ನೇತೃತ್ವದಲ್ಲಿ ಉತ್ಖನನದ ಮೂಲಕ ಹೊರತೆಗೆಯಲಾಯಿತು. ಟೋಪಿಕಲ್ಲು ಗೋರಿಯೊಂದರ ಅಡಿಯಲ್ಲಿ 1.05 ಮೀ ಆಳದ ಗುಂಡಿಯಲ್ಲಿ ಹೂಳಿದ್ದ ಅಸ್ಥಿ ಮಡಕೆಯನ್ನು ಉತ್ಖನನದಲ್ಲಿ ಅನಾವರಣಗೊಳಿಸಲಾಯಿತು. ಸಣ್ಣ ಮೂಳೆ ತುಂಡುಗಳು, ಕೆಂಪುಬಣ್ಣದ ಒಂದು ದಾನಿ, ಕೆಂಪುಬಣ್ಣದ ಲೇಪದಡಿ ಬಿಳಿರೇಖಾ ಚಿತ್ರವಿರುವ ಒಂದು ಬಟ್ಟಲು ಅಸ್ಥಿಮಡಕೆಯ ಒಳಗಿದ್ದವು. ಹೊರಭಾಗದಲ್ಲಿ ಕೆಂಪುಬಣ್ಣದ ದಾನಿ, ಕಪ್ಪು–ಕೆಂಪು ದ್ವಿವರ್ಣ ಪ್ರಕಾರದ 3 ಬಟ್ಟಲು ಮತ್ತು ಅನಿರ್ದಿಷ್ಟ ಆಕಾರದ ಒಂದು ಕಬ್ಬಿಣದ ಉಪಕರಣವಿದ್ದವು. ಅಸ್ಥಿಮಡಕೆಯ ಹೊರಭುಜದ ಮೇಲೆ ಮಣ್ಣಿನ ಪಟ್ಟಿಯನ್ನು ಅಂಟಿಸಿ ಅದರ ಮೇಲೆ ಹೆಬ್ಬೆರಳಿನ ಒತ್ತುಗಳಿಂದ ಅಲಂಕರಿಸಲಾಗಿತ್ತು. ಈ ಮಡಕೆಯ ಬಾಯಿಗೆ ಅಡ್ಡಲಾಗಿ ಒಂದು ಗ್ರಾನೈಟ್ ಚಪ್ಪಡಿಯನ್ನು ಇರಿಸಲಾಗಿತ್ತು. ಗುಂಡಿಯನ್ನು ಮಣ್ಣಿನಿಂದ ಮುಚ್ಚಿದ ಅನಂತರ ಇದರ ಮೇಲೆ ಟೋಪಿಕಲ್ಲನ್ನು ನಿಲ್ಲಿಸಲಾಗಿದೆ.

ಇಲ್ಲಿಯ ಇನ್ನೊಂದು ಪ್ರಕಾರದ ಗೋರಿಯ ಮೇಲೆ ಒಂದರ ಪಕ್ಕದಲ್ಲೊಂದರಂತೆ ವೃತ್ತ ವಿನ್ಯಾಸದಲ್ಲಿ ಎಂಟು ಹೆಡೆಶಿಲೆಗಳಿದ್ದವು. ಆದರೆ ಇದರ ಅಡಿಯಲ್ಲಿ ಯಾವುದೇ ಅವಶೇಷಗಳು ಉತ್ಖನನದಲ್ಲಿ ಕಂಡುಬರಲಿಲ್ಲ. ಇವು ಸಾಂಕೇತಿಕ ಸಮಾಧಿಗಳಾಗಿರಬಹುದು.

ಉತ್ಖನನದಲ್ಲಿ ಅಗೆದ 4ನೆಯ ಗೋರಿಯಲ್ಲಿ ಚಪ್ಪಡಿಕಲ್ಲಿನಿಂದ ಮುಚ್ಚಿದ ಅಸ್ಥಿಮಡಕೆಯಿತ್ತು. ಕೆಂಪು ಬಣ್ಣದ 11 ಮಣ್ಣಿನ ಪಾತ್ರೆಗಳಲ್ಲದೆ ಒಂದೆರಡು ಅಸ್ಥಿ ಚೂರುಗಳು ಇದರೊಳಗಿದ್ದವು. ಕಲ್ಲುವೃತ್ತದಿಂದ ಸುತ್ತುವರೆದ 5ನೆಯ ಗೋರಿಯಲ್ಲಿ ಮೂರು ಅಸ್ಥಿಮಡಕೆಗಳನ್ನು ಹೊರತೆಗೆಯಲಾಯಿತು. ಎಲ್ಲವನ್ನೂ ಪ್ರತ್ಯೇಕ ಗುಂಡಿಯೊಳಗೆ ಹೂಳಲಾಗಿತ್ತು. ಒಂದು ಅಸ್ಥಿಪಾತ್ರೆ ದೊಡ್ಡ ಬೋಗುಣಿಯಂತಿದ್ದು ಇದರೊಳಗೆ 1 ತಾಮ್ರದ ಬಟ್ಟಲು, ಕಬ್ಬಿಣದ 4 ಬಾಣದ ಮೊನೆ, ಕೊಕ್ಕೆಯುಳ್ಳ 2 ಹಣತೆ, 2 ತ್ರಿಪಾದಿ, ಕೊಕ್ಕೆ, ಚೂರಿ, ಮಚ್ಚು/ ಕತ್ತಿ, ಸಲಾಕೆ ಇವಿಷ್ಟು ವಸ್ತುಗಳಿದ್ದವು. ಎರಡನೆಯ ಅಸ್ಥಿಮಡಕೆಯಲ್ಲಿಯೂ ಇದೇ ಸಂಖ್ಯೆಯಲ್ಲಿ ಕಬ್ಬಿಣದ ವಸ್ತುಗಳಿದ್ದವು. ಇವೆರಡಕ್ಕಿಂತ ದೊಡ್ಡದಾಗಿದ್ದ ಮೂರನೆಯ ಮಡಕೆಯೊಳಗೂ ಸಾಕಷ್ಟು ಕಬ್ಬಿಣದ ಉಪಕರಣಗಳಿದ್ದವು. ಈ ಅಸ್ಥಿಮಡಕೆಗಳ ಮೇಲೆ ಗುರುತಿಗಾಗಿ ನಿಲ್ಲಿಸಿದ್ದ ಹೆಡೆಶಿಲೆಗಳಲ್ಲಿ ಸಣ್ಣ ಸಣ್ಣ ಗುಳಿಗಳನ್ನು ಮಾಡಿರುವುದು ಕುತೂಹಲಕಾರಿ. ಒಂದು ಹೆಡೆಶಿಲೆಯಲ್ಲಿ 2 ತೂತುಗಳಿದ್ದವು. (ಬಿ.ಎನ್.)

**ಚೈಲ್ಡ್, ಗೋರ್ಡನ್:** 1892–1957. ಆಸ್ಟ್ರೇಲಿಯನ್ ಪ್ರಾಗಿತಿಹಾಸಜ್ಞ. 1892ರ ಆಗಸ್ಟ್ 14ರಂದು ಆಸ್ಟ್ರೇಲಿಯದ ಸಿಡ್ನಿ ನಗರದಲ್ಲಿ ಜನಿಸಿದ. ಸಿಡ್ನಿ ವಿಶ್ವವಿದ್ಯಾಲಯದಲ್ಲಿ ಪದವೀಧರನಾಗಿ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿದ್ಯಾಲಯದ ಕ್ವೀನ್ಸ್ ಕಾಲೇಜಿನಲ್ಲಿ ಆನರ್ಸ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ. ಆಕ್ಸ್‌ಫರ್ಡಿನಲ್ಲಿ ಆರ್ತರ್ ಇವಾನ್ಸ್ ಮತ್ತು ಜಾನ್ ಲಿಂಟನ್ ಮೈರ್ಸ್‌ರ ಮಾರ್ಗದರ್ಶನದಲ್ಲಿ ಇಂಡೊ–

ಯುರೋಪಿಯನ್ ಭಾಷೆಗಳ ಮೇಲೆ ಪರಿಣಾಮ ಬೀರಿದ ಪುರಾತತ್ತ್ವ ವಿಚಾರಗಳನ್ನು ಕುರಿತು ಸಂಶೋಧನೆ ನಡೆಸಿದ. ಗ್ರೀಸ್, ಬಾಲ್ಕನ್ಸ್ ಮತ್ತು ಮಧ್ಯ ಯುರೋಪಿನಲ್ಲಿ ಪ್ರವಾಸ ಕೈಗೊಂಡು ಆ ಭಾಗಗಳ ಪ್ರಾಗಿತಿಹಾಸವನ್ನು ಆಳವಾಗಿ ಅಭ್ಯಸಿಸಿದ. ಅನಂತರ ಲಂಡನ್ ನಗರದ ರಾಯಲ್ ಆಂಥ್ರೊಪಲಾಜಿಕಲ್ ಇನ್‌ಸ್ಟಿಟ್ಯೂಟಿನ ಗ್ರಂಥಪಾಲಕನಾಗಿದ್ದ. ಇವನ ದಿ ಆರ್ಯನ್ಸ್ ಎಂಬ ಕೃತಿ 1926ರಲ್ಲಿ ಪ್ರಕಟವಾಯಿತು. 1927ರಲ್ಲಿ ಎಡಿನ್‌ಬರೊ ವಿಶ್ವವಿದ್ಯಾಲಯದಲ್ಲಿ ಪ್ರಾಗಿತಿಹಾಸ ಪುರಾತತ್ತ್ವದ ಪ್ರಥಮ ವಿಭಾಗದ ನಿರ್ದೇಶಕನಾದ. ಪ್ರ.ಶ.ಪೂ. 3ನೆಯ ಮತ್ತು 2ನೆಯ ಸಹಸ್ರಮಾನಗಳ ಐರೋಪ್ಯ ಪ್ರಾಗಿತಿಹಾಸವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿ ಯುರೋಪಿಗೂ ಪ್ರಾಚ್ಯಕ್ಕೂ ಇದ್ದ ಸಂಬಂಧಗಳೇನೆಂಬುದನ್ನು ವಿವೇಚಿಸಿದ. ಯುರೋಪಿನ ಪ್ರಾಚೀನ ಸಂಸ್ಕೃತಿಗಳ ಸ್ವರೂಪ ಗುಣಗಳ ಪರಿಶೀಲನೆ ನಡೆಸಿದ. ವಿಶಾಲ ಜ್ಞಾನ ಕ್ಷೇತ್ರದ ಅಧ್ಯಯನ ಮಾಡಿ, ವೈವಿಧ್ಯ ಪೂರಿತವಾದ ನಾನಾ ಅಂಶಗಳ ನಡುವಣ ಸಾಮರಸ್ಯವನ್ನು ತೋರಿಸಿ ಕೊಟ್ಟಿದ್ದು ಇವನ ಮಹಾಸಾಧನೆ. ಪ್ರಾಗಿತಿಹಾಸಾಭ್ಯಾಸದಲ್ಲಿ ಅಂತಾರಾಷ್ಟ್ರೀಯ ದೃಷ್ಟಿಯಿರಬೇಕೆಂಬುದು ಇವನು ತಳೆದಿದ್ದ ನಿಲುವು. ಇದು ಪ್ರಾಗಿತಿಹಾಸ ಅಧ್ಯಯನದ ಹೊಸ ಪರಂಪರೆಯನ್ನೇ ಸ್ಥಾಪಿಸಿತೆನ್ನಬಹುದು. ಸಾಮಾಜಿಕ ಹಾಗೂ ತಂತ್ರಶಾಸ್ತ್ರೀಯ ಅಭಿವೃದ್ಧಿಯ ಬೆಳಕಿನಲ್ಲಿ ಇವನು ಬರೆದ ಗ್ರಂಥಗಳು ಹೆಚ್ಚು ಜನಪ್ರಿಯವಾಗಿವೆ. ಪ್ರಪಂಚದಲ್ಲೇ ಇವನು ಆ ತಲೆಮಾರಿನ ಮಹಾ-ಪುರಾತತ್ತ್ವಜ್ಞನೆನ್ನಬಹುದು. 1925ರಲ್ಲಿ ಇವನ ದಿ ಡಾನ್ ಆಫ್ ಯುರೋಪಿಯನ್ ಸಿವಿಲೈಸೇಷನ್ ಪ್ರಕಟವಾಯಿತು. ಇವನು ಬದುಕಿದ್ದಾಗ ಈ ಗ್ರಂಥ ಆರು ಆವೃತ್ತಿಗಳನ್ನು ಕಂಡಿತು. ದಿ ಡ್ಯಾನ್ಯೂಬ್ ಇನ್ ಪ್ರಿ ಹಿಸ್ಟರಿ (1929) ಯುರೋಪಿನ ಪ್ರಾಗಿತಿಹಾಸವನ್ನು ಕುರಿತ ಅಭಿಜಾತ ಕೃತಿ, ಪೀಸಿಂಗ್ ಟುಗೆದರ್ ದಿ ಪಾಸ್ಟ್, ನ್ಯೂ ಲೈಟ್ ಆನ್ ದಿ ಮೋಸ್ಟ್ ಏನ್ಷಿಯಟ್ ಈಸ್ಟ್, ಮ್ಯಾನ್ ಮೇಕ್ಸ್ ಹಿಮ್‌ಸೆಲ್ಫ್-ಇವು ಇವನ ಇತರ ಕೃತಿಗಳು.

ಇವನು 1936ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನಡೆದ ಕಲೆ ಮತ್ತು ವಿಜ್ಞಾನ ಸಮ್ಮೇಳನಕ್ಕೆ ಪ್ರಾಗಿತಿಹಾಸ ವಿಭಾಗದ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದ. 1940ರಲ್ಲಿ ಬ್ರಿಟಿಷ್ ಅಕಾಡೆಮಿಯ ಫೆಲೊ ಆದ. ಇವನು 1937 ಅಕ್ಟೋಬರ್ 19ರಂದು ನಿಧನನಾದ. (ಎಂ.ಎಸ್.ಎನ್.)

**ಚೋಪನಿ-ಮಾಂಡೊ:** ಉತ್ತರಪ್ರದೇಶ ರಾಜ್ಯದ ಅಲಹಾಬಾದ್ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಬೇಲನ್ ನದಿಯ ಹಳೆಯ ಹರಿವೊಂದರ ಎಡದಂಡೆಯ ಮೇಲಿದೆ. ಸು. 15,000 ಚ.ಮೀ ಜಾಗದಲ್ಲಿರುವ ಈ ವಸತಿನೆಲೆಯಲ್ಲಿ 1967ರಲ್ಲಿ ಸಾಂಸ್ಕೃತಿಕ ಅನುಕ್ರಮವನ್ನು ತಿಳಿಯುವ ಉದ್ದೇಶದಿಂದ ಪರೀಕ್ಷೆಗುಂಡಿಯೊಂದನ್ನು ಅಗೆಯಲಾಯಿತು. 1977-84ರ ನಡುವೆ ಅಲಹಾಬಾದ್ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ, ಸಂಸ್ಕೃತಿ ಮತ್ತು ಪುರಾತತ್ತ್ವ ವಿಭಾಗ ಜಿ.ಆರ್. ಶರ್ಮ ಅವರ ನಿರ್ದೇಶನದಲ್ಲಿ ವಿಸ್ತೃತ ಉತ್ಖನನ ನಡೆಸಿತು. ಈ ವಸತಿನೆಲೆಯಲ್ಲಿ 1.55 ಮೀ ದಪ್ಪದ ವಸತಿ ಪದರವಿದೆ. ಇವು 10 ಸ್ತರಗಳಲ್ಲಿದ್ದು ಮೂರು ಸಾಂಸ್ಕೃತಿಕ ಹಂತಗಳನ್ನು ಪ್ರತಿನಿಧಿಸುತ್ತವೆ:

1ನೆಯ ಹಂತ-ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗದ ನಡುವಿನ ಸ್ಥಿತ್ಯಂತರ ಹಂತ; 2ನೆಯ ಹಂತ-ಆದಿ ಸೂಕ್ಷ್ಮಶಿಲಾಯುಗ (ಉಪಹಂತಗಳು-2ಎ ಮತ್ತು 2ಬಿ); 3ನೆಯ ಹಂತ-ಮುಂದುವರೆದ ಸೂಕ್ಷ್ಮಶಿಲಾಯುಗ.

1ನೆಯ ಹಂತ (10ನೆಯ ಸ್ತರ) ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗದ ನಡುವಿನ ಸ್ಥಿತ್ಯಂತರವಾಗಿದೆ. ಈ ಹಂತಕ್ಕೆ ಸೇರುವ ಉಪಕರಣಗಳು ಗಾತ್ರದಲ್ಲಿ ಅಂತ್ಯ ಹಳೆಶಿಲಾಯುಗದ ಉಪಕರಣಗಳಿಗಿಂತ ಚಿಕ್ಕದಾಗಿಯೂ ಸೂಕ್ಷ್ಮಶಿಲಾಯುಗದ ಉಪಕರಣಗಳಿಗಿಂತ ನೀಳವಾಗಿ ಮತ್ತು ದಪ್ಪವಾಗಿಯೂ ಇವೆ. ಹೆಚ್ಚಿನ ಉಪಕರಣಗಳನ್ನು ನೀಳ-ದಪ್ಪದ ಅಲಗು ಅಥವಾ ಚಕ್ಕೆಗಳಿಂದ ಮಾಡಲಾಗಿದೆ. ಸಮುಚ್ಚಯದಲ್ಲಿ ಶಿಲಾಗಟ್ಟಿಗಳು, ಚಕ್ಕೆಗಳು, ಅಲಗು, ಸಮಾನಾಂತರ ಅಲಗು, ಬದಿ ಮೊಂಡಾಗಿಸಿದ ಅಲಗು, ಕೊರೆಯುಳಿ ಮತ್ತು ವಿವಿಧ ನಮೂನೆಯ ಹೆರೆಚಕ್ಕೆಗಳಿವೆ. ಉಪಕರಣಗಳ ಅಂಚಿನಲ್ಲಿ ಅತಿಸೂಕ್ಷ್ಮ ಚಕ್ಕೆಗಳನ್ನು ಓರೆಕೋರೆಯಾಗಿ ತೆಗೆಯಲಾಗಿದೆ. ಚಕಮಕಿ ಕಲ್ಲು ಪ್ರಧಾನವಾಗಿ ಬಳಕೆಯಾಗಿದೆ.

2ನೆಯ ಹಂತದಲ್ಲಿ (9-4ನೆಯ ಸ್ತರ) 2 ಉಪಹಂತಗಳಿವೆ (2ಎ ಮತ್ತು 2ಬಿ). 1ನೆಯ ಉಪಹಂತದಲ್ಲಿ ವರ್ತುಲಾಕಾರದ (3.8ಮೀ ವ್ಯಾಸ) 2 ಗುಡಿಸಲುಗಳ ನೆಲಗಳಿವೆ. ಇವುಗಳ ಸುತ್ತಲೂ ಆಧಾರಕಂಬಗಳ ಗುಳಿಗಳಿವೆ. ಒಂದು ನೆಲದ ಮೇಲೆ ಕಲ್ಲಿನ ಹಾಸಿದೆ. ನೆಲಗಳ ಮೇಲೆ ಜಲ್ಲಿಕಲ್ಲುಗಳು, ಸೂಕ್ಷ್ಮಶಿಲೋಪಕರಣಗಳು, ಶಿಲಾಗಟ್ಟಿಗಳು ಕಂಡುಬಂದಿವೆ. ಹಿಂದಿನ ಹಂತಕ್ಕೆ ಹೋಲಿಸಿದರೆ ಸೂಕ್ಷಶಿಲೋಪಕರಣಗಳ ಗಾತ್ರ ಚಿಕ್ಕದಾಗಿರುವುದು ಗಮನಕ್ಕೆ ಬರುತ್ತದೆ. ಶೇ. 75ರಷ್ಟು ಉಪಕರಣಗಳನ್ನು ಅಲಗು ಅಥವಾ ಅಲಗಿನಂತಹ ಚಕ್ಕೆಗಳಿಂದ ರೂಪುಗೊಳಿಸಲಾಗಿದೆ. ಉಳಿದವು ಚಕ್ಕೆ ಅಥವಾ ಶಿಲಾಗಟ್ಟಿಗಳಿಂದ ತಯಾರಾದವು. ಅಲಗು ಮತ್ತು ಮೊನೆಗಳಲ್ಲಿ ಹೊಸ ನಮೂನೆಗಳು ಕಾಣುತ್ತವೆ. ನೀಳ-ದಪ್ಪ ಅಲಗುಗಳ ಬಳಕೆ ಮುಂದುವರೆಯುತ್ತದೆ. ಅಂಚಿನಲ್ಲಿ ತೆಗೆದ ಅತಿಸೂಕ್ಷ್ಮ ಚಕ್ಕೆಗಳು ಮತ್ತಷ್ಟು ಸೂಕ್ಷ್ಮವಾಗುತ್ತವೆ. ಚಕಮಕಿಕಲ್ಲು ಪ್ರಧಾನ (ಶೇ. 95) ಮೂಲವಸ್ತು. ಆದರೆ ಅಗೇಟ್, ಮಂದಗೆಂಪಿನ ಕಲ್ಲು ಮತ್ತು ಬೆಣಚು ಕಲ್ಲು ಸಣ್ಣ ಪ್ರಮಾಣದಲ್ಲಿ (ಶೇ. 5) ಬಳಕೆಯಾಗಿವೆ. 2ನೆಯ ಉಪಹಂತದಲ್ಲಿ (2ಬಿ) 5 ವರ್ತುಲ ಗುಡಿಸಲುಗಳ ನೆಲಗಳಿವೆ. ಒಂದು ಗುಡಿಸಲಿನ ಸುತ್ತಲೂ ವಿವಿಧ ಗಾತ್ರದ ಕಲ್ಲಿವೆ. ಮತ್ತೊಂದರಲ್ಲಿ ಕಲ್ಲುಹಾಸಿನ ನೆಲವಿದೆ. ನೆಲಗಳ ಹೊರಸುತ್ತಿನಲ್ಲಿ ಆಧಾರಕಂಬಗಳ ಗುಳಿಗಳಿವೆ. ಜಲ್ಲಿಕಲ್ಲುಗಳು, ಸೂಕ್ಷ್ಮಶಿಲೋಪಕರಣಗಳು, ಪ್ರಾಣಿಮೂಳೆಗಳು, ಬೊಂಬಿನ ಗುರುತುಳ್ಳ ಮಣ್ಣಿನುಂಡೆಗಳು ನೆಲಗಳ ಮೇಲೆ ಕಂಡುಬಂದಿವೆ. ಬೂದಿಯಿಂದ ತುಂಬಿದ ಅಗ್ಗಿಷ್ಟಿಕೆಯೊಂದು ಈ ಉಪಹಂತದಲ್ಲಿದೆ. ನಿರ್ದಿಷ್ಟ ಆಕೃತಿಗಳ ಉಪಕರಣಗಳಾದ ತ್ರಿಕೋನ ಮತ್ತು ಅಸಮ ಚತುರ್ಭುಜಗಳು ಮೊದಲ ಬಾರಿಗೆ ಕಂಡುಬರುತ್ತವೆ. ಅರ್ಧಚಂದ್ರಾಕೃತಿ, ಚಿಕ್ಕ ಕೊರೆಯುಳಿ ಇತರ ಹೊಸ ನಮೂನೆಗಳು. ನೀಳ-ದಪ್ಪ ಅಲಗಿನ ಬಳಕೆ ನಿಲ್ಲುತ್ತದೆ. ಉಳಿದ ಉಪಕರಣಗಳ ಗಾತ್ರ ಇನ್ನಷ್ಟು ಕುಗ್ಗುತ್ತದೆ. ಅಲಗಿನಿಂದ ರೂಪುಗೊಳಿಸಿದ ಉಪಕರಣಗಳ ಸಂಖ್ಯೆ ಹೆಚ್ಚುತ್ತದೆ (ಶೇ. 85). ಮುಂಚಿನಂತೆಯೇ ಚಕಮಕಿಕಲ್ಲು ಹೆಚ್ಚಾಗಿ ಉಪಯೋಗಿಸಲ್ಪಟ್ಟಿದೆ. ಜತೆಗೆ ಇತರ ಶಿಲಾಪ್ರಭೇದಗಳ ಬಳಕೆ ಹೆಚ್ಚುತ್ತದೆ (ಶೇ. 8).

3ನೆಯ ಹಂತದಲ್ಲಿ (3-1ನೆಯ ಸ್ತರ) ಗೋಲ (3-5.5 ಮೀ ವ್ಯಾಸ) ಅಥವಾ ಅಂಡಾಕಾರದ (4.7/3.3 ಮೀ) 30 ಗುಡಿಸಲುಗಳ ನೆಲಗಳಿವೆ. ಇವು ಒತ್ತೊತ್ತಾಗಿವೆ. ಎಲ್ಲ ನೆಲಗಳ ಮೇಲೆಯೂ ಬೊಂಬಿನ ಗುರುತುಳ್ಳ ಮಣ್ಣಿನುಂಡೆಗಳಿವೆ. ಈ ಗುಡಿಸಲುಗಳು ಮಣ್ಣು ಮೆತ್ತಿದ ಬೊಂಬಿನದ್ದಾಗಿದ್ದವು ಎಂಬುದು ಇದರಿಂದ ಖಚಿತವಾಗುತ್ತದೆ. ಕೆಲವು ನೆಲಗಳ ಅಂಚಿನಲ್ಲಿ ಕಲ್ಲಿನ ದೊಡ್ಡತುಂಡುಗಳಿವೆ. ಆಧಾರಕಂಬಗಳ ಗುಳಿಗಳು ಸಾಮಾನ್ಯವಾಗಿವೆ. ನೆಲಗಳ ಮೇಲೆ ಜಲ್ಲಿಕಲ್ಲು, ಸೂಕ್ಷ್ಮಶಿಲೋಪಕರಣಗಳು, ಅನೇಕ ಬಡಿಗಲ್ಲು ಮತ್ತು ಸುತ್ತಿಗೆಕಲ್ಲುಗಳು, ಕವಣೆ ಕಲ್ಲು, ಅರೆಯುವ ಕಲ್ಲು, ತೂತುಳ್ಳ ವರ್ತುಲಾಕಾರದ ಕಲ್ಲು, ಪ್ರಾಣಿಮೂಳೆಗಳು, ಮಡಕೆಚೂರುಗಳು ಮತ್ತು ಸುಟ್ಟ ಮಣ್ಣಿನುಂಡೆಗಳಿವೆ. ದೊಡ್ಡ ಬಡಿಗಲ್ಲೊಂದರ ಮೇಲೆ ಸುತ್ತಿಗೆಕಲ್ಲು ಮತ್ತು ಸುತ್ತಲೂ ತಯಾರಿಕೆಯ ಹಂತದಲ್ಲಿರುವ ಸೂಕ್ಷ್ಮಶಿಲೋಪಕರಣಗಳು ಕಂಡುಬಂದಿವೆ. ಕಲ್ಲಿನ ಗೋಲ ಅಥವಾ ಮೊಟ್ಟೆಯಾಕಾರದ (30-70 ಮೀ ವ್ಯಾಸ) ದಂಡೆಗಳು ಗುಡಿಸಲುಗಳ ಸಮೀಪದಲ್ಲಿ ಚಪ್ಪಡಿಗಳಿಂದ ಮಾಡಿವೆ. ಇವುಗಳ ಸುತ್ತಮುತ್ತ ಬೊಂಬಿನ ಗುರುತುಳ್ಳ ಮಣ್ಣಿನುಂಡೆಗಳಿವೆ. ಹಾಗಾಗಿ ಈ ದಂಡೆಗಳು ಬೊಂಬು ಮತ್ತು ಮಣ್ಣಿನಿಂದ ಕಟ್ಟಿದ ಧಾನ್ಯದ ಕಣಜಗಳ ಪೀಠಗಳಾಗಿರಬಹುದು. ಇವಲ್ಲದೆ 11 ಗೋಲಾಕಾರದ (80 ಸೆಂಮೀ-1.5 ಮೀ ವ್ಯಾಸ) ಗುಳಿಒಲೆಗಳು ಗುಡಿಸಲುಗಳ ಹೊರಗೆ ಕಂಡುಬಂದಿವೆ. ಸು.40 ಸೆಂಮೀ ಆಳವಿರುವ ಈ ಒಲೆಗಳೊಳಗೆ ಬೂದಿಮಣ್ಣು, ಮೂಳೆಚೂರು, ಇದ್ದಿಲು ಸುಟ್ಟಮಣ್ಣಿನುಂಡೆ ಮತ್ತು ವಿರಳವಾಗಿ ಸೂಕ್ಷ್ಮಶಿಲೋಪಕರಣಗಳಿವೆ. ಚಕ್ರದ ಸಹಾಯವಿಲ್ಲದೆ ತಯಾರಾದ ಮಣ್ಣಾತ್ರೆಗಳು ಈ ಹಂತದಲ್ಲಿ ಮೊದಲಬಾರಿಗೆ ಕಂಡುಬರುತ್ತವೆ. ಸೂಕ್ಷ್ಮಶಿಲೋಪಕರಣಗಳು ಮತ್ತಷ್ಟು ಕಿರಿದಾಗುತ್ತವೆ. ಇವನ್ನು ಜಾಗರೂಕತೆಯಿಂದ ಅತ್ಯಂತ ನಿಖರವಾಗಿ ರೂಪುಗೊಳಿಸಲಾಗಿದೆ. ಅಲಗಿನಿಂದ ಮಾಡಲ್ಪಟ್ಟ ಉಪಕರಣಗಳ ಸಂಖ್ಯೆ ಹೆಚ್ಚುತ್ತದೆ (ಶೇ.93.8). ಸಮದ್ವಿಬಾಹು ತ್ರಿಭುಜ ಮತ್ತು ಟ್ರಾಂಚೆಟ್ ಹೊಸ ಬಗೆಗಳು. ಹಿಂದಿನ ಹಂತಗಳಲ್ಲಿರುವಂತೆ ಚಕಮಕಿಕಲ್ಲು ಪ್ರಧಾನ ಮೂಲವಸ್ತುವಾದರೂ ಇತರ ಪ್ರಭೇದಗಳ ಬಳಕೆ ಇನ್ನಷ್ಟು ಹೆಚ್ಚಾಗುತ್ತದೆ.

ಉತ್ಖನನದಲ್ಲಿ ದೊರೆತ ಸುತ್ತಿಗೆ ಕಲ್ಲು, ಬಡಿಗಲ್ಲು, ಅರೆಯುವ ಕಲ್ಲು, ಕವಣೆ ಕಲ್ಲು, ತೂತಿರುವ ವರ್ತುಲಾಕಾರದ ಕಲ್ಲು ಮುಂತಾದ ಸ್ಥಳೀಯವಾಗಿ ಸಿಗುವ ಬೆಣಚುಕಲ್ಲು ಮತ್ತು ಮರಳುಗಲ್ಲಿನಿಂದ ಮಾಡಲ್ಪಟ್ಟಿವೆ. ಹೆಚ್ಚಿನವು 3ನೆಯ ಹಂತದಿಂದ ದೊರೆತಿವೆ. 2ನೆಯ ಹಂತದ 2ನೆಯ ಉಪಹಂತದಲ್ಲಿ ಬಡಿಗಲ್ಲು ಮತ್ತು ಸುತ್ತಿಗೆ ಕಲ್ಲುಗಳು ಮಾತ್ರ ಇವೆ. ಇನ್ನುಳಿದ ಹಂತಗಳಲ್ಲಿ ಕಲ್ಲಿನ ವಸ್ತುಗಳಿಲ್ಲ.

ಚಕ್ರದ ಸಹಾಯವಿಲ್ಲದೆ ತಯಾರಾದ ಕೆಂಪುಬಣ್ಣದ ಪಾತ್ರೆ ಮತ್ತು ಬೂದಿಗಂದು ಬಣ್ಣದ ಪಾತ್ರೆ 3ನೆಯ ಹಂತದ ವಿಶೇಷತೆ. ಇವುಗಳಲ್ಲಿನ ಮಣ್ಣು, ಮರಳು, ಹೊಟ್ಟು ಮತ್ತು ಹುಲ್ಲುಕಡ್ಡಿಗಳೊಂದಿಗೆ ಮಿಶ್ರವಾಗಿದ್ದು ಪೆಡಸಾಗಿದೆ. ಕಡಿಮೆ ತಾಪದಲ್ಲಿ ಸುಟ್ಟ ಕಾರಣ ಪಾತ್ರೆಗಳು ದುರ್ಬಲವಾಗಿವೆ. ಪಾತ್ರೆಗಳ ಮೇಲ್ಮೈ ಲೇಪರಹಿತವಾಗಿದೆ. ಚಿಕ್ಕ ಗಾತ್ರದ ಸರಳ ಬಟ್ಟಲು ಮತ್ತು ದಾನಿಗಳು ಹೆಚ್ಚಾಗಿ ಕಂಡುಬಂದಿವೆ. ಹಲವಾರು ಪಾತ್ರೆಚೂರುಗಳ ಹೊರಮೈ ಮೇಲೆ ಒತ್ತಿಮಾಡಿದ ವಿನ್ಯಾಸಗಳಿವೆ.

ಉತ್ಖನನದಲ್ಲಿ ದೊರೆತ ಪ್ರಾಣಿಮೂಳೆಗಳಲ್ಲಿ ಶೇ. 97 3ನೆಯ ಹಂತದಿಂದ ಲಭಿಸಿವೆ. ಇವು ಅತ್ಯಂತ ಚಿಕ್ಕದಾಗಿರುವುದರಿಂದ ಪ್ರಾಣಿಗಳನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಗೀರಿನ ವಿನ್ಯಾಸವುಳ್ಳ ಮೂಳೆಯ ಉಪಕರಣವೊಂದು 3ನೆಯ ಹಂತದ ಮಹತ್ವ ಅವಶೇಷ. ಕಾಡಕ್ಕಿಯ ಕಾಳುಗಳು ಮತ್ತು ಕಲ್ಲಿನ ಮಣಿ ಈ ಹಂತದಿಂದ ದೊರೆತ ಇತರ ಮುಖ್ಯ ಅವಶೇಷಗಳು.

ಅವಶೇಷಗಳ ಆಧಾರದ ಮೇಲೆ ಚೋಪನಿ–ಮಾಂಡೊವನ್ನು ಅರೆ–ವಲಸೆ ನಿವೇಶನವನ್ನಾಗಿ ಗುರುತಿಸಬಹುದು. ಇಲ್ಲಿಯ ಸೂಕ್ಷ್ಮಶಿಲಾಯುಗ ಸಮುದಾಯ ಬೇಲನ್ ನದಿಬಯಲಿನ ಇತರ ಸಮಕಾಲೀನ ಸಮುದಾಯಗಳಂತೆ ಬೇಟೆ–ಆಹಾರ ಸಂಗ್ರಹಣೆ–ಮೀನುಗಾರಿಕೆ ಇವುಗಳನ್ನು ಆಧರಿಸಿತ್ತು. ಉತ್ಖನನಕಾರರು ಚೋಪನಿ–ಮಾಂಡೊವನ್ನು ಪ್ರ.ಶ.ಪೂ.17,000–7,000ದ ನಡುವಿನ ಕಾಲಾವಧಿಗೆ ಸೇರಿಸಲಾಗುತ್ತದೆ. ಬೇಲನ್ ನದಿ ಬಯಲಿನ ಸೂಕ್ಷ್ಮಶಿಲಾಯುಗ ಹಂತವನ್ನು ಪ್ರ.ಶ.ಪೂ.12,000–7,000 ನಡುವಿನ ಅವಧಿಗೆ ಸೇರಿಸಲಾಗಿದೆ. (ವಿ.ಎಸ್.)

**ಚೋಳರು:** ದಕ್ಷಿಣ ಭಾರತವನ್ನು ಆಳಿದ ಪ್ರಮುಖ ರಾಜಮನೆತನಗಳಲ್ಲೊಂದು. ಇವರು ಸು.850–1250ರವರೆಗೆ ಆಳಿದರು. ಈ ಮನೆತನದ ಮೂಲವಿಲ್ಲ. ಇವರು ಕಾವೇರಿ ನದಿಯ ನಾಲೆಯ ಪಕ್ಕದ ಫಲವತ್ತಾದ ಪ್ರದೇಶವನ್ನು ಆಳುತ್ತಿದ್ದರು. ಇವರ ರಾಜಧಾನಿಯು ತಿರುಚಿರಾಪಳ್ಳಿಯ ಸಮೀಪದ ಉರ್‍ಯೆಯೂರು ಆಗಿತ್ತು. ಮೌರ್ಯ ಅರಸ ಅಶೋಕನ (ಪ್ರ.ಶ.ಪೂ.300) ಶಾಸನಗಳಲ್ಲಿ ಇವರ ಬಗ್ಗೆ ಪ್ರಸ್ತಾಪವಿದೆ. ಸಂಗಮ ಸಾಹಿತ್ಯದಲ್ಲೂ ಇವರ ಬಗ್ಗೆ ಉಲ್ಲೇಖಗಳಿವೆ. ಸಂಗಮಯುಗದಲ್ಲಿ ತಮಿಳು ಸಾಹಿತ್ಯ (ಪ್ರ.ಶ.ಪೂ.300–ಪ್ರ.ಶ.400ರವರೆಗೆ) ಪುನರುಜ್ಜೀವನ ಹೊಂದಿತು. ಚೋಳ ರಾಜರ ಸಲುವಾಗಿ ಕವಿಗಳಿಂದ (ಅಥವಾ ಹಾಡುಗಾರರಿಂದ) ಮತ್ತು ಆಸ್ಥಾನ ವಿದ್ವಾಂಸರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕವಿತೆಗಳು ರಚಿಸಲ್ಪಟ್ಟವು. ಅಂಥವರಲ್ಲಿ ಪ್ರಸಿದ್ಧರಾದವರೆಂದರೆ, ಪೆರ್‌ನ್ನಾರ್‌ಕಿಲ್ಲಿ, ಕರಿಕಾಲನ್, ಹಾಗೂ ಕೊಚ್ಚೆಂಗಣನ್. ಇವರು ಶೌರ್ಯ ಮತ್ತು ಉದಾರತನಕ್ಕೆ ಹೆಸರಾದ ಮೊದಲ ಚೋಳ ಅರಸರು. ಪೆರ್‌ನ್ನಾರ್‌ಕಿಲ್ಲಿ ಹಲವು ಯಜ್ಞಯಾಗಾದಿಗಳನ್ನು ಮಾಡಿದ ಕೀರ್ತಿ ಹೊಂದಿದ್ದ. ಅನಂತರದ ಅರಸರು ಕಾವೇರಿನದಿಗೆ ಅಣೆಕಟ್ಟನ್ನು ನಿರ್ಮಿಸಿದರು. ಪುರಾಣ ಕಥೆಗಳಲ್ಲಿ ಸಾಕಷ್ಟು ಸಲ ಕೇಳಿಬರುವ ಮತ್ತೊಬ್ಬ ಚೋಳ ಅರಸನೆಂದರೆ ಕೊಚಚೆಂಗಣಣ್. ಇವನು ಹಲವಾರು ಶೈವ ಮತ್ತು ವಿಷ್ಣು ದೇವಾಲಯಗಳನ್ನು ನಿರ್ಮಿಸಿದ.

ಸಂಗಮ ಯುಗದ ಅನಂತರ ಚೋಳರು ಉಪೇಕ್ಷಿತ ಸ್ಥಿತಿಯಲ್ಲಿದ್ದರು. ಪಲ್ಲವರ ಅಧೀನದಲ್ಲಿ ಮಹಾಮಂಡಲೇಶ್ವರರಾಗಿ ಸೇವೆ ಸಲ್ಲಿಸುತ್ತಾ ಮತ್ತೆ ಮೇಲೆ ಬರುವ ಪ್ರಯತ್ನ ನಡೆಸಿದರು. ಹೀಗೆ ಪುನರುಜ್ಜೀವಿತಗೊಂಡ ಚೋಳ ಸಾಮ್ರಾಜ್ಯದ ಮೊದಲ ಅರಸು ವಿಜಯಾಲಯ (ಸು.850). ಇವನು ಮುತ್ತರೈಯರಿಂದ ತಂಜಾವೂರನ್ನು ಗೆದ್ದುಕೊಂಡ ಹಾಗೂ ಚೋಳ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದ. ಈತನ ಮಗನೂ ಉತ್ತರಾಧಿಕಾರಿಯೂ ಆದ 1ನೆಯ ಆದಿತ್ಯನು (870–897) ತೊಂಡೈಮಂಡಲ ಹಾಗೂ ಕೊಂಗು ರಾಜ್ಯವನ್ನು ಗೆದ್ದ. ಇವನ ಆಳಿಕೆಯಲ್ಲಿ ಹಲವು ಹಳೇ ಶೈವ ದೇವಾಲಯಗಳನ್ನು ಕಲ್ಲಿನ ದೇವಾಲಯಗಳನ್ನಾಗಿ ಮಾರ್ಪಡಿಸಲಾಯಿತು. 1ನೆಯ ಆದಿತ್ಯ ಮಗನೇ 1ನೆಯ ಪರಾಂತಕ (907–955). ಇವನು ಮಧುರೈಕೊಂಡ, ಪರಕೇಸರಿವರ್ಮನ್ ಎಂಬ ಬಿರುದನ್ನು ಧರಿಸಿದ. ಪಾಂಡ್ಯರ ರಾಜಧಾನಿಯಾದ ಮಧುರೈಯನ್ನು ವಶಪಡಿಸಿಕೊಂಡ ಪರಾಂತಕ ಪಾಂಡ್ಯ ಅರಸ 2ನೆಯ ರಾಜಸಿಂಹನನ್ನು ಸೋಲಿಸಿದ. ಇಳಮ್ (ಶ್ರೀಲಂಕ) ಅರಸನು ಪಾಂಡ್ಯ ಅರಸನ ರಕ್ಷಣೆಗೆ ಬಂದ ಕಾರಣ 1ನೆಯ ಪರಾಂತಕನ ಮಧಿರೈಯಮ್ ಇಳಮುಮ್ಕೊಂಡ ಪರಕೇಸರಿವರ್ಮನ್ ಎಂಬ ಬಿರುದನ್ನು ಧರಿಸಿದ. ಅಲ್ಲದೆ 1ನೆಯ ಪರಾಂತಕನು ಬಾಣ ಮತ್ತು ವೈದುಂಬ ಮನೆತನದವರನ್ನು ಹತ್ತಿಕ್ಕಿದ. ಕೊನೆಗೆ, ರಾಷ್ಟ್ರಕೂಟ ಅರಸನಾದ 3ನೆಯ ಕೃಷ್ಣನಿಂದ (939–965) ತಕ್ಕೋಲಂ ಯುದ್ಧದಲ್ಲಿ ಸೋಲಿಸಲ್ಪಟ್ಟ. ಹಾಗಾಗಿ ಚೋಳ ಸಾಮ್ರಾಜ್ಯವು ಪುನಃ ಅವನತಿಯನ್ನು ಹೊಂದಿತು.

1ನೆಯ ಪರಾಂತಕ ಉತ್ತಮ ರಾಜನಾಗಿದ್ದ. ಸ್ಥಳೀಯ ಆಡಳಿತವನ್ನು ವ್ಯವಸ್ಥಿತ ರೀತಿಯಲ್ಲಿ ರಚಿಸಿದ. ಉತ್ತರಮೇರುಚತುರ್ವೇದಿಮಂಗಲ ಎಂಬ ಹಳ್ಳಿಯ ಸಮಿತಿಗಳಲ್ಲಿ ಸೇವೆಸಲ್ಲಿಸಲು, ಅಭ್ಯರ್ಥಿಗಳನ್ನು ಚುನಾಯಿಸುವ ರೀತಿಯನ್ನು ಪ್ರಸಿದ್ಧ ಉತ್ತರಮೇರೂರು ಶಾಸನ ತಿಳಿಸುತ್ತದೆ. ಕಂದಾಯ ಇಲಾಖೆಯ ಆಡಳಿತವನ್ನು ಪುನರ್ ರಚಿಸಿದ. ಮೂವೇನ್‌ದವೇಲನ್ ಎಂಬ ಹೊಸ ಕಛೇರಿಯನ್ನು ತೆರೆದ. ದೇವಸ್ಥಾನದ ಪೂಜಾನಿಯಮಗಳನ್ನು ವ್ಯವಸ್ಥೆಗೊಳಿಸಿದ. ಪೂಜೆಕಾರ್ಯಕ್ಕೆ ಹೊಸ ಹುದ್ದೆಯನ್ನು ಕಲ್ಪಿಸಿದ (ಶಿವಬ್ರಾಹ್ಮಣ). ಎರಮ್‌ಬೂರ್, ತಿರುನಾಮನಲ್ಲೂರ್ ಹಾಗೂ ಪುಳ್ಳಮಂಗೈನ ದೇವಾಲಯಗಳನ್ನು ಕಲ್ಲಿನಿಂದ ಪುನರ್‌ನಿರ್ಮಿಸಲಾಯಿತು. 1ನೆಯ ಪರಾಂತಕನ ಅನಂತರ ಆತನ ಮಗ ಗಂಡರಾದಿತ್ಯ, ಗಂಡರಾದಿತ್ಯನ ಅನಂತರ ಆತನ ಕಿರಿಯ ಸಹೋದರ ಅರಿಂಜಯ, ಅರಿಂಜಯ ಅನಂತರ ಸುಂದರಚೋಳ ಕ್ರಮವಾಗಿ ರಾಜರಾದರು. ಸುಂದರಚೋಳ (957–971) ಪಾಂಡ್ಯ ಅರಸ ವೀರಪಾಂಡ್ಯನನ್ನು ಜಯಿಸಿದ ಕಾರಣ ಮಧುರೈಕೊಂಡ ರಾಜಕೇಸರಿವರ್ಮನ್ ಎಂದು ಕರೆಯಲ್ಪಡುತ್ತಿದ್ದ. ಈತ ಇಲಮ್ (ಶ್ರೀಲಂಕ)ವರೆಗೂ ತನ್ನ ಪರಾಕ್ರಮ ಹೊಂದಿದ್ದ. ಇವನ ಮಗನಾದ 2ನೆಯ ಆದಿತ್ಯ (962–968) ಪಾಂಡ್ಯ ರಾಜ್ಯದ ಅಧಿಕಾರಿಗಳ ಸಂಚಿಗೆ ಬಲಿಯಾದ. ತರುವಾಯ ಇವನ ಚಿಕ್ಕಪ್ಪನ ಮಗ ಉತ್ತಮ ಚೋಳ (971–987)ನು ಸಿಂಹಾಸನ ರೂಢನಾದ. ಈತನ ತಾಯಿ ಸೆಂಬಿಯನ್ ಮಹಾದೇವಿ. ಈಕೆ ವೃದ್ಧಾಚಾಲಮ್, ಅನಂಗೂರ್, ಸೆಂಬಿಯನ್ ಮಾದೇವಿ, ತಿರುಮಣ್ಣನ್ ಜೇರಿ, ತಿರುಕ್ಕೋಡಿಕ್ಕಾವಲ್, ಗೋಪುರಪಟ್ಟಿ ಇತರ ಸ್ಥಳಗಳಲ್ಲಿ ಹಲವಾರು ದೇವಾಲಯಗಳನ್ನು ನಿರ್ಮಿಸಿದಳು. ಅಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ತಾಮ್ರಮೂರ್ತಿಗಳನ್ನು ದೇವಾಲಯಗಳಿಗೆ ಕೊಟ್ಟಳು. ಉತ್ತಮ ಚೋಳನ ಅನಂತರದಲ್ಲಿ 2ನೆಯ ಪರಾಂತಕನ ಮಗನೇ ಚೋಳ ಮನೆತನದ ಪ್ರಸಿದ್ಧ ಅರಸ 1ನೆಯ ರಾಜರಾಜ (985–1014). ಇವನು ಕರ್ನಾಟಕದ ಪ್ರದೇಶಗಳಾದ ಕಾಂಡಳೂರು–ಸಾಲೈ, ಗಂಗಪಾಡಿ, ನೊಳಂಬಪಾಡಿ, ತಡಿಗೈಪಾಡಿ ಮತ್ತು ಕೊಡಗನ್ನು ಗೆದ್ದುಕೊಂಡ. ಪಾಂಡ್ಯ ಅರಸ ಅಮರಭುಜಂಗನನ್ನು ಸೋಲಿಸಿದ. ಈ ರಾಜರಾಜ ಈಳಮಂಡಲಮ್ ಗೆದ್ದುಕೊಂಡು ಅದಕ್ಕೆ ಜನನಾಥ ಮಂಡಲಮ್ ಎಂದು ಹೆಸರಿಟ್ಟು ಚೋಳ ದೇಶದ ಪ್ರಾಂತವನ್ನಾಗಿಸಿದ. ಇವನು ಪಶ್ಚಿಮ ಚಾಳುಕ್ಯ ಅರಸ ಸತ್ಯಾಶ್ರಯನ ಮೇಲೂ ಧಾಳಿ ಮಾಡಿ ಸೋಲಿಸಿದ. ಇವನು ತನ್ನ ಮಗಳು ಕುಂದವೈಯನ್ನು ಶಕ್ತಿವರ್ಮನ ತಮ್ಮನಿಗೆ ಕೊಟ್ಟು ವಿವಾಹ ಮಾಡಿದ. ಪೂರ್ವ ಚಾಳುಕ್ಯ ಅರಸ ಭೀಮನನ್ನು ಕಿತ್ತೊಗೆದು ಅವನ ಜಾಗದಲ್ಲಿ ಶಕ್ತಿವರ್ಮನನ್ನು ರಾಜನನ್ನಾಗಿಸಿದ. ಇವನು ಉತ್ತಮ ಆಡಳಿತಗಾರನಾಗಿದ್ದ, ಭೂಮಾಪನ ಕಾರ್ಯವನ್ನು ಕೈಗೊಂಡಿದ್ದ. ಭೂಕಂದಾಯ ಪದ್ಧತಿಯನ್ನು ಪುನರ್‌ರಚಿಸಿದ. ಒಳನಾಡು ಎಂಬ ಹೊಸ ಆಡಳಿತ ವಿಭಾಗವನ್ನು ರಚಿಸಿದ. ಒಂದನೆಯ ರಾಜರಾಜ ತನ್ನ ಶಾಸನಗಳ ಮುನ್ನುಡಿಯ ಪ್ರಾರಂಭದಲ್ಲಿ ಮೇಯ್‌ಕೀರ್ತಿಯನ್ನು ಬರೆಸಲು ಪ್ರಾರಂಭಿಸಿದ.

ಬೃಹದೀಶ್ವರ ದೇವಾಲಯ, ತಂಜಾವೂರು

ಇವನ ಪೂರ್ವಿಕರು ರಾಜಕೇಸರಿವರ್ಮನ್ ಅಥವಾ ಪರಕೇಸರಿವರ್ಮನ್ ಎಂಬ ರಾಜರ ಬಿರುದುಗಳಿಂದ ಸಂಬೋಧಿಸಲ್ಪಟ್ಟಿದ್ದರು. ರಾಜನು ಪರಕೇಸರಿವರ್ಮನ್ ಬಿರುದನ್ನು ಹೊಂದಿದ್ದರೆ, ಆತನ ಮಗ ರಾಜಕೇಸರಿವರ್ಮನ್ ಎಂಬ ಬಿರುದನ್ನು ಹೊಂದಿರುತ್ತಿದ್ದ. ಹಾಗೆಯೇ ಮಗನ ಮಗ (ಮೊಮ್ಮಗ) ಪರಕೇಸರಿವರ್ಮನ್ ಎಂಬ ಬಿರುದನ್ನು ಧರಿಸುತ್ತಿದ್ದ. ಈ ಬಿರುದುಗಳು 1ನೆಯ ರಾಜರಾಜಚೋಳನ ಮುಂಚಿನ ಅರಸರನ್ನು ಗುರುತಿಸುವಲ್ಲಿ ಸಾಕಷ್ಟು ಗೊಂದಲಗಳಿಗೆ ದಾರಿಮಾಡಿಕೊಟ್ಟಿತು. ಶಾಸನದಲ್ಲಿ ದೃಢಪಡಿಸುವ ಬೇರೆ ಯಾವುದಾದರೂ ಮಾಹಿತಿ ಲಭ್ಯವಾದಲ್ಲಿ ಮಾತ್ರ ಆ ಶಾಸನ ಯಾವ ಅರಸನದೆಂದು ತಿಳಿಯಬಹುದಾಗಿತ್ತು. ಒಂದನೆಯ ರಾಜರಾಜ ಮೇಯ್‌ಕೀರ್ತಿಯನ್ನು ಬಳಸುವುದರ ಮೂಲಕ ಹೊಸ ಪದ್ಧತಿಯನ್ನು ಪ್ರಾರಂಭ ಮಾಡಿದ. ಪರಿಶುದ್ಧ ತಮಿಳು ಪದ್ಯದಲ್ಲಿ ರಚಿಸಿರುವ ಇದು ಕಾಲಾನುಕ್ರಮವಾಗಿ ತಮ್ಮ ಅರಸರುಗಳ ಸಾಧನೆಗಳನ್ನು ವಿವರಿಸುತ್ತದೆ. ಮೇಯ್‌ಕೀರ್ತಿಯನ್ನು ಓದಿದ ಪ್ರತಿಯೊಬ್ಬರು ಅದು ಯಾವ ಅರಸನ ಶಾಸನವೆಂದು ಸುಲಭವಾಗಿ ಹೇಳಬಹುದಾಗಿತ್ತು. ಇವನ ಉತ್ತರಾಧಿಕಾರಿ ಈ ಪದ್ಧತಿಯನ್ನು ಅನುಸರಿಸಿದ. ಇವನ ಉತ್ತರಾಧಿಕಾರಿಗಳ ಕಾಲದಲ್ಲಿ ಇದು ಒಂದು ಉತ್ತಮ ಪದ್ಧತಿಯಾಗಿ ಬೆಳೆಯಿತು. 1ನೆಯ ರಾಜರಾಜ ದೇವಸ್ಥಾನ ಆಡಳಿತ ಪದ್ಧತಿಯನ್ನು ಪುನರ್‌ರಚಿಸಿದ.

1ನೆಯ ರಾಜರಾಜಚೋಳನ ಬಹುಮುಖ್ಯ ಸಾಧನೆಯೆಂದರೆ 1014ರಲ್ಲಿ ತಂಜಾವೂರಿನಲ್ಲಿ ರಾಜರಾಜೇಶ್ವರಮ್ ದೇವಾಲಯವನ್ನು ನಿರ್ಮಿಸಿದ್ದು. ಭಾರತದ ಕಲಾ ಇತಿಹಾಸದಲ್ಲಿ ಈ ದೇವಾಲಯ ಪ್ರತ್ಯೇಕ ಸ್ಥಾನ ಪಡೆದಿದೆ. ಈ ಬೃಹತ್ ದೇವಾಲಯವು ಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ವರ್ಣಚಿತ್ರ ಮತ್ತು ಧರ್ಮದ ಪ್ರಮುಖ ಕೇಂದ್ರವಾಗಿತ್ತು. 1ನೆಯ ರಾಜರಾಜಚೋಳ, ಆತನ ಕುಟುಂಬದವರು, ಅಧಿಕಾರಿಗಳು ಮತ್ತು ಇತರ ವರ್ಗದವರು ಈ ದೇವಾಲಯಕ್ಕೆ ಹೇರಳವಾಗಿ ದಾನವನ್ನು ನೀಡಿದ್ದಾರೆ.

1ನೆಯ ರಾಜರಾಜನ ಮಗ 1ನೆಯ ರಾಜೇಂದ್ರ (1012–1044). ಇವನು ಪರಾಕ್ರಮಿ. ಪಾಂಡ್ಯ ಮತ್ತು ಸಿಂಹಳ ಮನೆತನದ ಅರಸರನ್ನು ಸೋಲಿಸಿದ. ಅಲ್ಲದೆ ಪಶ್ಚಿಮ ಚಾಳುಕ್ಯ ಹಾಗೂ ಚೇರ ಅರಸರನ್ನು ಸೋಲಿಸಿದ. ಗೆದ್ದ ಪಾಂಡ್ಯ ರಾಜ್ಯದ ರಾಯಭಾರಿಗಳಾಗಿ ತನ್ನ ಮಕ್ಕಳನ್ನು ನೇಮಿಸಿದ. ಇವರು ಚೋಳಪಾಂಡ್ಯರೆಂದು ಕರೆಯಲ್ಪಟ್ಟರು. 1ನೆಯ ರಾಜೇಂದ್ರ ತನ್ನ ಸೈನ್ಯಾಧಿಕಾರಿಯನ್ನು ಉತ್ತರಭಾರತದ ಭಾಗಗಳನ್ನು ಜಯಿಸಲು ಕಳುಹಿಸಿದ. ಇದರ ಉದ್ದೇಶವೆಂದರೆ ಗಂಗೆಯನ್ನು ತನ್ನ ಸಾಮ್ರಾಜ್ಯಕ್ಕೆ ತಂದು ಶುದ್ಧೀಗೊಳಿಸುವುದು. ಉತ್ತರಭಾರತದ ದಂಡಯಾತ್ರೆಯಲ್ಲಿ ಇವನು ವಶಪಡಿಸಿಕೊಂಡ ಸ್ಥಳಗಳೆಂದರೆ ಚಕ್ಕರಕೊಟ್ಟಂ, ವಡ್ಡವಿಷಯ ಹಾಗೂ ಕೋಸಲನಾಡು. ತದನಂತರ ಇವನು ಬಂಗಾಲದ ಮಹೀಪಾಲನನ್ನು ಸೋಲಿಸಿ, ತಕ್ಕಣಲಾಡಮ್ ಹಾಗೂ ತಂಡಬುದ್ಧಿಯನ್ನು ವಶಪಡಿಸಿಕೊಂಡ. ಆತನ

ಸೈನಾಧಿಕಾರಿ ಗಂಗಾನದಿಯನ್ನು ದಾಟಿ ನೀರನ್ನು ತಂದ. 1ನೆಯ ರಾಜೇಂದ್ರ ಗೆದ್ದ ಇತರ ಪ್ರದೇಶಗಳೆಂದರೆ ಅಂಡಮಾನ್ ನಿಕೋಬಾರ್ ದ್ವೀಪಗಳು, ಕಡಾರಮ್, ಪಣ್ಣಯಿ, ಶ್ರೀವಿಜಯ ಹಾಗೂ ಇತರ ಸಣ್ಣ ದ್ವೀಪಗಳು.

1ನೆಯ ರಾಜೇಂದ್ರ ಗಂಗೈಕೊಂಡ ಚೋಳಪುರಮ್ ಎಂಬ ಹೊಸ ರಾಜಧಾನಿ ಕಟ್ಟಿ ಅಲ್ಲಿ ನೀರಾವರಿಗೆ ಯೋಗ್ಯವಾದ ಒಂದು ದೊಡ್ಡ ಕೆರೆಯನ್ನೂ ಸಹ ಕಟ್ಟಿಸಿದ. ಮಧುರಾಂತಕ, ಗಂಗೈಕೊಂಡಚೋಳನ್, ಪಂಡಿತಚೋಳನ್, ಕಿಡಾರಂಕೊಂಡಚೋಳನ್ ಇತ್ಯಾದಿ ಇವನ ಸುಪ್ರಸಿದ್ಧವಾದ ಬಿರುದುಗಳು. ಇವನು ಹಲವು ತಾಮ್ರಪಟಗಳನ್ನು ಹೊರಡಿಸಿದ. ಅವುಗಳಲ್ಲಿ ಕರನ್‌ಡೈಪಟವು ಅತಿ ಪ್ರಮುಖವಾದುದು. ಈ ಪಟದಲ್ಲಿ ಇವನು ತ್ರಿಭುವನಮಾದೇವಿ-ಚತುರ್ವೇದಿಮಂಗಲಮ್ ಹಳ್ಳಿಯನ್ನು ದಾನವಾಗಿ ನೀಡಿದ ಮಾಹಿತಿ ಹಾಗೂ 1080 ಬ್ರಾಹ್ಮಣರಿಗೆ ದಾನ ನೀಡಿದ ವಿಷಯವಿದೆ. ಇವನ ಅಣ್ಣೈಮಂಗಲಮ್ ಪಟವು ನಾಗಪಟ್ಟಿನಮ್ ಬೌದ್ಧವಿಹಾರಕ್ಕೆ ದಾನ ನೀಡಿದ ಮಾಹಿತಿ ತಿಳಿಸುತ್ತದೆ.

1ನೆಯ ರಾಜಾಧಿರಾಜ (1018–1054) ಚೋಳ ಮನೆತನದ ಪ್ರಮುಖ ಅರಸ. ಇವನು ಪಶ್ಚಿಮದ ಚಾಳುಕ್ಯ ಅರಸರ ಜೊತೆ ಯುದ್ಧವನ್ನು ಮುಂದುವರಿಸಿದ. ಸರಣಿ ಯುದ್ಧದಲ್ಲಿ ಅವರನ್ನು ಸೋಲಿಸಿ ಕಲ್ಯಾಣಪುರವನ್ನು ವಶಪಡಿಸಿಕೊಂಡು ನೆಲಸಮಗೊಳಿಸಿದ. ಕಲ್ಯಾಣಪುರಂ ಚಾಳುಕ್ಯರ ರಾಜಧಾನಿಯಾಗಿತ್ತು. ಇವನು 1054ರಲ್ಲಿ ಕೊಪ್ಪಮ್ ಯುದ್ಧದಲ್ಲಿ ಮರಣ ಹೊಂದಿದ. ಇವನ ಕಿರಿ ಸಹೋದರ ರಾಜೇಂದ್ರದೇವ ಯುದ್ಧದ ನೇತೃತ್ವವನ್ನು ವಹಿಸಿ, ಚೋಳ ಸೈನ್ಯ ಮುಡುಕ್ಕಾರ್ ಕದನದಲ್ಲಿ ಜಯಗಳಿಸಲು ಕಾರಣನಾದನು.

ಮುಂದಿನ ಅರಸನಾದ ವೀರರಾಜೇಂದ್ರಚೋಳ ಪೊತ್ತಪ್ಪಿ ಮತ್ತು ಪಾಂಡ್ಯ ಅರಸರನ್ನು ಸೋಲಿಸಿದ. ಶ್ರೀಲಂಕದ ಅರಸ ವಿಜಯಬಾಹುವನ್ನು ಸೋಲಿಸಲು ಸೈನ್ಯವನ್ನು ಕೊಂಡೊಯ್ದ. 1068ರಲ್ಲಿ ಪಶ್ಚಿಮದ ಚಾಳುಕ್ಯ ಅರಸನಾದ ಸೋಮೇಶ್ವರನನ್ನು ಸೋಲಿಸಿದ. ಇವನು ತಿರುಮುಕ್ಕೂಡಲ್‌ನಲ್ಲಿ ದೊಡ್ಡ ಶಾಸನವನ್ನು ಹೊರಡಿಸಿದ. ಈ ಶಾಸನ ಇವನು ಸ್ಥಾಪಿಸಿದ ವೇದಶಾಸ್ತ್ರದ ಹೆಚ್ಚಿನ ಅಧ್ಯಯನ ಕೇಂದ್ರ ವಿದ್ಯಾರ್ಥಿನಿಲಯ. ಅಲ್ಲಿ ಆಸ್ಪತ್ರೆಯಿದ್ದು ಕಾಯಿಲೆಗೆ ತುತ್ತಾದ ವಿದ್ಯಾರ್ಥಿಗಳನ್ನು ನೋಡಿಕೊಳ್ಳಲು ಇದ್ದ ಆಯಾಗಳು ಮತ್ತು ಔಷಧಿಗಳ ಪಟ್ಟಿಯ ಬಗ್ಗೆ ಮಾಹಿತಿ ನೀಡುತ್ತದೆ.

ವೀರರಾಜೇಂದ್ರನ ಅನಂತರ ಅಧಿರಾಜೇಂದ್ರ (1067–70) ಅಧಿಕಾರರೂಢನಾದ. ಇವನು ಹೆಚ್ಚುಕಾಲ ಬಾಳಲಿಲ್ಲ. ಈ ಮನೆತನದ ಮುಂದಿನ ಅರಸನಾದ 1ನೆಯ ಕುಲೋತ್ತುಂಗ 1070ರಲ್ಲಿ ರಾಜನಾದ. ಇವನು ತಂದೆಯ ಕಡೆಯಿಂದ ಚಾಳುಕ್ಯ ಮನೆತನಕ್ಕೆ ಸೇರಿದವನಾಗಿದ್ದ. ಇವನ ತಾಯಿಯು ಚೋಳ ರಾಜಕುಮಾರಿ. ಅಧಿರಾಜೇಂದ್ರನಿಗೆ ಮಕ್ಕಳು ಇಲ್ಲದ ಕಾರಣ ಸಿಂಹಾಸನ ಇವನ ಪಾಲಾಯಿತು. ಇವನ ಅಜ್ಜಿ 1ನೆಯ ರಾಜೇಂದ್ರಚೋಳನ ರಾಣಿಯಾಗಿದ್ದ ಕಾರಣ ಈತನನ್ನು ಅವನ ತಾತನ ಹೆಸರಾದ ರಾಜೇಂದ್ರಚೋಳನೆಂತಲೂ ಕರೆಯುತ್ತಿದ್ದರು. ಇವನು 1060ರಲ್ಲಿ ವಿಷ್ಣುವರ್ಧನ ಎಂಬ ಬಿರುದಿನಿಂದ ವೆಂಗಿ ಸಿಂಹಾಸನ ಏರಿದ.

ಚೋಳ ಸಾಮ್ರಾಜ್ಯವನ್ನು ತುಂಗಭದ್ರಾ ನದಿಯನ್ನು ದಾಟಿ ವಿಸ್ತರಿಸುವುದರಲ್ಲಿ ಯಾವುದೇ ಅರ್ಥವಿಲ್ಲವೆಂದು ಕುಲೋತ್ತುಂಗ ಮನಗಂಡಿದ್ದ. ಚೋಳರು ಪಶ್ಚಿಮದ ಚಾಳುಕ್ಯ ಮನೆತನದ ಜೊತೆ ಸಾಕಷ್ಟು ಯುದ್ಧಗಳಲ್ಲಿ ಜಯಗಳಿಸಿದರೂ ಹೆಚ್ಚಿನದೇನನ್ನು ಸಾಧಿಸಿರಲಿಲ್ಲ. ಹಾಗಾಗಿ ಕುಲೋತ್ತುಂಗ ಯುದ್ಧವನ್ನು ಮುಂದುವರಿಸುವುದರಲ್ಲಿ ಯಾವುದೇ ಲಾಭವಿಲ್ಲವೆಂದು ಮನಗಂಡು ಪಶ್ಚಿಮದ ಚಾಳುಕ್ಯರ ಜೊತೆ ಯುದ್ಧವನ್ನು ನಿಲ್ಲಿಸಿದ. ಇಲ್ಲಿ ಇವನ ಯಾವುದೇ ಶಾಸನವು ಕಂಡುಬರದೇ ಇರುವುದು ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ. ಆದರೆ ಪಾಂಡ್ಯರ ಸೊಕ್ಕು ಮುರಿದು ಕಪ್ಪಕಾಣಿಕೆಯನ್ನು ವಿಧಿಸಿದ. ಅಲ್ಲದೆ ಚೇರ ಮತ್ತು ಪಾಂಡ್ಯ ರಾಜ್ಯಗಳ ಧಾಳಿಯ ಸಂಭವವನ್ನು ತಡೆಯುವ ಸಲುವಾಗಿ ಅಲ್ಲಿ ರಕ್ಷಣಾಪಡೆಯನ್ನು ಇರಿಸಿದ್ದ.

1096ರಲ್ಲಿ ಕುಲೋತ್ತುಂಗ ಒರಿಸ್ಸದ ಕಳಿಂಗದ ಮೇಲೆ ಧಾಳಿ ಮಾಡಿ ರಾಜ ತೆಲುಗು ಚೋಡಭೀಮನನ್ನು ಸೋಲಿಸಿದ. ಇದಕ್ಕೆ ಕಾರಣ ರಾಜನು ಕಪ್ಪಕಾಣಿಕೆ ನೀಡಲು ಒಪ್ಪದಿರುವುದು. ಪುನಃ 1112ರಲ್ಲಿ ಕುಲೋತ್ತುಂಗ ಕಳಿಂಗದ ಉತ್ತರಭಾಗದ ಮೇಲೆ ಧಾಳಿಮಾಡಿ ಅಲ್ಲಿಯ ಅರಸ ಅನಂತವರ್ಮನನ್ನು ಕಿತ್ತೊಗೆದ. ಇವನ ಸೈನ್ಯಾಧಿಕಾರಿ ಕರುಣಾಕರ ತೊಂಡೈಮಾನ್ ಈ ಧಾಳಿಯ ನೇತೃತ್ವ ವಹಿಸಿದ್ದ. ಕಳಿಂಗತುಬರಣಿ ಎಂಬ ಪ್ರಸಿದ್ಧ ಕೃತಿಯ ಕಥಾವಸ್ತು ಈ ಯುದ್ಧವಾಗಿದೆ.

1ನೆಯ ಕುಲೋತ್ತುಂಗ ಚೀನ ಮತ್ತು ಕಂಭೋಜದ ಜೊತೆ ಸ್ನೇಹಸಂಬಂಧ ಹೊಂದಿದ್ದ. ಚೋಳ ರಾಜ್ಯಕ್ಕೆ ಬರುವ ವಸ್ತುಗಳ ಮೇಲಿನ ತೆರಿಗೆಯನ್ನು ತೆಗೆದುಹಾಕಿ, ಸುಂಗಂತವಿರ್ತ್ತ ಚೋಳಲ್ ಎಂಬ ಬಿರುದು ಧರಿಸಿದ. 1086 ಮತ್ತು 1110ರಲ್ಲಿ ಭೂಮಿಯನ್ನು ಅಳೆದು ಕಂದಾಯ ಸಮೀಕ್ಷಣೆ ನಡೆಸಿದ.

1ನೆಯ ಕುಲೋತ್ತುಂಗನ ಉತ್ತರಾಧಿಕಾರಿಗಳೆಂದರೆ ವಿಕ್ರಮಚೋಳ (1118–36), 2ನೆಯ ಕುಲೋತ್ತುಂಗ (1133–50), 2ನೆಯ ರಾಜರಾಜ (1146–63) ಹಾಗೂ 2ನೆಯ ರಾಜಾಧಿರಾಜ (1163–78). ಇವರ ಅನಂತರದ ಅರಸನೆಂದರೆ 3ನೆಯ ಕುಲೋತ್ತುಂಗ (1178–1216). ಇವನು ಶ್ರೀಲಂಕ ಅರಸನನ್ನು ಸೋಲಿಸಿ, ಪಶ್ಚಿಮದ ಕೊಂಗು ಮೇಲೆ ಧಾಳಿ ಮಾಡಿದ. ಅಲ್ಲದೆ ತ್ರಿಭುವನನ್‌ನಲ್ಲಿ ದೊಡ್ಡದಾದ ಶಿವ ದೇವಾಲಯವನ್ನು ನಿರ್ಮಿಸಿದ.

ಇವನ ಅನಂತರ ಅಧಿಕಾರಕ್ಕೆ ಬಂದವನು 3ನೆಯ ರಾಜರಾಜ (1216–56). ಇವನ ಆಳಿಕೆಯಲ್ಲಿ ಪಾಂಡ್ಯದ ಅರಸ 1ನೆಯ ಮಾರವರ್ಮನ್ ಸುಂದರ ಪಾಂಡ್ಯನ್ ಚೋಳರಾಜ್ಯದ ಮೇಲೆ ಧಾಳಿ ಮಾಡಿ ಕೊಳ್ಳೆಹೊಡೆದು ಚೋಳರಾಜ್ಯದವರನ್ನು ಬಳಲಿಸಿ ತೊಂದರೆಗೊಳಿಸಿದ. ಚೋಳ ಅರಸನನ್ನು ಹಿಂಸಿಸಿದ. ಆದರೆ ಹೊಯ್ಸಳ ರಾಜರುಗಳಾದ ವೀರಬಲ್ಲಾಳ ಮತ್ತು ಆತನ ಮಗ 3ನೆಯ ನರಸಿಂಹ ಚೋಳರನ್ನು ರಕ್ಷಿಸಲು ಧಾವಿಸಿದರು. ಪುನಃ ತೆಳ್ಳಾರು ಬಳಿ ತನ್ನ ಮಾಂಡಲೀಕನಾದ ಕೋಪ್ಪೆರುಂಜಿಂಗನಿಂದ 3ನೆಯ ರಾಜರಾಜ ಸೋತು, ಬಂಧಿತನಾದ. ಆಗಲೂ ಹೊಯ್ಸಳರು ಚೋಳರ ನೆರವಿಗೆ ಬಂದು ಆತನನ್ನು ಬಂಧನದಿಂದ ಬಿಡಿಸಿದರು. ಇಷ್ಟಾದರೂ ಹೊಯ್ಸಳರು ಚೋಳರನ್ನು ದೂರವೇ ಇಟ್ಟಿದ್ದರು. ಆದರೆ ಹೊಯ್ಸಳರ ಆಳಿಕೆಯು ತಮಿಳುನಾಡಿನಲ್ಲಿ ಭದ್ರವಾಗಿತ್ತೆಂದು ಅಲ್ಲಿನ ತಮಿಳಿನ ಶಾಸನಗಳು ತಿಳಿಸುತ್ತವೆ.

ಚೋಳರ ಲಾಂಛನ

ಕೊನೆಯ ಅರಸನಾದ 3ನೆಯ ರಾಜೇಂದ್ರ 1264ರಲ್ಲಿ ಪಟ್ಟಕ್ಕೆ ಬಂದ. ಇವನು ಒಳ್ಳೆತನವನ್ನು ಹೊಂದಿದ್ದರೂ ಸಾಮ್ರಾಜ್ಯ ಹಾಳಾಗುವುದನ್ನು ತಡೆಯಲಾಗಲಿಲ್ಲ. ಇವನ ಆಳಿಕೆಯಲ್ಲಿ ಮಹಾಮಂಡಳೇಶ್ವರ ಮತ್ತು ಅಧಿಕಾರಿವರ್ಗದವರು ಕೇಂದ್ರದ ಅಧಿಕಾರವನ್ನು ತಿರಸ್ಕರಿಸುವವರಾಗಿದ್ದರು. ಅವರ ನಡವಳಿಕೆ ಅಸಹನೀಯವಾಗಿತ್ತು. ಪಾಂಡ್ಯ ಅರಸ 1ನೆಯ ಜಟವರ್ಮನ್ ಸುಂದರ ಪಾಂಡ್ಯ ಚೋಳ ಅರಸನನ್ನು ಸೋಲಿಸಿದ. ಈ ರೀತಿ ಚೋಳ ಸಾಮ್ರಾಜ್ಯ ವಾಸ್ತವಿಕವಾಗಿ ಅಸ್ತಂಗತವಾಯಿತು. ಆದರೂ 13ನೆಯ ಶತಮಾನದವರೆಗೂ ತಮಿಳುನಾಡಿನ ಹಲವು ಭಾಗಗಳಲ್ಲಿ ಇವರ ಆಡಳಿತ ಕುಂಟುತ್ತಾ ಸಾಗಿತು. ಆದರೆ 13ನೆಯ ಶತಮಾನದ ಕೊನೆಯ ಕಾಲದಲ್ಲಿ ಚೋಳರ ಆಳಿಕೆ ಕೊನೆಗೊಂಡಿತು.

**ರಾಜ್ಯಾಡಳಿತ:** ಚೋಳರ ಸಾಮ್ರಾಜ್ಯ ಉತ್ತರದಲ್ಲಿ ತುಂಗಭದ್ರಾ ನದಿಯಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ ವ್ಯಾಪಿಸಿತ್ತು. ರಾಜನು ಆಡಳಿತದ ಕೇಂದ್ರಬಿಂದುವಾಗಿದ್ದ. ರಾಜನನ್ನು ಉಡೈಯಾರ್, ನಾಯನಾರ್ ಮತ್ತು ಚಕ್ರವರ್ತಿಯೆಂದು ಕರೆಯಲಾಗುತ್ತಿತ್ತು. ರಾಜರು ಸಾಮಾನ್ಯ ಬಿರುದುಗಳನ್ನು ಹೊಂದುವುದರ ಜೊತೆಗೆ ತಮ್ಮ ಶೌರ್ಯ, ವಿದ್ವತ್ತು, ಜಯ, ಉದಾರತೆ ಹಾಗೂ ಯೋಗ್ಯತೆಗೆ ಆಧಾರವಾಗಿ ಬಿರುದುಗಳನ್ನು ಹೊಂದಿರುತ್ತಿದ್ದರು. ರಾಜನನ್ನು ದೇವರ ಪ್ರತೀಕನೆಂದು ಭಾವಿಸಿದ್ದರು. ಆಡಳಿತದಲ್ಲಿ ರಾಜನಿಗೆ ಸಲಹೆ ಸೂಚನೆ ನೀಡಲು ಉಡನ್‌ಕೂಟ್ಟಮ್ ಎಂಬ ಅಧಿಕಾರಿ ವರ್ಗದವರಿದ್ದರು. ಅಧಿಕಾರಿವರ್ಗದಲ್ಲಿ ಪೆರುನ್‌ತರಮ್ ಮತ್ತು ಸಿರುತರಮ್ ಎಂಬ ದರ್ಜೆಗಳಿದ್ದವು.

ರಾಜನು ಹೆಚ್ಚಿನ ಅಧಿಕಾರ ಹೊಂದಿದ್ದರೂ ನಿರಂಕುಶ ಪ್ರಭುವಾಗಿರಲಿಲ್ಲ. ಪ್ರಜೆಗಳಿಗೆ ಸುಲಭವಾಗಿ ಲಭ್ಯವಾಗಿರುತ್ತಿದ್ದ. ರಾಜನ ಯಾವುದೇ ಆಜ್ಞೆಯನ್ನು ಮೊದಲು ಆಲಿಸುತ್ತಿದ್ದವರು ತಿರುವಾಯ್‌ಕ್ಕೇಳ್ವಿ. ಅನಂತರ ಅದನ್ನು ತಿರುಮಂದಿರಓಲೈಗೆ ನೀಡಲಾಗುತ್ತಿತ್ತು. ಕರಡು ಪ್ರತಿಯನ್ನು ಒಲೈನಾಯಕಮ್ ಮತ್ತು ಇತರ ಮೇಲ್ದರ್ಜೆಯ ಅಧಿಕಾರಿಗಳು ಪರಿಶೀಲಿಸುತ್ತಿದ್ದರು. ಕೊನೆಗೆ ಅದನ್ನು ಸಂಬಂಧಪಟ್ಟ ಅಧಿಕಾರಿಗೆ ಕಳುಹಿಸುತ್ತಿದ್ದರು. ಆಜ್ಞೆಯು ಭೂದಾನಕ್ಕೆ ಸಂಬಂಧಿಸಿದ್ದಾಗಿದ್ದರೆ ಅದನ್ನು ಪುರವುವರಿತಿಣೈಕ್ಕಳಮ್ ಅಂದರೆ ಆದಾಯ ಇಲಾಖೆಗೆ ರವಾನಿಸಲಾಗುತ್ತಿತ್ತು. ಕಂದಾಯ ಅಧಿಕಾರಿಯನ್ನು ವರಿಪ್ಪೊಟ್ಟಿ ಗಕ್ಕಣಕ್ಕು ಎಂದು ಕರೆಯಲಾಗುತ್ತಿತ್ತು. ಅದನ್ನು ಆದಾಯ ದಾಖಲೆ ಪುಸ್ತಕದಲ್ಲಿ ದಾಖಲಿಸುವವನಿಗೆ ವರಿಯಲೀಡು ಎಂದು ಕರೆಯಲಾಗುತ್ತಿತ್ತು. ದಾಖಲೆಯ ಅನಂತರ ಅದನ್ನು ಆದಾಯ ಇಲಾಖೆಯ ಪುರವಟ್ಟಿಣೈಕ್ಕಲಮ್‌ಗೆ ರವಾನಿಸಲಾಗುತ್ತಿತ್ತು. ತದನಂತರ ವರಿಪೊಟ್ಟಗಕಣ್ಣಕ್ಕು ಎಂಬ ಆದಾಯ ಅಧಿಕಾರಿಯು ಲೇವಾದೇವಿಯ ವರದಿಯನ್ನು ವರಿಯಲೀಡು ಎಂಬ ದಾಖಲೆ ಪುಸ್ತಕದಲ್ಲಿ ದಾಖಲಿಸುತ್ತಿದ್ದನು. ಅನಂತರ ಇದನ್ನು ನಾಟ್ಟರ್ ಎಂಬ ಸ್ಥಳೀಯ ಅಧಿಕಾರಿಗೆ ರವಾನಿಸಲಾಗುತ್ತಿತ್ತು. ಇವನು ಆಜ್ಞೆಯನ್ನು ಪೂಜ್ಯಭಾವನೆಯಿಂದ ಸ್ವೀಕರಿಸಿ ಹಂಚುತ್ತಿದ್ದ ಅಥವಾ ಈಗಾಗಲೇ ನೀಡಿದ ಭೂಮಿಯ ಮೇಲಿನ ತೆರಿಗೆಯನ್ನು ಮುಕ್ತಗೊಳಿಸುತ್ತಿದ್ದ.

ಸೈನ್ಯ: ಚೋಳರು ಹೆಚ್ಚಾಗಿ ಯುದ್ಧದಲ್ಲಿ ನಿರತರಾಗಿದ್ದರು. ಆನೆಗಳು, ಅಶ್ವಗಳು ಮತ್ತು ಪದಾತಿಗಳಿಂದ ಕೂಡಿದ ದೊಡ್ಡದಾದ ಸೈನ್ಯ ಹೊಂದಿದ್ದರು. ಜೊತೆಗೆ ಮಹಾಮಂಡಳೇಶ್ವರರು ಯುದ್ಧದ ಸಮಯದಲ್ಲಿ ತಮ್ಮ ಸೈನ್ಯವನ್ನು ಒದಗಿಸುತ್ತಿದ್ದರು. ಗೆದ್ದ ಪ್ರದೇಶಗಳಲ್ಲಿ ದಂಗೆಯನ್ನು ಅಡಗಿಸಲು ಚೋಳರಾಜರು ನೀಲಪ್ಪಡೈ ಎಂಬ ರಕ್ಷಣಾ ಸೈನ್ಯವನ್ನು ಹೊಂದಿದ್ದರು. ಯುದ್ಧ ಮಾಡುವಾಗ ಚೋಳ ಸೈನ್ಯವು ಭಯಂಕರ ವಾಗಿರುತ್ತಿತ್ತು. ಹೊಟ್ಟೂರು ಶಾಸನದ ಪ್ರಕಾರ ಚೋಳ ಸೈನ್ಯವು ಪಶ್ಚಿಮದ ಚಾಳುಕ್ಯ ಪ್ರದೇಶವನ್ನು ವಿಧ್ವಂಸಗೊಳಿಸಿತ್ತೆಂದು ತಿಳಿಸುತ್ತದೆ. ಯುದ್ಧಭೂಮಿಯಲ್ಲಿ ಚೋಳ ಮಹಾರಾಜರು ಸೈನ್ಯದ ಮುಂದಾಳತ್ವವನ್ನು ಸ್ವತಹ ತಾವೇ

ವಹಿಸುತ್ತಿದ್ದರು. ತಕ್ಕೋಲಂ ಕದನದಲ್ಲಿ ರಾಜಕುಮಾರ ರಾಜಾಧಿತ್ಯನು ಚೋಳ ಸೈನ್ಯದ ಮುಂದಾಳತ್ವ ವಹಿಸಿದ್ದನು. ಹಾಗೇ ರಾಜಕುಮಾರ 1ನೆಯ ರಾಜೇಂದ್ರನು ತನ್ನ ತಂದೆಯ ಪರವಾಗಿ ಧಾಳಿಯ ಮುಂದಾಳತ್ವ ವಹಿಸಿದ್ದನು. ಕೊಪ್ಪಮ್ ಕದನದಲ್ಲಿ ರಾಜಾಧಿರಾಜ ಮಡಿದ.

ಸ್ಥಳೀಯ ಸಭೆಗಳು: ಹಳ್ಳಿಯು ಚೋಳ ಆಡಳಿತದ ಬುನಾದಿಯಾಗಿತ್ತು. ಆಡಳಿತದ ಮೇಲಿನ ಹಂತದಲ್ಲಿ ಏನೇ ಆದರೂ ಹಳ್ಳಿಯ ಆಡಳಿತದ ಮೇಲೆ ಯಾವುದೇ ಪ್ರಭಾವ ಬೀರುತ್ತಿರಲಿಲ್ಲ. ಅವರು ಪೂರ್ಣ ಪ್ರಮಾಣದ ಸ್ವಾಯತ್ತತೆಯನ್ನು ಹೊಂದಿದ್ದರು. ಹಾಗೆ ಧರ್ಮಶಾಸ್ತ್ರದ ಚೌಕಟ್ಟಿನಲ್ಲಿ ಆಡಳಿತ ನಡೆಸುತ್ತಿದ್ದರು. ಹಳ್ಳಿಯು ಬ್ರಾಹ್ಮಣರದಾಗಿದ್ದರೆ ಅದನ್ನು ಚತುರ್ವೇದಿಮಂಗಲಂ ಎಂದೂ, ವೆಳ್ಳಲ್ಲ (ರೈತರ) ಗ್ರಾಮವಾಗಿದ್ದರೆ ಅದನ್ನು ಉರ್ ಎಂದು, ವ್ಯಾಪಾರಸ್ಥರ ಪಟ್ಟಣವಾಗಿದ್ದರೆ ನಗರಮ್ ಎಂದು ಕರೆಯಲಾಗುತ್ತಿತ್ತು.

ಉತ್ತರಮೇರೂರು (ಚೆಂಗಲ್‌ಪೇಟ್ ಜಿಲ್ಲೆ)ದಲ್ಲಿ ಎರಡು ಶಿಲಾಶಾಸನಗಳು ಲಭ್ಯವಾಗಿವೆ. ಇದು 1ನೆಯ ಪರಾಂತಕನ 12 ಮತ್ತು 14ನೆಯ ವರ್ಷದ ಆಳಿಕೆಯಲ್ಲಿ ಮಂಡಿಸಿದ ಶಾಸನ (919,921). ಈ ಶಾಸನದಲ್ಲಿ ಬ್ರಾಹ್ಮಣರ ಹಳ್ಳಿಯೆಂದು ಕರೆಯಲ್ಪಡುವ ಉತ್ತರಮೇರೂರು ಚತುರ್ವೇದಿಮಂಗಲಮ್‌ನ ಸಮಿತಿಯಲ್ಲಿ ಸೇವೆ ಸಲ್ಲಿಸಲು ನಡೆಸುವ ಚುನಾವಣೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳ ಅರ್ಹತೆಯ ಪಟ್ಟಿಯನ್ನು ಉಲ್ಲೇಖಿಸಲಾಗಿದೆ. ಅಭ್ಯರ್ಥಿಯ ವಯಸ್ಸು 35ಕ್ಕಿಂತಲೂ ಹೆಚ್ಚು. ಆದರೆ 70ಕ್ಕಿಂತಲೂ ಕಡಿಮೆಯಿರಬೇಕು. ಆತನು ಕಡೆಪಕ್ಷ ಒಂದುವೇದದಲ್ಲಿ ಪಾರಂಗತನಾಗಿ ಮತ್ತೊಬ್ಬರಿಗೆ ಕಲಿಸುವವನಾಗಿ ¼ ವೇಲಿ (ಒಂದೂವರೆ ಎಕರೆಯಷ್ಟು) ಯಾಗುವಷ್ಟು ಜಮೀನಿನ ಒಡೆಯನಾಗಿರಬೇಕು. ಕಳೆದ ಮೂರು ವರ್ಷಗಳಿಂದ ಸತತವಾಗಿ ಯಾವುದೇ ಒಂದು ಸಮಿತಿಯಲ್ಲಿರ ಬಾರದಾಗಿತ್ತು. ಪ್ರಾಮಾಣಿಕ ಗಳಿಕೆಯಿಂದ ತನ್ನ ಜೀವನೋಪಾಯವನ್ನು ನಡೆಸುವವನಾಗಿರಬೇಕು. ಈ ಮೇಲಿನ ಅರ್ಹತೆಗೆ ಯೋಗ್ಯರಾದ ಬ್ರಾಹ್ಮಣರ ಹೆಸರನ್ನು ತಾಳೆಗರಿಗಳ ಮೇಲೆ ಬರೆದು, ಆ ಚೀಟಿಗಳನ್ನು ಒಂದು ಮಡಕೆಯಲ್ಲಿ ಹಾಕಲಾಗುತ್ತಿತ್ತು. ಅನಂತರ ನಿಗದಿತ ದಿನದಂದು ಹಳ್ಳಿಯ ಪ್ರಾಂಗಣದಲ್ಲಿ ಎಲ್ಲಾ ಜನಗಳ ಸಮೂಹದಲ್ಲಿ ಒಬ್ಬ ಚಿಕ್ಕ ಹುಡುಗನನ್ನು ಕರೆದು ಎಷ್ಟು ಅಭ್ಯರ್ಥಿಗಳ ಅವಶ್ಯಕತೆಯಿದೆಯೋ ಅಷ್ಟು ಚೀಟಿಗಳನ್ನು ಆ ಮಡಕೆಯಿಂದ ತೆಗೆಸಲಾಗುತ್ತಿತ್ತು. ಈ ರೀತಿ ನೇಮಕಗೊಂಡ ಅಭ್ಯರ್ಥಿ ವಾರ್ಷಿಕ ಸಮಿತಿ, ಕೆರೆಸಮಿತಿ, ಬಂಗಾರಸಮಿತಿ, ತೋಟಸಮಿತಿಯಲ್ಲಿ ಸೇವೆ ಸಲ್ಲಿಸಬೇಕಿತ್ತು. ಅವರು 300 ದಿನಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಬೇಕಿತ್ತು. ಈ ಸಮಿತಿಗಳು ಉತ್ತರಮೇರೂರ್ ಚತುರ್ವೇದಿಮಂಗಲದ ಹಳ್ಳಿಯ ಕೃಷಿ, ಕೆರೆ, ತೋಟ, ನ್ಯಾಯ ಮತ್ತು ಬಂಗಾರ ಇತ್ಯಾದಿಗೆ ಸಂಬಂಧಿಸಿದ ವಿಷಯವನ್ನು ನೋಡಿಕೊಳ್ಳುತ್ತಿದ್ದವು.

ಚೋಳರು ವಿವಿಧ ಬಗೆಯ ತೆರಿಗೆಯನ್ನು ವಿಧಿಸುತ್ತಿದ್ದರು. ಅವುಗಳಲ್ಲಿ ಪ್ರಧಾನ ವಾದುದೆಂದರೆ ಭೂಕಂದಾಯ. ಇದನ್ನು ಇರೈ, ಕಡಮೈ ಎಂತಲೂ ಕರೆಯಲಾಗುತ್ತಿತ್ತು. ಭೂಕಂದಾಯ ಸಾಮಾನ್ಯವಾಗಿ ಭೂಉತ್ಪನ್ನದ 1/6ನೆಯ ಭಾಗವಾಗಿರುತ್ತಿತ್ತು. ಇದಲ್ಲದೆ ತೆರಿಗೆಗಳಾದ ಅಂತರಾಯಮ್, ಕುಡಿಮೈ, ವಿಟ್ಟಿ, ಅಮಂಜಿ, ಎಚೋರ್, ಸಭಾ-ವಿನಿಯೋಗಮ್ ಹಾಗೂ ಇತರ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ವರ್ಷಗಳು ಕಳೆದಂತೆ ಹೆಚ್ಚಿನ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಹಾಗಾಗಿ ಅನಂತರದ ಕಾಲದಲ್ಲಿ ತೆರಿಗೆಯ ಭಾರವನ್ನು ಭರಿಸಲಾಗದ ರೈತರು ಭೂಮಿಯನ್ನು ತೊರೆದು ಓಡಿಹೋದರು.

ಭೂಮಿಯು ಆರ್ಥಿಕತೆಯ ಪ್ರಮುಖ ಅಂಶವಾಗಿತ್ತು. ಮೊದಲ ಹಂತದಲ್ಲಿ ಬ್ರಾಹ್ಮಣ ಪಟ್ಟಣಗಳು ಮತ್ತು ಖಾಸಗಿ ಮಾಲೀಕತ್ವ ಹೊಂದಿದ ಭೂಮಿಗಳಿದ್ದವು. ಆದರೆ ಅನಂತರದ ದಿನಗಳಲ್ಲಿ ರಾಜಕೀಯ ಗಲಭೆಯಿಂದ ಖಾಸಗಿ ಮಾಲೀಕತ್ವ ಹೊಂದಿದ ಭೂಮಿಗಳನ್ನು ಬ್ರಾಹ್ಮಣೇತರ ಹಳ್ಳಿಗಳಲ್ಲಿ ಅಂದರೆ ಉರ್‌ನಲ್ಲಿ ಕಾಣುತ್ತೇವೆ. ಬ್ರಾಹ್ಮಣ ಭೂಮಾಲೀಕರು ತಮ್ಮ ಭೂಮಿಗಳನ್ನು ವೆಳ್ಳಾಳ ಭೂಮಾಲೀಕರಿಗೆ ಮಾರಲು ಪ್ರಾರಂಭ ಮಾಡಿದರು.

**ವ್ಯಾಪಾರ:** ಚೋಳರು ವಾಣಿಜ್ಯ ಸಂಪರ್ಕವನ್ನು ಚೀನ, ಶ್ರೀವಿಜಯ, ಕಾಂಬೋಡಿಯ, ಜಾವ ಮತ್ತು ಬರ್ಮದ ಜೊತೆ ಹೊಂದಿದ್ದರು. ಮಣಿಗ್ರಾಮತ್ತರ್, ನಾನಾದೇಸಿ ಮತ್ತು ವಳಂಜಿಯರ್ ಎಂಬ ಹಲವು ಬಗೆಯ ವರ್ತಕ ಶ್ರೇಣಿಗಳಿದ್ದವು. ಮುತ್ತುಗಳು, ಆನೆದಂತ, ಬಣ್ಣಹಾಕಿದ ಬಟ್ಟೆಗಳು, ಅಡಿಕೆ, ರೇಷ್ಮೆ, ಮಸ್ಲಿನ್ ಮತ್ತು ಇತರ ವಸ್ತುಗಳು ರಫ್ತಾಗುತ್ತಿದ್ದವು. ಚೋಳರಾಜ್ಯವು ತನ್ನ ಬಿರುಸಿನ ವ್ಯಾಪಾರದಿಂದ ವೃದ್ಧಿಹೊಂದಲು ಸಾಧ್ಯವಾಯಿತು. ವ್ಯಾಪಾರದ ಅಭಿವೃದ್ಧಿಗಾಗಿ 1ನೆಯ ಕುಲೋತ್ತುಂಗ (ಸುಂಗಮ್) ತೆರಿಗೆಯನ್ನು ತೆಗೆದುಹಾಕಿದ. ವ್ಯಾಪಾರ ಸಮೂಹವು ಸಾಮಾಜಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇವರ ಕಾಲದ ಹೆದ್ದಾರಿಗಳು ವ್ಯಾಪಾರದ ಅಭಿವೃದ್ಧಿಗೆ ಕಾರಣವಾಗಿವೆ.

**ಸಮಾಜ:** ಸಮಾಜ ವರ್ಣಪದ್ಧತಿ ಅನುಸರಿಸಿತ್ತು. ಬ್ರಾಹ್ಮಣರು ಸಾಮಾಜಿಕ ಗೌರವ ಹೊಂದಿದ್ದರು. ಬ್ರಾಹ್ಮಣರನ್ನು ಪೋಷಿಸುವುದು ಶ್ರೇಯಸ್ಕರ ಎಂದು ಪರಿಗಣಿಸಲಾಗಿತ್ತು. ಬ್ರಾಹ್ಮಣರಿಗೆ ಭೂಮಿ ಮತ್ತು ಹಳ್ಳಿಗಳನ್ನು ನೀಡಲಾಗುತ್ತಿತ್ತು. ಬ್ರಾಹ್ಮಣರು ಅರ್ಚಕ, ಗುರು, ಅಧಿಕಾರಿ, ಸೇನಾಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು ಸಂಸ್ಕೃತಿಯ ಮೇಲ್ವಿಚಾರಕರಾಗಿದ್ದರು. ಚೋಳ ರಾಜ್ಯದಲ್ಲಿ ಹಲವಾರು ಬ್ರಹ್ಮದೇಯಗಳು ಕಾರ್ಯ ನಿರ್ವಹಿಸುತ್ತಿದ್ದವು. ಚೋಳ ಅರಸರು ತಮ್ಮ ಧಾರ್ಮಿಕ ಕಾರ್ಯಗಳಿಗೆ ಬ್ರಾಹ್ಮಣರನ್ನು ಅವಲಂಬಿಸಿದ್ದರು.

ಸ್ತ್ರೀಯರು ಸಮಾಜದಲ್ಲಿ ಗೌರವಸ್ಥಾನ ಹೊಂದಿದ್ದರು. ಅವರು ಪತಿ ಹಾಗೂ ತಂದೆತಾಯಿಯರಿಂದ ಬಂದ ಆಸ್ತಿಯನ್ನು ಹೊಂದಿದ್ದರು. ಅವರು ದಾನವನ್ನು ನೀಡುತ್ತಿದ್ದರು. ಸತಿಪದ್ಧತಿ ಹೆಚ್ಚಾಗಿರಲಿಲ್ಲ. ಆದರೆ 1ನೆಯ ರಾಜೇಂದ್ರಚೋಳ ಮತ್ತು ಸುಂದರಚೋಳನ ರಾಣಿಯರು ಸಹಗಮನ ಆಚರಿಸಿದರು. ರಾಜರು ಬಹುಪತ್ನಿತ್ವರಾಗಿದ್ದರು. ರಾಣಿಯರು ಸುಸಂಸ್ಕೃತರು ಮತ್ತು ಸುಶಿಕ್ಷಿತರು. ಚೋಳರ ಪ್ರಸಿದ್ಧ ರಾಣಿ ಸೆಂಬಿಯನ್ ಮಹಾದೇವಿ ಚೋಳರ ಕಲೆಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾಳೆ. ಇವಳು ಹಲವು ಹೊಸ ದೇವಾಲಯಗಳನ್ನು ನಿರ್ಮಿಸುವುದರ ಜೊತೆಗೆ ಹಳೇ ದೇವಾಲಯಗಳನ್ನು ದುರಸ್ತಿಗೊಳಿಸಿದಳು. ಇದೇ ರೀತಿಯ ಕೊಡುಗೆಯನ್ನು 1ನೆಯ ರಾಜರಾಜನ ಸಹೋದರಿ ಕುಂದವೈ ನೀಡಿದ್ದಾಳೆ. ಇವಳು ಲೋಕೋಪಕಾ ದೇವಸ್ಥಾನ, ಬಸದಿಗಳನ್ನು ನಿರ್ಮಿಸುವುದರ ಜೊತೆಗೆ ಆಸ್ಪತ್ರೆಯನ್ನು ನಿರ್ಮಿಸಿದಳು.

ಚೋಳರ ಕಾಲದಲ್ಲಿ ದೇವಸ್ಥಾನ ನಿರ್ಮಾಣಕಾರ್ಯ ಅತಿ ವೇಗದಿಂದ ಸಾಗಿತು. ಸುಂದರವಾದ ದೇವಾಲಯಗಳನ್ನು ಸೋಮೂರು, ಗ್ರಾಮಮ್, ತಿರುನಾಮನಲ್ಲೂರು, ತಂಜಾವೂರು, ಗಂಗೈಕೊಂಡಚೋಳಪುರಮ್, ಕೊರಂಗೂರು, ದಾರಸುರಮ್ ತ್ರಿಭುವನಮ್ ಮುಂತಾದ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಇವರು ಉತ್ಕೃಷ್ಟವಾದ ಲೋಹದ ಮೂರ್ತಿಗಳನ್ನು ನಿರ್ಮಿಸಿದರು. ಒಟ್ಟಿನಲ್ಲಿ ಚೋಳರ ಕಾಲ ದೇವಸ್ಥಾನ ನಿರ್ಮಾಣದ ಕಲೆಯಲ್ಲಿ ಪುನರುಜ್ಜೀವನ ಹೊಂದಿತು. ದೇವಸ್ಥಾನದ ಶಿಲ್ಪಗಳನ್ನು ಬಹಳ ಅಂದವಾಗಿ ಕೆತ್ತಿದ್ದಾರೆ. (ಎಸ್‌ಎನ್.ಎಸ್.)

**ಚೋಳರ ವಂಶಾವಳಿ:**

ವಿಜಯಾಲಯ (850–70)
ಆದಿತ್ಯ I (870–97)
ಪರಾಂತಕ I (907–55)
ರಾಜಾದಿತ್ಯ
ಗಂಡರಾದಿತ್ಯ
ಅರಿಂಜಯ
ಉತ್ತಮಚೋಳ (971–87)
ಸುಂದರ ಚೋಳ(957–71) (ಪರಾಂತಕ II)
ಆದಿತ್ಯ II(962–68)
ರಾಜರಾಜ I (985–1014)
ರಾಜೇಂದ್ರ ಚೋಳ I (1012–44)
ಕುಂದವ್ವೆ ವಿಮಲಾದಿತ್ಯ
ರಾಜಾಧಿರಾಜ I (1018–54)
ರಾಜೇಂದ್ರ II (1054–64)
ವೀರರಾಜೇಂದ್ರ (1064–68)
ಅಮ್ಮಂಗದೇವಿ (ಪತಿ: ರಾಜರಾಜ ವೆಂಗಿ ಚಾಲುಕ್ಯ)
ಆದಿರಾಜೇಂದ್ರ (1067–70)
ಕುಲೋತ್ತುಂಗ I (1070–1118)
ವಿಕ್ರಮ ಚೋಳ (1118–36)
ಕುಲೋತ್ತುಂಗ II (1133–50)
ಮಗಳು
ರಾಜರಾಜ II (1150–73)
ರಾಜಾಧಿರಾಜ II (1173–82)
ಕುಲೋತ್ತುಂಗ III (1178–1216)
ರಾಜರಾಜ III (1216–56)
ರಾಜೇಂದ್ರ III (1264)

**ವಾಸ್ತುಶಿಲ್ಪ:** ಚೋಳರು ಆಳಿದ 400 ವರ್ಷಗಳ ಕಾಲದಲ್ಲಿ (850–1250) ಚೋಳ ಸಾಮ್ರಾಜ್ಯದಲ್ಲಿ ವಾಸ್ತುಶಿಲ್ಪ ಅದ್ಭುತ ಪ್ರಗತಿ ಹೊಂದಿತು. ಪಲ್ಲವರು ಆರಂಭಿಸಿ ಬೆಳೆಸಿಕೊಂಡು ಬಂದಿದ್ದ ಶೈಲಿಯನ್ನೇ ಚೋಳರು ಮೊದಲು ಬಳಸಿದರೂ ಅವರು ಮುಂದುವರಿದಂತೆಲ್ಲ ತಮ್ಮದೇ ಆದ ರೀತಿಯನ್ನು ಅವುಗಳಲ್ಲಿ ಹೆಚ್ಚಾಗಿ ಅಳವಡಿಸುತ್ತ ಹೋಗಿ ಕಡೆಗೆ ಚೋಳ ಶೈಲಿ ಎಂದು ಸ್ಪಷ್ಟವಾಗಿ ಗುರುತಿಸಬಹುದಾದಷ್ಟು ಖಚಿತವಾದ ಸ್ವರೂಪವನ್ನು ಅದಕ್ಕೆ ಕೊಟ್ಟರು. ಅವರು ಕಟ್ಟಿಸಿದ ದೇವಾಲಯಗಳಿಗೆ ಲೆಕ್ಕವಿಲ್ಲ. ಚೋಳ ರಾಜ್ಯದಲ್ಲಷ್ಟೇ ಅಲ್ಲ. ಅವರು ಗೆದ್ದ ಸಿಂಹಳ, ಕರ್ನಾಟಕ, ಆಂಧ್ರಗಳ ಭಾಗಗಳಲ್ಲೂ ತಮ್ಮ ವಾಸ್ತುಶಿಲ್ಪ ಶೈಲಿಯನ್ನು ಅನುಷ್ಠಾನಕ್ಕೆ ತಂದರು. ಸಮುದ್ರದಾಚೆಗಿನ ಮಲಯ, ಸುಮಾತ್ರ, ಜಾವ ದ್ವೀಪಗಳಲ್ಲಿ ಕೂಡ ಇದರ ಪ್ರಭಾವವನ್ನು ಕಾಣಬಹುದು. ಈ ಅಸಂಖ್ಯಾತ ದೇವಾಲಯಗಳಲ್ಲಿ ಹಲವನ್ನು ಕಟ್ಟಿದ ಕಾಲ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೂ ಕಟ್ಟಡಗಳ ರಚನೆ, ಶೈಲಿ, ಶಿಲ್ಪಗಳ ಸೂಕ್ಷ್ಮ ಪರಿಶೀಲನೆಯಿಂದ ಅವುಗಳ ಕಾಲವನ್ನು ಸ್ಥೂಲವಾಗಿ ಹೇಳಲು ಸಾಧ್ಯ.

ಚೋಳರು ತಮ್ಮ ಸ್ವತಂತ್ರ ಅರಸು ಮನೆತನ ಸ್ಥಾಪನೆ ಮಾಡುವ ಹೊತ್ತಿಗೆ ಹೊತ್ತಿಗೆ ಪಲ್ಲವರಲ್ಲಿ ಗುಹಾ ವಾಸ್ತು ಪರಂಪರೆ ಕೊನೆಗೊಂಡು, ಇಟ್ಟಿಗೆಯ, ಕಲ್ಲಿನ ಸಣ್ಣಸಣ್ಣ ದೇವಾಲಯಗಳನ್ನು ಕಟ್ಟುವ ಪದ್ಧತಿ ಬೆಳೆದಿತ್ತು. ಅದನ್ನೇ ಮುಂದುವರಿಸಿದ ಮೊದಲಿನ

ರಾಜೇಂದ್ರ ಚೋಳೀಶ್ವರ ದೇವಾಲಯ, ಗಂಗೈಕೊಂಡ ಚೋಳಪುರಂ

ಚೋಳರಾಜರು ಇಟ್ಟಿಗೆಯ ಕಟ್ಟಡಗಳಿಗಿಂತ ಕಲ್ಲು ಕಟ್ಟಡಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರು. ಆಗಲೆ ಕಟ್ರಾಳಿಯನ್ನು (ಪೂರ್ಣವಾಗಿ ಶಿಲೆಯಿಂದ ನಿರ್ಮಿತವಾದ ದೇವಾಲಯ) ಕಟ್ಟಿಸುವುದು ಹೆಮ್ಮೆಯಿಂದ ಹೇಳಿಕೊಳ್ಳುವ ವಿಷಯವಾಗಿತ್ತು. ಹಿಂದಿನ ಹಲವು ಇಟ್ಟಿಗೆ ಕಟ್ಟಡಗಳನ್ನು ಅವರು ಕಲ್ಲು ಕಟ್ಟಡಗಳಾಗಿ ಮಾರ್ಪಡಿಸಿದ ನಿದರ್ಶನಗಳುಂಟು. ತಿರುಕ್ಕಳ ಕುಂಡ್ರದಲ್ಲಿದ್ದ ಇಟ್ಟಿಗೆ ಕಟ್ಟಡಕ್ಕೆ ಬದಲಾಗಿ 1ನೆಯ ಆದಿತ್ಯ ಕಲ್ಲಿನ ಕಟ್ಟಡವನ್ನು ಕಟ್ಟಿಸಿ ಆ ದೇವಾಲಯಕ್ಕೆ ಹಿಂದೆ ಸ್ಕಂದ ಶಿಷ್ಯ ಬಿಟ್ಟಿದ್ದ ದತ್ತಿಯನ್ನು ಮುಂದುವರಿಸಿದಂತೆ ತಿಳಿಸುವ ಶಾಸನಗಳು ಅದರಲ್ಲಿವೆ. ಆದಿತ್ಯ ಸಹ್ಯಾದ್ರಿಯಿಂದ ಸಮುದ್ರದವರೆಗೂ ಕಲ್ಲಿನಿಂದ ದೇವಾಲಯಗಳನ್ನು ಕಟ್ಟಿಸಿದುದಾಗಿ ಶಾಸನಗಳು ತಿಳಿಸುತ್ತವೆ. ಅದರೂ ಇಟ್ಟಿಗೆ ಕಟ್ಟಡಗಳನ್ನೂ ಈ ಕಾಲದಲ್ಲಿ ಕಟ್ಟಿದ್ದುಂಟು. ಆದಿತ್ಯನ ಸಾಮಂತ ಕಂದನ್ನ ಮಾರವರ್ಮನ್ ಎಂಬುವನು ಇಟ್ಟಿಗೆಯಲ್ಲಿ ಕಟ್ಟಿಸಿದ್ದ ತಿರುತೊಟ್ಟಮುಡೈಯ ಮಹಾದೇವರ ದೇವಾಲಯವನ್ನು 1ನೆಯ ಕುಲೋತ್ತುಂಗ ಚೋಳನ ಕಾಲದಲ್ಲಿ ಕಲ್ಲಿನಿಂದ ಪುನರ್ನಿರ್ಮಾಣ ಮಾಡಿದಂತೆ ಕಂಡುಬರುತ್ತದೆ. ಚೋಳರ ಕಾಲದಲ್ಲಿ ಇಟ್ಟಿಗೆಯಲ್ಲಿ ಕಟ್ಟಿದ ಕೆಲವು ದೇವಾಲಯಗಳು ಈಗಲೂ ಉಳಿದುಬಂದಿವೆ.

10ನೆಯ ಶತಮಾನದವರೆಗಿನ ಕಾಲದ ದೇವಾಲಯಗಳ ಗಾತ್ರ ಹೇಳುವಂಥದೇನೂ ಅಲ್ಲ. ಆದರೂ ಆ ಕಾಲದಲ್ಲಿ ಅವನು ಕಟ್ಟಿಸಿದ ದೇವಾಲಯಗಳಲ್ಲಿ ಹಂತಹಂತದ ಬೆಳವಣಿಗೆಯನ್ನು ಕಾಣಬಹುದು. ಆರಂಭಕಾಲದ ಅಂದರೆ ವಿಜಯಾಲಯ ಮತ್ತು 1ನೆಯ ಆದಿತ್ಯನ ಕಾಲದ ದೇವಾಲಯಗಳು ಸಣ್ಣ ಅಥವಾ ಮಧ್ಯಮ ಪ್ರಮಾಣದವಾಗಿದ್ದುವು. ಅವು ಹೆಚ್ಚಾಗಿ ಪಲ್ಲವ ಶೈಲಿಯಂತೆಯೇ ಇವೆ. ವಿಶಾಲೂರು, ತಿರುಪ್ಪೂರು, ಕಾಳಿಯಾಪಟ್ಟಿ, ಪನಂಗುಡಿ, ಏನಾದಿ ಮುಂತಾದ ಕಡೆ ಇರುವ ಚಿಕ್ಕ ಗುಡಿಗಳು ಈ ಗುಂಪಿಗೆ ಸೇರುತ್ತವೆ. ಇವುಗಳಲ್ಲಿ ಕಾಣುವ ಉಪಪೀಠ, ಗೂಡುಗಳು, ಅರೆಗಂಬಗಳು, ವಿಮಾನ ಎಲ್ಲವೂ ಪಲ್ಲವರೂ ಕಂಚಿಯಲ್ಲಿ ಕಟ್ಟಿಸಿರುವ ಮತಂಗೇಶ್ವರ, ಮುಕ್ತೇಶ್ವರ ದೇವಾಲಯಗಳ ಅನುಕರಣೆ ಗರ್ಭಗೃಹ ಮತ್ತು ಅಂತರಾಳಗಳೆರಡನ್ನೂ ಸೇರಿಸಿಕೊಂಡು ಮೇಲೇಳುವ ಪಲ್ಲವರ ವಿಮಾನ ಚೋಳರ ಕಾಲಕ್ಕೆ ಗರ್ಭಗುಡಿಯ ಮೇಲೆ ಮಾತ್ರ ಇರುತ್ತವೆ. ಹಾಗೆಯೇ ಸಿಂಹಸ್ತಂಭಗಳು ಕಡಿಮೆಯಾಗಿ ಕ್ರಮೇಣ ಬಿಟ್ಟುಹೋದವು. ಇನ್ನೊಂದು ಮುಖ್ಯ ವ್ಯತ್ಯಾಸ ವೆಂದರೆ, ಪಲ್ಲವರಲ್ಲಿ ಮೂಲದೇವಾಲಯದ ಸುತ್ತಲೂ ಅದರ ಗೋಡೆಗಳಿಗೆ ಹೊಂದಿ ಕೊಂಡಂತೆ ಹೊರಮುಖವಾದ ಕಿರುಗುಡಿಗಳಿದ್ದರೆ, ಚೋಳ ಸಂಪ್ರದಾಯದಲ್ಲಿ ಮಧ್ಯದ ಮೂಲೆಗುಡಿಯ ಸುತ್ತಲೂ ಪ್ರಾಕಾರಕ್ಕೆ ಹೊಂದಿಕೊಂಡಂತೆ ಒಳಮುಖವಾಗಿರುವ ಕಿರುಗುಡಿಗಳಿರುತ್ತವೆ. ನಾರ್ತಾಮಲೈಯಲ್ಲಿರುವ ವಿಜಯಾಲಯ ಚೋಳೇಶ್ವರ ಇಂಥ ದೇವಾಲಯಗಳಲ್ಲೆಲ್ಲ ಮಾದರಿಯಾದ್ದು, ಅದರ ಹೆಸರೇ ತಿಳಿಸುವಂತೆ ಅದು ವಿಜಯಾಲ ಯನ ಕಾಲದಲ್ಲಿ ನಿರ್ಮಿತವಾದಂತೆ ತೋರುತ್ತದೆ. ನಡುವೆ ಮೂಲದೇವಾಲಯ, ಸುತ್ತಲೂ ಏಳು ಚಿಕ್ಕಚಿಕ್ಕ ಗುಡಿಗಳು, ನುಣುಪಾದ ಹೊರಮೈಯುಳ್ಳ ಬೆಣಚುಕಲ್ಲಿನ ದಪ್ಪ ದಿಮ್ಮಿಗಳಿಂದ ನಿರ್ಮಿತವಾಗಿರುವ ಮೂಲದೇವಾಲಯದ ಗರ್ಭಗುಡಿ ವೃತ್ತಾಕಾರವಾಗಿದೆ. ಅದರ ಗೋಡೆಗಳ ದಪ್ಪ 1.52ಮೀ. ಗರ್ಭಗುಡಿಯನ್ನು ಬಳಸಿದ ಮತ್ತೊಂದು ಚೌಕನೆಯ ಕಟ್ಟಡ ಇದೆ. ಪ್ರದಕ್ಷಿಣಾಪಥ ಇರುವುದು ಇವುಗಳ ನಡುವೆ. ಮುಂದೆ 6 ಕಂಬಗಳ ಮೇಲೆ ನಿಂತಿರುವ ಅಂತರಾಳ. ಇದರ ಹೊರಗೋಡೆಯ ಮೇಲಿರುವ ಅಲಂಕೃತ ಅರೆಗಂಬಗಳು ಚೋಳ ಶಿಲ್ಪದ ವೈಶಿಷ್ಟ್ಯ. ಆದರೆ ನಡುವೆ ಗೂಡುಗಳಿಲ್ಲ. ಲೋವೆಯ ಕೆಳಭಾಗದಲ್ಲಿ ಕುಬ್ಜರ ಸಾಲು, ಮೇಲೆ ಯಾಳಿಗಳ ಸಾಲು, ಮಂಟಪದ ಕಂಬಗಳು ಕೆಳಗೆ ಮತ್ತು ಮೇಲೆ ಚೌಕಾಕೃತಿಯಲ್ಲಿದ್ದು, ನಡುವೆ ಅಷ್ಟಮುಖವುಳ್ಳವಾಗಿ ಪಲ್ಲವ ಶೈಲಿಯನ್ನುಳಿಸಿಕೊಂಡಿವೆ. ಪ್ರವೇಶದ್ವಾರದ ಎರಡೂ ಕಡೆಯೂ ಅರೆಮಂಟಪದಲ್ಲಿ ಎದುರುಮುಖವಾಗಿದ್ದು ದೇಹವನ್ನು ಬಾಗಿಲ ಕಡೆ ತಿರುಗಿಸಿ ಅಡ್ಡಗಾಲು ಹಾಕಿ ನಿಂತಿರುವ ದ್ವಾರಪಾಲಕ ಮೂರ್ತಿಗಳಿವೆ. ಅವುಗಳಿಗೆ ಪಲ್ಲವರ ದ್ವಾರಪಾಲಕ ಮೂರ್ತಿಗಳಂತೆ ಎರಡೇ ಕೈಗಳು. ಮೇಲಿನ ವಿಮಾನ ಮೂರು ಅಂತಸ್ತುಗಳಲ್ಲಿದೆ. ಮೂರನೆಯದು ವೃತ್ತಾಕಾರ, ಸುತ್ತಲೂ ಇರುವ ಕೈಪಿಡಿಯ ಪಂಜರಗಳ ಗೂಡುಗಳಲ್ಲಿ ಮನೋಹರವಾದ ನಾಟ್ಯಭಂಗಿ ಯಲ್ಲಿರುವ ನರ್ತಕಿಯರ ಮೂರ್ತಿಗಳಿವೆ. ಕಣ್ಣನ್ನೂರಿನಲ್ಲಿ 1ನೆಯ ಆದಿತ್ಯನ ಕಾಲದಲ್ಲಿ ಕಟ್ಟಿಸಿದ ಬಾಲಸುಬ್ರಹ್ಮಣ್ಯ ದೇವಾಲಯ ಇದೇ ಮಾದರಿಯದು. ಕುಂಭಕೋಣದ ಸುಂದರವಾದ ನಾಗೇಶ್ವರ ದೇವಾಲಯವೂ ಇದೇ ರೀತಿಯಲ್ಲಿದ್ದರೂ ಇದರ ಗರ್ಭಗೃಹದ ಹೊರಗೋಡೆಗಳಲ್ಲಿರುವ ಗೂಡುಗಳಲ್ಲಿ ಅರ್ಧನಾರಿ, ಬ್ರಹ್ಮ, ದಕ್ಷಿಣಾಮೂರ್ತಿಯರ ವಿಗ್ರಹಗಳಿವೆ. ಉಳಿದ ಗೂಡುಗಳಲ್ಲಿ ಆಳೆತ್ತರದ ಸುಂದರವಾದ ಭಂಗಿಗಳಲ್ಲಿರುವ ಸ್ತ್ರೀಪುರುಷರ ಅರೆಯುಬ್ಬು ಮೂರ್ತಿಗಳುಂಟು. ಇವಲ್ಲದೆ ಜಗತಿಯಲ್ಲಿ ಅರೆಗಂಬಗಳ ಕೆಳಗಿರುವ ಪೌರಾಣಿಕ ವಸ್ತುಗಳ ಶಿಲ್ಪಗಳು ಕುಸುರಿ ಕೆಲಸದಿಂದ ತುಂಬಿವೆ.

ಶ್ರೀನಿವಾಸನಲ್ಲೂರಿನಲ್ಲಿರುವ ಕೊರಂಗನಾಥ ದೇವಾಲಯ 1ನೆಯ ಪರಾಂತಕನ ಕಾಲದ್ದು. ಇದು ಮುಂದಿನ ಹಂತ. ಚೌಕವಾದ ಗರ್ಭಗೃಹ, ಉದ್ದುದ್ದನೆಯ ಮಂಟಪ 15.23 ಮೀ ಎತ್ತರವಾಗಿರುವ ಶಿಖರ. ಇದೊಂದು ಮಧ್ಯ ಗಾತ್ರದ ದೇವಾಲಯ. ಇದರಲ್ಲಿ ಹಿಂದಿನ ದೇವಾಲಯುಗಳಲ್ಲಿಯ ಸರಳತೆ ಇದೆ. ಆದರೆ ಒಳಗೆ ಚೋಳ ರೀತಿಯ ಕಂಬಗಳು, ಸ್ತಂಭಾಗ್ರದಲ್ಲಿ ಕಳಶದ ಆಕೃತಿಯನ್ನಳವಡಿಸಿದೆ. ಇದರ ಮೇಲೆ ಹೆಚ್ಚು ಅಗಲವಾದ ಪುಷ್ಪಬೋದಿಗೆಗಳಿವೆ. ಈ ದೇವಾಲಯದ ಹೊರಗೂಡುಗಳಲ್ಲಿರುವ ದಕ್ಷಿಣಾಮೂರ್ತಿ, ವಿಷ್ಣು, ಇವರ ಮತ್ತು ಇತರ ಸ್ತ್ರೀಪುರುಷರ ಮೂರ್ತಿಗಳು ಬಹುತೇಕ ಪೂರ್ಣವಾಗಿ ಬಿಡಿಸಲ್ಪಟ್ಟಿವೆ. ಇವು ಕಲಾಪೂರ್ಣವಾಗಿವೆ. ಕೋಡಂಬಾಳೂರಿನ ಮೂವರ್ ಕೋಯಿಲ್ ಸೊಗಸಾದ ವಾಸ್ತುಶೈಲಿಗೂ ಮೂರ್ತಿಶಿಲ್ಪಗಳ ಸೌಂದರ್ಯಕ್ಕೂ ಹೆಸರಾಗಿವೆ. 2ನೆಯ ಪರಾಂತಕನ ಕಾಲದಲ್ಲಿ ಅವನ ಸಾಮಂತ ಭೂತಿವಿಕ್ರಮ ಕೇಸರಿ ಕಟ್ಟಿಸಿದ. ಒಂದು ಸಾಲಿನಲ್ಲಿರುವ, ಈ ಮೂರೂ ಗುಡಿಗಳಲ್ಲಿ ಒಂದೊಂದೂ 6.4ಮೀ ಚೌಕವಾಗಿದೆ. ಒಂದಕ್ಕೂ ಇನ್ನೊಂದಕ್ಕೂ 3.4ಮೀ ಅಂತರ. ಒಂದೊಂದರ ಮುಂದೆಯೂ ಒಂದೊಂದು ಅರ್ಧ ಮಂಟಪವುಂಟು. ಇವುಗಳ ಮುಂದೆ 2.4ಮೀ ಅಂತರದಲ್ಲಿ ಇವು ಮೂರಕ್ಕೂ ಸೇರುವ ಒಂದು ದೊಡ್ಡ ಮಹಾಮಂಟಪ–ಇದರ ಮುಂದೆ, ನಡುವೆ. ಒಂದು ನಂದಿಮಂಟಪ; ಈ ಮಂಟಪಕ್ಕೂ ಪ್ರಾಕಾರದ್ವಾರಕ್ಕೂ ನಡುವೆ ಬಲಿಪೀಠ ಅಥವಾ ಧ್ವಜಸ್ತಂಭ; ಇವೆಲ್ಲವನ್ನೂ ಒಳಗೊಂಡಂತೆ ಸುತ್ತಾಲಯ; ಇದಕ್ಕೆ ಸೇರಿದಂತೆ ಸುತ್ತಲೂ 15 ಕಿರುಗುಡಿಗಳು. ಹೊರ ಪ್ರಾಕಾರ ದಪ್ಪಗೋಡೆಯದು. ಪಶ್ಚಿಮದಲ್ಲಿ ಪ್ರವೇಶದ್ವಾರ ಗೋಪುರವೊಂದಿತ್ತು. ಹೊರಗೋಡೆಯ ಶಿಲ್ಪಗಳು ಇತರ ದೇವಾಲಯಗಳಲ್ಲಿರುವಂತೆಯೇ ಇವೆ. ಆದರೆ ಇವು ಹೆಚ್ಚು ನವುರವು. ಲೋವೆಯ ಕೆಳಗಿನ ಗಣಗಳು ಹಲವು ಭಂಗಿಗಳಲ್ಲಿ ಆಕರ್ಷಕವಾಗಿವೆ. ಇಲ್ಲಿಯ ಶಿಲ್ಪಗಳಲ್ಲಿ ಅರ್ಧನಾರಿ, ವೀಣಾಧರ, ದಕ್ಷಿಣಾಮೂರ್ತಿ, ಗಜಾರಿ, ಗಂಗಾಧರ ಮುಂತಾದವು ಗಮನಿಸಬೇಕಾದವು. ಕಿಳಿಯನೂರಿನ ಅಗಸ್ತ್ಯೇಶ್ವರ, ತಿಂಡಿವನದ ತಿರುತ್ತಿಂಡೀಶ್ವರ, ತಿರುಪೆರುಂಬಿಯೂರಿನ ಪಿಪೀಲಿಕೇಶ್ವರ, ಬ್ರಹ್ಮದೇಶದ ತಿರುವಾಳೀಶ್ವರ ಮುಂತಾದವು ಈ ಗುಂಪಿಗೆ ಸೇರುತ್ತವೆ.

ರಾಜರಾಜ ಮತ್ತು ರಾಜೇಂದ್ರನ ಕಾಲದಲ್ಲಿ ಚೋಳರ ವಾಸ್ತುಶಿಲ್ಪಶೈಲಿ ಪರಾಕಾಷ್ಠೆ ಮುಟ್ಟಿತು. ಬೃಹತ್ತಿಗೂ ಮಹತ್ತಿಗೂ ಹೆಸರಾಯಿತು. ಇವರ ಸಾಮ್ರಾಜ್ಯ ದೊಡ್ಡದಾದಂತೆ ಅವರು ದೊಡ್ಡ ದೇವಾಲಯಗಳನ್ನು ಕಟ್ಟಿಸಿ ವಾಸ್ತುಶಿಲ್ಪ ಇತಿಹಾಸದಲ್ಲಿ ಚೋಳಶೈಲಿಗೆ

ಪ್ರಮುಖ ಸ್ಥಾನ ದೊರಕಿಸಿಕೊಟ್ಟರಲ್ಲದೆ ತಮ್ಮ ಕೀರ್ತಿಯನ್ನು ಅಜರಾಮರಗೊಳಿಸಿಕೊಂಡರು. ಇವರ ಸಾಮ್ರಾಜ್ಯದ ಉದ್ದಗಲಕ್ಕೂ ದೇವಾಲಯಗಳು ಹರಡಿಕೊಂಡುವು. ರಾಜರಾಜನ ಆಳ್ವಿಕೆಯ ಮೊದಲ ಭಾಗದಲ್ಲಿ ಅವನು ಕಟ್ಟಿಸಿದ ದೇವಾಲಯಗಳು ಹಿಂದಿನ ದೇವಾಲಯಗಳಿಗಿಂತ ದೊಡ್ಡವಾಗಿದ್ದರೂ ಮುಂದೆ ಅವನು ತಂಜಾವೂರಿನಲ್ಲಿ ಕಟ್ಟಿಸಿದ ರಾಜರಾಜ ದೇವಾಲಯದ (ಬೃಹದೀಶ್ವರ ದೇವಾಲಯ) ಮುಂದೆ ತೀರ ಚಿಕ್ಕವೇ. ಇವುಗಳಲ್ಲಿ ತಿರುವಾಳೀಶ್ವರ ದೇವಾಲಯ ತನ್ನ ಶಿಲ್ಪಬಾಹುಳ್ಯ ಮತ್ತು ವೈವಿಧ್ಯದಿಂದ ಅತ್ಯಂತ ಆಕರ್ಷಕವಾಗಿದೆ. ಅದರಲ್ಲೂ ಲೋವೆಯ ಕೆಳಗಿನ ಗಣಗಳ ವಿವಿಧನಾಟ್ಯಭಂಗಿಗಳು, ವಿಚಿತ್ರ ಮುಖಮುದ್ರೆಗಳು, ಹಾಸ್ಯಮಯವಾದ ನಡೆನೋಟಗಳು ಗಮನಾರ್ಹವಾಗಿವೆ.

ತಂಜಾವೂರಿನಲ್ಲಿ ರಾಜರಾಜ ಕಟ್ಟಿಸಿದ ರಾಜರಾಜೇಶ್ವರ ಮತ್ತು ಗಂಗೈಕೊಂಡ ಚೋಳಪುರದಲ್ಲಿ 1ನೆಯ ರಾಜೇಂದ್ರ ಕಟ್ಟಿಸಿದ ಗಂಗೈಕೊಂಡ ಚೋಳೇಶ್ವರ ದೇವಾಲಯಗಳು ಚೋಳಶೈಲಿಯ ಉತ್ತುಂಗ ಶಿಖರಗಳು. ಗಾತ್ರದಲ್ಲಷ್ಟೇ ಅಲ್ಲ. ರಚನೆಯಲ್ಲಿ, ಶಿಲ್ಪದಲ್ಲಿ, ಯಾವುದೇ ದೃಷ್ಟಿಯಿಂದಲೂ ಇವನ್ನು ಮೀರಿಸಿದ ಚೋಳ ದೇವಾಲಯಗಳಿಲ್ಲ, ರಾಜರಾಜೇಶ್ವರ ಅಥವಾ ಬೃಹದೀಶ್ವರ ದೇವಾಲಯ ರಾಜರಾಜನ ಅತ್ಯದ್ಭುತ ಸಾಧನೆ. 1003ರಲ್ಲಿ ಆರಂಭವಾದ ಈ ದೇವಾಲಯ ನಿರ್ಮಾಣ 1009–10ರ ಹೊತ್ತಿಗೆ, ಎಂದರೆ ರಾಜರಾಜನ ಆಳಿಕೆಯ 25ನೆಯ ವರ್ಷದಲ್ಲಿ ಮುಗಿಯಿತು. ಚೋಳರ ಬಲ ಮತ್ತು ಐಶ್ವರ್ಯಗಳು ರಾಜರಾಜನ ಕಾಲದಲ್ಲಿ ಹೇಗೆ ಬೆಳೆದುವೆಂಬುದಕ್ಕೆ ಇದು ಸಾಕ್ಷಿಯಾಗಿದೆ. 54.8ಮೀ ಉದ್ದವಿರುವ ದೇವಾಲಯದ ವಿಮಾನ 57.9ಮೀ ಎತ್ತರವಾಗಿದೆ. ಇದು ಭಾರತದಲ್ಲೇ ಅತ್ಯುನ್ನತ ದೇವಾಲಯ. ವಿಮಾನ, ಅರ್ಧಮಂಟಪ, ಮಹಾಮಂಟಪ, ನಂದಿಮಂಟಪಗಳು. ಅವನ್ನು ಬಳಸಿದ ಒಂದು ದೊಡ್ಡ ಪ್ರಾಕಾರ, ಆ ಪ್ರಾಕಾರದ ಒಳಭಾಗದಲ್ಲಿ 35 ಸಣ್ಣ ಗುಡಿಗಳು. ಪ್ರಾಕಾರದ ಪ್ರವೇಶದ್ವಾರದ ಮೇಲೊಂದು ಗೋಪುರ. ಅಲ್ಲಿಂದ ಹೊರಗಡೆಗೆ ಎರಡನೆಯ ಪ್ರಾಕಾರಕ್ಕೆ ಸೇರಿದಂತೆ ಮತ್ತೊಂದು ಗೋಪುರ, ಇದರ ಭವ್ಯವಾದ ವಿಮಾನ 27.4ಮೀ ಚೌಕದ ಭದ್ರವಾದ ಬುನಾದಿಯ ಮೇಲೆ ನಿಂತಿದೆ. ಹೊರಮುಖದಲ್ಲಿರುವ ಹಲವು ಭಾಗಗಳು ಒಳಸರಿದೋ ಹೊರಚಾಚಿಯೋ ಇದ್ದು ದೇವಾಲಯದ ಒಟ್ಟಿನ ಆಕೃತಿಗೆ ಮೆರಗು ನೀಡಿವೆ. ಗರ್ಭಗೃಹದ ಗೋಡೆಯ ಎತ್ತರ 15.23ಮೀ. ಅದರ ಮೇಲೆ 13 ಅಂತಸ್ತುಗಳಲ್ಲಿ ಗೋಪುರಾಕೃತಿಯಲ್ಲಿ ನೇರವಾಗಿ ಮೇಲೆದ್ದಿರುವ ವಿಮಾನದ ತುದಿಯಲ್ಲಿ ದುಂಡಾದ ಶಿಖರವಿದೆ. ಅದರ ಭವ್ಯತೆ ಅಡಗಿರುವುದು ವಿಮಾನದ ಸರಳವಾದ ನೇರವಾದ ನಿಲುವಿನಲ್ಲಿ ಮತ್ತು ಅದರ ಮೇಲಿನ ಗೋಳಾಕೃತಿಯ ಬೃಹತ್ ಶಿಖರದಲ್ಲಿ. ಮಧ್ಯದಲ್ಲಿ ಅಡ್ಡವಾಗಿ ಹಾದುಹೋಗಿರುವ ದಿಂಡುಕಲ್ಲಿನಿಂದ ಹೊರಗೋಡೆ ಎರಡು ಭಾಗವಾಗಿದೆ. ಈ ದಿಂಡಿನ ಕೆಳಗೂ ಮೇಲೂ ಅರೆಗಂಬಗಳ ಸಾಲು ಮತ್ತು ಇತರ ಅಲಂಕೃತ ಶಿಲ್ಪಗಳಿವೆ. ಗೋಡೆಗೆ ಹಲವು ಮುಖಗಳಿವೆ. ಒಂದೊಂದು ಮುಖದಲ್ಲೂ ಅರೆಮಂಟಪಗಳು ಅಥವಾ ಆಳವಾದ ದೇವಕೋಷ್ಠಗಳಿವೆ. ಇವುಗಳಲ್ಲಿ ಅತ್ಯಂತ ಸುಂದರವಾಗಿ ಕಡೆದ ಮೂರ್ತಿಶಿಲ್ಪಗಳು ತುಂಬಿವೆ. ಮೇಲೇರುತ್ತ ಕಿರಿದಾಗುವ ವಿಮಾನದ 13 ಅಂತಸ್ತುಗಳೂ ರಚನೆಯಲ್ಲಿ ಒಂದೇ ಬಗೆ, ಒಂದೊಂದರಲ್ಲೂ ಅಲಂಕೃತ ಕಿರುಗೋಪುರಗಳ ಸಾಲು. ಇದು ಅತ್ಯಂತ ಸುಂದರವಾದ ಶಿಲ್ಪ ಜೋಡಣೆ. ಚೌಕಾಕೃತಿಯಲ್ಲೇ ಮೇಲೆದ್ದ ಈ ವಿಮಾನದ ತುದಿಯಲ್ಲಿಯ ಕಂಠ ಭಾಗದಿಂದ ಅದರ ಮೇಲೆ ನಾಲ್ಕು ಕಡೆಯೂ ಅಲಂಕೃತ ಗೂಡುಗಳಿರುವ ಗೋಲಾಕೃತಿಯ ದೊಡ್ಡ ಶಿಖರದಿಂದ ಅದರ ಸೌಂದರ್ಯ ಇಮ್ಮಡಿಸಿದೆ. 13.7ಮೀ ಚೌಕದ ಗರ್ಭಗೃಹದ ಸುತ್ತಲೂ ಇರುವ 1.8ಮೀ ಅಗಲದ ಪ್ರದಕ್ಷಿಣಾಪಥದ ಒಳಚಾವಣಿ ಆ ಕಾಲದ ಸೊಗಸಾದ ವರ್ಣಚಿತ್ರಗಳಿಂದ ತುಂಬಿದೆ. ಗರ್ಭಗೃಹದಲ್ಲಿರುವ ಲಿಂಗ, ನಂದಿಮಂಟಪದಲ್ಲಿರುವ ನಂದಿ ಎರಡೂ ದೊಡ್ಡವು. ಅರ್ಧ ಮಂಟಪ ಹೊರಗೋಡೆಗಳ ಗೂಡುಗಳಲ್ಲಿರುವ ದೇವತಾಮೂರ್ತಿಗಳು ಕಲಾತ್ಮಕವಾದವು. ಒಟ್ಟಿನಲ್ಲಿ ಈ ದೇವಾಲಯದ ರಚನೆ ಸುಭದ್ರ, ಸ್ಥೂಲ, ಭವ್ಯ ಮತ್ತು ಪ್ರಮಾಣಬದ್ಧ.

ರಾಜರಾಜೇಂದ್ರ ಸು.1030ರಲ್ಲಿ ಕಟ್ಟಿಸಿದ ಗಂಗೈಕೊಂಡ ಚೋಳೇಶ್ವರ ದೇವಾಲಯ ಇದೇ ಮಾದರಿಯದು. ಇದು ವಿಸ್ತಾರದಲ್ಲಿ ಹಿರಿದಾಗಿದ್ದರೂ ಗಾತ್ರದಲ್ಲಿ ಕಿರಿದು. ಇದರ 8 ಅಂತಸ್ತುಗಳ 48.7ಮೀ ಎತ್ತರದ ವಿಮಾನದಲ್ಲಿ ರಾಜರಾಜೇಶ್ವರ ದೇವಾಲಯದ ನೇರವಾದ ನೀಳ ರಚನೆ ಇಲ್ಲ. ಅದರ ಬುಡ ಅಗಲ; ಮೇಲೇರುತ್ತಿದ್ದಂತೆ ಹೊರರಚನೆಯಲ್ಲಿ ಒಂದು ಬಳುಕಿದೆ. ಇದರಲ್ಲಿ ರಾಜರಾಜೇಶ್ವರ ದೇವಾಲಯದ ಗಂಡುತನ ಇಲ್ಲದಿದ್ದರೂ ಗಾಂಭೀರ್ಯವಿದೆ. ದೇವಾಲಯದ ಹೊರರಚನೆಯಲ್ಲೂ ಅಲಂಕರಣ ಹೆಚ್ಚು. ದ್ವಾರಪಾಲಕರು, ಹೊರಗೋಡೆಯ ಮೇಲಿನ ಮೂರ್ತಿಗಳು ಜೀವಂತ ಸೌಂದರ್ಯವನ್ನು ಹೊಮ್ಮಿಸುವ ಮಹತ್ತರ ಕೃತಿಗಳು.

ಮುಂದೆ ಒಂದು ಶತಮಾನಕಾಲ ಚೋಳ ವಾಸ್ತುಶಿಲ್ಪಗಳು ಬಹುಮುಖವಾಗಿ ಬೆಳೆದುವು. ಅನೇಕ ದೇವಾಲಯಗಳ ನಿರ್ಮಾಣವಾಯಿತು. ಇವುಗಳಲ್ಲಿ ದಾರಾಸುರಂ ನಲ್ಲಿರುವ ಐರಾವತೇಶ್ವರ ದೇವಾಲಯ 2ನೆಯ ರಾಜರಾಜನ ಕಾಲದ ಭವ್ಯ ಕಟ್ಟಡ. ಇದು ತಂಜಾವೂರಿನ ಮಾದರಿಯಲ್ಲೇ ಇದ್ದರೂ ಇದನ್ನು ಹಲವು ಪ್ರಾಕಾರಗಳು ಸುತ್ತುವರಿದಿವೆ. ಅಲ್ಲದೆ ಇದರ ಮಹಾಮಂಟಪದ ಮುಂದೆ ರಾಜಗಂಭೀರವೆಂಬ ಮತ್ತೊಂದು ಮಂಟಪವಿದೆ. ಇದು ಆನೆಗಳು ಎಳೆಯುತ್ತಿರುವ ರಥದ ಮಾದರಿಯಲ್ಲಿದೆ. 3ನೆಯ ಕುಲೋತ್ತುಂಗನ ಕಾಲದಲ್ಲಿ ತ್ರಿಭುವನದಲ್ಲಿ ಕಟ್ಟಿದ ಕಂಪಹರೇಶ್ವರ ದೇವಾಲಯವೂ ಮೇಲೆ ತಿಳಿಸಿದ ಬೃಹದ್ದೇವಾಲಯಗಳ ಮಾದರಿಯದೇ ಆದರೂ ಇದರಲ್ಲಿ ಚೋಳರ ಕಾಲದ ಅನಂತರ ಬೆಳೆದ ದೇವಾಲಯಗಳ ರಚನೆಯ ವೈವಿಧ್ಯವನ್ನು ಗುರುತಿಸಬಹುದು.

ಚೋಳರ ಕಾಲದ ಮೂರ್ತಿಶಿಲ್ಪ ಜೀವಂತವಾದ ಶಿಲ್ಪಮಾದರಿ. ಪಲ್ಲವರ ಕಾಲದಲ್ಲಿ ತೆಳುಉಬ್ಬು ಶಿಲ್ಪದಲ್ಲಿರುತ್ತಿದ್ದ ಮೂರ್ತಿಗಳು ಚೋಳರ ದೇವಾಲಯಗಳ ಮೇಲೆ ಹೆಚ್ಚು ಗುಂಡು ರೂಪ ತಾಳುತ್ತವೆ. ಇವರ ಕಾಲದ ಕಂಚು ಶಿಲ್ಪಗಳಂತೂ ಲೋಕಪ್ರಸಿದ್ಧವಾಗಿವೆ.

**ಶಾಸನಗಳು:** ವಿಜಯಾಲಯನ ಕಾಲದಿಂದ ಆರಂಭವಾಗುವ ಚೋಳವಂಶದ ದೊರೆಗಳು ಹೆಚ್ಚಿನ ಸಂಖ್ಯೆಯ ಶಾಸನಗಳನ್ನು ಹಾಕಿಸಿದ್ದಾರೆ. ಇವುಗಳಲ್ಲಿ ಕೆಲವು ತಾಮ್ರಶಾಸನಗಳು, ಹೆಚ್ಚಿನವು ಶಿಲಾಶಾಸನಗಳು. ಈ ಶಾಸನಗಳನ್ನು ಸಾಮಾನ್ಯವಾಗಿ ದೇವಾಲಯಗಳ ತಳಪಾಯದ ದಿಂಡುಗಳ ಮೇಲೆ, ಹೊರಭಿತ್ತಿಗಳ ಮೇಲೆ, ಕಂಬಗಳ ಬುಡದಲ್ಲಿ, ಮೂರ್ತಿಗಳ ಕೆಳಗೆ, ಪ್ರಾಕಾರದ ಗೋಡೆಗಳ ಮೇಲೆ ಹಾಕಿಸಿರುತ್ತದೆ. ಕೆಲವು ದೇವಾಲಯಗಳ ಗೋಡೆಗಳಂತೂ ಶಾಸನಗಳಿಂದ ತುಂಬಿ ಹೋಗಿವೆ. ದೊಡ್ಡದೇವಾಲಯಗಳೊಂದೊಂದರಲ್ಲೂ ಚೋಳರ ನೂರಾರು ಶಾಸನಗಳನ್ನು ಕಾಣಬಹುದು. ಅಲ್ಲಲ್ಲಿ ಕಲ್ಲಿನ ಹಲಗೆಗಳ ಮೇಲೆ ಹಾಕಿಸಿರುವ ಶಾಸನಗಳುಂಟು. ಇಟ್ಟಿಗೆಯ ದೇವಾಲಯಗಳನ್ನು ಕಲ್ಲಿನಿಂದ ಹೊಸದಾಗಿ ಕಟ್ಟಿಸಿದಾಗ ಹಳೆಯ ದೇವಾಲಯಗಳ ಮೇಲಿದ್ದ ಶಾಸನಗಳನ್ನು ಹೊಸ ದೇವಾಲಯದ ಗೋಡೆಗಳ ಮೇಲೆ ಪ್ರತಿಮಾಡಿಸುವ ಪದ್ಧತಿಯನ್ನು ಚೋಳರು ಆಚರಣೆಗೆ ತಂದಿದ್ದರು.

ಮಹಿಷಮರ್ದಿನಿ, ಈಶ್ವರ ದೇವಾಲಯ, ಪುಂಜೈ

ಚೋಳರ ತಾಮ್ರಶಾಸನಗಳು ಅತ್ಯಂತ ದೊಡ್ಡವು. ಚೆನ್ನಾಗಿ ತಟ್ಟಿ ಮಾಡಿದ ಅಗಲವಾದ ಹಲಗೆಗಳನ್ನು ದೊಡ್ಡದಾದ ಬಳೆಯೊಂದಕ್ಕೆ ಪೋಣಿಸಿ ಬಳೆಯ ತುದಿಗಳನ್ನು ಗುಂಡು ಮುದ್ರೆಯೊಂದಕ್ಕೆ ಬೆಸೆದು ಸೇರಿಸಿರುತ್ತದೆ. ಅವುಗಳಲ್ಲಿ ಒಂದೊಂದೂ ಹೆಚ್ಚು ತೂಕವುಳ್ಳವಾಗಿರುತ್ತವೆ. ಲೇಡನ್ ವಸ್ತುಸಂಗ್ರಹಾಲಯದಲ್ಲಿರುವ 1ನೆಯ ರಾಜರಾಜನ ತಾಮ್ರಶಾಸನದಲ್ಲಿ 21 ಹಲಗೆಗಳಿವೆ; 443 ಪಂಕ್ತಿಗಳುಂಟು. ರಾಜೇಂದ್ರ ಚೋಳನ 6ನೆಯ ವರ್ಷದ ತಿರುವಾಲಂಗಾಡು ಶಾಸನದಲ್ಲಿ 31 ಹಲಗೆಗಳಿವೆ. ಇದು ದೊಡ್ಡದಾದ ಬಳೆ ಮುದ್ರೆಗಳಿಂದ ಕೂಡಿ, 7,980 ತೊಲ ತೂಗುತ್ತದೆ. ಇದರಲ್ಲಿ 816 ಪಂಕ್ತಿಗಳುಂಟು. ಇದುವರೆಗೆ ದೊರೆತಿರುವ ತಾಮ್ರಶಾಸನಗಳಲ್ಲೆಲ್ಲ ಅತ್ಯಂತ ದೊಡ್ಡದಾದ್ದು 1ನೆಯ ರಾಜೇಂದ್ರನ ಕರಂದೈ ಶಾಸನಗಳ 55 ಹಲಗೆಗಳ ಮೇಲೆ 2,500 ಪಂಕ್ತಿಗಳಿಗೂ ಉದ್ದವಾದ ಶಾಸನವಿದೆ. ಇದರ ತೂಕ 89,645 ತೊಲಗಳು. ಜೊತೆಗೆ ಇದರ ಮುದ್ರೆ ಮತ್ತು ಉಂಗುರಗಳ ತೂಕ 753 ತೊಲಗಳು. 1,500 ಪಂಕ್ತಿಗಳಲ್ಲಿ ಚೋಳರ ದೀರ್ಘವಾದ ವಂಶಾವಳಿಯನ್ನು ಕೊಟ್ಟಿರುವ ಈ ಶಾಸನದಲ್ಲಿ 1,073 ಬ್ರಾಹ್ಮಣರಿಗೆ ದತ್ತಿಯನ್ನು ಕೊಟ್ಟ ವಿಷಯವನ್ನು ವಿವರವಾಗಿ ತಿಳಿಸಿದೆ. ಈ ತಾಮ್ರಶಾಸನಗಳಲ್ಲಿ ಸೂರ್ಯವಂಶದ ಪೌರಾಣಿಕ ರಾಜಮನೆತನದಿಂದ ಆರಂಭಿಸಿ ಅತಿ ದೀರ್ಘವಾಗಿ ಚೋಳ ವಂಶಾವಳಿಯ ಪಟ್ಟಿ ಕೊಟ್ಟಿದೆಯಲ್ಲದೆ ರಾಜರ ಪ್ರಶಸ್ತಿಗಳನ್ನೂ ತಿಳಿಸಿದೆ.

ಚೋಳರ ಮೊದಮೊದಲಿನ ತಾಮ್ರಶಾಸನಗಳಲ್ಲಿ ಸ್ವಲ್ಪಭಾಗ ಸಂಸ್ಕೃತದಲ್ಲೂ ಉಳಿದ ಭಾಗ ತಮಿಳಿನಲ್ಲೂ ಇರುವುದು ರೂಢಿ; ರಾಜರಾಜರ ಲೇಡನ್ ಶಾಸನ, ರಾಜೇಂದ್ರನ ತಿರುವಾಲಂಗಾಡು ಶಾಸನ. ಸುಂದರ ಚೋಳನ ಅನ್‌ಬಿಲ್ ಶಾಸನ ಮುಂತಾದವು ಈ ಗುಂಪಿಗೆ ಸೇರಿದವು. ಆದರೆ ಮುಂದೆ ಇವರು ಶಾಸನಗಳನ್ನು ಪೂರ್ಣವಾಗಿ ತಮಿಳಿನಲ್ಲೇ ಹಾಕಿಸಿದರು. ರಾಜೇಂದ್ರನ ತಿರುಕ್ಕಲರ್ ಶಾಸನ ತಮಿಳಿನಲ್ಲೇ ಇದೆ. ಅದೇ ತಿರುಕ್ಕಲರಿನ 1ನೆಯ ರಾಜಾಧಿರಾಜ, 1ನೆಯ ಕುಲೋತ್ತುಂಗ, 2ನೆಯ ರಾಜರಾಜ, 3ನೆಯ ಕುಲೋತ್ತುಂಗ ಮುಂತಾದವರ ತಾಮ್ರಶಾಸನಗಳೂ ಪೂರ್ಣವಾಗಿ ತಮಿಳಿನಲ್ಲೇ ಇವೆ. ಬಳೆಯ ತುದಿಗಳನ್ನು

ಬಂಧಿಸಿರುವ ದುಂಡು ಮುದ್ರೆಗಳ ಮೇಲೆ ಛತ್ರ, ಚಾಮರ, ದೀಪಸ್ತಂಭಗಳು, ಹುಲಿ ಮುಂತಾದ ಚಿಹ್ನೆಗಳಿವೆ. ಶಿಲಾಶಾಸನಗಳು ವೈವಿಧ್ಯಮಯವಾದವು. ಮೂರ್ತಿಗಳ ಹೆಸರನ್ನು ಸೂಚಿಸುವ ಒಂದೇ ಪದವುಳ್ಳ ಶಾಸನಗಳಿಂದ ಹಿಡಿದು, ಬೃಹದೀಶ್ವರ ದೇವಾಲಯದಲ್ಲಿರುವ 16.7ಮೀ ಎತ್ತರದ, 55ಕ್ಕಿಂತ ಹೆಚ್ಚು ಸಾಲುಗಳಿರುವ, 1ನೆಯ ರಾಜರಾಜನ ಶಾಸನದಂತೆ ದೀರ್ಘವಾದವೂ ಇವೆ. ದಾರಾಸುರಂನಲ್ಲಿ ಐರಾವತೇಶ್ವರ ದೇವಾಲಯದ ಗೋಡೆಗಳ ಗೂಡುಗಳಲ್ಲಿರುವ ಮೂರ್ತಿಗಳ ಪೀಠಗಳ ಮೇಲೆ ಮೂರ್ತಿಗಳ ಹೆಸರುಗಳನ್ನು ತಿಳಿಸುವ ಸಣ್ಣಸಣ್ಣ ಶಾಸನಗಳಿವೆ. ಶಿಲಾ ಶಾಸನಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯವು ರಾಜನೋ, ಅಧಿಕಾರಿಗಳೋ, ಗ್ರಾಮ ಸಭೆಗಳೋ, ಸೈನ್ಯಗಳ ತುಕಡಿಗಳೊ ಸಾಮಾನ್ಯ ಜನತೆಯೋ ದೇವಾಲಯಗಳಿಗೆ, ಮಠಗಳಿಗೆ, ಬ್ರಾಹ್ಮಣರಿಗೆ ಕೊಟ್ಟ ದತ್ತಿಯನ್ನು ಅಥವಾ ನಂದಾದೀಪಕ್ಕಾಗಿ, ದೇವರಪೂಜೆಗಾಗಿ ಇಟ್ಟ ಪುದುವಟ್ಟು ಅಥವಾ ಬಿಟ್ಟ ಹಸು ಕುರಿಗಳ ವಿಷಯವನ್ನು ತಿಳಿಸುತ್ತವೆ. ಗ್ರಾಮಸಭೆಗಳು ನಡೆಸುತ್ತಿದ್ದ ವ್ಯವಹಾರ, ಕೊಡುತ್ತಿದ್ದ ತೀರ್ಪು, ಹಾಕುತ್ತಿದ್ದ ದಂಡ, ಸ್ವತ್ತುಗಳ ಮಾರಾಟ, ಈಡುಮಾಡುವುದು ಮುಂತಾದುವುಗಳ ವಿವರಗಳನ್ನು ದೇವಾಲಯಗಳ ಗೋಡೆಗಳ ಮೇಲೆ ದಾಖಲು ಮಾಡಿರುವುದೂ ಉಂಟು. ಚಾರಾಲ ತಾಮ್ರಶಾಸನದಲ್ಲಿರುವ ಸಂಸ್ಕೃತ ಪ್ರಶಸ್ತಿ ಕನ್ಯಾಕುಮಾರಿ ಶಿಲಾಶಾಸನದ ಪ್ರತಿ. ತಿರುವಿಡೈವಾಯಿಲ್‍ನಲ್ಲಿರುವ ಅಪರೂಪದ ಶಾಸನವೊಂದು ಜ್ಞಾನಸಂಬಂಧರು ಅಲ್ಲಿಯ ದೇವಾಲಯವೊಂದರ ವಿಷಯದಲ್ಲಿ ಹಾಡಿರುವ ತೇವಾರವನ್ನು ಒಳಗೊಂಡಿದೆ.

ಚೋಳರ ಶಾಸನಗಳು ತಮಿಳುಗ್ರಂಥ ಅಥವಾ ವಟ್ಟೆಳುತ್ತು ಲಿಪಿಯಲ್ಲಿವೆ. ವಟ್ಟೆಳುತ್ತನ್ನು ತಮಿಳುನಾಡಿನಲ್ಲಿ 10ನೆಯ ಶತಮಾನದಿಂದೀಚೆಗೆ 16ನೆಯ ಶಾಸನದಿಂದೀಚೆಗೆ ಬಳಸುವುದು ನಿಂತುಹೋಯಿತು. ಚೋಳಸರು ಗೆದ್ದ ಇತರ ಪ್ರಾಂತ್ಯಗಳಲ್ಲಿ ಆಯಾ ಪ್ರಾಂತ್ಯದ ಭಾಷೆ ಮತ್ತು ಲಿಪಿಯನ್ನು ಬಳಸಿರುವುದುಂಟು. ಒಂದನೆಯ ರಾಜರಾಜನ ಸೇನಾಧಿಪತಿ ಅಪ್ರಮೇಯ ಕಲಿಯೂರಿನಲ್ಲಿ ಹಾಕಿಸಿರುವ ಜಯಸ್ತಂಭ ಶಾಸನವೂ ಒಂದನೆಯ ರಾಜೇಂದ್ರನ ಬಲಮುರಿ ಶಾಸನವೇ ಮುಂತಾದವೂ ಸುಂದರವಾದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿವೆ. ಕೆಲವು ಶಾಸನಗಳು ತಮಿಳು ಭಾಷೆ ಮತ್ತು ಕನ್ನಡಲಿಪಿ ಮತ್ತು ಭಾಷೆಯಲ್ಲಿವೆ. ಕೆಲವು ಶಾಸನಗಳು ತಮಿಳು ಭಾಷೆ ಮತ್ತು ಕನ್ನಡಲಿಪಿಯಲ್ಲಿರುವುದೂ ಉಂಟು. ಅನಂತಪುರ ಜಿಲ್ಲೆಯ ಕೊತ್ತ ಶಿಖರದಲ್ಲಿರುವ, 1ನೆಯ ರಾಜೇಂದ್ರನ ಕಾಲದ, ತಮಿಳು ಶಾಸನವೊಂದು ಕನ್ನಡ ಲಿಪಿಯಲ್ಲಿದೆ. ವೆಂಗಿನಾಡಿನಲ್ಲೂ ಚೋಳರ ಹಲವು ಶಾಸನಗಳುಂಟು. ಆದರೆ ಅಲ್ಲಿ ಹಾಕಿಸಿದ ಹೆಚ್ಚು ಶಾಸನಗಳು ತಮಿಳನವು. ಕೋಲಾರದ ಕೋಲಾರಮ್ಮನ ದೇವಾಲಯದ ಗೋಡೆಯ ಮೇಲೆ ತಮಿಳು ಶಾಸನಗಳು ತುಂಬಿವೆ.

ರಾಜರ ವಂಶಾವಳಿಯನ್ನು ಕೊಟ್ಟು ಆಯಾ ರಾಜರ ಕಾಲದಲ್ಲಿ ನಡೆದ ಕೆಲವು ಘಟನೆಗಳನ್ನು ತಿಳಿಸುವುದು ರಾಜರಾಜನ ಕಾಲದವರೆಗಿನ ಪದ್ಧತಿಯಾಗಿತ್ತು. ಆದರೆ ರಾಜರಾಜ ತನ್ನ ಶಿಲಾಶಾಸನಗಳಲ್ಲಿ ತನ್ನ ಆಡಳಿತ ಕಾಲದಲ್ಲಿ ಆಯಾ ವರ್ಷ ನಡೆದ ಮುಖ್ಯ ಘಟನೆಗಳನ್ನು ಒಂದು ಗೊತ್ತಾದ ರೀತಿಯಲ್ಲಿ ವರ್ಣಿಸುವ ಪದ್ಧತಿಯನ್ನು ಅನುಷ್ಠಾನಕ್ಕೆ ತಂದ. ಕಾಲ ಕಳೆದಂತೆ ಆ ವರ್ಣನೆಯ ಜೊತೆಗೆ ಹೊಸ ಹೊಸ ಘಟನೆಗಳನ್ನೂ ವರ್ಣನೆಯನ್ನೂ ಸೇರಿಸುತ್ತ ಹೋಗುವ ಪದ್ಧತಿ ಬೆಳೆಯಿತು. ಇದರಿಂದ ಅವನ ಕಾಲದಲ್ಲಿ ನಡೆದ ಮುಖ್ಯ ಘಟನೆಗಳ ಅನುಕ್ರಮಣಿಕೆಯನ್ನು ತಿಳಿಯಲು ಅನುಕೂಲವಾಗಿದೆ. ಇದೇ ಪದ್ಧತಿಯನ್ನೇ ರಾಜರಾಜನ ಅನಂತರ ಬಂದ ರಾಜರೂ ಅನುಸರಿಸಿದರು. ಹೀಗೆ ಒಬ್ಬೊಬ್ಬ ರಾಜನೂ ತನ್ನ ಕೀರ್ತಿ ಅಥವಾ ಪ್ರಶಸ್ತಿಯನ್ನು ಒಂದು ಗೊತ್ತಾದ ರೀತಿಯಲ್ಲಿ ಆರಂಭಿಸಿರುವುದನ್ನು ಕಾಣಬಹುದು. ರಾಜರಾಜನ ಪ್ರಶಸ್ತಿ ತಿರುಮಗಳ್ ಪೋಲ ಎಂದು ಆರಂಭವಾದರೆ, ರಾಜೇಂದ್ರನ ಪ್ರಶಸ್ತಿ ಆರಂಭವಾಗುವುದು ತಿರುಮಣ್ಣಿವಳರ ಎಂದು. ರಾಜೇಂದ್ರನ ಚಿಕ್ಕ ಶಾಸನಗಳಲ್ಲಿ ಪೂರ್ವ ದೇಶಮುಂ ಗಂಗೆಯೊ ಕಡಾರಮುಂಕೊಣ್ಣೋಪರ ಕೇಸರಿ, ಪನ್ಮರಾನ–ಎಂದು ಮಾತ್ರ ಇರುತ್ತದೆ. ಇದೇ ರೀತಿ ಒಂದನೆಯ ರಾಜಾಧಿರಾಜನ ಶಾಸನಗಳು ತಿಙ್ಗಳೇರ್ತರು ಎಂದೂ ಇಮ್ಮಡಿ ರಾಜೇಂದ್ರನ ಶಾಸನಗಳು ತಿರುಮಾಡು ಪುವಿಯೆನುಂ ಎಂದೂ ವೀರರಾಜೇಂದ್ರನವು ತಿರುಳರ್ ತಿರುಳ್ ಪುಯತ್ತು ಎಂದೂ ಆರಂಭವಾಗಿ ಅವರವರ ಸಾಧನೆಗಳನ್ನು ವರ್ಣಿಸುತ್ತವೆ.

ಚೋಳರ ಶಾಸನಗಳ ವಿಷಯಗಳು ಹೆಚ್ಚು ವೈವಿಧ್ಯಮಯ. ದತ್ತಿ ಶಾಸನಗಳೇ ಸಾಮಾನ್ಯ. ಆದರೆ ಚಾರಿತ್ರಿಕ ವಿಷಯಗಳನ್ನು ಮಾತ್ರ ತಿಳಿಸುವ ಶಾಸನಗಳೂ ಇಲ್ಲದಿಲ್ಲ. ರಾಜರಾಜ ಪಾಂಡ್ಯರಿಂದ ಸೋತು ಓಡಿಹೋದದ್ದನ್ನೂ ಅನಂತರ ಹೊಯ್ಸಳ ವೀರ ಬಲ್ಲಾಳನ ನೆರವಿನಿಂದ ರಾಜ್ಯಕ್ಕೆ ಹಿಂದಿರುಗಿದ್ದನ್ನೂ ತಿರುವೇಂಡಿಪುರದಲ್ಲಿರುವ 3ನೆಯ ರಾಜರಾಜನ ಕಾಲದ ಇಂಥ ಒಂದು ಶಾಸನ ನೇರವಾಗಿ ತಿಳಿಸುತ್ತದೆ. ಕಲಿಯೂರಿನಲ್ಲಿರುವ ಅಪ್ರಮೇಯನ ಶಾಸನ, ಅವನು ಕನ್ನಡನಾಡಿನ ಹಲವು ರಾಜಮನೆತನಗಳನ್ನು ಒಟ್ಟಾಗಿ ಎದುರಿಸಿ ಸೋಲಿಸಿದುದನ್ನು ವರ್ಣಿಸುವ ಒಂದು ಜಯಸ್ತಂಭ ತಿರುವಾಲೀಶ್ವರದ ಅಪರೂಪ ಶಾಸನವೊಂದು, ಮೂನ್ರುಕೈ ಮಹಾ ಸೇನೈ ಎಂಬ ಒಂದು ಸೈನ್ಯದ ತುಕಡಿಯ ಸಾಹಸ; ಅದು ನಡೆಸಿದ ಯುದ್ಧಗಳು, ಗೆದ್ದ ಗೆಲುವುಗಳು–ಇವನ್ನು ಇದು ವಿವರಿಸುತ್ತದೆ. ಒಂದನೆಯ ಪರಾಂತಕನ ಕಾಲದ ಉತ್ತರ ಮೇರೂರಿನ ಎರಡು ಶಾಸನಗಳು ಗ್ರಾಮಸಭೆಗೆ ವಾರಿಯಂಗಳಿಗೆ ಕುಡುವೋಲೈ ಮೂಲಕ ನಡೆಸುವ ಚುನಾವಣೆಯ ಬಗ್ಗೆ ವಿವರವಾದ ತಿಳುವಳಿಕೆಯನ್ನು ಕೊಡುವುದಲ್ಲದೆ, ಚುನಾವಣೆಗೆ ನಿಲ್ಲಬೇಕಾದವರ ಅರ್ಹತೆಗಳೇನಿರಬೇಕೆಂಬುದನ್ನೂ ನಿಗದಿಪಡಿಸುತ್ತವೆ. ಮಧುರಾಂತಕ ಉತ್ತಮ ಚೋಳನ 14ನೆಯ ವರ್ಷಕ್ಕೆ ಸೇರಿದ ತಿರುಮಲಾಪುರದ ಒಂದು ಶಾಸನ ಮೂರು ವರ್ಷಗಳಷ್ಟು ಕಾಲ ನಡೆದ ವ್ಯವಹಾರವೊಂದನ್ನು ವಿವರಿಸುತ್ತದೆ. ಒಂದನೆಯ ಆದಿತ್ಯನ ಕಾಲದಲ್ಲಿ ಶೆಟ್ಟಿಯೂರನ್ನು ದೇವದಾನವಾಗಿ ಪುದುಪ್ಪಾಕ್ಕಂ ಸಭೆಯ ವಶಕ್ಕೆ ಬಿಟ್ಟಿತು. ಆದರೆ ಶಾಸನ ಹಾಕಿಸಿದ್ದರೂ ಅದು ಕಡತಗಳಲ್ಲಿ ಸೇರಿದ್ದುದರಿಂದ ದೇವಾಲಯಕ್ಕೆ ಅದರ ಉತ್ಪತ್ತಿ ತಲುಪುತ್ತಿರಲಿಲ್ಲ. ಒಂದನೆಯ ಪರಾಂತಕನ ಕಾಲದಲ್ಲಿ 4ನೆಯ ವರ್ಷದಲ್ಲಿ ಈ ತಪ್ಪನ್ನು ಸರಿಪಡಿಸಿದ ಮೇಲೆ ಪುದುಪ್ಪಾಕ್ಕಂ ಸಭೆ ದೇವಾಲಯಕ್ಕೆ ಅಲ್ಲಿಯ ಉತ್ಪತ್ತಿಯನ್ನು ಕೊಡಲಾರಂಭಿಸಿತು. ಪರಾಂತಕನ ಆಳಿಕೆಯ ಮೂವತ್ತಾರನೆಯ ವರ್ಷದಲ್ಲಿ ಮತ್ತೊಂದು ದತ್ತಿ ಬಿಟ್ಟುದರಿಂದ ಅದೂ ಸೇರಿದಂತೆ ಹೆಚ್ಚಿನ ವರಮಾನವನ್ನು ಆ ಸಭೆ ದೇವಸ್ಥಾನಕ್ಕೆ ಕೊಡಬೇಕಾಗಿತ್ತು. ಹಾಗೆ ಕೊಡದೆ ಹೆಚ್ಚಿನ ಬಾಕಿಯನ್ನು ಸಭೆ ಉಳಿಸಿಕೊಂಡಿತ್ತು. ಉತ್ತಮ ಚೋಳನ ಕಾಲದಲ್ಲಿ ದೇವಸ್ಥಾನದ ಅಧಿಕಾರಿಗಳು ರಾಜನಲ್ಲಿ ದೂರಿತ್ತಾಗ ರಾಜ ಅದನ್ನು ಸರಿಪಡಿಸಿ ಆಜ್ಞೆ ಹೊರಡಿಸಿದ. ಕಿಲಿಯ್ಯೂರಿನ ಮತ್ತೊಂದು ಶಾಸನ, 3ನೆಯ ಕುಲೋತ್ತುಂಗನ ಕಾಲಕ್ಕೆ ಸೇರಿದ್ದು. ಅದರಲ್ಲಿ ನ್ಯಾಯ ನಿರ್ವಹಣೆಯ ವಿಷಯವಿದೆ. ಆ ಊರಿನ ಇಬ್ಬರು ಜಗಳವಾಡಿ ಊರಿಗೆ ತೊಂದರೆ ಕೊಟ್ಟಿದ್ದರಿಂದ ಅವರನ್ನು ವಿಚಾರಣೆಗೆ ಗುರಿಪಡಿಸಿ ರಾಜಾಜ್ಞೆಯ ಮೇರೆಗೆ ಸಾವಿರ ಕಾಶು ದಂಡ ಹಾಕಲಾಯಿತು. ಅವರ ನೆರವಿಗೆ ಯಾರೂ ಬಾರದಿರಲು ಅವರ ಆಸ್ತಿಯನ್ನು ಸಾವಿರದರವತ್ತು ಕಾಶುಗಳಿಗೆ ಮಾರಿ ದಂಡವನ್ನು ಉತ್ತಾರ ಹಾಕಿಕೊಂಡದ್ದಲ್ಲದೆ ಅದನ್ನು ಕೊಡಲು ತಡಮಾಡಿದ್ದಕ್ಕಾಗಿ ಹೆಚ್ಚಿಗೆ ಬಂದ ಅರವತ್ತು ಕಾಶುಗಳನ್ನೂ ದಂಡವನ್ನಾಗಿ ಪರಿಗಣಿಸಲಾಯಿತು.

ಗ್ರಾಮಾಡಳಿತಕ್ಕೆ, ನ್ಯಾಯನಿರ್ವಹಣೆಗೆ, ಸಂಘ ಸಮುದಾಯಗಳಿಗೆ ಸಂಬಂಧಿಸಿದ ವಿವರಗಳನ್ನು ಕೊಡುವ ಶಾಸನಗಳಿರುವಂತೆ, ದೇವಾಲಯಗಳ ಆಡಳಿತಕ್ಕೆ ಸಂಬಂಧಿಸಿದ ಪರಿಚಯ ನೀಡುವ ಹಲವು ಶಾಸನಗಳಿವೆ. ತಂಜಾವೂರಿನ ಬೃಹದೀಶ್ವರ ದೇವಾಲಯದ ಮೇಲಿರುವ ಶಾಸನದಲ್ಲಿ ರಾಜರಾಜ ಆ ದೇವಾಲಯವನ್ನು ನಿರ್ಮಿಸಿದ್ದನ್ನೂ ರಾಜರಾಜೇಶ್ವರ ದೇವರ ಪ್ರತಿಷ್ಠೆ ಮಾಡಿದ್ದನ್ನೂ ಅವನೂ ಅವನ ಸೋದರಿ ಕುಂದವೈಯೊ ಅಧಿಕಾರಿಗಳೂ ದಂಡನಾಯಕರೂ ದೇವರಿಗೆ ಮಾಡಿದ ದಾನಗಳನ್ನೂ ಸಂಪೂರ್ಣವಾದ ವಿವರಗಳೊಡನೆ ನೀಡಲಾಗಿದೆ. ನೂರಾರು ಆಭರಣಗಳ ಹೆಸರು, ತೂಕ, ಬೆಲೆ–ಎಲ್ಲವೂ ಅದರಲ್ಲಿವೆ. ರಾಜರಾಜ ಯುದ್ಧದಲ್ಲಿ ದೋಚಿ ತಂದ ಐಶ್ವರ್ಯದ ಬಹುಭಾಗ ಇದರಲ್ಲಿ ಸೇರಿತ್ತು. ಚಿನ್ನವೇ 41,500 ಕರಂಜುಗಳಷ್ಟಿತ್ತು. 10,200 ಕಾಶುಗಳ ಬೆಲೆಯ ಒಡವೆಗಳಿದ್ದುವು. ಅವನು 50,650 ಕರಂಜುಗಳ ತೂಕದ ಬೆಳ್ಳಿಯನ್ನು ದೇವಾಲಯಕ್ಕೆ ಕೊಟ್ಟ; ಸಾಮ್ರಾಜ್ಯದ ನಾನಾ ಭಾಗಗಳಲ್ಲಿ ಅನೇಕ ಹಳ್ಳಿಗಳನ್ನೂ ಭೂಮಿಗಳನ್ನೂ ದತ್ತಿ ಬಿಟ್ಟಿದ್ದ ಇದರಿಂದ 1,16,000 ಕಲಂ ಬತ್ತದ ಆದಾಯವಿತ್ತು; ದೇವಸ್ಥಾನದ ಆಡಳಿತವರ್ಗದಲ್ಲಿ 400 ಜನರಿದ್ದರು. ಆಸ್ಪತ್ರೆಗಳನ್ನೂ ವಿದ್ಯಾಶಾಲೆಗಳನ್ನೂ ನಡೆಸಲು ಬಿಟ್ಟಿದ್ದ ದತ್ತಿಗಳ ವಿವರಗಳೂ ಇವೆ. ಒಂದನೆಯ ರಾಜೇಂದ್ರನ ಎಣ್ಣಾಯಿರಂ ಶಾಸನದಲ್ಲಿ ಶಾಲೆಗಳ, ಶಾಲಾಭೋಗಗಳ ವಿವರಗಳನ್ನಿತ್ತಿದೆ. 270 ಬ್ರಹ್ಮಚಾರಿಗಳು, 70 ಶಾತ್ತಿರಾರ್‌ಗಳು ಮತ್ತು 14 ಪ್ರಾಧ್ಯಾಪಕರಿಗೆ ಅಲ್ಲಿ ಊಟ, ವಾಸ ಮತ್ತು ವಿದ್ಯಾಭ್ಯಾಸಕ್ಕೆ ಅವಕಾಶಮಾಡಿಕೊಡಲಾಗಿತ್ತು.

ಹೀಗೆ ಚೋಳರ ಶಾಸನಗಳು ಇತರ ರಾಜವಂಶಗಳ ಶಾಸನಗಳಿಗಿಂತ ವಿಶಿಷ್ಟವಾಗಿದ್ದು, ಆ ಕಾಲದ ಆಡಳಿತ, ವಿದ್ಯಾಭ್ಯಾಸ, ಮತ, ಧರ್ಮ, ನ್ಯಾಯನಿರ್ವಹಣೆ ಸಂಸ್ಕೃತಿ ಮುಂತಾದ ಹಲವು ವಿಷಯಗಳ ಮೇಲೆ ಅಮೂಲ್ಯವಾದ ಬೆಳಕನ್ನು ಚೆಲ್ಲುತ್ತವೆ.

**ನಾಣ್ಯಗಳು:** ಚೋಳರ ಕಾಲದಲ್ಲಿ ನಾನಾ ವಿಧದ ನಾಣ್ಯಗಳು ಚಲಾವಣೆಯಲ್ಲಿದ್ದವು. ಬಂಗಾರ ವಸ್ತುಗಳ ಅಳತೆಯ ಸಾಧನವಾಗಿತ್ತು. ಇದನ್ನು ಕಳಂಜುನಿಂದ ಅಳೆಯಲಾಗುತ್ತಿತ್ತು. ಚೋಳ ಅರಸ ಉತ್ತಮ ಚೋಳ ಬಂಗಾರದ ನಾಣ್ಯಗಳನ್ನು ಹೊರಡಿಸಿದ. ಬಂಗಾರದ ನಾಣ್ಯದ ಜೊತೆಗೆ ಕಾಶು, ಕರುಂಕಾಶು, ಈಳಕ್ಕಾಶು, ಮಾಡೈ ಮತ್ತು ಪಣಮ್ ಎಂಬ ಇತರ ನಾಣ್ಯಗಳಿದ್ದವು. ತುಳೈಪನ್ ಎಂಬ ಒಂದು ಬಗೆಯ ನಾಣ್ಯ ಚಲಾವಣೆಯಲ್ಲಿತ್ತು.

ಚೋಳರ ಈಗ ದೊರೆತಿರುವ ನಾಣ್ಯಗಳ ಸಂಖ್ಯೆ ಹೆಚ್ಚಿಲ್ಲ. ಅವರ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳು ದೊರೆತಿದ್ದರೂ ಮೊದಲಿನ ಚಕ್ರವರ್ತಿಗಳು ಹಾಕಿಸಿದ್ದ ಶುದ್ಧ ಚಿನ್ನದ ನಾಣ್ಯಗಳು ದೊರೆತಿರುವುದು ವಿರಳ. ಮುಂದಿನ ಚೋಳರಾಜರು ಬೇರೆ ಲೋಹಗಳನ್ನು ಬೆರೆಸಿ ಅಚ್ಚು ಹಾಕಿಸಿದ್ದ ಅಶುದ್ಧ ಚಿನ್ನದ ನಾಣ್ಯಗಳಲ್ಲಿ ಅವು ಸೇರಿಹೋಗಿರಬೇಕು. ಇಲ್ಲವೆ ಈಚೆಗೆ ದೊರೆತ ಈ ನಾಣ್ಯಗಳ ಬಹುಭಾಗ ಕರಗಿ ಚಿನ್ನವಾಗಿ ಮಾರ್ಪಟ್ಟಿರಬೇಕು.

ಉತ್ತಮ ಚೋಳ ಪರಾಕೇಸರಿಯ ನಾಣ್ಯಗಳೇ ಈಗ ದೊರೆತಿರುವ ನಾಣ್ಯಗಳಲ್ಲಿ ಪ್ರಾಚೀನವಾದವು. ಇವನ ಬೆಳ್ಳಿಯ ನಾಣ್ಯ 62 ಗುಂಜಿ ತೂಕವಿದೆ. ಮುಂಬದಿಯಲ್ಲಿ ಮೇಲೆ ಛತ್ರ, ಅದರ ಇಕ್ಕೆಲ್ಲಗಳಲ್ಲಿ ಚಾಮರಗಳು, ಕೆಳಗೆ ಅತ್ತ ಇತ್ತ ದೀಪದ ಕಂಬಗಳು, ನಡುವೆ ಅನುಕ್ರಮವಾಗಿ ಬಿಲ್ಲು, ಮುಂಗಾಲುಗಳನ್ನೂರಿ ಕುಳಿತ ಹುಲಿ ಮತ್ತು ಜೋಡಿ ಮೀನುಗಳು; ಹಿಂಬದಿಯಲ್ಲೂ ಸುತ್ತಲೂ ಚುಕ್ಕೆಗಳು, ನಡುವೆ ನಾಗರಿಯಲ್ಲಿ, ಉತ್ತಮ ಚೋಳಃ ಎಂಬ ಅಂಕನ, ಬಿಲ್ಲು ಮತ್ತು ಜೋಡಿ ಮೀನುಗಳು ಚೇರ ಮತ್ತು ಪಾಂಡ್ಯರನ್ನು ಇವನ್ನು ಗೆದ್ದದ್ದರ ಕುರುಹು. ಹುಲಿ ಚೋಳರ ಲಾಂಛನ. ಈ ಉಪಲಬ್ಧವಿಲ್ಲದ ಚಿನ್ನದ ನಾಣ್ಯವೊಂದನ್ನು ಇಲಿಯಟ್ ಪ್ರಕಟಿಸಿದ್ದಾರೆ. ಅದರ ತೂಕ 50–60 ಗುಂಜಿ. ಅದರ

ಎರಡು ಬದಿಗಳಲ್ಲೂ ಮೀನು ಮತ್ತು ಹುಲಿ, ಅವುಗಳ ಸುತ್ತಲೂ ಉತ್ತಮ ಶೋರನ್ ಎಂಬ ಅಂಕನ ಇವೆ. ಇದರಿಂದ ಚೋಳರು ದಕ್ಷಿಣ ಭಾರತದಲ್ಲಿ ಆಗ ಪ್ರಚಾರದಲ್ಲಿದ್ದ, ಸರಾಸರಿ 58 ಗುಂಜಿ ತೂಕದ ಗದ್ಯಾಣ ಅಥವಾ ಕಟಿಂಜನ್ನು ಮೊದಲು ತಮ್ಮ ನಾಣ್ಯವಾಗಿ ಬಳಸಿದಂತೆ ಕಂಡುಬರುತ್ತದೆ. ಮುಂದೆ ಅವರು 20 ಮಂಜಾಳಿಗಳ ಕಟಿಂಜನ್ನು–72ರಿಂದ 80 ಗುಂಜಿವರೆಗಿನ ತೂಕದ ನಾಣ್ಯಗಳನ್ನು ಬಳಕೆಗೆ ತಂದರು. ಆದರೆ ಅದು ಬಳಕೆಗೆ ಬಂದುದು ಯಾವಾಗ ಎನ್ನುವುದು ತಿಳಿಯದು. ಒಂದನೆಯ ಪರಾಂತಕನ 30ನೆಯ ವರ್ಷದ ಶಾಸನವೊಂದರಲ್ಲಿ ಈ ತೂಕವನ್ನು ಸೂಚಿಸುವ ನಿಷ್ಕದ ಹೆಸರಿಸಿದೆ. ಮಧುರಾಂತಕದೇವನ್ ಮಾಡ್ಯೆ ಎಂಬ ನಾಣ್ಯದ ಹೆಸರು ಒಂದನೆಯ ರಾಜರಾಜನ ಶಾಸನವೊಂದರಲ್ಲಿದೆ. ಇದು ಬಹುಶಃ ಮಧುರಾಂತಕ ಉತ್ತಮ ಚೋಳನ ನಾಣ್ಯವಾಗಿದ್ದಿರಬೇಕು. ರಾಜರಾಜನ ಕಾಲದ ರಾಜರಾಜನ್ ಕಾಶು ಈ ಮಾಡ್ಯೆನ ಅರ್ಧದಷ್ಟಿದೆ.

ರಾಜರಾಜನ ಬೆಳ್ಳಿ ನಾಣ್ಯದ ಮುಂಬದಿ ಉತ್ತಮ ಚೋಳನ ನಾಣ್ಯದ್ದರಂತೆಯೇ ಇದೆ; ಅದರ ಮೇಲೆ ನಾಗರೀಲಿಪಿಯಲ್ಲಿ ರಾಜರಾಜ ಎಂಬ ಅಂಕನವಿದೆ. ಅದರ ಹಿಂಬದಿಯಲ್ಲಿ ಸುಖಾಸೀನನಾಗಿ ಕುಳಿತ ರಾಜನ ಅಂಕನ. ರಾಜರಾಜನ ಚಿನ್ನದ ನಾಣ್ಯವೊಂದರ ಮುಂಬದಿಯಲ್ಲಿ ರಾಜನನ್ನು ನಿಂತಿದ್ದಂತೆ ತೋರಿಸಲಾಗಿದೆ. ಅವನ ಕಾಲಿನ ಬಳಿ ಎಡಕ್ಕೆ ಕಮಲದ ಬಳ್ಳಿ ಮತ್ತು ಶಂಖ, ಬಲಕ್ಕೆ ಸೂರ್ಯನ ಚಿಹ್ನೆ ಇವೆ. ಹಿಂಬದಿಯಲ್ಲಿ ರಾಜನನ್ನು ಕುಳಿತಂತೆ ತೋರಿಸಿದೆ. ಬಲಕ್ಕೆ ಶ್ರೀ ರಾಜರಾಜ ಎಂಬ ಹೆಸರಿದೆ. ಈ ಬಗೆಯ ನಾಣ್ಯಗಳನ್ನು ಸಿಂಹಳದ ನಾಣ್ಯಗಳ ಮಾದರಿಯನ್ನನುಸರಿಸಿ ಅಚ್ಚು ಹಾಕಿಸಿದಂತೆ ತೋರುತ್ತದೆ. ಪಾಂಡ್ಯನಾಡನ್ನು ಗೆದ್ದ ಮೇಲೆ ಅಲ್ಲಿ ಪ್ರಚಾರದಲ್ಲಿದ್ದ ಸಿಂಹಳ ರೀತಿಯ ನಾಣ್ಯಗಳನ್ನನುಸರಿಸಿ ಈ ರಾಜರು ತಮ್ಮ ನಾಣ್ಯಗಳನ್ನು ಹಾಕಿಸಿ ಆ ಪ್ರಾಂತ್ಯದಲ್ಲಿ ಚಲಾವಣೆಗೆ ತಂದಿರಬೇಕು. ರಾಜರಾಜನ ಸಿಂಹಳದ ರೀತಿಯ ನಾಣ್ಯಗಳು ಬೆರಕೆಯ ಲೋಹ ಉಪಯೋಗಿಸಿರುವುದು ಕಂಡುಬರುತ್ತದೆ. ಲಂಕವೀರ ಎಂಬ ಅಂಕನವುಳ್ಳ ಕೆಲವು ನಾಣ್ಯಗಳು ರಾಜರಾಜ ಸಿಂಹಳವನ್ನು ಗೆದ್ದ ಮೇಲೆ ಹಾಕಿಸಿರುವ ನಾಣ್ಯಗಳಾಗಿರಬೇಕು. ಒಂದನೆಯ ರಾಜೇಂದ್ರನ ನಾಣ್ಯಗಳಲ್ಲಿರುವಂತೆ ಛತ್ರಚಾಮರಾದಿ ಚಿಹ್ನೆಗಳೂ ನಾಗರಿಲಿಪಿಯಲ್ಲಿ ಶ್ರೀ ರಾಜೇಂದ್ರಃ ಅಥವಾ ಗಂಗೈಕೊಂಡ ಚೋಳಃ ಎಂಬ ಬರೆಹವೂ ಇರುತ್ತವೆ. ಧವಳೇಶ್ವರ ಎಂಬಲ್ಲಿ ದೊರೆತ, ಇವನ ನಾಣ್ಯಗಳ ಪೈಕಿ ದೊರೆತ ಇವನ ನಾಣ್ಯಗಳಲ್ಲಿ ತಮಿಳು ಗ್ರಂಥಾಕ್ಷರಗಳಲ್ಲಿ ಗಂಗೈಕೊಂಡ ಚೋಳನ್ ಎಂದಿದೆ; ಇವನ ಆಳಿಕೆಯ ವರ್ಷವನ್ನೂ ಸೂಚಿಸಿದೆ. ಅದೇ ಗುಂಪಿನ ನಾಣ್ಯಗಳ ಪೈಕಿ ದೊರೆತ ಮಲನಾಡು ಕೊಂಡಚೋಳನ್ ಎಂಬ ಅಂಕನವುಳ್ಳ ನಾಣ್ಯಗಳು ಒಂದನೆಯ ರಾಜಾಧಿರಾಜನ ಕಾಲಕ್ಕೆ ಸೇರಿದವು. ವಿಕ್ರಮಚೋಳನ ಕಾಲದಿಂದೀಚೆಗೆ ಚೋಳರ ನಾಣ್ಯಗಳಲ್ಲಿ ಗೂಳಿಯ ಚಿಹ್ನೆಯನ್ನು ಕಾಣಬಹುದು. ಗೂಳಿಯ ಜೊತೆಗೆ ಕತ್ತಿಯೋ ಶಂಖವೋ ತ್ರಿಶೂಲವೋ ಇರುತ್ತದೆ. 3ನೆಯ ಕುಲೋತ್ತುಂಗನ ನಾಣ್ಯಗಳಲ್ಲಿ ಅಂಕನ ಕೋನೇರಿರಾಯನ್ ಎಂಬುದು. ಜೋಡಿ ಕುದುರೆ ಸವಾರರದೋ ಕುದುರೆಯನ್ನೇರಿದ ರಾಜನದೋ ಚಿಹ್ನೆಯಿದ್ದು ರಾಜರಾಜ ಎಂಬ ಅಂಕನವಿರುವ ನಾಣ್ಯಗಳು ಬಹುಶಃ 3ನೆಯ ರಾಜನದಿರಬೇಕು. 3ನೆಯ ಕುಲೋತ್ತುಂಗನ ಕಾಲದಿಂದ ಕಡಿಮೆ ಬೆಲೆಯ ತಾಮ್ರದ ನಾಣ್ಯಗಳಿಗೂ ಕಾಶು ಎಂಬ ಹೆಸರು ಬಂತು. ಇವಲ್ಲದೆ ಒಂದನೆಯ ಕುಲೋತ್ತಂಗನ ಅನಂತರ ಹಲವು ಚೋಳ ಸಾಮಂತರು ನಾಣ್ಯಗಳನ್ನು ಅಚ್ಚು ಹಾಕಿಸಿದ್ದಾರೆ. ಶಾಸನಗಳಲ್ಲಿ ಬರುವ ಜಯಮಾಡ, ಉತ್ತಮಗಂಡಮಾಡ, ಬಿರುದಮಾಡ, ನಕ್ಕಿಮಾಡ, ಗಂಡಗೋಪಾಲಮಾಡ ಮೊದಲಾದವು ಈ ಗುಂಪಿಗೆ ಸೇರಿದವು. (ಎಂ.ಎಚ್.)

**ಚೌಟಮನೆತನ (ಪುತ್ತಿಗೆಯ ಚೌಟರು):** ದಕ್ಷಿಣ ಕನ್ನಡ ಜಿಲ್ಲೆ ಮೂಡಬಿದಿರೆ ಬಳಿಯ ಪುತ್ತಿಗೆಯನ್ನು ತಮ್ಮ ರಾಜಕೀಯ ಕೇಂದ್ರವನ್ನಾಗಿಸಿಕೊಂಡು ಹಲವು ಶತಮಾನಗಳ ಕಾಲ ಈ ಪ್ರದೇಶದಲ್ಲಿ ಆಳಿಕೆ ನಡೆಸಿದ ಮನೆತನ. ಮೂಲತಃ ಈ ವಂಶದವರು ಮೈಸೂರು ಪ್ರದೇಶದಿಂದ ಇಲ್ಲಿಗೆ ವಲಸೆಬಂದವರು ಎಂದು ಹೇಳಲಾಗುತ್ತಿದ್ದರೂ ಚೌಟವಂಶದ ಮೂಲ ಕುರಿತು ಯಾವುದೇ ಖಚಿತವಾದ ಆಧಾರಗಳು ಲಭ್ಯವಿಲ್ಲ. ಪ್ರಾರಂಭದಲ್ಲಿ ಮಂಗಳೂರು ಬಳಿಯ ಉಳ್ಳಾಲದಿಂದ ಆಳಿಕೆ ನಡೆಸುತ್ತಿದ್ದ ಚೌಟವಂಶದ ಒಂದು ಭಾಗದವರು ಪುತ್ತಿಗೆಗೆ ಬಂದು ಅಲ್ಲಿಂದ ರಾಜ್ಯವನ್ನಾಳಲು ಪ್ರಾರಂಭಿಸಿದರು ಎನ್ನಲಾಗಿದೆ.

ಚೌಟರ ಆರಂಭಿಕ ರಾಜಕೀಯ ಇತಿಹಾಸ ಮಾಹಿತಿಗಳು ಅಸ್ಪಷ್ಟವಾಗಿವೆ. ಪಾರಂಪರಿಕ ಹೇಳಿಕೆಗಳ ಪ್ರಕಾರ ಇವರು 12ನೇ ಶತಮಾನದ ಮಧ್ಯಭಾಗದಲ್ಲಿ ತಮ್ಮ ಆಳಿಕೆಯನ್ನು ಪ್ರಾರಂಭಿಸಿದರು. ಈ ಹೇಳಿಕೆಗಳ ಹಿನ್ನೆಲೆಯಲ್ಲಿ ತಿರುಮಲರಸ ಚೌಟನಿಂದ ಪ್ರಾರಂಭಗೊಳ್ಳುವ ಇವರ ಇತಿಹಾಸದಲ್ಲಿ 19ನೆಯ ಶತಮಾನದ ಪ್ರಾರಂಭದ ತನಕ ಆಳಿದ 23 ಮಂದಿ ಅರಸರನ್ನು ಗುರುತಿಸಲಾಗುತ್ತದೆ. ಆದರೆ ಖಚಿತವಾದ ಶಾಸನಾಧಾರದಂತೆ 1390ರ ಮೂಡುಬಿದಿರೆ ಶಾಸನದಲ್ಲಿ ಉಲ್ಲೇಖಿತನಾದ ವಿಕ್ರುಚೌಟನೇ ಚೌಟವಂಶದಲ್ಲಿ ಗುರುತಿಸಬಹುದಾದ ಪ್ರಥಮ ಅರಸ. 1390 ರಿಂದ 1640ರ ವರೆಗೆ ಆಳಿಕೆ ನಡೆಸಿದ ಅರಸರ ಪೈಕಿ ಹತ್ತು ಮಂದಿಯನ್ನು ಶಾಸನಾಧಾರಗಳಿಂದ ಗುರುತಿಸಲುಸಾಧ್ಯ. ಪ್ರಾಯಶಃ ಹೊಯ್ಸಳರ ಅಧೀನ ಅರಸರಾಗಿ ಚೌಟರು ತಮ್ಮ ಆಳಿಕೆಯನ್ನು ಪ್ರಾರಂಭಿಸಿರಬೇಕು. ಅನಂತರ ಈ ಪ್ರದೇಶ ವಿಜಯನಗರದ ಆಳಿಕೆಯಡಿ ಬಂದಾಗ ಚೌಟರು ವಿಜಯನಗರ ಪ್ರಭುತ್ವದ ವಿರುದ್ಧ ಪ್ರತಿಭಟನೆ ನಡೆಸಿದ್ದನ್ನು 1398ರ ಶೈಕಿಣೀ ಶಾಸನ ಸೂಚಿಸುತ್ತದೆ. ವಿಜಯನಗರ ಹಾಗೂ ಕೆಳದಿ ಅರಸರ ಅಧಿಪತ್ಯದಡಿಯಲ್ಲಿ ಆಳಿಕೆಯನ್ನು ಮುಂದುವರಿಸಿದ ಚೌಟರಸರ ಪ್ರಾಬಲ್ಯ 1763ರಲ್ಲಿ ಹೈದರಾಲಿ ಕೆಳದಿ ರಾಜ್ಯವನ್ನು ವಶಪಡಿಸಿಕೊಳ್ಳುವುದ ರೊಂದಿಗೆ ಕೊನೆಗೊಂಡಂತೆ ತೋರುತ್ತದೆ. ತಮ್ಮ ರಾಜಕೀಯ ಅಧಿಕಾರವನ್ನು ಕಳೆದು ಕೊಂಡರೂ ಈ ಅರಸುಮನೆತನ ಸಾಂಪ್ರದಾಯಿಕ ಅಸ್ತಿತ್ವ ಇಂದಿಗೂ ಮುಂದುವರಿದಿರು ವುದನ್ನು ಗುರುತಿಸಬಹುದು.

ಪುತ್ತಿಗೆಯ ಅರಸರು ಜೈನಧರ್ಮೀಯರಾಗಿದ್ದು ರಾಜಕೀಯ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಈ ಪ್ರದೇಶದಲ್ಲಿ ಜೈನ ಸಂಸ್ಕೃತಿಯ ಬೆಳೆವಣಿಗೆಯಲ್ಲಿ ಗಮನಾರ್ಹ ಪಾತ್ರವನ್ನು ವಹಿಸಿದ್ದ ಚೌಟ ಅರಸರು ಮೂಡುಬಿದಿರೆಯ ಪ್ರಸಿದ್ಧ ಸಾವಿರಕಂಬದ ಸೋಮನಾಥನನ್ನು ಇವರು ತಮ್ಮ ಕುಲದೇವರಾಗಿ ಅಂಗೀಕರಿಸಿದ್ದರು ಎಂಬುದು ಇವರ ಧರ್ಮ ಸಮನ್ವಯ ದೃಷ್ಟಿಗೆ ಸಾಕ್ಷಿ. ತಿರುಮಲರಾಯ, ಚನ್ನರಾಯ, ಭೋಜರಾಯ, ಚಂದ್ರಶೇಖರ ಚಿಕ್ಕರಾಯ, ವಿಕ್ರುಚೌಟ, ಅಲ್ಲಪ್ಪಶೇಖ, ದೇವರು ಶೇಖ, ತುಳುವರಸ ಚೌಟ ಮೊದಲಾದ ಇಪ್ಪತ್ತಕ್ಕೂ ಮಿಕ್ಕಿ ಅರಸರ ಹೆಸರುಗಳು ವಿವಿಧ ಆಕರಗಳಿಂದ ಲಭ್ಯವಾಗುತ್ತಿದ್ದರೂ ಇವರ ಸಾಧನೆಗಳ ವಿವರಗಳು ಅಲಭ್ಯವಾಗಿವೆ. ದೀರ್ಘಕಾಲ ಪುತ್ತಿಗೆಯಿಂದ ಆಳಿಕೆ ನಡೆಸಿದ ಚೌಟರಸರು ಸು. 1643ರ ಮೂರನೆಯ ಭೋಜರಾಯನ ಆಳಿಕೆಯಲ್ಲಿ, ಮೂಡುಬಿದಿರೆಯಲ್ಲಿ ಅರಮನೆಯೊಂದನ್ನು ನಿರ್ಮಿಸಿ ಅಲ್ಲಿಗೆ ತಮ್ಮ ನಿವಾಸವನ್ನು ಸ್ಥಳಾಂತರಿಸಿಕೊಂಡರು. ಆ ಅರಮನೆಯ ಕೆಲ ಭಾಗಗಳು ಇಂದಿಗೂ ಉಳಿದುಕೊಂಡು ಬಂದಿದ್ದು ತುಳುನಾಡಿನ ಕಾಷ್ಠಶಿಲ್ಪದ ವಿಶಿಷ್ಟ ಮಾದರಿ ಎನಿಸಿವೆ. (ಪಿ.ಜಿಬಿ.)

**ಚೌರಿಚೌರ:** ಉತ್ತರ ಪ್ರದೇಶ ರಾಜ್ಯದ ಗೋರಖಪುರದ ಬಳಿ ಇರುವ ಒಂದು ಸಣ್ಣ ಹಳ್ಳಿ. ಭಾರತ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ 1922 ಫೆಬ್ರುವರಿ 4ರಂದು ನಡೆದ ಒಂದು ವಿಷಾದಕರ ಘಟನೆಯಿಂದಾಗಿ ಈ ಹಳ್ಳಿಯ ಹೆಸರು ಶಾಶ್ವತವಾಗಿದೆ. ಆ ಸಮಯದಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿಯನ್ನು ನಿರ್ದೇಶಿಸಲು ಗಾಂಧಿಯವರನ್ನು ಏಕೈಕ ನಾಯಕರಾಗಿ ಕಾಂಗ್ರೆಸ್ ಆರಿಸಿತ್ತು. ಬೃಹತ್‌ಪ್ರಮಾಣದಲ್ಲಿ ಜನತಾ ಚಳವಳಿ ನಡೆಸಲು ತಕ್ಕ ಉತ್ಸಾಹ ರಾಷ್ಟ್ರದಲ್ಲಿ ಮೂಡಿತ್ತು. ತಮ್ಮ ಅಹಿಂಸಾತ್ಮಕ ಸತ್ಯಾಗ್ರಹ ಚಳವಳಿಯನ್ನು ಮೊದಲು ಬಾರ್ದೋಲಿ ಜಿಲ್ಲೆಯಲ್ಲಿ ಆರಂಭಿಸಬೇಕೆಂದು ಗಾಂಧಿಯವರು ಆಲೋಚಿಸಿದ್ದರು. ಆ ಸಮಯದಲ್ಲಿ ಚೌರಿಚೌರದಲ್ಲಿ ದುರ್ಘಟನೆ ಸಂಭವಿಸಿದ್ದು ಆ ಊರಿನ ಜನರು ಕಾಂಗ್ರೆಸ್ ಧ್ವಜದೊಂದಿಗೆ ಅಲ್ಲಿ ಒಂದು ಮೆರವಣಿಗೆ ಏರ್ಪಡಿಸಿದ್ದರು. ಅಲ್ಲಿಯ ಪೊಲೀಸ್ ಠಾಣೆಯ ಮುಂದೆಯೇ ಮೆರವಣಿಗೆ ಹಾದುಹೋಗಬೇಕಾಗಿತ್ತು. ಮೆರವಣಿಗೆ ಠಾಣೆಯಿಂದ ಮುಂದುವರಿದಾಗ ಅದರ ಹಿಂಭಾಗದಲ್ಲಿದ್ದ ಕೆಲವರನ್ನು ಪೊಲೀಸರು ಮೂದಲಿಸಿ, ರೇಗಿಸಿ ಹೊಡೆಯಲಾರಂಭಿಸಿದರು. ಕೂಗಾಟ ಆರಂಭವಾಯಿತು. ಮೆರವಣಿಗೆಯ ಜನ ಹಿಂದಿರುಗಿ ಪೊಲೀಸರ ಮೇಲೆ ಬಿದ್ದರು. ಪೊಲೀಸರು ಗುಂಡು ಹಾರಿಸಿದರು. ಅಷ್ಟರಲ್ಲಿ ಅವರಲ್ಲಿದ್ದ ಮದ್ದು ಮುಗಿದುಹೋಯಿತು. ಆದ್ದರಿಂದ ಅವರು ಠಾಣೆಯೊಳಗೆ ಅವಿತುಕೊಂಡರು. ಜನರು ಠಾಣೆಗೆ ಬೆಂಕಿ ಇಟ್ಟರು. ತಪ್ಪಿಸಿಕೊಳ್ಳಲು ಹೊರಬಂದ ಪೊಲೀಸರನ್ನು ತುಂಡರಿಸಿ ಬೆಂಕಿಗೆ ಹಾಕಿದರು. ಇಪ್ಪತ್ತೆರಡು ಮಂದಿ ಪೊಲೀಸರು ಆಹುತಿಯಾದರು.

ಬಾರ್ದೋಲಿ ಜಿಲ್ಲೆಯಲ್ಲಿ ಕರನಿರಾಕರಣೆಯ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಈ ವಿಚಾರವಾಗಿ ವೈಸ್‌ರಾಯರಿಗೆ ಒಂದು ಪತ್ರವನ್ನು ಬರೆದಿದ್ದ ಮಹಾತ್ಮಗಾಂಧಿಯವರು ಚೌರಿಚೌರದ ದುರ್ಘಟನೆಯ ಸುದ್ದಿ ಕೇಳಿ ಪರಿತಪಿಸಿದರು. ಕೂಡಲೇ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದರು (ಫೆಬ್ರುವರಿ 11). ಸತ್ಯಾಗ್ರಹವನ್ನು ಆರಂಭಿಸುವ ತೀರ್ಮಾನವನ್ನು ಸದ್ಯಕ್ಕೆ ಕೈಬಿಡಬೇಕೆಂದು ನಿಶ್ಚಯಿಸಿದರು. ತಮ್ಮ ಯಂಗ್ ಇಂಡಿಯ ಪತ್ರಿಕೆಯಲ್ಲಿ (ಫೆಬ್ರುವರಿ 16) ಇದನ್ನು ಕುರಿತು ಗಾಂಧಿಯವರು ಒಂದು ದೀರ್ಘ ಲೇಖನ ಬರೆದು ತಾವು ಸತ್ಯಾಗ್ರಹ ನಿಲ್ಲಿಸಿದ್ದನ್ನು ಸಮರ್ಥಿಸಿದರು. ಅಹಿಂಸಾತ್ಮಕ ಸಮರಕ್ಕೆ ಜನತೆಯಿನ್ನೂ ಸಿದ್ಧವಾಗಿಲ್ಲವೆಂಬುದು ಅವರ ಮನವರಿಕೆಯಾಗಿತ್ತು. ತಮ್ಮ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ 5 ದಿನಗಳ ಉಪವಾಸ ಕೈಗೊಂಡರು. ಫೆಬ್ರುವರಿ 25ರಂದು ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯ ಸಮಿತಿಯ ನಿರ್ಣಯವನ್ನು ಸ್ಥಿರೀಕರಿಸಿತು. ಸಾಮೂಹಿಕ ಅಸಹಕಾರ ಚಳವಳಿಯನ್ನು ನಿಲ್ಲಿಸಬೇಕೆಂಬ ತೀರ್ಮಾನದಿಂದ ದೇಶದಲ್ಲಿ ತುಂಬ ನಿರಾಶೆ ಹಬ್ಬಿತು. ಗಾಂಧಿಯವರ ತೀರ್ಮಾನವನ್ನು ಅನೇಕ ಕಾಂಗ್ರೆಸ್ಸಿಗರೇ ಟೀಕಿಸಿದರು. ಹಿಂಸಾಕೃತ್ಯಗಳನ್ನು ಪ್ರಚೋದಿಸಲು ಗಾಂಧಿಯವರೇ ಕಾರಣರೆಂದು ವೈಸರಾಯ್ ಲಾರ್ಡ್ ರೀಡಿಂಗ್ ವಾದಿಸಿದ. ಗಾಂಧಿಯವರ ದಸ್ತಗಿರಿಯಾಯಿತು. ಅವರಿಗೆ ಆರು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಚೌರಿಚೌರ ಘಟನೆಯಿಂದಾಗಿ ಅಸಹಕಾರ ಚಳವಳಿಗೆ ಭಾರಿ ಪೆಟ್ಟು ಬಿದ್ದಂತಾಯಿತು. (ಕೆ.ಎಸ್.ಜಿ.ಆರ್.)

**ಚೌಸಟ್ ಯೋಗಿನಿಯರ ದೇವಾಲಯಗಳು:** ವಿವಿಧ ಯೋಗಿನಿಯರ ಉಗಮದ ಸಂದರ್ಭ, ಕಾರಣ, ಸ್ವರೂಪಾದಿಗಳನ್ನು ಕುರಿತು ಉಲ್ಲೇಖಗಳು ಪುರಾಣ, ಮಾಹಾತ್ಮ್ಯ ಮತ್ತಿತರ ಸಾಹಿತ್ಯಕ ಆಕರಗಳಲ್ಲಿವೆ. ಮಾರ್ಕಂಡೇಯ, ಕಾಲಿಕಾ, ಅಗ್ನಿ, ಮತ್ಸ್ಯ, ಗರುಡ, ಸ್ಕಾಂದ, ದೇವಿಭಾಗವತಾದಿ ಪುರಾಣಗಳಲ್ಲಿ ದುರ್ಗಾ, ಭಗವತೀ, ಗೌರೀಮುಂತಾದ ಮುಖ್ಯ ಶಕ್ತಿಯರು, ಅವರ ಪರಿವಾರದ ದೇವಿಯರು, ಸೇವಕಿ, ಗಣಗಳಾಗಿ ಅನೇಕ ದೇವಿ, ಕ್ಷುದ್ರದೇವತೆಗಳನ್ನು ಹೆಸರಿಸಲಾಗಿದೆ. ಸಾತ್ತ್ವಿಕ ಆರಾಧನಾಮಾರ್ಗವನ್ನೂ

ಎತ್ತಿಹಿಡಿಯುವ ಶಿಷ್ಟಸಮಾಜದ ಶ್ರೀವಿದ್ಯೋಪಾಸನೆಯಲ್ಲಿ ಈ ದೇವತೆಗಳೆಲ್ಲ ಲಲಿತಾದೇವಿಯ ಸೇವಕಿಯರು. ಕೆಲವೊಮ್ಮೆ ಮಾನವಶರೀರ, ಪಶುಪಕ್ಷಿಗಳ ತಲೆಯಿರುವ ಶೈವಗಣಗಳ ಶಕ್ತಿರೂಪಣಿಯರಾಗಿಯೂ ಇವರು ಕಲ್ಪಿತರಾಗಿದ್ದಾರೆ.

ಯೋಗಿನಿಯರ ಪ್ರಪಂಚದ ಹುಟ್ಟು, ಉಳಿವು, ಅಳಿವುಗಳಿಗೆ ಮುಖ್ಯಕಾರಣವಾದ ಕ್ರಿಯೋನ್ಮುಖೀ ಆದಿಶಕ್ತಿ ಅಥವಾ ಮೂಲಶಕ್ತಿಯ ವ್ಯಕ್ತರೂಪಗಳು, ಶಿಷ್ಟಸಮಾಜದವರ ಪ್ರಕಾರ ಕ್ಷುದ್ರಮಾಟಗಾತಿ ದೇವಿಯರು. ವಿವಿಧ ರೀತಿಯ ಅನೂಹ್ಯ, ಅಗ್ರಾಹ್ಯ ಶಕ್ತಿಸಾಮರ್ಥ್ಯಗಳನ್ನು ಪಡೆದು ಯೋಗಿನೀ, ಡಾಕಿನೀ, ಶಾಕಿನೀ ಮುಂತಾದ ಹೆಸರುಗಳಿಂದಲೂ ಪರಿಚಿತರು. ಕೆಲವೆಡೆಯಂತಲೂ ಮಂತ್ರಿಸಿದ ದಾರವನ್ನು ತಾಯತದಂತೆ ಕೊರಳಿಗೆ ಕಟ್ಟುವುದರ ಮೂಲಕ ಯೋಗಿನಿಯರು, ಅಕ್ಕಿಯ ಕಾಳೆರಚುವುದರ ಮೂಲಕ ಶಾಕಿನಿಯರು ಮನುಷ್ಯರನ್ನು ತಮಗಿಷ್ಟಬಂದಂತೆ ಪಶುಪಕ್ಷಿ, ಮರ, ಕಲ್ಲು ಮುಂತಾದ ನಿರ್ಜೀವಿ ಪದಾರ್ಥಗಳನ್ನಾಗಿ ಪರಿವರ್ತಿಸಬಲ್ಲ ಸಾಮರ್ಥ್ಯ ಪಡೆದ ಪೈಶಾಚಿಕ ಸ್ವಭಾವದವರಾದುದರಿಂದ ಭಯಕಾರಕ ಸ್ತ್ರೀದೇವತೆಗಳೆಂದೂ ಜನ ನಂಬಿದ್ದರು.

ಈ ದೇವತೆಗಳ ಸಂಖ್ಯೆಯ ಬಗೆಗೆ ಸಾಕಷ್ಟು ಚರ್ಚೆಗಳಿವೆ. ಮೊದಲಿಗೆ ಪುರುಷದೇವತೆಗಳ ಶಕ್ತಿ ಸ್ವರೂಪಿಣಿಯರಾಗಿ, ಪರಾಶಕ್ತಿಯ ಏಳು (ಸಪ್ತ) ಅಥವಾ ಎಂಟು (ಅಷ್ಟ) ಮಾತೃಕೆಯರಾಗಿ ಪ್ರಾದುರ್ಭವಿಸಿದರು. ಇವರ ವಂಶ ಅಥವಾ ಕುಟುಂಬವರ್ಗದ ದೇವತೆ–ಉಪದೇವತೆಗಳ ಎಂಟು ಕುಲಗಳು ಉಗಮಿಸಿದವು. ಈ ಎಂಟರಲ್ಲಿ ಪ್ರತಿಕುಲದಲ್ಲೂ 8 ದೇವಿಯರು ಉದ್ಭವಿಸಿ ಒಟ್ಟು ಚತುಷ್ಷಷ್ಠಿ(64) ಯೋಗಿನಿಗಳಾದರು. ಉಳಿದಂತೆ ಈ ಸಂಖ್ಯೆಯಲ್ಲಿ ಕೆಲವರನ್ನು ಬಿಟ್ಟು, ಕೆಲವು ಪರಿವಾರ ದೇವತೆಗಳನ್ನು ಸೇರಿಸಿ 42, 64 ಮತ್ತು 81 ಯೋಗಿನಿಯರಿದ್ದರೂ 64 ಯೋಗಿನಿಗಳ ಪಂಥವೇ ಪ್ರಧಾನವಾದ್ದು ಹಾಗೂ ಪ್ರಸಿದ್ಧವಾದ್ದು.

ಶೈವ ಹಾಗೂ ಶಾಕ್ತ ಆಗಮ ಗ್ರಂಥಗಳಲ್ಲಿ ಶಿವನ ಉಗ್ರಸ್ವರೂಪ ಭೈರವನಿಂದ ಅಷ್ಟಭೈರವರೂ ಅವರಲ್ಲಿ ಪ್ರತಿಯೊಬ್ಬರೂ ಎಂಟುರೂಪಗಳಲ್ಲಿದ್ದು ಒಟ್ಟು ಆರವತ್ತನಾಲ್ಕು ಭೈರವರಾದರೆಂದೂ ಅವರ ಶಕ್ತಿಸ್ವರೂಪಿಣಿಯರಾಗಿ ಯೋಗಿನಿಯರು ಉಗಮಿಸಿದರೆಂದು ಹೇಳಿದೆ. ಪ್ರಾಚೀನ ಕಾಲದ ಪುರಾಣಾದಿ ಸಾಹಿತ್ಯಗಳಲ್ಲಿ ಉಲ್ಲೇಖವಿದ್ದರೂ ತಾಂತ್ರಿಕಪಂಥ, ಗುಪ್ತ ಸಮಾಜದ ಸುಳಿ, ಒಳಸುಳಿಗಳು ಅತಿ ಪ್ರಾಚೀನಪರಂಪರೆಯನ್ನು ಹೊಂದಿದ್ದರೂ ದೇವಾಲಯ, ಶಿಲ್ಪ ಮುಂತಾದವು ಪ್ರತಿನಿಧಿಸುವ ಚತುಷ್ಷಷ್ಠಿ ಯೋಗಿನಿಪಂಥ ಪೂರ್ಣರೂಪದಲ್ಲಿ ಅಸ್ತಿತ್ವಕ್ಕೆ ಬಂದದ್ದು  9ನೆಯ ಶತಮಾನದ ವೇಳೆಗೆ.

ಈ ದೇವತೆಗಳ ಹೆಸರೂಗಳೂ ಸಂಖ್ಯೆ ಹಾಗೂ ಸ್ವರೂಪದಷ್ಟೇ ವೈವಿಧ್ಯಮಯವಾಗಿದ್ದು, ಒಂದೊಂದು ಆಕಾರದಲ್ಲಿಯೂ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಈ ದೇವತೆಗಳನ್ನು ಕುಲಗಳೆಂದೂ ಇವರನ್ನು ಆರಾಧಿಸುವವರು ಕೌಲರೆಂದೂ ವ್ಯವಹರಿಸಲಾಗಿದೆ. ಕುಲಾರ್ಣವ, ಮತೋತ್ತರ ಮತ್ತು ಕೌಲಜ್ಞಾನನಿರ್ಣಯ ಮುಂತಾದ ತಾಂತ್ರಿಕಪರಂಪರೆಯ ಕೃತಿಗಳಲ್ಲಿ ಇವರ ಉಲ್ಲೇಖವಿರುವುದಾದರೂ ಎಲ್ಲ ಗುಪ್ತಸಮಾಜಗಳ ವಿಶಿಷ್ಟ ನಿಯಾಮವಳಿ, ಆಚಾರಸಂಹಿತೆಗಳಂತೆ ಈ ಪಂಥದ ವಿಧಿವಿಧಾನಾದಿ ವಿವರಗಳು ಮೌಖಿಕಸಂಪ್ರದಾಯದ ಮೂಲಕವೇ ದೀಕ್ಷೆಪಡೆದ ಮುಖ್ಯಶಿಷ್ಯ ಸಾಧಕರಿಗೆ ಹಸ್ತಾಂತರವಾಗುತ್ತಿದ್ದವು. ಇಂತಹ ಕೌಲ ಶಾಖೆಗಳಲ್ಲಿ ಮತ್ಸ್ಯೇಂದ್ರನಾಥ ಪ್ರಾರಂಭಿಸಿದ ಯೋಗಿನೀ ಕೌಲ ಪ್ರಮುಖವೂ ಅತ್ಯಂತ ಜನಪ್ರಿಯವೂ ಆದುದು.

ಉಳಿದ ತಾಂತ್ರಿಕ ಆಚಾರಗಳಂತೆ ಸಾಧಕರು ಯೋಗಿನಿಸ್ವರೂಪಿಣಿಯರಾದ ಸಹಚರಿ ಸಾಧಕಿಯರೊಂದಿಗೆ ನಡೆಸುವ ಯೋಗಿನೀ ಚಕ್ರ ಅಥವಾ ಕಾಲಚಕ್ರದ ರಹಸ್ಯ ಪ್ರಕ್ರಿಯೆಗಳು ಮತ್ತು ಆಚರಣೆಗಳು ಪ್ರಾಬಲ್ಯಕ್ಕೆ ಬಂದವು. ಯೋಗಿನಿಯರ ಆರಾಧನೆಯಲ್ಲಿಯೂ ಮತ್ಸ್ಯ, ಮಾಂಸ, ಮುದ್ರಾ, ಮದ್ಯ ಮತ್ತು ಮೈಥುನಗಳ ಸಾಧನೆ ಮುಖ್ಯವಾಗಿತ್ತು. ಈ ಸಾಧಕರ ಅಂತಿಮಗುರಿ ಮೋಕ್ಷವಾಗಿರದೆ ಆಯಾ ಯೋಗಿನಿಯರಿಗೇ ವಿಶಿಷ್ಟವಾದ ಮಾಯ, ಮಂತ್ರ ಮುಂತಾದ ಸಿದ್ಧಿಗಳನ್ನು ಪಡೆಯುವುದು. ಇದು ಲೌಕಿಕ ಪ್ರಯೋಜನದಲ್ಲಿ ಯೋಗಸಾಧನೆಯಿಂದ ಮೂಲಾಧಾರದಲ್ಲಿ ನಿದ್ರಿಸುತ್ತಿರುವ ಆದಿಶಕ್ತಿಸ್ವರೂಪಿಯಾದ ಕುಂಡಲಿಯನ್ನು ಜಾಗೃತಿಗೊಳಿಸಿ, ಸ್ವಾಧಿಷ್ಠಾನ, ಮಣಿಪೂರ, ವಿಶುದ್ಧ, ಆಜ್ಞಾ ಸ್ಥಾನಗಳನ್ನು ಮುಟ್ಟಿಸಿ, ಸಹಸ್ರಾರದಲ್ಲಿ ಲೀನವಾಗಿಸಿ ಪಡೆಯುವ ಷಡೈಶ್ವರ್ಯ ಸಿದ್ಧಿಯೇ ತಂತ್ರದ ಗುರಿ. ಲೌಕಿಕವಾಗಿ ಇಂತಹ ತಂತ್ರಮಾರ್ಗಾವಲಂಬಿ ಸಾಧಕರನ್ನು ಕಂಡರೆ ಶಿಷ್ಟಸಮಾಜದ ಜನರು ಭೀತಿಪಡುತ್ತಿದ್ದರು. ಯೋಗಿನಿಯರ ಶಾಪಭಯ ಜನಸಾಮಾನ್ಯರನ್ನು ಕಾಡುತ್ತಿತ್ತು.

ವಾಮಾಚಾರದ ಆರಾಧನಾ ಪ್ರಕ್ರಿಯಗಳೇ ಪ್ರಧಾನವಾಗಿದ್ದ ಗುಪ್ತಸಮಾಜದ ಅನುಯಾಯಿಗಳಾಗಿದ್ದ ಸಾಧಕರಿಗೆ ಸಹಜವಾಗಿ ಶಿಷ್ಟಸಮಾಜದ ಪರಿಧಿಯೊಳಗೆ ತಮ್ಮ ಆಚರಣೆಗಳನ್ನು ನಡೆಸುವುದು ಅಸಾಧ್ಯ. ಆದುದರಿಂದ ಯೋಗಿನಿ ಮಂದಿರಗಳೆಲ್ಲ ಬಹುತೇಕ ಊರ ಹೊರಗಿರುತ್ತವೆ. ಸಾಧಾರಣವಾಗಿ ಬೆಟ್ಟಗುಡ್ಡಗಳ ಮೇಲೆ, ನದಿತೀರದಲ್ಲಿ ಹಾಗೂ ದಟ್ಟಕಾಡುಗಳಲ್ಲಿನ ಏಕಾಂತ ಸ್ಥಳದಲ್ಲಿ ಇವು ಕಂಡುಬರುತ್ತವೆ. ಇಂತಹ ಸ್ಥಳಗಳಲ್ಲಿ ಯೋಗಿನಿಯರನ್ನು ಚಕ್ರಗಳ ರೂಪದಲ್ಲಿ ನಾಲ್ಕು ವಿಧವಾಗಿ ಆರಾಧಿಸುವ ಪರಂಪರೆಯಿತ್ತು. ಖೇಚಚಕ್ರ ಮತ್ತು ಯೋಗಿನಿಚಕ್ರಗಳು 64 ಯೋಗಿನಿಯರನ್ನು ಪ್ರತಿನಿಧಿಸಿದರೆ ಮಾಲಿನಿಚಕ್ರ 50 ಮತ್ತು ಮೂಲಚಕ್ರ 81 ಯೋಗಿನಿಯರನ್ನು ಅಳವಡಿಸಿಕೊಂಡಿವೆ.

ಜನಸಾಮಾನ್ಯರಲ್ಲಿ ಹಾಗೂ ಬರೆಹಗಳಲ್ಲಿ ಚತುಷ್ಷಷ್ಠಿ ಯೋಗಿನಿಯರ ದೇವಾಲಯಗಳೆಂದು ಪ್ರಸಿದ್ಧವಾದ ಈ ಗುಡಿಗಳು ಭಾರತದ ಶಿಲ್ಪಕಲೆ ಹಾಗೂ ವಾಸ್ತುಪರಂಪರೆಗಳಲ್ಲಿ ತನ್ನದೇ ಆದ ವಿಶಿಷ್ಟಲಕ್ಷಣಗಳಿಂದಾಗಿ ಸ್ಥಾನಪಡೆದಿವೆ. ಇವು ಬಹುತೇಕ ಮಧ್ಯಭಾರತದಲ್ಲಿ ಚಂದೇಲ ಹಾಗೂ ಕಳಚುರಿ ರಾಜವಂಶೀಯರು ಮತ್ತು ಪೂರ್ವದ ಒರಿಸ್ಸದಲ್ಲಿ ಭೌಮ–ಕಾರರ ಆಳಿಕೆಯ ಕಾಲದಲ್ಲಿ ಅಂದರೆ 9–12ನೆಯ ಶತಮಾನಗಳಲ್ಲಿ ಹೆಚ್ಚು ಜನಪ್ರಿಯವೂ ಪ್ರಚಲಿತವೂ ಆಗಿದ್ದವು. 16ನೆಯ ಶತಮಾನದಿಂದೀಚೆಗೆ ಅಲ್ಲಿಲ್ಲಿ ಈ ಪಂಥದ ಅಸ್ತಿತ್ವವಿದ್ದರೂ ಪ್ರತ್ಯೇಕ ಮಂದಿರವಿದ್ದಂತಿಲ್ಲ. 18ನೆಯ ಶತಮಾನದ ವೇಳೆಗೆ ಈ ಪಂಥ ಧಾರ್ಮಿಕಪ್ರಾಬಲ್ಯ, ಜನಬೆಂಬಲಗಳನ್ನು ಪೂರ್ಣವಾಗಿ ಕಳೆದುಕೊಂಡರೂ ರಾಜಸ್ತಾನದ ಕೆಲವು ಜನಪದಶೈಲಿಯ ಚಿತ್ರಕಲಾ ಪರಂಪರೆಯಲ್ಲಿ ಯೋಗಿನಿಯರ ಚಿತ್ರಣ ಸ್ವಲ್ಪಮಟ್ಟಿಗೆ 20ನೆಯ ಶತಮಾನದ ಆರಂಭದವರೆಗೂ ಉಳಿದಿತ್ತು.

ಯೋಗಿನಿ ದೇವಾಲಯಗಳು ಯಾವುದೇ ಸಮಕಾಲೀನ ಪ್ರಾದೇಶಿಕ ಶೈಲಿಗಳನ್ನು ಹೋಲದೆ ತಮ್ಮದೇ ಆದ ವಿಶಿಷ್ಟಲಕ್ಷಣಗಳನ್ನು ಹೊಂದಿವೆ. ಒಂದೆರೆಡು ವ್ಯತ್ಯಾಸಗಳನ್ನು ಹೊರೆತು ಪಡಿಸಿದರೆ ಎಲ್ಲ ಮಂದಿರಗಳೂ ಒಂದೇ ಶೈಲಿಯ ಚೌಕಟ್ಟಿನಲ್ಲಿವೆ. ಇವುಗಳ ತಲವಿನ್ಯಾಸ ವೃತ್ತಕಾರದಲ್ಲಿದ್ದು ಚಾವಣಿಯಿಲ್ಲದೆ ಆಕಾಶಕ್ಕೆ ತೆರೆದುಕೊಂಡಿರುತ್ತವೆ. ಕೆಲವೊಮ್ಮೆ ಅಪವಾದವೆನ್ನುವಂತೆ ಚತುರ್ಭುಜಾಕಾರದಲ್ಲಿಯೂ ಇವೆ. ವೃತ್ತಾಕಾರದ ವೈಶಿಷ್ಟ್ಯ ಬಹುಶಃ ಲೌಕಿಕಪ್ರಪಂಚಕ್ಕೆ ವಿಮುಖವಾಗಿ ತಾವೇ ಹಾಕಿಕೊಂಡ ನೀತಿ, ನಿಯಾಮವಳಿಗಳ ಪರಿಮಿತಿಯೊಳಗೆ ಸ್ವಯಂಪೂರ್ಣ ಹಾಗೂ ಸ್ವತಂತ್ರವಾಗಿರುವುದು. ಚಾವಣಿಯಿಲ್ಲದೆ ಆಕಾಶಕ್ಕೆ ತೆರೆದುಕೊಂಡಿರುವುದು ಬೆಳಕಿಗಾಗಿ ಹಾಗೂ ಮುಕ್ತತೆಯನ್ನು ಸಂಕೇತಿಸಲು. ಹೊರಗಣ ಜಗತಿ, ಅಧಿಷ್ಠಾನ, ಭಿತ್ತಿಗಳು ಯಾವುದೇ ಅಲಂಕರಣವಿಲ್ಲದೆ ತೀರ ಸರಳವಾಗಿರುತ್ತವೆ. ಆಡಂಬರರಹಿತವಾದ ಪ್ರವೇಶದ್ವಾರ ಸಾಮಾನ್ಯವಾಗಿ ಪೂರ್ವಕ್ಕಿರುತ್ತದೆ. ವೃತ್ತದ ಒಳಪರಿಧಿಗೆ ಹೊಂದಿಕೊಂಡಂತೆ, ಮಧ್ಯದಲ್ಲಿ ವಿಶಾಲವಾದ ಮುಕ್ತ ಅಂಕಣ, ಅದರ ಸುತ್ತ ಆಯಾ ಸಾಧಕವರ್ಗದ ನಂಬಿಕೆಗನುಗುಣವಾಗಿ 42, 64, 81 ಸಣ್ಣ ಮಂದಿರಗಳಿದ್ದು ಪ್ರತಿಯೊಂದರಲ್ಲಿ ಒಂದು ಯೋಗಿನಿ ಶಿಲ್ಪವಿರುತ್ತದೆ. ವೃತ್ತದ ಮಧ್ಯದಲ್ಲಿ ಯೋಗಿನಿಯರ ನಾಯಕ ಭೈರವ ಅಥವಾ ಶಿವನ ಮುಖ್ಯ ಗರ್ಭಗೃಹವಿರುತ್ತದೆ.

ಗರ್ಭಗೃಹಗಳಲ್ಲಿಯ ಶಿಲ್ಪಗಳು ಆಸೀನ ಭಂಗಿಯಲ್ಲಿದ್ದು, ಪ್ರಮಾಣಬದ್ಧವಾಗಿ, ಛನ್ನವೀರ ಧರಿಸಿರುವ ತುಂಬು ಯೌವನ ಸುಂದರಿಯರ ಅಂಗಸೌಷ್ಠವವಿರುವಂತೆ ಕಂಡರಿಸಲಾಗಿರುತ್ತವೆ. ವಿವಿಧ ರೀತಿಯ ಕಿರೀಟ, ಆಕರ್ಷಕ ಕರ್ಣಾಭರಣ, ರತ್ನಖಚಿತ ಕಂಠಾಭರಣ, ಏಕಾವಳಿ, ಮೇಖಲೆ, ಕೇಯೂರ, ಕಂಕಣ ನೂಪುರಾದಿಗಳಿಂದ ಸರ್ವಾಲಂಕಾರಸುಶೋಭಿತೆಯರಾಗಿ, ಸುಖಾಸೀನರಾಗಿ ಇಲ್ಲವೇ ನಿಂತ ಭಂಗಿಯಲ್ಲಿರುತ್ತವೆ. ಮಾನವರೂಪದಲ್ಲಿದ್ದರೂ ಬಹುತೇಕ ಶಿಲ್ಪಗಳ ತಲೆ ಪ್ರಾಣಿಗಳದಾಗಿರುತ್ತದೆ.

ಮಧ್ಯ ಹಾಗೂ ಪೂರ್ವ ಭಾರತದ ಕೆಲವು ಪ್ರದೇಶಗಳಲ್ಲಿ ಅಧಿಕವಾಗಿರುವ, ಯೋಗಿನಿಯರಿಗೇ ಅರ್ಪಿತವಾದ ಕನಿಷ್ಠ ಹದಿನೈದು ದೇವಾಲಯಗಳು ಇದುವರೆಗೆ ಬೆಳಕಿಗೆ ಬಂದಿವೆ. ಅವುಗಳಲ್ಲಿ ಮುಖ್ಯವಾದವು: ಮಧ್ಯಪ್ರದೇಶದೊಳಗಣ ಖಜುರಾಹೊ (ಛತ್ತರಪುರ ಜಿಲ್ಲೆ), ದುಧಾಯಿ (ಝಾಂಸಿ ಜಿಲ್ಲೆ), ಮಿತಾವೊಲಿ (ಮೊರೆನಾ ಜಿಲ್ಲೆ), ಭೇರಾಘಾಟ್ (ಜಬಲ್‌ಪುರ ಜಿಲ್ಲೆ), ನರೇಶ್ವರ್(ಗ್ವಾಲಿಯರ್ ಬಳಿ) ಹಾಗೂ ಗೂರ್ಗಿ (ರೇವಾ ಜಿಲ್ಲೆ) ಮತ್ತು ಈ ಪರಿಸರಕ್ಕೆ ಹೊಂದಿಕೊಂಡಂತೆ ಒರಿಸ್ಸ ರಾಜ್ಯದಲ್ಲಿರುವ ರಾಣಿಪುರ ಝರಿಯಾಲ್ (ಬೋಲಂಗೀರ್ ಜಿಲ್ಲೆ), ಸುರಾದಾ (ಕಾಳಹಂಡಿಯ ಬಳಿ) ಮತ್ತು ಭುವನೇಶ್ವರ ಬಳಿಯ ಹೀರಾಪುರ. ಇವುಗಳಲ್ಲಿ ಹೆಚ್ಚಿನವನ್ನು 19ನೆಯ ಶತಮಾನದ ಕೊನೆಯ ದಶಕಗಳಲ್ಲಿ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಈ ಪ್ರದೇಶಗಳಲ್ಲಿ ಸ್ಥಳಪರಿಶೋಧನೆ ನಡೆಸುತ್ತಿದ್ದಾಗ ಮೊದಲಬಾರಿಗೆ ವರದಿಮಾಡಿದ. ಅನಂತರವೂ ಕೆಲವು ದೇವಾಲಯಗಳು ಬೆಳಕಿಗೆ ಬಂದವು. ಈ ಮಂದಿರಗಳು ನೆಲೆಗೊಂಡಿರುವ ಸ್ಥಳಗಳ ಪ್ರಸರಣದ ಅವಲೋಕನದಿಂದ ಯೋಗಿನಿ ಆರಾಧನೆ ಮಧ್ಯಪ್ರದೇಶದಲ್ಲಿ ವಿಶೇಷವಾಗಿ ಜನಪ್ರಿಯವಾಗಿತ್ತು. ತಮಿಳುನಾಡಿನ ಕೊಯಮತ್ತೂರಿನಲ್ಲಿಯೂ ಒಂದು ಯೋಗಿನಿ ದೇವಾಲಯವಿತ್ತು.

ಖಜುರಾಹೊದ ಚೌಸಟ್ ಯೋಗಿನಿಮಂದಿರ: ಇಲ್ಲಿ ಮುಖ್ಯ ಹಾಗೂ ಪ್ರಸಿದ್ಧ ಕಂದಾರಿಯ ಮಹಾದೇವ ದೇವಾಲಯ ಸಮುಚ್ಚಯದಿಂದ ಸ್ವಲ್ಪ ದೂರದಲ್ಲಿ ಪ್ರತ್ಯೇಕವಾಗಿ ಮಂದಿರ ಹಲವು ವೈಶಿಷ್ಟ್ಯಗಳಿಂದ ಕೂಡಿರುವ, ಅತ್ಯಂತ ಪ್ರಾಚೀನ ಹಾಗೂ ಅನನ್ಯ ಉದಾಹರಣೆಯಾಗಿದೆ. ಇತರ ಮಂದಿರಗಳಂತೆ ವೃತ್ತಾಕಾರದ ತಲವಿನ್ಯಾಸಕ್ಕೆ ಬದಲಾಗಿ ಈ ದೇವಾಲಯವನ್ನು 4.2–5.5 ಮೀ ಎತ್ತರದ ಜಗತಿಯ ಮೇಲೆ ಚತುರ್ಭುಜಾಕಾರದ ತಲವಿನ್ಯಾಸದಲ್ಲಿ ನಿರ್ಮಿಸಲಾಗಿದೆ. ನಯಗೊಳಿಸಿದ ಕಣಶಿಲೆಯನ್ನು ಉಪಯೋಗಿಸಿ ಸು. 31.09x18.24 ಮೀ ವಿಶಾಲ ಆವರಣದ ಸುತ್ತ ಕಟ್ಟಿದ ಎತ್ತರದ ಪ್ರಾಕಾರದ ಒಳಪರಿಧಿಗೆ ಹೊಂದಿಕೊಂಡಂತೆ ಮೊದಲಿಗೆ 67 ಸಣ್ಣಸಣ್ಣ ಮಂದಿರಗಳನ್ನು ಕಟ್ಟಲಾಗಿತ್ತು. ಇತರ ಮಂದಿರಗಳಲ್ಲಿರುವಂತೆ ಅಧಿಷ್ಠಾತೃದೇವತೆ ಶಿವ ಭೈರವನಿಗಾಗಿರುವ ದೊಡ್ಡ ಗರ್ಭಗೃಹ ಮಧ್ಯದಲ್ಲಿಲ್ಲದೆ ಮಹಾದ್ವಾರಕ್ಕೆದುರಾಗಿ ನೈರುತ್ಯಗೋಡೆಗೆ ಹೊಂದಿಕೊಂಡಂತೆ ಇದೆ. ತೀವ್ರಹಾನಿಗೀಡಾಗಿರುವ ಮಂದಿರಗಳಿಗೆ ಸರಳರೀತಿಯ ರೇಖಾನಗರ ಶಿಖರಗಳಿದ್ದಂತೆ

ಕಾಣುತ್ತದೆ. ಜಗತಿ, ಗೋಡೆಗಳಲ್ಲಿ ಯಾವುದೇ ಅಲಂಕರಣವಿಲ್ಲ. ಪ್ರಸ್ತುತ ಯಾವ ಗರ್ಭಗುಡಿಯಲ್ಲೂ ಶಿಲ್ಪವಿಲ್ಲವಾದರೂ ಕನಿಷ್ಠ ಮೂರರಲ್ಲಿ ಪ್ರಮಾಣಬದ್ಧವಾಗಿ ರೂಪಿಸಿದ ಮರಳುಗಲ್ಲಿನ ಮಹಿಷಮರ್ದಿನಿ, ಮಾಹೇಶ್ವರಿ ಮತ್ತು ಬ್ರಹ್ಮಾಣಿ (ಬ್ರಾಹ್ಮೀ)ಯರನ್ನು ಪ್ರತಿಷ್ಠಾಪಿಸಲಾಗಿತ್ತೆಂದು ಹೇಳಬಹುದು. ಇವುಗಳಲ್ಲಿ ಎರಡರ ಪೀಠದ ಮೇಲಿನ ಶಾಸನಗಳ ಲಿಪಿಶೈಲಿ, ಒಟ್ಟಾರೆ ಸರಳ ವಿನ್ಯಾಸ ಇವುಗಳನ್ನಾಧರಿಸಿ ಈ ದೇವಾಲಯವನ್ನು 850–900ರ ಕಾಲದ್ದೆಂದು ನಿರ್ಧರಿಸಲಾಗಿದೆ.

ಭೇರಾಘಾಟ್‌ನ ಯೋಗಿನಿದೇವಾಲಯ: ಜಬಲ್‌ಪುರದ ಬಳಿಯಲ್ಲಿ ನರ್ಮದಾ ಮತ್ತು ಬಾವನಗಂಗಾನದಿಗಳ ಸಂಗಮಸ್ಥಾನದಲ್ಲಿರುವ ಭೇರಾಘಾಟ್‌ನ ದೇವಾಲಯ ಗಮನಾರ್ಹ. ವೃತ್ತಾಕಾರದ ಈ ಮಂದಿರದ ಒಳಾವರಣಕ್ಕೆ ಹೊಂದಿಕೊಂಡಂತೆ 81 ಗರ್ಭಗೃಹಗಳಿದ್ದರೂ ಇದನ್ನೂ ಚತುಷ್ಷಷ್ಠಿ ಯೋಗಿನಿ ದೇವಾಲಯವೆಂದೇ ವ್ಯವಹರಿಸುವುದು ಕುತೂಹಲಕರವಾಗಿದೆ. ಇದುವರೆಗೆ ಬೆಳಕಿಗೆ ಬಂದಿರುವ ಅತಿದೊಡ್ಡದಾದ ಈ ಯೋಗಿನಿಯ ಮಂದಿರದಲ್ಲಿ ಗರ್ಭಗೃಹಗಳು ಕಂಬಗಳನ್ನಾಧರಿಸಿದ ಸಮತಲ ಚಾವಣಿಯುಳ್ಳವು. 64 ಯೋಗಿನಿಯರ ಶಿಲ್ಪಗಳೊಂದಿಗೆ ವೀರಭದ್ರ, ಗಣೇಶ ಸಹಿತರಾದ ಸಪ್ತಮಾತೃಕೆಯರು ಮತ್ತಿತರ ಪರಿವಾರ ದೇವತೆಗಳು ಸೇರಿ 81 ದೇವಿ ಪ್ರತಿಮೆಗಳಿವೆ. ಇವುಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಕೆಂಪು ಮರಳುಗಲ್ಲಿನಲ್ಲಿ ರೂಪಿತವಾಗಿದ್ದು, ಹಸುರುಮಿಶ್ರಿತ ಹಳದಿ ಬಣ್ಣದ ಮರಳುಗಲ್ಲಿನ ಉಳಿದ ಯೋಗಿನಿ ಶಿಲ್ಪಗಳಿಗಿಂತ ಪ್ರಾಚೀನವಾದುವೆಂದು ತೋರುತ್ತವೆ. ಬಹುತೇಕ ಗರ್ಭಗೃಹಗಳಲ್ಲಿಯ ಶಿಲ್ಪಗಳು ಕಾಣೆಯಾಗಿದ್ದು ಉಳಿದಿರುವ ಕೆಲವು ಬಹಳಷ್ಟು ಭಗ್ನವಾಗಿವೆ. ಆವರಣದ ಮಧ್ಯದಲ್ಲಿ ಗೌರೀಶಂಕರ ದೇವಾಲಯವಿದ್ದು ಗರ್ಭಗೃಹದಲ್ಲಿರುವ ಶಿಲ್ಪದ ಪೀಠದ ಮೇಲಿನ 12ನೆಯ ಶತಮಾನದ ಲಿಪಿಯ ಶಾಸನ ಪ್ರತಿಷ್ಠಿತದೇವತೆಯನ್ನು ವರೇಶ್ವರ (ವೀರೇಶ್ವರ–ಭೈರವ?) ಎಂದು ಹೆಸರಿಸಿದೆ. ಈ ಗೌರೀಶಂಕರ ದೇವಾಲಯ ಮೂಲ ಮಂದಿರಕ್ಕೆ ಅನಂತರದ ಸೇರ್ಪಡೆಯಾಗಿರಬೇಕು. ಬ್ಯಾನರ್ಜಿ ಮತ್ತು ಮಿರಾಶಿಯವರು ಇಲ್ಲಿಯ ಹಾಗೂ ಭೇರಾಘಾಟ್‌ನ 1155ರ ರಾಜಾ ನರಸಿಂಹನ ಶಾಸನಗಳನ್ನು ಅಧ್ಯಯನ ಮಾಡಿ 915–945ರ ಅವಧಿಯಲ್ಲಿ ಮಹಾರಾಜ ಯುವರಾಜದೇವನು ಕಟ್ಟಿಸಿದ ಮೊದಲ ಹಂತದ ದೇವಾಲಯ ಮೂಲತಃ ನಾಥಸಂಪ್ರದಾಯಕ್ಕೆ ಸೇರಿದ ಗೋಲಕೀಮಠವಾಗಿತ್ತೆಂದು ಭಾವಿಸಿದ್ದಾರೆ.

(ಎಸ್.ಎಸ್‌ವಿ.)

# ಜ

**ಜಗನ್ನಾಥ:** ಒರಿಸ್ಸ ರಾಜ್ಯದ ಪುರಿಯಲ್ಲಿರುವ ಪುಣ್ಯಕ್ಷೇತ್ರಗಳಲ್ಲಿ ಒಂದು. ಕಾಶಿ, ರಾಮೇಶ್ವರಗಳಂತೆ ಹಿಂದುಗಳಿಗೆ ಪವಿತ್ರ ಯಾತ್ರಾಸ್ಥಳ. ಜಗನ್ನಾಥ ದೇವಾಲಯವನ್ನು ಹನ್ನೆರಡನೆಯ ಶತಮಾನದಲ್ಲಿ ಆ ಪ್ರದೇಶವನ್ನಾಳುತ್ತಿದ್ದ ಪೂರ್ವ ಗಂಗವಂಶದ ಅನಂತವರ್ಮ ಚೋಡಗಂಗರಾಜ ಕಟ್ಟಿಸಿದ (1078–1150). ಪ್ರಾಚೀನ ಕರ್ನಾಟಕದಿಂದ ಅಲ್ಲಿ ರಾಜ್ಯ ಕಟ್ಟಿದ ಕನ್ನಡ ರಾಜವಂಶವಿದೆಂದು ಇತಿಹಾಸಕಾರರ ಅಭಿಪ್ರಾಯ. 195 ಮೀ ವಿಸ್ತಾರವುಳ್ಳ ಈ ದೇಗುಲದಲ್ಲಿ ಗರ್ಭಗುಡಿ, ನವರಂಗ ಮತ್ತು ಮೊಗಸಾಲೆ ಹೀಗೆ ಮೂರು ಭಾಗಗಳಿವೆ. ಗರ್ಭಗುಡಿಯ ಮೇಲಿನ ಶಿಖರದ ಎತ್ತರ 57.60ಮೀ ಈ ಮಂದಿರದಲ್ಲಿ ಶ್ರೀಕೃಷ್ಣನ ವಿಗ್ರಹವಲ್ಲದೆ ಬಲಭದ್ರ ಮತ್ತು ಸುಭದ್ರೆಯರ ವಿಗ್ರಹಗಳೂ ಅಕ್ಕಪಕ್ಕಗಳಲ್ಲಿ ಒಂದು ನೂರ ಇಪ್ಪತ್ತು ಇತರ ದೇವಾಲಯಗಳೂ ಇವೆ.

ಗಿರಿಜನರಿಂದ ಪೂಜೆಗೊಳ್ಳುತ್ತಿದ್ದ ಜಗನ್ನಾಥ ಇಂದ್ರದ್ಯುಮ್ನನೆಂಬ ರಾಜನಿಗೆ ಕನಸಿನಲ್ಲಿ ಕಾಣಿಸಿಕೊಂಡು ಈಗಿರುವ ಸ್ಥಳದಲ್ಲಿ ತನ್ನನ್ನು ಪ್ರತಿಷ್ಠಾಪಿಸಬೇಕೆಂದು ಅನುಗ್ರಹಿಸಿದನೆಂದು ಒಂದು ಐತಿಹ್ಯವಿದ್ದರೆ, ಮತ್ತೊಂದು ಈ ರಾಜ ದೇವತೆಗಳ ಬಡಗಿ ವಿಶ್ವಕರ್ಮನಿಂದಲೇ ಈ ಮೂರ್ತಿಯನ್ನು ಮಾಡಿಸಿ ಪ್ರತಿಷ್ಠಾಪಿಸಿದನೆಂದೂ ಬ್ರಹ್ಮನೇ ಜಗನ್ನಾಥನಿಗೆ ಪ್ರಪ್ರಥಮವಾಗಿ ಅರ್ಚನಾಕೈಂಕರ್ಯವನ್ನೆಸಗಿದನೆಂದೂ ಐತಿಹ್ಯ. ವಿಗ್ರಹ ಮಾತ್ರ ಬುಡದಲ್ಲಿ ದಪ್ಪನಾಗಿದ್ದು ಮೇಲಕ್ಕೆ ಹೋದಂತೆ ಚೂಪಾಗಿರುವ ಮರದ ಮೂರ್ತಿಯಾಗಿದೆ. ಒರಟು ಒರಟಾಗಿ ಕೆತ್ತಿದಂತಿರುವುದನ್ನು ನೋಡಿದರೆ ಪ್ರಾಯಶಃ ಇದು ಪೂರ್ವದಲ್ಲಿ ಗಿರಿಜನ ಬುಡಕಟ್ಟೊಂದರ ಆರಾಧ್ಯದೈವವಾಗಿದ್ದಂತೆ ತೋರುತ್ತದೆ. ಅಭಿಷೇಕ ಅಭ್ಯಂಜನಾದಿಗಳಿಂದ ಕಪ್ಪಾಗಿರುವ ಈ ಮೂರ್ತಿಯನ್ನು ದೂರದಿಂದ ನೋಡಿದಾಗ ಕರಿಯ ಕಲ್ಲಿನಿಂದ ಮಾಡಿದಂತೆ ಕಾಣುತ್ತದೆ. ನಿತ್ಯಚಂಚಲೆಯಾದ ಹೆಂಡತಿ ಲಕ್ಷ್ಮಿ, ಮೂರು ಲೋಕವನ್ನೂ ಸೂರೆಗೊಳ್ಳುವ ಮತ್ತು ಹಿಡಿತಕ್ಕೆ ದಕ್ಕದ (ದರ್ನಿವಾರ) ಮಗ ಪ್ರದ್ಯುಮ್ನ, ಹಾವಿನ ಹಾಸಿಗೆ, ಅದರ ವೈರಿ ಗರುಡ ವಾಹನ, ಅಲ್ಲೋಲಕಲ್ಲೋಲವಾದ ಕಡಲು ವಸತಿ–ಹೀಗೆ ತನ್ನ ಮನೆವಾರ್ತೆಯನ್ನು ಪ್ರತಿನಿತ್ಯವೂ ನೆನೆದು ನೆನೆದು ಪೀಕಲಾಟಕ್ಕೆ ಸಿಕ್ಕಿ ಮರವಾಗಿ ಬಿಟ್ಟ ಮುರಾರಿ ಎಂದು ಹೇಳುವ ಸಂಸ್ಕೃತ ಶ್ಲೋಕವೊಂದುಂಟು (ಸ್ಮಾರಂ ಸ್ಮಾರಂ ಸ್ವಗೃತಚರಿತಂ ದಾರುಭೂತೋ ಮುರಾರಿಃ).

ಜಗನ್ನಾಥನ ವಿಗ್ರಹದೊಳಗಡೆ ಮೂಳೆಯ ಕಿರುಪೆಟ್ಟಿಗೆಯೊಂದನ್ನು ಇಡಲಾಗಿದೆ. ಇದು ಶ್ರೀಕೃಷ್ಣನ ಅಸ್ಥಿ ಎಂಬ ಐತಿಹ್ಯವಿದೆ. ಈಗ ಪೆಟ್ಟಿಗೆಯನ್ನು ಹನ್ನೆರಡು ವರ್ಷಕ್ಕೊಮ್ಮೆ ವಿಗ್ರಹದ ಒಳಗಡೆ ಇಡುವ ಪರಿಪಾಠವಿದೆ. ಈ ಆಧಾರದ ಮೇಲೆ ಇದು ಹಿಂದೆ ಬೌದ್ಧಸ್ತೂಪವೊಂದಿದ್ದ ಸ್ಥಳವಿರಬಹುದೆಂದೂ ಇಲ್ಲಿರುವ ತ್ರಿಮೂರ್ತಿಗಳು (ಕೃಷ್ಣ, ಬಲಭದ್ರ, ಸುಭದ್ರೆ) ಬೌದ್ಧ ತ್ರಿರತ್ನಗಳ (ಬುದ್ಧ, ಧಮ್ಮ, ಸಂಘ) ಪ್ರತೀಕವೆಂದೂ ಹೇಳುವುದುಂಟು. ಭಾರತದ ಮತ್ತಾವ ಹಿಂದು ದೇವಾಲಯದಲ್ಲೂ ಈ ಸಂಪ್ರದಾಯವಿಲ್ಲ. ಸ್ಪೃಶ್ಯಾಸ್ಪೃಶ್ಯ ಭಾವನೆಗೆ ಇಂತಿಷ್ಟೂ ಈ ಕ್ಷೇತ್ರದಲ್ಲಿ ಎಡೆಯಿಲ್ಲದಿರುವುದು ಈ ವಾದಕ್ಕೆ ಪುಷ್ಟಿ ಕೊಡುತ್ತದೆ.

ಪುರಿಯಲ್ಲಿ ಆಷಾಢ ಶುಕ್ಲ ಬಿದಿಗೆಯ ದಿನ ಮಹಾ ಮೇಳವೊಂದು ಸೇರುತ್ತದೆ. ಭಾರತದ ನಾನಾ ಕಡೆಗಳಿಂದ ಲಕ್ಷಾಂತರ ಯಾತ್ರಿಕರು ಬರುತ್ತಾರೆ. ಮೂರು ನಾಲ್ಕುಸಾವಿರ ಬ್ರಾಹ್ಮಣರು ಪೂಜಾಕಾರ್ಯದಲ್ಲಿ ನಿರತರಾಗಿರುತ್ತಾರೆ. ಸ್ನಾನ ಯಾತ್ರೆ, ಮರಳದಂಡೆಯ ಮೇಲೆ 3ಕಿಮೀ ದೂರ ಜಗನ್ನಾಥರಥ, ಬಲಭದ್ರರಥ ಮತ್ತು ಸುಭದ್ರಾರಥಗಳನ್ನು ಮೆರವಣಿಗೆಯಲ್ಲಿ ಎಳೆದೊಯ್ಯುವುದು–ಮಹಾಸಾಹಸದ ಅಂತೆಯೇ ವಿಜೃಂಭಣೆಯ ದೃಶ್ಯ. ಪುರಿಯ ಸಮೀಪದಲ್ಲಿರುವ ಖುರ್ದಾಪಟ್ಟಣದ ರಾಜರು ಪರಂಪರೆಯಿಂದ (1590) ಇಲ್ಲಿಯ ಪೂಜೆಗೆ ಹಕ್ಕುದಾರರು. ಪುರಿಯಲ್ಲಿ ಸ್ನಾನ ಮಾಡಿ ಕಡಲತೀರದ ಮರಳ ಪ್ರಶಾಂತ ವಾತಾವರಣದಲ್ಲಿ ಕುಳಿತು ಜಗನ್ನಾಥನ ಧ್ಯಾನ ಮಾಡಿದರೆ ಸರ್ವಪಾಪವೂ ಕ್ಷಯಿಸಿ ಪುಣ್ಯ ಪ್ರಾಪ್ತಿಯಾಗುವುದೆಂದು ಭಕ್ತರ ನಂಬಿಕೆ.

(ಸಿ.ಜಿ.ಪಿ.)

**ಜಟಿಂಗರಾಮೇಶ್ವರ:** ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬ್ರಹ್ಮಗಿರಿ ಬೆಟ್ಟಕ್ಕೆ 3ಕಿಮೀ ಅಂತರದಲ್ಲಿ ರಾಮಸಾಗರದ ಬಳಿ ಇರುವ ಬೆಟ್ಟ. ಇದರಲ್ಲಿ ಸಣ್ಣ ಜಟಿಂಗರಾಮೇಶ್ವರ ಮತ್ತು ಹಿರಿಯ ಜಟಿಂಗರಾಮೇಶ್ವರ ಎಂಬ 2 ಬೆಟ್ಟಗಳು ಸೇರಿವೆ. ಮೊದಲನೆಯ ಬೆಟ್ಟದ ಮೇಲಿನ ಒಂದು ಬಂಡೆಯಲ್ಲಿ ಅಶೋಕನ ಶಾಸನವಿದೆ. ಇಲ್ಲಿಯ ಎರಡು ಗುಹೆಗಳಲ್ಲಿ ನವ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಮತ್ತು ಬಿಳಿವರ್ಣದ ಮನುಷ್ಯಾಕೃತಿಗಳನ್ನು ಎಸ್.ವೈ.ಸೋಮಶೇಖರ ವರದಿ ಮಾಡಿದ್ದಾರೆ. ಈ ಶಾಸನದ ಕೆಳಗಿರುವ ವೃತ್ತದೊಳಗೆ ಪಾದದ್ವಯದ ರೇಖಾಚಿತ್ರವನ್ನು ಮತ್ತು ಈ ನೆಲೆಯಲ್ಲಿ ನವ–ಶಿಲಾ ತಾಮ್ರಯುಗ, ಆದಿ ಕಬ್ಬಿಣಯುಗದ ಬೃಹತ್ ಶಿಲಾಯುಗ–ಆದಿ ಇತಿಹಾಸ ಸಂಸ್ಕೃತಿಗಳ ಮಣ್ಪಾತ್ರೆಗಳು ಮೊದಲಾದ ಅವಶೇಷಗಳನ್ನು ಮತ್ತು ಜಟಿಂಗ ರಾಮೇಶ್ವರ ದೇವಾಲಯಕ್ಕೆ ಏರಿ ಹೋಗುವ ಹಾದಿಯ ಹತ್ತಿರ ಒಂದು ಕಲ್ಲಾಸರೆಯಲ್ಲಿ ಪ್ರಾಗಿತಿಹಾಸ ಕಾಲದ ಒಂದು ಪ್ರಾಣಿಯ ರೇಖಾಚಿತ್ರವನ್ನು 1978ರಲ್ಲಿ ಅ.ಸುಂದರ ಶೋಧಿಸಿದರು. ಅಶೋಕನ ಕಾಲಕ್ಕಿಂತ ಮೊದಲೇ ಇಲ್ಲಿ ಜನವಸತಿಯಿತ್ತು. ಅಶೋಕನ ಕಾಲದ ಇಸಿಲ ನಗರ, ಜಟಿಂಗರಾಮೇಶ್ವರ ಮತ್ತು ಬ್ರಹ್ಮಗಿರಿಗಳ ನಡುವೆ ಸಂಪರ್ಕವಿತ್ತು. ಇಲ್ಲಿರುವ ಗವಿಗಳೂ ಏಕಾಂತ ತೀರ್ಥದಂಥ ದೊಣೆಗಳೂ ಜನವಸತಿಗೆ ಅನುಕೂಲವಾಗಿದ್ದುವು. ದೊಡ್ಡ ಜಟಂಗಿ ಬೆಟ್ಟದ ಮೇಲೆ ಜಟಿಂಗರಾಮೇಶ್ವರ ದೇವಾಲಯ ರಾವಣ ಸೀತೆಯನ್ನು ಕದ್ದೊಯ್ಯುತ್ತಿದ್ದಾಗ ಜಟಾಯು ಇಲ್ಲಿ ಅವನನ್ನು ತಡೆದು ಹೋರಾಡಿ ಮಡಿದನೆಂಬ ಕಥೆಯನ್ನು ಇಲ್ಲಿಯ 961ರ ಶಾಸನವೊಂದು ಹೇಳುತ್ತದೆ. ಈ ಬೆಟ್ಟದಲ್ಲಿ ಜಟಾಯುವಿನ ಹೆಸರಿನಲ್ಲಿ ರಾಮ ಲಿಂಗವನ್ನು ಪ್ರತಿಷ್ಠೆ ಮಾಡಿದನೆಂದೂ ದೇವಾಲಯ ಇಟ್ಟಿಗೆಯದಾಗಿತ್ತೆಂದೂ ಇದನ್ನು ಕಿತ್ತು ಶಿಲಾಮಯವಾದ ದೇವಾಲಯವೊಂದನ್ನೂ ಮತ್ತೆ ಕೆಲವು ದೇವಾಲಯಗಳನ್ನೂ ಶಿವಾಜೀಯು ಕಟ್ಟಿಸಿದನೆಂದೂ ಅದೇ ಶಾಸನ ತಿಳಿಸುತ್ತದೆ. ಜಟಿಂಗರಾಮೇಶ್ವರ ಎಂಬ ಹೆಸರಿಗೆ ಈ ಕಥೆಯೆ ಕಾರಣವಿರಬಹುದು. ಜಟಾಯು ರಾವಣನೊಂದಿಗೆ ಹೋರಾಡುತ್ತಿದ್ದಾಗ ಸೀತೆ ನಿಂತಿದ್ದ ಸ್ಥಳ ಎಂದು ಕೊಳದ ಬಳಿ ಇರುವ ಪಾದಗಳನ್ನೂ ರಾವಣನನ್ನು ಜಟಾಯು ಕೆಡವಿದ ಕೊರಕಲು ಜಟಾಯುವಿನ ದೇಹಕ್ಕೆ ರಾಮ ಅಗ್ನಿಸ್ಪರ್ಶ ಮಾಡಿದ ಸ್ಥಳ ಎಂದೂ ಅಲ್ಲಿ ಜನ ತೋರಿಸುತ್ತಾರೆ ಮತ್ತು ಈ ಬೆಟ್ಟದಲ್ಲಿ ಜಟಾಯುವಿನ ಸಮಾಧಿಯೆಂದು ಒಂದು ಇಟ್ಟಿಗೆ–ಮರದ ಕಟ್ಟಡದ ಭಗ್ನಾವಶೇಷಗಳನ್ನು ತೋರಿಸಲಾಗುತ್ತಿದೆ.

ನೊಳಂಬರ ಮತ್ತು ಚಾಳುಕ್ಯರ ಕಾಲದಲ್ಲಿ ಇಲ್ಲಿ ಕೆಲವು ಸಣ್ಣ ದೇವಾಲಯಗಳು ನಿರ್ಮಿತವಾದವು. ಆ ಕಾಲದಲ್ಲಿ ಈ ಬೆಟ್ಟಕ್ಕೆ ಬಲ್ಗೋಡಿ ತೀರ್ಥ ಎಂಬ ಹೆಸರಿತ್ತು. ಮುಂದೆ ವಿಜಯನಗರದ ಕಾಲದಲ್ಲೂ ಪಾಳೆಯಗಾರರ ಕಾಲದಲ್ಲೂ ಹಲವು ಗುಡಿಗೋಪುರಗಳನ್ನು ಕಟ್ಟಿಸಲಾಯಿತು; ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲಾಯಿತು. ಸಣ್ಣ ಜಟಿಂಗರಾಮೇಶ್ವರ ಬೆಟ್ಟದ ಮೇಲಿನ ದೊಡ್ಡ ಆವರಣದಲ್ಲಿ ಹಲವಾರು ದೇವಾಲಯಗಳು ಉಳಿದುಬಂದಿವೆ. ವಿಜಯನಗರದ ದೇವರಾಯನ ಕಾಲದಲ್ಲಿ ಕಟ್ಟಿದ ದೊಡ್ಡ ಮಹಾದ್ವಾರದ ಗೋಪುರ ಈಗ ಶಿಥಿಲವಾಗಿದೆ. ಆ ಮಹಾದ್ವಾರದ ಒಳಹೊಕ್ಕರೆ ಮತ್ತೊಂದು ಸಣ್ಣ ಮಹಾದ್ವಾರ, ಅದರ ಎರಡು ಕಡೆಯೂ ಗಣಪತಿ ಮತ್ತು ಚಾಮುಂಡಾಂಬಿಕೆ ಗುಡಿಗಳನ್ನು ಕಾಣಬಹುದು. ಎರಡನೆಯ ಗುಡಿಯಲ್ಲಿರುವ ಮಹಿಷಾಸುರಮರ್ದಿನಿ ಮೂರ್ತಿ ಸುಂದರವಾಗಿದೆ. ಮುಂದೆ 12 ಮೀ ಎತ್ತರದ ದೀಪಸ್ತಂಭವಿದೆ. ಇದು ಪಾಳೆಯಗಾರರ ಕಾಲಕ್ಕೆ ಸೇರಿದ್ದುದು. ಇಲ್ಲಿಯ ಪಂಪಾಪತಿ ದೇವಾಲಯಕ್ಕೆ ಕದಂಬ ನಾಗರ ಮಾದರಿಯ ಶಿಖರವಿದೆ. ಜಂಬುಕೇಶ್ವರನ ಗುಡಿ ಇಟ್ಟಿಗೆಯದು. ಇವಲ್ಲದೆ ವೀರಭದ್ರ, ಸಪ್ತಮಾತೃಕೆಯರು, ಜನಾರ್ದನ, ಅರ್ಕೇಶ್ವರ, ಚಂಡಿಕೇಶ್ವರ, ತಪೋಲಿಂಗ, ಭೈರವ ಮುಂತಾದ ಸರಳವಾಗಿ ಕಟ್ಟಿರುವ ಹಲವಾರು ಗುಡಿಗಳೂ ಇಲ್ಲಿವೆ. ಗರ್ಭಗುಡಿ, ಸುಕನಾಸಿ ಮತ್ತು

ನವರಂಗಗಳನ್ನುಳ್ಳ ರಾಮೇಶ್ವರ ದೇವಾಲಯವೇ ಇಲ್ಲಿಯ ಪ್ರಾಚೀನ ಹಾಗೂ ಮುಖ್ಯದೇವಾಲಯ. ಇದನ್ನು ವಿಜಯನಗರದ ಕಾಲದಲ್ಲಿ ಸಂಪೂರ್ಣವಾಗಿ ಪುನರ್ನಿರ್ಮಿಸಿದಂತೆ ತೋರುತ್ತದೆ. (ಎಂ.ಎಚ್.)

**ಜಡಿಗೇನಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾಸಮಾಧಿ ನೆಲೆ. 1.8ಮೀ ನಿಂದ 6ಮೀ ವ್ಯಾಸದ ಶಿಲಾವೃತ್ತ ಸಮಾಧಿಗಳು ಇಲ್ಲಿವೆ. ಎರಡು ವೃತ್ತಗಳುಳ್ಳ ಸಮಾಧಿಗಳೂ ಕೆಲವು ಇವೆ. ಮಳೆಗಾಲದಲ್ಲಿ ಈ ನೆಲೆಯ ಮೂಲಕ ಹರಿಯುವ ಹಳ್ಳದ ಕೊರೆತಕ್ಕೊಳಗಾಗಿ ಕೆಲವೊಂದು ಸಮಾಧಿಗಳು ತೆರೆದುಕೊಂಡಿವೆ. 1957ರಲ್ಲಿ 4 ಸಮಾಧಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಎಮ್.ಶೇಷಾದ್ರಿ ಅವರ ನೇತೃತ್ವದಲ್ಲಿ ಉತ್ಖನನದ ಮೂಲಕ ಹೊರತೆಗೆಯಿತು. ಆಳವಾದ ಗುಂಡಿಯಲ್ಲಿ ಮಣ್ಣಿನ ಶವಪೆಟ್ಟಿಗೆಯನ್ನು ಹೂಳಿರುವುದು ಇಲ್ಲಿಯ ಬೃಹತ್ ಶಿಲಾಸಮಾಧಿಗಳ ಒಂದು ವೈಶಿಷ್ಟ್ಯ. ಸು. 1.8 ಮೀ ಆಳದ ಗುಂಡಿಗಳಲ್ಲಿ ಸು. 1–1.2 ಮೀ ಉದ್ದದ ಶವಪೆಟ್ಟಿಗೆಗಳಿದ್ದವು. ಗುಂಡಿಯ ತಳದಲ್ಲಿ ಬತ್ತ ಹರಡಿ ಅದರ ಮೇಲೆ ಪೆಟ್ಟಿಗೆಗಳನ್ನು ಇಟ್ಟಿರುವಂತೆ ಕಾಣುತ್ತದೆ. ಕೆಲವು ಶವಪೆಟ್ಟಿಗೆಗಳಿಗೆ 8 ಕಾಲಿದ್ದು ಉಬ್ಬಿದ ಮುಚ್ಚಳದಿಂದ ಇವನ್ನು ಮುಚ್ಚಲಾಗಿತ್ತು. ಪೆಟ್ಟಿಗೆಯ ಸುತ್ತ ಕಪ್ಪು, ಕೆಂಪು, ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳನ್ನೂ ಕಬ್ಬಿಣದ ಸಾಮಾನುಗಳನ್ನೂ ಇಡಲಾಗಿತ್ತು. 3.5ಮೀ ಆಳದ ಒಂದು ಗುಂಡಿಯ ತಳದಲ್ಲಿ ಅಕ್ಕಪಕ್ಕದಲ್ಲಿ ಎರಡು ಕಿರುಗುಂಡಿಗಳಿದ್ದು ಒಂದರಲ್ಲಿ ಶವಪೆಟ್ಟಿಗೆಯನ್ನೂ ಮತ್ತೊಂದರಲ್ಲಿ ಮಣ್ಪಾತ್ರೆಗಳನ್ನೂ ಇಟ್ಟಿದ್ದುದು ಕಂಡುಬಂತು. ಯಾವ ಪೆಟ್ಟಿಗೆಯಲ್ಲಿಯೂ ಅಸ್ಥಿಪಂಜರ ಇಲ್ಲದ್ದಿದ್ದುದು ಕುತೂಹಲಕಾರಿ. ಕಬ್ಬಿಣದ ಸಾಮಾನುಗಳಲ್ಲಿ ಕತ್ತಿ, ಚೂರಿ, ಕುಡುಗೋಲು, ಗುದ್ದಲಿ, ಅಡ್ಡಣಿಗೆ ಮುಕ್ಕಾಲಿನ ಪೀಠ, ಬಾಣಲೆ, ತ್ರಿಶೂಲ ಮುಂತಾದವೂ ಮಣ್ಪಾತ್ರೆಗಳಲ್ಲಿ ಮಡಕೆ, ತಟ್ಟೆ, ಬಟ್ಟಲು, ಮುಚ್ಚಳವಿರುವ ಉದ್ದಕತ್ತಿನ ಹೂಜಿ, ಪಾನಪಾತ್ರೆ ಮತ್ತು ಆಟಿಕೆಯಂಥ ಕಿರುಪಾತ್ರೆಗಳೂ ಸೇರಿವೆ. ಈ ಸಮಾಧಿಗಳು 1–3 ನೆಯ ಶತಮಾನದ ಅವಧಿಯಲ್ಲಿ ನಿರ್ಮಿಸಲಾಗಿವೆಯೆಂದು ಅಭಿಪ್ರಾಯವಿದೆ. (ಎಂ.ಎಚ್.)

**ಜನಾಂಗ ಹತ್ಯೆ:** ಒಂದು ರಾಷ್ಟ್ರ, ಕುಲ, ಬುಡಕಟ್ಟು, ಮತ ಅಥವಾ ರಾಜಕೀಯ ಸಮೂಹವನ್ನು ನಾಶಗೊಳಿಸುವ ಯತ್ನ (ಜೆನೊಸೈಡ್). ಇಂಗ್ಲಿಷಿನ ಜೆನೊಸೈಡ್ ಎಂಬ ಶಬ್ದವನ್ನು ರಚಿಸಿದವನು ರಾಫೇಲ್ ಲಿಮ್‌ಕಿನ್ ಎಂಬ ಅಮೆರಿಕನ್ ವಿದ್ವಾಂಸ. ಬುಡಕಟ್ಟು, ರಾಷ್ಟ್ರ ಅಥವಾ ಕುಲ ಎಂಬ ಅರ್ಥ ಇರುವ ಜೆನೋಸ್ ಎಂಬ ಗ್ರೀಕ್ ಪದವನ್ನೂ ಹತ್ಯೆ ಅಥವಾ ವಧೆ ಎಂಬ ಅರ್ಥದ ಸೈಡ್ ಎಂಬ ಲ್ಯಾಟಿನ್ ಪ್ರತ್ಯಯವನ್ನೂ ಕೂಡಿಸಿ ಅವನು ಈ ಶಬ್ದವನ್ನು ರಚಿಸಿದ. ಜನಾಂಗಹತ್ಯೆಯನ್ನು ನಿಷೇಧಿಸಲು ಅಂತಾರಾಷ್ಟ್ರೀಯ ಕ್ರಮ ಕೈಗೊಳ್ಳಬೇಕೆಂದು ಪ್ರತಿಪಾದಿಸಿದವನು ಆತ. 1933–45ರ ಕಾಲದ ಯುರೋಪಿನ ಅನುಭವದ ದೃಷ್ಟಿಯಲ್ಲಿ, ಮಾನವ ಸಮೂಹಗಳನ್ನೇ ನಾಶಗೊಳಿಸುವ ಕೃತ್ಯಕ್ಕೆ ಸಂಬಂಧಿಸಿದಂತೆ ನ್ಯಾಯಿಕ ಪರಿಕಲ್ಪನೆಯನ್ನು ರೂಪಿಸುವುದು ಅವಶ್ಯವೆಂದು ಆತ ಪ್ರತಿಪಾದಿಸಿದ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಎಸಗಲಾದ ಅಪರಾಧಗಳನ್ನು ಕುರಿತು ನಡೆಸಿದ ನ್ಯೂರೆನ್‌ಬರ್ಗ್ ಮತ್ತು ಇತರ ವಿಚಾರಣೆಗಳಿಂದ ಬೆಳಕಿಗೆ ಬಂದ ಸಂಗತಿಗಳ ಪರಿಣಾಮವಾಗಿ ಜನಾಂಗಕ್ಕೆ ಅಂತಾರಾಷ್ಟ್ರೀಯ ನ್ಯಾಯದ ದೃಷ್ಟಿಯಲ್ಲಿ ನಾಗರಿಕ ಪ್ರಪಂಚದ ಖಂಡನೆಗೆ ಅರ್ಹವಾದ ಅಪರಾಧವೆಂದೂ ಇದನ್ನು ಎಸಗುವವರೂ ಅವರ ಜೊತೆಗಾರರೂ ಶಿಕ್ಷಾರ್ಹರೆಂದೂ ವಿಶ್ವಸಂಸ್ಥೆ ಸಾರಿತು. ಜನಾಂಗಹತ್ಯೆಯ ಅಪರಾಧದ ತಡೆ ಹಾಗೂ ಶಿಕ್ಷೆಯ ಬಗ್ಗೆ 1948ರ ಡಿಸೆಂಬರ್ 9ರಂದು ವಿಶ್ವಸಂಸ್ಥೆಯ ಮಹಾಸಭೆ ಒಂದು ಒಡಂಬಡಿಕೆಗೆ ಒಪ್ಪಿಗೆ ನೀಡಿತು. ಜನಾಂಗಹತ್ಯೆ ಯುದ್ಧಕಾಲದಲ್ಲೇ ನಡೆಯಲಿ, ಶಾಂತಿಕಾಲದಲ್ಲೇ ನಡೆಯಲಿ, ಅದು ಅಂತಾರಾಷ್ಟ್ರೀಯ ನ್ಯಾಯದೃಷ್ಟಿಯಲ್ಲಿ ಅಪರಾಧ; ಅದಕ್ಕಾಗಿ ದಂಡನೆ ವಿಧಿಸಲು ಒಡಂಬಡಿಕೆಯ ರಾಷ್ಟ್ರಗಳು ವಾಗ್ದಾನ ಮಾಡಿವೆ.

ಜನಾಂಗಹತ್ಯೆಗೂ ಜನಹತ್ಯೆಗೂ ವ್ಯತ್ಯಾಸವುಂಟು. ಶಾಂತಿಗೆ ವಿರುದ್ಧವಾದ ಅಪರಾಧಗಳಿಗೆ ಅಥವಾ ಯುದ್ಧಾಪರಾಧಗಳಿಗೆ ಸಂಬಂಧಿಸಿದಂತೆ ಎಸಗಿದಾಗ ಮಾತ್ರ ಕೆಲವು ಅಮಾನುಷ ಕೃತ್ಯಗಳು ಅಂತಾರಾಷ್ಟ್ರೀಯ ಅಪರಾಧಗಳಾಗುತ್ತವೆ, ಎಂದರೆ ಮಾನವತೆಯ ವಿರುದ್ಧವಾದ ಅಪರಾಧಗಳಾಗುತ್ತವೆ, ಎಂದರೆ ಒಂದು ಕೃತ್ಯವನ್ನು ಜನಾಂಗಹತ್ಯೆಯೆಂದು ಕರೆಯಬೇಕಾದರೆ ಅದು ಯುದ್ಧಸಂಬಂಧವಾದ್ದಾಗಿಯೇ ಇರಬೇಕಾದ್ದಿಲ್ಲ; ಯುದ್ಧಸಮಯದಲ್ಲೇ ಎಸಗಿದ್ದಾಗಿರಬೇಕಿಲ್ಲ. ಒಂದು ರಾಷ್ಟ್ರ, ಕುಲ ಬುಡಕಟ್ಟು, ಮತ ಅಥವಾ ರಾಜಕೀಯ ಸಮೂಹವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅಳಿಸಿಹಾಕುವ ಉದ್ದೇಶದಿಂದ ಎಸಗಿದ ಈ ಕೃತ್ಯಗಳೆಲ್ಲವೂ ಒಡಂಬಡಿಕೆಯ ಪ್ರಕಾರ ಜನಾಂಗಹತ್ಯೆ ಎನಿಸುತ್ತದೆ: 1. ಒಂದು ಸಮೂಹದ ಸದಸ್ಯರ ಕೊಲೆ; 2. ಒಂದು ಸಮೂಹದ ಸದಸ್ಯರಿಗೆ ಶಾರೀರಿಕವಾದ ಅಥವಾ ಬೌದ್ಧಿಕವಾದ ತೀವ್ರ ಹಾನಿ ಉಂಟುಮಾಡುವುದು; 3. ಒಂದು ಸಮೂಹವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ನಾಶಗೊಳಿಸುವ ದೃಷ್ಟಿಯಿಂದ ಅದನ್ನು ದುರ್ಭರ ಜೀವನ ಸ್ಥಿತಿಗಳಿಗೆ ಒಳಪಡಿಸುವುದು; 4. ಒಂದು ಸಮೂಹದಲ್ಲಿ ಮಕ್ಕಳು ಹುಟ್ಟದಂತೆ ಕಟ್ಟುಕಟ್ಟಳೆಗಳನ್ನು ಜಾರಿಗೆ ತರುವುದು; 5. ಒಂದು ಸಮೂಹದ ಮಕ್ಕಳನ್ನು ಬಲಾತ್ಕಾರವಾಗಿ ಇನ್ನೊಂದು ಸಮೂಹಕ್ಕೆ ವರ್ಗಾಯಿಸುವುದು.

1951ರ ಜನವರಿ 12ರಿಂದ ಈ ಒಡಂಬಡಿಕೆ ಕಾರ್ಯರೂಪಕ್ಕೆ ಬಂದಿದೆ. ಈ ನಿರ್ಣಯವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಂಗೀಕರಿಸಿದ ಬಳಿಕ 1965ರ ಫೆಬ್ರುವರಿ 28ರವರೆಗೆ 67 ರಾಷ್ಟ್ರಗಳು ಇದನ್ನು ಒಪ್ಪಿ ಸಹಿ ಮಾಡಿದ್ದವು. ನೇರವಾಗಿ ಮತ್ತು ಸಾರ್ವಜನಿಕ ದೋಷಾರೋಪಣೆಯ ಮೂಲಕ ಸಂಚು ಹೂಡುವುದು ಹಾಗೂ ಜನಾಂಗಹತ್ಯೆ ನಡೆಸಲು ಪ್ರಯತ್ನಿಸುವುದು ಮತ್ತು ಅದರಲ್ಲಿ ಭಾಗಿಯಾಗುವುದು–ಈ ಎಲ್ಲ ಅಪರಾಧಗಳೂ ಶಿಕ್ಷಾರ್ಹವೆಂದು ಪರಿಗಣಿತವಾಗಿವೆ. ಅಪರಾಧಿಗಳು ಸಂವಿಧಾನಬದ್ಧ ಆಡಳಿತಗಾರರಾಗಿರಲಿ, ಸರ್ಕಾರಿ ಅಧಿಕಾರಿಗಳಾಗಿರಲಿ, ಖಾಸಗಿ ವ್ಯಕ್ತಿಗಳಾಗಿರಲಿ ಅವರೆಲ್ಲ ಶಿಕ್ಷೆಗೆ ಒಳಗಾಗುತ್ತಾರೆ. ಕೃತ್ಯ ನಡೆದ ಪ್ರದೇಶದ ಸರ್ಕಾರದಿಂದ ರಚಿತವಾದ ಅರ್ಹ ವಿಚಾರಣಾಮಂಡಳಿಯಾಗಲಿ, ಒಡಂಬಡಿಕೆಯನ್ನೊಪ್ಪಿದ ರಾಷ್ಟ್ರಗಳ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಒಡಂಬಡಿಕೆ ರಾಷ್ಟ್ರಗಳು ಒಪ್ಪಿಕೊಂಡ, ಅಂತಾರಾಷ್ಟ್ರೀಯ ದಂಡನಾಮಂಡಳಿಯಾಗಲಿ ಆರೋಪಿಗಳ ವಿಚಾರಣೆ ಮಾಡತಕ್ಕದ್ದು.

ಒಂದು ರಾಷ್ಟ್ರದ ಸರ್ಕಾರವೇ ತನ್ನ ಸ್ವಂತ ಪ್ರದೇಶದೊಳಗೆ ಜನಹತ್ಯೆಯನ್ನೆಸಗಿದರೂ ಅದು ಆ ರಾಷ್ಟ್ರಕ್ಕೆ ಮಾತ್ರ ಸಂಬಂಧಪಟ್ಟ ವಿಷಯವಾಗದೆ ಅಂತಾರಾಷ್ಟ್ರೀಯ ವಿಷಯವಾಗುತ್ತದೆ ಎಂಬ ಅಂಶವನ್ನು ಒಡಂಬಡಿಕೆಯ ರಾಷ್ಟ್ರಗಳು ಮನಗಂಡಿವೆ. ಒಡಂಬಡಿಕೆಯ ಯಾವುದೇ ರಾಷ್ಟ್ರವಾದರೂ ಜನಾಂಗಹತ್ಯೆಯನ್ನು ತಡೆಗಟ್ಟಲು ಕ್ರಮಕೈಗೊಳ್ಳಬಹುದು; ವಿಶ್ವಸಂಸ್ಥೆಯ ಪ್ರಣಾಳಿಕೆಗಳಿಗನುಗುಣವಾಗಿ ವಿಶ್ವಸಂಸ್ಥೆಯ ಅಂಗಸಂಸ್ಥೆಗಳು ಮಧ್ಯ ಪ್ರವೇಶಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಕೋರಬಹುದು.

ಜನಾಂಗಹತ್ಯೆಯ ಪರಿಕಲ್ಪನೆ ಈಚಿನದಾದರೂ ಅದು ಇತಿಹಾಸದ ಉದ್ದಕ್ಕೂ ನಡೆದುಕೊಂಡು ಬಂದಿರುವ ಅಪರಾಧ. 1269ರಲ್ಲಿ ಭಾರತದ ನಶಾಪುರದ ಪ್ರದೇಶದಲ್ಲಿ ಚೆಂಗೇಸ್ ಖಾನನ ಕಡೆಯವರು ನಡೆಸಿದ ಜನಾಂಗಹತ್ಯೆಯಿಂದ ಸು.17,47,000 ಜನ ಸತ್ತರೆಂದು ಹೇಳಲಾಗಿದೆ. ಉತ್ತರ ಐರ್ಲೆಂಡಿನಲ್ಲಿ 1641ರ ಅಕ್ಟೋಬರ್ 23ರಂದು 1,54,000 ಪ್ರಾಟೆಸ್ಟಂಟರನ್ನು ಕೆಥೊಲಿಕರು ಕೊಲೆ ಮಾಡಿದರು. ಜರ್ಮನ್ ಆಕ್ರಮಿತ ಪ್ರದೇಶದಲ್ಲಿ 1945ರ ಮೇ ವರೆಗೆ ನಾಜಿಗಳು ಸು.57,00,000 ಯಹೂದ್ಯರನ್ನು ಕೊಂದರು. 1951–1952ರವರೆಗೆ ಚೀನದಲ್ಲಿ ನಡೆದ ವಿಚಾರ ಸುಧಾರಣಾ ಚಳವಳಿಯ ಕಾಲದಲ್ಲಿ ಸಂಭವಿಸಿದ ಕ್ರಾಂತಿ ವಿರೋಧಿಗಳ ಹತ್ಯೆ 20,00,000 ಎಂದು ಅಂದಾಜು ಮಾಡಲಾಗಿದೆ. ಭಾರತ–ಪಾಕಿಸ್ತಾನ ವಿಭಜನೆಯ ಕಾಲದಲ್ಲಿ ಕಾಶ್ಮೀರದಲ್ಲಿ ಹತ್ಯೆಗೆ ಒಳಗಾದವರು 1,80,000 (1947).

ಮಂಗೋಲರೂ ಹೂಣರು ಯುರೋಪನ್ನು ಮುತ್ತಿದಾಗ, ಅಲೆಗ್ಸಾಂಡರ್ ದಂಡಯಾತ್ರೆ ನಡೆಸಿದಾಗ, ಇಸ್ಲಾಮ್ ಧರ್ಮ ಹರಡಿದಾಗ, ಯುರೋಪಿಯನರು ಆಫ್ರಿಕ–ಅಮೆರಿಕಗಳಲ್ಲಿ ನೆಲೆಸಿದಾಗ ಸಂಭವಿಸಿದ ಜನಾಂಗ ಹತ್ಯೆಗಳಲ್ಲಿ ಅಸಂಖ್ಯಾತ ಜನ ಬಲಿಯಾಗಿದ್ದಾರೆ. ಇತಿಹಾಸದ ಆದಿಯಿಂದ ಸತತವಾಗಿ ಹತ್ಯೆಗೆ ಒಳಗಾಗಿರುವವರೆಂದರೆ ಯಹೂದ್ಯರು. 1971ರಲ್ಲಿ ಬಾಂಗ್ಲಾದೇಶದಲ್ಲಿ ಪಾಕಿಸ್ತಾನ ನಡೆಸಿದ ಜನಾಂಗಹತ್ಯೆಯಲ್ಲಿ ಸತ್ತವರ ಸಂಖ್ಯೆ ಸು.30 ಲಕ್ಷ ಎಂದು ಅಂದಾಜು ಮಾಡಲಾಗಿದೆ. (ಡಿ.ಎಸ್.ಜೆ.)

**ಜಮೀನ್ದಾರಿ ಪದ್ಧತಿ:** ಭಾರತದಲ್ಲಿ ಬ್ರಿಟಿಷ್ ಆಳಿಕೆ ವ್ಯಾಪಕವಾಗಿ ಜಾರಿಯಲ್ಲಿದ್ದು, ಸ್ವತಂತ್ರ ಭಾರತದಲ್ಲೂ ಹಲವು ವರ್ಷಗಳ ಕಾಲ ವಿವಿಧ ರಾಜ್ಯಗಳಲ್ಲಿ ಮುಂದುವರಿದುಕೊಂಡು ಬಂದಿದ್ದ ಜಮೀನು ಹಿಡುವಳಿ ಪದ್ಧತಿಗಳಲ್ಲೊಂದು. ಒಂದು ಇಡೀ ಪ್ರದೇಶದ ಮೇಲೆ ನಿಗದಿಯಾದ ಕಂದಾಯವನ್ನು ಸಲ್ಲಿಸಲೊಪ್ಪಿ, ಪ್ರತಿಯಾಗಿ ಆ ಪ್ರದೇಶದ ರೈತರಿಂದ ಪ್ರತ್ಯೇಕವಾಗಿ ಕಂದಾಯ ವಸೂಲು ಮಾಡಿಕೊಳ್ಳಲು ಒಬ್ಬನಿಗೆ ಅಥವಾ ಜಂಟಿಯಾಗಿ ಕೆಲವು ಮಂದಿಗೆ ಸರ್ಕಾರ ನೀಡಿದ್ದ ಹಕ್ಕು. ಈ ಹಕ್ಕು ಪಡೆದ ವ್ಯಕ್ತಿ ಜಮೀನ್ದಾರ. ಆ ಪ್ರದೇಶದ ರೈತರೆಲ್ಲ ಜಮೀನ್ದಾರನಿಗೆ ಅಧೀನರಾಗಿರುತ್ತಿದ್ದರು. ಜಮೀನ್ದಾರಿ ಪದ್ಧತಿ ಒಂದೊಂದು ಕಡೆ ಒಂದೊಂದು ರೀತಿ ಇತ್ತಾದರೂ ಸ್ಥೂಲವಾಗಿ ಜಮೀನ್ದಾರಿ ಪದ್ಧತಿಗಳ ಲಕ್ಷಣ ಇದು.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸರ್ಕಾರಗಳು ರೈತರಿಂದ ಜಮೀನಿನ ಹುಟ್ಟುವಳಿಯಲ್ಲಿ ಒಂದು ಭಾಗವನ್ನು ಕಂದಾಯವಾಗಿ ಪಡೆಯುತ್ತ ಬಂದಿವೆ. ಮೊದಮೊದಲು ಒಟ್ಟು ಫಸಲಿನಲ್ಲಿ ಒಂದು ನಿಗದಿಯಾದ ಪಾಲನ್ನು ನೇರವಾಗಿ ಭೂಗಂದಾಯವಾಗಿ ಪಡೆಯಲಾಗುತ್ತಿತ್ತು. ಆದರೆ ಈ ಪದ್ಧತಿಯಲ್ಲಿ ಅನೇಕ ತೊಂದರೆಗಳಿದ್ದುವು. ಆದ್ದರಿಂದ ಇದರಲ್ಲಿ ಕ್ರಮೇಣ ಅನೇಕ ಸುಧಾರಣೆಗಳಾದುವು. ಸಾಗುವಳಿ ನೆಲವನ್ನು ಅಳತೆ ಮಾಡಿ, ಗುಣಕ್ಕೆ ಅನುಗುಣವಾಗಿ ಅದನ್ನು ಸ್ಥೂಲವಾಗಿ ನಾಲ್ಕು ದರ್ಜೆಗಳಾಗಿ ವಿಂಗಡಿಸಲಾಯಿತು.

ಮೊಗಲ್ ಸಾಮ್ರಾಜ್ಯ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ವ್ಯಾಪಕವಾಗಿ ಜಾರಿಯಲ್ಲಿದ್ದ ಈ ಪದ್ಧತಿ ಅನಂತರ ವಿಕೃತರೂಪಗಳನ್ನು ತಳೆಯಿತು. ಕ್ರಮೇಣ ಜಮೀನ್ದಾರಿ ಪದ್ಧತಿ ಹುಟ್ಟಿಕೊಂಡಿತು. ಮೊಗಲ್ ಸಾಮ್ರಾಜ್ಯ ಕ್ಷೀಣಿಸತೊಡಗಿದಾಗ ದೆಹಲಿಯ ಸರ್ಕಾರಕ್ಕೆ ತನ್ನ ಸಾಮ್ರಾಜ್ಯದ ದೂರ ಪ್ರಾಂತಗಳಲ್ಲಿದ್ದ ಕಂದಾಯ ವಸೂಲಿ ಅಧಿಕಾರಿಗಳ ಮೇಲೆ ಸರಿಯಾದ ಹತೋಟಿ ಇಟ್ಟುಕೊಳ್ಳುವುದು ಸಾಧ್ಯವಾಗದೆ ಹೋಯಿತು. ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ವರಮಾನ ತಪ್ಪದಂತೆ ಯಾವುದಾದರೊಂದು ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅಗತ್ಯವೆನಿಸಿತು. ಫರುಕ್‌ಸಿಯಾರನ ಆಳಿಕೆಯ ಕಾಲದಲ್ಲಿ (1713–19) ಜಮೀನ್ದಾರಿ

ಪದ್ಧತಿ ಖಚಿತವಾಗಿ ರೂಪುಗೊಂಡಿತೆನ್ನಬಹುದು. ಪ್ರತಿಯೊಂದು ಜಿಲ್ಲೆ ಅಥವಾ ಪರಗಣದಲ್ಲೂ ಆಢ್ಯನಾದ ರೈತನೊಬ್ಬ ಆ ಸುತ್ತಿನ ಎಲ್ಲ ರೈತರಿಂದ ಕಂದಾಯ ವಸೂಲು ಮಾಡಿ, ಒಟ್ಟು ವಸೂಲಿಯ ಮೊಬಲಗಿನಲ್ಲಿ ಹತ್ತನೆಯ ಒಂಬತ್ತು ಭಾಗವನ್ನು ಸರ್ಕಾರಕ್ಕೆ ಸಲ್ಲಿಸಿ, ಉಳಿದ ಒಂದು ಭಾಗವನ್ನು ತನಗೆ ಸಂಭಾವನೆಯಾಗಿ ಉಳಿಸಿಕೊಳ್ಳುವ ಪದ್ಧತಿ ರೂಪುಗೊಂಡಿತು.

ವಸೂಲಿಯ ಶ್ರಮವಿಲ್ಲದೆ ಒಟ್ಟೊಟ್ಟಾಗಿ ಕಂದಾಯ ಪಡೆಯುವುದು ಸಾಧ್ಯವೆನಿಸಿದಾಗ ಸರ್ಕಾರ ಈ ಪರಿಸ್ಥಿತಿಯ ದುರುಪಯೋಗ ಪಡೆದುಕೊಳ್ಳಲು ಕ್ರಮ ತೆಗೆದುಕೊಂಡಿತು. ಪ್ರತಿಯೊಂದು ಪರಗಣದ ಕಂದಾಯ ವಸೂಲಿ ಹಕ್ಕನ್ನೂ ಹರಾಜು ಮಾಡಿ, ಅತಿ ಹೆಚ್ಚಿನ ಬಿಡ್ಡುದಾರನಿಗೆ ಅದನ್ನು ನೀಡಲಾರಂಭಿಸಿದ್ದು ಮುಂದಿನ ಮಜಲು. ಈ ಹಕ್ಕು ಪಡೆದವನು ಸರ್ಕಾರಕ್ಕೆ ಒಂದು ಗಂಟಿನಲ್ಲಿ ಬಿಡ್ಡಿನ ಮೊಬಲಗನ್ನು ಪಾವತಿ ಮಾಡಿ, ಇದಕ್ಕಿಂತ ಹೆಚ್ಚಿಗೆಯಾಗಿ ವಸೂಲಾದ ಮೊಬಲಗನ್ನು ತಾನೇ ಉಳಿಸಿಕೊಳ್ಳಬಹುದಿತ್ತು. ಇಂಥ ಹಕ್ಕುದಾರರು ರೈತರನ್ನು ಅತಿಯಾಗಿ ಶೋಷಿಸುತ್ತಿದ್ದರು. ಸರ್ಕಾರಕ್ಕೆ ಆದಷ್ಟು ಕಡಿಮೆ ಪಾವತಿ ಮಾಡಲು ಯತ್ನಿಸುತ್ತಿದ್ದರು. ಮೊಗಲರಿಗೆ ಮಣಿಯಬೇಕಾಗಿ ಬಂದ ಅನೇಕ ಹಿಂದು ದೊರೆಗಳು ಕೇವಲ ಕಂದಾಯ ವಸೂಲಿ ಹಕ್ಕುದಾರರಾಗಬೇಕಾಗಿ ಬಂದದ್ದೂ ಉಂಟು. ಆರಂಭದೆಸೆಯಲ್ಲಿ ಇದು ವಂಶಪಾರಂಪರ್ಯವಾದ ಹಕ್ಕಾಗಿರಲಿಲ್ಲವಾದರೂ ಕೇಂದ್ರಾಧಿಕಾರ ಸಡಿಲವಾದಂತೆ ಇದು ಅನುವಂಶಿಕವಾಯಿತು. ದೇಶದಲ್ಲಿ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿ ಉಂಟಾದಾಗ ಕಂದಾಯ ವಸೂಲಿ ಹಕ್ಕುದಾರನ ಸ್ಥಿತಿ ಭದ್ರವಾಯಿತು. ತನ್ನ ಹಕ್ಕಿಗೆ ಒಳಪಟ್ಟಿದ್ದ ಪ್ರದೇಶಕ್ಕೆಲ್ಲ ತಾನೇ ಮಾಲೀಕನೆಂಬಂತೆ ಅವನು ವರ್ತಿಸತೊಡಗಿದ. ತನ್ನ ಸ್ವಂತ ಜಮೀನಿನ ಜೊತೆಗೆ ಅಲ್ಲಿಯ ಪಾಳುನೆಲವನ್ನೆಲ್ಲ ಅವನು ಸಾಗುವಳಿ ಮಾಡತೊಡಗಿದ. ನಾನಾ ಉಪಾಯಗಳಿಂದ ಇತರ ರೈತರ ಜಮೀನುಗಳನ್ನೂ ಕೊಂಡುಕೊಳ್ಳಲಾರಂಭಿಸಿದ. ಲಾರ್ಡ್ ಕಾರ್ನ್‌ವಾಲಿಸ್ ಭಾರತದ ಗವರ್ನರ್–ಜನರಲ್ ಆಗುವ ವೇಳೆಗೆ (1786) ಅಂತ್ಯದಿಶೆಯಲ್ಲಿದ್ದ ಮೊಗಲ್ ಪ್ರಭುತ್ವಕ್ಕೆ ಏಕೈಕ ಧನ ಮೂಲಗಳಾಗಿದ್ದ ಈ ಹಕ್ಕುದಾರರು, ಜಮೀನ್ದಾರರು, ಆರ್ಥಿಕವಾಗಿ ತುಂಬ ಬಲಿಷ್ಠರಾಗಿದ್ದರು. ಭೂಗಂದಾಯ ಆಡಳಿತ ವ್ಯವಸ್ಥೆಯೇ ಇಲ್ಲವಾಗಿದ್ದದ್ದರಿಂದ ಇವರ ಚಟುವಟಿಕೆಗಳಿಗೆ ಯಾವ ನಿರ್ಬಂಧವೂ ಇಲ್ಲದೆ, ಜಮೀನ್ದಾರರಿಂದ ರೈತರ ಸುಲಿಗೆ ಅಬಾಧಿತವಾಗಿ ಸಾಗಿತ್ತು.

ಮೊಗಲ್ ಸಾಮ್ರಾಜ್ಯಕ್ಕೆ, ಅದರಲ್ಲೂ ಬಂಗಾಲ ಪ್ರಾಂತಕ್ಕೆ ಸೀಮಿತವಾಗಿದ್ದ ಈ ಪದ್ಧತಿ ಕ್ರಮೇಣ ದೇಶದ ಇತರ ಭಾಗಗಳಿಗೂ ಹಬ್ಬಿತು. ಆ ಕಡೆಗಳಲ್ಲೂ ಆಡಳಿತ ಶಿಥಿಲವಾದ್ದೇ ಇದಕ್ಕೆ ಕಾರಣ. ಆದರೆ ಇದು ಎಲ್ಲ ಕಡೆಗಳಲ್ಲೂ ಒಂದೇ ರೀತಿಯಾಗಿರಲಿಲ್ಲ. ಉತ್ತರ ಭಾರತದಲ್ಲಿ ಈ ಪದ್ಧತಿ ಮೊದಲು ಜಾರಿಗೆ ಬಂದದ್ದರಿಂದಲೂ ಅಲ್ಲಿ ಕೇಂದ್ರಾಡಳಿತ ಬಲು ಬೇಗ ದುರ್ಬಲವಾದ್ದರಿಂದಲೂ ಭಾರತದ ಆ ಭಾಗದಲ್ಲಿ ಜಮೀನ್ದಾರಿ ಪದ್ಧತಿ ಹೆಚ್ಚಾಗಿ ಬೆಳೆಯಿತು. ಬಂಗಾಲದಲ್ಲಿ ಈ ಹಕ್ಕುಗಳು ದೃಢವಾಗಿ ಬೇರೂರಿದುವು. ದಕ್ಷಿಣ ಭಾರತದಲ್ಲಿ ಈ ಪದ್ಧತಿ ಹೆಚ್ಚು ಸ್ಥಿರವಾಗಲಿಲ್ಲ. ಕೊಂಕಣದಲ್ಲಿ ಮಾತ್ರ ಖೋಟರು ಜಮೀನ್ದಾರಿ ಹಕ್ಕುಗಳನ್ನು ಪಡೆದುಕೊಂಡರು. ಸಂಯುಕ್ತ ಪ್ರಾಂತಗಳಲ್ಲಿ (ಈಗಿನ ಉತ್ತರ ಪ್ರದೇಶ) ಜಮೀನ್ದಾರರು ಕೆಲವು ಭೂಒಡೆತನ ಹಕ್ಕುಗಳನ್ನು ಪಡೆದುಕೊಂಡರು. ಪಂಜಾಬಿನಲ್ಲೂ ಈ ಪದ್ಧತಿ ಇದೇ ರೀತಿ ಬೆಳೆಯಿತು. ಈ ಪರಿಸ್ಥಿತಿಯಲ್ಲಿ ಬ್ರಿಟಿಷರು ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು.

ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ಆಡಳಿತದ ಆರಂಭ ಕಾಲದಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ರಾಬರ್ಟ್ ಕ್ಲೈವ್ ಜಾರಿಗೆ ತಂದ ದ್ವಿಮುಖ ಆಡಳಿತ ಪದ್ಧತಿಯೂ ಇದಕ್ಕೆ ಸಹಾಯ ಮಾಡಿತು. ಬಂಗಾಲದಲ್ಲಿದ್ದ ನವಾಬನ ಕಂದಾಯ ವಸೂಲಿ ಅಧಿಕಾರಿಗಳಾಗಲಿ ಕಂಪನಿಯ ನೌಕರರಾಗಲಿ ಸುರಾಜ್ಯಭಾರದ ಕಡೆಗೆ ಲಕ್ಷ್ಯ ಕೊಡಲಿಲ್ಲ. ತತ್ಫಲವಾಗಿ ಜನರು ಹಿಂಸೆಗೆ ಒಳಗಾದರು. ಎರಡೂ ಕಡೆಗಳಿಂದ ಅವರು ಶೋಷಣೆಗೆ ಒಳಗಾಗಿದ್ದರು. ಆದರೆ ಅವರ ಹಿತವನ್ನು ರಕ್ಷಿಸುವವರು ಮಾತ್ರ ಯಾರೂ ಇರಲಿಲ್ಲ ಜಮೀನ್ದಾರರ ಸುಲಿಗೆಯಿಂದ ರೈತರನ್ನು ರಕ್ಷಿಸಬೇಕೆಂಬ ಉದ್ದೇಶದಿಂದ ಕಂದಾಯ ಮೇಲ್ವಿಚಾರಣೆಗಾಗಿ 1769ರಲ್ಲಿ ನೇಮಕವಾದ ಅಧಿಕಾರಿಗಳು ಚಿಕ್ಕ ವಯಸ್ಸಿನವರೂ ಅನನುಭವಿಗಳೂ ಆಗಿದ್ದುದರಿಂದ ಅವರು ಏನೂ ಮಾಡಲಾಗಲಿಲ್ಲ. ಜಮೀನಿಗೆ ಸಂಬಂಧಿಸಿದ ವಿವರಗಳೆಲ್ಲ ಜಮೀನ್ದಾರರ ವಶದಲ್ಲಿದ್ದುವು. ಅವರು ಅಧಿಕಾರಿಗಳಿಗೆ ಆ ವಿವರಗಳನ್ನು ನೀಡಲಿಲ್ಲ. 1770ರಲ್ಲಿ ಸಂಭವಿಸಿದ ಕ್ಷಾಮದಿಂದ ಜನರ ಕಷ್ಟ ಇನ್ನೂ ಹೆಚ್ಚಿತು. ಕಂಪನಿಯ ನಿರ್ದೇಶಕರಿಗೆ ಆಗ ಗಂಭೀರ ಪರಿಸ್ಥಿತಿಯ ಅರಿವು ಉಂಟಾಯಿತು. ಕಂದಾಯ ಆಡಳಿತದ ನೇರ ನಿರ್ವಹಣೆಯನ್ನು ವಹಿಸಿಕೊಳ್ಳಬೇಕೆಂದು ಅವರು 1772ರಲ್ಲಿ ವಾರೆನ್ ಹೇಸ್ಟಿಂಗ್ಸನಿಗೆ ಆದೇಶ ನೀಡಿದರು. ಅವನು ಕಂದಾಯ ವಸೂಲಿಗಾಗಿ ವ್ಯವಸ್ಥೆಯೊಂದನ್ನು ನಿರ್ಮಿಸಿದನಾದರೂ ಹೆಚ್ಚು ಹಣ ಸಂಪಾದನೆಯ ಉದ್ದೇಶದಿಂದ ಹಳೆಯ ಜಮೀನ್ದಾರರನ್ನು ತಳ್ಳಿಹಾಕಿ, ಕಂದಾಯ ವಸೂಲಿ ಹಕ್ಕುಗಳನ್ನು ಹರಾಜು ಮೂಲಕ ಏರ್ಪಾಟು ಮಾಡಿದ. ಇದರಿಂದ ಜನರಿಗೆ ಬಹಳ ತೊಂದರೆಯಾಯಿತು.

ಈ ಸಮಯದಲ್ಲಿ ಲಾರ್ಡ್ ಕಾರ್ನ್‌ವಾಲಿಸ್ ಬಂದ (1786). ಅವನ ಅತ್ಯಂತ ಮುಖ್ಯ ಕ್ರಮವೆಂದರೆ ಬಂಗಾಲದ ಖಾಯಂ ಭೂಗಂದಾಯ ವ್ಯವಸ್ಥೆ ಅಥವಾ ಶಿಸ್ತು. ಮೂರು ವರ್ಷಗಳ ಕಾಲ ಕೂಲಂಕಷ ವಿಚಾರಣೆ ನಡೆಸಿದ ಮೇಲೆ ಇದನ್ನು ಜಾರಿಗೆ ತರಲಾಯಿತು. ಜಮೀನ್ದಾರರ ಕಂದಾಯ ವಸೂಲಿ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಪ್ರದೇಶಕ್ಕೆ ಆಯಾ ಜಮೀನ್ದಾರರೇ ಸಂಪೂರ್ಣ ಒಡೆಯರೆಂದು ಘೋಷಿಸಿ ಜಮೀನ್ದಾರರ ಸ್ಥಾನವನ್ನು ಕಾನೂನಬದ್ಧಗೊಳಿಸಲಾಯಿತು. ಜಮೀನ್ದಾರರು ಹೆಚ್ಚು ಆಸಕ್ತಿ ವಹಿಸಿ ವಸೂಲಿ ಕ್ರಮ ಕೈಗೊಂಡು ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯವನ್ನು ಪಾವತಿ ಮಾಡುವರೆಂಬುದು ಇದರ ಹಿಂದೆ ಇದ್ದ ಆಶಯ. ಬಾಕಿದಾರರಾದ ಜಮೀನ್ದಾರರ ಜಮೀನನ್ನು ವಿಕ್ರಯ ಮಾಡುವ ಅಧಿಕಾರವನ್ನು ಸರ್ಕಾರ ಉಳಿಸಿಕೊಂಡಿತು. 1793ರಲ್ಲಿ ಈ ವ್ಯವಸ್ಥೆಯನ್ನು ಖಾಯಂ ಮಾಡಲಾಯಿತು.

ಬಂಗಾಲದ 1793ರ ಖಾಯಂ ಕಂದಾಯ ವ್ಯವಸ್ಥೆಯಲ್ಲಿ ಅನೇಕ ದೋಷಗಳಿದ್ದುವು. ಕೂಲಂಕಷ ಸರ್ವೆ, ನೆಲದ ವರ್ಗೀಕರಣ, ಹಕ್ಕುಗಳ ದಾಖಲೆಯ ಸ್ಥಾಪನೆ ಮುಂತಾದ ಕ್ರಮಗಳನ್ನು ಕೈಗೊಳ್ಳದೆ ಮಾಡಲಾದ ಈ ವ್ಯವಸ್ಥೆ ರೈತರ ಜಮೀನುಗಳ ವೈಯಕ್ತಿಕ ಒಡೆತನವೇ ಮುಂತಾದ ಹಿತಗಳ ರಕ್ಷಣೆ ಆದಂತಾಗಲಿಲ್ಲವೆಂದೂ ಅವರು ಅನೇಕ ವೇಳೆ ಅತ್ಯಂತ ಹೆಚ್ಚಿನ ಕಂದಾಯ ಕೊಡಬೇಕಾಗಿ ಬರುವುದೆಂದೂ ಅವರಿಗೆ ಭದ್ರತೆ ಇಲ್ಲದಂತಾಗಿ ಉತ್ಪಾದನೆ ಕ್ಷೀಣಿಸುವುದೆಂದೂ ವಾದಿಸಲಾಯಿತಾದರೂ ಮುಂದಿನ ಸುಮಾರು ಎಪ್ಪತ್ತೈದು ವರ್ಷಗಳ ಕಾಲ ರೈತರಿಗೆ ಯಾವ ರಕ್ಷಣೆಯೂ ದೊರಕಲಿಲ್ಲ. ಬಂಗಾಲದ ಮಾದರಿಯನ್ನು ಇತರ ಪ್ರದೇಶಗಳಿಗೂ ವಿಸ್ತರಿಸಲು ಯತ್ನಿಸಲಾಯಿತು. ಉತ್ತರ ಪ್ರದೇಶ, ಮಧ್ಯ ಪ್ರದೇಶ, ಪಂಜಾಬ್, ಅಸ್ಸಾಂ, ಬಿಹಾರ, ಒರಿಸ್ಸ, ಮಹಾರಾಷ್ಟ್ರ ಮುಂತಾದ ಅನೇಕ ಪ್ರಾಂತಗಳಲ್ಲಿ ಕಂದಾಯ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಯತ್ನಗಳಾದುವು.

ನಿವಾರಣೆಯ ಕ್ರಮಗಳು: ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿ ಜಮೀನ್ದಾರಿ ಮತ್ತು ಇಂಥ ಇತರ ದೋಷಪೂರ್ಣ ಜಮೀನು ಹಿಡುವಳಿ ವ್ಯವಸ್ಥೆಗಳನ್ನು ನಿವಾರಿಸಲು ತೀವ್ರವಾದ ಕ್ರಮಗಳೇನೂ ಜಾರಿಗೆ ಬರಲಿಲ್ಲ. 1947ರ ಅನಂತರ ಭಾರತದ ನಾನಾ ರಾಜ್ಯ ಸರ್ಕಾರಗಳು ಜಮೀನ್ದಾರಿ ಮತ್ತು ಇತರ ಹಕ್ಕುಗಳನ್ನು ತೊಡೆದು ಹಾಕಲು ಅಧಿನಿಯಮಗಳನ್ನು ಜಾರಿಗೆ ತಂದಿವೆ. ತತ್ಫಲವಾಗಿ ಜಮೀನ್ದಾರಿ ಪದ್ಧತಿ ಇಂದು ಭಾರತದಲ್ಲಿ ಸಂಪೂರ್ಣವಾಗಿ ಇಲ್ಲವಾಗಿದೆ.

ಜಮೀನ್ದಾರಿ ಪದ್ಧತಿಯನ್ನು ತೊಡೆದು ಹಾಕಲು ನೀಡಲಾದ ಮುಖ್ಯವಾದ ಕಾರಣಗಳಿವು: 1. ಜಮೀನ್ದಾರ ಪರೋಪಜೀವಿ. ತನ್ನ ಅಧೀನದಲ್ಲಿರುವ ಜಮೀನನ್ನು ಅಭಿವೃದ್ಧಿ ಪಡಿಸಲು ಅವನು ಏನೂ ಕ್ರಮ ಕೈಗೊಳ್ಳಲಿಲ್ಲ. ಉಳುವ ರೈತನಿಗೂ ಸರ್ಕಾರಕ್ಕೂ ನಡುವೆ ಇರುವ ಈತ ಸಣ್ಣ ಜಮೀನುಗಳ ಒಗ್ಗೂಡಿಸುವ (ಕನ್ಸಾಲಿಡೇಷನ್) ಪ್ರಕ್ರಿಯೆಗೆ ಭಾರಿ ಅಡ್ಡಿ. ಜಮೀನಿನ ಅಭಿವೃದ್ಧಿ, ಆಹಾರೋತ್ಪಾದನೆಯಲ್ಲಿ ಹೆಚ್ಚಳ ಸಾಧನೆ, ಭೂ ಸುಧಾರಣೆ–ಇವನ್ನು ಜಮೀನ್ದಾರಿ ಪದ್ಧತಿಯನ್ನು ತೊಡೆದು ಹಾಕದೆ ಸಾಧಿಸಲಾಗುವುದಿಲ್ಲ. 2. ಜಮೀನ್ದಾರಿ ಪದ್ಧತಿಯನ್ನು ತೊಡೆದು ಹಾಕುವುದರಿಂದ ಸರ್ಕಾರಕ್ಕೆ ಭೂಗಂದಾಯದಿಂದ ಬರುವ ವರಮಾನ ಅಧಿಕವಾಗುತ್ತದೆ. ಜಮೀನ್ದಾರರ ಪಾಲೂ ಸರ್ಕಾರಕ್ಕೆ ಸಂದಾಯವಾಗುತ್ತದೆ–ಎಂಬುದು ಇನ್ನೊಂದು ವಾದ. ಈ ವಾದ ಸುಳ್ಳಾಗಲಿಲ್ಲ. ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡುವ ಕ್ರಮ ಕೈಗೊಂಡ ಮೇಲೆ ಭೂಗಂದಾಯದಿಂದ ರಾಜ್ಯ ಸರ್ಕಾರಗಳ ವರಮಾನ ಇಮ್ಮಡಿಸಿತು. ಈ ಅಧಿಕ ವರಮಾನದಿಂದ ರಾಜ್ಯ ಸರ್ಕಾರಗಳಿಗೆ ಭೂ ಅಭಿವೃದ್ಧಿ ಹಾಗೂ ಭೂ ಸುಧಾರಣೆಗೆ ಹೆಚ್ಚು ಹಣ ಒದಗುವಂತಾಯಿತು. 3. ಜಮೀನ್ದಾರಿ ಪದ್ಧತಿಯ ನಿವಾರಣೆ ಕೇವಲ ಆರ್ಥಿಕ ಕ್ರಮವಲ್ಲ. ಅದು ರಾಜಕೀಯ ಕ್ರಮ ಕೂಡ. ಪ್ರಜಾಪ್ರಭುತ್ವ ಭಾರತದಲ್ಲಿ ಬಹುತೇಕ ಮತದಾರರು ಸಣ್ಣಪುಟ್ಟ ರೈತರು. ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಮೂಡುವಂತೆ ಮಾಡಲು ಅವರ ಸ್ಥಿತಿಯನ್ನು ಉತ್ತಮಪಡಿಸುವುದು ಅತ್ಯವಶ್ಯ.

ಜಮೀನ್ದಾರಿ ಪದ್ಧತಿಯನ್ನು ರದ್ದುಪಡಿಸಬಾರದೆಂಬುದಕ್ಕೂ ಅನೇಕ ಕಾರಣಗಳನ್ನೂ ನೀಡಬಹುದಾಗಿತ್ತು: 1. ಜಮೀನ್ದಾರಿ ಪದ್ಧತಿಯ ರದ್ದಿನಿಂದ ಈ ಪದ್ಧತಿಯನ್ನೇ ಆಶ್ರಯಿಸಿದ ಅನೇಕರು ನಿರುದ್ಯೋಗಿಗಳಾಗುವರೆಂಬುದು ಒಂದು ವಾದ. ಆದರೆ ಅದರ ರದ್ದಿನಿಂದ ಒಟ್ಟಿನಲ್ಲಿ ಹಲವರಿಗೆ ಲಭ್ಯವಾಗುವ ಅನುಕೂಲದ ದೃಷ್ಟಿಯಿಂದ ಕೆಲವೇ ಮಂದಿಗೆ ಆಗುವ ಈ ತೊಂದರೆಯನ್ನು ಪರಿಗಣಿಸಬೇಕಾಗಿಲ್ಲವೆಂಬುದು ಇದಕ್ಕೆ ಉತ್ತರ. 2. ಜಮೀನ್ದಾರಿ ಪದ್ಧತಿಯ ರದ್ದಿನಿಂದ ರೈತನಿಗೂ ತೊಂದರೆಯಾಗುವುದೆಂದು ವಾದಿಸಲಾಗಿತ್ತು. ಅವನಿಗೆ ಜಮೀನ್ದಾರನಿಂದ ಧನಸಹಾಯ ಲಭ್ಯವಾಗುತ್ತಿತ್ತು. ಜಮೀನ್ದಾರ ಇಲ್ಲವಾದಾಗ ಇದು ಅವನಿಗೆ ದೊರಕದೆಂದೂ ಸರ್ಕಾರ, ಸಹಕಾರ ಮತ್ತು ಇತರ ಉದ್ದರಿ ವ್ಯವಸ್ಥೆಗಳು ರೈತನಿಗೆ ನೆರವು ನೀಡಲು ಅವುಗಳೇ ರಚಿಸಿಕೊಂಡ ಅನೇಕ ನಿಬಂಧನೆಗಳು ಅಡ್ಡ ಬರುವುದೆಂದೂ ಹೇಳಲಾಗಿತ್ತು. ಆದರೆ ಗ್ರಾಮ ಪ್ರದೇಶದ ಯಾವುದೇ ಸುಧಾರಣೆ ಸಾಧಿಸುವ ಮುನ್ನ ಅತ್ಯಂತ ಕ್ರೂರವಾದ ಜಮೀನ್ದಾರಿ ವ್ಯವಸ್ಥೆಯನ್ನು ರದ್ದುಮಾಡುವುದು ಅನಿವಾರ್ಯವೆಂಬುದರಲ್ಲಿ ಸಂದೇಹವಿರಲಿಲ್ಲ.

ಉತ್ತರ ಪ್ರದೇಶ, ಮಧ್ಯಪ್ರದೇಶ ಮುಂತಾದ ಹಂಗಾಮಿ ಕಂದಾಯ ವ್ಯವಸ್ಥೆಯಿದ್ದ ರಾಜ್ಯಗಳಲ್ಲಿ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡುವುದು ಹೆಚ್ಚು ಕಷ್ಟವಾಗಲಿಲ್ಲ. ಏಕೆಂದರೆ ಅಲ್ಲಿ ಸಾಕಷ್ಟು ದಾಖಲೆಗಳೂ ಕಂದಾಯ ಆಡಳಿತ ಯಂತ್ರವೂ ಲಭ್ಯವಿದ್ದುವು. ಬಿಹಾರ, ಒರಿಸ್ಸ, ಪಶ್ಚಿಮ ಬಂಗಾಲ ರಾಜ್ಯಗಳ ವಿಚಾರ ಹಾಗಲ್ಲ. ಖಾಯಂ ಕಂದಾಯ ವ್ಯವಸ್ಥೆ ಇದ್ದ ಆ ರಾಜ್ಯಗಳಲ್ಲೂ ಜಾಗೀರ್‌ದಾರಿ ವ್ಯವಸ್ಥೆ ಇದ್ದ ರಾಜಸ್ಥಾನ, ಸೌರಾಷ್ಟ್ರ ರಾಜ್ಯಗಳಲ್ಲೂ

ಜಮೀನುಗಳನ್ನು ಕುರಿತ ದಾಖಲೆಗಳನ್ನೂ ಕಂದಾಯ ವ್ಯವಸ್ಥೆಯನ್ನೂ ಹೊಸದಾಗಿ ರಚಿಸಬೇಕಾಗಿ ಬಂತು. ಅಂತೂ ಎಲ್ಲ ರಾಜ್ಯಗಳಲ್ಲೂ ಸರ್ಕಾರಕ್ಕೂ ರೈತನಿಗೂ ನಡುವಣ ಹಿಡುವಳಿಗಳನ್ನು ರದ್ದುಮಾಡುವ ಕಾನೂನುಗಳು ಜಾರಿಗೆ ಬಂದುವು.

ಜಮೀನ್ದಾರಿ ಪದ್ಧತಿಯ ರದ್ದಿಗಾಗಿ ಸ್ಥೂಲವಾಗಿ ಈ ರೀತಿ ಕ್ರಮ ಕೈಗೊಳ್ಳಲಾಯಿತು: 1. ಪಾಳು ನೆಲ. ಅರಣ್ಯ ಆಬಾದಿ ನೆಲ ಮುಂತಾದ-ಜಮೀನ್ದಾರರೇ ಮುಂತಾದ ಮಧ್ಯವರ್ತಿಗಳಿಗೆ ಸೇರಿದ್ದ-ಒಟ್ಟಿನ ನೆಲದ ವ್ಯವಸ್ಥೆ ಮತ್ತು ಅಭಿವೃದ್ಧಿಗಾಗಿ ಅವನ್ನು ಸರ್ಕಾರವೇ ವಹಿಸಿಕೊಂಡಿತು. 2. ಹಿತ್ತಲು, ಮಧ್ಯವರ್ತಿಗಳು ಖುದ್ದಾಗಿ ಸಾಗುವಳಿ ಮಾಡುತ್ತಿದ್ದ ಜಮೀನು ಮುಂತಾದವನ್ನು ಅವರ ವಶದಲ್ಲೇ ಇರಗೊಡಲಾಯಿತು. 3. ಬಹುತೇಕ ಎಲ್ಲ ರಾಜ್ಯಗಳಲ್ಲೂ ಮುಖ್ಯ ಗೇಣಿದಾರರಿಗೂ ಸರ್ಕಾರಕ್ಕೂ ನೇರಸಂಬಂಧ ಏರ್ಪಡಿಸಲಾಯಿತು. ಕೆಲವು ರಾಜ್ಯಗಳಲ್ಲಿ ಮುಖ್ಯ ಗೇಣಿದಾರರಿಗೆ ನೆಲದಲ್ಲಿ ಖಾಯಂ ಹಾಗೂ ವರ್ಗ ಮಾಡುವ ಹಕ್ಕುಗಳಿದ್ದುದರಿಂದ ಅಲ್ಲಿ ಹೊಸದಾಗಿ ಸಂಬಂಧ ಏರ್ಪಡಿಸಬೇಕಾಗಿದ್ದಿರಲಿಲ್ಲ.

ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡಿದ್ದಕ್ಕೆ ಪ್ರತಿಯಾಗಿ ಜಮೀನ್ದಾರರಿಗೆ ನೀಡಬೇಕೆಂದು ಗೊತ್ತುಮಾಡಿದ ಪರಿಹಾರ ಸೂತ್ರ ಎಲ್ಲ ರಾಜ್ಯಗಳಲ್ಲೂ ಒಂದೇ ರೀತಿಯಾಗಿರಲಿಲ್ಲ. ಅಸ್ಸಾಂ, ಬಿಹಾರ, ಒರಿಸ್ಸ, ಮಧ್ಯಪ್ರದೇಶ-ಈ ರಾಜ್ಯಗಳಲ್ಲಿ ಜಮೀನ್ದಾರನ ನಿವ್ವಳ ವರಮಾನವೇ ಪರಿಹಾರಧನ ನಿಷ್ಕರ್ಷೆಗೆ ಆಧಾರ. ಉತ್ತರ ಪ್ರದೇಶದಲ್ಲಿ ನಿವ್ವಳ ಆಸ್ತಿಯ ಆಧಾರದ ಮೇಲೆ ಇದನ್ನು ನಿಷ್ಕರ್ಷಿಸಲಾಯಿತು. ತಮಿಳುನಾಡಿನಲ್ಲಿ ಮೂಲವಾರ್ಷಿಕ ಮೊಬಲಗನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿತ್ತು. ನಿವ್ವಳ ವರಮಾನ, ಮೂಲವಾರ್ಷಿಕ ಮೊಬಲಗು ಅಥವಾ ನಿವ್ವಳ ಆಸ್ತಿಯ ಒಂದು ನಿರ್ದಿಷ್ಟ ಗಣಕವನ್ನು ಪರಿಹಾರಧನವಾಗಿ ನಿಷ್ಕರ್ಷಿಸಲಾಯಿತು. ಜಮೀನ್ದಾರರ ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳುವುದಕ್ಕೂ ಪರಿಹಾರಧನ ನಿಷ್ಕರ್ಷೆ ಹಾಗೂ ಪಾವತಿಗೂ ಇದ್ದ ನಾನಾ ಸಂವಿಧಾನಿಕ ತೊಡಕುಗಳನ್ನು ನಿವಾರಿಸಲು 1951, 1955 ಮತ್ತು 1964-65ರಲ್ಲಿ ಸಂವಿಧಾನಕ್ಕೆ ತಿದ್ದುಪಡಿಗಳನ್ನು ಮಾಡಲಾಯಿತು. ಪರಿಹಾರಧನದ ಒಟ್ಟು ಮೊಬಲಗು ಸು. ರೂ.641 ಕೋಟಿ ಎಂದು ಅಂದಾಜು ಮಾಡಲಾಗಿದೆ. ಜಮೀನ್ದಾರಿ ರದ್ದಿನಿಂದಾಗಿ ಭೂಸುಧಾರಣೆಯ ಮುಂದಿನ ಹಂತಗಳು ಸುಸೂತ್ರವಾಗಲು ಸಹಾಯವಾಯಿತು. *

**ಜರ್ಮೊ:** ಇರಾಕ್ ದೇಶದ ಕುರ್ದಿಸ್ತಾನ್ ಪ್ರದೇಶದಲ್ಲಿ ಜಾಗ್ರೋಸ್ ಪರ್ವತದ ತಪ್ಪಲಲ್ಲಿ ಕಿರ್ಕುಕ್ ನಗರದ ಪೂರ್ವಕ್ಕಿರುವ ಪ್ರಶ.ಪೂ.7000 ವರ್ಷಗಳ ಹಿಂದಿನ ಕೃಷಿ ಸಮುದಾಯದ ನೆಲೆ. ದಕ್ಷಿಣ ಲೆವಂಟ್‌ನಲ್ಲಿರುವ ಜರಿಕೊ ಮತ್ತು ಅನಟೋಲಿಯದ ಕಟಲ್ ಹುಯುಕ್ ನೆಲೆಯ ಸಮಕಾಲೀನವಾದುದು. ಈ ನೆಲೆ ಸಮುದ್ರ ಮಟ್ಟಕ್ಕಿಂತ 800ಮೀ ಎತ್ತರದಲ್ಲಿ ಓಕ್ ಮತ್ತು ಐಸ್ತೇಶಿಬ (ಪಿಸ್ತಾಬೀಜ) ಮರಗಳ ಕಾಡಿನಲ್ಲಿದ್ದು ಸು.1.5 ಹೆ ವಿಸ್ತೀರ್ಣವಾಗಿದೆ. ಇದು ಮಾನವನ ಆರಂಭದ ಸಂಸ್ಕೃತಿಗಳಲ್ಲಿ ಒಂದು. (ಎನ್.ಎಲ್.)

**ಜಯಚಾಮರಾಜ ಒಡೆಯರ್:** 1919-74. ಮೈಸೂರು ಸಂಸ್ಥಾನದ ಕೊನೆಯ ದೊರೆ (1940-50). ತತ್ತ್ವಜ್ಞಾನಿ, ಸಂಗೀತಜ್ಞ, ರಾಜನೀತಿಜ್ಞ, ಮಿಗಿಲಾಗಿ ರಾಜಪ್ರಭುತ್ವ ಹಾಗೂ ಪ್ರಜಾಪ್ರಭುತ್ವಗಳ ನಡುವಣ ಸುವರ್ಣಸೇತುವೆ. ಇವರು 1919 ಜುಲೈ 18ರಂದು ಜನಿಸಿದರು. ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರ ಏಕಮಾತ್ರ ಪುತ್ರ. ತಾಯಿ ಕೆಂಪುಚೆಲುವಾಜಮ್ಮಣ್ಣಿ. ಮೊದಲಿನ ವಿದ್ಯಾಭ್ಯಾಸ ರಾಜಮನೆತನದ ಪ್ರತ್ಯೇಕ ಶಾಲೆಯಲ್ಲಿ ನಡೆಯಿತು. ಚಿಕ್ಕಂದಿನಲ್ಲಿ ಇವರು ಸ್ಕೌಟ್ ದಳದ ಬಾಲಕರ ವಿಭಾಗದ ನಾಯಕರಾಗಿದ್ದರು. 1936ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾಗಿ 1938ರಲ್ಲಿ ಬಿ.ಎ. ಪದವೀಧರರಾದರು. ಇಲ್ಲಿ ರಾಜನೀತಿ, ಇತಿಹಾಸ ಹಾಗೂ ಅರ್ಥಶಾಸ್ತ್ರಗಳ ಅಧ್ಯಯನವನ್ನು ನಡೆಸಿ ಉತ್ತಮ ಪಾಂಡಿತ್ಯಕ್ಕೆ ಮೀಸಲಾದ ಐದು ಬಹುಮಾನಗಳು ಮತ್ತು ಸುವರ್ಣಪದಕಗಳನ್ನು ಗಳಿಸಿದರು. ಮೈಸೂರಿನ ಮಹಾರಾಜ ಕಾಲೇಜಿನ ಹಿಸ್ಟಾರಿಕಲ್ ಅಸೋಸಿಯೇಷನ್ನಿನ ಗೌರವ ಅಧ್ಯಕ್ಷರೂ ಆಗಿದ್ದರು. ಆ ಕಾಲದಲ್ಲಿ ರಾಜಕೀಯ ಸಮಸ್ಯೆಗಳಲ್ಲಿ ಮತ್ತು ಸಾರ್ವಜನಿಕ ಆಡಳಿತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. 1937ರಲ್ಲಿ ಆಗ್ನೇಯ ಏಷ್ಯ ದೇಶಗಳಲ್ಲಿ ಸಂಚಾರ ಕೈಗೊಂಡರು. ಪದವೀಧರರಾದ ಅನಂತರ ಇಂಡಿಯನ್ ಸಿವಿಲ್ ಸರ್ವಿಸ್ ಹುದ್ದೆಯಲ್ಲಿದ್ದ ಎಲ್ವಿನ್ ಅವರನ್ನು ಇವರಿಗೆ ಆವಶ್ಯಕವಾದ ಆಡಳಿತ ತರಬೇತಿಯನ್ನು ಕೊಡಲು ನೇಮಿಸಲಾಯಿತು. ಇವರು ಸಂಸ್ಥಾನದ ಆಡಳಿತದ ಎಲ್ಲ ಶಾಖೆಗಳ ಅಧ್ಯಯನವನ್ನು ನಡೆಸಿ, ರೈತಾಪಿ ವರ್ಗದವರ ಸ್ಥಿತಿ ಗತಿಗಳನ್ನು ಖುದ್ದಾಗಿ ತಿಳಿಯಲು ಮೈಸೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಸಂಚರಿಸಿದರು. 1939ರಲ್ಲಿ ಪ್ರಥಮವಾಗಿ ಯುರೋಪಿನಲ್ಲಿ ಸಂಚಾರ ಮಾಡಿದರು. ಲಂಡನ್ನಿನ ಅನೇಕ ಸಂಘ ಸಂಸ್ಥೆಗಳಿಗೆ ಭೇಟಿಕೊಟ್ಟು ಅನೇಕ ವಿದ್ವಾಂಸರ, ಕಲಾವಿದರ ಪರಿಚಯ ಮಾಡಿಕೊಂಡು, ಅವರ ನಿಕಟಸಂಬಂಧ ಹೊಂದಿದ್ದರು.

ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಉತ್ತರಾಧಿಕಾರಿಗಳಾಗಿ 1940 ಸೆಪ್ಟೆಂಬರ್ 8ರಂದು ಮೈಸೂರು ಸಂಸ್ಥಾನದ ಸಿಂಹಾಸನವನ್ನೇರಿದರು. 1947ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿದಾಗ ಮೈಸೂರು ಸಂಸ್ಥಾನ ಭಾರತ ಒಕ್ಕೂಟದಲ್ಲಿ ಸೇರುವುದಕ್ಕೆ ಒಪ್ಪಿ, ಸಂಸ್ಥಾನದಲ್ಲಿ ಪ್ರಜಾಸರ್ಕಾರ ಸ್ಥಾಪನೆಗೆ ಅನುವು ಮಾಡಿದರೂ 1950 ಜನವರಿ 26ರಂದು ಭಾರತ ಗಣರಾಜ್ಯವಾಗಿ ಘೋಷಿತವಾಗುವವರೆಗೂ ಮಹಾರಾಜರಾಗಿ ಮುಂದುವರಿದರು. ಅನಂತರ ರಾಜಪ್ರಮುಖರಾದರು (1950-56). ರಾಜ್ಯಗಳ ಪುನರ್ವಿಂಗಡಣೆಯಾದಾಗ ವಿಶಾಲ ಮೈಸೂರಿನ (ಇಂದಿನ ಕರ್ನಾಟಕ) ಪ್ರಥಮ ರಾಜ್ಯಪಾಲರಾದರು (1956-64). ಮುಂದೆ ಮದರಾಸು ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡರು (1964-67). ಅನಂತರ ಮೈಸೂರಿನಲ್ಲೇ ನೆಲಸಿದರು. ಸತ್ಯಪ್ರೇಮಕುಮಾರಿ ಮತ್ತು ತ್ರಿಪುರಸುಂದರಮ್ಮಣ್ಣಿ ಎಂಬ ಇಬ್ಬರು ಮಡದಿಯರು. ಐವರು ಹೆಣ್ಣು ಮಕ್ಕಳು ಹಾಗೂ ಒಬ್ಬ ಪುತ್ರ - ಶ್ರೀಕಂಠದತ್ತ ನರಸಿಂಹರಾಜ ಒಡೆಯರ್.

ಇವರು ಸಂಸ್ಥಾನದ ಮಹಾರಾಜರಾಗಿದ್ದ ಕಾಲ ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲವಾಗಿದ್ದು ಪ್ರಪಂಚದ ಇತರೆಡೆಗಳಂತೆ ಮೈಸೂರು ಸಹ ಆರ್ಥಿಕ ಸಂಕಷ್ಟಗಳನ್ನು ಎದುರಿಸಬೇಕಾಗಿತ್ತು. ಆರ್ಥಿಕ ರಂಗದಲ್ಲಿ ಹೆಚ್ಚಿನ ಸಾಧನೆಗಳಿಗೆ ಅವಕಾಶ ಇರಲಿಲ್ಲ. ಮಹಾರಾಜರೂ ಆಡಳಿತ ವ್ಯವಸ್ಥೆಯಲ್ಲಿ ಮುಖ್ಯ ಅಧಿಕಾರಿಗಳಾಗಿದ್ದ ದಿವಾನರೂ (ಮಿರ್ಜಾ ಇಸ್ಮಾಯಿಲ್ 1941 ಮೇ ವರೆಗೆ; ನ್ಯಾಪತಿ ಮಾಧವರಾವ್ 1941-46; ಆರ್ಕಾಟ್ ರಾಮಸ್ವಾಮಿ

ಮೊದಲಿಯಾರ್ (1946-49) ಸಂಸ್ಥಾನದ ಹಣಕಾಸು ಸ್ಥಿತಿಯನ್ನು ಸರಿದೂಗಿಸುವುದಕ್ಕೆ ಶ್ರಮಿಸಿದರು. ರಾಜಕೀಯ ಜಾಗೃತಿ ಬೆಳೆದಿದ್ದ ಕಾಲದಲ್ಲಿ ಅದಕ್ಕೆ ಅನುವಾಗುವ ಹಲವು ಸುಧಾರಣೆಗಳು ನಡೆದವು. ಪ್ರಜಾಪ್ರತಿನಿಧಿ ಸಭೆಗೆ ಹೊಸ ಸ್ವರೂಪವನ್ನು ಕೊಡಲಾಯಿತು. ಅದಕ್ಕಾಗಿ ಚುನಾವಣೆಗಳು 1941 ಮತ್ತು 1945ರಲ್ಲಿ ನಡೆದುವು. 1945ರಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಸದಸ್ಯರು ಬಹುಮತದಿಂದ ಆರಿಸಿಬಂದು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಒತ್ತಾಯ ಮಾಡಿದರು. ಆದರೆ ಅಂದಿನ ದಿವಾನರ ಧೋರಣೆಗಳಿಂದ ಸ್ವಲ್ಪಮಟ್ಟಿನ ವಿರಸವುಂಟಾದರೂ ದೇಶ ಸ್ವತಂತ್ರವಾದಾಗ ಭಾರತ ಒಕ್ಕೂಟದಲ್ಲಿ ತಮ್ಮ ಸಂಸ್ಥಾನವನ್ನು ಸೇರಿಸುವಲ್ಲಿ ಇವರು ಮೊದಲಿಗರಾದರು. ವಿಶಾಲ ಕರ್ನಾಟಕದ ಕನಸನ್ನು ಬಹುಹಿಂದೆಯೇ ಕಂಡಿದ್ದ ಇವರು ಅದು ನನಸಾಗುವಲ್ಲಿ ರಾಜತ್ವವನ್ನು ತ್ಯಜಿಸಲೂ ಸಿದ್ಧವೆಂದು ಹೇಳಿದ್ದರು. ಮೈಸೂರಿನ ರಾಜ್ಯಪಾಲರಾಗಿದ್ದ ಸಂದರ್ಭದಲ್ಲಿ ಸಂಬಳವನ್ನೂ ಸ್ವೀಕರಿಸುತ್ತಿರಲಿಲ್ಲ. ಅಲ್ಲದೆ ಜನಹಿತ ಕಾರ್ಯಕ್ಕಾಗಿ ಕೊಡುಗೈದಾನಿಯಾಗಿದ್ದರು. ಮೈಸೂರು ನಗರದಲ್ಲಿರುವ ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆಗಾಗಿ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿಕೊಟ್ಟರು. ಕೇಂದ್ರೀಯ ಆಹಾರ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ ಮುಂತಾದವುಗಳಿಗಾಗಿ ನಿವೇಶನ ಮತ್ತು ಕಟ್ಟಡಗಳನ್ನು ದೊರಕಿಸಿಕೊಡುವುದರಲ್ಲಿ ನೆರವಾದರು. ತಮ್ಮ ಹಲವಾರು ಕಟ್ಟಡ, ನಿವೇಶನಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ದಾನಮಾಡಿದರು.

ಇವರು ಕ್ರೀಡಾಪಟುವಾಗಿದ್ದರು. ಉತ್ತಮ ಕುದುರೆ ಸವಾರರೂ ಟೆನಿಸ್ ಆಟವಾಡುವುದರಲ್ಲಿ ನಿಪುಣರೂ ನುರಿತ ಶಿಕಾರಿದಾರರೂ ಆಗಿದ್ದರು. ವನ್ಯಮೃಗಗಳ ಬಗ್ಗೆ ಹೆಚ್ಚಿನ ಆಸಕ್ತಿ ಇತ್ತು. ಭಾರತೀಯ ವನ್ಯಮೃಗ ಮಂಡಳಿಯ ಅಧ್ಯಕ್ಷರಾಗಿದ್ದರಲ್ಲದೆ, ಮೈಸೂರು ನಗರದಲ್ಲಿನ ಸ್ವಂತ ಮೃಗಾಲಯವನ್ನು ಸರ್ಕಾರಕ್ಕೆ ವಹಿಸಿಕೊಟ್ಟು ಅದರ ಅಭಿವೃದ್ಧಿಗೆ ಕಾರಣರಾದರು.

ಒಡೆಯರಿಗೆ ಸಂಗೀತವೆಂದರೆ ಪಂಚಪ್ರಾಣ. ಅನೇಕ ವಿದ್ವಾಂಸರನ್ನು ಆಸ್ಥಾನ ವಿದ್ವಾಂಸರನ್ನಾಗಿ ಗೌರವಿಸಿದುದೂ ಉಂಟು. ಸಂಸ್ಕೃತದಲ್ಲಿ ಇವರು ರಚಿಸಿರುವ ಸಂಗೀತ ಕೃತಿಗಳು 94 ಎನ್ನಲಾಗಿದೆ. ವಿದ್ಯಾರಾಜ ಯೋಗೀಂದ್ರ ಮುಂತಾದ ಸಂಕೇತಗಳು ಇವರ ಕೀರ್ತನೆಗಳ ಅಂಕಿತಗಳು. ಈಗ ಬಳಕೆಯಲ್ಲಿರುವ ರಾಗಗಳಲ್ಲದೆ ಬೃಹಸ್ಪತಿಪ್ರಿಯ ಮುಂತಾದ ಕೆಲವು ನೂತನ ರಾಗಗಳನ್ನೂ ಇವರು ಸೃಜಿಸಿದ್ದಾರೆನ್ನಲಾಗಿದೆ. ಇವರ ಕೃತಿಗಳು ನಾದಮಾಧುರ್ಯಕ್ಕೆ ಅರ್ಥಾಭಿವ್ಯಕ್ತಿಗೆ ಹೆಸರಾಗಿವೆ. ಪಾಶ್ಚಾತ್ಯ ಸಂಗೀತದಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ಆ ಸಂಗೀತವನ್ನು ಕುರಿತಂತೆ ಭಾರತದಲ್ಲೇ ಅತಿ ದೊಡ್ಡದೆನಿಸುವ ಗ್ರಂಥ ಭಂಡಾರವನ್ನು ತಮ್ಮ ಅರಮನೆಯಲ್ಲಿ ಸಂಗ್ರಹಿಸಿದ್ದರು. ಪ್ರಪಂಚದ ಹೆಸರಾಂತ ಸಂಗೀತಗಾರರೊಂದಿಗೆ ಇವರಿಗೆ ಸಂಪರ್ಕವಿತ್ತು. ಖ್ಯಾತ ಅಪೇರಾಗಳ ಕರ್ತೃವಾದ ಜರ್ಮನಿಯ ರಿಚರ್ಡ್ ವ್ಯಾಗ್ನರ್ (1813-83), ಪ್ರಸಿದ್ಧ ಜರ್ಮನ್ ಸಂಗೀತಗಾರ ಲಡ್ವಿಗ್ ಫಾನ್ ಬೇತೋವನ್ (1770-1827), ಬಾಕ್ ಮನೆತನದ ಸಂಗೀತ ವಿದ್ವಾಂಸರು ಮೊದಲಾದವರು ಇವರ ಮೆಚ್ಚಿನ ಸಂಗೀತಗಾರರಾಗಿದ್ದರು.

ಇವರು ಪಂಡಿತರು, ವಿದ್ವತ್ಪ್ರೇಮಿಗಳು, ರಾಜ್ಯಶಾಸ್ತ್ರ, ಚರಿತ್ರೆ, ಅರ್ಥಶಾಸ್ತ್ರ, ಆಫ್ರಿಕನ್ ವಿಷಯಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದರು. ತತ್ತ್ವಶಾಸ್ತ್ರದಲ್ಲಿ ವಿಶೇಷ ಆಸಕ್ತಿ. ಅರಮನೆಯ ನುರಿತ ಪಂಡಿತರಲ್ಲಿ ಸಂಸ್ಕೃತಭಾಷೆಯನ್ನೂ ತತ್ತ್ವಗ್ರಂಥಗಳನ್ನೂ ಆಳವಾಗಿ ಅಭ್ಯಾಸ ಮಾಡಿದರು. ಹಠಯೋಗವನ್ನೂ ಸ್ವಲ್ಪ ಅಭ್ಯಾಸ ಮಾಡಿದ್ದುಂಟು. ಜಯಚಾಮರಾಜೇಂದ್ರ

ಗ್ರಂಥರತ್ನಮಾಲಾ, ಜಯಚಾಮರಾಜೇಂದ್ರವೇದರತ್ನಮಾಲಾ ಎಂಬ ಪ್ರಕಟನಾಮಾಲೆಗಳಲ್ಲಿ ತತ್ತ್ವಶಾಸ್ತ್ರ ಮೊದಲಾದ ವಿಷಯಗಳು, ವೇದ, ಉಪನಿಷತ್ತು, ಪುರಾಣಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಿದರು. ಈ ಸರಣಿಗಳಲ್ಲಿ ಅಚ್ಚಾದ ಕೃತಿಗಳ ಪುಟಗಳು ಒಂದು ಲಕ್ಷವನ್ನೂ ಮೀರುತ್ತವೆ. ಕನ್ನಡ ಸಾರಸ್ವತ ಪ್ರಪಂಚಕ್ಕೆ ಇವು ಅಮೂಲ್ಯ ಕೊಡುಗೆಗಳು.

ಜಯಚಾಮರಾಜರು ಸ್ವತಃ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದುದು: ದತ್ತಾತ್ರೇಯ–ದಿ ವೇ ಅಂಡ್ ದಿ ಗೋಲ್ (1956), ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್, ಭಾರತೀಯ ಸೌಂದರ್ಯಶಾಸ್ತ್ರದ ಹಲವು ಮುಖಗಳು, ದಿ ರಿಲಿಜನ್ ಅಂಡ್ ದಿ ಮ್ಯಾನ್, ಆತ್ಮ ಮತ್ತು ಬ್ರಹ್ಮ ಇವರ ಆಳವಾದ ತತ್ತ್ವಶಾಸ್ತ್ರಾಧ್ಯಯನದ ಫಲವೇ ಆಂಗ್ಲ ಭಾಷೆಯಲ್ಲಿ ರಚಿತವಾಗಿರುವ ದತ್ತಾತ್ರೇಯ–ದಿ ವೇ ಅಂಡ್ ದಿ ಗೋಲ್. ಇದಕ್ಕೆ ಭಾರತದ ರಾಷ್ಟ್ರಪತಿಗಳಾಗಿದ್ದ ಎಸ್.ರಾಧಾಕೃಷ್ಣನ್ ಅವರು ಮುನ್ನುಡಿ ಬರೆದಿದ್ದಾರೆ. ಭಾರತೀಯ ಸಂಸ್ಕೃತಿ ಮತ್ತು ತತ್ತ್ವಶಾಸ್ತ್ರದ ಅನಧಿಕೃತ ರಾಯಭಾರಿಯಾಗಿ ಇವರು ಅನೇಕ ಬಾರಿ ದೇಶವಿದೇಶಗಳ ಪ್ರವಾಸ ಕೈಗೊಂಡಿದ್ದರು. ಆಗ ಇವರು ಅಲ್ಲಲ್ಲಿ ಮಾಡಿದ ಭಾಷಣಗಳು ವಿಚಾರಪೂರ್ಣವಾಗಿವೆ.

ಬನಾರಸ್ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪದವಿಯನ್ನೂ (1942) ಅಣ್ಣಾಮಲೈ ವಿಶ್ವವಿದ್ಯಾಲಯ ಡಿ.ಲಿಟ್ ಪದವಿಯನ್ನೂ (1965) ನೀಡಿ ಗೌರವಿಸಿದೆ. ಇದಕ್ಕೂ ಮುನ್ನ (1937) ಲಂಡನ್ನಿನ ಗಿಲ್ಡ್ ಹಾಲ್ ಸಂಗೀತಶಾಲೆಯ ಲೈಸೆನ್ಸಿಯೇಟ್ ಪದವೀಧರರಾಗಿದ್ದರು. ಅನಂತರ ಇವರು 1945ರಲ್ಲಿ ಲಂಡನ್ನಿನ ಟ್ರಿನಿಟಿ ಸಂಗೀತ ಕಾಲೇಜಿನ ಗೌರವ ಫೆಲೋ ಆದರು. ಇವರ ಪಾಂಡಿತ್ಯ ಮತ್ತು ಪ್ರತಿಭೆಗಳನ್ನು ಮನಗಂಡು ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡ್ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್ ಪದವಿ ನೀಡಿ (1936) ಸನ್ಮಾನಿಸಿತು. ಬ್ರಿಟಿಷ್ ಸರ್ಕಾರ ಇವರಿಗೆ 1945ರಲ್ಲಿ ಜಿ.ಸಿ.ಎಸ್.ಐ. ಬಿರುದನ್ನೂ 1946ರಲ್ಲಿ ಜಿ.ಸಿ.ಬಿ. ಬಿರುದನ್ನೂ ನೀಡಿತು.

ತಮ್ಮ ಕೊನೆಯ ದಿನಗಳನ್ನು ಪುರಾಣ ಮತ್ತು ಧಾರ್ಮಿಕ ಗ್ರಂಥಗಳ ಶ್ರವಣದಲ್ಲೇ ಕಳೆಯುತ್ತಿದ್ದ ಇವರು ಶ್ವಾಸಕೋಶದ ಉರಿಯೂತಕ್ಕೆ ಬಲಿಯಾಗಿ 1974 ಸೆಪ್ಟೆಂಬರ್ 23ರಂದು ಬೆಂಗಳೂರು ಅರಮನೆಯಲ್ಲಿ ನಿಧನರಾದರು. (ಎ.ವಿ.ವಿ.;ಎಂ.ಜಿ.ಎನ್.)

**ಜಯಪ್ರಕಾಶ್ ನಾರಾಯಣ್:** 1902–1979. ಭಾರತದ ಜನನಾಯಕ, ದೇಶಪ್ರೇಮಿ, ಅನ್ಯಾಯದ ವಿರುದ್ಧ ಸತತವಾಗಿ ಹೋರಾಟ ನಡೆಸಿದವರು. ಗಾಂಧಿಯವರ ಹಾದಿಯಲ್ಲಿ ಮುನ್ನಡೆದ ಮಹಾ ನಿಷ್ಠಾವಂತ. 1902 ಅಕ್ಟೋಬರ್ 11 ರಂದು ಬಿಹಾರ್ ಪ್ರಾಂತದ (ಈಗಿನ ಬಿಹಾರ್ ರಾಜ್ಯ) ಸರನ್ ಜಿಲ್ಲೆಯ ಸಿತಾಬ್ ದಿಯಾರಾದಲ್ಲಿ ಜನಿಸಿದರು. ಇವರ ತಂದೆ ರೆವೆನ್ಯೂ ಇಲಾಖೆಯಲ್ಲಿ ಚಿಕ್ಕ ಅಧಿಕಾರಿಯಾಗಿದ್ದ ಹರಸೂ ದಯಾಳ್. ಇವರ ತಾಯಿ ಧಾರ್ಮಿಕ ಪ್ರವೃತ್ತಿಯ ಸರಳ ಸ್ವಭಾವದ ಗೃಹಿಣಿ ಪೂಲ್‌ರಾಣಿ. ಇವರ ತಾತ ದೇವಕಿನಂದನಲಾಲ್ ಪೋಲಿಸ್ ಅಧಿಕಾರಿ. ತಮ್ಮ ಬ್ರಿಟಿಷ್ ಮೇಲಧಿಕಾರಿಯನ್ನೇ ಹೊಡೆದ ಪ್ರಸಿದ್ಧಿ ಅವರದು. ಇವರದು ಬಿಹಾರದ ಮಧ್ಯಮ ವರ್ಗದ ಕಾಯಸ್ಥ ಕುಟುಂಬ.

ಜಯಪ್ರಕಾಶರ ಬಾಲ್ಯವೆಲ್ಲ ಹಳ್ಳಿಯಲ್ಲಿ ಕಳೆಯಿತು. ಅವರು ಅಲ್ಲೇ ಆರಂಭದ ವಿದ್ಯಾಭ್ಯಾಸ ಪಡೆದರು. ಅನಂತರ ಪಟ್ನಾದ ಕೊಲಿಜಿಯೇಟ್ ಶಾಲೆ ಸೇರಿದರು. ಮೆಟ್ರಿಕ್ ಪರೀಕ್ಷೆ ಮುಗಿಸಿದ ನಂತರ ಪಟ್ನಾ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ವಿಭಾಗದಲ್ಲಿ ಇಂಟರ್ ತರಗತಿ ಸೇರಿದರು. ಆಗ ಇವರು ಅಸಹಕಾರ ಚಳವಳಿಯಿಂದ ಪ್ರಭಾವಿತರಾಗಿ ಕಾಲೇಜನ್ನು ತೊರೆದು ಬಂದು ಬಿಹಾರ್ ವಿದ್ಯಾಪೀಠವನ್ನು ಸೇರಿ ವಿದ್ಯಾಭ್ಯಾಸ ಮುಂದುವರಿಸಿ ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅಮೆರಿಕಕ್ಕೆ ತೆರಳಿ ಎಂಟು ವರ್ಷಗಳವರೆಗೆ ಅಲ್ಲಿ ಇದ್ದು ಕ್ಯಾಲಿಫೋರ್ನಿಯಾ, ಐಯೋವಾ, ವಿಸ್ಕಾನ್ಸಿನ್ ಹಾಗೂ ಒಹೈಯೋ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ, ಸಮಾಜವಿಜ್ಞಾನಗಳ ಅಧ್ಯಯನ ಮಾಡಿ ಒಹೈಯೋ ವಿಶ್ವವಿದ್ಯಾಲಯದಿಂದ ಎಂ. ಎ ಪದವಿ ಪಡೆದರು. ಪ್ರತಿಭಾಶಾಲಿ ವಿದ್ಯಾರ್ಥಿಯಾಗಿದ್ದ ಜಯಪ್ರಕಾಶರು ಅಮೆರಿಕದಲ್ಲಿ ಕಾರ್ಖಾನೆಗಳಲ್ಲಿ, ಹೋಟೆಲುಗಳಲ್ಲಿ, ಹೊಲಗಳಲ್ಲಿ ದುಡಿದು ಹಣ ಗಳಿಸಿ ತಮ್ಮ ಜೀವನ ಮತ್ತು ಶಿಕ್ಷಣ ವೆಚ್ಚವನ್ನು ನಿರ್ವಹಿಸಿಕೊಂಡರು.

ಅಮೆರಿಕವನ್ನು ಬಿಡುವ ಹೊತ್ತಿಗೆ ಜಯಪ್ರಕಾಶರು ಮಾರ್ಕ್ಸ್‌ವಾದಿಯಾಗಿದ್ದರು. ಎಂ.ಎನ್. ರಾಯರ ವಿಚಾರಧಾರೆ ಇವರ ರಾಜಕೀಯ ಪ್ರಜ್ಞೆಯ ಮೇಲೆ ಪ್ರಭಾವ ಬೀರಿತು. ಅಮೆರಿಕಕ್ಕೆ ತೆರಳುವ ಮುನ್ನ ಬ್ರಿಜ್ ಕಿಶೋರ್ ಪ್ರಸಾದರ ಮಗಳು ಪ್ರಭಾವತಿ ದೇವಿಯವರನ್ನು ವಿವಾಹವಾದರು.

ಅಮೆರಿಕದಿಂದ ಮರಳಿದ ಜಯಪ್ರಕಾಶರಿಗೆ ನೆಹರುರೊಂದಿಗೆ ಪರಿಚಯ ಬೆಳೆಯಿತು. ನೆಹರು ಸೂಚಿಸಿದಂತೆ ಕಾಂಗ್ರೆಸ್ಸಿನ ಕಾರ್ಮಿಕ ಶಾಖೆಯ ನೇತೃತ್ವ ವಹಿಸಲು ಒಪ್ಪಿಕೊಂಡರು. ಆಗ ಗಾಂಧೀಜಿಯವರೊಂದಿಗೆ ಇವರ ಸಂಪರ್ಕ ಹೆಚ್ಚಾಯಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಇವರು ಭಾಗವಹಿಸಿ ದಸ್ತಗಿರಿಯಾದರು. ಮುಂದೆ ಆಚಾರ್ಯ ನರೇಂದ್ರದೇವರ ಸಹಕಾರ ಪಡೆದು ಜಯಪ್ರಕಾಶ್ ನಾರಾಯಣರು ಅಖಿಲ ಭಾರತೀಯ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು.

ಎರಡನೆಯ ಮಹಾಯುದ್ಧ ಆರಂಭವಾದಾಗ ತಮಗೆ ಬೇಡದ ಯುದ್ಧದಲ್ಲಿ ಬ್ರಿಟಿಷರೊಂದಿಗೆ ಭಾರತ ಸಹಕರಿಸಬಾರದೆಂಬುದು ಜಯಪ್ರಕಾಶರ ಅಭಿಪ್ರಾಯವಾಗಿತ್ತು. ಸಮಾಜವಾದಿ ಬಂಡಾಯ ಆಗಬೇಕೆಂದು ಪ್ರಚಾರ ಮಾಡುತ್ತಾ ಇವರು ದೇಶದ ಹಲವೆಡೆ ಸಂಚರಿಸಿದರು. ಸರ್ಕಾರ ಇವರನ್ನು 1940ರಲ್ಲಿ ದಸ್ತಗಿರಿ ಮಾಡಿ 1941 ರಲ್ಲಿ ಬಿಡುಗಡೆ ಮಾಡಿತು. ಮತ್ತೆ 1941ರಲ್ಲಿ ಇವರು ದಸ್ತಗಿರಿಯಾದರು. ಇವರನ್ನು ಬಂದಿಗಳ ಶಿಬಿರದಲ್ಲಿ ಅತ್ಯಂತ ಕಟ್ಟುನಿಟ್ಟಾದ ಸೆರೆಯಲ್ಲಿಡಲಾಗಿತ್ತು. ಇವರ ಕ್ರಾಂತಿಕಾರಿ ಭಾವನೆಗಳಿಂದಾಗಿ ಬ್ರಿಟಿಷ್ ಸರ್ಕಾರ ತುಂಬಾ ಬೆದರಿತ್ತು. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕೆಂದು ಚಳವಳಿ ಹೂಡಲು 1942ರಲ್ಲಿ ಕಾಂಗ್ರೆಸ್ಸು ನಿರ್ಣಯಮಾಡಿದಾಗ ಜಯಪ್ರಕಾಶರು ಬಂಧನದಲ್ಲೇ ಇದ್ದರು. ರಾಷ್ಟ್ರದ ಮುಖಂಡರನ್ನೆಲ್ಲಾ ಸರ್ಕಾರ ದಸ್ತಗಿರಿ ಮಾಡಿತು. ನಾಯಕರಿಲ್ಲದ ಆ ಸಮಯದಲ್ಲಿ ತಾವು ಹೇಗಾದರೂ ಮಾಡಿ ಸೆರೆಮನೆಯಿಂದ ಹೊರಬಿದ್ದು ಜನತೆಯ ಹೋರಾಟವನ್ನು ನಿರ್ದೇಶಿಸಬೇಕೆಂದು ಜಯಪ್ರಕಾಶ್ ನಾರಾಯಣರು ನಿರ್ಧರಿಸಿದರು. ಗೆಳೆಯರೊಂದಿಗೆ ಕೂಡಿ ಯೋಜನೆ ಮಾಡಿಕೊಂಡು ಕಾರಾಗೃಹದ ಗೋಡೆಯನ್ನು ಹಾರಿ ಕಾಡಿನಲ್ಲಿ ನುಸುಳಿ ಅಗಾಧ ಕಷ್ಟ ಅನುಭವಿಸಿ ಪಾರಾದರು. ಬ್ರಿಟಿಷ್ ಆಡಳಿತಕ್ಕೆ ಕಿರುಕುಳ ಕೊಡುವ ನಾನಾ ಕಾರ್ಯಗಳಲ್ಲಿ ತೊಡಗಿದ್ದವರಿಗೆ ಸೂಚನೆ ನೀಡುವ ಹೊಣೆ ಹೊತ್ತರು. ತಂತಿ ಕತ್ತರಿಸುವುದು, ಬ್ರಿಟಿಷ್ ಸರ್ಕಾರದ ಆಡಳಿತ ವ್ಯವಸ್ಥೆಗಳನ್ನು ತುಂಡರಿಸುವುದು ಇಂಥ ಯಾವ ಕಾರ್ಯವೂ ತಪ್ಪಲ್ಲ ಎಂಬುದು ಇವರ ನಂಬಿಕೆಯಾಗಿತ್ತು. ಭೂಗತರಾದ ಜಯಪ್ರಕಾಶರನ್ನು ಹಿಡಿದುಕೊಟ್ಟವರಿಗೆ ಅಥವಾ ಇವರ ಸುಳಿವು ನೀಡಿದವರಿಗೆ ಬಹುಮಾನ ನೀಡುವುದಾಗಿ ಸರ್ಕಾರ ಘೋಷಿಸಿತು. ಆದರೆ, ಜಯಪ್ರಕಾಶರು ಸರ್ಕಾರದ ಕಣ್ಣು ತಪ್ಪಿಸಿ ತಿರುಗುತ್ತ ಹೋರಾಟದಲ್ಲಿ ನಿರತರಾಗಿದ್ದರು. ಸರ್ಕಾರ ಇವರನ್ನು ಮತ್ತೆ ದಸ್ತಗಿರಿ ಮಾಡಿ ಸೆರೆಯಲ್ಲಿಟ್ಟಿತ್ತು.

ಸ್ವಾತಂತ್ರ್ಯಾನಂತರ ಮತ್ತು ಗಾಂಧೀಜಿಯವರ ಮರಣದ ಅನಂತರ ಜಯಪ್ರಕಾಶರು ಕ್ರಮಕ್ರಮವಾಗಿ ಗಾಂಧಿ ವಿಚಾರದತ್ತ ಹೆಚ್ಚು ಹೆಚ್ಚು ಸರಿಯ ತೊಡಗಿದರು. ಹಳ್ಳಿ ನಗರಗಳ ನಡುವಿನ ಆರ್ಥಿಕ ಅಂತರ ಇನ್ನೂ ಉಳಿದ ಅಸ್ಪೃಶ್ಯತೆಯೇ ಮುಂತಾದ ಸಾಮಾಜಿಕ ಅನ್ಯಾಯಗಳು, ಸುತ್ತಲೂ ಬೆಳೆಯುತ್ತಿರುವ ರಾಜಕೀಯ ಭ್ರಷ್ಟಾಚಾರ, ವಂಚನೆ ಇವು ಜಯಪ್ರಕಾಶರ ಚಿತ್ತಸ್ವಾಸ್ಥ್ಯವನ್ನು ಕೆಡಿಸಿದವು. ಇವರು ವಿನೋಬಾಜಿಯವರೊಂದಿಗೆ ಸೇರಿ ಸರ್ವೋದಯ ಕಾರ್ಯಕ್ರಮಗಳನ್ನು ರಾಷ್ಟ್ರವ್ಯಾಪಿ ಪ್ರಮಾಣದಲ್ಲಿ ಸಂಘಟಿಸಿದರು. ಇವರು ಮಂಚೂಣಿಯ ನಾಯಕರಾಗಿ ಜನಪ್ರಿಯರಾಗಿ ಇದ್ದರಾದರೂ ಪ್ರಚಾರ, ಪ್ರಸಿದಗದೀ ಹಾಗೂ ಉನ್ನತ ಅಧಿಕಾರ ಸ್ಥಾನಗಳನ್ನು ಎಂದೂ ಬಯಸಲಿಲ್ಲ. ಸ್ವಪ್ರೇರಣೆ ಯಿಂದ ಅವುಗಳಿಂದ ದೂರ ಸರಿದು ಗ್ರಾಮಮಟ್ಟದಲ್ಲಿ ಸಮಾಜಸೇವೆಗಾಗಿ ತಮ್ಮನ್ನು ಮುಡಿಪಾಗಿಟ್ಟುಕೊಂಡರು. ಇವರಿಗೆ ಹಿಂಸಾತ್ಮಕ ಕ್ರಾಂತಿಯಲ್ಲಿ ನಂಬಿಕೆಯಿರಲಿಲ್ಲ. ಇವರ ಅಹಿಂಸಾತ್ಮಕವಾದ ಪ್ರಾಮಾಣಿಕ ದಾರಿ ಇವರ ಸಮಾಜವಾದಿ ಕಾರ್ಯಕ್ರಮಗಳಿಗೆ ಯಶಸ್ಸನ್ನು ತಂದ ಅನೇಕ ನಿದರ್ಶನಗಳಿವೆ. ಭೂದಾನ ಚಳವಳಿ ಅಂತಹುಗಳಲ್ಲೊಂದು. 1967ರಲ್ಲಿ ಬಿಹಾರದಲ್ಲಿ ಬರ ಬಂದಾಗ ಇವರ ಒಂದು ಬೇಡಿಕೆ ಅನೇಕ ದೇಶಗಳ ಸದ್ವಿವೇಕವನ್ನು ಜಾಗೃತಗೊಳಿಸಿ ನೆರವು ಪ್ರವಹಿಸುವಂತೆ ಮಾಡಿತು. ಹತ್ತು ವರ್ಷಗಳ ಕಾಲ ಕೂಟ ಯುದ್ಧದಲ್ಲಿ ತೊಡಗಿದ್ದ ನಾಗಾಬಂಡಾಯಗಾರರನ್ನು ನಿರ್ಭಯವಾಗಿ ಸಂದರ್ಶಿಸಿದ ಜಯಪ್ರಕಾಶರು ತಮ್ಮ ಸೌಜನ್ಯಪೂರ್ಣ ವಿವರಣೆಯಿಂದ ನಾಗಾಗಳ ಮನವೊಲಿಸಿ ಅವರು ಯುದ್ಧ ನಿಲ್ಲಿಸಿ ಮಾತುಕತೆಗೆ ಒಡಂಬಡುವಂತೆ ಅವರನ್ನು ಅಣಿಮಾಡಿದರು. ಕಾಶ್ಮೀರದ ವಿಚಾರದಲ್ಲಿ ಮತ್ತು ಪಾಕಿಸ್ತಾನದ ಜೊತೆಗಿನ ಸಂಬಂಧದ ವಿಚಾರದಲ್ಲಿ ಇವರು ಅನೇಕ ಸಲ ಸರ್ಕಾರಕ್ಕೆ ಮತ್ತು ಜನನಾಯಕರಿಗೆ ಅಷ್ಟೊಂದು ರುಚಿಸದ, ಆದರೆ ಅರ್ಥಪೂರ್ಣವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಪ್ರಜಾಸತ್ತೆ ಅವಿಭಾಜ್ಯವಾದ ಮೌಲ್ಯ. ನಾವು, ಹೊರಗಿನವರಿಗೆ ಪ್ರಜಾತಂತ್ರವಾದಿಗಳಾಗಿ ಆಂತರಿಕವಾಗಿ ಪ್ರಜಾತಂತ್ರ ವಿರೋಧಿಗಳಾಗಲು ಶಕ್ಯವಿಲ್ಲ. ಇದು ಇವರ ಅವರ ಸ್ಪಷ್ಟ ಅಭಿಪ್ರಾಯ.

1973ರ ಏಪ್ರಿಲ್‌ನಲ್ಲಿ ಜಯಪ್ರಕಾಶರ ಪತ್ನಿ ಪ್ರಭಾವತಿ ತೀರಿಕೊಂಡರು. ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ಸರ್ಕಾರದ ಏಕಾಧಿಕಾರದ ವಿರುದ್ಧ ಇವರು ಹೋರಾಟ ಆರಂಭಿಸಿದರು. ರಾಜತಂತ್ರ ಪ್ರಬಲವಾಗಿ ಜನತಂತ್ರವನ್ನು ಕಡೆಗಣಿಸಿದುದನ್ನು ಇವರು ವಿರೋಧಿಸಿದರು. ಪ್ರಜಾಪ್ರಭುತ್ವದ ಅಂಗಗಳಾದ ಸಂಸತ್ತು, ನ್ಯಾಯಾಲಯ, ಆಡಳಿತ ಮೂರೂ ಸಂವಿಧಾನಬದ್ಧವಾಗಿ ಕೆಲಸಮಾಡುವಂಥ ವಾತಾವರಣ ದೇಶದಲ್ಲಿ ಸೃಷ್ಟಿಯಾಗಬೇಕೆಂದು ಇವರು ಬಯಸಿದರು. ಭ್ರಷ್ಟಾಚಾರ, ಸರ್ವಾಧಿಕಾರ ಇವನ್ನು ಎದುರಿಸಲು ಮಹಾಚಳವಳಿಯೊಂದು ದೇಶದಲ್ಲಿ ಆರಂಭವಾಯಿತು. ದೇಶದ ಈ ಪರ್ವಕಾಲದಲ್ಲಿ ಜಯಪ್ರಕಾಶರು ಅದರ ನಿರ್ದೇಶನದ ಹೊಣೆ ವಹಿಸಿಕೊಂಡರು.

ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರ ಪ್ರತಿಸ್ಪರ್ಧಿಯು ಅಲಹಾಬಾದ್ ಉಚ್ಚನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಇಂದಿರಾಗಾಂಧಿಯವರ ವಿರುದ್ಧ ತೀರ್ಪು ಹೊರಬಿದ್ದಾಗ ಚಳವಳಿ ತೀವ್ರವಾಯಿತು. ಇಂದಿರಾಗಾಂಧಿಯವರು ರಾಜೀನಾಮೆ ಕೊಡಬೇಕೆಂಬ ಕೂಗು ಎದ್ದಿತು. ಇಂದಿರಾಗಾಂಧಿಯವರು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲರ್ಜಿ ಸಲ್ಲಿಸಿದರಲ್ಲದೆ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿದರು. ಜಯಪ್ರಕಾಶ ನಾರಾಯಣ್ ಮೊದಲುಗೊಂಡು ಅನೇಕ ನಾಯಕರು ದಸ್ತಗಿರಿಯಾದರು (1975). ಇವರನ್ನು ಸ್ಥಾನಬದ್ಧತೆಯಲ್ಲಿಡಲಾಯಿತು. 1976ರ ಕೊನೆಯಲ್ಲಿ ಜಯಪ್ರಕಾಶರ ಬಿಡುಗಡೆಯಾಯಿತು. ಆದರೆ ಇವರ ಆರೋಗ್ಯ ಹದಗೆಟ್ಟಿತು. ಜನತಂತ್ರಬಾಹಿರವಾದ ಕೃತ್ಯವೆಸಗಿ ಸರ್ಕಾರ ಅನ್ಯಾಯ ಮಾಡುತ್ತಿದೆಯೆಂಬ ಜಯಪ್ರಕಾಶರ ನಿಲುವಿನಲ್ಲಿ ಬದಲಾವಣೆಯಾಗಿರಲಿಲ್ಲ. ಮುಂದಿನ ಹಲವು ವಾರಗಳ ಕಾಲ ಇವರು ಜಸ್‍ಲೋಕ್ ಆಸ್ಪತ್ರೆಯಲ್ಲಿ ಸಾವು–ಬದುಕಿನ ಹೋರಾಟ ನಡೆಸಿದರು. 1977ರ ಜನವರಿಯಲ್ಲಿ ಇಂದಿರಾಗಾಂಧಿಯವರು ತುರ್ತುಪರಿಸ್ಥಿತಿಯನ್ನು ಸಡಿಲಿಸಿ ಲೋಕಸಭೆಗೆ ಚುನಾವಣೆ ಘೋಷಿಸಿದರು. ಹಲವು ವಿರೋಧ ಪಕ್ಷಗಳು ಒಂದಾಗಿ ಜನತಾಪಕ್ಷ ಸ್ಥಾಪಿತವಾಯಿತು. ಅದು ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸಿ ಸರ್ಕಾರ ರಚಿಸಿತು.

ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತೆ ಸ್ಥಾಪಿತವಾಯಿತೆಂದು ಜಯಪ್ರಕಾಶರಿಗೆ ಸಮಾಧಾನ ವಾಯಿತಾದರೂ ಇದು ತೃಪ್ತಿತರಲಿಲ್ಲ. ದೇಶದಲ್ಲಿ ಸಂಪೂರ್ಣ ಕ್ರಾಂತಿಯಾಗಬೇಕು, ಭ್ರಷ್ಟಾಚಾರ ತೊಲಗಬೇಕು, ನಿಜವಾದ ಜನಶಕ್ತಿಯ ಆಳ್ವಿಕೆ ಆರಂಭವಾಗಬೇಕು, ಆಡಳಿತದ ವಿಕೇಂದ್ರಿಕರಣವಾಗಬೇಕು, ಹೊಸ ಶಿಕ್ಷಣ ರೂಪುಗೊಳ್ಳಬೇಕು ಎಂಬುದು ಇವರ ಬಯಕೆಯಾಗಿತ್ತು. ಅಮೆರಿಕದ ಸಿಯಾಟ್‍ನಲ್ಲಿ ಶಸ್ತ್ರಚಿಕಿತ್ಸೆ ಹೊಂದಿ ಮರಳಿದ ಮೇಲೆ ಇವರು ಈ ಆದರ್ಶ ಸಮಾಜದ ಸ್ಥಾಪನೆಗಾಗಿ ತಮ್ಮ ಕೆಲಸ ಮುಂದುವರಿಸಿದರು. 1979 ಅಕ್ಟೋಬರ್ 8 ರಂದು ನಿಧನ ಹೊಂದಿದರು.

ಯಾವ ತೊಡಕಿನ ಸಮಸ್ಯೆಯನ್ನೇ ಆಗಲಿ ಬಿಡಿಸುವಲ್ಲಿ ಇವರು ತೋರಿಸುತ್ತಿದ್ದ ಅಪೂರ್ವ ತಾಳ್ಮೆ, ಇತರರ ಅಭಿಪ್ರಾಯಗಳನ್ನು ಗೌರವಿಸುವ ಗುಣ, ಮನುಷ್ಯನ ಮೂಲಭೂತ ಒಳ್ಳೆಯತನದಲ್ಲಿ ನಂಬಿಕೆ, ಈ ಒಳ್ಳೆಯತನವನ್ನು ಮುಟ್ಟುವ ತಟ್ಟುವ ಇವರ ಪ್ರಾಮಾಣಿಕ ಪ್ರಯತ್ನ–ಇವೇ ಇವರ ಯಶಸ್ಸಿನ ಗುಟ್ಟು. ಇಡೀ ಅಧಿಕಾರದ ಅಹಂಭಾವ ಚಂಬಲ್ ಕಣಿವೆಯ ಡಾಕುಗಳನ್ನು ಮಣಿಸದಿದ್ದಾಗ ಅಂಥವರನ್ನು ಮನವೊಲಿಸಿದ, ಅವರು ಶರಣಾಗತ ರಾಗುವಂತೆ ಮಾಡಿದ ಮಾನವೀಯ ಯಶಸ್ಸು ಇವರದು. ಒಳ್ಳೆಯ ಶೀಲ, ಚಾರಿತ್ರ್ಯ, ಪ್ರಾಮಾಣಿಕತೆ, ತ್ಯಾಗಗಳಿಂದ ಒಬ್ಬ ವ್ಯಕ್ತಿ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಜಯಪ್ರಕಾಶ ನಾರಾಯಣರು ಉತ್ತಮ ನಿದರ್ಶನವಾಗಿದ್ದರು.

ಜಯಪ್ರಕಾಶ್ ನಾರಾಯಣರು ಪ್ರಖ್ಯಾತ ಬರೆಹಗಾರರೂ ಚಿಂತಕರೂ ಆಗಿದ್ದರು. ಭಾರತ ಸರ್ಕಾರ ಇವರಿಗೆ 1999ರಲ್ಲಿ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. 2002ರಲ್ಲಿ ದೇಶದ್ಯಾಂತ ಇವರ ಶತಮಾನೋತ್ಸವವನ್ನು ಆಚರಿಸಲಾಯಿತು. (ಜಿ.ಆರ್.ಪಿ.)

**ಜಯಸ್ವಾಲ್, ಕಾಶೀಪ್ರಸಾದ:** 1871–1937. ಭಾರತದ ಇತಿಹಾಸಶಾಸ್ತ್ರಜ್ಞ, ವಿದ್ವಾಂಸ. ಪ್ರಾಚೀನ ಭಾರತದ ರಾಜತಾಂತ್ರಿಕ ವಿಚಾರಗಳನ್ನೂ ಸಂಸ್ಥೆಗಳನ್ನೂ ಶಾಸ್ತ್ರೀಯವಾಗಿ ಅಭ್ಯಾಸಿಸಿ, ಅವನ್ನು ಸುಸಂಯೋಜಿತ ರೀತಿಯಲ್ಲಿ ಬೆಳಕಿಗೆ ತರುವ ಪ್ರಥಮ ಪ್ರಯತ್ನ ಮಾಡಿಸಿದರು. ಜನನ 1871ರಲ್ಲಿ, ಈಗಿನ ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ. ತಂದೆ ಸಾಹುಮಹಾದೇವ ಪ್ರಸಾದ್, ಮಿರ್ಜಾಪುರದ ಒಬ್ಬ ದೊಡ್ಡ ವ್ಯಾಪಾರಿ.

ಜಯಸ್ವಾಲ್ ಚಿಕ್ಕ ವಯಸ್ಸಿನಲ್ಲೇ ಸಂಸ್ಕೃತವನ್ನು ಅಭ್ಯಾಸ ಮಾಡಿದರು. ಇಂಗ್ಲೆಂಡಿಗೆ ತೆರಳಿ ಆಕ್ಸ್‍ಫರ್ಡ್ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಮಿಡ್ಲ್‍ಟೆಂಪಲ್‍ನಲ್ಲಿ ನ್ಯಾಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಕ್ಸ್‍ಫರ್ಡಿನಲ್ಲಿ ಚೀನಿ ವಿಷಯದಲ್ಲಿ ಡೇವಿಸ್ ವಿದ್ಯಾರ್ಥಿಯೂ ಅನಂತರ ಸಂಶೋಧನ ವಿದ್ಯಾರ್ಥಿಯೂ ಆಗಿ ಆಳವಾಗಿ ಅಧ್ಯಯನ ನಡೆಸಿದರು. ಸಂಸ್ಕೃತ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ವಿಶೇಷವಾದ ಆಸಕ್ತಿ ಬೆಳೆಸಿಕೊಂಡರು.

ಇಂಗ್ಲೆಂಡಿನಲ್ಲಿದ್ದಾಗಲೂ ಇವರು ಆಗ ನಮ್ಮ ದೇಶದಲ್ಲಿ ನಡೆಯುತ್ತಿದ್ದ ರಾಜಕೀಯ ಆಂದೋಲನದಿಂದ ದೂರ ಇರಲಿಲ್ಲ. ಹರದಯಾಳರ ಕ್ರಾಂತಿಕಾರಿ ಸಂಘಟನೆಗೆ ಸಂಬಂಧಿಸಿದವನೆಂದು ಸರ್ಕಾರ ಇವರನ್ನು ಅಪಾಯಕಾರಿ ಕ್ರಾಂತಿಕಾರಿಯೆಂದು ಪರಿಗಣಿಸಿತ್ತು. ಇವರು ಭಾರತಕ್ಕೆ ಮರಳಿದ ಮೇಲೆಯೂ ಇವರ ಚಟುವಟಿಕೆಗಳನ್ನು ಸರ್ಕಾರ ತೀವ್ರವಾಗಿ ಗಮನಿಸುತ್ತಿತ್ತು. 1913ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಇವರಿಗೆ ನೀಡಲಾದ ಅಧ್ಯಾಪಕ ಹುದ್ದೆಯನ್ನು ಸರ್ಕಾರ ಮಂಜೂರು ಮಾಡಲಿಲ್ಲ. ಸರ್ಕಾರದ ಈ ಕ್ರಮದ ವಿರುದ್ಧ ತೀವ್ರ ಚಳವಳಿ ನಡೆಯಿತು. ಇವರು ಆಗ ಕಲ್ಕತ್ತ ಉಚ್ಚನ್ಯಾಯಾಲಯದಲ್ಲಿ ವಕೀಲಿ ಪ್ರಾರಂಭಿಸಿದರು. ಅಮೇಲೆ ಇವರು ಪಾಟ್ನಕ್ಕೆ ಬಂದರು. ಬಹಿರಂಗವಾಗಿಯೇ ಕಾಂಗ್ರೆಸ್ ಸದಸ್ಯರಾದರು. ರಾಜೇಂದ್ರ ಪ್ರಸಾದರಂಥ ಮುಖಂಡರೊಂದಿಗೆ ಇವರ ಸ್ನೇಹ ಬೆಳೆಯಿತು. ಇವರು ಬಿಹಾರದ ಮುಂಚೂಣಿ ನಾಯಕರಲ್ಲೊಬ್ಬರಾದರು. ಉತ್ತಮ ನ್ಯಾಯವಾದಿ ಯೆಂದು ಖ್ಯಾತರಾದರು. ಇವರು ಇಂಗ್ಲೆಂಡ್ ಫ್ರಾನ್ಸ್‍ಗಳಿಗೆ ಅನೇಕ ಸಲ ಹೋಗಿ ಬಂದರು.

ಆದರೆ ಇವರ ಮುಖ್ಯ ಕಾರ್ಯಕ್ಷೇತ್ರ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಕುರಿತ ಸಂಶೋಧನೆಯಾಗಿತ್ತು. ಇಂಡಿಯನ್ ಪಾಲಿಟಿ (ಭಾರತೀಯ ರಾಜನೀತಿ) ಎಂಬುದು ಇವರ ಪ್ರಖ್ಯಾತ ಗ್ರಂಥ. ಸು.150–350ರ ಭಾರತ ಚರಿತ್ರೆಯನ್ನು ಕುರಿತದ್ದು ಇನ್ನೊಂದು ಗ್ರಂಥ. ಭಾರತದ ಇತಿಹಾಸದ ಅಂಧಕಾರಯುಗವೆಂದು ಹೆಸರಾದ ಅವಧಿಯ ಇತಿಹಾಸವನ್ನು ಜಯಸ್ವಾಲರು ಇದರಲ್ಲಿ ಸುಸಂಬಂಧವಾಗಿ ಪುನರ್ರಚಿಸುವ ಪ್ರಯತ್ನ ಮಾಡಿದ್ದಾರೆ. ಇವರ ವಿಚಾರಗಳು ಅನೇಕ ಅಜ್ಞಾತ ವಿಷಯಗಳ ಮೇಲೆ ಬೆಳಕು ಬೀರಿದುವು. ಮನು, ಯಾಜ್ಞವಲ್ಕ್ಯರನ್ನು ಕುರಿತು ಇವರು ಮಾಡಿದ ಠಾಕೂರ್ ಸ್ಮಾರಕ ಉಪನ್ಯಾಸಗಳು ಹಿಂದು ಸಾಮಾಜಿಕ ಹಾಗೂ ನ್ಯಾಯಿಕ ಸಂಸ್ಥೆಗಳ ಅಧ್ಯಯನಕ್ಕೆ ತುಂಬ ಸಹಾಯಕ ಭಾರತದ

ಬುದ್ಧ ಯುಗದ ಪ್ರಾರಂಭದ ಇತಿಹಾಸದಲ್ಲೂ ನೇಪಾಲದ ಪ್ರಾಚೀನ ಸಾಂಕೃತ್ಯಾಯನರೊಂದಿಗೆ ಸೇರಿ ಇವರು ಟಿಬೆಟಿನ ಭಾಷೆಯ ಮಂಜುಶ್ರೀ ಮೂಲಕಲ್ಪ ಎಂಬ ಗ್ರಂಥವನ್ನು ಸಂಪಾದಿಸಿದರು. ಇಂಪೀರಿಯಲ್ ಹಿಸ್ಟರಿ ಆಫ್ ಇಂಡಿಯದಲ್ಲಿ ಈ ಗ್ರಂಥದ ಬಗ್ಗೆ ಅಮೂಲ್ಯವಾದ ಹಾಗೂ ಉದ್ಬೋಧಕ ಲೇಖನವೊಂದನ್ನು ಬರೆದರು. ಒರಿಸ್ಸದ ಹಾಥಿಗುಂಫದ ಖಾರವೇಲ ಶಾಸನವನ್ನು ಓದುವುದರಲ್ಲೂ ಇವರು ಶ್ಲಾಘನೀಯ ಪ್ರಯತ್ನ ಮಾಡಿದರು. ನಾಣ್ಯಶಾಸ್ತ್ರ ಕ್ಷೇತ್ರದಲ್ಲೂ ಇವರು ವಿಶೇಷವಾದ ಕೆಲಸ ಮಾಡಿದ್ದಾರೆ.

ಪಾಟ್ನ ವಸ್ತುಸಂಗ್ರಹಾಲಯವೂ ಬಿಹಾರ್ ಸಂಶೋಧನ ಸಂಘವೂ ಸ್ಥಾಪಿತವಾಗಲು ಜಯಸ್ವಾಲರ ಪ್ರಯತ್ನವೇ ಕಾರಣ. ಶಿಕ್ಷಣ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇವರು ಮಾಡಿದ ಮಹತ್ ಸಾಧನೆಗಳನ್ನು ಮನ್ನಿಸಿ ಪಟ್ನಾ ವಿಶ್ವವಿದ್ಯಾಲಯ ಇವರಿಗೆ 1936ರಲ್ಲಿ ಡಾಕ್ಟೊರೇಟ್ ಪದವಿ ನೀಡಿತು. ಬರೋಡದಲ್ಲಿ ನಡೆದ ಭಾರತೀಯ ಪ್ರಾಚ್ಯ ಸಮ್ಮೇಳನದ ಅಧಿವೇಶನಕ್ಕೆ ಇವರು ಅಧ್ಯಕ್ಷರಾಗಿದ್ದರು. ಭಾರತದ ನಾಣ್ಯಶಾಸ್ತ್ರ ಸಂಘದವರು ನಾಣ್ಯಶಾಸ್ತ್ರಕ್ಕೆ ಇವರು ಸಲ್ಲಿಸಿದ ಕೊಡುಗೆಯನ್ನು ಮನ್ನಿಸಿ ಇವರಿಗೆ ಪದಕವೊಂದನ್ನು ಅರ್ಪಿಸಿದರು. ಇವರು ನಿಷ್ಠುರ ರಾಷ್ಟ್ರವಾದಿಯಾಗಿದ್ದರು. ಇವರಿಗೆ ಭಾರತದ ಆದರ್ಶ ಪರಂಪರೆಗಳಲ್ಲಿ ಅಚಲ ಶ್ರದ್ಧೆಯಿತ್ತು. (ಜಿ.ಆರ್.ಪಿ.)

**ಜರತುಷ್ಟ್ರ ಧರ್ಮ:** ಸುಮಾರು ಮೂರುವರೆ ಸಾವಿರ ವರ್ಷಗಳ ಹಿಂದೆ ಪಶ್ಚಿಮ ಏಷ್ಯದ ಇರಾನ್ (ಪರ್ಷಿಯ) ದೇಶದಲ್ಲಿ ಜನಿಸಿದ ಮಹಾನ್ ಧಾರ್ಮಿಕ ಚಿಂತಕ ಹಾಗೂ ಸುಧಾರಕನಾದ ಜರತುಷ್ಟ್ರ ಸ್ಥಾಪಿಸಿದ ಧರ್ಮ. ಬುಡಕಟ್ಟು ಜನರ ಧಾರ್ಮಿಕ ಅರ್ಚಕನಾಗಿದ್ದ ಇವನು ಅಂದಿನ ಸಮಾಜದಲ್ಲಿದ್ದ ಧಾರ್ಮಿಕ ಆಚರಣೆಗಳು ಕೇವಲ ಭ್ರಮೆಯೆಂದು ಭಾವಿಸಿದ್ದ ಇವನಿಗೆ ಕಾಲಕ್ರಮೇಣ ದೇವರ ಸಾಕ್ಷಾತ್ಕಾರವಾಯಿತೆಂದು ತಿಳಿಯುತ್ತದೆ. ಅಹುರ್‍ಮಜ್ದ ಎಂಬ ದೇವರು ಅತಿ ಶ್ರೇಷ್ಠ ಪೂಜನೀಯನೆಂದು ಭಾವಿಸಿದ್ದ. ಅಂದಿನ ಪರ್ಷಿಯ ಸಮಾಜದಲ್ಲಿ ಆಚರಣೆಯಲ್ಲಿದ್ದ ಬಹುದೇವತಾರಾಧನೆಯನ್ನು ಒಪ್ಪದೆ ಪ್ರಾಣಿಬಲಿಯನ್ನು ತೀವ್ರವಾಗಿ ವಿರೋಧಿಸಿದ. ಅದೇ ವೇಳೆಯಲ್ಲಿ ಅಗ್ನಿಯು ಶುದ್ಧತೆಯ ಸಂಕೇತವೆಂದು ಬಗೆದು ಧಾರ್ಮಿಕ ಆಚರಣೆಯಲ್ಲಿ ಅಗ್ನಿಯನ್ನು ಆರಾಧಿಸುವ ಪದ್ಧತಿಯನ್ನು ಅಳವಡಿಸಿಕೊಂಡ.

ಜರತುಷ್ಟ್ರ ತನ್ನ ಬೋಧನೆಗಳಿಂದ ಅಂದಿನ ಪರ್ಷಿಯ ದೊರೆ ವಿಸ್‍ತಷ್ಪನನ್ನು ತನ್ನ ಧರ್ಮಕ್ಕೆ ಮತಾಂತರಿಸಿ ರಾಜನ ಆಸ್ಥಾನದಲ್ಲಿ ಸ್ಥಾನ ಪಡೆದುಕೊಂಡ. ತದನಂತರ ಪರ್ಷಿಯದ ರಾಜಧರ್ಮವೆಂದು ಇದು ಮನ್ನಣೆ ಗಳಿಸಿತು. ಪ್ರಾಚೀನ ಪರ್ಷಿಯದ ಅನೇಕ ದಂತಕಥೆಗಳಿಗೆ ಕಾರಣವಾಗಿದ್ದ ಜರತುಷ್ಟ್ರ ತನ್ನ 77ನೆಯ ವಯಸ್ಸಿನಲ್ಲಿ ನಿಧನನಾದ. ಇವನ ಅನುಯಾಯಿಗಳನ್ನು ಜೋರಾಷ್ಟ್ರಿಯನ್ನರೆಂದು ಅಥವಾ ಪಾರ್ಸಿಗಳೆಂದು ಕರೆಯಲಾಗುತ್ತದೆ.

ಪ್ರ.ಶ.ಪೂ.1400–1000ರ ನಡುವೆ ಜರುತುಷ್ಟ್ರನಿಂದ ಸ್ಥಾಪಿತವಾದ ಈ ಧರ್ಮದ ಅಂಶಗಳು ಅನಂತರ ಉದಯಿಸಿದ ಪ್ರಮುಖ ಧರ್ಮಗಳಾದ ಜುಡಾಯಿಸಂ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಲ್ಲಿ ಅಡಕವಾಗಿರುವುದನ್ನು ಕಾಣಬಹುದಾಗಿದೆ. ಅಹುರ್‍ಮಜ್ದ ಬೆಳಕಿನ ಸಂಕೇತವಾಗಿ ಒಳ್ಳೆಯದಕ್ಕೆ ಪ್ರತೀಕವಾದರೆ, ಅಹುಮನ್ ಕತ್ತಲು ಅಥವಾ ಕೆಡುಕಿನ ಸಂಕೇತವೆಂದು ಭಾವಿಸುವ ಇವರು ಮನುಷ್ಯನು ಕೆಡುಕಿನಿಂದ ಮುಕ್ತಿಹೊಂದಲು ದೇಹಶುದ್ಧಿ ಮುಖ್ಯವೆಂಬುದು ಇವರ ಭಾವನೆ. ಈ ಧರ್ಮದ ಗುರುಗಳನ್ನು ಮಗಿ ಎಂದು ಕರೆಯುತ್ತಾರೆ. ಇವರ ಧರ್ಮಗ್ರಂಥ ಅವೆಸ್ತ. ಈ ಧರ್ಮದ ಜನ ಮರಣ ಹೊಂದಿದಾಗ ಇತರೆ ಧರ್ಮೀಯರಂತೆ ಮಣ್ಣಿನಲ್ಲಿ ಹೂಳುವುದಾಗಲಿ ಅಥವಾ ಬೆಂಕಿಯಲ್ಲಿ ಸುಡುವುದಾಗಲಿ ಮಾಡುವುದಿಲ್ಲ. ಬದಲಾಗಿ ತೆರೆದ ಬಾವಿಯಾಕಾರದ ಕಟ್ಟಡದ ಮೇಲೆ ಸತ್ತ ದೇಹವನ್ನು ಮಲಗಿಸುತ್ತಾರೆ. ನೈಸರ್ಗಿಕವಾಗಿ ದೇಹ ಅಳಿದು ಹದ್ದುಕಾಗೆಗಳಿಗೆ ಆಹಾರವಾದ ಅನಂತರ ಉಳಿದ ಎಲುಬುಗಳು ಪುಡಿಯಾಗಿ ಕೆಳಗೆ ನಿರ್ಮಿಸಿರುವ ಕಂದಕದಲ್ಲಿ ಶೇಖರಣೆಯಾಗುತ್ತವೆ. ಹಲವು ವಿಶಿಷ್ಟ ಸಂಪ್ರದಾಯಾಚರಣೆಗಳನ್ನು ಈ ಧರ್ಮೀಯರು ನಿಯಮಬದ್ಧರಾಗಿ ಪಾಲಿಸುವರು. ಪರ್ಷಿಯದಲ್ಲಿ ಏಳ್ಗೆ ಹೊಂದಿದ್ದ ಈ ಧರ್ಮದ ಮೇಲೆ ಅಲೆಗ್ಸಾಂಡರನ ದಂಡಯಾತ್ರೆಯ ಪ್ರಭಾವದಿಂದಾಗಿ ಗ್ರೀಕ್ ಧಾರ್ಮಿಕ ಪದ್ಧತಿಗಳು ರೂಢಿಗೆ ಬಂದವು. ಜರತುಷ್ಟ್ರನ ಬೋಧನೆಗಳು

ಗ್ರೀಕರ ಧಾರ್ಮಿಕ ಬೋಧನೆಗಳೊಂದಿಗೆ ಸಮ್ಮಿಲನ ಹೊಂದಿ ಪ್ರಪಂಚದಾದ್ಯಂತ ಹರಡಿದವು. ಕ್ರೈಸ್ತಧರ್ಮ ಚಾಲ್ಡಿಯನ್ನರ ಕಾಲದಲ್ಲಿ ಪರ್ಷಿಯವನ್ನು ಪ್ರವೇಶಿಸಿದಾಗ, ಬಲವಂತವಾಗಿ ಬಹುಸಂಖ್ಯೆಯ ಜೋರಾಷ್ಟ್ರಿಯನ್ನರು ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದ ಬೇಕಾಯಿತು. ಕ್ರೈಸ್ತಧರ್ಮ ಹಾಗೂ ಜೂಡಾಯಿಸಂ ಜೊತೆ ಪ್ರಬಲವಾಗಿ ಬೆಳೆಯಲಾಗಲಿಲ್ಲ. ಈ ಧರ್ಮದ ಅರ್ಚಕರು ಮಂತ್ರವಾದಿಗಳು ಎಂಬ ಭಾವನೆ ಇತರೆ ಧರ್ಮೀಯರಲ್ಲಿ ಉಂಟಾಯಿತು. ಇಸ್ಲಾಂ ಧರ್ಮದ ಉದಯದ ಅನಂತರ ಕಲೀಫರ ಅನಾದರ ಹಾಗೂ ಇಸ್ಲಾಂ ಧಾರ್ಮಿಕ ಕಾನೂನುಗಳಿಂದ ಸಾವಿರಾರು ಸಂಖ್ಯೆಯ ಜೋರಾಷ್ಟ್ರಿಯನ್ನರು ಮತಾಂತರಗೊಂಡರೆ ಅಳಿದುಳಿದವರು ಪ್ರಾಣಬೆದರಿಕೆಯಿಂದ ಭಾರತಕ್ಕೆ ವಲಸೆ ಬಂದರು. ಈಗಾಗಿ ಇಸ್ಲಾಂಧರ್ಮ ಬಹುತೇಕ ಜೋರಾಷ್ಟ್ರಿಯನ್ ಧರ್ಮವನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡಿತು. (ಸಿ.ಜಿ.ಎಸ್.)

**ಜಮ್ಮು ಮತ್ತು ಕಾಶ್ಮೀರ:** ಭಾರತದ ಪ್ರಮುಖ ರಾಜ್ಯಗಳಲ್ಲೊಂದು. ರಾಜಧಾನಿ ಶ್ರೀನಗರ. ಜಮ್ಮು ಚಳಿಗಾಲದ ರಾಜಧಾನಿ. ಕಾಶ್ಮೀರದ ಪ್ರಾಚೀನ, ಮಧ್ಯ ಮತ್ತು ಅಂತ್ಯಶಿಲಾಯುಗ ಸಂಸ್ಕೃತಿಗಳ ಬಗ್ಗೆ ಸಿಕ್ಕಿರುವ ಮಾಹಿತಿಗಳು ಅತ್ಯಲ್ಪ ಮತ್ತು ಅನಿರ್ದಿಷ್ಟ. ಆದರೆ ಪ್ರಪಂಚದ ಇತರ ಎಡೆಗಳಲ್ಲಿ ಪ್ರಾಚೀನ ಶಿಲಾಯುಗ ಸಂಸ್ಕೃತಿಗಳು ಹರಡಿದ್ದ ಪ್ಲೀಸ್ಟೊಸೀನ್ ಯುಗದಲ್ಲಿ ಕಾಶ್ಮೀರದಲ್ಲೂ ವಾಯುಗುಣ ಮತ್ತು ಭೂಲಕ್ಷಣಗಳಲ್ಲಿ ಹಲವು ಬದಲಾವಣೆಗಳಾದುವು. ಆ ಕಾಲದಲ್ಲಿ ಕಾಶ್ಮೀರದ ನೆರೆಯ ಪ್ರದೇಶಗಳಲ್ಲಿ ಶಿಲೋಪಕರಣ ಸಂಸ್ಕೃತಿಗಳು ಹರಡಿದ್ದುದರಿಂದ, ಕಾಶ್ಮೀರದಲ್ಲೂ ಈ ಸಂಸ್ಕೃತಿಗಳು ಇದ್ದಿರಬಹುದು. ಈಚೆಗೆ ಆ ಕಾಲದ ಕೆಲವು ಶಿಲೋಪಕರಣಗಳು ಅಲ್ಲಿ ದೊರೆತಿವೆ. ಕಾಶ್ಮೀರದ ಸಸ್ಸಿರ್ ಕಣಿವೆಯ ಕೆಲವು ಗುಹೆಗಳಲ್ಲಿ ಪ್ರಾಗೈತಿಹಾಸಿಕ ರೀತಿಯ ಚಿತ್ರಗಳಿವೆ. ಆದರೆ ಇವುಗಳ ಸರಿಯಾದ ಕಾಲವನ್ನು ನಿಷ್ಕರ್ಷಿಸುವುದು ಕಷ್ಟ. ದಾರ್ದಿಸ್ತಾನದಲ್ಲೂ ಬಂಡೆಗಳ ಮೇಲೆ ಸ್ಥೂಲವಾಗಿ ಸಸ್ಸಿರ್ ಕಣಿವೆಯ ಗುಹೆಗಳಲ್ಲಿರುವ ಚಿತ್ರಗಳಂತಿರುವ ಪ್ರಾಣಿಗಳ ಮತ್ತು ಬೇಟೆಯ ಚಿತ್ರಗಳು ಇವೆಯಾದರೂ ಇಲ್ಲಿ ಇವುಗಳ ಜೊತೆಯಲ್ಲೇ ಕೆಲವು ಬ್ರಾಹ್ಮೀ ಮತ್ತು ಖರೋಷ್ಠೀ ಶಾಸನಗಳೂ ಇರುವುದರಿಂದ ಇವು ಐತಿಹಾಸಿಕ ಯುಗಕ್ಕೆ ಸೇರಿದವಾಗಿರ ಬಹುದು.

**ಇತಿಹಾಸ:** ಈ ರಾಜ್ಯದ ಇತಿಹಾಸವನ್ನು ಅರಿಯಲು ದೇಶೀಯ ಗ್ರಂಥರಾಶಿ, ಇತಿಹಾಸ ಮತ್ತು ಪ್ರಾಚೀನ ಅವಶೇಷಗಳು ಆಧಾರ. ಪರ್ಷಿಯನ್ ಭಾಷೆಯಲ್ಲಿ ಬರೆದ ಕೆಲವು ಗ್ರಂಥಗಳು ಸಹಾಯಕ. 1148–49ರಲ್ಲಿ ಕಲ್ಹಣನಿಂದ ಸಂಸ್ಕೃತದಲ್ಲಿ ರಚಿತವಾದ ರಾಜತರಂಗಿಣಿ ಒಂದು ಮುಖ್ಯ ಗ್ರಂಥ. ಇದು ಕಾಶ್ಮೀರ ಇತಿಹಾಸವನ್ನು ನಿರೂಪಿಸುವ ನಾಲ್ಕು ಸಂಸ್ಕೃತ ಗ್ರಂಥಗಳಲ್ಲಿ ಒಂದು. ಇದರಲ್ಲಿ ಪ್ರಾಚೀನ ಕಾಲದಿಂದ ಹಿಡಿದು 1006ರಲ್ಲಿ ಸಂಗ್ರಾಮದೇವ ಪಟ್ಟಾಭಿಷಿಕ್ತನಾಗುವವರೆಗಿನ ಇತಿಹಾಸವಿದೆ. ಈ ಗ್ರಂಥದ ಮೊದಲನೆಯ ಮೂರು ಸರ್ಗಗಳಲ್ಲಿ ನಿರೂಪಿಸಲಾಗಿರುವ ಘಟನಾವಳಿಗಳು ದಂತಕಥೆಗಳು. ಉಳಿದ 5 ಸರ್ಗ ಚರಿತ್ರೆ. ಕಲ್ಹಣನ ಇತಿಹಾಸ ರಚನಾಕಾರ್ಯವನ್ನು ಜೋನರಾಜ ಮುಂದುವರಿಸಿದ. ಕಲ್ಹಣ ಬಿಟ್ಟಲ್ಲಿಂದ ಮುಂದಕ್ಕೆ ಮುಸ್ಲಿಮರ ಏಳಿಗೆಯ ಕಾಲದವರೆಗೆ–1420ರಲ್ಲಿ ಸಿಂಹಾಸನಾ ರೋಹಣ ಮಾಡಿದ ಜೈನ್–ಉಲ್_ಅಬದಿನನ ಕಾಲದವರೆಗೆ–ಕಾಶ್ಮೀರವನ್ನು ಆಳಿದ ರಾಜರ ವಿವರಗಳು ಈ ಗ್ರಂಥದಲ್ಲಿವೆ. ಅವನ ಅನಂತರ ಅವನ ಶಿಷ್ಯನಾದ ಶ್ರೀವರ ಈ ಕೆಲಸವನ್ನು ಮುಂದುವರಿಸಿದ. 1459–89ರವರೆಗಿನ ಘಟನಾವಳಿಗಳನ್ನು ಅವನು ವರದಿ ಮಾಡಿದ್ದಾನೆ. ನಾಲ್ಕನೆಯ ಗ್ರಂಥ ರಾಜಾವಳೀ ನಾಟಕ. ಇದು ಪ್ರಾಜ್ಯಭಟ್ಟನಿಂದ ವಿರಚಿತವಾದ್ದು. ಇದರಲ್ಲಿ 1586ರ ವರೆಗಿನ–ಕಾಶ್ಮೀರ ಮೊಗಲರ ಸಾಮ್ರಾಜ್ಯದಲ್ಲಿ ವಿಲೀನಗೊಳ್ಳುವವರೆಗಿನ ಇತಿಹಾಸವಿದೆ. ಕಾಶ್ಮೀರ ಕಣಿವೆಯ ಮೂಲವನ್ನು ಕುರಿತಂತೆ ಐತಿಹ್ಯವಿದ್ದು ಅತ್ಯಂತ ಹಿಂದೆ ಅದೊಂದು ಪುಷ್ಕರಿಣಿಯಾಗಿತ್ತಂತೆ.

ಮೂಲತಃ ಕಾಶ್ಮೀರಿಗಳು ವೈದಿಕ ಜನವರ್ಗದವರು. ಅನಂತರ ಪರ್ಷಿಯನರು, ಗ್ರೀಕರು ಮತ್ತು ಯೂಚಿಗಳು ಅಥವಾ ತುರ್ಕಿ ವಂಶಜರು ಬಂದು ಕಾಶ್ಮೀರದಲ್ಲಿ ನೆಲಸಿದರು. ಕಲ್ಹಣ ಕಾಶ್ಮೀರವನ್ನು ಆಳಿದ ರಾಜರುಗಳ ಪಟ್ಟಿಯನ್ನು ಕೊಡುತ್ತಾನೆ. ಅಶೋಕನಿಗೆ ಮೊದಲು ಕಾಶ್ಮೀರವನ್ನು ಆಳಿದ ರಾಜರ ಬಗ್ಗೆ ನಿಖರವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ. ಅಶೋಕನ ಕಾಲದಿಂದ ಈಚೆಗೆ ನಮಗೆ ಸರಿಯಾದ ಖಚಿತವಾದ ಐತಿಹಾಸಿಕ ನೆಲೆ ಸಿಗುತ್ತದೆ. ಕಾಶ್ಮೀರವನ್ನಾಳಿದ ಅಶೋಕ ಮಗಧರಾಜ್ಯವನ್ನಾಳಿದ ಚಕ್ರವರ್ತಿ ಅಶೋಕನೇ ಹೊರತು ಬೇರೆಯವನಲ್ಲವೆಂದು ಇತಿಹಾಸಕಾರರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಏಕೆಂದರೆ ಅಶೋಕಚಕ್ರವರ್ತಿಯ ಸಾಮ್ರಾಜ್ಯ ಪೂರ್ವದಲ್ಲಿ ಬಂಗಾಲದವರೆಗೂ ಪಶ್ಚಿಮದಲ್ಲಿ ಹಿಂದೂಕುಷ್‌ವರೆಗೂ ವ್ಯಾಪಿಸಿತ್ತು. ಕಲ್ಹಣ ತನ್ನದೇ ಆದ ಕಾಲ ಗಣನೆಯ ಶಾಸ್ತ್ರವನ್ನು ಅನುಸರಿಸಿ, ಅಶೋಕನಿಗೆ ಪ್ರ.ಶ.ಪೂ.1182ಕ್ಕೆ ಸಮನಾದ ಕಾಲವನ್ನು ಸೂಚಿಸಿದ್ದರಿಂದ ಸ್ವಲ್ಪ ತೊಡಕುಂಟಾಗಿದೆ. ಶಕಾನುಕ್ರಮದಲ್ಲಿ ಸ್ವಲ್ಪ ದೋಷವಿದೆ ಎಂದು ಹೇಳಲಾಗಿದೆ.

ಅಶೋಕನ ಕಾಲಕ್ಕೆ ಮೊದಲು ಕಾಶ್ಮೀರದ ಪರಿಸ್ಥಿತಿ ಹೇಗಿತ್ತು ಎಂಬುದರ ಬಗ್ಗೆ ರಾಜತರಂಗಿಣಿ ಖಚಿತವಾಗಿ ಏನನ್ನೂ ಹೇಳುವುದಿಲ್ಲ. ಸಂಸ್ಕೃತದ ಕೆಲವು ಗ್ರಂಥಗಳಿಂದಲೂ ವೇದದ ಉತ್ತರ ಭಾಗಗಳಲ್ಲಿ ಕಂಡುಬರುವ ವಿಷಯಗಳಿಂದಲೂ ಅಕಿಮೆನಿಡೀಸ್ ಮನೆತನದ ದೊರೆಗಳು ಮತ್ತು ಗ್ರೀಕರು ಭಾರತದ ಮೇಲೆ ನಡೆಸಿದ ದಂಡಯಾತ್ರೆಯ ಸೂಚನೆಗಳಿಂದಲೂ ಕಾಶ್ಮೀರ ಆಫ್ಘಾನಿಸ್ತಾನಕ್ಕೆ ಉತ್ತರದಲ್ಲಿದ್ದ ಗಾಂಧಾರದ ಒಂದು ಭಾಗವಾಗಿತ್ತೆಂದು ತಿಳಿಯಬಹುದು. ಪರ್ಷಿಯದ ದೊರೆ ಕೈರಸ್, ಪೆಲೊಪೊನೀಸಸ್ ಮತ್ತು ಕಾಬೂಲ್ ಕಣಿವೆಯಲ್ಲಿ ಭಾರತೀಯ ಜನರನ್ನು ಅಧೀನಕ್ಕೆ ಒಳಪಡಿಸಿಕೊಂಡಿದ್ದನೆಂದು ಗ್ರೀಕ್ ಚರಿತ್ರಕಾರರ ಬರೆಹಗಳಿಂದ ತಿಳಿದುಬರುತ್ತದೆ. ಡೇರಿಯಸ್‌ನ ಒಂದು ಶಾಸನದಲ್ಲಿ ಗಾಂಧಾರ ಅವನ ಸಾಮ್ರಾಜ್ಯದ ಒಂದು ಪ್ರಾಂತವಾಗಿತ್ತೆಂದು ಉಲ್ಲೇಖವಿದೆ. ಅವನ ಉತ್ತರಾಧಿಕಾರಿಗಳು ಪಶ್ಚಿಮ ರಾಜ್ಯಗಳ ವ್ಯವಹಾರದಲ್ಲಿ ಕೈಹಾಕಿದ್ದರಿಂದ ಅವರು ಪೂರ್ವದ ರಾಜ್ಯಗಳ ಕಡೆ ಗಮನ ನೀಡಲಿಲ್ಲ. ಆದರೆ 1ನೆಯ ಡೇರಿಯಸ್ (ಪ್ರ.ಶಪೂ. 582–486) ಸಿಂಧು ಪ್ರದೇಶದ ಒಂದು ಭಾಗವನ್ನು ಪ್ರ.ಶ.ಪೂ.518ರಲ್ಲಿ ಆಕ್ರಮಿಸಿದಂತೆ ಕಂಡುಬರುತ್ತದೆ. ಕಾಶ್ಮೀರ ಸ್ವಲ್ಪಕಾಲ ಅಕಿಮೆನಿಡೀಸ್ ದೊರೆಗಳ ಅಧೀನದಲ್ಲಿತ್ತು ಎನ್ನುವುದರ ಬಗ್ಗೆ ಯಾವ ಸಂಶಯವೂ ಇಲ್ಲ. ಅಲೆಗ್ಸಾಂಡರ್ ಭಾರತದ ಮೇಲೆ ಕೈಗೊಂಡ ದಂಡಯಾತ್ರೆಯನ್ನು ಕುರಿತ ದಾಖಲೆಗಳಲ್ಲಿ ಕಾಶ್ಮೀರದ ಉಲ್ಲೇಖವಿಲ್ಲ.

ಅಲೆಗ್ಸಾಂಡರ್ ಭಾರತವನ್ನು ಬಿಟ್ಟು ಹೋದಮೇಲೆ ಚಂದ್ರಗುಪ್ತ ಮಗಧ ರಾಜ್ಯದ ದೊರೆಯಾಗಿ ತನ್ನ ಪ್ರಭುತ್ವವನ್ನು ಉತ್ತರ ಹಿಂದೂಸ್ಥಾನಕ್ಕೆಲ್ಲ ವಿಸ್ತರಿಸಿದ. ಅವನು ಗಾಂಧಾರ ವನ್ನೂ ಭಾರತದ ವಾಯವ್ಯ ಭಾಗದಲ್ಲಿದ್ದ ಎಲ್ಲ ಸತ್ರಪಗಳನ್ನೂ ವಶಪಡಿಸಿಕೊಂಡ. ಚಂದ್ರಗುಪ್ತನ ಮೊಮ್ಮಗನಾದ ಅಶೋಕ ಕಾಶ್ಮೀರದಲ್ಲಿ ಅನೇಕ ಕಟ್ಟಡಗಳನ್ನು ಕಟ್ಟಿಸಿ, ಅಲ್ಲಿಗೆ ಆಗಾಗ್ಗೆ ಭೇಟಿ ಕೊಡುತ್ತಿದ್ದ. ಕಾಶ್ಮೀರದ ರಾಜಧಾನಿಯಾದ ಶ್ರೀನಗರವನ್ನು ಸ್ಥಾಪಿಸಿ ಅಲ್ಲಿ 96,000 ಮನೆಗಳನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಇವುಗಳ ಜೊತೆಗೆ ಅಶೋಕ ಅಲ್ಲಿ ಅನೇಕ ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟಿಸಿದ. ವಿಜಯೇಶ್ವರ ದೇವಾಲಯದ ಸುತ್ತ ಕಲ್ಲುಗೋಡೆ ಕಟ್ಟಿಸಿ ಆ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ. ಅಲ್ಲದೆ ಇವನು ಭೂತೇಶ ಶಿವದೇವಾಲಯದ ಭಕ್ತನಾಗಿದ್ದಂತೆ ಕಂಡುಬರುತ್ತದೆ. ಕಾಶ್ಮೀರದಲ್ಲಿ ಬೌದ್ಧಧರ್ಮವನ್ನು ಪ್ರಚಾರಕ್ಕೆ ತಂದವನು ಇವನೇ. ಮೊಗ್ಗಲಿಪುತ್ತ ತಿಸ್ಸನ ಅಧ್ಯಕ್ಷತೆಯಲ್ಲಿ ಸೇರಿದ್ದ ಬೌದ್ಧಸಭೆಯ ಕಾರ್ಯಕಲಾಪಗಳು ಮುಕ್ತಾಯವಾದ ಮೇಲೆ, ಮಜ್ಜಂತಿಕನೆಂಬ ಧರ್ಮಪ್ರಚಾರಕನನ್ನು ಕಾಶ್ಮೀರ ಮತ್ತು ಗಾಂಧಾರಗಳಿಗೆ ಕಳುಹಿಸಲಾಯಿತು. ಅಶೋಕನ ಆಜ್ಞೆಯ ಮೇರೆಗೆ 5,000 ಬೌದ್ಧ ಸನ್ಯಾಸಿಗಳು ಕಾಶ್ಮೀರಕ್ಕೆ ಬಂದು ನೆಲಸಿದರೆಂದು ಯುವಾನ್‌ಚಾಂಗ್ ಮತ್ತು ಔಕಾಂಗ್ ತಿಳಿಸುತ್ತಾರೆ. ಬೌದ್ಧಧರ್ಮ ಪ್ರಚಾರಕ್ಕೂ ಅಧ್ಯಯನಕ್ಕೂ ಅದನ್ನೇ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಳ್ಳುವಂತೆ ಹೇಳಿ ಅಶೋಕ ಆ ಕಣಿವೆಯನ್ನು ಸಂಘಕ್ಕೆ ಬಿಟ್ಟುಕೊಟ್ಟ. ಅಶೋಕನ ಚಕ್ರಾಧಿಪತ್ಯ ಆಫ್ಘಾನಿಸ್ತಾನ, ಕಾಶ್ಮೀರ ಮತ್ತು ನೇಪಾಲ ದೇಶಗಳಿಂದ ಹಿಡಿದು ದಕ್ಷಿಣದಲ್ಲಿ ಕರ್ನಾಟಕದವರೆಗೂ ವಿಸ್ತರಿಸಿತ್ತೆಂಬುದು ಆ ಶಾಸನಗಳಿಂದ ತಿಳಿದುಬರುತ್ತದೆ.

ಅಶೋಕನ ಕಾಲದ ಅನಂತರ ಮಗಧ ಸಾಮ್ರಾಜ್ಯ ಅವನತಿಯ ಹಾದಿ ಹಿಡಿಯಿತು. ಕಾಶ್ಮೀರದಲ್ಲಿದ್ದ ಹರ ಮುಕುಟ ಗಂಗಾ ಎಂಬ ಪ್ರಸಿದ್ಧವಾದ ದೇವಾಲಯದ ಶಿವಭೂತ ದೇವರನ್ನು ಪೂಜಿಸಿ, ಅವನ ಕೃಪಾಕಟಾಕ್ಷದಿಂದ ಅಶೋಕ ಒಬ್ಬ ಮಗನನ್ನು ಪಡೆದನೆಂದು ಕಲ್ಹಣ ತಿಳಿಸುತ್ತಾನೆ. ಜಲೌಕನೆಂದು ಪ್ರಸಿದ್ಧನಾದ ಅವನು ತನ್ನ ತಂದೆಯ ಮರಣಾನಂತರ ಕಾಶ್ಮೀರದಲ್ಲಿ ಒಬ್ಬ ಸ್ವತಂತ್ರ ರಾಜನಾದ. ಅವನು ಶಿವನ ಆರಾಧಕನಾಗಿದ್ದು ಪ್ರತಿನಿತ್ಯವೂ ಭೂತೇಶ ಮತ್ತು ವಿಜಯೇಶ್ವರ ದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಿದ್ದ. ಮೊದಲು ಅವನು ಬೌದ್ಧರ ವಿರೋಧಿಯಾಗಿದ್ದು ಅನಂತರ ಅವರ ಸ್ನೇಹಿತನಾದ. ಬಾರಾಮೂಲಕ್ಕೆ 8 ಕಿಮೀ ದೂರವಿರುವ ಝೀಲಂ ನದಿಯ ಎಡದಂಡೆಯ ಕೃತ್ಯ ಶ್ರಾಮ ಎಂಬ ಹಳ್ಳಿಯಲ್ಲಿ ಅವನು ಒಂದು ಬೌದ್ಧ ವಿಹಾರ ಕಟ್ಟಿಸಿ, ಬೌದ್ಧಧರ್ಮಕ್ಕೆ ಪ್ರೋತ್ಸಾಹ ನೀಡಿದ. ಅವನು ಅಪ್ರತಿಮ ವೀರನಾಗಿದ್ದ. ದೇಶದ ಮೇಲೆ ಧಾಳಿಯಿಟ್ಟ ಮ್ಲೇಚ್ಛರನ್ನು ಹೊಡೆದೋಡಿಸಿ ರಾಜ್ಯವನ್ನು ವಿಸ್ತರಿಸಿದ, ಕನೌಜ್ ಮತ್ತು ಗಾಂಧಾರಗಳನ್ನು ಗೆದ್ದು ಅಲ್ಲಿದ್ದ ವಿದ್ವಾಂಸರನ್ನು ಸೆರೆಹಿಡಿದು ತಂದು ಕಾಶ್ಮೀರದಲ್ಲಿ ನೆಲಸುವಂತೆ ಮಾಡಿದ. ಆಫ್ಘಾನಿಸ್ತಾನದ ಕೆಲವು ಭಾಗಗಳಲ್ಲೂ ಪಂಜಾಬಿನಲ್ಲೂ ಕೆಲವು ಗ್ರೀಕ್ ರಾಜರು ಸು.300 ವರ್ಷಗಳ ಕಾಲ ಆಳಿದರು. ಪ್ರ.ಶ.ಪೂ.150ರಲ್ಲಿ ರಾಜ್ಯವಾಳುತ್ತಿದ್ದ ಮಿನಾಂಡರ್ ಎಂಬುವನು ಇವರಲ್ಲಿ ಅತ್ಯಂತ ಪ್ರಸಿದ್ಧ. ಕಾಶ್ಮೀರದಿಂದ 12 ಯೋಜನ ದೂರದಲ್ಲಿದ್ದ ಒಂದು ಸ್ಥಳದಲ್ಲಿ ಭಾರತದ ವಾಯವ್ಯ ಭಾಗದಲ್ಲಿ ಆಳುತ್ತಿದ್ದ ಇಂಡೊ–ಗ್ರೀಕ್ ದೊರೆಯಾದ ಮಿನಾಂಡರ್ ಮತ್ತು ಬೌದ್ಧ ಸನ್ಯಾಸಿಯಾದ ನಾಗಸೇನ ಇವರ ನಡುವೆ ಚರ್ಚೆ ನಡೆದುದು ಮಿಳಿಂದ ಪನ್ಹಃ ಎಂಬ ಗ್ರಂಥದಿಂದ ತಿಳಿದುಬರುತ್ತದೆ. ಅನಂತರ ಪಾರ್ಥಿಯನರೂ ಶಕರೂ ಗ್ರೀಕರಿಗೆ ಸೇರಿದ್ದ ಭಾಗಗಳನ್ನು ಜಯಿಸಿದರು. ಶಕರ ತರುವಾಯ ಬಂದ ಕುಷಾಣರ ವಿಸ್ತಾರವಾದ ರಾಜ್ಯದಲ್ಲಿ ಕಾಶ್ಮೀರ ಸೇರಿತ್ತು. ಕನಿಷ್ಕ ಇವರಲ್ಲಿ ಪ್ರಸಿದ್ಧನಾದವನು. ಪುರುಷಪುರವೇ (ಪೆಷಾವರ್) ಅವನ ರಾಜಧಾನಿಯಾಗಿತ್ತು. ಕನಿಷ್ಕ ಬೌದ್ಧಧರ್ಮವನ್ನವ ಲಂಬಿಸಿದ. ಬೌದ್ಧ ಸಿದ್ಧಾಂತಗಳನ್ನು ವ್ಯವಸ್ಥೆಗೊಳಿಸಿ ಕ್ರಮಪಡಿಸುವುದಕ್ಕಾಗಿ ಅವನು ಕಾಶ್ಮೀರದಲ್ಲಿ ಬೌದ್ಧಮಹಾಸಭೆಯನ್ನು ನಡೆಸಿದ. ಕನಿಷ್ಕನ ತರುವಾಯ ಬೌದ್ಧಧರ್ಮಕ್ಕೆ ಭಾರಿ ಪೆಟ್ಟು ಬಿದ್ದಿತು. ನಾಗಾರ್ಜುನನ ಮಾರ್ಗದರ್ಶನದಲ್ಲಿ ಮುಂದುವರಿದ ಬೌದ್ಧರು ವೈದಿಕಧರ್ಮವನ್ನು ಮೂಲೋತ್ಪಾಟನೆ ಮಾಡಲು ಯತ್ನಿಸಿದರು. ಇದರಿಂದ ಕೋಪಗೊಂಡ ನಾಗರು ಬೌದ್ಧರನ್ನು

ಹಿಂಸಿಸಲು ಪ್ರಾರಂಭಿಸಿದರು. ಅಂತ್ಯದಲ್ಲಿ ಕಾಶ್ಮೀರದ ನಾಗರ ರಾಜನಾದ ನೀಲನಾಗನೆಂಬ ದೊರೆಯ ಅಪ್ಪಣೆ ಪಡೆದ ಒಬ್ಬ ಬ್ರಾಹ್ಮಣ ಹಿಂದುಧರ್ಮವನ್ನು ಪುನರುಜ್ಜೀವನಗೊಳಿಸಿ, ಬೌದ್ಧರ ಪ್ರಾಬಲ್ಯವನ್ನು ಕಡಿಮೆ ಮಾಡಿದ. ಎರಡೂ ಧರ್ಮಗಳೂ ಕಾಶ್ಮೀರದಲ್ಲಿ ಬೆಳೆದುವು.ಈ ಹಿಂದು-ಬೌದ್ಧ ಕಾಲದಲ್ಲಿ, ಅದರಲ್ಲೂ ಪ್ರಧಾನವಾಗಿ 510ನೆಯ ಶತಮಾನದವರೆಗೆ, ಹಿಂದುಗಳು ಕಾಶ್ಮೀರದಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದರು.

ಕಾಶ್ಮೀರಿ ಸನ್ಯಾಸಿಗಳು, ಮತಪ್ರಚಾರಕರು, ಬರೆಹಗಾರರು ಮತ್ತು ವಿದ್ವಾಂಸರು ಭಾರತೀಯ ಸಂಸ್ಕೃತಿಯನ್ನೂ ಮತಧರ್ಮವನ್ನೂ ಚೀನದಲ್ಲಿ ಹರಡುತ್ತಿದ್ದಂತೆಯೇ ಅಲ್ಲಿಂದ ಪ್ರವಾಹದೋಪಾದಿಯಲ್ಲಿ ಯಾತ್ರಿಕರೂ ವಿದ್ಯಾರ್ಥಿಗಳೂ ಭಾರತದ ಪವಿತ್ರ ಸ್ಥಳಗಳನ್ನೂ ವಿದ್ಯಾಕೇಂದ್ರಗಳನ್ನೂ ಸಂದರ್ಶಿಸುವ ಸಲುವಾಗಿ ಬರತೊಡಗಿದರು. ಅವರಲ್ಲಿ ಅನೇಕ ಮಂದಿ ಕಾಶ್ಮೀರಕ್ಕೆ ಭೇಟಿ ಕೊಟ್ಟರು. ಕಾಶ್ಮೀರದಲ್ಲಿ ಸಂಪಾದಿಸಿದ ಜ್ಞಾನವನ್ನು ಅವರು ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಪ್ರಸಾರ ಮಾಡತೊಡಗಿದರು. ಬುದ್ಧನ ಪವಿತ್ರ ಗ್ರಂಥಗಳನ್ನು ಸಂಗ್ರಹಿಸುವುದಕ್ಕೂ ಬುದ್ಧನ ಜನ್ಮಸ್ಥಳದಲ್ಲಿ ಜನರು ಅವನ ವಿಷಯವಾಗಿ ಏನನ್ನು ನೆನಪಿನಲ್ಲಿಟ್ಟಿದ್ದಾರೆಂಬುದನ್ನು ತಿಳಿಯುವುದಕ್ಕೂ ಫಾಹಿಯಾನ್ ಎಂಬ ಬೌದ್ಧ ಸನ್ಯಾಸಿ ಚೀನದಿಂದ ಹೊರಟು, ಕಾಶ್ಮೀರದ ಗಡಿಯ ಮೂಲಕ ಭಾರತಕ್ಕೆ ಬಂದ (ಪ್ರ.ಶ.399). ಪೂರ್ವ ತುರ್ಕಿಸ್ತಾನದ ಮಾರ್ಗವಾಗಿ ಬರುತ್ತ ಅವನು ಗಿಲ್ಗಿಟ್ ಮತ್ತು ಲಡಾಕ್‍ಗಳಿಗೆ ಭೇಟಿ ಕೊಟ್ಟ. ಅಲ್ಲಿ ಬೌದ್ಧ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದುದನ್ನು ಅವನು ಕಂಡ. ಅವನು ಚೀನಕ್ಕೆ ಹಿಂದಿರುಗುವಾಗ ಜೊತೆಯಲ್ಲಿ ಕಾಶ್ಮೀರದ ನಿವಾಸಿಯಾದ ಬುಧಜೀವಿಯನ್ನು ಕರೆದುಕೊಂಡು ಹೋದ. ಫಾಹಿಯಾನನ ತರುವಾಯ ಮತ್ತೊಬ್ಬ ಚೀನಿಯಾತ್ರಿಕನಾದ ಚೆ-ಮಾಂಗ್ ಮತ್ತು ಅವನ ಜೊತೆಗಾರರು ಕಾಶ್ಮೀರದಲ್ಲಿ ಬಹಳ ಕಾಲದವರೆಗೆ ಇದ್ದು, ಬೌದ್ಧಮತದ ಪ್ರಗತಿಯನ್ನು ಕಂಡು ಆನಂದಿಸಿ, ಅನಂತರ ಭಾರತದ ಪವಿತ್ರ ಸ್ಥಳಗಳ ಸಂದರ್ಶನಾರ್ಥವಾಗಿ ಅಲ್ಲಿಂದ ಹೊರಟರು. 424ರಲ್ಲಿ ಚೆಮಾಂಗ್ ಚೀನವನ್ನು ಮರಳಿ ಸೇರಿದ. ಮತ್ತೊಬ್ಬ ಚೀನಿ ಸನ್ಯಾಸಿ ಫ-ಯಂಗ್ 20 ಮಂದಿ ಸನ್ಯಾಸಿಗಳ ಗುಂಪಿನೊಂದಿಗೆ 420ರಲ್ಲಿ ಹೊರಟು, ಗಿಲ್ಗಿಟ್ ಮೂಲಕ ಕಾಶ್ಮೀರಕ್ಕೆ ಬಂದು, ಒಂದು ವರ್ಷಕ್ಕೂ ಹೆಚ್ಚು ಕಾಲ ಅಲ್ಲಿದ್ದು ಸಂಸ್ಕೃತ ಭಾಷೆ ಕಲಿತು, ಬೌದ್ಧ ಗ್ರಂಥವನ್ನು ಅಧ್ಯಯನ ಮಾಡಿ, ಸ್ವದೇಶಕ್ಕೆ ಮರಳಿದ. ಯುವಾನ್‍ಚಾಂಗ್ ಕೂಡ ಕಾಶ್ಮೀರವನ್ನು ಪ್ರವೇಶಿಸಿ ಅಲ್ಲಿ ಸೂತ್ರಗಳ ಮತ್ತು ಶಾಸ್ತ್ರಗಳ ಅಧ್ಯಯನದಲ್ಲಿ ಎರಡು ವರ್ಷಗಳನ್ನು ಕಳೆದ (ಏಪ್ರಿಲ್ 631-ಏಪ್ರಿಲ್ 633). ಕಾಶ್ಮೀರದ ರಾಜ ಅವನಿಗೆ ಅದ್ದೂರಿಯ ಸ್ವಾಗತ ಕೋರಿದ. ಐದು ಸಾವಿರಕ್ಕೂ ಹೆಚ್ಚು ಮಂದಿ ಬೌದ್ಧ ಸನ್ಯಾಸಿಗಳು ಅನೇಕ ಸಂಘಗಳಲ್ಲಿ ಜೀವಿಸುತ್ತಿದ್ದುದನ್ನು ಯುವಾನ್‍ಚಾಂಗ್ ಅಲ್ಲಿ ಕಂಡ. ಒ-ಕಾಂಗ್ ಎಂಬ ಮತ್ತೊಬ್ಬ ಚೀನಿ ಬೌದ್ಧಯಾತ್ರಿಕ ಕಾಬೂಲ್ ಕಣಿವೆ ಮತ್ತು ಗಾಂಧಾರದ ಮೂಲಕ ಪ್ರ.ಶ.759ರಲ್ಲಿ ಕಿ-ಪಿನ್‍ಗೆ ಬಂದ. ಅವನು ಕಾಶ್ಮೀರದಲ್ಲಿ ನಾಲ್ಕು ವರ್ಷಗಳ ಕಾಲ ಇದ್ದ. ಅವನು ಸಂಸ್ಕೃತವನ್ನು ಅಭ್ಯಸಿಸಿ, ಮೂರು ಮಂದಿ ಉಪಾಧ್ಯಾಯರ ಸಹಾಯದಿಂದ ವಿನಯಪಿಟಕವನ್ನು ಕಲಿತುಕೊಂಡ. ಹೀಗೆ ಚೀನಿ ಯಾತ್ರಿಕರು ಕಾಶ್ಮೀರಕ್ಕೆ ಪದೇಪದೇ ಬರುತ್ತಲೇ ಇದ್ದರು.

ಕಾರ್ಕೋಟರಾಜ ವಂಶದ ದುರ್ಲಭವರ್ಧನ ಕಾಶ್ಮೀರದ ಸಿಂಹಾಸನವನ್ನೇರಿದಕಾಲದಿಂದ ಕಲ್ಹಣನ ಚರಿತ್ರೆ ಅಧಿಕೃತ ಗ್ರಂಥದ ಸ್ವರೂಪ ಪಡೆಯುತ್ತದೆ. 7-12ನೆಯ ಶತಮಾನದವರೆಗೂ ಕಾಶ್ಮೀರವನ್ನು ಆಳಿದ ರಾಜರ ಚರಿತ್ರೆಯನ್ನು ಅವನು ಖಚಿತವಾಗಿಯೂ ನಿರ್ಣಾಯಕವಾಗಿಯೂ ವಿವರಿಸಿದ್ದಾನೆ. ಕಲ್ಹಣನ ಪ್ರಕಾರ ದುರ್ಲಭವರ್ಧನ ಕಾಶ್ಮೀರವನ್ನು ಸು.36 ವರ್ಷಗಳ ಕಾಲ ಆಳಿದ. ಅವಂತಿವರ್ಮನವರೆಗೆ ಕಾಶ್ಮೀರವನ್ನಾಳಿದ ಕಾರ್ಕೋಟ ರಾಜವಂಶದ ಅರಸರು: ದುರ್ಲಭವರ್ಧನ (600-36), 2ನೆಯ ಪ್ರತಾಪಾದಿತ್ಯ (636-86), ಚಂದ್ರಾಪೀಡ (686-94), ತಾರಾಪೀಡ (694-99), ಮುಕ್ತಾಪೀಡ (699-736), ಕುವಲಾಯಾಪೀಡ (736-37), ವಜ್ರಾದಿತ್ಯ (737-44), ಪ್ರಿತ್ಯಪೀಡ (744-48), ಸಂಗ್ರಾಮಪೀಡ (748), ಜಜ್ಜ (748-51), ಜಯಾಪೀಡ (751-82), ಲಲಿತಾಪೀಡ (782-94), 2ನೆಯ ಸಂಗ್ರಾಮಪೀಡ (794-801), ಸಿಪ್ಪತ ಜಯಾಪೀಡ (801-53), ಉತ್ಪಲಾಪೀಡ (853-55).

ಅವಂತಿವರ್ಮನ ಕಾಲದಲ್ಲಿ (855-83) ಕಾಶ್ಮೀರ ಸಂಪದ್ಭರಿತವಾದ ರಾಜ್ಯವಾಗಿ ಬೆಳೆಯಿತು. ಯುದ್ಧಗಳನ್ನು ತೊರೆದು ದೇಶದಲ್ಲಿ ಶಾಂತಿ ನೆಮ್ಮದಿಗಳನ್ನು ಸ್ಥಾಪಿಸಲು ಅವನು ಬಹುವಾಗಿ ಶ್ರಮಿಸಿದ. ಅನೇಕ ದೇವಸ್ಥಾನಗಳನ್ನು ಕಟ್ಟಿಸಿ, ನಗರ ನಿರ್ಮಾಣ ಕಾರ್ಯದಲ್ಲಿ ಹೆಚ್ಚು ಆಸಕ್ತಿ ವಹಿಸಿದ. ಅವನ ಪತ್ನಿ ಮತ್ತು ಮಕ್ಕಳು ಅನೇಕ ದೇವಾಲಯಗಳನ್ನೂ ಮಠಗಳನ್ನೂ ಕಟ್ಟಿಸಿದರು. ಅವನ ಮಗನೂ ಉತ್ತರಾಧಿಕಾರಿಯೂ ಆದ ಶಂಕರವರ್ಮ (883-902) ತನ್ನ ವಿರೋಧಿಗಳನ್ನು ದಮಿಸಿ, ಅನೇಕ ರಾಜ್ಯಗಳನ್ನು ಜಯಿಸಿ, ಕಾಶ್ಮೀರದ ಕೀರ್ತಿಯನ್ನು ಎತ್ತಿಹಿಡಿದ. ಗೋಪಾಲವರ್ಮ (902-04), ರಾಣಿ ಸುಗಂಧಾ (904-06), ಸುರವರ್ಮ (933-34), ಉನ್ಮತ್ತಿವಂತಿ (937-39), ಯಶಸ್ಕರ (939-48), ಪರ್ವಗುಪ್ತ (949-50), ಅಭಿಮನ್ಯು (958-72), ನಂದಿಗುಪ್ತ (972-73), ಭೀಮಗುಪ್ತ (975-81), ದಿಡ್ಡಾ (981-1003)-ಇವರು ಕಾಶ್ಮೀರವನ್ನು ಆಳಿದರು.

ಹನ್ನೊಂದನೆಯ ಶತಮಾನದಲ್ಲಿ ಘಜ್ನಿ ಮಹಮದ್ ನಡೆಸಿದ ದಂಡಯಾತ್ರೆಗಳಿಂದ ಕಾಶ್ಮೀರ ಕಣಿವೆಗೆ ಯಾವ ಅಪಾಯವೂ ತಗುಲಲಿಲ್ಲ. ಆನಂದಪಾಲನ ಮಗನಾದ ತ್ರಿಲೋಚನಪಾಲ ಘಜ್ನಿ ಮಹಮದ್‍ನ ವಿರುದ್ಧ ನಡೆಸಿದ ಯುದ್ಧದಲ್ಲಿ ಕಾಶ್ಮೀರದ ಸೇನಾನಾಯಕನಾದ ತುಮಗ ಎಂಬುವನು ತ್ರಿಲೋಚನಪಾಲನ ಪರವಾಗಿ ಹೋರಾಡಿ ಸೋತುಹೋದನೆಂದು ತಿಳಿದುಬರುತ್ತದೆ. ಮಹಮದ್ ಆರನೆಯ ಸಾರಿ ಭಾರತದ ಮೇಲೆ ದಂಡಯಾತ್ರೆ ಮಾಡಿದಾಗ ಕಾಶ್ಮೀರದ ಮೇಲೆ ಧಾಳಿ ಮಾಡಿದ. ಆದರೆ ಈ ವಿಷಯದ ಬಗ್ಗೆ ಕಲ್ಹಣ ಏನನ್ನೂ ಹೇಳುವುದಿಲ್ಲ.

ಕಾಶ್ಮೀರವನ್ನು ಆಳಿದ ಹರ್ಷ (1089-1101) ಪ್ರಸಿದ್ಧ ದೊರೆ. ಇವನು ಅಪ್ರತಿಮ ವೀರ, ಮಹಾವಿದ್ವಾಂಸ, ಬಹುಭಾಷಾವಿದ, ಸಂಗೀತಪ್ರಿಯ, ಸಾಹಿತ್ಯ ಕಲಾಪ್ರವೀಣ. ಕಾಶ್ಮೀರವನ್ನು ಆಳಿದ ಕೊನೆಯ ಹಿಂದುರಾಜರಲ್ಲಿ ಇವನು ಶ್ರೇಷ್ಠ. ಕಾಶ್ಮೀರದ ರಾಜಾಸ್ಥಾನದ ವೈಭವವನ್ನು ಕುರಿತು ಕಲ್ಹಣ ಒಂದು ಹೃದಯಂಗಮ ಚಿತ್ರ ಕೊಟ್ಟಿದ್ದಾನೆ. ಉಡುಪು, ಆಭರಣಗಳಲ್ಲಿ ಹೊಸ ಹೊಸ ಶೈಲಿಗಳನ್ನು ಹರ್ಷ ಜಾರಿಗೆ ತಂದ. ಹರ್ಷನ ಮರಣಾನಂತರ ಕಾಶ್ಮೀರ ಸಿಂಹಾಸನವನ್ನು ಪಡೆಯುವುದಕ್ಕಾಗಿ ಉಕ್ಕಾಲ ಮತ್ತು ಸುಸ್ಸಾಲ ಎಂಬ ಇಬ್ಬರು ಸಹೋದರರು ನಡೆಸಿದ ಘೋರ ಹೋರಾಟವನ್ನು ಕಲ್ಹಣ ಚಿತ್ರಿಸಿದ್ದಾನೆ. ಸುಸ್ಸಾಲನ ಕೊಲೆಯಾದ ಮೇಲೆ ಅವನ ಮಗನಾದ ಜಯಸಿಂಹ (1128-55) ತನ್ನ ರಕ್ಷಣೆಗಾಗಿ ಕಾಶ್ಮೀರವನ್ನು ಬಿಟ್ಟು ಲೋಹಾರ ಎಂಬ ಸ್ಥಳಕ್ಕೆ ಓಡಿಹೋದ. ಅಲ್ಲಿ ಸ್ವಲ್ಪ ಕಾಲವಿದ್ದು, ಒಂದು ಸೈನ್ಯವನ್ನು ಸಜ್ಜುಗೊಳಿಸಿಕೊಂಡ. ಭಿಕ್ಷಕರನೆಂಬ ಶತ್ರು ಶ್ರೀನಗರದ ಕಡೆಗೆ ಧಾವಿಸುತ್ತಿದ್ದಾನೆಂಬ ವರ್ತಮಾನವನ್ನು ಕೇಳಿ, ಧಾರಾಕಾರವಾಗಿ ಬೀಳುತ್ತಿದ್ದ ಹಿಮವನ್ನು ಲೆಕ್ಕಿಸದೆ ಸೇನಾಸಮೇತನಾಗಿ ಹೊರಟು, ಯುದ್ಧದಲ್ಲಿ ಶತ್ರುವನ್ನು ಸೋಲಿಸಿ, ಕಾಶ್ಮೀರ ಸಿಂಹಾಸನವನ್ನೇರಿ ರಾಜ್ಯವನ್ನು ವಿಸ್ತರಿಸಿದ. ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದ ದಾರ್ದ್ ಜನರನ್ನು ಹೊಡೆದೋಡಿಸಿದ. ಹಿಂದು ರಾಜರ ಆಳಿಕೆಯ ಇನ್ನುಳಿದ ಕಾಲದ ಚರಿತ್ರೆಯನ್ನು 1459ರಲ್ಲಿ ಜೋನರಾಜನಿಂದ ರಚಿತವಾದ ಕೃತಿಯಿಂದ ತಿಳಿಯಬಹುದು.

ಹದಿಮೂರನೆಯ ಶತಮಾನದ ಆರಂಭದಲ್ಲಿ ಉತ್ತರ ಭಾರತ ಮತ್ತು ಮಧ್ಯ ಏಷ್ಯದ ಮೇಲೆ ಇಸ್ಲಾಂ ಪರಿಣಾಮಕಾರಿಯಾದ ಪ್ರಭಾವ ಬೀರಿತು. ಘಜ್ನಿ ಮಹಮದ್ ಮತ್ತು ಇತರರ ಆಕ್ರಮಣಗಳನ್ನು ಕಾಶ್ಮೀರ ತಪ್ಪಿಸಿಕೊಂಡರೂ ಇಸ್ಲಾಂ ಧರ್ಮ ಪ್ರಚಾರ ದಿಂದ ಅದು ಪ್ರಭಾವಿತವಾಯಿತು. ಸಹದೇವ (1301-20) ಸಿಂಹಾಸನಕ್ಕೆ ಬರುವ ಹೊತ್ತಿಗೆ ಕಾಶ್ಮೀರದಲ್ಲಿ ಹಲವರು ಇಸ್ಲಾಂ ಧರ್ಮವನ್ನು ಅವಲಂಬಿಸಿದ್ದರು. ಇಪ್ಪತ್ತು ವರ್ಷಗಳ ಕಾಲ (1318-38) ಪಿತೂರಿ, ಗಲಭೆ, ಕ್ರಾಂತಿ ಮತ್ತು ಯುದ್ಧಗಳ ಒಂದು ನಾಟಕವೇ ನಡೆದು ಅಂತ್ಯದಲ್ಲಿ ಕಾಶ್ಮೀರ ಮುಸ್ಲಿಂ ಆಳಿಕೆಗೆ ಒಳಪಟ್ಟಿತು. ಹಿಂದು ರಾಜರ ಆಳಿಕೆ 1338ರಲ್ಲಿ ಮುಕ್ತಾಯಗೊಂಡಿತು. ರಾಮಚಂದ್ರ ಸಹದೇವನ ದಕ್ಷ ಪ್ರಧಾನಿಯೂ ಸೇನಾಧಿಕಾರಿಯೂ ಆಗಿದ್ದ. ರಾಜ್ಯಾಡಳಿತದ ಎಲ್ಲ ಭಾಗಗಳನ್ನೂ ನೋಡಿಕೊಳ್ಳುತ್ತಿದ್ದವನು ರಾಮಚಂದ್ರನೇ. ಅವನ ಮಗಳಾದ ಕೋಟಾ ಎಂಬವಳು ತಂದೆಗೆ ಸಹಾಯಕಳಾಗಿದ್ದಳು. ರಿಂಚಿನ್ ಎಂಬ ನಿರಾಶ್ರಿತ ರಾಜಕುಮಾರ ಟಿಬೆಟ್ಟಿನಿಂದ ಓಡಿಬಂದು ರಾಮಚಂದ್ರನ ಆಶ್ರಯ ಬೇಡಿದ. ಸ್ವಲ್ಪ ಕಾಲಾನಂತರ ರಿಂಚಿನ್ ಕುತಂತ್ರದಿಂದ ಕಾಶ್ಮೀರವನ್ನು ವಶಪಡಿಸಿಕೊಂಡು ಅದರ ರಾಜನೆಂದು ಘೋಷಿಸಿಕೊಂಡ, ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು, ಕೋಟಾಳ ಕೈಹಿಡಿದು, ರಾಜ್ಯಭಾರ ಮಾಡತೊಡಗಿದ. ಲಾಮಾ ಮತವನ್ನು ಬಿಟ್ಟು ಹಿಂದುಧರ್ಮವನ್ನು ಅವಲಂಬಿಸುವಂತೆ ರಾಣಿ ಕೋಟಾ ಅವನನ್ನು ಕೇಳಿಕೊಂಡಳು. ಆದರೆ ಅವನು ಹಾಗೆ ಮಾಡದೆ ಇಸ್ಲಾಂ ಧರ್ಮಾವಲಂಬಿಯಾದ. ಅವನೇ ಕಾಶ್ಮೀರದ ಮೊಟ್ಟ ಮೊದಲನೆಯ ಮುಸ್ಲಿಂ ದೊರೆ. ರಿಂಚನ್ ಮತ್ತು ಅವನ ರಾಣಿ ಇಬ್ಬರೂ ರಾಜ್ಯಾಡಳಿತವನ್ನು ದಕ್ಷತೆಯಿಂದಲೂ ನ್ಯಾಯಪರತೆಯಿಂದಲೂ ನಡೆಸಿದರು. ದೇಶದಲ್ಲಿ ಶಾಂತಿ, ನೆಮ್ಮದಿ ನೆಲಸುವಂತೆ ಶ್ರಮಿಸಿದರು. ಸಹದೇವನ ಸಹೋದರನಾದ ಉದ್ಯಾನದೇವ ಕಾಶ್ಮೀರದ ಮೇಲೆ ಆಕ್ರಮಣ ನಡೆಸಿ, ರಿಂಚಿನನ ಕೊಲೆಗೆ ಪ್ರಯತ್ನಿಸಿದ. ಆದರೆ ರಿಂಚಿನ್ ಅವನನ್ನು ಅಡಗಿಸಿ ದೇಶದಲ್ಲಿ ಶಾಂತಿ ನೆಲಸುವಂತೆ ಮಾಡಿದ. ರಿಂಚಿನ್ ಮೃತನಾದ ಮೇಲೆ ಉದ್ಯಾನದೇವ ಕಾಶ್ಮೀರದ ಮೇಲೆ ಧಾಳಿ ಮಾಡಿದ. ಕೋಟಾರಾಣಿ ಅವನನ್ನು ಬರಮಾಡಿಕೊಂಡು, ಸಿಂಹಾಸನವನ್ನು ಅವನಿಗೆ ಅರ್ಪಿಸಿ, ಅವನ ಕೈಹಿಡಿದಳು. ತನ್ನ ಸೌಂದರ್ಯ, ಪ್ರೇಮ ಮತ್ತು ಬುದ್ಧಿವಂತಿಕೆಯಿಂದ ಅವನ ಮೇಲೆ ತನ್ನ ಅಧಿಕಾರ ಸ್ಥಾಪಿಸಿ, ರಾಜ್ಯಾಡಳಿತವನ್ನು ತಾನೇ ನಡೆಸತೊಡಗಿದಳು. ಇವಳೇ ಕಾಶ್ಮೀರದ ಕೊನೆಯ ಹಿಂದು ಮಹಾರಾಣಿ. ಬಹಳ ದರ್ಪದಿಂದ ರಾಜ್ಯವಾಳಿದಳು. 1338ರಲ್ಲಿ ಉದ್ಯಾನವನದೇವ ಮೃತನಾದ. ಉದ್ಯಾನದೇವನ ಕೈಕೆಳಗೆ ವಜೀರನಾಗಿದ್ದ ಷಮೀರನಿಗೂ ರಾಣಿಗೂ ಹೋರಾಟ ಆರಂಭವಾಯಿತು. ಷಮೀರನ ಕಿರುಕುಳವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಳು.

ಷಮೀರ ಸುಲ್ತಾನ್ ಷಂಸುದ್ದೀನ್ ಎಂಬ ಹೆಸರಿನಿಂದ (1339-42) ಕಾಶ್ಮೀರದ ಸಿಂಹಾಸನವನ್ನೇರಿ, ಕಾಶ್ಮೀರದಲ್ಲಿ ಸುಲ್ತಾನ್ ಸಂತತಿ ಅಭಿವೃದ್ಧಿ ಹೊಂದಲು ತಳಪಾಯವನ್ನು ಹಾಕಿದ. ಸುಲ್ತಾನ್ ಸಂತತಿಯವರು ಸು.222 ವರ್ಷಗಳ ಕಾಲ ಕಾಶ್ಮೀರವನ್ನು ಆಳಿದರು. ಕಾಶ್ಮೀರದ ದೀರ್ಘ ಇತಿಹಾಸದಲ್ಲಿ ಈ ಕಾಲ ಬಹಳ ಮುಖ್ಯವಾದ್ದು, ಕಾಶ್ಮೀರದ ಫಲವತ್ತಾದ ಭೂಮಿಯಲ್ಲಿ ಇಸ್ಲಾಂ ಧರ್ಮ ಬಹುಬೇಗ ಬೆಳೆಯತೊಡಗಿತು. ಸುಲ್ತಾನ್

ವಂಶದ ಜೈನ್-ಉಲ್-ಅಬದಿನನ ಕಾಲದಲ್ಲಿ ಕಾಶ್ಮೀರಿಗಳು ಸಾಹಿತ್ಯ ಮತ್ತು ಕಲೆಗಳ ಕ್ಷೇತ್ರದಲ್ಲಿ ಉನ್ನತ ಸ್ಥಾನ ಗಳಿಸಿದರು. ಕಾಶ್ಮೀರಿ ಭಾಷೆ ಬೆಳೆಯಿತು. ಮೀರ್ ಷಂಸುದ್ದೀನ್ ಇರಾಕಿಯಿಂದ ಷಿಯ ಮತ ಜಾರಿಗೆ ಬಂತು. ಜೈನ್-ಉಲ್-ಅಬದಿನನ ಕಾಲದಲ್ಲಿ ಸಂಸ್ಕೃತದ ಬದಲು ಪರ್ಷಿಯನ್ ಅಧಿಕೃತ ಭಾಷೆಯಾಯಿತು. ಈ ಕಾಲದಲ್ಲಿ ಪರ್ಷಿಯನ್ ಮತ್ತು ಅರಬ್ಬಿ ಕಲೆ ಮತ್ತು ಸಂಸ್ಕೃತಿಗಳು ಕಾಶ್ಮೀರದ ಮೇಲೆ ತಮ್ಮ ಪ್ರಭಾವ ಬೀರಿದುವು. ಇಸ್ಲಾಂ, ಬೌದ್ಧ ಮತ್ತು ಹಿಂದು ಸಂಸ್ಕೃತಿಗಳ ಸಂಯೋಜನೆ ಅಲ್ಲಿ ಸಾಧ್ಯವಾಯಿತು. ಮೂರು ವರ್ಷಗಳ ಆಳಿಕೆಯಲ್ಲಿ ಷಂಸುದ್ದೀನ್ ದೇಶದ ಪ್ರಗತಿಗಾಗಿ ಶ್ರಮಿಸಿ, ಜನರ ಸುಖದುಃಖಗಳಲ್ಲಿ ಭಾಗಿಯಾಗಿ, ಒಳ್ಳೆಯ ಆಡಳಿತಗಾರನೆಂಬ ಹೆಸರು ಪಡೆದ. ಸುಲ್ತಾನ್ ಅಲ್ಲಾಉದ್ದೀನ್ (1343–54), ಸುಲ್ತಾನ್ ಶಿಹಾಬ್-ಉದ್ದೀನ್ (1354–73), ಸುಲ್ತಾನ್ ಕುತ್ಬುದ್ದೀನ್ (1373–89), ಸುಲ್ತಾನ್ ಸಿಕಂದರ್ (1389–1413), ಸುಲ್ತಾನ್ ಅಲಿ ಷಾ (1413–20) ಇವರು ದೇಶವನ್ನು ಹೊರಗಿನ ಆಕ್ರಮಣದಿಂದ ರಕ್ಷಿಸಿ, ಜನರಿಗೆ ಸುಭದ್ರವಾದ ಸರ್ಕಾರ ನೀಡಲು ಶ್ರಮಿಸಿದರು.

ಸುಲ್ತಾನ್ ಜೈನ್-ಉಲ್-ಅಬದಿನ್ (1420–70) ಸಿಂಹಾಸನಾರೋಹಣ ಮಾಡಿದಂದಿನಿಂದ ಕಾಶ್ಮೀರ ವೈಭವಯುತವಾಗಿಯೂ ಸಂಪದ್ಭರಿತವಾಗಿಯೂ ಏಳಿಗೆ ಹೊಂದಲು ಆರಂಭಿಸಿತು. ಅವನು ಉದಾರಿ, ಕ್ಷಮಾಶೀಲ, ವಿಶಾಲ ಬುದ್ಧಿಯುಳ್ಳವ, ಪರಮತಸಹಿಷ್ಣು. ಅವನನ್ನು ಬುದ್ ಷಾ ಅಥವಾ ಮಹಾ ದೊರೆ ಎಂದು ಜನರು ಕರೆದು ತಮ್ಮ ಗೌರವವನ್ನು ಸೂಚಿಸಿದರು. ಒಳ್ಳೆಯ ಶಿಕ್ಷಣ ಪಡೆದು, ಸಮರ್‌ಖಂಡ್ ಮೊದಲಾದ ದೇಶಗಳಲ್ಲಿ ಸಂಚರಿಸಿ, ಜನರ ರೀತಿನೀತಿಗಳನ್ನು ಗಮನಿಸಿ, ವಿವಿಧ ಸರ್ಕಾರಗಳ ಸ್ವರೂಪವನ್ನು ಕಂಡು ಅವನು ಜನರಿಗೆ ಯಾವುದು ಹಿತವೋ ಅಂಥ ಕೆಲಸಗಳನ್ನು ಮಾಡಲು ಯತ್ನಿಸಿದ. ಆಡಳಿತ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಅಪ್ರಾಮಾಣಿಕ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ವಿಧಿಸುತ್ತಿದ್ದ. ಜನತೆಗೆ ಶೀಘ್ರವಾಗಿ ನ್ಯಾಯ ದೊರಕಿಸಿ ಕೊಡುತ್ತಿದ್ದ. ಸರ್ಕಾರವನ್ನು ಮಾನವೀಯತೆ ಮತ್ತು ಕಾನೂನುಗಳ ತಳಪಾಯದ ಮೇಲೆ ರಚಿಸಿದ. ಸೈನ್ಯ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನುಮಾಡಿ ಶಿಸ್ತು ನೆಲಸುವಂತೆ ಕ್ರಮ ಕೈಗೊಂಡ. ಅನೇಕ ಕೈಗಾರಿಕೆಗಳು ಸ್ಥಾಪಿತವಾದವು. ಸಂಗೀತ ಮತ್ತು ನೃತ್ಯ ಕಲೆಗಳ ಅಭಿವೃದ್ಧಿಗೆ ಉದಾರವಾಗಿ ಧನಸಹಾಯ ಮಾಡಿದ. ನಗರಗಳು, ಹಳ್ಳಿಗಳು ನಾಲೆಗಳು ಮತ್ತು ಸೇತುವೆಗಳ ನಿರ್ಮಾಣಕಾರ್ಯ ಕೈಗೊಂಡ. ವಿದ್ವಾಂಸರಿಗೆ ಆಶ್ರಯ ದೊರಕಿತು. ಬೋಧಿಭಟ್ಟ ಅನೇಕ ಸಂಸ್ಕೃತ ಗ್ರಂಥಗಳನ್ನು ಪರ್ಷಿಯನ್ ಭಾಷೆಗೆ ತರ್ಜುಮೆ ಮಾಡಿದ. ಜೋನರಾಜ ಮತ್ತು ಶ್ರೀವರರಾಜ ಇವನ ಆಶ್ರಯದಲ್ಲಿದ್ದರು. ಪರ್ಷಿಯನ್ ಮತ್ತು ಅರಬ್ಬೀ ವಿದ್ವಾಂಸರಾದ ಮೌಲನಾ ಕಬೀರ್, ಮುಲ್ಲಾ ಜಮಾಲ್ ಉದ್ದೀನ್ ಮತ್ತು ಕಾಜಿ ಮೀರ್ ಅಲಿ ಇವರ ಆಸ್ಥಾನವನ್ನು ಬೆಳಗಿದರು. 1470ರಲ್ಲಿ ಇವನು ಮರಣ ಹೊಂದಿದ.

ಜೈನ್-ಉಲ್-ಅಬದಿನನ ಎರಡನೆಯ ಮಗನಾದ ಹಾಜಿಖಾನ ಹೈದರ್ ಷಹ ಎಂಬ ಹೆಸರಿನಿಂದ 1470ರಲ್ಲಿ ಸಿಂಹಾಸನವನ್ನೇರಿದ. 1472ರಲ್ಲಿ ಅವನು ಕುಡಿದು ಮತ್ತನಾಗಿ ಅರಮನೆಯ ಉಪ್ಪರಿಗೆಯಿಂದ ಕಾಲುಜಾರಿ ಬಿದ್ದು ಸತ್ತ. ಹಸನ್ ಷಹ (1472–84). ಮಹಮದ್ ಷಹ (1484–86), ಫತೇ ಷಹ (1486–93), 2ನೆಯ ಮಹಮದ್ ಷಹ (1493–1505), 2ನೆಯ ಫತೇ ಷಹ (1505–14). 3ನೆಯ ಮಹಮದ್ ಷಹ (1514–15), 3ನೆಯ ಫತೇ ಷಹ (1515–17) ಮತ್ತು 4ನೆಯ ಮಹಮದ್ ಷಹ (1517–28) ಇವರು ಅನುಕ್ರಮವಾಗಿ ಕಾಶ್ಮೀರವನ್ನು ಆಳಿದರು. 1528ರಿಂದ ಮೊಗಲರು ಕಾಶ್ಮೀರವನ್ನು ವಶಪಡಿಸಿಕೊಳ್ಳುವವರೆಗೆ (1586) ಚಾಕ್ ವಂಶದವರು ಇಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ಹುಮಾಯೂನನ ಹೆಸರಿನಲ್ಲಿ ಮಿರ್ಜಾ ಹೈದರ್ ದುಗ್ಲಕ್ ಕಾಶ್ಮೀರವನ್ನು ವಶಪಡಿಸಿಕೊಂಡಿದ್ದರಿಂದ ಆ ರಾಜ್ಯ ತನಗೆ ಸೇರಬೇಕೆಂದು ಅಕ್ಬರ್ ಚಕ್ರವರ್ತಿ ಕಾಶ್ಮೀರವನ್ನು ಆಳುತ್ತಿದ್ದ ಯೂಸುಫ್‌ಖಾನನಿಗೆ ತಿಳಿಸಿ, ಆ ಬಗ್ಗೆ ಮಾತುಕತೆ ನಡೆಸಲು ಕೂಡಲೇ ಬರುವಂತೆ ಆಜ್ಞೆ ಮಾಡಿದ. ಯೂಸುಫಖಾನ್ ಅವನ ಆಜ್ಞೆಯನ್ನು ಉಪೇಕ್ಷಿಸಿದ. ಕೋಪಗೊಂಡ ಚಕ್ರವರ್ತಿ 1585ರಲ್ಲಿ ಐದು ಸಾವಿರ ಸೈನಿಕರ ಪಡೆಯನ್ನು ಭಗವಾನ್ ದಾಸನ ನಾಯಕತ್ವದಲ್ಲಿ ಕಾಶ್ಮೀರಕ್ಕೆ ಕಳುಹಿಸಿಕೊಟ್ಟ. ಯೂಸುಫ್‌ಖಾನನ ಮಗ ಯಾಕೂಬ್ ವೀರಾವೇಶದಿಂದ ಹೋರಾಡಿ ಮೊಗಲರ ಧಾಳಿಯನ್ನು ಪ್ರತಿಭಟಿಸಿದ. ಭಗವಾನ್‌ದಾಸ ಕಂಗೆಟ್ಟು ಯೂಸುಫ್ ಷಹನೊಂದಿಗೆ ಶಾಂತಿಸಂಧಾನ ಮಾಡಿಕೊಂಡು, ಯೂಸುಫ್ ಷಹನನ್ನು ಮೋಸದಿಂದ ಸೆರೆ ಹಿಡಿಸಿದ. 1592ರಲ್ಲಿ ಯೂಸುಫ್ ಷಹ ಕಾರಾಗೃಹದಲ್ಲಿ ಮರಣಹೊಂದಿದ. ಮತ್ತೆ ಅಕ್ಬರ್ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಕಾಸಿಮ್‌ಖಾನನ್ನು ಕಳುಹಿಸಿಕೊಟ್ಟ. 1586 ಅಕ್ಟೋಬರ್ 14ರಂದು ಮೊಗಲ್ ಸೈನ್ಯ ಶ್ರೀನಗರದ ಮೇಲೆ ಧಾಳಿಮಾಡಿತು. ಯಾಕೂಬ್ ಆಕ್ರಮಣಕಾರರನ್ನು ಎದುರಿಸಲಾರದೆ ದೇಶ ಬಿಟ್ಟು ಓಡಿಹೋದ. ಶ್ರೀನಗರ ಮೊಗಲರ ವಶವಾಯಿತು. ಅಂದಿನಿಂದ ಕಾಶ್ಮೀರ ಮೊಗಲ್ ಸಾಮ್ರಾಜ್ಯದ ಒಂದು ಪ್ರಾಂತವಾಯಿತು.

ಅಕ್ಬರ್ ಕಾಶ್ಮೀರದ ಮೇಲೆ ತನ್ನ ಅಧಿಕಾರವನ್ನು 19 ವರ್ಷಗಳ ಕಾಲ ಸ್ಥಾಪಿಸಿದ್ದ. ಆ ಕಾಲದಲ್ಲಿ ಮಿರ್ಜಾ ಖಾಸಿಂ (1586–87), ಮಿರ್ಜಾ ಯೂಸುಫ್ ಖಾನ್ ರಿಜ್ವಿ (1587–90), ಮಹಮದ್ ಕುಲಿಜ್ ಖಾನ್ (1590–1601) ಮತ್ತು ಮಿರ್ಜಾ ಅಲಿ ಅಕ್ಬರ್ (1601–06) ಸುಭೇದಾರರಾಗಿ ಕಾಶ್ಮೀರದ ಆಡಳಿತ ನಡೆಸಿದರು. ಅಕ್ಬರ್ ಕೈಗಾರಿಕೆಗಳನ್ನು ಸ್ಥಾಪಿಸಲು ಧನಸಹಾಯ ಮಾಡಿ, ಕಾಶ್ಮೀರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ. ಅಕ್ಬರನ ಮಗ ಜಹಾಂಗೀರ್ ಕಾಶ್ಮೀರದ ಸೌಂದರ್ಯದಿಂದ ಆಕರ್ಷಿತನಾಗಿ, ತನ್ನ ತಂದೆಯ ಜೊತೆಯಲ್ಲಿ 1589ರಲ್ಲಿ ಪ್ರಥಮವಾಗಿ ಅಲ್ಲಿಗೆ ಭೇಟಿ ಕೊಟ್ಟಿದ್ದ. ಆಮೇಲೆ ಪದೇಪದೇ ಕಾಶ್ಮೀರಕ್ಕೆ ಭೇಟಿಕೊಡುತ್ತಿದ್ದ. ಅವನ ಕಾಲದಲ್ಲಿ ಹಷಾಮ್ ಖಾನ್ (1609–12), ಸರ್ದಾರ್ ಖಾನ್ (1612–15), ಅಹಮದ್ ಬೇಗ್ (1615–18), ದಿಲಾವರ್ ಖಾನ್ (1618–20), ಇರಾದತ್ ಖಾನ್ (1620–22) ಮತ್ತು ಇತ್‌ಕದ್ ಖಾನ್ (1622–33) ಮೊಗಲ್ ಸುಭೇದಾರರಾಗಿ ಕಾಶ್ಮೀರದ ಆಡಳಿತವನ್ನು ದಕ್ಷತೆಯಿಂದ ನಡೆಸಿದರು. ಜಹಂಗೀರ್ ನಾನಾ ಬಗೆಯ ಹೂ ಗಿಡಗಳನ್ನೂ ಮರಗಳನ್ನೂ ಅಲ್ಲಿ ನೆಡಿಸಿ ಬೆಳೆಸಿದ. ಷಾಲಿಮಾರ್ ಮತ್ತು ನಿಷಾದ್ ಬಾಗ್ ಎಂಬ ಉದ್ಯಾನಗಳು ಫಲಪುಷ್ಪ ಗಿಡಮರಗಳಿಂದ ಕಂಗೊಳಿಸತೊಡಗಿದವು. ಜನರು ಮೂಢನಂಬಿಕೆಯಿಂದ ನಡೆಸುತ್ತಿದ್ದ ಕೆಲವು ಹೇಯಕೃತ್ಯಗಳನ್ನು ಜಹಂಗೀರ್ ನಿಲ್ಲಿಸಿದ. ಸಹಗಮನ, ಮಕ್ಕಳ ಬಲಿ, ಬಲವಂತ ಮತಾಂತರ ಮುಂತಾದವನ್ನು ತೊಡೆದುಹಾಕಿದ.

ಜಹಂಗೀರನ ಮಗನಾದ ಷಹಜಹಾನನಿಗೂ (1627–58) ಕಾಶ್ಮೀರದಲ್ಲಿ ಹೆಚ್ಚು ಆಸಕ್ತಿಯಿತ್ತು. ಅವನು ಕಾಶ್ಮೀರಕ್ಕೆ ಅನೇಕ ಬಾರಿ ಭೇಟಿ ಕೊಟ್ಟ. ಕಾಶ್ಮೀರದ ಗಿರಿಶ್ರೇಣಿಗಳು, ಪುಷ್ಕರಿಣಿಗಳು, ಉದ್ಯಾನಗಳು, ನದಿಗಳು, ಝರಿಗಳು, ಶುಕಪಿಕಗಳು ಅವನನ್ನು ಬಹುವಾಗಿ ಆಕರ್ಷಿಸಿದ್ದವು. ಅವನು ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದ. ಕಾಶ್ಮೀರದಲ್ಲಿ ಅನೇಕ ತೋಟಗಳನ್ನು ಬೆಳೆಸಿದ. ಮಸೀದಿಗಳನ್ನೂ ಸರಾಯ್‌ಗಳನ್ನೂ ಕಟ್ಟಿಸಿದ. ಜಫಾರ್‌ಖಾನ್, ಅಲಿಮರ್ದನ್ ಖಾನ್, ಲಷ್ಕರ ಖಾನ್ ಇವರು ಮೊಗಲ್ ಸುಭೇದಾರರಾಗಿದ್ದರು. ಕವಿಯೂ ರಾಜಕಾರಣಿಯೂ ಯೋಧನೂ ಆದ ಜಫಾರ್ ಖಾನ್ ಬಾಲ್ಟಿಸ್ತಾನದ ದಂಗೆಕೋರರನ್ನು ಅಡಗಿಸಿ, ಕಾಶ್ಮೀರದಲ್ಲಿ ಸುಖಶಾಂತಿ ನೆಲಸುವಂತೆ ಕ್ರಮ ಕೈಗೊಂಡ. ಷಹಜಹಾನನ ಮಗ ಮುರಾ ರಾಜಕುಮಾರ ಕಾಶ್ಮೀರದ ಆಡಳಿತಾಧಿಕಾರಿಯಾಗಿ ಒಂದು ವರ್ಷ ಇದ್ದ.

ಷಹಜಹಾನನ ಮರಣಾನಂತರ (1658) ಅವನ ಮಗ ಔರಂಗ್‌ಜೇಬ್ ದೆಹಲಿ ಸಿಂಹಾಸನವನ್ನೇರಿದ. 1665ರಲ್ಲಿ ಒಮ್ಮೆ ಅವನು ಕಾಶ್ಮೀರಕ್ಕೆ ಭೇಟಿಕೊಟ್ಟ. ತನ್ನ ಮಗಳು ರೋಷನಾರಳೊಂದಿಗೆ ಔರಂಗ್‌ಜೇಬ್ ಕಾಶ್ಮೀರಕ್ಕೆ ಭೇಟಿ ಕೊಟ್ಟದ್ದನ್ನು ಫ್ರಾಂಕೋಯಿಸ್ ಬರ್ನಿಯರ್ ಎಂಬ ಪ್ರವಾಸಿ ರಮ್ಯವಾಗಿ ವರ್ಣಿಸಿದ್ದಾನೆ. ಔರಂಗ್‌ಜೇಬನ 49 ವರ್ಷಗಳ ಆಳಿಕೆಯಲ್ಲಿ 14 ಮಂದಿ ಗವರ್ನರುಗಳು ದಕ್ಷತೆಯಿಂದ ಕಾಶ್ಮೀರದ ಆಡಳಿತ ನಡೆಸಿದರು. ಅವರೂ ಹೊಸಹೊಸ ತೋಟಗಳನ್ನೂ ಮಸೀದಿಗಳನ್ನೂ ವಿಹಾರಸ್ಥಳಗಳನ್ನೂ ಕಟ್ಟಿಸಿದರು. ಔರಂಗ್‌ಜೇಬನ ಮರಣಾನಂತರ (1707) ದೆಹಲಿ ಸಿಂಹಾಸನಕ್ಕೆ ಬಂದ ಬಾದಷಹರೂ ಕಾಶ್ಮೀರದ ಆಡಳಿತದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದರು.

ಅನಂತರ ಆಫ್ಘನರ ಆಳಿಕೆ ಬಂತು. ಅಹಮದ್ ಷಾ ಅಬ್ದಾಲಿ ತನ್ನ ದಿಗ್ವಿಜಯವನ್ನು ಮುಗಿಸಿಕೊಂಡು ಲಾಹೋರಿನಲ್ಲಿ ಬೀಡುಬಿಟ್ಟಿದ್ದಾಗ, ಪ್ರಭಾವಶಾಲಿಗಳಾದ ಇಬ್ಬರು ಕಾಶ್ಮೀರಿಗಳು, ಗವರ್ನರ್ ಅಬುಲ್ ಖಾಸಿಂಖಾನನ ಮೇಲೆ ಇಲ್ಲದ ಸಲ್ಲದ ಆರೋಪಣೆಗಳನ್ನು ಹೊರಿಸಿ, ಕಾಶ್ಮೀರದ ಮೇಲೆ ಧಾಳಿ ಮಾಡುವಂತೆ ಅಬ್ದಾಲಿಯನ್ನು ಕೇಳಿಕೊಂಡರು. ಅಬ್ದಾಲಿ ಬಹು ಸಂತೋಷದಿಂದ ಅವರ ಆಹ್ವಾನವನ್ನು ಅಂಗೀಕರಿಸಿ, 1753ರಲ್ಲಿ ಒಂದು ದೊಡ್ಡ ಆಫ್ಘನ್ ಸೈನ್ಯವನ್ನು ಕಳುಹಿಸಿಕೊಟ್ಟ. 15 ದಿವಸಗಳವರೆಗೆ ಆಫ್ಘನರಿಗೂ ಖಾಸಿಂಖಾನನ ಸೈನಿಕರಿಗೂ ಭೀಕರ ಯುದ್ಧ ನಡೆದು, ಅಂತ್ಯದಲ್ಲಿ ಆಫ್ಘನರು ಗೆದ್ದರು. ಆಫ್ಘನರು ಕಾಶ್ಮೀರದಲ್ಲಿ ಮೊಗಲರ ಆಳಿಕೆಯನ್ನು ಕೊನೆಗಾಣಿಸಿದರು.

ಆಫ್ಘನರ ಆಳಿಕೆಯಲ್ಲಿ ದೇಶ ಅಧೋಗತಿಗೆ ಇಳಿಯಿತು. ಆಫ್ಘನ್ ಸೈನಿಕರು ಪಟ್ಟಣಗಳನ್ನೂ ಹಳ್ಳಿಗಳನ್ನೂ ಲೂಟಿಮಾಡಿ, ಹಿಂಸಾಕೃತ್ಯಗಳಲ್ಲಿ ತೊಡಗಿದರು. ಅರಮನೆ ಯಲ್ಲಿದ್ದ ಧನಕನಕ ವಸ್ತುವಾಹನಗಳನ್ನೆಲ್ಲ ಆಕ್ರಮಣಕಾರರು ವಶಪಡಿಸಿಕೊಂಡರು. ಸುಖಜೀವನಮಲ್ಲನೆಂಬವನು ಪ್ರಬಲನಾಗಿ ಕಾಶ್ಮೀರದ ದೊರೆಯಾದ. ಅಹಮದ್ ಷಾ ಅಬ್ದಾಲಿ ಸುಖಜೀವನನ ಮೇಲೆ ಯಾವ ಶಿಸ್ತಿನ ಕ್ರಮವನ್ನೂ ಕೈಗೊಳ್ಳದೆ, ಕಾಶ್ಮೀರದ ವೈಸ್‌ರಾಯಿಯೆಂದು ಅವನಿಗೆ ಮಾನ್ಯತೆ ನೀಡಿ, ಅವನ ಸಹಾಯಕ್ಕೆ ಖ್ವಾಜಾ ಕಿಜಾಕ್ ಎಂಬ ಆಫ್ಘನ್ ಶ್ರೀಮಂತನನ್ನು ಕಳುಹಿಸಿಕೊಟ್ಟ. ಆದರೆ ಅಹಮದ್ ಷಾ ಅಬ್ದಾಲಿಯ ದಂಡಯಾತ್ರೆಯಿಂದಲೂ ಮರಾಠರು ಮತ್ತು ಸಿಖ್ಖರನ್ನು ಎದುರಿಸಬೇಕಾದ್ದರಿಂದಲೂ ಆಫ್ಘನರಿಗೆ ಆರ್ಥಿಕ ತೊಂದರೆಗಳು ಉದ್ಭವಿಸಿದುವು. ಹಣಕ್ಕಾಗಿ ಅವರು ಸುಖಜೀವನನನ್ನು ಪೀಡಿಸಿದರು. ಸುಖಜೀವನ ಶ್ರೀಮಂತರ ಸಲಹೆಯ ಮೇರೆಗೆ ಆಫ್ಘನರನ್ನೂ ಖ್ವಾಜಾ ಕಿಜಾಕನನ್ನೂ ಬಾರಾಮುಲದಲ್ಲಿ ಸೋಲಿಸಿ ಓಡಿಸಿದ. ಕೋಪಗೊಂಡ ಅಬ್ದಾಲಿ ಸುಖಜೀವನನ್ನು ಶಿಕ್ಷಿಸಿ ಕಾಶ್ಮೀರವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತೊಂದು ಸೈನ್ಯವನ್ನು ಕಳುಹಿಸಿಕೊಟ್ಟ. ಆದರೆ ಆ ಸೈನ್ಯ ಮಳೆಗಾಲದಲ್ಲಿ ದಂಡಯಾತ್ರೆ ಕೈಗೊಂಡದ್ದರಿಂದ ಕಾಶ್ಮೀರಿಗಳಿಗೆ ಸೋತು ರಣರಂಗವನ್ನು ಬಿಟ್ಟು ಓಡಿತು. ಹೊರ ಆಕ್ರಮಣದಿಂದ ರಾಜ್ಯವನ್ನು ರಕ್ಷಿಸಿದರೂ ಪ್ರಕೃತಿಯ ಪ್ರಕೋಪಕ್ಕೆ ಗುರಿಯಾದ ಕಾಶ್ಮೀರವನ್ನು ಸುಖಜೀವನ ರಕ್ಷಿಸಲಾರದೆ ಹೋದ. 1755ರಲ್ಲಿ ಕ್ಷಾಮ ತಲೆದೋರಿ ಅನೇಕ ಮಂದಿ ಕಾಶ್ಮೀರಿಗಳು ಬಲಿಯಾದರು. 1762ರಲ್ಲಿ ಅಹಮದ್ ಷಾ ಅಬ್ದಾಲಿ ದೊಡ್ಡ ಸೈನ್ಯವನ್ನು ಕಾಶ್ಮೀರದ ಮೇಲೆ ಧಾಳಿ ಮಾಡಲು ಕಳುಹಿಸಿದ. ಕಾಶ್ಮೀರಿ ಸೈನಿಕರ ದ್ರೋಹದಿಂದ ಸುಖಜೀವನ ಸೆರೆಸಿಕ್ಕಿದ. ಕಣ್ಣುಗಳನ್ನು ಕೀಳಿಸಿ, ಆನೆಯ ಕಾಲಿನಿಂದ

ತುಳಿಸಿ ಅವನನ್ನು ಸಾಯಿಸಲಾಯಿತು. ಮತ್ತೊಮ್ಮೆ ಕಾಶ್ಮೀರ ಆಫ್ಘನರ ಆಳಿಕೆಗೆ ಒಳಪಟ್ಟಿತು. ಅಹಮದ್ ಷಾ ಅಬ್ದಾಲಿಯ ಮರಣಾನಂತರ ಅವನ ಮಗನಾದ ತೈಮೂರ್ ಷಹ ಆಫ್ಘನ್ ಸಿಂಹಾಸನವನ್ನೇರಿದ. ಅವನು ತನ್ನ ಅಧಿಕಾರವನ್ನು ಕಾಶ್ಮೀರದ ಮೇಲೆ ಭದ್ರವಾಗಿ ಸ್ಥಾಪಿಸಿದ. ಕಾಶ್ಮೀರ ಸಂಪತ್ತಿನ ಗಣಿಯೆಂದು ಆಫ್ಘನರು ಭಾವಿಸಿದ್ದರು. ಅನೇಕ ಮಂದಿ ಆಫ್ಘನ್ ಆಡಳಿತಾಧಿಕಾರಿಗಳು ಕಾಶ್ಮೀರವನ್ನು ಆಳಿದರು. ಕೊನೆಗೆ ಕಾಶ್ಮೀರದಲ್ಲಿ ಆಫ್ಘನ್ ಆಡಳಿತ ಅಂತ್ಯಗೊಳ್ಳಲು ಆಡಳಿತಾಧಿಕಾರಿಗಳು ಅನುಸರಿಸಿದ ಕಠಿಣನೀತಿಯೇ ಬಹುಮಟ್ಟಿಗೆ ಕಾರಣವಾಯಿತು. ಎಲ್ಲ ಪಂಥದ ಜನರೂ ಅವರ ಆಳಿಕೆಯನ್ನು ಕಿತ್ತೊಗೆಯಬೇಕೆಂದು ಸಂಕಲ್ಪಿಸಿದರು. ಕಾಶ್ಮೀರವನ್ನು ರಕ್ಷಿಸಬೇಕೆಂದು ಸಿಖ್ ದೊರೆ ರಣಜಿತ್‌ಸಿಂಗನಿಗೆ ಮೊರೆಯಿಟ್ಟರು. ಅವನು 1819ರಲ್ಲಿ ಕಾಶ್ಮೀರವನ್ನು ಆಫ್ಘನರಿಂದ ಕಸಿದುಕೊಂಡ. ರಣಜಿತ್ ಸಿಂಗನ ಮತ್ತು ಅವನ ಉತ್ತರಾಧಿಕಾರಿಗಳ ಕಾಲದಲ್ಲಿ ಎಂಟು ಮಂದಿ ಹಿಂದು ಮತ್ತು ಸಿಖ್ ಗವರ್ನರುಗಳೂ ಅಂತ್ಯದಲ್ಲಿ ಇಬ್ಬರು ಮುಸ್ಲಿಂ ಗವರ್ನರುಗಳೂ ಕಾಶ್ಮೀರದ ಆಡಳಿತ ನಡೆಸಿದರು.

ಸಿಖ್ಖರು ಕಾಶ್ಮೀರವನ್ನು ವಶಪಡಿಸಿಕೊಂಡ ಮೇಲೆ, ದೋಗ್ರ ರಜಪೂತ ಗುಲಾಬ್ ಸಿಂಗನ ಆಡಳಿತದಲ್ಲಿದ್ದ ಜಮ್ಮುವಿಗೆ ಐತಿಹಾಸಿಕ ಪ್ರಾಮುಖ್ಯ ಬಂತು. ಈತ ಕಾಶ್ಮೀರದ ಮೇಲೂ ತನ್ನ ಅಧಿಕಾರವನ್ನು ವಿಸ್ತರಿಸಿ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಆಸ್ತಿಭಾರ ಹಾಕಿದ. 18ನೆಯ ಶತಮಾನದ ಮಧ್ಯಭಾಗದಲ್ಲಿ ಜಮ್ಮುವನ್ನು ಆಳುತ್ತಿದ್ದ ರಾಜ ರಣಜಿತ್ ದೇವ ಎಂಬವನ ಸಂತತಿಗೆ ಸೇರಿದವನು ಗುಲಾಬ್ ಸಿಂಗ್. ಕೆಲವರು ಅವನನ್ನು ರಾಜತರಂಗಿಣಿಯಲ್ಲಿ ಉಲ್ಲೇಖಿತನಾದ ಗೋಣಂದನ ಸಂತತಿಯವನೆಂದು ಹೇಳುತ್ತಾರೆ. ಗುಲಾಬ್ ಸಿಂಗನ ಕಾಲಕ್ಕೆ ಹಿಂದೆ ಜಮ್ಮುವಿಗೆ ಕೇವಲ ಸ್ಥಳೀಯ ಪ್ರಾಮುಖ್ಯ ಇತ್ತು. 1780ರ ತರುವಾಯ ಜಮ್ಮುವಿನ ದೊರೆಗಳು ಲಾಹೋರಿನ ಸಿಖ್ಖರ ಸಾಮಂತರಾಗಿದ್ದರು. ಸಿಖ್ ಸೇನೆಗೆ ಸೇರಿದ ಗುಲಾಬ್ ಸಿಂಗನಿಗೆ ರಣಜಿತ್ ಸಿಂಗ್ ಉನ್ನತ ಅಧಿಕಾರ ನೀಡಿದ; 1820ರಲ್ಲಿ ಅವನನ್ನು ಜಮ್ಮುವಿನ ದೊರೆಯಾಗಿ ನೇಮಿಸಿದ. ಮೊದಮೊದಲು ಜಮ್ಮುವನ್ನು ಆಳುವುದು ಅವನಿಗೆ ಬಲು ಕಷ್ಟವಾಗಿತ್ತು. ಹೀಗೆ ಸು.10 ವರ್ಷಗಳ ಕಾಲ ಹೆಣಗಿದ ಮೇಲೆ ಅವನೂ ಅವನ ಇಬ್ಬರು ಸೋದರರೂ ಕಾಶ್ಮೀರದಿಂದ ಪಂಜಾಬಿನ ನೆಲದ ಮೇಲೆ ಪ್ರಭುತ್ವ ಸ್ಥಾಪಿಸಿದರು. ಭದರ್‌ವಾರ್ ಮತ್ತು ಕಿಷ್ಟ್‌ವಾರ್ ಪ್ರದೇಶಗಳೂ ಅವರಿಗೆ ಸೇರಿದುವು. ರಣಜಿತ್ ಸಿಂಗ್ 1839ರಲ್ಲಿ ತೀರಿಕೊಂಡ. 1845–46ರಲ್ಲಿ ಇಂಗ್ಲಿಷರಿಗೂ ಸಿಖ್ಖರಿಗೂ ನಡೆದ ಯುದ್ಧದಲ್ಲಿ ಸಿಖ್ಖರು ಸೋತರು. 1846ರ ಲಾಹೋರ್ ಒಪ್ಪಂದದ ಪ್ರಕಾರ ಕೆಲವು ಪ್ರದೇಶಗಳ ಜೊತೆಗೆ ಕೊಡಬೇಕಾದ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡಲಾರದ ಸಿಖ್ಖರು ಅದರ ಬದಲು ಕಾಶ್ಮೀರ ಪ್ರದೇಶವನ್ನು ಬ್ರಿಟಿಷರಿಗೆ ಕೊಡಬೇಕಾಯಿತು. ಜಮ್ಮುವನ್ನಾಳುತ್ತಿದ್ದ ಗುಲಾಬ್ ಸಿಂಗನಿಗೆ ಕಾಶ್ಮೀರವನ್ನು ವಹಿಸಿಕೊಟ್ಟು ಅವನ ಸ್ನೇಹ ಸಂಪಾದಿಸಲು ಬ್ರಿಟಿಷರು ಬಯಸಿದರು. ಬ್ರಿಟಿಷರಿಗೆ ಸಿಖ್ಖರಿಂದ ಬರಬೇಕಾಗಿದ್ದ ಹಣವನ್ನು ಕೊಡಲು ಗುಲಾಬ್ ಸಿಂಗ್ ಸಿದ್ಧನಿದ್ದ. 1846 ಮಾರ್ಚ್ 16ರಂದು ಇಂಗ್ಲಿಷರಿಗೂ ಗುಲಾಬ್ ಸಿಂಗನಿಗೂ ಆದ ಅಮೃತಸರ ಕೌಲಿನ ಪ್ರಕಾರ ಇಂಗ್ಲಿಷರು ಗುಲಾಬ್ ಸಿಂಗನಿಗೆ ಜಮ್ಮು ಮತ್ತು ಕಾಶ್ಮೀರದ ದೊರೆಯೆಂದು ಮನ್ನಣೆ ನೀಡಿದರು. ಆ ವೇಳೆಗೆ ಆಗಲೇ ಗುಲಾಬ್ ಸಿಂಗ್ ಜಮ್ಮುವಿನ ಪೂರ್ವ ಪಶ್ಚಿಮ ಪ್ರದೇಶಗಳನ್ನೂ ಲಾಸಕ್ಕೆ ಸೇರಿದ ಲಡಾಕನ್ನೂ ಸ್ವತಂತ್ರ ಮುಸ್ಲಿಂ ಅರಸರ ಆಳಿಕೆಗೆ ಒಳಪಟ್ಟಿದ್ದ ಸ್ಕಾರ್ದುವನ್ನೂ ಗೆದ್ದುಕೊಂಡಿದ್ದ.

ಗುಲಾಬ್ ಸಿಂಗ್ 1857ರಲ್ಲಿ ತೀರಿಕೊಂಡ. ಅವನ ಮಗನಾದ ರಣಬೀರ್ ಸಿಂಗ್ (1857–85) ಪಟ್ಟಕ್ಕೆ ಬಂದ. 1857ರಲ್ಲಿ ಭಾರತದಲ್ಲಿ ನಡೆದ ಬಂಡಾಯದಲ್ಲಿ ರಣಬೀರ್ ಸಿಂಗ್ ಬ್ರಿಟಿಷರಿಗೆ ವಿಧೇಯನಾಗಿದ್ದುದರಿಂದ, ಸ್ವಂತ ಮಕ್ಕಳಿಲ್ಲದ ಅವನು ದತ್ತು ತೆಗೆದುಕೊಳ್ಳಲು ಬ್ರಿಟಿಷರು ಅವಕಾಶ ನೀಡಿದರು. ಮುಂದಿನ ದೊರೆ ಮಹಾರಾಜ ಪ್ರತಾಪ್ ಸಿಂಗ್. ಅವನ ಆಡಳಿತದ ಕಾಲದಲ್ಲಿ (1885–1925) ಪ್ರಥಮವಾಗಿ ಕಾಶ್ಮೀರಕ್ಕೆ ಒಬ್ಬ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಲಾಯಿತು. ಆಡಳಿತದಲ್ಲಿ ಸುಧಾರಣೆಗಳಾದುವು. ಭೂಕಂದಾಯವನ್ನು ನಿರ್ಧರಿಸಲಾಯಿತು. ಇವನು ಗಿಲ್ಗಿಟ್ ಮೇಲೆ ಕಾಶ್ಮೀರದ ಸಾರ್ವಭೌಮತ್ವವನ್ನು ಮತ್ತೆ ಸ್ಥಾಪಿಸಿದ. ಮಹಾರಾಜ ಹರಿ ಸಿಂಗ್ ಪಟ್ಟಕ್ಕೆ ಬಂದದ್ದು 1925ರಲ್ಲಿ.

1947ರಲ್ಲಿ ಭಾರತದ ವಿಭಜನೆಯಾದ ಅನಂತರ ಭಾರತ ಮತ್ತು ಪಾಕಿಸ್ತಾನಗಳ ನಡುವಣ ಕಲಹಕ್ಕೆ ಕಾಶ್ಮೀರ ಒಂದು ಕಾರಣವಾಯಿತು. 1947ರ ಅಕ್ಟೋಬರ್ 20ರಂದು ಪಾಕಿಸ್ತಾನದ ವಾಯವ್ಯಗಡಿ ಪ್ರದೇಶದಿಂದ ಪಾಕಿಸ್ತಾನಿಗಳು ಕಾಶ್ಮೀರದ ಮೇಲೆ ಆಕ್ರಮಣ ನಡೆಸಿ ರಾಜಧಾನಿ ಶ್ರೀನಗರದವರೆಗೆ ಧಾವಿಸಿ ಬಂದರು. ಕಾಶ್ಮೀರದ ದೊರೆ ಆ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸಿ, ಆಕ್ರಮಣಕಾರರನ್ನು ಎದುರಿಸಲು ಭಾರತದ ಸಹಾಯ ಕೋರಿದರು. ಭಾರತದ ಸೇನೆ ಧಾಳಿಕಾರರನ್ನು ಹಿಮ್ಮೆಟ್ಟಿಸಿತಲ್ಲದೆ, ಪಾಕಿಸ್ತಾನಿ ಆಕ್ರಮಣವನ್ನು ನಿಲ್ಲಿಸಲು ವಿಶ್ವಸಂಸ್ಥೆಗೆ ದೂರು ನೀಡಿತು. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯದಂತೆ ಕಾಶ್ಮೀರದಲ್ಲಿ ಕದನ ನಿಲುಗಡೆ ಆಯಿತು. ಆಕ್ರಮಣ ಸಂಪೂರ್ಣವಾಗಿ ತೆರವಾಗಿ ಆ ರಾಜ್ಯದಲ್ಲಿ ಪ್ರಸಾಮಾನ್ಯ ಪರಿಸ್ಥಿತಿ ಏರ್ಪಟ್ಟ ಮೇಲೆ ಆ ರಾಜ್ಯದ ಭವಿಷ್ಯದ ಬಗ್ಗೆ ಜನಮತಗಣನೆ ಆಗಬೇಕೆಂದು ನಿರ್ಣಯಿಸಲಾಯಿತು. ಆದರೆ ಆಕ್ರಮಿತ ಪ್ರದೇಶದಿಂದ ಪಾಕಿಸ್ತಾನ ವಾಪಸಾಗಲಿಲ್ಲವಾದ್ದರಿಂದ ಇದು ಸಾಧ್ಯವಾಗಲಿಲ್ಲ. 1949ರಲ್ಲಿ ಜಮ್ಮು ಮತ್ತು ಕಾಶ್ಮೀರದ ದೊರೆ ಹರಿ ಸಿಂಗ್ ಸಿಂಹಾಸನ ತ್ಯಾಗ ಮಾಡಿದ. ಅವರ ಮಗ ಯುವರಾಜ ಕರಣ್ ಸಿಂಗ್ ರೀಜೆಂಟ್ ಆದ. ಕಾಶ್ಮೀರದ ಆಕ್ರಮಣ ತೆರವಾಗುವಂತೆ ಭಾರತ ನಡೆಸಿದ ಪ್ರಯತ್ನವೆಲ್ಲ ವ್ಯರ್ಥವಾಗಿದೆ. ಕಾಶ್ಮೀರ ಭಾರತದ ಅವಿಭಾಜ್ಯ ಭಾಗವಾಗಿದ್ದರೆ ಮಾತ್ರವೇ ತಮ್ಮ ಭವಿಷ್ಯ ಸುಭದ್ರವೆಂಬುದನ್ನು ಅಲ್ಲಿಯ ಪ್ರಜೆಗಳು ಅನಂತರ ಅಲ್ಲಿ ನಡೆದ ಚುನಾವಣೆಗಳಲ್ಲಿ ಸುವ್ಯಕ್ತವಾಗಿದೆ. ಕ್ರಮಕ್ರಮವಾಗಿ ಕಾಶ್ಮೀರದ ಜನತೆಯ ಆಶಯವನ್ನು ಭಾರತ ಸರ್ಕಾರ ಕಾರ್ಯಗತಗೊಳಿಸಿದೆ. 1952–56ರಲ್ಲಿ ಕರಣ್ ಸಿಂಗರನ್ನು ಜಮ್ಮು–ಕಾಶ್ಮೀರದ ಸದರ್–ಇ–ರಿಯಾಸತ್ ಆಗಿ ಭಾರತ ಸರ್ಕಾರ ನೇಮಕ ಮಾಡಿತು. ಈಗ ಅಲ್ಲಿ ಭಾರತದ ಇತರ ರಾಜ್ಯಗಳಲ್ಲಿರುವಂತೆ ರಾಜ್ಯಪಾಲರಿದ್ದಾರೆ. ಆಕ್ರಮಿತ ಪ್ರದೇಶವನ್ನು ತೆರವು ಮಾಡುವ ಬದಲು ಜಮ್ಮು–ಕಾಶ್ಮೀರದ ಉಳಿದ ಭಾಗಗಳನ್ನೂ ಆಕ್ರಮಿಸಿಕೊಳ್ಳಲು ಪಾಕಿಸ್ತಾನ ಹಲವು ಬಾರಿ ಪ್ರಯತ್ನಿಸಿತು. ಆದರೆ ಅದು ಸಾಧ್ಯವಾಗಲಿಲ್ಲ.

ಜಮ್ಮು–ಕಾಶ್ಮೀರದ ಭಾಗವಾದ ಲಡಾಕಿನಲ್ಲಿ ಚೀನಿಯರು ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡು, ಸಿಂಕಿಯಾಂಗ್ ಟಿಬೆಟ್‌ಗಳೊಡನೆ ಸಂಪರ್ಕ ಏರ್ಪಡಿಸುವ ರಸ್ತೆಯೊಂದನ್ನು ನಿರ್ಮಿಸಿದ್ದುದಾಗಿ 1959ರಲ್ಲಿ ತಿಳಿಯಿತು. ಗಡಿಯನ್ನು ಕಾಯುತ್ತಿದ್ದ ಭಾರತ ಸೈನಿಕರ ಮೇಲೆ ಚೀನಿಯರು ಗುಂಡು ಹಾರಿಸಿ ಕೆಲವರನ್ನು ಕೊಂದರು. ಚೀನೀಯರ ಆಕ್ರಮಣ ನೀತಿಯನ್ನು ಭಾರತ ಖಂಡಿಸಿತು. ಭಾರತದ ವಿರೋಧಕ್ಕೆ ಉತ್ತರವಾಗಿ ಚೀನೀ ಸರ್ಕಾರ ವಿವಾದಕ್ಕೊಳಪಟ್ಟ ಪ್ರದೇಶವೆಲ್ಲವೂ ತನಗೆ ಸೇರಬೇಕೆಂದು ಹೇಳಿ, ತನ್ನ ಸೇನೆಯನ್ನು ಅಲ್ಲಿಂದ ವಾಪಸ್ ಕರೆಸಿಕೊಳ್ಳಲು ನಿರಾಕರಿಸಿತು. 1962ರ ಅಕ್ಟೋಬರಿನಲ್ಲಿ ಚೀನ ಭಾರತದ ಗಡಿಯಲ್ಲಿ ವ್ಯಾಪಕವಾಗಿ ಆಕ್ರಮಣ ನಡೆಸಿತು. ಆ ವರ್ಷದ ನವೆಂಬರ್ ತಿಂಗಳಲ್ಲಿ ಅದು ಏಕಪಕ್ಷೀಯವಾಗಿ ಕದನವಿರಾಮ ಘೋಷಿಸಿತು. ಆದರೆ ಉತ್ತರ ಲಡಾಕ್ ಪ್ರದೇಶದಲ್ಲಿ ಅದು ಆಕ್ರಮಿಸಿಕೊಂಡಿದ್ದ 36,120 ಚ.ಕಿಮೀ ಪ್ರದೇಶದಿಂದ ಹಿನ್ನಡೆಯಲಿಲ್ಲ.

ಕಾಶ್ಮೀರದಲ್ಲಿ ಆಗಿಂದಾಗ್ಗೆ ಕದನವಿರಾಮ ರೇಖೆಯನ್ನು ಉಲ್ಲಂಘಿಸುತ್ತಿದ್ದ ಪಾಕಿಸ್ತಾನ 1965 ಆಗಸ್ಟ್ 5ರಂದು ಮುಂಜಾನೆ ಭಾರಿ ಪ್ರಮಾಣದಲ್ಲಿ ಅದನ್ನು ಅತಿಕ್ರಮಣ ಮಾಡಿತು. ಕದನವಿರಾಮರೇಖೆಯನ್ನು ನಾಲ್ಕಾರು ಕಡೆಗಳಿಂದ ದಾಟಿಬಂದ ಸಹಸ್ರಾರು ಮಂದಿ ಸಶಸ್ತ್ರ ಪಾಕಿಸ್ತಾನಿಗಳು ಶ್ರೀನಗರದ ಕಡೆಗೆ ಧಾವಿಸಲಾರಂಭಿಸಿದರು. ಜಮ್ಮು–ಕಾಶ್ಮೀರ ಸರ್ಕಾರ ರಕ್ಷಣಾ ಮತ್ತು ಪೊಲೀಸ್ ಬಲದಿಂದ ಅತಿಕ್ರಮಣಕಾರರನ್ನು ಹಿಮ್ಮೆಟ್ಟಿಸಿತು. ಭಾರತ ಮತ್ತೆ ವಿಶ್ವಸಂಸ್ಥೆಗೆ ಸಲ್ಲಿಸಿದ ದೂರಿನಿಂದ ಪ್ರಯೋಜನವಾಗಲಿಲ್ಲ. 1965 ಸೆಪ್ಟೆಂಬರ್ 1ರಂದು ಪಾಕಿಸ್ತಾನಿಗಳು ಜಮ್ಮುವಿನ ಚಂಬ್ ವಲಯದಲ್ಲಿ ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ನುಗ್ಗಿ ಬಂದಾಗ ಭಾರತ–ಪಾಕಿಸ್ತಾನಿಗಳ ನಡುವೆ ಯುದ್ಧ ಆರಂಭವಾಯಿತು. ಭಾರತ ಸೈನಿಕರು ಪಾಕ್ ಸೈನಿಕರನ್ನು ಹಿಮ್ಮೆಟ್ಟಿಸಿದರು. ಪಾಕಿಸ್ತಾನದ ಲಾಹೋರ್ ವಲಯವನ್ನು ಭಾರತದ ಸೈನ್ಯ ಪ್ರವೇಶಿಸಿತು. ಪಾಕಿಸ್ತಾನದ ರಕ್ಷಣಾ ಠಾಣ್ಯಗಳ ಮೇಲೂ ಶಸ್ತ್ರಾಸ್ತ್ರ ಕೋಠಿಗಳ ಮೇಲೂ ಭಾರತೀಯ ವಿಮಾನಬಲ ಕಾರ್ಯಾಚರಣೆ ನಡೆಸಿತು. ಅಂತ್ಯದಲ್ಲಿ 1965 ಸೆಪ್ಟೆಂಬರ್ 23ರಂದು ಭಾರತ–ಪಾಕಿಸ್ತಾನಗಳೆರಡೂ ಭದ್ರತಾಸಮಿತಿಯ ನಿರ್ಣಯಕ್ಕನುಗುಣವಾಗಿ ಕದನ ನಿಲ್ಲಿಸಿದವು. 1971 ಡಿಸೆಂಬರಿನಲ್ಲಿ ನಡೆದ ಭಾರತ–ಪಾಕಿಸ್ತಾನ ಯುದ್ಧದಲ್ಲೂ ಪಾಕಿಸ್ತಾನ ಕಾಶ್ಮೀರದ ಉಳಿದ ಪ್ರದೇಶವನ್ನು ಆಕ್ರಮಿಸಿಕೊಳ್ಳಲು ಯತ್ನಿಸಿ ವಿಫಲಗೊಂಡಿತು. ಭಾರತ ಗಣರಾಜ್ಯದ ಅಂಗವಾಗಿ ಜಮ್ಮು–ಕಾಶ್ಮೀರ ರಾಜ್ಯ ಪ್ರಗತಿಯ ಹಾದಿಯಲ್ಲಿ ಸಾಗುತ್ತಿದೆ.(ಬಿ.ಎಂ.)

**ವಾಸ್ತುಶಿಲ್ಪ:** ಕಾಶ್ಮೀರ ಅಶೋಕನ ಸಾಮ್ರಾಜ್ಯದ ಭಾಗವಾಗಿದ್ದಾಗ, ಅವನು ಅಲ್ಲಿ ಶ್ರೀನಗರಿ (ಈಗಿನ ಪಂಸ್ರಿಥಾನ್) ಎಂಬ ಪಟ್ಟಣ ಕಟ್ಟಿ ಅಲ್ಲಿ ಒಂದು ಸ್ತೂಪವನ್ನು ನಿರ್ಮಿಸಿದನೆಂದು ಬೌದ್ಧ ಗ್ರಂಥಗಳಿಂದ ತಿಳಿಯುತ್ತದೆ. ಹಾಗೆಯೇ ಅವನ ಮಗ ಜಲೌಕ ಗುಷ್ಕುರ್‌ನಲ್ಲಿಯ ಜೇಷ್ಠೇಶ, ಬಿಜ್ಜಹರಾದಲ್ಲಿನ ಅಶೋಕೇಶ್ವರ ಮತ್ತು ವಂಥ್‌ನಲ್ಲಿಯ ಜೇಷ್ಠರುದ್ರ ದೇವಾಲಯಗಳನ್ನೂ ಜಲೌಕನ ತಾಯಿ ಈ ಪ್ರದೇಶದಲ್ಲಿ ಅನೇಕ ಮಾತೃ ಚಕ್ರಗಳನ್ನೂ (ವೃತ್ತಾಕಾರದ ಮಾತೃದೇವತೆಗಳ ಗುಡಿಗಳು) ಕಟ್ಟಿಸಿದರೆಂದು ಪ್ರತೀತಿ. ಆದರೆ ಈ ಸ್ಥಳಗಳಲ್ಲಿ ಉಳಿದಿರುವ ಈಗಿನ ದೇವಾಲಯಗಳು ಅನಂತರಕಾಲದ ಪುನರ್ರಚನೆಗಳು. ಮೌರ್ಯರ ಅನಂತರ ಕುಷಾಣ ಅರಸರಾದ ಕನಿಷ್ಕ, ಜುಷ್ಕ ಮತ್ತು ಹುವಿಷ್ಕರು ಅನುಕ್ರಮವಾಗಿ ಕಾನಿಷ್ಕಪುರ (ಈಗಿನ ಉಷ್ಕೂರ್) ಕಟ್ಟಿದರು. ಇವುಗಳಲ್ಲಿ ಹುವಿಷ್ಕಪುರ ಪ್ರಸಿದ್ಧವಾದ್ದು. ಇಲ್ಲಿ ಹುವಿಷ್ಕ ಒಂದು ಸ್ತೂಪವನ್ನೂ ಅದರ ಸುತ್ತಲೂ ಅನೇಕ ಸಂಘಾರಾಮಗಳನ್ನೂ ಕಟ್ಟಿಸಿದ್ದನೆಂಬುದಕ್ಕೆ ಕೆಲವು ಮಾಹಿತಿಗಳಿವೆ. ಇಲ್ಲಿ ನಡೆದಿರುವ ಉತ್ಖನನದಿಂದ ಸ್ತೂಪದ ಅಡಿಪಾಯವಷ್ಟೇ ಬೆಳಕಿಗೆ ಬಂದಿದೆ.

ಕುಷಾಣರ ಸಾಮ್ರಾಜ್ಯ ಕಾಶ್ಮೀರವಲ್ಲದೆ ಪಂಜಾಬ್ ಮತ್ತು ಉತ್ತರ ಪ್ರದೇಶಗಳ ಭಾಗಗಳನ್ನೂ ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯದ ಭಾಗಗಳನ್ನೂ ಒಳಗೊಂಡಿದ್ದರಿಂದಲೂ ಅನಂತರ ಈ ಪ್ರದೇಶಗಳು ಆಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯದಿಂದ ಬಂದ ಪಾರ್ಥಿಯನ್ನರು, ಸಸ್ಸಾನೀಯ ಮತ್ತು ಶ್ವೇತಹೂಣರ ಆಳಿಕೆಗೆ ಒಳಪಟ್ಟಿದ್ದರಿಂದಲೂ ಇಲ್ಲಿ ಭಾರತೀಯ ವಾಸ್ತುಶಿಲ್ಪಶೈಲಿಗಳು ಇತರ ಶೈಲಿಗಳೊಂದಿಗೆ ಮಿಳಿತವಾಗಿ ಬೆಳೆದದ್ದು ಕಂಡುಬರುತ್ತದೆ. ಕುಶಾನ ಅರಸನ ಪ್ರತಿಮೆಯೊಂದು ಶ್ರೀನಗರದಲ್ಲಿದೆ. ಇದರದು ಪಾರ್ಥೀಯ ಶಿಲ್ಪಶೈಲಿ. ಗಾಂಧಾರ ಶಿಲ್ಪಶೈಲಿಯ ಅನೇಕ ಸುದ್ದೆವಿಗ್ರಹಗಳು ಅಖ್ನೂರ್, ಉಷ್ಕೂರ್ ಮುಂತಾದೆಡೆಗಳಲ್ಲಿ ದೊರಕಿವೆ. ಕೆಲವು ವಿದ್ವಾಂಸರ ಪ್ರಕಾರ ಇವು ಕುಷಾಣರ ಕಾಲದ ಅನಂತರ 4–8ನೆಯ ಶತಮಾನಗಳ ಇಳಿಮುಖದ ಗಾಂಧಾರ ಶೈಲಿಯ ಕೃತಿಗಳು. ಈ ಸುದ್ದೆವಿಗ್ರಹಗಳಲ್ಲಿ ಹೆಚ್ಚಿನವು ಬುದ್ಧ, ಬೋಧಿಸತ್ವ ಮತ್ತು ಬೌದ್ಧಕಥೆಗಳ ನಿರೂಪಣೆಗಳಾಗಿವೆ.

ಹಾರ್ವಾನ್ ಎಂಬಲ್ಲಿಯ ಉತ್ಖನನದಲ್ಲಿ ಬೆಳಕಿಗೆ ಬಂದ ಬೌದ್ಧಸಂಘಾರಾಮದಲ್ಲಿ ಪಾರ್ಥೀಯನ್ನರ ಶೈಲಿ ಚೆನ್ನಾಗಿ ವ್ಯಕ್ತವಾಗಿದೆ. ಇಲ್ಲಿ ಅನೇಕ ಸ್ತೂಪಗಳು ಅರ್ಧ ವೃತ್ತಾಕಾರದ ಹಿಂಭಾಗವಿರುವ ಚೈತ್ಯಗೃಹಗಳ ಮತ್ತು ಭಿಕ್ಷುಗಳಿಗಾಗಿ ಕಟ್ಟಿದ ಸಣ್ಣ ಕೊಠಡಿಗಳ ಅಡಿಪಾಯಗಳು ಕಂಡುಬಂದಿವೆ. ಇಲ್ಲಿಯ ಒಂದು ಹಜಾರದಲ್ಲಿ ಸುಂದರ ಚಿತ್ರಣವಿರುವ ನೆಲಹೆಂಚುಗಳನ್ನು ಹಾಸಲಾಗಿದೆ. ಪಾರ್ಥಿಯನ್ ಕುದುರೆ ಸವಾರರ, ಎದೆಮಟ್ಟ ಚಿತ್ರಗಳ, ಭಾರತೀಯ ವಸ್ತ್ರ ಧರಿಸಿದ ಪಾರ್ಥಿಯನ್ನರ, ಬ್ರಾಹ್ಮಣ ಸನ್ಯಾಸಿಗಳ, ಬಳ್ಳಿಗಳೇ ಮುಂತಾದವುಗಳ ಉಬ್ಬುಶಿಲ್ಪಗಳು ಈ ಹೆಂಚುಗಳಲ್ಲಿವೆ. ಇವು ಪಾರ್ಥಿಯನ್ನರ ಶಿಲ್ಪಶೈಲಿಯವಾದರೂ ಗುಪ್ತರ ಕಲೆಯ ಪ್ರಭಾವವೂ ಕಂಡುಬರುತ್ತದೆ.

ಬಿಜ್ಜೆಹರಾದಲ್ಲಿ ಶ್ರೀಲಕ್ಷ್ಮೀ, ಗಜಲಕ್ಷ್ಮೀ ಮುಂತಾದ ಕೆಲವು ಸುದ್ದೆವಿಗ್ರಹಗಳು ದೊರಕಿವೆ. ಗಾಂಧಾರ ಶೈಲಿಯ ಇಳಿಗಾಲದ ಈ ವಿಗ್ರಹಗಳಲ್ಲೂ ಗುಪ್ತ ಸಂಪ್ರದಾಯದ ಛಾಯೆಯನ್ನು ಕಾಣಬಹುದು. ಇವು ಬೌದ್ಧಧರ್ಮಕ್ಕೆ ಮಾರಕವಾಗಿ ಹಿಂದುಧರ್ಮವನ್ನು ಎತ್ತಿಹಿಡಿಯಲು ಯತ್ನಿಸಿದ ಹೂಣಮಿಹಿರಗುಲನ (ಸು.520–30) ಕಾಲದವಾಗಿರಬಹುದೆಂದು ಕೆಲವರ ಅಭಿಪ್ರಾಯ. ಮಿಹಿರಗುಲ ಬಿಜ್ಬೆಹರಾದಲ್ಲಿ ವಿಜಯೇಶ್ವರ ಎಂಬ ಶಿವದೇವಾಲಯವನ್ನು ಕಟ್ಟಿಸಿದ್ದ.

ಸು.410–470ರವರೆಗೆ ಆಳಿದ ಇಮ್ಮಡಿ ಪ್ರವರಸೇನ ಪ್ರವರಪುರವನ್ನು (ಈಗಿನ ಶ್ರೀನಗರ) ಕಟ್ಟಿಸಿದ. ಇವನ ಕಾಲದ ಪ್ರವರೇಶ್ವರ ದೇವಾಲಯವೂ ಇವನ ವಂಶದವನೇ ಆದ ರಾಣಾದಿತ್ಯನೆಂಬುವನ ರಾಣಾಸ್ವಾಮಿ ದೇವಾಲಯವೂ ಈಗಿನ ಬಹಾಉದ್ದೀನ್ ಮತ್ತು ಪೀರ್ ಹಾಜ್ಜ್ ಮುಹಮ್ಮದ್ ಸಾಹಿಬ್ ಗೋರಿಗಳು ಇರುವ ಎಡೆಗಳಲ್ಲಿದ್ದುವೆಂದು ತಿಳಿದುಬಂದಿದೆ. ಆದರೆ 8ನೆಯ ಶತಮಾನದ ಕೆಲವು ಸೇರ್ಪಡೆಗಳಷ್ಟೇ ಈಗ ಇಲ್ಲಿ ಕಂಡುಬರುವ ಅತ್ಯಂತ ಪ್ರಾಚೀನ ಅವಶೇಷಗಳು. ಕಾಶ್ಮೀರದ ಆ ಕಾಲದ ವಾಸ್ತುಶಿಲ್ಪಕಲೆ ಗುಪ್ತಶೈಲಿಯಿಂದ ಬಹು ಪ್ರಭಾವಿತವಾಗಿದ್ದಿತೆಂಬುದು ಆಗಿನ ಇತರ ಕೆಲವು ಸಣ್ಣಪುಟ್ಟ ಅವಶೇಷಗಳಿಂದ ತಿಳಿದುಬರುತ್ತದೆ.

ಕಾಶ್ಮೀರದ ಕಲೆಯ ಇತಿಹಾಸದಲ್ಲಿ ಕಾರ್ಕೋಟ ರಾಜವಂಶದ ಕಾಲ ಮುಖ್ಯವಾದ್ದು. ಈ ವಂಶದ ಲಲಿತಾದಿತ್ಯ ಮುಕ್ತಾಪೀಡ ತನ್ನ ಅಪಾರ ಸಂಪತ್ತನ್ನು ದೊಡ್ಡ ದೇವಾಲಯಗಳ ನಿರ್ಮಾಣಕ್ಕೆ ವಿನಿಯೋಗಿಸಿದನೆಂದು ಪ್ರತೀತಿ. ಶ್ರೀನಗರದ ಬಳಿಯ ಕಶ್ತ್–ಇ–ಸುಲೈಮಾನ್ ಬೆಟ್ಟದ ಮೇಲಿರುವ ಶಂಕರಾಚಾರ್ಯ (ಜೇಷ್ಠೇಶ) ದೇವಾಲಯ ಪ್ರಾಯಶಃ ಕಾರ್ಕೋಟ ಶೈಲಿಯ ಅತ್ಯಂತ ಪ್ರಾಚೀನ ಕಟ್ಟಡ. ಅಷ್ಟಭುಜಾಕೃತಿಯ ಜಗತಿಯ ಮೇಲೆ ನಿಂತಿರುವ ಮಧ್ಯಭಾರತದ ಗುಡಿಗಳ ಶಿಖರಗಳಂತಿರುವ ಈ ಗುಡಿ ದೊಡ್ಡದಾದರೂ ಕಲೆಯ ದೃಷ್ಟಿಯಲ್ಲಿ ಬಹು ಒರಟು. ಆದರೂ ಮುಂದೆ ಕಾಶ್ಮೀರ ವಾಸ್ತುಶೈಲಿಯಲ್ಲಿ ಪ್ರಚುರವಾದ ಕೆಲವು ಅಂಶಗಳ ಉಗಮ ಇಲ್ಲಿ ಕಾಣುತ್ತದೆ. ಪಾಂಪುರ್ ಬಳಿಯ ಲೋದುವ್‌ನ (ಪ್ರಾಯಶಃ ಪ್ರಾಚೀನ ಲಲಿತಪುರ) ರುದ್ರೇಶ ದೇವಾಲಯ ಗಾಂಧಾರ ವಾಸ್ತುಶಿಲ್ಪ ರೀತಿಯದು. 48 ಚೌಕದ ಜಗತಿಯ ಮೇಲೆ 28 ಚೌಕದ ಈ ಗುಡಿಯ ಒಳಭಾಗ ವೃತ್ತಾಕಾರವಾದ್ದು. ಮುಂದೆ ಕುದುರೆಲಾಳದ ಆಕೃತಿಯ ತಲೆ ಇರುವ ದ್ವಾರವಿದೆ. ಗುಡಿಯ ಚಾವಣಿ ಉಳಿದಿಲ್ಲವಾದರೂ ದುಂಡನೆಯ ಮರದ ಹಂಜರ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಸಮೀಪದ ನೋರ್ವಾದಲ್ಲೂ ಇದೇ ರೀತಿಯ ಇನ್ನೊಂದು ದೇವಾಲಯ ಇದೆ. ಇವು ಲಲಿತಾದಿತ್ಯನ ಆಳಿಕೆಯ ಮೊದಲ ಭಾಗದಲ್ಲಿ ಕಟ್ಟಿರಬಹುದು.

ಚೀನದ ಆಸ್ಥಾನದಲ್ಲಿದ್ದು ಅನಂತರ ಲಲಿತಾದಿತ್ಯನ ಪ್ರಧಾನಿಯಾದ ಚಂಕುಣ ಕಾಶ್ಮೀರದ ವಾಸ್ತುಶಿಲ್ಪದಲ್ಲಿ ಕೆಲವು ಹೊಸ ಅಂಶಗಳನ್ನು ಅಳವಡಿಸಿದ. ಇವನ ಕಾಲದಲ್ಲಿ ಕಟ್ಟಿದ ಗುಪ್ತಶೈಲಿಯ ಸ್ತೂಪಗಳ ಅಲಂಕರಣದಲ್ಲಿ ಗುಪ್ತರೀತಿಯ ಬುದ್ಧವಿಗ್ರಹಗಳು ಅರೆಚೀನೀ ರೀತಿಯ ಬೋಧಿಸತ್ತ್ವ ವಿಗ್ರಹಗಳು ಮಿಳಿತವಾಗಿವೆ. ಬೋಧಿಸತ್ತ್ವ ವಿಗ್ರಹಗಳಲ್ಲಿ ಚೀನದ ವೀ ಮತ್ತು ಕಾಂಗ್ ಶೈಲಿಗಳ ಸಂಬಂಧವನ್ನು ಗುರುತಿಸಬಹುದು. ಲಲಿತಾದಿತ್ಯ ಪರಿಹಾಸಪುರವೆಂಬ (ಈಗಿನ ಪರಸ್ಪೋರ್) ಹೊಸ ರಾಜಧಾನಿಯನ್ನು ನಿರ್ಮಿಸಿದಾಗ ಅಲ್ಲಿ ಚಂಕುಣ ರಾಜ ವಿಹಾರವೆಂಬ ಸಂಘಾರಾಮವನ್ನೂ ಚೈತ್ಯ ಮತ್ತು ಸ್ತೂಪವನ್ನೂ ಕಟ್ಟಿಸಿದ. ಇಲ್ಲಿಯ ಸ್ತೂಪ ಗಾಂಧಾರ ಶೈಲಿಯದಾದರೂ ಮುಂಭಾಗದಲ್ಲಿ ಬಾಮಿಯನ್ ರೀತಿಯ ಬೃಹತ್ ಬುದ್ಧವಿಗ್ರಹಗಳನ್ನೂ ಟಾಂಗ್ ಶೈಲಿಯ ಬೋಧಿಸತ್ತ್ವ ವಿಗ್ರಹಗಳನ್ನೂ ಗಾಂಧಾರ ರೀತಿಯ ವಿನ್ಯಾಸಗಳನ್ನೂ ಅಲಂಕರಣಕ್ಕಾಗಿ ಬಳಸಲಾಗಿದೆ. ಹೀಗಾಗಿ ಇಲ್ಲಿ ಹಲವು ಶೈಲಿಗಳ ಮಿಶ್ರಣವನ್ನು ಕಾಣಬಹುದು. ಇವು ಸು.747ಕ್ಕಿಂತ ಹಿಂದಿನವು. ಲಲಿತಾದಿತ್ಯನ ಕಾಲಕ್ಕೆ ಸೇರಿದ ಅನಂತರದ ದೇವಾಲಯಗಳಲ್ಲಿ ಬೈಜಾಂಟೀಯನ್ ಮತ್ತು ಸಿರಿಯನ್–ರೋಮನ್ ಶೈಲಿಯ ಅಂಶಗಳು ಎದ್ದು ಕಾಣುತ್ತವೆ. ಮಾರ್ತಾಂಡ ದಲ್ಲಿರುವ ಸೂರ್ಯದೇವಾಲಯ ಇದಕ್ಕೆ ಉದಾಹರಣೆ. ಎರಡೂ ಕಡೆ ಚಿಕ್ಕ ಗುಡಿಗಳಿರುವ ಚೌಕಾಕಾರದ ಈ ದೇವಾಲಯ ವಿಶಾಲವಾದ ಜಗತಿಯ ಮೇಲೆ ಇದೆ. ಗಾರೆ ಮತ್ತು ಬೆಣೆಯ ಉಪಯೋಗ, ದುಂಡು ಕಮಾನುಗಳು, ಪರಸ್ಪರ ಕತ್ತರಿಸುವಂತೆ ಒಂದರ ಮೇಲೊಂದು ಎತ್ತಿರುವ ಚೌಕಗಳ ಭುವನೇಶ್ವರಿ, ಡೋರಿಕ್ ಸ್ತಂಭಗಳು, ಪಟ್ಟಿಕೆ ಮತ್ತು ಕೋಷ್ಠಗಳನ್ನೊಳಗೊಂಡಿರುವ ಕಾರಿಂತಿಯನ್ ಅರೆಗಂಬಗಳು ಮುಂತಾದ ರೋಮನ್ ವಾಸ್ತು ಅಂಶಗಳೂ ಸಿರಿಯದ ವಾಸ್ತುವಿನ ರೀತಿಯ ದೊಡ್ಡ ಕಪೋತಗಳುಳ್ಳ ಕಿಟಕಿಗಳೂ ಬೈಜಾಂಟೀಯನ್ ರೀತಿಯ ಮುಂಚಾಚಿದ ತಲೆಯ ಅಲಂಕರಣವಿರುವ ತ್ರಿಕೋಣಪಟ್ಟಿಕೆಗಳೂ ಈ ದೇವಾಲಯದಲ್ಲಿವೆ. ಈ ಕಾಲದಲ್ಲಿ ಸಿರಿಯ ಮತ್ತು ಏಷ್ಯ ಮೈನರ್ ಪ್ರದೇಶಗಳು ಅರಬರ ಆಕ್ರಮಣಕ್ಕೆ ಒಳಗಾದ್ದರಿಂದ, ಇಲ್ಲಿಯ ಶಿಲ್ಪಗಳಿಗೆ ಇಲ್ಲಿ ಆಸರೆ ದೊರೆಯದೆ ಅಲ್ಲಿಯವರು ಕಾಶ್ಮೀರದೆಡೆಗೆ ಬಂದಿರಬಹುದೆಂದೂ ಕಾಶ್ಮೀರದ ಕಲೆಯಲ್ಲಿಯ ಈ ಪಾಶ್ಚಾತ್ಯ ಪ್ರಭಾವಕ್ಕೆ ಅವರೇ ಕಾರಣರೆಂದೂ ಅಭಿಪ್ರಾಯವಿದೆ. ಆದರೆ ಮಾರ್ತಾಂಡದ ಮೂರ್ತಿಶಿಲ್ಪ ಬಹುತೇಕ ಗುಪ್ತಶೈಲಿಯಲ್ಲಿರುವುದು ಗಮನಾರ್ಹ. ಸಮಕಾಲೀನ ಕಲೆಯಲ್ಲಿಯ ರೋಮನ್ ಪ್ರಭಾವ ಪರಿಹಾಸಪುರದ ಅವಶೇಷಗಳಲ್ಲಿ ಎದ್ದು ಕಾಣುತ್ತದೆ. ಲಲಿತಾದಿತ್ಯನ ಕಾಲದ ದೇವಾಲಯಗಳು ವಂಗಥ್, ಪಂದ್ರೆಥಾನ್, ನರಸ್ತಾನ್ ಮುಂತಾದ ಎಡೆಗಳಲ್ಲೂ ಇವೆ. ಗುಪ್ತ ರೀತಿಯ ಅಧಿಷ್ಠಾನ, ಡೋರಿಕ್ ಅಥವಾ ಕಾರಿಂತಿಯನ್ ರೀತಿಯ ಕಂಬಗಳು ಮತ್ತು ಅರೆಗಂಬಗಳು, ಇಳಿಕಪೋತದ ಕೆಳಗಿರುವ ತ್ರಿಪತ್ರ ಕಮಾನು ಮತ್ತು ದ್ವಿಪಿರಮಿಡ್ಡಿನಂತಿರುವ ಚಾವಣಿ–ಇವು ಕಾಶ್ಮೀರದ ಕಾರ್ಕೋಟ ವಾಸ್ತುಶೈಲಿಯ ಸಾಮಾನ್ಯ ಲಕ್ಷಣಗಳು. ಈ ಕಾಲದ ಶಿಲ್ಪಗಳು ಹೆಚ್ಚಿಲ್ಲವಾದರೂ ಅವುಗಳಲ್ಲಿ ಗುಪ್ತ, ಗಾಂಧಾರ ಮತ್ತು ರೋಮನ್ ಅಂಶಗಳನ್ನು ಕಾಣಬಹುದು.

ಕಾರ್ಕೋಟ ವಂಶದ ರೋಮನ್ ಜಯಪುರವೆಂಬ ರಾಜಧಾನಿಯ ನಿರ್ಮಾತ. ಇಲ್ಲಿಯ ಅವಶೇಷಗಳಲ್ಲಿ ಅನೇಕ ದೇವಾಲಯಗಳ ಉಳಿಕೆಗಳಿವೆ. ಇವುಗಳಲ್ಲಿ ಲಲಿತಾದಿತ್ಯನ ಕಾಲದ್ದಕ್ಕಿಂತಲೂ ಶಕ್ತಿಯುತವೂ ಪರಿಷ್ಕೃತವೂ ಆದ ಕಲಾಶೈಲಿಯನ್ನು ಗುರುತಿಸಬಹುದು. ಕಾರ್ಕೋಟ ವಂಶದ ಕೊನೆಯ ಕಾಲದ ಕಟ್ಟಡಗಳಲ್ಲಿ ಪದ್ಮಪುರದ (ಈಗಿನ ಪಾಂಪುರ್) ಪದ್ಮಸ್ವಾಮಿ ದೇವಾಲಯ 9ನೆಯ ಶತಮಾನದ ಆದಿಭಾಗಕ್ಕೆ ಸೇರಿದ್ದು.

ಕಾರ್ಕೋಟರ ಅನಂತರ ಆಳಿದ ಉತ್ಪಲವಂಶದ ಕಾಲ ಕಾಶ್ಮೀರದ ವಾಸ್ತುಶಿಲ್ಪ ಇತಿಹಾಸದ ಮತ್ತೊಂದು ವೈಭವಯುಗ. ಈ ವಂಶದ ಅವಂತಿವರ್ಮ (855–83) ಅವಂತಿಪುರದ ಅವಂತಿಸ್ವಾಮಿ ಎಂಬ ವಿಷ್ಣುದೇವಾಲಯವನ್ನೂ ಅವಂತೀಶ್ವರ ಎಂಬ ಶಿವದೇವಾಲಯವನ್ನೂ ನಿರ್ಮಿಸಿದ. ವಿಶಾಲ ಪ್ರಾಂಗಣದ ಮಧ್ಯೆ ಜಗತಿಯ ಮೇಲೆ ಕಟ್ಟಿರುವ ಈ ದೇವಾಲಯಗಳ ಸುತ್ತಲೂ ನಾಲ್ಕು ಚಿಕ್ಕ ಗುಡಿಗಳಿವೆ. ಇವು ಪಂಚಾಯತನ ರೀತಿಯವು. ಇಲ್ಲಿಯ ವಾಸ್ತುವಿನ್ಯಾಸ ಲಲಿತಾದಿತ್ಯನ ಕಾಲದವುಗಳಿಗಿಂತ ಹೆಚ್ಚು ಪರಿಷ್ಕೃತ ಅಲಂಕಾರಯುತ. ಅಲಂಕರಣದಲ್ಲಿ ಸಸ್ಸಾನೀಯ ಅಂಶಗಳು ಹೆಚ್ಚು. ಇಲ್ಲಿಯ ಶಿಲ್ಪಗಳು ಹಿಂದಿನವುಗಳಿಗಿಂತ ಉತ್ತಮವೂ ಹೆಚ್ಚು ಶಕ್ತಿಯುತವೂ ಆಗಿವೆ. ದೇವ ಮತ್ತು ಮಾನವರ ನಿರೂಪಣೆಯಲ್ಲಿ ಗಾಂಭೀರ್ಯ ಎದ್ದುಕಾಣುತ್ತದೆ. ಶಂಕರವರ್ಮ (883–902) ಅನೇಕ ಪ್ರಾಚೀನ ದೇವಾಲಯಗಳನ್ನು ಒಡೆದು ಅವನ್ನು ತನ್ನ ಕಟ್ಟಡಗಳಿಗಾಗಿ ಬಳಸಿಕೊಂಡ. ಶಂಕರಪುರದಲ್ಲಿರುವ ಶಂಕರ, ಗೌರೀಶ್ವರ ಮತ್ತು ಸುಗಂಧೇಶ್ವರ ದೇವಾಲಯಗಳು ಆ ಕಾಲದ ಕೃತಿಗಳಲ್ಲಿ ಮುಖ್ಯವಾದುವು. ಶಂಕರವರ್ಮನ ಅನಂತರದ ಕಾಲ ಕಾಶ್ಮೀರದ ಇತಿಹಾಸದಲ್ಲಿ ಘೋರಯುಗ. ಅರಾಜಕತೆಯೂ ಅನೀತಿಯೂ ಪ್ರಬಲಿಸಿದ್ದ ಆ ಕಾಲದಲ್ಲೂ ವಾಸ್ತುಶಿಲ್ಪ ಮುಂದುವರಿದರೂ ಆಗಿನ ಕೃತಿಗಳಲ್ಲಿ ಹೆಚ್ಚಿನವು ಸುಲಭದ ದಾರುಕೃತಿಗಳು. ಉತ್ಪಲ ಕಲೆಯ ಕಾಲೀಕ ವ್ಯಾಪ್ತಿ ಹೆಚ್ಚಿಲ್ಲವಾದರೂ ಅದರ ಪ್ರಭಾವವನ್ನು ಗಿಲ್ಗಿಟ್, ಆಗ್ನೇಯ ಹಿಮಾಲಯ, ಜಮ್ಮು ಮತ್ತು ಕಾಶ್ಮೀರದ ಪ್ರಾಚೀನ ಹಿಂದು ವಾಸ್ತುಶಿಲ್ಪದ ಇತಿಹಾಸದ ಕಡೆಯ ಅಧ್ಯಾಯವೆನ್ನಬಹುದು. ಈ ಕಾಲದ ಶಿಲಾ ದೇವಾಲಯಗಳು ಬುಮಜುವ್, ಪಂದ್ರೆಥಾನ್, ಝರಿಬಲ್, ಕೋಥೇರ್, ಪಾಯರ್, ಮಾಮಲ್, ಗರೂರ್ ಮುಂತಾದೆಡೆಗಳಲ್ಲಿವೆ. ದೇವಾಲಯಗಳ ವಿನ್ಯಾಸ ಕ್ರಮೇಣ ಸರಳವಾಯಿತಲ್ಲದೆ ಅವುಗಳ ಗಾತ್ರವೂ ಚಿಕ್ಕದಾಯಿತು, ಅಲಂಕರಣದಲ್ಲೂ ಇದೇ ರೀತಿಯ ಬಡತನ ಕಾಣಿಸಿಕೊಳ್ಳುತ್ತದೆ. ಪಂದ್ರೆಥಾನ್‌ನಲ್ಲಿರುವ ರಿಲ್ಹಣೇಶ್ವರ ದೇವಾಲಯ (1135) ಈ ಶೈಲಿಗೆ ಒಳ್ಳೆಯ ಉದಾಹರಣೆ. ಶಿಲಾದೇವಾಲಯಗಳಿಗಿಂತ ಮರದ ಗುಡಿಗಳ ರಚನೆ ಹೆಚ್ಚಿದ್ದು ಈ ಕಾಲದ ವೈಶಿಷ್ಟ್ಯ. ಕಾಶ್ಮೀರ ಕಣಿವೆಯಲ್ಲಿಯ ಈ ಕಾಲದ ಮರದ ದೇವಾಲಯಗಳು ಬಹುಮಟ್ಟಿಗೆ ನಷ್ಟವಾಗಿದ್ದರೂ ಈ ಪ್ರದೇಶದ ಹೊರಗೆ ಇದೇ ಶೈಲಿಯಲ್ಲಿ ಕಟ್ಟಿದ ಮರದ ರಚನೆಗಳೂ ಉಳಿದಿವೆ. ಚಂಬಾದ ಮಿರ್ಕುಲ–ಉದೈಪುರ್‌ದಲ್ಲಿರುವ ಕಾಳಿ ದೇವಾಲಯ, ಪಶ್ಚಿಮ ಟಿಬೆಟ್ಟಿನ ಗುಗೆ ಭಾಗದಲ್ಲಿರುವ ತ್ಸಪರಂಗ್ನ ಬೌದ್ಧ ಗುಡಿಗಳಲ್ಲಿರುವ ಕೆತ್ತನೆಗಳು, ಸ್ಥಿತಿಯ ಕೋಲುಂಗ್ ಮತ್ತು ಲ್ಹಕುನ್, ಲಡಾಕ್‌ನ ಅಲಿ ಮುಂತಾದ ಎಡೆಗಳಲ್ಲಿರುವ ದಾರುಕೃತಿಗಳು ಈ ರೀತಿಯವು. ಇವು ಸಮಕಾಲೀನ ಕಾಶ್ಮೀರ ವಾಸ್ತುಶಿಲ್ಪದ ಬಗ್ಗೆ ಬೆಳಕು ಚೆಲ್ಲುತ್ತವೆ. ಜಮ್ಮು–ಕಾಶ್ಮೀರದ ಈ ಕಾಲದ ಹಲವು ಶಿಲ್ಪಕೃತಿಗಳು ಶ್ರೀನಗರದ ವಸ್ತುಸಂಗ್ರಹಾಲಯದಲ್ಲಿವೆ. ವಿಚಿತ್ರ ಕೋಷ್ಠಗಳಲ್ಲೋ ಸುತ್ತುವರಿದ ಬಳ್ಳಿಯಿಂದೆದ್ದ ಕಮಲಗಳ ಮೇಲೋ ನಿರೂಪಿಸಿದ ಮೂರ್ತಿಗಳು ಮತ್ತು ಅತಿಯಾದ ಕುಸುರಿಕೆಲಸ–ಇವು ಈ ಕಾಲದ ಕಟ್ಟಡಗಳ ಅಲಂಕರಣಶಿಲ್ಪಗಳ ವೈಶಿಷ್ಟ್ಯ. ಮೂರ್ತಿಶಿಲ್ಪಗಳು ಎಚ್ಚರಿಕೆಯಿಂದ ಮಾಡಿದವಾದರೂ ಅವುಗಳಲ್ಲಿ ಅಂಗಾಂಗ ಪ್ರಮಾಣ ವ್ಯತ್ಯಾಸವಾಗಿರುವುದಲ್ಲದೆ, ಮುಖ ಸಪ್ಪೆಯಾಗಿಯೂ ಸ್ವಲ್ಪ ಉಬ್ಬಿಕೊಂಡೂ ಇರುತ್ತದೆ. ಈ ದೋಷಗಳಿದ್ದರೂ ಈ ಕಾಲದಲ್ಲಿ ಕಾಶ್ಮೀರದ ಅನೇಕ ಶಿಲ್ಪಿಗಳನ್ನು ಟಿಬೆಟ್ಟಿನ ಲಾಮಾಗಳು ಆಹ್ವಾನಿಸುತ್ತಿದ್ದುದರಿಂದ ಈ ಇಳಿಮುಖ ಶಿಲ್ಪಶೈಲಿಯೇ ಮುಂದೆ ಟಿಬೆಟ್ಟಿನ ಲಾಮಾ ಪಂಥೀಯ ಶಿಲ್ಪಗಳಲ್ಲಿ ಬೇರೂರಿತು.

ಕಾಶ್ಮೀರದಲ್ಲಿ ಇಸ್ಲಾಮೀ ಪ್ರಭುತ್ವ ಪ್ರಾರಂಭವಾದ್ದು 1339ರಲ್ಲಿ. ಆದರೆ 16ನೆಯ ಶತಮಾನದ ಅಂತ್ಯದಲ್ಲಿ ಮೊಗಲರ ಆಳಿಕೆ ಆರಂಭವಾಗುವವರೆಗೆ ಅಲ್ಲಿಯ ವಾಸ್ತುಶೈಲಿಯಲ್ಲಿ ಗಮನಾರ್ಹ ಬದಲಾವಣೆಯೇನೂ ಆಗಲಿಲ್ಲ. ಕಾಶ್ಮೀರ ಸುಲ್ತಾನರ ಹೆಚ್ಚು ಕಟ್ಟಡಗಳೆಲ್ಲ

ಮರವಾದ್ದರಿಂದ ಅವು ಯಾವುವೂ ಉಳಿದಿಲ್ಲ. ಆದರೆ ಶ್ರೀನಗರದಲ್ಲಿರುವ ಜಾಮಿ ಮಸೀದಿ, ಷಾಹಾಮಾದಾನ್‌ನ ಗೋರಿ–ಮಸೀದಿ ಮತ್ತು ಪಾಂಪುರ್‌ನಲ್ಲಿರುವ ಮಸೀದಿಗಳು ಅನಂತರ ನವೀಕೃತವಾಗಿದ್ದರೂ ಹೆಚ್ಚು ಕಡಿಮೆ ಹಳೆಯ ವಿನ್ಯಾಸವನ್ನೇ ಉಳಿಸಿಕೊಂಡಿರುವುದರಿಂದ ತತ್ಕಾಲೀನ ವಾಸ್ತುರೀತಿಯ ಅಧ್ಯಯನಕ್ಕೆ ಉಪಯುಕ್ತವಾಗಿವೆ. ಈ ಕಟ್ಟಡಗಳು ವಿಶೇಷವಾಗಿ ಚೌಕಾಕಾರದವು. ಮಧ್ಯೆ ಒಂದು ಅಥವಾ ಎರಡು ಅಂತಸ್ತುಗಳ, ಕೆಲವೊಮ್ಮೆ ನಾಲ್ಕು ಕಂಬಗಳ ಮೇಲೆ ನಿಂತ, ಹಜಾರಗಳು ಇರುತ್ತವೆ. ಒಳಭಾಗದಲ್ಲಿ ಸುತ್ತುಗೋಡೆಗಳಿಗೆ ಸೇರಿದ ಹಾಗೆ ಉಗ್ರಾಣ ಕೋಣೆಗಳೂ ಕೆಲವು ಕಟ್ಟಡಗಳಲ್ಲಿವೆ. ಚಾವಣಿ ಸ್ವಲ್ಪ ಮಾತ್ರ ಇಳಿಜಾರಾಗಿರುತ್ತದೆ. ಮೂಲೆಗಳಲ್ಲಿ ಘಂಟಾಕೃತಿಯ ಅಲಂಕರಣವಿರುತ್ತದೆ. ಚಾವಣಿಯ ಮೇಲೆ ಮಧ್ಯದಲ್ಲಿ ಕಲಶಾಕೃತಿಯ ಮೆಜೀನ್ ಇರುತ್ತದೆ. ಈ ಕಟ್ಟಡಗಳು ಇಸ್ಲಾಮ್ ಮತೀಯವಾಗಿದ್ದರೂ ಇವುಗಳಲ್ಲಿ ಕಾಶ್ಮೀರದ ಪ್ರಾಚೀನ ಹಿಂದು ಬೌದ್ಧ ವಾಸ್ತುಸಂಪ್ರದಾಯವೇ ಮುಂದುವರಿದಿರುವುದನ್ನು ಗುರುತಿಸಬಹುದು. ಅಲ್ಲದೆ ಇಲ್ಲಿಯ ಕೆಲವು ಜಿ಼ಯರಾಗಳನ್ನು ಹಿಂದುದೇವಾಲಯಗಳ ಅಡಿಪಾಯದ ಮೇಲೆ ಕಟ್ಟಿರುವುದರಿಂದ ಅವು ಆ ದೇವಾಲಯಗಳ ವಿನ್ಯಾಸವನ್ನೇ ಅನುಸರಿಸುತ್ತವೆ.

1585ರಲ್ಲಿ ಅಕ್ಬರ್ ಕಾಶ್ಮೀರವನ್ನು ಆಕ್ರಮಿಸಿದ ಮೇಲೆ ಈ ಪ್ರದೇಶದಲ್ಲಿ ಮೊಗಲ್ ಶೈಲಿಯ ಕಟ್ಟಡಗಳು ನಿರ್ಮಿತವಾದುವು. 1589–99ರಲ್ಲಿ ಹರಿ ಪರ್ವತದ ಮೇಲೆ ಅಕ್ಬರ್ ಒಂದು ಕೋಟೆ ಕಟ್ಟಿಸಿದ. 1619ರ ಅನಂತರ ಜಹಾಂಗೀರ್ ಪೀರ್ ಪಂಜಾಲ್ ಕಣಿವೆಯ ಮುಖ್ಯರಸ್ತೆಯ ಅಕ್ಕಪಕ್ಕಗಳಲ್ಲಿ ನೂರ್‌ಮಹಲ್, ಸೈದಾಬಾದ್ ಮುಂತಾದೆಡೆಗಳಲ್ಲಿ ಸರಾಯ್‌ಗಳನ್ನು ಕಟ್ಟಿಸಿದ. ಶ್ರೀನಗರದ ಬಳಿ ಷಾಲಿಮಾರ್ ಉದ್ಯಾನವನ್ನೂ ವೇರಿನಾಗ್‌ನಲ್ಲಿ ಸ್ನಾನಕೊಳವನ್ನೂ ಅಚಾಬಲ್, ಮಾನಸಬಲ್, ಗಂಧರ್‌ಬಲ್‌ಗಳಲ್ಲಿ ಉದ್ಯಾನಗಳನ್ನೂ ನಿರ್ಮಿಸಿದ. ಶ್ರೀನಗರದ ಪತ್ಥರ್ ಮಸೀದಿಯನ್ನು ನೂರ್‌ಜಹಾನ್ ಕಟ್ಟಿಸಿದಳು. ಚಶ್ಮ–ಇ–ಷಾಹಿಯನ್ನು ಷಾಹಜಹಾನ್ 1632–33ರಲ್ಲಿ ನಿರ್ಮಿಸಿದ. ಯುವರಾಜ ದಾರಾಶಿಕೋ 1644ರಲ್ಲಿ ಶ್ರೀನಗರದ ಪರೀಮಹಲನ್ನೂ ಹರಿಪರ್ವತದಲ್ಲಿ ಒಂದು ಮಸೀದಿಯನ್ನೂ ಕಟ್ಟಿಸಿದ. ಇವೆಲ್ಲ ಮೊಗಲ್ ವಾಸ್ತುಶೈಲಿಯಲ್ಲೇ ಇವೆ. ಇವುಗಳಲ್ಲಿ ಮುಖ್ಯವಾದ್ದು ಕಾಶ್ಮೀರದಲ್ಲೇ ದೊಡ್ಡದಾದ ಪತ್ಥರ್ ಮಸೀದಿ. ಇದರಲ್ಲಿ 27 ಗುಮ್ಮಟಗಳೂ ಮುಂದೆ ಒಂಬತ್ತು ಕಮಾನುಗಳೂ ಇವೆ. ಇದರದು ಪರ್ಷಿಯನ್ ಮಾದರಿ, ಕಟ್ಟಡವನ್ನು ಪೂರ್ತಿಯಾಗಿ ಕಂದುಬಣ್ಣದ ಸುಣ್ಣಕಲ್ಲಿನಲ್ಲಿ ಕಟ್ಟಲಾಗಿದೆ. ಭಾರತದಲ್ಲೇ ಪ್ರಪ್ರಥಮವಾಗಿ, ಹಲ್ಲುಹಲ್ಲಿನ ಕಮಾನನ್ನು ಇಲ್ಲಿ ರಚಿಸಲಾಗಿದೆ.

ಹರಿಪರ್ವತದ ಮೇಲೆ ಈಗ ಇರುವ ಕೋಟೆಯನ್ನು 18ನೆಯ ಶತಮಾನದಲ್ಲಿ, ಕಾಶ್ಮೀರ ಆಫ್ಘನ್ ರಾಜರ ಆಳಿಕೆಗೆ ಒಳಪಟ್ಟಿದ್ದಾಗ ಕಟ್ಟಲಾಯಿತು. ಆ ಕಾಲದಲ್ಲಿ ಶ್ರೀನಗರದ ಅನೇಕ ಕಟ್ಟಡಗಳು ದುರಸ್ತಿಗೊಂಡವು. ಡೋಗ್ರಾ ಅರಸರ ಕಾಲದ ಕಾಶ್ಮೀರ ವಾಸ್ತುಕಲೆಯಲ್ಲಿ ಭಾರತೀಯ, ಆಫ್ಘನ್, ಸಿಖ್ ಮತ್ತು ಕಾಂಗ್ರ ರಾಜಸ್ತಾನಗಳ ಅಂಶಗಳನ್ನು ಕಾಣಬಹುದು. ಆದರೆ ಶೇರ್ ಗಡಿಯಲ್ಲಿ ಕಟ್ಟಿರುವ ಬೇಸಗೆ ಅರಮನೆಯೊಂದೇ ಈ ಕಾಲದ ಹೆಸರಿಸಬಹುದಾದ ಕಟ್ಟಡ. ಈ ಕಾಲದಲ್ಲಿ ಲಡಾಕ್ ಕಾಶ್ಮೀರದಲ್ಲಿ ಸೇರಿದ್ದರಿಂದ ಇಲ್ಲಿ ಹರಡಿದ್ದ ಚೀನಿ ಶಿಲ್ಪಕಲೆ ಇಲ್ಲೂ ಪ್ರಸಾರಗೊಂಡಿತು. ಈ ಪ್ರಭಾವ ಹೆಚ್ಚಾಗಿ ಕಾಶ್ಮೀರದ ಮರದ ಕೆತ್ತನೆಯಲ್ಲಿ ಕಂಡುಬರುತ್ತದೆ.

**ಶಾಸನಗಳು:** ಜಮ್ಮು–ಕಾಶ್ಮೀರಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಶಾಸನಗಳು ಕಡಿಮೆ. ಲಡಾಕ್‌ನ ಖಲಾತ್ಸೆ ಎಂಬಲ್ಲಿ ಖರೋಷ್ಠಿ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿ ಇರುವ ಕುಷಾಣ ವರ್ಷ 187ರ ವಿಮ ಕಡ್‌ಫೀಸಿಸ್‌ನ ಶಾಸನವೇ ಅತ್ಯಂತ ಪ್ರಾಚೀನವಾದ್ದು. ಅನಂತರ ದಿದ್ದಾ ರಾಣಿಯಿಂದ ಬೆಳೆದ ಶಾರದ ಲಿಪಿಯಲ್ಲಿವೆ. ಇವು ಹೆಚ್ಚಾಗಿ ದಾನಶಾಸನಗಳು. ಕೆಲವು ಶಾಸನಗಳು ದೇವಾಲಯ ಅಥವಾ ವಿಗ್ರಹಗಳ ಸ್ಥಾಪನೆಯನ್ನು ತಿಳಿಸುತ್ತದೆ. ಅರಿಗೋಮ್ ಎಂಬಲ್ಲಿಯ 1197ರ ಒಂದು ಶಾಸನದಲ್ಲಿ ಇಟ್ಟಿಗೆಯಲ್ಲಿ ಕಟ್ಟಿದ ವಿಹಾರವೊಂದರ ಸ್ಥಾಪನೆಯ ವಿಷಯವಿದೆ. ಆ ಕಾಲದಲ್ಲಿಯ ಶಾಸನಗಳಲ್ಲಿ ಲೌಕಿಕ ವರ್ಷವನ್ನು ನಮೂದಿಸುವುದು ಒಂದು ವಿಶೇಷ. ಕಾಶ್ಮೀರದ ಮುಸ್ಲಿಮ್ ಅರಸರ ಕಾಲದಲ್ಲೂ ಸಂಸ್ಕೃತ ಮತ್ತು ಕಾಶ್ಮೀರಿ ಭಾಷೆಯಲ್ಲಿ ಶಾರದಾ ಲಿಪಿಯಲ್ಲಿ ಶಾಸನಗಳನ್ನು ಬರೆಯುತ್ತಿದ್ದರು. ಸುಲ್ತಾನ್ ಜೈ಼ನುಲ್ ಅಬಿದೀನನ ಆಳಿಕೆಯಲ್ಲಿ ಕಲಿ ಸಂವತ್ಸರ 4530ರಲ್ಲಿ (1428) ಹೊರಡಿಸಲಾದ ಒಂದು ಶಾಸನ ಆಶ್ರಮವೊಂದರ ಸ್ಥಾಪನೆಯ ವಿಷಯವನ್ನು ಕುರಿತದ್ದು. ಆ ಕಾಲದ ಕೆಲವು ಅರಬ್ಬೀ ಶಾಸನಗಳೂ ದೊರಕಿವೆ. ಮೊಗಲರ ಶಾಸನಗಳು ಬಹುಮಟ್ಟಿಗೆ ಪಾರಸೀ ಲಿಪಿ ಮತ್ತು ಭಾಷೆಯವು. ಕಾಶ್ಮೀರದ ಇತಿಹಾಸದ ಬಗ್ಗೆ ವಿಪುಲವಾದ ಗ್ರಂಥಸಾಮಗ್ರಿ ದೊರಕುವುದರಿಂದ ಶಾಸನಗಳಿಂದ ದೊರಕುವ ಸಾಮಗ್ರಿ ಕಡಿಮೆ.

**ನಾಣ್ಯಗಳು:** ಕಾಶ್ಮೀರದಲ್ಲಿ ಇಂಡೊ–ಗ್ರೀಕ್ ಅರಸರಿಂದ ಇತ್ತೀಚಿನವರೆಗೆ ಆಳಿದ ಎಲ್ಲ ರಾಜವಂಶಗಳ ನಾಣ್ಯಗಳೂ ದೊರಕಿವೆ. ಇಂಡೊ–ಗ್ರೀಕ್ ಅರಸರಾದ ಅಜ಼ಿಸ್ ಮತ್ತು ಅಜ಼ಿಲೈಸೆಸ್‌ರ ಬೆಳ್ಳಿ ನಾಣ್ಯಗಳು ಬಾರಾಮುಲ ಬಳಿಯೂ ಕನಿಷ್ಕ, ಹುವಿಷ್ಕ ಮುಂತಾದ ಕುಷಾಣ ಅರಸರ ನಾಣ್ಯಗಳು ಉಷ್ಕೂರ್, ಹಾರ್ವಾನ್ ಮುಂತಾದ ಸಮಕಾಲೀನ ನಿವೇಶನಗಳಲ್ಲೂ ದೊರಕಿವೆ.

ಕಾಶ್ಮೀರದ್ದೇ ಆದ ಪ್ರತ್ಯೇಕ ನಾಣ್ಯ ಚಲಾವಣೆಗೆ ಬಂದದ್ದು ಮಿಹಿರಗುಲನ ಕಾಲದಲ್ಲಿ. ಇವನ ನಾಣ್ಯಗಳು ಬೆಳ್ಳಿ ಮತ್ತು ತಾಮ್ರದವು. ಇವು ಸಸ್ಸಾನೀಯ ಮಾದರಿಯಲ್ಲಿವೆ. ಬೆಳ್ಳಿಯ ನಾಣ್ಯಗಳ ಮುಂಬದಿಯಲ್ಲಿ ರಾಜನ ತಲೆ, ನಂದಿಯ ಚಿತ್ರವಿರುವ ರಾಜದಂಡ ಮತ್ತು ತ್ರಿಶೂಲವು, ಹಿಂಬದಿಯಲ್ಲಿ ಜಯತು ಮಿಹಿರಗುಲ ಅಥವಾ ಜಯತು ವೃಷಧ್ವಜ ಎಂಬ ಲೇಖವೂ ಇರುತ್ತವೆ. ಕೆಲವು ನಾಣ್ಯಗಳ ಹಿಂಬದಿಯಲ್ಲಿ ಅರ್ಧೋಕ್ಷೋ ದೇವತೆಯ ಚಿತ್ರವಿರುವುದೂ ಉಂಟು. ತಾಮ್ರದ ನಾಣ್ಯಗಳೂ ಸುಮಾರು ಇದೇ ತರಹದವೇ. ಇವನ ಅನಂತರ ಆಳಿದ ತೋರಮಾನ ಮತ್ತು ಪ್ರವರಸೇನರ ನಾಣ್ಯಗಳೂ ಇದೇ ಮಾದರಿಯವೇ, ಆದರೆ ಅವುಗಳ ಮೇಲಣ ಬರೆಹ ಸೂಕ್ತವಾಗಿ ಬದಲಾಗುತ್ತದೆ.

ಕಾರ್ಕೋಟ ಅರಸರ ನಾಣ್ಯಗಳು ತೂಕ ಮತ್ತು ಮಾದರಿಗಳಲ್ಲಿ ಕುಷಾಣರ ನಾಣ್ಯಗಳಂತೆ ಇದ್ದರೂ ಅವು ಬಹು ಒರಟು. ಈ ವಂಶದ ದುರ್ಲಭ, ಪ್ರತಾಪಾದಿತ್ಯ, ಜಯಾಪೀಡ ಮೊದಲಾದವರ ನಾಣ್ಯಗಳ ಮುಂಬದಿಯಲ್ಲಿ ರಾಜನ ತಲೆಯೂ ಹಿಂಬದಿಯಲ್ಲಿ ದೇವಿಯ ವಿಗ್ರಹವೂ ರಾಜನ ಹೆಸರೂ ಇರುತ್ತದೆ.

ಉತ್ಪಲವಂಶದ ಮತ್ತು ಅನಂತರದ ಹಿಂದು ರಾಜರ ನಾಣ್ಯಗಳೂ ಇದೇ ರೀತಿಯವು. ಆದರೆ ಇವುಗಳಲ್ಲಿ ರಾಜರ ಹೆಸರು ದಪ್ಪ ಅಕ್ಷರಗಳಲ್ಲಿ ಎರಡೂ ಬದಿಗಳಲ್ಲೂ ಭಾಗಶಃ ಇರುತ್ತದೆ. ಉದಾ: ಕ್ಷೇಮಗುಪ್ತನ ನಾಣ್ಯಗಳ ಮುಂಬದಿಯಲ್ಲಿ ಕ್ಷೇಮಗು ಎಂದೂ ಹಿಂಬದಿಯಲ್ಲಿ ಪ್ರದೇವ ಎಂದೂ ಬರೆಯಲಾಗಿದೆ. ಈ ವಂಶದ ಬಹುತೇಕ ಎಲ್ಲ ಅರಸರ ನಾಣ್ಯಗಳೂ ಬೆಳಕಿಗೆ ಬಂದಿವೆ. ಈ ಹಿಂದು ಅರಸರ ಪೈಕಿ ಹರ್ಷ ದೇವ ಹೊರಡಿಸಿದ ನಾಣ್ಯಗಳಲ್ಲಿ ಕೆಲವು ವೈಶಿಷ್ಟ್ಯಗಳುಂಟು. ಇವನು ಕರ್ನಾಟಕದ ನಾಣ್ಯಗಳ ರೀತಿಯಲ್ಲಿ ಮುಂಬದಿಯಲ್ಲಿ ಆನೆಯ ಚಿತ್ರ ಇರುವ ಚಿನ್ನದ ನಾಣ್ಯಗಳನ್ನೂ ಕಾಬೂಲಿನ ಬ್ರಾಹ್ಮಣೀ ಅರಸರ ನಾಣ್ಯಗಳ ರೀತಿಯಲ್ಲಿ ಮುಂಬದಿಯಲ್ಲಿ ಕುದುರೆ ಸವಾರರ ಚಿತ್ರ ಇರುವ ನಾಣ್ಯಗಳನ್ನೂ ಕಾಶ್ಮೀರದಲ್ಲಿ ಚಲಾವಣೆಗೆ ತಂದ.

ಕಾಶ್ಮೀರದ ಮುಸ್ಲಿಮ್ ಅರಸರ ನಾಣ್ಯಗಳು ಬೇರೆ ರೀತಿಯವು. ಇವುಗಳಲ್ಲಿ ಹೆಚ್ಚಿನವು ತಾಮ್ರದವು. ಗುಂಡಗಿನ ಮತ್ತು ಚೌಕಾಕಾರದ ಎರಡೂ ಬಗೆಯ ನಾಣ್ಯಗಳು ಬಳಕೆಯಲ್ಲಿದ್ದುವು. ಹೆಚ್ಚಿನ ನಾಣ್ಯಗಳಲ್ಲಿ ಮುಂಬದಿಯಲ್ಲಿ ಮಧ್ಯೆ ಗಂಟಿರುವ ಒಂದು ಅಡ್ಡಗೆರೆಯೂ ತಳದಲ್ಲಿ ಅರಬ್ಬೀ ಲಿಪಿಯಲ್ಲಿ ರಾಜನ ಹೆಸರೂ ಇರುತ್ತವೆ. ಹಿಂಬದಿಯಲ್ಲಿ ನಾಲ್ಕು ಮೂಲೆಗಳಲ್ಲೂ ಗಂಟುಗಳುಳ್ಳ ಚೌಕವಿದೆ. ನಾಣ್ಯ ಅಚ್ಚಾದ ಸ್ಥಳವೂ ಹೆಸರೂ ಮಧ್ಯದಲ್ಲಿ ಅರಬ್ಬೀ ಲಿಪಿಯಲ್ಲಿದೆ. ಈ ನಾಣ್ಯಗಳಲ್ಲಿ ಹೆಚ್ಚಿನವು ಕಾಶ್ಮೀರದಲ್ಲೇ ಅಚ್ಚಾದ್ದರಿಂದ ಜ಼ರ್ಬ್–ಇ–ಕಾಶ್ಮೀರೀ ರೀತಿಯಲ್ಲಿ ತಮ್ಮ ನಾಣ್ಯಗಳನ್ನಲ್ಲದೆ ತಮ್ಮ ಇತರ ರೀತಿಯ ನಾಣ್ಯಗಳನ್ನೂ ಚಲಾವಣೆಗೆ ತಂದರು.

ಅನಂತರ ಈ ಪ್ರದೇಶ ಪಂಜಾಬಿನ ರಣಜಿತ್ ಸಿಂಗ್, ರಣಬೀರ್ ಸಿಂಗ್ ಮುಂತಾದವರ ಕೈವಶವಾದಾಗ, ಇಲ್ಲಿ ಅವರ ನಾಣ್ಯಗಳು ಚಲಾವಣೆಗೆ ಬಂದುವು. ಇವುಗಳಲ್ಲಿ ಸಾಮಾನ್ಯವಾಗಿ ಮುಂಬದಿಯಲ್ಲಿ ಗುರುಮುಖಿಯಲ್ಲಿ ಅಕಾಲ್ ಸಹಾಇ ಗುರು ನಾನಕ್‌ಜೀ ಎಂದೂ ಹಿಂಬದಿಯಲ್ಲಿ ನಾಸ್ತಲಿಕ್‌ನಲ್ಲಿ ಜ಼ರ್ಬ್–ಇ–ಕಶ್ಮೀರ್ ಎಂದೂ ಇರುತ್ತವೆ. ಇತ್ತೀಚಿನ ಡೋಗ್ರಾ ಅರಸರ ನಾಣ್ಯಗಳೂ ಸುಮಾರು ಇದೇ ರೀತಿಯವೇ. ಇವಲ್ಲದೆ ಕಾಶ್ಮೀರದಲ್ಲೆ ಆಫ್ಘನ್ ಮತ್ತು ನೇಪಾಲಿ ರಾಜರ ಕೆಲವು ನಾಣ್ಯಗಳೂ ದೊರಕಿವೆ. (ಎಸ್.ಎನ್.)

**ಜಲಿಯನ್‌ವಾಲಾಬಾಗ್:** 1919 ಏಪ್ರಿಲ್ 13ರಂದು ಅಮಾಯಕ ಭಾರತೀಯರ ಕಗ್ಗೊಲೆ ನಡೆದ ಪಂಜಾಬ್ ರಾಜ್ಯದ ಅಮೃತಸರದ ಸ್ವರ್ಣಮಂದಿರದ ಬಳಿ ಇರುವ ಒಂದು ತೋಟ. ಬ್ರಿಟಿಷ್ ಸರ್ಕಾರ ನಡೆಸಿದ ಈ ಘೋರ ಹತ್ಯಾಕಾಂಡ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಭಾರತದಲ್ಲಿ ವೈಸ್‌ರಾಯ್ ಆಗಿದ್ದ ಲಾರ್ಡ್ ಚೆಮ್ಸ್‌ಫರ್ಡನ (1917–21) ಕಾಲದಲ್ಲಿ ಈ ಕೃತ್ಯ ಜರುಗಿತು. ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಆ ವೇಳೆಗೆ ಆರಂಭವಾಗಿದ್ದ ಅಹಿಂಸಾತ್ಮಕ ಹೋರಾಟವನ್ನು ತಡೆಯಲು 1919ರಲ್ಲಿ ರೌಲೆಟ್‌ನ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿ ಆ ಬಗ್ಗೆ ಹಲವಾರು ಸಲಹೆಗಳನ್ನು ನೀಡಿತು. ಅವನ್ನು ಕಾರ್ಯಗತಗೊಳಿಸಲು ಸರ್ಕಾರ ದಂಡ ನ್ಯಾಯವನ್ನು ತಿದ್ದುಪಡಿ ಮಾಡುವ ಅಧಿನಿಯಮವನ್ನೂ ಜಾರಿಗೆ ತಂದಿತು. ಆ ವಿಶೇಷ ಅಧಿಕಾರಗಳಿಂದ ಸರ್ಕಾರಕ್ಕೆ ಪೊಲೀಸ್ ದಬ್ಬಾಳಿಕೆಗೆ ಅನುಮತಿ ನೀಡಿದಂತಾಯಿತು. ಮಹಾತ್ಮ ಗಾಂಧಿಯವರು ಇದನ್ನು ವಿರೋಧಿಸಿ ಸತ್ಯಾಗ್ರಹಕ್ಕೆ ಕರೆ ನೀಡಿದರು. ರೊಚ್ಚಿಗೆದ್ದಿದ್ದ ಜನ ಹಿಂಸಾಕೃತ್ಯಗಳಲ್ಲಿ ತೊಡಗಿದ್ದರಿಂದ ಗಾಂಧಿಯವರು ಸತ್ಯಾಗ್ರಹವನ್ನು ಹಿಂತೆಗೆದುಕೊಂಡರು. ಪಂಜಾಬ್ ಪ್ರಾಂತದಲ್ಲಿ ಪ್ರಜೆಗಳು ಸರ್ಕಾರದ ದಮನನೀತಿಗೆ ಈಡಾಗಿ ತೊಂದರೆಗೀಡಾಗಿದ್ದರು. ಅಲ್ಲಿಯ ಲೆಫ್ಟಿನೆಂಟ್ ಗವರ್ನರ್ ಮೈಕೇಲ್ ಒಡ್ವೈಯರ್ ಪ್ರಜೆಗಳನ್ನು ಕ್ರೂರ ದಂಡನೆಗೆ ಒಳಪಡಿಸತೊಡಗಿದ್ದ. ಆಗ ನಡೆದ ಘಟನೆಗಳಲ್ಲಿ ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡ ಪ್ರಮುಖವಾದ್ದು.

ಜಲಿಯನ್‌ವಾಲಾ ಬಾಗ್‌ನೊಳಕ್ಕೆ ಹೋಗಲು ಕಿರಿದಾದ ಒಂದೇ ಒಂದು ಮಾರ್ಗವಿತ್ತು. ಉಳಿದ ಎಲ್ಲ ಕಡೆಗಳಲ್ಲೂ ಎತ್ತರದ ಮನೆಗಳ ಹಿಂಭಾಗವಿತ್ತು. ಏಪ್ರಿಲ್ 9ರಂದು ನಡೆದ ಹರತಾಳದ ಸಮಯದಲ್ಲಿ ಶಾಂತವಾಗಿ ಮೆರವಣಿಗೆ ಹೊರಟಿದ್ದ ನಾಗರಿಕರ ಮೇಲೆ ಪೊಲೀಸರು ಗುಂಡು ಹಾರಿಸಿದರು. ಜನರು ಕ್ರೋಧದಿಂದ ಹಿಂಸಾಕೃತ್ಯಗಳಲ್ಲಿ ತೊಡಗಿ

ಐವರು ಯುರೋಪಿಯನ್ನರನ್ನು ಕೊಂದರು. ಆದರೆ ಎರಡು ದಿನಗಳಲ್ಲಿ ಪರಿಸ್ಥಿತಿ ಹತೋಟಿಗೆ ಬಂತು. ಏಪ್ರಿಲ್ 15ರಿಂದ ಆಚರಣೆಗೆ ತರಬೇಕಾಗಿದ್ದ ಲಷ್ಕರಿ ನ್ಯಾಯವನ್ನು ಬ್ರಿಗೇಡಿಯರ್–ಜನರಲ್ ಡೈಯರ್ ಅನಧಿಕೃತವಾಗಿ 11ರಿಂದಲೇ ಆಚರಣೆಗೆ ತಂದ. ಆದರೆ ಅದನ್ನು ಸಾರ್ವಜನಿಕರಿಗೆ ತಿಳಿಸುವ ಯಾವ ಯತ್ನವನ್ನೂ ಕೈಗೊಳ್ಳದೆ ದೈತ್ಯನಂತೆ ವರ್ತಿಸಲಾರಂಭಿಸಿದ.

ಏಪ್ರಿಲ್ 13ರ ಮಧ್ಯಾಹ್ನ 4–30ಕ್ಕೆ ಜಲಿಯನ್‌ವಾಲಾಬಾಗಿನಲ್ಲಿ ಜನರ ಬಹಿರಂಗ ಸಭೆ ಸೇರುವುದೆಂದು ಹಿಂದಿನ ದಿನವೇ ಜಾಹೀರುಗೊಳಿಸಲಾಗಿತ್ತು. ಜನರಲ್ ಡೈಯರ್ ಅದನ್ನು ನಿಷೇಧಿಸುವ ಯಾವ ಯತ್ನವನ್ನೂ ಮಾಡದೆ, ಜನ ಸಭೆ ಸೇರದಂತೆ ತಡೆಯಲು ಕ್ರಮ ಕೈಗೊಳ್ಳದೆ, ಸಭೆ ಆರಂಭವಾಗುವವರೆಗೂ ಕಾದಿದ್ದು 50 ಬಂದೂಕುಗಳಿಂದ ಸಜ್ಜಿತ ಪಡೆಯೊಡನೆ ಸಭಾಸ್ಥಳಕ್ಕೆ ಬಂದ. ತೋಟದ ದ್ವಾರದ ಎತ್ತರದ ಭಾಗದಲ್ಲಿ ನಿಂತು ಯಾವ ಮುನ್ನೆಚ್ಚರಿಕೆಯನ್ನೂ ನೀಡದೆ 90ಮೀ ದೂರದಿಂದಲೇ ಜನರ ಮೇಲೆ ಗುಂಡು ಹಾರಿಸುವಂತೆ ಸೈನಿಕರಿಗೆ ಆಜ್ಞೆ ನೀಡಿದ.

ಅಂದು ಅಲ್ಲಿ ಸು.6,000 ಮಂದಿ ಸೇರಿದ್ದರೆಂಬುದು ಡೈಯರನ ಹೇಳಿಕೆ. ಇತರ ವರದಿಗಳಂತೆ ಅಲ್ಲಿದ್ದ ಜನರ ಸಂಖ್ಯೆ 10,000. ಅವರ ಮೇಲೆ ಹತ್ತು ನಿಮಿಷಗಳ ಕಾಲ ಎಡೆಬಿಡದೆ 1,650 ಸುತ್ತು ಗುಂಡಿನ ಮಳೆ ಸುರಿಸಲಾಯಿತು. 500 ಮಂದಿ ಸತ್ತರೆಂಬುದು ಅಧಿಕೃತ ವರದಿ. ವಾಸ್ತವವಾಗಿ 1,000ಕ್ಕೂ ಹೆಚ್ಚು ಸಂಖ್ಯೆಯ ಜನ ಸತ್ತರೆಂದು ಹೇಳಲಾಗಿದೆ. ಜನರ ಪರಿಸ್ಥಿತಿ ಬೋನಿನಲ್ಲಿ ಸಿಕ್ಕ ಇಲಿಗಳಂತಾಗಿತ್ತು. ದಿಕ್ಕುಗಾಣದೆ ಓಡತೊಡಗಿದ ಜನ ಆ ತೋಟದ ಬದಿಯಲ್ಲಿದ್ದ ಕಟ್ಟೆಯಿಲ್ಲದ ಬಾವಿಯೊಂದರಲ್ಲಿ ಬಿದ್ದು ಪ್ರಾಣಬಿಟ್ಟರು. ಬಹಳ ಜನ ಗುಂಡೇಟಿಗೆ ತುತ್ತಾದರು. ನೂರಾರು ಜನ ಗಾಯಾಳುಗಳು ಉಪಚಾರವಿಲ್ಲದೆ ನರಳುತ್ತಿದ್ದಾಗ ಅವರ ಶುಶ್ರೂಷೆಗೆ ತಾನು ಯಾವ ವಿಧದಲ್ಲೂ ಬಾಧ್ಯನಲ್ಲವೆಂದು ಡೈಯರ್ ತಿಳಿಸಿದ. ಲಷ್ಕರಿ ನ್ಯಾಯ ಜಾರಿಗೆ ಬಂದಿದ್ದರಿಂದ ಗಾಯಾಳುಗಳನ್ನು ಇತರರು ಆಸ್ಪತ್ರೆಗೋ ಮನೆಗೋ ಒಯ್ಯುವುದು ಸಾಧ್ಯವಿರಲಿಲ್ಲ. ಜನರ ಅಂದಿನ ಪರಿಸ್ಥಿತಿ ಊಹಾತೀತವಾದಷ್ಟು ಶೋಚನೀಯವಾಗಿತ್ತು.

ಅನಂತರ ಈ ಘಟನೆಗಳನ್ನು ಕುರಿತು ವಿಚಾರಣೆ ನಡೆಸಲು ಒಂದು ಸಮಿತಿಯನ್ನು (ಹಂಟರ್ ಸಮಿತಿ) ನೇಮಿಸಲಾಯಿತು. ಡೈಯರ್ ಅವರ ಮುಂದೆ ಸಾಕ್ಷ್ಯ ನೀಡಿ ತನ್ನ ಕೃತ್ಯಗಳನ್ನು ಒಪ್ಪಿಕೊಂಡುದೇ ಅಲ್ಲದೆ, ತೋಟದ ಸಣ್ಣ ದ್ವಾರದ ಮೂಲಕ ಮೆಷಿನ್‌ಗನ್ನು ಗಳನ್ನು ಒಯ್ಯಲು ಸಾಧ್ಯವಿರಲಿಲ್ಲವೆಂದೂ ಹಾಗೇನಾದರೂ ಆಗಿದ್ದಲ್ಲಿ ನಿರ್ಯೋಚನೆಯಿಂದ ಇನ್ನೂ ಕ್ರೂರ ಕ್ರಮ ಕೈಗೊಂಡು ಇಡೀ ಪಂಜಾಬ್ ಪ್ರಾಂತದ ಪ್ರಜೆಗಳಲ್ಲಿ ಭೀತಿ ಮೂಡಿಸಿ, ಬ್ರಿಟಿಷರ ಆಳಿಕೆಯ ವಿರುದ್ಧವಾದ ಹೋರಾಟವನ್ನು ಕೊನೆಗೊಳಿಸುತ್ತಿದ್ದುದಾಗಿಯೂ ಹೇಳಿದ. ಅನೇಕ ಬ್ರಿಟಿಷರು ಡೈಯರನ ಈ ಹೇಯಕೃತ್ಯವನ್ನು ಖಂಡಿಸದೆ, ಅದೊಂದು ಆವಶ್ಯಕ ಕ್ರಮವೆಂದೇ ಭಾವಿಸಿದ್ದರು. ಡೈಯರನನ್ನು ಅಧಿಕಾರದಿಂದ ನಿವೃತ್ತಿಗೊಳಿಸಿದಷ್ಟೇ ಸರ್ಕಾರ ಕೈಗೊಂಡ ದಂಡನೆಯ ಕ್ರಮ. ಡೈಯರ ಮತ್ತು ಚೆಮ್ಸ್‌ಫರ್ಡ್‌ರು ಇದಕ್ಕೆ ಬಾಧ್ಯರಲ್ಲವೆಂದು ಹೇಳಿ ಅವರ ಮೇಲಿನ ಆಪಾದನೆಯನ್ನು ಸರ್ಕಾರ ತಳ್ಳಿಹಾಕಿತು. ಭಾರತದಲ್ಲಿದ್ದ ಯುರೋಪಿಯನ್ನರ ಸಂಘ ಡೈಯರನನ್ನು ಬ್ರಿಟಿಷ್ ಸಾಮ್ರಾಜ್ಯದ ರಕ್ಷಕನೆಂದು ಹೊಗಳಿ ಇವನಿಗೆ ಒಂದು ಕತ್ತಿಯನ್ನೂ 20,000 ಪೌಂಡುಗಳ ನಿಧಿಯನ್ನೂ ಸಮರ್ಪಿಸಿತು. ಆದರೆ ಯಾವುದೇ ಸುಸಂಸ್ಕೃತ ಸರ್ಕಾರ ಕೈಗೊಳ್ಳಲು ಹೇಸುವಂಥ ಹೇಯಕೃತ್ಯ ಇವನದು. ಜನರ ಸ್ವಾತಂತ್ರ್ಯಾಕಾಂಕ್ಷೆಯನ್ನು ದಮನ ಮಾಡಲು ಬ್ರಿಟಿಷ್ ಸರ್ಕಾರ ಕೈಗೊಂಡ ಪಾಶವೀಕೃತ್ಯದ ಮೂಕ ಸಾಕ್ಷಿ ಜಲಿಯನ್‌ವಾಲಾಬಾಗ್. (ಬಿ.ಆರ್.ಜಿ.;ಬಿ.ಎಸ್.ಎ.)

**ಜವಾಹರಲಾಲ್ ನೆಹರು:** 1889–1964. ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ. 1889 ನವೆಂಬರ್ 14ರಂದು ಅಲಹಾಬಾದಿನಲ್ಲಿ ಜನಿಸಿದರು. ತಂದೆ ಮೋತಿಲಾಲ್ ನೆಹರು, ತಾಯಿ ಸ್ವರೂಪರಾಣಿ. ಇವರದು ಕಾಶ್ಮೀರೀ ಬ್ರಾಹ್ಮಣ ಮನೆತನ. ಮೋತಿಲಾಲರು ಯಶಸ್ವಿ ನ್ಯಾಯವಾದಿಯಾಗಿ ಅಪಾರ ಹಣಗಳಿಸಿದ್ದರು. ಅವರಿಗೆ ಸಮಾಜದಲ್ಲಿ ಗೌರವದ ಸ್ಥಾನವಿತ್ತು. ಪಾಶ್ಚಾತ್ಯರ ಆಚಾರ ವಿಚಾರ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರು. ಇತರ ಹುಡುಗರ ಸಂಪರ್ಕ ಮಗನಿಗೆ ಒಳಿತಲ್ಲವೆಂದು ಭಾವಿಸಿದ ಅವರು ಮಗನನ್ನು ಶಾಲೆಗೆ ಕಳಿಸದೆ ಮನೆಯಲ್ಲೇ ಖಾಸಗಿಯಾಗಿ ಶಿಕ್ಷಣ ಕೊಡಿಸಿದರು. ಐರೋಪ್ಯ ಸಂಸ್ಕೃತಿಯ ಪರಿಚಯ ಜವಾಹರಲಾಲರಿಗೆ ಚಿಕ್ಕಂದಿನಿಂದಲೇ ಆಯಿತು.

ಮೋತಿಲಾಲರ ಆಪ್ತಸ್ನೇಹಿತರಲ್ಲೊಬ್ಬರಾಗಿದ್ದ ಮುನ್ಷಿ ಮುಬಾರಕ್ ಎಂಬವರು ಜವಾಹರರಿಗೆ ಬಾಲ್ಯದಲ್ಲಿ ತೀರ ಹತ್ತಿರದವರಾಗಿದ್ದರು. ಅವರು ಕತೆಗಳನ್ನು ಹೇಳಿ ಜವಾಹರರನ್ನು ವಿನೋದಪಡಿಸುತ್ತಿದ್ದರು. ಈ ಅವಧಿಯಲ್ಲಿ ಜವಾಹರರ ಮನಸ್ಸಿನ ಮೇಲೆ ಬಲವಾದ ಪ್ರಭಾವ ಬೀರಿದವರೆಂದರೆ ಫರ್ಡಿನೆಂಟ್ ಟಿ. ಬ್ರೂಕ್ಸ್. ಥಿಯೊಸೊಫಿಸ್ಟರೂ ಆನಿಬೆಸೆಂಟರ ಅನುಯಾಯಿಯೂ ಐರಿಷರೂ ಆಗಿದ್ದ ಅವರು ಜವಾಹರರಿಗೆ ಸುಮಾರು ಮೂರು ವರ್ಷಗಳ ಕಾಲ ಶಿಕ್ಷಕರಾಗಿದ್ದರು.

ಇಂಗ್ಲೆಂಡಿನ ಹ್ಯಾರೋ ಶಾಲೆಯಲ್ಲಿ ಜವಾಹರರು 2 ವರ್ಷ ಶಿಕ್ಷಣ ಪಡೆದರು. 1907ರಲ್ಲಿ ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜನ್ನು ಪ್ರವೇಶಿಸಿ 1910ರಲ್ಲಿ ರಸಾಯನಶಾಸ್ತ್ರ, ಭೂವಿಜ್ಞಾನ ಮತ್ತು ಸಸ್ಯಶಾಸ್ತ್ರಗಳಲ್ಲಿ ಟ್ರೈಪಾಸ್ ದೊರಕಿಸಿಕೊಂಡು ಹೊರಬಿದ್ದರು. ಆ ಸಮಯದಲ್ಲಿ ಇವರು ಸಾಹಿತ್ಯ ಮತ್ತು ರಾಜಕೀಯ ಗ್ರಂಥಗಳನ್ನು ಓದುತ್ತಿದ್ದರು. ಆಧುನಿಕ ಅರ್ಥಶಾಸ್ತ್ರದ ತತ್ತ್ವಗಳ ಪರಿಚಯ ಮಾಡಿಕೊಂಡರು. ಸಮಾಜವಾದದಲ್ಲಿ ಆಸಕ್ತಿ ತಳೆದರು. 1912ರಲ್ಲಿ ಇವರಿಗೆ ಬ್ಯಾರಿಸ್ಟರ್ ಪದವಿ ದೊರೆಯಿತು. ಭಾರತಕ್ಕೆ ಮರಳಿದಾಗ ಸ್ವಪ್ರತಿಷ್ಠೆಯವರಾಗಿದ್ದು ಭಾರತೀಯರಿಗಿಂತಲೂ ಆಂಗ್ಲ ಗೃಹಸ್ಥರನ್ನೇ ಹೆಚ್ಚಾಗಿ ಹೋಲುತ್ತಿದ್ದರು. 1916 ಫೆಬ್ರುವರಿ 8ರಂದು ತಂದೆತಾಯಿಯರು ಆರಿಸಿದ 17 ವರ್ಷ ವಯಸ್ಸಿನ ಕಮಲಾ ಅವರೊಂದಿಗೆ ಇವರ ವಿವಾಹವಾಯಿತು. ಕಮಲಾ ಅವರು ಕೌಲ್ ಕುಟುಂಬಕ್ಕೆ ಸೇರಿದವರು. 1917ರ ನವೆಂಬರ್ 19ರಂದು ಇವರ ಏಕಮಾತ್ರ ಸಂತಾನ ಇಂದಿರಾ ಜನಿಸಿದರು. ಕಮಲಾ ನೆಹರು 1936ರಲ್ಲಿ ಅಕಾಲಿಕವಾಗಿ ಯುರೋಪಿನಲ್ಲಿ ನಿಧನರಾದರು.

ಜವಾಹರರು ರಾಜಕೀಯದಲ್ಲಿ ಆಸಕ್ತಿ ತಾಳಿದ್ದರಾದರೂ ಇವರು ಅದರಲ್ಲಿ ಧುಮುಕಿದ್ದು ಅರೆಮನಸ್ಸಿನಿಂದ, ಸಾರ್ವಜನಿಕ ಜೀವನದಲ್ಲಿ ಅವರು ಕಾಲಿಟ್ಟದ್ದು ಸ್ವಪ್ರೇರಣೆಗಿಂತಲೂ ಹೆಚ್ಚಾಗಿ ಪರಿಸ್ಥಿತಿಯಿಂದಾಗಿ. ಭಾರತಕ್ಕೆ ಮರಳಿದ ಅನಂತರ ಇವರು ಶ್ರದ್ಧೆಯಿಂದಲೇ ತಂದೆಯೊಡನೆ ನ್ಯಾಯವಾದಿಯ ವೃತ್ತಿ ಕೈಗೊಂಡರಾದರೂ ನ್ಯಾಯಾಲಯದ ವಾತಾವರಣ ಇವರಿಗೆ ಬೌದ್ಧಿಕ ಉತ್ತೇಜನ ನೀಡುವಂಥದಾಗಿರಲಿಲ್ಲ. ನ್ಯಾಯವಾದಿಯ ಜೀವನ ಸಪ್ಪೆಯಾಗಿತ್ತು. ಆಗ ಇವರ ಗಮನ ರಾಜಕಾರಣದತ್ತ ಹರಿಯತೊಡಗಿತ್ತು. 1916ರಲ್ಲಿ ಪ್ರಥಮ ಬಾರಿಗೆ ಲಖನೌ ಕಾಂಗ್ರೆಸ್ ಅಧಿವೇಶನದ ಸಮಯಕ್ಕೆ ಇವರ ಮತ್ತು ಮಹಾತ್ಮ ಗಾಂಧಿಯವರ ಭೇಟಿಯಾಯಿತು. 1915ರಲ್ಲಿ ಮದನ ಮೋಹನ ಮಾಲವೀಯರು ಸಂಯುಕ್ತ ಪ್ರಾಂತದ ರೈತರ ಸ್ಥಿತಿಯ ಸುಧಾರಣೆಗಾಗಿ ಸ್ಥಾಪಿಸಿದ ಕಿಸಾನ್ ಸಭಾ ಇವರ ಗಮನ ಸೆಳೆಯಿತು. 1918ರಲ್ಲಿ ಇವರು ಆ ಸಭೆಯ ಉಪಾಧ್ಯಕ್ಷರಾದರು. ಗಾಂಧೀಜಿಯವರ ಅಸಹಕಾರ ಚಳವಳಿಯಲ್ಲಿ ಧುಮುಕಿ ಅದರಲ್ಲಿ ಪೂರ್ಣವಾಗಿ ಭಾಗವಹಿಸಿದರು. ಆ ಸಮಯದಲ್ಲಿ ದೇಶದಲ್ಲಿ ರೌಲತ್ ಕಾಯಿದೆಯ ವಿರುದ್ಧ ಆಂದೋಲನ ನಡೆಯುತ್ತಿತ್ತು. ಇವರು 1919 ಏಪ್ರಿಲ್ 6ರಂದು ಭಾರತಾದ್ಯಂತ ಹರತಾಳಗಳನ್ನು ವ್ಯವಸ್ಥೆಗೊಳಿಸುವುದರಲ್ಲಿ ನಿರತರಾದರು. ಅಮೃತಸರದ ಜಲಿಯನ್‌ವಾಲಾಬಾಗ್‌ನಲ್ಲಿ ಭೀಕರ ಹತ್ಯೆ, ಪಂಜಾಬಿನಲ್ಲಿ ಸೈನ್ಯಾಡಳಿತದ ಕ್ರೌರ್ಯ ನಡೆದವು. ಇದರಿಂದ ರೋಸಿದ ಜವಾಹರರು ಅಸಹಕಾರ ಚಳವಳಿಯಲ್ಲಿ ಹೆಚ್ಚು ಹೆಚ್ಚಾಗಿ ಸೇರಿಕೊಂಡರು. ಮಗನಿಂದ ಪ್ರಭಾವಿತರಾದ ಮೋತಿಲಾಲರು ತಮ್ಮ ವೃತ್ತಿಯನ್ನು ಬಿಟ್ಟುಕೊಟ್ಟರು. ಜವಾಹರರು ಬ್ರಿಟಿಷ್ ಆಳ್ವಿಕೆಯ ಪೂರ್ಣವಿರೋಧಿಗಳಾದರು. 1920–1945ರವರೆಗಿನ ಅವಧಿಯಲ್ಲಿ ಇವರು ಮತ್ತೆಮತ್ತೆ ಜೈಲುವಾಸವನ್ನು ಅನುಭವಿಸಿದರು. 1942 ಆಗಸ್ಟ್ 8ರಂದು ಇವರನ್ನು ಬಂಧಿಸಿ ಅಹ್ಮದ್‌ನಗರ ಕೋಟೆಯಲ್ಲಿ ಇಡಲಾಗಿತ್ತು. ಇದು ನೆಹರು ಅವರ ತುರಂಗವಾಸ. ಒಟ್ಟು 9 ಸಲ ಇವರು ದಸ್ತಗಿರಿಯಾಗಿ ಬಂಧನದಲ್ಲಿದ್ದರು.



1929ರಲ್ಲಿ ಕಾಂಗ್ರೆಸ್ಸಿನ ಲಾಹೋರ್ ಅಧಿವೇಶನದ ಅಧ್ಯಕ್ಷರಾಗಿ ಚುನಾಯಿತರಾದರು. ಪೂರ್ಣ ಸ್ವರಾಜ್ಯವೇ ಭಾರತದ ಗುರಿಯೆಂದು ಕಾಂಗ್ರೆಸ್ ಸಾರಿತು. ಸ್ವಾತಂತ್ರ್ಯ ಬರುವವರೆಗೆ ಇವರು ಐದು ಸಲ ಕಾಂಗ್ರೆಸ್ಸಿನ ಅಧ್ಯಕ್ಷತೆ ವಹಿಸಿದರು. ಸ್ವಾತಂತ್ರ್ಯಾನಂತರ 1951–1954ರವರೆಗೆ ಮೂರು ಬಾರಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಇವರು ವಿವಿಧ ಸಂಸ್ಥೆಗಳಲ್ಲಿ ವಹಿಸಿಕೊಂಡ ಕಾರ್ಯದರ್ಶಿತ್ವ ಹಾಗೂ ಅಧ್ಯಕ್ಷಸ್ಥಾನಗಳು ಹಲವಾರು. ದೇಶಕ್ಕೆ ಸ್ವಾತಂತ್ರ್ಯ ಬಂದಂದಿನಿಂದ (1947 ಆಗಸ್ಟ್ 15) ತಮ್ಮ ಬದುಕಿನ ಕೊನೆಯವರೆಗೂ ಇವರು ಭಾರತದ ಪ್ರಧಾನಿಯಾಗಿದ್ದರು. 1962ರಲ್ಲಿ ಭಾರತದ ಗಡಿಯ ಮೇಲೆ ಚೀನಿ ಆಕ್ರಮಣ ನಡೆದಾಗ ಜವಾಹರಲಾಲರ ಮನಸ್ಸಿನ ಮೇಲೆ ತೀವ್ರ ಪರಿಣಾಮ ಉಂಟಾಯಿತು. 1964 ಮೇ 27ರಂದು ಹೃದಯಾಘಾತದಿಂದ ನವದೆಹಲಿಯಲ್ಲಿ ನಿಧನರಾದರು.

ಗಾಂಧೀಜಿಯಿಂದ ಜವಾಹರರಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ದೊರೆತುವಾದರೂ ಅನೇಕ ಮೂಲ ಸಮಸ್ಯೆಗಳ ಬಗೆಗೆ ಇವರಿಬ್ಬರಲ್ಲಿ ಭಿನ್ನಾಭಿಪ್ರಾಯಗಳಿದ್ದುವು. ಜವಾಹರರು ವ್ಯಾಪಕವಾಗಿ ಪ್ರಪಂಚಸಂಚಾರ ಮಾಡಿದವರಲ್ಲೊಬ್ಬರು. 1926ರಲ್ಲಿ ಇವರು ತಮ್ಮ ಅಸ್ವಸ್ಥಪತ್ನಿಯನ್ನು ಚಿಕಿತ್ಸೆಗಾಗಿ ವೆನಿಸಿಗೆ ಕರೆದುಕೊಂಡು ಹೋಗಿದ್ದರು. 1938ರಲ್ಲಿ ಯುರೋಪಿನ ಪ್ರವಾಸ ಮಾಡಿದರು. ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ಏಷ್ಯ, ಯುರೋಪ್, ಆಫ್ರಿಕ ಮತ್ತು ಅಮೆರಿಕ ಖಂಡಗಳಲ್ಲಿ ಪ್ರವಾಸ ಮಾಡಿದರು. ಪ್ರತಿವರ್ಷ ಲಂಡನ್ನಿನಲ್ಲಿ ಜರುಗುತ್ತಿದ್ದ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಸಾಮಾನ್ಯವಾಗಿ ಹಾಜರಿರುತ್ತಿದ್ದರು.

ಜವಾಹರರು ಭಾರತಕ್ಕೆ ಪ್ರಪಂಚದಲ್ಲಿ ಮಹತ್ತ್ವದ ಸ್ಥಾನ ಒದಗಿಸಿಕೊಟ್ಟರು. ಇವರು ಪ್ರಪಂಚದ ಪ್ರಮುಖ ನಾಯಕರಲ್ಲೊಬ್ಬರಾಗಿದ್ದರು. ಇವರು ಭಾರತದ ವಿದೇಶಾಂಗ ನೀತಿಯ ಶಿಲ್ಪಿ. ರಾಜರ ಮತ್ತು ನಿರಂಕುಶ ಪ್ರಭುಗಳ ಬಗ್ಗೆ ಇವರಿಗೆ ಪ್ರೀತಿಗೌರವಗಳಿರಲಿಲ್ಲ. ಭಾರತದ ಅಲಿಪ್ತ ನೀತಿಗೆ ಇವರೇ ಕಾರಣರು. ಪ್ರಪಂಚದಲ್ಲಿ ಅಲಿಪ್ತ ರಾಷ್ಟ್ರಗಳ ಸಂಘಟನೆಯಾಗಲು ಇದು ಪೀಠಿಕೆಯಾಯಿತು. ಸ್ವಭಾವತಃ ಯುದ್ಧವಿರೋಧಿ, ಶಾಂತಿಸಾಧಕರು. ವಿಶ್ವಭ್ರಾತೃತ್ವದಲ್ಲಿ ಇವರಿಗೆ ಅಚಲವಿಶ್ವಾಸವಿತ್ತು. ಅಂತಾರಾಷ್ಟ್ರೀಯ ಕಲಹಗಳು ಪರಸ್ಪರ ವಿಚಾರವಿನಿಮಯ ಮತ್ತು ಸಂಧಾನಗಳಿಂದ ಮತ್ತು ಅವು ವಿಫಲವಾದಲ್ಲಿ ಮಧ್ಯಸ್ಥಿಕೆಯಿಂದ ಇತ್ಯರ್ಥವಾಗಬೇಕೆಂಬುದು ಇವರ ಅಭಿಪ್ರಾಯವಾಗಿತ್ತು. ಇದಕ್ಕಾಗಿ ಇವರು ವಿಶ್ವಸಂಸ್ಥೆಯ ನಿಯತ ಪ್ರತಿಪಾದಕರಾಗಿದ್ದರು. ವಸಾಹತುಶಾಹಿಗೆ ಇವರ ಪೂರ್ಣ ವಿರೋಧವಿತ್ತು. ಅದಕ್ಕೆ ಒಳಗಾದ ದೇಶಗಳ ಬಗ್ಗೆ ಇವರಿಗೆ ಸಹಾನುಭೂತಿಯಿತ್ತು. ಕ್ರೌರ್ಯ ದಬ್ಬಾಳಿಕೆಗಳು ಪ್ರಪಂಚದ ಯಾವುದೇ ಭಾಗದಲ್ಲಿ ನಡೆಯುತ್ತಿದ್ದರೂ ಇವರು ಅವಕ್ಕೆ ತಮ್ಮ ತೀವ್ರ ವಿರೋಧ ಪ್ರಕಟಿಸುತ್ತಿದ್ದರು.

ಜವಾಹರರು ವ್ಯಕ್ತಿಸ್ವಾತಂತ್ರ್ಯ ಮತ್ತು ಗೌರವಗಳ ಬಗ್ಗೆ ಕಟ್ಟುನಿಟ್ಟಾದ ನಿಷ್ಠೆಯುಳ್ಳವರಾಗಿದ್ದರು. ಸಂವಿಧಾನದಲ್ಲಿ ಹೇಳಲಾಗಿದ್ದ ಮೂಲಭೂತ ಹಕ್ಕುಗಳ ಮತ್ತು ನ್ಯಾಯಾಂಗ ಸ್ವಾತಂತ್ರ್ಯದ ಬಗ್ಗೆ ಇವರಿಗೆ ವಿಶೇಷ ಮನ್ನಣೆಯಿತ್ತು. ಅವನ್ನು ಮೊಟಕುಗೊಳಿಸುವ ಯಾವುದೇ ಕ್ರಮವನ್ನೂ ಇವರು ಕೈಗೊಳ್ಳಲಿಲ್ಲ.

ಭಾರತದ ಆರ್ಥಿಕ ಅಭಿವೃದ್ಧಿ ಆರ್ಥಿಕ ಯೋಜನೆಯಿಂದ ಮಾತ್ರ ಸಾಧ್ಯ ಎಂದು ಇವರು ನಂಬಿದ್ದರು. ಇವರ ದೃಷ್ಟಿಯಲ್ಲಿ ಆರ್ಥಿಕ ಯೋಜನೆ ಸಾಮಾಜಿಕ ನ್ಯಾಯವನ್ನು ದೊರಕಿಸುವುದಕ್ಕೆ ಮುಖ್ಯ ಸಾಧನವಾಗಿತ್ತು. ಯೋಜನಾ ಆಯೋಗವನ್ನು ನೇಮಿಸಿದ್ದು ಮತ್ತು ಪ್ರಜಾಪ್ರಭುತ್ವದ ಯೋಜನೆಗೆ ಅವಶ್ಯವಾದ ವ್ಯವಸ್ಥೆಯನ್ನು ಯೋಜಿಸಿದ್ದು–ಇವು ಭಾರತವನ್ನು ಆಧುನಿಕ ರಾಷ್ಟ್ರವಾಗಿ ಮಾರ್ಪಡಿಸುವುದಕ್ಕೆ ಇವರು ಕೈಗೊಂಡ ಪ್ರಥಮ ಕ್ರಮಗಳು.

ಜವಾಹರರದು ಆಧುನಿಕ ದೃಷ್ಟಿ; ಸ್ವತಂತ್ರ ಸಮಾಜದ ಪ್ರತಿಪಾದಕರು. ಜಾತೀಯತೆ, ಸಂಕುಚಿತ ರಾಷ್ಟ್ರೀಯತೆ, ದೃಷ್ಟಿವಿಶಾಲತೆಯಿಲ್ಲದ ಸ್ವಭಾಷಾಪ್ರೇಮ ಇವು ಇವರಿಗೆ ಸೇರುತ್ತಿರಲಿಲ್ಲ. ಧರ್ಮಾಂಧತೆಯನ್ನು ದ್ವೇಷಿಸುತ್ತಿದ್ದರು. ಇವರಿಗೆ ಹಿಂದುಳಿದ ಹಾಗೂ ಶೋಷಿತ ವರ್ಗಗಳ ಬಗ್ಗೆ ಅಪಾರ ಸಹಾನುಭೂತಿಯಿತ್ತು. ಸ್ವತಂತ್ರ ಸಮಾಜಕ್ಕೆ ವಿರುದ್ಧವಾಗಿದ್ದ ಜಾತೀಯತೆಯನ್ನು ನಿವಾರಿಸಲು ಯತ್ನಿಸಿರಾದರೂ ಇವರಿಗೆ ಅದರಲ್ಲಿ ಯಶಸ್ಸು ದೊರೆಯಲಿಲ್ಲ.

ಇವರಿಗೆ ಅಸಾಧಾರಣವಾದ ಇತಿಹಾಸಪ್ರಜ್ಞೆಯಿತ್ತು. ಬುದ್ಧ, ಅಶೋಕರನ್ನು ಮೆಚ್ಚಿದ್ದರು. ಕಲೆ ಸಾಹಿತ್ಯಗಳಲ್ಲಿ ವಿಶೇಷ ಆಸಕ್ತಿಯಿತ್ತು. ನಾಟಕಕಾರ ಬರ್ನಾರ್ಡ್ ಷಾ ಮತ್ತು ತತ್ತ್ವವೇತ್ತ ಬರ್ಟ್ರಂಡ್ ರಸಲ್ ಇವರ ಮಿತ್ರರಾಗಿದ್ದರು. ಇಂಗ್ಲಿಷಿನಲ್ಲಿಯೂ ಜವಾಹರರು ಉತ್ತಮ ಲೇಖಕರೂ ಆಗಿದ್ದರು. ಸೆರೆಮನೆ ವಾಸದ ಸಂದರ್ಭದಲ್ಲಿ ಆ ಸಮಯವನ್ನು ಬರವಣಿಗೆ ಮತ್ತು ಅಧ್ಯಯನಗಳಿಗೆ ಉಪಯೋಗಿಸಿಕೊಂಡರು. ಡಿಸ್ಕವರಿ ಆಫ್ ಇಂಡಿಯ ಇವರ ಪ್ರಸಿದ್ಧ ಕೃತಿ.

ಇವರು ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತಿದ್ದರು. ಆದರ್ಶ ಸಂಸದೀಯಪಟು. ಇವರು ಪ್ರಕ್ಷ ಪ್ರದೇಶಗಳ ನಿರ್ಬಂಧಗಳನ್ನು ಮೀರಿದ್ದ ರಾಷ್ಟ್ರದ ವಕ್ತಾರರಾಗಿದ್ದರು; ಸಂಸತ್ತಿನಲ್ಲಿ ಚರ್ಚೆ ಕಹಿಯಾದಾಗ ವಿರೋಧಪಕ್ಷಗಳ ಸದಸ್ಯನೂ ಇವರನ್ನು ಅವಲಂಬಿಸುತ್ತಿದ್ದುದುಂಟು. ಪ್ರಧಾನಿಯಾಗಿದ್ದಾಗ ವಿದೇಶ ವ್ಯವಹಾರ, ಪರಮಾಣುಶಕ್ತಿ ಆಯೋಗಗಳೇ ಅಲ್ಲದೆ ರಕ್ಷಣೆ, ವಿತ್ತ ಮೊದಲಾದ ಇಲಾಖೆಗಳನ್ನೂ ಸ್ವಲ್ಪಕಾಲ ನಿರ್ವಹಿಸಿದರು. ಯೋಜನಾ ಆಯೋಗದ ಅಧ್ಯಕ್ಷರೂ ಆಗಿದ್ದರು.

ಇವರನ್ನು ಮತ್ತು ಇವರ ಧೋರಣೆ ಆಡಳಿತನೀತಿಗಳನ್ನು ದೂರುವವರು ಇಲ್ಲದಿಲ್ಲ. ಇವರು ವ್ಯಕ್ತಿಗಳ ದಕ್ಷ ಪರೀಕ್ಷಕರಾಗಿರಲಿಲ್ಲವೆನ್ನುವವರಿದ್ದಾರೆ. ಮೂವತ್ತರ ದಶಕದಲ್ಲಿ ಜಯಪ್ರಕಾಶನಾರಾಯಣ, ರಾಮಮನೋಹರ ಲೋಹಿಯ ಮುಂತಾದ ಅನೇಕ ತೀವ್ರಗಾಮಿ ಯುವಕರು ಇವರೊಡನಿದ್ದರು. ಆದರೆ ಕ್ರಮೇಣ ಅವರೆಲ್ಲರೂ ನೆಹರು ಅವರನ್ನು ಬಿಟ್ಟರಲ್ಲದೆ ಅವರಲ್ಲನೇಕರು ಜವಾಹರರನ್ನು ಟೀಕಿಸುತ್ತಿದ್ದರು. ಪ್ರಥಮ ಭಾರತೀಯ ಗವರ್ನರ್–ಜನರಲ್ ಸಿ.ರಾಜಗೋಪಾಲಾಚಾರಿಯವರೊಂದಿಗೆ ಇವರ ಮೈತ್ರಿ ಬಹಳ ಕಾಲ ಬಾಳಲಿಲ್ಲ. ಪ್ರಥಮ ಅಧ್ಯಕ್ಷ ಬಾಬು ರಾಜೇಂದ್ರಪ್ರಸಾದರೊಡನೆ ಇವರ ಸಂಬಂಧ ತೃಪ್ತಿಕರವಾಗಿರಲಿಲ್ಲ. ಇವರ ಮಂತ್ರಿಮಂಡಲದಿಂದ ಹೊರಬಿದ್ದ ಅಂಬೇಡ್ಕರ್ ಮುಂತಾದ ಅನೇಕ ಸಹೋದ್ಯೋಗಿಗಳು ಇವರ ನಿರಂಕುಶಾಧಿಕಾರದ ವಿಧಾನ, ಮಂತ್ರಿಮಂಡಲದ ಸದಸ್ಯರನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಕಟುವಾಗಿ ಟೀಕಿಸಿದ್ದಾರೆ. ಕೊನೆಕೊನೆಗೆ ಜವಾಹರಲಾಲರನ್ನು ಕೇವಲ ಸ್ತುತಿಪಾಠಕರ ಗುಂಪೊಂದು ಸುತ್ತುವರಿದಿತ್ತು ಎನ್ನುವವರುಂಟು. ಗಂಭೀರ ಸಮಸ್ಯೆಗಳು ತಲೆದೋರಿದಾಗ ಯೋಗ್ಯ ನಿರ್ಣಯಗಳನ್ನು ತೆಗೆದುಕೊಳ್ಳಲು ಜವಾಹರರು ಅಸಮರ್ಥರಾಗಿದ್ದರು ಎನ್ನುವುದಕ್ಕೆ ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆ ಎದುರಿಗೆ ಒಯ್ದದ್ದನ್ನು ಉದಾಹರಿಸಲಾಗುತ್ತದೆ. ತಮ್ಮ ಅದೂರ ದೃಷ್ಟಿ ಮತ್ತು ಹಟಮಾರಿತನಗಳಿಂದಾಗಿ ಜಿನ್ನಾ ಮತ್ತು ಉಳಿದ ಮುಸ್ಲಿಮ್ ಲೀಗ್ ಸದಸ್ಯರನ್ನು ಇವರು ಒಲಿಸಿಕೊಳ್ಳಲಾಗದೆ ಹೋದರು. ಅದರಿಂದ ಲೀಗಿಗೆ ಕಾಂಗ್ರೆಸ್ಸಿನಲ್ಲಿ ವಿಶ್ವಾಸ ಅಳಿದು ಭಾರತ ಇಬ್ಭಾಗವಾಗುವುದಕ್ಕೆ ಹಾದಿಯಾಯಿತು ಎಂದು ಆಕ್ಷೇಪಿಸುವವರೂ ಇದ್ದಾರೆ. ಟಿಬೆಟ್ಟಿನ ಸಮಸ್ಯೆ ವಿಶ್ವಸಂಸ್ಥೆಯ ಎದುರಿಗೆ ಬಂದಾಗ ಭಾರತ ಅನುಸರಿಸಿದ ನಿಲುವಿನಿಂದಾಗಿ ವಿಶ್ವಸಂಸ್ಥೆ ಆ ಸಮಸ್ಯೆಗೆ ಸಾಕಷ್ಟು ಗಮನ ಕೊಡಲಿಲ್ಲ. (ಜಿ.ಎನ್.ಕೆ.;ಎಂ.ವಿ.ಎಸ್ಆರ್.)

**ಜ್ವಾಲಾಪುರಂ:** ಆಂಧ್ರಪ್ರದೇಶ ರಾಜ್ಯದ ಕರ್ನೂಲು ಜಿಲ್ಲೆಯಲ್ಲಿರುವ ಹಳೆ ಶಿಲಾಯುಗದ ನೆಲೆ. ಇಲ್ಲಿಯ ಉತ್ಖನನದಲ್ಲಿ ತೋಬಾ ಬೂದಿ ಎಂದು ಕರೆಯಲಾಗುವ ಬೂದಿಯ ಪದರ ಕಂಡುಬಂದಿರುವುದು ಕುತೂಹಲಕಾರಿ. ಇದೇ ಬೂದಿಯ ಪದರ ಮಹಾರಾಷ್ಟ್ರದ ಆದಿ ಹಳೆಶಿಲಾಯುಗದ ನೆಲೆಗಳಾದ ಮೋರ್‌ಗಾಂವ್ ಮತ್ತು ಬೋರಿಗಳಲ್ಲಿ ಮೊದಲೇ ಕಂಡುಬಂದಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತೋಬಾ ಬೂದಿಯ ಹಿನ್ನೆಲೆ ಹೀಗಿದೆ: ಆಗ್ನೇಯ ರಾಷ್ಟ್ರಗಳಲ್ಲಿ ಒಂದಾದ ಸುಮಾತ್ರದ ವಾಯವ್ಯ ಭಾಗದಲ್ಲಿರುವ ಇಂದಿನ ತೋಬಾ ಸರೋವರ ಪ್ರದೇಶದಲ್ಲಿ ಸು.74,000 ವರ್ಷಗಳ ಹಿಂದೆ ಅಗ್ನಿಪರ್ವತವೊಂದು ಬೃಹತ್ ಪ್ರಮಾಣದಲ್ಲಿ ಸ್ಫೋಟಿಸಿದಾಗ 1120 ಘನ ಕಿಮೀ ಲಾವಾರಸ ಉಕ್ಕಿ

ಪ್ರಾಗಿತಿಹಾಸ ನೆಲೆಯ ಉತ್ಖನನ

ಹೊರಬಂದಿತು, ಬೇಸಗೆ ಕಾಲದಲ್ಲಿ ಬೀಸುವ ಮುಂಗಾರು ಗಾಳಿಯಿಂದಾಗಿ ಇದರ ಬೂದಿ ಕಾಲಕ್ರಮೇಣ ದಕ್ಷಿಣ ಚೀನದಿಂದ ಅರಬ್ಬಿ ಸಮುದ್ರದವರೆಗಿನ ಪ್ರದೇಶದಲ್ಲಿ ಹರಡಿತು. ಇಂತಹ ವಿನಾಶಕಾರಿ ಸ್ಫೋಟದಿಂದ ಆಕಾಶದಲ್ಲಿ ದಟ್ಟವಾದ ಬೂದಿಯ ಪದರ ನಿರ್ಮಾಣವಾಗಿ ಇದು ಸೂರ್ಯನ ಬೆಳಕನ್ನು ಭೂಮಿಯ ಮೇಲೆ ಬೀಳದಂತೆ ತಡೆಗಟ್ಟಿತೆಂದೂ ಇದರಿಂದ ಹವಾಮಾನ ಅತಿಯಾಗಿ ತಂಪಾಗಿ ಮಾನವ ಜನಾಂಗದ ಮೇಲೆ ಭೀಕರ ಪರಿಣಾಮ ಉಂಟುಮಾಡಿತೆಂದೂ ಈ ಪರಿಸ್ಥಿತಿಯಲ್ಲಿ ಬದುಕಿ ಉಳಿದವರೇ ಇಂದಿನ ಜನಾಂಗದ ಮೂಲ ಪುರುಷರೆಂದೂ ಕೆಲವು ತಜ್ಞರ ಅಭಿಪ್ರಾಯವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ರವಿ ಕೋರಿಶೆಟ್ಟರ್, ಕೇಂಬ್ರಿಜ್ ವಿಶ್ವವಿದ್ಯಾಲಯದ ಮೈಕೆಲ್ ಪೆಟ್ರಾಗ್ಲಿಯ ಮತ್ತು ಆಸ್ಟ್ರೇಲಿಯದ ತಜ್ಞರೊಬ್ಬರು ಸೇರಿ ಜ್ವಾಲಾಪುರಂನಲ್ಲಿ ಉತ್ಖನನ ನಡೆಸಿದ್ದಾರೆ. ಇಲ್ಲಿ ತೋಬಾ ಬೂದಿಯ ಪದರ 2.4 ಮೀ ದಪ್ಪವಿದೆ. ಈ ಪದರದ ಮೇಲೆ ಮತ್ತು ಕೆಳಗಿರುವ ಭೂಸ್ತರಗಳಲ್ಲಿ ಮಧ್ಯ–ಅಂತ್ಯಹಳೆ ಶಿಲಾಯುಗದ ನೂರಾರು ಕಲ್ಲಿನ ಚಕ್ಕೆಗಳು ದೊರೆತಿವೆ. ಇವೆರಡು ಉಪಕರಣ ಸಮುಚ್ಚಯಗಳಲ್ಲಿ ಹೇಳುವಂತಹ ವ್ಯತ್ಯಾಸಗಳೇನಿಲ್ಲ. ಆದ್ದರಿಂದ ತೋಬಾ ಘಟನೆ ಈ ಮೊದಲು ಊಹಿಸಿದ್ದ ಪ್ರಮಾಣದಲ್ಲಿ ಮಾನವ ಜನಾಂಗದ ಮೇಲೆ ಪರಿಣಾಮ ಉಂಟುಮಾಡಲಿಲ್ಲ ಮತ್ತು ಇದರ ಅನಂತರವೂ ಜನವಸತಿ ಮೊದಲಿನಂತೆಯೇ ಮುಂದುವರೆಯಿತು. ಅಲ್ಲದೆ, ಬೇಟೆ ಮತ್ತು ಸಸ್ಯ ಸಂಗ್ರಹಣೆಯನ್ನು ಆಧರಿಸಿದ್ದ ಅಲೆಮಾರಿ ಜನ ಇವರಾಗಿದ್ದರಿಂದ ಈ ನೈಸರ್ಗಿಕ ಪ್ರಕೋಪ ಇವರ ಜೀವನಶೈಲಿಯ ಮೇಲೆ ಗಾಢ ಪ್ರಭಾವ ಬೀರಲಿಲ್ಲ ಎಂಬುದು ಉತ್ಖನನಕಾರರ ಅಭಿಪ್ರಾಯ. ಈ ಜನರು ಮೂಲತಃ ಆಫ್ರಿಕ ಪ್ರದೇಶದಿಂದ ಪಸರಿಸಿದ ಆಧುನಿಕ ಮಾನವ ಜನಾಂಗದವರಾಗಿದ್ದರು. ಈ ಪ್ರದೇಶದಲ್ಲಿ 75,000 ವರ್ಷಗಳಷ್ಟು ಹಿಂದೆಯೇ ಮಾನವ ವಸತಿಯಿದ್ದುದು ಗಮನಾರ್ಹ ಎಂಬುದು ಉತ್ಖನನಕಾರರ ಅಭಿಪ್ರಾಯ. ತೋಬಾ ಸ್ಫೋಟ ಮಾನವ ವಿಕಾಸದ ಮೇಲೆ ಅದ್ಭುತ ಪರಿಣಾಮ ಬೀರಿತು ಎಂಬ ನಿಲುವಿನ ಪ್ರತಿಪಾದಕರಾದ ಮಾನವಶಾಸ್ತ್ರಜ್ಞ ಹಾಗೂ ಪುರಾತತ್ತ್ವಜ್ಞ ಸ್ಟ್ಯಾನ್ಲಿ

ಆಂಬ್ರೋಸ್‌ರವರು (ಇಲಿನಾಯ್ಸ್ ವಿಶ್ವವಿದ್ಯಾಲಯ) ಇಂತಹ ತುರ್ತು ಅಭಿಪ್ರಾಯಗಳು ಸಮಂಜಸವಲ್ಲ; ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ಅವಶ್ಯವಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. (ಆರ್.ಕೆ.ಎಸ್.)

**ಜಿನ್ನಾ, ಮೊಹಮ್ಮದ್ ಅಲಿ:** 1876–1948. ಪಾಕಿಸ್ತಾನದ ಸ್ಥಾಪಕ ಮತ್ತು ಅದರ ಪ್ರಥಮ ಗವರ್ನರ್–ಜನರಲ್. ಇವರು 1876 ಡಿಸೆಂಬರ್ 25ರಂದು ಕರಾಚಿಯಲ್ಲಿ ಜನಿಸಿದರು. ತಂದೆ ಜಿನ್ನಾ ಪೂಂಜ, ಕರಾಚಿಯ ಚರ್ಮದ ವ್ಯಾಪಾರಿ. ಜಿನ್ನಾ ಚಿಕ್ಕ ವಯಸ್ಸಿನಲ್ಲೇ ಒಳ್ಳೆಯ ಪ್ರತಿಭಾವಂತರೆನಿಸಿಕೊಂಡು, ಉಚ್ಚ ವಿದ್ಯಾಭ್ಯಾಸಕ್ಕೆ ಇಂಗ್ಲೆಂಡಿಗೆ ಹೋಗಿ, ಕೇವಲ 20ನೆಯ ವಯಸ್ಸಿನಲ್ಲಿಯೇ ನ್ಯಾಯಶಾಸ್ತ್ರಪಾರಂಗತರಾಗಿ ಕರಾಚಿ ಮತ್ತು ಬೊಂಬಾಯಿ ಪಟ್ಟಣಗಳಲ್ಲಿ ನ್ಯಾಯವಾದಿಯಾಗಿ ಪ್ರಸಿದ್ಧರಾದರು. ದಾದಾಭಾಯಿ ನವರೋಜಿ, ಗೋಖಲೆ ಇವರ ಪ್ರಭಾವಕ್ಕೆ ಒಳಗಾದ ಇವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲಕ, ಹಿಂದು–ಮುಸ್ಲಿಂ ಐಕಮತ್ಯದ ಆಧಾರದ ಮೇಲೆ ಭಾರತ ಸ್ವಾತಂತ್ರ್ಯ ಗಳಿಸಬೇಕೆಂದು ಶ್ರಮಿಸಿದರು. ಆನಿಬೆಸೆಂಟರ ಹೋಂರೂಲ್ ಚಳವಳಿಯಲ್ಲಿ ಲೋಕಮಾನ್ಯ ಟಿಳಕ್ ಮತ್ತು ಮಹಾತ್ಮ ಗಾಂಧಿಯವರೊಡನೆ ಕೂಡಿ ಕೆಲಸ ಮಾಡಿದರು. ಇವರು 1913ರಲ್ಲೇ ಮುಸ್ಲಿಂಲೀಗಿನ ಸದಸ್ಯರಾಗಿದ್ದರಾದರೂ ಭಾರತ ರಾಷ್ಟ್ರೀಯತ್ವಕ್ಕೆ ಧಕ್ಕೆ ಬರುವ ಕ್ರಮಗಳಿಗೂ ಒಪ್ಪಿರಲಿಲ್ಲ. ಸ್ವತಂತ್ರ ಭಾರತದ ಸಂಸದೀಯ ಸಂವಿಧಾನದಲ್ಲಿ ಮುಸ್ಲಿಮರು ತಮ್ಮ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡು ಬಾಳಲು ಸಾಧ್ಯವೆಂದು ನಂಬಿದ್ದರು. ಇವರು 1919ರಲ್ಲಿ ರೌಲತ್ ಕಾಯಿದೆ ಎಂಬ ಕರಾಳ ಶಾಸನವನ್ನು ಖಂಡಿಸಿದ್ದರಲ್ಲದೆ, ಪಂಜಾಬಿನ ಅತ್ಯಾಚಾರದ ಬಗೆಗೂ ಖಿಲಾಫತ್ತಿನ ವಿಷಯದಲ್ಲಿಯೂ ಬ್ರಿಟಿಷ್ ಸರ್ಕಾರವನ್ನು ಟೀಕಿಸಿದ್ದರು.

1920ರಲ್ಲಿ ಮಹಾತ್ಮ ಗಾಂಧಿಯವರು ಕಾಂಗ್ರೆಸಿನ ನಾಯಕರಾದ ಮೇಲೆ ಜಿನ್ನಾರ ಧೋರಣೆ ಬದಲಾಯಿಸಿತು. ಗಾಂಧಿ ಆರಂಭಿಸಿದ ಸತ್ಯ–ಅಹಿಂಸಾ ಪ್ರಧಾನ ಅಸಹಕಾರ ಆಂದೋಲನವೂ ಇವರಿಗೆ ಹಿಡಿಸಲಿಲ್ಲ. ಇವರ ಪಾಲಿಗೆ ಗಾಂಧಿ ಒಬ್ಬ ಸರ್ವಾಧಿಕಾರಿಯಂತೆ ಕಂಡುಬಂದರು. ಅಲ್ಲಿಂದ ಮುಂದೆ ಇವರು ಕಾಂಗ್ರೆಸಿನಿಂದ ಕ್ರಮೇಣ ದೂರವಾದರೂ ಹಿಂದು–ಮುಸ್ಲಿಂ ಐಕಮತ್ಯವನ್ನು ಬಿಡದೆ ಪ್ರತಿಪಾದಿಸಿದರು. ಇವರು ಕೇಂದ್ರ ವಿಧಾನ ಸಭೆಯ ಸದಸ್ಯರಾದಾಗಲೂ ಮುಸ್ಲಿಂ ಲೀಗಿನ ಧೋರಣೆಯನ್ನು ಒಪ್ಪದೆ ಇದ್ದರು. 1930ರಲ್ಲಿ ಮಹಮ್ಮದ್ ಇಕ್ಬಾಲ್ ಸೂಚಿಸಿದ ಪಾಕಿಸ್ತಾನದ ಪ್ರತ್ಯೇಕ ರಾಷ್ಟ್ರ ಕಲ್ಪನೆ ಇವರಿಗೆ ವ್ಯವಹಾರವೆನಿಸಿರಲಿಲ್ಲ. 1930–32ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ ಮೇಲೆ, ಭಾರತದ ರಾಜಕಾರಣದಿಂದಲೇ ವಿರಮಿಸಿ, ಲಂಡನ್ನಿನಲ್ಲೇ ನೆಲೆಸಲು ನಿರ್ಧಾರಮಾಡಿ, ಸ್ವಲ್ಪ ಕಾಲ ಅಲ್ಲೇ ಇದ್ದರು.

1935ರ ಭಾರತ ಸರ್ಕಾರ ಅಧಿನಿಯಮದ ಪ್ರಕಾರ, ಪ್ರಾಂತೀಯ ಸ್ವಾಯತ್ತೆಯ ಆಧಾರದ ಮೇಲೆ ಚುನಾವಣೆಗಳು ನಡೆದಾಗ ಜಿನ್ನಾ ಭಾರತಕ್ಕೆ ಹಿಂದಿರುಗಿ ಬಂದು, ಮುಸ್ಲಿಂ ಲೀಗಿನ ನಾಯಕತ್ವ ವಹಿಸಿಕೊಂಡು, ರಾಜಕೀಯದಲ್ಲಿ ಭಾಗವಹಿಸಿದರು. ಚುನಾವಣೆಯ ಫಲಿತಾಂಶವಾಗಿ ಏಳು ರಾಜ್ಯಗಳಲ್ಲಿ ಕಾಂಗ್ರೆಸ್ ಬಹುಮತ ಗಳಿಸಿ ಅಧಿಕಾರಕ್ಕೆ ಬಂದದ್ದು ಹಿಂದು ಪ್ರಭುತ್ವ ಸ್ಥಾಪನೆಗೆ ನಾಂದಿ ಎಂದು ಇವರಿಗೆ ಭಾಸವಾಯಿತು. ಅಂದಿನಿಂದ ಇವರು ಮುಸ್ಲಿಂ ಲೀಗಿನ ನಿಲುವನ್ನು ಸಮರ್ಥಿಸಿ, ಪಾಕಿಸ್ತಾನದ ಪ್ರತ್ಯೇಕ ರಾಷ್ಟ್ರವಾದವನ್ನು ಉಗ್ರವಾಗಿ ಪ್ರತಿಪಾದಿಸಲಾರಂಭಿಸಿದರು. 1940ರಲ್ಲಿ ಇವರು ಮುಸ್ಲಿಂ ಲೀಗಿನ ಅಧ್ಯಕ್ಷರಾಗಿ ಚುನಾಯಿತರಾದರು. ಆ ವರ್ಷ ಲಾಹೋರಿನಲ್ಲಿ ನಡೆದ ಲೀಗ್ ಅಧಿವೇಶನದಲ್ಲಿ ಪಾಕಿಸ್ತಾನ ರಾಷ್ಟ್ರ ಬೇಡಿಕೆಯ ನಿರ್ಣಯ ಅಂಗೀಕೃತವಾಯಿತು. ಏಳು ವರ್ಷಗಳ ಕಾಲ ಇವರು ಮುಸ್ಲಿಂಲೀಗಿನ ಏಕೈಕ ನಾಯಕರಾಗಿ ಮುಂದುವರಿದರು. ಬ್ರಿಟಿಷ್ ಸರ್ಕಾರವಾಗಲೀ ಕಾಂಗ್ರೆಸ್ ಸರ್ಕಾರವಾಗಲೀ ಕಾಂಗ್ರೆಸ್ ಸಂಸ್ಥೆಯಾಗಲೀ ಮಂಡಿಸಿದ ಎಲ್ಲ ಸಲಹೆಗಳನ್ನೂ ನಿರಾಕರಿಸುತ್ತ, ಪಾಕಿಸ್ತಾನ ಸ್ಥಾಪನೆಯ ವಾದವನ್ನೇ ಮುಂದುವರಿಸಿದರು. 1947ರಲ್ಲಿ ಭಾರತ ವಿಭಜನೆಯಾಗಿ ಸ್ವತಂತ್ರ ಪಾಕಿಸ್ತಾನದ ಉದಯವಾದಾಗ ಇವರು ಅದರ ಗವರ್ನರ್–ಜನರಲ್ ಆದರು. ಇವರು 1948ರ ಸೆಪ್ಟೆಂಬರ್ 11ರಂದು ನಿಧನರಾದರು. (ಜಿ.ವಿ.ಎನ್.)

**ಜಿಯಾವುದ್ದೀನ್ ಬರನಿ:** ಮಧ್ಯಯುಗೀನ ಭಾರತದ ಹೆಸರಾಂತ ಇತಿಹಾಸಕಾರ. ಈತ ಇತಿಹಾಸವನ್ನು ವಿಜ್ಞಾನಿಗಳ ರಾಣಿಯೆಂದು ಕರೆದ. ಬರನಿಯ ಕುಟುಂಬದ ಸದಸ್ಯರೆಲ್ಲರೂ ಬಲ್ಬನ್‌ನ ಕಾಲದಿಂದಲೇ ದೆಹಲಿ ಸುಲ್ತಾನರ ಸೇವೆಯಲ್ಲಿದ್ದರು. ಹೀಗಾಗಿ ಬರನಿ ಅಧಿಕಾರ ಅರಸೊತ್ತಿಗೆಯನ್ನು ಸಮೀಪದಿಂದ ಕಂಡು ಅದರ ಆಳವನ್ನು ಚೆನ್ನಾಗಿ ಅರಿತವನಾಗಿದ್ದ. ಈ ಹಿನ್ನಲೆಯಿಂದಲೇ ಇವನು ಗಣ್ಯ ಮನೆತನದ ಹುಟ್ಟು, ರಾಜಾಶ್ರಯದ ಅಧಿಕಾರ ಮತ್ತು ಸಂಪತ್ತನ್ನು ಸಂಪಾದಿಸುವುದು ಅತ್ಯಾವಶ್ಯಕವಾದುದೆಂದು ಭಾವಿಸಿದ್ದ. ಆದರೆ ಇವನ ದೀರ್ಘಾವಧಿಯ ಜೀವನದಲ್ಲಿ ಅಧಿಕಾರ, ರಾಜಾಶ್ರಯ ದೊರೆಯಲೇ ಇಲ್ಲ. ಅಲಾವುದ್ದೀನ್ ಖಿಲ್ಜಿಯಂತೂ ಇವನಿಗೆ ಯಾವುದೇ ಪ್ರೋತ್ಸಾಹವನ್ನು ಕೊಡಲಿಲ್ಲ. ಕೇವಲ ಮಹಮ್ಮದ್ ಬಿನ್ ತುಘಲಕ್‌ನ ಆಳಿಕೆಯಲ್ಲಿ ಮಾತ್ರ ಹದಿನೇಳು ವರ್ಷ ರಾಜಾಶ್ರಯ ಸಿಕ್ಕಿ ಆಸ್ಥಾನಿಕನಾಗಿದ್ದ. ಫಿರೋಜ್ ಷಾನ ಆಳಿಕೆಯಾರಂಭದಲ್ಲಿ, ಬರನಿಯ ಮೇಲೆ ಹಲವು ಆರೋಪಗಳು ಸ್ಥಿರಪಟ್ಟಿದ್ದರಿಂದ ಇವನನ್ನು ಭಟ್‌ನೀರ್ ಕೋಟೆಯಲ್ಲಿ ಸೆರೆಯಲ್ಲಿರಿಸಲಾಯಿತು. ವೃದ್ಧಾಪ್ಯ, ಅರೆಬಾಗಿದ ಶರೀರ, ಬಿಳಿಕೂದಲು, ಸ್ನೇಹಿತರು, ಹಿತೈಷಿಗಳಿಲ್ಲದ ಏಕಾಂಗಿತನ ಇಂತಹ ಸನ್ನಿವೇಶದಲ್ಲಿ ಬರನಿ ತನ್ನ ಕಾಲವನ್ನು ಕುರಿತು ಬರೆಯಲಾರಂಭಿಸಿದ. ಇವನಿಗೆ ಒದಗಿದ ದೌರ್ಭಾಗ್ಯ ಇವನನ್ನು ಅಂತರ್‌ಮುಖಿ ಯಾಗಿಸಿ ಬರೆಯಲು ಪ್ರೇರೇಪಿಸಿತು; ಒಬ್ಬ ಪ್ರಭಾವಶಾಲಿ ಚಿಂತಕನನ್ನಾಗಿ ರೂಪಿಸಿತು.

ಬರನಿಗೆ ಒಬ್ಬ ಉತ್ತಮ ಬರೆಹಗಾರನಿಗಿರಬೇಕಾದ ಕೆಲವು ಅಪೂರ್ವ ಗುಣಗಳಿದ್ದವು. ನವಿರಾದ ಹಾಸ್ಯ, ಪಾಂಡಿತ್ಯದ ಗಾಂಭೀರ್ಯ ಹದವಾಗಿ ಮಿಶ್ರಿತವಾಗಿದ್ದವು. ತನ್ನ ಕಾಲದ ಅನುಭಾವಿಗಳು, ಸಂತರು, ಕವಿಗಳು ಕಲಾಕಾರರೊಂದಿಗೆ ಇವನಿಗೆ ಖಾಸ ಗೆಳೆತನವಿತ್ತು. ಮಧ್ಯಯುಗದ ಬದುಕಿನ ಸಮಸ್ತ ವೈವಿಧ್ಯತೆಗಳ ಅನುಭವವಿತ್ತು. ಇವುಗಳೆಲ್ಲವನ್ನು ಹದವಾಗಿ ಬೆರೆಸಿ ತನ್ನ ಇಳಿವಯಸ್ಸಿನಲ್ಲಿ ನತ್ ಮಹಮ್ಮದಿ, ಸಲಾಯತ್–ಇ–ಕಬೀರ್ ಇನಾಯತ್ ನಾಮ್ಹಾ–ಇ–ಇಲಾಹಿ, ಮ್ಹಾ–ಅಸಿಯೊಸಿ–ಇ–ಸಾದತ್, ತಾರೀಖ್–ಇ–ಫಿರೋಜ್‌ಶಾಹಿ ಮತ್ತು ಫತ್ವಾ–ಇ–ಜಿಹಾನ್ದಾರಿ ಎನ್ನುವ ಕೃತಿಗಳನ್ನು ರಚಿಸಿದ. ಆದರೆ ಇವನನ್ನು ಇತಿಹಾಸಕಾರರ ಸಾಲಿನಲ್ಲಿ ನಿಲ್ಲಿಸಿದ ಕೃತಿಗಳು ತಾರೀಖ್–ಇ–ಫಿರೋಜ್‌ಶಾಹಿ ಮತ್ತು ಫತ್ವಾ–ಇ–ಜಿಹಾನ್ದಾರಿ. ತಾರೀಖ್–ಇ–ಫಿರೋಜ್‌ಶಾಹಿ ಬಲ್ಬನ್‌ನ ಕಾಲದಿಂದ ಫಿರೋಜ್ ಷಾ ತುಘಲಕ್‌ನ ಆಳಿಕೆಯ ಮೊದಲ ಆರುವರ್ಷಗಳ ಅವಧಿಯವರೆಗಿನ ದೆಹಲಿ ಸುಲ್ತಾನರ ಕಾಲದ ಇತಿಹಾಸವಾಗಿದೆ. ಫತ್ವಾ–ಇ–ಜಹಾನ್ದಾರಿ ಎಂಬ ಕೃತಿ ಆಡಳಿತವನ್ನು ಕುರಿತು ರಾಜರಿಗೆ, ರಾಜಕುಮಾರರಿಗೆ ಮತ್ತು ಆಳುವ ವರ್ಗಕ್ಕೆ ಸಲಹೆ ಸೂಚನೆ ಮತ್ತು ಮಾರ್ಗದರ್ಶನ ನೀಡುವಂತಹದ್ದಾಗಿದೆ. ಬರನಿ ತನ್ನ ಕಾಲದ ಸುಲ್ತಾನರು, ಗಣ್ಯವರ್ಗದ ಪ್ರತಿಷ್ಠಿತರ ಕೆಲಸ ಕಾರ್ಯಗಳನ್ನು ಯಾವುದೇ ಅಂಜಿಕೆಯಿಲ್ಲದೆ, ಟೀಕಿಸಿ ಸೂಕ್ತವಾಗಿ ವಿಶ್ಲೇಷಿಸಿದ್ದಾನೆ ಎಂದು ಜಾನ್ ಡಾಸನ್ ಅಭಿಪ್ರಾಯ ಪಟ್ಟಿದ್ದಾರೆ. ಮೋರ್‌ಲ್ಯಾಂಡ್ ಮತ್ತು ಐ.ಎಂ.ಎಚ್. ಕುರೇಶಿ ಅವರು ಬರನಿ ವ್ಯವಸಾಯ ಆರ್ಥಿಕತೆಗಳನ್ನು ಕುರಿತು ಅತ್ಯುಪಯುಕ್ತ ಮಾಹಿತಿ ನೀಡುತ್ತಾನೆ ಎಂದಿದ್ದಾರೆ.

ಇತಿಹಾಸಕಾರ ಯಾವುದೇ ಅಂಜಿಕೆಯಿಲ್ಲದೆ ಸತ್ಯವನ್ನು ಹೇಳಬೇಕು ಮತ್ತು ಪ್ರಾಮಾಣಿಕವಾಗಿ ತನ್ನ ಕಾಲವನ್ನು ದಾಖಲಿಸಬೇಕೆಂದು ಈತ ಬಯಸುತ್ತಿದ್ದ. ಆದರೆ ಇವನು ಕೆಳವರ್ಗದ ಏಳಿಗೆಯನ್ನೂ ಕೆಳವರ್ಗಕ್ಕೆ ಸೇರಿದವರಿಗೆ ಆಸ್ಥಾನದ ಪ್ರವೇಶವನ್ನೂ ದೃಢವಾಗಿ ವಿರೋಧಿಸಿದ್ದ. ಪ್ರಾಯಶಃ ಈ ನಂಬಿಕೆಯೇ ಇವನನ್ನು, ಕೆಳವರ್ಗಕ್ಕೆ ಸೇರಿದ ಪ್ರತಿಭಾನ್ವಿತರನ್ನು ಪ್ರೋತ್ಸಾಹಿಸಿದ ಅಲಾವುದ್ದೀನ್ ಖಿಲ್ಜಿ ಮತ್ತು ಮಹಮದ್ ಬಿನ್ ತುಘಲಕ್‌ರನ್ನು ಪೂರ್ವಗ್ರಹ ಪೀಡಿತನಾಗಿ ನೋಡುವಂತೆ ಮಾಡಿರಬೇಕು. (ಎ.ಎನ್.)

**ಜುನಿಕುರಣ:** ಗುಜರಾತ್ ರಾಜ್ಯದ ಕಚ್ಛ್ ಜಿಲ್ಲೆಯ ಭುಜ್ ತಾಲ್ಲೂಕಿನಲ್ಲಿ ಖಾವಡ ಪಶ್ಚಿಮಬೆಟ ದ್ವೀಪದ ಮೇಲಿನ ದಿಬ್ಬ. ಈ ದಿಬ್ಬ ಕುರಣ ಹಳ್ಳಿಯಿಂದ 3 ಕಿಮೀ ಮತ್ತು ಭಾರತ–ಪಾಕಿಸ್ತಾನದ ಗಡಿಯಿಂದ 25 ಕಿಮೀ ದಕ್ಷಿಣಕ್ಕೆ ಇದೆ. 1968–69 ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಜೆ.ಪಿ.ಜೋಶಿ ಇದನ್ನು ಗುರುತಿಸಿದರು.

ಈ ದಿಬ್ಬದಲ್ಲಿ ಎರಡು ಭಾಗಗಳಿವೆ: ವಸತಿ ನೆಲೆ ಮತ್ತು ಸ್ಮಶಾನ. ಇದಲ್ಲದೆ ಇನ್ನೂ ಮೂರು ಪುಟ್ಟ ದಿಬ್ಬಗಳಿವೆ. ಮುಖ್ಯ ದಿಬ್ಬದ ಉತ್ಖನನದಲ್ಲಿ ಪ್ರೌಢ ಹಾಗೂ ಅಂತ್ಯ ಹರಪ್ಪ ಸಂಸ್ಕೃತಿಗಳ ಅವಶೇಷಗಳು ಕಂಡುಬಂದವು. ಹಸಿ ಇಟ್ಟಿಗೆಯ ಮತ್ತು ಕಲ್ಲಿನ ಕಟ್ಟಡಗಳು ಎರಡೂ ಹಂತಗಳಲ್ಲೂ ಕಂಡುಬಂದವು. ಇಟ್ಟಿಗೆಯು 1:2:4 ಪ್ರಮಾಣದಲ್ಲಿ ಇದ್ದು, 40–42 ×20–22×6–8 ಸೆಂಮೀ ಅಳತೆಯದಾಗಿತ್ತು.

ವಸತಿಯಲ್ಲಿ ಎರಡು ಭಾಗಗಳಿದ್ದವು: ಕೋಟೆ ಅಥವಾ ಆಡಳಿತ ವಿಭಾಗ ಮತ್ತು ಕೆಳನಗರ. ಉತ್ಖನನ ಕೋಟೆಯ ದಕ್ಷಿಣ ಭಾಗಕ್ಕೆ ಸೀಮಿತವಾಗಿದ್ದುದರಿಂದ ದಕ್ಷಿಣದ ಹೆಬ್ಬಾಗಿಲು ಮತ್ತು ಪಕ್ಕದಲ್ಲಿ ಎರಡು ಅಂಗಣಗಳು ಕಂಡುಬಂದವು (ಸ್ಟೇಡಿಯಂ I ಮತ್ತು II ). ಹೆಬ್ಬಾಗಿಲಿನ ದಕ್ಷಿಣಕ್ಕಿರುವ ಸ್ಟೇಡಿಯಂ–I , 24.75–25.25 ಮೀ ಉದ್ದ 8.25 ಮೀ ಅಗಲ ಇದೆ. ಸ್ಟೇಡಿಯಂ–II, ಇದರ ಪೂರ್ವಕ್ಕೆ ಇದೆ. ಇದರ ಅಳತೆ 22.20 ×14.50ಮೀ. ಎತ್ತರಕ್ಕೆ ಹಂತ–ಹಂತದಲ್ಲಿ ಕಟ್ಟಿರುವ ಆಡಳಿತ ವಿಭಾಗ ಊರ ಮುಖ್ಯಸ್ಥರ ಹಾಗೂ ಗಣ್ಯರ ನಿವಾಸ ಸ್ಥಾನ ಎಂದು ಭಾವಿಸಬಹುದು. ಇದರ ದಕ್ಷಿಣಕ್ಕೆ ಒಂದು ಬಯಲು ರಂಗಮಂಟಪವಿದ್ದು (200×50 ಮೀ), ಅದರಲ್ಲಿ ಸಮಾರಂಭಗಳನ್ನು ಆಚರಿಸುತ್ತಿದ್ದರೆಂದು ಕಾಣುತ್ತದೆ. ಧೋಲಾವೀರದಲ್ಲಿ ಇರುವ ಸ್ಟೇಡಿಯಮ್ ಹಂತ III ಕ್ಕೆ ಸೇರಿದ್ದಾದರೆ ಜುನಿಕುರಣದ ಸ್ಟೇಡಿಯಮ್ ಹಂತ IV ನೆಯದಕ್ಕೆ ಸೇರಿದ್ದು. ಜುನಿಕುರಣದ ಅವಶೇಷಗಳು ಧೋಲಾವೀರದ ಹಂತ IV ಮತ್ತು V ರ ಅವಶೇಷಗಳನ್ನು ಹೋಲುತ್ತವೆ. ಈ ಎರಡು ಊರುಗಳ ನಡುವಿನ ಅಂತರ 42 ಕಿಮೀ.

ಆಡಳಿತ ವಿಭಾಗದ ದಕ್ಷಿಣ ಕೋಟೆಗೋಡೆಯನ್ನು ಉತ್ಖನನದಲ್ಲಿ ಪತ್ತೆಹಚ್ಚಲಾಯಿತು. ಇದರ ಉದ್ದ 92 ಮೀ × ಅಗಲ 0.72 ಮೀ. ಇದು ಕಲ್ಲು ಮತ್ತು ಕಲಸುಮಣ್ಣಿನಿಂದ ಕಟ್ಟಿದ ಕಟ್ಟಡ. ಇಲ್ಲಿಯೂ ಧೋಲಾವೀರದಂತಹ ಮರಳುಗಲ್ಲಿನ ಆಧಾರ ಕಂಬಗಳು ಹೆಬ್ಬಾಗಿಲಲ್ಲಿದ್ದವು. ಅವಶೇಷಗಳಲ್ಲಿ ಮಣ್ಣಿನ ಬಳೆ ಚೂರುಗಳು, ಶಂಖದ ಸಾಮಗ್ರಿಗಳು ಹೆಚ್ಚಾಗಿವೆ. ಬಳಪದ ಕಲ್ಲಿನ, ಕಾರ್ನೇಲಿಯನ್ ಮತ್ತು ಸರ್ಪೆಂಟೈನ್ ಕಲ್ಲುಗಳಲ್ಲಿ ಮಾಡಿರುವ ಮಣಿಗಳು, ಚರ್ಟ್ ಕಲ್ಲಿನ ತೆಳು ನೀಳ ಚಕ್ಕೆಗಳು, ವೃತ್ತಾಕಾರದ ಸ್ಟಿಯಟೈಟ್‍ನ ಚಪ್ಪಟೆಯಾದ ಮಣಿಗಳು, ತಾಮ್ರದ ಬಾಣದ ಮೊನೆ, ಮೀನು ಹಿಡಿಯುವ ಗಾಳ ದೊರೆತಿವೆ. ಕಪ್ಪುಬಣ್ಣದ ಚಿತ್ರಗಳುಳ್ಳ ಕೆಂಪು ಮಣ್ಪಾತ್ರೆಗಳು ಮತ್ತು ರಿಸರ್ವ್ ಸ್ಲಿಪ್ ಪಾತ್ರೆ ಪ್ರೌಢ ಹರಪ್ಪ ಸಂಸ್ಕೃತಿಯ ಹಂತದಲ್ಲಿ ದೊರೆತಿವೆ.

ಕೋಟೆಗೋಡೆಯ ಹೊರಗೆ ಇರುವ ಹಲವಾರು ಕಲ್ಲುಗುಪ್ಪೆಗಳ ಉತ್ಖನನದಿಂದ ಅವು ಗೋರಿಗಳೆಂದು ತಿಳಿದುಬಂದಿದೆ. ಶವವನ್ನು ಹೂತ ಅನಂತರ ಚಪ್ಪಡಿಕಲ್ಲಿನಿಂದ ಮುಚ್ಚಿ ಅದರ ಮೇಲೆ ಕಲ್ಲಿನರಾಶಿಯನ್ನು ನಿರ್ಮಿಸಲಾಗುತ್ತಿತ್ತು. ಗೋರಿಗಳಲ್ಲಿ ಹರಪ್ಪ ಕಾಲದ ಪಾತ್ರೆಗಳು ಕೂಡ ಕಂಡುಬಂದವು.

ಜುನಿಕುರಣದ ಕಟ್ಟಡಗಳಲ್ಲಿ ಸ್ಟೇಡಿಯಮ್, ಹೆಬ್ಬಾಗಿಲು, ಕೋಟೆಗೋಡೆಗಳು, ಕೋಟೆ, ಕೆಳನಗರ, ಮಣ್ಣಿನ ಇಟ್ಟಿಗೆಯ ಜಗಲಿಗಳು, ಚರಂಡಿಗಳು ಇತ್ಯಾದಿ ಸಮೃದ್ಧ ನಗರಜೀವನ ಶೈಲಿಗೆ ಉತ್ತಮ ಉದಾಹರಣೆಯಾಗಿವೆ. (ಯು.ಎಸ್.)

**ಜುನ್ನರ್:** ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯಲ್ಲಿರುವ ಆದಿ ಚಾರಿತ್ರಿಕ ನೆಲೆ. ಇದು ಸಾತವಾಹನರ ಮೊದಲ ರಾಜಧಾನಿಯಾಗಿತ್ತು. ಶಿವಾಜಿಯ ಜನ್ಮಸ್ಥಳವೂ ಹೌದು. ಸಾತವಾಹನ ಮತ್ತು ಮರಾಠ ಸಾಮ್ರಾಜ್ಯಗಳ ನಡುವಿನ ಅವಧಿಯ ಅವಶೇಷಗಳು ಇಲ್ಲಿ ಸಿಕ್ಕಿರಲಿಲ್ಲ. ಹಾಗಾಗಿ ಇಲ್ಲಿ ಆದಿ ಚಾರಿತ್ರಿಕ ಕಾಲದಿಂದ ಮಧ್ಯಯುಗೀನ ಕಾಲದವರೆಗೆ ಸತತ ಸಾಂಸ್ಕೃತಿಕ ಘಟ್ಟಗಳಿವೆಯೆ ಎಂಬುದನ್ನು ತಿಳಿಯಲು ಹಾಗೂ ಸಾತವಾಹನರ ಕಾಲದಲ್ಲಿ ಇಲ್ಲಿದ್ದ ವಸತಿಯ ಸ್ವರೂಪವೇನೆಂಬುದನ್ನು ತಿಳಿಯಲು ಡೆಕ್ಕನ್ ಕಾಲೇಜಿನ ತಂಡ 2005–07ರ ಅವಧಿಯಲ್ಲಿ ಉತ್ಖನನ ನಡೆಸಿತು.

ಉತ್ಖನನದಲ್ಲಿ ಕಂಡುಬಂದ ನಾಲ್ಕು ಸಾಂಸ್ಕೃತಿಕ ಹಂತಗಳೆಂದರೆ ಸಾತವಾಹನ –ಪೂರ್ವ, ಸಾತವಾಹನ, ಇತಿಹಾಸೋತ್ತರ ಮತ್ತು ಮಧ್ಯಯುಗೀನ ಕಾಲ. ಉತ್ಖನನ ಕೈಕೊಳಪಟ್ಟ ಜಾಗ ಸೀಮಿತವಾಗಿದ್ದರಿಂದ ಮೊದಲೆರಡು ಹಂತಗಳ ವಸತಿಯ ಬಗ್ಗೆ ಹೆಚ್ಚು ಮಾಹಿತಿಯನ್ನು ಪಡೆಯುವುದು ಸಾಧ್ಯವಾಗಲಿಲ್ಲ. ಸಾತವಾಹನರ ಕಾಲದ 3 ಕಟ್ಟಡಗಳ ಅಳಿದುಳಿದ ಅವಶೇಷಗಳು ಕಂಡುಬಂದವು. ಎರಡು ಕಟ್ಟಡಗಳ ಗೋಡೆಗಳು ಮಣ್ಣು ಮತ್ತು ಇಟ್ಟಿಗೆಯಿಂದ ಕಟ್ಟಿದವಾಗಿದ್ದವು. ಇವುಗಳಿಗಿಂತ ಹಳೆಯದಾದ ಮೂರನೆಯ ಕಟ್ಟಡ ಸುಟ್ಟ ಇಟ್ಟಿಗೆಯಿಂದ ನಿರ್ಮಿತವಾದುದಾಗಿತ್ತು. ಈ ಕಟ್ಟಡವನ್ನು ಕರಿ ಜೇಡಿಮಣ್ಣು ಮತ್ತು ಕಲ್ಲುಗಳ ಅಡಿಪಾಯದ ಮೇಲೆ ಕಟ್ಟಲಾಗಿತ್ತು. ಕೆಂಪು ಲೇಪನವುಳ್ಳ ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಮತ್ತು ಬೂದುಬಣ್ಣದ ದೊರಕು ಪಾತ್ರೆ–ಇವು ಇಲ್ಲಿ ಸಿಕ್ಕ ಸಾತವಾಹನ ಕಾಲದ ಪಾತ್ರೆಗಳು. ಎಲ್ಲವೂ ತಿಗುರಿಯ ಮೇಲೆ ಮಾಡಿದ ಪಾತ್ರೆಗಳಾಗಿದ್ದು ಬಟ್ಟಲು, ಗೋಲಮಡಕೆ, ಮುಚ್ಚಳ, ಜಾಡಿ ಮೊದಲಾದ ನಮೂನೆಗಳಿದ್ದವು. ಹೊಳಪುಗೆಂಪಿನ ಪಾತ್ರೆಗಳ ಒಂದೆರಡು ಭಾಗಗಳೂ ಇಲ್ಲಿ ದೊರಕಿದ್ದು ಇವು ಪ್ರಶ.ಪೂ. 1ನೆಯ ಶತಮಾನದಲ್ಲಿ ರೋಮ್ ದೇಶದೊಂದಿಗೆ ಇದ್ದ ಸಂಪರ್ಕ ಹಾಗೂ ಪ್ರಾದೇಶಿಕ ವ್ಯಾಪಾರ–ವ್ಯವಹಾರಗಳಲ್ಲಿ ಈ ನೆಲೆ ಸಕ್ರಿಯವಾಗಿದ್ದನ್ನು ಸೂಚಿಸುತ್ತವೆ. ಇವಲ್ಲದೆ ಪ್ರಸಕ್ತ ಶತಮಾನದ ಆರಂಭಿಕ ದಶಕಗಳಿಗೆ ಸೇರುವ ಬಿ–1 ಎಂದು ಹೆಸರಿಸಲಾದ ಮಣ್ಪಾತ್ರೆಯ ಕೆಲವು ಚೂರುಗಳೂ ಇಲ್ಲಿ ಕಂಡುಬಂದಿವೆ. ಹಸುರು ಬಣ್ಣದ ಹೊಳಪಿನ ಮೇಲ್ಮೈಯುಳ್ಳ ಈ ಪಾತ್ರೆಗಳು ಪರ್ಷಿಯನ್ ಕೊಲ್ಲಿಯ ಪ್ರದೇಶದಿಂದ ಆಮದಾಗಿರುವ ಸಾಧ್ಯತೆಯಿದೆ. ಪರ್ಷಿಯನ್ ಕೊಲ್ಲಿಯ ಪ್ರದೇಶದಲ್ಲಿ ಪ್ರ.ಶ.ಪೂ.2– ಪ್ರ.ಶ.1ನೆಯ ಶತಮಾನದ ಅವಧಿಯಲ್ಲಿ ಈ ಪಾತ್ರೆಗಳು ಚಲಾವಣೆಯಲ್ಲಿದ್ದವು.

ಆದಿ ಚಾರಿತ್ರಿಕ ಕಾಲದ ಇತರ ಅವಶೇಷಗಳೆಂದರೆ ಅಡಕೆಯಾಕಾರದ ಸುಡಾವೆ ಮಣ್ಣಿನ ಮಣಿಗಳು, ಕಣ್ಣಿನ ಹಾಗೂ ಬೊಂಬೆಯಾಕಾರದ ಪದಕಗಳು, ಮಂದಗೆಂಪಿನ ಮಣಿ, ಅಗೇಟ್ ಮೊದಲಾದ ಅರೆ–ಪ್ರಶಸ್ತ ಕಲ್ಲಿನ ಮಣಿಗಳು, ಸುಡಾವೆಮಣ್ಣಿನ ಆಕೃತಿಗಳು, ಗಾಜಿನ ಮಣಿ ಹಾಗೂ ಬಳೆಗಳು, ತಾಮ್ರ ಮತ್ತು ಕಬ್ಬಿಣದ ವಸ್ತುಗಳು. ಸುಡಾವೆಮಣ್ಣಿನ ಸ್ತ್ರೀ ಆಕೃತಿಯೊಂದರ ಮುಖದಲ್ಲಿ ಭಾರತೀಯ ಲಕ್ಷಣಗಳಿದ್ದು ಕೇಶ ವಿನ್ಯಾಸ ಮಾತ್ರ ರೋಮನ್ ಶೈಲಿಯಲ್ಲಿದ್ದುದು ಸೋಜಿಗದ ವಿಚಾರ.

ಒಟ್ಟಿನಲ್ಲಿ ಆದಿ ಚಾರಿತ್ರಿಕ ಕಾಲದಲ್ಲಿ ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ವ್ಯಾಪಾರ ಜಾಲದಲ್ಲಿ ಜುನ್ನರ್ ಮುಖ್ಯಸ್ಥಾನ ವಹಿಸಿದ್ದನ್ನು ಈ ಎಲ್ಲ ಅವಶೇಷಗಳೂ ಸೂಚಿಸುತ್ತವೆ. ಸಮೀಪದಲ್ಲಿಯೇ ಇರುವ ನಾಣೇಘಾಟ್ ಕಣಿವೆಯ ಮೂಲಕ ಪಶ್ಚಿಮ ಕರಾವಳಿಯ ಆಗಿನ ಮುಖ್ಯ ಬಂದರುಗಳಲ್ಲೊಂದಾದ ಕಲ್ಯಾಣದೊಂದಿಗೆ ಜುನ್ನರ್ ಸಂಪರ್ಕವಿಟ್ಟುಕೊಂಡಿದ್ದಾಗಿ ಕಾಣುತ್ತದೆ. (ವಿ.ಎಸ್‍ಎಚ್.)

**ಜುಲೈ ಕ್ರಾಂತಿ:** 1830 ಜುಲೈ 28ರಿಂದ ಮೂರು ದಿವಸಗಳ ಕಾಲ ಹತ್ತನೆಯ ಚಾರ್ಲ್ಸ್‌ನ ನಿರಂಕುಶ ಪ್ರಭುತ್ವದ ವಿರುದ್ಧ ಪ್ಯಾರಿಸಿನಲ್ಲಿ ನಡೆದ ಕ್ರಾಂತಿ. ಹತ್ತನೆಯ ಚಾರ್ಲ್ಸ್ ಸಂಸದೀಯ ಸಂಸ್ಥೆಗಳಿಗೆ ಅನುಗುಣವಾಗಿ ರಾಜ್ಯವಾಳುವುದಾಗಿ ಹೇಳಿ ತನ್ನ ಆಳಿಕೆಯನ್ನು ಪ್ರಾರಂಭಿಸಿದ (1824). ಆದರೆ ಇವನು ಅತ್ಯಲ್ಪ ಕಾಲದಲ್ಲೇ ಜನರ ಪ್ರೀತಿವಿಶ್ವಾಸಗಳನ್ನು ಕಳೆದುಕೊಂಡ. 1830 ಜುಲೈ 26ರಂದು ಇವನು ಸುಗ್ರೀವಾಜ್ಞೆಗಳನ್ನು ಹೊರಡಿಸಿದ. ಪತ್ರಿಕಾಸ್ವಾತಂತ್ರ್ಯದ ನಿರ್ಬಂಧ, ಸಂಸತ್ತಿನ ವಿಸರ್ಜನೆ, ಶಾಸಕರ ಅಧಿಕಾರಾವಧಿಯನ್ನು ಏಳು ವರ್ಷದಿಂದ ಐದು ವರ್ಷಕ್ಕೆ ಮೊಟಕುಗೊಳಿಸಿದ್ದು, ಮುಕ್ಕಾಲು ವಾಸಿ ಮತದಾರರನ್ನು ಮತದಾನದ ಹಕ್ಕಿನಿಂದ ದೂರ ಮಾಡಿದ್ದು ಮತ್ತು ಸೆಪ್ಟೆಂಬರಿನಲ್ಲಿ ಹೊಸ ಚುನಾವಣೆ ಮಾಡಲು ಆಜ್ಞೆ ನೀಡಿದ್ದು–ಈ ಸುಗ್ರೀವಾಜ್ಞೆಗಳ ವಿಷಯ. ಈ ಆಜ್ಞೆಗಳಿಂದ ಪ್ರಜೆಗಳು ರೊಚ್ಚಿಗೆದ್ದು ನಿರಂಕುಶ ಪ್ರಭುತ್ವವನ್ನು ಕೊನೆಗಾಣಿಸಲು ಚಳವಳಿ ಹೂಡಿದರು.

1830 ಜುಲೈ 27–28ರ ರಾತ್ರಿ ಚಳವಳಿಗೆ ಸನ್ನದ್ಧರಾದ ಪ್ಯಾರಿಸಿನ ಪ್ರಜೆಗಳು ಚಳವಳಿ ಆರಂಭಿಸಿದರು. ಅವರು ರಸ್ತೆಯಲ್ಲಿ ಸೇರಿ ಪ್ರಜಾಪ್ರಭುತ್ವ ಸಂವಿಧಾನ ಬೇಕೆಂದು ಘೋಷಣೆಗಳನ್ನು ಕೂಗಲಾರಂಭಿಸಿದರು. ಈ ಚಳವಳಿಯಲ್ಲಿ ಮಧ್ಯಮ ವರ್ಗದ ಜನ ಮತ್ತು ಕಾರ್ಮಿಕರು ಹೆಚ್ಚಾಗಿ ಭಾಗವಹಿಸಿದ್ದರು. ಬಹು ಬೇಗ ಪ್ರದರ್ಶನಗಳು ಹಿಂಸೆಯ ಸ್ವರೂಪವನ್ನು ತಳೆದುವು. ಕ್ರಾಂತಿಕಾರರು ಹಿಂದಿನ ಬಿಳಿಯ ಧ್ವಜಕ್ಕೆ ಬದಲಾಗಿ ತ್ರಿವರ್ಣ ಧ್ವಜವನ್ನು ಹಿಡಿದು ಅದೇ ರಾಷ್ಟ್ರದ ನಿಜವಾದ ಲಾಂಛನವೆಂದು ಘೋಷಿಸಿದರು. ಚಳವಳಿಯಲ್ಲಿ ಸು.10,000 ಜನ ಭಾಗವಹಿಸಿದ್ದರು. ಸು.14,000 ಸೈನಿಕರನ್ನು ಪ್ಯಾರಿಸಿನಲ್ಲಿ ಇಡಲಾಗಿತ್ತಾದರೂ ಪ್ಯಾರಿಸಿನ ರಸ್ತೆಗಳು ಇಕ್ಕಟ್ಟಾಗಿ ಅಂಕುಡೊಂಕಾಗಿದ್ದುದರಿಂದ ದಂಗೆಯನ್ನು ಅಡಗಿಸುವುದು ಕಷ್ಟವಾಯಿತು. ಕೊನೆಗೆ ರಾಜ ವಿರೋಧಿಗಳೊಡನೆ ರಾಜಿ ಮಾಡಿಕೊಳ್ಳಲು ಪಟ್ಟ ಪ್ರಯತ್ನ ವಿಫಲವಾಯಿತು. ಜುಲೈ 31ರಂದು ಚಾರ್ಲ್ಸ್ ತನ್ನ 9 ವರ್ಷದ ಮೊಮ್ಮಗನಿಗೆ ಸಿಂಹಾಸನ ಬಿಟ್ಟುಕೊಟ್ಟು ಇಂಗ್ಲೆಂಡಿಗೆ ಸಂಸಾರ ಸಮೇತ ಓಡಿಹೋದ. ನಿರಂಕುಶ ಪ್ರಭುತ್ವದ ವಿರುದ್ಧ ದಂಗೆ ಎದ್ದಿದ್ದ ಜನ ಪ್ರಜಾಪ್ರಭುತ್ವ ಬೇಕೆಂದು ಇಚ್ಛಿಸಿದರು. ಆದರೆ ಕೆಲವು ಪತ್ರಿಕೋದ್ಯಮಿಗಳು ಮತ್ತು ಪ್ಯಾರಿಸಿನ ಬಹು ಸಂಖ್ಯೆಯ ಪ್ರಜೆಗಳು ಸೇರಿ ಲೂಯಿ ಫಿಲಿಪನನ್ನು ಸಿಂಹಾಸನಕ್ಕೆ ಏರಿಸಿದರು. ಈತ ಸಂವಿಧಾನ ಬದ್ಧವಾಗಿ ರಾಜ್ಯವಾಳಲು ಪ್ರಾರಂಭಿಸಿ, ಕ್ರಾಂತಿಯ ಉದ್ದೇಶವನ್ನು ಅಲಕ್ಷಿಸದೆ, ಜನತೆಯ ವಿಶ್ವಾಸ ಗಳಿಸಲು ಪ್ರಯತ್ನಿಸಿದ.

ಜುಲೈ ಕ್ರಾಂತಿ ಫ್ರಾನ್ಸಿನ ಇತಿಹಾಸದಲ್ಲಿ ಅತ್ಯಂತ ಮಹತ್ತ್ವ ಉಳ್ಳದ್ದು. ಇದು ಮಧ್ಯಮ ವರ್ಗದ ಜನರ ಕ್ರಾಂತಿ. ಕ್ರಾಂತಿಯ ಪರಿಣಾಮ ಯುರೋಪಿನಾದ್ಯಂತ ಹರಡಿತು. ಯುರೋಪಿನ ರಾಜರಿಗೆ ಇದು ಆತಂಕಕಾರಿಯಾಯಿತು. ಒಟ್ಟಿನಲ್ಲಿ ಇದರಿಂದ ನಿರಂಕುಶ ಪ್ರಭುತ್ವಕ್ಕೆ ಭಾರಿ ಪೆಟ್ಟಾಯಿತು. ರಾಜ ಪ್ರಜೆಗಳ ಆಶಯದಂತೆ (ಪ್ರಜಾಪ್ರತಿನಿಧಿಯಂತೆ) ಆಳಬೇಕೇ ವಿನಾ ತನ್ನ ಸ್ಥಾನ ದೈವದತ್ತವಾಗಿ ಬಂದ ಹಕ್ಕು ಎಂದು ತಿಳಿಯಬಾರದು ಎಂಬುದನ್ನು ಜನರು ಕ್ರಾಂತಿಯ ಮೂಲಕ ರಾಜರಿಗೆ ಮನವರಿಕೆ ಮಾಡಿಕೊಟ್ಟರು.

(ಎನ್.ಎ.ಎಚ್.ಎಂ.)

**ಜೆರುಸಲೇಂ:** ಇಸ್ರೇಲ್ ದೇಶದ ರಾಜಧಾನಿ. ಪ್ರಪಂಚದ ಪ್ರಾಚೀನ ನಗರಗಳಲ್ಲಿ ಒಂದು. ಶತಮಾನಗಳ ಕಾಲ ಪ್ರಸಿದ್ಧ ಪ್ಯಾಲಸ್ತೀನ್ ರಾಷ್ಟ್ರದ ರಾಜಧಾನಿಯಾಗಿತ್ತು. ಸಮುದ್ರಮಟ್ಟದಿಂದ 2460 ಅಡಿ ಮೇಲಿದ್ದು, ಬಹುತೇಕ ಈ ನಗರ ಗುಡ್ಡದ ಮೇಲೆ ನಿರ್ಮಾಣವಾಗಿದೆ. ಇಲ್ಲಿನ ಯಹೂದಿ ದೇವಾಲಯ ಪಶ್ಚಿಮ ಭಾಗದಲ್ಲಿ ಸಮುದ್ರಮಟ್ಟದಿಂದ 2500 ಅಡಿ ಮೇಲಿದ್ದರೆ, ನಗರದ ಆಗ್ನೇಯ ಭಾಗ ಸಮುದ್ರಮಟ್ಟದಿಂದ 2130 ಅಡಿ ಎತ್ತರದಲ್ಲಿದೆ. ಈ ನಗರದ ಸುತ್ತಲೂ ಕಣಿವೆ–ಕಂದರಗಳು ಸುತ್ತುವರೆದಿದೆ. ಸಾವಿರಾರು ವರ್ಷಗಳಿಂದ ಸತತ ವಿದೇಶಿಯರ ದಾಳಿಗೆ ತುತ್ತಾದ ನಗರಗಳ ಪೈಕಿ ಜೆರುಸಲೇಂ ಮೊದಲನೆಯದು. ಐತಿಹಾಸಿಕವಾಗಿ ಜೆರುಸಲೇಂ ನಗರದ ಬಗ್ಗೆ ಮಾಹಿತಿ ಟೆಲ್–ಅಮರ್ನ ಸ್ಥಳದಲ್ಲಿ ಪತ್ತೆಯಾಗಿರುವ ಪ್ರ.ಶ.ಪೂ.15ನೆಯ ಶತಮಾನದ ಶಾಸನಗಳಿಂದ ತಿಳಿದುಬರುತ್ತದೆ. ಅನಂತರದ ಕಾಲದಲ್ಲಿ ಈ ನಗರದ ಬೆಳವಣಿಗೆಯ ಮೇಲೆ ಬ್ಯಾಬಿಲೋನ್ ಸಂಸ್ಕೃತಿ ಪ್ರಭಾವ ಬೀರಿತ್ತು. ಈ ನಗರ ಪ್ರ.ಶ.ಪೂ.15ನೆಯ ಶತಮಾನದಲ್ಲಿ ಬ್ಯಾಬಿಲೋನಿಯ ದೊರೆ ಅಮೆನೊಫಿಯಿಸ್ ಆಳಿಕೆಗೆ ಒಳಪಟ್ಟಿತ್ತು. ಅನಂತರದ ಶತಮಾನಗಳಲ್ಲಿ ಈಜಿಪ್ಟಿನ ಫೆರೋಗಳ ಆಳಿಕೆಯಲ್ಲಿ ಒಂದು ಪ್ರಾಂತ್ಯದ ಆಡಳಿತ ಕೇಂದ್ರವಾಗಿತ್ತು. ಈ ಕಾಲದಲ್ಲಿ ಈ ನಗರಕ್ಕೆ ಅಂದಿನ ಆಡಳಿತಗಾರನ ಹೆಸರು ತಳುಕುಹಾಕಿಕೊಂಡು ಜೆರುಸಲೇಂ ಎಂದು ಪ್ರಸಿದ್ಧಿಯಾಯಿತು. ಬಹುತೇಕ ಇತಿಹಾಸಕಾರರು ಈ ನಗರ ಇಸ್ರೆಲೈಟ್ಸ್ ಪಂಗಡದ ಮೂಲ ನೆಲೆಯೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಇವರಿಗಿಂತಲೂ ಮೊದಲೇ ಜೆಬುಸೈಟ್ಸ್ ಮತ್ತು ಬೆಂಜಮೈಟ್ಸ್ ಎಂಬ ಅಲೆಮಾರಿ ಪಂಗಡಗಳು ಇಲ್ಲಿ ವಾಸಿಸುತ್ತಿದ್ದವು ಎಂದು ತಿಳಿದುಬರುತ್ತದೆ.

ಜೆರುಸಲೇಂ ನಗರದಲ್ಲಿದ್ದ ಅನ್ಯ ಪಂಗಡದವರನ್ನು ಹೊರಹಾಕಿ ಪ್ರ.ಶ.ಪೂ.1010–970ರಲ್ಲಿ ಯಹೂದಿ ದೊರೆ ಡೇವಿಡ್ ಟೈರಿಯನ್ ಕೆಲಸಗಾರರಿಂದ ನಗರವನ್ನು ಪುನರ್ ನಿರ್ಮಿಸಿ ಇಲ್ಲಿ ತನ್ನ ಆಳಿಕೆ ನಡೆಸಿದ. ಇವನ ಮಗ ಸುಲೇಮನ್ ಆಡಳಿತಕಾಲದಲ್ಲಿ ಜೆರುಸಲೇಂ ಪೋಗಿಗೆ ತುತ್ತಾಗಿ ಹಲವಾರು ವರ್ಷಗಳ ಕಾಲ ಕ್ಷಾಮ ತಲೆದೋರಿದ ಬಗ್ಗೆ ಹಳೆ ಒಡಂಬಡಿಕೆಯಲ್ಲಿ ಮಾಹಿತಿ ಸಿಗುತ್ತದೆ. ಸಾಲೋಮನ್ ಇಲ್ಲಿ ಅರಮನೆಯೊಂದನ್ನು

ನಿರ್ಮಿಸಿದ ಬಗ್ಗೆ ವಿವರಣೆಯಿದ್ದು ಸು.13 ವರ್ಷಕಾಲ ಇದರ ನಿರ್ಮಾಣ ನಡೆದಿತ್ತು. ಅರಮನೆಯು ಅನೇಕ ಕಂಬಗಳನ್ನು ಹೊಂದಿದ್ದು ಪ್ರಮುಕ ಕಂಬಗಳಿಗೆ ತಾಮ್ರದ ತಗಡಿನ ಹೊದಿಕೆ ಹಾಕಲಾಗಿತ್ತು. ಕಲ್ಲು ಮತ್ತು ಮರವನ್ನು ಬಳಸಿ ನಿರ್ಮಿಸಲಾಗಿದ್ದ ಈ ಅರಮನೆ ಅನಂತರ ಸಂಭವಿಸಿದ ಭೂಕಂಪದಿಂದ ಹಾಳಾಯಿತು. ಸಾಲೋಮನ್ ಆಡಳಿತದಲ್ಲಿ ವೈಭವ ಕಂಡಿದ್ದ ಈ ನಗರ ಸಮರ್ಥ ಆಡಳಿತಗಾರರ ಕೊರತೆಯಿಂದಾಗಿ ಮತ್ತೆ ಈಜಿಪ್ಷಿಯನ್ನರ ವಶವಾಯಿತು.

ಈಜಿಪ್ಟಿನ ದೊರೆ ಶಿಶಾಕ್ ಎಂಬುವನು ಜೆರುಸಲೇಂ ನಗರವನ್ನು ತನ್ನ ಆಳಿಕೆಗೆ ಒಳಪಡಿಸಿ, ನಗರವನ್ನು ಎರಡು ಭಾಗಗಳಾಗಿ ವಿಭಜಿಸಿದ. ಯಹೂದಿ ದೇವಾಲಯವನ್ನು ಕೆಡವಿ ಸು.400 ಇತರ ಕಟ್ಟಡಗಳನ್ನು ನಾಶಪಡಿಸಲಾಯಿತು. ಪ್ರ.ಶ.ಪೂ.585ರಲ್ಲಿ ಜುಡ್

ಜೆರುಸಲೇಂ ನಗರ

ಪ್ರಾಂತ ಬ್ಯಾಬಿಲೋನಿಯನ್ನರ ವಶವಾಯಿತು. ದೊರೆ ನೆಬುಚಡ್ನೆಸರ್ ಸ್ವತಃ ದಾಳಿನಡೆಸಿ ಜೆರುಸಲೇಂ ನಗರವನ್ನು ಗುಲಾಮರನ್ನಾಗಿಸಿ ಬ್ಯಾಬಿಲೋನಿಗೆ ಕರೆದೊಯ್ದ. ಈ ದಾಳಿಯಲ್ಲಿ ಜೆರುಸಲೇಂ ಬಹುತೇಕ ನಾಶವಾಯಿತು. ಈ ನಗರದ ಸುತ್ತಲೂ ಬ್ಯಾಬಿಲೋನಿಯ ಆಡಳಿತಗಾರರು ಕಲ್ಲಿನಿಂದ ಹೊರಗೋಡೆ ನಿರ್ಮಿಸಿದ್ದರು. ಈ ನಗರದ ಅವಶೇಷಗಳನ್ನು ಬ್ಯಾಬಿಲೋನಿಯಾಕ್ಕೆ ಸಾಗಿಸಲಾಯಿತು (ಪ್ರಮುಖವಾಗಿ ತಾಮ್ರ ಲೋಹದ ಪಾತ್ರೆಗಳು).

ಪ್ರ.ಶ.ಪೂ. 539 ಪರ್ಷಿಯ ಚಕ್ರವರ್ತಿ ಸೈರಸ್ ಬ್ಯಾಬಿಲೋನಿಯನ್ನರನ್ನು ಸೋಲಿಸಿ ಜೆರುಸಲೇಂ ನಗರವನ್ನು ತನ್ನ ಆಡಳಿತಕ್ಕೆ ವಹಿಸಿಕೊಂಡ. ಇವನ ಆಡಳಿತಕಾಲದಲ್ಲಿ ಬ್ಯಾಬಿಲೋನಿಯದಲ್ಲಿ ಬಂಧಿತರಾಗಿದ್ದ ಜುಡಾಯಿನ್ಸ್‌ಗೆ ಸ್ವದೇಶಕ್ಕೆ ಹಿಂತಿರುಗಲು ಅನುಮತಿ ನೀಡಿದ. ಪ್ರ.ಶ.ಪೂ.537–516ರ ನಡುವೆ ಇಲ್ಲಿ ಶಾಂತಿ ನೆಲೆಸಿತು. ಯಹೂದಿಯರು ಮತ್ತೆ ತಮ್ಮ ದೇವಾಲಯವನ್ನು ನಿರ್ಮಿಸಿದ್ದರು. ಪ್ರ.ಶ.ಪೂ.357–338ರ ಕಾಲದಲ್ಲಿ ಈ ನಗರವು ಈಜಿಪ್ಷಿಯನ್ನರ ದಾಳಿಗೆ ಒಳಗಾಗಿ, ಅಪಾರ ಪ್ರಮಾಣದ ಜೀವಹಾನಿ ಯಾಯಿತು. ಯಹೂದಿಯರು ಈಜಿಪ್ಷಿಯನ್ನರ ಗುಲಾಮರಾಗಬೇಕಾಯಿತು. ಪ್ರ.ಶ.ಪೂ.332ರಲ್ಲಿ ಅಲೆಗ್ಸಾಂಡರ್ ಈಜಿಪ್ಷಿಯನ್ನರನ್ನು ಸೋಲಿಸಿ ಜೆರುಸಲೇಂ ನಗರವನ್ನು ತನ್ನ ಆಳಿಕೆಗೆ ವಶಪಡಿಸಿಕೊಂಡ. ಅಲೆಕ್ಸಾಂಡರ್ ಮರಣಾನಂತರ ಆಡಳಿತಕ್ಕೆ ಬಂದ ಪೊಲಮಿ ಮತ್ತು ಸೆಲ್ಯುಸಿಡ್ಸ್ ಆಡಳಿತಾವಧಿಯಲ್ಲಿ ಜೆರುಸಲೇಂ ಪದೇ ಪದೇ ಈಜಿಪ್ಷಿಯನ್ನರ ಧಾಳಿಗೆ ಒಳಗಾಯಿತು. ಈಜಿಪ್ಷಿಯನ್ನರ ವಿರುದ್ಧ ಸೆಲ್ಯುಸಿಡ್ಸ್ ಬೆಂಬಲಕ್ಕೆ ನಿಂತ ಯಹೂದಿಯರು ಕೆಲವು ಕಾಲ ನೆಮ್ಮದಿಯ ಜೀವನ ಕಂಡರು ಸಹ. ಜೆರುಸಲೇಂ ಬಲವಂತದ ಗ್ರೀಕ್ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕಾಯಿತು. ಹಾನಿಗೊಳಗಾದ ದೇವಾಲಯ, ಕಟ್ಟಡ ಹಾಗೂ ಹೊರಗೋಡೆಯನ್ನು ಗ್ರೀಕರು ಪುನರ್ ನಿರ್ಮಿಸಿದರು. (ಇಫಿಪನೆಸ್) ಎಂಬ ಆಂಟಿಕೋದ ದಂಡನಾಯಕ ಯಹೂದಿ ದೇವಾಲಯವನ್ನು ದೋಚಿ, ನಗರವನ್ನು ದಹಿಸಿದ. ಇದರಿಂದಾಗಿ ಜೆರುಸಲೇಂ ತನ್ನ ಹಳೆಯ ವೈಭವವನ್ನು ಕಳೆದುಕೊಂಡು ಗ್ರೀಕರ ನಗರವೆಂಬಂತೆ ಕಾಣಲಾರಂಭಿಸಿತು. ಪ್ರ.ಶ.ಪೂ.86ರ ವೇಳೆಯಲ್ಲಿ ಈ ನಗರ ಪಾಂಪೆಯ ವಶವಾಯಿತು. ಹೆರಾಡ್ ಆಡಳಿತದಲ್ಲಿ ಮತ್ತೆ ಜೆರುಸಲೇಂ ಅಭಿವೃದ್ಧಿ ಕಂಡಿತು. ಆದರೆ ಈ ಅಭಿವೃದ್ಧಿ ಬಹಳ ಕಾಲ ಉಳಿಯಲಿಲ್ಲ. ಪ್ರ.ಶ.ಪೂ.70ರಲ್ಲಿ ರೋಮನ್ನರ ದೊರೆ ಟೈಟಸ್ ಜೆರುಸಲೇಂ ನಗರದ ಮೇಲೆ ಮುತ್ತಿಗೆ ಹಾಕಿ ಧೂಳಿಪಟ ಮಾಡಿದ. ಸು.1,15,880 ನಗರವಾಸಿಗಳು ಮರಣವನ್ನಪ್ಪಬೇಕಾಯಿತು. ಪ್ರಥಮ ಬಾರಿಗೆ ಯಹೂದಿಯರು ಜೆರುಸಲೇಂ ನಗರ ತಮಗೆ ಸುರಕ್ಷಿತವಲ್ಲವೆಂಬ ತೀರ್ಮಾನಕ್ಕೆ ಬಂದರು. ರೋಮನ್ನರ ಧಾಳಿಗೆ ಸಿಲುಕಿ ಅಳಿದುಳಿದ ಯಹೂದಿಯರು ಯುರೋಪಿನ ಭಾಗಗಳಿಗೆ ವಲಸೆಹೋದರು. ಜೆರುಸಲೇಂ ದೇವಾಲಯದ ಭಗ್ನ ಅವಶೇಷಗಳ ಮೇಲೆ ಅನಂತರದ ರೋಮನ್ ದೊರೆ ಹೇದ್ರಿಯನ್ ಜುಪಿಟರ್ ಕ್ಯಾಪಿಟುಲಿಯಸ್ ದೇವಾಲಯ ನಿರ್ಮಿಸಿದ. ಈ ಘಟನೆಗೆ ಸಂಬಂಧಿಸಿದ ಅಡಿಗಲ್ಲು ಇಂದಿಗೂ ಹೆರಮ್ ಆಫ್ ಷರೀಫ್ ಕಟ್ಟಡದ ದಕ್ಷಿಣದ ಗೋಡೆಯಲ್ಲಿ ಕಾಣಬಹುದಾಗಿದೆ. ರೋಮನ್ನರ ಧಾಳಿಯಿಂದಾಗಿ ಅಪಾರ ಪ್ರಮಾಣದ ಯಹೂದಿಯರು ಹತರಾದರು ಹಾಗೂ ಗುಲಾಮರಾಗಿ ಉಳಿಯುವಂತಾದರು. ಅನಂತರದ 300 ವರ್ಷಗಳ ಬಗ್ಗೆ ಪೂರ್ಣ ಮಾಹಿತಿ ದೊರೆಯುವುದಿಲ್ಲ.

ಜೆರುಸಲೇಂ ನಗರ ಮತ್ತೆ ಬೈಜಾಂಟೀಯನ್ ಆಡಳಿತಗಾರರಾಗಿದ್ದ ರೋಮನ್ನರ ದೊರೆ ಕಾನ್‌ಸ್ಟಾಂಟೀನ್ ಮಹಾಶಯನ ಕಾಲದಲ್ಲಿ ಮತ್ತೆ ತನ್ನ ವೈಭವವನ್ನು ಕಾಣುವಂತಾಯಿತು. ಪ್ರ.ಶ.336ರಲ್ಲಿ ಅನಾಸ್ಟಿಯಸ್ ಚರ್ಚ್ ನಿರ್ಮಿಸಲಾಯಿತು. ಪ್ರ.ಶ.450ರಲ್ಲಿ ಎರಡನೆಯ ಥಿಯೋಡೇಸಿಯಸ್ ಇಲ್ಲಿ ಯುಡೋಕ್ಸಿಯ ಚರ್ಚ್ ನಿರ್ಮಿಸಿದ. ಹೀಗಾಗಿ ಮುಂದಿನ ವರ್ಷಗಳಲ್ಲಿ ಜೆರುಸಲೇಂ ಕ್ರೈಸ್ತ ಧರ್ಮದ ಪ್ಯಾಟ್ರೀಯೂತ್ ಆಗಿ ಉಳಿಯಿತು. ಪ್ರ.ಶ. 614ರಲ್ಲಿ ಪರ್ಷಿಯನ್ನರು ಬೈಜಾಂಟೀಯನ್ ಆಡಳಿತಗಾರರನ್ನು ಸೋಲಿಸಿ, ಜೆರುಸಲೇಂ ಮೇಲೆ ದಾಳಿನಡೆಸಿದರು. ಎರಡನೇ ಸೋರೆಯಿಸ್ ಈ ಧಾಳಿಯ ನೇತೃತ್ವ ವಹಿಸಿದ್ದ ಅಪಾರ ಪ್ರಮಾಣದ ಕೊಲೆ–ಸುಲಿಗೆಗೆ ಕಾರಣನಾದ.

ಪ್ರ.ಶ.637ರಲ್ಲಿ ಜೆರುಸಲೇಂ ಪ್ರಥಮ ಬಾರಿಗೆ ಅರಬ್ಬರ ವಶವಾಯಿತು. ಇಸ್ಲಾಂಧರ್ಮದ ಮೂರನೆಯ ಸಂಪ್ರದಾಯ ಖಲೀಫ ಉಮರ್ ಪ್ಯಾಲಸ್ಟೀನ್‌ನ್ನು ಗೆದ್ದು, ಜೆರುಸಲೇಂ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡು ಇಸ್ಲಾಂ ಧಾರ್ಮಿಕ ಕೇಂದ್ರವೆಂದು ಸಾರಿದ. ಪ್ರಸ್ತುತ ಅಸ್ತಿತ್ವದಲ್ಲಿರುವ ಡೊಮ್ ಆಫ್ ರಾಕ್‌ನ ಪಶ್ಚಿಮಕ್ಕೆ ಮರದಲ್ಲಿ ಒಂದು ಮಸೀದಿ ನಿರ್ಮಿಸಿದ ಹಾಗೇಯೇ ಚರ್ಚ್‌ಗಳ ನಿರ್ಮಾಣದ ಮೇಲೆ ನಿರ್ಬಂಧ ಹೇರಿದ. ಅರಬ್ಬರ ಆಳ್ವಿಕೆಗೆ ಒಳಗಾದ ಅನಂತರ ಇಲ್ಲಿ ಮಹಮ್ಮದೀಯರ ಪ್ರಭಾವ ಅಧಿಕಗೊಂಡಿತು. ಪ್ರ.ಶ.688ರಲ್ಲಿ ಉಮಾಯಿದ್ದ ಆಡಳಿತಗಾರ ಖಲೀಫ ಅಬ್ದುಲ್ ಮಾಲೀಕ್ ಪ್ರಪಂಚಪ್ರಸಿದ್ಧ ಡೋಮ್ ಆಫ್ ರಾಕ್ ನಿರ್ಮಿಸಿದ. ಪ್ರ.ಶ.738ರಲ್ಲಿ ಅಲ್–ಅಕ್ಸಾ ಮಸೀದಿ ನಿರ್ಮಿಸಲಾಯಿತು. ಅಬ್ಬಾಸಿದ್ದ ಆಡಳಿತಗಾರ ಖಲೀಫ್ ಅಲ್–ಮಮೂನ್ ಡೋಮ್ ಆಫ್ ರಾಕ್‌ನ ನವೀಕರಣಗೊಳಿಸಿ ಸುತ್ತಲೂ ಕಲ್ಲಿನ ಗೋಡೆ ನಿರ್ಮಿಸಿದ. 1016ರಲ್ಲಿ ಭೂಕಂಪನದಿಂದಾಗಿ ಹಲವಾರು ಕಟ್ಟಡಗಳು ಹಾಳಾದವು. ಡೋಮ್ ಅಫ್ ರಾಕ್‌ನ ಕಲ್ಲಿನ ಗುಮ್ಮಟದ ಒಂದು ಭಾಗ ಕುಸಿದಿತ್ತು, ಅದನ್ನು 1022ರಲ್ಲಿ ಪುನರ್ ರಚಿಸಲಾಯಿತು. 985ರಲ್ಲಿ ಅಲ್–ಮುಖಾದ್ದಸಿ ಎಂಬ ಭೂಗೋಳಶಾಸ್ತ್ರಜ್ಞನು ಜೆರುಸಲೇಂ ನಗರದ ಬಗ್ಗೆ ವಿವರಣೆ ನೀಡಿದ್ದಾನೆ. ಈ ವೇಳೆಯಲ್ಲಿ ಯಹೂದಿಯರು ಪ್ರಾಬಲ್ಯದಿಂದಿದ್ದು, ಅವರ ಪ್ರಮುಖ ಅರ್ಚಕ ರಬ್ಬಾ ಎಂಬುವರು ಪ್ರಮುಖರಾಗಿದ್ದರು ಎಂದು ಬರೆದಿದ್ದಾನೆ. ಅರಬ್ಬರ ಪ್ರಮುಖ ದೊರೆ ಖಲೀಫ್ ಹರುಣ್ ಅಲ್ ರಷೀದ್ ಕಾಲದಲ್ಲಿ ಯೂರೋಪಿನ ಪ್ರಬ್ಯಾರೆ ದೊರೆ ಚಾರ್ಲ್‌ಮಗ್ನಾ ಅರಬ್ಬರ ಸ್ನೇಹದ ಬೆಂಬಲ ಗಳಿಸಿ ಅನೇಕ ಚರ್ಚ್‌ಗಳ ನಿರ್ಮಾಣಕ್ಕೆ ಕಾರಣನಾದ.

969ರಲ್ಲಿ ಈಜಿಪ್ಟಿನ ಆಡಳಿತಗಾರ ಮುಜ್ಹಾ ಅಲ್ ದೀನ್ ಜೆರುಸಲೇಂ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡ. ಅನೇಕ ಕಟ್ಟಡಗಳನ್ನು ದಹಿಸಲಾಯಿತು. 1077ರಲ್ಲಿ ಸೆಲ್‌ಜುಕ್ ಟರ್ಕರ ರಾಜ ಇಸರಾಲ್ ಅತೀಸ್ ಈಜಿಪ್ಟಿನ ಸೈನಿಕರನ್ನು ಹೊರಹಾಕಿ ತನ್ನ ಅಧಿಕಾರ ಸ್ಥಾಪಿಸಿದ. ಸು.300 ನಗರವಾಸಿಗಳು ಸಾವನ್ನಪ್ಪಿದರು. 1098ರಲ್ಲಿ ಸಂಭವಿಸಿದ ಧರ್ಮ ಯುದ್ಧದಲ್ಲಿ ಈಜಿಪ್ಷಿಯನ್ನರು 40 ದಿನಗಳ ಮುತ್ತಿಗೆಯ ಅನಂತರ ಮತ್ತೆ ನಗರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಟರ್ಕರನ್ನು ಹೊರಗಟ್ಟಲಾಯಿತು. 1099ರಲ್ಲಿ ಜೆರುಸಲೇಂ ಕ್ರುಸೇಡ್‌ಗಳ ವಶವಾಯಿತು. ಈ ಕಾಲದಲ್ಲಿ ಜೆರುಸಲೇಂ ನಗರ ಕ್ರೈಸ್ತಧರ್ಮಿಯರ ಹಾಗೂ ಇಸ್ಲಾಂ ಧರ್ಮಿಯರ ಹೋರಾಟದ ಪ್ರತಿಷ್ಠೆಯ ನೆಲೆಯಾಗಿ ವಿಶ್ವ ಪ್ರಸಿದ್ಧಿಯಾಗಿದೆ.

ಡೋಮ್ ಆಫ್ ರಾಕ್

1187ರಲ್ಲಿ ಪ್ರಸಿದ್ಧ ಮುಸ್ಲಿಂ ದಂಡನಾಯಕ ಸಲಾವುದ್ದೀನ್ ಕ್ರೂಸೇಡ್ಸ್(ಫ್ರಾಂಕರನ್ನು) ಹೊರದೂಡಿದ. ಯಹೂದಿಗಳು ಮತ್ತೆ ಜೆರುಸಲೇಂನಲ್ಲಿ ನೆಲೆನಿಂತರು. ಯಹೂದಿಯರ ದೇವಾಲಯದ ಒಂದು ಭಾಗವನ್ನು ಮಸೀದಿಯಾಗಿ ಪರಿವರ್ತಿಸಲಾಯಿತು. ಡೋಮ್ ಆಫ್ ರಾಕ್‌ನ್ನು ಸೌಂದರ್ಯಕರಣಗೊಳಿಸಲಾಯಿತು. ನಗರದ ಸುತ್ತಲೂ ಬಿಗಿಯಾದ ಗೋಡೆ ನಿರ್ಮಿಸಲಾಯಿತು. ಅನಂತರದ ದಿನಗಳಲ್ಲಿ ಈ ನಗರದ ಮೇಲೆ ಸತತ ಧಾಳಿಗಳಾದವು. ಇಸ್ಲಾಂ ಕ್ರೈಸ್ತರ ಹೋರಾಟಕ್ಕೆ ಸಿಲುಕಿ ಅನೇಕ ಯಹೂದಿ ಕುಟುಂಬಗಳು ಮತ್ತೆ ಯೂರೋಪಿ ನತ್ತ ವಲಸೆಹೋದರು. ಪ್ರ.ಶ.1260ರಲ್ಲಿ ಮಂಗೋಲಿಯನ್ನರ ದಾಳಿಗೆ ಸಿಲುಕಿ ಅಪಾರ ಪ್ರಮಾಣದ ಸಾವು–ನೋವು ಉಂಟಾಯಿತು. ಪ್ರ.ಶ.1518ರಲ್ಲಿ ಜೆರುಸಲೇಂ ಆಟೋಮನ್ ತುರ್ಕರ ವಶವಾಯಿತು. ಸುಲ್ತಾನ ಒಂದನೆಯ ಸಲೀಂ ನಗರದ ಹೊರಗೋಡೆಗಳನ್ನು ಭದ್ರಪಡಿಸಿದ. ಆಟೋಮನ್ ತುರ್ಕರ ಆಡಳಿತದಲ್ಲಿ ಯಹೂದಿಯರು ಅರಬ್ಬರು ಸ್ನೇಹದಿಂದ ಬದುಕಿದ್ದರು.

1834ರಲ್ಲಿ ಭೂಕಂಪ, 1839ರಲ್ಲಿ ಪ್ಲೇಗು ಈ ನಗರವನ್ನು ತಲ್ಲಣಗೊಳಿಸಿತು. ಯೂರೋಪಿನ ಪ್ರಮುಖ ರಾಷ್ಟ್ರಗಳಾದ ಅಮೇರಿಕ, ಇಂಗ್ಲೆಂಡ್, ರಷ್ಯದಿಂದ ನೆರವಿನ ಮಹಾಪೂರವೇ ಹರಿದುಬಂದಿತು. ಹೊರ ರಾಷ್ಟ್ರಗಳ ಸಹಾಯಧನ ಹಾಗೂ ನೆರವಿನಿಂದ ಜೆರುಸಲೇಂನಲ್ಲಿ ಯಹೂದಿಯರು ಚೇತರಿಸಿಕೊಂಡರಲ್ಲದೇ ಆರ್ಥಿಕವಾಗಿ ಸಬಲರಾದರು. 1865ರಲ್ಲಿ ಕಾಲರಾದಿಂದಾಗಿ ಅಪಾರ ಪ್ರಮಾಣದ ನಷ್ಟ ಉಂಟಾಯಿತು. ಮತ್ತೆ ಬಡತನ ತಾಂಡವವಾಡತೊಡಗಿತ್ತು. ಈ ವೇಳೆಯಲ್ಲಿ ವಸಹತುಶಾಹಿಯ ಕರಾಳ ಕೈಗಳು ಜೆರುಸಲೇಂ ನಗರದ ಮೇಲು ಪ್ರಭಾವ ಬೀರಲಾರಂಭಿಸಿದವು.

ಯುರೋಪಿನಲ್ಲಿ ಉಂಟಾದ ರಾಷ್ಟ್ರೀಯ ಪ್ರಜ್ಞೆ ಹಾಗೂ ಜನಾಂಗೀಯ ವಾದದಿಂದಾಗಿ ಅಪಾರ ಪ್ರಮಾಣದ ಯಹೂದಿಯರು ಜೆರುಸಲೇಂ ನಗರಕ್ಕೆ ವಲಸೆ ಬರುವಂತಾಯಿತು. ವಲಸೆಯಿಂದಾದ ಯಹೂದಿ–ಅರಬ್ಬರ ನಡುವಿನ ಸಂಪರ್ಕಕ್ಕೆ ಜೆರುಸಲೇಂ ಪ್ರಮುಖ ನೆಲೆಯಾಯಿತು. ಪ್ರಥಮ ಮಹಾಯುದ್ಧದ ನಂತರ ತುರ್ಕರ ಆಡಳಿತದಿಂದ ಮುಕ್ತಿ ಪಡೆದ ಜೆರುಸಲೇಂ ನಗರವು ಬ್ರಿಟಿಷರ ಪರಮಾಧಿಕಾರಕ್ಕೆ ಒಳಗಾಗಿ 1948 ರ ಮೇ 14ರಂದು ಯಹೂದಿಯರ ರಾಜ್ಯ ಇಸ್ರೇಲ್‌ಗೆ ರಾಜಧಾನಿಯಾಯಿತು. ಜೆರುಸಲೇಂ ಕ್ರೈಸ್ತ ಧರ್ಮ, ಇಸ್ಲಾಂ ಹಾಗೂ ಯಹೂದಿಯರ ಪ್ರಮುಖ ಧಾರ್ಮಿಕ ನಗರವಾಗಿರುವ ಕಾರಣ, ಇಸ್ರೇಲ್ ತನ್ನ ರಾಜಧಾನಿಯನ್ನು ಟೆಲ್ ಅವೀವ್‌ಗೆ ವರ್ಗಾಯಿಸಿಕೊಂಡಿದೆ. ಈ ನಗರವು ಈಗ ಪ್ಯಾಲಸ್ತೀನ್ ಅರಬ್ಬರು ಹಾಗೂ ಯಹೂದಿಗಳ ಪ್ರಾಬಲ್ಯಕ್ಕೆ ಒಳಗಾಗಿ ಸಂಘರ್ಷದ ನೆಲೆಯಾಗಿದೆ.

ಜೆರುಸಲೇಂ ನಗರಕ್ಕೆ ಸು.70 ಹೆಸರುಗಳಿವೆ ಎಂದು ಬೈಬಲ್‌ನಲ್ಲಿ ಹೆಸರಿಸಲಾಗಿದೆ. ಸುಮಾರು ಸಿನಗಾಗ್ ಹಾಗೂ 80 ಯಹೂದಿ ಶಾಖೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಯಹೂದಿ ಪ್ರಧಾನ ಅರ್ಚಕ ರಬ್ಬಿಗಳ ಕೇಂದ್ರ ಸ್ಥಾನ ಸಹ ಆಗಿದೆ. ಇಲ್ಲಿ ಈ ಇಸ್ಲಾಂ, ಕ್ರೈಸ್ತ ಹಾಗೂ ಯಹೂದಿ ಧರ್ಮಕ್ಕೆ ಸೇರಿದ ಅನೇಕ ಪ್ರಾಚೀನ ವಸ್ತುಶಿಲ್ಪಗಳು ವಿಶ್ವದ ಗಮನ ಸೆಳೆಯುತ್ತವೆ. ಆಲಿವ್ ಗಿಡಗಳು, ನಿಂಬೆಯ ಜಾತಿಯ ಹಣ್ಣುಗಳಿಗೆ ಪ್ರಸಿದ್ಧಿಯಾದ ಈ ನಗರ ಪ್ರಪಂಚದ ಪ್ರಮುಖ ಧಾರ್ಮಿಕ ಸಾಂಸ್ಕೃತಿಕ ನೆಲೆಗಳಲ್ಲಿ ಒಂದು. ಇಲ್ಲಿನ ಪ್ರಾಚೀನ ವಾಸ್ತುಶಿಲ್ಪಗಳೆಂದರೆ ಡೋಮ್ ಆಫ್ ರಾಕ್, ಅಲ್–ಅಕ್ಸ ಮಸೀದಿ, ಯಹೂದಿಯರ ದೇವಾಲಯದ ಪಳೆಯುಳಿಕೆಗಳು, ಡೇವಿಡ್ ಗೋಪುರ, ಜಯಾನ್ ದ್ವಾರ, ಗೋಲ್ಡನ್ ಗೇಟ್, ದಿ ಗ್ರೇಟ್ ಅಸ್ಲೆನಾಜಯಾ, ಸಿನಾಗಾಗ್, ವಯಲಿಂಗ್ ವಾಲ್, ಪ್ರಾಚೀನ ನೀರಿನ ಕೊಳ ಹಾಗೂ ಕಾಲದಿಂದ ಕಾಲಕ್ಕೆ ನಿರ್ಮಾಣಗೊಂಡಿರುವ ನಗರದ ಸುತ್ತಲೂ ಗೋಡೆಗಳು. ಪ್ರಾಚೀನ ನಗರ ಜೆರುಸಲೇಂ ಸಾಂಸ್ಕೃತಿಕ ದೃಷ್ಟಿಯಿಂದ ಅತ್ಯಂತ ಮಹತ್ತ್ವದ್ದೆನಿಸಿದೆ. (ಸಿ.ಜಿ.ಎಸ್.)

**ಜೇವರ್ಗಿ:** ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿರುವ ಪುರಾತತ್ತ್ವ ನೆಲೆ. ಬ್ರಿಟಿಷ್ ಅಧಿಕಾರಿ ಕರ್ನಲ್ ಮೆಡೋಸ್ ಟೇಲರ್ ಕರ್ನಾಟಕದಲ್ಲಿಯೇ ಪ್ರಥಮ ಬಾರಿಗೆ ಇಲ್ಲಿ ಬೃಹತ್ ಶಿಲಾಗೋರಿ ನೆಲೆಯನ್ನು ಶೋಧಿಸಿದ (ಸು.1850). ಇಂತಹ ಇನ್ನೊಂದು ನೆಲೆಯನ್ನು ಈ ಗ್ರಾಮದ ಸಮೀಪದ ಅಂದೋಳದಲ್ಲಿಯೂ ಶೋಧಿಸಿದ. ಜೇವರ್ಗಿಯ ಉತ್ತರಕ್ಕೆ 3ಕಿಮೀ ದೂರದ ಸಂಗಪ್ಪನ ಮರಡಿಯಲ್ಲಿ ಈ ನೆಲೆಯಿದೆ. ಇದರ ಸಮೀಪ ದಕ್ಷಿಣದಲ್ಲಿ ಭೀಮ ನದಿದಂಡೆ ಮೇಲೆ ಒಂದು ಪ್ರಾಚೀನ ಜನ ವಾಸ್ತವ್ಯದ ನೆಲೆಯಿದೆ. ಇಲ್ಲಿ ಬೃಹತ್ ಶಿಲಾ ಸಂಸ್ಕೃತಿ ಮತ್ತು ಇತಿಹಾಸ ಕಾಲದ ಮಣ್ಪಾತ್ರೆ ಚೂರುಗಳಿವೆ. ಟೇಲರ್‌ನ ಸರ್ವೇಕ್ಷಣೆಯ ಸಮಯದಲ್ಲಿ ಇಲ್ಲಿ 375 ಕಲ್ಗೋರಿಗಳಿದ್ದವು. 1964ರ ವೇಳೆಗೆ 110 ಮಾತ್ರ ಉಳಿದಿದ್ದುವು. ಇವುಗಳಲ್ಲಿ ಕಲ್ಲುವೃತ್ತಗಳು ಮತ್ತು ಕಲ್ಲುಗುಪ್ಪೆಗಳೆಂಬ 2 ಪ್ರಕಾರದ ಗೋರಿಗಳಿವೆ. ವೃತ್ತಗಳೊಳಗಿನ ಕಲ್ಲುರಾಶಿಯ ಅಂಚಿನಲ್ಲಿ ಶೇದಿಕಲ್ಲು ಹಲಗೆಗಳುಳ್ಳ ಹಾದಿ ಇರುವುದು ಒಂದು ವಿಶಿಷ್ಟ ಲಕ್ಷಣ. ಕೆಲವೊಂದರಲ್ಲಿ ಕೇವಲ ಆಳದ ಗುಂಡಿ, ಮತ್ತೆ ಕೆಲವುದರಲ್ಲಿ ಶೇದಿಕಲ್ಲಿನ ಆಯತಾಕಾರದ ಕೋಣೆಯಿದೆ. ಇವುಗಳಲ್ಲಿ ಕಪ್ಪು–ಕೆಂಪು ದ್ವಿವರ್ಣದ ಪಾತ್ರೆಗಳು, ಮೆರುಗಿನ ಕಪ್ಪು, ಕೆಂಪು ವರ್ಣದ ಪಾತ್ರೆಗಳು, ಕಬ್ಬಿಣದ ಉಪಕರಣಗಳು, ಮಾನವನ ಅಸ್ಥಿ ಅವಶೇಷಗಳು ದೊರೆತವು. ಈ ನೆಲೆಯನ್ನು ರಾಜ್ಯಸರ್ಕಾರದ ಪುರಾತತ್ತ್ವ ಇಲಾಖೆ ಸಂರಕ್ಷಿಸಿದೆ. (ಎ.ಎಸ್.;ಎನ್.ಎಲ್.)

**ಜೇಮ್ಸ್ ಮಿಲ್:** 1773–1836. ಸ್ಕಾಟಿಷ್ ಇತಿಹಾಸಕಾರ, ತತ್ತ್ವಜ್ಞಾನಿ, ಅರ್ಥನೀತಿ ಹಾಗೂ ರಾಜನೀತಿಶಾಸ್ತ್ರಜ್ಞ. 1773 ಏಪ್ರಿಲ್ 6ರಂದು ಸ್ಕಾಟ್ಲೆಂಡ್‌ನಲ್ಲಿ ಜನಿಸಿದ. ತಂದೆ ಚಮ್ಮಾರ; ತಾಯಿ ಸುಸಂಸ್ಕೃತ ಮನೆತನದವಳಾದ್ದರಿಂದ ಉನ್ನತ ಮಟ್ಟದ ಶಿಕ್ಷಣ ಇವನಿಗೆ ದೊರೆಯಿತು. ಎಡಿನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಓದುವಾಗ ತನ್ನನ್ನು ಗ್ರೀಕ್ ಸಂಶೋಧಕನೆಂದು ಗುರುತಿಸಿಕೊಂಡ ಇವನು 1790–1802ರವರೆಗೆ ಖಾಸಗಿ ಶಿಕ್ಷಕನಾಗಿ ಕೆಲಸ ಮಾಡಿದ. ಜೊತೆಗೆ ಇತಿಹಾಸ ಹಾಗೂ ತತ್ತ್ವಜ್ಞಾನದ ಅಧ್ಯಯನದಲ್ಲಿ ತೊಡಗಿಸಿಕೊಂಡ. ಹೆಚ್ಚಿನ ಅವಕಾಶಗಳ ಹಂಬಲದಲ್ಲಿ 1802ರಲ್ಲಿ ಲಂಡನ್‌ಗೆ ತೆರಳಿ ಮುಂದಿನ ನಾಲ್ಕು ವರ್ಷಗಳನ್ನು ಸಾಹಿತ್ಯಕ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ಕಳೆದ. ಹಿಸ್ಟರಿ ಆಫ್ ಇಂಡಿಯ ಎಂಬ ಉತ್ಕೃಷ್ಟಕೃತಿಯನ್ನು ಬರೆಯಲು ಇವನು ಪ್ರಾರಂಭಿಸಿದ್ದು 1806ರ ಕೊನೆಯ ದಿನಗಳಲ್ಲಿ. ಬರವಣಿಗೆಯಲ್ಲಿ ಭಾರತೀಯ ಇತಿಹಾಸವನ್ನು ಸಂಗ್ರಹಿಸಿದ ಪ್ರಥಮ ಕೃತಿ ಎಂಬುದು ಇದರ ಹೆಗ್ಗಳಿಕೆ. 12 ವರ್ಷಗಳಲ್ಲಿ 6 ಸಂಪುಟಗಳಲ್ಲಿ ಪೂರ್ಣಗೊಂಡ (1818) ಈ ಕೃತಿ ಮಿಲ್‌ಗೆ ಅಪಾರ ಯಶಸ್ಸು ಗಳಿಸಿಕೊಟ್ಟಿತು. ಇಷ್ಟಾಗಿ ಮಿಲ್ ಒಮ್ಮೆಯೂ ಭಾರತಕ್ಕೆ ಬಂದಿರಲಿಲ್ಲ. ಪುಸ್ತಕವನ್ನು ಇವನು ಸಿದ್ಧಪಡಿಸಿದ್ದು ಸರ್ಕಾರಿ ದಾಖಲು ಹಾಗೂ ಬಖೈರುಗಳ ಆಧಾರದಿಂದ. ಪುಸ್ತಕ ಬಿಡುಗಡೆಯಾದ ಮರುವರ್ಷ ಇವನಿಗೆ ಇಂಡಿಯ ಹೌಸ್‌ನಲ್ಲಿ ಅಧಿಕಾರಿಯ ಹುದ್ದೆ ನೀಡಲಾಯಿತು. ಈ ಹುದ್ದೆಯಲ್ಲಿ ಬಡ್ತಿ ಪಡೆಯುತ್ತ ತನ್ನ ಜೀವಿತದ ಕೊನೆಯವರೆಗೆ ಕೆಲಸ ಮಾಡಿದ. 1836 ಜೂನ್ 23ರಂದು ನಿಧನನಾದ. (ವಿ.ಎಸ್.)

**ಜೈನಧರ್ಮ:** ಭಾರತದ ಪ್ರಮುಖ ಧಾರ್ಮಿಕ ಪಂಥ. ಹಿಂದುಧರ್ಮದ ಸಮಾನ ತತ್ತ್ವಗಳ ಆಧಾರದ ಮೇಲೆ ವಿವಿಧ ಮಾರ್ಗಗಳು ರೂಪುಗೊಳ್ಳುತ್ತಿದ್ದಂತೆ, ಇನ್ನೊಂದು ಕಡೆಯಲ್ಲಿ ಶ್ರೇಷ್ಠವಾದ ತತ್ತ್ವಗಳು ಗೌಣವಾಗಿ ಜಡ್ಡುಗಟ್ಟಿದ ಅರ್ಥಹೀನ ಸಂಪ್ರದಾಯಗಳು ಸಮಾಜದಲ್ಲಿ ಪ್ರಬಲವಾದವು. ಇದಕ್ಕೆ ಪ್ರತಿಯಾಗಿ ಸರಳ ಹೊಸ ಮಾರ್ಗಗಳನ್ನು ಹುಡುಕುವ ಪ್ರಯತ್ನಗಳಲ್ಲಿ ಜೈನ ಮತ್ತು ಬೌದ್ಧ ಪಂಥಗಳು ಹುಟ್ಟಿದವು. ಚತುರ್ವರ್ಣಗಳನ್ನು ಅನುಸರಿಸುವವರಲ್ಲಿ ಮೇಲು ಕೀಳುಗಳೆಂಬ ಅನಾರೋಗ್ಯಕರ ಭಾವನೆಗಳು ಬೆಳೆದುಬಂದವು. ಇದನ್ನು ಹೋಗಲಾಡಿಸಿ ಸಮಾಜದಲ್ಲಿ ಸಮಾನ ಸ್ಥಾನವನ್ನು ಎಲ್ಲರಿಗೂ ತಂದುಕೊಡಲು ಈ ಪಂಥಗಳ ಮೂಲದವರಾದ ಜೈನ ತೀರ್ಥಂಕರರು ಮತ್ತು ಬೌದ್ಧ ಮತದ ಗೌತಮ ಬುದ್ಧನು ತಮ್ಮ ತಮ್ಮ ಬೋಧನೆ ನಡವಳಿಕೆಗಳ ಮೂಲಕ ಪ್ರಯತ್ನಿಸಿದರು.

ಜೈನಧರ್ಮದ ಪ್ರಮುಖವಾದ ಸಂದೇಶ ಅಹಿಂಸೆ. ಅಹಿಂಸಾ ಪರಮೋಧರ್ಮ ಎಂಬುದನ್ನು ಕಠಿಣವಾದ ಶ್ರದ್ಧೆಯಿಂದ ಆಚರಿಸಿದ ಧರ್ಮ ಇದು. ಪಾರ್ಶ್ವನಾಥ ಮತ್ತು ಮಹಾವೀರ ತೀರ್ಥಂಕರರ ವ್ಯಕ್ತಿತ್ವದ ಪ್ರಭಾವ ಅಂದಿನ ಸಮಾಜದಲ್ಲಿ ಗಾಢವಾಗಿ ಬದಲಾವಣೆಯನ್ನು ತಂದಿತು. ಈ ಧರ್ಮದ ಪ್ರಮುಖ ದಾರ್ಶನಿಕ ಮಹಾವೀರ. ಜೈನ ಸಂಪ್ರದಾಯದ ಪ್ರಕಾರ ಜೈನಧರ್ಮದ ಸ್ಥಾಪಕ ಮೊದಲನೆಯ ತೀರ್ಥಂಕರ ಋಷಭದೇವ(ಆದಿನಾಥ). ಜೈನ ಧರ್ಮ ಗ್ರಂಥಗಳ ಪ್ರಕಾರ 24 ತೀರ್ಥಂಕರರಲ್ಲಿ ಮೊದಲನೆಯವ ಆದಿನಾಥ. ಕೊನೆಯವ ಮಹಾವೀರ. ಜೈನಗ್ರಂಥಗಳ ಪ್ರಕಾರ 23ನೆಯ ತೀರ್ಥಂಕರ ಪಾರ್ಶ್ವನಾಥ. ಪ್ರ.ಶ.ಪೂ.8ನೆಯ ಶತಮಾನದಲ್ಲಿದ್ದ ಪಾರ್ಶ್ವನಾಥ ಐತಿಹಾಸಿಕ ವ್ಯಕ್ತಿ. ಈತ ಕಾಶಿ ರಾಜ ಅಶ್ವಸೇನನ ಮಗನೆಂದು ಜೈನಕಲ್ಪಸೂತ್ರದಲ್ಲಿ ಉಲ್ಲೇಖವಿದೆ. ಈತನೇ ಜೈನ ಧರ್ಮದ ನಿಜವಾದ ಸ್ಥಾಪಕ ಎಂಬ ಅಭಿಪ್ರಾಯ ಜಾಕೋಬಿಯವರದು. ಈತ ಪ್ರಾಣಿ ಬಲಿಯನ್ನು ವಿಗ್ರಹಾರಾಧನೆಯನ್ನು ವಿರೋಧಿಸುತ್ತಿದ್ದನು. ಸ್ತ್ರೀಯರಾಗಲಿ ಪುರುಷರಾಗಲಿ ಸ್ವನಿಯಂತ್ರಣದಿಂದ ಮೋಕ್ಷ ಸಾಧಿಸಬಹುದೆಂದು ಬೋಧಿಸಿದನು. ಇವನ ಮುಖ್ಯ ತತ್ತ್ವಗಳು ಅಹಿಂಸೆ, ಸತ್ಯ, ಅಸ್ತೇಯ (ಕದಿಯದಿರುವುದು) ಮತ್ತು ಅಪರಿಗ್ರಹ (ಸಂಪತ್ತಿನ ವ್ಯಾಮೋಹ ಹೊಂದದಿರುವುದು). ಇವನ ಬೋಧನೆಗಳಿಂದಾಗಿ ಮಗಧ ಮತ್ತು ಅಂಗ ರಾಜ್ಯಗಳಲ್ಲಿ ಇವನ ತತ್ತ್ವಗಳು ರೂಢಿಯಲ್ಲಿದ್ದವು. ಅನುಯಾಯಿಗಳಿಗೆ ಬೋಧಿಸಿದ ಕೆಲವು ನಿಯಮಗಳು ಜೈನ ಸಂಘಕ್ಕೆ ಒಂದು ರೂಪ ಕೊಟ್ಟಂತಾಯಿತು.



ಆದಿನಾಥ ದೇವಾಲಯ, ರಂಕಾಪುರ

ವರ್ಧಮಾನನು ತನ್ನ 30ನೆಯ ವಯಸ್ಸಿನಲ್ಲಿ ಸಂಸಾರವನ್ನು ತ್ಯಜಿಸಿ 12 ವರ್ಷಗಳ ಕಾಲ ತಪಸ್ಸನ್ನು ಉತ್ತರಭಾರತದ ಅನೇಕ ಸ್ಥಳಗಳಲ್ಲಿ ಕಠಿಣವಾಗಿ ಆಚರಿಸಿದನು. ತನ್ನ ತಪಸ್ಸಿನ 13ನೆಯ ವರ್ಷದಲ್ಲಿ ಜಂಭಿಯಾ ಗ್ರಾಮದ ಹೊರಗೆ, ಋಜುವಾಲಿಕಾ ನದಿಯ ತೀರದಲ್ಲಿ ಸಾಲವೃಕ್ಷಗಳಡಿಯಲ್ಲಿ ಧ್ಯಾನಾಸಕ್ತನಾಗಿದ್ದಾಗ ಕೇವಲ ಜ್ಞಾನ ಪ್ರಾಪ್ತಿಯಾಯಿತು. ಆದ್ದರಿಂದ ಇವನು ಸರ್ವಜ್ಞಾನಿ ಅಥವಾ ಕೇವಲಿನ್, ಜಿನ (ಇಂದ್ರಿಯಗಳನ್ನು ಗೆದ್ದವನು) ಮತ್ತು ಮಹಾವೀರನೆಂದು ಪ್ರಸಿದ್ಧನಾದನು. ಇದರಿಂದ ಇವನ ಅನುಯಾಯಿಗಳು ಜೈನರೆಂದು, ನಿರ್ಗ್ರಂಥ (ಬಂಧನಗಳಿಲ್ಲದ) ಪಂಥದವರೆಂದು ಪ್ರಸಿದ್ಧರಾದರು.

ಪಾರ್ಶ್ವನಾಥನು 4 ತತ್ತ್ವಗಳನ್ನು ಬೋಧಿಸಿದರೆ ಮಹಾವೀರನು ಬ್ರಹ್ಮಚರ್ಯ ಎಂಬ 5ನೆಯ ತತ್ತ್ವವನ್ನು ಸೇರ್ಪಡೆ ಮಾಡಿದನು. ಉಳಿದ ಆಯಸ್ಸಿನ ಅವಧಿಯಲ್ಲಿ ತತ್ತ್ವಗಳನ್ನು ಬೋಧಿಸಿದನು. ಕೇವಲಜ್ಞಾನ ಹೊಂದಿದ ಅನಂತರ ತನ್ನ ಮೈಮೇಲಿನ ವಸ್ತ್ರಗಳನ್ನು ತ್ಯಜಿಸಿದನು. ಇಹದ ಎಲ್ಲ ಬಂಧನಗಳಿಂದ ಬಿಡುಗಡೆಯಾಗಬೇಕಾದರೆ ವ್ಯಕ್ತಿಯ ತಾನು ಧರಿಸಿದ ವಸ್ತ್ರವೂ ಸೇರಿದಂತೆ ಎಲ್ಲ ಬಾಹ್ಯ ವಸ್ತುಗಳನ್ನು ತ್ಯಜಿಸಬೇಕೆಂದು ಪ್ರಚಾರ ಮಾಡಿದ. ಮುಂದೆ ಈ ಧರ್ಮದಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಪಂಗಡಗಳು ಉದಯಿಸಿದವು.

ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯ ಎಂಬುದು ಐದು ಮಹಾನ್ ತತ್ತ್ವಗಳು. ಈ ಧರ್ಮದ ಪ್ರಕಾರ ಕರ್ಮ ಎಂಬುದು ಸಹ ಒಂದು ವಸ್ತುವಾಗಿದ್ದು ಅದು ಆತ್ಮದ ಮೇಲೆ ಕೆಸರು ಅಂಟಿಕೊಂಡ ಹಾಗೆ ಅಂಟಿಕೊಂಡಿರುತ್ತದೆ. ಇದನ್ನು ವಿಸರ್ಜಿಸುವುದು ಹಾಗೂ ಹೊಸ ಕರ್ಮ ಅಂಟಿಕೊಳ್ಳದಂತೆ ನೋಡಿಕೊಳ್ಳುವುದು ಅತ್ಯುನ್ನತ ಗುರಿಯೆಂದು ಬೋಧಿಸಿದರು. ಇದನ್ನು ತಡೆಯುವುದಕೋಸ್ಕರ ಸನ್ಯಾಸ ಜೀವನ ಅವಶ್ಯ, ಹಳೆ ಕರ್ಮಗಳನ್ನು ಹೋಗಲಾಡಿಸಲು ತಪಸ್ಸು ಅಗತ್ಯವೆಂದು ನಂಬಿದ್ದರು. ಇದು ಸಂಸಾರ ದುಃಖದಲ್ಲಿ ತೊಳಲುತ್ತಿರುವ ಜೀವನನ್ನು ಮೇಲೆತ್ತಿ ಉತ್ತಮ ಸ್ವರ್ಗ, ಮೋಕ್ಷ, ಸುಖಗಳನ್ನು ಒದಗಿಸಿ ಕೊಡುವಂತಹುದು. ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರ, ಸಮ್ಯಕ್ ಜ್ಞಾನವೆಂಬ ಮೂರು ಮಾರ್ಗಗಳಿಂದ ಕರ್ಮಚಕ್ರದಿಂದ ಹೊರಬರಲು ತಿಳಿಸುತ್ತದೆ. ಇವಕ್ಕೆ ರತ್ನತ್ರಯ ಎಂದು ಹೆಸರಿದೆ. ಸಾಧನೆಯ ಮಾರ್ಗದಿಂದ ತನ್ನಲ್ಲಿರುವ ಸಕಲ ಕರ್ಮಗಳನ್ನು ಜಯಿಸಿದವನು ಸರ್ವಜ್ಞತ್ವ ಪಡೆದವನು ಜಿನ. ದಯೆ, ದಮಂ, ದಾನಂ, ತಪಂ, ಶೀಲಂ ಎಂಬಿವೆ ಮೆಯ್ಯಾಗಿರೆ ಸಂದ ಧರ್ಮಮೆವಲಂ ಪೊತ್ತೆತ್ತುಗುಂ ಮುಕ್ತಿ ಪರ್ಯಾವಸಾನಂಬರಂ ಎಂಬುದು ಪಂಪ ಮಹಾಕವಿಯ ವ್ಯಾಖ್ಯೆ.

ಪಾರ್ಶ್ವನಾಥನ ಬೋಧನೆಯಲ್ಲಿ ವಸ್ತ್ರವನ್ನು ಧರಿಸುವುದಕ್ಕೆ ನಿರ್ಬಂಧವಿರಲಿಲ್ಲ. ಆದರೆ ಮಹಾವೀರನು ಜೈನಮುನಿಗಳು ವಸ್ತ್ರವನ್ನು ಧರಿಸುವಂತಿಲ್ಲ ಎಂಬ ನಿರ್ಬಂಧ ಹಾಕಿದ. ಇದನ್ನು ವಿರೋಧಿಸಿ ಬಿಳಿಯುಡುಗೆ ಧರಿಸಿದವರನ್ನು ಶ್ವೇತಾಂಬರರೆಂದೂ ಮಹಾವೀರನ ತತ್ತ್ವ ಪಾಲಿಸಲು ವಸ್ತ್ರಧರಿಸದವರನ್ನು ದಿಗಂಬರರೆಂದೂ ಕರೆಯಲಾಯಿತು.

ಈ ಧರ್ಮದ ಸಂದೇಶ ಅಹಿಂಸೆ ಮತ್ತು ಸಚ್ಚಾರಿತ್ರ್ಯ, ಜಾತಿ ಮತಗಳ ತಾರತಮ್ಯ ವಿಲ್ಲದೆ ಎಲ್ಲ ಮಾನವರು, ಕರ್ಮ ಬಂಧನವನ್ನು ಪರಿಹರಿಸಿಕೊಳ್ಳುವ ಮಾರ್ಗವನ್ನು ಕೈಕೊಳ್ಳಬೇಕೆಂದು ಸಾರಿತು. ಭಾರತದ ಸಾಂಸ್ಕೃತಿಕ ಜೀವನವನ್ನು ರೂಪಿಸುವಲ್ಲಿ ಅಗಾಧ ಶಕ್ತಿಯಾಗಿ ಪರಿಣಮಿಸಿತು. (ಎನ್.ಎಲ್.)

**ಜೊನ್ನಗಿರಿ:** ಆಂಧ್ರಪ್ರದೇಶ ರಾಜ್ಯದ ಕರ್ನೂಲು ಜಿಲ್ಲೆಯಲ್ಲಿರುವ ಬೃಹತ್ ಶಿಲಾ ಸಂಸ್ಕೃತಿಯ ನೆಲೆ. ಅಶೋಕನ ಶಾಸನಗಳು ದೊರಕಿರುವ ಪ್ರಸಿದ್ಧವಾದ ಯರ್ರಗುಡಿ ಬೆಟ್ಟದ ಹತ್ತಿರವಿರುವ ಈ ಪ್ರದೇಶದಲ್ಲಿ ಬೃಹತ್ ಶಿಲಾಸಂಸ್ಕೃತಿಗೆ ಸಂಬಂಧಿಸಿದ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ದೊರೆತಿವೆ. ಇಲ್ಲಿ ಈ ಸಂಸ್ಕೃತಿಯ ವಾಸ್ತವ್ಯದ ನೆಲೆಯಿದೆ.

ಕರ್ನೂಲು ಜಿಲ್ಲೆಯ ಗೂಟಿಗೆ ವಾಯವ್ಯದಲ್ಲಿ ಸು.13 ಕಿಮೀ ದೂರದಲ್ಲಿರುವ ತುಂಗಾಭದ್ರಾ ನದಿಯ ತಟದಲ್ಲಿರುವ ಯರ್ರಗುಡಿ ಬೆಟ್ಟದ ದೊಡ್ಡದೊಡ್ಡ ಬಂಡೆಗಳ ಮೇಲೆ ಅಶೋಕನ ಶಾಸನಗಳಿರುವುದನ್ನು 1929ರಲ್ಲಿ ಘೋಷ್ ಕಂಡುಹಿಡಿದರು. ಈ ಶಾಸನಗಳಲ್ಲಿ ಸುವರ್ಣಗಿರಿ ಎಂಬ ಹೆಸರು ದಾಖಲಾಗಿದೆ. ಇದೇ ಹೆಸರು ಕಾಲಾಂತರದಲ್ಲಿ ಜೊನ್ನಗಿರಿಯಾಗಿರಬಹುದೆಂಬ ಅಭಿಪ್ರಾಯವಿದೆ. ಹೈಮನ್ ಡಾಲ್ಫ್ ಸೂಚಿಸಿದಂತೆ ಬ್ರಹ್ಮಗಿರಿಯಲ್ಲಿಯ (ಚಿತ್ರದುರ್ಗ ಜಿಲ್ಲೆ) ಅಶೋಕನ ಕಿರುಬಂಡೆ ಶಾಸನ ಮಾರ್ಟಿಮರ್ ವೀಲರನ ಅಧ್ಯಯನದ ಇಂಗಿತದಂತೆ ಆದಿ ಇತಿಹಾಸಕಾಲದ ಜನ ಸಮುದಾಯವನ್ನು ಕುರಿತಾಗಿಲ್ಲ. ಅದು ಅಲ್ಲಿಯ ಬೃಹತ್ ಶಿಲಾ ಸಂಸ್ಕೃತಿ ಜನರನ್ನು ಕುರಿತದ್ದಾಗಿದೆಯೆಂದು ಹೇಳಿರುವುದು ಯರ್ರಗುಡಿ ನೆಲೆಗೆ ಅನ್ವಯವಾಗಬಹುದು. (ಸಿ.ಕೆ.ಎಂ.)

**ಜೋನ್ ಆಫ್ ಆರ್ಕ್:** 1412–31. ಫ್ರೆಂಚ್ ರಾಷ್ಟ್ರೀಯ ವೀರಾಂಗನೆ. ಸು.5 ಶತಮಾನಗಳ ಅನಂತರ ಸಂತಳೆಂದು ಪರಿಗಣಿತೆ. ದೈವಿಕ ಸ್ಫೂರ್ತಿಯಿಂದ ಪ್ರವೃತ್ತಳಾಗಿರು ವುದಾಗಿ ನಂಬಿ ಆರ್ಲಿಯನ್ಸ್ ಕದನದಲ್ಲಿ ಫ್ರೆಂಚರಿಗೆ ಜಯ ದೊರಕಿಸಿಕೊಟ್ಟು, 7ನೆಯ ಚಾರ್ಲ್ಸ್ ದೊರೆ ರೀಮ್ಸ್‌ನಲ್ಲಿ ಪಟ್ಟಾಭಿಷಿಕ್ತನಾಗುವುದನ್ನು ಸಾಧ್ಯವಾಗಿಸಿದಾಕೆ, ಅನಂತರ ಸೆರೆಯಾಗಿ ಮಾಟಗಾತಿಯೆಂದು ಇಂಗ್ಲಿಷರಿಂದ ಜೀವಂತ ಸುಡಲ್ಪಟ್ಟ ಗ್ರಾಮೀಣ ತರುಣಿ. ಷಾನ್ ಡಾರ್ಕ್ ಎಂಬುದು ಈಕೆಯ ಮೂಲ ಹೆಸರು. ಆರ್ಲಿಯನ್ಸ್ ಕೊಡಗೂಸು (ಫ್ರೆಂಚ್: ಲಾ ಪ್ರಸೆಲ್ ಡಾರ್ಲೀಲಯಾನ್) ಎಂದೂ ಖ್ಯಾತಳಾಗಿದ್ದಾಳೆ. ಫ್ರಾನ್ಸಿನ ಬಾರ್ ಸಂಸ್ಥಾನದ ಮ್ಯೂಸ್ ನದಿತೀರದ ಡಾನ್ರೇಮೀ ಗ್ರಾಮದಲ್ಲಿ 1412 ಜನವರಿ 6ರಂದು ಜನಿಸಿದಳು. ತಂದೆ ಷಾಕ್ ಡಾರ್ಕ್, ತಾಯಿ ಈಸಾಬೆಲ್ ರೊಮಿ. ಜೋನ್ ದೇವರಲ್ಲಿ ನಂಬಿಕೆಯನ್ನೂ ಪ್ರಾರ್ಥನೆಯ ಅಭ್ಯಾಸವನ್ನೂ ತಾಯಿಯಿಂದ ಕಲಿತಳು. ಈಕೆ ಕಷ್ಟಪಟ್ಟು ಕೆಲಸಮಾಡುತ್ತಿದ್ದಳು. ಮನೆಗೆಲಸದಲ್ಲಿ ಇವಳಿಗೆ ವಿಶೇಷ ಆಸಕ್ತಿ. ಆಗಾಗ್ಗೆ ದನ ಕಾಯಲು ಹೋಗುತ್ತಿದ್ದಳು. ಸಮವಯಸ್ಕರೊಡನೆ ಗ್ರಾಮದ ಗಂಧರ್ವವೃಕ್ಷದ ಬಳಿ ಆಟಪಾಟಗಳಲ್ಲಿ ನೃತ್ಯ ವಿನೋದಗಳಲ್ಲಿ ಭಾಗವಹಿಸುತ್ತಿದ್ದಳು.

ಫ್ರಾನ್ಸಿನ 6ನೆಯ ಚಾರ್ಲ್ಸ್ ದೊರೆಯ ಮರಣಾನಂತರ ಅವನ ಮಗ ಡಾಫಿನ್ ಚಾರ್ಲ್ಸ್‌ನ (ಅನಂತರ 7ನೆಯ ಚಾರ್ಲ್ಸ್) ಉತ್ತರಾಧಿಕಾರವನ್ನು ಇಂಗ್ಲಿಷ್ ದೊರೆ 6ನೆಯ ಹೆನ್ರಿ ಪ್ರಶ್ನಿಸಿದ್ದರಿಂದ ಆ ಬಗ್ಗೆ ವಿವಾದ ಉದ್ಭವಿಸಿತ್ತು. ಅವನ ಸೈನ್ಯಗಳು ಬರ್ಗಂಡಿ ಯವರ ಮೈತ್ರಿ ಸಾಧಿಸಿ ಅವರ ನೆರವಿನಿಂದ ಉತ್ತರ ಫ್ರಾನ್ಸನ್ನೆಲ್ಲ ಆಕ್ರಮಿಸಿಕೊಂಡಿದ್ದುವು. ಫ್ರೆಂಚ್ ಅರಸನ ಪಟ್ಟಾಭಿಷೇಕವಾಗಬೇಕಾಗಿದ್ದ ಅರಮನೆ ಇದ್ದ ರೀಮ್ಸ್ ಎಂಬ ಸ್ಥಳ ಇಂಗ್ಲಿಷರ ಅಧೀನದಲ್ಲಿತ್ತು. ಪಟ್ಟಾಭಿಷೇಕವಾಗದೆ ಫ್ರೆಂಚ್ ಪ್ರಜೆಗಳು ಚಾರ್ಲ್ಸನನ್ನು ಅರಸನೆಂದು ಸ್ವೀಕರಿಸಲು ಹಿಂಜರಿಯುತ್ತಿದ್ದರು. 1421ರಲ್ಲಿ 6ನೆಯ ಚಾರ್ಲ್ಸ್ ಮರಣಹೊಂದಿದ್ದರೂ 1427ರಲ್ಲಿ ಕೂಡ ಅವನ ಮಗನ ಪಟ್ಟಾಭಿಷೇಕವಾಗಿಲ್ಲದ್ದು ಆತಂಕಕಾರಿಯಾಗಿತ್ತು.

ಇಂಥ ಪರಿಸ್ಥಿತಿಯಲ್ಲಿ ಜೋನಳ 13ನೆಯ ವಯಸ್ಸಿನಲ್ಲೇ ದೇವವಾಣಿ ಕೇಳಿಸಿತ್ತು; ಆತ್ಮಸಂಯಮವನ್ನು ಬೋಧಿಸಿತ್ತು. ಅನಂತರ ಆ ವಾಣಿ ಇವಳು ಫ್ರಾನ್ಸಿಗೆ ಹೋಗಿ ಆರ್ಲಿಯನ್ಸ್ ಆಕ್ರಮಣವನ್ನು ತೆರವು ಮಾಡಬೇಕೆಂದು ಆದೇಶ ನೀಡಿತು. ಸೇಂಟ್ ಮೈಕೇಲ್, ಸೇಂಟ್ ಕ್ಯಾದರೀನ್, ಸೇಂಟ್ ಮಾರ್ಗರೆಟರ ದರ್ಶನ ತನಗೆ ಪದೇಪದೇ ಆಗುತ್ತಿತ್ತೆಂದು ಇವಳು ಹೇಳಿದಳು. ಈ ವಾಣಿಗಳು ಇಡೀ ಜೀವಮಾನಪರ್ಯಂತ ಮಾರ್ಗದರ್ಶನ ಮಾಡಲಿದ್ದುವು. ಈ ವಾಣಿಗಳ ಒತ್ತಾಯದ ಮೇರೆಗೆ ಕೊನೆಗೂ ಈಕೆ ಚಾರ್ಲ್ಸನನ್ನು ನೋಡಲು ಹೊರಟಳು. ಆಗ ಈಕೆ ಪುರುಷವೇಷ ಧರಿಸಿದಳು. ಅನಂತರ ಕೊನೆಯವರೆಗೂ ಆ ಉಡುಪನ್ನು ಈಕೆ ಬದಲಿಸಿ ಸ್ತ್ರೀಯರ ಉಡುಪು ಧರಿಸಲಿಚ್ಛಿಸಲಿಲ್ಲ.

ಮೊದಮೊದಲು ಈಕೆಯ ಯತ್ನಗಳು ಫಲಿಸಲಿಲ್ಲ. ಆದರೂ ಈಕೆ ನಿರಾಸೆ ಹೊಂದದೆ, 1429ರಲ್ಲಿ ಷೀನಾನ್‌ನಲ್ಲಿ ಚಾರ್ಲ್ಸನನ್ನು ಕಂಡಳು. ತನ್ನ ಆಸ್ಥಾನಿಕರ ನಡುವೆ ಅಡಗಿದ್ದ ಆತನ ಬಳಿಗೆ ನೇರವಾಗಿ ಹೋಗಿ, ತಾನು ಹೋಗಿ ಯುದ್ಧ ಮಾಡುವುದಾಗಿಯೂ ಆತನಿಗೆ ಪಟ್ಟಾಭಿಷೇಕ ಮಾಡಿಸುವುದಾಗಿಯೂ ಹೇಳಿದಳು. ಇವಳು ಕ್ರೈಸ್ತಮತ ಪಂಡಿತರ ವಿವಿಧ ಪರೀಕ್ಷೆಗಳಿಗೊಳಗಾಗಿ, ಕೊನೆಗೊಮ್ಮೆ ಅವರ ಶಿಫಾರಸನ್ನು ಪಡೆದು ಏಪ್ರಿಲ್ ತಿಂಗಳಲ್ಲಿ ಸಣ್ಣ ಸೈನ್ಯವೊಂದರ ನೇತೃತ್ವ ವಹಿಸಿ ಮೊದಲು ಆರ್ಲಿಯನ್ಸ್ ಅಭಿಮುಖವಾಗಿ ಹೊರಟಳು. ದೈವಪ್ರೇರಣೆಯಂತೆ 1429ರ ಮೇ 4ರಂದು ಒಮ್ಮಿಂದೊಮ್ಮೆ ಇಂಗ್ಲಿಷರನ್ನು ಮುತ್ತಿ, ಆರ್ಲಿಯನ್ಸ್ ನಗರವನ್ನು ವಶಪಡಿಸಿಕೊಂಡಳು. ಮುಂದೆ ಇವಳ ಗುರಿ ರೀಮ್ಸ್ ಅಲ್ಲಿದ್ದ ಶತ್ರುಗಳನ್ನು ಇವಳು ಹೊರದೂಡಿ ದಳು. ಅಲ್ಲಿ ಪಟ್ಟಾಭಿಷೇಕ ಮಾಡಿ ಕೊಳ್ಳಲು ಚಾರ್ಲ್ಸನನ್ನು ಶ್ರಮಪಟ್ಟು ಒಪ್ಪಿಸಿದಳು. ಜುಲೈ 17ರಂದು ಅವನ ಪಟ್ಟಾಭಿಷೇಕವಾಯಿತು. ಆಗ ಈಕೆ ಅರಸನಿಗೆ ಅತ್ಯಂತ ಸಮೀಪದಲ್ಲಿ ತನ್ನದೇ ಆದ ಧ್ವಜವನ್ನು ಹಿಡಿದು ನಿಂತಳು. ಎಲ್ಲರಿಗಿಂತ ಮೊದಲು ಇವಳು ಆತನನ್ನು ದೊರೆಯೆಂದು ಸಂಬೋಧಿಸಿ ತನ್ನ ವಿಧೇಯತೆಯನ್ನು ಸೂಚಿಸಿದಳು.

ವರ್ಣಚಿತ್ರ

ಅಲ್ಲಿಂದ ಮುಂದೆ ಪ್ಯಾರಿಸ್ ನಗರವನ್ನು ವಶಪಡಿಸಿಕೊಳ್ಳಬೇಕೆಂದು ಈಕೆಯ ಮಹದಾಸೆಯಾಗಿತ್ತು. ಆದರೆ ದೊರೆ ಕೂಡಲೇ ಅದಕ್ಕಾಗಿ ಕಾರ್ಯೋನ್ಮುಖನಾಗದಿರುವಂತೆ ಅವನ ಇತರ ಹಿತೈಷಿಗಳು ಅವನನ್ನು ತಡೆದರು. ಸೆಪ್ಟೆಂಬರ್ ತಿಂಗಳಲ್ಲಿ ಮತ್ತೊಮ್ಮೆ ಯತ್ನಿಸಿದರೂ ಯಶಸ್ಸು ಲಭಿಸಲಿಲ್ಲ. ಅರಸನನ್ನು ಇತರರು ಕೈಬಿಟ್ಟರೂ ಜೋನ್ ಆತನ ಬೆಂಬಲಕ್ಕೆ ನಿಂತಳು. ಈ ಮಧ್ಯೆ ರೀಮ್ಸ್ ನಗರ ಬರ್ಗಂಡಿಯನ್ನರ ಧಾಳಿಗೆ ತುತ್ತಾಗಲು, ಅವರನ್ನು ಓಡಿಸಲು ಜೋನ್ ಶ್ರಮಿಸಿದಳು. ಆದರೆ ಕೋಂಪ್ಯೇನ್ ಎಂಬಲ್ಲಿ 1430 ಮೇ 23ರಂದು ಜೋನ್ ತನ್ನ ಇಬ್ಬರು ಸೋದರರೊಂದಿಗೆ ಬರ್ಗಂಡಿಯನ್ನರಿಗೆ ಸೆರೆ ಸಿಕ್ಕಳು.

ಈಕೆ ಸೆರೆಯಿಂದ ತಪ್ಪಿಸಿಕೊಳ್ಳಲು ಮಾಡಿದ ಯತ್ನಗಳು ಫಲಿಸಲಿಲ್ಲ. ಇಂಗ್ಲಿಷರ ಕೋರಿಕೆಯಂತೆ ಲಕ್ಸೆಂಬರ್ಗಿನ ಜಾನ್ ಆಳಿಕೆಯನ್ನು 10,000 ಫ್ರಾಂಕ್‌ಗಳಿಗೆ ಪ್ರತಿಯಾಗಿ ಇಂಗ್ಲಿಷರಿಗೆ ಒಪ್ಪಿಸಿದ. 1431 ಜನವರಿ 13ರಿಂದ ಈಕೆ ಧಾರ್ಮಿಕ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಳು. ವಿಚಾರಣಾಕರ್ತರು ಚಾರ್ಲ್ಸ್‌ನ ಶತ್ರುಗಳಾಗಿದ್ದುದರಿಂದ ತಾನು ಅವರಿಗೆ ನಿಜ ಸಂಗತಿಯನ್ನೆಲ್ಲ ಹೇಳಬೇಕೆಂಬ ಷರತ್ತಿಗೆ ಬದ್ಧವಾಗುವುದಿಲ್ಲವೆಂದು ಈಕೆ ಸ್ಪಷ್ಟಪಡಿಸಿದಳು. ಮಾರ್ಚ್ 24ರಂದು ಈಕೆಯ ಮೇಲೆ ಆಪಾದನೆಗಳನ್ನು ಹೊರಿಸಲಾಯಿತು. ಈಕೆ ಮಾಟಗಾತಿ, ದೇವರ ಹೆಸರಿನಲ್ಲಿ ದ್ರೋಹ ಮಾಡಿದವಳು; ಭವಿಷ್ಯವನ್ನು ನುಡಿಯುವು ದಾಗಿ ಘೋಷಿಸಿಕೊಂಡು, ದೇವರಿಂದ ನೇರವಾಗಿ ಆದೇಶಗಳನ್ನು ಸ್ವೀಕರಿಸಿದುದಾಗಿ ಸಾರಿಕೊಂಡು, ಕ್ರೈಸ್ತ ಚರ್ಚ್ ನಿಯಮಗಳನ್ನು ಉಲ್ಲಂಘಿಸಿದಳು. ತನ್ನ ಹಲವಾರು ಕಾಗದಗಳಲ್ಲಿ ಜೀಸಸ್ ಮತ್ತು ಮೇರಿಯ ಅಂಕಿತ ಹಾಕಿದಳು. ಲಜ್ಜೆಗೇಡಿಯಾಗಿ ಗಂಡುಡುಪು ಧರಿಸಿದಳು. ತನ್ನ ಸಂತರು ತನ್ನನ್ನು ಫ್ರೆಂಚ್ ಭಾಷೆಯಲ್ಲಿ ಮಾತಾಡಿಸಿದರೆಂದೂ ಇಂಗ್ಲಿಷಿನಲ್ಲಲ್ಲವೆಂದೂ ಸಾಧಿಸಿದಳು. ಚರ್ಚಿನಲ್ಲಿ ನಂಬುಗೆಯಿಡದೆ ಈಕೆ ಧರ್ಮಕ್ಕೂ ದೇವರಿಗೂ ದ್ರೋಹ ಬಗೆದಿದ್ದಾಳೆ. ಇವು ಈಕೆಯ ಮೇಲಣ ಕೆಲವು ಮುಖ್ಯ ಆಪಾದನೆಗಳು. ಆದರೂ ಈಕೆ ತಪ್ಪೊಪ್ಪಿಕೊಳ್ಳಲಿಲ್ಲ. ತಾನು ಮೊದಲು ನೀಡಿದ ಹೇಳಿಕೆಗಳೇ ಸತ್ಯವೆಂದೂ ಅವನ್ನು ಬದಲಿಸಲಾರನೆಂದೂ ದೇವರೇ ತನ್ನ ರಕ್ಷಕನೆಂದೂ ನುಡಿದಳು. ಕೊನೆಗೆ ಧಾರ್ಮಿಕ ನ್ಯಾಯಾಲಯ ಈಕೆಯನ್ನು ಇಂಗ್ಲಿಷ್ ಸೈನ್ಯಾಧಿಕಾರಿಗಳಿಗೆ ಒಪ್ಪಿಸಿತು. 1431 ಮೇ 20ರಂದು ಆಕೆಯನ್ನು ಜೀವಸಹಿತ ಸುಡಲಾಯಿತು. ಸು.20 ವರ್ಷಗಳ ಅನಂತರ 7ನೆಯ ಚಾರ್ಲ್ಸ್

ಈ ಪ್ರಕರಣವನ್ನು ಕುರಿತು ವಿಚಾರಣೆ ನಡೆಸಲು ಆಜ್ಞಾಪಿಸಿದ. 2 ವರ್ಷಗಳ ಅನಂತರ ಪೋಪನ ಮುಖ್ಯ ರಾಯಭಾರಿ ಗಿಲಾಮ್ ಡಿ ಎಸ್ಟೌಟ್‌ವಿಲ್ ಈ ಬಗ್ಗೆ ಸಮಗ್ರ ತನಿಖೆ ನಡೆಸಿದ. ಪೋಪ್ 3ನೆಯ ಕ್ಯಾಲಿಕ್ಸ್‌ಟಸನ ಆದೇಶದ ಮೇರೆಗೆ 1431ರಲ್ಲಿ ಈಕೆಗೆ ವಿಧಿಸಿದ ಶಿಕ್ಷೆಯನ್ನು ರದ್ದುಮಾಡಿ ವರ್ಜಿಸುವ ಕ್ರಮ ಕೈಗೊಳ್ಳಲಾಯಿತು. 1920 ಮೇ 16ರಂದು ಪೋಪ್ 5ನೆಯ ಬೆನೆಡಿಕ್ಟ್ ಈಕೆಯನ್ನು ವಿಧಿಪೂರ್ವಕವಾಗಿ ಸಂತರ ಪಟ್ಟಿಗೆ ಸೇರಿಸಿದ, ಪ್ರತಿವರ್ಷ ಮೇ 30ರಂದು ಚರ್ಚ್ ಈಕೆಯ ಹಬ್ಬ ಆಚರಿಸುತ್ತದೆ. 1920ರಲ್ಲಿ ಫ್ರೆಂಚ್ ಪಾರ್ಲಿಮೆಂಟ್ ಕೈಗೊಂಡ ನಿರ್ಣಯದ ಮೇರೆಗೆ ಪ್ರತಿವರ್ಷವೂ ಮೇ ಎರಡನೆಯ ಭಾನುವಾರ ರಾಷ್ಟ್ರೀಯ ಉತ್ಸವದಿನ.

ಜೋನಳಿಗೆ ಕಾಣಿಸಿಕೊಂಡ ದೇವತೆಗಳೂ ಕೇಳಿಸಿದ ಧ್ವನಿಗಳೂ ಎಷ್ಟರಮಟ್ಟಿಗೆ ಸತ್ಯ ಎಂಬುದು ಪ್ರಶ್ನೆಯಾಗಿ ಉಳಿದುಬಂದಿದೆ. ಆದರೆ ಈಕೆ ಫ್ರಾನ್ಸ್ ದೇಶಕ್ಕೆ ಮಹೋಪಕಾರ ಮಾಡಿದಳೆಂಬುದಂತೂ ನಿಜ. ತನ್ನ ವಿಜಯದಿಂದ ಈಕೆಗೆ ಆಗ ನಡೆಯುತ್ತಿದ್ದ ನೂರು ವರ್ಷಗಳ ಯುದ್ಧಕ್ಕೆ ಒಂದು ಹೊಸ ತಿರುವನ್ನೇ ಕೊಟ್ಟಳು. ಈಕೆ ಬರೆದ, ಬರೆಸಿದ ನೂರಾರು ಪತ್ರಗಳು ಉಳಿದು ಬಂದಿವೆ. ಅವು ಈಕೆಯ ರಾಷ್ಟ್ರಪ್ರೇಮ ಮತ್ತು ದೈವಭಕ್ತಿಗಳಿಗೆ ಸಾಕ್ಷಿಗಳಾಗಿವೆ. ಜೋನಳ ಜೀವನ ಅನೇಕ ಲೇಖಕರ ಸಾಹಿತ್ಯಕೃತಿಗಳಿಗೆ ವಸ್ತುವಾಗಿದೆ. ಜರ್ಮನ್ ಕವಿ-ನಾಟಕಕಾರ ಷಿಲ್ಲರನೂ ಇಂಗ್ಲಿಷ್ ನಾಟಕಕಾರ ಜಾರ್ಜ್ ಬರ್ನಾರ್ಡ್ ಷಾನೂ ಈಕೆಯ ಬಗ್ಗೆ ನಾಟಕಗಳನ್ನು ಬರೆದಿದ್ದಾರೆ. ಆನಟೋಲ್ ಫ್ರಾನ್ಸ್, ಮಾರ್ಕ್ ಟ್ವೇನ್, ಆಂಡ್ರ್ಯೂ ಲ್ಯಾಂಗ್ ಇವರು ಬರೆದ ಜೀವನಚರಿತ್ರೆಗಳು ಪ್ರಖ್ಯಾತವಾಗಿವೆ. ಜೋನ್ ಆಫ್ ಆರ್ಕ್ ಎಂಬ ಆಂಗ್ಲ ಚಲನಚಿತ್ರ ಈಕೆಯ ಜೀವನ ಕಥೆಯಾಧಾರಿತವಾಗಿದ್ದು ಪ್ರಪಂಚ ಪ್ರಸಿದ್ಧಿ ಪಡೆಯಿತು. (ಬಿ.ಆರ್.ಜ.)

**ಜೋರ್ಡಾನ್:** ನೈರುತ್ಯ ಏಷ್ಯದ ಒಂದು ಅರಬ್ ರಾಜ್ಯ. ಅಲ್ ಮಮ್ಲುಕಾ ಅಲ್ ಉರ್ದೂನಿಯಾ ಅಲ್ ಹಷೀಮಿಯಾ ಎಂಬುದು ಅರಬ್ಬೀ ನಾಮ. ಬ್ರಿಟಿಷ್ ವಸಾಹತು ಪ್ರದೇಶವಾಗಿದ್ದ ಟ್ರಾನ್ಸ್‌ಜೋರ್ಡಾನ್ ಮತ್ತು ಪೂರ್ವ ಪ್ಯಾಲಸ್ತೀನಿನ ಒಂದು ಭಾಗವನ್ನು ಒಳಗೊಂಡಿದೆ. ಉತ್ತರಕ್ಕೆ ಸಿರಿಯ, ಪೂರ್ವಕ್ಕೆ ಇರಾಕ್, ಪಶ್ಚಿಮಕ್ಕೆ ಇಸ್ರೇಲ್, ದಕ್ಷಿಣಕ್ಕೆ ಸೌದಿ ಅರೇಬಿಯ-ಇವು ಇದರ ಮೇರೆಗಳು. ನೈರುತ್ಯದಲ್ಲಿ ಇದಕ್ಕೆ ಆಕಬ ಖಾರಿಯ 19ಕಿಮೀ ಉದ್ದದ ಸಮುದ್ರತೀರವಿದೆ. ಆಕಬ ಈ ದೇಶದ ಏಕೈಕ ಬಂದರು. ರಾಜಧಾನಿ ಅಮ್ಮಾನ್.

**ಪುರಾತತ್ತ್ವ:** ಜೋರ್ಡಾನ್ ಪ್ರದೇಶದಲ್ಲಿ ಪ್ರಾರಂಭಕಾಲದಿಂದಲೂ ಆದಿ ಮಾನವ ವಾಸಿಸುತ್ತಿದ್ದನೆಂಬುದಕ್ಕೆ ಸಾಕಷ್ಟು ಮಾಹಿತಿಗಳಿವೆ. ಉತ್ತರ ಆಫ್ರಿಕದಲ್ಲಿ ರೂಢಿಯಲ್ಲಿದ್ದ ಹಳೆಶಿಲಾಯುಗ ಸಂಸ್ಕೃತಿಗಳು ಈಜಿಪ್ಟಿನ ಮಾರ್ಗವಾಗಿ ಜೋರ್ಡಾನ್ ಪ್ರದೇಶವನ್ನು ಪ್ರವೇಶಿಸಿದುವು. ಇಲ್ಲಿಯ ಅಲ್-ಉಬೇದಿಯ ಎಂಬಲ್ಲಿ ಆಸ್ಟ್ರಲೊಪಿತಿಕಸ್ ವರ್ಗಕ್ಕೆ ಸೇರಿದ ಆದಿಮಾನವನ ದೇಹದ ಪಳೆಯುಳಿಕೆಗಳೂ ಆಗಿನ ಶಿಲೋಪಕರಣಗಳೂ ದೊರಕಿವೆ. ಜೋರ್ಡಾನಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿರುವ ಮರಳ್ಗಾಡು ಪ್ರದೇಶದಲ್ಲಿ ಆದಿಹಳೆಶಿಲಾಯುಗದ ಬೇಟೆಗಾರರು ಅಲೆದಾಡುತ್ತಿದ್ದುದಕ್ಕೆ ಆಧಾರಗಳಿವೆ. ಆದಿಹಳೆಶಿಲಾಯುಗದ ಮೊದಲ ಹಂತವಾದ ಅಬೆವಿಲಿಯನ್ ಮಾದರಿಯ ಒರಟಾದ ಕೈಕೊಡಲಿಗಳು ಇಲ್ಲಿಯ ಪ್ಲೀಸ್ಟೊಸೀನ್ ಯುಗದ ಪ್ಲುವಿಯಲ್ ಪದರಗಳಲ್ಲಿ ದೊರಕಿವೆ. 1956ರಲ್ಲಿ ಅಜ್ರಕ್ ಎಂಬಲ್ಲಿ ಅಶೂಲಿಯನ್ ಮಾದರಿಯ ಕೈ ಕೊಡಲಿಗಳು ಹೆಚ್ಚಾಗಿ ಕಂಡುಬಂದು, ದ್ವಿತೀಯ ಹಂತದಲ್ಲೂ ಆದಿಮಾನವ ಈ ಪ್ರದೇಶದಲ್ಲಿ ನೆಲಸಿದ್ದ ಅಂಶವನ್ನು ಸ್ಥಿರಗೊಳಿಸುತ್ತವೆ. ಆ ಕಾಲದ ಅನೇಕ ನೆಲೆಗಳು ಪೂರ್ವದ ಮರಳ್ಗಾಡಿನಲ್ಲಿವೆ. ಆಗ್ನೇಯ ಭಾಗದಲ್ಲಿರುವ ಜಬಾಲ್-ಟುಬೆಕ್ ಪ್ರದೇಶದಲ್ಲಿ ಆದಿ-ಸೂಕ್ಷ್ಮ ಶಿಲಾಯುಗಗಳ ಹಂತದಲ್ಲಿ ಅನಂತರದ ಕಾಲದ ಎಲ್ಲ ಶಿಲಾಯುಗ ಸಂಸ್ಕೃತಿಗಳಿಗೂ ಸೇರಿದ ಕಲ್ಲುಬಂಡೆಗಳ ಮೇಲೆ ಮಾಡಿದ ಕೆತ್ತನೆಗಳು ಕಂಡುಬಂದಿವೆ.

ಜೆರಿಕೋ (ಈಗಿನ ಟೆಲ್-ಎಸ್-ಸುಲ್ತಾನ್) ಪರಿಸರದಲ್ಲಿ ಸೂಕ್ಷ್ಮಶಿಲಾಯುಗದ ಬೇಟೆಗಾರರು ನೆಲಸಿದ್ದಕ್ಕೆ ಮಾಹಿತಿಗಳು ದೊರಕಿವೆ. ಇಲ್ಲಿ 1930-36ರವರೆಗೆ ಜಾನ್ ಗಾರ್ಸ್ಟಾಂಗ್ ಮತ್ತು 1951-61ರಲ್ಲಿ ಕೆತಲಿನ್ ಕೆನ್ಯಾನ್ ಭೂಶೋಧನೆಗಳನ್ನು ನಡೆಸಿದರು. ಸೂಕ್ಷ್ಮಶಿಲಾಯುಗದ ಬೇಟೆಗಾರರು ಬದಲಾಗುತ್ತಿದ್ದ ವಾತಾವರಣ ಮತ್ತು ವಾಯುಗುಣಗಳಿಂದಾಗಿ ಅಲೆಮಾರಿ ಜೀವನ ಮತ್ತು ಆಹಾರಸಂಗ್ರಹದ ಹಂತದಿಂದ ಮುಂದುವರಿದು, ಒಂದೆಡೆಯಲ್ಲಿ ನೆಲೆ ನಿಂತು ಆಹಾರ ಉತ್ಪಾದಿಸುವ ಹಂತವನ್ನು ಕ್ರಮೇಣ ತಲುಪಿದರೆಂದೂ ಗ್ರಾಮೀಣ ಜೀವನವನ್ನು ರೂಢಿಸಿಕೊಂಡರೆಂದೂ ಈ ಶೋಧನೆಗಳಿಂದ ತಿಳಿದುಬರುತ್ತದೆ. ಬದಲಾದ ಈ ಸಾಂಸ್ಕೃತಿಕ ವಿಧಾನವನ್ನು ನವಶಿಲಾಯುಗ ಸಂಸ್ಕೃತಿಯೆಂದು ಕರೆಯಲಾಗಿದೆ. ಈ ಸಂಸ್ಕೃತಿಯ ಎರಡು ಹಂತಗಳನ್ನು ಇಲ್ಲಿ ಗುರುತಿಸಲಾಗಿದೆ. ಬಂಡೆಯಲ್ಲಿ ಕಡಿದ ಕಂದಕ (9ಮೀ ಅಗಲ × 3ಮೀ ಆಳ) ದಿಂದ ಸುತ್ತುವರಿಯಲ್ಪಟ್ಟ ಕಲ್ಲಿನ ರಕ್ಷಣಾ ಕೋಟೆಯೊಳಗೆ ಗೋಪುರ ಮತ್ತು ನಿರ್ಮಿಸಿದ ಗುಡಿಸಲುಗಳಲ್ಲಿ ಜನರು ವಾಸಿಸುತ್ತಿದ್ದುದು ಮೊದಲನೆಯ ಹಂತ. ಇವರು ಬೇಟೆಯಿಂದ ಆಹಾರ ಸಂಗ್ರಹಣೆ ಮಾಡುತ್ತಿದ್ದರೂ ಬಾರ್ಲಿ, ಗೋದಿ ಆಹಾರೋತ್ಪಾದನೆಯ ಮೊದಲ ಪ್ರಯತ್ನಗಳು ಇಲ್ಲಿ ಕಂಡುಬರುತ್ತವೆ. ಆಗಿನ ಜನರು ಕಲ್ಲಿನ ಪಾತ್ರೆಗಳನ್ನು ಬಳಸುತ್ತಿದ್ದರು. ಎರಡನೆಯ ಹಂತದಲ್ಲಿ ಗ್ರಾಮೀಣ ಜೀವನದಲ್ಲಿ ಹಲವು ಸುಧಾರಣೆಗಳಾದುವು. ಜೇಡಿಮಣ್ಣಿನಲ್ಲಿ ಮಾಡಿ ಸುಟ್ಟ ಮಡಕೆಗಳ ಉಪಯೋಗ ಪ್ರಾರಂಭವಾಯಿತು. ಇಂಗಾಲ-14 ಕಾಲನಿರ್ಣಯ ವಿಧಾನದಿಂದ ಮೊದಲ ಹಂತವನ್ನು ಪ್ರ.ಶ.ಪೂ.4ನೆಯ ಸಹಸ್ರಮಾನಕ್ಕೆ ನಿರ್ದೇಶಿಸಲಾಗಿದೆ. ಈಚೆಗೆ ದಕ್ಷಿಣ ಜೋರ್ಡಾನಿನ ಪೆಟ್ರಾ ಮತ್ತು ವಾಡಿ ಷಯಿಬ್ ನೆಲೆಗಳಲ್ಲಿ ನವಶಿಲಾಯುಗದ ಮೊದಲ ಹಂತದ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ದೇಶದ ವಿವಿಧ ಭಾಗಗಳಲ್ಲಿ ಹರಡಿರುವ ಬೃಹತ್ ಸಮಾಧಿ ಸಂಸ್ಕೃತಿಯ ಅವಶೇಷಗಳು ಈ ಕಾಲಕ್ಕೆ ಸೇರುತ್ತವೆ.

ಪ್ರ.ಶ.ಪೂ.4,500-3,000ಕ್ಕೆ ಸೇರಿದ ತಾಮ್ರಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಟೆಲ್-ಎಲ್-ಅಜ್ಜುಲ್ ನೆಲೆಯಲ್ಲಿ 1930-34 ಮತ್ತು 1938ರಲ್ಲಿ ವಿಲಿಯಮ್ ಫ್ಲಿಂಡರ್ಸ್‌ಪೆಟ್ರಿ ನಡೆಸಿದ ಸಂಶೋಧನೆಗಳಿಂದ ದೊರೆತಿವೆ. ಜೆರಿಕೋ ಬಳಿ ಇರುವ ಟೆಲೈಲತ್-ಎಲ್-ಘಸ್ಸುಲ್ ನೆಲೆಯಲ್ಲಿ 1930-38, 1960 ಮತ್ತು 1967ರಲ್ಲಿ ನಡೆಸಿದ ಭೂಶೋಧನೆಗಳಿಂದ ಪ್ರ.ಶ.ಪೂ. ಸು.3,500ಕ್ಕೆ ನಿರ್ದೇಶಿಸಬಹುದಾದ ಈ ಸಂಸ್ಕೃತಿಯ ಕಾಲದಲ್ಲಿ ಮಣ್ಣಿನ ಗೋಡೆಗಳಿಂದ ನಿರ್ಮಿಸಲಾದ ವಾಸಗೃಹಗಳು ಇದ್ದುದು ಗೊತ್ತಾಗಿದೆ. ಆ ಗೋಡೆಗಳ ಮೇಲೆ ವಿವಿಧ ಬಣ್ಣಗಳಿಂದ ಚಿತ್ರಗಳನ್ನು ಬಿಡಿಸಲಾಗಿತ್ತು. ಆ ವೇಳೆಗೆ ವ್ಯವಸಾಯ ಬಹಳ ಸುಧಾರಿಸಿತ್ತು.



ಪೆಟ್ರಾ ಟ್ರೆಷರಿ, ಜೋರ್ಡಾನ್

ಅನಂತರ ಕಾಲದ ಕಂಚಿನ ಯುಗ ಸಂಸ್ಕೃತಿಯನ್ನು ಆದಿ, ಮಧ್ಯ, ಅಂತ್ಯ ಎಂದು ಮೂರು ಉಪಹಂತಗಳಾಗಿ ವಿಭಾಗಿಸಲಾಗಿದೆ. ಕಂಚಿನ ಯುಗದ ಆದಿ ಕಾಲದಲ್ಲಿ (ಪ್ರ.ಶ.ಪೂ.3,000-2,100) ಆಯ್, ಟೆಲ್-ಎಲ್-ಫರಾ, ಧಿಬಾನ್ ಮುಂತಾದ ನೆಲೆಗಳಲ್ಲಿ ಜನವಸತಿಯಿತ್ತು. ಆಯ್ ನೆಲೆಯಲ್ಲಿ ಪ್ರ.ಶ.ಪೂ. 2,900-2,500 ರ ಕಾಲಕ್ಕೆ ಸೇರಿದ, ಮೂರು ಸುತ್ತಿನ ಕೋಟೆಯಿಂದ ರಕ್ಷಿತವಾದ, ಗ್ರಾಮದಲ್ಲಿ ಒಂದು ದೇವಾಲಯ, ಅರಮನೆ ಮತ್ತು ಇತರ ವಾಸಗೃಹಗಳಿದ್ದುವು. ಟೆಲ್-ಎಲ್-ಫರಾದಲ್ಲಿ ಪ್ರ.ಶ.ಪೂ.4ನೆಯ ಸಹಸ್ರಮಾನಕ್ಕೆ ಸೇರಿದ ಗ್ರಾಮೀಣ ಜೀವನ ಹಂತದ ತರುವಾಯ ಕಂಚಿನ ಯುಗದ ಆದಿಕಾಲದಲ್ಲಿ ಕೋಟೆಯಿಂದ ರಕ್ಷಿತವಾದ ಗ್ರಾಮ ಸ್ಥಾಪಿತವಾಯಿತು. ಜನಜೀವನ ವಿಧಾನಗಳಲ್ಲಿ ಉಂಟಾಗುತ್ತಿದ್ದ ಸುಧಾರಣೆಗಳ ಪರಿಚಯ ಈ ಎಲ್ಲ ನೆಲೆಗಳಲ್ಲೂ ನಡೆಸಿದ ಉತ್ಖನನಗಳಿಂದ ದೊರಕುತ್ತದೆ. ನೆರೆಯ ಈಜಿಪ್ಟ್ ಮತ್ತು ಇರಾಕ್‌ಗಳಲ್ಲಿ ನಾಗರಿಕ ಹಂತದತ್ತ ಮುನ್ನಡೆಯುತ್ತಿದ್ದ ಸಂಸ್ಕೃತಿಯ ಕುರುಹುಗಳು ಇಲ್ಲೂ ಕಂಡುಬರುತ್ತವೆ. ಈ ಹಂತದ ಸಂಸ್ಕೃತಿಯ ಕುರುಹುಗಳು ದೇಶಾದ್ಯಂತ ಕಂಡುಬಂದಿವೆಯಾದರೂ ಪ್ರಸ್ತುಭೂಮಿ ಪ್ರದೇಶದಲ್ಲಿ-ಯಾರ್ಮೂಕ್‌ನಿಂದ ಷೋಬಕ್‌ವರೆಗೂ-ಅನೇಕ ಗ್ರಾಮಗಳ ಅವಶೇಷಗಳು ಕಂಡುಬಂದಿರುವುದು ಗಮನಾರ್ಹ. ಬೈಬಲಿನಲ್ಲಿ ರಾಜಮಾರ್ಗವೆಂದು ಕರೆಯಲಾದ ವ್ಯಾಪಾರಮಾರ್ಗ ಈ ಗ್ರಾಮಗಳ ಮೂಲಕ ಹಾದುಹೋಗುತ್ತಿತ್ತು.

ತರುವಾಯದ ಕಂಚಿನ ಯುಗದಲ್ಲಿ-ಮಧ್ಯ ಮತ್ತು ಅಂತ್ಯಕಾಲಗಳಲ್ಲಿ (ಪ್ರ.ಶ.ಪೂ. 2100-1200)-ಅಮೋರೈಟ್, ಹೈಕ್ಸಾಸ್ ಮತ್ತು ಈಜಿಪ್ಷಿಯನ್ನರ ಧಾಳಿಗಳಿಗೆ ಜೋರ್ಡಾನ್ ತುತ್ತಾಯಿತು. ಟೆಲ್-ಎಲ್-ಅಜ್ಜುಲ್‌ನ ಭೂಶೋಧನೆಗಳಲ್ಲಿ ಈ ಕಾಲಕ್ಕೆ ಸೇರಿದ ಕೋಟೆಯಿದ್ದ

ದೊಡ್ಡ ಗ್ರಾಮವೊಂದರ ಅವಶೇಷಗಳು ದೊರಕಿವೆ. ಒಂದರ ಅನಂತರ ಒಂದರಂತೆ ಕಟ್ಟಲಾಗಿದ್ದ ಐದು ಅರಮನೆಗಳ ಅವಶೇಷಗಳೂ ಹಲವು ಚಿನ್ನದ ಆಭರಣಗಳ ರಾಶಿಗಳೂ ಅಲ್ಲಿ ಕಂಡುಬಂದಿರುವುದರಿಂದ ಅಲ್ಲಿಯ ಸಂಪದ್ಭರಿತ ಸಮಾಜದ ಪರಿಚಯವಾಗುತ್ತದೆ. ಷೆಚೆಮ್ (ಈಗಿನ ಬಲಾಟಾ) ನೆಲೆಯಲ್ಲಿ 1913–34ರ ನಡುವೆ ಜರ್ಮನರೂ ಈಚೆಗೆ ಅಮೆರಿಕನರೂ ಸಂಶೋಧನೆ ನಡೆಸಿದರು. ಅಲ್ಲಿದ್ದ ಗ್ರಾಮದ ಸುತ್ತಲೂ ಬಲವಾದ, 1.8ಮೀ ಎತ್ತರದ, ಇಳಿಜಾರಾದ ಕೋಟೆಗೋಡೆಯಿದ್ದುದು ತಿಳಿದುಬಂದಿದೆ. ಅದೇ ಕಾಲಕ್ಕೆ ಸೇರಿದ ಕಲ್ಲಿನ ಫಲಕವೊಂದರ ಮೇಲೆ ಅಕ್ಷರ ಲಿಪಿ ಕಂಡುಬಂದಿದೆ.

ಕಂಚಿನ ಯುಗದ ಅಂತ್ಯಕಾಲದಲ್ಲಿ ಸ್ಥಾಪಿತವಾದ ಬೆತೆಲ್‌ನಲ್ಲಿಯ (1934) ಉತ್ಖನನದಲ್ಲಿ ಪ್ರ.ಶ.ಪೂ.2000ದಿಂದ ಪ್ರ.ಶಕೆಯ ಆರಂಭದವರೆಗೂ ಅಸ್ತಿತ್ವದಲ್ಲಿದ್ದ ನಗರದ ಅವಶೇಷಗಳು ದೊರಕಿವೆ. ಆಗ ಕ್ಯಾನನೈಟ್ ಪಂಗಡದವರು ಅಲ್ಲಿ ನೆಲಸಿದ್ದರು. ಅದೇ ಸುಮಾರಿನಲ್ಲಿ ಅಮ್ಮಾನ್ ಬಳಿಯ ಒಂದು ನೆಲೆಯಲ್ಲಿ ಈಜಿಪ್ಟ್, ಮೈಸಿನೆ ಮತ್ತು ಸೈಪ್ರಸ್‌ಗಳಿಂದ ಆಮದು ಮಾಡಿಕೊಂಡ ವಸ್ತುಗಳನ್ನು ಉಪಯೋಗಿಸುತ್ತಿದ್ದ ದೇವಾಲಯದ ಅವಶೇಷಗಳು ಕಂಡುಬಂದಿವೆ. ಪ್ರಮುಖ ವಿಶ್ವಧರ್ಮಗಳ ಪವಿತ್ರ ಕ್ಷೇತ್ರವಾದ ಜೆರುಸಲೇಮ್ ಸಹ ಆ ಕಾಲದಲ್ಲಿ ಅಸ್ತಿತ್ವಕ್ಕೆ ಬಂತು. ಆ ಪ್ರದೇಶದಲ್ಲಿ 1864ರಿಂದ ಆಗಾಗ್ಗೆ ಉತ್ಖನನಗಳು ನಡೆದಿವೆ. ಕ್ಯಾನನೈಟ್ ಪಂಗಡದ ಜನರು ಈಗಿನ ಜೆರುಸಲೇಮ್‌ನ ಆಗ್ನೇಯಕ್ಕಿರುವ ಓಫೆಲ್ ಗುಡ್ಡದ ಮೇಲೆ ನೆಲಸಿದ್ದರು. ಪ್ರ.ಶ.ಪೂ.1000ದ ಸುಮಾರಿನಲ್ಲಿ ಡೇವಿಡನ ನಾಯಕತ್ವದಲ್ಲಿ ಇಸ್ರೇಲಿಗಳು ಅದನ್ನು ಗೆದ್ದುಕೊಂಡರು. ಇದರ ಉತ್ತರ ಭಾಗದಲ್ಲಿ ಡೇವಿಡ್ಡನ ಮಗ ಸಾಲೊಮನ್ ನಿರ್ಮಿತ ದೇವಾಲಯವೊಂದಿದೆ.

**ಇತಿಹಾಸ:** ಹಳೆಯ ಒಡಂಬಡಿಕೆಯಲ್ಲಿ ಜೋರ್ಡಾನ್ ಪ್ರದೇಶದ ಬಗ್ಗೆ ಅನೇಕ ಉಲ್ಲೇಖಗಳುಂಟು. ಆಗಿದ್ದ ರಾಜ್ಯಗಳಲ್ಲಿ ಉತ್ತರದ ಗಿಲಿಯಟ್, ಮಧ್ಯಭಾಗದ ಮೋಆಬ್ ಮತ್ತು ಮಿಡಿಯನ್ (ಅಮ್ಮಾನ್), ದಕ್ಷಿಣದ ಎಡೋಮ್ ಮುಖ್ಯವಾದವು. ಇಸ್ರೇಲಿಗಳು ದೇಶಭ್ರಷ್ಟರಾದ ಕಾಲದಲ್ಲಿ ಈಜಿಪ್ಟಿನಿಂದ ಜೋರ್ಡಾನ್ ಪ್ರದೇಶದ ಮೂಲಕ ಹಾದುಹೋಗುವಾಗ ಅವರು ಅಮೊರೈಟ್ ಪಂಗಡದವರನ್ನು ಹೆಷ್ಬಾನಿನಲ್ಲಿ ಸೋಲಿಸಿದರಲ್ಲದೆ ಗಿಲಿಯಡ್ ರಾಜ್ಯವನ್ನು ಆಕ್ರಮಿಸಿಕೊಂಡರು. ಗಾಡ್, ರೂಬೆಮ ಮತ್ತು ನಾನ್ಸೆ ಪಂಗಡಗಳ ಜನರು ಅಮೊನೈಟ್, ಅಮೊರೈಟ್ ಮತ್ತು ಬಷನ್ ಪ್ರದೇಶಗಳಲ್ಲಿ ನೆಲಸಿ, ತಾವು ನಾಶಮಾಡಿದ್ದ ಅನೇಕ ನಗರಗಳನ್ನು ಪುನರ್‌ನಿರ್ಮಿಸಿದರು. ಧಿಬಾನ್‌ನಲ್ಲಿ ದೊರಕಿರುವ ಮೆಷಾ ಶಿಲೆಯ ಮೇಲೆ ಪ್ರ.ಶ.ಪೂ.850ಕ್ಕೆ ಸೇರಿದ, ಹೀಬ್ರುವನ್ನು ಹೋಲುವ ಲಿಪಿಯಲ್ಲಿ ಬರೆದ ಕ್ಯಾನನೈಟ್ ಶಾಸನ ಮೋಆಬ್ ರಾಜ್ಯದ ಮೇಲೆ ಓಮ್ರಿ ನಡೆಸಿದ ಆಕ್ರಮಣದ ವಿಚಾರವನ್ನು ಹೇಳುತ್ತದೆ.

ಪ್ರ.ಶ.ಪೂ.1300ರಿಂದ 1000ರ ವರೆಗಿನ ಕಾಲದಲ್ಲಿ ಈ ಪ್ರದೇಶದ ಮೇಲೆ ಇಕ್ಕೆಲಗಳಿಂದಲೂ ಧಾಳಿಗಳು ನಡೆಯುತಿದ್ದವು. ಮೋಆಬ್ ಮತ್ತು ಎಡೋಮ್ ರಾಜ್ಯಗಳನ್ನು ಡೇವಿಡ್ ಆಕ್ರಮಿಸಿ, ಮೋಆಬ್‌ನ ಮೂರನೆಯ ಎರಡು ಭಾಗದ ಜನರನ್ನೂ ಎಡೋಮ್‌ನ ಎಲ್ಲ ಜನರನ್ನೂ ಕೊಂದ. ಅಮ್ಮಾನ್ ಶತ್ರು ವಶವಾದರೂ ಪ್ರ.ಶ.ಪೂ.960ರ ವೇಳೆಗೆ ಮತ್ತೆ ಸ್ವಾತಂತ್ರಗಳಿಸಿಕೊಂಡಿತು. ತೀರ ಪ್ರದೇಶದ ಎಜಿಯನ್ ಗೆಬರ್ ಎಂಬಲ್ಲಿ ಸಾಲೊಮನ್ ಒಂದು ಬಂದರನ್ನು ನಿರ್ಮಿಸಿದ.

ಜುಡಾ ಮತ್ತು ಎಡೋಮ್‌ಗಳ ನಡುವೆ ಸತತ ಹೋರಾಟ ನಡೆಯುತ್ತಿತ್ತು. ಹೀಬ್ರು ದೊರೆ ಅಮ್‌ಝಯ ಸಲಾವನ್ನು (ಪೆಟ್ರಾ) ಆಕ್ರಮಿಸಿಕೊಂಡು, 10,000 ಜನರನ್ನು ಕೊಂದುಹಾಕಿದ. ಅನಂತರ ಎಡೋಮ್‌ವರೆಗಿನ ಪೂರ್ವಭಾಗವನ್ನು ಅಸ್ಸೀರಿಯನ್ ದೊರೆ 3ನೆಯ ಅದಾದ್ನಿರಾರಿ (ಪ್ರ.ಶ.ಪೂ.811–782) ಗೆದ್ದರೂ ಮತ್ತೆ ಅಲ್ಲಿ ದಂಗೆಗಳಾದವು. 3ನೆಯ ಟಿಗ್ಲಾತ್ ಪಿಲೇಸರ್ (ಪ್ರ.ಶ.ಪೂ.745–727)ಅವನ್ನು ಅಡಗಿಸಿದ. ಪ್ರ.ಶ.ಪೂ.612ರಲ್ಲಿ ಅಸ್ಸೀರಿಯನ್ ಚಕ್ರಾಧಿಪತ್ಯ ಅಳಿಯುವವರೆಗೂ ಈ ಪ್ರದೇಶ ಅವರ ವಶದಲ್ಲಿ ಉಳಿದಿತ್ತು. ಅನಂತರ ಬ್ಯಾಬಿಲೋನಿಯ ಮತ್ತು ಪರ್ಷಿಯಗಳ ವಶವಾಗಿದ್ದ ಜೋರ್ಡಾನ್ ಪ್ರ.ಶ.ಪೂ. 5ನೆಯ ಶತಮಾನದ ಕೊನೆಯಲ್ಲಿ ನಬಾಟೇಯನರ ಅಧೀನವಾಯಿತು. ಆಗ ಪೆಟ್ರಾ ಅವರ ರಾಜಧಾನಿಯಾಯಿತು. ಪ್ರ.ಶ.ಪೂ.330ರಲ್ಲಿ ಸೆಲೆಯುಸಿಡ್ಸ್ ಇದನ್ನು ತನ್ನ ಆಳಿಕೆಗೆ ಒಳಪಡಿಸಿಕೊಂಡ. (ಬಿ.ಕೆ.ಜಿ.)

ಅಸ್ಸೀರಿಯನರ ಅನಂತರ ಸ್ವಲ್ಪಕಾಲ ನವಬ್ಯಾಬಿಲೋನಿಯನರು ಮತ್ತು ಪರ್ಷಿಯನರು ಜೋರ್ಡಾನನ್ನು ಆಳಿದರು. ಗ್ರೀಕರ ಆಗಮನದವರೆಗೆ ದೇಶದಲ್ಲಿ ಯಾವ ಪ್ರಗತಿಯೂ ಕಂಡುಬರಲಿಲ್ಲ. ಗ್ರೀಕರ ಆಳಿಕೆಯ ಕಾಲದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಪ್ರಗತಿ ಸಾಧಿಸಲಾಯಿತು. ಅನೇಕ ಪಟ್ಟಣಗಳು ನಿರ್ಮಾಣವಾದುವು. ವ್ಯಾಪಾರ ವೃದ್ಧಿಗೊಂಡಿತು. ಪ್ರ.ಶ.ಪೂ.64–63ರಲ್ಲಿ ಜೋರ್ಡಾನ್ ರೋಮನರ ಆಕ್ರಮಣಕ್ಕೆ ಒಳಗಾಯಿತು. ಪ್ರ.ಶ.ಪೂ.313ರ ಅನಂತರ ಕ್ರೈಸ್ತಧರ್ಮಕ್ಕೆ ಮನ್ನಣೆ ದೊರಕಿತು. ಅನೇಕ ಚರ್ಚುಗಳ ನಿರ್ಮಾಣವಾಯಿತು. ಬೆತ್ಲೆಹೆಮ್ ಇಂದಿಗೂ ಕ್ರೈಸ್ತರ ಒಂದು ಧಾರ್ಮಿಕ ಕ್ಷೇತ್ರ. 6 ಮತ್ತು 7ನೆಯ ಶತಮಾನಗಳಲ್ಲಿ ಜೋರ್ಡಾನ್ ಪರ್ಷಿಯನರ ಧಾಳಿಗಳಿಗೆ ತುತ್ತಾಯಿತು. ಬೈಜ಼ಾಂಟೀಯನ್ ದೊರೆ ಹೆರಾಕ್ಲಿಯಸ್ ಪರ್ಷಿಯನರನ್ನು ಸೋಲಿಸಿ ದೇಶದಲ್ಲಿ ಕಾನೂನು ಮತ್ತು ಶಾಂತಿ ನೆಲಸುವಂತೆ ಮಾಡಿದ. ಆದರೆ 636ರಲ್ಲಿ ಮುಸ್ಲಿಮರು ಇದನ್ನು ಜಯಿಸಿದರು. ಅನೇಕ ರೋಮನ್ ಕೋಟೆಗಳನ್ನು ಪುನರ್‌ನಿರ್ಮಿಸಲಾಯಿತು. ಅಬ್ಬಾಸಿದರು ಬಾಗ್ದಾದಿನಲ್ಲಿ ತಮ್ಮ ರಾಜಧಾನಿಯನ್ನು ಸ್ಥಾಪಿಸಿಕೊಂಡ ಮೇಲೆ ಜೋರ್ಡಾನಿನ ಬೆಳವಣಿಗೆ ಕುಂಠಿತಗೊಂಡಿತು. ಅನಂತರ ಜೋರ್ಡಾನ್ ಪ್ರಾಂತದ ಮೇಲೆ ಧರ್ಮಯೋಧರು (ಕ್ರುಸೇಡರ್ಸ್) ಧಾಳಿ ಮಾಡಿ 1099ರಲ್ಲಿ ಹಲವು ಭಾಗಗಳನ್ನು ಗೆದ್ದುಕೊಂಡು ಅನೇಕ ಕಟ್ಟಡಗಳನ್ನು ಮತ್ತು ಭೂಮಾರ್ಗಗಳನ್ನು ನಿರ್ಮಿಸಿದರು. ಆದರೆ ಅವರು ಹಿಂದಿರುಗಿದ ಮೇಲೆ ಜೋರ್ಡಾನಿನ ಇತಿಹಾಸ ಅಂಥ ವಿಶೇಷ ಘಟನೆಗಳಿಂದ ಕೂಡಿರಲಿಲ್ಲ. 16ನೆಯ ಶತಮಾನದಲ್ಲಿ ಜೋರ್ಡಾನ್ ಆಟೋಮನ್ (ತುರ್ಕಿ) ಸುಲ್ತಾನರ ಅಧಿಕಾರಕ್ಕೆ ಒಳಪಟ್ಟು ಡಮಾಸ್ಕಸ್‌ನ ವಿಲಾಯತ್ ಆಯಿತು.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಬ್ರಿಟನ್ ಮತ್ತು ಅರಬ್ ಸೈನ್ಯಗಳು ಪ್ಯಾಲಸ್ತೀನನ್ನು ಗೆದ್ದುಕೊಂಡವು. 1920ರಲ್ಲಿ ರಾಷ್ಟ್ರಗಳ ಕೂಟ (ಲೀಗ್ ಆಫ್ ನೇಷನ್ಸ್) ಪ್ಯಾಲಸ್ತೀನನ್ನು ಪ್ರದೇಶಾಧೀನ ಪ್ರದೇಶವಾಗಿ ಬ್ರಿಟನಿಗೆ ವಹಿಸಿತು. ಈಗಿನ ಇಸ್ರೇಲ್ ಮತ್ತು ಜೋರ್ಡಾನ್ ಪ್ರದೇಶಗಳು ಬ್ರಿಟನಿನ ಮೇಲಾಧಿಕಾರಕ್ಕೆ ಒಳಪಟ್ಟಿದ್ದುವು. ಬ್ರಿಟನ್ ಹಾಷೆಮೈಟ್ ವಂಶಸ್ಥನಾದ ಅಬ್ದುಲ್ಲನನ್ನು ಜೋರ್ಡಾನ್ ಮತ್ತು ಸುತ್ತಮುತ್ತಲ ಪ್ರದೇಶಗಳ ಸುಲ್ತಾನನಾಗುವಂತೆ ಒಡಂಬಡಿಸಿತು. ಅವನ ಆಳಿಕೆಗೆ ಒಳಪಟ್ಟ ಪ್ರದೇಶಕ್ಕೆ ಟ್ರಾನ್ಸ್‌ಜೋರ್ಡಾನ್ ಎಂದು ಹೆಸರಾಯಿತು.

ಟ್ರಾನ್ಸ್‌ಜೋರ್ಡಾನನ್ನು ಒಂದು ಪ್ರತ್ಯೇಕ ದೇಶವೆಂದು 1927ರಲ್ಲಿ ಪರಿಗಣಿಸಲಾಯಿತು. ಆದರೂ ಅದು ಬ್ರಿಟನಿನ ಅಧೀನತೆಯಲ್ಲಿ ಮುಂದುವರಿಯಿತು. ಟ್ರಾನ್ಸ್‌ಜೋರ್ಡಾನಿಗೆ ಸ್ವತಂತ್ರವಾಗಿ ಆಳಲು ಇನ್ನೂ ಶಕ್ತಿಯಿಲ್ಲವೆಂದು ಪರಿಗಣಿಸಲಾಗಿತ್ತು. ಮುಂದಿನ 20 ವರ್ಷಗಳಲ್ಲಿ ಟ್ರಾನ್ಸ್‌ಜೋರ್ಡಾನ್ ಬ್ರಿಟನಿನ ಅಧಿಕಾರದಿಂದ ಸ್ವತಂತ್ರವಾಗಲು ಪ್ರಯತ್ನಪಟ್ಟಿತು. 1940ರ ವೇಳೆಗೆ ಜೋರ್ಡಾನಿನಲ್ಲಿ ಕೇವಲ ಕೆಲವು ಬ್ರಿಟಿಷರು ಸಲಹೆಗಾರರಾಗಿ ಅರಬ್ ಸೈನ್ಯದ ಅಧಿಕಾರಿಗಳಾಗಿ ಇದ್ದರು. 1946 ಮೇ ತಿಂಗಳಲ್ಲಿ ಅಬ್ದುಲ್ಲನನ್ನು ಟ್ರಾನ್ಸ್‌ಜೋರ್ಡಾನಿನ ದೊರೆಯೆಂದು ಘೋಷಿಸಲಾಯಿತು. 1948ರಲ್ಲಿ ಬ್ರಿಟನ್ ಟ್ರಾನ್ಸ್‌ಜೋರ್ಡಾನಿನ ಪಶ್ಚಿಮ ಭಾಗದಲ್ಲಿದ್ದ ಪ್ಯಾಲಸ್ತೀನ್‌ನ ಒಂದು ಭಾಗದ ಮೇಲೆ ತನ್ನ ಅಧಿಕಾರ ಕೊನೆಗಾಣಿಸಿತು. ಇಲ್ಲಿ ಯಹೂದ್ಯರು 1948ರಲ್ಲಿ ಇಸ್ರೇಲ್ ರಾಜ್ಯ ಸ್ಥಾಪಿಸಿದರು. ಇಸ್ರೇಲ್‌ಗೂ ಅರಬ್ ರಾಷ್ಟ್ರಗಳಿಗೂ ನಡುವೆ ಆರಂಭವಾದ ಯುದ್ಧ, ವಿಶ್ವಸಂಸ್ಥೆ ನಡುವೆ ಪ್ರವೇಶಿಸಿದ್ದರಿಂದ ಕೊನೆಗೊಂಡಿತು. ಜೋರ್ಡಾನ್ ನದಿಯ ಪಶ್ಚಿಮ ಭಾಗದ ಪ್ರದೇಶ ಟ್ರಾನ್ಸ್‌ಜೋರ್ಡಾನಿಗೆ ಬಂತು. ಆ ದೇಶದ ಹೆಸರು ಟ್ರಾನ್ಸ್‌ಜೋರ್ಡಾನ್ ಎಂಬುದರಿಂದ ಜೋರ್ಡಾನ್ ಎಂದು ಬದಲಾಯಿತು.

1951ರಲ್ಲಿ ಅಬ್ದುಲ್ಲ ಕೊಲೆಯಾದುದರಿಂದ ಅವನ ಮಗ ತಲಾಲ್ ರಾಜನಾದ. ಆದರೆ ತಲಾಲನ ಅನಾರೋಗ್ಯದಿಂದ ಆತ ದೊರೆಯಾಗಿರಲು ಸಾಧ್ಯವಾಗಲಿಲ್ಲ. ಸಂಸತ್ತು ಅವನನ್ನು ಪದಚ್ಯುತಗೊಳಿಸಿ ಅವನ ಮಗ 1ನೆಯ ಹುಸೇನನನ್ನು ದೊರೆಯಾಗಿ ನೇಮಿಸಿತು.

1948ರಲ್ಲಿ ನಡೆದ ಇಸ್ರೇಲ್–ಅರಬ್ ಯುದ್ಧದಿಂದಾಗಿ ಅನೇಕ ಅರಬ್ ನಿರಾಶ್ರಿತರು ಜೋರ್ಡಾನಿಗೆ ಬಂದರು. ಜೋರ್ಡಾನ್ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿತು.1955ರಲ್ಲಿ ಜೋರ್ಡಾನ್‌ಗೆ ವಿಶ್ವಸಂಸ್ಥೆಯ ಸದಸ್ಯತ್ವ ದೊರಕಿತು.

ಜೋರ್ಡಾನಿನಲ್ಲಿ ಬ್ರಿಟಿಷರ ಪ್ರಭಾವವನ್ನು ಸಂಪೂರ್ಣವಾಗಿ ಕೊನೆಗಾಣಿಸಲು ಅನೇಕ ದಂಗೆಗಳು ಎದ್ದುವು. 1956ರಲ್ಲಿ ದೊರೆ ಹುಸೇನ್ ಜೋರ್ಡಾನಿನ ಬ್ರಿಟಿಷ್ ಮಹಾದಂಡನಾಯಕನನ್ನು ವಜ ಮಾಡಿದರು. ಜೋರ್ಡಾನಿನ ರಕ್ಷಣೆಗಾಗಿ 1948ರಲ್ಲಿ ಬ್ರಿಟನಿನೊಡನೆ ಮಾಡಿಕೊಂಡಿದ್ದ ಒಪ್ಪಂದವನ್ನು 1957ರಲ್ಲಿ ಕೊನೆಗೊಳಿಸಲಾಯಿತು. 1967ರಲ್ಲಿ ಇಸ್ರೇಲಿನೊಂದಿಗೆ ನಡೆದ ಯುದ್ಧದಲ್ಲಿ ಜೋರ್ಡಾನ್ ನದಿಯ ಪಶ್ಚಿಮ ದಂಡೆಯ ಪ್ರದೇಶವನ್ನೆಲ್ಲ ಇಸ್ರೇಲ್ ಆಕ್ರಮಿಸಿಕೊಂಡಿತು. ಜೆರುಸಲೇಮ್ ಹಳೇ ನಗರ ಇಸ್ರೇಲಿನ ಭಾಗವಾಯಿತು. ಉಳಿದ ಭಾಗವೆಲ್ಲ ಇಸ್ರೇಲಿ ಆಕ್ರಮಿತ ಪ್ರದೇಶ ಎನಿಸಿಕೊಂಡಿತು. ಜೋರ್ಡಾನ್ನಿನ ಸಮೀಪದ ಪ್ಯಾಲಸ್ತೀನಿಯನ್ ಗೆರಿಲಾ ಕಾರ್ಯಾಚರಣೆಗೆ ಜೋರ್ಡಾನ್ ನೆಲೆಯಾಯಿತು. ಸರ್ಕಾರಕ್ಕೂ ಗೆರಿಲ್ಲಾಗಳಿಗೂ ನಡುವೆ ಘರ್ಷಣೆಗಳು ಮುಂದುವರಿದುವು. ಇವು ಅಂತರ್ಯುದ್ಧವಾಗಿ ಪರಿಣಮಿಸಿದುವು (1970). 1971ರಲ್ಲಿ ಸರ್ಕಾರ ವಿಜಯ ಗಳಿಸಿತು. 1973ರಲ್ಲಿ ನಡೆದ ಅರಬ್–ಇಸ್ರೇಲಿ ಯುದ್ಧದಲ್ಲಿ ಜೋರ್ಡಾನ್ ಭಾಗವಹಿಸಲಿಲ್ಲ.

ಈಗ ಜೋರ್ಡಾನಿನಲ್ಲಿರುವುದು ಸಂವಿಧಾನಬದ್ಧ ರಾಜತ್ವ. ಜೋರ್ಡಾನಿನ ವ್ಯವಹಾರ ಭಾಷೆ ಅರಬ್ಬೀ. 1988ರಲ್ಲಿ ದೊರೆ ಹುಸೇನ್ ಪ್ಯಾಲಸ್ತೀನ್ ವಿಮೋಚನ ರಂಗದ ಪರವಾಗಿ ಪಶ್ಚಿಮ ದಂಡೆ ಅರಬ್ಬರ ಪ್ರದೇಶವೆಂದು ಘೋಷಿಸಿದರು. 1994ರಲ್ಲಿ ಜೋರ್ಡಾನ್ ಮತ್ತು ಇಸ್ರೇಲ್ ಪೂರ್ಣ ಪ್ರಮಾಣದ ಶಾಂತಿ ಒಪ್ಪಂದಕ್ಕೆ ಸಹಿ ಮಾಡಿವೆ. (ಎಸ್‌ಎಚ್‌ಐ.)

**ಜೋಬ್:** ಉತ್ತರ ಬಲೂಚಿಸ್ತಾನದ ಜೋಬ್ ನದಿಬಯಲಿನಲ್ಲಿ ಈ ಸಂಸ್ಕೃತಿಯ ನೆಲೆಗಳು ಸಿಕ್ಕಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಇಲ್ಲಿಯ ರಾಣಾಘುಂಡೈ, ಮೊಗಲ್ ಘುಂಡೈ, ಪೆರಿಯಾನೊ ಘುಂಡೈ, ಲೋರಲೈ ಮುಂತಾದ ಸ್ಥಳಗಳಲ್ಲಿ ತಾಮ್ರ–ಶಿಲಾಯುಗ ಮತ್ತು ಅದಕ್ಕೂ ಹಿಂದಿನ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಇಲ್ಲಿ ದೊರೆತಿರುವ ತಾಮ್ರ–ಶಿಲಾಯುಗದ ಸುಂದರವಾದ ಮಣ್ಪಾತ್ರೆಗಳು ಚಕ್ರದ ಮೇಲೆ ಮಾಡಿದವಾಗಿವೆ. ಕೆಂಪುಬಣ್ಣದ ಈ ಮಣ್ಪಾತ್ರೆಗಳ ಮೇಲೆ ಕಪ್ಪುಬಣ್ಣದಲ್ಲಿ ಗೂಳಿಯ ಸಾಲು ಮತ್ತು ರೇಖಾ ನಕಾಸೆಗಳನ್ನು ಚಿತ್ರಿಸಲಾಗಿದೆ. ಸುಟ್ಟಮಣ್ಣಿನ ಅನೇಕ ಹೆಣ್ಣುಗೊಂಬೆಗಳೂ ದೊರೆಕಿವೆ. ಈ ಕಾಲದಲ್ಲಿ ಹಸಿ ಇಟ್ಟಿಗೆಯ ಕಟ್ಟಡಗಳು ರೂಢಿಯಲ್ಲಿದ್ದವು. ಶವಗಳನ್ನು ದಹನಮಾಡುವ ಪದ್ಧತಿ ಜಾರಿಯಲ್ಲಿತ್ತು. ಈ ವೈಶಿಷ್ಟ್ಯಗಳನ್ನುಳ್ಳ ಸಂಸ್ಕೃತಿಯನ್ನು ಜೋಬ್ ಸಂಸ್ಕೃತಿಯೆಂದು ಹೆಸರಿಸಲಾಗಿದೆ. ವ್ಯಾಪಾರಕೇಂದ್ರಗಳಾಗಿದ್ದುದರಿಂದ ಇವು ದಕ್ಷಿಣ

ಬಲೂಚಿಸ್ತಾನ, ಇರಾನ್ ಮುಂತಾದ ಸ್ಥಳಗಳೊಡನೆ ನಿಕಟ ಸಂಪರ್ಕ ಹೊಂದಿದ್ದಿರಬೇಕು. ಈ ಸಂಸ್ಕೃತಿಯ ಅವಶೇಷಗಳು ಹರಪ್ಪ ನೆಲೆಯಲ್ಲಿ ಹರಪ್ಪ ಸಂಸ್ಕೃತಿಗಿಂತ ಪೂರ್ವದ ಘಟ್ಟಗಳಲ್ಲಿ ಕಂಡುಬಂದಿದೆ. ಹರಪ್ಪ ಸಂಸ್ಕೃತಿಯ ಬೆಳೆವಣಿಗೆಗೆ ಈ ಸಂಸ್ಕೃತಿಯೂ ಕಾರಣವಾಗಿದ್ದಿರಬೇಕು. ಜೋಬ್‌ನ ಪ್ರಾಚೀನ ಘಟ್ಟದ ಸಂಸ್ಕೃತಿ ಹಿಸ್ಸಾರ್ 1ನೆಯ ಘಟ್ಟದಷ್ಟು ಹಳೆಯದು ಎನ್ನಲಾಗಿದೆ. ಜೋಬ್ ಪ್ರದೇಶದಲ್ಲಿಯ ಈ ಸಂಸ್ಕೃತಿಗಳು ಪ್ರ.ಶ.ಪೂ.4–3ನೆಯ ಸಹಸ್ರಮಾನದಲ್ಲಿ ಪ್ರಚಲಿತವಾಗಿದ್ದುವು. ರಾಣಾಘುಂಡೈ ನೆಲೆಯ ಮೇಲಿನ ಪದರಗಳಲ್ಲಿ ಹರಪ್ಪ ಸಂಸ್ಕೃತಿಯ ಕಾಲದ ಮತ್ತು ಅದಕ್ಕೂ ಅನಂತರದ ಕೆಲವು ಸಂಸ್ಕೃತಿಗಳು, ಅವಶೇಷಗಳು ಬೆಳಕಿಗೆ ಬಂದಿವೆ. (ಎಂ.ಎಸ್.ಕೆ.)

**ಜೋರ್ವೆ:** ಮಹಾರಾಷ್ಟ್ರ ರಾಜ್ಯದ ಅಹಮದ್‌ನಗರ ಜಿಲ್ಲೆಯಲ್ಲಿರುವ ತಾಮ್ರ–ಶಿಲಾಯುಗದ ನೆಲೆ. ಪ್ರವರ ನದಿಯ ಎಡದಂಡೆಯ ಮೇಲಿದೆ. ಡೆಕ್ಕನ್ ಕಾಲೇಜಿನ ಎಚ್.ಡಿ. ಸಾಂಕಳಿಯ ಅವರು ಇಲ್ಲಿ 1950–51ರಲ್ಲಿ ಉತ್ಖನನ ನಡೆಸಿದರು. ಈ ನೆಲೆ ದಖನ್ ತಾಮ್ರ–ಶಿಲಾಯುಗ ಸಾಂಸ್ಕೃತಿಕ ವಲಯಕ್ಕೆ ಸೇರಿದ್ದು ಕೆಲವು ವಿಶೇಷ ಲಕ್ಷಣಗಳು ಪ್ರಪ್ರಥಮವಾಗಿ ಇಲ್ಲಿ ತೋರಿಬಂದುದರಿಂದ ಈ ಸಂಸ್ಕೃತಿಯನ್ನು ಜೋರ್ವೆ ಸಂಸ್ಕೃತಿಯೆಂದು ಹೆಸರಿಸಲಾಗಿದೆ. ಕಪ್ಪುಚಿತ್ರಿತ ಕೆಂಪುಪಾತ್ರೆಗಳು ಈ ಲಕ್ಷಣಗಳಲ್ಲೊಂದು. ಇಂಥ ಪಾತ್ರೆಗಳು ಇಲ್ಲಿ ಮೊದಲಬಾರಿಗೆ ಕಂಡುಬಂದಿದ್ದರಿಂದ ಇವನ್ನು ಜೋರ್ವೆ ಪಾತ್ರೆಗಳೆಂದು




ವರ್ಣ ರೇಖಾಚಿತ್ರಿತ ಮಣ್ಣಿನ ಬಟ್ಟಲುಗಳು

ಕರೆಯಲಾಗಿದೆ. ತಿಗುರಿಯ ಮೇಲೆ ಮಾಡಿದ ಈ ಪಾತ್ರೆಗಳ ಮೇಲೆ ಕೆಂಪು ಲೇಪನವಿದ್ದು ಚಿತ್ರಗಳು ಜ್ಯಾಮಿತೀಯ ಆಕಾರದವು. ಆಲಿಕೆಯಂಥ ಬಾಯಿರುವ ಗಿಂಡಿ, ಸಣ್ಣ ತಪ್ಪಲೆಗಳು, ವಿವಿಧಾಕೃತಿಯ ಬಟ್ಟಲು, ತಟ್ಟೆ, ಮಡಕೆ, ಮುಚ್ಚಳ, ಸಣ್ಣ ಬೋಗುಣಿ ಇವು ಈ ಮಾದರಿಯಲ್ಲಿ ಕಂಡುಬರುವ ಸಾಮಾನ್ಯ ಆಕಾರಗಳು. ಕ್ಯಾಲ್ಸೆಡನಿ ನೀಳ ಚಕ್ಕೆಗಳು, ಕಲ್ಲಿನ ಮಣಿಗಳು, ತಾಮ್ರದ ಆರು ಕೊಡಲಿಗಳು ಹಾಗೂ ಒಂದು ಬಳೆ, ಅಲಗು, ಅರ್ಧಚಂದ್ರಾಕೃತಿ ಮುಂತಾದ ಸೂಕ್ಷ್ಮಶಿಲೋಪಕರಣಗಳು ಇವು ಈ ಸಂಸ್ಕೃತಿಯ ಇತರ ಅವಶೇಷಗಳು. ಈ ಹಂತ ಇನಾಂಗಾವ್ ನೆಲೆಯಲ್ಲಿಯೂ ಕಂಡುಬಂದಿದೆ. (ವಿ.ಎಸ್.)

**ಜ್ಯೋತಿ ಬಾ ಫುಲೆ:** 1827–90. ಮಹಾತ್ಮ ಎಂದು ಕರೆಯಲ್ಪಟ್ಟ ಮಹಾರಾಷ್ಟ್ರದ ಪ್ರಮುಖ ಸಮಾಜಸುಧಾರಕ. ಹುಟ್ಟಿದ್ದು ಪುಣೆಯಲ್ಲಿ. ತಂದೆ ಗೋವಿಂದರಾವ್. ಪೂರ್ವಜರು ಸಾತಾರ ಜಿಲ್ಲೆಯ ಕಟಗುಣಿ ಗ್ರಾಮದವರು. ಜಾತಿ ಮಾಲೀ ಕ್ಷತ್ರಿಯ ಸಮುದಾಯ. ಮನೆತನದ ಹೆಸರು ಗೋರ್‍ಹೆ. ಹೂವಿನ ವ್ಯಾಪಾರ ಮಾಡುತ್ತಿದ್ದರಿಂದ ಫುಲೆ ಎಂಬ ಅಡ್ಡ ಹೆಸರು ಬಂತು. ಈತ ಹುಟ್ಟಿದ ಒಂದು ವರ್ಷದಲ್ಲಿಯೆ ತಾಯಿ ಚಿಮಣಾ ಬಾಯಿ ತೀರಿಕೊಂಡಳು. ಆರಂಭದ ವಿದ್ಯಾಭ್ಯಾಸ ಗಾಂವಟೀ (ಪಂತೋಜೀ) ಶಾಲೆಯಲ್ಲಿ ಆಯಿತು. ಅನಂತರ ಸ್ಕಾಟಿಷ್ ಮಿಷನ್ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಶಾಲೆಯಲ್ಲಿ ಸದಾಶಿವ ಬಲ್ಲಾಳಗೊವಂದೆ, ಮೋರೋ ವಿಠ್ಠಲ ವಾಳ್ವೇಕರ್ ಮತ್ತು ಸಖಾರಾಮ ಯಶವಂತ ಪರಾಂಜಪೆ ಎಂಬುವರು ಸ್ನೇಹಿತರಾಗಿ ಇವರಿಗೆ ನೆರವು ನೀಡಿದರು. ವಿದ್ಯಾಭ್ಯಾಸದ ಕಾಲದಲ್ಲಿ ಶಿವಾಜಿ, ವಾಷಿಂಗ್‌ಟನ್ ಮತ್ತು ಥಾಮಸ್ ಪೇನ್ ಇವರ ಪ್ರಭಾವ ಇವನ ಮೇಲೆ ಗಾಢವಾಗಿ ಆಯಿತು. ಪೇನನ ರೈಟ್ಸ್ ಆಫ್ ಮ್ಯಾನ್ ಇವರ ಅತ್ಯಂತ ಮೆಚ್ಚುಗೆಯ ಪುಸ್ತಕ. ದೇವರ ಮಕ್ಕಳಾದ ನಾವೆಲ್ಲರೂ ಜಾತಿಮತ ಭೇದಗಳಿಲ್ಲದೆಯೆ ಸಮಾನರು ಎಂಬ ತತ್ತ್ವ ಇವರನ್ನು ಪ್ರಬಲವಾಗಿ ಆಕರ್ಷಿಸಿತು. ಶಾಲೆಗೆ ಸೇರಿದ 5–6ವರ್ಷಗಳಲ್ಲೆ ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನು ಕೈಬಿಡಬೇಕಾದ ಪರಿಸ್ಥಿತಿ ಒದಗಿತು. ಗುಲಾಮಗಿರಿ,

ಅಸ್ಪೃಶ್ಯತೆ ಇತ್ಯಾದಿಗಳು ಇವರಿಗೆ ಬಾಲ್ಯದಿಂದಲೇ ನೋವನ್ನು ಉಂಟು ಮಾಡುವ ಸಂಗತಿಗಳಾಗಿದ್ದವು. ಶಿಕ್ಷಣ ಪಡೆಯುವಲ್ಲಿ ನಿಮ್ನವರ್ಗದ ಇವರಿಗೆ ಉಂಟಾದ ಕಷ್ಟಕಾರ್ಪಣ್ಯಗಳು ಪ್ರತಿಕೂಲ ಪರಿಸ್ಥಿತಿಗಳು ಅಚ್ಚಳಿಯದ ಪ್ರಭಾವ ಬೀರಿದ್ದವು. ಇವುಗಳ ವಿರುದ್ಧ ಫುಲೆ ಅವರು ಪ್ರಬಲ ಚಳವಳಿಯನ್ನೇ ಆರಂಭಿಸಿದರು. ಸಮಾಜಸುಧಾರಣೆ ಯನ್ನೊಪ್ಪಿದ ಬ್ರಾಹ್ಮಣರೆಲ್ಲರೂ ಇವರ ಸ್ನೇಹಿತರಾದರು. ಆರ್.ಜಿ.ಭಂಡಾರ್ಕರ್, ನ್ಯಾಯಮೂರ್ತಿ ರಾನಡೆ ಮೊದಲಾದವರು ಇವರ ಕೆಲಸವನ್ನು ವಿಶೇಷವಾಗಿ ಪ್ರಶಂಸಿಸಿದರು.

ಶಿಕ್ಷಣ ಪ್ರಸಾರದ ವಿನಾ ಭಾರತೀಯ ಸ್ತ್ರೀಯರ ಹಾಗೂ ನಿಮ್ನವರ್ಗಗಳ ಜನರ ಉದ್ಧಾರ ಅಶಕ್ಯ ಎಂಬುದನ್ನು ಕಂಡುಕೊಂಡ ಫುಲೆ ಅವರು 1848ರಲ್ಲಿ ಪುಣೆಯ ಬುಧವಾರ ಪೇಟೆಯಲ್ಲಿ ಹೆಣ್ಣು ಮಕ್ಕಳ ಶಾಲೆಯೊಂದನ್ನು ಸ್ಥಾಪಿಸಿದರು. ಸ್ತ್ರೀಶಿಕ್ಷಕರ ಕೊರತೆಯನ್ನು ನಿವಾರಿಸಲು ಮೊದಲು ತಮ್ಮ ಹೆಂಡತಿ ಸಾವಿತ್ರಿಬಾಯಿಗೇ ತರಬೇತಿ ನೀಡಿದರು. 1852ರಲ್ಲಿ ವಿಠ್ಠಲ ಪೇಟೆಯಲ್ಲಿ ಇನ್ನೊಂದು ಶಾಲೆ ಪ್ರಾರಂಭವಾಯಿತು. ಇದೇ ಸಮಯಕ್ಕೆ ವೇತಾಲಪೇಟೆಯಲ್ಲಿ ಅಸ್ಪೃಶ್ಯರ ಹಾಗೂ ಎಲ್ಲ ಬಗೆಯ ಅತಿಶೂದ್ರವರ್ಗದ ಜನರಿಗೆಂದು ಒಂದು ಶಾಲೆ ಏರ್ಪಟ್ಟಿತು. ಈ ಶಾಲೆಗಳ ಉಸ್ತುವಾರಿಗೆಂದು ಕಾರ್ಯಕಾರಿ ಮಂಡಲವೊಂದು ಅಸ್ತಿತ್ವಕ್ಕೆ ಬಂತು.

ಇವರು ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಕೆಲಸ ನಡೆಸಿದ್ದರ ಜೊತೆಗೆ ಸಮಾಜದಲ್ಲಿ ವಿಧವಾ ವಿವಾಹ, ಕೇಶಮುಂಡನ ನಿಷೇಧ, ಬಾಲಹತ್ಯಾ ಪ್ರತಿಬಂಧ, ದ್ವಿಭಾರ್ಯ ಪ್ರತಿಬಂಧ ಇತ್ಯಾದಿ ಸುಧಾರಣೆಯ ಕೆಲಸಗಳನ್ನೂ ಆರಂಭಿಸಿದರು. ಸಮಾಜ ಸುಧಾರಣೆಗೆಂದು ಸತ್ಯಶೋಧಕ ಸಮಾಜ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ತಮ್ಮ ತತ್ತ್ವಪ್ರಚಾರಕ್ಕೆಂದು ಬ್ರಾಹ್ಮಣೇತರ ಕಸಬು, ಗುಲಾಮಗಿರಿ, ಇಶಾರಾ ಸಾರ್ವಜನಿಕ ಸತ್ಯಧರ್ಮ, ಶಿವಾಜಿಚಾ ಪವಾಡಾ, ಶೇತ್ಕರೀಚಾ ಆಸೂಡ, ಜಾತಿಭೇದ, ವಿವೇಕಸಾರ ಮತ್ತು ಅಸ್ಪೃಶ್ಯಾಂಚಿ ಕೈಫಿಯತ್ ಮುಂತಾದ ಪುಸ್ತಕಗಳನ್ನು ಬರೆದು ಪ್ರಕಟಿಸಿದರು.

ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳನ್ನು ಅವುಗಳಲ್ಲಿರುವ ಸಾಮಾಜಿಕ ಸಮಾನತೆಯ ಗುಣಕ್ಕಾಗಿ ಇವರು ವಿಶೇಷ ಪ್ರೀತಿಸುತ್ತಿದ್ದರು. ಆದರೂ ಹಿಂದುಧರ್ಮದಿಂದ ಮತಾಂತರ ಹೊಂದಲಿಲ್ಲ. ಇವರ ಷಷ್ಟ್ಯಬ್ದಿ ಸಮಾರಂಭದಲ್ಲಿ ಮುಂಬಯಿ ಸರ್ಕಾರ ಇವರಿಗೆ ಮಹಾತ್ಮ ಎಂಬ ಪದವಿಯನ್ನು ಕೊಟ್ಟು ಶಾಲು ಹೊದಿಸಿ ಗೌರವಿಸಿತು. (1) ಈಶ್ವರ ಸರ್ವವ್ಯಾಪಿ ಯಾದುದರಿಂದ ಎಲ್ಲ ಮನುಷ್ಯ ಪ್ರಾಣಿಗಳೂ ಆತನ ಪ್ರೇಮವನ್ನು ಪಡೆದೇ ಇರುತ್ತವೆ. (2) ಈಶ್ವರನಲ್ಲಿ ಎಲ್ಲರೂ ತಮ್ಮ ಭಕ್ತಿಯನ್ನು ಅರ್ಪಿಸಬಹುದಾದ್ದರಿಂದ ಎಲ್ಲರೂ ಉತ್ತಮರೆ ವಿನಾ ಮನುಷ್ಯ ಜಾತಿಯಲ್ಲಿ ಜಾತಿಯಿಂದ ಶ್ರೇಷ್ಠವೆಂಬುದಾಗಲಿ ಕನಿಷ್ಠವೆಂಬುದಾಗಲಿ ಇಲ್ಲ. (3) ಯಾವುದೇ ಗ್ರಂಥ ಸರ್ವರಿಗೂ ಪ್ರಮಾಣ ಗ್ರಂಥವಾಗಲಾರದು ಮತ್ತು ಅದು ಈಶ್ವರಪ್ರಣೀತ ಎಂಬುದೂ ಸರಿಯಲ್ಲ. (4) ಪುನರ್ಜನ್ಮ, ಕರ್ಮಕಾಂಡ, ಜಪತಪ ಮುಂತಾದವುಗಳೆಲ್ಲ ಅಜ್ಞಾನದ ಮೂಲಕ ಉಂಟಾದವು ಎಂಬ ನಾಲ್ಕು ತತ್ತ್ವಪ್ರಣಾಲಿಗಳನ್ನು ಇವರು ಪ್ರತಿಪಾದಿಸಿದರು. (ಎಸ್.ಜಿವಿ.)

## ಟ

**ಟಾಯ್ನ್‌ಬಿ, ಆರ್ನಾಲ್ಡ್ ಜೋಸೆಫ್:** 1889–1975. ಹೆಸರಾಂತ ಇತಿಹಾಸಕಾರ. ನಾಗರಿಕತೆಗಳ ಸರ್ವೇಕ್ಷಣೆ, ವಿಶ್ಲೇಷಣೆ ನಡೆಸುವ ಸ್ಟಡಿ ಆಫ್ ಹಿಸ್ಟೊರಿ ಎಂಬ ತನ್ನ ಗ್ರಂಥದಿಂದಾಗಿ ಪ್ರಸಿದ್ಧನಾದ. 1889 ಏಪ್ರಿಲ್ 14ರಂದು ಲಂಡನಿನಲ್ಲಿ ಜನಿಸಿದ. ವಿಂಚೆಸ್ಟರಿನಲ್ಲೂ ಆಕ್ಸ್‌ಫರ್ಡಿನ ಬೇಲಿಯಲ್ ಕಾಲೇಜಿನಲ್ಲೂ ಶಿಕ್ಷಣ ಪಡೆದ. ಬೇಲಿಯಲ್ ಕಾಲೇಜಿನಲ್ಲೇ ಇವನು 1912–15ರಲ್ಲಿ ಫೆಲೋ ಆಗಿಯೂ ಪ್ರಾಚೀನ ಇತಿಹಾಸ ಬೋಧಕನಾಗಿಯೂ ಸೇವೆಸಲ್ಲಿಸಿದ. 1919–24ರಲ್ಲಿ ಇವನಿದ್ದುದು ಲಂಡನ್ ವಿಶ್ವವಿದ್ಯಾಲಯದಲ್ಲಿ–ಬೈಜಾಂಟೀಯನ್ ಮತ್ತು ಆಧುನಿಕ ಗ್ರೀಕ್ ಭಾಷೆ, ಸಾಹಿತ್ಯ ಮತ್ತು ಇತಿಹಾಸದ ಕಾರಾಯೀಸ್ ಪ್ರಾಧ್ಯಾಪಕನಾಗಿ. 1925–55 ರಲ್ಲಿ ನಿವೃತ್ತನಾಗುವವರೆಗೆ, ಅಲ್ಲೇ ಅಂತಾರಾಷ್ಟ್ರೀಯ ಇತಿಹಾಸದ ಸಂಶೋಧನ ಪ್ರಾಧ್ಯಾಪಕನಾಗಿ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳ ರಾಯಲ್ ಇನ್‌ಸ್ಟಿಟ್ಯೂಟಿನ ನಿರ್ದೇಶಕನಾಗಿದ್ದ. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಸರ್ಕಾರಕ್ಕಾಗಿ ಕೆಲಸ ಮಾಡಿದ. 1919ರಲ್ಲೂ 1945ರಲ್ಲೂ ಇವನು ಪ್ಯಾರಿಸ್ ಶಾಂತಿ ಸಮ್ಮೇಳನಗಳಲ್ಲಿ ಬ್ರಿಟಿಷ್ ನಿಯೋಗದ ಸದಸ್ಯನಾಗಿದ್ದ. ಸ್ಟಡಿ ಆಫ್ ಹಿಸ್ಟರಿ ಎಂಬ ಹತ್ತು ಸಂಪುಟಗಳ

ಗ್ರಂಥದ ರಚನೆಯಲ್ಲಿ ಟಾಯ್ನ್‌ಬಿ ತೊಡಗಿದ್ದು 1922ರಲ್ಲಿ. ಪ್ರ.ಶ.ಪೂ.5ನೆಯ ಶತಮಾನದ ಗ್ರೀಕ್ ಇತಿಹಾಸಕಾರ ಹಿರೋಡಾಟಸ್ ಬಣ್ಣಿಸಿರುವ ಪರ್ಷಿಯನ್ ದೊರೆ ಜರ್ಕ್ಸೀಸನ ಸೈನಿಕರ ತಲೆಯುಡಿಗೆಗಳಂತೆಯೆ ಇದ್ದ, ನರಿಯ ಚರ್ಮದ ಟೋಪಿಗಳನ್ನು ಧರಿಸಿದ್ದ ಬಲ್ಗೇರಿಯನ್ ರೈತರನ್ನು ನೋಡಿದಾಗ ಟಾಯ್ನ್‌ಬಿಗೆ ಮೇಲೆ ಹೇಳಿದಂಥ ಕೃತಿಯನ್ನು ರಚಿಸಬೇಕೆಂಬ ಪ್ರೇರಣೆ ಬಂತು. ಈ ಘಟನೆ ಇವನ ಇತಿಹಾಸ ಗ್ರಂಥದ ಸ್ವರೂಪದ ಮೇಲೆ ಬೆಳಕು ಚೆಲ್ಲುತ್ತದೆ. ಇತಿಹಾಸದ ನಿರಂತರತೆಯ ಕಲ್ಪನೆ, ಅದರ ವಿನ್ಯಾಸವನ್ನು ಕಾಣಬಲ್ಲ ದೃಷ್ಟಿ, ವಿದ್ವತ್‌ಪ್ರಪೂರ್ಣತೆ, ಸೂಕ್ಷ್ಮಾವಲೋಕನ–ಈ ಗುಣಗಳಿಂದಾಗಿ ಇವನ ಈ ಗ್ರಂಥಕ್ಕೆ ವಿಶಿಷ್ಟತೆ ಪ್ರಾಪ್ತವಾಗಿದೆ. ಈ ಬೃಹದ್ಗ್ರಂಥದ ಹತ್ತು ಸಂಪುಟಗಳು 1934–54ರಲ್ಲಿ ಪ್ರಕಟವಾದುವು. ಇದರ ಮೊದಲ ಆರು ಸಂಪುಟಗಳ ಸಂಗ್ರಹ ಆವೃತ್ತಿ 1946ರಲ್ಲೂ ಕೊನೆಯ ನಾಲ್ಕು ಸಂಪು ಟಗಳದು 1957ರಲ್ಲೂ ಪ್ರಕಟವಾದುವು.



ಟಾಯ್ನ್‌ಬಿ ಅಭಿಪ್ರಾಯ ಮತ್ತು ಸಿದ್ಧಾಂತಗಳನ್ನು ಅನೇಕ ಪರಿಣತರು ಟೀಕಿಸಿದ್ದಾರೆ. ಇವನ ತೀರ್ಮಾನಗಳು ಇತಿಹಾಸಕಾರನ ತೀರ್ಮಾನಗಳಂತೆ ಇಲ್ಲವೆಂದೂ ಕ್ರೈಸ್ತ ನೀತಿ ಬೋಧಕನ ದೃಷ್ಟಿಯಿಂದ ಇತಿಹಾಸ ಬರೆದಿರುವುದು ಈ ಗ್ರಂಥದ ದೋಷವೆಂದೂ ಅಭಿಪ್ರಾಯವಿದೆ. ಆದರೂ ನಾಗರಿಕತೆಯ ಇತಿಹಾಸಕ್ಕೆ ಇವನ ಕೃತಿ ಒಂದು ಅಮೂಲ್ಯ ಕೊಡುಗೆಯೆಂದು ಪರಿಭಾವಿಸಲಾಗಿದೆ.

ನಾಗರಿಕತೆಗಳ ಹುಟ್ಟು ಬೆಳೆವಣಿಗೆಗಳನ್ನು ಸೂಕ್ಷ್ಮವಾಗಿ, ಆಳವಾಗಿ ವ್ಯಾಸಂಗ ಮಾಡಿದ್ದ ಟಾಯ್ನ್‌ಬಿ ಅವುಗಳ ಬಗ್ಗೆ ಕೆಲವು ಸಿದ್ಧಾಂತಗಳನ್ನು ರೂಪಿಸಿದ್ದಾನೆ. ನಾಗರಿಕತೆ ಹೇಗೆ ಪ್ರಗತಿ ಹೊಂದುತ್ತದೆ, ಆ ಪ್ರಗತಿಯ ಸಾಧಕರಾರು, ಅದು ಕ್ಷೀಣಿಸಲು ಕಾರಣಗಳೇನು–ಎಂಬ ಪ್ರಶ್ನೆಗಳಿಗೆ ಟಾಯ್ನ್‌ಬಿ ಸಮರ್ಪಕ ಉತ್ತರ ನೀಡಲು ಯತ್ನಿಸಿದ್ದಾನೆ. ಪ್ರಪಂಚದ 21 ನಾಗರಿಕತೆಗಳನ್ನು ಖಚಿತವಾಗಿ ಗುರುತಿಸಿ ಅವುಗಳ ಜೀವಿತವನ್ನು ಕುರಿತು ವಿವೇಚಿಸಿದ್ದಾನೆ. ನಾಗರಿಕತೆಗಳ ಬೆಳೆವಣಿಗೆಯಾಗುವುದು ಸವಾಲುಗಳಿಗೆ ಯಶಸ್ವಿಯಾದ ರೀತಿಯ ಪ್ರತಿವರ್ತನೆ ತೋರುವ ಕ್ರಿಯಾಶಕ್ತಿಯುಳ್ಳ ಅಲ್ಪಸಂಖ್ಯಾತ ಗುಂಪುಗಳ ನಾಯಕತ್ವದಲ್ಲಿ ಎಂಬುದು ಟಾಯ್ನ್‌ಬಿ ಗ್ರಂಥದ ಪ್ರಮೇಯ. ನಾಯಕರು ಕ್ರಿಯಾತ್ಮಕವಾಗಿ ಈ ಸವಾಲುಗಳಿಗೆ ಪ್ರತಿಕ್ರಿಯೆ ತೋರಿಸದಿದ್ದಾಗ ಆ ನಾಗರಿಕತೆಗಳು ಕ್ಷೀಣಿಸುತ್ತವೆ.

ಟಾಯ್ನ್‌ಬಿ ಸಿದ್ಧಾಂತಗಳು ಇತರ ಹಲವು ಇತಿಹಾಸಕಾರರದಕ್ಕಿಂತ ಭಿನ್ನವಾಗಿವೆ. ನಾಗರಿತೆಯ ಸಾವು ಅನಿವಾರ್ಯವೆಂದು ಸ್ಪಿಂಗ್ಲರ್ ತನ್ನ ದಿ ಡಿಕ್ಲೈನ್ ಆಫ್ ದಿ ವೆಸ್ಟ್ ಎಂಬ ಗ್ರಂಥದಲ್ಲಿ ಹೇಳಿರುವ ಮಾತನ್ನು ಟಾಯ್ನ್‌ಬಿ ಒಪ್ಪುವುದಿಲ್ಲ. ಎಡೆಬಿಡದೆ ಬರುತ್ತಿರುವ ಸವಾಲುಗಳಿಗೆ ಅದು ಅನುಕ್ರಿಯೆ ತೋರಿಸಬಹುದು ಅಥವಾ ತೋರಿಸದಿರಬಹುದು. ಆರ್ಥಿಕ ಬಲಗಳಿಂದ ಇತಿಹಾಸ ರೂಪಿತವಾಗುತ್ತದೆ ಎಂಬ ಕಾರ್ಲ್‌ಮಾರ್ಕ್ಸ್‌ನ ವಾದವನ್ನೂ ಟಾಯ್ನ್‌ಬಿ ಒಪ್ಪುವುದಿಲ್ಲ. ಆಧ್ಯಾತ್ಮಿಕ ಬಲಗಳು ಇತಿಹಾಸವನ್ನು ರೂಪಿಸುತ್ತವೆ ಎಂಬುದು ಇವನ ಅಭಿಪ್ರಾಯ.

ಇವನ ಇತರ ಕೃತಿಗಳು: ಗ್ರೀಕ್ ಹಿಸ್ಟಾರಿಕಲ್ ಥಾಟ್ ಅಂಡ್ ಗ್ರೀಕ್ ಸಿವಿಲೈಜೇಷನ್ ಅಂಡ್ ಕ್ಯಾರೆಕ್ಟರ್ (1924), ಸಿವಿಲೈಜೇಷನ್ ಆನ್ ಟ್ರೈಯಲ್ (1948), ಎನ್ ಹಿಸ್ಟೋರಿಯನ್ಸ್ ಅಪ್ರೋಚ್ ಟು ರಿಲಿಜನ್ (1956), ಈಸ್ಟ್ ಟು ವೆಸ್ಟ್ : ಎ ಜರ್ನಿ ರೌಂಡ್ ದಿ ವರ್ಲ್ಡ್ (1958), ಹೆಲೆನಿಸಂ: ದಿ ಹಿಸ್ಟೊರಿ ಆಫ್ ಎ ಸಿವಿಲೈಸೇಷನ್ (1959). ಈತ 1975 ಅಕ್ಟೋಬರ್ 22 ರಂದು ನಿಧನನಾದ. (ಕೆ.ಟಿ.ಆರ್.)

**ಟಾಲಮಿ ದೊರೆಗಳು:** ಪ್ರ.ಶ.ಪೂ.232–ಪ್ರ.ಶ.ಪೂ.30ರ ವರೆಗೆ ಈಜಿಪ್ಟನ್ನು ಆಳಿದ ಮ್ಯಾಸಿಡೋನಿಯನ್ ದೊರೆಗಳು.

**ಟಾಲಮಿ I:** ಈ ಸಂತತಿಯ ಸ್ಥಾಪಕ. ಲಾಗಸನ ಪುತ್ರ. ಅಲೆಕ್ಸಾಂಡರ್ ನಿಷ್ಠೆಯ ದಂಡನಾಯಕ, ಅವನ ಏಳು ಜನ ಪ್ರಮುಖ ಅಂಗರಕ್ಷಕರಲ್ಲೊಬ್ಬ. ಅಲೆಕ್ಸಾಂಡರನ ಭಾರತ ಮತ್ತು ಆಫ್ಘಾನಿಸ್ತಾನಗಳ ಧಾಳಿಗಳಲ್ಲಿ ಈತ ಪ್ರಮುಖ ಪಾತ್ರವಹಿಸಿದ್ದ. ಸೂಸದಲ್ಲಿ ನಡೆದ ಮದುವೆ ಸಮಾರಂಭದಲ್ಲಿ (ಪ್ರ.ಶ.ಪೂ.324) ಅಲೆಕ್ಸಾಂಡರನ ಒತ್ತಾಯಕ್ಕೆ ಕಟ್ಟುಬಿದ್ದು ಪರ್ಷಿಯದ ರಾಜಕುಮಾರಿ ಆರ್ತಕಾಮಳನ್ನು ವಿವಾಹವಾದ.

ಪ್ರ.ಶ.ಪೂ.323 ರಲ್ಲಿ ಅಲೆಕ್ಸಾಂಡರ್ ನಿಧನನಾದಾಗ ಬ್ಯಾಬಿಲೋನಿನ ಸಾಮ್ರಾಜ್ಯದ ಮರು ಸ್ಥಾಪನೆಗೆ ಟಾಲಮಿ I ಬಹುವಾಗಿ ಶ್ರಮಿಸಿದ. ಅನಂತರ ಹೆಸರಿಗೆ ಮಾತ್ರ ರಾಜನಾಗಿದ್ದ ಫಿಲಿಪ್ ಮತ್ತು ಯುವಕ ಅಲೆಕ್ಸಾಂಡರನ ಕಾಲದಲ್ಲಿ ಈತ ಈಜಿಪ್ಟಿನ ಸತ್ರಪ ಆಗಿ ನೇಮಕಗೊಂಡ. ಅಧಿಕಾರಕ್ಕೆ ಬಂದಕೂಡಲೆ ಅಲೆಕ್ಸಾಂಡರನಿಂದ ಈಜಿಪ್ಟಿನಲ್ಲಿ ಹಣಕಾಸಿನ ನಿಯಂತ್ರಣಾಧಿಕಾರಿಯಾಗಿ ನೇಮಕನಾದ. ಹಣಕಾಸಿನ ನಿಯಂತ್ರಣಾಧಿಕಾರಿಯಾಗಿ ನೇಮಿಸಲ್ಪಟ್ಟಿದ್ದ ಕ್ಲಿಯಾಮಿನೀಸನನ್ನು ಕೊಲ್ಲಿಸಿ ಆ ಪ್ರಾಂತದಲ್ಲಿ ಪ್ರಾಮುಖ್ಯಕ್ಕೆ ಬಂದ. ಸಂಚುಹೂಡಿ ಅಲೆಕ್ಸಾಂಡರನ ಶವವನ್ನು ಪಡೆದು ಅದನ್ನು ತಾತ್ಕಾಲಿಕವಾಗಿ ಮೆಂಫಿಸ್‌ನಲ್ಲಿರಿಸಿದ್ದ. ಇದರಿಂದ ಟಾಲಮಿಗೂ ಸಾಮ್ರಾಜ್ಯದ ರೀಜೆಂಟನಾದ ಪರ್ಡಿಕ್ಯಾಸನಿಗೂ ಕಲಹವುಂಟಾಯಿತು. ಪರ್ಡಿಕ್ಯಾಸ್ 321ರಲ್ಲಿ ಈಜಿಪ್ಟಿನ ಮೇಲೆ ಧಾಳಿ ಮಾಡಿದಾಗ ಯುದ್ಧದಲ್ಲಿ ಮರಣವನ್ನಪ್ಪಿದ.

ಮ್ಯಾಸಿಡೋನಿಯನ್ ದೊರೆಗಳೊಡನೆ ಆರಂಭವಾದ ದೀರ್ಘಕಾಲದ ಯುದ್ಧಗಳ ಕಾಲದಲ್ಲಿ ಈಜಿಪ್ಟ್‌ನಲ್ಲಿ ತನ್ನ ಸ್ಥಾನವನ್ನು ಭದ್ರಗೊಳಿಸಿಕೊಳ್ಳುವುದು ಟಾಲಮಿಯ ಪ್ರಥಮ ಉದ್ದೇಶವಾಗಿತ್ತು. ಸಿರನೇಕ, ಸೈಪ್ರಸ್ ಮತ್ತು ಪ್ಯಾಲಸ್ತೀನ್‌ಗಳನ್ನು ವಶಪಡಿಸಿಕೊಳ್ಳುವುದು ಅವನ ಎರಡನೆಯ ಉದ್ದೇಶ. ಪ್ರ.ಶ.ಪೂ.318ರಲ್ಲಿ ಪ್ಯಾಲಸ್ತೀನನ್ನು ಪ್ರಥಮ ಬಾರಿ ವಶಪಡಿಸಿಕೊಂಡ. ಅನಂತರ ಸೈಪ್ರಸಿನ ಸಣ್ಣ ರಾಜರುಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದ. ಆಂಟಿಗೋನಸ್‌ನ ಪ್ರಾಬಲ್ಯದಿಂದಾಗಿ ಪ್ಯಾಲಸ್ಟೈನನ್ನು ಮೂರು ಸಲ ತೆರವು ಮಾಡಿ ಆಂಟಿಗೋನಸನನ್ನು ಸೋಲಿಸಿದ (ಪ್ರ.ಶ.ಪೂ.306–5). ಡೆಮೆಟ್ರಿಯಸನ ಧಾಳಿಗೆ ಒಳಗಾದ ರೋಡಿಯನ್ನರಿಗೆ ಸಹಾಯ ಮಾಡಿದುದರಿಂದ ಸೋಟರ್ (ರಕ್ಷಕ) ಎಂಬ ಬಿರುದು ಪಡೆದ. ಆಂಟಿಗೋನಸನ ಮರಣದ ಅನಂತರ ನಾಲ್ಕನೆಯ ಬಾರಿಗೆ ಪ್ಯಾಲಸ್ತೀನ್ ಯಾರಿಗೆ ಸೇರಬೇಕೆಂಬ ವಿಷಯದಲ್ಲಿ ಮುಂದಿನ 100 ವರ್ಷಗಳ ಕಾಲ ಸೆಲ್ಯೂಕಸನ ಸಂತತಿಯವರಿಗೂ ಟಾಲಮಿಯ ಸಂತತಿಯವರಿಗೂ ಕಲಹಗಳುಂಟಾದುವು.

ಟಾಲಮಿ ಗ್ರೀಕ್ ಹಾಗೂ ಮ್ಯಾಸಿಡೋನಿಯನರಿಬ್ಬರನ್ನೂ ತನ್ನ ಸೈನ್ಯಕ್ಕೆ ಸೇರಿಸಿಕೊಂಡ. ಆದರೆ ಸ್ಥಳೀಯ ಜನರನ್ನು ಕಡೆಗಾಣಿಸಲಿಲ್ಲ. ಸಾಹಿತ್ಯಕ್ಕೆ ಉತ್ತೇಜನ ನೀಡಿದ. ಅಲೆಕ್ಸಾಂಡರನ ದಂಡಯಾತ್ರೆಗಳನ್ನು ಕುರಿತು ಸ್ವತಃ ಬರೆದ. ಅಲೆಕ್ಸಾಂಡ್ರಿಯದ ಪ್ರಸಿದ್ಧ ಗ್ರಂಥಾಲಯದ ಪ್ರಾರಂಭಕ್ಕೆ ಈತನೇ ಕಾರಣ.

ಪ್ರ.ಶ.ಪೂ.285 ರಲ್ಲಿ ಟಾಲಮಿ ತನ್ನ ಕಿರಿಯ ಪುತ್ರನಿಗಾಗಿ ಸಿಂಹಾಸನ ತ್ಯಜಿಸಿದ. ಅವನೂ ತಂದೆಯ ಹೆಸರಿನಿಂದಲೇ ಸಿಂಹಾಸನವೇರಿದ್ದರಿಂದ ಟಾಲಮಿ II ಎನಿಸಿಕೊಂಡ.

**ಟಾಲಮಿ II (ಫಿಲಡೆಲ್ಫಸ್):** ಆಳಿಕೆ ಪ್ರ.ಶ.ಪೂ.309–246. ಈತ ಹಿಂದಿನ ಮ್ಯಾಸಿಡೋನಿಯನ್ ದಂಡನಾಯಕರಂತೆ ದೃಢಶರೀರದವನಲ್ಲ. ಆದರೂ ಅಲೆಕ್ಸಾಂಡ್ರಿಯದಲ್ಲಿ ವೈಭವಯುತವಾದ ರಾಜಸ್ಥಾನ ನಡೆಸಿಕೊಂಡು ಬಂದ. ಸೆಲ್ಯೂಕಸನ ಮಗ ಒಂದನೆಯ ಆಂಟಿಯೋಕಸ್ ಪ್ಯಾಲಸ್ತೀನ್ ಪಡೆಯಲು ಈತನ ಮೇಲೆ ಯುದ್ಧವನ್ನಾರಂಭಿಸಿದ. ಬಹುಬೇಗ ಪೂರ್ವ ಮೆಡಿಟರೇನಿಯನ್ ಪ್ರದೇಶದಲ್ಲಿ ಈಜಿಪ್ಟ್ ಪ್ರಬಲ ನೌಕಾದಳ ಪಡೆದ ರಾಷ್ಟ್ರವಾಯಿತು. ಟಾಲಮಿಯ ಪ್ರಭಾವ ಹಲವು ಪ್ರದೇಶಗಳಲ್ಲಿ ಹರಡಿತು.

ಮ್ಯಾಸಿಡೋನಿಯನ್ ರಾಜ ಆಂಟಿಗೋನಸ್ ಈತನನ್ನು ಸೋಲಿಸಿದ. ಈ ಸೋಲು ಈಜಿಯನ್ ಸಮುದ್ರದ ಮೇಲೆ ಟಾಲಮಿ ಹೊಂದಿದ್ದ ಪ್ರಭಾವವನ್ನೇನೂ ಕಡಿಮೆಗೊಳಿಸಲಿಲ್ಲ. ಸೆಲ್ಯೂಸಿಡ್ ರಾಜ್ಯದೊಡನೆ ನಡೆದ ಎರಡನೆಯ ಯುದ್ಧದಲ್ಲಿ ಟಾಲಮಿ ಸೋಲನ್ನನುಭವಿಸಿ ಅಲ್ಲಿಯ ರಾಜ ಎರಡನೆಯ ಆಂಟಿಯೋಕಸನಿಗೆ ತನ್ನ ಪುತ್ರಿಯನ್ನು ವಿವಾಹ ಮಾಡಿಕೊಟ್ಟು ಒಪ್ಪಂದ ಮಾಡಿಕೊಳ್ಳಬೇಕಾಯಿತು. ಅಲೆಕ್ಸಾಂಡ್ರಿಯದಲ್ಲಿಯ ರಾಜಾಸ್ಥಾನದ ವೈಭವ ಟಾಲಮಿ IIರ ಕಾಲದಲ್ಲಿ ಬಹಳ ಪ್ರಸಿದ್ಧವಾಗಿತ್ತು. ಈತನ ಕಾಲದಲ್ಲಿ ಸಾಹಿತ್ಯಕ್ಕೆ ತುಂಬ ಉತ್ತೇಜನ ದೊರಕಿತು. ಈತನ ಕಾಲದಲ್ಲಿಯೇ ಪ್ರಸಿದ್ಧ ಗ್ರೀಕ್ ವಿದ್ವಾಂಸ ಕಲಿಮಕಸ್ ಅಲೆಕ್ಸಾಂಡ್ರಿಯ ಗ್ರಂಥಾಲಯದ ಗ್ರಂಥಪಾಲಕನಾದದ್ದು. ಥಿಯಾಕ್ರಿಟಸ್ ಮತ್ತಿತರ ಕವಿಗಳು ಟಾಲಮಿ ಸಂತತಿಯವರನ್ನು ಕೊಂಡಾಡಿದರು. ಸ್ವತಃ ಟಾಲಮಿ ಗ್ರಂಥಭಂಡಾರವನ್ನು ಬೆಳೆಸಿ ವೈಜ್ಞಾನಿಕ ಸಂಶೋಧನೆಗಳು ನಡೆಯಲು ಅವಕಾಶ ಮಾಡಿಕೊಟ್ಟ. ವಿವಿಧ ಪ್ರದೇಶಗಳಿಂದ ಪ್ರಾಣಿಗಳನ್ನು ತರಿಸಿ ಅಲೆಕ್ಸಾಂಡ್ರಿಯದಲ್ಲಿರಿಸಿದ್ದ. ಆದರೆ ಸ್ಥಳೀಯ ಧರ್ಮದಲ್ಲಿ ಆಸಕ್ತಿ ತೋರಲಿಲ್ಲ. ಈತ ಹಳೆಯ ಒಡಂಬಡಿಕೆಯನ್ನು ಗ್ರೀಕ್ ಭಾಷೆಗೆ ಅನುವಾದಿಸಿದ.

**ಟಾಲಮಿ III (ಅಯೂರ್ ಜೆಟೀಜ್ 1):** ಆಳಿಕೆ ಪ್ರ.ಶ.ಪೂ.246–221. ಇವನು ಎರಡನೆಯ ಟಾಲಮಿಯ ಪುತ್ರ. ಇವನು ಮ್ಯಾಗಾಸನ ಪುತ್ರಿ ಬೆರಿನೆರೀಳನ್ನು ಮದುವೆಯಾಗಿ ಅವಳಿಗೆ ಸೇರಿದ ಸಿರನೇಕವನ್ನು ಈಜಿಪ್ಟಿನಲ್ಲಿ ಸೇರಿಸಿದ. ಇದೇ ವೇಳೆಯಲ್ಲಿ ಸೆಲ್ಯೂಸಿಡ್ ಸಾಮ್ರಾಜ್ಯದ ರಾಜ ಎರಡನೆಯ ಆಂಟಿಯೋಕಸ್ ತೀರಿಕೊಂಡ. ಈ ಅವಕಾಶವನ್ನು ಪಯೋಗಿಸಿಕೊಂಡು ಅದರ ಮೇಲೆ ಧಾಳಿಮಾಡಿ ಬ್ಯಾಬಿಲೋನಿಯದವರೆಗೂ ನುಗ್ಗಿದ, ಇರಾನಿನ ಸಣ್ಣಪುಟ್ಟ ಸಂಸ್ಥಾನಗಳ ಶರಣಾಗತಿಯನ್ನು ಒಪ್ಪಿಕೊಂಡ. ಈತನ ನೌಕಾಪಡೆ ಈಜಿಯನ್ ಸಮುದ್ರ ಪ್ರದೇಶದಲ್ಲಿ ಈತನ ತಂದೆ ಕಳೆದುಕೊಂಡಿದ್ದ ಪ್ರದೇಶಗಳನ್ನು ಮತ್ತೆ ಪಡೆದು ತನ್ನ ಹಿಂದಿನ ಪ್ರಾಬಲ್ಯವನ್ನು ಗಳಿಸಿತು. ಅನಂತರದ ಕಾಲದಲ್ಲಿ ಟಾಲಮಿ ಹೆಚ್ಚಾಗಿ ಯುದ್ಧಗಳಲ್ಲಿ ಭಾಗವಹಿಸಲಿಲ್ಲ.

**ಟಾಲಮಿ IV (ಫಿಲಾಪಟಾರ್):** ಆಳಿಕೆ ಪ್ರ.ಶ.ಪೂ.221–204. ಮೂರನೆಯ ಟಾಲಮಿಯ ಮಗ. ವ್ಯಭಿಚಾರಿಯಾದ ಈತನ ಕಾಲದಲ್ಲಿ ಸಾಮ್ರಾಜ್ಯದ ಅವನತಿ ಪ್ರಾರಂಭವಾಯಿತು. ಈತ ತುಂಬ ಅಶಕ್ತ ರಾಜ. ಯಾವಾಗಲೂ ಸ್ನೇಹಿತರ ಪ್ರಭಾವಕ್ಕೆ ಒಳಗಾಗಿ ದೇಶವನ್ನು ಯುದ್ಧದಲ್ಲಿ ತೊಡಗಿಸಿದ. ಇದರಿಂದಾಗಿ ಮುಂದಿನ 30 ವರ್ಷಗಳ ಕಾಲ ಒಂದೇ ಸಮನೆ ದಂಗೆಗಳಿಗೆಡೆಯಾಯಿತು. ಸಾಹಿತಿಯಾಗಿದ್ದ ಈತ ಒಂದು ಗಂಭೀರ ನಾಟಕವನ್ನು ಬರೆದಿದ್ದಾನೆ. ಇವನು ಹೋಮರನಿಗೆ ಒಂದು ದೇವಸ್ಥಾನ ಕಟ್ಟಿಸಿದ.

**ಟಾಲಮಿ V (ಎಪಿಫನೀಸ್):** ಆಳಿಕೆ ಪ್ರ.ಶ.ಪೂ.204–181. ನಾಲ್ಕನೆಯ ಟಾಲಮಿಯ ಮಗ. ತುಂಬ ಚಿಕ್ಕ ವಯಸ್ಸಿನಲ್ಲಿಯೇ ಸಿಂಹಾಸನವೇರಿದ. ಈತನ ಪರವಾಗಿ ಆಡಳಿತ ನಡೆಸಿದ ರಾಜಪ್ರತಿನಿಧಿಗಳು ದೇಶದ ಸ್ಥಿತಿಯನ್ನು ಹದಗೆಡಿಸಿದರು. ಮೂರನೆಯ ಆಂಟಿಯೋಕಸ್ ಮತ್ತು ಮ್ಯಾಸಿಡೋನಿಯದ ಐದನೆಯ ಫಿಲಿಪ್ ಇವರು ಟಾಲಮಿಯ ಹೊರದೇಶದ ಸ್ವತ್ತುಗಳನ್ನು ತಮ್ಮಲ್ಲಿ ಹಂಚಿಕೊಳ್ಳುವ ಒಂದು ಒಪ್ಪಂದ ಮಾಡಿಕೊಂಡರು. ಕ್ಯಾರೀಯ ಮತ್ತು ತ್ರೇಸ್‍ನಲ್ಲಿ ಅನೇಕ ಪ್ರದೇಶಗಳನ್ನು ಫಿಲಿಪ್ ವಶಪಡಿಸಿಕೊಂಡ. ಪ್ಯಾಲಸ್ತೀನ್ ಸೆಲ್ಯೂಸಿಡರಿಗೆ ಹೋಯಿತು. ಕೊನೆಗೆ ಆಂಟಿಯೋಕಸ್ ಟಾಲಮಿಗೆ ತನ್ನ ಪುತ್ರಿ ಕ್ಲೀಯೊಪಾತ್ರಳನ್ನು ವಿವಾಹ ಮಾಡಿಕೊಟ್ಟು ಶಾಂತಿ ಒಪ್ಪಂದ ಮಾಡಿಕೊಂಡ. ಆದರೂ ಆಂಟಿಯೋಕಸ್ ರೋಮಿನೊಡನೆ ಯುದ್ಧಕ್ಕಿಳಿದಾಗ ಟಾಲಮಿ ರೋಮಿನವರ ಪಕ್ಷ ವಹಿಸಿದ. ಟಾಲಮಿ ಒಳ್ಳೆಯ ಕ್ರೀಡಾಪಟುವಾಗಿದ್ದು ಅನೇಕ ಪಂದ್ಯಗಳಲ್ಲಿ ಪ್ರಾವೀಣ್ಯ ಗಳಿಸಿದ್ದ. ಈತ ಈಜಿಪ್ಟಿನ ದುಃಸ್ಥಿತಿಯನ್ನು ಹೋಗಲಾಡಿಸಲು ಅನೇಕ ಸುಧಾರಣೆಗಳನ್ನು ಜಾರಿಗೆ ತಂದಂತೆ ತೋರುತ್ತದೆ. ಈ ವಿಷಯ ಜಗತ್ಪ್ರಸಿದ್ಧ ರೋಸೆಟ ಶಾಸನಫಲಕದಲ್ಲಿ ನಿರೂಪಿತವಾಗಿದೆ. ಆದರೆ ಈತನ ಪ್ರಯತ್ನಗಳು ಸಫಲವಾದಂತೆ ತೋರುವುದಿಲ್ಲ.

**ಟಾಲಮಿ VI (ಫಿಲಾಮೀಟಾರ್):** ಆಳಿಕೆ ಪ್ರ.ಶ.ಪೂ.181–145. ಐದನೆಯ ಟಾಲಮಿಯ ಹಿರಿಯ ಮಗ. ಚಿಕ್ಕವಯಸ್ಸಿನಲ್ಲಿಯೇ ರಾಜನಾದ. ಸ್ವಂತ ಸಹೋದರಿ 2ನೆಯ ಕ್ಲಿಯೊಪಾತ್ರಳನ್ನು ಮದುವೆಯಾದ. ತಾಯಿ ಕ್ಲಿಯೊಪಾತ್ರಳೇ ರಾಜಪ್ರತಿನಿಧಿಯಾಗಿ ಆಳಿಕೆ ಪ್ರಾರಂಭಿಸಿದಳು. ಅವಳ ಮರಣದ ಅನಂತರ ಟಾಲಮಿ ಮತ್ತು ಸೆಲ್ಯೂಸಿಡ್ ಸಂತತಿಯವರ ನಡುವೆ ವೈಮನಸ್ಯ ಆರಂಭವಾಯಿತು. ತನ್ನ ತಮ್ಮ ಅಯೂರ್‌ಜೆವೇಜ಼್ ಸಿರನೇಕಕ್ಕೆ ರಾಜನಾಗಲು ಈತ ಸಹಾಯ ಮಾಡಿದ. ಸೆಲ್ಯೂಸಿಡ್ ರಾಜ ಡೆಮೆಟ್ರಿಯಸನ ವಿರುದ್ಧ ಸಂಯುಕ್ತ ಪಕ್ಷವನ್ನು ಸೇರಿ ಅವರ ನಾಶಕ್ಕೆ ಟಾಲಮಿ ಕಾರಣನಾದ. ಸೆಲ್ಯೂಸಿಡ್ ದೊರೆ ನಾಲ್ಕನೆಯ ಆಂಟಿಯೋಕಸ್ ಪ್ಯಾಲಸ್ತೀನನ್ನು ಪಡೆಯಲು ಟಾಲಮಿಯೊಂದಿಗೆ ಯುದ್ಧಮಾಡಿ ಅವನನ್ನು ಸೋಲಿಸಿ ಬಂಧಿಸಿದ. ಆದರೆ ರೋಮ್ ಸಾಮ್ರಾಜ್ಯದ ಮಧ್ಯಸ್ಥಿಕೆಯಿಂದ ತನ್ನ ಸೋದರ ಅಯೂರ್ ಜೆವೇಜ಼್‌ನೊಡನೆ (ಟಾಲಮಿ VIII) ಜಂಟಿ ರಾಜನಾಗಿ ಮತ್ತೆ ಸಿಂಹಾಸನವೇರಿದ. ಆದರೆ ಬಹುಬೇಗ ಸಹೋದರರಲ್ಲಿ ಕಲಹ ಪ್ರಾರಂಭವಾಯಿತು. ರೋಮ್ ಮಧ್ಯಸ್ಥಿಕೆ ವಹಿಸಿ ಅಯೂರ್‌ಜೆವೇಜ಼್‌ನಿಗೆ ಸಿರನೇಕವನ್ನು ಪ್ರತ್ಯೇಕ ರಾಜ್ಯವಾಗಿ ಒಪ್ಪಿಸಿತು. ಆದರೂ ಸಹೋದರರ ಮಧ್ಯೆ ಆಗಾಗ ಕದನಗಳು ಆಗುತ್ತಲೇ ಇದ್ದವು. ಪ್ರ.ಶ.ಪೂ. 145ರಲ್ಲಿ ಆಂಟಿಯೋಕಸ್ ಸಮೀಪದಲ್ಲಿ ಅಲೆಕ್ಸಾಂಡರ್ ಬಲಾಸನೊಡನೆ ಯುದ್ಧ ಮಾಡುತ್ತಿದ್ದಾಗ ಗಾಯಗೊಂಡು ಮರಣಹೊಂದಿದ.

ಫಿಲಾಮೀಟಾರ್ ಟಾಲಮಿ ಈ ವಂಶದಲ್ಲೇ ಅತ್ಯುತ್ತಮ ರಾಜನೆಂದು ಹೇಳಬಹುದು. ಬಹುಪಾಲು ಯುದ್ಧಗಳಲ್ಲಿ ಈತ ಸ್ವತಃ ಭಾಗವಹಿಸುತ್ತಿದ್ದ. ಈತನ ಮರಣಾನಂತರ ಇವನ ಶಿಶುಕುವರನನ್ನು (ಟಾಲಮಿ VII) ಸಿಂಹಾಸನಕ್ಕೆ ತರಲಾಯಿತು. ಆದರೆ ಅಯೂರ್‌ಜೆವೇಜ಼್ ಅವನನ್ನು ಕೊಂದು ಪಟ್ಟಕ್ಕೆ ಬಂದ.

**ಟಾಲಮಿ VIII (ಅಯೂರ್ ಜೆವೇಜ಼್ 2):** ಆಳಿಕೆ ಪ್ರ.ಶ.ಪೂ. 144–116. ಪಟ್ಟವೇರಿದ ಕೂಡಲೆ ತನ್ನ ಸೋದರಿಯೂ ಅಣ್ಣನ ವಿಧವೆಯೂ ಆದ 2ನೆಯ ಕ್ಲಿಯೊಪಾತ್ರಳನ್ನು ಮದುವೆಯಾದ. ಅನಂತರ ಸೋದರಿಯ ಮಗಳು 3ನೆಯ ಕ್ಲಿಯೊಪಾತ್ರಳನ್ನು ಮದುವೆಯಾದ. ಈ ಮದುವೆಯಿಂದಾಗಿ ಎರಡನೆಯ ಕ್ಲಿಯೊಪಾತ್ರ ದಂಗೆಯೆದ್ದು ಅಯೂರ್ ಜೆವೇಜ಼ನನ್ನು ಈಜಿಪ್ಟಿನಿಂದ ಓಡಿಸಿದಳು. ಪ್ರ.ಶ.ಪೂ. 131–129ರ ಅವಧಿಯಲ್ಲಿ ಈತ ಸೈಪ್ರಸ್‍ನಲ್ಲಿ ಆಳಿದ, ಅನಂತರ ಈಜಿಪ್ಟಿಗೆ ಹಿಂದಿರುಗಿ ಮತ್ತೆ ಸಿಂಹಾಸನವೇರಿದ. ತುಂಬ ಕ್ರೂರಿಯಾಗಿದ್ದ ಈತ ರಕ್ತಪಾತಕ್ಕೆ ಎಂದೂ ಹೇಸಲಿಲ್ಲ. ಗ್ರೀಕರು ಈತನನ್ನು ಅಷ್ಟಾಗಿ ಮನ್ನಿಸಿದಂತೆ ತೋರುವುದಿಲ್ಲ. ಆದರೆ ದೇಶೀಯ ಜನರ ಬೆಂಬಲ ಈತನಿಗಿತ್ತು. ಈತ ಗ್ರೀಕ್ ಸಂಸ್ಕೃತಿಯನ್ನು ಪೋಷಿಸಿದ. ಅಲೆಕ್ಸಾಂಡ್ರಿಯ ಗ್ರಂಥಾಲಯವನ್ನು ವಿಸ್ತರಿಸಿದ. ಈತ ತನ್ನ ಪ್ರವಾಸಗಳನ್ನು ಕುರಿತು ಒಂದು ಬೃಹತ್ ಗ್ರಂಥವನ್ನು ಬರೆದ. ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದ. ಈತನ ಮರಣಾನಂತರ ಟಾಲಮಿ ಸಾಮ್ರಾಜ್ಯ ಒಡೆದು ಹೋಯಿತು. ಈತ ಸಾಯುವ ಮೊದಲು ಉಯಿಲು ಬರೆದು ಸಿರಿನಿಕವನ್ನು ತನ್ನ ಜಾರಜಪುತ್ರ ಏಪಿಯನಿಗೂ ಈಜಿಪ್ಟ್ ಮತ್ತು ಸೈಪ್ರಸ್‍ಗಳನ್ನು ಹೆಂಡತಿ ಕ್ಲಿಯೊಪಾತ್ರಳಿಗೂ (ಕೋಕೆ) ಹಂಚಿದ.

**ಇತರ ಟಾಲಮಿಗಳು:** 8ನೆಯ ಟಾಲಮಿಯ ಮರಣಾನಂತರ ಟಾಲಮಿ ಸಾಮ್ರಾಜ್ಯ ಏಕತೆಯಿಂದಿರಲಿಲ್ಲ. ಈಜಿಪ್ಟಿನ ಆಳಿಕೆಗಾಗಿ ಕ್ಲಿಯೊಪಾತ್ರಳಿಗೂ ಅವಳ ಮಕ್ಕಳು ಸೋಟರ್ 11 ಮತ್ತು ಅಲೆಕ್ಸಾಂಡರಿಗೂ ನಡುವೆ ಕಲಹಗಳು ಪ್ರಾರಂಭವಾದವು.

ಈಜಿಪ್ಟಿನಲ್ಲಿ ತಾಯಿಯೊಂದಿಗೆ ಮೊದಲು ಸೋಟರ್ ಆಳಿಕೆ ಪ್ರಾರಂಭಿಸಿದ. ಆದರೆ 108ರಲ್ಲಿ ತಾಯಿಮಕ್ಕಳಲ್ಲಿ ವೈಮನಸ್ಯ ಬೆಳೆದು ಸೋಟರ್ ರಾಜ್ಯ ಬಿಟ್ಟು ಸೈಪ್ರಸ್‍ನಲ್ಲಿ ಆಳತೊಡಗಿದ. ಅನಂತರ ಪಟ್ಟಕ್ಕೆ ಬಂದ. ಟಾಲಮಿ ಅಲೆಕ್ಸಾಂಡರನೊಬ್ಬನೇ ಪ್ರ.ಶ.ಪೂ. 89ರವರೆಗೆ ಈಜಿಪ್ಟನ್ನು ಆಳಿದ. ಪ್ರ.ಶ.ಪೂ.89ರಲ್ಲಿ ಜನರು ದಂಗೆಯೆದ್ದು ಅವನನ್ನು ಓಡಿಸಿದರು. ಸೋಟರ್ ಪ್ರ.ಶ.ಪೂ. 88 ರಲ್ಲಿ ಹಿಂದಕ್ಕೆ ಬಂದು ಈಜಿಪ್ಟ್ ಮತ್ತು ಸೈಪ್ರಸ್‍ಗಳನ್ನು ಒಟ್ಟುಗೂಡಿಸಿ ಆಳಿದ. ಅವನ ಎರಡನೆಯ ಆಳಿಕೆಯ ಅನಂತರ ಅವನ ಮಗಳು ಬೆರೆನೀಸ್ ಅಧಿಕಾರ ವಹಿಸಿಕೊಂಡಳು. ರೋಮನ್ ಚಕ್ರಾಧಿಪತ್ಯದ ಬೆಂಬಲ ಪಡೆದ 1ನೆಯ ಅಲೆಕ್ಸಾಂಡರನ ಪುತ್ರ 2ನೆಯ ಅಲೆಕ್ಸಾಂಡರ್ ಅಲೆಕ್ಸಾಂಡ್ರಿಯಕ್ಕೆ ಬಂದು ತನ್ನ ಸೋದರ ಸಂಬಂಧಿಯೂ ಮಲತಾಯಿಯೂ ಆದ ಬೆರೆನೀಸಳನ್ನು ಮದುವೆಯಾಗಿ ಹತ್ತನೆಯ ಟಾಲಮಿ ಎಂದು ಪಟ್ಟಕ್ಕೆ ಬಂದ. ಪಟ್ಟಕ್ಕೆ ಬಂದ ಕೇವಲ ಇಪ್ಪತ್ತು ದಿನಗಳಲ್ಲಿಯೇ ಹೆಂಡತಿಯನ್ನು ಕೊಂದ. ಇದರಿಂದ ಜನ ಕುಪಿತರಾಗಿ ಇವನನ್ನು ಕೊಂದುಹಾಕಿದರು.

ಅಲೆಕ್ಸಾಂಡ್ರಿಯದ ಜನ ಸೋಟರನ ಜಾರಜ ಪುತ್ರ ಎರಡನೆಯ ಸೋಟರನನ್ನು ರಾಜನಾಗಿ ಆರಿಸಿಕೊಂಡರು. ಈತ 11ನೆಯ ಟಾಲಮಿಯೆಂದು ಪಟ್ಟವೇರಿದ. ಈತನ ಹಕ್ಕು ಸ್ಥಿರವಾಗಿರಲಿಲ್ಲ. ಇವನ ಅನಂತರ 12ನೆಯ ಟಾಲಮಿ ಫಿಲಾಪಟಾರ್ (51–47) ಮತ್ತು ಕ್ಲಿಯೊಪಾತ್ರ ಫಿಲಾಪಟಾರರ ಕಾಲದಲ್ಲಿ ಈಜಿಪ್ಟಿನ ಇತಿಹಾಸ ರೋಮನ್ ಚಕ್ರಾಧಿಪತ್ಯದ ಇತಿಹಾಸದೊಡನೆ ಸೇರಿಹೋಗುತ್ತದೆ. ಪ್ರ.ಶ.ಪೂ. 44ರವರೆಗೆ 13ನೆಯ ಟಾಲಮಿ ಮತ್ತು 30ರವರೆಗೆ 14ನೆಯ ಟಾಲಮಿ ಆಳಿದರೆಂದು ತಿಳಿದುಬರುತ್ತದೆ. (ವಿ.ಕೆ.)

**ಟಾಲ್ಮುಡ್:** ಯಹೂದ್ಯರ ಧರ್ಮಗ್ರಂಥ. ಹೀಬ್ರು ಭಾಷೆಯಲ್ಲಿ ಈ ಪದಕ್ಕೆ ಪಾಂಡಿತ್ಯ ಎಂದು ಅರ್ಥ. ಇದರಲ್ಲಿ ಯಹೂದಿ ಜನರ ಸಾಮಾಜಿಕ ಮತ್ತು ಮತೀಯ ಕಟ್ಟುಕಟ್ಟಲೆಗಳನ್ನು ನಿರೂಪಿಸಲಾಗಿದೆ. ವಾಚಿಕವಾಗಿ ತಲೆಮಾರಿನಿಂದ ತಲೆಮಾರಿಗೆ ನಡೆದು ಬಂದಿರುವ ನೀತಿಧರ್ಮಗಳನ್ನು ಟಾಲ್ಮುಡ್ ಒಳಗೊಂಡಿದೆ. ಮಿಷ್ನ ಎಂಬುದು ಟಾಲ್ಮುಡಿನ ಒಂದು ಭಾಗ. ಇದು ಹಿರಿಯರ ಬೋಧನೆಗಳನ್ನು ಒಳಗೊಂಡಿದೆ. ಮಿಷ್ನ ಎಂದರೆ ಪದೇಪದೇ ಹೇಳುವುದು ಎಂದು ಅರ್ಥ. ಈ ಭಾಗದ ರಚನೆ ಪ್ರ.ಶ.ಸು.200ರಲ್ಲಿ ಆಯಿತೆಂದು ಹೇಳಲಾಗಿದೆ. ಮಿಷ್ನ ಭಾಗದ ಮೇಲೆ ಗೆಮ್ಮರ ಎಂಬ ಭಾಷ್ಯವಿದೆ. ಈ ಭಾಷ್ಯಕ್ಕೆ ಎರಡು ಪಾಠಾಂತರಗಳಿವೆ. ಒಂದು ಪ್ಯಾಲಸ್ಟೀನಿನಲ್ಲಿ ಬರೆದಿದ್ದು;ಇದರ ಕಾಲ ಸು.4ನೆಯ ಶತಮಾನ. ಮತ್ತೊಂದು, ಬ್ಯಾಬಿಲೋನಿಯದಲ್ಲಿ ಬರೆದಿದ್ದು; ಇದರ ಕಾಲ ಸು.5ನೆಯ ಶತಮಾನ.

ಟಾಲ್ಮುಡ್ ಗ್ರಂಥ ಪ್ರ.ಶ.3ನೆಯ ಶತಮಾನದಿಂದ ಆರಂಭವಾಗಿ 5ನೆಯ ಶತಮಾನದವರೆಗಿನ ಯಹೂದಿ ಮತತತ್ತ್ವಜ್ಞಾನಿಗಳ, ತಾತ್ತ್ವಿಕ ಪ್ರತಿಕ್ರಿಯೆಗಳನ್ನು ಪ್ರತಿನಿಧಿಸುತ್ತದೆ. ಹಳೆ ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವ ಧರ್ಮದ ಬೆಳವಣಿಗೆಯನ್ನು ಟಾಲ್ಮುಡ್ ಇನ್ನಾವುದೇ ಯಹೂದ್ಯ ಗ್ರಂಥಕ್ಕಿಂತ ಚೆನ್ನಾಗಿ ಪ್ರತಿನಿಧಿಸುತ್ತದೆ; ಕೆಲವು ಮುಖ್ಯ ವಿಷಯಗಳಲ್ಲಂತೂ ಹಳೆ ಒಡಂಬಡಿಕೆಯನ್ನು ಮೀರಿ ಇನ್ನೂ ಮುಂದೆ ಹೋಗುತ್ತದೆ. ಟಾಲ್ಮುಡ್ ಜೀವನಕ್ಕೆ ನೇರವಾಗಿ ಸಂಬಂಧಿಸಿದೆ. ಲೌಕಿಕ ಮತ್ತು ಧಾರ್ಮಿಕ ಭಾವನೆಗಳ ನಡುವೆ ಇದು ಯಾವ ವ್ಯತ್ಯಾಸವನ್ನೂ ಮಾಡುವುದಿಲ್ಲ. ಆದರೂ ಇದು ವಿಧಿ ಸಂಸ್ಕಾರಗಳಿಗೆ ಅನಾವಶ್ಯಕವಾದ ಪ್ರಾಮುಖ್ಯ ಕೊಟ್ಟಿದೆ. ಹೀಗಿದ್ದರೂ ಇದರ ಮಹತ್ತ್ವದ ತತ್ತ್ವಗಳಿಗೆ ಧಕ್ಕೆ ಏನೂ ಒದಗಿಲ್ಲ ಎಂದೇ ಹೇಳಬೇಕು. ಪ್ರತಿಯೊಬ್ಬ ಮಾನವನಲ್ಲೂ ದೇವರಿದ್ದಾನೆ. ಅವನನ್ನು ಪೂಜಾವೇಳೆಗಳಲ್ಲಿ ಮಾತ್ರ ಅಲ್ಲದೆ, ವೇಳೆ ಅವೇಳೆ ಎನ್ನದೆ ಸರ್ವಕಾಲವೂ ಪೂಜಿಸಬೇಕು; ಮನೆಯೇ ಪವಿತ್ರ ದೇಗುಲ–ಎಂದು ಈ ಗ್ರಂಥ ಬೋಧಿಸುತ್ತದೆ. ಟಾಲ್ಮುಡ್‍ನ ಪ್ರಾಮಾಣ್ಯವನ್ನೂ ಮತಸುಧಾರಕರು ಪ್ರಶ್ನಿಸಿದರೂ ಅದರ ಸ್ಫೂರ್ತಿದಾಯಕ ಉಪದೇಶಗಳನ್ನು ನಿರಾಕರಿಸಿಲ್ಲ. ಟಾಲ್ಮುಡ್‍ಗೆ ಆ ಮತದ ಸುಧಾರಕರಿಂದಲೂ ವಿಶೇಷ ಗೌರವ ದೊರೆತಿದೆ. ಜೀವನದ ಗುರಿಯನ್ನು ಸಾಕ್ಷಾತ್ಕರಿಸಿಕೊಳ್ಳಲು, ಮಾನವ ದೇವರ ಮೊರೆಹೋಗಬೇಕೆಂಬುದನ್ನು ಟಾಲ್ಮುಡ್ ಸ್ಪಷ್ಟ ವಾಕ್ಯಗಳಲ್ಲಿ ಹೇಳುತ್ತದೆ.

ಟಾಲ್ಮುಡ್‍ನಲ್ಲಿ ವಿಷಯ ವೈವಿಧ್ಯವಾಗಿದ್ದು, ಮಾನವನ ಪ್ರತಿಯೊಂದು ಚಟುವಟಿಕೆಯನ್ನೂ ಅದು ಚರ್ಚಿಸುತ್ತದೆ. ಅದರ ವ್ಯಾಪ್ತಿ ಬಹಳ ವಿಶಾಲವಾಗಿದೆ. ಅದನ್ನು ಚೆನ್ನಾಗಿ ಓದಿದವನಿಗೆ ಅನೇಕ ಶಾಖೆಗಳ ಜ್ಞಾನ ದೊರೆಯುತ್ತದೆ. ಓದುಗನ ಮನಸ್ಸನ್ನು ತನ್ನ ಕುತೂಹಲಕರ ವಿಷಯಗಳಿಂದ ಸದಾ ಹಿಡಿದು ಇಡುವುದು ಈ ಗ್ರಂಥದ ವಿಶೇಷ ಗುಣ. ಯಹೂದಿಗಳ ಮಾನಸಿಕ ಬೆಳವಣಿಗೆಯ ಮೇಲೆ ಟಾಲ್ಮುಡ್‍ನ ಪ್ರಭಾವ ಅಪಾರ.

ಮೇಲೆ ಹೇಳಿದ ಕಾರಣಗಳಿಂದ ಟಾಲ್ಮುಡ್ ಗ್ರಂಥದ ಶ್ರೇಷ್ಠತೆ ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಮೋಸಸ್ ಮೈಮೊನಿಡೀಸ್ ಮತ್ತು ಜೋಸೆಫ್ ಕ್ಯಾರೋ ಎಂಬ ಪ್ರಸಿದ್ಧ ಯಹೂದಿ ಧರ್ಮಾಧಿಕಾರಿಗಳು ಬಂದ ಮೇಲೂ ಅದು ತನಗೆ ಮೊದಲಿದ್ದ ಗೌರವವನ್ನೇ ಉಳಿಸಿಕೊಂಡಿದೆ.

ಪ್ರತಿಯೊಬ್ಬ ಯಹೂದಿಯೂ ಟಾಲ್ಮುಡ್‍ನ ಭಾಷಾಶೈಲಿ, ಅದರ ಕವಿತಾ ಶಕ್ತಿ, ಹಾಸ್ಯದೃಷ್ಟಿ, ನೀತಿಕತೆಗಳು–ಮುಂತಾದವನ್ನು ಹಾಡಿ ಹರ್ಷಿಸುತ್ತಾನೆ. ಆಧುನಿಕ ಯಹೂದ್ಯ ಧರ್ಮದಲ್ಲಿ ನಾವು ಕಾಣುವ ಅನುಭಾವಿಗಳಿಗೆ ಟಾಲ್ಮುಡೇ ತಾಯಿಬೇರು. ಅದರ ಸುಂದರವಾದ ವಿಷಯಗಳ ಬಗ್ಗೆ ಸಂಪುಟಗಟ್ಟಲೆ ಬರೆದಿದ್ದಾರೆಂದೂ ಇನ್ನೂ ಬರೆಯಬಹುದೆಂದೂ ಯಹೂದಿಗಳು ಬಹು ಹೆಮ್ಮೆಯಿಂದ ಅದರ ವ್ಯಾಪ್ತಿಯನ್ನು ಹೊಗಳುತ್ತಾರೆ.

ಆದರೂ ಟಾಲ್ಮುಡ್ ಗ್ರಂಥ ಧರ್ಮಾಂಧರ ವಕ್ರದೃಷ್ಟಿಯಿಂದ ಬಿಡುಗಡೆ ಪಡೆಯಲಿಲ್ಲ. ಪೋಲೆಂಡಿನಲ್ಲಿ 1757ರಲ್ಲಿ ಟಾಲ್ಮುಡ್‍ನ ಅನೇಕ ನಕಲುಗಳನ್ನು, ಅದು ದೋಷಮಯವಾಗಿದೆ ಎಂಬ ಕಾರಣದಿಂದ ವಿಧ್ಯುಕ್ತವಾಗಿ ಸುಡಲಾಯಿತೆಂದು ತಿಳಿದುಬರುತ್ತದೆ. ಟಾಲ್ಮುಡ್ ಮೇಲಿನ ದೋಷಾರೋಪಣೆಗಳು ಸತ್ಯಕ್ಕೆ ದೂರವೆಂದೂ ಅದರಲ್ಲಿ ದೋಷಗಳಿಗಿಂತ ಗುಣಗಳೇ ವಿಪುಲವೆಂದೂ ಯಹೂದಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. (ಎಸ್.ಎಸ್.ಆರ್.)

**ಟಿಪ್ಪುಸುಲ್ತಾನ್:** 1750–99. ಮೈಸೂರು ಸಂಸ್ಥಾನದ ಪ್ರಖ್ಯಾತ ಸುಲ್ತಾನ (1782–99). ಹೈದರ್ ಅಲಿಯ ಮಗ. 1750 ನವೆಂಬರ್ 10 ರಂದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದ. ಟಿಪ್ಪುಮಸ್ತಾನ್ ಔಲಿಯಾ ಎಂಬ ಸಂತನ ಹೆಸರನ್ನು ಇವನಿಗೆ ಇಡಲಾಯಿತು. ಟಿಪ್ಪು ಬಾಲ್ಯದಿಂದಲೇ ಉತ್ತಮ ವಿದ್ಯಾಭ್ಯಾಸವನ್ನು ಪಡೆದು ತನ್ನ ಕಾಲದ ವಿವಿಧ ರೀತಿಯ ಕಲೆಗಳಲ್ಲಿ, ಪಾಂಡಿತ್ಯದಲ್ಲಿ ಪರಿಶ್ರಮವನ್ನು ಸಾಧಿಸಿದ್ದ. ಬಹು ಚಿಕ್ಕವನಾಗಿದ್ದಾಗಲೇ ತಂದೆಯ ಜೊತೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ. 1763 ರಲ್ಲಿ ಹೈದರ್ ಮಲಬಾರನ್ನು ಮುತ್ತಿದಾಗ ಟಿಪ್ಪು ಅವನೊಡನೆ ಇದ್ದ. ಒಂದನೆಯ ಮೈಸೂರು ಯುದ್ಧದ ಕಾಲದಲ್ಲಿ ಹೈದರಾಬಾದಿನ ನಿಜಾಮನೊಡನೆ ಮಾತುಕತೆಗಳನ್ನು ನಡೆಸಿದ. ನಿಜಾಮ ಇವನಿಗೆ ಫತೆ ಅಲಿ ಖಾನ್ ಎಂಬ ಬಿರುದನ್ನು ನೀಡಿದ. 1769–72 ರಲ್ಲಿ ನಡೆದ ಎರಡನೆಯ ಮೈಸೂರು–ಮರಾಠ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದ. ಅದೇ ರೀತಿ 1780 ರಲ್ಲಿ ಆರಂಭವಾದ ಎರಡನೆಯ ಮೈಸೂರು ಯುದ್ಧದಲ್ಲೂ ಪ್ರಧಾನ ಪಾತ್ರ ವಹಿಸಿದ. ಸೆಪ್ಟೆಂಬರ್ 1780ರಲ್ಲಿ ಪೊಳ್ಳಿಲೂರ್ ರಣರಂಗದಲ್ಲಿ ಕರ್ನಲ್ ಬೇಲಿಯನ್ನು, ಫೆಬ್ರವರಿ 1782ರಲ್ಲಿ ಅನ್ನಗುಡಿ ಕದನದಲ್ಲಿ ಕರ್ನಲ್ ಬ್ರೈತ್‍ವೈಟ್‍ನನ್ನು ಸೋಲಿಸಿ ಹಿಮ್ಮೆಟ್ಟಿಸಿದಾಗ ಟಿಪ್ಪುವಿನ ಸಾಮರ್ಥ್ಯ ಪ್ರಕಾಶಕ್ಕೆ ಬಂತು.

ಎರಡನೆಯ ಮೈಸೂರು ಯುದ್ಧ ಸಾಗುತ್ತಿದ್ದ ಕಾಲದಲ್ಲೇ ಡಿಸೆಂಬರ್ 1782ರಲ್ಲಿ ಹೈದರ್ ಮರಣ ಹೊಂದಲಾಗಿ ಟಿಪ್ಪು ಅಧಿಕಾರಕ್ಕೆ ಬಂದ. ಉತ್ತರದಲ್ಲಿ ಕೃಷ್ಣಾನದಿಯಿಂದ ದಕ್ಷಿಣದ ದಿಂಡಿಗಲ್ಲಿನವರೆಗೂ ಪಶ್ಚಿಮದಲ್ಲಿ ಮಲಬಾರಿನಿಂದ ಪೂರ್ವಘಟ್ಟ ಪ್ರದೇಶಗಳವರೆಗೂ ವಿಸ್ತಾರವಾಗಿದ್ದು, ಒಂದು ಲಕ್ಷ ಚದರ ಮೈಲಿಗಳಿಗೂ ಹೆಚ್ಚು ವಿಸ್ತೀರ್ಣವನ್ನು ಪಡೆದಿದ್ದ ಸಾಮ್ರಾಜ್ಯಕ್ಕೆ ಟಿಪ್ಪು ಉತ್ತರಾಧಿಕಾರಿಯಾದ. 1784 ರಲ್ಲಿ ಬ್ರಿಟಿಷರನ್ನು ಸೋಲಿಸಿ 1784 ಮಾರ್ಚ್ 11 ರಂದು ಮಂಗಳೂರು ಒಪ್ಪಂದಕ್ಕೆ ಸಹಿ ಹಾಕಿಸಿದ. ಬ್ರಿಟಿಷ್ ಇತಿಹಾಸದಲ್ಲೇ ಪ್ರಸಿದ್ಧವಾದ ಹಾಗೂ ಪ್ರಮುಖವಾದ ದಾಖಲೆಯಾಗಿರುವ ಈ ಒಪ್ಪಂದ ಇಂಗ್ಲಿಷರಿಗೆ ಎಷ್ಟರಮಟ್ಟಿಗೆ ನಿರಾಶೆಯನ್ನು ಉಂಟುಮಾಡಿತೆಂದರೆ, ಹೇಸ್ಟಿಂಗ್ಸ್ ಅದನ್ನು ಒಂದು ಅವಮಾನಕರವಾದ ಶಾಂತಿ ಒಪ್ಪಂದ ಎಂದು ಕರೆದ. ಯಾವ ಷರತ್ತಿನ ಮೇಲಾದರೂ ಶಾಂತಿಗೆ ಬರಲು ಒಪ್ಪಿಕೊಳ್ಳಬೇಕಾಗಿ ಬಂದ ಈ ಒಪ್ಪಂದ ಬ್ರಿಟಿಷರ ಪ್ರತಿಷ್ಠೆಗೆ ಕೊಡಲಿಪೆಟ್ಟನ್ನು ಕೊಟ್ಟಿತು.

1785–1787ರ ನಡುವೆ ಟಿಪ್ಪುಸುಲ್ತಾನ್ ಮರಾಠರು ಹಾಗೂ ಹೈದರಾಬಾದಿನ ನಿಜಾಮರ ನಡುವೆ ಅನೇಕ ಬಾರಿ ಕದನಗಳಲ್ಲಿ ತೊಡಗಬೇಕಾಯಿತು.

ಬ್ರಿಟಿಷರಿಂದ ವಿರೋಧವಿದ್ದ ಕಾರಣದಿಂದಾಗಿ ಟಿಪ್ಪು ಸುಲ್ತಾನ್ ದೇಶೀಯ ಆಡಳಿತಗಾರರ ಒಕ್ಕೂಟ ರಚಿಸಲು ಪ್ರಯತ್ನಿಸಿದ. ಅದು ಸಾಧ್ಯವಾಗದೆ ವಿದೇಶಿ ಆಡಳಿತಗಾರರ ಜೊತೆ ಸ್ನೇಹ ಬೆಳೆಸಿ ಬ್ರಿಟಿಷರ ವಿರುದ್ಧ ಹೋರಾಡಲು ಪ್ರಯತ್ನಿಸಿದ. ಅದಕ್ಕಾಗಿ ಕೇವಲ ರಾಜಕೀಯ ದೃಷ್ಟಿಯಿಂದಲ್ಲದೆ, ವಾಣಿಜ್ಯ ದೃಷ್ಟಿಯಿಂದಲೂ ಬ್ರಿಟಿಷರನ್ನು ಹೊರಗಟ್ಟಲು ಪ್ರಯತ್ನ ನಡೆಸಿ ವಿಫಲನಾದ.

ಸ್ಥಳೀಯ ರಾಜರ ಪ್ರಬಲ ವಿರೋಧದಿಂದಾಗಿ ಟಿಪ್ಪುವಿನ ಆಸೆಗಳು ಈಡೇರಲಿಲ್ಲ. ಟಿಪ್ಪುವಿನ ಶಕ್ತಿ ಸಾಮರ್ಥ್ಯ ಅರಿತ ಬ್ರಿಟಿಷರು ಭಾರತೀಯ ರಾಜಕೀಯದ ನ್ಯೂನತೆಗಳನ್ನು ಗುರುತಿಸಿ, ದಕ್ಷಿಣದ ಪ್ರಮುಖ ಆಡಳಿತಗಾರರಾಗಿದ್ದ ಮರಾಠರು ಹಾಗೂ ಹೈದರಾಬಾದಿನ ನಿಜಾಮರನ್ನು ಒಳಗೊಂಡ ಒಂದು ಪ್ರಬಲ ಮಿತ್ರಕೂಟ ರಚಿಸಿ ಬ್ರಿಟಿಷರ ದಂಡನಾಯಕ ಕಾರನ್‍ವಾಲಿಸ್‍ನ ನೇತೃತ್ವದಲ್ಲಿ 1792 ಫೆಬ್ರವರಿ 6 ರಂದು ಶ್ರೀರಂಗಪಟ್ಟಣದ ಮೇಲೆ ಧಾಳಿ ಮಾಡಿ 3ನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪುವನ್ನು ಸೋಲಿಸಿದರು. ಇದರಿಂದಾಗಿ ಟಿಪ್ಪು ಬ್ರಿಟಿಷರಿಗೆ ಮೂರು ಕೋಟಿ ರೂಪಾಯಿ ಪರಿಹಾರ ಕೊಡುವುದಾಗಿ ಒಪ್ಪಿಕೊಂಡ. ಇದಕ್ಕಾಗಿ ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಡಬೇಕಾಯಿತು.ಒಪ್ಪಂದದ ಪ್ರಕಾರ ಇವನ ರಾಜ್ಯದ ಅರ್ಧಭಾಗವನ್ನು ಇಂಗ್ಲಿಷರು ಆಕ್ರಮಿಸಿಕೊಂಡರು. ದಿಂಡಿಗಲ್ ಅದರ ಸುತ್ತಮುತ್ತಲಿನ ಪ್ರದೇಶಗಳು, ಪೂರ್ವಕ್ಕೆ ಬಾರಾಮಹಲ್ ಮತ್ತಿತರ ಕಣಿವೆಗಳು ಇಂಗ್ಲಿಷರ ಕೈ ಸೇರಿದವು. ಅವರ ಮಿತ್ರನಾದ ನಿಜಾಮನಿಗೆ ಮೈಸೂರಿನ ಈಶಾನ್ಯ ಭಾಗದ ಬಳ್ಳಾರಿ ಮತ್ತು ಕಡಪ ಜಿಲ್ಲೆಗಳು ಸೇರಿದವು. ವಾಯವ್ಯ ಭಾಗಕ್ಕೆ ಮರಾಠರು ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಣ ಪ್ರದೇಶವನ್ನು ಪಡೆದರು. ಈ ಯುದ್ಧ ಟಿಪ್ಪುವಿಗೆ ಬಹು ಕಠಿಣವಾದ ಪೆಟ್ಟನ್ನು ಕೊಟ್ಟಿತು. ದಕ್ಷಿಣದ ರಾಜ್ಯಗಳೆಲ್ಲಾ ಒಂದುಗೂಡಿ ಟಿಪ್ಪುವನ್ನು ಎದುರಿಸಿದ್ದರ ಪರಿಣಾಮವಿದು. (ಬಿ.ಎಸ್.ಎ; ಬಿ.ಎಂ.)

3ನೆಯ ಮೈಸೂರು ಯುದ್ಧದಲ್ಲಿ ಸೋತ ಟಿಪ್ಪುಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಡಲು ಕೇವಲ ತನ್ನ ಸೈನ್ಯದಿಂದ ಅಸಾಧ್ಯವೆಂದರಿತು ತನ್ನ ಇಡೀ ರಾಜ್ಯವನ್ನು ಪುನಾರಚಿಸಲು ಪ್ರಯತ್ನಿಸಿದ. ಫ್ರೆಂಚ್ ಹಾಗೂ ಅರಬ್ಬರ ಸ್ನೇಹ ಗಳಿಸಲು ಶತಪ್ರಯತ್ನ ನಡೆಸಿದ. ಹೊಸ ಆರ್ಥಿಕ ಕಾಯಿದೆಗಳನ್ನು ಜಾರಿಗೆ ತಂದು ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಗೆ ವ್ಯಾಪಾರದ ಹಕ್ಕನ್ನು ನಿರಾಕರಿಸಿ ಅನೇಕ ನಿರ್ಬಂಧನೆಗಳನ್ನು ಜಾರಿಗೆ ತಂದ.

ಬ್ರಿಟಿಷರಿಂದ ಯುದ್ಧಭೀತಿಯನ್ನು ಎದುರಿಸುತ್ತಿದ್ದ ಟಿಪ್ಪುಸುಲ್ತಾನ್ ಬ್ರಿಟಿಷರಿಗೆ ಸಹಕರಿಸುತ್ತಿದ್ದ ತಿರುವಾಂಕೂರ್ ರಾಜ, ಕೊಡಗಿನ ರಾಜ ಹಾಗೂ ನಿಜಾಮರ ವಿರುದ್ಧ ತೆಗೆದುಕೊಂಡ ಕೆಲವು ಕ್ರಮಗಳು ಟಿಪ್ಪುವಿಗೆ ಜಗಳಗಂಟನೆಂಬ ಹೆಸರನ್ನು ತಂದುಕೊಟ್ಟವು. 1792 ರ ಯುದ್ಧಾನಂತರದಲ್ಲಿ ಇವನು ಜಾರಿಗೊಳಿಸಿದ ಕಾರ್ಯಕ್ರಮಗಳು ಆಸ್ಥಾನದಲ್ಲಿದ್ದ ಸಮಯಸಾಧಕರಿಂದ ಪೂರ್ಣಪ್ರಮಾಣದಲ್ಲಿ ಜನರಿಗೆ ತಲುಪಲಿಲ್ಲ. ಸರಿಯಾದ ಮಾರ್ಗದರ್ಶಕರ ಕೊರತೆ ಹಾಗೂ ತಾಳ್ಮೆಯ ಕೊರತೆಯಿಂದಾಗಿ ಬ್ರಿಟಿಷರಿಂದ 1799 ಮೇ 4ರಂದು ಶ್ರೀರಂಗಪಟ್ಟಣದಲ್ಲಿ ನಡೆದ 4ನೆಯ ಮೈಸೂರು ಯುದ್ಧದಲ್ಲಿ ತನ್ನ ಅವನತಿಯನ್ನು ಕಾಣಬೇಕಾಯಿತು. ಟಿಪ್ಪು ತನ್ನ ಆಡಳಿತ ಕಾಲದಲ್ಲಿ ವಾಣಿಜ್ಯ, ಕೈಗಾರಿಕೆ ಮತ್ತು ವ್ಯವಸಾಯ ಕ್ಷೇತ್ರಗಳ ಅಭಿವೃದ್ಧಿಯನ್ನು, ಸರ್ವತೋಮುಖವಾದ ಪ್ರಗತಿಯನ್ನು ಕಡೆಗಣಿಸಲಿಲ್ಲ. ಕರ್ನಾಟಕವನ್ನು ಸಮೃದ್ಧವಾದ ರಾಜ್ಯವನ್ನಾಗಿ ಮಾಡಲು ಅವಿಶ್ರಾಂತವಾಗಿ ಶ್ರಮಿಸಿದ. ವಾಣಿಜ್ಯ ಕ್ಷೇತ್ರದಲ್ಲಿ ಅನೇಕ ಆಶ್ಚರ್ಯಕರವಾದ ಪ್ರಯೋಗಗಳನ್ನು ಇವನು ಮಾಡಿದ. ವಿಶೇಷವಾಗಿ ಹಾಗೂ ಪ್ರತ್ಯೇಕವಾಗಿ ವಾಣಿಜ್ಯ ಇಲಾಖೆಯನ್ನು ಏರ್ಪಡಿಸಿದ್ದ. ದೇಶದ ದೂರದೂರದ ಪ್ರದೇಶಗಳಲ್ಲೂ ಪರದೇಶಗಳಲ್ಲೂ ವ್ಯಾಪಾರದ ಕೋಠಿಗಳನ್ನು ಸ್ಥಾಪಿಸಿದ್ದ. ಕೋವಿ, ಕಾಗದ, ಇತರ ಅನೇಕ ಪದಾರ್ಥಗಳನ್ನು ತಯಾರಿಸುವ ಸಲುವಾಗಿ ವಿದೇಶಗಳಿಂದ ತಜ್ಞರನ್ನು ಕರೆಸಿಕೊಂಡು ಹಣಕಾಸು, ತೂಕ, ಅಳತೆ, ಬ್ಯಾಂಕಿಂಗ್, ಕಂದಾಯ, ನ್ಯಾಯಾಡಳಿತ, ಸೈನ್ಯ, ನೌಕಾದಳ–ಇವುಗಳ ಆಡಳಿತ ರೀತಿನೀತಿಗಳ ಬಗ್ಗೆ ನಡೆಸಿದ ಸುಧಾರಣೆಗಳು ಇತಿಹಾಸದಲ್ಲಿ ಇವನಿಗೆ ಗಣ್ಯಸ್ಥಾನವನ್ನು ಗಳಿಸಿಕೊಟ್ಟಿವೆ. ಇವನು ಒಳ್ಳೆಯ ನೌಕಾಪಡೆಯನ್ನೂ ವ್ಯಾಪಾರಿ ಹಡಗುಗಳ ಪಡೆಯನ್ನೂ ಕಟ್ಟಿದ. ಆಗ ಇವನ ರಾಜ್ಯದಲ್ಲಿ ಮೂರು ನೌಕಾನಿರ್ಮಾಣ ಕೇಂದ್ರಗಳಿದ್ದವು. ನೌಕಾಧಿಕಾರಿಗಳಿಗೆ ಶಿಕ್ಷಣ ನೀಡಲು ನೌಕಾಶಾಲೆಯೊಂದಿತ್ತು. ಸಮರ್ಥವಾಗಿ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದ ಟಿಪ್ಪು ಪಾಶ್ಚಿಮಾತ್ಯ ತತ್ತ್ವಗಳನ್ನು ಸಂಸ್ಥಾನಗಳ ಆಡಳಿತದಲ್ಲಿ ಅಳವಡಿಸಿದವರಲ್ಲಿ ಮೊದಲಿಗನೆಂದು ಹೇಳಬಹುದು. ಉಳುವವರಿಗೆ ಭೂಒಡೆತನ ಎಂಬ ತತ್ತ್ವದ ಆಧಾರದ ಮೇಲೆ ರಚಿಸಲ್ಪಟ್ಟ ಕಂದಾಯ ವ್ಯವಸ್ಥೆಯ ಮೂಲಕವೂ ಬಂಜರು ಭೂಮಿಯನ್ನು ಕೆಲವು ವರ್ಷಗಳ ಕಾಲ ತೆರಿಗೆ ರಹಿತ ಗುತ್ತಿಗೆ ಕೊಡುವ ಕ್ರಮದಿಂದಲೂ ತೆರಿಗೆ ವಸೂಲಿ ಮಾಡುವ ಕ್ರಮದಲ್ಲಿ ಮಧ್ಯವರ್ತಿಗಳನ್ನು ತೆಗೆದು ಹಾಕಿ ಅವರ ಸ್ಥಾನದಲ್ಲಿ ಕಂದಾಯ ಅಧಿಕಾರಿಗಳನ್ನು ನೇಮಿಸುವುದರ ಮೂಲಕವೂ ಜಹಗೀರಿ ಪದ್ಧತಿಯನ್ನು ರದ್ದು ಮಾಡಿ, ಅದಕ್ಕೆ ಬದಲಾಗಿ ಅಧಿಕಾರಿಗಳಿಗೆ ಸಂಬಳವನ್ನು ನಿಗದಿ ಮಾಡುವುದರ ಮೂಲಕವೂ ಟಿಪ್ಪು ಕೃಷಿಯ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ. ನ್ಯಾಯವನ್ನು ವಿಶಿಷ್ಟ ರೀತಿಯಲ್ಲಿ ನಡೆಯುವಂತೆ ಬೇಕಾದ ಏರ್ಪಾಡುಗಳನ್ನು ಮಾಡಿದ್ದು ನಾಣ್ಯ ಹಾಗೂ ಪಂಚಾಂಗದ ಸುಧಾರಣೆ ಇವನ ಇತರ ಸಾಧನೆಗಳು. (ಬಿ.ಎಸ್.ಎ.)

**ನಾಣ್ಯಗಳು:** ಭಾರತೀಯ ನಾಣ್ಯ ಚರಿತ್ರೆಯಲ್ಲಿ ಟಿಪ್ಪು ಸುಲ್ತಾನನ ನಾಣ್ಯಗಳಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಸದಾ ಯುದ್ಧಗಳಲ್ಲಿಯೇ ನಿರತನಾಗಿದ್ದರೂ ಟಿಪ್ಪು ತನ್ನ ನಾಣ್ಯಗಳ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿ ಸುಂದರವೂ ಕಲಾತ್ಮಕವೂ ವೈವಿಧ್ಯಪೂರ್ಣವೂ ಆದ ಅನೇಕ ನಮೂನೆಯ ನಾಣ್ಯಗಳನ್ನು ಅಚ್ಚುಹಾಕಿಸಿದ್ದಾನೆ. ಟಿಪ್ಪುವಿನ ಕಾಲದಲ್ಲಿ ಕೊನೆಯ ಪಕ್ಷ ಹದಿನೈದು ವಿವಿಧ ಸ್ಥಳಗಳಲ್ಲಿ ಟಂಕಸಾಲೆಗಳಿದ್ದವು. ಇವುಗಳಲ್ಲಿ ಮುಖ್ಯವಾದವೆಂದರೆ–ಶ್ರೀರಂಗಪಟ್ಟಣ, ನಗರ, ಗುತ್ತಿ, ಬೆಂಗಳೂರು, ಚಿತ್ರದುರ್ಗ, ಕಲ್ಲಿಕೋಟೆ, ಫೆರೋಕ್, ಸತ್ಯಮಂಗಲ, ದಿಂಡಿಗಲ್, ಗುರ್ರಂಕೊಂಡ, ಧಾರವಾಡ ಮತ್ತು ಮೈಸೂರು. ಶಿವಮೊಗ್ಗದ ಹೊಳೆಹೊನ್ನೂರಿನಲ್ಲಿಯೂ ಒಂದು ಟಂಕಸಾಲೆಯಿತ್ತೆಂದು ತಿಳಿದುಬರುತ್ತದೆ. ಆದರೆ ಇಲ್ಲಿಯ ನಾಣ್ಯಗಳು ದೊರಕಿಲ್ಲ. ಈ ಟಂಕಸಾಲೆಗಳಿಗೆ ಟಿಪ್ಪು ಕಾಲ್ಪನಿಕ ಹೆಸರುಗಳನ್ನು ಕೊಟ್ಟಿದ್ದ. ಹೊಳೆಹೊನ್ನೂರಿನ ಟಂಕಸಾಲೆಯನ್ನು ಅಸದೃಶವಾದುದು (ಬೇನಜೀರ್) ಎಂದು ಕರೆಯಲಾಗಿದೆ.

ಟಿಪ್ಪು ತಾನು ಅಚ್ಚುಹಾಕಿಸಿದ ಪ್ರತಿಯೊಂದು ನಾಣ್ಯಕ್ಕೂ ಒಂದೊಂದು ಹೆಸರನ್ನು ಕೊಟ್ಟ. ಆ ಹೆಸರುಗಳು ಸಾಮಾನ್ಯವಾಗಿ ಪ್ರವಾದಿ ಮಹಮ್ಮದ್, ಕಲೀಫರು ಮತ್ತು ನಕ್ಷತ್ರಗಳಿಗೆ ಸಂಬಂಧಿಸಿದವು. ಇವುಗಳನ್ನು ಈ ರೀತಿ ಹೆಸರಿಸಬಹುದು: ನಾಲ್ಕು ಪಗೋಡಗಳ ನಾಣ್ಯ–ಅಹ್ಮದಿ, ಎರಡು ಪಗೋಡ–ಸಾದಿಕೀ, ಒಂದು ಪಗೋಡ–ಫರೂಕೀ, ಎರಡು ರೂಪಾಯಿ–ಹೈದರೀ, ರೂಪಾಯಿ–ಇಮಾಮೀ, ಅರ್ಧ ರೂಪಾಯಿ–ಅಬಿದೀ, ಕಾಲು ರೂಪಾಯಿ–ಬಾಖರೀ, ಎಂಟನೆಯ ಒಂದು ರೂಪಾಯಿ–ಜಾಫರೀ, ಹದಿನಾರನೆಯ ಒಂದು ರೂಪಾಯಿ–ಖಾಸಿಮೀ, ಮೂವತ್ತೆರಡನೆಯ ಒಂದು ರೂಪಾಯಿ–ಕೈಸರೀ, ಎರಡು ಪೈಸೆ–ಉಸ್ಮಾನೀ ಅಥವಾ ಮುಷ್ತರೀ, ಒಂದು ಪೈಸೆ–ಜೋಹ್ರ, ಅರ್ಧಪೈಸೆ–ಬದ್ರಾಮ್, ಕಾಲು ಪೈಸೆ–ಅಖ್ತರ್, ಎಂಟನೆಯ ಒಂದು ಪೈಸೆ–ಕುತ್ಬ್. ಈ ರೀತಿಯ ಹೆಸರಿಲ್ಲದ ನಾಣ್ಯವೆಂದರೆ ಚಿನ್ನದ ಪಣ. ಇದು ಬಹು ಸಣ್ಣ ನಾಣ್ಯವಾದುದರಿಂದ ಇದರ ಮೇಲೆ ನಾಣ್ಯದ ಹೆಸರನ್ನು ಮುದ್ರಿಸುವಷ್ಟು ಸ್ಥಳವಿರಲಿಲ್ಲವೆಂದು ನಾಣ್ಯಶಾಸ್ತ್ರಜ್ಞ ಹೆಂಡರ್‍ಸನ್ ಅಭಿಪ್ರಾಯ ಪಡುತ್ತಾರೆ.

ನಾಣ್ಯಗಳ ಮೇಲೆ ಕಾಲವನ್ನು ನಮೂದಿಸುವ ವಿಷಯದಲ್ಲಿಯೂ ಟಿಪ್ಪು ಅನೇಕ ಬದಲಾವಣೆಗಳನ್ನು ಮಾಡಿದ. ತನ್ನ ಆಳ್ವಿಕೆಯ ಮೊದಲ ನಾಲ್ಕು ವರ್ಷಗಳು ನಾಣ್ಯಗಳ ಮೇಲೆ ಹಿಜಿರ ಕಾಲವನ್ನು ಅಚ್ಚುಹಾಕಿಸಿದ. ಐದನೆಯ ವರ್ಷದಿಂದ ತನ್ನ ಆಳಿಕೆ ಮೌಲೂದೀ ಕಾಲಮಾನವನ್ನು ಅಚ್ಚು ಹಾಕಿಸಿದ. ಇದರಲ್ಲಿ ಸಂಖ್ಯೆಗಳು ಬಲದಿಂದ ಎಡದ ಕಡೆಗೆ ಬರೆಯಲ್ಪಟ್ಟಿವೆ. ನಾಣ್ಯಗಳ ಮೇಲೆ ವರ್ಷವನ್ನು ಸೂಚಿಸುವಾಗ ಮೊದಲು ಅಬ್ಜದ್ ಎಂಬ ಪ್ರಕಾರವನ್ನೂ ಅನಂತರ ಅಖ್ತತ್ ಎಂಬ ಪ್ರಕಾರವನ್ನೂ ಅನುಸರಿಸಿದ. ಇವೆರಡರಲ್ಲಿಯೂ ಅರಬ್ಬೀ ಅಕ್ಷರಗಳಿಗೆ ಕೆಲವು ಸಂಖ್ಯಾಮೌಲ್ಯಗಳನ್ನು ಕೊಡುವ ಕ್ರಮವಿದೆ.

ಟಿಪ್ಪುವಿನ ಚಿನ್ನದ ನಾಣ್ಯಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು: ಅಹ್ಮದೀ, ಸಾದಿಕೀ, ಫರೂಕೀ(ಪಗೋಡ) ಮತ್ತು ಪಣಂ. ಅಹ್ಮದೀ ನಾಣ್ಯ ಸು.211 ಗ್ರೇನ್ ತೂಕವಿದ್ದು ನಾಲ್ಕು ಪಗೋಡಗಳಿಗೆ ಸಮನಾಗಿತ್ತು. ಆ ರೀತಿಯ ನಾಣ್ಯದ ಮುಮ್ಮುಖದಲ್ಲಿ ಅಹ್ಮದನ ಧರ್ಮ ಈ ಪ್ರಪಂಚದಲ್ಲಿ ಹೈದರನ ವಿಜಯಗಳಿಂದ ಪ್ರಕಾಶಗೊಂಡಿದೆ ಎಂಬ ಅರ್ಥ ಬರುವ ಪರ್ಷಿಯನ್ ಬರೆಹದ ಮತ್ತು ಕಾಲದ ಉಲ್ಲೇಖ ಕಂಡುಬರುತ್ತದೆ. ಸಾದಿಕೀ ನಾಣ್ಯಗಳು 106 ಗ್ರೇನ್ ತೂಕವಿದ್ದು ಹೆಚ್ಚು ಕಡಿಮೆ ಅಹ್ಮದೀ ನಾಣ್ಯಗಳನ್ನೇ ಹೋಲುತ್ತವೆ. ಫರೂಕೀ ನಾಣ್ಯ ಸು.52 ಗ್ರೇನ್ ತೂಕವುಳ್ಳದ್ದಾಗಿದ್ದು ಹೈದರನ ಮೊದಲನೆಯ ಅಕ್ಷರ ಹೆ ಮತ್ತು ಕಾಲ, ಟಂಕಸಾಲೆಯ ಹೆಸರುಗಳನ್ನು ಹೊಂದಿವೆ. ಪಣಂ ಎಂಬ ನಾಣ್ಯ ಬಹು ಸಣ್ಣದಾಗಿದ್ದು, ಸು.5–6 ಗ್ರೇನ್ ತೂಗುತ್ತದೆ. ಇದು ದಕ್ಷಿಣ ಭಾರತದಲ್ಲೇ ಬಹಳ ಜನಪ್ರಿಯವಾಗಿದ್ದ ನಾಣ್ಯ. ಇವುಗಳಲ್ಲಿಯೂ ಹೆ ಎಂಬ ಅಕ್ಷರ ಮತ್ತು ಕಾಲದ ಉಲ್ಲೇಖವಿದೆ.

ಟಿಪ್ಪುಸುಲ್ತಾನನ ಏಳು ರೀತಿಯ ಬೆಳ್ಳಿಯ ನಾಣ್ಯಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ಎರಡು ರೂಪಾಯಿನ ಹೈದರೀ ನಾಣ್ಯ ಶ್ರೀರಂಗಪಟ್ಟಣ, ನಗರ ಮತ್ತು ಕಲ್ಲೀಕೋಟೆಗಳಲ್ಲಿಯೂ ಒಂದು ರೂಪಾಯಿನ ಇಮಾಮೀ ನಾಣ್ಯ ಶ್ರೀರಂಗಪಟ್ಟಣ, ನಗರ ಮತ್ತು ಧಾರವಾಡಗಳಲ್ಲಿಯೂ 1/2 ರೂಪಾಯಿನ ಆಬಿದೀ ನಾಣ್ಯ ಶ್ರೀರಂಗಪಟ್ಟಣ ಮತ್ತು ನಗರಗಳಲ್ಲಿಯೂ ಬಾಖರೀ, ಜಾಫರೀ, ಕಾಜಿಮೀ, ಖಿಸ್ರೀ ನಾಣ್ಯಗಳು ಶ್ರೀರಂಗಪಟ್ಟಣದಲ್ಲಿ ಮಾತ್ರವೂ ಅಚ್ಚಾದವು. ಎರಡು ರೂಪಾಯಿನ ಹೈದರೀ ನಾಣ್ಯಗಳಲ್ಲಿ ಅಹ್ಮದೀ ಚಿನ್ನದ ನಾಣ್ಯಗಳಲ್ಲಿರುವಂತೆಯೇ ಬರೆಹಗಳಿವೆ. ಇದರ ತೂಕ ಸು.355 ಗ್ರೇನ್. ಒಂದು ರೂಪಾಯಿನ ಇಮಾಮೀ ನಾಣ್ಯ ಸು.175 ಗ್ರೇನ್ ತೂಕವಾಗಿದ್ದು ಹೈದರೀ ನಾಣ್ಯದಂತೆಯೇ ಮಹಮ್ಮದ್ ಎಂಬ ಬರೆಹದ ಜೊತೆಗೆ ಟಂಕಸಾಲೆಯ ಹೆಸರಿದೆ. ಕೇವಲ 5 ಗ್ರೇನ್ ತೂಕದ ಖಿಸ್ರೀ ನಾಣ್ಯದಲ್ಲಿ ಟಂಕಸಾಲೆಯ ಹೆಸರು ಮತ್ತು ಕಾಲಗಳು ಉಲ್ಲೇಖಿತವಾಗಿವೆ.

ಟಿಪ್ಪುಸುಲ್ತಾನನ ತಾಮ್ರದ ನಾಣ್ಯಗಳಲ್ಲಿ ಐದು ವಿಧದ ಮೌಲ್ಯಗಳಲ್ಲಿವೆ. ಸಾಮಾನ್ಯವಾಗಿ ಈ ತಾಮ್ರದ ನಾಣ್ಯಗಳು ಎಲ್ಲ ಟಂಕಸಾಲೆಗಳಲ್ಲಿಯೂ ಮುದ್ರಿತವಾಗಿದ್ದುವೆಂದು ಹೇಳಬಹುದು. ತಾಮ್ರದ ನಾಣ್ಯಗಳ ಮೇಲೆ ಸಾಮಾನ್ಯವಾಗಿ ಆನೆಯ ಚಿತ್ರವಿರುವುದು ವಿಶೇಷ ಸಂಗತಿ. ಸುಮ್ಮನೆ ನಿಂತಿರುವ, ಇಲ್ಲವೇ ಸೊಂಡಿಲನ್ನು ಮೇಲೆತ್ತಿ ಸಲಾಂ ಮಾಡುತ್ತಿರುವಂತೆ ತೋರಿಸಿರುವ ಆನೆಯ ಚಿತ್ರ ಬಹು ಸುಂದರವಾಗಿಯೂ ಸ್ಫುಟವಾಗಿಯೂ ಇದೆ. ಆನೆ ವಿವಿಧ ರೀತಿಯ ಆಭರಣಗಳಿಂದ ಅಲಂಕೃತವಾಗಿರುವುದು ಗಮನಾರ್ಹ. ಸಾಮಾನ್ಯವಾಗಿ ತಾಮ್ರದ ನಾಣ್ಯಗಳ ಮೇಲೆ ಬರೆವಣಿಗೆ ಕಡಿಮೆ. ಕೆಲವು ನಾಣ್ಯಗಳಲ್ಲಂತೂ ಬರೆವಣಿಗೆ ಹಿಮ್ಮುಖಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆನೆಯ ಮೇಲೆ ಕೆಲವು ನಾಣ್ಯಗಳಲ್ಲಿ ಒಂದು ಧ್ವಜವಿರುವುದು ಕಂಡುಬರುತ್ತದೆ. ಎರಡು ಪೈಸೆ ಮೌಲ್ಯದ ಉಸ್ಮಾನೀ ನಾಣ್ಯದ ಮುಮ್ಮುಖದಲ್ಲಿ ಸೊಂಡಿಲನ್ನು ಎತ್ತಿಕೊಂಡಿರುವ ಆನೆ, ಬಾಲದ ಮೇಲೆ ನಾಣ್ಯ ಮುದ್ರಣಗೊಂಡ ಕಾಲ ಮತ್ತು ಆನೆಯ ಮೇಲೆ ಧ್ವಜದ ಚಿತ್ರಗಳಿವೆ. ಇದರ ಹಿಮ್ಮುಖದಲ್ಲಿ ನಾಣ್ಯದ ಟಂಕಸಾಲೆಯ ಹೆಸರು ಕಾಣಬರುತ್ತದೆ. ಅತ್ಯಂತ ಕಡಿಮೆ ಮೌಲ್ಯದ 1.8 ಪೈಸಾ ಅಥವಾ ಕುತ್ಬ್ ತಾಮ್ರ ನಾಣ್ಯ ಸು.18–21 ಗ್ರೇನ್ ತೂಗುತ್ತದೆ. ಆ ನಾಣ್ಯ ಶ್ರೀರಂಗಪಟ್ಟಣ, ನಗರ, ಬೆಂಗಳೂರು, ಚಿತ್ರದುರ್ಗ ಮತ್ತು ಸತ್ಯಮಂಗಲ ಟಂಕಸಾಲೆಗಳಲ್ಲಿ ಮಾತ್ರ ಅಚ್ಚು ಹಾಕಲ್ಪಟ್ಟಿದೆ. ಈ ನಾಣ್ಯಗಳ ಮುಮ್ಮುಖದಲ್ಲಿ ಆನೆಯ ಚಿತ್ರ ಮತ್ತು ಹಿಮ್ಮುಖದಲ್ಲಿ ನಾಣ್ಯದ ಮತ್ತು ಟಂಕಸಾಲೆಯ ಹೆಸರು ಮುದ್ರಿತವಾಗಿದೆ.
(ಎ.ವಿ.ಎನ್.)

**ಹೈದರ್ ಅಲಿ, ಟಿಪ್ಪುಸುಲ್ತಾನರ ಕಾಲದ ವಾಸ್ತುರಚನೆಗಳು:** ಹೈದರ್ ಅಲಿ, ಟಿಪ್ಪು ಸುಲ್ತಾನರ ವಾಸ್ತುಕೃತಿಗಳನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು. ರಕ್ಷಣಾ ದೃಷ್ಟಿಯಿಂದ ಕಟ್ಟಿಸಿರುವ ಕೋಟೆ ಕೊತ್ತಲಗಳು ಹಾಗೂ ಅರಮನೆ, ಮಸೀದಿಗಳು, ಸಮಾಧಿಗಳು.

ಹೈದರ್ ಹಾಗೂ ಟಿಪ್ಪುಸುಲ್ತಾನ್ ತಾವು ಗೆದ್ದ ಪ್ರದೇಶಗಳಲ್ಲಿದ್ದ ಪ್ರಮುಖ ಆಯಕಟ್ಟಿನ ಪ್ರದೇಶಗಳಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿದರು. ಕೆಲವೊಂದು ಹಳೆಯ ಕೋಟೆಗಳಿಗೆ ಗಾರೆಗಚ್ಚುಗಳನ್ನು ಹಾಕಿ ಭದ್ರಪಡಿಸಿದ್ದರೂ ಅವರು ಕಟ್ಟಿಸಿದ ಕೋಟೆಗಳಲ್ಲಿ ದೇವನಹಳ್ಳಿ, ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಪಾವಗಡ, ಮಿಡಿಗೇಸಿ, ರಹಮಾನ್ ದುರ್ಗ ಪ್ರಮುಖವಾದವು. ಶ್ರೀರಂಗಪಟ್ಟಣದ ಕೋಟೆಯ ಒಳಗಡೆ ಕೆಲವೊಂದು ಗೋಡೆಸಾಲುಗಳನ್ನು ಫ್ರೆಂಚ್ ತಂತ್ರಜ್ಞಾನ ನೆರವಿನಿಂದ ನಿರ್ಮಿಸಿದ್ದನೆಂದು ತಿಳಿದುಬರುತ್ತದೆ. ಕೆಲವು ಕಡೆ ನೆಲಮಾಳಿಗೆಗಳು ಕಟ್ಟಲ್ಪಟ್ಟಿದ್ದವು. ಸಕಲೇಶಪುರದ ಹತ್ತಿರವಿರುವ ಮಂಜರಾಬಾದ್‌ನಲ್ಲಿ ಟಿಪ್ಪು ಕಟ್ಟಿಸಿದ 200 ಅಡಿ ಎತ್ತರದ ಚಿಕ್ಕಕೋಟೆ ಅತ್ಯಂತ ವಿಶಿಷ್ಟವಾದುದು. ಟಿಪ್ಪುವಿನ ಕಾಲದಲ್ಲಿ ಚಿತ್ರದುರ್ಗ ಕೋಟೆಯನ್ನು ಭದ್ರಪಡಿಸಲಾಯಿತು.

ಪ್ರಮುಖ ಅರಮನೆ, ಮಸೀದಿ ಹಾಗೂ ಇತರೆ ಕಟ್ಟಡಗಳೆಂದರೆ ದರಿಯಾ ದೌಲತ್. ಇದು ಶ್ರೀರಂಗಪಟ್ಟಣದ ಪ್ರಮುಖ ಆಕರ್ಷಣೀಯ ಅರಮನೆ. ಮತ್ತೊಂದು ಕೋಟೆ ರಂಗನಾಥಸ್ವಾಮಿ ದೇವಾಲಯದ ಎದುರಿನಲ್ಲಿ ಇತ್ತೆಂದು ತಿಳಿದುಬರುತ್ತದೆ. ಆದರೆ ಅದು ನಾಶವಾಗಿದೆ. ಟಿಪ್ಪು ಕಟ್ಟಿಸಿದ ಮತ್ತೊಂದು ಕಟ್ಟಡ ಹೈದರನ ಸಮಾಧಿ. ಇದು ಗುಂಬಜ್ ಎಂದು ಪ್ರಸಿದ್ಧಿಯಾಗಿದೆ. ಇದು ಕಪ್ಪುಕಲ್ಲಿನ ಸುಂದರ ಕಂಬಗಳ ಕಟ್ಟಡ. ಇಲ್ಲಿ ಟಿಪ್ಪು ಸುಲ್ತಾನನ ಸಮಾಧಿಯೂ ಇದೆ. 1787ರಲ್ಲಿ ಟಿಪ್ಪುಸುಲ್ತಾನ್ ಕಟ್ಟಿಸಿದ ಜುಮ್ಮಾ ಮಸೀದಿ ಸಹ ಆಕರ್ಷಣೀಯವಾಗಿದ್ದು, ಎರಡು ಉನ್ನತವಾದ ಮಿನಾರುಗಳನ್ನು ಹೊಂದಿದೆ. ಟಿಪ್ಪುವಿನ ಮತ್ತೊಂದು ಭವ್ಯವಾದ ಕಟ್ಟಡ ಬೆಂಗಳೂರಿನಲ್ಲಿರುವ ಅರಮನೆ. ಇದು ದರಿಯಾ ದೌಲತ್‌ನಷ್ಟು ಸುಂದರವಾಗಿರದಿದ್ದರೂ, ಇದು ಆ ಕಾಲದ ವಾಸ್ತುಶಿಲ್ಪದ ಒಂದು ಪ್ರಮುಖ ಆಕರ್ಷಣೆ.

ಚನ್ನಪಟ್ಟಣದಲ್ಲಿರುವ ಅಕಲ್ ಷಾ ಖಾದ್ರಿ ದರ್ಗಾ ಮತ್ತು ಸಯ್ಯದ್ ಇಬ್ರಾಹಿಂ ಗೋರಿ ಪ್ರಮುಖವಾದವುಗಳು. ಇವಲ್ಲದೆ ಚಿತ್ರದುರ್ಗ, ನಂದಿದುರ್ಗ, ನಗರ ಮುಂತಾದ ಕಡೆಗಳಲ್ಲಿ ಟಿಪ್ಪು ತನ್ನ ವಾಸಕ್ಕಾಗಿ ಸರಳವಾದ ಕಟ್ಟಡಗಳನ್ನು ನಿರ್ಮಿಸಿದ್ದನೆಂದು ತಿಳಿದುಬರುತ್ತದೆ. ದಕ್ಷಿಣ ಕರ್ನಾಟಕದ ಕೆಲವೇ ಇಸ್ಲಾಮಿಕ್ ವಾಸ್ತುಶಿಲ್ಪಗಳಲ್ಲಿ ಕಟ್ಟಿಸಿದ ಕಟ್ಟಡಗಳು ಪ್ರಾಮುಖ್ಯ ಗಳಿಸಿಕೊಂಡಿವೆ.
(ಎಂ.ಎಚ್.)

**ಟಿಬೆಟ್:** ಪ್ರಪಂಚದ ಚಾವಣಿ ಎಂದೆನಿಸಿದ ದಕ್ಷಿಣ ಮಧ್ಯ ಏಷ್ಯದ ಒಂದು ಸ್ವತಂತ್ರ ದೇಶವಾಗಿದ್ದು 1959ರಿಂದ ಚೀನ ಸಮಾಜವಾದಿ ಗಣರಾಜ್ಯದ ಸ್ವಯಮಾಡಳಿತ ಪ್ರದೇಶ. ಈ ದೇಶದ ಪ್ರಾಚೀನ ಇತಿಹಾಸ ಹೆಚ್ಚು ತಿಳಿಯದು. ಷಿಪ್ರಯೆ ಅಥವಾ ಪುಗ್ಯೆ ಈ ದೇಶದ ಮೊದಲ ಅರಸನೆಂದು ಅತ್ಯಂತ ಪ್ರಾಚೀನ ವರದಿಗಳಲ್ಲಿ ಉಲ್ಲೇಖಗೊಂಡಿದೆ. ಈತನ ಕಾಲದಲ್ಲಿ ಬೊನ್ ಎಂಬ ಸರ್ವಚೇತನವಾದಿ ಧರ್ಮ ಅಸ್ತಿತ್ವದಲ್ಲಿತ್ತು. ಪ್ರ.ಶ.ಪೂ.1ನೆಯ ಶತಮಾನದಿಂದ ಪ್ರ.ಶ.7ನೆಯ ಶತಮಾನದವರೆಗೂ ಅನೇಕ ಅರಸರು ಟಿಬೆಟ್ಟನ್ನು ಆಳಿದರು. ಅವರ ಕಾಲದಲ್ಲಿ ಕಲ್ಲಿದ್ದಲಿನ ಬಳಕೆ ಆರಂಭವಾಯಿತು. ಟಿಬೆಟ್ ಸಂಸ್ಕೃತಿಯ ಅಸ್ತಿಭಾರ ಹಾಕಿದ ಸಾಂಗ್–ತ್ಸೆನ್ ಗ್ಯಾಂಪೊ 620–645ರವರೆಗೆ ಆಳಿ, ಬರ್ಮದ ಉತ್ತರಭಾಗ ಮತ್ತು ಚೀನದ ಪಶ್ಚಿಮ ಪ್ರದೇಶಗಳವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಚೀನದ ಸಾಮ್ರಾಟ ತನ್ನ ಕುಮಾರಿಯನ್ನು ಈತನಿಗೆ ಕೊಟ್ಟು ಮದುವೆ ಮಾಡಬೇಕಾಯಿತು. ನೇಪಾಲದ ರಾಜಕುಮಾರಿಯೊಬ್ಬಳು ಇವನ ಇನ್ನೊಬ್ಬ ಪತ್ನಿ. ಆ ವೇಳೆಗಾಗಲೇ ಬೌದ್ಧಧರ್ಮ ಟಿಬೆಟ್ಟನ್ನು ಪ್ರವೇಶಿಸಿತ್ತು. ಬೌದ್ಧ ಧರ್ಮಾವಲಂಬಿಗಳಾಗಿದ್ದ ತನ್ನ ಇಬ್ಬರು ಪತ್ನಿಯರ ಪ್ರಭಾವಕ್ಕೆ ಈತ ಒಳಗಾಗಿ ಬೌದ್ಧಧರ್ಮವನ್ನು ಅಲ್ಲಿ ಪ್ರಸರಿಸಲು ಶ್ರಮಿಸಿದ. ಭಾರತದಿಂದ ಬೌದ್ಧಗ್ರಂಥಗಳನ್ನು ತರಲಾಯಿತು. ಅದುವರೆಗೂ ಆಡುಮಾತಾಗಿದ್ದ ಟಿಬೆಟ್ ಭಾಷೆಗೆ ಲಿಪಿಯೊಂದು ಹುಟ್ಟಿದ್ದು ಕೂಡ ಆ ಗ್ರಂಥಗಳ ಅಧ್ಯಯನ ಅಧ್ಯಾಪನಗಳಿಗಾಗಿಯೇ. ಬೌದ್ಧಧರ್ಮ ರಾಜಧರ್ಮವೆನಿಸಿಕೊಂಡಿತು. ಗ್ಯಾಂಪೊ ತನ್ನ ರಾಜ್ಯಕ್ಕೆ ಭದ್ರವಾದ ಆಡಳಿತ ವ್ಯವಸ್ಥೆಯನ್ನು ನೀಡಿದ. ಭಾರತ ಮತ್ತು ಚೀನಗಳ ಹಲವಾರು ಕಲೆಗಳನ್ನೂ ಪದ್ಧತಿಗಳನ್ನೂ ತನ್ನ ರಾಜ್ಯದಲ್ಲಿ ಆರಂಭಿಸಿದ. ಲಾಸದಲ್ಲಿ ತನಗಾಗಿ ದೊಡ್ಡ ಅರಮನೆಯೊಂದನ್ನು ಕಟ್ಟಿಸಿದ. ಟಿಬೆಟ್ಟಿನ ಇತಿಹಾಸದಲ್ಲಿ ಈತನದು ಪ್ರಥಮ ಸ್ಥಾನ.

755–97ರಲ್ಲಿ ಆಳಿದವನು ಖ್ರಿಸೋಂಗ್ ಡೆ–ತ್ಸೆನ್. ಈತ ಭಾರತದಿಂದ ಪದ್ಮಸಂಭವನೆಂಬ ಬೌದ್ಧ ಭಿಕ್ಷುವನ್ನು ಬರಮಾಡಿಕೊಂಡ. ಮುಂದಿನ ಶತಮಾನದಲ್ಲಿ ರಾಲ್–ಪಾ–ಚಾನ್ ಬೌದ್ಧ ಸಂಘಗಳನ್ನು ವ್ಯವಸ್ಥೆಗೊಳಿಸಿದ. ಭಿಕ್ಷುಗಳ ಪ್ರಭಾವ ಹೆಚ್ಚಿತು. ಅನೇಕ ಬೌದ್ಧಾಲಯಗಳು ನಿರ್ಮಿತವಾದುವು. ಭಾರತದಿಂದ ಅನೇಕ ಬೌದ್ಧಪಂಡಿತರು ಟಿಬೆಟ್ಟಿಗೆ ಬಂದು ಧಾರ್ಮಿಕ ಗ್ರಂಥಗಳನ್ನು ಭಾಷಾಂತರಿಸಿದರು; ಧರ್ಮಪ್ರಚಾರ ಮಾಡಿದರು.

ಗ್ಯಾಂಪೋನ ಕಾಲದಿಂದಲೂ ಟಿಬೆಟ್–ಚೀನಗಳ ನಡುವೆ ಕದನಗಳಾಗುತ್ತಲೇ ಇದ್ದುವು. ಗ್ಯಾಂಪೋನ ಮರಣಾನಂತರ ಚೀನಿಯರು ಲಾಸವನ್ನು ಆಕ್ರಮಿಸಿದರು. ಆದರೆ ಡೆ–ತ್ಸೆನನ ಕಾಲದಲ್ಲಿ ಚೀನಿಯರು ಪರಾಭವವನ್ನನುಭವಿಸಿ ಟಿಬೆಟ್ಟಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಬೇಕಾಯಿತು. ಅನಂತರ ಬಂದ ಪಾ ಚನ್ ತನ್ನ ರಾಜ್ಯವನ್ನು ಇನ್ನಷ್ಟು ವಿಸ್ತರಿಸಿದ. ಆದರೆ ಈತನ ಸೋದರ ಲಾಂಗ್–ದರ್–ಮ ಬೌದ್ಧಮತದ ವಿರೋಧಿಯಾಗಿದ್ದ. ಅಣ್ಣನ ಬೌದ್ಧಧರ್ಮದ ಒಲವನ್ನು ಸಹಿಸದೆ ಅವನನ್ನು ಕೊಂದು ಸಿಂಹಾಸನವನ್ನೇರಿದ. ಆದರೆ ಮೂರು ವರ್ಷಗಳೊಳಗಾಗಿಯೇ ಈತನೂ ಕೊಲ್ಲಲ್ಪಟ್ಟ (842). ಟಿಬೆಟ್ಟಿನ ಇತಿಹಾಸದಲ್ಲೆ ಅರಸುಮನೆತನಗಳ ಆಳಿಕೆ ಇದರೊಂದಿಗೆ ಮುಗಿಯಿತು. ಅನೇಕ ಪಾಳೆಯಗಾರರು ತಲೆಯೆತ್ತಿ ಪ್ರಬಲರಾದರು. ಲಾಂಗ್–ದರ್–ಮನ ವಂಶಜರು ಪಶ್ಚಿಮ ಟಿಬೆಟ್ಟಿನಲ್ಲಿ (ಗುಗೆ, ಲಡಖ್) ಪ್ರಬಲರಾದರು. ಪಾಳೆಯಗಾರರ ಪರಸ್ಪರ ಕಲಹಗಳ ಪರಿಣಾಮವಾಗಿ ರಾಜಕೀಯ ಅವ್ಯವಸ್ಥೆ ತಲೆದೋರಿತು.

1207ರಲ್ಲಿ ಮಂಗೋಲರ ಚೆಂಗೇಷ್‌ಖಾನ್ ಟಿಬೆಟ್ ಹಾಗೂ ಚೀನಗಳನ್ನು ಆಕ್ರಮಿಸಿದ. ಟಿಬೆಟ್ ಅವನ ಸಾರ್ವಭೌಮತ್ವವನ್ನು ಒಪ್ಪಿತು. ಚೀನದ ಕ್ಯಾನ್ಸೂ ಪ್ರಾಂತ್ಯದ ಅಧಿಪತಿಯಾಗಿದ್ದ ಗೋದನ್ 1239ರಲ್ಲಿ ಟಿಬೆಟ್ಟಿನ ಮೇಲೆ ಧಾಳಿಮಾಡಿದ. ಆಗ ಟಿಬೆಟಿನ ಪ್ರಜೆಗಳು ಪ್ರಜಾನುರಾಗಿಯಾಗಿದ್ದ ಸಾಕ್ಯಪಂಡಿತನೆಂಬ ಸಾಕ್ಯ ಸಂಘದ ಲಾಮನನ್ನು ಆಶ್ರಯಿಸಿ ಆತನ ನೆರವನ್ನು ಅಪೇಕ್ಷಿಸಿದರು. ಮಂಗೋಲರ ನಾಯಕ ಆತನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿ ಟಿಬೆಟ್ಟಿನ ಆಡಳಿತ ಸೂತ್ರಗಳನ್ನು ಅವನಿಗೆ ವಹಿಸಿದ. 1251ರಲ್ಲಿ ಗೋದನ್ ಮರಣ ಹೊಂದಿದ ಬಳಿಕ ಟಿಬೆಟ್ಟು ಕುಬ್ಲೈಖಾನನ ವಶಕ್ಕೆ ಬಂತು. ಇದೇ ವೇಳೆಗೆ ಸಾಕ್ಯಪಂಡಿತನೂ ಮರಣ

ಹೊಂದಿದ್ದ. ಈತನ ಸೋದರಳಿಯ ಫಗ್ಪನನ್ನು ಕುಬ್ಲೈಖಾನ್ ಗೌರವಿಸಿ ರಾಜಪ್ರಧಾನಿಯಾಗಿ ನೇಮಿಸಿ ಅವನಿಗೆ ತಿಸ್ರಿ ಎಂಬ ಬಿರುದು ನೀಡಿದ. ಭೌದ್ಧಧರ್ಮವನ್ನು ರಾಜಧರ್ಮವೆಂದು ಸಾರಿದ. ಟಿಬೆಟ್ಟು ಮಂಗೋಲರ ಅಧೀನಕ್ಕೆ ಒಳಪಟ್ಟಿತು. ತಿಸ್ರಿಗಳು ಅರಸನ ಪ್ರತಿನಿಧಿಗಳಾಗಿ ಮಧ್ಯ ಟಿಬೆಟ್ಟಿನ ಅಧಿಪತಿಗಳಾದರು. ಆದರೆ ಹೀಗೆ ನೇಮಕಗೊಂಡ ತಿಸ್ರಿಗಳೆಲ್ಲ ಸಾಕ್ಯಪಂಡಿತನ ವಂಶಸ್ಥರೇ. ಅವರಲ್ಲಿಯ ದ್ವೇಷಾಸೂಯೆಗಳ ಪರಿಣಾಮವಾಗಿ ಕ್ರಮೇಣ ತಿಸ್ರಿಗಳ ಪ್ರಭಾವ ಕುಗ್ಗಿತು. ಕುಬ್ಲೈಖಾನ್ ಚೀನದ ಚಕ್ರವರ್ತಿಯಾದ. ಆದರೆ ಅಲ್ಲಿಯ ಜನರು ಈ ಪರಕೀಯನನ್ನು ಮತ್ತು ಈತನ ವಂಶವಾದ ಯೂವಾನ್ ಮನೆತನದ ಅರಸರನ್ನು ಹೊರದೂಡಲು ಯತ್ನಿಸಿ 1368ರಲ್ಲಿ ಯಶಸ್ವಿಯಾದರು. ಚೀನದಲ್ಲಿ ಮಿಂಗ್ ಅರಸರ ಆಳಿಕೆ ಆರಂಭವಾಯಿತು. ಯೂವಾನ್ ಅರಸರಂತೆ ಟಿಬೆಟ್ಟಿನ ಮೇಲಣ ಪ್ರಭುತ್ವವನ್ನು ಈ ಅರಸರು ಉಳಿಸಿಕೊಳ್ಳಲಾಗಲಿಲ್ಲ. ಸಾಕ್ಯಕುಲದ ಪ್ರತಿಸ್ಪರ್ಧಿಗಳಾಗಿದ್ದ ಪಗ್ಮೋತ್ರು ಕುಲದವರು ತಿಸ್ರಿಗಳನ್ನು ಕಡೆಗಣಿಸಿದರು. ಮಿಂಗ್ ಮನೆತನದ ಅರಸರು ನಾಮಮಾತ್ರಕ್ಕೆ ಟಿಬೆಟ್ಟಿನ ಪ್ರಭುಗಳಾಗಿದ್ದರೂ ವಾಸ್ತವವಾಗಿ ಪಗ್ಮೋತ್ರುಗಳೂ ಅನಂತರ ಬಂದ ರಿಂಪುಂಗ್ ಮತ್ತು ಟ್ಸಾಂಗ್ ಕುಲಗಳವರೂ ಟಿಬೆಟಿನ ಅರಸಾದರು. ಈ ಕುಲಗಳ ಲಾಮಗಳು ಚೀನಕ್ಕೆ ಹೋಗಿಬರುವಷ್ಟಕ್ಕೆ ಚೀನದೊಂದಿಗೆ ಇವರ ಸಂಬಂಧ ಸೀಮಿತವಾಗಿತ್ತು.

ಈ ವೇಳೆಗೆ ಭಾರತದಲ್ಲಿ ಬೌದ್ಧಧರ್ಮದ ತಾಂತ್ರಿಕ ಪದ್ಧತಿ ಪ್ರಭಾವಶಾಲಿಯಾಗಿತ್ತು. ಅದು ನೆರೆಯ ಪ್ರದೇಶಗಳಿಗೂ ಹಬ್ಬಿತು. ಪ್ರಕೃತಿಪೂಜಕರಾದ ಟಿಬೆಟ್ ಜನರು ತಾಂತ್ರಿಕ ಪದ್ಧತಿಗಳನ್ನು ತಮ್ಮ ಸಂಪ್ರದಾಯದೊಂದಿಗೆ ಹೊಂದಿಸಿಕೊಂಡು ವಿಶಿಷ್ಟವಾದ ಒಂದು ಧರ್ಮವನ್ನು ಬೆಳೆಸಿಕೊಂಡರು. ಈ ಧರ್ಮದ ಪ್ರಭಾವ ಆಳವಾಗಿ ಬೇರೂರಿ, ಧಾರ್ಮಿಕ ಗುರುಗಳೇ ಆಳರಸರೂ ಆದರು. 14ನೆಯ ಶತಮಾನದವರೆಗೂ ಕೆಂಪುಟೋಪಿಯ ಬೌದ್ಧ ಗುರುಗಳು ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆದಿದ್ದರು. ಇವರು ಮದುವೆಯಾಗಬಹುದಿತ್ತು. ಮದ್ಯ ಸೇವಿಸಬಹುದಾಗಿತ್ತು. ಆದರೆ ಗೆಲುಗ್ಪ ಕುಲಕ್ಕೆ ಸೇರಿದ ತ್ಸಾಂಗ್–ಖಾ–ಪಾ (ಸು.1357–1419) ಎಂಬ ಸುಧಾರಕನೊಬ್ಬ ಹಳದಿ ಟೋಪಿಯ ಹೊಸ ಪಂಥವನ್ನು ಆರಂಭಿಸಿದ. ಹೆಚ್ಚು ಕಟ್ಟುನಿಟ್ಟಾದ ನಿಯಮಗಳನ್ನು ಜಾರಿಗೆ ತಂದ. ಈತನ ಉತ್ತರಾಧಿಕಾರಿ ಗ್ಯಾಂಡೆನ್ ತ್ರುಪ್ಪ 1474ರಲ್ಲಿ ಮರಣಹೊಂದಿದ. ಎರಡು ವರ್ಷಗಳ ಬಳಿಕ ಹುಟ್ಟಿದ ಬಾಲಕನೊಬ್ಬನನ್ನು ಆತನ ಆತ್ಮ ಪ್ರವೇಶಿಸಿತೆಂದು ಭಾವಿಸಿ ಆ ಹುಡುಗನನ್ನು ತ್ರುಪ್ಪನ ಉತ್ತರಾಧಿಕಾರಿಯೆಂದು ಜನ ಸ್ವೀಕರಿಸಿದರು. ಈ ಧಾರ್ಮಿಕ ಗುರು ಅವತಾರಪುರುಷನೆಂಬ ಭಾವನೆ ಉಂಟಾಯಿತು. ಸೋ ನಮ್ ಗ್ಯಾಟ್ಸೋಗೆ ಮಂಗೋಲರ ನಾಯಕ ಅಲ್ತನ್‍ಖಾನ್ ದಲೈಲಾಮ ಎಂಬ ಬಿರುದನ್ನಿತ್ತ. ಈ ಧಾರ್ಮಿಕ ಗುರುವಿಗೆ ದಲೈಲಾಮ ಎಂಬ ಹೆಸರೇ ಬಂದಿತು. ಲೊಬ್ ಸ್ಯಾಂಗ್ ಗ್ಯಾಟ್ಸೊ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಹಿಂದಿನ ಧಾರ್ಮಿಕ ಪರಂಪರೆಗೆ ಸೇರಿದ ಪಂಗಡದವರೊಂದಿಗೆ ಹೋರಾಡಬೇಕಾಯಿತು. ಆತ ಇದಕ್ಕಾಗಿ ಮಂಗೋಲರ ನೆರವನ್ನು ಪಡೆದ. ಕೆಂಪುಟೋಪಿ ಪಂಗಡದವರನ್ನು ಹಿಮ್ಮೆಟ್ಟಿಸಿದ. ಆ ಬಳಿಕ ಟಿಬೆಟ್ಟಿನ ಒಡೆತನ ಈ ದಲೈಲಾಮನಿಗೆ ದೊರಕಿತು. ಲ್ಹಾಸದಲ್ಲಿ ಪೊಟಾಲ ಅರಮನೆಯನ್ನು ಕಟ್ಟಿಸಲು ಅಸ್ತಿಭಾರ ಹಾಕಿದವನು ಈತನೇ.

ದಲೈಲಾಮನನ್ನು ಟಿಬೆಟ್ ದೇಶದಲ್ಲಿ ಬೋಧಿಸತ್ತ್ವನೆಂದು ಭಾವಿಸಿ ಪೂಜಿಸುವ ಪದ್ಧತಿ ಬೆಳೆಯಿತು. ನಿರ್ವಾಣ ಪದವಿಗೆ ಏರಿದರೂ ಸಮಾಜ ಕಲ್ಯಾಣಕ್ಕಾಗಿ ಪುನಃ ಅವತಾರವನ್ನು ತಾಳುವವರು ಬೋಧಿಸತ್ತ್ವರು. ಟಿಬೆಟ್ಟಿನ ದಲೈಲಾಮಗಳು ಪ್ರಜೆಗಳ ಅರಸರೂ ಧಾರ್ಮಿಕ ಗುರುಗಳೂ ಆಗಿದ್ದರು. ರಾಜಕೀಯ ಮತ್ತು ಧಾರ್ಮಿಕ ಅಧಿಕಾರಗಳು ಅವರಲ್ಲಿ ಕೇಂದ್ರೀಕೃತವಾಗಿದ್ದುವು. ಐದನೆಯ ದಲೈಲಾಮ ಅಧಿಕಾರಕ್ಕೆ ಬಂದಾಗ ಈ ಅವತಾರದ ಸಿದ್ಧಾಂತಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರಕಿತು. ಒಬ್ಬ ದಲೈಲಾಮ ಮರಣ ಹೊಂದುವ ಮೊದಲು ಮುಂದೆ ಇಂತಹ ಕಡೆ ಅವತಾರ ಹೊಂದುವುದಾಗಿ ತಿಳಿಸುತ್ತಿದ್ದ. ಅದಕ್ಕಾಗಿ ಕೆಲವು ಗುರುತುಗಳನ್ನು ಸೂಚಿಸುತ್ತಿದ್ದ. ಆತ ನಿಧನನಾದ 3–4 ವರ್ಷಗಳ ಬಳಿಕ ಸೇರಾ, ದ್ರೆಪುಂಗ್, ಗಂಡೆನ್, ನೆಚುಂಗ್ ಮತ್ತು ಸಾಮ್ಯೆಗಳ ಪುರಾತನ ಮಠಗಳ ಸಂನ್ಯಾಸಿಗಳು ಮುಂದಿನ ದಲೈಲಾಮ ಜನಿಸಿರಬಹುದಾದ ಸ್ಥಳವನ್ನು ಹುಡುಕುತ್ತಿದ್ದರು. ಅವರೇ ಆತನನ್ನು ಆರಿಸುತ್ತಿದ್ದರು. ಆತನನ್ನು ಲಾಸದ ಪೊಟಾಲ ಅರಮನೆಗೆ ಕರೆತಂದು ಅಲ್ಲಿ ಆತನ ವಿದ್ಯಾಭ್ಯಾಸಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಲಾಗುತ್ತಿತ್ತು. 18 ವರ್ಷಗಳು ತುಂಬಿದ ಬಳಿಕ ಹೊಸ ದಲೈಲಾಮ ತನ್ನ ಅಧಿಕಾರಸೂತ್ರಗಳನ್ನು ವಹಿಸಿಕೊಳ್ಳುತ್ತಿದ್ದ. ಟಿಬೆಟ್ಟನರು ದಲೈಲಾಮನನ್ನು ಅಮೂಲ್ಯರಕ್ಷಕ, ಅಮೂಲ್ಯ ಚಕ್ರವರ್ತಿ ಎಂದು ಅರ್ಥಬರುವ ಕ್ಯಮ್ ಗೋನ್ ರಿಂ–ಪೋ–ಚೆ, ಗ್ಯೆ ವಾ–ರಿಂ–ಪೋ ಚೆ ಎಂದು ಕರೆಯಲಾಗುತ್ತಿದೆ. ದಲೈಲಾಮ (ತಲೆಲಾಮ) ಎಂಬುದು ಮಂಗೋಲರೂ ಚೀನಿಯರೂ ಬಳಸುವ ಪದ.

ದಲೈಲಾಮನಿಗೆ ತಾತ್ತ್ವಿಕವಾಗಿ ನಿರಂಕುಶ ಅಧಿಕಾರವಿದ್ದರೂ ಆಚರಣೆಯಲ್ಲಿ ಕೆಲವು ಅಡೆತಡೆಗಳಿದ್ದುವು. ರಾಜನೂ ಗುರುವೂ ಆಗಿದ್ದ ದಲೈಲಾಮ ಅಧಿಕಾರಸೂತ್ರಗಳನ್ನು ವಹಿಸುವವರೆಗೂ ರಾಜ್ಯಸಭೆಯಿಂದ ನಿಯೋಜಿತನಾದ ರಾಜಪ್ರತಿನಿಧಿ ಆಡಳಿತದ ಹೊಣೆ ಹೊರುತ್ತಿದ್ದ. ಆತನ ಅನಂತರದ ಸ್ಥಾನ ಪ್ರಧಾನಿಯದು. ಈತ ಲೌಕಿಕ ವ್ಯಕ್ತಿ. ಒಬ್ಬನೇ ಪ್ರಧಾನಿಯಿರಬೇಕೆಂಬ ನಿಯಮವಿರಲಿಲ್ಲ. ಆದರೆ ಈತ ಆಡಳಿತ ಸಭೆಯ ಸದಸ್ಯನಾಗಿರಲಿಲ್ಲ. ಆ ಸಭೆ ಮಾಡಿದ ಸಲಹೆಗಳನ್ನು ತನ್ನದೇ ಆದ ಟೀಕೆಗಳೊಂದಿಗೆ ದಲೈಲಾಮನಿಗೆ ಕಳುಹಿಸುವ ಕರ್ತವ್ಯ ಈತನದಾಗಿತ್ತು. ಟಿಬೆಟ್ ಸರ್ಕಾರದಲ್ಲಿ ಕಷಗ್ ಎಂಬುದು ಆಡಳಿತ ಸಭೆ. ಇದನ್ನು ಮಂತ್ರಿಮಂಡಲ ಎನ್ನುವುದು ಕಷ್ಟ. ಒಬ್ಬೊಬ್ಬ ಮಂತ್ರಿಗೆ ಸೇರಿದಂತೆ ಇಲಾಖೆಗಳನ್ನು ಪ್ರತ್ಯೇಕಿಸಲಾಗಿರಲಿಲ್ಲ. ಅವರದು ಜಂಟಿ ಜವಾಬ್ದಾರಿ. ಅವರು ತಮ್ಮ ಸಲಹೆಗಳನ್ನು ಅನುಮೋದನೆಗೆಂದು ದಲೈಲಾಮನಿಗೆ ಸಲ್ಲಿಸುತ್ತಿದ್ದರು. ಆಡಳಿತಸಭೆ ನ್ಯಾಯಮಂಡಲಿಯೂ ಆಗಿತ್ತು.

ಆಡಳಿತಸಭೆಯ ಅಧೀನದಲ್ಲಿ ಹಲವಾರು ವಿಶಿಷ್ಟ ಅಧಿಕಾರಿಗಳಿದ್ದರು (ತ್ಸಿ–ಪೊನ್). ದೇಶದ ಆದಾಯ–ವೆಚ್ಚಗಳ ಲೆಕ್ಕಪತ್ರಗಳನ್ನಿಡುವ, ಕಂದಾಯಗಳನ್ನು ನಿರ್ಧರಿಸುವ ಹೊಣೆ ಇವರದು. ರಾಜನಿಗೆ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ನೆರವು ನೀಡಲು ಚಿಕ್ಯಾಂಪ್ ಖೆಂಪೊ ಎಂಬ ಸಂನ್ಯಾಸಿ ಇರುತ್ತಿದ್ದ. ಈತ ದಲೈಲಾಮನ ಸ್ವಂತ ಖಜಾನೆಯ ಹಾಗೂ ಪೊಟಾಲದ ಖಜಾನೆಯ ಅಧಿಕಾರಿಯಾಗಿದ್ದ. ಯಿಕ್ ಟ್ಸಾಂಗ್ ಎಂಬುದು ನಾಲ್ವರು ಸಂನ್ಯಾಸಿಗಳ ಸಭೆ. ಮಠಗಳ ಆಡಳಿತದ ಹೊಣೆಯನ್ನು ಇವರು ಹೊತ್ತಿದ್ದರು. ಇವರು ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನ ವಹಿಸುತ್ತಿದ್ದರು. ರಾಷ್ಟ್ರೀಯ ಸಭೆ ಅವಶ್ಯವಿದ್ದಾಗ ಮಾತ್ರ ಸೇರುತ್ತಿತ್ತು. ಇದು ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸಲು ರೂಪಿತವಾಗಿದ್ದ ಸಭೆ. ಉನ್ನತ ಅಧಿಕಾರಿಗಳು, ಲಾಸದ ಮಠಗಳಲ್ಲಿಯ ಸಂನ್ಯಾಸಿಗಳ ಪ್ರತಿನಿಧಿಗಳು ಈ ಸಭೆಯ ಸದಸ್ಯರಾಗಿದ್ದರು. ದಲೈಲಾಮ ನಿಧನಹೊಂದಿದಾಗ ಇನ್ನೊಬ್ಬನನ್ನು ಆ ಸ್ಥಾನಕ್ಕೆ ಆರಿಸುವವರೆಗೆ ರಾಜಪ್ರತಿನಿಧಿಯಾಗಿ ಆಳಬೇಕಾಗಿದ್ದವನನ್ನು ನೇಮಿಸುವ ಅಧಿಕಾರ ಈ ಸಭೆಗೆ ಇತ್ತು.

ಐದನೆಯ ದಲೈಲಾಮನಿಗೆ ಕೋಕೋ ನೋರ್ ಪ್ರದೇಶದ ಮಂಗೋಲರ ನಾಯಕನಾದ ಗುಸ್ರಿಖಾನನ ಬೆಂಬಲವಿತ್ತು. ಚೀನದಲ್ಲಿ ಆಗ ಮಾಂಚೂಗಳು ಕ್ರಮೇಣ ಪ್ರಾಬಲ್ಯಕ್ಕೆ ಬರುತ್ತಿದ್ದರು. ಗುಸ್ರಿಖಾನ ಮಾಂಚೂಗಳೊಂದಿಗೆ ರಾಜಕೀಯ ಸಂಬಂಧ ಹೊಂದಿದ್ದ. ಗುಸ್ರಿಖಾನನ ಅಧೀನಕ್ಕೆ ಟಿಬೆಟ್ ಬಂದಾಗ ಆತ 5ನೆಯ ದಲೈಲಾಮನನ್ನು ಆ ಪದವಿಗೆ ಏರಿಸಿದ. ಆತ ಬದುಕಿರುವ ತನಕ (1655) ದಲೈಲಾಮ ಆತನ ಆಜ್ಞಾಧಾರಕನಂತಿದ್ದ. ಆದರೆ ಅನಂತರ ದಲೈಲಾಮ ಟಿಬೆಟ್ಟಿನ ವ್ಯವಹಾರಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ಪಡೆದ. ಈತ ಒಂದು ಕಡೆ ಚೀನದ ಮಾಂಚೂಗಳನ್ನೂ ಇನ್ನೊಂದು ಕಡೆ ಮಂಗೋಲರನ್ನೂ ಅನುಸರಿಸಿದ. ಆದರೆ 1682ರಲ್ಲಿ ಈ ದಲೈಲಾಮ ಮರಣಹೊಂದಿದಾಗ ಈತನ ಪ್ರಧಾನಿಯಾಗಿದ್ದ ಸಾಂಗ್ಯೆ ಗ್ಯಾಟ್ಸೊ ದಲೈಲಾಮನ ನಿಧನದ ವಾರ್ತೆಯನ್ನು ಮುಚ್ಚಿಟ್ಟು ಆಡಳಿತದ ಸೂತ್ರಗಳನ್ನು ಸ್ವತಃ ವಹಿಸಿದ. ಆದರೆ ಮಂಗೋಲ ಲ್ಹಾಬ್ಜಾಂಗ್ ಖಾನ್ ಇದನ್ನು ಸಹಿಸಲಿಲ್ಲ. ಆತ ಚೀನದ ಚಕ್ರವರ್ತಿ ಕಾಂಗ್ ಹ್ಸಿಯ ನೆರವನ್ನು ಪಡೆದು ಸಾಂಗ್ಯೆ ಗ್ಯಾಟ್ಸೊನನ್ನು ಸೋಲಿಸಿ ತಾನೇ ಆರಿಸಿದ ಒಬ್ಬ ಲಾಮನನ್ನು ಟಿಬೆಟ್ಟಿನ ಕಲ್ಯೆ ಎಂದು ನೇಮಿಸಿದ. ಆದರೆ ಟಿಬೆಟ್ಟಿನ ಪ್ರಜೆಗಳು ಇದನ್ನು ಮಾನ್ಯ ಮಾಡಲಿಲ್ಲ. ಕಾಂಗ್ ಹ್ಸಿ ಈ ಪರಿಸ್ಥಿತಿಯ ಪ್ರಯೋಜನ ಪಡೆದು ಟಿಬೆಟ್ ಜನರ ಕೋರಿಕೆಯನ್ನು ಮಾನ್ಯಮಾಡಿ ಲ್ಹಾಬ್ಜಾಂಗನನ್ನು ಹೊರದೂಡಿದ. ಈ ಮೂಲಕ ಚೀನದ ಚಕ್ರವರ್ತಿ ಟಿಬೆಟ್ಟಿನ ರಾಜಕೀಯದಲ್ಲಿ ಪ್ರವೇಶಿಸಿದ. ಲಾಸದಲ್ಲಿ ತನ್ನ ಸೈನ್ಯದ ಒಂದು ತುಕಡಿಯನ್ನು ನಿಲ್ಲಿಸಿದ. ದಲೈಲಾಮನ ಪ್ರಭಾವ ಕುಗ್ಗಿತು. ಟಿಬೆಟ್ಟಿನ ಆಡಳಿತ ನಿರ್ವಹಿಸಲು ಆಂಬನರನ್ನು ಚೀನ ಚಕ್ರವರ್ತಿ ನೇಮಿಸಿದ. ಪೋಲ ತೇಜಿ ಎಂಬಾತ ನೂತನ ಆಡಳಿತಾಧಿಕಾರಿಯಾದ. ಈತ ವಿಚಕ್ಷಣೆಯಿಂದ ಆಡಳಿತ ಸೂತ್ರಗಳನ್ನು 18 ವರ್ಷಗಳ ಕಾಲ ನಿರ್ವಹಿಸಿ ಮಾಂಚೂ ಅರಸರು ನಾಮಮಾತ್ರಕ್ಕೆ ಟಿಬೆಟ್ಟಿನ ಪ್ರಭುಗಳಾಗಿರುವಂತೆ ಮಾಡಿದ. ಈ ಸಮಯದಲ್ಲೇ ದಲೈಲಾಮನ ಪ್ರತಿಸ್ಪರ್ಧಿ ಎನ್ನಿಸುವಂತೆ ಪಂಚೆನ್‍ಲಾಮನನ್ನು ನಿಯಮಿಸುವ ಪದ್ಧತಿ ಆರಂಭವಾಯಿತು. ಪೋಲ ತೇಜಿ 1747ರಲ್ಲಿ ನಿಧನಹೊಂದಿದ. ಆತನ ಮಗ ಗ್ಯುರ್ಮೆ ನಂಗ್ಯಾಲ್ ಉತ್ತರಾಧಿಕಾರಿಯಾದ. ಆದರೆ ಆತ ತಂದೆಯ ನೀತಿಯನ್ನು ಪಾಲಿಸದೆ ಚೀನ ಅಧಿಕಾರಿಗಳೊಂದಿಗೆ ವೈರ ಕಟ್ಟಿಕೊಂಡ. ಅಂಬನರು ಗ್ಯುರ್ಮೆಯನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಕೊಲೆಮಾಡಿದರು. ಆಗ ಚೀನ ಚಕ್ರವರ್ತಿ ಚಿಯೆನ್ ಲುಂಗ್ ಮತ್ತೊಮ್ಮೆ ಟಿಬೆಟ್ಟಿನ ರಾಜಕೀಯದಲ್ಲಿ ಪ್ರವೇಶಿಸಿದ. ಇದರ ಪರಿಣಾಮವಾಗಿ ಮತ್ತೊಮ್ಮೆ ದಲೈಲಾಮ ತನ್ನ ಹಿಂದಿನ ಅಧಿಕಾರಗಳನ್ನು ಪಡೆದುಕೊಂಡ. ಈತ ಏಳನೆಯ ದಲೈಲಾಮ ಕೆಸಂಗ್ ಗ್ಯಾಟ್ಸೊ. ಈತ 1757ರಲ್ಲಿ ನಿಧನ ಹೊಂದಿದ. ಆನಂತರ ಬಂದ ದಲೈಲಾಮಗಳು ತಮ್ಮ ಪ್ರತಿನಿಧಿಗಳಿಗೇ ಅಧಿಕಾರ ವಹಿಸಿಕೊಟ್ಟರು. ಸು. 120 ವರ್ಷಗಳ ಕಾಲ ಈ ಪರಿಸ್ಥಿತಿ ಮುಂದುವರಿಯಿತು. 5ನೆಯ ದಲೈಲಾಮ ತನ್ನ ಗುರು ಲೊಬ್ಜಾಂಗ್ ಜೋಕ್ಯಿ ಗ್ಯಾಲ್ಟೆಸೆನ್‍ನನ್ನು ಟಾಷಿಲುಂಪೊ ಮಠದ ಸಂನ್ಯಾಸಿಯಾಗಿ ನೇಮಿಸಿ, ಆತ ಧ್ಯಾನಿ ಬುದ್ಧ ಅಮಿತಭನ ಅವತಾರವೆಂದು ಘೋಷಿಸಿದ್ದ. ಈತನೇ ಪಂಚೆನ್‍ಲಾಮ ಎನಿಸಿಕೊಂಡ. ದಲೈಲಾಮನ ಗುರುವಿನ ಸ್ಥಾನದಲ್ಲಿದ್ದ ಈತ ಸಹಜವಾಗಿಯೇ ಲೌಕಿಕ ವಿಷಯಗಳೊಡನೆ ಯಾವ ಸಂಬಂಧವನ್ನೂ ಹೊಂದಿರದೆ, ಆಧ್ಯಾತ್ಮಿಕವಾಗಿ ದಲೈಲಾಮನಿಗಿಂತ ಉನ್ನತ ಮಟ್ಟದಲ್ಲಿರುವವನೆಂದು ಭಾವಿಸಲಾಗಿತ್ತು.

ಈ ಮಧ್ಯೆ ಭಾರತದಲ್ಲಿ ಬ್ರಿಟಿಷರ ಆಳಿಕೆ ಆರಂಭವಾಗಿತ್ತು. ವಾರನ್ ಹೇಸ್ಟಿಂಗ್ಸ್ ಟಿಬೆಟ್ಟಿನೊಡನೆ ವಾಣಿಜ್ಯ ಸಂಪರ್ಕಗಳನ್ನು ಬೆಳೆಸಲು ಯತ್ನಿಸಿದ. ಅದಕ್ಕಾಗಿ ಜಾರ್ಜ್ ಬೋಗ್ಲ್ ಎಂಬ ಅಧಿಕಾರಿಯನ್ನು ಭೂತಾನದ ಮೂಲಕ ಟಿಬೆಟ್ಟಿಗೆ ಕಳಿಸಿದ. ಆತ ಪಂಚೆನ್ ಲಾಮನನ್ನು ಟಾಷಿ ಲುಂಪೋದಲ್ಲಿ ಕಂಡು ಅವನೊಡನೆ ವ್ಯವಹಾರಗಳನ್ನು ಕುರಿತು ಚರ್ಚಿಸಿದ. 1788ರಲ್ಲಿ ನೇಪಾಲದ ಗೂರ್ಖರು ಟಿಬೆಟ್ಟಿನ ಝಿಕಾಟ್ಸೆಯನ್ನು ಮುತ್ತಿದರು. ಆದರೆ ಮಾಂಚೂ ಅರಸರು ಅವರನ್ನು ಹೊರದೂಡಿದರು (1792). 1855ರಲ್ಲಿ ಇನ್ನೊಮ್ಮೆ

ಗೂರ್ಖರು ಟಿಬೆಟ್ಟನ್ನು ಮುತ್ತಿದಾಗ ಟಿಬೆಟ್‌ನಲ್ಲಿ ಮಾಂಚೂಗಳ ಪ್ರಭಾವ ಕಡಿಮೆಯಾಗಿದ್ದ ಕಾರಣ ಗೂರ್ಖರು ಜಯಶೀಲರಾದರು. ಟಿಬೆಟ್ ಸರ್ಕಾರ 10,000 ರೂಪಾಯಿಗಳನ್ನು ಪ್ರತಿವರ್ಷವೂ ಗೂರ್ಖರಿಗೆ ಕೊಡಬೇಕೆಂಬ, ಗೂರ್ಖ ವರ್ತಕರಿಂದ ಸುಂಕಗಳನ್ನು ಪಡೆಯ ಬಾರದೆಂಬ ಒಪ್ಪಂದವಾಯಿತು.

1911ರಲ್ಲಿ ಚೀನದಲ್ಲಿ ನಡೆದ ಕ್ರಾಂತಿಯ ಪರಿಣಾಮವಾಗಿ ಟಿಬೆಟ್ಟಿನ ಇತಿಹಾಸದಲ್ಲಿ ನೂತನ ಘಟ್ಟವೊಂದು ಆರಂಭವಾಯಿತು. ದಲೈಲಾಮ ಚೀನದೊಡನೆ ತನ್ನ ಸಂಬಂಧಗಳನ್ನು ಕಡಿದುಕೊಂಡು ಬ್ರಿಟನ್ ಹಾಗೂ ರಷ್ಯ ದೇಶಗಳೊಡನೆ ಹೊಸ ಬಾಂಧವ್ಯ ಬೆಳೆಸಬೇಕೆಂದೂ ಸ್ವತಂತ್ರವಾಗಿರಬೇಕೆಂದೂ ಯೋಚಿಸಿದ. ಆದರೆ ಬ್ರಿಟನ್ ಇದಕ್ಕೆ ಬೆಂಬಲ ನೀಡಲಿಲ್ಲ. ಚೀನ ಗಣರಾಜ್ಯ ಟಿಬೆಟ್ಟಿನ 13ನೆಯ ದಲೈಯನ್ನು ದಲೈಲಾಮನೆಂದು ಮಾನ್ಯಮಾಡಿತು. 1913ರಲ್ಲಿ ಬ್ರಿಟನ್, ಚೀನ ಹಾಗೂ ಟಿಬೆಟ್ ಪ್ರತಿನಿಧಿಗಳು ಸಿಮ್ಲಾದಲ್ಲಿ ಸಭೆ ಸೇರಿದರು. ಹೆನ್ರಿಕ್ ಮ್ಯಾಕ್‌ಮೋಹನ್ ಇದರ ಅಧ್ಯಕ್ಷತೆ ವಹಿಸಿದ. ಚೀನ–ಟಿಬೆಟ್‌ಗಳ ನಡುವಣ ಹಾಗೂ ಭಾರತ–ಟಿಬೆಟ್ ನಡುವಣ ಮೇರೆಗಳನ್ನು ಈ ಸಭೆಯಲ್ಲಿ ನಿರ್ಧರಿಸಲಾಯಿತು. ಚೀನ ಈ ಒಪ್ಪಂದವನ್ನು ಅನುಮೋದಿಸಲಿಲ್ಲ. ದಲೈಲಾಮ ಹಾಗೂ ಪಂಚೆನ್‌ಲಾಮಗಳ ನಡುವಣ ಭಿನ್ನಾಭಿಪ್ರಾಯವೂ ಇದಕ್ಕೊಂದು ಕಾರಣವಾಯಿತು. 9ನೆಯ ಪಂಚೆನ್‌ಲಾಮ ಚೀನಕ್ಕೆ ಓಡಿಹೋದ. ಜನರಲ್ ಚಿಯಾಂಗ್ ಕೈ–ಷೆಕ್ ಟಿಬೆಟ್ಟನ್ನು ಚೀನದ ಭಾಗವೆಂದು ಘೋಷಿಸಿ ಅದನ್ನು ವಶಪಡಿಸಿಕೊಳ್ಳಲು ಯತ್ನಿಸಿದ. ಆದರೆ ಇದೂ ಫಲಿಸಲಿಲ್ಲ. 1947ರಲ್ಲಿ ಭಾರತ ಸ್ವತಂತ್ರವಾದಾಗ ಟಿಬೆಟ್ಟಿನಲ್ಲಿದ್ದ ಬ್ರಿಟಿಷ್ ಕಚೇರಿ ಭಾರತದ ಕಚೇರಿಯಾಗಿ ಮಾರ್ಪಟ್ಟಿತು. ಅಂದಿನಿಂದ ಬ್ರಿಟನ್ನಿನ ಸ್ಥಾನದಲ್ಲಿ ಭಾರತ ಟಿಬೆಟ್ಟಿನೊಡನೆ ವ್ಯವಹಾರಗಳನ್ನು ಮುಂದುವರಿಸಿತು. 1949ರಲ್ಲಿ ಚೀನದಲ್ಲಿ ಕಮ್ಯುನಿಸ್ಟ್ ಸರ್ಕಾರ ಸ್ಥಾಪಿತವಾಯಿತು. ಇದು ಟಿಬೆಟ್ಟನ್ನು ಚೀನದೊಡನೆ ವಿಲೀನಗೊಳಿಸುವ ಹಂಚಿಕೆ ಹೂಡಿತು. ಟಿಬೆಟ್ಟಿನ ಎಲ್ಲ ಪ್ರದೇಶಗಳಿಗೂ ರಸ್ತೆಗಳನ್ನು ನಿರ್ಮಿಸುವ ಕಾರ್ಯವನ್ನೂ ಮಾಡಿದ ಟಿಬೆಟ್ಟಿನ ಎಲ್ಲ ಪ್ರಜೆಗಳನ್ನೂ ಕಾರ್ಯೋನ್ಮುಖರಾಗು ವಂತೆ ಮಾಡಿತು. ಪರಂಪರಾನುಗತವಾಗಿ ಬೆಳೆದು ಬಂದಿದ್ದ ಪದ್ಧತಿಗಳನ್ನು ತ್ಯಜಿಸಿ, ಭೂಮಿಯ ಒಡೆತನಕ್ಕೆ ಸಂಬಂಧಿಸಿದಂತೆ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಇದರ ಪರಿಣಾಮ ವಾಗಿ ಹಲವರು ದಂಗೆ ಎದ್ದರು. ಚೀನೀ ಸರ್ಕಾರ ಆ ದಂಗೆಯನ್ನು ಅಡಗಿಸಬೇಕೆಂದು ದಲೈಲಾಮಗೆ ಆದೇಶ ನೀಡಿತಾದರೂ ದಲೈ ಅದಕ್ಕೆ ಒಪ್ಪಲಿಲ್ಲ. ಚೀನ ಸರ್ಕಾರ ದಲೈಲಾಮನ ನಿವಾಸವನ್ನೂ ದ್ರೆಪುಂಗ್ ಮತ್ತು ಸೆರಾ ಸಂಘಗಳನ್ನೂ ಮುತ್ತಿ ಹಾನಿ ಉಂಟುಮಾಡಿತು. ದಲೈಲಾಮ ತನ್ನ ಪರಿವಾರದೊಂದಿಗೂ ಮೂವರು ಸಂಪುಟ ದರ್ಜೆಯ ಮಂತ್ರಿಗಳು ಮತ್ತು ಇತರ ಉನ್ನತ ಅಧಿಕಾರಿಗಳೊಂದಿಗೂ ಭಾರತಕ್ಕೆ ಓಡಿಬಂದರು. ಭಾರತ ಸರ್ಕಾರ ಇವರಿಗೆ ರಾಜಕೀಯ ಆಶ್ರಯ ನೀಡಿತು. ಚೀನ ಸರ್ಕಾರ ಲಾಸದ ಸರ್ಕಾರವನ್ನು ಅಂತ್ಯಗೊಳಿಸಿ ಪಂಚೆನ್‌ಲಾಮನನ್ನು ಪೀಕಿಂಗಿನ ರಾಷ್ಟ್ರೀಯ ಪ್ರಜಾಸರ್ಕಾರದ ಉಪಾಧ್ಯಕ್ಷರನಾಗಿ ನೇಮಿಸಿ ಲಾಸಕ್ಕೆ ಕಳುಹಿಸಿತು (1959). ವಿಶ್ವಸಂಸ್ಥೆ ಚೀನ ಸರ್ಕಾರದ ಈ ಕ್ರಮವನ್ನು ಖಂಡಿಸಿತಾದರೂ ಅದರಿಂದ ಏನೂ ಪರಿಣಾಮ ಆಗಲಿಲ್ಲ. ಟಿಬೆಟ್ ಚೀನ ಸಮಾಜವಾದಿ ಗಣರಾಜ್ಯದ ಸ್ವಯಮಾಡಳಿತ ಪ್ರದೇಶವಾಯಿತು. (ಎಚ್.ಜಿ.ಆರ್.;ಬಿ.ಆರ್.ಜಿ.)

**ಟಿಳಕ್, ಬಾಲಗಂಗಾಧರ:** 1856–1920. ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು ಎಂದು 1916ರಷ್ಟು ಹಿಂದೆಯೇ ಸಾರಿದ ಭಾರತೀಯ ಜನನಾಯಕ. ಬದುಕಿದ್ದಾಗಲೇ ಲೋಕಮಾನ್ಯರೆಂದು ಜನತೆಯಿಂದ ಕರೆಸಿಕೊಂಡ ಉಜ್ವಲ ರಾಷ್ಟ್ರಪ್ರೇಮಿ, ತತ್ತ್ವಜ್ಞಾನಿ, ಪತ್ರಕರ್ತ, ಸಮಾಜಸುಧಾರಕ. ಇವರು ತಮ್ಮ ಜೀವನದಲ್ಲಿ ತಮ್ಮ ಮತ್ತು ತಮ್ಮನ್ನು ಅನುಸರಿಸು ವವರ ಎದುರಿಗೆ ಇರಿಸಿದ್ದು ಒಂದೇ ನುಡಿ–ಯುದ್ಧಸ್ವ. ಶ್ರೀಕೃಷ್ಣ ಅರ್ಜುನನಿಗಿತ್ತ ಉಪದೇಶ, ಇವರ ಪಾತ್ರ ಕರ್ಮಯೋಗಿಯದು.

ಇವರ ಮನೆತನದಲ್ಲಿ ಖ್ಯಾತನಾದವನು ಕೇಶವರಾವ್. ಪೇಷ್ವೆ ದರಬಾರಿನಲ್ಲಿ ಮಾಮಲೇ ದಾರನಾಗಿದ್ದ ಈತ ಪ್ರಸಿದ್ಧ ವಿದ್ವಾಂಸ, ಪರಿಣಿತ ಕುದುರೆಸವಾರ, ಖಚಿತವಾದ ಗುರಿ ಹೊಡೆಯುವ ಶೂರ ಸಿಪಾಯಿ ಹಾಗೂ ಉತ್ತಮ ಈಜುಗಾರ. ಈತನೇ ಬಾಳ ಗಂಗಾಧರ ಟಿಳಕರ ಮುತ್ತಾತ. ಇವರು ಚಿತ್ಪಾವನ ಬ್ರಾಹ್ಮಣರು. ಚಿತ್ಪಾವನ ಸರಕಾರವೆಂದೇ ಖ್ಯಾತವಾದ ಪೇಷ್ವೆಗಳ ಪ್ರಭಾವ ಕುಗ್ಗಿದಮೇಲೆ ಈ ಮನೆತನವೂ ಸಾಮಾನ್ಯ ಸ್ಥಿತಿಗೆ ಬಂತು.

ಬಾಳ ಗಂಗಾಧರ ಟಿಳಕರು 1856 ಜುಲೈ 23ರಂದು ರತ್ನಗಿರಿಯಲ್ಲಿ ಜನಿಸಿದರು. ಬಾಳ ಗಂಗಾಧರ ಟಿಳಕರ ತಂದೆ ಗಂಗಾಧರ ಪಂತ; ತಾಯಿ ಪಾರ್ವತಿ. ಮೂರು ಹೆಣ್ಣು ಮಕ್ಕಳನ್ನು ಸತತವಾಗಿ ಹಡೆದ ಆ ತಾಯಿ ಗಂಡು ಮಗುವಿಗಾಗಿ ಸೂರ್ಯೋಪಾಸನೆ ಮಾಡಿದರು. ಗಂಡು ಮಗು ಜನಿಸಿದಾಗ ಸೂರ್ಯದೇವನ ಅನುಗ್ರಹವೆಂದೇ ಅವರು ಭಾವಿಸಿದರು. ಮನೆತನದಲ್ಲಿ ಪ್ರಬಲನಾಗಿದ್ದ ಕೇಶವರಾಯನ ಹೆಸರನ್ನೇ ಇಟ್ಟರಾದರೂ ಅದರ ಅಕ್ಕರೆಯ ಹೆಸರು ಬಲವಂತ. ಇದು ಬಾಳ ಎಂದಾಯಿತು.

ಗಂಗಾಧರ ಪಂತರು ನುರಿತ ಶಿಕ್ಷಕರೂ ವಿದ್ವಾಂಸರೂ ಆಗಿದ್ದರು. ಇವರು ಮಗನಿಗೆ ಸಂಸ್ಕೃತ, ಮರಾಠಿ ಹಾಗೂ ಗಣಿತದಲ್ಲಿ ಒಳ್ಳೆಯ ಬುನಾದಿ ಹಾಕಿದರು. ಮೊದಲಿಂದಲೂ ಸೂಕ್ಷ್ಮ ಪ್ರಕೃತಿಯವರಾಗಿದ್ದ ತಾಯಿ ಬಾಳ ಗಂಗಾಧರರು ಇನ್ನೂ ಹತ್ತು ವರ್ಷದವರಿದ್ದಾಗಲೇ ತೀರಿಕೊಂಡರು.

1866ರಲ್ಲಿ ಟಿಳಕರು ಪುಣೆಯ ನಗರಶಾಲೆ ಸೇರಿದರು. ಟಿಳಕರ ಅಸಾಧಾರಣ ಮೇಧಾಶಕ್ತಿ ಸಂಪ್ರದಾಯಪ್ರಿಯ ಶಿಕ್ಷಕರ ಅತೃಪ್ತಿಗೆ ಕಾರಣವಾಯಿತು. ಸಂಸ್ಕೃತ ಹಾಗೂ ಗಣಿತದಲ್ಲಿ ಅಭಿರುಚಿಯನ್ನು ಅವರು ತಂದೆಯಿಂದಲೇ ಪಡೆದಿದ್ದರು. ಗಣಿತದ ಲೆಕ್ಕವನ್ನು ಬಾಯಲ್ಲೇ ಮಾಡಿ ಮುಗಿಸಿ ಲೇಖನ ಪುಸ್ತಕದಲ್ಲಿ ಅದರ ಉತ್ತರವನ್ನು ಮಾತ್ರ ಬರೆದಿಡುತ್ತಿದ್ದ ಟಿಳಕರನ್ನು ಶಿಕ್ಷಕರು, ಇದರ ಸಾಧನೆ ಎಲ್ಲಿ ಎಂದು ಕೇಳಿದಾಗ, ಟಿಳಕರು ಇಲ್ಲಿ, ಎಂದು ತಮ್ಮ ತಲೆಯತ್ತ ಬೆರಳು ತೋರಿಸಿದರೆಂದು ಹೇಳಲಾಗಿದೆ. ಸ್ವಭಾವತಃ ಧೀರಪ್ರವೃತ್ತಿಯ ಟಿಳಕರು ಇಂಥ ಪ್ರಸಂಗಗಳಿಂದ ಶಿಕ್ಷಕರ ವಿರೋಧವನ್ನು ಕಟ್ಟಿಕೊಂಡರು. ತಾವು ಸರಿಯಾದ ಮಾರ್ಗದಲ್ಲಿದ್ದುದನ್ನು ಮನಗಂಡಾಗ ಮುಖ್ಯಾಧ್ಯಾಪಕರ ತೀರ್ಮಾನವನ್ನೂ ಪ್ರತಿಭಟಿಸಿ ಶಾಲೆ ತೊರೆಯುವವರೆಗೂ ಹೋಗಿದ್ದರು.

ಟಿಳಕರು ಇನ್ನೂ ಶಾಲೆಯಲ್ಲಿದ್ದಾಗಲೇ ಅವರ 15ನೆಯ ವಯಸ್ಸಿನಲ್ಲಿ, ಅವರ ಜಿಲ್ಲೆಯಲ್ಲೇ ಇರುವ ಲಾಡ ಗ್ರಾಮದ ಬಲ್ಲಾಳ ಬಾಳರ ಮಗಳು ತಾಪೀಬಾಯಿಯೊಂದಿಗೆ ಮದುವೆ ಯಾಯಿತು. ಆಕೆಗೂ ತಾಯಿಯಿರಲಿಲ್ಲ. ಮಾವನಿಂದ ಟಿಳಕರು ಬಯಸಿದ್ದು ಬೆಲೆಬಾಳುವ ಉಡುಗೊರೆಯನ್ನಲ್ಲ, ಓದಲು ಪುಸ್ತಕಗಳನ್ನು. ಮರುವರ್ಷ ಟಿಳಕರ ತಂದೆ ಅಕಾಲಮರಣಕ್ಕೆ ತುತ್ತಾದರು. ಆದರೆ ಮಗ ವಿದ್ಯಾಭ್ಯಾಸ ಮುಂದುವರೆಸಲು ಸಾಕಷ್ಟು ಹಣವನ್ನು ತಮ್ಮ ಸಹೋದರ ಗೋವಿಂದರಾಯರಿಗೆ ಮೃತ್ಯುಪತ್ರದ ಮೂಲಕ ಒಪ್ಪಿಸಿದರು.



ಟಿಳಕರು ಅಧ್ಯಯನವನ್ನು ಮುಂದುವರಿಸಿ ಪುಣೆಯ ಡೆಕ್ಕನ್ ಕಾಲೇಜು ಸೇರಿದರು. ಅಲ್ಲಿ ಪಠ್ಯಪುಸ್ತಕ ಗಳಿಗಿಂತ ಹೆಚ್ಚಾಗಿ ಅಂಗಸಾಧನೆ ಮತ್ತು ವ್ಯಾಯಾಮಗಳಲ್ಲಿ ಅವರು ಹೆಚ್ಚು ಆಸಕ್ತಿ ವಹಿಸಿದ್ದರು. ಪ್ರವಚನದಲ್ಲಿ ತಥ್ಯವಿರದಿ ದ್ದರೆ ಕೂಡಲೇ ಟಿಳಕರು ತರಗತಿಯ ಕೋಣೆಯಿಂದ ಹೊರಬರುತ್ತಿದ್ದರು. ಇದನ್ನು ಗಮನಿಸಿದ ಪ್ರಾಂಶುಪಾಲರು ಕೇಳಿದಾಗ ತಾವು ಆ ವರ್ಷ ಪರೀಕ್ಷೆಗೆ ಕೂಡುವುದಿಲ್ಲವೆಂದು ನೇರ ಉತ್ತರ ನೀಡುತ್ತಿದ್ದರು. ಇಂಥ ಉತ್ತರಗಳಿಗಾಗಿ ಕಾಲೇಜಿನಲ್ಲಿ ಅವರನ್ನು ಶ್ರೀಮಾನ್ ಖಂಡಿತವಾದಿ (ಮಿಸ್ಟರ್ ಬ್ಲಂಟ್) ಎಂದು ಕರೆಯುತ್ತಿದ್ದರು. ತೀಕ್ಷ್ಣಮತಿಯ ಟಿಳಕರು ದೀರ್ಘಕಾಲ ಓದುತ್ತಿರಲಿಲ್ಲ. ಸ್ವಲ್ಪಕಾಲ ಓದಿದರೂ ವಿಷಯವನ್ನು ಸಮಗ್ರವಾಗಿ ಗ್ರಹಿಸುತ್ತಿದ್ದರು. ಪಠ್ಯೇತರ ವಿಷಯಗಳ ಅಧ್ಯಯನದಲ್ಲಿ ಟಿಳಕರಿಗೆ ಬಹಳ ಉತ್ಸಾಹವಿತ್ತು. ಒಮ್ಮೆ ನಡೆದ ಸಂಸ್ಕೃತ ಕವಿತಾ ಸ್ಪರ್ಧೆಯಲ್ಲಿ ಟಿಳಕರ ಕವಿತೆಗಳು ಉತ್ತಮವೆಂದು ಪ್ರಶಂಸೆಗಳಿಸಿದುವು. ಎಲ್ಲ ಹಿಂದು ಧರ್ಮಶಾಸ್ತ್ರಗ್ರಂಥಗಳನ್ನೂ ಸರ್ಕಾರ ಆವರೆಗೆ ಜಾರಿಗೆ ತಂದಿದ್ದ ಕಾನೂನುಗಳನ್ನೂ ಭಾರತೀಯ ಸಮಾಜ ಸಂಸ್ಕೃತಿಗಳನ್ನು ತಿಳಿಸುವ ಗ್ರಂಥರಾಶಿಯನ್ನೂ ಆ ದಿನಗಳಲ್ಲಿ ಟಿಳಕರು ತಿರುವಿ ಹಾಕಿದರು. ಈ ಓದೇ ಇವರ ಮುಂದಿನ ಸಾರ್ವಜನಿಕ ಜೀವನಕ್ಕೆ ಅಸ್ತಿಭಾರವಾಯಿತು. 1876ರಲ್ಲಿ ಗಣಿತದಲ್ಲಿ ಪದವಿ ಪಡೆದ ಟಿಳಕರು ಎಂ.ಎ.ಗೆ ಸೇರಿ, ಅದನ್ನು ಬಿಟ್ಟು 1879ರಲ್ಲಿ ಎಲ್‌ಎಲ್.ಬಿ ಪಡೆದರು. 5–6 ವರ್ಷಗಳಲ್ಲಿ ಅನಂತರ ಮತ್ತೆ ಎಂ.ಎ.ಗೆ ಪ್ರಯತ್ನಿಸಿದರಾದರೂ ಅದರಲ್ಲಿ ಜಯ ಗಳಿಸಲಿಲ್ಲ.

ಟಿಳಕರು ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ್ದು (1880) ಶಿಕ್ಷಣ ಕ್ಷೇತ್ರದ ಮೂಲಕ. ಮಿಷನರಿ ಶಾಲೆಗಳ ಮಾದರಿಯಲ್ಲಿ ರಾಷ್ಟ್ರೀಯ ಶಾಲೆಗಳನ್ನು ನಡೆಸಬೇಕೆಂಬ ವಿಚಾರ ಅವರಿಗೆ ಕಾಲೇಜಿನಲ್ಲಿರುವಾಗಲೇ ಬಂದಿತ್ತು. ಅವರು ತಮ್ಮ ಕೆಲವರು ಗೆಳೆಯರೊಂದಿಗೆ ಇದನ್ನು ಕುರಿತು ಸಮಾಲೋಚನೆ ನಡೆಸಿದರು. ತ್ಯಾಗವೇ ಇದಕ್ಕೆ ಮುಖ್ಯವಾದ ಬಂಡವಾಳವಾಗಿರ ತಕ್ಕದೆಂಬುದು ಮನವರಿಕೆಯಾಗಿತ್ತು. ಟಿಳಕರೂ ಅಗರ್‌ಕರ್ ಎಂಬುವರು ನ್ಯೂ ಇಂಗ್ಲಿಷ್ ಸ್ಕೂಲ್ ಎಂಬ ಹೆಸರಿನಲ್ಲಿ ಇದನ್ನು ಪ್ರಾರಂಭಿಸಿ, ಯಾವ ವೇತನವೂ ಇಲ್ಲದೆ ದುಡಿಯ ತೊಡಗಿದರು. ಅನಂತರ ಅಪ್ಟೆ ಮೊದಲಾದ ಕೆಲವು ತರುಣರು ಇವರೊಂದಿಗೆ ಸೇರಿದರು. ಈ ಶಾಲೆಯ ಶಿಕ್ಷಣಕ್ರಮ ಮತ್ತು ಶಿಸ್ತು ಮನೆಮಾತಾದವು. ಸರ್ಕಾರವೂ ಇದಕ್ಕೆ ಮನ್ನಣೆಯಿತ್ತು ಇವರ ಪ್ರಯತ್ನವನ್ನು ಮೆಚ್ಚಿತು. ಇದರ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವಿಶಿಷ್ಟ ವೇತನಗಳನ್ನು ಗಳಿಸತೊಡಗಿದರು. ಶೈಕ್ಷಣಿಕ ಕ್ಷೇತ್ರವನ್ನು ವ್ಯಾಪಿಸಿದ್ದ ಕ್ರೈಸ್ತಪಾದ್ರಿಗಳಿಗೆ ಇದರಿಂದ ಕಳವಳವಾಯಿತು. ಕೆಲವೇ ವರ್ಷಗಳಲ್ಲಿ ಈ ಸಂಸ್ಥೆ ಬೆಳೆದು ಡೆಕ್ಕನ್ ಎಜುಕೇಷನ್ ಸೊಸೈಟಿ ಎಂಬ ಸಂಸ್ಥೆಯ ರೂಪ ತಾಳಿತು. ಇದರ ಆಶ್ರಯದಲ್ಲಿ ಫರ್ಗ್ಯುಸನ್ ಕಾಲೇಜು ಸ್ಥಾಪಿತವಾಯಿತು.

ಟಿಳಕರು ಪತ್ರಿಕೋದ್ಯಮದಲ್ಲೂ ತೊಡಗಿದರು. ಆಗ ಸಮರ್ಥ ಸಂಪಾದಕರೆಂದು ಹೆಸರಾಗಿದ್ದ ನಾಮಜೋಷಿ ಹಾಗೂ ಚಿಪಳೂಣಕರರ ಸೂಚನೆಯ ಪ್ರಕಾರ ನಾಮಜೋಷಿ ಯವರ ಮುದ್ರಣಾಲಯವನ್ನು ಖರೀದಿ ಮಾಡಿ, ಮರಾಠಿಯಲ್ಲಿ ಕೇಸರಿ ಎಂಬ ಪತ್ರಿಕೆಯನ್ನೂ ಇಂಗ್ಲಿಷಿನಲ್ಲಿ ಮರಾಠಾ ಎಂಬ ಪತ್ರಿಕೆಯನ್ನೂ ಹೊರಡಿಸಬೇಕೆಂದು ತೀರ್ಮಾನಿಸಲಾಯಿತು.

ಟಿಳಕರು ಸ್ವತಃ ಅಚ್ಚಿನ ಮೊಳೆಗಳ ಡಬ್ಬಿಗಳನ್ನು ಹೊತ್ತು ತಂದು ಶಾಲೆಯಲ್ಲೇ ಕೆಲಸ ಪ್ರಾರಂಭಿಸಿದರು. ಅಗರ್ಕರ್ ಹಾಗೂ ಟಿಳಕರು ಈ ಎರಡು ಹೊಸ ಪತ್ರಿಕೆಗಳ ಪ್ರಕಟಣೆಯನ್ನು ನೋಡಿಕೊಳ್ಳತೊಡಗಿದರು. ಈ ಪತ್ರಿಕೆಗಳಲ್ಲಿ ಅಚ್ಚಾಗುತ್ತಿದ್ದ ವಿಚಾರಗಳು ರಾಜಕೀಯ ಆಸಕ್ತಿ ಕೆರಳಿಸತೊಡಗಿದವು. ಗಾಯಕವಾಡ್ ರಾಜರಿಗೆ ಸಂಬಂಧಿಸಿದ 400 ಹಳೆಯ ಬಂದೂಕುಗಳನ್ನು ಬ್ರಿಟಿಷ್ ಸರ್ಕಾರದವರು ನಾಶಪಡಿಸಿದ ಸುದ್ದಿಯ ಬಗ್ಗೆ ಕಟುವಾದ ಟೀಕೆ ಬಂದಿತ್ತು. ಆಫ್ಘನ್ ಯುದ್ಧದ ಖರ್ಚನ್ನು ಬ್ರಿಟಿಷ್ ಸರ್ಕಾರ ಭಾರತದ ಮೇಲೆ ಹೇರಿದ್ದನ್ನು ಮರಾಠಾ ಪತ್ರಿಕೆಯಲ್ಲಿ ಟೀಕಿಸಲಾಗಿತ್ತು. ಆದರೆ ಬರಬರುತ್ತ ಅಗರ್‌ಕರರಿಗೂ ಟಿಳಕರಿಗೂ ಸಮಾಜ ಸುಧಾರಣೆಯ ಬಗ್ಗೆ ಭಿನ್ನಾಭಿಪ್ರಾಯಗಳು ಬೆಳೆದವು. ಟಿಳಕರೇ ಕೇಸರಿಯನ್ನು ಸಾಲಸಹಿತ ವಹಿಸಿಕೊಂಡು ನಡೆಸಬೇಕೆಂದೂ ಅಗರ್ಕರರು ಶಿಕ್ಷಣ ಸಂಸ್ಥೆಗಳನ್ನು ನೋಡಿಕೊಳ್ಳಬೇಕೆಂದು ವ್ಯವಸ್ಥೆಯಾಯಿತು.

ಟಿಳಕರು ಕೇಸರಿ ಪತ್ರಿಕೆಯನ್ನು ಮೂವತ್ತು ವರ್ಷ ನಡೆಸಿದ ನಿರ್ಭೀತ ಸಂಪಾದಕರೆಂದು ಹೆಸರು ಗಳಿಸಿದರು. ಪತ್ರಿಕೋದ್ಯಮದಲ್ಲಿ ಕೇಸರಿ ಒಂದು ಮೈಲಿಗಲ್ಲೆಂದು ಪ್ರಸಿದ್ಧವಾಯಿತು. ತಾವು ಪತ್ರಿಕೆಗಳನ್ನು ಪ್ರಕಟಿಸುವುದು ಸರ್ಕಾರದ ಸಂತೋಷಕ್ಕಲ್ಲವೆಂದು 1904ರಲ್ಲಿ ಕೇಸರಿಯಲ್ಲಿ ತಮ್ಮ ಧೋರಣೆಯನ್ನು ಸ್ಪಷ್ಟಪಡಿಸಿದರು. ಈ ಪತ್ರಿಕೆ ಟಿಳಕರ ವಿಚಾರಗಳ ಮುಖಪತ್ರವಾಯಿತು. ಅವರು ಪೂರ್ಣಾವಧಿಯ ಪತ್ರಕರ್ತರಾಗಿ, ಪತ್ರಿಕೆಯೇ ಸರ್ವಸ್ವವೆಂದು ದುಡಿದರು. ಪ್ಲೇಗಿನಿಂದ ನರಳಿ ತೀರಿಕೊಂಡ ಮಗನನ್ನು ಎತ್ತಿಕೊಂಡು ಹೋದದು ಕೂಡ, ಸಮಯಕ್ಕೆ ಸರಿಯಾಗಿ ಸಂಪಾದಕೀಯವನ್ನು ಬರೆದು ಮುಗಿಸಲು ಕುಳಿತಿದ್ದ ಟಿಳಕರಿಗೆ ಗೊತ್ತಾಗಿರಲಿಲ್ಲ. ಟಿಳಕರ ಟೀಕೆಗಳು ಬಹಳ ತೀಕ್ಷ್ಣವಾಗಿರುತ್ತಿದ್ದುವು. ಅಧಿಕಾರಿಗಳು ಬೆಚ್ಚಿಬೀಳುತ್ತಿದ್ದರು. ಸರ್ಕಾರ ರೊಚ್ಚಿಗೇಳುತ್ತಿತ್ತು. ಅನೇಕ ಸಲ ಅಚ್ಚು ಕೂಟದವರು ಹೆದರಿ ಅಚ್ಚು ಮಾಡಲು ಹಿಂಜರಿಯುತ್ತಿದ್ದರು. ಆದರೂ ಟಿಳಕರು ಎದೆಗುಂದುತ್ತಿರಲಿಲ್ಲ. ಅವರ ಬರೆಹಗಳಿಗಾಗಿ 1897ರಲ್ಲಿ ರಾಜದ್ರೋಹದ ಆಪಾದನೆಯ ಮೇಲೆ ಟಿಳಕರಿಗೆ ಒಂದೂವರೆ ವರ್ಷಗಳ ಕಾರಾಗೃಹ ಶಿಕ್ಷೆ ಆಯಿತು.

ಆ ಕಾಲದಲ್ಲಿ ಮರಾಠಿಯಲ್ಲಿ ಕೇಸರಿಯೇ ಅತ್ಯಧಿಕ ಪ್ರಸಾರವುಳ್ಳ ಪತ್ರಿಕೆಯಾಗಿತ್ತು. ಮಹಾರಾಷ್ಟ್ರದಲ್ಲಿ ಸ್ವಾತಂತ್ರ್ಯ, ಸ್ವಾಭಿಮಾನ, ಸ್ವದೇಶಾಭಿಮಾನಗಳನ್ನು ಪ್ರಚೋದಿಸಿದ ಪತ್ರಿಕೆಯೆಂದರೆ ಕೇಸರಿಯೇ. ಟಿಳಕರು ಅಕ್ಷರಶಃ ಕರ್ಮಯೋಗಿ. ಇವರಿಗೆ ಯಾವ ಕೆಲಸವೂ ಕೀಳಾಗಿರಲಿಲ್ಲ. ಸಂಪಾದಕೀಯ ಬರೆಯುವುದರಿಂದಾರಂಭಿಸಿ ಮೊಳೆ ಜೋಡಿಸುವವರೆಗೆ ಎಲ್ಲ ಕೆಲಸವನ್ನೂ ಕರಗತ ಮಾಡಿಕೊಂಡಿದ್ದರು. ವೈಚಾರಿಕ ರಾಜಕೀಯ ಆಂದೋಲನಕ್ಕಾಗಿಯೇ ಜನ್ಮತಾಳಿದ ಕೇಸರೀ ಪತ್ರಿಕೆ ಟಿಳಕರ ನೇತೃತ್ವದಲ್ಲಿ ಆ ಆಂದೋಲನವನ್ನು ನಡೆಸಿತು. ಇಂದಿಗೂ ಈ ಪತ್ರಿಕೆಯ ಜನಪ್ರಿಯತೆ ಕಡಿಮೆಯಾಗಿಲ್ಲ.

ಟಿಳಕರ ಚಟುವಟಿಕೆ ಕೇವಲ ಲೇಖನ ಬರೆಯುವುದಕ್ಕೆ ಸೀಮಿತವಾಗಿರಲಿಲ್ಲ. ಜನಜಾಗೃತಿ ಅವರ ಮುಖ್ಯಧ್ಯೇಯವಾಗಿತ್ತು. ಹಿಂದುಜನರಲ್ಲಿಯ ವರ್ಣಭೇದ, ವರ್ಗಭೇದಗಳು ಅವರ ಅನೈಕ್ಯಕ್ಕೆ ಮೂಲವೆಂದು ತಿಳಿದಿದ್ದ ಟಿಳಕರು ಅವರನ್ನೆಲ್ಲ ಒಂದುಗೂಡಿಸಲು ಸಾರ್ವಜನಿಕ ಗಣಪತಿ ಉತ್ಸವದ ಯೋಜನೆ ರೂಪಿಸಿದರು. ಇದರಿಂದ ಈ ಉತ್ಸವದ ಸ್ವರೂಪವೇ ಬದಲಾಗಿ ಇದಕ್ಕೆ ರಾಷ್ಟ್ರೀಯ ಸ್ವರೂಪ ಬಂತು. ಶಿವಾಜಿಯ ಜನ್ಮದಿನೋತ್ಸವವೂ ಸಾರ್ವಜನಿಕ ಉತ್ಸವವಾಗಿ ಮಹಾರಾಷ್ಟ್ರದಾದ್ಯಂತ ಸಂಘಟಿತವಾಯಿತು. ಗಣಪತಿ ಉತ್ಸವ ಮಹಾರಾಷ್ಟ್ರದ ಎಲ್ಲೆಯನ್ನು ದಾಟಿ ಇತರ ಪ್ರಾಂತಗಳಲ್ಲೂ ರಾಷ್ಟ್ರೀಯ ಹಬ್ಬವಾಗಿ ಪರಿಣಮಿಸಿ ಜನಜಾಗೃತಿಯ ಸಾಧನವಾಯಿತು; ರಾಜಕೀಯ, ಸಾಮಾಜಿಕ, ತಾತ್ತ್ವಿಕ ವಿಚಾರಗಳ ಪ್ರಚಾರದ ವೇದಿಕೆಯಾಯಿತು. ಅದರೊಂದಿಗೇ ಟಿಳಕರು ಪ್ರಭಾವಶಾಲಿ ಮುಂದಾಳಾಗಿ ಬೆಳೆಯತೊಡಗಿದರು.

1896ರಲ್ಲಿ ಮಹಾರಾಷ್ಟ್ರದಲ್ಲೆಲ್ಲ ಬರ ಬಂದಾಗಲೂ ಮರುವರ್ಷ ಗಂಟುಬೇನೆ ವ್ಯಾಪಿಸಿದಾಗಲೂ ಟಿಳಕರು ಹಳ್ಳಿಗಳಲ್ಲಿ ರೈತರೊಂದಿಗೆ ಕೆಲಸ ಮಾಡಿ, ಆಸ್ಪತ್ರೆಗಳನ್ನು ತೆರೆಯಿಸಿ ಕ್ರಿಯಾಶೀಲತೆಯನ್ನು ತೋರಿಸಿದರು. ಇಂಥ ಸಂಕಟ ಸಮಯದಲ್ಲಿ ಸಹ ಸರ್ಕಾರಿ ಅಧಿಕಾರಿಗಳು ತೋರಿದ ಅಶ್ರದ್ಧೆಯನ್ನು ಕೇಸರಿ ಬಯಲಿಗೆಳೆಯಿತು. ಜನ ಪಿಡುಗಿನಿಂದ ಸಾಯುತ್ತಿದ್ದಾಗ ವಿಕ್ಟೋರಿಯ ರಾಣಿಯ ವಜ್ರಮಹೋತ್ಸವವನ್ನು ಸರ್ಕಾರ ಏರ್ಪಡಿಸಿದ್ದನ್ನು ಪತ್ರಿಕೆ ಟೀಕಿಸಿತು. ರೊಚ್ಚಿಗೆದ್ದ ತರುಣನೊಬ್ಬ ಪ್ಲೇಗಿನ ವಿಶೇಷಾಧಿಕಾರಿ ರೈಂಡನಿಗೆ ಗುಂಡಿಕ್ಕಿದ. ಈ ಘಟನೆಯಿಂದ ಪುಣೆಯಲ್ಲಿ ಪೊಲೀಸ್ ಅತ್ಯಾಚಾರ ಇನ್ನಷ್ಟು ಹೆಚ್ಚಾಯಿತು. ಕೇಸರಿ ಇದನ್ನೆಲ್ಲ ಕಟುವಾಗಿ ಖಂಡಿಸಿತು. ಆಗ ಅಧಿಕಾರಿಗಳು ರಾಜದ್ರೋಹದ ಆರೋಪದ ಮೇಲೆ ಟಿಳಕರನ್ನು ಬಂಧಿಸಿ ಸೆಷನ್ಸ್ ಜಡ್ಜರಾದ ಬದರುದ್ದೀನ್ ತಯ್ಯಬ್ಜಿಯವರ ನ್ಯಾಯಾಲಯಕ್ಕೆ ಒಯ್ದರು. 50,000 ರೂಪಾಯಿಗಳ ಜಾಮೀನು ಕೇಳಿದಾಗ ದ್ವಾರಕಾದಾಸ್ ಧರ್ಮಸಿ ಮುಂದೆ ಬಂದು ಟಿಳಕರನ್ನು ಬಿಡಿಸಿದರು. ಟಿಳಕರ ಈ ಮೊಕದ್ದಮೆಗೆ ಆಗಲೇ ಸಾರ್ವಜನಿಕ ಸ್ವರೂಪ ಬಂದಿತ್ತು. ವಿಚಾರಣೆಯ ಅನಂತರ ಟಿಳಕರಿಗೆ ಒಂದೂವರೆ ವರ್ಷ ಶಿಕ್ಷೆಯಾಗಿ ಸೆರೆಮನೆ ಸೇರಿದರು. ಆಗ ಟಿಳಕರು ಲೋಕಮಾನ್ಯರಾದರು. ಭಾರತದಲ್ಲೆಲ್ಲಾ ಅವರ ಕೀರ್ತಿ ಹಬ್ಬಿತು. ಆಗಿನ ಜೈಲುಗಳು ತುಂಬ ಅಸಮರ್ಪಕವಾಗಿದ್ದುವು. ಆದರೆ ಟಿಳಕರು ಜೈಲುವಾಸ ಕಾಲದಲ್ಲಿ ಬರೆದ ವೇದಕಾಲ ನಿರ್ಣಯ ಮುಂತಾದ ವಿದ್ವತ್ಪೂರ್ಣ ಲೇಖನಗಳಿಂದ ಇವರ ವ್ಯಕ್ತಿತ್ವ ಯುರೋಪಿನ ಅನೇಕ ವಿದ್ವಾಂಸರ ಮೇಲೆ ಪ್ರಭಾವ ಬೀರಿತು. ಪ್ರೊಫೆಸರ್ ಮ್ಯಾಕ್ಸ್‌ಮ್ಯುಲರ್ ಮೊದಲಾದವರು ಬ್ರಿಟಿಷ್ ಸರ್ಕಾರದ ಮೇಲೆ ಒತ್ತಾಯ ತಂದು ಟಿಳಕರನ್ನು ಸೌಜನ್ಯದಿಂದ ನಡೆಸಿಕೊಳ್ಳುವಂತೆ ಮಾಡಿದರು. ರಾಜದ್ರೋಹ ಮಾಡುವುದಿಲ್ಲವೆಂಬ ಕರಾರಿನ ಮೇಲೆ ಟಿಳಕರನ್ನು ಬಿಡಲೂ ಸರ್ಕಾರ ಆಲೋಚಿಸಿತು. ಆದರೆ ಟಿಳಕರು ಇಂಥ ಕರಾರಿಗೆ ಒಪ್ಪಲಿಲ್ಲ. ಟಿಳಕರು ಒಂದು ವರ್ಷ ಶಿಕ್ಷೆ ಅನುಭವಿಸಿದ ಅನಂತರ ಇವರ ಬಿಡುಗಡೆಯಾಯಿತು. ಟಿಳಕರ ಬಿಡುಗಡೆ ಎಲ್ಲರಿಗೂ ಸಂತೋಷ ತಂದಿತು. ಕಾರಾಗೃಹವಾಸದಿಂದ ಇವರ ಆರೋಗ್ಯ ಕೆಟ್ಟಿತ್ತು. ಆರೋಗ್ಯ ಸುಧಾರಣೆಗಾಗಿ ಸಿಂಹಗಢದಲ್ಲಿ ವಿಶ್ರಾಂತಿ ಪಡೆದರು.

ಆ ವರ್ಷದ ಡಿಸೆಂಬರ್‌ನಲ್ಲಿ ನಡೆದ ಮದರಾಸು ಕಾಂಗ್ರೆಸ್ ಅಧಿವೇಶನದಲ್ಲಿ ಸಾಮಾನ್ಯ ಸದಸ್ಯರಾಗಿ ಟಿಳಕರು ಭಾಗವಹಿಸಿದರು. ವೈದ್ಯರ ಸಲಹೆಯಂತೆ ಭಾಷಣ ಮಾಡಲಿಲ್ಲ. ರಾಮೇಶ್ವರ, ಸಿಂಹಳಗಳ ಸಂಚಾರ ಮಾಡಿ ಬಂದರು. ಲಖನೌ ಕಾಂಗ್ರೆಸಿಗೆ ಹೋದಾಗ ಬರ್ಮದಲ್ಲಿ ಸಂಚರಿಸಿ ಬಂದರು. ರೈಂಡನ ಕೊಲೆ ಮಾಡಿದವನ ಸುಳಿವೇ ಸಿಗಲಿಲ್ಲ. ಆ ಸಂದರ್ಭದಲ್ಲಿ ಟೈಮ್ಸ್ ಪತ್ರಿಕೆ ಟಿಳಕರ ಮೇಲೆ ಸಂಚಿನ ಆರೋಪ ಹೊರಿಸಿ ಬರೆದ ಲೇಖನಕ್ಕಾಗಿ ಟಿಳಕರು ಮಾನಹಾನಿ ಖಟ್ಲೆ ಹಾಕುವುದಾಗಿ ಹೇಳಿದಾಗ ಟೈಮ್ಸ್ ಕ್ಷಮಾಪಣೆ ಬೇಡಿತು. ಹೀಗೆಯೇ ಬರೆದ ಗ್ಲೋಬ್ ಪತ್ರಿಕೆಯ ವಿರುದ್ಧ ಖಟ್ಲೆ ಹಾಕಿ ಅದು ದಂಡ ತೆರುವಂತೆ ಮಾಡಿದರು.

ಟಿಳಕರಿಗೆ ಕಾಂಗ್ರೆಸ್ ಸಂಸ್ಥೆಯ ಬಗ್ಗೆ ತುಂಬ ಪ್ರೀತಿಯಿತ್ತು. ಅದು ಬೇಗ ಬೆಳೆದು ದೇಶದ ಆಡಳಿತಸೂತ್ರ ವಹಿಸಲಿದೆಯೆಂಬುದು ಇವರ ಭಾವನೆಯಾಗಿತ್ತು. ಅದು ನಿಜವೂ ಆಯಿತು. ಟಿಳಕರ ಉಗ್ರವಿಚಾರಗಳಿಂದ ಕಾಂಗ್ರೆಸಿನ ಮಂದಗಾಮಿ ಮುಖಂಡರಾದ ರಾನಡೆ, ಮೆಹೆತ, ಗೋಖಲೆ, ಬ್ಯಾನರ್ಜಿ ಮೊದಲಾದವರಿಗೆ ರಾಜದ್ರೋಹದ ಭಯವಾಗುತ್ತಿತ್ತು. ಆದ್ದರಿಂದ ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಟಿಳಕರನ್ನು ಸೂಚಿಸಿದಾಗ ಅವರು ವಿರೋಧಿಸಿದರು: ಕಲ್ಕತ್ತ ಕಾಂಗ್ರೆಸ್ ಅಧಿವೇಶನಕ್ಕೆ (1906) ಅವರ ಬದಲಾಗಿ ವೃದ್ಧರಾದ ದಾದಾಭಾಯಿ ನವರೋಜಿಯವರನ್ನು ಆರಿಸಿದರು. ಈ ನಡುವೆ ಸ್ವರಾಜ್ಯದ ಬೇಡಿಕೆಯ ಘೋಷಣೆಯಾಗಲೇಬೇಕೆಂಬ ಪ್ರಚಾರವನ್ನಂತೂ ಟಿಳಕರು ನಡೆಸಿಯೇ ಇದ್ದರು. ಇವರ ಕಾರ್ಯವನ್ನು ಬಲ್ಲ ದಾದಾಭಾಯಿ ನವರೋಜಿಯವರು ಅಧ್ಯಕ್ಷಸ್ಥಾನದಿಂದ ಸ್ವರಾಜ್ಯದ ಬೇಡಿಕೆಯನ್ನು ಘೋಷಿಸಿಬಿಟ್ಟರು. ಉಗ್ರಗಾಮಿಗಳ ಮಾತಿಗೆ ಕಿವಿಗೊಟ್ಟರೆಂದು ಇವರನ್ನು ಇಂಗ್ಲಿಷ್ ಪತ್ರಿಕೆಗಳು ಟೀಕಿಸಿದವು. 1907ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಮಂದ ಮತ್ತು ಉಗ್ರಗಾಮಿ ಪಂಗಡಗಳಲ್ಲಿ ತಿಕ್ಕಾಟ ಪ್ರಾರಂಭವಾಯಿತು. ಅದರ ಮುಂದಿನ ಅಧಿವೇಶನ ಸೂರತ್‌ನಲ್ಲಿ ನಡೆಯಿತು. ಅಲ್ಲೂ ಘರ್ಷಣೆ ಪ್ರಾರಂಭವಾಗಿ ಕೊನೆಗೆ ಟಿಳಕರ ಉಗ್ರವಾದಿ ಪಕ್ಷದ ಕೈ ಮೇಲಾಯಿತು. ಅಧ್ಯಕ್ಷರಾಗಿದ್ದ ಲಾಲಾ ಲಜಪತ್‌ರಾಯ್ ಹಾಗೂ ಬಿಪಿನ್ ಚಂದ್ರಪಾಲ್ ಅವರು ಟಿಳಕರ ಜೊತೆಗೆ ನಿಂತರು. ಲಾಲ್, ಬಾಲ್, ಪಾಲ್ ಈ ಮೂವರು ಮೂರು ರತ್ನಗಳು ಎಂದು ಜನ ಅಕ್ಕರೆಯಿಂದ ಕರೆದರು.

ಟಿಳಕರು ರೂಪಿಸಿದ ಸ್ವದೇಶೀ, ಪರದೇಶೀ ಅರಿವೆಯ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ, ಸ್ವರಾಜ್ಯ–ಈ ನಾಲ್ಕು ಮಹಾಮಂತ್ರಗಳಿಂದ ದೇಶದಲ್ಲಿ ನವಚೈತನ್ಯ ಮೂಡಿತು. ಜನಜಾಗೃತಿ ಹೆಚ್ಚಿದಂತೆಲ್ಲ ದಬ್ಬಾಳಿಕೆಯೂ ಹೆಚ್ಚಿತು. ಬಂಗಾಳದ ವಿಭಜನೆಯಿಂದ ಕ್ರಾಂತಿಯ ಕಿಡಿ ಹೊತ್ತಿತು. ಯುವಕರು ಮಾಣಿಕತೊಲಾಬಾಗ್‌ನಲ್ಲಿ ಬಾಂಬಿನ ಕಾರ್ಖಾನೆಯನ್ನು ಸ್ಥಾಪಿಸಿದರು. ಅಧಿಕಾರಿಗಳ ಮೇಲೆ ಬಾಂಬ್ ಎಸೆಯಲಾಯಿತು. ಆಂಗ್ಲ ಮಹಿಳೆಯರು ಅದರಲ್ಲಿ ಹತರಾದರು. ನಿಜವಾದ ಅಪರಾಧಿಗಳು ಸಿಗದಂತಾಗಲು ಕಾಂಗ್ರೆಸ್ ಉಗ್ರವಾದಿ ಮುಖಂಡರನ್ನೆಲ್ಲ ಸರ್ಕಾರ ಬಂಧಿಸತೊಡಗಿತು. ಕೇಸರಿ ಪತ್ರಿಕೆ 1908ರಲ್ಲಿ ಇದನ್ನು ಖಂಡಿಸಿ ಬರೆಯುತ್ತ, ಇಂಥ ಪರಿಸ್ಥಿತಿಯನ್ನು ತಂದುಕೊಳ್ಳಲು ಸರ್ಕಾರದ ಅನ್ಯಾಯದ ಆಡಳಿತವೇ ಕಾರಣವೆಂದು ಸಾರಿತು. ವೈಸ್‌ರಾಯಿಯಿಂದ ಆರಂಭಿಸಿ ಎಲ್ಲ ಅಧಿಕಾರಿಗಳೂ ಕೋಪಗೊಂಡರು. ಟಿಳಕರ ಬಂಧನದ ಸಂಚು ಹೂಡಿದರು. ಇದರ ಸುಳಿವು ಟಿಳಕರಿಗೆ ಹತ್ತಿತ್ತು. ಮಿತ್ರರೂ ಎಚ್ಚರಿಸಿದರು. ದೇಶವೇ ದೊಡ್ಡ ಸೆರೆಮನೆಯಂತಿದ್ದಾಗ ಸಣ್ಣ ಸೆರೆಮನೆಯದೇನು ಹೆದರಿಕೆ ಎಂದು ಟಿಳಕರು ಮುಂಬಯಿಗೆ ಇನ್ನೊಂದು ರಾಜದ್ರೋಹದ ಖಟ್ಲೆಯಲ್ಲಿ ವಕಾಲತ್ತು ವಹಿಸಲು ಹೊರಟೇ ಬಿಟ್ಟರು. ಮುಂಬಯಿಯಲ್ಲಿ ಟಿಳಕರನ್ನು ಬಂಧಿಸಲಾಯಿತು. ಟಿಳಕರ ಪರವಾಗಿ ವಕಾಲತ್ತು ವಹಿಸಿದ್ದ ವ್ಯಕ್ತಿ ಮಹಮದ್ ಅಲಿ ಜಿನ್ನಾ. ಜಾಮೀನಿನ ಮೇಲೆ ಇವರ ಬಿಡುಗಡೆ ಆಗಲಿಲ್ಲ. ಮೊಕದ್ದಮೆ ನಡೆಯಿತು. ಟಿಳಕರು ಇಪ್ಪತ್ತೊಂದು ಗಂಟೆಗಳ ಭಾಷಣ ಮಾಡಿ ದೀರ್ಘವಾದ ಹೇಳಿಕೆ ಕೊಟ್ಟರು. ನ್ಯಾಯದರ್ಶಿಗಳಲ್ಲಿ ಆರು ಜನ ಯುರೋಪಿಯನರೂ ಇಬ್ಬರು ಪಾರ್ಸಿಗಳೂ ಇದ್ದರು. ಟಿಳಕರು ತಪ್ಪಿತಸ್ಥರೆಂದು ಏಳು ಮಂದಿ ನ್ಯಾಯದರ್ಶಿಗಳು ಅಭಿಪ್ರಾಯಪಟ್ಟರು. ನ್ಯಾಯಾಧೀಶರು 52 ವರ್ಷ ವಯಸ್ಸಿನ ಟಿಳಕರಿಗೆ ಆರು ವರ್ಷಗಳ ಕರೀನೀರಿನ–ಗಡಿಪಾರಿನ–ಶಿಕ್ಷೆ ವಿಧಿಸಿದರು. ಇದು ಮರಣದಂಡನೆಯಷ್ಟೇ ಭಯಂಕರವಾಗಿತ್ತು. ಟಿಳಕರಿಗೆ ಮಧುಮೇಹದ ಬೇನೆ ಬೇರೆ ಕಾಡುತ್ತಿತ್ತು. ಆದರೂ ಟಿಳಕರು ಧೃತಿಗೆಡಲಿಲ್ಲ. ನ್ಯಾಯಾಧೀಶರು ಎಂಥ ತೀರ್ಪು ಕೊಟ್ಟರೂ ನಾನು ನಿರಪರಾಧಿ ಎಂದು ನ್ಯಾಯಾಲಯದಲ್ಲೇ ಟಿಳಕರು ಘೋಷಿಸಿದರು. ತೀರ್ಪು ಕೊಟ್ಟ ಬಳಿಕ ಇವರನ್ನು ಕರೆದೊಯ್ಯುವಾಗ ಅಲ್ಲಿ ಸೇರಿದ ಜನತೆಗೆ ಇವರ ದರ್ಶನ ಕೂಡ ಆಗದಂತೆ ಸರ್ಕಾರ ಜಾಗ್ರತೆ ವಹಿಸಿತು. ನೇರವಾಗಿ ಅವರನ್ನು ಸಾಬರಮತಿ ಜೈಲಿಗೆ, ಆಮೇಲೆ ಬರ್ಮದ ಮಾಂಡಲೆಯ ಕಾರಾಗೃಹಕ್ಕೆ ಕಳಿಸಲಾಯಿತು. ಮರುದಿವಸ ಈ ಸುದ್ದಿ ತಿಳಿದ ಕೂಡಲೇ ಮುಂಬಯಿಯಲ್ಲಿ ಹರತಾಳಗಳಾದವು. ದೇಶಾದ್ಯಂತ ಪ್ರತಿಭಟನಾ ಸಭೆಗಳು ಏರ್ಪಟ್ಟವು. ಮುಂಬಯಿಯ ಗವರ್ನರ್ ಜಾರ್ಜ್ ಕ್ಲಾರ್ಕ್ ದಬ್ಬಾಳಿಕೆಯ ಸತ್ತೆಯನ್ನೇ ಪ್ರಾರಂಭಿಸಿದ.

ಮಾಂಡಲೆಯ ಸೆರೆಮನೆಯ ಏಕಾಂತವೂ ಟಿಳಕರಿಗೆ ವರದಾನವಾಗಿ ಪರಿಣಮಿಸಿತು. ಚಿಕ್ಕ ಕೋಣೆ; ಪಕ್ಕದಲ್ಲಿ ಕಿರಿದಾದ ಅಂಗಳ. ಟಿಳಕರ ಸಂಗಾತಿಗಳೆಂದರೆ ಕೋಣೆಯ ಒಂದು ಕಪಾಟಿನ ಪುಸ್ತಕಗಳು. ಅಧ್ಯಯನ, ಚಿಂತನ, ಲೇಖನಗಳ ತಪಸ್ಸು ನಡೆಯಿತು. ಜರ್ಮನ್, ಪಾಳೀ ಭಾಷೆಗಳ ಅಧ್ಯಯನವನ್ನು ಸೆರೆಮನೆಯಲ್ಲೇ ಮಾಡಿದರು. ಇವರ ಶಿಸ್ತು, ಸೌಜನ್ಯಯುತ ನಡತೆಗಾಗಿ ಬರ್ಮದ ಸರ್ಕಾರ ಕೆಲವು ಸೌಲಭ್ಯಗಳನ್ನು ಒದಗಿಸಿತು. ಸೆರೆಮನೆಯಿಂದ ರಾಷ್ಟ್ರಕ್ಕೆ ಟಿಳಕರು ಕೊಟ್ಟ ಕಾಣಿಕೆಯೇ ಗೀತಾರಹಸ್ಯ ಎಂಬ ದೊಡ್ಡ ಆಕಾರದ ಸಾವಿರ ಪುಟಗಳ ವಿವೇಚನಾತ್ಮಕ ಗ್ರಂಥ. ಇದು 1911ರಲ್ಲಿ ರಚಿತವಾದರೂ 1915ಕ್ಕೆ ಮುಂಚೆ ಇದನ್ನು ಪ್ರಕಟಿಸಲಾಗಲಿಲ್ಲ. ವೇದಾಂತ ವಿಷಯದ ಇನ್ನೂ ಅನೇಕ ಗ್ರಂಥಗಳನ್ನು ಇವರು ಬರೆದಿದ್ದಾರೆ. ಒರೈಯನ್ (1893) ಮತ್ತು ಆರ್ಕ್‌ಟಿಕ್ ಹೋಮ್ ಇನ್ ದಿ ವೇದಾಸ್ (1903) ಗ್ರಂಥಗಳು ಇವರ ಸಂಶೋಧನ ಪ್ರವೃತ್ತಿಗೆ ಸಾಕ್ಷಿಗಳಾಗಿವೆ. ಮಾಸಾನಾಂ ಮಾರ್ಗಶೀರ್ಷೋಸ್ಮಿ ಎಂಬ ಗೀತಾವಾಕ್ಯ ಅವರಿಗೆ ಒರೈಯನ್ ಗ್ರಂಥರಚನೆಗೆ ಸ್ಫೂರ್ತಿಯಿತ್ತಿತ್ತು.

ಟಿಳಕರಿಗೂ ಭಗವದ್ಗೀತೆಗೂ ಸಂಪರ್ಕ ಏರ್ಪಟ್ಟುದು ಅವರ 16ನೆಯ ವಯಸ್ಸಿನಲ್ಲಿ. ಅಲ್ಲಿಂದ ಸತತವಾಗಿ ಅವರು ಗೀತೆಯ ಶ್ರವಣ, ವಾಚನ, ಚಿಂತನಗಳಲ್ಲಿ ಇದ್ದರು. ಧಾರ್ಮಿಕ ಜೀವನ ಬೇರೆ, ಲೌಕಿಕ ಜೀವನ ಬೇರೆ ಎಂದವರಿಗೆ ಟಿಳಕರು ಗೀತಾರಹಸ್ಯದಲ್ಲಿ ಉತ್ತರ ಕೊಟ್ಟಿದ್ದಾರೆ. ಟಿಳಕರು ಭಗವದ್ಗೀತೆಯಲ್ಲಿ ಕಂಡದ್ದು ಜ್ಞಾನಯುಕ್ತವಾದ ಭಕ್ತಿಪ್ರಧಾನವಾದ ಕರ್ಮಯೋಗ: ಲೋಕಮಾನ್ಯ ಟಿಳಕರು ಕರ್ಮಯೋಗದ ಆರಾಧಕರು. ಗಣಿತದ ಬಗ್ಗೆ ಇವರಿಗೆ ಇನ್ನೊಂದು ಪುಸ್ತಕ ಬರೆಯುವ ಮನಸ್ಸಿತ್ತು. ರಾಧಾಕೃಷ್ಣನ್ ಅವರು ಹೇಳಿದಂತೆ ಟಿಳಕರು ಸ್ವಭಾವತಃ ವಿದ್ವಾಂಸರು, ಆದರೆ ದೇಶದ ಆವಶ್ಯಕತೆಗಾಗಿ ರಾಜಕಾರಣಿಯಾದವರು.

ಆರು ವರ್ಷಗಳು ಪೂರ್ತಿ ಶಿಕ್ಷೆ ಅನುಭವಿಸಿದ ಅನಂತರ ಟಿಳಕರನ್ನು ಮಾಂಡಲೆ ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು (1914). ನಾನು ಸ್ವತಂತ್ರನಾಗಿರುವುದಕ್ಕಿಂತ ಸಂಕಷ್ಟಗಳಿಗೊಳಗಾಗುವುದರಿಂದಲೇ ನಾನೆಣಿಸಿದ ಕಾರ್ಯ ಸಾಧಿಸಬಹುದೇನೋ ಎನಿಸುತ್ತದೆ ಯೆಂದು, ನ್ಯಾಯಾಲಯದಲ್ಲಿ ತೀರ್ಪನ್ನು ಕೇಳಿದಾಗ, ಟಿಳಕರು ಹೇಳಿದ್ದರು. ಈಗ ಅದೇ ನ್ಯಾಯಾಲಯದಲ್ಲಿ ಈ ಮಾತುಗಳನ್ನು ಕೆತ್ತಿಸಿಡಲಾಗಿದೆ. ಈ ಮಾತು ಸತ್ಯವೆಂಬಂತೆ ಗೀತಾರಹಸ್ಯದಂಥ ಕೃತಿರತ್ನ ಸೆರೆಮನೆಯಲ್ಲಿ ತಯಾರಾಯಿತು. ಹಸ್ತಪ್ರತಿಯನ್ನು ಒಯ್ಯಲು ಟಿಳಕರಿಗೆ ಅನುಮತಿ ಸಿಗಲಿಲ್ಲ. ಅದರಲ್ಲಿ ಆಕ್ಷೇಪಾರ್ಹವಾದುದೇನೂ ಇಲ್ಲವೆಂದು ಪರಿಶೀಲಿಸಿದ ಮೇಲೆ ಅದು ಟಿಳಕರ ಕೈಸೇರಿತು. ಮೊದಲು ಮರಾಠಿಯಲ್ಲಿ ಬರೆಯಲಾದ ಈ ಗ್ರಂಥವನ್ನು ಆಮೇಲೆ ಇಂಗ್ಲಿಷಿಗೆ ಅನುವಾದಿಸಿದರು. ಈ ನಡುವೆ 1912ರಲ್ಲಿ ಲೋಕಮಾನ್ಯರ ಪತ್ನಿ ಸ್ವರ್ಗಸ್ಥರಾಗಿದ್ದರು. ಆಗ ಟಿಳಕರು ಅವರ ಬಳಿ ಇರಲಿಲ್ಲ. ಜೈಲುವಾಸದಿಂದ ಟಿಳಕರ ಆರೋಗ್ಯ ತುಂಬ ಕೆಟ್ಟಿತ್ತು. ಟಿಳಕರು ಸರ್ಕಾರದ ಶತ್ರುವಾಗಿದ್ದಾರೆಂದೂ ಇವರೊಡನೆ ಸರ್ಕಾರಿ ನೌಕರರೂ ಸರ್ಕಾರದ ಹಿತೈಷಿಗಳೂ ಸಂಬಂಧ ಬೆಳೆಸಬಾರದೆಂದೂ ಸರ್ಕಾರ ಪ್ರಕಟಿಸಿತು. ಇವರ ಸುತ್ತ ಗುಪ್ತ ಪೊಲೀಸರ ಕಾವಲು ಏರ್ಪಟ್ಟಿತು.

ಆ ಹೊತ್ತಿಗೆ ಪ್ರಾರಂಭವಾದ ಒಂದನೆಯ ಮಹಾಯುದ್ಧದ ನಿಮಿತ್ತ ಬ್ರಿಟಿಷ್ ಸರ್ಕಾರ ಪ್ರಾರಂಭಿಸಿದ ಸೈನ್ಯಭರ್ತಿಯಲ್ಲಿ ಸುಶಿಕ್ಷಿತ ತರುಣರು ಸೇರಿಕೊಳ್ಳಬೇಕೆಂದೂ ದೇಶರಕ್ಷಣೆಗೆ ಸೈನಿಕ ಶಿಕ್ಷಣ ಅಗತ್ಯವೆಂದೂ ಟಿಳಕರು ಕೇಸರಿಯಲ್ಲಿ ಬರೆದರು. ಆದರೆ ಸರ್ಕಾರಕ್ಕೆ ಇವರ ಮಾತಿನಲ್ಲಿ ವಿಶ್ವಾಸವಿರಲಿಲ್ಲ. ಯುದ್ಧಪ್ರಯತ್ನಕ್ಕೆ ಸರ್ಕಾರ ಕೈಗೊಂಡ ಕ್ರಮಗಳಿಗೆ ನೆರವಾಗಲು ಭಾರತೀಯ ಮುಂದಾಳುಗಳ ಸಭೆಯನ್ನು ಕರೆದರೂ ಮೊದಲು ಟಿಳಕರಿಗೆ ಆಮಂತ್ರಣ ಕೊಡಲಿಲ್ಲ. ಎರಡನೆಯ ಸಭೆ ಮುಂಬಯಿಯಲ್ಲಿ ಸೇರಿದಾಗ ಟಿಳಕರನ್ನು ಕರೆಸಿಕೊಳ್ಳಲಾಯಿತಾದರೂ ಭಾರತಕ್ಕೆ ಸ್ವರಾಜ್ಯ ಕೊಡುವ ಭರವಸೆ ಕೊಟ್ಟಲ್ಲಿ ದೇಶವೇ ಸರ್ಕಾರವನ್ನು ಬೆಂಬಲಿಸುವುದೆಂದು ಟಿಳಕರು ಹೇಳಿದಾಗ ಸಭೆಯಲ್ಲಿದ್ದ ಲಾರ್ಡ್ ವಿಲಿಂಗ್‌ಟನ್ ಗಾಬರಿಯಾಗಿ ಟಿಳಕರಿಗೆ ಮಾತು ನಿಲ್ಲಿಸಲು ಹೇಳಿದ. ಆ ಕೂಡಲೇ ಅಲ್ಲಿಗೆ ಬಂದಿದ್ದ ಗಾಂಧೀಜಿ, ಹಾರ್ನಿಮನ್, ಜಮುನಾದಾಸ ಮೊದಲಾದವರೆಲ್ಲ ಟಿಳಕರ ಹಿಂದೆಯೇ ಸಭಾತ್ಯಾಗ ಮಾಡಿ ಹೊರಬಂದರು. ಟಿಳಕರಿಗೆ ಆದ ಅಪಮಾನವನ್ನು ಪ್ರತಿಭಟಿಸಿ ಗಾಂಧೀಜಿಯ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ವಿಲಿಂಗ್ಟನನ ವರ್ತನೆಯನ್ನು ಖಂಡಿಸಿ ಗಾಂಧಿ ಹಾಗೂ ಜಿನ್ನಾ ಮಾತಾಡಿದರು. ಯುದ್ಧಸಹಾಯದ ವಿಚಾರದಲ್ಲಿ ತಮ್ಮ ಪ್ರಾಮಾಣಿಕತೆಯನ್ನು ಸ್ಥಾಪಿಸಲು 50,000 ರೂಪಾಯಿಗಳನ್ನು ಟಿಳಕರು ಕಳಿಸಿದರೂ ಸರ್ಕಾರ ಇವರನ್ನು ನಂಬಲಿಲ್ಲ.

ಕಾಂಗ್ರೆಸಿನಲ್ಲಿ ಮಂದ ಮತ್ತು ತೀವ್ರಗಾಮಿಗಳಲ್ಲಿ ಬಹಳ ಬಿರುಕು ಉಂಟಾಗಿತ್ತು. ಆನಿಬೆಸೆಂಟರ ಮಧ್ಯಸ್ಥಿಕೆಯಿಂದಲೂ ಇದು ಬಗೆಹರಿಯದಿದ್ದಾಗ ಟಿಳಕರು ಹೋಮ್ ರೂಲ್ ಲೀಗ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಆಂದೋಲನವನ್ನು ಸಂಘಟಿಸತೊಡಗಿದರು. ಸರ್ಕಾರಕ್ಕೆ ಮತ್ತೆ ಚಿಂತೆ ಹತ್ತಿತ್ತು. ಅಹಮದಾಬಾದಿನಲ್ಲಿ ಟಿಳಕರು ಮಾಡಿದ ಭಾಷಣ ರಾಜದ್ರೋಹಾತ್ಮಕವೆಂದು ಇವರನ್ನು ಬಂಧಿಸಿತು. ಆದರೆ ಉಚ್ಚನ್ಯಾಯಾಲಯದವರೆಗೆ ಹೋದ ಈ ಪ್ರಕರಣದಲ್ಲಿ ನ್ಯಾಯಮೂರ್ತಿಗಳಾದ ಬೈಚೆಲ್ ಮತ್ತು ಲಲ್ಲೂಭಾಯಿಯವರು ಹೋಮ್ ರೂಲ್ ಕೇಳುವುದು ರಾಜದ್ರೋಹವಲ್ಲ ಎಂದು ತೀರ್ಪಿತ್ತರು. ಈ ನಿರ್ಣಯದಿಂದ ಸ್ವರಾಜ್ಯ ಚಳವಳಿಗೆ ಇನ್ನಷ್ಟು ಪುಷ್ಟಿ ಸಿಕ್ಕಿತು. ಟಿಳಕರು ದೇಶಾದ್ಯಂತ ತಿರುಗಿ ಸ್ವರಾಜ್ಯದ ಸಂದೇಶ ಸಾರಿದರು. ಒಂದೇ ವರ್ಷದಲ್ಲಿ 14,218 ಜನರು ಹೋಮ್ ರೂಲ್ ಲೀಗಿನ ಸದಸ್ಯರಾದರು. ನಿಧಿಯೂ ಸೇರತೊಡಗಿತು. ಮುಂದೆ ಸ್ವಲ್ಪ ದಿನಗಳಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತೀಯರ ಸಹಾನುಭೂತಿಪರವಾದ ಗಾಳಿ ಬೀಸತೊಡಗಿತು. ಮಾಂಟೆಗೊ-ಚೆಲ್ಮ್ಸ್‌ಫರ್ಡ್ ಸುಧಾರಣೆಗಳ ಯೋಜನೆ ಬಂತು. ಭಾರತದಿಂದ ಅನೇಕ ಶಿಷ್ಟಮಂಡಳಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಲು ಇಂಗ್ಲೆಂಡಿಗೆ ಹೋದವು. ಹೋಮ್ ರೂಲ್ ಲೀಗಿನ ಪರವಾಗಿ ಟಿಳಕ್ ಮತ್ತು ಆನಿಬೆಸೆಂಟರ ನಾಯಕತ್ವದಲ್ಲಿ ಒಂದು ಶಿಷ್ಟಮಂಡಳಿ ಇಂಗ್ಲೆಂಡಿಗೆ ಹೋಯಿತು. ಭಾರತದ ಸ್ವಾತಂತ್ರ್ಯ ಕೇಳಿಕೆಯನ್ನು ಟಿಳಕರು ಸಮರ್ಥವಾಗಿ ಪಾರ್ಲಿಮೆಂಟಿನ ಮುಂದೆ ಪ್ರತಿಪಾದಿಸಿದರು. ಇಂಗ್ಲೆಂಡಿನಲ್ಲಿ ಈ ವಿಚಾರವನ್ನು ಪ್ರಚಾರ ಮಾಡುವುದೇ ಇವರ ಮುಖ್ಯ ಗುರಿಯಾಗಿತ್ತು. ಇವರು ಇಂಗ್ಲೆಂಡನ್ನು ಪ್ರವೇಶಿಸದಂತೆ ತಡೆಯುವ ಪ್ರಯತ್ನಗಳೆಲ್ಲ ವಿಫಲವಾಗಿದ್ದವು. ಟಿಳಕರು ಪಾರ್ಲಿಮೆಂಟಿನ ಕೆಲವು ಸದಸ್ಯರ ಸಹಾನುಭೂತಿ ಗಳಿಸುವಲ್ಲಿ ಯಶಸ್ವಿಯಾದರು. ಇಂಗ್ಲೆಂಡಿನಲ್ಲಿ ಒಂದು ವರ್ಷ ಕಳೆದಮೇಲೆ ಟಿಳಕರು 1919 ನವೆಂಬರಿನಲ್ಲಿ ಭಾರತಕ್ಕೆ ಮರಳಿದರು.

ಸಪ್ಪೆಯಾದ ರಾಜಕಾರಣ ಟಿಳಕರಿಗೆ ಒಪ್ಪಿಗೆಯಾಗುತ್ತಿರಲಿಲ್ಲ. ರಾಜಕಾರಣದಲ್ಲಿ ಹಿಂದಡಿಯಿಡುವ ಸ್ವಭಾವ ಇವರದಲ್ಲ. ಆದ್ದರಿಂದಲೇ ಮಂದಗಾಮಿಗಳೊಡನೆ ಇವರ ಮತಭೇದವಿತ್ತು. ಆದರೆ ತಮ್ಮ 61ನೆಯ ವಯಸ್ಸಿನಲ್ಲಿ ಟಿಳಕರು ರಾಷ್ಟ್ರೋದ್ದೇಶ ಸಾಧನೆಗಾಗಿ ತಮ್ಮ ಟೀಕೆಗಳಲ್ಲಿ ಕಟುತ್ವವನ್ನು ಕಡಿಮೆ ಮಾಡಿ ಇವರು ಕಾಂಗ್ರೆಸ್ ಸೇರುವ ನಿರ್ಧಾರ ಮಾಡಿದರು. ತಮ್ಮ ಅನುಯಾಯಿ ಉಗ್ರವಾದಿಗಳನ್ನು ಸಹ ಕಾಂಗ್ರೆಸ್ ಜೊತೆಗೆ ಸಂಧಾನಕ್ಕೆ ಒಪ್ಪಿಕೊಳ್ಳಲು ಹೇಳಿದರು. ಕೆಲವರು ಈ ಕ್ರಮವನ್ನು ಮೆಚ್ಚಿಕೊಳ್ಳದಿದ್ದರೂ ಬಹುಜನರು ಇದಕ್ಕೆ ಸಮ್ಮತಿಸಿದರು. ಟಿಳಕರ ಕಾಂಗ್ರೆಸ್ ಪ್ರವೇಶವನ್ನು ವಿರೋಧಿಸಿದವರಲ್ಲಿ ಇವರ ಪ್ರತಿಸ್ಪರ್ಧಿಯಂತಿದ್ದ ಗೋಪಾಲ ಕೃಷ್ಣ ಗೋಖಲೆಯೊಬ್ಬರೇ ಪ್ರಮುಖರು. ಅನಂತರ ಕಾಂಗ್ರೆಸಿನ ಲಖನೌ ಅಧಿವೇಶನದಲ್ಲಿ ಟಿಳಕರ ಸಂಕಲ್ಪ ಫಲಿಸಿ ಮಂದಗಾಮಿ ಮತ್ತು ತೀವ್ರಗಾಮಿಗಳಲ್ಲಿ ಐಕ್ಯ ಸಾಧಿಸಿತು. ಹಿಂದು ಮುಸಲ್ಮಾನರೆಂಬ ಭೇದಭಾವವಿಲ್ಲದೆ ಎಲ್ಲರೂ ಸ್ವರಾಜ್ಯದ ಬೇಡಿಕೆಯನ್ನು ಘೋಷಿಸಿದರು. ಲೋಕಮಾನ್ಯರು 300 ಪ್ರತಿನಿಧಿಗಳೊಂದಿಗೆ ವಿಶೇಷ ರೈಲಿನಲ್ಲಿ ಈ ಐತಿಹಾಸಿಕ ಅಧಿವೇಶನಕ್ಕೆ ಹೋಗಿದ್ದರು. ಲಖನೌ ಅಧಿವೇಶನದ ಅನಂತರ ಸ್ವಲ್ಪ ದಿನಗಳಲ್ಲೇ ಗೋಖಲೆ ನಿಧನರಾದರು. ಗೋಖಲೆ ಟಿಳಕರ ರಾಜಕೀಯ ಪ್ರತಿಸ್ಪರ್ಧಿಯಾಗಿ ಕೆಲಸ ಮಾಡಿದ್ದರೂ ಇವರ ಮರಣದ ವಾರ್ತೆ ಕೇಳಿದ ಟಿಳಕರು ಹೃದಯ ತುಂಬಿ ಗೋಖಲೆಯವರ ದೇಶಪ್ರೇಮವನ್ನು ಹೊಗಳಿದರು.

ಟಿಳಕರು ಇಂಗ್ಲೆಂಡಿನಲ್ಲಿದ್ದಾಗ ಬ್ರಿಟಿಷ್ ಸರ್ಕಾರ ದೇಶದಲ್ಲಿ ರೌಲೆಟ್ ಅಧಿನಿಯಮವನ್ನು ಜಾರಿಗೆ ತಂದು ವ್ಯಕ್ತಿಸ್ವಾತಂತ್ರ್ಯವನ್ನು ಹರಣಮಾಡಿತ್ತು. ಇದನ್ನು ವಿರೋಧಿಸುವುದಕ್ಕಾಗಿ ಗಾಂಧೀಜಿ ಪ್ರಚಂಡ ಚಳವಳಿಯನ್ನು ಸಂಘಟಿಸಿದರು. ನಿಶ್ಶಸ್ತ್ರ ಜನರ ಮೇಲೆ ಪೊಲೀಸರು ಕಾರ್ಯಾಚರಣೆ ನಡೆಸಿದರು. ಜಲಿಯನ್‌ವಾಲಾಬಾಗಿನಲ್ಲಿ ನೆರೆದ ಸಭೆಯ ಮೇಲೆ ಗೋಲಿಬಾರ್ ಆಯಿತು. ಸ್ತ್ರೀಯರನ್ನು ಬೆತ್ತಲೆ ಮಾಡಿ ಅವಮಾನಗೊಳಿಸಲಾಯಿತು. ಗಾಂಧೀಜಿ ಸತ್ಯಾಗ್ರಹ ಹೂಡಿದರು.

ಈ ಸಮಾಚಾರ ತಿಳಿದು ಟಿಳಕರು ಭಾರತಕ್ಕೆ ವಾಪಸ್ಸಾದರು. ಈ ನಡುವೆ ಹೋಮ್ ರೂಲ್ ಲೀಗಿನ ಚಳವಳಿ, ಮಾನನಷ್ಟ ಮೊಕದ್ದಮೆ, ಇಂಗ್ಲೆಂಡ್ ವಾಸ-ಇವುಗಳಿಂದ ಟಿಳಕರು ಸಾಲದಲ್ಲಿ ಮುಳುಗಿದರು. ರವೀಂದ್ರನಾಥ ಟಾಗೋರ್, ಅರವಿಂದ ಘೋಷ್ ಮೊದಲಾದವರೆಲ್ಲ ಬಂಗಾಲದಲ್ಲಿ ಹಣ ಕೂಡಿಸಿ ಟಿಳಕರಿಗೆ ಸಹಾಯ ಮಾಡಿದರು. ಅಲ್ಪಾವಧಿಯಲ್ಲಿಯೇ ಮೂರು ಲಕ್ಷ ರೂಪಾಯಿಗಳು ಸಂಗ್ರಹವಾದವು. ಟಿಳಕರು ಋಣದಿಂದ ಪಾರಾದರು. ಮಾನನಷ್ಟ ಮೊಕದ್ದಮೆಯಲ್ಲಿ ಟಿಳಕರಿಗೆ ಸೋಲಾದರೂ ಅವರು ಆತ್ಮಗೌರವಕ್ಕಾಗಿ, ಭಾರತೀಯರ ಸ್ವಾಭಿಮಾನಕ್ಕಾಗಿ ಹೂಡಿದ ಮೊಕದ್ದಮೆ ಅದಾಗಿತ್ತು. ಈ ಮಾತನ್ನು ಗಾಂಧೀಜಿಯವರೇ ಮುಂಬಯಿಯಲ್ಲಿ ನಡೆದ ಪ್ರಚಂಡ ಸಭೆಯಲ್ಲಿ ಹೇಳಿದರು. ಸ್ವಾತಂತ್ರ್ಯ ಪ್ರಾಪ್ತಿಯ ವಿಚಾರದಲ್ಲಿ ಗಾಂಧೀಜಿ ಮತ್ತು ಟಿಳಕರ ದಾರಿಗಳು ಬೇರೆಬೇರೆಯಾಗಿದ್ದರೂ ಟಿಳಕರ ಸ್ವಾರ್ಥತ್ಯಾಗ ಮತ್ತು ವಿದ್ವತ್ತುಗಳನ್ನು ಗಾಂಧೀಜಿ ಮೆಚ್ಚಿದ್ದರು.

ಭಾರತಕ್ಕೆ ಹಿಂದಿರುಗಿದ ಮೇಲೆ ಟಿಳಕರು ಅಮೃತಸರ ಕಾಂಗ್ರೆಸ್ ಅಧಿವೇಶನಕ್ಕೆ ಹೋದರು. ಅಲ್ಲಿ ಮಾಂಟೆಗೊ-ಚೆಲ್ಮ್ಸ್‌ಫರ್ಡ್ ಸುಧಾರಣೆಯ ಬಗ್ಗೆ ಗಾಂಧಿ ಹಾಗೂ ಟಿಳಕರಲ್ಲಿ ಮತಭೇದವುಂಟಾಯಿತು. ಸುಧಾರಣೆಗಳನ್ನು ಕೊಡುವುದಾದಲ್ಲಿ ಸರ್ಕಾರದೊಡನೆ ಸಹಕರಿಸುವುದಾಗಿ ಟಿಳಕರು ಇಂಗ್ಲೆಂಡಿನಲ್ಲಿ ಕೂಲಿಕಾರ ಪಕ್ಷದ ಮುಖಂಡರಿಗೆ ಮಾತುಕೊಟ್ಟು ಬಂದಿದ್ದರು. ಆಗ ಭಾರತದಲ್ಲಿ ಸರ್ಕಾರ ನಡೆಸಿದ ಅತ್ಯಾಚಾರದ ತೀವ್ರತೆ ಅವರಿಗೆ ತಿಳಿದಿರಲಿಲ್ಲ. ದೇಶದ ತುಂಬ ಹಬ್ಬಿದ ಅಸಹಕಾರ ಸತ್ಯಾಗ್ರಹ, ಕಾನೂನುಭಂಗ ಮುಂತಾದ ಆಂದೋಲನದ ಬಿರುಗಾಳಿಗೆ ಗಾಂಧೀಜಿಯವರು ಸೂತ್ರಧಾರರಾಗಿದ್ದರು. ಅತ್ಯಾಚಾರದಿಂದ ರೊಚ್ಚಿಗೆದ್ದ ಜನರು ಸರ್ಕಾರದೊಂದಿಗೆ ಸಹಕರಿಸಲು ಸಿದ್ಧರಿರಲಿಲ್ಲ. ಅದಕ್ಕಾಗಿ ಗಾಂಧೀಜಿಯವರು ಸೂಚಿಸಿದ ಅಸಹಕಾರ ಕಾರ್ಯಕ್ರಮಕ್ಕೆ ಬೆಂಬಲ ದೊರೆಯಿತು. ಗಾಂಧಿ, ಟಿಳಕ್-ಇಬ್ಬರೂ ಮಹಾಪುರುಷರು. ಮತಭೇದ ಕೊನೆಯವರೆಗೆ ಉಳಿದರೂ ಒಬ್ಬರನ್ನೊಬ್ಬರು ಮನಃಪೂರ್ವಕವಾಗಿ ಗೌರವಿಸುತ್ತಿದ್ದರು.

ಟಿಳಕರು ಭಾರತೀಯ ಧರ್ಮಸಂಸ್ಕೃತಿಗಳಲ್ಲಿ ಅಚಲಶ್ರದ್ಧೆಯುಳ್ಳವರಾಗಿದ್ದರೂ ಇವರದು ಕುರುಡುನಂಬಿಕೆಯಾಗಿರಲಿಲ್ಲ. ವರದಕ್ಷಿಣೆ ನಿಷೇಧಿಸಬೇಕು, ವಿಧವೆಯರ ಮುಂಡನ ಅನಗತ್ಯ ಮುಂತಾದ ಸಮಾಜ ಸುಧಾರಣೆಗಾಗಿ ಆದಾಯದ ಒಂದಂಶ ವ್ಯಯವಾಗಬೇಕು. ಇಂಥ ಕ್ರಾಂತಿಕಾರಕ ಸುಧಾರಣೆಗಳಿಗಾಗಿ ಇವರು ಹೆಣಗಾಡಿದರು. ಸುಧಾರಣೆಯೆಂದರೆ ಪಾಶ್ಚಾತ್ಯರ ನಕಲು ಅಲ್ಲ ಎಂಬುದಾಗಿ ಟಿಳಕರು ಪದೇಪದೇ ಹೇಳುತ್ತಿದ್ದರು. ಟಿಳಕರು ಸತ್ಯವಾದಿಗಳು, ಸತ್‌ಚಾರಿತ್ರ್ಯವುಳ್ಳವರು. ಇವರು ಭಾರತೀಯ ಸಮಾಜದೊಳಗಿನ ಮೂಲ ತಪ್ಪುಗಳನ್ನು ಶೋಧಿಸಿದರು. ಮಡಿವಂತಿಕೆಯ ಕುರುಡುಪರಂಪರೆಯಲ್ಲಿ ಇವರಿಗೆ ನಂಬಿಕೆ ಇರಲಿಲ್ಲ.

ಅಮೃತಸರ ಕಾಂಗ್ರೆಸ್ ಅಧಿವೇಶನದ ಅನಂತರ ಟಿಳಕರು ಮತ್ತು ಅವರ ಅನುಯಾಯಿಗಳು ಕಾಂಗ್ರೆಸ್ ಡೆಮೊಕ್ರಾಟಿಕ್ ಪಾರ್ಟಿ ಎಂಬ ಹೊಸ ಪಕ್ಷವನ್ನು ಸ್ಥಾಪಿಸಿ ಶಾಸನಸಭೆಗಳನ್ನು ಪ್ರವೇಶಿಸಲು ಚುನಾವಣಾ ಪ್ರಣಾಳಿಕೆಯನ್ನು ಸಿದ್ಧಪಡಿಸಿ ಪ್ರಚಾರ ನಡೆಸಿದರು. ಆದರೆ ರಾಷ್ಟ್ರಕ್ಕೆ ಬೇಕಾದುದನ್ನು ತೀರ್ಮಾನಿಸುವ ಏಕೈಕ ಸಂಸ್ಥೆ ರಾಷ್ಟ್ರೀಯ ಕಾಂಗ್ರೆಸ್; ಅದು ಅಮೃತಸರದಲ್ಲಿ ತೀರ್ಮಾನಿಸಿದ ಮಾರ್ಗವೇ ಸರಿ ಎಂದು ಟಿಳಕರು ತಮ್ಮ ಭಾಷಣಗಳಲ್ಲಿ ಪ್ರಚಾರ ಮಾಡಿದರು. ಶಾಸನಸಭಾ ಪ್ರವೇಶವನ್ನು ಕಾಂಗ್ರೆಸ್ ಒಪ್ಪಿಕೊಂಡಿತ್ತು. ಆದರೆ ಮುಂದಿನ ಚುನಾವಣೆಯ ಸಂಘಟನೆಯ ಕ್ರಮ ಕೈಗೊಂಡಿರಲಿಲ್ಲ. ಟಿಳಕರು ಆ ಕೆಲಸ ಮಾಡಿದರು.

ಆ ವೇಳೆಗೆ ಟಿಳಕರ ಆರೋಗ್ಯ ಕ್ಷೀಣಿಸತೊಡಗಿತ್ತು. ವಾರಾಣಸಿಯ ಕಾಂಗ್ರೆಸ್ ಅಧಿವೇಶನಕ್ಕೆ ಟಿಳಕರು ಹೋಗಲಾಗಲಿಲ್ಲ. ಎಲ್ಲರೂ ಗಾಂಧೀಜಿಯವರ ಅಸಹಕಾರ ಯೋಜನೆಯ ಬಗ್ಗೆ ಟಿಳಕರ ಅಭಿಪ್ರಾಯವೇನೆಂದು ಕೇಳುವವರೇ. ಆದರೆ ಟಿಳಕರು ಗಾಂಧೀಜಿಗೆ ತಿಳಿಸಿದ್ದರು. ಕಾರ್ಯಕ್ರಮ ನನಗೆ ಒಪ್ಪಿಗೆಯಾದರೂ ದೇಶ ಈ ವಿಚಾರದಲ್ಲಿ ನಮ್ಮೊಂದಿಗಿರುವ ಬಗ್ಗೆ ನನ್ನ ಸಂದೇಹವಿದೆ. ಇದಕ್ಕೆ ನಾನು ಅಡ್ಡಬರುವುದಿಲ್ಲ. ನಿಮಗೆ ಯಶ ಸಿಗಲಿ. ಜನತೆ ನಿಮ್ಮ ಮಾತಿಗೆ ಕಿವಿಗೊಟ್ಟರೆ ನನ್ನ ಉತ್ಸಾಹದ ಬೆಂಬಲವೂ ನಿಮಗಿದೆಯೆಂದು ಭಾವಿಸಿರಿ ಎಂದು ಇವರು ಹೇಳಿದ್ದರು.

ಗಾಂಧೀಜಿ, ಶೌಕತ್ ಅಲಿ ಇಬ್ಬರೂ ಮುಂಬಯಿಯಲ್ಲಿ ಟಿಳಕರನ್ನು ಕಂಡು ಮಾತನಾಡಿದರು. 1920ರ ದಿನಗಳವು. ಬಾಳ ಗಂಗಾಧರ ಟಿಳಕರು ಆಗ ಹಿರಿಯರ ಪ್ರತಿನಿಧಿಯಾಗಿ ಮಾತನಾಡಬಲ್ಲ ನಾಯಕರಾಗಿದ್ದರು. ಟಿಳಕರು ಆ ವರ್ಷದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರೆಂದು ಆಯ್ಕೆಯಾಗಲಿದ್ದರು. ಗಾಂಧೀಜಿ ಆಗಸ್ಟ್ 1ರಂದು ಅಸಹಕಾರ ಚಳವಳಿ ಪ್ರಾರಂಭವಾಗುವುದೆಂದು ಘೋಷಿಸಿದ್ದರು. ಅದೇ ದಿನ ಟಿಳಕರು ಈ ಲೋಕ ತ್ಯಜಿಸಿದರು. ದೈವವೇ ರಾಷ್ಟ್ರದ ನಾಯಕ ಪಟ್ಟವನ್ನು ಲೋಕಮಾನ್ಯ ಟಿಳಕರ ತಲೆಯಿಂದ ಮಹಾತ್ಮ ಗಾಂಧಿಯವರ ತಲೆಗೆ ವರ್ಗಾಯಿಸಿತ್ತು.

1920 ಜುಲೈ ತಿಂಗಳಲ್ಲಿ ಇವರಿಗೆ ತೀವ್ರವಾದ ಮಲೇರಿಯ ಆಯಿತು. ಜ್ವರದ ತಾಪದಲ್ಲೂ ಇವರು ಸ್ವರಾಜ್ಯ ಬೇಕು, 1818–1918 ಒಂದು ನೂರು ವರ್ಷಗಳ ಗುಲಾಮಗಿರಿ ಎಂದು ಹೇಳುತ್ತಿದ್ದರು, ನಮ್ಮ ಉಳಿವಿಗಾಗಿ ಸ್ವರಾಜ್ಯ ಸಾಧಿಸಬೇಕು ಎಂಬುದು ಟಿಳಕರ ಕೊನೆಯ ಮಾತು. ಇವರು 1920 ಜುಲೈ 31ರಂದು ನಿಧನರಾದರು. (ಜೆ.ಆರ್.ಪಿ.)

**ಟೀಟೊ, ಜೋಸಿಪ್ ಬ್ರೋಜ್:** 1892–1980 ಯೂಗೋಸ್ಲಾವಿಯ ಸಮಾಜವಾದಿ ಸಂಯುಕ್ತ ಗಣರಾಜ್ಯದ ಪ್ರಧಾನ ಮಂತ್ರಿ (1945–53), ಅಧ್ಯಕ್ಷ (1953–80). ರಾಜನೀತಿಜ್ಞ. ಜನನ 1892ರ ಮೇ 25ರಂದು, ಕ್ರೊವೇಷ್ಯದ ಮುಖ್ಯ ಪಟ್ಟಣವಾದ ಜ಼ಾಗ್ರೆಬ್ ಬಳಿ ಇರುವ ಕುಮ್ರಾವೋಕ್‌ನಲ್ಲಿ ರೈತಕುಟುಂಬವೊಂದರಲ್ಲಿ. ಪ್ರಾಥಮಿಕ ಮತ್ತು ಅಭ್ಯಾಸಿ (ಅಪ್ರೆಂಟಿಸ್) ಶಾಲೆಯಲ್ಲಿ ಶಿಕ್ಷಣ ಪಡೆದು 1907–14 ರಲ್ಲಿ ಕ್ರೊವೇಷಿಯ, ಆಸ್ಟ್ರಿಯ, ಚೆಕೊಸ್ಲೊವಾಕಿಯಗಳಲ್ಲೂ 1920–28 ರಲ್ಲಿ ಯೂಗೋಸ್ಲಾವಿಯದ ಹಲವಾರು ಪಟ್ಟಣಗಳಲ್ಲೂ ಲೋಹಕೆಲಸಗಾರನಾಗಿದ್ದ ಇವನು 1910ರಲ್ಲಿ ಕಾರ್ಮಿಕ ಚಳವಳಿಗೆ ಸೇರಿದ. ಒಂದನೆಯ ಮಹಾಯುದ್ಧದ ಕಾಲದಲ್ಲಿ. 1915 ಏಪ್ರಿಲ್‌ನಲ್ಲಿ, ರಷ್ಯನ್ ಜ಼ಾರ್ ಚಕ್ರವರ್ತಿಯ ಸೇನೆ ಇವನನ್ನು ಸೆರೆಹಿಡಿಯಿತು. 1918ರಲ್ಲಿ ರಷ್ಯದಲ್ಲಿ ಅಕ್ಟೋಬರ್ ಕ್ರಾಂತಿ ಆರಂಭವಾದಾಗ ಕೆಂಪು ಅಂತಾರಾಷ್ಟ್ರೀಯ ರಕ್ಷಣಾದಳವನ್ನು ಸೇರಿ ತಮ್ಮ ತಂಡ ಒಡೆಯುವವರೆಗೂ ಅದರಲ್ಲಿದ್ದ. 1920ರಲ್ಲಿ ಯೂಗೋಸ್ಲಾವ್ ಕಮ್ಯೂನಿಸ್ಟ್ ಪಕ್ಷದ ಸದಸ್ಯನಾದನು. ಪಕ್ಷದಲ್ಲಿ ನಾನಾ ಸ್ಥಾನಗಳಲ್ಲಿ ಕೆಲಸಮಾಡಿ ಅಂತಿಮವಾಗಿ ಅದರ ಮಹಾಕಾರ್ಯದರ್ಶಿಯಾದ. ಅನೇಕ ಸಾರಿ ದಸ್ತಗಿರಿಯಾಗಿದ್ದ ಇವನು 1928 ರಲ್ಲಿ ಬಾಂಬ್ ಎಸೆದರೆಂಬ ಆಪಾದನೆಗೆ ಗುರಿಯಾಗಿ ಐದು ವರ್ಷಗಳ ಕಾರಾಗೃಹ ಶಿಕ್ಷೆಗೆ ಗುರಿಯಾದ. 1934ರ ವರೆಗೆ ಸೆರೆಮನೆಯಲ್ಲಿದ್ದು ಹೊರ ಬಂದ ಮೇಲೆ ಇವನ ಕ್ರಾಂತಿಯ ಹೋರಾಟ ಇನ್ನೂ ತೀವ್ರವಾಯಿತು. ವಿಯೆನ್ನ, ಮಾಸ್ಕೊ, ಪ್ಯಾರಿಸ್‌ಗಳಲ್ಲಿ ಸಂಚರಿಸಿ ಬಂದ ಮೇಲೆ ಯೂಗೋಸ್ಲಾವಿಯದ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪಾಲಿಟ್ ಬ್ಯೂರೋದ ಸದಸ್ಯನೂ (1936) ಅದರ ಮಹಾಕಾರ್ಯದರ್ಶಿಯೂ (1937) ಆಗಿ ಪಕ್ಷವನ್ನು ಶುದ್ಧೀಕರಿಸಿ ಯೂಗೋಸ್ಲಾವಿಯದ ಜನತಾ ಹೋರಾಟವನ್ನು ತೀವ್ರಗೊಳಿಸಿದನು. ಸ್ಪೇನಿನಲ್ಲಿ ಫ್ರಾಂಕೋನ ಸರ್ವಾಧಿಕಾರದ ವಿರುದ್ಧ ಹೋರಾಡುತ್ತಿದ್ದ ಅಂತಾರಾಷ್ಟ್ರೀಯ ಬ್ರಿಗೇಡುಗಳಿಗೆ ಯೋಧರನ್ನು ಸಂಗ್ರಹಿಸುವ ಕಾರ್ಯದಲ್ಲಿ 1936 ರಲ್ಲಿ ನಿರತನಾಗಿದ್ದನು. 1938ರಲ್ಲಿ ಮತ್ತು 1939ರಲ್ಲಿ ಮಾಸ್ಕೋ ಸಂದರ್ಶಿಸಿದನು. ಎರಡನೆಯ ಮಹಾಯುದ್ಧ ಆರಂಭವಾದಾಗ, ಅದು ಸಾಮ್ರಾಜ್ಯಶಾಹಿ ಯುದ್ಧವಾದ್ದರಿಂದ, ಯೂಗೋಸ್ಲಾವಿಯ ಅದರಿಂದ ದೂರ ಇರಬೇಕೆಂದು ಜ಼ಾಗ್ರೆಬ್‌ನಲ್ಲಿ ಸೇರಿದ್ದ ಪಕ್ಷದ 5ನೆಯ ಕಾಂಗ್ರೆಸ್ ತೀರ್ಮಾನಿಸಿತು. 1940ರಲ್ಲಿ ಹಿಟ್ಲರ್ ಯೂಗೋಸ್ಲಾವಿಯಾದ ಮೇಲೆ ಆಕ್ರಮಣ ನಡೆಸಿ ಅದನ್ನು ತುಂಡರಿಸಿದ. ಅನಂತರ ಸೋವಿಯೆತ್ ದೇಶದ ಆಕ್ರಮಣ ಆರಂಭವಾಯಿತು. ಆಕ್ರಮಣಕಾರಿಗಳ ವಿರುದ್ಧ ಯೂಗೋಸ್ಲಾವಿಯದ ಜನರ ಪ್ರತಿಭಟನೆ ಉಗ್ರರೂಪ ತಾಳಿತು. ಟೀಟೊ ವಿಮೋಚನಾರಂಗದ ನಾಯಕತ್ವ ವಹಿಸಿದ. ಟೀಟೊ ಎಂಬುದು ಆಗ ಇವರು ಇಟ್ಟುಕೊಂಡಿದ್ದ ಗುಪ್ತನಾಮ. ಇವನ ನಾಯಕತ್ವ ಉತ್ಸಾಹದ ಬುಗ್ಗೆಯಾಗಿತ್ತು. ಇವನ ಎದುರು ಮತ್ತು ಮಿತ್ರ ರಾಷ್ಟ್ರಗಳ ಸೈನಿಕರ ಒತ್ತಡದ ಎದುರು ಹಿಟ್ಲರನ ಸೈನ್ಯ ಬಹಳಕಾಲ ಯೂಗೋಸ್ಲಾವಿಯದಲ್ಲಿ ಉಳಿಯಲಾಗಲಿಲ್ಲ. ಹಿಟ್ಲರ್ ಹಿಮ್ಮೆಟ್ಟಿದ. 1945ರಲ್ಲಿ ಯೂಗೋಸ್ಲಾವಿಯದ ವಿಮೋಚನೆಯಾಯಿತು.

ಸ್ವತಂತ್ರವಾದ ಯೂಗೋಸ್ಲಾವಿಯ ಸರ್ಕಾರದ ನಾಯಕತ್ವ ಸ್ವಾಭಾವಿಕವಾಗಿಯೇ ಟೀಟೊ ಅವರದಾಯಿತು. 1945–53 ರಲ್ಲಿ ಇವನು ಯೂಗೋಸ್ಲಾವಿಯದ ಪ್ರಧಾನಮಂತ್ರಿ ಮತ್ತು ರಾಷ್ಟ್ರೀಯ ರಕ್ಷಣಾ ಸಚಿವಸ್ಥಾನ ಹೊಂದಿದನು. 1953 ಜನವರಿಯಲ್ಲಿ ಯೂಗೋಸ್ಲಾವಿಯ ಸಮಾಜವಾದಿ ಸಂಯುಕ್ತ ಗಣರಾಜ್ಯದ ಅಧ್ಯಕ್ಷರಾಗಿ ಚುನಾಯಿತನಾದ. 1954 ಮತ್ತು 1958 ರಲ್ಲೂ ಅಧ್ಯಕ್ಷನಾಗಿ ಆಯ್ಕೆಯಾದನು. 1963 ರಲ್ಲಿ ಜೀವಾವಧಿ ಅಧ್ಯಕ್ಷನಾಗಿ ಚುನಾಯಿತನಾದ.

ಟೀಟೊ ನವ ಯೂಗೋಸ್ಲಾವಿಯದ ನಿರ್ಮಾಪಕ. 1945ರಿಂದ ತಮ್ಮ ರಾಷ್ಟ್ರದ ಆಂತರಿಕ ಮತ್ತು ಅಂತಾರಾಷ್ಟ್ರೀಯ ನೀತಿಯನ್ನು ಪ್ರತಿಪಾದಿಸುವುದರಲ್ಲಿ ವಿಶಿಷ್ಟಪಾತ್ರ ವಹಿಸಿದ. ಇವನ ನಾಯಕತ್ವದಲ್ಲಿ ಯೂಗೋಸ್ಲಾವಿಯ ಹಿಡಿದ ಅಭಿವೃದ್ಧಿ ಪಥ ವಿಶಿಷ್ಟವಾದ್ದು. ಕಮ್ಯೂನಿಸ್ಟ್ ಮಾದರಿಯ ರಾಜ್ಯ ಸ್ಥಾಪಿಸಿದರೂ ಯುರೋಪಿನ ಇತರ ಕಮ್ಯೂನಿಸ್ಟ್

ರಾಜ್ಯಗಳ ನೀತಿಗೆ ಹೊರತಾಗಿ ಟೀಟೊರವರ ಯೂಗೋಸ್ಲಾವಿಯ ಮುನ್ನಡೆಯಿತು. 1945–49ರ ವರೆಗೆ ಕಮ್ಯೂನಿಸ್ಟ್ ರಾಜ್ಯ ಸ್ಥಾಪಿಸಲು ಕ್ರಾಂತಿಕಾರಿ ಪ್ರಯತ್ನ ನಡೆದಾಗ ಟೀಟೊ ರಷ್ಯದ ಸ್ಟಾಲಿನ್ ನೀತಿಗಳನ್ನೇ ಅನುಸರಿಸಿದ. ಸೋವಿಯತ್ ಕಮ್ಯೂನಿಸ್ಟ್ ವ್ಯವಸ್ಥೆಯಲ್ಲಿ ಅನವಶ್ಯಕವಾದ ಬಿಗಿಮುಷ್ಟಿತನ, ಕೇಂದ್ರೀಕರಣ, ನೌಕರಶಾಹಿ ಮುಂತಾದ ನ್ಯೂನತೆಗಳಿವೆಯೆಂಬುದಾಗಿ ಭಾವಿಸಿ 1948 ರಲ್ಲಿ ಯೂಗೋಸ್ಲಾವಿಯದಲ್ಲಿ ಕಮ್ಯೂನಿಸ್ಟ್ ನೀತಿಗಳನ್ನು ಸಡಿಲಗೊಳಿಸಿ ಮಾರ್ಪಡಿಸಲು ಆರಂಭಿಸಿದ. ಕೇಂದ್ರೀಕೃತವಾದ ರಾಜ್ಯಾಧಿಕಾರವನ್ನು ಸ್ಥಳೀಯ ಮತ್ತು ಪ್ರಾದೇಶಿಕ ಸರ್ಕಾರಗಳಿಗೂ ಸಂಘ ಸಂಸ್ಥೆಗಳಿಗೂ ಹಂಚಿ ಅದನ್ನು ವಿಕೇಂದ್ರೀಕರಿಸಲು ಆರಂಭಿಸಿದ. ರಾಷ್ಟ್ರೀಕೃತವಾದ ಆಸ್ತಿಯನ್ನು ಸಾಮಾಜಿಕ ಆಸ್ತಿಯನ್ನಾಗಿ ಪರಿವರ್ತಿಸಲು ಆರ್ಥಿಕ ಮತ್ತು ಸಾಮಾಜಿಕ ಸಂಘಸಂಸ್ಥೆಗಳಿಗೂ ಸ್ಥಳೀಯ ಸಂಸ್ಥೆಗಳಿಗೂ ವರ್ಗಾಯಿಸಲಾರಂಭಿಸಿದ. ಸಾಮಾಜಿಕವಾದ ಆಸ್ತಿಯನ್ನು ನಿರ್ವಹಿಸುವ ಅಧಿಕಾರವನ್ನು ನೌಕರರ ಸ್ವಯಂ ಆಡಳಿತಕ್ಕೂ ನಾಗರಿಕರ ಸ್ವಯಂ ಆಡಳಿತ ವ್ಯವಸ್ಥೆಗೂ ವಹಿಸಿದ. ಸ್ವಯಂ ಆಡಳಿತ ಸೂತ್ರಕ್ಕೂ ಪ್ರಜಾಪ್ರಭುತ್ವ ಪದ್ಧತಿಗೂ ಹೀಗೆ ಹೆಚ್ಚಿನ ಮಾನ್ಯತೆ ದೊರೆಯಲು ಆರಂಭವಾಯಿತು. ಅಷ್ಟೇ ಅಲ್ಲದೆ ವಿಕೇಂದ್ರೀಕೃತ ಅರ್ಥವ್ಯವಸ್ಥೆ ಯನ್ನು ನಿರ್ವಹಿಸಲು ವಿಕೇಂದ್ರೀಕೃತವಾದ ಯೋಜನಾ ಪದ್ಧತಿಯೂ ಸಾಮಾಜಿಕವಾಗಿ ನಿಯಂತ್ರಿಸಲ್ಪಟ್ಟ ಬಂಡವಾಳಶಾಹಿ ಪದ್ಧತಿಯಲ್ಲಿರುವಂಥ ಮಾರುಕಟ್ಟೆವ್ಯವಸ್ಥೆಯೂ ಆರಂಭವಾದವು. ಈ ವ್ಯವಸ್ಥೆಗಳಿಂದಾಗಿ ಯೂಗೋಸ್ಲಾವಿಯದ ಕಮ್ಯೂನಿಸ್ಟ್ ಪದ್ಧತಿ ಇತರ ಕಮ್ಯೂನಿಸ್ಟ್ ಪದ್ಧತಿಗಿಂತ ಭಿನ್ನವಾಯಿತು. ಇತರ ಕಮ್ಯೂನಿಸ್ಟ್ ರಾಷ್ಟ್ರಗಳಿಗೆ ಇದು ಅಸಮಂಜಸವೆನಿಸಿತು. ಸೋವಿಯತ್ ಒಕ್ಕೂಟದ ಸರ್ವಾಧಿಕಾರಿ ಸ್ಟಾಲಿನನನ್ನು ಇದು ಕೆರಳಿಸಿತು. 1948ರಲ್ಲಿ ಯೂಗೋಸ್ಲಾವಿಯವನ್ನು ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಸಂಘದಿಂದ ಹೊರದೂಡಲಾಯಿತು. ಸೋವಿಯತ್ ಬಣದ ಎಲ್ಲ ರಾಷ್ಟ್ರಗಳೊಡನೆಯೂ ಯೂಗೋಸ್ಲಾವಿಯದ ಸಂಬಂಧ ಕೃಶವಾಯಿತು. ಟೀಟೊನ ನೀತಿನಿಲುವುಗಳು ಟೀಕೆಗೆ ಗುರಿಯಾದವು. 1953ರಲ್ಲಿ ಸ್ಟಾಲಿನ್ ನಿಧನಹೊಂದುವವರೆಗೂ ಈ ವೈಮನಸ್ಯ ತೀವ್ರವಾಗಿತ್ತು. ಆದರೂ ಯೂಗೋಸ್ಲಾವಿಯದ ನೀತಿಗಳಿಗೆ ಆಂತರಿಕವಾಗಿ ಜನಾನುರಾಗ ಲಭಿಸಿತೆಂದು ಹೇಳಲಾಗಿದೆ. ಟೀಟೊನ ನಿರ್ಧಾರ, ನಿಲುವು ಬಲಗೊಂಡವು. 1956ರಿಂದ ಈಚೆಗೆ, ಕ್ರುಶ್ಚೋವ್ ಆಡಳಿತದಲ್ಲಿ ಸೋವಿಯೆತ್ ದೇಶದಲ್ಲಿ ವಿಸ್ಟಾಲಿನೀಕರಣವಾದ ಮೇಲೆ, ಯೂಗೋಸ್ಲಾವ್–ಸೋವಿಯೆತ್ ವಿರಸ ಕಡಿಮೆಯಾಯಿತು. ಸೋವಿಯೆತ್ ದೇಶ ಯೂಗೋಸ್ಲಾವಿಯದ ಸಮತಾವಾದಿ ಮಾರ್ಗಕ್ಕೆ ಮನ್ನಣೆ ನೀಡಿತು.

ಇದರಿಂದಾಗಿ ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ವೃತ್ತದಲ್ಲೂ ಟೀಟೊನ ವ್ಯಕ್ತಿತ್ವ ಪುನರುತ್ಥಾನಗೊಂಡಿತು. ಆಂತರಿಕವಾಗಿ ಟೀಟೊ ಪ್ರತಿಪಾದಿಸಿದ ನೀತಿಗಳು ವಿನೂತನ. ಅವು ಸಾಹಸಮಾರ್ಗದಲ್ಲಿ ಮುಂದುವರಿಯುತ್ತ ಬಂದಿವೆ. ಪಾಶ್ಚಾತ್ಯ ಬಂಡವಾಳಶಾಹಿ ಮತ್ತು ಪೌರಸ್ತ್ಯ ಕಮ್ಯೂನಿಸ್ಟ್ ಪದ್ಧತಿಯ ನ್ಯೂನತೆಗಳೆಲ್ಲವನ್ನೂ ಹೊರಗೆ ಹಾಕಿ ಪ್ರಗತಿಪರ ಒಳಿತುಗಳೆಲ್ಲವನ್ನೂ ಸಾಧಿಸಲು ಟೀಟೊ ಪ್ರಯತ್ನ ನಡೆಸಿದ. ಆದರೂ ಒಳಗೆ ಮತ್ತು ಹೊರಗೆ ಇವನ ನೀತಿಗಳನ್ನು ಟೀಕಿಸುವವರು ಇಲ್ಲದಿಲ್ಲ. ಟೀಟೊನ ನೀತಿ ಸೋವಿಯೆತ್ ನೀತಿಗೆ ಅಷ್ಟೇನೂ ವಿರುದ್ಧ ವಾದುದಲ್ಲವೆಂಬುದು 1954ರ ವರೆಗೆ ಯೂಗೋಸ್ಲಾವಿಯದ ಉಪಾಧ್ಯಕ್ಷನಾಗಿದ್ದ ಮಿಲೊವಾನ್ ಜೆಲಾಸ್‌ನ ಅಭಿಪ್ರಾಯ. 1963ರಿಂದ ಈಚೆಗೆ ಯೂಗೋಸ್ಲಾವಿಯದ ಒಳಗೆ ಇರುವ ಕೆಲವು ರಾಷ್ಟ್ರೀಯ ಜನಾಂಗಗಳು ದಂಗೆಯ ಪ್ರಯತ್ನ ನಡೆಸಿದಾಗಿನಿಂದ ಟೀಟೊ ಸುಧಾರಣಾ ನೀತಿಯಲ್ಲಿ ಸ್ವಲ್ಪ ವ್ಯತ್ಯಾಸಗಳಾಯಿತು. ಆದರೂ ಟೀಟೊ ನೀತಿ ಮುಂದುವರಿಯಿತು.

ಟೀಟೊ ಅಂತಾರಾಷ್ಟ್ರೀಯವಾಗಿ ಅಲಿಪ್ತನೀತಿಯನ್ನು ಅನುಸರಿಸುತ್ತಿದ್ದ. ಭಾರತದ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರು ಮತ್ತು ಈಜಿಪ್ಟಿನ ಅಧ್ಯಕ್ಷ ಅಬ್ದುಲ್ ನಾಸೆರರೊಂದಿಗೆ ಸೇರಿ ಅಲಿಪ್ತನೀತಿಯ ವಿಸ್ತರಣೆ ಮತ್ತು ಅಲಿಪ್ತ ರಾಷ್ಟ್ರಗಳ ಸಂಘಟನೆಗೆ ಟೀಟೊ ನೆರವಾದ. 1961ರಲ್ಲಿ ಬೆಲ್ಗ್ರೇಡಿನಲ್ಲಿ ಅಲಿಪ್ತ ರಾಷ್ಟ್ರಗಳ ಅಗ್ರಸಭೆ ಸೇರಿತ್ತು. ನೆಹರೂ ಮತ್ತು ನಾಸೆರ್ ಕಣ್ಮರೆಯಾದ ಮೇಲೆ ಟೀಟೊ ಅಲಿಪ್ತ ರಾಷ್ಟ್ರಗಳ ಮಹಾನಾಯಕನಾಗಿ ಮುಂದುವರೆದ. ಅಂತಾರಾಷ್ಟ್ರೀಯ ಶಾಂತಿ–ಸಹಕಾರಗಳ ಪ್ರತಿಪಾದಕನಾಗಿ ಪ್ರಪಂಚದ ಅನೇಕ ದೇಶಗಳಲ್ಲಿ ಹಲವು ಬಾರಿ ಸಂಚರಿಸಿದ್ದಾನೆ. ಭಾರತಕ್ಕೆ ಇವನು ನಾಲ್ಕು ಬಾರಿ ಭೇಟಿ ನೀಡಿದ್ದ.

ಹೀಗೆ ಟೀಟೊನ ವೈವಿಧ್ಯಮಯ ಸಾಧನೆ. ಸಾರ್ಥಕವಾದ ಜೀವನ. ಯೂಗೋಸ್ಲಾವಿಯದಲ್ಲಷ್ಟೇ ಅಲ್ಲದೆ, ಅಂತಾರಾಷ್ಟ್ರೀಯವಾಗಿ ಪ್ರಸಿದ್ಧನಾಗಿದ್ದಾನೆ. ಇತಿಹಾಸದಲ್ಲಿ ಇವನಿಗೆ ವಿಶೇಷ ಸ್ಥಾನ. ಇವನೊಬ್ಬ ರಾಷ್ಟ್ರೀಯ ವೀರ, ಸಮಾಜವಾದಿ ಕಾರ್ಯದ ವೀರ ಎಂದು ಸನ್ಮಾನಿತರಾಗಿದ್ದಾನೆ. ಯೋವಾಂಕ ಬ್ರೋಜ್ ಇವನ ತೃತೀಯ ಪತ್ನಿ, ಎರಡನೆಯ ಮಹಾಯುದ್ಧದ ಒಬ್ಬ ವೀರೆ. ಅಸಾಧಾರಣ ದೇಹದಾರ್ಢ್ಯ, ಅಸದಳವಾದ ಛಲ, ನೈತಿಕ ಸ್ಥೈರ್ಯ, ಬಿಚ್ಚುಮನ, ಹಾಸ್ಯಪ್ರಿಯತೆ, ಸ್ನೇಹಪರತೆಗಳು ಟೀಟೊನ ಗುಣಗಳು. ಇವನು 1980ರಲ್ಲಿ ನಿಧನಹೊಂದಿದ. (ಎಂ.ಯು.)

**ಟೇಕವಾಡ:** ಮಹಾರಾಷ್ಟ್ರ ರಾಜ್ಯದ ಧುಳೆ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಗಿರಣ ನದಿಯ ಬಲದಂಡೆಯ ಮೇಲಿದೆ. ಎದುರು ದಂಡೆಯ ಮೇಲೆ ಬಹಾಲ್ ನೆಲೆಯಿದೆ. 1956–57ರಲ್ಲಿ ನಡೆದ ಉತ್ಖನನದಲ್ಲಿ ತಾಮ್ರ–ಶಿಲಾಯುಗದಿಂದ ಮರಾಠ ಕಾಲದವರೆಗಿನ ಅವಶೇಷಗಳು ಇಲ್ಲಿ ಪತ್ತೆಯಾದುವು. ಇದೇ ಸಮಯದಲ್ಲಿ ನೆಲೆಯ ಸಮೀಪದಲ್ಲಿ ನದಿಯ ಮತ್ತೊಂದು ದಂಡೆಯಲ್ಲಿ ಶವಕುಣಿಯೊಂದು ಕಂಡುಬಂದಿತು. ಇದನ್ನು ಉತ್ಖನನ ಮಾಡಿದಾಗ ಸು.1 ಮೀ ಉದ್ದದ ಗುಡಾಣದಂಥ ಅಸ್ಥಿ ಮಡಕೆ ಗೋಚರಿಸಿತು. ಇದರೊಳಗೆ ಕಪ್ಪು ಹಾಗೂ ಕಪ್ಪು–ಕೆಂಪು ದ್ವಿವರ್ಣದ ಬಟ್ಟಲುಗಳು, ನೇರಳೆಬಣ್ಣದಿಂದ ಚಿತ್ರಿಸಿದ ಕೆಂಪುಬಣ್ಣದ ಹೂಜಿ ಇದ್ದುದು ಬಟ್ಟಲುಗಳ ಹೊರಮೇಲ್ಮೈಯಲ್ಲಿ ಗೀರು ವಿನ್ಯಾಸಗಳಿದ್ದುವು. ಇಂಥ ಪಾತ್ರೆಗಳು ವಸತಿ ನೆಲೆಯಲ್ಲಿ ತಾಮ್ರ–ಶಿಲಾಯುಗ ಹಂತದಲ್ಲಿ ದೊರಕಿದ್ದು ಶವಕುಣಿಯೂ ಇದೇ ಹಂತದ್ದೆಂಬುದನ್ನು ಸೂಚಿಸುತ್ತವೆ. ತಾಮ್ರ–ಶಿಲಾಯುಗ ಹಂತದಲ್ಲಿ ವಸತಿ ಪ್ರದೇಶದಿಂದ ದೂರದಲ್ಲಿ ಶವಸಂಸ್ಕಾರ ಮಾಡಿರುವ ಅಪರೂಪದ ಉದಾಹರಣೆಯಿದು. (ಎ.ಎಸ್.)

**ಟೇಲರ್, ಮೆಡೋಸ್:** 1808–76. ಭಾರತದಲ್ಲಿದ್ದ ಒಬ್ಬ ಬ್ರಿಟಿಷ್ ಅಧಿಕಾರಿ, ಪುರಾತತ್ತ್ವಜ್ಞ, ಕಾದಂಬರಿಕಾರ. ಫಿಲಿಪ್ ಮೆಡೋಸ್ ಟೇಲರ್ ಎಂಬುದು ಇವನ ಪೂರ್ಣ ಹೆಸರು. ಲಿವರ್‌ಪೂಲ್‌ನ ವರ್ತಕನೊಬ್ಬನ ಮಗನಾದ ಈತ 1808ರಲ್ಲಿ ಹುಟ್ಟಿದ. ಇವನು ತನ್ನ 16ನೆಯ ವಯಸ್ಸಿನಲ್ಲಿ ಭಾರತಕ್ಕೆ ಬಂದು ಹೈದರಾಬಾದ್ ನಿಜಾಮನ ಸೈನ್ಯಕ್ಕೆ ಸೇರಿ ದೊಡ್ಡ ಹುದ್ದೆಗೆ ಏರಿದ. ಸು.1840ರಿಂದ ಸುರಪುರ ನಾಯಕರ ಸಂಸ್ಥಾನದ ಆಗಿನ ಬ್ರಿಟಿಷ್ ಸರ್ಕಾರದ ರಾಜಕೀಯ ಪ್ರತಿನಿಧಿಯಾಗಿ, ಸಂಸ್ಥಾನದ ಏಳಿಗೆಗಾಗಿ ಶ್ರಮಿಸಿ ದಕ್ಷನೆಂದು ಪ್ರಸಿದ್ಧಿ ಪಡೆದ. ಇವನು ಬರುವ ಮುನ್ನ ಆ ಸಂಸ್ಥಾನದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ ತೀರ ಹದಗೆಟ್ಟಿತ್ತು. ಕೃಷ್ಣಪ್ಪನಾಯಕನ ಮರಣಾನಂತರ ಅವನ ಹಿರಿಯ ರಾಣಿ ಈಶ್ವರಮ್ಮ ತನ್ನ ಚಿಕ್ಕವಯಸ್ಸಿನ ಮಗ ವೆಂಕಟಪ್ಪನಾಯಕನ ಹೆಸರಿನಲ್ಲಿ ಸಂಸ್ಥಾನವನ್ನು ಆಳುತ್ತಿದ್ದಳು. ರಾಜಮನೆತನದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ಒಳಜಗಳವನ್ನು ತಪ್ಪಿಸಲು ಟೇಲರ್ ತಾಳ್ಮೆಯಿಂದಲೂ ಚತುರತೆಯಿಂದಲೂ ಪ್ರಯತ್ನಿಸಿದ. ಸಂಸ್ಥಾನದ ಸುಧಾರಣೆಗಾಗಿ ದುಡಿದ. 10 ವರ್ಷದ ವೆಂಕಟಪ್ಪನಾಯಕನಿಗೆ ಸಿಂಹಾಸನದ ಮೇಲೆ ಕೂರಿಸಿ, ಪಟ್ಟಾಭಿಷೇಕ ನೆರವೇರಿಸಿದ. ವೆಂಕಟಪ್ಪನಾಯಕನಿಗೆ ವಿದ್ವಾಂಸರಿಂದ ಶಿಕ್ಷಣ ಕೊಡಿಸಿದ. ರಾಜ್ಯದಲ್ಲಿ ರೈತರಿಗಾಗುತ್ತಿದ್ದ ತೊಂದರೆಗಳನ್ನು ನಿವಾರಿಸಿ ಸುರಪುರದ ಮೇಲೆ ಅನ್ಯಾಯದ ಸಾಲದ ಹೊರೆ ಏರಿಸಿದ್ದನ್ನು ತಪ್ಪೆಂದು ತೋರಿಸಿ ಅವರಿಂದಲೇ ಸುರಪುರಕ್ಕೆ 11 ಲಕ್ಷ ರೂ. ಬರುವ ಹಾಗೆ ಮಾಡಿದ. ಇವನ ಸುವ್ಯವಸ್ಥಿತ ಆಡಳಿತದಿಂದ ಸಂಸ್ಥಾನದಲ್ಲಿ ದರೋಡೆಗಳು ಕಡಿಮೆಯಾದುವು. ಜೋನಾಳ, ಕಚಕನೂರು ಮುಂತಾದೆಡೆಗಳಲ್ಲಿ ಕೆರೆಗಳು ನಿರ್ಮಾಣವಾದುವು. ರಾಜ್ಯದ ಖರ್ಚನ್ನು ಕಡಿಮೆ ಮಾಡಿ ಆದಾಯವನ್ನು ಹೆಚ್ಚಿಸಿದ. ರಾಜ ವೆಂಕಟಪ್ಪನಾಯಕ ಇವನಿಂದ ಬ್ರಿಟಿಷರ ರಾಜ್ಯ ಪದ್ಧತಿ, ಸ್ವಾಭಿಮಾನ, ಸ್ವಾತಂತ್ರ್ಯಪ್ರಿಯತೆ ಮುಂತಾದವನ್ನು ಕಲಿತುಕೊಂಡ. 1853ರ ಜೂನ್ 2ರಂದು ಟೇಲರ್ ಆಡಳಿತದ ಅಧಿಕಾರವನ್ನು ವೆಂಕಟಪ್ಪನಾಯಕನಿಗೆ ಒಪ್ಪಿಸಿ ಬೀರಾರ್ ಜಿಲ್ಲಾಧಿಕಾರಿಯ ಹುದ್ದೆ ವಹಿಸಿಕೊಂಡ. ರಾಜ ವೆಂಕಟಪ್ಪನಾಯಕ ಟೇಲರ್‌ನ ಪ್ರೀತಿಯ ಮತ್ತು ಉತ್ತಮ ಕಾರ್ಯಗಳ ಜ್ಞಾಪಕಾರ್ಥವಾಗಿ ಅವನು ಸುರಪುರದಲ್ಲಿ ವಾಸಿಸುತ್ತಿದ್ದ ಬಂಗ್ಲೆಯನ್ನು ಕೃತಜ್ಞತಾಪೂರ್ವಕವಾಗಿ 20,000 ರೂ.ಗಳಿಗೆ ಕೊಂಡ. ಇದನ್ನು ಟೇಲರ್ ಮಂಜಿಲ್ ಎಂದು ಕರೆಯುತ್ತಾರೆ. ಈಗ ಇದು ಕರ್ನಾಟಕ ರಾಜ್ಯ ಸರ್ಕಾರದ ಪುರಾತತ್ತ್ವ ಇಲಾಖೆಯ ರಕ್ಷಣೆಯಲ್ಲಿದೆ. ಇವನು ಹೈದರಾಬಾದ್ ಸಂಸ್ಥಾನದಲ್ಲಿ ರೆಸಿಡೆಂಟ್ ಜನರಲ್ ಆಗಿದ್ದಾಗ ಠಕ್ಕರನ್ನು ಅಡಗಿ ಸಿದ್ದು ಇವನ ಇನ್ನೊಂದು ಮುಖ್ಯ ಸಾಧನೆ.



ಕರ್ನಾಟಕ ಪ್ರಾಗಿತಿಹಾಸ ಸಂಶೋಧನೆಯಲ್ಲಿ ಟೇಲರ್‌ನ ಪಾತ್ರ ದೊಡ್ಡದು. ಈತ 1851–62ರಲ್ಲಿ ಸುರಪುರ ಭಾಗದಲ್ಲಿಯ ಹಗರಟಗಿ, ರಾಜನಕೋಳೂರು ಮತ್ತು ಚಿಕನಹಳ್ಳಿ, ಶಾಹಪುರ ತಾಲ್ಲೂಕಿನ ಶಾಹಪುರ, ವಿಭೂತಿಹಳ್ಳಿ ಮತ್ತು ಗೋಗಿ, ಜೇವರಗಿ ತಾಲ್ಲೂಕಿನ ಜೇವರಗಿ, ಅಂದೋಲ ಮುಂತಾದ ಕಡೆಗಳಲ್ಲಿ, ಕರ್ನಾಟಕದಲ್ಲೇ ಪ್ರಥಮ ಬಾರಿಗೆ, ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳ ನೆಲೆಗಳನ್ನು ಶೋಧಿಸಿದ. ಅವುಗಳಲ್ಲಿ ಕೆಲವನ್ನು ಉತ್ಖನನ ಮಾಡಿದ. ಈ ಉತ್ಖನನಗಳಿಂದ ತಿಳಿದ ವಿಷಯಗಳನ್ನು ಸ್ಪಷ್ಟವಾದ, ಪ್ರಾಮಾಣಿಕವಾದ, ಆಗಿನ ಸಂಶೋಧನ ಮಟ್ಟದಿಂದ ಅತ್ಯುತ್ತಮವೆನ್ನಬಹುದಾದ, ವಿಮರ್ಶಾತ್ಮಕವಾದ ವಿವರಣೆಗಳಿಂದಲೂ ಚಿತ್ರಗಳಿಂದಲೂ ಕೂಡಿದ ಮೂರು ಲೇಖನಗಳನ್ನು ಜರ್ನಲ್ ಆಫ್ ದಿ ಬೆಂಗಾಲ್ ರಾಯಲ್ ಏಷ್ಯಾಟಿಕ್ ಸೊಸೈಟಿಯಲ್ಲೂ ಟ್ರಾನ್ಸಾಕ್ಷನ್ ಆಫ್ ದಿ ರಾಯಲ್ ಐರಿಷ್ ಅಕಾಡೆಮಿಯಲ್ಲೂ ಪ್ರಕಟಿಸಿದ. ಈ ಲೇಖನಗಳನ್ನು ಸಂಗ್ರಹಿಸಿ ಹಿಂದಿನ ಹೈದರಾಬಾದ್ ಸರ್ಕಾರ ಮೆಗಾಲಿತಿಕ್ ರಿಮೇನ್ಸ್ ಇನ್ ದಿ ಡೆಕ್ಕನ್ ಎಂಬ ಪುಸ್ತಕವಾಗಿ ಪ್ರಕಟಿಸಿತು. ದಕ್ಷಿಣ ಭಾರತದ ಪ್ರಾಗಿತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿರುವ ಬೃಹತ್ ಶಿಲಾಸಂಸ್ಕೃತಿಯ ಬಗ್ಗೆ ಪ್ರಪ್ರಥಮ ಉತ್ಖನನ ನಡೆಸಿ ಶ್ರೇಷ್ಠಮಟ್ಟದ ಸಂಶೋಧನೆ ನಡೆಸಿದ ಕೀರ್ತಿ ಟೇಲರನದು. ಇವನು ಬ್ರಿಟಿಷ್ ಸರ್ಕಾರದಿಂದ ಸಿ.ಎಸ್.ಐ. ಪ್ರಶಸ್ತಿ ಗಳಿಸಿದ್ದ.

ಈತ ಬರೆದ ಕೃತಿಗಳಿವು: ಕನ್ಫೆಷನ್ಸ್ ಆಫ್ ಎ ಥಗ್ (1839), ಟೀಪೂಸುಲ್ತಾನ್ (1849), ತಾರಾ (1863), ರಾಲ್ಫ್ ಡಾರ್ನೆಲ್ (1865), ದ ಸ್ಟೂಡೆಂಟ್ಸ್ ಮ್ಯಾನ್ಯುಯಲ್ ಆಫ್ ಇಂಡಿಯನ್ ಹಿಸ್ಟರಿ (1870), ಸೀತಾ (1872), ದ ಸ್ಟೋರಿ ಆಫ್ ಮೈ ಲೈಫ್ (1874), ಎ ನೋಬಲ್ ಕ್ವೀನ್ (1876).

ಕನ್ಫೆಷನ್ಸ್ ಆಫ್ ಎ ಥಗ್ ಎಂಬ ಕಾದಂಬರಿಯಲ್ಲಿ ಅಮೀರ ಅಲಿ ಎಂಬ ಕಳ್ಳನೊಬ್ಬ ಹೇಗೆ ಕೇವಲ ಕರವಸ್ತ್ರದಿಂದ ಕುತ್ತಿಗೆ ಬಿಗಿದು ಕೊಂದು ಸಿರಿವಂತರಿಂದ ಹಣದೋಚುತ್ತಿದ್ದನೆಂಬ ನೂರಾರು ಭೀಕರ ಕೊಲೆಗಳ ಘಟನೆಗಳ ವಿವರಗಳಿವೆ. ಟೇಲರ್ ಪೊಲೀಸ್ ಅಧಿಕಾರಿಯಾಗಿದ್ದಾಗ ಕಳ್ಳನ ರಹಸ್ಯವನ್ನು ಬಯಲು ಮಾಡಿದುದು ಈ ಕಾದಂಬರಿಯ ವಸ್ತು. ಟೀಪೂ ಸುಲ್ತಾನ ಎಂಬ ಕಾದಂಬರಿ ಟೀಪೂವಿನ ಗೆಲುವು, ಸೋಲು ಹಾಗೂ ಸಾವಿನ ವಿಷಯ ಕುರಿತದ್ದು. ತಾರಾ ಎಂಬ ಕಾದಂಬರಿ 17ನೆಯ ಶತಮಾನದ ಜೀವನವನ್ನು ಚಿತ್ರಿಸುತ್ತದೆ. ಅಫಝುಲ್‌ಖಾನನ ಮರಣಾನಂತರ ಅವನ ಮಗ ಫಜಿಲ್‌ಖಾನನು ತುಳಜಾಪುರದ ವ್ಯಾಸಶಾಸ್ತ್ರಿಯ ಮಗಳಾದ ಬಾಲ ವಿಧವೆ ತಾರಾ ಎಂಬವಳನ್ನು ಮದುವೆಯಾದ ಕತೆಯಿದೆ. ರಾಲ್ಫ್ ಡಾರ್ನೆಲ್ ಕಾದಂಬರಿಯಲ್ಲಿ 1757ರ ಕಾಳಗದ ಹಿನ್ನೆಲೆ ಇದೆ. ಆ ಕಾಳಗದಲ್ಲಿ ರಾಬರ್ಟ್ ಕ್ಲೈವನು ಗೆದ್ದು ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆ ಮಾಡಿದ ಕತೆಯಿದೆ. ರಾಲ್ಫ್ ಡಾರ್ನೆಲ್ ಎಂಬಾತ ಕ್ಲೈವನ ಮಿತ್ರನಾಗಿದ್ದು ಆತ ಬೇಗಂ ಎಂಬಾಕೆಯನ್ನು ಮದುವೆಯಾಗುತ್ತಾನೆ. ಬೇಗಂ ನಿಧನಳಾದ ಅನಂತರ ಸಾವನ್ನಪ್ಪುತ್ತಾನೆ. ಸೀತಾ ಬಂಡಾಯದ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿ. ಇದರಲ್ಲಿ ಸಿರಿಲ್ ಬ್ರ್ಯಾಂಡನ್ ಎಂಬ ಬ್ರಿಟಿಷ್ ಮ್ಯಾಜಿಸ್ಟ್ರೇಟನು ಸೀತಾ ಎಂಬ ವಿಧವೆಯನ್ನು ಪ್ರೀತಿಸಿ ಮದುವೆಯಾದ ಕತೆಯಿದೆ. ದ ಸ್ಟೋರಿ ಆಫ್ ಮೈ ಲೈಫ್ ಟೇಲರನ ಆತ್ಮ ಚರಿತ್ರೆ. ಎ ನೋಬಲ್ ಕ್ವೀನ್ ಎಂಬ ಕಾದಂಬರಿಯಲ್ಲಿ ಚಾಂದಬೀಬಿಯ ಜೀವನ ವೃತ್ತಾಂತವಿದೆ. ಅಬ್ಬಾಸಖಾನ ಎಂಬ ತರುಣನು ಝೋರಾ ಎಂಬ ತರುಣಿಯನ್ನು ಪ್ರೇಮಿಸಿ ಮದುವೆಯಾದ ಕತೆಯಿದೆ. (ಸಿ.ಆರ್.ಎಸ್.)

**ಟ್ಯಾಸಿಟಸ್, ಕಾರ್ನಲಿಯಸ್:** ಸು.56–120. ರೋಮನ್ ವಾಗ್ಮಿ, ರಾಜಕಾರಣಿ, ಇತಿಹಾಸಕಾರ. ಇವನು ಸು.56ರಲ್ಲಿ ಹುಟ್ಟಿದ. ಈತನ ಮೊದಲ ಹೆಸರು ಪಬ್ಲಿಯಸ್ ಅಥವಾ ಗೈಯಸ್. ಈತನ ಮನೆತನದ ವಾತಾವರಣ, ಸಾಮರ್ಥ್ಯ ಇವುಗಳಿಂದಾಗಿ ಈತ ಒಳ್ಳೆಯ ಶಿಕ್ಷಣ ಪಡೆದು, ಒಳ್ಳೆಯ ವಿವಾಹಸಂಬಂಧ ಬೆಳಸಿ, ಅಧಿಕಾರ ಸಂಪಾದಿಸುವುದು ಸುಲಭವಾಯಿತು. ಟ್ಯಾಸಿಟಸ್ ವಾಗ್ಮಿಕಲೆಯನ್ನು ಅಭ್ಯಾಸಮಾಡಿ ಇಬ್ಬರು ಪ್ರಮುಖ ವಾಗ್ಮಿಗಳ ಅಡಿಯಲ್ಲಿ ವಾದವೃತ್ತಿಯನ್ನಾರಂಭಿಸಿದ. ಅಗ್ರಿಕೋಲನ ಮಗಳನ್ನು ವಿವಾಹವಾದ. ಈ ಸಂಬಂಧದಿಂದಾಗಿ ಇವನಿಗೆ ಪ್ರಭಾವಶಾಲಿಗಳ ಬೆಂಬಲ ಸಿಕ್ಕಿತು. ಈತ ನ್ಯಾಯಾಧಿಕಾರಿಯಾಗಿ, ದಂಡಾಧಿಕಾರಿಯಾಗಿ, 81ರಲ್ಲಿ ಕ್ವೆಸ್ಟರ್ ಆದ. 88ರಲ್ಲಿ ನ್ಯಾಯಾಧೀಶನಾಗಿ (ಪ್ರೆಟರ್) ಪುರೋಹಿತ ವರ್ಗದ ಸದಸ್ಯನಾದ. ಮಾವನಾದ ಅಗ್ರಿಕೋಲ ಮರಣಹೊಂದಿದಾಗ (93) ಇವನು ರೋಮಿನಿಂದ ಹೊರಗೆ ಇದ್ದ. ಅನಂತರ ರೋಮಿಗೆ ಹಿಂದಿರುಗಿದ. ವಾಗ್ಮಿಯಾಗಿ ಹೆಸರು ಗಳಿಸಿದ. ಆದರೆ ಕ್ರಮೇಣ ಇವನ ಮನಸ್ಸು ಸಾಹಿತ್ಯದ ಕಡೆಗೆ ತಿರುಗಿತು. ಇವನು ಅನೇಕ ಗ್ರಂಥಗಳನ್ನು ರಚಿಸಿದ. ವಿಷಯಕ್ಕೆ ತಕ್ಕ ಶೈಲಿಯನ್ನು ಬಳಸುವ ಸಾಮರ್ಥ್ಯ ಇವನಿಗೆ ಇತ್ತು. ಇವನ ರಾಜಕೀಯ ಅನುಭವದ ಹಿನ್ನಲೆಯಲ್ಲಿ ಇತಿಹಾಸಪ್ರಜ್ಞೆ ಎಲ್ಲ ಕೃತಿಗಳಲ್ಲೂ ಅಭಿವ್ಯಕ್ತಿ ಪಡೆಯಿತು. ಇವನ ಮುಖ್ಯ ಕೃತಿಗಳು ಇವು: ಅಗ್ರಿಕೋಲ–ಮಾವ ಅಗ್ರಿಕೋಲನ ಜೀವನ ಚರಿತ್ರೆ (98); ಜರ್ಮೇನಿಯ–ಜರ್ಮನಿಯ ಭೂವಿವರಣೆ ಮತ್ತು ವಿವಿಧ ಪಂಗಡಗಳ ಪದ್ಧತಿ (98); ಡೈಯಲೋಗಸ್ ಡಿ ಆರೆಟೋರಿಬಸ್–ಕವಿಜೀವನದ ಆನಂದ, ಶ್ರೇಷ್ಠತೆ ಮತ್ತು ವಾಗ್ಮಿತೆಗಳ ತೌಲನಿಕ ವಿವೇಚನೆ; ಭಾಷಣಕಲೆ ಇಳಿಮುಖವಾದ್ದರ ಕಾರಣಗಳ ಪರಿಶೀಲನೆ ಸು. (102); ಹಿಸ್ಟೋರೀಸ್–69 ರಿಂದ 96ರ ವರೆಗಿನ ಇತಿಹಾಸ (ಇದರ ರಚನೆ ಸು.109ರಲ್ಲಿ ಮುಗಿಯಿತು); ಅನಾಲ್ಸ್–ಹಿಸ್ಟೋರೀಸ್‌ನ ಹಿಂದಿನ ಅವಧಿಯ (14–68) ಇತಿಹಾಸ. ಈತ ತನ್ನ ಕೃತಿಗಳನ್ನು ರಚಿಸಲು ಹಿಂದಿನ ಅನೇಕ ಆಕರಗಳನ್ನು ಉಪಯೋಗಿಸಿಕೊಂಡಿದ್ದಾನೆ.

ಇವನ ಇತಿಹಾಸದೃಷ್ಟಿ ನಿಷ್ಪಕ್ಷಪಾತವಾದ್ದು. ಇವನು ರೋಮನ್ ಸಾಂಪ್ರದಾಯಿಕ ವರ್ತನೆಯನ್ನೇ ಆಧಾರವಾಗಿಟ್ಟುಕೊಂಡಿದ್ದ; ಇತಿಹಾಸ ವ್ಯಕ್ತಿ ಪ್ರಧಾನವಾದ್ದೆಂದೇ ಇವನ ಭಾವನೆಯಾಗಿತ್ತು. ಇವನಿಗೆ ಇತಿಹಾಸಕಾರನಿಗಿರಬೇಕಾದ ಎಲ್ಲ ಗುಣಗಳೂ ಇದ್ದುವು. ಇವನ ಕಲ್ಪನಾಶಕ್ತಿ ಅಗಾಧವಾದ್ದು. ಇವನ ಗ್ರಂಥಗಳಲ್ಲಿ ವಿಷಯವೈವಿಧ್ಯವನ್ನೂ ವಿಮರ್ಶಾತ್ಮಕ ವಾದ ಮತ್ತು ವೈಜ್ಞಾನಿಕವಾದ ದೃಷ್ಟಿಯನ್ನೂ ಕಾಣಬಹುದು. ಫ್ರಾನ್ಸಿನ ಕ್ರಾಂತಿಗಿಂತಲೂ ಹಿಂದೆಯೇ ಇವನ ಇತಿಹಾಸ ಗ್ರಂಥಗಳು ಫ್ರೆಂಚರ ಸಾಹಿತ್ಯದ ಮೇಲೆ ಪ್ರಭಾವ ಬೀರಿದ್ದುವು. ಆಧುನಿಕ ವಿದ್ವಾಂಸರು ಇವನ ಕೃತಿಗಳನ್ನು, ಶೈಲಿಯನ್ನು ಮತ್ತು ಐತಿಹಾಸಿಕ ದೃಷ್ಟಿಯನ್ನು ವಿವರವಾಗಿ ಪರೀಕ್ಷಿಸಿ, ಇವನು ರೋಮಿನ ವಿಮರ್ಶಾತ್ಮಕ ದೃಷ್ಟಿಯ ಇತಿಹಾಸಕಾರನೆಂದು ಪರಿಗಣಿಸಿದ್ದಾರೆ. (ಎಸ್‌ಎಚ್‌ಐ.)

**ಟ್ರಾಯ್:** ಏಷ್ಯ ಮೈನರಿನ ವಾಯವ್ಯದಲ್ಲಿ, ಡಾರ್ಡನೆಲ್ಸ್‌ಗೆ ದಕ್ಷಿಣದಲ್ಲಿ, ಟ್ರೋವಾಸ್ ಅಥವಾ ಟ್ರೋವಾಡ್ ಪ್ರದೇಶದಲ್ಲಿದ್ದ ಪ್ರಾಚೀನ ನಗರ. ಈ ಪುರಾತನ ನಗರದ ನೆಲೆ ಈಗಿನ ತುರ್ಕಿಯ ವಾಯವ್ಯದಲ್ಲಿ ಮೆಂಡರೆಸ್ ನದಿಯ ದಡದಲ್ಲಿರುವ ಹಿಸರ್ಲಿಕ್‌ನಲ್ಲಿದೆ. ಶಿಲಾಯುಗದಿಂದ ರೋಮನ್ ಕಾಲದವರೆಗೆ ಅನುಕ್ರಮವಾಗಿ ಈ ನಿವೇಶನದಲ್ಲಿ ಒಂಬತ್ತು ನಗರಗಳು ನಿರ್ಮಿತವಾದುವೆಂದೂ ಪ್ರತಿಯೊಂದು ಸಾರಿಯೂ ಹಿಂದಿನ ನಗರದ ಪಾಳಿನ ಮೇಲೆ ಹೊಸ ನಗರ ನಿರ್ಮಿತವಾಗುತ್ತಿತ್ತೆಂದೂ ಹೇಳಲಾಗಿದೆ. ಹೋಮರ್ ಕವಿ ರಚಿಸಿದ ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳಲ್ಲೂ ವರ್ಜಿಲನ ಈನಿಯಿಡ್‌ನಲ್ಲೂ ಇದು ಅಮರವಾಗಿದೆ. ಹತ್ತು ವರ್ಷಗಳ ಟ್ರೋಜನ್ ಯುದ್ಧದಲ್ಲಿ ಸಂಘಟಿತ ಗ್ರೀಕ್ ಸೇನೆಗಳು ಟ್ರಾಯ್ ನಗರಕ್ಕೆ ಮುತ್ತಿಗೆ ಹಾಕಿ ನಾಶಪಡಿಸಿದುವೆಂದು ಗ್ರೀಕ್ ಆಖ್ಯಾಯಿಕೆಯಿದೆ. ಮಧ್ಯಯುಗದ ರಮ್ಯ ಕಾವ್ಯಗಳಲ್ಲೂ ಇದರ ಉಲ್ಲೇಖವುಂಟು. ಇಲೀಯಮ್, ಟ್ರಾಯ್, ಟ್ರೋಯ, ಟ್ರೋಜ, ಇಲೀಯನ್ ಎಂಬವೂ ಇದರ ಹೆಸರುಗಳು. ಹೋಮರನಿಂದ ವ್ಯಕ್ತಪಡುವ ಪೌರಾಣಿಕ ವೃತ್ತಾಂತದ ಪ್ರಕಾರ ಜ್ಯೂಸ್ ದೇವತೆಯ ಮಗನೂ ಟ್ರೋಜನರ ಮೂಲಪುರುಷನೂ ಆದ ಡಾರ್ಡನಸ್ ಇದರ ಸ್ಥಾಪಕ. ನಾಲ್ಕು ತಲೆಮಾರುಗಳ ಅನಂತರ ಈ ನಗರದ ದುರ್ಗಮವಾದ ಕೋಟೆಯ ಗೋಡೆಗಳನ್ನು ಅಪೋಲೊ ಮತ್ತು ಪೊಸಿಡಾನರು ನಿರ್ಮಿಸಿದರು. ಅನಂತರದ ಹಾಗೂ ಕೊನೆಯ ದೊರೆ ಪ್ರೈಯಮ್. ಅವನ ಮಗ ಪ್ಯಾರಿಸ್. ಈತ ಸ್ಪಾರ್ಟದ ದೊರೆ ಮೆನಲಸ್‌ನ ಪತ್ನಿ ಹೆಲೆನ್‌ಳನ್ನು ಟ್ರಾಯ್‌ಗೆ ಹಾರಿಸಿಕೊಂಡು ಬಂದ. ಟ್ರೋಜನ್ ಯುದ್ಧಕ್ಕೆ ಇದು ಕಿಡಿ ಹಚ್ಚಿತು. ಟ್ರಾಯ್ ನಾಶವಾಯಿತು. ಪ್ರ.ಶ.ಪೂ.1184 ರಲ್ಲಿ ಈ ಘಟನೆ ಸಂಭವಿಸಿತೆಂಬುದು ಐತಿಹ್ಯ.

ಟ್ರಾಯ್ ನಗರ ಇತ್ತೆಂಬುದು ಕೇವಲ ಊಹೆಯೆಂದೇ ಇತಿಹಾಸಕಾರರೂ ಭಾಷಾಶಾಸ್ತ್ರಜ್ಞರೂ ನಂಬಿದ್ದರು. ಆದರೆ 1871–1890ರಲ್ಲಿ ಜರ್ಮನ್ ಪುರಾತತ್ತ್ವಜ್ಞ ಹೈನ್ರಿಕ್ ಶ್ಲೀಮಾನ್ (1822–1890) ಹಿಸರ್ಲಿಕ್‌ನ ಬೆಟ್ಟದ ಮೇಲೆ ವ್ಯಾಪಕವಾದ ಪಾಳುಗಳನ್ನು ಪತ್ತೆ ಹಚ್ಚಿದ. ಈ ಸ್ಥಳವೇ ಪುರಾತನ ಟ್ರಾಯ್ ನಗರದ ನೆಲೆಯೆಂಬುದರಲ್ಲಿ ಅವನಿಗೆ ಸಂಶಯವೇ ಇರಲಿಲ್ಲ. ಅವನು ಅನುಕ್ರಮವಾಗಿ ಮೂರು ಬಾರಿ ಉತ್ಖನನ ನಡೆಸಿ, ಅಲ್ಲಿ ಒಂದಾದಮೇಲೊಂದರಂತೆ ಅಸ್ತಿತ್ವದಲ್ಲಿದ್ದ ಒಂಬತ್ತು ನಗರಗಳ ಅವಶೇಷಗಳನ್ನು ಗುರುತಿಸಿದ. ಅನಂತರ 1893–94ರಲ್ಲಿ ಫ್ರೆಡರಿಕ್ ವಿಲ್‌ಹೆಲ್ಮ್ ಡರ್ಪ್‌ಫೆಲ್ಡನೂ 1932–38ರಲ್ಲಿ ಅಮೆರಿಕನ್ ಪುರಾತತ್ತ್ವಜ್ಞ ಕಾರ್ಲ್ ವಿಲಿಯಮ್ ಬ್ಲೆಗೆನನೂ ಉತ್ಖನನ ಕಾರ್ಯವನ್ನು ಮುಂದುವರಿಸಿದರು. ಶ್ಲೀಮನ್ ಪತ್ತೆ ಹಚ್ಚಿದ ವಿವಿಧ ಸ್ತರಗಳ ಕಾಲಾನುಕ್ರಮಣಿಕೆಯನ್ನು ನೇರ್ಪುಗೊಳಿಸುವುದು ಇದರಿಂದ ಸಾಧ್ಯವಾಯಿತು.

ಈ ಹಂತಗಳಲ್ಲಿ ಅತ್ಯಂತ ಕೆಳಗಿನದು ಕಂಚಿನ ಯುಗದ ಆರಂಭ ಕಾಲಕ್ಕೆ ಸಮಬಂಧಿಸಿದ್ದು. ಸು.11/4 ಎಕರೆ ಪ್ರದೇಶದಲ್ಲಿದ್ದ ಈ ಪಟ್ಟಣದ ನಡುವೆ ಸಣ್ಣ ಅರಮನೆಯೊಂದಿತ್ತು. ಇದರ ಸುತ್ತ ಭದ್ರವಾದ ಗೋಡೆ ಇತ್ತು. ಇಲ್ಲಿದ್ದ ಮನೆಗಳನ್ನು ಕಲ್ಲಿನ ತಳಹದಿಗಳ ಮೇಲೆ ಒರಟು ಇಟ್ಟಿಗೆಗಳಿಂದ ಕಟ್ಟಲಾಗಿತ್ತು. ಇದರ ಕಾಲ ಪ್ರ.ಶ.ಪೂ.ಸು.3000. ಎರಡನೆಯ ಹಂತದ ಪಟ್ಟಣ ಪ್ರ.ಶ.ಪೂ.ಸು.2400ರಷ್ಟು ಹಿಂದಿನದು. ಇಲ್ಲಿನ ಜನರು ಸಮುದ್ರ ವ್ಯಾಪಾರದಿಂದ ಹೆಚ್ಚು ಐಶ್ವರ್ಯ ಶೇಖರಿಸಿದ್ದರು. ಇದೇ ಪ್ರೈಯಮನ ಕಾಲದಲ್ಲಿದ್ದ ಟ್ರಾಯ್ ಎಂಬುದಾಗಿ



ಟ್ರಾಯ್–ನಗರವಿನ್ಯಾಸ

ಶ್ಲೀಮಾನನ ಭಾವನೆ. ಇದರಲ್ಲಿದ್ದ ಉಗ್ರಾಣವನ್ನು ಪ್ರೈಯಮನ ಖಜಾನೆಯೆಂದು ಶ್ಲೀಮನ್ ನಂಬಿದ್ದ. ಇದರಲ್ಲಿ ಒಡವೆ, ಚಿನ್ನ, ಬೆಳ್ಳಿ, ಮುಂತಾದ ಅಮೂಲ್ಯ ವಸ್ತುಗಳು ಶ್ಲೀಮನನಿಗೆ ದೊರಕಿದ್ದುವು. ಮಡಕೆಯನ್ನು ಮಾಡುವುದರಲ್ಲಿ ವಿಶಿಷ್ಟವಾದ ಶೈಲಿಯೊಂದು ಆ ವೇಳೆಗೆ ಬೆಳೆದಿತ್ತಾದರೂ ಕುಂಬಾರ ಚಕ್ರದ ಬಳಕೆ ಇನ್ನೂ ಗೊತ್ತಿದ್ದಂತಿಲ್ಲ. ಈ ಪಟ್ಟಣ ಅಗ್ನಿಗೆ ಆಹುತಿಯಾಯಿತು. ಆದ್ದರಿಂದಲೇ ಶ್ಲೀಮನ್ ಇದನ್ನು ಪ್ರೈಯಮನ ಟ್ರಾಯ್ ಎಂದು ತಪ್ಪಾಗಿ ಭಾವಿಸಿದ. ಅವನು ಸಾಯುವ ಮುನ್ನ ಅವನೂ ಡರ್ಪ್‌ಫೆಲ್ಡನೂ ಈ ಭಾವನೆ ತಪ್ಪೆಂದು ಅರಿತುಕೊಂಡರು. 3, 4 ಮತ್ತು 5ನೆಯ ಟ್ರಾಯ್‌ಗಳು ಪ್ರ.ಶ.ಪೂ.1800ರ ವರೆಗೆ ಸಂಸ್ಕೃತಿಯ ಮುಂದುವರಿಕೆಯನ್ನು ಸೂಚಿಸುತ್ತವೆ. ಇವು ಹಿಂದಿನದಕ್ಕಿಂತ ಚಿಕ್ಕವು. ಈ ಕಾಲದಲ್ಲಿ ಹೊಸದಾಗಿ ಏನನ್ನೂ ಕಂಡುಹಿಡಿದಂತಿಲ್ಲ. ಬಣ್ಣ ಹಚ್ಚಿದ ಮಣ್ಪಾತ್ರೆಗಳು ಮಾತ್ರವೇ ಹೊಸವು.

6ನೆಯ ಟ್ರಾಯ್‌ನ ಕಾಲ ಪ್ರ.ಶ.ಪೂ.ಸು.1800–1300. ಇದು ತಕ್ಕಮಟ್ಟಿಗೆ ವಿಶಾಲವಾಗಿತ್ತು. ಇದರ ಕೋಟೆ ಗೋಡೆಗಳು ಎತ್ತರವಾಗಿದ್ದುವು. ಅಲ್ಲಲ್ಲಿ ರಕ್ಷಣಾಗೋಪುರಗಳೂ ಮೂರು ಹೆಬ್ಬಾಗಿಲುಗಳೂ ಇದ್ದುವು. ಕೋಟೆಯ ನಡುವೆ ಕಟ್ಟಲಾಗಿದ್ದ ಕಟ್ಟಡಗಳು ಮೆಗರಾನ್ ಶೈಲಿಯವು. ಆಗ ಕುದುರೆಯ ಉಪಯೋಗ ಗೊತ್ತಿತ್ತು. ಇಂಡೊ–ಯುರೋಪಿಯನ್ ಭಾಷೆ ಆಡುತ್ತಿದ್ದ ಹೊಸ ಜನ ಈ ಸಂಸ್ಕೃತಿಗೆ ಕಾರಣರೆಂದು ಹೇಳಬಹುದು. ಈ ಕಾಲದಲ್ಲಿ ಮೈಸೀನೀಯನ್ ಸಂಪರ್ಕ ಬೆಳೆಯುತ್ತಿತ್ತು. ಭೂಕಂಪದಿಂದ ಈ ಪಟ್ಟಣ ನಾಶವಾಯಿತು. ಇದನ್ನು ಮತ್ತೆ ನಿರ್ಮಿಸಲಾಯಿತು. ಗ್ರೀಕರು ಟ್ರಾಯ್ ನಗರವನ್ನು ಗೆದ್ದು ನಾಶಪಡಿಸಿದರೆಂಬ ಕಥೆ ನಿಜವಾಗಿದ್ದಿದ್ದರೆ ಬಹುಶಃ ಇದೇ ಆ ಟ್ರಾಯ್ ಆಗಿರಬೇಕು. ಇದು ಅಗ್ನಿಗೆ ಆಹುತಿಯಾದ ಗುರುತುಗಳಿವೆ. ಪ್ರ.ಶ.ಪೂ.1200ರ ವೇಳೆಗೆ ಇದು ಗಮನಾರ್ಹವಾಗಿ ನಾಗರಿಕತೆ ಮತ್ತು ಅಭಿವೃದ್ಧಿಯ ಮಟ್ಟ ಮುಟ್ಟಿತ್ತೆಂಬುದು ಖಂಡಿತ. ಆದರೆ ಈ ನಗರ ಹೋಮರನಿಂದ ವರ್ಣಿತವಾಗಿರುವಷ್ಟು ವಿಶಾಲವಾಗಿರಲಿಲ್ಲವೆನ್ನಬಹುದು. ಇದರ ಸೈನಿಕ ಶಕ್ತಿಯೂ ವಾಣಿಜ್ಯವೂ ಬೆಳೆದಿದ್ದುವು. ಮೈಸೀನೀಯನ್ ಗ್ರೀಸಿನೊಂದಿಗೆ ಇದು ನಿಕಟ ಸಂಪರ್ಕ ಹೊಂದಿತ್ತು. ಪ್ರ.ಶ.ಪೂ.13ನೆಯ ಶತಮಾನದಿಂದ ಇಲ್ಲಿ ಮೈಸೀನೀಯನ್ ಮಣ್ಪಾತ್ರೆಗಳು ಇದ್ದುವು. ಇವುಗಳ ನಡುವಣ ವಾಣಿಜ್ಯಕ ಸ್ಪರ್ಧೆಯೇ ಹತ್ತು ವರ್ಷಗಳ ಯುದ್ಧಕ್ಕೂ ಕೊನೆಯಲ್ಲಿ ಟ್ರಾಯ್ ನಾಶವಾದ್ದಕ್ಕೂ ಕಾರಣವಾಗಿದ್ದಿರಬಹುದು. ಮುಂದಿನ ಶತಮಾನಗಳಲ್ಲಿ ಥ್ರೇಸಿನ ಬರ್ಬರರೂ ಅನಂತರ ಇಯೋಲಿಯನರೂ ಇದರ ಮೇಲೆ ಆಕ್ರಮಣ ನಡೆಸಿದರು.

ಪ್ರ.ಶ.ಪೂ.700ರಲ್ಲಿ ಗ್ರೀಕರು ಇಲ್ಲಿ ನೆಲೆಸಿದರು. 8ನೆಯ ನಗರ ಗ್ರೀಕ್ ಟ್ರಾಯ್. ಅನಂತರ ಗ್ರೀಕ್ ಮೂಲದವರ (ಹೆಲೆನಿಸ್ಟಿಕ್) ಮತ್ತು ರೋಮನರ ವಸತಿಗಳು ಬೆಳೆದುವು. 5ನೆಯ ಶತಮಾನದಲ್ಲಿ ಫ್ರೀಜಿಯದ ಪರ್ಷಿಯನ್ ಸತ್ರಪಿಯಲ್ಲಿ ಇದನ್ನು ಸೇರಿಸಲಾಗಿತ್ತು. 9ನೆಯ ಟ್ರಾಯನ್ನು ಗ್ರೀಕ್ ಸೇನಾಪತಿ ಹಾಗೂ ಥ್ರೇಸಿನ ದೊರೆ (ಪ್ರ.ಶ.ಪೂ.306) ಲೈಸಿಮಕಸ್ ವಿಸ್ತರಿಸಿದ. ಆದರೆ ರೋಮನ್ ಅಂತರ್ಯುದ್ಧಗಳಲ್ಲಿ ಇದು ನಾಶವಾಯಿತು. ಇದನ್ನು ಅನಂತರ ರೋಮನ್ ಸರ್ವಾಧಿಕಾರಿ ಲೂಸಿಯಸ್ ಕಾರ್ನಿಲೀಯಸ್ ಸುಲ್ಲ (ಪ್ರ.ಶ.ಪೂ.138–78) ಪುನರ್ನಿರ್ಮಿಸಿದ. ಅನೇಕ ರೋಮನ್ ಚಕ್ರವರ್ತಿಗಳು ಇದರಲ್ಲಿ ಅಭಿಮಾನ ತಳೆದಿದ್ದರು. ರೋಮಿನಿಂದ ಟ್ರಾಯ್‍ಗೆ ರಾಜಧಾನಿಯನ್ನು ಬದಲಾಯಿಸಲು ಜೂಲಿಯಸ್ ಸೀಸರ್ ಯೋಚಿಸಿದ್ದನೆಂದು ಹೇಳಲಾಗಿದೆ. ಟ್ರಾಯ್ ಬಗ್ಗೆ ಪ್ರ.ಶ.ಪೂ.350ರಿಂದ ಈಚೆಗೆ ದಾಖಲೆಗಳಿಲ್ಲ.

(ಬಿ.ಆರ್.ಜಿ.;ಬಿ.ಕೆ.ಜಿ.)

# ಠ

**ಠಾಕೂರ್, ರವೀಂದ್ರನಾಥ:** 1861–1941. ನೊಬೆಲ್ ಪ್ರಶಸ್ತಿ ಪಡೆದ ಭಾರತದ ಮೊದಲ ಮಹಾಕವಿ, ಅಪ್ರತಿಮ ದೇಶಪ್ರೇಮಿ, ಸೋಪಜ್ಞ ವೇದಾಂತಿ, ಖ್ಯಾತ ಶಿಕ್ಷಣವೇತ್ತ, ನುರಿತ ಕಲೆಗಾರ. ಇವೆಲ್ಲಕ್ಕೂ ಮಿಗಿಲಾಗಿ ಭಾರತೀಯ ಆದರ್ಶಗಳ, ಜೀವನದ ಮೌಲ್ಯಗಳ ಸಂಕೇತ. ನಾಡಿನ ಸಾಂಸ್ಕೃತಿಕ ಜೀವನವನ್ನು ರೂಢಿಸಿದ ಶ್ರೇಷ್ಠ ಶಿಲ್ಪಿ, ಕಲ್ಕತ್ತದ ದ್ವಾರಕಾನಾಥ ಠಾಕೂರ್ ಬೀದಿಯಲ್ಲಿರುವ ಜೊರ್‍ಸಂಕೊ ಎಂಬ ತಮ್ಮ ಪೂರ್ವಿಕರ ಮನೆಯಲ್ಲಿ 7 ಮೇ 1861ರಂದು ಶಾರದಾದೇವಿ ಹಾಗೂ ದೇವೇಂದ್ರನಾಥ ಠಾಕೂರ್‍ರ 14ನೆಯ ಮಗನಾಗಿ ಜನಿಸಿದರು. ರವೀಂದ್ರರ ತಾತ ದ್ವಾರಕಾನಾಥ ಠಾಕೂರ್ ಕಳೆದ ಶತಮಾನದ ಆದಿಭಾಗದಲ್ಲಿ ಬಂಗಾಲದ ಅತಿ ದೊಡ್ಡ ಶ್ರೀಮಂತರಾಗಿದ್ದರು. ಅವರ ಐಶ್ವರ್ಯ ಹಾಗೂ ವೈಭವಯುತ ಜೀವನದ ಫಲವಾಗಿ ಅವರನ್ನು ಪ್ರಿನ್ಸ್ (ರಾಜಕುಮಾರ) ಎಂದು ಕರೆಯುತ್ತಿದ್ದರು. ಅವರು ರಾಜಾರಾಮ ಮೋಹನರಾಯರ ಅನುಯಾಯಿಗಳಾಗಿದ್ದರು. ಅವರ ಮಗ ಮಹರ್ಷಿ ದೇವೇಂದ್ರನಾಥ ಠಾಕೂರ್ ಬ್ರಹ್ಮಸಮಾಜದ ಮುಂದಾಳು. ಸ್ವಪ್ರತಿಭೆ, ಜ್ಞಾನಸಂಪತ್ತು ಹಾಗೂ ನೀತಿನಿಷ್ಠೆಗಳಿಂದಾಗಿ ಮಹರ್ಷಿಗಳೆಂದು ಖ್ಯಾತರಾದವರು.

ರವೀಂದ್ರರ ಅಗ್ರಜ ದ್ವಿಜೇಂದ್ರನಾಥರು ತತ್ತ್ವಜ್ಞಾನಿ ಹಾಗೂ ಉತ್ತಮ ಗದ್ಯಲೇಖಕ, ಇನ್ನೊಬ್ಬ ಅಣ್ಣ ಸತ್ಯೇಂದ್ರನಾಥರು ಐ.ಸಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಧಿಕಾರ ಗಳಿಸಿದ ಮೊಟ್ಟ ಮೊದಲ ಭಾರತೀಯ. ಜ್ಯೋತೀಂದ್ರನಾಥ ಠಾಕೂರ್ ಚಿತ್ರಕಲಾಪ್ರೇಮಿ ಹಾಗೂ ಚಿತ್ರವಿಮರ್ಶಕ. ರವೀಂದ್ರರ ಸಹೋದರಿ ಗಣ್ಯ ಸಂಸ್ಕೃತ ವಿದುಷಿ. ಸ್ವಭಾವತಃ ಕವಿಗಳೂ ಕಲೋಪಾಸಕರೂ ಸೌಂದರ್ಯಾರಾಧಕರೂ ಸತ್ಯಾನ್ವೇಷಕರೂ ಆಗಿದ್ದ ರವೀಂದ್ರನಾಥ ಠಾಕೂರ್ ಬೆಳೆದದ್ದು ಇಂಥ ಕೌಟುಂಬಿಕ ಪರಿಸರದಲ್ಲಿ. ಇವರ ಶೈಶವ ಹಾಗೂ ಬಾಲ್ಯದ ದಿನಗಳು ಮನೆಯ ಸೇವಕರ ಪೋಷಣೆಯಲ್ಲಿ, ಎಳೆಹರೆಯದ ಮೇಲೆ ಪರಿಣಾಮ ಬೀರುವಂಥ ವಾತಾವರಣದಲ್ಲಿ ಕಳೆದವು. ಬ್ರಜೇಶ್ವರನೆಂಬ ಸೇವಕ ಕೃತ್ತಿವಾಸ ರಾಮಾಯಣವನ್ನು ಓದುವುದು, ಮನೆಯ ಆಶ್ರಿತರಾದ ಕಿಶೋರಿ ಚಟರ್ಜಿಯವರು ಸುಶ್ರಾವ್ಯವಾಗಿ ಹಾಡುವುದು ರವೀಂದ್ರರ ಮೃದು ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟು ಮಾಡುತ್ತಿತ್ತು. ಪುಸ್ತಕಪ್ರೇಮಿ ಶಾರದಾದೇವಿಯವರೂ ರವೀಂದ್ರರ ತೊದಲ್ನುಡಿಗಳಿಗೆ ಆಗಾಗ ಗಮನ ನೀಡುತ್ತಿದ್ದುದುಂಟು. ಎಲ್ಲರಿಗಿಂತ ಹೆಚ್ಚಿನ ಪ್ರಭಾವ ಬೀರಿದವರೆಂದರೆ ಜ್ಯೋತೀಂದ್ರನಾಥರು. ಕವಿ ರವೀಂದ್ರ ಸ್ಫೂರ್ತಿಯ ಸೆಲೆಯೊಡೆಯಲು ಅವರೇ ಕಾರಣರು. ತಮ್ಮ 9ನೆಯ ವಯಸ್ಸಿನಲ್ಲೇ ರವೀಂದ್ರರು ಬಂಗಾಲಿ ಸಾಹಿತ್ಯದ ಸುಪ್ರಸಿದ್ಧ ಕಾವ್ಯವಾದ ಮೇಘನಾದವಧ ಓದತೊಡಗಿದ್ದರು. ಇವರಿಗೆ ಸುಮಧುರ ಕಂಠವಿತ್ತು, ಸಂಗೀತದ ಮೇಲೆ ಪ್ರೀತಿಯಿತ್ತು, ಇಂಥ ಹುಟ್ಟು ಪ್ರತಿಭಾವಂತ ಬಾಲಕನ ಶಾಲಾದಿನಗಳೆಲ್ಲ ಸಪ್ಪೆಯೆಂದರೂ ಸರಿ, 1868–74ರವರೆಗೆ ಆರು ವರ್ಷಗಳಲ್ಲಿ ಕನಿಷ್ಠ ನಾಲ್ಕುಸಲ ಶಾಲೆಗಳನ್ನು ಬದಲಾಯಿಸ ಬೇಕಾಯಿತು. ಓರಿಯಂಟಲ್ ಸೆಮಿನರಿ, ನಾರ್ಮಲ್ ಸ್ಕೂಲ್, ಬೆಂಗಾಲ್ ಅಕಾಡಮಿ–ಹೀಗೆ ಯಾವ ಶಾಲೆಯ ವ್ಯಾಸಂಗಕ್ರಮವೂ ರವೀಂದ್ರರಿಗೆ ಹಿಡಿಸಲಿಲ್ಲ. ಇವರ ಗ್ರಹಣ ಶಕ್ತಿ ಅತಿಸೂಕ್ಷ್ಮವಾಗಿತ್ತು. ತಮ್ಮ ದೈನಂದಿನ ಅಭ್ಯಾಸದ ಜೊತೆಗೆ ಅದ್ಭುತ ಮಾಯಾ ಕಥೆಗಳನ್ನು ಓದುತ್ತಿದ್ದರು. ರಾಬಿನ್‍ಸನ್ ಕ್ರೂಸೊ ಇವರಿಗೆ ಬಹಳ ಮೆಚ್ಚಿಗೆಯಾಗಿತ್ತು. ಹೀಗೆ ಶಾಲೆಯ ಓದಿಗಿಂತ ಪರಂಪರಾಗತವಾಗಿ ಬಂದ ವಂಶದ ಸದ್ಗುಣಗಳಿಂದ ಹಾಗೂ ಹಿರಿಯರ ಮೇಲ್ಪಂಕ್ತಿಯಿಂದ ಇವರ ಬದುಕು ಪುಷ್ಟವಾಯಿತು.

12 ವರ್ಷದ ಬಾಲಕನಾಗಿದ್ದಾಗ (1873) ರವೀಂದ್ರರಿಗೆ ಉಪನಯನವಾಯಿತು. ಅನಂತರ ತಂದೆಯವರೊಡನೆ ಬೋಲ್‍ಪುರ, ಅಮೃತಸರ, ಡಾಲ್‍ಹೌಸಿ ಮುಂತಾದೆಡೆಗಳಲ್ಲಿ ಪ್ರವಾಸ ಮಾಡಿದರು. ಆಗ ಮಹರ್ಷಿ ದೇವೇಂದ್ರರ ಸಂಪೂರ್ಣ ಪ್ರಭಾವಕ್ಕೊಳಗಾದರು. ರವೀಂದ್ರರ ಸಂಗೀತ ಹಾಗೂ ಕಾವ್ಯ ಪ್ರತಿಭೆ ಮನೆಯವರಿಗೆ ತಿಳಿಯಿತು; ಎಲ್ಲ ರೀತಿಯ ಪ್ರೋತ್ಸಾಹ ದೊರಕಿತು. 1874ರಲ್ಲಿ ತತ್ತ್ವಬೋಧಿನಿ ಪತ್ರಿಕೆಯಲ್ಲಿ ಅವರ ಚೊಚ್ಚಲ ಕವನ ಅಭಿಲಾಷಾ ಪ್ರಕಟವಾಯಿತು. ಆಗ ಇವರ ವಯಸ್ಸು 12. ಅಷ್ಟು ಚಿಕ್ಕವಯಸ್ಸಿನಲ್ಲಿ ಕಾವ್ಯರಚನೆಗೆ ಕೈಹಾಕಿದವರು ವಿರಳ, 14 ವರ್ಷದ ಬಾಲಕರಾಗಿದ್ದಾಗಲೆ ಜನತೆಯೆದುರು ಕವಿಯಾಗಿ ಇವರು ತಮ್ಮ ಕವನಗಳನ್ನು ಹಾಡಿದರು. ಸ್ವದೇಶಿ ಪುನರುತ್ಥಾನದ ಅಂದಿನ ದಿನಗಳಲ್ಲಿ ದೇಶಭಕ್ತರ ಹಾಗೂ ಕವಿಗಳ ಕೂಟವಾದ ಒಂಬತ್ತನೆಯ ಹಿಂದೂ ಮೇಳದಲ್ಲಿ ಭಾರತದ ಜಯ ಎಂಬ ತಮ್ಮ ಪ್ರಸಿದ್ಧ ಗೀತೆಯೊಂದನ್ನು ಹಾಡಿದರು. ಇವರ ಬಾಲಬರವಣಿಗೆಗಳು ಜ್ಞಾನಾಂಕುರ, ಭಾರತಿ ಎಂಬ ಹೊಸ ಪತ್ರಿಕೆಗಳಲ್ಲೂ ಪ್ರಕಟವಾದುವು. ಕಾಡಿನ ಹೂವು (ಬನ್ ಫೂಲ್) ಅವರ ಮೊದಲ ಕಥನ ಕವನ–ಸಾವಿರದ ಐದುನೂರು ಸಾಲುಗಳಿಗೂ ಮೀರಿದ ಎಂಟು ಅಧ್ಯಾಯಗಳ ಸುದೀರ್ಘ ಕಥೆ. ಪುಸ್ತಕ ರೂಪದಲ್ಲಿ ಪ್ರಕಟವಾದ ರವೀಂದ್ರರ ಮೊದಲ ಪದ್ಯವೆಂದರೆ ಕವಿಯ ಕಥೆ (ಕವಿ ಕಾ ಕಹಾನಿ). ಮಾತೃವಿಯೋಗಾನಂತರ (1875) ರವೀಂದ್ರರು ಜ್ಯೋತೀಂದ್ರನಾಥ ಹಾಗೂ ಕಾದಂಬರೀ ದೇವಿಯರ ಪೋಷಣೆಯಲ್ಲಿ ಬೆಳೆದರು. 1877ರಲ್ಲಿ ಜ್ಯೋತೀಂದ್ರರು ರಚಿಸಿದ ಒಂದು ಪ್ರಹಸನದಲ್ಲಿ ರವೀಂದ್ರರೂ ಪಾತ್ರ ವಹಿಸಿದ್ದರು. ಮರುವರ್ಷ ಸತ್ಯೇಂದ್ರನಾಥರೊಟ್ಟಿಗೆ ಇಂಗ್ಲೆಂಡಿಗೆ ತೆರಳಿದರು. ಲಂಡನ್ ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಹೆನ್ರಿ ಮಾರ್ಲೆಯವರ ಮಾರ್ಗದರ್ಶನದಲ್ಲಿ ಇಂಗ್ಲಿಷ್ ಸಾಹಿತ್ಯದ ಅಧ್ಯಯನ ನಡೆಸಿದರು. ಆಗ ಬರೆದ ಪತ್ರಗಳಲ್ಲಿ ಲಂಡನ್ನಿನ ಜೀವನದ ಬಗೆಗೆ ನಿರ್ದಾಕ್ಷಿಣ್ಯವಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಇದರಿಂದ ಕಸಿವಿಸಿಗೊಂಡ ಹಿರಿಯರು 1880ರಲ್ಲಿ ಠಾಕೂರ್‍ರನ್ನು ವಾಪಸ್ಸು ಕರೆಸಿಕೊಂಡರು. ಇಂಗ್ಲೆಂಡಿನಲ್ಲಿದ್ದಾಗ



ಭಗ್ನ ಹೃದಯ ಎಂಬ ಗೀತನಾಟಕವನ್ನು ಬರೆಯಲು ಆರಂಭಿಸಿದ್ದನ್ನು ಇಲ್ಲಿ ನೆನೆಯಬಹುದು. 1881ರಲ್ಲಿ ತಾವು ಬರೆದ ಪತ್ರಗಳ ಸಂಕಲನವನ್ನು ಪ್ರಕಟಿಸಿದರು (ಯುರೋಪ್ ಪ್ರವಾಸೀರ್ ಪತ್ರ). ಇದು ಇವರ ಮೊದಲ ಗದ್ಯಕೃತಿಯಷ್ಟೆ ಅಲ್ಲ ಆಡುಮಾತಿನಲ್ಲಿ ಬರೆದ ಚೊಚ್ಚಲ ಕೃತಿಯೂ ಹೌದು. ವಾಲ್ಮೀಕಿ ಪ್ರತಿಭಾ ಹಾಗೂ ಕಾಲ ಮೃಗಯಾ ಇದೇ ಕಾಲದಲ್ಲಿ ರಚಿತವಾದ ಗೀತನಾಟಕಗಳು. ಇವರ ಮೊದಲ ಕವನ ಸಂಕಲನವಾದ ಸಂಧ್ಯಾಗೀತದಲ್ಲಿ ಬಂಗಾಲಿ ಕಾವ್ಯ ಹೊಸಗತಿಯನ್ನು ಪಡೆದಿರುವುದನ್ನು ಗಮನಿಸಬಹುದು. ಇದೇ ವೇಳೆಗೆ ರುದ್ರಚಂದ್ರ ಎಂಬ ಹದಿನಾಲ್ಕು ದೃಶ್ಯಗಳ ನಾಟಕ ಬರೆದರು. ಅಲ್ಲದೆ ಕೋಲ್ಕತ್ತೆಯ ಮೆಡಿಕಲ್ ಕಾಲೇಜಿನ ಭಾಷಣಮಂದಿರದಲ್ಲಿ ಸಂಗೀತ ಮತ್ತು ಭಾವದ ಬಗೆಗೆ ಮೊತ್ತ ಮೊದಲ ಸಾರ್ವಜನಿಕ ಉಪನ್ಯಾಸ ನೀಡಿದರು. ಬ್ಯಾರಿಸ್ಟರ್ ಪದವಿ ಪಡೆಯಲೆಂದು ಹಿರಿಯರು ರವೀಂದ್ರರನ್ನು ಪುನಃ ಲಂಡನ್ನಿಗೆ ಕಳಿಸಿದರು. ಅಲ್ಲಿಂದ ಮರಳಿ ಬರುವಾಗ ರವೀಂದ್ರರು ಮದರಾಸಿನಲ್ಲಿಳಿದು ಜ್ಯೋತೀಂದ್ರನಾಥರ ಮನೆಯಲ್ಲಿ ಕೆಲಕಾಲ ತಂಗಿದ್ದರು (1882). ಆಗ ಅವರ ಜೀವನದಲ್ಲಿ ಮಹತ್ತ್ವಪೂರ್ಣವೆನಿಸಿದ ಘಟನೆಯೊಂದು ನಡೆಯಿತು. ಇವರ ಕಾವ್ಯ ಜೀವನದ ನವೋದಯದ ಬಾಗಿಲು ತೆರೆದು ದಿವ್ಯದರ್ಶನವುಂಟಾಯಿತು. ನಿರ್ಝರಿಯ ಸ್ವಪ್ನಭಂಗ ಎಂಬ ಪ್ರಖ್ಯಾತ ಗೀತೆಯನ್ನು ರವೀಂದ್ರರು ಬರೆದದ್ದು ಆ ದಿನಗಳಲ್ಲೆ. ಅಲ್ಲಿಂದ ನಿಸರ್ಗದ ನೆಲೆವೀಡಾದ ಕಾರವಾರದಲ್ಲಿ ಅಣ್ಣ ಸತ್ಯೇಂದ್ರನಾಥರ ಮನೆಯಲ್ಲಿ ಸ್ವಲ್ಪಕಾಲ ತಂಗಿದ್ದು ಕಾರವಾರದ ಸುಂದರ ಕಡಲತೀರದಲ್ಲಿ ಬೆಳದಿಂಗಳ ರಾತ್ರಿಗಳನ್ನು ಕಳೆದರು. ಅಲ್ಲಿಯ ನಿಸರ್ಗ ರಮಣೀಯತೆ ಪ್ರಕೃತಿರ್ ಪರಿಶೋಧ್ ಎಂಬ ನಾಟಕ ಬರೆಯಲು ಪ್ರೇರಣೆ ನೀಡಿತು. 1883ರಲ್ಲಿ ಕೋಲ್ಕತಕ್ಕೆ ಮರಳಿ ಬಂದವರು ಡಿಸೆಂಬರ್ 9ರಂದು ಖುಲ್ನಾದ ವೇಣಿಮಾಧವ ರಾಯ್‍ಚೌಧುರಿಯ ಪುತ್ರಿ ಮೃಣಾಲಿನಿ ದೇವಿಯನ್ನು ವಿವಾಹವಾದರು. ಅನೇಕ ಚಿತ್ರಗಳು ಮತ್ತು ಹಾಡುಗಳು ಈ ಕಾಲದಲ್ಲಿ ರಚಿತವಾದುವು. 1884ರಲ್ಲಿ ತಮ್ಮ ಪ್ರೀತಿಯ ಚಿಕ್ಕ ಅತ್ತಿಗೆ ಕಾದಂಬರಿ ದೇವಿಯವರ ಮರಣ ರವೀಂದ್ರರ ಮನವನ್ನು ಕಲಕಿತು. ಅದೇ ವರ್ಷ ಆದಿ ಬ್ರಹ್ಮಸಮಾಜದ ಕಾರ್ಯದರ್ಶಿಗಳಾದರು; ಸಮಕಾಲೀನ ಬಂಗಾಲಿ ಸಾಹಿತ್ಯದ ನೇತಾರರಾಗಿದ್ದ ಬಂಕಿಮಚಂದ್ರ ಚಟರ್ಜಿಯವರೊಡನೆ ಹಿಂದು ಧರ್ಮದ ಆದರ್ಶಗಳ ಬಗೆಗೆ ಬಿರುಸಿನ ಚರ್ಚೆಮಾಡಿದ್ದುಂಟು. ಅತ್ತಿಗೆ ಆರಂಭಿಸಿದ ಸಚಿತ್ರ ಮಾಸಪತ್ರಿಕೆ ಯಾದ ಬಾಲಕಕ್ಕೆ (1885) ರವೀಂದ್ರರು ನೆರವು ನೀಡಿದರು, ಇದಕ್ಕಾಗಿ ಅನೇಕ ಪದ್ಯಗಳನ್ನೂ ಲೇಖನಗಳನ್ನೂ ಹಾಸ್ಯಚಿತ್ರಗಳನ್ನೂ ರಾಜರ್ಷಿ ಎಂಬ ಧಾರವಾಹಿ ಕಾದಂಬರಿಯನ್ನೂ ಬರೆದುಕೊಟ್ಟರು. ಆಗಿನ ಕಾಲದಲ್ಲಿ ರವೀಂದ್ರರನ್ನು ಬಂಗಾಲದ

ಷೆಲ್ಲೀ ಎಂದು ಕರೆಯುತ್ತಿದ್ದರು. ರವೀಂದ್ರರ 25ನೆಯ ವಯಸ್ಸಿನಲ್ಲಿ ಮೊದಲ ಮಗು ಮಾಧುರೀಲತಾ ಜನಿಸಿತು. ಅದೇ ವರ್ಷ ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯಲ್ಲಿ ಕೂಡಿದ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್‍ನ ದ್ವಿತೀಯ ಅಧಿವೇಶನದಲ್ಲಿ ರವೀಂದ್ರರು ಗೀತೆಯೊಂದನ್ನು ತಾವೇ ರಚಿಸಿ ಹಾಡಿದ್ದರು. ರವೀಂದ್ರರ ಕೃತಿಗಳ ಮೇಲೆ ಹಳ್ಳಿಯ ಹಾಡುಗಾರರ ಪ್ರಭಾವ ಗಣನೀಯ. ಅಂತೆಯೆ ಕ್ಲಿಷ್ಟತರವಾದ ಭಾವಗಳನ್ನೂ ಕವಿ ಅತಿ ಸರಳಭಾಷೆಯಲ್ಲೇ ವ್ಯಕ್ತಪಡಿಸುತ್ತಿದ್ದರು.

1887–90ರ ಸುಮಾರಿಗೆ ರವೀಂದ್ರರ ಸಾಹಿತ್ಯ ಪ್ರತಿಭೆ ವಿವಿಧ ಮುಖವಾಗಿ ಹರಡಿತು. ಮಾನಸೀ (ಕವನಸಂಕಲನ), ಮಯೂರ್ ಖೇಲಾ (ಚಿಕ್ಕಗೀತ ನಾಟಕ), ಕಡಿ ಓ ಕೋಮಲ (ಕವನಸಂಕಲನ)–ಮುಂತಾದ ಸಮರ್ಥಕೃತಿಗಳನ್ನಿಲ್ಲಿ ಹೆಸರಿಸಬಹುದು. ಇವುಗಳಲ್ಲಿ ಸಮಕಾಲೀನ ಸಾಮಾಜಿಕ ಸ್ಥಿತಿಗಳಲ್ಲದೆ ವಿಡಂಬನೆಗೂ ಹಾಸ್ಯಕ್ಕೂ ಸ್ಥಾನವಿದೆ.

1888ರಲ್ಲಿ ರವೀಂದ್ರರ ಜ್ಯೇಷ್ಠಪುತ್ರ ರತೀಂದ್ರನಾಥ ಜನಿಸಿದ. ಎರಡು ವರ್ಷಗಳ ಅನಂತರ ರವೀಂದ್ರರು ಇಂಗ್ಲೆಂಡಿಗೆ ಪುನಃ ಭೇಟಿಕೊಟ್ಟರು. ಅಲ್ಲಿಂದ ಮರಳಿ ಬಂದವರು ವ್ಯವಹಾರದ ಅನುಕೂಲತೆಯ ದೃಷ್ಟಿಯಿಂದ ಶೆಲೈಡದಲ್ಲಿ ನೆಲೆಸಿದರು.

ರವೀಂದ್ರನಾಥರು ತಮ್ಮ ಕಾಲದ ಭಾರತದ ಸಾಮಾಜಿಕ ಮೂಲಸಮಸ್ಯೆಗಳಿಗೆ ಪರಿಹಾರ ಹುಡುಕುವಲ್ಲಿ ಮಗ್ನರಾದರು. ದೇಶದ ದೋಷಪೂರ್ಣ ಶಿಕ್ಷಣಪದ್ಧತಿಯನ್ನು ಆದಷ್ಟು ಬೇಗ ಶುದ್ಧೀಕರಿಸಬೇಕೆಂದು ಯೋಚಿಸಿದರು. ಈ ರಚನಾತ್ಮಕ ಕಾರ್ಯವನ್ನು ಅವರು ತಮ್ಮ ಮನೆಯಿಂದಲೇ ಆರಂಭಿಸಿದರು. ತಮ್ಮ ಮಕ್ಕಳನ್ನು ಬೇರೆ ಯಾವುದೆ ಶಾಲೆಗಳಿಗೆ ಕಳಿಸದೆ ಅವರಿಗಾಗಿ ತಮ್ಮ ಮನೆಯಲ್ಲೇ ಶಾಲೆಯೊಂದನ್ನು ಆರಂಭಿಸಿದರು. ಇದೇ ಕಾಲಕ್ಕೆ ತಪೋವನ ಶಾಲೆಯ ಕಲ್ಪನೆ ಮೂಡಿತು. ಪ್ರಾಚೀನ ಗುರುಕುಲಪದ್ಧತಿಯಂತೆ ಪ್ರಕೃತಿಯ ಸುಂದರ ತಾಣದ ಮಧ್ಯೆ ಸ್ವಚ್ಛಂದ ವಾತಾವರಣದಲ್ಲಿ ಜೀವನ ಶಿಕ್ಷಣ ಪಡೆಯುವ ಸೌಲಭ್ಯವನ್ನು ಕುರಿತು ಯೋಚಿಸತೊಡಗಿದರು. 1901 ಡಿಸೆಂಬರ್ 22ರಲ್ಲಿ ಬೋಲ್ಪುರದ ಸಮೀಪದಲ್ಲಿರುವ ಶಾಂತಿನಿಕೇತನದಲ್ಲಿ ಬ್ರಹ್ಮಚರ್ಯಾಶ್ರಮವನ್ನು ಸ್ಥಾಪಿಸಿದರು. ಇದೇ ಮುಂದೆ ವಿಶ್ವಭಾರತಿ ಎಂಬ ವ್ಯಕ್ತವಾಗಿ ಪ್ರಪಂಚ ಪ್ರಸಿದ್ಧವಾಯಿತು. ಆಮೇಲೆ ಬಂಕಿಮಚಂದ್ರರ ವಂಗದರ್ಶನ ಎಂಬ ನಿಯತಕಾಲಿಕೆಯ ಸಂಪಾದಕರಾದರು. ಅದರಲ್ಲಿ ವಿನೋದಿನಿ ಕಾದಂಬರಿ ಕ್ರಮಶಃ ಪ್ರಕಟವಾಯಿತು (ಇದೇ ವೇಳೆ ನೈವೇದ್ಯ ಎಂಬ ಭಕ್ತಿಗೀತಗಳ ಸಂಕಲನ ಪ್ರಕಟವಾಯಿತು). ಭಾರತೀಯ ಭಾಷೆಗಳಲ್ಲಿ ಅದುವರೆಗೆ ಪ್ರಕಟವಾದ ಮನೋವೈಜ್ಞಾನಿಕ ಕಾದಂಬರಿಗಳಲ್ಲಿ ಇದು ಮೊದಲನೆಯದು.

ಈ ಶತಮಾನದ ಆರಂಭದಲ್ಲಿ ರವೀಂದ್ರರ ಜೀವನದಲ್ಲಿ ಕಷ್ಟಗಳ ಸುರಿಮಳೆ ಆರಂಭವಾಯಿತು. ಆರ್ಥಿಕ ಮುಗ್ಗಟ್ಟಿನಿಂದಾಗಿ ತಾವು ಸ್ಥಾಪಿಸಿದ ಶಿಕ್ಷಣಸಂಸ್ಥೆಯನ್ನು ಕೆಲಕಾಲ ಮುಚ್ಚಬೇಕಾಯಿತು. ಧರ್ಮಪತ್ನಿ ಮೃಣಾಲಿನಿ ನಿಧನರಾದ (1902) ಮರುವರ್ಷ ಪುತ್ರಿ ರೇಣುಕ ಸಾವನ್ನಪ್ಪಿದಳು (1903). ಅಲ್ಲದೆ ನೆಚ್ಚಿನ ಶಿಷ್ಯ ಅಸಾಧಾರಣ ಪ್ರತಿಭೆಯ ಸತೀಶ್ ಚಂದ್ರರಾಯ್ ಶಾಂತಿನಿಕೇತನದಲ್ಲಿ ನಿಧನಹೊಂದಿದ (1904). ಮರುವರ್ಷವೇ ರವೀಂದ್ರರ ತಂದೆಯವರೂ ಸ್ವರ್ಗಸ್ಥರಾದರು (1905). ಇಷ್ಟೆಲ್ಲ ಸಂಕಷ್ಟಗಳ ನಡುವೆಯೂ ರವೀಂದ್ರರ ಲೇಖನಿಗೆ ಬಿಡುವಿರಲಿಲ್ಲ. ಸ್ಮರಣ, ಶಿಶು, ನೌಕಾ ಡುಬಿ ಎಂಬ ಕೃತಿಗಳು ಪ್ರಕಟವಾದವು. ಆಗತಾನೆ ಆರಂಭವಾದ ಸ್ವದೇಶೀ ಚಳವಳಿಯನ್ನು ಬೆಂಬಲಿಸಿ 1904ರಲ್ಲಿ ಕಲ್ಕತ್ತದ ಮಿನರ್ವ ಥಿಯೇಟರಿನಲ್ಲಿ ಸ್ವದೇಶೀ ಸಮಾಜ ಎಂಬ ವಿಷಯವನ್ನು ಕುರಿತು ಮಾತನಾಡುತ್ತ ಲಾರ್ಡ್ ಕರ್ಜನ್ನನ ವಿಭಜಿಸಿ ಆಳುವ ನೀತಿಯನ್ನು ತೀವ್ರವಾಗಿ ಖಂಡಿಸಿದರು.

1906ರಲ್ಲಿ ರವೀಂದ್ರರು ಕಾಸಿಂ ಬಜಾ಼ರಿನಲ್ಲಿ ನಡೆದ ಮೊದಲ ಬಂಗಾಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಆ ವೇಳೆಗೆ ಖೇಯಾ (ಪದ್ಯಸಂಕಲನ) ಬಿಡುಗಡೆಯಾಯಿತು. ಪ್ರಸಿದ್ಧ ಕಾದಂಬರಿ ಗೋರಾ ಪ್ರಕಟವಾಯಿತು. ಇದು ಬಂಗಾಲಿ ಕಾದಂಬರಿ ಸಾಹಿತ್ಯದ ಶ್ರೇಷ್ಠ ಕೃತಿಗಳಲ್ಲೊಂದು. 1909ರಲ್ಲಿ ಪ್ರಾಯಶ್ಚಿತ್ತ ಎಂಬ ನಾಟಕ ರಚಿಸಿದರು. ಮರುವರ್ಷ ಖ್ಯಾತ ಗೀತಾಂಜಲಿಯ ಗೀತೆಗಳನ್ನು ರಚಿಸಿದರು. 1911ರಲ್ಲಿ ರವೀಂದ್ರರ 50ನೆಯ ಹುಟ್ಟುಹಬ್ಬ ಶಾಂತಿನಿಕೇತನದಲ್ಲಿ ವಿಜೃಂಭಣೆಯಿಂದ ಜರುಗಿತು. ಪ್ರವಾಸಿ ಎಂಬ ಪತ್ರಿಕೆಯಲ್ಲಿ ಅವರು ತಮ್ಮ ಬಾಲ್ಯದ ನೆನಪುಗಳನ್ನು ಪ್ರಕಟಿಸಿದರು. ಇವರ ಕೆಲವು ಕವಿತೆಗಳು ಇಂಗ್ಲಿಷಿಗೆ ಅನುವಾದವಾದವು. ಮರುವರ್ಷ ಪ್ರಖ್ಯಾತವಾದ ಜನಗಣಮನ ಎಂಬ ರಾಷ್ಟ್ರಗೀತೆಯನ್ನು ರಚಿಸಿ ಮಾಘೋತ್ಸವದಲ್ಲಿ ತಾವೇ ಹಾಡಿದರು. 1914ರಲ್ಲಿ ಪುನಃ ಇಂಗ್ಲೆಂಡಿಗೆ ಹೋದ ವೇಳೆಗಾಗಲೇ ರವೀಂದ್ರರ ಗೀತಾಂಜಲಿ ಇಂಗ್ಲಿಷ್ ಸಾಹಿತ್ಯಕ ವಲಯದಲ್ಲಿ ಹೊಸ ಮನ್ವಂತರವನ್ನು ಸೃಷ್ಟಿಸಿತ್ತು. 1913 ನವೆಂಬರ್ 13ರಂದು ರವೀಂದ್ರರ ಗೀತಾಂಜಲಿಗೆ ಪ್ರಪಂಚದಲ್ಲೇ ಶ್ರೇಷ್ಠ ಪ್ರಶಸ್ತಿಯಾದ ನೊಬೆಲ್ ಬಹುಮಾನ ಲಭಿಸಿತು. ಕಲ್ಕತ್ತ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿತು. 1915ರ ಜೂನ್ 3ರಂದು ಬ್ರಿಟಿಷ್ ಚಕ್ರವರ್ತಿ ನೈಟ್‍ಹುಡ್ ಪ್ರಶಸ್ತಿ ನೀಡಿದರು. ಅನಂತರ ಆಂಧ್ರದವರು ಭಾರತತೀರ್ಥ, ಕವಿಸಾಮ್ರಾಟ ಎಂಬ ಬಿರುದುಗಳನ್ನೂ ತ್ರಿಪುರಾದ ಮಹಾರಾಜರು ಭಾರತಭಾಸ್ಕರ ಎಂಬ ಬಿರುದನ್ನೂ ನೀಡಿದ್ದಲ್ಲದೆ, ಬನಾರಸ್, ಢಾಕಾ, ಉಸ್ಮಾನಿಯ ವಿಶ್ವವಿದ್ಯಾಲಯಗಳು ಗೌರವ ಡಾಕ್ಟೊರೇಟ್ ಪದವಿಯನ್ನು ನೀಡಿದವು.

1917ರ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಗೆ ಆನಿಬೆಸೆಂಟರ ಹೆಸರನ್ನು ಸೂಚಿಸಿದವರು ರವೀಂದ್ರರು. ಈ ವೇಳೆಗೆ ಇವರ ಅಂಚೆ ಮನೆ ನಾಟಕ ಪ್ರದರ್ಶನವನ್ನು ಆನಿಬೆಸೆಂಟ್, ಗಾಂಧಿ, ತಿಲಕ್, ಮಾಳವೀಯ ಮೊದಲಾದವರು ವೀಕ್ಷಿಸಿದ್ದರು. 1919ರ ಮೇ 30ರಂದು ನಡೆದ ಜಲಿಯನ್‍ವಾಲಾಬಾಗಿನ ಹತ್ಯಾಕಾಂಡದಿಂದ ಮನನೊಂದ ರವೀಂದ್ರರು ತಮಗೆ ಬ್ರಿಟಿಷರು ನೀಡಿದ್ದ ನೈಟ್‍ಹುಡ್ ಪದವಿಯನ್ನು ವಾಪಸು ಮಾಡಿದರು. ಒಂದನೆಯ ಮಹಾಯುದ್ಧದಿಂದ ವಿಹ್ವಲರಾದ ರವೀಂದ್ರರು ಶಾಂತಿದೂತರಾಗಿ ವಿದೇಶಗಳಲ್ಲಿ ತಿರುಗಾಡಿದರು. 1920–21ರಲ್ಲಿ ಪುನಃ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೆರಿಕ, ಚೀನ, ಜಪಾನ್ ಮುಂತಾದ ದೇಶಗಳಿಗೆ ಹೋಗಿ ಅಲ್ಲಿಯ ಬುದ್ಧಿಜೀವಿಗಳನ್ನು ಕುರಿತು ಮಾತನಾಡಿ ವಿಶ್ವಭಾರತಿಗೆ ಸಹಾಯ ಕೇಳಿದರು. ವಾಪಸು ಬಂದವರು ಬ್ರಜೇಂದ್ರನಾಥ ಸೀಲರ ಅಧ್ಯಕ್ಷತೆಯಲ್ಲಿ ಹಾಗೂ ಸಿಲ್ವನ್ ಲಿವಿಯಂಥ ಖ್ಯಾತ ವಿದ್ವಾಂಸರ ಸಮಕ್ಷಮದಲ್ಲಿ ವಿಶ್ವಭಾರತಿಯನ್ನು ಸಾರ್ವಜನಿಕ ಸೊತ್ತಾಗಿ ಪರಿವರ್ತನೆ ಮಾಡಿದರು. ಅಲ್ಲದೆ ಶ್ರೀನಿಕೇತನದಲ್ಲಿ ಗ್ರಾಮ ಪುನರುಜ್ಜೀವನ ಕೇಂದ್ರವನ್ನು ಆರಂಭಿಸಿದರು. ರಾಷ್ಟ್ರದ ತಳಪಾಯದಂತಿರುವ ಹಳ್ಳಿಗಳ ಪುನರ್ನಿರ್ಮಾಣ ಹಾಗೂ ಗ್ರಾಮಕೈಗಾರಿಕೆಗಳಿಗೆ ಜೀವತುಂಬುವುದು ಅವಶ್ಯವೆಂದರು. ಹೀಗೆ ಆದರ್ಶ ಮತ್ತು ವಾಸ್ತವಿಕತೆಗಳು ಮೇಳವಿಸಿದ ಶಾಂತಿನಿಕೇತನ ಹಳತು–ಹೊಸತರ ಸಂಗಮವಾಗಿ ಪೂರ್ವ–ಪಶ್ಚಿಮಗಳ ಮಿಲನಕೇಂದ್ರವಾಗಿ ಜಗದ್ವಿಖ್ಯಾತವಾಯಿತು.

1932ರಲ್ಲಿ ಇರಾನಿನ ರಾಜನ ಆಹ್ವಾನದ ಮೇರೆಗೆ ಪರ್ಷಿಯ, ಇರಾಕ್, ಇರಾನ್‍ಗಳಲ್ಲಿ ಪ್ರವಾಸಮಾಡಿದರು. ಅದೇ ವರ್ಷ ಸ್ವದೇಶಕ್ಕೆ ಮರಳಿದವರು ಕೋಲ್ಕತ ವಿಶ್ವವಿದ್ಯಾಲಯದಲ್ಲಿ ಬಂಗಾಲಿ ಭಾಷಾ ಪ್ರಾಧ್ಯಾಪಕರಾದರು. 1933ರಲ್ಲಿ ಸಿಂಹಳಕ್ಕೆ ಹೋದಾಗ ನಾಲ್ಕು ಅಧ್ಯಾಯಗಳು ಎಂಬ ಕಾದಂಬರಿ ಬರೆದು ಮುಗಿಸಿದರು. 1936ರ ಸುಮಾರಿಗೆ ನೃತ್ಯಗೀತರೂಪಕಗಳಲ್ಲೂ ಹೊಸ ಪ್ರಯೋಗಗಳನ್ನು ಮಾಡಿದ್ದುಂಟು. ತಾವು ರಚಿಸಿದ ಗೀತೆಗಳಿಗೆ ತಾವೇ ಸ್ವರಸಂಯೋಜನೆ ಮಾಡಿದರು. ಬಂಗಾಲಿ ಸಂಗೀತದಲ್ಲಿ ರವೀಂದ್ರಸಂಗೀತ ಎಂಬ ಹೊಸ ಪರಂಪರೆಯನ್ನು ಆರಂಭಿಸಿದ ರವೀಂದ್ರರು ಸು.2000 ಕೀರ್ತನೆಗಳನ್ನು ರಚಿಸಿದ್ದಾರೆ.

1936ರಲ್ಲಿ ಪಾಟ್ನದ ನಾಗರಿಕರು ಬಾಬು ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ರವೀಂದ್ರರನ್ನು ಗೌರವಿಸಿದರು. 1937ರಲ್ಲಿ ರವೀಂದ್ರರು ಕಲ್ಕತ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡಿದರು. ಅಧಿಕಾರಿಗಳಲ್ಲದವರಿಗೆ ಇಂಥ ಒಂದು ಘನ ಭಾಷಣ ಮಾಡುವ ಗೌರವ ದೊರೆತದ್ದೂ ಬಂಗಾಲಿ ಭಾಷೆಯಲ್ಲಿ ಘಟಿಕೋತ್ಸವ ಭಾಷಣ ಮಾಡಿದ್ದೂ ಅದೇ ಮೊದಲು. ಅದೇ ವರ್ಷ ತೀವ್ರ ಅನಾರೋಗ್ಯಕ್ಕೀಡಾದರು.

1940 ಆಗಸ್ಟ್ 7ರಂದು ಶಾಂತಿನಿಕೇತನದ ವಿಶೇಷ ಘಟಿಕೋತ್ಸವದಲ್ಲಿ ಲೋಕಪ್ರಸಿದ್ಧವಾದ ಆಕ್ಸ್‍ಫರ್ಡ್ ವಿಶ್ವವಿದ್ಯಾಲಯ ಮಾರಿಸ್ ಗ್ವಯರ್ ಹಾಗೂ ರಾಧಾಕೃಷ್ಣರ ಸಮಕ್ಷಮದಲ್ಲಿ ಇವರಿಗೆ ಗೌರವ ಡಿ.ಲಿಟ್ ಪ್ರಶಸ್ತಿ ನೀಡಿತು.

1940ರಲ್ಲಿ ಎರಡನೆಯ ಮಹಾಯುದ್ಧದಿಂದ ತೀವ್ರವಾಗಿ ಮನನೊಂದರಲ್ಲದೆ ಇವರ ದೈಹಿಕ ಅಸ್ವಸ್ಥತೆಯೂ ಹೆಚ್ಚಿತು. ಈ ಸ್ಥಿತಿಯಲ್ಲೂ ಸಾಹಿತ್ಯಸೃಷ್ಟಿ ನಿಲ್ಲಲಿಲ್ಲ. 1941 ಏಪ್ರಿಲ್ 14ರಂದು ತಮ್ಮ 80ನೆಯ ಹುಟ್ಟುಹಬ್ಬದ ಸಮಾರಂಭದಲ್ಲಿ ನಾಗರಿಕತೆಯ ಸಂಧಿಕಾಲ ಎಂಬ ಲೇಖನ ಓದಿದರು. ಮಿಸ್ ರ್‍ಯಾತ್‍ಬೋನ್ ಎಂಬ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯೆ ಭಾರತವನ್ನು ಟೀಕಿಸಿ ಬರೆದಿದ್ದ ಬಹಿರಂಗ ಪತ್ರಕ್ಕೆ ಅಷ್ಟೇ ಕಟುವಾಗಿ ಖಂಡಿಸಿ ಉತ್ತರ ಬರೆದರು. 1941 ಆಗಸ್ಟ್ 7ರಂದು ರವೀಂದ್ರರು ಕಲ್ಕತ್ತದಲ್ಲಿ ವಿಧಿವಶರಾದರು.

(ಎಚ್.ಆರ್.ಆರ್.ಬಿ.;ವಿ.ಕೆ.)

# ಡ

**ಡಂಬಾರ್ಟನ್ ಓಕ್ಸ್ ಸಮ್ಮೇಳನ:** ವಾಷಿಂಗ್ಟನ್ ಡಿ.ಸಿ.ಯ ಡಂಬಾರ್ಟನ್ ಓಕ್ಸ್ ಎಂಬಲ್ಲಿ ಎರಡನೆಯ ಮಹಾಯುದ್ಧದ ಕಾಲದಲ್ಲಿ (1944) ಸೇರಿದ್ದ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಬ್ರಿಟನ್, ಸೋವಿಯೆತ್ ಒಕ್ಕೂಟ ಮತ್ತು ಚೀನಗಳ ರಾಜತಾಂತ್ರಿಕ ಪ್ರವೀಣರ ಒಂದು ಸಭೆ. ರಾಷ್ಟ್ರಗಳ ಕೂಟದ ಸ್ಥಾನದಲ್ಲಿ ಯುದ್ಧಾನಂತರ ಕಾಲದಲ್ಲಿ ಹೊಸದೊಂದು ಭದ್ರತಾ ಸಂಸ್ಥೆಯ ಸ್ಥಾಪನೆಗೆ ಮೂಲಭೂತ ಸೂಚನೆಗಳನ್ನು ನಿರ್ಧರಿಸಲು ಈ ಸಮ್ಮೇಳನವನ್ನು ಕರೆಯಲಾಗಿತ್ತು. ವಿದೇಶ ಮಂತ್ರಿಗಳಿಗಿಂತ ಕೆಳಗಿನ ಮಟ್ಟದ ಸಭೆ ಇದು. ಇದರಲ್ಲಿ ಭಾಗವಹಿಸಿದ್ದವರು ಅಧಿಕಾರಿಗಳು. ಇವರ ತೀರ್ಮಾನಗಳು ಕೇವಲ ಸಲಹೆಗಳು. ಸಂಬಂಧಪಟ್ಟ ರಾಷ್ಟ್ರಗಳು ಇವನ್ನು ಅಂತಿಮವಾಗಿ ಒಪ್ಪಿಕೊಂಡಂತೆಂದು ಭಾವಿಸುವಂತಿರಲಿಲ್ಲ. ಆದ್ದರಿಂದ ಈ ಚರ್ಚೆಗಳನ್ನು ಅಧಿಕೃತವಾಗಿ ಸಂಭಾಷಣೆಗಳೆಂದು ಕರೆಯಲಾಯಿತು. ಆದರೂ ಈ ಸಭೆಯ ಮಹತ್ತ್ವವನ್ನು ಅಲ್ಲಗಳೆಯುವಂತಿಲ್ಲ. ಪ್ರಪಂಚದ ಶಾಂತಿ ಭದ್ರತೆಗಳಿಗಾಗಿ ಅಂತಾರಾಷ್ಟ್ರೀಯ ಸಂಸ್ಥೆಯೊಂದು ಅವಶ್ಯವೆಂಬುದಾಗಿ 1943ರಲ್ಲಿ ಮಾಸ್ಕೋದಿಂದ ಮಿತ್ರರಾಷ್ಟ್ರಗಳು ಮಾಡಿದ ಘೋಷಣೆಯನ್ನು ಕಾರ್ಯಗತಗೊಳಿಸಲು

ಕೈಗೊಂಡ ಪ್ರಥಮ ಪ್ರಯತ್ನವಿದು. ಈ ಸಮ್ಮೇಳನ ನಡೆದ ಸಮಯದಲ್ಲಿ ಜಪಾನ್ ವಿರುದ್ಧ ಸಮರದಲ್ಲಿ ಸೋವಿಯೆತ್ ದೇಶ ಸೇರಿರಲಿಲ್ಲ. ಅದು ಇನ್ನೂ ತಟಸ್ಥ ನೀತಿ ತಳೆದಿತ್ತು. ಆದ್ದರಿಂದ ಚೀನದ ಪ್ರತಿನಿಧಿಯೊಂದಿಗೆ ಸಮಾಲೋಚನೆಯಲ್ಲಿ ಭಾಗವಹಿಸಲು ಸೋವಿಯೆತ್ ದೇಶ ಒಡಂಬಡಲಿಲ್ಲ. ಆದ್ದರಿಂದ ಪ್ರಥಮತಃ ಅಮೆರಿಕ, ಬ್ರಿಟನ್ ಮತ್ತು ಸೋವಿಯೆತ್ ದೇಶಗಳ ಪ್ರತಿನಿಧಿಗಳು ಆಗಸ್ಟ್ 21ರಿಂದ ಸೆಪ್ಟೆಂಬರ್ 28ರವರೆಗೆ ಸಭೆ ಸೇರಿ ಸೂಚಿತ ಅಂತಾರಾಷ್ಟ್ರೀಯ ಸಂಸ್ಥೆಯ ಸ್ಥಾಪನೆಗೆ ಸಲಹೆಗಳ ಕರಡನ್ನು ರಚಿಸಿದರು. ಇವು ಡಂಬಾರ್ಟನ್ ಓಕ್ಸ್ ಸಲಹೆಗಳೆಂದು ಪ್ರಸಿದ್ಧವಾಗಿವೆ. ಸೆಪ್ಟೆಂಬರ್ 29ರಿಂದ ಅಕ್ಟೋಬರ್ 7ರವರೆಗೆ ಅಮೆರಿಕ, ಬ್ರಿಟನ್ ಮತ್ತು ಚೀನದ ಪ್ರತಿನಿಧಿಗಳು ಸೇರಿ ಈ ಸಲಹೆಗಳನ್ನು ಪರಿಶೀಲಿಸಿದರು. ಚೀನ ಪ್ರತಿನಿಧಿಯ ಒಪ್ಪಿಗೆಯೂ ಇವಕ್ಕೆ ದೊರಕಿತು.

ಇವು ಭಾವೀ ಸಂಸ್ಥೆಯ ಸಮಗ್ರ ಯೋಜನೆಯೇನೂ ಆಗಲಿಲ್ಲ. ಸೂಚಿತ ಭದ್ರತಾ ಸಮಿತಿಯಲ್ಲಿ ಮತದಾನದ ವ್ಯವಸ್ಥೆ, ಸಂಸ್ಥೆಯ ಸಾಮಾನ್ಯ ಸಭೆಯ ಸದಸ್ಯತ್ವ–ಇವೆರಡು ವಿಚಾರಗಳಲ್ಲಿ ಸೋವಿಯೆತ್ ದೇಶಕ್ಕೂ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೂ ನಡುವೆ ಒಮ್ಮತ ಬರಲಿಲ್ಲ. ಅಮೆರಿಕದ ಅಧ್ಯಕ್ಷ ರೂಸ್ವೆಲ್ಟ್, ಬ್ರಿಟಿಷ್ ಪ್ರಧಾನಿ ಚರ್ಚಿಲ್, ಸೋವಿಯೆತ್ ಸರ್ವಾಧಿಕಾರಿ ಸ್ಟಾಲಿನ್ ಇವರು ಯಾಲ್ಟದಲ್ಲಿ ಸಭೆ ಸೇರಿ (1945) ಇವೆರಡು ಸಮಸ್ಯೆಗಳನ್ನೂ ಬಗೆಹರಿಸಿದರು. ಡಂಬಾರ್ಟನ್ ಓಕ್ಸ್ ಸಮ್ಮೇಳನದ ಸಲಹೆಗಳ ಆಧಾರದ ಮೇಲೆ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ 1945ರಲ್ಲಿ ವಿಶ್ವ ಸಂಸ್ಥೆಯ ಪ್ರಣಾಳಿಕೆ ರಚಿತವಾಯಿತು.*

**ಡಾಂಗ್ ಸೋನ್:** ಉತ್ತರ ಅನ್ನಾಮ್‌ನಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಇಲ್ಲಿ ಮೊಟ್ಟಮೊದಲ ಬಾರಿಗೆ ಕಂಚಿನಯುಗಕ್ಕೆ ಸಂಬಂಧಿಸಿದ ಕಂಚಿನ ಉಪಕರಣಗಳು ವಿಶೇಷವಾಗಿ ದೊರಕಿದುವು. ಆದ್ದರಿಂದ ಇಲ್ಲಿಯ ಸಂಸ್ಕೃತಿಯನ್ನು ಡಾಂಗ್ ಸೋನ್ ಸಂಸ್ಕೃತಿ ಎಂದು ಕರೆಯಲಾಯಿತು. ಪ್ರ.ಶ.ಪೂ. 1ನೆಯ ಸಹಸ್ರಮಾನದ ಉತ್ತರಾರ್ಧಕ್ಕೆ ಸೇರುವ ಈ ಸಂಸ್ಕೃತಿ ಸುತ್ತಮುತ್ತಲ ಸ್ಥಳಗಳಲ್ಲೂ ಹರಡಿತು. ಈ ಸಂಸ್ಕೃತಿಯ ನೆಲೆಗಳಲ್ಲಿ ದೊರಕಿದ ಕಂಚಿನ ಉಪಕರಣಗಳು ಸೀಸ ಮಿಶ್ರಿತವಾದವು. ಇವು ಮುಖ್ಯವಾಗಿ ಕಠಾರಿ, ಕಾವು ತೂತಿನ ಕೊಡಲಿ, ಕಳೆಗುದ್ದಲಿ, ಈಟಿಯ ಮೊನೆ ಮತ್ತು ಬುರುಡೆಮದ್ದಲೆ (ಕೆಟ್ಲ್‌ಡ್ರಮ್) ಮುಂತಾದ ಆಕಾರಗಳಲ್ಲಿ ವಿಶೇಷವಾಗಿ ದೊರಕಿವೆ. ಬುರುಡೆ ಮದ್ದಲೆಗಳ ಮೇಲೆ ಕುದುರೆಸವಾರರ ಚಿತ್ರಗಳಿವೆ. ಇವರ ಉಡುಗೆತೊಡುಗೆಗಳು ಚೌ ಸಂಸ್ಕೃತಿಯ ಲಕ್ಷಣಗಳನ್ನು ತೋರ್ಪಡಿಸುವುದರಿಂದ, ಡಾಂಗ್‌ಸೋನ್ ಸಂಸ್ಕೃತಿ ಹುಲ್ಲುಗಾವಲಿನ ಜನ ಇಲ್ಲಿಗೆ ಪ್ರ.ಶ.ಪೂ.6ನೆಯ ಶತಮಾನದಲ್ಲಿ ಬಂದಿರಬೇಕೆಂದು ಊಹಿಸಲಾಗಿದೆ. ಸೀಸವನ್ನು ಉತ್ತರ ಚೀನದಲ್ಲೂ ವಿಶೇಷವಾಗಿ ಬಳಸಲಾಗುತ್ತಿತ್ತು. ಒಂದೆರಡು ಶತಮಾನಗಳ ಅನಂತರ ಇಂಡೊನೇಷ್ಯದಲ್ಲಿ ಅಲ್ಲಲ್ಲಿ ಕಂಚಿನ ಉಪಕರಣಗಳ ಉಪಯೋಗ ಪ್ರಾರಂಭವಾಯಿತು. ಆದರೂ ಡಾಂಗ್‌ಸೋನ್ ಸಂಸ್ಕೃತಿ ಪೂರ್ಣವಾಗಿ ತನ್ನ ಪ್ರಭಾವವನ್ನು ಬೀರಲಿಲ್ಲ. ನವಶಿಲಾಯುಗದ ಸಂಸ್ಕೃತಿಯೇ ವಿಶೇಷವಾಗಿತ್ತು. (ಎ.ವಿ.ಎನ್.)

**ಡಿರೋಜಿಯನ್ ಚಳವಳಿ:** 19ನೆಯ ಶತಮಾನದ ಭಾರತದ ಪ್ರಮುಖ ಚಳವಳಿಗಳಲ್ಲೊಂದು. ಇದನ್ನು ಯುವ ಬಂಗಾಲಿ ಚಳವಳಿಯೆಂದೂ ಕರೆಯಲಾಗಿದೆ. ಈ ಚಳವಳಿಯ ಕಾರಣಕರ್ತ ರಾದ ಹೆನ್ರಿ ಲೂಯಿ ವಿವಿಯನ್ ಡಿರೋಜಿಯೊ 1809ರಲ್ಲಿ ಜನಿಸಿದರು. ಕಲ್ಕತ್ತದ ಹಿಂದು ಕಾಲೇಜ್‌ನಲ್ಲಿ 1826–1831ರವರೆಗೆ ಅಧ್ಯಾಪಕರಾಗಿದ್ದರು. ಅಗಾಧ ವಿದ್ವಾಂಸ ಮತ್ತು ಪ್ರಗತಿಪರ ಚಿಂತಕರಾಗಿದ್ದ ಇವರ ವಿಚಾರಗಳಲ್ಲಿ ಫ್ರೆಂಚ್ ಕ್ರಾಂತಿಯ ಪ್ರಭಾವವಿದ್ದಿತ್ತು. ಜನಪ್ರಿಯ ಅಧ್ಯಾಪಕರಾಗಿದ್ದುದರಿಂದ ಯುವ ವಿದ್ಯಾರ್ಥಿಗಳ ಒಂದು ಗುಂಪು ಇವರ ಪ್ರಭಾವದಲ್ಲಿ ಬೆಳೆಯಿತು. ಈ ಯುವಕರಿಗೆ ಪ್ರಗತಿಪರ ಮತ್ತು ಸ್ವತಂತ್ರವಾಗಿ ಚಿಂತಿಸಲು ಸ್ಫೂರ್ತಿ ನೀಡಿದ ಡಿರೋಜಿಯೋ ಮತ್ತವರ ಗುಂಪನ್ನು ಡಿರೋಜಿಯನ್ನರು ಅಥವಾ ಯಂಗ್ ಬಂಗಾಲಿಗಳು ಎಂದು ಕರೆಯಲಾಗುತ್ತದೆ. ಇವರು ಮಹಾ ದೇಶಭಕ್ತರಾಗಿದ್ದು ಸ್ವಾತಂತ್ರ್ಯ, ಸಮಾನತೆ ಮತ್ತು ಸತ್ಯವನ್ನು ಪ್ರೀತಿಸುತ್ತಿದ್ದರು. ಇವರು 1827ರಲ್ಲೇ ದೇಶವನ್ನು ಕುರಿತು ಕವಿತೆಯೊಂದನ್ನು ರಚಿಸಿದ್ದರು. ಹೀಗಾಗಿ ಬಹುಶಃ ಪ್ರಪ್ರಥಮ ರಾಷ್ಟ್ರೀಯ ಕವಿ ಡಿರೋಜಿಯೊ ಎಂದು ಹೇಳಬಹುದು.

ಡಿರೋಜಿಯೊ ಪ್ರಗತಿಪರ, ಕ್ರಾಂತಿಕಾರಕ ವಿಚಾರಗಳು ಅವನನ್ನು ಕಾಲೇಜಿನಿಂದ 1831ರಲ್ಲಿ ಹೊರದೂಡುವಂತೆ ಮಾಡಿದವು ಮತ್ತು ತಮ್ಮ 22ನೆಯ ವರ್ಷದಲ್ಲೇ ಕಾಲರಾ ರೋಗಕ್ಕೆ ತುತ್ತಾಗಿ ಮರಣ ಹೊಂದಿದನು. ಡಿರೋಜಿಯೊನ್ನರು ಪ್ರಾಚೀನ ಸಂಪ್ರದಾಯ, ಆಚಾರವಿಚಾರಗಳು, ಮೂಢನಂಬಿಕೆಗಳನ್ನು ಕಟುವಾಗಿ ಟೀಕಿಸಿದರು. ಸ್ತ್ರೀಯರ ಹಕ್ಕುಬಾಧ್ಯತೆಗಳನ್ನು ಕಾಪಾಡಲು ಮತ್ತು ಅವರಿಗೆ ಶಿಕ್ಷಣ ಕೊಡಲು ಒತ್ತಾಯಿಸಿದರು. ಆದರೆ ಅವರು ಒಂದು ದೊಡ್ಡ ಆಂದೋಲನವನ್ನು ಮಾಡಲಾಗಲಿಲ್ಲ. ಏಕೆಂದರೆ ಆಗಿನ ಸಾಮಾಜಿಕ ಸ್ಥಿತಿ ಡಿರೋಜಿಯನ್ನರ ವಿಚಾರಗಳನ್ನು ಅರಿಯುವಷ್ಟು ಮುಂದುವರಿದಿರಲಿಲ್ಲ ಮತ್ತು ಬಹುಸಂಖ್ಯಾತರಾದ ರೈತರ ಕಾರಣಕ್ಕಾಗಿ ಹೋರಾಡಲಿಲ್ಲ. ಜೊತೆಗೆ ಆಗಿನ ಭಾರತದ ಇನ್ನಾವ ಗುಂಪುಗಳೂ ಇವರ ವಿಚಾರಗಳಿಗೆ ಬೆಂಬಲಿಸಲಿಲ್ಲ. ಅದಕ್ಕಿಂತ ಹೆಚ್ಚಾಗಿ ಇವರು ಜನರೊಂದಿಗೆ ಹೆಚ್ಚು ಸಂಪರ್ಕ ಇಟ್ಟುಕೊಂಡಿರಲಿಲ್ಲ. ಇವರ ವಿಚಾರಗಳು ಜನರನ್ನು ಮುಟ್ಟುವಲ್ಲಿ ವಿಫಲವಾದವು. ಆದರೂ ಡಿರೋಜಿಯನ್ನರು ರಾಜಾರಾಮಮೋಹನರಾಯ್‌ರವರ ಪರಂಪರೆಯನ್ನು ಮುಂದುವರಿಸಿ ಕರಪತ್ರಗಳ ಮೂಲಕ ಸಾರ್ವಜನಿಕ ಸಂಘಗಳ ಶಿಕ್ಷಣ ಕೊಡಲು ಪ್ರಯತ್ನಿಸಿದರು. ಸಾರ್ವಜನಿಕ ಸಮಸ್ಯೆಗಳನ್ನು ಕುರಿತು ಸಾರ್ವಜನಿಕ ಚಳವಳಿಗಳನ್ನು ಏರ್ಪಡಿಸುತ್ತಿದ್ದರು. ಪತ್ರಿಕಾ ಸ್ವಾತಂತ್ರ್ಯ, ಬ್ರಿಟಿಷ್ ಕಾಲೋನಿಗಳಲ್ಲಿ ಭಾರತೀಯ ಕಾರ್ಮಿಕರನ್ನು ಉತ್ತಮವಾಗಿ ನೋಡಿಕೊಳ್ಳುವುದು, ಜಮೀನ್ದಾರರ ಕೈಯಿಂದ ರೈತರ ಸಂರಕ್ಷಣೆಗೆ ಭಾರತೀಯರನ್ನು ಉನ್ನತ ಹುದ್ದೆಗೆ ಆಯ್ಕೆ ಮಾಡುವುದು ಮುಂತಾದ ಸಮಸ್ಯೆ ಬಗ್ಗೆ ಸಾರ್ವಜನಿಕ ಚಳವಳಿ ಕೈಗೊಳ್ಳುತ್ತಿದ್ದರು. ರಾಷ್ಟ್ರೀಯ ಚಳವಳಿಯ ಪ್ರಮುಖ ನಾಯಕ ರಾದ ಸುರೇಂದ್ರನಾಥ ಬ್ಯಾನರ್ಜಿಯವರು ಡಿರೋಜಿಯನ್ನರನ್ನು ಕುರಿತು ಬಂಗಾಲದ ಆಧುನಿಕ ನಾಗರಿಕತೆಯ ಬೆಳೆವಣಿಗೆಯ ಮುಖ್ಯ ಪ್ರವರ್ತಕರು, ನಮ್ಮ ಜನಾಂಗದ ಯುದ್ಧೋತ್ಸಾಹದ ಮೂಲ ಪುರುಷರು. ಇವರ ಸದ್ಗುಣಗಳು ನಮಗೆ ಗೌರವ ಮೂಡಿಸುತ್ತವೆ ಮತ್ತು ಇವರ ಸೋಲನ್ನು ನಾವು ಮೃದು ಭಾವನೆಯಿಂದ ಪರಿಗಣಿಸುತ್ತೇವೆ ಎಂದು ಹೇಳಿದ್ದಾರೆ. ಡಿರೋಜಿಯನ್ನರ ವೈಚಾರಿಕತೆ ಚಳವಳಿಗಳು ಮುಂದಿನ ಬಂಗಾಲದ ಎಲ್ಲ ರಾಜಕೀಯ, ಸಾಮಾಜಿಕ ಚಳವಳಿಗಳಿಗೂ ಮೂಲ ಸ್ಫೂರ್ತಿಯ ಸೆಲೆಗಳಾದವೆಂದು ಹೇಳಬಹುದು. (ಕೆ.ಎಸ್‌ಡಿ.)

**ಡೆಲ್ಫಿ:** ಪ್ರಾಚೀನ ಕಾಲದಿಂದಲೂ ಗ್ರೀಕರ ಧಾರ್ಮಿಕ ಸಾಮಾಜಿಕ ಜೀವನಗಳ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತಿರುವ ಧಾರ್ಮಿಕ ಕೇಂದ್ರವಾಗಿರುವ ನಗರ. ಗ್ರೀಸ್ ದೇಶದ ಮಧ್ಯಭಾಗದಲ್ಲಿರುವ ಫೋಸಿಸ್ ಪ್ರಾಂತದ ಕಾರಿಂತ್ ಕೊಲ್ಲಿಯ ಮೇಲೆ ಪರ್ನಾಸಸ್ ಪರ್ವತ ಪ್ರದೇಶದಲ್ಲಿ ದಟ್ಟಕಾಡು ಮತ್ತು ಪರ್ವತ ಕಣಿವೆಗಳ ನಿಸರ್ಗಸೌಂದರ್ಯದ ರಾಶಿಯ ನಡುವೆ ಅಡಗಿರುವ ಡೆಲ್ಫಿ ಅಲ್ಲಿಯ ಜನತೆಯ ಭಾವುಕತೆಯ ನೆಲೆಯಾಗಿತ್ತು. ವಿಶ್ವದ ಕೇಂದ್ರ ಅಥವಾ ನಾಭಿಪ್ರದೇಶವನ್ನು ಕಂಡುಹಿಡಿಯಲು ಝ್ಯೂಸ್‌ದೇವತೆ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಕಳಿಸಿದ ಎರಡು ಪಕ್ಷಿಗಳು ಡೆಲ್ಫಿಯ ಒಂಫಾಲಸ್ (ನಾಭಿ) ಶಿಲೆಯಿರುವ ಸ್ಥಳದಲ್ಲಿ ಸಂಧಿಸಿದುವೆಂದೂ ಆದ್ದರಿಂದ ಅದೇ ಪ್ರಪಂಚದ ಕೇಂದ್ರವೆಂದೂ ಗ್ರೀಕರು ನಂಬಿದ್ದರು. ಡೆಲ್ಫಿಸ್ ಪದಕ್ಕೆ ಗರ್ಭಾಶಯ ಅಥವಾ ನಾಭೀಪ್ರದೇಶ ಎಂದು ಅರ್ಥವಿದೆ.

ಪ್ರಾಚೀನ ಕಾಲದಲ್ಲಿ ಒಲಂಪಿಯನ್ನರು ಬರುವ ಮೊದಲೇ ಇಲ್ಲಿ ಜ್ಯೂಸ್ ದೇವತೆಯ ಮಕ್ಕಳಾದ ಅಪೊಲೊ ಮತ್ತು ಅಥೆನಾ ಅವರ ಗುಡಿಗಳ ನಿರ್ಮಾಣವಾಗಿತ್ತು. ಪ್ರ.ಶ.ಪೂ.2ನೆಯ ಸಹಸ್ರಮಾನದ ಮಧ್ಯಭಾಗಕ್ಕೆ ಸೇರಿದ ಮೈಸೀನಿಯನ್ ಸಂಸ್ಕೃತಿಯ ಕಾಲಕ್ಕೆ ನಿರ್ದೇಶಿಸಬಹುದಾದ ವಸತಿಗಳ ಮತ್ತು ದೇವಾಲಯಗಳ ಅವಶೇಷಗಳು ಫ್ರೆಂಚ್ ಪ್ರಾಕ್ತನಶಾಸ್ತ್ರಜ್ಞರು ನಡೆಸಿದ ಉತ್ಖನನಗಳಲ್ಲಿ ದೊರಕಿವೆ. ಮೈಸಿನೆ ಸಂಸ್ಕೃತಿಯಲ್ಲಿ ಮಹತ್ತ್ವವನ್ನು ಗಳಿಸಿದ್ದ ಮಹಾಮಾತೃ ದೇವತೆಯ ಪೂಜಾದ್ರವ್ಯ ಇಲ್ಲಿ ಕಂಡುಬಂದಿದೆ. ಭವಿಷ್ಯ ನುಡಿಯುವ ಡೆಲ್ಫಿಯ ದಿವ್ಯವಾಣಿಯನ್ನು ಕಾಯುವ ಮಹಾಸರ್ಪ ಅಲ್ಲಿ ವಾಸಿಸುತ್ತಿತ್ತು. ಡೆಲ್ಫಿಯಲ್ಲಿ ತನ್ನ ಮಹತ್ತ್ವವನ್ನು ಸ್ಥಾಪಿಸುವ ಸಲುವಾಗಿ ಆ ಸರ್ಪವನ್ನು ಕೊಂದ ಅಪೊಲೊ ಅಲ್ಲಿಯ ಮುಖ್ಯದೇವತೆಯಾದ. ಅವನ ಭವಿಷ್ಯವಾಣಿ ಪಿಥಿಯಾ ಎಂಬ ಭಕ್ತೆಯ ಮುಖಾಂತರ ನುಡಿಸಲಾಗುತ್ತಿತ್ತು. ನಾಲ್ಕು ವರ್ಷಗಳಿಗೊಮ್ಮೆ ಗ್ರೀಸಿನ ಎಲ್ಲ ಭಾಗಗಳಿಂದ ಬಂದ ಕ್ರೀಡಾಪಟುಗಳು ಪಿಥಿಯನ್ ಸಂಗೀತ ಮತ್ತು ಕ್ರೀಡಾಪಂದ್ಯಗಳಲ್ಲಿ ಭಾಗವಹಿಸುತ್ತಿದ್ದರು. ಭವಿಷ್ಯವಾಣಿ ಮತ್ತು ಕ್ರೀಡಾಪಂದ್ಯಗಳಿಂದ ಡೆಲ್ಫಿಯ ಅಪೊಲೊ ಜ್ಯೂಸ್ ದೇವತೆಯಂತೆ ದೇಶಾದ್ಯಂತ ಪೂಜಾರ್ಹನಾದ.

ಅಥೆನ್ಸ್‌ನಿಂದ ಡೆಲ್ಫಿಗೆ ಬಂದ ಪ್ರವಾಸಿಗ ಮೊದಲು ಅಥೆನಾ ಪ್ರೊನಾಯಿಯ ಗುಡಿಯನ್ನು ತಲುಪಿ ಅಲ್ಲಿದ್ದ ಥೊಲೊಸ್ ಶಿಲೆಯನ್ನು ಸಂದರ್ಶಿಸುತ್ತಿದ್ದ. ಅಲ್ಲಿಂದ ಮುಂದೆ ಪಿಥಿಯನ್ ಕ್ರೀಡಾಪಟುಗಳು ತರಬೇತು ಹೊಂದುತ್ತಿದ್ದ ವ್ಯಾಯಾಮ ಶಾಲೆ, ಪರ್ವತದಡಿಯಿಂದ ಬುಗ್ಗೆಯಾಗಿ ಹರಿಯುತ್ತಿದ್ದ ನೀರಿನಿಂದ ತುಂಬಿದ ಕೆಸ್ಟಾಲಿಯ ಕೊಳ ಮತ್ತು ಕೊನೆಗೆ ಅಪೊಲೊ ಮುಖ್ಯದೇವಾಲಯ ಇದ್ದುವು. ಈ ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲೂ ದೇಶದ ವಿವಿಧ ಭಾಗಗಳಿಗೆ ಸೇರಿದ ಭಕ್ತರು, ರಾಜರು, ಶ್ರೀಮಂತ ವರ್ಗದವರು, ಡೆಲ್ಫಿಯ ಅಧಿದೇವತೆಗೆ ಸಮರ್ಪಿಸಿದ ಅನೇಕ ಪ್ರತಿಮೆಗಳು, ಸುಂದರಸ್ತಂಭಗಳು, ಭಂಡಾರಗಳು, ವೇದಿಕೆಗಳು ಇದ್ದುವು. ಇವು ಉತ್ತಮ ಆಲಂಕಾರಿಕ ಕಲಾಕೃತಿಗಳಾಗಿದ್ದುವು. ಭಂಡಾರಗಳು ಗ್ರೀಸಿನ ವಿವಿಧ ರಾಜ್ಯಗಳು ತಮ್ಮ ಕಾಣಿಕೆಯಾಗಿ ಆ ಪವಿತ್ರಕ್ಷೇತ್ರದಲ್ಲಿ ನಿರ್ಮಿಸಿದ ಮಂಟಪ ಅಥವಾ ಪವಿತ್ರ ಕಟ್ಟಡಗಳು. ಭಂಡಾರಗಳಲ್ಲಿ ಅತ್ಯಂತ ಸುಂದರ ನಿರ್ಮಿತಿಯಾಗಿದ್ದ ಅಥೆನ್ಸಿನ ಭಂಡಾರವನ್ನು ಈಚೆಗೆ ಪುನರ್ನಿರ್ಮಿಸಲಾಗಿದೆ. ಅಪೊಲೊ ಗುಡಿ ಪ್ರ.ಶ.ಪೂ. 6ನೆಯ ಮತ್ತು 4ನೆಯ ಶತಮಾನಗಳಲ್ಲಿ ಸಂಭವಿಸಿದ ಭೂಕಂಪಗಳಿಂದ ಹಾಳಾದರೂ ಅದನ್ನು ಹೆಚ್ಚು ಸುಂದರವಾಗಿ ಮತ್ತೆ ಕಟ್ಟಲಾಯಿತು. ಅದರ ನಿರ್ವಹಣೆಗಾಗಿ ನೆರೆಹೊರೆಯ ನಗರರಾಜ್ಯಗಳ ಪ್ರತಿನಿಧಿಗಳನ್ನೊಳಗೊಂಡಿದ್ದ ಆಂಫಿಕ್ಟಿಯೊನಿ ಎಂಬ ಸಂಸ್ಥೆ ಇತ್ತು. ಅಪೊಲೊ ತರುವಾಯ ಡೆಲ್ಫಿಯ ಪ್ರಮುಖ ದೇವತೆ ಡೈಯೊನೈಸಸ್, ಅಮರನಾದರೂ ಮೃತ್ಯುವಿಗೀಡಾಗಿ ಮರಳಿ ಬದುಕಿ ಬಂದ ಡೈಯೊನೈಸಸನ ಸಮಾಧಿ ಅಪೊಲೊನ ಗರ್ಭಗುಡಿಯ ಕೆಳಗಿದೆಯೆಂದು ನಂಬಲಾಗಿದೆ. ಆ ಸಮಾಧಿಕೊಠಡಿ ಅಥವಾ ಅಡ್ಯೆಟಾನ್‌ನಲ್ಲಿ ಮುಕ್ಕಾಲಿನ ಆಸನದ ಮೇಲೆ ಪಿಥಿಯಾ ಕುಳಿತು, ಅಪೊಲೊನ ಭವಿಷ್ಯವಾಣಿಯನ್ನು ಜನಸಾಮಾನ್ಯರಿಗೆ ತಿಳಿಸುತ್ತಾಳೆಂದು ನಂಬಲಾಗಿತ್ತು. ಡೈಯೊನೈಸಸನ ಪ್ರೇತಶಕ್ತಿ ಪಿಥಿಯಾಳ ದೇಹ ಪ್ರವೇಶಿಸುವುದೇ ಭವಿಷ್ಯವಾಣಿಗೆ ಪ್ರೇರಕವೆಂದು ನಂಬಲಾಗಿತ್ತು.

ಸಾರ್ವಜನಿಕರೂ ರಾಜಕೀಯ ವ್ಯಕ್ತಿಗಳೂ ರಾಜಪ್ರತಿನಿಧಿಗಳೂ ಅಪೋಲೊ ದೇವತೆಗೆ ಕಾಣಿಕೆಗಳನ್ನು ಅರ್ಪಿಸಲು ಮತ್ತು ತಮ್ಮ ವೈಯಕ್ತಿಕ ಅಥವಾ ರಾಜ್ಯದ ಸಮಸ್ಯೆಗಳ ಬಗ್ಗೆ ದಿವ್ಯವಾಣಿಯಿಂದ ಸೂಕ್ತ ಸಲಹೆಗಳನ್ನು ಪಡೆಯಲು ಸಹಸ್ರಾರು ಸಂಖ್ಯೆಯಲ್ಲಿ ಡೆಲ್ಫಿಗೆ ಬರುತ್ತಿದ್ದರು. ಯುದ್ಧದ ಪ್ರಾರಂಭ, ಶಾಂತಿ ಸಂಧಾನ, ಹೊಸ ನಿರ್ಮಾಣಗಳ ಪ್ರಾರಂಭ ಮುಂತಾದ ಯಾವುದೇ ಪ್ರಮುಖ ಕಾರ್ಯದ ಆರಂಭವಾಗಬೇಕಿದ್ದರೂ ಗ್ರೀಕರು ತಮ್ಮ ನಾಡು ಅಥವಾ ವಸಾಹತುಗಳಿಂದ ಡೆಲ್ಫಿಗೆ ಬಂದು ದಿವ್ಯವಾಣಿಯ ಸಲಹೆ ಪಡೆದು ತರುವಾಯ ಮಾತ್ರ ಅಂಥ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಪ್ರ.ಶ.ಪೂ. 8-6ನೆಯ ಶತಮಾನದವರೆಗೆ ಗ್ರೀಕರ ವಸಾಹತುಶಾಹಿಯ ಅಭಿವೃದ್ಧಿಯಲ್ಲಿ ಡೆಲ್ಫಿಯ ದಿವ್ಯವಾಣಿಯ ಪಾತ್ರ ಪ್ರಧಾನವಾಗಿತ್ತು. ವಸಾಹತುಗಾರರು ಹೊಸ ನಗರಗಳ ಸ್ಥಾಪನೆಗೆ ಅನುಸರಿಸಬೇಕಾದ ಕ್ರಮಗಳನ್ನೂ ಆಚರಿಸಬೇಕಾದ ವಿಧಿ ನಿಯಮಗಳನ್ನೂ ದಿವ್ಯವಾಣಿ ತಿಳಿಸುತ್ತಿದ್ದುದಲ್ಲದೆ ಭೌಗೋಳಿಕವಾಗಿ ಮಾರ್ಗದರ್ಶನವನ್ನೂ ಒದಗಿಸುತ್ತಿತ್ತು. ಡೆಲ್ಫಿಗೆ ವಿವಿಧ ಪ್ರದೇಶಗಳಿಂದ ಯಾತ್ರಿಕರು ಬರುತ್ತಿದ್ದುದರಿಂದ ಆ ಎಲ್ಲ ಪ್ರದೇಶಗಳ ಜನಜೀವನ, ಸಂಸ್ಕೃತಿ ಮತ್ತು ಭೌಗೋಳಿಕ ಲಕ್ಷಣಗಳ ಪರಿಚಯ ಪಡೆದಿರುತ್ತಿದ್ದ ಮತ್ತು ಚತುರ್ವಾರ್ಷಿಕ ಪಿಥಿಯನ್ ಪಂದ್ಯಗಳಲ್ಲಿ ಭಾಗವಹಿಸಲು ಬರುತ್ತಿದ್ದ ಕ್ರೀಡಾಪಟುಗಳಿಂದ ಸುದ್ದಿ ಸಂಗ್ರಹ ಮಾಡಿಕೊಂಡಿರುತ್ತಿದ್ದ ಡೆಲ್ಫಿಯ ಪುರೋಹಿತವರ್ಗ ಇಂಥ ಸುದ್ದಿ ಸಲಹೆಗಳನ್ನು ಒದಗಿಸುತ್ತಿದ್ದುದರಲ್ಲಿ ಅಚ್ಚರಿ ಇಲ್ಲ.

ಪ್ರ.ಶ.ಪೂ.6ನೆಯ ಶತಮಾನದಲ್ಲಿ ಡೆಲ್ಫಿ ಬಹಳ ಉಚ್ಛ್ರಾಯಸ್ಥಿತಿಯಲ್ಲಿತ್ತು. ಪ್ರ.ಶ.ಪೂ. 480ರಲ್ಲಿ ಪರ್ಷಿಯನ್ ಆಕ್ರಮಣದ ಸಂದರ್ಭದಲ್ಲಿ ದಿವ್ಯವಾಣಿ ಗ್ರೀಕರಿಗೆ ನಿರಾಶಾದಾಯಕವೂ ಆಕ್ರಮಣಕಾರರಿಗೆ ಅನುಕೂಲಕರವೂ ಆಗಿತ್ತು. ಆದರೆ ಸ್ಯಾಲಮಿಸ್ ಮತ್ತು ಪ್ಲಾಟ್ಯಿಯ ಕದನಗಳಲ್ಲಿ ಗ್ರೀಕರು ಅದ್ಭುತ ಜಯಗಳಿಸಿದ್ದರಿಂದ ದಿವ್ಯವಾಣಿಯ ಬಗ್ಗೆ ಗ್ರೀಕರಿಗಿದ್ದ ಗಾಢನಂಬಿಕೆಗೆ ಕೊಡಲಿ ಪೆಟ್ಟು ಬಿದ್ದಂತಾಯಿತು. ಪರ್ಷಿಯನ್ನರ ಯುದ್ಧಗಳ ಅನಂತರ ರಾಜಕೀಯವಾಗಿ ಡೆಲ್ಫಿ ಆಳುವ ಮನೆತನದತ್ತ ಒಲುವಂತಾಯಿತು. ಇಷ್ಟಾದರೂ ಅಲೆಕ್ಸಾಂಡರನ ಕಾಲದವರೆಗೂ ಡೆಲ್ಫಿ ದೇವಾಲಯದ ಪ್ರಭಾವ ಉಳಿದುಬಂತು. 2ನೆಯ ಶತಮಾನದಲ್ಲಿ ಡೆಲ್ಫಿಯ ಪ್ರಭಾವ ಮತ್ತೊಮ್ಮೆ ಬೆಳೆಯಿತು. ಡೆಲ್ಫಿಯ ಪುರೋಹಿತವರ್ಗಕ್ಕೆ ಸೇರಿದ ಪ್ಲೂಟಾರ್ಕ್ ಡೆಲ್ಫಿಯ ಪುನರುತ್ಥಾನಕ್ಕೆ ಬಹುಮಟ್ಟಿಗೆ ಕಾರಣನಾದ. ಇಲಿಯಡ್‌ನಲ್ಲಿ ಕ್ರೂರಿಯೂ ನಿರ್ದಯ ಬಿಲ್ಲುಗಾರನೂ ರೋಗರುಜಿನಗಳ ಹರಡುವಿಕೆಗೆ ಕಾರಣನೂ ಎನಿಸಿಕೊಂಡಿದ್ದ ಅಪೋಲೋನನ್ನು ಪ್ಲುಟಾರ್ಕ್ ತನ್ನ ಗ್ರಂಥಗಳಲ್ಲಿ ಅತ್ಯಂತ ಉದಾರಿ, ಲೋಕಹಿತೈಷಿ, ದಿವ್ಯವಾಣಿಗಳ ಮೂಲಕ ಮಾನವರ ಮಾರ್ಗದರ್ಶಕ, ಅವರ ಪಾವಿತ್ರ್ಯಸಾಧನೆಗೆ ಸಹಾಯಕ ಎಂದು ವರ್ಣಿಸಿದ್ದಾನೆ. ಈಸ್ಕಿಲಸ್, ಪಿಂಡಾರ್, ಹಿರೋಡಾಟಸ್ ಮೊದಲಾದವರು ಸಹ ಡೆಲ್ಫಿಯ ಭಕ್ತರಾಗಿದ್ದುಕೊಂಡು ಅದರ ಪ್ರಭಾವ ಬೆಳೆಯಲು ಕಾರಣರಾದರು. ಬೌದ್ಧಿಕ ಮತ್ತು ಸಾಹಿತ್ಯದ ವಿಷಯಗಳಲ್ಲಿ ಡೆಲ್ಫಿ ಬಹಳ ಪ್ರಭಾವ ಬೀರಿತು. ಅಪೋಲೊ ದೇವಾಲಯದಲ್ಲಿ ಹೋಮರ್, ಹೆಸಿಯಾಡರ ಭಾವಚಿತ್ರಗಳನ್ನು ಕಾದಿರಿಸಲಾಗಿತ್ತು. ಪಿಂಡಾರನ ಕಬ್ಬಿಣದ ಆಸನವೂ ಅಲ್ಲಿತ್ತು. ದೇವಾಲಯಕ್ಕೆ ಸಲ್ಲಬೇಕಾಗಿದ್ದ ತೆರಿಗೆಗಳಲ್ಲಿ ಪಿಂಡಾರನಿಗೆ ಪಾಲು ದೊರೆಯುವಂತೆ ದಿವ್ಯವಾಣಿ ಆದೇಶ ನೀಡಿತ್ತು. ಅಪೋಲೊ ಕವಿ-ಕಾವ್ಯಗಳ ಪೋಷಕ ಸಂತನೆಂದು ಪ್ರಸಿದ್ಧನಿದ್ದುದರಿಂದ ಸಾಹಿತ್ಯಶಾಸ್ತ್ರಗಳ ಬೆಳೆವಣಿಗೆಗೆ ಪ್ರೋತ್ಸಾಹ ನೀಡಲಾಯಿತು. ವಿಜ್ಞಾನದ ಬೆಳವಣಿಗೆಗೂ ಅವನು ಕಾರಣನೆಂದು ಗ್ರೀಕರು ಭಾವಿಸಿದ್ದರು. ಯಾವುದರಲ್ಲೂ ಅತಿರೇಕವಿರಬಾರದು. ನಿನ್ನನ್ನೇ ನೀನು ತಿಳಿದುಕೋ-ಮೊದಲಾದ ಪ್ರಸಿದ್ಧ ಸಾರ್ವತ್ರಿಕ ತತ್ತ್ವಗಳು ಅಪೋಲೊನಿಂದಲೇ ಹುಟ್ಟಿದವು ಎಂದು ಗ್ರೀಕರು ನಂಬಿದ್ದರು ಮತ್ತು ದೇವಾಲಯದ ದ್ವಾರದ ಬಳಿ ಎದ್ದುಕಾಣುವಂತೆ ಅವನ್ನು ಬರೆಸಿದ್ದರು. ಸಾಕ್ರಟೀಸ್ ಪ್ರಪಂಚದಲ್ಲೇ ದೊಡ್ಡ ಜ್ಞಾನಿಯೆಂದು ದಿವ್ಯವಾಣಿಯೊಂದು ನುಡಿದಿತ್ತು. ಪ್ಲೇಟೋ ತನ್ನ ಬರೆವಣಿಗೆಗಳಲ್ಲಿ ಧಾರ್ಮಿಕ ಮತ್ತು ನೈತಿಕ ವಿಚಾರಗಳಲ್ಲಿ ಡೆಲ್ಫಿಗೆ ಪ್ರಪ್ರಥಮಸ್ಥಾನ ಕೊಟ್ಟಿದ್ದಾನೆ. ಸರ್ವಕಾಲಗಳಲ್ಲೂ ಎಲ್ಲ ಸಂದರ್ಭದಲ್ಲೂ ಪ್ರತಿಯೊಂದು ವಸ್ತುವಿನ ವಿಚಾರದಲ್ಲೂ ಡೆಲ್ಫಿ ಅಸಮಾನವೆಂದು ಅಪೋಲೊ ಹೇಳಿದ್ದಾನೆ. (ಬಿ.ಕೆ.ಜಿ.)

**ಡೇನಿಯಲ್ ಸಹೋದರರು:** ಹೆಸರಾಂತ ಐರೋಪ್ಯ ವರ್ಣಚಿತ್ರ ಕಲಾವಿದರು. ಥಾಮಸ್ ಡೇನಿಯಲ್ (1749-1840) ಹಾಗೂ ವಿಲಿಯಂ ಡೇನಿಯಲ್ (1769-1837) - ಈ ಇಬ್ಬರು ಸಹೋದರರು 1786ರಲ್ಲಿ ಭಾರತಕ್ಕೆ ಬಂದು ಕಲ್ಕತ್ತದಲ್ಲಿ ಇಳಿದರು. ಬಂದ ಹೊಸತರಲ್ಲಿಯೇ ಥಾಮಸ್ ಕಲ್ಕತ್ತದ ಹನ್ನೆರಡು ಮನೋಹರದೃಶ್ಯಗಳನ್ನು ಕೇವಲ ಹನ್ನೆರಡು ಮೊಹರು (ಚಿನ್ನದನಾಣ್ಯ)ಗಳಿಗೆ ಮಾರುವ ತನ್ನ ಬಯಕೆಯನ್ನು ಕಲ್ಕತ್ತ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಕಟಿಸಿದ್ದ. ಹೀಗೆ ಪ್ರಾರಂಭವಾದ ಇವರ ಕಲಾಯಾತ್ರೆ ಅತ್ಯಂತ ಯಶಸ್ವಿಯಾಯಿತು. ಡೇನಿಯಲ್ ಬಂಧುಗಳು ಒಟ್ಟಾಗಿ, ಪ್ರತ್ಯೇಕವಾಗಿಯೂ ಬಹುಶ್ರಮವಹಿಸಿ ರಚಿಸಿ ಪ್ರಕಟಿಸಿದ ನೂರಾರು ಮುದ್ರಿತ ಜಲವರ್ಣಚಿತ್ರಗಳು ಅನನ್ಯವೆಂದು ಖ್ಯಾತಿ ಪಡೆದಿವೆ. ಅನಂತರ 1788-1791ರವರೆಗಿನ 3 ವರ್ಷಗಳ ಕಾಲ ಇವರು ಉತ್ತರಭಾರತದಲ್ಲಿ ಗಂಗಾನದಿಯ ದಂಡೆಯುದ್ದಕ್ಕೂ ಚಲಿಸಿ ಗಢವಾಲದ ಬಳಿಯಿಂದ ಶ್ರೀನಗರದವರೆಗೂ-ಹೀಗೆ 5,000 ಹೆಚ್ಚು ಕಿಮೀ ದೂರವನ್ನು ಕ್ರಮಿಸಿ ಹಿಮಾಲಯವನ್ನು ಕಂಡು ಚಿತ್ರಿಸಿದ ಮೊಟ್ಟಮೊದಲ ಕಲಾವಿದರೆನಿಸಿದರು.

ಕಲ್ಕತ್ತದಲ್ಲಿ ತಂಗಿದ್ದಾಗ ತಾವು ರಚಿಸಿದ್ದ 150ಕ್ಕೂ ಹೆಚ್ಚಿನ ಕೃತಿಗಳ ಒಂದು ಪ್ರದರ್ಶನವನ್ನು ಏರ್ಪಡಿಸಿ ಹರಾಜಿನ ಮೂಲಕ ಚಿತ್ರಗಳನ್ನು ಮಾರಿ ಸಾಕಷ್ಟು ಹಣವನ್ನೂ ಸಂಗ್ರಹಿಸಿದರು. 1792ರಲ್ಲಿ ದಕ್ಷಿಣಭಾರತ ಪ್ರವಾಸ ಕೈಗೊಂಡರು. ಮದರಾಸಿನಿಂದ ಈ ಪ್ರವಾಸವನ್ನು ಆರಂಭಿಸಿದರು. ಬೆಂಗಳೂರಿನಲ್ಲಿ ಲಾಲ್‌ಬಾಗಿನ ಬಂಡೆಯ ಮೇಲಿರುವ ಕೆಂಪೇಗೌಡ ಕಟ್ಟಿಸಿದ ಸೀಮಾಗೋಪುರ, ಗವಿಗಂಗಾಧರೇಶ್ವರ ದೇವಾಲಯದ ಮುನ್ನೋಟ ಮತ್ತು ಅದರ ಪರಿಸರದಲ್ಲಿರುವ ಬೃಹದಾಕಾರದ ಏಕಶಿಲಾ ಶೈವಚಿಹ್ನೆ/ಆಯುಧಶಿಲ್ಪಗಳು, ಕೋಲಾರದ ಬಳಿಯ ಬೆಟ್ಟದ ಮೇಲಿನ ಗುಡಿ, ಹೊಸೂರಿನ ಗುಡ್ಡದ ಮೇಲಿರುವ ದೇವಾಲಯ, ವಿಶಾಲ ಕೆರೆ ಕೃಷ್ಣಗಿರಿ, ಶಂಕರೀದುರ್ಗ, ಹೊಸೂರು, ಅಡಿಚೆಟ್ಟಿ, ರಾಯಕೋಟೆ, ವೀರಪ್ಪದುರ್ಗ, ಜಗದೇವಿ ಮುಂತಾದ ಅತ್ಯಂತ ದುರ್ಗಮ ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ ಟಿಪ್ಪುಸುಲ್ತಾನ್ ಕಟ್ಟಿಸಿದ್ದ ಕೋಟೆಗಳ ಹಲವು ಅದ್ಭುತ ಚಿತ್ರಗಳನ್ನು ಬರೆದರು. 9 ತಿಂಗಳ ಪ್ರವಾಸದಲ್ಲಿ ಸು.2500 ಕಿಮೀ ಕ್ರಮಿಸಿ ಮದರಾಸಿನಲ್ಲಿ ತಮ್ಮ ಕೃತಿಗಳನ್ನು ಆಯ್ದ 68 ವರ್ಣಚಿತ್ರ ಹಾಗೂ 8 ನಕ್ಷೆಗಳನ್ನು ಹರಾಜಿನಲ್ಲಿ ಮಾರಿದರು.

ಅನಂತರ ಆ ಕಾಲದ ಇನ್ನೊಬ್ಬ ಹೆಸರಾಂತ ಕಲಾವಿದ ಜೇಮ್ಸ್ ವೇಲ್ಸ್‌ನೊಡನೆ ಎಲಿಫೆಂಟ, ಕಾನ್ಹೇರಿ, ಜೋಗೇಶ್ವರಿ, ಕೊಂಡಿವೀಟಿ ಮುಂತಾದ ಸ್ಥಳದ ಗುಹಾಂತರ ದೇವಾಲಯಗಳನ್ನು ಹೃದಯಂಗಮವಾಗಿ ಚಿತ್ರಿಸಿದರು. 1793ರ ಕೊನೆಗೆ ಇಂಗ್ಲೆಂಡಿಗೆ ಹಿಂದಿರುಗಿದರು. ಇವರ ಶ್ರೀಮಂತ ಸಂಗ್ರಹದಲ್ಲಿ ವರ್ಣಚಿತ್ರ, ನಕ್ಷೆ, ಕೆಲವು ಅಪೂರ್ಣ ರೇಖಾಚಿತ್ರಗಳೇ (ಸ್ಕೆಚ್) ಅಲ್ಲದೆ ದೀರ್ಘ ಪ್ರವಾಸ ಕಾಲದಲ್ಲಿ ತಮಗಾದ ದಿನದಿನದ ಅನುಭವ, ವಿವಿಧ ವಿಷಯಗಳ ಬಗೆಗೆ ತಮ್ಮ ಅನಿಸಿಕೆ, ಅಭಿಪ್ರಾಯಗಳ ನಿಖರ ಹಾಗೂ ಸವಿವರ ಮಾಹಿತಿಯನ್ನು ಒಳಗೊಂಡ ವಿಶೇಷ ಪ್ರಾಮುಖ್ಯದ ದಿನಚರಿಗಳೂ ಇವೆ. ಈ ವಿವರಗಳಲ್ಲಿ ಆ ಕಾಲದ ಜನರ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳ ಬಗೆಗೆ ಐರೋಪ್ಯರ ಅನಿಸಿಕೆ, ಸೂಕ್ಷ್ಮ ಒಳನೋಟಗಳಿಂದ ಕೂಡಿದ್ದು ಮಹತ್ತ್ವದ್ದಾಗಿವೆ.

ಇಂಗ್ಲೆಂಡಿಗೆ ಹಿಂದಿರುಗಿದ ಮೇಲೆ ತಮ್ಮೆಲ್ಲ ಕೃತಿಗಳನ್ನು ಮುದ್ರಿತ ಜಲವರ್ಣಚಿತ್ರಗಳಾಗಿ ಪರಿವರ್ತಿಸಲು ಪ್ರಾರಂಭಿಸಿದರು. ಥಾಮಸ್ ಡೇನಿಯಲ್ ಆದರ ಪಡೆದ ಹಿರಿಯ ಕಲಾವಿದನಾಗಿ ಬೆಳೆದರೆ, ವಿಲಿಯಂ ಮುದ್ರಿತ ಜಲಚಿತ್ರಗಳ ರಚನೆಯಲ್ಲಿ ಅಪರಿಮಿತ ಸಾಧನೆ ಮಾಡಿದ. 1795 ಮಾರ್ಚ್‌ನಿಂದ ಆರಂಭವಾಗಿ ಆರು ಸರಣಿಗಳಲ್ಲಿ ಭಾರತದ ಒಟ್ಟು 144 ವಿಹಂಗಮ ದೃಶ್ಯಗಳ ಮುದ್ರಿತ ಜಲಚಿತ್ರಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಮೊದಲ ಮೂರು ಓರಿಯಂಟಲ್ ಸೀನರಿ ಭಾಗ-1, 2 ಮತ್ತು 3; 24-ಭೌಗೋಳಿಕ ದೃಶ್ಯಗಳು; ಭಾರತದ ಪ್ರಾಚ್ಯವಸ್ತುಗಳ ಉತ್ಖನನಗಳು (ಗುಹಾಂತರ ದೇವಾಲಯ). ಸರಣಿಯ ಪ್ರತಿಸಂಪುಟದಲ್ಲಿ 24 ಚಿತ್ರಗಳು ಇದ್ದವು. ಆರಂಭದಲ್ಲಿ ಡೇನಿಯಲ್ಸ್ ಬಂಧುಗಳ ಕಲಾಕೃತಿಗಳು ಕಟುವಿಮರ್ಶೆಗೊಳಗಾಗಿದ್ದವು. ಆದರೆ ಭಾರತದ ಸಂದರ್ಭದಲ್ಲಿ ಇವರ ಕಾರ್ಯ ಹಲತೆರನ ಮಹತ್ತ್ವದ್ದು. ಭಾರತೀಯ ಕಲೆಯನ್ನು ಪ್ರಪಂಚಕ್ಕೆ ತೆರೆದಿಡುವುದರ ಜೊತೆಗೇ ಮುದ್ರಿತ ಜಲಚಿತ್ರ ಪ್ರಕಾರವನ್ನು ಒಂದು ವಿಶಿಷ್ಟ ಮಾಧ್ಯಮವಾಗಿ ರೂಪಿಸಿ, ಪರಾಕಾಷ್ಠೆಗೆ ಒಯ್ದರು. ಇವರ ಕೆಲವು ಆಯ್ದ ಕೃತಿಗಳನ್ನು ಮದರಾಸಿನ ಸೇಂಟ್‌ಜಾರ್ಜ್ ಕೋಟೆಯೊಳಗಿರುವ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಪ್ರಾಚ್ಯವಸ್ತುಸಂಗ್ರಹಾಲಯದ ಒಂದು ವಿಶೇಷ ಗ್ಯಾಲರಿಯಲ್ಲಿ ಪ್ರದರ್ಶಿಸಲಾಗಿದೆ. ಕರ್ನಾಟಕಕ್ಕೆ ಸಂಬಂಧಿಸಿದ ಕೆಲವು ನಿಸರ್ಗದೃಶ್ಯ, ಕೋಟೆ ಹಾಗೂ ಗವಿಗಂಗಾಧರೇಶ್ವರ ದೇವಾಲಯದ ಮುಂದಿನ ಶಿಲ್ಪಗಳ ಚಿತ್ರಗಳನ್ನು ಶ್ರೀರಂಗಪಟ್ಟಣದ ದರಿಯಾ ದೌಲತ್‌ನಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಿದೆ. (ಪಿ.ಎಸ್.ಎಸ್.)

**ಡೇರಿಯಸ್ I:** ಪ್ರ.ಶ.ಪೂ. 522-486. ಪ್ರಾಚೀನ ಪರ್ಷಿಯದ ಅಕಿಮೆನಿಡ್ ವಂಶದ ಅರಸನ ಹೆಸರು. ಪಾರ್ಥಿಯದ ಕ್ಷತ್ರಪನಾಗಿದ್ದ ಹಿಸ್ಟಾಸ್ಪಸನ ಮಗ. ಆ ಮನೆತನದಲ್ಲಿ ಅತ್ಯಂತ ಖ್ಯಾತಿ ಪಡೆದ ಅರಸ. ಈತನ ಬೆಹಿಸ್ತಾನ್, ಪರ್ಸಿಪಲಿಸ್, ನಕ್ಷೆಇ-ರುಸ್ತುಮ್ ಶಾಸನಗಳಿಂದಲೂ ಗ್ರೀಕ್ ಇತಿಹಾಸಕಾರರಾದ ಹಿರೋಡಾಟಸ್ ಮತ್ತು ಟೀಸಿಯಸರ ಬರೆಹಗಳಿಂದಲೂ ಈತನ ಬಗ್ಗೆ ಅನೇಕ ವಿಷಯಗಳು ತಿಳಿದಿವೆ. ಸೈರಸ್‌ನ ಬಳಿಕ ಪರ್ಷಿಯದಲ್ಲಿ ಆಳಿದ ಕ್ಯಾಂಬೈಸಿಸ್ ಈಜಿಪ್ಟನ್ನು ಮುತ್ತಿದ ಸಂದರ್ಭದಲ್ಲಿ ಆತನ ಬೆಂಗಾವಲು ಪಡೆಯಲ್ಲಿ ಡೇರಿಯಸ್ ಸೇರಿಕೊಂಡಿದ್ದ. ಪ್ರ.ಶ.ಪೂ.522ರಲ್ಲಿ ಆತ ಮರಣ ಹೊಂದಿದ ಬಳಿಕ ಕ್ಷಿಪ್ರಾಕ್ರಮಣದ ನೇತೃತ್ವ ವಹಿಸಿ ಸ್ವತಃ ಅರಸನಾದ. ಆಗ ಸೈರಸನ ಮಗ ಬರ್ದಿಯ ಕೊಲೆ ಗೀಡಾದ. ಕ್ಯಾಂಬೈಸಿಸನೇ ಕೊಲೆಗೆ ಕಾರಣನೆಂದೂ ಗೌಮಾತಾ ಎಂಬಾತ ತಾನೇ ಬರ್ದಿಯನೆಂದೂ ನಟಿಸಿ ರಾಜ್ಯವನ್ನು ಕಸಿಯಲು ಯತ್ನಿಸಿದಾಗ ಅಕಿಮೆನಿಡ್ ಸಂತತಿಯ ಉಳಿವಿಗಾಗಿ ತಾನು ಗೌಮಾತಾನನ್ನು ಕೊಂದುದಾಗಿಯೂ ಡೇರಿಯಸ್ ಬೆಹಿಸ್ತಾನ್ ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಹಿರೋಡಾಟಸ್ ಮಾತ್ರ ಬರ್ದಿಯನ ಕೊಲೆಯ ಆಪಾದನೆಯನ್ನು ಡೇರಿಯಸನ ಮೇಲೆ ಹೊರಿಸಿದ್ದಾನೆ.

ಡೇರಿಯಸ್ ಅರಸನಾದಾಗ ರಾಜ್ಯದಲ್ಲಿ ದಂಗೆಗಳು ತಲೆದೋರಿದುವು. ಸೂಸಿಯಾನ, ಬ್ಯಾಬಿಲೋನಿಯ, ಮಿಡಿಯ, ಸಗರ್ಟಿಯ, ಮಾರ್ಗಿಯಾನಗಳಲ್ಲಿ ಸ್ವತಂತ್ರ ಸರ್ಕಾರಗಳು ನೆಲೆಗೊಂಡವು. ಅಲ್ಲಿ ಗ್ರೀಸ್‌ನಿಂದ ಬಂದಿದ್ದ ಜನ ನೆಲೆಸಿದ್ದರು. ಇವರು ಪರ್ಷಿಯನರ

ಸಾರ್ವಭೌಮತ್ವವನ್ನು ಒಪ್ಪಿರಲಿಲ್ಲ. ಗ್ರೀಸಿನ ಅಥೆನ್ಸ್ ಗಣರಾಜ್ಯ ಸಹ ಈ ಸಣ್ಣ ರಾಜ್ಯಗಳ ಯತ್ನಕ್ಕೆ ಬೆಂಬಲ ನೀಡಿತು. ಆದ್ದರಿಂದ ಈ ದಂಗೆಗಳನ್ನು ಅಡಗಿಸಲು ಡೇರಿಯಸ್ ತನ್ನೆಲ್ಲ ಬುದ್ಧಿಶಕ್ತಿ, ಸಾಮರ್ಥ್ಯಗಳನ್ನು ವ್ಯಯಿಸಬೇಕಾಯಿತು. ಈ ದಂಗೆಗಳು ಸುಸಂಘಟಿತವಾಗಿರದಿದ್ದುದು ಡೇರಿಯಸನ ಯಶಸ್ಸಿಗೆ ಕಾರಣ. ಆ ಸಂದರ್ಭದಲ್ಲಿ ನಡೆದ 19 ಕದನಗಳಲ್ಲಿ ಇವನು 9 ದಂಗೆಕೋರ ನಾಯಕರನ್ನು ಸೋಲಿಸಿದುದಾಗಿ ಬೆಹಿಸ್ತಾನ್ ಶಾಸನದಲ್ಲಿ ಹೇಳಿದೆ. ಪ್ರ.ಶ.ಪೂ. 519ರ ಸುಮಾರಿಗೆ ಈತ ಪೂರ್ವ ಪ್ರಾಂತಗಳನ್ನು ಸ್ವಾಧೀನಪಡಿಸಿಕೊಂಡು, ಮರುವರ್ಷ ಈಜಿಪ್ಟಿಗೆ ಹೋದ. ಅಲ್ಲಿಯ ಕ್ಷತ್ರಪ ಆರ್ಯಂಡೆಸನನ್ನು ಕೊಂದು, ಗಾರ್ಡಿಸ್‌ನ ಕ್ಷತ್ರಪ ಓರೋಟಿಸ್ ಅವಿಧೇಯನಾಗಿದ್ದನೆಂದು ಅವನನ್ನು ಕೊಂದು ಹೊರದೂಡಿದ. ಈ ಕ್ರಮಗಳಿಂದ ರಾಜ್ಯದಲ್ಲಿ ಭದ್ರತೆಯನ್ನು ಏರ್ಪಡಿಸಿದ ಅನಂತರ ಡೇರಿಯಸ್ ದಿಗ್ವಿಜಯ ಯಾತ್ರೆ ಕೈಗೊಂಡ.

ಅಯೋನಿಯ ದ್ವೀಪಗಳ ಗ್ರೀಕರು ಅರಿಸ್ಟಾಗೊರಸನ ನಾಯಕತ್ವದಲ್ಲಿ ದಂಗೆ ಎದ್ದರು. ಅಥೆನ್ಸ್ ಅವರಿಗೆ ಸಹಾಯ ನೀಡಲು ಒಪ್ಪಿತು. ಅಥೀನಿಯನರು ಸಾರ್ಡಿಸ್ ನಗರವನ್ನು ಸುಟ್ಟರು. ಆದರೂ ಪರ್ಷಿಯನರು ಗ್ರೀಕರನ್ನು ಹಿಂದಕ್ಕೆ ಓಡಿಸುವುದರಲ್ಲಿ ಯಶಸ್ವಿಯಾದರು. ಅನಂತರ ಮಿಲೆಟಸ್ ಪಟ್ಟಣವನ್ನು ಮುತ್ತಿ ಗ್ರೀಕರನ್ನು ಸೋಲಿಸಿ ಆ ನಗರವನ್ನು ನಾಶಗೊಳಿಸಿದರು.

ಡೇರಿಯಸನ ವಿರುದ್ಧ ಬಲಗಳಿಗೆ ಅಥೆನ್ಸ್ ಪ್ರೋತ್ಸಾಹ ನೀಡಿತೆಂಬ ಕಾರಣದಿಂದ ಆ ದೇಶದ ಮೇಲೆ ಸೇಡು ತೀರಿಸಿಕೊಂಡು ಅವರ ತ್ರೇಸ್, ಮ್ಯಾಸಿಡೋನಿಯಗಳನ್ನು ವಶಪಡಿಸಿಕೊಂಡ. ಮುಂದಿನ ಹೆಜ್ಜೆ ಗ್ರೀಸ್ ದೇಶದ ಆಕ್ರಮಣ. ಅದಕ್ಕೆಂದೇ ಅಲ್ಲಿಯ ತೀರಪ್ರದೇಶಗಳ ಪರಿಚಯ ಪಡೆಯಲು ನೌಕಾಪಡೆಯೊಂದನ್ನು ಕಳುಹಿಸಿದ. ಆದರೆ ಪ್ರ.ಶ.ಪೂ. 499ರ ವರೆಗೂ ಇವನು ಸೈನಿಕ ಕಾರ್ಯಾಚರಣೆ ನಡೆಸಲಿಲ್ಲ. ಅನಂತರ ತನ್ನ ಅಳಿಯ ಮಾರ್ಡೊನಿಯಸನ ನೇತೃತ್ವದಲ್ಲಿ ನೌಕಾದಳವೊಂದನ್ನು ಅಥೆನ್ಸ್‌ನ ವಿರುದ್ಧ ಕಳುಹಿಸಿದ. ಆದರೆ ದುರದೃಷ್ಟವಶಾತ್ ಅದು ಚಂಡಮಾರುತಕ್ಕೆ ಬಲಿಯಾಯಿತು. ಪ್ರ.ಶ.ಪೂ. 490 ರಲ್ಲಿ ಡೇಟಿಸನ ನೇತೃತ್ವದಲ್ಲಿ ಇನ್ನೊಂದು ಸೈನ್ಯವನ್ನು ಕಳುಹಿಸಲಾಯಿತು. ಅಥೆನ್ಸ್ ನಗರಕ್ಕೆ 32 ಕಿಮೀ ದೂರದಲ್ಲಿದ್ದ ಮ್ಯಾರಥಾನ್ ಬಯಲಿನಲ್ಲಿ ನಡೆದ ಘೋರ ಕದನದಲ್ಲಿ ಪರ್ಷಿಯನರು ಸೋತರು. ಆ ಬಳಿಕವೂ ಅಥೆನ್ಸನ್ನು ವಶಪಡಿಸಿಕೊಳ್ಳಲು ಡೇರಿಯಸ್ ಸನ್ನಾಹ ನಡೆಸಿದನಾದರೂ ಈತನ ಬಯಕೆ ಈಡೇರಲಿಲ್ಲ. ಡೇರಿಯಸ್ ಪ್ರ.ಶ.ಪೂ. 486ರಲ್ಲಿ ನಿಧನನಾದ.

ಪರ್ಷಿಯ ಸಾಮ್ರಾಜ್ಯವನ್ನು ವಿಸ್ತರಿಸಿ ಅದರ ಬಲವನ್ನು ಹೆಚ್ಚಿಸಿದ್ದು ಡೇರಿಯಸನ ಒಂದು ಸಾಧನೆಯಾದರೂ ಇತಿಹಾಸದಲ್ಲಿ ಇವನು ಅಮರನಾಗಿರುವುದು ತನ್ನ ರಾಜ್ಯದಲ್ಲಿ ಆಚರಣೆಗೆ ತಂದ ಆಡಳಿತ ಪದ್ಧತಿಗಳಿಗಾಗಿ. ಬ್ಯಾಬಿಲೋನಿಯ ಮತ್ತು ಈಜಿಪ್ಟ್‌ಗಳ ಆಡಳಿತದ ಹೊಣೆಯನ್ನು ಇವನೇ ವಹಿಸಿಕೊಂಡು, ರಾಜ್ಯದ ಉಳಿದ ಭಾಗಗಳನ್ನು 20 ಪ್ರಾಂತ್ಯಗಳಾಗಿ ವಿಂಗಡಿಸಿ, ಒಂದೊಂದು ಪ್ರಾಂತ್ಯಕ್ಕೊಬ್ಬೊಬ್ಬ ಕ್ಷತ್ರಪನನ್ನು ನೇಮಿಸಿದ. ಈ ಕಾರ್ಯವನ್ನು ಹಿಂದೆ ಸೈರಸ್ ಆರಂಭಿಸಿದನಾದರೂ ಇದಕ್ಕೆ ಅಂತಿಮ ರೂಪ ದೊರೆತದ್ದು ಡೇರಿಯಸನ ಕಾಲದಲ್ಲಿ. ಪೆಷಾವರ್ ಸುತ್ತಲಿನ ಅಂದಿನ ಗಾಂಧಾರ ಮತ್ತು ಉತ್ತರ ಪಂಜಾಬ್‌ಗಳನ್ನೊಳಗೊಂಡ ಸಿಂಧೂ ನದೀ ಪ್ರದೇಶದ ಹಿಂದು (ಹಿಂದೂ) ಎಂದು ಕರೆಯಲಾದ ಪ್ರಾಂತವೂ ಈ ಆಡಳಿತ ವಿಭಾಗಗಳಲ್ಲಿ ಒಂದಾಗಿತ್ತೆಂದು ಇವನ ಪರ್ಸೆಪಲಿಸ್ ಮತ್ತು ನಕ್ಷ್ ಇರುಸ್ತುಮ್ ಶಾಸನಗಳಿಂದ ತಿಳಿದುಬರುತ್ತದೆ. ಈ ಪ್ರಾಂತಗಳ ಅಧಿಕಾರಗಳ ಚಲನವಲನಗಳನ್ನು ಗಮನಿಸಿ ಅವರು ದಂಗೆ ಏಳದಂತೆ ಮಾಡಲು ಸಮರ್ಥ ಬೇಹುಗಾರ ಪಡೆಯನ್ನು ಅಸ್ತಿತ್ವಕ್ಕೆ ತಂದ.

ರಾಜ್ಯದ ಆರ್ಥಿಕಾಭಿವೃದ್ಧಿಗಾಗಿ ದೂರದೇಶಗಳೊಡನೆ ಈತ ವಾಣಿಜ್ಯ ಸಂಬಂಧಗಳನ್ನು ಬೆಳೆಸಲು ಯತ್ನಿಸಿದ. ಅದಕ್ಕಾಗಿ ಪರಿವೀಕ್ಷಣಾ ಗುಂಪುಗಳನ್ನು ಕಳುಹಿಸಿದ. ಈತನ ನೌಕಾಧಿಕಾರಿಗಳಲ್ಲೊಬ್ಬನಾಗಿದ್ದ ಕಾರಿಯಾಂಡದ ಸ್ಕೈಲಾಕ್ಸ್ ಎಂಬಾತ ಸಿಂಧೂ ನದೀ ಪ್ರಾಂತದ ಪರಿಚಯ ಪಡೆಯಲು ಭಾರತಕ್ಕೆ ಬಂದಿದ್ದ. ಈ ಪರಿವೀಕ್ಷಣೆಯ ಅನಂತರವೇ ಆ ಪ್ರಾಂತವನ್ನು ಡೇರಿಯಸ್ ವಶಪಡಿಸಿಕೊಂಡಿದ್ದು. ಈ ಪ್ರಾಂತದಿಂದ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ಚಿನ್ನದ ಪುಡಿ ಪರ್ಷಿಯದ ಬೊಕ್ಕಸವನ್ನು ತುಂಬುತ್ತಿತ್ತು. ಒಳನಾಡಿನ ಸಂಚಾರ ವ್ಯವಸ್ಥೆಯನ್ನೂ ಇವನು ಅಭಿವೃದ್ಧಿಪಡಿಸಿದ. ಹೊಸ ಹೊಸ ರಾಜಮಾರ್ಗಗಳು ನಿರ್ಮಾಣವಾದುವು. ಕೆಂಪು ಸಮುದ್ರ ಮತ್ತು ನೈಲ್ ನದಿಯ ನಡುವಣ ಕಾಲುವೆ ಮರಳಿನಿಂದ ಮುಚ್ಚಿಹೋಗಿತ್ತು. ಡೇರಿಯಸ್ ಅದನ್ನು ಸರಿಪಡಿಸಿ ಅದರ ಮೇಲೆ ನಾವೆಗಳು ಓಡಾಡುವಂತೆ ಮಾಡಿದ. ನಾಣ್ಯ ವಿನಿಮಯದ ಸೌಲಭ್ಯವನ್ನು ಕಂಡುಕೊಂಡ. ಡೇರಿಯಾಸ್ ತನ್ನ ರಾಜ್ಯಾದ್ಯಂತ ನಾಣ್ಯಗಳನ್ನು ಚಲಾವಣೆಗೆ ತಂದ. ಸಮರ್ಪಕ ಅಂಚೆವ್ಯವಸ್ಥೆಯನ್ನು ಏರ್ಪಡಿಸಿದ. ರಾಜ್ಯದಲ್ಲಿ ತೂಕ, ಅಳತೆಗಳಲ್ಲಿ ಏಕರೂಪತೆ ಸಾಧಿಸಿತು.

ಭಿನ್ನ ಜನಾಂಗಗಳಿಗೆ ಸೇರಿದ ಭಿನ್ನ ಧರ್ಮೀಯರನ್ನೊಳಗೊಂಡ ಸಾಮ್ರಾಜ್ಯದಲ್ಲಿ ಯಾರಿಗೂ ಅಸಮಾಧಾನವಾಗದಂತೆ ಎಲ್ಲ ಧರ್ಮಕ್ಕೂ ರಕ್ಷಣೆ, ಪ್ರೋತ್ಸಾಹಗಳನ್ನು ನೀಡಿದ್ದು ಡೇರಿಯಸ್‌ನ ಇನ್ನೊಂದು ಸಾಧನೆ. ಖಾರ್ಗಾದಲ್ಲಿ ಈಜಿಪ್ಟ್ ದೇವತೆ ಅಮೊನ್‌ಗಾಗಿ ದೇವಾಲಯ ನಿರ್ಮಾಣವಾಯಿತು. ಎಡ್‌ಫದಲ್ಲಿಯ ದೇವಾಲಯದ ಜೀರ್ಣೋದ್ಧಾರವಾಯಿತು. ಈಜಿಪ್ಟ್‌ನ ಪುರೋಹಿತರ ಸಲಹೆ ಪಡೆದು ಡೇರಿಯಸ್ ಸೂಕ್ತವಾದ ಕಾನೂನುಗಳನ್ನು ರಚಿಸಿದ. ಜೆರೂಸಲೆಮ್ ನಗರದಲ್ಲಿ ಯಹೂದ್ಯರು ತಮ್ಮ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಕೊಳ್ಳಲು ಅನುಮತಿ ಇತ್ತ. ಡೇರಿಯಸ್ ವೈಯಕ್ತಿಕವಾಗಿ ಜರತುಷ್ಟ್ರ ಧರ್ಮವನ್ನು ಅವಲಂಬಿಸಿದ್ದ. ಪರ್ಷಿಯದಲ್ಲಿ ಅದು ರಾಜಧರ್ಮವೆಂದು ಸ್ವೀಕೃತವಾಗಲು ಡೇರಿಯಸನೇ ಕಾರಣವೆಂದು ಹೇಳಲಾಗಿದೆ. ಪ್ರ.ಶ.ಪೂ. 521ರಲ್ಲಿ ಸೂಸ ಈತನ ರಾಜಧಾನಿಯಾಯಿತು. ಈತ ಅಲ್ಲಿಯ ಕೋಟೆ ಕೊತ್ತಲಗಳನ್ನು ಬಲಪಡಿಸಿ ಅರಮನೆಯೊಂದನ್ನು ಕಟ್ಟಿಸಿದ. ಅದಕ್ಕೆಂದೇ ರಾಜ್ಯದ ಎಲ್ಲ ಮೂಲೆಗಳಿಂದಲೂ ಪರಿಣತರಾದ ಶಿಲ್ಪಿಗಳನ್ನೂ ತಂತ್ರಜ್ಞರನ್ನೂ ಬರಮಾಡಿಕೊಂಡಿದ್ದ. ಇವನ ಊರಾದ ಪರ್ಸಿಪಲಿಸ್‌ನಲ್ಲೂ ಒಂದು ಅರಮನೆಯ ನಿರ್ಮಾಣವಾಯಿತು. (ಬಿ.ಆರ್.ಜಿ.)

**ಡೇಲಾಸ್:** ಈಜಿಯನ್ ಸಮುದ್ರದಲ್ಲಿರುವ ಒಂದು ಸಣ್ಣ ಗ್ರೀಕ್ ದ್ವೀಪ. ಇಲ್ಲಿ ದೊರಕಿದ ಪ್ರಾಚೀನ ವಸ್ತುಗಳನ್ನು ಇಡಲು ಒಂದು ವಸ್ತುಸಂಗ್ರಹಾಲಯವನ್ನು ಕಟ್ಟಲಾಗಿದೆ. ಡೇಲಾಸ್ ದ್ವೀಪ ಬಹುತೇಕ ನಿರ್ಜನವಾಗಿದೆ.

ಡೇಲಾಸ್ ದ್ವೀಪದ ಉಗಮದ ಬಗ್ಗೆ ಪ್ರಾಚೀನ ಗ್ರೀಕರಲ್ಲಿ ಅನೇಕ ಐತಿಹ್ಯಗಳಿದ್ದುವು. ಅವುಗಳಲ್ಲಿ ಹೆಚ್ಚು ಪ್ರಚಲಿತವಾಗಿರುವುದು ಹೀಗಿದೆ: ಡೇಲಾಸ್ ದ್ವೀಪ ಈಜಿಯನ್ ಸಮುದ್ರದಲ್ಲಿ ತೇಲಿಕೊಂಡು ಹೋಗುತ್ತಿತ್ತು. ಆಗ ಜ್ಯೂಸ್ ದೇವತೆ ತನ್ನ ಅಲೆದಾಡುತ್ತಿದ್ದ ಪ್ರೇಯಸಿ ಲೆಟೊಗಾಗಿ ಇದನ್ನು ತಡೆದು ನಿಲ್ಲಿಸಿದ, ಅವಳಲ್ಲಿ ಜನಿಸಲಿದ್ದ ಅಪೊಲೊ ಮತ್ತು ಆರ್ಟಿಮಿಸರಿಗೆ ಇದು ಜನ್ಮಸ್ಥಳವಾಗಲೆಂಬುದು ಅವನ ಉದ್ದೇಶವಾಗಿತ್ತು. ಮೈಸಿನೀಯ ಅವಧಿಯಲ್ಲಿ ಬಹುಶಃ ಕ್ಯಾರಿಯನರಿಂದ ಇಲ್ಲಿ ಜನ ವಾಸ್ತವ್ಯ ಏರ್ಪಟ್ಟಿತ್ತೆಂಬುದು ಇಲ್ಲಿಯ ಉತ್ಖನನಗಳಿಂದ ತಿಳಿದುಬಂದಿದೆ. ಪ್ರಸಿದ್ಧವಾದ ಅಯೋನಿಯ ಉತ್ಸವ ಇಲ್ಲಿ ನಡೆಯುತ್ತಿತ್ತೆಂಬುದೇ ಇತಿಹಾಸದಲ್ಲಿ ಇದರ ಬಗ್ಗೆ ದೊರೆಯುವ ಪ್ರಥಮ ಉಲ್ಲೇಖ. ಇದಕ್ಕೆ ಅಥೆನ್ಸ್ ಸೇರಿದಂತೆ ಎಲ್ಲ ಅಯೋನಿಕ್ ರಾಜ್ಯಗಳೂ ತಂತಮ್ಮ ಪವಿತ್ರ ರಾಯಭಾರಿಗಳನ್ನು ಕಳುಹಿಸುತ್ತಿದ್ದುವು. ಅಪೊಲೊನ ಜನ್ಮದಿನದ ಈ ಉತ್ಸವ ನಡೆಯುತ್ತಿತ್ತು. ಪ್ರ.ಶ.ಪೂ.6ನೆಯ ಶತಮಾನದಲ್ಲಿ ಡೇಲಾಸ್‌ನ ಅಪೊಲೊ ಪ್ರಸಿದ್ಧಿಯ ಶಿಖರ ಮುಟ್ಟಿದ್ದ. ಆಗ ಸೇಮಾಸ್ ದ್ವೀಪದ ನಿರಂಕುಶಾಧಿಪತಿ ಪೊಲಿಕ್ರಿಟೀಸ್ ಎಂಬವನು ಅಪೊಲೊ ಸೇವಾರ್ಥವಾಗಿ ರಿನಿಯ ದ್ವೀಪವನ್ನು ದತ್ತಿಯಾಗಿ ಕೊಟ್ಟ. ಅಥೆನ್ಸಿನ ನಿರಂಕುಶಪ್ರಭು ಪೈಸಿಸ್ಟ್ರಾಟಸ್ ಎಂಬವನು ಇಲ್ಲಿಯ ದೇವಸ್ಥಾನದಿಂದ ದೃಷ್ಟಿ ಹಾಯುವಷ್ಟು ದೂರದಲ್ಲಿದ್ದ ಸಮಾಧಿಗಳನ್ನೆಲ್ಲ ತೆಗೆಯಿಸಿದ. ಪರ್ಷಿಯನ್ ಯುದ್ಧಗಳ ಅನಂತರ ಅಥೆನ್ಸ್ ಪ್ರಬಲವಾಯಿತು. ಡೇಲಿಯನ್ ಒಕ್ಕೂಟ ಹೋಗಿ ಅತೀನಿಯನ್ ಸಾಮ್ರಾಜ್ಯ ಏರ್ಪಟ್ಟಿತು. ಅತೀನಿಯನರು ಪ್ರ.ಶ.ಪೂ.426ರಲ್ಲಿ ಇಲ್ಲಿಯ ಉತ್ಸವದ ಸ್ವರೂಪವನ್ನು ಮಾರ್ಪಡಿಸಿದರು. ದ್ವೀಪದ ಎಲ್ಲ ಸಮಾಧಿಗಳನ್ನು ತೆಗೆದು ಅದನ್ನು ಶುದ್ಧೀಕರಿಸಿದರಲ್ಲದೆ, ಸಾಯಲಿದ್ದ ಎಲ್ಲರೂ ಅಥವಾ ಪ್ರಸವಿಸಲಿದ್ದ ಎಲ್ಲರೂ ದ್ವೀಪದಿಂದ ನಿರ್ಗಮಿಸಬೇಕೆಂದು ಆಜ್ಞೆ ಮಾಡಿದರು.

ಪೆಲೊಪೊನೀಷಿಯನ್ ಯುದ್ಧದ ಕೊನೆಯಲ್ಲಿ ಸ್ಪಾರ್ಟನರು ಡೇಲಾಸ್ ದ್ವೀಪದ ಜನಕ್ಕೆ ಸ್ವಯಮಾಡಳಿತದ ಅಧಿಕಾರ ನೀಡಿದರು, ಆದರೆ ಅಥೆನ್ಸಿನವರು ಮತ್ತೆ ಪ್ರಬಲರಾದರು. ಪ್ರ.ಶ.ಪೂ.322–166ರಲ್ಲಿ ಮ್ಯಾಸಿಡೋನಿಯನರ ಕಾಲದಲ್ಲಿ ಡೇಲಾಸ್ ಪುನಃ ಸ್ವತಂತ್ರವಾಯಿತು. ಅಲ್ಲಿಯ ದೇವಾಲಯ ಮತ್ತು ಅದರ ಸ್ವತ್ತುಗಳ ಆಡಳಿತವನ್ನು ಏರೋಪಾಯ್ ಎಂಬ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಪ್ರ.ಶ.ಪೂ.166ರ ತರುವಾಯ ರೋಮನರು ಡೇಲಿಯನ್ ಪೂಜೆಯ ನಿಯಂತ್ರಣವನ್ನು ಅಥೆನ್ಸಿನವರಿಗೆ ಮತ್ತೆ ವಹಿಸಿದರು. ಆದರೆ ಆ ದ್ವೀಪಕ್ಕೆ ಅನೇಕ ವಾಣಿಜ್ಯ ಸವಲತ್ತುಗಳನ್ನು ನೀಡಿದ್ದರಿಂದ ಅದು ಉಚ್ಛ್ರಾಯ ಸ್ಥಿತಿಗೆ ಬಂತು.

ಪ್ರ.ಶ.ಪೂ.87ರಲ್ಲಿ ಪಾರ್ತಿಯದ ದೊರೆ 6ನೆಯ ಮಿತ್ರಡಟೀಸನ ದಂಡನಾಯಕ ಮೆನೊಫೇನೀಸ್ ಎಂಬವನು ರೋಮಿಗೆ ನಿಷ್ಠೆಯಿಂದಿದ್ದ ಈ ದ್ವೀಪವನ್ನು ಧ್ವಂಸ ಮಾಡಿದ. ಈ ಆಘಾತದಿಂದ ಇದು ಎಂದೂ ಚೇತರಿಸಿಕೊಳ್ಳಲಿಲ್ಲ. ಪ್ರ.ಶ.ಪೂ.42ರಲ್ಲಿ ಇದರ ಮೇಲೆ ಮತ್ತೆ ಅಥೆನ್ಸಿನ ಹತೋಟಿ ಸ್ಥಾಪಿತವಾಯಿತು. ಆದರೆ ಅಥೆನ್ಸಿನ ಕೆಲವು ಅಧಿಕಾರಿಗಳ ವಿನಾ ಅಲ್ಲಿ ಯಾರೂ ಇರಲಿಲ್ಲವೆಂದು ಕಾಣುತ್ತದೆ. ಪ್ರಾಚೀನ ಮತ ಅಧಿಕೃತವಾಗಿ ಅಳಿಸಿಹೋಗುವ ವರೆಗೂ ದೇವಸ್ಥಾನದ ಪೂಜಾದಿಗಳು ನಡೆಯುತ್ತಿದ್ದುವು.

ಪುರಾತತ್ತ್ವ: ಅಥೆನ್ಸ್‌ನಲ್ಲಿರುವ ಫ್ರೆಂಚ್ ಸಂಸ್ಥೆ ಇಲ್ಲಿ 1873ರಿಂದ ನಡೆಸಿದ ಉತ್ಖನನಗಳ ಪರಿಣಾಮವಾಗಿ ಅನೇಕ ಪ್ರಾಚೀನ ಕಟ್ಟಡಗಳು ಪತ್ತೆಯಾಗಿವೆ. ಅಪೊಲೊ ದೇವತೆಯ ಸನ್ನಿಧಿ, ಗ್ರೀಕ್ ಮತ್ತು ರೋಮನ್ ಕಾಲದ ವಾಣಿಜ್ಯ ಪ್ರದೇಶ, ರಂಗಮಂಟಪ, ವಿದೇಶೀ ದೇವತೆಗಳ ದೇವಾಲಯಗಳು, ಸಿಂತಸ್ ಶಿಖರದ ಮೇಲಿರುವ ದೇವಾಲಯಗಳು, ಕೆಲವು ಖಾಸಗಿ ನಿವಾಸಗಳು ಮೊದಲಾದವನ್ನೂ ಉತ್ಖನನ ಮಾಡಲಾಗಿದೆ. ವಿವಿಧ ಕಾಲಗಳ ಶಿಲ್ಪಕೃತಿಗಳೂ ಈ ಕಾಲದ ದೇವಾಲಯದ ಆಡಳಿತ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಶಾಸನಗಳೂ ಸಿಕ್ಕಿವೆ.

ಈ ದ್ವೀಪದ ಪ್ರಾಚೀನ ಕಾಲದ ಹಡಗಿನ ಇಳಿದಾಣ ಡೇಲಾಸ್ ಮತ್ತು ರಿನಿಯ ದ್ವೀಪಗಳ ನಡುವಣ ಕಾಲುವೆಗೆ ಎದುರಾಗಿದೆ. ದೇವಾಲಯದ ಪ್ರಾಕಾರವನ್ನು ಪ್ರ.ಶ.ಪೂ.ಸು. 200ರಲ್ಲಿ ಮ್ಯಾಸಿಡೋನಿಯದ 5ನೆಯ ಫಿಲಿಪ್ ಕಟ್ಟಿಸಿದನೆಂದು ತಿಳಿದುಬರುತ್ತದೆ. ಅಲ್ಲಿಗೆ ಹೋಗಲು ಒಂದು ರಾಜಮಾರ್ಗವುಂಟು. ಪವಿತ್ರ ರಾಯಭಾರಿ ನಿಯೋಗಗಳು ಮತ್ತು ಮೆರವಣಿಗೆಗಳು ಸಾಮಾನ್ಯವಾಗಿ ಈ ಮಾರ್ಗದ ಮೂಲಕವೇ ಹೋಗುತ್ತಿದ್ದುವು. ಆದರೆ

ಅಥೆನ್ಸಿನ ಪವಿತ್ರ ಮೆರವಣಿಗೆ ಬರಲು ಹೆಕೇಟ್ ದ್ವೀಪವೆಂದು ಕರೆಯುವ ಕಲ್ಲಿನ ದಿಬ್ಬವೊಂದರಿಂದ ಡೇಲಾಸ್‍ಗೆ ನಿಷಿಯಸ್ ಎಂಬವನು ಒಂದು ಸೇತುವೆ ಕಟ್ಟಿಸಿದ. ಈ ರಾಜಮಾರ್ಗದ ಎದುರು ನಾಲ್ಕು ಸ್ತಂಭಗಳ ಮುಂಚಾಚಿದ ಪ್ರವೇಶದ್ವಾರವಿದೆ. ಈ ಮಾರ್ಗ ಮುಂದೆ ಬಯಲಿನಲ್ಲಿ ಸಾಗುತ್ತದೆ. ಇದರ ಪಶ್ಚಿಮಕ್ಕೆ ಆರ್ಟಿಮಿಸ್ ದೇವತೆಯ ಪ್ರಾಕಾರ ಮತ್ತು ಪೂರ್ವಕ್ಕೆ ಮೂರು ದೇವಾಲಯಗಳಿರುವ ಒಂದು ದಿಬ್ಬವಿದೆ. ಇವುಗಳಲ್ಲಿ ತೀರ ದಕ್ಷಿಣಕ್ಕಿರುವುದೇ ಪುರಾಣ ಪ್ರಸಿದ್ಧ ಅಪೋಲೊ ದೇವಾಲಯ. ಆದರೆ, ಪಶ್ಚಿಮಭಾಗದಿಂದ ಇದರ ಹಿಂಭಾಗ ಮಾತ್ರ ಕಾಣಿಸುತ್ತದೆ. ಇನ್ನೆರಡು ದೇವಾಲಯಗಳು ಪಶ್ಚಿಮದ ಕಡೆ ಮುಖ ಮಾಡಿವೆ. ಅವನ್ನು ವೀರರಿಗೆ ಅಥವಾ ಕಿರಿಯ ದೇವತೆಗಳಿಗೆ ಅಥವಾ ಖಜಾನೆಗಳಿಗಾಗಿ ಕಟ್ಟಿರಬೇಕು. ಇವುಗಳ ಆಚೆಗೆ ತಿರುಗಿದ ರಸ್ತೆ ಅಪೋಲೊ ದೇವಾಲಯದ ಮುಂದುಗಡೆಗೆ ಬರುತ್ತದೆ. ಈ ತಿರುವಿನಿಂದ ಹೊರಭಾಗದಲ್ಲಿ ವಿವಿಧ ದ್ವೀಪಗಳಿಂದಲೂ ನಗರಗಳಿಂದಲೂ ಬಂದ ಕಾಣಿಕೆಗಳನ್ನು ಸಂಗ್ರಹಿಸುವುದಕ್ಕಾಗಿ ಇಟ್ಟಿದ್ದ ಖಜಾನೆಗಳ ಸಾಲು ಬರುತ್ತದೆ. ಬೃಹತ್ ಅಪೊಲೊ ವಿಗ್ರಹದ ಪೀಠವಿರುವುದು ಇದರ ಉತ್ತರಕ್ಕೆ. ಪ್ರಖ್ಯಾತವಾದ ಪ್ರಾಚೀನ ಶಾಸನವೂ ಈ ವಿಗ್ರಹದ ಎರಡು ದೊಡ್ಡ ಭಿನ್ನ ಭಾಗಗಳೂ ಅಲ್ಲಿವೆ. ಇದನ್ನು ಅರ್ಪಿಸಿದವರು ನಕ್ಸಿಯನರು.

ಅಪೊಲೊ ದೇವಾಲಯ ಈ ದ್ವೀಪದ ಒಂದು ಆಕರ್ಷಣೀಯ ರಚನೆ. ಇದು ಡೋರಿಕ್ ಶೈಲಿಯಲ್ಲಿ ನಿರ್ಮಿತವಾಗಿತ್ತು. ಇದರ ನಿರ್ಮಾಣಕಾರ್ಯ ಪ್ರ.ಶ.ಪೂ.5ನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾಗಿ ಪ್ರ.ಶ.ಪೂ.3ನೆಯ ಶತಮಾನದವರೆಗೂ ಮುಂದುವರಿಯಿತು. ಈ ದೇವಾಲಯದ ಸಮೀಪದಲ್ಲೇ ಆರ್ಟಿಮಿಸಳ ಹಳೆಯ ದೇವಾಲಯವಿತ್ತು. ಆ ದೇವತೆಯ ಇತ್ತೀಚಿನ ದೇವಾಲಯ ಅದರ ದಕ್ಷಿಣಕ್ಕಿದ್ದು ಅಪೊಲೊ ದೇವತೆಯ ಪೂಜಾಸ್ಥಳದ ಕಡೆ ತೆರೆದಿತ್ತು. ಅಪೊಲೊ ದೇವತೆಯ ಪೂಜಾಸ್ಥಳದ ಹೊರವಲಯದಲ್ಲಿ ದಕ್ಷಿಣದ ಕಡೆ ಪುರೋಹಿತರ ಮನೆಯೂ ಸಮಾಧಿಗಳೆಂದು ಗುರುತಿಸಲಾಗಿರುವ ಸಣ್ಣ ಸಣ್ಣ ನಿರ್ಮಾಣಗಳೂ ಇದ್ದುವು. ಇದರ ಪೂರ್ವಕ್ಕೆ ಡೆಯಾನಿಸಸ್ ದೇವಾಲಯವಿತ್ತು. ಇನ್ನೊಂದು ಕಡೆಗೆ ದೊಡ್ಡ ಅಂಗಣದಲ್ಲಿ ವಾಣಿಜ್ಯ ವಿನಿಮಯ ಸ್ಥಳವಿತ್ತು. ಇಲ್ಲಿ ಅಫ್ರೊಡೈಟ್ ಮತ್ತು ಹರ್ಮಿಸ್ ದೇವಾಲಯಗಳಿದ್ದುವು. ಉತ್ತರದ ಕಡೆ ಪೂಜಾವರಣ ಮತ್ತು ಪವಿತ್ರಸರೋವರದ ಮಧ್ಯ ಪ್ರದೇಶದಲ್ಲಿ ಪಟ್ಟಣದ ವ್ಯಾಪಕವಾದ ಅವಶೇಷಗಳಿವೆ. ರಿನಿಯ ದ್ವೀಪಕ್ಕೆ ಎದುರಾಗಿರುವ ಕಾಲುವೆಯ ದಡದ ಉದ್ದಕ್ಕೂ ಹಡಗುಕಟ್ಟೆಗಳು ಮತ್ತು ದಾಸ್ತಾನು ಮಳಿಗೆಗಳಿವೆ. ಇವುಗಳ ಆಚೆಗೆ ಪ್ರ.ಶ.ಪೂ.2 ಅಥವಾ 3ನೆಯ ಶತಮಾನದಲ್ಲಿ ಕಟ್ಟಿದ ಖಾಸಗಿ ಮನೆಗಳಿವೆ.

ಸಿಂತಸ್ ಬೆಟ್ಟದ ಕೆಳಗಿನ ಇಳಿಜಾರಿನಲ್ಲಿ ಒಂದು ರಂಗಮಂದಿರವಿತ್ತು. ಇದೇ ಬೆಟ್ಟದ ಶಿಖರದ ಮೇಲೆ ಪ್ರಾಚೀನ ಗುಹಾದೇವಾಲಯದ ಮೇಲ್ಭಾಗದಲ್ಲಿ ಜ್ಯೂಸ್ ಮತ್ತು ಅಥೆನಾ ದೇವತೆಗಳಿಗೆ ಅರ್ಪಿಸಿರುವ ಒಂದು ಸಣ್ಣ ಪೂಜಾ ಸ್ಥಳವುಂಟು. ಬೆಟ್ಟದ ಇಳಿಜಾರಿನಲ್ಲಿ, ಗುಹಾದೇವಾಲಯ ಮತ್ತು ಐನೋಪಸ್ ಕಮರಿಯ ನಡುವೆ, ವಿದೇಶೀ ದೇವತೆಗಳ ಎರಡು ದೇವಾಲಯಗಳನ್ನೂ ಒಂದು ಸಣ್ಣ ಸಂಗೀತಶಾಲೆಯನ್ನೂ ಒಳಗೊಂಡ ಸಮತಟ್ಟು ನೆಲವಿದೆ. ರಂಗಮಂದಿರಕ್ಕೂ ರೇವಿಗೂ ನಡುವೆ ಮನೆಗಳ ಅವಶೇಷಗಳುಂಟು. ದ್ವೀಪದ ಉತ್ತರದ ತುದಿಯ ಬಳಿ ವ್ಯಾಯಾಮಶಾಲೆ, ಕ್ರೀಡಾಂಗಣ ಮತ್ತು ಪ್ರಾಚೀನ ಆರಾಧನ ಮಂದಿರಗಳಿವೆ. (ಡಿ.ಎಸ್.ಜಿ.)

**ಡೇವಿಡ್ಸ್, ಥಾಮಸ್ ವಿಲಿಯಮ್ ರೀಸ್:** 1843–1922. ಇಂಗ್ಲಿಷ್ ಪ್ರಾಚ್ಯಶಾಸ್ತ್ರಜ್ಞ. ಹುಟ್ಟಿದ್ದು ಕೊಲ್‍ಚೆಸ್ಟರ್‍ನಲ್ಲಿ. ಅನಂತರ ಶ್ರೀಲಂಕದ ಆಡಳಿತ ಇಲಾಖೆ ಸೇರಿದ (1886). ಅಲ್ಲಿ ಪಾಲಿ ಮತ್ತು ಬೌದ್ಧಧರ್ಮದ ಬಗೆಗೆ ವಿಶೇಷ ಅಧ್ಯಯನ ನಡೆಸಿದ. ಆ ವಿಷಯಗಳ ಬಗೆಗೆ ರೀಸನ ಅಭಿಪ್ರಾಯಗಳು ಪ್ರಮಾಣಭೂತ ಎನಿಸಿವೆ. ಈತ ಬೌದ್ಧಧರ್ಮಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಬುದ್ಧಿಸಮ್ (1878); ಬುದ್ಧಿಸ್ಟ್ ಸುತ್ತಾಸ್ ಫ್ರಂ ದಿ ಪಾಲಿ (1881); ಬುದ್ಧಿಸಮ್; ಇಟ್ಸ್ ಹಿಸ್ಟರಿ ಅಂಡ್ ಲಿಟರೇಚರ್ (1896); ಬುದ್ಧಿಸ್ಟ್ ಇಂಡಿಯ (1903); ಅರ್ಲಿ ಬುದ್ಧಿಸಮ್ (1908) ಪ್ರಮುಖವಾದವು. ಇವಲ್ಲದೆ ಈತ ಪಾಲಿ ಭಾಷೆಯಿಂದ ಅನೇಕ ಗ್ರಂಥಗಳನ್ನು ಅನುವಾದ ಮಾಡಿದ್ದಾನೆ. ವಿಲಿಯಂ ಸ್ಟೆಡ್‍ನ ಜೊತೆಗೂಡಿ ಪಾಲಿ ಭಾಷೆಯ ನಿಘಂಟನ್ನು ಸಿದ್ಧಪಡಿಸಿದ್ದಾನೆ. 1894ರಲ್ಲಿ ಕಾರೋಲೈನ ಆಗಸ್ಟ ಫೋಲಿ ಎಂಬಾಕೆಯನ್ನು ಈತ ಮದುವೆಯಾದ. ಆಕೆ ಈತನ ಅನುವಾದನ ಕಾರ್ಯದಲ್ಲಿ ತುಂಬ ನೆರವು ನೀಡಿದಳು.*

**ಡೈಯರ್, ರೆಜಿನಲ್ಡ್ ಎಡ್ವರ್ಡ್ ಹ್ಯಾರಿ:** 1864–1927. ಬ್ರಿಟಿಷ್ ಯೋಧ. ಭಾರತವನ್ನಾಳುತ್ತಿದ್ದ ಬ್ರಿಟಿಷ್ ಸರ್ಕಾರದಲ್ಲಿ ಸೇವೆ ಸಲ್ಲಿಸಿದವ. 1864ರ ಅಕ್ಟೋಬರ್ 9ರಂದು ಪಂಜಾಬಿನ ಮರೀಯಲ್ಲಿ ಜನಿಸಿದ. ಇವನ ತಂದೆ ಒಬ್ಬ ಮದ್ಯ ತಯಾರಕ. ಡೈಯರ್ ಐರ್ಲೆಂಡಿನಲ್ಲಿ ಕಾರ್ಕ್ ಕೌಂಟಿಯ ಮಿಡ್ಲ್‍ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ 1885ರಲ್ಲಿ ಬ್ರಿಟಿಷ್ ಸೈನ್ಯ ಸೇರಿದ. 1919 ಏಪ್ರಿಲ್ 13ರಂದು ಅಮೃತಸರದ ಜಲಿಯನ್‍ವಾಲಾಬಾಗ್‍ನಲ್ಲಿ ಸೇರಿದ್ದ ನಿಶಸ್ತ್ರ ಜನರ ಮೇಲೆ ಅಮಾನುಷ ಹಾಗೂ ಭೀಕರವಾದ ರೀತಿಯಲ್ಲಿ ಸೈನಿಕ ಕಾರ್ಯಾಚರಣೆ ನಡೆಸಿ, ಸು.400 ಜನರನ್ನು ಕೊಲ್ಲಿಸಿ ಸಾವಿರಾರು ಜನರನ್ನು ಗಾಯಗೊಳಿಸಿದ. 1886–87ರಲ್ಲಿ ಬರ್ಮ ಯುದ್ಧಗಳಲ್ಲಿ ಪಾಲ್ಗೊಂಡಿದ್ದ. ಅನಂತರ ಗಡಿನಾಡಿನ ಬೆಟ್ಟಗುಡ್ಡ ಪ್ರದೇಶದ ಬಣಗಳನ್ನು ಅಡಗಿಸಲು ನಿಯೋಜಿತನಾಗಿದ್ದ (1901–02). ಒಂದನೆಯ ಮಹಾಯುದ್ಧದಲ್ಲೂ ಭಾಗವಹಿಸಿದ್ದ. 1919ರಲ್ಲಿ ಜಲಂಧರ್‍ನಲ್ಲಿ ಬ್ರಿಗೇಡ್ ಕಮಾಂಡರ್ ಆಗಿದ್ದ. ಬ್ರಿಟಿಷರು ಯುದ್ಧಸಮಯದಲ್ಲಿ ನೀಡಿದ್ದ ವಾಗ್ದಾನಗಳನ್ನು ಮರೆತು ಭಾರತೀಯರ ಮೇಲೆ ದಬ್ಬಾಳಿಕೆಯನ್ನಾರಂಭಿಸಿ, ಅತ್ಯಂತ ಉಗ್ರವಾದ ರೌಲೆಟ್ ಅಧಿನಿಯಮವನ್ನು ಜಾರಿಗೆ ತರಲು ಯತ್ನಿಸಿದಾಗ ಭಾರತ ರಾಷ್ಟ್ರೀಯ ಕಾಂಗ್ರೆಸ್ ಗಾಂಧೀಜಿಯವರ ನಾಯಕತ್ವದಲ್ಲಿ ಸತ್ಯಾಗ್ರಹ ಆರಂಭಿಸುವ ಕಾರ್ಯಕ್ರಮ ಹೊಂದಿತ್ತು. ಪಂಜಾಬಿನಲ್ಲಿ ಕಾಂಗ್ರೆಸ್ ಚಟುವಟಿಕೆಗಳನ್ನು ಹತ್ತಿಕ್ಕಲು ಅಲ್ಲಿಯ ಆಡಳಿತಾಧಿಕಾರಿ ಮೈಕೆಲ್ ಒಡ್ವೈಯರ್ ಸಂಕಲ್ಪಿಸಿದ್ದ.

ಪಂಜಾಬಿನ ನಾಯಕರಾಗಿದ್ದ ಕಿಚಲೂ ಮತ್ತು ಸತ್ಯಪಾಲರನ್ನು ಸರ್ಕಾರ ಬಂಧಿಸಿ ಗೋಪ್ಯವಾಗಿಟ್ಟಿದ್ದುದರಿಂದ ಅವರ ಬಗ್ಗೆ ಮಾಹಿತಿ ಪಡೆಯಲು 1919ರ ಏಪ್ರಿಲ್ 10ರಂದು ಜನರು ಗುಂಪುಗೂಡಿ ಅಮೃತಸರದ ಜಿಲ್ಲಾ ನ್ಯಾಯಾಧಿಕಾರಿಯ ಸಂದರ್ಶನಕ್ಕೆ ಹೋದರು. ಅಲ್ಲಿ ಜನರ ಮೇಲೆ ಗುಂಡು ಹಾರಿಸಿದಾಗ ಅನೇಕರು ಗಾಯಗೊಂಡರು. ಇಬ್ಬರು ಮರಣ ಹೊಂದಿದರು. ಇದರಿಂದ ಕೋಪಗೊಂಡ ಗುಂಪು ಸರ್ಕಾರದ ಆಸ್ತಿಪಾಸ್ತಿಯನ್ನು ನಷ್ಟಗೊಳಿಸುವುದರಲ್ಲಿ ತೊಡಗಿತು. ಜನರ ಕ್ರೋಧದ ಫಲವಾಗಿ ಐದು ಮಂದಿ ಇಂಗ್ಲಿಷರು ಹತರಾದರು. ಷೆರ್ ವುಡ್ ಎಂಬ ಕ್ರೈಸ್ತಮತ ಪ್ರಚಾರಕಳಿಗೆ ಗಾಯಗಳಾದವು. ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಮೈಕೇಲ್ ಒಡ್ವೈಯರ್ ನಗರದಲ್ಲಿ ನಿಷೇಧಾಜ್ಞೆಗಳನ್ನು ಜಾರಿ ಮಾಡಿ, ಆಡಳಿತವನ್ನು ಸೈನ್ಯದ ವಶಕ್ಕೆ ಒಪ್ಪಿಸಿಕೊಟ್ಟ. ಏಪ್ರಿಲ್ 12ರಂದು ಬ್ರಿಗೇಡಿಯರ್ – ಜನರಲ್ ಡೈಯರ್ ಅದರ ಆಡಳಿತ ವಹಿಸಿಕೊಂಡ.

ಏಪ್ರಿಲ್ 13 ಹಿಂದುಗಳ ನೂತನ ವರ್ಷದ ಮೊದಲ ದಿನವಾಗಿತ್ತು. ಜಲಿಯನ್ ವಾಲಾಬಾಗ್‍ನಲ್ಲಿ ಸು. 20,000 ಮಂದಿ ಹೆಂಗಸರು, ಮಕ್ಕಳು, ವೃದ್ಧರು ಹೊಸ ವರ್ಷದ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಜಲಿಯನ್‍ವಾಲಾಬಾಗ್ ಎಂಬ ಮೈದಾನ. ಸುತ್ತಲೂ ಗೋಡೆಯಿಂದ ಆವೃತ್ತವಾಗಿದ್ದು ಆ ಮೈದಾನಕ್ಕೆ ಕಿರಿದಾದ ಒಂದೇ ಒಂದು ಬಾಗಿಲಿತ್ತು. ಅಲ್ಲಿ ಹನ್ಸರಾಜ್ ಎಂಬವರು ಗುಂಪನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ಸಮಯದಲ್ಲಿ ಜನರಲ್ ಡೈಯರ್ ನೂರು ಮಂದಿ ಭಾರತೀಯ ಹಾಗೂ ಐವತ್ತು ಮಂದಿ ಇಂಗ್ಲಿಷ್ ಸೈನಿಕರೊಡನೆ ಧಾವಿಸಿ ಮುನ್ನೆಚ್ಚರಿಕೆಯನ್ನೂ ನೀಡದೆ ಗುಂಪಿನ ಮೇಲೆ ಗುಂಡಿನ ಮಳೆಗರೆದ. ಹತ್ತು ನಿಮಿಷಗಳ ಕಾಲ ಅವ್ಯಾಹತವಾಗಿ 1,600 ಸುತ್ತುಗಳಷ್ಟು ಗೋಲಿಬಾರ್ ನಡೆಯಿತು. ಗುಂಡುಗಳ ದಾಸ್ತಾನು ಮುಗಿದ ಅನಂತರವೇ ಅದು ನಿಂತಿತು. ಸರ್ಕಾರದ ವರದಿಯ ಪ್ರಕಾರ 379 ಮಂದಿ ಸತ್ತು 1,208 ಮಂದಿ ಗಾಯಗೊಂಡರು. ಗಾಯಗೊಂಡವರ ಉಪಚಾರಕ್ಕೂ ಡೈಯರ್ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ.

ಇದರ ಜೊತೆಗೆ ಇವನು ಇನ್ನೂ ಅನೇಕ ಅಮಾನುಷ ಮತ್ತು ಕ್ರೂರ ಕೃತ್ಯಗಳನ್ನು ಮಾಡಿದ. ಅಮೃತಸರಕ್ಕೆ ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜನ್ನು ನಿಲ್ಲಿಸಿದ. ಸಾರ್ವಜನಿಕರನ್ನು ವಿಚಾರಣೆಯಿಲ್ಲದೆ ಥಳಿಸಿದ. ಗುಂಪಿನ ಕ್ರೋಧಕ್ಕೆ ಷೆರ್‍ವುಡ್‍ಳು ಗುರಿಯಾದ ಬೀದಿಯಲ್ಲಿ ಹಿಂದುಗಳು ತೆವಳಿಕೊಂಡು ಹೋಗುವಂತೆ ಮಾಡಿದ. ಜನರನ್ನು ಹಿಡಿದು ತಂದು ಥಳಿಸಲು ನ್ಯಾಯಾಲಯದ ಮುಂದಿನ ಮೈದಾನದಲ್ಲಿ ಏರ್ಪಾಡು ಮಾಡಿದ. ಸಾಧುಗಳ ಮೇಲೆ ಸುಣ್ಣ ಸುರಿಸಿದ. ಐನೂರು ಕಾಲೇಜು ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ಬಂಧಿಸಿ ಅವರು ಪ್ರತಿದಿನವೂ ಕೋರ್ಟಿಗೆ ಬರುವಂತೆ ಆಜ್ಞೆ ಮಾಡಿದ. ನಗರದ ಸುತ್ತಮುತ್ತಿನ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಜನರ ಮೇಲೆ ವಿಮಾನಗಳಿಂದ ಬಾಂಬುಗಳನ್ನು ಸುರಿಸಿದ. ಈತನ ಕ್ರೂರ ಕಾನೂನುಗಳು ಮತ್ತು ಹೀನಕೃತ್ಯದಿಂದ ಪಂಜಾಬ್ ನಿವಾಸಿಗಳು ದಿಗ್ಭ್ರಾಂತರಾದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರು ಪಂಜಾಬಿನಲ್ಲಿ ನಡೆದ ಕ್ರೌರ್ಯವನ್ನು ಖಂಡಿಸಿ, ವಿಚಾರಣೆ ನಡೆಸುವಂತೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಪಡಿಸಿದರು. 1919ರ ಸೆಪ್ಟಂಬರ್‍ನಲ್ಲಿ ಲಾರ್ಡ್ ಹಂಟರ್ ಎಂಬವನ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯೊಂದನ್ನು ನೇಮಿಸಲಾಯಿತು. ಆ ಸಮಿತಿಯ ಮುಂದೆ ಹೇಳಿಕೆ ನೀಡುತ್ತ ಜನರಲ್ ಡೈಯರ್ ತಾನು ಮೊದಲೇ ನಿರ್ಧರಿಸಿದ್ದಂತೆ ಈ ಕಾರ್ಯಾಚರಣೆ ನಡೆಸಿದುದಾಗಿಯೂ ಇನ್ನೂ ಗುಂಡುಗಳನ್ನು ಹಾರಿಸುತ್ತಿದ್ದುದಾಗಿಯೂ ಆದರೆ ಗುಂಡುಗಳೆಲ್ಲ ಮುಗಿದುದರಿಂದ ನಿಲ್ಲಿಸಬೇಕಾಯಿತೆಂದೂ ಹೇಳಿದ. ಜನರಲ್ ಡೈಯರ್‍ನ ಕ್ರೌರ್ಯವನ್ನು ಸಮರ್ಥಿಸುತ್ತ ಮೈಕೆಲ್ ಒಡ್ವೈಯರ್ ಬ್ರಿಟಿಷ್ ಆಡಳಿತದಲ್ಲಿ ಜನರಿಗಿದ್ದ ತಾತ್ಸಾರ ಭಾವನೆಯನ್ನು ನಿರ್ಮೂಲಮಾಡಲು ಅಂಥ ಕಾರ್ಯಾಚರಣೆ ಅಗತ್ಯವಾಗಿತ್ತೆಂದು ತಿಳಿಸಿದ. ಹಂಟರ್ ವಿಚಾರಣಾ ಸಮಿತಿ ಕೇವಲ ಬ್ರಿಟಿಷ್ ಸದಸ್ಯರಿಂದ ಕೂಡಿದ್ದುದರಿಂದ ಕಾಂಗ್ರೆಸ್ ನಾಯಕರು ತಮ್ಮದೇ ಆದ ಆಯೋಗ ವೊಂದನ್ನು ನೇಮಿಸಿದರು. ಜನರಲ್ ಡೈಯರ್ ತಪ್ಪಿತಸ್ಥನೆಂದು ಹಂಟರ್ ಸಮಿತಿ ವರದಿ ಮಾಡಿತು. ಸರ್ಕಾರ ಆ ವರದಿಯನ್ನೊಪ್ಪಿ ಡೈಯರನನ್ನು ಖಂಡಿಸಿ ಇವನನ್ನು ಸೇನಾನಾಯಕತ್ವ ದಿಂದ ತೆಗೆದು ಕೆಲಸದಿಂದ ವಜಾಮಾಡಿತು. ಡೈಯರ್ ಬ್ರಿಟನ್ನಿಗೆ ಹಿಂದಿರುಗಿದ. ಆದರೆ ಅಲ್ಲಿ ಇವನ ಅಭಿಮಾನಿಗಳು ಅನೇಕರಿದ್ದರು. ಅವರು ಇವನಿಗೆ ವೀರೋಚಿತ ಸನ್ಮಾನ ಮಾಡಿ ಇವನಿಗಾಗಿ ನಿಧಿ ಕೂಡಿಸಿಕೊಟ್ಟರು. ಇದರಿಂದ ಭಾರತೀಯರ ಅಸಮಾಧಾನ ಇನ್ನೂ ಹೆಚ್ಚಿತು. ಡೈಯರ್ 1927 ಜುಲೈ 23ರಂದು ಬ್ರಿಸ್ಟಲಿನ ಲಾಂಗ್ ಆಷ್ಟನ್‍ನಲ್ಲಿ ನಿಧನಹೊಂದಿದ. (ಜಿ.ಆರ್.ಆರ್.)

# ತ

**ತಂಜಾವೂರು:** ತಮಿಳುನಾಡು ರಾಜ್ಯದ ಒಂದು ಪಟ್ಟಣ; ಅದೇ ಹೆಸರಿನ ಜಿಲ್ಲೆಯ ಆಡಳಿತ ಕೇಂದ್ರ. ಕಾವೇರಿ ನದೀ ಮುಖಜಭೂಮಿಯ ಪಶ್ಚಿಮ ಭಾಗದಲ್ಲಿ ಚೆನ್ನೈನಿಂದ 351 ಕಿಮೀ ದೂರದಲ್ಲಿದೆ. 10ನೆಯ ಶತಮಾನದಿಂದ ಇದು ದಕ್ಷಿಣ ಭಾರತದ ಪ್ರಮುಖ ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ, ಧಾರ್ಮಿಕ ಕೇಂದ್ರಗಳಲ್ಲೊಂದಾಗಿ ಬೆಳೆದುಬಂದಿದೆ. ಇದಕ್ಕೆ ಪರಾಶರ ಕ್ಷೇತ್ರವೆಂಬ ಹೆಸರೂ ಉಂಟು. ಹಿಂದೆ ಇದು ತಂಜನ್ ಎಂಬ ರಾಕ್ಷಸನ ವಾಸಸ್ಥಾನವಾಗಿತ್ತೆಂದೂ ಅವನನ್ನು ಮಹಾವಿಷ್ಣು ಸಂಹರಿಸುವಾಗ ಆತ ಈ ನಗರ ತನ್ನ ಹೆಸರಿನಲ್ಲಿ ಪ್ರಸಿದ್ಧವಾಗಬೇಕೆಂದು ಕೇಳಿಕೊಂಡಿದ್ದರಿಂದ ನಗರಕ್ಕೆ ತಂಜಪುರವೆಂಬ ಹೆಸರು ಬಂದಿತೆಂದೂ ಐತಿಹ್ಯ. ನಗರದಲ್ಲಿ 18ಕ್ಕೂ ಹೆಚ್ಚು ದೇವಾಲಯಗಳಿವೆ. ಇವುಗಳಲ್ಲಿ ಪ್ರಮುಖ ವಾದದ್ದು 11 ನೆಯ ಶತಮಾನದಲ್ಲಿ ನಿರ್ಮಾಣವಾದ ಬೃಹದೀಶ್ವರ ದೇವಾಲಯ. ರಾಜರಾಜ ಚೋಳ ನಿರ್ಮಿಸಿದ್ದರಿಂದ ಈ ದೇವಾಲಯಕ್ಕೆ ರಾಜರಾಜ ದೇವಾಲಯವೆಂಬ ಹೆಸರೂ ಇದೆ.

ಬೃಹದೀಶ್ವರ ದೇವಾಲಯದ ಉತ್ತರದಲ್ಲಿ ಹಳೆಯ ಅರಮನೆಯುಂಟು. ಇದರೊಳಗೆ ಕಲಾ ಗ್ಯಾಲರಿ, ಸರಸ್ವತಿ ಮಹಲ್ ಪುಸ್ತಕ ಭಂಡಾರ, ದರ್ಬಾರ್ ಹಾಲ್, ಆಯುಧಶಾಲೆ, ಪ್ರತೀಕ್ಷಾ ಗೋಪುರ ಹಾಗೂ ಸಂಗೀತಮಹಲುಗಳಿವೆ. ನಾಯಕ ಹಾಗೂ ಮರಾಠ ಪ್ರಭುಗಳ ಆಸಕ್ತಿಯಿಂದಾಗಿ ಬೆಳೆದ ಪುಸ್ತಕ ಭಂಡಾರದಲ್ಲಿ 30,000ಕ್ಕೂ ಹೆಚ್ಚು ಗ್ರಂಥಗಳಿವೆ. ಇವುಗಳಲ್ಲಿ ಸು. 8,000 ಕೃತಿಗಳು ಅಪೂರ್ವವಾದ ತಾಳೆಯೋಲೆಯ ಹಸ್ತಪ್ರತಿಗಳು, ಖಗೋಳವಿಜ್ಞಾನ, ವೈದ್ಯ, ಜ್ಯೋತಿಷ, ವಿಜ್ಞಾನ ಮುಂತಾದ ಹಲವು ವಿಷಯಗಳಿಗೆ ಸಂಬಂಧಿಸಿದ ತಮಿಳು, ತೆಲುಗು, ಮರಾಠಿ, ಸಂಸ್ಕೃತ ಹಾಗೂ ಇತರ ಭಾಷೆಗಳ ಗ್ರಂಥಗಳು ಇಲ್ಲಿವೆ. ಶಿವಗಂಗಾ ಸರೋವರ, 1778ರಲ್ಲಿ ಸಿ. ಎಫ್. ಷ್ವಾಟ್ಸ್ ಎಂಬ ಪಾದ್ರಿ ನಿರ್ಮಿಸಿದ ಷ್ವಾರ್ಟ್ಸ್ ಚರ್ಚ್, ಜನತಾ ಉದ್ಯಾನ–ಇವು ತಂಜಾವೂರಿನ ಇತರ ಆಕರ್ಷಣೆಗಳು.

ಇದು ದಕ್ಷಿಣ ಭಾರತದ ಒಂದು ಲಲಿತ ಕಲಾಕೇಂದ್ರ. ಭರತನಾಟ್ಯದ ತವರು. ಸು. 1000ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ ಸುಪ್ರಸಿದ್ಧ ಕರ್ನಾಟಕ ಸಂಗೀತ ವಿದ್ವಾಂಸರಾದ ತ್ಯಾಗರಾಜರ (1767–1847) ಸಮಾಧಿ ತಂಜಾವೂರಿಗೆ 14 ಕಿಮೀ ದೂರದ ತಿರುವೈಯಾರಿನಲ್ಲಿದೆ. ಇಲ್ಲಿ ಪ್ರತಿವರ್ಷವೂ ತ್ಯಾಗರಾಜರ ಆರಾಧನೆಯ ಸಮಯದಲ್ಲಿ ಕರ್ನಾಟಕ ಸಂಗೀತದ ಅನೇಕ ವಿದ್ವಾಂಸರು ನೆರೆದು ಆ ವಾಗ್ಗೇಯಕಾರರಿಗೆ ಸಂಗೀತಾಂಜಲಿಯನ್ನರ್ಪಿಸುತ್ತಾರೆ. ಪ್ರಸಿದ್ಧ ಪ್ರಾಚೀನ ಸಂಸ್ಕೃತ ಶಿಕ್ಷಣ ಕಾಲೇಜೂ ಇದೆ. (ಎಚ್.ಜಿ.)

ಬೃಹದೀಶ್ವರ ದೇವಾಲಯ

ಇತಿಹಾಸ: 985–1014 ರಲ್ಲಿ ಆಳಿಕೆ ನಡೆಸಿದ 1 ನೆಯ ರಾಜರಾಜನ ಅನಂತರವೂ ತಂಜಾವೂರು ಚೋಳ ದೊರೆಗಳ ರಾಜಧಾನಿಯಾಗಿತ್ತು. ಒಂದನೆಯ ರಾಜರಾಜನ ಕಾಲದಲ್ಲಿ ತಂಜಾವೂರು ತನ್ನ ವೈಭವದ ಪರಾಕಾಷ್ಠೆಯನ್ನು ಮುಟ್ಟಿತ್ತು. ರಾಜರಾಜನ ಅನಂತರ ಬಂದ ರಾಜೇಂದ್ರ ಚೋಳ ರಾಜಧಾನಿಯನ್ನು ಇಲ್ಲಿಂದ ಬದಲಾಯಿಸಿದ. ಇದರಿಂದ ತಂಜಾವೂರಿನ ಮಹತ್ತ್ವತಗ್ಗಿತು. ಸ್ವಲ್ಪ ಕಾಲ ತಂಜಾವೂರು ಹೊಯ್ಸಳರ ಮತ್ತು ಮಧುರೆಯ ಪಾಂಡ್ಯರ ಆಡಳಿತಕ್ಕೊಳಪಟ್ಟಿತು. ಮಲ್ಲಿಕ್ ಕಾಫರನ ಆಕ್ರಮಣದ ಅನಂತರ ಇದು ವಿಜಯನಗರದ ಸಾಮ್ರಾಜ್ಯದ ಭಾಗವಾಯಿತು. ಇದರ ಪ್ರಾಂತಾಧಿಪತಿಯೊಬ್ಬ 16ನೆಯ ಶತಮಾನದಲ್ಲಿ ಸ್ವಾತಂತ್ರ್ಯ ಘೋಷಿಸಿಕೊಂಡ. ನಾಯಕ ಮನೆತನದ ಆಡಳಿತ ಆರಂಭವಾಯಿತು. ಈ ಮನೆತನದ ಅರಸರ ಕಾಲದಲ್ಲಿ ತಂಜಾವೂರು ಮತ್ತೊಮ್ಮೆ ಪ್ರಾಮುಖ್ಯ ಗಳಿಸಿತು. ಇವರು ಇಲ್ಲಿ ಎರಡು ಕೋಟೆಗಳನ್ನು ನಿರ್ಮಿಸಿದರು. ಅವುಗಳಲ್ಲಿ ಒಂದು ಈಗಲೂ ಉಳಿದಿದೆ. 1674ರ ಸುಮಾರಿಗೆ ಇದು ಮರಾಠಾ ವಂಶವೊಂದರ ಆಳಿಕೆಗೆ ಒಳಪಟ್ಟಿತು. 1799ರಲ್ಲಿ ಇದರ ಸುತ್ತಣ ಪ್ರದೇಶವನ್ನು ರಾಜ ಸರ್ಫೋಜಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ವಹಿಸಿಕೊಟ್ಟ. ಇವನ ಅನಂತರ ಬಂದ ಶಿವಾಜಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವನ ಮರಣಾನಂತರ (1855) ತಂಜಾವೂರು ಸಂಪೂರ್ಣವಾಗಿ ಬ್ರಿಟಿಷರ ಆಡಳಿತಕ್ಕೆ ಸೇರಿಹೋಯಿತು.

ತಂಜಾವೂರಿನ ಶಾಸನಗಳಿಂದ ಈ ಸ್ಥಳದ ವೈಭವದ ಅರಿವು ಸ್ವಲ್ಪಮಟ್ಟಿಗೆ ಉಂಟಾಗುತ್ತದೆ. ಚೋಳ ಚಕ್ರಾಧಿಪತ್ಯದ ರಾಜಧಾನಿಯಾಗಿದ್ದುದರಿಂದ ವೈಭವೋಪೇತವಾದ ಅರಮನೆಗಳಿಂದಲೂ ಇತರ ವಸತಿ ಬಡಾವಣೆಗಳಿಂದಲೂ ಈ ಪಟ್ಟಣ ಕಂಗೊಳಿಸುತ್ತಿತ್ತು. ಪಟ್ಟಣದಲ್ಲಿ ವಿಸ್ತಾರವಾದ ರಾಜ ಬೀದಿಗಳಿದ್ದವು. ಪಟ್ಟಣಕ್ಕೆ ಸೇರಿದಂತೆ ಹೊರವಲಯದಲ್ಲಿ ಅಧಿಕಾರಿಗಳ ಮತ್ತು ನೌಕರರ ವಸತಿಗೃಹಗಳು, ಸಾರ್ವಜನಿಕರ ಅನುಕೂಲಕ್ಕಾಗಿ ಆಸ್ಪತ್ರೆಗಳು, ಬಾವಿಗಳು, ಶಾಲೆಗಳು ಇತ್ಯಾದಿ ಕಟ್ಟಡಗಳಿದ್ದವು ಮತ್ತು ಊರಿನ ಅನೇಕ ಭಾಗಗಳಲ್ಲಿ ದೇವಾಲಯಗಳನ್ನು ನಿರ್ಮಿಸಲಾಗಿತ್ತು. ವಾಸ್ತುಶಿಲ್ಪದ ಬೆಳವಣಿಗೆಗೆ ವಿಶೇಷ ಗಮನ ಮತ್ತು ಉತ್ತೇಜನ ನೀಡಿದ ಚೋಳರು ತಂಜಾವೂರು ಹಾಗೂ ಅದರ ಸುತ್ತಮುತ್ತ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ತಂಜಾವೂರಿನ ದೇವಾಲಯಗಳಲ್ಲೆಲ್ಲ ಮುಖ್ಯವಾದುದು 1010ರಲ್ಲಿ ನಿರ್ಮಿತವಾದ ಬೃಹದೀಶ್ವರ ದೇವಾಲಯ ಮತ್ತು 18ನೆಯ ಶತಮಾನದಲ್ಲಿ ನಾಯಕರ ಕಾಲದಲ್ಲಿ ನಿರ್ಮಿತವಾದ ಸುಬ್ರಹ್ಮಣ್ಯ ದೇವಾಲಯ. ಚೋಳ ದೊರೆ 1ನೆಯ ರಾಜರಾಜನ ನೇತೃತ್ವದಲ್ಲಿ ನಿರ್ಮಿತವಾದ ಬೃಹದೀಶ್ವರ ದೇವಾಲಯವನ್ನು ಚಕ್ರವರ್ತಿ ತನ್ನ ಸಾರ್ವಭೌಮತ್ವ ಮತ್ತು ಉನ್ನತಾಕಾಂಕ್ಷೆಗಳನ್ನು ಪ್ರತಿಬಿಂಬಿಸುವಂತೆ ಸುವರ್ಣಲೇಪಿತ ಕಲಶವನ್ನಿಟ್ಟು ಪ್ರತಿಷ್ಠಾಪಿಸಿದ.

ಹೆಸರಿಗೆ ತಕ್ಕಂತೆ ಬೃಹದಾಕಾರವಾಗಿರುವ ಈ ದೇವಾಲಯವನ್ನು 225x75ಮೀ ವಿಸ್ತೀರ್ಣವುಳ್ಳ ಪ್ರಾಕಾರದ ಮಧ್ಯದಲ್ಲಿ ಕಟ್ಟಲಾಗಿದೆ. ಕೇವಲ ದೇವಾಲಯದ ವಿಸ್ತೀರ್ಣ 45ಮೀ ಉದ್ದ, 27.0ಮೀ ಅಗಲ. ವಿಮಾನದ ಎತ್ತರ 60ಮೀ. ಇದು ದಕ್ಷಿಣ ಭಾರತದ ದೇವಾಲಯಗಳ ವಿಮಾನಗಳಲ್ಲಿ ಅತ್ಯುನ್ನತವಾದದ್ದು. ನುಣುಪಾದ ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲಾದ ಈ ದೇವಾಲಯದಲ್ಲಿ ಗರ್ಭಗೃಹ, ಪ್ರದಕ್ಷಿಣಾಪಥ, ಅರ್ಧ ಮಂಟಪ, ಮಹಾ ಮಂಟಪ ಮತ್ತು ಪ್ರತ್ಯೇಕ ನಂದಿ ಮಂಟಪಗಳು ಇವೆ. ಇವೆಲ್ಲವನ್ನೂ ಒಂದೇ ರೇಖೆಯಲ್ಲಿ ಪ್ರಾಕಾರದ ಮಧ್ಯ ಭಾಗದಲ್ಲಿ ಕಟ್ಟಲಾಗಿದೆ.

ಗರ್ಭಗೃಹದ ಭಿತ್ತಿಯ ಹೊರಮುಖದಲ್ಲಿ ಎರಡು ತಲ (ಅಂತಸ್ತು)ಗಳಿವೆ. ಈ ಎರಡೂ ಅಂತಸ್ತುಗಳಲ್ಲಿ ಗೂಡುಗಳಿಂದ ಕೂಡಿದ ವಾಸ್ತುಶಿಲ್ಪ ಅಲಂಕರಣವಿದೆ. ಈ ಗೂಡುಗಳಲ್ಲಿರುವ ಸುಂದರ ಶಿಲ್ಪಗಳು ಚೋಳರ ಕಾಲದ ಮೂರ್ತಿಶಿಲ್ಪದ ಉತ್ತಮ ನಿದರ್ಶನಗಳು. ದಕ್ಷಿಣಾಮೂರ್ತಿ, ಚಂಡೇಶಾನುಗ್ರಹಮೂರ್ತಿ, ಅರ್ಧನಾರೀಶ್ವರ, ಭಿಕ್ಷಾಟನ ಮೂರ್ತಿ, ಚಂದ್ರಶೇಖರ ಇತ್ಯಾದಿ ಅನೇಕ ಶಿವಲೀಲಾ ಮೂರ್ತಿಗಳನ್ನು ಮತ್ತು ಇತರ ಪೌರಾಣಿಕ ಶಿಲ್ಪಗಳನ್ನು ಇಲ್ಲಿ ಬಿಡಿಸಲಾಗಿದೆ. ಇವಲ್ಲದೆ ಅನೇಕ ಪಟ್ಟಿಕೆಗಳಿಂದ ಕೂಡಿದ ಅಧಿಷ್ಠಾನ, ಭಿತ್ತಿಯ ಮೇಲಿನ ಅರೆಗಂಬಗಳು ಹಾಗೂ ಬೋದಿಗೆಗಳು ಇತರ ಚಿತ್ರಪಟ್ಟಿಕೆಗಳು ದೇವಾಲಯದ ಭವ್ಯತೆಗೆ ಪೂರಕವಾಗಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಹದಿಮೂರು ಹಂತಗಳಲ್ಲಿ ಮೇಲೇರುವ ದ್ರಾವಿಡ ಶೈಲಿಯ ವಿಮಾನ, ಅದರ ಮೇಲ್ಭಾಗದಲ್ಲಿರುವ ಬೃಹತ್ತಾದ ಏಕಶಿಲೆಯ ಶಿಖರ ಮುಂತಾದವು ಚೋಳರ ವಾಸ್ತುಶಿಲ್ಪ ಕೌಶಲ್ಯಕ್ಕೆ, ಪ್ರೌಢಜ್ಞಾನಕ್ಕೆ ಸಾಕ್ಷಿಯಾಗಿವೆ.

ದೇವಾಲಯದ ದ್ವಾರಗಳು ಪಾರ್ಶ್ವಭಾಗಗಳಲ್ಲಿವೆ, ಉನ್ನತ ಅಧಿಷ್ಠಾನದ ಮೇಲೆ ದೇವಾಲಯವಿರುವುದರಿಂದ ಎರಡೂ ಪಾರ್ಶ್ವಗಳಲ್ಲಿ ಸೋಪಾನಗಳನ್ನು ಕಟ್ಟಲಾಗಿದೆ. ಸೋಪಾನಗಳ ಪಕ್ಕಗಳಲ್ಲಿ ಸುಂದರವಾದ ಕೆತ್ತನೆಗಳುಳ್ಳ ಕೈಪಿಡಿಗಳನ್ನು ನಿರ್ಮಿಸಲಾಗಿದೆ. ದ್ವಾರದ ಎರಡೂ ಪಕ್ಕಗಳಲ್ಲಿ ಬೃಹದಾಕಾರವಾದ ದ್ವಾರಪಾಲಕ ವಿಗ್ರಹಗಳಿವೆ.

ಪ್ರದಕ್ಷಿಣಾಪಥವೂ ಎರಡು ಅಂತಸ್ತುಗಳಿಂದ ಕೂಡಿದ್ದು, ಹೊರಗೋಡೆಯ ಮೂರು ಮುಖಗಳ ಮಧ್ಯಭಾಗದಲ್ಲಿ ಬಾಗಿಲುಗಳುಂಟು. ಪಥದ ಒಳಗೋಡೆಯಲ್ಲೂ ಅಲ್ಲಲ್ಲಿ ಗೂಡುಗಳಿವೆ. ಅವುಗಳಲ್ಲೂ ಶಿವನ ಮತ್ತು ಇತರ ಮುಖ್ಯ ದೇವತೆಗಳ ಮೂರ್ತಿಗಳನ್ನು ಕಡೆಯಲಾಗಿದೆ. ಗೋಡೆಯ ಉಳಿದ ಭಾಗವನ್ನು ಸುಣ್ಣದಿಂದ ನಯಮಾಡಿ ಅದರ ಮೇಲೆ ವರ್ಣ ಚಿತ್ರಗಳನ್ನು ಚಿತ್ರಿಸಲಾಗಿತ್ತು. ಆದರೆ ನಾಯಕರ ಕಾಲದಲ್ಲಿ ಹಳೆಯ ಚಿತ್ರಗಳ ಮೇಲೆ ಮತ್ತೆ ವರ್ಣಚಿತ್ರಗಳನ್ನು ಚಿತ್ರಿಸಿ ಬರೆಯಲಾಗಿದೆಯಾದ್ದರಿಂದ ಎಲ್ಲೋ ಕೆಲವು ಕಡೆಗಳಲ್ಲಿ ಮಾತ್ರ ಚೋಳರ ಮೂಲ ವರ್ಣಚಿತ್ರಗಳನ್ನು ಕಾಣಬಹುದು. ಸ್ವಲ್ಪವೇ ಕಂಡರೂ ಅವು ಆ ಕಾಲದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಅಧ್ಯಯನಕ್ಕೆ ಬಹಳ ಸಹಕಾರಿಗಳಾಗಿವೆ.

ಬೃಹದಾಕಾರವಾದ ಲಿಂಗ ಮತ್ತು ಅಷ್ಟೇ ದೊಡ್ಡದಾದ ಪೀಠವಿರುವ ಗರ್ಭಗೃಹದ ಒಳಭಾಗ ಒಂದೇ ಅಂತಸ್ತಿನಿಂದ ಕೂಡಿದ್ದು. ಇದರ ಎತ್ತರ ಹೊರಗಿನ ಎರಡು ಅಂತಸ್ತುಗಳಿಗೆ ಸಮ. ಮಂಟಪ ಮತ್ತು ಮುಖಮಂಟಪಗಳ ಪಾರ್ಶ್ವಭಾಗಗಳಲ್ಲಿ ಮುಚ್ಚಲಾಗಿದೆ. ಒಳಭಾಗದಲ್ಲಿ ಚೋಳರ ಶೈಲಿಯ ಕಂಬಗಳಿವೆ. ಗರ್ಭಗೃಹದ ಮುಂಭಾಗದ ಎರಡು ಮಂಟಪಗಳು ನಾಲ್ಕು ಅಂತಸ್ತುಗಳಿಂದ ಕೂಡಿವೆ. ಮಹಾಮಂಟಪದಲ್ಲಿ ಮೂರು ಅಂತಸ್ತುಗಳಿವೆ. ದೇವಾಲಯದ ಮುಂದಿರುವ ನಂದಿ ಮಂಟಪದಲ್ಲಿರುವ ನಂದಿಯ ವಿಗ್ರಹ ಭಾರತೀಯ ಶಿಲ್ಪದ ಕೆಲವೇ ಬೃಹದಾಕಾರದ ನಂದಿಗಳಲ್ಲಿ ಒಂದು.

ಪೂರ್ವಭಾಗದಲ್ಲಿ ಪ್ರಾಕಾರದ ಮಧ್ಯದಲ್ಲಿ ಕಲ್ಲಿನಿಂದ ಕಟ್ಟಲ್ಪಟ್ಟ ಒಂದು ಗೋಪುರವಿದೆ. ಪ್ರಾಕಾರದ ಒಳಮುಖದಲ್ಲಿ ಸುತ್ತಲೂ ಎರಡು ಅಂತಸ್ತಿನ ಮಾಳಿಗೆಯಿದೆ. ಮಾಳಿಗೆಯ ಮುಂಭಾಗದಲ್ಲಿ ಅಷ್ಟದಿಕ್ಕುಗಳಲ್ಲಿ ಅಷ್ಟದಿಕ್ಪಾಲಕರಿಗಾಗಿ ಸಣ್ಣ ಗುಡಿಗಳಿವೆ. ಈ ಗೋಪುರದಿಂದ ಸ್ವಲ್ಪ ಮುಂದೆ ಮತ್ತೊಂದು ಗೋಪುರದ್ವಾರವಿರುವ ಪ್ರಾಕಾರವುಂಟು. ಹೊರಪ್ರಾಕಾರದ ದ್ವಾರ ಈ ಗೋಪುರದಲ್ಲಿದೆ. ಅನಂತರದ ಕಾಲದ ಕೋಟೆಯ ಒಂದು ಭಾಗವಾಗಿ ಇದು ಉಳಿದಿದೆ.

ಚೋಳರ ಕಾಲದಲ್ಲಿ ಈ ದೇವಾಲಯಕ್ಕೆ ಅತ್ಯಂತ ಅಮೂಲ್ಯವಾದ ಆಭರಣಗಳು, ಭೂಮಿ, ಹಣ, ಕಂಚಿನ ವಿಗ್ರಹಗಳು ಮುಂತಾದ ಅನೇಕ ಸಾಮಗ್ರಿಗಳನ್ನು ಕಾಣಿಕೆಯಾಗಿ ಕೊಡಲಾಯಿತು. ಇವುಗಳಲ್ಲನೇಕವನ್ನು ವಿವರಣಾತ್ಮಕವಾಗಿ ದೇವಾಲಯದ ಅಧಿಷ್ಠಾನದ ಮೇಲಿರುವ ಶಾಸನಗಳು ರೂಪಿಸುತ್ತವೆ. ಈ ಶಾಸನಗಳು ಚೋಳರ ಲಿಪಿಯ ಉತ್ತಮ ನಿದರ್ಶನಗಳು. ಕಾಣಿಕೆಯಾಗಿ ಬಂದ ಅನೇಕ ಕಂಚಿನ ವಿಗ್ರಹಗಳಲ್ಲಿ ಕೆಲವು ಈಗಲೂ ಇಲ್ಲಿ ಕಾಣಸಿಗುತ್ತವೆ. ಇವು ಚೋಳರ ತಾಮ್ರ ಶಿಲ್ಪ ಅಧ್ಯಯನಕ್ಕೆ ಮೂಲಾಧಾರಗಳು.

ಬೃಹದೀಶ್ವರ ದೇವಾಲಯದ ಪ್ರಾಕಾರದ ಒಳಗೆ ವಾಯವ್ಯ ಭಾಗದಲ್ಲಿ ಕಟ್ಟಲಾಗಿರುವ ಮತ್ತೊಂದು ದೇವಾಲಯವೆಂದರೆ ಸುಬ್ರಹ್ಮಣ್ಯೇಶ್ವರ ದೇವಾಲಯ. 18 ನೆಯ ಶತಮಾನದಲ್ಲಿ ನಾಯಕರ ಕಾಲದಲ್ಲಿ ನಿರ್ಮಿತವಾದ ಈ ದೇವಾಲಯ ದ್ರಾವಿಡ ಮಾದರಿಯ ಎಲ್ಲ ಉತ್ತಮ ಲಕ್ಷ್ಯಗಳನ್ನೂ ಒಳಗೊಂಡಿದೆ. ಗರ್ಭಗೃಹ, ಅರ್ಧಮಂಟಪ, ಮುಖಮಂಟಪ ಇತ್ಯಾದಿಗಳಿಂದ ಕೂಡಿದ ಈ ದೇವಾಲಯವನ್ನು ನಯವಾದ ಗ್ರ್ಯಾನೈಟ್ ಕಲ್ಲಿನಿಂದ ಕಟ್ಟಲಾಗಿದೆ. ತಳಪಾದಿಯ ಪಟ್ಟಿಕೆಗಳು, ಭಿತ್ತಿಯ ಆಲಂಕಾರಿಕ ಗೂಡುಗಳು, ಜಾಲಂಧ್ರಗಳು, ಅರೆಗಂಬಗಳು, ಪಂಜರಗಳು, ಸುಂದರವಾದ ಬೋದಿಗೆ, ಕೈಪಿಡಿಗೋಡೆ ಇವೆಲ್ಲ ದೇವಾಲಯದ ಆಕರ್ಷಣೆಗೆ ಪೂರಕವಾಗಿದೆ. ಗರ್ಭಗೃಹದ ಮೇಲಿರುವ ದ್ರಾವಿಡ ರೀತಿಯ ವಿಮಾನ ರಮಣೀಯವಾದುದು. ಗರ್ಭಗೃಹದ ಒಳಗಿರುವ ವಿಗ್ರಹ ಷಣ್ಮುಖವಾದುದರಿಂದ ವಿಮಾನದ ಮೇಲಿರುವ ಶಿಖರಕ್ಕೆ ಆರು ಮುಖಗಳಿವೆ. (ಎಂ.ಎಸ್.ಕೆ.)

ತಂಜಾವೂರು ಸಾಂಪ್ರದಾಯಿಕ ಚಿತ್ರಕಲೆ: ದಕ್ಷಿಣ ಭಾರತದಲ್ಲಿ 1509–29ರವರೆಗೆ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ದಕ್ಷಿಣಭಾರತದ ಸಾಮ್ರಾಜ್ಯವನ್ನು ಗಿನಿಜಿ, ತಂಜಾವೂರ್ ಮತ್ತು ಮದುರೈ ಎಂದು ಮೂರುಭಾಗ ಮಾಡಲಾಯಿತು. ತಂಜಾವೂರನ್ನು ಮರಾಠ ರಾಜರು ಆಳುತ್ತಿದ್ದರು. ಇವರ ಕಾಲದಲ್ಲಿ ಇದ್ದ ಕಲಾವಿದರು ವಿಜಯನಗರದ ಭಿತ್ತಿ ಚಿತ್ರ ಶೈಲಿಯನ್ನು ಸ್ವಲ್ಪ ಮಾರ್ಪಾಡು ಮಾಡಿ ಅದಕ್ಕೆ ಸ್ವಲ್ಪ ಅಲಂಕಾರವನ್ನು ಸೇರಿಸಿ ಮೊಗಲರ ಚಿಕಣಿ ಚಿತ್ರಕಲೆಯಂತೆ ವೈಭವಯುತವಾದ ಹೊಸ ಶೈಲಿ ಚಿತ್ರಗಳನ್ನು ತಂಜಾವೂರಿನಲ್ಲಿ ಪ್ರಾರಂಭಿಸಿದರು–ಇದೇ ತಂಜಾವೂರು ಶೈಲಿ. ಈ ಶೈಲಿ ಕಲಿಕಾಶಾಲೆಯ ಮರಾಠರ ಕಾಲದಲ್ಲಿ 12ನೆಯ ಶತಮಾನದಿಂದ ಪ್ರಾರಂಭವಾಗಿ 19ನೆಯ ಶತಮಾನದವರೆಗೂ ಉನ್ನತ ಸ್ಥಿತಿಯಲ್ಲಿತ್ತು. ತಂಜಾವೂರಿನಲ್ಲಿ ನಾಯಕರ ವಂಶದ ಪರಂಪರೆಯಲ್ಲಿ ಪಟ್ಟಕ್ಕೆ ಬಂದವನು ರಘುನಾಥನಾಯಕ (1200–34). ತಂಜಾವೂರು ಚಿತ್ರಕಲೆಗೆ ಬಹಳ ಉತ್ತೇಜನ ನೀಡಿದ. 19ನೆಯ ಶತಮಾನದ ಆದಿಯಲ್ಲಿ ತಂಜಾವೂರಿನ 2ನೆಯ ಶರಭೋಜಿ ಮಹಾರಾಜ ಹಲವು ಕಲಾವಿದರಿಗೆ ಆಶ್ರಯ ನೀಡಿ ತಂಜಾವೂರು ಶೈಲಿ ಚಿತ್ರಗಳು ಹೆಸರುವಾಸಿಯಾಗಲು ಕಾರಣನಾದ. ಇವನು ಬೇಕಾದಷ್ಟು ಚಿತ್ರಗಳನ್ನೂ ಮತ್ತು ಹಸ್ತಪ್ರತಿಗಳಿಗೆ ಪೂರಕವಾದ ಚಿತ್ರಗಳನ್ನು ತಂಜಾವೂರು ಶೈಲಿಯಲ್ಲಿ ಮಾಡಿಸಿ ಕಲಾವಿದರನ್ನೂ ಮತ್ತು ಈ ಕಲೆಯನ್ನು ಪೋಷಿಸಿ ಬೆಳಸಿದ.

ತಂಜಾವೂರು ಶೈಲಿಯ ಚಿತ್ರಗಳನ್ನು ತೆಲುಗು ಪ್ರದೇಶದ ರಾಜು ಮತ್ತು ನಾಯ್ಡು ವರ್ಗದವರು ಮಾತ್ರ ಕಲಿತು ಚಿತ್ರಿಸುತ್ತಿದ್ದರು. ಇವರ ಚಿತ್ರಗಳಲ್ಲಿ ಎಲ್ಲೂ ಕಲಾವಿದನ ಹೆಸರು ಬರೆದಿಲ್ಲ.

ತಂಜಾವೂರು ಶೈಲಿಯ ಚಿತ್ರಗಳಿಗೆ ಮರದ ಹಲಗೆ, ಗಾಜಿನಫಲಕ, ದಂತ. ಕಾಗೆ ಬಂಗಾರ ಮತ್ತು ಚರ್ಮದ ಹಾಳೆಗಳನ್ನುಪಯೋಗಿಸಿದ್ದಾರೆ. ಅದರಲ್ಲಿ ಮರದ ಹಲಗೆಯ ಮೇಲೆ ಅಂಟಿಸಿದ ಬಟ್ಟೆಯ ಮೇಲೆ ಚಿತ್ರಿಸಿದ ಮತ್ತು ಗಾಜಿನ ಫಲಕದ ಮೇಲೆ ಚಿತ್ರಿಸಿದ ಚಿತ್ರಗಳು ಬಹಳ ಹೆಸರುವಾಸಿಯಾದವು. ಇಂದಿಗೂ ಈ ಎರಡು ಮಾಧ್ಯಮಗಳಲ್ಲಿ ತಮಿಳುನಾಡಿನ ಚೆನ್ನೈ, ತಂಜಾವೂರು, ಕುಂಭಕೋಣಂ, ಮದುರೈ ಮತ್ತು ತಿರುಚಿ ನಗರಗಳಲ್ಲಿ ದೇವಸ್ಥಾನದ ಸುತ್ತಮುತ್ತ ಇರುವ ಕಲಾವಿದರು ಚಿತ್ರಿಸುತ್ತಾರೆ.

ಮದುರೆಯಲ್ಲಿ ಬೆಳ್ಳಿಯ ಹಾಳೆಗಳ ಮೇಲೆ ಬಂಗಾರದ ಮುಲಾಮು ಹಚ್ಚಿ, ಅದರ ಮೇಲೆ ಅಮೂಲ್ಯವಾದ ಹರಳುಗಳನ್ನು ಜೋಡಿಸಿ ಅಲಂಕರಿಸಿದ, ಪರಿಸರಕ್ಕೆ ಹೊಂದಿದ ದೊಡ್ಡ ಚಿತ್ರಗಳ ಸೊಗಸು ಒಂದು ಬಗೆಯದು. ಈ ಶೈಲಿಯಲ್ಲೇ ನಡೆದ ಇನ್ನೊಂದು ಕಲಾತ್ಮಕ ಪ್ರಯೋಗವೆಂದರೆ ಗಾಜಿನ ಹಿಂದೆ ರಚಿಸಿದ ಚಿತ್ರಗಳು. ತಂಜಾವೂರ್ ಶೈಲಿಯಲ್ಲಿ ಬಣ್ಣಗಳು ಕಣ್ಣಿಗೆ ರಾಚುವಂತಿದ್ದರೂ ಒಳ್ಳೆ ಅಭಿರುಚಿಯುಳ್ಳ ವರ್ಣ ಕೌಶಲ್ಯವಿದೆ. ಇಲ್ಲಿ ಮುತ್ತನ್ನು ಬಹಳ ಅಪರೂಪವಾಗಿ ಬಳಸಲಾಗಿದೆ ಮತ್ತು ದೇವರುಗಳ ಹಿನ್ನೆಲೆಯಲ್ಲಿ ಗರ್ಭಗುಡಿ ಅಥವಾ ಗುಡಿ ಗೋಪುರಗಳನ್ನು, ಪರದೆಗಳನ್ನು ಚಿತ್ರಿಸಿದೆ.

ಗಾಜಿನ ಚಿತ್ರಕ್ಕೆ ಬಂಗಾರದ ಕೆಲಸ ಮಾಡುವುದು. ಇದಕ್ಕೆ ಬೇರೆ ಬೇರೆ ಮಾಧ್ಯಮಗಳಿಗೆ ಬೇರೆ ಬೇರೆ ಅಂಟುಗಳನ್ನು ಬಣ್ಣಗಳ ಜೊತೆ ಸೇರಿಸಿ ಚಿತ್ರಗಳಿಗೆ ಬಣ್ಣ ಹಾಕಲಾಗಿದೆ. ಕೆಲವು ಚಿತ್ರಗಳಲ್ಲಿ ಕಪ್ಪು ಶಾಯಿ ಇರುವ ಲೇಖನಿಯಿಂದ ಛಾಯೆಯನ್ನು ಮೂಡಿಸಲಾಗಿದೆ. ಇನ್ನೂ ಕೆಲವು ಚಿತ್ರಗಳಲ್ಲಿ ಒಡವೆಯ ನಮೂನೆಗಳನ್ನು ಆಕೃತಿಗಳು ಧರಿಸಿರುವ ಬಟ್ಟೆಯ ಮೇಲೆ ಚಿತ್ರಿಸಿದೆ. ಈ ತಂಜಾವೂರು ಶೈಲಿಯ ಕಲಾವಿದರು ಮರದ ಹಲಗೆ ಮೇಲೆ ಹಿಂದು ದೇವರುಗಳು, ಮಗು ಕೃಷ್ಣ, ಶಿವ ಪಾರ್ವತಿ, ರಾಮ, ಸರಸ್ವತಿ ಇತ್ಯಾದಿ ರಾಮಯಣ, ಮಹಾಭಾರತ, ಭಾಗವತ ಪುರಾಣ ಪುಣ್ಯ ಕಥೆಗಳಿಂದ ಆಯ್ದ ದೃಶ್ಯಗಳ ಅನೇಕ ಚಿಕ್ಕ ಪುಟ್ಟ ಆಕೃತಿಗಳನ್ನು ಚಿತ್ರಿಸುತ್ತಿದ್ದರು.

ತಂಜಾವೂರು ಶೈಲಿಯ ಚಿತ್ರಗಳಲ್ಲಿ ಮೈ ಅಳತೆಗಿಂತ ತಲೆ ದೊಡ್ಡದು. ಮುಖ ದುಂಡು ಮತ್ತು ಭಕ್ತಿ ಪ್ರಧಾನ. ಇಲ್ಲಿಯ ಚಿತ್ರಗಳಲ್ಲಿ ಉಬ್ಬೆತ್ತುವಿಕೆ ಬಹಳ ದಪ್ಪವಾಗಿದ್ದು ಚಿತ್ರವು ಮೂರು ಆಯಾಮದಲ್ಲಿರುವಂತೆ ತೋರುತ್ತದೆ. ಈ ಶೈಲಿಯಲ್ಲಿ ಬೃಹದಾಕಾರದ ಚಿತ್ರದಿಂದ ಹಿಡಿದು ಚಿಕಣಿ ಚಿತ್ರದವರೆಗೂ ಎಲ್ಲಾ ಅಳತೆಯ ಚಿತ್ರಗಳಿವೆ. ತಂಜಾವೂರ್ ಶೈಲಿಯಲ್ಲಿ ಭಾವ ಚಿತ್ರಗಳಲ್ಲಿ ಮುಖ ಭಾವಕ್ಕೆ ಹೆಚ್ಚು ಗಮನ ಕೊಡಲಾಗಿದೆ. ಆಭರಣ ಉಡಿಗೆ ತೊಡಿಗೆಗಳಿಗೆ ಬಹಳಷ್ಟು ಕುಸುರಿ ಕೆಲಸವಿದೆ. ಆಭರಣ ಮತ್ತು ಬಟ್ಟೆಗಳಿಗೆ ಚಿನ್ನದ ರೇಖನ್ನು ಅಂಟಿಸಿ ಅದರ ಮೇಲೆ ಬಣ್ಣದ ಚಿತ್ತಾರವಿರುತ್ತಿತ್ತು.

ಕೆಂಪುಬಣ್ಣದ ಹಿನ್ನೆಲೆ ತಂಜಾವೂರು ಶೈಲಿಯ ವೈಶಿಷ್ಟ್ಯ. ಮತ್ತೊಂದು ವೈಶಿಷ್ಟ್ಯವೆಂದರೆ ನಟರಾಜನಿಗೆ ಬಿಳಿ ಬಣ್ಣ, ವಿಷ್ಣುವಿಗೆ ನೀಲಿ ಬಣ್ಣ ಮತ್ತು ಹೆಣ್ಣು ದೇವರಿಗೆಲ್ಲಾ ಹಳದಿಬಣ್ಣ ಬಳಸಿರುವುದು. ಆಕಾಶ ನೀಲಿಬಣ್ಣ ಅಥವಾ ಅಪರೂಪಕ್ಕೆ ಕಪ್ಪುಬಣ್ಣ ಹಾಕುತ್ತಿದ್ದರು. ಆಭರಣಗಳಿಗೆ ಮತ್ತು ಉಬ್ಬೆತ್ತುವುದಕ್ಕೆ ತಂಜಾವೂರು ಶೈಲಿಯದೇ ಒಂದು ಕ್ರಮ ಇದೆ. ಕತ್ತಲೆ ಮನೆಯಲ್ಲಿಟ್ಟರೆ ಈ ಚಿತ್ರಗಳು ಹೊಳೆಯುತ್ತವೆ. ತಂಜಾವೂರು ಶೈಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಕೃಷ್ಣನನ್ನು ಯಾವಾಗಲೂ ಪುಟ್ಟ ಮಗುವಿನಂತೆಯೇ ಚಿತ್ರಿಸುವುದು. ಅವನು ಬೆಣ್ಣೆ ಕದಿಯುವಾಗಲೂ ಮಗುವೇ ಅವನು ರಾಧಾ ರುಕ್ಮಿಣಿಯರೊಡನೆ ಇರುವಾಗಲೂ ಐದು ಅಥವಾ ಆರು ವರ್ಷದ ಬಾಲಕನಂತೆಯೇ ಚಿತ್ರಿಸಿದ್ದಾರೆ. ಆದರೆ 20ನೆಯ ಶತಮಾನದ ಚಿತ್ರಗಳಲ್ಲಿ ಸ್ವಲ್ಪ ಬದಲಾವಣೆ ಆಗಿದೆ. ಆಕೃತಿಗಳು ಪ್ರಮಾಣಬದ್ಧವಾಗಿವೆ. ಬೇರೆ ಬೇರೆ ದೇವಾದಿ ದೇವತೆಗಳ ಚಿತ್ರಣ ಆರಂಭವಾಯಿತು. ವ್ಯಕ್ತಿಗಳನ್ನು ಸಾತ್ವಿಕ, ರಾಜಸ, ತಾಮಸ ಎಂಬ ಮೂರು ಸ್ವಭಾವಗಳಿಂದ ವಿಂಗಡಿಸುವ ಪುರಾತನ ಪದ್ಧತಿ ಪ್ರಕಾರ ಸಾತ್ವಿಕಕ್ಕೆ ಹಸುರು, ರಾಜಸಕ್ಕೆ ಕೆಂಪು ಮತ್ತು ಹೊಂಬಣ್ಣ ಹಾಗು ತಾಮಸಕ್ಕೆ ಬಿಳಿ, ಹಾಗೂ ದೆವ್ವ, ಪಿಶಾಚಿ ಮತ್ತು ಕ್ರೂರ ಪಾತ್ರಗಳಿಗೆ ಕಪ್ಪು ಎನ್ನುವುದು ಸಾಮಾನ್ಯ ವಾಡಿಕೆ. (ಎಸ್‌ಎಚ್‌ಒ.ಟಿ.)

ತಂಜಾವೂರು ಶೈಲಿಯ ಚಿತ್ರಗಳು ಶ್ರೀಮಂತರ ಮನೆಗಳಲ್ಲಿ, ಮಠಗಳಲ್ಲಿ, ದೇವಸ್ಥಾನಗಳಲ್ಲಿ, ಭಜನೆ ಮಂದಿರಗಳಲ್ಲಿ, ಆರ್ಟ್ ಗ್ಯಾಲರಿಗಳಲ್ಲಿ ಹೇರಳವಾಗಿ ಕಾಣಸಿಗುತ್ತವೆ.

ಬೃಹದೀಶ್ವರ ದೇವಾಲಯ ವರ್ಣಚಿತ್ರಗಳು: ಚೋಳ ದೊರೆ ಒಂದನೆಯ ರಾಜರಾಜ ಕಟ್ಟಿಸಿದ ಈ ದೇವಾಲಯ ಭಾರತೀಯ ನೃತ್ಯದ 81 ಕರಣಗಳನ್ನು ಪ್ರದರ್ಶಿಸುವ ಶಿಲ್ಪಗಳಿಗೆ ಹೆಸರಾಗಿದೆ. ನಾಟ್ಯಶಾಸ್ತ್ರದ ಕರ್ತನಾದ ಭರತನ ಪರಿಕಲ್ಪನೆಯನ್ನು ಅನುಕರಿಸುವಂತಿರುವ ಈ ಕರಣಶಿಲ್ಪಗಳು ದೇವಾಲಯ ವಾಸ್ತುಶಿಲ್ಪ ಚರಿತ್ರೆಯಲ್ಲಿ ಮೊತ್ತಮೊದಲ ದೃಶ್ಯ ನಿದರ್ಶನಗಳಾಗಿವೆ. ಈ ಶಿಲ್ಪಗಳಷ್ಟೇ ಅದ್ಭುತವಾದುವೆಂದರೆ ದೇವಾಲಯದ ಪ್ರದಕ್ಷಿಣಾ ಪಥದ ಗೋಡೆಗಳನ್ನು ಅಲಂಕರಿಸಿರುವ ವರ್ಣಚಿತ್ರಗಳು. ಸು.2160 ಚ.ಮೀ ನಷ್ಟು ಗೋಡೆಯ ಭಾಗವನ್ನು ತುಂಬಿರುವ ಈ ಚಿತ್ರಗಳನ್ನು ಕಠಿಣವಾದ ಫ್ರೆಸ್ಕೊ ತಂತ್ರವಿಧಾನದಿಂದ ಬಿಡಿಸಲಾಗಿದೆ. ಚಿತ್ರವಸ್ತುವನ್ನು ಪ್ರಧಾನವಾಗಿ ಶೈವ ಕಥಾನಕಗಳಿಂದ ಆಯ್ದುಕೊಳ್ಳಲಾಗಿದೆ. ರಾಜರಾಜನು ಶೈವಾರಾಧಕನಾಗಿದ್ದನೆಂಬುದನ್ನು ಇಲ್ಲಿ ಸ್ಮರಿಸಬಹುದು. ಶಿವ–ಪಾರ್ವತಿಯರ ವಿವಾಹ, ಶೈವ ಭಕ್ತ ಸುಂದರರ್ ಇವರ ದೃಷ್ಟಾಂತ, ಕೈಲಾಸದಲ್ಲಿರುವ ರಾವಣ, ದಕ್ಷಿಣಾ ಮೂರ್ತಿಯ ರೂಪದಲ್ಲಿರುವ ಶಿವ, ಚಿದಂಬರಂನಲ್ಲಿ ನಟರಾಜನನ್ನು ಪೂಜಿಸುತ್ತಿರುವ ರಾಜರಾಜ ಮತ್ತು ಅವನ ಮೂವರು ರಾಣಿಯರು, ದೇವಾಲಯದಲ್ಲಿ ಸ್ಥಾಪಿತಗೊಳ್ಳುತ್ತಿರುವ ಲಿಂಗವನ್ನು ಪೂಜಿಸುತ್ತಿರುವ ರಾಜರಾಜ–ಈ ದೃಶ್ಯಗಳು ಚಿತ್ರರೂಪದಲ್ಲಿ ಅಭಿವ್ಯಕ್ತಗೊಂಡಿವೆ. ಇನ್ನುಳಿದ ಭಾಗದಲ್ಲಿ ಚೋಳ ಚಿತ್ರಗಳ ಮೇಲೆಯೇ ಸ್ಥಳೀಯ ಪ್ರಭುಗಳ ಕಾಲದಲ್ಲಿ ಮತ್ತೆ ಚಿತ್ರಗಳನ್ನು ಬಿಡಿಸಲಾಗಿದ್ದು, ಇವನ್ನು ಇತ್ತೀಚೆಗೆ ವೈಜ್ಞಾನಿಕ ವಿಧಾನದಿಂದ ಪ್ರತ್ಯೇಕಿಸಿ ದೇವಾಲಯ ಸಂಕೀರ್ಣದಲ್ಲಿರುವ ಪ್ರತ್ಯೇಕ ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ .ಇದರಿಂದ ಮುಚ್ಚಿಹೋಗಿದ್ದ ಚೋಳ ಚಿತ್ರಗಳನ್ನು ಮತ್ತೆ ಕಾಣುವಂತೆ ಮಾಡಲಾಗಿದೆ. ಇದೊಂದು ಅಪೂರ್ವವಾದ, ಪ್ರಶಂಸನೀಯವಾದ ವೈಜ್ಞಾನಿಕ ಸಾಧನೆ.

ಚೋಳ ಚಿತ್ರಗಳು ಲಾಲಿತ್ಯಕ್ಕೆ, ಚಿತ್ರಕಾರರ ಕಾಲ್ಪನಿಕ ಪ್ರಜ್ಞೆಗೆ ಹಿಡಿದ ಕನ್ನಡಿಯಾಗಿವೆ. ದಕ್ಷಿಣ ಮೂರ್ತಿಯ ಚಿತ್ರ ದೃಶ್ಯದಲ್ಲಿ ನಲಿದಾಡುತ್ತಿರುವ ಮಂಗ, ಅಳಿಲು, ನವಿಲು, ಹಂಸ, ಗೂಬೆ ಮೊದಲಾದ ಪ್ರಾಣಿ–ಪಕ್ಷಿಗಳಿದ್ದು ನಾಗರ ಹಾವೊಂದು ಸಮೀಪಿಸಿದಾಗ ಈ ಪ್ರಾಣಿ ಪಕ್ಷಿಗಳ ಚಲನವಲನಗಳಲ್ಲಿ ಕಾಣುವ ಭಯ ಭೀತಿಯನ್ನು ಇಲ್ಲಿ ಮನೋಜ್ಞವಾಗಿ ಸೆರೆಹಿಡಿಯಲಾಗಿದೆ. ಸುಂದರರ್ ಕಥಾಚಿತ್ರದಲ್ಲಿ ಸಭಾ ಸದನಕ್ಕೆ ಹಕ್ಕಿಯ ಚಿತ್ರವಿನ್ಯಾಸದಿಂದ ಕೂಡಿದ ಬಟ್ಟೆಯ ಚಾವಣಿಯನ್ನು ಕಲಾವಿದನು ಬಿಡಿಸಿರುವನು. ಚಾವಣಿಯ ಬಟ್ಟೆಯನ್ನು ಚಿತ್ರಿಸುವಲ್ಲಿ ಸಮಕಾಲೀನ ಉಡುಗೆಯ ಬಟ್ಟೆಯ ವಿನ್ಯಾಸವನ್ನೇ ಅನುಕರಿಸಲಾಗಿದೆಯೇನೋ ಎಂಬ ಅನುಮಾನ ಮೂಡುತ್ತದೆ. ಭಕ್ತಿಪ್ರಧಾನ ದೃಶ್ಯಗಳಲ್ಲೂ ಕೆಲವೊಂದು ನೈಜ ವಿವರಗಳನ್ನು ಬಿಂಬಿಸಲಾಗಿದೆ. ಉದಾಹರಣೆಗೆ, ರಾಜರಾಜ ಮತ್ತು ಅವನ ರಾಣಿಯರು ನಟರಾಜನನ್ನು ಪೂಜಿಸುತ್ತಿರುವ ದೃಶ್ಯದಲ್ಲಿ ಹಿರಿಯರು, ಸಾಮಾನ್ಯ ವರ್ಗದ ಸ್ತ್ರೀಯರು ದೇವರ ಧ್ಯಾನದಲ್ಲಿ

ಮಗ್ನರಾಗಿದ್ದರೆ ಅವರ ಜೊತೆಗಿರುವ, ರಾಜಮನೆತನದ ಹೆಂಗಸರು ಹರಟೆಯಲ್ಲಿ ಮಗ್ನರಾಗಿದ್ದಾರೆ. ಇವರು ಧರಿಸಿರುವ ಬೆಲೆಬಾಳುವ ಆಭರಣಗಳು ಹಾಗೂ ಉಡುಗೆ ತೊಡುಗೆಗಳು ಪ್ರಾಯಶ: ಆ ಕಾಲದ ನವೀನ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ಬಾಗಿಲಿನ ಮೇಲಿನ ಮೊಳೆಯನ್ನೂ ಬಿಡದಂತೆ ಎಲ್ಲ ಸೂಕ್ಷ್ಮ ವಿವರಗಳನ್ನೂ ಈ ಚಿತ್ರದಲ್ಲಿ ಅತ್ಯಂತ ಸಹಜ ರೀತಿಯಲ್ಲಿ ಬಿಡಿಸಲಾಗಿದೆ. ನಟರಾಜನ ಚಿತ್ರವಂತೂ ಕಣ್ಣಿಗೆ ಹಬ್ಬವೇ ಸರಿ. ರಾಕ್ಷಸರೊಂದಿಗೆ ಯುದ್ಧದಲ್ಲಿ ತೊಡಗಿರುವ ತ್ರಿಪುರಾಂತಕ ಶಿವನ ದೃಶ್ಯದಲ್ಲಿ ಪ್ರತಿಯೊಂದು ಮುಖದಲ್ಲಿಯೂ ಒಂದೊಂದು ಭಾವವಿದೆ. ಶಿವನ ಮುಖದಲ್ಲಿ ವೀರರಸವಿದ್ದರೆ, ರಾಕ್ಷಸರ ವದನದಲ್ಲಿ ರೌದ್ರಭಾವವಿದೆ; ರಾಕ್ಷಸರ ಪತ್ನಿಯರ ಮುಖಗಳಲ್ಲಿ ವಿಹ್ವಲತೆ ಕಾಣುತ್ತದೆ. ಉಳಿದ ಚಿತ್ರಗಳು ತ್ರುಟಿತವಾಗಿದ್ದರೂ ಚೋಳ ಚಿತ್ರಕಾರರ ಕಲಾದೃಷ್ಟಿ ಹಾಗೂ ನೈಪುಣ್ಯ ಇವುಗಳಲ್ಲಿ ಎದ್ದುತೋರುತ್ತದೆ. (ವಿ.ಎಸ್.)

**ತಂತ್ರಸಮುಚ್ಚಯ: ನೋಡಿ–ವಾಸ್ತುಶಿಲ್ಪ (ದೇವಾಲಯ)**

**ತಕಲ್‌ಘಾಟ್–ಖಾಪ:** ಮಹಾರಾಷ್ಟ್ರದ ನಾಗಪುರ ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗದ ವಸತಿ ಹಾಗೂ ಗೋರಿ ನೆಲೆ. ಕೃಷ್ಣ ಎಂಬ ಸಣ್ಣ ಹಳ್ಳದ ಒಂದು ದಂಡೆಯ ಮೇಲೆ ಕಲ್ಲುವೃತ್ತ ಸಮಾಧಿಗಳಿರುವ ಖಾಪ ನೆಲೆಯೂ ಮತ್ತೊಂದರ ಮೇಲೆ ವಸತಿ ಅವಶೇಷಗಳಿರುವ ತಕಲ್‌ಘಾಟ್ ನೆಲೆಯೂ ಇವೆ. 1968–69ರಲ್ಲಿ ನಾಗಪುರ ವಿಶ್ವವಿದ್ಯಾಲಯದ ಎಸ್.ಬಿ. ದೇವ್ ಅವರು ಎರಡೂ ನೆಲೆಗಳಲ್ಲಿ ಉತ್ಖನನ ನಡೆಸಿದರು. ತಕಲ್‌ಘಾಟ್‌ನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಮೂರು ಹಂತಗಳಿವೆ. ಮೊದಲ ಉಪಹಂತದಲ್ಲಿ ಕಡುಗಂದು ಬಣ್ಣದ ಜೇಡಿಮಣ್ಣನ್ನು ದಮ್ಮಸು ಮಾಡಿ ನಿರ್ಮಿಸಿದ ನೆಲಗಟ್ಟುಗಳೂ ಆಧಾರ ಕಂಬಗಳ ಗುಳಿಗಳೂ ಇವೆ. ಮುಂದಿನ ಎರಡು ಹಂತಗಳ ನೆಲಗಟ್ಟುಗಳಲ್ಲಿ ಜೇಡಿಮಣ್ಣಿನ ಜೊತೆಗೆ ಸುಣ್ಣವನ್ನೂ ಬಳಸಲಾಗಿದೆ. ಮಣ್ಣುಮೆತ್ತಿದ ಬೊಂಬಿನ ತಡಿಕೆ ಗೋಡೆಗೂ ಸುಣ್ಣ ಲೇಪಿಸಲಾಗುತ್ತಿತ್ತು. ಮೂರೂ ಹಂತಗಳಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಹಾಗೂ ಅಭ್ರಕಯುಕ್ತ ಮಾಸಲುಕೆಂಪು ಪಾತ್ರೆಗಳ ಬಳಕೆ ಪ್ರಧಾನವಾಗಿತ್ತು. ಮೊದಲ ಪ್ರಕಾರದ ಅನೇಕ ಪಾತ್ರೆಗಳಲ್ಲಿ ಗೀರುಚಿತ್ರಗಳಿವೆ; ಎರಡನೆಯ ಪ್ರಕಾರದಲ್ಲಿ ಮಧ್ಯಮ ಗಾತ್ರದ ಸಂಗ್ರಹಣ ಜಾಡಿಗಳು ಅಧಿಕವಾಗಿವೆ. ಕಪ್ಪುಬಣ್ಣದ ಚಿತ್ರಗಳಿರುವ ಕೆಂಪು ಪಾತ್ರೆಗಳು ಅಪರೂಪವಾಗಿದ್ದವು. ಕಾರ್ನೇಲಿಯನ್ (ಎಚ್ಚಿದ ಹಾಗೂ ಸಾಮಾನ್ಯ), ಅಗೇಟ್, ಸ್ಫಟಿಕ ಹಾಗೂ ಗಾಜಿನ ಮಣಿಗಳು, ಕಬ್ಬಿಣದ ಪಟ್ಟಿಬಿಗಿದ ಕೊಡಲಿಗಳು (ಆಕ್ಸ್ ವಿದ್ ಕ್ರಾಸ್ ರಿಂಗ್ ಫಾಸ್ನರ್), ಚಮಚ, ಕಠಾರಿ, ಜಾನುವಾರು, ಹಂದಿ ಹಾಗೂ ಕುದುರೆಯ ಮೂಳೆಗಳು ಎಲ್ಲ ಹಂತಗಳಲ್ಲಿಯೂ ದೊರೆತಿವೆ. ಮೊದಲ ಉಪಹಂತದ ಇಂಗಾಲ 14 ಕಾಲಮಾನ 2505±100 (ಪ್ರ.ಶ.ಪೂ.555).

ಖಾಪ ಮತ್ತು ಇದರ ಸಮೀಪದಲ್ಲಿರುವ ಗಂಗಪುರದಲ್ಲಿ 26 ಕಲ್ಲುವೃತ್ತ ಸಮಾಧಿಗಳಿದ್ದವು. ಇವುಗಳ ವ್ಯಾಸ 26.5–12 ಮೀ. ವೃತ್ತದಲ್ಲಿ ಬಳಸಿದ ಕೆಲವೊಂದು ಬಂಡೆಗಳ ಮೇಲೆ ಸಣ್ಣಸಣ್ಣ ಕುಳಿಗಳು ಕಂಡುಬಂದವು. ಗಂಗಪುರದ 3 ಸಮಾಧಿಗಳಲ್ಲಿ ಉತ್ಖನನ ನಡೆಸಲಾಯಿತು. ಇಲ್ಲಿ ಸಿಕ್ಕ ಮಣ್ಪಾತ್ರೆಗಳು ವಸತಿಯಲ್ಲಿ ಸಿಕ್ಕ ಮೊದಲೆರಡು ಪ್ರಕಾರಗಳ ಮಣ್ಪಾತ್ರೆಗಳನ್ನು ಹೋಲುತ್ತವೆ. ಕೆಲವು ಸಮಾಧಿಗಳಲ್ಲಿ ಒಂದಕ್ಕಿಂತ ಹೆಚ್ಚಿನ ಅಸ್ಥಿಪಂಜರಗಳಿದ್ದವು. ಹೆಚ್ಚಿನ ಸಮಾಧಿಗಳಲ್ಲಿ ಶವವನ್ನು ಉತ್ತರ–ದಕ್ಷಿಣಾಭಿಮುಖವಾಗಿ ನೇರಭಂಗಿಯಲ್ಲಿ ಹೂಳಲಾಗಿದ್ದರೆ ಇನ್ನು ಕೆಲವದರಲ್ಲಿ ಕೆಲವೊಂದು ಮೂಳೆಗಳನ್ನು ಮಾತ್ರ ಮಣ್ಪಾತ್ರೆಯಲ್ಲಿ ಅಥವಾ ಒಂದು ಸಮಾಧಿಯಲ್ಲಿ ಕಂಡುಬಂದಂತೆ ತಾಮ್ರದ ತಟ್ಟೆಯಲ್ಲಿ ಇಡಲಾಗಿತ್ತು. ಕಬ್ಬಿಣದ ಪಟ್ಟಿಬಿಗಿದ ಕೊಡಲಿಗಳು, ವಿವಿಧ ರೂಪದ ಉಳಿ ಹಾಗೂ ಬಾಚಿ, ಕಠಾರಿ, ಭರ್ಜಿ ಮುಂತಾದ ಆಯುಧಗಳನ್ನೂ ಅರ (ನೇಲ್ ಪೇರರ್), ತವ ಮುಂತಾದ ಸಲಕರಣೆಗಳನ್ನೂ ಅಸ್ಥಿ ಅವಶೇಷಗಳೊಂದಿಗೆ ಹೂಳಲಾಗಿತ್ತು. ತಾಮ್ರದ ತಟ್ಟೆ ಹಾಗೂ ಅಲಂಕೃತ ಮುಚ್ಚಳಗಳು ಇಲ್ಲಿಯ ವಿಶೇಷ ಅವಶೇಷಗಳು. ಮುಚ್ಚಳಗಳು ಶಂಕುವಿನಾಕಾರವಾಗಿದ್ದು ತುದಿಯಲ್ಲಿ ಮುಖಾಮುಖಿಯಾಗಿ ಕೂತ ನಾಲ್ಕು ಹಕ್ಕಿಯ ಗೊಂಬೆಗಳಿವೆ. ಅಗೇಟ್ ಹಾಗೂ ಎಚ್ಚಿದ ಕಾರ್ನೇಲಿಯನ್ ಮಣಿಗಳು ವಿಪುಲ ಸಂಖ್ಯೆಯಲ್ಲಿದ್ದವು. ಇಲ್ಲಿಯ ಸಮಾಧಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಮಾನವ ಶವದೊಂದಿಗೆ ಕುದುರೆಯನ್ನು ಹೂಳಿರುವುದು. ಅನೇಕ ಸಮಾಧಿಗಳು ಇದಕ್ಕೆ ನಿದರ್ಶನವಾಗಿವೆ. ಕುದುರೆಯೊಂದಿಗೆ ಅದರ ಮುಖಕ್ಕೆ ತೊಡಿಸುತ್ತಿದ್ದ ತಾಮ್ರದ ತಗಡಿನ ಆಭರಣಗಳನ್ನೂ ಕಬ್ಬಿಣದ ಕಡಿವಾಣವನ್ನೂ ಹೂಳಲಾಗಿದೆ. ವಸತಿಯ ಅವಶೇಷಗಳಿಗೆ ದೊರೆತ ಕಾಲಮಾನದ ಆಧಾರದ ಮೇಲೆ ಸಮಾಧಿಗಳ ಕಾಲಮಾನ ಪ್ರ.ಶ.ಪೂ.6–7ನೆಯ ಶತಮಾನ ಎಂದು ಹೇಳಬಹುದು. (ವಿ.ಎಸ್.)

**ತಕ್ಷಶಿಲೆ:** ಪ್ರಾಚೀನ ಗಾಂಧಾರ ದೇಶದ ರಾಜಧಾನಿ; ಭಾರತದ ಪ್ರಾಚೀನತಮ ಉನ್ನತ ವಿದ್ಯಾಕೇಂದ್ರ; ಈಗ ಪಾಕಿಸ್ತಾನದ ರಾವಲ್ಪಿಂಡಿ ಜಿಲ್ಲೆಯಲ್ಲಿದೆ. ಈ ನಗರವನ್ನು ಭರತ ಸ್ಥಾಪಿಸಿದನೆಂದೂ ಅದಕ್ಕೆ ಈ ಹೆಸರು ತಕ್ಷನಿಂದ ಬಂದಿತೆಂದೂ ಪುರಾಣಗಳಲ್ಲಿ ಉಲ್ಲೇಖಗಳುಂಟು. ಜನಮೇಜಯರಾಯ ಸರ್ಪಯಾಗವನ್ನು ಆಚರಿಸಿದ್ದು ಇಲ್ಲೇ ಎನ್ನಲಾಗಿದೆ. ರಾಮಾಯಣವಾಗಲೀ ಮಹಾಭಾರತವಾಗಲೀ ಅದೊಂದು ವಿದ್ಯಾಕೇಂದ್ರವಾಗಿತ್ತೆಂಬ ಅಂಶವನ್ನು ಉಲ್ಲೇಖಿಸದಿದ್ದರೂ ಸಂಸ್ಕೃತಿ ನಾಗರಿಕತೆಗಳ ಕೇಂದ್ರವಾಗಿತ್ತೆಂಬ ಅಂಶವನ್ನು ಸೂಚಿಸುತ್ತವೆ.. ಜ್ಞಾನಾಭಿಮಾನಿಗಳಿದ್ದ ಈ ನಗರ ಅಂದಿಗಾಗಲೆ ಉನ್ನತ ಶಿಕ್ಷಣ ಕೇಂದ್ರವೂ ಆಗಿದ್ದಿರಬೇಕೆಂದು ಊಹಿಸಬಹುದು. ಪ್ರ.ಶ.ಪೂ.7ನೆಯ ಶತಮಾನದ ವೇಳೆಗಂತೂ ಅದು ಪ್ರಮುಖ ಉನ್ನತ ಶಿಕ್ಷಣ ಕೇಂದ್ರವಾಗಿ ಖ್ಯಾತಿಗಳಿಸಿತ್ತು. ಮಿಥಿಲೆ, ವಾರಾಣಸಿ, ರಾಜಗೃಹ ಮುಂತಾದೆಡೆಗಳಿಂದ ಬಂದ ವಿದ್ವಜ್ಜನ ಅಲ್ಲಿ ನೆಲೆಸಿದ್ದರು. ಇವರ ಖ್ಯಾತಿ ಅಪಾರವಾದದ್ದು. ಆದರೂ ಅಲ್ಲಿದ್ದ ಶಿಕ್ಷಣ ಸೌಲಭ್ಯಗಳನ್ನು ಪರಿಚಯ ಮಾಡಿಕೊಡುವ ಆಧಾರಗಳು ದೊರೆತಿಲ್ಲ. ಪ್ರ.ಶ.ಪೂ.6ನೆಯ ಶತಮಾನದಲ್ಲಿ ಈ ನಗರ ಪಾರಸಿಕರ ಧಾಳಿಗೂ ಪ್ರ.ಶ.ಪೂ.7ನೆಯ ಶತಮಾನದಲ್ಲಿ ಇಂಡೊಬ್ಯಾಕ್ಟ್ರಿಯನ್ನರ ಧಾಳಿಗೂ ಅನಂತರ ಪ್ರ.ಶ.ಪೂ.1ನೆಯ ಶತಮಾನದಲ್ಲಿ ಸಿತಿಯನ್ನರ ಧಾಳಿಗೂ ಕೊನೆಗೆ ಕುಷಾನರ ಧಾಳಿಗೂ ಒಳಗಾಯಿತು. ಆ ಎಲ್ಲ ಧಾಳಿಕಾರರೂ ಈ ನಗರವನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ತಮ್ಮ ಕಾಲದಲ್ಲಿ ತಮ್ಮ ದೇಶದ ಮಾದರಿಯಲ್ಲಿ ಇದನ್ನು ಮಾರ್ಪಡಿಸಲು ಯತ್ನಿಸಿರಬೇಕು. ನಗರ ಮೂರು ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿದ್ದುದನ್ನು ಇಲ್ಲಿಯ ಭೂಶೋಧನೆ ತೋರಿಸಿದೆ. ಪರಕೀಯರ ಸತತ ಸಂಪರ್ಕ ಈ ನಗರಕ್ಕೆ ಉಂಟಾಗಿದ್ದುದರಿಂದ ಇಲ್ಲಿಯ ವ್ಯವಹಾರಗಳಿಗೆ ಅಗತ್ಯವೆನಿಸಿರಬಹುದಾದ ಉನ್ನತ ಶಿಕ್ಷಣಕ್ಕೂ ವಿದ್ವತ್ತಿಗೂ ಅವಕಾಶವೂ ಪ್ರೋತ್ಸಾಹವೂ ಒದಗಿರಬೇಕು. ಪಾರಸಿಕರ ಪ್ರಭಾವದಿಂದ ಭಾರತದ ರಾಷ್ಟ್ರೀಯ ಲಿಪಿಯ ಸ್ಥಾನದಲ್ಲಿ ಪರ್ಷಿಯದ ಆಸ್ಥಾನದ ಲಿಪಿಯಾಗಿದ್ದ ಖರೋಷ್ಠಿ ಬಳಕೆಗೆ ಬಂದಿರಬೇಕು. ಇಂಡೊಬ್ಯಾಕ್ಟ್ರಿಯನ್ನರು ಗ್ರೀಸಿನಲ್ಲಿ ಅಂದಿಗಾಗಲೇ ಪ್ರಬುದ್ಧ ಸ್ಥಿತಿಗೇರಿದ್ದ ಸಾಹಿತ್ಯ ಸಂಸ್ಕೃತಿಗಳನ್ನು ಇಲ್ಲಿಗೆ ತಂದಿರಬೇಕು. ತಕ್ಷಶಿಲೆಯ ಪಂಡಿತರನೇಕರು ಗ್ರೀಕ್ ಭಾಷೆಯನ್ನು ಕಲಿತು ಅಲ್ಲಿ ನೆಲೆಗೊಳ್ಳುತ್ತಿದ್ದ ಗ್ರೀಕ್ ಮಾದರಿಯ ಆಡಳಿತ ವ್ಯವಸ್ಥೆಗೆ ಅಗತ್ಯವಾದ ಸಿಬ್ಬಂದಿಯ ತರಬೇತಿಗಾಗಿ ನೆರವಾಗುತ್ತಿದ್ದಿರಬೇಕು. ಗ್ರೀಸಿನಲ್ಲಿ ಅಂದು ಅಭಿನಯಿಸುತ್ತಿದ್ದ ಸಾಫೋಕ್ಲಿಸ್, ಯೂರಿಪಿಡೀಸ್ ಮುಂತಾದವರ ನಾಟಕ ಕೃತಿಗಳನ್ನೂ ಓದಿರಬೇಕು. ಇಲ್ಲಿ ವಾಸಿಸುತ್ತಿದ್ದ ಗ್ರೀಕರು ತಮ್ಮ ನಾಡಿನೊಡನೆ ಸಂಪರ್ಕ ಕಳೆದುಕೊಂಡಂತೆ ಇಲ್ಲಿಯವರ ಜೀವನದಲ್ಲಿ ಆಸಕ್ತಿವಹಿಸಿ ಸ್ಥಳೀಯ ಸಂಸ್ಕೃತಿಯನ್ನು ಅನುಕರಿಸಲಾರಂಭಿಸಿದರೆಂದು ತೋರುತ್ತದೆ. ಇವರ ಉಪಯೋಗಕ್ಕಾಗಿ ಭಾರತೀಯ ಜನಜೀವನ, ಧರ್ಮ, ಸಂಸ್ಕೃತಿಗಳಿಗೆ ಸಂಬಂಧಿಸಿದ್ದ ವಸ್ತುಗಳನ್ನಾರಿಸಿಕೊಂಡು ಗ್ರೀಕ್ ಮಾದರಿಯ ನಾಟಕಗಳನ್ನು ರಚಿಸಲು ಅಶ್ವಘೋಷನಂಥ ನಾಟಕಕಾರರು ಯತ್ನಿಸಿದ್ದಿರಬೇಕು. ಇವೆಲ್ಲದರ ಫಲವಾಗಿ ಇಲ್ಲಿನ ವಿದ್ವಜ್ಜನರ ಮೇಲೆ ಗ್ರೀಕ್ ಪ್ರಭಾವ ನಿರ್ದಿಷ್ಟವಾಗಿ ಬಿದ್ದಿತ್ತೆನ್ನಬಹುದು. ಆದರೂ ಇಲ್ಲಿನ ವಿದ್ಯಾಕೇಂದ್ರಗಳನ್ನು ವ್ಯವಸ್ಥೆಗೊಳಿಸಲು ಅದು ಎಷ್ಟರಮಟ್ಟಿಗೆ ಸಹಾಯ ಮಾಡಿರಬಹುದೆಂಬ ಅಂಶ ಅಸ್ಪಷ್ಟವಾಗಿದೆ.

ತಕ್ಷಶಿಲೆ ಭಾರತದ ಪ್ರಾಚೀನತಮ ವಿಶ್ವವಿದ್ಯಾಲಯ. ಇಲ್ಲಿ ಅನೇಕ ತತ್ತ್ವಚಿಂತಕರೂ ವಿದ್ವಜ್ಜನರೂ ಪಂಡಿತರೂ ಇರುತ್ತಿದ್ದು ಅನೇಕ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದರು. ಅವರು ಒಂದು ನಿರ್ದಿಷ್ಟ ಸಂಸ್ಥೆಗೆ ಸೇರಿದ್ದು ಅದರ ನಿರ್ದೇಶನದಂತೆ ಬೋಧಿಸುತ್ತಿರಲಿಲ್ಲ; ರೂಪಿಸಿದ ಯಾವ ಪಠ್ಯಕ್ರಮವನ್ನೂ ಅವರು ಅನುಸರಿಸುತ್ತಿರಲಿಲ್ಲ. ಇಲ್ಲಿ ಪ್ರತಿಯೊಬ್ಬ ಗುರುವಿನ ಬಳಿಯೂ 500 ಮಂದಿ ವಿದ್ಯಾರ್ಥಿಗಳಿರುತ್ತಿದ್ದರೆಂದು ಕೆಲವು ಜಾತಕಗಳು ಹೇಳುತ್ತವೆ. ಖ್ಯಾತಗುರುಗಳ ಬಳಿ 103 ರಾಜಕುಮಾರರು ಅಧ್ಯಯನ ನಡೆಸುತ್ತಿದ್ದುದಾಗಿ ಮಹಾಸೂತ ಸೋಮ ಜಾತಕದಲ್ಲಿ ಸೂಚನೆಯಿದೆ. ತಕ್ಷಶಿಲೆಯ ಬಳಿ ಈಚೆಗೆ ನಡೆಸಿರುವ ಭೂಶೋಧನೆ ಇಲ್ಲಿ ವಿಶಾಲಮಂದಿರಗಳಾಗಲೀ ಛಾತ್ರಾಲಯಗಳಾಗಲೀ ಇದ್ದ ಕುರುಹುಗಳನ್ನು ಸೂಚಿಸಿಲ್ಲ. ಬಹುಶಃ ವಿದ್ಯಾರ್ಥಿಗಳು ತಮ್ಮ ತಮ್ಮ ಗುರುಗಳ ಮನೆಯಲ್ಲೇ ವಾಸಿಸುತ್ತಿದ್ದಿರಬೇಕು. ಶ್ರೀಮಂತ ವಿದ್ಯಾರ್ಥಿಗಳು ಪ್ರತ್ಯೇಕ ನಿವಾಸಗಳನ್ನು ಏರ್ಪಡಿಸಿಕೊಳ್ಳುತ್ತಿದ್ದಿರಬಹುದು. ಎಂದರೆ ಮೊದಮೊದಲು ತಕ್ಷಶಿಲೆ ಅನೇಕ ಗುರುಕುಲಗಳ ಸಮೂಹವಾಗಿತ್ತು. ಪ್ರ.ಶ.ಪೂ. 6ನೆಯ ಶತಮಾನದ ವೇಳೆಗೆ ಇದು ಒಂದು ಖ್ಯಾತಿವೆತ್ತ ವಿದ್ಯಾಕೇಂದ್ರವಾಯಿತು. ಇಲ್ಲಿಗೆ ಆಗ ವಾಹನ ಸೌಕರ್ಯಗಳಾಗಲೀ ಮಾರ್ಗ ಸೌಲಭ್ಯಗಳಾಗಲೀ ಇರದಿದ್ದರೂ ಉಜ್ಜಯಿನಿ ಮುಂತಾದ ದೂರದ ಊರುಗಳಿಂದ ವಿದ್ಯಾರ್ಥಿಗಳು ಬಂದು ಅಧ್ಯಯನ ಮಾಡುತ್ತಿದ್ದುದೇ ಇದರ ಘನತೆಗೆ ಸಾಕ್ಷಿಯಾಗಿದೆ. ಕೋಸಲ, ಕಾಶಿ ಮುಂತಾದ ರಾಜಮನೆತನಗಳೂ ತಮ್ಮ ಮಕ್ಕಳಿಗೆ ಇಲ್ಲಿ ಜಾತಕ ಶಿಕ್ಷಣಕ್ಕೆ ವ್ಯವಸ್ಥೆ ಮಾಡುವುದು ಸಂಪ್ರದಾಯವಾಗಿ ಹೋಗಿತ್ತು. ಬಿಲ್ಲುವಿದ್ಯೆಯಲ್ಲೂ ಅಲ್ಲಿ ಸಿಗುತ್ತಿದ್ದ ಶಿಕ್ಷಣ ರಾಜಮನೆತನಗಳಿಗೆ ಪ್ರಿಯವೆನಿಸಿತ್ತು. ಬಿಂಬಸಾರನ ಪುತ್ರ ಜೀವಿತ ಏಳುವರ್ಷಗಳವರೆಗೆ ವೈದ್ಯ ವಿದ್ಯೆಯನ್ನು ಇಲ್ಲಿ ಅಧ್ಯಯನ ಮಾಡಿದನಂತೆ. ವ್ಯಾಕರಣಶಾಸ್ತ್ರದ ಕರ್ತೃವಾದ ಪಾಣಿನಿಯೂ ಇಲ್ಲೇ ಅಧ್ಯಯನ ಮಾಡಿರಬೇಕೆಂಬ ಊಹೆಯಿದೆ. ತಕ್ಷಶಿಲೆಯಲ್ಲಿ ಮೂರು ವೇದಗಳನ್ನೂ 18 ಶಾಸ್ತ್ರಗಳನ್ನೂ ವೃತ್ತಿಕಲೆಗಳನ್ನೂ ಬೋಧಿಸುತ್ತಿದ್ದ ಅಂಶವನ್ನು ಜಾತಕಗಳು ಸೂಚಿಸುತ್ತವೆ. ವೃತ್ತಿ ಕಲೆಗಳಲ್ಲಿ ವೈದ್ಯ, ಶಸ್ತ್ರಚಿಕಿತ್ಸೆ, ಬಿಲ್ಲುವಿದ್ಯೆ, ಯುದ್ಧ ಕಾರ್ಯಾಚರಣೆ, ಖಗೋಳಶಾಸ್ತ್ರ, ಜೋತಿಷ್ಯ, ಲೆಕ್ಕವಿಡುವಿಕೆ, ವ್ಯವಸಾಯ, ದೇವತಾಶಾಸ್ತ್ರ, ಸರ್ಪವಿದ್ಯೆ, ಮಂತ್ರಗಾರಿಕೆ–ಇವು ಮುಖ್ಯವಾದುವು. ತತ್ತ್ವಶಾಸ್ತ್ರ ಆದಿಯಿಂದಲೂ ಪ್ರಖ್ಯಾತವಾಗಿದ್ದಿತಲ್ಲದೆ ವೇದಗಳ ಜೊತೆಗೆ ವೇದಾಂತವನ್ನೂ ಬೋಧಿಸಲಾಗುತ್ತಿತ್ತು. ವಿದ್ಯಾರ್ಥಿಗಳು ತಮ್ಮ 16–17ನೆಯ ವಯಸ್ಸಿನಲ್ಲಿ ಇಲ್ಲಿಗೆ ಬಂದು ಶಿಕ್ಷಣವನ್ನು ಆರಂಭಿಸುತ್ತಿದ್ದರು. ಅನಂತರ 6–8 ವರ್ಷಗಳ ತನಕ ವಿದ್ಯಾಭ್ಯಾಸ ಮಾಡುತ್ತಿದ್ದರು. ವಿದ್ಯಾರ್ಥಿಗಳಲ್ಲಾಗಲೀ, ಅಧ್ಯಾಪಕರಲ್ಲಾಗಲೀ ಆಗ ಜಾತಿಭೇದವಿದ್ದಂತೆ ತೋರುವುದಿಲ್ಲ. ಬಹುಶಃ ಜಾತಿಪದ್ಧತಿ ಅಂದು ಅಷ್ಟಾಗಿ ಬಲಗೊಂಡಿರಲಿಲ್ಲ. ಒಬ್ಬ ಗುರುಗಳ ಬಳಿ ಬ್ರಾಹ್ಮಣ

ರಂತೆ ಕ್ಷತ್ರಿಯರೂ ವೈಶ್ಯರೂ ಇತರರೂ ಅಧ್ಯಯನ ಮಾಡುತ್ತಿದ್ದರು. ಬ್ರಾಹ್ಮಣ ವಿದ್ಯಾರ್ಥಿಗಳೂ ಬಿಲ್ಲುವಿದ್ಯೆಯನ್ನು ಅಭ್ಯಸಿಸುತ್ತಿದ್ದ ಅಂಶ ಕೆಲವು ಜಾತಕಗಳಲ್ಲಿ ಉಲ್ಲೇಖಗೊಂಡಿದೆ (ಶರಭಂಗ ಜಾತಕ). ಧನುರ್ವೇದಸಂಹಿತೆ ಯಲ್ಲಿ ಬ್ರಾಹ್ಮಣ ಅಥವಾ ಕ್ಷತ್ರಿಯ ಜಾತಿಯ ಗುರುಗಳು ಸೈನಿಕ ಶಿಕ್ಷಣವೀಯಬೇಕೆಂದು ಸೂಚಿಸಿದೆ. ಕ್ಷತ್ರಿಯರಾದ ಕೌರವರಿಗೆ ಬ್ರಾಹ್ಮಣರೆನಿಸಿದ ದ್ರೋಣಾಚಾರ್ಯರು ಗುರುಗಳಾಗಿದ್ದರು. ಬ್ರಾಹ್ಮಣರೂ ಆಗ ಎಲ್ಲ ವೃತ್ತಿಗಳನ್ನೂ ಅನುಸರಿಸುತ್ತಿದ್ದ ಅಂಶವನ್ನು ಸ್ಮೃತಿಗಳು ಕೂಡ ಸೂಚಿಸುತ್ತವೆ. ಆದ್ದರಿಂದ ಜಾತಿಪದ್ಧತಿ ವೃತ್ತಿಗಳ ಆಧಾರವನ್ನು ಇನ್ನೂ ಅನುಸರಿಸಿರಲಿಲ್ಲ. ಯಾವ ವಿದ್ಯಾರ್ಥಿಯೇ ಆಗಲಿ ತನಗೆ ಆಸಕ್ತಿಯಿರುವ ವೃತ್ತಿಯನ್ನು ಕಲಿಯುವ ಅವಕಾಶವಿತ್ತೆಂಬ ಅಂಶ ಈ ಎಲ್ಲ ಆಧಾರಗಳಿಂದ ದೃಢಪಡುತ್ತದೆ. ವಿದ್ಯಾರ್ಥಿಗಳು ತಾವು ಸೇರುವಾಗ ಅಥವಾ ಬಿಡುವಾಗ ಯಾವ ಗುರುದಕ್ಷಿಣೆಯನ್ನೂ ಕೊಡುತ್ತಿರಲಿಲ್ಲವೆಂದು ತೋರುತ್ತದೆ. ಅದಕ್ಕೆ ಬದಲು ಗುರುಗಳಿಗೆ ಅಗತ್ಯವಾದ ಸೇವಾಕಾರ್ಯಗಳನ್ನು ಮಾಡಿಕೊಡುತ್ತಿದ್ದಿರಬೇಕು. ಹಗಲು ಅವರಿಂದ ಬೇಕಾದ ಕೆಲಸ ಮಾಡಿಸಿಕೊಂಡು ಸಂಜೆ ಮತ್ತು ರಾತ್ರಿಯ ವೇಳೆ ಗುರುಗಳು ಅವರಿಗೆ ಪಾಠ ಹೇಳುತ್ತಿದ್ದರು.

ತಕ್ಷಶಿಲೆಯ ಖ್ಯಾತಿ ಮೌರ್ಯರ ಕಾಲಕ್ಕೆ ಇಳಿಮುಖವಾಗುತ್ತ ಬಂದಿತು. ಹಾಗೂ ಹೀಗೂ ಅದು ಸು. 250ರವರೆಗೂ ಉಳಿದುಕೊಂಡು ಬಂದಿತಾದರೂ ಕುಷಾಣರ ಅನಂತರ ಇಲ್ಲಿ ಅಧಿಕಾರಕ್ಕೆ ಬಂದ ಧೂರ್ತ ರಾಜಮನೆತನಗಳ ಹಿಡಿತಕ್ಕೆ ಸಿಕ್ಕಿ ಇಲ್ಲಿಯ ಶಿಕ್ಷಣ ಸೌಲಭ್ಯಗಳು ಸಿಗದಾದುವು. 5ನೆಯ ಶತಮಾನದ ವೇಳೆಗೆ ಇಲ್ಲಿ ಇಂಥ ಶಿಕ್ಷಣ ಸೌಲಭ್ಯಗಳಾವುವೂ ಉಳಿಯದಾದವು. ಈ ಕಾಲಾವಧಿಯಲ್ಲಿ ಫಾಹಿಯಾನ್ ಭಾರತದಲ್ಲಿ ಸಂಚರಿಸಿ ಇಲ್ಲಿಯ ಪ್ರಮುಖ ಶಿಕ್ಷಣ ಕೇಂದ್ರಗಳ ಬಗ್ಗೆ ವಿವರ ನೀಡುವಾಗ ತಕ್ಷಶಿಲೆಯ ಹೆಸರನ್ನು ಉಲ್ಲೇಖಿಸಿಲ್ಲ. ಅಲ್ಲಿ ಉಳಿದಿದ್ದ ಅಷ್ಟಿಷ್ಟು ಶಿಕ್ಷಣ ಸೌಲಭ್ಯಗಳೂ ಈ ಶತಮಾನದ ಕೊನೆಕೊನೆಗೆ ಆರಂಭವಾದ ಹೂಣರ ಧಾಳಿಗೆ ಸಿಕ್ಕಿದ್ದರಿಂದ ನಾಶವಾಗಿ ಹೋಗಿದ್ದವು. ಯುವಾನ್ ಚಾಂಗ್ 7ನೆಯ ಶತಮಾನದಲ್ಲಿ ಭಾರತಪ್ರವಾಸವನ್ನು ಕೈಗೊಂಡ ಕಾಲಕ್ಕೆ ಇಲ್ಲಿ ಯಾವ ಶೈಕ್ಷಣಿಕ ಸೌಲಭ್ಯವೂ ಉಳಿದಿರಲಿಲ್ಲ. ಸೌತ್ರಾಂತಿಕದ ಕರ್ತೃವಾದ ಕುಮಾರಲಬ್ಧನ ಮಠವೂ ಪಾಳು ಬಿದ್ದಿತ್ತು. ಇಲ್ಲಿ ಸ್ಥಾಪನೆಯಾಗಿದ್ದ ಅನೇಕ ಇತರ ಬೌದ್ಧಮಠಗಳೂ ಹಾಳಾಗಿದ್ದವು. ಹೀಗೆ ಪ್ರಪಂಚದಲ್ಲಿ ನಾಗರಿಕತೆಯ ಅರುಣೋದಯದಲ್ಲಿ ರೂಪುಗೊಂಡು ಸುಮಾರು 14 ಶತಮಾನಗಳವರೆಗೆ ನಡೆದು ಬಂದ ಈ ವಿದ್ಯಾಕೇಂದ್ರ ಹೂಣರ ಧಾಳಿಯಿಂದ ಅಂತಿಮವಾಗಿ ನಿರ್ನಾಮವಾಯಿತು. (ಬಿ.ಎಸ್.ಪಿ.;ಎಸ್.ವಿ.ಎಸ್.ಎಲ್.)

ಭೂಶೋಧನೆ: ತಕ್ಷಶಿಲೆಯಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮುಖ್ಯಾಧಿಕಾರಿ ಜಾನ್ ಮಾರ್ಷಲ್‌ನ ನಿರ್ದೇಶನದಲ್ಲಿ ಭೂಶೋಧನೆಗಳು ನಡೆದವು (1819–1934). ಈ ಭೂಶೋಧನೆಗಳ ಫಲವಾಗಿ ತಕ್ಷಶಿಲೆಯ ಇತಿಹಾಸವನ್ನು ಪ್ರ.ಶ.ಪೂ. 7ನೆಯ ಶತಮಾನದವರೆಗೂ ಕೊಂಡೊಯ್ಯಬಹುದಾಗಿದೆ.

ಮಾರ್ಷಲ್‌ನ ಭೂಶೋಧನೆಗಳಿಂದ ಇಲ್ಲಿ ಮೂರು ಪ್ರಾಚೀನ ನಗರಗಳ ಹಾಳು ನೆಲೆಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಅತ್ಯಂತ ಪ್ರಾಚೀನವಾದ ಭೀರ್ ನೆಲೆ ಪ್ರ.ಶ.ಪೂ.518ರಲ್ಲಿ ಡೇರಿಯಸ್ ಈ ಪ್ರದೇಶವನ್ನು ಗೆಲ್ಲುವ ಮೊದಲೇ ಅಸ್ತಿತ್ವಕ್ಕೆ ಬಂದಿತ್ತು. ಕ್ರಮೇಣ ದೊಡ್ಡ ನಗರವಾಗಿ ಬೆಳೆದು ಪರ್ಷಿಯ ಸಾಮ್ರಾಜ್ಯದ 20ನೆಯ ಸತ್ರಪಿಯ (ಪ್ರಾಂತ) ಮುಖ್ಯನಗರವಾಗಿತ್ತು. ಪ್ರ.ಶ.ಪೂ. 2ನೆಯ ಶತಮಾನದ ಆದಿಭಾಗದಲ್ಲಿ ಬ್ಯಾಕ್ಟ್ರಿಯದ ಗ್ರೀಕರು ಭಾರತದ ವಾಯವ್ಯ ಭಾಗಗಳನ್ನು ಆಕ್ರಮಿಸಿದಾಗ, ಅವ್ಯವಸ್ಥಿತವಾಗಿ ಬೆಳೆದಿದ್ದ ಭೀರ್ ನಗರ ತಮ್ಮ ರಾಜಧಾನಿಗೆ ಯೋಗ್ಯವಾಗಿಲ್ಲವೆಂದು ತಮ್ಮ ಸುಧಾರಿತ ನಗರ ಯೋಜನೆಗನುಗುಣವಾಗಿ ತಾಮ್ರನಾಲೆಯ ದಡದಲ್ಲಿ ಸರ್ಕಾಪ್ ನಗರವನ್ನು ಸ್ಥಾಪಿಸಿದರು. ನೇರವಾದ ಅಗಲವಾದ ರಸ್ತೆಗಳುಳ್ಳ, ಚೌಕಟ್ಟಿನ ತಳಹದಿಯುಳ್ಳ ಈ ನಗರ ಗ್ರೀಕರ ವಾಸ್ತುಯೋಜನೆಗನುಗುಣವಾಗಿ ನಿರ್ಮಿತವಾಗಿದೆ. ಉತ್ಖನನಗಳಲ್ಲಿ ಆ ಕಾಲದ ಅರಮನೆ, ಗ್ರೀಕ್ ಧಾರ್ಮಿಕ ಮಂದಿರಗಳು ಮತ್ತು ಸಾರ್ವಜನಿಕ ಕಟ್ಟಡಗಳ ಅವಶೇಷಗಳಲ್ಲದೆ ಜನಸಾಮಾನ್ಯರ ವಸತಿಗಳ ಅವಶೇಷಗಳೂ ಕಂಡುಬಂದಿವೆ. ನಗರದ ಸುತ್ತ ಸುಭದ್ರವಾದ 15ರಿಂದ 21½ ಅಡಿ ಅಗಲವಾದ ಕಲ್ಲಿನ ಕೋಟೆಗೋಡೆ, ಕಂದಕಗಳಿವೆ. ಕೋಟೆ ಗೋಡೆಯ ಹೊರ ಭಾಗದಲ್ಲಿ ಅಲ್ಲಲ್ಲಿ ಚಚ್ಚೌಕನಾದ ಬುರುಜುಗಳನ್ನು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಕೋಟೆಯ ಒಳಭಾಗದಲ್ಲಿ ಹಥಿಯಾಲ್ ಬೆಟ್ಟಸರಣಿಯ ಮೂರು ಶಿಖರಗಳೂ ಪ್ರತ್ಯೇಕವಾದ ಮತ್ತೊಂದು ಗುಡ್ಡವೂ ಇವೆ. ಈ ಪ್ರತ್ಯೇಕ ಗುಡ್ಡದ ಮೇಲೆ ಅರಮನೆ, ಸಾರ್ವಜನಿಕ ಕಟ್ಟಡಗಳಿದ್ದ ನಗರದ ಕೇಂದ್ರ ಪ್ರದೇಶವಿದ್ದಿರಬಹುದು. ಬೆಟ್ಟದ ಸರಣಿಯ ನಡುವಣ ಕಣಿವೆಯಲ್ಲಿ ಕೋಟೆಯ ಮಹಾದ್ವಾರವಿತ್ತು. ಸರ್ಕಾಪ್ ನಗರದ ರಸ್ತೆಗಳ ಬದಿಗಳಲ್ಲಿ ಇರುವ ದೊಡ್ಡ ತೆರೆದ ಚರಂಡಿ, ಮನೆಗಳ ಚರಂಡಿ ವ್ಯವಸ್ಥೆ, ಅಲ್ಲಲ್ಲಿ ಕಾಣುವ ಬಾವಿಗಳು–ಇವೆಲ್ಲ ನಗರ ನೈರ್ಮಲ್ಯದ ಬಗೆಗೆ ಅಂದು ಇದ್ದ ವ್ಯವಸ್ಥೆಯನ್ನು ಸೂಚಿಸುತ್ತವೆ. ನಗರದ ಹೊರಭಾಗದಲ್ಲಿ ಬಡಜನರ ಕಾರ್ಮಿಕರ ವಸತಿಗಳೂ ಗ್ರೀಕ್ ದೇವತೆಯೊಂದರ ಮಂದಿರವೂ ಇದ್ದವು.

ಬ್ಯಾಕ್ಟ್ರಿಯದ ಗ್ರೀಕರು, ಶಕರು ಮತ್ತು ಪಾರ್ತಿಯನರ ಕಾಲಗಳಲ್ಲಿ ಈ ನಗರ ರಾಜಧಾನಿಯಾಗಿ ಮುಂದುವರಿದರೂ ಬಹುಶಃ ಮೊದಲನೆಯ ಕನಿಷ್ಕನ ಕಾಲದಲ್ಲಿ ಹೊಸ ರಾಜಧಾನಿಯಾದ ಸರ್‌ಸುಖ್ ನಗರವನ್ನು ಸರ್ಕಾಪ್ ನಗರದ ಈಶಾನ್ಯದಲ್ಲಿ ನಿರ್ಮಿಸಲಾಯಿತು. ಚಚ್ಚೌಕವಾದ ಪ್ರದೇಶಗಳನ್ನೊಳಗೊಂಡ ಈ ನಗರದ ಸುತ್ತಳತೆ ಸು.5 ಕಿಮೀಗಳಷ್ಟಿತ್ತು. ಕೋಟೆ ಗೋಡೆಯ ಅಗಲ 18 ಅಡಿಗಳಿದ್ದು ಅದನ್ನು ಕಲ್ಲಿನಲ್ಲಿ ಕಟ್ಟಲಾಗಿತ್ತು. ಬುರುಜುಗಳು ವೃತ್ತಾಕಾರವಾಗಿದ್ದುವು. ಅವನ್ನು 90 ಅಡಿಗಳ ಅಂತರದಲ್ಲಿ ಕಟ್ಟಲಾಗಿತ್ತು. ಕೋಟೆಯ ಒಳಭಾಗದಲ್ಲಿ ಈಗ ಮೂರು ಗ್ರಾಮಗಳಿರುವುದರಿಂದ ಅಲ್ಲಿರುವ ಅವಶೇಷಗಳನ್ನು ಶೋಧಿಸಲಾಗಿಲ್ಲ. ಸರ್‌ಸುಖ್ 7–8ನೆಯ ಶತಮಾನಗಳಲ್ಲಿ ಕುಷಾಣ ಮತ್ತು ಕಿದಾರ ಕುಷಾಣ ರಾಜ್ಯಗಳು ನಾಶವಾಗುವವರೆಗೂ ರಾಜಧಾನಿಯಾಗಿತ್ತು.

ಮಾರ್ಷಲ್‌ನ ಭೂಶೋಧನೆಗಳಿಂದ ತಕ್ಷಶಿಲೆಯ ಈ ಮೂರು ಪ್ರಾಚೀನ ನಗರ ನೆಲೆಗಳಲ್ಲದೆ, ನಗರಗಳ ಹೊರವಲಯದಲ್ಲಿ ಗುಡ್ಡ ಕಣಿವೆಗಳ ಪ್ರದೇಶದಲ್ಲಿದ್ದ ನೂರಾರು ಬೌದ್ಧಸ್ತೂಪ, ವಿಹಾರಗಳ ಅವಶೇಷಗಳು ಬೆಳಕಿಗೆ ಬಂದಿವೆ. ಕಣಿವೆಯ ದಕ್ಷಿಣ ಭಾಗದಲ್ಲಿ ಹಲವಾರು ಪ್ರತ್ಯೇಕವಾದ ಎತ್ತರದ ಗುಡ್ಡಗಳಿವೆ. ಅವುಗಳ ಶಿಖರ ಪ್ರದೇಶಗಳಲ್ಲಿ ಸುತ್ತಲ ಪ್ರಕೃತಿ ಸೌಂದರ್ಯದ ನಡುವೆ ಈ ಬೌದ್ಧ ನಿರ್ಮಾಣಗಳನ್ನು ರಚಿಸಲಾಗಿದೆ. ಅವುಗಳಲ್ಲಿ ಅತ್ಯಂತ ದೊಡ್ಡದು ಹಾಗೂ ಮುಖ್ಯವಾದುದು ಧರ್ಮರಾಜಿಕ ಸ್ತೂಪ. ಇದು ತಾಮ್ರನಾಲೆಯ ದಡದಲ್ಲಿ ಎತ್ತರದ ಮೈದಾನದಲ್ಲಿದೆ. ಮೊದಲಿಗೆ ಅಶೋಕನ ಕಾಲದಲ್ಲಿ ಕಟ್ಟಲಾಗಿದ್ದು ಮತ್ತೆ ಕುಷಾಣರ ಕಾಲದಲ್ಲಿ ವಿಸ್ತಾರವಾಗಿ ಪುನರ್ರಚಿತವಾಗಿದೆ. ಎತ್ತರವಾದ ಜಗಲಿಯ ಮೇಲೆ ವೃತ್ತಾಕಾರದ ಸ್ತೂಪವನ್ನು ಕಟ್ಟಲಾಗಿದೆ. ಹೊರಮೈಮೇಲಿರುವ ಉಬ್ಬುತಗ್ಗುಗಳು, ಗೂಡುಗಳು, ಬುದ್ಧ, ಬೋಧಿಸತ್ವ ಮತ್ತಿತರ ಬೌದ್ಧ ದೇವತೆಗಳ ಉಬ್ಬು ಚಿತ್ರಗಳು ಕಟ್ಟಡದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಈ ಅಲಂಕರಣಗಳನ್ನು ಕಾಲಕ್ರಮದಲ್ಲಿ ಮಾಡಿದರೆಂಬ ಅಂಶ ಇಲ್ಲಿ 4–5ನೆಯ ಶತಮಾನಗಳಲ್ಲಿ ನಿರ್ಮಿಸಿದ ಸ್ತೂಪಗಳ ಮೇಲಿನ ಅಲಂಕರಣಗಳಿಂದ ವ್ಯಕ್ತವಾಗುತ್ತವೆ. ಮುಖ್ಯ ಸ್ತೂಪದ ಸುತ್ತ ಹಲವಾರು ಸಣ್ಣಪುಟ್ಟ ಸ್ತೂಪಗಳನ್ನು ವಿವಿಧ ಕಾಲಗಳಲ್ಲಿ ನಿರ್ಮಿಸಲಾಗಿದೆ. ಮುಖ್ಯ ಸ್ತೂಪದ ಸುತ್ತ ಪ್ರದಕ್ಷಿಣಾ ಪಥದಂಚಿನಲ್ಲಿ ಅನೇಕ ಸಣ್ಣ ಗುಡಿಗಳನ್ನು ಕಟ್ಟಲಾಗಿದೆ. ಈ ಗುಡಿಗಳಲ್ಲಿ ಅಲ್ಲಿ ವಾಸಿಸಿ ನಿರ್ವಾಣ ಪಡೆದ ಪ್ರಮುಖ ಬೌದ್ಧ ಸನ್ಯಾಸಿಗಳ ಸ್ಮಾರಕ ಸ್ತೂಪಗಳಿವೆ. ಹೊರವಲಯದಲ್ಲಿ ಮತ್ತೆ ಕೆಲವು ಕಾಲ ವಿಶಾಲ ಗುಡಿಗಳನ್ನು ಕಟ್ಟಲಾಗಿದೆ. ಅವುಗಳಲ್ಲಿ ನೈರುತ್ಯ ಮೂಲೆಯಲ್ಲಿರುವ ಗಜಪೃಷ್ಠಾಕೃತಿಯ ಗುಡಿ ಗಮನಾರ್ಹ.

ಧರ್ಮರಾಜಿಕ ಸ್ತೂಪದ ಆಗ್ನೇಯದಲ್ಲಿ ಮತ್ತೆ ಕೆಲವು ಸಣ್ಣ ಸ್ತೂಪಗಳಿವೆ. ಅವನ್ನು ದಾಟಿ ಮುಂದೆ ನಡೆದರೆ ಅಶೋಕನ ಮಗ ಕುನಾಲನ ಸ್ಮರಣಾರ್ಥವಾಗಿ ಕಟ್ಟಿಸಲಾಯಿತೆಂದು ಹೇಳಲಾದ ಕುನಾಲ ಸ್ತೂಪವಿದೆ. ಸರ್ಕಾಪ್ ನಗರವನ್ನು ದಾಟಿದರೆ ಜಾಂಡಿಯಾಲ್ ಮಂದಿರ ಬರುತ್ತದೆ. ಗ್ರೀಕ್ ದೇವಾಲಯಗಳ ಶೈಲಿಯ ಈ ಕಟ್ಟಡವನ್ನು ಬಹುಶಃ ಜರತುಷ್ಟ್ರ ಪಂಥದ ಮಂದಿರವೆಂದು ಮಾರ್ಷಲ್ ಅಭಿಪ್ರಾಯಪಟ್ಟಿದ್ದಾನೆ. ಮುಂದೆ ಕೆಲವು ಸ್ತೂಪ, ವಿಹಾರಗಳ ಅನಂತರ ಸರ್‌ಸುಖ್ ನಗರದ ಪರಿಧಿ ಮುಗಿದು ಲಾಲ್‌ಚಕ್ ಮತ್ತು ಭಲ್ಲರ್ ಸ್ತೂಪಗಳು ಬರುತ್ತವೆ. ಇವಲ್ಲದೆ ತಕ್ಷಶಿಲೆಯಲ್ಲಿರುವ ಮೊಹ್ರಮೊರಾಡು, ಪಿಪ್ಪಲಾ ಮತ್ತು ಜಾಲಿಯಾನ್ ಸ್ತೂಪಗಳು ವಿಹಾರಗಳು ಅಲ್ಲಿಯ ಬೌದ್ಧ ನಿರ್ಮಾಣಗಳ ಉತ್ತಮ ನಿದರ್ಶನಗಳಾಗಿದ್ದು ಉತ್ತಮಸ್ಥಿತಿಯಲ್ಲಿ ಉಳಿದುಬಂದಿದೆ. ಜಾಲಿಯಾನ್ ಸ್ತೂಪ ಮತ್ತು ಅದಕ್ಕೆ ಸೇರಿದ ವಿಹಾರಗಳು ಈ ಪ್ರದೇಶದ ಬೌದ್ಧ ನಿರ್ಮಾಣಗಳ ಉತ್ತಮ ಮಾದರಿಯೆಂದು ಪರಿಗಣಿಸಲಾಗಿದೆ. (ಬಿ.ಕೆ.ಜಿ)

**ತಡಕನಹಳ್ಳಿ:** ಧಾರವಾಡ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿರುವ ಬೃಹತ್ ಶಿಲಾಯುಗದ ಗೋರಿನೆಲೆ. ಇಲ್ಲಿ 38 ಕಲ್ಲುವೃತ್ತ ಗೋರಿಗಳಿವೆ. ಕೆಲವೊಂದರಲ್ಲಿ ವೃತ್ತಗಳ ಒಳಗೆ ಕಲ್ಗುಪ್ಪೆಗಳಿವೆ. ವೃತ್ತಗಳ ವ್ಯಾಸ 9–11.5ಮೀ. ಇವುಗಳ ಪೈಕಿ 4 ಗೋರಿಗಳನ್ನು ಎಮ್.ಎಸ್. ನಾಗರಾಜರಾವ್ 1978ರಲ್ಲಿ ಉತ್ಖನನದಿಂದ ಹೊರತೆಗೆದರು. ಎರಡರಲ್ಲಿ ಅಸ್ಥಿ ಮಡಕೆಗಳಿದ್ದವು. ಉತ್ಖನನಕ್ಕೊಳಪಟ್ಟ ಗೋರಿಗಳು ಶವಕುಣಿಗಳು. ಕುಣಿಯನ್ನು ಮಣ್ಣಿನ ಅಡಿಯಲ್ಲಿರುವ ನೈಸರ್ಗಿಕ ಕಲ್ಲಿನ ನಿಕ್ಷೇಪದವರೆಗೆ ಅಗೆಯಲಾಗಿದೆ. ಕುಣಿಯ ತಳದಲ್ಲಿ ಮಣ್ಪಾತ್ರೆಗಳನ್ನು ಇಟ್ಟು ಇವುಗಳ ಮೇಲೆ ಅಂಟುಮಣ್ಣನ್ನು ಸಮತಟ್ಟಾಗಿ ಹಾಸಲಾಗಿದೆ. ಅಸ್ಥಿ ಅವಶೇಷಗಳನ್ನು ಈ ದಂಡೆಯ ಮೇಲಿಟ್ಟು ಕುಣಿಯನ್ನು ಅಂಟುಮಣ್ಣು ಮತ್ತು ಸಣ್ಣ ಕಲ್ಲುಗಳಿಂದ ಮುಚ್ಚಲಾಗಿದೆ. ಒಂದು ಗೋರಿಯಲ್ಲಿ ಮಣ್ಣಿನ ದಂಡೆಯ ಮೇಲೆ ಎರಡು ಮಾನವ ತಲೆಬುರುಡೆಗಳು, ಉದ್ದ ಮೂಳೆಗಳು ಹಾಗೂ ಪ್ರಾಣಿಗಳ ಮೂಳೆಗಳ ಜೊತೆಗೆ ಕಬ್ಬಿಣದ ಒಂದು ಬಾಣದ ಮೊನೆ ಮತ್ತು ಕಠಾರಿ ಇದ್ದವು. ಈ ಗೋರಿಯ ತಳದಲ್ಲಿದ್ದ ಮಣ್ಪಾತ್ರೆಗಳೆಂದರೆ ಕಪ್ಪು–ಕೆಂಪು ದ್ವಿವರ್ಣದ ಬಟ್ಟಲು, ಶಂಕುವಿನಾಕಾರದ ಮುಚ್ಚಳ, ಸಣ್ಣ ಗೋಲ ಮಡಕೆ, ಕಪ್ಪು ಮತ್ತು ಕೆಂಪುಬಣ್ಣದ ಮುಚ್ಚಳಗಳು, ಕೆಂಪುಬಣ್ಣದ 4 ಕಾಲಿರುವ ಮಡಕೆ ಮತ್ತು 4 ನಳಿಕೆಗಳಿರುವ ಮಡಕೆಗಳು, ಬಿಳಿಬಣ್ಣದ ಚಿತ್ರಗಳಿದ್ದ ಕಪ್ಪು–ಕೆಂಪು ದ್ವಿವರ್ಣದ ಬಟ್ಟಲುಗಳು ಇದರೊಳಗಿದ್ದುದು ವಿಶೇಷವಾಗಿದೆ. ಎರಡು ಗೋರಿಗಳಲ್ಲಿ 34 ಪಾತ್ರೆಗಳು, 3ನೆಯದರಲ್ಲಿ 36 ಮತ್ತು 4ನೆಯದರಲ್ಲಿ 27 ಪಾತ್ರೆಗಳಿದ್ದವು. ಇವುಗಳಲ್ಲಿದ್ದ ಕಬ್ಬಿಣದ ಉಪಕರಣಗಳು ದೊಡ್ಡ ಕೊಡಲಿ, ಬಾಣ ಮತ್ತು ಭರ್ಜಿಯ ಮೊನೆಗಳು, ಚೂರಿ/ಚಾಕು ಮತ್ತು ಕಠಾರಿ. ಒಂದು ಗೋರಿಯಲ್ಲಿ 9 ಕಬ್ಬಿಣದ ಉಪಕರಣಗಳಿದ್ದರೆ ಉಳಿದರೆಡರಲ್ಲಿ 6 ಮತ್ತು 4 ಉಪಕರಣಗಳಿದ್ದವು. ಈ ಗೋರಿಗಳ ಅವಶೇಷಗಳು, ಮುಖ್ಯವಾಗಿ ಬಿಳಿ ಚಿತ್ರವುಳ್ಳ ಪಾತ್ರೆಗಳು ಮತ್ತು ಕಬ್ಬಿಣದ ಉಪಕರಣಗಳು, ಸಮೀಪದ ಹಳ್ಳೂರಿನ ಉತ್ಖನನದಲ್ಲಿ ಕಂಡುಬಂದ ನವಶಿಲಾಯುಗ–ಕಬ್ಬಿಣಯುಗದ ಸಮ್ಮಿಶ್ರ ಹಂತದ ಅವಶೇಷಗಳನ್ನು ಹೋಲುತ್ತವೆ. ಹಳ್ಳೂರಿನಲ್ಲಿ ಈ ಹಂತ ಪ್ರ.ಶ.ಪೂ.1000ದ ಅವಧಿಯದೆಂದು ನಿಗದಿಯಾಗಿದೆ. ಈ ಆಧಾರದ ಮೇಲೆ ಇಲ್ಲಿನ ಗೋರಿಗಳು ಇದೇ ಕಾಲಾವಧಿಯದ್ದಾಗಿರುವ ಸಾಧ್ಯತೆಯಿದೆ. (ಎಂ.ಎಸ್.ಎನ್.)

**ತರದಿಹ್: ನೋಡಿ–ಗಯ**

**ತರೈನ್ ಕದನಗಳು:** ಮೊದಲನೆಯ ಎರಡು ಕದನಗಳು ಘೋರಿ ಮಹಮ್ಮದ್ ಮತ್ತು ಚೌಹಾಣ ಮನೆತನದ ದೊರೆ ಪೃಥ್ವೀರಾಜ ಇವರ ನಡುವೆಯೂ ಮೂರನೆಯ ಕದನ ದೆಹಲಿಯಲ್ಲಿ ಸುಲ್ತಾನ ಇಲ್ತಮಿಷ್ ಮತ್ತು ಘಜ್ನಿಯ ತಾಜುದ್ದೀನ್ ಇಲ್ದಿಜ್ ಇವರ ನಡುವೆಯೂ ನಡೆದವು.

ಒಂದನೆಯ ತರೈನ್ ಕದನ ನಡೆದಿದ್ದು 1190–91ರಲ್ಲಿ. ಘೋರಿ ಮಹಮ್ಮದನ ಸೇನೆ ಪೃಥ್ವೀರಾಜನ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ದಾಳಿ ಮಾಡತೊಡಗಿದಾಗ ಪೃಥ್ವೀರಾಜ ಎರಡು ಲಕ್ಷ ಕುದುರೆಗಳೂ ಮೂರು ಸಾವಿರ ಆನೆಗಳೂ ಇದ್ದ ದೊಡ್ಡ ಸೈನ್ಯದೊಂದಿಗೆ ತನ್ನ ಸಾಮಂತ ರಜಪೂತ ದೊರೆಗಳೊಡಗೂಡಿ, ಘೋರಿ ಮಹಮ್ಮದ್ ಬೀಡುಬಿಟ್ಟಿದ್ದ ತಬರಿಂಧಾ (ಈಗಿನ ಸರ್‌ಹಿಂದ್) ಕಡೆಗೆ ಹೊರಟ. ಮಹಮ್ಮದ್ ಇವನನ್ನು ತರೈನ್‌ನಲ್ಲಿ ಎದುರಿಸಿದ. ಅಲ್ಲಿ ನಡೆದ ಕದನದಲ್ಲಿ ಮಹಮ್ಮದ್ ಸೈನ್ಯದ ಎಡ–ಬಲ ಪಕ್ಕಗಳು ಬಲಗುಂದಿದುವು. ಆ ಸೈನಿಕರು ಪಲಾಯನ ಮಾಡಿದರು. ಮಹಮ್ಮದ್‌ನ ಸೇನೆ ಕರಗಿತು. ಮಹಮ್ಮದ ಕುದುರೆಯ ಮೇಲೆ ಕುಳಿತು ತನ್ನ ಕತ್ತಿಯನ್ನು ಹಿಡಿದು, ಅಳಿದುಳಿದ ಸೇನೆಯೊಂದಿಗೆ ರಜಪೂತರತ್ತ ಮುನ್ನುಗ್ಗಿದ. ದೆಹಲಿಯ ಗೋವಿಂದರಾಜ ಇವನನ್ನು ಕಂಡು, ತನ್ನ ಆನೆಯನ್ನು ಮಹಮ್ಮದ್‌ನ ಕಡೆಗೆ ನುಗ್ಗಿಸಿದ. ಮಹಮ್ಮದ್ ಅವನ ಮೇಲೆ ಭರ್ಜಿಯೊಂದನ್ನು ಎಸೆದ. ಗೋವಿಂದರಾಜನ ಮುಂದಿನ ಎರಡು ಹಲ್ಲುಗಳು ಮುರಿದವು. ಗೋವಿಂದರಾಜ ಪ್ರತಿಯಾಗಿ ಎಸೆದ ಭಲ್ಲೆಯಿಂದ ಸುಲ್ತಾನನ ತೋಳಿನಲ್ಲಿ ತೀವ್ರವಾದ ಗಾಯವಾಯಿತು. ಮಹಮ್ಮದ್ ಬೀಳದಂತೆ ಖಿಲ್ಜಿ ಸೈನಿಕನೊಬ್ಬ ತಡೆದು ಅವನನ್ನು ರಣರಂಗದಿಂದ ಆಚೆಗೆ ಕರೆದೊಯ್ದ. ಮಹಮ್ಮದ್ ಸೋತು ಹಿಂದಿರುಗಬೇಕಾಯಿತು. ಈ ಕದನದಲ್ಲಿ ರಜಪೂತರ ಕಡೆ ಪ್ರಧಾನಪಾತ್ರ ವಹಿಸಿದ್ದವನು ಪೃಥ್ವೀರಾಜನ ದಂಡನಾಯಕನಾಗಿದ್ದ ಸ್ಕಂದ.

ಎರಡನೆಯ ತರೈನ್ ಕದನ 1192ರಲ್ಲಿ ನಡೆಯಿತು. ಪೃಥ್ವೀರಾಜನಿಂದ ಪರಾಜಿತನಾದ ಘೋರಿ ಮಹಮ್ಮದ್ 1,20,000 ಸೈನಿಕರ ಭಾರಿ ಸೈನವೊಂದನ್ನು ಘಜ್ನಿಯಲ್ಲಿ ಜಮಾಯಿಸಿ, ಪೆಷಾವರ್ ಮತ್ತು ಮುಲ್ತಾನ್ ಮೂಲಕ ಲಾಹೋರಿಗೆ ಬಂದು ಅಲ್ಲಿಂದಲೂ ನೆರವು ಪಡೆದುಕೊಂಡು, ಪೃಥ್ವೀರಾಜನಿಗೆ ಒಂದು ಓಲೆ ಕಳುಹಿಸಿದ. ಪೃಥ್ವೀರಾಜ ಇಸ್ಲಾಂ ಧರ್ಮವನ್ನು ಸ್ವೀಕರಿಸುವುದಲ್ಲದೆ ಮಹಮ್ಮದ್ ಸಾರ್ವಭೌಮತ್ವವನ್ನೊಪ್ಪಬೇಕೆಂದೂ ಇಲ್ಲದಿದ್ದರೆ ಯುದ್ಧವನ್ನೆದುರಿಸಬೇಕಾದೀತೆಂದೂ ತಿಳಿಸಿದ. ಪೃಥ್ವೀರಾಜ ಇದನ್ನು ತಿರಸ್ಕರಿಸಿ, 3 ಲಕ್ಷ ಕುದುರೆಗಳಿಂದಲೂ 3 ಸಾವಿರ ಆನೆಗಳಿಂದಲೂ ಕಾಲಾಳುಗಳಿಂದಲೂ ಕೂಡಿದ ದೊಡ್ಡ ಸೈನ್ಯವನ್ನು ಕೂಡಿಸಿ, ಅನೇಕ ರಾಜರ ಸಹಾಯವನ್ನು ಪಡೆದು, ಹಿಂದಿನ ವಿಜಯದ ನೆನಪಿನಿಂದ ಕೂಡಿದ ಉತ್ಸಾಹದಿಂದ ಮುನ್ನಡೆದ. ಮೊದಲನೆಯ ಕದನದ ಸಮಯದಲ್ಲಿ ದಂಡನಾಯಕನಾಗಿದ್ದ ಸ್ಕಂದ ಬೇರೊಂದೆಡೆಯಲ್ಲಿ ಯುದ್ಧನಿರತನಾಗಿದ್ದುದರಿಂದ ಅವನು ಬರಲಾಗಲಿಲ್ಲ. ಇನ್ನೊಬ್ಬ ದಳಪತಿ ಉದಯರಾಜ ಹೊರಡುವುದು ತಡವಾಯಿತು. ದೆಹಲಿಯ ಗೋವಿಂದರಾಜ ಹಾದಿಯಲ್ಲಿ ಪೃಥ್ವೀರಾಜನನ್ನು ಕೂಡಿಕೊಂಡ. ಪೃಥ್ವೀರಾಜ ಮುಂದುವರಿಯ ಬಾರದೆಂದು ಸೋಮೇಶ್ವರನೆಂಬ ಮಂತ್ರಿ ಅವನಿಗೆ ಸಲಹೆ ನೀಡಿದ. ಸೋಮೇಶ್ವರನ ಸಲಹೆಯನ್ನು ಪೃಥ್ವೀರಾಜ ಸಂಶಯ ದೃಷ್ಟಿಯಿಂದ ನೋಡಿದ. ಅವನು ದ್ರೋಹ ಬಗೆಯುತ್ತಿದ್ದಾನೆಂದು ಸಂದೇಹಿಸಿ ಅವನ ಕಿವಿಗಳನ್ನು ಕತ್ತರಿಸಿ ಅವನನ್ನು ವಜಾ ಮಾಡಿದ. ಸೋಮೇಶ್ವರ ಪೃಥ್ವೀರಾಜನ ಶತ್ರುವಾಗಿ ಪರಿಣಮಿಸಿ ಮುಸ್ಲಿಮರ ಪಕ್ಷ ಸೇರಿದ. ಪೃಥ್ವೀರಾಜ ತನ್ನ ಭಾರಿ ಸೇನೆಯೊಂದಿಗೆ ತರೈನ್ ರಣರಂಗವನ್ನು ಮುಟ್ಟಿದ. ಮಹಮ್ಮದ್ ತಬರಿಂಧಾವನ್ನು ವಶಪಡಿಸಿಕೊಂಡು ತರೈನ್‌ಗೆ ಬಂದ. ತಬರಿಂಧಾ ಮತ್ತು ಪಂಜಾಬ್ ವಿಜಯಕ್ಕೇ ತನ್ನ ಆಕ್ರಮಣವನ್ನು ಸೀಮಿತಗೊಳಿಸಿ ಹಿಂದಿರುಗಬೇಕೆಂದು ಮಹಮ್ಮದ್‌ನಿಗೆ ಪೃಥ್ವೀರಾಜ ಒಂದು ಪತ್ರ ಕಳಿಸಿದ. ಮಹಮ್ಮದ್ ಒಂದು ಉಪಾಯ ಹೂಡಿದ, ತನ್ನ ಅಣ್ಣನ ಆಣತಿಯಂತೆ ತಾನು ಬಂದಿರುವುದಾಗಿಯೂ ಪೃಥ್ವೀರಾಜನ ಸೂಚನೆಯನ್ನು ಅವನಿಗೆ ಕಳಿಸಿ, ಅವನಿಂದ ಒಪ್ಪಿಗೆ ಬಂದರೆ ಹಿಂದಿರುಗುವುದಾಗಿಯೂ ಅದುವರೆಗೂ ಯುದ್ಧ ಮಾಡದಿರಲು ಒಪ್ಪುವುದಾಗಿಯೂ ತಿಳಿಸಿದ. ಪೃಥ್ವೀರಾಜನ ಸೈನ್ಯ ಈ ಮಾತನ್ನು ನಂಬಿತು. ಅಂದು ರಾತ್ರಿ ಅದು ಆನಂದದಿಂದ ಮೈಮರೆತಿದ್ದಾಗ ಮಹಮ್ಮದ್ ತನ್ನ ಪಾಳೆಯದಲ್ಲಿ ಸೈನಿಕರು ತಂಗಿರುವಂತೆ ಭ್ರಮೆ ಹುಟ್ಟಿಸಲು ದೀಪಗಳನ್ನು ಹಚ್ಚಿಟ್ಟು, ರಹಸ್ಯವಾಗಿ ಬೇರೊಂದು ಮಾರ್ಗದಿಂದ ಪೃಥ್ವೀರಾಜನ ಪಾಳೆಯದ ಹಿಂಬದಿಯಿಂದ ಧಾಳಿಮಾಡಿದ. ಚಕಿತರಾದ ರಜಪೂತ ಸೈನಿಕರು ಕಕ್ಕಾಬಿಕ್ಕಿಯಾದರು. ಆದರೆ ಪೃಥ್ವೀರಾಜ ಧೈರ್ಯಗೆಡದೆ ತನ್ನ ಅಶ್ವಸೇನೆಯನ್ನು ಮುನ್ನುಗ್ಗಿಸಿ ಶತ್ರುದಾಳಿಯನ್ನು ಹಿಮ್ಮೆಟ್ಟಿಸಿದ.

ಸೈನ್ಯದೊಂದಿಗೆ ತನ್ನ ಪಾಳೆಯಕ್ಕೆ ಹಿಂದಿರುಗಿದ ಸುಲ್ತಾನ ಇನ್ನೊಂದು ಉಪಾಯ ಹೂಡಿದ. ತನ್ನ ಸೈನ್ಯವನ್ನು 5 ತುಕಡಿಗಳಾಗಿ ವಿಂಗಡಿಸಿದ. 4 ತುಕಡಿಗಳಲ್ಲಿ ತಲಾ 10 ಸಾವಿರ ರಾವುತರೂ ಉಳಿದ ಒಂದರಲ್ಲಿ 12 ಸಾವಿರ ರಾವುತರೂ ಇದ್ದರು. 10 ಸಾವಿರ ರಾವುತರ ನಾಲ್ಕು ತುಕಡಿಗಳಿಂದ ಅವನು ರಜಪೂತ ಸೇನೆಯ ಮೇಲೆ ನಾಲ್ಕೂ ಕಡೆಗಳಿಂದ ಧಾಳಿ ಮಾಡಿಸಿದ. ರಜಪೂತ ಸೇನೆ ಪ್ರತಿದಾಳಿ ನಡೆಸಿದಾಗ ಇವು ಹಿನ್ನಡೆಯುತ್ತ ಮತ್ತೇ ಮತ್ತೇ ಧಾಳಿ ಮಾಡುವ ಸೋಗು ಹಾಕುತ್ತ ಪೃಥ್ವೀರಾಜನ ಕಡೆಯ ಸೈನ್ಯಕ್ಕೆ ಆಯಾಸವನ್ನುಂಟು ಮಾಡಿದುವು. ಅದುವರೆಗೂ ಧಾಳಿಯಲ್ಲಿ ನಿರತವಾಗದಿದ್ದ ದೊಡ್ಡ ತುಕಡಿ ಅನಂತರ ರಜಪೂತರ ಮೇಲೆ ಒಮ್ಮೆಗೇ ಎರಗಿತು. ಪೃಥ್ವೀರಾಜನ ಕಡೆಯಲ್ಲಿ 1 ಲಕ್ಷ ಸೈನಿಕರು ಮಡಿದರು. ಗೋವಿಂದರಾಜನೂ ಸತ್ತ. ಪೃಥ್ವೀರಾಜ ತನ್ನ ಆನೆಯಿಂದ ಇಳಿದು ಕುದುರೆಯನ್ನು ಹತ್ತಿ ಓಡುತ್ತಿದ್ದಾಗ ಮುಸ್ಲಿಮರು ಅವನ ಬೆನ್ನಟ್ಟಿ ಸೆರೆಹಿಡಿದರು. ಮಹಮ್ಮದ್ ತನ್ನ ದಾಳಿಯನ್ನು ಮುಂದುವರಿಸಿ ಅನೇಕ ಪ್ರದೇಶಗಳನ್ನು ಜಯಿಸಿ, ಸೆರೆಯಾಗಿದ್ದ ಪೃಥ್ವೀರಾಜ ನೊಂದಿಗೆ ಅಜ್ಮೀರದ ಕಡೆಗೆ ಸಾಗಿದ. ಪೃಥ್ವೀರಾಜನಿಗೆ ಕ್ಷಮಾದಾನ ಮಾಡಲಾಗಿತ್ತೆಂದೂ ಆದರೆ ಅವನು ಸುಲ್ತಾನನ ವಿರುದ್ಧ ಅನಂತರ ಸಂಚು ಹೂಡಿದನೆಂಬ ಕಾರಣದಿಂದ ಸುಲ್ತಾನ ಅವನನ್ನು ಕೊಲ್ಲಿಸಿದನೆಂದೂ ತಿಳಿದುಬರುತ್ತದೆ. ಈ ಬಗ್ಗೆ ಬೇರೆ ಬಗೆಯ ಕೆಲವು ವರದಿಗಳೂ ಉಂಟು.

ಒಂದನೆಯ ತರೈನ್ ಕದನದಲ್ಲಿ ಹಿಂದುಗಳು ಮಹಮ್ಮದ್‌ನ ಸೈನ್ಯವನ್ನು ಭಾರತದ ಗಡಿಯಾಚೆಯವರೆಗೂ ಅಟ್ಟಿಸಿಕೊಂಡು ಹೋಗಿ ಅವರ ಬಲವನ್ನು ಸಂಪೂರ್ಣವಾಗಿ ಮುರಿದಿದ್ದರೆ ಅವನು ಮತ್ತೆ ಗರಿಗಟ್ಟಿಕೊಂಡು ದಂಡೆತ್ತಿ ಬರುತ್ತಿರಲಿಲ್ಲವೆಂದೂ ಹಿಂದುಗಳು ಎಂದಿನಂತೆ ಕೇವಲ ರಕ್ಷಣಾತ್ಮಕ ಕದನ ಮಾಡಿದರೇ ಹೊರತು ಆಕ್ರಮಣಶೀಲ ಕದನ ಹೂಡದಿದ್ದುದೇ ದೊಡ್ಡ ತಪ್ಪಾಯಿತೆಂದೂ ಹೇಳಲಾಗಿದೆ. ಅಂತೂ ಎರಡನೆಯ ತರೈನ್ ಕದನ ಭಾರತದ ಇತಿಹಾಸದಲ್ಲಿ ಒಂದು ಮಹಾತಿರುವಾಗಿ ಪರಿಣಮಿಸಿತು.

ಒಂದನೆಯ ಮತ್ತು ಎರಡನೆಯ ತರೈನ್ ಕದನಗಳು ಹಿಂದುಗಳಿಗೂ ಮುಸ್ಲಿಮರಿಗೂ ನಡೆದ ಕದನವಾದರೆ ಮೂರನೆಯ ಕದನ ನಡೆದದ್ದು (1214) ಎರಡು ಮುಸ್ಲಿಂ ಪಕ್ಷಗಳ ನಡುವೆ. ಆ ಸಮಯದಲ್ಲಿ ದೆಹಲಿಯಲ್ಲಿ ಗುಲಾಮೀ ಸಂತತಿಯ ಇಲ್ತಮಿಷ್ ಸುಲ್ತಾನನಾಗಿದ್ದ. ಘೋರಿ ಮಹಮ್ಮದ್‌ನಿಗೆ ಮಕ್ಕಳಿರಲಿಲ್ಲ. ಅವನು ತೀರಿಕೊಂಡಾಗ ಅವನ ಉತ್ತರಾಧಿಕಾರಕ್ಕೆ ಅವನ ಗುಲಾಮರಲ್ಲಿ ಹಲವರ ನಡುವೆ ಸ್ಪರ್ಧೆ ಏರ್ಪಟ್ಟಿತು. ಮಹಮ್ಮದ್‌ನ ಸೋದರ ಸಂಬಂಧಿ ಘಿಯಾಸ್‌ಉದ್ದೀನ್ ಮಹಮ್ಮದ್ ವಂಶಪಾರಂಪರ್ಯವಾಗಿ ಬಂದ ಫಿರೋಜ್‌ಕೋ ಪ್ರದೇಶದ ಮೇಲಿನ ಒಡೆತನವಷ್ಟಕ್ಕೇ ಸಂತೃಪ್ತನಾಗಿದ್ದ. ತನ್ನ ಮನೆತನದ ಗುಲಾಮರನ್ನು ಬಿಡುಗಡೆ ಮಾಡುವುದಷ್ಟೇ ಅವನಿಗಿದ್ದ ಆಕಾಂಕ್ಷೆ. ಅವರ ಪೈಕಿ ಒಬ್ಬನಾದ ತಾಜುದ್ದೀನ್ ಯಿಲ್ದಿಜ್ ಎಂಬುವವನು ಘಜ್ನಿಯನ್ನು ಹಿಡಿದುಕೊಂಡ. ಆದರೆ ಅವನಿಗೆ ಇತರ ಸ್ಪರ್ಧಿಗಳು ವಿರೋಧ ವ್ಯಕ್ತಪಡಿಸಿದರು. ಘಜ್ನಿಯಲ್ಲಿ ಅವನ ಪ್ರಾಬಲ್ಯ ಕುಗ್ಗಿತು. ಆದರೂ ತಾನೊಬ್ಬ ದೊಡ್ಡ ಸುಲ್ತಾನನೆಂದೇ ಭಾವಿಸಿದ್ದ ತಾಜುದ್ದೀನ್ ಯಿಲ್ದಿಜ್ ಭಾರತದ ಕಡೆಗೆ ನುಗ್ಗಿದ. ಘಜ್ನಿಯಿಂದ ಯಿಲ್ದಿಜ್ ಕೊನೆಗೂ ಸಂಪೂರ್ಣವಾಗಿ ಕಾಲ್ತೆಗೆಯಬೇಕಾಗಿ ಬಂದಾಗ ಲಾಹೋರಿನಲ್ಲಿ ಪ್ರಬಲನಾಗಲು ಹವಣಿಸಿ, ದೆಹಲಿಯ ಸಹಾಯ ಅಪೇಕ್ಷಿಸಿ ಇಲ್ತಮಿಷ್‌ನಿಗೆ ಆದೇಶ ಕಳಿಸಿದ. ಯಿಲ್ದಿಜನೊಂದಿಗೆ ಇಲ್ತಮಿಷ್ ತರೈನ್‌ನಲ್ಲಿ ಯುದ್ಧಮಾಡಿ ಅವನನ್ನು ಸೆರೆಹಿಡಿದ. (ಎಚ್.ಎಂ.ಎನ್.ಆರ್.)

**ತಲಕಾಡು:** ಮೈಸೂರಿನಿಂದ 60 ಕಿಮೀ ಪೂರ್ವಕ್ಕೆ ಕಾವೇರಿ ನದಿಯ ಉತ್ತರ ದಂಡೆಯ ಮೇಲಿರುವ ಒಂದು ಪ್ರಾಚೀನ ತೀರ್ಥಕ್ಷೇತ್ರ. ಹಲವಾರು ವರ್ಷಗಳಿಗೊಮ್ಮೆ ನಡೆಯುವ ಪಂಚಲಿಂಗ ದರ್ಶನ ಜಾತ್ರೆ, ಕೆಲವು ಪ್ರಾಚೀನ ದೇವಾಲಯಗಳು ಮತ್ತು ಇಲ್ಲಿ ಅಗಾಧವಾಗಿ ಉದ್ಭವಿಸಿರುವ ಮರಳು ದಿಣ್ಣೆಗಳಿಗಾಗಿ ತಲಕಾಡು ಪ್ರಖ್ಯಾತವಾಗಿದೆ. ತಲಕಾಡು ಸು.500–975ರವರೆಗೆ ದಕ್ಷಿಣ ಕರ್ನಾಟಕದಲ್ಲಿ ಆಳಿದ ಪಶ್ಚಿಮ ಗಂಗ ರಾಜವಂಶದ ರಾಜಧಾನಿಯಾ ಗಿತ್ತು. ಹೀಗಾಗಿ ಇವರು ತಲಕಾಡಿನ ಗಂಗರೆಂದೇ ಇತಿಹಾಸದಲ್ಲಿ ಪ್ರಸಿದ್ಧ ರಾಗಿದ್ದಾರೆ. ಗಂಗರ ಕಾಲದ್ದೆಂದು ಹೇಳಬಹುದಾದ ಅನೇಕ ದೇವಾಲಯ ಅಧಿಷ್ಠಾನಗಳು, ಕಂಬಗಳು, ಶಿಲ್ಪಗಳು ಹಾಗೂ ಇನ್ನಿತರ ವಾಸ್ತು ಭಾಗಗಳು ಸಾಕಷ್ಟು ಸಂಖ್ಯೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಇಲ್ಲಿ ಬಿದ್ದಿವೆ. ಗಂಗರ ಅನಂತರ ಸು.980ರಲ್ಲಿ ಚೋಳರು ಈ ಭೂಪ್ರದೇಶವನ್ನು ಆಕ್ರಮಿಸಿಕೊಂಡು ತಮ್ಮ ರಾಜ್ಯದ ಪ್ರಾಂತೀಯ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಚೋಳರ ಆಳಿಕೆಯಲ್ಲಿ ಇಲ್ಲಿ ಕೆಲವು ದೇವಾಲಯಗಳು ನಿರ್ಮಾಣಗೊಂಡವು. ಇವುಗಳಲ್ಲಿ ಪಾತಾಳೇಶ್ವರ ಮತ್ತು ಮರಳೇಶ್ವರ ಗುಡಿಗಳು ಈಗಲೂ ಮರಳು ರಾಶಿಯ ಮಧ್ಯದಾಳದಲ್ಲಿ ಇರುವ ಜೀವಂತ ಗುಡಿಗಳು. ಸು.1117ರಲ್ಲಿ ಹೊಯ್ಸಳ ವಿಷ್ಣುವರ್ಧನ ಚೋಳರನ್ನು ಸೋಲಿಸಿ ತಲಕಾಡನ್ನು ಆಕ್ರಮಿಸಿಕೊಂಡನಲ್ಲದೆ, ತಲಕಾಡುಗೊಂಡನೆಂಬ ಬಿರುದನ್ನು ಧರಿಸಿದ. ವಿಷ್ಣುವರ್ಧನ ತನ್ನ ಚೋಳರ ಮೇಲಿನ ವಿಜಯದ ಸಂಕೇತವಾಗಿ ಇಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಸು.1117ರಲ್ಲಿ ನಿರ್ಮಿಸಿದ.

ಕಣ ಶಿಲೆಯ ಈ ಹೊಯ್ಸಳ ದೇವಾಲಯ ಮರಳುರಾಶಿಯ ಅಡಿಯಾಳದಿಂದ ಮೇಲೆದ್ದು ನಿಂತಂತಿದೆ. ಇತ್ತೀಚಿನ ವರ್ಷಗಳಲ್ಲಿ ಈ ದೇವಾಲಯ ಸಂರಕ್ಷಣಾ ಕಾಯಕ ಪ್ರಾರಂಭವಾಗಿದೆ. ಹೊಯ್ಸಳರ ಅನಂತರ ತಲಕಾಡು ವಿಜಯನಗರ ಸಾಮ್ರಾಜ್ಯದ ಮುಖ್ಯ ಪಟ್ಟಣವಾಗಿತ್ತು. ಇಲ್ಲಿಯ ವೈದ್ಯೇಶ್ವರ ದೇವಾಲಯ ಸು.14ನೆಯ ಶತಮಾನದ ವಾಸ್ತು ರಚನೆಯಾಗಿದ್ದು, ಹೊಯ್ಸಳ–ವಿಜಯನಗರ ಶೈಲಿಯ ವಾಸ್ತು ಲಕ್ಷಣಗಳುಳ್ಳ ಸುಂದರ ದೇವಾಲಯ. ವಿಜಯನಗರೋತ್ತರ ಕಾಲದಲ್ಲಿ ತಲಕಾಡು ಮೈಸೂರು ಒಡೆಯರ್‌ರವರ ವಶ ಸೇರಿತ್ತು. 17ನೆಯ ಶತಮಾನದಲ್ಲಿ ಸಂಭವಿಸಿದ ವಿಚಿತ್ರ ನೈಸರ್ಗಿಕ ವಿಕೋಪದಿಂದಾಗಿ ಇಡೀ ಪ್ರಾಚೀನ ತಲಕಾಡು ಪಟ್ಟಣ ಗಾಳಿಯಲ್ಲಿ ತೇಲಿಬಂದು ಶೇಖರವಾದ ಮರಳು ರಾಶಿಯಲ್ಲಿ ಸಂಪೂರ್ಣವಾಗಿ ಮುಚ್ಚಿಹೋಯಿತು. ಈಗ ಕಾಣುವ ಹಳೆತಲಕಾಡು ಎಂಬ ಊರು ಸು.18ನೆಯ ಶತಮಾನದಿಂದೀಚೆಗೆ ನಿರ್ಮಿತವಾದದ್ದು. ಹೊಸತಲಕಾಡು ಇನ್ನೂ ಇತ್ತೀಚಿನದು.

ತಲಕಾಡು ಹಾಗೂ ಸುತ್ತಮುತ್ತಲಿನ ಪ್ರದೇಶ ಶತಮಾನಗಳಿಂದ ನದಿ ನೀರಿನ ಆಸರೆಯನ್ನು ಪಡೆದ ಕೃಷಿ ಭೂಮಿಯಿಂದಾವೃತವಾದ ಸ್ಥಳ. ಇಂತಹ ಸ್ಥಳದಲ್ಲಿ ಏಕೆ, ಹೇಗೆ ಮತ್ತು ಯಾವಾಗ ಮರಳು ರಾಶಿ ಉದ್ಭವವಾಗಿದೆಯೆಂಬುದು ಒಂದು ವಿಸ್ಮಯವೇ ಸರಿ. ಭೂವಿಜ್ಞಾನಿಗಳಿಗೂ ಈ ವಿಚಾರ ಒಂದು ಗೋಜಲಿನ ಸಂಗತಿಯೇ ಆಗಿತ್ತು. ತಲಕಾಡಿನ ಜನಪದದಲ್ಲಿ ಇರುವ ಒಂದು ದಂತಕಥೆ ಮತ್ತು ಅದಕ್ಕೆ ಸಂಬಂಧಪಟ್ಟ ಶಾಪ ಮಾತ್ರ ತಲಕಾಡಿನ ಮರಳು ದಿಣ್ಣೆಗಳ ಬಗ್ಗೆ ಸ್ವಲ್ಪ ಮಾಹಿತಿ ನೀಡುವಂತಿತ್ತು. ಇದು ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ ಎಂಬ ಸಾಧ್ವಿ ಅಲಮೇಲಮ್ಮನ ಶಾಪ. ಸು. 1640ರಲ್ಲಿ ನಡೆದಿರಬಹುದಾದ ಘಟನೆಯ ಬಗ್ಗೆ ಚರಿತ್ರಕಾರರಾಗಲೀ ಭೂವಿಜ್ಞಾನಿಗಳಾಗಲೀ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಹೀಗಾಗಿ ತಲಕಾಡಿನ ಇತಿಹಾಸದ ಬಗ್ಗೆ ಹಲವಾರು ವಿಷಯಗಳು ಕಗ್ಗಂಟಾಗಿಯೇ ಉಳಿದಿದ್ದವು. ಇಂತಹ ಸನ್ನಿವೇಶದಲ್ಲಿ 1993–97ರಲ್ಲಿ ಮತ್ತು 2007ರಲ್ಲಿ ಕರ್ನಾಟಕದ ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಜೊತೆಯಾಗಿ, ತಲಕಾಡಿನಲ್ಲಿ ಉತ್ಖನನ ನಡೆಸಿದವು. ಉತ್ಖನನದ ಉದ್ದೇಶ ತಲಕಾಡಿನ ಸಂಸ್ಕೃತಿಯ ಪ್ರಾಚೀನತೆ, ಇಲ್ಲಿಯ ಇತಿಹಾಸ, ಮರಳು ದಿಣ್ಣೆಗಳ ಉದ್ಭವ ಮುಂತಾದ ಕ್ಲಿಷ್ಟ ವಿಷಯಗಳ ಬಗ್ಗೆ ಬೆಳಕು ಚೆಲ್ಲುವುದೇ ಆಗಿತ್ತು. ಯಶಸ್ವಿಯಾಗಿ ನಡೆದ ಈ ಉತ್ಖನನದಿಂದ ತಲಕಾಡಿನ ಸಂಸ್ಕೃತಿಯ ಪ್ರಾಚೀನತೆ, ಇಲ್ಲಿ

ಕೀರ್ತಿನಾರಾಯಣ ದೇವಾಲಯ

ಸಂಸ್ಕೃತಿ ಬೆಳೆದು ಬಂದ ಹಾದಿ, ಸಾಂಸ್ಕೃತಿಕ ವಸ್ತುವಿಷಯಗಳು, ತಲಕಾಡಿನಲ್ಲಿ ಜೈನಧರ್ಮ, ತಲಕಾಡಿನಲ್ಲಿ ವಿಜಯನಗರ ಕಾಲದ ನೀರು ಸರಬರಾಜು ವ್ಯವಸ್ಥೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ತಲಕಾಡಿನಲ್ಲಿ ಮರಳು ದಿಣ್ಣೆ ಉದ್ಭವವಾದ ಸಂಗತಿ, ಕಾಲ, ಕಾರಣ ಹಾಗೂ ನಿರಂತರ ಮರಳು ಪ್ರವಾಹವನ್ನು ತಡೆಯಲು ಇಲ್ಲಿಯ ಜನತೆ ನಡೆಸಿದ ವಿಫಲ ಪ್ರಯತ್ನಗಳು ಮುಂತಾದವುಗಳ ಬಗ್ಗೆ ನಿಖರ ಸಾಕ್ಷ್ಯಾಧಾರಗಳು ದೊರಕಿದವು. ಉತ್ಖನನದಲ್ಲಿ ಒಟ್ಟು ಏಳು ಸ್ಥಳಗಳಲ್ಲಿ ಗುಂಡಿಗಳನ್ನು ತೆಗೆಯಲಾಯಿತು. ಇವುಗಳಲ್ಲಿ ಎರಡು ಗುಂಡಿಗಳು ಮಾತ್ರ ಈಗಿನ ಮರಳು ದಿಣ್ಣೆಯ ಪ್ರದೇಶದ ಹೊರಗಿದ್ದು, ಇವುಗಳಲ್ಲಿ ಯಾವುದೇ ಐತಿಹಾಸಿಕ ಮಹತ್ತ್ವದ ವಸ್ತು ವಿಷಯಗಳು ದೊರೆಯಲಿಲ್ಲ. ಉಳಿದ ಐದು ಗುಂಡಿಗಳನ್ನು ಮರಳು ದಿಣ್ಣೆಯ ವಿವಿಧ ಭಾಗಗಳಲ್ಲಿ, ಅಲ್ಲಿ ಶೇಖರಗೊಂಡಿದ್ದ ಮರಳನ್ನು ಸ್ಥಳಾಂತರಿಸಿ, ಕೆಳಗಿನ ಗಟ್ಟಿನೆಲದಲ್ಲಿ, ಜಾಲಂಧ್ರ ವಿಧಾನದಲ್ಲಿ ತೋಡಲಾಯಿತು.

ಉತ್ಖನನ: ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಹಿಂಭಾಗದಲ್ಲಿ, ಅಂದರೆ ಪಶ್ಚಿಮಕ್ಕೆ, ಸು.100 ಮೀ ದೂರದಲ್ಲಿ ನಡೆಸಿದ ಉತ್ಖನನ (ತಲಕಾಡು, ಗುಂಡಿ–4) ತಲಕಾಡಿನ ಸಂಸ್ಕೃತಿಯ ಪ್ರಾಚೀನತೆಯ ಬಗ್ಗೆ ನಿಖರವಾದ ಮಾಹಿತಿಗಳನ್ನು ನೀಡಿತು. ಸು. 5.40 ಮೀ ಆಳದಲ್ಲಿ ಕಂಡು ಬಂದ ಸ್ವಾಭಾವಿಕ ನೆಲದ ಮೇಲೆ ಹನ್ನೊಂದು ಪದರಗಳಲ್ಲಿ ಮಣ್ಣು ಶೇಖರಣೆಯಾಗಿತ್ತು. ಅತ್ಯಂತ ಕೆಳಗಿನ ಎರಡು ಪದರಗಳಲ್ಲಿ (11–10) ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ವಸ್ತು ಅವಶೇಷಗಳಿದ್ದುವು. ಇದರಲ್ಲಿ ಕಪ್ಪು, ಕೆಂಪು, ಕಪ್ಪು–ಕೆಂಪು ದ್ವಿವರ್ಣದ ವಿವಿಧಾಕಾರದ ಮಣ್ಪಾತ್ರೆಗಳು ಕಂಡುಬಂದವು. ಅನೇಕ ಮಣ್ಣಿನಪಾತ್ರೆಗಳ ಮೇಲೆ ಗೀರು ರೇಖೆ ಗುರುತುಗಳು ಇದ್ದವು. ಇನ್ನು ಕೆಲವು ಪಾತ್ರೆಗಳಲ್ಲಿ ತೆಳು ಅಲೆಗಳ ರೀತಿಯ ಅಲಂಕರಣವಿತ್ತು. ಆದರೆ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ದೊರೆಯಲಿಲ್ಲ. ಈ ಗುಂಡಿಯ 9ನೆಯ ಪದರದಲ್ಲಿ ಕಬ್ಬಿಣ ಕುಲುಮೆ ಕಾರ್ಯಾಗಾರವಿತ್ತು. ಒಂದು ಸಣ್ಣ ಕುಲುಮೆ, ಸುಟ್ಟನೆಲ, ಸಣ್ಣ–ಸಣ್ಣ ಬೂದಿ ಕುಪ್ಪೆ, ಇದ್ದಿಲು ರಾಶಿ, ಕುಲುಮೆಮಣ್ಣಿನ (ರಿಫ್ರಾಕ್ಟರಿ ಮಣ್ಣು ಅಥವಾ ಫೈರ್–ಕ್ಲೇ) ಗುಪ್ಪೆ, ಚೆಲ್ಲಾಪಿಲ್ಲಿ ಯಾಗಿ ಅಲ್ಲಲ್ಲೇ ಬಿದ್ದಿರುವ, ಒಡೆದ ಮಡಕೆಗಳು, ಬೋಗುಣಿಗಳು, ಸುಟ್ಟ ಮಣ್ಣಿನ ಕೂರುವ ಮಣೆ ಇತ್ಯಾದಿ ಕಂಡು ಬಂದಿವೆ. ಈ ಎಲ್ಲ ಲಕ್ಷಣಗಳು ಇದೊಂದು ಕುಲುಮೆ ಕಾರ್ಯಾಗಾರವಾಗಿತ್ತೆಂಬುದನ್ನು ನಿರೂಪಿಸುತ್ತವೆ. ಕುಲುಮೆ ಚಿಕ್ಕದಾಗಿದ್ದು ಇದಕ್ಕೆ ಒಂದು ಪಾರ್ಶ್ವದಲ್ಲಿ ಊದು ಕೊಳವೆಗಾಗಿ ರಂಧ್ರವಿತ್ತು. ಈ ಕುಲುಮೆಯಲ್ಲಿ ಅಕ್ಕಸಾಲಿಗನೊಬ್ಬ ರೋಮನ್ ನಾಣ್ಯದ ನಕಲುಗಳನ್ನು ತಯಾರಿಸುತ್ತಿದ್ದುದು ಅಲ್ಲಿಯೇ ದೊರೆತ, ರೋಮನ್ ನಾಣ್ಯದ ಹಿಮ್ಮುಖದ ಚಿತ್ರವನ್ನು ಹೊಂದಿರುವ ಮಣ್ಣಿನ ಮುದ್ರೆಯಿಂದ ತಿಳಿಯುತ್ತದೆ. ಈ ಮುದ್ರೆಯನ್ನು ಎರಡು ಸಮಾನಾರ್ಧಗಳಲ್ಲಿ ಮಾಡಲಾಗಿದೆ. ಒಂದು ಅರ್ಧದಲ್ಲಿ ನಾಣ್ಯದ ಮುಮ್ಮುಖದ ಮುದ್ರೆಯೂ (ಇದು ದೊರಕಿಲ್ಲ), ಇನ್ನೊಂದರಲ್ಲಿ ನಾಣ್ಯದ ಹಿಮ್ಮುಖದ ಮುದ್ರೆಯೂ ಇದೆ. ಇವೆರಡನ್ನೂ ಕೂಡಿಸಿ ಖಾಲಿಯಿದ್ದ ಭಾಗದಲ್ಲಿ ಕರಗಿದ ಚಿನ್ನವನ್ನು ತುಂಬಿ ನಾಣ್ಯವನ್ನು ತಯಾರಿಸಲಾಗುತ್ತಿತ್ತು. ಹಿಮ್ಮುಖವನ್ನು ಹೊಂದಿರುವ ನಾಣ್ಯಮುದ್ರೆ ಮಾತ್ರ ಈಗ ಲಭಿಸಿದ್ದು ಅದರಲ್ಲಿ ಪೀಠದ ಮೇಲೆ ಕುಳಿತಿರುವ ಸ್ತ್ರೀಯೊಬ್ಬಳ (ಲಿವಿಯ–ಗ್ರೀಕ್ ನ್ಯಾಯ ದೇವತೆ) ಚಿತ್ರವಿದೆ. ಈ ದೇವತೆ ಒಂದು ಕೈಯಲ್ಲಿ ಉದ್ದವಾದ ದಂಡವನ್ನೂ ಇನ್ನೊಂದು ಕೈಯಲ್ಲಿ ಪೈರಿನ ತೆನೆಗಳನ್ನು ಹಿಡಿದಿದ್ದಾಳೆ. ಈಕೆಯ ಚಿತ್ರದ ಅಕ್ಕಪಕ್ಕದಲ್ಲಿ ಮಾಕ್ಸಿಮ್–ಫಾಂಟಿಫ್ ಎಂದು ಗ್ರೀಕ್ (ಇಂಗ್ಲಿಷ್) ಅಕ್ಷರದಲ್ಲಿ ಐತಿಹ್ಯವಿದೆ. ನಾಣ್ಯದ ಮುದ್ರೆ ಮತ್ತು ಇದರೊಡನೆ ದೊರೆತಿರುವ ಮಡಕೆ ಚೂರುಗಳ ಲಕ್ಷಣಗಳು, ಈ ಪದರ ಸು. 2ನೆಯ ಶತಮಾನದ್ದೆಂದು ಸೂಚಿಸುತ್ತವೆ. ಈ ನಾಣ್ಯದ ಮುದ್ರೆಯ ಮೇಲಿನ ಚಿತ್ರ ರೋಮನ್ ಚಕ್ರವರ್ತಿಗಳಾದ ಅಗಸ್ಟಸ್ ಮತ್ತು ಅವನ ಮಗ ಟೈಬೀರಿಯಸ್‌ನ ಚಿನ್ನದ ನಾಣ್ಯಗಳ ಹಿಮ್ಮುಖವನ್ನು ಹೋಲುತ್ತದೆ. ಪ್ರ.ಶ.ದ ಪ್ರಾರಂಭದ ಶತಮಾನಗಳಲ್ಲಿ ತಲಕಾಡು ಪ್ರದೇಶ ಸಾತವಾಹನರ ಆಳಿಕೆಯಲ್ಲಿರಲಿಲ್ಲವೆಂದು ಹೇಳಬಹುದು. ಇಲ್ಲಿ ಯಾವುದೇ ಸಾತವಾಹನ ನಾಣ್ಯಗಳಾಗಲೀ ಶಾಸನಗಳಾಗಲೀ ದೊರೆತಿಲ್ಲ. ಬದಲಿಗೆ ತಮಿಳುನಾಡು, ಕೇರಳದಲ್ಲಿ ದೊರೆತಿರುವ ಅಸಂಖ್ಯಾತ ರೋಮನ್ ನಾಣ್ಯಗಳೇ ಇಲ್ಲೂ ಚಲಾವಣೆಯಲ್ಲಿದ್ದಂತೆ ತೋರುತ್ತದೆ. ಹೀಗಾಗಿ ತಲಕಾಡಿನಲ್ಲಿ ನಕಲಿ ರೋಮನ್ ನಾಣ್ಯ ತಯಾರಿಕೆಯ ಒಂದು ಕಾರ್ಯಾಗಾರವೇ ಕೆಲಸಮಾಡುತ್ತಿತ್ತು. ಕುಲುಮೆ ಕಾರ್ಯಾಗಾರದ ಸಾಂದರ್ಭಿಕ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಈ ಕಾರ್ಯಾಗಾರದ ಕೆಲಸ ಕ್ಷಿಪ್ರ ಧಾಳಿಯಿಂದಾಗಿ ಸ್ಥಗಿತಗೊಂಡಿರುವಂತೆ ತೋರುತ್ತದೆ. ಈ ಧಾಳಿ ಅಲ್ಲಿ ನಡೆಯುತ್ತಿದ್ದ ಕಾನೂನು ಬಾಹಿರ ಚಟುವಟಿಕೆಗಳ ವಿರುದ್ಧವೇ ಆಗಿದ್ದಿರಬಹುದು. ಒಟ್ಟಿನಲ್ಲಿ ಇದೊಂದು ಅದ್ವಿತೀಯ ಶೋಧನೆಯೇ ಸರಿ.

ಕುಲುಮೆ ಕಾರ್ಯಾಗಾರ ನಾಶವಾದ ಅನಂತರ ಈ ಸ್ಥಳದಲ್ಲಿ (ಪದರ–8) ಒಂದೆರಡು ಶತಮಾನಗಳ ಕಾಲ ಚಾರಿತ್ರಿಕ ಕಾಲದ ಸಂಸ್ಕೃತಿ ನೆಲೆಸಿತ್ತು. ತದನಂತರ ಬಂದ ಗಂಗರ ಕಾಲದಲ್ಲಿ ಈ ಪ್ರದೇಶ ಒಂದು ರುದ್ರಭೂಮಿಯಾಗಿ ಮಾರ್ಪಟ್ಟಿತು (ಪದರ 7–4). ಗಂಗರ ಕಾಲಕ್ಕೆ ಸೇರಿರಬಹುದಾದ ಅನೇಕ ಸಮಾಧಿಗಳು ಈ ಸ್ಥಳದಲ್ಲಿ ದೊರೆತಿವೆ. ಈ ಸಮಾಧಿ ಗುಂಡಿಗಳಲ್ಲಿ ದೊರೆತ ವೈವಿಧ್ಯಮಯ ಮಡಕೆಗಳು, ಗಾಜಿನ, ಕಲ್ಲಿನ, ಮಣ್ಣಿನ, ದಂತದ ಮಣಿಗಳು ಹಾಗೂ ಇನ್ನಿತರ ಲೌಕಿಕ ವಸ್ತುಗಳು ತಲಕಾಡಿನ ಸಂಸ್ಕೃತಿಗೇ ವಿಶೇಷವೆನಿಸುವಂಥದ್ದು. ಬೃಹತ್ ಶಿಲಾಯುಗ ಸಂಸ್ಕೃತಿಯಲ್ಲಿ ಆಚರಿಸುತ್ತಿದ್ದಂತಹ ಹಲವಾರು ಸಂಪ್ರದಾಯಗಳು ಇಲ್ಲೂ ಉಳಿದಿರುವುದು ಇಲ್ಲಿನ ಸಮಾಧಿಗಳಲ್ಲಿ ಕಂಡುಬಂದಿದೆ. ಆದರೆ ಕಲ್ಲಿನ ಸಮಾಧಿ ಕೋಣೆಗಳಾಗಲೀ ಅಸ್ಥಿಪಂಜರಗಳಾಗಲೀ ಇಲ್ಲಿ ದೊರೆತಿಲ್ಲ. ಇಲ್ಲಿಯ ಪ್ರತಿಯೊಂದು ಸಮಾಧಿಯಲ್ಲೂ ಹಲವಾರು ಆಕಾರದ, ಗಾತ್ರದ ಮಣ್ಪಾತ್ರೆಗಳು ದೊರೆತಿವೆ. ಆದರೆ ಅವುಗಳಲ್ಲಿ ಒಂದು ವಿಧದ ಮಡಕೆ ಮಾತ್ರ ಗಮನೀಯವಾದದ್ದು. ಇಲ್ಲಿಯ ಪ್ರತಿಯೊಂದು ಸಮಾಧಿಯಲ್ಲೂ ಒಂದೊಂದರಂತೆ ಕಾಣಬರುವ ಈ ಮಡಕೆ ನಳಿಗೆ ನೀರಿನ ಅಥವಾ ಮದ್ಯದ ಹೂಜಿಗಳು ಎತ್ತರವಾದ, ಬುಗುರಿಯಾಕಾರದ ದೇಹ, ನಳಿಗೆ, ತೆಳ್ಳನೆಯ ಉದ್ದ ಕಂಠ, ಹೊರಕ್ಕೆ ಬಾಗಿದ ಅಂಚು, ಮಿರಿ–ಮಿರಿ ಮಿಂಚುವ ಕೆಂಬಣ್ಣ, ಚೆನ್ನಾಗಿ ಸುಟ್ಟ ಹಸನಾದ ಬಳೆಯಾಕಾರದ ಅಂಚಿನ ಮಟ್ಟವಾದ ತಳಭಾಗ ಇವೆಲ್ಲವೂ ಈ ಮಡಕೆಯ ಲಕ್ಷಣಗಳು. ಇಂತಹ ಮಡಕೆಗಳ ಕಂಠಭಾಗ ಮಾತ್ರ ಸರ್ ಮಾರ್ಟಿಮರ್ ವೀಲರ್ ಅವರಿಗೆ ಪಾಂಡಿಚೇರಿಯ ಬಳಿಯ ಅರಿಕಮೇಡುವಿನಲ್ಲಿ (ರೋಮನ್ ನೆಲೆ) ದೊರೆತಿತ್ತು. ಆದರೆ ತಲಕಾಡಿನ ಈ ವಿಶಿಷ್ಟ ಗಡಿಗೆ ಪೂರ್ಣವಾಗಿ ದೊರೆತು, ತಲಕಾಡಿಗೂ ತಮಿಳುನಾಡಿನ ಅರಿಕಮೇಡುವಿಗೂ ನಿಕಟ ಸಾಂಸ್ಕೃತಿಕ ಸಂಬಂಧವಿತ್ತೆಂಬುದನ್ನು ಸೂಚಿಸುತ್ತದೆ. ಈ ನಿಟ್ಟಿನಲ್ಲಿ ನೋಡಿದಾಗ, ರೋಮನ್ ನಾಣ್ಯವನ್ನು ನಕಲು ಮಾಡುವ ಕುಲುಮೆ ಕಾರ್ಯಾಗಾರ, ನಕಲಿ ರೋಮನ್ ನಾಣ್ಯಮುದ್ರೆ ಇವೆಲ್ಲವೂ ಈ ಸಾಂಸ್ಕೃತಿಕ ಸಂಬಂಧ ಇನ್ನೂ ಹೆಚ್ಚಿನ ವ್ಯಾಪ್ತಿಯದ್ದಾಗಿರಬೇಕೆಂಬ ಅಂಶವನ್ನು ಸೂಚಿಸುತ್ತದೆ. ಈ ಗುಂಡಿಯಲ್ಲಿ ದೊರೆತ ಸಮಾಧಿಗಳು ಮತ್ತು ಇಲ್ಲಿಯ ಇತರೆ ವಸ್ತುಗಳು ಇದುವರೆಗೂ ತಿಳಿಯದಿದ್ದ ಗಂಗರ ಸಂಸ್ಕೃತಿಯ ಒಂದು ಹೊಸಮುಖವನ್ನು ಪರಿಚಯಿಸುತ್ತವೆ. ಗಂಗರ ಕಾಲಾನಂತರ ಈ ಗುಂಡಿಯ ಭಾಗದಲ್ಲಿ ಕಂಡುಬಂದ ಚಟುವಟಿಕೆಗಳಾವುವೂ ಮಹತ್ತ್ವದ್ದಾಗಿರಲಿಲ್ಲ. ತಲಕಾಡಿನಲ್ಲಿ ಪ್ರ.ಶ.ಪೂ. ಬೃಹತ್ ಶಿಲಾ ಸಂಸ್ಕೃತಿಯ ಕಾಲದಿಂದ ಹಿಡಿದು ಮಧ್ಯಕಾಲೀನ ಯುಗದ ಕೊನೆಯವರೆಗೂ ನಿರಂತರವಾಗಿ ಬೆಳೆದು ಬಂದ ಸಂಸ್ಕೃತಿಯ ವಿವಿಧ ಸ್ತರಗಳನ್ನು ಈ ಗುಂಡಿ (ಗುಂಡಿ–4) ಸಮರ್ಪಕವಾಗಿ ಪ್ರದರ್ಶಿಸುತ್ತದೆ. 7–8ನೆಯ ಶತಮಾನದ ವೇಳೆಗೆ, ಪ್ರವರ್ಧಮಾನವಾಗಿ ಬೆಳೆದಿದ್ದ ತಲಕಾಡು ಗಂಗ ರಾಜ್ಯದ ಪ್ರಮುಖ ಪಟ್ಟಣವೇ ಆಯಿತು. ಗಂಗರು ಜೈನಧರ್ಮಕ್ಕೆ ನೀಡಿದ ಪ್ರೋತ್ಸಾಹ ಗಣನೀಯವಾದದ್ದು. ಇಷ್ಟಾಗಿ ಇದುವರೆಗೆ ತಲಕಾಡಿನಲ್ಲಿ ಯಾವುದೇ ಜೈನಬಸದಿ ದೊರೆತಿರಲಿಲ್ಲ. ಪ್ರಸ್ತುತ ಉತ್ಖನನದಲ್ಲಿ (ತಲಕಾಡು, ಗುಂಡಿ–6) ದೊರೆತ ಇಟ್ಟಿಗೆಯ

ಜೈನ ಬಸದಿಯೊಂದರ ಅಡಿಪಾಯ, ಗಂಗರು ಜೈನಧರ್ಮಕ್ಕೆ ನೀಡಿದ ಪೋಷಣೆ–ಪ್ರೋತ್ಸಾಹದ ಪ್ರತೀಕವಾಗಿದೆಯಲ್ಲದೆ, ಕರ್ನಾಟಕದಲ್ಲಿ ಇದುವರೆಗೆ ದೊರೆತಿರುವ ಕೆಲವೇ ಪ್ರಾಚೀನ ಬಸದಿಗಳಲ್ಲಿ ಒಂದಾಗಿದೆ. ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಉತ್ತರಕ್ಕೆ ಸು. 500 ಮೀ ದೂರದಲ್ಲಿ, ಸು.0.90–1.20ಮೀ ದಪ್ಪ ಮರಳಿನಿಂದಾವೃತವಾದ ಪ್ರದೇಶವಿದೆ. ಈ ಪ್ರದೇಶದಲ್ಲಿ ಪ್ರಾಚೀನ ಲಕ್ಷಣಗಳುಳ್ಳ, ಪಾರ್ಶ್ವನಾಥನ, ಕಣಶಿಲೆಯ ಶಿಲ್ಪವೊಂದು, ಮರದಡಿಯಲ್ಲಿ ಅನಾಥವಾಗಿ ನಿಂತಿತ್ತು. ಈ ಶಿಲ್ಪದ ಕುರುಹನ್ನು ಆಧರಿಸಿ ಸಮೀಪದಲ್ಲೇ ನಡೆಸಿದ ಉತ್ಖನನದಲ್ಲಿ 22X16 ಮೀ ವಿಸ್ತೀರ್ಣದ, ಇಟ್ಟಿಗೆಯಲ್ಲಿ ನಿರ್ಮಿಸಿದ, ಬಸದಿಯೊಂದರ ಅಡಿಪಾಯ ದೊರೆಯಿತು. ಈ ಬಸದಿಯನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗಿತ್ತು. ಮೊದಲನೆಯ ಹಂತದಲ್ಲಿ, ತಳವಿನ್ಯಾಸದಲ್ಲಿ ಸಾಲಾಗಿ ಮೂರು ಗರ್ಭಗುಡಿಗಳು, ಮುಂದೆ ಆಯತಾಕಾರದ ಏಕ ಕೈಸಾಲೆ ಮತ್ತು ಅದರ ಮುಂಭಾಗದಲ್ಲಿ, ಪ್ರತ್ಯೇಕವಾದ ಒಂದು ಮಂಟಪವಿತ್ತು. ಈ ಕಟ್ಟಡದ ಕಾಲ ಸು.5–7ನೆಯ ಶತಮಾನ. ಸು.466ರ ಗಂಗದೊರೆ ಅವಿನೀತನ ಮಡಿಕೇರಿ ತಾಮ್ರ ಶಾಸನದಲ್ಲಿ, ತಲವನಪುರದ (ತಲಕಾಡು) ವಿಜಯ ಜಿನಾಲಯಕ್ಕೆ, ಅಮಾತ್ಯ ಅಕಾಲವರ್ಷ ಪೃಥಿವೀವಲ್ಲಭ ನೀಡಿದ ದಾನದ ವಿವರಣೆಯಿದೆ. ತಲಕಾಡಿನ ಉತ್ಖನನದಲ್ಲಿ ಕಂಡುಬಂದ ಈ ಜಿನಾಲಯವನ್ನು ಮಡಿಕೇರಿ ತಾಮ್ರಪಟದ ವಿಜಯ ಜಿನಾಲಯದೊಂದಿಗೆ ಸಮೀಕರಿಸಲಾಗಿದೆ.

ಜಿನಾಲಯ ಮೂಲದಲ್ಲಿ ಮಂದ ಚಾವಣಿಯನ್ನು ಹೊಂದಿದ್ದಂತೆ ಕಂಡುಬಂದಿದೆ. ಕಾಲಕ್ರಮದಲ್ಲಿ ಚಾವಣಿ ಬೆಂಕಿಗಾಹುತಿಯಾಗಿ, ಸು.10ನೆಯ ಶತಮಾನದಲ್ಲಿ ಜಿನಾಲಯವನ್ನು ವಿಸ್ತರಿಸಿ ನಿರ್ಮಿಸಲಾಯಿತು. ಕಟ್ಟಡದ ಮೂಲವಿನ್ಯಾಸವನ್ನು ಉಳಿಸಿಕೊಂಡು, ಗರ್ಭಗೃಹದ ಸುತ್ತಲೂ 1 ಮೀ ಅಂತರದಲ್ಲಿ, ಕಲ್ಲಿನ ಅಧಿಷ್ಠಾನದ ಮೇಲೆ, ಹೊಸಗೋಡೆಯನ್ನು ನಿರ್ಮಿಸಿ, ಪ್ರದಕ್ಷಿಣಾ ಪಥವನ್ನು ಕಲ್ಪಿಸಿದರು. ಗರ್ಭಗೃಹದ ಮುಂದಿನ ಅಡ್ಡ ಕೈಸಾಲೆಯ ಮುಂದೆ, ಹಳೆಯ ಮಂಟಪವನ್ನು ಆವರಿಸಿದಂತೆ ಗೋಡೆ ನಿರ್ಮಿಸಿ, ಒಂದು ನವರಂಗವನ್ನು ಕಲ್ಪಿಸಲಾಗಿತ್ತು. ಇದರಿಂದ ಮೂಲದ ಕೈಸಾಲೆ ಅಂತರಾಳವಾಗಿ ಮಾರ್ಪಾಟಾಯಿತು. ಮೂಲತಃ ಈ ಬಸದಿ ಸುಂದರ ಶಿಲಾಶಿಲ್ಪ, ಗಚ್ಚು–ಶಿಲ್ಪಗಳ ಅಲಂಕರಣೆಯಿಂದ ಕೂಡಿತ್ತೆಂದು ಉತ್ಖನನದಲ್ಲಿ ದೊರೆತ ಸಾಕ್ಷ್ಯಗಳು ಸೂಚಿಸುತ್ತವೆ. ದುರದೃಷ್ಟವಶಾತ್ ಕೆಲವು ಶತಮಾನಗಳ ಹಿಂದೆ, ಗಾಳಿಯಲ್ಲಿ ತೂರಿಬಂದ ಮರಳು ಪ್ರವಾಹಕ್ಕೆ ತಲಕಾಡು ತುತ್ತಾದಾಗ ಜನಾಶ್ರಯವಿಲ್ಲದ ಈ ಬಸದಿಯನ್ನು ಸ್ಥಳೀಯರು ಸಂಪೂರ್ಣವಾಗಿ ಕೆಡವಿ ಇಲ್ಲಿಯ ಎಲ್ಲ ಕಲ್ಲುಗಳನ್ನು ಬೇರೆ–ಬೇರೆ ನಿರ್ಮಾಣಗಳಿಗಾಗಿ ಕೊಂಡೊಯ್ದು, ಇಡೀ ಬಸದಿ ನೆಲಸಮವಾಗಿ ಮರಳಿನಡಿಯಲ್ಲಿ ಮುಚ್ಚಿಹೋಗಿತ್ತು. ಬಸದಿ ನಾಶವಾದರೂ ಅಲ್ಲಿ ದೊರೆತಿರುವ ಸಾಂದರ್ಭಿಕ ಸಾಕ್ಷ್ಯಗಳು, ಕರ್ನಾಟಕದಲ್ಲಿ ದೇವಾಲಯ ವಾಸ್ತು ಉಗಮ, ಬೆಳವಣಿಗೆ, ವಾಸ್ತು ವಿನ್ಯಾಸ ಲಕ್ಷಣ, ಶಿಲ್ಪ ಲಕ್ಷಣ ಮುಂತಾದವುಗಳ ಬಗ್ಗೆ ಎಲ್ಲೂ ಲಭ್ಯವಾಗದ ಮಾಹಿತಿಗಳನ್ನು ನೀಡಿದೆಯಲ್ಲದೆ, ಕರ್ನಾಟಕದ ಅತ್ಯಂತ ಪ್ರಾಚೀನ ಜೈನ ಬಸದಿ ಎಂಬ ಹಿರಿಮೆಗೂ ಪಾತ್ರವಾಗಿದೆ.

ತಲಕಾಡಿನ ಮತ್ತೊಂದು ಉತ್ಖನನಗುಂಡಿ (ತಲಕಾಡು, ಗುಂಡಿ–5) ಕೀರ್ತಿನಾರಾಯಣ ದೇವಾಲಯದ ಮುಂಭಾಗದ ಮುಖ್ಯ ರಸ್ತೆಯ ಪಾರ್ಶ್ವದಲ್ಲಿ ನಿರ್ಮಾಣಗೊಂಡಿದ್ದ ಕೆಲವು ವಾಸದ ಮನೆಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡಿತು. ಕೀರ್ತಿನಾರಾಯಣ ದೇವಾಲಯದ ಮುಂದೆ ಸು.100 ಅಡಿ ದೂರದಲ್ಲಿ ಶೇಖರವಾಗಿದ್ದ ಸು.4.50 ಮೀ ಎತ್ತರದ ಮರಳು ರಾಶಿಯನ್ನು ಖಾಲಿಮಾಡಿ, ಕೆಳಗಿನ ಗಟ್ಟನೆಲದಲ್ಲಿ ನಡೆಸಿದ ಈ ಉತ್ಖನನದಲ್ಲಿ ಹೊಯ್ಸಳ ಕಾಲಕ್ಕೆ ಸೇರಿಸಬಹುದಾದ ಮನೆಯೊಂದರ ಇಟ್ಟಿಗೆಯ ಗೋಡೆಗಳು ಕಂಡುಬಂದವು. ಈ ಕಟ್ಟಡದ ಒಂದು ಸಣ್ಣಕೋಣೆಯ ನೆಲದಲ್ಲಿ ಹುದುಗಿದ್ದ ಕೆಲವು ಅಪರೂಪದ ತಾಮ್ರ ವಸ್ತುಗಳೂ ಪತ್ತೆಯಾದವು. ಆಲದೆಲೆಯಾಕಾರದ ಒಂದು ಬೋಗುಣಿ, ಚಿಕ್ಕ ಡಮರು ಮತ್ತು ಅದರ ಸರಪಳಿ, ಹಾಗೂ ಒಂದು ಕುಂಕುಮದ ಭರಣಿ ಇವೇ ಆ ತಾಮ್ರ ವಸ್ತುಗಳು. ಕೆಂಪು ಕುಂಕುಮದ ಅವಶೇಷಗಳು ಇನ್ನೂ ಈ ಭರಣಿಗೆ ಅಂಟಿಕೊಂಡಿದ್ದ ವಿಚಾರ ಇಲ್ಲಿ ಗಮನೀಯ. ಇದೇ ಗುಂಡಿಯಲ್ಲಿ ವಿಜಯನಗರ ಕಾಲಕ್ಕೆ ಸೇರಿಸಬಹುದಾದ ಎರಡು ಬಳೆಬಾವಿಗಳೂ ಅಕ್ಕ ಪಕ್ಕದಲ್ಲೇ ಕಂಡುಬಂದವು. ಈ ಬಾವಿಗಳನ್ನು ಸುಟ್ಟ ಮಣ್ಣಿನ ದೊಡ್ಡ ದೊಡ್ಡ ಉಂಗುರಗಳನ್ನು ಒಂದರ ಮೇಲೊಂದರಂತೆ ಜೋಡಿಸಿ ರಚಿಸಲಾಗಿತ್ತು. ಪ್ರತಿಯೊಂದು ಉಂಗುರದ ಎತ್ತರ 25 ಸೆಂಮೀ ಮತ್ತು ವ್ಯಾಸ 90 ಸೆಂಮೀ. ಇಪ್ಪತ್ತೊಂದು ಬಳೆಗಳ ಆಳದವರೆಗೆ ಉತ್ಖನನ ನಡೆಸಲಾಯಿತು. ಪದರ ಅಧ್ಯಯನ ಹಾಗೂ ಇತರ ಸಾಂದರ್ಭಿಕ ಆಧಾರದ ಮೇಲೆ ಈ ಬಾವಿಯನ್ನು 15–16ನೆಯ ಶತಮಾನಗಳಿಗೆ ಸೇರಿಸಲಾಗಿದೆ. ಇದೇ ಗುಂಡಿಯ ಮತ್ತೊಂದು ಶೋಧನೆಯೆಂದರೆ ವಿಜಯನಗರ ಕಾಲದ ನಾಲ್ಕು ತಾಮ್ರದ ನಾಣ್ಯಗಳು. ಗುಂಡಿಯ 1–2ನೆಯ ಪದರಗಳಲ್ಲಿ ದೊರೆತ ಈ ನಾಣ್ಯಗಳು ಮುಂಭಾಗದಲ್ಲಿ ಸಿಂಹ/ವ್ಯಾಳಗಳ ಚಿತ್ರವನ್ನು, ಹಿಂಭಾಗದಲ್ಲಿ ನಾಗರಿ ಲಿಪಿಯಲ್ಲಿ ವೀರನಾರಸಿಂಹವೆಂಬ ಆಲೇಖವನ್ನು ಹೊಂದಿವೆ. ನಾರಸಿಂಹವೀರನೆಂಬ ಈ ದೊರೆಯನ್ನು ಶ್ರೀಕೃಷ್ಣದೇವರಾಯನ ಅಣ್ಣನಾದ ವೀರನರಸಿಂಹನೊಂದಿಗೆ ಸಮೀಕರಿಸಲಾಗಿದೆ. ಈತನ ಕಾಲ 1506–09. ನಾಣ್ಯಗಳು ಸಾಧಾರಣವಾದರೂ ಇವುಗಳಿಂದ ತಿಳಿಯಬಹುದಾದ ಐತಿಹಾಸಿಕ ವಿಷಯ ಬಹಳ ಮಹತ್ತ್ವವಾದದ್ದು. ಈ ನಾಣ್ಯಗಳು ಚಲಾವಣೆ ಮೂಲಕ ತಲಕಾಡನ್ನು ತಲುಪಬೇಕಾದರೆ ಹಲವಾರು ದಶಕಗಳು ಸಂದಿರಬಹುದು. ನಾಣ್ಯ ಮಣ್ಣಿನಲ್ಲಿ ಹುದುಗಿಹೋದ ಅನಂತರ ಈ ಸ್ಥಳದಲ್ಲಿ ಅಗಾಧವಾಗಿ ಮರಳಿನ ರಾಶಿ ಬೆಳೆದಿತ್ತು. ನಾಣ್ಯ 16ನೆಯ ಶತಮಾನದ್ದಾದ ಮೇಲೆ ಅದನ್ನು ಮುಚ್ಚಿದ ಮರಳು ದಿಣ್ಣೆ ಕಡೇ ಪಕ್ಷ 17ನೆಯ ಶತಮಾನದ ಅನಂತರದ್ದಾಗಿರಬೇಕು ಎಂಬ ವಿಷಯ ಖಚಿತವಾಗುತ್ತದೆ. ತಲಕಾಡಿನ ಜಾನಪದ ಕಥೆಯಂತೆ ಸಾಧ್ವಿ ಅಲಮೇಲಮ್ಮ ಮೈಸೂರಿನ ರಾಜ ಒಡೆಯರಿಗೆ ನೀಡಿದ ಶಾಪದ ಕಾಲದೊಂದಿಗೆ ಈ ಕಾಲ ಸರಿಹೊಂದುವುದು ಕಾಕತಾಳೀಯವೆನಿಸಿದರೂ ಸತ್ಯ. ಹೀಗಾಗಿ ತಲಕಾಡಿನ ಮರಳು ರಾಶಿ 17ನೆಯ ಶತಮಾನದ ಅನಂತರ ಶೇಖರಗೊಂಡಿತೆಂಬ ವಿಷಯ ನಾಣ್ಯಾಧಾರದಿಂದ ಖಚಿತವಾಗುತ್ತದೆ. ಇದುವರೆಗೆ ನಾಣ್ಯಗಳು ಕೇವಲ ಐತಿಹಾಸಿಕ ವಿಷಯಗಳನ್ನು ತಿಳಿಯಲು ಸಹಕಾರಿಯೆನಿಸಿತ್ತು. ಆದರೆ ಈಗ ದೊರೆತಿರುವ ನಾಣ್ಯಗಳು ತಲಕಾಡಿನಲ್ಲಿ ಸಂಭವಿಸಿದ ವಿಚಿತ್ರ ನೈಸರ್ಗಿಕ ವಿಕೋಪದ ಕಾಲವನ್ನು ನಿಷ್ಕರ್ಷೆ ಮಾಡುವುದಕ್ಕೂ ಸಹಕಾರಿಯಾಗಿರುವುದು ನಾಣ್ಯಶಾಸ್ತ್ರದ ಆಯಾಮವನ್ನು ವರ್ಧಿಸಿದೆ.

ತಲಕಾಡು ಉತ್ಖನನದ ಮತ್ತೊಂದು ಮಹತ್ತರ ಶೋಧನೆಯೆಂದರೆ, ಇಲ್ಲಿ (ತಲಕಾಡು, ಗುಂಡಿ–7) ದೊರೆತ ವಿಜಯನಗರ ಕಾಲಕ್ಕೆ ಸೇರಿಸಬಹುದಾದ ನೀರು ಸರಬರಾಜು ವ್ಯವಸ್ಥೆಯ ವಿವಿಧ ಮುಖಗಳು ಮತ್ತು ಅದಕ್ಕೂ ಮಿಗಿಲಾಗಿ ವಿಜಯನಗರೋತ್ತರ ಕಾಲದಲ್ಲಿ ಮರಳು, ಗಾಳಿಯನ್ನು ತಡೆಯಲು ನಿರ್ಮಿಸಿದ ಗಾಳಿ ತಡೆಗೋಡೆ (ವಿಂಡ್ ಬ್ರೇಕರ್). ಅರಮನೆಯಿದ್ದ ಜಾಗವೆಂದು ಗುರುತಿಸಲ್ಪಡುವ ಈ ಪ್ರದೇಶದಲ್ಲಿ ಸಾಕಷ್ಟು ವಿಸ್ತಾರವಾಗಿ ಉತ್ಖನನ ನಡೆಯಿತು. ಉತ್ಖನನದಲ್ಲಿ ಕೀರ್ತಿನಾರಾಯಣ ದೇವಾಲಯದ ಪಶ್ಚಿಮದಲ್ಲಿ ಒಂದು ಕಾಲದಲ್ಲಿ ಹರಿಯುತ್ತಿದ್ದ ಮಾಧವ ಮಂತ್ರಿ ನಾಲೆಯ ಉಪನಾಲೆಯೊಂದರಿಂದ ನೇರವಾಗಿ ಸರಬರಾಜಾಗುತ್ತಿದ್ದ ನೀರಿನ ಕೊಳಾಯಿಗಳು, ಸಣ್ಣ ಒಂದು ಸ್ನಾನದ ಕೊಳ ಮತ್ತು ಬಾವಿಯಂತೆ ಆಳವಾದ



**ಉತ್ಖನನ, ಪಾರ್ಶ್ವನಾಥ ಬಸದಿ, ತಲಕಾಡು**

ಒಂದು ನೀರಿನ ಇಂಗು ಗುಂಡಿ ಇವೆಲ್ಲವೂ ಪತ್ತೆಯಾದವು. ಕೀರ್ತಿನಾರಾಯಣ ದೇವಾಲಯದ ಹಿಂಭಾಗದಲ್ಲಿ ಈಗಿರುವ ಮರಳು ರಾಶಿಯ ಪ್ರದೇಶದಲ್ಲಿ 15ನೆಯ ಶತಮಾನದಲ್ಲಿ ವಿಶಾಲವಾಗಿ ಹರಡಿದ್ದ ಗದ್ದೆಯ ಬಯಲು ಇತ್ತೆಂಬ ವಿಷಯ ಮಾಲಂಗಿಯ ಒಂದು ಶಾಸನದಿಂದ ತಿಳಿದುಬರುತ್ತದೆ. ಅಂದ ಮೇಲೆ ಇಲ್ಲಿ ಮಾಧವ ಮಂತ್ರಿ ನಾಲೆಯ ಉಪನಾಲೆಗಳು ಇದ್ದುದೂ ಸ್ಪಷ್ಟವಾಗುತ್ತದೆ. ಅಂತಹ ಒಂದು ಉಪನಾಲೆಯಿಂದ ಇಟ್ಟಿಗೆಯಲ್ಲಿ ಸುಭದ್ರವಾಗಿ ನಿರ್ಮಿಸಿದ್ದ, ಕೊಳಾಯಿಗಳ ಮುಖಾಂತರ ನದಿ ನೀರನ್ನು ಅರಮನೆಯ ಆವರಣದೊಳಕ್ಕೆ ಬರುವಂತೆ ಮಾಡಿದ್ದರು. ಈ ಆವರಣದಲ್ಲಿ ಸಣ್ಣದಾದ ಖಾಸಗಿ ಸ್ನಾನದ ಕೊಳವೊಂದನ್ನು ನಿರ್ಮಿಸಿದ್ದರು. ಕೊಳಕ್ಕೆ ಸುತ್ತಲೂ ಎತ್ತರವಾದ ಗೋಡೆಯನ್ನೂ ಮೇಲ್ಗಡೆ ಚಾವಣಿಯನ್ನೂ ನಿರ್ಮಿಸಿದ್ದರು. ಅರಮನೆಯ ಕಡೆಗೆ ಒಂದು ದ್ವಾರವನ್ನೂ ಕಲ್ಪಿಸಿದ್ದರು. ಎರಡು ಬೇರೆ–ಬೇರೆ ಮಟ್ಟದ ಕೊಳಾಯಿಗಳ ಮೂಲಕ ಕೊಳದೊಳಕ್ಕೆ ನೀರು ಬರುತ್ತಿತ್ತು. ಇವುಗಳಲ್ಲಿ ಮೇಲಿನ ಕೊಳಾಯಿಗೆ ಘಟಪ್ರನಾಳವನ್ನು ಕೂಡಿಸಿ ನೀರು ಎತ್ತರದಿಂದ ವರ್ಷಧಾರೆಯಂತೆ ಕೊಳದೊಳಕ್ಕೆ ಬೀಳುವಂತೆ ಮಾಡಿದ್ದರು. ಕೆಳಮಟ್ಟದ ಕೊಳಾಯಿಯ ಮೂಲಕವೂ ನೀರು ಕೊಳದೊಳಕ್ಕೆ ಬರುತ್ತಿತ್ತು. ಆದರೆ ಈ ನೀರು ಕೊಳದೊಳಕ್ಕೆ ರಭಸದಿಂದ ನುಗ್ಗಿ ಇಲ್ಲಿರುವ ನೀರನ್ನು ಕಲಕಿ ರಾಡಿ ಮಾಡದಂತೆ ಗೋಡೆಯೊಳಗಿನ ಗುಪ್ತವಾದ ಕೊಳಾಯಿಯ ಮೂಲಕ ಕೊಳದೊಳಕ್ಕೆ ನೀರು ಇಳಿಯುವಂತೆ ಮಾಡಿದ್ದರು. ಸರಳವಾದರೂ ವಿಶೇಷ ಆಲೋಚನೆಯಿಂದ ನೀರಿನ ಕೊಳಾಯಿಯನ್ನು ಈ ರೀತಿ ವಿನ್ಯಾಸಮಾಡಿರುವುದು, ಈ ಕಾಲದ ತಂತ್ರಜ್ಞಾನ ಬೆಳವಣಿಗೆ ಮತ್ತು ಸರಳ ಸೂಕ್ಷ್ಮವಿಷಯಗಳಿಗೆ ಇವರು ನೀಡುತ್ತಿದ್ದ ಕಾಳಜಿಗಳನ್ನು ಸೂಚಿಸುತ್ತದೆ. ಸ್ನಾನಕೊಳದ ಒಳಭಾಗಕ್ಕೆ ಅಚ್ಚುಕಟ್ಟಾಗಿ ಸುಣ್ಣ ಗಾರೆಯಿಂದ ಗಿಲಾವು ಇತ್ತು. ಸ್ನಾನಮಾಡುವಾಗ ವಿರಮಿಸಿಕೊಳ್ಳಲು ಮತ್ತು ಪ್ರಸಾಧನ ಸಾಮಾಗ್ರಿಗಳನ್ನಿಡಲು ಎರಡು ಕಡೆಗಳಲ್ಲಿ ಕಟ್ಟೆಗಳನ್ನು ನಿರ್ಮಿಸಿದ್ದರು. ನೆಲಮಟ್ಟದ ಒಂದು ಕೊಳಾಯಿಯ ಮೂಲಕ ಕೊಳದ ನೀರು ಸನಿಹದಲ್ಲೇ ಇರುವ ಇಂಗು–ಗುಂಡಿಯನ್ನು ಸೇರುವ ವ್ಯವಸ್ಥೆಯೂ ಇತ್ತು. ನದಿಯ ನೀರನ್ನು ನಿರಂತರವಾಗಿ ಕೊಳದೊಳಕ್ಕೆ ಹರಿದುಬರುವಂತೆ ಮಾಡಿ ಇದನ್ನು ತಮ್ಮ ವಿಲಾಸ ಜೀವನಕ್ಕೆ ಬಳಸಿಕೊಂಡಿದ್ದ ಈ ಕಾಲದ ನಿರ್ಮಾಣ ತಂತ್ರಜ್ಞಾನ ನಿಜಕ್ಕೂ ಪ್ರಶಂಸಾರ್ಹ ಹಾಗೂ ಅನುಕರಣೀಯ.

ಪ್ರವರ್ಧಮಾನವಾಗಿ ಬೆಳೆದಿದ್ದ ತಲಕಾಡು ನಗರ 17ನೆಯ ಶತಮಾನದ ಮಧ್ಯಭಾಗದಲ್ಲಿ ವಿಚಿತ್ರವಾದ ನಿಸರ್ಗ ವಿಕೋಪಕ್ಕೆ ತುತ್ತಾಯಿತು. ಊರಿನ ಬಳಿಯ ಕಾವೇರಿ ದಂಡೆಯ ಮೇಲೆ ಶೇಖರವಾಗಿದ್ದ ವಿಶಾಲ ಮರಳು ಹಾಸಿನ ಮೇಲೆ ನೈರುತ್ಯಮಾರುತ ಪ್ರಬಲವಾಗಿ ಬೀಸಿ ಸಣ್ಣದಾದ ಮರಳಿನ ಕಣಗಳನ್ನು ತನ್ನೊಡನೆ ಹಾರಿಸಿಕೊಂಡು ಬೀಸುವ ನಿಸರ್ಗ

ಕ್ರಿಯೆ ಪ್ರಾರಂಭವಾಯಿತು. ಹೀಗೆ ಬೀಸಿಬಂದ ಮರಳು ಮಾರುತ ತಲಕಾಡಿನ ಮೇಲೆ ಹಾಯ್ದುಹೋದಾಗ ಊರಿನಲ್ಲಿದ್ದ ಎತ್ತರವಾದ ಮನೆಗಳು, ಮರಗಳು, ಮಾರುತದ ಮುನ್ನಡೆಯ ವೇಗಕ್ಕೆ ತಡೆಯಾದವು. ಈ ತಡೆಯಿಂದ ಗಾಳಿಯ ವೇಗ ಕುಂಠಿತಗೊಂಡು ಮರಳಿನ ಕಣಗಳು ಊರಿನ ಮೇಲೆ ಉದುರಿದವು, ಗಾಳಿ ಮಾತ್ರ ಮುಂದಕ್ಕೆ ಚಲಿಸಿತು. ಈ ಕಾಲದಲ್ಲಿ ಅನೇಕ ವರ್ಷಗಳವರೆಗೆ ನಿರಂತರವಾಗಿ ಈ ಪ್ರಕ್ರಿಯೆ ನಡೆದಿರಬೇಕು. ಇದರಿಂದಾಗಿ ನಗರ ಪ್ರದೇಶದ ಮೇಲೆ ಮರಳು ರಾಶಿಯೇ ಉಂಟಾಯಿತು. ಜನರು ಈ ನಿಸರ್ಗ ಪ್ರಕ್ರಿಯೆಯಿಂದ ದಿಗ್ಭ್ರಾಂತರಾದರು. ಆದರೆ ಜನ ಅಷ್ಟು ಸುಲಭವಾಗಿ ಸೋಲನ್ನೊಪ್ಪಲು ಸಿದ್ಧರಿರಲಿಲ್ಲ. ಗಾಳಿಯ ವೇಗವನ್ನು ಮತ್ತು ಮರಳಿನ ಪ್ರವಾಹವನ್ನು ತಡೆಯಲು ಊರಿನ ನೈರುತ್ಯ ಅಂಚಿನಲ್ಲಿ ಎತ್ತರವಾದ ಒಂದು ಗಾಳಿ ತಡೆಗೋಡೆಯನ್ನೇ ನಿರ್ಮಿಸಿದರು. ಉತ್ಖನನದಲ್ಲಿ 2 ಮೀ ದಪ್ಪದವರೆಗೂ ಇರುವ ಬೃಹದಾಕಾರದ ಗೋಡೆಯ ತಳಭಾಗ ದೊರೆತಿದೆ. ಈ ಗೋಡೆಯನ್ನು ಸು. 100 ಮೀ ಗಳ ಉದ್ದಕ್ಕೂ ಅನಾವರಣಗೊಳಿಸಲಾಯಿತು. ಗೋಡೆ ಆಗ್ನೇಯ ದಿಕ್ಕಿನತ್ತ ಇನ್ನೂ ಮುಂದುವರೆದಿರುವ ಸೂಚನೆಗಳಿವೆ. ಗೋಡೆಯ ತಳಭಾಗವನ್ನು ವೀಕ್ಷಿಸಿದಾಗ ಗೋಡೆ ಕೆಲವೆಡೆ ಸು.6 ಮೀ ವರೆಗೂ ಎತ್ತರವಿದ್ದಿರಬಹುದೆಂಬ ಅಂದಾಜಿದೆ. ಈ ಬೃಹತ್ ಗೋಡೆಯನ್ನು ಅವಸರದಲ್ಲಿ ನಿರ್ಮಿಸಿರುವ ಸೂಚನೆಗಳೂ ಇವೆ. ಇಂತಹ ವಿಚಿತ್ರ ನೈಸರ್ಗಿಕ ಸನ್ನಿವೇಶ ಇದುವರೆಗೂ ಯಾರೂ ಕಂಡು ಕೇಳರಿಯದಂಥದ್ದು. ಆದರೂ ಇಲ್ಲಿಯ ಜನ ನಡೆಸಿದ ಪ್ರಯತ್ನ ವಿಫಲವಾದರೂ ಮೆಚ್ಚುವಂಥದ್ದು. ಪ್ರಕೃತಿಯ ವಿಕೋಪ ಎಷ್ಟು ಅಗಾಧವಾಗಿತ್ತೆಂದರೆ ಸ್ವಲ್ಪ ಕಾಲದಲ್ಲೇ ಗಾಳಿಯಲ್ಲಿ ತೂರಿಬಂದ ಮರಳು ಮೊದಲು ಗೋಡೆಯನ್ನೇ ಮುಚ್ಚಿತು. ತದನಂತರ ಅದರ ಹಿಂಬದಿಯಲ್ಲಿದ್ದ ಅರಮನೆ, ಗುಡಿಗೋಪುರ, ಮನೆ–ಮಹಡಿಗಳೂ ಎಲ್ಲವೂ ಮರಳಿನ ರಾಶಿಯಡಿಯಲ್ಲಿ ಕಣ್ಮರೆಯಾದವು. ನಾಗರಿಕತೆಗಳ ಇತಿಹಾಸದಲ್ಲಿ ನದಿಪ್ರವಾಹ, ಕಾಳ್ಗಿಚ್ಚು, ಬೆಂಕಿ ಅನಾಹುತ, ಅತಿವೃಷ್ಟಿ–ಅನಾವೃಷ್ಟಿ, ಶತ್ರುಸೈನ್ಯಧಾಳಿ ಇಂತಹ ಪ್ರಾಕೃತಿಕ ಹಾಗೂ ಸ್ವಯಂಕೃತ ಅನಾಹುತಗಳನ್ನು ಮನುಷ್ಯ ಯಶಸ್ವಿಯಾಗಿ ಎದುರಿಸುವ ಸನ್ನಿವೇಶಗಳು ಅನೇಕವಿವೆ. ಆದರೆ ಗಾಳಿಯಲ್ಲಿ ತೇಲಿಬಂದು ಊರನ್ನೇ ಮುಚ್ಚುವ ಮರಳಿನ ಪ್ರವಾಹ, ಹಾಗೆಯೇ ಇದನ್ನೆದುರಿಸಲು ನಡೆಸಿದ ಪ್ರಯತ್ನಗಳು ಎಲ್ಲವೂ ಅಭೂತಪೂರ್ವವಾದದ್ದು. ಪ್ರಪಂಚದ ಯಾವುದೇ ನಾಗರಿಕತೆಗಳ ನಿವೇಶನದಲ್ಲೂ ಗಾಳಿತಡೆಗೋಡೆ ನಿರ್ಮಿತವಾದ ವಿಷಯ ಇದುವರೆಗೂ ಎಲ್ಲಿಯೂ ಕಾಣದೇ ಇರುವ ವಿಚಾರ. ಇಂತಹ ಸಂದರ್ಭದಲ್ಲಿ ತಲಕಾಡಿನ ಗಾಳಿತಡೆಗೋಡೆ ಪ್ರಪಂಚದಲ್ಲಿಯೇ ಅತ್ಯಪೂರ್ವವಾದ ಒಂದು ಮಾನವ ನಿರ್ಮಿತ ಸ್ಮಾರಕವೆಂಬ ಖ್ಯಾತಿಗೆ ಅರ್ಹವಾಗಿದೆ.

ತಲಕಾಡು ಪ್ರಾಚೀನ ನಗರ ಸಂಪೂರ್ಣವಾಗಿ ಮರಳು ರಾಶಿಯಡಿಯಲ್ಲಿ ಮುಳುಗಿ ಇಲ್ಲಿ ಅಗಾಧವಾದ ಮರಳುಗುಡ್ಡೆಗಳೇ ನಿರ್ಮಾಣವಾದವು. ಮರಳು ರಾಶಿ ಶೇಖರಗೊಳ್ಳಲು ಪ್ರಾರಂಭಗೊಂಡಾಗ ಜನರು ಹತಾಶರಾಗಿ ತಮ್ಮ ನಿವಾಸಗಳನ್ನು ಈಗಿರುವ ಹಳೇತಲಕಾಡು ಭಾಗಕ್ಕೆ ವರ್ಗಾಯಿಸಿಕೊಂಡರು. ಪ್ರಕೃತಿಯ ವಿಕೋಪ ಕಡಿಮೆಯಾದರೂ ಗಾಳಿ ಬೀಸಿದಾಗ ಮರಳು ಬಂದು ಮನೆಗಳ ಮೇಲೂ ಬೀಳುತ್ತಿತ್ತು. 1800ರಲ್ಲಿ ತಲಕಾಡನ್ನು ಮಾಲಂಗಿಯ ತೀರದಿಂದ ವೀಕ್ಷಿಸಿದ ಬುಕನನ್ ಎಂಬ ಬ್ರಿಟಿಷ್ ಅಧಿಕಾರಿ ತಲಕಾಡಿನಲ್ಲಿ ಕಾಣುತ್ತಿದ್ದ ಬೋಳು ಮರಳು ಗುಡ್ಡೆಗಳು ಮತ್ತು ಅದು ಇನ್ನೂ ಬೆಳೆಯುತ್ತಿದೆ ಎಂಬ ವಿಷಯವನ್ನು ಹೇಳಿದ್ದಾನೆ. ತದನಂತರ ಈ ಮರಳು ಗುಡ್ಡೆಯ ಉದ್ದಗಲಕ್ಕೂ ನೀಲಗಿರಿ, ಗೋಡಂಬಿ ಹಾಗೂ ಇನ್ನಿತರ ಮರಗಳನ್ನು ನೆಟ್ಟು ಇಲ್ಲಿ ಕಾಡು ಬೆಳೆಯುವಂತೆ ಮಾಡಿ ಗಾಳಿಯಲ್ಲಿ ಮರಳು ತೂರಿಬರುವ ಸನ್ನಿವೇಶವನ್ನು ಕಡಿಮೆಮಾಡಲಾಯಿತು. ಈಗಿನ ಪರಿಸ್ಥಿತಿಯಲ್ಲಿ ಗಾಳಿಯ ವೇಗವೂ ಕಡಿಮೆಯಾಗಿದೆ, ಮರಳಿನ ಸ್ಥಳಾಂತರ ಕ್ರಿಯೆಯೂ ಸ್ಥಗಿತಗೊಂಡಿದೆ. (ಎಂ.ಎಸ್.ಕೆ.)

**ತಾಂಡಿಕುಡಿ:** ತಮಿಳುನಾಡು ರಾಜ್ಯದ ದಿಂಡಗಲ್ ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗ ಗೋರಿನೆಲೆ. ಪಳನಿ ಬೆಟ್ಟಶ್ರೇಣಿಯ ಕೆಳಸಾಲಿನಲ್ಲಿ ಈ ನೆಲೆಯಿದೆ. 1350–1500 ಮೀ ಎತ್ತರದಲ್ಲಿರುವ ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಗೋರಿನೆಲೆಗಳೂ ಚಾರಿತ್ರಿಕ ನೆಲೆಗಳೂ ಹೆಚ್ಚಿನ ಸಂಖ್ಯೆಯಲ್ಲಿರುವುದು ಗಮನಾರ್ಹ. ಅಸ್ಥಿಮಡಕೆ, ಕಲ್ಮನೆ, ನೆಲಕೋಣೆ ಇಲ್ಲಿಯ ಮುಖ್ಯ ಬೃಹತ್ ಶಿಲಾ ಗೋರಿ ಪ್ರಕಾರಗಳು. ಈ ನೆಲೆಯಲ್ಲಿ ಕಲ್ಮನೆಗಳ 8 ಸಂಕೀರ್ಣ ಹಾಗೂ ನೂರಾರು ನೆಲಕೋಣೆಗಳನ್ನು ಸು.40 ಹೆಕ್ಟೇರ್ ಪ್ರದೇಶದಲ್ಲಿ ಗುರುತಿಸಲಾಗಿದೆ. ಗೋರಿಗಳು ಮರುಡ ನದಿಯ ಬಲದಂಡೆಯ ಮೇಲಿವೆ. ಕಲ್ಲುಪ್ಪೆ ವೃತ್ತಸಹಿತವಾದ 4 ಹಾದಿಕೋಣೆ ಗೋರಿಗಳನ್ನು ಕೆ.ರಾಜನ್ ತಂಡ ಉತ್ಖನನಕ್ಕೆ ಒಳಪಡಿಸಿತು. 1ನೆಯ ಗೋರಿಯಲ್ಲಿ ವಿವಿಧಾಕಾರದ 41 ಮಣ್ಪಾತ್ರೆಗಳು, 4 ಗುಡಾಣದಂತಹ ಮಡಕೆಗಳು ಹಾಗೂ ಕಬ್ಬಿಣದ 1 ಉದ್ದ ಕತ್ತಿ ದೊರೆತವು. 4ನೆಯ ಗೋರಿಯಲ್ಲಿ ಮಂದಗೆಂಪಿನ ಕಲ್ಲಿನ ಎಚ್ಚಿದ 296 ಮಣಿಗಳು, ಬೆಣಚುಕಲ್ಲಿನ 48 ಮಣಿಗಳು, ಕಬ್ಬಿಣದ ಬಾಣದ ಮೊನೆಗಳು, ಕತ್ತಿ, ಚಿನ್ನದ ಸಣ್ಣ ತುಂಡು ಮತ್ತಿತರ ಅವಶೇಷಗಳು ಕಂಡುಬಂದವು. ಈ ಗೋರಿಗಳು ಗಣ್ಯವರ್ಗದ ವ್ಯಕ್ತಿಗಳದ್ದಾಗಿರಬೇಕು. ಸುತ್ತಮುತ್ತಲಹಳ್ಳಿಗಳಲ್ಲಿ ನಡೆಸಿದ ಸರ್ವೇಕ್ಷಣೆಯಿಂದ ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗ ದಿಂದ ಸತತವಾಗಿ ಜನವಸತಿ ಇರುವುದು ತಿಳಿದುಬಂದಿದೆ. ಈ ಜಾಗ ಮೆಣಸು, ಏಲಕ್ಕಿ ಮುಂತಾದ ಸಾಂಬಾರ ಪದಾರ್ಥ ಹಾಗೂ ಅಪರೂಪ ತಳಿಯ ಬಾಳೆಹಣ್ಣಿನ ಬೆಳೆಗೆ ಪ್ರಶಸ್ತವಾಗಿರುವುದೇ ಇದಕ್ಕೆ ಕಾರಣವಿರಬೇಕು. ಪ್ರಾಚೀನ ವ್ಯಾಪಾರ ಮಾರ್ಗಗಳು ಈ ಪ್ರದೇಶವನ್ನು ಬಳಸಿ ಹೋಗಿದ್ದವೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಇಲ್ಲಿನ ಬೃಹತ್ ಶಿಲಾಯುಗ ಜನ ಸಾಂಬಾರ ಪದಾರ್ಥ ಹಾಗೂ ಅರಣ್ಯೋತ್ಪನ್ನಗಳನ್ನು ಬಯಲಿನ ಜನರಿಗೆ ಕೊಟ್ಟು ಅವರಿಂದ ಪ್ರಶಸ್ತ ಸರಕುಗಳನ್ನು ಪಡೆಯುತ್ತಿದ್ದಿರಬೇಕು. (ವಿ.ಎಸ್.)

**ತಾಜ್‌ಮಹಲ್:** ಪ್ರಪಂಚದಲ್ಲಿಯೇ ಅತ್ಯಂತ ಸುಂದರ ಕಲಾಕೃತಿಗಳಲ್ಲೊಂದು ಎಂದು ಪ್ರಸಿದ್ಧವಾಗಿರುವ ಸಮಾಧಿಮಂದಿರ. ಆಗ್ರದಲ್ಲಿ ಯಮುನಾ ನದಿಯ ದಡದ ಮೇಲಿದೆ. ಮೊಗಲ್ ಚಕ್ರವರ್ತಿ ಷಹಜಹಾನನ ಮೆಚ್ಚಿನ ರಾಣಿ ಮುಮ್ತಾಜ್‌ಮಹಲಳ ಗೋರಿಯ ಮೇಲೆ ನಿರ್ಮಿತವಾದ ಈ ಮಂದಿರಕ್ಕೆ ಆಕೆಯದೇ ಹೆಸರು. ಅರ್ಜುಮಂದ್ ಬಾನೂ ಬೇಗಂ ಎಂಬುದು ಆಕೆಯ ಹುಟ್ಟು ಹೆಸರು. ಷಹಜಹಾನ್ ಇನ್ನೂ ರಾಜಕುಮಾರನಾಗಿದ್ದಾಗಲೇ ಅಂದರೆ ಅವನ ತಂದೆ ಜಹಂಗೀರ್ ಚಕ್ರವರ್ತಿಯಾಗಿದ್ದಾಗ 1612ರಲ್ಲಿ ಮುಮ್ತಾಜಳನ್ನು ಮದುವೆಯಾದ, ಆಗ ಜಹಂಗೀರನೇ ತನ್ನ ಸೊಸೆಗೆ ಮುಮ್ತಾಜ್ ಮಹಲ್ (ಅರಮನೆಯ ಅಕ್ಕರೆಯ ಮಕುಟ) ಎಂಬ ಬಿರುದನ್ನಿತ್ತ. ಷಹಜಹಾನ್ ಚಕ್ರವರ್ತಿಯಾದ ಮೂರನೆಯ ವರ್ಷ ಎಂದರೆ 1630ರಲ್ಲಿ ದಂಗೆಯೊಂದನ್ನಡಗಿಸಲು ಬರ್ಹಾಂಪುರಕ್ಕೆ ಹೋಗಿದ್ದು ವಿಜಯೋತ್ಸಾಹದಲ್ಲಿದ್ದಾಗ ಅವನನ್ನೇ ಹಿಂಬಾಲಿಸಿದ್ದ ಮುಮ್ತಾಜ್ ತನ್ನ ಹದಿನಾಲ್ಕನೆಯ ಮಗುವಿಗೆ ಜನ್ಮವಿತ್ತು ಅದೇ ಜೂನ್ 7ರಂದು ಅಸು ನೀಗಿದಳು.



ಮುಮ್ತಾಜಳ ನೆನಪಿಗಾಗಿ ಹಿಂದೆ ಯಾರೂ ಕಂಡರಿಯದಂಥ ಸ್ಮಾರಕವೊಂದನ್ನು ನಿರ್ಮಿಸಲು ನಿಶ್ಚಯಿಸಿದ ಚಕ್ರವರ್ತಿ ಬರ್ಹಾಂಪುರದಲ್ಲಿ ತಾತ್ಕಾಲಿಕವಾಗಿ ಗೋರಿಯೊಂದರಲ್ಲಿರಿಸಿದ್ದ ಮುಮ್ತಾಜಳ ದೇಹವನ್ನು ಆರು ತಿಂಗಳ ಅನಂತರ ಆಗ್ರಕ್ಕೆ ತರಿಸಿದ. ಸಮಾಧಿ ಮಂದಿರ ನಿರ್ಮಾಣಕ್ಕಾಗಿ ಯಮುನಾನದಿಯ ದಂಡೆಯ ಮೇಲೆ ವಿಶಾಲವಾದ ಸೂಕ್ತವಾದ ಸ್ಥಳವನ್ನಾರಿಸಿ ಅಲ್ಲಿ ಗೋರಿ ಮಾಡಲಾಯಿತು. ಅನಂತರ ಅದರ ಮೇಲೆ ಮುಮ್ತಾಜಳ ಹೆಸರು ಅಮರವಾಗುವಂತೆ ಭವ್ಯವಾದ ಮಂದಿರ ನಿರ್ಮಾಣವಾಯಿತು.

ಪ್ರಪಂಚದಲ್ಲಿಯೇ ಅತ್ಯಂತ ಶ್ರೀಮಂತನಾಗಿದ್ದ ಚಕ್ರವರ್ತಿ, ವಾಸ್ತುಶಿಲ್ಪ ನಿರ್ಮಾಣದಲ್ಲಿ ಅವನಿಗಿದ್ದ ಅತೀವ ಆಸಕ್ತಿ, ಮೊಗಲ್ ಶೈಲಿಯ ಮಾದರಿಗಳು, ಇವುಗಳೊಂದಿಗೆ ಅರಿತ ನುರಿತ ಮೇಧಾವಿ ಶಿಲ್ಪಿಗಳ ತಂಡ ಒಂದುಗೂಡಿ ಈ ಬೃಹದ್ ವಾಸ್ತು ಕೃತಿಗೆ ಕಾರಣವಾದುವು. ಸು.20 ವರ್ಷಗಳ ಕಾಲ 20,000 ಜನರ ಎಡಬಿಡದ ದುಡಿಮೆಯಿಂದ ರೂಪುಗೊಂಡ ಈ ಮಂದಿರದಲ್ಲಿ ಅತ್ಯುತ್ತಮವಾದ ಹಾಲುಬಿಳುಪಿನ ಅಮೃತಶಿಲೆ, ಕೆಂಪು ಮರಳುಗಲ್ಲು, ಬಗೆಬಗೆಯ ವರ್ಣದ ಅತ್ಯಂತ ಬೆಲೆಬಾಳುವ ಅಸಂಖ್ಯಾತ ಪ್ರಶಸ್ತ ಶಿಲೆಗಳನ್ನು ಬಳಸಲಾಗಿದೆ. ಈ ಕಟ್ಟಡವನ್ನು ರೂಪಿಸಿದ ಪ್ರಧಾನ ಶಿಲ್ಪಿ ಉಸ್ತಾದ್ ಈಶ. ನಿರ್ಮಾಣಕಾರ್ಯದ ಮೇಲ್ವಿಚಾರಣೆ ನಡೆಸಿದವರು ಮಕ್ರಾಮತ್‌ಖಾನ್ ಮತ್ತು ಮೀರ್ ಅಬ್ದುಲ್ ಕರೀಮ್. ಇದರ ಗೋಪುರಕ್ಕೆ ಭವ್ಯವಾದ ಆಕಾರವನ್ನು ಕೊಟ್ಟವ ಇಸ್ಮೈಲ್‌ಖಾನ್. ಅಲಂಕರಣ ಲಿಪಿಯ ವಿನ್ಯಾಸಕ ಅಮಾನತ್‌ಖಾನ್, ಕುಂದಣದ ಕೆಲಸ ಮಾಡಿದವರು ಚಿರಂಜಿಲಾಲ್ ಮನ್ನೂಲಾಲ್ ಮೊದಲಾದವರು.

810ಮೀ ಉದ್ದ 300ಮೀ ಅಗಲವಿದ್ದು ಉತ್ತರ ದಕ್ಷಿಣವಾಗಿ ಚಾಚಿರುವ ಆಯಾಕಾರದ ಒಂದು ವಿಸ್ತೀರ್ಣವಾದ ಆವರಣ. ಅದನ್ನು ಸುತ್ತುವರಿದ ಪೌಳಿಗೋಡೆ, ದಕ್ಷಿಣಕ್ಕೆ ಹೆಬ್ಬಾಗಿಲು, ಉತ್ತರಕ್ಕೆ ತಾಜ್ ಮಂದಿರ, ತಾಜಿನ ಕಡೆ ಮುಖ ಮಾಡಿ ಅದರ ಪೂರ್ವಪಶ್ಚಿಮಗಳಲ್ಲಿ ಒಂದೇ ವಿನ್ಯಾಸದಲ್ಲಿರುವ ಮಸೀದಿ ಮತ್ತು ಯಾತ್ರಿಗಳು ತಂಗುತ್ತಿದ್ದ ಜಮತ್ ಖಾನ್, ತಾಜ್‌ಗೂ ಅದರ ಹೆಬ್ಬಾಗಿಲಿಗೂ ನಡುವೆ 540ಮೀ ಉದ್ದದ ಉದ್ಯಾನ. ಉದ್ಯಾನದ ಮಧ್ಯದಲ್ಲಿ ಉದ್ದವಾದ ಹರಿವ ಕಾಲುವೆ, ಅಲ್ಲಲ್ಲಿ ಚಿಮ್ಮುವ ನೀರಿನ ಬುಗ್ಗೆಗಳು, ನಡುವೆ

22.50 ಮೀ ಚಚ್ಚೌಕವಾದ ಕೊಳ ಕೊಳದ ಎರಡು ಕಡೆಯೂ ಪೌಳಿಗೋಡೆಗೆ ಹೊಂದಿದಂತೆ ಒಂದಕ್ಕೊಂದು ಅನುರೂಪವಾದ ಮತ್ತೆರಡು ಕಟ್ಟಡಗಳು. ಹೆಬ್ಬಾಗಿಲಿನಿಂದ ಹೊರಗೆ ವಿಶಾಲವಾದ ಅಂಗಳ. ಅದರ ಇಕ್ಕೆಲಗಳಲ್ಲಿಯೂ ಯಾತ್ರಿಕರು ತಂಗುವುದಕ್ಕಾಗಿರುವ ಕೋಣೆಗಳು. ಅಂಗಳದಿಂದ ಹೊರಕ್ಕೆ ಒಂದು ಕಡೆ ಮಸೀದಿ ಮತ್ತೊಂದು ಕಡೆ ಮಮ್ತಾಜಳ ಒಡನಾಡಿಗಳಿಬ್ಬರ ಸಮಾಧಿಮಂದಿರ. ಇವು ತಾಜ್‍ಮಹಲಿಗೆ ಸೇರಿದ ಒಟ್ಟು ಕಟ್ಟಡಗಳ ವಿನ್ಯಾಸ. ತಾಜಿನ ಮುಂಭಾಗಕ್ಕೆ ಬರಬೇಕಾದರೆ ಷಹಜಹಾನ್ ತೋಟಗಳ ಮೂಲಕ ಬರಬೇಕು.

ಪ್ರವೇಶದ್ವಾರ ಅಷ್ಟಕೋನಾಕೃತಿಯ ಹಜಾರ. ಅಕ್ಕಪಕ್ಕಗಳಲ್ಲಿ ಎರಡಂತಸ್ತಿನ ಕಿರುಕೋಣೆಗಳು. ಮುಂದೆ ಹಿಂದೆ ಸುಂದರವಾಗಿ ಅಲಂಕೃತವಾದ ದ್ವಾರಗಳು. ಇದಕ್ಕೇ ಮೊದಲು ಬೆಳ್ಳಿಯ ಬಾಗಿಲುಗಳಿದ್ದು ಅವಕ್ಕೆ ಜೋಡಿಸಿದ್ದ 1100 ಬೆಳ್ಳಿಯ ಮೊಳೆಗಳ ತಲೆಗಳಿಗೆ ಆ ಕಾಲದ ಬೆಳ್ಳಿಯ ನಾಣ್ಯಗಳನ್ನು ಕೆತ್ತಿಸಲಾಗಿತ್ತು. ಕಾಲಕ್ರಮದಲ್ಲಿ ಈ ಬಾಗಿಲುಗಳನ್ನು ತೆಗೆದು ಈಗಿರುವ ಹಿತ್ತಾಳೆಯ ಬಾಗಿಲುಗಳನ್ನಳವಡಿಸಲಾಯಿತು. ಇಕ್ಕೆಲಗಳಲ್ಲಿರುವ ಕೋಣೆಗಳಲ್ಲಿ ತಾಜ್‍ಮಹಲನ್ನು ಕುರಿತ ವಸ್ತುಸಂಗ್ರಹಾಲಯವಿದೆ. ದ್ವಾರಗಳ ದೊಡ್ಡ ಕಮಾನುಗಳ ಮೇಲೆ ಹನ್ನೊಂದು ಕಿರುಗುಮ್ಮಟಗಳುಳ್ಳ ಸಾಲುಮಂಟಪ, ನಾಲ್ಕು ಮೂಲೆಗಳಲ್ಲಿ ಅಷ್ಟಕೋನಾಕಾರದ ಮಂಟಪಗಳಿವೆ. ಇಲ್ಲಿಂದ ಆವರಣದ ಹಿಂಭಾಗದಲ್ಲಿ 540 ಮೀ ದೂರದಲ್ಲಿರುವ ತಾಜ್ ಮಂದಿರದ ದೂರನೋಟ ಮೋಹಕವಾದುದು. ಈ ಅಂತರದಿಂದ ನೋಡಿದಾಗ 93.90 ಮೀ ಚೌಕದ ಜಗತಿಯ ಮೇಲೆ ಒಟ್ಟು 72 ಮೀಗಳಿಗೂ ಹೆಚ್ಚು ಎತ್ತರವಿರುವ ಮಂದಿರ ಅಷ್ಟು ಬೃಹತ್ತಾದುದೆಂಬ ಕಲ್ಪನೆಯೇ ಬಾರದು.

ಹೆಬ್ಬಾಗಿಲಿನಿಂದ ತಾಜ್‍ಮಂದಿರದವರೆಗೆ ನೇರವಾದ ನೀರಿನ ಕಾಲುವೆಯಿದೆ. ಅದರ ನಡುವೆ 22.50 ಮೀ ಚೌಕ 1.50 ಮೀ ಆಳದ ಅಚ್ಚುಕಟ್ಟಾದ, ಅತ್ಯಂತ ಕರಾರುವಾಕ್ಕಾದ ಅಳತೆಯುಳ್ಳ ಸುಂದರ ಕೊಳ. ಕಾಲುವೆಯ ಎರಡು ಕಡೆಯೂ ಕೆಂಪು ಮರಳುಗಲ್ಲಿನಲ್ಲಿ ಸುಂದರ ವಿನ್ಯಾಸಗಳಿಂದಲಂಕೃತವಾದ ಕಾಲುದಾರಿಗಳು. ಪಕ್ಕದಲ್ಲಿ ಸಾಲು ಸೈಪ್ರೆಸ್ ಮರಗಳು, ಹಚ್ಚನೆಯ ಹುಲ್ಲುಗಾವಲು. ಈ ಸುಂದರ ತೋಟದ ವಿನ್ಯಾಸ ಅಲುಮರ್ದಾನ್‍ಖಾನನದು. ತೋಟದ ಉತ್ತರದ ಕೊನೆಯಲ್ಲಿ ಪೂರ್ವಪಶ್ಚಿಮವಾಗಿ ಸು.300ಮೀ ಗಳಷ್ಟಿರುವ ಆವರಣದ ಪೂರ್ಣ ಅಡ್ಡಗಲಕ್ಕೂ ಇರುವ ವಿಸ್ತಾರವಾದ 1.20 ಮೀ ಎತ್ತರದ ಒಂದು ಜಗತಿ. ಇದು ನದಿಯ ದಂಡೆಯವರೆಗೂ ಚಾಚಿಕೊಂಡಿದ್ದು ನದಿಯಲ್ಲಿ ನೀರು ತುಂಬಿ ಹರಿವಾಗ ಅದರ ಅಲೆಗಳು ಈ ಜಗತಿಯನ್ನು ತಾಡಿಸುತ್ತವೆ. ಜಗತಿಯ ಮೇಲೆ ತಾಜ್ ಮಹಲಿನ ಎರಡು ಕಡೆಯೂ ಇರುವ ಮಸೀದಿ ಮತ್ತು ಜಮತ್‍ಖಾನ್ ಮಂದಿರಗಳು, ಜಗತಿ ಮತ್ತು ಪೌಳಿಗೋಡೆಗಳು ಈ ಎಲ್ಲವೂ ಕೆಂಪು ಮರಳುಗಲ್ಲಿನಿಂದಲೇ ನಿರ್ಮಿತವಾಗಿದ್ದು ಅನರ್ಘ್ಯರತ್ನದಂತಿರುವ ಹಾಲುಬಿಳಿಪಿನ ಅಮೃತಶಿಲೆಯ ಮೂಲಮಂದಿರ ತಾಜ್‍ಮಹಲಿಗೆ ಸಂಪುಟದಂತಿವೆ.

ಕೆಂಪು ಮರುಳುಗಲ್ಲಿನ ವಿಶಾಲವಾದ ಈ ಜಗತಿಯ ನಡುವೆ 5.40 ಮೀ ಎತ್ತರದ ಶಿಲೆಯಿಂದ ನಿರ್ಮಿತವಾದ ಮತ್ತೊಂದು ಉನ್ನತ ಜಗತಿ. 93.90 ಮೀ ಚಚ್ಚೌಕವಾಗಿರುವ ಈ ಜಗತಿಯ ನಾಲ್ಕು ಮೂಲೆಗಳಲ್ಲೂ ಗುಂಡಾಗಿ ಮೇಲೆದ್ದಿರುವ 420 ಮೀ ಎತ್ತರದ ಮೂರು ಅಂತಸ್ತಿನ ಮಿನರೆಟ್ಟುಗಳು-ಇವುಗಳೊಳಗಿನ ಸುತ್ತೇಣಿಯ ಮೂಲಕ ಮೇಲೇರಿದರೆ ತುದಿಯಲ್ಲಿ ಎಂಟು ತೆಳುಗಂಬಗಳ ಮೇಲೆ ನಿಂತಿರುವ ಮಂಟಪ. ಅದರ ಮೇಲೆ ಅರೆಗೋಳಾಕಾರದ ಗುಮ್ಮಟ. ಈ ಎತ್ತರವಾದ ಜಗತಿಯ ನಡುವೆ ಇರುವುದು 55.80 ಮೀ ಚೌಕದ ತಾಜ್‍ಮಹಲ್. ಮೂಲತಃ ಇದು ಒಂದು ಉನ್ನತವಾದ ಗುಮ್ಮಟವುಳ್ಳ ಚೌಕ ವಿನ್ಯಾಸದ ಕಟ್ಟಡ. ಇದಕ್ಕೆ ನಾಲ್ಕೂ ಕಡೆಯೂ ಪ್ರವೇಶದ್ವಾರವಿರುವಲ್ಲಿ, ಮುಂಚಾಚಿರುವಂತೆ ಒಂದು ಅಗಲವಾದ ಕಮಾನು, ಅದರ ಎರಡು ಕಡೆಯೂ ಒಂದರ ಮೇಲೊಂದರಂತಿರುವ ಸಣ್ಣ ಪ್ರಮಾಣದ ಕಮಾನುಗಳು. ಮೂಲೆಗಳನ್ನು 10.20 ಮೀ ಗಳಷ್ಟು ಸವರಿ ಅಲ್ಲಿಯೂ ಒಂದರ ಮೇಲೊಂದರಂತೆ ಕಮಾನುಗಳಿರುವುದರಿಂದ ಈ ಕಟ್ಟಡದ ಹೊರವಿನ್ಯಾಸ ಪೂರ್ಣವಾಗಿ ಚೌಕವಾಗಿಲ್ಲದೆ ಎಂಟುಮೂಲೆಗಳನ್ನು ಹೊಂದಿದಂತಿದೆ. ಮಧ್ಯ ಹಜಾರದ ಮೇಲಿನ 24.0 ಮೀ ಎತ್ತರವಿರುವ ಬೃಹದ್‍ಗುಮ್ಮಟ ಮೊದಲು ಗುಂಡಾಗಿ ಕೊಳಗದಾಕಾರದಲ್ಲಿ ಮೇಲೆದ್ದು ಅನಂತರ ಅರ್ಧಕ್ಕಿಂತ ಸ್ವಲ್ಪ ಹೆಚ್ಚಾದ ಗೋಲ ಪ್ರಮಾಣದಲ್ಲಿ ಆಕೃತಿಗೊಂಡಿದೆ. 17.40 ಮೀ ಗಳಷ್ಟು ವ್ಯಾಸವುಳ್ಳ ಈ ಗೋಲದ ಮೇಲಿನ ಕಂಚಿನ ಕಲಶವೇ 9.0ಮೀ ಎತ್ತರವಿದೆ. ಈ ಬೃಹದ್ಗುಮ್ಮಟದ ನಾಲ್ಕು ಕಡೆಯೂ 8.10ಮೀ ವ್ಯಾಸವುಳ್ಳ ನಾಲ್ಕು ಕಿರುಗುಮ್ಮಟಗಳುಂಟು. ಕಮಾನಿನ ಸುತ್ತಲೂ ಸು. 30 ಮೀ ಎತ್ತರವಿರುವ ಗೋಡೆಯ ಮೇಲೆ ಕುರಾನಿನ ಭಾಗಗಳನ್ನು ಕಂಡರಿಸಿದ್ದು ಮೇಲೆ ಹೋಗುತ್ತ ಅಕ್ಷರಗಳ ಗಾತ್ರ ದೊಡ್ಡದಾಗುತ್ತ ಹೋಗುತ್ತದೆ. ಇದರಿಂದ ನೋಡುವವರಿಗೆ ಎಲ್ಲ ಅಕ್ಷರಗಳೂ ಒಂದೇ ಗಾತ್ರದಂತೆ ಭಾಸವಾಗುತ್ತವೆ. ನಾಲ್ಕು ದಿಕ್ಕುಗಳಲ್ಲಿಯೂ ಪೂರ್ಣ ಅನುರೂಪವುಳ್ಳ ಅತ್ಯಂತ ಸಮರ್ಪಕವಾದ ಸಮ ಸೂತ್ರವುಳ್ಳ ರಚನೆ ಈ ಮಂದಿರದ್ದು.

ಒಳಹೊಕ್ಕರೆ ನಡುವೆ ಚೌಕನಾದ ದೊಡ್ಡ ಹಜಾರ. ಅದರ ಸುತ್ತಲೂ ಎರಡಂತಸ್ತಿನ ಕೋಣೆಗಳು. ಹಜಾರದ ಮೇಲೆ ತುಂಬ ಎತ್ತರವಾದ ಪೊಳ್ಳು ಗುಮ್ಮಟ. ಕೆಳಗೆ ನುಡಿಸಿದ ಒಂದು ರಾಗಲಹರಿ ದೂರದಲ್ಲೆಲ್ಲಿಯೋ ಹಲವು ಬಾರಿ ನುಡಿಸುತ್ತಿರುವಂತೆ ಗಂಭೀರವಾಗಿ ಮಾರ್ದನಿಸುತ್ತದೆ. ಹಜಾರದ ನಟ್ಟನಡುವೆ ನೆಲಮಾಳಿಗೆಯಲ್ಲಿರುವ ಮಮ್ತಾಜ್‍ಮಹಲಳ ಗೋರಿಯ ಮೇಲೆ ಸರಿಯಾಗಿ ಸಮಾಧಿ ಶಿಲೆಯುಂಟು. ಇದರ ಒಂದು ಪಕ್ಕದಲ್ಲಿರುವ ಮತ್ತೊಂದು ಸಮಾಧಿ ಶಿಲೆ ಷಹಜಹಾನನ ಗೋರಿಯ ಮೇಲಿನದು. ಈ ಸಮಾಧಿ ಶಿಲೆಗಳನ್ನು ಸುತ್ತುವರಿದು ಒಂದು ಅಮೃತಶಿಲೆಯ ಅಡ್ಡ ತೆರೆಯೊಂದಿದ್ದು ಸಮೃದ್ಧವಾಗಿ ಅಲಂಕರಿಸುವ ಅದರ ಜಾಲಂದ್ರದ ಕಂಡರಣೆ ಸುಂದರ ಹೂಗಳ ಬಳ್ಳಿಗಳ ಆಕಾರ ತಳೆದಿದೆ. ಮೊದಲು ಈ ಅಡ್ಡತೆರೆಗಳು ಚಿನ್ನದ ಹಲಗೆಗಳಿಂದಲೇ ನಿರ್ಮಿತವಾಗಿದ್ದುವೆಂದೂ ಷಹಜಹಾನ್ ತೀರಿಕೊಂಡ ಬಳಿಕ ಔರಂಗಜೇಬ ಮಮ್ತಾಜ್‍ಮಹಲಳ ಗೋರಿಯ ಪಕ್ಕದಲ್ಲಿಯೇ ಆತನ ಗೋರಿಯನ್ನೂ ಮಾಡಿಸಿ ಚಿನ್ನದ ತೆರೆಯನ್ನು ತೆಗೆಸಿ ಈಗಿನ ಅಮೃತಶಿಲೆಯ ತೆರೆಯನ್ನು ನಿಲ್ಲಿಸಿದನೆಂದೂ ತಿಳಿದುಬರುತ್ತದೆ.

ತಾಜ್‍ಮಹಲಿನ ಇಡೀ ಮಂದಿರ ಪರಿಶುದ್ಧವಾದ, ದಂತದಂತೆ ನಯಗೊಳಿಸಿದ ಹಾಲುಬಿಳುಪಿನ ಅಮೃತಶಿಲೆಯಿಂದ ನಿರ್ಮಿತವಾಗಿದೆ. ಗೋಡೆಗಳಲ್ಲಿ ನೂರಾರು ಬಗೆಯ ಬಣ್ಣ ಬಣ್ಣದ ಪ್ರಶಸ್ತ ಶಿಲೆಗಳನ್ನು ಜೋಡಿಸಿ ಮಾಡಿರುವ ಕುಂದಣ ಕೆಲಸದಲ್ಲಿ ಹೂಗಳ ಬಳ್ಳಿಗಳ ಎಲೆಗಳ ಸ್ವಾಭಾವಿಕ ರಚನೆಗಳಿವೆ. ಇಲ್ಲಿ ಉಬ್ಬಿಸಿ, ಬಿಡಿಸಿರುವ ಅಲಂಕರಣದ ಕೆಲಸ ಕಡಿಮೆಯೇ. ಒಟ್ಟು ಕಟ್ಟಡ ಸರಳವಾದುದಾಗಿ ಕಂಡರೂ ಅದರಲ್ಲಿನ ಸೂಕ್ಷ್ಮವಾದ ತೆರಪು ಚಿತ್ರದ ಕೆಲಸ ಅಪೂರ್ವವಾದುದು. ಈ ತೆರನಾದ ಅತ್ಯಂತ ಬೆಲೆಬಾಳುವ ಕುಂದಣದ ಕೆಲಸವನ್ನು ಸಮಾಧಿಶಿಲೆಗಳ ಮೇಲೆ, ತೆರೆಗಳ ಮೇಲೆ, ಗೋಡೆಗಳ ಮೇಲೆ, ಅಕ್ಕಪಕ್ಕಗಳಲ್ಲಿರುವ ಮಸೀದಿ ಜಮತ್‍ಖಾನ, ಹೆಬ್ಬಾಗಿಲಿನ ಗೋಡೆಗಳ ಮೇಲೆಲ್ಲ ಕಾಣಬಹುದು. ಮೊಗಲ್‍ಶೈಲಿಯಲ್ಲಿ ಕಾಲಕ್ರಮೇಣ ಬೆಳೆದುಬಂದ ಹಿಂದು ಮುಸ್ಲಿಂ ಶೈಲಿಗಳ ಮಧುರ ಸಮ್ಮಿಳನದ ಉನ್ನತಮಟ್ಟವನ್ನು ಇಲ್ಲಿ ಕಾಣಬಹುದು.

ಆದರೂ ಮಹಲಿನ ಶಿಲ್ಪಶೈಲಿಯ ಹಾಗೂ ಅದಕ್ಕಾಗಿ ಸೂರೆಯಾಗಿರುವ ಐಶ್ವರ್ಯದ ಬಗೆಗೆ ಅಸಮಾಧಾನ ಸೂಚಿಸಿರುವವರೂ ಕೆಲವರುಂಟು. ಪ್ರಸಿದ್ಧ ಪ್ರವಾಸಿಗ ಹಾಗೂ ಕಾದಂಬರಿಕಾರ ಆಲ್ಡಸ್ ಹಕ್ಸ್ಲಿಗೆ ತಾಜನ್ನು ನೋಡಿದಾಗ ಆಶಾಭಂಗವಾಯಿತಂತೆ. ಅದಕ್ಕಾಗಿ ಆತ ನಂಬಲಾಗದಷ್ಟು ಹೆಚ್ಚಿನ ವೆಚ್ಚದಿಂದ ಅದರ ಸುತ್ತಲ ಆವರಣವನ್ನು ಅನೇಕರು ಮೆಚ್ಚುವಂತೆ ಮಾಡಿರಬಹುದು. ಆದರೆ ಅದರ ವಾಸ್ತುಶಿಲ್ಪ ಶೈಲಿಯ ಸೊಬಗು ತೀರ ಶುಷ್ಕ ಮತ್ತು ಭಾವನಾರಹಿತವಾಗಿದ್ದು ಅದರಲ್ಲಿ ಕಲ್ಪನಾದಾರಿದ್ರ್ಯ, ಅಭಿರುಚಿಯ ಕೊರತೆ ಎದ್ದು ಕಾಣುತ್ತದೆ-ಎಂದು ಆತ ಹೇಳಿದ್ದಾನೆ. ಕೆಲವರಿಗಂತೂ ಅದು ನಿರಂಕುಶ ಪ್ರಭುಗಳ ದಬ್ಬಾಳಿಕೆಯ ಮತ್ತು ಜೀವನವಿಡೀ ದುಡಿಸಿದ ಬಡಜನತೆಯ ದುಡಿಮೆಯ ಪ್ರತೀಕವಾಗಿ ಕಂಡುಬಂದಿದೆ. ಪಿ.ಎನ್. ಓಕ್ ಎಂಬ ವಿದ್ವಾಂಸರು ಅದು ಹಿಂದುರಾಜನ ಅರಮನೆಯಾಗಿತ್ತೆಂದೂ ಅದನ್ನು ಅನಂತರ ಗೋರಿಯಾಗಿ ಉಪಯೋಗಿಸಲಾಯಿತೆಂದೂ ಹೇಳಿರುವುದುಂಟು. ವೈಸರಾಯ್ ಆಗಿದ್ದ ವಿಲಿಯಂ ಬೆಂಟಿಂಕ್ ತಾಜನ್ನು ಕೆಡವಿಸಿ ಅದರ ಕಲ್ಲನ್ನು ಮಾರಿಬಿಡುವಂತೆ ಸಲಹೆ ಮಾಡಿದ್ದನಂತೆ. (ಎಂ.ಎಚ್.)

**ತಾತ್ಯಾಟೋಪಿ:** 1813-59. ಬ್ರಿಟಿಷ್ ಸರ್ಕಾರದ ವಿರುದ್ಧ 1857ರಲ್ಲಿ ನಡೆದ ಬಂಡಾಯದಲ್ಲಿ ಪ್ರಮುಖ ಪಾತ್ರವಹಿಸಿದ ದೇಶೀ ಸೇನಾನಿ. ಈತನ ನಿಜನಾಮ ರಾಮಚಂದ್ರ. ಪುಣೆಯ ದೇಶಸ್ಥ ಬ್ರಾಹ್ಮಣ ಕುಟುಂಬದಲ್ಲಿ ಸು. 1813 ರಲ್ಲಿ ಜನಿಸಿದ. ಈತನ ತಂದೆ ಪಾಂಡುರಂಗರಾವ್ ಟೋಪಿ. ಪೇಶ್ವೆ ಬಾಜಿರಾಯನ ಆಸ್ಥಾನದಲ್ಲಿದ್ದ. ಬಾಜಿರಾಯನ ದತ್ತುಪುತ್ರ ನಾನಾಸಾಹೇಬನ ಜೊತೆ ತಾತ್ಯಾನಿಗೆ ಸ್ನೇಹ ಬೆಳೆಯಿತು. ಬಾಜಿರಾಯನ ಮರಣಾನಂತರ ನಾನಾಸಾಹೇಬನಿಗೆ ಬ್ರಿಟಿಷರಿಂದ ಮಾನ್ಯತೆ ಸಿಗಲಿಲ್ಲ. ನಾನಾಸಾಹೇಬ ಬ್ರಿಟಿಷರ ದ್ವೇಷಿಯಾದ. ಇದೇ ರೀತಿ ಅತೃಪ್ತರಾದ ಜನರನ್ನು ಸೇರಿಸಿ ಬ್ರಿಟಿಷರ ವಿರುದ್ಧ ಬಂಡಾಯ ಹೂಡಲು ನಾನಾಸಾಹೇಬ ಸಂಚು ನಡೆಸಿದ. ಈ ಕಾರ್ಯದಲ್ಲಿ ತಾತ್ಯಾನದೇ ಮುಖ್ಯ ಪಾತ್ರವಾಯಿತು. 1857 ಮೇ ತಿಂಗಳಲ್ಲಿ 20,000 ಬಂಡು ಸೈನಿಕರನ್ನು ಸೇರಿಸಿಕೊಂಡು ತಾನೇ ಅದರ ಮುಂದಾಳಾಗಿ ಕಾನ್ಪುರದಲ್ಲಿ ತಳವೂರಿದ್ದ ಈಸ್ಟ್ ಇಂಡಿಯ ಕಂಪನಿಯ ಸೈನ್ಯವನ್ನು ಇವನು ಸೋಲಿಸಿದ. ಆದರೆ ಮತ್ತೆ ಬಲು ಬೇಗ ಈತ ಕಾನ್ಪುರದಲ್ಲಿ ಬ್ರಿಟಿಷರಿಂದ ಸೋತ. ಅನಂತರ ಇವನು ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯನ್ನು ಕೂಡಿಕೊಂಡು ಬ್ರಿಟಿಷರ ವಿರುದ್ಧ ಸೈನಿಕ ಕಾರ್ಯಾಚರಣೆಗಳಲ್ಲಿ ತೊಡಗಿದ. ಝಾನ್ಸಿಯನ್ನು ಕಳೆದುಕೊಂಡ ರಾಣಿ ಲಕ್ಷ್ಮೀಬಾಯಿಯ ಜೊತೆಗೂಡಿ ಗ್ವಾಲಿಯರಿನ ಮೇಲೆ ಧಾಳಿಮಾಡಿ ಅಲ್ಲಿಯ ರಾಜ ಸಿಂಧೆಯನ್ನು ಆಗ್ರದ ಕಡೆಗೆ ಓಡಿಸಿದ. ಗ್ವಾಲಿಯರಿನ ಸೈನಿಕರು ತಾತ್ಯಾನ ಪಕ್ಷ ಸೇರಿದರು. ಅಲ್ಲಿ ನಾನಾಸಾಹೇಬನನ್ನು ಇವನು ಪೇಶ್ವೆಯೆಂದು ಘೋಷಿಸಿದ್ದಲ್ಲದೆ, ಮರಾಠರು ಇಂಗ್ಲಿಷರ ವಿರುದ್ಧ ಬಂಡೇಳುವಂತೆ ಮಾಡುವುದಾಗಿ ಬೆದರಿಕೆ ಹಾಕಿದ. ಪ್ರಬಲವಾಗುತ್ತಿದ್ದ ತಾತ್ಯಾನನ್ನು ಹತ್ತಿಕ್ಕಲು ನೇಮಕಗೊಂಡ ಸರ್ ಹ್ಯೂ ರೋಸ್ ತಾತ್ಯಾನನ್ನು ಸೋಲಿಸಿ ಗ್ವಾಲಿಯರನ್ನು ವಶಪಡಿಸಿಕೊಂಡ (ಜೂನ್ 1858). ಈ ಯುದ್ಧದಲ್ಲಿ ರಾಣಿ ಲಕ್ಷ್ಮೀಬಾಯಿ ತೀರಿಕೊಂಡಳು. ಅನಂತರದ ಅನೇಕ ಕದನಗಳಲ್ಲಿ ತಾತ್ಯಾ ಸೋಲುತ್ತ ಬಂದರೂ ಬ್ರಿಟಿಷರಿಗೆ ಶರಣಾಗಲಿಲ್ಲ. (ಎಸ್.ಎಂ.ಎಸ್.)

ಗೆರಿಲ್ಲ ಯುದ್ಧದಲ್ಲಿ ತಾತ್ಯಾನದು ಅಸಾಧಾರಣ ಸಾಮರ್ಥ್ಯ. ಗ್ವಾಲಿಯರ್ ಸೋಲಿನ ಅನಂತರ ಈತ ಬ್ರಿಟಿಷರ ವಿರುದ್ಧ ಗೆರಿಲ್ಲ ಯುದ್ಧಗಳಲ್ಲಿ ತೊಡಗಿದ. ಮಧ್ಯಭಾರತ, ಮಾಳವ, ಬುಂದೇಲಖಂಡ, ವಿಂಧ್ಯ, ಅರಾವಳಿ_ ಈ ವಿಸ್ತಾರವಾದ ಪ್ರದೇಶದಲ್ಲಿ ಈತ ಬ್ರಿಟಿಷರಿಗೆ ಕಿರುಕುಳ ಕೊಡುತ್ತಿದ್ದ. ಮಿಂಚಿನ ವೇಗದಿಂದ ಈತ ಚಲಿಸುತ್ತಿದ್ದ. ಈತನನ್ನು ಸೆರೆಹಿಡಿಯಲು 1858ರ ಜೂನ್-1859 ಏಪ್ರಿಲ್ ವರೆಗೆ ಭಾರತದಲ್ಲಿದ್ದ ಬ್ರಿಟಿಷ್ ಸೈನ್ಯದ ಸುಮಾರು

ಅರ್ಧಭಾಗ ಸತತವಾಗಿ ಪ್ರಯತ್ನಿಸಿತು. ಸು.4,480 ಕಿಮೀ ವ್ಯಾಪ್ತಿಯಲ್ಲಿ ಈತನನ್ನು ಬೆಟ್ಟ ಕಾಡುಗಳಲ್ಲಿ ಸತತವಾಗಿ ಬೆನ್ನಟ್ಟಲಾಯಿತು. ಆದರೂ ಹಿಡಿಯಲಾಗಲಿಲ್ಲ. ಈತ ಕೊನೆಗೆ ಸಿಂಧೆಯ ಸಾಮಂತನಾಗಿದ್ದ ಮಾನಸಿಂಗನ ದ್ರೋಹದಿಂದಾಗಿ 1859 ಏಪ್ರಿಲ್ 8ರಂದು ಬ್ರಿಟಿಷರಿಗೆ ಸೆರೆಸಿಕ್ಕಿದ. ದೇಶದ್ರೋಹದ ಆಪಾದನೆ ಹೊರಿಸಿ ಬ್ರಿಟಿಷ್ ನ್ಯಾಯಾಲಯ ಈತನನ್ನು ಅದೇ ಏಪ್ರಿಲ್ 18ರಂದು ಗಲ್ಲಿಗೇರಿಸಿತು. *

**ತಾನ್‌ಸೇನ್:** 1550–1610. ಭಾರತೀಯ ವಾಗ್ಗೇಯಕಾರರಲ್ಲಿ ಪ್ರಸಿದ್ಧನಾದವ. ಮಹಮದ್ ಗೌಸ್ ಎಂಬ ಮುಸಲ್ಮಾನ ಸಾಧುವಿನ ಅನುಗ್ರಹದಿಂದ ಆಗಿನ ಗ್ವಾಲಿಯರ್ ಪ್ರಾಂತಕ್ಕೆ ಸೇರಿದ ಬಾಹಿರ್ ಎಂಬ ಗ್ರಾಮದಲ್ಲಿ ವಾಸವಾಗಿದ್ದ ಮಕರಂದ ಪಾಂಡೆ ಎಂಬಾತನ ಮಗ. ಬಾಲ್ಯದಲ್ಲಿಯೇ ಈತನಿಗಿದ್ದ ಸಂಗೀತದಲ್ಲಿನ ಆಸಕ್ತಿಯನ್ನು ಗಮನಿಸಿದ ಹರಿದಾಸಸ್ವಾಮಿ ಎಂಬುವರು ಈತನನ್ನು ಉತ್ತರಾದಿ ಸಂಗೀತದಲ್ಲಿ ಮುಂದುವರೆಯುವಂತೆ ಪ್ರೋತ್ಸಾಹಿಸಿದರು. ಗಂಧರ್ವನಂತೆ ಹಾಡುತ್ತಿದ್ದ ಈತನಿಗೆ ರಾಜ ಮಾನ್‌ಸಿಂಗ್ ತೋಮರ (1486–1518) ಗ್ವಾಲಿಯರ್ ನಗರದಲ್ಲಿ ಸ್ಥಾಪಿಸಿದ್ದ ಸಂಗೀತ ಶಾಲೆಯಲ್ಲಿ ಶಿಕ್ಷಣ ದೊರೆಯಿತು. ಕ್ರಮೇಣ ಈತನ ಕೀರ್ತಿ ಉತ್ತರ ಭಾರತದಲ್ಲೆಲ್ಲ ಹರಡಿತು. ಈತನ ಖ್ಯಾತಿಯನ್ನು ಕೇಳಿದ ಮೊಗಲ್ ಚಕ್ರವರ್ತಿ ಅಕ್ಬರ್ ಈತನನ್ನು ಗ್ವಾಲಿಯರ್‌ನಿಂದ ತನ್ನ ಆಸ್ಥಾನಕ್ಕೆ ಕರೆಸಿಕೊಂಡು ಆಸ್ಥಾನದ ನವಮಣಿಗಳಲ್ಲಿ ಒಬ್ಬನನ್ನಾಗಿ ನೇಮಿಸಿಕೊಂಡ (1563). ಚಕ್ರವರ್ತಿ ಮತ್ತು ಹಿಂದು ದೇವತೆಗಳನ್ನು ಕುರಿತು ತಾನ್‌ಸೇನ್ ಅನೇಕ ಕೀರ್ತನೆಗಳನ್ನು ರಚಿಸಿದ. ಹಾಗೆ ಈತನಿಂದ ರಚಿಸಲ್ಪಟ್ಟ ಕೀರ್ತನೆಗಳನ್ನು ಈಗಲೂ ಉತ್ತರ ಭಾರತದ ಜನ ಭಜನಮಂದಿರಗಳಲ್ಲೂ ಸಂಗೀತ ಕಚೇರಿಗಳಲ್ಲೂ ಹಾಡುತ್ತಾರೆ. ಉತ್ತರಾದಿ ಗಾಯನದಲ್ಲಿ ಧ್ರುಪದ್ ಹಾಡುಗಾರಿಕೆ ಅತ್ಯಂತ ಕಷ್ಟವಾದುದು. ಈ ಧ್ರುಪದ್ ಶೈಲಿಯ ಆಕಾರ ಪ್ರಕಾರಗಳನ್ನು ರೂಪಿಸಿ ರೂಢಿಗೆ ತಂದ ಆದ್ಯ ಪುರುಷ ತಾನ್‌ಸೇನ್. ಮೀರಾಬಾಯಿ, ಸೂರ್‌ದಾಸ್, ತುಲಸೀದಾಸ್ ಮೊದಲಾದ ವಾಗ್ಗೇಯಕಾರರು ತಾನ್‌ಸೇನ್‌ನ ಸಮಕಾಲೀನರು ಎನ್ನಲಾಗಿದೆ.

ಮುಂದೆ ತಾನ್‌ಸೇನ್ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದನೆನ್ನಲಾಗಿದೆ. ಈತನಿಗೆ ಬಿಲಾಸ್‌ಖಾನ್ ಮೊದಲಾದ ನಾಲ್ಕುಜನ ಗಂಡುಮಕ್ಕಳು ಮತ್ತು ಸರಸ್ವತಿ ಎಂಬ ಒಬ್ಬ ಹೆಣ್ಣುಮಗಳೂ ಇದ್ದರು. ಆ ಕಾಲದ ಅದ್ವಿತೀಯ ವಾದ್ಯಗಾರನೂ ತಾನ್‌ಸೇನ್‌ನ ಶಿಷ್ಯನೂ ಆಗಿದ್ದ ಸೌಬತ್‌ಖಾನನಿಗೆ ಸರಸ್ವತಿಯನ್ನು ಮದುವೆ ಮಾಡಿಕೊಡಲಾಗಿತ್ತು. ಇವನ ಮಗ ಬಿಲಾಸ್‌ಖಾನನೂ ತಂದೆಯಂತೆ ಒಳ್ಳೆಯ ಗಾಯಕನೆನಿಸಿದ್ದ. ತಾನ್‌ಸೇನನ ಮರಣಕಾಲದಲ್ಲಿ ಆಶ್ರಯದಾತನೂ ಸ್ನೇಹಿತನೂ ಆಗಿದ್ದ ಅಕ್ಬರ್ ಚಕ್ರವರ್ತಿ ಹತ್ತಿರದಲ್ಲೇ ಇದ್ದನಲ್ಲದೆ ಇವನ ಇಚ್ಛೆಯ ಮೇರೆಗೆ ಇವನನ್ನು ಗ್ವಾಲಿಯರ್‌ನಲ್ಲಿ ಸಮಾಧಿ ಮಾಡಿಸಿದ. ತಂದೆ ಶವದ ಪಕ್ಕದಲ್ಲೇ ಕುಳಿತು ಮಗ ದುಃಖಾವೇಶದಿಂದ ಒಂದು ರಾಗವನ್ನು ಹಾಡಿದನಂತೆ. ಆ ರಾಗದಿಂದ ಪ್ರಸನ್ನನಾದ ತಾನ್‌ಸೇನನ ನಿರ್ಜೀವವಾದ ಬಲಗೈ ಎದ್ದು ಇವನನ್ನು ಆಶೀರ್ವದಿಸಿತಂತೆ. ಆ ರಾಗವೇ ಬಿಲಾಸ್‌ಖಾನಿ ತೋಡಿಯೆಂಬ ಹೆಸರಿನಿಂದ ಪ್ರಖ್ಯಾತವಾಗಿದೆ.

ತಾನ್‌ಸೇನ್ ಉತ್ತರಾದಿ ಸಂಗೀತಕ್ಕೆ ಸಂಬಂಧಿಸಿದಂತೆ ಸಂಗೀತಸಾರ ಮತ್ತು ರಾಗಮಾಲ ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾನಲ್ಲದೆ ಮಿಯಾಮಲ್ಹಾರ್, ಮಿಯಾನ್ ಕಿ ತೋಡಿ, ಮಿಯಾನ್ ಕಿ ಸಾರಂಗ್, ದರ್ಬಾರ್ ಮುಂತಾದ ರಾಗಗಳನ್ನು ಸೃಜಿಸಿದ್ದಾನೆ. ಉತ್ತರಾದಿ ಗಾಯಕರು ಗ್ವಾಲಿಯರ್‌ನಲ್ಲಿರುವ ತಾನ್‌ಸೇನನ ಸಮಾಧಿಯ ಬಳಿ ಅಷ್ಟೇ ವಿಜೃಂಭಣೆಯಿಂದ ತಾನ್‌ಸೇನನ ಆರಾಧನೆ ನಡೆಸುತ್ತಾರೆ. ತಾನ್‌ಸೇನ್ ಭಾರತೀಯ ಸಂಗೀತ ಪರಂಪರೆಗೆ ತನ್ನದೇ ಆದ ಕಾಣಿಕೆ ಸಲ್ಲಿಸಿರುವುದರ ಜೊತೆಗೆ ಹಿಂದು ಮುಸ್ಲಿಂ ಸಂಪ್ರದಾಯಗಳಲ್ಲಿ ಸಾಮರಸ್ಯವನ್ನುಂಟು ಮಾಡಿದ ಕೀರ್ತಿಗೂ ಪಾತ್ರನಾಗಿದ್ದಾನೆ. ಈತನ ಕಾಲಕ್ಕಿಂತ ಮುಂಚೆ ಸಂಗೀತವೆಂದರೆ ಬರೀ ಶಾಸ್ತ್ರೀಯ ರೀತಿಯ ಹಾಡುಗಾರಿಕೆಯಾಗಿತ್ತು. ತಾನ್‌ಸೇನ್ ಅದರ ಜೊತೆಗೆ ಮನರಂಜಕವಾದ ಲಘುಸಂಗೀತವನ್ನೂ ಬಳಕೆಗೆ ತಂದ. (ಎಸ್.ಕೆ.ಎಸ್.)

**ತಾಮ್ರ–ಶಿಲಾಯುಗ:** ಮಾನವನ ಸಾಂಸ್ಕೃತಿಕ ವಿಕಾಸ ಒಂದು ಘಟ್ಟ. ಪ್ರಾಗೈತಿಹಾಸಿಕ ಸಂಸ್ಕೃತಿಯನ್ನು 3 ಯುಗಗಳಾದ (ಶಿಲಾಯುಗ, ಕಂಚಿನಯುಗ, ಕಬ್ಬಿಣಯುಗ) ವರ್ಗೀಕರಿಸುವ ವಿಧಾನವಿದೆ. ಉಪಕರಣಗಳನ್ನು ತಯಾರಿಸಲು ಮಾನವ ಬಳಸುತ್ತಿದ್ದ ವಸ್ತು, ತಂತ್ರ ಹಾಗೂ ಆಕೃತಿಗಳ ಆಧಾರದ ಮೇಲೆ ಈ ವರ್ಗೀಕರಣ ಮಾಡಲಾಗಿದೆ. ಉಪಕರಣತಯಾರಿಕೆಗೆ ತಾಮ್ರವೇ ಪ್ರಧಾನವಾಗಿದ್ದ ಕಾಲದ ಸಂಸ್ಕೃತಿಯನ್ನು ತಾಮ್ರಯುಗ ಸಂಸ್ಕೃತಿ ಎಂದೂ ಹೇಳಬಹುದು. ಆದರೆ ಈ ಖಚಿತ ಅರ್ಥದಲ್ಲಿ ಶುದ್ಧ ತಾಮ್ರಯುಗ ಸಂಸ್ಕೃತಿ ಪ್ರಪಂಚದ ಯಾವುದೇ ಭಾಗದಲ್ಲಿ ಎಂದಿಗೂ ಇದ್ದಂತೆ ಕಂಡುಬರುವುದಿಲ್ಲ. ಬೇರೆ ಬೇರೆ ದೇಶಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳು ಬೇರೆ ಬೇರೆ ಕಾಲಾವಧಿಯಲ್ಲಿ ಕಂಡುಬಂದಿವೆ. ಶಿಲಾಯುಗದ ಅಂತ್ಯ ಕಾಲದಲ್ಲಿ ನೈಸರ್ಗಿಕವಾಗಿ ದೊರಕುತ್ತಿದ್ದ ತಾಮ್ರವನ್ನು ಬಡಿದು ತಯಾರಿಸಿದ ವಸ್ತುಗಳು ಕಾಣಬರುತ್ತವೆ. ಆದರೆ ಈ ನೈಸರ್ಗಿಕ ತಾಮ್ರ ತುಂಬ ಮೃದುವಾದದ್ದರಿಂದಲೂ ವಿರಳವಾದದ್ದ ರಿಂದಲೂ ಕಲ್ಲಿನ ಉಪಕರಣಗಳ ಬಳಕೆ ಮುಂದುವರಿಯಿತು. ತವರದ ಜೊತೆ ತಯಾರಿಸಿದ ತಾಮ್ರದ ಮಿಶ್ರಲೋಹ (ಕಂಚು) ಶುದ್ಧ ತಾಮ್ರಕ್ಕಿಂತ ಗಟ್ಟಿಯಾಗೂ ಬಾಳಿಕೆಗೆ ಬರುವಂಥದೂ ಆಗಿರುತ್ತದೆಂದು ಮಾನವ ಬಹು ಬೇಗ ಕಂಡುಕೊಂಡಿರಬೇಕು. ಯುರೋಪ್ ಮತ್ತು ಏಷ್ಯದ ಅನೇಕ ಪ್ರದೇಶಗಳಲ್ಲಿ ನವಶಿಲಾಯುಗ ಮತ್ತು ಕಂಚಿನಯುಗಗಳ ಮಧ್ಯದಲ್ಲಿ ತಾಮ್ರದ ಬಳಕೆ ಪ್ರಾರಂಭವಾಗುವುದು ಕಂಡುಬರುತ್ತದೆ. ಈ ಹಂತವನ್ನು ಮಾತ್ರ ತಾಮ್ರಯುಗ ವೆಂದು ಕರೆಯಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಪಶ್ಚಿಮ ಏಷ್ಯ ಪ್ರದೇಶದ ಬಾಲ ಚಂದ್ರಾಕೃತಿಯ ಪ್ರದೇಶದಲ್ಲಿ ಪ್ರ.ಶ.ಪೂ. 5ನೆಯ ಸಹಸ್ರಮಾನದ ಪೂರ್ವಾರ್ಧದಲ್ಲಿ ತಾಮ್ರದ ಬಳಕೆ ಕಂಡುಬರುತ್ತದೆ. ಈಜಿಪ್ಟಿನಲ್ಲಿ ತಾಮ್ರದ ಬಳಕೆ ಪ್ರ.ಶ.ಪೂ.5000 ದಿಂದ ಕಂಡುಬಂದರೂ ಅಲ್ಲಿ ಲೋಹವಿದ್ಯೆಯ ಬಗ್ಗೆ ಖಚಿತ ಆಧಾರಗಳು ಸಿಗುವುದು ಪ್ರ.ಶ.ಪೂ.3800 ರಿಂದ ಈಚೆಗೆ ಮಾತ್ರ. ಕ್ರೀಟ್ ಮತ್ತು ಸೈಪ್ರಸ್‌ಗಳಲ್ಲಿ ಪ್ರ.ಶ.ಪೂ.3000 ದಿಂದಲೂ ಸಿಸಿಲಿಯಲ್ಲಿ ಪ್ರ.ಶ.ಪೂ.2500ರಿಂದಲೂ ಮಧ್ಯ ಯುರೋಪಿನಲ್ಲಿ ಪ್ರ.ಶ.ಪೂ.2000ದಿಂದಲೂ ಬ್ರಿಟನ್ ಮತ್ತು ಸ್ಕಾಂಡಿನೇವಿಯ ಪ್ರದೇಶಗಳಲ್ಲಿ ಪ್ರ.ಶ.ಪೂ. 1800ರಿಂದಲೂ ತಾಮ್ರ ಮತ್ತು ಕಂಚುಗಳ ಬಳಕೆ ಕಂಡುಬರುತ್ತದೆ. ಆಲ್ಪ್ಸ್ ಪರ್ವತದ ಓಡ್ಸ್‌ಲೇರ್‌ನಲ್ಲಿ ಆಕಸ್ಮಿಕವಾಗಿ ಬೆಳಕಿಗೆ ಬಂದ ಉಡಿಗೆ–ತೊಡಿಗೆ, ಕೊಡಲಿ ಮೊದಲಾದ ತಾಮ್ರ ಉಪಕರಣಗಳ ಸಹಿತ ಮಾನವನ ಕಾಲಮಾನ ಪ್ರ.ಶ.ಪೂ.3300. ಈ ಉಪಕರಣಗಳ ಗುಣಮಟ್ಟ ಉತ್ತಮವಾಗಿದ್ದು ಆ ಕಾಲದ ತಾಮ್ರಲೋಹ ಕೈಗಾರಿಕೆಯ ಕೌಶಲ್ಯವನ್ನು ಸೂಚಿಸುತ್ತದೆ. ಯೂರೋಪಿನ ಭೀಕರ ಸಂಸ್ಕೃತಿ ತಾಮ್ರಯುಗ ಹಂತದ್ದಾಗಿದ್ದು ಇದರಲ್ಲಿ ನಗರೀಕರಣದ ಲಕ್ಷಣಗಳಿವೆ. ಐಬಿರುಯಾ ಪರ್ಯಾಯ ದ್ವೀಪ (ಇಂದಿನ ಸ್ಪೇನ್)ದ ಲಾ–ಮಿಲ್ಲರೆ ಮೊದಲಾದೆಡೆಗಳಲ್ಲಿ ತಾಮ್ರ–ಶಿಲಾಯುಗ ನೆಲೆಗಳಿವೆ. ಪೂರ್ವ ಏಷ್ಯಾದ ಜಿಯಾಂಫ್ಯೆ ಮತ್ತು ಹಾಂಗ್‌ಶಾನ್ ಸಂಸ್ಕೃತಿಗಳಲ್ಲಿ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮಿಚಿಗನ್ ಮತ್ತು ವಿಸ್ಕಾನ್‌ಸಿನ್ ಪ್ರದೇಶಗಳಲ್ಲಿ ಪ್ರ.ಶ.ಪೂ.4000–1000ದ ಅವಧಿಯಲ್ಲಿ ತಾಮ್ರದ ಉಪಕರಣಗಳು ಆಯುಧಗಳು ಬಳಕೆಯಲ್ಲಿದ್ದುವು. (ಬಿ.ಕೆ.ಜಿ.)

**ಭಾರತ:** ಪ್ರ.ಶ.ಪೂ.2ನೆಯ ಸಹಸ್ರವರ್ಷ ಆರಂಭವಾಗುವ ಹೊತ್ತಿಗೆ ಭಾರತದ ಅತ್ಯಂತ ದಕ್ಷಿಣ ಭಾಗವನ್ನು ಬಿಟ್ಟು ಉಳಿದೆಲ್ಲ ಕಡೆ ಆಹಾರ ಉತ್ಪತ್ತಿ ಮಾಡುವ ಸಮುದಾಯಗಳು ತಲೆದೋರಿದ್ದವು. ಹಲವಾರು ಕಾರಣಗಳಿಂದಾಗಿ ಸಿಂಧೂ ಅಥವಾ ಹರಪ್ಪ ಸಂಸ್ಕೃತಿ ನೆಲಕಚ್ಚುವತ್ತ ನಡೆದಿತ್ತು. ಪರಿಸರ ಮತ್ತು ನಗರ ವ್ಯವಸ್ಥೆಯ ಅವನತಿ ಅದಕ್ಕೆ ಮುಖ್ಯ ಕಾರಣವಾಗಿತ್ತು. ಉಪಖಂಡದಲ್ಲಿ ಬೇಸಾಯ ಮಾಡುವ ಸಮುದಾಯಗಳು ತಲೆಯೆತ್ತಲು ಕೊನೆಕೊನೆಯ ಹರಪ್ಪ ಜನರು ಎಷ್ಟರಮಟ್ಟಿಗೆ ಕಾರಣರಾಗಿದ್ದರು ಎಂಬುದು ಇನ್ನೂ ಅಷ್ಟು ಸ್ಪಷ್ಟವಾಗಿಲ್ಲ. 1942ರಲ್ಲಿ ಬ್ರಹ್ಮಗಿರಿಯಲ್ಲಿ ನವಶಿಲಾಯುಗ ಹಂತ ಶೋಧನೆಯಾದಂದಿ ನಿಂದ ಹಲವಾರು ತಾಮ್ರ–ಶಿಲಾಯುಗದ ವಸತಿಗಳನ್ನು ಭಾರತದ ಬೇರೆಬೇರೆ ಕಡೆಗಳಲ್ಲಿ, ಅಂದರೆ ಮಧ್ಯ, ಪಶ್ಚಿಮ ಭಾರತವಷ್ಟೇ ಅಲ್ಲದೆ ಉತ್ತರದ ಗಂಗಾಬಯಲಿನಲ್ಲೂ ದಕ್ಷಿಣ ಭಾರತದಲ್ಲೂ ಪತ್ತೆಹಚ್ಚಲಾಯಿತು.

ಪ್ರ.ಶ.ಪೂ.2ನೆಯ ಸಹಸ್ರವರ್ಷದ ಕಾಲದಲ್ಲಿದ್ದ ಆಹಾರ ಉತ್ಪಾದಿಸುವ ಈ ಸಮುದಾಯಗಳ ನಡುವೆ ಹಲವು ಸಾಮಾನ್ಯ ಲಕ್ಷಣಗಳಿವೆ. ಉದಾ: ಕಪ್ಪು ರೇಖಾಚಿತ್ರಿತ ಕೆಂಪುವರ್ಣದ ಪಾತ್ರೆಗಳು, ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು, ಸುಧಾರಿಸಿದ ಅಲಗು–ಚಕ್ಕೆಯ ಬೆಣಚುಕಲ್ಲಿನ (ಕ್ಯಾಲ್ಸೆಡನಿ) ಉದ್ಯಮ, ಅರೆದ, ಹೊಳಪುಗೊಳಿಸಿದ ಕಲ್ಲಿನ ಉಪಕರಣಗಳು, ಹಾಗೂ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತಿದ್ದ ಕಾರಣ ತಾಮ್ರದ ಅಪರೂಪದ ಬಳಕೆ. ಅವರ ಮಿಶ್ರ ಆರ್ಥಿಕತೆಯು ಜೀವನಾಧಾರ ಬೇಸಾಯ, ಪಶುಸಾಕಣೆ, ಬೇಟೆ ಮತ್ತು ಮೀನುಗಾರಿಕೆ ಹಿಡಿಯುವುದನ್ನು ಒಳಗೊಂಡಿತ್ತು. ಇವುಗಳಲ್ಲಿ ಹಲವು ಜನಸಮುದಾಯಗಳು ಕಪ್ಪು ಹತ್ತಿಮಣ್ಣಿನ ವಲಯದಲ್ಲಿ ಏಳಿಗೆ ಹೊಂದಿದವು. ಈ ವಲಯ ಅರೆಒಣ ಪ್ರದೇಶವಾಗಿದ್ದು ವರ್ಷದಲ್ಲಿ 400–1000 ಮಿಮೀ ಮಳೆಯನ್ನು ಪಡೆಯುತ್ತದೆ. ಈ ಪ್ರದೇಶ ಮಧ್ಯಭಾರತದ ಪ್ರಸ್ಥಭೂಮಿಯ ಪಶ್ಚಿಮಭಾಗದಲ್ಲಿದೆ. ಇದು ಉತ್ತರದ ವಿಂಧ್ಯದಿಂದ ಹಿಡಿದು ದಕ್ಷಿಣದ ಕೃಷ್ಣಾನದಿ ಬಯಲಿನವರೆಗೂ, ಪೂರ್ವದಲ್ಲಿ ಮಧ್ಯಪ್ರದೇಶದ ಪಶ್ಚಿಮಭಾಗದಿಂದ ಹಿಡಿದು ಪಶ್ಚಿಮದಲ್ಲಿ ಗುಜರಾತಿನ ಕರಾವಳಿಯವರೆಗೂ ಹರಡಿದೆ. ಮಹಾರಾಷ್ಟ್ರದ ಕರಾವಳಿ ಇದರಿಂದ ಹೊರತಾಗಿದೆ. ಅಂದರೆ, ಮಧ್ಯಪ್ರದೇಶದ ಪಶ್ಚಿಮಭಾಗ, ರಾಜಸ್ಥಾನದ ದಕ್ಷಿಣಭಾಗ, ಗುಜರಾತ್, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕ ಹಾಗೂ ತಮಿಳುನಾಡಿನ ಉತ್ತರ ಭಾಗಗಳನ್ನೆಲ್ಲ ಇದು ಒಳಗೊಳ್ಳುತ್ತದೆ. ಪರಿಸರದ ದೃಷ್ಟಿಯಲ್ಲಿ ಇದು ಒಂದೇ ಘಟಕವಾಗಿದ್ದರಿಂದ ಸಂಸ್ಕೃತಿಯ ಕಾರಣಾಂಶಗಳೂ ಈ ಪ್ರದೇಶಗಳಲ್ಲಿ ಒಂದೇ ಆಗಿದ್ದವು. ಇನ್ನೊಂದು ಘಟಕ ಮಧ್ಯ ಮತ್ತು ಕೆಳಗಿನ ಗಂಗಾಬಯಲನ್ನೂ ಒರಿಸ್ಸಾವನ್ನೂ ಒಳಗೊಳ್ಳುತ್ತದೆ; ಇಲ್ಲೂ ಸಹ ನವಶಿಲಾ–ತಾಮ್ರಯುಗಕ್ಕೆ ಸೇರಿದ ಸಮಾಜಗಳು ಪ್ರ.ಶ.ಪೂ.2ನೆಯ ಸಹಸ್ರವರ್ಷದ ಕಾಲದಲ್ಲಿ ಇದ್ದವು. ಕರ್ನಾಟಕ, ಆಂಧ್ರಪ್ರದೇಶ ಮತ್ತು ಉತ್ತರ ತಮಿಳುನಾಡನ್ನು ಒಳಗೊಳ್ಳುವ ಮಧ್ಯ–ದಕ್ಷಿಣ ವಲಯದಲ್ಲಿ ಮತ್ತು ಕಾಶ್ಮೀರದಲ್ಲಿ ನವಶಿಲಾಯುಗಕ್ಕೆ ಸೇರುವ ರೈತರು ಇದ್ದರು. ಇವೆಲ್ಲವೂ ಒಂದೊಂದು ಪರಿಸರ ವಲಯಗ ಳಾಗಿದ್ದವು. ಇವುಗಳ ನಡುವಿನ ಸಾಂಸ್ಕೃತಿಕ ಹೋಲಿಕೆಗಳಿಗೆ ಈ ಸ್ವರೂಪವೇ ಕಾರಣ.

ಸಂಸ್ಕೃತಿಗಳು: ಪ್ರ.ಶ.ಪೂ.2ನೆಯ ಸಹಸ್ರವರ್ಷದ ಆರಂಭಿಕ ಬೇಸಾಯ ಸಂಸ್ಕೃತಿಗಳನ್ನು ವಿಶಿಷ್ಟ ಗುಂಪುಗಳಾಗಿ ಈ ಕೆಳಗಿನಂತೆ ವಿಂಗಡಿಸಬಹುದು:

1. ಕಾಶ್ಮೀರ – ನವಶಿಲಾಯುಗ: ಬೂರ್ಜಹೋಮ್ **(ನೋಡಿ)**, ಗುಫ್‌ಕ್ರಾಲ್ **(ನೋಡಿ)**
2. ಮಧ್ಯ ಮತ್ತು ಪಶ್ಚಿಮ ಭಾರತ: ಅಹಾರ್ **(ನೋಡಿ)**, ಕಯಥ **(ನೋಡಿ)**, ಸಾವಳ್ದ, ಮಾಳ್ವ, ಜೋರ್ವೆ **(ನೋಡಿ)**, ಪ್ರಭಾಸ್ ಪಾಠಣ್ **(ನೋಡಿ)**, ರಂಗಪುರ
3. ಮಧ್ಯ ಮತ್ತು ಕೆಳಗಿನ ಗಂಗಾಬಯಲು – ಉತ್ತರಪ್ರದೇಶದ ಪೂರ್ವಭಾಗ, ಬಿಹಾರ, ಬಂಗಾಲ ಮತ್ತು ಒರಿಸ್ಸದ ನವಶಿಲಾಯುಗ ಮತ್ತು ತಾಮ್ರ–ಶಿಲಾಯುಗದ ಜನಸಮುದಾಯಗಳು

4. ಕರ್ನಾಟಕ ಮತ್ತು ಆಂಧ್ರದ ನವಶಿಲಾ-ತಾಮ್ರಯುಗದ ಜನಸಮುದಾಯಗಳು ಮತ್ತು ತಮಿಳುನಾಡಿನ ನವಶಿಲಾಯುಗ ಜನಸಮುದಾಯ: ಬ್ರಹ್ಮಗಿರಿ, ತೆಕ್ಕಲಕೋಟೆ, ಹಳ್ಳೂರು ಇತ್ಯಾದಿ.

ದಕ್ಷಿಣದ ನವಶಿಲಾಯುಗ ಸಂಚಯ: ವಿಶಿಷ್ಟವಾದ ಸಾಂಸ್ಕೃತಿಕ ಸಮುಚ್ಚಯವನ್ನು ರೂಪಿಸುವ ದಕ್ಷಿಣದ ನವಶಿಲಾಸಂಚಯ ಕರ್ನಾಟಕ, ಆಂಧ್ರಪ್ರದೇಶ ಮತ್ತು ಅದಕ್ಕೆ ತಗಲಿಕೊಂಡಂತೆ ತಮಿಳುನಾಡಿನ ಕೆಲವು ಭಾಗಗಳನ್ನು ಒಳಗೊಳ್ಳುತ್ತದೆ. ಇಲ್ಲಿ ಮೂರು ಬಗೆಯ ವಸತಿಗಳು ಕಂಡುಬರುತ್ತವೆ: 1) ಬೆಟ್ಟದ ಮೇಲಿನ ನಿವೇಶನಗಳು 2) ನೆಲಮಟ್ಟದ ನಿವೇಶನಗಳು 3) ಬೂದಿದಿಬ್ಬಗಳು (**ನೋಡಿ**). ಸಂಗನಕಲ್ಲಿನ ಪುರಾವೆ ಸೂಚಿಸುವಂತೆ ವಸತಿಯು ಬೆಟ್ಟದ ಮೇಲಿನ ನಿವೇಶನಗಳಿಂದ ಆರಂಭವಾಗಿರಬೇಕು.



ತಾಮ್ರ ಶಿಲಾಸಂಸ್ಕೃತಿ ಹಂತದ ಚಿತ್ರಗಳು

ಈ ಎಲ್ಲ ಪ್ರದೇಶಗಳಲ್ಲಿಯ ಸಂಸ್ಕೃತಿಗಳ ಕೆಲವು ಸಾಮಾನ್ಯ ಮತ್ತು ವಿಶಿಷ್ಟ ಸಂಗತಿಗಳನ್ನು ಅಲ್ಲಲ್ಲಿ ನಿರೂಪಿಸಲಾಗಿದೆ. ಉತ್ತರಪ್ರದೇಶ-ಒರಿಸ್ಸ ಪ್ರದೇಶದ ನವಶಿಲಾಯುಗ ಸಂಸ್ಕೃತಿಯ ಬಗ್ಗೆ ಕೆಲವು ಅಂಶಗಳು ಗಮನಾರ್ಹ. ನವಶಿಲಾಯುಗ ಸಂಸ್ಕೃತಿ ವಿಂಧ್ಯ ಪ್ರದೇಶದಿಂದ ಹಿಡಿದು ಹಿಮಾಲಯದ ತೆರಾಯಿಯ ಮಧ್ಯ ಗಂಗಾಬಯಲಿನ ಉತ್ತರದ ಭಾಗದವರೆಗೆ ಅಥವಾ ಬಸ್ತಿ ಮತ್ತು ಗೋರಖಪುರ ಜಿಲ್ಲೆಗಳನ್ನು ಒಳಗೊಳ್ಳುವ ಸರಯೂಪಾರ ಪ್ರದೇಶದವರೆಗೆ ಹರಡಿದೆ. ಈ ಪ್ರದೇಶ ಘಾಘ್ರಾ ನದಿಬಯಲಾಗಿದ್ದು, ವರ್ಷಕ್ಕೆ 2000 ಮಿಮೀ ಗೂ ಹೆಚ್ಚು ಮಳೆಯನ್ನು ಪಡೆಯುತ್ತದೆ. ಮುಂದೆ ಇದು ಬಿಹಾರಕ್ಕೂ ಹರಡುತ್ತದೆ. ಬಿಹಾರದಲ್ಲಿ ನವಶಿಲಾಯುಗದ ಸಮಯದಿಂದ ಚಾರಿತ್ರಿಕ ಕಾಲದವರೆಗೆ ನಿರಂತರವಾಗಿ ಜನರು ವಾಸಿಸುತ್ತಿದ್ದರು. ಇಲ್ಲಿನ ಅತಿಮುಖ್ಯ ನಿವೇಶನ ಸರನ್ ಜಿಲ್ಲೆಯ ಚಿರಂದ್‌ನಲ್ಲಿದೆ. ಇದು ಉತ್ತರ ಬಿಹಾರದ ವಿಶಾಲ ಮೆಕ್ಕಲುಮಣ್ಣಿನ ಬಯಲಿನಲ್ಲಿದೆ. ಇಲ್ಲಿ ಮೂರು ಸಂಸ್ಕೃತಿಗಳ ಸರಣಿಯೇ ಕಂಡುಬರುತ್ತದೆ. ಮೊದಲನೆಯದು ನವಶಿಲಾಯುಗ (ಪ್ರ.ಶ.ಪೂ.ಸು.2200-1500). ಕೆಂಪುಪಾತ್ರೆ, ಹೊಳಪುಳ್ಳ ಕಲ್ಲಿನ ಉಪಕರಣಗಳು, ಸೂಕ್ಷ್ಮಶಿಲೆಗಳು ಇದರ ಮುಖ್ಯ ಲಕ್ಷಣಗಳು. ಆದರೆ ಮೂಳೆಯ ಉಪಕರಣದ ತಯಾರಿಕೆ ನೆಲೆ ಇವೆಲ್ಲಕ್ಕಿಂತ ಸ್ವಾರಸ್ಯಕರವಾದುದು. ಇದರ ಅನಂತರ ತಾಮ್ರ-ಶಿಲಾಯುಗ (ಪ್ರ.ಶ.ಪೂ.ಸು. 1500-800) ಬರುತ್ತದೆ. ಕಪ್ಪು-ಕೆಂಪು ಪಾತ್ರೆ, ಕಪ್ಪು ಲೇಪವುಳ್ಳ ಪಾತ್ರೆ, ಬೂದು-ಕೆಂಪುಬಣ್ಣದ ಪಾತ್ರೆ ಇದರ ಮುಖ್ಯ ಲಕ್ಷಣಗಳು. ಸಮೃದ್ಧವಾದ ಮೂಳೆಯ ಉಪಕರಣದ ತಯಾರಿಕೆ ಈ ಹಂತದಲ್ಲೂ ಮುಂದುವರೆಯುತ್ತದೆ. ಅರ್ಧಚಂದ್ರಾಕೃತಿಯಂತಹ ತಳಗಟ್ಟಿನ ಮನೆಗಳು ಚಿರಂದಿನಲ್ಲಿ ಕಂಡುಬರುತ್ತವೆ. ಬೇರೆಬೇರೆ ಗಾತ್ರದ ಒಲೆಗಳು ಗಯಾ ಜಿಲ್ಲೆಯ ತರದಿಹ್‌ನಲ್ಲಿ ಇವೆ. ಇವುಗಳಲ್ಲಿ ದೊಡ್ಡ ಅಳತೆಯವು ಇಡೀ ಸಮುದಾಯ ಬಳಸುತ್ತಿದ್ದ ಅಡಿಗೆಮನೆಯಿದ್ದರೂ ಇರಬಹುದು. ಆದರೆ ಚಿರಂದಿನಲ್ಲಿರುವುದು ಕುಂಬಾರರ ಆವಿಗೆ ಇರಬೇಕು. ಈ ಪುರಾವೆಗಳು ಗಯಾ ಜಿಲ್ಲೆಯ ಸೋನ್‌ಪುರದಲ್ಲೂ ಕಾಣಿಸಿಕೊಳ್ಳುತ್ತವೆ. ಶವವನ್ನು ಸುಟ್ಟಮೇಲೆ ಮಣ್ಣುಮಾಡಿರುವುದು ಇಲ್ಲಿನ ಹೊಸ ಲಕ್ಷಣ.

ಬೇಸಾಯ: ಮೆಹರಗಡದ ಪುರಾವೆ ಸೂಚಿಸುವಂತೆ ಭಾರತ ಉಪಖಂಡದಲ್ಲಿ ಪ್ರಾಣಿಸಾಕಣೆ ಮತ್ತು ಗಿಡ ಬೆಳೆಸುವುದು ಪ್ರ.ಶ.ಪೂ.7500ರಷ್ಟು ಹಿಂದೆಯೂ ಇತ್ತೆಂದು ತಿಳಿಯುತ್ತದೆ. ಆಹಾರೋತ್ಪಾದನೆಯ ತಂತ್ರ ಕ್ರಮೇಣವಾಗಿ ಇಡೀ ಉಪಖಂಡದಲ್ಲಿ ಆರಂಭವಾಯಿತು. ಐದು ಸಾವಿರ ವರ್ಷಗಳ ಹಿಂದೆ ಕಾಶ್ಮೀರದಲ್ಲಿ ನವಶಿಲಾಯುಗದ ಜನರು ಬಾಲ್ಯಾವಸ್ಥೆಯ ಬೇಸಾಯವನ್ನು ಮಾಡುತ್ತಿದ್ದರು. ಆರುಸಾಲು ತೆನೆಯ ಜವೆ (ಬಾರ್ಲಿ), ಗೋದಿ, ಹೊಲಗದ್ದೆಗಳಲ್ಲಿ ಬೆಳೆಯುವ ಒಂದು ಕಳೆಯ ಕಾಳುಗಳನ್ನು ಅವರು ಬೆಳೆಯುತ್ತಿದ್ದರು. ಬೇಸಾಯಕ್ಕಿಂತ ಹೆಚ್ಚಾಗಿ ಪ್ರಾಣಿಮೂಲದ ಆಹಾರವನ್ನೇ ಅವರು ಜೀವನಾಧಾರವಾಗಿ ಮಾಡಿಕೊಂಡಿದ್ದರು ಎನಿಸುತ್ತದೆ. ಪ್ರಾಣಿಗಳಲ್ಲಿ ಕಾಡುಕುರಿ, ಕಾಡುಮೇಕೆ, ಕಾಡುದನ/ಎಮ್ಮೆ, ಕಡವೆ, ತೋಳ, ಹಿಮಾಲಯದ ಕಾಡುಹೋತ ಮತ್ತು ಕರಡಿಗಳು ಕಂಡುಬರುತ್ತವೆ. ಅವರು ಕುರಿ ಸಾಕುತ್ತಿದ್ದರು. ಮೇಕೆ ಕೂಡ ಅವರ ಆಹಾರದ ಒಂದು ಭಾಗವಾಗಿತ್ತು. ಒಟ್ಟು ಪ್ರಾಣಿಗಳಲ್ಲಿ ಶೇ.5-30ರಷ್ಟು ಇವಿರುತ್ತಿದ್ದವು. ನವಶಿಲಾಯುಗದ ಎರಡನೆ ಹಂತದಲ್ಲಿ ಸಾಕುಪ್ರಾಣಿಗಳ ಪ್ರಮಾಣ ಹೆಚ್ಚಾಗುತ್ತದೆ. ಸಾಕುಪ್ರಾಣಿಯಾಗಿಬಿಟ್ಟಿದ್ದರಿಂದ ಮೇಕೆಯ ಗಾತ್ರ ಈ ಹೊತ್ತಿಗೆ ಸಣ್ಣದಾಗುತ್ತದೆ. ಸಾರಂಗ, ಕಾಡುಹೋತದ ಮಾಂಸ ಅವರಿಗೆ ಅತಿಪ್ರಿಯವಾಗಿಬಿಟ್ಟಿತ್ತು ಅನಿಸುತ್ತದೆ. ಏಕೆಂದರೆ ಇವುಗಳ ಮೂಳೆಗಳು ಹೆಚ್ಚಾಗುತ್ತವೆ. ಅವರು ನಾಯಿಯನ್ನು ಪಳಗಿಸಿ ಸಾಕುತ್ತಿದ್ದರು. ಇದು ಬೇಟೆಯ ಸಮಯದಲ್ಲಿ ಬಹಳ ಕೆಲಸಕ್ಕೆ ಬರುವ ಪ್ರಾಣಿ. ಕಾಡುನಾಯಿ ಮತ್ತು ತೋಳವನ್ನು ಹೂತಿರುವುದು ಆ ಪ್ರಾಣಿಗಳ ಮೇಲೆ ಅವರಿಗಿದ್ದ ಪ್ರೀತಿಯನ್ನು ತೋರುತ್ತದೆ.

ಮಧ್ಯ ಗಂಗಾಬಯಲಿನಲ್ಲಿ ಮಳೆ ಸ್ವಲ್ಪ ಹೆಚ್ಚು; ಚಳಿಗಾಲದಲ್ಲಿಯೂ ಮಳೆ ಬರುತ್ತದೆ. ಇಲ್ಲಿ ಜವೆಯ ಜೊತೆ ಗೋದಿಯನ್ನೂ ಬೆಳೆಯಲಾಗುತ್ತಿತ್ತು. ಮಹಾಗರ ಮತ್ತು ಕೋಲ್ಡಿವದಲ್ಲಿ ಅಕ್ಕಿ ದೊರೆತದ್ದು ಮಹತ್ತ್ವಪೂರ್ಣವಾದುದು. ಇಂಗಾಲದ ಕಾಲನಿರ್ಣಯದ ಪ್ರಕಾರ ಇದು ಈಗಿಗಿಂತ 7390 $\pm$240 ಮತ್ತು 6480 $\pm$ 185 ವರ್ಷಗಳಷ್ಟು ಹಳೆಯದು. ಇದಕ್ಕೂ ಹಿಂದಿನ, ಅಂದರೆ ಪ್ರ.ಶ.ಪೂ.6ನೆಯ ಸಹಸ್ರವರ್ಷಕ್ಕೆ ಸೇರಿದ ಅಕ್ಕಿಯನ್ನು ಉತ್ತರ ಪ್ರದೇಶದ ಲಹುರದೇವದಲ್ಲಿ ಪತ್ತೆ ಹಚ್ಚಲಾಗಿದೆ. ಅಂದರೆ ಅಕ್ಕಿ ಸರಾಸರಿ ಪ್ರ.ಶ.ಪೂ.4500 ರಷ್ಟು ಹಳೆಯದು ಎಂದಾಯಿತು. ವ್ಯವಸಾಯದಿಂದ ಬೆಳೆದ ಅಕ್ಕಿಗೆ ಇದಕ್ಕಿಂತ ಹಳೆಯ ಕಾಲಮಾನ ಪ್ರಪಂಚದಲ್ಲೆಲ್ಲೂ ಸಿಕ್ಕಿಲ್ಲ. ನವಶಿಲಾಯುಗಕ್ಕೆ ಸೇರಿದ ಮಧ್ಯ ಗಂಗಾಬಯಲಿನ ಸುಮಾರು ಎಲ್ಲ ನಿವೇಶನಗಳಲ್ಲೂ ಅಕ್ಕಿಯ ಪುರಾವೆ ದೊರೆತಿದೆ. ಅಕ್ಕಿಯ ಹೊಟ್ಟನ್ನು ಮಡಕೆ ಮಾಡುವ ಮಣ್ಣಿನೊಂದಿಗೆ ಬೆರೆಸಲಾಗುತ್ತಿತ್ತು. ಅಲ್ಲದೆ, ಸುಟ್ಟು ಕರಕಲಾದ ಅಕ್ಕಿಕಾಳುಗಳೂ ದೊರೆತಿವೆ. ಬೆಳೆಸುವ ಜಾತಿ, ಕಾಟುಜಾತಿ ಹಾಗೂ ಸದಾ ಬೆಳೆಯುವ ಜಾತಿಗಳೆಲ್ಲವೂ ಇವುಗಳಲ್ಲಿವೆ. ರೇಡಿಯೋಮೆಟ್ರಿಕ್ ಕಾಲಗಣನೆಯಂತೆ ಮಧ್ಯ ಗಂಗಾಬಯಲಿನ ಅಕ್ಕಿ ಬೆಳೆಯನ್ನು ಪ್ರ.ಶ.ಪೂ.2ನೆಯ ಸಹಸ್ರವರ್ಷದ ಮೊದಲ ಅರ್ಧಕ್ಕೇ ಸೇರಿಸಬೇಕಾಗುತ್ತದೆ. ಕೆಂಪುತೊಗರಿ ಮತ್ತು ಹೆಸರುಕಾಳುಗಳ ಇರುವಿಕೆಗೂ ಪುರಾವೆ ದೊರೆತಿದೆ. ಉತ್ತರಪ್ರದೇಶ, ಬಿಹಾರ, ಬಂಗಾಲ ಮತ್ತು ಒರಿಸ್ಸದ ಅತಿ ಮುಂಚಿನ ರೈತರು ಪ್ರಾಣಿಗಳನ್ನೂ ಸಾಕುತ್ತಿದ್ದರು. ಅವುಗಳಲ್ಲಿ ಕುರಿ, ಮೇಕೆ, ದನಕರು ಇತ್ಯಾದಿಗಳಿವೆ. ಸಾರಂಗ, ನೀಲಗಾಯ್, ಕಾಡುಹಂದಿ ಇತ್ಯಾದಿ ಪ್ರಾಣಿಗಳನ್ನು ಇವರು ಬೇಟೆಯಾಡುತ್ತಿದ್ದರು. ಆ ಭೌಗೋಳಿಕ ಪ್ರದೇಶಕ್ಕೆ ಸೇರಿದ ಹಕ್ಕಿ, ಜಲಚರಗಳೂ ಅವರ ಆಹಾರದ ಭಾಗವಾಗಿದ್ದವು.

ರಾಜಸ್ತಾನದ ಅಹಾರ್ ಸಂಸ್ಕೃತಿಯ ಜನರು ರಾಗಿಜೋಳದಂತಹ ಸಣ್ಣಕಾಳಿನ ಗಡಸು ಧಾನ್ಯಗಳನ್ನೇ ಬೆಳೆಯುತ್ತಿದ್ದರು. ಈ ಜನರು ಬೇರೆಬೇರೆ ಬಗೆಯ ಸಣ್ಣಕಾಳಿನ ಧಾನ್ಯಗಳನ್ನು ಬೆಳೆಯುತ್ತಿದ್ದರೆಂಬುದಕ್ಕೆ ಮಣ್ಪಾತ್ರೆಗಳ ಮೇಲಿರುವ ಅವುಗಳ ಅಚ್ಚು ಗುರುತುಗಳೇ ಸಾಕ್ಷಿ. ಈಗ ಸದ್ಯಕ್ಕೆ ಗುರುತಿಸಲಾಗಿರುವ ಕಾಳುಗಳಲ್ಲಿ ಮೆಕ್ಕೆಜೋಳ, ಸಜ್ಜೆ ಇವೆ. ಜೊತೆಗೆ ರಾಗಿ ಇದ್ದರೂ ಇರಬಹುದು. ಅಕ್ಕಿಯ ಗುರುತುಗಳೂ ಪಾತ್ರೆಗಳ ಮೇಲೆ ಮೂಡಿವೆ.

ಅಹಾರ್ ಸಂಸ್ಕೃತಿಗೆ ತೀರ ವಿರುದ್ಧವಾಗಿ ಮಾಳ್ವ ಸಾಂಸ್ಕೃತಿಕ ವಲಯದಲ್ಲಿ ಗೋದಿ, ಜವೆ ಮತ್ತು ಬತ್ತ ಬೆಳೆಯಲಾಗುತ್ತಿತ್ತು. ಅಲ್ಲದೆ, ಉದ್ದು, ಹೆಸರು, ಕೆಂಪುತೊಗರಿ ಸಹ ಕಂಡುಬರುತ್ತವೆ. ಇಲ್ಲಿಯ ಜನರು ದನ, ಹಂದಿ, ಜಿಂಕೆ ಮಾಂಸವನ್ನೂ ಮೀನನ್ನೂ ತಿನ್ನುತ್ತಿದ್ದರು.

ಜೋರ್ವೆ ಸಂಸ್ಕೃತಿಯ ಜನರದ್ದು ಖುಷ್ಕಿ ಬೇಸಾಯವಾಗಿತ್ತು. ಆದರೂ ಇನಾಂಗಾಂವಿ ನಲ್ಲಿ ಕೃತಕ ನೀರಾವರಿ ಸೌಲಭ್ಯವನ್ನು ಮಾಡಿಕೊಳ್ಳಲಾಗಿತ್ತು. ಈ ರೈತರು ಬೇರೆಬೇರೆ ಬಗೆಯ ಬೆಳೆಗಳನ್ನು ಬೆಳೆಯುತ್ತಿದ್ದರು. ನೀರಾವರಿ ಕಾಲುವೆಯಿಂದಾಗಿಯೇನೋ ವರ್ಷಕ್ಕೆರಡು (ಖಾರಿಫ್ ಮತ್ತು ರಬ್ಬಿ) ಬೆಳೆ ತೆಗೆಯುವುದು ಸಾಧ್ಯವಾಗಿತ್ತು. ಜವೆ ಪ್ರಧಾನ ಧಾನ್ಯವಾಗಿದ್ದರೂ ಆದಿ ಜೋರ್ವೆ ಹಂತದಲ್ಲಿ (ಎರಡನೆಯ ಹಂತ) ನೀರಾವರಿ ಸೌಲಭ್ಯವಿರುವ ಕಡೆ ಗೋದಿಯನ್ನೂ ಬೆಳೆಯಲಾಗುತ್ತಿತ್ತು. ಆದಿ ಜೋರ್ವೆ ಹಂತದಲ್ಲಿ (ಪ್ರ.ಶ.ಪೂ.ಸು.1500-1000) ವಾಯುಗುಣ ಅನುಕೂಲಕರವಾಗಿದ್ದಿರಬೇಕು. ಘೋಡ್ ನದಿಯಲ್ಲಿ ಬರುವ ನೆರೆಯಿಂದ ಅದರ ದಂಡೆಯ ಮೇಲಿದ್ದ ಇನಾಂಗಾಂವಿನ ಜನವಸತಿಗೆ ತೊಂದರೆಯಾಗಿದ್ದಿರ ಬೇಕು. ಆ ಕಾರಣ ಜೋರ್ವೆ ಜನರು 4 ಮೀ ಅಗಲ, 2.4 ಮೀ ಆಳವಿರುವ ಕಾಲುವೆ ಯೊಂದನ್ನು ಕಟ್ಟಿ ನೆರೆನೀರನ್ನು ಬೇಕಾದೆಡೆ ಹಾಯಿಸಿಕೊಂಡರು. ಈ ಕಾಲುವೆಯುದ್ದಕ್ಕೂ ಒಂದು ಬಂಡನ್ನು ಕಟ್ಟಿದರು. ಇದಕ್ಕೆ ಚೂರುಗಲ್ಲಿನ ತಳಪಾಯವಿತ್ತು; ಮೇಲಿನ ಭಾಗ ಮಣ್ಣಿನಿಂದ ಕಟ್ಟಿದ್ದರು. ಇದರಿಂದ ನೀರನ್ನು ಇನ್ನೊಂದು ಅಡ್ಡಕಾಲುವೆಗೆ ಹರಿಸಿ ಅದು ಹೋಗಿ ಒಂದು ಆಯತಾಕಾರದ ತೊಟ್ಟಿಯಲ್ಲಿ ಕೂಡುವಂತೆ ಮಾಡಿದ್ದರು. ಹೆಚ್ಚುವರಿ ನೀರು ಹರಿದು ಅಕ್ಕಪಕ್ಕದ ಹೊಲಗದ್ದೆಗಳಿಗೆ ಹೋಗುವಂತಿರುವುದು ವಿಹಂಗಮ ನೋಟಕ್ಕೆ ಕಾಣುತ್ತದೆ. ತಾಮ್ರ-ಶಿಲಾಯುಗದ ರೈತರಿಗೆ ಗೋದಿ ಬೆಳೆಯುವುದು, ವರ್ಷಕ್ಕೆ ಎರಡು-ಮೂರು ಬೇರೆಬೇರೆ ಬೆಳೆತೆಗೆಯುವುದು ಹೇಗೆ ಸಾಧ್ಯವಾಯಿತು ಎಂಬುದು ಇದರಿಂದ ತಿಳಿಯುತ್ತದೆ.

ಆದಿ ಜೋರ್ವೆ ಹಂತದ ಸಮೃದ್ಧ ಸಸ್ಯಾಧಾರಿ ಆರ್ಥಿಕತೆ ಅಂದು ಬೇಸಾಯಕ್ಕೆ ಹಿತವಾದ ಗಾಳಿಮಳೆ, ಪರಿಸರವಿತ್ತು ಎಂಬುದನ್ನು ಸೂಚಿಸುತ್ತದೆ. ಜವೆ, ಗೋದಿ, ಮೆಕ್ಕೆಜೋಳದೊಂದಿಗೆ ಬತ್ತವನ್ನು ಸಹ ಈ ಜನರು ಬೆಳೆದರು. ನೀರು ನಿಲ್ಲಿಸಲಾಗುವಂತಹ ಸಣ್ಣ ಸಣ್ಣ ಗದ್ದೆಗಳಲ್ಲಿ ಬತ್ತ ಬೆಳೆಯುವುದು ಅವರಿಗೆ ಸಾಧ್ಯವಾಗಿರಬೇಕು. ಪ್ರ.ಶ.ಪೂ.3ನೆಯ

ಸಹಸ್ರವರ್ಷದ ಕಡೆಯ ಭಾಗದಲ್ಲಿ ಹರಪ್ಪ ಜನರು ಸೌರಾಷ್ಟ್ರದಲ್ಲಿ ಕೂಡ ಮೆಕ್ಕೆಜೋಳವನ್ನು ಬೆಳೆಯುತ್ತಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈಜಿಪ್ಟಿನಲ್ಲಿ ಇತ್ತೀಚೆಗೆ ದೊರೆತ ಪುರಾವೆಗಳ ಪ್ರಕಾರ, ನವಶಿಲಾಯುಗದ ಜನರು ಪ್ರ.ಶ.ಪೂ.8ನೆಯ ಸಹಸ್ರವರ್ಷದಲ್ಲೇ ಕಾಟುಜೋಳವನ್ನು ಉಪಯೋಗಿಸುತ್ತಿದ್ದರು ಎಂದು ತಿಳಿಯುತ್ತದೆ. ಅತಿ ಮುಂಚೆ ಬೆಳೆದ ಜೋಳ ಪ್ರ.ಶ.ಪೂ.4000ದ ಹೊತ್ತಿಗೆ ಕೊಲ್ಲಿ ಪ್ರದೇಶದಲ್ಲಿ ಕಾಣಸಿಗುತ್ತದೆ. ಭಾರತದಲ್ಲಿ ಇದು ಸೌರಾಷ್ಟ್ರದ ಅಂತ್ಯ ಹರಪ್ಪ ಪದರಗಳಲ್ಲಿ ಕಾಣುತ್ತದೆ. ಮೆಕ್ಕೆಜೋಳವನ್ನು ಅಂತ್ಯ ಹರಪ್ಪ ಜನರು ಮಹಾರಾಷ್ಟ್ರಕ್ಕೆ ತಂದಿರಬಹುದಾದ ಸಾಧ್ಯತೆ ಇದೆ. ರಾಗಿಯೂ ಈಜಿಪ್ಟಿನಿಂದಲೇ ಬಂದಿರಬಹುದು. ಇದರ ಕಾಟುಜಾತಿ ಭಾರತದಲ್ಲಿರುವುದೇನೋ ನಿಜ. ಸಜ್ಜೆ ಸಹ ಸೌರಾಷ್ಟ್ರದಿಂದಲೇ ಬಂದಿರಬೇಕು. ಸೌರಾಷ್ಟ್ರಕ್ಕೆ ಅದು ಪರ್ಷಿಯನ್ ಕೊಲ್ಲಿ ಪ್ರದೇಶದಿಂದ ಮೊದಲೇ ಬಂದಿತ್ತು.

ಉಳಿದ ಆಹಾರ ಸಸ್ಯಗಳಲ್ಲಿ ಅವರೆ, ಬಟಾಣಿ, ಒಂದು ಜಾತಿಯ ಕಾಟುಬಟಾಣಿ, ಕೆಂಪುತೊಗರಿ, ಹೆಸರು ಮತ್ತು ಉದ್ದು ಮುಖ್ಯವಾದವು. ಹುರುಳಿ ಹೆಚ್ಚು ಮಳೆ ಬೀಳುವ ಪಶ್ಚಿಮಘಟ್ಟಗಳ ಪ್ರದೇಶದಿಂದ ಬಂದಿರಬೇಕು. ನಳನಳಿಸುತ್ತಿದ್ದ ಬೇಸಾಯ ಅಂತ್ಯ ಜೋರ್ವೆ ಅವಧಿಯಲ್ಲಿ ಸೊರಗುವುದಕ್ಕೆ ವಾಯುಗುಣದಲ್ಲಾದ ವಿಪರೀತ ಬದಲಾವಣೆಗಳೇ ಕಾರಣವಿರಬೇಕು. ಇದರ ಪರಿಣಾಮವಾಗಿ ಜನರು ಹೆಚ್ಚು ಹೆಚ್ಚು ಬೇಟೆಯಾಡಲಾರಂಭಿಸಿದರು.

ನೇಗಿಲು: ತಾಮ್ರ-ಶಿಲಾಯುಗದ ಜನರು ಗಟ್ಟಿಯಾದ ಕರಿಮಣ್ಣನ್ನು ಉತ್ತದ್ದು ಹೇಗೆ ಎಂಬುದಕ್ಕೆ ಉತ್ತರ ಸರಳವಾದದು: ಕರಿಮಣ್ಣನ್ನು ಉಳುವ ಅಗತ್ಯವಿಲ್ಲ, ಅದು ತಾನೇ ಉತ್ತುಕೊಳ್ಳುತ್ತದೆ. ಹರಪ್ಪದ ಜನರು ಮರದ ನೇಗಿಲನ್ನು ಉಪಯೋಗಿಸುತ್ತಿದ್ದರು ಎಂಬುದು ಈಗ ಸ್ಪಷ್ಟವಾಗಿದೆ. ಈ ನೇಗಿಲಿಗೂ ಈಗ ಉತ್ತರ ಭಾರತದಲ್ಲಿ ಮತ್ತು ಕರಾವಳಿ ಕರ್ನಾಟಕದಲ್ಲಿ ಉಪಯೋಗಿಸುವ ನೇಗಿಲಿಗೂ ಹೆಚ್ಚು ವ್ಯತ್ಯಾಸವೇನೂ ಇಲ್ಲ. ಬನಾವಳಿಯಲ್ಲಿ ಸುಟ್ಟಮಣ್ಣಿನ ನೇಗಿಲ ಮಾದರಿಗಳು ಸಿಕ್ಕಿವೆ. ಮಾಳ್ವದ ಮುಂಚಿನ ಬೇಸಾಯಗಾರರು ಈಗಲೂ ರೂಢಿಯಲ್ಲಿರುವಂತೆ ಗಟ್ಟಿ ಜಾಲಿಮರದಿಂದ ನೇಗಿಲು ಮಾಡಿಕೊಂಡಿರಬಹುದು. ಆದರೆ ಮಹಾರಾಷ್ಟ್ರದಲ್ಲಿ ಜಿಂಕೆಯ ಕೊಂಬನ್ನೇ ಹಾರೆ ಅಥವಾ ಕೈನೇಗಿಲಾಗಿ ಉಪಯೋಗಿಸಿರಬಹುದು. ತಾಮ್ರ-ಶಿಲಾಯುಗದ ನಿವೇಶನಗಳಲ್ಲಿ ಇಂಥ ಹಲವು ಕೊಂಬುಗಳು ದೊರೆತಿವೆ. ಇದು ಎಷ್ಟು ಗಟ್ಟಿಯಾಗಿರುತ್ತದೆಂದರೆ ಯುರೋಪಿನಲ್ಲಿ ನವಶಿಲಾಯುಗದ ಕಾಲದಲ್ಲಿ ಚಕಮಕಿ ಕಲ್ಲನ್ನು ನೆಲದೊಳಗಿಂದ ಅಗೆದು ತೆಗೆಯಲು ಇದನ್ನು ಉಪಯೋಗಿಸುತ್ತಿದ್ದರು. ಅದೇನೇ ಇರಲಿ, ಮಹಾರಾಷ್ಟ್ರದ ಪುಣೆ ಜಿಲ್ಲೆಯ ವಾಳ್ಕಿ ಎಂಬಲ್ಲಿ ನಿಜವಾದ ನೇಗಿಲ ಮುಂಜಣದ ಮಾದರಿ ದೊರೆತಿದೆ. ಇದು ಜೋರ್ವೆ ಸಂಸ್ಕೃತಿಯ ನಿವೇಶನವಾಗಿದೆ. ಜಾನುವಾರಿನ ರಟ್ಟೆಯ ಮೂಳೆಯಿಂದ ಮಾಡಿದ ಇದು ಹೆಚ್ಚೂಕಡಿಮೆ ತ್ರಿಕೋನಾಕಾರದಲ್ಲಿದೆ; ಅದರೊಳಗೆ ಎರಡು ತೂತನ್ನೂ ಮಾಡಿದ್ದಾರೆ. ಇದರಂತಹ ಇನ್ನೊಂದು ಮಾದರಿ ಭಾರತದಲ್ಲೆಲ್ಲೂ ಈವರೆಗೆ ಸಿಕ್ಕಿಲ್ಲ. ಆದರೆ ಉತ್ತರ ಯುರೋಪಿನ ನವಶಿಲಾಯುಗದ ನಿವೇಶನಗಳಲ್ಲಿ ಮರದಿಂದ ಮಾಡಿದ ಇಂತಹ ಕರಕುಶಲ ವಸ್ತುಗಳು ದೊರೆತಿವೆ; ಸಿರಿಯಾದಲ್ಲಿ ಕಂಚಿನಯುಗದ ಪದರಗಳಲ್ಲಿ ಕಲ್ಲಿನ ಗುಳವೊಂದು ದೊರೆತಿದೆ. ಇದನ್ನು ನೇಗಿಲ ಪೂರ್ವಜನೆನ್ನಬಹುದು. ಪ್ರಾಗೈತಿಹಾಸಿಕ ಬೇಸಾಯ ಅಂಬೆಗಾಲಿಡುತ್ತಿದ್ದಾಗ, ಈ ಸರಳ ನೇಗಿಲ ತೂತುಗಳ ಮಧ್ಯ ಹಗ್ಗ ತೂರಿಸಿ ಉಳುವವನು ಅದನ್ನೆಳೆದು ಹಿಡಿಯುತ್ತಿದ್ದ. ಆಳವಾಗಿ ಉಳುವುದು ಇದರಿಂದ ಸಾಧ್ಯವಾಗುತ್ತಿರಲಿಲ್ಲ. ತುಂಬ ಫಲವತ್ತಾದ ಮೆಕ್ಕಲು ಮಣ್ಣಿನಲ್ಲಿ ಆಳವಾಗಿ ಉಳುವ ಅಗತ್ಯವೂ ಇರಲಿಲ್ಲ. ದಖನಿನ ಮೊತ್ತಮೊದಲ ರೈತರು ಇಂಥ ಸರಳ ನೇಗಿಲುಗಳನ್ನು ಬಳಸುತ್ತಿದ್ದರೆಂಬುದು ಇಲ್ಲಿ ಮುಖ್ಯವಷ್ಟೆ ವಾಳ್ಕಿಯಲ್ಲಿ ಸ್ವಾರಸ್ಯಕರವಾದ ಇನ್ನೊಂದು ವಸ್ತು ಸಿಕ್ಕಿದೆ. ಇದು 35 ಸೆಂಮೀ ಉದ್ದದ ಒಂದು ಜಿಂಕೆ ಕೊಂಬು. ಇದನ್ನು ಟೊಳ್ಳಾಗಿಸಿ ಕೊಳವೆಯಂತೆ ಮಾಡಿ ಬೀಜಬಿತ್ತಲು ಉಪಯೋಗಿಸುತ್ತಿದ್ದರು. ಇನಾಂಗಾಂವಿನ ರೈತರಿಗೆ 30ಕಿಮೀ ದೂರದಲ್ಲಿರುವ ವಾಳ್ಕಿ ಬೇಸಾಯಭೂಮಿಯಾಗಿರಬಹುದು ಎಂಬುದನ್ನು ಇಲ್ಲಿ ಗಮನಿಸಬಹುದು.

ಆಹಾರ ಪದ್ಧತಿ: ಇನಾಂಗಾಂವಿನ ಉತ್ಖನನದಿಂದ ಆಹಾರಪದ್ಧತಿಯ ಬಗ್ಗೆ ಸ್ವಾರಸ್ಯಕರವಾದ ಪುರಾವೆಗಳು ಹೊರಬಂದಿವೆ. ಮನುಷ್ಯರ ಮೂಳೆಗಳಲ್ಲಿರುವ ಸೂಕ್ಷ್ಮ ಧಾತುಗಳ ವಿಶ್ಲೇಷಣೆ ಮಾಡಿದಾಗ, 2-5 ವರ್ಷ ವಯಸ್ಸಿನ ಮಕ್ಕಳ ಮೂಳೆಗಳಲ್ಲಿ ಸ್ಟ್ರೋಂಟಿಯಂನ ಪ್ರಮಾಣ ಹೆಚ್ಚಿರುವುದು ತಿಳಿದುಬಂದಿತು. ಬೇಸಾಯ ಚಟುವಟಿಕೆ ಹೆಚ್ಚಿದ್ದ ಆದಿ ಜೋರ್ವೆ ಹಂತದಲ್ಲಿ ಸಸ್ಯಾಹಾರವನ್ನೇ ಹೆಚ್ಚು ಬಳಸುತ್ತಿದುದಕ್ಕೆ ಇದು ಸೂಚಕವಾಗುತ್ತದೆ. ಮಾಳ್ವ ಮತ್ತು ಆದಿ ಜೋರ್ವೆ ಹಂತಗಳಲ್ಲಿ ಬೇಸಾಯ ಹುಲುಸಾಗಿದ್ದುದರಿಂದ ಜನರು ಸಸ್ಯಾಹಾರವನ್ನೇ ಹೆಚ್ಚು ಬಳಸುತ್ತಿದ್ದರು. ಅಂತ್ಯ ಜೋರ್ವೆ ಹಂತದಲ್ಲಿ ಬೇಸಾಯ ಅವನತಿ ಹೊಂದಲು ಶುರುವಾಗಿದ್ದರಿಂದ ಪಶುಸಾಕಣೆ, ಬೇಟೆಯನ್ನು ಹೆಚ್ಚೆಚ್ಚು ಅವಲಂಬಿಸತೊಡಗಿದರು. ಮನುಷ್ಯನ ಮೂಳೆಗಳಲ್ಲಿ ಸತು ಮತ್ತು ತಾಮ್ರದ ಅಂಶ ಹೆಚ್ಚಿದುದು ಇದಕ್ಕೆ ಕನ್ನಡಿ ಹಿಡಿಯುತ್ತದೆ. ಸ್ಟ್ರೋಂಟಿಯಂನ ಪ್ರಮಾಣ ಕಡಿಮೆಯಾಗುವುದಕ್ಕೆ ಹಾಲುಮೊಸರು ಹೆಚ್ಚು ತಿನ್ನುವುದೇ ಕಾರಣ. ಅಂತ್ಯ ಜೋರ್ವೆ ಜನರಿಗಿಂತ ಕಡಿಮೆ ಹಾಲುಮೊಸರನ್ನು ಆದಿ ಜೋರ್ವೆಯವರು ಸೇವಿಸುತ್ತಿದ್ದರು. ಅವರ ಆಹಾರದಲ್ಲಿ ಮೀನಿನ ಪ್ರಮಾಣ ಹೆಚ್ಚಾದದ್ದು ಇದಕ್ಕೆ ಕಾರಣವಿರಬಹುದು. ಅಂತ್ಯ ಜೋರ್ವೆ ಜನರ ಮೂಳೆಗಳಲ್ಲಿ ಮ್ಯಾಂಗನೀಸ್ ಪ್ರಮಾಣ ಹೆಚ್ಚಿರುವುದು ಸಹ ಇದನ್ನು ಸೂಚಿಸುತ್ತದೆ. ಜೊತೆಗೆ, ಆಯತಾಕಾರದ ದೊಡ್ಡ ಮನೆಗಳಲ್ಲಿ ವಾಸಿಸುತ್ತಿದ್ದ ಜನರು ದುಂಡಾದ ಗುಡಿಸಿಲುಗಳಲ್ಲಿರುವವರಿಗಿಂತ ಒಳ್ಳೆಯ ಆರೋಗ್ಯ ಹೊಂದಿದ್ದರು. ದೊಡ್ಡ ಮನೆಯವರು ಪ್ರೋಟೀನ್ ಹೆಚ್ಚಿರುವ ಪುಷ್ಕಳ ಭೋಜನ ಉಣ್ಣುತ್ತಿದುದು ಅವರ ಮೂಳೆಗಳಲ್ಲಿರುವ ಸತು ಮತ್ತು ತಾಮ್ರದ ಅಂಶದಿಂದ ತಿಳಿಯುತ್ತದೆ. ಈ ಅಂಶ ಗುಡಿಸಿಲಿನವರಲ್ಲಿ ಕಡಿಮೆ ಇದೆ. ಆದಿ ಜೋರ್ವೆಗಿಂತ ಅಂತ್ಯ ಜೋರ್ವೆ ಜನರಲ್ಲಿ ಹೆಂಗಸರು ಮತ್ತು ಗಂಡಸರ ಆಹಾರ ಸೇವನೆಯಲ್ಲಿ ವ್ಯತ್ಯಾಸ ಇರುವುದು ತಿಳಿಯುತ್ತದೆ.

ದಕ್ಷಿಣದ ನವಶಿಲಾಯುಗದವರ ಮುಖ್ಯಬೆಳೆ ರಾಗಿಯಾಗಿತ್ತು. ರಾಗಿ ಈಜಿಪ್ಟಿನಿಂದ ಬಂದದ್ದೆಂದು ಈಗ ಸ್ಪಷ್ಟವಾಗಿದೆ. ಹುರುಳಿ ಮತ್ತು ಮೆಕ್ಕೆಜೋಳವನ್ನೂ ಅವರು ಬೆಳೆಯುತ್ತಿದ್ದರು. ಸಾಕುಪ್ರಾಣಿ, ಕಾಡುಪ್ರಾಣಿಗಳ (ಮುಖ್ಯವಾಗಿ ಜಿಂಕೆಯ) ಮಾಂಸವನ್ನು ತಿನ್ನುತ್ತಿದ್ದರು. ಸಾಕುಪ್ರಾಣಿಗಳಲ್ಲಿ ಜಾನುವಾರು ಹೆಚ್ಚಿದ್ದರೂ ಕುರಿ, ಮೇಕೆಗಳೂ ಇವೆ. ಗೊರಸಿನ ಗಂಟಿನ ಐಬು, ಮೂಳೆಯ ಮೇಲೆ ಬೆಳೆದ ದುರ್ಮೂಳೆಯನ್ನೆಲ್ಲ ಗಮನಿಸಿದರೆ ಜಾನುವಾರನ್ನು ಗಾಡಿ ಎಳೆಯಲು ಬಳಸುತ್ತಿದ್ದರೆಂಬುದು ಅರಿವಾಗುತ್ತದೆ. ಹಲ್ಲೂರಿನಲ್ಲಿ ಕುದುರೆ, ಮಸ್ಕಿ ಮತ್ತು ಬ್ರಹ್ಮಗಿರಿಯಲ್ಲಿ ಕತ್ತೆ ಕಂಡುಬಂದಿವೆ. ಕಾಡುಪ್ರಾಣಿಗಳಲ್ಲಿ ನೀಲಗಾಯ್, ಜಿಂಕೆ, ಸಾರಂಗ, ಆಮೆ ಮತ್ತು ಹಲ್ಲಿಗಳಿವೆ.

ಕರಕುಶಲಕಲೆ: ಪ್ರ.ಶ.ಪೂ.2ನೆಯ ಸಹಸ್ರವರ್ಷದ ಬೇಸಾಯಗಾರರ ಜನಸಮುದಾಯಗಳು ತಮಗೆ ಬೇಕಾದ್ದೆಲ್ಲ ತಾವೇ ತಯಾರಿಸಿಕೊಳ್ಳುತ್ತಿದ್ದವು. ತಮ್ಮ ದಿನನಿತ್ಯದ ಬಳಕೆಗಾಗಿ ಕರಕುಶಲವಸ್ತುಗಳನ್ನೂ ತಯಾರಿಸಿಕೊಳ್ಳುತ್ತಿದ್ದವು. ಕಲ್ಲಿನ ಕೆತ್ತನೆ ಮತ್ತು ಕುಂಬಾರಿಕೆಯಲ್ಲಿ ಸಾಕಷ್ಟು ನಿಪುಣರಾಗಿದ್ದರೆಂಬುದಕ್ಕೆ ಪುರಾವೆಗಳಿವೆ. ದೈವಾಬಾದ್ ಮತ್ತು ಇನಾಂಗಾಂವ್‌ಗಳಲ್ಲಿ ಹೊರತೆಗೆಯಲಾದ ಕುಂಬಾರನ ಆವಿಗೆಗಳು ವಿಶೇಷ ನೈಪುಣ್ಯವನ್ನು



ಶಿಲಾ ಅಲಗುಗಳು

ಪ್ರದರ್ಶಿಸುವುದಲ್ಲದೆ ಕಲ್ಪನೆ, ವಿನ್ಯಾಸದಲ್ಲಿ ಹರಪ್ಪ ಸಂಸ್ಕೃತಿಯ ಆವಿಗೆಗಳಿಗಿಂತ ತೀರ ಬೇರೆಯಾಗಿವೆ. ಹರಪ್ಪ ಆವಿಗೆಗಳು ಗುಂಡಾಗಿ ಉದ್ದವಾಗಿದ್ದು ಅವುಗಳಲ್ಲಿ ಬೆಂಕಿಗೂಡು ಕೆಳಭಾಗದಲ್ಲಿರುತ್ತದೆ. ಇದಕ್ಕೆ ಹೋಲಿಸಿದರೆ ಜೋರ್ವೆ ಕಾಲಕ್ಕೆ ಸೇರಿದ ದೈಮಾಬಾದಿನ ಎರಡು ಆವಿಗೆಗಳು ಬೇರೆ ರೀತಿಯಿವೆ. ಈ ಎರಡು ಆವಿಗೆಗಳೂ ಒಂದೇ ರೀತಿಯಲ್ಲಿವೆ. ಒಂದು ಸು.25 ಸೆಂಮೀ ಎತ್ತರದ ಮಣ್ಣಿನ ಕಟ್ಟೆಯ ಮೇಲೆ ಕಟ್ಟಲಾದ 5x5 ಮೀ ದೊಡ್ಡದಾದ ಕಟ್ಟಣ. ಇದರ ತಳಗಟ್ಟು ಸುಮಾರಾಗಿ ಚೌಕಾಕಾರವಾಗಿತ್ತು, ಮೂಲೆಗಳು ದುಂಡಗಿದ್ದವು; ಆವಿಗೆಯಲ್ಲಿ ಎರಡೆರಡು ಮಣ್ಣಿನ ಗೋಡೆಗಳಿದ್ದವು, ಒಳಗಿನ ಗೋಡೆಯನ್ನು ಸುಟ್ಟು ಗಟ್ಟಿಮಾಡಲಾಗಿತ್ತು. ಈ ಗೋಡೆಗಳು ಸುಮಾರು 1.4ಮೀ ಎತ್ತರವಿದ್ದವು. ಅವುಗಳ ಮಧ್ಯೆ ಬೂದಿತುಂಬಿಸಿ ಒತ್ತಲಾಗಿತ್ತು. ಇದು ಸುಮಾರು 15-50ಸೆಂಮೀ ಯಷ್ಟು ದಪ್ಪವಿದ್ದು ಕಾವು ಹೊರಹೋಗದಂತೆ ಕಾಯುತ್ತಿತ್ತು. ಆವಿಗೆಯೊಳಗಿದ್ದ 3-5ಸೆಂಮೀ ದಪ್ಪದ ಗೋಡೆ ಅದರಲ್ಲಿ ಎರಡು ಕೋಣೆಗಳನ್ನುಂಟುಮಾಡಿತ್ತು. ಮೊಟ್ಟೆಯಾಕಾರದ ಒಲೆಗೂಡುಗಳು ಉತ್ತರದ ಕಡೆಗೆ ಎರಡಿದ್ದವು. ಇವನ್ನು ಸೌದೆಯೊಡ್ಡಲು ಮತ್ತು ಗಾಳಿ ಹಾಕಲು ಉಪಯೋಗಿಸಲಾಗುತ್ತಿತ್ತು. ಆಗ್ನೇಯ ಮೂಲೆಯಲ್ಲಿದ್ದ ದೊಡ್ಡ ಕಲ್ಲು ಕುಲುಮೆಯೊಳಗೆ ಹೋಗಲು ಮೆಟ್ಟಲಿನಂತಿತ್ತು. ಆವಿಗೆಯೊಳಗಡೆ ಅರ್ಧ ಸುಟ್ಟ, ಪೂರ್ಣ ಸುಟ್ಟ ಮರದ ದಿಮ್ಮಿಗಳು, ಸುಟ್ಟು ಕೆಂಪಾದ ಮರಳು ಇದ್ದವು. ಜೊತೆಗೆ ಇಡಿಯಾದ, ಒಡೆದ ಮಡಕೆಗಳಿದ್ದವು. ಆವಿಗೆಯೊಳಗೆ ಬೇರೆಬೇರೆ ಅಳತೆ, ಆಕಾರದ ಮಣ್ಪಾತ್ರೆಗಳನ್ನು ಸಾಲಾಗಿ ಒಂದರ ಮೇಲೊಂದು ಜೋಡಿಸಿಡುತ್ತಿರಬೇಕು. ಎರಡು ಸಾಲುಗಳ ಮಧ್ಯದ ಎಡೆಯಲ್ಲಿ ಮರಳು ಮತ್ತು ಮಡಕೆಚೂರನ್ನು ತುಂಬಿಸಿ ಶಾಖ ಇಳಿದುಹೋಗದಂತೆ ಮಾಡುತ್ತಿದ್ದರು. ಆಮೇಲೆ ಆವಿಗೆಯನ್ನು ಈಗಲೂ ಮಾಡುವಂತೆ ಬೂದಿ ಮತ್ತು ಜೇಡಿಮಣ್ಣಿನ ಪದರದಿಂದ ಮುಚ್ಚಿಬಿಡುತ್ತಿದ್ದರು. ಇನಾಂಗಾಂವಿನಲ್ಲಿ ಎರಡು ಕುಂಬಾರರ ಆವಿಗೆಗಳು ದೊರೆತಿವೆ. ಅವುಗಳಲ್ಲೊಂದು ಮಾಳ್ವ ಕಾಲಕ್ಕೆ ಸೇರಿದರೆ ಮತ್ತೊಂದು ಜೋರ್ವೆ ಕಾಲದ್ದು. ಎರಡರ ಆಕಾರ, ಕಟ್ಟಣಗಳು ಒಂದೇ ರೀತಿಯಿದ್ದರೂ

ಮೊದಲನೆಯದು ಸ್ವಲ್ಪ ಚಿಕ್ಕದು (1.35ಮೀ ವ್ಯಾಸ). ಆದಿ ಜೋರ್ವೆ ಆವಿಗೆ ದೊಡ್ಡ ತೊಟ್ಟಿಯಂತಿದೆ. ಅದರ ವ್ಯಾಸ 1.75 ಮೀಟರಿದೆ. ಇದರ ಹೊಗೆಗೊಳವೆ ತಳದಲ್ಲಿವೆ. ಈ ತೊಟ್ಟಿಗೆ ಒಂದು ಉದ್ದವಾದ ಕಂಡಿಯಿದೆ. ಇದರ ತೆರಪನ್ನು ಜೇಡಿಮಣ್ಣಿನ ಮೆತ್ತೆಯಿಂದ ಅರೆಬರೆ ಮುಚ್ಚಲಾಗಿದೆ. ಇದರ ಅಂಚಿನಲ್ಲಿ ಸಪೂರವಾದ ತೋಡುಗಳನ್ನು ಮಾಡಿದೆ; ಕೆಳಗಿನ ಬೆಂಕಿಗೂಡಿನಿಂದ ಬಿಸಿಹೊಗೆ ಹೊರಹೋಗಲು ಇದರ ಮಧ್ಯದಲ್ಲಿ ತೂತುಗಳಿವೆ. ಅಂತ್ಯ ಜೋರ್ವೆ ಪದರಗಳಲ್ಲಿ ತೆರೆದ ಆವಿಗೆಯೊಂದು ಸಿಕ್ಕಿತು. ಎಲ್ಲ ಆವಿಗೆಗಳೂ ಮನೆಯ ಅಂಗಳದಲ್ಲೇ ಇದ್ದಿದ್ದರಿಂದ ಅವು ಕುಂಬಾರರ ಮನೆಗಳೆಂದು ಗುರುತಿಸಬಹುದು. ಅಂದರೆ ಹಳ್ಳಿಯ ಜನರಲ್ಲಿ ಕೆಲವರು ಕುಂಬಾರಕಲೆಯಲ್ಲಿ ನಿಪುಣರಾಗಿದ್ದರು ಎಂದಾಗುತ್ತದೆ.

ಬೇರೆಬೇರೆ ಪದಾರ್ಥಗಳಿಂದ ಮಾಡಿದ ಮಣಿಗಳು ಹೇರಳವಾಗಿ ದೊರೆತಿವೆ. ಅವುಗಳಲ್ಲಿ ಕಾರ್ನೇಲಿಯನ್ ಮತ್ತು ಚರ್ಟ್ (ಚಕಮಕಿ ಕಲ್ಲು) ನಂತಹ ಅಷ್ಟು ಬೆಲೆಬಾಳದ ಕಲ್ಲುಗಳು ಮುಖ್ಯವಾದವು. ಇನಾಂಗಾಂವಿನ ಆದಿ ಜೋರ್ವೆ ಪದರಗಳಲ್ಲಿ ಮಣಿಗಾರನ (ಲ್ಯಾಪಿಡರಿ) ಮನೆಯೊಳಗೆ ಮಣಿಯನ್ನು ಉಜ್ಜಿ ಹೊಳಪುಮಾಡುವ ಸಾಧನ ದೊರೆಯಿತು. ಇನಾಂಗಾಂವಿನಲ್ಲಿ ದೊರೆತ ಬೆಣಚುಕಲ್ಲಿನ ಬೈರಿಗೆಗಳ ಬಗ್ಗೆ ಇಲ್ಲಿ ಹೇಳಲೇಬೇಕು. ಮಣಿಗಳಲ್ಲಿ ತೂತು ಕೊರೆಯಲು ಇವನ್ನು ಬಳಸುತ್ತಿದ್ದರು ಎಂಬುದಂತೂ ನಿಜ. ದಂತದ ಮಣಿಗಳಲ್ಲಿ ತೂತು ಕೊರೆಯಲು ಪ್ರಾಯಶಃ ತಾಮ್ರದ ಬೈರಿಗೆಗಳನ್ನು ಬಳಸುತ್ತಿದ್ದರು.

ವರ್ಣ ರೇಖಾಚಿತ್ರಿತ ಮಣ್ಪಾತ್ರೆಗಳು (ಜೋರ್ವೆ ಮಾದರಿ)

ಲೋಹ ತಂತ್ರಜ್ಞಾನ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ತಾಮ್ರದ ಅದುರನ್ನು ಕಾಯಿಸಿ ಬೇಕಾದ ಆಕಾರಕ್ಕೆ ಬಡಿದು ಹೆಚ್ಚಿನ ವಸ್ತುಗಳನ್ನು ಮಾಡುತ್ತಿದ್ದರು. ಆದರೆ ಕಯಥ ಸಂಸ್ಕೃತಿಯ (1ನೆಯ ಹಂತ) ತಾಮ್ರದ ಕೊಡಲಿಗಳು ಇವಕ್ಕೆ ಅಪವಾದವಾಗಿವೆ. ಅವನ್ನು ಅಚ್ಚಿನಿಂದ ಮಾಡಲಾಗಿದ್ದು ಕರಕೌಶಲದ ಪ್ರತೀಕವಾಗಿವೆ. ಅಕ್ಕಸಾಲಿಯ ಕೆಲಸವೂ ಅಷ್ಟೇನೂ ಕೌಶಲವನ್ನು ಹೊಂದಿರಲಿಲ್ಲ. ಇನಾಂಗಾಂವಿನಲ್ಲಿ ದೊರೆತ ಚಿನ್ನದ ಮಣಿಗಳು ಮತ್ತು ಸುರುಳಿಯಾಕಾರದ ಕಿವಿಯೋಲೆಗಳನ್ನು (ಇವು ನಂತರ ಬಂದ ಸರ್ಪಕುಂಡಲವನ್ನು ಹೋಲುತ್ತವೆ) ಬಡಿದು ಮಾಡಲಾಗಿದೆ. ಇನಾಂಗಾಂವಿನ ಆದಿ ಜೋರ್ವೆ ಮನೆಯೊಂದರಲ್ಲಿ ಮೂಸೆ ಮತ್ತು ತಾಮ್ರದ ಇಕ್ಕಳ ದೊರೆತಿದ್ದರಿಂದ ಅದು ಅಕ್ಕಸಾಲಿಯ ಮನೆಯೆಂದು ಗುರುತಿಸಲಾಗಿದೆ. ಅತಿ ಹತ್ತಿರದ ಚಿನ್ನದ ಗಣಿ ರಾಯಚೂರಿನ ಹಟ್ಟಿಯಲ್ಲಿತ್ತು.

ಆದಿ ಬೇಸಾಯ-ಪಶುಸಾಕಣೆ ಕಾಲದ ಜನಸಮುದಾಯಗಳಿಗೆ ಮುಖ್ಯವಾಗಿರ ಬಹುದಾದ ಮತ್ತೊಂದು ವೃತ್ತಿಯೆಂದರೆ ಸುಣ್ಣ ತಯಾರಿಕೆ. ಇನಾಂಗಾಂವಿನ ಅಂತ್ಯ ಜೋರ್ವೆ ಹಂತದಲ್ಲಿ ಬೇಸಾಯದಿಂದ ಪಶುಸಾಕಣೆಯತ್ತ ಜನರ ಒಲವು ಹೆಚ್ಚಾದಾಗ ಸುಣ್ಣ ತಯಾರಿಕೆ ಏರುದೆಸೆಯಲ್ಲಿತ್ತು. ಸುಣ್ಣದ ಉಂಡೆಯ ರಾಶಿಗಳ ಪಕ್ಕದಲ್ಲಿ ಚೂರುಗಲ್ಲಿನಿಂದ ಕಟ್ಟಿದ ಸುಣ್ಣದ ಭಟ್ಟಿ ಸಿಕ್ಕಿದೆ. ಅದರ ತಳಗಟ್ಟು ಸುಮಾರಿಗೆ ದುಂಡಾಗಿದೆ. ಈ ಮುಂಚಿನ ಮಾಳ್ವ ಮತ್ತು ಆದಿ ಜೋರ್ವೆ ಕಾಲಗಳಲ್ಲಿ ಧಾನ್ಯ ಕೂಡಿಡಲು ಬಳಸುತ್ತಿದ್ದ ಹಗೆಗೆ ಮೆತ್ತಲು ಸುಣ್ಣ ಬೇಕಿತ್ತು. ಆದರೆ ಇದಕ್ಕಿಂತ ಹೆಚ್ಚಾಗಿ ಸುಣ್ಣದ ಅಗತ್ಯ ತೊಗಲನ್ನು ತಯಾರಿಸುವುದಕ್ಕಿತ್ತು ಎಂದು ಜನಾಂಗಶಾಸ್ತ್ರಕ್ಕೆ ಸಂಬಂಧಿಸಿದ ಪುರಾವೆಗಳು ಸೂಚಿಸುತ್ತವೆ. ಸತ್ತ ಪ್ರಾಣಿಗಳ ಚರ್ಮವನ್ನು ಸುಲಿದು ತೆಗೆದು ಸುಣ್ಣದ ನೀರಿನಲ್ಲಿ ಬಹಳ ಕಾಲ ನೆನೆಸಿಟ್ಟಾಗ ಅದರ ಮೇಲಿನ ರೋಮವನ್ನೂ, ಕೆಳಗಂಟಿದ ಮಾಂಸದ ತುಣುಕುಗಳನ್ನೂ ತೆಗೆಯುವುದು ಸುಲಭವಾಗುತ್ತಿತ್ತು. ದಖನಿನ ಅರೆಒಣ ಪ್ರದೇಶದಲ್ಲಿ ಸುಣ್ಣದ ಸಣ್ಣಸಣ್ಣ ಕಲ್ಲು ಹೇರಳವಾಗಿ ದೊರೆಯುತ್ತಿತ್ತು. ಇದರಿಂದ ಸುಣ್ಣ ತಯಾರಿಸುತ್ತಿದ್ದರು. ಕೆಲವೆಡೆ ನದಿಯೊಳಗೆ ಸಿಗುವ ಕಪ್ಪೆಚಿಪ್ಪಿನ ರಾಶಿಗಳು ದೊರೆತಿರುವುದರಿಂದ ಇವನ್ನೂ ಸುಣ್ಣ ತಯಾರಿಸಲು ಬಳಸುತ್ತಿರ ಬೇಕೆನಿಸುತ್ತದೆ.

ತಾಮ್ರ-ಶಿಲಾಯುಗದಲ್ಲಿ ಶಿಲೋಪಕರಣ ತಯಾರಿಕೆ ಒಂದು ವಿಶೇಷ ಪರಿಣತಿಯ ಕಸುಬಾಗಿತ್ತೇ ಎಂಬುದು ಇನ್ನೂ ತಿಳಿದಿಲ್ಲ. ಹರಪ್ಪ ನಿವೇಶನಗಳಲ್ಲಿ ದೊರೆತ ಪುರಾವೆಯನ್ನು ಗಮನಿಸಿದರೆ ಅದೊಂದು ಕಸುಬಾಗಿರುವ ಸಾಧ್ಯತೆಯನ್ನು ತೆಗೆದುಹಾಕುವಂತಿಲ್ಲ. ಹರಪ್ಪದಲ್ಲಿ ನಡೆದ ಇತ್ತೀಚಿನ ಉತ್ಖನನದಲ್ಲಿ ಹಲವು ಕುಶಲಕರ್ಮಿಗಳು ಪ್ರತ್ಯೇಕವಾದ ಒಂದು ತಾವಿನಲ್ಲಿ ಇದ್ದದ್ದು ಅರಿವಿಗೆ ಬಂದಿದೆ. ಇವರೊಂದಿಗೆ ಕುಂಬಾರರೂ, ಕಲ್ಲಿನ ಕೆತ್ತನೆಯವರೂ ಇದ್ದರು. ಈ ಸಂದರ್ಭದಲ್ಲಿ ಇನಾಂಗಾಂವಿನ ಅಂತ್ಯ ಜೋರ್ವೆ ಕಾಲದ ದೊಡ್ಡ ಮನೆಯೊಂದರ ಪಕ್ಕದಲ್ಲಿರುವ ಅರೆಚಂದ್ರಾಕಾರದ ಗುಡಿಸಿಲಿನ ಬಗ್ಗೆ ಇಲ್ಲಿ ಹೇಳಬಹುದು. ಇದು ಶಿಲೋಪಕರಣ ಮಾಡುವ ಕಸಬಿನವನ ಮನೆಯಾಗಿರಬಹುದು. ಏಕೆಂದರೆ ಇದರ ಮುಂದೆ ಪೂರ್ಣವಾಗಿ ಮತ್ತು ಅರೆಬರೆ ತಯಾರಾದ ಬೆಣಚುಕಲ್ಲಿನ ನೂರಾರು ಚಕ್ಕೆ/ ಅಲಗುಗಳೂ, ಶಿಲಾಗಟ್ಟಿಗಳೂ ಮೂಲಶಿಲೆಯ ಚೂರುಗಳೂ ಚೆಲ್ಲಿದ್ದವು.

ವಿನಿಮಯ: ಪರಸ್ಪರ ವಿನಿಮಯ ಇತ್ತೆಂಬುದು ಅಲ್ಲಿಯವಲ್ಲದ ಸಾಮಗ್ರಿಗಳಿಂದ ತಿಳಿಯುತ್ತದೆ. ಆದಿ ಬೇಸಾಯಗಾರರ ಜನಸಮುದಾಯಗಳು ತಮ್ಮ ವಸತಿಯ ಸುತ್ತಮುತ್ತಲು ದೊರೆಯದ ಸಾಮಗ್ರಿಗಳನ್ನು ಬೇರೆಡೆಯಿಂದ ತಂದುಕೊಂಡದ್ದಕ್ಕೆ ಕೆಲವು ಪುರಾವೆಗಳಿವೆ. ಇಂತಹ ಕೊಡುಕೊಳ್ಳುವಿಕೆಗಳು ನಾಯಕತ್ವ ಸಮಾಜದ ಮುಖ್ಯ ಲಕ್ಷಣವಾಗಿವೆ. ಕಯಥ ಜನರು ಹರಪ್ಪ ಜನರೊಂದಿಗೆ ಒಡನಾಡಿರಬೇಕು; ಅಷ್ಟು ಬೆಲೆಬಾಳದ ಮಣಿಗಳ ಎರಡು ಕಯಥದ ಸರಗಳು ಇದನ್ನು ಸೂಚಿಸುತ್ತವೆ. ಅಹಾರ್ ಸಂಸ್ಕೃತಿಯವರು ಕಯಥದವರಿಗಷ್ಟೇ ಅಲ್ಲ ಮಾಳ್ವದವರಿಗೂ ತಾಮ್ರದ ಅದಿರನ್ನು ಪೂರೈಕೆ ಮಾಡಿರಬೇಕು. ಅದು ಹಾಗೇ ಇಳಿದು ಮಹಾರಾಷ್ಟ್ರದವರೆಗೂ ಬಂದಿರಬೇಕು. ಬೇರೆಬೇರೆ ಜಾಗಗಳಲ್ಲಿ ದೊರೆತ ತಾಮ್ರದ ಕೊಡಲಿಗಳನ್ನೆಲ್ಲ ಮಾಳ್ವದವರೇ ಮಾಡಿರಬೇಕು; ಅವುಗಳ ಮೇಲಿರುವ ಕಚ್ಚುಗುರುತಿನ ವಿನ್ಯಾಸ ಇದನ್ನು ಸೂಚಿಸುತ್ತದೆ. ಬಳೆ, ಮಣಿ ಮಾಡುವುದಕ್ಕೆ ಶಂಖ ಸೌರಾಷ್ಟ್ರದ ಕಡಲತೀರದಿಂದಲೇ ಬಂದಿರಬೇಕು. ಜೋರ್ವೆ ಜನರು ಚಿನ್ನ, ದಂತ, ಸರ್ಪೆಂಟೈನ್ ಕಲ್ಲನ್ನು ಕರ್ನಾಟಕದಿಂದಲೂ ಅಮೆಜ಼ೋನೈಟ್ ಕಲ್ಲನ್ನು ಬರೋಡದ ಬಳಿ ಇರುವ ರಾಜ್ಪಿಪ್ಲದಿಂದಲೂ (ಇದೊಂದೆಡೆಯೇ ಅದು ದೊರೆಯುವುದು) ತರಿಸಿಕೊಳ್ಳುತ್ತಿದ್ದರು. ಸಮುದ್ರದ ಮೀನು, ಕೆಂಪುಕಬ್ಬಿಣದ ಅದಿರು, ಸರ ಮಾಡಲು ಕಪ್ಪೆಚಿಪ್ಪು, ಕವಡೆಗಳನ್ನು ಕೊಂಕಣದ ಕರಾವಳಿಯಿಂದ ತರಿಸಿಕೊಳ್ಳುತ್ತಿದ್ದರು. ಹೆಚ್ಚು ಮಳೆಬೀಳುವಲ್ಲಿ ಮಾತ್ರ ಬೆಳೆಯುವ ಹುರುಳಿಯನ್ನೂ ಅವರು ಕೊಂಕಣದಿಂದಲೇ ತರಿಸಿಕೊಳ್ಳುತ್ತಿದ್ದರು. ಜೊತೆಗೆ ಸುಗಂಧ ತಯಾರಿಸಲು ಬಳಸುವ ಸುಗಂಧ ಬಾಲದ ಬೇರು ಸಹ ಇಲ್ಲಿಂದಲೇ ಬಂದಿರಬೇಕು. ಜೋರ್ವೆ ಮಣ್ಪಾತ್ರೆಗಳ ಅಂಕಿಅಂಶ ವಿಶ್ಲೇಷಣೆ ಮಾಡಿದಾಗ ಜೋರ್ವೆಯ ಕುಂಬಾರರು ಫೋಡ್ ಕಣಿವೆಯ ಇತರ ವಸತಿಗಳಿಗೆ ತಮ್ಮ ಉತ್ಪನ್ನಗಳನ್ನು ಒದಗಿಸುತ್ತಿದ್ದರೆಂಬುದು ತಿಳಿಯುತ್ತದೆ. ದಕ್ಷಿಣದಲ್ಲಿ ಮೈಸೂರಿನ ಟಿ. ನರಸೀಪುರದವರೆಗೂ, ಪಶ್ಚಿಮದಲ್ಲಿ ತಾಪಿಬಯಲಿನ ಮೂಲಕ ಗುಜರಾತಿನವರೆಗೂ ಅವರ ಸಂಪರ್ಕವಿತ್ತು. ದೂರದ ಉತ್ತರದೊಂದಿಗೂ ಅವರು ಸಂಪರ್ಕ ಹೊಂದಿದ್ದರು ಎಂದು ಹೇಳುವುದು ಕಷ್ಟವಾದರೂ ಕೇವಲ ಹಿಮಾಲಯದ ಶಿವಾಲಿಕ ಪ್ರದೇಶದಲ್ಲಿ ಬೆಳೆಯುವ ಕೆಸೆರು (ಹೆಟೆರೊಪನಕ್ಸ್ ಫ್ರಾಗ್ರಾನ್ಸ್) ಗಿಡವು ಇಲ್ಲಿಗೆ ಹೇಗೆ ಬಂತು? ಹರಳು ಗಿಡದ ಎಲೆಗಳ ಬದಲಿಗೆ ರೇಷ್ಮೆ ಹುಳಗಳಿಗೆ ಕೆಸೆರು ಗಿಡದ ಎಲೆಗಳನ್ನು ತಿನ್ನಿಸುತ್ತಾರೆ. ಈ ಸಂದರ್ಭದಲ್ಲಿ, ತಾಮ್ರ-ಶಿಲಾಯುಗದ ಪದರ ಮತ್ತು ನೆವಾಸಗಳಲ್ಲಿ ರೇಷ್ಮೆಯ ಇರುವಿಕೆಯ ಪುರಾವೆ ಹಾಗೂ ಚಾಂದೋಲಿಯಲ್ಲಿ ಅಗಸೆಯ ಪುರಾವೆ ದೊರೆತಿರುವುದನ್ನು ಹೇಳಲೇಬೇಕು. ಇದನ್ನು 'ಹಲವು ಕೈಬದಲಿಸಿ ನಡೆವ ವ್ಯಾಪಾರ' ಎನ್ನಬಹುದೇನೋ. ಅಂದರೆ, ಕೈಯಿಂದ ಕೈಗೆ ವರ್ಗವಾಗುತ್ತಾ ವಸ್ತುಗಳು ದೂರದೂರದವರೆಗೆ ಪಯಣಿಸುತ್ತವೆ; ಹೀಗಾಗುವಾಗ ಅವುಗಳ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಹಲವು ವಸ್ತುಗಳನ್ನು ಹೀಗೆ ಕೊಡುಕೊಳ್ಳುತ್ತಿದ್ದರು; ಈ ಕೊಡುಕೊಳ್ಳುವಿಕೆಯ ಒಂದು ಜಾಲವನ್ನೇ ಮಾಡಿಕೊಂಡಿದ್ದರು.

ಸಮಾಜ: ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಜೀವನಾಧಾರವಾಗಿಸಿಕೊಂಡು, ಬೇಸಾಯವನ್ನು ತಕ್ಕಮಟ್ಟಿಗೆ ಶುರುಮಾಡಿಕೊಂಡಿದ್ದ ನವಶಿಲಾಯುಗದವರು (ಕಾಶ್ಮೀರ, ಗಂಗಾಬಯಲು ಅಥವಾ ದಕ್ಷಿಣ ಭಾರತದಲ್ಲಿ) ಸಮಾನತೆಯಲ್ಲಿ ನಂಬಿಕೆ ಉಳ್ಳವರಾಗಿದ್ದರು ಎಂದು ತೋರುತ್ತದೆ. ಆದರೆ ಮಧ್ಯ ಮತ್ತು ಪಶ್ಚಿಮ ಭಾರತದ ತಾಮ್ರ-ಶಿಲಾಯುಗದ ಜನರು ನಾಯಕತ್ವ ಸಮಾಜವಾಗಿಬಿಟ್ಟಿರುವ ಸಾಧ್ಯತೆ ಇದೆ. ಪ್ರಭುತ್ವರಾಜ್ಯದತ್ತ ಇಟ್ಟ ಮೊತ್ತಮೊದಲ ಹೆಜ್ಜೆಯಿದು. ಅಹಾರ್ ಸಂಸ್ಕೃತಿಯ ವಸತಿಯಾದ ಬಾಲಾಥಲ್‌ನಲ್ಲಿ ಎರಡೆರಡು ರಕ್ಷಣಾಗೋಡೆಗಳಿರುವುದು, ಮಾಳ್ವ ಕಾಲದ ಏರಣ್‌ನ ರಕ್ಷಣಾಗೋಡೆ, ಪ್ರಭಾಸ್ ಪಾತಣ್‌ನ ಮೊದಲ ಹಂತದ ಗೋದಾಮು, ಇನಾಂಗಾಂವಿನ ಆದಿ ಜೋರ್ವೆ ಕಾಲದ ನೀರಾವರಿ ಏರ್ಪಾಡು ಮತ್ತು ಕಣಜ ನಾಯಕತ್ವ ಸಮಾಜಕ್ಕೆ ಪುರಾವೆಗಳಾಗಿವೆ. ನವ್ದತೋಲಿಯ ಯಜ್ಞವೇದಿಕೆ, ಬಲಿಕುಂಡಗಳು ಹರಪ್ಪ ಕಾಲದಿಂದಲೇ ಧಾರ್ಮಿಕ ಕೇಂದ್ರವಾಗಿದ್ದ ದೈಮಾಬಾದಿನ ಇಂತಹದೇ ಪುರಾವೆಗಳು ಈ ಮಾತಿಗೆ ಬಲನೀಡುತ್ತವೆ. ಇವಕ್ಕಿಂತ ಹೆಚ್ಚು ಸ್ವಾರಸ್ಯಕರವಾದ ಪುರಾವೆಗಳು ಇನಾಂಗಾಂವಿನ ಸಮಾಧಿಗಳಲ್ಲಿ ದೊರೆಯುತ್ತವೆ. ಸತ್ತ ಮೇಲೆ ಒಬ್ಬ ವ್ಯಕ್ತಿಗೆ ಯಾವ ರೀತಿಯ ಶವಸಂಸ್ಕಾರ ನೀಡಲಾಗುತ್ತ ದೆಂಬುದು ಆ ವ್ಯಕ್ತಿ ಬದುಕಿದ್ದಾಗ ಅವನ ಸಾಮಾಜಿಕ ಸ್ಥಾನವನ್ನು ಅವಲಂಬಿಸುತ್ತದೆ.

ಇನಾಂಗಾಂವಿನ ವಸತಿಯ ಮಧ್ಯದಲ್ಲಿದ್ದ ಐದುಕೋಣೆಯ ದೊಡ್ಡ ಮನೆಯಲ್ಲಿ ಸಿಕ್ಕಿದ ಸಮಾಧಿಯು ಅಲ್ಲಿನ ಉಳಿದೆಲ್ಲ ಸಮಾಧಿಗಳಿಗಿಂತ ಪೂರ್ತಿ ಬೇರೆಯಾಗಿತ್ತು. ಸುಮಾರು 35 ವರ್ಷದ ವ್ಯಕ್ತಿಯ ಶವವನ್ನು ನಾಲ್ಕು ಕಾಲಿನ ದೊಡ್ಡ ಜಾಡಿಯಲ್ಲಿ ಚಕ್ಕಳಮಕ್ಕಳ ಹಾಕಿಸಿ ಕೂಡಿಸಿದೆ. ಅವನ ದೊಡ್ಡ ಮನೆ, ಅದರ ಪಕ್ಕದಲ್ಲಿರುವ ಕಣಜದ ಸ್ಥಾನ, ವಿಶಿಷ್ಟವಾದ ಶವಸಂಸ್ಕಾರ ಸಮಾಜದಲ್ಲಿ ಅವನ ಸ್ಥಾನವನ್ನು ಸೂಚಿಸುತ್ತವೆ. ಅವನೇ ಆ ಸಮುದಾಯದ ನಾಯಕನಾಗಿರಬಹುದು. ಹೆಚ್ಚಿನಂಶ ಇದನ್ನೇ ಹೋಲುವ, ಸಾಂಕೇತಿಕ ರೂಪದ ಇನ್ನೊಂದು ಶವಸಂಸ್ಕಾರ ಇದೇ ಮನೆಯ ಮುಂಚಿನ ಪದರದಲ್ಲಿ ಕಂಡು ಬಂದಿರುವುದರಿಂದ ನಾಯಕತ್ವ ಆನುವಂಶಿಕವೆಂದು ತೀರ್ಮಾನಿಸಬಹುದು.



ತಾಮ್ರದ ಕೊಡಲಿಗಳು ಮತ್ತು ಬಳೆಗಳು, ಜೋರ್ವೆ

ಹರಪ್ಪ ಸಂಸ್ಕೃತಿಯ ನಂತರದ ಕಾಲದ ಜನಸಂಖ್ಯೆಯಲ್ಲಿ ಗಣನೀಯವಾದ ಭಾಗ ಅರೆಅಲೆಮಾರಿ ಕುರುಬ/ಗೊಲ್ಲರು ಹಾಗೂ ಬೇಟೆಗಾರರು-ಸಂಗ್ರಹಿಸುವವರೂ ಇದ್ದರು. ಅರೆಅಲೆಮಾರಿಗಳು ದುಂಡಾದ ಗುಡಿಸಿಲುಗಳಲ್ಲಿ ಇದ್ದರೆಂಬುದು ಇನಾಂಗಾಂವಿನಲ್ಲಷ್ಟೇ ಅಲ್ಲ ಬೇರೆ ಹಲವು ನಿವೇಶನಗಳಿಂದಲೂ ತಿಳಿದುಬಂದಿದೆ. ಜನಾಂಗಶಾಸ್ತ್ರದ ದೃಷ್ಟಿಯಿಂದ ನೋಡಿದಾಗ ಇಂತಹದೇ ರಚನೆ ಕಂಡುಬಂದ ಕಡೆಯಲ್ಲೆಲ್ಲ ಆಯತಾಕಾರದ ಮನೆಗಳಲ್ಲಿ ವಾಸಿಸುವ ಜನರು ಇದ್ದಲ್ಲೇ ಇರುವಂಥವರಾದರೆ ದುಂಡಾದ ಮನೆಗಳಲ್ಲಿ ವಾಸಿಸುವವರು ಅರೆಅಲೆಮಾರಿ ಜನರಾಗಿರುತ್ತಾರೆ.

ಧಾರ್ಮಿಕ ನಂಬಿಕೆಗಳು: ಆದಿ ಬೇಸಾಯಗಾರರ ಜನಸಮುದಾಯಗಳ ಧಾರ್ಮಿಕ ನಂಬಿಕೆಗಳ ಬಗ್ಗೆ ನಮ್ಮ ತಿಳಿವು ಬಹಳ ತೆಳುವಾದದ್ದು. ಯಾವುದೋ ಸಂತಾನಮಾತೆಯನ್ನು ಅವರು ಪೂಜಿಸುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಈ ಮಾತೃದೇವತೆಯ ಸುಟ್ಟಮಣ್ಣಿನ ಮೂರ್ತಿಗಳು ಹೆಚ್ಚೇನೂ ಹೇಳುವುದಿಲ್ಲ. ಆದರೆ ಇನಾಂಗಾಂವಿನಲ್ಲಿ ದೊರೆತ ತಲೆಯಿಲ್ಲದ ಮೂರ್ತಿಗಳು ಹೆಚ್ಚು ಸ್ವಾರಸ್ಯಕರವಾಗಿವೆ. ಇತರ ಜನಾಂಗಗಳಲ್ಲಿರುವಂತೆ ಇವೂ ಸಂತಾನಮಾತೆಯವೇ ಆಗಿವೆ. ಉತ್ತರ ಭಾರತದ ಬೂದುಬಣ್ಣದ ಪಾತ್ರೆಯ ಪದರದಲ್ಲಿ ಕಂಡುಬರುವ ಈ ದಂತದ ಆಕೃತಿಗಳ ಮೇಲೆ ಒತ್ತಿ ಒತ್ತಿ ಮಾಡಿರುವ ಚುಕ್ಕೆ ಅಥವಾ ಕಣ್ಣಿನ ಚಿಹ್ನೆಗೂ ಸಿಡುಬಿಗೂ ಸಂಬಂಧ ಇರಬಹುದು ಅಥವಾ ಕೆಟ್ಟ ದೃಷ್ಟಿ ಬೀಳದಂತೆ ಮಾಡಲು ಇರಬೇಕು ಅನಿಸುತ್ತದೆ. ಜೇಡಿಮಣ್ಣಿನ ಗಂಡು ಆಕೃತಿಗಳೂ ಇನಾಂಗಾಂವಿನಲ್ಲಿ ದೊರೆತಿವೆ.

ತಾಮ್ರ-ಶಿಲಾಯುಗದ ಕೆಲವು ಜನಸಮುದಾಯಗಳಲ್ಲಿ ಸಾವಿನ ಅನಂತರದ ಬದುಕಿನಲ್ಲಿ ನಂಬಿಕೆ ಇರುವುದು ಅವರ ಶವಸಂಸ್ಕಾರ ವಿಧಿಗಳಿಂದ ತಿಳಿಯುತ್ತದೆ. ಜೋರ್ವೆ ಜನರು ತಮ್ಮ ವಸತಿಯೊಳಗೆ, ಹೆಚ್ಚಿನ ಪಕ್ಷ ಮನೆಯೊಳಗೇ ಶವಗಳನ್ನು ಹೂಳುತ್ತಿದ್ದರು. ಶವದ ತಲೆ ಉತ್ತರಕ್ಕೆ ಕಾಲು ದಕ್ಷಿಣಕ್ಕೆ ಬರುವ ಹಾಗೆ ಅಂಗಾತ ಮಲಗಿಸುತ್ತಿದ್ದರು. ಆದರೆ ಮಣ್ಣು ಮಾಡುವ ಮುಂಚೆ ಶವದ ಪಾದಗಳನ್ನು ಕತ್ತರಿಸಿ ಹಾಕುತ್ತಿದ್ದರು; ಸತ್ತ ವ್ಯಕ್ತಿ ಭೂತವಾಗಿ ಮತ್ತೆ ಬರದಿರುವಂತೆ ಮಾಡುವ ಮೂಢನಂಬಿಕೆಯೇ ಇದಕ್ಕೆ ಕಾರಣ. ಅನಂತರದ ಹಂತದಲ್ಲಿ ಶವದ ತಲೆ ಪೂರ್ವಕ್ಕೂ ಕಾಲು ಪಶ್ಚಿಮಕ್ಕೂ ಬರುವಂತೆ ಇಡಲಾರಂಭಿಸಿದರು. ಮಕ್ಕಳ ಶವಗಳನ್ನು ಎರಡು ಬೂದುಬಣ್ಣದ ಮಡಕೆಗಳನ್ನು ಬಾಯಿಗೆ ಬಾಯಿ ತಗಲುವಂತೆ ಅಡ್ಡಲಾಗಿ ಉತ್ತರ-ದಕ್ಷಿಣ ದಿಕ್ಕಿಗೆ ಇಟ್ಟು ಅವುಗಳಲ್ಲಿ ಇಡುತ್ತಿದ್ದರು.

ಅವನತಿ: ಆದಿ ಬೇಸಾಯಗಾರರ ಸಂಸ್ಕೃತಿಗಳ ಎದ್ದುಕಾಣುವ ಒಂದು ಲಕ್ಷಣವೆಂದರೆ, ಪ್ರ.ಶ.ಪೂ.2ನೆಯ ಸಹಸ್ರವರ್ಷದ ಎರಡನೆಯ ಅರ್ಧದಲ್ಲಿ ಅವೆಲ್ಲವೂ ಅವನತಿ ಹೊಂದಿದವು. ಮಧ್ಯ ಮತ್ತು ಪಶ್ಚಿಮ ಭಾರತ ಹಾಗೂ ದಖನ್‌ನಲ್ಲಿ ತಾಮ್ರ-ಶಿಲಾಯುಗದ ವಸತಿಗಳನ್ನು ಜನರು ತೊರೆದುಹೋದಮೇಲೆ ಪ್ರ.ಶ.ಪೂ.6-5ನೆಯ ಶತಮಾನದ ಚಾರಿತ್ರಿಕ ಕಾಲದಲ್ಲೇ ಆ ವಸತಿಗಳಿದ್ದಲ್ಲಿ ಜನ ಮತ್ತೆ ವಾಸಿಸತೊಡಗಿದ್ದು. ಇನಾಂಗಾಂವಿನ ವಸತಿಯಲ್ಲಿ ಜನಜೀವನ ಮುಂದುವರೆದರೂ ಅದು ಅವನತಿಯ ಹಾದಿ ಹಿಡಿದಿತ್ತು. ಉತ್ತರ ಮತ್ತು ಪೂರ್ವ ಭಾರತದಲ್ಲಿ ಪ್ರ.ಶ.ಪೂ.800ರ ಸಮಯದಲ್ಲಿ ನವಶಿಲಾಯುಗ ಮತ್ತು ತಾಮ್ರ-ಶಿಲಾಯುಗಗಳು ಒಂದರೊಳಗೊಂದು ಚಾಚಿಕೊಂಡಿಲ್ಲ.

ಪ್ರ.ಶ.ಪೂ.ಸು.1800ರ ಹೊತ್ತಿಗೆ ವಾಯುಗುಣದಲ್ಲಿ ವಿಪರೀತ ಬದಲಾವಣೆಗಳಾದವೆಂದು ರಾಜಸ್ತಾನದ ಸರೋವರಗಳ ತಳದ ಹೂಳಿನ ಪದರಗಳ ಅಧ್ಯಯನದಿಂದ ತಿಳಿದುಬರುತ್ತದೆ. ಪ್ರ.ಶ.ಪೂ.1200ರ ಅನಂತರ ಒಣಹವೆ ಶುರುವಾಯಿತು. ಆರಂಭದ ಬೇಸಾಯಗಾರರ ಜನಸಮುದಾಯಗಳ ಕೊನೆಗಾಲಕ್ಕೆ ಈ ಶುಷ್ಕತೆಯೇ ಕಾರಣವಾಗಿರಬಹುದು. ಇದು ಭಾರತದಲ್ಲಷ್ಟೇ ಅಲ್ಲ, ಇಡೀ ಜಗತ್ತಿನಲ್ಲಿ ಉಂಟಾದ ಒಂದು ವಿದ್ಯಮಾನವಾಗಿತ್ತು. ಪ್ರ.ಶ.ಪೂ. ಮೊದಲನೆ ಸಹಸ್ರವರ್ಷದ ಮೊದಲ ಅರ್ಧದಲ್ಲಿ ಯೂರೋಪಿನಲ್ಲಿ ತೀವ್ರವಾದ ಶೀತ ವಾಯುಗುಣ (ಉಪ ಅಟ್ಲಾಂಟಿಕ್ ಹಂತ) ಶುರುವಾಯಿತು. ಈ ಕಾಲದಲ್ಲಿ ಗ್ರೀಸ್, ಅನಟೋಲಿಯ, ಈಜಿಪ್ಟ್, ಮೆಸಪೊಟೇಮಿಯದ ಆರಂಭದ ಸಾಮ್ರಾಜ್ಯಗಳು ನೆಲಕಚ್ಚಿದವು. ಈ ಸಮಯದಲ್ಲಿ ಬರಗಾಲಗಳು ಹೆಚ್ಚಾದವು. ಇದರಿಂದ ಜನರು ಕುರುಬ/ಗೊಲ್ಲರಾಗಿ ಅಲೆಮಾರಿಗಳಾಗಬೇಕಾಯಿತು. ಆದ್ದರಿಂದ ಪ್ರ.ಶ.ಪೂ.1200 ರಿಂದ 700ರ ವರೆಗಿನ ಕಾಲವನ್ನು ಪ್ರಾಚೀನ ಇತಿಹಾಸದ ಕಪ್ಪುಯುಗವೆಂದು ಪರಿಗಣಿಸಲಾಗುತ್ತದೆ. (ಡಿ.ಎಂ.ಕೆ.)

**ತಾಮ್ರೋಪಕರಣ ಗುಡ್ಡೆಗಳು:** ಉತ್ತರ ಭಾರತದ ಪೂರ್ವಭಾವಿ ಇತಿಹಾಸ ಕಾಲದ ಸಂಸ್ಕೃತಿಗಳಲ್ಲೊಂದು. ಆಕಸ್ಮಿಕವಾಗಿ ಸಿಕ್ಕಂತಹ ತಾಮ್ರೋಪಕರಣ ಗುಡ್ಡೆಗಳು (ಕಾಪರ್ ಹೋರ್ಡ್ಸ್) ಈ ಸಂಸ್ಕೃತಿಯ ಏಕೈಕ ಪ್ರಾಚ್ಯಾವಧಾರಗಳು. 1822ರಲ್ಲಿ ಉತ್ತರ ಪ್ರದೇಶದ ಕಾನ್ಪುರ ಜಿಲ್ಲೆಯ ಬಿತೂರಿನಲ್ಲಿ ಇಂತಹ ಗುಡ್ಡೆಯೊಂದು ಮೊದಲಿಗೆ ವರದಿಯಾಯಿತು. ಬಿಹಾರ, ಒರಿಸ್ಸ, ಬಂಗಾಲ, ಉತ್ತರಾಂಚಲ, ಹರಿಯಾಣ, ರಾಜಸ್ತಾನ ಮತ್ತು ಮಧ್ಯಪ್ರದೇಶದಲ್ಲಿ 100ಕ್ಕೂ ಹೆಚ್ಚು ಗುಡ್ಡೆಗಳು ಈವರೆಗೆ ಬೆಳಕಿಗೆ ಬಂದಿವೆ. ಇವು ಅಧಿಕವಾಗಿ ದೊರೆತಿರುವುದು ಗಂಗಾನದಿ ಬಯಲಿನಲ್ಲಿ. ಉತ್ತರ ಪ್ರದೇಶದ ರಾಜ್‌ಪುರ್ ಪರ್ಸು, ಬಿಸೌಲಿ, ಬಹದರಾಬಾದ್, ಫತೇಗಡ, ಕಿರಾತ್‌ಪುರ್, ಮಾದರ್‌ಪುರ್, ಶಹಬಾದ್, ಉತ್ತರಾಂಚಲದ ಪಿತೋರ್‌ಗಡ, ಒರಿಸ್ಸದ ಸಂಬಲ್‌ಪುರ್, ಭಂಗ್ರಪೀರ್, ಮಧ್ಯ ಪ್ರದೇಶದ ಗುಂಗೇರಿಯ, ರಾಜಸ್ತಾನದ ಖುರ್ಡಿ ಈ ಸಂಸ್ಕೃತಿಯ ಮುಖ್ಯ ನೆಲೆಗಳು. ರಾಯಚೂರಿನ ಕಲ್ಲೂರಿನಲ್ಲಿ ಈ ಲಕ್ಷಣವುಳ್ಳ ಚಿಟ್ಟೆ ಮೀಸೆಯಾಕಾರದ ಹಿಡಿಕೆಯುಳ್ಳ ಒಂದು ಕತ್ತಿ ಸಿಕ್ಕಿದೆ. ವಿವಿಧ ನಮೂನೆಯ ಚಪ್ಪಟೆ ಕೊಡಲಿಗಳು, ಮುಳ್ಳಿರುವ ಈಟಿಗಳು, ಚಿಟ್ಟೆ ಮೀಸೆಯಾಕಾರದ ಹಿಡಿಕೆಯ ಅಥವಾ ಹಿಡಿಕೆಯಲ್ಲಿ ಕೊಕ್ಕೆಯಿರುವ ಸುಂದರವಾದ ಕತ್ತಿಗಳು (ಆಂಟೆನೆ ಹಿಲ್ಟೆಡ್ ಸ್ವೋರ್ಡ್ಸ್),



ತಾಮ್ರದ ವಿವಿಧ ಉಪಕರಣಗಳು

ಚಪ್ಪಟೆ ಮಾನವಾಕೃತಿ, ಬಳೆ ಮತ್ತು ಉಂಗುರ ಈ ಗುಡ್ಡೆಗಳಲ್ಲಿ ಇರುವ ಮಾದರಿ ಉಪಕರಣಗಳಾಗಿವೆ. ಗುಡ್ಡೆಗಳಲ್ಲಿ ಉಪಕರಣಗಳ ಸಂಖ್ಯೆ 1ರಿಂದ 47ರವರೆಗಿದೆ. 424 ತಾಮ್ರೋಪಕರಣಗಳು ಹಾಗೂ ತೆಳು ಹಾಳೆಯಿಂದ ಮಾಡಿದ 102 ಬೆಳ್ಳಿಯ ಉಪಕರಣಗಳು ಇದ್ದ ಗುಂಗೇರಿಯದ ಗುಡ್ಡೆ ಒಂದು ಅಪರೂಪದ ದಾಖಲೆಯಾಗಿದೆ. ಉಪಕರಣಗಳನ್ನು ಶುದ್ಧ ತಾಮ್ರದಿಂದ ಎರಕ ಹೊಯ್ದು ಇಲ್ಲವೇ ದಪ್ಪ ಹಾಳೆಯನ್ನು ತಟ್ಟಿ ಬಡಿದು ತಯಾರಿಸ ಲಾಗಿದೆ. ಕೆಲವೇ ಕೆಲವು ಉಪಕರಣಗಳಲ್ಲಿ ಆರ್ಸನಿಕ್ ಅಥವಾ ತವರವನ್ನು ಸಣ್ಣ ಪ್ರಮಾಣ ದಲ್ಲಿ ಬೆರೆಸಲಾಗಿದೆ. ತಾಮ್ರದ ಅದಿರನ್ನು ಚೋಟನಾಗಪುರ್ ಪ್ರಾಂತದಲ್ಲಿರುವ ರಾಖ ಗಣಿಯಿಂದ ತಂದಿರುವ ಸಾಧ್ಯತೆಯಿದೆ. ಈ ಉಪಕರಣಗಳು ಏತಕ್ಕೆ ಬಳಕೆಯಾದವು ಮತ್ತು ಅವನ್ನು ಏಕೆ ಶೇಖರಿಸಿಡ ಲಾಯಿತು ಎಂಬುದು ಊಹಾತ್ಮಕವಾಗಿದೆ. 40 ಸೆಂಮೀ ಅಗಲವಿದ್ದು ಭಾರವಾಗಿರುವ

ಪರಶುವಿನಾಕಾರದ ಕೊಡಲಿಗಳನ್ನು (ಡಬಲ್ ಆಕ್ಸ್) ಆಯುಧಕ್ಕಿಂತ ಹೆಚ್ಚಾಗಿ ಧಾರ್ಮಿಕ ಕಾರ್ಯಗಳಲ್ಲಿ ಬಳಸಿರಬಹುದು. 50–60 ಸೆಂಮೀ ಉದ್ದವಿರುವ ಸಲಾಕೆಗಳನ್ನು (ಬಾರ್ ಸೆಲ್ಟ್ಸ್) ತಾಮ್ರದ ಗಣಿಗಾರಿಕೆಯಲ್ಲಿ ಉಪಯೋಗಿಸಿದ್ದಂತೆ ತೋರುತ್ತದೆ. ಸು. 5 ಕೆಜಿ ತೂಗುವ ಚಪ್ಪಟೆ ಮಾನವಾಕೃತಿಗಳು (ಆಂಥ್ರೊಪೊಮಾರ್ಫ್ಸ್) ಧಾರ್ಮಿಕ ಕ್ರಿಯೆಗಳಲ್ಲಿ ಅಥವಾ ಆಯುಧವಾಗಿ ಅಥವಾ ಶುಭಸೂಚಕ ವಸ್ತುವಾಗಿ ಬಳಕೆಯಾಗಿರಬಹುದು. ಇವನ್ನು ಇಂದ್ರನ ವಜ್ರಾಯುಧ ದೊಂದಿಗೂ ಹೋಲಿಸಲಾಗಿದೆ. ವಿದ್ವಾಂಸರಾದ ವಿಜಯಕುಮಾರ್ ಇವನ್ನು ವೇದ ಸಮಾಜದ ಮಾರುತ ಗಣಸಮುದಾಯಕ್ಕೆ ಸೇರಿದ ಪೂಜೋಪಕರಣಗಳೆಂದು ವ್ಯಾಖ್ಯಾನಿಸಿದ್ದಾರೆ. ಯಜುರ್ವೇದದ ಕೆಲವು ಮಂತ್ರ ವಿವರಣೆಗಳು ಈ ಮಾನವಾಕೃತಿಗಳನ್ನು ಹೋಲುವುದೇ ಇದಕ್ಕೆ ಆಧಾರ. ಮಾರುತ ಸಮುದಾಯ ಹರಪ್ಪ ಸಂಸ್ಕೃತಿಯ ಪೀಳಿಗೆಯಾಗಿತ್ತು ಅಥವಾ ಈ ಸಂಸ್ಕೃತಿಯೊಂದಿಗೆ ಸಂಬಂಧ ಹೊಂದಿತ್ತು ಎಂಬುದು ಇವರ ಅಭಿಪ್ರಾಯ.

ಉತ್ತರ ಪ್ರದೇಶದ ಸೈಪೈ ಮತ್ತು ಸನೌಲಿಯನ್ನು ಹೊರತುಪಡಿಸಿ ಇನ್ನೆಲ್ಲಿಯೂ ಈ ಸಂಸ್ಕೃತಿಯ ಉಪಕರಣಗಳು ವಸತಿ ನೆಲೆಯ ಉತ್ಖನನದಲ್ಲಿ (ಸ್ತರಕ್ರಮದಲ್ಲಿ) ಈವರೆಗೆ ಕಂಡುಬಂದಿಲ್ಲ. ಹೀಗಾಗಿ ಇವುಗಳ ಕಾಲಮಾನ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಒಂದು ಒಗಟಾಗಿದೆ. ಇರಾನಿನ ಕೆಲವು ಉಪಕರಣಗಳಿಗೂ ಭಾರತದ ಉಪಕರಣಗಳಿಗೂ ಇರುವ ಹೋಲಿಕೆಯನ್ನು ಗಮನಿಸಿದ ಹೇನ್–ಗೆಲ್ಡೆರ್ನ್ ತಾಮ್ರೋಪಕರಣ ಗುಡ್ಡೆಗಳು ಆರ್ಯ ಸಂಸ್ಕೃತಿಯದೆಂದು ಸೂಚಿಸಿದ್ದಾನೆ. ಈ ಗುಡ್ಡೆಗಳು ಹರಪ್ಪ ಸಂಸ್ಕೃತಿಯ ನಿರಾಶ್ರಿತ ಸಮುದಾಯಕ್ಕೆ ಸೇರಿದವೆಂಬುದು ಪಿಗ್ಗಾಟ್‌ನ ಅಭಿಪ್ರಾಯ. ಇವು ಕಾವಿಬಣ್ಣದ ಪಾತ್ರೆ ಸಂಸ್ಕೃತಿಯ ಒಂದು ಅಂಗವಾಗಿರಬಹುದೆಂದು ಮೊದಲು ಸೂಚಿಸಿದವರು ಪುರಾತತ್ತ್ವಜ್ಞ ಬಿ.ಬಿ. ಲಾಲ್ ಅವರು ರಾಜ್‌ಪುರ್‌ಪರ್ಸು ಮತ್ತು ಬಿಸೌಲಿಯಲ್ಲಿ ಇವರು ನಡೆಸಿದ ಉತ್ಖನನದಲ್ಲಿ ಕಾವಿಬಣ್ಣದ ಪಾತ್ರೆ ಸಂಸ್ಕೃತಿಯ ಕುರುಹುಗಳು ಕಂಡುಬಂದವು; ಆದರೆ ಉತ್ಖನನದಲ್ಲಿ ತಾಮ್ರೋಪಕರಣಗಳು ದೊರೆಯಲಿಲ್ಲ. ಸೈಪೈ ಉತ್ಖನನದಲ್ಲಿ ಕಾವಿಬಣ್ಣದ ಪಾತ್ರೆ ಸಂಸ್ಕೃತಿಯ ವಸತಿ ಪದರದಲ್ಲಿ ಸಿಕ್ಕ ತಾಮ್ರೋಪಕರಣ ಈ ಅಭಿಪ್ರಾಯಕ್ಕೆ ಪುಷ್ಟಿ ನೀಡಿತು. ಇತ್ತೀಚೆಗೆ ಸನೌಲಿಯಲ್ಲಿ ಚಿಟ್ಟೆ ಮೀಸೆಯಾಕಾರದ ಹಿಡಿಕೆಯ ಕತ್ತಿ ಅಂತ್ಯ ಹರಪ್ಪ ಸಾಂಸ್ಕೃತಿಕ ಪದರದಲ್ಲಿ ಕಂಡುಬಂದಿದೆ. ಉತ್ಖನನದ ಆಧಾರದ ಮೇಲೆ ತಾಮ್ರೋಪಕರಣ ಗುಡ್ಡೆಗಳ ಕಾಲಮಾನ ಪ್ರ.ಶ.ಪೂ.1700–1400 ಎಂದು ಅಂದಾಜು ಮಾಡಲಾಗಿದೆ. (ವಿ.ಎಸ್.)

**ತಾಮ್‌ಲುಕ್:** ಪಶ್ಚಿಮ ಬಂಗಾಲ ರಾಜ್ಯದ ಮಿಡ್ನಾಪುರ ಜಿಲ್ಲೆಯಲ್ಲಿ ರೂಪನಾರಾಯಣ ನದಿಯ ಬಲದಂಡೆ ಮೇಲಿರುವ ಪುರಾತತ್ತ್ವ ನೆಲೆ. ಪೂರ್ವ ಕರಾವಳಿಯ ಪ್ರಸಿದ್ಧ ಪ್ರಾಚೀನ ಬಂದರು. ಇದನ್ನು ಪ್ರಾಚೀನ ಕಾಲದ ತಾಮ್ರಲಿಪ್ತ ಎಂದು ಗುರುತಿಸಲಾಗಿದೆ. ಪಾಳಿ ಮತ್ತು ಸಂಸ್ಕೃತ ಗ್ರಂಥಗಳಲ್ಲಿ ಇದನ್ನು ತಾಮ್ರಲಿಪ್ತ, ದಾಮಲಿಪ್ತ, ತಾಮ್ರಲಿಪಿ, ತಾಮ್ರಲಿಪ್ತಿಕಾ ಅಥವಾ ವೆಲಾಕುಲ ಎಂದು ಉಲ್ಲೇಖಿಸಲಾಗಿದೆ. ಪ್ಲಿನಿ ಮತ್ತು ಟಾಲೆಮಿ ಕೃತಿಗಳಲ್ಲಿ ತಲುಕ್ಟಯಿ, ತಮಲಿಟೆಸ್ ಎಂದು ಉದ್ಧರಿಸಲಾಗಿದೆ. ಇದೊಂದು ಸಮೃದ್ಧ ವ್ಯಾಪಾರ ಕೇಂದ್ರವೂ ಸಾಂಸ್ಕೃತಿಕ ಕೇಂದ್ರವೂ ಆಗಿತ್ತು. ಫಾಹಿಯಾನ್, ಯುವಾನ್‌ಚಾಂಗ್, ಇತ್ಸಿಂಗ್ ಮೊದಲಾದವರು ಇದರ ಬಗ್ಗೆ ಉಜ್ವಲ ವಿವರಣೆ ನೀಡಿದ್ದಾರೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎಂ.ಎನ್.ದೇಶಪಾಂಡೆ ನೇತೃತ್ವದಲ್ಲಿ ಇಲ್ಲಿ ನಡೆದ ಉತ್ಖನನದಲ್ಲಿ (1954–55) ನವಶಿಲಾಯುಗ ಹಂತದಿಂದ ಆಧುನಿಕ ಹಂತದವರೆಗೆ ನಿರಂತರ ಜನವಸತಿಯ ಕುರುಹುಗಳು ದೊರಕಿವೆ.

ನವಶಿಲಾಯುಗ ಹಂತದಲ್ಲಿ ಬೂದುವರ್ಣದ ಮಣ್ಪಾತ್ರೆಗಳು, ಉಜ್ಜಿ ನಯ ಮಾಡಿದ ಕಲ್ಲಿನ ಕೊಡಲಿ ದೊರೆತಿವೆ. ಅನಂತರ ಸ್ವಲ್ಪ ಕಾಲ ಇಲ್ಲಿ ಜನವಸತಿ ಇರಲಿಲ್ಲ. ಮೌರ್ಯ ಮತ್ತು ಶುಂಗರ ಹಂತದ ಪೂರ್ವಾರ್ಧದಲ್ಲಿ ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳೂ ಉತ್ತರಾರ್ಧದಲ್ಲಿ ಕೆಂಪುವರ್ಣದ ಮಣ್ಪಾತ್ರೆ, ವಿಶಿಷ್ಟ ಸುಡಾವೆಮಣ್ಣಿನ ಗೊಂಬೆ, ಅಚ್ಚು ಹಾಕಿದ ತಾಮ್ರದ ನಾಣ್ಯಗಳೂ ಮುಖ್ಯವಾದ ಅವಶೇಷಗಳು. ಇದರ ಮುಂದಿನ ಹಂತದಲ್ಲಿ ಕೆಂಪುವರ್ಣದ ಹೊಳಪಿನ ಪಾತ್ರೆಗಳು, ರೌಲೆಟ್ ಪಾತ್ರೆಗಳು ಕಾಣಿಸಿಕೊಳ್ಳುತ್ತವೆ. ಕೆಂಬಣ್ಣದ ಸ್ಪ್ರಿಂಕ್ಲರ್ಸ್ ರೋಮ್ ದೇಶದ ವರ್ತಕರೊಡನೆ ಈ ನಗರದ ಸಂಪರ್ಕವಿದ್ದುದನ್ನು ಸೂಚಿಸುತ್ತವೆ. ಇಂಗುಗುಣಿಗಳು ಮತ್ತು ಮೆಟ್ಟಿಲುಳ್ಳ ಇಟ್ಟಿಗೆ ಕೊಳ ಗಮನಾರ್ಹ. ಬಹುಮಟ್ಟಿಗೆ ಇವು ಕುಷಾಣ ಮತ್ತು ಗುಪ್ತರ ಕಾಲದವು. ಗುಪ್ತರ ಕಾಲದ ಒಂದು ನರ್ತನ ಗೊಂಬೆ ಆಕರ್ಷಕವೂ ಮನೋಹರವೂ ಆಗಿದೆ. ಇದರ ವಸ್ತ್ರವನ್ನು ಪಾರದರ್ಶಕವಾಗಿರುವಂತೆ ತೋರಿಸಲಾಗಿದೆ. ಮುಂದಿನ ಹಂತಗಳು ಪಾಲ ಮತ್ತು ಸೇನ ಕಾಲದವು. ಅನಂತರ ಕಾಲದಲ್ಲಿ ತೋಡಿದ ಗುಂಡಿಗಳಿಂದ ಈ ಹಂತದ ಅವಶೇಷಗಳು ಅಸ್ತವ್ಯಸ್ತವಾಗಿವೆ. ಕೆಲವು ಭಗ್ನ ಶಿಲಾಮೂರ್ತಿಗಳು ಪಾಲ ಮತ್ತು ಸೇನ ಶೈಲಿಯಲ್ಲಿವೆ. ಅತ್ಯಂತ ಮೇಲಿನ ಹಂತದಲ್ಲಿ 18 ಮತ್ತು 19ನೆಯ ಶತಮಾನದ ಅವಶೇಷಗಳಿವೆ. ಪಶ್ಚಿಮ ಬಂಗಾಲ ಸರ್ಕಾರದ ಪುರಾತತ್ತ್ವ ನಿರ್ದೇಶನಾಲಯ ನಡೆಸಿದ ಅನ್ವೇಷಣೆಯಲ್ಲಿ ಬಿಳಿಬಣ್ಣದ ರೇಖಾಚಿತ್ರವುಳ್ಳ ಕಪ್ಪು ಮತ್ತು ಕೆಂಪು ದ್ವಿವರ್ಣ ಪಾತ್ರೆಗಳು, ಸೂಕ್ಷ್ಮಶಿಲೋಪಕರಣಗಳು ಮತ್ತು ಇತರ ಅವಶೇಷಗಳು ದೊರಕಿವೆ. ಜೊತೆಗೆ ಭಾರತೇತರ ಕೊರೆದ ಚಿತ್ರಗಳಿರುವ ಕಾರ್ನೇಲಿಯನ್ ಕಲ್ಲು, ಒಂದು ಬದಿಯಲ್ಲಿ ಮುಳ್ಳುಳ್ಳ ಎಲುಬಿನ ಮೀನುಗಾಳ ಸಿಕ್ಕಿದ್ದು ಇವು ಪ್ರಶ.ಪೂ.ಸು. 2ನೆಯ ಸಹಸ್ರಮಾನದ ಆದಿಭಾಗದ್ದೆಂದು ತರ್ಕಿಸಲಾಗಿದೆ.

ಇಲ್ಲಿ 1975ರಲ್ಲಿ ಮತ್ತೆ ಉತ್ಖನನ ನಡೆಸಲಾಯಿತು. ಇದರಲ್ಲಿ ಅತ್ಯಂತ ಕೆಳ ಹಂತದಲ್ಲಿ ತಾಮ್ರ–ಶಿಲಾಯುಗದ ಬಿಳಿಬಣ್ಣದ ರೇಖಾಚಿತ್ರಿತ ಕಪ್ಪು–ಕೆಂಪು ದ್ವಿವರ್ಣದ ಪಾತ್ರೆಗಳು, ನವಶಿಲಾ ಕೊಡಲಿಗಳು ಮತ್ತು ವಿವಿಧ ಪ್ರಕಾರದ ಎಲುಬಿನ ಉಪಕರಣಗಳು ಇದ್ದವು. ಮುಂದಿನ ಹಂತದಲ್ಲಿ ಆದಿ ಕಬ್ಬಿಣಯುಗದ ಸಂಸ್ಕೃತಿಯ ಕೆಂಪು–ಕಪ್ಪು ದ್ವಿವರ್ಣದ ಕಳಪೆ ಮಟ್ಟದ ಪಾತ್ರೆಗಳು ಆದಿ ಭಾಗದಲ್ಲಿಯೂ ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳು, ಕಪ್ಪು ಲೇಪನದ ಪಾತ್ರೆಗಳು ಹಾಗೂ ಸಣ್ಣ ಇಟ್ಟಿಗೆ ತುಂಡಿನಿಂದ ಮಾಡಿದ ವಾಸದ ಮನೆಯ ನೆಲ, ಕಂಬಗಳ ಗುಳಿಗಳು ಮೊದಲಾದವು ಅಂತ್ಯ ಭಾಗದಲ್ಲಿಯೂ ಕಂಡುಬಂದವು. ಇದರ ಮುಂದಿನ ಹಂತದಲ್ಲಿ ನದಿಯ ಪ್ರವಾಹದಿಂದ ಬಂದ ಮಣ್ಣೇ ಹೆಚ್ಚಾಗಿದ್ದು ಅಲ್ಲಲ್ಲಿ ಶುಂಗ–ಕುಷಾಣರ ಕಾಲದ ಮಣ್ಪಾತ್ರೆಯ ಅವಶೇಷಗಳಿವೆ. ಅತ್ಯಂತ ಮೇಲಿನ ಸಂಗ್ರಹದಲ್ಲಿ ಆಧುನಿಕ ಕಾಲದ ಉಪ್ಪು ಕೈಗಾರಿಕೆಯ ಬಯಲು ಒಲೆಗಳಿದ್ದವು. (ಎ.ಎಸ್.;ಎನ್.ಎಲ್.)

**ತಾಲಾ:** ಛತ್ತೀಸಗಡ ರಾಜ್ಯದ ಬಿಲಾಸಪುರ ಜಿಲ್ಲೆಯ ಅಮೇರಿಕಾಂಪ ಗ್ರಾಮದಲ್ಲಿರುವ ಐತಿಹಾಸಿಕ ನೆಲೆ. ಶಿವನಾಥ ನದಿಯ ಉಪನದಿ ಮಣಿಯಾರಿಯ ಎಡದಂಡೆಯ ಮೇಲಿದೆ. ಈ ನೆಲೆ ದೇವರಾಣಿ–ಜೇಠಾಣಿ (ಓರಗಿತ್ತಿಯರು) ಹೆಸರಿನ ಎರಡು ದೇವಾಲಯಗಳಿಗೆ ಪ್ರಸಿದ್ಧಿಯಾಗಿದೆ. ಈಗ ಈ ದೇವಾಲಯಗಳು ಭಗ್ನವಾಗಿವೆ. 1987–88ರಲ್ಲಿ ಮಧ್ಯಪ್ರದೇಶದ ಪುರಾತತ್ತ್ವ ಹಾಗೂ ವಸ್ತು ಸಂಗ್ರಹಾಲಯ ಇಲಾಖೆ ದೇವರಾಣಿ ಮಂದಿರ ಪರಿಸರದ ನಿರ್ಮಲೀಕರಣ ಕೈಗೊಂಡಾಗ ದೇವಾಲಯದ ಭಗ್ನಾವಶೇಷಗಳಲ್ಲಿ ಕಲ್ಲಿನ ಒಂದು ಸ್ಥೂಲಕಾಯದ ವಿಲಕ್ಷಣ ಪ್ರತಿಮೆ ಬೆಳಕಿಗೆ ಬಂದಿತು. ಭಾರತೀಯ ಶಿಲ್ಪಶಾಸ್ತ್ರದ ಲಕ್ಷಣಗಳಿಗೆ

ಶಿವ (ರುದ್ರ–ಶಿವ)

ವ್ಯತಿರಿಕ್ತವಾದ ಸ್ವರೂಪವನ್ನು ಹೊಂದಿದ ಈ ವಿಗ್ರಹವನ್ನು ತಾತ್ಕಾಲಿಕವಾಗಿ ರುದ್ರ–ಶಿವ ಶಿಲ್ಪವೆಂದು ಗುರುತಿಸಲಾಗಿದೆ. ಸು.2.30 ಮೀ ಎತ್ತರದ ಸಮಭಂಗದಲ್ಲಿ ನಿಂತಿರುವ ಈ ಮೂರ್ತಿ ಉಗ್ರರೂಪದಲ್ಲಿದೆ. ಇದರ ಅಂಗಾಂಗಗಳ ಮೇಲೆ ಮಾನವ ಮುಖಗಳು, ಜಲಚರ, ಉಭಯ ಜೀವಿ ಪ್ರಾಣಿಗಳು, ಪಕ್ಷಿ ಇವುಗಳನ್ನು ಕೆತ್ತಿ ಬಿಡಿಸಲಾಗಿದೆ. ಮೂರ್ತಿಯ ಬಲಗೈ, ಎರಡೂ ಪಾದಗಳು ಹಾಗೂ ಪೀಠ ಆಂಶಿಕವಾಗಿ ಭಗ್ನಗೊಂಡಿವೆ. ಎಡಗೈ ಕಟ್ಯವಲಂಬಿತ ಮುದ್ರೆಯಲ್ಲಿದ್ದಂತೆ ತೋರುತ್ತದೆ. ಒಂದನ್ನೊಂದು ಸುತ್ತಿಕೊಂಡಿರುವ ಎರಡು ಸರ್ಪಗಳು ವಿಗ್ರಹದ ತಲೆಯ ಮೇಲೆ ಮುಂಡಾಸಿನೋಪಾದಿಯಂತಿದ್ದು, ತಲೆಯ ಎರಡೂ ಪಾರ್ಶ್ವ ಭಾಗಗಳಲ್ಲಿ ಹಾವಿನ ಬಿಚ್ಚಿದ ಹೆಡೆಗಳನ್ನು ಕಾಣಬಹುದು. ಹಾವು ಸೊಂಟಪಟ್ಟಿಯಂತೆ ಅಲಂಕರಿತವಾಗಿದ್ದು ಕೈಬೆರಳಿನ ಉಗುರುಗಳೂ ಸಹ ಹಾವಿನ ತಲೆಯನ್ನು ಹೋಲುತ್ತವೆ. ಮೂರ್ತಿಯ ಹಣೆಯ ಮಧ್ಯಭಾಗದಲ್ಲಿ ಹುಬ್ಬು ಹಾಗೂ ಮೂಗಿನ ನಡುವೆ ಕೆಳಮುಖವಾಗಿರುವ ಹಲ್ಲಿ ಇದೆ. ಮೀಸೆಯೋಪಾದಿಯಲ್ಲಿ ಜೋಡಿಮೀನುಗಳನ್ನು ಮೇಲ್ತುಟಿಯ ಮೇಲೆ ಹಾಗೂ ಕೆಳದುಟಿ ಮತ್ತು ಗದ್ದದ ಮೇಲೆ ಏಡಿಯನ್ನು ಕೆತ್ತಲಾಗಿದೆ. ಎರಡೂ ಕಿವಿಗಳಲ್ಲಿ ಗರಿಗೆದರಿ ನಿಂತ ಮಯೂರ ಕುಂಡಲಗಳಿವೆ. ಎರಡೂ ಭುಜ ಭಾಗಗಳಲ್ಲಿ ಬಾಯ್ದೆರೆದ ಮಕರಗಳಿದ್ದು, ಅವುಗಳ ಬಾಯಿಯಿಂದಲೇ ಕೈಗಳೆರಡೂ ಹೊರಬಂದಂತಿವೆ. ಶಿಲ್ಪದ ಮೂಲ ಮುಖವಲ್ಲದೆ, ಎದೆಯ ಮೇಲೆರಡು, ಹೊಟ್ಟೆಯ ಮೇಲೆ ಒಂದು, ಎರಡೂ ತೊಡೆಗಳ ಮುಂಭಾಗ ಹಾಗೂ ಪಾರ್ಶ್ವಭಾಗಗಳಲ್ಲಿ ಎರಡೆರಡರಂತೆ, ಒಟ್ಟು ಏಳು ಮಾನವ ಮುಖಗಳನ್ನು ಕೆತ್ತಲಾಗಿದೆ. ಎದೆ ಹಾಗೂ ಹೊಟ್ಟೆಯ ಮೇಲಿನ ಮುಖಗಳ ಕಿವಿಗಳಲ್ಲಿ ಗಂಟೆಯಾಕಾರದ ಕುಂಡಲಗಳಿವೆ. ತೊಡೆಯ ಮುಂಭಾಗದ ಮುಖಗಳು ಹಸನ್ಮುಖಿಗಳಾಗಿದ್ದು, ಅವುಗಳ ಕೈಗಳು ಅಂಜಲಿ ಮುದ್ರೆಯಲ್ಲಿವೆ. ಊರ್ಧ್ವಜನನೇಂದ್ರಿಯ ಆಮೆಯ ಹೊರಚಾಚಿದ ತಲೆಯನ್ನು ಹೋಲುತ್ತದೆ. ವೃಷಣ ಜೋಡಿಗಳ ಸ್ಥಾನದಲ್ಲಿ ಎರಡು ಗಂಟೆಗಳನ್ನು ಕೆತ್ತಲಾಗಿದೆ. ವಿಗ್ರಹದ ಮೊಳಕಾಲ (ಮಂಡಿಗಳು) ಮೇಲೆ ಎರಡು ಸಿಂಹ ಅಥವಾ ಬೆಕ್ಕುಗಳ ತಲೆಯನ್ನು ಕೆತ್ತಲಾಗಿದೆ. ವಿಗ್ರಹದ ಎಡಗಾಲಿನ ಪಕ್ಕದಲ್ಲಿ ಹೆಡೆಬಿಚ್ಚಿ ನಿಂತ ಹಾವಿದೆ. ಬಹುಶಃ ಇಂತಹದೇ ಇನ್ನೊಂದು ಹಾವಿನ ಹೆಡೆ ಮೂರ್ತಿಯ ಬಲಭಾಗದಲ್ಲಿಯೂ ಇದ್ದಿರಬಹುದು. ಆದರೆ ಈಗ ಆ ಭಾಗ ಒಡೆದುಹೋಗಿದೆ. ವಿಶೇಷವೆಂದರೆ ಈ ವಿಗ್ರಹದ ಮುಖ, ಎದೆ

ಹಾಗೂ ಹೊಟ್ಟೆಗಳ ಮೇಲಿರುವ ಮುಖಗಳಲ್ಲಿ ಹುಬ್ಬುಗಳನ್ನೇರಿಸಿ, ವಿಶಾಲವಾಗಿ ತೆರೆದ ಕಣ್ಣುಗಳಿಂದ ಹೊರಬಂದಂತಿರುವ ದೊಡ್ಡದೊಡ್ಡ ಚೆಂಡಿನಾಕಾರದ ಕಣ್ಣುಗುಡ್ಡೆಗಳು ನಿಜವಾಗಿಯೂ ಭಯ ಹುಟ್ಟಿಸುವಂತಿವೆ. ವಾಸ್ತುಶೈಲಿ ಯನ್ನಾಧರಿಸಿ, ಈ ವಿಗ್ರಹ 6ನೆಯ ಶತಮಾನದ್ದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಇದುವರೆಗಿನ ಭಾರತೀಯ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ತಾಲಾ ಪ್ರತಿಮೆಯನ್ನು ಹೋಲುವ ವರ್ಣನೆಯ ಉಲ್ಲೇಖವಿಲ್ಲ. ಆದ್ದರಿಂದಾಗಿ ಈ ವಿಗ್ರಹ ಭಾರತೀಯ ಶಿಲ್ಪಶಾಸ್ತ್ರದ ವಿದ್ವಾಂಸರಿಗೆ ಒಗಟಾಗಿದೆ. ಇದನ್ನು ಪಶುಪತಿ–ಶಿವ, ಅಷ್ಟಮೂರ್ತಿ–ಶಿವ, ಯಕ್ಷ–ಶಿವ, ವಿಷ್ಣು–ವಿಶ್ವರೂಪ, ಶಿವ–ವಿಶ್ವರೂಪ, ಮಹಾಯಕ್ಷ, ರೂಪ–ಯಕ್ಷ, ಕ್ಷೇತ್ರಪಾಲ, ಸಂಕೀರ್ಣ ಶೈವಗಣ, ಸ್ಕಂದಅಪಸ್ಮಾರ, ತಾಂತ್ರಿಕರೂಪಿ ವರುಣ, ಮಹಾಕಾಲ, ಸೋಮ–ಶೈವಸಿದ್ಧಾಂತ ಆಧಾರಿತ ಮೂರ್ತಿ ಎಂದು ವಿದ್ವಾಂಸರು ಗುರುತಿಸಿದ್ದಾರೆ. (ಎಲ್.ಎಸ್.ಆರ್.)

**ತಾವೋ ತತ್ತ್ವ:** ಚೀನದ ಮೂರು ಮುಖ್ಯ ತತ್ತ್ವಗಳಲ್ಲಿ ಒಂದು (ಕನ್‌ಫ್ಯೂಷಿಯಸ್ ತತ್ತ್ವ, ಬೌದ್ಧತತ್ತ್ವ ಮತ್ತು ತಾವೋ ತತ್ತ್ವ). ತಾವೋ ಮತ್ತು ಕನ್‌ಫ್ಯೂಷಿಯಸ್ ತತ್ತ್ವಗಳು ಚೀನದಲ್ಲೇ ಹುಟ್ಟಿ ಬೆಳೆದವು. ಬೌದ್ಧತತ್ತ್ವ ಭಾರತದಿಂದ ಬೌದ್ಧಭಿಕ್ಷುಗಳ ಮೂಲಕ 65ರಲ್ಲಿ ಚೀನವನ್ನು ಪ್ರವೇಶಿಸಿ ಅಲ್ಲಿ 3ನೆಯ ಶತಮಾನದ ವೇಳೆಗೆ ಭದ್ರವಾಗಿ ಬೇರೂರಿ ಅಲ್ಲಿಯ ತತ್ತ್ವಗಳ ಮೇಲೆ ತನ್ನ ಪ್ರಭಾವ ಬೀರಿತು.

ತಾವೋ ತತ್ತ್ವದ ಮೂಲ ಆಚಾರ್ಯ ಲೌಡ್ಸು. ಈತ ಕನ್‌ಫ್ಯೂಷಿಯಸ್‌ನಿಗಿಂತ ಸುಮಾರು ಅರ್ಧ ಶತಮಾನದ ಹಿಂದೆ ಪ್ರ.ಶ.ಪೂ.604ರಲ್ಲಿ ಹುಟ್ಟಿದನೆಂದೂ ಚೌ ಚಕ್ರವರ್ತಿಯ ಆಸ್ಥಾನದ ನೌಕರನಾಗಿದ್ದನೆಂದೂ ಕೊನೆಯಲ್ಲಿ ಆ ನೌಕರಿಯನ್ನು ಬಿಟ್ಟು ವಿರಕ್ತ ಜೀವನವನ್ನು ನಡೆಸಿದನೆಂದೂ ತಿಳಿದುಬಂದಿದೆ. ಇತ್ತೀಚಿನ ಪಾಶ್ಚಾತ್ಯ ಸಂಶೋಧಕರು ಲೌಡ್ಸು ಎಂಬ ಹಲವು ಪೌರಾಣಿಕ ವ್ಯಕ್ತಿಗಳಿದ್ದಿರಬಹುದೆಂದೂ ಅವರ ಕೆಲವು ವಚನಗಳು ಲೌಡ್ಸುನವೆಂದು ಭಾವಿಸಲಾದ ತಾವೋ ತೇಕಿಂಗ್ ಎಂಬ ಗ್ರಂಥವನ್ನು ಯಾವನೋ ಪ್ರ.ಶ.2ನೆಯ ಶತಮಾನದಲ್ಲಿ ಬರೆದನೆಂದೂ ಅದರಲ್ಲಿ ಹಿಂದಿನ ಲೌಡ್ಸುಗಳ ಕೆಲವು ವಚನಗಳನ್ನು ಸೇರಿಸಿರಬಹುದೆಂದೂ ವಾದಿಸಿದ್ದಾರೆ. ಆದರೆ ಇದು ನಂಬಲರ್ಹವಲ್ಲ. ಏಕೆಂದರೆ ಪ್ರ.ಶ.ಪೂ.400 ರಲ್ಲಿದ್ದ ಚ್ವಾಂಗ್–ಟ್ಸೆ ಎಂಬಾತ ತಾವೋ–ತೇಕಿಂಗ್ ಗ್ರಂಥದ ಎಂಬತ್ತೊಂದು ಅಧ್ಯಾಯಗಳಲ್ಲಿ ಕೆಲವು ಅಧ್ಯಾಯಗಳನ್ನು ಉಲ್ಲೇಖಿಸಿರುತ್ತಾನೆ. ಆ ಗ್ರಂಥದಲ್ಲಿ ಮುಖ್ಯವಾದುವು: ಪರತತ್ತ್ವ ಭಾವನೆಗಳು, ನೀತಿತತ್ತ್ವ ಭಾವನೆಗಳು, ರಾಜಕೀಯ ತತ್ತ್ವ ಭಾವನೆಗಳು.

ಪರತತ್ತ್ವದ ಮುಖ್ಯ ಭಾವನೆ ತಾವೋ. ತಾವೋ ಎಂದರೆ ಜೀವನ ಪಥ ಅಥವಾ ಮಾರ್ಗ ಎಂದು ಒಂದು ಅರ್ಥ. ಈ ಅರ್ಥ ನೀತಿಗೆ ಸಂಬಂಧಪಟ್ಟಿದ್ದು. ಆದರೆ ಆ ಗ್ರಂಥದ 1,4,14,21,25,34,37,40,42,51 ಮತ್ತು 61ನೆಯ ಅಧ್ಯಾಯಗಳಲ್ಲಿ ತಾವೋ ಪದ ಇರುವುದಕ್ಕೆಲ್ಲ ಆಧಾರವಾದ ಪರತತ್ತ್ವ ಎಂಬ ಅರ್ಥದಲ್ಲಿ ಉಪಯೋಗವಾಗಿದೆ. ಆ ಅಧ್ಯಾಯಗಳಲ್ಲಿನ ತಾವೋದ ವರ್ಣನೆ ಹೀಗಿದೆ: ಸ್ವರ್ಗ ಮರ್ತ್ಯಗಳ ಆಶ್ರಯವಾದದ್ದು ಅವ್ಯಕ್ತವಾದದ್ದು ಮತ್ತು ಮಾತಿನ ಮೂಲಕ ವಿವರಿಸಲಾಗದ್ದು ತಾವೋ. ಅದು ದೇವರಿಗಿಂತ ಆಚಿನದು. ಅದೇನೆಂಬುದನ್ನು ಅದರಿಂದ ಹುಟ್ಟಿಬಂದ ವಿಶ್ವಕ್ಕೆ ಸಾಪೇಕ್ಷವಾಗಿ ಮಾತ್ರ ಹೆಸರಿಸಬಹುದು. ಸೃಷ್ಟಿಯಾದ ಎಲ್ಲಕ್ಕೂ ತಾನೇ ಸೃಷ್ಟಿಯಾಗದ ಯಾವುದು ಕಾರಣವೋ ಅದೇ ತಾವೋ. ಎಲ್ಲಕ್ಕೂ ಮೂಲವಾದ ಅದು ಎಲ್ಲಕ್ಕೂ ಮೇಲಿನದು. ಅದು ಹೊರದಲ್ಲಿರುವುದನ್ನು ಎಟುಕಿಸಿಕೊಳ್ಳಬಲ್ಲುದಾದರೂ ಅದು ಅಚಲ; ತಾನೇ ಚಲಿಸದೆ ಚಲಿಸುವುದಕ್ಕೆಲ್ಲಕ್ಕೂ ಕಾರಣ; ಅತೀತವಾದರೂ ಎಲ್ಲದರ ಅಂತರ್ಯಾಮಿ; ಎಲ್ಲಕ್ಕೂ ಮೀರಿದ್ದಾದರೂ ಒಳಗೂ ಇದೆ. ಅದು ದೈವದಂತೆ ವ್ಯಕ್ತಿತ್ವವುಳ್ಳದ್ದಲ್ಲ. ಈ ಭಾವನೆ ಉಪನಿಷತ್ತುಗಳ ನಿರ್ಗುಣ ಬ್ರಹ್ಮವನ್ನೂ ಬೌದ್ಧರ ನಿರ್ವಾಣವನ್ನೂ ಹೋಲುತ್ತದೆ ಯಾದರೂ ಅದು ಉಪನಿಷತ್ತುಗಳಿಂದಾಗಲೀ ಬೌದ್ಧ ಗ್ರಂಥಗಳಿಂದಾಗಲೀ ಬಂದುದೆಂದು ಹೇಳಲಾಗುವುದಿಲ್ಲ.

ತಾವೋ ತತ್ತ್ವದಿಂದ ಗಮ್ಯವಾದದ್ದು ನೀತಿತತ್ತ್ವ. ತಾವೋ ಅಚಲವಾದದ್ದು ಮತ್ತು ನಿರ್ಗುಣಿ ಎಂದು ತಿಳಿದವನೂ ಅದನ್ನು ಮಾತಿನಲ್ಲಿ ವಿವರಿಸದೆ ತೋಲನದಿಂದಲೇ ಸೂಚಿಸಬೇಕು. ಹಾಗೆಯೇ ಅಚಲವಾದ ತಾವೋವನ್ನು ತಿಳಿದವ ಲೌಕಿಕ ಕರ್ಮದ ಕಟ್ಟಿಗೆ ಸಿಕ್ಕದೆ ನಿರ್ಲಿಪ್ತನಾಗಿರಬೇಕು. ಅದನ್ನು ತಿಳಿದವ ತನ್ನ ಮನೆಯ ಹೊಸಲನ್ನು ದಾಟದೆಯೆ ಎಲ್ಲವನ್ನೂ ಅರಿಯಬಲ್ಲ. ಅತೀತವಾದ ಅದು ಚಲಿಸದೆಯೇ ಎಲ್ಲವನ್ನೂ ಮುಟ್ಟಬಲ್ಲದ್ದು. ಅದನ್ನು ತಿಳಿದಾಗ ಅವನು ಎಲ್ಲವನ್ನೂ ತಿಳಿದಂತಾಗುತ್ತದೆ. ಅವನ ನೀತಿತತ್ತ್ವವನ್ನು ತಿಳಿಸುವ ಪದ ತೇಹ್, ತೇಹ್ ತಾವೋದಿಂದ ಗಮ್ಯವಾದದ್ದು. ಸಕಲ ನೀತಿನಿಯಮಗಳ ಸತ್ತ್ವ ತೇಹ್ ವರ್ಣಿಸುವ ಮೌನದಿಂದ ತಾವೋದ ತಿಳಿವನ್ನು ಅಭಿವ್ಯಕ್ತಗೊಳಿಸಿದಂತೆಯೇ ಶ್ರಮದಿಂದ ತನ್ನ ನೀತಿಯನ್ನು ಅಭಿವ್ಯಕ್ತಗೊಳಿಸಬೇಕು. ಸಂಯಮ ಹಾಗೂ ಶಾಂತಿಭಾವವೇ ತಾವೋ ನೀತಿಯ ಅಡಿಗಲ್ಲು. ಹಿಂಸೆಗೆ ಪ್ರತಿ ಹಿಂಸೆ ಮಾಡದೆ ಸಂಯಮವನ್ನೂ ಶಾಂತಿಭಾವವನ್ನೂ ತಳೆಯುವುದೇ ಉನ್ನತ ನೀತಿ.

ಲೌಡ್ಸು ಪ್ರತಿಪಾದಿಸಿದ ರಾಜನೀತಿಯೂ ಸರಳವಾದದ್ದು. ದೇಶದಲ್ಲಿ ಜನ ಕ್ಷಾಮಡಾಮರಗಳಿಂದ ನರಳುತ್ತಿದ್ದಾಗ ರಾಜ ಮೃಷ್ಟಾನ್ನವನ್ನು ತಿಂದು ವೈಭವದಿಂದ ಮೆರೆಯುವುದು ಖಂಡನಾರ್ಹ. ಹಾಗೆಯೇ ರಾಜರು ವೈಯಕ್ತಿಕ ಕಾರಣಗಳಿಗಾಗಿ ಯುದ್ಧ ಹೂಡುವುದೂ ಅಯುಕ್ತ. ಪ್ರಜೆಗಳ ಸ್ವಾತಂತ್ರ್ಯವನ್ನು ಕುಗ್ಗಿಸುವ ಕಾನೂನುಗಳನ್ನು ಹೆಚ್ಚಿಸದೆ ಆಡಂಬರವಿಲ್ಲದೆ ಆಳಿದರೆ ಎಲ್ಲವೂ ಒಳ್ಳೆಯದಾಗುತ್ತದೆ. ರಾಜ್ಯ ಶಾಂತಿ ಮತ್ತು ತೃಪ್ತಿಯಿಂದ ತುಂಬಿ ತುಳುಕಬೇಕಾದರೆ ರಾಜ ಪ್ರಾಜ್ಞರನ್ನು ಅಂದರೆ ತತ್ತ್ವಜ್ಞಾನಿಗಳನ್ನು ಮಂತ್ರಿಗಳನ್ನಾಗಿ ನೇಮಿಸಿಕೊಂಡು ಅವರು ಉಪದೇಶಿಸಿದಂತೆ ನಡೆದುಕೊಳ್ಳಬೇಕು. ವೈಯಕ್ತಿಕ ಜೀವನದಲ್ಲಿ ಯಾವುದು ಒಳ್ಳೆಯದೆಂದು ಭಾವಿಸಿ ಆಚರಿಸುತ್ತೇವೆಯೋ ರಾಜಕೀಯದಲ್ಲೂ ಅದೇ ಒಳ್ಳೆಯದು. ವ್ಯಕ್ತಿ ಜೀವನಕ್ಕೆ ಒಂದು ನಿಯಮ, ಸಾಮೂಹಿಕ ಜೀವನಕ್ಕೆ ಬೇರೆ ನಿಯಮ ಸಲ್ಲದು.

ಮೊದಮೊದಲಲ್ಲಿ ಕನ್‌ಫ್ಯೂಷಿಯಸ್‌ನ ಅನುಯಾಯಿಗಳಿಗೂ ಲೌಡ್ಸು ಅನುಯಾಯಿಗಳಿಗೂ ವಿರೋಧವಿತ್ತು. ಲೌಡ್ಸು ಪಂಥದವರು ಪ್ರಬಲರಾದಾಗ ಕನ್‌ಫ್ಯೂಷಸ್‌ನ ಅನುಯಾಯಿಗಳನ್ನು ಸಾವಿರಗಟ್ಟಲೆ ಕೊಂದು ಅವರ ಮನೆ ಮಠಗಳನ್ನೂ ಪವಿತ್ರ ಗ್ರಂಥಗಳನ್ನೂ ಸುಟ್ಟುಹಾಕುವಂತೆ ರಾಜರನ್ನು ಪುಸಲಾಯಿಸುತ್ತಿದ್ದರು. ಕನ್‌ಫ್ಯೂಷಿಯಸ್‌ನ ಅನುಯಾಯಿಗಳು ಪ್ರಬಲರಾದಾಗ ಲೌಡ್ಸು ಅನುಯಾಯಿಗಳದೂ ಅದೇ ಗತಿಯಾಗುತ್ತಿತ್ತು. ಚಿನ್ ವಂಶದ ರಾಜರ ಆಳಿಕೆಯಲ್ಲಿ ಲೌಡ್ಸು ಅನುಯಾಯಿಗಳ ಪ್ರಾಬಲ್ಯ ಹೆಚ್ಚಿತು. 6ನೆಯ ಶತಮಾನದಲ್ಲಿ ಕುಗ್ಗಿದ್ದು ಅದು ಪುನಃ 8 ನೆಯ ಶತಮಾನದಲ್ಲಿ ರಾಜಗೌರವಕ್ಕೆ ಪಾತ್ರವಾಯಿತು.

10–12 ಶತಮಾನಗಳಿಂದ ಈಚಿನ ಕಾಲದಲ್ಲಿ ಬೌದ್ಧ ಹಾಗೂ ಉಳಿದೆರಡು ಮತದವರಲ್ಲಿ ಸೌಹಾರ್ದ ಉಂಟಾದ ಸೂಚನೆಗಳು ಕಂಡುಬರುತ್ತವೆ. ಫು ಹಿಷಿ ಎಂಬ ಚೀನಿ ಬೌದ್ಧ ವಿದ್ವಾಂಸನನ್ನು ವು–ಟಿ ಚಕ್ರವರ್ತಿ ನೀನು ಬೌದ್ಧನೆ ಎಂದು ಕೇಳಿದಾಗ ಅವನು ತಾನು ಧರಿಸಿದ್ದ ತಾವೋ ಮತದವರ ಕುರುಹಾದ ತನ್ನ ಕುಲಾವಿಯ ಕಡೆ ಕೈಮಾಡಿ ತೋರಿಸಿದನಂತೆ. ಅದನ್ನು ಕಂಡ ಚಕ್ರವರ್ತಿ ಅವನನ್ನು ಹಾಗಾದರೆ ನೀನು ತಾವೋ ಮತದವನೆ ಎಂದು ಪ್ರಶ್ನಿಸಿದಾಗ ಅವನು ಕನ್‌ಫ್ಯೂಷಿಯಸನ ಅನುಯಾಯಿಗಳ ಕುರುಹಾದ ತನ್ನ ಮೆಟ್ಟನ್ನು ತೋರಿಸಿದನಂತೆ. ಆಗ ಚಕ್ರವರ್ತಿ ನೀನು ಕನ್‌ಫ್ಯೂಷಿಯಸ್ ಮತದವನಿರಬೇಕು ಎಂದಾಗ ಆತ ತಾನು ಬೌದ್ಧರು ಕೊರಳಿಗೆ ಸುತ್ತಿಕೊಳ್ಳುವ ವಸ್ತ್ರವನ್ನು ಧರಿಸಿದ್ದನ್ನು ತೋರಿಸಿದನಂತೆ. ಈಗ್ಗೆ ಸುಮಾರು ನೂರೈವತ್ತು ವರ್ಷಗಳ ಹಿಂದೆ (ಸು.1850)ಅಬೇ ಹಕ್ ಎಂಬ ಕ್ರೈಸ್ತ ಮಠಾಧಿಕಾರಿ ಚೀನಕ್ಕೆ ಹೋಗಿ ಅಲ್ಲಿ ತಾನು ಕಂಡ ಮತ ಸೌಹಾರ್ದವನ್ನು ಪ್ರಶಂಸಿಸಿದ್ದಾನೆ.

ಈಗ ಚೀನದಲ್ಲಿ ಕಮ್ಯೂನಿಸಂ ಪ್ರಬಲವಾಗಿರುವುದರಿಂದ ಚೀನದ ಈ ಹಳೆಯ ಮೂರೂ ಮತಗಳ ಪ್ರಾಬಲ್ಯ ಕುಗ್ಗಿದೆ. (ಜಿ.ಎಚ್.)

**ತಾಷ್ಕೆಂಟ್ ಘೋಷಣೆ:** ಭಾರತದ ಪ್ರಧಾನ ಮಂತ್ರಿಯಾಗಿದ್ದ ಲಾಲ್ ಬಹಾದ್ದೂರ್‌ಶಾಸ್ತ್ರೀ ಮತ್ತು ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಅಯೂಬ್‌ಖಾನ್ ಇವರು 1966 ಜನವರಿ 10 ರಂದು ಸೋವಿಯೆತ್ ಒಕ್ಕೂಟದ ಉಜ್ಬೆಕ್ ಗಣರಾಜ್ಯದ ರಾಜಧಾನಿ ತಾಷ್ಕೆಂಟಿನಲ್ಲಿ ಸಹಿ ಹಾಕಿ ಹೊರಡಿಸಲಾದ ಘೋಷಣೆ. 1965ರ ಭಾರತ–ಪಾಕಿಸ್ತಾನ ಯುದ್ಧದ ಅನಂತರ ಇವೆರಡೂ ದೇಶಗಳ ನಡುವೆ ಶಾಂತಿಯನ್ನು ಕುದುರಿಸುವ ಉದ್ದೇಶದಿಂದ ಸೋವಿಯೆತ್ ಒಕ್ಕೂಟದ ಪ್ರಧಾನ ಮಂತ್ರಿ ಕೊಸಿಗಿನ್ ತಾಷ್ಕೆಂಟಿನಲ್ಲಿ ಏರ್ಪಡಿಸಿದ್ದ ಮಾತುಕತೆಯ ಪರಿಣಾಮವಿದು. ಸೋವಿಯೆತ್ ಸರ್ಕಾರದ ಆಹ್ವಾನದ ಮೇರೆಗೆ ತಾಷ್ಕೆಂಟಿನಲ್ಲಿ 1966 ಜನವರಿ 4ರಂದು ಲಾಲ್ ಬಹಾದ್ದೂರ್‌ಶಾಸ್ತ್ರೀ ಮತ್ತು ಅಯೂಬ್‌ಖಾನರು ಮಾತುಕತೆ ಪ್ರಾರಂಭಿಸಿದರು. ಈ ಮಾತುಕತೆ ನಡೆದ ಆರು ದಿನಗಳ ಕಾಲ ಕೊಸಿಗಿನರು ತಾಷ್ಕೆಂಟಿನಲ್ಲೇ ಇದ್ದರು. ಮಾತುಕತೆಯಲ್ಲಿ ಬಿಕ್ಕಟ್ಟು ಉಂಟಾದಾಗ ಅದನ್ನು ಬಗೆಹರಿಸಲು ಅವರು ಮಹತ್ವದ ಪಾತ್ರ ವಹಿಸಿದರು, ಶಾಸ್ತ್ರಿ ಮತ್ತು ಅಯೂಬ್ ಖಾನರ ಕೋರಿಕೆಯಂತೆ ಕೊಸಿಗಿನರು ನಡೆವಳಿಗಳನ್ನು ಪ್ರಾರಂಭಿಸುವುದರ ಜೊತೆಗೆ ತಾಷ್ಕೆಂಟ್ ಘೋಷಣೆಯ ಮುಖ್ಯ ಸಾಕ್ಷಿಯೂ ಆಗಿದ್ದರು.

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಆದರ್ಶಪ್ರಾಯವಾದ ಶಾಂತಿಯುತ ಸಂಬಂಧಗಳನ್ನು ಸ್ಥಾಪಿಸಲು, ತಮ್ಮ ಜನತೆಯ ನಡುವೆ ಸಾಮರಸ್ಯ ಮತ್ತು ಸ್ನೇಹ ಸಂಬಂಧಗಳನ್ನು ಉತ್ತಮಪಡಿಸಲು, ಎರಡೂ ದೇಶಗಳ 60,00,00,000 ಜನತೆಯ ಹಿತಕ್ಕಾಗಿ ಮಹತ್ತ್ವಪೂರ್ಣವಾದ ಗುರಿಗಳನ್ನು ಸಾಧಿಸಲು, ವಿಶ್ವಸಂಸ್ಥೆಯ ಶಾಸನಕ್ಕೆ ಅನುಸಾರವಾಗಿ ಎರಡೂ ದೇಶಗಳ ನಡುವೆ ಒಳ್ಳೆಯ ನೆರೆಹೊರೆ ಸಂಬಂಧಗಳನ್ನು ರೂಪಿಸಲು, ಈ ಒಪ್ಪಂದವನ್ನು ಕಾರ್ಯಗತಗೊಳಿಸುವ ಕಾರ್ಯದಲ್ಲಿ ಹಿಂದೆಗೆಯದೆ ಪರಸ್ಪರರ ನಡುವಣ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು, ಶಾಂತಿಯ ದೃಷ್ಟಿಯಿಂದ ಭಾರತ – ಪಾಕಿಸ್ತಾನ ಉಪಖಂಡದಲ್ಲಿ ಅದರಲ್ಲೂ ಮುಖ್ಯವಾಗಿ ತಮ್ಮ ಜನತೆಯ ಹಿತದೃಷ್ಟಿಯಿಂದ ಮತ್ತೆ ಪರಸ್ಪರರ ನಡುವೆ ಬಿಕ್ಕಟ್ಟು ತಲೆದೋರದಂತೆ ನಡೆದುಕೊಳ್ಳಲು; 1965 ಆಗಸ್ಟ್ 5ರಂದು ಇದ್ದ ಮೊದಲಿನ ಸ್ಥಳಗಳಿಗೆ ತಮ್ಮ ತಮ್ಮ ಸೈನ್ಯವನ್ನು 1966ರ ಫೆಬ್ರವರಿ 28ಕ್ಕಿಂತ ಮುಂಚಿತವಾಗಿ ಹಿಂತೆಗೆದುಕೊಳ್ಳಲು, ಯುದ್ಧ ನಿಲುಗಡೆ ರೇಖೆಗೆ ಅನುಸಾರವಾಗಿ ಯುದ್ಧ ನಿಲುಗಡೆ ನಿಯಮಗಳನ್ನು ಅನುಸರಿಸಲು; ಪರಸ್ಪರ ದೇಶಗಳ ಆಂತರಿಕ ವಿಷಯಗಳಲ್ಲಿ ಪ್ರವೇಶಿಸಬಾರದೆಂಬ ತತ್ತ್ವವನ್ನು ಆಧಾರವಾಗಿಟ್ಟುಕೊಳ್ಳಲು; ಪರಸ್ಪರ ದೇಶಗಳ ವಿರುದ್ಧ ಮಾಡುವ ಅಪಪ್ರಚಾರಗಳನ್ನು ಬೆಂಬಲಿಸದೆ, ಸ್ನೇಹಪೂರ್ವಕ ಸಂಬಂಧಗಳನ್ನು ವೃದ್ಧಿಗೊಳಿಸುವ ಪ್ರಚಾರಗಳಿಗೆ ಉತ್ತೇಜನ ನೀಡಲು; ಭಾರತ ಮತ್ತು ಪಾಕಿಸ್ತಾನದ ರಾಜತಾಂತ್ರಿಕರು ಭಾರತ ಹಾಗೂ ಪಾಕಿಸ್ತಾನಕ್ಕೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗುವುದಲ್ಲದೆ ಎರಡೂ ದೇಶಗಳ ನಡುವೆ ರಾಯಭಾರ ವ್ಯವಹಾರ ಮುಂದುವರಿಸಲು, ರಾಯಭಾರ ವ್ಯವಹಾರದಲ್ಲಿ 1961ರ

ವಿಯೆನ್ನ ಒಪ್ಪಂದವನ್ನು ಪಾಲಿಸಿಕೊಂಡು ಬರಲು; ಆರ್ಥಿಕ ವಾಣಿಜ್ಯ ಸಂಬಂಧಗಳು, ಸಂಪರ್ಕಗಳು, ಸಾಂಸ್ಕೃತಿಕ ವಿನಿಮಯ ಮುಂತಾದವನ್ನು ಪೂರ್ವಸ್ಥಿತಿಗೆ ತರಲು, ಪ್ರಕೃತದಲ್ಲಿ ಇರುವ ಕರಾರುಗಳನ್ನು ಕಾರ್ಯಗತಗೊಳಿಸಲು ಅಗತ್ಯ ಕ್ರಮಗಳನ್ನು ಪರ್ಯಾಲೋಚಿಸಲು; ಯುದ್ಧ ಕೈದಿಗಳನ್ನು ಅವರವರ ತಾಯ್ನಾಡಿಗೆ ಹಿಂದಿರುಗಿಸುವಂತೆ ತಂತಮ್ಮ ಕಡೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ತಿಳಿವಳಿಕೆ ನೀಡಲು; ನಿರಾಶ್ರಿತರು, ಕಾನೂನು ಬಾಹಿರ ವಲಸೆಗಾರರನ್ನು ಹೊರಕ್ಕೆ ಕಳುಹಿಸುವ ವಿಷಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತ ಚರ್ಚೆಯನ್ನು ಮುಂದುವರಿಸಲು, ಜನರು ದೇಶ ಬಿಟ್ಟು ವಲಸೆ ಹೋಗುವುದನ್ನು ತಪ್ಪಿಸಲು ಅಗತ್ಯವಾದ ಸ್ಥಿತಿಗತಿಗಳನ್ನು ರೂಪಿಸಲು, ಯುದ್ಧದಲ್ಲಿ ವಶಪಡಿಸಿಕೊಳ್ಳಲಾದ ಆಸ್ತಿಪಾಸ್ತಿಯನ್ನು ಸಂಬಂಧಿಸಿದವರಿಗೆ ಹಿಂದಿರುಗಿಸುವುದನ್ನು ಚರ್ಚಿಸಲು; ಮುಂದೆ ತೆಗೆದುಕೊಳ್ಳಬೇಕಾದ ಅಗತ್ಯಕ್ರಮಗಳನ್ನು ಕುರಿತು ತಂತಮ್ಮ ಸರ್ಕಾರಗಳಿಗೆ ವರದಿಮಾಡಲು ಭಾರತ–ಪಾಕಿಸ್ತಾನ ಸಂಯುಕ್ತ ಮಂಡಳಿಯನ್ನು ರೂಪಿಸಬೇಕಾದ ಅಗತ್ಯವನ್ನು ಮನಗಂಡು ಎರಡೂ ದೇಶಗಳಿಗೆ ನೇರವಾಗಿ ಸಂಬಂಧಿಸಿದ ವಿಷಯಗಳನ್ನು ಕುರಿತು ಉನ್ನತ ಹಾಗೂ ಇನ್ನಿತರ ಹಂತಗಳಲ್ಲಿ ಚರ್ಚೆ ಮುಂದುವರಿಸಲು ಒಪ್ಪಿ ಈ ಘೋಷಣೆಗೆ ಎರಡೂ ದೇಶಗಳ ಮುಖ್ಯಸ್ಥರು ಸಹಿ ಹಾಕಿದರು.

ಸಹಿ ಹಾಕುವ ಸಮಾರಂಭದ ಕೊನೆಯಲ್ಲಿ ಸಂಕ್ಷಿಪ್ತ ಭಾಷಣ ಮಾಡಿದ ಕೊಸಿಗಿನ್ ಭಾರತದ ಪ್ರಧಾನಿ ಮತ್ತು ಪಾಕಿಸ್ತಾನದ ಅಧ್ಯಕ್ಷರನ್ನು ಅಭಿನಂದಿಸುತ್ತ ತಾಷ್ಕೆಂಟ್ ಘೋಷಣೆ ಭಾರತ ಮತ್ತು ಪಾಕಿಸ್ತಾನಗಳ ಸ್ನೇಹದ ನಿರಂತರ ಕುರುಹಾಗಿ ಇರಲಿ ಎಂದು ಹಾರೈಸಿದರು. ಭಾರತ ಮತ್ತು ಪಾಕಿಸ್ತಾನಗಳ ಬಾಂಧವ್ಯದಲ್ಲಿ ಈ ಘೋಷಣೆ ಒಂದು ಹೆಗ್ಗುರುತಾಗಿದೆಯಾದರೂ ಇದರ ಆಶಯಗಳೆಲ್ಲ ಅನಂತರ ಕಾರ್ಯಗತವಾಗಲಿಲ್ಲ. ಈ ಘೋಷಣೆಗೆ ಸಹಿ ಹಾಕಿದ ಕೆಲವು ಗಂಟೆಗಳೊಳಗೆ ಲಾಲ್ ಬಹಾದ್ದೂರ್ ಶಾಸ್ತ್ರೀಯವರು ಹೃದಯಾಘಾತದಿಂದ ನಿಧನ ಹೊಂದಿದರು. (ಎಂ.ಎಸ್.ಎಸ್.)

**ತಾಳಗುಂದ:** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಬಳ್ಳಿಗಾವೆಗೆ ಸು.3ಕಿಮೀ ಈಶಾನ್ಯದಲ್ಲಿ ಇರುವ ಒಂದು ಐತಿಹಾಸಿಕ ಗ್ರಾಮ. ಆದಿ ಕದಂಬರ ಕಾಲದಲ್ಲಿ ಇದು ಸ್ಥಾನಗುಂದೂರ ಎಂಬ ಪ್ರಸಿದ್ಧ ಅಗ್ರಹಾರವಾಗಿತ್ತು. ಈ ಅಗ್ರಹಾರವನ್ನು ಕದಂಬ ಮಯೂರ ಶರ್ಮನ ಪೂರ್ವಜನಾದ ಮುಕ್ಕಣ್ಣ ಅಥವಾ ತ್ರಿಣೇತ್ರ ಸ್ಥಾಪಿಸಿದ. ಅಹಿಚ್ಛತ್ರ ವೆಂಬ ಸ್ಥಳದಿಂದ 32 ಬ್ರಾಹ್ಮಣ ಕುಟುಂಬಗಳನ್ನು ಕರೆಸಿ ಇಲ್ಲಿ ನೆಲಸು ವಂತೆ ಮಾಡಿದ. ಇಲ್ಲಿ 12,000 ಅಥವಾ 32,000 ಬ್ರಾಹ್ಮಣರಿದ್ದರೆಂದು ಉಲ್ಲೇಖಗಳಿವೆ. ಬಹುಶಃ ಇದೇ ಕರ್ನಾಟಕದಲ್ಲಿ ಸ್ಥಾಪನೆಯಾದ ಪ್ರಾಚೀನತಮ ಅಗ್ರಹಾರ. ಈ ಊರಿನಲ್ಲಿ ಕೆಲವು ಪ್ರಾಚೀನ ಶಾಸನ ಗಳಿವೆ. ಇವುಗಳಲ್ಲಿ ಪ್ರಣವೇಶ್ವರ (ಶಾಸನದ ಆದಿ ದೇವನಾದ ಭವನ ಸಿದ್ಧಾಲಯ) ದೇವಾಲಯದ ಮುಂದಿನ ಸ್ತಂಭದ ಮೇಲಿನ ಶಾಸನ ಬಹು ಮುಖ್ಯವಾದುದು. ಕದಂಬ ಶಾಂತಿವರ್ಮನ ಕಾಲದ ಈ ಶಾಸನ (ಸು.450) ಪೆಟ್ಟಿಗೆ ತಲೆಯ ಬ್ರಾಹ್ಮಿ–ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ. ಕುಬ್ಜ ಎಂಬ ಕವಿಯಿಂದ ಭಾವ ಪೂರ್ಣವಾಗಿ ರಚಿತವಾಗಿರುವ, ವಿವಿಧ ಛಂದಸ್ಸುಗಳಲ್ಲಿ ಸಂಸ್ಕೃತ ಶ್ಲೋಕಗಳಿರುವ ಈ ಶಾಸನ ಕದಂಬ ಇತಿಹಾಸದ ಮುಖ್ಯ ಆಧಾರಗಳ ಲ್ಲೊಂದು. ಈ ಶಾಸನದಲ್ಲಿ ಸಾತ ಕರ್ಣಿಯೇ ಮೊದಲಾದ ರಾಜರಿಂದ ಪೂಜಿಸಲ್ಪಟ್ಟ ಮಹಾದೇವ ದೇವಾಲಯ ಮತ್ತು ಅದರ ಸಮೀಪದಲ್ಲಿ ಕಾಕುತ್ಸ್ಥವರ್ಮ ನಿರ್ಮಿಸಿದ ಕೆರೆ–ಇವುಗಳ ಉಲ್ಲೇಖವೂ ಇದೆ.



ಶಾಂತಿವರ್ಮನ ಶಾಸನ

ಸ್ತಂಭದ ಎದುರಿನಲ್ಲೇ ಇರುವ ಪ್ರಣವೇಶ್ವರ ದೇವಾಲಯವೇ ಮೇಲಿನ ಶಾಸನೋಕ್ತ ಗುಡಿ. ಬಹುಶಃ ಕರ್ನಾಟಕದ ಅತಿ ಪ್ರಾಚೀನ ದೇವಾಲಯಗಳಲ್ಲಿ ಒಂದು. ಈಗ ಗರ್ಭಗೃಹ ಮತ್ತು ಸುಕನಾಸಿ ಮಾತ್ರ ಇರುವ ಬಹು ಸರಳ ಕಟ್ಟಡ. ಈಚೆಗೆ ನವೀಕೃತವಾಗಿದ್ದು ಹಳೆಯ ವಾಸ್ತು ಅಂಶಗಳೂ ಅಷ್ಟಾಗಿ ಉಳಿದಿಲ್ಲ. ಗರ್ಭಗುಡಿಯಲ್ಲಿ ಪೀಠದ ಮೇಲೆ ಸು.18ಮೀ ಎತ್ತರದ ಲಿಂಗವಿದೆ. ತಳದಲ್ಲಿ ಅದು ಸು.16ಮೀ ಸುತ್ತಳತೆಯುಳ್ಳದಾಗಿದೆ. ಇದು ಮೂಲ ಲಿಂಗವಿದ್ದಂತೆ ತೋರುತ್ತದೆ. ಗರ್ಭಗೃಹದ ದ್ವಾರದ ತೋಳಿನ ಮೇಲೆ ಕದಂಬ ಕಾಲದ ಇನ್ನೊಂದು ಶಾಸನವಿದೆ. ಇಲ್ಲಿಯ ಪ್ರಣವೇಶ್ವರ (ಭವ) ದೇವಾಲಯ ಮೊದಲು ಇಟ್ಟಿಗೆಯಿಂದ ನಿರ್ಮಿಸಲಾಗಿತ್ತು. ಇದರ ಅವಶೇಷಗಳು ಈಗಿರುವ ಶಿಲಾದೇವಾಲಯದ ಗರ್ಭಗೃಹದಡಿಯಲ್ಲಿ ಕಾಣಬರುತ್ತವೆ. ಇಟ್ಟಿಗೆ ದೇವಾಲಯ ಪ್ರ.ಶ. ಆರಂಭ ಕಾಲದ್ದೆಂದು ಹೇಳಬಹುದು. ಬಹುಶಃ 5ನೆಯ ಶತಮಾನದಲ್ಲಿ ಇದನ್ನು ಶಿಲಾಮಯವಾಗಿಸಲಾಯಿತು. ಇದರ ಅಂತರಾಳದ ಮತ್ತು ಗರ್ಭಗುಡಿಯ ಬಾಗಿಲು ಚೌಕಟ್ಟುಗಳು ಲಕ್ಷಣ ಮತ್ತು ಶೈಲಿಯಿಂದ ಖಚಿತವಾಗಿ 5ನೆಯ ಶತಮಾನದವೆಂದು ಹೇಳಬಹುದು. ಮೊದಲನೆಯ ಬಾಗಿಲು ಚೌಕಟ್ಟಿನ ಮೇಲೆ ಕದಂಬ ಮೃಗೇಶವರ್ಮನ ಕಾಲದ ಎರಡು ಶಾಸನಗಳಿವೆ. ಅಲ್ಲಲ್ಲಿ 2–5ನೆಯ ಶತಮಾನದ ಕುಬ್ಜ ಗಣಗಳು ಕುಳಿತ ಭಂಗಿಯಲ್ಲಿಯ ಚತುರ್ಭುಜ ಸಾಲಂಕೃತ ನರಸಿಂಹ, ಎರಡು ದ್ವಾರಪಾಲ ವಿಗ್ರಹಗಳು, ಮಹಿಷಮರ್ದಿನಿ ಮುಂತಾದ ಶಿಲಾಮೂರ್ತಿಗಳಿವೆ. ಕೊನೆಯದು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ. ದೇವಾಲಯದ ಸಮೀಪದಲ್ಲಿ ಪ್ರಣವನ ಕೆರೆ ಎಂಬ ಚಿಕ್ಕ ಕೆರೆಯಿದೆ. ಇದು ಕಾಕುತ್ಸ್ಥವರ್ಮ ಕಟ್ಟಿಸಿದ ತಟಾಕವಿರಬಹುದು. ತಾಳಗುಂದ ಮತ್ತು ಪ್ರಣವೇಶ್ವರ ದೇವಾಲಯಗಳು ಸು.12–13ನೆಯ ಶತಮಾನಗಳವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿದ್ದುವೆಂಬುದಕ್ಕೆ ಶಾಸನೋಲ್ಲೇಖಗಳಿವೆ. 12ನೆಯ ಶತಮಾನದ ಮಧ್ಯಕಾಲದಲ್ಲಿ ಈ ದೇವಾಲಯದಲ್ಲಿ ಚಿಕ್ಕದಾದರೂ ಪ್ರಸಿದ್ಧಿಪಡೆದಿದ್ದ ಒಂದು ವಿದ್ಯಾಪೀಠವಿತ್ತು. ಇಲ್ಲಿ 48 ಮಂದಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು. ಈ ಉನ್ನತ ಶಿಕ್ಷಣ ಕೇಂದ್ರದ ಪಠ್ಯಕ್ರಮದಲ್ಲಿ ಯಜುರ್ವೇದ, ಸಾಮವೇದ, ಪ್ರಭಾಕರ ಮೀಮಾಂಸೆ, ವೇದಾಂತ, ಭಾಷಾಧ್ಯಯನ, ಕನ್ನಡ ಮುಂತಾದ ವಿಷಯಗಳು ಸೇರಿದ್ದುವು. ಪ್ರತಿ ಅಧ್ಯಾಪಕರು ಎಂಟು ಮಂದಿಗೆ ಪಾಠ ಹೇಳುತ್ತಿದ್ದರು. ಅವರು ತಮ್ಮ ವಿಶಿಷ್ಟ ವಿಷಯದಲ್ಲಿ ಆಳವಾದ ಪಾಂಡಿತ್ಯವನ್ನು ಸಾಧಿಸಿದ್ದರು. ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯಿತ್ತು. ಅದಕ್ಕಾಗಿ ಇಬ್ಬರು ಅಡುಗೆ ಭಟ್ಟರಿದ್ದರು. ದೇವಾಲಯಕ್ಕೆ ಬರುತ್ತಿದ್ದ ಆದಾಯವನ್ನು ಅಧ್ಯಾಪಕರ ಸಂಬಳಕ್ಕೂ ವಿದ್ಯಾರ್ಥಿಗಳ ಊಟೋಪಚಾರಗಳಿಗೂ ಬಳಸುತ್ತಿದ್ದರು. ತಾಳಗುಂದದಲ್ಲಿ ಗಂಗಾಧರೇಶ್ವರ ಮತ್ತು ವೀರಭದ್ರ ಎಂಬ ಇನ್ನೆರಡು ದೇವಾಲಯಗಳೂ ಇವೆ. ಗ್ರಾಮದ ಪೂರ್ವದಲ್ಲಿ ಪ್ರಭುದೇವರ ಗದ್ದುಗೆ ಇರುವ ವಿರಕ್ತ ಮಠವಿದೆ. ಪ್ರಭುದೇವರು ಕೈಲಾಸವಾಸಿ ಯಾದದ್ದು ಬಳ್ಳಿಗಾವೆಯಲ್ಲಲ್ಲ ತಾಳಗುಂದದಲ್ಲಿ ಎಂಬ ನಂಬಿಕೆ ಇದೆ. ಮತ್ತಷ್ಟು ಪೂರ್ವದಲ್ಲಿ ದೋಣನ ಗುಡ್ಡ ಎಂಬ ಬೆಟ್ಟವಿದೆ. ಸ್ಥಳಪುರಾಣದ ಪ್ರಕಾರ ಭೀಮ ದೋಣನನ್ನು (ಬಕಾಸುರ) ಕೊಂದದ್ದು ಇಲ್ಲಿ; ಏಕಚಕ್ರನಗರ ಈ ಗುಡ್ಡದ ಬಳಿ ಇದ್ದಿತೆಂದು ಪ್ರತೀತಿ. (ಎಸ್.ಎಸ್.ವಿ.)

**ತಿಯಾಸೊಫಿ ಪಂಥ:** ತಿಯಾಸೊಫಿ ಎಂದರೆ ಬ್ರಹ್ಮಜ್ಞಾನ, ಬ್ರಹ್ಮವಿದ್ಯೆ. ಸರ್ವಶಕ್ತನೂ ಸರ್ವಜ್ಞನೂ ಸರ್ವವ್ಯಾಪಿಯೂ ಸರ್ವಪ್ರಕಾಶನೂ ಸರ್ವಾಂತರ್ಯಾಮಿಯೂ ಆದ ದೇವನೇ ಬ್ರಹ್ಮ. ಆತನೊಬ್ಬನೇ ಆತನ ಮತ್ತು ನಮ್ಮ ಸ್ವರೂಪವನ್ನರಿತು, ಆತನಿಗೂ ನಮಗೂ ಪ್ರಪಂಚಕ್ಕೂ ಇರುವ ಸಂಬಂಧವನ್ನು ತಿಳಿದರೆ ಸರ್ವಮತಸಮ್ಮತವಾದ ಮುಕ್ತಿ ಲಭ್ಯ. ಈ ಸರ್ವ ದಾರ್ಶನಿಕ ಗೂಢತತ್ತ್ವವನ್ನು ಜಾತಿ, ಕುಲ, ಸ್ತ್ರೀಪುರುಷ ಭೇದವಿಲ್ಲದೆ ಎಲ್ಲರಿಗೂ ಬ್ರಹ್ಮಜ್ಞಾನಿಗಳ, ಸಿದ್ಧಪುರುಷರ, ಅದೃಶ್ಯ ಮಹನೀಯರ ಮೂಲಕ ಉಪದೇಶಿಸಿ ಪ್ರಚಾರಪಡಿಸು ವುದೇ ಈ ತಿಯಾಸೊಫಿ ಪಂಥದ (ಬ್ರಹ್ಮವಿದ್ಯಾ ಸಮಾಜದ) ಮುಖ್ಯ ಧ್ಯೇಯ. ಈ ಚಳವಳಿಯ ಆರಂಭದಿಂದ ಇದಕ್ಕಾಗಿ ಕೆಲಸ ಮಾಡಿದವರೆಲ್ಲರೂ ಆತ್ಮ ಅಮರನೆಂದೂ ಪ್ರತಿಯೊಬ್ಬನ ಆತ್ಮನೂ ಕ್ರಮವಾಗಿ ವಿಕಾಸಹೊಂದಿ ಸಿದ್ಧಪುರುಷನಾಗಬಲ್ಲನೆಂದೂ ಅನೇಕ ಸಿದ್ಧಪುರುಷರು, ಅಭಿಜ್ಞರು ಅದೃಶ್ಯರಾದ ದಿನದಿಂದಲೂ ಇದ್ದೇ ಇರುವರೆಂದೂ ಅವರ ಬಲದಿಂದಲೂ ಉಪದೇಶದಿಂದಲೂ ಪ್ರಪಂಚ ನಡೆಯುತ್ತಿರುವುದೆಂದೂ ನಂಬಿದ್ದಾರೆ. ಇಂಥ ನಂಬಿಕೆಯಿದ್ದವರಲ್ಲಿ ಮುಖ್ಯಳಾದವಳು ರಷ್ಯದ ಎಚ್.ಪಿ.ಬ್ಲಾವಟ್‌ಸ್ಕಿ. ಈಕೆ ಟಿಬೆಟ್ಟಿನ ಗುರುಗಳ ಉಪದೇಶ ಮತ್ತು ಪ್ರೇರಣೆಯ ಮೇಲೆ ಈ ಚಳವಳಿಯನ್ನು ಆರಂಭಿಸಿ ಬೆಳೆಸಿದಳು.

ಆರಂಭದಲ್ಲಿ ಈ ಚಳವಳಿ ಶ್ವೇತ ಭ್ರಾತೃಮಂಡಲದ ಕೆಲವು ಅಭಿಜ್ಞರ ಮತ್ತು ಗುಹ್ಯತತ್ತ್ವಗಳಲ್ಲಿ ದೀಕ್ಷೆಹೊಂದಿದವರ ನೇತೃತ್ವದಲ್ಲಿತ್ತು. ಈಜಿಪ್ಟಿನ ಗುರು ಸೆರಾಫಿಸ್ ಬೇ ಎಂಬಾತ ಕರ್ನಲ್ ಅಲ್ಕಾಟ್ ಮತ್ತು ಬ್ಲಾವಟ್‌ಸ್ಕಿಗಳಿಗೆ ಉಪದೇಶವಿತ್ತ; ಆದರೆ ಮಹದ್ಯೋಗಶಕ್ತಿಯುಳ್ಳವಳಾಗಿದ್ದರೂ ಬ್ಲಾವಟ್‌ಸ್ಕಿ ಅದೃಶ್ಯ ಗುರುಗಳ ಆಜ್ಞೆಯನ್ನೂ ಪಡೆದು ಅಲ್ಕಾಟನ ಸಹಾಯವನ್ನೂ ಹೊಂದಿ 1875ರಲ್ಲಿ ಈ ಬ್ರಹ್ಮಜ್ಞಾನಬೋಧೆಯನ್ನು ಆರಂಭಿಸಿದಳು. ಅಲ್ಕಾಟ್ ದಿವ್ಯಜ್ಞಾನ ಸಮಾಜವನ್ನು ಸ್ಥಾಪಿಸಿ ಅದಕ್ಕೆ ಅನೇಕ ಸದಸ್ಯರನ್ನು ಕೂಡಿಸಿದ. 1876ರಲ್ಲಿ ಸಮಾಜ ಒಂದು ಗುಹ್ಯಸಂಘವಾಗಿ ಸದಸ್ಯರ ದೀಕ್ಷೆ ಕಡ್ಡಾಯವಾಗಿ ಪಡೆಯಬೇಕೆಂಬ ನಿರ್ಬಂಧ ಬಂದಿತಲ್ಲದೆ ಸದಸ್ಯತ್ವದಲ್ಲಿ ಮೂರು ಶ್ರೇಣಿಗಳು ಏರ್ಪಟ್ಟವು.

ಬ್ಲಾವಟ್‌ಸ್ಕಿಯ ಐಸಿಸ್ ಅನ್‌ವೇಲ್ಡ್ ಎಂಬ ಗ್ರಂಥ ಅಚ್ಚಾಗಿ ಹೊರಬಿದ್ದಾಗ ಅದನ್ನು ಓದಿ ಪ್ರಭಾವಿತರಾದ ಭಾರತೀಯ ಶ್ರೀಮಂತರನೇಕರು ಆ ಸಮಾಜದ ಸದಸ್ಯರಾದರು. ತತ್ತ್ವಗಳಲ್ಲಿ ಹೋಲಿಕೆ ಇದ್ದುದರಿಂದ ಬ್ರಹ್ಮಜ್ಞಾನ ಸಮಾಜದವರು ಆರ್ಯಸಮಾಜದವರೊಡನೆ ಕಲೆತು ಕೆಲಸಮಾಡಲೊಪ್ಪಿದರು. 1878 ರಲ್ಲಿ ಅಲ್ಕಾಟ್ ಸಮಾಜದ ಕೇಂದ್ರ ಕಚೇರಿಯನ್ನು

ಭಾರತಕ್ಕೆ ವರ್ಗಾಯಿಸಲು ಗುರುವಿನ ಒಪ್ಪಿಗೆ ಪಡೆದು ಮುಂಬಯಿಗೆ ಬಂದು (1879) ಅಲ್ಲಿ ಕೆಲವು ಕಾಲ ಇದ್ದು ಬ್ರಹ್ಮಜ್ಞಾನಿಯೆಂಬ ಪತ್ರಿಕೆಯನ್ನಾರಂಭಿಸಿದ. ಚಳವಳಿ ಭಾರತದಲ್ಲಿ ಬಹು ಬೇಗ ಬಲಗೊಂಡು ಪ್ರಸರಿಸಿತು.

1882ರಲ್ಲಿ ಬ್ಲಾವಟ್‌ಸ್ಕಿ ಹಾಗೂ ಅಲ್ಕಾಟರು ಮದರಾಸಿನ ಅಡ್ಯಾರ್ ಪ್ರದೇಶವನ್ನು ಬೆಲೆಗೆ ಕೊಂಡು ಅಲ್ಲಿ ಸಮಾಜವನ್ನು ಸ್ಥಾಪಿಸಿದರು. 1884ರಲ್ಲಿ ಇವರು ಜರ್ಮನಿಗೆ ಹೋಗಿ ಅಲ್ಲೂ ತಮ್ಮ ಸಮಾಜವನ್ನು ಸ್ಥಾಪಿಸಿದರು. ಇಂಗ್ಲೆಂಡಿನ ಲೆಡ್‌ಬೇಟರ್ ಎಂಬಾತ ಸಿನ್ನೆಟ್ ಎಂಬಾತನ ಅಕಲ್ಟ್ ವರ್ಲ್ಡ್ (ಅತೀಂದ್ರಿಯ ಲೋಕ) ಎಂಬ ಗ್ರಂಥದಿಂದ ಪ್ರಭಾವಿತನಾಗಿ ಅಡ್ಯಾರಿಗೆ ಬಂದು ಸೇವಾನಿರತನಾದ, ಬ್ಲವಟ್‌ಸ್ಕೀ ಆದರೋ ಲಂಡನ್ನಿನಲ್ಲಿ ನೆಲಸಿ (1887) ಸಮಾಜವನ್ನು ಬೆಳೆಸಿದಳು. 1889ರಲ್ಲಿ ಸುಪ್ರಸಿದ್ಧ ದೇಶಾಭಿಮಾನಿ ಆನಿಬೆಸೆಂಟ್ ಇದಕ್ಕೆ ಸದಸ್ಯಳಾದಳು. ಅತ್ತ ಬ್ಲಾವಟ್‌ಸ್ಕಿ ತನ್ನ ಹೆಸರಿನಲ್ಲಿ ಸಂಘವೊಂದನ್ನು ಸ್ಥಾಪಿಸಿ ಅದರ ರಹಸ್ಯ ಶಾಖೆಯನ್ನು (ಎಸೋಟೆರಿಕ್ ಬ್ರ್ಯಾಂಚ್) ಆರಂಭಿಸಿದಳು. ಸಮಾಜದ ಚಳವಳಿ ಹೆಚ್ಚಿತು. ಬೆಸೆಂಟ್ 1893ರಲ್ಲಿ ಷಿಕಾಗೋವಿನ ಸರ್ವಮತ ಪ್ರತಿನಿಧಿ ಸಭೆಯಲ್ಲಿ ಬ್ರಹ್ಮಜ್ಞಾನದ ಪರ ವಾದಿಸಿದಳು.

ಈ ಸಮಾಜ ಕಾರ್ಯಗಳು ಈಗ ಅಡ್ಯಾರ್ ಗ್ರಂಥಭಂಡಾರದಲ್ಲಿ ನಡೆಯುತ್ತಿವೆ. ಇಲ್ಲಿನ ಗ್ರಂಥ ಭಂಡಾರ ದೊಡ್ಡದು. ಅನೇಕ ಪ್ರಾಚೀನ ಗ್ರಂಥಗಳು ಇಲ್ಲಿ ಅಚ್ಚಾಗುತ್ತವೆ. ಇಲ್ಲೊಂದು ಸುಪ್ರಸಿದ್ಧ ಕಲಾಕ್ಷೇತ್ರವಿದೆ. ಬ್ರಹ್ಮವಿದ್ಯೆಯೆಂಬ ಪತ್ರಿಕೆ ಪ್ರಕಟವಾಗುತ್ತಿದೆ. ಈ ಸಮಾಜದ ಶಾಖೋಪಶಾಖೆಗಳು ಭಾರತ, ಯುರೋಪ್, ಅಮೆರಿಕ, ಆಫ್ರಿಕ, ಆಸ್ಟ್ರೇಲಿಯ, ಜರ್ಮನಿ, ಶ್ರೀಲಂಕ ಮುಂತಾದ ಸ್ಥಳಗಳಲ್ಲಿ ವ್ಯಾಪಿಸಿವೆ. ಎಲ್ಲ ಮತೀಯರೂ ಈ ಸಮಾಜಕ್ಕೆ ಸದಸ್ಯರಾಗಿದ್ದಾರೆ.

ಈ ಸಮಾಜದ ಮುಖ್ಯ ಉದ್ದೇಶಗಳು ಈ ರೀತಿಯಿವೆ: ಲೋಕದ ಜನರಲ್ಲಿ ಪರಸ್ಪರ ಸೌಹಾರ್ದವನ್ನುಂಟುಮಾಡಿ, ವಿಶ್ವಭ್ರಾತೃತ್ವವನ್ನು ಬೆಳೆಸುವುದು. ವಿವಿಧ ಮತ ಮತ್ತು ಶಾಸ್ತ್ರಗ್ರಂಥಗಳನ್ನೂ ವಿಜ್ಞಾನಶಾಸ್ತ್ರ ಗ್ರಂಥಗಳನ್ನೂ ಯಾವ ಪಕ್ಷಪಾತವೂ ಇಲ್ಲದಂತೆ ಅಧ್ಯಯನಮಾಡಿ, ತುಲನೆ ಮಾಡಿ, ಅವುಗಳ ಸಾರಾಂಶವನ್ನು ತಿಳಿದುಕೊಳ್ಳುವುದು. ಅಪೂರ್ವ ತತ್ತ್ವವಿಚಾರ; ಗಹನವಾಗಿರುವ ಆಧ್ಯಾತ್ಮ ವಿಷಯಗಳನ್ನೂ ಮಾನವನಲ್ಲಿ ಅಡಗಿರುವ ಅತ್ಯದ್ಭುತ ಶಕ್ತಿಗಳನ್ನೂ ಕೂಲಕಂಷವಾಗಿ ವಿಮರ್ಶಿಸಿ ಕಂಡುಹಿಡಿಯುವುದು ಮತ್ತು ಅತೀಂದ್ರಿಯ ಶಕ್ತಿಗಳನ್ನು ವೃದ್ಧಿಪಡಿಸುವುದು (**ನೋಡಿ–ಆನಿಬೆಸೆಂಟ್**). (ಎಚ್.ಆರ್.ಆರ್.ಐ.)

**ತಿರುಕಲ್ಲುಪಟ್ಟಿ:** ತಮಿಳುನಾಡು ರಾಜ್ಯದ ಮದುರೈ ಜಿಲ್ಲೆಯ ತಿರುಮಂಗಲ ತಾಲ್ಲೂಕಿನ ಪುರಾತತ್ತ್ವ ನೆಲೆ. ದೇವನ ಕುರಿಚಿ ಬೆಟ್ಟದ ಉತ್ತರ ತಪ್ಪಲಿನಲ್ಲಿರುವ ಬೃಹತ್ ಶಿಲಾ ಸಂಸ್ಕೃತಿಯ ವಸತಿ ನೆಲೆಯನ್ನೂ ದಕ್ಷಿಣ ತಪ್ಪಲಿನಲ್ಲಿರುವ ಕಲ್ಗೋರಿ ನೆಲೆಯನ್ನೂ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಚೆನ್ನೈ ವೃತ್ತ ಶೋಧಿಸಿತು. ಮೊದಲನೆಯ ನೆಲೆಯಲ್ಲಿ ಬಿಳಿ ಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸಲ್ಪಟ್ಟ ಕಪ್ಪು–ಕೆಂಪು ದ್ವಿವರ್ಣದ ಮಣ್ಪಾತ್ರೆ ಚೂರುಗಳು ಇದ್ದವು. ಈ ಸಂಸ್ಕೃತಿಯ ಇತರ ನೆಲೆಗಳಲ್ಲಿ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳ ಅವಶೇಷಗಳು ಸಿಕ್ಕರೂ ಅವುಗಳ ಮೇಲೆ ಬಿಳಿ ವರ್ಣಚಿತ್ರಗಳಿರುವುದು ಅಪರೂಪ. ಆದ್ದರಿಂದ ಈ ನೆಲೆಯ ಸಾಂಸ್ಕೃತಿಕ ಮಹತ್ತ್ವವನ್ನು ತಿಳಿಯಲು ಇದೇ ಇಲಾಖೆ 1976–77ರಲ್ಲಿ ಉತ್ಖನನ ನಡೆಸಿತು. ವಸತಿ ನೆಲೆಯಲ್ಲಿ ಇತರ ಸಮಕಾಲೀನ ನೆಲೆಗಳಲ್ಲಿ ಕಾಣುವಂತೆ ಕಪ್ಪು–ಕೆಂಪು ದ್ವಿವರ್ಣ, ಪೂರ್ಣಕಪ್ಪು ಮತ್ತು ಕೆಂಪು ಪಾತ್ರೆಗಳ ಚೂರುಗಳಲ್ಲದೆ ತಾಮ್ರ–ಶಿಲಾಯುಗ ಸಂಸ್ಕೃತಿಯ ತಿಳಿ ನೇರಳೆ ವರ್ಣಚಿತ್ರಿತ ಕೆಂಪುವರ್ಣದ, ಹೊಳಪಾದ ಬೂದು ವರ್ಣದ ಮಣ್ಪಾತ್ರೆ ಚೂರುಗಳು, ಚೆರ್ಟ್ ಕಲ್ಲಿನ ತೆಳು ನೀಳ ಚಕ್ಕೆಗಳು ಕೆಳಗಿನ ಸ್ತರಗಳಲ್ಲಿ ದೊರೆತವು.



ಬಿಳಿರೇಖಾ ಚಿತ್ರಿತ ಕಪ್ಪು ಮಣ್ಪಾತ್ರೆ

ಮೇಲಿನ ಸ್ತರಗಳಲ್ಲಿ ಕೇವಲ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳು, ವಿಶೇಷವಾಗಿ ಕೆಂಪು ಲೇಪನದಡಿಯಲ್ಲಿ ಬಿಳಿವರ್ಣ ರೇಖಾಚಿತ್ರಗಳುಳ್ಳ ಕೆಂಪು ಹಾಗೂ ಕೆಂಪು–ಕಪ್ಪು ದಿವರ್ಣದ ಪಾತ್ರೆಗಳು ಮಾತ್ರ ಇದ್ದವು. ಬಹುಶಃ ದಮ್ಮಸ್ಸು ಮಾಡಿದ ನೆಲವುಳ್ಳ ಹುಲ್ಲಿನ ಜೋಪಡಿಗಳಲ್ಲಿ ಜನರು ವಾಸಿಸುತ್ತಿದ್ದರು. ನೆಲದ ಸುತ್ತಲೂ ಅಲ್ಲೊಂದು ಇಲ್ಲೊಂದು ಗೋಡೆಯ ಕಂಬಗಳ ಗುಳಿಗಳಿದ್ದವು. ಸರಗಳಿಗೆ ಪೋಣಿಸಿದ್ದ ಸುಡಾವೆ ಮಣ್ಣಿನ ಅಡಿಕೆಯಾಕಾರದ ಮಣಿಗಳು, ಕುಂಟೆಬಿಲ್ಲೆಯಾಟದ ಬಿಲ್ಲೆಗಳು, ಕಾರ್ನೇಲಿಯನ್, ಅಗೇಟ್ ಮುಂತಾದ ಕಲ್ಲುಗಳ, ಹವಳ ಮತ್ತು ಸ್ಟಿಯಟೈಟ್‌ನ ಅತಿಸೂಕ್ಷ್ಮ ಚಪ್ಪಟೆ ಮಣಿಗಳು ದೊರಕಿದವು. ಕಲ್ಗೋರಿಯ ಉತ್ಖನನದಲ್ಲಿ ಒಂದು ಗುಂಡಿಯಲ್ಲಿದ್ದ ಗುಡಾಣದೊಳಗೆ ಮಾನವನ ಅಸ್ಥಿ ಚೂರುಗಳು, ಸಣ್ಣ ಗಾತ್ರದ ಬಟ್ಟಲುಗಳು, ಚೊಂಬಿನಾಕೃತಿಯ ಮಣ್ಪಾತ್ರೆಗಳು, ಉಂಗುರಾಕಾರದ ಮಣ್ಣಿನ ಸಿಂಬೆಯ ಮೇಲಿಟ್ಟಿದ್ದ ಬಟ್ಟಲು, ಇವುಗಳ ಸುತ್ತ ಒಂದು ಕಬ್ಬಿಣದ ಬಾಚಿ ಮತ್ತು ಚೂರಿ ಇದ್ದವು. ಶವಕುಣಿಯನ್ನು ನೈಸರ್ಗಿಕ ಜಂಬಿಟ್ಟಿಗೆ ತಳಬಂಡೆಯಲ್ಲಿ ತೋಡಲಾಗಿತ್ತು. ಹತ್ತಿರದ ಒಂದು ಗವಿಯೊಳಗೆ ನಡೆಸಿದ ಉತ್ಖನನದ ಗುಂಡಿಯಲ್ಲಿ ಎರಡು ಅನುಕ್ರಮ ಸಾಂಸ್ಕೃತಿಕ ಹಂತಗಳಿದ್ದು ಕೆಳಗಿನ ಹಂತದಲ್ಲಿ ಸೂಕ್ಷ್ಮ ಶಿಲೋಪಕರಣಗಳು ಮತ್ತು ಕೆಂಪುಬಣ್ಣದ ಮಣ್ಪಾತ್ರೆಗಳು ಇದ್ದವು. ಮೇಲಿನ ಹಂತದಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಮಣ್ಣಿನ ಪಾತ್ರೆಗಳು, ಸುಡಾವೆ ಮಣ್ಣಿನ, ಅರೆ–ಪ್ರಶಸ್ತ ಕಲ್ಲುಗಳ, ಗಾಜಿನ ಮತ್ತು ಸ್ಟಿಯಟೈಟ್ ಮಣಿಗಳು ಹಾಗೂ ತಾಮ್ರದ ಮತ್ತು ಕಬ್ಬಿಣದ ಉಪಕರಣಗಳಿದ್ದವು. ಈ ನೆಲೆಯ ಬಿಳಿವರ್ಣ ರೇಖಾಚಿತ್ರಿತ ಮಣ್ಪಾತ್ರೆಗಳು ಆಕಾರ, ಮಾದರಿ ಮತ್ತು ಲಕ್ಷಣಗಳಲ್ಲಿ ಹಳ್ಳೂರಿನ ಬೃಹತ್ ಶಿಲಾ ಸಂಸ್ಕೃತಿಯ ಮಡಕೆಗಳನ್ನು ಹೋಲುವುದು ಗಮನಾರ್ಹ. (ಎಸ್.ಐ.)

**ತಿರುಕಾಂಪುಲಿಯೂರು:** ತಮಿಳುನಾಡು ರಾಜ್ಯದ ತಿರುಚಿರಾಪಳ್ಳಿ ಜಿಲ್ಲೆಯಲ್ಲಿರುವ ಕುಲಿತ್ತಲೈ ತಾಲ್ಲೂಕಿಗೆ ಸೇರಿದ ಐತಿಹಾಸಿಕ ನೆಲೆ. ಕಾವೇರಿ ನದಿ ಕೆಳಬಯಲಿನಲ್ಲಿರುವ ಈ ನೆಲೆಯಲ್ಲಿ ನಡೆದ ಉತ್ಖನನಗಳಿಂದ ಪ್ರ.ಶ.ಪೂ. 3ನೆಯ ಶತಮಾನದಿಂದ 1500 ವರ್ಷಗಳ ವರೆಗಿನ ಮೂರು ಅನುಕ್ರಮ ಸಾಂಸ್ಕೃತಿಕ ಹಂತಗಳನ್ನು ತಿಳಿಯಬಹುದಾಗಿದೆ. ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗದ ವಿ.ವಿ. ಮಹಾಲಿಂಗಮ್ ಹಾಗೂ ಅವರ ಸಹೋದ್ಯೋಗಿಗಳಾದ ಸಿ. ಕೃಷ್ಣಮೂರ್ತಿ, ಬಿ.ಕೆ. ಗುರುರಾಜರಾವ್ 1962 ಮತ್ತು 1963ರಲ್ಲಿ ಅನ್ವೇಷಣೆ ಮತ್ತು ಉತ್ಖನನಗಳನ್ನು ಸತತವಾಗಿ ಈ ನೆಲೆಯಲ್ಲಿ ನಡೆಸಿದರು. ಹಂತ 1: ಪ್ರ.ಶ.ಪೂ 3ನೆಯ ಶತಮಾನದಿಂದ ಪ್ರ.ಶ. 3 ಮತ್ತು 4ನೆಯ ಶತಮಾನ. ಹಂತ 2: 3 ಮತ್ತು 4ನೆಯ ಶತಮಾನದಿಂದ 9 ಮತ್ತು 10ನೆಯ ಶತಮಾನಗಳ ವರೆಗೆ. ಹಂತ 3: 9 ಮತ್ತು 10ನೆಯ ಶತಮಾನದಿಂದ 14 ಮತ್ತು 15ನೆಯ ಶತಮಾನದ ವರೆಗೆ. ಹಂತ 1: ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ವಿಪುಲವಾಗಿವೆ. ಜೊತೆಗೆ ಅಚ್ಚಕಪ್ಪು ವರ್ಣದ ಪಾತ್ರೆಗಳು ಮತ್ತು ಕೆಮ್ಮಣ್ಣಿನ ತೆಳು ಲೇಪನವುಳ್ಳ ಬಿಳಿ ರೇಖಾಚಿತ್ರಿತ ಮಣ್ಪಾತ್ರೆಗಳು ವಿಶಿಷ್ಟವಾದುವು. ಬಹುಮಟ್ಟಿಗೆ ಇವು ಈ ಪ್ರದೇಶದ ಆದಿ ಕಬ್ಬಿಣಯುಗದ ಬೃಹತ್‌ಶಿಲಾ ಸಂಸ್ಕೃತಿಯದಾಗಿರಬಹುದು. ಹಂತ 2: ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳ ಉಪಯೋಗ ಕಡಿಮೆಯಾಗಿ ಕೆಂಪು ಲೇಪನವುಳ್ಳ ಉತ್ತಮ ಗುಣಮಟ್ಟದ ಪಾತ್ರೆಗಳೂ ಲೇಪನರಹಿತ ಕೆಂಪುಪಾತ್ರೆಗಳೂ ಕಾಣಿಸಿಕೊಂಡವು. ಹಂತ 3: ಸರಿಯಾಗಿ ಸುಡದ ಕೆಂಪು ಲೇಪನ ಸಹಿತ/ರಹಿತ ಮಣ್ಪಾತ್ರೆಗಳು ಬಳಕೆಗೆ ಬಂದುವು. ಸುಟ್ಟ ಇಲ್ಲವೆ ಹಸಿ ಇಟ್ಟಿಗೆ ಕಟ್ಟಡ ಅವಶೇಷಗಳೂ ಕಂಡುಬಂದವು. ಈ ಎಲ್ಲ ಹಂತಗಳಲ್ಲಿ ಮಣಿಗಳು, ಶಂಖದ ಬಳೆ, ಸುಡಾವೆಮಣ್ಣಿನ ಗೊಂಬೆಗಳು ದೊರೆತಿವೆ.

ಮೊದಲನೆಯ ಎರಡು ಹಂತಗಳು ಸಂಗಮ್ ಸಾಹಿತ್ಯದಲ್ಲಿ ನಿರೂಪಿತವಾಗಿರುವ ಕೆಲವೊಂದು ವಿಷಯಗಳಿಗೆ ಪೂರಕವಾಗಿವೆ. (ಡಿ.ಟಿ.)

**ತಿರುಮಕೂಡಲು ನರಸೀಪುರ:** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು, ಈ ತಾಲ್ಲೂಕಿನ ಆಡಳಿತ ಕೇಂದ್ರ. ಕಾವೇರಿ– ಕಪಿಲಾ ನದಿಗಳ ಸಂಗಮದ ಬಳಿ, ಮೈಸೂರು ನಗರಕ್ಕೆ ಆಗ್ನೇಯದಲ್ಲಿ 35ಕಿಮೀ ದೂರದಲ್ಲಿದೆ. ಇಲ್ಲಿಂದ ನಂಜನಗೂಡು 30ಕಿಮೀ ದೂರದಲ್ಲಿದೆ. ಕಾವೇರಿಯ ತಳದಲ್ಲಿದೆಯೆನ್ನಲಾದ ಸ್ಫಟಿಕ ಸರೋವರ ಕಾವೇರಿ ಮತ್ತು ಕಪಿಲಾ ನದಿಗಳು ಕೂಡುವ ಸ(ತಿರುಮು–ಕೂಡಲು) ಸ್ಥಳಕ್ಕೆ ತಿರುಮಕೂಡಲು ಎಂದು ಹೆಸರು ಬಂದಿದೆ. ಇದರಿಂದಾಚೆ ಕಪಿಲಾ ನದಿಯ ಬಲದಂಡೆಯಲ್ಲಿ ಮತ್ತು ಕಾವೇರಿಯ ಪಕ್ಕದಲ್ಲಿ ನರಸೀಪುರ ಪಟ್ಟಣ ಇದೆ. ನರಸೀಪುರದಲ್ಲಿರುವ ಗುಂಜಾನರಸಿಂಹ ಮತ್ತು ಮೂಲಸ್ಥಾನೇಶ್ವರ ದೇವಾಲಯಗಳೂ ತಿರುಮಕೂಡಲಿನ ಅಗಸ್ತ್ಯೇಶ್ವರ ದೇವಸ್ಥಾನವೂ ಪ್ರಸಿದ್ಧವಾದವು.

ರಾಜ್ಯ ಪುರಾತತ್ತ್ವ ಇಲಾಖೆ 1958–60 ಮತ್ತು 1961–62ರಲ್ಲಿ ಇಲ್ಲಿ ಉತ್ಖನನ ನಡೆಸಿ ನವಶಿಲಾಯುಗ, ಬೃಹತ್ ಶಿಲಾಯುಗ ಹಾಗೂ ಆದಿಚಾರಿತ್ರಿಕ ಕಾಲದ ಅವಶೇಷಗಳನ್ನು ಬೆಳಕಿಗೆ ತಂದಿತು. ನದಿದಂಡೆಯ ಮಧ್ಯ ಹಳೆಶಿಲಾಯುಗದ ಉಪಕರಣಗಳೂ ಕಂಡುಬಂದವು. ನವಶಿಲಾಯುಗದ ಪದರದಲ್ಲಿ ದಪ್ಪದ ಬೂದುಬಣ್ಣದ ಪಾತ್ರೆ, ಉಜ್ಜಿದ ಬೂದು, ಕೆಂಪು ಹಾಗೂ ಕಂದುಬಣ್ಣದ ಪಾತ್ರೆಗಳು ಮತ್ತು ಜೋರ್ವೆ ಅಥವಾ ಸಾವಳ್ದ ಮಾದರಿಯ ಕೆಲವು ಪಾತ್ರೆ ಚೂರುಗಳು ಸಿಕ್ಕವು. ಹೆಚ್ಚಿನ ಪಾತ್ರೆಗಳು ತಿಗುರಿಯನ್ನುಪಯೋಗಿಸದೆ ಕೈಯಿಂದಲೇ ತಟ್ಟಿ ಮಾಡಿದಂತಹವು. ಕೆಲವು ಪಾತ್ರೆಗಳ ಮೇಲೆ ಗೆರೆಗಳ ಗೀರು ವಿನ್ಯಾಸಗಳಿದ್ದವು. ಕೆಂಬಣ್ಣದ ಪಾತ್ರೆಗಳಲ್ಲಿ ಕೆಲವು ನೇರಳೆ ಬಣ್ಣದ ಬಾಗಿದ ಗೆರೆಗಳಿಂದ ಅಲಂಕರಿಸಲ್ಪಟ್ಟಿದ್ದವು. ಅಧಿಕ ಸಂಖ್ಯೆಯಲ್ಲಿರುವ ಗಿಂಡಿ ಹಾಗೂ ದೊಡ್ಡ ಪ್ರಮಾಣದ ಒಳಲೆಯಾಕಾರದ ಪಾತ್ರೆಗಳಲ್ಲಿ ನಳಿಕೆ ಅಥವಾ ಚುಳ್ಳಿಗೆ ಸಾಮಾನ್ಯವಾಗಿ ಕೆಮ್ಮಣ್ಣಿನ ಬಣ್ಣ ಹಚ್ಚಲಾಗಿತ್ತು. ಕಲ್ಲಿನ ಕೊಡಲಿಗಳು, ಕುಟ್ಟಾಣಿ ಹಾಗೂ ಸುಡಾವೆ ಮಣ್ಣಿನ ತಲೆಯಾನಿಕೆಗಳು ಈ ಸಂಸ್ಕೃತಿಯ ಪ್ರಮುಖ ಅವಶೇಷಗಳು. ಇದೇ ಪದರದಲ್ಲಿದ್ದ ಪೂರ್ಣ ಮಾನವ ಅಸ್ಥಿಪಂಜರವುಳ್ಳ ಶವಕುಣಿ ಒಂದು ಅಪರೂಪದ ಶೋಧವಾಗಿದೆ. ಪೂರ್ವ–ಪಶ್ಚಿಮಾಭಿಮುಖವಾಗಿ ಹೆಣವನ್ನು ಇದರಲ್ಲಿ ಹೂಳಿದ್ದು ಕೈಗಳನ್ನು ಹೊಟ್ಟೆಯ ಮೇಲೆ ಇಡಲಾಗಿತ್ತು. ಕುತ್ತಿಗೆಯ ಕೆಳಗೆ ಆಧಾರವಾಗಿ ತಲೆಯಾನಿಕೆಯಿತ್ತು. ಈ ನೆಲೆಯ ಮೇಲ್ಮೈಮೇಲೆ ಹಲವಾರು ತ್ರಿಕೋಣಾಕೃತಿಯ ಉಜ್ಜಿ ಮಾಡಿದ ಹರಿತ ಬಾಯಿಯುಳ್ಳ ಶಿಲಾಕೊಡಲಿಗಳು ಸಿಕ್ಕಿವೆ. ಆದರೆ ಉತ್ಖನನದಲ್ಲಿ ಈ

ಸಂಸ್ಕೃತಿಯ ಅಂತ್ಯಕಾಲದ ಸ್ತರದಲ್ಲಿ ಇಂಥ ಒಂದೇ ಒಂದು ಕೊಡಲಿ ದೊರೆತಿರುವುದು ಕುತೂಹಲಕಾರಿಯಾಗಿದೆ. ಬೃಹತ್ ಶಿಲಾಯುಗ ಹಂತದಲ್ಲಿ ಹೊಳಪಿನ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು ದೊರೆತವು. ಅನೇಕ ಪಾತ್ರೆ ಚೂರುಗಳ ಮೇಲೆ ಗೀರುಚಿತ್ರಗಳು ಇರುವುದು ಗಮನಾರ್ಹ. ಕತ್ತಿಯನ್ನು ಹೋಲುವ ಏಕೈಕ ಕಬ್ಬಿಣ ಉಪಕರಣ ಈ ಪದರದಲ್ಲಿ ದೊರೆಯಿತು. ಆದಿಚಾರಿತ್ರಿಕ ಪದರ ಅತ್ಯಂತ ತೆಳುವಾಗಿದ್ದು ಕಾವಿಲೇಪನದಡಿ ಬಿಳಿಚಿತ್ರಿತ ಕೆಂಪು, ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು ಶಂಖ-ಗಾಜಿನ ಬಳೆಚೂರುಗಳು ಇಲ್ಲಿ ಸಿಕ್ಕವು.(ಏ.ಎಸ್.)

ಇಲ್ಲಿರುವ ಅಗಸ್ತ್ಯೇಶ್ವರ ದೇವಾಲಯ ದ್ರಾವಿಡ ಮಾದರಿಯಲ್ಲಿರುವ ಕಟ್ಟಡ. ಗರ್ಭಗುಡಿ ಸೇರಿದಂತಿರುವ ಮೂಲಭಾಗ ಬಹುಶಃ 10-11ನೆಯ ಶತಮಾನದ ನಿರ್ಮಾಣ. ಮುಂದಿರುವ ನವರಂಗ ಮಂಟಪ ಸ್ವಲ್ಪಕಾಲಾನಂತರದಲ್ಲಿ ಕಟ್ಟಲಾಯಿತು. ಇದರಲ್ಲಿಯ ಅನೇಕ ಕಂಬಗಳ ಮೇಲೆ ಪಿಟೀಲುವಾದಕಿ, ದುರ್ಗಾ ಮೊದಲಾದ ಸುಂದರ ಶಿಲ್ಪಗಳಿವೆ. ನವರಂಗದಲ್ಲಿ

ಗುಂಜಾ ನರಸಿಂಹ ದೇವಾಲಯ

ಸುಬ್ರಹ್ಮಣ್ಯ, ಹೊಯ್ಸಳ ಕಾಲದ ಮಹಿಷಾಸುರಮರ್ದಿನಿ, ಸೂರ್ಯ ಮೊದಲಾದ ಶಿಲಾಶಿಲ್ಪಗಳಿವೆ. ವಿಜಯನಗರ ಕಾಲದ ಕೆಲವು ಕಂಚಿನ ವಿಗ್ರಹಗಳೂ ಒಂದು ಕೋಣೆಯಲ್ಲಿ ಉತ್ಸವಮೂರ್ತಿ ಇವೆ. ಈ ಮೂಲಗುಡಿಯ ವಾಯವ್ಯದಲ್ಲಿ ಪಾರ್ವತಿ ಗುಡಿ ಇದೆ. ಇದು ಪಾಳೆಯಗಾರರ ಕಾಲದ ನಿರ್ಮಾಣ. ಈ ದೇವಿಯನ್ನು ಪೂರ್ಣಮಂಗಳ ಕಾಮಾಕ್ಷಿಯೆಂದು ಕರೆಯುತ್ತಾರೆ. ಈಕೆಯ ವಿಗ್ರಹ ಸುಂದರವಾಗಿದ್ದು ಸು.1.20 ಮೀ ಎತ್ತರವಿದೆ. ಸುತ್ತಲೂ ಪ್ರಾಕಾರದ ಒಳಭಾಗದಲ್ಲಿ ನಂದಿ, ವಿಷ್ಣು, ದಕ್ಷಿಣಾಮೂರ್ತಿ ಮೊದಲಾದ ಅನೇಕ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿರುವ ಅಶ್ವತ್ಥನಾರಾಯಣನ ಮೂರ್ತಿ ವಿಶಿಷ್ಟ ಕೃತಿ. ಇದು ಸು.60 ಸೆಂಮೀ ಎತ್ತರವಾಗಿದ್ದು ನೃತ್ಯಭಂಗಿಯಲ್ಲಿದ್ದು ಅಷ್ಟಕರಗಳಿಂದ ಕೂಡಿದೆ. ದೇವಾಲಯದಲ್ಲಿ ಅಗಸ್ತ್ಯೇಶ್ವರ ಲಿಂಗವಲ್ಲದೆ ಸೋಮೇಶ್ವರ ಮತ್ತು ಮಾರ್ಕಂಡೇಶ್ವರ ಲಿಂಗಗಳೂ ಇವೆ. ಮುಂದಿರುವ ಮಹಾದ್ವಾರದ ಮೇಲೆ ಚಿಕ್ಕ ಗೋಪುರವಿದೆ. ದೇವಾಲಯದ ಮುಂದೆ ಒಂದು ದೊಡ್ಡ ಉಯ್ಯಾಲೆ ಕಂಬ (ತೋರಣ) ಮತ್ತು ಎತ್ತರದ ದೀಪಸ್ತಂಭಗಳಿವೆ.

ದೇವಾಲಯದ ಹೊರಗಡೆ ಇರುವ ಅಶ್ವತ್ಥಮರ (ಅಶ್ವತ್ಥನಾರಾಯಣ) ಪವಿತ್ರವಾದುದೆಂದು ನಂಬಿಕೆ. ಇದು ಅನಾದಿಯಿಂದಲೂ ಇದೆಯೆಂದು, ಇದನ್ನು ಮೊದಲು ಬ್ರಹ್ಮ ಪೂಜಿಸಿದನೆಂದು ಪ್ರತೀತಿ. ಇದರ ಸುತ್ತ ಅನೇಕ ನಾಗರಕಲ್ಲುಗಳನ್ನೂ ಹನುಮಂತ ವಿಗ್ರಹಗಳನ್ನೂ ಪ್ರತಿಷ್ಠಾಪಿಸಿದೆ. ಇದರ ಸಮೀಪದಲ್ಲೇ ವ್ಯಾಸರಾಯ ಮಠವಿದ್ದು ಇದರಲ್ಲಿ ಈ ಮಠದ ಕೆಲವು ಗುರುಗಳ ಬೃಂದಾವನಗಳಿವೆ. ತಿರುಮಕೂಡಲಿನ ಎದುರಿಗೆ ಕಾವೇರಿಯ ಎಡದಂಡೆಯಲ್ಲಿ ಆನಂದೇಶ್ವರ, ಭಿಕ್ಷೇಶ್ವರ ಎಂಬ ಎರಡು ಶಿವಾಲಯಗಳಿವೆ. ಆನಂದೇಶ್ವರ ದೇವಾಲಯವನ್ನು ಸು.18ನೆಯ ಶತಮಾನದಲ್ಲಿ ಚಿದಾನಂದಸ್ವಾಮಿ ಎಂಬ ಯತಿ ಕಟ್ಟಿಸಿದನೆಂದು ಹೇಳಲಾಗುತ್ತದೆ. *

ಇಲ್ಲಿರುವ ಗುಂಜಾನರಸಿಂಹ ದೇವಾಲಯ ಊರಿನ ಉತ್ತರಕ್ಕೆ ನದಿಯ ದಂಡೆಯಲ್ಲಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯ ದೊಡ್ಡ ಕಟ್ಟಡ. ಈ ದೇವಾಲಯ ವಿಜಯನಗರದ ಕಾಲದ ರಚನೆ. ಇಲ್ಲಿ ದೊರೆತಿರುವ ಪ್ರಾಚೀನತಮ ಶಾಸನ ಕೃಷ್ಣದೇವರಾಯನ ಕಾಲದ್ದಾಗಿದ್ದು ದೇವಾಲಯಕ್ಕೆ ನೀಡಿದ ದತ್ತಿಯ ವಿಚಾರವನ್ನು ತಿಳಿಸುತ್ತದೆ. ಮೂಗೂರ ಅರಸರು ಹಾಗೂ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಈ ದೇವಾಲಯವನ್ನು ಮತ್ತಷ್ಟು ವಿಸ್ತರಿಸಿದರು. ದ್ರಾವಿಡ ಮಾದರಿಯಲ್ಲಿ ನಿರ್ಮಿತವಾಗಿರುವ ಈ ದೇವಾಲಯ ಗರ್ಭಗೃಹ, ಸೊಗಸಾದ ಮಂಟಪ, ಪ್ರಾಕಾರ, ಮಹಾದ್ವಾರ ಮತ್ತು ಗೋಪುರ-ಇವುಗಳಿಂದ ಕೂಡಿದ ವಿಶಾಲ ಕಟ್ಟಡ. ಮಂಟಪದ ಮುಂದೆ ಬಲಿಪೀಠದ ಬಳಿ ಪರಸ್ಪರ ಎದುರಿರುವ ಕಂಬಗಳ ಮೇಲೆಲ್ಲ ತುಂಬ ಅಲಂಕೃತವಾದ, ಅಂಜಲಿಬದ್ಧವಾಗಿ, ನಿಂತಭಂಗಿಯಲ್ಲಿರುವ ಮತ್ತು ಗಡ್ಡಧಾರಿಯಾದ ಎರಡು ಮೂರ್ತಿಗಳನ್ನು ಕೆತ್ತಿದೆ. ಇವು ಮೂಗೂರ ಅರಸ ಹಾಗೂ ದೇವಾಲಯದ ಈ ಭಾಗವನ್ನು ಕಟ್ಟಿಸಿದ ಅವನ ಸೋದರರನ್ನು ಪ್ರತಿನಿಧಿಸುತ್ತವೆಂದು ಹೇಳಲಾಗಿದೆ. ಇದೇ ರೀತಿ ಮಹಾದ್ವಾರದ ಬಳಿ ಇರುವ ಮೂರ್ತಿಯೊಂದು ಗೋಪುರವನ್ನು ಕಟ್ಟಿಸಿದ ಇನ್ನೊಬ್ಬ ಮೂಗೂರ ಅರಸನನ್ನು ಪ್ರತಿನಿಧಿಸುತ್ತದೆ. ದೇವಾಲಯದ ಪ್ರಾಕಾರದೊಳಗೆ ರಾಮ, ಕೃಷ್ಣ, ವರದರಾಜ, ಆಂಡಾಳ್ ಮುಂತಾದ ಮೂರ್ತಿಗಳನ್ನೊಳಗೊಂಡ ಕೆಲವು ಚಿಕ್ಕ ಗುಡಿಗಳಿವೆ. ದೇವಾಲಯದ ಸುತ್ತ ಇರುವ ಮೇಲ್ಭಾಗದ ಕೈಪಿಡಿಗೋಡೆಯಲ್ಲಿ ವಿಷ್ಣುವಿನ ವಿವಿಧ ರೂಪ ಮತ್ತು ಅವತಾರಗಳ ಗಾರೆಯ ಮೂರ್ತಿಗಳಿವೆ. ಕೆಲವು ಮೂರ್ತಿಗಳ ಕೆಳಗೆ ಹೆಸರುಗಳನ್ನೂ ಕೆತ್ತಿದೆ. ಕೃಷ್ಣನ ಲೀಲೆಗಳನ್ನು ವಿವರಿಸುವ ಮೂರ್ತಿಗಳೂ ಇಲ್ಲಿವೆ. ಕೆಲವು ವಿಚಿತ್ರ ಮೂರ್ತಿಗಳು ಅಲ್ಲಲ್ಲಿ ಕಾಣಸಿಗುತ್ತವೆ. ದಕ್ಷಿಣ ಹಾಗೂ ಪಶ್ಚಿಮದ ಕೈಪಿಡಿ ಗೋಡೆಯಲ್ಲಿ ಹಿರಣ್ಯಕಶಿಪು ಸಂಹಾರ, ಯೋಗಾನರಸಿಂಹ, ಲಕ್ಷ್ಮೀನರಸಿಂಹ, ಅಷ್ಟಪಾಣಿ ನರಸಿಂಹ ಇತ್ಯಾದಿಯಾಗಿ ನರಸಿಂಹನ ಒಂಬತ್ತು ವಿವಿಧ ರೂಪಗಳನ್ನು ಚಿತ್ರಿಸಲಾಗಿದೆ.

ಮೂಲದೇವರಾದ ನರಸಿಂಹನ ಬಲಗೈಯ ಹೆಬ್ಬೆರಳು ಮತ್ತು ತೋರುಬೆರಳುಗಳ ನಡುವೆ ಗುಂಜಾಸಸ್ಯದ ಕಾಂಡವೊಂದನ್ನು ಬಿಡಿಸಲಾಗಿದೆ. ಈ ಕ್ಷೇತ್ರ ಪಾವಿತ್ರ್ಯದಲ್ಲಿ ಕಾಶಿಗಿಂತ ಒಂದು ಗುಂಜಿ ತೂಕ ಹೆಚ್ಚು ಎಂಬ ಅಂಶವನ್ನು ಇದು ಸೂಚಿಸುತ್ತದೆಂಬ ನಂಬುಗೆ ಇದೆ. ಈ ದೇವಾಲಯದ ಎಡಭಾಗಕ್ಕೆ ಅನತಿ ದೂರದಲ್ಲಿ ಸೊಗಸಾದ ಜನಾರ್ದನ ಮೂರ್ತಿಯುಳ್ಳ ಚಿಕ್ಕ ಗುಡಿಯೊಂದಿದೆ. ಇದರ ಪಶ್ಚಿಮಕ್ಕೆ 1855ರಲ್ಲಿ ನಿರ್ಮಿತವಾದ ಪ್ರಹ್ಲಾದ ಮಂಟಪವಿದೆ.

ಊರಿನ ಪೂರ್ವಕ್ಕೆ ನದಿ ದಂಡೆಯಲ್ಲಿ ಮೂಲಸ್ಥಾನೇಶ್ವರ ಗುಡಿ ಇದೆ. ಇದು ಬಹುಶಃ 1300ರಲ್ಲಿ ರಚನೆಯಾಗಿದ್ದು ಅನಂತರ 19ನೆಯ ಶತಮಾನದಲ್ಲಿ ಪುನರ್ನಿರ್ಮಿತವಾದ ದ್ರಾವಿಡ ಮಾದರಿಯ ಚಿಕ್ಕ ಗುಡಿ. (ಎಚ್.ಎಂ.ಎನ್.ಆರ್.)

**ತಿರುವನಂತಪುರ:** ಕೇರಳ ರಾಜ್ಯದ ರಾಜಧಾನಿ; ತಿರುವನಂತಪುರ ಜಿಲ್ಲೆಯ ಮುಖ್ಯ ಪಟ್ಟಣ. ಇದು ಹಿಂದೆ ತಿರುವಾಂಕೂರು ಸಂಸ್ಥಾನದ ಮುಖ್ಯ ಪಟ್ಟಣವೂ ಆಗಿತ್ತು. ಇದು ದಕ್ಷಿಣ ಭಾರತದ ಪ್ರಮುಖ ರೇವುಪಟ್ಟಣ ಹಾಗೂ ದೊಡ್ಡ ವ್ಯಾಪಾರಕೇಂದ್ರ. ಇಲ್ಲಿಂದ ಮುಂಬೈ ಹಾಗೂ ಚೆನ್ನೈಗಳಿಗೆ ರೈಲು ಹಾಗೂ ವಿಮಾನ ಸೌಲಭ್ಯ ಉಂಟು.

ಈ ನಗರ ಸಮುದ್ರಕ್ಕೆದುರಾಗಿರುವ ಪಶ್ಚಿಮ ಘಟ್ಟಗಳಿಗೆ ಸೇರಿದ ಒಂದು ಎತ್ತರವಾದ ದಿಣ್ಣೆಯ ಮೇಲಿದೆ. ಆದ್ದರಿಂದ ಈ ಸ್ಥಳದಿಂದ ಕಾಣುವ ದೃಶ್ಯ ಅತ್ಯಂತ ಮನಮೋಹಕವಾದದ್ದು. ಇಲ್ಲಿ ಅನೇಕ ಸರ್ಕಾರಿ ಕಟ್ಟಡಗಳೂ ಸರ್ಕಾರಿ ಸಚಿವಾಲಯ, ನೇಪಿಯರ್ ವಸ್ತುಸಂಗ್ರಹಾಲಯ, ವಿಕ್ಟೋರಿಯ ಜ್ಯೂಬಿಲಿ ಪುರಭವನ ಮುಂತಾದ ಭವ್ಯ ಭವನಗಳೂ ಇವೆ. ಹಿಂದೆ ಆಗಿಹೋದ ತಿರುವಾಂಕೂರ್ ದೊರೆಯ ಬಲು ಆಕರ್ಷಕ ಅರಮನೆ ಇಲ್ಲಿದೆ. ಇಲ್ಲಿರುವ ಪ್ರಾಣಿಸಂಗ್ರಹಾಲಯ ಭಾರತದ ಅತ್ಯುತ್ತಮ ಪ್ರಾಣಿಸಂಗ್ರಹಾಲಯಗಳಲ್ಲೊಂದು ಎಂಬ ಖ್ಯಾತಿ ಗಳಿಸಿದೆ. ಶ್ರೀ ಚಿತ್ರಾಲಯಂ ಎಂಬುದು ಇಲ್ಲಿರುವ ಒಂದು

ಅನಂತಪದ್ಮನಾಭಸ್ವಾಮಿ ದೇವಾಲಯ

ಪ್ರಸಿದ್ಧ ಚಿತ್ರಕಲಾಶಾಲೆ. ಇದರಲ್ಲಿ ರಾಜಾ ರವಿವರ್ಮನ ಕಲಾಕೃತಿಗಳೂ ಸೇರಿದಂತೆ ಅನೇಕ ಚಿತ್ತಾಕರ್ಷಕ ಚಿತ್ರಕೃತಿಗಳನ್ನು ಪ್ರದರ್ಶಿಸಲಾಗಿದೆ. ರಜಪೂತ, ಮೊಗಲ್ ಹಾಗೂ ತಂಜಾವೂರು ಸಂಪ್ರದಾಯದ ಕಲಾಕೃತಿಗಳೂ ಅಜಂತ ಮತ್ತು ಸಿಗ್ರಿಯ ಭಿತ್ತಿಚಿತ್ರಗಳೂ ಚೀನ, ಜಪಾನ್, ಟಿಬೆಟ್ ಮತ್ತು ಬಾಲಿ ಶೈಲಿಯ ಕೃತಿಗಳೂ ಆಧುನಿಕ ಭಾರತೀಯ ಚಿತ್ರಕಾರರು ಕ್ಯಾನ್‌ವಾಸಿನ ಮೇಲೆ ಮೂಡಿಸಿರುವಂಥ ಚಿತ್ರಕೃತಿಗಳೂ ಇವೆ. ಹಿಂದು ನಂಬಿಕೆಯ ಪ್ರಕಾರ 108 ದಿವ್ಯ ದೇಶಗಳಲ್ಲಿ ತಿರುವನಂತಪುರವೂ ಒಂದು. ಇಲ್ಲಿಯ ಅನಂತಪದ್ಮನಾಭಸ್ವಾಮಿ ದೇವಾಲಯ ಬಹಳ ಪ್ರಸಿದ್ಧವಾದದ್ದು. ತಿರುವನಂತಪುರದಲ್ಲಿ

ಮತ್ಸ್ಯಪಾಲನಾಗಾರವಿದೆ. ಇದು ಸಾಗರದ ಜೀವವಿಜ್ಞಾನಿಗಳಿಗೂ ಮತ್ಸ್ಯೋದಮಿಗಳಿಗೂ ಉಪಯುಕ್ತವಾಗಿದೆ. ಈ ನಗರಕ್ಕೆ 16 ಕಿಮೀ ದೂರದಲ್ಲಿ ಪ್ರಸಿದ್ಧ ವಿಹಾರ ಸ್ಥಳವಾದ ಕೋವಲಮ್‌ಸಮುದ್ರ ದಂಡೆ ಇದೆ. ಇದು ಕೇರಳ ವಿಶ್ವವಿದ್ಯಾಲಯದ ಕೇಂದ್ರ. (ಎಸ್.ಎಸ್.ಎಚ್.)

**ತುಗಲಕ್ ವಂಶ:** ಸು.1320–1414. ದೆಹಲಿಯಿಂದ ಆಳಿದ ತುರ್ಕಿ ಪಂಗಡಕ್ಕೆ ಸೇರಿದ ಸುಲ್ತಾನ್ ವಂಶ. ಗಾಜಿ ಮಾಲಿಕ್ ಮತ್ತು ಅವನ ಸಹೋದರರಾದ ರಜಬ್ ಮತ್ತು ಅಬೂಬಕ್ರ್ ಇವರು ಅಲಾಉದ್ದೀನ್ ಖಿಲ್ಜಿಯ ಕಾಲದಲ್ಲಿ ಭಾರತಕ್ಕೆ ಬಂದು ಖಿಲ್ಜಿ ಸೈನ್ಯವನ್ನು ಸೇರಿದರು. ಗಾಜಿ ಮಾಲಿಕ್ ತನ್ನ ಸ್ವಸಾಮರ್ಥ್ಯದಿಂದ ಸೈನ್ಯದಲ್ಲಿ ಕ್ರಮೇಣ ಉತ್ಕರ್ಷಗೆ ಬಂದ. ಅಲಾಉದ್ದೀನನ ಮರಣಾನಂತರ ದೆಹಲಿಯ ಸಿಂಹಾಸನವನ್ನು ಆಕ್ರಮಿಸಿದ ಖುಸ್ರಾವ್ ಖಾನನನ್ನು ಸೋಲಿಸಿ ಕೊಲ್ಲಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ. ಪ್ರಮುಖ ತುರ್ಕಿ ಸರ್ದಾರರು ಈತನೇ ಮುಂದಿನ ರಾಜನೆಂದು ಘೋಷಿಸಿದಾಗ ಘಿಯಾಸ್–ಉದ್ದೀನ್ ತುಗಲಕ್ ಎಂಬ ಅಭಿಧಾನದೊಡನೆ ದೆಹಲಿಯ ಸಿಂಹಾಸನವೇರಿ (1320) ತುಗಲಕ್ ವಂಶವನ್ನು ಸ್ಥಾಪಿಸಿದ. ಮುಂದೆ 5 ವರ್ಷಗಳ ಕಾಲ ಭದ್ರ ಆಡಳಿತ ನಡೆಸಿ ಆಕಸ್ಮಿಕವಾಗಿ ಮರಣ ಹೊಂದಿದ (1225). ಈತನ ಅನಂತರ ಈತನ ಮಗ ಜಾನ್‌ಖಾನ್ ಮಹಮ್ಮದ್ ತುಗಲಕ್ ಎಂಬ ಹೆಸರಿನೊಡನೆ ಪಟ್ಟವೇರಿದ. ತುಗಲಕ್ ವಂಶದಲ್ಲೇ ಈತ ವಿಚಿತ್ರ ಹಾಗೂ ವಿರೋಧಾಭಾಸಕರ ನಡವಳಿಕೆಗಳಿಗಾಗಿ ಪ್ರಸಿದ್ಧನಾಗಿದ್ದಾನೆ. ಈತ ತನ್ನ ಪಾಂಡಿತ್ಯಕ್ಕೆ, ಕ್ರೌರ್ಯಕ್ಕೆ ಮತ್ತು ಔದಾರ್ಯಕ್ಕೆ ಹೆಸರಾಗಿದ್ದಾನೆ. ದೇವಗಿರಿಗೆ ರಾಜಧಾನಿಯ ಬದಲಾವಣೆ, ತಾಮ್ರದ ನಾಣ್ಯಗಳ ಚಲಾವಣೆ, ವಿಫಲ ಕೃಷಿ ಸುಧಾರಣೆಗಳು–ಇವು ಈತನ ಆಡಳಿತ ಕಾಲದ ಮುಖ್ಯ ಘಟನೆಗಳು. ಈತನ ಕಾಲದಲ್ಲಿ ರಾಜ್ಯದಲ್ಲಿ ಅರಾಜಕತೆ ತಲೆದೋರಿತು. 1351ರಲ್ಲಿ ಮಹಮ್ಮದ್ ಮರಣ ಹೊಂದಿದಾಗ ಇವನ ಚಿಕ್ಕಪ್ಪನ ಮಗ ಫಿರೋಜ್ ಷಾ ಪಟ್ಟವೇರಿದ. ಫಿರೋಜ್ ಷಾ ತುಗಲಕ್ ವಂಶದ ಅತ್ಯಂತ ಪ್ರಸಿದ್ಧನಾದ ರಾಜ. ಈತ 37 ವರ್ಷಗಳಷ್ಟು ದೀರ್ಘಕಾಲ ರಾಜ್ಯವಾಳಿದ. ಈತನದು ಇಸ್ಲಾಮೀ ಪ್ರಭುತ್ವ. ಈತ ಆಡಳಿತವನ್ನು ಶರೀಯತ್‌ಗೆ ಅನುಸಾರವಾಗಿ ನಡೆಸುತ್ತಿದ್ದ. ಪ್ರಪ್ರಥಮ ಬಾರಿ ಈತ ಬ್ರಾಹ್ಮಣರ ಮೇಲೆ ಜಿಜಿಯಾತೆರಿಗೆ ವಿಧಿಸಿದ. ಅನೇಕ ಹಿಂದು ಮಂದಿರಗಳನ್ನು ಕೆಡವಿಸಿದ. ಅನೇಕ ಮಸೀದಿ ಹಾಗೂ ಮದರಸಗಳನ್ನು (ಪಾಠಶಾಲೆ) ಕಟ್ಟಿಸಿದ. ಫಿರೋಜಾಬಾದ್ ಮತ್ತು ಜೋನಪುರ ಪಟ್ಟಣಗಳ ಸ್ಥಾಪನೆ ಆದದ್ದು ಈತನ ಕಾಲದಲ್ಲೇ. ಇವನು ಆಳುತ್ತಿದ್ದಾಗ ಇಬ್ನಬತೂತಾ ಎಂಬ ಪ್ರವಾಸಿ ಭಾರತವನ್ನು ಸಂದರ್ಶಿಸಿದ. ಫಿರೋಜ್ ಷಾನ ಅನಂತರ ಸ್ವಲ್ಪ ಸ್ವಲ್ಪ ಕಾಲ ಅನುಕ್ರಮವಾಗಿ 2ನೆಯ ಘಿಯಾಸುದ್ದೀನ್, ಅಬೂಬ್ರಕ್, 3ನೆಯ ಮಹಮ್ಮದ್, 1ನೆಯ ಸಿಕಂದರ್, ಮಹಮೂದ್ ಮತ್ತು ನುಸರತ್ ಷಾ ಎಂಬ ಆರು ಜನ ತುಗಲುಕ್ ಸುಲ್ತಾನರು ಆಳಿಕೆ ನಡೆಸಿದರು. ಇವರ ಕಾಲವೆಲ್ಲ ಪರಸ್ಪರ ಕಚ್ಚಾಟದಲ್ಲೇ ಕಳೆಯಿತು. ಮಹಮೂದನ ಆಳಿಕೆಯ ಕಾಲದಲ್ಲಿ (1395) ತೈಮೂರ್ ಭಾರತದ ಮೇಲೆ ದಂಡೆತ್ತಿ ಬಂದು ದೇಶವನ್ನು ಕೊಳ್ಳೆ ಹೊಡೆದ. ದೆಹಲಿ ಪಾಳುಬಿತ್ತು. ಬಲು ಬೇಗ ರಾಜ್ಯ ದುರ್ಬಲವಾಗಿ ಸಯ್ಯದ್ ವಂಶದವರ ಪಾಲಾಯಿತು. (ಎಚ್.ಎಸ್.ಎಸ್.ಬಿ.)

**ತುರ್ಕಿ:** ಪಶ್ಚಿಮ ಏಷ್ಯ ಮತ್ತು ಆಗ್ನೇಯ ಯುರೋಪ್ ಭೂಭಾಗಗಳನ್ನು ಒಳಗೊಂಡಿರುವ ಸಾರ್ವಭೌಮ ಪ್ರಜಾಪ್ರಭುತ್ವ ರಾಷ್ಟ್ರ. ಸು. 779,452 ಚ.ಕಿಮೀ ಭೂಪ್ರದೇಶವನ್ನು ಹೊಂದಿದ್ದು, ಮೆಡಿಟರೇನಿಯನ್, ಏಜಿಯನ್, ಕಪ್ಪು ಸಮುದ್ರಗಳಿಂದ ಆವೃತವಾಗಿದೆ. ತುರ್ಕಿ ಪರ್ವತಗಳ ದೇಶ. ಮಧ್ಯಭಾಗದಲ್ಲಿ ಅನಾಟೋಲಿಯ ಎಂಬ ವಿಸ್ತಾರವಾದ ಮೈದಾನ ಪ್ರದೇಶವನ್ನೊಳಗೊಂಡಿದೆ. ಇಲ್ಲಿನ ಆಡಳಿತ ಭಾಷೆ ತುರ್ಕಿ. ಬಹುತೇಕರು ಮಹಮ್ಮದೀಯರು, ಅಲ್ಪ ಪ್ರಮಾಣದಲ್ಲಿ ಕ್ರೈಸ್ತರು ಹಾಗೂ ಯಹೂದ್ಯರು ಇಲ್ಲಿ ನೆಲೆಸಿದ್ದಾರೆ. ಈ ದೇಶದ ಹಣದ ಹೆಸರು ಟರ್ಕಿಷ್ ಲಿರಾ. ಕುರ್ದ್, ತುರ್ಕಿ ಹಾಗೂ ಗ್ರೀಕ್ ಮೂಲದವರು ಇಲ್ಲಿ ಹೆಚ್ಚಾಗಿ ವಾಸಿಸುತ್ತಾರೆ.

ತುರ್ಕಿಯ ಹಿಂದಿನ ಹೆಸರು ಏಷ್ಯ ಮೈನರ್ ಎಂಬ ಭೂಪ್ರದೇಶವನ್ನು ಒಳಗೊಂಡ ಬೈಜಾಂಟಿಯನ್ ಸಾಮ್ರಾಜ್ಯ. ಪೂರ್ವರೋಮನ್ ಚಕ್ರಾಧಿಪತ್ಯದ ಆಡಳಿತ ಕೇಂದ್ರವಾಗಿ ಇದು 325ರಲ್ಲಿ ರೋಮ್‌ನಿಂದ ಕಾನ್‌ಸ್ಟಾಂಟಿನೋಪಲ್‌ಗೆ ವರ್ಗವಾಗುವುದರ ಮೂಲಕ ಪ್ರಸಿದ್ಧಿಗೆ ಬಂದಿತು. ತುರ್ಕಿ ಭಾಷೆಯನ್ನಾಡುತ್ತಿದ್ದ ಜನಸಮುದಾಯದವರಿಂದ 1300ರಲ್ಲಿ ಈ ದೇಶಕ್ಕೆ ತುರ್ಕಿಯೆಂಬ ಹೆಸರು ಬಂದಿತು.

6ನೆಯ ಶತಮಾನದಲ್ಲಿ ಉತ್ತರ ಏಷ್ಯದ ಆಲ್ಟಿಕ್–ಪರ್ವತ ಪ್ರದೇಶದ ಇಳಿಜಾರುಗಳಲ್ಲಿ ನೆಲೆಸಿದ್ದ ಸೀತೀಯಾನ್ ಚಾರ್ಚರ್ಸ್ ಎಂಬ ಗುಡ್ಡಗಾಡು ಸಮುದಾಯದವರು ಚೀನ ಮತ್ತು ಪರ್ಷಿಯ ಸಾಮ್ರಾಜ್ಯಗಳ ಅಧೀನಕ್ಕೆ ಒಳಗಾದರು. ಪರಕೀಯರ ದೌರ್ಜನ್ಯಕ್ಕೆ ಒಳಗಾದ ಈ ಸಮುದಾಯದವರು ತಮ್ಮ ಅಸ್ತಿತ್ವದ ಪ್ರಶ್ನೆ ಉದ್ಭವಿಸಿದಾಗ ಇತರೆ ಸಹವರ್ತಿಗಳಾದ ಕಿರ್ಗಿಗಳು, ಬುಕಾರಿಯನ್ನರು ಮತ್ತು ಉಜ್ಬೇಕ್ ಸಮುದಾಯದವರ ಜೊತೆ ಸೇರಿ ಪರ್ಷಿಯ ಹಾಗೂ ಬೈಜಾಂಟೀಯನ್ನರ ಜೊತೆ ಹಲವು ಸಲ ಯುದ್ಧಕ್ಕಿಳಿಯ ಬೇಕಾಯಿತು. ಆದರೆ ಪರ್ಷಿಯ ಮತ್ತು ಚೀನದ ಪ್ರಾಬಲ್ಯದೆದುರು ಪ್ರತಿರೋಧ ತೋರಲಾರದೆ ತುರ್ಕಿಸ್ತಾನವು ಎರಡು ಪ್ರಾಂತ್ಯಗಳಾಗಿ ಒಡೆದು ಚೀನ ಮತ್ತು ಪರ್ಷಿಯ ಸಾಮ್ರಾಜ್ಯದ ನಡುವೆ ಹಂಚಿಕೆಯಾಯಿತು.

8ನೆಯ ಶತಮಾನದಲ್ಲಿ ಇಸ್ಲಾಂ ಧರ್ಮ ಪಶ್ಚಿಮ ಏಷ್ಯದಲ್ಲಿ ತೀವ್ರವಾಗಿ ಹರಡಿದಂತೆಲ್ಲಾ ಸರಾಸಿಯನ್ಸ್ ಪಂಗಡದ ಸೀತೀಯಾನ್ ಚಾರ್ಟರ್ಸ್ ಇಸ್ಲಾಂ ಧರ್ಮ ಸ್ವೀಕರಿಸಿ ಮಹಮ್ಮದೀಯರೆನಿಸಿಕೊಂಡರು. ಬಾಗ್ದಾದಿನ ಖಲೀಫರ ಅಂಗರಕ್ಷಕರಾಗಿ ನೇಮಕಗೊಂಡ ಅನಂತರ ಇವರು, ಸೈನ್ಯದಲ್ಲಿಯೂ ಸೇರ್ಪಡೆಗೊಂಡರು. ಇದೇ ಪಂಗಡದ ತುಲನಿದ್ ಮತ್ತು ಅಕ್ಷಿಡೈಡೀಸ್ ಸಂತತಿಯ ಸೈನ್ಯಾಧಿಕಾರಿಗಳು ಪ್ಯಾಲಸ್ಟೀನ್, ಸಿರಿಯ, ಈಜಿಪ್ಟ್‌ಗಳಲ್ಲಿ ಅಬ್ಬಾಸಿದ್ದರ ಅಧೀನದಲ್ಲಿ ಅಧಿಕಾರ ಹೊಂದಿದ್ದರು. 10–11ನೆಯ ಶತಮಾನಗಳಲ್ಲಿ ಈ ಪಂಗಡದ ಘಜ್ನಿ ಸಂತತಿಯವರು ಭಾರತ ಮತ್ತು ಪರ್ಷಿಯಾದಲ್ಲಿ ಅಧಿಕಾರ ಸ್ಥಾಪಿಸಿದ್ದರು. ಪ್ರಾಚೀನ ಕಾಲದಲ್ಲಿ ಈ ಪಂಗಡದ ಸೀತೀಯನ್ ಮೆಸಹಾಥಿಕ್ ಸಂತತಿಯವರು ತುರ್ಕಿಸ್ತಾನದಲ್ಲಿ ಆಡಳಿತ ಹೊಂದಿದ್ದರೆಂದೂ ತಿಳಿದುಬರುತ್ತದೆ.

11ನೆಯ ಶತಮಾನದಲ್ಲಿ ಮಂಗೋಲಿಯರ ಧಾಳಿಯಿಂದ ಪಾರಾಗಲು ಸುರಕ್ಷಿತ ಆಶ್ರಯತಾಣ ಹುಡುಕುತ್ತ ತಮ್ಮ ನಾಯಕರಿಂದ ಸೆಲ್‌ಜುಕ್ (ವೀರಯೋಧ) ಎಂದು ಕರೆಯಿಸಿಕೊಂಡು ಅನಾಟೋಲಿಯದ ಕಡೆ ಒಂದು ಗುಂಪು ವಲಸೆಬಂದಿತು. ಅಲ್ಪ್ ಅರ್ಸಲಾನ್ ಎಂಬುವನ ಮುಂದಾಳತ್ವದಲ್ಲಿ ಇಲ್ಲಿ ನೆಲೆಸಿದ ಈ ಗುಂಪಿನವರಾದ ತುರ್ಗಲ್ ಬೇಗ್ ಮತ್ತು ಮಾಲಿಕ್ ಷಾ ಎಂಬ ಯುದ್ಧ ಪ್ರವೀಣ ಸಾಹಸಿಗಳು ತಮ್ಮದೇ ಆಡಳಿತವಿರುವ ಒಂದು ರಾಜಕೀಯ ವ್ಯವಸ್ಥೆಯನ್ನು ರೂಪಿಸಿಕೊಂಡು ಕುರಾಸಾನ್ ಪ್ರಾಂತ್ಯದಲ್ಲಿ ತಮ್ಮ ಆಡಳಿತ ಸ್ಥಾಪಿಸಿಕೊಂಡರು. ಇದು ತುರ್ಕಿ ಸಾಮ್ರಾಜ್ಯದ ಮೂಲ.

12–13ನೆಯ ಶತಮಾನದಲ್ಲಿ ಮಂಗೋಲರು ಪರ್ಷಿಯ, ಮೇಡಿಯ, ಕುರಾಸಾನ್ ಮತ್ತು ಒಕ್ಸಾಸ್ ಪ್ರಾಂತಗಳ ಮೇಲೆ ಧಾಳಿ ನಡೆಸಿ ಸಲ್‌ಜುಕ್ ತುರ್ಕರ ಆಡಳಿತವನ್ನು ಧ್ವಂಸಗೊಳಿಸಿದರು. ಅನಂತರ ಮಂಗೋಲಿಯನ್ನರ ಆಡಳಿತವನ್ನು ಧಿಕ್ಕರಿಸಿ ಸೆಲ್‌ಜುಕ್ ಮತ್ತು ಇನ್ನೊಂದು ಗುಂಪು ತುರ್ಕಮನ್ ಎಂಬುವವರು ಉತ್ತರದ ಕಣಿವೆ ಭಾಗದಿಂದ ಏಷ್ಯಮೈನರ್ ಪ್ರದೇಶಕ್ಕೆ ವಲಸೆ ಬಂದು ಇಲ್ಲಿನ ಪ್ರದೇಶವನ್ನು ತಮ್ಮಲ್ಲಿ ಹಂಚಿಕೊಂಡು ತಮ್ಮ ಜೀವನ ಪ್ರಾರಂಭಿಸಿದರು.

1299ರಲ್ಲಿ ತುರ್ಕಮನ್ ಗುಂಪಿನ ಒಂದು ಗುಂಪು ಒಲಂಪಸ್‌ಗೆ ಬಂತು. ಬಿತೀಯನ್ ಎಂಬ ಪ್ರಾಂತವೊಂದರಲ್ಲಿ ಸೆಲ್‌ಜುಕ್ ತುರ್ಕರ ಹೈಯೋನಿಯಮ್ ಎಂಬುವವನು ಇಲ್ಲಿನ ಪ್ರಾಂತಾಧಿಕಾರಿಯಾಗಿದ್ದ. ಈ ಅಧಿಕಾರಿಯ ನೆರವು ಪಡೆದು ತುರ್ಕಮನ್ ಗುಂಪಿನವರು ಓಡಿಬಂದ ಗುಲಾಮರು, ದಾರಿಗಳ್ಳರು, ಬಂದಿಗಳನ್ನು ಸೇರಿಸಿಕೊಂಡು ಒಂದು ಸೈನ್ಯ ನಿರ್ಮಿಸಿಕೊಂಡರು. ತಾವು ನೆಲಸಿದ್ದ ಸುತ್ತಮುತ್ತಲ ಪ್ರದೇಶಗಳ ಮೇಲೆ ಹತೋಟಿ ಸಾಧಿಸಿ ಪೂರ್ವ ರೋಮನ್ ಅಥವಾ ಬೈಜಾಂಟೀಯನ್ ಆಡಳಿತಕ್ಕೊಳಪಟ್ಟ ಕೆಲವು ಪ್ರಾಂತಗಳಲ್ಲಿ ಪರ್ಯಾಯ ಆಡಳಿತ ಸ್ಥಾಪಿಸಿಕೊಂಡರು. 1300ರಲ್ಲಿ ಇವರ ಆಶ್ರಯದಾತ ಸುಲ್ತಾನ ಹೈಯೋನಿಯಮ್ ಸಾವಿನ ಅನಂತರ ತುರ್ಕರ ಗುಂಪಿನ ನಾಯಕ ಒಸ್ಮಾನ್ ಅಥವಾ ಉತ್ಮಾನ್ ತಾನೇ ಬಿತೀಯಾನ್ ಪ್ರಾಂತದ ಸುಲ್ತಾನನೆಂದು ಘೋಷಿಸಿಕೊಂಡ. ಇವನೇ ಆಟೋಮನ್ ಸಾಮ್ರಾಜ್ಯದ ಸ್ಥಾಪಕ (ಆಟೋಮನ್ ಎಂದರೆ ತಲೆ ಒಡೆಯುವವನು ಅಥವಾ ಹೆಡ್ ಬ್ರೇಕರ್ ಎಂದರ್ಥ).

ಒಸ್ಮಾನ್ ಒಬ್ಬ ಧೀರ ಹಾಗೂ ಸಾಹಸಿಗ ಆಳ್ವಿಕೆಗಾರ. ತನ್ನ ಕ್ರಿಯಾಶೀಲತೆಯಿಂದಾಗಿ ಒಂದು ಸದೃಢ ಸೇನೆಯನ್ನು ನಿರ್ಮಿಸಿಕೊಂಡ. ಯುದ್ಧ ಹಾಗೂ ಅರಬ್ಬರ ದಾಳಿಯಿಂದ ಜರ್ಜರಿತವಾಗಿದ್ದ ಬೈಜಾಂಟೀನ್ ಆಡಳಿತಗಾರರನ್ನು ಸೋಲಿಸಿ ಸಾರಸೀಯನ್, ಸೆಲ್‌ಜುಕ್ ಮತ್ತು ಮಂಗೋಲರ ಆಳಿಕೆ ಹೊಂದಿದ್ದ ಪ್ರಾಂತಗಳನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡ. ಉತ್ತಮ ಆಡಳಿತ ಹಾಗೂ ದಕ್ಷ ನಾಯಕತ್ವದಲ್ಲಿ ತುರ್ಕಿ ರಾಜ್ಯವೊಂದರ ಸ್ಥಾಪಕನಾದ ಈತ 1326ರಲ್ಲಿ ಮರಣಹೊಂದಿದ.

ಒಸ್ಮಾನ್ ಕಟ್ಟಿದ ತುರ್ಕಿ ಸಾಮ್ರಾಜ್ಯದ ಮೊದಲ ಸುಲ್ತಾನನೆಂದರೆ ಬರ್‌ಖಾನ್ ಎಂಬುವವನು (1328–62). ಮೊದಲ ಬಾರಿಗೆ ನೇರವಾಗಿ ಬೈಜಾಂಟೀಯನ್ ಸಾಮ್ರಾಜ್ಯದ ಮೇಲೆ ಧಾಳಿ ನಡೆಸಿ ಕಾನ್‌ಸ್ಟಾಂಟಿನೋಪಲ್ ನಗರದ ಎದುರಿಗಿದ್ದ ಬ್ರುಸಾಮ ನಗರವನ್ನು ವಶಪಡಿಸಿಕೊಂಡು ತನ್ನ ಆಡಳಿತ ಸ್ಥಾಪಿಸಿಕೊಂಡ. ತನಗಾಗಿ ಒಂದು ಅರಮನೆಯನ್ನು ನಿರ್ಮಿಸಿಕೊಂಡು, ಜಾನಸಾರೀಸ್ ಎಂಬ ಗುಲಾಮ ಕ್ರೈಸ್ತ ಯುವ ಪಡೆಯನ್ನು ರಚಿಸಿಕೊಂಡ. ಏಡ್ರಿನೋಪಲ್ ಪ್ರಾಂತವನ್ನು ಒಗ್ಗೂಡಿಸಿ ಪದಿಷಾ ಎಂಬ ಬಿರುದನ್ನು ಗಳಿಸಿದ. ಗ್ರೀಕ್ ಚಕ್ರವರ್ತಿ ಕಾಂಟಕುಜೀನಸ್‌ನ ಮಗಳನ್ನು ವರಿಸಿ ಚಕ್ರವರ್ತಿಯ ಅಳಿಯನಾಗಿ ವ್ಯಾಪಾರ ಹಾಗೂ ಆಡಳಿತದಲ್ಲಿ ಸ್ಥಿರತೆ ತಂದು ಏಷ್ಯದ ತೀರ ಪ್ರದೇಶದಲ್ಲಿ ಬೈಜಾಂಟಿಯನ್ ಆಡಳಿತಕ್ಕೆ ಪರ್ಯಾಯ ವಾದ ಬಲಿಷ್ಠ ರಾಜ್ಯ ನಿರ್ಮಿಸಿ ಸುಲ್ತಾನನೆನಿಸಿಕೊಂಡ. ನಿರಂಕುಶ ಆಡಳಿತ, ಆಂತರಿಕ ಕಚ್ಚಾಟ ಹಾಗೂ ಭೂಮಾಲೀಕತ್ವದಡಿಯಲ್ಲಿ ಸಿಲುಕಿ ಕಾನೂನು ಹಾಗೂ ನ್ಯಾಯಗಳು ಅರ್ಥ ಕಳೆದುಕೊಂಡಿದ್ದ ಬೈಜಾಂಟಿಯನ್ ಸಾಮ್ರಾಜ್ಯದಲ್ಲಿ ಆಟೋಮನ್ನರ ತುರ್ಕಿ ಸಾಮ್ರಾಜ್ಯ ದಿನದಿಂದ ದಿನಕ್ಕೆ ಏಳ್ಗೆ ಕಾಣುವಂತಾಯಿತು.

ಯುರೋಪಿನ ಆಡಳಿತಗಾರರು ಧರ್ಮಯುದ್ಧದ ನೆಪದಲ್ಲಿ ಏಷ್ಯ ಖಂಡದ ಮೇಲೆ ದಾಳಿ ನಡೆಸಲು ಪ್ರಾರಂಭಿಸಿದಾಗ ಪ್ರವಾದಿಯವರ ಕಾಯಿದೆ ಹಾಗೂ ತುರ್ಕಿಯರ ಶೌರ್ಯವನ್ನು ಬಳಸಿಕೊಂಡು ಏಷ್ಯವನ್ನು ಧರ್ಮಯುದ್ಧದ ಭೀತಿಯಿಂದ ಪಾರುಮಾಡಿದ ಯಶಸ್ಸು ತುರ್ಕಿಯ ಸುಲ್ತಾನರಿಗೆ ಸಲ್ಲುತ್ತದೆ.

ಬರ್‌ಖಾನ್ ಮರಣದ ಅನಂತರ ಅವನ ಮಗ ಒಂದನೆಯ ಮುರಾದ್ ಅಧಿಕಾರಕ್ಕೆ ಬಂದ (1362–89). ಈತ 1355ರಲ್ಲಿ ಯುರೋಪಿನ ರಾಷ್ಟ್ರಗಳ ಮೇಲೆ ದಾಳಿ ನಡೆಸಿ 1358ರಲ್ಲಿ ಗ್ಯಾಲಿಪೋಲಿ ಸೇಸ್ಟೋಸ್‌ಗಳು ತುರ್ಕಿಯ ವಶವಾದವು. ಏಷ್ಯ ಮತ್ತು ಯುರೋಪ್ ಸಂಧಿಸುವ ಭೂ ಪ್ರದೇಶಗಳ ಮೇಲೆ ತನ್ನ ಹತೋಟಿ ಸಾಧಿಸಿ, ಯುರೋಪಿನ ರಾಷ್ಟ್ರಗಳ ಮೇಲೆ ತನ್ನ ಪರಮಾಧಿಕಾರ ಹೇರಿದ. ತನ್ನ ಸೈನ್ಯವನ್ನು ವಿಭಾಗಿಸಿ ಏಕಕಾಲದಲ್ಲಿ ಯುರೋಪ್ ಹಾಗೂ ಏಷ್ಯದ ಪರ್ಷಿಯನ್ ಸಾಮ್ರಾಜ್ಯದ ಮೇಲೆ ಧಾಳಿ ನಡೆಸಿದ. ಈ ಯುದ್ಧಗಳಲ್ಲಿ ತುರ್ಕಿಯರು ತಮ್ಮ ಅಸಾಧಾರಣ ಶಕ್ತಿ ಪ್ರದರ್ಶಿಸಿದರು. ಬರ್‌ಖಾನನ ಎರಡನೆಯ ಮಗ ಅಮುರ್ತ್ಯೆ ಅಡ್ರಿನೋಪಲ್ ಮೇಲೆ ಜಯ ಸಾಧಿಸಿದ. ಅಲ್ಬೇನಿಯ, ಸರ್ಬಿಯ, ಮ್ಯಾಸಿಡೋನಿಯ ತುರ್ಕಿಯರ ವಶವಾದವು.

1396ರಲ್ಲಿ ಸುಲ್ತಾನ ಬಯಾಜಿದ್ (ಇಲ್ದೆರಿಮ್ ಅಥವಾ ಮಿಂಚು ಎಂಬ ಬಿರುದನ್ನು ಹೊಂದಿದ್ದ) ಕಾನ್‌ಸ್ಟಾಂಟಿನೋಪಲ್ ನಗರದ ಮೇಲೆ ಮಿಂಚಿನ ಧಾಳಿ ನಡೆಸಿದ. ಆದರೆ ಭದ್ರವಾದ ಕೋಟೆ ತಕ್ಷಣದಲ್ಲಿ ಇವನ ವಶವಾಗಲಿಲ್ಲ. ಹಂಗರಿ, ಬಲ್ಗೇರಿಯ ತುರ್ಕಿಯ ವಶವಾದವು. ಗ್ರೀಕ್ ಚಕ್ರವರ್ತಿಯನ್ನು ಕಪ್ಪಕಾಣಿಕೆ ತರುವಂತೆ ಒಪ್ಪಿಸಲಾಯಿತು. ಬೈಜಾಂಟಿಯನ್ ಸಾಮ್ರಾಜ್ಯ ಕೇವಲ ಕಾನ್‌ಸ್ಟಾಂಟಿನೋಪಲ್‌ಗೆ (ಇಂದಿನ ಇಸ್ತಾನ್‌ಬುಲ್) ಸೀಮಿತವಾಯಿತು. ಇದೇ ವೇಳೆಯಲ್ಲಿ ತೈಮೂರನ ಸೇನೆ ಪೂರ್ವದಿಂದ ಧಾಳಿ ನಡೆಸಲು ಮುಂದಾದಾಗ, ಬಯಾಜಿದ್ ಯುರೋಪ್‌ನಿಂದ ಹಿಂದಿರುಗಿ ತೈಮೂರನ ಮೇಲೆ ಯುದ್ಧಕ್ಕೆ ನಿಂತು ಸೋತು ಶರಣಾದ. ತೈಮೂರ್ ತುರ್ಕಿ ಸಾಮ್ರಾಜ್ಯವನ್ನು ವಿಂಗಡಿಸಿ ಬಯಾಜಿದ್ದನ ಇಬ್ಬರು ಮಕ್ಕಳಿಗೆ ಹಂಚಿದ.

1413ರಲ್ಲಿ ಬಯಾಜಿದ್‌ನ ನಾಲ್ಕನೆಯ ಮಗ ಒಂದನೆಯ ಮಹಮ್ಮದ್ ತುರ್ಕಿಯ ಸುಲ್ತಾನನಾಗಿ ಅಧಿಕಾರಕ್ಕೆ ಬಂದ. ಈತ ತನ್ನ ಆಡಳಿತ ಕೌಶಲ ಹಾಗೂ ಅಪ್ರತಿಮ ಹೋರಾಟದಿಂದಾಗಿ ಸೆರ್ಲ್‌ಬರ್ಗ್, ಬಮೇರಿಯ, ಸಲೋನಿಕಗಳ ಮೇಲೆ ಧಾಳಿ ನಡೆಸಿ ಅವನ್ನು ವಶಪಡಿಸಿಕೊಂಡ. ಇವನ ಪ್ರಧಾನ ಮಂತ್ರಿ ಇಬ್ರಾಹಿಂ ಸೆಲೋನಿಕಾದಲ್ಲಿ ತುರ್ಕಿಯರ ಮೊದಲ ನೌಕಾದಳವನ್ನು ಸ್ಥಾಪಿಸಿದ. ಇವನ ಅನಂತರ ಎರಡನೆಯ ಮುರಾದ್ ಅಧಿಕಾರಕ್ಕೆ ಬಂದು (1421–51) ಟ್ರಾನ್ಸಲ್ವೇನಿಯ, ಬೆಲ್‌ಗ್ರೇಡ್ ಮೇಲೆ ಧಾಳಿ ನಡೆಸಿದ. 1440ರಲ್ಲಿ ಶಾಂತಿ ಒಪ್ಪಂದವಾದರೂ ಪೋಪರ ಆಜ್ಞೆಯ ಮೇರೆಗೆ ಯುರೋಪಿನ ಪ್ರಮುಖ ರಾಜ್ಯಗಳಾದ ಹಂಗರಿ, ಪೋಲೆಂಡ್ ಸೈನ್ಯಗಳು ತುರ್ಕಿ ಸೈನ್ಯದ ಮೇಲೆ ವರ್ನ ಎಂಬಲ್ಲಿ ಧಾಳಿ ನಡೆಸಿದವು. ತುರ್ಕಿಸೈನ್ಯ ವಿಜಯ ಸಾಧಿಸಿತು. 1449ರಲ್ಲಿ ಯುರೋಪಿನ ಪ್ರಮುಖ ನಗರ ಕೊಸ್ಸಾವ ತುರ್ಕಿಯ ವಶವಾಯಿತು.

ಎರಡನೆಯ ಮುರಾದ್‌ನ ಅನಂತರ ಅಧಿಕಾರಕ್ಕೆ ಬಂದ ಇವನ ಮಗ ಎರಡನೆಯ ಮಹಮ್ಮದ್ ತುರ್ಕಿಯ ಸುಲ್ತಾನರಲ್ಲೇ ಅತ್ಯಂತ ಪ್ರಸಿದ್ಧನಾದವನು. ತನ್ನ 26ನೆಯ ವಯಸ್ಸಿನಲ್ಲಿ ತುರ್ಕಿಯ ಸಿಂಹಾಸನವೇರಿ ಸುಲ್ತಾನನೆನಿಸಿಕೊಂಡು 1451–81ರ ತನಕ ಗೌರವಾನ್ವಿತ ಆಳಿಕೆ ನಡೆಸಿ, ಯುರೋಪಿನಲ್ಲಿ ದೀರ್ಘಕಾಲ ಆಡಳಿತ ನಡೆಸಿದ್ದ ಬೈಜಾಂಟಿಯನ್ (ಪೂರ್ವ ರೋಮನ್) ಸಾಮ್ರಾಜ್ಯವನ್ನು ಅಧಿಕಾರದಿಂದ ಮುಕ್ತಿಗೊಳಿಸಿದ. 1453 ಮೇ 29ರಂದು ಬೈಜಾಂಟಿಯನ್ ರಾಜಧಾನಿ ಕಾನ್‌ಸ್ಟಾಂಟಿನೋಪಲ್ ನಗರದ ಮೇಲೆ ಯಶಸ್ವಿ ಧಾಳಿ ನಡೆಸಿ ವಶಪಡಿಸಿಕೊಂಡ. ಫತೇ ಮಹಮ್ಮದ್ ಎಂಬ ಬಿರುದಿನೊಂದಿಗೆ ಡಾರ್ಡನಲ್ಸ್‌ನಲ್ಲಿ ಸುಭದ್ರವಾದ ಕೋಟೆ ನಿರ್ಮಿಸಿ, ಇಡೀ ಆಟೋಮನ್ ಸಾಮ್ರಾಜ್ಯದ ಆಡಳಿತದಲ್ಲಿ ಸುಧಾರಣೆ ತಂದ. ಪರ್ಷಿಯದ ಚಕ್ರವರ್ತಿ ನುಸ್ಸಿರ್‌ವಾನ್ ಮಾದರಿಯ ಆಡಳಿತ ಜಾರಿಗೆ ತಂದ. 1456ರಲ್ಲಿ ಮೋರಿಯ, 1461ರಲ್ಲಿ ತೆಬ್ರೀಜ್, 1470ರಲ್ಲಿ ಬೋಸ್ನಿಯ, 1465ರಲ್ಲಿ ಎಪಿರಸ್, ವೆನಿಷಿಯ, ಒರೆಂಟೋ ತುರ್ಕಿಯರ ವಶವಾದವು. ಉಳಿದಂತೆ ಯುರೋಪಿನ ರೋಮ್ ಹಾಗೂ ಏಷ್ಯದ ಪರ್ಷಿಯ ಸಾಮ್ರಾಜ್ಯದ ಮೇಲೆ ಧಾಳಿ ನಡೆಸಲು ತಯಾರಿ ನಡೆಸುವ ವೇಳೆಯಲ್ಲಿ ಫತೇ ಎರಡನೆಯ ಮಹಮ್ಮದ್ ಮರಣ ಹೊಂದಿದ. ಇವನ ಆಳಿಕೆಯಲ್ಲಿ ತುರ್ಕಿ ಸಾಮ್ರಾಜ್ಯ ಪ್ರಪಂಚದಲ್ಲೇ ಅತ್ಯುತ್ತಮವಾದ ಸೈನ್ಯ ಹೊಂದಿತ್ತು. ವಿದ್ಯೆ, ಕಲೆಗಳಿಗೆ, ವಿಶೇಷ ಪ್ರೋತ್ಸಾಹ ದೊರಕಿತು. ಈತ ಅನೇಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ. ಭವ್ಯ ಸೌಧ, ಮಸೀದಿಗಳನ್ನು ಅಲಂಕರಿಸಿದ್ದ. ಹಲವಾರು ಭಾಷೆಗಳ ಪರಿಚಯವಿದ್ದ ಅವನು ತಾನು ಗೆದ್ದ ಪ್ರದೇಶಗಳ ಜನತೆಯ ವಾಕ್ ಮತ್ತು ಮತ ಸ್ವಾತಂತ್ರ್ಯದ ಹಕ್ಕುಗಳನ್ನು ರಕ್ಷಿಸಿದ. ಇಂದಿನ ಪ್ರಸಿದ್ಧ ಇಸ್ತಾನ್‌ಬುಲ್ ವಿಶ್ವವಿದ್ಯಾಲಯದ ರೂವಾರಿ ಎರಡನೆಯ ಮಹಮ್ಮದ್.

ಫತೆ ಮಹಮ್ಮದ್ ಮರಣದ ಅನಂತರ ಎರಡನೆಯ ಸುಲೇಮಾನ್ (1519–66) ತುರ್ಕಿಯ ಸುಲ್ತಾನನಾಗಿ ಅಧಿಕಾರಕ್ಕೆ ಬಂದ. ಸಿರಿಯ, ಈಜಿಪ್ಟ್ ತುರ್ಕಿಯ ವಶವಾದವು. ಆಟೋಮನ್ ತುರ್ಕರ ಆಡಳಿತ ಈತನ ಕಾಲದಲ್ಲಿ ಉತ್ತುಂಗದಲ್ಲಿತ್ತು. ತುರ್ಕಿ ಸಾಮ್ರಾಜ್ಯ ಉತ್ತರದಲ್ಲಿ ಡ್ಯಾನ್ಯುಬ್ ನದಿಯಿಂದ ಬಾಗ್ದಾದ್ ತನಕ, ಕ್ರಿಮಿಯಾದಿಂದ ನೈಲ್‌ನದಿಯ ತನಕ ವಿಸ್ತಾರಗೊಂಡಿತ್ತು. ಯುರೋಪಿಯನ್ನರಿಂದ ವೈಭವದ ಸುಲ್ತಾನ ಎಂದು ಬಿರುದು ಪಡೆದಿದ್ದ. ತುರ್ಕಿಯ ಜನತೆಯಿಂದ ಅಲ್–ಕಾನೂನಿ (ಲಾಗಿವರ್) ಎನಿಸಿಕೊಂಡಿದ್ದ.

ತುರ್ಕಿಯ ಆಡಳಿತ ಉತ್ತುಂಗದಲ್ಲಿತ್ತು, ರಾಜಧಾನಿ ಕಾನ್‌ಸ್ಟಾಂಟಿನೋಪಲ್ ನೋಡಲು ಸುಂದರವಾಗಿತ್ತು. ಹಲವಾರು ಮಸೀದಿ, ಅರಮನೆ, ಗೋರಿ, ಸೇತುವೆ ನಿರ್ಮಾಣಗೊಂಡವು. ವರ್ತಕರು ತಂಗುವ ಸ್ಥಳ, ಆಸ್ಪತ್ರೆಗಳು ನಿರ್ಮಾಣವಾದವು. ಪ್ರಸಿದ್ಧ ಪರ್ಷಿಯನ್ ವಾಸ್ತುಶಿಲ್ಪಿ ಸಿನಾನ್ ನೇತೃತ್ವದಲ್ಲಿ ತುರ್ಕಿಯ ವಾಸ್ತುರಚನೆಗಳು ಹೊಸ ರೂಪಕಂಡವು.

1522ರಲ್ಲಿ ರೋಡ್ಸ್, 1526ರಲ್ಲಿ ಹಂಗರಿಯ ಒಂದು ಭಾಗ ತುರ್ಕಿಯ ವಶವಾದವು. ಪರ್ಷಿಯದ ಮೇಲೆ ಹತೋಟಿ ಸಾಧಿಸಲು ಅನುವಾಗುವಂತೆ ಬಾಗ್ದಾದ್, ಮೆಸೊಪೊಟೇಮಿಯ ಹಾಗೂ ಜಾರ್ಜಿಯ ಮೇಲೆ ವಿಜಯ ಸಾಧಿಸಿದ. 1538ರಲ್ಲಿ ತುರ್ಕಿಯ ಸುಲ್ತಾನರಿಗೆ ಇಸ್ಲಾಂ ಧರ್ಮದ ಪ್ರಧಾನ ಪದವಿ ಖಲೀಫ್ ಪಟ್ಟ ಲಭಿಸಿತು. ಎರಡನೆಯ ಸುಲೇಮಾನನ ಆಳಿಕೆಯ ಅನಂತರ ತುರ್ಕಿ ಆಡಳಿತ ಕುಸಿಯಲಾರಂಭಿಸಿತು. ಇದುವರೆವಿಗೂ ಆಡಳಿತ ನಡೆಸಿದ ಎಂಟು ಜನ ಸುಲ್ತಾನರು ತುರ್ಕಿಯ ಬಲವರ್ಧನೆ ಹಾಗೂ ವಿಸ್ತರಣೆಗೆ ತಮ್ಮ ಶಕ್ತಿಮೀರಿ ಶ್ರಮಿಸಿದ್ದರು. 1617–22ರ ತನಕ ಸುಲ್ತಾನನಾಗಿದ್ದ ಮುಸ್ತಫ್ ಅಧಿಕಾರ ದಾಹಕ್ಕೆ ಬಲಿಯಾದ. ಸುಲೇಮಾನ್ ಅನಂತರ ಅಧಿಕಾರಕ್ಕೆ ಬಂದ ಸುಲ್ತಾನರು ಅಧಿಕಾರ ದುರುಪಯೋಗ, ರಾಣಿವಾಸದವರು ನಡೆಸಿದ ಆಡಳಿತದಲ್ಲಿನ ಹಸ್ತಕ್ಷೇಪ ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಭ್ರಷ್ಟತೆಯಿಂದಾಗಿ ತುರ್ಕಿ ಸಾಮ್ರಾಜ್ಯ ಕ್ಷೀಣಿಸಿತು.

1578–90ರ ವರೆಗೆ ಪರ್ಷಿಯದ ಸಫಾವಿದ್‌ರ ಜೊತೆ ನಡೆದ ದೀರ್ಘ ಯುದ್ಧ, ಯುರೋಪಿನ ಜನತೆ ಮೇಲೆ ಹೇರಿದ ತೆರಿಗೆ ಪದ್ಧತಿ, ಬೆಳ್ಳಿಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೃಷ್ಟಿಸಿದ ಆರ್ಥಿಕ ಕುಸಿತದ ಪರಿಣಾಮದಿಂದಾಗಿ 16ನೆಯ ಶತಮಾನದ ಆಟೋಮನ್ ಸಾಮ್ರಾಜ್ಯಕ್ಕೂ ಬಿಸಿ ಮುಟ್ಟಿತು.

ಅತ್ಯಂತ ಪ್ರಮುಖವಾಗಿ 16ನೆಯ ಶತಮಾನದಲ್ಲಿ ಹೊಸ ಸಮುದ್ರ ಮಾರ್ಗಗಳಿಂದಾಗಿ ತುರ್ಕಿಯ ಪ್ರಮುಖ ರೇವು ಪಟ್ಟಣಗಳಾದ ಬಾಸ್ಪರಸ್ ಹಾಗೂ ಮೆಡಿಟರೇನಿಯನ್ ಸಮುದ್ರ ತೀರಗಳು ವ್ಯಾಪಾರದಲ್ಲಿ ಹಿಂದುಳಿಯುವಂತಾಯಿತು. ಇದೇ ವೇಳೆಯಲ್ಲಿ ಯುರೋಪಿನಲ್ಲಿ ಒಮ್ಮತದ ಒಪ್ಪಂದಗಳಿಂದಾಗಿ ಒಂದೊಂದೇ ಪ್ರದೇಶಗಳು ಸ್ವತಂತ್ರಗೊಂಡವು.

ತುರ್ಕಿಯ ಆಡಳಿತಕ್ಕೆ ಮೊದಲ ಹೊಡೆತವೆಂದರೆ ಉತ್ತರ ಆಫ್ರಿಕದ ಆಟೋಮನ್ ಪ್ರಾಂತಗಳು ಯುರೋಪ್‌ಗೆ ನಿಕಟವಾಗಿದ್ದು ಸ್ವಾತಂತ್ರ್ಯ ಘೋಷಿಸಿಕೊಂಡವು. 1830ರಲ್ಲಿ ಅಲ್ಜೀರಿಯ ಫ್ರೆಂಚರ ಆಡಳಿತಕ್ಕೆ ಒಳಪಟ್ಟಿತು. 1821ರಲ್ಲಿ ಗ್ರೀಕರು ದಂಗೆಯೆದ್ದು ತುರ್ಕಿಯ ಆಡಳಿತದಿಂದ ಮುಕ್ತಿಹೊಂದಿದರು.

ತುರ್ಕಿಯ ಸಂಸ್ಕೃತಿ ಮತ್ತು ಜನಾಂಗದಿಂದ ಬೇರೆಯಾಗಿದ್ದ ಬಹುತೇಕ ಯುರೋಪಿನ ಪ್ರಾಂತಗಳು ಒಂದೊಂದಾಗಿ ಸ್ವತಂತ್ರವಾಗಲು ಸುಲ್ತಾನರ ಆಡಳಿತದ ವಿರುದ್ಧ ದಂಗೆಯೆದ್ದವು. ಯುರೋಪಿನ ವಸಾಹತುಶಾಹಿ ವ್ಯವಸ್ಥೆಯೂ ಈ ಪ್ರಚೋದನೆಗೆ ಬೆಂಬಲ ಸೂಚಿಸಿತು. ತುರ್ಕಿಯ ಅವನತಿಯ ಲಾಭ ಪಡೆಯಲು ಯುರೋಪಿನ ಪ್ರಮುಖ ರಾಷ್ಟ್ರಗಳಾದ ಫ್ರಾನ್ಸ್, ಇಂಗ್ಲೆಂಡ್, ಆಸ್ಟ್ರಿಯ ಹಾಗೂ ರಷ್ಯ ಹೊಂಚು ಹಾಕಿ ತುರ್ಕಿಯನ್ನು ಯುರೋಪಿನ ರೋಗಿ ಎಂದು ಕರೆದವು.

1798 ಜುಲೈನಲ್ಲಿ ಫ್ರಾನ್ಸ್ ಚಕ್ರವರ್ತಿ ನೆಪೋಲಿಯನ್ ಬೋನಪಾರ್ಟೆ ಈಜಿಪ್ಟಿನ ಪ್ರಮುಖ ನಗರ ಅಲೆಕ್ಸಾಂಡ್ರಿಯದ ಮೇಲೆ ಧಾಳಿ ನಡೆಸಿದ. ಫ್ರೆಂಚರ ಪ್ರಾಬಲ್ಯವಿರಿತ ಇಂಗ್ಲೆಂಡ್ ಏಷ್ಯದಲ್ಲಿ ತನ್ನ ಹಿತಾಸಕ್ತಿ ಉಳಿಸಿಕೊಳ್ಳಲು ಸಹಾಯಕವಾಗುವಂತೆ ತುರ್ಕಿ ಆಡಳಿತಕ್ಕೆ ಬೆಂಬಲ ನೀಡಿದರೂ ತುರ್ಕಿಯ ಕುಸಿತವನ್ನು ತಡೆಯಲಾಗಲಿಲ್ಲ. ಸುಲ್ತಾನ ಎರಡನೆಯ ಮಹಮದ್ (1808–39) ತುರ್ಕಿಯ ಆಡಳಿತದಲ್ಲಿ ಸುಧಾರಣೆ ತರಲು ಪ್ರಯತ್ನಿಸಿ ಆಡಳಿತದಲ್ಲಿ ಬಿಗಿ ಮುಷ್ಟಿ ಹೊಂದಿದ್ದು ಜಾನಾಸರೀಸ್ ಪಡೆಯನ್ನು ತನ್ನ ಅಂಗರಕ್ಷಕ ಪಡೆಯಿಂದ ನಿರ್ನಾಮಗೊಳಿಸಿದ. 1827ರಲ್ಲಿ ಇಂಗ್ಲಿಷರು ಮತ್ತು ಫ್ರೆಂಚರು ನವರಿನೋದಲ್ಲಿನ ಈಜಿಪ್ಟ್ ಮತ್ತು ತುರ್ಕಿಯ ನೌಕಾನೆಲೆಯನ್ನು ಧ್ವಂಸಗೊಳಿಸಿದರು.

ಆಲ್ಬೇನಿಯದ ಸೇನಾನಿ ಮಹಮ್ಮದ್ ಅಲಿ ತುರ್ಕಿಯ ವಿರುದ್ಧ ಬಂಡಾಯವೆದ್ದು ಈಜಿಪ್ಟಿನ ಮೇಲೆ ಹತೋಟಿ ಸಾಧಿಸಿದ. ಇದು ತುರ್ಕಿಯ ಸೈನ್ಯದಲ್ಲಿನ ಅಸಮರ್ಥತೆಯನ್ನು ಎತ್ತಿತ್ತೋರಿಸಿತು. ತುರ್ಕಿಯ ಪ್ರಾಬಲ್ಯವನ್ನು ಎತ್ತಿಹಿಡಿಯಲು ಕಡೆಯ ಸುಲ್ತಾನರಾದ ಮೂರನೆಯ ಸಲೀಮ್, ಎರಡನೆಯ ಮಹಮದ್ (1808–39) ಹಾಗೂ ಅಬ್ದುಲ್ ಮಜೀದ್ (1839–61) ಪ್ರಯತ್ನ ನಡೆಸಿದರೂ ಫಲಿತಾಂಶ ದೊರಕಲಿಲ್ಲ. 1877–78ರಲ್ಲಿ ತುರ್ಕಿ ರಷ್ಯದೊಡನೆ ಯುದ್ಧಕ್ಕಿಳಿಯಿತು. ಈ ಯುದ್ಧಕ್ಕೆ ಪ್ರಮುಖ ಕಾರಣವೆಂದರೆ ರಷ್ಯ ತುರ್ಕಿಯ ಆಡಳಿತಕ್ಕೆ ಒಳಪಟ್ಟ ಬಾಲ್ಕನ್ ಪ್ರದೇಶದ ಕ್ರಿಶ್ಚಿಯನ್ ಸಮುದಾಯದವರ ಧಾರ್ಮಿಕ ಹಕ್ಕುಗಳನ್ನು ಕಾಪಾಡುವ ನೆಪದಲ್ಲಿ ತುರ್ಕಿಯ ಕೆಲವು ಪ್ರದೇಶಗಳನ್ನು ಕಬಳಿಸಲು ಪ್ರಯತ್ನ ನಡೆಸಿತ್ತು, ಇದು ಮೇಲಿನ ಯುದ್ಧಕ್ಕೆ ಕಾರಣವಾಯಿತು. ಈ ಯುದ್ಧದಿಂದಾಗಿ ತುರ್ಕಿ ಕೆಲವು ಬಾಲ್ಕನ್ ಪ್ರದೇಶಗಳನ್ನು ಕಳೆದುಕೊಳ್ಳಬೇಕಾಯಿತು.

ತುರ್ಕಿಯ ಸುಲ್ತಾನನಾಗಿ ಅಧಿಕಾರಕ್ಕೆ ಬಂದ ಎರಡನೆಯ ಅಬ್ದುಲ್ ಹಮೀದ್ (1876–1909) ಪರಕೀಯರ ಪ್ರಾಬಲ್ಯವನ್ನು ತಗ್ಗಿಸಲು ಸಹಾಯಕವಾಗುವಂತೆ ಪ್ಯಾನ್ ಇಸ್ಲಾಮಿಸಂ ತತ್ತ್ವಗಳಿಗೆ ಮಾನ್ಯತೆ ನೀಡಿದ. ಯುವ ತುರ್ಕಿಯರ ಪ್ರಾಬಲ್ಯ ತಪ್ಪಿಸಲು ಅನೇಕ ಕಠಿಣ ನಿರ್ಧಾರಗಳನ್ನು ಜಾರಿಗೊಳಿಸಿದ. ಆದರೆ ಸ್ವಾತಂತ್ರ್ಯಪ್ರಿಯರಾದ ಅರಬ್ಬರು ಹಾಗೂ ಬ್ರಿಟಿಷರು ರಹಸ್ಯ ಒಪ್ಪಂದಕ್ಕೆ ಬರಲಾಗಿ ತುರ್ಕಿ ಪಶ್ಚಿಮ ಏಷ್ಯದಲ್ಲಿ ತನ್ನ ಪ್ರಾಮುಖ್ಯ ಕಳೆದು ಕೊಳ್ಳಲಾರಂಭಿಸಿತು. ಸುಲ್ತಾನ ಅಬ್ದುಲ್ ಹಮೀದ್‌ನ ದುರಾಡಳಿತದಿಂದ ಬೇಸತ್ತ ತುರ್ಕಿಯ ಯುವಜನತೆ ಈತನನ್ನು ಅಧಿಕಾರದಿಂದ ಕಿತ್ತೊಗೆದು ತಮ್ಮ ಆಡಳಿತ ಜಾರಿಗೆ ತಂದರು.

ಯುವ ತುರ್ಕಿಯರು ಜಾರಿಗೆ ತಂದ ಆಡಳಿತ (1909–19) ಮೊದಲಿಗೆ ಅತ್ಯಂತ ಯಶಸ್ವಿಯಾದರೂ ತದನಂತರದಲ್ಲಿ ಅನೇಕ ಸಂಘರ್ಷಗಳಿಗೆ ಕಾರಣವಾಯಿತು. 1910–12ರಲ್ಲಿ ಬಾಲ್ಕನ್ ಹಾಗೂ ಉತ್ತರ ಆಫ್ರಿಕ ಭೂಭಾಗದ ಪ್ರದೇಶಗಳು ತುರ್ಕಿಯಿಂದ

ಬೇರ್ಪಟ್ಟವು. ಹೆಜಾಜ್ ಮತ್ತು ಅರೇಬಿಯ ಪ್ರಾಂತದಲ್ಲಿ ಸೌದಿ ಮನೆತನ ಆಳಿಕೆಗೆ ಬಂದಿತು. ಅರಬ್ಬರ ಬೆಂಬಲ ಗಳಿಸಿದ ಬ್ರಿಟಿಷರು ಒಂದನೆಯ ಮಹಾಯುದ್ಧದಲ್ಲಿ ಜರ್ಮನಿಯ ಬೆಂಬಲಕ್ಕಿದ್ದ ತುರ್ಕಿಯನ್ನು ಸೋಲಿಸಿದರು. ಪ್ರಥಮ ಯುದ್ಧದ ಫಲವಾಗಿ ಯುವ ತುರ್ಕಿಯರ ಆಡಳಿತ ಕೊನೆಗೊಂಡಿತು.

1919ರಲ್ಲಿ ನಡೆದ ಸೇವರ್ಸ್ ಒಪ್ಪಂದದಿಂದಾಗಿ ತುರ್ಕಿ ತನ್ನ ಆಡಳಿತಕ್ಕೆ ಒಳಪಟ್ಟಿದ್ದ ಉತ್ತರ ಆಫ್ರಿಕ, ಅರೇಬಿಯ, ಸಿರಿಯ ಮತ್ತು ಮೆಸಪೊಟೇಮಿಯ ಪ್ರದೇಶಗಳ ತನ್ನ ಹಕ್ಕನ್ನು ಬಿಡಬೇಕಾಯಿತು. ತುರ್ಕಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾದ ಸಂದಿಗ್ಧ ಸ್ಥಿತಿಯಲ್ಲಿದ್ದಾಗ, ತುರ್ಕಿಯ ಅಪ್ರತಿಮ ಸೇನಾನಿ ಮುಸ್ತಫ ಕಮಾಲ್ ಪಾಷ ರಾಷ್ಟ್ರೀಯ ಪಕ್ಷದ ಸಹಾಯದಿಂದ ತುರ್ಕಿಯನ್ನು ವಸಾಹತುಶಾಹಿಗಳಿಂದ ಕಾಪಾಡಿ, ಸುಲ್ತಾನರ ಅಸಮರ್ಥ ಆಡಳಿತದಿಂದ ಮುಕ್ತಿಗೊಳಿಸಿದ.

1923 ಅಕ್ಟೋಬರ್ 29ರಂದು ತುರ್ಕಿ ಗಣರಾಜ್ಯವಾಯಿತು. ಕಮಾಲ್ ಪಾಷ ತುರ್ಕಿಯ ಅಧ್ಯಕ್ಷನಾಗಿ (1923–38) ಹಲವಾರು ಯೋಜನೆಗಳನ್ನು ಜಾರಿಗೆ ತಂದ. ಈತನ ಅಧಿಕಾರದಲ್ಲಿ ತುರ್ಕಿ ದೇಶ ಆಧುನಿಕವಾಗಿ ಅಭಿವೃದ್ಧಿ ಹೊಂದಿತು. ಈತನು ಸ್ಥಾಪಿಸಿದ ರಿಪಬ್ಲಿಕನ್ ಪೀಪಲ್ಸ್ ಪಕ್ಷ (1923–50) ತರುವಾಯ ಇಸ್ಮತ್ ಇನಾನೋ ಅಧಿಕಾರದಲ್ಲಿ ಅತ್ಯಂತ ಜಾಗ್ರತೆಯಿಂದ ಆಡಳಿತ ನಡೆಸಿತು. ಎರಡನೆಯ ಮಹಾಯುದ್ಧದಲ್ಲಿ ಕಡೆಯವರೆಗೂ ತಟಸ್ಥವಾಗಿದ್ದು ಮಿತ್ರ ರಾಷ್ಟ್ರಗಳು ಜಯಗಳಿಸುವ ಸೂಚನೆಯ ಅನಂತರ 1945ರ ಮಾರ್ಚ್ ಒಂದರಂದು ಜರ್ಮನಿಯ ವಿರುದ್ಧ ಯುದ್ಧಕ್ಕಿಳಿದು ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಂಡಿತು.

1950ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷ ಅಧಿಕಾರಕ್ಕೆ ಬಂದು ಚೆಲಲ್ ಬೆ ಬಯರ್ ಅಧ್ಯಕ್ಷನಾದ. ಈತನ ಅಧಿಕಾರದಲ್ಲಿ ತುರ್ಕಿ ಕೊರಿಯ ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಬೇಕಾಯಿತು. ಇದರ ಫಲವಾಗಿ ನ್ಯಾಟೋ ಸದಸ್ಯತ್ವ ಪಡೆಯಿತು. 1959ರಲ್ಲಿ ತುರ್ಕಿ ಯುರೋಪಿಯನ್ ಒಕ್ಕೂಟಕ್ಕೆ ಸಹಸದಸ್ಯತ್ವ ಪಡೆಯಿತು. 1960ರಲ್ಲಿ ತುರ್ಕಿ ಕ್ಷಿಪ್ರ ಕ್ರಾಂತಿ ಸಂಭವಿಸಿ ಈತನ ಸರ್ಕಾರವನ್ನು ಮಿಲಿಟರಿ ಅಧಿಕಾರಿಗಳು ತಮ್ಮ ವಶಕ್ಕೆ ತೆಗೆದುಕೊಂಡರು. 1924ರಲ್ಲಿ ಜಾರಿಗೆ ತಂದಿದ್ದ ಸಂವಿಧಾನವನ್ನು 1961ರಲ್ಲಿ ಪುನಾರಚಿಸಲಾಯಿತು. (ಜಿ.ಆರ್.ಕೆ.)

1961ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ತುರ್ಕಿಯಲ್ಲಿ ಮೊದಲ ಬಾರಿಗೆ ಸಮ್ಮಿಶ್ರಸರ್ಕಾರ ಅಥವಾ ಬಹುಪಕ್ಷಗಳ ಆಡಳಿತ ಜಾರಿಗೆ ಬಂದಿತು. ಜಸ್ಟಿಸ್ ಮತ್ತು ನ್ಯೂಟರ್ಕಿಷ್ ಪಕ್ಷ ಆಡಳಿತಕ್ಕೆ ಬಂದವು. ಈ ಅವಧಿಯಲ್ಲಿ ಎಡಪಂಥೀಯರು ಬಲಪಂಥೀಯರ ನಡುವೆ ಘರ್ಷಣೆಗಳುಂಟಾದವು. ಧಾರ್ಮಿಕ ಮೂಲಭೂತವಾದಿಗಳು ತುರ್ಕಿಯ ಆಡಳಿತದಲ್ಲಿ ಪ್ರಾಬಲ್ಯ ಕಾಣುವಂತಾದರು. ಕೇಂದ್ರ ಸರ್ಕಾರದಲ್ಲಿ ದುರ್ಬಲತೆ ಕಾಣಿಸಿಕೊಂಡಿತು. 1980 ಸೆಪ್ಟೆಂಬರ್ 12 ರಂದು ತುರ್ಕಿಯ ಮಿಲಿಟರಿ ಅಧಿಕಾರಿಗಳು ಅಧಿಕಾರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

1982ರಲ್ಲಿ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವುದರ ಮೂಲಕ ಮಿಲಿಟರಿ ಅಧಿಕಾರಿಗಳು ತುರ್ಕಿಯ ಆಡಳಿತದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡರು. ಕಮಾಲ್ ಪಾಷನ ಅನಂತರದ ತುರ್ಕಿಯ ವಿದೇಶಾಂಗ ನೀತಿ ಬಹುತೇಕ ಪಶ್ಚಿಮ ಯುರೋಪ್ ರಾಷ್ಟ್ರಗಳತ್ತ ತಿರುಗಿತ್ತು ಎಂದರೆ ತಪ್ಪಾಗಲಾರದು. 1983ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮೂರು ಪ್ರಮುಖ ಪಕ್ಷಗಳು ಒಂದಾಗಿ ಮದರ್‌ಲ್ಯಾಂಡ್ ಪಕ್ಷ ರಚಿಸಿಕೊಂಡು ಅಧಿಕಾರಕ್ಕೆ ಬಂದವು. ಈ ಸರ್ಕಾರದ ಅಧ್ಯಕ್ಷನಾಗಿ ಆಯ್ಕೆಯಾದ ತುರ್ಗತ್ ಒಝಲ್ ಮಿಲಿಟರಿ ಹಾಗೂ ಸಿವಿಲ್ ಅಧಿಕಾರಿಗಳ ನಡುವೆ ಸರಿದೂಗಿಸಿಕೊಂಡು ತುರ್ಕಿಯ ಅಭಿವೃದ್ಧಿಗೆ ಕಾರಣನಾದ. ತುರ್ಕಿ ದೇಶ ಎಲ್ಲ ರಂಗಗಳಲ್ಲಿಯೂ ಪ್ರಗತಿ ಸಾಧಿಸಿತು. ಅನೇಕ ಜನಪರ ಕಾರ್ಯಕ್ರಮಗಳು ಜಾರಿಗೆ ಬಂದವು. ಕೈಗಾರಿಕೆಗಳ ವಿಸ್ತರಣೆ ಹಾಗೂ ಕೃಷಿ ಅಭಿವೃದ್ಧಿಗೆ ಒತ್ತು ನೀಡಲಾಯಿತು. ಶಿಕ್ಷಣ ಹಾಗೂ ಉದ್ಯೋಗದ ರಂಗಗಳನ್ನು ಬಲಪಡಿಸಲಾಯಿತು.

1994ರ ಚುನಾವಣೆಯಲ್ಲಿ ವಿಜಯಿಯಾದ ವೆಲ್‌ಫೇರ್ ಪಕ್ಷ ಅಧಿಕಾರಕ್ಕೆ ಬಂದರೂ 1996ರಲ್ಲಿ ಧಾರ್ಮಿಕ ಹಿನ್ನೆಲೆಯ ರಿಫ಼ಾ ಪಾರ್ತಿಸಿ ಹಾಗೂ ದೋಗ್ರುಯೆಲ್ ಪಾರ್ತಿಸಿ ಎಂಬ ಪಕ್ಷಗಳು ತುರ್ಕಿಯಲ್ಲಿ ಅಧಿಕಾರಕ್ಕೆ ಬಂದವು. 1999ರಲ್ಲಿ ತುರ್ಕಿ ಯುರೋಪಿಯನ್ ಒಕ್ಕೂಟದ ಪೂರ್ಣ ಸದಸ್ಯತ್ವ ಪಡೆಯಿತು.

2002ರಲ್ಲಿ ಜಸ್ಟಿಸ್ ಮತ್ತು ಅಭಿವೃದ್ಧಿ ಪಕ್ಷಗಳು ಒಗ್ಗೂಡಿ ಅಧಿಕಾರಕ್ಕೆ ಬಂದವು. ಇದರ ಅಧ್ಯಕ್ಷನಾಗಿ ಅಹ್ಮೆತ್ ನೆಸ್ದೆತ್ ಸೆಝೆರ್ ಮತ್ತು ರೆಸೆಪ್ ತಯ್ಯಾಪಿ ಯೆರ್ಡೊಜನ್ ಪ್ರಧಾನಿಯಾಗಿದ್ದಾರೆ. (ಸಿ.ಜಿ.ಎಸ್.)

**ತುಲಾಭಾರಶಿಲ್ಪ:** ಷೋಡಶ ಮಹಾದಾನಗಳಲ್ಲಿ ಒಂದಾದ ಹಿರಣ್ಯಗರ್ಭದಾನ ಮಾಡಿದ ಅಪರೂಪದ ತುಲಾಪುರುಷ ಶಿಲ್ಪ ಶಿವಮೊಗ್ಗ ಜಿಲ್ಲೆಯ ಹೊಂಬುಜದಲ್ಲಿದೆ. ರಾಜನಿಂದ ಹಿಡಿದು ಜನಸಾಮಾನ್ಯರವರೆಗೆ ಅವರವರ ಶಕ್ತ್ಯಾನುಸಾರ, ಯಾವುದೇ ವಸ್ತುವಿನಿಂದ ತುಲಾಭಾರ ಮಾಡಿ ಅವರ ತೂಕದ ವಸ್ತು, ಬಟ್ಟೆ, ಹಣ, ಧಾನ್ಯಗಳನ್ನು ದಾನ ಮಾಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಹರಕೆಯ ಸಂಕಲ್ಪವಾಗಿ ರಾಜಕೀಯ, ಧಾರ್ಮಿಕ, ಸಾಮಾಜಿಕ ಪದ್ಧತಿಯಾಗಿ ಪ್ರಾಚೀನ ಕಾಲದಿಂದ ರೂಢಿಯಲ್ಲಿದ್ದು, ಇಂದಿಗೂ ವ್ಯಾಪಕವಾಗಿ ತುಲಾಭಾರ ದಾನ ಪದ್ಧತಿ ಮುಂದುವರಿದು ಬಂದಿದೆ.

ಸಾಂತಳಿಗೆ – 1000 ನಾಡನ್ನು ಆಳುತ್ತಿದ್ದ ಮಹಾಉಗ್ರ ವಂಶದ ಜಿನದತ್ತನ ವಂಶದಲ್ಲಿ ವಿಕ್ರಮ ಸಾಂತರ ತನ್ನ ಆಳಿಕೆಯಲ್ಲಿ ಪೋಬುಚ್ಚಪುರದ ಹಗೆಗಳನ್ನು ನಿರ್ಮೂಲ ಮಾಡಿ ನಾಡಿನ ಎಲ್ಲೆಗಳನ್ನು ವಿಸ್ತರಿಸಿ ಅನೇಕ ಧಾನ ಧರ್ಮಗಳನ್ನು ಮಾಡಿದ್ದಾನೆ. 895ರಲ್ಲಿ ಪಟ್ಟಕ್ಕೆ ಬಂದ ವಿಕ್ರಮ ಸಾಂತರನ್ನು ತನ್ನ ಮನೆ ದೇವತೆ ಪದ್ಮಾವತೀ ಸನ್ನಿಧಿಯಲ್ಲಿ ತನ್ನ ತೂಕದ ಹಿರಣ್ಯವನ್ನು (ಸುವರ್ಣ) ತನ್ನ ಪ್ರಜೆಗಳಿಗೆ ದಾನ ಮಾಡಿದ. ಇದರಿಂದ ಆತನಿಗೆ ತೋಲಾಪುರುಷ ಸಾಂತರನೆಂಬ ಹೆಸರು ಬಂದಿತು. ತನ್ನ ದೇಹದ ತೂಕದ ಚಿನ್ನವನ್ನು ತಕ್ಕಡಿಯಲ್ಲಿಟ್ಟು ತೂಗಿ ಪ್ರಜೆಗಳಿಗೆ ದಾನ ಮಾಡುವ ಪದ್ಧತಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಅನೇಕ ಪ್ರಾಚೀನ ಕಾವ್ಯಗಳಲ್ಲಿ, ಶಾಸನಗಳಲ್ಲಿ ಕಂಡುಬರುವ ತೊಳಾ(ಲಾ) ಪುರುಷ ಎಂಬ ಪದ ಪ್ರಯೋಗ ವಿಶಿಷ್ಟವಾಗಿದೆ. ಈ ಹೆಸರಿಗೆ ಕಾರಣವಾಗಿರುವ ತುಲಾಪುರುಷ ಶಿಲಾಫಲಕ ಹೊಂಬುಜದಲ್ಲಿದೆ. ಹೊಂಬುಜದ ಪಾರ್ಶ್ವನಾಥ ಬಸದಿಯ ಆವರಣದಲ್ಲಿರುವ ಈ ಫಲಕವನ್ನು ಹರಕೆಯ ಫಲಕವೆಂದು ಕರೆಯಲಾಗುತ್ತದೆ. ಹಲಗೆಯ ಹಾಗೆ ಇರುವ ಕಲ್ಲಿನ ಚಪ್ಪಡಿಯ ಮೇಲಿರುವ ಉಬ್ಬು ಶಿಲ್ಪ ಚಿತ್ರಗಳು ಸುಸ್ಥಿತಿಯಲ್ಲಿವೆ. ಇದೊಂದು ಐತಿಹಾಸಿಕ ಮಹತ್ತ್ವದ ಮತ್ತು ಅಪರೂಪದ ಪ್ರಾಚೀನ ಶಿಲ್ಪ.



ತುಲಾಭಾರ ಶಿಲ್ಪ, ಹೊಂಬುಜ

ಈ ತುಲಾಪುರುಷ (ತುಲಾಭಾರ ಅಥವಾ ತುಲಾದಾನ) ಶಿಲ್ಪವನ್ನು ಮೂರು ಹಂತಗಳಲ್ಲಿ ಕೆತ್ತಲಾಗಿದೆ. ಮೊದಲ ಹಂತದಲ್ಲಿ ತುಲಾಭಾರಕ್ಕಾಗಿ ಮಾಂಡಲೀಕನ ಪರಿವಾರದವರು ಸುವರ್ಣವನ್ನು ಹರಿವಾಣದಲ್ಲಿಟ್ಟು ಕೊಂಡು ತಕ್ಕಡಿ (ತುಲಾದಂಡ) ಇರುವ ಕಡೆ ತರುತ್ತಿರುವಂತೆ. ಆತನು ಒಂದು ಕೈಯಲ್ಲಿ ಹರಿವಾಣ ಹಿಡಿದುಕೊಂಡು ಮತ್ತೊಂದು ಕೈ ಬೀಸುತ್ತಾ ಬರುತ್ತಿದ್ದಾನೆ. ಎರಡು ದೊಡ್ಡ ಕಂಬಗಳಿಗೆ ತೂಗು ಬಿಟ್ಟಿರುವ ತಕ್ಕಡಿಯ ಎಡಭಾಗದ ತಟ್ಟೆಯಲ್ಲಿ ಹೆಚ್ಚು ತೂಕದ ಚಿನ್ನ, ಆಭರಣ ತುಂಬಿದ ಮೂಟೆಯೂ ಬಲದ ತಟ್ಟೆಯಲ್ಲಿ ವಿಕ್ರಮ ಸಾಂತರನೂ ಕುಳಿತಿದ್ದಾನೆ. ತಕ್ಕಡಿಯ ಎರಡೂ ತಟ್ಟೆಗಳೂ (ಹಲಗೆ) ಸಮನಾಗಿವೆ. ಈ ತೂಗು ಕಂಬದ ಪಕ್ಕದಲ್ಲಿ ತೋಲಾಪುರುಷ ವಿಕ್ರಮ ಸಾಂತರನು ಹೊನ್ನಿನ ನಾಣ್ಯ, ಆಭರಣಾದಿ ಗಳನ್ನು ಎರಡು ಕಾಲಿನ ಪೀಠದ ಮೇಲೆ ಇಟ್ಟುಕೊಂಡು ದಾನಮಾಡಲು ನಿಂತಿರುವುದು ಚಿತ್ರಿತವಾಗಿದೆ. ಎಡಬಲಗಳಲ್ಲಿ ಸೇವಕರು ಮತ್ತು ದಾನ ಸ್ವೀಕರಿಸಿದವರು ನಿರ್ಗಮಿಸುತ್ತಿರುವ ಚಿತ್ರವಿದೆ.

ಎರಡನೆಯ ಹಂತದ ನಡುವೆ ಸಾಂತರರ ಕುಲದೇವತೆ ಪದ್ಮಾವತಿ ದೇವಿಯ ಪ್ರತಿಮೆ ಇದೆ. ಪದ್ಮಾಸನದಲ್ಲಿ ಚತುರ್ಭುಜಳಾಗಿರುವ ಶಿಲ್ಪದ ಕಿರೀಟದ ಮೇಲೆ ಸರ್ಪದ ಹೆಡೆ ಇದೆ. ಕೈಗಳಲ್ಲಿ ಪಾಶ, ಅಂಕುಶ, ಕಮಲ ಮತ್ತು ಫಲಗಳಿವೆ. ದೇವಿಯ ಸುತ್ತ ಪ್ರಭಾವಳಿಯಲ್ಲಿ ದೇವಿಯರ ಚಿತ್ರಗಳಿವೆ. ಮೂರನೆಯ ಹಂತದಲ್ಲಿ ಮಧ್ಯದಲ್ಲಿ ಪದ್ಮಾಸನದಲ್ಲಿ ಧ್ಯಾನ ಮುದ್ರೆಯಲ್ಲಿರುವ ಪಾರ್ಶ್ವನಾಥ ಮೂರ್ತಿ ಇದೆ. ಎಡಬಲಗಳಲ್ಲಿ ಚಾಮರಧಾರಿಗಳಿದ್ದಾರೆ. ಬಲಭಾಗದಲ್ಲಿ ಒಬ್ಬ ಯಕ್ಷ ಸುಖಾಸನದಲ್ಲಿ ಕುಳಿತಿದ್ದಾನೆ. ಬಲಗೈಯಲ್ಲಿ ಕಮಲ ಪುಷ್ಪವಿದೆ. ಎಡಬದಿಗೆ ಚಿಕ್ಕಮಗುವನ್ನು, ಬಲಗೈಯಲ್ಲಿ ಸ್ತ್ರೀ ವಿಗ್ರಹವನ್ನು ಹಿಡಿದಿರುವಂತಿದೆ. ಅತ್ಯಂತ ಪ್ರಾಚೀನವಾದ (895) ಈ ತುಲಾ ಪುರುಷ ಶಿಲಾಫಲಕ ಒಂದು ಅಪರೂಪದ ಶಿಲ್ಪವಾಗಿದೆ. ವಿಕ್ರಮ ಸಾಂತರನಿಗೆ ತುಲಾಪುರುಷನೆಂಬ ಹೆಸರು ಬರಲು ಕಾರಣವಾದ ಈ ಶಿಲ್ಪ ಅನನ್ಯವಾದದ್ದು. (ಜಿ.ಜಿ.)

**ತುಳುನಾಡಿನ ದೇವಾಲಯಗಳು:** ಕರಾವಳಿ ಪ್ರದೇಶದ ಶರಾವತಿ–ಸೀತಾನದಿಗಳ ಪ್ರದೇಶ. ಇಲ್ಲಿ ಪೂಜೆಗೊಳ್ಳುತ್ತಿರುವ ಸಂಖ್ಯೆಯಷ್ಟು ಪ್ರಾಚೀನ ದೇವಾಲಯಗಳು ಬೇರೆ ಜಿಲ್ಲೆಗಳಲ್ಲಿ ದೊರೆಯುವುದು ದುರ್ಲಭ. ಪ್ರಸ್ತುತಶಕದ ಆರಂಭಕ್ಕೆ ಮೊದಲಿನಿಂದ ಬೇರೆಡೆಗಳಿಂದ ಬರುತ್ತಿದ್ದ ವರ್ತಕ ಸಮುದಾಯದೊಂದಿಗೆ ಇಲ್ಲಿಯ ಸಮಾಜ ಬೆಳೆಯಿತು. ಒಂದು ವಿಶಿಷ್ಟರೀತಿಯ ದೇವಾಲಯ ಸಂಸ್ಕೃತಿ ಇಲ್ಲಿ ಬೆಳೆಯುವುದಕ್ಕೆ ಇದು ಸಹಕಾರಿಯಾಯಿತು.

ವೈದಿಕ, ಜೈನ ಮತ್ತು ಬೌದ್ಧ ಧರ್ಮಗಳು ಇಲ್ಲಿ ಕಾಲಕ್ರಮೇಣ ಹರಡಿದವು. ಬೌದ್ಧ ಧರ್ಮ ಉಳಿದೆರಡರಂತೆ ಪ್ರಭಾವ ಬೀರಿದಂತೆ ಕಾಣುವುದಿಲ್ಲ. ವೈದಿಕಧರ್ಮದಲ್ಲಿದ್ದ ಹಲವು ಪ್ರಭೇದಗಳಾದ ಶೈವ, ಶಾಕ್ತ, ಗಾಣಪತ್ಯ, ಸೌರ, ಕೌಮಾರ ಮತ್ತು ಭಾಗವತ ಸಂಪ್ರದಾಯಗಳು ಬಹಳ ಆಳವಾಗಿ ಬೇರೂರಿದವು. ಶೈವದ ಪಾಶುಪತ, ಕಾಳಾಮುಖ ಮತ್ತು ಕಾಪಾಲಿಕ ಪಂಗಡಗಳೂ ಇಲ್ಲಿದ್ದವು. ಇಲ್ಲಿಯ ಪ್ರಾಚೀನ ದೇವಾಲಯಗಳು ಈ ಪಂಗಡಗಳಲ್ಲಿಯ ಸಮನ್ವಯತೆಯನ್ನು ಗುರುತಿಸಲು ಸಹಕಾರಿಯಾಗಿವೆ. ಬೈಂದೂರು, ಉಲ್ಲಾಳಗಳ

ಸೋಮೇಶ್ವರ, ಕಿರಿಮಂಜೇಶ್ವರದ ಸಿಗಸ್ತ್ಯೇಶ್ವರ, ಮರವಂತೆಯ ವರಾಹಸ್ವಾಮಿ, ಮಲ್ಪೆಯ ವಡಭಾಂಡೇಶ್ವರ ಇವು ಸಮುದ್ರ ತಟದ ಕ್ಷೇತ್ರಗಳು. ಕೊಲ್ಲೂರು, ಕಮಲಶಿಲೆ, ಧರ್ಮಸ್ಥಳ ಮತ್ತು ಕುಕ್ಕೆ ಸುಬ್ರಹ್ಮಣ್ಯಗಳಲ್ಲಿ ದುರ್ಗಮವಾದ ಶಾಸನಗಳಿದ್ದವು. ಬೆಳ್ಮಣ್ಣಿನ ಮಹಿಷಮರ್ದಿನಿ, ನಿರಿಂಜದ ಕಾರಿಂಜೇಶ್ವರ, ನರಹರಿಪರ್ವತದ ಸದಾಶಿವ, ಕುಂಜಾರುವಿನ ದುರ್ಗಾಪರಮೇಶ್ವರಿ– ಇವು ಗಿರಿಯ ಮೇಲಿನ ಆಲಯಗಳು. ಉಪ್ಪಿನಂಗಡಿಯ ಸಹಸ್ರಲಿಂಗೇಶ್ವರ, ಕಡೇಶಿವಾಲಯದ ಚಿಂತಾಮಣಿ ನರಸಿಂಹ ಮತ್ತು ನಂದಾವರದ ಶಂಕರ ನಾರಾಯಣ ನೇತ್ರಾವತೀ ನದಿತಟದಲ್ಲಿರುವ ಪವಿತ್ರತಾಣಗಳು.

ಮೂಕಾಂಬಿಕ ದೇವಸ್ಥಾನ, ಕೊಲ್ಲೂರು

ವಿನ್ಯಾಸದಲ್ಲಿ ಇಲ್ಲಿಯ ದೇವಾಲಯಗಳ ವಾಸ್ತು ಮಾದರಿಗಳನ್ನು ಮೂರು ವರ್ಗಗಳಲ್ಲಿ ಕಾಣಬಹುದು. ಗಜಪೃಷ್ಠ, ಚತುರಸ್ರ ಮತ್ತು ವೃತ್ತ. ಗಜಪೃಷ್ಠ ಮಾದರಿಯ ದೇವಾಲಯಗಳು 5–6 ನೆಯ ಶತಮಾನದಿಂದ 9ನೆಯ ಶತಮಾನದ ಅವಧಿಯೊಳಗಿನವುಗಳಲ್ಲಿ ಪ್ರಮುಖವಾದವು ಉದ್ಯಾವರದ ಶಂಭುಕಲ್ಲು ಸೋಮೇಶ್ವರ, ಕೋಟದ ಹಿರೇಮಹಾಲಿಂಗೇಶ್ವರ, ಬ್ರಹ್ಮಾವರ, ಹೆಜಮಾಡಿ, ಬಾಂಟ್ರ, ಪುತ್ತೂರುಗಳ ಮಹಾಲಿಂಗೇಶ್ವರ, ಉಡುಪಿಯ ಅನಂತೇಶ್ವರ ಕಾರಿಂಜದ ಕಾರಿಂಜೇಶ್ವರ ಹಾಗೂ ಬಾಕನೂರು ವಿಟ್ಲ ಮತ್ತು ಪಂಜೆಯ ಪಂಚಲಿಂಗೇಶ್ವರ, ಕೋಟ, ಉಡುಪಿ ಮತ್ತು ವಿಟ್ಲದ ದೇವಾಲಯಗಳು. ಅತ್ಯಂತ ಪ್ರಾಚೀನ ದೇವಸ್ಥಾನ ಉದ್ಯಾವರದ್ದು. ಇದರ ಕಾಲ ಸು. 5–6ನೆಯ ಶತಮಾನ. ಆದರೆ ಕೆಲದಶಕಗಳ ಹಿಂದೆ ಹಳೆಯ ಅಧಿಷ್ಠಾನದ ಮೇಲೆ ಇದು ಸಂಪೂರ್ಣ ಹೊಸದಾಗಿ ನಿರ್ಮಾಣಗೊಂಡಿದೆ. ನಂದಿ, ಪಾಣಿಪೀಠ ಸಹಿತ ಶಿವಲಿಂಗ ಮತ್ತು ಅಧಿಷ್ಠಾನ. ಇಲ್ಲಿ ಈಗ ಇರುವ ಪಳೆಯುಳಿಕೆಗಳು. ಉಡುಪಿಯ ಅನಂತೇಶ್ವರ ದೇವಾಲಯದ ಒಳಭಿತ್ತಿ ಶಿಲಾಮಯವಾದುದು; ಕೆಲವು ಸುಂದರ ರಚನೆಗಳಿಂದ ಕೂಡಿದೆ. ಆದರೆ ಹೊರಭಾಗದ ಸಾಮಾನ್ಯ ಭಿತ್ತಿ ಈ ಸೌಂದರ್ಯವನ್ನು ಮುಚ್ಚಿ ಹಾಕಿದೆ. ಈಗ ಕಾಣಬಹುದಾದ್ದೆಂದರೆ ಎರಡು ಹಂತದಲ್ಲಿರುವ ಎತ್ತರವಾಗಿರುವ ಮತ್ತು ಇಳಿಜಾರಾದ ಮಾಡು. ಕೆಳಹಂತದಲ್ಲಿ ಬೃಹತ್ ಶಿಲಾಚಪ್ಪಡಿಗಳ ಹಾಸಿದ್ದರೆ ಮೇಲಿನದು ತಾಮ್ರದ ಹೊದಿಕೆಯನ್ನು ಹೊಂದಿದೆ. ಕೋಟದ ದೇವಾಲಯದಲ್ಲಿ ಮೂರಕಲ್ಲು ಮತ್ತು ಗಾರೆಗಳಿಂದ ಮಾಡಿದ ಸುಂದರ ಭಿತ್ತಿ ರಚನೆಯನ್ನು ಕೆಳ ಮತ್ತು ಮೇಲಿನ ಹಂತಗಳಲ್ಲಿ ಕಾಣಬಹುದು. ಮೇಲೇರುವ ಇದರ ಭಿತ್ತಿ ಆಲಯಕ್ಕೆ ಔನ್ನತ್ಯವನ್ನಿತ್ತಿದೆ. ಹೊರಭಾಗ ಸುಂದರ ಮತ್ತು ಕಲಾತ್ಮಕವಾದ ರಚನೆಗಳನ್ನು ಹೊಂದಿದೆ. ಮೂರು ಹಂತದಲ್ಲಿರುವ ಇದರ ಮಾಡು ಇಳಿಜಾರಾಗಿದ್ದು ತಾಮ್ರದ ಹೊದಿಕೆಯನ್ನು ಹೊಂದಿದೆ.

ಕಾರಿಂಜದ ಕಾರಿಂಜೇಶ್ವರ ಸಹಜವಾದ ಪ್ರಕೃತಿ ಸೌಂದರ್ಯದಿಂದ ಶೋಭಿಸುತ್ತಿದೆ. ಅಷ್ಟೇ ಅಲ್ಲ ಈ ಪ್ರದೇಶದ ಉಳಿದ ಗಜಪೃಷ್ಠ ವಾಸ್ತುವಿನ ದೇವಾಲಯಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಉಳಿದೆಡೆಗಳಲ್ಲಿ ದೇವಾಲಯಕ್ಕೆ ಶಿಖರ ಎಂಬುದಿಲ್ಲ. ಆದರೆ ಇಲ್ಲಿ ಗರ್ಭಗುಡಿಯ ಮೇಲೆ ಶಿಖರವಿದೆ. ದೇವಾಲಯದ ಗಾತ್ರಕ್ಕೆ ತಕ್ಕಂತಿರುವ ಇದು ಸು. 10–11ನೆಯ ಶತಮಾನದ ಸುಂದರ ರಚನೆಯಾಗಿದೆ.

ಗಜ ಪೃಷ್ಠಾಕಾರದ ದೇವಾಲಯಗಳ ಪ್ರಮುಖ ಅಂಗಗಳೆಂದರೆ–ಧ್ವಜಸ್ತಂಭ, ಪ್ರಧಾನ ಬಲಿಪೀಠ, ಮುಖ ಮಂಟಪ, ನವರಂಗ, ಸುಕನಾಸಿ ಮತ್ತು ಗರ್ಭಗೃಹ ಹೊರಭಾಗದ ಅಧಿಷ್ಠಾನ ಒಂದೇ ಮಟ್ಟದ್ದಾದರೂ ಒಳಭಾಗದಲ್ಲಿ ಇದು ಹಂತಹಂತವಾಗಿ ಮೇಲೇರುತ್ತದೆ. ಇದರಿಂದ ಗರ್ಭಗೃಹದ ನೆಲಮಟ್ಟ ಸಾಕಷ್ಟು ಎತ್ತರವಾಗಿದ್ದು ಉನ್ನತ ವೇದಿಕೆಯೊಂದು ನಿರ್ಮಾಣವಾಗಿರುತ್ತದೆ. ಇದರ ಕೇಂದ್ರ ಭಾಗದಲ್ಲಿ ಪಾಣಿಪೀಠದ ಮೇಲೆ ಶಿವಲಿಂಗಪ್ರತಿಷ್ಠಾಪನೆ. ಉಡುಪಿಯ ಅನಂತೇಶ್ವರ ಮತ್ತು ಕೋಟದ ಹಿರೇಮಹಾಲಿಂಗೇಶ್ವರ ದೇವಾಲಯಗಳ ಗರ್ಭಗೃಹಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ.

ವೃತ್ತಾಕಾರದಲ್ಲಿ ದೇವಾಲಯಗಳನ್ನು ಕಟ್ಟಿರುವ ಹಲವು ಉದಾಹರಣೆಗಳು ಇಲ್ಲಿವೆ. ಆದರೆ ಈ ವೃತ್ತ ಗರ್ಭಗೃಹಕ್ಕೆ ಮಾತ್ರ ಸೀಮಿತವಾಗಿದೆ. ಉಳಿದಂತೆ ಇದರ ತೀರ್ಥ ಮಂಟಪ ಮತ್ತು ಪ್ರಾಕಾರಗಳು ಚತುರಸ್ರ ಮತ್ತು ದೀರ್ಘ ಚತುರಸ್ರವಾಗಿವೆ. ಪೊಳಲಿಯ ಅಖಿಲೇಶ್ವರಿ, ಕೊಕ್ಕಡ, ಉಜಿರೆ, ಬೆಳ್ಳೆ, ಎಡಪದವು, ಫಲಿಮಾರು, ಸಾಂತೂರು, ಪಜೆಬೆಟ್ಟು, ಕಡೇಕಾರು ಇತ್ಯಾದಿ ಸ್ಥಳಗಳ ದೇವಾಲಯಗಳು ಈ ಶೈಲಿಗೆ ಉದಾಹರಣೆಗಳು. ಇಲ್ಲಿಯ ಗಮನಾರ್ಹ ಅಂಶವೆಂದರೆ ಹೆಚ್ಚಿನ ಈ ದೇವಾಲಯಗಳು ಸ್ಕಂದ ಕಾರ್ತಿಕೇಯನ ಆಲಯಗಳು. ಆದರೆ ದಕ್ಷಿಣ ಕನ್ನಡದ ಬಹುತೇಕಗುಡು, ವಾರಯಗಳು ಚತುರಸ್ರ ಆಕಾರದಲ್ಲಿವೆ. ಅಧಿಷ್ಠಾನದಿಂದ ಶಿಖರದವರೆಗೆ ಇದು ಚತುರಸ್ರವಾಗೇ ಇವೆ. ಇವಕ್ಕಿರುವ ಎರಡು ಹಂತದ ಮಾಡು ಚತುರಸ್ರವಾಗೇ ಇದ್ದು ಸ್ತೂಪಿ ಕಲಶದಲ್ಲಿ ಕೊನೆಗೊಳ್ಳುತ್ತದೆ. ಚತುರಸ್ರಾಕಾರದ ದೇವಾಲಯ ಗಳಲ್ಲಿ ಮುಖ್ಯ ಅಂಗಗಳೆಂದರೆ ಧ್ವಜಸ್ತಂಭ, ಪ್ರಧಾನ ಬಲಿಪೀಠ, ಮಹಾದ್ವಾರ ಸಹಿತದ ಪ್ರಾಕಾರ, ಹೊರ ಪ್ರದಕ್ಷಿಣಾಪಥ, ತೀರ್ಥ ಮಂಟಪ ಮತ್ತು ಗರ್ಭಗೃಹ. ನವರಂಗ, ಸುಕನಾಸಿಗಳಿರುವ ಗರ್ಭಗೃಹ ರಚನೆ ಸಹ ಇದೆ, ಆದರೆ ಸಂಖ್ಯೆ ವಿರಳ. ಕೊಲ್ಲೂರಿನ ಮೂಕಾಂಬಿಕೆ, ಸಾಲಿಗ್ರಾಮದ ಗುರುನರಸಿಂಹ, ಉಡುಪಿಯ ಚಂದ್ರಮೌಳೇಶ್ವರ, ನಂದಾವರದ ಶಂಕರನಾರಾಯಣ, ಪಣಯೂರಿನ ನಂದನೇಶ್ವರ, ಕೋಟೇಕಾರ್ ಸೋಮೇಶ್ವರದ ಸೋಮನಾಥೇಶ್ವರ, ನಿಟಿಲಾಪುರದ ನಿಟಿಲಾಕ್ಷಸದಾಶಿವ, ಶಿಶಿಲದ ಶಿಶಿಲೇಶ್ವರ, ಕಡಿಯಾಳಿ ಮಹಿಷಮರ್ದಿನಿ ಹಲವು ಪ್ರಮುಖ ದೇವಾಲಯಗಳನ್ನು ಮೊದಲವರ್ಗಕ್ಕೆ ಉದಾಹರಣೆಯಾಗಿ ಹೆಸರಿಸಬಹುದು. ಕೊಡವೂರಿನ ಶಂಕರನಾರಾಯಣ, ಕಾಂತಾವರದ ಕಾಂತೇಶ್ವರ, ಕಡೆಶಿವಾಲ ಯದ ಚಿಂತಾಮಣಿ ನರಸಿಂಹ, ತಿರುವೈಲು ಅಮೃತೇಶ್ವರ, ಬೈಂದೂರಿನ ಸೇನೇಶ್ವರ ಇತ್ಯಾದಿ ಕೆಲವು ಪ್ರಮುಖ ದೇವಾಲಯಗಳನ್ನು ಎರಡನೆಯ ವರ್ಗಕ್ಕೆ ಉದಾಹರಿಸಬಹುದು.

ಪೊಳಲಿಯ ರಾಜರಾಜೇಶ್ವರಿ, ಉದ್ಯಾವರದ ವೀರಭದ್ರ ಮತ್ತು ಮರವಂತೆಯ ಮಾರಸ್ವಾಮಿ ದೇವಾಲಯಗಳು ಆಯತಾಕಾರದಲ್ಲಿವೆ. ಪೊಳಲಿಯ ದೇಗುಲದಲ್ಲಿ ರಾಜರಾಜೇಶ್ವರಿಯ ಎಡ–ಬಲಗಳಲ್ಲಿ ದೇವ–ದೇವಿಯರ ಸಮೂಹವೇ ಇದ್ದರೆ, ಉದಿಯಾವರ ಮತ್ತು ಮರವಂತೆ ದೇವಾಲಯಗಳು ತ್ರಿಕೂಟಗಳಂತಿವೆ.

ಚತುರಸ್ರವಾಗಿದ್ದರೂ ವ್ಯೂಹಶೈಲಿಯಲ್ಲಿರುವ ಒಂದು ದೇವಾಲಯವೆಂದರೆ ಕಾರ್ಕಳದ ಅನಂತಶಯನ. ಮಹಾಬಲಿಪುರಂನ ಏಕಶಿಲಾ ರಥಗಳನ್ನು ನೆನಪಿಗೆ ತರುವಂತಹ ಅದ್ಭುತ ರಚನೆಯನ್ನು ಉಳ್ಳಾಲ ಸೋಮೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಗಣಪತಿದೇವಾಲಯ ದಲ್ಲಿ ಕಾಣಬಹುದು. ಕದ್ರಿ, ಶಂಕರನಾರಾಯಣ ಮತ್ತು ಬೈಂದೂರಿನ ದೇವಾಲಯಗಳು ಕಲಾತ್ಮಕವಾದ ಶಿಖರಗಳನ್ನು ಹೊಂದಿವೆ. ಮೂರೂ ಭಿನ್ನಶೈಲಿಯವು.

ಶ್ರೀಕೃಷ್ಣ ದೇವಾಲಯ, ಉಡುಪಿ

ಸಾಮಾನ್ಯವಾಗಿ ಸ್ಥಳೀಯವಾಗಿ ದೊರಕುವ ಮೂರಕಲ್ಲು ಮತ್ತು ಮರವನ್ನು ದೇವಾಲಯ ರಚನೆಯಲ್ಲಿ ಬಳಸಲಾಗಿದೆ. ಮಾಡಿಗೆ ತಾಮ್ರದ ತಗಡಿನ ಹೊದಿಕೆ ಸಾಮಾನ್ಯ ಮುಳಿಹುಲ್ಲಿನ ಹೊದಿಕೆಯ ದೇವಾಲಯಗಳು ಬಹಳ ಇದ್ದವು. 19ನೆಯ ಶತಕದ ಉತ್ತರಾರ್ಧದಲ್ಲಿ ಇವುಗಳಲ್ಲಿ ಹೆಚ್ಚಿನವು ಹೊಸದಾಗಿ ತಯಾರಾದ ಮಂಗಳೂರು ಹೆಂಚಿನ ಹೊದಿಕೆಗೆ ಬದಲಾದವು. ಸಂಪೂರ್ಣವಾಗಿ ಶಿಲಾಮಯವಾಗಿ ರಚಿತವಾದ ದೇವಾಲಯಗಳು ಇಲ್ಲಿ ಸಾಕಷ್ಟಿವೆ. ಬೈಂದೂರು ಶಂಕರನಾರಾಯಣ, ಧುರಾಲು, ಬಳ್ವ, ಶಿಶಿಲ, ಉಳ್ಳಾಲ, ಕದ್ರಿ ಇತ್ಯಾದಿ ಕಡೆಗಳ ದೇವಾಲಯಗಳನ್ನು ಉದಾಹರಿಸಬಹುದು. ಇಲ್ಲಿಯ ಅಸಂಖ್ಯ ದೇವಾಲಯಗಳು ನಾನಾ ವಾಸ್ತು ಶೈಲಿಯಲ್ಲಿ ರಚಿತವಾಗಿದ್ದರೂ ಎಲ್ಲವೂ ಸಾಮಾನ್ಯ ಸರಳ ಕಟ್ಟಡಗಳು. ಅಲಂಕಾರ

ಸಂಭ್ರಮ ಇರುವುದು ಇಲ್ಲಿಯ ಪೂಜೆ ಉತ್ಸವಾದಿಗಳಲ್ಲಿ ಮಾತ್ರ. ಕರಾವಳಿಯ ಇಳಿಜಾರಾದ ಮಾಡಿನ ಶೈಲಿಯನ್ನು ನೋಡಿದ ವಿದೇಶಿ ವಿದ್ವಾಂಸರು ಇಲ್ಲಿಯ ವಾಸ್ತುಶೈಲಿಯನ್ನು ನೇಪಾಲಿ ಶೈಲಿ ಎಂದು ಕರೆದಿದ್ದಾರೆ. ಈ ಹೇಳಿಕೆ ಸರಿಯಾದುದಲ್ಲ. ಕಾರಣ ಇಲ್ಲಿಯ ಎಲ್ಲ ರಚನೆಗಳೂ ಸ್ಥಳೀಯ ಹವಾಮಾನಕ್ಕನುಗುಣವಾಗಿವೆ. ಬಹು ಕಾಲದಿಂದ ವಿದೇಶೀ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಂದ ಕೂಡಿ ಬೆಳೆದ ಇಲ್ಲಿನ ಸಮಾಜ ತನ್ನ ಆವಶ್ಯಕತೆಗೆ ತಕ್ಕ ರಚನೆಗಳನ್ನು ರೂಢಿಸಿಕೊಂಡಿತು. ಆದರೆ ಎರಡೂ ಕಡೆಯ ಶೈಲಿಗಳಲ್ಲಿ ತಕ್ಕಮಟ್ಟಿಗೆ ಕಾಕತಾಳೀಯವಾಗಿ ಹೋಲಿಕೆ ಇರುವುದು ಆಕಸ್ಮಿಕ.

ಸುಬ್ರಹ್ಮಣ್ಯ ದೇವಾಲಯ, ಕುಕ್ಕೆ

ದಕ್ಷಿಣ ಕನ್ನಡದ ಅನೇಕ ಪುಣ್ಯಪ್ರದ ಸ್ಥಳಗಳು ಅತ್ಯಂತ ಪ್ರಾಚೀನ ಕ್ಷೇತ್ರಗಳು ಇಲ್ಲಿಯ ದೇವಾಲಯಗಳು. ಆದರೆ ಇವುಗಳ ಇಂದಿನ ಸ್ಥಿತಿಯನ್ನು ಗಮನಿಸಿದರೆ ಇವು ಎಷ್ಟು ಪ್ರಾಚೀನ ಎಂದು ಹೇಳುವುದು ಕಷ್ಟವಾಗುತ್ತದೆ. ಆದರೆ ದೇವಾಲಯದೊಳಗಿರುವ ಅದ್ಭುತ ಶಿಲ್ಪಸಂಪತ್ತು ಆದಷ್ಟು ಈ ಕಷ್ಟ ನಿವಾರಣೆಮಾಡಿದೆ. ಶಿಲ್ಪಗಳು ಧಾರ್ಮಿಕ ಸಂಪ್ರದಾಯಗಳ ಬೆಳವಣಿಗೆಯ ಅಧ್ಯಯನಕ್ಕೆ ದಿಕ್ಸೂಚಿಯೂ ಆಗಿವೆ. ಶುದ್ಧ ಶೈವ, ಶಾಕ್ತ, ಗಾಣಾಪತ್ಯ, ಸ್ಕಂದ, ಸೌರ ಮತ್ತು ಭಾಗವತದ ಸಂಪ್ರದಾಯದ ದೇವಾಲಯಗಳನ್ನು ಇಲ್ಲಿ ಸುಲಭವಾಗಿ ಗುರುತಿಸಬಹುದು. ಅಷ್ಟೇ ಅಲ್ಲ, ಕಾಲದಿಂದ ಕಾಲಕ್ಕೆ ನಾನಾ ಪ್ರಭಾವಗಳಿಗನುಗುಣವಾಗಿ ಇಲ್ಲಿ ಆಗಿರುವ ಬದಲಾವಣೆ ಅಥವಾ ಸೇರ್ಪಡೆಗಳನ್ನು ಸುಲಭವಾಗಿ ಗುರುತಿಸಬಹುದು. ಶುದ್ಧ ಶೈವಕ್ಕೆ ಸಂಬಂಧಿಸಿದಂತೆ ಉದಿಯಾವರದ ಶಂಭುಕಲ್ಲು–ಪ್ರಸನ್ನ ಸೋಮೇಶ್ವರ ಮತ್ತು ವಡ್ಡರ್ಸೆಯ ಮಹಾಲಿಂಗೇಶ್ವರ ಅತ್ಯಂತ ಪ್ರಾಚೀನ ದೇಗುಲಗಳು. ಇಲ್ಲಿರುವ ಶಿವಲಿಂಗಗಳು ಪ್ರಾಯಶಃ 5–6ನೆಯ ಶತಮಾನದಷ್ಟು ಪ್ರಾಚೀನವಾದವು. ಎರಡು ಬೃಹತ್ ಶಿವಲಿಂಗಗಳು (ಒಂದು ಪಾಣಿಪೀಠಸಹಿತ) ದೊರೆತಿವೆ. ಇವೂ ಆದಿ ಕದಂಬರ ಕಾಲಕ್ಕೆ ಸೇರುವಂಥವು. ತ್ರಿಮೂರ್ತಿ ಪೂಜೆ ಇಲ್ಲಿ ವ್ಯಾಪಕವಾಗಿತ್ತು ಎಂಬುದಕ್ಕೆ ಉಡುಪಿ ತಾಲ್ಲೂಕಿನಲ್ಲಿ ಉದಾಹರಣೆಗಳಿವೆ. ಕುತ್ಯಾಡಿ ಮತ್ತು ಸಾಸ್ತಾನಗಳಲ್ಲಿನ ದೇವಾಲಯಗಳಲ್ಲಿ ತ್ರಿಮೂರ್ತಿಗಳನ್ನು ಪ್ರತಿನಿಧಿಸುವ ಮೂರು ಲಿಂಗಗಳನ್ನು ಒಂದೇ ಪೀಠದಲ್ಲಿ ಸ್ಥಾಪಿಸಿ ಪೂಜಿಸುತ್ತಿರುವುದನ್ನು ಈಗಲೂ ಕಾಣಬಹುದು. ಶಿವನ ಪಂಚತತ್ತ್ವಗಳನ್ನು (ಸದ್ಯೋಜಾತ / ಪೃಥ್ವಿ, ವಾಮದೇವ / ನೀರು, ಅಘೋರ / ಅಗ್ನಿ, ತತ್ಪುರುಷ / ವಾಹಿನಿ, ಈಶಾನ / ಆಕಾಶ) ಪ್ರತಿನಿಧಿಸುವ ಪಂಚಲಿಂಗ ದೇವಸ್ಥಾನಗಳು ಇಲ್ಲಿ ಹಲವಾರು ಇವೆ. ಒಂದೇ ಪಾಣಿಪೀಠದ ಮೇಲೆ ಐದೂ ಲಿಂಗಗಳನ್ನು ಸ್ಥಾಪಿಸಿ ಪೂಜಿಸುವುದು ಇಲ್ಲಿಯ ವೈಶಿಷ್ಟ್ಯ. ಇವು ಬಹುತೇಕ ಪ್ರಾಕೃತಿಕ ಶಿಲಾಖಂಡಗಳು.

ಗಾಣಾಪತ್ಯರ ಪ್ರಭಾವದಿಂದ ಇಲ್ಲಿ ಪ್ರತ್ಯೇಕವಾದ ಗಣಪತಿದೇವಾಲಯಗಳು ಹುಟ್ಟಿಕೊಂಡವು. ಹಟ್ಟಿಯಂಗಡಿ, ಕಿರಿಮಂಜೇಶ್ವರ ಮತ್ತು ಮಂಗಳೂರುಗಳಲ್ಲಿ ಆದಿ ಕದಂಬರ ಕಾಲದ್ದೆನ್ನಬಹುದಾದ ಗಣಪತಿ ವಿಗ್ರಹಗಳನ್ನು ನೋಡಬಹುದು. ಗಣಪತಿ ಮಠಗಳೂ ಇಲ್ಲಿದ್ದವು. ಕಾರ್ಕಳದ ವಿನಾಯಕ ಬೆಟ್ಟುವಿನಲ್ಲಿ ಇದಕ್ಕೊಂದು ಅಪೂರ್ವ ಉದಾಹರಣೆ ಇದೆ.

ಶಾಕ್ತ ಸಂಪ್ರದಾಯ ಅತ್ಯಂತ ಪ್ರಬಲವಾಗಿ ಮತ್ತು ವ್ಯಾಪಕವಾಗಿ ಇಲ್ಲಿ ಹರಡಿತ್ತು. ಇದರ ದ್ಯೋತಕವಾಗಿ ಇಲ್ಲಿ ಅಸಂಖ್ಯ ದೇವೀ ಆಲಯಗಳು ಹುಟ್ಟಿಕೊಂಡವು. ದೇವಿಯನ್ನು ಲಿಂಗರೂಪದಲ್ಲಿ ಆರಾಧಿಸುವುದು ಇಲ್ಲಿಯ ವೈಶಿಷ್ಟ್ಯ ಅಷ್ಟೇ ಅಲ್ಲ. ಇದು ಪ್ರಾಚೀನ ಪದ್ಧತಿ. ಈ ರೀತಿಯ ದೇವಾಲಯಗಳ ಸಂಖ್ಯೆ ಬಹಳ ಇದ್ದರೂ ಕೊಲ್ಲೂರಿನ ಮೂಕಾಂಬಿಕೆ ಒಂದು ಪ್ರಸಿದ್ಧ ಹಾಗೂ ಪ್ರಾಚೀನ ಉದಾಹರಣೆ.

ಲೆಪ್ಪ, ಕಾಷ್ಠ, ಶಿಲೆ ಮತ್ತು ಲೋಹಗಳಲ್ಲಿ ದೇವಿಯ ವಿಗ್ರಹಗಳನ್ನು ತಯಾರಿಸಿ ಪೂಜಿಸುವ ಪದ್ಧತಿ ಅತ್ಯಂತ ಪ್ರಾಚೀನ ಕಾಲದಿಂದಲೇ ಇಲ್ಲಿತ್ತು. ಬಾರಕೂರು, ಉದಿಯಾವರ ಮತ್ತು ಪೊಳಲಿಗಳಲ್ಲಿರುವ ಆಲಯಗಳಲ್ಲಿ ಮಣ್ಣಿನ ವಿಗ್ರಹಗಳು ಇಂದಿಗೂ ಪೂಜೆಗೊಳ್ಳುತ್ತಿರುವುದನ್ನು ಕಾಣಬಹುದು. ಇಲ್ಲಿರುವ ದೇವಿಯರ ವಿಗ್ರಹಗಳು ಸಪ್ತಮಾತೃಕೆಯರದ್ದು. ಆದರೆ ಸ್ಥಳೀಯವಾಗಿ ಇವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. 7ನೆಯ ಶತಮಾನದ ಮಧ್ಯಭಾಗಕ್ಕೆ ಸೇರುವ ಪೊಳಲಿಯ ಶಾಸನದಲ್ಲಿ ಸ್ಪಷ್ಟವಾಗಿ ಸಪ್ತಮಾತೃಕೆಯರ ಉಲ್ಲೇಖ ಇದೆ. ಆದರೆ ಅಲ್ಲಿಯ ಮುಖ್ಯದೇವಿಯನ್ನು ರಾಜರಾಜೇಶ್ವರಿ ಎಂದು ಕರೆಯಲಾಗುತ್ತದೆ. ಸಿಂಹಾಸನಾರೂಢವಾಗಿರುವ ಈ ದೇವಿಯ ವಿಗ್ರಹ ಹೆಚ್ಚು ಎತ್ತರವಾಗಿದೆ. ಸುಖಾಸೀನದಲ್ಲಿರುವ ಈ ವಿಗ್ರಹದ ಕಾಲುಗಳು ಇಳಿಬಿಟ್ಟಿದ್ದು, ಪಾದಗಳು ಅಡಿಯಲ್ಲಿನ ಪೀಠದ ಮೇಲಿವೆ. ಕರಂಡಮುಗುಟ ಮತ್ತು ಪ್ರಸನ್ನವದನದ ಈ ದೇವಿ ದ್ವಿಭುಜೆ. ಎಡದ ಕೈ ಫಲವನ್ನು ಹೊಂದಿದ್ದರೆ ಬಲದ ಕೈ ಅಭಯ ಮುದ್ರೆಯಲ್ಲಿದೆ. ಮಧ್ಯಭಾಗದ ಎಡಬಲಗಳಲ್ಲಿ ಶರಭದಂತಹ ಪ್ರಾಣಿಯ ರಚನೆ ಇದ್ದರೆ ಅವುಗಳ ಮೇಲ್ಭಾಗದಲ್ಲಿ ಶಸ್ತ್ರ ಸಜ್ಜಿತ ರಕ್ಷಕ ಸೇವಕರ ಶಿಲ್ಪಗಳಿವೆ. ಆಯತಾಕಾರದ ಗರ್ಭಗುಡಿಯಲ್ಲಿ ಉದ್ದನೆಯ ಪೀಠದ ಮೇಲೆ ರಾಜರಾಜೇಶ್ವರಿ ವಿಗ್ರಹದ ಎಡಬಲಗಳಲ್ಲಿ ಹಲವು ದೇವ, ದೇವಿಯರ ಮಣ್ಣಿನ ವಿಗ್ರಹಗಳಿವೆ. ಹೆಸರಿಸಬಹುದಾದುವೆಂದರೆ ಬಲಕ್ಕೆ ಸ್ಕಂದ ಮತ್ತು ಗಣಪತಿ ಎಡದಲ್ಲಿ ಶವಾಸನದ ಮೇಲೆ ಕುಳಿತಿರುವ ಭದ್ರಕಾಳಿ. ಈಕೆಯ ಇಳಿಬಿಟ್ಟ ಎಡದ ಕಾಲು ನರಿಯ ಬೆನ್ನಿನ ಮೇಲಿದೆ. ದ್ವಿಭುಜೆಯಾದ ಈಕೆಯ ಎಡಬಲಗಳಲ್ಲಿ ಖಡ್ಗಪಾಣಿಯರಾದ ಸೇವಕಿಯರ ಮೂರ್ತಿಗಳಿವೆ. ಹಿಂಭಾಗದಲ್ಲಿ ಮೇಲುಗಡೆ ಅಷ್ಟಭೈರವರ ಪ್ರತೀಕವಾಗಿ ನಾಲ್ಕು ಮಂದಿ ಭೈರವರಿದ್ದಾರೆ. ಗರ್ಭಗೃಹದ ದಕ್ಷಿಣದ ಗೋಡೆ ಬದಿಯಲ್ಲಿ ತಗ್ಗಾದ ವೇದಿಕೆಯ ಮೇಲೆ ವ್ಯಾಘ್ರಾಸುರ ಸಂಹಾರಿ ರೌದ್ರಾವತಾರಿ ಶಿವನಿದ್ದಾನೆ. ವಿಗ್ರಹಗಳು ಸರಳ ಆದರೆ ಅಸಾಮಾನ್ಯ ರಚನೆಗಳಾಗಿವೆ. ದೇವ, ದೇವಿಯರ ಗುಣಸ್ವಭಾವಗಳನ್ನು ಈ ಬಿಂಬಗಳು ಯಥಾವತ್ ಪ್ರತಿಫಲಿಸಿವೆ. ಇದರ ವೈಭವವನ್ನು ಗರ್ಭಗುಡಿಯ ಮೂರು ದ್ವಾರಗಳ ಮೂಲಕವೇ ನೋಡಿ ಆನಂದಿಸಲು ಸಾಧ್ಯ. ಪೊಳಲಿ ಕ್ಷೇತ್ರದಲ್ಲಿ ಶಕ್ತಿ–ಸಪ್ತಮಾತೃಕೆಯರ ಆರಾಧನೆ ಆದಿಕದಂಬರ ಕಾಲಕ್ಕೆ ಹೋಗುವಂತಹದು.

ಶಿಲೆ ಮತ್ತು ಲೋಹಗಳಲ್ಲಿ ಶಕ್ತಿ ದೇವತೆಯ ನಾನಾರೂಪಗಳನ್ನು ತಯಾರಿಸಿ ಪ್ರತಿಷ್ಠಾಪಿಸಿ ಪೂಜಿಸುವ ರೂಢಿ ಸಹ ಇಲ್ಲಿ ಹಿಂದಿನಿಂದಲೂ ವ್ಯಾಪಕವಾಗಿ ಹರಡಿತ್ತು. ಇದಕ್ಕೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾದ್ಯಾಂತ ಅಧಿಕ ಸಂಖ್ಯೆಯಲ್ಲಿರುವ ದೇವಿಯ ದೇವಾಲಯಗಳೇ ಸಾಕ್ಷಿ. ಹೆಚ್ಚಿನವು ಮಹಿಷಮರ್ದಿನಿ ಶಿಲ್ಪಗಳು. ಒಂದು ಕೈಯಲ್ಲಿ ಮಹಿಷನ ಬಾಲವನ್ನು ಹಿಡಿದೆತ್ತಿ, ತಲೆಯನ್ನು ಕಾಲಿನಿಂದ ಮೆಟ್ಟಿ ಕೈಯಲ್ಲಿರುವ ಶೂಲದಿಂದ ಮಹಿಷನ ದೇಹವನ್ನು ಇರಿದು ಕೊಲ್ಲುವ ದೃಶ್ಯ ಈ ವಿಗ್ರಹಗಳಲ್ಲಿ ರೂಪಿತವಾಗಿದೆ. 3–4ನೆಯ ಶತಮಾನದಿಂದ 10–11ನೆಯ ಶತಮಾನದ ಅವಧಿಯಲ್ಲಿ ಕಡೆಯಲ್ಪಟ್ಟ ವಿಗ್ರಹಗಳು ಪೂಜೆಗೊಳ್ಳುತ್ತಿವೆ. ಪುತ್ತೂರು ತಾಲ್ಲೂಕಿನ ಕುಂಜೂರುನಲ್ಲಿರುವ ಮಹಿಷಮರ್ದಿನಿ ವಿಗ್ರಹ ಅತ್ಯಂತ ಪ್ರಾಚೀನವಾದುದು (ಪ್ರಾಯಶಃ 3–4ನೆಯ ಶತಮಾನ) ಎಂದು ತಜ್ಞರ ಅಭಿಪ್ರಾಯ.

ಉಡುಪಿಯ ಎಂ.ಜಿ.ಎಂ ಕಾಲೇಜಿನ ಗೋವಿಂದ ಪೈ ಸ್ಮಾರಕ ವಸ್ತುಸಂಗ್ರಹಾಲಯದಲ್ಲಿರುವ ಮಹಿಷಮರ್ದಿನಿ ವಿಗ್ರಹ 5ನೆಯ ಶತಮಾನಕ್ಕೆ ಸೇರುವುದಾಗಿದ್ದು ಈ ಭಾಗದ ಎರಡನೆಯ ಪ್ರಾಚೀನ ದೇವಿ ವಿಗ್ರಹವೆನಿಸಿದೆ. ಕದಂಬ–ಚಳುಕ್ಯ ಚಕ್ರವರ್ತಿಗಳ ಕಾಲಕ್ಕೆ ಸೇರುವಂತಹ ಹಲವಾರು ಮಹಿಷಮರ್ದಿನಿ ವಿಗ್ರಹಗಳು ಇಲ್ಲಿವೆ. ಹೆಸರಿಸಬಹುದಾದುವೆಂದರೆ ಕಡಿಯಾಳಿ, ಬಗ್ಗವಾಡಿ, ಮಂದತಳ, ಪೊಳಲಿ, ಬೆಳ್ಮಣ್ಣು, ಮಂಗಳೂರು ಇತ್ಯಾದಿ ಸ್ಥಳಗಳಲ್ಲಿವೆ.

ಗಣಪತಿ ದೇವಾಲಯ, ಕುಂಭಾಶಿ

ಕುಂಜೂರು ಮತ್ತು ಉಡುಪಿ ಎಂ.ಜಿ.ಎಂ ಸಂಗ್ರಹಾಲಯದಲ್ಲಿರುವ ವಿಗ್ರಹಗಳು ದ್ವಿಬಾಹು ಹೊಂದಿವೆ. ಉಡುಪಿ ತಾಲ್ಲೂಕಿನ ಕಣ್ಣಾರುವಿನಲ್ಲಿ ಒಂದು ಸುಂದರವೂ ಮತ್ತು ಅಪೂರ್ವವೂ ಆದ ವಿಗ್ರಹವಿದೆ. ಇದರಲ್ಲಿ ರಾಷ್ಟ್ರಕೂಟ ಮತ್ತು ಪಲ್ಲವ ಪ್ರಭಾವವಿದೆ. ದಷ್ಟಪುಷ್ಟ ದೇಹ, ಬಲಿಷ್ಠ ಬಾಹುಗಳು ಮತ್ತು ಕಾಲುಗಳು, ದುಂಡು ಮುಖ, ಕಿರೀಟ ರಹಿತ ತಲೆ, ಬೆಂಡಿನಂತೆ ಸುತ್ತಿ ಕಟ್ಟಿರುವ ಕೇಶ ಬಲಭುಜದ ಮೇಲೆ ವಾಲಿದೆ. ಹಿತಮಿತವಾದ ವಸ್ತ್ರ, ಆಭರಣ, ಎಡಕೈ ಮಹಿಷನ ಮುಖವನ್ನು ಹಿಡಿದೆತ್ತಿದ್ದರೆ, ಎಡದ ಪಾದ ಮಹಿಷನ ಬೆನ್ನನ್ನು ಅದುಮಿ ತುಳಿದು ಬಲಗೈಯಲ್ಲಿರುವ ಶೂಲ ಮಹಿಷನ ಗೋಣನ್ನು ಇರಿದಿದೆ. ಆದಿ ಕದಂಬರ ಕಾಲಕ್ಕೆ ಹೋಗಬಹುದಾದಷ್ಟು ಪ್ರಾಚೀನವಾದ ಗಣಪತಿ ವಿಗ್ರಹಗಳನ್ನು

ಹಟ್ಟಿಯಂಗಡಿ, ಕಿರಿಮಂಜೇಶ್ವರ ಮತ್ತು ಮಂಗಳೂರುಗಳಲ್ಲಿ ನೋಡಬಹುದು. ಇವು ಈಗಲೂ ಪೂಜೆಗೊಳ್ಳುತ್ತಿವೆ. ಈ ದ್ವಿಭುಜ ವಿಗ್ರಹಗಳು ರಚನೆಯಲ್ಲಿ ಅತ್ಯಂತ ಸರಳವಾದವು. ಕಿರಿಮಂಜೇಶ್ವರದ ಗಣಪತಿ ನಿಂತ ಭಂಗಿಯಲ್ಲಿದೆ. ದಷ್ಟಪುಷ್ಟ ದೇಹ ಕೈ ಕಾಲುಗಳು, ಎಡಗೈ ಮೋದಕ ಹಿಡಿದಿದ್ದರೆ ಸೊಂಡಿಲು ಅದನ್ನು ತೆಗೆದುಕೊಳ್ಳುತ್ತಿರುವಂತಿದೆ. ಬಲದ ಕೈ ನೀಳವಾಗಿದ್ದು ಭಗ್ನದಂತ ಹಿಡಿದಂತಿದೆ. ಗಜಮುಖನ ಕಿವಿಗಳು ಬಹಳ ವಿಶಾಲವಾಗಿವೆ. ಹೀಗೆ ಇದೊಂದು ಅಪೂರ್ವ ರಚನೆಯಾಗಿದೆ. ಚಾಳುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳ ಕಾಲಗಳಿಗೆ ಸೇರಿದಂತೆ ಗಣಪತಿ ವಿಗ್ರಹಗಳೂ ಇವೆ. ವಿನಾಯಕನಿಗೆ ಮಠಗಳೂ ಇದ್ದವು, ಇದಕ್ಕೆ ಶಾಸನಾಧಾರವಿದೆ. ಕಾರ್ಕಳದ ವಿನಾಯಕ ಬೆಟ್ಟದ ವಿನಾಯಕ ದೇವಸ್ಥಾನ ಇದಕ್ಕೆ ಉದಾಹರಣೆ.

ಶಿವದೇವಾಲಯ, ಉದ್ಯಾವರ

ಸೂರ್ಯದೇವಾಲಯಗಳು ಮತ್ತು ಮಠಗಳಿವೆ. ಅತ್ಯಂತ ಪ್ರಾಚೀನವಾದ ಸೂರ್ಯನ ಸ್ಥಾನಕ ವಿಗ್ರಹಗಳನ್ನು, ಬಾರಕೂರು, ಪವಿತ್ರ ಕ್ಷೇತ್ರವಾದ ಕುಂಭಾಸಿ (ಕುಂದಾಪುರ ತಾಲ್ಲೂಕು), ಹಿರಿಮಡಕದ ಬಳಿಯ ಪುತ್ತಿಗೆ (ಉಡುಪಿ ತಾಲ್ಲೂಕು), ಮಂಗಳೂರು ಬಳಿಯ ಮತ್ತೋಳಿ ಮತ್ತು ಕಾರ್ಕಳ ಮತ್ತು ನಾರಾವಿಯಲ್ಲಿ ಕಾಣಬಹುದು. ಸೂರ್ಯನನ್ನು ನಾರಾಯಣನೊಂದಿಗೆ ಸೇರಿಸಿ ಸೂರ್ಯನಾರಾಯಣ ಎಂದೇ ಕರೆಯುವುದು ಇಲ್ಲಿನ ವಾಡಿಕೆ. ಪುತ್ತಿಗೆಯ ಸೂರ್ಯನನ್ನು ವಿಷ್ಣು ಎಂದು ಗ್ರಹಿಸಿ–ವಿಷ್ಣುಮೂರ್ತಿ ಎಂದು ಪೂಜಿಸುತ್ತಿದ್ದಾರೆ.

ಇಲ್ಲಿಯ ಹಲವು ವಿಶೇಷಗಳಲ್ಲಿ ನಾಗಾರಾಧನೆಯೂ ಒಂದು. ಸ್ಕಂದ–ಸುಬ್ರಹ್ಮಣ್ಯ ರೂಪದಲ್ಲೂ ಇದು ಮಿಳಿತವಾಗಿದೆ. ಇದರಿಂದಾಗಿ ಸ್ಕಂದ–ಕಾರ್ತಿಕೇಯನಿಗಾಗಿ ಪ್ರತ್ಯೇಕ ದೇವಾಲಯಗಳಿವೆ. ಕಂದಾವರ, ಬಾರಕೂರು, ಮಲ್ಪೆ (ವಡಭಾಂಡೇಶ್ವರ), ಕಡಂದಲೆ, ಸಾಂತೂರು, ನೀರುಮಾರ್ಗ, ಪೊಳಲಿ, ಸೂರಿಯ ಇತ್ಯಾದಿ ಸ್ಥಳಗಳಲ್ಲಿ ಸ್ಕಂದ–ಕಾರ್ತಿಕೇಯನ ಅತ್ಯಂತ ಪ್ರಾಚೀನ ವಿಗ್ರಹಗಳನ್ನು ಕಾಣಬಹುದು. ವಾಸುದೇವ, ಜನಾರ್ಧನ ಮತ್ತು ನರಸಿಂಹ ಆರಾಧನೆ ಇಲ್ಲಿ ಪ್ರಚಲಿತವಿತ್ತು. ಕುಂದಾಪುರ ತಾಲ್ಲೂಕಿನ ಶಿರೂರಿನಲ್ಲಿ ವಾಸುದೇವ ದೇವಾಲಯವಿದ್ದು ಇಲ್ಲಿ ಪೂಜೆಗೊಳ್ಳುತ್ತಿರುವ ವಿಗ್ರಹ ಸು. 10ನೆಯ ಶತಮಾನಕ್ಕೆ ಸೇರಿದ್ದು. ಜನಾರ್ಧನ ದೇವಾಲಯಗಳು ಇಲ್ಲಿ ಅಧಿಕಸಂಖ್ಯೆಯಲ್ಲಿ ಇವೆ. ಈಗ ಈ ದೇವಾಲಯಗಳಿಗೆ ವಿಷ್ಣುಮೂರ್ತಿ ಎಂಬ ಹೆಸರಿದೆ. ಅಗ್ರಹಾರಗಳು ಹುಟ್ಟಿಕೊಂಡಲ್ಲೆಲ್ಲಾ ಒಂದೊಂದು ಜನಾರ್ಧನ ದೇವಾಲಯ ನಿರ್ಮಾಣವಾದಂತೆ ಕಾಣುತ್ತದೆ. ಉಡುಪಿಯ ಶಿವಳ್ಳಿ ಅತ್ಯಂತ ಪ್ರಾಚೀನ ಅಗ್ರಹಾರ ಕೇಂದ್ರ. ಇಲ್ಲಿಯ ಸಿರಂದಳ್ಳಿ ಮತ್ತು ಮಲ್ಲಂಪಳ್ಳಿ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನವಾದ ಕದಂಬ–ಚಾಳುಕ್ಯ ಕಾಲದ ಸುಂದರ ಜನಾರ್ಧನ ವಿಗ್ರಹಗಳಿವೆ. ಎರಡೂ ವಿಗ್ರಹಗಳು ಚತುರ್ಭುಜವಾಗಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ, ಚಕ್ರಗಳಿದ್ದರೆ ಕೆಳಗಿನ ಎಡಗೈ ಗದೆಯನ್ನು ಹಿಡಿದಿದ್ದು ಬಲಹಸ್ತದಲ್ಲಿ ಪಿಂಡವಿದೆ.

ನರಸಿಂಹಾರಾಧನೆ ಇಲ್ಲಿ ವ್ಯಾಪಕವಾಗಿತ್ತು. ಇಲ್ಲಿ ಅವನನ್ನೇ ಪೂಜಿಸುವ ಪ್ರತ್ಯೇಕ ಸಮುದಾಯ ಈಗಲೂ ಇದೆ. ಆದಿ ಕದಂಬರ ಕಾಲದ್ದೆನ್ನಬಹುದಾದ ನರಸಿಂಹ (ದ್ವಿಬಾಹು) ವಿಗ್ರಹಗಳನ್ನು ಉಡುಪಿ ತಾಲ್ಲೂಕಿನ ಸಾಲಿಗ್ರಾಮ, ಕುಂದಾಪುರ ತಾಲ್ಲೂಕಿನ ಕ್ಯಾರತ್ತೂರು, ಗಂಗನಾಡು ಮತ್ತು ಬಂಟವಾಳ ತಾಲೂಕಿನ ಪೊಳಲಿಗಳಲ್ಲಿ ನೋಡಬಹುದು. ಅನಂತರದ ಕಾಲಕ್ಕೆ ಸೇರಿದ ನರಸಿಂಹನ ವಿಗ್ರಹಗಳೂ ಇಲ್ಲಿವೆ.

10ನೆಯ ಶತಮಾನದಿಂದ ಅಧಿಕ ಸಂಖ್ಯೆಯಲ್ಲಿ ಕೃಷ್ಣನ ದೇವಾಲಯಗಳು ನಿರ್ಮಾಣಗೊಂಡವು. ಇವುಗಳಲ್ಲಿ ಬಹುತೇಕ ವೇಣುಗೋಪಾಲ ದೇವಾಲಯಗಳು. ಕಾಲದ ವೈಶಿಷ್ಟ್ಯಗಳನ್ನು ಹೊಮ್ಮಿಸುವ ಶಿಲ್ಪ ವೈಭವ ಇಲ್ಲಿವೆ. ಮಧ್ವಮತದ ಪ್ರಾರಂಭಕ್ಕೆ ಕೆಲವು ಶತಮಾನಗಳಷ್ಟು ಹಿಂದೆಯೇ ಇವು ರೂಪುಗೊಂಡಿದ್ದವು. ಈ ಕಾಲದ ಸುಂದರ ಉದಾಹರಣೆಯಾಗಿ ಕಾರ್ಕಳ, ಮಂಗಳೂರು, ಬಾರಕೂರು, ಬನ್ನಾಡಿ, ಕೋಟೇಶ್ವರ, ಗುಂಡ್ಮಿ ಇತ್ಯಾದಿ ಊರುಗಳಲ್ಲಿರುವ ವೇಣುಗೋಪಾಲ ವಿಗ್ರಹಗಳನ್ನು ನೋಡಬಹುದು. ಇವೆಲ್ಲವೂ ದ್ವಿಬಾಹು ವಿಗ್ರಹಗಳು. ಅತ್ತಾವರ, ಚೋಳ್ವಾಡಿ ಮತ್ತು ಬನ್ನಾಡಿ ವಿಗ್ರಹಗಳ ಪ್ರಭಾವಳಿಯಲ್ಲಿ ದಶಾವತಾರಗಳ ಕೆತ್ತನೆ ಇದೆ. ಇದಕ್ಕೂ ಹಿಂದಿನ ಕಾಲದ್ದಾದ ಕೃಷ್ಣನ ವಿಗ್ರಹಗಳು ಬಿಳಿನೆಲೆ (ಪುತ್ತೂರು ತಾಲ್ಲೂಕು) ಮತ್ತು ಉಡುಪಿಯ ಕೃಷ್ಣಮಠದಲ್ಲಿವೆ. ಬಿಳಿನೆಲೆಯ ಕೃಷ್ಣ–ಬಾಲಗೋಪಾಲ ಎರಡೂ ಹಸ್ತಗಳಲ್ಲಿ ಬೆಣ್ಣೆಯನ್ನು ಹಿಡಿದಿದ್ದಾನೆ.

ಕಾರ್ಕಳದ ಅನಂತಶಯನ ಇಲ್ಲಿ ಉಲ್ಲೇಖಾರ್ಹ. ವ್ಯೂಹಶೈಲಿಯಲ್ಲಿ ನಿರ್ಮಿತವಾಗಿರುವ ಈ ದೇವಾಲಯದ ಗರ್ಭಗೃಹದಲ್ಲಿರುವುದು ಬೃಹತ್ ಶೇಷ ಶಾಯಿ ವಿಷ್ಣು, ಇದೊಂದು ಬೃಹತ್ ರಚನೆ. ಸು.3.6 ಮೀ ಉದ್ದ ಮತ್ತು 2.40ಮೀ ಎತ್ತರ ಇರುವ ಈ ಫಲಕದಲ್ಲಿಯ ಸೂಕ್ಷ್ಮ ರಚನೆ ಬೆರಗುಗೊಳಿಸುವಂತಹದ್ದು ಮೂರು ಸುತ್ತು ಸುತ್ತಿ ತನ್ನ ಐದು ಹೆಡೆಗಳನ್ನು ಬಿಚ್ಚಿರುವ ಮಹಾಶೇಷನ ಕಲ್ಪನೆ ಹಾಗೂ ಕೆತ್ತನೆ ತನ್ಮೂಲಕ ಅದಕ್ಕೆ ಕೊಟ್ಟಿರುವ ನೈಜತೆಯ ಪರಿಣಾಮ ನೈಪುಣ್ಯತೆಯ ಶಿಖರಕ್ಕೆ ಸಾಕ್ಷಿಯೆನಿಸಿದೆ. ಈ ಮಹಾಶೇಷನ ಪಲ್ಲಂಕದಲ್ಲಿ ಪವಡಿಸಿರುವ ಮಹಾವಿಷ್ಣು ಬಲಕ್ಕೆ ತಿರುಗಿ, ದಿಂಬಿಗೆ ದೇಹವನ್ನು ಆಧರಿಸಿ ಮೌನ ಮುದ್ರೆಯಲ್ಲಿದ್ದಾನೆ. ಉದ್ದನೆಯ ಕಿರೀಟ ಇವನ ಶಿರವನ್ನಲಂಕರಿಸಿದೆ. ಇದು ಬಾದಾಮಿ, ಐಹೊಳೆ ಮತ್ತು ಎಲ್ಲೋರ ಗುಹಾಲಯಗಳಲ್ಲಿ ಕಂಡುಬರುವ ಕಿರೀಟಗಳನ್ನು ನೆನಪಿಗೆ ತರುವಂತಿದೆ. ಬಲದ ಕೈ ದಿಂಬನ್ನು ಆಧರಿಸಿದ್ದರೆ ಎಡದ ಕೈ ನೀಳವಾಗಿ ಚಾಚಿಕೊಂಡಿದೆ. ಪಾದಭಾಗದಲ್ಲಿ ಶ್ರೀದೇವಿ, ಭೂ ದೇವಿಯರಿದ್ದಾರೆ. ಇವರು ಧರಿಸಿರುವ ಆಭರಣ ಮತ್ತು ಕಿರೀಟಗಳು ಚಾಳುಕ್ಯ–ರಾಷ್ಟ್ರಕೂಟ ಕಾಲದ ರಚನೆಯನ್ನು ಹೋಲುವಂತಿವೆ. ಕಮಲದದಂಟು ಇವರ ಎಡಭುಜವನ್ನು ಆಧರಿಸಿದೆ. ಇಡೀ ರಚನೆಯ ಕೇಂದ್ರಬಿಂದುವೆಂದರೆ ವಿಷ್ಣುವಿನ ನಾಭಿಯಿಂದ ಹೊರಟಿರುವ ಕಮಲದ ದಂಟು. ಇದು ಎಡಕ್ಕೆ ಹೊರಳಿ ಮೊಣಕೈಗಳನ್ನು ಆಧರಿಸಿ ಮೇಲೇರಿದೆ. ಸ್ವಲ್ಪ ಅರಳಿದ ಸ್ಥಿತಿಯಲ್ಲಿರುವ ಮೊಗ್ಗಿನ ಮೇಲೆ ಚತುರ್ಮುಖ ಬ್ರಹ್ಮನಿದ್ದಾನೆ. ಈ ಶಿಲ್ಪ ಕಮಲದ ಶಲಾಕಿ ಮತ್ತು ಮೊಗ್ಗಿನ ಗಾತ್ರ ಮತ್ತು ಶಕ್ತಿಯನ್ನು ಆಧರಿಸಿ ರಚನೆಯಾಗಿದೆ. ಇಡೀ ರಚನೆ ಸರಿಸಾಟಿ ಇಲ್ಲದುಂತಿದ್ದು, ನೈಜತೆಯ ಪರಾಕಾಷ್ಠೆಯಿಂದ ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಪ್ರಾಯಶಃ ಈ ಬೃಹತ್ ಶಿಲಾ ಫಲಕ 10–12ನೆಯ ಶತಮಾನದ ಅವಧಿಯಲ್ಲಿ ಭಾಗವತ ಸಂಪ್ರದಾಯದ ಉತ್ತುಂಗ ಸಮಯದಲ್ಲಿ ರಚನೆಯಾಗಿದ್ದಿರಬಹುದು. ದಕ್ಷಿಣ ಭಾರತದಲ್ಲಿ ಅನಂತಪದ್ಮನಾಭನ ಇಂತಹ ವಿಗ್ರಹ ಬೇರೊಂದಿಲ್ಲ. ಬೃಹತ್ ರಚನೆಯ ಅನಂತ ಪದ್ಮನಾಭಮೂರ್ತಿಯನ್ನು ಕಾಣಬೇಕೆಂದರೆ ತಿರುವನಂತಪುರದಲ್ಲಿದೆ.

ಬೈಂದೂರಿನ ಸೇನೇಶ್ವರ ದೇವಾಲಯದಲ್ಲಿ ಕಲ್ಯಾಣ ಚಾಳುಕ್ಯ ಕಾಲದ ಶಿಲ್ಪಗಳ ಲಕ್ಷಣ ಮತ್ತು ಶೈಲಿಯನ್ನು ಕಾಣಬಹುದು.

ಈ ಭಾಗದಲ್ಲಿ ದೊರೆಯುವ ಹೆಚ್ಚಿನ ಶಿಲ್ಪಗಳನ್ನು ಕಡೆದಿರುವುದು ಕಾರ್ಕಳ ಸಮೀಪ ಇರುವ ನೆಲ್ಲಿಕಾರಿನಲ್ಲಿ ದೊರೆಯುವ ವಿಶಿಷ್ಟ ರೀತಿಯ ಕೃಷ್ಣ ಶಿಲೆಯಿಂದ. ಈ ಶಿಲೆ ನೆಲ್ಲಿಕಾರು ಶಿಲೆ ಎಂದೇ ಹೆಸರು ಪಡೆದಿದೆ. ಕಾರ್ಕಳದ ಅನಂತಪದ್ಮನಾಭನ (ಅನಂತ ಶಯನ) ವಿಗ್ರಹವನ್ನು ಈ ಶಿಲ್ಪದಲ್ಲೇ ನಿರ್ಮಿಸಿರುವುದು.

ತುಳುನಾಡಿನಲ್ಲಿ ಶಿಲಾ ನಿರ್ಮಿತ ಶಿಲ್ಪಗಳಂತೆ ಲೋಹ ನಿರ್ಮಿತ ಶಿಲ್ಪಗಳೂ ಅಧಿಕ ಸಂಖ್ಯೆಯಲ್ಲಿವೆ. ಇಲ್ಲಿಯ ಶಿಲ್ಪಿಗಳು ಶಿಲೆಯಲ್ಲಷ್ಟೇ ಅಲ್ಲದೆ ಲೋಹದಲ್ಲೂ ಶಿಲ್ಪಗಳನ್ನು ಅನಾದಿಕಾಲದಿಂದಲೂ ರಚಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು ಎಂಬುದು ಇದರಿಂದ ವ್ಯಕ್ತವಾಗುತ್ತದೆ. 8–16ನೆಯ ಶತಮಾನದ ಕೊನೆಯವರೆಗೆ ಈ ಕಾರ್ಯ ಅವಿರತವಾಗಿ ನಡೆದಿದ್ದು ಅನಂತರದ ಕಾಲದಲ್ಲೂ ಇದು ಮುಂದುವರೆಯಿತು. ತಾಮ್ರ, ಕಂಚು ಮತ್ತು ಪಂಚಲೋಹಗಳು ಇಲ್ಲಿ ಮುಖ್ಯವಾಗಿ ಬಳಕೆಯಾಗಿರುವ ಲೋಹಗಳು. ಚಾಳುಕ್ಯ ಶಿಲ್ಪವನ್ನು ಪ್ರತಿಬಿಂಬಿಸುವ 10–12 ನೆಯಶತಮಾನದ ಅವಧಿಯಲ್ಲಿ ತಯಾರಾದ ಅಧಿಕ ಸಂಖ್ಯೆಯ ಕಂಚಿನ ಮಹಿಷಮರ್ದಿನಿ ವಿಗ್ರಹಗಳು ಇಲ್ಲಿವೆ. ಹೆಚ್ಚಿನ ದೇವಾಲಯಗಳಲ್ಲಿರುವ ಉತ್ಸವಮೂರ್ತಿಗಳು ವಿಜಯನಗರಕಾಲದಲ್ಲಿ ಪುನರ್ನಿರ್ಮಾಣಗೊಂಡ ಪ್ರಾಚೀನ ವಿಗ್ರಹಗಳ ಪ್ರತಿಕೃತಿಗಳು, ಕೆಲವೆಡೆ ಅತ್ಯಂತ ಪ್ರಾಚೀನವಾದ ಲೋಹಶಿಲ್ಪಗಳು ಉಳಿದಿವೆ. ಉದಾಹರಿಸಬಹುದಾದ ಕೆಲವು ಇಂತಿವೆ: 1. ಉಡುಪಿಯ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿರುವ ಸದಾಶಿವನ ಕಂಚಿನ ವಿಗ್ರಹ (9–10ನೆಯ ಶತಮಾನ), ಅನಂತೇಶ್ವರ ದೇವಾಲಯದಲ್ಲಿರುವ ಮಹಾದೇವನ ಕಂಚಿನ ವಿಗ್ರಹ (10–11ನೆಯ ಶತಮಾನ), ಶಿವಳ್ಳಿಯ ಪೆರಂಪಳ್ಳಿಯಲ್ಲಿರುವ ಈಶ್ವರ ದೇವಾಲಯದ ಕಂಚಿನ ಸದಾಶಿವ ವಿಗ್ರಹ (12ನೆಯ ಶತಮಾನ), 2. ಕಾರ್ಕಳ ತಾಲ್ಲೂಕಿನ ಬೆಳ್ಮಣ್ಣುವಿನ ದುರ್ಗಾದೇವಾಲಯದ ಕಂಚಿನ ಮಹಿಷಮರ್ದಿನಿ ವಿಗ್ರಹ (8ನೆಯ ಶತಮಾನ) ಇತ್ಯಾದಿ. ಆದರೆ ಎಲ್ಲಕ್ಕೂ ಮಿಗಿಲಾದ ಲೋಹ ಇರುವುದು ಮಂಗಳೂರಿನ ಕದ್ರಿಯ ಮಂಜುನಾಥ ದೇವಾಲಯದಲ್ಲಿ. 968ಕ್ಕೆ ಶಾಸನಾಂಕಿತಗೊಂಡಿರುವ, 160 ಸೆಂಮೀ ಎತ್ತರವಿರುವ ಕಂಚಿನ ಬೃಹತ್ ಲೋಕೇಶ್ವರ ಪ್ರತಿಮೆ. ನಾಲ್ಕು ಮುಖ, ಆರು ಕೈಗಳನ್ನು ಹೊಂದಿ ಪದ್ಮಾಸನದಲ್ಲಿ ಲೋಕೇಶ್ವರನ ಪ್ರಭಾವಳಿಯಲ್ಲಿ ಚಾಮರಧಾರಿಣಿಯರಿದ್ದಾರೆ. ನಿಜಕ್ಕೂ ಇದೊಂದು ಅತ್ಯಂತ ಚೆಲುವಾದ ಅಪರೂಪದ ಶಿಲ್ಪ.

ತುಳುನಾಡಿನ ವಾಸ್ತುವಿನಲ್ಲಿ ಬೆರಳೆಣಿಕೆಯಷ್ಟು ದೇವಾಲಯಗಳನ್ನು ಬಿಟ್ಟರೆ, ಒಂದು ರೀತಿಯ ಏಕತಾನತೆ ಇದೆ. ಆದಿ ಕದಂಬರ ಕಾಲದಿಂದ ಹೊಯ್ಸಳರ ಕಾಲದವರೆಗಿನ ದೇವಾಲಯಗಳು ಇಲ್ಲಿದ್ದರೂ ಅವು–ಗಜಪೃಷ್ಠಾಕಾರದವನ್ನು ಹೊರತುಪಡಿಸಿ ಯಾವುವೂ ಆಯಾ ಕಾಲಗಳ ರಚನಾ ಕೌಶಲವನ್ನು ಬಿಂಬಿಸುವುದೇ ಇಲ್ಲ.

ಇಲ್ಲಿನ ಶಿಲ್ಪಗಳು ನೊಳಂಬ, ಪಲ್ಲವ ಶೈಲಿಯವು ಎಂಬೊಂದು ಹೇಳಿಕೆ ಇದೆ. ಆದರೆ ಈ ಹೇಳಿಕೆ ಯಾವ ರೀತಿಯಲ್ಲೂ ಸರಿಯಾದುದಲ್ಲ. ಈ ಭಾಗದ ಮೇಲೆ ತಮ್ಮ ಪೂರ್ಣ ಪ್ರಭಾವವನ್ನು ಬೀರಿದವರು ಬನವಾಸಿ ಕದಂಬ, ಚಾಳುಕ್ಯ ಮತ್ತು ಹೊಯ್ಸಳರು. ನೊಳಂಬರು ಈ ಭಾಗದೊಂದಿಗೆ ಹೊಂದಿದ್ದಿರಬಹುದಾದ ಸಂಬಂಧದ ಬಗ್ಗೆ ಈವರೆಗೆ ಒಂದೇ ಒಂದು ಉದಾಹರಣೆಯೂ ದೊರೆತಿಲ್ಲ. ಅದೂ ಚಕ್ರವರ್ತಿಗಳ ವಂಶಗಳ ಕಲಾ ಪ್ರೌಢಿಮೆಯನ್ನು ಮೆಟ್ಟಿನಿಂತು ಬೇರೆ ಕಡೆಯಲ್ಲಿ ತಮ್ಮದನ್ನು ಹರಡಬಲ್ಲ ರಾಜಕೀಯ ಪ್ರಭುತ್ವ ಈ ಸಾಮಂತ ಅರಸರಿಗಿರಲಿಲ್ಲ. ಅಲ್ಲದೆ ತುಳುನಾಡಿನ ಎಲ್ಲೆಡೆ ಶಿಲ್ಪಗಳಲ್ಲಿ ಪ್ರತಿಬಿಂಬಿತವಾಗಿರುವುದು ಹೆಚ್ಚಾಗಿ ಚಾಳುಕ್ಯ ಮತ್ತು ಹೊಯ್ಸಳ ಪ್ರಭಾವ (**ನೋಡಿ– ಆಳುಪ ವಂಶ**). (ಪಿ.ಎನ್.ಎನ್.)

**ತೆಕ್ಕಲಕೋಟೆ:** ಬಳ್ಳಾರಿ ಜಿಲ್ಲೆ ಶಿರಗುಪ್ಪ ತಾಲ್ಲೂಕಿನ ನವಶಿಲಾಯುಗ ನೆಲೆ. ಬಳ್ಳಾರಿಯಿಂದ 44 ಕಿಮೀ ದೂರದಲ್ಲಿದೆ. ವಿಜಯನಗರದ ಪತನಾನಂತರ ಈ ಗ್ರಾಮವನ್ನು ಬಳ್ಳಾರಿ ಮತ್ತು ಕುರುಗೋಡಿನ ಪಾಳೆಯಗಾರ ಬಾಲದ ಹನುಮಪ್ಪ ನಾಯಕ ಎಂಬುವನಿಗೆ ಕೊಡಲಾಗಿತ್ತು. ಆದವಾನಿಯ ಮಹಮ್ಮದೀಯ ಅಧಿಪತಿಗಳು ಈ ಗ್ರಾಮವನ್ನು ನಾಯಕ ಮನೆತನದವರಿಂದ ಕಸಿದುಕೊಂಡರು. 1775ರಲ್ಲಿ ಹೈದರ್‌ಅಲಿ ಈ ಗ್ರಾಮವನ್ನು ವಶಪಡಿಸಿ ಕೊಂಡು ಚತುರ್ಭುಜ ವಿನ್ಯಾಸದ ಕೋಟೆಯನ್ನು ಕಟ್ಟಿಸಿದ.

ಗ್ರಾಮದ ನೈರುತ್ಯ ದಿಕ್ಕಿನಲ್ಲಿರುವ ಹುಡೇದಗುಡ್ಡ ಎಂಬ ಬೆಟ್ಟದಲ್ಲಿ ನವಶಿಲಾಯುಗ ಸಂಸ್ಕೃತಿಯ 19 ವಾಸದ ನೆಲೆಗಳು ಬೆಳಕಿಗೆ ಬಂದಿವೆ. 1963–64ರಲ್ಲಿ ಇಲ್ಲಿ ನಡೆಸಿದ ಉತ್ಖನನದಲ್ಲಿ ನವಶಿಲಾಯುಗದ ಜನಜೀವನದ ಬಗ್ಗೆ ಉತ್ತಮವಾದ ಮಾಹಿತಿ ದೊರೆತಿದೆ. ಇಂಗಾಲ–14 ಕಾಲಮಾಪನದ ಪ್ರಕಾರ ತೆಕ್ಕಲಕೋಟೆಯ ನವಶಿಲಾಯುಗದ ಕಾಲ ಪ್ರ.ಶ.ಪೂ. 1700–1000ದವರೆಗೆ ಎಂದು ಹೇಳಬಹುದು. ಸಾಂಸ್ಕೃತಿಕ ಅವಶೇಷಗಳ ಆಧಾರದ ಮೇಲೆ ನವಶಿಲಾಯುಗ ಸಂಸ್ಕೃತಿಯ ಎರಡು ಹಂತಗಳನ್ನು ಕಾಣಬಹುದು.

ಮೊದಲನೆಯದು ಈ ಸ್ಥಳದ ಅತ್ಯಂತ ಪ್ರಾಚೀನ ಹಂತ. ಈ ಕಾಲದ ನಯಮಾಡಿದ ಕಲ್ಲಿನ ಕೊಡಲಿಗಳು, ಚಕಮಕಿ ಕಲ್ಲಿನ ಉಪಕರಣಗಳು, ತಾಮ್ರದ, ಎಲುಬಿನ ಆಯುಧಗಳು, ಬಂಗಾರದ ಆಭರಣಗಳು, ಅನೇಕ ವಿಧವಾದ ಮಣಿಗಳು, ಕಂದುಬಣ್ಣದ ಹೊಳಪಿನ ಮಣ್ಪಾತ್ರೆ ಗಳು ದೊರೆತಿವೆ. ಕೆಲವು ವೇಳೆ ಮಡಕೆಗಳನ್ನು ಸುಟ್ಟ ಅನಂತರ ಕೆಮ್ಮಣ್ಣಿನ ದ್ರವವನ್ನು ಅಂಚುಗಳಲ್ಲಿ ಸವರಿ ಅವನ್ನು ಅಲಂಕರಿಸಲಾಗಿದೆ. ಈ ಕಾಲದ ಕೆಲವು ಶವಕುಣಿಗಳು ಸಹ ದೊರೆತಿವೆ.

ಎರಡನೆಯ ಹಂತದಲ್ಲಿ ಕೆಲವು ವೈಶಿಷ್ಟ್ಯಗಳನ್ನು ಕಾಣಬಹುದು. ಈ ಕಾಲದಲ್ಲಿ ತಾಮ್ರವಸ್ತುಗಳೂ ಕಲ್ಲಿನ ನುಣುಪಾದ ಕೊಡಲಿಗಳೂ ಚಕಮಕಿ ಕಲ್ಲಿನ ಆಯುಧಗಳೂ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತವೆ. ಆದರೆ ಅತಿ ಪ್ರಮುಖ ಬದಲಾವಣೆಗಳು ಮಣ್ಪಾತ್ರೆಗಳಲ್ಲಿ ಕಂಡುಬರುತ್ತವೆ. ಕೆಂಪು ಸುದ್ದೆಯಿಂದ ಲೇಪಿತವಾದ ಕಂದುಪಾತ್ರೆಗಳು ಕಡಿಮೆಯಾಗುತ್ತವೆ. ಕೆಂಪು ಹಾಗೂ ಕಪ್ಪುವರ್ಣದ ಚಿತ್ರಿತ ಪಾತ್ರೆಗಳು ಹೊಸದಾಗಿ ಕಂಡುಬರುತ್ತವೆ. ಅಲ್ಲದೆ ಶ್ವೇತವರ್ಣದಿಂದ ಚಿತ್ರಿತವಾದ ಕಪ್ಪು–ಕೆಂಪು ದ್ವಿವರ್ಣ ಬಟ್ಟಲುಗಳು ದೊರೆಯುತ್ತವೆ. ಈ ಕಾಲದ ಕೆಲವು ಶವಗುಂಡಿಗಳು ಸಹ ದೊರೆತಿವೆ.

ಈ ನೆಲೆಯಲ್ಲಿ ನವಶಿಲಾಯುಗದ ಜನಜೀವನ ಪ್ರ.ಶ.ಪೂ. 1700ರಿಂದ ಆರಂಭವಾಗಿದೆ. ಈ ಜನರು ಗುಡ್ಡಗಳ ಪ್ರದೇಶದಲ್ಲಿ, ಸಮತಟ್ಟಾದ ಜಾಗಗಳಲ್ಲಿ ವಾಸಿಸುತ್ತಿದ್ದರು; ಗುಡ್ಡದ ಬಂಡೆಗಳು ಸ್ವಾಭಾವಿಕ ಕೋಟೆಗಳಂತಿದ್ದು ಆ ಜನರಿಗೆ ರಕ್ಷಣೆ ದೊರೆಯುತ್ತಿದ್ದಿತು. ಗುಡ್ಡದ ತಪ್ಪಲು ವ್ಯವಸಾಯಕ್ಕೆ ಅನುಕೂಲವಾಗಿದ್ದು ಇವರ ವಸತಿಗಳು ವೃತ್ತಾಕಾರದ ವಿನ್ಯಾಸದಲ್ಲಿದ್ದುವು. ಮಣ್ಣು ಮೆತ್ತಿದ ಹೆಣೆದ ಬೊಂಬಿನ ಚಾಪೆಗಳೆ ಗೋಡೆಗಳಾಗಿದ್ದುವು. ಅಲ್ಲಲ್ಲಿ ಬೊಂಬಿನ ಕಂಬಗಳನ್ನು ನೆಟ್ಟು ಗೋಡೆಯನ್ನು ಗಟ್ಟಿ ಮಾಡುತ್ತಿದ್ದರು. ಗುಡಿಸಿಲೊಳಗಿನ ನೆಲವನ್ನು ಗಟ್ಟಿಮಾಡಿ, ಆಗಾಗ್ಗೆ ಸಾರಿಸುತ್ತಿದ್ದರು. ಗುಡಿಸಿಲಿನ ಗೋಡೆ ಗಟ್ಟಿಯಾಗಿರಲೆಂದು ಹೊರಭಾಗದಲ್ಲಿ ಕಲ್ಲುಗುಂಡುಗಳನ್ನು ಆಸರೆಯಾಗಿ ಸುತ್ತಲೂ ಜೋಡಿಸುತ್ತಿದ್ದರು. ಇಂತಹ ಗುಡಿಸಿಲುಗಳ ಅವಶೇಷಗಳು ಉತ್ಖನನದಲ್ಲಿ ದೊರೆತಿವೆ.

ಆದಿ ಹಂತದ ಮಣ್ಪಾತ್ರೆಗಳಲ್ಲಿ ತಿಗುರಿಯ ಉಪಯೋಗ ತೀರ ಕಡಿಮೆ. ಮಡಕೆಗಳನ್ನು ಕೈಯಿಂದಲೇ ರೂಪಿಸುತ್ತಿದ್ದರು. ಕಾಳುಗಳನ್ನು ಶೇಖರಿಸಲು ಬಳಸುತ್ತಿದ್ದ ದೊಡ್ಡ ರಂಜಣಿಗೆ ಗಳು, ದುಂಡು ಮಡಕೆಗಳು ಮತ್ತು ಬಟ್ಟಲುಗಳು ದೊರೆತಿವೆ. ಕೆಲವು ಪಾತ್ರೆಗಳ ತಳಭಾಗದಲ್ಲಿ ರಂಧ್ರಗಳಿವೆ. ದೊಡ್ಡ ಮಡಕೆಗಳನ್ನು ಸಮಾಧಿಗಳಲ್ಲೂ ಉಪಯೋಗಿಸುತ್ತಿದ್ದರು. ಕಪ್ಪು – ಕೆಂಪು ದ್ವಿವರ್ಣ ಬಟ್ಟಲುಗಳನ್ನು ವಿಶೇಷವಾಗಿ ಸಮಾಧಿಗಳಲ್ಲಿ ಉಪಯೋಗಿಸುತ್ತಿದ್ದರು. ಉತ್ಖನನದಲ್ಲಿ ಆಕಳು, ಕುರಿ, ಜಿಂಕೆ, ಅಳಿಲು ಮತ್ತು ಇಲಿಗಳ ಎಲುಬುಗಳು ದೊರಕಿವೆ. ಕೆಲವು ಪ್ರಾಣಿಗಳನ್ನು ಆಹಾರಕ್ಕಾಗಿ ಉಪಯೋಗಿಸಿದ್ದಿರಬಹುದು. ಅನೇಕ ಸುಟ್ಟ ಎಲುಬುಗಳು ದೊರೆತಿರುವುದರಿಂದ ಮಾಂಸವನ್ನು ಸುಟ್ಟು ತಿನ್ನುತ್ತಿದ್ದರೆಂದು ಹೇಳಬಹುದು. ಈ ಜನ ವ್ಯವಸಾಯವನ್ನೂ ಮಾಡುತ್ತಿದ್ದರು. ಉತ್ಖನನದಲ್ಲಿ ದೊರೆತಿರುವ ಹುರುಳಿಕಾಳು ಇದಕ್ಕೆ ಸಾಕ್ಷಿ.

ನುಣುಪುಕಲ್ಲಿನ ಕೈಗೊಡಲಿಗಳು ಮತ್ತು ಚಕಮಕಿ ಕಲ್ಲಿನ ಹರಿತವಾದ ಸಣ್ಣ ಉಪಕರಣ ಗಳನ್ನು ತಮ್ಮ ನೆಲೆಯಲ್ಲಿಯೆ ತಯಾರಿಸಿಕೊಳ್ಳುತ್ತಿದ್ದರು. ಇವಲ್ಲದೆ ಎಲುಬಿನ ಆಯುಧಗಳು, ತಾಮ್ರದ ಕೊಡಲಿ ಮತ್ತು ಮೀನಿನ ಗಾಳಗಳು ದೊರೆತಿವೆ. ಇಲ್ಲಿ ಸಿಕ್ಕಿರುವ ಸುಟ್ಟಮಣ್ಣಿನ, ಎಲುಬಿನ ಮತ್ತು ಹರಳಿನ ಮಣಿಗಳು ನವಶಿಲಾಯುಗದ ಜನರ ಅಲಂಕಾರಪ್ರಿಯತೆಯನ್ನು ತೋರಿಸುತ್ತದೆ. ಚಿನ್ನದ ಕಿವಿಯ ಆಭರಣಗಳೂ ದೊರೆತಿವೆ. ಇಲ್ಲಿ ದೊರೆತ ಒಂದು ಮಣ್ಣಿನ ಮುಚ್ಚಳಿಕೆಯ ಮೇಲೆ ಎರಡು ನವಿಲುಗಳು, ಹಾವು, ಗೂಳಿ ಮತ್ತು ಜಿಂಕೆಗಳನ್ನು ಚುಚ್ಚು ಚಿತ್ರವಾಗಿ ಚಿತ್ರಿಸಿದ್ದಾರೆ.

ಪ್ರಥಮ ಹಂತದ ಜನರು ಹೆಣವನ್ನು ಕೆಲವು ಕಾಲ ಒಂದೆಡೆಯಲ್ಲಿ ಹುಗಿದಿಟ್ಟು ಅನಂತರ ತಲೆಬುರುಡೆ, ಕೈಕಾಲುಗಳ ಎಲುಬುಗಳನ್ನು ಶೇಖರಿಸಿ, ಬೇರೆ ಗುಂಡಿಯಲ್ಲಿ ಕ್ರಮಬದ್ಧವಾಗಿ ಹೂಳುತ್ತಿದ್ದರೆಂದು ಕಾಣಬರುತ್ತದೆ. ಇಂಥ ಒಂದು ಸಮಾಧಿಯಲ್ಲಿ ಮೂವರು ವ್ಯಕ್ತಿಗಳ ಅಸ್ಥಿ ಅವಶೇಷಗಳು ಕಂಡುಬಂದುವು. ಇದರ ಬದಿಯಲ್ಲೇ ದೊರೆತ ಮತ್ತೊಂದು ಸಮಾಧಿಯಲ್ಲಿ ಪೀಠವುಳ್ಳ ಬಟ್ಟಲನ್ನು ತಲೆಯ ಬಳಿ ಇಟ್ಟಿದ್ದರು. ಎರಡನೆಯ ಹಂತದ ಶವಸಂಸ್ಕಾರ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯಾದಂತೆ ಕಂಡುಬರುತ್ತದೆ. ಈ ಜನ ಪೂರ್ಣ ಶವವನ್ನೇ ಗುಂಡಿಯಲ್ಲಿ ಹೂಳುತ್ತಿದ್ದರು. ಅದೇ ಗುಂಡಿಯಲ್ಲಿ ಅನೇಕ ಪಾತ್ರೆಗಳನ್ನು ಇಡುತ್ತಿದ್ದರು. ವಿಶೇಷವೆಂದರೆ ಕಪ್ಪು ಮತ್ತು ಕೆಂಪು ವರ್ಣದ ಬಟ್ಟಲುಗಳನ್ನು ತಪ್ಪದೆ ಇಡುತ್ತಿದ್ದರು. ಕೆಲವು ನಿದರ್ಶನಗಳಲ್ಲಿ, ಇಂಥ ಕಪ್ಪು–ಕೆಂಪು ದ್ವಿವರ್ಣ ಬಟ್ಟಲುಗಳು ಶ್ವೇತವರ್ಣರೇಖೆಗಳಿಂದ ರಂಜಿತವಾಗುತ್ತಿದ್ದವು. ಅಲ್ಲದೆ, ಶವಗಳನ್ನು ಅಡ್ಡಡ್ಡವಾಗಿ ತಳ ಒಡೆದು ಸಾಲಾಗಿ ಜೋಡಿಸಿದ ಮಡಕೆಗಳಲ್ಲಿಟ್ಟು, ಗುಂಡಿಗಳಲ್ಲಿ ಹೂಳುವ ನಿದರ್ಶನಗಳೂ ತೆಕ್ಕಲಕೋಟೆಯಲ್ಲಿ ಇವೆ. ವಯಸ್ಕರನ್ನು ಐದು ಮಡಕೆಗಳಲ್ಲಿಯೂ ಮಕ್ಕಳನ್ನು ಒಂದು ಅಥವಾ ಎರಡು ಮಡಕೆಗಳಲ್ಲಿಯೂ ಸಮಾಧಿ ಮಾಡಿರುವುದು ಇಲ್ಲಿ ಕಂಡುಬಂದಿದೆ.

ಎಲ್ಲ ಸಮಾಧಿಗಳೂ ಜನ ವಾಸಮಾಡುತ್ತಿದ್ದಲ್ಲಿಯೇ ಕಂಡುಬಂದಿವೆ. ಕೆಲವು ವೇಳೆ ಅವರು ವಾಸಿಸುತ್ತಿದ್ದ ಗುಡಿಸಿಲಿನ ನೆಲದಲ್ಲಿಯೇ ಹೆಣವನ್ನು ಹುಗಿದಿದ್ದಾರೆ. ಸಮಾಧಿ ಮಾಡಿ ಗುಂಡಿಗಳಲ್ಲಿ ಬಹುಶಃ ಆಹಾರಪೂರಿತ ಪಾತ್ರೆಗಳನ್ನು ಇಡಲಾಗುತ್ತಿತ್ತು. ಇದು ಇವರಿಗೆ ಮರಣೋತ್ತರ ಜೀವನದಲ್ಲಿ ನಂಬಿಕೆ ಇತ್ತೆಂಬುದನ್ನು ತೋರಿಸುತ್ತದೆ. ಇಂಥ ಸಮಾಧಿಗಳು ಮಹಾರಾಷ್ಟ್ರದ ಸಮಕಾಲೀನ ನೆಲೆಗಳಾದ ಬಹಾಳ್–ಟೇಕವಾಡ, ನೆವಾಸ, ದೈಮಾಬಾದ್ ಮತ್ತು ಚಂದೋಳಿಗಳಲ್ಲಿ ದೊರೆತಿವೆ. ಇವುಗಳ ಆಧಾರದ ಮೇಲೆ ಕರ್ನಾಟಕದ ನವಶಿಲಾಯುಗದ ಜನಾಂಗಕ್ಕೂ ಮಹಾರಾಷ್ಟ್ರದ ಶಿಲಾ–ತಾಮ್ರಯುಗದ ಜನಾಂಗಕ್ಕೂ ಪರಸ್ಪರ ಸಾಂಸ್ಕೃತಿಕ ಸಂಬಂಧವಿತ್ತೆಂದು ಊಹಿಸಬಹುದು.

ತೆಕ್ಕಲಕೋಟೆಯ ಗುಡ್ಡದಲ್ಲಿ ಅನೇಕ ನೈಸರ್ಗಿಕ ಗುಹೆಗಳಿವೆ. ಅವುಗಳನ್ನು ನವಶಿಲಾಯುಗದ ಜನರು ಉಪಯೋಗಿಸುತ್ತಿದ್ದರೆಂಬುದಕ್ಕೆ ಆ ಗುಹೆಗಳಲ್ಲಿ ಇರುವ ಕೆಂಪುವರ್ಣ ಚಿತ್ರಗಳೇ ಸಾಕ್ಷಿ. ಅಲ್ಲಿ ಚಿತ್ರಿಸಿರುವುದು ಗೂಳಿಗಳು ಮತ್ತು ಮಾನವರನ್ನು. ಇವು ಶೈಲಿಯಲ್ಲಿ ತಾಮ್ರ–ಶಿಲಾಯುಗದ ಮಡಕೆಗಳ ಮೇಲಿರುವ ಚಿತ್ರಗಳನ್ನು ಹೋಲುತ್ತವೆ.

ತೆಕ್ಕಲಕೋಟೆಯ ಮತ್ತೊಂದು ವೈಶಿಷ್ಟ್ಯವೆಂದರೆ ಇಲ್ಲಿನ ನವಶಿಲಾಯುಗದ ಅನೇಕ ಸಾಂಸ್ಕೃತಿಕ ಅಂಶಗಳು ಇಂದಿಗೂ ಈ ಸ್ಥಳದಲ್ಲಿ ವಾಸವಾಗಿರುವ ಆದಿವಾಸಿ ಬೇಟೆಗಾರರಾದ ಬೋಯ ಜನಾಂಗದವರಲ್ಲಿ ಉಳಿದಿದೆ. ಈ ಜನ ಪ್ರತಿವರ್ಷವೂ ಯುಗಾದಿ ಹಬ್ಬದಂದು ಹುಡೇದಗುಡ್ಡಕ್ಕೆ ಬೇಟೆಗಾಗಿ ಹೋಗಿ ಮೊಲ ಮುಂತಾದುವುಗಳನ್ನು ಬೇಟೆಯಾಡಿ, ಸಂಜೆ ಸಾಮೂಹಿಕ ನೃತ್ಯ ಮಾಡಿ, ಬೇಟೆ ಮಾಡಿದ ಪ್ರಾಣಿಗಳನ್ನು ಸಾಮೂಹಿಕವಾಗಿ ಸೇವಿಸುತ್ತಾರೆ. ಇದೇ ವಸ್ತುವಾಗುಳ್ಳ, ಸುಮಾರು ನವಶಿಲಾಯುಗ ಕಾಲದ ಒಂದು ವರ್ಣಚಿತ್ರ ತೆಕ್ಕಲಕೋಟೆಯ ಗುಹೆಯೊಂದರಲ್ಲಿ ಇದೆ. ಇದರಲ್ಲಿ ಮುಖ್ಯಸ್ಥನೊಬ್ಬನು ಒಂದು ಪ್ರಾಣಿಯ ಮೇಲೆ ಕುಳಿತು ಬೇಟೆಗೆ ಹೊರಟಿದ್ದಾನೆ. ಅನಂತರ ಕೈಕೈಹಿಡಿದು ಸಾಮೂಹಿಕ ನೃತ್ಯ ಮಾಡುತ್ತಿರುವ ಚಿತ್ರವಿದೆ. ಈ ಚಿತ್ರದಲ್ಲಿ ಚಿತ್ರಿಸಿರುವಂತೆ, ಮನುಷ್ಯರ ಚಿತ್ರಗಳನ್ನು ಬೋಯ ಗುಡಿಸಿಲಿನ ಗೋಡೆಗಳ ಹೊರ ಮೈಯಲ್ಲಿ ಕೆಂಪುಮಣ್ಣಿನಿಂದ ಇಂದಿಗೂ ಚಿತ್ರಿಸುತ್ತಾರೆ. ಈ ಚಿತ್ರದ ವ್ಯಕ್ತಿಗಳು ದುಷ್ಟಶಕ್ತಿಗಳನ್ನು ಗುಡಿಸಿಲಿನಿಂದ ಹೊರಗಿಡುತ್ತಾರೆಂಬುದು ಅವರ ನಂಬಿಕೆ. ಬೋಯ ಜನರ ಗುಡಿಸಿಲುಗಳು ಸಹ ತೆಕ್ಕಲಕೋಟೆಯ ನವಶಿಲಾಯುಗ ಕಾಲದ ಗುಡಿಸಿಲುಗಳಂತೆಯೇ ಇವೆ. ಅವುಗಳೂ ದುಂಡಾಕಾರವಾಗಿದ್ದು ಒಳಭಾಗ, ಗೋಡೆ ಮತ್ತು ನೆಲ ಮಣ್ಣಿನಿಂದ ಸಾರಿಸಲ್ಪಡುತ್ತವೆ. ಚಾಪೆ ಅಥವಾ ಜೊಂಡಿನಿಂದ ಮಾಡಿದ ಗೋಡೆಯನ್ನು ಭದ್ರವಾಗಿರಿಸಲು ಕಲ್ಲುಗುಂಡುಗಳನ್ನು ಗುಡಿಸಿಲಿನ ಸುತ್ತಲೂ ಜೋಡಿಸುತ್ತಾರೆ. ಈ ಜನರೇ ನವಶಿಲಾಯುಗ ಜನಾಂಗದ ಆನುವಂಶಿಕರೆಂದು ಊಹಿಸಬಹುದಾಗಿದೆ. (ಎಂ.ಎಸ್.ಎನ್.)

**ತೆಪೆ ಯಾಹ್ಯಾ:** ಆಗ್ನೇಯ ಇರಾನ್‌ನ ಸೊಗುನ್ ಬಯಲಿನಲ್ಲಿರುವ ಪ್ರಾಗ್ಯೈತಿಹಾಸಿಕ ದಿಬ್ಬ. ಈ ವೃತ್ತ ದಿಬ್ಬದ ಎತ್ತರ 19.8ಮೀ, ನೆಲಮಟ್ಟದ ವ್ಯಾಸ 187ಮೀ. ದಿಬ್ಬದ ಪೂರ್ವದಲ್ಲಿ ಸು.75 ಮೀ ದೂರದಲ್ಲಿ ಕಿಷ್–ಎ–ಶೂರ್ ನದಿ ಹರಿಯುತ್ತದೆ.

ಇಲ್ಲಿ ನಡೆದ ಉತ್ಖನನದಿಂದ ಪ್ರ.ಶ.ಪೂ.5ನೆಯ ಸಹಸ್ರಾಬ್ದಿಯ ಮಧ್ಯಾವಧಿಯಿಂದ ಪ್ರ.ಶ.ಪೂ.3ನೆಯ ಸಹಸ್ರಾಬ್ದಿಯ ಅಂತ್ಯದವರೆಗೆ ನಿರಂತರವಾಗಿ ಬೆಳೆದು ಬಂದ ಸಾಂಸ್ಕೃತಿಕ ಸ್ಥೂಲಚಿತ್ರವನ್ನು ಬೆಳಕಿಗೆ ತರಲಾಗಿದೆ. ಪ್ರ.ಶ.ಪೂ.2ನೆಯ ಸಹಸ್ರಾಬ್ದಿಯ ಬಹುತೇಕ ಸಮಯದಲ್ಲಿ ಈ ನೆಲೆ ನಿರ್ಜನವಾಗಿತ್ತು. ಆದರೆ 2ನೆಯ ಸಹಸ್ರಾಬ್ದಿಯ ಅಂತಿಮ ಚರಣ ದಿಂದ ಆದಿ ಸಸಾನಿಯನ್ ಕಾಲದವರೆಗೆ ವಿಭಿನ್ನ ಸಂಸ್ಕೃತಿಗಳ ಅವಶೇಷಗಳನ್ನೊಳಗೊಂಡ ಹಂತಗಳ ಚಿತ್ರ ದೊರೆತಿದೆ. I ಸಸಾನಿಯನ್ (ಪ್ರ.ಶ.400ರ ಪೂರ್ವ); II ಅಕೆಮೇನಿಯನ್ (ಪ್ರ.ಶ.ಪೂ.500–300); III ಕಬ್ಬಿಣ ಯುಗ (ಪ್ರ.ಶ.ಪೂ.1000–500); IV ಎ ಈಳಂ

ಪ್ರ.ಶ.ಪೂ.2500–2200; IV ಬಿ ಪೂರ್ವಭಾವಿ ಈಳಂ (ಪ್ರ.ಶ.ಪೂ.3000–2500); IV ಸಿ ಪೂರ್ವಭಾವಿ ಈಳಂ (ಪ್ರ.ಶ.ಪೂ.3400–3000); V ಯಾಹ್ಯಾ ಸಂಸ್ಕೃತಿ (ಪ್ರ.ಶ.ಪೂ. 3800–3400); VI ಒರಟು ಪಾತ್ರೆ ನವಶಿಲಾಯುಗ (ಪ್ರ.ಶ.ಪೂ.4500–3800).

ಹಂತ I: ಎರಡು ಹಂತಗಳಲ್ಲಿ ನಿರ್ಮಿಸಿದ ಇಟ್ಟಿಗೆಯ ಅನೇಕ ಗೋಡೆಗಳು, ಕೋಣೆಗಳು, ಪ್ಲ್ಯಾಟ್‌ಫಾರ್ಮ್‌ಗಳು, ಬಾವಿಗಳು ಹಾಗೂ ಅಂಗಣಗಳುಳ್ಳ, ಕೋಟೆಯೋಪಾದಿಯಂತಹ ಕಟ್ಟಡ ಸಂಕೀರ್ಣವನ್ನು ಬೆಳಕಿಗೆ ತರಲಾಗಿದೆ. ಭವನಗಳ ಮೇಲ್ಚಾವಣಿ ಗುಮ್ಮಟ ಆಕಾರದ್ದಾಗಿತ್ತು; ನೆಲಗಟ್ಟುಗಳು ಇಟ್ಟಿಗೆಯಿಂದ ಕಟ್ಟಲಾಗಿದ್ದವು. ಉತ್ತಮ ದರ್ಜೆಯ ಮಣ್ಪಾತ್ರೆಗಳ ಮೇಲೆ ಕಪ್ಪುಬಣ್ಣದಲ್ಲಿ ಕುದುರೆ, ಟಗರಿನ ಚಿತ್ರಗಳನ್ನು ಬಿಡಿಸಲಾಗಿತ್ತು. ವಿರಳವಾದ ಅಚ್ಚೊತ್ತಿದ ಕೆಲವು ಪಾತ್ರೆಗಳ ಮೇಲೆ ಪಹಲವಿ ಅಕ್ಷರಗಳನ್ನು ಗೀರುಗೀಟಿನಲ್ಲಿ ಬರೆಯಲಾಗಿದೆ. ಕುಂಬಾರನ ಸಂಕೇತಗಳನ್ನೂ ಮಣ್ಪಾತ್ರೆಗಳ ಮೇಲೆ ಕಾಣಬಹುದು. ಮಹತ್ತ್ವಪೂರ್ಣವಾದದ್ದು ಕೆಂಪುಬಣ್ಣದಿಂದ ಅಲಂಕರಿಸಿದ ಕಟ್ಟಿಗೆಯ ಒರೆಗಳಲ್ಲಿಟ್ಟ ಎರಡು ಕಠಾರಿಗಳು. ಇವುಗಳನ್ನು ಒಂದು ಮಣ್ಣಿನ ಜಾಡಿಯಲ್ಲಿಡಲಾಗಿತ್ತು. 5ನೆಯ ಶತಾಬ್ದಿಯ ಇನ್ನಿತರ ಅವಶೇಷಗಳು: ಸ್ಫಟಿಕದ ಛೇದವುಳ್ಳ ಮುದ್ರೆ, ಕಬ್ಬಿಣ ಬಾಣದ ಮೊನೆಗಳು, ಹಿಡಿಕೆ ತೂತಿನ ಕೊಡಲಿಗಳು, ಕಠಾರಿಗಳು, ಉಳಿಗಳು; ಕಂಚಿನ ಬಾಣದ ತುದಿಗಳು, ಗಾಜಿನ ಶೀಷೆಗಳು, ಸುಟ್ಟಮಣ್ಣಿನ ಶಿರಸ್ತ್ರಾಣ ಹಾಗೂ ಖಡ್ಗಧಾರಿ ಯೋಧನ ಗೊಂಬೆ; ಸ್ಟಿಯಟೈಟ್‌ನ ಕುದುರೆ ತಲೆ; ಮಣ್ಣಿನ ಜಾಡಿಗಳ ಮೇಲೆ ಗೀರು ಗೀಟಿನಲ್ಲಿ ಬಿಡಿಸಿದ ನೃತ್ಯಾಂಗನೆ, ಕುದುರೆ, ಮಾನವತಲೆ ಇತ್ಯಾದಿ.

ಹಂತ II: ಅಕೆಮಿನಿಡ್ ಕಾಲದ ಕೆಲ ಇಟ್ಟಿಗೆ ಕೋಣೆಗಳು, ವರ್ಣಚಿತ್ರಿತ ಹಾಗೂ ಸಾದಾ ಬಟ್ಟಲುಗಳು, ಉದ್ದ ಕತ್ತಿನ ಜಾಡಿ, ಹೊರಚಾಚಿಕೊಂಡಿರುವ ಅಂಚುಳ್ಳ ಪಾತ್ರೆಗಳು ದೊರೆತಿವೆ. ಒಂದೇ ಒಂದು ಕಬ್ಬಿಣದ ಬಾಣದ ಮೊನೆ ದೊರೆತಿರುವುದು ಗಮನಾರ್ಹ.

ಹಂತ III: ಕಲ್ಲಿನ ಅಡಿಪಾಯವುಳ್ಳ ಕಟ್ಟಡಗಳ ಮೇಲ್ಚಾವಣಿಯ ಅವಶೇಷಗಳನ್ನೂ ಒಳಭಾಗದಲ್ಲಿ ಕಂಬಗಳ ಪೀಠಾವಶೇಷಗಳನ್ನೂ ಪತ್ತೆಹಚ್ಚಲಾಗಿದೆ. ಹೊಳಪಿನ ಕೆಂಪುವರ್ಣದ ಹಾಗೂ ಬೂದುಬಣ್ಣದ ಮಣ್ಪಾತ್ರೆಗಳಲ್ಲದೆ ಸಾದಾ ನಸುಹಳದಿ ಬಣ್ಣದ ಪಾತ್ರೆಗಳೂ ಇವೆ.

ಹಂತ IV: ಈ ಅವಧಿಯನ್ನೂ ಮೂರು ಉಪಹಂತಗಳಲ್ಲಿ ವಿಭಜಿಸಲಾಗಿದೆ–IVಎ, IVಬಿ, IVಸಿ. ಪ್ರ.ಶ.ಪೂ.3ನೆಯ ಸಹಸ್ರಾಬ್ದಿಯ ಒಂದು ಮಹತ್ತ್ವಪೂರ್ಣ ಕಾಲ.

ಉಪಹಂತ IVಎ ಕಾಲಾವಧಿಯ ವಿಭಿನ್ನ ಅಳತೆಗಳ ಇಟ್ಟಿಗೆ ಕಟ್ಟಡಗಳು ಗಮನಾರ್ಹ. ಆದರೆ IVಬಿ ಉಪಹಂತದಲ್ಲಿ ಇಟ್ಟಿಗೆಗಳ ಅಳತೆಯಲ್ಲಿ ಏಕರೂಪತೆ ಕಂಡುಬರುತ್ತದೆ.

ಈ ಎರಡೂ ಕಾಲಾವಧಿಗಳ ಮಣ್ಪಾತ್ರೆಗಳ ರಚನೆ ಹಾಗೂ ಆಕಾರದಲ್ಲಿ ವ್ಯತ್ಯಾಸಗಳಿವೆ. IVಎ ಉಪಹಂತದ ಪಾತ್ರೆಗಳು ಹೆಚ್ಚಾಗಿ ಸಮತಟ್ಟಾದ ತಳವಿರುವ ಬಟ್ಟಲುಗಳಿಂದ ಕೂಡಿವೆ. ನಸುಹಳದಿ ಹಾಗೂ ಕೆಂಪು ಲೇಪಿತ ಪಾತ್ರೆಗಳ ಅಡಿಭಾಗದಲ್ಲಿ ಕುಂಬಾರನ ಸಂಕೇತಗಳಿವೆ. IVಬಿ ಉಪಹಂತದ ಹೊಳಪಿನ ಬೂದುಬಣ್ಣದ ಪಟ್ಟಿಯ ಮಣ್ಪಾತ್ರೆಗಳು IVಎ ಉಪಹಂತದಲ್ಲಿಯೂ ಮುಂದುವರೆದುದನ್ನು ಕಾಣಬಹುದು. IVಎ ಹಂತದಿಂದ ದೊರೆತ ಅವಶೇಷಗಳು–ಮುಕ್ಕಾಲು ಮಣೆ, ವಿವಿಧ ಮಣಿಗಳು, ಗಾಜಿನ ಬಳೆಗಳು, ಅಲಂಕಾರರಹಿತ ಸ್ಟಿಯಟೈಟ್ ಪಾತ್ರೆಗಳು.

ಉಪಹಂತ IVಬಿ ಕಾಲದ ಅವಶೇಷಗಳೆಂದರೆ ಸ್ಟಿಯಟೈಟ್ ಪಾತ್ರೆಗಳು ಮತ್ತು ಇನ್ನಿತರ ವಸ್ತುಗಳು, ಮಣ್ಪಾತ್ರೆಗಳು, ಮುದ್ರೆಗಳು. ಅತ್ಯುತ್ತಮ ಕುಶಲತೆಯಿಂದ ತಯಾರಿಸಿದ ಸ್ಟಿಯಟೈಟ್ ಪಾತ್ರೆಗಳಲ್ಲಿ ಕೆಲವು ಸಮಕಾಲೀನ ಮೆಸಪೊಟೇಮಿಯ, ಇರಾನ್ ಹಾಗೂ ಬಲೂಚಿಸ್ತಾನದ ಸ್ಟಿಯಟೈಟ್ ಪಾತ್ರೆಗಳನ್ನು ಹೋಲುತ್ತವೆ. ಈ ಸ್ಟಿಯಟೈಟ್ ಪಾತ್ರೆಗಳು ಕಡಿಮೆ ಎತ್ತರದ ವೃತ್ತ ಪೀಠವುಳ್ಳದ್ದಾಗಿವೆ. ತೂತಿರುವ ಒಂದು ಸ್ಟಿಯಟೈಟ್ ಕೊಡಲಿಯ ಮೇಲೆ ಕಾಲುಗಳನ್ನಗಲಿಸಿ, ರೆಕ್ಕೆ ಬಿಚ್ಚಿ ನಿಂತ ಗರುಡನ ಎರಡು ಚಿತ್ರಗಳನ್ನು ಗೀರು ಗೀಟಿನಿಂದ ಬಿಡಿಸಲಾಗಿದೆ. ಇಂಥ ಗರುಡನ ಚಿತ್ರಗಳು ಸೂಸದ ಸಿ ಮತ್ತು ಡಿ ಹಂತಗಳ ವರ್ಣಚಿತ್ರಿತ ಪಾತ್ರೆಗಳ ಮೇಲೆ ಸಾಮಾನ್ಯವಾಗಿ ಕಂಡುಬರುತ್ತವೆ. ಇದೇ ರೀತಿಯಾಗಿ ಆದಿ ಅರಸು ಮನೆತನಗಳ ಮುದ್ರೆಗಳಲ್ಲೂ ತೋರಿಬರುತ್ತದೆ. ಇಂತಹ ಚಿತ್ರಗಳು ಹರಪ್ಪ ಮತ್ತು ಚನ್ಹುದಾರೊವಿನಲ್ಲಿ ದೊರೆತ ಮುದ್ರೆಗಳಲ್ಲಿಯೂ ಇವೆ. ವೃತ್ತಕಾರದ ಒಂದು ಸ್ಟಿಯಟೈಟ್ ಗಾಲಿಯ ಮಧ್ಯದಲ್ಲಿ ಚೌಕಾಕಾರದ ತೂತು ಇದ್ದು ಗಾಲಿಯ ಮೇಲ್ಮೈಯನ್ನು ನಾಲ್ಕು ಭಾಗಗಳಲ್ಲಿ ಗೀರು ಗೀಟಿನಿಂದ ವಿಭಜಿಸಿರುವುದು ಗಾಲಿಗಳ ತಯಾರಿಕೆಯ ತಂತ್ರವನ್ನು ಸೂಚಿಸುತ್ತದೆ. ಒಂದು ಸ್ಟಿಯಟೈಟ್ ಪಾತ್ರೆಯ ಅಡಿಯಲ್ಲಿ ಗೀರು ಗೀಟಿನಿಂದ ಬಿಡಿಸಿದ ನಾಯಿಯನ್ನು ಹೋಲುವ ಚಿತ್ರ ಸೂಸದ ಫಲಕಗಳ ಮೇಲೆ ಬಿಡಿಸಿದ ಕೆಲಚಿತ್ರಗಳನ್ನು ನೆನಪಿಗೆ ತರುತ್ತವೆ. ಇಂಥ ಚಿತ್ರಗಳನ್ನೇ ಪೂರ್ವಭಾವಿ–ಈಳಂ ಲಿಪಿಯೆಂದು ಬಗೆದಿದ್ದಾರೆ. ಸ್ಟಿಯಟೈಟಿನ ಒಂದು ಬಟ್ಟಲಿನ ಮೇಲೆ ಸಿಂಹ ಹಾಗೂ ತಳುಕು ಹಾಕಿದ ಹಾವುಗಳನ್ನು ಕೊರೆದು ಬಿಡಿಸಲಾಗಿದೆ. ಸ್ತಂಭವೊಂದರ ಮೇಲೆ ಮುಖಾಮುಖಿಯಾಗಿರುವ ಬೆಕ್ಕಿನ ತಲೆಯುಳ್ಳ ಹಾವುಗಳನ್ನು ಚಿತ್ರಿಸಲಾಗಿದೆ. ಅನೇಕ ಸಂಖ್ಯೆಯಲ್ಲಿ ದೊರೆತ ಕಂಚಿನ ಸೂಜಿಗಳು ಹಾಗೂ ಉಳಿಗಳೇ ಸ್ಟಿಯಟೈಟಿನ ಪಾತ್ರೆಗಳನ್ನು ತಯಾರಿಸುವ ಸಾಧನಗಳಾಗಿದ್ದವೆಂದು ತೋರುತ್ತದೆ. ಬಿರಡೆಯಂತಹ ತೂತುಗಳುಳ್ಳ ಸ್ಟಿಯಟೈಟಿನ ಅನೇಕ ಮುದ್ರೆಗಳು ದೊರೆತಿವೆ. ಸ್ತಂಭಾಕಾರದ ಮುದ್ರೆಗಳಲ್ಲಿ ಒಂದರ ಮೇಲೆ ತಾಳ ವೃಕ್ಷಗಳ ಸಾಲನ್ನು ಕೊರೆಯಲಾಗಿದೆ. ಇನ್ನೊಂದು ಹೊಳಪುಳ್ಳ ಮುದ್ರೆಯ ಮೇಲೆ ಒಂದೇ ರೀತಿಯಾಗಿ ತೋರುವ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬನಿಗೆ ಗಡ್ಡವಿದೆ; ಇಬ್ಬರ ತಲೆಯ ಮೇಲೆ ಕೊಂಬುಗಳುಳ್ಳ ದುಂಡನೆ ಟೊಪ್ಪಿಗೆಯಿದೆ. ಬೆನ್ನ ಹಿಂದೆ ಬುಚ್ಚಡ ಇದೆ; ಇವರ ಎರಡೂ ಕೈಗಳು ಟೊಂಕದ ಮುಂಭಾಗದಲ್ಲಿವೆ. ಈ ಇಬ್ಬರ ಪಕ್ಕದಲ್ಲಿ ತಾಳದ ಗರಿಗಳಿವೆ; ಕಣ್ಣುಗಳನ್ನು ಆಳವಾಗಿ ಕೊರೆಯಲಾಗಿದೆ, ನಿರಿಗೆಯುಳ್ಳ ಅಂಗಿಯನ್ನು ಧರಿಸಿದ್ದಾರೆ. ಪರ್ಷಿಯನ್ ಖಾರಿಯ ಒಂದು ಸ್ಟಿಯಟೈಟ್ ಮುದ್ರೆಯಲ್ಲಿಯೂ ಬಿರಡೆಯೋಪಾದಿಯ ತೂತುಗಳಿದ್ದು ಗೂಳಿ, ಮೇಕೆ ಹಾಗೂ ಅರ್ಧಚಂದ್ರನ ಚಿತ್ರಗಳಿವೆ. ವಿಪುಲ ಸಂಖ್ಯೆಯ ಶಂಖಗಳು, ಟರ್ಕ್ವಾಯಿಜ಼್ ಮಣಿಗಳು, ಕಾರ್ನೀಲಿಯನ್, ದಂತದ ಮಣಿಗಳು ಹಾಗೂ ಫಲಕ ಇತ್ಯಾದಿ ತೆಪೆ ಯಾಹ್ಯಾದ ಪೂರ್ವ ಹಾಗೂ ಪಶ್ಚಿಮ ಪ್ರದೇಶಗಳೊಂದಿಗೆ ಇದ್ದ ವ್ಯಾಪಾರ ಸಂಬಂಧದ ದ್ಯೋತಕವಾಗಿವೆ. ಈ ಹಂತದ ಮಣ್ಪಾತ್ರೆಗಳ ಮೇಲೆ ತೆಳು ಕೆಂಪು ಲೇಪನದ ಮೇಲೆ ಕಪ್ಪುವರ್ಣದ ಚಿತ್ರಗಳು ಹಾಗೂ ಬೂದುಬಣ್ಣದ ಮೇಲೆ ಕಪ್ಪುವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಎತ್ತರ ಬುಗುಟುಳ್ಳ ಮಣ್ಪಾತ್ರೆಗಳನ್ನು ಹೋಲುವಂಥವು ಮೆಸಪೊಟೇಮಿಯದ ಟೆಲ್‌ಅಸ್ಮಾರ್ ಹಾಗೂ ಸಿಂಧೂ ಬಯಲಿನಲ್ಲಿ ದೊರೆತಿವೆ. ಕೆಲವು ಬಹು ರಂಧ್ರದ ಮಣ್ಪಾತ್ರೆಗಳು ಹರಪ್ಪ ಸಂಸ್ಕೃತಿಯ ಬಹು ರಂಧ್ರ ಪಾತ್ರೆಗಳಂತಿವೆ. ಇಂಥ ಪಾತ್ರೆಗಳು ಇರಾನಿನ ಹಿಸ್ಸಾರ್, ತುರಂಗ ತೆಪೆ, ಬಾಮಪುರ್, ಶಹರ–ಎ–ಸೋಖ್ತಾ ನೆಲೆಗಳಲ್ಲೂ ಕಂಡುಬಂದಿವೆ.

ಪ್ರ.ಶ.ಪೂ.3ನೆಯ ಸಹಸ್ರಾಬ್ದಿಯ ಮಧ್ಯಾವಧಿಯಲ್ಲಿ ತೆಪೆ ಯಾಹ್ಯಾ ಒಂದು ಶ್ರೀಮಂತ ನಗರವೂ ಆಡಳಿತ ಕೇಂದ್ರವೂ ಆಗಿತ್ತು.

IVಸಿ ಉಪಹಂತದಲ್ಲಿ ಐದುಕೋಣೆಗಳುಳ್ಳ ಒಂದು ದೊಡ್ಡ ಭವನವನ್ನು ಅನಾವರಣಗೊಳಿಸಲಾಗಿದೆ. ಈ ಭವನದ ಇಟ್ಟಿಗೆಗಳು (24×24ಸೆಂಮೀ), ಮಣ್ಪಾತ್ರೆಗಳು ಬಾಮಪುರ I-V ಹಾಗೂ ಶಹರ್–ಎ–ಸೊಖ್ತಾ IIIರ ಪಾತ್ರೆಗಳನ್ನು ಹೋಲುತ್ತವೆ. ಒಂದು ಕೋಣೆಯ ನೆಲಗಟ್ಟಿನ ಮೇಲೆ ಸುಡದೇ ಇದ್ದ ಆರು ಮಣ್ಣಿನ ಫಲಕಗಳು ದೊರೆತಿವೆ. ಈ ಫಲಕಗಳ ಮೇಲೆ ಪೂರ್ವಭಾವಿ–ಈಳಂ ಲಿಪಿಯಲ್ಲಿ ಬರೆದ 17 ಸಾಲುಗಳ ಬರೆವಣಿಗೆಯಿದೆ. ಇಂಥ ಲಿಪಿ ಫಲಕಗಳನ್ನು ಸೂಸ ಸಿ ಉಪಹಂತದಿಂದ ಸಂಗ್ರಹಿಸಲಾಗಿದೆ. ಈ ಕೋಣೆಯ ಇನ್ನೊಂದು ಭಾಗದಿಂದ 50ಕ್ಕೂ ಹೆಚ್ಚು ಫಲಕಗಳು ದೊರೆತಿವೆ. ಇವನ್ನು ಇಲ್ಲಿಯೇ ತಯಾರಿಸಿ, ಬರೆಯಲು ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ಇವಲ್ಲದೆ 12ಕ್ಕೂ ಹೆಚ್ಚು ಸ್ತಂಭಾಕಾರದ ಮುದ್ರಾಂಕನಗಳು ದೊರೆತಿವೆ. ಈ ಮುದ್ರಾಂಕನಗಳಲ್ಲಿ ದನಗಳ ಮೆರೆವಣಿಗೆ, ಹಾರುವ ಮೀನುಗಳು, ಗಿಡಬಳ್ಳಿಗಳ ನಡುವೆ ನಾಟ್ಯ ಟಗರುಗಳ ಚಿತ್ರಗಳಿವೆ.

ಹಂತ V: Vಎ, ಬಿ ಮತ್ತು ಸಿ ಎಂದು 3 ಉಪಹಂತಗಳಲ್ಲಿ ವಿಭಜಿಸಲಾಗಿದ್ದು, ಈ ಹಂತಗಳನ್ನು ಯಾಹ್ಯಾಕಾಲವೆಂದು ಸೂಚಿಸಲಾಗಿದೆ. Vಎ ಮತ್ತು Vಬಿ ಹಂತಗಳಲ್ಲಿ ವರ್ಣಚಿತ್ರಿತ ಮಣ್ಪಾತ್ರೆಗಳು ಹೇರಳವಾಗಿದ್ದರೆ, Vಸಿ ಹಂತದಲ್ಲಿ ಇವು ವಿರಳವಾಗಿವೆ. Vಎ ಮತ್ತು Vಬಿಯ ವರ್ಣಚಿತ್ರಿತ ಪಾತ್ರೆಗಳು ಒಂದೇ ರೀತಿಯಾಗಿದ್ದು, ಇವುಗಳಲ್ಲಿ ನಸುಹಳದಿಯ ಮೇಲೆ ಕಪ್ಪು ಹಾಗೂ ಕೆಂಪುಬಣ್ಣದ ಮೇಲೆ ಕಪ್ಪುಬಣ್ಣದ ಚಿತ್ರಗಳನ್ನು ಕಾಣಬಹುದು. ಚುಳ್ಳಿ ಲೋಟಗಳು  ಪ್ರಮುಖವಾಗಿವೆ. ಕೆಂಪಿನ ಮೇಲೆ ಕಪ್ಪುವರ್ಣದ ಪ್ರಮುಖ ಚಿಹ್ನೆಯೆಂದರೆ ಶೆವರಾನ್. ಇವನ್ನು ಸರಣಿಯಲ್ಲಿ ಬಿಡಿಸಲಾಗಿದೆ. ಲೋಟ ಮತ್ತು ಚುಳ್ಳಿ ಲೋಟ ತಳದ ಮೇಲೆ ಕುಂಬಾರರ ಏಳು ರೀತಿಯ ನಿಶಾನೆಗಳಿವೆ. ಈ ಪಾತ್ರೆಗಳನ್ನು ಉತ್ಖನನಕಾರರು ಯಾಹ್ಯಾವೇರ್ ಎಂದು ಕರೆದಿದ್ದಾರೆ. ದೊರಗು ಮಣ್ಪಾತ್ರೆಗಳೂ Vಬಿ ಉಪಹಂತದಲ್ಲಿ ಹೇರಳವಾಗಿ ಕಂಡುಬಂದಿವೆ. ಇಂಥ ಒರಟು ಪಾತ್ರೆಗಳ ಮೇಲ್ಮೈ ಹೊಳಪುಳ್ಳದ್ದು ಹಾಗೂ ಲಘು ಕೆಂಪುಬಣ್ಣದ ಲೇಪನದಿಂದ ಕೂಡಿದ್ದಾಗಿದೆ. ಸಾದಾ ಮಣ್ಪಾತ್ರೆಗಳಲ್ಲಿಯೂ ವಿಭಿನ್ನ ಪ್ರಕಾರಗಳಿವೆ. ಇವುಗಳಲ್ಲಿ ಉತ್ತಮ ದರ್ಜೆಯ ನಸುಹಳದಿ ಜಾಡಿ ಮತ್ತು ಬಟ್ಟಲುಗಳನ್ನು ಕಾಣಬಹುದು.

Vಎ ಉಪಹಂತದ ಮೂರು ಕೋಣೆಗಳನ್ನು ಚಿಕ್ಕ ಆಕಾರದ ಇಟ್ಟಿಗೆಗಳಿಂದ ಕಟ್ಟಲಾಗಿದೆ. ನಾಯಿ, ಕುರಿ/ಮೇಕೆಗಳ ಗೊಂಬೆಗಳು, ತಾಮ್ರ/ಕಂಚಿನ ಕಠಾರಿ ಹಾಗೂ ಕಾರ್ನೀಲಿಯನ್ ಮಣಿಗಳು ಇತರ ಸಾಂಸ್ಕೃತಿಕ ಅವಶೇಷಗಳು. Vಬಿ ಉಪಹಂತದಲ್ಲಿಯ ಕಟ್ಟಡಗಳಲ್ಲಿ ದೊಡ್ಡ ಅಳತೆಯ ಇಟ್ಟಿಗೆಗಳನ್ನು ಉಪಯೋಗಿಸಲಾಗಿದೆ. ಅಲ್ಲದೆ ಬೀದಿಗಳಲ್ಲಿ ಚರಂಡಿ ವ್ಯವಸ್ಥೆಯೂ ಇದ್ದಿತ್ತು. ಲೋಹದ ಉಪಕರಣಗಳು ಇಂತಿವೆ: ಉಳಿಗಳು, ದಬ್ಬಣ, ಸೌಟು ಹಾಗೂ ಕೇಶಸೂಚಿಗಳು, ವಿವಿಧ ಮಣಿಗಳು, ಅಲಬಾಸ್ಟರ್ ಅಥವಾ ಮಾರ್ಬಲ್ ಬಟ್ಟಲ ತುಣುಕುಗಳು. ಪ್ರಾಣಿಗಳ ಎಲುಬುಗಳು ದೊರೆತಿವೆ. Vಎ ಮತ್ತು Vಬಿ ಉಪಹಂತಗಳಿಂದ ಕಲ್ಲಿನ ಅನೇಕ ದೊಡ್ಡ ರುಬ್ಬು ಗುಂಡು, ಒರಳು ಹಾಗೂ ಉಂಗುರ ಕಲ್ಲುಗಳು ದೊರಕಿವೆ. Vಸಿ ಉಪಹಂತದ ವರ್ಣಚಿತ್ರಿತ ಮಣ್ಪಾತ್ರೆಗಳು ಭಿನ್ನವಾಗಿವೆ. ಈ ಹಂತದ ಕಟ್ಟಡಗಳಲ್ಲಿ 2 ಹಂತಗಳನ್ನು ಗುರುತಿಸಲಾಗಿದ್ದು, ಇವುಗಳಲ್ಲಿ ವಿಶಿಷ್ಟ ರೀತಿಯ ಇಟ್ಟಿಗೆಗಳನ್ನು ಉಪಯೋಗಿಸಲಾಗಿದೆ. ಇಟ್ಟಿಗೆಯ ಒಂದು ಮುಖದಲ್ಲಿ ಹೆಬ್ಬೆರಳಿನ ಮುದ್ರೆ ಇದ್ದು, ಈ ಭಾಗವನ್ನು ಕೆಳಮುಖವಾಗಿಟ್ಟು ಹೊಟ್ಟು ಮಿಶ್ರಿತ ಮಣ್ಣಿನ ಗಾರೆಯಿಂದ ಗೋಡೆಯನ್ನು ಕಟ್ಟಲಾಗಿದ್ದು ಮೇಲ್ಚಾವಣಿ ಹುಲ್ಲಿನದಾಗಿತ್ತು. ಗೋಡೆಯ ಒಳಭಾಗವನ್ನು ಹಳದಿಬಣ್ಣದ ಗಿಲಾವಿನಿಂದ ಲೇಪಿಸಲಾಗಿದೆ. ಕೋಣೆಗಳಲ್ಲಿ ಒಲೆಗಳಿದ್ದವು; ಒಂದು ಒಲೆಯ ಮೇಲೆ ಹೊಗೆನಳಿಕೆಯೂ ಇತ್ತು. ಎಲುಬಿನ ಸೂಜಿ/ದಬ್ಬಣ, ಕಲ್ಲಿನ ಕೊಡಲಿಗಳು, ಹಾಗೂ ಕಪ್ಪೆಚಿಪ್ಪಿನ ಕಿವಿಯೋಲೆ, ಟರ್ಕ್ವಾಯಿಜ಼್‌ನ ಕಂಠಹಾರ ಮುಂತಾದವು ಇತರ ಗಮನಾರ್ಹ ಅವಶೇಷಗಳು.

ಹಂತ VI: ಈ ಹಂತವನ್ನು 5 ಉಪಹಂತಗಳನ್ನಾಗಿ ವಿಂಗಡಿಸಲಾಗಿದೆ: VI ಎ, ಬಿ, ಸಿ, ಡಿ ಮತ್ತು ಇ.

VIಎ ಉಪಹಂತದ ಕೆಲವೊಂದು ಗೋಡೆಗಳಷ್ಟೆ ಕಂಡುಬಂದಿವೆ. ಇವು ವಾಸದ ಮನೆಗಳಲ್ಲ. ಹೆಬ್ಬೆರಳಿನ ಅಚ್ಚೊತ್ತು (4–12) ಇರುವ ಇಟ್ಟಿಗೆಗಳು ನಿರ್ದಿಷ್ಟ ಪ್ರಮಾಣದ್ದಾಗಿರಲಿಲ್ಲ. ಮಣ್ಪಾತ್ರೆಗಳು ಹೊಟ್ಟು ಮಿಶ್ರಿತ ಮಣ್ಣಿನಿಂದ ತಯಾರಿಸಲಾಗಿವೆ. ಇವುಗಳ ಹೊರ ಮೇಲ್ಮೈ ಕೆಂಪುಲೇಪನದಿಂದ ಕೂಡಿದೆ. ಕೆಲವು ನಸುಹಳದಿ ಬಣ್ಣದ ಜೇಡಿ ಲೇಪನವನ್ನು ಹೊಂದಿವೆ. ನಸುಹಳದಿ ಪಾತ್ರೆಗಳ ಮೇಲೆ ಕೆಂಪುವರ್ಣ ಚಿತ್ರಗಳು ಹಾಗೂ ಕೆಂಪು–ಕಪ್ಪು ದ್ವಿವರ್ಣ ಚಿತ್ರಗಳೂ ಇವೆ. ಇಂಥ ವರ್ಣಚಿತ್ರಿತ ಪಾತ್ರೆಗಳು ಉತ್ತಮ ದರ್ಜೆಯವು. ಫಿರಂಗ್ ಕಲ್ಲಿನ ಸೂಕ್ಷ್ಮ ಆಕಾರದ ಅಲಗುಗಳು, ಹೆಬ್ಬೆರಳಿನಾಕಾರದ ಹೆರೆಚಕ್ಕೆ ಹಾಗೂ ತಿರುಳುಗಲ್ಲುಗಳೂ ದೊರೆತಿವೆ. VIಬಿ ಉಪಹಂತದಲ್ಲಿ ಕೆಲ ಗೋಡೆಗಳಷ್ಟೆ ದೊರಕಿದ್ದು ಇವುಗಳ ಸಂಪೂರ್ಣ ವಿನ್ಯಾಸ ತಿಳಿದಿಲ್ಲ. VIಸಿ ಉಪಹಂತದ ಮೂರು ಕಟ್ಟಡ ಘಟ್ಟಗಳನ್ನು ಗುರುತಿಸಲಾಗಿದೆ. ಕೋಣೆಗಳು 1.5ಮೀ ಸಮಚತುರ್ಭುಜ ವಿನ್ಯಾಸದಲ್ಲಿದ್ದು ಹುಲ್ಲಿನ ಮೇಲ್ಹಾವಣಿಯನ್ನು ಹೊಂದಿದ್ದವು; ನೆಲಗಟ್ಟನ್ನು ಗಿಲಾವು ಮಾಡಲಾಗಿದೆ. ಈ ಕೋಣೆಗಳ ಉಪಯೋಗ ತಿಳಿದಿಲ್ಲ. ಮಣ್ಪಾತ್ರೆಗಳು ಹಾಗೂ ಫ್ಲಿಂಟ್ ಉಪಕರಣಗಳು ಅಲ್ಪ ಸಂಖ್ಯೆಯಲ್ಲಿ ದೊರೆತಿವೆ. ಹೊಟ್ಟು ಮಿಶ್ರಿತ ಮಣ್ಪಾತ್ರೆಗಳಲ್ಲಿ, ಕೆಲವೊಂದರ ಮೇಲೆ ಕೆಂಪುಬಣ್ಣದ ಅಗಲವಾದ ಹಾಗೂ ತಿರುವು ಮುರುವು ಇರುವ ಪಟ್ಟಿಕೆಯನ್ನು ಬಿಡಿಸಲಾಗಿವೆ. VIಡಿ ಹಂತದ ಕಟ್ಟಡ ಹಾಗೂ ಮಣ್ಪಾತ್ರೆಗಳಲ್ಲಿ ಹೆಚ್ಚಿನ ಬದಲಾವಣೆಗಳಿಲ್ಲ. ನೀರಿನ ಒಂದು ಬಾನಿಯೊಂದರಲ್ಲಿ ಜೇಡಿಮಣ್ಣನ್ನು ಸಂಗ್ರಹಿಸಲಾಗುತ್ತಿತ್ತೆಂದು ಉತ್ಖನನಕಾರರು ಹೇಳಿದ್ದಾರೆ. ಕಟ್ಟಡಗಳಲ್ಲಿ ಇಟ್ಟಿಗೆಗಳ ಉಪಯೋಗವಿಲ್ಲ; ಕೇವಲ ಹೊಟ್ಟು ಮಿಶ್ರಿತ ಕಲಸು ಮಣ್ಣಿನ ಮುದ್ದೆಗಳಿಂದ ಕಟ್ಟಲಾಗಿದ್ದು, ಹುಲ್ಲಿನ ಮೇಲ್ಹಾವಣಿಯಿತ್ತು. ಗೋಡೆಗಳು ಹಳದಿ–ಹಸಿರು ಮಿಶ್ರಿತ ಬಣ್ಣದ ಜೇಡಿಮಣ್ಣಿನ ಗಿಲಾವಿನಿಂದ ಕೂಡಿದ್ದವು. ಇಂಥ ಗಿಲಾವು ಬಾನಿಯಲ್ಲಿಯೂ ಇತ್ತು. ಛಾವಣಿಯಿಂದ ಕಟ್ಟಡದ ಒಳಗೆ ಇಳಿಯುತ್ತಿರಬೇಕೆಂದು ಉತ್ಖನನಕಾರರು ಊಹಿಸಿದ್ದಾರೆ. ದೊರಗು ಮಣ್ಪಾತ್ರೆಗಳನ್ನು ಹೊಟ್ಟು ಮಿಶ್ರಿತ ಮಣ್ಣಿನಿಂದ ತಯಾರಿಸಲಾಗಿವೆ. ಇಲ್ಲಿಯ ಒಂದು ಕೋಣೆಯಲ್ಲಿ ಸರ್ಪೆಂಟೈನ್, ಸ್ಟಿಯಟೈಟ್ ಕಲ್ಲಿನ ಮಹಿಳೆಯ ದುಂಡುಶಿಲ್ಪ, ಅದರೊಂದಿಗೆ ಎಲುಬಿನ ಮೂರು ಉಪಕರಣಗಳು, 63 ಫ್ಲಿಂಟ್ ಚಕ್ಕೆಗಳು, ನೆಲಗಟ್ಟಿನ ಮೇಲೆ ಹರಡಿದ ಫ್ಲಿಂಟ್‌ಚಕ್ಕೆಗಳ ಮೇಲೆ ಬೋರಲಾಗಿ ಸ್ತ್ರೀ ಶಿಲ್ಪವನ್ನಿಡಲಾಗಿತ್ತು. ಈ ಶಿಲ್ಪದ ಶೈಲಿಯೂ ವಿಶಿಷ್ಟವಾಗಿದೆ. ಇದರ ಎರಡು ಪಾರ್ಶ್ವಗಳು ಒಂದೇ ಸಮನಾಗಿದ್ದು, ಅಳತೆಯಲ್ಲಿ ಉದ್ದವಾಗಿದ್ದು, ಕಿರಿದಾದ ಸ್ತನಗಳಿದ್ದು, ತಲೆಯ ಮೇಲ್ಭಾಗದಲ್ಲಿರುವ ತೂತನ್ನು ಕಂಡು ಉತ್ಖನನಕಾರರು ಮೂಲತಃ ಇದು ಶಿಶ್ನವಾಗಿದ್ದು ಇದರ ಮೇಲೆ ಸ್ತ್ರೀಯ ದೈಹಿಕ ಲಕ್ಷಣಗಳನ್ನು ಕೊರೆಯಲಾಗಿದೆಯೆಂದು ಸೂಚಿಸಿದ್ದಾರೆ. ಈ ಶಿಲ್ಪದೊಂದಿಗೆ ಇನ್ನುಳಿದ ವಸ್ತುಗಳನ್ನು ಉದ್ದೇಶಪೂರ್ವಕವಾಗಿ ಇಡಲಾಗಿತ್ತು. ಈ ಕೋಣೆಗಳು ಉಗ್ರಾಣಗಳಾಗಿದ್ದಿರ ಬಹುದು. ಇವುಗಳಲ್ಲಿ ಸಂಗ್ರಹಿಸಿದ ಧಾನ್ಯ ಇನ್ನಿತರ ವಸ್ತುಗಳ ಸುರಕ್ಷೆಗಾಗಿ ಕೊಟ್ಟ ಬಲಿಯ ಸಂಕೇತ ಈ ಶಿಲ್ಪವಾಗಿರಬಹುದೆಂದು ಉತ್ಖನನಕಾರರು ಊಹಿಸಿದ್ದಾರೆ. VIಸಿ ಮತ್ತು VIಡಿ ಉಪಹಂತಗಳ ಕಲ್ಲಿನ ಹಲವು ಆಭರಣಗಳು ದೊರಕಿವೆ. VIಇ ಉಪಹಂತದಲ್ಲಿ ತೆಪೆ ಯಾಹ್ಯಾದ ಪ್ರಥಮ ನಿವಾಸಿಗಳು ಬಂದು ಇಲ್ಲಿ ನೆಲೆಸಿದರು. ಈ ಕಾಲದ ಅನೇಕ ಕೋಣೆಗಳನ್ನು ಕಂಡುಹಿಡಿಯಲಾಗಿದೆ. ಮಣ್ಪಾತ್ರೆಗಳು VIಡಿ ಹಂತದಲ್ಲಿದ್ದಂತೆ ಇವೆ; ಆದರೆ ವರ್ಣಚಿತ್ರಿತ ಪಾತ್ರೆಗಳಿಲ್ಲ. (ಎಲ್.ಎಸ್.ಆರ್.)

**ತೇರ್:** ಮಹಾರಾಷ್ಟ್ರದ ಒಸ್ಮಾನಾಬಾದ್ ಜಿಲ್ಲೆಯಲ್ಲಿ ತೇರ್ಣ ನದಿ ದಂಡೆಯ ಮೇಲಿರುವ ಆದಿ ಚಾರಿತ್ರಿಕ ವಸತಿ ನೆಲೆ. ಪ್ರಸಕ್ತ ಶಕೆಯ ಆಸುಪಾಸಿನ ಕಾಲದಲ್ಲಿ ಪಶ್ಚಿಮ ಭಾರತದ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಮಹಾರಾಷ್ಟ್ರದ ಪೈಠಣ ಹಾಗೂ ಆಂಧ್ರದ ಕೊಂಡಾಪುರ, ನಾಗಾರ್ಜುನಕೊಂಡವನ್ನು ಸೇರಿಸುವ ಪ್ರಾಚೀನ ವ್ಯಾಪಾರ ಮಾರ್ಗದಲ್ಲಿದೆ. ಪೆರಿಪ್ಲಸ್ ಆಫ್ ಎರಿತ್ರಿಯನ್ ಸೀ ಹಾಗೂ ಟಾಲಮಿಯ ಜಿಯಾಗ್ರಫಿಯಲ್ಲಿ ತಗರ ಎಂದು ಉಲ್ಲೇಖಗೊಂಡಿರುವ ನಗರವೇ ಇಂದಿನ ತೇರ್ ಎಂದು ಗುರುತಿಸಿದವನು ಫ್ಲೀಟ್ (1901).

ಮಹಾರಾಷ್ಟ್ರ ರಾಜ್ಯ ಪುರಾತತ್ತ್ವ ಇಲಾಖೆ, ಡೆಕ್ಕನ್ ಕಾಲೇಜು ಹಾಗೂ ಔರಂಗಾಬಾದ್‌ನ ಮರಾಠವಾಡ ವಿಶ್ವವಿದ್ಯಾಲಯ ಕೆ.ಡಿ.ಬ್ಯಾನರ್ಜಿ, ಬಿ.ಎನ್. ಚಾಪೇಕರ್, ಎಮ್.ಜಿ.ದೀಕ್ಷಿತ್, ಎಸ್.ಬಿ.ದೇವ್ ಮುಂತಾದವರ ನೇತೃತ್ವದಲ್ಲಿ 1965 ರಿಂದ 1989ರ ನಡುವೆ ಇಲ್ಲಿ ಹಲವಾರು ಬಾರಿ ಉತ್ಖನನ ನಡೆಸಿವೆ. ವಸತಿಯ ಕಾಲವನ್ನು ಎರಡು ಅಥವಾ ಮೂರು ಹಂತಗಳಾಗಿ ವಿಂಗಡಿಸಲಾಗಿದೆ. ಇವು ಔತ್ತರೇಯ ಮೆರುಗಿನ ಪಾತ್ರೆ ಸಂಸ್ಕೃತಿಯ ಕಾಲ, ಆದಿ ಸಾತವಾಹನ (ಮೆರುಗಿನ ಪಾತ್ರೆ ಸಂಸ್ಕೃತಿಯ ಕಾಲ) ಮತ್ತು ಅಂತ್ಯ ಸಾತವಾಹನ; ಮೌರ್ಯ (ಪ್ರ.ಶ.ಪೂ. 300–100), ಪ್ರ.ಶ.ಪೂ.100–ಪ್ರ.ಶ.100 ರ ಹಂತ, ಅಂತ್ಯ ಸಾತವಾಹನ (50–200); ಆದಿ ಸಾತವಾಹನ (ಪ್ರ.ಶ.ಪೂ.200–ಪ್ರ.ಶ.ಪೂ. 1ನೆಯ ಶತಮಾನ), ಇಂಡೊ–ರೋಮನ್ ಸಂಪರ್ಕ ಕಾಲ (ಪ್ರ.ಶ.1–3ನೆಯ ಶತಮಾನ). ಒಟ್ಟಾರೆ ಈ ನೆಲೆಯಲ್ಲಿ ಎರಡು ಹಂತಗಳು ದಾಖಲಾಗಿವೆ: ಔತ್ತರೇಯ ಮೆರುಗಿನ ಪಾತ್ರೆ ಸಂಸ್ಕೃತಿಯ ಕಾಲ (ಪ್ರ.ಶ.ಪೂ.3–1ನೆಯ ಶತಮಾನ) ಹಾಗೂ ಸಾತವಾಹನ ಅಥವಾ ಇಂಡೊ–ರೋಮನ್ ಸಂಪರ್ಕ ಕಾಲ (ಪ್ರ.ಶ.ಪೂ.1ನೆಯ ಶತಮಾನ–ಪ್ರ.ಶ.3ನೆಯ ಶತಮಾನ). ವಾಣಿಜ್ಯ ಸಂಪರ್ಕದಿಂದಾಗಿ ಎರಡನೆಯ ಹಂತದಲ್ಲಿ ವಸತಿ ಆರ್ಥಿಕ ಮುನ್ನಡೆ ಸಾಧಿಸಿ ಸಮೃದ್ಧಿ ಹೊಂದಿತು.

ಒಂದನೆಯ ಹಂತದಲ್ಲಿ ಮರದ ಚೌಕಟ್ಟಿನೊಂದಿಗೆ ಕೂಡಿಸಿದ ಸುಡಾವೆಮಣ್ಣಿನ ಬಳೆಗಳಿಸಿದ ಇಂಗು ಗುಣಿಗಳಿದ್ದವು. ಔತ್ತರೇಯ ಮೆರುಗಿನ ಪಾತ್ರೆ ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳನ್ನು ಈ ಹಂತದಲ್ಲಿ ಬಳಸಲಾಗುತ್ತಿತ್ತು. ಈ ಹಂತದಲ್ಲಿ ಸಿಕ್ಕ ಇಟ್ಟಿಗೆ ಗಾತ್ರ 38x25.5x8 ಸೆಂಮೀ. ಎರಡನೆಯ ಹಂತದಲ್ಲಿ ಜನಜೀವನ ಮಟ್ಟ ಉಚ್ಛ್ರಾಯ ಸ್ಥಿತಿ ತಲುಪಿತು. ಈ ಊರು ವ್ಯಾಪಾರ ಕೇಂದ್ರವಾಗಿ ಬೆಳೆದದ್ದು ಇದಕ್ಕೆ ಮುಖ್ಯ ಕಾರಣ. ಆಂಧ್ರಪ್ರದೇಶದಿಂದ ಪಾಶ್ಚಿಮಾತ್ಯ ದೇಶಗಳಿಗೆ, ವಿಶೇಷವಾಗಿ ರೋಮ್ ದೇಶಕ್ಕೆ ರಫ್ತಾಗುತ್ತಿದ್ದ ಸರಕುಗಳು ತೇರ್ ನಗರಕ್ಕೆ ಬಂದು ಇಲ್ಲಿಂದ ಪೈಠಣದ ಮೂಲಕ ಪಶ್ಚಿಮ ಕರಾವಳಿಯ ಬಂದರುಗಳನ್ನು ತಲುಪುತ್ತಿದ್ದಿರಬೇಕು. ಇದಕ್ಕೆ ಸಾಕ್ಷಿಯಾಗಿ ಇಲ್ಲಿ ಮೆಡಿಟರೇನಿಯನ್ ಮಾದರಿಯ ಗಾಜಿನ ಬಾಟಲಿ, ರೋಮಿನ ಸುಡಾವೆಮಣ್ಣಿನ ಬುಲ್ಲೆ, ರೋಮ್ ಮೂಲದಂತೆ ತೋರುವ ವಿಶೇಷ ಪ್ರಕಾರದ ದೀಪಗಳು, ಕಾರ್ನೇಲಿಯನ್ ಮುದ್ರೆಗಳು, ಮದ್ಯ ಜಾಡಿಗಳು, ರೌಲೆಟ್ ಪಾತ್ರೆಗಳು, ಮೆರುಗಿನ ಕೆಂಪು ಪಾತ್ರೆಗಳು ದೊರೆತಿವೆ. ಈ ಹಂತದಲ್ಲಿ ಕಂಡುಬಂದ ಸ್ತೂಪದ ಅವಶೇಷ ಗಮನಾರ್ಹ. 8 ಅರೆಗಳುಳ್ಳ ಚಕ್ರದ ವಿನ್ಯಾಸದಲ್ಲಿರುವ ಇಟ್ಟಿಗೆಯಿಂದ ಕಟ್ಟಿದ ಈ ಸ್ತೂಪದ ತಳಪಾಯ ಮಾತ್ರ ಉತ್ಖನನದಲ್ಲಿ ಪತ್ತೆಯಾಗಿದೆ. 26 ಮೀ ವ್ಯಾಸವಿರುವ ಸ್ತೂಪದ ಸುತ್ತ ಪ್ರದಕ್ಷಿಣ ಪಥವೂ 4 ಆಯಕ ವೇದಿಕೆಗಳೂ ಇವೆ. ಪುಳುಮಾವಿಯ ನಾಣ್ಯ ಹಾಗೂ ಕಿರುಶಾಸನಗಳ ಆಧಾರದ ಮೇಲೆ ಇದರ ಕಾಲಮಾನ 2ನೆಯ ಶತಮಾನದ ಮೊದಲ ಭಾಗ ಎಂದು ಅಂದಾಜು ಮಾಡಲಾಗಿದೆ. ಇದೇ ಕಾಲಮಾನಕ್ಕೆ ಸೇರುವ ಇಟ್ಟಿಗೆಯ ನಿರ್ಮಿಸಿದ ಗಜಪೃಷ್ಠಾಕಾರದ ಒಂದು ಕಟ್ಟಡದ ಅವಶೇಷಗಳನ್ನೂ ಹೊರತೆಗೆಯಲಾಯಿತು. ಈ ಕಟ್ಟಡದ ಒಳಗೆ ಸ್ತೂಪವಿದ್ದಿತ್ತು. ಇದರ ಮುಂದೆ ಮರದ ಕಂಬಗಳ ಮಂಟಪವಿದ್ದಿರಬೇಕು. ಸುಟ್ಟಇಟ್ಟಿಗೆಯ ಇತರ ಕಟ್ಟಡಗಳು ಹಾಗೂ ಇಂಗುಗುಣಿಗಳು ಈ ಹಂತದ ಇತರ ಕಟ್ಟಡ ಅವಶೇಷಗಳು. ಸಮೃದ್ಧಿಯ ಕುರುಹಾಗಿ ದೊರೆತಿರುವ ಅವಶೇಷಗಳೆಂದರೆ ಕೆಯೊಲಿನ್ ಹಾಗೂ ಸುಡಾವೆಮಣ್ಣಿನ ಮನುಷ್ಯ–ಪ್ರಾಣಿಪಕ್ಷಿಗಳ ಗೊಂಬೆಗಳು, ದಂತದ ಕಲಾಕೃತಿಗಳು, ಶಂಖದಲ್ಲಿ ಕೊರೆದ ಸಿಂಹದ ಶಿಲ್ಪ, ಶಂಖದ ಅಲಂಕೃತ ಬಳೆಗಳು, ಹರಕೆ ತಟ್ಟೆಗಳು, ವೈಡೂರ್ಯ, ಫಯಾನ್ಸ್, ಅರೆ–ಪ್ರಶಸ್ತ ಕಲ್ಲಿನ ಮಣಿ ಮತ್ತು ಸಾತವಾಹನ ರಾಜರ ನಾಣ್ಯಗಳು. 40 ನಾಣ್ಯಗಳಲ್ಲಿ 39 ತಾಮ್ರದ ವೃತ್ತಾಕಾರ ನಾಣ್ಯಗಳು; ಒಂದು ಸೀಸದ ಆಯತಾಕಾರದ ನಾಣ್ಯ. ಕೆಲವೊಂದರ ಮೇಲೆ ಆನೆಯ ಚಿಹ್ನೆಯಿದ್ದು ಸತಕನಿಸ ಎಂಬ ಬ್ರಾಹ್ಮಿ ಬರೆಹವಿದೆ. ಸಾದಾ ಕೆಂಪು, ಒರಟು ಕಪ್ಪು, ಕಪ್ಪು–ಕೆಂಪು ದ್ವಿವರ್ಣ, ಮೆರುಗಿನ ಕೆಂಪು ಹಾಗೂ ಕೆಯೊಲಿನ್ ಪಾತ್ರೆಗಳು ಈ ಹಂತದಲ್ಲಿ ಬಳಸಲ್ಪಡುತ್ತಿದ್ದವು. ತ್ರಿರತ್ನ, ನಂದಿಪಾದ, ಬ್ರಾಹ್ಮಿಯ ಮ ಅಕ್ಷರ ಮುಂತಾದ ಚಿಹ್ನೆಗಳನ್ನು ಕೆಲವು ಪಾತ್ರೆಗಳ ಮೇಲೆ ಕೊರೆಯಲಾಗಿದೆ. (ಪಿ.ಎಸ್.)

**ತೇರದಾಳ:** ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನಲ್ಲಿ ಕಸಬೆಯಿಂದ 29ಕಿಮೀ ಪಶ್ಚಿಮಕ್ಕಿರುವ ಪಟ್ಟಣ, ಐತಿಹಾಸಿಕ ಸ್ಥಳ. 1949ರ ವರೆಗೆ ಇದು ಸಾಂಗ್ಲಿ ಸಂಸ್ಥಾನದ ಉಪವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಇದರ ಸುತ್ತಲೂ ಮುಸಲ್ಮಾನ ಮತ್ತು ಮರಾಠರ ಕಾಲದ ಕಂದಕದಿಂದ ಆವರಿಸಲ್ಪಟ್ಟ ಕಲ್ಲಿನ ಕೋಟೆಯಿದೆ. ಇಲ್ಲಿ 11–12ನೆಯ ಶತಮಾನದ ಹಲವಾರು ಶಾಸನಗಳು ದೊರೆತಿದ್ದು ಹಿಂದೆ ವಣಿಕ ಶ್ರೇಣಿಗಳು ನೆಲೆಸಿದ್ದ ವ್ಯಾಪಾರ ಕೇಂದ್ರವಾಗಿ ತ್ತೆಂದು ತಿಳಿಯುತ್ತದೆ. 6ನೆಯ ವಿಕ್ರಮಾದಿತ್ಯನ ಸಾಮಂತನಾದ ಗೌರನು ಮಹಾಮಂಡಲೇಶ್ವರ ಕಾರ್ತವೀರ್ಯನ ಆಜ್ಞೆಯ ಪ್ರಕಾರ ಕಟ್ಟಿಸಿದ ನೇಮಿನಾಥ ದೇವಾಲಯ ಇಂದೂ ಪೂಜೆಗೊಳ್ಳು ತ್ತಿದೆ. ಇದು ಕಲ್ಯಾಣ ಚಾಳುಕ್ಯ ಶೈಲಿಯಲ್ಲಿರುವ ಸುಂದರ ಕಟ್ಟಡ.

17ನೆಯ ಶತಮಾನದ ಉತ್ತರಾರ್ಧದಲ್ಲಿ ಇಲ್ಲಿದ್ದರೆನ್ನಲಾದ ಪ್ರಭುಸ್ವಾಮಿ ಎಂಬ ವೀರಶೈವ ಸಂತರ ದೇವಾಲಯ ಊರಿನ ಪ್ರಮುಖ ದೇಗುಲಗಳಲ್ಲೊಂದು. ನಗರದ ಉತ್ತರದಂಚಿನಲ್ಲಿ ಸುಡಗಾಡು ಲಕ್ಕಿ ದೇವಾಲಯವಿದೆ. ಅಬಶಾನ್ ಪೀರರ ದರ್ಗಾ ಊರಿನ ಆಗ್ನೇಯಕ್ಕಿದೆ.

ಈ ಊರಿನ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳಿವೆ. ಊರಿನ ಪಶ್ಚಿಮ ದಿಕ್ಕಿಗೆ ಸು.5 ಕಿಮೀ ದೂರದಲ್ಲಿ ವಿಭೂತಿ ಮಡ್ಡಿ ಎಂದು ಕರೆಯಲಾಗುವ ತಾಮ್ರ–ಶಿಲಾಯುಗ ಅವಶೇಷ ಗಳಿಂದ ಕೂಡಿದ ಒಂದು ವಸತಿನೆಲೆ ಇದೆ. ಊರಿನ ಉತ್ತರಕ್ಕೆ ಗುಡ್ಡ ಪ್ರದೇಶದಲ್ಲಿ ಮತ್ತು 5 ಕಿಮೀ ವ್ಯಾಪ್ತಿಯಲ್ಲಿರುವ ಹನಗಂಡಿ, ಹಳಿಂಗಳಿ, ಮಾದಲಮಟ್ಟಿ, ಆಸಂಗಿ ಮುಂತಾದ ಹಳ್ಳಿಗಳಲ್ಲಿ ಸು.1000 ಬೃಹತ್ ಶಿಲಾಗೋರಿಗಳಿವೆ. 1964–66ರಲ್ಲಿ ತಾಮ್ರ–ಶಿಲಾಯುಗ ವಸತಿ ನೆಲೆ, ಕಲ್ಗೋರಿ ಮತ್ತು 2 ಬೃಹತ್ ಶಿಲಾಗೋರಿಗಳ ಉತ್ಖನನ ನಡೆಸಲಾಯಿತು.

ತೇರದಾಳ ಪ್ರದೇಶದ ಬೃಹತ್ ಶಿಲಾಗೋರಿಗಳಲ್ಲಿ ಕೋಣೆ ಗೋರಿಗಳು ವಿಶಿಷ್ಟವಾದುವು. ಇವುಗಳಲ್ಲಿ ಎರಡು ವಿಧಗಳಿವೆ–ವರ್ತುಲಾಕಾರದ ದಾರಿ ಕೋಣೆಗೋರಿಗಳು ಮತ್ತು ಶಿಲುಬೆಯಾಕಾರದ ದಾರಿ ಕೋಣೆಗೋರಿಗಳು. ಕೆಲವಕ್ಕೆ ದಾರಿ ಉದ್ದವಿರುತ್ತದೆ. ಪ್ರತಿ ಬದಿಯಲ್ಲಿಯೂ ದೊಡ್ಡ ಚಪ್ಪಡಿ ಕಲ್ಲನ್ನು ನೆಟ್ಟಗೆ ನಿಲ್ಲಿಸಿ ಕೋಣೆಯನ್ನು ನಿರ್ಮಿಸಲಾಗಿರುತ್ತದೆ. ಕೋಣೆ ಮತ್ತು ಅದರ ದಾರಿಯನ್ನು ನಾಲ್ಕಾರು ಚಪ್ಪಡಿಕಲ್ಲುಗಳನ್ನು ಮೇಲೆ ಅಡ್ಡಲಾಗಿಟ್ಟು ಮುಚ್ಚಲಾಗಿರುತ್ತದೆ. ದೊಡ್ಡ ದೊಡ್ಡ ಕೋಣೆಗಳ ಆಧಾರವಾಗಿ ನಾಲ್ಕು ಕಂಬಗಳಿರುತ್ತವೆ. ಕೋಣೆಯ ಹೊರಬದಿಯಲ್ಲಿ ಸಣ್ಣ ಕಲ್ಲುಗಳನ್ನು ಒತ್ತೊತ್ತಾಗಿ ರಾಶಿ ಹಾಕಿ, ಈ ರಾಶಿಯು ಚೆಲ್ಲಾಪಿಲ್ಲಿಯಾಗದ ಹಾಗೆ ಸುತ್ತಲೂ ತುಂಡು ಕಲ್ಲುಗಳಿಂದ ಕೋಣೆಯಷ್ಟೇ ಅಥವಾ ಅದಕ್ಕಿಂತ ತುಸು ಕಡಿಮೆ ಎತ್ತರದ ಚೌಕೋನ ಕಟ್ಟೆಯೊಂದನ್ನು ಕಟ್ಟಲಾಗಿರುತ್ತದೆ. ಕೆಲವೊಮ್ಮೆ

ವರ್ತುಲಾಕಾರದ ಕಟ್ಟೆಯಿದ್ದು ಅದರ ಹೊರಬದಿಯಲ್ಲಿ ಒತ್ತೊತ್ತಾಗಿ ಕಲ್ಲಿನ ರಾಶಿಯಿದ್ದು, ಅದರ ಸುತ್ತಲೂ ಮತ್ತೆ ಚೌಕೋನ ಕಟ್ಟೆಯಿರುತ್ತದೆ. ವರ್ತುಲ ವಿನ್ಯಾಸದ ದಾರಿ ಕೋಣೆ ಗೋರಿಯಲ್ಲಿ ಒಂದರ ಪಕ್ಕದಲ್ಲಿ ಮತ್ತೊಂದು ನಿಲ್ಲಿಸಿ, ಮಾಡಿದ ಕೋಣೆಯ ದಾರಿ ಚಿಕ್ಕದಿರುತ್ತದೆ. ಕೋಣೆಯ ಮೇಲೆ ಮುಚ್ಚಲು ಕಲ್ಲುಚಪ್ಪಡಿಗಳೂ ಇವನ್ನು ಹೊರಲು 3 ಅಥವಾ 4 ಕಂಬಗಳೂ ಇರುತ್ತವೆ. ಹೊರಬದಿಯಲ್ಲಿ ಒತ್ತೊತ್ತಾಗಿ ಕಲ್ಲುರಾಶಿಯಿದ್ದು ಅದು ಒಂದು ಅಥವಾ ಎರಡು ದುಂಡುಕಟ್ಟೆಯಿಂದ ಭದ್ರವಾಗಿ ಆವರಿಸಲ್ಪಟ್ಟಿರುತ್ತದೆ. ಇವಲ್ಲದೆ ಸು.15 ಕಲ್ಲುರಾಶಿಗಳನ್ನೊಳಗೊಂಡ ದುಂಡುಕಟ್ಟೆಗಳೂ ಉಂಟು.

ಈ ಮೂರು ವಿಧದ ಬೃಹತ್ ಶಿಲಾಗೋರಿಗಳಲ್ಲಿ ಎರಡನ್ನು ಉತ್ಖನನ ಮಾಡಲಾಯಿತು (1996). ಆದರೆ ಇವೆಲ್ಲವೂ ಹಿಂದೆಯೆ ಅಗೆಯಲ್ಪಟ್ಟು ಅವುಗಳಲ್ಲಿದ್ದ ಅವಶೇಷಗಳು

ಉತ್ಖನನ ಮಾಡಿದ ಶಿಲುಬೆಯಾಕಾರದ ಬೃಹತ್ ಶಿಲಾಗೋರಿ

ನಾಶವಾಗಿದ್ದುದು ಕಂಡುಬಂದಿತು. ಕೋಣೆಗೋರಿಗಳಲ್ಲಿ ಮಾನವನ ಅಸ್ಥಿಚೂರುಗಳು, ಮಣ್ಪಾಸತ್ರೆಗಳು ಮತ್ತು ಭಗ್ನಾವಶೇಷಗಳು ಅಸ್ತವ್ಯಸ್ತವಾಗಿದ್ದವು. ದಾರಿಯುಳ್ಳ ದುಂಡು ಕೋಣೆಗೋರಿಗಳಲ್ಲಿ ಕೆಂಪುವರ್ಣದ ಒಂದು ಮಡಕೆಯಲ್ಲಿ ಅಸ್ಥಿ ಚೂರುಗಳಿದ್ದವು. ದುಂಡು ಕಟ್ಟೆಗಳಲ್ಲಿ ಮಾತ್ರ ಕೆಲವೇ ಮಣ್ಪಾತ್ರೆಯ ಚೂರುಗಳು ದೊರೆತವು.

ಅಸ್ಥಿ ಚೂರುಗಳು ಆ ವ್ಯಕ್ತಿಯ ವಯಸ್ಸು, ಲಿಂಗ, ಎತ್ತರ ಮತ್ತು ಜನಾಂಗ ತಿಳಿಯಲಾಗ ದಷ್ಟು ಸಣ್ಣದಿದ್ದವು. ಪ್ರಾಯಶಃ ಕೋಣೆಗೋರಿಯಲ್ಲಿ ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳ ಅಸ್ಥಿಗಳಿದ್ದ ಹಾಗೆ ತೋರುವುದು. ಮಣ್ಪಾತ್ರೆಗಳಲ್ಲಿ ಹೊಳಪಾದ ಕೆಂಪು ವರ್ಣದ್ದೇ ಹೆಚ್ಚಾಗಿದ್ದುವು. ಕೆಲವು ಮಾತ್ರ ಕಪ್ಪು–ಕೆಂಪು ದ್ವಿವರ್ಣದವು. ಇನ್ನು ಕೆಲವು ದೊರಗುಮೈಯುಳ್ಳವುಗಳಾಗಿ ಲೇಪನವಿಲ್ಲದವು. ಬಲವಾದ ದಪ್ಪ ಹಿಡಿಕೆಯುಳ್ಳ ಕೊಡ, ಗಡಿಗೆ, ಬಾನಿ, ಚೊಂಬು, ಅರ್ಧಗೋಲಾಕೃತಿಯ ಪಾತ್ರೆ, ತಟ್ಟೆಗಳು, ಸಣ್ಣ ಬುಡದ ಅಗಲ ಬಾಯುಳ್ಳ ಲೋಟಗಳು, ಕಾಲಿರುವ ಬಟ್ಟಲು ಮುಂತಾದವು. ತಾಮ್ರದ ತಗಡಿನ ಪಟ್ಟಿಗಳು, ಕಬ್ಬಿಣದ ತೂಗುದೀಪದ ತರಹದ ಹಣತೆ, ತಂತಿ ಇತ್ಯಾದಿಗಳೂ ದೊರಕಿದುವು. ಈ ಕೋಣೆಗೋರಿಗಳ ಕಾಲಮಾನ ಪ್ರ.ಶ.ಪೂ.ಸು.1000–800.

ಬೃಹತ್ ಶಿಲಾಗೋರಿಯ ರೀತಿಯಲ್ಲಿದ್ದ ಸು.6ಮೀ ವ್ಯಾಸದ ಒಂದು ದುಂಡು ಕಲ್ಲುಗುಪ್ಪೆಯನ್ನೂ ಇಲ್ಲಿ ಅಗೆಯಲಾಯಿತು. ಅನಿರೀಕ್ಷಿತವಾಗಿ ಇದರಲ್ಲಿ ತಾಮ್ರ–ಶಿಲಾ ಸಂಸ್ಕೃತಿಯ ಒಂದು ಶವಕುಣಿ ಕಂಡುಬಂದಿತು. ಇದರಲ್ಲಿ ಒಂದು ವ್ಯಕ್ತಿಯ ತಲೆ, ಎದೆ ಹಾಗೂ ತೊಡೆಯ ಭಾಗದ ಅಸ್ಥಿ ಚೂರುಗಳನ್ನು ಪೂರ್ವ–ಈಶಾನ್ಯ ಅಭಿಮುಖವಾಗಿ ಇಡಲಾಗಿದ್ದಿತು. ಜೊತೆಗೆ, ಬೂದುವರ್ಣದ ಮೂರು ಮಣ್ಪಾತ್ರೆಗಳು, ತಾಮ್ರದ ಒಂದು ಬಳೆ ಮತ್ತು ಕೆಲವು ಸೂಕ್ಷ್ಮಶಿಲೋಪಕರಣಗಳು ಇದ್ದವು. ತಾಮ್ರ–ಶಿಲಾಯುಗದ ಶವಕುಣಿಗೆ ಹೀಗೆ ಕಲ್ಲುಗುಪ್ಪೆಯಿದ್ದುದು ಪ್ರಥಮವಾಗಿ ಕಂಡುಬಂದಿರುವುದು ಇಲ್ಲಿಯೇ. ತಾಮ್ರ–ಶಿಲಾಯುಗದ ವಸತಿನೆಲೆ ಬಹುಮಟ್ಟಿಗೆ ನಶಿಸಿದೆ. ಇಲ್ಲಿ ಸಣ್ಣ ಪ್ರಮಾಣದ ಉತ್ಖನನದಲ್ಲಿ ಸುಟ್ಟುಹೋದ ಮರದ ಕಂಬಗಳು, ವರ್ಣಚಿತ್ರವುಳ್ಳ ಮತ್ತು ಸಾದಾ ಮಣ್ಪಾತ್ರೆಗಳು ಕಲ್ಲಿನ ಸೂಕ್ಷ್ಮ ಶಿಲೋಪಕರಣಗಳು ದೊರಕಿದವು. ಸ್ಥಳೀಯ ತಾಮ್ರ– ಶಿಲಾಯುಗೀನ ಮಣ್ಪಾತ್ರೆಗಳ ಜೊತೆಗೆ ತಪತಿ ನದಿ ಬಯಲಿನಲ್ಲಿರುವ ಸಾವಳ್ದ ಮುಂತಾದ ಪ್ರದೇಶಗಳ ಮಣ್ಪಾತ್ರೆ ಮಾದರಿಗಳೂ ದೊರಕಿವೆ. ಇಂಗಾಲ–14 ವಿಧಾನದಿಂದ ಇಲ್ಲಿಯ ತಾಮ್ರ–ಶಿಲಾಯುಗ ಸಂಸ್ಕೃತಿ ಪ್ರ.ಶ.ಪೂ.ಸು.1800ರಲ್ಲಿ ಆರಂಭವಾಯಿತೆನ್ನಬಹುದು. (ಎ.ಎಸ್.)

**ತೈಮೂರ್ ಲಂಗ್:** 1336–1405. 14ನೆಯ ಶತಮಾನದ ಅಪ್ರತಿಮ ಹೋರಾಟಗಾರ ಹಾಗೂ ಧಾಳಿಕೋರ. ಜಾರ್ಜಿಯದ ಮೇಲೆ ಯುದ್ಧ ನಡೆಸುವಾಗ ಬಾಣ ನೆಟ್ಟು ಕಾಲಿಗೆ ಆದ ಅಂಗವಿಕಲತೆಯಿಂದ ಕುಂಟನಾದುದರಿಂದ ಇವನನ್ನು ಕುಂಟ ತೈಮೂರ್ ಅಥವಾ ತೈಮೂರ್ ಲಂಗ್ ಎಂದು ಇತಿಹಾಸಕಾರರು ಕರೆದಿದ್ದಾರೆ. ದಕ್ಷಿಣಭಾಗದ ಕುಷ್ ಎಂಬಲ್ಲಿ ಇವನು ಜನಿಸಿದ. ತಂದೆ ಅಮೀರ್ ತುಘಾಯ್ ಬಾರ್ಲಾಸ್ ಎಂಬ ತುರ್ಕಿ ಬುಡಕಟ್ಟು ನಾಯಕ. ಈತನ ವಂಶಜರು ಮಂಗೋಲರ ದಂಡನಾಯಕ ಚಂಗೇಷ್‌ಖಾನ್‌ನ ಆಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಸಾಮಾನ್ಯ ಕುಟುಂಬದಿಂದ ಮೇಲೆ ಬಂದ ಇವನು 1370–80ರ ನಡುವೆ ಮವಾರ್ ಉನ್ನಾರ್ ಪ್ರಾಂತವನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾದ. ಒಳಸಂಚು, ತೀಕ್ಷ್ಣಬುದ್ಧಿ ಹಾಗೂ ಅಪ್ರತಿಮ ಹೋರಾಟದಿಂದ 1369ರಲ್ಲಿ ಸಮರ್‌ಖಂಡ್‌ನ ಸಿಂಹಾಸನ ವೇರಿದ. ಬಾರ್ಲಾಸ್ ಬುಡಕಟ್ಟಿನಿಂದ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದವರಲ್ಲಿ ಇವನು ಮೊದಲಿಗ. ಅಲೆಮಾರಿ ಕುಟುಂಬದಲ್ಲಿ ಹುಟ್ಟಿದರೂ ನಂಬಿಕೆಯಲ್ಲಿ ಮುಸ್ಲಿಂ ಧರ್ಮದವನಾದ ಮೇಲೆ ಇಸ್ಲಾಂಧರ್ಮದ ವಿಸ್ತರಣೆ ಹಾಗೂ ಇರಾನಿನ ಸಂಸ್ಕೃತಿಯ ಮಿಶ್ರಣವನ್ನು ಏಷ್ಯದಲ್ಲಿ ಯಶಸ್ವಿಯಾಗಿ ಪ್ರಚಾರಕ್ಕೆ ತಂದ.

ಚಾಗ್ಟೈಖಾನನ ಧಾಳಿಗಳಿಂದ ಅನುಭವ ಹೊಂದಿದ್ದ ತೈಮೂರ್ ಖುರಾಸಾನ್ 1380–82ರಲ್ಲಿ, ಸಿಸ್ತಾನ್ 1383, ಪಶ್ಚಿಮ ಪರ್ಷಿಯ (ಇರಾನ್) 1384–85, ಜಾರ್ಜಿಯ 1386–88, ಅಜರ್‌ಬೈಜಾನ್, ಇಸ್ಫಹಾನ್ ಹಾಗೂ ಸಿರಾಜ್‌ಗಳನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡ. 1388–98ರ ನಡುವೆ ಈಜಿಪ್ಟ್, ಸಿರಿಯ, ಬಾಗ್ದಾದ್, ಅಲೆಪ್ಪೋ ಇವನ ಚಕ್ರಾಧಿಪತ್ಯವನ್ನು ಒಪ್ಪಿಕೊಳ್ಳಬೇಕಾಯಿತು. 1387ರಲ್ಲಿ ಇಸ್ಫಹಾನ್ ಜನತೆ ಇವನ ಆಡಳಿತದ ವಿರುದ್ಧ ದಂಗೆ ಎದ್ದಾಗ ತನ್ನ ಸೈನಿಕ ಶಕ್ತಿಯನ್ನು ಬಳಸಿ ಲಕ್ಷಾಂತರ ನಾಗರಿಕರನ್ನು ಹತ್ಯೆಗೈದು, ಅಮಾನುಷವಾಗಿ ದಂಗೆಯನ್ನು ಹತ್ತಿಕ್ಕಿದ.

ಸಮರ್‌ಖಂಡ್ ಅನ್ನು ಪ್ರಪಂಚ ಪ್ರತಿಷ್ಠಿತ ನಗರವನ್ನಾಗಿಸಲು ಪ್ರಯತ್ನಿಸಿ 1398 ಡಿಸೆಂಬರ್ 18ರಂದು ದೆಹಲಿಯ ಮೇಲೆ ಮುತ್ತಿಗೆ ಹಾಕಿದ. ದೆಹಲಿ ಸುಲ್ತಾನ ಫಿರೋಜ್‌ಷಾ ತುಗಲಕ್ ಹೆದರಿ ಓಡಿಹೋದ. ಸತತ 15 ದಿನಗಳ ಕಾಲ ದೆಹಲಿ ತೈಮೂರ್‌ನ ಧಾಳಿಯಿಂದ ಜರ್ಜರಿತ ವಾಯಿತು. ಅಪಾರ ಸಂಪತ್ತನ್ನು ಲೂಟಿ ಹೊಡೆದು ಲಕ್ಷಾಂತರ ನಾಗರಿಕರನ್ನು ಹತ್ಯೆ ಮಾಡಲಾಯಿತು. ಅನೇಕ ಭವ್ಯ ಭವನಗಳು ಬೆಂಕಿಗೆ ಆಹುತಿಯಾದವು. ಸಾವಿರಾರು ಕುಶಲ ಕರ್ಮಿಗಳನ್ನು ಬಲವಂತವಾಗಿ ಸಮರ್‌ಕಂದ್‌ಗೆ ಕರೆದೊಯ್ಯಲಾಯಿತು. ಡಿಸೆಂಬರ್ ತಿಂಗಳಿನ ಭೀಕರ ಚಳಿ ಹಾಗೂ ಕ್ಷಾಮಗಳಿಂದ ದೆಹಲಿ ಸ್ಮಶಾನ ಸದೃಶವಾಯಿತು. ರಾಜಕೀಯ ವಾಗಿ ದುರ್ಬಲವಾಗಿದ್ದ ತುಗಲಕ್ ಸಂತತಿ ತೈಮೂರ್‌ನ ಧಾಳಿಯಿಂದ ಅವನತಿ ಹೊಂದಿತು.

1399 ಜನವರಿ 1ರಂದು ದೆಹಲಿಯಿಂದ ಸಮರ್‌ಖಂಡ್‌ಗೆ ತೈಮೂರ್ ಹಿಂದಿರುಗಿದ. ಅನಂತರದಲ್ಲಿ ತುರ್ಕಿ, ಬಾಗ್ದಾದ್, ಅಲೆಪ್ಪೋ ಹಾಗೂ ಡಮಾಸ್ಕಸ್ ತೈಮೂರನ ಧಾಳಿಗೆ ಒಳಗಾದವು. ಅಂಕರದಲ್ಲಿ ನಡೆದ ಯುದ್ಧದಲ್ಲಿ ಆಟೋಮನ್ ತುರ್ಕರ ಸುಲ್ತಾನ ಒಂದನೆಯ ಬಯಾಜಿದ್‌ನನ್ನು ಸೋಲಿಸಿ ಸೆರೆಹಿಡಿದ. ಈಜಿಪ್ಟಿನ ಮುತ್ತಿಗೆಯಿಂದ ತೈಮೂರನ ಆಡಳಿತ ಉತ್ತರದ ಓಲ್ಗಾನದಿಯಿಂದ ದಕ್ಷಿಣದ ಪರ್ಷಿಯನ್ ಖಾರಿಯತನಕ, ಪಶ್ಚಿಮದ ಹೆಲಸ್‌ಪಾಂಟ್ ನಿಂದ ಪೂರ್ವದ ಗಂಗಾನದಿಯ ತನಕ ಹರಡಿತ್ತು.

ತನ್ನ ಅಧೀನವಾಗಿದ್ದ ಪ್ರದೇಶಗಳಲ್ಲಿ ಇಸ್ಲಾಂ ಕಾಯಿದೆಗಳನ್ನು ಜಾರಿಗೆ ತಂದ. ಚಂಗೇಷ್‌ಖಾನ್ ಜಾರಿಗೆ ತಂದಿದ್ದ ಯಾಸ ಸೂತ್ರಗಳನ್ನು ಸಾರ್ವಜನಿಕವಾಗಿ ಜಾರಿಗೊಳಿಸಿದ. ಇವು ಬುಡಕಟ್ಟು ಸಂಪ್ರದಾಯ ಹಾಗೂ ವೈಯಕ್ತಿಕ ಇಸ್ಲಾಂ ಕಾಯಿದೆಗಳ ಮಿಶ್ರಣದಂತಿದ್ದವು. ಉಕ್ಕಿನಂತಹ ವ್ಯಕ್ತಿತ್ವ ಹಾಗೂ ಸಮರಯೋಧನಾಗಿದ್ದ ತೈಮೂರ್ ಯುದ್ಧರಂಗದಲ್ಲಿ ಮುಂಚೂಣಿಯಲ್ಲಿದ್ದು ತನ್ನ ಸೈನಿಕರನ್ನು ಹುರಿದುಂಬಿಸುತ್ತಿದ್ದ. ಭಾರತ, ಈಜಿಪ್ಟ್, ತುರ್ಕಿ, ಗೋಲ್ಡನ್ ಹೋರ್ಡ್ ತೈಮೂರನ ಪರಮಾಧಿಕಾರವನ್ನು ಒಪ್ಪಿಕೊಂಡಿದ್ದವು. ಇವನ ಹೆಸರಿನಲ್ಲಿ ಶುಕ್ರವಾರದ ಪ್ರಾರ್ಥನೆ ಹಾಗೂ ನಾಣ್ಯಗಳನ್ನು ಹೊರಡಿಸಲಾಗಿತ್ತು.

1404ರಲ್ಲಿ ನಾಲ್ಕನೆಯ ಹೆನ್ರಿ ಹಾಗೂ ಫ್ರೆಂಚ್ ಚಕ್ರವರ್ತಿ ಆರನೆಯ ಚಾರ್ಲ್ಸ್ ತೈಮೂರನ ವಿಜಯವನ್ನು ಅಭಿನಂದಿಸಿ, ದ್ವಿಪಕ್ಷೀಯ ವ್ಯಾಪಾರಕ್ಕೆ ಸಹಕಾರ ಕೋರಿದ್ದರು. ಎರಡನೆಯ ಇಮ್ಯಾನುಯಲ್ ಟ್ರೆಬಿಜ಼್ ಕಪ್ಪ ಸಲ್ಲಿಸಿದ್ದ. ವ್ಯಾಪಾರಕ್ಕೆ ಅನುಕೂಲವಾಗುವಂತೆ ಸಮರ್‌ಖಂಡ್‌ನಿಂದ ಪ್ರಪಂಚದ ಇತರೆ ಭಾಗಗಳಿಗೆ ಸುವ್ಯವಸ್ಥಿತವಾದ ರಸ್ತೆ ನಿರ್ಮಾಣಗೊಂಡಿ ದ್ದವು. ಇಸ್ಲಾಂಧರ್ಮದ ಪ್ರಚಾರಕ್ಕಾಗಿ ಅಪಾರ ಪ್ರಮಾಣದ ಸಂಪತ್ತನ್ನು ವಿನಿಯೋಗಿಸಿದ. ಶಾಲೆ ವಿದ್ಯಾಲಯಗಳನ್ನು, ಮಸೀದಿ, ಉದ್ಯಾನವನಗಳನ್ನು ನಿರ್ಮಿಸಿ ಸಮರ್‌ಖಂಡ್ ಏಷ್ಯದ ಅತ್ಯಂತ ಸುಂದರನಗರವನ್ನಾಗಿಸಲು ಪ್ರಯತ್ನಿಸಿದ. ಸಮರ್‌ಖಂಡ್‌ನಲ್ಲಿ ಡೆನ್‌ಕೆದಾಸ್ ಎಂದು ಕರೆಯುವ ಉಪಗ್ರಾಮ ನಿರ್ಮಿಸಿ ಅವುಗಳಿಗೆ ಪ್ರಪಂಚದ ಪ್ರಮುಖ ಮುಸ್ಲಿಂ ನಗರಗಳ ಹೆಸರುಗಳನ್ನಿಡಿಸಿದ.

ತನ್ನ ಜೀವಿತ ಕಾಲದಲ್ಲೇ ಚಂಗೇಷ್‌ಖಾನನಂತೆ ತನ್ನ ಮಕ್ಕಳಿಗೆ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ತನ್ನ ರಾಜ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಕೇಂದ್ರದಲ್ಲಿ ತನ್ನ ಅಧಿಕಾರ ಸ್ಥಾಪಿಸಿದ್ದ. ಸಂಪತ್ತಿನ ಲೂಟಿಗಾಗಿ 1405ರಲ್ಲಿ ಖಿಟ್ನಿ ಎಂದು ಕರೆಯುತ್ತಿದ್ದ ಚೀನದ ಮೇಲೆ ಧಾಳಿಗೆ ಹೊರಟಾಗ ನಿಧನನಾದ ಇವನ ಮೃತದೇಹವನ್ನು ಸಮರ್‌ಖಂಡ್‌ಗೆ ತಂದು ಹೂಳಲಾಯಿತು. ತೈಮೂರ್‌ಲಂಗ್ ಸಾಯುವ ವೇಳೆಯಲ್ಲಿ 4 ಮಕ್ಕಳು, 21 ಮೊಮ್ಮಕ್ಕಳು ಹಾಗೂ 15 ಮರಿಮಕ್ಕಳು ಇದ್ದರು. ಮುಂದೆ ಭಾರತದಲ್ಲಿ ಮೊಗಲ್ ಸಾಮ್ರಾಜ್ಯ ವನ್ನು ಸ್ಥಾಪಿಸಿದ ಬಾಬರ್ ಈ ವಂಶದವನು.

ತೈಮೂರನ ಪ್ರಯತ್ನದಿಂದಾಗಿ ಮುಂದೆ ಸಮರ್‌ಖಂಡ್ ಜ್ಞಾನ, ವಿಜ್ಞಾನ ಹಾಗೂ ಕಲೆ–ಸಂಸ್ಕೃತಿಗಳಿಗೆ ಹೆಸರುವಾಸಿಯಾಯಿತು. ಇಸ್ಲಾಂ ಹಾಗೂ ಇರಾನಿಯನ್ ಸಂಸ್ಕೃತಿಯ ಮಿಶ್ರಣ ಏಷ್ಯದಾದ್ಯಂತ ಹರಡಲು ಕಾರಣವಾಯಿತು.

**ಭಾರತ ದಂಡಯಾತ್ರೆ (1398)**: ದೆಹಲಿಯ ಸುಲ್ತಾನರು ಮೂರ್ತಿಪೂಜಕರಾದ ಹಿಂದುಗಳ ಬಗ್ಗೆ ಹೆಚ್ಚಿನ ಸಹಿಷ್ಣುತೆಯನ್ನು ತೋರಿದ್ದಾರೆಂಬ ನೆಪವೊಡ್ಡಿ ತೈಮೂರ್ ಅವರನ್ನು ಶಿಕ್ಷಿಸುವ ಉದ್ದೇಶದಿಂದ ಭಾರತದ ದಂಡಯಾತ್ರೆಯನ್ನು ಕೈಗೊಂಡನೆಂದು ಹೇಳಲಾಗಿದೆ. ಆಗ ಅವನ ವಯಸ್ಸು 60ನ್ನು ದಾಟಿತ್ತು. 1398 ಸೆಪ್ಟೆಂಬರ್ 24 ರಂದು ತೈಮೂರನ ಸೈನ್ಯ ಸಿಂಧೂನದಿಯನ್ನು ದಾಟಿತು. ತಾನು ಬಂದ ಹಾದಿಯಲ್ಲಿ ಸಿಕ್ಕಿದವರನ್ನು ಸುಲಿದು, ಪಟ್ಟಣಗಳನ್ನು ನಾಶಮಾಡಿ ಐಶ್ವರ್ಯವನ್ನು ಕೊಳ್ಳೆಹೊಡೆದು ದೆಹಲಿಯ ಕಡೆಗೆ ತೈಮೂರ್ ಸಾಗಿದ. ಡಿಸೆಂಬರ್ 17ರಂದು ಪಾಣಿಪತ್ ಯುದ್ಧಭೂಮಿಯಲ್ಲಿ ಮಹಮದ್ ಬಿನ್ ತುಗಲಕನ ಸೇನೆಯನ್ನು ಸೋಲಿಸಿದ. ಮರುದಿನ ದೆಹಲಿಯನ್ನು ಪ್ರವೇಶಿಸಿದ. ತೈಮೂರನ ಸೈನ್ಯ ನಗರವನ್ನು ಸತತವಾಗಿ ಐದು ದಿವಸ ಲೂಟಿ ಮಾಡಿತು. ಕಟ್ಟಡಗಳು ಭಸ್ಮವಾದವು. ನಿರಪರಾಧಿ ಪ್ರಜೆಗಳು ಲಕ್ಷಗಟ್ಟಲೆ ಕೊಲೆಯಾದರು. ಇಲ್ಲವೆ ಬಂಧಿತರಾದರು. ತೈಮೂರನ ಹೊಡೆತದಿಂದ ಚೇತರಿಸಿಕೊಳ್ಳಲು ದೆಹಲಿಗೆ ಒಂದು ಶತಮಾನವೇ ಬೇಕಾಯಿತು.

ಭಾರತದಲ್ಲಿ ಸಾಮ್ರಾಜ್ಯ ಸ್ಥಾಪಿಸುವುದು ತೈಮೂರನ ಉದ್ದೇಶವಾಗಿರಲಿಲ್ಲ. ಆತ ಇಲ್ಲಿಗೆ ಕೇವಲ ಕೊಳ್ಳೆ ಹೊಡೆಯಲು ಬಂದಿದ್ದ. ಎಂತಲೇ ಕೇವಲ 15 ದಿವಸಗಳ ಅನಂತರ ಆತ ದೆಹಲಿಯಿಂದ ಕಾಲ್ತೆಗೆದ. 1399 ಜನವರಿ 9 ರಂದು ಈತ ಮೀರತ್ ಮೇಲೆ ಧಾಳಿ ಮಾಡಿ ನಗರವನ್ನು ಕೊಳ್ಳೆಹೊಡೆದು ಜನರನ್ನು ಸಾಮೂಹಿಕವಾಗಿ ಕೊಲೆಗೆ ಈಡುಮಾಡಿದ. ಅಲ್ಲಿಂದ ಹರಿದ್ವಾರವನ್ನು ಹಾದು ಶಿವಾಲಿಕ್ ಬೆಟ್ಟಗಳ ಮೂಲಕ ಮುಂದುವರಿದು ಕಾಂಗಡಾ ಪ್ರದೇಶವನ್ನು ವಶಪಡಿಸಿಕೊಂಡ. ಅನಂತರ ಜಮ್ಮುವಿನ ಮೇಲೆ ಧಾಳಿ ಮಾಡಿದ; ಹೋದಲ್ಲೆಲ್ಲ ಕೊಳ್ಳೆಹೊಡೆಯುವುದು, ಕಟ್ಟಡಗಳನ್ನು ಸುಡುವುದು, ಜನರನ್ನು ಕೊಲ್ಲುವುದು–ಇವೇ ಈತನ ಸೈನ್ಯದ ಮುಖ್ಯ ಕೆಲಸಗಳಾದವು. ಈ ರೀತಿ ಉತ್ತರ ಭಾರತದ ಬಹುಪಾಲು ಸಂಪತ್ತನ್ನು ಕೊಳ್ಳೆಹೊಡೆದ ತೈಮೂರ್ 1399 ಮಾರ್ಚ್ 19ರಂದು ಸಿಂಧೂ ನದಿಯನ್ನು ದಾಟಿ ಸಮರ್‌ಖಂಡ್‌ನತ್ತ ಹಿಂದಿರುಗಿದ. ಭಾರತದಲ್ಲಿ ಬಂಧಿಸಿದ ಹೆಂಗಸರು, ಶಿಲ್ಪಿಗಳು ಹಾಗೂ ಕುಶಲಕರ್ಮಿಗಳನ್ನು ತನ್ನೊಡನೆ ಸಾಗಿಸಿದ. ಸು. 90 ಆನೆಗಳ ಮೇಲೆ ಭಾರತದ ಹಿಂದು ದೇವಾಲಯಗಳ ಕಂಬ, ಚಪ್ಪಡಿ ಮುಂತಾದವನ್ನು ಸಾಗಿಸಿ ಅವನ್ನೇ ಉಪಯೋಗಿಸಿ ಸಮರ್‌ಕಂದ್‌ನಲ್ಲಿ ಒಂದು ಮಸೀದಿ ಕಟ್ಟಿಸಿದ. ಭಾರತೀಯ ಶಿಲ್ಪಿಗಳಿಂದ ತನ್ನ ರಾಜಧಾನಿಯಲ್ಲಿ ಅನೇಕ ಹೊಸ ಕಟ್ಟಡಗಳನ್ನು ಕಟ್ಟಿಸಿದ. ಪಂಜಾಬ್ ಪ್ರಾಂತ್ಯದಲ್ಲಿ ತನ್ನ ದಳಪತಿಯೊಬ್ಬನನ್ನು ಆಡಳಿತಾಧಿಕಾರಿಯಾಗಿ ನೇಮಿಸಿದ. ಈತ ಹೆಚ್ಚು ಕಡಿಮೆ ಪೂರ್ಣ ಸ್ವತಂತ್ರನೇ ಆಗಿದ್ದ.

ಭಾರತದ ದಂಡಯಾತ್ರೆ ತೈಮೂರನ ಕೊನೆಯ ದಂಡಯಾತ್ರೆಯಾಗಲಿಲ್ಲ. ಅದೇ ವರ್ಷ (1399) ಅವನು ತನ್ನ ಜೀವನದ ಕೊನೆಯ ಹಾಗೂ ದೊಡ್ಡ ದಂಡಯಾತ್ರೆಯನ್ನು ಕೈಗೊಂಡ. ಈಜಿಪ್ಟಿನ ಮ್ಯಾಮಲೂಕ ಸುಲ್ತಾನನನ್ನು ಶಿಕ್ಷಿಸುವುದೇ ಈ ದಂಡಯಾತ್ರೆಯ ಗುರಿಯಾಗಿತ್ತು. ಆ ಸುಲ್ತಾನ ಬಾಗ್ದಾದ್ ಸುಲ್ತಾನನಿಗೆ ಸಹಾಯ ಮಾಡಿ ಆತ ಅಜರ್‌ಬೈಜಾನನ್ನು ವಶಪಡಿಸಿಕೊಳ್ಳಲು ಸಾಧ್ಯಮಾಡಿಕೊಟ್ಟಿದ್ದಲ್ಲದೆ ಆಟೋಮನ್ ಸುಲ್ತಾನನಾದ ಮೊದಲನೆಯ ಬಯಜಿದ್, ಪೂರ್ವ ಅನಟೋಲಿಯವನ್ನು ವಶಪಡಿಸಿಕೊಳ್ಳಲೂ ಸಹಾಯ ಮಾಡಿದ್ದ. ಆದ್ದರಿಂದಲೇ ತೈಮೂರ್ ಅವನ ಮೇಲೆ ದಂಡೆತ್ತಿ ಹೋಗಿ ಮೊದಲು ಅಜರ್ ಬೈಜಾನಿನಲ್ಲಿ ತನ್ನ ಪ್ರಭುತ್ವವನ್ನು ಪುನಃ ಸ್ಥಾಪಿಸಿ ಸಿರಿಯದ ಕಡೆ ನುಗ್ಗಿದ. ಆಲೋಪ್ಪೋಗೆ ಮುತ್ತಿಗೆ ಹಾಕಿ, ಅದನ್ನು ಸೂರೆ ಮಾಡಿ, ಮ್ಯಾಮಲೂಕನ ಸೇನೆಯನ್ನು ಸೋಲಿಸಿ, ಡಮಾಸ್ಕಸ್ ನಗರವನ್ನು ವಶಪಡಿಸಿಕೊಂಡ (1401). ಅಲ್ಲಿಯ ಕುಶಲ ಕೆಲಸಗಾರರನ್ನು ಸಮರ್‌ಖಂಡ್‌ಗೆ ಬಲತ್ಕಾರದಿಂದ ಕರೆದೊಯ್ದಿದ್ದರಿಂದ ಡಮಾಸ್ಕಸಿನ ಅಭ್ಯುದಯಕ್ಕೆ ಧಕ್ಕೆ ಬಂತು. ಅದೇ ವರ್ಷ ಬಾಗ್ದಾದ್ ನಗರವನ್ನು ಆಕ್ರಮಿಸಿ, ಸು. 20,000 ಜನರನ್ನು ಕೊಂದು ಹಾಕಿದ. ತೈಮೂರ್ ಚಳಿಗಾಲವನ್ನು ಜಾರ್ಜಿಯಲ್ಲಿ ಕಳೆದು, ಅನಟೋಲಿಯದ ಮೇಲೆ ಆಕ್ರಮಣ ನಡೆಸಿ, ಆಟೋಮನ್ ಸುಲ್ತಾನ್ ಬಯಜಿದ್ದನ ಸೇನೆಯನ್ನು ಅಂಕಾರದ ಬಳಿ ಸೋಲಿಸಿದ. 1402ರಲ್ಲಿ ಸರವನ್ನು ರೋಡ್ಸ್ ಶ್ರೀಮಂತರಿಂದ ಕಸಿದುಕೊಂಡ. ಅತ್ತಕಡೆ ಈಜಿಪ್ಟಿನ ಸುಲ್ತಾನ ಶರಣಾಗತನಾದ. ದಿಗ್ವಿಜಯಿಯಾದ ತೈಮೂರ್ 1404ರಲ್ಲಿ ತನ್ನ ರಾಜಧಾನಿ ಸಮರ್‌ಖಂಡ್‌ಗೆ ಹಿಂದಿರುಗಿದ. ಕೂಡಲೇ ಚೀನದ ಕಡೆ ಕಣ್ಣು ಹಾಯಿಸಿ ಅಲ್ಲಿಗೆ ಸೇನೆಯನ್ನು ಕಳುಹಿಸಲು ತಯಾರಾದ. 1404 ಡಿಸೆಂಬರ್ ಅಂತ್ಯದಲ್ಲಿ ಸೇನೆಯ ನಾಯಕತ್ವ ವಹಿಸಿ ತೈಮೂರ್ ಅತ್ತ ಹೊರಟ. ಆದರೆ ದಾರಿಯಲ್ಲೇ 1405 ಜನವರಿ 19ರಂದು ನಿಧನ ಹೊಂದಿದ. ತೈಮೂರನ ದೇಹವನ್ನು ಅದ್ದೂರಿಯಿಂದ ಸಮರ್‌ಖಂಡ್‌ಗೆ ತೆಗೆದುಕೊಂಡು ಹೋಗಿ ಸಮಾಧಿ ಮಾಡಲಾಯಿತು.

ಜೀವನವನ್ನೇ ದಂಡಯಾತ್ರೆಗೆ, ನಗರಗಳ ನಾಶಕ್ಕೆ, ಐಶ್ವರ್ಯದ ಲೂಟಿಗೆ, ಪ್ರಾಣಹಾನಿಗೆ ಮುಡಿಪಾಗಿಟ್ಟಿದ್ದ ತೈಮೂರ್ ಒಬ್ಬ ಸಾಹಸಿ, ಕ್ರೂರಿ, ಲೂಟಿಕೋರ ಯೋಧನೆಂದು ಪರಿಗಣಿತನಾಗಿದ್ದಾನೆ. ಲೂಟಿಯಿಂದ ದೊರೆತ ಹಣ, ವಸ್ತುಗಳಿಂದ ಸುಂದರವಾದ, ವೈಭವಯುತವಾದ ಕಟ್ಟಡಗಳನ್ನು ನಿರ್ಮಿಸಿ ಆಗಿನ ಸಂಸ್ಕೃತಿಗೆ ತನ್ನ ಕೊಡುಗೆಯನ್ನು ಸಲ್ಲಿಸಿದ್ದಾನೆ. ತೈಮೂರನ ಜೀವನದ ಸಾಹಸಮಯ ಸಾಧನೆಗಳನ್ನು ಅವನ ಬರೆಹದಿಂದಲೇ ತಿಳಿಯಬಹುದಾಗಿದೆ. ತಾನು ನಡೆಸಿದ ದಂಡಯಾತ್ರೆಗಳ ಬಗ್ಗೆ ಆತ ಮುಲ್‌ಫುಜತ್–ಐ–ತಿಮೂರಿ ಜೀವನ ಚರಿತ್ರೆಯಲ್ಲಿ ದಾಖಲಿಸಿದ್ದಾನೆ.

ತೈಮೂರನ ವಂಶಸ್ಥರು ಮಧ್ಯ ಏಷ್ಯ ಮತ್ತು ಇರಾನ್ ಪ್ರದೇಶಗಳಲ್ಲಿ ರಾಜ್ಯವಾಳಿದರು. ಹಿರಾತ್ ನಗರವನ್ನು ರಾಜಧಾನಿ ಮಾಡಿಕೊಂಡ ಇವರು 15 ಮತ್ತು 16ನೆಯ ಶತಮಾನಗಳಲ್ಲಿ ಪ್ರಬಲರಾಗಿದ್ದರು. ಆದರೆ ಇರಾನಿನಿಂದ ಓಡಿಸಲ್ಪಟ್ಟಾಗ ತೈಮೂರನ ವಂಶಸ್ಥನಾದ ಬಾಬರ್ ಭಾರತಕ್ಕೆ ಬಂದು ದೆಹಲಿಯಲ್ಲಿ ಮೊಗಲ್ ರಾಜಸಂತತಿಯನ್ನು ಸ್ಥಾಪಿಸಿದ. (ಸಿ.ಜಿ.ಎಸ್.)

**ತೋದರಮಲ್ಲ:** 1523–89. ಅಕ್ಬರನ ಒಬ್ಬ ಮಂತ್ರಿ; ಭೂಕಂದಾಯ ವ್ಯವಸ್ಥೆಯ ಸುಧಾರಣೆಗಾಗಿ ಪ್ರಸಿದ್ಧನಾಗಿದ್ದಾನೆ. ಮೊದಲು ಅಕ್ಬರನ ಆಸ್ಥಾನದಲ್ಲಿ ಕಾರಕೂನನಾಗಿದ್ದ ಈತ ತನ್ನ ಬುದ್ಧಿವಂತಿಕೆ ಹಾಗೂ ಕಾರ್ಯದಕ್ಷತೆಯಿಂದ ಬಲು ಬೇಗ ಉನ್ನತಿ ಹೊಂದಿ ಸೈನ್ಯದಲ್ಲಿ ಹಿರಿಯ ಅಧಿಕಾರಿಯಾದ. 1567ರಲ್ಲಿ ಅಯೋಧ್ಯೆಯ ಸುಭೇದಾರ ಸಿಕಂದರ್ ಶಾಹನನ್ನು ಸೋಲಿಸಿದ. ಅನಂತರ ಒರಿಸ್ಸ, ಬಂಗಾಲ, ಬಿಹಾರ, ಗುಜರಾತ್ ಮುಂತಾದ ಪ್ರಾಂತಗಳಲ್ಲಿ ಎದ್ದ ಬಂಡಾಯಗಳನ್ನು ಅಡಗಿಸಿದ. 1584ರಲ್ಲಿ ಬಂಗಾಲದ ಬಹುಭಾಗವನ್ನು ಗೆದ್ದು ಅದನ್ನು ಅಕ್ಬರನ ಸಾಮ್ರಾಜ್ಯಕ್ಕೆ ಸೇರಿಸಿದ. ಇದರಿಂದ ಸಂಪ್ರೀತನಾದ ಅಕ್ಬರ್ ಈತನಿಗೆ ರಾಜಾ ಎಂಬ ಪದವಿ ಕೊಟ್ಟು ಸನ್ಮಾನಿಸಿದ. ತನ್ನ ಜೀವನದ ಕೊನೆಗಾಲದಲ್ಲಿ ಅಕ್ಬರನ ಕಂದಾಯ ಹಾಗೂ ಅರ್ಥ ಮಂತ್ರಿಯಾಗಿ ಕೆಲಸಮಾಡಿದ.

ತೋದರ್‌ಮಲ್ ಪ್ರಸಿದ್ಧನಾಗಿರುವುದು ಈತ ಮಾಡಿದ ಕಂದಾಯ ಹಾಗೂ ಆಡಳಿತ ಸುಧಾರಣೆಗಳಿಗಾಗಿ. ರಾಜ್ಯದ ಲೆಕ್ಕಪತ್ರ ವ್ಯವಸ್ಥೆಯಲ್ಲಿ ಹೊಸ ಕ್ರಮಗಳನ್ನು ಜಾರಿಗೆ ತಂದ. ಮೊದಲಿನಿಂದ ಬಳಕೆಯಲ್ಲಿದ್ದ ಹಿಂದೂಸ್ತಾನೀ ಭಾಷೆಯ ಬದಲಾಗಿ ಲೆಕ್ಕಪತ್ರ ಹಾಗೂ ಆಡಳಿತದಲ್ಲಿ ಪರ್ಷಿಯನ್ ಭಾಷೆಯ ಬಳಕೆಯನ್ನು ರೂಢಿಸಿದ. ರಾಜ್ಯದ ಸಾಗುವಳಿ ಜಮೀನನ್ನು ಕರಾರುವಾಕ್ಕಾಗಿ ಅಳೆಯುವುದು, ಒಂದು ಬೀಘಾ ಜಮೀನಿನ ಸರಾಸರಿ ಬೆಳೆಯ ಪರಿಮಾಣ ನಿರ್ಧರಿಸುವುದು, ಈ ಪರಿಮಾಣದ ಆಧಾರದ ಮೇಲೆ ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯವನ್ನು ನಿರ್ಧರಿಸುವುದು, ಸಂಪತ್ತಿನ ಮೌಲ್ಯಮಾಪನ–ಇವು ತೋದರಮಲ್ ಆಚರಣೆಗೆ ತಂದ ವಿಶೇಷ ಸುಧಾರಣೆಗಳು. ಸಾಗುವಳಿ ಜಮೀನನ್ನು ಫಲವತ್ತಾದ್ದು, ಸಾಧಾರಣ ಮತ್ತು ಬರಡು ಎಂದು ವಿಭಾಗಿಸಿದ. ಜಮೀನಿನ ವಿವರಗಳನ್ನೊಳಗೊಂಡ ಪಹಣಿ (ಲೆಕ್ಕಪತ್ರದ) ಪುಸ್ತಕವನ್ನಿಡುವ ಕ್ರಮವನ್ನು ಬಳಕೆಗೆ ತಂದ. ತೋದರ್‌ಮಲ್ ಆಚರಣೆಗೆ ತಂದ ಅನೇಕ ಸುಧಾರಣೆಗಳು ಭಾರತದಲ್ಲಿ ಇಂದಿಗೂ ಬೇರೆ ಬೇರೆ ರೂಪಗಳಲ್ಲಿ ಬಳಕೆಯಲ್ಲಿವೆ.

ಈತ ಸೈನಿಕನಾಗಿ, ಮಂತ್ರಿಯಾಗಿ ಹೆಸರು ಗಳಿಸಿರುವಂತೆ ಕವಿಯಾಗಿಯೂ ಪ್ರಮುಖನಾಗಿದ್ದಾನೆ. ಹಿಂದೀ ಭಾಷೆಯಲ್ಲಿ ಈತ ರಚಿಸಿದ ನೀತಿ ಪದ್ಯಗಳು ಲಭಿಸಿವೆ. ಈತನ ಆಶ್ರಯದಲ್ಲಿ ತೋದರಾನಂದ, ತೋದರಪ್ರಕಾಶ, ಸ್ವರಮೇಲಕಲಾನಿಧಿ ಮುಂತಾದ ಗ್ರಂಥಗಳು ರಚನೆಗೊಂಡವು. ತೋದರಾನಂದ ಅಂದಿನ ಕಾಲದಲ್ಲಿ ರಚಿತವಾದ ಒಂದು ಜ್ಞಾನಕೋಶವೆಂದು ಹೇಳಬಹುದು. ಇದರಲ್ಲಿ ಆಚಾರ, ವ್ಯವಹಾರ, ದಾನ, ಶ್ರಾದ್ಧ, ಪ್ರಾಯಶ್ಚಿತ್ತ, ವಿವೇಕ, ವಿವಾಹ, ಕರ್ಮವಿಪಾಕ ಮುಂತಾದವುಗಳನ್ನು ಕುರಿತ 15ಕ್ಕೂ ಹೆಚ್ಚು ಪ್ರಕರಣಗಳಿವೆ. (ಸಿ.ಕೆ.ಎನ್.)

**ತೋರಗಲ್ಲಿನ ಮಹಾಮಂಡಲೇಶ್ವರರು: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು**

**ತ್ಯೂಸಿಡೈಡೀಸ್:** ಪ್ರ.ಶ.ಪೂ.ಸು.460–411. ಪ್ರಸಿದ್ಧ ಗ್ರೀಕ್ ಇತಿಹಾಸಕಾರ. ಹಿಸ್ಟರಿ ಆಫ್ ದಿ ಪೆಲೊಪೊನೇಷ್ಯನ್ ವಾರ್ ಎಂಬ ಅಪೂರ್ಣ ಕೃತಿಯ ಕರ್ತೃ. ಈತನ ಜೀವಿತದ ಬಗ್ಗೆ ಹೆಚ್ಚಿನ ಅಂಶಗಳು ತಿಳಿದಿಲ್ಲ. ಹುಟ್ಟಿದ್ದು ಅಥೆನ್ಸಿನಲ್ಲಿ. ತಂದೆ ಅಥೆನ್ಸಿನ ನಾಗರಿಕ ಓಲೊರಸ್. ಆತನಿಗೆ ತೆಲಾಸ್‌ನ ಬಳಿ ಬ್ರೇಸಿಯನ್ ತೀರದಲ್ಲಿ ಸ್ಕ್ಯಾಪ್ಟೆ ಹಿಲೇ ಎಂಬಲ್ಲಿನ ಚಿನ್ನದ ಗಣಿಗಳಿಂದ ಒಳ್ಳೆಯ ಆದಾಯ ಬರುತ್ತಿತ್ತು. ಹೀಗಾಗಿ ತ್ಯೂಸಿಡೈಡೀಸನಿಗೆ ಚಿಕ್ಕಂದಿನಿಂದಲೇ ಉನ್ನತ ರಾಜಕೀಯ ವಲಯಗಳಲ್ಲಿ ಓಡಾಡಿ ಅಲ್ಲಿನ ವಿಷಯಗಳನ್ನು ಸಂಗ್ರಹಿಸುವ ಸುಸಂಧಿ ದೊರಕಿತ್ತು. ಇವರ ವ್ಯವಹಾರಗಳೆಲ್ಲ ತ್ರೇಸ್ ರಾಷ್ಟ್ರದಲ್ಲಿದ್ದವು. ಇದರಿಂದ ಎರಡೂ ನಗರಗಳ ಇತಿಹಾಸ, ಬೆಳವಣಿಗೆಗಳನ್ನೆಲ್ಲ ಈತ ಚೆನ್ನಾಗಿ ತಿಳಿದಿದ್ದ. ಈತ ತತ್ತ್ವಶಾಸ್ತ್ರವನ್ನು ಅನ್ಯಾಕ್ಸಗೊರಾಸನ ಕೈಕೆಳಗೂ ಅಲಂಕಾರಶಾಸ್ತ್ರವನ್ನು ಆಂಟಿಫಾನ್‌ನ ಕೈಕೆಳಗೂ ಅಭ್ಯಾಸ ಮಾಡಿದ. ಆಲೋಚನೆ ನಿಸ್ಸಂದಿಗ್ಧವಾಗಿ ಸ್ಪಷ್ಟವಾಗಿರಬೇಕು; ಭ್ರಮೆಯಿಂದ ದೂರವಾಗಿ ವಿವೇಚನೆಯಿಂದ ವರ್ತಿಸಬೇಕು; ಬರೀ ಭಾವಾವೇಶದ ದೇಶಭಕ್ತಿ ಕೂಡದು; ತನ್ನ ನಿಜವಾದ ಹಿರಿಯ ಗುಣಗಳಿಂದ ದೇಶಭಕ್ತಿಗೆ ಕುಂದು ಬಾರದಂತೆ ವರ್ತಿಸಬೇಕು–ಇವೇ ಈತನ ಆದರ್ಶಗಳಾದವು.

ಪ್ರ.ಶ.ಪೂ.5ನೆಯ ಶತಮಾನದಲ್ಲಿ ಅಥೆನ್ಸಿನ ರಾಜಕೀಯ ಪ್ರಾಬಲ್ಯ ಬಹಳವಾಗಿ ಬೆಳೆದಿದ್ದು ಜನಜೀವನದಲ್ಲೂ ತತ್ಪರಿಣಾಮವಾದ ಬದಲಾವಣೆಗಳಾಗ ತೊಡಗಿತ್ತು. ಈತನ ಧ್ಯೇಯ ಯಾವುದಾದರೂ ಒಂದು ಕಾಲದ ಇತಿಹಾಸ ಬರೆಯುವುದಾಗಿರದೆ ಒಂದು

ಘಟನೆಯ ಬಗ್ಗೆ ಬರೆಯುವುದಾಗಿತ್ತು. ಪೆಲೊಪೊನೇಷ್ಯನ್ ಸಮರ ಗ್ರೀಕ್ ಇತಿಹಾಸದಲ್ಲಿ ಒಂದು ಮಹತ್ತ್ವದ ಸ್ಥಾನವುಳ್ಳದ್ದು. ಹಿಂದೆಂದೂ ಕೇಳರಿಯದಷ್ಟು ವಿಪತ್ಕಾರಕ ಸಮರವಿದು ಎಂಬ ಭಾವನೆ ತ್ಯೂಸಿಡೈಡೀಸ್‌ನಲ್ಲಿ ತುಂಬಿ ಬಂದಿತ್ತು. ತ್ರೇಸ್ ಮತ್ತು ಅಥೆನ್ಸ್ ನಗರಗಳು ಇದಕ್ಕಾಗಿ ಎಲ್ಲ ವಿಧವಾದ ಸಿದ್ಧತೆಗಳನ್ನು ಮೊದಲಿನಿಂದಲೂ ಮಾಡಿಕೊಂಡಿದ್ದವೆಂಬ ವಿಷಯ ಈತನಿಗೆ ತಿಳಿದಿತ್ತು. ಹಾಗೆಂತಲೇ ಯುದ್ಧ ಆರಂಭವಾದ ಮೊದಲ ದಿನದಿಂದಲೇ ಅವರ ಬಗ್ಗೆ ಬರೆಯಾಲರಂಭಿಸಿದ ಈ ಇತಿಹಾಸಕಾರ ಪ್ರ.ಶ.ಪೂ.424ರಲ್ಲೊಮ್ಮೆ ತಾನು ಅದರಲ್ಲಿ ಭಾಗವಹಿಸಬೇಕಾಗಿ ಬಂತು. ಆ ವರ್ಷದ ಚಳಿಗಾಲದಲ್ಲಿ ಏಳು ಯುದ್ಧನಾವೆಗಳ ತ್ರೇಸನ್ನು ಎದುರಿಸಿ ಈತ ಹೋರಾಡಿದ. ಈತನಿಂದ ನಿರೀಕ್ಷಿಸಿದ ಗೆಲುವು ದೊರಕಿಲ್ಲವಾಗಿ ಸಂಶಯಗ್ರಸ್ಥರಾದ ಅಥೇನಿಯನರು ಈತನನ್ನು ನಗರದಿಂದ ಹೊರದೂಡಿದರು. ಪ್ರ.ಶ.ಪೂ. 423-404ರವರೆಗೆ ಈತ ತ್ರೇಸಿನಲ್ಲಿನ ತನ್ನ ಭೂಮಿಗಳನ್ನು ನೋಡಿಕೊಂಡಿದ್ದ. ಈ ವೇಳೆಯಲ್ಲಿ ಸಮರದ ಪ್ರತ್ಯಕ್ಷದರ್ಶಿಯಾಗಿ ಬಹಳವಾಗಿ ಪರ್ಯಟನ ಮಾಡಿದ; ಒಮ್ಮೆ ಅಥೆನ್ಸ್ ನಗರಕ್ಕೂ ಹೋಗಿ ಬಂದ.

ಪ್ರಾಯಶಃ ಪ್ರ.ಶ.ಪೂ.400ರಂದು ಯಾರೋ ಈತನನ್ನು ಯಾವುದೋ ಕಾರಣಕ್ಕಾಗಿ ಕೊಲೆಮಾಡಿದರು ಎನ್ನಲಾಗಿದೆ. ಇತಿಹಾಸ ಲೇಖನವನ್ನು ಅಚ್ಚುಕಟ್ಟಾಗಿಯೂ ರಸವತ್ತಾಗಿಯೂ ಕಾವ್ಯವಾಗಿಸಿದ ಹಿರಿಮೆ ಈತನದು. ನೂರಾರು ಸಂಗತಿಗಳಿಂದ ಮನಸ್ಸಿಗೆ ಗೊಂದಲವನ್ನು ತಂದುಕೊಡುವ 27, 28 ಸಂವತ್ಸರಗಳ ಚರಿತ್ರೆಯಲ್ಲಿ ಕ್ಲುಪ್ತ ಸಂವಿಧಾನವನ್ನು ಕಂಡುಹಿಡಿದು, ಮನವೊಪ್ಪಿಸುವ ಆಧಾರರಾಶಿಯಿಂದ ಅದನ್ನು ಸಮರ್ಥಿಸಿ, ಮಜಲು ಮಜಲಿಗೂ ಕುತೂಹಲ ವನ್ನು ಹೆಚ್ಚಿಸುವ ಕತೆಗಾರಿಕೆಯನ್ನು ಇಲ್ಲಿ ಈಗ ತೋರಿದ್ದಾನೆ. ಕೊನೆಯ ಪರಿಚ್ಛೇದ ಅಪೂರ್ಣವಾಗಿ ಉಳಿದಿದ್ದರೂ ವಿಷಯದ ಪರಿಜ್ಞಾನ ಸರಿಸುಮಾರಾಗಿ ಪೂರ್ತಿಯಾಗಿಯೇ ದೊರಕುತ್ತದೆ. ತಾನೇ ಕಣ್ಣಿಂದ ಕಂಡ ವಿವರಗಳು, ಇತರರಿಂದ ಕೇಳಿ ತಿಳಿದುಕೊಂಡು ಹೋಲಿಸಿ, ಹೆಕ್ಕಿನೋಡಿ ಆಭಾಸಗಳನ್ನು ಕೊಡವಿ ಸತ್ಯವೋ ಅಥವಾ ಸತ್ಯಕ್ಕೆ ಅತಿ ಹತ್ತಿರವೋ ಎಂದು ಭಾವಿಸಬಹುದಾದ ಸಂಗತಿಗಳು; ಕಾಗದ ಪತ್ರ ಕರಾರು ಸಂಧಾನಲೇಖ ಮುಂತಾದ ದಾಖಲೆಗಳು; ಮಂತ್ರಾಲೋಚನೆಗಳ ವಾದ ವಿವಾದದ ವರದಿ, ಘಟನೆಗಳನ್ನು ಕುರಿತ ಅವರಿವರ ಟೀಕೆ ಟಿಪ್ಪಣಿಗಳು-ಹೀಗೆ ಇತಿಹಾಸ ಲೇಖನಕ್ಕೆ ಉಪಯುಕ್ತವಾಗಬಲ್ಲ ಸಕಲ ಸಾಮಗ್ರಿಯನ್ನೂ ಎಚ್ಚರಿಕೆಯಿಂದ ಈತ ಶೇಖರಿಸಿದ್ದಾನೆ. ತನ್ನ ಸ್ವಂತ ಅಭಿಪ್ರಾಯವನ್ನು ಎಲ್ಲಿಯೂ ಹೇರಿಲ್ಲ. ಅಲ್ಲದೆ ಸಾಹಿತ್ಯಕ್ಕೆ ಮೀಸಲಾದ ಧ್ವನಿ ಲಕ್ಷಣ ಈ ಕೃತಿಯಲ್ಲಿ ಚೆನ್ನಾಗಿ ಮೂಡಿಬಂದಿದೆ. ಪೆಲೊಪೊನೇಷ್ಯನ್ ಯುದ್ಧದ ವರದಿಯಿಂದ ಪ್ರಾರಂಭಗೊಳ್ಳುವ ಈ ಕೃತಿ ಕೊನೆ ಮುಟ್ಟುವ ಹೊತ್ತಿಗೆ ಅಥೆನ್ಸಿನ ಇಡೀ ರಾಜಕೀಯ ಆಖ್ಯಾನವಾಗಿ ರೂಪುಗೊಂಡು ಹೃದಯಂಗಮವಾಗಿ ಮೂಡಿ ಅನ್ಯಾದೃಶವಾಗಿದೆ. ಸಾವಿರಾರು ವರ್ಷ ಸಂದರೂ ಯುರೋಪಿನ ಇತಿಹಾಸಕಾರರಿಗೆ ಇವನು ಅನುಕರಣಯೋಗ್ಯನಾಗಿದ್ದಾನೆ. (ಎಸ್.ವಿ.ಆರ್.)

**ತ್ರಿಯುಗ ಸಿದ್ಧಾಂತ:** ಸಿ.ಜೆ.ಥಾಮ್ಸನ್ ಪ್ರಚುರಪಡಿಸಿ ಸ್ಥಾಪಿಸಿದ ಸಿದ್ಧಾಂತ (ತ್ರಿ ಏಜ್ ಸಿಸ್ಟಮ್). ಈ ಸಿದ್ಧಾಂತದ ಪ್ರಕಾರ ಮಾನವನ ಪ್ರಾಗಿತಿಹಾಸವನ್ನು ತಂತ್ರಜ್ಞಾನದ ಆಧಾರದ ಮೇಲೆ ಶಿಲಾಯುಗ, ಕಂಚಿನ ಯುಗ ಮತ್ತು ಕಬ್ಬಿಣ ಯುಗಗಳಾಗಿ ವರ್ಗೀಕರಿಸ ಬಹುದಾಗಿದೆ. ಇಂತಹ ಒಂದು ಪರಿಕಲ್ಪನೆಯನ್ನು 1734ರಲ್ಲಿ ನಿಕೊಲಸ್ ಮಹುದೆಲ್ ಎಂಬ ಫ್ರೆಂಚ್ ವಿದ್ವಾಂಸ ಮೊದಲಿಗೆ ಪ್ರತಿಪಾದಿಸಿದ. ಮಾನವನ ಇತಿಹಾಸದ ಬಗೆಗೆ ಚರ್ಚ್‌ನ ಧಾರ್ಮಿಕ ಧೋರಣೆಗಳು ಪ್ರಬಲವಾಗಿದ್ದ ಆ ಕಾಲದಲ್ಲಿ ಇವನ ಮಾತುಗಳು ಹೆಚ್ಚಾಗಿ ಗಮನ ಸೆಳೆಯಲಿಲ್ಲ. ಮುಂದೆ 1820ರ ದಶಕದಲ್ಲಿ ಡೇನಿಶ್ ಪ್ರಜೆ ಸಿ.ಜೆ.ಥಾಮ್ಸನ್ ತ್ರಿಯುಗ ಸಿದ್ಧಾಂತಕ್ಕೆ ಒಂದು ಪ್ರಾಯೋಗಿಕ ತಳಹದಿಯನ್ನು ಒದಗಿಸಿದ್ದಲ್ಲದೆ ಸಮಕಾಲೀನರಾದ ವೋರ್ಸೆ ಮೊದಲಾದವರ ಜೊತೆಗೂಡಿ ಅದನ್ನು ಪ್ರಚುರ ಪಡಿಸಿದ. ಆದ್ದರಿಂದ ಇವನನ್ನೇ ಈ ಸಿದ್ಧಾಂತದ ಸ್ಥಾಪಕನೆನ್ನಲಾಗಿದೆ. ಥಾಮ್ಸನ್ ಮತ್ತು ಇವನ ಅನುಯಾಯಿಗಳ ತರ್ಕವೇ ನೆಂದರೆ ಕಂಚಿನ ಬಳಕೆ ತಿಳಿದಿದ್ದ ಪಕ್ಷದಲ್ಲಿ ಮಾನವ ಕಲ್ಲನ್ನು ಉಪಯೋಗಿಸುತ್ತಿರಲಿಲ್ಲ. ಅಂತೆಯೇ ಕಬ್ಬಿಣದ ಬಳಕೆ ತಿಳಿದಿದ್ದಲ್ಲಿ ಅವನು ಕಂಚನ್ನು ಬಳಸುತ್ತಿರಲಿಲ್ಲ; ಹಾಗಾಗಿ ಇದೇ ಅನುಕ್ರಮಣಿಕೆಯಲ್ಲಿ ಈ ತಂತ್ರಜ್ಞಾನಗಳು ಬೆಳೆದವು. ಈ ಆಧಾರದ ಮೇಲೆ ನ್ಯಾಷನಲ್ ಮ್ಯೂಸಿಯಂ ಎಂದು ಮುಂದೆ ಹೆಸರು ಪಡೆದ ಡೆನ್ಮಾರ್ಕಿನ ವಸ್ತುಸಂಗ್ರಹಾಲಯದಲ್ಲಿ ಒಟ್ಟಿಗೆ ರಾಶಿಹಾಕಿದ್ದ ವಿವಿಧ ಬಗೆಯ ಪ್ರಾಗೈತಿಹಾಸಿಕ ಉಪಕರಣಗಳನ್ನು ಸಂಗ್ರಹಾಲಯದ ಮೇಲ್ವಿಚಾರಕನಾಗಿದ್ದ ಇವನ್ನನು ವರ್ಗೀಕರಿಸಿದ. ಪ್ರಾಗೈತಿಹಾಸಿಕ ಉಪಕರಣಗಳಿಗೆ ಸಾಪೇಕ್ಷ ಕಾಲಮಾನದ ಚೌಕಟ್ಟನ್ನು ನಿರ್ಮಿಸಿದ ಮೊಟ್ಟಮೊದಲ ಪ್ರಯತ್ನವಿದು. ಇದೊಂದು ಅತ್ಯಂತ ಸರಳ ವರ್ಗೀಕರಣವೇನೋ ನಿಜ. ಏಕೆಂದರೆ ಇಂದು ತಿಳಿದಿರುವಂತೆ ಪ್ರಪಂಚದ ಎಲ್ಲೆಡೆ ತಂತ್ರಜ್ಞಾನ ಇದೇ ಕ್ರಮದಲ್ಲಿ ಬೆಳೆಯಲಿಲ್ಲ. ಉದಾಹರಣೆಗೆ, ಆಫ್ರಿಕದಲ್ಲಿ ಸಹಾರದ ದಕ್ಷಿಣ ಪ್ರಾಂತದಲ್ಲಿ ಶಿಲೋಪಕರಣ ತಂತ್ರಜ್ಞಾನದಿಂದ ನೇರವಾಗಿ ಕಬ್ಬಿಣ ತಂತ್ರಜ್ಞಾನಕ್ಕೆ ಜನ ಕಾಲಿಟ್ಟರು. ಯುರೋಪಿನಲ್ಲಿ ಕಬ್ಬಿಣ ಯುಗದಲ್ಲಿಯೂ ಕಲ್ಲಿನ ಉಪಕರಣಗಳ ಬಳಕೆ ಮುಂದುವರೆದಿತ್ತು. ಹಾಗಾಗಿ ಈಗಿನ ಸಂದರ್ಭದಲ್ಲಿ ತ್ರಿಯುಗ ಸಿದ್ಧಾಂತಕ್ಕೆ ಅದರದ್ದೇ ಆದ ಇತಿಮಿತಿಯಿದೆ. ಹಾಗಿದ್ದರೂ ಪ್ರಾಗೈತಿಹಾಸಿಕ-ಪುರಾತತ್ತ್ವಕ್ಕೆ ಒಂದು ಭದ್ರ ಅಡಿಪಾಯವನ್ನು ಇದು ನಿರ್ಮಿಸಿತೆಂಬುದನ್ನು ಅಲ್ಲಗಳೆಯುವಂತಿಲ್ಲ. (ವಿ.ಎಸ್.)

# ಥ

**ಥಾಪರ್, ಬಿ.ಕೆ.:** ನೋಡಿ-ಬಾಲಕೃಷ್ಣ ಥಾಪರ್

**ಥೈಲೆಂಡ್:** ಆಗ್ನೇಯ ಏಷ್ಯದ ಒಂದು ಸ್ವತಂತ್ರ ರಾಜ್ಯ. ಸಯಾಂ ಎಂಬುದು ಹಿಂದೆ ಇದಕ್ಕೆ ಇದ್ದ ಹೆಸರು. ಉತ್ತರ ಮತ್ತು ವಾಯವ್ಯದಲ್ಲಿ ಮಯನ್ಮಾರ್, ಈಶಾನ್ಯ ಮತ್ತು ಪೂರ್ವದಲ್ಲಿ ಲಾವೊಸ್ ಮತ್ತು ಕಾಂಬೋಡಿಯ, ಆಗ್ನೇಯ ಮತ್ತು ದಕ್ಷಿಣದಲ್ಲಿ ಮಲಯ ಮತ್ತು ಸಯಾಂ ಖಾರಿ, ಪಶ್ಚಿಮದಲ್ಲಿ ಅಂಡಮಾನ್ ಸಮುದ್ರ ಮತ್ತು ಮಯನ್ಮಾರ್‌ಗ ಳಿಂದ ಬಳಸಲ್ಪಟ್ಟಿದೆ. ಈ ದೇಶದ ವಿಸ್ತೀರ್ಣ 5,13,115 (2000). ಈ ದೇಶ ಪೂರ್ವ ಪಶ್ಚಿಮವಾಗಿ 772 ಕಿಮೀ, ಉತ್ತರ ದಕ್ಷಿಣವಾಗಿ 1770 ಕಿಮೀ ಇದ್ದು 2615 ಕಿಮೀ ಸಮುದ್ರ ತೀರ ಹೊಂದಿದೆ. ಕ್ರಾ ಭೂಕಂಠದಲ್ಲಿ ಅದರ ಅಗಲ ಕೇವಲ 48 ಕಿಮೀ. ರಾಜಧಾನಿ ಬ್ಯಾಂಕಾಕ್.

ಥೈಲೆಂಡಿನಲ್ಲಿ ವಿಭಿನ್ನ ಇತಿಹಾಸ, ಭಾಷೆ, ಧರ್ಮ, ರೂಪ ಜೀವನವಿಧಾನಗಳ 30ಕ್ಕೂ ಹೆಚ್ಚು ಸಮುದಾಯಗಳಿವೆ. ದೇಶದಲ್ಲೆಲ್ಲ ಭಾರತೀಯರು ಅಲ್ಲಲ್ಲಿ ಹರಡಿದ್ದಾರೆ. ಇವರ ಮುಖ್ಯ ಕಸಬು ವ್ಯಾಪಾರ. ಮಲೇಷ್ಯದ ಗಡಿಯ ಬಳಿ, ದಕ್ಷಿಣಪರ್ಯಾಯ ದ್ವೀಪದಲ್ಲಿ ಮಲಯನರಿದ್ದಾರೆ; ಆಗ್ನೇಯ ಕರಾವಳಿಯಲ್ಲಿಯೂ ಇವರು ಅಲ್ಪ ಸಂಖ್ಯೆಯಲ್ಲಿದ್ದಾರೆ. ಕಾಂಬೋಡಿಯನ್ ಗಡಿಯ ಉದ್ದಕ್ಕೂ ಕಾಂಬೋಡಿಯನ್ನರಿದ್ದಾರೆ. ಕುಯಿಗಳೂ ಕಾಲಿಯೂಂಗರೂ ಇರುವುದು ಈಶಾನ್ಯದಲ್ಲಿ. ಮಾನ್ ಜನರು ಪರ್ಯಾಯ ದ್ವೀಪ ಭಾಗದಲ್ಲಿ ಮಯನ್ಮಾರ್ ಗಡಿಯುದ್ದಕ್ಕೂ ಇದ್ದಾರೆ; ಇತರೆಡೆಗಳಲ್ಲಿ ಖೋರಾತ್‌ನಲ್ಲೂ ಆಗ್ನೇಯ ವಿಯೆಟ್ನಾಮೀ ಅಥವಾ ಅನಾಮೀ ಜನರು ದಕ್ಷಿಣ ಖೋರಾತ್‌ನಲ್ಲೂ ಆಗ್ನೇಯ ಕರಾವಳಿಯಲ್ಲೂ ಇದ್ದಾರೆ. ಕರೆನ್ ಜನರು ಮಯನ್ಮಾರ್ ಗಡಿಯ ಉದ್ದಕ್ಕೂ ಇದ್ದಾರೆ. ಇವರಲ್ಲದೆ ಅಖಾ, ಮುಸ್ಸೊ, ವಿಯೊ, ಕಾಮೂಕ್, ಟಿನ್, ಲಾವ, ಸೋ ಮುಂತಾದ ಇಪ್ಪತ್ತು ಅಲ್ಪಸಂಖ್ಯಾತ ಗುಂಪುಗಳನ್ನು ಕಾಣಬಹುದು. ಈ ಗುಂಪುಗಳದು ಆದಿಮ ಸ್ವರೂಪ. ಈ ಗುಂಪುಗಳ ಜನಸಂಖ್ಯೆ ಅಲ್ಪ. ಪರ್ವತ ಪ್ರದೇಶಗಳಲ್ಲೂ ಅರಣ್ಯಗಳಲ್ಲೂ ಇವರು ವಾಸಿಸುತ್ತಾರೆ. ಥೈಲೆಂಡಿನ ಪ್ರಮುಖ ಭಾಷೆ ಥೈ. ರಾಜ್ಯದಲ್ಲಿ ಹೀನಯಾನ ಬೌದ್ಧಧರ್ಮ ಪ್ರಧಾನ. ಜನಸಂಖ್ಯೆಯಲ್ಲಿ ಸೇ.90 ರಷ್ಟು ಮಂದಿ ಬೌದ್ಧರು. ಕೆಲವು ಕಡೆ ಸರ್ವಚೇತನ ಪಂಥ ಮತ್ತು ಭೂತಗಳಲ್ಲಿ ನಂಬಿಕೆ ಈಗಲೂ ಇದೆ. ದಕ್ಷಿಣದಲ್ಲಿ ಮಲಯ ಮುಸಲ್ಮಾನರ ಸಂಖ್ಯೆ ಹೆಚ್ಚು. ಕ್ರೈಸ್ತರು ಅಲ್ಪಸಂಖ್ಯಾತರು. ಇವರ ವಾಸ ಹೆಚ್ಚಾಗಿ ಬ್ಯಾಂಕಾಕ್ ಮತ್ತು ರಾಜ್ಯದ ಉತ್ತರ ಭಾಗ. ಇವರಲ್ಲಿ ರೋಮನ್ ಕೆಥೊಲಿಕ್ ಕ್ರೈಸ್ತರೇ ಹೆಚ್ಚು. ಥೈಲೆಂಡಿನಲ್ಲಿರುವ ಚೀನೀಯರು ಕನ್‌ಫ್ಯೂಷಿಯಸ್ ಧರ್ಮವನ್ನನುಸರಿಸುತ್ತಾರೆ. ಸು. 4,000ಕ್ಕೂ ಹೆಚ್ಚು ಹಿಂದು ಕುಟುಂಬಗಳು ಥೈಲೆಂಡಿನಲ್ಲಿದ್ದವು (1974). ಅರಮನೆಯ ಧಾರ್ಮಿಕ ವಿಧಿಗಳಲ್ಲಿ ಭಾರತೀಯ ಪುರೋಹಿತರ ಪಾತ್ರ ಪ್ರಧಾನ; ಇಲ್ಲಿ ಹಿಂದು ಧಾರ್ಮಿಕ ವಿಧಿಗಳು ಬೌದ್ಧ ಜೋತಿಷ್ಯದಲ್ಲಿ ಹಾಸುಹೊಕ್ಕಾಗಿವೆ. 1974ರ ಸಂವಿಧಾನದ ಪ್ರಕಾರ ಥೈಲೆಂಡಿನದು ಸಂವಿಧಾನಾತ್ಮಕ ರಾಜಪ್ರಭುತ್ವ. ದೊರೆ ರಾಷ್ಟ್ರದ ಹಾಗೂ ಪ್ರಧಾನ ದಂಡನಾಯಕ. ರಾಜನ ಅಧಿಕಾರಗಳು ಸಂವಿಧಾನದಿಂದ ನಿಯಂತ್ರಿತ. (ವಿ.ಜಿ.ಕೆ.)

**ಪ್ರಾಗಿತಿಹಾಸ:** ಥೈಲೆಂಡಿನ ಪಶ್ಚಿಮ ಭಾಗದಲ್ಲಿ ಮಧ್ಯ ಪ್ಲಿಸ್ಟೊಸೀನ್ ಯುಗದಲ್ಲಿ ನೆರೆಯ ಪ್ರದೇಶವಾದ ಮಯನ್ಮಾರ್‌ನಲ್ಲಿ ಪ್ರಸಾರದಲ್ಲಿದ್ದ ಹಳೆಶಿಲಾಯುಗದ ಅನ್ಯಾಥಿಯನ್ ಸಂಸ್ಕೃತಿಗೆ ಸೇರಿದ ಕಲ್ಲುಮಚ್ಚು, ಮಚ್ಚು ಕೊಡಲಿ ಮತ್ತು ಚಕ್ಕೆಕಲ್ಲಿನ ಉಪಕರಣಗಳು ಬಳಕೆಯಲ್ಲಿದ್ದುವು. ಹಲವಾರು ನೆಲೆಗಳಲ್ಲಿ ಈ ರೀತಿಯ ಉಪಕರಣಗಳು ದೊರಕಿರುವುದರಿಂದ ಆ ಪ್ರದೇಶದಲ್ಲಿ ಆದಿಮಾನವ ವಾಸಿಸುತ್ತಿದ್ದ ಸಂಗತಿ ಖಚಿತಗೊಳ್ಳುತ್ತದೆ. ಥೈಲೆಂಡಿನ ಈ ಹಳೆ ಶಿಲಾಯುಗ ಸಂಸ್ಕೃತಿಯನ್ನು ಫಿಂಗೋನಿಯನ್ ಸಂಸ್ಕೃತಿ ಎಂದು ಕರೆಯಲಾಗಿದೆ. ಬಹುಶಃ ಈಚಿನವರೆಗೂ ಈ ಸಂಸ್ಕೃತಿ ಉಳಿದುಬಂದಂತೆ ತಿಳಿದುಬರುತ್ತದೆ.

ಪ್ರ.ಶ.ಪೂ.3-2 ನೆಯ ಸಹಸ್ರಮಾನದ ಹೊಬಿನಿಯನ್ ಮತ್ತು ಬ್ಯಾಕ್ಸೋನಿಯನ್ ಸಂಸ್ಕೃತಿಗಳು ಈ ಪ್ರದೇಶದಲ್ಲಿ ಕಂಡುಬಂದಿದೆ. ಇವು ಬಹುಮಟ್ಟಿಗೆ ಸಮಕಾಲೀನವಾದವು. ಇವುಗಳಲ್ಲಿ ಹಳೆಶಿಲಾಯುಗ ಪದ್ಧತಿಯ ವಿಧಾನಗಳಲ್ಲಿ ತಯಾರಿಸಲಾದ ಚಕ್ಕೆಕಲ್ಲಿನ ಉಪಕರಣಗಳೂ ಕೈಗೊಡಲಿಗಳೂ ಉಪಯೋಗದಲ್ಲಿದ್ದುವು. ಜನರು ಪ್ರಾಣಿಗಳ ಬೇಟೆ, ಸಸ್ಯಮೂಲ ಆಹಾರ ಸಂಗ್ರಹಣೆ ಮುಂತಾದ ಕಸುಬುಗಳಲ್ಲಿ ಈ ಉಪಕರಣಗಳನ್ನು ಬಳಸುತ್ತಿದ್ದರು. ಬಹುಶಃ ಈ ಕಾಲದಲ್ಲೇ ಬತ್ತದ ಬೇಸಾಯ ಆ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದಿರಬೇಕು. ಮೀನು, ಆಮೆ ಮುಂತಾದ ಜಲಚರಗಳನ್ನು ಆಹಾರಕ್ಕಾಗಿ ಬಳಸುತ್ತಿದ್ದರು. ದೈಹಿಕವಾಗಿ ಈ ಜನರು ಈಗಿನ ಮಲನೇಷ್ಯ ಮತ್ತು ಪಪ್ಪುವದ ಜನರನ್ನು ಹೋಲುತ್ತಿದ್ದುದಾಗಿ ಅವರ ಅಸ್ಥಿಗಳ ಅವಶೇಷಗಳಿಂದ ತಿಳಿದುಬಂದಿದೆ.

ನವಶಿಲಾಯುಗ ಮತ್ತು ಕಂಚಿನ ಯುಗಗಳಿಗೆ ಸೇರಬಹುದಾದ ಡಾಂಗ್ ಸೋನ್ ಸಂಸ್ಕೃತಿಯ ಅವಶೇಷಗಳು ಪಶ್ಚಿಮ ಥೈಲೆಂಡಿನಲ್ಲಿ ದೊರಕಿವೆ. ದಕ್ಷಿಣ ಚೀನದ ಸಂಸ್ಕೃತಿಯ ಪ್ರಭಾವದಿಂದ ಹುಟ್ಟಿದ ಈ ಸಂಸ್ಕೃತಿಯ ಕಾಲದಲ್ಲಿ ಕಂಚಿನಲ್ಲಿ ಮಾಡಿದ ಆಯುಧೋಪಕರಣಗಳು ಕ್ರಮೇಣ ಬಳಕೆಗೆ ಬಂದವು. ಅಂಥ ಉಪಕರಣಗಳ ಬಳಕೆ ಪ್ರಚಲಿತ ಶಕೆಯ ಆರಂಭಕಾಲದವರೆಗೆ ಮುಂದುವರೆಯಿತು. ಈ ಉಪಕರಣಗಳಲ್ಲಿ ಕಂಚಿನಲ್ಲಿ ಮಾಡಿದ ಚಾಕುಗಳು, ಹಿಡಿಕೆ ರಂಧ್ರವಿದ್ದ ಕೊಡಲಿಗಳು, ಸಲಿಕೆಗುದ್ದಲಿಗಳು ಮತ್ತು ಭರ್ಜಿಮೊನೆಗಳು ಮುಖ್ಯವಾದವು. ಭವಿಷ್ಯ ಹೇಳಲೂ ಭೂತಗಳನ್ನು ಆಹ್ವಾನಿಸುವುದು, ಮಳೆ ಬರುವಂತೆ ಮಾಡುವುದು, ಶತ್ರುಗಳಿಗೆ ಮಾಟ ಮಾಡುವುದು ಮುಂತಾದ ಮಾಂತ್ರಿಕ ವಿದ್ಯೆಗಳಲ್ಲೂ ಮಯನ್ಮಾರ್‌ನ ಕರೆನ್ ಬುಡಕಟ್ಟಿನ ಜನರು ಇತ್ತೀಚಿನವರೆಗೂ ಬಳಸುತ್ತಿದ್ದ ಕಂಚಿನ ಬುರುಡೆ ಮದ್ದಲೆಗಳು (ಕೆಟಲ್–ಡ್ರಮ್) ಈ ಸಂಸ್ಕೃತಿಯ ಮತ್ತೊಂದು ವೈಶಿಷ್ಟ್ಯ. ಆ ಬುರುಡೆಮದ್ದಲೆಗಳ ಮೇಲೆ ಕೆತ್ತಿರುವ ಚೀನಿ ಚೌ ವಂಶದ ಕಾಲದ ಪೋಷಾಕುಗಳನ್ನು ತೊಟ್ಟ ಕುದುರೆಸವಾರರ



ವಟ್‌ಪ್ರಪಥೋಮ್ ಚೈತ್ಯ, ಬ್ಯಾಂಕಾಕ್

ದೃಶ್ಯಗಳಿಂದ ಈ ಸಂಸ್ಕೃತಿಯ ಮೂಲವನ್ನು ಸುಲಭವಾಗಿ ನಿರ್ಧರಿಸಬಹುದು. ಪ್ರಚಲಿತ ಶಕೆಕಾಲದ ಮೊದಲ ಕೆಲವು ಶತಮಾನಗಳಲ್ಲಿ ಭಾರತೀಯ ವರ್ತಕರು ಕಬ್ಬಿಣದ ಉಪಕರಣಗಳ ಉಪಯೋಗ ಮತ್ತು ನಾಗರಿಕತೆಯ ಪ್ರಭಾವಗಳನ್ನು ಇಲ್ಲಿಯ ಜನರಿಗೆ ಪರಿಚಯ ಮಾಡಿಕೊಡುವವರೆಗೂ ಇದೇ ಸಂಸ್ಕೃತಿ ಮುಂದುವರಿಯಿತು. (ಬಿ.ಕೆ.ಜಿ.)

**ಇತಿಹಾಸ:** ರಾಜ್ಯಕ್ಕೆ ಹಿಂದೆ ಸಯಾಂ ಎಂಬ ಹೆಸರಿದ್ದು 1939ರಲ್ಲಿ ಥೈಲೆಂಡ್ ಅಥವಾ ಥೈಮು–ಅಂಗ್ ಥೈ ಎಂಬ ಹೆಸರಾಯಿತು. ಥೈಲೆಂಡ್ ಎಂದರೆ ಸ್ವತಂತ್ರ ಜನರ ನಾಡು. ಹಿಂದೆ ಇದ್ದ ನಿರಂಕುಶ ಪ್ರಭುತ್ವ ಹೋಗಿ ಅನಂತರ ಸಾಂವಿಧಾನಾತ್ಮಕ ಅರಸರ ಆಳ್ವಿಕೆ ಸ್ಥಾಪಿತವಾಗಿದೆ.

ಥೈ ಜನರ ಇತಿಹಾಸ ಸು.10ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ. ಈ ಜನ ಚೀನೀ ಮಹಾ ಬಯಲಿನಿಂದ ಪಶ್ಚಿಮ ಹಾಗೂ ದಕ್ಷಿಣದ ಕಡೆ ಹೊರಟು, ಪಶ್ಚಿಮದ ಅಸ್ಸಾಮ್‌ನಿಂದ ಹಿಡಿದು ಪೂರ್ವಭಾಗದಲ್ಲಿ ಉತ್ತರ ವಿಯಟ್ನಾಂ ವರೆಗೆ ವ್ಯಾಪಕವಾಗಿ ನೆಲೆಸಿದರು. ಹೀಗೆ ನೆಲೆನಿಂತ ಹೊಸ ಜನ ಸಣ್ಣಪುಟ್ಟ ರಾಜ್ಯಗಳನ್ನು ಕಟ್ಟಿಕೊಳ್ಳುವಷ್ಟು ಸಾಮಾಜಿಕ ಹಾಗೂ ರಾಜಕೀಯ ಅಂತಸ್ತನ್ನು ಮುಟ್ಟಿದ್ದರು. ಈಗಿನ ಉತ್ತರ ಮಯನ್ಮಾರ್, ಚೀನದ ಯೂನಾನ್ ಪ್ರಾಂತ್ಯ, ಭಾರತದ ಅಸ್ಸಾಂ ಹಾಗೂ ಥೈಲೆಂಡ್ ಪ್ರದೇಶಗಳಲ್ಲಿ ಈ ಜನ 13ನೆಯ ಶತಮಾನದಲ್ಲೇ ಥೈ ರಾಜ್ಯಗಳನ್ನು ಸ್ಥಾಪಿಸಿಕೊಂಡರು. ಕುಬ್ಲೈಖಾನನ (1216–94) ಸೈನ್ಯ ಇವರ ಮೇಲೆ ದಂಡೆತ್ತಿ ಬಂದಾಗ, ಇವರು ಮತ್ತಷ್ಟು ದಕ್ಷಿಣಕ್ಕೆ ಇಂಡೊ–ಚೀನ ಪರ್ಯಾಯ ದ್ವೀಪದತ್ತ ಸರಿದರು. ಈ ಸಮಯದಲ್ಲಿ ಇಂಡೊ–ಚೀನ ಪರ್ಯಾಯ ದ್ವೀಪದ ಮಧ್ಯಭಾಗದಲ್ಲಿ ಪ್ರಧಾನವಾಗಿದ್ದ ಎರಡು ಬುಡಕಟ್ಟುಗಳು ಮಾನ್ ಮತ್ತು ಖ್ಮರ್. ಈ ಬುಡಕಟ್ಟುಗಳ ಸಂಸ್ಕೃತಿ, ಧರ್ಮ, ರಾಜ್ಯ ಪದ್ಧತಿ, ಕಲೆ ಹಾಗೂ ಸಾಹಿತ್ಯ – ಇವುಗಳಲ್ಲಿ ಭಾರತೀಯ ಛಾಯೆ ಇತ್ತು. ಮಾನ್ ಜನರ ನೆಲೆ ದಕ್ಷಿಣ ಮಯನ್ಮಾರ್ ಮತ್ತು ಮಧ್ಯ ಥೈಲೆಂಡ್; ಖ್ಮರ್ ಬುಡಕಟ್ಟುಗಳ ವಾಸ ಮೇಕಾಂಗ್ ಕಣಿವೆಯಲ್ಲಿ. 13ನೆಯ ಶತಮಾನದ ಹೊತ್ತಿಗೆ ಮಾನ್ ಜನರನ್ನು ಖ್ಮರ್ ಬಣದ ಜನ ಕುಗ್ಗಿಸಿದ ಕಾರಣ ಹರಿಪುಂಜಯ ಎಂಬ ಸಣ್ಣ ರಾಜ್ಯ ಮಾತ್ರ ಮಾನ್ ಜನರಿಗೆ ಸೇರಿತ್ತು. ಈ ಭಾಗ ಈಗಿನ ಉತ್ತರ ಥೈಲೆಂಡ್. ಖ್ಮರ್ ಬಣದವರು ತಮ್ಮ ಅರಸ 7ನೆಯ ಜಯವರ್ಮನ ಕಾಲದಲ್ಲಿ (1181–1219) ರಾಜ್ಯವನ್ನು ವಿಸ್ತರಿಸಿಕೊಂಡಿದ್ದರೂ ಬೇಗ ಕ್ಷೀಣಾವಸ್ಥೆಗೆ ಬಂದರು. ವಲಸೆ ಬಂದ ಥೈ ಜನರು ರಾಜ್ಯ ಕಟ್ಟಿಕೊಂಡು ಪ್ರಾಬಲ್ಯಕ್ಕೆ ಬರಲು ಈ ಕಾಲ ಅನುಕೂಲವಾಗಿತ್ತು. ಈಗಿನ ಥೈಲೆಂಡ್ ಮಧ್ಯಭಾಗದ ಬಯಲುನಾಡಿನಲ್ಲಿ ಸುಖೋಥೈ ರಾಜ್ಯ 1220ರಲ್ಲೂ ಉತ್ತರದಲ್ಲಿ ಚಿಯಾಂಗ್ ಮಯ್ ರಾಜ್ಯ 1296ರಲ್ಲೂ ಸ್ಥಾಪಿತವಾದವು. ಥೈ ಜನ ಸುಖೋಥೈ ರಾಜ್ಯವೇ ಇತಿಹಾಸ ಯುಗದ ತಮ್ಮ ಪ್ರಪ್ರಥಮ ರಾಜ್ಯವೆಂದು ಪರಿಗಣಿಸಿದ್ದಾರೆ. ಈ ರಾಜ್ಯದ 3ನೆಯ ಅರಸ ರಾಮಕಮ್‌ಹೆಂಗ್ (1279–1317) ಹೊರಡಿಸಿದ ಶಾಸನವೊಂದು ಪ್ರಾರಂಭಕಾಲದ ಥೈ ಭಾಷೆಗೆ ನಿದರ್ಶನ. ಇವನ ಮಗ ಲೊ ಥೈ (1317–47) ಅಸಮರ್ಥ. 1378ರ ಹೊತ್ತಿಗೆ ಈ ರಾಜ್ಯ ದಕ್ಷಿಣದಲ್ಲಿ ಪ್ರಬಲವಾಗುತ್ತಿದ್ದ ಅಯುಥಿಯ ರಾಜ್ಯದ ದೆಸೆಯಿಂದ ಕ್ಷೀಣಿಸಿತು.

ಅಯುಥಿಯ ರಾಜಸಂತತಿ (1350–1767): ಈ ರಾಜಸಂತತಿಯ ಮೊದಲನೆಯ ಅರಸ 1ನೆಯ ರಾಮತಿಬೋಧಿ. ಈತ ಲಾವೊಸ್ ಮತ್ತು ಯುತೊಂಗ್ ರಾಜ್ಯಗಳನ್ನು ಒಟ್ಟುಗೂಡಿಸಿ ಆಳಿದ. ಈ ರಾಜ್ಯ ಚಾವ್ ಫ್ರೈಯ ನದಿಯ ಫಲವತ್ತಾದ ಪ್ರದೇಶದಲ್ಲಿ ಸ್ಥಾಪಿತವಾಗಿದ್ದು ಖ್ಮರ್, ಮಾನ್ ಮತ್ತು ಮಯನ್ಮಾರ್ ಜನರ ಸಂಸ್ಕೃತಿ ಭಾಷೆಗಳ ಪ್ರಭಾವಕ್ಕೆ ಒಳಗಾಗಿತ್ತು. ಸ್ಥಾಪನೆಯ ಕಾಲದಿಂದಲೂ ಇದು ತನ್ನ ನೆರೆಯ ಸುಖೋಥೈ ಹಾಗೂ ಖ್ಮರ್ (ಕಾಂಬೋಡಿಯ) ರಾಜ್ಯಗಳೊಡನೆ ಪರಮಾಧಿಕಾರಕ್ಕಾಗಿ ಸ್ಪರ್ಧಿಸಿದಂತೆ ತೋರುತ್ತದೆ. ಇದು ಸುಖೋಥೈ ರಾಜ್ಯವನ್ನು ಆಕ್ರಮಿಸಿದ್ದ ಕಾಂಬೋಡಿಯ ರಾಜ್ಯವನ್ನು 15ನೆಯ ಶತಮಾನದಲ್ಲಿ ಮುರಿಯಿತು. ಸುಖೋಥೈ ತನ್ನ ವಶವಾದ ಮೇಲೆ ಉತ್ತರದ ಥೈ ರಾಜ್ಯಗಳಾದ ಚಿಯಾಂಗ್ ಮಯ್ ಮತ್ತು ಲಾವೋಸ್‌ಗಳ ಧಾಳಿಗಳನ್ನು ಎದುರಿಸಬೇಕಾಯಿತು. ಚಿಯಾಂಗ್ ಮಯ್ ರಾಜ್ಯ ತನ್ನ ಮೇಲೆ ಬೀಳದಂತೆ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಅಯುಥಿಯ ಅರಸ ತ್ರೈಲೋಕ 1467ರಲ್ಲಿ ತನ್ನ ರಾಜಧಾನಿಯನ್ನು ಉತ್ತರದ ಪಿತ್ಸನುಲೋಕ್ ನಗರಕ್ಕೆ ವರ್ಗಾಯಿಸಿದ. ಅಯುಥಿಯ ರಾಜ್ಯ 18ನೆಯ ಶತಮಾನದಲ್ಲಿ ಚಿಯಾಂಗ್ ಮಯ್ ರಾಜ್ಯವನ್ನು ವಶಪಡಿಸಿಕೊಂಡಿತು.

ಅಯುಥಿಯ ಮತ್ತು ಮಯನ್ಮಾರ್ ರಾಜ್ಯಗಳ ವೈರ: ಥೈಲೆಂಡಿನ ಪ್ರಬಲ ವೈರಿ ಆಗಿನ ಬರ್ಮ ಆಗಿತ್ತು. ಥೈಲೆಂಡ್ ಕಡೆಗೆ ಮಯನ್ಮಾರ್ ರಾಜ್ಯ ವಿಸ್ತರಿಸಿಕೊಂಡು 1569ರಲ್ಲಿ ಥೈಲೆಂಡ್ ಪಡೆಯನ್ನು ಸೋಲಿಸಿತು. ಈ ಯುದ್ಧದಲ್ಲಿ ಅಯೂದಿಯ ಅರಸ ಮಹಾಚಕ್ರಫತ್ ವಿಪತ್ತಿಗೊಳಗಾದಾಗ ರಾಣಿ ಸೂರ್ಯೋ ಥೈ ಇವನ ನೆರವಿಗೆ ನಿಂತು ಶತ್ರುಗಳಿಂದ ನಿಧನಳಾದಳು. 1584–88ರ ವರೆಗೆ ಥೈಲೆಂಡ್ ಮಯನ್ಮಾರ್‌ನ ಅಧೀನದಲ್ಲಿತ್ತು. ಅರಸು ಮನೆತನದ ನರೇಸುವನ್ ಎಂಬಾತ ಆಗಿನ ಬರ್ಮೀಯರ ವಿರುದ್ಧ ಕ್ರಾಂತಿಯನ್ನೆಬ್ಬಿಸಿ ದೇಶಕ್ಕೆ ಸ್ವಾತಂತ್ರವನ್ನು ತಂದ. ಥೈ ಜನ ಅವನನ್ನು ರಾಷ್ಟ್ರವೀರನೆಂದು ಪರಿಗಣಿಸಿದ್ದಾರೆ. ಮಯನ್ಮಾರ್ ಪುನಃ ಥೈ ರಾಜಧಾನಿಯ ಮೇಲೆ ಧಾಳಿ ನಡೆಸಿ ಅದನ್ನು ಸಂಪೂರ್ಣವಾಗಿ ನಾಶಮಾಡಿತು (1767)–ಹೀಗೆ ಥೈ ಇತಿಹಾಸದಲ್ಲಿ ಅಯೂದಿಯ ರಾಜಸಂತತಿ ಕೊನೆಗೊಂಡಿತು.

**ಯುರೋಪಿಯನ್ನರ ಆಗಮನ:** 16ನೆಯ ಶತಮಾನದ ಪ್ರಾರಂಭದಲ್ಲಿ ಪೋರ್ಚುಗೀಸ್ ರಾಯಭಾರಿಗಳು, ವ್ಯಾಪಾರಿಗಳು ಹಾಗೂ ಮತಪ್ರಚಾರಕರು ಥೈಲೆಂಡಿಗೆ ಬಂದರು. ಅಯೂದಿಯ ಅರಸರ ಕಾಲದಲ್ಲಿ ಮಲಕ್ಕ ಇವರ ವಶವಾಯಿತು (1511). 17ನೆಯ ಶತಮಾನದಲ್ಲಿ ಬಂದ ಡಚ್ಚರು ಹಾಗೂ ಇಂಗ್ಲಿಷರು ರಾಜಧಾನಿಯಲ್ಲಿ ವ್ಯಾಪಾರದ ಕೋಠಿಗಳನ್ನು ಸ್ಥಾಪಿಸಿದರು. ಡಚ್ಚರು ಬಲ ಪ್ರಯೋಗಿಸಿ ವ್ಯಾಪಾರದ ಹಕ್ಕುಗಳನ್ನು ಪಡೆದುಕೊಂಡ ಕಾರಣ ಅವರನ್ನು ದೇಶದಿಂದ ಓಡಿಸಲು ಥೈ ಅರಸ 1660ರಲ್ಲಿ ಬಂದ ಫ್ರೆಂಚರನ್ನು ಸ್ವಾಗತಿಸಿದ. ಥೈಲೆಂಡ್ ಮತ್ತು ಫ್ರಾನ್ಸ್ ದೇಶಗಳ ನಡುವೆ ರಾಯಭಾರ ಸಂಧಾನಗಳು ನಡೆದವು (1684). ಆದರೆ ಫ್ರೆಂಚರ ರಾಜಕೀಯ ಉದ್ದೇಶಗಳು ಹಾಗೂ ಅವರ ಕುತಂತ್ರ ಬಹಿರಂಗವಾಗಿ, ಬ್ಯಾಂಕಾಕ್‌ನಲ್ಲಿ ಅವರ ರಾಜಪ್ರತಿನಿಧಿಯನ್ನು ಸೆರೆಹಿಡಿದು ಗಲ್ಲಿಗೇರಿಸಿದರು. ಆ ತರುವಾಯ ಥೈ ಅರಸ ನರೈ (1657–88) ವಿದೇಶೀಯರ ಬಗ್ಗೆ ಎಚ್ಚರದ ನೀತಿಯನ್ನು ವಹಿಸಿದ. ಈ ನೀತಿ 150 ವರ್ಷ ಮುಂದುವರಿಯಿತು.

ತನ್ ಬರೀ ಮತ್ತು ಪ್ರಾರಂಭಿಕ ಬಾನ್‌ಕೋಟ್ ಅರಸರ ಕಾಲ (1767–1868): ಅಯುಥಿಯ ರಾಜಸಂತತಿ ಅವನತಿ ಹೊಂದಿದ ಮೇಲೆ ಫ್ರಾಯಾ ತಾಕ್ಸಿನ್ ಎಂಬ ಸೇನಾನಿ ಬರ್ಮೀಯರನ್ನು ರಾಜ್ಯದಿಂದ ಓಡಿಸಿ, ನಾಶಗೊಂಡಿದ್ದ ರಾಜಧಾನಿಯ ದಕ್ಷಿಣಕ್ಕೆ ಸು. 40 ಮೈಲಿ ದೂರದಲ್ಲಿ, ಚಾವ್‌ಫ್ರೈಯ ನದಿಯ ದಂಡೆಯ ಮೇಲೆ, ತನ್ ಬರೀ ಬಳಿ ಹೊಸ ರಾಜಧಾನಿಯನ್ನು ನಿರ್ಮಿಸಿ ಆಳತೊಡಗಿದ. ಕೊನೆಕೊನೆಗೆ ಇವನು ಉನ್ಮಾದ ಪೀಡಿತನಾಗಿ, ತಾನು ಬುದ್ಧನ ಅವತಾರವೆಂದು ಹೇಳತೊಡಗಲು, 1781ರಲ್ಲಿ ನಡೆದ ಅರಮನೆಯ ಸಂಚಿನಿಂದ ಇವನು ಪದಚ್ಯುತನಾಗಿ 1782ರಲ್ಲಿ ನಿಧನನಾದ. ಇವನ ಅನಂತರ ಚಕ್ರೈ ಎಂಬ ಹೊಸ ರಾಜಸಂತತಿ ಥೈಲೆಂಡನ್ನು ಆಳತೊಡಗಿತು. ಈ ಸಂತತಿಯ ಮೊದಲ ಅರಸ ರಾಜಧಾನಿಯನ್ನು ಚಾವ್ ಫ್ರೈಯ ದಂಡೆಯಾಚೆ ಬ್ಯಾಂಕಾಕ್ ನಗರಕ್ಕೆ ವರ್ಗಾಯಿಸಿದ.

ತಾಕ್ಸಿನ್ ಮತ್ತು ಇವನ ತರುವಾಯ ಚಕ್ರೈ ಅರಸರು ರಾಜ್ಯವನ್ನು ಸಂಘಟಿಸಿದರು. ಇವರ ಕಾಲದಲ್ಲಿ ಕಾನೂನುಗಳು, ಧರ್ಮಗ್ರಂಥಗಳು, ಸಾಹಿತ್ಯ ಕೃತಿಗಳು ರಚಿತವಾದವು. ಮೊದಲನೆಯ ಚಕ್ರೈ ಅರಸ 1ನೆಯ ರಾಮನಿಗೆ (1782–1809) ಕಾಂಬೋಡಿಯ ರಾಜ ಸಾಮಂತನಾದ. ಸಾಹಿತ್ಯಾಭಿಮಾನಿ ಇಮ್ಮಡಿ ರಾಮನ ಕಾಲದಲ್ಲಿ (1809–24) ಥೈ ಭಾಷೆಯಲ್ಲಿ ರಾಮಾಯಣ ರಚಿತವಾಯಿತು. 3ನೆಯ ರಾಮನ ಕಾಲದಲ್ಲಿ (1824–51) ಬ್ರಿಟಿಷರು ಆಗಿನ ಬರ್ಮ ಯುದ್ಧದಲ್ಲಿ (1824) ಮಯನ್ಮಾರ್ ರಾಜ್ಯವನ್ನು ಸೋಲಿಸಿದ ಕಾರಣ ಮಯನ್ಮಾರ್ ಭಯವೂ ಥೈಲೆಂಡಿಗೆ ತಪ್ಪಿತು. 4ನೆಯ ರಾಮನ ಆಳಿಕೆಯಲ್ಲಿ (1851–

68) ಬ್ರಿಟಿಷರೊಡನೆ 1855ರಲ್ಲಿ ಅಮೆರಿಕನ್ ಮತ್ತು ಫ್ರೆಂಚರೊಡನೆ 1856ರಲ್ಲಿ ಥೈಲೆಂಡ್ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿತು. 1855ರ ಒಪ್ಪಂದದ ಪ್ರಕಾರ ಬ್ರಿಟಿಷರಿಗೆ ಬ್ಯಾಂಗ್‌ಕಾಕ್ ನಗರದಲ್ಲಿ ಬ್ರಿಟಿಷ್ ರಾಜಪ್ರತಿನಿಧಿಯನ್ನು ಇರಿಸಲು, ಭೂಮಿಯನ್ನು ಸಂಪಾದಿಸಿಕೊಳ್ಳಲು ಹಾಗೂ ವ್ಯಾಪಾರ ನಡೆಸಲು ಅವಕಾಶ ಒದಗಿತು. ಭೂಮಿಯನ್ನು ಆಕ್ರಮಿಸಿಕೊಂಡ ಬ್ರಿಟಿಷರು ಹಾಗೂ ಫ್ರೆಂಚರ ವಿರುದ್ಧ ಥೈಲೆಂಡ್ ಕೊನೆಗೆ ಯುದ್ಧ ಮಾಡಬೇಕಾಯಿತು. 1863ರಲ್ಲಿ ಥೈಲೆಂಡ್ ಫ್ರೆಂಚರಿಗೆ ಕಾಂಬೋಡಿಯ ಮೇಲಣ ತನ್ನ ಪ್ರಭುತ್ವವನ್ನು ಬಿಟ್ಟುಕೊಟ್ಟುದಲ್ಲದೇ, ಮೇಕಾಂಗ್ ನದಿಯ ಪೂರ್ವಭಾಗದ ರೇವುಗಳನ್ನೂ ಪ್ರದೇಶಗಳನ್ನೂ

ಬುದ್ಧ ಶಿಲ್ಪ

ಬಿಟ್ಟು ಕೊಟ್ಟಿತು. 1908ರಲ್ಲಿ ಬ್ರಿಟಿಷ್ ಮಲಯದ ಉತ್ತರದಲ್ಲಿದ್ದ ತನ್ನ 4 ದಕ್ಷಿಣ ರಾಜ್ಯಗಳನ್ನು ಬ್ರಿಟಿಷರಿಗೆ ವಹಿಸಿಕೊಟ್ಟಿತು. ಈ ಒಪ್ಪಂದಗಳಿಂದ ರಾಜ್ಯಕ್ಕೆ ಭಾರಿ ನಷ್ಟವಾದರೂ ಯುರೋಪಿನೊಡನೆ ವಾಣಿಜ್ಯ ಸಂಪರ್ಕ ದೊರಕಿತು. ಒಂದನೆಯ ಮಹಾ ಯುದ್ಧದಲ್ಲಿ ಥೈಲೆಂಡ್ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿತು(1917). ಅನಂತರ ಇದು ರಾಷ್ಟ್ರಗಳ ಕೂಟದ ಸದಸ್ಯ ರಾಷ್ಟ್ರವಾಯಿತು.

**ಎರಡನೆಯ ಮಹಾಯುದ್ಧ:** ಎರಡನೆಯ ಮಹಾಯುದ್ಧ ಪ್ರಾರಂಭವಾದ ಮರುವರ್ಷವೇ (1940) ಥೈಲೆಂಡ್ ಇಂಡೋಚೀನದ ಮೇಲೆ ಧಾಳಿ ನಡೆಸಿತು; 6 ಮಾರ್ಚ್ 1941ರ ಕೌಲಿನ ಪ್ರಕಾರ ಫ್ರಾನ್ಸಿನ ವಿಚಿ ಸರ್ಕಾರ ಥೈಲೆಂಡಿಗೆ ಲಾವೊಸ್ ಮತ್ತು ಕಾಂಬೋಡಿಯದ ಕೆಲವು ಭಾಗಗಳನ್ನು ಕೊಡಬೇಕಾಯಿತು. ಥೈಲೆಂಡ್ 1940 ಜುಲೈ 2ರಂದು ಬ್ರಿಟಿಷರೊಡನೆ ಬ್ಯಾಂಕಾಕ್‌ನಲ್ಲಿ ನಿಶ್ಶಸ್ತ್ರ ಒಪ್ಪಂದ ಮಾಡಿಕೊಂಡಿತ್ತು. ಆದರೆ ಡಿಸೆಂಬರ್ 1941ರಲ್ಲಿ ಜಪಾನ್ ಥೈಲೆಂಡನ್ನು ಆಕ್ರಮಿಸಿಕೊಂಡ ಕಾರಣ, ಜಪಾನಿನ ನಿಯಂತ್ರಣಕ್ಕೊಳಪಟ್ಟು 1942 ಜನವರಿ 25ರಂದು ಬ್ರಿಟನ್ ಮತ್ತು ಅಮೆರಿಕಗಳ ವಿರುದ್ಧ ಯುದ್ಧ ಘೋಷಿಸಿತು. ಮಯನ್ಮಾರ್ ಮತ್ತು ಭಾರತದ ಮೇಲೆ ಧಾಳಿ ನಡೆಸಲು ಥೈಲೆಂಡ್ ಜಪಾನಿಗೆ ಅನುಕೂಲವಾದ ಕೇಂದ್ರವಾಗಿತ್ತು. ಥೈಲೆಂಡಿನ ಸಹಾಯದೊಂದಿಗೆ ಜಪಾನು ಮಯನ್ಮಾರನ್ನು ಆಕ್ರಮಿಸಿಕೊಂಡಾಗ ಬ್ರಿಟಿಷರಿಗೆ ಸೇರಿದ್ದ ಮಯನ್ಮಾರಿನ 2 ಷಾನ್ ರಾಜ್ಯಗಳನ್ನೂ 4 ಮಲಯ ರಾಜ್ಯಗಳನ್ನೂ ಜಪಾನು ಥೈಲೆಂಡಿಗೆ ಕೊಟ್ಟಿತು (1943 ಜುಲೈ 5).

**ಯುದ್ಧಾನಂತರದ ಕಾಲ:** ಎರಡನೆಯ ಮಹಾಯುದ್ಧ ಮುಗಿದ ಮೇಲೆ 1946 ಜನವರಿ 1ರಂದು ಬ್ರಿಟನ್ ಮತ್ತು ಭಾರತ ಒಂದು ಪಕ್ಷವಾಗಿಯೂ ಥೈಲೆಂಡ್ ಮತ್ತೊಂದು ಪಕ್ಷವಾಗಿಯೂ ಶಾಂತಿ ಒಪ್ಪಂದ ಮಾಡಿಕೊಂಡಾಗ ಥೈಲೆಂಡ್ ತಾನು ಯುದ್ಧ ಕಾಲದಲ್ಲಿ ಜಪಾನಿನಿಂದ ಪಡೆದ ಬ್ರಿಟಿಷ್ ಪ್ರದೇಶಗಳನ್ನು ಬ್ರಿಟಿಷರಿಗೆ ಹಿಂದಿರುಗಿಸಿತು. ತರುವಾಯ ವಿಶ್ವಸಂಸ್ಥೆಯಲ್ಲಿ ಥೈಲೆಂಡಿನ ಉಮೇದುವಾರಿಕೆಗೆ ಇಂಗ್ಲೆಂಡ್ ಮತ್ತು ಭಾರತ ಬೆಂಬಲ ನೀಡಲು ನಿಂತವು. ಒಂದು ವರ್ಷದ ತರುವಾಯ ಫ್ರಾನ್ಸ್ ಸಹ ಥೈಲೆಂಡಿನೊಡನೆ ಶಾಂತಿ ಒಪ್ಪಂದ ಮಾಡಿಕೊಂಡಿತು. ಹಿಂದೆ ತಾನು ವಿಚಿ ಸರ್ಕಾರದಿಂದ ಪಡೆದ ಇಂಡೊಚೀನ ಭಾಗಗಳನ್ನು ಥೈಲೆಂಡ್ ಫ್ರಾನ್ಸಿಗೆ ಹಿಂದಿರುಗಿಸಿತು (ನವೆಂಬರ್ 1946).

ಈ ಮಧ್ಯೆ ಥೈಲೆಂಡ್‌ನ ಯುವಕ ದೊರೆ ಆನಂದ ಮಹಿದೋಲ್ ಕೊಲೆಯಾಗಿ ಅವನ ಸಹೋದರ ಭೂಮಿಬಾಲ್ ಅತ್ತುಲ್ಯತೇಜ್ (ಜ. 1927) ಪಟ್ಟಾಭಿಷಿಕ್ತನಾದ (1946). 1947 ರ ಕ್ಷಿಪ್ರಾಕ್ರಮಣದಲ್ಲಿ ಸೈನ್ಯಾಧಿಕಾರಿ ಫೀಲ್ಡ್ ಮಾರ್ಷಲ್ ಫಿಬುಲ್ ಸೊಂಗ್ರಾಮ್ ರಾಜಪ್ರತಿನಿಧಿಯ ಆಡಳಿತವನ್ನು ತೆಗೆದುಹಾಕಿ ಅಧಿಕಾರ ವಹಿಸಿಕೊಂಡ. 1950 ರ ಹೊತ್ತಿಗೆ ಇವನ ಪ್ರಭಾವ ಕುಗ್ಗಿತು. ಥೈಲೆಂಡ್ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ 1950–53ರ ಕೊರಿಯ ಯುದ್ಧದಲ್ಲಿ ಭಾಗವಹಿಸಿತು. 1957ರಲ್ಲಿ ನಡೆದ ರಕ್ತರಹಿತ ಕ್ರಾಂತಿಯಲ್ಲಿ ಸೊಂಗ್ರಾಮನನ್ನು ಪದಚ್ಯುತಿಗೊಳಿಸಿ ಫೀಲ್ಡ್ ಮಾರ್ಷಲ್ ಸರಿತ್ ತನಾರತ್ ಆಡಳಿತ ವಹಿಸಿಕೊಂಡ. ಸಾರ್ವತ್ರಿಕ ಚುನಾವಣೆಗಳು ನಡೆದರೂ 1958ರಲ್ಲಿ ಸೈನ್ಯಾಡಳಿತ ಘೋಷಿಸಲ್ಪಟ್ಟು ಎಲ್ಲ ರಾಜಕೀಯ ಪಕ್ಷಗಳೂ ರದ್ದಾದವು. 1963ರಲ್ಲಿ ಸರಿತ್ ಮರಣ ಹೊಂದಲು ಜನರಲ್ ತರುವಾಯ ಫೀಲ್ಡ್ ಮಾರ್ಷಲ್ ಥಾನೋಂ ಕಿಟ್ಟಿಕ ಚರೋನ್ ಮುಖ್ಯ ಮಂತ್ರಿಯಾದ. ಥೈಲೆಂಡ್ 1965ರಲ್ಲಿ ವಿಯಟ್ನಾಂ ಯುದ್ಧದಲ್ಲಿ ದಕ್ಷಿಣ ವಿಯಟ್ನಾಂನ ಪಕ್ಷ ವಹಿಸಿತು. ರಾಜ್ಯದಲ್ಲಿ 10 ವರ್ಷ ಮಿಲಿಟರಿ ಆಡಳಿತ ನಡೆದು ಜುಲೈ 1968ರಲ್ಲಿ ಸಂವಿಧಾನ ರಚಿತವಾಯಿತು. 1969ರ ಚುನಾವಣೆಯಲ್ಲಿ 7 ರಾಜಕೀಯ ಪಕ್ಷಗಳು ಸಂಸತ್ತಿನಲ್ಲಿ ಸ್ಥಾನ ಪಡೆದವುಗಳ ಪೈಕಿ ಮಿಲಿಟರಿ ಪಕ್ಷಕ್ಕೆ ಬಹುಮತವಿತ್ತು. ದೇಶದಲ್ಲಿ ಅಶಾಂತಿಯ ಪರಿಸ್ಥಿತಿ ಇತ್ತೆಂಬ ಕಾರಣದಿಂದ ಫೀಲ್ಡ್ ಮಾರ್ಷಲ್ ಥಾನೋಮ್ ಸಂವಿಧಾನವನ್ನು ರದ್ದುಮಾಡಿ ಪುನಃ ಮಿಲಿಟರಿ ಸರ್ಕಾರವನ್ನು ಸ್ಥಾಪಿಸಿದ. ಅವನ ಅಧ್ಯಕ್ಷತೆಯಲ್ಲಿ 5 ಮಂದಿ ಸದಸ್ಯರ ರಾಷ್ಟ್ರೀಯ ಆಡಳಿತ ಪರಿಷತ್ತು ಏರ್ಪಟ್ಟು ಆಡಳಿತ ವಹಿಸಿತು. ಡಿಸೆಂಬರ್ 1972ರಲ್ಲಿ ಮಧ್ಯಕಾಲಿಕ ಸಂವಿಧಾನ ಘೋಷಿತವಾಗಿ ಶಾಸನಸಭೆ ಹಾಗೂ ಮಂತ್ರಿ ಮಂಡಲ ರಚಿತವಾಯಿತು. ಥಾನೋಮ್ ಮುಖ್ಯಮಂತ್ರಿಯಾದ. ಖಾಯಂ ಸಂವಿಧಾನವನ್ನು ರಚಿಸಲು ತಪ್ಪಿದ್ದರಿಂದಲೂ ಬೆಲೆಗಳ ಏರಿಕೆ, ಲಂಚಕೋರತನ ಹಾಗೂ ದಂಗೆಗಳು ಹೆಚ್ಚಿದ್ದರಿಂದಲೂ ಅಮೆರಿಕನ್ ಸೈನ್ಯ ಥೈಲೆಂಡಿನಲ್ಲಿದ್ದರಿಂದಲೂ ವಿದ್ಯಾರ್ಥಿಗಳ ಗಲಭೆಗಳಾಗಿ ರಕ್ತಪಾತವಾಯಿತು. ಇವುಗಳ ಪರಿಣಾಮವಾಗಿ ಮಿಲಿಟರಿ ಸರ್ಕಾರ ಉರುಳಿತು (1973). ಅಕ್ಟೋಬರ್ 1974 ರಲ್ಲಿ ಹೊಸ ಸಂವಿಧಾನ ರಚನೆಯಾಗಿ ಸನ್ಯ ಧರ್ಮಸಾಕಿಯ ನಾಯಕತ್ವದಲ್ಲಿ ತಾತ್ಕಾಲಿಕ ಸರ್ಕಾರ ಏರ್ಪಟ್ಟಿತು. 1975ರ ಚುನಾವಣೆಯಲ್ಲಿ 42 ರಾಜಕೀಯ ಪಕ್ಷಗಳು ಹೊಸ ಪ್ರತಿನಿಧಿಗಳ ಸಭೆಗೆ ಸ್ಪರ್ಧಿಸಿದವು. ಯಾವ ಪಕ್ಷಕ್ಕೂ ಬಹುಮತ ಬರಲಿಲ್ಲವಾಗಿ ಪ್ರಜಾ ಪಕ್ಷದ ನಾಯಕತ್ವದಲ್ಲಿ ಸಂಯುಕ್ತ ಸರ್ಕಾರ ಏರ್ಪಟ್ಟಿತು. ಸೇನ್ಯೆ ಪ್ರಮೋಜ್ ಮುಖ್ಯಮಂತ್ರಿಯಾದ. ಮಾರ್ಚ್ 1975ರಲ್ಲಿ ಇವನ ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ನಿರ್ಣಯ ಬಂದು, ಸೈನಿಕ ಹಾಗೂ ಉದ್ಯಮ ಹಿತಾಸಕ್ತಿಗಳುಳ್ಳ ಸಂಯುಕ್ತ ಪಕ್ಷ ಅಧಿಕಾರಕ್ಕೆ ಬಂತು. ಇದರ ನಾಯಕ ಕುಕ್ರಿತ್ ಪ್ರಮೋಜ್ ಅವರು ತರಲು ಪ್ರಯತ್ನಿಸಿದ ಸುಧಾರಣೆಗಳಾವುವೂ ಕಾರ್ಯಗತವಾಗಲಿಲ್ಲ.

ಥೈಲೆಂಡ್ ಇಂಡೋಚೀನೀ ಯುದ್ಧರಂಗದ ಸಮೀಪದ ರಾಜ್ಯವಾಗಿದ್ದ ಪ್ರಯುಕ್ತ ವಿದೇಶಾಂಗ ನೀತಿಯಲ್ಲಿ ಅದು ಅಮೆರಿಕದ ಪಕ್ಷ ವಹಿಸಿತು. ತನ್ನ ಸೈನ್ಯಗಳನ್ನು ದಕ್ಷಿಣ ವಿಯಟ್ನಾಂನ ನೆರವಿಗೆ ಕಳುಹಿಸಿತಾದರೂ 1970ರಲ್ಲಿ ವಾಪಸು ಕರೆಸಿಕೊಂಡಿತು. 1976ರ ಏಪ್ರಿಲ್‌ನಲ್ಲಿ ನಡೆದ ಚುನಾವಣೆಗಳ ಅನಂತರ ಕುಕ್ರಿತ್ ಪ್ರಮೋಜರ ಸೋದರನಾದ ಸೇನ್ಯೆ ಪ್ರಮೋಜರು ಸಮ್ಮಿಶ್ರ ಮಂತ್ರಿಮಂಡಲ ರಚಿಸಿದರು. ಆದರೆ ಅಕ್ಟೋಬರ್ 6ರಂದು ನಡೆದ ಕ್ಷಿಪ್ರಕ್ರಾಂತಿಯಿಂದ ಈ ಸರ್ಕಾರ ಉರುಳಿತು. ಅನಂತರ ತಾನಿನ್ ಕ್ರೈವಿಚಿಯೆನ್ ಪ್ರಧಾನಿಯಾದರು. (ವಿ.ಜಿ.ಕೆ.)

**ವಾಸ್ತು ಶಿಲ್ಪ:** 2ನೆಯ ಶತಮಾನದಿಂದಲೇ ಥೈಲೆಂಡಿನ ಮೇಲೆ ಭಾರತೀಯ ಸಂಸ್ಕೃತಿ ಪ್ರಭಾವ ಬೀರಿದ್ದರಿಂದ ಇಲ್ಲಿ ಈ ಸಂಸ್ಕೃತಿಗೆ ಸೇರಿದ ಅವಶೇಷಗಳು ದೊರಕಿವೆ. ಪ್ರಪಥೋಮ್‌ನಲ್ಲಿ ದೊರಕಿರುವ ದೇವತೆಗಳ ಮೂರ್ತಿ ಶಿಲ್ಪಗಳು 2ನೆಯ ಶತಮಾನಕ್ಕೆ ಸೇರಿದವು ಎಂಬುದರಲ್ಲಿ ಸಂದೇಹವಿಲ್ಲ. ಪಾಂಗ್‌ಟಕ್‌ನಲ್ಲಿ ದೊರಕಿರುವ ಬುದ್ಧ ವಿಗ್ರಹಗಳು ಅಮರಾವತಿಯ ಶಿಲ್ಪಶೈಲಿಯಲ್ಲಿವೆ. ಸು. 5ನೆಯ ಶತಮಾನಕ್ಕೆ ಸೇರಬಹುದಾದ ಗುಪ್ತ ಶೈಲಿಯನ್ನು ತೋರಿಸುವ ಅನೇಕ ಶಿಲ್ಪಗಳೂ ಇಲ್ಲಿ ದೊರಕಿವೆ.

ಅಯುಥಿಯ ನಗರ ಸುಖೋಥೈ ರಾಜ್ಯದ ಮುಖ್ಯ ನಗರವಾಗಿದ್ದುದರಿಂದ ಇಲ್ಲಿ ಅನೇಕ ಕಟ್ಟಡಗಳು ದೊರಕಿವೆ. ಸುಖೋದಯದಲ್ಲಿರುವ ಪಾತ್‌ಜೈ ಮಹಾದ್ವಾರ ಗಮನಾರ್ಹವಾದ್ದು. ಇದರ ಸಮೀಪದಲ್ಲಿರುವ ಪ್ರಪಂಗ್ ಮತ್ತು ಪ್ರಜೇಡಿ ಸ್ತೂಪಗಳು ಮುಖ್ಯವಾದವು. ಪ್ರಪಂಗ್ ಸ್ತೂಪ ಥೈಲೆಂಡಿನ ಪ್ರಾಚೀನ ವಾಸ್ತು ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ದೂರದಿಂದ ನೋಡಿದರೆ ಹಿಂದೂ ದೇವಾಲಯದ ಶಿಖರದಂತೆ ಕಾಣುತ್ತದೆ. ಕೆಳಭಾಗದಿಂದ ಅಷ್ಟಕೋನಾಕಾರವಾಗಿ ಮೇಲೇರುತ್ತ, ಮೆಟ್ಟಲು ಮೆಟ್ಟಲಾಗಿ ಇದೇ ಆಕಾರದಲ್ಲೇ ಮುಂದುವರಿದು, ಮೇಲೇರಿದಂತೆ ಕಿರಿದಾಗುತ್ತಾ ಹೋಗುತ್ತದೆ. ಹೀಗೆ 3 ಅಥವಾ 4 ಅಂತಸ್ತುಗಳ ಅನಂತರ ನಾಗರಶೈಲಿಯ ಶಿಖರ ಮುಂದುವರಿಯುತ್ತದೆ. ಕೆಳಗಿನಿಂದ ಮೇಲೆ ನೋಡಿದರೆ, ಅದು ದ್ರಾವಿಡ ಮತ್ತು ನಾಗರಶಿಖರಗಳನ್ನು ಒಂದರ ಮೇಲೊಂದು

ನಿಲ್ಲಿಸಿರುವಂತೆ ಕಾಣುತ್ತದೆ. ಇದು ಸಾಮಾನ್ಯವಾಗಿ ಥೈಲೆಂಡಿನ ವಾಸ್ತು ಕೃತಿಗಳ ಸ್ವರೂಪ. ಫ್ರಜೇಡಿ ಸ್ತೂಪ ಘಂಟಾಕೃತಿಯಲ್ಲಿದೆ. 344 ಅಡಿ ಎತ್ತರದ ಈ ಸ್ತೂಪ ಥೈಲೆಂಡಿನಲ್ಲಿ ಮುಖ್ಯವಾದದ್ದು. ಆರು ಅಂತಸ್ತುಗಳ ಜಗಲಿಯ ಮೇಲೆ ಈ ಸ್ತೂಪದ ಅಂಡದ ಮೇಲೆ ಚೌಕನೆಯ ಎರಡಂತಸ್ತುಗಳ ಹರ್ಮಿಕೆಯೂ ಅದರ ಮೇಲೆ ಕ್ರಮವಾಗಿ ಕಿರಿದಾಗುವ ಶಿಖರವೂ ಇವೆ. ಸಜ್ಜನಾಲಯದಲ್ಲಿರುವ ಚತುರ್ಮುಖ ಮಂಟಪ ಥೈಲೆಂಡಿನ ಉತ್ತಮ ಬೌದ್ಧ ಕಟ್ಟಡಗಳಲ್ಲೊಂದು. ಚೌಕಾಕಾರದ ವಿಶಾಲ ಹಜಾರದ ಮಧ್ಯದಲ್ಲಿ ಚೌಕನೆಯ ಮಂಟಪವಿದೆ. ಇದರ ನಾಲ್ಕು ಗೋಡೆಗಳಲ್ಲೂ ಬುದ್ಧನ ವಿಗ್ರಹಗಳಿವೆ. ಇದೇ ರೀತಿಯ ಇನ್ನೊಂದು ಕಟ್ಟಡವೆಂದರೆ ಸುಖೋದಯದಲ್ಲಿರುವ ಇಟ್ಟಿಗೆಯ ಮಂಟಪ. ಇಲ್ಲಿಯ ವಿಶೇಷವೆಂದರೆ ಇಟ್ಟಿಗೆಯಿಂದ ಗೋಡೆಗೆ ಒರಗಿದಂತೆ ಮಾಡಿರುವ ಬುದ್ಧ ವಿಗ್ರಹ.

ಖ್ಮೆರ್ ವಾಸ್ತುಶಿಲ್ಪ, ನಾಮ್‌ರಂಗ್

ಇದರ ಎತ್ತರ 15ಮೀ ಲವಪುರಿಯಲ್ಲಿರುವ ಪ್ರಥಟ್ ದೇವಾಲಯದಲ್ಲೂ ಚೌಕನೆಯ ಹಜಾರ ಮತ್ತು ಮಧ್ಯದಲ್ಲಿ ಗರ್ಭಗೃಹ ಇವೆ. ಇದರಲ್ಲಿ ಸ್ತೂಪವಿದೆ. ಈ ಸ್ತೂಪದ ಎದುರಿಗೆ ಕಂಬಗಳು ಇವೆ. ಭಾರತೀಯ ದೇವಾಲಯದ ಮಾದರಿಯ ರಚನೆಯಿದು.

ಭಾರತೀಯ ಸಂಸ್ಕೃತಿಯ ಪ್ರಭಾವ ಕಡಿಮೆಯಾದಂತೆ, ಥೈಲೆಂಡಿನ ಶಿಲ್ಪಗಳಲ್ಲಿ ತಮ್ಮವೇ ಆದ ಶೈಲಿಗಳು ಕಾಣತೊಡಗುತ್ತವೆ. ಇದು ಕಂಬುಜದೊಡನೆ ನಿಕಟ ರಾಜಕೀಯ ಸಂಬಂಧ ಹೊಂದಿದುದರಿಂದ, ಅಲ್ಲಲ್ಲಿ ಖ್ಮೆರ್ ಶೈಲಿಯ ಪ್ರಭಾವಗಳಿವೆ. ಆದರೆ ಪ್ರಧಾನವಾಗಿ ಥೈ ಶೈಲಿ, ವಿಶೇಷವಾಗಿ ಉತ್ತರದಲ್ಲಿ ಮುಂದುವರಿಯಲು ಪ್ರಾರಂಭವಾಯಿತು. ಈ ಶೈಲಿ ಅದುವರೆಗೂ ಬೆಳೆದುಬಂದಿದ್ದ ಇಂಡೊ–ಥೈ ಶೈಲಿಗಿಂತ ಸ್ವಲ್ಪ ಭಿನ್ನವಾಗಿ ಕಾಣುತ್ತದೆ. ಬಾಗಿದ ಮೂಗು, ಎಳಸಾದ ತುಟಿ, ಖಂಡ ವೃತ್ತಾಕಾರದ ಹುಬ್ಬು ಇವು ಥೈ ಶೈಲಿಯ ಮುಖ್ಯ ಲಕ್ಷಣಗಳು. ಇವು ವಿಶೇಷವಾಗಿ ಸುಖೋದಯ ಮತ್ತು ಲವಪುರಿ ನಗರಗಳಲ್ಲಿ ಬೆಳೆದವು. ಇದೇ ಸಮಯದಲ್ಲಿ ದಕ್ಷಿಣ ಥೈಲೆಂಡಿನಲ್ಲಿ ಖ್ಮೆರ್ ಶೈಲಿ ಬೆಳೆಯಿತು. ಅಲ್ಲಿಯ ಮೂರ್ತಿ ಶಿಲ್ಪಗಳಿಗೆ ನೆಟ್ಟಗಿನ ಹುಬ್ಬು, ಅಗಲ ಬಾಯಿ ಇವೆ. ಇವು ಖ್ಮೆರ್ ಶೈಲಿಗೆ ಸೇರಿದವು.

14ನೆಯ ಶತಮಾನಕ್ಕೆ ಸೇರಿದ ವಾತ್‌ಸಿಜಿಮ್ ಎಂಬಲ್ಲಿಯ ದೇವಾಲಯದಲ್ಲಿ ಬುದ್ಧನ ಜಾತಕ ಕಥೆಗಳು ಚಿತ್ರಿತವಾಗಿವೆ. ಇವು ರೇಖಾಚಿತ್ರಗಳಂತೆ ಕಾಣುತ್ತವೆ. ಇದೇ ಕಾಲಕ್ಕೆ ಸೇರಬಹುದಾದ, ವಿಷ್ಣು ಮತ್ತು ಶಿವನ ಕಂಚಿನ ವಿಗ್ರಹಗಳು ಸುಖೋದಯದಲ್ಲಿ ದೊರಕಿವೆ. ಇವು ಥೈ ಶೈಲಿಯ ಅವನತಿಯನ್ನು ಸೂಚಿಸುತ್ತವೆ.

**ಶಾಸನಗಳು:** ಭಾರತೀಯ ಸಂಸ್ಕೃತಿ ಥೈಲೆಂಡಿನಲ್ಲಿ 2ನೆಯ ಶತಮಾನದಲ್ಲಿ ಪ್ರಸರಿಸಿದುದರಿಂದ ಅಲ್ಲಿಯ ಶಾಸನಗಳಲ್ಲೂ ಭಾರತೀಯ ರೂಪವೇ ಬಹು ಕಾಲದವರೆಗೆ ಬಳಕೆಗೆ ಬಂತು. 2006ರಲ್ಲಿ ಫೂಖಾವೊ ಥಾಂಗ್ ಎಂಬಲ್ಲಿ ಪ್ರಾಕೃತ ಭಾಷೆಯಲ್ಲಿ 2ನೆಯ ಶತಮಾನದ ಬ್ರಾಹ್ಮಿ ಲಿಪಿಯೊಂದು ಒಂದು ಮಡಕೆಯ ಮೇಲೆ ಇದ್ದುದು ಕಂಡುಬಂದಿತು. ಇದನ್ನು ತುರವೊ ಎಂದು ಓದಲಾಗಿದ್ದು ಇದು ಒಬ್ಬ ಬೌದ್ಧ ಭಿಕ್ಷುವಿನ ಹೆಸರಿರಬೇಕೆಂದು ಊಹಿಸಲಾಗಿದೆ. ಬುದ್ಧನ ವಿಗ್ರಹಗಳ ಮೇಲೆ, ಗೋಡೆಗಳ ಮೇಲೆ ಶಾಸನಗಳಿವೆ. ಬ್ರಾಹ್ಮಿಲಿಪಿ ಇಲ್ಲೂ ಬಳಕೆಯಲ್ಲಿದ್ದು ಕಾಲಕ್ರಮದಲ್ಲಿ ವಿಕಾಸ ಹೊಂದಿತು. ಲವಪುರಿಯ ಮಹಾರಾತು, ವತ್‌ಥೋಯ್, ಸಾಲ್‌ಸುನ್, ರಾಜಪುರಿ ಮುಂತಾದ ಕಡೆಗಳಲ್ಲಿ ದೊರಕಿರುವ ಶಾಸನಗಳು ಚರಿತ್ರೆಯ ರಚನೆಗೆ ಸಹಕಾರಿಯಾಗಿವೆ. ಇವೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಭಾರತದಲ್ಲಿದ್ದಂತೆಯೇ ಅನೇಕ ಶಾಸನಗಳು ದೇವತಾಸ್ತುತಿಯಿಂದ ಆರಂಭವಾಗುತ್ತವೆ. ಸ್ವಸ್ತಿ ಶ್ರೀ ಮುಂತಾದವು ಶಾಸನದ ಆರಂಭದಲ್ಲಿ ಕಾಣಬರುತ್ತವೆ. ಕೆಲವು ಶಾಸನಗಳಲ್ಲಿ ಕಲಿಯುಗ ವರ್ಷವನ್ನೂ ಮತ್ತೆ ಕೆಲವಲ್ಲಿ ಶಕವರ್ಷವನ್ನೂ ಹೇಳಲಾಗಿದೆ.

ರಾಮಕಮ್‌ಹೆಂಗ್ ಎಂಬ ರಾಜ ಥೈ ಭಾಷೆಗೆ ಅನುಕೂಲವಾದ ಲಿಪಿಯೊಂದನ್ನು ರೂಪಿಸಿ, ಅದು ಥೈಲೆಂಡಿನಲ್ಲಿ ಬಳಕೆಗೆ ಬರುವ ಹಾಗೆ ಮಾಡಿದ. ಅಂದರೆ 13ನೆಯ ಶತಮಾನದ ಅನಂತರದ ಶಾಸನಗಳು ಥೈ ಲಿಪಿಯಲ್ಲಿ ಬರಲು ಪ್ರಾರಂಭವಾದವು. (ಎ.ವಿ.ಎನ್.)

# ದ

**ದಕ್ಷಿಣ ಅಮೇರಿಕ:** ಪಶ್ಚಿಮಾರ್ಧಗೋಳದ ದಕ್ಷಿಣದ ನಾಲ್ಕನೆಯ ದೊಡ್ಡಖಂಡ.

**ಪ್ರಾಗಿತಿಹಾಸ:** 1950ರ ವರೆಗೂ ಕ್ಲೋವಿಸ್ ಬೇಟೆ ವೃತ್ತಿಯ ಜನರ ಕೆಲವು ತಂಡಗಳು 1500 ವರ್ಷಗಳ ಹಿಂದೆ ಅಲಾಸ್ಕ ಮಾರ್ಗವಾಗಿ ಉತ್ತರ ಅಮೆರಿಕದ ಪೆನ್ಸಿಲ್‌ವೇನಿಯ ಮೊದಲಾದ ಪ್ರದೇಶಗಳಲ್ಲಿ ನೆಲೆಸಿದ್ದು ದಕ್ಷಿಣ ಅಮೆರಿಕದ ಚಿಲಿ ಮತ್ತು ಬ್ರೆಜಿಲ್‌ಗೂ ಪ್ರಸರಿಸಿದರೆಂದು ತಜ್ಞರ ಅಭಿಪ್ರಾಯವಾಗಿತ್ತು. ಆದರೆ ಕೆಲವೊಂದು ಪುರಾತತ್ತ್ವ ಅವಶೇಷಗಳ ವೈಜ್ಞಾನಿಕ ಅಧ್ಯಯನಗಳಿಂದ 15 ಸಾವಿರ ವರ್ಷಗಳಿಗಿಂತಲೂ ಹಿಂದಿನ ಜನವಸತಿಯ ನೆಲೆಗಳನ್ನು ಗುರುತಿಸಲಾಗಿದೆ. ಬ್ರೆಜಿಲ್‌ನ ಈಶಾನ್ಯ ಭಾಗದ ಕೆಂಪು ಮರಳು ಕಲ್ಲಿನ ಬೆಟ್ಟ ಪ್ರದೇಶದ ಪೆದ್ರಪುರದಲ್ಲಿ ಸು.12 ಸಾವಿರ ವರ್ಷಗಳಿಗಿಂತ ಹಿಂದಿನ ವಿವಿಧ ಪದರಗಳಲ್ಲಿ ಅಗ್ಗಿಷ್ಟಿಗೆಗಳು ಇದ್ದದನ್ನು ಉತ್ಖನನದಲ್ಲಿ ಗುರುತಿಸಲಾಗಿದೆ. ಈ ಪ್ರದೇಶದ ಕಲ್ಲಾಸರೆಗಳಲ್ಲಿ ಕೆಂಪು, ಕಪ್ಪು, ಹಳದಿ ಮತ್ತು ಬಿಳಿ ಬಣ್ಣಗಳ ಜಿಂಕೆ, ಹಲ್ಲಿ, ಒಂದು ಬಗೆಯ ಚಿರತೆ, ಚಿಪ್ಪಿನ ಕವಚವುಳ್ಳ ಪ್ರಾಣಿ (ಪಂಗುರಿಯ) ಮತ್ತು ಮನುಷ್ಯರ ವಿವಿಧ ಚಿತ್ರಗಳಿವೆ. ಈ ಚಿತ್ರಗಳಲ್ಲಿ ಸಂಭೋಗ, ಶಿಶುವಿನ ಜನನ, ಬೇಟೆಯಾಡುತ್ತಿರುವುದು ಮೊದಲಾದವುಗಳ ದೃಶ್ಯಗಳು ಸ್ವಾರಸ್ಯಕರವಾಗಿವೆ. ಆದರೆ ಅಗ್ಗಿಷ್ಟಿಗೆ ಇರುವ ಪದರುಗಳಲ್ಲಿ ಪ್ರಾಣಿಗಳ ಎಲುಬುಗಳಾಗಲೀ ಸಸ್ಯಗಳ ಅವಶೇಷಗಳಾಗಲೀ ಅಥವಾ ಮನುಷ್ಯ ನಿರ್ಮಿತ ವಸ್ತುಗಳ ಅವಶೇಷಗಳಾಗಲೀ ಅಥವಾ ಕಲ್ಲಿನ ಉಪಕರಣಗಳಾಗಲೀ ಇರಲಿಲ್ಲ. ದಕ್ಷಿಣ ಚಿಲಿ ಪ್ರದೇಶದಲ್ಲಿ 1977 ರಿಂದ ಮೊಂತೆ ವರ್ದೆ ಉತ್ಖನನದಲ್ಲಿ ಮನುಷ್ಯರ ತಾತ್ಕಾಲಿಕ ವಸತಿ ನೆಲೆಗಳನ್ನು ಗುರುತಿಸಲಾಗಿದೆ. ಇದರ ಕಾಲಮಾನ 12800–12300. ಇಲ್ಲಿ ಸಸ್ಯಾಂಗಾರದಲ್ಲಿ ಉಳಿದ್ದಿದ ಮಾಂಸದ ತುಣುಕು ಮತ್ತು ಕಾಡು ಆಲೂಗಡ್ಡೆ, ಸಮುದ್ರ ಬಳ್ಳಿ ಮತ್ತು ಇತರ ಸಸ್ಯಗಳು, ಮರದ ಉಪಕರಣಗಳು ಮೊದಲಾದವು ಇದ್ದವು. ಉತ್ಖನನ ಗುಂಡಿಯ ಕೆಳಗಿನ ಹಂತದಲ್ಲಿ ಸು.33000ವರ್ಷಗಳ ಹಿಂದಿನ ಕಲ್ಲಿನ ಉಪಕರಣಗಳು, ಸುತ್ತಲೂ ಮಣ್ಣಿನಿಂದ ಬಳಿಯಲ್ಪಟ್ಟ ಗುಂಡಿಗಳಿದ್ದವು. ಉತ್ತರ ವೆನಿಜುವೇಲ ಪ್ರದೇಶದ ತೈಮತೈಮದಲ್ಲಿ ಒಂದು ನೀರಿನ ಗುಂಡಿಯಲ್ಲಿ ನಶಿಸಿಹೋದ ಆನೆಯನ್ನು ಹೋಲುವಂಥ ಚಿಕ್ಕ ವಯಸ್ಸಿನ ದೊಡ್ಡ ಸ್ತನಿಯ ಅವಶೇಷಗಳು, ಅತಿ ಚೂಪಾದ ತುದಿಯುಳ್ಳ ಕಲ್ಲಿನ ಉಪಕರಣಗಳು ಮತ್ತು ಇತರ ಕಲ್ಲಿನ ಉಪಕರಣಗಳು ಶೋಧವಾಗಿವೆ. ಇವುಗಳ ಕಾಲಮಾನ 13000–12500 ವರ್ಷಗಳು. ದಕ್ಷಿಣ ಅಮೇರಿಕಕ್ಕೆ ಕೊಲಂಬಿಯ ಒಂದು ಮಹಾದ್ವಾರವಿದ್ದಂತೆ ಈ ಪ್ರದೇಶದ ಬಯಲು ಭೂಮಿಯಲ್ಲಿಯ ನೆಲೆಗಳನ್ನು ಉತ್ಖನನ ಮಾಡಲಾಗಿದೆ. ಇವುಗಳಲ್ಲಿ ಮುಖ್ಯವಾದವು ಟಿಬೆಟೊ, ಎಲ್ಲಬ್ರ ಮೊದಲಾದವು. ಹೆಚ್ಚಾಗಿ ನಶಿಸಿಹೋದ ದೊಡ್ಡ ಸ್ತನಿ, ಕುದುರೆ, ಜಿಂಕೆ ಹಾಗೂ ಇತರ ದೊಡ್ಡ ಪ್ರಾಣಿಗಳ ಎಲುಬುಗಳು, ಒಬ್ಬದಿಯ ಕಲ್ಲಿನ ಉಪಕರಣಗಳು ಸಿಕ್ಕಿವೆ. ಅರ್ಜೆಂಟೀನದಲ್ಲಿಯ ಲಾಸ್‌ತೋಲ್‌ದೋಸ್, ಬ್ರೆಜಿಲ್‌ನಲ್ಲಿಯ ಹಲವಾರು ಕಲ್ಲಾಸರೆ, ಗವಿಗಳು ಚಿಲಿಯಲ್ಲಿಯ ಕೂರಿಯೊ ಹಾಗೂ ಇತರ ಸ್ಥಳಗಳಲ್ಲಿಯ ಉತ್ಖನನದಲ್ಲಿ ಹಲವಾರು ಮಾನವ ಜೀವನಕ್ಕೆ ಸಂಬಂಧಿಸಿದ ಉಪಕರಣಗಳು ದೊರೆಕಿವೆ. ಇವೆಲ್ಲವೂ 11500 ವರ್ಷಗಳ ಹಿಂದಿನವು. ಆದರೆ ಮಾನವ ಅಸ್ಥಿಪಂಜರಗಳು ಇಲ್ಲವೆ ಇವುಗಳ ಅವಶೇಷಗಳು ಇದುವರೆಗೆ ದೊರೆಕಿಲ್ಲ. ಹೀಗಾಗಿ ದಕ್ಷಿಣ ಅಮೇರಿಕದಲ್ಲಿ ಜನ ವಾಸ್ತವ್ಯ ಎಂದಿನಿಂದ ಪ್ರಾರಂಭವಾಯಿತೆಂದು ಇನ್ನೂ ನಿಶ್ಚಿತವಾಗಿಲ್ಲ. (ಎ.ಎಸ್.)

**ಇತಿಹಾಸ:** ಕೊಲಂಬಸ್ ಮೂರನೆಯ ಬಾರಿ ಯಾತ್ರೆ ಮಾಡಿದಾಗ (1498)ದಕ್ಷಿಣ ಅಮೇರಿಕದ ಪ್ರಧಾನ ಭಾಗವನ್ನು ನೋಡಿದ. ಆಗ ವಿಭಿನ್ನ ಸಂಸ್ಕೃತಿಗಳ ಹಲವಾರು ಇಂಡಿಯನ್ ಜನಸಮುದಾಯಗಳು ವಾಸಿಸುತ್ತಿದ್ದುವು. ಇತಿಹಾಸ ಯುಗದಲ್ಲಿ ಪ್ರಥಮ ನಾಗರಿಕ ಜನಸಮುದಾಯವೆಂದರೆ ಪೆರು ಪ್ರದೇಶದ ಇಂಕ **(ನೋಡಿ)**, ಕೊಲಂಬಿಯದ ಚಿಬ್ಚರು, ಉಳಿದ ಪ್ರದೇಶಗಳಲ್ಲಿ ಅಲ್ಲಲ್ಲಿ ವಿರಳವಾಗಿ ನಿಸರ್ಗದಿಂದ ಆಹಾರ ಸಂಗ್ರಹಿಸುತ್ತಿದ್ದ ಬೇಟೆ ವೃತ್ತಿಯ ಜನರು.

16ನೆಯ ಶತಮಾನದಲ್ಲಿ ಯುರೋಪಿನ ಸ್ಪಾನಿಯಾರ್ಡರುಗಳು ಮತ್ತು ಪೋರ್ಚುಗೀಸರು ಹಡಗುಗಳಲ್ಲಿ ಇಲ್ಲಿಗೆ ಬಂದು ಸ್ಥಳೀಯರಿಂದ ಹೇರಳವಾಗಿ ಚಿನ್ನವನ್ನು ಕೊಳ್ಳೆ ಹೊಡೆಯುವ ಆರಂಭದಿಂದ ಇಲ್ಲಿಯ ಸ್ಥಳೀಯರ ಜೀವನ ಶೈಲಿ ಬದಲಾಗುತ್ತ ಬಂತು. ಬರುಬರುತ್ತಾ ಪರದೇಶಿಯರು ತಮ್ಮೊಡನೆ ಕುದುರೆ ಬಂದೂಕಗಳನ್ನು ತಂದು ಸ್ಥಳೀಯರ ರಾಜ್ಯಗಳನ್ನೆಲ್ಲ ನಾಶಮಾಡಿದರು. ಆದರೂ ಇಂಕ ಮಾತ್ರ ಮುಂದಿನ 200 ವರ್ಷಗಳವರೆಗೂ ಸ್ಪಾನಿಯಾರ್ಡರಗಳೊಡನೆ ಕಾದಾಡುತ್ತಲೆ ಇದ್ದರು. ಇವರೊಡನೆ ದನ–ಕರು ಕುರಿಗಳೊಡನೆ ಬಂದ ಜನರು ಶಾಶ್ವತವಾಗಿ ನೆಲೆಸಿದರು. ಹೆಚ್ಚಾಗಿ ಸ್ಪಾನಿಯಾರ್ಡರುಗಳು ಸ್ಥಳೀಯ ಸ್ತ್ರೀಯರನ್ನು ಮದುವೆಮಾಡಿಕೊಂಡು ಮೆಸ್ಟಿಜೊ ಎಂಬ ಮಿಶ್ರ ಜಾತಿಯ ಜನ ಸಮುದಾಯದ ಸೃಷ್ಟಿಗೆ ಕಾರಣರಾದರು. ಇದೇ ಸಮಯದಲ್ಲಿ ಯುರೋಪಿನ ಜನರೊಡನೆ ಬಂದ ರೋಗ ರುಜಿನಗಳಿಗೆ ಸ್ಥಳೀಯರು ತುತ್ತಾಗಿ ಈ ಸಮುದಾಯ ಅರ್ಧಕರ್ಧ ಅಳಿದು ಹೋಯಿತು. ಪೋರ್ಚುಗೀಸರು ಕಬ್ಬಿನ ತೋಟವನ್ನು ಬೆಳೆಸುವುದಕೋಸ್ಕರ ಆಫ್ರಿಕದಿಂದ ತಂದ ನೀಗ್ರೊಗಳನ್ನು ಗುಲಾಮರನ್ನಾಗಿ ಮಾಡಿಕೊಂಡರು. ಬ್ರೆಜಿಲ್ ಪ್ರದೇಶದಲ್ಲಿ

ಈ ಜನಾಂಗಗಳ ಮಿಶ್ರ ಜಾತಿಯವರು ವೃದ್ಧಿಯಾದರು. ಸು.1600ರಲ್ಲಿ ವಿಶ್ವವಿದ್ಯಾಲಯ, ಕ್ರೈಸ್ತ ಕತೀಡ್ರಲ್‌ಗಳಿಂದ ದೊಡ್ಡ ದೊಡ್ಡ ನಗರಗಳು ಬೆಳೆದವು. ಕೆಲವು ಮಾತ್ರ ಸಮೃದ್ಧವಾಗಿದ್ದುವು. ಸ್ಪೇನ್ ದೇಶಕ್ಕೆ ಇಲ್ಲಿಂದ ಹಡಗುಗಳಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಬೆಳ್ಳಿ ಹೋಗುತ್ತಿತ್ತು. ಸ್ಪಾನಿಷ್ ಭಾಷೆ ಬ್ರೆಜಿಲ್ ಹೊರತು ಪಡಿಸಿ ಎಲ್ಲ ಕಡೆ ಹರಡಿತು. ಇದರಂತೆಯೆ ವಸಾಹತುಶಾಹಿಗಳೊಡನೆ ಸ್ಥಳೀಯರು ಕ್ರೈಸ್ತಧರ್ಮವನ್ನು ಅನುಸರಿಸುತ್ತಿದ್ದರು. ಆದರೆ ಒಂದು ರಾಜ್ಯವಿರದೆ ಹಲವಾರು ದೊಡ್ಡ ಚಿಕ್ಕ ಪ್ರಾಂತಗಳು ಉದಯವಾದವು. ಮಧ್ಯೆ ಫ್ರೆಂಚ್ ನಾವಿಕರೂ ಬ್ರೆಜಿಲ್ ಪ್ರದೇಶದಲ್ಲಿಯ ಕೆಂಪುವರ್ಣದ ಮರಗಳನ್ನು ಸಂಗ್ರಹಿಸುತ್ತಿದ್ದರು. ಈ ವಿಶಿಷ್ಟ ಸಸ್ಯದಿಂದಲೆ ಈ ಪ್ರದೇಶಕ್ಕೆ ಬ್ರೆಜಿಲ್ ಎಂದು ಹೆಸರು ಬಂದಿತು. ಇಂಗ್ಲಿಷರು ಒರಿನಿಕೊವಿನ ಅರಣ್ಯ ಸಂಪತ್ತಿನಿಂದ ಆಕರ್ಷಿತರಾಗಿದ್ದರು. 17ನೆಯ ಶತಮಾನದಲ್ಲಿ ಡಚ್ಚರು-ಸ್ಪಾನಿಯಾರ್ಡರ ನಡುವೆ ಕದನಗಳಾಗಿ ಡಚ್ಚರು ಕಬ್ಬಿನ ತೋಟಗಳನ್ನು ವಶಪಡಿಸಿಕೊಂಡರು. ಹೀಗೆಲ್ಲ ಈ ವಸಾಹತು ಜನಾಂಗಗಳಲ್ಲಿ ಕದನಗಳಾಗುತ್ತಿದ್ದರೂ ಸ್ಪಾನಿಯಾರ್ಡರು ಮತ್ತು ಪೋರ್ಚುಗೀಸರು ಸು. 300 ವರ್ಷಗಳ ಕಾಲ ಪ್ರಬಲರಾಗಿದ್ದರು. 18ನೆಯ ಶತಮಾನದ ಕೊನೆಯ ಹೊತ್ತಿಗೆ ಉತ್ತರ ಅಮೆರಿಕದಲ್ಲಿಯ ಬ್ರಿಟಿಷ್ ವಸಾಹತುಗಳ ಸ್ವಾತಂತ್ರ್ಯ ಸಮರ ಮತ್ತು ಫ್ರೆಂಚ್ ಕ್ರಾಂತಿಯ ಪ್ರಭಾವದಿಂದ ಅಮೆರಿಕದ ಬೊಲಿವರ್ ಸ್ಯಾನ್ ಮಾರ್ಟಿನ್ ದಕ್ಷಿಣ ಅಮೆರಿಕವನ್ನು ಯುರೋಪಿನ ರಾಷ್ಟ್ರಗಳಿಂದ ಮುಕ್ತವಾಗಿಸಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಾದ ಯುದ್ಧಗಳಲ್ಲಿ 1824ರಲ್ಲಿ ಸ್ಪಾನಿಷ್ ಸೈನ್ಯ ಪೂರ್ಣವಾಗಿ ಸೋತುಹೋಯಿತು. ತತ್ಪರಿಣಾಮವಾಗಿ ದಕ್ಷಿಣ ಅಮೆರಿಕ ಸಂಯುಕ್ತ ಸಂಸ್ಥಾನಗಳೆಂಬ ಒಂದು ಗಣರಾಜ್ಯ ಸ್ಥಾಪಿತವಾಯಿತು. ಅನಂತರ 10 ಗಣರಾಜ್ಯಗಳು ಹುಟ್ಟಿದವು. ಆದರೆ ಇವುಗಳ ನಡುವೆ ಕಾದಾಟವಿದ್ದಿತ್ತು. 1945ರಲ್ಲಿ ಮುಖ್ಯವಾಗಿ ಅರ್ಜೆಂಟೀನ, ಬ್ರೆಜಿಲ್ ಮತ್ತು ವೆನಿಜುವೆಲ ಆರ್ಥಿಕವಾಗಿ ಅಭಿವೃದ್ಧಿಗೊಂಡವು. ಜನರ ಆರ್ಥಿಕ ಸ್ಥಿತಿ ಏರುಪೇರಾಗಿದ್ದರೂ 1982ರಲ್ಲಿ ಇದು ಒಂದು ಪ್ರಬಲ ಆರ್ಥಿಕ ಶಕ್ತಿಯಾಗಿ ಬೆಳೆಯಿತು. ವೆನಿಜುವೆಲ ಮತ್ತು ಈಕ್ವೆಡಾರ್ ಒಪಿಇಎಸ್ ಸಂಸ್ಥೆಯ ಸದಸ್ಯತ್ವ ಪಡೆದವು. 1983ರಲ್ಲಿ ಅರ್ಜೆಂಟೀನ ಪ್ರಜಾಪ್ರಭುತ್ವ ಆಡಳಿತಕ್ಕೆ ಒಳಪಟ್ಟಿತ್ತು. 1985ರಲ್ಲಿ 20 ವರ್ಷಗಳ ಕಾಲ ಮಿಲಿಟರಿ ಆಡಳಿತವನ್ನು ಮುಗಿಸಿ ಪ್ರಜಾಪ್ರಭುತ್ವವಾಯಿತು. *

**ದತ್ತು ಮಕ್ಕಳ ಹಕ್ಕು:** 1848ರಲ್ಲಿ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿ ವಸಾಹತು ಸಾಮ್ರಾಜ್ಯ ವಿಸ್ತರಣೆಯ ದುರಾಸೆಯಿಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ಆಧಾರದ ಮೇಲೆ ಕೆಲವು ರಾಜ್ಯಗಳನ್ನು ಸ್ವಾಧೀನಪಡಿಸಿಕೊಂಡ. ಈ ನೀತಿಯ ಪ್ರಕಾರ ವಾಸ್ತವ ಹಕ್ಕುದಾರನಿಲ್ಲದಿರುವಾಗ ಆಶ್ರಿತ ರಾಜ್ಯಗಳ ಪರಾಮಧಿಕಾರತ್ವ ಬ್ರಿಟಿಷ್ ಅಧಿಕಾರದ ವಶವಾಗುತ್ತಿತ್ತು. ಹಿಂದುಗಳಲ್ಲಿ ಬಹು ಹಿಂದಿನಿಂದಲೂ ಉತ್ತರಾಧಿಕಾರಕ್ಕೆ ದತ್ತು ತೆಗೆದುಕೊಳ್ಳುವ ಪದ್ಧತಿ ರೂಢಿಯಲ್ಲಿತ್ತು. ಈ ತತ್ತ್ವ ಸಂರಕ್ಷಿತ ರಾಜ್ಯಗಳಿಗೆ ಅನ್ವಯವಾಗುತ್ತಿರಲಿಲ್ಲ.

ವಸಾಹತುಶಾಹಿ ಅಧೀನ ರಾಜ್ಯಗಳಲ್ಲಿ ಯಾವುದೇ ರೀತಿಯ ಹಕ್ಕುದಾರರಿಲ್ಲದೆ ಹೋದ ಸಂದರ್ಭದಲ್ಲಿಯಾಗಲೀ ಅಥವಾ ಹಿಂದು ಕಾನೂನಿನ ಪ್ರಕಾರ ದತ್ತು ಸ್ವೀಕಾರ ಮಾಡಲು ಸರ್ಕಾರದಿಂದ ಅನುಮತಿ ಪಡೆದ ಉತ್ತರಾಧಿಕಾರಿಯನ್ನು ದತ್ತು ತೆಗೆದುಕೊಳ್ಳಲು ಅಸಮರ್ಥವಾದ ಸಂದರ್ಭದಲ್ಲಿಯೂ ಸರ್ಕಾರ ಈ ಅಧಿಕಾರವನ್ನು ಚಲಾಯಿಸಬಹುದಾಗಿತ್ತು. ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ನೀತಿ ಮತ್ತು ರಾಜ್ಯ ಸ್ವಾಧೀನ ಪಡಿಸಿಕೊಳ್ಳುವ ನೀತಿ ಲಾರ್ಡ್ ಡಾಲ್‌ಹೌಸಿಯಿಂದೇನೂ ಉಗಮಗೊಳ್ಳಲಿಲ್ಲ ಎಂಬುದಂತೂ ಸತ್ಯ. ಡೈರೆಕ್ಟರುಗಳ ಮಂಡಳಿ ಇವೆರಡನ್ನೂ 1834ರಷ್ಟು ಮೊದಲೇ ಪ್ರತಿಪಾದಿಸಿದ್ದು ಕೆಲವು ಪ್ರಕರಣಗಳಲ್ಲಿ ಇದನ್ನು ಅನ್ವಯಿಸಲಾಗಿತ್ತು. ದತ್ತು ಸ್ವೀಕಾರಕ್ಕೆ ಹಕ್ಕಿಲ್ಲ ಎಂಬ ತತ್ತ್ವವನ್ನು 1839ರಲ್ಲಿ ಮಾಂಡವಿಗೂ 1840ರಲ್ಲಿ ಕೊಲಾಬ ಮತ್ತು ಜಲೌನಾಗೂ 1842ರಲ್ಲಿ ಸೂರತ್‌ಗೂ ಅನುಷ್ಠಾನಗೊಳಿಸಲಾಗಿತ್ತು. ಆದರೆ ಲಾರ್ಡ್ ಡಾಲ್‌ಹೌಸಿ ಈ ತತ್ತ್ವಗಳನ್ನು ಹೆಚ್ಚು ತೀವ್ರವಾಗಿ ಪ್ರತಿಪಾದಿಸಿದ. ದತ್ತು ಸ್ವೀಕಾರಕ್ಕೆ ಹಕ್ಕಿಲ್ಲ ಎಂಬ ನಿಯಮದ ಅನುಸಾರ ಬ್ರಿಟಿಷ್ ಸಾಮ್ರಾಜ್ಯಕ್ಕೆ 1842ರಲ್ಲಿ ಸತಾರಾ, 1849ರಲ್ಲಿ ಜೈಪುರ ಮತ್ತು ಸಂಬಾಲ್ಪುರ, 1850ರಲ್ಲಿ ಸಟ್ಲೆಜ್ ಇತ್ತಣ ಗುಡ್ಡರಾಜ್ಯದ ಭಗತ್, 1852ರಲ್ಲಿ ಉದಯಪುರ, 1853ರಲ್ಲಿ ನಾಗ್ಪುರ ಮತ್ತು 1854ರಲ್ಲಿ ಝಾನ್ಸಿ ರಾಜ್ಯಗಳನ್ನು ಸೇರಿಸಿಕೊಳ್ಳಲಾಯಿತು.

ಡಾಲ್‌ಹೌಸಿ ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸಿದ್ದೇನೋ ಹೌದು. ಆದರೆ ಬ್ರಿಟಿಷ್ ಇತಿಹಾಸಕಾರರು ಹೇಳಿರುವ ಹಾಗೆ ವಿಲೀನಗೊಂಡ ರಾಜ್ಯಗಳ ಪ್ರಜೆಗಳು ಸಂತೋಷಪಡಲಿಲ್ಲ. ಆದರೆ ಅದರ ಪರಿಣಾಮವಾಗಿ ಅನೇಕ ಘಟನೆಗಳು ಬೇರೆ ರೀತಿಯಾಗಿ ಸಂಭವಿಸಿದವು. ಈ ರಾಜ್ಯಗಳ ಪ್ರಜೆಗಳು ಬ್ರಿಟಿಷರ ವಿರುದ್ಧವಾಗಿ 1857ರ ದಂಗೆಯಲ್ಲಿ ತಮ್ಮ ಅರಸರಿಗೆ ಬೆಂಬಲ ನೀಡಿದರು. ಹೀಗೆ ವಾರಸುದಾರಿಕೆಯ ಕೊರತೆಯ ಸಿದ್ಧಾಂತ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಪಾಯವನ್ನುಂಟುಮಾಡಿತು. ಆದ್ದರಿಂದಲೇ 1857ರ ಬಂಡಾಯ ಅನಂತರ ಬ್ರಿಟಿಷರು ದೇಶೀಯ ಅರಸರ ವಾರಸುದತ್ತಕದ ಹಕ್ಕನ್ನು ಅನುಮೋದಿಸಿದರು. 1860 ಜುಲೈ 26ರಂದು ಆಗಿನ ಭಾರತ ಸರ್ಕಾರದ ಕಾರ್ಯದರ್ಶಿಯಾಗಿದ್ದ ಚಾರ್ಲ್ಸ್‌ವುಡ್ ಹೀಗೆ ಪ್ರಕಟಿಸಿದ: ನಮ್ಮ ಹಕ್ಕುಗಳನ್ನು ಪಾಲಿಸಿಕೊಳ್ಳಲೂ ಗೌರವಿಸಲೂ ಬಯಸುತ್ತೇವೆ. ಹಾಗಾಗಿ ಲಾರ್ಡ್ ಡಾಲ್‌ಹೌಸಿ ಅನೇಕ ಭಾರತೀಯ ರಾಜ್ಯಗಳನ್ನು ವಸಾಹತು ಸಾಮ್ರಾಜ್ಯಕ್ಕೆ ವಿಲೀನಗೊಳಿಸಿ ಕೊಂಡದ್ದು ಸಮರ್ಥನೀಯವಾಗಿರಲಿಲ್ಲ. (ಎಸ್‌ಯು.ಎಸ್.)

**ದಮ್‌ದಮ:** ಉತ್ತರಪ್ರದೇಶ ರಾಜ್ಯದ ಪ್ರತಾಪಗಡ ಜಿಲ್ಲೆಯಲ್ಲಿರುವ ಸೂಕ್ಷ್ಮ ಶಿಲಾಯುಗದ ನೆಲೆ. ಪೀಲಿನದಿಯ ಉಪನದಿಯಾದ ತಂಬೂರ ನಾಲೆಯ ಕವಲಿನ ಬಳಿ ಈ ನೆಲೆಯಿದೆ. ಈ ನದಿ-ನಾಲೆಗಳು ಹಿಂದೆ ಲಾಳಾಕೃತಿಯ ಸರೋವರಗಳಾಗಿದ್ದವು. ಈ ನಿವೇಶನವನ್ನು 1978ರಲ್ಲಿ ಶೋಧಿಸಲಾಯಿತು. ಅಲಹಾಬಾದ್ ವಿಶ್ವವಿದ್ಯಾಲಯದ ಆರ್.ಕೆ. ವರ್ಮರವರ ನಿರ್ದೇಶನದಲ್ಲಿ ಇಲ್ಲಿ ಉತ್ಖನನ ನಡೆಯಿತು (1982-87).

ಈ ನೆಲೆ 8750 ಚ.ಮೀ ವಿಸ್ತಾರವಿದೆ. ವಸತಿಪದರ 1.5ಮೀ ದಪ್ಪವಿದ್ದು ಹತ್ತು ಸ್ತರಗಳನ್ನು ಒಳಗೊಂಡಿದೆ. ಮೇಲಿನ ಸ್ತರವನ್ನು ಬಿಟ್ಟು ಉಳಿದೆಲ್ಲ ಸ್ತರಗಳಲ್ಲಿ ಸೂಕ್ಷ್ಮಶಿಲಾಯುಗ ಕಾಲದ ಅವಶೇಷಗಳಿವೆ. ಲೇಪವುಳ್ಳ ಅಥವಾ ಲೇಪರಹಿತ ಗುಳಿಒಲೆಗಳು, ನೆಲದ ಅವಶೇಷಗಳು ಮತ್ತು ಇವುಗಳ ನಡುವಿರುವ 41 ಮಾನವ ಶವಕುಣಿಗಳು ಇಲ್ಲಿಯ ಮುಖ್ಯ ಸಾಂಸ್ಕೃತಿಕ ಆಧಾರಗಳು. ಕೆಲವು ಗೋಳಾಕಾರದ ನೆಲಗಳು ಉತ್ಖನನದಲ್ಲಿ ಕಂಡುಬಂದಿವೆ. ನೆಲಗಳ ಮೇಲೆ ಹಳದಿಬಣ್ಣದ ಅಂಟುಮಣ್ಣಿನ ತೆಳುಲೇಪವಿದೆ. ಇಂತಹ ಲೇಪದ ಪದರಗಳನ್ನು ಅಧಿಕ ತಾಪದಲ್ಲಿ ಸುಡಲಾಗಿದೆ. ಕೆಲವೊಂದು ನೆಲದ ಮೇಲೆ ಸುಟ್ಟಲೇಪದ ಪದರಗಳು ಒಂದರ ಮೇಲೊಂದಿವೆ. ಸೂಕ್ಷ್ಮಶಿಲೋಪಕರಣಗಳು, ಸುಟ್ಟ ಮಣ್ಣಿನುಂಡೆಗಳು, ಪ್ರಾಣಿಮೂಳೆಗಳು, ಅರೆಯುವ ಕಲ್ಲುಗಳು ಈ ನೆಲಗಳ ಮೇಲೆ ಕಂಡುಬಂದಿವೆ. ಗೋಳ ಅಥವಾ ಮೊಟ್ಟೆಯಾಕಾರದ ಗುಳಿಒಲೆಗಳು ಇಲ್ಲಿವೆ. ಕೆಲವೊಂದು ಒಲೆಗಳ ಒಳಭಾಗದಲ್ಲಿ ಮಣ್ಣಿನ ತೆಳುಲೇಪವನ್ನು ಹಚ್ಚಲಾಗಿದೆ. ಸುಟ್ಟ ಮಣ್ಣಿನುಂಡೆಗಳು, ಸುಟ್ಟ/ಅರೆಸುಟ್ಟ ಪ್ರಾಣಿಮೂಳೆಗಳು ಮತ್ತು ಕೆಂಡದ ತುಣುಕುಗಳನ್ನು ಒಲೆಗಳೊಳಗಿಂದ ತೆಗೆಯಲಾಗಿದೆ.

ನೆಲೆಯ ಮಧ್ಯೆ ಮತ್ತು ಪಶ್ಚಿಮ ಭಾಗಗಳಲ್ಲಿರುವ 41 ಸಮಾಧಿಗಳಲ್ಲಿ ಐದರಲ್ಲಿ ಜೋಡಿ ಅಸ್ಥಿಪಂಜರಗಳಿವೆ; ಮತ್ತೊಂದರಲ್ಲಿ ಮೂರು ಅಸ್ಥಿಪಂಜರಗಳಿವೆ. ಉಳಿದೆಲ್ಲ ಸಮಾಧಿಗಳಲ್ಲಿ ಒಂದೇ ಅಸ್ಥಿಪಂಜರ ಕಂಡುಬಂದಿದೆ. ಶವವನ್ನು ಆಳವಿಲ್ಲದ ಉದ್ದ ಕುಣಿಗಳಲ್ಲಿ ಪಶ್ಚಿಮ-ಪೂರ್ವಾಭಿಮುಖವಾಗಿ ಹೂಳಲಾಗಿದೆ. ತಲೆ ಪಶ್ಚಿಮಕ್ಕಿದೆ. ಎರಡು ಸಮಾಧಿಗಳಲ್ಲಿ ಮಾತ್ರ ಅಸ್ಥಿಪಂಜರಗಳು ಪೂರ್ವ-ಪಶ್ಚಿಮಾಭಿಮುಖವಾಗಿವೆ. ಎರಡನ್ನು ಹೊರತುಪಡಿಸಿ ಉಳಿದೆಲ್ಲ ಶವಗಳನ್ನು ನೇರಭಂಗಿಯಲ್ಲಿ ಮಲಗಿಸಲಾಗಿದೆ. ಎರಡು ಕೈಕಾಲು ಮಡಿಸಿದ ಭಂಗಿಯಲ್ಲಿವೆ. 41 ಅಸ್ಥಿಪಂಜರಗಳಲ್ಲಿ 24 ಪುರುಷರದ್ದು ಮತ್ತು 17 ಮಹಿಳೆಯರದ್ದು; ಉಳಿದವುಗಳ ಲಿಂಗನಿರ್ಣಯ ಸಾಧ್ಯವಾಗಿಲ್ಲ. ಹೆಚ್ಚಿನ ಅಸ್ಥಿಪಂಜರಗಳು ಮಧ್ಯವಯಸ್ಕರದ್ದು. ಮೂರು ಸಮಾಧಿಗಳಲ್ಲಿ ಬಾಣದ ಮೊನೆಗಳನ್ನು ಅರ್ಪಿಸಲಾಗಿದೆ. ಒಂದರಲ್ಲಿ ಎರಡು ಬಾಣದ ಮೊನೆ ಮತ್ತು ಮೂಳೆಯ ಅಥವಾ ದಂತದ ತೂತುಳ್ಳ ಪದಕವೊಂದು ಅಸ್ಥಿಪಂಜರದ ಪಾದದ ಬಳಿ ಕಂಡುಬಂದಿವೆ. ಕೆಲವೊಂದು ಸಮಾಧಿಗಳಲ್ಲಿ ಪ್ರಾಣಿಮೂಳೆ ಮತ್ತು ಸೂಕ್ಷ್ಮಶಿಲೋಪಕರಣಗಳಿವೆ. ಆದರೆ ಇವು ಆಕಸ್ಮಿಕವಾಗಿ ಸಮಾಧಿ ಮಣ್ಣಿನೊಂದಿಗೆ ಬೆರೆತಿರುವ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ. ಹೆಚ್ಚಿನ ಸಮಾಧಿಗಳ ಸಮೀಪದಲ್ಲಿ ಗುಳಿಒಲೆಗಳಿವೆ.

ಸೂಕ್ಷ್ಮಶಿಲೋಪಕರಣಗಳ ಲಕ್ಷಣಗಳು ಮಣ್ಪಾತ್ರೆರಹಿತ-ನಿರ್ದಿಷ್ಟ ರೇಖಾಕೃತಿ ಉಪಕರಣಗಳ ಸೂಕ್ಷ್ಮಶಿಲಾಯುಗ ಹಂತದ ಲಕ್ಷಣಗಳನ್ನು ಹೋಲುತ್ತವೆ. ಸಮುಚ್ಚಯದಲ್ಲಿ ಹಲವಾರು ನಮೂನೆಯ ಅಲಗುಗಳು, ಅರ್ಧಚಂದ್ರಾಕೃತಿ, ಅಸಮ ಚತುರ್ಭುಜ, ಸಮದ್ವಿಬಾಹು ತ್ರಿಭುಜ, ಮೊನೆ, ಚಿಕ್ಕ ಕೊರೆಯುಳಿ, ವಿವಿಧ ನಮೂನೆಯ ಹೆರೆಚಕ್ಕೆಗಳಿವೆ. ಸಿದ್ಧ ಉಪಕರಣಗಳ ಸಂಖ್ಯೆ ಶೇ.11.7 ಉಪಯೋಗಿಸದ ಚಕ್ಕೆ, ತ್ಯಾಜ್ಯ ಚೂರುಗಳು ಮತ್ತು ಶಿಲಾಗಟ್ಟಿಗಳು ಹೇರಳವಾಗಿವೆ (ಶೇ.88). ಬೆಣಚುಕಲ್ಲು, ಚಕಮಕಿಕಲ್ಲು, ಅಗೇಟ್ ಮತ್ತು ಮಂದಗೆಂಪಿನ ಕಲ್ಲುಗಳಿಂದ ಮಾಡಲ್ಪಟ್ಟಿವೆ. ಇವನ್ನು ಹೆಚ್ಚಿನ ಪಕ್ಷ ವಿಂಧ್ಯಪರ್ವತ ಶ್ರೇಣಿಯಿಂದ ತರಲಾಗಿದೆ. ಆಹಾರಸಂಸ್ಕರಣೆಯ ಸಾಧನಗಳಾದ ಅರೆಯುವ ಕಲ್ಲು, ಕುಟ್ಟಾಣಿ, ಸುತ್ತಿಗೆಕಲ್ಲು ಮತ್ತು ಬಡಿಗಲ್ಲಿವೆ.

ಸಸ್ಯಾವಶೇಷಗಳಲ್ಲಿ ಹಲವಾರು ಜಾತಿಯ ಕಳೆ-ಹುಲ್ಲುಗಳ ಪುಟ್ಟ ಬೀಜಗಳಿವೆ. ಆದರೆ ಇವಾವುದು ಬೆಳೆಸಿದ ತಳಿಗಳಿಗೆ ಸೇರುವುದಿಲ್ಲ. ಪ್ರಾಣಿಗಳಲ್ಲಿ ವಿವಿಧ ಜಾತಿಯ ಜಿಂಕೆಗಳ ಮೂಳೆಗಳು ಅತಿಹೆಚ್ಚು ಪ್ರಮಾಣದಲ್ಲಿವೆ (ಶೇ. 70). ಇವಲ್ಲದೆ ನೀಲಗಾಯ್, ಕೃಷ್ಣಮೃಗ, ಚಿಂಕಾರ, ಕಾಡುಹಂದಿ, ಆನೆ, ಕಾಡೆಮ್ಮೆ, ಖಡ್ಗಮೃಗ, ನರಿ, ತೋಳ, ಆಮೆ, ಮೀನು ಮತ್ತು ಹಕ್ಕಿಗಳ ಮೂಳೆಗಳು ದಾಖಲಾಗಿವೆ. ಸಂಗ್ರಹದಲ್ಲಿರುವ ಎಲ್ಲ ಮೂಳೆಗಳು ಕಾಡುಪ್ರಾಣಿಗಳದ್ದು. ಹೆಚ್ಚಿನ ಮೂಳೆಗಳಲ್ಲಿ ಕಚ್ಚುಗುರುತು ಅಥವಾ ಸುಟ್ಟಚಿಹ್ನೆಗಳಿವೆ. ಆನೆ, ಕಾಡೆಮ್ಮೆ ಮತ್ತು ಖಡ್ಗಮೃಗಗಳ ಮೂಳೆಗಳನ್ನು ಉಪಕರಣಗಳಿಗಾಗಿ ಸಂಗ್ರಹಿಸಿರುವ ಸಾಧ್ಯತೆಯಿದೆ. ಮೂಳೆಯ ಉಪಕರಣಗಳು ಗಣನೀಯ ಪ್ರಮಾಣದಲ್ಲಿವೆ. ಬಾಣದ ಮೊನೆ, ಅಲಗು, ಚೂರಿ, ಉಳಿ, ಹೆರೆಚಕ್ಕೆ, ಗರಗಸ ಮುಂತಾದ ಬಗೆಗಳಿವೆ. ಮೂಳೆಯ ಚಿಕ್ಕ ಚಕ್ಕೆಗಳು ಸಾವಿರಾರು ಸಂಖ್ಯೆಯಲ್ಲಿ ಕಂಡುಬಂದಿವೆ. ಮೂಳೆಯ ಆಭರಣಗಳಲ್ಲಿ ಬಳೆಯ ಒಂದು ಚೂರು ಮತ್ತು ಮೂರು ಪದಕಗಳಿವೆ. ಈ ನೆಲೆಯಿಂದ ನಿರ್ದಿಷ್ಟ ಕಾಲಮಾನಗಳನ್ನು ಪಡೆಯಲಾಗಿಲ್ಲ. ವಸ್ತುಸಂಸ್ಕೃತಿಯ ಆಧಾರದ ಮೇಲೆ ಇದನ್ನು ಪ್ರ.ಶ.ಪೂ. 10,000-4000/3000ದ ಅವಧಿಯಲ್ಲಿ ಇಡಲಾಗಿದೆ. (ವಿ.ಎಸ್.)

**ದಯಾನಂದ ಸರಸ್ವತಿ:** 1825-83. ಹಿಂದುಧರ್ಮ ಸುಧಾರಕ; ಆರ್ಯ ಸಮಾಜದ ಸಂಸ್ಥಾಪಕ. ಇವರು ಗುಜರಾತಿನ ಟಂಕಾರಾ ಎಂಬ ಗ್ರಾಮದಲ್ಲಿ ಜನಿಸಿದರು. ಮೊದಲ ಹೆಸರು ಮೂಲಶಂಕರ. ತಂದೆ ಕೃಷ್ಣಜೀ ತ್ರಿವೇದಿ ಸಾಮವೇದಿ ಔದೀಚ್ಯ ಬ್ರಾಹ್ಮಣ.

ಬಾಲ್ಯದಲ್ಲಿಯೇ ಮೂಲಶಂಕರನ ವೇದಾಧ್ಯಯನ ಸಾಂಗವಾಗಿ ನೆರವೇರಿತು. ಶಿವರಾತ್ರಿಯ ದಿನ ಶಿವಲಿಂಗದ ಮೇಲೇರಿ ಅಕ್ಷತೆ ಕಾಳನ್ನು ಆರಿಸಿ ತಿನ್ನುತ್ತಿದ್ದ ಇಲಿ, ಪ್ರೀತಿಯ ಚಿಕ್ಕಪ್ಪ ಮತ್ತು ತಂಗಿಯ ಅಕಾಲಮೃತ್ಯು–ಈ ಘಟನೆಗಳಿಂದ ಮೂಲಶಂಕರನ ಹೃದಯದಲ್ಲಿ ಬಗೆಬಗೆಯ ಪ್ರಶ್ನೆಗಳು ಎದ್ದುವು. ಜೀವಿತದಲ್ಲಿ ಇವಕ್ಕೆ ಉತ್ತರ ಪಡೆಯಲೇಬೇಕೆಂದು ಬಾಲಕ ದೃಢಸಂಕಲ್ಪ ಮಾಡಿದ. ಅದಕ್ಕಾಗಿ ತಂದೆ ತಾಯಿ ಸಂಪತ್ತು ಎಲ್ಲವನ್ನೂ ತೊರೆದ. ದುರ್ಗಮ ಅರಣ್ಯಗಳಲ್ಲಿ ಅಲೆದು ಯೋಗಿಗಳಿಂದ ಯೋಗವಿದ್ಯೆಯ ಅನೇಕ ರಹಸ್ಯಗಳನ್ನರಿತ. 1848ರಲ್ಲಿ ಪೂರ್ಣಾನಂದ ಸರಸ್ವತಿಗಳು ಈ ಬ್ರಹ್ಮಚಾರಿಗೆ ಸನ್ಯಾಸದೀಕ್ಷೆಯನ್ನು ಕೊಟ್ಟು ದಯಾನಂದ ಸರಸ್ವತಿ ಎಂದು ಹೆಸರಿಟ್ಟರು.

1858ರಲ್ಲಿ ದಯಾನಂದರು ಮಥುರೆಗೆ ಬಂದು ವಿರಜಾನಂದ ಸರಸ್ವತಿಗಳಲ್ಲಿ ವೇದವೇದಾಂಗಗಳನ್ನು ಅಧ್ಯಯನ ಮಾಡಿದರು. ಮಧ್ಯಕಾಲದ ಸಂಕುಚಿತ ಮತಪಂಥಗಳು ದೇಶದಲ್ಲಿ ನೂರಾರು ಜಾತಿಪಂಗಡಗಳನ್ನು ಸೃಷ್ಟಿಸಿ, ರಾಗದ್ವೇಷಗಳನ್ನು ಬೆಳೆಸಿ ಭಾರತೀಯ ಸಮಾಜವನ್ನು ನುಚ್ಚು ನೂರು ಮಾಡಿದವೆಂದು ವಿರಜಾನಂದರ ಭಾವನೆ. ಕುಲಜಾತಿ ಭೇದಗಳ ಸ್ಪರ್ಶವಿಲ್ಲದ ವಿಶ್ವಮಾನವತೆಯನ್ನು ಬೋಧಿಸುವ ಅತಿ ಪುರಾತನ ವೈದಿಕ ಧರ್ಮವನ್ನು ಪ್ರಚಾರ ಮಾಡಬೇಕೆಂದು ಶಿಷ್ಯನಿಗೆ ಅವರು ಆದೇಶ ನೀಡಿದರು. ದಯಾನಂದರು ಬದುಕಿರುವವರೆಗೆ ಗುರುಗಳ ಆದೇಶವನ್ನು ಪರಿಪಾಲಿಸಿದರು. ಯಜುರ್ವೇದ ಭಾಷ್ಯ, ಋಗ್ವೇದ ಭಾಷ್ಯ, ಸತ್ಯಾರ್ಥ ಪ್ರಕಾಶ, ವೇದಾಂಗಪ್ರಕಾಶ ಮುಂತಾದ ಗ್ರಂಥಗಳನ್ನು ರಚಿಸಿದರು. ಆ ಕಾಲದಲ್ಲಿ ಸುಪ್ರಸಿದ್ಧರಾ ಗಿದ್ದ ಶ್ರೀರಾಮಕೃಷ್ಣ ಪರಮಹಂಸ, ಕೇಶವಚಂದ್ರಸೇನ, ದೇವೇಂದ್ರನಾಥ ಟಾಗೋರ್, ಆಲ್ಕಾಟ್, ಈಶ್ವರಚಂದ್ರ ವಿದ್ಯಾಸಾಗರ ಮೊದಲಾದ ಮಹಾಪುರುಷರೊಡನೆ ವಿಚಾರವಿನಿಮಯ ನಡೆಸಿದರು. 1875ರಲ್ಲಿ ಬೊಂಬಾಯಿಯಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿದರು. ದೇಶದ ಬಹುಭಾಗಗಳಲ್ಲಿ ಸಂಚರಿಸಿ ವೈದಿಕಧರ್ಮವನ್ನು ಪ್ರಚಾರ ಮಾಡಿದರು. ಧರ್ಮಪ್ರಚಾರಕ್ಕಾಗಿ ಜೋಧಪುರಕ್ಕೆ ಹೋದರು. ತಮ್ಮ ಉಪದೇಶದಿಂದ ಅಲ್ಲಿಯ ರಾಜನನ್ನು ವೇಶ್ಯೆಯೊಬ್ಬಳ ಸಹವಾಸದಿಂದ ಬಿಡಿಸಿದರು. ಇದರಿಂದ ಕೆರಳಿದ ಆ ಹೆಂಗಸು (ನನ್ಹೀ ಜಾನ್) ಅಡಿಗೆಯವನ ಮೂಲಕ ದಯಾನಂದರಿಗೆ ವಿಷ ಹಾಕಿಸಿದಳೆನ್ನಲಾಗಿದೆ. ಇವರು 1883 ಅಕ್ಟೋಬರ್ 30ರಂದು ನಿಧನರಾದರು. (ಬಿ.ಪಿ.ಎಸ್.; ಎಂ.ವಿ.ಎಸ್.ಆರ್.)

ಕೇವಲ ವೈದಿಕ ಸಾಹಿತ್ಯದ ಅಧ್ಯಯನದ ಫಲವಾಗಿ ಅನೇಕ ಬಗೆಯ ಸಮಾಜಸುಧಾರಣಾ ಕಾರ್ಯಗಳಿಗೆ ಸ್ಫೂರ್ತಿಯನ್ನು ಪಡೆದುದು ಇವರ ವೈಶಿಷ್ಟ್ಯವೆಂದು ಹೇಳಬಹುದು. 19ನೆಯ ಶತಮಾನದಲ್ಲಿ ಕಂಡುಬಂದ ಭಾರತದ ವಿಚಾರ ಕ್ರಾಂತಿಗೂ ಸುಧಾರಣಾ ಚಟುವಟಿಕೆಗಳಿಗೂ ಇಂಗ್ಲಿಷ್ ಸಾಹಿತ್ಯದಿಂದಲೇ ವಿಶೇಷವಾಗಿ ಪ್ರೇರಣೆ ದೊರೆಯಿತು. ಬ್ರಹ್ಮ ಸಮಾಜದ ಕಾರ್ಯಗಳು ಇದಕ್ಕೆ ಉತ್ತಮ ನಿದರ್ಶನ. ಆದರೆ ದಯಾನಂದರು ಈ ಬಗೆಯ ಪ್ರೇರಣೆ ಪಡೆದವರಾಗಿರಲಿಲ್ಲ. ತಮ್ಮ ಸ್ವತಂತ್ರ ವಿಚಾರದಿಂದಲೂ ನಿರ್ಭಯ ಪ್ರವೃತ್ತಿಯಿಂದಲೂ ಹಿಂದು ಸಮಾಜದಲ್ಲಿ ಗುರುತರವಾದ ಸುಧಾರಣೆಗಳನ್ನು ಸೂಚಿಸಿ, ಅವನ್ನು ಕಾರ್ಯಗತ ಮಾಡುವಲ್ಲಿ ಇವರು ಸಮರ್ಥರಾದರು. (ಕೆ.ಎಸ್.ಜಿ.ಆರ್.)

**ದರಿಯ ದೌಲತ್: ನೋಡಿ–ಶ್ರೀರಂಗಪಟ್ಟಣ**

**ದರಿಯಸಾಹೇಬ್:** ಮಧ್ಯಕಾಲೀನ ಭಾರತದ ಭಕ್ತಿಪಂಥದ ಪ್ರಮುಖ ಸುಧಾರಕ. ಈತ ಉಜ್ಜಯನಿಯ ಕ್ಷತ್ರಿಯ ಮನೆತನಕ್ಕೆ ಸೇರಿದ್ದವನು. ಕಬೀರನ ಬೋಧನೆಗಳಿಂದ ಬಹಳ ಪ್ರಭಾವಿತನಾಗಿದ್ದ. ಈತನ ಅನುಯಾಯಿಗಳು ಮುಸ್ಲಿಮರಂತೆ ನಿಂತು ಪ್ರಾರ್ಥನೆ ಮಾಡುತ್ತಿದ್ದರು. ಅದನ್ನು ಕೋನಿಸ್ ಎಂದೂ ಕುಳಿತು ಮಾಡುವ ಪ್ರಾರ್ಥನೆಗೆ ಸಿಜ್ದಾ ಎಂದೂ ಕರೆಯುತ್ತಿದ್ದರು. ಧಾರ್ಮಿಕ ವಿಧಿಗಳಲ್ಲಿ ತೀರ್ಥಯಾತ್ರೆಗೆ ಹೋಗುವುದು, ಹರಕೆ ಮಾಡಿಕೊಳ್ಳುವುದು ಮುಂತಾದವುಗಳಲ್ಲಿ ನಂಬಿಕೆ ಇರಲಿಲ್ಲ. ವಿಗ್ರಹಾರಾಧನೆ, ಜಾತಿಭೇಧ, ಮಾಂಸಾಹಾರ, ಮದ್ಯಸೇವನೆ, ಹಿಂಸೆ ಮುಂತಾದವುಗಳು ಈ ಪಂಥದಲ್ಲಿ ನಿಷಿದ್ಧವಾಗಿದ್ದವು. (ಕೆ.ಎಸ್‌ಡಿ)

**ದಲಾಯಿ ಲಾಮಾ:** 1935–. ಟಿಬೆಟ್ಟಿನ ಬೌದ್ಧರ ಡ್ಗೆ–ಲುಗ್ಸ್–ಪ ಅಥವಾ ಹಳದಿ ತಲೆಯುಡಿಗೆಯ ಸನ್ಯಾಸಿ ವರ್ಗದ ಅಧಿಪತಿ. ಲಾವಹಾ ಲಾಮಾ, ಮಹಾ ಸನ್ಯಾಸಿ. ಟಿಬೆಟ್ಟಿನ ಧಾರ್ಮಿಕ ಹಾಗೂ ಲೌಕಿಕ ಪ್ರಭು. ದಲಾಯಿ ಲಾಮಾ ಪರಂಪರೆ 15ನೆಯ ಶತಮಾನದಲ್ಲಿ ಆರಂಭವಾಯಿತು. ಮಧ್ಯ ಟಿಬೆಟ್ಟಿನ ತಶಿಲುನ್‌ಪೊ ಮಠದ ಡ್ಗೆ–ಮನ್–ಗ್ರುಬ್–ಪ (1391–1475) ಪ್ರಥಮ ಅಧಿಪತಿ. ಲಾಮಾಗಳು ಮತ್ತೆ ಮತ್ತೆ ಅವತಾರವೆತ್ತಿ ಬರುತ್ತಾರೆಂಬ ನಂಬಿಕೆ 14ನೆಯ ಶತಮಾನದಲ್ಲಿ ಪ್ರಚಲಿತವಾಗಿತ್ತು. ಒಬ್ಬರ ಅನಂತರ ಒಬ್ಬರು ಬರುವ ಈ ಲಾಮಾಗಳು ನಿರಂತರ ಪುನರ್ಜನ್ಮಗಳೆಂದೂ ಬೋಧಿಸತ್ತ್ವ ಅವಲೋಕಿತೇಶ್ವರನ ಅವತಾರಗಳೇ ಎಂದೂ ನಂಬಿಕೆ. ಈ ಸನ್ಯಾಸಿ ವರ್ಗದ ಎರಡನೆಯ ಅಧಿಪತಿ ಡ್ಗೆ–ದುನ್–ಗ್ಯಾ–ಮ್‌ಟ್ಸೊ (1475–1542). ಈತ ಲಾಸಾದ ಹೊರವಲಯದಲ್ಲಿದ್ದ ಬ್ರಾಸ್–ಸ್ಪಂಗ್ಸ್ ಅಥವಾ ಡ್ರೆಪಂಗ್ ಮಠದ ಅಧಿಪತಿಯಾದ. ಇದೇ ಈ ಪರಂಪರೆಯ ಮಹಾ ಸನ್ಯಾಸಿ ಪೀಠವಾಯಿತು. ಈತನ ಅನಂತರ ಬಂದಾತ ಬ್ಸೋದ್–ನಾಮ್ಸ್–ಗ್ಯಾ–ಮ್‌ಟ್ಸೊ (1543–88). ಮಂಗೋಲ ಅಧಿಪತಿ ಅಲ್ತಾನ್‌ಖಾನನ ಆಸ್ಥಾನಕ್ಕೆ ಈತ ಭೇಟಿ ಕೊಟ್ಟಿದ್ದಾಗ ಅವನು ಈತನಿಗೆ ತಾ–ಲೆ ಎಂಬ ಬಿರುದು ನೀಡಿದ. ಇದು ಇಂಗ್ಲಿಷಿನಲ್ಲಿ ದಲಾಯಿ ಎಂದಾಯಿತು. ತಾ–ಲೆ ಎಂಬುದು ಟಿಬೆಟನ್ ಭಾಷೆಯ ಗ್ಯಾ–ಮ್‌ಟ್ಸೊ ಎಂಬುದರ ಮಂಗೋಲಿಯನ್ ರೂಪಾಂತರ. ಸಾಗರ ಎಂದು ಇದರ ಅರ್ಥ. ಈತ ಜ್ಞಾನಸಾಗರನೆಂದು ಜನರ ಭಾವನೆ. ಈ ಬಿರುದನ್ನು ಈತನ ಹಿಂದಿನವರಿಗೂ ಅನ್ವಯಿಸಲಾಯಿತು. ಟಿಬೆಟಿಯನರು ದಲಾಯಿ ಲಾಮಾನನ್ನು ಗ್ಯಾಲ್–ಬ–ರನ್–ಪೊ–ಚೆ ಎಂದು ಕರೆಯುತ್ತಾರೆ. ಮಹಾ ಅಮೂಲ್ಯ ವಿಜಯಿ ಎಂಬುದು ಇದರ ಅರ್ಥ.



ಈಗಿನ ದಲಾಯಿ ಲಾಮಾ ಹದಿನಾಲ್ಕನೆಯವರು. ಬ್‌ಸ್ತಾನ್–ಡ್‌ಜಿನ್–ಗ್ಯಾ–ಮ್‌ಟ್ಸೊ ಎಂದು ಇವರ ಹೆಸರು. ಇವರು 1935 ಜುಲೈ 6ರಂದು ಚೀನದ ಜಿಂಗ್‌ಹೈ ಪ್ರಾಂತದ ಟಕಸ್ಮಾರದಲ್ಲಿ ಟಿಬೆಟನ್ ತಾಯಿ ತಂದೆಯರಿಗೆ ಜನಿಸಿದರು. ಇವರು ಪಟ್ಟಾಭಿಷಿಕ್ತರಾದ್ದು 1940ರಲ್ಲಿ. 1950ರವರೆಗೆ ಪ್ರತಿನಿಧಿ ಆಡಳಿತವಿತ್ತು. 1950ರಲ್ಲಿ ಇವರು ಆಡಳಿತ ಸೂತ್ರ ವಹಿಸಿಕೊಂಡರು. ಆ ವರ್ಷ ಚೀನಿ ಜನತಾ ಗಣರಾಜ್ಯ ಟಿಬೆಟ್ಟಿನ ಮೇಲೆ ತನ್ನ ಪರಮಾಧಿಕಾರ ಸ್ಥಾಪಿಸಿತು. ದಲಾಯಿ ಲಾಮಾ ಇದನ್ನು ಪ್ರತಿಭಟಿಸಿದರು. ಆದರೆ ಪ್ರತಿಭಟನೆ ವಿಫಲಗೊಂಡಿತು. ಇವರು ದಕ್ಷಿಣ ಟಿಬೆಟ್ಟಿನ ಚುಂಬಿಗೆ ಪಲಾಯನ ಮಾಡಿದರು. 1951ರಲ್ಲಿ ಚೀನದೊಂದಿಗೆ ಸಂಧಾನ ಮಾಡಿಕೊಂಡರು. 1951–59ರಲ್ಲಿ ಇವರು ರಾಷ್ಟ್ರೀಯ ಸಮಿತಿಯ ಸದಸ್ಯರೂ 1953–59ರಲ್ಲಿ ಚೀನೀ ಬೌದ್ಧ ಸಂಘದ ಗೌರವಾಧ್ಯಕ್ಷರೂ ಆಗಿದ್ದರು. ಟಿಬೆಟ್ ಸ್ವಯಂಮಾಡಳಿತ ಪ್ರದೇಶದ ಸಿದ್ಧತಾ ಸಮಿತಿಯ ಅಧ್ಯಕ್ಷರಾಗಿದ್ದುದು 1955–59ರಲ್ಲಿ. ಇವರಿಗೆ 1959ರಲ್ಲಿ ಬೌದ್ಧದರ್ಶನದ ಡಾಕ್ಟೊರೇಟ್ ಪದವಿ ಪ್ರಾಪ್ತವಾಯಿತು. ಚೀನದ ವಿರುದ್ಧ ಟಿಬೆಟ್ಟಿನಲ್ಲಿ ಎದ್ದ ದಂಗೆಯನ್ನು ಬೀಜಿಂಗ್ ಸರ್ಕಾರ ಅಡಗಿಸಿತು. ದಲಾಯಿ ಲಾಮಾ ಅಲ್ಲಿಂದ ತಪ್ಪಿಸಿಕೊಂಡು ಭಾರತಕ್ಕೆ ಬಂದರು (1959). ಹಿಮಾಚಲ ಪ್ರದೇಶದ ಕಾಂಗಡ ಜಿಲ್ಲೆಯ ಧರ್ಮಶಾಲಾ ಸೈನ್ಯಾಡಳಿತ ಭಾಗದಲ್ಲಿ ಇವರ ಈಗಿನ ಬಿಡಾರ. ಇವರಿಗೆ 1989ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿತು. ಮೈ ಲ್ಯಾಂಡ್ ಅಂಡ್ ಪೀಪಲ್ (1962), ಲೋಸಾರ್ ಮಿಗ್‌ಜೆ (ಜ್ಞಾನ ಚಕ್ಷುವಿನ ಉನ್ಮೀಲನ) (1963), ಉಮಾಯ್ ಥೆಮಿಂಗ್ (ಮಧ್ಯಮಾರ್ಗೋಪಾಯ) (1971)–ಇವು ಇವರು ಬರೆದಿರುವ ಕೃತಿಗಳು. (ಎಲ್.ಆರ್.ಕೆ.)

**ದಾಖಲಾತಿ ಭಿತ್ತಿಚಿತ್ರಗಳು: ನೋಡಿ–ಭಾರತೀಯ ಚಿತ್ರಕಲೆ**

**ದಾದಾಬಾಯಿ, ನವರೋಜಿ:** 1827–1917. ಭಾರತ ಹಾಗೂ ಇಂಗ್ಲೆಂಡ್ ದೇಶಗಳ ಸಾರ್ವಜನಿಕ ಹಾಗೂ ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬ್ರಿಟಿಷ್ ಪಾರ್ಲಿಮೆಂಟಿಗೆ ಚುನಾಯಿತರಾದ ಪ್ರಥಮ ಭಾರತೀಯ. ಪ್ರತಿಭಾವಂತ ರಾಷ್ಟ್ರಪ್ರೇಮಿ, ಸ್ವಾತಂತ್ರ್ಯವಾದಿ, ಶಿಕ್ಷಣತಜ್ಞ, ಸಮಾಜ ಸುಧಾರಕ ಹಾಗೂ ಪತ್ರಕರ್ತ. 1825 ಸೆಪ್ಟೆಂಬರ್ 4 ರಂದು ಮುಂಬಯಿಯಲ್ಲಿ ಬಡ ಪಾರ್ಸಿ ಕುಟುಂಬವೊಂದರಲ್ಲಿ ಜನಿಸಿದರು. ತಂದೆ ನೌರೋಜಿ ಪಾಲಂಜಿ ದೋರ್ದಿ, ತಾಯಿ ಮಾಣಿಕ್‌ಬಾಯಿ. ದಾದಾಬಾಯಿ 4 ವರ್ಷದವರಿದ್ದಾಗ ತಂದೆ ತೀರಿಕೊಂಡರು. ಮನೆಯಲ್ಲಿ ಬಡತನವಿದ್ದರೂ ಮಗನಿಗೆ ಉತ್ತಮ ಶಿಕ್ಷಣ ಕೊಡಿಸಿ ಮುಂದೆ ತರಲು ತಾಯಿ ಶ್ರಮಿಸಿದರು. ದಾದಾಬಾಯಿಯವರಿಗೆ 11 ವರ್ಷ ಆಗಿದ್ದಾಗ ಸೊರಾಬ್‌ಜಿ ಷರಾಫ್‌ರ 7 ವರ್ಷ ವಯಸ್ಸಿನ ಪುತ್ರಿ ಗುಲ್‌ಬಾಯಿಯೊಂದಿಗೆ ವಿವಾಹವಾಯಿತು. ಮುಂಬಯಿಯಲ್ಲಿ ಖಾಸಗಿ ಶಾಲೆಯೊಂದರಲ್ಲಿ ಪ್ರಾಥಮಿಕ ಶಿಕ್ಷಣವನ್ನೂ ಅಲ್ಲಿಯ ಎಲ್ಫಿನ್‌ಸ್ಟನ್ ಇನ್‌ಸ್ಟಿಟ್ಯೂಟಿನಲ್ಲಿ ಪ್ರೌಢಶಿಕ್ಷಣವನ್ನೂ ಪಡೆದರು. 1840ರಲ್ಲಿ ಕ್ಲೇರ್ ವಿದ್ಯಾರ್ಥಿ ವೇತನ ದೊರೆಯಿತು. 1845ರಲ್ಲಿ ಪದವೀಧರರಾದರು. ಅನಂತರ ಎಲ್ಫಿನ್‌ಸ್ಟನ್ ಸಂಸ್ಥೆಯ ನೇಟಿವ್ ಹೆಡ್ ಅಸಿಸ್ಟೆಂಟ್ ಆಗಿ ನೇಮಕಗೊಂಡರು. 1850ರಲ್ಲಿ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಗಣಿತ ಶಾಸ್ತ್ರ ಹಾಗೂ ಭೌತವಿಜ್ಞಾನಗಳ ಸಹಾಯಕ ಪ್ರಾಧ್ಯಾಪಕರಾದರು.

ಆ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕವಾದ ಪ್ರಥಮ ಭಾರತೀಯರಿವರು. ಸ್ತ್ರೀಯರ ಶಿಕ್ಷಣಕ್ಕಾಗಿ ನಡೆಸುತ್ತಿದ್ದ ವಿಶೇಷ ತರಗತಿಗಳಲ್ಲೂ ಇವರು ಬೋಧಿಸುತ್ತಿದ್ದರು.

1855ರಲ್ಲಿ ಕಾಮಾ ವ್ಯಾಪಾರ ಸಂಸ್ಥೆಯ ಪಾಲುದಾರರಾಗಿ ಅದರ ಲಂಡನ್ ಶಾಖೆಯನ್ನು ನೋಡಿಕೊಳ್ಳಲು ಅಲ್ಲಿಗೆ ತೆರಳಿದರು. ಅನಂತರ ತಮ್ಮದೇ ಸಂಸ್ಥೆಯನ್ನು ಆರಂಭಿಸಿದರು (1862). 1865ರಲ್ಲಿ ಡಬ್ಲ್ಯು. ಸಿ. ಬ್ಯಾನರ್ಜಿಯೊಂದಿಗೆ ಲಂಡನ್ ಇಂಡಿಯ ಸೊಸೈಟಿ ಎಂಬ ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾದರು. 1907ರಲ್ಲಿ ಭಾರತಕ್ಕೆ ಮರಳುವವರೆಗೂ ಆ ಸ್ಥಾನದಲ್ಲಿದ್ದು ಅನಂತರವೂ ಅದರ ಗೌರವಾಧ್ಯಕ್ಷರಾಗಿದ್ದರು.

1866 ಡಿಸೆಂಬರ್ 1ರಂದು ಇವರು ಇಂಗ್ಲೆಂಡ್ ಮತ್ತು ಭಾರತಗಳ ನಡುವೆ ಸಾಮರಸ್ಯ ಮತ್ತು ಸ್ನೇಹಭಾವಗಳನ್ನು ಬೆಳೆಯಿಸುವ ಉದ್ದೇಶದಿಂದ ನಿವೃತ್ತ ಆಂಗ್ಲ ಅಧಿಕಾರಿಗಳ ಸಮಿತಿಯೊಂದರ ಸಹಕಾರ ಪಡೆದು ಲಂಡನ್ನಿನಲ್ಲಿ ಈಸ್ಟ್ ಇಂಡಿಯ ಅಸೋಸಿಯೇಷನ್ ಎಂಬ ಸಂಘವನ್ನು ಸ್ಥಾಪಿಸಿ ಅದರ ಕಾರ್ಯದರ್ಶಿಯಾದರು. ಬಹು ಮಂದಿ ಇಂಗ್ಲಿಷ್ ರಾಜಕೀಯ ವ್ಯಕ್ತಿಗಳು, ರಾಜನೀತಿಜ್ಞರು, ನಿವೃತ್ತ ಗವರ್ನರರು ಮತ್ತು ಇತರ ಅಧಿಕಾರಿಗಳು ಆ ಸಂಘದ ಸದಸ್ಯರಾದರು. ಭಾರತದ ಹಿತಾಸಕ್ತಿಗಳನ್ನು ಸ್ವತಂತ್ರ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ಪ್ರತಿಪಾದಿಸುವುದು, ಅವನ್ನು ಸಾಧಿಸಲು ಎಲ್ಲ ನ್ಯಾಯಬದ್ಧ ರೀತಿಗಳಲ್ಲೂ ಶ್ರಮಿಸುವುದು, ಭಾರತದ ಬಗ್ಗೆ ತಿಳುವಳಿಕೆ ನೀಡುವುದು–ಇವು ಸಂಘದ ಗುರಿಗಳಾಗಿದ್ದವು. ಭಾರತೀಯ ಸಿವಿಲ್ ಸರ್ವಿಸಿಗೆ ಭಾರತೀಯರನ್ನು ಸೇರಿಸಿಕೊಳ್ಳುವ ಪ್ರಶ್ನೆಯನ್ನೆತ್ತಿ, ಆ ಪರೀಕ್ಷೆಯನ್ನು ಭಾರತದಲ್ಲೂ ನಡೆಸುವಂತೆ ಸ್ಟೇಟ್ ಸೆಕ್ರೆಟರಿಗೆ ವಿಜ್ಞಾಪನ ಪತ್ರವೊಂದನ್ನು ಕಳಿಸಬೇಕೆಂಬ ಸೂಚನೆಯನ್ನು 1867 ಆಗಸ್ಟ್ 13ರ ಸಭೆಯಲ್ಲಿ ಮಂಡಿಸಿದರು. ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಏಕಕಾಲದಲ್ಲಿ ಲಂಡನ್, ಕಲ್ಕತ್ತ, ಮದರಾಸು, ಬೊಂಬಾಯಿಗಳಲ್ಲಿ ನಡೆಸುವುದು ಅಪೇಕ್ಷಣೀಯವೆಂಬ ಸೂಚನೆ ಕಾಮನ್ಸ್ ಸಭೆಗೆ ಹೋಯಿತು. ಭಾರತದ ಪ್ರಮುಖ ನಗರಗಳಲ್ಲಿ ಈಸ್ಟ್ ಇಂಡಿಯ ಅಸೋಸಿಯೇಷನ್ನಿನ ಶಾಖೆಗಳನ್ನು ತೆರೆಯುವುದಕ್ಕೆ ಮತ್ತು ನಿಧಿ ಕೂಡಿಸುವುದಕ್ಕೆ ಹಿಂದಿರುಗಿದರು. ಮುಂಬಯಿಯಲ್ಲಿ ಅದರ ಶಾಖೆಯೊಂದು ಆರಂಭವಾಯಿತು. ಕೆಲವು ತಿಂಗಳುಗಳಲ್ಲಿ ಕಲ್ಕತ್ತ, ಮದರಾಸು ನಗರಗಳಲ್ಲೂ ಶಾಖೆಗಳು ಸ್ಥಾಪಿತವಾದವು.

1874ರಲ್ಲಿ ಬರೋಡದ ದಿವಾನರಾಗಿ ನೇಮಕವಾದರು. ಅನಂತರ ಆ ಹುದ್ದೆಗೆ ರಾಜೀನಾಮೆ ನೀಡಿದರು. 1883ರಲ್ಲಿ ಜಸ್ಟಿಸ್ ಆಫ್ ದಿ ಪೀಸ್ ಆಗಿ ಇವರ ನೇಮಕವಾಯಿತು. ದಿ ವಾಯ್ಸ್ ಆಫ್ ಇಂಡಿಯ (1883) ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಭಾರತೀಯರ ಮನೋಭಾವ, ಆಶಯಗಳನ್ನು ಬ್ರಿಟಿಷರಿಗೆ ಮನವರಿಕೆ ಮಾಡಿಕೊಡುವುದೇ ಈ ಪತ್ರಿಕೆಯ ಉದ್ದೇಶವಾಗಿತ್ತು. ಅನಂತರ ಇದು ಇಂಡಿಯನ್ ಸ್ಪೆಕ್ಟೇಟರ್ ಪತ್ರಿಕೆಯಲ್ಲಿ ವಿಲೀನವಾಯಿತು.

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಯಲ್ಲಿ (1885) ಭಾಗವಹಿಸಿದವರ ಪೈಕಿ ಇವರೂ ಒಬ್ಬರು. 1886, 1893 ಮತ್ತು 1906ರಲ್ಲಿ ಇವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು (1886; 1893; 1906). 1902ರಲ್ಲಿ ಇವರು ಮಧ್ಯ ಫಿನ್ಸ್‌ಬರಿ ಕ್ಷೇತ್ರದಿಂದ ಲಿಬರಲ್ ಪಕ್ಷದ ಅಭ್ಯರ್ಥಿಯಾಗಿ ಬ್ರಿಟನ್ನಿನ ಕಾಮನ್ಸ್ ಸಭೆಗೆ ಚುನಾಯಿತರಾದರು. ಸಂವೈಧಾನಿಕ ಪ್ರಜಾಸತ್ತೆಯಲ್ಲಿ ಇವರಿಗೆ ದೃಢವಾದ ನಂಬಿಕೆಯಿತ್ತು. ಭಾರತದ ಸ್ವಾತಂತ್ರ್ಯದ ಪ್ರಶ್ನೆ ಬ್ರಿಟನ್ನಿನ ಕಾಮನ್ಸ್ ಸಭೆಯಲ್ಲಿ ಇತ್ಯರ್ಥವಾಗಬೇಕೆಂದು ಇವರು 1905ರಲ್ಲಿ ಹೇಳಿದರು. ಆಮ್‌ಸ್ಟರ್‌ಡ್ಯಾಮಿನಲ್ಲಿ ಜರುಗಿದ ಅಂತಾರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿದ್ದರು. ಒಂದನೆಯ ಮಹಾಯುದ್ಧದಲ್ಲಿ ಭಾರತೀಯರು ಬ್ರಿಟಿಷರಿಗೆ ಸಹಾಯ ಮಾಡಬೇಕೆಂಬುದಾಗಿ ಇವರು ಮನವಿ ಮಾಡಿದರು. 1916ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯ ಇವರಿಗೆ ಗೌರವ ಎಲ್.ಎಲ್.ಡಿ. ಪದವಿ ನೀಡಿತು. ಇವರು 1917 ಜೂನ್ 30 ರಂದು ನಿಧನರಾದರು.

ಇವರು ಅನೇಕ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. ಇಂಗ್ಲೆಂಡ್ ಮತ್ತು ಭಾರತದ ಅನೇಕ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗುತ್ತಿದ್ದವು. ಭಾರತದಲ್ಲಿ ದಾರಿದ್ರ್ಯ ಎಂಬ ವಿಷಯವನ್ನು ಕುರಿತು ಇವರು ಇಂಗ್ಲಿಷಿನಲ್ಲಿ ಬರೆದ ಹೊತ್ತಗೆಯೊಂದು 1878ರಲ್ಲಿ ಪ್ರಕಟವಾಯಿತು. ಇದನ್ನು ಅನಂತರ ಪರಿಷ್ಕರಿಸಿ ಪಿಗ್ಗಿಸಿ, ಪಾವರ್ಟಿ ಅಂಡ್ ಎನ್–ಬ್ರಿಟಿಷ್ ರೂಲ್ ಇನ್ ಇಂಡಿಯ ಎಂಬ ಹೆಸರಿನಲ್ಲಿ 1901ರಲ್ಲಿ ಲಂಡನ್ನಿನಿಂದ ಪ್ರಕಟಿಸಿದರು. ಇವರ ಭಾಷಣಗಳು ಮತ್ತು ಲೇಖನಗಳ ಸಂಕಲನವೊಂದನ್ನು ಮದರಾಸಿನ ಜಿ.ಎ. ನಟೇಶನ್ ಮತ್ತು ಕಂಪನಿ ಪ್ರಕಟಿಸಿದೆ. ಭಾರತದ ರಾಷ್ಟ್ರೀಯ ವರಮಾನ ಕ್ಷೇತ್ರದಲ್ಲಿ ಮೊಟ್ಟಮೊದಲು ಅಧ್ಯಯನ ನಡೆಸಿದ ಇವರು ಆರ್ಥಿಕ ಶೋಷಣೆಯ ವಾಸ್ತವ ಚಿತ್ರಣವನ್ನು ಮೊದಲ ಬಾರಿಗೆ ತೆರೆದಿಟ್ಟರು. ಅಂತೆಯೇ ಡ್ರೈನ್‌ಥಿಯರಿ ಅಥವಾ ಸಂಪತ್ತಿನ ಸೋರುವಿಕೆಯ ಸಿದ್ಧಾಂತವನ್ನು ಪ್ರತಿಪಾದಿಸಿದರು. ಭಾರತದಲ್ಲಿ ಸರಾಸರಿ ವಾರ್ಷಿಕ ತಲಾ ಆದಾಯ ಕೇವಲ ಇಪ್ಪತ್ತು ರೂಪಾಯಿಗಳೆಂದು ಅಂದಾಜು ಮಾಡಿ ಭಾರತೀಯರ ಕಡು ಬಡತನದ ಕ್ರೂರ ಚಿತ್ರಣವನ್ನು ತೆರೆದಿಟ್ಟರು. ಜೊತೆಗೆ ಬ್ರಿಟಿಷರು ಆರಂಭಿಸಿದ್ದ ಮುಕ್ತ ವ್ಯಾಪಾರ ನೀತಿಯಿಂದಾಗಿ ಭಾರತದ ಕೃಷಿ ಹಾಗೂ ಕೈಗಾರಿಕೆ ನಾಶವಾಗಿ ಭಾರತ ಕೇವಲ ಕಚ್ಚಾವಸ್ತುಗಳನ್ನು ರವಾನಿಸುವ ಹಾಗೂ ಸಿದ್ಧಪಡಿಸಿದ ವಸ್ತುಗಳ ಮಾರುಕಟ್ಟೆಯಾದುದು ಭಾರತದ ಆರ್ಥಿಕ ದುಃಸ್ಥಿತಿಗೆ ಕಾರಣವಾಯಿತೆಂಬುದನ್ನು ವಿವರಿಸಿ ಇದರ ಪರಿಹಾರ ಸ್ವದೇಶಿ ಮಂತ್ರದಲ್ಲಿದೆ ಎಂದರು. ಇವರ ಆರ್ಥಿಕ ಚಿಂತನೆಗಳು ವಿದ್ಯಾವಂತ ಬ್ರಿಟಿಷ್‌ಪರ ಭಾರತೀಯ ರನ್ನು ರೊಚ್ಚಿಗೆಬ್ಬಿಸಿತು. ಇವರು ಫ್ರಾಮ್‌ಜಿ ಇನ್‌ಸ್ಟಿಟ್ಯೂಟ್, ಇರಾನಿ ಫಂಡ್ ಪಾರ್ಸೀ ಜಿಮ್ನಾಸಿಯಮ್, ವಿಧವಾ ವಿವಾಹ ಸಂಘ, ವಿಕ್ಟೋರಿಯ ಮತ್ತು ಆಲ್ಬರ್ಟ್ ಮ್ಯೂಸಿಯಮ್ ಮೊದಲಾದ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದರು. ಪಾರ್ಸಿಗಳ ಮುನ್ನಡೆಗಾಗಿಯೂ ಶ್ರಮಿಸಿದರು.

ಜಾತೀಯತೆಯಲ್ಲಿ ಇವರಿಗೆ ನಂಬಿಕೆಯಿರಲಿಲ್ಲ. ಸ್ತ್ರೀ ಶಿಕ್ಷಣದ ಮುಂದಾಳಾಗಿದ್ದ ಇವರು ಸ್ತ್ರೀಪುರುಷರಿಗೆ ಸಮಾನವಾದ ಕಾನೂನುಗಳಿರಬೇಕೆಂದು ಪ್ರತಿಪಾದಿಸುತ್ತಿದ್ದರು. ಇವರು ಪ್ರಾಥಮಿಕ ಶಿಕ್ಷಣದ ಮಹತ್ತ್ವವನ್ನು ಒತ್ತಿ ಹೇಳಿದರು. ವಿಚಾರ, ಮಾತು ಮತ್ತು ಕೃತಿಗಳಲ್ಲಿ ಶುಚಿಯಾಗಿರಬೇಕೆಂದು ಝೋರಾಸ್ಟ್ರಿಯನರ ಕರ್ತವ್ಯಗಳನ್ನು ಕುರಿತು ಬರೆದಿರುವ ಹೊತ್ತಗೆಯಲ್ಲಿ ಹೇಳಿದ್ದಾರೆ.

ಭಾರತ ಸ್ವರಾಜ್ಯವಾಗಬೇಕೆಂಬುದು ಇವರ ಹಂಬಲವಾಗಿತ್ತು. ಇದಕ್ಕಾಗಿ ಸಂವಿಧಾನ ಬದ್ಧವಾದ ಮಾರ್ಗಗಳನ್ನೇ ಅನುಸರಿಸಬೇಕೆಂದು ಇವರು ಪ್ರತಿಪಾದಿಸಿದರು. (ಬಿ.ಪಿ.ಐ.)

**ದಾದುಪುರ:** ಉತ್ತರಪ್ರದೇಶ ರಾಜ್ಯದ ಲಖನೌ ನಗರದ ಆಗ್ನೇಯ ದಿಕ್ಕಿಗೆ 23 ಕಿಮೀ ದೂರದಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿ ಸಣ್ಣ ತೊರೆಯ ಹತ್ತಿರ ಸು. 250ಮೀ 150 ಮೀ ವಿಸ್ತಾರದ ಮತ್ತು 4 ಮೀ ಎತ್ತರದ ಪ್ರಾಚೀನ ದಿಬ್ಬವಿದೆ. 1960–61 ರಲ್ಲಿ ಶೋಧವಾದ ಈ ನೆಲೆಯಲ್ಲಿ ಉತ್ತರ ಪ್ರದೇಶ ಸರ್ಕಾರದ ಪುರಾತತ್ತ್ವ ಇಲಾಖೆ 1999–2001 ರ ಅವಧಿಯಲ್ಲಿ ಉತ್ಖನನ ನಡೆಸಿ 12 ಪದರಗಳನ್ನೂ ಅವುಗಳಲ್ಲಿ ಅನುಕ್ರಮವಾಗಿ ಮೂರು ಸಾಂಸ್ಕೃತಿಕ ಹಂತಗಳನ್ನೂ ಗುರುತಿಸಿತು.

1ನೆಯ ಹಂತ: ಇಲ್ಲಿ ಕಪ್ಪುಬಣ್ಣದ ಉತ್ತಮ ಮಣ್ಪಾತ್ರೆಗಳು ಅಧಿಕವಾಗಿಯೂ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ವಿರಳವಾಗಿಯೂ (1.77%) ದೊರೆತಿವೆ. ಎರಡನೆಯ ವರ್ಗದ ಪಾತ್ರೆಗಳನ್ನು ಅಪರೂಪವಾಗಿ ಬಿಳಿಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸಲಾಗಿದೆ.



ಆದಿ ಹಂತದ ಕಬ್ಬಿಣದ ಬಾಣದ ನಮೂನೆ

ಕೆಲವೊಂದರ ಮೇಲೆ ಹೊಸೆದ ಹುರಿಯ ಅಚ್ಚೊತ್ತಿದ ವಿನ್ಯಾಸಗಳಿವೆ. ಅರ್ಧಗೋಲಾಕೃತಿಯ ಬಟ್ಟಲು, ತಟ್ಟೆಗಳು, ನೀರಿನ ಪಾತ್ರೆ, ದೊಡ್ಡ ಬೋಗುಣಿಗಳು ಸಾಮಾನ್ಯ ಆಕಾರಗಳು. ಮಣ್ಣು–ಬೊಂಬಿನ ತಡಿಕೆ ಗೋಡೆಗಳು ಮತ್ತು ಬತ್ತದ ಹೊಟ್ಟಿನ ಮಿಶ್ರಣವಿರುವ ಸುಟ್ಟಇಟ್ಟಿಗೆ ಮುಂತಾದುವುಗಳಿಂದ ನಿರ್ಮಿತವಾದ ವಾಸಗೃಹಗಳ ಅವಶೇಷಗಳಲ್ಲದೆ ಕಬ್ಬಿಣದ ಬಾಣದಮೊನೆ, ಮೊಳೆ, ಮೂಳೆಯ ದಬ್ಬಣ, ಬಾಣದ ಮೊನೆಗಳು, ಸುಡಾವೆಮಣ್ಣಿನ ಮಣಿಗಳು, ಕುಂಟೆಬಿಲ್ಲೆ, ಉಜ್ಜು ಕಲ್ಲುಗಳು ದೊರಕಿವೆ. ಇಂಗಾಲ–14ರ ಕಾಲಮಾಪನದಿಂದ ಈ ಹಂತ ಪ್ರ.ಶ.ಪೂ. 1700–1300 ಅವಧಿಯದೆಂದು ಹೇಳಬಹುದು.

2ನೆಯ ಹಂತ: ಈ ಹಂತದಲ್ಲಿ ನೇರಳೆ/ಕಪ್ಪುಬಣ್ಣದ ರೇಖಾಚಿತ್ರವುಳ್ಳ ಬೂದುಬಣ್ಣದ ಪಾತ್ರೆಗಳು ವಿಶೇಷವಾಗಿವೆ. ಜೊತೆಗೆ ಮೊದಲನೆಯ ಹಂತದ ಪಾತ್ರೆಗಳ ಬಳಕೆ ಮುಂದುವರೆಯಿತು. ವಾಸದ ಮನೆಗಳ ನೆಲಗಟ್ಟುಗಳು, ಅಗ್ಗಿಷ್ಟಿಕೆ, ಮಣ್ಣು ಮೆತ್ತಿದ ತಡಿಕೆ ಗೋಡೆಗಳ ಭಾಗಗಳು, ಜಿಂಕೆಕೊಂಬಿನ ಹಾಗೂ ಎಲುಬಿನ ಬಾಣದಮೊನೆಗಳು, ಸೂಕ್ಷ್ಮ ಮೊನೆಗಳು, ಮಣ್ಣಿನ ಮಣಿಗಳು, ಕಬ್ಬಿಣದ ಉಪಕರಣಗಳು, ಕರಕಲಾದ ಪ್ರಾಣಿಗಳ ಎಲುಬುಗಳು ಇಲ್ಲಿ ಕಂಡುಬಂದಿವೆ. ಈ ಹಂತ ಪ್ರ.ಶ.ಪೂ. 800–700 ರಲ್ಲಿ ಕೊನೆಗೊಂಡಿರಬಹುದೆಂದು ತರ್ಕಿಸಲಾಗಿದೆ.

3ನೆಯ ಹಂತ: ಔತ್ತರೇಯ ಮೆರುಗಿನ ಕಪ್ಪು ಪಾತ್ರೆ, ರೇಖಾಚಿತ್ರಿತ ಬೂದುಬಣ್ಣದ ಮಣ್ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಹಾಗೂ ಕೆಂಪು ಪಾತ್ರೆಗಳನ್ನು ಈ ಹಂತದಲ್ಲಿ ಬಳಸಲಾಗುತ್ತಿತ್ತು. ಮನೆಗಳ ನೆಲಗಳು, ತಡಿಕೆ ಗೋಡೆಯ ತುಂಡುಗಳು, ಸುಟ್ಟ

ಇಟ್ಟಿಗೆಗಳ ಕೆಲವು ಚೂರುಗಳು, ಕಬ್ಬಿಣದ ಉಪಕರಣಗಳು, ಎಲುಬಿನ ಬಾಣದ ಮೊನೆಗಳು, ದಬ್ಬಳದಂಥ ಮೊನೆಗಳು, ಸೂಕ್ಷ್ಮ ಮೊನೆಗಳು, ಸುಡಾವೆ ಮಣ್ಣಿನ ದುಂಡುಬಿಲ್ಲೆಗಳು, ಮನುಷ್ಯಾಕೃತಿ ಗೊಂಬೆಗಳು, ಕಲ್ಲು ಮತ್ತು ಮಣ್ಣಿನ ಮಣಿಗಳು, ಕಲ್ಲಿನ ಸುತ್ತಿಗೆಗಳು, ಉಜ್ಜುಗಲ್ಲುಗಳು ಮುಂತಾದ ನಿತ್ಯೋಪಯೋಗಿ ವಸ್ತುಗಳು ಇಲ್ಲಿ ಸಿಕ್ಕಿವೆ. ಈ ಹಂತದ ಕಾಲಮಾನ ಪ್ರ.ಶ.ಪೂ. 700/600–300/200 ಎಂದು ಅಂದಾಜಿಸಲಾಗಿದೆ. ಈ ನೆಲೆಯ ಮೇಲೆ ಪ್ರ.ಶ.ದ ಆರಂಭಿಕ ಕಾಲದ ಅವಶೇಷಗಳು ಹರಡಿವೆ. ಆದರೆ ಈ ಕಾಲದ ವಸತಿ ನೆಲೆಯನ್ನು ಗುರುತಿಸಲು ಆಗಿಲ್ಲ.

ಈ ನೆಲೆಯ ಉತ್ಖನನದಿಂದ ತಿಳಿದ ಮಹತ್ತ್ವದ ವಿಷಯವೆಂದರೆ ಕಬ್ಬಿಣ ಉಪಕರಣಗಳ ಪ್ರಾಚೀನತೆ. ಇಷ್ಟು ಪ್ರಾಚೀನವಾದ ಕಬ್ಬಿಣ ಉಪಕರಣಗಳು ಗಂಗಾನದಿ ಬಯಲಿನಲ್ಲಿ ಈವರೆಗೆ ದೊರೆತಿರಲಿಲ್ಲ. ವಿಂಧ್ಯ ಪ್ರಸ್ಥಭೂಮಿಯ ಮಲ್ಹರ್‌ನಲ್ಲಿ ಮಾತ್ರ ಪ್ರ.ಶ.ಪೂ. 1800ರ ಕಾಲದ ಕಬ್ಬಿಣದ ಕುಲುಮೆ, ಕಿಟ್ಟದ (ಕರಿಕು) ಅವಶೇಷಗಳು ಕಂಡುಬಂದಿವೆ. ದಾದುಪುರದಲ್ಲಿ ತಯಾರಿಕೆಯ ಅವಶೇಷಗಳು ಸಿಗದಿರುವುದರಿಂದ ವಿಂಧ್ಯ ಪ್ರದೇಶದಿಂದ ಇಲ್ಲಿಗೆ ಸಿದ್ಧ ಕಬ್ಬಿಣ ಉಪಕರಣಗಳು ಆಮದಾಗುತ್ತಿದ್ದವೆಂದು ಕಾಣುತ್ತದೆ. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಗಂಗಾ–ಗೋಮತಿ ಸಂಗಮ ಪ್ರದೇಶದಲ್ಲಿರುವ ಹುಲಸ್‌ಖೇಡ, ಕೆಲ್ಲಪಶ್ಚಿಮ್ (ಲಖನೌ ಜಿಲ್ಲೆ), ಪರ್ಯಾರ್ಲ್, ಸನ್‌ಚನ್‌ಕೋಟ (ಉನ್ನಾಂ ಜಿಲ್ಲೆ), ಶೃಂಗವೇರಪುರ (ಅಲಹಾಬಾದ್ ಜಿಲ್ಲೆ) ಮುಂತಾದ ವಸತಿನೆಲೆಗಳಿಗಿಂತ ದಾದುಪುರ ಪ್ರಾಚೀನವಾಗಿದೆ.(ಆರ್.ಟಿ.)

**ದಾರಾಷುಕೊ:** 1614–58. ಷಹಜಹಾನ್ ಹಾಗೂ ಮುಮ್ತಾಜ್‌ಮಹಲಳ ಪ್ರೀತಿಯ ಹಿರಿಯ ಮಗ. ಇವನಿಗೆ ಮೂವರು ಸಹೋದರರು (ಶೂಜ, ಔರಂಗಜೇಬ್, ಮುರಾದ್ ಹಾಗೂ ಇಬ್ಬರು ತಂಗಿಯರು ಜಹನಾರ, ರೋಷನಾರ). ಷಹಜಹಾನ್ ಇವನನ್ನು ಪಂಜಾಬಿನ ರಾಜ್ಯಪಾಲನಾಗಿ ನೇಮಿಸಿದಾಗ (1657) ಔರಂಗಜೇಬ್ ಅಸಮಧಾನಗೊಂಡಿದ್ದ. ನಾದಿರಬೇಗಂ ಇವನ ಪತ್ನಿ. ಇಬ್ಬರು ಗಂಡು ಮಕ್ಕಳಾದ ಸುಲೇಮಾನ್‌ಷುಕೊ, ಸಿಫಿರ್‌ಷುಕೊ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದರು.

ದಾರಾಷುಕೊ ರಾಜ್ಯದ ರಾಜಕೀಯ, ಆಡಳಿತದ ತರಬೇತಿಯ ಹೊರತಾಗಿಯೂ ಸೂಫಿ ಸಂತರು ಹಾಗೂ ಪಾದ್ರಿಗಳ ಸಂಪರ್ಕದಲ್ಲಿದ್ದ. ತಾಲ್ಮುದ್, ಹೊಸ ಒಡಂಬಡಿಕೆ, ಉಪನಿಷತ್ ಸಿದ್ಧಾಂತ ಹಾಗೂ ಸೂಫಿ ಕೃತಿಗಳ ಅಧ್ಯಯನದತ್ತ ಒಲವು ಹೊಂದಿದ್ದ. ಖಾದ್ರಿಯತ್ ಸೂಫಿ ಪಂಥಕ್ಕೆ ಮಾರುಹೋಗಿದ್ದ ಇವನು ವೇದಾಂತ, ಹಿಂದುತತ್ತ್ವಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಿದ. ಹಲವು ಧರ್ಮಗಳ ನೀತಿಸಾರಗಳ ಬಗ್ಗೆ ಪರಿಜ್ಞಾನ ಹೊಂದಿದ್ದು, ಹಿಂದು–ಮುಸ್ಲಿಂ ಧರ್ಮಗಳ ನಡುವೆ ಭಿನ್ನಭೇದಗಳಿಲ್ಲವೆಂದು ಪ್ರತಿಪಾದಿಸುತ್ತಿದ್ದ. ತನ್ನ ಮುತ್ತಾತ ಅಕ್ಬರನಂತೆ ಸರ್ವಧರ್ಮ ಗ್ರಂಥಗಳನ್ನು ಅಧ್ಯಯನ ಮಾಡಿ ಸಮನ್ವಯತೆಯನ್ನು ತರುವುದೇ ಇವನ ಉದ್ದೇಶವಾಗಿತ್ತು. ಆದರೂ ಇಸ್ಲಾಂ ಧರ್ಮದ ಬಗ್ಗೆ ನಿಷ್ಠೆ ಹೊಂದಿದ್ದ. ಈತನ ಉದ್ಗಾರದಂತೆ ವೇದಾಂತ ಒಂದು ವಿಜ್ಞಾನದಂತೆ, ಸೂಫಿಪಂಥವೂ ವಿಜ್ಞಾನ ಎಂಬುದಾಗಿತ್ತು. ಕುರಾನ್ ಧರ್ಮಗ್ರಂಥದ ಸುರ 18:60 ರಲ್ಲಿನ ಅರ್ಥವನ್ನು ತೆಗೆದುಕೊಂಡು ಮಜ್ ಮೈ ಅಲ್–ಬಹ್‌ವಾಯ (ಎರಡು ಸಾಗರಗಳ ಮಿಲನ) ಎಂಬ ಗ್ರಂಥ ರಚಿಸಿದ. ಈತ ಧರ್ಮಸಹಿಷ್ಣುತೆ ಹಾಗೂ ಸೂಫಿ ತತ್ತ್ವಗಳ ಪ್ರತಿಪಾದನೆಯಿಂದಾಗಿ ಇಸ್ಲಾಂ ಸಂಪ್ರದಾಯಸ್ಥರ ಕೆಂಗಣ್ಣಿಗೆ ಗುರಿಯಾಗಿದ್ದ. ಅಥರ್ವಣವೇದ, ಉಪನಿಷತ್ತುಗಳ ಅಧ್ಯಯನ ಮಾಡಿದ್ದ. ಈತ ತತ್ತ್ವಜ್ಞಾನಿಯಂತೆ ಕಾಣುತ್ತಿದ್ದ. ಆನಂದ ಹಾಗೂ ಕರುಣೆಯ ಮೂರ್ತಿಯಂತಿದ್ದ ಈತನಲ್ಲಿ ನಾನತ್ವ ಹಾಗೂ ಮುಂಗೋಪ ಅಧಿಕವಾಗಿತ್ತು. ತನ್ನ ನಿಲುವುಗಳೇ ಸರಿಯೆಂಬ ಭಾವನೆಯಿಂದಾಗಿ ಸಮಯದಲ್ಲಿ ಸಲಹೆ ನೀಡಲು ಈತನ ಸ್ನೇಹಿತರು ಹಿಂಜರಿಯುತ್ತಿದ್ದರು. ಅದೃಷ್ಟ ಯಾವಾಗಲೂ ನನ್ನ ಜೊತೆಯಲ್ಲಿರುತ್ತದೆ, ಎಲ್ಲರೂ ನನ್ನನ್ನು ಪ್ರೀತಿಸುತ್ತಾರೆ ಎಂಬ ಗುಂಗಿನಲ್ಲಿರುತ್ತಿದ್ದ. ತಂದೆಯ ಪ್ರೀತಿಯ ಹಾಗೂ ಹಿರಿಯ ಮಗನಾದ ಈತ ಸದಾ ತಂದೆಯ ಬಳಿಯಲ್ಲಿ ವಾಸಿಸುತ್ತಿದ್ದ. ಮೊಗಲ್ ಸಾಮ್ರಾಟನಾಗಲು ಬೇಕಾದ ಧೈರ್ಯ, ಸಮರಕಲೆ, ರಾಜತಾಂತ್ರಿಕತೆ ಹಾಗೂ ಸೇನಾಧಿಪತಿಯ ಲಕ್ಷಣಗಳನ್ನು ಹೊಂದಿರಲಿಲ್ಲ. ಪಂಜಾಬ್ ರಾಜ್ಯಪಾಲನಾದರೂ ಆಗ್ರದಲ್ಲೆ ಉಳಿದು ಉತ್ತಮ ಸೈನಿಕಗುಣ ಹಾಗೂ ಯುದ್ಧರಂಗದ ಅನುಭವಗಳ ಕೊರತೆಯಿಂದಾಗಿ ತನ್ನ ಸೋದರ ಔರಂಗಜೇಬ್‌ನಿಂದ ಸೋಲಬೇಕಾಯಿತು.

ಷಹಜಹಾನನ ಆರೋಗ್ಯ ಸ್ಥಿತಿ ಬಿಗಡಾಯಿಸಿದಾಗ ಸಹಜವಾಗಿ ಸಿಂಹಾಸನಕ್ಕಾಗಿ ಸಹೋದರರ ನಡುವೆ ಪೈಪೋಟಿಯುಂಟಾಯಿತು. ತಂದೆಯ ಬೆಂಬಲ ಹಾಗೂ ಸಂಪತ್ತಿನ ಲಭ್ಯತೆಯ ಹೊರತಾಗಿ ದಾರಾಷುಕೊ ದುರಾದೃಷ್ಟದ ಬೆನ್ನೇರಿದ್ದ. 1658 ಜೂನ್ 8ರಂದು ಸಂಭವಿಸಿದ ಆಗ್ರದ ಸಮುಘರ್ ಯುದ್ಧದಲ್ಲಿ ಸಿಂಹಾಸನಕ್ಕಾಗಿ ಸಹೋದರರಾದ ಮುರಾದ್ ಹಾಗೂ ಔರಂಗಜೇಬ್‌ರ ಸಮ್ಮಿಶ್ರ ಸೈನ್ಯವನ್ನು ಎದುರಿಸಬೇಕಾಯಿತು. ಸಾಹಸಿಗರಾದ ರಜಪೂತ್ ಸೈನಿಕರು ತಮ್ಮ ಶಕ್ತಿ ಮೀರಿ ಹೋರಾಡಿ ದಾರಾಷುಕೊನನ್ನು ಜಯದ ಹೊಸ್ತಿಲಲ್ಲಿ ನಿಲ್ಲಿಸಿದರು. ಕುತಂತ್ರಿಯಾದ ಸೇನಾಪತಿ ಖಲೀಮುಲ್ಲಾನ ಸಲಹೆಯಂತೆ ಯುದ್ಧರಂಗದಲ್ಲಿ ಗಾಯಗೊಂಡ ಆನೆಯಿಂದಿಳಿದು ಕುದುರೆಯ ಮೇಲೆ ಯುದ್ಧ ಮುಂದುವರೆಸಿದ. ಆದರೆ ರಾಜನನ್ನು ಕಾಣದ ಸೈನಿಕರು ರಣರಂಗದಿಂದ ಪಲಾಯನಗೈದರು. ಇದರಿಂದಾಗಿ ದಾರಾಷುಕೊ ಸೋತು ಪಂಜಾಬಿಗೆ ಓಡಿಹೋದ. ಶತಾಯಗತಾಯ ದಾರನನ್ನು ಸೆರೆಹಿಡಿಯಬೇಕೆಂದು ತೀರ್ಮಾನಿಸಿದ ಔರಂಗಜೇಬ್‌ನ ಸೈನ್ಯ ಹಿಂಬಾಲಿಸಿತು. ಆಶ್ರಯಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಅಲೆಯುತ್ತ ದಿಕ್ಕೆಟ್ಟ ದಾರಾಷುಕೊನ ಪ್ರೀತಿಯ ಪತ್ನಿ ನಾದಿರಬೇಗಂ ಮರಣಹೊಂದಿದಳು. ಅಳಿದುಳಿದ ಸೈನ್ಯ ಸಂಘಟಿಸಿ ದಾರ ಮತ್ತೆ 1659 ಏಪ್ರಿಲ್ 12–14 ರಂದು ದಿಯೊರಾಯ್ ಕಣಿವೆಯಲ್ಲಿ ಔರಂಗಜೇಬ್‌ನನ್ನು ಮತ್ತೆ ಎದುರಿಸಿ ಸೋತ. ಪರ್ಷಿಯಕ್ಕೆ ಓಡಿಹೋಗಬೇಕೆಂದು ಯೋಚಿಸುತ್ತಿರುವಾಗ ಮಲ್ಲಿಕ್ ಜೀವನ್ ಎಂಬ ಆಫ್ಘನ್ ಮುಖಂಡನ ಮೋಸದಿಂದಾಗಿ 1659 ಆಗಸ್ಟ್ 23 ರಂದು ಬಂಧನಕ್ಕೆ ಒಳಗಾದ. ಔರಂಗಜೇಬ್ ಇವನನ್ನು ದೆಹಲಿಗೆ ಸೆರೆತಂದು, ಅವಮಾನಗಳಿಗೆ ಗುರಿಪಡಿಸಿ ದೆಹಲಿಯ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿದ. ಬರ್ನಿಯರ್ ಎಂಬ ಪ್ರವಾಸಿಗ ಈ ಮೆರವಣಿಗೆಯ ಬಗ್ಗೆ ಮನಕರಗು ವಂತೆ ವರ್ಣಿಸಿದ್ದಾನೆ. ಮೊಗಲ್ ಸಾಮ್ರಾಜ್ಯದ ಚಕ್ರವರ್ತಿಯಾಗಬೇಕಾಗಿದ್ದ ದಾರಾಷುಕೊನನ್ನು ಧರ್ಮಭ್ರಷ್ಟನೆಂದು ಆಪಾದಿಸಿ ವಿಶೇಷ ಇಸ್ಲಾಮಿಕ್ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ಜಿಗುಪ್ಸೆ, ಅಪಮಾನ ಹಾಗೂ ಸೋಲುಗಳಿಂದ ಕಂಗೆಟ್ಟಿದ್ದ ಈತನನ್ನು 1659 ಆಗಸ್ಟ್ 30 ರಂದು ಇಸ್ಲಾಂ ಧಾರ್ಮಿಕ ಕಾಯಿದೆಯಂತೆ ಶಿರಚ್ಛೇದನ ಮಾಡಿ, ದೇಹವನ್ನು ಹುಮಾಯುನ್ ಗೋರಿಯ ಕೆಳಗೆ ಹೂಳಲಾಯಿತು. (ಸಿ.ಜಿ.ಎಸ್.)

**ದಾವೊಜಲಿ ಹಡಿಂಗ್:** ಅಸ್ಸಾಮ್ ರಾಜ್ಯದ ಉತ್ತರ ಕಚರ್ ಜಿಲ್ಲೆಯ ಬೆಟ್ಟಶ್ರೇಣಿಯಲ್ಲಿರುವ ನವಶಿಲಾಯುಗ ನೆಲೆ. ಸಮುದ್ರಮಟ್ಟದಿಂದ ಸು.450 ಮೀ ಎತ್ತರದಲ್ಲಿದೆ. ದಟ್ಟವಾದ ಬಿದಿರುಕಾಡುಗಳಿಂದ ಆವೃತವಾಗಿರುವ ಈ ನೆಲೆಯ ಬಹುಭಾಗ ನೀರಿನ ಕೊರೆತಕ್ಕೊಳಗಾಗಿ ನಶಿಸಿದೆ. ಟಿ.ಸಿ. ಶರ್ಮ ಈ ನೆಲೆಯನ್ನು ಶೋಧಿಸಿ ಇಲ್ಲಿ ಉತ್ಖನನ ನಡೆಸಿದರು (1961–63).

ಇಲ್ಲಿ ಅಗೆದ ಗುಂಡಿಗಳ ಪೈಕಿ ಒಂದು ಗುಂಡಿಯಲ್ಲಿ ಮಾತ್ರ ಕ್ರಮಬದ್ಧವಾದ ಸ್ತರಕ್ರಮ ಕಂಡುಬಂತು. 1.5 ಮೀ ದಪ್ಪದ ವಸತಿ ಪದರವಿದ್ದ ಈ ಗುಂಡಿಯಲ್ಲಿ ಮೂರು ಸ್ತರಗಳಿದ್ದವು. ಮಧ್ಯದ ಸ್ತರದಲ್ಲಿ (2ನೆಯ ಸ್ತರ) ನವಶಿಲಾಯುಗದ ಅವಶೇಷಗಳಿದ್ದುವು. ಈ ಸ್ತರದಿಂದ ಸಿಕ್ಕಿರುವ ಅವಶೇಷಗಳೆಂದರೆ ಕಲ್ಲಿನ ಸಲಕರಣೆಗಳು ಮತ್ತು ಮಣ್ಪಾತ್ರೆಗಳು. ಲೋಹದ ವಸ್ತುಗಳಾವುವೂ ಸಿಕ್ಕಿಲ್ಲ. ಉತ್ಖನನ ಹಾಗೂ ನೆಲೆಯ ಮೇಲ್ಮೈಯಿಂದ ಸಂಗ್ರಹಿಸಿದ ಶಿಲೋಪಕರಣಗಳ ಸಂಖ್ಯೆ 202.

ಇಲ್ಲಿ ಸಿಕ್ಕ ಅವಶೇಷಗಳನ್ನು ಅಲಗಿನ ಹರಿತವಿರುವ (ಕತ್ತರಿಸುವ) ಸಲಕರಣೆಗಳು, ಅರೆಯುವ ಕಲ್ಲುಗಳು, ಬೀಸುವಕಲ್ಲುಗಳು, ಉಜ್ಜುವ ಸಾಧನಗಳು, ಸುತ್ತಿಗೆಕಲ್ಲುಗಳು, ಉರುಟು ಬೆಣಚುಕಲ್ಲುಗಳು, ಉದ್ದ ಪಾತ್ರೆಗಳು ಎಂದು ವರ್ಗೀಕರಿಸಲಾಗಿದೆ. ಅನೇಕ ಉಪಕರಣಗಳು ಇಂಗಾಲಯುಕ್ತ ಗಟ್ಟಿ ಜೇಡಿಪದರಗಲ್ಲಿನಿಂದ ಮಾಡಿದವು. ಕೆಲವು ಮರಳುಗಲ್ಲು ಹಾಗೂ ಪಳೆಯುಳಿಕೆ ಮರದಿಂದ ಮಾಡಿದಂಥವು. ಕತ್ತರಿಸುವ ಸಲಕರಣೆಗಳನ್ನು ಚಕ್ಕೆ ತೆಗೆದು ಉಜ್ಜಿ ಮಾಡಲಾಗಿದೆ. ಇಲ್ಲಿ ಕಂಡುಬಂದಿರುವ ಸುತ್ತಿಗೆಕಲ್ಲುಗಳು ಮತ್ತು ಕಲ್ಲಿನ ಚಕ್ಕೆಗಳು ಸೂಚಿಸುವಂತೆ ಉಪಕರಣಗಳನ್ನು ಈ ನೆಲೆಯಲ್ಲಿಯೇ ತಯಾರಿಸಲಾಗುತ್ತಿತ್ತು. ತಾಂತ್ರಿಕ ದೃಷ್ಟಿಯಿಂದ ಈ ಉಪಕರಣಗಳನ್ನು 3 ಗುಂಪುಗಳಾಗಿ ವಿಂಗಡಿಸಬಹುದು; ತೆಳುವಾದ ಎಲೆಯಾಕಾರದ ಜೇಡಿಪದರಗಲ್ಲಿನ ಚಕ್ಕೆ ಉಪಕರಣಗಳು, ತುದಿಯನ್ನು ಉಜ್ಜಿ ನಯಗೊಳಿಸಿದ ಉಪಕರಣಗಳು, ಪೂರ್ಣವಾಗಿ ಉಜ್ಜಿ ನಯಗೊಳಿಸಿದ ಉಪಕರಣಗಳು.

ಬಹುತೇಕ ಸಲಕರಣೆಗಳು 3ನೆಯ ಗುಂಪಿಗೆ ಸೇರಿದುವು. ಹಿಡಿಕೆ ಇರುವ ದ್ವಿಭುಜ ಕೊಡಲಿಗಳು, ಚತುರ್ಭುಜಾಕಾರದ ಬಾಚಿಗಳನ್ನು ಉಜ್ಜುವ ವಿಧಾನದಿಂದ ಮಾಡಲಾಗಿದೆ. ಯಾವುದೇ ಲೋಹದ ಉಪಕರಣದಿಂದ ಕತ್ತರಿಸಿದ ಗುರುತಿಲ್ಲ. ಬಹುತೇಕ ಕಲ್ಲಿನ ಸಲಕರಣೆಗಳು ಗಾತ್ರದಲ್ಲಿ ಚಿಕ್ಕವು. 2.9–5.9 ಸೆಂಮೀ ಉದ್ದದವು. ಕೆಲವು ಸಂದರ್ಭಗಳಲ್ಲಿ ಉದ್ದಕ್ಕಿಂತ ಅಗಲವೇ ಜಾಸ್ತಿಯಿರುವುದೂ ಉಂಟು. ನಮೂನೆಗಳ ದೃಷ್ಟಿಯಿಂದ ಇವನ್ನು 4 ಭಾಗವಾಗಿ ವಿಂಗಡಿಸಬಹುದು:ಹಿಡಿಕೆ ಹಾಗೂ ಭುಜವುಳ್ಳ ಕೊಡಲಿಗಳು, ಚಿಕ್ಕ ಕೊಡಲಿಗಳು, ಚತುರ್ಭುಜಾಕಾರದ ಕೈಗೊಡಲಿ ಮತ್ತು ಬಾಚಿಗಳು. ದ್ವಿಭುಜವುಳ್ಳ ಕೊಡಲಿಗಳ ಪೈಕಿ, ಚೌಕನಾಗಿ ಕತ್ತರಿಸಿದ ನೇರ ರೇಖೆಯಂಚಿನದವುಗಳಿಗಿಂತ ಒರಟು ಭುಜದ ವಕ್ರರೇಖೆಯವೇ ಹೆಚ್ಚು. ಚಿಕ್ಕ ಕೊಡಲಿಗಳು ಅಂಡಾಕಾರವಾಗಿ ಇಲ್ಲವೇ ತ್ರಿಕೋಣಾಕಾರವಾಗಿವೆ. ಚತುರ್ಭುಜಾಕಾರದ ನಮೂನೆಯದವುಗಳಲ್ಲಿ ಬದಿಗಳನ್ನು ಉಜ್ಜಿ ಚಪ್ಪಟೆ (ಸಪಾಟು) ಮಾಡಿರುವುದು ವಿಶಿಷ್ಟವಾಗಿದೆ.

ಇಲ್ಲಿ ದೊರೆತ ಬೂದು ಹಾಗೂ ಮಾಸಲು ಕೆಂಪು ಮಣ್ಪಾತ್ರೆಗಳಲ್ಲಿ ಶೇ. 95 ರಷ್ಟು ಕೈಯಲ್ಲೇ ಮಾಡಿದವು. ಹೆಚ್ಚಿನ ಪಾತ್ರೆಗಳು ಹುರಿಯ ಗುರುತಿನಿಂದ ಅಲಂಕೃತವಾಗಿವೆ. ಕೆಲವೊಂದು ಮೀನುಮುಳ್ಳಿನ ಗೀರು ವಿನ್ಯಾಸದಿಂದ ಅಲಂಕೃತವಾಗಿವೆ. ಉಳಿದ ಪಾತ್ರೆಗಳು ಕಡುಗೆಂಪು ಬಣ್ಣದ್ದಾಗಿದ್ದು ನುಣುಪು ಮಣ್ಣಿನಿಂದ ಮಾಡಲ್ಪಟ್ಟಿವೆ.

ಸುತ್ತಿಗೆಕಲ್ಲುಗಳನ್ನು ಕೊಡಲಿ ಹಾಗೂ ಬಾಚಿಗಳನ್ನು ಉಜ್ಜಲು, ನಯ ಮಾಡಲು ಮತ್ತು ಹರಿತ ಮಾಡಲು ಬಳಸಲಾಗುತ್ತಿತ್ತು. ಬೀಸುವಕಲ್ಲು, ಅರೆಯುವ ಕಲ್ಲು, ಉಜ್ಜುವ ಕಲ್ಲಿನ ಸಾಧನಗಳು, ಹಿಟ್ಟು ಮಾಡುವ ಪಾತ್ರೆ ಇವು ಜನರ ಆಹಾರ ಪದ್ಧತಿಯನ್ನು ಸೂಚಿಸುತ್ತವೆ. ಈ ಜನರು ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದರು.

ಕಾಮರೂಪ ಜಿಲ್ಲೆಯ ಸರುತರು ನೆಲೆಯಲ್ಲಿ ಎಸ್.ಎನ್.ರಾವ್ ನಡೆಸಿದ ಉತ್ಖನನದಲ್ಲಿ ಇಲ್ಲಿಯ ಉಪಕರಣಗಳನ್ನು ಹೋಲುವ ಶಿಲೋಪಕರಣಗಳು ಸ್ತರಕ್ರಮದಲ್ಲಿ ದೊರೆತಿವೆ. ಇಂತಹ ಕೆಲವೊಂದು ಸಲಕರಣೆಗಳು, ಮುಖ್ಯವಾಗಿ ಭುಜವುಳ್ಳ ಮತ್ತು ಸಪಾಟದ ಪಾರ್ಶ್ವಗಳುಳ್ಳ

ಚಿಕ್ಕ ಕೊಡಲಿಗಳು, ವಿರಳವಾಗಿ ಬಂಗಾಲ, ಬಿಹಾರ ಮತ್ತು ಒರಿಸ್ಸ ರಾಜ್ಯಗಳಲ್ಲಿ ಕಂಡು ಬಂದಿದ್ದರೂ ದಾವೊಜಲಿ ಹಡಿಂಗ್‌ನಲ್ಲಿ ಸಿಕ್ಕಿರುವಂಥವು ಭಾರತದ ಇನ್ನುಳಿದ ಭಾಗಗಳಿಂದ ವರದಿಯಾಗಿಲ್ಲ. ಅಲ್ಲದೆ ದ್ವಿಭುಜ ಕೊಡಲಿಗಳು, ಚತುರ್ಭುಜಾಕಾರದ ಕೈಗೊಡಲಿಗಳು ಮತ್ತು ಬಾಚಿಗಳು ಹಾಗೂ ಹುರಿಯ ಗುರುತುಳ್ಳ ಮಡಕೆಗಳು ಆಗ್ನೇಯ ಏಷ್ಯ ಮತ್ತು ದಕ್ಷಿಣ ಚೀನದ ಅಂತ್ಯ ನವಶಿಲಾಯುಗದ ಸಂಸ್ಕೃತಿಗಳಿಗೆ ಹತ್ತಿರದ ಸಂಬಂಧವನ್ನು ಹೊಂದಿರುವುದು ಗಮನಾರ್ಹ. ಆದರೆ ಈ ನೆಲೆಯಿಂದ ಇಂಗಾಲ-14 ರ ಕಾಲಮಾನ ಲಭ್ಯವಿಲ್ಲ. (ಜಿ.ಎಸ್.)

**ದೀಪವಂಶ:** ಪಾಳಿ ಭಾಷೆಯಲ್ಲಿರುವ ಸಿಂಹಳದ (ಈಗಿನ ಶ್ರೀಲಂಕ) ಅತ್ಯಂತ ಪ್ರಾಚೀನ ಇತಿಹಾಸ ಸಾಹಿತ್ಯ. ಪಾಳಿ ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಐತಿಹಾಸಿಕ ದಾಖಲೆಗಳು ಎಂದು ಹೇಳಲಾಗಿದೆ. ಈ ವರ್ಗದ ಸಾಹಿತ್ಯಕ ರಚನೆಗಳೊಡನೆ ಹೋಲಿಸಬಹುದಾದಂಥ ಕೃತಿಗಳು ಬೇರಾವುದೇ ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಇಲ್ಲ. ಶೈಲಿ ಮತ್ತು ಸ್ವರೂಪಗಳಲ್ಲಿ ಇವು ಇತಿಹಾಸ ಮತ್ತು ಪುರಾಣಗಳನ್ನು ಹೋಲುತ್ತವೆಯಾದರೂ ಇವುಗಳ ಪೂರ್ಣ ಪುರಾಣಗಳಾಗಲೀ ಐತಿಹ್ಯಗಳಾಗಲೀ ಅಲ್ಲ.

ಸುಪ್ರಸಿದ್ಧ ಪ್ರಾಚ್ಯಶಾಸ್ತ್ರಜ್ಞ ರೀಸ್ ಡೇವಿಡ್ಸ್‌ನ ಪ್ರಕಾರ ಸಿಂಹಳದ ವೃತ್ತಾಂತಗಳು ತೀರ ಅನಂತರದ ದಿನಗಳಲ್ಲಿ ರಚಿತವಾದ ಇಂಗ್ಲೆಂಡಿನ ಅಥವಾ ಫ್ರಾನ್ಸಿನ ಇಂಥ ವೃತ್ತಾಂತಗಳಿಗಿಂತ ಕಡಿಮೆ ಪ್ರಮಾಣಭೂತವಾದುದೇನೂ ಅಲ್ಲ. ಭಾರತೀಯ ಇತಿಹಾಸದ ಅನೇಕ ಘಟನೆಗಳಿಗೆ ಮತ್ತು ಕಾಲಗಳಿಗೆ ಎರಡೂ ರಾಷ್ಟ್ರಗಳ ನಡುವೆ ನಡೆದ ವಿನಿಮಯಗಳಿಗೆ ಧಾರ್ಮಿಕ ಪಂಥಗಳು ಮತ್ತು ಸಂಪ್ರದಾಯಗಳಿಗೆ ಸಾಂಸ್ಕೃತಿಕ ಕೇಂದ್ರಗಳು ಮತ್ತು ಆ ಕಾಲದಲ್ಲಿ ಇದ್ದ ಸಾಮಾಜಿಕ ನಡವಳಿಕೆಗಳಿಗೆ ಸಂಬಂಧಿಸಿದಂತೆ ತಾರ್ಕಣೆಯನ್ನೊದಗಿಸುವುದರಿಂದಲೂ ಸಮಕಾಲೀನ ಖಂಡಾಂತರ ಭಾರತದ ಭೌಗೋಳಿಕ ಪರಿಸ್ಥಿತಿಯ ಬಗ್ಗೆ ಸಮೃದ್ಧ ಮಾಹಿತಿಯನ್ನೊದಗಿಸುವುದರಿಂದಲೂ ಭಾರತೀಯ ಇತಿಹಾಸದ ದೃಷ್ಟಿಯಿಂದ ಈ ವೃತ್ತಾಂತಗಳು ವಿಶೇಷ ಪ್ರಾಮುಖ್ಯಗಳಿಸಿವೆ.

ವಂಶಸಾಹಿತ್ಯದಲ್ಲಿ 12 ಪ್ರಮುಖ ಕೃತಿಗಳಿವೆ. ಇವುಗಳಲ್ಲಿ ದೀಪವಂಶವೇ ಅತ್ಯಂತ ಪ್ರಾಚೀನವಾದುದು. ಮಹಾನ್ ಬೌದ್ಧ ವಿದ್ವಾಂಸನೂ ಪಾಳೀ ಪವಿತ್ರ ಗ್ರಂಥಗಳ ವ್ಯಾಖ್ಯಾನಕಾರನೂ 5 ನೆಯ ಶತಮಾನದಲ್ಲಿ ಸಿಂಹಳಕ್ಕೆ ಭೇಟಿಕೊಟ್ಟ ಆಚಾರ್ಯ ಬುದ್ಧಘೋಷ ಹಿಂದಿನ ಎಲ್ಲ ಭಾರತ-ಸಿಂಹಳಿಗಳ ಸಂಬಂಧದ ಬಗೆಗೆ ದೀಪವಂಶವನ್ನು ಐತಿಹಾಸಿಕ ಆಕರ ಗ್ರಂಥವಾಗಿ ಉದ್ಧರಿಸಿದ್ದಾನೆ. ಈ ಕೃತಿಗಳಲ್ಲಿ ಕೃತಿಕಾರನ ಹೆಸರು ಹೇಳಿಲ್ಲ; ಅನೇಕ ತಲೆಮಾರುಗಳಲ್ಲಿ ವಿದ್ವಾಂಸರಾದ ಬೌದ್ಧ-ಭಿಕ್ಷುಗಳು ಬಹುಶಃ 4 ನೆಯ ಶತಮಾನದವರೆಗೆ ಇದನ್ನು ರಚಿಸಿದ್ದಾರೆ. ಏಕೆಂದರೆ ಅತ್ಯಂತ ಪ್ರಾಚೀನ ಕಾಲದಿಂದ ಹಿಡಿದು ಮಹಾಸೇನನ ಆಳ್ವಿಕೆಯ ವರೆಗಿನ-ಅಂದರೆ 325-352ರ ವರೆಗಿನ -ಸಿಂಹಳದ ಇತಿಹಾಸವನ್ನು ಇದರಲ್ಲಿ ಕೊಡಲಾಗಿದೆ.

ಮಹಾಟ್ಠಕಥ, ಮಹಪಚ್ಚರೀ, ಕುರುಂದಿ, ಚುಲ್ಲಪಚ್ಚರಿ, ಅಂಧಟ್ಠ ಕಥಾ ಇವೇ ಮುಂತಾದ ಪ್ರಾಚೀನ ವ್ಯಾಖ್ಯಾನಗಳಲ್ಲಿ ಅಡಕಗೊಂಡಿರುವ ಐತಿಹಾಸಿಕ ಸಂಪ್ರದಾಯಗಳ ಆಧಾರದ ಮೇಲೆ ದೀಪವಂಶ ರಚಿತವಾಗಿವೆ. ಆ ಕಾಲದಲ್ಲಿ ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಕೇಂದ್ರಬಿಂದುವಾಗಿದ್ದ ಬೌದ್ಧಧರ್ಮವನ್ನು ಸಿಂಹಳಕ್ಕೆ ಕೊಂಡೊಯ್ದು, ಯಕ್ಷದೀಪ ಅಂದರೆ ಅಸುರರ ದ್ವೀಪವಾಗಿದ್ದ ಸಿಂಹಳವನ್ನು ಧರ್ಮದೀಪವಾಗಿ ಪರಿವರ್ತಿಸಿದ ಚಕ್ರವರ್ತಿ ಅಶೋಕನ ಮಗ ಅರ್ಹತಮಹಿಂದನಿಂದ ಇವು ಮೂಲತಃ ಕೈಸೇರಿದಂಥವು. ಧಾತುಸೇನನೆಂಬ ಸಿಂಹಳದ ರಾಜನೊಬ್ಬ ಈ ಕೃತಿಯ ಸಮ್ಮಾನಾರ್ಥವಾಗಿ ಪ್ರತಿವರ್ಷವೂ ಸಮಸ್ತ ರಾಜವೈಭವದಿಂದ ಕೂಡಿದ ಸಮಾರಂಭವೊಂದನ್ನು ಏರ್ಪಡಿಸುತ್ತಿದ್ದ. ಬುದ್ಧನ ವಂಶವೃಕ್ಷದೊಂದಿಗೆ ಹಾಗೂ ಸಿಂಹಳಕ್ಕೆ ಆತ ಮೂರುಬಾರಿ ಭೇಟಿಕೊಟ್ಟಿದ್ದರ ಬಗೆಗಿನ ಉಲ್ಲೇಖನದೊಂದಿಗೆ ದೀಪವಂಶ ಪ್ರಾರಂಭವಾಗುತ್ತದೆ. ಅನಂತರ ಇದು ಮೊದಲ ಮೂರು ಬೌದ್ಧ ಧಾರ್ಮಿಕ ಪರಿಷತ್ತುಗಳ ವರ್ಣನೆಯನ್ನು ಮುಂದಿರಿಸುತ್ತದೆ. ಇವನ್ನು ಸಂಗೀತಿಗಳೆಂದು ಕರೆಯಲಾಗಿದೆ. ಈ ಸಂದರ್ಭದಲ್ಲಿಯೇ ಸಮಸ್ತ ಬೋಧನೆಯನ್ನೂ ಪುನರುಚ್ಚರಿಸಲಾಯಿತು ಹಾಗೂ ತ್ರಿಪಿಟಕದ ರೂಪದಲ್ಲಿ ಅವನ್ನು ಸಕ್ರಮೀಕರಿಸಲಾಯಿತು. ಬೌದ್ಧರ ಧರ್ಮ ಗ್ರಂಥವಾದ ಇದು ತನ್ನ ಹಿಂದಿನ ಪರಿಶುದ್ಧ ಸ್ವರೂಪದಲ್ಲಿಯೇ ಇಂದಿನವರೆಗೆ ಉಳಿದುಬಂದಿದೆ.

ಇದು ಚಕ್ರವರ್ತಿ ಅಶೋಕ ನಡೆಸಿದ ಹಾಗೂ ಅಶೋಕನ ಧರ್ಮವಿಜಯದ ಕೇಂದ್ರಬಿಂದುವಾಗಿದ್ದ ಮೂರನೆಯ ಸಂಗೀತಿಯನ್ನು ವರ್ಣಿಸುತ್ತದೆ. ಪ್ರಪಂಚದಾದ್ಯಂತ ಪಶ್ಚಿಮದಲ್ಲಿ ಗ್ರೀಸ್ ಮತ್ತು ಈಜಿಪ್ಟಿನಿಂದ ಹಿಡಿದು ಪೂರ್ವದಲ್ಲಿ ಬರ್ಮ, ಕಾಂಬೋಡಿಯ ಮುಂತಾದ ಆಗ್ನೇಯ ಏಷ್ಯದ ರಾಷ್ಟ್ರಗಳವರೆಗೆ, ಉತ್ತರದಲ್ಲಿನ ಕೆಲವು ಮಧ್ಯ ಏಷ್ಯ ರಾಷ್ಟ್ರಗಳಿಗೆ ಹಾಗೂ ದಕ್ಷಿಣದಲ್ಲಿ ಸಿಂಹಳಕ್ಕೆ ಬೌದ್ಧಧರ್ಮದ ಬೆಳಕನ್ನು ಹೊತ್ತ ಭಾರತದ ಧರ್ಮದೀಪಕರನ್ನು ಬಹುಸಂಖ್ಯೆಯಲ್ಲಿ ಕಳುಹಿಸಲು ದಾರಿಮಾಡಿಕೊಟ್ಟಿದ್ದು ಈ ಪರಿಷತ್ತೇ.

ದೀಪವಂಶ ಮಹಾಸೇನನ ಕಾಲದವರೆಗೆ ಆಳಿದ ವಿವಿಧ ರಾಜರುಗಳ ಆಳ್ವಿಕೆಯನ್ನು ವರ್ಣಿಸುತ್ತದೆ. ಇನ್ನೂ ಹೆಚ್ಚು ಪ್ರಸಿದ್ಧವಾಗಿರುವ ಇತರ ಎರಡು ವೃತ್ತಾಂತಗಳಾದ ಮಹಾವಂಶ ಮತ್ತು ಚೂಲವಂಶಗಳು ವಾಸ್ತವವಾಗಿ ಈ ಕೃತಿಯ ವಾಖ್ಯಾನಗಳು ಅಥವಾ ವಿಸ್ತೃತ ರೂಪಗಳು ಅಷ್ಟೆ. (ಬಿ.ಟಿ.)

**ದೆಹಲಿಯ ಸುಲ್ತಾನರು:** ಭಾರತ-ಅರಬ್ ದೇಶಗಳ ಸಂಬಂಧ ಏಳನೆಯ ಶತಮಾನದಿಂದಲೇ ಆರಂಭವಾಗಿತ್ತು. ಅರಬರ ಸೈನ್ಯದ ತುಕಡಿಗಳು ಬ್ರೋಚ್, ಸಿಂಧ್ ಪ್ರಾಂತ್ಯಗಳಿಗೆ ಬರತೊಡಗಿದುವು. ಆಫ್ಘಾನಿಸ್ತಾನದ ಜರಾಂಜ್ ಮತ್ತು ಬಲೂಚಿಸ್ತಾನದ ಮಕ್ರಾನ್ ಪ್ರಾಂತ್ಯಗಳನ್ನು ಇವರು ವಶಪಡಿಸಿಕೊಂಡರು. ಇರಾಕಿನ ಅಲ್‌ಹಜಾಜನು ಸಿಂದ್ ಪ್ರಾಂತ್ಯವನ್ನು ಆಕ್ರಮಿಸಿದಾಗ ಇವನನ್ನು ಅಲ್ಲಿಯ ಅರಸ ದಾಹಿರ್ ಎದುರಿಸಿ ಸತ್ತ. ಮುಲ್ತಾನ ಮತ್ತು ಕೆಳಗಣ ಸಿಂಧೂಕಣಿವೆಯ ಪ್ರದೇಶ ಅರಬರ ವಶವಾದುವು. ಕ್ರಮೇಣ ಈಗಿನ ಗುಜರಾತ್ ಮತ್ತು ರಾಜಸ್ತಾನ ಅವರ ಆಕ್ರಮಣಕ್ಕೆ ತುತ್ತಾದವು. ಚೇನಾಬ್ ನದಿಯಿಂದ ಹಿಂದೂಕುಶ್ ವರೆಗೆ ಹಬ್ಬಿದ ಹಿಂದು ಷಾಹಿ ರಾಜ್ಯ ಕ್ಷೀಣವಾಗುತ್ತಿತ್ತು. ಜಯಪಾಲ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಪ್ರಸಿದ್ಧ ದೊರೆ. ಕಾಶ್ಮೀರದಲ್ಲಿ ಕ್ಷೇಮಗುಪ್ತನ ರಾಣಿ ದಿಡಾ ರಾಜ್ಯವಾಳುತ್ತಿದ್ದಳು. ಕನೋಜದಲ್ಲಿ ಪ್ರತಿಹಾರರ ವರ್ಚಸ್ಸು ಕಡಿಮೆಯಾಗಿತ್ತು. ಈ ವಂಶದ ಕೊನೆಯ ಅರಸ ರಾಜ್ಯಪಾಲ ಅಬಲನಾಗಿದ್ದ.

ಸಮನಿದ್ ಅರಸರ ಗುಲಾಮನಾಗಿದ್ದ ಅಲ್ಪಿಗಿನ್ ಘಜ್ನಿಯಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಿ ಕಾಬೂಲನ್ನು ಸೇರಿಸಿಕೊಂಡಿದ್ದ. 963ರಲ್ಲಿ ಈತ ನಿಧನ ಹೊಂದಿದ. ಇವನ ಅಳಿಯ ಸಬುಕ್ತಿಗಿನ್ ಉತ್ತರಾಧಿಕಾರಿಯಾಗಿ (977) ಷಾಹಿಯ ದೊರೆ ಜಯಪಾಲನನ್ನು ಹಿಂದಕ್ಕೆ ಸರಿಸಿದ. 997ರಲ್ಲಿ ಈತನ ಮಗ ಮಹಮದ್ ಘಜ್ನಿ ಅಧಿಕಾರಕ್ಕೆ ಬಂದು ಹಿಂದು ಅರಸರ ಮೇಲೆ 17 ಬಾರಿ ದಂಡೆತ್ತಿ ಬಂದ. ಜಯಪಾಲನ ಸಂತತಿಯವರು ಇವರನ್ನು ಎದುರಿಸುತ್ತಲೇ ಇದ್ದರು. ಈ ಮನೆತನದ ಭೀಮ ಮರಣ ಹೊಂದಿದಾಗ (1026) ಈ ಸಂತತಿ ಅಂತ್ಯಗೊಂಡಿತು. ಅನಂತರದ 150 ವರ್ಷಗಳಲ್ಲಿ ಪರಕೀಯರ ಆಕ್ರಮಣ ಇಲ್ಲದಿದ್ದರೂ ಆಂತರಿಕ ಕಲಹಗಳಿಂದ ಹಿಂದುರಾಜ್ಯಗಳು ಬಲಗುಂದಿದವು. ಗುಜರಾತಿನಲ್ಲಿ ಚಾಳುಕ್ಯರು (ಸೋಲಂಕಿ) ಮತ್ತು ಮಾಳವದಲ್ಲಿ ಪರಮಾರರು ಪ್ರಬಲರಾಗಿದ್ದರು. ಚಾಳುಕ್ಯ ಭೀಮ ದೇವಾಲಯಗಳ ಜೀರ್ಣೋದ್ಧಾರ ಕಾರ್ಯಗಳಲ್ಲಿ ನಿರತನಾಗಿದ್ದರೆ, ಅನಂತರ ಬಂದ ವಸ್ತುಪಾಲ, ತೇಜಪಾಲರು ನಿರ್ಮಾಣ ಕಾರ್ಯಗಳಲ್ಲಿ ಮಗ್ನರಾಗಿದ್ದರು. ಮಾಳವದಲ್ಲಿ ಪರಮಾರ ಮುಂಜ ಹೆಸರಾಂತ ಅರಸ. ಈತನ ಅನಂತರ ಬಂದವ ಭೋಜ. ಇವರಿಬ್ಬರೂ ಸ್ವತಃ ಪಂಡಿತರೂ ಪಂಡಿತರಿಗೆ ಆಶ್ರಯದಾತರೂ ಆಗಿದ್ದರು. ಭೋಜನದು ಬಹುಮುಖ ಪ್ರತಿಭೆ. ಕಾವ್ಯಮೀಮಾಂಸೆ, ರಾಜನೀತಿ, ಅಲಂಕಾರ ಶಾಸ್ತ್ರ ಇತ್ಯಾದಿಗಳಲ್ಲಿ ಪರಿಣತ. ಮುಂಜ ಕರ್ನಾಟಕದಲ್ಲಿ ಚಾಳುಕ್ಯ ಇಮ್ಮಡಿ ತೈಲಪನನ್ನು ಹಲವಾರು ಬಾರಿ ಕದನಗಳಲ್ಲಿ ಎದುರಿಸಿ, ಅಂತಿಮವಾಗಿ ಪರಾಜಿತನಾಗಿ ಅಸುನೀಗಿದ. ಭೋಜ ಚಾಳುಕ್ಯ ಜಯಸಿಂಹನ ವಿರುದ್ಧ ದಂಡೆತ್ತಿ ಕೆಲಕಾಲ ಮೀರಜ್ ಸುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಂಡ. ಆದರೆ ಮುಂದೆ ಆತ ಅವನ್ನು ಬಿಟ್ಟುಕೊಡಬೇಕಾಯಿತು. ತ್ರಿಪುರದಲ್ಲಿ ಕಳಚುರಿವಂಶದ ಗಾಂಗೇಯ ಮತ್ತು ಲಕ್ಷ್ಮಣರಾಜರು ಪ್ರಬಲರಾಗಿದ್ದರಾದರೂ ಕ್ರಮೇಣ ದುರ್ಬಲರಾದರು.

1175ರಲ್ಲಿ ಘೋರಿಮಹಮದ್ ಮೊದಲ ದಂಡಯಾತ್ರೆ ಕೈಗೊಂಡ. ಈತ ಗುಜರಾತಿನಲ್ಲಿ ಪರಾಭವಗೊಂಡನಾದರೂ (1178) ಘಜನಿಯ ಖುಸ್ರುಮಲಿಕ್‌ನನ್ನು ಲಾಹೋರಿನಲ್ಲಿ ಸೆರೆಹಿಡಿದಿದ್ದ. 1179ರಲ್ಲಿ ಉಚ್ ದುರ್ಗ, ಪೆಷಾವರ್ ಲಾಹೋರ್‌ಗಳನ್ನು ವಶಪಡಿಸಿಕೊಂಡ. ಈ ಕಾಲದಲ್ಲಿ ಬುಂದೇಲಖಂಡ ಚಂದೇಲರ, ಕನೌಜ ಗಾಹಡಪಾಲರ, ದೆಹಲಿ ಮತ್ತು ಅಜ್ಮೀರ್‌ಗಳು ಚೌಹಾಣರ ಆಳ್ವಿಕೆಗೊಳಪಟ್ಟಿದ್ದುವು. ಕನೌಜದ ಜಯಚಂದ್ರನಿಗೂ ಅಜ್ಮೀರದ ಪೃಥ್ವಿರಾಜ್ ಚೌಹಾಣನಿಗೂ ಇದ್ದ ವೈಮನಸ್ಯದ ಕಾರಣವಾಗಿ ದೇಶದಲ್ಲಿ ರಾಜಕೀಯ ಅಭದ್ರ ಸ್ಥಿತಿ ಇತ್ತು.

1191ರಲ್ಲಿ ಘೋರಿಮಹಮದ್ ಪಂಜಾಬಿನಿಂದ ಮುನ್ನುಗ್ಗಿ ಥಾನೇಶ್ವರದ ಸಮೀಪದ ತರೈನ್ ಬಯಲಿನಲ್ಲಿ ಪೃಥ್ವೀರಾಜನೊಡನೆ ಹೋರಾಡಿ ಸೋತ. 1192ರಲ್ಲಿ ಪುನಃ ಅದೇ ಸ್ಥಳದಲ್ಲಿ ಅವನನ್ನು ಎದುರಿಸಿ ಕೊಂದ. ಈ ನಿರ್ಣಾಯಕ ಯುದ್ಧದಿಂದ ಉತ್ತರ ಭಾರತ ಪರಕೀಯರ ಆಕ್ರಮಣಕ್ಕೆ ತುತ್ತಾಯಿತು. ಘೋರಿಯ ಪ್ರತಿನಿಧಿ ಐಬಕ್ ಎಂಬಾತ ಬುಲಂದ ಶಹರ್, ಮೀರತ್ ಮತ್ತು ದೆಹಲಿಗಳನ್ನು ಆಕ್ರಮಿಸಿದ. ಕನೌಜದ ಜಯಚಂದ್ರನನ್ನು ಚಂದವರ್ ರಣಾಂಗಣದಲ್ಲಿ ಮಹಮದ್ ಸೋಲಿಸಿದ (1194). 1195-96ರಲ್ಲಿ ಗ್ವಾಲಿಯರ್ ಕೋಟೆಗಳನ್ನು ವಶಪಡಿಸಿಕೊಂಡ. ಐಬಕ್ ರಾಜಸ್ತಾನ ಮತ್ತು ಅಜ್ಮೀರ್‌ಗಳಲ್ಲಿ ಆಗಾಗ ಎದ್ದ ದಂಗೆಗಳನ್ನು ಅಡಗಿಸಿ ಬುಂದೇಲ್‌ಖಂಡವನ್ನು ಗೆದ್ದುಕೊಂಡ. ಘೋರಿ ಮಹಮದನ ಇನ್ನೊಬ್ಬ ಅಧಿಕಾರಿ ಇಖ್ತಿಯಾರ್-ಉದ್-ದೀನ್ ಮಹಮದ್ ಬಿಹಾರ ಮತ್ತು ಬಂಗಾಲದ ಕೆಲವು ಭಾಗಗಳನ್ನು ಆಕ್ರಮಿಸಿದ. ಹೀಗೆ 13ನೆಯ ಶತಮಾನದ ಪ್ರಾರಂಭದಲ್ಲಿ ಪಶ್ಚಿಮದಲ್ಲಿ ಸಿಂಧೂನದಿಯಿಂದ ಪೂರ್ವದಲ್ಲಿ ಗಂಗಾನದಿಯ ವರೆಗಿನ ಬಹುಭಾಗ ಮುಸಲ್ಮಾನರ ಆಡಳಿತಕ್ಕೆ ಒಳಪಟ್ಟವು.

**ಕುತ್ಬುದೀನ್ ಐಬಕ್ (1206-10):** ತುರ್ಕಿಸ್ತಾನದಲ್ಲಿ ಹುಟ್ಟಿ ಖಾಜಿಯೊಬ್ಬನಿಗೆ ಬಾಲ್ಯದಲ್ಲಿ ಮಾರಲ್ಪಟ್ಟು, ಘೋರಿಮಹಮದನ ಗುಲಾಮನಾಗಿ, ತನ್ನ ಕರ್ತೃತ್ವ ಶಕ್ತಿಯಿಂದ ಘಜ್ನಿಯಲ್ಲಿ ಒಡೆಯನ ಮನಸ್ಸನ್ನು ಗೆದ್ದು, ಎರಡನೆಯ ತರೈನ್ ಯುದ್ಧದ ತರುವಾಯ ಭಾರತದಲ್ಲಿ ಗೆದ್ದ ಪ್ರದೇಶಗಳ ಮೇಲ್ವಿಚಾರಕನೆಂದು ನೇಮಿಸಲ್ಪಟ್ಟ. ದೆಹಲಿಯ ಸಮೀಪದ ಇಂದ್ರಪ್ರಸ್ಥವನ್ನು ಕೇಂದ್ರವಾಗಿ ಮಾಡಿಕೊಂಡು ಅದೇ ವರ್ಷ ಅಜ್ಮೀರ್ ಮತ್ತು ಮೀರತ್‌ಗಳಲ್ಲಿ ಎದ್ದದಂಗೆಗಳನ್ನು ಅಡಗಿಸಿ, ದೆಹಲಿಯನ್ನು ಗೆದ್ದು, ಕನೌಜದ ಜಯಚಂದ್ರನನ್ನು ಗೆಲ್ಲಲು ತನ್ನೊಡೆಯನಿಗೆ

ನೆರವಾದ. 1195ರಲ್ಲಿ ಅಲಿಘರವನ್ನು ಗೆದ್ದ. ರಣಥಂಬೋರದ ಕೋಟೆ ವಶಪಡಿಸಿಕೊಂಡು, 1197–98ರಲ್ಲಿ ಬದೌನ್, ಚಂದವರ ಮತ್ತು ಕನೌಜಗಳನ್ನು ಆಕ್ರಮಿಸಿದ. ಬುಂದೇಲ್ ಖಂಡದ ಚಂದೇಲರ ರಾಜನನ್ನು ಸೋಲಿಸಿ (1202–03) ಕಾಲಿಂಜರ್, ಮಹೋಬ ಮತ್ತು ಖಜುರಾಹೊಗಳನ್ನು ವಶಪಡಿಸಿಕೊಂಡ. ಘೋರಿಮಹಮದನ ಮರಣದ ತರುವಾಯ ಭಾರತದ ಪ್ರದೇಶಗಳಿಗೆ ಉತ್ತರಾಧಿಕಾರಿಯಾಗಿ ಐಬಕ್ ದೆಹಲಿಯ ಸಿಂಹಾಸನ ಏರಿ (1206) ಗುಲಾಮಿ ಮನೆತನದ ಆಳಿಕೆಯ ಪ್ರಾರಂಭಕ್ಕೆ ಕಾರಣನಾದ. ಈತನ ವಂಶಸ್ಥರನ್ನು ಗುಲಾಮೀ ಸಂತತಿಯವರೆಂದು ಕರೆಯಲಾಗಿದ್ದರೂ ವಾಸ್ತವಿಕವಾಗಿ ಐಬಕ್ ಇಲ್ತುಮಿಷ್ ಮತ್ತು ಬಲ್ಬನ್ ಮಾತ್ರ ಆರಂಭದಲ್ಲಿ ಗುಲಾಮರಾಗಿದ್ದರು. ಅವರು ಅಧಿಕಾರಕ್ಕೆ ಬರುವ ವೇಳೆಗೆ ಗುಲಾಮಗಿರಿಯಿಂದ ಮುಕ್ತರಾಗಿ ಬಿಡುಗಡೆ ಪತ್ರಗಳನ್ನು ಪಡೆದಿದ್ದರು. 1206ರಲ್ಲಿ 'ಮಲ್ಲಿಕ್' ಬಿರುದು ಪಡೆದು ಸ್ಥಾನ ಭದ್ರಪಡಿಸಿಕೊಳ್ಳಲು ಮಗಳನ್ನು ಇಲ್ತುಮಷ್‌ನಿಗೂ ಸಹೋದರಿಯನ್ನು ನಾಸಿರ್–ಉದ್–ದೀನ್‌ನಿಗೂ ವಿವಾಹ ಮಾಡಿಕೊಟ್ಟು, ತಾನು ತಾಜುದ್ದೀನ್ ಯಲ್ದುಜನ ಮಗಳನ್ನು ವರಿಸಿದ. ಘಜ್ನಿಯಲ್ಲಿ ತನ್ನೊಡೆಯನ ಉತ್ತರಾಧಿಕಾರಿಯಾದ ಘಿಯಾಸುದ್ದೀನ್ ಮಹಮದ್‌ನಿಂದ ಸುಲ್ತಾನ್ ಎಂಬ ಪದವಿ ಪಡೆದ. ಘಜ್ನಿಯನ್ನು ಯಲ್ದುಜನಿಂದ ರಕ್ಷಿಸಲು ಅಸಮರ್ಥನಾದರೂ ದೆಹಲಿಯಲ್ಲಿ ತನ್ನ ಆಳಿಕೆ ನೆಲೆಗೊಳಿಸಿದ. ಬಂಗಾಲದಲ್ಲಿ ಮಹಮದ್‌ಶೆರಾನ್‌ನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಲಾಹೋರಿನಲ್ಲಿ ಪೋಲೋ ಆಟ ಆಡುವಾಗ ಕುದುರೆಯಿಂದ ಬಿದ್ದು ಮರಣಹೊಂದಿದ (1210). ಈತನಿಗೆ ತನ್ನ ರಾಜ್ಯದಲ್ಲಿ ಸುಭದ್ರ ಆಡಳಿತವನ್ನು ಮಾತ್ರ ನೆಲೆಗೊಳಿಸಲಾಗಲಿಲ್ಲ. ಲಾಹೋರಿನ ಅಮೀರರು ಮತ್ತು ಮಲ್ಲಿಕರು ಆರಾಮಬಕ್ಷ್ ಎಂಬಾತನನ್ನು ಆರಾಮ್‌ಷಾ ಎಂದು ಹೆಸರಿಸಿ ಉತ್ತರಾಧಿಕಾರಿಯಾಗಿ ಆರಿಸಿದರು. ಆದರೆ ದೆಹಲಿಯ ಪ್ರಮುಖರು ಇದನ್ನೊಪ್ಪದೆ ಬದಾನ್ ಪ್ರಾಂತ್ಯಾಧಿಕಾರಿಯಾಗಿದ್ದ ಇಲ್ತುಮಿಷ್‌ನನ್ನು ಆಯ್ದುಕೊಂಡರು. ಆತ ಆರಾಮ್‌ಷಾನನ್ನು ಸೋಲಿಸಿ ಸುಲ್ತಾನನಾದ (1210). ಮಧ್ಯಏಷ್ಯದ ಅಲ್ಬಾರಿ ಜನಾಂಗಕ್ಕೆ ಸೇರಿದ ಈತನನ್ನು ಖಾಸಾ ಸಹೋದರರೇ ಅಸೂಯೆಯಿಂದ ವ್ಯಾಪಾರಿಯೊಬ್ಬನಿಗೆ ಮಾರಿದರು. ಕಷ್ಟನಷ್ಟಗಳನ್ನು ಎದುರಿಸಿ ಉನ್ನತಿಗೆ ಬಂದ ಈತ ಐಬಕ್‌ನ ಠಾಣ್ಯ ಸೇರಿ ಗ್ವಾಲಿಯರ್ ಕೋಟೆಯ ರಕ್ಷಕನಾಗಿ ಬುಲಂದ್‌ಶಹರಿನ ಮತ್ತು ಬದೌನ್ ಪ್ರಾಂತ್ಯದ ಗವರ್ನರನಾಗಿ ಸೇವೆ ಸಲ್ಲಿಸಿದ. ಯಲ್ದುಜ್‌ನನ್ನು ತರೈನ್ ಯುದ್ಧದಲ್ಲಿ ಸೋಲಿಸಿ, ಅವನಿಂದ ಬರಬಹುದಾದ ತೊಂದರೆಯನ್ನು ನಿವಾರಿಸಿಕೊಂಡ. 1217ರಲ್ಲಿ ಲಾಹೋರನ್ನೂ 1226ರಲ್ಲಿ ರಣಥಂಬೂರ ಕೋಟೆಯನ್ನೂ 1227ರಲ್ಲಿ ಸಿವಾಲಕ್ ಪ್ರಾಂತ್ಯದ ಮಂದವಾರವನ್ನೂ 1228ರಲ್ಲಿ ಸಿಂಧ್ ಪ್ರಾಂತ್ಯವನ್ನೂ ವಶಪಡಿಸಿಕೊಂಡ. ಬಂಗಾಲದಲ್ಲಿ ಭಕ್ತಿಯಾರ್ ಖಿಲ್ಜಿ ದಂಗೆ ಎದ್ದಿದ್ದು ಆತನ ಮಗ ಇಖ್ತಿಯಾರ್–ಉದ್–ದೀನ್ ಮಹಮದ್ ಬಿಹಾರ ಪ್ರಾಂತ್ಯವನ್ನೂ ಪಶ್ಚಿಮ ಬಂಗಾಲದ ಒಂದು ಪ್ರಾಂತ್ಯವನ್ನೂ ಗೆದ್ದುಕೊಂಡಿದ್ದ. ಆತನ ತರುವಾಯ ಕುತ್ಬುದ್ದೀನ್‌ನಿಂದ ಪ್ರಾಂತ್ಯಾಧಿಕಾರಿಯಾಗಿ ನೇಮಿತನಾಗಿದ್ದ ಅಲಿಮರ್ದನ ಸ್ವಾತಂತ್ರ್ಯ ಘೋಷಿಸಿ ಸುಲ್ತಾನ್ ಅಲಾಉದ್ದೀನ್ ಎಂಬ ಹೆಸರಿನಲ್ಲಿ ಆಳತೊಡಗಿದ. ಖಲ್ಜೀಮಲ್ಲಿಕರು ಅವನ ನೆರವಿಗಿದ್ದರು. ಅವರನ್ನು ಇಲ್ತುಮಿಷ್ ಸೋಲಿಸಿ ಶರಣಾಗತರಾಗುವಂತೆ ಮಾಡಿದ (1230–31). ಜಾನಿಯನ್ನು ಲಖನೌತಿಯ ಪ್ರಾಂತ್ಯಾಧಿಕಾರಿಯಾಗಿ ಅಲಾಉದ್ದೀನ್ ನೇಮಿಸಿದ. 1234ರಲ್ಲಿ ಮಾಳ್ವದ ಬಿಸ್ಲಾದುರ್ಗವನ್ನೂ ಉಜ್ಜಯನಿ ನಗರವನ್ನೂ ವಶಪಡಿಸಿಕೊಂಡ. ಬಿನಿಯನ್ ನಗರದ ಮೇಲೆ ಧಾಳಿ ಮಾಡಿದಾಗ ಈತ ಮರಣ ಹೊಂದಿದ (1236). ಈತನ ಕಾಲದಲ್ಲಿ ಮಂಗೋಲರ ಚಂಗೇಸ್‌ಖಾನ್ (ತೆಮುಜಿನ್ ಎಂಬುದು ಮೂಲ ಹೆಸರು) 1221ರಲ್ಲಿ ಸಿಂಧೂ ನದಿ ತೀರದಲ್ಲಿ ಮೊದಲು ಕಾಣಿಸಿಕೊಂಡ. ಖ್ವಾರಜಮ್ ರಾಜ್ಯದ ಕೊನೆಯ ಷಹ ಜಲಾಲುದ್ದೀನ್ ಮಂಗ್ಬರ್ನಿಯ ಮೇಲೆ ಧಾಳಿ ಮಾಡಿದಾಗ ಆತ ಪಂಜಾಬಿಗೆ ಧಾವಿಸಿ ಅಲ್ಲಿ ಇಲ್ತುಮಿಷನ ಆಶ್ರಯ ಬೇಡಿದ. ಇಲ್ತುಮಿಷ್ ಆತನಿಗೆ ಆಶ್ರಯ ನೀಡಲಿಲ್ಲ. ಒಂದು ವಿಧದಲ್ಲಿ ಇದರಿಂದ ಆತ ಭಾರತವನ್ನು ಮಂಗೋಲರ ಕ್ರೂರ ಆಕ್ರಮಣದಿಂದ ರಕ್ಷಿಸಿದಂತಾಯಿತು. ಖಲೀಫನಿಂದ ಇಲ್ತುಮಿಷ್ ಸುಲ್ತಾನ್–ಇ–ಆಜûಮ್ ಎಂಬ ಬಿರುದು ಪಡೆದು ತಾನು ಖಲೀಫನ ತವನಿಧಿಯೆಂದು ನಾಣ್ಯಗಳ ಮೇಲೆ ಟಂಕಿಸಿದ. ಕಲೆ ಸಾಹಿತ್ಯಗಳಿಗೆ ಪೋಷಣೆ ನೀಡಿದ ಈತನ ಹೆಸರು ಕುತುಬ್ ಮಿನಾರದಿಂದಾಗಿ ಅಜರಾಮರವಾಗಿದೆ. ಈತನ ಗೌರವಕ್ಕೆ ಪಾತ್ರನಾಗಿದ್ದ ಮತ್ತು ಬಾಗ್ದಾದ್ ಸಮೀಪದಲ್ಲಿ ವಾಸವಾಗಿದ್ದ ಖ್ವಾಜಾ ಕುತ್ಬುದ್ದೀನ್ ಭಾರತಕ್ಕೆ ಬಂದುದರ ಸ್ಮರಣಾರ್ಥ ಈ ಗೋಪುರವನ್ನು ಕಟ್ಟಿಸಲಾಯಿತು. ಇಲ್ತುಮಿಷನ ಹಿರಿಯಮಗ ನಾಸಿರುದ್ದೀನ್ ಮಹಮೂದ್ ಬಂಗಾಲದಲ್ಲಿ ಆಳುತ್ತಿದ್ದಾಗ ಕಾಲವಾದ (1279). ಇತರ ಗಂಡು ಮಕ್ಕಳು ಯೋಗ್ಯರಲ್ಲವೆಂಬ ಕಾರಣದಿಂದ ಮಗಳು ರಜಿಯಾಳನ್ನು ಉತ್ತರಾಧಿಕಾರಿಯಾಗಿ ಇಲ್ತುಮಿಷ್ ನೇಮಿಸಿದ. ಆದರೆ ಅವಳ ಅಯೋಗ್ಯ ಸಹೋದರ ರುಕ್ನುದ್ದೀನನನ್ನು ಸಂಪ್ರದಾಯವಾದಿಗಳು ಸಿಂಹಾಸನದ ಮೇಲೆ ಕೂರಿಸಿದರು. ರಾಜ್ಯದ ಸ್ಥಿತಿ ಹದಗೆಟ್ಟಿತು. ಬದೌನ್, ಮುಲ್ತಾನ್, ಲಾಹೋರ್, ಝಾನ್ಸಿ ಮತ್ತು ಬಂಗಾಲದಲ್ಲಿ ಕೇಂದ್ರ ಸರ್ಕಾರವನ್ನು ನಿರ್ಲಕ್ಷಿಸಲಾಯಿತು. ರೋಸಿದ ದೆಹಲಿಯ ಕುಲೀನರು ರಜಿಯಾಳನ್ನು ಸಿಂಹಾಸನಕ್ಕೇರಿಸಿದರು. ತೀಕ್ಷ್ಣಮತಿ ಹಾಗೂ ದಕ್ಷತೆಗಳಿಂದ ಆಕೆ ತನ್ನ ವಿರುದ್ಧ ದಂಗೆ ಎದ್ದವರನ್ನು ಸೋಲಿಸಿದಳು. ಅವರಲ್ಲಿ ವಜೀರನಾಗಿದ್ದ ಮಹಮದ್ ಜುನಾದಿ ಪ್ರಮುಖ. ಅಂತಿಮವಾಗಿ ಲಖ್ನೌತಿಯಿಂದ ದೇಬುಲ್, ದಮ್ರಿಲಗಳವರೆವಿಗೆ ಎಲ್ಲ ಮಲ್ಲಿಕರೂ ಅಮೀರರೂ ಆಕೆಯ ಅಧಿಕಾರವನ್ನು ಅಂಗೀಕರಿಸಿದರು. ಅಬಿಸೀನಿಯದ ಜಲಾಲುದ್ದೀನ್ ಯಾಖೂಬ್ ಎಂಬ ಗುಲಾಮನಿಗೆ ಆಕೆ ತೋರಿದ ವಿಶೇಷ ಅನುಗ್ರಹ ಸಂಪ್ರದಾಯವಾದಿಗಳ ಅಸಂತುಷ್ಟಿಗೆ ಕಾರಣವಾಗಿ ಅವರು ದಂಗೆ ಎದ್ದರು. ಸರ್‌ಹಿಂದ್ ಪ್ರಾಂತ್ಯದ ಇಖ್ತಿಯಾರ್ ಉದ್ದೀನ್ ಅಲ್ತೂನಿಯ ಇವರಲ್ಲಿ ಮೊದಲಿಗ. ಈತನನ್ನು ಎದುರಿಸಲು ರಾಣಿ ಸ್ವತಃ ಸೈನ್ಯದೊಡನೆ ಹೊರಟಳು. ಆದರೆ ದಂಗೆ ಎದ್ದ ಜನ ಯಾಖೂಬನನ್ನು ಕೊಲೆಮಾಡಿ ರಾಣಿಯನ್ನು ಸೆರೆ ಹಿಡಿದರು. ಅವಳ ಸಹೋದರ ಮುಯಿಜ್ ಉದ್ದೀನ್ ಬಹ ರಾಮ್‌ನನ್ನು ರಾಜನೆಂದು ಘೋಷಿಸಲಾಯಿತು. ಇಷ್ಟರಲ್ಲಿ ಆಕೆ ಅಲ್ತೂನಿಯನನ್ನೇ ಮದುವೆಯಾಗಿ ದೆಹಲಿಗೆ ಬಂದಳಾದರೂ ಬಹರಾಮ್ ಆಕೆಯನ್ನು ಸೋಲಿಸಿ ಇಬ್ಬರನ್ನೂ ಕೊಂದ. ಆಕೆಯ ಉತ್ತರಾಧಿಕಾರಿಗಳಾದ ಬಹರಾಮ್ ಮತ್ತು ಅಲಾ ಉದ್ದೀನ್ ಮಸೂದ್ ಅಸಮರ್ಥರಾದ್ದರಿಂದ ಅಶಾಂತಿ ಬೆಳೆಯಿತು. 1241ರಲ್ಲಿ ಮಂಗೋಲರು ಪಂಜಾಬನ್ನು ಪ್ರವೇಶಿಸಿ ಲಾಹೋರನ್ನು ಹಿಡಿದರು. 1245ರಲ್ಲಿ ಉಚ್‌ವರೆಗೂ ಬಂದರು. ಇಂಥ ಅಸ್ತವ್ಯಸ್ತ ಪರಿಸ್ಥಿತಿಗಳನ್ನು ಸುಧಾರಿಸಲು ಶ್ರೀಮಂತವರ್ಗದವರು ಇಲ್ತುಮಿಷನ ಕಿರಿಯಮಗ ನಾಸಿರುದ್ದೀನನಿಗೆ ಪಟ್ಟ ಕಟ್ಟಿದರು (1246). ಈತ ದಯಾಪರ, ಧಾರ್ಮಿಕ ಪ್ರವೃತ್ತಿಯುಳ್ಳವ. ಉತ್ತಮ ಲಿಪಿಕಾರನಾಗಿದ್ದು ಖುರಾನನ್ನು ಪ್ರತಿಮಾಡಿದ. ಪಂಡಿತಗೋಷ್ಠಿಗಳಲ್ಲಿ ವಿಶೇಷ ಆಸಕ್ತಿ ತಳೆದ. ಈತನಿಗೆ ಘಿಯಾಸುದ್ದೀನ್ ಬಲ್ಬನ್ ಎಂಬ ನಿಷ್ಠಾವಂತ ದಕ್ಷಮಂತ್ರಿ ಇದ್ದ. ಸುಲ್ತಾನನ ಎಲ್ಲ ಅಧಿಕಾರಗಳನ್ನೂ ಇವನೇ ವಹಿಸಿಕೊಂಡಿದ್ದ. ಪುತ್ರಸಂತಾನವಿಲ್ಲದೆ ನಾಸಿರುದ್ದೀನ್ ಕಾಲವಾದಾಗ ಬಲ್ಬನ್ನನೇ ಸುಲ್ತಾನನ ಉತ್ತರಾಧಿಕಾರಿಯಾದ (1266).

ಈತ ತುರ್ಕಿಸ್ತಾನದ ಅಲ್ಬೇರಿ ಜನಾಂಗಕ್ಕೆ ಸೇರಿದವ. ಮಂಗೋಲರು ಸೆರೆಹಿಡಿದು ಖ್ವಾಜಾ ಜಮಾಲುದ್ದೀನನಿಗೆ ಇವನನ್ನು ಮಾರಿದರು. ಈತ 1232ರಲ್ಲಿ ಇಲ್ತುಮಿಷನ ನಲ್ವತ್ತು ಮಂದಿ ಗುಲಾಮರ ಗುಂಪಿಗೆ ಸೇರಿದ. ಆರಂಭದಲ್ಲಿ ಆತನ ಖಾಸಾ ನೌಕರನಾಗಿ ಸ್ವಸಾಮರ್ಥ್ಯದಿಂದ ಉನ್ನತ ಪದವಿಗಳಿಗೇರಿ 1249ರಲ್ಲಿ ಸುಲ್ತಾನನ ಮಗಳನ್ನು ವರಿಸಿದ. ಇಲ್ತುಮಿಷನ ತರುವಾಯದ ಮೂರು ದಶಕಗಳಲ್ಲಿ ರಾಜ್ಯದಲ್ಲಿ ಅವ್ಯವಸ್ಥೆ ತಲೆದೋರಿತ್ತು. ಪ್ರಭುತ್ವದಲ್ಲಿ ಜನರಿಗೆ ಭೀತಿಯೇ ಇರಲಿಲ್ಲ. ಇವನ್ನು ಸರಿಪಡಿಸುವಲ್ಲಿ ಮೊದಲ ಹೆಜ್ಜೆಯಾಗಿ ಸೈನ್ಯವನ್ನು ಬಲಗೊಳಿಸಿ ಅಶ್ವದಳ ಕಾಲ್ದಳಗಳನ್ನು ಪುನರ್ವ್ಯವಸ್ಥೆಗೊಳಿಸಿದ. ಮೇವಾಡದ ಹಾಗೂ ಇತರ ದರೋಡೆಕಾರರ ತಂಡಗಳು ದೆಹಲಿಯನ್ನು ಆಕ್ರಮಿಸಿ ಜನರಲ್ಲಿ ಭೀತಿ ಮೂಡಿಸಿದ್ದುವು. ಅಂಥವರನ್ನು ದೆಹಲಿಯ ಕಾಡುಗಳಿಂದ ಓಡಿಸಿ ಗೋಪಾಲಗಿರಿಯಲ್ಲಿ ಕೋಟೆ ಕಟ್ಟಿಸಿದ. ದೋಅಬ್‌ನಲ್ಲಿ ಡಕಾಯಿತರ ಧಾಳಿಗಳನ್ನು ತಡೆದ. ಜೂಡ್ ಪರ್ವತ ಪ್ರದೇಶಗಳ ಗುಡ್ಡಗಾಡು ಬಣಗಳನ್ನು ಹತ್ತಿಕ್ಕಿ ಕಾಥೆರ್‌ದಲ್ಲಿಯ (ಈಗಿನ ರೋಹಿಲ ಖಂಡ್) ಮಂಗೋಲರ ಆಕ್ರಮಣವನ್ನು ಹಿಮ್ಮೆಟ್ಟಿಸಿ ಲಾಹೋರಿನ ಕೋಟೆಯನ್ನು ಭದ್ರಪಡಿಸಿದ (1271). 1279ರಲ್ಲಿ ಮಂಗೋಲರು ಸಟ್ಲೆಜ್ ನದಿಯನ್ನು ದಾಟಿದರು. ಆದರೆ ಸುಲ್ತಾನನ ಹಿರಿಯಮಗ ಮಹಮ್ಮದನನ್ನು ಮುಲ್ತಾನದ ಪ್ರಾಂತ್ಯಾಧಿಕಾರಿಯಾಗಿ, ಎರಡನೆಯ ಬುಘ್ರಾಖಾನನನ್ನು ಸಾಮಾನ್ ಮತ್ತು ಸುನಾಮ್‌ಗಳ ಆಡಳಿತಾಧಿಕಾರಿಯಾಗಿ ನೇಮಿಸಿದ. ಇವರಿಬ್ಬರ ಸೈನ್ಯಗಳೂ ದೆಹಲಿಯಿಂದ ಬಂದ ಮಲಿಕ್ ಮುಬಾರಕ್ ಬೆಕ್ತರನ ಸೈನ್ಯವೂ ಮಂಗೋಲರ ದ್ವಿತೀಯ ಧಾಳಿಯನ್ನು ಎದುರಿಸಿ ಅವರನ್ನು ಹಿಂದಕ್ಕಟ್ಟಿದುವು (1279). ಬಂಗಾಲದಲ್ಲಿ ಅಧಿಕಾರಿಯಾಗಿದ್ದ ತುಘ್ರಿಲ್ ಖಾನ್ ದೆಹಲಿಯ ಅರಾಜಕತೆಯನ್ನು ಅನುಲಕ್ಷಿಸಿ 1279–80ರಲ್ಲಿ ದಂಗೆ ಎದ್ದ. ಮೊದಲ ವರ್ಷ ಸುಲ್ತಾನನ ದಂಡನಾಯಕ ಅಲ್ತಗೀನ್ ಉರುಫ್ ಅಮೀರ್‌ಖಾನ್ ಅವನ ವಿರುದ್ಧ ಸೈನ್ಯಾಚರಣೆ ಮಾಡಿದರೂ ಸೋತು ಹಿಂದಿರುಗಿದ. ಮಲಿಕ್ ತರ್ಘೀ ಎಂಬಾತನೂ ಮರುವರ್ಷ ಸೋತಾಗ ಬಲ್ಬನ್ ಕೆರಳಿ ಸ್ವತಃ ಸೈನ್ಯನಾಯಕತ್ವ ವಹಿಸಿ ಬಂಗಾಲಕ್ಕೆ ಧಾವಿಸಿದ. ಹೆದರಿದ ತುಘ್ರಿಲ್ ತಪ್ಪಿಸಿಕೊಳ್ಳಲು ಯತ್ನಿಸಿದನಾದರೂ ಬಲ್ಬನನ ಅನುಯಾಯಿಗಳಿಂದ ಹತನಾದ. ತನ್ನ ಮಗ ಬುಘ್ರಾಖಾನನನ್ನು ಬಂಗಾಲದ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿ ಬಲ್ಬನ್ ಹಿಂದಿರುಗಿದ. ಅನಂತರದ ವರ್ಷಗಳಲ್ಲಿ ಬಲ್ಬನ್ನನ ಬಲ ಕುಗ್ಗಿತು. ಮಂಗೋಲರು ತಮರನ ನಾಯಕತ್ವದಲ್ಲಿ ಪಂಜಾಬಿಗೆ ನುಗ್ಗಿದಾಗ ಹಿರಿಯ ಮಗ ಮಹಮ್ಮದ್ ಅವನನ್ನೆದುರಿಸಿ ಸಾವಿಗೀಡಾದ. ಈ ಚಿಂತೆಯಲ್ಲಿ ಸುಲ್ತಾನ್ ಮರಣ ಹೊಂದಿದ (1287). ಈತ ರಾಜ್ಯಾಡಳಿತದಲ್ಲಿ ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಗೆ ತಂದು ಸಾಮ್ರಾಜ್ಯದ ಘನತೆ ಗೌರವಗಳನ್ನು ಹೆಚ್ಚಿಸಿದ್ದ; ಪರ್ಷಿಯದ ಅರಸರ ಆಸ್ಥಾನ ಪದ್ಧತಿಗಳನ್ನು ಜಾರಿಗೆ ತಂದಿದ್ದ. ಸಾಮ್ರಾಜ್ಯ ಛಿದ್ರವಾಗದಂತೆ ಅದನ್ನು ಕಾಪಾಡಿದ್ದ. ಆದರೆ ಪ್ರಜಾಹಿತಕ್ಕಾಗಿ ಆಡಳಿತ ವ್ಯವಸ್ಥೆಯನ್ನು ನವೀಕರಿಸುವ ಕಾರ್ಯವನ್ನು ಮಾತ್ರ ಮಾಡಲಿಲ್ಲ. ಪ್ರಸಿದ್ಧಕವಿ ಅಮೀರ್ ಖುಸ್ರು ಈತನ ಸಮಕಾಲೀನ.

ಈತನ ತರುವಾಯ ಬಂದವರು ವಿಷಯಲಂಪಟರೂ ಅದಕ್ಷರೂ ಆಗಿದ್ದರು. ಇದರಿಂದ ಪುನಃ ಅವ್ಯವಸ್ಥೆ ತಲೆ ಎತ್ತಿತು. ಅಂತಃಕಲಹಗಳ ಪರಿಣಾಮವಾಗಿ ಕೈಖುಬಾದ ಕೊಲ್ಲಲ್ಪಟ್ಟಾಗ ಖಿಲ್ಜಿ ಪಕ್ಷದವರು ಜಲಾಉದ್ದೀನ್ ಫಿರೋಜ್ ಎಂಬವನ ನಾಯಕತ್ವದಲ್ಲಿ ಪ್ರಬಲರಾಗಿ ಆತನನ್ನು ಸುಲ್ತಾನ ಪದವಿಗೇರಿಸಿದರು (1290). ದೆಹಲಿಯಲ್ಲಿ ತುರ್ಕಿ ಪಕ್ಷದವರು ಖಿಲ್ಜಿ ಪಕ್ಷದ ಇವನನ್ನು ಮಾನ್ಯ ಮಾಡಲಿಲ್ಲವಾದ ಕಾರಣ ಜಲಾಲುದ್ದೀನ್ ಆರಂಭದಲ್ಲಿ ಕಿಲೋಬಿಯನ್ನೇ ರಾಜಧಾನಿಯಾಗಿ ಮಾಡಿಕೊಂಡ. ಆ ವೇಳೆಗಾಗಲೇ ಇವನಿಗೆ 70ವರ್ಷ ಮೀರಿತ್ತು. ಈತ ದಯಾಪರನಾಗಿದ್ದು ಉದಾರ ನೀತಿಗಳಿಂದ ವಿರೋಧಿಗಳನ್ನು ಗೆದ್ದ. ಬಲ್ಬನ್ನನ ಸೋದರಳಿಯ ಮಲಿಕ್ ಛಜ್ಜೂ ಕಾರಾದಲ್ಲಿ ದಂಗೆ ಎದ್ದರೂ ಜಲಾಲುದ್ದೀನ್ ಅವನನ್ನು ಕ್ಷಮಿಸಿದ. ಆದರೆ ಈತನ ಸದ್ಗುಣಗಳು ಆಸ್ಥಾನಿಕರ ವಿಶ್ವಾಸಗಳಿಸುವಲ್ಲಿ ವಿಫಲವಾದುವು.

ಆಕ್ರಮಣ ನೀತಿಯನ್ನು ಸಹಿಸದ ಈತ ರಣಥಂಬೋರ್ ಕೋಟೆಯನ್ನು ಮುತ್ತಿದರೂ ಅಲ್ಲಿ ಮುಸಲ್ಮಾನರ ಜೀವಹಾನಿಯಾದೀತೆಂದು ಭಾವಿಸಿ ಹಿಂತಿರುಗಿದ. ಆದರೆ 1292ರಲ್ಲಿ ಒಂದೂವರೆ ಲಕ್ಷ ಮಂಗೋಲರನ್ನು ಸೋಲಿಸಿ ಅವರು ಭಾರತದಿಂದ ಕಾಲ್ತೆಗೆಯಲು ಅನುಮತಿ ನೀಡಿದ. ಅವರಲ್ಲಿ ಅನೇಕರು ಇಸ್ಲಾಮ್ ಧರ್ಮ ಸ್ವೀಕರಿಸಿದಾಗ ದೆಹಲಿಯ ಬಳಿ ವಾಸಿಸಲು ಅನುಮತಿ ನೀಡಿದ. ಹೊಸ ಮುಸಲ್ಮಾನರು ಎಂದು ಕರೆಯಲಾದ ಅವರು ಮುಂದೆ ದೆಹಲಿ ಸರ್ಕಾರಕ್ಕೆ ನಾನಾ ವಿಧದ ಕಿರುಕುಳ ಕೊಟ್ಟರು. ಸೋದರಳಿಯ ಅಲಾಉದ್ದೀನ್ ಇವನನ್ನು ಕೊಂದು ಸಿಂಹಾಸನವೇರಿದ (1296).

ಜಲಾಲುದ್ದೀನನ ಪ್ರೀತ್ಯಾದರಗಳಿಗೆ ಪಾತ್ರನಾಗಿದ್ದ ಅಲಾಉದ್ದೀನ್ ಅಲಹಾಬಾದ್ ಜಿಲ್ಲೆಯ ಕಾರಾ ಪ್ರಾಂತ್ಯಾಧಿಕಾರಿಯಾಗಿದ್ದಾಗ ದೆಹಲಿ ಸಿಂಹಾಸನದ ಉತ್ತರಾಧಿಕಾರಿಯಾಗುವ ಕನಸು ಕಾಣತೊಡಗಿದ. ಸಾಂಸಾರಿಕ ನೆಮ್ಮದಿಯಿಂದ ವಂಚಿತನಾಗಿದ್ದ ಈತ ಅಧಿಕಾರದ ಮೂಲಕ ಪ್ರಭಾವಶಾಲಿಯಾಗ ಬಯಸಿದ. ಮಾಳವದ ವಿರುದ್ಧ ಹೋದ ದಂಡಯಾತ್ರೆಯ (1292) ಬಳಿಕ ಔಧ್ ಪ್ರಾಂತ್ಯ ಸಹ ಇವನ ಅಧೀನಕ್ಕೊಳಪಟ್ಟಿತು. ಬಿಸ್ಲಾದಿಂದ ದಖನ್‌ಗೆ ನುಗ್ಗಿ ಸೇವುಣ ರಾಮಚಂದ್ರನನ್ನು ದೇವಗಿರಿಯಲ್ಲಿ ಸೋಲಿಸಿದ ಸಂದರ್ಭದಲ್ಲಿ ದಕ್ಷಿಣ ಭಾರತದ ಅಪಾರ ಸಂಪತ್ತು ಇವನನ್ನು ಆಕರ್ಷಿಸಿತು. ಅಲ್ಲಿ ಕಪ್ಪವಾಗಿ ಪಡೆದ ಸಂಪತ್ತನ್ನು ತಾನೇ ಇಟ್ಟುಕೊಂಡ. ದೆಹಲಿಯ ಆಸ್ಥಾನಿಕರಲ್ಲಿ ಪ್ರಮುಖನಾದ ಅಹಮ್ಮದ್‌ಛಾಪ್ ಸುಲ್ತಾನನನ್ನು ಈತನ ವಿಷಯದಲ್ಲಿ ಜಾಗರೂಕನಾಗಿರುವಂತೆ ಎಚ್ಚರಿಸಿದ. ಆದರೆ ಈತ ಅಳಿಯನಿಂದ ವ್ಯಾಮೋಹಿತನಾಗಿದ್ದು, ಆತನ ಆಹ್ವಾನ ಸ್ವೀಕರಿಸಿ ಕಾರಾಕ್ಕೆ ತೆರಳಿದ. ದೋಣಿಯಲ್ಲೇ ಈತನ ಕೊಲೆಯಾಯಿತು (1296, ಜುಲೈ). ಅಲಾಉದ್ದೀನನ ಹಿಂಬಾಲಕರು ಅವನನ್ನು ಸುಲ್ತಾನನೆಂದು ಘೋಷಿಸಿದರೂ ದೆಹಲಿಗೆ ಹಿಂತಿರುಗಿ ಅರಮನೆಯೊಳಗಿನ ಮತ್ತು ಹೊರಗಿನ ಶತ್ರುಗಳನ್ನು ನಿವಾರಿಸಿಕೊಳ್ಳುವ ತನಕವೂ ಅವನ ಸ್ಥಾನ ಭದ್ರವಾಗಿರಲಿಲ್ಲ. ತನ್ನ ಸಂಪತ್ತನ್ನು ಅನುಯಾಯಿಗಳಿಗೆ ಹಂಚಿ ಅವರ ಒಲವನ್ನು ಪಡೆದ. 1296 ಅಕ್ಟೋಬರಿನಲ್ಲಿ ಪಟ್ಟಾಭಿಷಿಕ್ತನಾದ. ಜಫರ್‌ಖಾನ್ ಈತನ ಮಂತ್ರಿಯೂ ವೀರಯೋಧನೂ ಆಗಿದ್ದು ರುಸ್ತುಮ್ ಎನಿಸಿಕೊಂಡಿದ್ದ. ಈತನ ಧೈರ್ಯ ಸಾಹಸಗಳಿಂದ 1296, 1297 ಮತ್ತು 1299ರಲ್ಲಿ ಮೇಲಿಂದ ಮೇಲೆ ಧಾಳಿ ಮಾಡಿದ ಮಂಗೋಲರು ತೀವ್ರ ಸೋಲನ್ನು ಅನುಭವಿಸಿ ಹಿಂದೆ ಸರಿದರು. ಅವರ ನಾಯಕ ಸಾಲ್ದಿ ಸೆರೆಸಿಕ್ಕ. ಕುತ್ಲುಬ್ ಖ್ವಾಜಾನ ನೇತೃತ್ವದಲ್ಲಿ ಬಂದಿದ್ದ ಮಂಗೋಲರ ಸೈನ್ಯ 1299ರ ಕದನದಲ್ಲಿ ಹಿಂದಕ್ಕೆ ಸರಿದರೂ ಸ್ವತಃ ಜಫರ್‌ಖಾನನೇ ವೀರಮರಣ ಅಪ್ಪಿದ. 1307–08ರಲ್ಲಿ ಇಖ್ಬಾಲ್‌ಮಂಡನ ನೇತೃತ್ವದಲ್ಲಿ ಸಿಂಧೂನದಿ ದಾಟಿ ಮಂಗೋಲರು ಮುನ್ನುಗ್ಗಿದರೂ ಹಿಮ್ಮೆಟ್ಟಿಸಲ್ಪಟ್ಟರು. ಈ ಧಾಳಿಗಳಿಂದ ರಾಜ್ಯವನ್ನು ರಕ್ಷಿಸಲು ಸುಲ್ತಾನ ವಾಯವ್ಯಗಡಿಯಲ್ಲಿ ಕೋಟೆಗಳ ದುರಸ್ತಿ ಮತ್ತು ಹೊಸಕೋಟೆಗಳ ನಿರ್ಮಾಣ ಕಾರ್ಯ ಕೈಗೊಂಡ. ದೆಹಲಿಯಲ್ಲಿ ಈತನ ವಿರುದ್ಧ ದಂಗೆ ಎದ್ದಿದ್ದ ಹೊಸ ಮುಸಲ್ಮಾನರನ್ನು ಸೇವೆಯಿಂದ ಕಿತ್ತು, ಕೊನೆಗೆ ಅವರ ಸಾಮೂಹಿಕ ಕೊಲೆಗೆ ಆಜ್ಞೆ ಹೊರಡಿಸಿದ.

ಆರಂಭದ ಈ ವಿಜಯಗಳು ಅಲಾಉದ್ದೀನನ ಸೀಮಿತವನ್ನು ಕೆಡಿಸಿದುವು. ಗುಜರಾತಿನಲ್ಲಿ ಬಘೇಲಾ ರಜಪೂತ ಅರಸ ಎರಡನೆಯ ಕರ್ಣದೇವ ಆಳುತ್ತಿದ್ದ. ಈ ಹಿಂದೂ ರಾಜ್ಯದ ಮೇಲೆ ದಂಡೆತ್ತಲು ಅಲಾಉದ್ದೀನ್ ತನ್ನ ಸಹೋದರ ಉಲುಘ್‌ಖಾನ್ ಮತ್ತು ವಜೀರ್‌ನಜರತ್ ಖಾನರನ್ನು ಕಳುಹಿಸಿದ (1297). ಕರ್ಣದೇವ ತನ್ನ ಮಗಳಾದ ದೇವಲಾದೇವಿಯೊಡನೆ ದೇವಗಿರಿಯಲ್ಲಿ ಆಶ್ರಯ ಪಡೆದ. ಆತನ ರಾಣಿ ಕಮಲಾದೇವಿ ಮಾತ್ರ ಸೆರೆಯಾಳಾಗಿ ಮುಂದೆ ಸುಲ್ತಾನನ ಸತಿಯಾದಳು. ಸಂಪತ್ತಿನ ಸೂರೆಯಾಯಿತು. ಈ ಸಂದರ್ಭದಲ್ಲಿ ಅಲ್ಲಾಉದ್ದೀನನಿಗೆ ಮಲ್ಲಿಕ್ ಕಾಫರ್ ಎಂಬ ನಪುಂಸಕ ನೌಕರ ಕಾಣಿಕೆಯಾಗಿ ಸಿಕ್ಕಿದ.

1299ರಲ್ಲಿ ರಣಥಂಬೋರ್ ಕೋಟೆಯ ಆಕ್ರಮಣದ ಯುದ್ಧದಲ್ಲಿ ಉಲುಘ್ ಮತ್ತು ನಜರತ್‌ಖಾನ್‌ರು ಸೋತಾಗ ಸ್ವತಃ ಸುಲ್ತಾನನೇ ಸೈನ್ಯದ ನಾಯಕತ್ವ ವಹಿಸಿ, ಒಂದು ವರ್ಷಕಾಲ ದೀರ್ಘ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡ. ಈ ಸಂದರ್ಭದಲ್ಲಿ ಸುಲ್ತಾನನ ವಿರುದ್ಧ ಸಂಚು ಹೂಡಿದ್ದ ಹಲವಾರು ಸೇನಾನಿಗಳು ಅವನ ಕೋಪಕ್ಕೆ ತುತ್ತಾದರು. ಹಮ್ಮೀರದೇವ ಅಸುನೀಗಿದ. ಮುಂದಿನ ಗುರಿ ಮೇವಾಡದ ಕೋಟೆ. ಇಲ್ಲಿಯೂ ರಜಪೂತರು ಪ್ರಬಲ ವಿರೋಧ ಒಡ್ಡಿದರು. ರಾಣಾ ರತ್ನಸಿಂಹನ ಮಡದಿ ಪದ್ಮಿನಿ ಈ ದಂಡಯಾತ್ರೆಗೆ ಕಾರಣ ಎಂಬುದೊಂದು ಪರಂಪರಾಗತ, ಆದರೆ ಸಿದ್ಧಪಡಿಸಲಾಗದ ಹೇಳಿಕೆ. ಚಿತ್ತೂರು ವಶವಾದಾಗ (1303) ಅಲ್ಲಿಯ ರಾಣಿ ಮತ್ತು ರಜಪೂತ ಸ್ತ್ರೀಯರು ಅಗ್ನಿಪ್ರವೇಶಿಸಿದರು. ಚಿತ್ತೂರಿನ ಹೆಸರನ್ನು ಖಿಜ್ರಾಬಾದ್ ಎಂದು ಬದಲಾಯಿಸಲಾಯಿತು. ಮಗ ಖಿಜ್ರಾಖಾನನಿಗೆ ಅಲ್ಲಿಯ ಆಡಳಿತ ವಹಿಸಲಾಯಿತು. ಆದರೆ ರಜಪೂತರ ಪ್ರತಿಭಟನೆ ತೀವ್ರವಾಗಿದ್ದು 1311ರ ವೇಳೆಗೆ ಖಿಜ್ರಾಖಾನ್ ದೆಹಲಿಗೆ ಹಿಂತಿರುಗಬೇಕಾಯಿತು. ಜಾಲೋರ್ ರಾಜ್ಯದ ಮಾಲದೇವ ಆಡಳಿತ ವಹಿಸಿದನಾದರೂ ಅಂತಿಮವಾಗಿ ಚಿತ್ತೂರು ರಜಪೂತರ ವಶವಾಗಿ ಮತ್ತೊಮ್ಮೆ ಮೇವಾಡದ ರಾಜಧಾನಿಯಾಯಿತು.

1305ರಲ್ಲಿ ಸುಲ್ತಾನನ ಸೈನ್ಯ ಮಾಳವದ ಮಹಲತದೇವನನ್ನು ಸೋಲಿಸಿತು. ದರ್ಬಾರ್ ಭಕ್ಷಿಯಾದ ಐನ್–ಉಲ್–ಮುಲ್ಕ್ ಪ್ರಾಂತ್ಯಾಧಿಕಾರಿಯಾದ. ಉಜ್ಜಯಿನಿ, ಮಾಂಡ್, ಧಾರಾ ಮತ್ತು ಚಾಂಧೇರಿ ಸಹ ಸುಲ್ತಾನನ ವಶವಾದುವು. ದೇವಗಿರಿಯ ರಾಮಚಂದ್ರದೇವ ಮೂರು ವರ್ಷಗಳಿಂದ ಕಪ್ಪ ಸಲ್ಲಿಸಿರಲಿಲ್ಲವೆಂಬ ಮತ್ತು ಕರ್ಣದೇವನಿಗೆ ಆಶ್ರಯ ನೀಡಿದನೆಂಬ ಕಾರಣಗಳಿಂದ ಸುಲ್ತಾನ್ ಮಲ್ಲಿಕ್ ಕಾಫರನನ್ನು ದೇವಗಿರಿಗೆ ಕಳುಹಿಸಿದ (1307). ಆತನ ಸೈನ್ಯ ದೇವಗಿರಿಯನ್ನು ಸೂರೆ ಮಾಡಿತು. ರಾಮಚಂದ್ರದೇವನನ್ನು ದೆಹಲಿಗೆ ಒಯ್ಯಲಾಯಿತು. ಆರು ತಿಂಗಳ ಬಳಿಕ ಆತ ಸಾಮಂತನಾಗಿ ಕಪ್ಪಕಾಣಿಕೆ ಸಲ್ಲಿಸುವ ಒಡಂಬಡಿಕೆಗೆ ಒಳಪಟ್ಟು ಹಿಂತಿರುಗಿದ. ಕರ್ಣದೇವನ ಮಗಳಾದ ದೇವಲದೇವಿಯನ್ನು ಸೆರೆಹಿಡಿದು ದೆಹಲಿಗೆ ಕರೆದೊಯ್ಯಲಾಯಿತು. ಅಲ್ಲಿ ಆಕೆ ಸುಲ್ತಾನನ ಹಿರಿಯಮಗ ಖಿಜ್ರಾಖಾನನನ್ನು ವರಿಸಬೇಕಾಯಿತು.

1303ರಲ್ಲಿ ಒಮ್ಮೆ ಕಾಕತೀಯ ಪ್ರತಾಪರುದ್ರನ ವಿರುದ್ಧ ವಾರಂಗಲ್ಲಿಗೆ ಹೋಗಿದ್ದ ಸೈನ್ಯ ಬರಿಗೈಯಲ್ಲಿ ಹಿಂತಿರುಗಿತ್ತು. ಆದರೆ ಈಗ ರಾಮಚಂದ್ರನ ಸೋಲು ಸುಲ್ತಾನನನ್ನು ಉತ್ತೇಜಿಸಿ ಆತ ಕಾಫರನನ್ನು ವಾರಂಗಲ್ಲಿನ ವಿರುದ್ಧ ಕಳಿಸಿದ. ಪ್ರತಾಪ ರುದ್ರ ಸೋತು ಸೆರೆಯಾಳಾಗಿ ದೆಹಲಿಗೆ ಕರೆದೊಯ್ಯಲ್ಪಟ್ಟ. ನೂರು ಆನೆಗಳು, ಏಳುಸಾವಿರ ಕುದುರೆಗಳು, ಸಾವಿರ ಒಂಟೆಗಳ ಮೇಲೆ ಹೇರಿದ ಅಪಾರ ಧನಕನಕಗಳು ಕಾಫರನಿಗೆ ದಕ್ಕಿದುವು. ಅಲ್ಲಿಂದ ಮುಂದೆ ಕಾಫರನೂ ಸೇನಾನಿ ಖ್ವಾಜಾಹಾಜಿಯೂ ಹೊಯ್ಸಳ ವೀರಬಲ್ಲಾಳನ ವಿರುದ್ಧ ಬಂಡೆದ್ದು ಅವನನ್ನು ಸೋಲಿಸಿ ರಾಜಧಾನಿ ದೋರಸಮುದ್ರವನ್ನು ದೋಚಿದರು. ಬಲ್ಲಾಳ ಸುಲ್ತಾನನ ಸಾಮಂತಿಕೆಯನ್ನು ಒಪ್ಪಿ ಮಗನನ್ನು ದೆಹಲಿಗೆ ಕಳುಹಿಸಬೇಕಾಯಿತು. 1311ರಲ್ಲಿ ಪಾಂಡ್ಯರನ್ನು ಸೋಲಿಸಿ, ಮಧುರೆಯನ್ನು ಸೂರೆಗೊಂಡು, ಅಪಾರ ಸಂಪತ್ತನ್ನು ದೋಚಿದ. ಕಾಫರ್ ರಾಮೇಶ್ವರದ ವರೆಗೂ ಹೋದನೆಂದು ಅಮೀರ್ ಖುಸ್ರು ಹೇಳಿದ್ದಾನೆ. ದೇವಗಿರಿಯ ಶಂಕರ ಸ್ವಾತಂತ್ರ್ಯ ಘೋಷಿಸಿದ್ದರಿಂದ 1312ರಲ್ಲಿ ಪುನಃ ದಕ್ಷಿಣಕ್ಕೆ ಬಂದು, ಕಾಫರ್ ಶಂಕರದೇವನನ್ನು ಯುದ್ಧದಲ್ಲಿ ಕೊಂದ.

1313ರ ವೇಳೆಗೆ ಸಮಗ್ರ ಉತ್ತರ ಭಾರತ ಅಲಾಉದ್ದೀನನ ಅಧೀನಕ್ಕೆ ಬಂದು ದಕ್ಷಿಣ ಭಾರತದ ರಾಜ್ಯಗಳು ಈತನ ಪದಾಘಾತಕ್ಕೆ ತತ್ತರಿಸಿ ಕಪ್ಪಕಾಣಿಕೆಗಳನ್ನು ಸಲ್ಲಿಸಲು ಒಪ್ಪಿದುವು. ಇದು ಈತನ ಅಧಿಕಾರದ ಪರಾಕಾಷ್ಠೆ. ಆದರೆ ಸ್ವಚ್ಛಂದ ಜೀವನ ಈತನ ಆರೋಗ್ಯ ಕೆಡಿಸಿತು. ಮಲ್ಲಿಕ್‌ಕಾಫರ್‌ನನ್ನು ವಜೀರನ ಪದವಿಗೇರಿಸಿ, ತನ್ಮೂಲಕ ಮೊದಲಿನಿಂದಲೂ ಇದ್ದ ಸಮರ್ಥ ಅಧಿಕಾರಿಗಳ ವಿಶ್ವಾಸ ಕಳೆದುಕೊಂಡ. ಸುಲ್ತಾನನ ಆಡಳಿತ ಶಿಥಿಲಗೊಂಡಿತು. ವಜೀರ ಅರಮನೆಯ ಅಂತಃಕಲಹಗಳಿಗೆ ಕಾರಣನಾದ. ಸುಲ್ತಾನ ಅನಾರೋಗ್ಯದಿಂದ ಅಸುನೀಗಿದ (1316). ಸುಲ್ತಾನನ ಹಿರಿಯಮಗ ಖಿಜ್ರಾಖಾನನನ್ನು ಬದಿಗೊತ್ತಿದ ಕಾಫರ್ ಕಿರಿಯನಾದ ಐದಾರು ವರ್ಷಗಳ ಷಿಹಾಬುದ್ದೀನನನ್ನು ಪಟ್ಟಕ್ಕೆ ತಂದು ತಾನು ರಾಜಪ್ರತಿನಿಧಿಯಾಗಿ ಆಳುವ ಕುತಂತ್ರ ಹೂಡಿದ. ಆದರೆ ವಜೀರನ ಈ ಕ್ರಮಗಳಿಂದ ರೋಸಿದ ಕುಲೀನ ಆಸ್ಥಾನಿಕರು ಅವನನ್ನು ಕೊಂದರು. ಸೆರೆಯಲ್ಲಿದ್ದ ಮೂರನೆಯ ಮಗ ಮುಬಾರಕನನ್ನು ರಾಜಪ್ರತಿನಿಧಿಯಾಗಿ ನೇಮಿಸಿದರು. ಆದರೆ ಕೆಲವೇ ದಿನಗಳಲ್ಲಿ ಆತ ಸುಲ್ತಾನನೆನಿಸಿದ್ದ ಕಿರಿಯನನ್ನು ಬದಿಗೊತ್ತಿ ಕುತ್ಬುದ್ದೀನ್ ಮುಬಾರಕ್ ಷಾ ಎಂಬ ಹೆಸರಿನಿಂದ ಸಿಂಹಾಸನ ಏರಿದ. ಈತ ವಿಷಯ ಲಂಪಟ. ಅಧಿಕಾರವನ್ನು ಖುಸ್ರೂಖಾನ್ ಎಂಬ ಮಂತ್ರಿಗೆ ಒಪ್ಪಿಸಿದ. ಗುಜರಾತಿನಲ್ಲಿ ಕಾಣಿಸಿಕೊಂಡ ದಂಗೆಯನ್ನು ಆತನ ಮಾವ ಜಾಫರ್‌ಖಾನ್ ಅಡಗಿಸಿದ. ದೇವಗಿರಿಯ ಬಂಡಾಯವನ್ನು ದಮನಗೊಳಿಸಲು ಸ್ವತಃ ಸುಲ್ತಾನನೇ ಅಲ್ಲಿಗೆ ಹೋದ. ಸೇವುಣರು ಸಂಪೂರ್ಣವಾಗಿ ಸೋತು ದೇವಗಿರಿ ರಾಜ್ಯ ಇವನ ವಶವಾಯಿತು. ಮಲ್ಲಿಕ್ ಯಾಕ್ಲಕೀಖಾನ್ ಅಲ್ಲಿಯ ಪ್ರಾಂತ್ಯಾಧಿಕಾರಿಯಾಗಿ ನೇಮಕಗೊಂಡ. ದೆಹಲಿಗೆ ಹಿಂತಿರುಗಿದ ಬಳಿಕ 1320ರಲ್ಲಿ ಖುಸ್ರೂಖಾನನ ಒಳಸಂಚಿಗೆ ಬಲಿಯಾದ. ಆದರೆ ಖುಸ್ರೂಖಾನನೆ ಗಡಿನಾಡಿನ ರಕ್ಷಕನಾಗಿದ್ದ ಘಾಜಿಮಲ್ಲಿಕನಿಂದ ಸೋಲಿಸಲ್ಪಟ್ಟು ಅಸುನೀಗಿದ. ಇದು ಕೆಲವೇ ತಿಂಗಳುಗಳ ಬಳಿಕ 1320ರ ಸೆಪ್ಟೆಂಬರಿನಲ್ಲಿ ನಡೆದ ಘಟನೆ. ಘಾಜೀಮಲ್ಲಿಕನೊಡನೆ ದೆಹಲಿಯಲ್ಲಿ ತುಘಲಕ್ ಸಂತತಿಯವರ ಆಳ್ವಿಕೆ ಆರಂಭವಾಯಿತು.

ಅಲಾಉದ್ದೀನನ ವಿಜಯಗಳು ಆತನನ್ನು ಉನ್ಮಾದಗೊಳಿಸಿದುವು. ಈ ತನಕವೂ ದೆಹಲಿಯ ಸುಲ್ತಾನ ಧಾರ್ಮಿಕ ಮುಖಂಡರಾದ ಉಲೆಮರ ನೆರವಿನಿಂದ ಅಧಿಕಾರ ಪಡೆದವನಾಗಿರಬೇಕೆಂದು ಭಾವಿಸಲಾಗಿತ್ತು. ಇದರಿಂದ ಉಲೆಮರ ಪ್ರಭಾವ ಅಪಾರವಾಗಿತ್ತು. ಆದರೆ ಅಲಾಉದ್ದೀನ್ ಮೊದಲಬಾರಿಗೆ ಅದನ್ನು ಉಲ್ಲಂಘಿಸಿದ. ತಾನು ಕೈಗೊಂಡ ತೀರ್ಮಾನ ರಾಜ್ಯ ಹಿತಕ್ಕಾಗಿಯೇ. ಅವಿಧೇಯರನ್ನೂ ದಂಗೆಕೋರರನ್ನೂ ತಹಬಂದಿಗೆ ತರುವುದು ಮುಖ್ಯವೇ ಹೊರತು ಅದಕ್ಕಾಗಿ ತಾನು ನೀಡಿದ ಶಿಕ್ಷೆಯ, ಹಿಡಿದ ಮಾರ್ಗಗಳ ನ್ಯಾಯಾನ್ಯಾಯಗಳ ವಿಷಯ ತನಗೆ ತಿಳಿಯದು ಎಂಬುದು ಅವನ ಖಚಿತ ಅಭಿಪ್ರಾಯವಾಗಿತ್ತು. ಈ ವಾದದ ಮುನ್ನೆಲೆಯಲ್ಲಿ ರಾಜ ಕೇವಲ ರಾಜಕೀಯ ಮುಖಂಡನಷ್ಟೇ ಅಲ್ಲದೆ, ಧಾರ್ಮಿಕ ವಿಷಯಗಳಲ್ಲೂ ಅವನಿಗೆ ಮೇಲೊಬ್ಬ ಧರ್ಮಾಧಿಕಾರಿ ಇರುವನೆಂಬ ವಾದವನ್ನು ಅಲ್ಲಗಳೆದಿದ್ದನೆಂಬುದನ್ನು ಗಮನಿಸಬೇಕು. ವಿರೋಧಿಗಳನ್ನು ಸದೆಬಡಿಯಲು ಪ್ರಜೆಗಳ ಆಸ್ತಿಪಾಸ್ತಿ ಒಡೆತನದ ಹಕ್ಕನ್ನು ನಿಷೇಧಿಸಿದ. ಗೂಢಚಾರದಳದ ಮೂಲಕ ವಿಷಯ ಸಂಗ್ರಹಣೆ ಮಾಡಿ ತನ್ನ ವಿರುದ್ಧ ವರ್ತಿಸಿದವರನ್ನು ಹತೋಟಿಗೆ ತಂದ. ಮಾದಕ ಪಾನೀಯಗಳ ಸೇವನೆ, ಜೂಜು ಮುಂತಾದ ಅನೈತಿಕ ವ್ಯವಹಾರಗಳನ್ನು ನಿಷೇಧಿಸಿದ. ಬಲಿಷ್ಠ ಸೈನ್ಯ ಕಟ್ಟಿದ. ಜನರ ಜೀವನ ಸುಗಮವಾಗಿರಲು ಮಾರುಕಟ್ಟೆಯಲ್ಲಿ ನಿಯಂತ್ರಣಗಳನ್ನು ವಿಧಿಸಿ ಧಾನ್ಯಗಳು ಮತ್ತು ಜೀವನಾವಶ್ಯಕ ವಸ್ತುಗಳು ಸುಲಭ ಬೆಲೆಗೆ ದೊರಕುವ ಏರ್ಪಾಡು ಮಾಡಿದ. ಸಾಹಿತ್ಯ, ವಾಸ್ತುಶಿಲ್ಪಗಳಲ್ಲಿ ಆಸಕ್ತಿ ಇತ್ತು. ಅಮೀರ್‌ಖುಸ್ರು, ಹಸನ್ ಮುಂತಾದ ಕವಿಗಳಿಗೆ ಆಶ್ರಯದಾತನಾಗಿದ್ದ. ಅನೇಕ ಭಗ್ನ ಮಸೀದಿಗಳನ್ನು ಪುನರುಜ್ಜೀವನಗೊಳಿಸಿದ. ವರ್ತುಲಾ

ಕಾರದ ಅಲಾಯ್ ಕೋಟೆ (ಷೆರ್‌ಷಾಸಿರಿ) ಕಟ್ಟಿಸಿದ. ಅಧಿಕಾರಕ್ಕೆ ಬಂದ ಕೂಡಲೇ ಪ್ರಜೆಗಳ ಮೇಲಿನ ಕರಭಾರ ತಗ್ಗಿಸಿ ಆಡಳಿತದಲ್ಲಿ ಜನಾನುರಾಗಿ ಸುಧಾರಣೆಗಳನ್ನು ಕೈಗೊಂಡು ನಂಬುಗೆಗೆ ಪಾತ್ರರಾದ ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿ, ಕಾಲುವೆಗಳನ್ನೂ ಕೆರೆಗಳನ್ನೂ ಕಟ್ಟಿಸುವ ಮೂಲಕ ಬೇಸಾಯಕ್ಕೆ ಪ್ರೋತ್ಸಾಹ ನೀಡಿ ಜನರ ಬಾಳು ಹಸನಾಗುವಂತೆ ಮಾಡಿದ. ಕಪ್ಪ ಕೊಡದಿದ್ದ ವಾರಂಗಲ್ಲಿನ ಕಾಕತೀಯ ಪ್ರತಾಪರುದ್ರನ ವಿರುದ್ಧ 1322ರಲ್ಲಿ ಹಿರಿಯಮಗ ಜೌನಾಖಾನನ ನೇತೃತ್ವದಲ್ಲಿ ಸೈನ್ಯ ಕಳುಹಿಸಿದ. ಆದರೆ ಅಂತಃಕಲಹ ಹಾಗೂ ಸೈನ್ಯದಲ್ಲಿ ಹರಡಿದ ಕಾಯಿಲೆ ಇವುಗಳಿಂದ ಸೈನ್ಯ ತತ್ತರಿಸಿ ಹಿಮ್ಮೆಟ್ಟಬೇಕಾಯಿತು. ಆದರೆ ಇನ್ನೊಮ್ಮೆ ನಾಲ್ಕು ತಿಂಗಳ ಬಳಿಕ ಧಾಳಿ ಮಾಡಿದ ಜೌನಾಖಾನ್ ಕಾಕತೀಯರನ್ನು ಸೋಲಿಸಿ ರಾಜ್ಯವನ್ನು ಸ್ವಾಧೀನ ಮಾಡಿಕೊಂಡ. ವಾರಂಗಲ್ ಈಗ ಸುಲ್ತಾನಪುರ ಎನಿಸಿತು. ಬಂಗಾಲದಲ್ಲಿ ಆಳುತ್ತಿದ್ದ ಸುಲ್ತಾನನ ಮಕ್ಕಳಲ್ಲಿ ಇದೇ ಸಮಯಕ್ಕೆ ಸ್ಪರ್ಧೆಗಳೇರ್ಪಟ್ಟುವು. ದೆಹಲಿಯ ಸುಲ್ತಾನ ಈ ಪರಿಸ್ಥಿತಿಯನ್ನು ಬಳಸಿಕೊಂಡು ಬಂಗಾಲದ ವಿರುದ್ಧ ಧಾವಿಸಿದ. ಅಲ್ಲಿಯ ರಾಜಕುಮಾರನನ್ನು ಸೋಲಿಸಿ ನಾಸಿರುದ್ದೀನನನ್ನು ಸಾಮಂತನಾಗಿ ನೇಮಿಸಿ ಹಿಂತಿರುಗಿದ. ಆದರೆ ಹಿಂತಿರುಗುವಾಗ ದೆಹಲಿ ಸಮೀಪದ ಅಫ್ಘನ್ ಪುರದಲ್ಲಿ ಪಿತೂರಿಗೆ ಬಲಿಯಾಗಿ ಸತ್ತ (1325). ರಾಜಕುಮಾರ ಜೌನಾಖಾನ್ ನಿರ್ಮಿಸಿದ ಮರದ ರಚನೆಯೊಂದು ಸುಲ್ತಾನನ ಮೇಲೆ ಕುಸಿಯುವಂತೆ ರೂಪಿಸಲಾಗಿತ್ತು ಎಂದು ಇಬನ್ ಬತೂತ ಹೇಳಿದ್ದಾನೆ. ಅದು ಸಿಡಿಲಿನ ಹೊಡೆತಕ್ಕೆ ಕುಸಿಯಿತು ಎಂಬ ಬರ್ನಿಯ ವಾದಕ್ಕೆ ಹೆಚ್ಚಿನ ಆಧಾರಗಳಿಲ್ಲ. ಜೌನಾಖಾನನ ಕುತಂತ್ರವೇ ಸುಲ್ತಾನನ ಸಾವಿಗೆ ಕಾರಣ ಎನ್ನಲಾಗಿದೆ.

ಮಹಮದ್ (ಷಾ) ತುಗಲಕ್ ಎಂಬ ಹೆಸರಿನಿಂದ ಜೌನಾಖಾನ್ ಅಧಿಕಾರಕ್ಕೆ ಬಂದ (1325). ದೆಹಲಿಯ ಸುಲ್ತಾನರ ಪೈಕಿ ಈತ ಚರ್ಚಾಸ್ಪದ ವ್ಯಕ್ತಿ. ಈತನ ಸೋದರಳಿಯ ಬಹಾಉದ್ದೀನ್ ಗುರ್ಷಾಷ್ಪ ಗುಲ್ಬರ್ಗ ಸಮೀಪದ ಸಾಗರದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದ. ದಂಗೆ ಎದ್ದಾಗ ಈತನನ್ನು ದೇವಗಿರಿಯಲ್ಲಿ ಸೋಲಿಸಿ ಅಟ್ಟಿಸಿಕೊಂಡು ಹೋಗಲಾಯಿತು. ಮೊದಲು ಕಂಪಿಲಿಯಲ್ಲಿ, ಅನಂತರ ದೋರಸಮುದ್ರದಲ್ಲಿ ಇವನು ಆಶ್ರಯ ಪಡೆದ. ಕಂಪಿಲಿಯಲ್ಲಿ ಕುಮಾರರಾಮ ಮಹಮ್ಮದನನ್ನು ಎದುರಿಸಿ ತೀವ್ರವಾಗಿ ಹೋರಾಡಿ ವೀರಮರಣ ಅಪ್ಪಿದ. ಹೆದರಿದ ಹೊಯ್ಸಳ ಬಲ್ಲಾಳ ದಂಗೆಕೋರರನ್ನು ಸುಲ್ತಾನನಿಗೆ ಒಪ್ಪಿಸಿದ. ಈ ದಂಡಯಾತ್ರೆಯ ಪರಿಣಾಮವಾಗಿ ಹೊಯ್ಸಳರು ಮತ್ತು ಪಾಂಡ್ಯರು ಮಹಮ್ಮದನ ಸಾಮಂತಿಕೆ ಒಪ್ಪಿಕೊಂಡರು. ಈ ಸಂದರ್ಭದಲ್ಲಿ ಸುಲ್ತಾನ ತೋರಿದ ಕ್ರೌರ್ಯ ಆತನ ಸ್ವಭಾವಕ್ಕೆ ಅನುಗುಣವಾಗಿತ್ತು. ಬೊಕ್ಕಸ ತುಂಬಲು ಗಂಗಾ ಯಮುನಾ ದೋಆಬ್ ಪ್ರದೇಶ ದಲ್ಲಿ ತೆರಿಗೆಯನ್ನು ಮೂರು ನಾಲ್ಕರಷ್ಟು ಏರಿಸಿ ಪ್ರಜೆಗಳನ್ನು ಹಿಂಸಿಸಿದ. ದಂಗೆಗಳು ಹೆಚ್ಚಿದುವು (1326–27). ಬಹುಶಃ ಈಗ ವಿಸ್ತೃತವಾದ ರಾಜ್ಯಕ್ಕೆ ಮಧ್ಯದಲ್ಲಿರುವ ದೇವಗಿರಿ (ದೌಲತಾಬಾದ್) ರಾಜಧಾನಿಯಾಗುವುದು ಹೆಚ್ಚು ಉಪಯುಕ್ತವೆಂದು ಭಾವಿಸಿದುದರಿಂದಲೋ ಏನೋ ರಾಜಧಾನಿಯನ್ನು ಅಲ್ಲಿಗೆ ಬದಲಿಸಿದ. ಆದರೆ ದೆಹಲಿಯ ಎಲ್ಲ ಪ್ರಜೆಗಳೂ ದೇವಗಿರಿಗೆ ಹೋಗಬೇಕೆಂದು ನೀಡಿದ ಆಜ್ಞೆ ವಿಲಕ್ಷಣ, ಅರ್ಥಶೂನ್ಯ ಆಗಿದ್ದು ಅದರಿಂದ ಜನ ಬಹಳ ಕಷ್ಟಗಳನ್ನೆದುರಿಸಬೇಕಾಯಿತು. ಅವರ ಸೌಕರ್ಯಕ್ಕೆಂದು ಉತ್ತಮ ರಸ್ತೆಗಳನ್ನು ನಿರ್ಮಿಸಿ ಅಲ್ಲಲ್ಲಿ ಅರವಟ್ಟಿಗೆ, ಅನ್ನ ಶಾಲೆಗಳನ್ನು ಏರ್ಪಡಿಸಿದ್ದರೂ ಪ್ರಜೆಗಳಿಗೆ ಬಹಳ ಹಿಂಸೆಯಾಯಿತು. ಈ ವೈಪರೀತ್ಯದ ಪರಮಾವಧಿ ಎಂದರೆ ಸುಲ್ತಾನ ಮತ್ತೊಮ್ಮೆ ದೆಹಲಿಯನ್ನೇ ರಾಜಧಾನಿಯಾಗಿಸಲು ತೀರ್ಮಾನಿಸಿ ಪ್ರಜೆಗಳು ಹಿಂತಿರುಗಬೇಕೆಂದು ಬಲಾತ್ಕರಿಸಿದುದು. ಇದರಿಂದ ಸಾವಿರಾರು ಜನ ಸಾವಿಗೀಡಾದರು. ದೆಹಲಿಯ ಮೇಲೆ ದಂಡೆತ್ತಿ ಬಂದಾಗ ಅವನಿಗೆ ಅಪಾರ ಹಣ ನೀಡಿ ಅವನನ್ನು ಹಿಂದೆ ಕಳಿಸಲಾಯಿತೆಂದು ಪ್ರಸಿದ್ಧ ಇತಿಹಾಸಕಾರ ಫೆರಿಸ್ತ ಹೇಳಿದ್ದಾನೆ. 1327–28ರಲ್ಲಿ ಸಿಂಧ್, ಮುಲ್ತಾನ್ ಪ್ರಾಂತ್ಯಗಳನ್ನು ಆಳುತ್ತಿದ್ದ ಖಿಸ್ಲುಖಾನ್ ದಂಗೆ ಎದ್ದ. ಅವನ ಹುಟ್ಟಡಗಿಸಲು ದಕ್ಷಿಣದಿಂದ ಅಪಾರ ಸೈನ್ಯದೊಡನೆ ಬಂದ ಮಹಮ್ಮದ್ ಅವನನ್ನು ಸೋಲಿಸಿ ಕೊಂದು ಅವನ ರುಂಡವನ್ನು ದೆಹಲಿಯ ದ್ವಾರದಲ್ಲಿ ತೂಗು ಹಾಕಿದ. ಪುಣೆ ಸಮೀಪದ ಕೊಂಡಾನೆಯನ್ನು (ಸಿಂಹಗಡ) 7–8 ತಿಂಗಳುಗಳ ಕಾಲ ಮುತ್ತಿ ಅದನ್ನು ವಶಪಡಿಸಿಕೊಂಡ. ರಜಪೂತರ ರಾಣಾ ಹಮ್ಮೀರ ಮಾತ್ರ ಮೇವಾಡದ ಸುತ್ತಲಿನ ರಜಪೂತರ ಪ್ರದೇಶಗಳ ಮೇಲೆ ಒಡೆತನ ಸಾಧಿಸಿ ಮಹಾರಾಣಾ ಎನಿಸಿಕೊಂಡು ಅಜ್ಮೀರ್, ರಣಥಂಬೋರ್‌ಗಳು ಆತನ ಅಧೀನಕ್ಕೆ ಬಂದುವು. ಸುಲ್ತಾನ ಬಹುಶಃ ರಾಜಸ್ಥಾನ ದಲ್ಲಿ ತನ್ನ ಒಡೆತನವನ್ನು ಸಾಧಿಸದೆ ಅವರನ್ನು ತಮ್ಮ ಪಾಡಿಗೆ ಬಿಟ್ಟನೆಂದು ತೋರುತ್ತದೆ. ಚೀನ ಪರ್ಷಿಯಗಳಲ್ಲಿ ಆಗ ಚಲಾವಣೆಯಲ್ಲಿದ್ದ ಕಾಗದದ ಹಣವನ್ನು (ನೋಟು) ಗಮನದಲ್ಲಿರಿಸಿ ಸುಲ್ತಾನ ತನ್ನ ರಾಜ್ಯದಲ್ಲೂ ತಾಮ್ರ ಅಥವಾ ಹಿತ್ತಾಳೆಯ ನಾಣ್ಯಗಳನ್ನು ಬೆಳ್ಳಿಯ ನಾಣ್ಯಗಳಿಗೆ ಸಮಸಮವಾಗಿ ಚಲಾವಣೆಗೆ ತಂದ. ಯುಕ್ತ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳದ ಕಾರಣ ಎಲ್ಲೆಲ್ಲೂ ಖೋಟಾ ನಾಣ್ಯಗಳು ಚಲಾವಣೆಗೆ ಬಂದವು. ಇವುಗಳ ಮುಖಬೆಲೆಯಷ್ಟು ಚಿನ್ನ ಬೆಳ್ಳಿಗಳನ್ನು ಸುಲ್ತಾನ ಬೊಕ್ಕಸದಿಂದ ಕೊಡಿಸಿದ. ಇದರಿಂದಾಗಿ ಖಜಾನೆ ಬರಿದಾಗಿ ಆರ್ಥಿಕಸ್ಥಿತಿ ಹದಗೆಟ್ಟಿತು. ಖುರಾಸಾನ್, ಇರಾಕ್ ದೇಶಗಳನ್ನು ಗೆದ್ದುಕೊಳ್ಳುವ ಯೋಚನೆ ಬಂದಾಗ ಅದಕ್ಕಾಗಿ ಬರ್ನಿಯ ಹೇಳಿಕೆಯಂತೆ 3,70,000 ಸೈನ್ಯ ಬಲವನ್ನು ಒಟ್ಟುಗೂಡಿಸಿದ. ಆದರೆ ಈ ಆಲೋಚನೆಯನ್ನು ಕೈಬಿಟ್ಟು ಹಿಮಾಲಯ ಪರ್ವತದ ತಪ್ಪಲಿನ ಕರತಿಲವನ್ನು (ಕೂರ್ಮಾಚಲ) ಗೆದ್ದುಕೊಳ್ಳಲು ಸೈನ್ಯ ಕಳಿಸಿದ. ಮಳೆಗಾಲ ಆರಂಭವಾಗಿ ಸೈನ್ಯದಲ್ಲಿ ಕಾಯಿಲೆ ಹಬ್ಬಿ ಸೈನ್ಯ ಹಿಂತಿರುಗಿತು. ತಪ್ಪಲಿನ ಪ್ರದೇಶವನ್ನು ಬೇಸಾಯಕ್ಕೆ ಅಳವಡಿಸಲು ಸುಲ್ತಾನನ ಅನುಮತಿ ಅವಶ್ಯವಿದ್ದ ಕಾರಣ ಅಲ್ಲಿಯ ಪ್ರಜೆಗಳು ಸುಲ್ತಾನನ ಸಾರ್ವಭೌಮತ್ವವನ್ನು ಒಪ್ಪಬೇಕಾಯಿತು.

ಇವೆಲ್ಲದರ ಪರಿಣಾಮವಾಗಿ ರಾಜ್ಯದಲ್ಲೆಲ್ಲ ಕಂಗೆಟ್ಟ ಅಧಿಕಾರಿಗಳು ಪ್ರಜೆಗಳು ದಂಗೆ ಎದ್ದರು. ದಕ್ಷಿಣದ ಮದುರೆಯ ಸುತ್ತಲಿನ ಮಾಬರ್‌ನ ಕೊತ್ವಾಲನಾದ ಸೈಯ್ಯದ್ ಅಹಸಿನ್‌ಸಹ ಸ್ವಾತಂತ್ರ್ಯ ಘೋಷಿಸಿದ. ಅವನ ವಿರುದ್ಧ ಕಳುಹಿಸಿದ ಸೈನ್ಯ ಕೂಡ ಅವನನ್ನು ಕೂಡಿಕೊಂಡಿತು (1334–35). ಸ್ವತಃ ಸುಲ್ತಾನನೇ ಆಗ ಸೈನ್ಯಾಚರಣೆ ಕೈಗೊಂಡ. ದೌಲತಾಬಾದಿನಲ್ಲಿ ಅಪಾರ ತೆರಿಗೆಗಳನ್ನು ವಸೂಲು ಮಾಡಿ ಜನರನ್ನು ಬೇರೆ ವಿಧಗಳಲ್ಲೂ ಸುಲಿದ. ವಾರಂಗಲ್ಲಿನಲ್ಲಿದ್ದಾಗ ಕಾಲರಾಬೇನೆ ಬಂದುದರಿಂದ ದೆಹಲಿಗೆ ಹಿಂತಿರುಗಿದ. ಕೃಷ್ಣಾ ತುಂಗಭದ್ರೆಗಳ ನಡುವಣ ತೆಲಂಗಾಣ ಪ್ರದೇಶದಲ್ಲಿ ಈ ವೇಳೆಗಾಗಲೇ ಮಹಮ್ಮದೀಯರ ದಾಳಿಗಳಿಂದ ಬೇಸತ್ತ ಹಿಂದುಗಳು ಒಟ್ಟುಗೂಡಿ ಸ್ವತಂತ್ರರಾಗಲು ಹವಣಿಸುತ್ತಿದ್ದರು. ಪಾಕನಾಡಿನ ಮುಸುನೂರಿಗೆ ಸೇರಿದ ಪೋಲಯನಾಯಕ ಚಳವಳಿಯ ನೇತಾರನಾದ. ಈತನ ಸೋದರನ ಮಗ ಕಾಪಯನಾಯಕ, ಹೊಯ್ಸಳ ಮೂರನೆಯ ಬಲ್ಲಾಳ ಮುಂತಾದವರು ಒಟ್ಟುಗೂಡಿ ದಂಗೆ ಎದ್ದರು. ಮಾಬರಿನಲ್ಲಿ ಸುಲ್ತಾನನನ್ನು ಹೊರದೂಡಿ ತೊಂಡೈಮಂಡಲಮ್ ಪ್ರದೇಶವನ್ನು ಶಂಬುವರಾಯ ಮನೆತನದ ವೆನ್ರುಮಾನ್‌ಕೊಂಡಾನ್ ಎಂಬವನ ನಾಯಕತ್ವದಲ್ಲಿ ಇಡಲಾಯಿತು. ಕಂಚೀಪುರ ಇವನ ಅಧಿಕಾರಸ್ಥಾನ. ಕಂಪಿಲಿಯಲ್ಲಿ ನೇಮಕಗೊಂಡಿದ್ದ ಮಲಿಕ್ ಮಹಮದನನ್ನು ಚಾಳುಕ್ಯ ಸೋಮದೇವ ಸೋಲಿಸಿದ. ಪ್ರಜೆಗಳು ದಂಗೆ ಎದ್ದರು. ದೆಹಲಿಯಲ್ಲಿ ಸೆರೆಯಾಳು ಗಳಾಗಿದ್ದ ಹರಿಹರ ಬುಕ್ಕ ಎಂಬಿಬ್ಬರು ಸೋದರರನ್ನು ಸುಲ್ತಾನ ಕಂಪಿಲಿಗೆ ಅಧಿಕಾರಿಗಳಾಗಿ ನಿಯೋಜಿಸಿ ಕಳುಹಿಸಿದ. ಅವರು ವಿದ್ಯಾರಣ್ಯರ ಪ್ರಭಾವಕ್ಕೊಳಗಾಗಿ ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದರೆಂದು ಹೇಳಿದೆ. ಇದು ಸಂದೇಹಾಸ್ಪದ. 1347ರಲ್ಲಿ ದೇವಗಿರಿಯಲ್ಲೂ ಬಂಡಾಯ ಕಾಣಿಸಿಕೊಂಡಿತು. ಇದರ ಪರಿಣಾಮ ಬಹಮನಿರಾಜ್ಯದ ಉದಯ.

ಈಜಿಪ್ಟಿನ ಅಬ್ಬಾಸಿದ್ ಖಲೀಫನಿಂದ ಅಧಿಕಾರ ಲಾಂಛನ ಪಡೆದರೆ ಈ ದಂಗೆಗಳು ಅಡಗಬಹುದೆಂಬ ಸುಲ್ತಾನನ ಹಂಚಿಕೆ ಫಲಿಸಲಿಲ್ಲ. ಗುಜರಾತಿನಲ್ಲಿ ದಂಗೆಗಳನ್ನು ಅಡಗಿಸಲು ಹೋಗಿ ದಂಗೆಕೋರ ತಘಿಯನ್ನು ನಾಲ್ಕಾರು ಕದನಗಳಲ್ಲಿ ಸೋಲಿಸಿ ಬೆನ್ನಟ್ಟಿದ. ಆತ ಸಿಂಧನ್ ತಟ್ಟಾದಲ್ಲಿ ತಲೆಮರೆಸಿಕೊಂಡ. ಸುಲ್ತಾನ ಅಲ್ಲಿಗೂ ಸೈನ್ಯಸಮೇತ ತೆರಳಿದ. ಆದರೆ ಮಾರ್ಗದಲ್ಲಿಯೇ ಅಸ್ವಸ್ಥತೆಯಿಂದ ತಟ್ಟಾ ಸಮೀಪದಲ್ಲಿ ಅಸುನೀಗಿದ (1351 ಮಾರ್ಚ್ 10). ಹಲವು ವಿರೋಧಾಭಾಸಗಳಿಂದ ಕೂಡಿದ ಇವನದು ಇತಿಹಾಸದಲ್ಲಿ ವರ್ಣಮಯ ವ್ಯಕ್ತಿತ್ವ.

ಮಹಮ್ಮದ್ ತುಗಲಕನ ಅನಿರೀಕ್ಷಿತ ಮರಣ ರಾಜಧಾನಿಯಲ್ಲಿ ಕೋಲಾಹಲ ಉಂಟು ಮಾಡಿತು. ಖ್ವಾಜಾ–ಇ–ಜಹಾನ್ ಬಾಲಕನೊಬ್ಬನನ್ನು ಸುಲ್ತಾನನ ಮಗನೆಂದು ಪಟ್ಟಕ್ಕೇರಿಸಿದ. ಆದರೆ ಅಂತಿಮವಾಗಿ ಘಿಯಾಸುದ್ದೀನನ ಸೋದರ ರಜಬನ ಮಗ ಫಿರೋಜ್‌ಷಾ ಸಿಂಹಾಸನ ವೇರಿದ (1351). ಇವನು ಸಿಂಧ್‌ನಲ್ಲಿ ದಂಗೆ ಅಡಗಿಸಿದ. ಬಂಗಾಲದಲ್ಲಿ ಸ್ವತಂತ್ರನಾಗಿದ್ದ ಹಾಜಿ ಇಲಿಯಾಸ್ ದೆಹಲಿಯ ಮೇಲೆ ದಂಡೆತ್ತಲು ಯತ್ನಿಸಿದ (1353). ಆದರೆ ಫಿರೋಜ್ 70,000 ಸೈನ್ಯ ಬಲದೊಂದಿಗೆ ಬಂಗಾಲವನ್ನು ಮುತ್ತಿದಾಗ, ಇಲಿಯಾಸ್ ಎಗ್ದಾಲ ಕೋಟೆಯಲ್ಲಿ ಅಡಗಿ ಕುಳಿತ. ಮುಸಲ್ಮಾನರ ರಕ್ತಪಾತವನ್ನು ಇಚ್ಛಿಸದ ಫಿರೋಜ್ ಅವನ ಮೇಲೆ ತಕ್ಕ ಕ್ರಮ ಕೈಗೊಳ್ಳದೆ ಹಿಂತಿರುಗಿದ. ಇಲಿಯಾಸ್‌ನ ಉತ್ತರಾಧಿಕಾರಿ ಸಿಕಂದರ್ ಷಾನ ವಿರುದ್ಧ ದಂಡೆತ್ತಿ ಹೋದರೂ (1359) ಎಗ್ದಾಲ ಕೋಟೆಯಲ್ಲಿ ವಶಪಡಿಸಿ ಕೊಳ್ಳಲಾಗಲಿಲ್ಲ. ಹಿಂತಿರುಗುವಾಗ ಜಾಜ್ ನಗರದ (ಒರಿಸ್ಸ) ವಿರುದ್ಧ ಸಾಗಿದ. ಅಲ್ಲಿಯ ರಾಯ ವಾರ್ಷಿಕವಾಗಿ ಆನೆಗಳನ್ನು ಕಪ್ಪ ಕೊಡಲು ಒಪ್ಪಿದ. 1361–62ರಲ್ಲಿ ನಗರಕೋಟದ ರಾಯ ಶರಣಾದ. ಅಲ್ಲಿಯ ಜ್ವಾಲಾಮುಖಿ ದೇವಸ್ಥಾನದಲ್ಲಿದ್ದ ಸು. 300 ಸಂಸ್ಕೃತ ಗ್ರಂಥಗಳನ್ನು ಆಸ್ಥಾನ ಕವಿ ಖಾಲಿದ್‌ಖಾನಿ ಕಾವ್ಯರೂಪದಲ್ಲಿ ಪರ್ಷಿಯನ್ ಭಾಷೆಗೆ ಅನುವಾದಿಸಿದ. ಇದು ದಲಾಯಿಲ್–ಇ–ಫಿರೋಜ್ ಷಾಹಿ ಎಂದು ಹೆಸರಾಗಿದೆ. ಅದೇ ವರ್ಷ ಸಿಂಧ್ ಪ್ರಾಂತ್ಯ ಮುತ್ತಿದ. ಆದರೆ ಸಾಂಕ್ರಾಮಿಕ ರೋಗಕ್ಕೆ ಸೈನ್ಯದ ಬಲುಪಾಲು ತುತ್ತಾಯಿತು. ಹೊಸಬರ ಸೇರ್ಪಡೆಗೆಂದು ಗುಜರಾತಿಗೆ ಬರುವಾಗ ದಾರಿತಪ್ಪಿ ರಣ್ ಆಫ್ ಕಚ್ಛ್‌ನಲ್ಲಿ ಆರು ತಿಂಗಳು ಬಳಲಿದ. ಅವನ ಮಂತ್ರಿ ಖಾನ್–ಎ–ಜಹಾನ್ ಮಖ್ಬೂಲ್ ಕಳುಹಿಸಿದ ಸೇನೆ ಸುಲ್ತಾನನನ್ನು ಕೊನೆಗೆ ಹುಡುಕಿ, ಅವನೊಡನೆ ಸಿಂಧ್ ಪ್ರಾಂತ್ಯ ಮುತ್ತಿತು. ಸಿಂಧಿಯರು ಅಪಾರ ಕಪ್ಪ ಕಾಣಿಕೆ ಕೊಡುವಂತೆ ಮಾಡಿತು. ಸಿಂಧ್ ದೊರೆ ಬಾಬನಿ ಶರಣಾದ. ದಕ್ಷಿಣ ರಾಜ್ಯಗಳನ್ನು ಪುನಃ ಗಳಿಸುವ ಪ್ರಯತ್ನ ಮಾತ್ರ ಈತ ಮಾಡಲಿಲ್ಲ.

ಫಿರೋಜ್ ಧರ್ಮ ದುರಭಿಮಾನಿಯಾಗಿ ಹಿಂದುಗಳನ್ನು ಪೀಡಿಸಿದ. ಜಹಗೀರು ಪದ್ಧತಿ ಊರ್ಜಿತಗೊಳಿಸಿ ಹೆಚ್ಚಿನ ವೇತನ ಭತ್ಯೆಗಳನ್ನು ನೀಡುವುದರ ಮೂಲಕ ಸರ್ಕಾರವನ್ನು ಶಿಥಿಲಗೊಳಿಸಿದ. ಧರ್ಮಬಾಹಿರ ಕರಗಳನ್ನು ರದ್ದುಪಡಿಸಿ ಕುರಾನಿನನ್ವಯ ಕರಗಳನ್ನು ಹೇರಿದ. ಉದ್ಯಾನಗಳನ್ನು ರೂಪಿಸಿದ. ಇವನು 1388ರಲ್ಲಿ ಮರಣ ಹೊಂದಿದ. ಇವನ ಜೀವಿತದ ಅವಧಿಯಲ್ಲಿಯೇ ಅಂತಃಕಲಹ ಪ್ರಾರಂಭವಾಯಿತು. ಇವನ ಹಿರಿಯಮಗ ಮಹಮ್ಮದ್‌ಖಾನ್ ಅಸಮರ್ಥ, ಸುಖಲೋಲುಪ. ಅಲ್ಪಾಯುಷಿಯಾಗಿ ಸತ್ತ. ಇನ್ನೊಬ್ಬ ಮಗ ಫತ್‌ಖಾನ್‌ನ ಮಗ ತುಗಲಕ್‌ಖಾನನನ್ನು ಸಿಂಹಾಸನಕ್ಕೆ ವಾರಸುದಾರನೆಂದು ಫಿರೋಜ್ ನಿಯಮಿಸಿದ.

ಆದರೆ ಆತನ ಇತರ ಉತ್ತರಾಧಿಕಾರಿಗಳಾದ ಅಬುಬಕರ್ (1389–90), ನಾಸಿರ್ ಉದ್ದೀನ್ ಮಹಮ್ಮದ್ (1390–94), ಹುಮಾಯೂನ್ (1394), ನಾಸಿರ್ ಉದ್ದೀನ್ ಮಹಮದ್ ಷಾ (1394–99) ದುರ್ಬಲರಾಗಿದ್ದರು. ಇಂಥ ಸಮಯದಲ್ಲಿ ಇತಿಹಾಸದಲ್ಲಿಯೇ ಅತಿಭಯಂಕರ ಎನಿಸಿದ ಸೇನಾನಿ ತೈಮೂರ್ 1398 ಏಪ್ರಿಲ್‌ನಲ್ಲಿ ಸಿಂಧೂ, ಝೀಲಮ್, ರಾವಿಗಳನ್ನು ದಾಟಿ ಹಾದಿಯುದ್ದಕ್ಕೂ ಹತ್ಯಾಕಾಂಡಗಳನ್ನು ನಡೆಸಿ, ಸುಲಿಗೆ ಮಾಡಿ ಡಿಸೆಂಬರ್ ಮೊದಲ ವಾರದಲ್ಲಿ ದೆಹಲಿಯ ಹೊರವಲಯ ತಲುಪಿ 1,00,000 ಸೆರೆಯಾಳುಗಳನ್ನು ಕೊಂದು ಜನರನ್ನು ನಡುಗಿಸಿದ. ಸುಲ್ತಾನ್ ಮಹಮೂದ್ ಮತ್ತು ಮಲ್ಲೂ ಇಕ್ಬಾಲ್‌ರನ್ನು ಸೋಲಿಸಿ ಮರುದಿನ ದೆಹಲಿ ಪ್ರವೇಶಿಸಿ ಹದಿನೈದು ದಿನಗಳು ರಾಜಧಾನಿಯಲ್ಲಿ ಕೊಲೆ ಸುಲಿಗೆಗಳಲ್ಲಿ ನಿರತನಾದ. ಫಿರೋಜಾಬಾದ್ ಮೂಲಕ 1399 ಜನವರಿ ಒಂದರಂದು ಹಿಂತಿರುಗುವಾಗ ಮೀರತ್, ಕಾಂಗ್ರ ಮತ್ತು ಜಮ್ಮುಗಳನ್ನು ಕೊಳ್ಳೆ ಹೊಡೆದ. ಮಾರ್ಚ್ 19ರಂದು ಸಿಂಧೂ ನದಿ ದಾಟಿ ಹಿಂತಿರುಗಿದ. ಸುಲ್ತಾನ್ ಮಹಮೂದ್ ಪುನಃ ದೆಹಲಿಗೆ ಬಂದು 1413ರಲ್ಲಿ ಕಾಲವಾದ. ಇಲ್ಲಿಗೆ ತುಗಲಕ್ ವಂಶದ ಆಡಳಿತ ಕೊನೆಗೊಂಡಿತು.

**ಸಯ್ಯದ್ ಮತ್ತು ಲೋದಿಗಳು:** ತೈಮೂರನ ಪ್ರತಿನಿಧಿಯಾಗಿ ಮುಲ್ತಾನದ ಪ್ರಾಂತ್ಯಾಧಿಕಾರಿಯಾಗಿದ್ದ ಸಯ್ಯದ್ ವಂಶದ ಕಿಜರ್‌ಖಾನ್ ದೆಹಲಿಯಲ್ಲಿ ಕುಲೀನರು ರಾಜನಾಗಿ ಆಯ್ಕೆ ಮಾಡಿದ್ದ ದೌಲತ್‌ಖಾನ್ ಲೋದಿಯನ್ನು ಹೊರದೂಡಿ ಸ್ವತಃ ಸುಲ್ತಾನನೆಂದು ಕರೆದುಕೊಂಡು ಏಳು ವರ್ಷಗಳ ಕಾಲ ಆಳಿದ. ಈತನ ಆಳ್ವಿಕೆಯ ಕಾಲದಲ್ಲಿ ದೆಹಲಿ ರಾಜ್ಯ ವಿಸ್ತಾರದಲ್ಲಿ ಬಹಳ ಕುಗ್ಗಿತ್ತು. ಇವನ ಮಗ ಮುಬಾರಕ್ ಷಾನ (1421–34) ಆಳಿಕೆಯ ಕಾಲ ಸಹ ಘಟನಾಶೂನ್ಯ. ಯಾಹಿಯಾ ಬಿನ್ ಅಹಮದ್ ಸರ್ ಹಿಂದಿಯು ಈತನ ಕಾಲದಲ್ಲಿ ತಾರಿಖ್–ಎ–ಮುಬಾರಕ್ ಷಾಹಿ ಗ್ರಂಥ ರಚಿಸಿದ. 1434ರಲ್ಲಿ ವಜೀರ್‌ನಾದ ಸರ್ವರ್–ಉದ್–ಮುಲ್ಕ್‌ನ ಪಿತೂರಿಗೆ ಬಲಿಯಾದ. ಅನಂತರದ ದೊರೆ ಕಿಜರ್ಖಾನನ ಮೊಮ್ಮಗ ಮಹಮ್ಮದ್ ಷಾ ಕೂಡ ಅಸಮರ್ಥ (1434–45). ಮಾಳವದ ಮಹಮ್ಮದ್ ಷಾ ಖಿಲ್ಜಿ ದೆಹಲಿಗೆ ದಂಡೆತ್ತಿದಾಗ ಸುಲ್ತಾನನ ನೆರವಿಗೆ ಬಂದ ಲಾಹೋರ್–ಸರ್ ಹಿಂದ್‌ಗಳ ಪ್ರಾಂತ್ಯಾಧಿಕಾರಿ ಬಹಲೂಲ್ ಲೋದಿ ಪ್ರಬಲನಾದ. 1445ರಲ್ಲಿ ಪಟ್ಟಕ್ಕೆ ಬಂದ ಅಲಾ ಉದ್ದೀನ್ ಆರಂಷ 1451ರಲ್ಲಿ ಲೋದಿಗೆ ಸಿಂಹಾಸನವನ್ನು ಬಿಟ್ಟು ತಾನು ಬದ್ವಾನಿನಲ್ಲಿ ವಾಸಿಸತೊಡಗಿದ.

ಆಫ್ಘಾನರ ಲೋದಿ ಬುಡಕಟ್ಟಿಗೆ ಸೇರಿದ ಬಹಲೂಲ್ ಕ್ರಿಯಾಶೀಲನೂ ಯುದ್ಧ ಚತುರನೂ ಆಗಿದ್ದ. ಈತ ಮೇವಾಡ, ಸಂಬಲ್, ಕೋಯಿಲ್ ಮೈನ್‌ಪುರಿ, ರೇವಾರಿ, ಎಟಾವಗಳಲ್ಲಿ ಸ್ವತಂತ್ರರಾಗಿದ್ದ ನಾಯಕರು ತನ್ನ ಸಾರ್ವಭೌಮತ್ವ ಒಪ್ಪಿಕೊಳ್ಳುವಂತೆ ಮಾಡಿದ. ಜೋನಪುರವನ್ನು ವಶಪಡಿಸಿಕೊಂಡ ದೊಡ್ಡ ಮಗ ಬಾರ್ಬಕ್ ಷಾನನ್ನು ಪ್ರತಿನಿಧಿಯಾಗಿ ನೇಮಿಸಿದ. ಆದರೆ ಇವನ ಮರಣದ ಬಳಿಕ (1489) ಎರಡನೆಯಮಗ ನಿಜಾಮ್‌ಖಾನ್ ಸಿಕಂದರ್ ಷಾ ಎಂಬ ಬಿರುದಿನೊಂದಿಗೆ ಪಟ್ಟವೇರಿದ. ಇವನ ಆಡಳಿತ ಸುಧಾರಣೆಗೆ ತೊಡಗಿ ಅವ್ಯವಸ್ಥೆ ಹೋಗಲಾಡಿಸಲು ಶ್ರಮಿಸಿದ. ಬಂಗಾಲದ ಗಡಿಯವರೆಗೂ ಅಧಿಕಾರ ಸ್ಥಾಪಿಸಿದ. ಬಂಗಾಲದ ಅಲಾಉದ್ದೀನ್ ಹುಸೇನ್ ಷಾನೊಡನೆ ಪರಸ್ಪರ ಆಕ್ರಮಣ ಮಾಡದಂಥ ಒಪ್ಪಂದ ಮಾಡಿಕೊಂಡ. ಬಡಬಗ್ಗರಿಗೆ ಅನುಕಂಪ ತೋರಿದ. ವಿದ್ವಾಂಸರನ್ನು ಗೌರವಿಸಿದ; ನಿಷ್ಪಕ್ಷಪಾತ ನ್ಯಾಯ ತೀರ್ಮಾನಕ್ಕೆ ಹೆಸರಾದ. ಲೋದಿ ಅರಸರಲ್ಲಿ ಈತ ಶ್ರೇಷ್ಠದೊರೆ.

**ಇಬ್ರಾಹಿಂ ಲೋದಿ:** 1517–26. ಸಿಕಂದರ್ ಲೋದಿಯ ಅನಂತರ ಇಬ್ರಾಹಿಂ ಲೋದಿ ದೆಹಲಿ ಸುಲ್ತಾನನಾದ. ಇವನು ಸಿಕಂದರ್‌ನ ಹಿರಿಯ ಮಗ. ಅಧಿಕಾರಕ್ಕೆ ಬಂದ ತಕ್ಷಣ ಆಡಳಿತದಲ್ಲಿ ಭದ್ರತೆಯನ್ನು ತರಲು ತನ್ನ ಸೋದರ ಜಲಾಲ್‌ಖಾನ್‌ನನ್ನು ಕೊಲ್ಲಿಸಿದ. ಇಬ್ರಾಹಿಂ ಲೂದಿ ಒಬ್ಬ ನಿರಂಕುಶಾಧಿಪತಿಯಂತೆ ಕ್ರೂರವಾಗಿ ವರ್ತಿಸಿ ಅನೇಕ ಶ್ರೀಮಂತರನ್ನು ಶಿಕ್ಷಿಸಿದ. ರಾಜತ್ವ ಯಾವ ರಕ್ತ ಸಂಬಂಧವನ್ನು ಅರಿಯದು ಎಂಬುದು ಇವನ ಆಡಳಿತ ನೀತಿಯಾಗಿತ್ತು.

ಬಹಲೂಲ್ ಲೋದಿಯ ಹಿರಿಯರು ಆಫ್ಘಾನಿಸ್ತಾನ್‌ದಿಂದ ಮುಲ್ತಾನ್‌ಗೆ ಬಂದು ಫಿರೋಜ್‌ಷಾನ ಆಡಳಿತದಲ್ಲಿ ಉನ್ನತ ಉದ್ಯೋಗ ಪಡೆದಿದ್ದರು. ಮಹತ್ವಕಾಂಕ್ಷಿ, ಚತುರನಾಗಿದ್ದ ಬಹಲೂಲ್ ಲೋದಿ ಹಂತ ಹಂತವಾಗಿ ಉನ್ನತ ಪದವಿ ಪಡೆಯುವಲ್ಲಿ ಯಶಸ್ವಿಯಾದ. ಸಯ್ಯದ್ ಸಂತತಿಯ ಕೊನೆಯ ಸುಲ್ತಾನ ಅಲಾಉದ್ದೀನ್ ಷಾ ತನ್ನ ಆಡಳಿತ ಕೇಂದ್ರವನ್ನು ಬದನ್‌ಗೆ ಸ್ಥಳಾಂತರಿಸಿದಾಗ ಸಮಯಕಾಯುತ್ತಿದ್ದ ಬಹಲೂಲ್ ಲೂದಿ ಅಲಾಉದ್ದೀನ್‌ಷಾನ ಮಂತ್ರಿ ಹಮೀದ್‌ಖಾನ್‌ನ ಸಹಾಯದಿಂದ ದೆಹಲಿ ಆಡಳಿತವಹಿಸಿಕೊಂಡು, 1451 ಏಪ್ರಿಲ್ 19 ರಂದು ಮಂತ್ರಿ ಹಮೀದ್‌ಖಾನ್‌ನನ್ನು ಕೊಲೆಗೈದು, ದೆಹಲಿ ಸುಲ್ತಾನನಾದ.

ಬಹಲೂಲ್ ಲೋದಿ ದೆಹಲಿಸುಲ್ತಾನನಾಗಿ ಸಿಂಹಾಸನವೇರಿದ ತಕ್ಷಣ ತನ್ನ ಮೂಲನೆಲೆಯಾದ ಆಫ್ಘಾನಿಸ್ತಾನದ ಶ್ರೀಮಂತರನ್ನು ಸಂತೃಪ್ತಿಗೊಳಿಸುವಲ್ಲಿ ತನ್ನ ಅಧಿಕಾರವನ್ನು ಸುಗಮಗೊಳಿಸಿಕೊಂಡ. ಅನೇಕ ಶ್ರೀಮಂತ ಮನೆತನದವರಿಗೆ ಉನ್ನತ ಹುದ್ದೆಗಳ ಆಮಿಷ ಒಡ್ಡಿ ದಂಗೆಯನ್ನು ನಿಯಂತ್ರಿಸಿದ. ಇವನ ಆಡಳಿತ ಕಾಲದಲ್ಲಿ ಈಗಿನ ಅಳ್ವಾರ್ ಜಿಲ್ಲೆಯ ಮೇವತ್, ಸಂಬಾಲ್, ರಿವಾರಿ ಹಾಗೂ ಗ್ವಾಲಿಯರ್ ಮೇಲೆ ನಡೆದ ಯುದ್ಧಗಳು ಪ್ರಮುಖವಾದವು. ದೋ ಆಬ್ ಹಾಗೂ ಜೋನ್‌ಪುರದ ಮೇಲೆ ವಿಜಯ ಸಾಧಿಸಿದ. ಆಫ್ಘನ್ ಶ್ರೀಮಂತರ ಕಿರುಕುಳದ ನಡುವೆ ಅವರ ಜೊತೆ ಆತ್ಮೀಯನಾಗಿದ್ದು 1489ರಲ್ಲಿ ಮರಣ ಹೊಂದಿದ.

**ಸಿಕಂದರ್ ಲೋದಿ (1489–1517):** ಬಹಲೂಲ್ ಲೋದಿಯ ಮರಣಾನಂತರ ದೆಹಲಿ ಆಸ್ಥಾನದಲ್ಲಿ ಅಧಿಕಾರಕ್ಕಾಗಿ ಕಚ್ಚಾಟ ಪ್ರಾರಂಭವಾಯಿತು. ಆಸ್ಥಾನದ ಶ್ರೀಮಂತರ ಗುಂಪಿನ ಸಹಾಯದಿಂದ ಸಿಕಂದರ್ ಷಾ ದೆಹಲಿ ಸುಲ್ತಾನನಾಗಿ ಅಧಿಕಾರಕ್ಕೆ ಬಂದ. ಚಾಣಾಕ್ಷತೆಯಿಂದ ತನ್ನ ವಿರುದ್ಧ ದಂಗೆ ಏಳಬಹುದಾಗಿದ್ದ ಸಹೋದರ ಹಾಗೂ ಸೋದರಳಿಯನನ್ನು ಸೋಲಿಸಿ ಅಧಿಕಾರ ಭದ್ರಪಡಿಸಿಕೊಂಡ. ಇವನು ತನ್ನ ಆಳ್ವಿಕೆಯಲ್ಲಿ ಬಂಗಾಲದ ಶ್ರೀಮಂತರು ತನಗೆ ವಿಧೇಯರಾಗಿರುವಂತೆ ನೋಡಿಕೊಂಡ.

ಇಬ್ರಾಹಿಂನ ಪ್ರಮುಖ ದಂಡಯಾತ್ರೆ ಗ್ವಾಲಿಯರ್ ಮೇಲಿನ ವಿಜಯ. ಪಂಜಾಬಿನ ಮೇಲೆ ಧಾಳಿ ಮಾಡಲು ಪ್ರಯತ್ನಿಸಿದ. ಅಲ್ಲಿಯ ರಾಜ್ಯಪಾಲ ದೌಲತ್‌ಖಾನ್ ಬಾಬರ್‌ನ ಸಹಾಯ ಪಡೆದು ಸಿಕಂದರ್‌ನನ್ನು ಸೋಲಿಸಿದ. 1526 ರಲ್ಲಿ ಎರಡನೆಯ ಬಾರಿಗೆ ದಂಡೆತ್ತಿ ಬಂದ ಬಾಬರ್ ಸಿಕಂದರ್‌ನನ್ನು 1526 ಏಪ್ರಿಲ್ 21ರಂದು ಇತಿಹಾಸ ಪ್ರಸಿದ್ಧ ಒಂದನೆಯ ಪಾಣಿಪತ್ ಯುದ್ಧದಲ್ಲಿ ಸೋಲಿಸಿ ಕೊಂದುಹಾಕಿದ. ಅಲ್ಲಿಗೆ ದೆಹಲಿ ಸುಲ್ತಾನರ ಆಳ್ವಿಕೆ ಮುಗಿದು, ಮೊಗಲರು ಭಾರತದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸಿದರು. *

**ದೇವ್, ಎಸ್.ಬಿ.: ನೋಡಿ–ಶಾಂತಾರಾಮ ಬಾಲಚಂದ್ರದೇವ್**

**ದೇವಿನ್‌ಮೋರಿ:** ಗುಜರಾತ್ ರಾಜ್ಯದ ಸಬರ್‌ಕಂಠ ಜಿಲ್ಲೆಯಲ್ಲಿ ಮೆಶ್ವೊ ನದಿದಂಡೆಯ ಮೇಲಿರುವ ಪುರಾತತ್ತ್ವ ನೆಲೆ. ಈಗ ಈ ಸ್ಥಳ ಮುಳುಗಡೆಯಾಗಿದೆ. 1960–62 ರಲ್ಲಿ ಬರೋಡ ವಿಶ್ವವಿದ್ಯಾಲಯ ಈ ಸ್ಥಳದಲ್ಲಿ ಉತ್ಖನನ ಮಾಡಿ ಸೂಕ್ಷ್ಮಶಿಲಾಯುಗದ ಅವಶೇಷಗಳನ್ನು ಶೋಧಿಸಿತು. ಡೆಂಕ್‌ವಾಡ್ಲೊ ಮತ್ತು ಬೌದ್ಧ ಸಂಕೀರ್ಣದ ಬಳಿ ಇರುವ ಇನ್ನೊಂದು ನೆಲೆಯಲ್ಲಿ ನಡೆಸಿದ ಉತ್ಖನನಗಳಲ್ಲಿ ದೊರೆತ ಉಪಕರಣಗಳು ಗುಜರಾತಿನ ಇತರ ನೆಲೆಗಳಲ್ಲಿ ದೊರೆತ ಉಪಕರಣಗಳನ್ನು ಹೋಲುತ್ತವೆ. ಮೆಶ್ವೊ ನದಿಯ ಎಡದಂಡೆಯ ಮೇಲಿರುವ ಬೌದ್ಧ ಸಂಕೀರ್ಣದಲ್ಲಿ ಒಂದು ಸ್ತೂಪ ಹಾಗೂ ಚೈತ್ಯ, ಎರಡು ವಿಹಾರಗಳು, ನಾಲ್ಕು ಸಮರ್ಪಣ ಸ್ತೂಪಗಳು, ನಾಲ್ಕು ಪಡಸಾಲೆಗಳಿದ್ದು ಇವೆಲ್ಲವು ಪ್ರಾಕಾರದಿಂದ ಆವೃತವಾಗಿವೆ. ಇಲ್ಲಿನ ಅತ್ಯಂತ ದೊಡ್ಡ ಕಟ್ಟಡವಾದ 30 ಕೋಣೆಗಳ ವಿಹಾರ ಚತುಶಾಲಾ ವಿನ್ಯಾಸದಲ್ಲಿದೆ. ಇದು ಎತ್ತರದ ಜಗಲಿಯ ಮೇಲೆ ನಿರ್ಮಿತವಾಗಿದೆ. ಮುಖ್ಯದ್ವಾರಕ್ಕೆ ಹೋಗಲು ಉತ್ತರ ಬದಿಯಲ್ಲಿ ಮೆಟ್ಟಿಲುಗಳಿವೆ. ಇದರ ಕೋಣೆಗಳು ತೆರೆದ ಒಳಾಂಗಣಕ್ಕೆ ಅಭಿಮುಖವಾಗಿವೆ. ಚಾವಣಿ ಇಲ್ಲದ ಒಳಾಂಗಣದ ನೀರನ್ನು ಹೊರಕ್ಕೆ ಹರಿಸುವ ವ್ಯವಸ್ಥೆಯನ್ನೂ ಇಲ್ಲಿ ಕಾಣಬಹುದು. ಈ ವಿಹಾರವನ್ನು ಹಲವು ಸಲ ದುರಸ್ತಿ ಮಾಡಿದ ಕುರುಹುಗಳು ಕಂಡುಬಂದಿವೆ. ಇದೇ ಸ್ಥಳದಲ್ಲಿರುವ ಎರಡನೆಯ ವಿಹಾರ ಒಂದನೆಯ ವಿಹಾರದ ಪುಟ್ಟ ಪ್ರತಿಕೃತಿ. ಒಂದನೆಯ ವಿಹಾರದ ಉತ್ತರದಲ್ಲಿರುವ 20 ಚ.ಮೀ ಚಚ್ಚೌಕದ ಸುಂದರ ಇಟ್ಟಿಗೆ ಸ್ತೂಪವನ್ನು ಇಲ್ಲಿಯ ಶಾಸನವೊಂದರಲ್ಲಿ ಮಹಾಸ್ತೂಪವೆಂದು ಹೇಳಲಾಗಿದೆ. ಇದು 11.27ಮೀ ಎತ್ತರವಾಗಿದ್ದು ಇದರ ತಳಭಾಗ ಹಾಗೂ ಕಂಬಗಳು ಕುಸುರಿ ಕೆತ್ತನೆಗಳಿಂದ ಅಲಂಕೃತವಾಗಿವೆ ಸ್ತೂಪದ ಸುತ್ತ 2.5 ಮೀ ಅಗಲದ ಪ್ರದಕ್ಷಿಣ ಪಥವಿದೆ. ಈ ಸ್ತೂಪವನ್ನು ನಿರ್ಮಿಸುವ ಮೊದಲು ಏರುತಗ್ಗಾಗಿದ್ದ ನೆಲವನ್ನು ಸಮಮಾಡಲಾಗಿದೆ. ಸ್ತೂಪದ ಹೃದಯಭಾಗದಲ್ಲಿ ದೊರೆತ ಒಂದು ಕರಂಡಕದಲ್ಲಿ ಬೂದಿ, ಬಂಗಾರದ ತೆಳುಹಾಳೆ, ನೀಲಿ ಸೀಸೆಯ ಭಾಗಗಳು ಇದ್ದುವು. ಸ್ತೂಪದ ತಳಪಾಯದ ಮೇಲಿನ ಇಟ್ಟಿಗೆಗಳ ಸ್ತರಗಳಲ್ಲಿ ಸುರುಳಿಯಲಂಕಾರಗಳು, ಅರಳಿ ಎಲೆ, ಚೌಕಾಕೃತಿ ಮುಂತಾದ ವಾಸ್ತು ವಿನ್ಯಾಸಗಳಿವೆ. ಸ್ತೂಪದ ಮಧ್ಯಭಾಗದಲ್ಲಿ ಕುಳಿತ ಭಂಗಿಯ ಬುದ್ಧನ ಮೂರ್ತಿ ಇದೆ.

ಇಲ್ಲಿ ದೊರೆತ ಕರಂಡಕದ ಮೇಲೆ ಎರಡು ಶಾಸನಗಳಿವೆ. ಒಂದರಲ್ಲಿ 127 ಎಂದು ಕಾಲಮಾನವನ್ನು ಸೂಚಿಸಿದೆ. ಯುವರಾಜ ರುದ್ರಸೇನನ ಆಳಿಕೆಯಲ್ಲಿ ಈ ಮಹಾಸ್ತೂಪ ಮಹಾವಿಹಾರದ ಬಳಿ ಕಟ್ಟಲ್ಪಟ್ಟಿತೆಂದು ಇನ್ನೊಂದು ಶಾಸನ ತಿಳಿಸುತ್ತದೆ. ಈ ಸ್ಮಾರಕದ ನಿರ್ಮಾಣದ ಹೊಣೆಯನ್ನು ಸಾಧು ಅಗ್ನಿವರ್ಮನ್ ಮತ್ತು ಸುದರ್ಶನರು ಹೊತ್ತಿದ್ದರೆಂದೂ ಈ ಕರಂಡಕ ದಶಬಲನ ಅರ್ಥಾತ್ ಬುದ್ಧನ ಅವಶೇಷವನ್ನು ಹೊಂದಿದೆ ಎಂದೂ ಇದು ತಿಳಿಸುತ್ತದೆ. ಬೂದಿಯನ್ನು ಬಂಗಾರದ ಕರಂಡಿಕೆಯಲ್ಲಿಟ್ಟು ಇದನ್ನು ಹಿತ್ತಾಳೆ ಸಂಪುಟದಲ್ಲಿಟ್ಟು ಕಲ್ಲಿನ ಕರಂಡಕದಲ್ಲಿ ಸಂರಕ್ಷಿಸಲಾಗಿದೆ. ಈ ಸ್ಮಾರಕವನ್ನು ನೆರೆಹಾವಳಿಯಿಂದ ರಕ್ಷಿಸುವ ಸಲುವಾಗಿ ನದಿಯ ಪಕ್ಕದಲ್ಲಿ ಎತ್ತರದ ಗೋಡೆಯನ್ನು ನಿರ್ಮಿಸಲಾಯಿತು.

ಇದೇ ಪ್ರದೇಶದಲ್ಲಿ ಅನೇಕ ಶಿವಲಿಂಗಗಳು, ಗಣೇಶ ಮತ್ತು ಇತರ ದೇವತೆಗಳ ಗುಡಿಗಳು ಪತ್ತೆಯಾಗಿವೆ. ಉತ್ಖನನಕ್ಕೊಳಗಾದ ಒಂದು ಗುಡಿಯ ಇಟ್ಟಿಗೆಗಳು ಬೌದ್ಧ ಸ್ತೂಪದ ಇಟ್ಟಿಗೆಗಳಷ್ಟೇ ಪ್ರಾಚೀನವಾದುವು. (ಎ.ಎಂ.ಎಸ್.)

**ದೇಶಪಾಂಡೆ, ಎಂ.ಎನ್.: ನೋಡಿ–ಮಧುಸೂದನ ನರಹರಿ ದೇಶಪಾಂಡೆ**

**ದೇಸಾಯಿ, ಪಿ. ಬಿ.:** 1910–1974. ಕರ್ನಾಟಕ ಇತಿಹಾಸ ಸಾಹಿತ್ಯ ಸಂಸ್ಕೃತಿಗಳ ಖ್ಯಾತ ಸಂಶೋಧಕರೂ ಶಾಸನತಜ್ಞರೂ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಸಂಸ್ಕೃತಿಗಳ ಪ್ರಾಧ್ಯಾಪಕರೂ ಆಗಿದ್ದವರು. ಪಾಂಡುರಂಗ ಭೀಮರಾವ್

ದೇಸಾಯಿಯವರು ರಾಯಚೂರು ಜಿಲ್ಲೆಯ ಕೊಪ್ಪಳದ ಬಳಿಯ ಕಿನ್ನಾಳದವರಾದ ಭೀಮರಾವ್ ಮತ್ತು ಭಾಗೀರಥೀಬಾಯಿ ದಂಪತಿಗಳ ಐದನೆಯ ಪುತ್ರರು. ಜನನ 1910ರ ಡಿಸೆಂಬರ್ 24ರಂದು. ಹೈದರಾಬಾದ್ ಕರ್ನಾಟಕದ ಭಾಗವಾಗಿದ್ದ ರಾಯಚೂರು ಜಿಲ್ಲೆಯಲ್ಲಿ ಆಗ ಮರಾಠೀ ಮತ್ತು ಉರ್ದು ಭಾಷೆಗಳು ಪ್ರಬಲವಾಗಿದ್ದವು. ಇವರ ಪ್ರಾಥಮಿಕ ಶಿಕ್ಷಣ ಸೇಡಮ್‍ನಲ್ಲೂ ಸೆಕೆಂಡರಿ ಶಿಕ್ಷಣ ಗುಲ್ಬರ್ಗದಲ್ಲೂ ನಡೆಯಿತು. ಮುಂಬಯಿ ವಿಶ್ವವಿದ್ಯಾಲಯದ ಎಂಟ್ರೆನ್ಸ್ ಪರೀಕ್ಷೆಯ ಅನಂತರ ಅನಾರೋಗ್ಯದಿಂದಾಗಿ ಇವರು ಸುಮಾರು ಆರು ವರ್ಷ (1927–32) ವಿದ್ಯಾಭ್ಯಾಸವನ್ನು ಮುಂದುವರಿಸಲಾಗಲಿಲ್ಲ. 1935ರಲ್ಲಿ ಇವರು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತದಲ್ಲಿ ಆನರ್ಸ್ ಶ್ರೇಣಿಯ ಪದವಿ ಪಡೆದರು. 1937ರಲ್ಲಿ ಇವರಿಗೆ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಎಂ.ಎ. ಪದವಿ ದೊರಕಿತು. ಅನಾರೋಗ್ಯದಿಂದ ವಿಶ್ರಾಂತಿ ಪಡೆಯುತ್ತಿದ್ದಾಗಲೂ ಅನಂತರವೂ ಇವರು ತಮ್ಮ ಊರಿನ ಹಾಗೂ ಸುತ್ತಮುತ್ತಣ ಸ್ಥಳಗಳಲ್ಲಿದ್ದ ಶಿಲಾಶಾಸನಗಳನ್ನು ಅಧ್ಯಯನ ಮಾಡುವ ಹವ್ಯಾಸ ಬೆಳೆಸಿಕೊಂಡರು. ಇವರು ಸು.60 ಗ್ರಾಮಗಳಲ್ಲಿ ತಿರುಗಾಡಿ 200ಕ್ಕೂ ಹೆಚ್ಚಿನ ಶಾಸನಗಳನ್ನು ಪ್ರತಿ ಮಾಡಿಕೊಂಡರು. ಎಂ.ಎ. ಪರೀಕ್ಷೆಯಲ್ಲಿ ಇವರ ಅಧ್ಯಯನ ವಿಷಯಗಳಲ್ಲಿ ಲಿಪಿಶಾಸ್ತ್ರವೂ ಒಂದಾಗಿತ್ತು. 1936ರಲ್ಲಿ ವಿಜಯನಗರದ 6ನೆಯ ಶತಮಾನೋತ್ಸವದ ಸಂದರ್ಭದಲ್ಲಿ ಇವರು ವಿಜಯನಗರ ಸಾಮ್ರಾಜ್ಯ ಎಂಬ ಗ್ರಂಥವೊಂದನ್ನು ಕನ್ನಡದಲ್ಲಿ ಬರೆದರು. 1939ರಲ್ಲಿ ಕೇಂದ್ರ ಸರ್ಕಾರದ ಪುರಾತತ್ತ್ವ ಇಲಾಖೆಯ ಶಾಸನ ಶಾಖೆಯಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸಕ್ಕೆ ಸೇರಿದ ಇವರು 17 ವರ್ಷಗಳ ಕಾಲ ಉದಕಮಂಡಲದಲ್ಲಿದ್ದು ಶಾಸನಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿ ಅದರಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಪಡೆದರು. ದಕ್ಷಿಣ ಭಾರತದ ಶಾಸನ ಸಂಪುಟಗಳ ಪೈಕಿ 11ನೆಯ ಸಂಪುಟದ ಮೊದಲನೆಯ ಭಾಗವನ್ನು ಎನ್.ಲಕ್ಷ್ಮೀನಾರಾಯಣರಾಯರೊಂದಿಗೆ ಹಾಗೂ 15ನೆಯ ಸಂಪುಟವನ್ನು ತಾವೇ ಸಂಪಾದಿಸಿದರು. 1947ರಲ್ಲಿ ಚಂದ್ರವಳ್ಳಿಯಲ್ಲಿ ನಡೆಸಲಾದ ಉತ್ಖನನದಲ್ಲಿ ಇವರೂ ಭಾಗವಹಿಸಿದ್ದರು. ಶಾಸನಗಳಿಗೆ ಸಂಬಂಧಿಸಿದಂತೆ 1956ರಲ್ಲಿ ಇವರ ಶಾಸನ ಪರಿಚಯ ಎಂಬ ಗ್ರಂಥ ಪ್ರಕಟವಾಯಿತು. ಇದಕ್ಕೆ 1959ರಲ್ಲಿ ಆಗಿನ ಮೈಸೂರು ಸರ್ಕಾರದ ಪುರಸ್ಕಾರ ದೊರಕಿತು. ಅಂದಿನ ಹೈದರಾಬಾದ್ ಸರ್ಕಾರಕ್ಕಾಗಿ ಎ ಕಾರ್ಪಸ್ ಆಫ್ ಕನ್ನಡ ಇನ್‍ಸ್ಕ್ರಿಪ್ಷನ್ಸ್ ಇನ್ ಹೈದರಾಬಾದ್ ಎಂಬ ಗ್ರಂಥವನ್ನು ಸಂಪಾದಿ ಸಿದರು. ಇವರ ಜೈನಿಸಂ ಇನ್ ಸೌತ್ ಇಂಡಿಯ ಅಂಡ್ ಸಮ್ ಜೈನ ಎಪಿಗ್ರಾಫ್ಸ್ ಎಂಬ ಗ್ರಂಥಕ್ಕೆ 1961ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಡಿ.ಲಿಟ್ ಪದವಿ ನೀಡಿತು. 1957ರಲ್ಲಿ ಅದೇ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ಹಾಗೂ ಸಂಸ್ಕೃತಿ ಇಲಾಖೆ ಯಲ್ಲಿ ರೀಡರ್ ಆಗಿ ನೇಮಕಗೊಂಡ ದೇಸಾಯಿಯವರು 1962ರಲ್ಲಿ ಅದರ ಮುಖ್ಯಸ್ಥರೂ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರೂ ಆದರು. 1967ರಲ್ಲಿ ಇವರಿಗೆ ಪ್ರಾಧ್ಯಾಪಕ ಹುದ್ದೆ ದೊರಕಿತು. ಶಾಸನಶಾಸ್ತ್ರವನ್ನು ವೈಜ್ಞಾನಿಕವಾಗಿ ವಿದ್ಯಾರ್ಥಿಗಳಿಗೆ ಕಲಿಸಿಕೊಡಲು ಶಾಸನಶಾಸ್ತ್ರದ ಡಿಪ್ಲೊಮ ಶಿಕ್ಷಣವನ್ನು ಮೊದಲ ಬಾರಿಗೆ ರೂಪಿಸಿದವರು ಇವರು.

ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿ ಅಲ್ಲಿ ಪುರಾತತ್ತ್ವ ವಸ್ತುಸಂಗ್ರಹಾಲಯವನ್ನು ದೇಸಾಯಿ ಅವರು ರೂಪಿಸಿದರು. ಅನೇಕ ವಿದ್ವಾಂಸರಿಂದ ವಿದ್ವತ್ಪೂರ್ಣ ಉಪನ್ಯಾಸಗಳನ್ನೇರ್ಪಡಿಸಿ ಅವನ್ನು ಗ್ರಂಥ ರೂಪದಲ್ಲಿ ಹೊರತಂದದ್ದು ಅವರ ಇನ್ನೊಂದು ಮುಖ್ಯ ಕೆಲಸ. ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ ವಿಭಾಗದ ಹಸ್ತಪ್ರತಿಗಳ ವಿವರಣಾತ್ಮಕ ಪಟ್ಟಿಯನ್ನು (ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ಸ್ ಆಫ್ ಮ್ಯಾನ್‍ಸ್ಕ್ರಿಪ್ಟ್ಸ್ ಇನ್ ದಿ ಕನ್ನಡ ರಿಸರ್ಚ್ ಇನ್‍ಸ್ಟಿಟ್ಯೂಟ್, ಸಂ. 5–9) ಪ್ರಕಟಿಸಿದರು.

ಕನ್ನಡ ಇನ್‍ಸ್ಕ್ರಿಪ್ಷನ್ಸ್ ಆಫ್ ಆಂಧ್ರ ಪ್ರದೇಶ್ ಮತ್ತು ಸೆಲೆಕ್ಟ್ ಇನ್‍ಸ್ಕ್ರಿಪ್ಷನ್ ಆಫ್ ಆಂಧ್ರ ಪ್ರದೇಶ್ ಎಂಬವು ಆಂಧ್ರ ಪ್ರದೇಶ ಸರ್ಕಾರಕ್ಕಾಗಿ ಇವರು ಸಂಪಾದಿಸಿದ ಗ್ರಂಥಗಳು. ಇವರ ಸಂಶೋಧನ ಗ್ರಂಥಗಳಲ್ಲಿ ಪ್ರಮುಖವಾದದ್ದು ಬಸವೇಶ್ವರ ಅಂಡ್ ಹಿಸ್ ಟೈಮ್ಸ್ ಎಂಬುದು. ಕರ್ನಾಟಕದ ಇತಿಹಾಸವನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸಬೇಕೆಂಬ ಯೋಜನೆಗೆ ಅನುಗುಣವಾಗಿ ಇವರು ತಮ್ಮ ಇಬ್ಬರು ಸಹೋದ್ಯೋಗಿಗಳೊಡನೆ ಎ ಹಿಸ್ಟರಿ ಆಫ್ ಕರ್ನಾಟಕ ಎಂಬ ಗ್ರಂಥವನ್ನು ಪ್ರಕಟಿಸಿದರು. ಮಿಂಚಿದ ಮಹಿಳೆಯರು, ಕುಂತಲೇಶ್ವರ, ಮದಗಜಮಲ್ಲ, ಕರ್ನಾಟಕದ ಕಲಚುರಿಗಳು, ಕನ್ನಡನಾಡಿನ ಶಾಸನಗಳು – ಇವು ದೇಸಾಯಿ ಯವರ ಕನ್ನಡ ಗ್ರಂಥಗಳ ಪೈಕಿ ಕೆಲವು. ಶಿವಾಜಿಯ ಜೀವನಕ್ಕೆ ಸಂಬಂಧಿಸಿದ ಮೂಲಸಾಮಗ್ರಿ ಗಳನ್ನೊಳಗೊಂಡ ಶಿವಚರಿತ್ರ ವೃತ್ತ ಸಂಗ್ರಹ ಎಂಬ ಮರಾಠಿ ಗ್ರಂಥವನ್ನು ಇವರು ಬರೆದಿದ್ದಾರೆ. ಇವರು ಬರೆದು ಪ್ರಕಟಿಸಿದ ಇಂಗ್ಲಿಷ್ ಲೇಖನಗಳ ಸಂಖ್ಯೆ 105, ಕನ್ನಡದವು ಸುಮಾರು 230, ಮರಾಠಿಯವು 40. ಇವರ ಹಲವಾರು ಲೇಖನಗಳೂ ಒಂದು ಗ್ರಂಥವೂ ಇನ್ನೂ ಪ್ರಕಟವಾಗದೆ ಉಳಿದಿದೆ.

ಕರ್ನಾಟಕದ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಆಳವಾಗಿ ಅಭ್ಯಾಸಮಾಡಿ ಸಂಶೋಧನೆಯಲ್ಲಿ ನಿರತರಾಗಿದ್ದ ದೇಸಾಯಿಯವರು 1971ರಲ್ಲಿ ನಿವೃತ್ತರಾದ ಮೇಲೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಪ್ರಾಧ್ಯಾಪಕರಾಗಿದ್ದರು. 1973ರಲ್ಲಿ ನಡೆದ ಅಖಿಲ ಭಾರತ ಇತಿಹಾಸ ಸಮ್ಮೇಳನದಲ್ಲಿ ಶಾಸನಶಾಸ್ತ್ರ ವಿಭಾಗದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಇವರು 1974 ಮಾರ್ಚ್ 5ರಂದು ನಿಧನಹೊಂದಿದರು. (ಬಿ.ಆರ್.ಜಿ.)

**ದೈಮಾಬಾದ್:** ಮಹಾರಾಷ್ಟ್ರ ರಾಜ್ಯದ ಅಹಮದ್‍ನಗರ ಜಿಲ್ಲೆಯಲ್ಲಿರುವ ತಾಮ್ರ–ಶಿಲಾಯುಗದ ವಸತಿ ನೆಲೆ. ಗೋದಾವರಿಯ ಉಪನದಿಯಾದ ಪ್ರವರದ ಎಡದಂಡೆಯ ಮೇಲಿರುವ ಈ ನೆಲೆ 1958ರಲ್ಲಿ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ (ಔರಂಗಾಬಾದ್ ವೃತ್ತ) ಬಿ.ಪಿ.ಬೋಪರ್ಡಿಕರ್‌ರವರಿಂದ ಬೆಳಕಿಗೆ ಬಂದಿತು. ಇದೇ ಇಲಾಖೆಯ ಎಂ.ಎನ್.ದೇಶಪಾಂಡೆ ಇಲ್ಲಿ 1958–59ರಲ್ಲಿ ಉತ್ಖನನ ನಡೆಸಿದರು. ಮಣ್ಪಾತ್ರೆಗಳ ಆಧಾರದ ಮೇಲೆ ಅನುಕ್ರಮವಾಗಿ ಮೂರು ವಸತಿ ಹಂತಗಳನ್ನು ಇವರು ಗುರುತಿಸಿದರು. 1974ರಲ್ಲಿ ಕಂಚಿನ ನಾಲ್ಕು ಅತ್ಯಪೂರ್ವ ಗಟ್ಟಿಗೊಂಬೆಗಳು ಈ ನೆಲೆಯಿಂದ ಆಕಸ್ಮಿಕವಾಗಿ ಹೊರಬಂದವು. ಇವು ಮನುಷ್ಯ ಸವಾರನಾದ ತಾಮ್ರದ ರಥ (45×16 ಸೆಂಮೀ), ನಾಲ್ಕು ಗಾಲಿಗಳುಳ್ಳ ಖಡ್ಗಮೃಗ (25×19 ಸೆಂಮೀ), ಎಮ್ಮೆ (31×25 ಸೆಂಮೀ) ಹಾಗೂ ಆನೆ (25×14 ಸೆಂಮೀ). ಇವು ಹರಪ್ಪ ಸಂಸ್ಕೃತಿಯ ಇದೇ ಪ್ರಕಾರದ ಗೊಂಬೆಗಳನ್ನು ಹೋಲುತ್ತವೆ. ಇವುಗಳ ಕಾಲಮಾನ–ಸ್ತರಕ್ರಮವನ್ನು ತಿಳಿಯಲು ಹಾಗೂ ಹರಪ್ಪ ಸಂಸ್ಕೃತಿಯೊಂದಿಗೆ ಈ ನೆಲೆ ಸಂಪರ್ಕದಲ್ಲಿತ್ತೆ ಎಂಬುದನ್ನು ಖಚಿತಪಡಿಸಿಕೊಳ್ಳಲು 1974–75ರಲ್ಲಿ ಎಸ್.ಆರ್.ರಾವ್ ಇಲ್ಲಿ ಉತ್ಖನನ ನಡೆಸಿದರು. 1975–79ರ ನಡುವೆ ಎಸ್.ಎ. ಸಾಲಿ ಇಲ್ಲಿ ವಿಸ್ತೃತ ಉತ್ಖನನ ನಡೆಸಿ ತಾಮ್ರ–ಶಿಲಾಯುಗದ ಐದು ಹಂತಗಳನ್ನು ಗುರುತಿಸಿದರು. ಇವು–ಸವಳ್ದ, ಅಂತ್ಯ ಹರಪ್ಪ, ದೈಮಾಬಾದ್, ಮಾಳ್ವ ಮತ್ತು ಜೋರ್ವೆ. ಗೃಹಾವಶೇಷಗಳು, ಅಲಗು ಸಮುಚ್ಚಯ, ಮೂಳೆ ಹಾಗೂ ತಾಮ್ರ ಉಪಕರಣಗಳು, ಮಣಿಗಳು, ಧಾನ್ಯಾವಶೇಷಗಳು ಈ ಎಲ್ಲ ಹಂತಗಳಲ್ಲಿಯೂ ಸಿಕ್ಕಿವೆ. ಆದರೆ ಪ್ರತಿಯೊಂದು ಹಂತದ ಮಣ್ಪಾತ್ರೆಗಳು ಮಾತ್ರ ಭಿನ್ನವಾಗಿವೆ.



ತಾಮ್ರದ ರಥ

ಬಾಣದ ಮೊನೆ, ಈಟಿಗಾಳ, ಗರಗಸ ಮುಂತಾದ ಆಯುಧೋಪಕರಣಗಳ ಚಿತ್ರಗಳಿಂದಾಗಿ ಸವಳ್ದ ಸಂಸ್ಕೃತಿಯ ಮಣ್ಪಾತ್ರೆಗಳು ವಿಶಿಷ್ಟವಾಗಿವೆ. ಹೆಚ್ಚಾಗಿ ಕೆಂಬಣ್ಣದಲ್ಲಿಯೇ ಇರುವ ಇತರ ಚಿತ್ರಗಳಲ್ಲಿ ಹಕ್ಕಿ, ಪ್ರಾಣಿ ಹಾಗೂ ಶೈಲೀಕೃತ ಮನುಷ್ಯನ ಚಿತ್ರಗಳು ಪ್ರಮುಖವಾದುವು. ಕೃಷಿಕರಾಗಿದ್ದ ಈ ಜನ ಗೋದಿ, ಜವೆ, ಕೆಂಪು ತೊಗರಿ, ಬಟಾಣಿ, ಉದ್ದು/ಹೆಸರು ಮುಂತಾದ ಧಾನ್ಯ–ಕಾಳುಗಳನ್ನು ಬೆಳೆಯುತ್ತಿದ್ದರು. ಇವರ ಮನೆಗಳು ಮಣ್ಣಿನಿಂದ ಕಟ್ಟಿದವಾಗಿದ್ದವು. ಅಗೇಟ್ ಕಲ್ಲಿನ ಲಿಂಗವನ್ನು ಹೋಲುವ ವಸ್ತುವೊಂದು ಮನೆಯೊಂದರಲ್ಲಿದ್ದ ಅಗ್ಗಿಷ್ಟಿಕೆಯೊಳಗೆ ಸಿಕ್ಕಿರುವುದು ವಿಸ್ಮಯಕಾರಿ. 2ನೆಯ ಹಂತದಲ್ಲಿ ಸುಡಾವೆ ಮಣ್ಣಿನ ಮುದ್ರೆಗಳು, ಹರಪ್ಪ ಅಕ್ಷರ ಚಿಹ್ನೆಗಳುಳ್ಳ ಪಾತ್ರೆಗಳು, ಅಂತ್ಯ ಹರಪ್ಪ ಮಾದರಿಯ ಕೆಂಪು ಪಾತ್ರೆಗಳು ದೊರೆತಿದ್ದರಿಂದ ಇದನ್ನು ಅಂತ್ಯ ಹರಪ್ಪ ಹಂತವೆಂದು ಗುರುತಿಸಲಾಯಿತು. ಗೋದಾವರಿ ನದಿಬಯಲಿನಲ್ಲಿ ನಗರೀಕರಣ ಬೀಜವನ್ನು ಬಿತ್ತಿದ ಈ ಜನ ತಾಪಿ ಬಯಲಿನಿಂದ ಬಂದವರಿರಬೇಕು. ಹಸಿ ಇಟ್ಟಿಗೆ ಹಾಗೂ ಮಣ್ಣಿನಿಂದ ಮನೆ ಕಟ್ಟುವ ವಿಧಾನವನ್ನು ರೂಢಿಸಿಕೊಂಡಿದ್ದ ಇವರು ಮಣಿಗಾರಿಕೆಯಲ್ಲೂ ನಿಪುಣರಾಗಿದ್ದರು. ವಸತಿಯನ್ನು ಹಠಾತ್ತಾಗಿ ಇವರು ಏಕೆ ತೊರೆದರು ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಮೂರನೆಯ ಹಂತವಾದ ದೈಮಾಬಾದ್ ಸಂಸ್ಕೃತಿಯ ವಿಶಿಷ್ಟತೆ ಇದರ ತಿಳಿಗಂದು ಮತ್ತು ಕೆನೆಬಣ್ಣದ ಮಣ್ಪಾತ್ರೆಗಳು. ಇವುಗಳ ಮೇಲೆ ಕಪ್ಪುಬಣ್ಣದಲ್ಲಿ ವಿವಿಧ ರೇಖಾ ವಿನ್ಯಾಸಗಳನ್ನು

ಚಿತ್ರಿಸಲಾಗಿದೆ. ಮೂರು ಪ್ರಕಾರದ ಸಮಾಧಿಗಳು ಇಲ್ಲಿವೆ. ಇವು–ಸಾಂಕೇತಿಕ ಸಮಾಧಿಗಳು; ದಹನನಂತರ ಅವಶೇಷಗಳುಳ್ಳ ಅಸ್ಥಿಮಡಕೆ ಹಾಗೂ ಗುಳಿ ಸಮಾಧಿ. ಕೃಷಿ ಹಾಗೂ ತಾಮ್ರೋಪಕರಣ ತಯಾರಿಕೆ ಈ ಹಂತದ ಜನರ ಮುಖ್ಯ ಕಸಬಾಗಿತ್ತು. ಪ್ರ.ಶ.ಪೂ.ಸು. 1600ರ ಹೊತ್ತಿಗೆ ಇಲ್ಲಿ ಮಾಳ್ವ ಸಂಸ್ಕೃತಿಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ತಾಮ್ರ ಕಾರ್ಯಾಗಾರದ ಅವಶೇಷಗಳು, ಕಲ್ಲೊಡ್ಡನ ಮನೆಯ ಅವಶೇಷ, ಧಾರ್ಮಿಕ ಮಹತ್ತ್ವವಿದ್ದಂತೆ ತೋರುವ ಒಂದು ಕಟ್ಟಡ ಸಂಕೀರ್ಣ ಇವು ಈ ಹಂತದ ಮುಖ್ಯ ಅವಶೇಷಗಳು. ಇನ್ನುಳಿದಂತೆ ಈ ಹಂತ ಇನಾಂಗಾಂವ್‌ನಲ್ಲಿಯ **(ನೋಡಿ–ಇನಾಂಗಾಂವ್)** ಮಾಳ್ವ ಹಂತವನ್ನು ಹೋಲುತ್ತದೆ. ಕೊನೆಯದಾದ ಜೋರ್ವೆ ಹಂತವೂ ಇನಾಂಗಾಂವ್‌ನ ಜೋರ್ವೆ ಹಂತದ ಪ್ರತಿರೂಪವೇ ಆಗಿದೆ. ಕುಂಬಾರ ಹಾಗೂ ಸುಣ್ಣಗಾರರ ಕಾರ್ಯಾಗಾರದ ಅವಶೇಷಗಳು ಈ ಹಂತದಲ್ಲಿ ಕಂಡುಬಂದಿವೆ. ಒಟ್ಟು 48 ಸಮಾಧಿಗಳನ್ನು ಇಲ್ಲಿ ಗುರುತಿಸಲಾಗಿದೆ; ಕೆಲವೊಂದು ಸಮಾಧಿಗಳಲ್ಲಿ ಪಾದದ ಮೂಳೆಗಳಿಲ್ಲ. ಈ ಹಂತದಲ್ಲಿ ಕೃಷಿ ಚಟುವಟಿಕೆ ತೀವ್ರಗೊಂಡಿತು. ಮಾತೃ ದೇವತೆ/ಸ್ತ್ರೀ ಆಕೃತಿ, ಗೂಳಿ, ಖಡ್ಗಮೃಗ ಮುಂತಾದ ಸುಡಾವೆಮಣ್ಣಿನ ಆಕೃತಿಗಳು ಇಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ದೊರೆತಿವೆ. ಶಂಕುವಿನಾಕಾರದ ಮಣ್ಣಿನ ಮುದ್ರೆ ಮತ್ತು ತಾಮ್ರದ ಎರಡು ಸ್ತ್ರೀ ಆಕೃತಿಗಳು ಉಲ್ಲೇಖಾರ್ಹ. (ಆರ್.ಎಮ್.ಎಸ್.;ವಿ.ಎಸ್.)

**ದೊಡ್ಡೇರಿ:** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಐತಿಹಾಸಿಕ ನೆಲೆ. 1690–96ರ ಅವಧಿಯಲ್ಲಿ ಮೊಗಲರು–ಮರಾಠರ ನಡುವೆ ನಡೆದ ಯುದ್ಧ ದೊಡ್ಡೇರಿ ಕದನವೆಂದೇ ಪ್ರಸಿದ್ಧಿಯಾಗಿದೆ. ಇತ್ತೀಚೆಗೆ ಇಲ್ಲಿ ಪ್ರಾಗಿತಿಹಾಸ ಕಾಲದ ಅವಶೇಷಗಳು ಶೋಧವಾಗಿವೆ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಉಪಕರಣಗಳು, ನವಶಿಲಾಯುಗದ ಮಣ್ಪಾತ್ರೆಗಳು, ಬೃಹತ್‌ಶಿಲಾ ಸಂಸ್ಕೃತಿಯ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು, ಕಬ್ಬಿಣದ ಉಪಕರಣಗಳು, ಸಾತವಾಹನ ಕಾಲದ ಕಾವಿಬಣ್ಣದ ಲೇಪನವುಳ್ಳ ಬಿಳಿ ರೇಖಾಚಿತ್ರಿತ ಮಣ್ಪಾತ್ರೆಗಳು ಹಾಗೂ ಮಧ್ಯಯುಗೀನ ಕಾಲದ ಮಣ್ಪಾತ್ರೆಗಳು, ಬಳೆಗಳು, ಮಣಿಗಳು, ಗಣೇಶ, ಲಿಂಗ ಮುಂತಾದ ಶಿಲ್ಪಗಳು ದೊರೆತಿವೆ. ಸೂಕ್ಷ್ಮಶಿಲಾಯುಗ ಹಂತದಲ್ಲಿ ಈ ನೆಲೆ ಶಿಲೋಪಕರಣ ತಯಾರಿಕೆಯ ಸ್ಥಳವಾಗಿತ್ತು. ಸಾತವಾಹನ ಕಾಲದ ಇಟ್ಟಿಗೆ ಗೋಡೆಗಳ ಅವಶೇಷಗಳು ಇಲ್ಲಿ ಕಂಡುಬಂದಿವೆ. (ಆರ್‌ಡಿಆರ್.)

**ದೌಲತಾಬಾದ್:** ಮಹಾರಾಷ್ಟ್ರ ರಾಜ್ಯದ ಔರಂಗಾಬಾದ್ ಜಿಲ್ಲೆಯಲ್ಲಿ ಔರಂಗಾಬಾದ್‌ನಿಂದ ಸು.9ಕಿಮೀ ದೂರದಲ್ಲಿರುವ ಇತಿಹಾಸ ಪ್ರಸಿದ್ಧ ಸ್ಥಳ. ಮಧ್ಯಯುಗದಲ್ಲಿ ಇದು ದೇವಗಿರಿಯೆಂದು ಖ್ಯಾತಿ ಪಡೆದಿತ್ತು. ಜೈನ ಗ್ರಂಥವೊಂದರಲ್ಲಿ ಇದನ್ನು ಸುರಗಿರಿ ಎಂದು ಹೆಸರಿಸಲಾಗಿದೆ. ದೇವಗಿರಿ 12ನೆಯ ಶತಮಾನದ ಕೊನೆಯಲ್ಲಿ ರಾಜಧಾನಿಯಾಗುವ ಸುಯೋಗ ಪಡೆಯಿತು. ದೇವಗಿರಿಯ ಯಾದವರೆಂದು ಪ್ರಸಿದ್ಧರಾಗಿರುವ ಸೇವುಣರ ಅಧೀನ ಪ್ರದೇಶದಲ್ಲಿ ಈ ನಗರ ಇತ್ತು. ರಾಷ್ಟ್ರಕೂಟ 3ನೆಯ ಕೃಷ್ಣನ ಕಾಲದಿಂದ ಸಾಮಂತರಾಗಿದ್ದ ಈ ಅರಸರ ಮನೆತನದಲ್ಲಿಯ 5ನೆಯ ಭಿಲ್ಲಮ 12ನೆಯ ಶತಮಾನದ ಕೊನೆಯಲ್ಲಿ, ಚಾಳುಕ್ಯರ ಆಳ್ವಿಕೆಯ ಅಂತ್ಯದಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಿದ. ಆಗ ಇವನ ರಾಜ್ಯ ಉತ್ತರದಲ್ಲಿ ನರ್ಮದಾ ನದಿಯ ಸಮೀಪದಿಂದ ದಕ್ಷಿಣದಲ್ಲಿ ಮಲಪ್ರಭಾ ನದಿಯವರೆಗೆ ಹಬ್ಬಿತ್ತು. ಆದ್ದರಿಂದ ಈ ರಾಜ್ಯಕ್ಕೆ ಮಧ್ಯವರ್ತಿಯಾದ ಸ್ಥಳವೊಂದನ್ನು ರಾಜಧಾನಿಯನ್ನಾಗಿ ಮಾಡುವುದು ಅಗತ್ಯವಿತ್ತು. ದೇವಗಿರಿಯನ್ನು ಭಿಲ್ಲಮ ಕಟ್ಟಿಸಿದನೆಂದು ಹೇಮಾದ್ರಿಯ ವ್ರತಖಂಡ ಮತ್ತು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಇವನ ರಾಜಧಾನಿ ತೆನವಲಗೆ ಎಂಬುದಾಗಿತ್ತೆಂದು ಭಿಲ್ಲಮನ ಶಾಸನಗಳು ಹೇಳುತ್ತವೆ. ಭಿಲ್ಲಮನ ಮಗನಾದ ಜೈತುಗಿಯ ಶಾಸನವೊಂದರಲ್ಲಿ ದೇವಗಿರಿಯ ಉಲ್ಲೇಖ ದೊರೆಯುತ್ತದೆ. ಆದ್ದರಿಂದ ಭಿಲ್ಲಮ ನಿರ್ಮಿಸಿದ ನಗರ ಜೈತುಗಿಯ ಕಾಲಕ್ಕೆ ಸೇವುಣರ ರಾಜಧಾನಿಯಾಯಿತೆಂದು ಹೇಳಬಹುದು.

ಸೇವುಣ ಅರಸರ ಮನೆತನದ ಕೊನೆಯವರೆಗೂ ಈ ನಗರ ರಾಜಧಾನಿಯಾಗಿ ಉಳಿಯಿತು. ಆದರೆ 1296ರಿಂದ ಮುಂದೆ ಇದರ ಅಳಿಗಾಲ ಆರಂಭವಾಯಿತು. ಆಗ ಅಲಾಉದ್ದೀನ್ ಖಿಲ್ಜಿ ಇದರ ಮೇಲೆ ಧಾಳಿ ಮಾಡಿದ. ಆ ಸಮಯದಲ್ಲಿ ಸೇವುಣ ರಾಮಚಂದ್ರ ಆಳುತ್ತಿದ್ದ. ಮುಂದೆ 1302ರಲ್ಲಿ ಅಲಾಉದ್ದೀನನ ಅಧೀನಾಧಿಕಾರಿಯಾದ ಮಲಿಕ್ ಕಾಫೂರ್ ಮತ್ತೆ ದೇವಗಿರಿಯ ಮೇಲೆ ಧಾಳಿ ಮಾಡಿ ರಾಮಚಂದ್ರನನ್ನು ಸೆರೆಹಿಡಿದು ದಿಲ್ಲಿಗೆ ಕರೆದೊಯ್ದ. ರಾಮಚಂದ್ರ ಮರಳಿ ದೇವಗಿರಿಗೆ ಬಂದು ರಾಜ್ಯವಾಳಿದ. ದೇವಗಿರಿ ವಸ್ತುತಃ ಮುಸ್ಲಿಮರಿಗೆ ಅಧೀನವಾಗಿಯೇ ಉಳಿಯಿತು. ರಾಮಚಂದ್ರನ ಮಗನಾದ 3ನೆಯ ಸಿಂಘಣ ದಂಗೆಯೆದ್ದುದರಿಂದ 1313ರಲ್ಲಿ ಮಲಿಕ್ ಕಾಫರ್ ಮತ್ತೆ ದೇವಗಿರಿಯ ಮೇಲೆ ದಂಡೆತ್ತಿ ಬಂದು ಸಿಂಘಣನನ್ನು ಸೋಲಿಸಿ ತಾನು ಅಲ್ಲಿಯೇ ನಿಂತ. ಅಂದಿನಿಂದ ದೇವಗಿರಿ ಪೂರ್ತಿಯಾಗಿ ದಿಲ್ಲಿಯ ಸುಲ್ತಾನರ ವಶವಾಯಿತು.

ಮುಂದೆ ಅಲಾಉದ್ದೀನನ ಮರಣ, ರಾಜ್ಯಕ್ಕಾಗಿ ಕಾದಾಟ ಮುಂತಾದವುಗಳ ಗೊಂದಲದಲ್ಲಿ ರಾಮಚಂದ್ರನ ಅಳಿಯನಾದ ಹರಪಾಲದೇವ ದಂಗೆಯೇಳಲು ಅಲಾಉದ್ದೀನನ ಮಗನಾದ ಮುಬಾರಕ್ 1318ರಲ್ಲಿ ಮತ್ತೆ ದಂಡೆತ್ತಿ ಬಂದ. ಹೋರಾಟದಲ್ಲಿ ಹರಪಾಲ ಸೆರೆಸಿಕ್ಕಿ ಕೊಲ್ಲಲ್ಪಟ್ಟ. ಅಲ್ಲಿಗೆ ಸೇವುಣರ ಆಳಿಕೆ ಮುಗಿದು ದೇವಗಿರಿಯೊಂದಿಗೆ ಸೇವುಣ ರಾಜ್ಯ ದಿಲ್ಲಿಯ ಅರಸೊತ್ತಿಗೆಗೆ ಸೇರಿತು.

ಖಿಲ್ಜಿ ಆಳಿಕೆ ಮುಗಿದು ತುಗಲಕ್ ಮನೆತನದ ಆಳಿಕೆ ಆರಂಭವಾದಾಗ ದೇವಗಿರಿ ಮತ್ತೆ ಸ್ವಲ್ಪ ಕಾಲ ರಾಜಧಾನಿಯಾಯಿತು. ಈ ಮನೆತನದ 2ನೆಯ ಅರಸನಾದ ಮಹಮ್ಮದ್ ತುಗಲಕ್ 1327ರಲ್ಲಿ ತನ್ನ ರಾಜಧಾನಿಯನ್ನು ದಿಲ್ಲಿಯಿಂದ ದೇವಗಿರಿಗೆ ಸ್ಥಳಾಂತರಿಸಬೇಕೆಂದು ತೀರ್ಮಾನಿಸಿ ಇದಕ್ಕೆ ದೌಲತಾಬಾದ್ ಎಂದು ಹೆಸರಿಟ್ಟ. ಈ ಸ್ಥಳಾಂತರದ ಬಗ್ಗೆ ಮುಸ್ಲಿಮ್ ಇತಿಹಾಸಕಾರರು ಬರೆಯುತ್ತ, ದಿಲ್ಲಿಯಲ್ಲಿಯ ಪ್ರತಿಯೊಬ್ಬನನ್ನೂ ದೌಲತಾಬಾದಿಗೆ ಹೊರಡಿಸಲು ಸುಲ್ತಾನ ಯತ್ನಿಸಿದನೆಂದೂ ದಿಲ್ಲಿ ಹಾಳು ಪಟ್ಟಣವಾಯಿತೆಂದೂ ಹೇಳುತ್ತಾರೆ. ಆದರೆ ಇದೆಲ್ಲ ಉತ್ಪ್ರೇಕ್ಷೆಯೆಂಬುದು ಅರ್ವಾಚೀನ ವಿದ್ವಾಂಸರ ಅಭಿಪ್ರಾಯ. ಈ ಸ್ಥಳಾಂತರದಿಂದಾದ ಒಂದು ಮಹತ್ತ್ವದ ಪರಿಣಾಮವೆಂದರೆ ಮಹಮ್ಮದ್ ದೌಲತಾಬಾದಿನಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ನಿರ್ಮಿಸಿದನಲ್ಲದೆ, ಮೊದಲಿನ ಸೇವುಣರ ಕಾಲದ ಕೋಟೆಯನ್ನು ವಿಸ್ತರಿಸಿ ಕಟ್ಟಿಸಿದ. ಆ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಇಬ್ನಬತೂತನೆಂಬ ಪ್ರವಾಸಿ ದೌಲತಾಬಾದಿನ ವರ್ಣನೆ ಮಾಡುತ್ತ ಇದು ದೆಹಲಿಯಷ್ಟೇ ಸುಂದರವಾದ ನಗರವೆಂದು ಹೇಳಿದ್ದಾನೆ. 1347ರಲ್ಲಿ ದೇವಗಿರಿ ಅಥವಾ ದೌಲತಾಬಾದ್ ಬಹಮನೀ ಅರಸರ ವಶವಾಯಿತು. 1500ರಲ್ಲಿ ಅಹಮ್ಮದ್ ಷಾ ಅದನ್ನು ಗೆದ್ದುಕೊಂಡ. ಶಹಜಹಾನನ ಸೇನಾಪತಿ 1633ರಲ್ಲಿ ದೌಲತಾಬಾದನ್ನು ವಶಪಡಿಸಿಕೊಂಡ ಮೇಲೆ ಅದು ಮೊಗಲ್ ಸಾಮ್ರಾಜ್ಯದ ಭಾಗವಾಯಿತು. ಮುಂದೆ 18ನೆಯ ಶತಮಾನದಿಂದ ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿತ್ತು. ಸ್ವತಂತ್ರ ಭಾರತದಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಅವಿಭಜಿತ ಮುಂಬಯಿ ರಾಜ್ಯಕ್ಕೆ ಸೇರಿ, ಪ್ರತ್ಯೇಕ ಮಹಾರಾಷ್ಟ್ರ ರಾಜ್ಯವಾದಾಗ ಅದರಲ್ಲಿ ಉಳಿಯಿತು.

ಉತ್ಖನನ

**ವಾಸ್ತುಶಿಲ್ಪ:** ಸೇವುಣರ ಕಾಲದ ದೇವಗಿರಿಯ ಕೋಟೆ ತ್ರಿಕೋಣಾಕಾರದ ಬೆಟ್ಟದ ಮೇಲಿದೆ. ಇದನ್ನು ಗಿರಿದುರ್ಗವೆಂದು ಗುರುತಿಸಬಹುದು. ಬೆಟ್ಟದ ಎತ್ತರ ಸಮುದ್ರಮಟ್ಟದಿಂದ 675 ಮೀ ಕೋಟೆಯ ಎತ್ತರ 45 ಮೀ. ಇದರ ಸುತ್ತಲೂ ಕಂದಕವಿದೆ. ಕೋಟೆಯ ಹೊರಗಿನ ಗೋಡೆಯ ಸುತ್ತಳತೆ 4½ಕಿಮೀ. ಹೊರಗಿನ ಗೋಡೆಗೂ ಕೋಟೆಗೂ ಮಧ್ಯೆ ವ್ಯೂಹರಚನೆಯ ಮೂರು ಸಾಲುಗಳುಂಟು. ಪ್ರಾಚೀನ ದೇವಗಿರಿ ಈ ಕೋಟೆಯ ಒಳಭಾಗದಲ್ಲಿತ್ತು. ಆದರೆ ಈಗ ಇಲ್ಲಿ ಒಂದು ಹಳ್ಳಿಯಿದೆ. ಕೋಟೆಗೆ ಒಟ್ಟು 8 ಬಾಗಿಲುಗಳಿವೆ. ಗೋಡೆಗಳ ಮೇಲೆ ಅಲ್ಲಲ್ಲಿ ಇಂದಿಗೂ ಹಳೆಯ ತೋಪುಗಳ ಅವಶೇಷಗಳುಂಟು. ಕೋಟೆಯಲ್ಲಿ ಕಗ್ಗತ್ತಲಿನ ಭೂ ಮಾರ್ಗವೂ ಇದೆ. ಅದನ್ನು ಕತ್ತಲೆ ಮಾರ್ಗ ಎಂದು ಕರೆಯುತ್ತಾರೆ. ಈ ಮಾರ್ಗದಲ್ಲಿ ಅಲ್ಲಲ್ಲಿ ಆಳವಾದ ಗುಂಡಿಗಳಿವೆ. ಕಪಟೋಪಾಯದಿಂದ ಶತ್ರುಗಳನ್ನು ಬೀಳಿಸಲು ಅವನ್ನು ರಚಿಸಲಾಗಿತ್ತು. ಕತ್ತಲೆ ಮಾರ್ಗದ ಪ್ರವೇಶದ್ವಾರದಲ್ಲಿ ಕಬ್ಬಿಣದ ದೊಡ್ಡ ಅಗ್ಗಿಷ್ಟಿಕೆಗಳನ್ನು ರಚಿಸಲಾಗಿದ್ದು ಅವುಗಳಲ್ಲಿ ಬೆಂಕಿಯನ್ನುರಿಸಿ ಹೊಗೆಯನ್ನುಂಟು ಮಾಡಿ ಆಕ್ರಮಣಕಾರರು ಒಳಗೆ ಪ್ರವೇಶಿಸದಂತೆ ತಡೆಯಲು ಬಳಸುತ್ತಿದ್ದರು. ಕೋಟೆಯಿರುವ ಬೆಟ್ಟದ ಮೇಲೆ ಎಲ್ಲೋರ ಗುಹೆಗಳ ಸಮಕಾಲೀನವೆನ್ನಬಹುದಾದ ಕೆಲವು ಅಪೂರ್ವ ಗುಹೆಗಳಿವೆ.

ದೌಲತಾಬಾದಿನ ಪ್ರಮುಖ ಸ್ಮಾರಕಗಳು ಚಾಂದ್‌ಮಿನಾರ್, ಚೀನೀಮಹಲ್ ಹಾಗೂ ಜುಮಾ ಮಸೀದಿ. ಚಾಂದ್‌ಮಿನಾರ್ 63ಮೀ. ಎತ್ತರವಾಗಿದೆ. ಅದರ ಸುತ್ತಳತೆ 21ಮೀ. ಈ ಮಿನಾರ್ ದಕ್ಷಿಣ ಭಾರತದ ಮುಸಲ್ಮಾನರ ಸುಂದರ ವಾಸ್ತು ಕೃತಿಗಳಲ್ಲಿ ಒಂದು. ಕೋಟೆಯ ವಿಜಯದ ಸಂಕೇತವಾಗಿ ಅಲಾಉದ್ದೀನ್ ಬಹಮನಿ ಇದನ್ನು ನಿರ್ಮಿಸಿದ. ಗೋಪುರದ ಎತ್ತರ 4.50ಮೀ. ಮೊದಲು ಈ ಗೋಪುರವನ್ನು ಸಂಪೂರ್ಣವಾಗಿ ಇರಾನಿನ ಕಲ್ಲುಗಳಿಂದ ಅಲಂಕರಿಸಲಾಗಿತ್ತು. ಮಿನಾರಿನ ದಕ್ಷಿಣಕ್ಕೆ ಒಂದು ಚಿಕ್ಕ ಮಸೀದಿ ಇದೆ. ಇದು ಹಿಜರಿ 849ರಲ್ಲಿ (ಪ್ರಶ. 1145) ನಿರ್ಮಾಣವಾದುದಾಗಿ ಪಾರಸಿ ಶಾಸನದಿಂದ ತಿಳಿದುಬರುತ್ತದೆ. ಚೀನೀಮಹಲ್ ಕೋಟೆಯ ಎಂಟನೆಯ ದ್ವಾರದಿಂದ 12ಮೀ. ದೂರದಲ್ಲಿ ಬಲಭಾಗದಲ್ಲಿದೆ. ಇದು ಮೊದಲು ಅತ್ಯಂತ ಸುಂದರವಾಗಿತ್ತು. ಗೋಲ್ಕೊಂಡದ ಕೊನೆಯ

ಅರಸ ಅಬುಹಸನ್ ತಾನ್ ಶಾಹನನ್ನು ಔರಂಗ್‌ಜೇಬ್ ಇಲ್ಲೇ ಬಂಧನದಲ್ಲಿಟ್ಟಿದ್ದ. ಸೇವುಣರ ಕಾಲದ ಕಟ್ಟಡಗಳ ಅವಶೇಷಗಳು ಈಗ ಇಲ್ಲವೆಂದೇ ಹೇಳಬಹುದು. ಮೊದಲು ಇಲ್ಲಿದ್ದ ಕಾಳಿಕಾ ದೇವಾಲಯದ ಮಧ್ಯಭಾಗವನ್ನು ಮಲ್ಲಿಕ್‌ಕಾಫೂರ್ ಮಸೀದಿಯಾಗಿ ಪರಿವರ್ತಿಸಿದ ಈ ಕಟ್ಟಡವಿದೆ. ಇದರ ಹತ್ತಿರವೇ ಇರುವ ಜುಮಾ ಮಸೀದಿಗೆ ಪ್ರಾಚೀನ ಭಾರತೀಯ ಶೈಲಿಯ ಕಂಬ ಹಾಗೂ ಬಾಗಿಲುಗಳಿವೆ. ಇದನ್ನು 1313ರಲ್ಲಿ ಮುಬಾರಕ್ ಖಿಲ್ಜಿ ನಿರ್ಮಿಸಿದ. 1347ರಲ್ಲಿ ಬಹಮನೀ ವಂಶದ ಸ್ಥಾಪಕನಾದ ಹಸನ್ ಗಂಗುವಿನ ಪಟ್ಟಾಭಿಷೇಕ ಇಲ್ಲೇ ಆಯಿತೆಂದು ಹೇಳುತ್ತಾರೆ. ಅಕ್ಬರನ ಸಮಕಾಲೀನ ಇತಿಹಾಸ ಲೇಖಕ ಫೆರಿಷ್ತಾ ಇದನ್ನು ವರ್ಣಿಸಿದ್ದಾನೆ. ಟಂಕಸಾಲೆ, ಆನೆಯ ಕೊಳ, ಜನಾರ್ದನಸ್ವಾಮಿಯ ಸಮಾಧಿ, ಶಾಹಜಹಾನ್ ಮತ್ತು ನಿಜಾಮ್ ವಂಶದ ಸುಲ್ತಾನರು ಕಟ್ಟಿಸಿದ ಕೆಲವು ಕಟ್ಟಡಗಳ ಭಗ್ನಾವಶೇಷಗಳು ಇಲ್ಲಿ ಕಂಡುಬರುತ್ತವೆ. (ಕೆಆರ್‌ಐ.)

ಫಿರಂಗಿ

1980–2007ರ ಅವಧಿಯಲ್ಲಿ ಮರಾಠವಾಡ ವಿಶ್ವವಿದ್ಯಾಲಯ, ಡೆಕ್ಕನ್ ಕಾಲೇಜು, ಭಾರತೀಯ ಇತಿಹಾಸ ಸಂಶೋಧನ ಮಂಡಲಿ ಮತ್ತು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಈ ನೆಲೆಯಲ್ಲಿ ಉತ್ಖನನ ನಡೆಸಿ ಯಾದವ, ಸುಲ್ತಾನ ಹಾಗೂ ಮೊಗಲರ ಕಾಲದ ವಸತಿ ಅವಶೇಷಗಳನ್ನು ಬೆಳಕಿಗೆ ತಂದಿವೆ.

ಯಾದವ ಕಾಲದ (1ನೆಯ ಹಂತ) ಮನೆಗಳಲ್ಲಿ ಸಾಮಾನ್ಯವಾಗಿ ದೊಡ್ಡ ಕಲ್ಲುಗಳಿಂದ ಮಾಡಿದ ಅಡಿಪಾಯವಿದೆ. ನೆಲವನ್ನು ಗಾರೆಯಿಂದಲೂ ಗೋಡೆಯನ್ನು ಮಣ್ಣಿನಿಂದಲೂ ಗಿಲಾವು ಮಾಡಲಾಗಿದೆ. ಗೋಡೆಗಳಲ್ಲಿ ಅಲಂಕಾರಿಕ ಕಲ್ಲುಗಳು ಬಳಕೆಯಾಗಿವೆ. ಇದೇ ಕಲ್ಲುಗಳು ಸುಲ್ತಾನರ ಕಾಲದ (2ನೆಯ ಹಂತ) ಮನೆಗಳಲ್ಲಿ ಮರುಬಳಕೆಯಾಗಿವೆ. ಈ ಕಾಲದ ಮನೆಗಳು ಆಯತಾಕಾರದ ಹಜಾರಗಳನ್ನೂ ಚೌಕಾಕಾರದ ಕೋಣೆಗಳನ್ನೂ ಹೊಂದಿದ್ದವು. ಕೆಲವು ಮನೆಗಳಲ್ಲಿ ನೆಲಮಾಳಿಗೆಯನ್ನೂ ನೆಲದಡಿಯ ಹಗೇವುಗಳನ್ನೂ ಮಾಡಲಾಗಿತ್ತು. ಮೊಗಲರ ಕಾಲದ (3ನೆಯ ಹಂತ) ಮನೆಗಳು ಆಕಾರದಲ್ಲಿ ಸಣ್ಣವು. ಕಲ್ಲಿನಿಂದ ನಿರ್ಮಿತವಾದ ಈ ಮನೆಗಳಿಗೆ ಸರಿಯಾದ ತಳಪಾಯವಿಲ್ಲ. ಈ ಕಾಲದ ಬೀದಿಗಳು ಓರಣವಾಗಿಲ್ಲ; ರಸ್ತೆಗಳು ಕಿರಿದಾಗಿವೆ. ಮೂರು ಹಂತದ ವಸತಿಗಳಲ್ಲಿಯೂ ಒಳಚರಂಡಿ ಹಾಗೂ ನೀರು ಸರಬರಾಜು ವ್ಯವಸ್ಥೆ ಸಮರ್ಪಕವಾಗಿತ್ತು. ಕುಡಿಯುವ ನೀರನ್ನು ಸಂಗ್ರಹಿಸಲು ಇಟ್ಟಿಗೆಯ ತೊಟ್ಟಿಗಳಿದ್ದವು. ಸುಡಾವೆಮಣ್ಣಿನ ಕೊಳವೆಗಳ ಮೂಲಕ ಮನೆಗಳಿಗೆ ನೀರು ಪೂರೈಕೆ ಮಾಡಲಾಗುತ್ತಿತ್ತು. ಚರಂಡಿಗಳು ಕಲ್ಲಿನಿಂದ ಕಟ್ಟಿದವಾಗಿದ್ದು ಇವನ್ನು ಕಲ್ಲುಚಪ್ಪಡಿಗಳಿಂದ ಮುಚ್ಚಲಾಗಿತ್ತು. ಸಾರ್ವಜನಿಕ ಪಾಯಖಾನೆಗಳ ವ್ಯವಸ್ಥೆಯೂ ಇತ್ತು. ಎರಡು ಸ್ಮಶಾನ ಸ್ಥಳಗಳು ಇಲ್ಲಿದ್ದು ಉತ್ತರ–ದಕ್ಷಿಣಾಭಿಮುಖವಾಗಿ ಹೂಳಿದ್ದ ಅಸ್ಥಿಪಂಜರಗಳ ಕುಣಿಗಳು ಇಲ್ಲಿ ಕಂಡುಬಂದವು.

ಇಲ್ಲಿ ವಾಸ್ತು ಹಾಗೂ ಶಿಲ್ಪಾವಶೇಷಗಳು ವಿಪುಲವಾಗಿ ದೊರೆತಿವೆ. ಕಲ್ಲಿನ ಶಿವಲಿಂಗಗಳು, ಮಹಿಷಾಸುರ ಮರ್ದಿನಿ, ಭೈರವ ಹಾಗೂ ಅಂಬಿಕೆಯ ಶಿಲ್ಪಗಳು, ಶಿಲೆ ಹಾಗೂ ತಾಮ್ರದ ಗಣಪತಿಯ ವಿಗ್ರಹಗಳು ಸುಂದರವಾಗಿವೆ. ಜೈನವಿಗ್ರಹಗಳಲ್ಲಿ ಶಿಲೆಯ ಆದಿನಾಥನ ಶಿಲ್ಪ ಹಾಗೂ ಸ್ಫಟಿಕದ ಪಾರ್ಶ್ವನಾಥ ಮೂರ್ತಿಗಳು ವಿಶೇಷವಾಗಿವೆ. ಗಾಜು, ಶಂಖ ಹಾಗೂ ಶಂಖದ ಬಳೆ, ವಿವಿಧ ಕಲ್ಲುಗಳ ಮಣಿಗಳು, ಚಿನ್ನ, ಬೆಳ್ಳಿ ಹಾಗೂ ತಾಮ್ರದ ಉಂಗುರಗಳು ಇಲ್ಲಿಯ ಆಭರಣಾವಶೇಷಗಳು. ನಾಣ್ಯಗಳಲ್ಲಿ ಪರ್ಷಿಯನ್–ಅರೇಬಿಕ್ ಬರೆಹವಿರುವ ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳು, ವಿಜಯನಗರದ 1ನೆಯ ದೇವರಾಯನ ಉಮಾಮಹೇಶ್ವರ ಹಾಗೂ ಲಕ್ಷ್ಮೀನಾರಾಯಣ ಮಾದರಿಯ ಚಿನ್ನದ ನಾಣ್ಯಗಳು, ಇದೇ ಸಾಮ್ರಾಜ್ಯದ ಶಿವಪಾರ್ವತಿ ಮಾದರಿಯ ಚಿನ್ನದ ನಾಣ್ಯಗಳು ಗಮನಾರ್ಹ. ದೇವರಾಯನ ನಾಣ್ಯಗಳ ಮೇಲೆ ದೇವನಾಗರಿ ಲಿಪಿಯಲ್ಲಿ ಶ್ರೀ ಪ್ರತಾಪ ದೇವರಾಯ ಎಂಬ ಬರೆಹವಿದೆ. ಬಾಣದ ಮೊನೆ, ಉಳಿ, ಮೊಳೆ, ಸರಪಳಿ, ಕುದುರೆ ಕಡಿವಾಣ ಮುಂತಾದ ಕಬ್ಬಿಣದ ಉಪಕರಣಗಳೂ ದಂತದ ಪೆಟ್ಟಿಗೆ ಹಾಗೂ ದಾಳಗಳೂ ಇಲ್ಲಿ ದೊರೆತಿರುವ ಇತರ ಅವಶೇಷಗಳು. ಮಣ್ಪಾತ್ರೆಗಳಲ್ಲಿ ಸೆಲಡನ್ ಪಾತ್ರೆ, ಕೆಂಪು ಲೇಪನವುಳ್ಳ ಪಾತ್ರೆ, ಕಪ್ಪು ಮತ್ತು ಬೂದು ಪಾತ್ರೆಗಳು ಹೆಸರಿಸಬಹುದಾದವು. ಸೆಲಡನ್ ಪಾತ್ರೆಯ ಕೆಲವು ಚೂರುಗಳು ಮೇಲೆ ಚೀನಿ ಲಿಪಿಯ ಬರೆಹಗಳಿವೆ. ಇಲ್ಲಿರುವ ಕೋಟೆ 8 ಹಂತಗಳಲ್ಲಿ ನಿರ್ಮಾಣಗೊಂಡಿದೆ ಎಂದು ತಿಳಿದುಬರುತ್ತದೆ: ಯಾದವಪೂರ್ವ ಕಾಲ (1000–1150), ಯಾದವರ ಕಾಲ (1150–1300), ಖಿಲ್ಜಿ ಮತ್ತು ತುಗಲಕರ ಕಾಲ (1300–50), ಬಹಮನಿ ಸುಲ್ತಾನರ ಕಾಲ (1350–1450), ನಿಜಾಮಶಾಹಿ ಕಾಲ (1450–1650), ಮೊಗಲರ ಕಾಲ (1750–1800), ಮರಾಠರ ಕಾಲ (1750–1180) ಮತ್ತು ಹೈದರಾಬಾದು ನಿಜಾಮರ ಕಾಲ (1800–1950). (ಡಿ.ಎಚ್.ಆರ್.)

**ದ್ರಾವಿಡರು:** ಭಾರತ ದೇಶದ ಆರಂಭದ ಸಂಸ್ಕೃತಿಯ ನಿರ್ಮಾಪಕರೇ ದ್ರಾವಿಡರು. ಇವರು ಸಿಂಧೂನದಿ ಕಣಿವೆ ಪ್ರದೇಶದಲ್ಲಿ ಮೊದಲಿಗೆ ನೆಲೆಸಿ, ಅಲ್ಲಿ ವ್ಯವಸ್ಥಿತ ಜೀವನ ಕ್ರಮವನ್ನು ನಡೆಸಿದ್ದರಿಂದ ಇವರ ಸಂಸ್ಕೃತಿಯನ್ನು ಸಿಂಧೂ ಕಣಿವೆ ಸಂಸ್ಕೃತಿ ಎಂದೇ ಕರೆಯಲಾಗುತ್ತದೆ. ನಾಗರಿಕತೆಯ ಅಸ್ತಿತ್ವ ಪ್ರ.ಶ.ಪೂ.4000ದ ಮೊದಲೇ ಆರಂಭವಾಗಿರಬೇಕೆಂದು ಸಾಮಾನ್ಯ ಅಭಿಪ್ರಾಯ. ದ್ರಾವಿಡರು ಭಾರತದ ಮೂಲನಿವಾಸಿಗಳೆಂದೂ ಮಧ್ಯ ಏಷ್ಯದಿಂದ ಬಂದ ಆರ್ಯರು ಇವರನ್ನು ಸೋಲಿಸಿ, ದಕ್ಷಿಣಕ್ಕೆ ಅಟ್ಟಿದರೆಂದೂ ಆದ್ದರಿಂದ ಉತ್ತರ ಭಾರತದ ಸಂಸ್ಕೃತಿ ಆರ್ಯರದಾಯಿತೆಂದೂ ದಕ್ಷಿಣದಲ್ಲಿ ದ್ರಾವಿಡ ಸಂಸ್ಕೃತಿ ಉಳಿಯಿತೆಂದೂ ಬಹುಕಾಲ ಇತಿಹಾಸದ ಅಭಿಪ್ರಾಯವಾಗಿತ್ತು. ಆರ್ಯರು ಉತ್ತಮರು, ದೃಢಕಾಯರು, ಸುಸಂಸ್ಕೃತರು. ದ್ರಾವಿಡರಾದರೋ ಕಪ್ಪುಬಣ್ಣದವರು, ಕುಳ್ಳರು ಮತ್ತು ಕೆಳಮಟ್ಟದ ಸಂಸ್ಕೃತಿಯಿದ್ದವರು. ಆದ್ದರಿಂದಲೇ ಆರ್ಯರು ಅವರನ್ನು ಗೆಲ್ಲುವುದು ಸಾಧ್ಯವಾಯಿತು. ಅಲ್ಲದೆ ತಮ್ಮ ಸಂಸ್ಕೃತಿಯನ್ನು ಭಾರತದಲ್ಲಿ ಹರಡಲು ಸುಲಭವಾಯಿತು. ದ್ರಾವಿಡರು ಆರ್ಯರ ದಾಸರಾದರು, ದಸ್ಯುಗಳೆನಿಸಿಕೊಂಡರು. ಆರ್ಯ ಸಂಪರ್ಕದಿಂದ ದ್ರಾವಿಡರು ನಾಗರಿಕರಾದರು–ಹೀಗೆಂದು ಬಹುಕಾಲ ವಿದ್ವಾಂಸರು ತಿಳಿದಿದ್ದರು.

ಆದರೆ ಈ ವಾದಸರಣಿ ಸಮಂಜಸವಲ್ಲವೆಂದೂ ಆಧಾರರಹಿತವಾದುದೆಂದೂ ಸತ್ಯಕ್ಕೆ ದೂರವೆಂದೂ ಐತಿಹಾಸಿಕವಲ್ಲವೆಂದೂ ಇತ್ತೀಚಿನ ಸಂಶೋಧನೆಗಳಿಂದ ಖಚಿತವಾಗಿದೆ. ಮುಖ್ಯವಾಗಿ, ಭಾರತದ ಸಂಸ್ಕೃತಿ ಮತ್ತು ಭಾಷೆಗಳ ವಿಷಯವನ್ನು ಪ್ರಸ್ತಾಪಿಸದೆ, ಬರಿ ಭಾರತೀಯರ ಭೌತಿಕ ಲಕ್ಷಣಗಳ ಆಧಾರದ ಮೇಲೆ ಸಿದ್ಧಾಂತವನ್ನು ರೂಪಿಸಿದ್ದೇ ಈ ವಾದ ಸರಣಿ ದಾರಿ ತಪ್ಪಲು ಕಾರಣವಾಯಿತು. ಅಲ್ಲದೆ ಯಾವ ಖಚಿತವಾದ ಆಧಾರವೂ ಇಲ್ಲದೆ, ಶಾಸ್ತ್ರದ ಬೆಂಬಲವಿಲ್ಲದೆ ಭಾರತೀಯರನ್ನು ಏಳು ಗುಂಪುಗಳನ್ನಾಗಿ ವಿಂಗಡಿಸಿ, ಅದರಲ್ಲಿ ಇಂಡೊ–ಆರ್ಯರು ಮತ್ತು ಮಂಗೋಲ್–ದ್ರಾವಿಡರು, ಆರ್ಯ – ದ್ರಾವಿಡರು ಮತ್ತು ಸಿಥಿಯ ದ್ರಾವಿಡರನ್ನು ಸೇರಿಸಲಾಯಿತು.

1933ರಲ್ಲಿ ಹಟನ್ ಎಂಬ ವಿದ್ವಾಂಸ ಈ ವಾದ ಮತ್ತು ವರ್ಗೀಕರಣಗಳನ್ನು ಅಲ್ಲಗೆಳೆದು, ಭಾರತದಲ್ಲಿ ಮೂಲವಾಸಿಗಳು ಯಾರೂ ಇರಲಿಲ್ಲವೆಂದೂ ಎಲ್ಲರೂ ಹೊರಗಿನಿಂದ ಬಂದ ಗುಂಪುಗಳೇ ಆಗಿವೆಯೆಂದೂ ಅವರನ್ನು ಎಂಟು ಗುಂಪುಗಳನ್ನಾಗಿ ವಿಂಗಡಿಸಬಹುದೆಂದೂ ಅಭಿಪ್ರಾಯಪಟ್ಟ. ಈ ಎಂಟು ಗುಂಪುಗಳು ಭಾರತಕ್ಕೆ ಬಂದು ವಿವಿಧ ಪ್ರದೇಶಗಳಲ್ಲಿ ನೆಲಸಿ ತಮ್ಮ ಸಂಸ್ಕೃತಿ ಮತ್ತು ಸಾಮಾಜಿಕ ಸಂಸ್ಥೆಗಳನ್ನು ಬೆಳೆಸಿಕೊಂಡರು; ಅವರಲ್ಲಿ ನಾರ್ಡಿಕ್ ಮೂಲಕ್ಕೆ ಸೇರಿದ ವೇದಕಾಲದ ಆರ್ಯರು ಮತ್ತು ಮೆಡಿಟರೇನಿಯನ್ ಬುಡಕಟ್ಟಿಗೆ ಸೇರಿದ ದ್ರಾವಿಡರು ಮುಖ್ಯರಾದವರು.

ಇತ್ತೀಚೆಗೆ ಈ ಕ್ಷೇತ್ರದಲ್ಲಿ ವಿಶೇಷ ಸಂಶೋಧನೆ ನಡೆಸಿದ ಆಂತ್ರೊಪಲಾಜಿಕಲ್ ಸರ್ವೆ ಸಂಸ್ಥೆಯ ಮುಖ್ಯಸ್ಥರಾದ ಗುಹ ಅವರು ತಮ್ಮ ರೇಷಿಯಲ್ ಎಲಿಮೆಂಟ್ಸ್ ಇನ್ ಪಾಪ್ಯುಲೇಷನ್ ಎಂಬ ಪುಸ್ತಕದಲ್ಲಿ ಶಾಸ್ತ್ರೀಯವಾದ ಮತ್ತು ವಿದ್ವಾಂಸರಿಂದ ಪುರಸ್ಕರಿಸಲ್ಪಟ್ಟ ವಾದವನ್ನು ಪ್ರತಿಪಾದಿಸಿದ್ದಾರೆ. ಅದರ ಪ್ರಕಾರ ಭಾರತದ ಜನ ಸಮುದಾಯವನ್ನು ಆರು ಮುಖ್ಯ ಜನಾಂಗಗಳಾಗಿ ಮತ್ತು ಒಂಬತ್ತು ಸಣ್ಣ ಭಾಗಗಳಾಗಿ ವಿಂಗಡಿಸಲಾಗಿದೆ. ಅದರಲ್ಲಿ ನಾಲ್ಕನೆಯ ಜನಾಂಗಕ್ಕೆ ಸೇರಿದ ಮೆಡಿಟರೇನಿಯನ್ ಜನರನ್ನು ಕನ್ನಡ, ತಮಿಳು ಮತ್ತು ಮಲೆಯಾಳ ಪ್ರದೇಶಗಳಲ್ಲಿ ಕಾಣಬಹುದಾಗಿದೆಯೆಂದು ಅವರ ಅಭಿಪ್ರಾಯ. ಈ ಬುಡಕಟ್ಟಿಗೆ ಸೇರಿದ ಜನ ಕುಳ್ಳರು, ಕಪ್ಪು ಬಣ್ಣದವರು. ನಿಜ, ಮೆಡಿಟರೇನಿಯನ್ ಅಥವಾ ಯುರೋಪಿಯನ್ ಜನಾಂಗಕ್ಕೆ ಸೇರಿದ ಮತ್ತು ಎತ್ತರದ ಮತ್ತು ದೃಢಕಾಯ ಜನ ಗಂಗಾ ಕಣಿವೆಯಲ್ಲಿ ನೆಲೆಸಿದರು. ಇವರೇ ಆರ್ಯರಿಗಿಂತ ಮುಂಚೆ ಉತ್ತರ ಭಾರತದಲ್ಲಿದ್ದ ದ್ರಾವಿಡರು. ಮುಂದೆ ಇವರೇ ಆರ್ಯರಾದರು. ಉತ್ತರ ಭಾರತದ ಸಂಸ್ಕೃತಿಯ ಬೆಳೆವಣಿಗೆಗೆ ಪೋಷಕರಾದರು. ಆರನೆಯ ಗುಂಪಾದ ನಾರ್ಡಿಕ್ ಆರ್ಯರು ಭಾರತಕ್ಕೆ ಭಾಷೆಯನ್ನು ಕೊಟ್ಟರು. ಅಲ್ಲದೆ ತಮ್ಮ ಪ್ರತಿಭೆಯಿಂದ ಭಾರತದ ವಿವಿಧ ಸಂಸ್ಕೃತಿಗಳನ್ನು ಒಂದುಗೂಡಿಸಿ, ಭಾರತೀಯ ನಾಗರಿಕತೆಯ ಅಡಿಪಾಯವನ್ನು ಹಾಕಿದರು. ಅಲ್ಲದೆ, ಭಾರತದ ಆರು ಗುಂಪುಗಳಲ್ಲಿ ಪ್ರತ್ಯೇಕತೆಯ ಮನೋಭಾವವಿರಲಿಲ್ಲವಲ್ಲದೆ ಅವು ಮಿಶ್ರಿತವಾದ ಗುಂಪುಗಳೇ ಆಗಿದ್ದವು. ಆದ್ದರಿಂದ ಭಾರತದ ಇತಿಹಾಸದ ಪ್ರಾರಂಭದಿಂದಲೂ ಇಂಥ ಜನಾಂಗದ ಮಿಶ್ರಣವನ್ನು ಕಾಣಬಹುದಾಗಿದೆ. ಭಾಷೆಯೇ, ಜನಾಂಗದ ಜೀವಾಳವಾದುದರಿಂದ ಅದರಿಂದಲೇ ಒಂದು ಜನಾಂಗದ ಸಂಸ್ಕೃತಿಯನ್ನು ಅಳೆಯಬೇಕೇ ಹೊರತು, ಬುಡಕಟ್ಟಿನ ಆಧಾರದ ಮೇಲಲ್ಲ.

ಮೇಲೆ ಹೇಳಿದ ಆರು ಗುಂಪುಗಳು ಒಂದು ಜನಾಂಗವಾಯಿತಲ್ಲದೆ ಅದು ನಾಲ್ಕು ಭಾಷೆಗಳನ್ನು ಹೊಂದಿತ್ತು. ಅದರಲ್ಲಿ ದ್ರಾವಿಡ ಮತ್ತು ಇಂಡೊ–ಯುರೋಪಿಯನ್ (ಆರ್ಯ) ಭಾಷೆಗಳು ಸೇರಿವೆ. ದ್ರಾವಿಡ ಭಾಷೆಗಳು ವಿಶೇಷವಾಗಿ ದಕ್ಷಿಣದಲ್ಲಿ ಕೇಂದ್ರೀಕೃತವಾದರೂ

ಉತ್ತರ ಭಾರತದ ಛೋಟನಾಗಪುರದಲ್ಲಿ, ದ್ರಾವಿಡ ಭಾಷೆಯನ್ನು ಬಳಸುವ ಓರಾಯನರಲ್ಲಿ ಮತ್ತು ಕೋಲ್ ಭಾಷೆಯನ್ನು ಬಳಸುವ ಮುಂಡರಲ್ಲಿ ಬಲೂಚಿಸ್ತಾನದ ಬ್ರಾಹುಇ ಭಾಷೆಯಲ್ಲಿ ದ್ರಾವಿಡ ಭಾಷೆಗಳ ಪ್ರಭಾವವನ್ನು ಕಾಣಬಹುದೆಂದು ಕೆಲವು ತಜ್ಞರ ಅಭಿಪ್ರಾಯವಾಗಿದೆ.

ಭಾರತಕ್ಕೆ ಬಂದು ನೆಲಸಿದ ವಿವಿಧ ಜನಾಂಗಗಳು ತಮ್ಮ ಸಂಸ್ಕೃತಿಯನ್ನು ಬೆಳೆಸಿ, ಅವೆಲ್ಲವನ್ನೂ ಒಂದುಗೂಡಿಸಿ, ಭಾರತೀಯ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದು ಇತಿಹಾಸದ ಮುಖ್ಯ ಘಟನೆಯಾಗಿದೆ. ಈ ಸಂಸ್ಕೃತಿಯ ಸಾಗರದಲ್ಲಿ ಗುಂಪುಗಳ ಕೊಡುಗೆಯನ್ನು ಬೇರ್ಪಡಿಸುವುದು ಸುಲಭದ ಕೆಲಸವಾಗದಿದ್ದರೂ ಅವುಗಳ ಮುಖ್ಯ ಲಕ್ಷಣಗಳು ತೋರಿಸುವುದು ಕಷ್ಟದ ಕೆಲಸವಾಗದು.

ದ್ರಾವಿಡರು ನಾಗರಿಕರಾಗಿದ್ದು ಭಾರತದಲ್ಲಿ ಪಟ್ಟಣಗಳನ್ನು ಕಟ್ಟಿ ನಗರ ನಾಗರಿಕತೆಯನ್ನು ರೂಪಿಸಿದರು. ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಬೆಳೆಸಿದರು. ಭಾರತದ ಎಲ್ಲ ಕಡೆಗಳಲ್ಲೂ ನೆಲೆಸಿದರು. ಬಲೂಚಿಸ್ತಾನದಲ್ಲಿ ಬಳಕೆಯಲ್ಲಿರುವ ಬ್ರಾಹುಇ ಭಾಷೆ ದ್ರಾವಿಡ ಭಾಷೆಯ ಛಾಯೆಯನ್ನು ಹೊಂದಿರುವುದರಿಂದ ದ್ರಾವಿಡರು ಸಿಂಧ್, ರಜಪುಟಾಣ ಮತ್ತು ಮಾಳವದ ಮೂಲಕ ಈಗಿನ ಮಹಾರಾಷ್ಟ್ರ ಪ್ರದೇಶ ಮತ್ತು ದಕ್ಷಿಣ ಭಾರತದ ಇತರ ಪ್ರದೇಶಗಳಿಗೂ ಪ್ರಸರಿಸಿದರೆಂದು ಹೇಳಬಹುದಾಗಿದೆ. ಅಲ್ಲದೆ ಸುಪ್ರಸಿದ್ಧವಾದ ಸಿಂಧೂಕಣಿವೆ ನಾಗರಿಕತೆ ಪಟ್ಟಣದಲ್ಲಿ ಕೇಂದ್ರೀಕೃತವಾಗಿದ್ದು, ಅಲ್ಲಿನ ಭಾಷೆ ದ್ರಾವಿಡ ಭಾಷೆಯನ್ನು ಹೋಲುವುದರಿಂದ ಸಿಂಧೂಕಣಿವೆಯ ಜನ ದ್ರಾವಿಡ ಗುಂಪಿಗೆ ಸೇರಿದವರೆಂದು ಹೇಳುವುದು ತಪ್ಪಾಗಲಾರದು. ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದ ಹೀರಾಸ್ ಮತ್ತು ಎಸ್.ಆರ್.ರಾವ್ ಅವರು ಇದೇ ತೀರ್ಮಾನಕ್ಕೆ ಬಂದಿದ್ದಾರೆ.

ಆರ್ಯರು ಭಾರತಕ್ಕೆ ಬಂದಾಗ ಇಲ್ಲಿ ಎರಡು ಗುಂಪುಗಳನ್ನು ಕಂಡರು. ಅವರನ್ನು ದಾಸ ಅಥವಾ ದಸ್ಯು ಮತ್ತು ನಿಷಾದರೆಂದು ಕರೆದರು. ಶತ್ರುಗಳಾದ ಅವರು ಆರ್ಯರಿಗೆ ದಾಸರೆನಿಸಿಕೊಂಡರು, ಕಳ್ಳರೆನಿಸಿಕೊಂಡರು. ಆದರೆ ದಾಸ ಅಥವಾ ದಸ್ಯು ಎಂಬ ಪದಗಳು ಪ್ರಾಚೀನ ಇರಾನಿನಲ್ಲೇ ಬಳಕೆಯಲ್ಲಿದ್ದುವು. ಅದು ಗುಂಪಿನ ನಾಮವಾಗಿತ್ತೇ ಹೊರತು ಸೇವಕನೆಂಬ ಅರ್ಥದಲ್ಲಿರಲಿಲ್ಲ. ಅಲ್ಲದೆ ಭಾರತದ ತತ್ತ್ವಶಾಸ್ತ್ರ, ಸಾಹಿತ್ಯ, ಧರ್ಮ ಮತ್ತು ಸಂಸ್ಕೃತಿಯಲ್ಲಿಯ ಉದಾತ್ತ ಮತ್ತು ಒಳ್ಳೆಯ ಭಾವನೆಗಳೆಲ್ಲ ಆರ್ಯರಿಂದಲೇ ರೂಪಿತವಾಯಿತೆಂದೂ ಇಲ್ಲಿನ ಕಂದಾಚಾರ ಪದ್ಧತಿ ಮತ್ತು ಹಿಂದುಧರ್ಮದಲ್ಲಿ ಕಂಡು ಬರುವ ಮೂಢ ನಂಬಿಕೆಗಳು, ಕೆಟ್ಟ ಲಕ್ಷಣಗಳು ದ್ರಾವಿಡರಿಂದ ಬಂತೆಂದೂ ಹೇಳುವುದು ವಾಡಿಕೆ. ಆದರೆ ಈ ಅಭಿಪ್ರಾಯ ಈಗ ತಿರಸ್ಕರಿಸಲ್ಪಟ್ಟಿದೆ.

ಆರ್ಯ ಮತ್ತು ದ್ರಾವಿಡ ಲಕ್ಷಣಗಳನ್ನು ಆಳವಾಗಿ ಪಾಂಡಿತ್ಯಪೂರ್ಣವಾಗಿ ವಿವೇಚಿಸಿರುವ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಭಾರತದ ನಾಗರಿಕತೆ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ದ್ರಾವಿಡರ ಪಾತ್ರ ಹಿರಿದಾದುದೆಂದೂ ಸಿಂಧೂ ಕಣಿವೆಯ ಸಂಸ್ಕೃತಿ ಆರ್ಯರಿಗಿಂತ ಉತ್ತಮವಾದುದೆಂದೂ ತಿಳಿದುಬಂದಿದೆ. ಹಿಂದುಧರ್ಮದ ಅನೇಕ ದೇವತೆಗಳು ದ್ರಾವಿಡರ ಕೊಡುಗೆಯೇ. ಶಿವಾರಾಧನೆ, ಮಾತೃದೇವತೆಯ ಪೂಜೆ, ನಂದಿ, ಶಿವ, ಉಮೆಯರ ಪೂಜೆ, ಯೋಗ ಇವು ದ್ರಾವಿಡ ಲಕ್ಷಣಗಳು. ದೇವರನ್ನು ಪೂಜಿಸುವ ಪದ್ಧತಿ ದ್ರಾವಿಡರದೇ ಆಗಿದೆ. ಹಿಂದುಧರ್ಮದಲ್ಲಿ ಶ್ರೇಷ್ಠಸ್ಥಾನ ಪಡೆದ ಶಿವ, ಉಮಾ, ವಿಷ್ಣು, ಹನುಮಂತ ಮತ್ತು ಗಣೇಶ–ಈ ದ್ರಾವಿಡ ದೇವರುಗಳು ಹಿಂದುಧರ್ಮದಲ್ಲಿ ಸೇರಿಹೋಗಿವೆ.

ದ್ರಾವಿಡರ ಪ್ರಭಾವವನ್ನು ಭಾರತೀಯ ಸಂಸ್ಕೃತಿಯ ನಾನಾ ಪ್ರಕಾರಗಳಲ್ಲಿ ಕಾಣಬಹುದಾಗಿದೆ. ಉತ್ತರ ಭಾರತದ ಊರುಗಳ ಹೆಸರಿನಲ್ಲಿ, ವೇದ ಮತ್ತು ಭಾರತದ ಸಾಹಿತ್ಯದಲ್ಲಿ, ಆರ್ಯರ ಭಾಷೆಗಳಲ್ಲಿ, ಮತಪದ್ಧತಿಯಲ್ಲಿ, ಸಂಪ್ರದಾಯದಲ್ಲಿ, ಪುರಾಣದಲ್ಲಿ, ಇತಿಹಾಸದಲ್ಲಿ, ದ್ರಾವಿಡ ಲಕ್ಷಣಗಳನ್ನು ಗುರುತಿಸಲಾಗಿದೆ. ಆರ್ಯ ಸಂಸ್ಕೃತಿಯ ಬಹುಭಾಗ ದ್ರಾವಿಡರದೇ ಆಗಿದೆ. ಭಾರತೀಯ ಆರ್ಥಿಕ ವ್ಯವಸ್ಥೆ, ಭಾರತೀಯ ಭಾಷೆಗಳು, ಸಾಮಾಜಿಕ ಸಂಸ್ಥೆಗಳು ಮತ್ತು ಸಂಪ್ರದಾಯ, ಮದುವೆ ಮುಂತಾದ ಪದ್ಧತಿಗಳು–ಇವುಗಳಲ್ಲಿ ದ್ರಾವಿಡರ ಪ್ರಭಾವವಿದೆ. ನಡೆ ನುಡಿಗಳಲ್ಲಿ ದ್ರಾವಿಡ ಛಾಯೆಯಿದೆ. (ಕೆ.ಟಿ.ಆರ್.)

**ದ್ರುಪದ ಖಿಲಾ:** ಉತ್ತರಪ್ರದೇಶದ ಫರೂಕಾಬಾದ್ ಜಿಲ್ಲೆಯಲ್ಲಿ ಕಾಂಪಿಲ್ಯದಿಂದ 5 ಕಿಮೀ ದೂರದಲ್ಲಿರುವ ಪುರಾತತ್ತ್ವ ನೆಲೆ. ರಾಮಾಯಣ ಹಾಗೂ ಮಹಾಭಾರತ ಕಾಂಪಿಲ್ಯವನ್ನು ದಕ್ಷಿಣ ಪಾಂಚಾಲದ ರಾಜಧಾನಿಯೆಂದು ಉಲ್ಲೇಖಿಸಿವೆ. ಮಹಾಭಾರತದ ಕಾಲದಲ್ಲಿ ಈ ಪ್ರದೇಶ ದ್ರುಪದ ರಾಜನ ಆಳಿಕೆಗೊಳಪಟ್ಟಿತ್ತೆಂಬ ಪ್ರತೀತಿಯಿದೆ. ಕನ್ನಿಂಗ್‌ಹ್ಯಾಮ್, ವಿ.ಎನ್.ಮಿಶ್ರ ಹಾಗೂ ಕೆ.ಕೆ.ಸಿನ್ಹ ಅವರು ಕಾಂಪಿಲ್ಯದ ಸುತ್ತಮುತ್ತ ಸರ್ವೇಕ್ಷಣೆ ನಡೆಸಿದರಾದರೂ ದ್ರುಪದ ಖಿಲಾದ ಅವಶೇಷಗಳು ಇವರ ಗಮನಕ್ಕೆ ಬರಲಿಲ್ಲ. ಕಾಂಪಿಲ್ಯದಲ್ಲಿ ಬನಾರಸ್ ಹಿಂದು ವಿಶ್ವವಿದ್ಯಾಲಯದ ಕೆ.ಕೆ.ಸಿನ್ಹ ಅವರು ನಡೆಸಿದ ಉತ್ಖನನದಲ್ಲಿ ಚಿತ್ರಿತ ಬೂದುಬಣ್ಣದ ಮಣ್ಪಾತ್ರೆ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಮುಖ್ಯವಾದುವೆಂದರೆ ಮಣ್ಣಿನ ಎರಿಯ ಭಾಗಗಳು, ಸುಡಾವೆಮಣ್ಣಿನ ಗೊಂಬೆಗಳು ಹಾಗೂ ತಾಮ್ರದ ವಸ್ತುಗಳು. ಈ ನೆಲೆಯ ಕೆಲವೊಂದು ಭಾಗಗಳಲ್ಲಿ ಔತ್ತರೇಯ ಮೆರುಗಿನ ಕಪ್ಪುಪಾತ್ರೆಯ ಚೂರುಗಳೂ ಕಂಡುಬಂದವು. ದ್ರುಪದ ಖಿಲಾದ ಪ್ರಾಚೀನತೆಯನ್ನು ತಿಳಿಯಲು ಇಲ್ಲಿ 1999–2000ದಲ್ಲಿ ಕ ಫಸ್ಕರಿ ವಿಶ್ವವಿದ್ಯಾಲಯದ ಜಿ.ಜಿ. ಫಿಲಿಪ್ಪಿ ಮತ್ತು ಇಂಡಿಯನ್ ಆರ್ಕಿಯಲಾಜಿಕಲ್ ಸೊಸೈಟಿಯ ಕೆ.ಎನ್. ದೀಕ್ಷಿತ್ ಅವರು ಇಂಡೊ–ಇಟಾಲಿಯನ್ ಕಾಂಪಿಲ್ಯ ಪ್ರಾಜೆಕ್ಟ್ ಯೋಜನೆಯಡಿಯಲ್ಲಿ ಉತ್ಖನನ ನಡೆಸಿದರು. ಕೋಟೆಯಿಂದಾವೃತವಾದ ಈ ವಿಶಾಲ ಪ್ರಾಚೀನ ವಸತಿಯ ಅನೇಕ ಭಾಗಗಳಲ್ಲಿ ಉತ್ಖನನ ನಡೆಸಲಾಯಿತು.

ಒಂದು ಗುಂಡಿಯಲ್ಲಿ 5 ಕಟ್ಟಡ ನಿರ್ಮಾಣ ಹಂತಗಳನ್ನು ಗುರುತಿಸಲಾಯಿತು. ಮೊದಲ ಹಂತದ ಅವಶೇಷಗಳು ನೈಸರ್ಗಿಕ ಮಣ್ಣಿನ ಮೇಲಿದ್ದುವು. ಇಲ್ಲಿ 1ಮೀ ಅಗಲದ ಸುಟ್ಟಇಟ್ಟಿಗೆ (35×25×5 ಸೆಂಮೀ) ಗೋಡೆಗಳನ್ನು ಅಡಿಪಾಯದಂತೆ ತೋರುವ ಮಣ್ಣಿನ ಸುಭದ್ರ ಪದರದ ಮೇಲೆ ನಿರ್ಮಿಸಲಾಗಿತ್ತು. ಈ ಗೋಡೆಗೆ ಸಮಾನಾಂತರದಲ್ಲಿ ಇದಕ್ಕಿಂತ 1.3ಮೀ ಎತ್ತರದಲ್ಲಿದ್ದ ಇಟ್ಟಿಗೆಚೂರುಗಳ ಅವಶೇಷಗಳು ಪ್ರಾಯಶಃ ಮಂದಿರದ ಭಾಗವಾಗಿದ್ದಿರಬೇಕು. ಮತ್ತೊಂದು ಗುಂಡಿಯಲ್ಲಿ ದೊರೆತ ಸುಣ್ಣಕಲ್ಲಿನ (ಕಂಕರ್ ಲೈಮ್) ಭಗ್ನ ವಾಸ್ತುಭಾಗಗಳು 9–10ನೆಯ ಶತಮಾನದ ದೇವಾಲಯದ್ದಾಗಿವೆ. ಈ ಕಟ್ಟಡಗಳಿಗೂ ಕೋಟೆಗೋಡೆಗೂ ಇರುವ ಸಂಬಂಧವನ್ನು ತಿಳಿಯಲು ಕೋಟೆಗೋಡೆಗೆ ಲಂಬಕೋನದಲ್ಲಿ ಗುಂಡಿಯನ್ನು ಅಗೆಯಲಾಯಿತು. ಮಣ್ಣಿನ ಸುಭದ್ರ ಅಡಿಪಾಯದ ಮೇಲೆ ಈ ಕೋಟೆಯನ್ನು ಕಟ್ಟಲಾಗಿತ್ತು. ಇದರ ತಳದ ಎರಡು ವರಸೆಗಳು ಪೂರ್ಣ ಇಟ್ಟಿಗೆಯದಾಗಿದ್ದು ಮೇಲಿನ ಭಾಗವನ್ನು ಇಟ್ಟಿಗೆ ಚೂರುಗಳಿಂದ ನಿರ್ಮಿಸಲಾಗಿತ್ತು. ಕೋಟೆಯ ಮೂಲ ಎತ್ತರ ಹಾಗೂ ಇದರ ನಿರ್ಮಾಣ ಕಾಲದ ಬಗೆಗೆ ಖಚಿತ ಮಾಹಿತಿ ದೊರೆಯಲಿಲ್ಲ. ಇಲ್ಲಿಯ ಅತ್ಯಂತ ಪ್ರಾಚೀನ ವಸತಿಯ ಕಾಲಮಾನವನ್ನು ತಿಳಿಯಲು ಕೋಟೆಯೊಳಗಿನ ಮತ್ತೊಂದು ಸ್ಥಳದಲ್ಲಿ ಗುಂಡಿ ಅಗೆಯಲಾಯಿತು. ಎರಡು ಹಂತಗಳು ಇದರಲ್ಲಿ ತೋರಿಬಂದವು. ಪ್ರಶ.ಪೂ. 200–ಪ್ರಶ. 100ರ ಅವಧಿಯ ಮೊದಲ ಹಂತದಲ್ಲಿ ನೆಲಗಟ್ಟುಗಳೂ ಸುಟ್ಟಇಟ್ಟಿಗೆಯ (31×21×5 ಸೆಂಮೀ) ಕಟ್ಟಡಾವಶೇಷಗಳೂ ಕೆಂಪು ಹಾಗೂ ಬೂದುಬಣ್ಣದ ಮಣ್ಪಾತ್ರೆಗಳೂ ಇದ್ದವು. 100–400 ರ ಅವಧಿಯ ಎರಡನೆಯ ಹಂತದಲ್ಲಿ ಕಟ್ಟಡಗಳ ಅವಶೇಷಗಳೇ ಪ್ರಧಾನವಾಗಿದ್ದವು. ಮಣ್ಪಾತ್ರೆಗಳಲ್ಲಿ ಬದಲಾವಣೆ ಕಾಣಲಿಲ್ಲ. ಸುಡಾವೆಮಣ್ಣಿನ ಗೊಂಬೆಗಳು, ಗಾಜು ಹಾಗೂ ಅಗೇಟಿನ ಮಣಿ, ಮೊಳೆ, ಚಾಕು ಮುಂತಾದ ಕಬ್ಬಿಣದ ಉಪಕರಣ, ತಾಮ್ರದ ವಸ್ತುಗಳು ಇವು ಇಲ್ಲಿ ಸಿಕ್ಕ ಅವಶೇಷಗಳು. ನೆಲೆಯ ಮೇಲ್ಮೈಯಲ್ಲಿ ಪಾಂಚಾಲ ನಾಣ್ಯವೊಂದು ದೊರಕಿದೆ. ಒಟ್ಟಾರೆ ಈ ಅವಶೇಷಗಳು ಪಾಂಚಾಲ, ಕುಷಾಣ ಹಾಗೂ ಗುಪ್ತರ ಕಾಲದವು. ಸಮೀಪದ ಕಾಂಪಿಲ್ಯದಲ್ಲಿಯ ವಸತಿ ಔತ್ತರೇಯ ಮೆರುಗಿನ ಪಾತ್ರೆ ಸಂಸ್ಕೃತಿಯ ಹಂತದ ಅನಂತರ ನೆರೆಗೆ ಆಹುತಿಯಾಗಿ ನಾಶಗೊಂಡಾಗ ಜನರು ದ್ರುಪದ ಖಿಲಾಗೆ ವಸತಿ ಬದಲಾಯಿಸಿರಬೇಕು. ದ್ರುಪದ ಖಿಲಾ ಪ್ರಾಚೀನ ವ್ಯಾಪಾರಮಾರ್ಗದ ಮೇಲಿರುವುದರಿಂದ ಇಲ್ಲಿ ಸುರಕ್ಷಾ ದೃಷ್ಟಿಯಿಂದ ಕೋಟೆಯನ್ನು ಕಟ್ಟಿರಬಹುದು. ಇಂಡೊ–ಗ್ರೀಕ್ ಹಾಗೂ ಇಂಡೊ–ಪಾರ್ಥಿಯ ನ್ನರ ಧಾಳಿಯಿಂದ ವಸತಿಯನ್ನು ರಕ್ಷಿಸುವುದು ಇನ್ನೊಂದು ಕಾರಣವಾಗಿರಬಹುದು. (ಡಿ.ಕೆ.ಎನ್.)

**ದ್ವಾರಕ:** ಗುಜರಾತ್ ರಾಜ್ಯದ ಪುರಾಣ ಪ್ರಸಿದ್ಧ ಪಟ್ಟಣ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಸಾಗರ ಪುರಾತತ್ತ್ವ ವಿಭಾಗ 2007ರಲ್ಲಿ ಸಮುದ್ರ ನಾರಾಯಣ ದೇವಾಲಯದ ನೈರುತ್ಯ ದಿಕ್ಕಿಗೆ ಸಮುದ್ರದಲ್ಲಿ 2–3 ಮೀ ಆಳದಲ್ಲಿ ಕಲ್ಲಿನ ಕಟ್ಟಡ ಮತ್ತು ಒಂದರ ಅಡಿಯಲ್ಲೊಂದಿದ್ದ ಮರದ ಹಲಗೆಯನ್ನು ಶೋಧಿಸಿದೆ. ಉತ್ಖನನಕಾರರಾದ ಅಲೋಕ್ ತ್ರಿಪಾಠಿಯವರ ಪ್ರಕಾರ ಇದೊಂದು ಮಹತ್ತ್ವದ ಶೋಧನೆ. ಇದರ ಕಾಲವನ್ನು ಇಂಗಾಲ–14 ವಿಧಾನದಿಂದ ನಿರ್ಧರಿ ಸಲು ಸಾಧ್ಯ. 2–3 ಸಣ್ಣ ಸಣ್ಣ ಭಾಗ ಸೇರಿಸಿ ಮಾಡಲಾದ ಈ ಮರದ ಹಲಗೆಯಲ್ಲಿ ಮೂಲೆಕಟ್ಟು ಮತ್ತು ತಲೆಯಿಲ್ಲದ ಮೊಳೆಯಾಕಾರದ ಬೆಣೆಗಳನ್ನು ಬಳಸಲಾಗಿದೆ. ಅನೇಕ ಶತಮಾನಗಳಿಂದ ಸಮುದ್ರದಲೆಗಳ ಹೊಡೆತವನ್ನು ತಡೆದಿರುವುದು ಮರ ಗೆಲಸದವರ ಕೌಶಲಕ್ಕೆ ಸಾಕ್ಷಿಯಾಗಿದೆ. ಸಮುದ್ರ ತಳದ ಇಂತಹ ಕಟ್ಟಡಗಳ ಮತ್ತು ಇವುಗಳ ಕಾಲಮಾನದ ಬಗ್ಗೆ ಕಳೆದ 40 ವರ್ಷಗಳಿಂದ ಹಲವಾರು ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ.

ಸಮುದ್ರದಡಿಯಲ್ಲಿಯ ಕಟ್ಟಡ

ದ್ವಾರಕಾಧೀಶ ದೇವಾಲಯದ ಬಳಿಯೂ ಈ ಪ್ರದೇಶದ ಪ್ರಾಚೀನ ಸಂಸ್ಕೃತಿಯ ಸ್ಥೂಲ ಚಿತ್ರಣವನ್ನು ತಿಳಿಯಲು ಉತ್ಖನನ ನಡೆಸಲಾಯಿತು. ಈ ಉತ್ಖನನದಲ್ಲಿ 60 ತಾಮ್ರದ ನಾಣ್ಯಗಳು, ಸುಡಾವೆಮಣ್ಣಿನ ಪ್ರಾಣಿಗೊಂಬೆಗಳು, ಶಿಲಾಮೂರ್ತಿಗಳು, ಗಾಜು, ಎಲುಬು, ಶಂಖದಿಂದ ಮಾಡಿದ ಬಳೆ, ಕಲ್ಲಿನ ಮತ್ತು ಸುಡಾವೆ ಮಣ್ಣಿನ ಮಣಿಗಳು, ವರ್ಣಚಿತ್ರಿತ ಮತ್ತು ಸಾದಾ ಮಣ್ಪಾತ್ರೆಗಳು ಶೋಧವಾಗಿವೆ. (ಎ.ಎಸ್.;ಎಸ್.ಟಿ.)

**ಧರಣಿಕೋಟ:** ಆಂಧ್ರಪ್ರದೇಶ ರಾಜ್ಯದ ಗುಂಟೂರು ಜಿಲ್ಲೆಯ ಕೃಷ್ಣಾನದಿ ಬಲದಂಡೆಯ ಮೇಲಿರುವ ಬೌದ್ಧ ನೆಲೆ. ಮೊದಲು ಧನಕಟಕ, ಧಮ್ಮಕಟಕ ಎಂದೂ ಅನಂತರದಲ್ಲಿ ಧಾನ್ಯವತಿಪುರ, ಧಾನ್ಯಕಟಕವೆಂದೂ ಇದನ್ನು ಕರೆಯಲಾಗುತ್ತಿತ್ತು. ಈ ಪ್ರದೇಶ ಪ್ರಸಿದ್ಧ ಬೌದ್ಧನೆಲೆಯಾಗಿದ್ದ ಅಮರಾವತಿಯನ್ನು ಒಳಗೊಂಡಿತ್ತು. ಅಮರಾವತಿ ಪಟ್ಟಣದ ಹೆಸರು ಅಮರೇಶ್ವರ ದೇವಾಲಯದಿಂದ ಬಂದಿದೆ. ಇಲ್ಲಿಯ ಶಾಸನಗಳು ತಿಳಿಸುವಂತೆ ಅಮರೇಶ್ವರ ದೇವಾಲಯ ಧಾನ್ಯವತಿಪುರದಲ್ಲಿತ್ತು.

ಮೊದಲಿಗೆ ವೆಂಕಟರಾಮಯ್ಯ, ಅನಂತರ ಕೆ. ರಾಘವಾಚಾರಿ ಇಲ್ಲಿ ಉತ್ಖನನ ನಡೆಸಿದರು (1963–65). ಇಲ್ಲಿಯ ವಸತಿ ಅವಶೇಷಗಳನ್ನು ಅನುಕ್ರಮವಾಗಿ 3 ಹಂತಗಳಲ್ಲಿ ವಿಂಗಡಿಸಲಾಗಿದೆ. 1ನೆಯ ಮತ್ತು 2ನೆಯ ಹಂತಗಳನ್ನು ಮತ್ತೆ ಎರಡೆರಡು ಉಪಹಂತಗಳನ್ನಾಗಿ ವಿಂಗಡಿಸಲಾಗಿದೆ.

ಇಂಗಾಲ–14 ರ ಆಧಾರದ ಮೇಲೆ 1ಎ ಉಪಹಂತದ ಕಾಲ ಪ್ರ.ಶ.ಪೂ.ಸು.400 ಎಂದು ನಿರ್ಧರಿಸಲಾಗಿದೆ. ಈ ಉಪಹಂತದ ಮುಖ್ಯ ಲಕ್ಷಣವೆಂದರೆ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ಕೆಂಪು ಹಾಗೂ ಕಪ್ಪುಬಣ್ಣದ ಪಾತ್ರೆಗಳು. ಜಲಯಾನಕ್ಕಾಗಿ ಕಲ್ಲುಬಂಡೆಗಳನ್ನು ಕಡಿದು ಮಾಡಿದ ಕಾಲುವೆ ಮತ್ತು ಒಲೆಗೂಡುಗಳ ಸಾಲುಗಳು ಈ ಹಂತದ ಗಮನಾರ್ಹ ಅವಶೇಷಗಳು. 1ಬಿ ಹಂತದಲ್ಲಿ ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆಗಳು, ಕಪ್ಪು–ಕೆಂಪು ದ್ವಿವರ್ಣ ಹಾಗೂ ಕೆಂಪು ಮತ್ತು ಕಪ್ಪು ಬಣ್ಣದ ಮಣ್ಪಾತ್ರೆಗಳು ದೊರೆತಿವೆ. ಈ ಹಂತದಲ್ಲಿ ಜಲಯಾನ ಕಾಲುವೆಗೆ ಹೊಂದಿದಂತೆ ಬಂದರುಕಟ್ಟೆಯನ್ನು ಮರದ ಕಂಬಗಳ ಆಸರೆನೀಡಿ ನಿರ್ಮಿಸಲಾಯಿತು. ಇಲ್ಲಿ ದೊರೆತಿರುವ ಅವಶೇಷಗಳಿಂದ ವಾಣಿಜ್ಯ ಚಟುವಟಿಕೆಗಳ ಸ್ವರೂಪ ಸ್ಪಷ್ಟವಾಗುತ್ತದೆ. ಈ ಅವಶೇಷಗಳಲ್ಲಿ ಗಮನಾರ್ಹವಾದುವೆಂದರೆ ಗಾಜಿನ ಕಿವಿಯೋಲೆ ಹಾಗೂ ಕೈಬಳೆಗಳು. ಈ ವಸ್ತುಗಳು ಸಾಗರೋತ್ತರ ವ್ಯಾಪಾರ ಅಥವಾ ಜಲಯಾನ ವ್ಯಾಪಾರದ ಮೂಲಕ ಬಂದವಾಗಿರಬೇಕು. ಈ ಹಂತದಲ್ಲಿ ದೊರೆತ ಇನ್ನೊಂದು ಮಹತ್ತ್ವದ ಅವಶೇಷ ವೆಂದರೆ ತಾಳೆಗರಿಯ ಕಿವಿಯೋಲೆ. ಅಮರಾವತಿ ಸ್ತೂಪದ ಶಿಲ್ಪಗಳಲ್ಲಿ ಈ ಬಗೆಯ ಆಭರಣಗಳ ಚಿತ್ರಣಗಳನ್ನು ಕಾಣಬಹುದು. ಮತ್ತೊಂದು ಗಮನಾರ್ಹ ಅವಶೇಷವೆಂದರೆ ಸಿಂಹದ ಉಬ್ಬುಶಿಲ್ಪವಿರುವ ಆಯತಾಕಾರದ ಗಾಜಿನ ಮುದ್ರೆ. ಸ್ತರಕ್ರಮದ ಆಧಾರದ ಮೇಲೆ ಇದು ಪ್ರ.ಶ.ಪೂ.1ನೆಯ ಶತಮಾನಕ್ಕೆ ಸೇರಿದ್ದು.

2ಎ ಹಂತದಲ್ಲಿ ಮರದಿಂದ ನಿರ್ಮಿತವಾಗಿದ್ದ ಬಂದರುಕಟ್ಟೆಯನ್ನು ಅಳಿದು ಇಟ್ಟಿಗೆಯ ಕಟ್ಟೆಯನ್ನು ನಿರ್ಮಿಸಲಾಯಿತು. ಈ ಕಟ್ಟೆಯನ್ನು ಸಮುದ್ರದ ಅಲೆಗಳ ಹೊಡೆತದಿಂದ ರಕ್ಷಿಸಲು ಇಳಿಜಾರಾದ ಮಣ್ಣಿನ ಏರಿಯನ್ನು ಆಧಾರರೂಪದಲ್ಲಿ ನಿರ್ಮಿಸಲಾಯಿತು. ಇದರಿಂದಾಗಿ ಸರಳರೂಪದಲ್ಲಿದ್ದ ಮರದಕಟ್ಟೆ ಪೂರ್ಣಪ್ರಮಾಣದ ಬಂದರಿನ ಸ್ವರೂಪ ಪಡೆಯಿತು. ಈ ಹಂತದಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ರೌಲೆಟ್ ಪಾತ್ರೆ, ಅರೆಟೈನ್ ಪಾತ್ರೆ, ಮದ್ಯದ ಹೂಜಿ ಮತ್ತು ನವಿಲು–ಮೀನು ಚಿತ್ರಮುದ್ರಿತ ಪಾತ್ರೆಗಳು ದೊರೆತಿವೆ. 2ಬಿ ಹಂತದಲ್ಲಿ ಬಂದರುಕಟ್ಟೆಯ ವಿನ್ಯಾಸದಲ್ಲಿ ಬದಲಾವಣೆಗಳು ಕಂಡುಬಂದವು. ಮುಖ್ಯ ಬದಲಾವಣೆಯೆಂದರೆ ಮಣ್ಣಿನ ಏರಿಯ ಬದಲಿಗೆ ಆಸರೆಯಾಗಿ ಇಟ್ಟಿಗೆಯ ಏರಿಯನ್ನು ನಿರ್ಮಿಸಲಾಯಿತು. ಈ ಹಂತದಲ್ಲಿ ಬೂದುಬಣ್ಣದ ಮಣ್ಪಾತ್ರೆ ಚೂರುಗಳು ವಿಪುಲವಾಗಿ ದೊರೆತಿವೆ. ಈ ಹಂತ 2–3ನೆಯ ಶತಮಾನಕ್ಕೆ ಸೇರುತ್ತದೆ.

3ನೆಯ ಹಂತದಲ್ಲಿ ಜಲಯಾನ ಕಾಲುವೆಯಲ್ಲಿ ಹೂಳು ತುಂಬಿದ್ದರಿಂದ ನಿರುಪಯುಕ್ತವಾಯಿತು. 3–4ನೆಯ ಶತಮಾನದ ಬರೆಹವುಳ್ಳ ಮಣ್ಪಾತ್ರೆ ಚೂರುಗಳು, ಇಕ್ಷ್ವಾಕು ಕಾಲದ ಶಾಸನವುಳ್ಳ ಭಗ್ನಕಲ್ಲು ಈ ಹಂತದಲ್ಲಿ ದೊರೆತಿವೆ. ಇಕ್ಷ್ವಾಕು ಕಾಲದ ಅನಂತರ ಬಂದರುಕಟ್ಟೆ ಹಾಗೂ ಜಲಯಾನ ಕಾಲುವೆಯನ್ನು ಕೋಟೆಯಾಗಿ ಪರಿವರ್ತಿಸಲಾಯಿತು. (ಜಿ.ಎಸ್.)

**ಧಾಮ್ನ:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗದ ಸಮಾಧಿ ನೆಲೆ. ವೇಣಾ ಜಲಾಶಯದ ದಂಡೆಯ ಮೇಲೆ ಸು. 50 ಸಮಾಧಿಗಳು ಮೂರು ಸಮೂಹಗಳಲ್ಲಿವೆ. ಇಲ್ಲಿ ಕಲ್ಗುಪ್ಪೆ ಹಾಗೂ ವೃತ್ತಸಹಿತ ಕಲ್ಗುಪ್ಪೆಗಳಿದ್ದು ಪ್ರತಿಯೊಂದು ಸಮಾಧಿಯೂ ರಚನೆ–ಆಕಾರದಲ್ಲಿ ಭಿನ್ನವಾಗಿದೆ. 2000ದಿಂದ 2004ರವರೆಗೆ ನಾಗಪುರ ವಿಶ್ವವಿದ್ಯಾಲಯದ ಚಂದ್ರಶೇಖರ ಗುಪ್ತ ಹಾಗೂ ಇಸ್ಮಾಯಿಲ್ ಕೆಲೆಲೂ 12 ಸಮಾಧಿಗಳಲ್ಲಿ ಉತ್ಖನನ ನಡೆಸಿದರು. ಕೆಲವೊಂದು ಸಮಾಧಿಗಳಲ್ಲಿ ಕಲ್ಲುವೃತ್ತದ ಒಳಗಲ್ಲದೆ ಹೊರಸುತ್ತಿನಲ್ಲಿಯೂ ಸಮಾಧಿಗಳು ಕಂಡುಬಂದಿದ್ದು ಇದು ಭಾರತದಲ್ಲಿಯೇ ಪ್ರಪ್ರಥಮ ಅನ್ವೇಷಣೆಯಾಗಿದೆ. ಈ ಸಮಾಧಿಗಳು ಪೂರ್ವ–ಪಶ್ಚಿಮಾಭಿಮುಖವಾಗಿರುವ ಶವಕುಣಿಗಳಾಗಿದ್ದು ಭೂಮೇಲ್ಮೈಯಲ್ಲಿ ಸಮಾಧಿಯ ಯಾವ ಲಕ್ಷಣಗಳನ್ನೂ ಹೊಂದಿರಲಿಲ್ಲ. ಇವು ಆಂಶಿಕ ಅಥವಾ ಅಪೂರ್ಣ ಸಮಾಧಿಗಳಾಗಿದ್ದರೂ ಅಸ್ಥಿ ಅವಶೇಷವನ್ನು ಸಕ್ರಮದಲ್ಲಿ, ಮಣ್ಪಾತ್ರೆ ಹಾಗೂ ಕಬ್ಬಿಣ ಉಪಕರಣಗಳೊಂದಿಗೆ ಹೂಳಲಾಗಿತ್ತು. ಇಂತಹ 14 ಸಮಾಧಿಗಳನ್ನು ಕಲ್ಲುವೃತ್ತ ಸಮಾಧಿಯೊಂದರ ಹೊರಸುತ್ತಿನಲ್ಲಿ ಅನಾವರಣಗೊಳಿಸಲಾಯಿತು. ಇವುಗಳಲ್ಲಿ ಸಾಮಾನ್ಯವಾಗಿ ಹಲ್ಲು, ತಲೆಬುರುಡೆ ಹಾಗೂ ಕೈ ಅಥವಾ ಕಾಲಿನ ಮೂಳೆಗಳನ್ನು ಮಾತ್ರ ಸಮಾಧಿಗೊಳಿಸಲಾಗಿತ್ತು. ಧಾಮ್ನದ ಮತ್ತೊಂದು ಅಪೂರ್ವ ಶೋಧನೆಯೆಂದರೆ ಮುಚ್ಚಳ ಸಹಿತವಾದ 3 ಮಣ್ಣಿನ ಶವಪೆಟ್ಟಿಗೆಗಳು. ಕೈಯಿಂದ ಮಾಡಿದ ಅಂಡಾಕಾರದ ಅಥವಾ ದೋಣಿಯಾಕಾರದ ಈ ಪೆಟ್ಟಿಗೆಗಳಲ್ಲಿ ಮಕ್ಕಳ ದಹನ ನಂತರದ ಅಸ್ಥಿ ಅವಶೇಷಗಳೂ ಪ್ರಾಣಿಮೂಳೆಗಳೂ ಇದ್ದವು. ಒಂದರಲ್ಲಿ ಗಾಜಿನ ಕಿವಿಯೋಲೆ ಸಿಕ್ಕಿತು. ಪೆಟ್ಟಿಗೆಗಳನ್ನು ಒಂದರ ಪಕ್ಕದಲ್ಲೊಂದು ಇರಿಸಿ ಮೇಲೆ ಕಲ್ಗುಪ್ಪೆಯನ್ನು ನಿರ್ಮಿಸಲಾಗಿತ್ತು. ಸಾಮಾನ್ಯ ಪ್ರಕಾರಗಳಾದ ಕಲ್ಗುಪ್ಪೆ ಮತ್ತು ವೃತ್ತಸಹಿತ ಕಲ್ಗುಪ್ಪೆ ಸಮಾಧಿಗಳಲ್ಲೂ ಕೆಲವೊಂದು ವಿಶೇಷ ಅಂಶಗಳು ಗೋಚರಿಸಿದವು. ಉದಾಹರಣೆಗೆ ಒಂದು ಸಮಾಧಿಯಲ್ಲಿ ಅಸ್ಥಿ ಅವಶೇಷಗಳನ್ನು ಕಲ್ಲುವೃತ್ತದ ಕೇಂದ್ರದಲ್ಲಿ ಅಗೆದ ಕುಣಿಯೊಳಗೆ ತಲೆಕೆಳಗಾಗಿ ಇಟ್ಟು, ಕುಣಿಯನ್ನು ಕಪ್ಪು ಮಣ್ಣಿನಿಂದ ತುಂಬಿ, ಮೇಲೆ ಸಣ್ಣ ಕಲ್ಲುಗಳನ್ನು ದಳದ ಆಕಾರದಲ್ಲಿ ಜೋಡಿಸಲಾಗಿತ್ತು. ಇನ್ನೊಂದರಲ್ಲಿ ಕಲ್ಲುವೃತ್ತದ ಹೊರಸುತ್ತಿನಲ್ಲಿ ಕಂಬಗಳಿಗಾಗಿ ಮಾಡಿದ ಸಣ್ಣ ಗುಳಿಗಳಿದ್ದವು (ಪೋಸ್ಟ್ ಹೋಲ್ಸ್). ಮತ್ತೊಂದರಲ್ಲಿ ಅಲ್ಲಲ್ಲಿ ಬೂದಿ ಹರಡಿತ್ತು. ಈ ಸಮಾಧಿಗಳಲ್ಲಿಟ್ಟ ವಸ್ತುಗಳು ವೈವಿಧ್ಯಮಯವಾಗಿದ್ದವು. ಸಾಮಾನ್ಯವಾಗಿದ್ದುದೆಂದರೆ ಮಣ್ಪಾತ್ರೆ ಹಾಗೂ ಕಬ್ಬಿಣ ಉಪಕರಣಗಳು. ಬಾಣದ ಮೊನೆ, ಉಳಿ, ಚಾಕು, ಪರಶುವಿನಂತಹ ಉಪಕರಣ, ಸೌಟು/ಸಟ್ಟುಗ, ಅಲಗು, ದೀಪದ ಕಂಬ, ಹೆರೆಯಲಗು (ನೇಲ್ ಪೇರರ್) ಮತ್ತು ಪಟ್ಟಿಬಿಗಿದ ಕೊಡಲಿಗಳು (ಆಕ್ಸ್ ವಿತ್ ಕ್ರಾಸ್ ರಿಂಗ್ ಫಾಸ್ನರ್) ಇಲ್ಲಿ ಸಿಕ್ಕ ಕಬ್ಬಿಣ ವಸ್ತುಗಳಾದರೆ, ತಾಮ್ರದ ಉಪಕರಣಗಳಲ್ಲಿ ಬಳೆ, ಉಂಗುರ, ಅರ್ಧಚಂದ್ರಾಕೃತಿಯ ಹಿಡಿಕೆಯಿರುವ ಮುಚ್ಚಳ ಹಾಗೂ ಬಟ್ಟಲು, ಭುಜಭಾಗದಲ್ಲಿ ಕೆತ್ತನೆಯುಳ್ಳ ಪಾತ್ರೆ, ಬಳೆಯ ಮೇಲೆ ಮುಖಾಮುಖಿಯಾಗಿ ಕೂತ 4 ಹಕ್ಕಿ ಜೋಡಿಗಳ ಹಿಡಿಕೆಯಿರುವ ಮುಚ್ಚಳ ಮತ್ತು ಆಳ ಬಟ್ಟಲುಗಳಿದ್ದವು. ಅಗೇಟ್, ಜಾಸ್ಪರ್, ಬೆಣಚುಕಲ್ಲು, ಸ್ಫಟಿಕ ಮತ್ತು ಮಂದಗೆಂಪಿನ ಕಲ್ಲಿನಿಂದ ಮಾಡಿದ ವಿವಿಧಾಕಾರದ ಮಣಿಗಳನ್ನು ಸಮಾಧಿಗಳಿಂದ ಸಂಗ್ರಹಿಸಲಾಯಿತು. ಒಂದು ಸಮಾಧಿಯಲ್ಲಿ 156 ಮಣಿಗಳಿದ್ದರೆ ಮತ್ತೊಂದರಲ್ಲಿ ಸರಮಾಲೆಯೊಂದರ 124 ಮಣಿಗಳು ಅಸ್ಥಿಪಂಜರದ ಎದೆ ಹಾಗೂ ಕುತ್ತಿಗೆಯ ಭಾಗದಲ್ಲಿ ಚದುರಿದ್ದವು. ಬೆರಕೆ ಚಿನ್ನದಿಂದ ಮಾಡಿದ ಉಂಗುರಾಕೃತಿಯ ಕಿವಿಯೋಲೆ, ಕಲ್ಲಿನ ಕುಟ್ಟಣಿ, ಸ್ಟಿಯಟೈಟಿನ ಕಿವಿಯೋಲೆ ಮುಂತಾದವು ಇತರ ಗಮನಾರ್ಹ ಅವಶೇಷಗಳು. ಮಣ್ಪಾತ್ರೆಗಳಲ್ಲಿ ವಿದರ್ಭ ಪ್ರಾಂತಕ್ಕೆ ವಿಶಿಷ್ಟವಾದ ಅಭ್ರಕಯುಕ್ತ ಕೆಂಪು ಪಾತ್ರೆಯಲ್ಲದೆ ಕಪ್ಪು, ಕೆಂಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳಿದ್ದವು. (ಐ.ಕೆ.)

**ಧಾರ್ಮಿಕ ಯುದ್ಧಗಳು:** ಯುರೋಪಿಯನ್ ಕ್ರೈಸ್ತರು ಮುಸ್ಲಿಮರ ಕೈವಶವಾಗಿದ್ದ ತಮ್ಮ ಪವಿತ್ರ ಭೂಮಿಯನ್ನು ಮುಖ್ಯವಾಗಿ ಜೆರುಸಲೇಮ್ ಅನ್ನು ವಿಮೋಚನೆಗೊಳಿಸುವ ಉದ್ದೇಶದಿಂದ 11–14 ನೆಯ ಶತಮಾನಗಳಲ್ಲಿ ಆರಂಭಿಸಲಾದ ಯುದ್ಧಗಳು (ಕ್ರೂಸೇಡ್ಸ್). ಪವಿತ್ರ ಭೂಮಿಯ ವಿಮೋಚನೆಯ ಚಳವಳಿ ಮೊದಲು ಆರಂಭವಾದ್ದು ಫ್ರಾನ್ಸಿನಲ್ಲಿ. ಕ್ಲೆರ್ಮಾಂಟ್ ಮಂಡಲಿಯಲ್ಲಿ (1095) ಎರಡನೆಯ ಪೋಪ್ ಅರ್ಬನ್ ಇದಕ್ಕಾಗಿ ಕ್ರೈಸ್ತರಿಗೆ ಕರೆನೀಡಿದಾಗ ಈ ಸಭೆಯಲ್ಲಿ ಶಿಲುಬೆಗಳನ್ನು ಹಂಚಲಾಯಿತು. ಕ್ರೂಸೇಡ್ಸ್ ಎಂದರೆ ಪವಾಡ ಎಂದರ್ಥ. ಇಸ್ಲಾಂ ಧರ್ಮೀಯರ ವಿರುದ್ಧ ಯುದ್ಧಕ್ಕೆ ಯುರೋಪಿನ ಜನತೆಯನ್ನು ಹುರಿದುಂಬಿಸಲು ಯೇಸುವಿನ ಪವಾಡಗಳು ಜೆರುಸಲೇಂನಲ್ಲಿ ಸದಾ ಜರುಗುತ್ತವೆ ಎಂದು ಪ್ರಚಾರ ಪಡಿಸಲಾಯಿತು. ಆದ್ದರಿಂದ ಯುರೋಪಿನ ಜನತೆ ಈ ಯುದ್ಧಗಳನ್ನು ಕ್ರೂಸೇಡ್ಸ್‌ಗಳೆನ್ನುತ್ತಾರೆ. ಯುರೋಪಿನ ಕ್ರೈಸ್ತ ಸೈನಿಕರು ತಮ್ಮ ಯುದ್ಧದಿರಿಸಿನಲ್ಲಿ ಶಿಲುಬೆ ಕ್ರಾಸ್ (†) ಚಿಹ್ನೆಯನ್ನು ಹೊಂದಿದ್ದರು. ಆದ್ದರಿಂದ ಈ ಯುದ್ಧಗಳಿಗೆ ಕ್ರೂಸೇಡ್ಸ್ ಎಂದು ಹೆಸರಾಯಿತು. ಆರಂಭದಲ್ಲಿ ಇವಕ್ಕೆ ಧಾರ್ಮಿಕ ಉದ್ದೇಶ ಇತ್ತಾದರೂ ಐಹಿಕ ಪರಿಗಣನೆಗಳಿಂದ ಇವು ಹೊರತಾಗಿರಲಿಲ್ಲ. ಸ್ವಂತ ಲಾಭದ ದೃಷ್ಟಿ ಈ ಯುದ್ಧಗಳ ಹಿಂದೆ ಇದ್ದೇ ಇತ್ತು. ಆಧ್ಯಾತ್ಮಿಕ ಹಾಗೂ ಐಹಿಕ ಉದ್ದೇಶಗಳ ನಡುವಣ ಘರ್ಷಣೆ ಕ್ರಮೇಣ ಪ್ರಬಲವಾಗಿ ಕೊನೆಗೆ ಐಹಿಕೋದ್ದೇಶಗಳದೇ ಮೇಲುಗೈ ಆಯಿತು. ಐಶ್ವರ್ಯದ ಸುಲಿಗೆ ಹಾಗೂ ರಾಜ್ಯವಿಸ್ತರಣಗಳಲ್ಲಿ ಕುಲೀನರು ಆಸಕ್ತರಾಗಿದ್ದರು. ಪೌರ್ವಾತ್ಯ ದೇಶಗಳ ಸರಕಿನ ವ್ಯಾಪಾರದಲ್ಲಿ ಅರಬರು ಹೊಂದಿದ್ದ ಏಕಸ್ವಾಮ್ಯವನ್ನು ಮುರಿದು ಅದರೊಂದಿಗೆ ತಮ್ಮ ವ್ಯಾಪಾರವನ್ನು ವಿಸ್ತರಿಸಿಕೊಳ್ಳುವುದು ಇಟಲಿಯ ನಗರಗಳಿಗೆ ಸಾಧ್ಯವಾಯಿತು. ಸಾಹಸಪ್ರಿಯರಿಗೆ ಇವು ಒಳ್ಳೆ ಅವಕಾಶ ನೀಡಿದವು.

ಒಂದನೆಯ ಧಾರ್ಮಿಕ ಯುದ್ಧ ನಡೆದದ್ದು 1095–99ರಲ್ಲಿ. ವಾಲ್ಟರ್ ದಿ ಪೆನಿಲೆಸ್, ಪೀಟರ್ ದಿ ಹರ್ಮಿಟ್ ಮತ್ತು ಇತರ ಕೆಲವರ ನಾಯಕತ್ವದಲ್ಲಿ ಹಲವು ಫ್ರೆಂಚ್ ಮತ್ತು ಜರ್ಮನ್ ಅಲೆಮಾರಿಗಳ ಅಶಿಸ್ತಿನ ಗುಂಪುಗಳು ಪೋಪ್ ಅರ್ಬನನ ಕರೆಗೆ ಓಗೊಟ್ಟು ನುಗ್ಗಿದುವು. ಅವು ರೈನ್‌ಲ್ಯಾಂಡನ್ನು ಪ್ರವೇಶಿಸಿ ಅಲ್ಲಿದ್ದ ಯಹೂದ್ಯರನ್ನು ಕೊಲೆ ಮಾಡಿದುವು; ಬಲ್ಗೇರಿಯನ್ನರನ್ನೂ ಹಂಗೇರಿಯನ್ನರನ್ನೂ ಕೆಣಕಿದವು. ಅವರು ಈ ಗುಂಪುಗಳ ಮೇಲೆ ಬಿದ್ದು ಇವರನ್ನು ಚದರಿಸಿದರು. ಈ ಗುಂಪುಗಳು ಚೆಲ್ಲಾಪಿಲ್ಲಿಯಾಗಿ ಮುಂದುವರಿದು ಕಾನ್‌ಸ್ಟಾಂಟಿನೋಪಲನ್ನು ಸೇರಿದವು. ಏಷ್ಯ ಮೈನರಿನಲ್ಲಿ ತುರ್ಕರು ಈ ಗುಂಪುಗಳನ್ನು ಸೋಲಿಸಿ ಓಡಿಸಿದರು. 1097ರಲ್ಲಿ ನಡೆದ ದಂಡಯಾತ್ರೆ ಸಂಘಟಿತವಾದದ್ದಾಗಿತ್ತು. ಅದರ ನಾಯಕರು ಟುಲೂಸಿನ (ದಕ್ಷಿಣ ಫ್ರಾನ್ಸಿನ ಒಂದು ನಗರ) 4ನೆಯ ಕೌಂಟ್ ರೇಮಾನ್, ಬೂಯಾನಿನ (ಬೆಲ್ಜಿಯಂನ ಒಂದು ನಗರ) ಗಾರ್ಡ್‌ಫ್ರೀ, ಬೋಯೇಮಾನ್ ಮತ್ತು ಟ್ಯಾಂಗ್‌ಕ್ರೆಡ್. ಇವರ ಪೈಕಿ ರೇಮಾನ್ ಮತ್ತು ಟ್ಯಾಂಗ್‌ಕ್ರೆಡರನ್ನು ಬಿಟ್ಟು ಉಳಿದವರೆಲ್ಲ ಬೈಜ಼ಾಂಟಿಯನ್ ಚಕ್ರವರ್ತಿ 1 ನೆಯ ಅಲೆಕ್ಸಿಯಸನಿಗೆ ವಿಧೇಯತೆಯನ್ನು ಸಾರಿ, ತಾವು

ಜಯಿಸಿದ ಪ್ರದೇಶಕ್ಕೆಲ್ಲ ಅವನೇ ಮಹಾಪ್ರಭುವೆಂಬುದನ್ನು ಒಪ್ಪಿದರು. ಅವರ ದಂಡಯಾತ್ರೆ ಜಯಪ್ರದವಾಯಿತು. 1099ರಲ್ಲಿ ಅವರು ಜೆರುಸಲೇಮನ್ನು ವಶಪಡಿಸಿಕೊಂಡರು. ಲ್ಯಾಟಿನ್ ಪ್ರಭುತ್ವ ಸ್ಥಾಪಿತವಾಯಿತು. ಜೆರುಸಲೇಮ್‍ಗೆ ಹೋಗುತ್ತಿದ್ದ ಯಾತ್ರಿಕರ ರಕ್ಷಣೆಗಾಗಿ ಧರ್ಮ ಸೈನಿಕರನ್ನೂ (ನೈಟ್ ಟೆಂಪ್ಲಾರಸ್) ಯೋಧ ಸಂನ್ಯಾಸಿಗಳನ್ನೂ (ನೈಟ್ಸ್ ಹಾಸ್ಪಿಟಲರ್ಸ್) ನೇಮಿಸಲಾಯಿತು.

ಎರಡನೆಯ ಧಾರ್ಮಿಕ ಯುದ್ಧ ಸಂಭವಿಸಿದ್ದು 1147–49ರಲ್ಲಿ. ಇದಕ್ಕೆ ಪ್ರಚೋದನೆ ನೀಡಿದವನು ಕ್ಲೇರ್‍ವೋನ ಸೇಂಟ್ ಬರ್ನಾಡ್. 1098ರಲ್ಲಿ ಕ್ರೈಸ್ತರ ವಶವಾಗಿದ್ದ ಇಡೆಸ್ಸವನ್ನು ಮುಸ್ಲಿಮರು 1144 ರಲ್ಲಿ ಮತ್ತೆ ಗೆದ್ದುಕೊಂಡದ್ದು ಈ ಯುದ್ಧಕ್ಕೆ ಪ್ರಚೋದನೆ ನೀಡಿತು. ಜರ್ಮನಿಯ ದೊರೆಯಾಗಿದ್ದ, ಪವಿತ್ರ ರೋಮನ್ ಚಕ್ರಾಧಿಪತ್ಯದ ಹೋಹೆನ್‍ಸ್ಟಾಫನ್ ವಂಶ ಸ್ಥಾಪಕನಾದ 3ನೆಯ ಕಾನ್ರಾಡನೂ ಫ್ರಾನ್ಸಿನ 7ನೆಯ ಲೂಯಿಯೂ ಇದರ ನೇತಾರರು. ಈ ದಂಡಯಾತ್ರೆ ವಿಫಲಗೊಂಡಿತು. ಈಜಿಪ್ಟ್, ಸಿರಿಯಗಳ ಸುಲ್ತಾನ ಸಾಲದಿನ್ 1147ರಲ್ಲಿ ಜೆರುಸಲೇಮ್ ಅನ್ನು ತನ್ನದಾಗಿ ವಶಪಡಿಸಿಕೊಂಡ.

ಮೂರನೆಯ ಯುದ್ಧ 1189–92 ರಲ್ಲಿ ಸಂಭವಿಸಿತು. ಇದರ ನಾಯಕತ್ವ ವಹಿಸಿದವನು ಚಕ್ರವರ್ತಿ 1ನೆಯ ಫ್ರೆಡರಿಕ್, ಫ್ರಾನ್ಸಿನ 2ನೆಯ ಫಿಲಿಪ್ ಮತ್ತು ಇಂಗ್ಲೆಂಡಿನ 1ನೆಯ ರಿಚರ್ಡ್. ಆದರೆ ಜೆರುಸಲೇಮ್ ನಗರವನ್ನು ವಶಪಡಿಸಿಕೊಳ್ಳಲು ಇವರು ಮಾಡಿದ ಪ್ರಯತ್ನ ವಿಫಲಗೊಂಡಿತು. ಆದರೆ ಕ್ರಿಸ್ತನ ಸಮಾಧಿಗುಹೆಯನ್ನು ಪ್ರವೇಶಿಸಲು ಕ್ರೈಸ್ತರಿಗೆ ಅವಕಾಶ ದೊರಕುವಂತೆ 1ನೆಯ ರಿಚರ್ಡ್ ದೊರೆ ಒಪ್ಪಂದ ಮಾಡಿಕೊಂಡ.

ನಾಲ್ಕನೆಯ ಯುದ್ಧ (1202–04) ಫ್ರಾನ್ಸಿನಲ್ಲಿ ಪ್ರಾರಂಭವಾಯಿತು. ಆದರೆ ನಾಯಕನಾದ ಎನ್ರಿಕೊ ಡಾಂಡೋಲೋನಿಂದ ಆ ಯುದ್ಧದ ಉದ್ದೇಶವೇ ಸಂಪೂರ್ಣವಾಗಿ ಬೇರೆ ಆಗಿತ್ತು. ಆತ ಇದನ್ನು ವೆನಿಸ್ಸಿನ ಲಾಭಕ್ಕಾಗಿ ಬಳಸಿಕೊಂಡ. ವೆನಿಷಿಯನ್ನರು ಝಾರ ರೇವುಪಟ್ಟಣವನ್ನು ಹಂಗರಿಯಿಂದ ವಶಪಡಿಸಿಕೊಳ್ಳಲು ಈ ಯೋಧರು ನೆರವಾದರು (1202). ತಮ್ಮ ದಂಡಯಾತ್ರೆಯ ಖರ್ಚನ್ನು ವೆನಿಷಿಯನ್ನರಿಂದ ಸಂಪಾದಿಸಿಕೊಳ್ಳಲು ಅವರು ಹೀಗೆ ಮಾಡಿದರು. ಕ್ರೈಸ್ತ ಪಟ್ಟಣವಾಗಿದ್ದ ಝಾರದ ಮೇಲೆ ನಡೆಸಿದ ಈ ದಂಡಯಾತ್ರೆಯನ್ನು ಪೋಪ್ ಖಂಡಿಸಿದ. ಆಕ್ರಮಣಕಾರರು ಅನಂತರ ಕಾನ್‍ಸ್ಟಾಂಟಿನೋಪಲಿನ ಕಡೆಗೆ ನುಗ್ಗಿದರು. ರಾಜ್ಯ ಕಳೆದುಕೊಂಡಿದ್ದ ಎರಡನೆಯ ಐಸಾಕನನ್ನು ಮತ್ತೆ ಪೂರ್ವ ರೋಮನ್ ಚಕ್ರಾಧಿಪತ್ಯದ ಮೇಲೆ ಕೂರಿಸುವುದು ಈ ದಂಡಯಾತ್ರೆಯ ಪ್ರಕಟಿತ ಉದ್ದೇಶ. 1204 ರಲ್ಲಿ ಅವರು ಕಾನ್‍ಸ್ಟಾಂಟಿನೋಪಲನ್ನು ಮುತ್ತಿ ಲೂಟಿಮಾಡಿ, ಅದರ ಲಾಭವನ್ನು ವೆನಿಸಿನೊಂದಿಗೆ ಹಂಚಿಕೊಂಡು ಲ್ಯಾಟಿನ್ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ಸ್ಟೀಫನ್ ಆಫ್ ಕ್ಲಾಯ್ಸ್ ಎಂಬ ಫ್ರೆಂಚ್ ರೈತ ಹುಡುಗನೊಬ್ಬನ ಉಪದೇಶದಿಂದ ಸ್ಫೂರ್ತಿಗೊಂಡು ಸಾವಿರಾರು ಹುಡುಗರು ಜೆರುಸಲೇಮ್ ಕಡೆಗೆ ಪ್ರಯಾಣ ಬೆಳೆಸಿದರು. ಆದರೆ ನೀಚನಾಯಕರು ಅವರನ್ನು ಗುಲಾಮರನ್ನಾಗಿ ಮಾಡಿ ಮಾರಿದರು. ಜರ್ಮನ್ ಹುಡುಗರ ಗುಂಪೊಂದು ಭೂಮಾರ್ಗವಾಗಿ ಆ ಎಡೆಗೆ ಪ್ರಯಾಣ ಮಾಡಿತು. ಆದರೆ ಅವರು ಹಸಿವು ರೋಗಗಳಿಂದ ನಾಶ ಹೊಂದಿದರು.

ಐದನೆಯ ಯುದ್ಧ 1217–21ರಲ್ಲಿ ನಡೆಯಿತು. ಮೂರನೆಯ ಇನ್ನೊಸೆಂಟ್ ಇದಕ್ಕೆ ಪ್ರಚೋದಕ. ಈಜಿಪ್ಟಿನತ್ತ ನಡೆಸಿದ ಈ ದಂಡಯಾತ್ರೆ ವಿಫಲಗೊಂಡಿತು. ಆರನೆಯ ದಂಡಯಾತ್ರೆಯನ್ನು (1228–29) ಚಕ್ರವರ್ತಿ 2ನೆಯ ಫ್ರೆಡರಿಕ್ ಕೈಗೊಂಡ. ಇದು ಶಾಂತಿಯುತವಾಗಿತ್ತು. ಪವಿತ್ರಸ್ಥಳಗಳನ್ನು ಒಪ್ಪಿಸಲು ಅರಬರು ಸಮ್ಮತಿಸಿದರು. ಆದರೆ ಮತ್ತೆ ಅಲ್ಲಿ ಇಲ್ಲಿ ಕದನಗಳು ಆರಂಭವಾದುವು. ಈಜಿಪ್ಟಿನ ಮಾಮೆಲೂಕರು ಗಾಝಾದಿಂದ ಕ್ರೈಸ್ತರನ್ನು ಹೊರತಳ್ಳಿದ್ದರಿಂದ (1244) ಏಳನೆಯ ಧಾರ್ಮಿಕ ಯುದ್ಧ 1248ರಲ್ಲಿ ಆರಂಭವಾಗಿ 1254ರವರೆಗೆ ನಡೆಯಿತು. ಫ್ರಾನ್ಸಿನ 9ನೆಯ ಲೂಯಿ ಇದರ ನಾಯಕ. ಇದು ಸಹ ಸೋಲಿನಲ್ಲಿ ಪರ್ಯವಸಾನವಾಯಿತು. ಈ ಪರಾಜಯವೇ ಎಂಟನೆಯ ಯುದ್ಧಕ್ಕೆ (1270) ಕಾರಣವಾಯಿತು. ಅಷ್ಟರಲ್ಲಿ ಲೂಯಿ ತೀರಿಕೊಂಡಿದ್ದರಿಂದ ಅದು ಹಠಾತ್ತನೆ ಕೊನೆಗೊಂಡಿತು. ಒಂಬತ್ತನೆಯ ಯುದ್ಧದ (1271–72) ನಾಯಕ ಇಂಗ್ಲೆಂಡಿನ ರಾಜಕುಮಾರ ಎಡ್ವರ್ಡ್ (ಅನಂತರ 1ನೆಯ ಎಡ್ವರ್ಡ್). ಇದೂ ವಿಫಲವಾಯಿತು. ಕ್ರೈಸ್ತರ ಕೊಟ್ಟಕೊನೆಯ ಬಲಿಷ್ಠ ಕೇಂದ್ರವಾಗಿದ್ದ ಆಕರ್ ಕೂಡ 1291ರಲ್ಲಿ ಪತನಹೊಂದಿತು. ಪೋಪನ ಅನುಮತಿಯಿಂದ ವಿರೋಧಿಗಳ ಮೇಲೂ ಅನ್ಯಧರ್ಮೀಯರ ಮೇಲೂ ನಡೆಸಲಾದ ಇತರ ದಂಡಯಾತ್ರೆಗಳನ್ನೂ ಧಾರ್ಮಿಕ ಯುದ್ಧಗಳೆಂದು ಕರೆಯಲಾಗಿದೆ. 15–16ನೆಯ ಶತಮಾನಗಳಲ್ಲಿ ತುರ್ಕರ ಮೇಲೆ ನಡೆಸಿದ ದಂಡಯಾತ್ರೆಗಳನ್ನೂ ಧಾರ್ಮಿಕ ಯುದ್ಧಗಳೆಂದು ಪರಿಗಣಿಸಲಾಗಿದೆ.

ಧಾರ್ಮಿಕ ಯುದ್ಧಗಳ ಮೂಲೋದ್ದೇಶ ಪವಿತ್ರ ಭೂಮಿಯ ವಿಮೋಚನೆಯಾದರೂ ಕಾರ್ಯತಃ ಇವು ಸ್ವಾರ್ಥ ಸಾಧನೆಯ ಉದ್ದೇಶದಿಂದ ನಡೆದುವು. ಈ ಯುದ್ಧಗಳಿಂದ ಕೆಲವು ಒಳ್ಳೆಯ ಪರಿಣಾಮಗಳೂ ಆದುವು. ಅರಬ್ಬರ ಪ್ರಭಾವದಿಂದಾಗಿ ಯುರೋಪಿನ ಸಂಸ್ಕೃತಿ, ವ್ಯಾಪಾರ ಮತ್ತು ಭೂಗೋಳ ಜ್ಞಾನಗಳು ಹೆಚ್ಚಿದವು. ಊಳಿಗಮಾನ್ಯ ವ್ಯವಸ್ಥೆ ದುರ್ಬಲವಾಯಿತು. ಅನೇಕ ಸ್ಥಳೀಯ ನಾಯಕರು ಈ ಯುದ್ಧಗಳಲ್ಲಿ ಮೃತರಾದ್ದರಿಂದ ಸ್ವತಂತ್ರ ಜಮೀನುದಾರರು ಹೆಚ್ಚಿದರು. ವ್ಯಾಪಾರ ವಿಸ್ತರಣೆಯಿಂದ ವರ್ತಕರು ಧನವಂತರಾಗಿ ಮುಖ್ಯಪಟ್ಟಣಗಳಲ್ಲಿ ಕೈಗಾರಿಕೆ ಮತ್ತು ವ್ಯಾಪಾರ ಶ್ರೇಣಿಗಳನ್ನು (ಗಿಲ್ಡ್) ಸ್ಥಾಪಿಸಿದರು. ಇಟಲಿಯ ಅನೇಕ ನಗರಗಳು ಪೌರ್ವಾತ್ಯ ವ್ಯಾಪಾರದಿಂದ ಅಭಿವೃದ್ಧಿ ಹೊಂದಿದುವು. ವಿದೇಶೀ ವ್ಯಾಪಾರವೂ ನೌಕಾಬಲವೂ ಹೆಚ್ಚಿದುವು. ಲೇವಾದೇವಿ ಬೆಳೆದಂತೆ ದೊಡ್ಡ ಸಂಸ್ಥೆಗಳು ಯುರೋಪಿನ ವ್ಯಾಪಾರವನ್ನೆಲ್ಲ ತಮ್ಮ ಹತೋಟಿಗೆ ತಂದುಕೊಂಡವು. ಪದಾರ್ಥಗಳ ಶ್ರೇಣಿಗಳು, ಗುಣ, ತೂಕ ಬೆಲೆಗಳನ್ನು ನಿರ್ಧರಿಸಿ ಒಂದೊಂದು ಕಸಬಿಗೂ ಕಾನೂನುಗಳನ್ನು ಮಾಡಿದವು. ಜರ್ಮನಿಯ ಹ್ಯಾನ್ಸಿ ಯಾಟಿಕ್ ಲೀಗ್ ಎಂಬ ಸಂಸ್ಥೆ ಉತ್ತರ ಯುರೋಪಿನ ಕೈಗಾರಿಕೆ ಹಾಗೂ ವ್ಯಾಪಾರಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿತು. ಪಟ್ಟಣಗಳ ಆಡಳಿತ ಹೆಚ್ಚು ಹೆಚ್ಚು ಸ್ಥಳೀಯವಾಯಿತು. ಆಕ್ಸ್‍ಫರ್ಡ್, ಕೇಂಬ್ರಿಜ್, ನೇಪಲ್ಸ್, ಹೈಡಲ್‍ಬರ್ಗ್ ಮುಂತಾದ ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ಲ್ಯಾಟಿನ್ ಸಾಹಿತ್ಯದ ಪ್ರಭಾವ ಕಡಿಮೆಯಾಗಿ ದೇಶೀಯಭಾಷೆಗಳ ಗ್ರಂಥಗಳು ಪ್ರಚಾರವಾದುವು. ರಾಷ್ಟ್ರೀಯ ಮನೋಭಾವ ಬೆಳೆದು ರಾಷ್ಟ್ರೀಯ ಸಂಸ್ಥಾನಗಳು ಸ್ಥಾಪಿತವಾದುವು. ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧಗಳು ಬಲಗೊಂಡವು. ಪ್ರಮುಖವಾಗಿ ಯುರೋಪಿನಲ್ಲಿ ಕಂಡುಬಂದ ಪುನರುಜ್ಜೀವನಕ್ಕೆ ಮೂಲ ಪ್ರೇರಣೆಯಾದವು. (ಬಿ.ಎಸ್.ಕೆ.)

**ಧೋಲಾವೀರ:** ಭಾರತ ಉಪಖಂಡದ ಹರಪ್ಪ ಸಂಸ್ಕೃತಿಯ ಅತಿದೊಡ್ಡ ಐದು ನೆಲೆಗಳಲ್ಲೊಂದು. ಗುಜರಾತ್ ರಾಜ್ಯದ ಕಚ್ಛ್ ಜಿಲ್ಲೆಯ ಭಚಾಊ ತಾಲ್ಲೂಕಿನಲ್ಲಿರುವ ಖಾದಿರ್ ದ್ವೀಪದಲ್ಲಿರುವ ಈ ನೆಲೆ ಪ್ರ.ಶ.ಪೂ. 3ನೆಯ ಸಹಸ್ರವರ್ಷದಿಂದ ಪ್ರ.ಶ.ಪೂ. 2ನೆಯ ಸಹಸ್ರವರ್ಷದ ಮಧ್ಯಭಾಗದವರೆಗಿನ ಮಹತ್ತ್ವಪೂರ್ಣ ಸಾಂಸ್ಕೃತಿಕ ಹಂತಗಳನ್ನೊಳಗೊಂಡಿದೆ. ಹರಪ್ಪ ಸಂಸ್ಕೃತಿಯ ಉನ್ನತಿ ಅವನತಿಗಳನ್ನಿದು ದಾಖಲಿಸುವುದಲ್ಲದೆ, ಅತ್ಯುತ್ಕೃಷ್ಟ ಯೋಜನೆ, ಭವ್ಯ ಸಂರಚನೆಗಳು, ಸೌಂದರ್ಯಾತ್ಮಕ ವಾಸ್ತುಶಿಲ್ಪ, ಅದ್ಭುತವಾದ ಜಲಾನಯನ ವ್ಯವಸ್ಥೆಗಳು ಮತ್ತು ಶವಸಂಸ್ಕಾರಕ್ಕೆ ಸಂಬಂಧಿಸಿದ ವೈವಿಧ್ಯಮಯ ವಾಸ್ತುಶಿಲ್ಪಗಳಿಂದ ಕೂಡಿದ ಮಾದರಿ ನಗರವೊಂದನ್ನು ಬೆಳಕಿಗೆ ತಂದಿದೆ. ಇಲ್ಲಿಯ ಜಲ-ಯಂತ್ರವಿಜ್ಞಾನ ಅತ್ಯಂತ ಅಪರೂಪದು.

ಇದು ರಾನ್ ಆಫ್ ಕಚ್ಛ್‍ನಿಂದ ಸುತ್ತುವರೆಯಲ್ಪಟ್ಟಿದೆ. ಮನ್ಸರ್ ಮತ್ತು ಮನ್ಹರ್ ಎಂಬ ಎರಡು ಮಳೆಗಾಲದ ಹಳ್ಳಗಳು ಇದರ ಎರಡು ಬದಿಗಳಲ್ಲಿ ಹರಿಯುತ್ತವೆ. ಸ್ಮಶಾನವೂ ಸೇರಿದಂತೆ ಈ ಅವಶೇಷಗಳು ಸು. ಒಂದು ಚ.ಕಿಮೀ ಭೂಮಿಯನ್ನು ಆವರಿಸಿಕೊಂಡಿವೆ. ಪೂರ್ಣವಾಗಿ ಅಭಿವೃದ್ಧಿ ಹೊಂದಿದ ನಗರದಲ್ಲಿ ಎರಡು ಭಾಗಗಳಿರುವ ದುರ್ಗ (ಸಿಟಡೆಲ್), ಮಧ್ಯದ ಪುರ ಅಥವಾ ನಗರ, ಕೆಳಗಿನ ಪುರ, ಎರಡು ಕ್ರೀಡಾಂಗಣಗಳು, ಒಂದು ಹೊರಕಟ್ಟಡ



ಪುನರ್ರಚಿತ ಹರಪ್ಪನಗರ, ಧೋಲಾವೀರ

ಮತ್ತು ನೀರಿನ ತೊಟ್ಟಿಗಳು ಇವೆ. ಇವೆಲ್ಲವೂ ರಕ್ಷಣಾಗೋಡೆಯಿಂದ ಆವೃತವಾಗಿವೆ. ನಗರದ ಒಳಗೂ ರಕ್ಷಣಾಗೋಡೆಗಳ ಜಟಿಲ ವ್ಯವಸ್ಥೆಯಿರುವುದು ಕುತೂಹಲಕಾರಿ. ಪೂರ್ವದಿಂದ ಪಶ್ಚಿಮಕ್ಕೆ ಹರಡಿದ ಸಮಾಂತರ ಚತುರ್ಭುಜದ ಆಕಾರದಲ್ಲಿ ನಗರವಿದೆ.

ದುರ್ಗ ನಗರದ ದಕ್ಷಿಣಭಾಗದಲ್ಲಿದೆ. ಕಾಲಿಬಂಗನ್ ಮತ್ತು ಸುರಕೋಟಡಗಳಲ್ಲಿರುವಂತೆ ಇದರಲ್ಲಿ ಮಹಲು ಮತ್ತು ಹೊರಾವರಣವೆನ್ನಬಹುದಾದ ಎರಡು ಉಪಭಾಗಗಳಿವೆ. ಇವು ಕ್ರಮವಾಗಿ ಪೂರ್ವ ಮತ್ತು ಪಶ್ಚಿಮಗಳಲ್ಲಿವೆ. ಮಹಲು ಸುಭದ್ರವಾಗಿ ಆವೃತವಾಗಿದ್ದು ಸುಂದರವಾದ ದ್ವಾರ, ಗೋಪುರ, ಚರಂಡಿಗಳಿಂದ ಕೂಡಿದೆ. ಇದರ ಉತ್ತರಕ್ಕೆ ದೊಡ್ಡ ಮೈದಾನವಿದೆ. ಇನ್ನೂ ಉತ್ತರದಲ್ಲಿ ರಕ್ಷಣಾಗೋಡೆಯಿಂದಾವೃತವಾದ ಮಧ್ಯದ ಪುರ ಮತ್ತು ಅದರ ಪೂರ್ವಕ್ಕೆ ಕೆಳಗಿನ ಪುರಗಳಿವೆ. ದುರ್ಗದ ದಕ್ಷಿಣಕ್ಕೆ ನಗರದ ರಕ್ಷಣಾಗೋಡೆ ಯುದ್ಧಕ್ಕೂ ತಾಗಿದಂತೆ ಎತ್ತರಿಸಿದ ಹೊರಕಟ್ಟಡವಿದೆ. ಈ ನಗರರಚನೆಯ ನಕ್ಷೆ ಪೂರ್ಣವಾಗಿ ಅಭಿವೃದ್ಧಿ ಹೊಂದಿದ (ಪ್ರೌಢ) ಹರಪ್ಪ ಸಂಸ್ಕೃತಿಯ ಸಂಕೇತವಾಗಿದೆ. ನಗರ ವ್ಯವಸ್ಥೆಯ ಏಳು ಬೀಳುಗಳನ್ನೊಳಗೊಂಡ ಏಳು ಮುಖ್ಯ ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ.

1ನೆಯ ಹಂತದ ವಸತಿಯಲ್ಲಿ ಮಹಲಿನ ದಿಬ್ಬದಡಿಯಲ್ಲಿ ಮುಚ್ಚಿಹೋದ ಬಲವಾದ ರಕ್ಷಣಾಗೋಡೆಯ ಭಾಗವಿದೆ. ಈ ಹಂತದಲ್ಲಿ ಹಾಕಿದ ಅಡಿಪಾಯದ ಸುತ್ತಲೂ ಅನಂತರದ ಹಂತಗಳ ಕಾಲಾವಧಿಯಲ್ಲಿ ಕ್ರಮೇಣ ವಿಸ್ತರಿಸಲಾಗಿದೆ. ಒಂದೇ ಅಳತೆಯ ಇಟ್ಟಿಗೆಗಳು,

ಕಲ್ಲುಗಳಂತಹ [ಚೇಣು ಹೊಡೆದ/ಹೊಡೆಯದ] ಕಟ್ಟಡದ ಸಾಮಗ್ರಿಗಳು 5ನೆಯ ಹಂತದವರೆಗೂ ಉಪಯೋಗದಲ್ಲಿರುವುದು ಕಂಡುಬರುತ್ತದೆ. 2ನೆಯ ಹಂತದಲ್ಲಿ ಮೊದಲಿದ್ದ ರಕ್ಷಣಾಗೋಡೆಗೆ ತಾಗಿದಂತೆ ಒಳಬದಿಯಲ್ಲಿ ಇಟ್ಟಿಗೆ ಗೋಡೆಯನ್ನು ಕಟ್ಟಲಾಗಿದೆ. ಇದಕ್ಕೆ ಬಿಳಿ ಮತ್ತು ಗುಲಾಬಿಬಣ್ಣದ ನುಣ್ಣನೆಯ ಜೇಡಿಮಣ್ಣನ್ನು ಸು. 13 ಬಾರಿ ಲೇಪಿಸಲಾಗಿದೆ. ಈ ಹಂತದ ಮುಖ್ಯ ಬೆಳವಣಿಗೆಯೆಂದರೆ ಉತ್ತರದಲ್ಲಿ ವಸಾಹತೊಂದು ಮೇಲೇಳತೊಡಗಿತು. ಜೊತೆಗೆ ಮಣ್ಪಾತ್ರೆಯ ಆಕಾರಗಳು ಮತ್ತಿತರ ವಸ್ತುಗಳ ಗುಣಮಟ್ಟವೂ ಹೆಚ್ಚಿದವು. 3ನೆಯ ಹಂತ ಹಲವು ವಿಷಯಗಳಲ್ಲಿ ಸೃಜನಶೀಲವೂ ಆಗಿದೆ. ನಗರದ ಬೆಳವಣಿಗೆಯ ದೃಷ್ಟಿಯಿಂದ ನೋಡಿದರೆ ರಕ್ಷಣಾಗೋಡೆಯ ವಿಸ್ತರಣೆ, ಮಧ್ಯದ ಪುರದ ಆರಂಭ, ಮಹಲು, ಅದರ ಹೊರಾವರಣ, ಮೈದಾನ, ಜಲಾಶಯಗಳು ಎಲ್ಲವನ್ನೂ ಆವರಿಸಿದ ರಕ್ಷಣಾಗೋಡೆಗಳ



ಕಟ್ಟಡ

ಕಟ್ಟುವಿಕೆಯೆಲ್ಲ ಈ ಹಂತದಲ್ಲೇ ಆದುವು. ಮೊದಲ ಬಾರಿಗೆ ಚೌಕಾಕಾರದ ಸ್ಟಿಯಟೈಟ್‌ನ ಮೂರು ಮೊಹರುಗಳು ದೊರೆತವು. ಇವು ಚಿಕ್ಕವೂ ಹಗುರವೂ ಆಗಿದ್ದವು. ಇವುಗಳ ಮೇಲೆ ಲಿಪಿಚಿಹ್ನೆಗಳಿಲ್ಲ. ಇವುಗಳಲ್ಲದೆ ಸಿಂಧು ಲಿಪಿ ಚಿಹ್ನೆಗಳನ್ನುಳ್ಳ ಮಡಕೆ ಚೂರುಗಳು, ಒಂದು ಘನಾಕಾರದ ಬಟ್ಟು ದೊರೆತಿವೆ. ಜೊತೆಗೆ ವರ್ಣಚಿತ್ರಗಳಿರುವ ಹಲವು ಪ್ರಕಾರಗಳ ಮಣ್ಪಾತ್ರೆಗಳು ಸಿಕ್ಕಿವೆ. ಈ ಹಂತದ ಕೊನೆಯ ಭಾಗದಲ್ಲಿ ಮಹಾವಿಪತ್ತು ಒದಗಿದ ಸೂಚನೆಗಳು ಕಂಡಬರುತ್ತವೆ. ಪುನರ್ನಿರ್ಮಾಣದ ಫಲವಾಗಿ ನಗರ ಪೂರ್ಣಪ್ರಮಾಣದಲ್ಲಿ ಬೆಳೆಯಿತು. ಈ ಬೆಳವಣಿಗೆಯ ಕಾರಣದಿಂದ 4 ಮತ್ತು 5ನೆಯ ಹಂತಗಳ ಅವಧಿಯವರೆಗೂ ನಗರ ಸಾಂಸ್ಕೃತಿಕ ಉನ್ನತಿ ಸಾಧಿಸಿತು. ಮೊದಲ ಮೂರು ಹಂತಗಳ ಅವಧಿಯಲ್ಲಿ ಬಣ್ಣಬಣ್ಣದ ಜೇಡಿಮಣ್ಣಿನ ಗಾರೆ ಬಹಳ ಪ್ರಿಯವಾಗಿತ್ತೆಂದು ತೋರುತ್ತದೆ. ಎಲ್ಲ ಬಗೆಯ ಕಟ್ಟಡಗಳ ಮೇಲೂ ಇದರ ತುಣುಕುಗಳು ಕಂಡುಬರುತ್ತದೆ. ಮೂರನೆಯ ಹಂತದ ಕೊನೆಯ ಭಾಗ ಮತ್ತು ನಾಲ್ಕನೆಯದರ ಆರಂಭದಲ್ಲಿ ಆಡಳಿತದ ನಿರ್ದೇಶನಕ್ಕನುಗುಣವಾಗಿಯೋ ಏನೋ ಇದು ಇದ್ದಕ್ಕಿದ್ದಂತೆ ನಿಂತುಹೋಗಿದೆ.

4ನೆಯ ಹಂತದಲ್ಲಿ ನಗರಯೋಜನೆಯ ಮುಖ್ಯ ಲಕ್ಷಣಗಳೆಲ್ಲವೂ ಇದ್ದಿತಲ್ಲದೆ, ಮಹಾದ್ವಾರ, ರಕ್ಷಣಾಗೋಡೆಯ ರಚನೆ, ಒಳಚರಂಡಿ ವ್ಯವಸ್ಥೆಯಂತಹ ಭವ್ಯ ಯೋಜನೆಗಳೂ ಕಾರ್ಯರೂಪಕ್ಕೆ ಬಂದಿದ್ದವು. ಬೃಹದಾಕಾರದ ಹತ್ತು ಅಕ್ಷರ ಸಂಕೇತಗಳುಳ್ಳ ಫಲಕ ದೊರೆತಿದ್ದು ಈ ಹಂತದಲ್ಲೇ. ಹರಪ್ಪ ಸಂಸ್ಕೃತಿಯ ಮುಖ್ಯ ಲಕ್ಷಣಗಳಾದ ಮಣ್ಣಿನ ಪಾತ್ರೆ, ಮೊಹರು, ಬಟ್ಟು, ಚಿನ್ನ–ಬೆಳ್ಳಿ–ತಾಮ್ರ–ದಂತ– ಕಪ್ಪೆ ಚಿಪ್ಪು–ಹೊಳಪುಳ್ಳ ಬಣ್ಣದ ಮಡಕೆ–ಸ್ಟಿಯಟೈಟ್–ಜೇಡಿಮಣ್ಣು ಮತ್ತು ಕಲ್ಲುಗಳಿಂದ ಮಾಡಿದ ವಸ್ತುಗಳು ಹೇರಳವಾಗಿ ದೊರೆಯುತ್ತವೆ. 5ನೆಯ ಹಂತದಿಂದ ನಗರಪಾಲಿಕೆಯ ವಿಷಯದಲ್ಲಿ ಅವನತಿ ಆರಂಭವಾಯಿತು. ಇದು ದುರ್ಗದ ಸ್ಥಿತಿಯಲ್ಲಿ ಎದ್ದು ಕಾಣುತ್ತದೆ. ಉಳಿದೆಲ್ಲ ಸಾಮಗ್ರಿಗಳ ಬಳಕೆಗೇನೂ ಚ್ಯುತಿ ಬಂದಿರಲಿಲ್ಲ. ಈ ಹಂತದ ಕೊನೆಯಲ್ಲಿ ಜನರು ಈ ವಸತಿ ನೆಲೆಯನ್ನು ತಾತ್ಕಾಲಿಕವಾಗಿ ಬಿಟ್ಟು ಹೋಗಿರಬೇಕು.

6ನೆಯ ಹಂತ ಸುಮಾರು ಎರಡು ದಶಕಗಳ ಕಾಲ ನಿರ್ವಾಸದ ಅನಂತರದಲ್ಲಿ ಸಾಂಸ್ಕೃತಿಕ ಪರಿವರ್ತನೆ ಕಂಡಿತು. ಕುಂಭಕಲೆಯ ಹೊಸ ಸಂಪ್ರದಾಯದ ಗಾಳಿ ಸಿಂಧ್, ರಾಜಸ್ಥಾನ, ಗುಜರಾತ್ ಮತ್ತು ದೂರದ ಉತ್ತರಪ್ರದೇಶಗಳ ಕಡೆಯಿಂದ ಬೀಸತೊಡಗಿತು. ಒಮ್ಮೆ ನಗರವಾಗಿ ಬಾಳಿ ಬದುಕಿದ್ದದ್ದು ಇಂದು ಸಣ್ಣ ಪಟ್ಟಣವಾಗಿ ಕುಗ್ಗಿತು. ಕ್ರಮಬದ್ಧ ನಗರ ಯೋಜನೆಗೆ ಬಹುಮಟ್ಟಿಗೆ ವಿದಾಯ ಹೇಳಲಾಯಿತು. ಮನೆಗಳ ವಿನ್ಯಾಸವೇ ಬದಲಾಗಿಬಿಟ್ಟಿತು. ಇಟ್ಟಿಗೆಗಳ ಬಳಕೆ ನಿಂತುಹೋಯಿತು. ಹಳೆಯ ಮಣ್ಪಾತ್ರೆಗಳು, ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು, ಬಿಳಿವರ್ಣಚಿತ್ರಿತ ಬೂದುಬಣ್ಣದ ಪಾತ್ರೆಗಳ ಹೊಸ ಪ್ರವೃತ್ತಿ ಆರಂಭವಾಯಿತು. ಇವುಗಳ ಜೊತೆಗೆ ಕಚ್ಚು ಗುರುತಿನ ಅಥವಾ ಮೆತ್ತೆ ವಿನ್ಯಾಸ ಅಲಂಕರಣ ಅಥವಾ ಈ ಎರಡೂ ಇರುವಂತಹ ದೊರಗು ಮಣ್ಪಾತ್ರೆಗಳೂ ಬಾರಾ ಮಾದರಿಯ ಮಣ್ಪಾತ್ರೆಗಳೂ ಮೊದಲ ಬಾರಿಗೆ ಕಂಡುಬಂದವು. ಹಲವು ಸಾಂಪ್ರದಾಯಿಕ ವಸ್ತುಗಳ ಉಪಯೋಗ ಮುಂದುವರೆದರೂ ಮೊಹರುಗಳಲ್ಲಿ ಬದಲಾವಣೆ ಉಂಟಾಯಿತು. ಚೌಕಾಕಾರವಾಗಿರುತ್ತಿದ್ದ ಮೊಹರು ಆಯತಾಕಾರ ತಾಳಿತು. ಜೊತೆಗೆ ದಾರ ಪೋಣಿಸಲು ತೂತು ಮಾಡಲಾಯಿತು. ಸುಂದರವಾಗಿ ಕೆತ್ತಿದ ಲಿಪಿಗಳು ಅವುಗಳ ಮೇಲಿದ್ದರೂ ಚಿತ್ರಗಳು ಇರುತ್ತಿರಲಿಲ್ಲ. ಘನಾಕಾರದ ಕಲ್ಲಿನ ಬಟ್ಟುಗಳ ಜೊತೆಗೆ ಮಡಕೆ ಚೂರುಗಳಿಂದ ಮಾಡಿದ ಅದೇ ಆಕಾರದವುಗಳು ಚಾಲ್ತಿಗೆ ಬಂದವು. ಒಟ್ಟಿನಲ್ಲಿ ಸುಸಂಸ್ಕೃತಿಯ ಅವನತಿ, ಆರ್ಥಿಕ ಇಳಿಮುಖದ ಚಿಹ್ನೆಗಳು ಕಾಣುತ್ತವೆ. ಸುಮಾರು ಒಂದು ಶತಮಾನದ ಕಾಲ ಇಲ್ಲಿ ನೆಲಸಿದ ಮೇಲೆ 6ನೆಯ ಹಂತದ ಜನರು ಈ ವಸತಿಯನ್ನು ತೊರೆದರೆಂದು ಕಾಣುತ್ತದೆ.

7ನೆಯ ಹಂತ ಬಹಳ ದೀರ್ಘವಾಗಿತ್ತು. ಈ ಹಂತದಲ್ಲಿ ಬಂದ ಹೊಸಬರಿಗೆ ಹರಪ್ಪ ಸಂಸ್ಕೃತಿಯ ವಿಶಿಷ್ಟ ಮಣ್ಪಾತ್ರೆ, ಆಕಾರ, ವಿನ್ಯಾಸಗಳಾವುವೂ ತಿಳಿದಿರಲಿಲ್ಲ. ವಿಚಿತ್ರವೇನೆಂದರೆ ಹೊಸ ನಿವಾಸಿಗಳು ತಮ್ಮ ಮನೆಗಳನ್ನು ತೀರ ಭಿನ್ನವಾಗಿ ವೃತ್ತಾಕಾರದಲ್ಲಿ ಕಟ್ಟಿದರು. ಯಾವುದೇ ರೀತಿಯ ಯೋಜನೆಯಾಗಲೀ ನಗರದ ಲಕ್ಷಣಗಳಾಗಲೀ ಕಂಡುಬರುವುದಿಲ್ಲ. ಅನಂತರ ಆ ನಿವೇಶನದಲ್ಲಿ ಜನರು ವಾಸಿಸಲೇ ಇಲ್ಲ.

ಧೋಲಾವೀರ ನಗರ ತನ್ನ ಪೂರ್ಣರೂಪದಲ್ಲಿ ನಿರ್ದಿಷ್ಟ ಯೋಜನಾ ತತ್ವಗಳಿಂದ ರಚಿತವಾದ ನಿಖರ ಪ್ರಮಾಣಬದ್ಧ ಸಂರಚನೆಯಾಗಿತ್ತು. ಇದರ ದಿಕ್ಕುಗಳು ಖಗೋಳಶಾಸ್ತ್ರದ ಪ್ರಕಾರ ನಿರ್ಧರಿತವಾಗಿದ್ದವೆನಿಸುತ್ತವೆ. ನಗರದ ಉದ್ದಗಲದಿಂದ ಹಿಡಿದು ಅದರ ಒಂದೊಂದು ಅಂಗಗಳವರೆಗೆ ಎಲ್ಲವೂ ಪರಸ್ಪರ ನಿರ್ದಿಷ್ಟ ಅನುಪಾತದಲ್ಲಿ ರಚಿತವಾಗಿದ್ದವು. ನಗರದ ಒಳಾಂಗಣದ ಕ್ಷೇತ್ರ ಉತ್ತರ–ಪಶ್ಚಿಮಾಭಿಮುಖವಾಗಿ 771.10 ಮೀ ಮತ್ತು ಪೂರ್ವ–ಪಶ್ಚಿಮಾಭಿಮುಖವಾಗಿ 616.87 ಮೀ ಅಂದರೆ 5:4 ಅನುಪಾತದಲ್ಲಿದೆ. ಇದರಂತೆಯೇ ದಿಬ್ಬದ ಮೇಲಿನ ವಾಡೆಯ ಒಳ ಮತ್ತು ಹೊರಗಿನ ಅಳತೆಗಳೂ ಇದೇ ಅನುಪಾತದಲ್ಲಿವೆ; ಮತ್ತು ಹೊರಾಂಗಣವೂ ಸೇರಿದಂತೆ ವಾಡೆ 1:2; ಮಧ್ಯನಗರ ಮತ್ತು ಕ್ರೀಡಾಂಗಣ 6:7; ಕೇವಲ ಮಧ್ಯನಗರದ ಒಳಾಂಗಣ 5:7; ಕೆಳನಗರ 1:1 ಇತ್ಯಾದಿ ವಿವಿಧ ಭಾಗಗಳು ನಿರ್ದಿಷ್ಟ ಅನುಪಾತಗಳಲ್ಲಿವೆ. ಹೀಗೆ ಇನ್ನೂ ಕೆಲವು ವಾಸ್ತು ಲೆಕ್ಕಾಚಾರಗಳು ಗಣಿತ ವಿಜ್ಞಾನದ ನಿರ್ದಿಷ್ಟ ಅಳತೆಗಳಲ್ಲಿವೆ. ನಿಖರವಾದ ಲೆಕ್ಕಾಚಾರಗಳ ಪ್ರಕಾರ ರೇಖಾಚಿತ್ರ ರಚಿಸಿಕೊಂಡು ಅನಂತರ ಅದನ್ನು 13ಮೀ ಇಳಿಜಾರಿರುವ ನೆಲದ ಮೇಲೆ ಕಾರ್ಯಗತಗೊಳಿಸಿರುವುದು ವಾಸ್ತುಶಿಲ್ಪ ಕ್ಷೇತ್ರದ ಒಂದು ವಿಸ್ಮಯಕರ ಸಾಧನೆ.

ಒಳಚರಂಡಿ

2/3 ಭಾಗದ ಮಧ್ಯನಗರ ಮತ್ತು ಇಡಿ ಕೆಳನಗರದ ಮುಖ್ಯ ಲಕ್ಷಣಗಳಲ್ಲೊಂದೇನೆಂದರೆ, ಅನಂತರದ ಯುಗದ ಭಾರತೀಯ ದೇವಸ್ಥಾನಗಳಲ್ಲಿ ಕಾಣುವ ಮುಂಚಾಚು ಮತ್ತು ಹಿಂಚಾಚು ರಚನೆಗಳು. ಇದರಿಂದಾಗಿ ವಾಸದ ಮನೆಗಳಿರುವ ಕ್ಷೇತ್ರಗಳು ಮತ್ತು ಖಾಲಿಜಾಗಗಳು ಸ್ಪಷ್ಟವಾಗಿ ಪ್ರತ್ಯೇಕಗೊಳ್ಳುತ್ತವೆ. ಜೊತೆಗೆ ಪೂರ್ವದಿಂದ ಪಶ್ಚಿಮಕ್ಕೆ ನಗರದ ಮಧ್ಯದಲ್ಲಿ ಹಾದುಹೋಗುವ ಮುಖ್ಯರಸ್ತೆ ಎಲ್ಲ ಘಟಕ, ಉಪಘಟಕಗಳನ್ನು ಎರಡು ಸಮಭಾಗಗಳಾಗಿ

ವಿಭಜಿಸುತ್ತದೆ. ಉತ್ತರದಿಂದ ದಕ್ಷಿಣಕ್ಕೆ ತಡೆದು ತಡೆದು ಸಾಗುವ ಇನ್ನೊಂದು ರಸ್ತೆ ಈ ಘಟಕಗಳನ್ನು ಮತ್ತಷ್ಟು ವಿಭಜಿಸುತ್ತದೆ. ಮುಖ್ಯರಸ್ತೆಯಿಂದ ಹಲವು ಸಣ್ಣ ಪುಟ್ಟ ಓಣಿಗಳು ಕವಲೊಡೆಯುತ್ತವೆ. ರಕ್ಷಣಾಗೋಡೆಗಳಲ್ಲಿ ಹದಿನೇಳು ದ್ವಾರಗಳಿವೆ. ಸ್ಥೂಲ ವಾಸ್ತು ಲಕ್ಷಣಗಳುಳ್ಳ ಈ ಭವ್ಯದ್ವಾರಗಳು ವಾಸ್ತುಶಿಲ್ಪ ಹಾಗೂ ಪುರಾತತ್ತ್ವಶಾಸ್ತ್ರ ದೃಷ್ಟಿಯಿಂದ ಮಹತ್ತ್ವಪೂರ್ಣವಾಗಿವೆ. ಹಲವು ದ್ವಾರಗಳಲ್ಲಿ ಅಗಲವೂ ಆಳವೂ ಆದ ಓಣಿಗಳು, ಎತ್ತರವಾದ ಎದುರಿನ ಉಪ್ಪರಿಗೆಗಳಿವೆ. ಉತ್ತರದ ದ್ವಾರ ಎಲ್ಲಕ್ಕಿಂತ ಸುಂದರವಾದದ್ದು. ಅದರ ಮೇಲಿನಿಂದ ಇಡೀ ನಗರದ ವಿಹಂಗಮ ದೃಶ್ಯ ಸವಿಯಬಹುದು. ಬೃಹತ್ ದ್ವಾರಬಂಧದಲ್ಲಿ ಪ್ರಾಯಶಃ ಎರಡು ಬಾಗಿಲುಗಳಿದ್ದವು. ಆಳದ ಹಾದಿಯ ಎರಡು ಬದಿಗಳ ಮೊಗಸಾಲೆ (ಕಾವಲು ಕೋಣೆ?) ಗಳಿಗೆ ಸುಣ್ಣದಕಲ್ಲಿನ ಹೊಸ್ತಿಲುಗಳಿದ್ದವು. ಮೊಗಸಾಲೆಯಲ್ಲಿ ಮರದ ನೆಲವಿತ್ತು. ಸುಂದರವಾದ ಕಲ್ಲಿನ ಕಂಬಗಳಿಂದ ಅಲಂಕೃತವಾದ ವಿಶಾಲ ಹಜಾರ ಇದಾಗಿತ್ತು. ಇದರ ಇನ್ನೊಂದು ಗಮನಾರ್ಹ ಅಂಶವೆಂದರೆ ಹರಪ್ಪ ಕಾಲದ ದೊಡ್ಡ ದೊಡ್ಡ ಹತ್ತು ಅಕ್ಷರಗಳನ್ನು ಕೆತ್ತಿ ಕೂಡಿಸಿದಂತಹ ಮಹಾನ್ ಫಲಕ. ಜಿಪ್ಸಂನಿಂದ ಕೆತ್ತಲಾದ ಅಕ್ಷರಗಳನ್ನು ಮರದ ಹಲಗೆಯ ಮೇಲೆ ಕೂಡಿಸಿರಬೇಕು: ಅದೀಗ ಶಿಥಿಲಗೊಂಡಿದೆ. ಆದರೆ ಇದರ ಆಕಾರ ಮತ್ತು ಗಾತ್ರಗಳನ್ನು ಗಮನಿಸಿದರೆ ಒಂದು ಕಾಲದಲ್ಲಿ ಇದು



ನೀರಿನ ಬಾವಿ

ದ್ವಾರಬಂಧದ ಮೇಲ್ಭಾಗದಲ್ಲಿ ವಿರಾಜಿಸಿ ದೂರದವರೆಗೆ ಸ್ಪಷ್ಟವಾಗಿ ಕಾಣುವಂತಿತ್ತು. ಮಹಾ ಕ್ರೀಡಾಂಗಣದ ಪೂರ್ವದ್ವಾರ, ಅದರಂತೆಯೇ ಮಧ್ಯದ ಪುರದ ದ್ವಾರಗಳು ಸಹ ಸರಳ ವಾಸ್ತುಲಕ್ಷಣಗಳಿಂದ ಕೂಡಿವೆ. ಇದೇ ಕ್ರೀಡಾಂಗಣದ ಪಶ್ಚಿಮ ದ್ವಾರ ಉದ್ದಗಲವಿರುವ ಮೊಗಸಾಲೆ ಯೊಂದಕ್ಕೆ ಸಂಪರ್ಕ ಕಲ್ಪಿಸುತ್ತದೆ. ಇದರ ಕೆಳಗೆ ಮಳೆನೀರಿನ ಚರಂಡಿ ಇದೆ. ಉತ್ತರ ಮತ್ತು ಪೂರ್ವದ್ವಾರಗಳನ್ನು ನಗರದ ಮುಖ್ಯಸ್ಥನ ಮೆರವಣಿಗೆಗೆ ಬಳಸಲಾಗುತ್ತಿದ್ದ ಸಾಧ್ಯತೆಗಳಿವೆ. ಅನಂತರದ ಅವಧಿಯ ದ್ವಾರಗಳು ಯಾವುದೇ ಆಡಂಬರವಿಲ್ಲದೆ ಅತಿ ಸರಳವಾಗಿವೆ.

ಹರಪ್ಪ ಹಾಗೂ ಮೊಹೆಂಜೋದಾರೋಗಳಲ್ಲಿ ಕಂಡುಬಂದಿರುವ ಖಾಲಿಜಾಗಗಳ ಉಪಯೋಗವೇನೆಂಬುದನ್ನು ಪುರಾವೆಗಳ ಮೂಲಕ ನಿರ್ಧರಿಸಲು ಈವರೆಗೆ ಸಾಧ್ಯವಾಗಿಲ್ಲ. ಈ ಸಮಸ್ಯೆಗೆ ಉತ್ತರವನ್ನು ಧೋಲಾವೀರದಲ್ಲಿ ಕಂಡುಹಿಡಿಯಬಹುದೆನಿಸುತ್ತದೆ. ಒಂದಕ್ಕೊಂದು ತಗಲಿಕೊಂಡಂತೆ ಇಂತಹ ಎರಡು ಕ್ರೀಡಾಂಗಣಗಳು ಇಲ್ಲಿವೆ. ಇವುಗಳಲ್ಲಿ ದೊಡ್ಡದಾದ ಕ್ರೀಡಾಂಗಣ ನಾಲ್ಕು ಕಡೆಗಳಲ್ಲೂ ಇಳಿಜಾರಾದ ಮೆಟ್ಟಿಲುಗಳಿಂದ ಸುತ್ತುವರೆಯ ಲ್ಪಟ್ಟಿದ್ದು, ಪ್ರಾಯಶಃ ಅತಿ ದೊಡ್ಡ ಅಂಗಣವಾಗಿದೆ. ಈ ಎರಡು ಕ್ರೀಡಾಂಗಣಗಳು ಪುರಾತತ್ತ್ವ ಸಂಶೋಧನೆಯ ಇತಿಹಾಸದಲ್ಲಿ ಈವರೆಗೆ ಕಂಡ ಅತ್ಯಂತ ಹಳೆಯ ಮೈದಾನಗಳಾಗಿವೆ. ನಿವೇಶನದಲ್ಲಿ ಇವುಗಳ ಸ್ಥಾನ, ವಾಸ್ತುಶಿಲ್ಪ ವಿಶೇಷತೆಗಳು ಮತ್ತು ಉತ್ಖನನದ ಸಮಯದಲ್ಲಿ ದೊರೆತ ಪ್ರಾಚೀನ ವಸ್ತುಗಳ ಆಧಾರದ ಮೇಲೆ ಇವುಗಳನ್ನು ಹಲವು ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು ಎಂದು ತೀರ್ಮಾನಿಸಬಹುದು. ಹಬ್ಬಹರಿದಿನ ಅಥವಾ ವಿಶೇಷ ಸಂದರ್ಭಗಳಲ್ಲಿ ಒಟ್ಟುಗೂಡಲು, ಮುಖ್ಯಸ್ಥನ ಅರಮನೆ/ನಗರದ ಉತ್ಸವಗಳ ಆಚರಣೆ, ಕ್ರೀಡೆ ಮತ್ತು ಮನರಂಜನೆ ಹಾಗೂ ವ್ಯಾಪಾರ ಚಟುವಟಿಕೆಗಳಿಗಾಗಿ ಇವನ್ನು ಉಪಯೋಗಿಸುತ್ತಿದ್ದಿರ ಬಹುದು. ಈ ಎರಡು ಅಂಗಣಗಳನ್ನು ಸಾಮಾನ್ಯ ಕಾರಣಗಳಿಗಾಗಿಯೂ ಬಳಸುತ್ತಿರಬೇಕು.

(ಬಿ.ಆರ್.ಎಸ್.)

ಇಲ್ಲಿಯ ಜನರು ಅತಿಶಯವಾದ ಪರಿಣತಿ ತೋರುವ ಇನ್ನೊಂದು ಕ್ಷೇತ್ರವೆಂದರೆ ಜಲನಿರ್ವಹಣೆ. ಅಣೆಕಟ್ಟು, ಚರಂಡಿ, ಬೃಹತ್ ನೀರಿನ ತೊಟ್ಟಿ ಮತ್ತು ಮಳೆನೀರಿನ ನಿರ್ವಹಣೆಯ ಮೂಲಕ ಇವರು ನೀರನ್ನು ನಿರ್ವಹಿಸುತ್ತಿದ್ದ ರೀತಿ ಆ ಕಾಲದ ರಚನಾ ವಿಜ್ಞಾನದ ಕೌಶಲಕ್ಕೆ ಹಿಡಿದ ಕನ್ನಡಿಯಾಗಿದೆ. ಜಲನಿರ್ವಹಣೆಯ ಈ ಎಲ್ಲ ಅಂಗಗಳು ನಗರದ ಸೌಂದರ್ಯವನ್ನೂ ಹೆಚ್ಚಿಸುತ್ತಿದ್ದುದು ಗಮನಾರ್ಹವಾಗಿದೆ. ನಗರದ ಸಂಪೂರ್ಣ ರಚನೆಯಲ್ಲಿ ಸು.10 ಹೆ. ಜಾಗವನ್ನು ನೀರು ಸಂಗ್ರಹಣೆ ಹಾಗೂ ಸರಬರಾಜಿಗಾಗಿಯೇ ಉಪಯೋಗಿಸಲಾಗಿತ್ತು. ಇದಕ್ಕಾಗಿ ಇವರು ಮನ್ಹರ್ ಮತ್ತು ಮನ್ಸರ್ ಹಳ್ಳಗಳ ಆಯಕಟ್ಟಿನ ಸ್ಥಾನದಲ್ಲಿ ಅಣೆಕಟ್ಟುಗಳನ್ನು ಕಟ್ಟಿದರು. ಮನ್ಹರ್ ಹಳ್ಳಕ್ಕೆ ಅಡ್ಡವಾಗಿ ಮೂರು ಅಣೆಕಟ್ಟು ಕಟ್ಟಿದ್ದರೆ ಮನ್ಸರ್‌ಗೆ ಎರಡು ಕಟ್ಟಲಾಗಿದ್ದವು. ವಿವಿಧ ಅಳತೆ ಮತ್ತು ವಿನ್ಯಾಸದ ಸು. 19 ನೀರಿನ ತೊಟ್ಟಿಗಳನ್ನು ಇಲ್ಲಿ ಹರಪ್ಪ ಜನರು ಕಟ್ಟಿದಂತೆ ಕಾಣುತ್ತದೆ. ಇವು ನಗರದ ನಾಲ್ಕು ಕಡೆಗಳನ್ನೂ ಆವರಿಸುವ ರೀತಿಯಲ್ಲಿ ಒಂದರನಂತರ ಒಂದು ಸ್ಥಿತವಾಗಿದ್ದು ಪರಸ್ಪರ ದೊಡ್ಡ ಏರಿಗಳಿಂದ ಬೇರ್ಪಟ್ಟಿದ್ದರೂ ಇವುಗಳಿಗೆ ನೀರು ಒದಗಿಸುವ ಕಾಲುವೆಗಳ ಮೂಲಕ ಜೋಡಿಸಲ್ಪಟ್ಟಿವೆ. 13ಮೀ ಇಳಿಜಾರಿನ ಪೂರ್ಣ ಪ್ರಯೋಜನ ಪಡೆಯುವ ಮೂಲಕ ನೀರಿಗೆ ಸಹಜವಾದ ಹರಿವನ್ನು ಕೊಡುವ ರೀತಿಯಲ್ಲಿ ಇವನ್ನು ಕಟ್ಟಲಾಗಿದೆ. ತುಂಬಿ ಹೆಚ್ಚಾದ ನೀರು ಕಲ್ಲಿನಿಂದ ಕಟ್ಟಿದ ಕಾಲುವೆಗಳ ಮೂಲಕ ಮುಂದಿನ ತೊಟ್ಟಿಗೆ ಹರಿದು ಹೋಗುತ್ತದೆ. ಕೇವಲ 7 ತೊಟ್ಟಿಗಳನ್ನು ಸಂಪೂರ್ಣವಾಗಿ ಬೆಳಕಿಗೆ ತರಲಾಗಿದೆ.

ದುರ್ಗದ ಪೂರ್ವ ದಿಕ್ಕಿನಲ್ಲಿರುವ ನೀರಿನ ತೊಟ್ಟಿ ಉಳಿದವುಗಳಿಗಿಂತ ವಿಶಾಲವಾಗಿದೆ. ಈ ತೊಟ್ಟಿಯ ತಳಬಂಡೆಗಲ್ಲಿನಲ್ಲಿ ಆಳವಾದ ಒಂದು ಬಾವಿಯನ್ನು ಕೊರೆಯಲಾಗಿದೆ. ವಾಯವ್ಯ, ಈಶಾನ್ಯ ಹಾಗೂ ನೈರುತ್ಯ ದಿಕ್ಕುಗಳಿಂದ ತೊಟ್ಟಿಯಲ್ಲಿ ಇಳಿಯಲು ಸೋಪಾನವನ್ನು ನಿರ್ಮಿಸಲಾಗಿದೆ.

ದುರ್ಗದ ದಕ್ಷಿಣ ದಿಕ್ಕಿನಲ್ಲಿ ವಿವಿಧ ಆಕಾರದ ಒಟ್ಟು ಐದು ನೀರಿನ ತೊಟ್ಟಿಗಳನ್ನು ಬೆಳಕಿಗೆ ತರಲಾಗಿದೆ. ಇವು ಪೂರ್ವ-ಪಶ್ಚಿಮವಾಗಿ ನೇರರೇಖೆಯಲ್ಲಿವೆ. ಈ ಪೈಕಿ 3ನೆಯ ತೊಟ್ಟಿಯ ನಿರ್ಮಾಣಶೈಲಿ ವಿಶೇಷವಾಗಿದೆ. ಇದರ ಘಟಕಗಳೆಂದರೆ ಒಂದು ಆಳವಾದ ಮಡು, ಅದರೊಳಗೆ ಕಟ್ಟಿರುವ ಅತ್ಯಂತ ಆಳವಾದ ನೀರಿನ ತೊಟ್ಟಿ, ಎರಡು ಸೋಪಾನಗಳು, ಮುಂದಿನ ತೊಟ್ಟಿಗೆ ನೀರನ್ನು ಸಾಗಿಸಲು ಬಂಡೆಗಲ್ಲಿನಲ್ಲಿ ಕೊರೆದ ಕಾಲುವೆಗಳು, ಈ ತೊಟ್ಟಿಯ ಸುತ್ತಲೂ ಭೂಮಟ್ಟದಲ್ಲಿ ಕಟ್ಟಿದ ಗೋಡೆ, ಅದರ ಹೊರಭಾಗದಲ್ಲಿರುವ ಕಾರ್ಯೋಪಯೋಗಿ ಕಟ್ಟೆ, ಬೇರೆ ಬೇರೆ ಕಡೆಯಿಂದ ಹರಿದುಬರುವ ನೀರನ್ನು ಸಂಗ್ರಹಿಸಿ ಈ ತೊಟ್ಟಿಗೆ ಜೋಡಿಸಿದ ಕಾಲುವೆ, ಈ ತೊಟ್ಟಿಯಿಂದ ದುರ್ಗದೊಳಗೆ ನೀರನ್ನು ಹರಿಸಲು ಕಟ್ಟಿರುವ ಗುಪ್ತಮಾರ್ಗ ಇತ್ಯಾದಿ. ಇದರ ಆಗ್ನೇಯ ಹಾಗೂ ವಾಯವ್ಯ ಮೂಲೆಗಳು ಹಾಗೂ ಮುಖ್ಯ ತೊಟ್ಟಿಯ ಗೋಡೆಗಳು ಒಂದೇ ಸಮಕ್ಷೇತ್ರದಲ್ಲಿರುವಂತೆ ಬಂಡೆಗಲ್ಲಿನಲ್ಲಿ ಕೊರೆಯಲಾಗಿದೆ. ಇಲ್ಲಿನ ವಿಶೇಷವಾದ ವಾಸ್ತುರಚನೆಗೆ ಮುಖ್ಯ ಕಾರಣವೆಂದರೆ ಆಗ್ನೇಯ ಹಾಗೂ ವಾಯವ್ಯ ಮೂಲೆಗಳಿಂದ ನೀರನ್ನು ಮೇಲಕ್ಕೆತ್ತಲು ಅನುಕೂಲವಾಗಲೆಂದು ಈ ಬಗೆಯ ರಚನೆ ಮಾಡಿರಲು ಸಾಧ್ಯ. ಅಲ್ಲದೆ ಈ ತೊಟ್ಟಿಯನ್ನು ಒಂದು ವಿಶೇಷ ಮಾರ್ಗದ ಮುಖಾಂತರ ದುರ್ಗದ ದಕ್ಷಿಣ ಸುರಕ್ಷಾಗೋಡೆಯಲ್ಲೊದಗಿಸಿದ ಗುಪ್ತದ್ವಾರಕ್ಕೆ ಜೋಡಿಸಲಾಗಿದ್ದು, ದುರ್ಗದ ನಿವಾಸಿಗಳು ಹಾಗೂ ಸಹಾಯಕ ಸಿಬ್ಬಂದಿ ಇದರ ನೀರನ್ನು ಉಪಯೋಗಿಸುತ್ತಿದ್ದ ರೆಂದು ತೋರುತ್ತದೆ. ಅರಸೊತ್ತಿಗೆಯ ಪಶುಪಾಲನೆಗಾಗಿಯೂ ಈ ನೀರನ್ನು ಉಪಯೋಗಿ ಸುತ್ತಿದ್ದಿರಬಹುದೆಂಬ ಅಭಿಪ್ರಾಯವಿದೆ. ಈ ತೊಟ್ಟಿಯನ್ನು ಇದರ ಪಶ್ಚಿಮ ದಿಕ್ಕಿನಲ್ಲಿದ್ದ 4ನೆಯ ತೊಟ್ಟಿಗೆ ಬಂಡೆಗಲ್ಲಿನಲ್ಲಿ 26ಮೀ ಉದ್ದವಾಗಿ ಕೊರೆದ ಕಾಲುವೆಯ ಮುಖಾಂತರ ಜೋಡಿಸಲಾಗಿದೆ. ಕಾಲುವೆಯ ಮೇಲ್ಭಾಗವನ್ನು ಚಪ್ಪಡಿಕಲ್ಲುಗಳೊಂದಿಗೆ ಸುಣ್ಣಮಿಶ್ರಿತ ಗಾರೆಯನ್ನುಪಯೋಗಿಸಿ ಮುಚ್ಚಲಾಗಿದೆ. 3ನೆಯ ಮತ್ತು 4ನೆಯ ತೊಟ್ಟಿಗಳನ್ನು ಹಾಸುಬಂಡೆ ಗಲ್ಲುಗಳನ್ನು ಕೊರೆದು ನಿರ್ಮಿಸಲಾಗಿದೆ. ಅವಶ್ಯಕವಿದ್ದೆಡೆ ಗೋಡೆಗಳನ್ನು ಕಟ್ಟಿ ಪೂರ್ಣ ಗೊಳಿಸಲಾಗಿದೆ.

ನಗರದೊಳಗೂ ನೀರು ವ್ಯವಸ್ಥೆಗೆ ಸಂಬಂಧಿಸಿದ ವಿಭಿನ್ನ ಪ್ರಕಾರದ ರಚನೆಗಳನ್ನು ಬೆಳಕಿಗೆ ತರಲಾಗಿದೆ. ಉದಾ: ನಗರದೊಳಗೆ ಶೇಖರವಾದ ಮಳೆನೀರನ್ನು ಹೊರಹಾಕುವ ನಾಲೆಗಳು, ಮನೆಗಳಿಂದ ಹಾಗೂ ಇನ್ನಿತರ ಕಟ್ಟಡಗಳ ಚಾವಣಿಯಿಂದ ಬರುವ ಮಳೆನೀರನ್ನು ಚಿಕ್ಕ ನಾಲೆಗಳಲ್ಲಿ ಹರಿಸಿ ಅನಂತರ ಒಳನಾಲೆಗಳ ಮುಖಾಂತರ ನೀರಿನ ತೊಟ್ಟಿಗಳಲ್ಲಿ ಸಂಗ್ರಹಿಸುವುದು, ಬಾವಿಗಳು ಹಾಗೂ ಅವುಗಳಿಗೆ ಹೊಂದಿ ಕಟ್ಟಲಾದ ನೀರಿನ ತೊಟ್ಟಿಗಳು ಇತ್ಯಾದಿ. ನಗರದ ಕೊಳಚೆ ನೀರನ್ನು ಹೊರಗೊಯ್ಯಲು ಪ್ರತ್ಯೇಕ ಒಳಚರಂಡಿ ಅಥವಾ ನೆಲದಲ್ಲಿ ಹೂತಿಟ್ಟ ಇಂಗುಜಾಡಿಗಳ ವ್ಯವಸ್ಥೆಯನ್ನು ಮಾಡಲಾಗಿದೆ.

ದುರ್ಗದೊಳಗಿರುವ ಚಿಕ್ಕಪುಟ್ಟ ನಾಲೆಗಳ ಸಮೂಹವನ್ನು ಒಂದು ಮುಖ್ಯ ನಾಲೆಗೆ ಜೋಡಿಸಲಾಗಿದೆ. ಈ ನಾಲೆ ದುರ್ಗದ ಒಳಭಾಗವನ್ನು ಪೂರ್ವ-ಪಶ್ಚಿಮವಾಗಿ ಎರಡು ಸಮಭಾಗಗಳಲ್ಲಿ ವಿಭಜಿಸುತ್ತದೆ. ಇದರ ಆಳ-ಅಗಲ ಎಷ್ಟಿದೆಯೆಂದರೆ ಅದರೊಳಗೆ ಒಬ್ಬ ವ್ಯಕ್ತಿ ಸರಾಗವಾಗಿ ನಡೆದಾಡಬಹುದು. ಈ ನಾಲೆಯ ಉದ್ದೇಶ ಮಳೆನೀರನ್ನು ದುರ್ಗದ ಹೊರಗೆ ಒಯ್ದು ನೀರಿನ ತೊಟ್ಟಿಗಳಿಗೆ ಜೋಡಿಸುವುದು. ಮುಖ್ಯನಾಲೆಗೆ ಅಲ್ಲಲ್ಲಿ ವಾಯುನಾಳ

ಗಳನ್ನು ಒದಗಿಸಲಾಗಿದೆ. ದುರ್ಗದೊಳಗೆ ಇಂಥ ಎರಡು ಮುಖ್ಯ ನಾಲೆಗಳಿವೆ. ಒಂದು ಪೂರ್ವ ಪ್ರವೇಶದ್ವಾರದ ಪಕ್ಕದಲ್ಲಿಂದ ಪ್ರಾರಂಭವಾಗಿದ್ದರೆ ಇನ್ನೊಂದು ಉತ್ತರದಿಕ್ಕಿನ ಪ್ರವೇಶದ್ವಾರದ ಸಮೀಪದಿಂದ ಪ್ರಾರಂಭವಾಗುತ್ತದೆ. ಈ ಎರಡು ನಾಲೆಗಳೂ ದುರ್ಗದ ಮಧ್ಯ ಭಾಗದಲ್ಲಿ ಸಂಧಿಸಿ ಪಶ್ಚಿಮದ್ವಾರದೆಡೆಗೆ ಹರಿದು, ಮುಂದೆ ದುರ್ಗದ ನೈರುತ್ಯ ದಿಕ್ಕಿನಲ್ಲಿ ಪೂರ್ವದಿಕ್ಕಿನಿಂದ ಬಂದ ಮತ್ತೊಂದು ನಾಲೆಯನ್ನು ಒಳಗೊಂಡು, ಪಶ್ಚಿಮ ಸುರಕ್ಷಾಗೋಡೆಯಡಿಯಿಂದ ಹೊರಗೆ ಹರಿಯುತ್ತದೆ. ಅನಂತರ ಈ ನೀರು ಬಯಲ ಭಾಗವನ್ನು ಕ್ರಮಿಸಿ ಬೇರೊಂದು ತೊಟ್ಟಿಯನ್ನು ಸೇರುತ್ತದೆ.

ಬೃಹತ್ ಕ್ರೀಡಾಂಗಣದ ಪಶ್ಚಿಮದ್ವಾರದಡಿಯಲ್ಲಿ ಕಟ್ಟಿರುವ ಕಾಲುವೆ ಕ್ರೀಡಾಂಗಣದಿಂದ ಹರಿದುಬರುವ ಎರಡೂ ನಾಲೆಗಳ ಮಳೆನೀರನ್ನು ಹೊರಗೊಯ್ಯುತ್ತಿತ್ತು. ದುರ್ಗದಲ್ಲಿ ಮುಖ್ಯಕಾಲುವೆಗೆ ಒದಗಿಸಿದಂತೆ, ಇಲ್ಲಿಯೂ ಗಾಳಿತೂಬುಗಳನ್ನುಒದಗಿಸಲಾಗಿದೆ. ದುರ್ಗದ ನೈರುತ್ಯ ಭಾಗದಲ್ಲಿ ಚತುರಸ್ರಾಕಾರದ ಒಂದು ಬಾವಿ, ಎರಡು ನೀರಿನ ತೊಟ್ಟಿಗಳು ಹಾಗೂ ಇವುಗಳನ್ನು ಜೋಡಿಸುವ ಒಳನಾಲೆಗಳು, ಇನ್ನಿತರ ಸಂಬಂಧಿತ ಕಟ್ಟಡಗಳನ್ನೊಳಗೊಂಡ ಒಂದು ಸಂಕೀರ್ಣ ಕುತೂಹಲಕಾರಿಯಾದವು. ಇವುಗಳಲ್ಲದೆ ಚೌಕಾಕಾರದ ಸ್ನಾನದ ಜಗುಲಿಗಳು ಹಾಗೂ ಅಗ್ನಿಸ್ಥಾನಗಳನ್ನು ಗುರುತಿಸಲಾಗಿದೆ. ಕಪಿಲೆಯಿಂದ ಬಾವಿಯ ನೀರನ್ನು ಮೇಲೆತ್ತಲು ಬಾವಿಯ ಹಿಂಬದಿಯಲ್ಲಿ ಜಾಗವನ್ನು ಕಲ್ಪಿಸಲಾಗಿದೆ.

ತೊಟ್ಟಿಗಳ ಸಮೂಹ, ಬಾವಿಯ ಸಂಕೀರ್ಣ ಇತ್ಯಾದಿ ಕೇವಲ ಲೌಕಿಕ ಆವಶ್ಯಕತೆಯನ್ನು ಪೂರೈಸುವುದೊಂದೇ ಅಲ್ಲದೆ ಪಾರಲೌಕಿಕ ವಿಷಯವನ್ನೊಳಗೊಂಡು ಪೂಜಾವಿಧಿಗಳ ಸ್ಥಾನಗಳೂ ಆಗಿದ್ದವೆಂದು ಉತ್ಖನನಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ಪ್ರದೇಶದಲ್ಲಿ ನೀರಿನ ಅಭಾವವಿದ್ದ ಕಾರಣ ಆದಿಹರಪ್ಪ ಜನರು ಕಾಲಾಂತರದಲ್ಲಿ ತಮ್ಮ ಅನುಭವ ಹಾಗೂ ಜಲಧರ್ಮಶಾಸ್ತ್ರದ ಜ್ಞಾನವನ್ನಳವಡಿಸಿಕೊಂಡು ವಿಶೇಷ ವ್ಯವಸ್ಥೆಯಿಂದ ನೀರನ್ನು ಕೇವಲ ಸಂಗ್ರಹಿಸುವುದೊಂದೇ ಅಲ್ಲದೆ ಸಮಾಜಕ್ಕಿರುವ ಅದರ ಆವಶ್ಯಕತೆ ಹಾಗೂ ಸದುಪಯೋಗದ ಮಾದರಿಯನ್ನು ಹಾಕಿಕೊಟ್ಟಿದ್ದಾರೆಂದರೆ ಉತ್ಪ್ರೇಕ್ಷೆಯಾಗದು. ಈ ನಗರಕ್ಕೆ ಅವಶ್ಯಕತೆಯಿದ್ದ ನೀರಿನ ಪೂರೈಕೆಗಾಗಿ ಆರಂಭದಿಂದಲೇ ತೊಟ್ಟಿಗಳನ್ನು ಕಟ್ಟಿ ನೀರನ್ನು ಸಂಗ್ರಹಿಸಲು ಶಾಸಕವರ್ಗ ಪ್ರಯತ್ನಿಸಿದ್ದಿರಬಹುದು. ಆದರೆ ಪುರಾವೆಗಳ ಪ್ರಕಾರ ಈ ನಗರದ 3ನೆಯ ಹಂತದಲ್ಲಿ ತೊಟ್ಟಿಗಳ ನಿರ್ಮಾಣಕಾರ್ಯ ಆರಂಭವಾಗಿತ್ತು. ಮೇಲೆ ವಿವರಿಸಿದ ನೀರು ಸರಬರಾಜಿನ ವ್ಯವಸ್ಥೆ ನಾಲ್ಕನೆಯ ಹಂತದ್ದಾಗಿದೆ. 5ನೆಯ ಹಂತದಲ್ಲಿ ವಿನಾಶಕಾರಿ ಮಹಾಪೂರದಿಂದಾಗಿ ಈ ತೊಟ್ಟಿಗಳು ನಿರುಪಯುಕ್ತವಾದುವು. (ಎಲ್.ಎಸ್.ಆರ್.)

ಧೋಲಾವೀರದ ಸಿಂಧೂ-ಸರಸ್ವತಿ ನಾಗರಿಕತೆಯ ಅದ್ಭುತ ಅಂಶಗಳಲ್ಲಿ ಸಮಾಧಿಗಳ ವಾಸ್ತುಶಿಲ್ಪವೂ ಒಂದು. ನಗರದ ಪಶ್ಚಿಮಭಾಗದಲ್ಲಿ ಸ್ಮಶಾನವಿದೆ. ವೈವಿಧ್ಯಮಯವಾದ ಸ್ಮಾರಕಗಳಲ್ಲಿ ಆಯತಾಕಾರ, ವೃತ್ತಾಕಾರದವೂ ಸೇರಿವೆ. ಅವುಗಳಲ್ಲಿ ಹಲವು ಉತ್ತರ-ದಕ್ಷಿಣ, ಈಶಾನ್ಯ-ನೈರುತ್ಯ ದಿಕ್ಕಿನ ನೇರಕ್ಕಿವೆಯಾದರೂ ಮತ್ತೆ ಹಲವು ಪೂರ್ವ-ಪಶ್ಚಿಮಕ್ಕಿವೆ. ಇದು ಖಂಡಿತವಾಗಿ ಹರಪ್ಪ ಸಂಸ್ಕೃತಿಯ ಲಕ್ಷಣವಲ್ಲ. ಇದಕ್ಕಿಂತ ಕುತೂಹಲಕಾರಿಯಾದ ವೆಂದರೆ, ಆರಂಭಕಾಲದ ಬೌದ್ಧಸ್ತೂಪಗಳನ್ನು ನೆನಪಿಸುವ ಗುಮ್ಮಟಾಕಾರದ ಮಣ್ಣಿನ ಇಟ್ಟಿಗೆಯ ರಚನೆಗಳು. ಇವುಗಳಲ್ಲಿ ಎರಡರ ಉತ್ಖನನ ಪೂರ್ಣಗೊಂಡಿದೆ. ಬಂಡೆಕಡಿದು ಮಾಡಿದ ದೊಡ್ಡ ಕೋಣೆಗಳ ಮೇಲಿರುವ ಇವುಗಳು ಅರೆಯಿರುವ ಅಥವಾ ಇಲ್ಲದ ಚಕ್ರದ ವಿನ್ಯಾಸದಲ್ಲಿವೆ. ಯಾವ ಸಮಾಧಿಯೊಳಗೂ ಅಸ್ಥಿಪಂಜರಗಳಿಲ್ಲ; ಆದರೂ ಅವುಗಳಲ್ಲಿ ಸಮಾಧಿ ಸಾಮಗ್ರಿಗಳನ್ನು, ಮುಖ್ಯವಾಗಿ ಮಣ್ಪಾತ್ರೆಗಳನ್ನು ಕಾಣಬಹುದು. ಒಂದು ಗುಮ್ಮಟದೊಳಗೆ ಎರಡು ಬದಿಗಳಲ್ಲೂ ಕೊಕ್ಕೆಯಿರುವ ತಾಮ್ರದ ತಂತಿಯಲ್ಲಿ ಪೋಣಿಸಿದ ಸ್ಟಿಯಟೈಟ್ ಮಣಿಗಳ ಸರ, ಒಂದು ಚಿನ್ನದ ಬಳೆ, ಚಿನ್ನದ ಗಿಲೀಟಿರುವ ಮಣಿಗಳು, ಇತರ ಮಣಿಗಳು ವಿಶೇಷವಾಗಿ ತಯಾರಿಸಿದ ಮಣ್ಪಾತ್ರೆಗಳೊಂದಿಗೆ ಕಂಡುಬಂದಿವೆ. ಅರೆಯಿರುವ ಅಥವಾ ಇಲ್ಲದ ಚಕ್ರದ ವಿನ್ಯಾಸ ಶತಪಥ ಬ್ರಾಹ್ಮಣ ಮತ್ತು ಶುಲ್ಬಸೂತ್ರದಲ್ಲಿ ಬರುವ ಶರ-ರಥ-ಚಕ್ರ-ಚಿತಿ ಮತ್ತು ಸಪ್ರಧಿ-ರಥ-ಚಕ್ರ-ಚಿತಿಯನ್ನು ನೆನಪಿಸುತ್ತವೆ. ಒಂದೇ ಒಂದು ಸಮಾಧಿಯಲ್ಲಿ ಅಸ್ಥಿಪಂಜರವಿದೆ. ಈ ಸಮಾಧಿಯೊಳಗೆ ತಾಮ್ರದ ಕನ್ನಡಿ ದೊರೆತಿದೆ. ಸಣ್ಣ ಸಮಾಧಿಗಳಲ್ಲಿ ನೆಲದಡಿಯ ಕೋಣೆಗಳಿವೆ ಅಥವಾ ಕಲ್ಲುದಿಬ್ಬ/ವೃತ್ತಾಕಾರ/ಅರ್ಧವೃತ್ತಾಕಾರದ ಆವರಣದೊಳಗೆ ಹಲವು ಸಮಾಧಿಗಳಿವೆ. ಭಿನ್ನ ಆಚರಣೆಗಳನ್ನುಳ್ಳ ಭಿನ್ನ ಜನಾಂಗ, ಬುಡಕಟ್ಟುಗಳಿಗೆ ಸೇರಿದವರಿಂದಾದ ಸಮಾಜ ಹರಪ್ಪ ಜನರದಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. (ಬಿ.ಆರ್.ಎಸ್.)

# ನ

**ನಂದರು:** ಮಗಧ ಸಾಮ್ರಾಜ್ಯವನ್ನು ಆಳಿದ ರಾಜರು. ಇವರಿಗೂ ಮೊದಲು ಆಳಿದ ದೊರೆ ಮಹಾನಂದಿಗೆ ಶೂದ್ರ ಹೆಂಗಸಿನಲ್ಲಿ ಜನಿಸಿದ ಮಹಾಪದ್ಮಾನಂದ ಇವರಲ್ಲಿ ಮೊದಲಿಗನೆನ್ನಲಾಗಿದೆ. ಈ ವಿಷಯವಾಗಿ ಭಿನ್ನಾಭಿಪ್ರಾಯಗಳಿವೆಯಾದರೂ ಎಲ್ಲ ಗ್ರಂಥಗಳೂ ನಂದರು ಶೂದ್ರಕುಲೋತ್ಪನ್ನರೆಂಬ ಬಗ್ಗೆ ಒಮ್ಮತ ಹೊಂದಿವೆ. ಇವರ ಬಗ್ಗೆ ಪುರಾಣಗಳು, ಜೈನ ಹಾಗೂ ಬೌದ್ಧ ಗ್ರಂಥಗಳಲ್ಲಿ ಅನೇಕ ವಿವರಗಳನ್ನು ನೀಡುತ್ತವೆ.

ಮಹಾಪದ್ಮಾನಂದ ಪ್ರ.ಶ.ಪೂ.ಸು.362ರಲ್ಲಿ ಪಾಟಲೀಪುತ್ರದಲ್ಲಿ ಸಿಂಹಾಸನವೇರಿದ. ಇವನ ಅನಂತರ ಈತನ ಎಂಟು ಜನ ಮಕ್ಕಳು ಕ್ರಮವಾಗಿ ರಾಜ್ಯವಾಳಿದರು. ಇವರು ನವನಂದರೆಂದೇ ಪ್ರಸಿದ್ಧರಾಗಿದ್ದಾರೆ. ಮಹಾಪದ್ಮಾನಂದ ಸು.28 ವರ್ಷ ಆಳಿಕೆ ನಡೆಸಿದಂತೆ ತಿಳಿದುಬರುತ್ತದೆ. ನಂದರ ಆಳಿಕೆ ಒಟ್ಟು 155 ವರ್ಷಗಳೆಂದು ಜೈನ ಗ್ರಂಥಗಳೂ 100 ವರ್ಷಗಳೆಂದು ಪುರಾಣಗಳೂ ತಿಳಿಸುತ್ತವೆ. ಆದರೆ ತಂದೆಮಕ್ಕಳ ಎರಡು ತಲೆಮಾರುಗಳಿಗೆ ಈ ಅವಧಿ ತೀರ ಹೆಚ್ಚಾದಂತೆ ತೋರುತ್ತದೆ. ಸಿಂಹಳದ ಕೆಲವು ಗ್ರಂಥಗಳಲ್ಲಿ ನಂದರ ಆಳಿಕೆ ಒಟ್ಟು 40 ವರ್ಷಗಳೆಂದು ಸೂಚಿಸಲಾಗಿದೆ. ಇದೇ ಸತ್ಯಕ್ಕೆ ಸಮೀಪವಾದದ್ದೆಂದು ಇತಿಹಾಸಕಾರರ ಅಭಿಪ್ರಾಯ. ಪ್ರ.ಶ.ಪೂ.322ರಲ್ಲಿ ಚಂದ್ರಗುಪ್ತ ಮೌರ್ಯ ಚಾಣಕ್ಯನ ಸಹಾಯದಿಂದ ಕೊನೆಯ ನಂದ ದೊರೆ ಧನನಂದನನ್ನು ಸೋಲಿಸಿ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ.

ನಂದರು ಶೂದ್ರಕುಲೋತ್ಪನ್ನರಾದ್ದರಿಂದ ಅಂದಿನ ಸಮಾಜದಲ್ಲಿ ಇವರಿಗೆ ಹೆಚ್ಚಿನ ಗೌರವ ದೊರೆಯಲಿಲ್ಲ. ಎಂತಲೇ ಇವರು ತಮ್ಮ ಸಾಮ್ರಾಜ್ಯವನ್ನು ಧನ ಮತ್ತು ಸೈನ್ಯಬಲದಿಂದ ಬೆಳೆಸಿದರು. ಸಾಮ್ರಾಜ್ಯದಾಹದ ಹುಚ್ಚಿನಲ್ಲಿ ಪ್ರಜೆಗಳ ಮೇಲೆ ವಿಪರೀತ ಕರಗಳನ್ನು ಹೇರಿದರು. ಇವರ ಸೈನ್ಯಬಲದ ಬಗ್ಗೆ ಅಲೆಗ್ಸಾಂಡರನ ಕಾಲದ ಬರೆಹಗಳಲ್ಲಿ ಉಲ್ಲೇಖ ಸಿಗುತ್ತದೆ. ಧನನಂದನನಲ್ಲಿ 20,000 ಅಶ್ವಗಳು, 2,00,000 ಕಾಲಾಳುಗಳು, 2,000 ರಥಗಳು ಮತ್ತು 3,000ಕ್ಕೂ ಹೆಚ್ಚು ಆನೆಗಳಿದ್ದುವೆನ್ನಲಾಗಿದೆ. ಈತನ ಬಲವನ್ನರಿತೇ ಅಲೆಕ್ಸಾಂಡರನ ಸೈನಿಕರು ಬಿಯಾಸ್ ನದಿಯಿಂದ ಮುಂದೆ ನುಗ್ಗಲು ಹೆದರಬೇಕಾಯಿತು. ಹಿಮಾಲಯದಿಂದ ನರ್ಮದೆಯವರೆಗೆ ಮತ್ತು ಬಿಯಾಸ್‌ನಿಂದ ಕಳಿಂಗದವರೆಗೆ ನಂದರ ಸಾಮ್ರಾಜ್ಯ ಹರಡಿತ್ತು. ವಿಶಾಲವಾದ ಸಾಮ್ರಾಜ್ಯದ ಏಕೀಕರಣ, ಆಡಳಿತ ಸುಧಾರಣೆ-ಇವು ನಂದರ ಕೊಡುಗೆಗಳು. ನಂದರ ಕ್ರೂರ ಆಡಳಿತಕ್ಕೆ ಒಳಗಾಗಿದ್ದ ಜನತೆಯ ಅತೃಪ್ತಿಯ ಉಪಯೋಗ ಪಡೆದುಕೊಂಡು ಚಂದ್ರಗುಪ್ತ ಮೌರ್ಯ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದ. (ಸಿ.ಕೆ.ಎನ್.)

**ನಗರ್:** ಪಂಜಾಬ್ ರಾಜ್ಯದ ಜಲಂಧರ್ ಜಿಲ್ಲೆಯಲ್ಲಿ ಫಿಲ್ಲೋರ್‌ಗೆ 9ಕಿಮೀ ದೂರದಲ್ಲಿರುವ ಪುರಾತತ್ತ್ವ ನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಜೆ.ಪಿ. ಜೋಷಿಯವರು ಉತ್ಖನನ ನಡೆಸಿ ಮೂರು ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದ್ದಾರೆ. 1ನೆಯ ಹಂತದಲ್ಲಿ ಬೂದುಬಣ್ಣದ ವರ್ಣಚಿತ್ರಿತ ಮಣ್ಪಾತ್ರೆಗಳು, ಅಂತ್ಯ ಹರಪ್ಪ ಕಾಲದ ಕೆಂಪು ಮಣ್ಪಾತ್ರೆಗಳು, ಅರ್ಧವರ್ತುಲ ವಿನ್ಯಾಸದ ಗುಡಿಸಲಿನ ಅವಶೇಷಗಳು, ಧಾರ್ಮಿಕ ಸಂಪ್ರದಾಯಕ್ಕೆ ಸಂಬಂಧಿಸಿದ್ದಿರಬಹುದಾದ ಎರಡು ಅಂಡಾಕಾರದ ಮಣ್ಣಿನ ಕಟ್ಟಡಗಳು, ತಾಮ್ರದ ಉಪಕರಣಗಳು, ಎಲುಬಿನ ಕಡ್ಡಿ, ಸುಡಾವೆಮಣ್ಣಿನ ಕಿವಿ ಆಭರಣಗಳು ಮತ್ತು ಪ್ರಾಣಿಗೊಂಬೆಗಳು, ಮಣಿ ಮತ್ತು ಬಳೆಗಳು ದೊರೆತಿವೆ. 2ನೆಯ ಹಂತದಲ್ಲಿ ಕುಷಾಣರ ಕಾಲದ ಮಣ್ಪಾತ್ರೆಗಳು, ಸುಟ್ಟ ಮಣ್ಣಿನ ವಸ್ತುಗಳು ಮತ್ತು ನಾಣ್ಯಗಳು ದೊರೆತಿವೆ. 3ನೆಯ ಶತಮಾನದ ಲಕ್ಷಣಗಳನ್ನೊಳಗೊಂಡ ಶ್ರೀಮಹಾಸೇನಾಪತಿ ರಾಮುಗುಪ್ತಸ್ಯ ಎಂಬ ಹೆಸರುಳ್ಳ ಸುಟ್ಟಮಣ್ಣಿನ ಮುದ್ರೆ ದೊರಕಿದೆ. 3ನೆಯ ಹಂತದಲ್ಲಿ ಶ್ರೀಮಂತವಾಗಿಯೂ ಸಮೃದ್ಧವಾಗಿಯೂ ಇದ್ದ, ಹೊಳಪಿನ ಕಪ್ಪು ಮಡಕೆಗಳುಳ್ಳ ಮಧ್ಯಕಾಲೀನ ವಸತಿಯಿತ್ತು. (ಸಿ.ಕೆ.ಎಂ.)

**ನಗರಿ:** ರಾಜಸ್ತಾನ ರಾಜ್ಯದ ಚಿತ್ತೋರ್‌ಗಡ ಜಿಲ್ಲಾಕೇಂದ್ರದಿಂದ 13 ಕಿಮೀ ಉತ್ತರಕ್ಕೆ ಬೇರಾಚ್ ನದಿಯ ಬಲದಂಡೆಯ ಮೇಲಿರುವ ಪಟ್ಟಣ. ಪ್ರಾಚೀನ ಕಾಲದ ಶಿಬಿಗಳ ಜನಪದದ ರಾಜಧಾನಿಯೆನಿಸಿದ್ದ ಮಧ್ಯಮಿಕಾ ಎಂಬ ಪಟ್ಟಣವೇ ಇಂದಿನ ನಗರಿ ಎಂದು ಗುರುತಿಸಲಾಗಿದೆ. ಇದೊಂದು ವಿಶಾಲವಾದ ಕೋಟೆಯಿಂದ ರಕ್ಷಿತವಾದ ನಗರವಾಗಿತ್ತು. 1887 ರಲ್ಲಿ ಕವಿರಾಜ ಶ್ಯಾಮಲದಾಸ ಅವರು ಗೋಸುಂದಿ ಎಂಬ ನೆಲೆಯಲ್ಲಿ ನಡೆಸಿದ ಅನ್ವೇಷಣೆಯಿಂದ ಪ್ರ.ಶ.ಪೂ.3ನೆಯ ಶತಮಾನದ ವೈಷ್ಣವ ಶಾಸನಗಳು ಬೆಳಕಿಗೆ ಬಂದುವು. ಅನಂತರದಲ್ಲಿ ಡಿ.ಆರ್.ಭಂಡಾರ್ಕರ್ ಮತ್ತೆ 3 ಶಾಸನಗಳನ್ನು ಪತ್ತೆ ಮಾಡಿದರು. ಇವು ಪ್ರ.ಶ.5ನೆಯ ಶತಮಾನದ ಮೊದಲನೆಯ ಭಾಗಕ್ಕೆ ಸೇರಿದವು. ಒಂದನೆಯ ಶಾಸನದಲ್ಲಿ ಸರ್ವತಾತ ಎಂಬಾತನು ಮಾಡಿದ ಅಶ್ವಮೇಧಯಾಗಗಳನ್ನು ಕುರಿತು ಪ್ರಸ್ತಾಪಿಸಿದೆ. ಎರಡನೆಯದರಲ್ಲಿ ವಾಜಪೇಯಯಾಗದ ಪ್ರಸ್ತಾಪವಿದೆ. ಮೂರನೆಯ ಶಾಸನ ವಿಷ್ಣುದೇವಾಲಯದ ನಿರ್ಮಾಣವನ್ನು ಕುರಿತದ್ದಾಗಿದೆ.

ಈ ನೆಲೆಯಲ್ಲಿ ಬಹಳಷ್ಟು ನಾಣ್ಯಗಳು ಸಿಕ್ಕಿವೆ. ಎ.ಸಿ.ಎಲ್.ಕಾರ್ಲೈಲ್‌ನಿಗೆ 175 ನಾಣ್ಯಗಳೂ ಭಂಡಾರ್ಕರ್‌ಗೆ 24 ನಾಣ್ಯಗಳೂ ಸಿಕ್ಕಿದ್ದುವು. ಇವುಗಳ ಪೈಕಿ ಕೆಲವು ಮುದ್ರಾಂಕಿತ ನಾಣ್ಯಗಳು ಹಾಗೂ ಇನ್ನು ಕೆಲವು ಕ್ಷತ್ರಪರವು. 4 ನಾಣ್ಯಗಳು ಗಣರಾಜ್ಯವೆನಿಸಿದ್ದ

ಶಿಬಿಜನಪದಕ್ಕೆ ಸೇರಿದವು. ಈ ನಾಣ್ಯಗಳ ಮೇಲಿರುವ ಮಝುಮಿಕಾಯೇ ಸಿವಿ–ಜನಪದಸ ಎಂಬ ಬರೆಹದಿಂದ ನಗರಿಯನ್ನು ಮಧ್ಯಮಿಕಾ ಪಟ್ಟಣವೆಂದು ಗುರುತಿಸಲಾಗಿದೆ. ಆರ್.ಡಿ. ಭಂಡಾರ್ಕರ್ (1920) ಈ ನೆಲೆಯಲ್ಲಿ ಸೀಮಿತ ಉತ್ಖನನ ನಡೆಸಿದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಕೆ.ವಿ.ಸೌಂದರರಾಜನ್ ಅವರು ಕ್ರಮಬದ್ಧವಾದ ಉತ್ಖನನ ನಡೆಸಿದರು (1962–63). ಭಂಡಾರ್ಕರ್ ಅವರಿಗೆ ಸಿಕ್ಕಿದ ಹಲವಾರು ಬಿಡಿಶಿಲ್ಪಗಳಲ್ಲಿ ಕೆತ್ತನೆ ಕೆಲಸ ಮಾಡಿದ್ದ 2 ಕಂಬಗಳು ಗುಪ್ತರ ಕಾಲದವು. ಇವುಗಳ ಬೋದಿಗೆಗಳ ಮೇಲೆ ಅನುಕ್ರಮವಾಗಿ ಸಿಂಹ ಮತ್ತು ಗೂಳಿಗಳ ಶಿಲ್ಪಗಳಿವೆ. ಇನ್ನಿತರ ಶಿಲ್ಪಗಳಲ್ಲಿ ಕಟಾಂಜನಗಳು, ಕುಂಬೆಕಲ್ಲುಗಳನ್ನು ಹೆಸರಿಸಬಹುದು. ಒಂದು ಶಿಲ್ಪ ಕುದುರೆಯ ಮೇಲೆ ಕುಳಿತಿರುವ ರೇವಂತನನ್ನು ಚಿತ್ರಿಸುತ್ತದೆ. ಇಟ್ಟಿಗೆಗಳ ರಚನೆಯಲ್ಲಿ ಖರ್ಜೂರಮರದಂತಹ ಅಲಂಕರಣೆಗಳನ್ನು ಕಾಣಬಹುದು. ಕೆಳಭಾಗದಲ್ಲಿ ಆಸನದ ಮೇಲೆ ಕುಳಿತಿರುವ ಮಾನವ ಮೂರ್ತಿ, ತಾವರೆ, ಹಾರುತ್ತಿರುವ ಪಕ್ಷಿಗಳು, ಮಾನವ ಕಲೆಗಳು–ಇವು ದೇವಾಲಯದ ವಾಸ್ತುಶಿಲ್ಪದ ರಚನಾ ಭಾಗಗಳೆನಿಸಿವೆ.

1962–63ರ ಉತ್ಖನನದಲ್ಲಿ 3 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ. ಮೊದಲನೆಯ 2 ಹಂತಗಳು ಕೋಟೆಗಳ ನಿರ್ಮಾಣಕ್ಕಿಂತ ಮುಂಚಿನವು. ಸುಟ್ಟ ಇಟ್ಟಿಗೆಗಳ ಕಟ್ಟಡ ಕಂಡುಬಂದಿಲ್ಲವಾದರೂ ಸುಣ್ಣಕಲ್ಲಿನ ಕಟ್ಟಡಗಳು ಕಂಡುಬಂದಿವೆ. ಕೆಂಪು ಮತ್ತು ಬೂದುಬಣ್ಣದ ಮಣ್ಪಾತ್ರೆಗಳು ಬಳಕೆಯಲ್ಲಿದ್ದುವು. ಉತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆಗಳು ಗಣನೀಯವಾಗಿಲ್ಲ; ಕೆಂಪು ಮಣ್ಪಾತ್ರೆಗಳು ಅಧಿಕ ಬಳಕೆಯಲ್ಲಿದ್ದವು. ಪ್ರ.ಶ.ಪೂ.400ರಲ್ಲಿ ಇಲ್ಲಿ ಜನಜೀವನ ಆರಂಭವಾದಂತೆ ತೋರುತ್ತದೆ. 3ನೆಯ ಹಂತದಲ್ಲಿ ಹೊಳಪಿನ ಕೆಂಪು ಮಣ್ಪಾತ್ರೆಗಳಿರುವುದು ಗಮನಾರ್ಹ. ಈ ನೆಲೆಯಲ್ಲಿ ಸಿಕ್ಕಿರುವ ಇನ್ನಿತರ ಅವಶೇಷಗಳಿವು: ಶುಂಗ ಮತ್ತು ಗುಪ್ತ ಶೈಲಿಯಲ್ಲಿರುವ ಸುಟ್ಟಮಣ್ಣಿನ ಮಾನವ ಹಾಗೂ ಪ್ರಾಣಿ ಗೊಂಬೆಗಳು, ಆಟಿಗೆಗಳು, ಉಜ್ಜುವ ಕಲ್ಲುಗಳು, ಸ್ವಸ್ತಿಕ ಚಿಹ್ನೆಯಿರುವ ಒಂದು ದಂತಮುದ್ರೆ, ಗೂಳಿಯ ಸಂಕೇತಗಳು, ತಾಮ್ರದ ಆಂಟಿಮನಿ ಕಡ್ಡಿಗಳು ಮತ್ತು ಉಂಗುರಗಳು. ಇಲ್ಲಿಯ ಕೋಟೆಯ ನಿರ್ಮಾಣ ಬಹುಶಃ ಗುಪ್ತರಕಾಲದಲ್ಲಿ ಆದಂತೆ ಕಾಣುತ್ತದೆ. (ಜಿ.ಎಸ್.)

**ನಗರೀಕರಣ:** ಭಾರತದಲ್ಲಿ ಸುಲ್ತಾನರ ರಾಜ್ಯಭಾರದ ಉದಯದೊಂದಿಗೆ ಪಟ್ಟಣ ಹಾಗೂ ನಗರಗಳ ಬೆಳವಣಿಗೆ ಆರಂಭವಾಯಿತು. ವಿದೇಶಿ ಪ್ರವಾಸಿಗಳ ವರದಿಗಳು ಮತ್ತು ಸಮಕಾಲೀನ ದಾಖಲೆಗಳು ನಗರೀಕರಣದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ಒಂದು ಕಾಲಘಟ್ಟದಲ್ಲಿ ಜನಸಂಖ್ಯೆಯ ಕ್ಷೇತ್ರವಾರು ಸಂಯೋಜನೆ ಪರಿಣಾಮವಾಗಿ ಉದ್ಭವಿಸುವ ಪರಿಸ್ಥಿತಿಯೇ ನಗರೀಕರಣಕ್ಕೆ ಕಾರಣವಾಗಬಹುದು. ಸಾಮಾನ್ಯವಾಗಿ ಪಟ್ಟಣ ಮತ್ತು ನಗರಗಳ ವರ್ಗೀಕರಣವನ್ನು ಹೀಗೆ ಮಾಡಬಹುದು: ಆಡಳಿತ ಕೇಂದ್ರಗಳು; ಮತೀಯ ಕೇಂದ್ರಗಳು; ಸೈನಿಕ ಕೇಂದ್ರಗಳು; ವ್ಯಾಪಾರ/ವಾಣಿಜ್ಯ ಕೇಂದ್ರಗಳು; ಸಾಂಸ್ಕೃತಿಕ ಕೇಂದ್ರಗಳು.

ಸುಲ್ತಾನರ ರಾಜ್ಯಭಾರ ಕಾಲದಲ್ಲಿ ಪಟ್ಟಣ ಮತ್ತು ನಗರಗಳ ಹುಟ್ಟು ಮತ್ತು ಬೆಳವಣಿಗೆಗೆ ಹಲವಾರು ಕಾರಣಗಳಿವೆ. ನುರುಲ್ ಹಾಸನ್‌ರ ಪ್ರಕಾರ ನಗರೀಕರಣ 13ನೆಯ ಶತಮಾನದಲ್ಲಿ ಆರಂಭವಾಗಿ 16–17ನೆಯ ಶತಮಾನದವರೆಗೆ ಮುಂದುವರಿಯಿತು. ಆ ಕಾಲದಲ್ಲಿ ಪ್ರಪಂಚದ ದೊಡ್ಡ ಮತ್ತು ಉತ್ತಮ ನಗರಗಳಿಗೆ ಸರಿಸಮಾನವಾದ ಅನೇಕ ನಗರಗಳು ಭಾರತದಲ್ಲಿದ್ದುವು. 13 ಮತ್ತು 14ನೆಯ ಶತಮಾನಗಳಲ್ಲಿ ಆದ ಅನೇಕ ವಿಶೇಷ ನೂತನ ಶೋಧನೆಗಳು ಸಾಕಷ್ಟು ತಾಂತ್ರಿಕ ಬದಲಾವಣೆಗಳನ್ನು ತಂದುವು. ಉದಾ: 13ನೆಯ ಶತಮಾನದಲ್ಲಿ ಚರಕದ ಬಳಕೆ ಬಟ್ಟೆ ಉತ್ಪಾದನೆಯಲ್ಲಿ ಕ್ರಾಂತಿಯನ್ನೇ ಮಾಡಿತು. ಪರ್ಷಿಯನ್ ಚಕ್ರ ಎಂದು ಪ್ರಸಿದ್ಧವಾಗಿದ್ದ ನೂಲು ತೆಗೆಯುವ ಚರಕವನ್ನು 13 ಮತ್ತು 14ನೆಯ ಶತಮಾನಗಳಲ್ಲಿ ಬಟ್ಟೆ ತಯಾರಿಕೆಗೆ ಹೆಚ್ಚಾಗಿ ಬಳಸತೊಡಗಿದರು. 17ನೆಯ ಶತಮಾನಕ್ಕಾಗುವಾಗ ನೂಲು ತೆಗೆಯುವ ಚರಕದ ಬಳಕೆ ಎಷ್ಟು ಸಾಮಾನ್ಯವಾಗಿತ್ತೆಂದರೆ ಮೊಗಲರ ಸಣ್ಣ ಸಣ್ಣ ತೈಲಚಿತ್ರಗಳಲ್ಲಿ ಇವುಗಳನ್ನು ಕಾಣಬಹುದು. ಆ ಕಾಲದಲ್ಲಿ ಆವಿಷ್ಕಾರಗೊಂಡ ಹತ್ತಿಯನ್ನು ಬಾಚಲು ಉಪಯೋಗಿಸುತ್ತಿದ್ದ ಬಾಚಣಿಗೆ ಮತ್ತು ಒತ್ತುಸನ್ನೆ ಜೊತೆಗೆ ನೂಲುವ ಚಕ್ರದ ಬಳಕೆಯಿಂದ ಭಾರತ ಬಟ್ಟೆಯ ಉತ್ಪಾದನೆಯಲ್ಲಿ ಪ್ರಪಂಚದ ದೇಶಗಳ ಮುಂಚೂಣಿಯಲ್ಲಿದ್ದು ಉಗಿಯಂತ್ರ ಮತ್ತು ಕೈಗಾರಿಕಾ ಕ್ರಾಂತಿಯ ಆರಂಭದವರೆಗೆ ಹಾಗೆಯೇ ಮುಂದುವರಿಯಿತು. ಬಟ್ಟೆಯ ತಯಾರಿಕೆ, ರೇಷ್ಮೆ ಉತ್ಪಾದನೆ ಮತ್ತು ಇತರ ಗೃಹಕೈಗಾರಿಕೆಗಳ ಉತ್ಪಾದನೆ ನಗರೀಕರಣಕ್ಕೆ ಪ್ರೇರಕವಾದುವು.

ಮಧ್ಯಯುಗದಲ್ಲಿ ನಡೆದ ಜನಗಣತಿಯ ಪ್ರಕಾರ ಪಟ್ಟಣ ಮತ್ತು ನಗರಗಳ ಜನಸಂಖ್ಯೆಯ ನಿಷ್ಪತ್ತಿ 19 ಮತ್ತು 20ನೆಯ ಶತಮಾನಗಳಿಗೆ ಹೋಲಿಸಿದರೆ ಹೆಚ್ಚಿತ್ತು. ಪಾರಂಪರಿಕ ಪಟ್ಟಣಗಳಿಂದ ಜನ ಹಳ್ಳಿಗಳಿಗೆ ಸ್ಥಳಾಂತರಗೊಂಡುದೇ ಇದಕ್ಕೆ ಕಾರಣ. ದೆಹಲಿಯ ಮಹಮ್ಮದೀಯ ಅರಸೊತ್ತಿಗೆ ಹಾಗೂ ಮೊಗಲ್ ಸಾಮ್ರಾಜ್ಯದ ಸ್ಥಾಪನೆಯ ಕಾರಣಗಳಿಂದ ಸಂಭವಿಸುತ್ತಿದ್ದ ಯುದ್ಧಗಳಿಂದಾಗಿ ಸೈನ್ಯ ಪಾಳಯ ಮತ್ತು ದಂಡುಗಳ ಸ್ಥಾಪನೆಯಾಯಿತು. ಅಂತಹ ಹೆಚ್ಚಿನ ಸೈನಿಕ ಪಾಳಯಗಳು ಮುಂದೆ ಸಾಕಷ್ಟು ಜನಸಂಖ್ಯೆ ಹೊಂದಿದ ಪಟ್ಟಣಗಳಾದುವು. ಈ ಪಟ್ಟಣ ಮತ್ತು ನಗರಗಳು ಹೆಚ್ಚು ಕಾಲ ಉಳಿದುಕೊಂಡುವು. ನಗರೀಕರಣದ ಪರಿಣಾಮವಾಗಿ ಕೃಷಿಯಲ್ಲಿ ಆಹಾರ ಮತ್ತು ವಾಣಿಜ್ಯ ಉತ್ಪನ್ನಗಳಿಗೆ ಹಳ್ಳಿಗಳಲ್ಲಿ ಬೇಡಿಕೆ ಹೆಚ್ಚಿದುವು. ಕೃಷಿ ಉತ್ಪನ್ನಗಳನ್ನು ಹಳ್ಳಿಗಳಿಂದ ದೂರದ ಪಟ್ಟಣಗಳಿಗೆ ಕೊಂಡೊಯ್ಯುವ ಮಾರ್ಗಗಳಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ಪಟ್ಟಣಗಳು ಹುಟ್ಟಿಕೊಂಡವು. ಈ ಬದಲಾವಣೆಗಳಿಂದ ಭಾರತದ ವಿದೇಶೀ ವ್ಯಾಪಾರ ವೃದ್ಧಿಗೊಂಡು ಬಂದರುಗಳ ಸ್ಥಾಪನೆ ಮತ್ತು ಬೆಳವಣಿಗೆಗೆ ಕಾರಣವಾಯಿತು.

ಮಹಮ್ಮದೀಯ ಅರಸೊತ್ತಿಗೆ ಕಾಲದಲ್ಲಿ ಬಲವಾದ ರಾಜ್ಯಪದ್ಧತಿ ಹಾಗೂ ಹೆಚ್ಚಿನ ವಾಣಿಜ್ಯ ವ್ಯವಹಾರಗಳು ಆರಂಭವಾದುವು. ಮಧ್ಯಯುಗದ ರಾಜರು ದೊಡ್ಡ ಬಂಡವಾಳದ ನಿರ್ಮಾಣ ಕಾರ್ಯಗಳಿಗೆ ಸಂಪತ್ತನ್ನು ವಿನಿಯೋಗಿಸಿದರು. ಅಲಾಉದ್ದೀನ್ ಖಿಲ್ಜಿ ಸು.1 ಲಕ್ಷದಷ್ಟು ಜನರನ್ನು ಏಕಕಾಲಕ್ಕೆ ಕಟ್ಟಡ, ಮಾರ್ಗ ಹಾಗೂ ಕೋಟೆಗಳ ನಿರ್ಮಾಣಕ್ಕೆ ನಿಯೋಜಿಸಿದನೆಂದು ತಿಳಿದುಬರುತ್ತದೆ. ಇವುಗಳಲ್ಲದೆ ಫಿರೋಜ್‌ಷಾ ತುಗಲಕನ ಕಾಲದಲ್ಲಿ ಕೃಷಿಗಾಗಿ ಅಣೆಕಟ್ಟು ಮತ್ತು ಕಾಲುವೆಗಳ ನಿರ್ಮಾಣಕಾರ್ಯಗಳೂ ಸೇರಿ ಹೆಚ್ಚಿನ ಮಟ್ಟದ ಉದ್ಯೋಗಾವಕಾಶಗಳು ಹುಟ್ಟಿಕೊಂಡವು. ಪುರಾತನ ಪಳೆಯುಳಿಕೆಗಳು, ಮಹಮ್ಮದೀಯ ಅರಸರ ಕಾಲದ ದೆಹಲಿಯ ಸ್ಮಾರಕಗಳು, ಬೃಹತ್ ನಿರ್ಮಾಣಕಾರ್ಯಗಳಿಗೆ ಸಾಕ್ಷಿಯಾಗಿವೆ. ಅದೇ ರೀತಿಯಲ್ಲಿ ಮೊಗಲರ ಕಾಲದಲ್ಲಿಯೂ ಅರಮನೆಗಳು, ಗೋರಿಗಳು ಹಾಗೂ ಕೋಟೆಗಳ ನಿರ್ಮಾಣದ ಸಾಕ್ಷಿಗಳಿವೆ. ದೆಹಲಿಯ ಕೆಂಪುಕೋಟೆ, ಫತೇಪುರ್‌ಸಿಕ್ರಿ ಮತ್ತು ತಾಜಮಹಲ್ ರಾಜ್ಯದ ಖರ್ಚಿನಿಂದ ನಿರ್ಮಾಣಗೊಂಡಾಗ ದೊಡ್ಡಮಟ್ಟದ ಉದ್ಯೋಗಾವಕಾಶಗಳು ಒದಗಿಬಂದುವು.

ಮಧ್ಯಯುಗದಲ್ಲಿ ಡಾಕ, ಲಖನೌ, ಸೂರತ್, ಕೋಳಿಕೋಡ್, ಆಗ್ರ, ದೆಹಲಿ, ಮುರ್ಶಿದಾಬಾದ್, ಲಾಹೋರ್, ಪೆಷಾವರ್, ಅಹಮದನಗರ, ದೇವಗಿರಿ, ಖಂಬತ್, ಭಟ್ಕಳ, ಮಂಗಳೂರು, ಮಸಲಪಟ್ಟಣ, ಟ್ಯೂಟಿಕಾರಿನ್, ಕ್ವಿಲಾನ್, ಕಾಸಿಂಬಾಜಾರ್, ತಲಾಲ್ಪುರ್, ಬೆರಾರ್, ಖಾಂದೇಶ್, ವಿಜಯನಗರ, ಗೋಲ್ಕೊಂಡ, ಖೈರಾಬಾದ್, ಹೇಜ್ರಾ, ಗ್ವಾಲಿಯರ್, ಹಿಸ್ಸಾರಿಫೆರೋಜ, ಫರೂಕಾ, ಲುಧಿಯಾನ, ಫೈಜಾಬಾದ್ ಅಲ್ಲದೆ ಇನ್ನೂ ಅನೇಕ ಪಟ್ಟಣಗಳು ಹುಟ್ಟಿ ಬೆಳೆದುವು. ಕೆಲವು ಪಟ್ಟಣಗಳು ಕೈಗಾರಿಕಾ ಕೇಂದ್ರಗಳಾಗಿ ಅಥವಾ ಆಡಳಿತ ಕೇಂದ್ರಗಳಾಗಿ ಪ್ರಸಿದ್ಧವಾದುವು. ಅದೇ ರೀತಿ ಮತೀಯ ಪ್ರಾಮುಖ್ಯದಿಂದ ಕೆಲವು ಪಟ್ಟಣಗಳು ಜನರನ್ನು ಆಕರ್ಷಿಸಿದುವು. (ಎಸ್.ಜಿ.)

**ನಟೂಫಿಯನ್ ಸಂಸ್ಕೃತಿ:** ಪೂರ್ವ ಮೆಡಿಟರೇನಿಯನ್ ಪ್ರದೇಶದಲ್ಲಿದ್ದ ಸೂಕ್ಷ್ಮ ಶಿಲಾಯುಗ ಸಂಸ್ಕೃತಿ. ಪ್ಯಾಲಸ್ತೀನಿನ ವಾಡಿ ಎನ್.ನಾಟೂಫ್ ಎಂಬ ಸ್ಥಳದ ಹೆಸರಿನಿಂದ ಇದಕ್ಕೆ ಈ ಹೆಸರು ಬಂದಿದೆ. ಹಿಮಯುಗ ಮುಗಿದ ಅನಂತರ ಈ ಸಂಸ್ಕೃತಿ ಪ್ರಾರಂಭವಾಯಿತು. ಸಿರಿಯ, ಲೆಬನಾನ್, ಪ್ಯಾಲಸ್ತೀನ್ ಮುಂತಾದ ಪ್ರದೇಶಗಳಿಂದ ಈ ಸಂಸ್ಕೃತಿ ಕೆಳಗಿನ ಈಜಿಪ್ಟ್‌ವರೆಗೂ ಹರಡಿತ್ತು.

ನಟೂಫಿಯನ್ನರು ಮೆಡಿಟರೇನಿಯನ್ ಬುಡಕಟ್ಟಿಗೆ ಸೇರಿದ ಜನ. ಇವರನ್ನು ಸೆಮಿಟೊಹ್ಯಾಮಿಟಿಕ್ ಜನಾಂಗ ಎಂದು ಕರೆಯುವುದುಂಟು. ಸು.5 ಅಡಿ (1.50ಮೀ)ಗಿಂತ ಹೆಚ್ಚು ಎತ್ತರವಾಗಿದ್ದ ಈ ಜನರ ಶರೀರ ತೆಳುವಾಗಿದ್ದು ತಲೆ ಉದ್ದವಾಗಿತ್ತು. ಸಾಮಾನ್ಯವಾಗಿ ಗುಹಾವಾಸಿಗಳಾಗಿದ್ದ ಇವರು ಚಕಮಕಿ ಕಲ್ಲುಗಳಿಂದ ಮಾಡಿದ ಸೂಕ್ಷ್ಮವಾದ ಅಲಗು, ಮೊನೆ ಮತ್ತು ಅರ್ಧಚಂದ್ರಾಕೃತಿಯ ಉಪಕರಣಗಳನ್ನು ಉಪಯೋಗಿಸುತ್ತಿದ್ದರು. ಕೊರೆಯುಳಿಯ ಬಳಕೆ ಇವರಿಗೆ ತಿಳಿದಿತ್ತು. ಇವರು ಉಪಯೋಗಿಸುತ್ತಿದ್ದ ಉಪಕರಣಗಳಲ್ಲಿ ಕುಡುಗೋಲಿನ ಆಕಾರದ ಅಲಗುಗಳು ಪ್ರಧಾನವಾದುವು. ಬೇಟೆಗೆ ಇವರು ಬಿಲ್ಲುಬಾಣಗಳನ್ನು ಉಪಯೋಗಿಸುತ್ತಿದ್ದರಲ್ಲದೆ ಏಷ್ಯಖಂಡದ ತೋಳ ಜಾತಿಗೆ ಸೇರಿದ ನಾಯಿಯನ್ನೂ ಪಳಗಿಸುತ್ತಿದ್ದರು. ಮೀನುಗಳನ್ನು ಹಿಡಿಯಲು ಮೂಳೆಯಿಂದ ಮಾಡಿದ ಗಾಳಗಳನ್ನು ಬಳಸುತ್ತಿದ್ದರು. ಅಲ್ಪಸ್ವಲ್ಪ ವ್ಯವಸಾಯ ಮಾಡುತ್ತಿದ್ದರಾದರೂ ಪ್ರಧಾನವಾಗಿ ಮೀನುಗಾರಿಕೆ ಮತ್ತು ಬೇಟೆಯಿಂದಲೇ ಜೀವನ ನಡೆಸುತ್ತಿದ್ದರು. ಮೂಳೆಗಳಿಂದ ದಬ್ಬಳ, ಪದಕ ಮತ್ತು ಗುಂಡುಸೂಜಿಗಳನ್ನು ಇವರು ತಯಾರಿಸುತ್ತಿದ್ದರು.

ಈ ಜನರ ಗುಹಾಕಲೆ ಯುರೋಪಿನ ಮ್ಯಾಗ್ಡಲೇನಿಯನ್ ಕಲೆಯನ್ನು ಹೋಲುತ್ತದೆ. ಚಿಪ್ಪು, ಮೃಗಗಳ ಹಲ್ಲು ಮತ್ತು ಮೂಳೆಗಳಿಂದ ನಿರ್ಮಿಸಿದ ಆಭರಣಗಳನ್ನು ಇವರು ಧರಿಸುತ್ತಿದ್ದರು. ಇವರಲ್ಲಿ ಹೆಣವನ್ನು ಹೂಳುವ ಸಂಪ್ರದಾಯವಿತ್ತು. ಬಹುಶಃ ಈ ಜನ ಒಂದೇ ಸ್ಥಳದಲ್ಲಿ ಹೆಚ್ಚು ಸಮಯ ವಾಸಿಸುತ್ತಿದ್ದಿರಬೇಕು. ಶವ ಸಂಸ್ಕಾರಕ್ಕೆ ಕಲ್ಲಿನ ನೆಲ ಮತ್ತು ಗೋಡೆಯುಳ್ಳ ವೃತ್ತಾಕಾರದ ಗೋರಿಗಳನ್ನು ನಿರ್ಮಿಸುತ್ತಿದ್ದರು. ಪ್ರ.ಶ.ಪೂ.ಸು.8 ಸಾವಿರ ವರ್ಷಗಳ ಹಿಂದೆಯೇ ಇವರು ಕಾಡು ತಳಿಗಳ ಬಾರ್ಲಿ ಮತ್ತು ಇನ್ನಿತರ ಧಾನ್ಯಗಳನ್ನು ಬೆಳೆಯುತ್ತಿದ್ದರು. ಕಲ್ಲಿನ ಸೂಕ್ಷ್ಮ ಅಲಗುಗಳನ್ನು ಕೊಂಬಿನಾಕೃತಿಯ ಮೂಳೆಗೆ ಸಿಕ್ಕಿಸಿ ಬೆಳೆಯನ್ನು ಕೊಯ್ಯಲು ಕುಡುಗೋಲಾಗಿ ಬಳಸುತ್ತಿದ್ದರು. ಧಾನ್ಯವನ್ನು ಕುಟ್ಟಲು ಕಲ್ಲಿನ ಒನಕೆ ಮತ್ತು ಒರಳುಗಳನ್ನು ಉಪಯೋಗಿಸುತ್ತಿದ್ದರು. ಆದಿಕಾಲದ ನಟೂಫಿಯನರು ಆಡುಗಳನ್ನು ಸಾಕುತ್ತಿದ್ದರು. ಗೆಡ್ಡೆ, ಗೆಣಸು, ಮಾಂಸ ಮತ್ತು ಮೀನುಗಳನ್ನು ತಿನ್ನುತ್ತಿದ್ದರು. ಅನಂತರ ವ್ಯವಸಾಯವನ್ನು ಕಲಿತುಕೊಂಡರು. ಕುಡುಗೋಲಿನ ಹಿಡಿ ಮತ್ತು ಕಲ್ಲಿನ ಒನಕೆಗಳ ಮೇಲೆ, ವನ್ಯಪ್ರಾಣಿಗಳ ತಲೆ ಮತ್ತು ಗೊರಸಿನ ಚಿತ್ರಗಳಿರುವುದನ್ನು ನೋಡಿದರೆ ಈ ಜನರಲ್ಲಿ ಬೇಟೆಯೆ ಆಹಾರ ಸಂಪಾದನೆಯ ಒಂದು ಪ್ರಧಾನ ಉದ್ಯೋಗವಾಗಿತ್ತೆಂದು ತೋರುತ್ತದೆ. ಈ ಸಂಸ್ಕೃತಿಯ ಕೊನೆಯ ಹಂತದಲ್ಲಿ ಈ ಜನ ದೊಡ್ಡ ದೊಡ್ಡ ನೆಲೆಗಳಲ್ಲಿ ವಾಸಿಸುತ್ತಿದ್ದರು. ಇಂಥ ನೆಲೆಗಳಿಗೆ ಕಲ್ಲಿನ ರಕ್ಷಣಾ ಗೋಡೆಗಳನ್ನು ಸುತ್ತಲೂ ಕಟ್ಟುತ್ತಿದ್ದರು. (ಕೆ.ಕೆ.ಎಸ್‌ಯು.)

**ನರಸಿಂಹಾಚಾರ್ಯ, ಆರ್.:** 1860– 1936. ಕನ್ನಡಕ್ಕೆ ಪುರಸ್ಕಾರವೇ ಇಲ್ಲದಿದ್ದ ಕಾಲದಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ದುಡಿದ ಮಹನೀಯರಲ್ಲೊಬ್ಬರು. ಕರ್ನಾಟಕ ಕವಿಚರಿತ್ರೆಕಾರರು, ಸಂಶೋಧನೆ, ಗ್ರಂಥಸಂಪಾದನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಮೌಲಿಕ ಕೆಲಸ ಮಾಡಿದವರು. ಇವರದು ಪಾಂಡಿತ್ಯ ಮನೆತನ. ಶ್ರೀರಂಗಪಟ್ಟಣದ ಮಂಡ್ಯದ ಕೊಪ್ಪಲಿನಲ್ಲಿ 1860 ಏಪ್ರಿಲ್ 9ರಂದು ಜನಿಸಿದರು. ತಂದೆ ತಿರುನಾರಾಯಣ ಪೆರುಮಾಳ್, ತಾಯಿ ಶಿಂಗಮ್ಮಾಳ್. ತಂದೆಯಿಂದಲೇ ಇವರಿಗೆ ಸಂಸ್ಕೃತದ ಅಭ್ಯಾಸವಾಯಿತು. ತಮಿಳು, ಸಂಸ್ಕೃತ, ಕನ್ನಡ ಭಾಷೆಗಳ ಜೊತೆಗೆ ಶಾಲೆಯಲ್ಲಿ ಇಂಗ್ಲಿಷ್ ಭಾಷೆಯ ಪರಿಚಯವೂ ಆಯಿತು. ಅನಂತರ ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪರೀಕ್ಷೆಯಲ್ಲಿ (1882) ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣರಾಗಿ ಅನೇಕ ಪಾರಿತೋಷಿಕಗಳನ್ನು ಪಡೆದರು. ಪದವಿ ಪಡೆದ ತರುಣದಲ್ಲಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಗಳಲ್ಲಿ ಪ್ರೌಢಶಾಲೆಯ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು ಅನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು. ಇಲ್ಲಿ ಇವರ ಬಹುಮುಖ ಪ್ರತಿಭೆಯ ವಿಕಾಸಕ್ಕೆ ಹೆಚ್ಚು ಅವಕಾಶ ದೊರೆಯಿತು. ಇವರು ಕನ್ನಡ ಮತ್ತು ತಮಿಳು ಭಾಷೆಗಳನ್ನು ಓದಿ 1893ರಲ್ಲಿ ಮದರಾಸು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೊತ್ತ ಮೊದಲನೆಯ ಕನ್ನಡ ಎಂ.ಎ. ಪದವೀಧರರಾದರು. ಕನ್ನಡ ಸಾಹಿತ್ಯ ಸಂಶೋಧನೆಗಳ ಕಡೆಗೆ ಮನಸ್ಸು ಒಲಿದುದರಿಂದ ಇವರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ವಿದ್ಯಾ ಇಲಾಖೆಯಲ್ಲಿ ಐದು ವರ್ಷಗಳ ಕಾಲ ಕನ್ನಡ ಭಾಷಾಂತರಕಾರರಾಗಿದ್ದು, 1899ರಲ್ಲಿ ಮೈಸೂರಿನ ಪ್ರಾಚ್ಯವಸ್ತು ಸಂಶೋಧನ ಇಲಾಖೆಯಲ್ಲಿ ಲೂಯಿರೈಸ್‌ರವರಿಗೆ ಸಹಾಯಕರಾಗಿ ನೇಮಕಗೊಂಡರು.

ಲೂಯಿರೈಸರ ಅನಂತರ 1906ರಲ್ಲಿ ಇವರೇ ನಿರ್ದೇಶಕರಾಗಿ ನೇಮಕವಾಗಿ 1922ರ ವರೆಗೆ ದುಡಿದು ಈ ಹುದ್ದೆಯಿಂದ ನಿವೃತ್ತರಾದರು.

ಇವರು ಸು.16 ವರ್ಷಗಳ ಕಾಲ ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿ ಮಾಡಿದ ಕೆಲಸ ದೊಡ್ಡ ಮಟ್ಟದ್ದು. ಆಗಿನ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ಸಂಚರಿಸಿ ಸು. 5,000 ಹೊಸ ಶಾಸನಗಳನ್ನು ಸಂಗ್ರಹಿಸಿದರು. ಹಿಂದು, ಜೈನ ಮತ್ತು ಮಹಮ್ಮದೀಯರಿಗೆ ಸಂಬಂಧಪಟ್ಟ 1,000 ಕಟ್ಟಡಗಳನ್ನು ಪರೀಕ್ಷಿಸಿದರು. 4,100 ನಾಣ್ಯಗಳ ಸಂಶೋಧನೆ, 1,250 ಛಾಯಾಚಿತ್ರಗಳು ಮತ್ತು 120 ನಕ್ಷೆಗಳ ರಚನೆಗಳೂ ಆದುವು. ಅಪರೂಪವಾದ ಸು. 125 ಪ್ರಾಚೀನ ಕನ್ನಡ ಸಂಸ್ಕೃತ ಗ್ರಂಥಗಳನ್ನು ಅವಲೋಕಿಸಿ ಇವುಗಳನ್ನು 100 ಸಂಪುಟಗಳಲ್ಲಿ ಪ್ರತಿ ಮಾಡಿಸಿ ಪ್ರಾಚ್ಯ ಕೋಶಾಗಾರದಲ್ಲಿರಿಸಿದರು. ಎಪಿಗ್ರಾಫಿಯ ಕರ್ನಾಟಿಕದ ವಿಸ್ತಾರವಾದ ಅಕಾರಾದಿ, ಇಲಾಖಾ ವರದಿಗಳ ಅಕಾರಾದಿಗಳನ್ನು ಐತಿಹಾಸಿಕ ಮತ್ತು ಸಾಮಾಜಿಕ ಪ್ರಾಮುಖ್ಯವುಳ್ಳ ಶಾಸನ ಸಂಗ್ರಹಗಳನ್ನೂ ಸಿದ್ಧಪಡಿಸಿದರು. ರೈಸರು ಪ್ರಕಟಿಸಿದ್ದ ಶ್ರವಣಬೆಳಗೊಳದ ಶಾಸನಗಳನ್ನೊಳಗೊಂಡ ಎಪಿಗ್ರಾಫಿಯ ಕರ್ನಾಟಿಕದ ಎರಡನೆಯ ಸಂಪುಟವನ್ನು ಇವರು ಸಂಪೂರ್ಣವಾಗಿ ಪರಿಷ್ಕರಿಸಿದರು. ಮೊದಲು 144 ಇದ್ದ ಶಾಸನಗಳ ಸಂಖ್ಯೆ ಪರಿಷ್ಕೃತ ಆವೃತ್ತಿಯಲ್ಲಿ 500 ಆಯಿತು. ಶ್ರವಣಬೆಳಗೊಳದ ಬಸದಿಗಳ ವಿವರಗಳನ್ನು ಒಳಗೊಂಡ ವಿಸ್ತಾರವಾದ ಮುನ್ನುಡಿಯನ್ನು ಈ ಸಂಪುಟಕ್ಕೆ ಬರೆದರು. ಸೋಮನಾಥಪುರದ ಕೇಶವ, ಬೇಲೂರಿನ ಚೆನ್ನಕೇಶವ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯಗಳ ಶಿಲ್ಪಗಳನ್ನು ಪರಿಚಯಿಸುವ ಕೈಪಿಡಿಗಳನ್ನು ಪ್ರಕಟಿಸಿದರು. ಚಂದ್ರವಳ್ಳಿ, ತಲಕಾಡು ಮತ್ತು ಹಳೇಬೀಡುಗಳಲ್ಲಿ ಭೂಶೋಧನೆಗಳನ್ನು ನಡೆಸಿ ರೋಮನ್ನರ ಮತ್ತು ಚೀನಿಯರ ಅನೇಕ ಬಗೆಯ ನಾಣ್ಯಗಳನ್ನು ಸಂಗ್ರಹಿಸಿದರು. ಇವುಗಳ ಜೊತೆಗೆ ಮೈಸೂರು ಸಂಸ್ಥಾನದ ಅನೇಕ ದೇವಾಲಯಗಳು ಮತ್ತು ಪ್ರಾಚೀನ ಶಿಲ್ಪಗಳ ಬಗ್ಗೆ ಸಂಶೋಧನಾತ್ಮಕ ಟಿಪ್ಪಣಿಗಳನ್ನು ಬರೆದಿರುವುದೂ ಇವರ ಬಹುಮುಖ್ಯ ಸಾಧನೆ. ಚಾಳುಕ್ಯ ಶಿಲ್ಪದ ಭಾಗವೆಂದೇ ಅದುವರೆಗೂ ಪರಿಗಣಿಸಲ್ಪಟ್ಟಿದ್ದ ಹೊಯ್ಸಳ ಕಟ್ಟಡಗಳಲ್ಲಿ ಕಂಡುಬರುವ ಶೈಲಿಯ ವಿಶಿಷ್ಟತೆಯನ್ನು ಗುರುತಿಸಿ, ಅದಕ್ಕೆ ಹೊಯ್ಸಳ ಶೈಲಿ ಎಂಬ ಪ್ರತ್ಯೇಕವಾದ ಹೆಸರು ಕೊಟ್ಟ ಕೀರ್ತಿ ಇವರದು. ವಾಸ್ತು, ಶಿಲ್ಪ, ಶಾಸನ ಮತ್ತು ನಾಣ್ಯಗಳನ್ನು ಕುರಿತ ಅನೇಕ ಸಂಶೋಧನ ಲೇಖನಗಳನ್ನು ಮಿಥಿಕ್ ಸೊಸೈಟಿಯ ತ್ರೈಮಾಸಿಕ ಮತ್ತು ಇಂಡಿಯನ್ ಆ್ಯಂಟಿಕ್ವರಿ ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಇವರು ಪ್ರಕಟಿಸಿರುವ ಕರ್ನಾಟಕ ಕವಿಚರಿತ್ರೆಯ ಮೂರು ಸಂಪುಟಗಳು ಇವರ ಪಾಂಡಿತ್ಯಪರಿಶ್ರಮಗಳಿಗೆ ಸಾಕ್ಷಿಯಾಗಿವೆ. ಸು.8–19ನೆಯ ಶತಮಾನದ ಅವಧಿಯಲ್ಲಿ ಬಾಳಿದ 1,100ಕ್ಕೂ ಮಿಕ್ಕ ಕನ್ನಡ ಕವಿಗಳು ಮತ್ತು ಅವರ ಕೃತಿಗಳನ್ನು ಕುರಿತ ವಿವರಗಳು ಈ ಸಂಪುಟಗಳಲ್ಲಿವೆ. ಕಾವ್ಯಾವಲೋಕನ, ಭಾಷಾಭೂಷಣ ಮತ್ತು ಶಬ್ದಾನುಶಾಸನಗಳನ್ನು ಸಂಪಾದಿಸಿದ್ದಾರೆ. ನೀತಿಮಂಜರಿ (1911), ನಗೆಗಡಲು (1898), ಶಾಸನಪದ್ಯಮಂಜರಿ (1923). ಇವು ಇವರ ಇತರ ಕೃತಿಗಳು. ಹಿಸ್ಟರಿ ಆಫ್ ಕನ್ನಡ ಲಿಟರೇಚರ್, ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್–ಇವು ಇವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಎರಡು ಗ್ರಂಥಗಳು.

ಭಾರತ ಸರ್ಕಾರದ ಪ್ರಾಚ್ಯ ವಿದ್ಯಾ ಇಲಾಖೆ, ಏಷ್ಯಾಟಿಕ್ ಸೊಸೈಟಿ, ಹೈದರಾಬಾದಿನ ಪ್ರಾಚ್ಯ ವಿದ್ಯಾ ಸಮಿತಿ, ಪ್ಯಾರಿಸ್ಸಿನ ಪ್ರಾಚ್ಯ ವಿದ್ಯಾಸಂಸ್ಥೆ, ಬೆಂಗಳೂರಿನ ಮಿಥಿಕ್ ಸೊಸೈಟಿ ಮುಂತಾದ ಹತ್ತಾರು ದೇಶವಿದೇಶಗಳ ಸಂಘಸಂಸ್ಥೆಗಳೊಂದಿಗೆ ಇವರು ನಿಕಟಸಂಪರ್ಕ ಹೊಂದಿದ್ದರು.

ಇವರು ಸಲ್ಲಿಸಿದ ನಾಡುನುಡಿಗಳ ಸೇವೆಗೆ ಮನ್ನಣೆ ಎಂಬಂತೆ ಹಲವು ಬಗೆಯ ಪ್ರಶಸ್ತಿಗಳೂ ಬಹುಮಾನಗಳೂ ಬಂದುವು. 1907ರಲ್ಲಿ ಇವರಿಗೆ ರಾಯಲ್ ಏಷ್ಯಾಟಿಕ್ ಸೊಸೈಟಿಯ ಗೌರವ ಸದಸ್ಯತ್ವ ದೊರೆಯಿತು. 1913ರಲ್ಲಿ ಆಗಿನ ಮೈಸೂರು ಮಹಾರಾಜರು ಪ್ರಾಕ್ತನ ವಿಮರ್ಶವಿಚಕ್ಷಣ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದರು. 1916ರಲ್ಲಿ ಬ್ರಿಟಿಷ್ ಸರ್ಕಾರದಿಂದ ರಾವ್‌ಬಹದ್ದೂರ್ ಪ್ರಶಸ್ತಿ ಬಂತು. ಕಲ್ಕತ್ತದ ಅಖಿಲಭಾರತ ಸಾಹಿತ್ಯ ಸಂಘ 1924ರಲ್ಲಿ ಇವರಿಗೆ ಪ್ರಾಚ್ಯ ವಿದ್ಯಾವೈಭವ ಎಂಬ ಬಿರುದನ್ನಿತ್ತು ಸನ್ಮಾನಿಸಿತು. 1934ರಲ್ಲಿ ಕೇಂದ್ರ ಸರ್ಕಾರ ಮಹಾಮಹೋಪಾಧ್ಯಾಯ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಧಾರವಾಡದಲ್ಲಿ 1918ರಲ್ಲಿ ನಡೆದ 4ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಕುರಿತು ಒಂದು ಜೀವನ ಚರಿತ್ರೆಯನ್ನು ಪ್ರಕಟಿಸಿದೆ. 1936 ಡಿಸೆಂಬರ್ 6ರಂದು ನಿಧನಹೊಂದಿದರು. (ಎನ್.ಎಆರ್.)

**ನರೇಂದ್ರ ಮಂಡಲ:** ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಸ್ಥಾಪಿತವಾಗಿದ್ದ, ಭಾರತದ ದೇಶೀಯ ರಾಜರುಗಳ ಪ್ರಾತಿನಿಧಿಕ ಸಂಸ್ಥೆ. ಇದಕ್ಕೆ ಮುಂಚೆ ದೇಶೀಯ ಸಂಸ್ಥಾನಗಳೂ ಬ್ರಿಟಿಷ್ ಸರ್ಕಾರವೂ ರಾಜಕೀಯ ಇಲಾಖೆಯ ಮೂಲಕ ವ್ಯವಹಾರ ಮಾಡುತ್ತಿದ್ದುವು. ಈ ವಿಧಾನ ಅಷ್ಟೇನೂ ಸರಳವಾಗಿಯೂ ಸಮರ್ಪಕವಾಗಿಯೂ ಇರಲಿಲ್ಲ. ದೇಶೀಯ ಸಂಸ್ಥಾನಗಳ ರಾಜರಲ್ಲಿ ಒಮ್ಮತ ಇರಲಿಲ್ಲ. ಇದರಿಂದ ಯಾವುದೇ ವಿಷಯವಾಗಿ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಲು ಬ್ರಿಟಿಷರಿಗೆ ತೊಂದರೆಯಾಗಿತ್ತು. ದೇಶೀಯ ಸಂಸ್ಥಾನಗಳು ಒಟ್ಟಾಗಿ ಕೂಡಿ, ಒಮ್ಮತ ಅಭಿಪ್ರಾಯ ನೀಡುವಂತೆ ಮಾಡಲು ಅನೇಕ ಸಲಹೆಗಳು ಮುಂದೆ ಬರುತ್ತಿದ್ದುವು. ಸಂವಿಧಾನ ಸುಧಾರಣೆಗಳ ವಿಚಾರವಾಗಿ ನೀಡಲಾದ ಮಾಂಟೆಗ್ಯೂ–ಚೆಮ್ಸ್‌ಫರ್ಡ್ ವರದಿಯಲ್ಲಿ (1918) ಈ ವಿಚಾರವನ್ನೂ ಪ್ರಸ್ತಾಪಿಸಲಾಗಿತ್ತು. ದೇಶೀಯ ಸಂಸ್ಥಾನಗಳ ರಾಜರ ಒಂದು ಪ್ರಾತಿನಿಧಿಕ ಮಂಡಲವನ್ನು ಸ್ಥಾಪಿಸಬೇಕೆಂಬುದು ಅದರ ಶಿಫಾರಸುಗಳಲ್ಲೊಂದು. ಇದನ್ನು ಕಾರ್ಯರೂಪಕ್ಕೆ ತರಲು 1921 ಫೆಬ್ರವರಿ 8ರಂದು ರಾಜಘೋಷಣೆಯೊಂದನ್ನು ಹೊರಡಿಸಿ ಇದನ್ನು ಸ್ಥಾಪಿಸಲಾಯಿತು. ಡ್ಯೂಕ್ ಆಫ್ ಕನ್ನಾಟ್ ಇದನ್ನು ಉದ್ಘಾಟಿಸಿದ.

ಬಟ್ಲರ್ ವರದಿಯಂತೆ ಭಾರತದಲ್ಲಿದ್ದ ದೇಶೀಯ ಸಂಸ್ಥಾನಗಳ ಸಂಖ್ಯೆ 562. ಇವುಗಳ ಪೈಕಿ 108 ಸಂಸ್ಥಾನಗಳು ನರೇಂದ್ರ ಮಂಡಲದ ಸದಸ್ಯ ಸಂಸ್ಥಾನಗಳಾಗಿದ್ದುವು. ಇವುಗಳ ಒಟ್ಟು ವಿಸ್ತೀರ್ಣ 13,15,48 ಚ.ಕಿಮೀ. ಇವು ಸೆಲ್ಯೂಟ್ ಸ್ಟೇಟ್ಸ್ ಎನಿಸಿಕೊಂಡಿದ್ದುವು. ಉಳಿದವುಗಳ ಪೈಕಿ 127 ಸಂಸ್ಥಾನಗಳಿಂದ ನರೇಂದ್ರ ಮಂಡಲಕ್ಕೆ 12 ಸದಸ್ಯರನ್ನು ಆರಿಸಲಾಗುತ್ತಿತ್ತು. ಇಂಥ ಸಂಸ್ಥಾನಗಳ ಒಟ್ಟು ವಿಸ್ತೀರ್ಣ 1,71,109 ಚ.ಕಿಮೀ. ಉಳಿದ 327 ಸಂಸ್ಥಾನಗಳು ಮತ್ತು ಜಹಗೀರುಗಳಿಗೆ ನರೇಂದ್ರ ಮಂಡಲದಲ್ಲಿ ಪ್ರಾತಿನಿಧ್ಯ ಇರಲಿಲ್ಲ. ನರೇಂದ್ರ ಮಂಡಲಕ್ಕೆ ವೈಸ್‌ರಾಯ್ ಅಧ್ಯಕ್ಷ. ಮಂಡಲದ ಸದಸ್ಯರಾಗಿದ್ದ ಅರಸರಿಂದ ಪ್ರತಿವರ್ಷವೂ ಚಾನ್ಸಲರನ್ನೂ ಪ್ರೋಚಾನ್ಸಲರನ್ನೂ ಆರಿಸಲಾಗುತ್ತಿತ್ತು. ನರೇಂದ್ರ ಮಂಡಲ ವರ್ಷಕ್ಕೊಮ್ಮೆ ದೆಹಲಿಯ ಕೆಂಪು ಕೋಟೆಯಲ್ಲಿ ಸಭೆ ಸೇರುತ್ತಿತ್ತು. ದೈನಂದಿನ ವ್ಯವಹಾರಗಳನ್ನು ನಿರ್ವಹಿಸಲು ಒಂದು ಸ್ಥಾಯೀ ಸಮಿತಿ ಇತ್ತು. ವಾರ್ಷಿಕ ಸಭೆ ವೈಸ್‌ರಾಯನ ಅಧ್ಯಕ್ಷತೆಯಲ್ಲಿ ನಡೆಯುತ್ತಿತ್ತು.

ನರೇಂದ್ರ ಮಂಡಲ ಒಂದು ಸಲಹಾ ಸಮಿತಿಯಾಗಿತ್ತೇ ಹೊರತು ಅದಕ್ಕೆ ಕಾರ್ಯನಿರ್ವಹಣಾಧಿಕಾರ ಇರಲಿಲ್ಲ. ಬ್ರಿಟಿಷ್ ಭಾರತ ಮತ್ತು ದೇಶೀಯ ಸಂಸ್ಥಾನಗಳಿಗೆ ಸಮಾನವಾಗಿದ್ದ ಎಲ್ಲ ವಿಚಾರಗಳಲ್ಲೂ ವೈಸ್‌ರಾಯ್ ಈ ಮಂಡಲಿಯ ಸಲಹೆ ಪಡೆಯಬಹುದಾಗಿತ್ತು. ಸಂಸ್ಥಾನಗಳ ಆಂತರಿಕ ವ್ಯವಹಾರಗಳಲ್ಲಾಗಲೀ ಅವುಗಳ ಅಧೀಶರ ವಿಚಾರದಲ್ಲಾಗಲೀ ನರೇಂದ್ರ ಮಂಡಲ ಪ್ರವೇಶಿಸುವಂತಿರಲಿಲ್ಲ. ನರೇಂದ್ರರ ಅಧಿಕಾರ, ಬ್ರಿಟಿಷ್ ಪ್ರಭುತ್ವದೊಂದಿಗೆ ಅವರ ಸಂಬಂಧ ಮುಂತಾದ ವಿಚಾರಗಳನ್ನು ಅದು ಚರ್ಚಿಸುವಂತಿರಲಿಲ್ಲ. ಬ್ರಿಟಿಷ್ ಭಾರತ ಸರ್ಕಾರದೊಂದಿಗೆ ಸಂಸ್ಥಾನಗಳ ಸಂಪರ್ಕವನ್ನು ಹೆಚ್ಚಿಸುವುದೂ ದೇಶದಲ್ಲಿ ಬೆಳೆಯುತ್ತಿದ್ದ ಹೊಸ ಪ್ರವೃತ್ತಿಗಳ ಅರಿವನ್ನು ಅವರಿಗೆ ಉಂಟುಮಾಡಿಕೊಡುವುದು ನರೇಂದ್ರ ಮಂಡಲದ ಎರಡು ಮುಖ್ಯ ಉದ್ದೇಶಗಳಾಗಿದ್ದುವು.

ರಾಜಕೀಯ ಇಲಾಖೆಯ ಕಾರ್ಯವನ್ನು ಸರಿಯಾದ ರೀತಿಯಲ್ಲಿ ವಿವರಿಸಬೇಕೆಂದು ಆರಂಭದಿಂದಲೂ ನರೇಂದ್ರ ಮಂಡಲ ಸರ್ಕಾರವನ್ನು ಪದೇ ಪದೇ ಒತ್ತಾಯ ಮಾಡುತ್ತಿತ್ತು. ದೇಶೀಯ ಸಂಸ್ಥಾನಗಳು ಮತ್ತು ಬ್ರಿಟಿಷ್ ಪ್ರಭುತ್ವದ ಮಧ್ಯೆ ಇರಬೇಕಾದ ಸಂಬಂಧವನ್ನು ಖಚಿತಪಡಿಸಬೇಕೆಂಬುದು ಅದರ ಸತತ ಬೇಡಿಕೆಯಾಗಿತ್ತು. ಬ್ರಿಟಿಷ್ ಭಾರತದಲ್ಲಿ ನಡೆಯುತ್ತಿದ್ದ

ರಾಜಕೀಯ ಚಳವಳಿಯಿಂದ ಕಳವಳಗೊಂಡ ಸಂಸ್ಥಾನಾಧೀಶರು ತಮ್ಮ ಭವಿಷ್ಯದ ಭದ್ರತೆಯ ಬಗ್ಗೆ ಬ್ರಿಟಿಷರಿಂದ ಭರವಸೆ ಪಡೆಯಲು ಆಸಕ್ತಿ ತೋರಿದರು. ಒಂದು ಪಕ್ಷ ಬ್ರಿಟಿಷ್ ಸರ್ಕಾರ ರಾಜಕೀಯಾಧಿಕಾರವನ್ನು ಭಾರತೀಯರಿಗೆ ಹಸ್ತಾಂತರ ಮಾಡುವುದಾದರೆ ತಮ್ಮನ್ನು ಕೇಳಿಯೇ ಮಾಡಬೇಕೆಂಬುದು ಅವರ ಅಪೇಕ್ಷೆ. ಇವಕ್ಕೆಲ್ಲ ಪ್ರತಿಕ್ರಿಯೆಯಾಗಿ ಬ್ರಿಟಿಷ್ ಸರ್ಕಾರ 1927ರಲ್ಲಿ ದೇಶೀಯ ಸಂಸ್ಥಾನಗಳ ವಿಚಾರಣಾ ಸಮಿತಿಯನ್ನು ನೇಮಿಸಿತು. ಇದು ಮುಖ್ಯ ಸಂಸ್ಥಾನಗಳನ್ನು ಸಂದರ್ಶಿಸಿ ಇಂಗ್ಲೆಂಡಿಗೆ ತೆರಳಿ ಅಲ್ಲಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿತು. ನರೇಂದ್ರ ಮಂಡಲದ ಪರವಾಗಿಯೂ ವಾದವನ್ನು ಮಂಡಿಸಲಾಯಿತು. ಈ ಸಮಿತಿ ತನ್ನ ವರದಿಯನ್ನು 1929ರಲ್ಲಿ ಪ್ರಕಟಿಸಿತು. ಈ ವರದಿ ನರೇಂದ್ರ ಮಂಡಲದ ಕೋರಿಕೆಯಂತೆ ಇರಲಿಲ್ಲವಾದರೂ ದೇಶೀಯ ಸಂಸ್ಥಾನಗಳ ಆಡಳಿತವನ್ನು ಜನಪ್ರತಿನಿಧಿಗಳಿಗೆ ವರ್ಗಾಯಿಸಬಾರದೆಂದು ಅದು ಶಿಫಾರಸು ಮಾಡಿತು.

1930ರ ಅನಂತರ ಭಾರತ ಒಕ್ಕೂಟದ ಪ್ರಶ್ನೆ ನರೇಂದ್ರ ಮಂಡಲದಲ್ಲಿ ಪ್ರಮುಖ ವಿಷಯವಾಗಿತ್ತು. ಈ ಬಗ್ಗೆ ಅದರ ಸದಸ್ಯರಲ್ಲಿ ಒಮ್ಮತ ಇರಲಿಲ್ಲ. ಕೆಲವು ಸಂಸ್ಥಾನಗಳು ಒಕ್ಕೂಟಕ್ಕೆ ಬೆಂಬಲ ಕೊಟ್ಟವು. ಉಳಿದ ಸಂಸ್ಥಾನಗಳು ಕಾಯ್ದು ನೋಡುವ ನೀತಿಯನ್ನು ಅನುಸರಿಸಿದವು. ನರೇಂದ್ರ ಮಂಡಲ ತನ್ನದೇ ಅದ ಒಂದು ನಿರ್ದಿಷ್ಟ ನೀತಿ ಹೊಂದಿರಲಿಲ್ಲ. 1935ರ ಭಾರತ ಸರ್ಕಾರ ಅಧಿನಿಯಮ ಜಾರಿಗೆ ಬಂದ ಮೇಲೆ ಸಂಸ್ಥಾನಗಳು ಒಕ್ಕೂಟವನ್ನು ಸೇರುವಂತೆ ದೇಶೀಯ ರಾಜರ ಮನವೊಲಿಸಲು ವೈಸ್‌ರಾಯ್ ಮಾಡಿದ ಪ್ರಯತ್ನಗಳು ವಿಫಲವಾದವು. 1939ರಲ್ಲಿ ಆರಂಭವಾದ ಎರಡನೆಯ ಮಹಾಯುದ್ಧದಿಂದಾಗಿ ಈ ಪ್ರಯತ್ನ ಕೊನೆಗೊಂಡಿತು. ಯುದ್ಧಕಾಲದಲ್ಲಿ ನರೇಂದ್ರ ಮಂಡಲದ ನೀತಿ ಬ್ರಿಟಿಷ್ ಪರವಾಗಿತ್ತು. ಭಾರತದ ಭವಿಷ್ಯದ ಬಗ್ಗೆ 1942ರಲ್ಲಿ ಕ್ರಿಪ್ಸ್ ನಿಯೋಗ ನೀಡಿದ ಸಲಹೆಯನ್ನು ನರೇಂದ್ರ ಮಂಡಲ ಒಪ್ಪಲಿಲ್ಲ. ಅನಂತರ 1945ರಲ್ಲಿ ಸಿಮ್ಲಾದಲ್ಲಿ ನಡೆದ ಸಭೆಗೆ ನರೇಂದ್ರ ಮಂಡಲವಾಗಲೀ ದೇಶೀಯ ರಾಜರಾಗಲೀ ಆಹ್ವಾನಿತರಾಗಿರಲಿಲ್ಲ. 1946ರ ಬ್ರಿಟಿಷ್ ಸಂಪುಟ ನಿಯೋಗದ ಸಮಯದಲ್ಲಿ, ಸಂಸ್ಥಾನಾಧೀಶರು ಒಕ್ಕೂಟವನ್ನು ಸೇರುವರೆಂಬ ಅನುಕೂಲ ಪ್ರತಿಕ್ರಿಯೆಯನ್ನು ನರೇಂದ್ರ ಮಂಡಲ ಪ್ರಕಟಪಡಿಸಿತು. ಒಕ್ಕೂಟವನ್ನು ಸೇರುವ ನಿಯಮಾವಳಿಯನ್ನು ತಯಾರಿಸಲು ಒಂದು ಸಮಿತಿಯನ್ನು ರಚಿಸಲಾಯಿತು. ಆದರೆ ಇದು ಫಲಪ್ರದವಾಗಲಿಲ್ಲ.

ಭಾರತ ಮತ್ತು ಪಾಕಿಸ್ತಾನಕ್ಕೆ ಸ್ವಾತಂತ್ರ್ಯವನ್ನು ನೀಡುವುದಾಗಿ 1947 ಜೂನ್ 3ರಂದು ಮಾಡಲಾದ ಘೋಷಣೆಗೆ ಅನುಸಾರವಾಗಿ ರಾಜಕೀಯ ಇಲಾಖೆಯನ್ನು ಜುಲೈ 5ರಂದು ರದ್ದುಪಡಿಸಿ ಅದರ ಬದಲು ಸರ್ದಾರ್ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಸಂಸ್ಥಾನಗಳ ಇಲಾಖೆಯನ್ನು ರಚಿಸಲಾಯಿತು. ಅದೇ ತಿಂಗಳು 25ರಂದು ನರೇಂದ್ರ ಮಂಡಲ ವಿಶೇಷ ಸಭೆ ಸೇರಿ ಸಂಧಾನ ಸಮಿತಿಯನ್ನು ರಚಿಸಿ ಒಕ್ಕೂಟವನ್ನು ಸೇರುವ ಬಗ್ಗೆ ಮಾತುಕತೆ ನಡೆಸಲು ಪ್ರಾರಂಭಿಸಿತು. ಈ ಬಗ್ಗೆ ಕರಾರನ್ನು ಸಿದ್ಧಪಡಿಸಿತು. ಈ ಕರಾರಿನ ಪ್ರಕಾರ ಅನೇಕ ದೇಶೀಯ ಸಂಸ್ಥಾನಗಳು ಭಾರತ ಒಕ್ಕೂಟದೊಳಗೆ ವಿಲೀನವಾದವು. ಸಂಸ್ಥಾನಗಳ ಇಲಾಖೆ ಕೆಲವು ಸಂಸ್ಥಾನಗಳೊಂದಿಗೆ ಕರಾರುಗಳನ್ನು ಮಾಡಿಕೊಂಡು ಅವನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಿತು.

ನರೇಂದ್ರ ಮಂಡಲದ ಕಲಾಪಗಳು ಭಾರತದ ರಾಜಕೀಯ ಘಟನೆಗಳ ಮೇಲೆ ಯಾವ ಪರಿಣಾಮಕಾರಿ ಪ್ರಭಾವವನ್ನೂ ಬೀರಲಿಲ್ಲ. ಇದರ ಸಾಧನೆಗಳು ಅಷ್ಟೇನೂ ಗಮನಾರ್ಹವಾಗಿರಲಿಲ್ಲ. ದೇಶೀಯ ಸಂಸ್ಥಾನಗಳ ರಾಜರೆಲ್ಲರೂ ವರ್ಷಕ್ಕೊಮ್ಮೆ ಒಟ್ಟಿಗೆ ಸೇರಲು ಇದೊಂದು ವ್ಯವಸ್ಥೆಯಾಗಿತ್ತು. ಕಲಾಪಗಳಿಗಿಂತಲೂ ಮಿಗಿಲಾಗಿ ತಮ್ಮ ಐಶ್ವರ್ಯ ಮತ್ತು ಆಡಂಬರದ ಪ್ರದರ್ಶನವೇ ಅನೇಕ ರಾಜರಿಗೆ ಪ್ರಮುಖವಾಗಿತ್ತು. ಹೈದರಾಬಾದ್ ಮತ್ತು ಮೈಸೂರಿನಂಥ ದೊಡ್ಡ ಸಂಸ್ಥಾನಗಳು ಈ ಮಂಡಲದ ಕಲಾಪಗಳಲ್ಲಿ ಎಂದೂ ಸಕ್ರಿಯವಾಗಿ ಭಾಗವಹಿಸಿರಲಿಲ್ಲ. ಇದರ ತೀರ್ಮಾನಗಳು ಬ್ರಿಟಿಷ್ ರಾಜ್ಯಾಡಳಿತದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ಇದು ಸಲಹಾ ಸಮಿತಿಯಾಗಿ ಮಾತ್ರ ಉಳಿದಿತ್ತು. ಇದರಲ್ಲಿ ಭಾಗವಹಿಸುತ್ತಿದ್ದ ರಾಜರಲ್ಲಿ ಅನೇಕರು ಸಮರ್ಥರಾಗಿರಲಿಲ್ಲ. ಸಿದ್ಧಪಡಿಸಿದ ಭಾಷಣಗಳನ್ನು ಅವರು ವೈಭವಯುತವಾಗಿ ಓದುತ್ತಿದ್ದರೇ ವಿನಾ ಯಾವುದೇ ಚರ್ಚೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ತಮ್ಮ ಪ್ರಜೆಗಳ ಹಿತಗಳಿಗೆ ಸಂಬಂಧಿಸಿದ ವಿಚಾರಗಳನ್ನು ಮಂಡಲದ ಸಭೆಗಳಲ್ಲಿ ಚರ್ಚಿಸುತ್ತಿರಲಿಲ್ಲ. ಅವರು ತಮ್ಮ ವೈಯಕ್ತಿಕ ಕುಂದುಕೊರತೆಗಳ ನಿವಾರಣೆಯಲ್ಲೇ ನಿರತರಾಗಿದ್ದರು. ಮಂಡಲದ ಸದಸ್ಯರಲ್ಲಿ ವೈಯುಕ್ತಿಕ ಭೇದಭಾವಗಳಿದ್ದವು. ಮಂಡಲದ ಸಭೆಗಳಲ್ಲಿ ಅವು ವ್ಯಕ್ತವಾಗುತ್ತಿದ್ದುವು. ದೇಶೀಯ ಸಂಸ್ಥಾನಗಳು ಒಟ್ಟಾಗಿ ಸೇರಿ ನಿರ್ಧಾರವನ್ನು ತೆಗೆದುಕೊಳ್ಳುವ ಅವಕಾಶವನ್ನು ಇದು ಕಲ್ಪಿಸಿತಾದರೂ ರಾಜರು ಇದರ ಸದುಪಯೋಗ ಪಡೆದುಕೊಳ್ಳಲಿಲ್ಲ. (ಜಿ.ಆರ್.ಆರ್.)

**ನವ ಪುರಾತತ್ತ್ವಶಾಸ್ತ್ರ:** 1960ರ ದಶಕದಲ್ಲಿ ಪುರಾತತ್ತ್ವಶಾಸ್ತ್ರ ಕಂಡ ಹೊಸ ತಿರುವು. ಈ ದಶಕದಲ್ಲಿ ಅಮೆರಿಕದ ಲೂಯಿಸ್ ಬಿನ್‌ಫರ್ಡ್ ಮತ್ತು ಬ್ರಿಟನ್ನಿನ ಡೇವಿಡ್ ಕ್ಲಾರ್ಕ್ ಎಂಬ ಇಬ್ಬರು ವಿದ್ವಾಂಸರು ಪುರಾತತ್ತ್ವಶಾಸ್ತ್ರದ ಸಾಂಪ್ರದಾಯಿಕತೆಯನ್ನು ತೊಡೆದು ಅದಕ್ಕೊಂದು ಹೊಸ ರೂಪುರೇಷೆಯನ್ನು ಕಲ್ಪಿಸುವಲ್ಲಿ ಕಾರ್ಯಶೀಲರಾದರು. ಈ ಚಳವಳಿ ಮುಂದೆ ನವಪುರಾತತ್ತ್ವಶಾಸ್ತ್ರ (ನ್ಯೂ ಅಥವಾ ಪ್ರೊಸೆಶುಯಲ್ ಆರ್ಕಿಯಾಲಜಿ) ಎಂಬ ಹೆಸರುಗಳಿಸಿತು. ಗತಕಾಲದ ಎಲ್ಲ ಆಗುಹೋಗುಗಳನ್ನೂ ಜನವಲಸೆ ಮತ್ತು ಪ್ರಸಾರ ಸಿದ್ಧಾಂತದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವ ಮನೋಧರ್ಮ ಮತ್ತು ಆಗ ಪ್ರಚಲಿತದಲ್ಲಿದ್ದ ವಿಧಾನಕ್ರಮದ ಬಗೆಗಿನ ಅಸಮಾಧಾನ ಈ ವೈಚಾರಿಕ ಕ್ರಾಂತಿಗೆ ಪ್ರೇರಣೆ ನೀಡಿತೆಂಬುದು ಸಾಮಾನ್ಯ ನಂಬಿಕೆ. ಪುರಾತತ್ತ್ವಶಾಸ್ತ್ರಕ್ಕೆ ವೈಜ್ಞಾನಿಕ ತಳಹದಿಯನ್ನು ಒದಗಿಸುವ ಉದ್ದೇಶ ಪೂರ್ವಕ ಪ್ರಯತ್ನ ಇದಾಗಿತ್ತು ಎಂಬುದು ಇನ್ನೊಂದು ಅಭಿಪ್ರಾಯ.

ನವಪುರಾತತ್ತ್ವ ಜನಪ್ರಿಯವಾಗಿದ್ದು ಮುಖ್ಯವಾಗಿ ಬಿನ್‌ಫರ್ಡ್‌ನ ಬರವಣಿಗೆಯಿಂದ. ಆರ್ಕಿಯಾಲಜಿ ಆಸ್ ಆಂಥ್ರೊಪಾಲಜಿ (1962) ಎಂಬ ಲೇಖನದಲ್ಲಿ ಹಾಗೂ ನ್ಯೂ ಪರ್ಸ್‌ಪೆಕ್ಟಿವ್ಸ್ ಇನ್ ಆರ್ಕಿಯಾಲಜಿ (1968) ಎಂಬ ಪುಸ್ತಕದಲ್ಲಿ ನವಪುರಾತತ್ತ್ವಶಾಸ್ತ್ರದ ಆಶಯಗಳನ್ನು ವಿವರಿಸಿದ್ದಾನೆ. ಮಾನವಶಾಸ್ತ್ರದಂತೆ ಪುರಾತತ್ತ್ವಶಾಸ್ತ್ರವನ್ನು ಸಾಮಾಜಿಕ ವಿಜ್ಞಾನವಾಗಿ ಪರಿಗಣಿಸಬೇಕು ಎಂಬುದು ಇವನ ಅಭಿಪ್ರಾಯವಾಗಿತ್ತು. ಏಕೆ ಎಂಬ ಪ್ರಶ್ನೆಯ ಮೂಲಕ ಗತಕಾಲದ ಪ್ರಕ್ರಿಯೆಗಳಿಗೆ ವ್ಯಾಖ್ಯೆಯನ್ನು (ಎಕ್ಸ್‌ಪ್ಲನೇಷನ್) ಕಂಡುಕೊಳ್ಳುವುದು ಅತ್ಯಗತ್ಯ ಎಂಬುದು ಇವನ ಬರವಣಿಗೆಯ ಸಾರವಾಗಿದೆ. ಪ್ರಾಚ್ಯಾಧಾರಗಳು ಮನುಷ್ಯನ ಚಟುವಟಿಕೆಗಳ ವಸ್ತುರೂಪದ ಅಭಿವ್ಯಕ್ತಿಯಾಗಿವೆ ಎಂಬುದು ಇವನು ಮತ್ತೆ ಮತ್ತೆ ಪ್ರತಿಪಾದಿಸಿದ ಮತ್ತೊಂದು ವಿಚಾರ. ಹಾಗಾಗಿ ಪುರಾತತ್ತ್ವದ ಮುಖ್ಯ ಉದ್ದೇಶ ಪ್ರಾಚ್ಯವಸ್ತುಗಳನ್ನೂ ತನ್ಮೂಲಕ ಮಾನವನ ಅನುಭವ ಮತ್ತು ನಡವಳಿಕೆಯನ್ನೂ (ಹ್ಯೂಮನ್ ಬಿಹೇವಿಯರ್) ವಿಶ್ಲೇಷಿಸುವುದೇ ಹೊರತು ವಿವರಿಸುವುದಲ್ಲ (ಡಿಸ್ಕ್ರಿಪ್ಷನ್).

ಬಿನ್‌ಫರ್ಡ್ ಮತ್ತು ಇವನ ಅನುಯಾಯಿಗಳು ಗತಸಮಾಜದ ಸಾಂಸ್ಕೃತಿಕ ಪ್ರಕ್ರಿಯೆಗಳಿಗೆ (ಕಲ್ಚರ್ ಪ್ರೊಸೆಸ್) ಪ್ರಾಧಾನ್ಯ ನೀಡಿದರು. ಮಾನವ ಸಂಸ್ಕೃತಿ ಒಂದರೊಳಗೊಂದು ಹೆಣೆದಿರುವ ಎಳೆಗಳ ಸಂಕೀರ್ಣ ವ್ಯವಸ್ಥೆಯಾಗಿದ್ದು (ಕಲ್ಚರ್ ಆಸ್ ಸಿಸ್ಟಮ್) ಈ ಎಳೆಗಳನ್ನು ಪ್ರಾಚ್ಯಾವಶೇಷಗಳ ನೆರವಿನಿಂದ ಪುನರ್ರಚಿಸುವುದೇ ಪುರಾತತ್ತ್ವಜ್ಞರ ಗುರಿ. ಸಮಾಜದ ಅವಿಭಾಜ್ಯ ಅಂಗಗಳಾದ ತಂತ್ರಜ್ಞಾನ, ತತ್ತ್ವಜ್ಞಾನ, ಆಹಾರ ಆರ್ಥಿಕತೆ-ಈ ಎಲ್ಲ ವಿಚಾರಗಳನ್ನು ಇವರು ಪುರಾತತ್ತ್ವ ಪರಿಶೀಲನೆಯ ಪರಿಧಿಯೊಳಗೆ ತಂದರು. ಅವಶೇಷಗಳ ಕ್ರಿಯಾವಿಶೇಷ (ಫಂಕ್ಷನ್) ಮತ್ತು ವೈಜ್ಞಾನಿಕ ವಿಶ್ಲೇಷಣೆ, ಪರಿಸರ ಮತ್ತು ಮಾನವನ ನಡುವಿನ ಸಂಬಂಧ, ಸಂಸ್ಕೃತಿಯ ಮೇಲೆ ಭೌತಿಕ ಪರಿಸರದ ಪ್ರಭಾವ ಮತ್ತು ಸಮಾಜದ ಒಗ್ಗುವಿಕೆ (ಅಡಾಪ್ಟೇಷನ್) ಮೊದಲಾದ ನೂತನ ವಿಷಯಗಳು ಇವರ ಚಿಂತನೆಗೆ ಗ್ರಾಸವಾದವು. ಇಂತಹ ಒಳನೋಟಗಳನ್ನು ಪಡೆಯುವುದಕ್ಕೆ ಕ್ರಮಬದ್ಧ, ಸಮಸ್ಯೆಯಾಧಾರಿತ ಸಂಶೋಧನೆ (ಪ್ರಾಬ್ಲಮ್ ಓರಿಯೆಂಟೆಡ್ ರಿಸರ್ಚ್) ಅಗತ್ಯ ಎಂಬುದನ್ನು ಇವರು ಅರಿತಿದ್ದರು. ಪುರಾತತ್ತ್ವ ಚಿಂತನೆ ಮತ್ತು ತತ್ತ್ವಗಳು ಸ್ಪಷ್ಟವಾಗಿಯೂ ವಸ್ತುನಿಷ್ಠವಾಗಿಯೂ ತರ್ಕಬದ್ಧವಾಗಿಯೂ ಇರಬೇಕು; ಸಂಶೋಧನೆ ಪ್ರಮೇಯವನ್ನು (ಹೈಪಾಥಿಸಿಸ್) ಆಧರಿಸಿದ್ದಾಗಿದ್ದು ಪ್ರಾಯೋಗಿಕ ಮಾದರಿಗಳನ್ನು (ವರ್ಕಿಂಗ್ ಮಾಡಲ್) ಬಳಸಿಕೊಳ್ಳಬೇಕು; ಅಲ್ಲದೆ ಫಲಿತಾಂಶಗಳನ್ನು ಅಂತಿಮವೆಂದು ಪರಿಗಣಿಸದೆ ಪ್ರಮೇಯಗಳನ್ನು ಕಾಲಕಾಲಕ್ಕೆ ಮರುಪರೀಕ್ಷೆಗೆ ಒಳಪಡಿಸುವ ವೈಜ್ಞಾನಿಕ ಮನೋಭಾವ ಈ ಕ್ಷೇತ್ರದ ಸಂಶೋಧಕರಿಗಿರಬೇಕು ಎಂಬುದು ಇವರ ಧೋರಣೆಯಾಗಿತ್ತು. ಇತರ ವಿಜ್ಞಾನಗಳಂತೆ ಪುರಾತತ್ತ್ವ ಸಂಶೋಧನೆಯಲ್ಲಿಯೂ ಸಾಮಾನ್ಯೀಕರಣ ನಿಯಮಗಳನ್ನು (ಲಾ ಮತ್ತು ಜನರಲೈಸೇಷನ್ಸ್) ರಚಿಸಬಹುದೆಂಬುದು ಇವರ ವಾದವಾಗಿತ್ತು. ತಮ್ಮ ಸಂಶೋಧನೆಗಳಲ್ಲಿ ಇವರು ವಿವಿಧ ವೈಜ್ಞಾನಿಕ ತಂತ್ರಗಳನ್ನೂ ಬಳಸಿಕೊಂಡರು.

ಇದೇ ಬಗೆಯ ಸೈದ್ಧಾಂತಿಕಧಾರೆಯನ್ನು ಬ್ರಿಟನ್ನಿನಲ್ಲಿ ಡೇವಿಡ್ ಕ್ಲಾರ್ಕ್ ಬೆಳೆಯಿಸಿದ. ಅನಲಿಟಿಕಲ್ ಆರ್ಕಿಯಾಲಜಿ (1968) ಇವನ ಅತ್ಯುತ್ತಮ ಕೃತಿ; ಲಾಸ್ ಆಫ್ ಇನೊಸೆನ್ಸ್ ಇನ್ ಆರ್ಕಿಯಾಲಜಿ (1973) ಇವನ ಪ್ರಸಿದ್ಧ ಲೇಖನ. ಬಿನ್‌ಫರ್ಡ್ ಪಂಥ ಸಾಂಸ್ಕೃತಿಕ ಪ್ರಕ್ರಿಯೆ ಮತ್ತು ಅದರ ವೈಜ್ಞಾನಿಕ ವಿಶ್ಲೇಷಣೆಗೆ ಆದ್ಯತೆ ನೀಡಿದರೆ ಕ್ಲಾರ್ಕ್ ಅತ್ಯಾಧುನಿಕ ಪರಿಮಾಣಾತ್ಮಕ ವಿಧಾನಗಳನ್ನು (ಕ್ವಾಂಟಿಟೇಟಿವ್ ಮೆಥಡ್ಸ್) ಈ ಕ್ಷೇತ್ರಕ್ಕೆ ಪರಿಚಯಿಸಿದ. ಗಣಕಯಂತ್ರ-ಆಧಾರಿತ ತಂತ್ರಗಳನ್ನು ಪುರಾತತ್ತ್ವ ಸಂಶೋಧನೆಗೆ ಅಳವಡಿಸುವ ಪ್ರಯತ್ನದಲ್ಲಿ ಈತನೇ ಮೊದಲಿಗ. ಭೂವಿಜ್ಞಾನ, ಪರಿಸರವಿಜ್ಞಾನ, ವಾಸ್ತುಶಿಲ್ಪಶಾಸ್ತ್ರ ಮೊದಲಾದ ಕ್ಷೇತ್ರಗಳಲ್ಲಿ ಆಗ ಪ್ರಚಲಿತವಿದ್ದ ಚಿಂತನೆಗಳನ್ನು ಇವನು ಎರವಲು ಪಡೆದು ಪುರಾತತ್ತ್ವಕ್ಕೆ ಅನ್ವಯಿಸುವ ಪ್ರಯತ್ನ ಮಾಡಿದ. ಸಾಂಪ್ರದಾಯಿಕ ಉತ್ಖನನ ವಿಧಾನಗಳಿಂದ ಸಂಗ್ರಹಿಸಿರುವ ಅವಶೇಷಗಳನ್ನೂ ನೂತನ ವಿಧಾನಕ್ರಮಗಳಿಂದ ವಿಶ್ಲೇಷಿಸಬಹುದಾದ ಸಾಧ್ಯತೆಯನ್ನು ಇವನು ತನ್ನ ಮಾಡಲ್ಸ್ ಇನ್ ಆರ್ಕಿಯಾಲಜಿ (1971) ಕೃತಿಯಲ್ಲಿ ತೋರಿಸಿಕೊಟ್ಟಿದ್ದಾನೆ.

ಬ್ರೂಸ್ ಟ್ರಿಗರ್, ಕಾಲಿನ್ ರೆನ್‌ಫ್ರ್ಯು, ಗೋರ್ಡನ್ ವಿಲ್ಲಿ, ಕಾರ್ಲ್ ಬಟ್ಜರ್ ಮೊದಲಾದವರು ನವಪುರಾತತ್ತ್ವಕ್ಕೆ ತಮ್ಮದೇ ಆದ ಕೊಡುಗೆ ಸಲ್ಲಿಸಿರುವರು. ಈ ಪಂಥದ ಪ್ರಾರಂಭಿಕ ಹಂತದಲ್ಲಿಯೇ ಕೆಲವು ಟೀಕೆಗಳು ಕೇಳಿಬಂದವು; ಇವರ ವಿಚಾರಗಳು ವಿಡಂಬನೆಗೊಳಗಾದವು. ವಾಲ್ಟರ್ ಟೇಲರ್ ಈ ಸಿದ್ಧಾಂತವನ್ನು ಹೊಸ ಶೀಷೆಯಲ್ಲಿ ಹಳೆಯ ಮದ್ಯವನ್ನು ತುಂಬುವ ಒಂದು ಪ್ರಯತ್ನವೆಂದು ಟೀಕಿಸಿದ. ಪ್ರಸಿದ್ಧ ಪುರಾತತ್ತ್ವಜ್ಞ ಗ್ರಹಾಮ್ ಕ್ಲಾರ್ಕ್ ಇದನ್ನು ಸಮರ್ಥಿಸಿದ. ನವಪಂಥೀಯರ ವೈಜ್ಞಾನಿಕ ನಿಲುವು ಹಾಗೂ ಸಂಸ್ಕೃತಿಯನ್ನು ಭೌತಿಕ ದೃಷ್ಟಿಯಿಂದ ಮಾತ್ರ ಅರ್ಥೈಸುವ ವಿಧಾನಗಳನ್ನು ಕೆಂಟ್ ಫ್ಲಾನೆರಿ ಅತ್ಯಂತ ತೀಕ್ಷ್ಣವಾಗಿ ಖಂಡಿಸಿದ.

ನವಪುರಾತತ್ತ್ವ ಪರಿಕಲ್ಪನೆ ಎರಡು ದಶಕಗಳನ್ನು ಪೂರೈಸುತ್ತಿದ್ದ ಸಮಯದಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಇಯಾನ್ ಹಾಡರ್ ತನ್ನ ಕಾಂಟೆಕ್ಸ್ಚುಯಲ್ ಆರ್ಕಿಯಾಲಜಿ (ಸಾಂದರ್ಭಿಕ ಪುರಾತತ್ತ್ವಶಾಸ್ತ್ರ) ಎಂಬ ಪರಿಕಲ್ಪನೆಯ ಮುಖಾಂತರ ಮತ್ತೊಂದು ಪಥವನ್ನು

ನಿರ್ಮಿಸಿದ. 1980ರ ದಶಕದ ಈ ಬೆಳವಣಿಗೆಯನ್ನು ಪೋಸ್ಟ್–ಪ್ರೊಸೆಶುಯಲ್ ಆರ್ಕಿಯಾಲಜಿ ಎಂದು ಕರೆಯಲಾಗುತ್ತದೆ. ಪುರಾತನ ಅವಶೇಷಗಳ ಸಾಂಕೇತಿಕ ಅರ್ಥ–ಆಶಯಗಳು ನವಪುರಾತತ್ತ್ವಜ್ಞರ ಅವಜ್ಞೆಗೊಳಗಾದುದೇ ಈ ಪಂಥದ ಹುಟ್ಟಿಗೆ ಪ್ರಚೋದನೆ ನೀಡಿತು. ಪ್ರಾಚ್ಯಾಧಾರಗಳ ಮೂಲಕ ಗತ ಸಮಾಜದ ಸಂವೇದನೆ ಮತ್ತು ಜ್ಞಾನಗ್ರಹಣವನ್ನು ಅರಿಯುವುದಕ್ಕೆ ಇವರ ಈ ಪಂಥ ಪ್ರಾಶಸ್ತ್ಯ ಕೊಟ್ಟಿತು. ಇವರ ಕೆಲವೊಂದು ವಿಚಾರಗಳು ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತಗಳಿಂದ ಪ್ರಭಾವಿತವಾದುವು. ಮೈಕೆಲ್ ಶಿಫರ್, ಕ್ರಿಸ್ಟಫರ್ ಟಿಲ್ಲೆ ಮೊದಲಾದವರು ಈ ವರ್ಗದ ಮುಖ್ಯ ಪ್ರತಿಪಾದಕರು. ವಿದ್ವಾಂಸರಾದ ಪದ್ದಯ್ಯನವರು ಅಭಿಪ್ರಾಯಪಡುವಂತೆ 1980ರ ದಶಕದಲ್ಲಿ ಹುಟ್ಟಿಕೊಂಡ ಎಲ್ಲ ಶಾಖೆಗಳೂ ನವಪುರಾತತ್ತ್ವದ ವಿಸ್ತರಣೆ ಅಥವಾ ವಿಮರ್ಶೆ ಮಾತ್ರ. (ಪಿ.ಎಸ್.ಜಿ.)

**ನವಶಿಲಾಯುಗ:** ಶಿಲಾಯುಗದ ಕೊನೆಯ ಹಂತ (ನಿಯೋಲಿತಿಕ್ ಏಜ್). ಚಕ್ಕೆ ತೆಗೆದು ಮಾಡಿದ ಒರಟಾದ ಆದಿಹಳೆಶಿಲಾಯುಗದ ಉಪಕರಣಗಳಿಗಿಂತ ಭಿನ್ನವಾದ ಕತ್ತರಿಸುವ ಅಂಚನ್ನು ಮತ್ತು ಇಡೀ ಉಪಕರಣವನ್ನು ಕಲ್ಲುಬಂಡೆಗಳ ಮೇಲೆ ತಿಕ್ಕಿ ನಯಗೊಳಿಸಿ ಬಳಸುತ್ತಿದ್ದುದು ಈ ಹಂತದ ವೈಶಿಷ್ಟ್ಯ. ಜಾನ್ ಲಬಕ್ (ಲಾರ್ಡ್ ಆವೆಬರಿ) 1865ರಲ್ಲಿ ನಿಯೋಲಿತಿಕ್ ಏಜ್ ಎಂಬ ಪದವನ್ನು ಮೊದಲಿಗೆ ಬಳಸಿದ. ಉಪಕರಣ ತಯಾರಿಕೆಯಲ್ಲಿ

ಪೂರ್ವ ಭಾರತ ನವ ಶಿಲಾಯುಗ ಸಂಸ್ಕೃತಿಯ ಕೊಡಲಿಗಳು

ಹೊಸ ತಂತ್ರ ಬಳಸಿದುದನ್ನು ಇದು ಪ್ರಧಾನವಾಗಿ ಸೂಚಿಸುತ್ತದೆ. ನಯಗೊಳಿಸಿದ ಕಲ್ಲಿನ ಉಪಕರಣಗಳ ಬಳಕೆ, ಮೊದಲ ಬಾರಿಗೆ ಮಣ್ಪಾತ್ರೆಗಳ ತಯಾರಿಕೆ ಮತ್ತು ಉಪಯೋಗ, ಆರಂಭಿಕ ಹಂತದ ಬೇಸಾಯ ಮತ್ತು ಪ್ರಾಣಿಗಳ ಸಾಕಾಣಿಕೆ–ಇವು ಈ ಹಂತದ ವಿಶಿಷ್ಟ ಲಕ್ಷಣಗಳೆಂದು ಈಚಿನವರೆಗೂ ಪರಿಗಣಿಸಲಾಗಿತ್ತು. ಆದರೆ ಸು.7–8 ದಶಕಗಳಿಂದ ಗೋರ್ಡನ್ ಚೈಲ್ಡ್ ಮೊದಲಾದ ಪ್ರಾಕ್ತನ ವಿದ್ವಾಂಸರು ಅಂಥ ತಾಂತ್ರಿಕ ಲಕ್ಷಣಗಳಿಗಿಂತಲೂ ಸಾಂಸ್ಕೃತಿಕ ಹಿನ್ನೆಲೆಯನ್ನು ಸೂಚಿಸುವ ಆರ್ಥಿಕ ಸಾಮಾಜಿಕ ಅಂಶಗಳ ಆಧಾರದ ಮೇಲೆ ನವಶಿಲಾಯುಗದ ಸಂಸ್ಕೃತಿಯನ್ನು ಗುರುತಿಸುವುದು ಸೂಕ್ತವೆಂದು ವಾದಿಸಿದ್ದಾರೆ. ಅವರ ಪ್ರಕಾರ ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದ ಶಿಲಾಯುಗದ ಮಾನವ ಈ ಹಂತದಲ್ಲಿ ಆಹಾರೋತ್ಪಾದನೆಯತ್ತ ಮೊದಲ ಹೆಜ್ಜೆ ಇಟ್ಟ. ಪ್ರಕೃತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವುದರ ಮೂಲಕ ಆರಂಭ ಹಂತದ ಬೇಸಾಯ, ಪಶು ಸಂಗೋಪನೆ ಗಳನ್ನು ರೂಢಿಸಿಕೊಂಡು, ತತ್ಪರಿಣಾಮವಾಗಿ ಅಲೆಮಾರಿ ಜೀವನಕ್ರಮವನ್ನು ಬಿಟ್ಟು ಒಂದೆಡೆಯಲ್ಲಿ ನೆಲೆನಿಂತು ವಾಸಿಸುವಂತಾಯಿತು. ಇದರ ಫಲವಾಗಿ ಗ್ರಾಮೀಣ ಜೀವನ ಮತ್ತು ವಸತಿ ನಿರ್ಮಾಣಗಳು ಬೆಳೆದವು. ಧಾನ್ಯ, ಮಾಂಸ, ಮತ್ತಿತರ ಪಾನೀಯಗಳನ್ನೂ ಸಂಗ್ರಹಿಸಿಡಲು ಸುಟ್ಟಮಣ್ಣಿನ ಪಾತ್ರೆಗಳನ್ನು, ಬೆತ್ತದಲ್ಲಿ ಹೆಣೆದ ಬುಟ್ಟಿಗಳನ್ನು ತಯಾರಿಸ ಲಾರಂಭಿಸಿದ. ಇವೆಲ್ಲವುಗಳಿಂದ ಮಾನವ ಸಂಸ್ಕೃತಿ ದೊಡ್ಡಪ್ರಮಾಣದಲ್ಲಿ ಪ್ರಗತಿ ಹೊಂದಿತು. ಮಾನವನ ಜೀವನ ರೀತಿಯಲ್ಲಿ ತಲೆದೋರಿದ ಇಂಥ ಪ್ರಮುಖ ಬದಲಾವಣೆಗಳು ಅವನ ಸರ್ವತೋಮುಖ ಪ್ರಗತಿ ಮತ್ತು ನಾಗರಿಕತೆಗೆ ಭದ್ರಬುನಾದಿಯನ್ನೊದಗಿಸಿದವು. ಆದುದರಿಂದ ಚೈಲ್ಡ್ ಈ ಹಂತವನ್ನು ಆಹಾರೋತ್ಪಾದನಾ ಕ್ರಾಂತಿ ಮತ್ತು ಮಾನವ ಪ್ರಗತಿಯ ಮೊದಲ ದಿಟ್ಟಹೆಜ್ಜೆ ಎಂದು ವರ್ಣಿಸಿದ್ದಾನೆ. ಈ ಕ್ರಾಂತಿಯ ಮೊದಲ ಕುರುಹುಗಳು ಪಶ್ಚಿಮ ಏಷ್ಯದ ಇರಾಕ್, ಪ್ಯಾಲಸ್ಟೀನ್ ಮತ್ತು ಸಿರಿಯ ಪ್ರದೇಶಗಳಲ್ಲಿ ಪ್ರ.ಶ.ಪೂ.9ನೆಯ ಸಹಸ್ರಮಾನದಲ್ಲಿ ತಲೆದೋರಿದವು. ಕ್ರಮೇಣ ಇತರ ಪ್ರದೇಶಗಳಲ್ಲಿಯೂ ಕಂಡುಬಂದಿವೆ. ಈಜಿಪ್ಟಿನಲ್ಲಿ ಪ್ರ.ಶ.ಪೂ.6–5ನೆಯ ಸಹಸ್ರಮಾನಗಳಲ್ಲೂ ಇರಾನಿನಲ್ಲಿ ಪ್ರ.ಶ.ಪೂ.7–6ನೆಯ ಸಹಸ್ರಮಾನಗಳಲ್ಲೂ ಮೆಡಿಟರೇನಿಯನ್ ಭೂಭಾಗದಲ್ಲಿ ಪ್ರಶ.ಪೂ.5ನೆಯ ಸಹಸ್ರ ಮಾನದಲ್ಲೂ ಯುರೋಪಿನಲ್ಲಿ ಪ್ರ.ಶ.ಪೂ.4ನೆಯ ಸಹಸ್ರಮಾನ ದಲ್ಲೂ ನವಶಿಲಾಯುಗ ಸಂಸ್ಕೃತಿಯ ಕುರುಹುಗಳು ಕಾಣಬರುತ್ತವೆ. ಆದರೆ ಈ ಎಲ್ಲ ಪ್ರದೇಶಗಳಲ್ಲೂ ಆಯಾ ಕಾಲಗಳಲ್ಲಿ, ಚೈಲ್ಡನ ಸ್ಪಷ್ಟೀಕರಣಕ್ಕೆ ಸರಿಹೊಂದುವ ಗ್ರಾಮೀಣ ಜೀವನ ಆರಂಭವಾಯಿತೆಂದು ಹೇಳಲು ಸಾಧ್ಯವಿಲ್ಲ.

ಭಾರತದ ವಾಯವ್ಯ ಗಡಿಪ್ರದೇಶ, ಅಫ್ಘಾನಿಸ್ತಾನ, ಬಲೂಚಿಸ್ತಾನ ಮತ್ತು ಸಿಂಧ್ ಪ್ರದೇಶಗಳಲ್ಲಿ ಪ್ರ.ಶ.ಪೂ.5ನೆಯ ಸಹಸ್ರಮಾನದ ಕೊನೆಯ ಭಾಗದಲ್ಲಿ ಈ ಗ್ರಾಮೀಣ ಜೀವನದ ಕುರುಹುಗಳು ಕಂಡುಬರುತ್ತವೆ. ಪ್ರ.ಶ.ಪೂ.3ನೆಯ ಸಹಸ್ರಮಾನದ ವೇಳೆಗೆ ಕಾಶ್ಮೀರ, ಪೂರ್ವಭಾರತ ಮತ್ತು ಕರ್ನಾಟಕ–ಆಂಧ್ರ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಹೆಜ್ಜೆಗಳನ್ನೂ ಗುರುತಿಸಲಾಗಿದೆ. ಇತ್ತೀಚೆಗೆ ಖಂಬತ್‌ಕೊಲ್ಲಿ (ಗುಜರಾತ್) ಪ್ರದೇಶದಲ್ಲಿ ಪ್ರ.ಶ.ಪೂ.ಸು.7000 ವರ್ಷ ಹಿಂದೆಯೆ ಈ ಹಂತದ ಅವಶೇಷಗಳಿದ್ದಂತೆ ತೋರಿಬಂದಿದೆ. (ಬಿ.ಕೆ.ಜಿ.)

**ನವಶಿಲಾಯುಗ ಸಂಸ್ಕೃತಿ–ತಮಿಳುನಾಡು:** ತಮಿಳುನಾಡು ರಾಜ್ಯದ ದಯಲ್‌ಮಲ್ಲೈ, ತೊಗರಪಲ್ಲಿ ಮತ್ತು ಮುಲ್ಲಿಕಾಡಿನಲ್ಲಿ ನವಶಿಲಾಯುಗ ಸಂಸ್ಕೃತಿಯ ಮೂರು ಅನುಕ್ರಮಗಳನ್ನು ಗುರುತಿಸಲಾಗಿದೆ. ದಯಲ್‌ಮಲ್ಲೈ ಬೆಟ್ಟ ಧರ್ಮಪುರಿ ಜಿಲ್ಲೆಯ ಹರೂರು ತಾಲ್ಲೂಕಿನಲ್ಲಿದೆ. ಇದರ ಈಶಾನ್ಯ ತಪ್ಪಲಿನಲ್ಲಿ ನವಶಿಲಾಯುಗದ ನೆಲೆಯಿದೆ. ಅರ್ಧ ಕಿಮೀ ದೂರದಲ್ಲಿ ಆದಿಚಾರಿತ್ರಿಕ ಕಾಲದ ನೆಲೆಯಿದೆ. ಪೊಣ್ಣೈಯಾರ್‌ನ ಉಪನದಿಯಾದ ವಣಿಯಾರ್ ಇಲ್ಲಿಂದ 1 ಕಿಮೀ ದೂರದಲ್ಲಿ ಹರಿಯುತ್ತದೆ. ಇದೇ ಜಿಲ್ಲೆಯ ಕೃಷ್ಣಗಿರಿ ತಾಲ್ಲೂಕಿನಲ್ಲಿರುವ ನವಶಿಲಾಯುಗದ ನೆಲೆ ತೊಗರಪಲ್ಲಿ. ಇದು ಬೆಟ್ಟದ ಬುಡದಲ್ಲಿದೆ. ಬೆಟ್ಟದ ಇಳಿಜಾರಿನಲ್ಲಿ ಬೃಹತ್‌ಶಿಲಾಯುಗ ಹಾಗೂ ಆದಿಚಾರಿತ್ರಿಕ ಕಾಲದ ಅವಶೇಷಗಳಿವೆ. ಹರೂರು ತಾಲ್ಲೂಕಿನಲ್ಲಿರುವ ಮತ್ತೊಂದು ನೆಲೆಯಾದ ಮುಲ್ಲಿಕಾಡಿನಲ್ಲಿ ನವಶಿಲಾಯುಗ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಹಂತ ಹಾಗೂ ಆದಿಚಾರಿತ್ರಿಕ ಕಾಲದ ಅವಶೇಷಗಳುಳ್ಳ ವಸತಿನೆಲೆಯಿದೆ. ಇದು ಶೆವ್ರಾಯ್ ಬೆಟ್ಟ (**ನೋಡಿ**) ಶ್ರೇಣಿಯ ಭಾಗವಾದ ವತ್ತಲ್‌ಮಲ್ಲೈ ಬೆಟ್ಟದ ತಪ್ಪಲಿನಲ್ಲಿದೆ. ದಯಲ್‌ಮಲ್ಲೈ ಇಲ್ಲಿಂದ ಸು.10 ಕಿಮೀ ದೂರದಲ್ಲಿದೆ. ಈ ನೆಲೆಗಳಲ್ಲಿಯ ನವಶಿಲಾಯುಗ ಸಂಸ್ಕೃತಿಯ ಮಣ್ಪಾತ್ರೆಗಳಲ್ಲಿ 5 ಪ್ರಕಾರಗಳಿವೆ: ಬೂದುಪಾತ್ರೆ, ಕಂದು, ಕೆಂಪು, ಕಪ್ಪು ಮತ್ತು ಟ್ಯಾನ್‌ಬಣ್ಣದ ಪಾತ್ರೆಗಳು. ಕೆಲವೇ ಕೆಲವು ಪಾತ್ರೆಗಳ ಮೇಲೆ ಗೀರುವಿನ್ಯಾಸಗಳಿವೆ. ಮುಲ್ಲಿಕಾಡಿನಲ್ಲಿ ಏಕೈಕ ಕೆಂಪುಬಣ್ಣದ ಪಾತ್ರೆಚೂರಿನ ಮೇಲೆ ನೇರಳೆ ಬಣ್ಣದ ಚಿತ್ರವಿದೆ. ಹೆಚ್ಚಿನ ಪಾತ್ರೆಗಳು ಕೈಯಿಂದಲೇ ತಟ್ಟಿ ಮಾಡಿದವು. ಕೆಲವಕ್ಕೆ ಮಂದಗತಿಯ ಚಕ್ರ ಅಥವಾ ಹಲಗೆಯನ್ನು ಬಳಸಿ ಆಕಾರ ಕೊಡಲಾಗಿದೆ. ಪಾತ್ರೆಗಳಲ್ಲಿ ಬಳಸಿರುವ ಮಣ್ಣು ದೊರಗಾಗಿದೆ. ದಯಲ್‌ಮಲ್ಲೈನ ಪಾತ್ರೆಗಳನ್ನು ಸರಿಸಮ ತಾಪದಲ್ಲಿ ಸುಟ್ಟಿಲ್ಲ. ಆದರೆ ಮುಲ್ಲಿಕಾಡಿನ ಪಾತ್ರೆಗಳು ಚೆನ್ನಾಗಿ ಸುಡಲ್ಪಟ್ಟವು.

ಈ ಮೂರು ನೆಲೆಗಳಲ್ಲಿಯೂ ಸೂಕ್ಷ್ಮಶಿಲೋಪಕರಣಗಳಾದ ಬಾಣದ ಮೊನೆ, ಕೊರೆಯುಳಿ, ಕೊರಗ, ಅರ್ಧಚಂದ್ರಾಕೃತಿ, ಹೆರೆಚಕ್ಕೆ, ಅಲಗು, ಚಕ್ಕೆಗಳು, ತಿರುಳುಗಲ್ಲುಗಳು ದೊರೆತಿವೆ. ಇವನ್ನು ಪ್ರಧಾನವಾಗಿ ಬೆಣಚುಕಲ್ಲಿನಿಂದ ಮಾಡಲಾಗಿದೆ. ಸ್ಫಟಿಕ, ಕ್ಯಾಲ್ಸೆಡನಿಯಿಂದ ಮಾಡಿದ ಉಪಕರಣಗಳೂ ಕೆಲವೊಂದಿವೆ. ದಯಲ್‌ಮಲ್ಲೈ ಮತ್ತು ತೊಗರಪಲ್ಲಿಯ ಉಪಕರಣ ಗಳು ಸಣ್ಣಸಣ್ಣ ಕಲ್ಲಿನುಂಡೆಗಳನ್ನೇ ಮಾರ್ಪಡಿಸಿ ಮಾಡಿದಂತಹವು; ಆದರೆ ಮುಲ್ಲಿಕಾಡಿನಲ್ಲಿ ಉಪಕರಣಗಳನ್ನು ಅಲಗು ಅಥವಾ ಅಲಗಿನಂತಹ ಚಕ್ಕೆಗಳಿಂದ ತಯಾರಿಸಲಾಗಿದೆ. ದಯಲ್‌ಮಲ್ಲೈ ಉಪಕರಣಗಳನ್ನು ಒತ್ತಡ ವಿಧಾನದಿಂದ ಮಾಡಲಾಗಿದೆ. ಇಲ್ಲಿ ಅಲಗು ಹಾಗೂ ಅರ್ಧಚಂದ್ರಾಕೃತಿಗಳಿಲ್ಲ. ಇಲ್ಲಿಯ ಮಣ್ಪಾತ್ರೆ ಹಾಗೂ ಶಿಲೋಪಕರಣಗಳ ಆಧಾರದ ಮೇಲೆ ಪಶ್ಚಿಮ ತಮಿಳುನಾಡಿನ ನವಶಿಲಾಯುಗ ಸಂಸ್ಕೃತಿಯನ್ನು ಮೂರು ಹಂತಗಳಾಗಿ ವಿಂಗಡಿಸಬಹುದು. ಮೊದಲನೆಯ ಹಂತಕ್ಕೆ ಸೇರುವ ನೆಲೆ ದಯಲ್‌ಮಲ್ಲೈ (ಪ್ರ.ಶ.ಪೂ.2800–2200). ಇಲ್ಲಿ ಕೆಂಬಣ್ಣದ ಪಾತ್ರೆ ಅಧಿಕವಾಗಿದ್ದು, ಸೂಕ್ಷ್ಮಶಿಲೋಪ ಕರಣಗಳು ಅಂತ್ಯ ಹಳೆಶಿಲಾಯುಗದ ಉಪಕರಣಗಳನ್ನು ಹೋಲುತ್ತವೆ. ತೊಗರಪಲ್ಲಿಯ (ಪ್ರ.ಶ.ಪೂ.2200–1800) ಅವಶೇಷಗಳನ್ನು ಎರಡನೆಯ ಹಂತಕ್ಕೆ ಸೇರಿಸಬಹುದು. ಇಲ್ಲಿ ಕೆಂಬಣ್ಣದ ಪಾತ್ರೆಗಳು ಪ್ರಧಾನವಾಗಿವೆ. ಉಜ್ಜಿದ ಬೂದುಬಣ್ಣದ ಪಾತ್ರೆಗಳು, ಅಲಗುಗಳೂ ಇಲ್ಲಿ ಪ್ರಥಮಬಾರಿಗೆ ಕಾಣಿಸಿಕೊಳ್ಳುತ್ತವೆ. ಕೊನೆಯ ಹಂತಕ್ಕೆ ಸೇರುವ ನೆಲೆ ಮುಲ್ಲಿಕಾಡು. ಇಲ್ಲಿ ಉಜ್ಜಿದ ಬೂದು ಮಣ್ಪಾತ್ರೆಗಳೂ ಅಲಗುಗಳೂ ಪ್ರಧಾನವಾಗಿದೆ. (ಬಿ.ಎಸ್.)

**ನವ್ದತೋಲಿ:** ಮಧ್ಯಪ್ರದೇಶದ ಪಶ್ಚಿಮ ನಿಮಾರ್ ಜಿಲ್ಲೆಯಲ್ಲಿರುವ ತಾಮ್ರ–ಶಿಲಾಯು ಗದ ನೆಲೆ. ನರ್ಮದ ನದಿಯ ಎಡದಂಡೆಯ ಮೇಲಿದೆ. ಇದರ ಎದುರಿಗೆ ನದಿಯ ಬಲದಂಡೆಯ ಮೇಲೆ ಮಾಹೇಶ್ವರ ನೆಲೆಯಿದೆ. ಇದು ಪ್ರಾಚೀನ ಬೌದ್ಧ ಸಾಹಿತ್ಯದಲ್ಲಿ ಆವಂತಿ ಜನಪದದ ರಾಜಧಾನಿಯೆಂದು ಉಲ್ಲೇಖಗೊಂಡಿರುವ ಮಾಹಿಷ್ಮತಿ. 1952–

53ರಲ್ಲಿ ಬರೋಡದ ಎಂ.ಎಸ್. ಹಾಗೂ ಪೂನ ವಿಶ್ವವಿದ್ಯಾಲಯಗಳು ಜೊತೆಯಾಗಿ ಎಚ್.ಡಿ. ಸಾಂಕಳಿಯ ಅವರ ನೇತೃತ್ವದಲ್ಲಿ ಈ ಎರಡೂ ನೆಲೆಗಳಲ್ಲಿ ಉತ್ಖನನ ನಡೆಸಿದವು. ಅನಂತರ 1957–50ರ ಅವಧಿಯಲ್ಲಿ ನವ್ದತೋಲಿಯಲ್ಲಿ ಉತ್ಖನನವನ್ನು ಮುಂದುವರಿಸಲಾಯಿತು. ಮಾಹೇಶ್ವರದಲ್ಲಿ ಆದಿ ಹಾಗೂ ಮಧ್ಯ ಹಳೆಶಿಲಾಯುಗದ ಶಿಲೋಪಕರಣಗಳು ನರ್ಮದ ನದಿಯ ಸ್ತರದಲ್ಲಿ ಕಂಡುಬಂದವು. ನವ್ದತೋಲಿಯ ಉತ್ಖನನದಲ್ಲಿ ತಾಮ್ರ–ಶಿಲಾಯುಗದಿಂದ ಮುಸ್ಲಿಂ–ಮರಾಠ ಕಾಲದವರೆಗಿನ ಹಂತಗಳನ್ನು ಗುರುತಿಸಲಾಯಿತು.

ಇಲ್ಲಿಯ ಕಪ್ಪುಮಣ್ಣಿನ ನೆಲದ ಮೇಲೆ ತಾಮ್ರ–ಶಿಲಾಯುಗ ಸಂಸ್ಕೃತಿಯ ಜನ ನೆಲೆಯೂರಿದರು. ಮಣ್ಪಾತ್ರೆಯ ಆಧಾರದ ಮೇಲೆ ಇವರ ಸಂಸ್ಕೃತಿಯನ್ನು 4 ಹಂತಗಳಲ್ಲಿ ವಿಭಜಿಸಲಾಗಿದೆ. 1ನೆಯ ಹಂತದಲ್ಲಿ ಮಾಳ್ವ ಪಾತ್ರೆಗಳ ಜೊತೆಗೆ ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಹಾಗೂ ಕೆನೆಬಣ್ಣದ ಲೇಪನವುಳ್ಳ ಪಾತ್ರೆಗಳನ್ನು ಇವರು ಉಪಯೋಗಿಸುತ್ತಿದ್ದರು. 2ನೆಯ ಹಂತದಲ್ಲಿ ದ್ವಿವರ್ಣ ಪಾತ್ರೆಯ ಬಳಕೆ ನಿಂತುಹೋಯಿತು. ಇದೇ ಸಮಯದಲ್ಲಿ ವಸತಿ ಬೆಂಕಿಯಿಂದ ನಾಶವಾಯಿತು. 3ನೆಯ ಹಂತದಲ್ಲಿ ಜೋರ್ವೆ ಮಾದರಿಯ ಪಾತ್ರೆಗಳು ಬಳಕೆಗೆ ಬಂದವು. ಜೊತೆಗೆ ಹೊಳಪಿನ ಕೆಂಪು ಬಣ್ಣದ ಪಾತ್ರೆಗಳು ವಿರಳವಾಗಿ ಉಪಯೋಗಿಸಲ್ಪಟ್ಟವು. ಈ ಪಾತ್ರೆಗಳು 4ನೆಯ ಹಂತದಲ್ಲಿ ಮುಂದುವರೆದುದರ ಜೊತೆಗೆ ಮಣ್ಣು ಮೆತ್ತಿ ಅಲಂಕರಿಸಿದಂಥ (ಅಪ್ಲಿಕ್) ದೊಡ್ಡ ಸಂಗ್ರಹಣ ಜಾಡಿಗಳ ಬಳಕೆ ಸಾಮಾನ್ಯವಾಯಿತು. ಆದರೆ ಈ ಸಂಸ್ಕೃತಿಯುದ್ದಕ್ಕೂ ಅಧಿಕವಾಗಿ ಉಪಯೋಗಿಸಲ್ಪಟ್ಟದ್ದೆಂದರೆ ಮಾಳ್ವ ಮಾದರಿಯ ಬಟ್ಟಲು, ನಳಿಕೆ ಬಟ್ಟಲು (ಒಳಲೆ/ಗಿಂಡಿ), ಚೊಂಬುಗಳು ಹಾಗೂ ಕಿರಿದಾದ ತಳದ ಪೀಠವುಳ್ಳ ಹೂಜಿ (ಪೆಡೆಸ್ಟಲ್ಡ್ ಗಾಬ್ಲೆಟ್). ಈ ಜನರ ಮನೆಗಳು ವೃತ್ತಾಕಾರ ಇಲ್ಲವೇ ಆಯತಾಕಾರದವಾಗಿದ್ದವು. ಗೋಡೆಗಳು ಮಣ್ಣು–ಮೆತ್ತಿದ ಬೊಂಬಿನ ತಡಿಕೆಯಿಂದ ನಿರ್ಮಿಸಿದವು. ಮನೆಯೊಳಗೆ ಸಾಮಾನ್ಯವಾಗಿ ಒಂದು ಅಥವಾ ಜೋಡಿ ಒಲೆಗೂಡುಗಳೂ ಕಣಜದ ದಂಡೆಗಳೂ ಇದ್ದವು. ಗೋದಿ, ಅಕ್ಕಿ, ಎಣ್ಣೆಕಾಳುಗಳು ಹಾಗೂ ಬೇಳೆಕಾಳುಗಳ ಬೇಸಾಯ ಇವರ ಪ್ರಧಾನ ಕಸಬಾಗಿತ್ತು. ಹಂದಿ, ಜಾನುವಾರುಗಳ ಸಾಕಾಣಿಕೆ ಹಾಗೂ ಬೇಟೆ ಇವರ ಇನ್ನಿತರ ಆರ್ಥಿಕ ಚಟುವಟಿಕೆಗಳಾಗಿದ್ದವು. ಇವರ ಧಾರ್ಮಿಕ ನಂಬಿಕೆಯ ಮೇಲೆ ಬೆಳಕು ಚೆಲ್ಲುವ ಒಂದು ಸಂಗ್ರಹಣ ಜಾಡಿ 4ನೆಯ ಹಂತದಿಂದ ದೊರಕಿದೆ. ಇದರ ಹೊರಮೈ ಮೇಲೆ ಮಣ್ಣಿನುಂಡೆ ಮತ್ತು ಲಾಡಿಯನ್ನು ಅಂಟಿಸಿ ಸ್ತ್ರೀ ಹಾಗೂ ಹಲ್ಲಿಯ ಆಕೃತಿಯನ್ನು ಮೂಡಿಸಲಾಗಿದೆ. ಇವರೆಡರ ನಡುವೆ ದೇಗುಲದಂತೆ ತೋರುವ ಮತ್ತೊಂದು ಅಂಟಿಸಿ ಮಾಡಿದ ಚಿತ್ರವಿದೆ. ಸರಿಸೃಪದೊಂದಿಗೆ ಸಂಬಂಧವಿದ್ದ ಯಾವುದೋ ದೇವತೆಯ ದೇಗುಲದ ಚಿತ್ರ ಇದೆಂಬುದು ಧವಳೀಕರ್ ಅವರ ಅಭಿಪ್ರಾಯ. ಅಂತೆಯೇ ಕೆದರಿದ ಕೂದಲಿನ ಮನುಷ್ಯನ ವರ್ಣಚಿತ್ರವಿರುವ ನಳಿಕೆ ಪಾತ್ರೆಯೊಂದನ್ನು ಧಾರ್ಮಿಕ ವಿಧಿಯಲ್ಲಿ ಬಳಸಲಾಗಿದ್ದೆಂದು ತಿಳಿಯಲಾಗಿದೆ.


ಅಲಂಕೃತ ವಿವಿಧ ರೂಪದ ಮಣ್ಪಾತ್ರೆಗಳು

ತಾಮ್ರ–ಶಿಲಾಯುಗದ ಜನರು ತವರಯುಕ್ತ ಕಂಚಿನಿಂದ ತಯಾರಿಸಿದ ಉಳಿ, ಬಾಣದ ಮೊನೆ, ಚಪ್ಪಟೆ ಕೊಡಲಿ, ಮೀನುಗಾಳದ ಕೊಕ್ಕೆ ಮುಂತಾದ ಉಪಕರಣಗಳನ್ನು ತಯಾರಿಸುತ್ತಿದ್ದರು. ಮಧ್ಯದಲ್ಲಿ ಏಣುಳ್ಳ ಖಡ್ಗ ಅಥವಾ ಕಠಾರಿ ವಿಶೇಷವಾಗಿದ್ದು ತಾಮ್ರೋಪಕರಣ ಗುಡ್ಡೆಯ ಖಡ್ಗವನ್ನು ಹೋಲುತ್ತದೆ. ತಾಮ್ರ, ಮಣ್ಣು, ಚಿಪ್ಪು, ಅರೆಪ್ರಶಸ್ತ ಕಲ್ಲುಗಳಿಂದ ತಯಾರಿಸಿದ ಮಣಿ, ಕಿವಿಯೋಲೆ, ಬಳೆ, ಉಂಗುರ ಮುಂತಾದ ಆಭರಣಗಳನ್ನು ಇವರು ಧರಿಸುತ್ತಿದ್ದರು. ಅರ್ಧ ಚಂದ್ರಾಕೃತಿ, ಅಲಗು ಮುಂತಾದ ಸೂಕ್ಷ್ಮಶಿಲೋಪಕರಣಗಳೂ ಕವಣೆಕಲ್ಲು, ಸುತ್ತಿಗೆಕಲ್ಲು ಮುಂತಾದ ಕಲ್ಲಿನ ಉಪಕರಣಗಳೂ ನಿತ್ಯಬಳಕೆಯ ವಸ್ತುಗಳಾಗಿದ್ದವು. ಸುಡಾವೆಮಣ್ಣಿನ ಗೊಂಬೆ, ಆಟಿಕೆ ಗಾಡಿಯ ಚಕ್ರ, ತಕಲಿ ಇವು ಇತರ ಅವಶೇಷಗಳು. ಇಂಗಾಲ 14 ಕಾಲಮಾಪನದಿಂದ ಇವರ ಸಂಸ್ಕೃತಿ ಪ್ರ.ಶ.ಪೂ. 1500–1200ರ ನಡುವಿನಲ್ಲಿತ್ತು ಎಂಬುದು ದೃಢಪಟ್ಟಿದೆ. ಈ ಹಂತದ ಕೊನೆಯಲ್ಲಿ ನೆರೆಯ ಕಾರಣದಿಂದ ಇಲ್ಲಿ ಕೆಲಕಾಲ ಜನವಸತಿ ಇರಲಿಲ್ಲ. ಆದಿಚಾರಿತ್ರಿಕ ಕಾಲದ ಔತ್ತರೇಯ ಮೆರುಗಿನ ಕಪ್ಪುಪಾತ್ರೆ ಸಂಸ್ಕೃತಿಯೊಂದಿಗೆ ಇಲ್ಲಿ ಮತ್ತೆ ಜನವಸತಿ ಆರಂಭವಾಯಿತು. ವಿಶೇಷ ಛಾಯೆಗಳಲ್ಲಿರುವ ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳಲ್ಲದೆ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕೆಂಪು ಲೇಪನವುಳ್ಳ ಪಾತ್ರೆಗಳೂ ಬಳಕೆಯಲ್ಲಿದ್ದವು. ಇಟ್ಟಿಗೆಯ (50×27.5×7.5 ಸೆಂಮೀ) ಸ್ತೂಪ ಹಾಗೂ ಆಯತಾಕಾರದ ಕಟ್ಟಡದ ತಳಪಾಯ ಈ ಹಂತದ ಮಹತ್ತ್ವದ ಅವಶೇಷಗಳು. ಸ್ತೂಪವನ್ನು ಪೂರ್ಣವಾಗಿ ಕಟ್ಟಿದಂತೆ ತೋರುವುದಿಲ್ಲ. ಇದನ್ನು ಮಣ್ಣಿನ ತಳಪಾಯದ ಮೇಲೆ ನಿರ್ಮಿಸಲಾಗಿದೆ. ತಳಪಾಯದಿಂದ ಪ್ರ.ಶ.ಪೂ. 3ನೆಯ ಶತಮಾನದ ಬ್ರಾಹ್ಮಿ ಅಕ್ಷರವುಳ್ಳ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಯ ಚೂರು ಸಿಕ್ಕಿತು. ಆನೆಯ ಚಿತ್ರವುಳ್ಳ ಕಪ್ಪುಗಾಜಿನ ಮುದ್ರೆ ಉಲ್ಲೇಖಾರ್ಹ. ಮುದ್ರಾಂಕಿತ ನಾಣ್ಯ, ಬರೆಹರಹಿತ ಎರಕಹೊಯ್ದ ನಾಣ್ಯ ಹಾಗೂ ಉಜ್ಜಯನಿ ಮಾದರಿಯ ಬುಡಕಟ್ಟು ನಾಣ್ಯಗಳ ಆಧಾರದ ಮೇಲೆ ಈ ಹಂತ ಪ್ರ.ಶ.ಪೂ. 400–100ರ ನಡುವಿನದೆಂದು ತಿಳಿಯಬಹುದು. ಇದರ ಅನಂತರದ ಹಂತ ಪ್ರ.ಶ.ಪೂ. 100–ಪ್ರ.ಶ. 100ರ ನಡುವಿನದ್ದಾಗಿದ್ದು ಇದು ಔತ್ತರೇಯ ಕಪ್ಪು ಮೆರುಗಿನ ಪಾತ್ರೆ ಹಾಗೂ ಮೆರುಗಿನ ಕೆಂಪು ಪಾತ್ರೆ ಸಂಸ್ಕೃತಿಗಳ ನಡುವಿನ ಸಂಕ್ರಮಣ ಹಂತವಾಗಿದೆ. ಅನಂತರದ ಮೆರುಗಿನ ಕೆಂಪುಪಾತ್ರೆ ಹಂತದಲ್ಲಿ ಇಟ್ಟಿಗೆಯ (37.5×25×7.5 ಸೆಂಮೀ) ಕಟ್ಟೆ, ಹೆಂಚುಗಳು ವಿಶೇಷವಾಗಿವೆ. ಮಾಹೇಶ್ವರದಲ್ಲಿ ಸಿಕ್ಕ ಸುಡಾವೆಮಣ್ಣಿನ ಶಿರರಹಿತ ಮಾನವ ಗೊಂಬೆಗಳು ಈ ಹಂತದ್ದಿರಬೇಕು. ಇವುಗಳಲ್ಲಿ ಮೂರು ಅಹಿಚ್ಛತ್ರದಲ್ಲಿ ಸಿಕ್ಕ ತಾಯಿ–ಮಗುವಿನ ಬೊಂಬೆಗಳನ್ನು ಹೋಲುತ್ತವೆ. ಗಣೇಶನ ಶಿಲ್ಪವಿರುವ ಎರಡು ಫಲಕಗಳೂ ಈ ಹಂತಕ್ಕೆ ಸೇರುತ್ತವೆ. ಕೊನೆಯ ಹಂತವಾದ ಮುಸ್ಲಿಂ–ಮರಾಠ ಕಾಲದಲ್ಲಿ ಗಾಜಿನ ಮೆರುಗುಳ್ಳ ಪಾತ್ರೆಗಳಿವೆ. (ವಿ.ಎಸ್.)

**ನವಾಬರು: ಅಯೋಧ್ಯೆ:** ಔಧ್ ಅಥವಾ ಅವಧ ಎಂದು ಪ್ರಖ್ಯಾತವಾಗಿದ್ದ ಅಯೋಧ್ಯೆಯಲ್ಲಿ 18–19ನೆಯ ಶತಮಾನಗಳಲ್ಲಿ ಆಳುತ್ತಿದ್ದ ನವಾಬರು. ಇದು ಮೊದಲು ಮೊಗಲ್ ಸಾಮ್ರಾಜ್ಯದ ಒಂದು ಮುಖ್ಯವಾದ ಸುಭಾ ಆಗಿತ್ತು. ಔಧ್ ರಾಜ್ಯದ ಸ್ಥಾಪಕ ಸಾದತ್ ಖಾನ್ (1722–39) ಖುರಾಸಾನ್‌ನಿಂದ ಬಂದವನು. 1724ರಲ್ಲಿ ಔಧ್‌ನ ರಾಜ್ಯಪಾಲನಾಗಿ ನೇಮಕ ಹೊಂದಿದ ಈತ ಬಲು ಬೇಗ ಮೇಲಕ್ಕೆ ಏರಿದ. ನಾದಿರನ ಆಕ್ರಮಣದ ಕಾಲದಲ್ಲಿ (1739) ಇವನು ದೆಹಲಿಗೆ ಆಹ್ವಾನಿತನಾಗಿದ್ದ. ಅದೇ ವರ್ಷ ಇವನು ಆತ್ಮಹತ್ಯೆ ಮಾಡಿಕೊಂಡ. ಅನಂತರ ರಾಜ್ಯಪಾಲನಾದವನು ಸಾದತ್ ಖಾನನ ಸೋದರಳಿಯ ಹಾಗೂ ಅಳಿಯ ಸಫ್ದರ್ ಜಂಗ್ (1739–54). ಈತ ದೆಹಲಿ ಚಕ್ರಾಧಿಪತ್ಯದ ವಜೀರನಾಗಿ ನೇಮಕ ಹೊಂದಿದ್ದ (1748). ಸಫ್ದರ್ ಜಂಗ್ ತನ್ನ ಸಮಕಾಲೀನ ರಾಜಕೀಯದಲ್ಲಿ ಮಹತ್ತರ ಪಾತ್ರವಹಿಸಿದ್ದ. ಈತ 1754ರಲ್ಲಿ ಮರಣ ಹೊಂದಿದ. ಸಫ್ದರ್ ಜಂಗನ ಮರಣದ ಅನಂತರ ಸಿಂಹಾಸನಕ್ಕೆ ಬಂದ ಅವನ ಮಗ ಶೂಜಾ–ಉದ್–ದೌಲ (1754–75) ಕ್ಷೀಣದೆಸೆಯಲ್ಲಿದ್ದ ಮೊಗಲ್ ಆಡಳಿತದಲ್ಲಿ ವಜೀರನಾಗಿದ್ದ. 1775ರಲ್ಲಿ ತನ್ನ ಕೊನೆಯುಸಿರೆಳೆಯುವತನಕ ಈ ಅಧಿಕಾರದಲ್ಲಿ ಮುಂದುವರಿದ ಈತ ಉತ್ತರ ಭಾರತದ ಇತಿಹಾಸದ ಪ್ರಮುಖ ವ್ಯಕ್ತಿಗಳಲ್ಲೊಬ್ಬ.

ಶೂಜಾ–ಉದ್–ದೌಲ 1763ರಲ್ಲಿ ಮೊಗಲ್ ಚಕ್ರವರ್ತಿ ಮತ್ತು ಮೀರ್ ಕಾಸಿಂನೊಂದಿಗೆ ಕೂಡಿಕೊಂಡು ಬಕ್ಸರ್ ಎಂಬಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ (1764). ಆದರೆ ಪರಾಜಿತನಾಗಿ ಅವನು ಅವಹೇಳನಕರವಾದ ಕರಾರಿಗೆ ಒಪ್ಪಬೇಕಾಯಿತು. ಆದಾಗ್ಯೂ ಆತನ ರಾಜಕೀಯ ದೂರದೃಷ್ಟಿಯಿಂದಾಗಿ ಅವನು ಪೂರ್ಣವಾಗಿ ನಾಶವಾಗದೆ ಉಳಿದುಕೊಂಡ. ಚಾಣಾಕ್ಷತೆ ಮತ್ತು ಕುಶಲ ಆಡಳಿತ ನೀತಿಯಿಂದ ಅವನು ಬ್ರಿಟಿಷರ ಸ್ನೇಹವನ್ನು ಸಂಪಾದಿಸಿಕೊಂಡು ತನ್ನ ಸ್ಥಾನವನ್ನು ಉಳಿಸಿಕೊಂಡ. ಇಂಗ್ಲಿಷರಿಗೂ ಔಧ್ ನವಾಬನೊಂದಿಗೆ ಸ್ನೇಹ ಬೇಕಾಗಿತ್ತು. ಮರಾಠರು ಮತ್ತು ಆಫ್ಘನ್ನರ ವಿರುದ್ಧ ರಕ್ಷಣೆಗೆ ಅವನನ್ನು ಅವರು ಬಳಸಿಕೊಂಡರು. 1765ರ ಇಂಗ್ಲಿಷ್–ಔಧ್ ಕೌಲಿನ ಹಿಂದೆ ಈ ಉದ್ದೇಶವಿತ್ತು. 1770–71ರಲ್ಲಿ ದೆಹಲಿಯ ಚಕ್ರವರ್ತಿ 2ನೆಯ ಷಾ ಆಲಂ ಮರಾಠರ ಆಶ್ರಯ ಪಡೆದಾಗ ಇಂಗ್ಲಿಷರು ಕೋರಾ ಮತ್ತು ಅಲಹಾಬಾದ್ ಜಿಲ್ಲೆಗಳನ್ನು ಅವನಿಂದ ಕಿತ್ತುಕೊಂಡು ಅವುಗಳನ್ನು ನವಾಬನಿಗೆ ಕೊಟ್ಟರು. ಇದಕ್ಕೆ ಪ್ರತಿಯಾಗಿ ನವಾಬನಿಂದ ರೂ. 50 ಲಕ್ಷ ಪಡೆದುಕೊಂಡರು. ಜೊತೆಗೆ ನವಾಬನ ರಕ್ಷಣೆಗಾಗಿ ಕಂಪನಿಯ ಸೈನಿಕ ಠಾಣೆಯನ್ನು ಅಲ್ಲಿ ಇಟ್ಟು, ಅದಕ್ಕಾಗಿ ಅವನು ವಾರ್ಷಿಕ ಪೊಗದಿ ಕೊಡಬೇಕೆಂದು ಕರಾರು ಮಾಡಿದರು. 1773ರಲ್ಲಿ ಬನಾರಸ್ ಒಪ್ಪಂದದಲ್ಲಿ ಇದಕ್ಕೆ ಸ್ವೀಕಾರಮುದ್ರೆ ಬಿತ್ತು. 1774ರಲ್ಲಿ ಇಂಗ್ಲಿಷರ ಮತ್ತು ನವಾಬನ ಸೈನ್ಯಗಳು ರೋಹಿಲ್‌ಖಂಡವನ್ನು ವಶಪಡಿಸಿಕೊಂಡವು. ಸ್ವಲ್ಪ ಭಾಗ ಬಿಟ್ಟು ಉಳಿದ ಪ್ರದೇಶವನ್ನು ನವಾಬ ಶೂಜಾ–ಉದ್–ದೌಲನಿಗೆ ಕೊಡಲಾಯಿತು.

ಶೂಜಾ–ಉದ್–ದೌಲ ಬಲಶಾಲಿಯೂ ರಾಜತಂತ್ರನಿಪುಣನೂ ತೀಕ್ಷ್ಣಬುದ್ಧಿಯುಳ್ಳವನೂ ಉತ್ಸಾಹಶಾಲಿಯೂ ಆಗಿದ್ದ. ಆತ ತನ್ನ ಕರ್ತವ್ಯನಿಷ್ಠೆಯಿಂದ ಅಯೋಧ್ಯೆಯ ಸ್ವಾತಂತ್ರ್ಯವನ್ನೂ ತನ್ನ ವಂಶದ ಗೌರವವನ್ನೂ ಕಾಪಾಡಿಕೊಂಡಿದ್ದ. ಆದರೆ ಶೂಜಾ–ಉದ್–ದೌಲನ ಅನಂತರ ಅಧಿಕಾರಕ್ಕೆಬಂದ ಅನೇಕ ನವಾಬರು ದುರ್ಬಲರೂ ಅಸಮರ್ಥರೂ ಆಗಿದ್ದರು. ಇದರ ಪರಿಣಾಮವಾಗಿ ಅಯೋಧ್ಯೆಯ ಆಡಳಿತವ್ಯವಹಾರಗಳಲ್ಲಿ ಬ್ರಿಟಿಷರ ಪ್ರಾಬಲ್ಯ ಹೆಚ್ಚಿ ಕೊನೆಗೆ ಅಯೋಧ್ಯೆಯು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿಹೋಗಲು ಅವಕಾಶವಾಯಿತು. ಶೂಜಾ–ಉದ್–ದೌಲನ ತರುವಾಯ ಅಸಫ್–ಉದ್–ದೌಲ (1775–97) ಸಿಂಹಾಸನಕ್ಕೆ ಬಂದ. ಈತ ದುರ್ಬಲ ಹಾಗೂ ಯೋಗ್ಯನಲ್ಲದ ದೊರೆಯಾಗಿದ್ದ.

ಈತನ ಕಾಲದಲ್ಲಿ ಆಡಳಿತ ವ್ಯವಸ್ಥೆ ಬೇಜವಾಬ್ದಾರಿಯುತವೂ ಕಳಂಕಪೂರಿತವೂ ಆಗಿತ್ತು. ಬೇಗಮರ ಸ್ವಂತ ಆಸ್ತಿಯಲ್ಲಿ ಗವರ್ನರ್-ಜನರಲ್ ವಾರನ್ ಹೇಸ್ಟಿಂಗ್ಸ್ ಕೈಹಾಕಲು ಇದು ಪ್ರೋತ್ಸಾಹ ನೀಡಿತು. ನವಾಬ ತನ್ನ ಹೇಯಕೃತ್ಯಕ್ಕಾಗಿ ಕೆಟ್ಟ ಹೆಸರು ಗಳಿಸಿದ. 1794ರಲ್ಲಿ ಅಸಫ್-ಉದ್-ದೌಲನ ವಜೀರ ಹೈದರ್ ಬೇಗ್ ಮರಣ ಹೊಂದಿದಾಗ ಉತ್ತಮ ಆಡಳಿತ ವ್ಯವಸ್ಥೆಯ ಎಲ್ಲ ಆಶೆಗಳೂ ಮಣ್ಣುಪಾಲಾದುವು.

ಅಸಫ್-ಉದ್-ದೌಲ 1797ರಲ್ಲಿ ಮರಣಹೊಂದಿದ ಮೇಲೆ ವಾಜೀರ್ ಅಲಿ ಮತ್ತು ಸಾದತ್ ಅಲಿ ನಡುವೆ ಉತ್ತರಾಧಿಕಾರಕ್ಕಾಗಿ ಜಗಳವುಂಟಾಯಿತು. 1797ರಲ್ಲಿ ಸಿಂಹಾಸನವೇರಿದ ವಾಜೀರ್ ಅಲಿಯನ್ನು ಸಾದತ್ ಅಲಿ ಗವರ್ನರ್ ಜನರಲ್ ಸರ್ ಜಾನ್ ಶೋರನ ಸಹಾಯದಿಂದ ಕೆಳಗಿಳಿಸಿ (1798) ಅಯೋಧ್ಯೆಯ ನವಾಬನಾದ. ವಾಜೀರ್ ಅಲಿಗೆ ನಿವೃತ್ತಿವೇತನವನ್ನು ನೀಡಿ ಬನಾರಸ್‌ಗೆ ಕಳುಹಿಸಲಾಯಿತು. ಇಂಗ್ಲಿಷರು ಅನೇಕ ಷರತ್ತುಗಳನ್ನು ಹೇರಿ ನವಾಬನೊಂದಿಗೆ ಒಪ್ಪಂದ ಮಾಡಿಕೊಂಡರು. ಇದ್ದರಿಂದ ನವಾಬನ ಸ್ವಾತಂತ್ರ್ಯ ಕಳೆದುಹೋಯಿತು. ಅಯೋಧ್ಯೆಯನ್ನು ಬ್ರಿಟಿಷರ ನೇರ ಹತೋಟಿಗೆ ಒಳಪಡಿಸುವುದು ಗವರ್ನರ್-ಜನರಲ್ ಲಾರ್ಡ್ ವೆಲ್ಲೆಸ್ಲಿಯ ಹಂಚಿಕೆಯಾಗಿತ್ತು. ವೆಲ್ಲೆಸ್ಲಿ ಬನಾರಸ್ ದಂಗೆಯ ನೆವವನ್ನು ಮುಂದುಮಾಡಿ, ನವಾಬ ತನ್ನ ಸೈನ್ಯವನ್ನು ವಿಸರ್ಜಿಸಿ ಬ್ರಿಟಿಷರ ಸೈನ್ಯದ ಬಲವನ್ನು ಹೆಚ್ಚಿಸುವಂತೆ ಬಲಾತ್ಕರಿಸಿದ. ಈ ಸಂಬಂಧವಾಗಿ ನವಾಬನೊಂದಿಗೆ ಒಂದು ಒಪ್ಪಂದ ಮಾಡಿಕೊಂಡ. ನವಾಬ 1801ರಲ್ಲಿ ತನ್ನ ರಾಜ್ಯದ ಅರ್ಧಭಾಗವನ್ನು ಬ್ರಿಟಿಷರಿಗೆ ಬಿಟ್ಟುಕೊಡಬೇಕಾಯಿತು. ವೆಲ್ಲೆಸ್ಲಿ ಅನಂತರ ನವಾಬನೊಂದಿಗೆ ಮಾಡಿಕೊಂಡ ಒಪ್ಪಂದಗಳಿಂದಾಗಿ ಲಾರ್ಡ್ ಡಾಲ್‌ಹೌಸಿ 1856ರಲ್ಲಿ ಅಯೋಧ್ಯೆಯನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳಲು ಅಡಿಪಾಯ ನಿರ್ಮಿತವಾಯಿತು.

ಘಾಸಿ ಉದ್ದೀನ್ ಹೈದರನ (1814–27) ಆಳ್ವಿಕೆಯ ಕಾಲದಲ್ಲಿ ದೆಹಲಿ ಮತ್ತು ಅಯೋಧ್ಯೆಯ ನಡುವಿನ ಎಲ್ಲ ಸಂಬಂಧಗಳೂ ಕಡಿದುಹೋದವು. ನಾಸಿರ್ ಉದ್ದೀನ್ ಹೈದರ್ (1827–37), ಮಹಮ್ಮದ್ ಅಲಿ ಷಾ (1837–42) ಇವರು ಆಡಳಿತವನ್ನು ಸುಧಾರಿಸಲು ಏನನ್ನೂ ಮಾಡಲಿಲ್ಲ. ಪರಿಸ್ಥಿತಿ ಹದಗೆಟ್ಟು, ಎಲ್ಲೆಲ್ಲೂ ಗೊಂದಲಮಯ ವಾತಾವರಣ ಉಂಟಾಯಿತು. ಬ್ರಿಟಿಷರು ನೇರ ಕ್ರಮ ಕೈಗೊಳ್ಳಲು ಇದರಿಂದ ಉತ್ತಮ ಅವಕಾಶ ಒದಗಿಬಂತು. ಅತ್ಯಂತ ಶೀಘ್ರವಾಗಿ ಬೆಳೆಯುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯದ ನಡುವೆ ಇದ್ದ ಅಯೋಧ್ಯೆ ಸಂಪೂರ್ಣ ಅಸ್ಥಿರತೆಗೆ ಒಳಗಾಯಿತು. ಅದು ಅಳಿದುಹೋಗುವ ಸ್ಥಿತಿಯಲ್ಲಿತ್ತು. ದುರಾಡಳಿತದ ನೆವವನ್ನು ಒಡ್ಡಿ ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕರ ಮಂಡಲಿಯು ಅಯೋಧ್ಯೆಯನ್ನು ಆಕ್ರಮಿಸಿಕೊಳ್ಳಲು ಅಧಿಕಾರ ನೀಡಿತು. 1856ರ ಚಳಿಗಾಲದಲ್ಲಿ ಈ ಉದ್ದೇಶವನ್ನು ಪ್ರಕಟಿಸಲಾಯಿತು. ಅಯೋಧ್ಯೆಯ ಕೊನೆಯ ನವಾಬನೂ ಅಮ್ಜದ್ ಅಲಿ ಷಾನ (1842–47) ಮಗ ಹಾಗೂ ಉತ್ತರಾಧಿಕಾರಿಯೂ ಆಗಿದ್ದ ವಾಜೀದ್ ಅಲಿ ಷಾನನ್ನು (1847–56) ಸಿಂಹಾಸನದಿಂದ ಇಳಿಸಿ ಅವನಿಗೆ 12 ಲಕ್ಷ ರೂಪಾಯಿಗಳ ನಿವೃತ್ತಿ ವೇತನ ನೀಡಿ ಕಲ್ಕತ್ತೆಗೆ ಕಳುಹಿಸಲಾಯಿತು. ಹೀಗೆ ಅಯೋಧ್ಯೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು. ಅಲ್ಲಿಗೆ ಅಯೋಧ್ಯೆಯ ನವಾಬರ ಆಡಳಿತ ಕೊನೆಗೊಂಡಿತು.

**ಆರ್ಕಾಟ್:** ಯುರೋಪಿಯನ್ನರು ಕರ್ಣಾಟಿಕ ಎಂದು ಕರೆಯುತ್ತಿದ್ದ, ದಕ್ಷಿಣ ಭಾರತದ ಕೋರಮಂಡಲ ತೀರ ಮತ್ತು ಅದರ ಹಿನ್ನಾಡಿನ, ಪ್ರದೇಶದಲ್ಲಿ ಆಳಿದ ನವಾಬರ ಕಾಲವಾದ 18ನೆಯ ಶತಮಾನ ಭಾರತದ ರಾಜಕೀಯ ಗೊಂದಲಮಯವಾಗಿತ್ತು. ಈ ವೇಳೆಯಲ್ಲಿ ಮೊಗಲ್ ಆಧಿಪತ್ಯ ಅವನತಿಯ ಹಾದಿಯಲ್ಲಿತ್ತು. ಈ ಅಸ್ತವ್ಯಸ್ತ ಪರಿಸ್ಥಿತಿಯಲ್ಲಿ ಅನೇಕ ರಾಜ್ಯಾಕಾಂಕ್ಷೆಯ ವ್ಯಕ್ತಿಗಳು ಸ್ವತಂತ್ರ ರಾಜ್ಯಗಳನ್ನು ಕಟ್ಟಿಕೊಳ್ಳಲು ಅವಕಾಶ ಒದಗಿಬಂದಿತ್ತು. ದಖನ್ನಿನಲ್ಲಿ ನಿಜಾಮ್-ಉಲ್-ಮುಲ್ಕ್ ಅಸಾಫ್ ಜಾಹ್ ಸ್ವತಂತ್ರನಾಗಿದ್ದ. ದಖನ್ ಪ್ರಾಂತದ ಬಹುಮುಖ್ಯ ಭಾಗವಾದ ಕರ್ಣಾಟಿಕ ಪ್ರದೇಶ ನಿಜಾಮನ ಆಳ್ವಿಕೆಯಲ್ಲಿ ಸಂದಿಗ್ಧ ಸ್ಥಿತಿಯಲ್ಲಿತ್ತು. ಮೊದಲು ದೆಹಲಿಗೂ ಅನಂತರ ನಿಜಾಮನಿಗೂ ಅಧೀನರಾಗಿ ಕರ್ಣಾಟಿಕದಲ್ಲಿ ರಾಜಧಾನಿಯಾದ ಆರ್ಕಾಟ್ ಇಂದಿನ ಧರ್ಮಪುರಿ-ವೆಲ್ಲೂರು ಜಿಲ್ಲೆಯಿಂದ ಈ ನವಾಬರು ಆಡಳಿತ ನಡೆಸುತ್ತಿದ್ದರು. ಆದ್ದರಿಂದ ಆರ್ಕಾಟಿನ ನವಾಬರೆಂದೂ ಇವರು ಪ್ರಸಿದ್ಧರಾಗಿದ್ದಾರೆ. ಕರ್ಣಾಟಿಕದ ಮೊದಲನೆಯ ನವಾಬ ಜ಼ುಲ್‌ಫಕರ್ ಅಲಿ ಖಾನನನ್ನು (ಸು. 1690–1703) ನೇಮಿಸಿದ್ದವನು ದೆಹಲಿಯ ಮೊಗಲ್ ಚಕ್ರವರ್ತಿ ಔರಂಗ್‌ಜ಼ೇಬ್. ಅನಂತರ ದಾವೂದ್ ಖಾನ್ 1703–10ರಲ್ಲಿ ಆಡಳಿತ ನಡೆಸಿದ. ಮಹಮ್ಮದ್ ಸಯ್ಯಿದ್ ಸಾದತ್-ಉಲ್ಲಾ ಖಾನನೂ (1710–32) ದೋಸ್ತ್ ಅಲಿ ಖಾನನೂ (1732–40) ಅನಂತರ ಬಂದವರು. ಸುಮಾರು ಈ ಕಾಲದಲ್ಲಿ ಹೈದರಾಬಾದಿನ ನಿಜಾಮ ಅಸಾಫ್ ಜಾಹ್ ಸ್ವತಂತ್ರನಾದ. ದೆಹಲಿಯ ಚಕ್ರವರ್ತಿಯ ಅಧಿಕಾರವನ್ನೆಲ್ಲ ದಖನ್ನಿನಲ್ಲಿ ಚಲಾಯಿಸತೊಡಗಿದ್ದ ನಿಜಾಮ ಆರ್ಕಾಟಿನ ನವಾಬನನ್ನು ನೇಮಿಸುವ ಅಧಿಕಾರವನ್ನೂ ಪಡೆದುಕೊಂಡಿದ್ದ. ಕ್ರಮೇಣ ದೋಸ್ತ್ ಅಲಿ ಸ್ವತಂತ್ರನಾಗಿ ವರ್ತಿಸತೊಡಗಿದ. 18ನೆಯ ಶತಮಾನದ ಮಧ್ಯಭಾಗದ ವೇಳೆಗೆ ಪೇಶ್ವೆಗಳ ನೇತೃತ್ವದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆದ ಮರಾಠರು ಕರ್ಣಾಟಿಕ ಪ್ರಾಂತದ ಮೇಲೆ ಧಾಳಿ ನಡೆಸಿ ನವಾಬ ದೋಸ್ತ್ ಅಲಿಯನ್ನು ಕೊಂದು ಆತನ ಅಳಿಯ ಚಂದಾಸಾಹೇಬನನ್ನು ಸೆರೆಹಿಡಿದು ಸಾತಾರಕ್ಕೆ ಕೊಂಡೊಯ್ದರು. ನವಾಬ್ ದೋಸ್ತ್ ಅಲಿಯ ಮಗ ಸಫ್ದರ್ ಅಲಿ ಖಾನ್ ಮರಾಠರಿಗೆ ಒಂದು ಕೋಟಿ ರೂಪಾಯಿ ಕಪ್ಪವನ್ನು ಕೊಡುವುದಾಗಿ ಹೇಳಿ ತನ್ನ ಜೀವ ಮತ್ತು ರಾಜ್ಯವನ್ನು ಉಳಿಸಿಕೊಂಡ (1740–42). ಆದರೆ ಮರಾಠರು ಸಫ್ದರ್ ಅಲಿಯನ್ನು ಕೊಂದು ಆತನ ಮಗ 2ನೆಯ ಸಾದತ್-ಉಲ್ಲಾ ಖಾನನನ್ನು ನವಾಬನೆಂದು ಘೋಷಿಸಿದರು. ಈ ಘಟನೆಗಳು ಕರ್ಣಾಟಿಕ ಪ್ರಾಂತದಲ್ಲಿ ಅನಿಶ್ಚಿತ ಪರಿಸ್ಥಿತಿಯನ್ನು ಉಂಟುಮಾಡಿದುವು. ಸಂಪೂರ್ಣ ದಖನ್ನಿನ ಒಡೆಯನೆನಿಸಿಕೊಂಡಿದ್ದ ನಿಜ಼ಾಮ ಅನ್ವರುದ್ದೀನನನ್ನು ಕರ್ಣಾಟಿಕದ ನವಾಬನನ್ನಾಗಿ ನೇಮಕ ಮಾಡಿದ (1744). ಆದರೆ ದೋಸ್ತ್ ಅಲಿಯ ಅನೇಕ ಸಂಬಂಧಿಕರಿಗೆ ಮತ್ತು ಮಿತ್ರರಿಗೆ ಇವನ ಆಯ್ಕೆ ಸಮ್ಮತವಾಗಲಿಲ್ಲ. ಇವರು ಅನೇಕ ಕೋಟೆ ಮತ್ತು ಜಾಗೀರುಗಳ ಆಡಳಿತ ನಡೆಸುತ್ತಿದ್ದರು. ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತಕ್ಕೆ ವ್ಯಾಪಾರೋದ್ದೇಶದಿಂದ ಬಂದಿದ್ದ ಇಂಗ್ಲಿಷರು, ಫ್ರೆಂಚರು ಮುಂತಾದ ಐರೋಪ್ಯರು ಸ್ಥಳೀಯ ರಾಜರ ಆಂತರಿಕ ವ್ಯವಹಾರಗಳಲ್ಲಿ ಕೈಹಾಕತೊಡಗಿ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸಿದರು.

ಮರಾಠರು 1748ರಲ್ಲಿ ಚಂದಾ ಸಾಹೇಬನನ್ನು ಬಿಡುಗಡೆ ಮಾಡಿದಾಗ ಕರ್ಣಾಟಿಕದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಅವನು ತನ್ನ ಮಾವನ ಸಿಂಹಾಸನವನ್ನು ಪಡೆಯಲು ಪಿತೂರಿ ಹೂಡಿದ. ದಖನ್ನಿನಲ್ಲೂ ಇಂಥದೇ ಮತ್ತೊಂದು ಸಮಸ್ಯೆ ಉದ್ಭವಿಸಿತು. ಅಸಾಫ್ ಜಾಹನ ಮರಣದಿಂದಾಗಿ ಹೈದರಾಬಾದಿನಲ್ಲಿ ಉತ್ತರಾಧಿಕಾರಕ್ಕಾಗಿ ಮುಜಾಫರ್ ಜಂಗ್ ಮತ್ತು ನಾಸಿರ್ ಜಂಗರ ನಡುವೆ ಕಲಹ ಏರ್ಪಟ್ಟಿತು. ಇಂಥ ಅವಕಾಶಕ್ಕಾಗಿ ಕಾಯುತ್ತಿದ್ದ ಫ್ರೆಂಚ್ ಗವರ್ನರ್-ಜನರಲ್ ಡೂಪ್ಲೆಕ್ಸ್ (ಡೂಪ್ಲೆ) ಕರ್ಣಾಟಿಕದ ಚಂದಾ ಸಾಹೇಬ್ ಮತ್ತು ಮುಜ಼ಾಫರ್ ಜಂಗನೊಡನೆ ಪ್ರತ್ಯೇಕ ರಹಸ್ಯ ಒಪ್ಪಂದಗಳನ್ನು ಮಾಡಿಕೊಂಡು ಅವರ ಸಿಂಹಾಸನಗಳನ್ನು ಮರಳಿ ಗಳಿಸಿಕೊಡುವುದಾಗಿ ಆಶ್ವಾಸನೆ ನೀಡಿದ. ಈ ಮೂವರೂ ಕೂಡಿಕೊಂಡು 1749ರ ಆಗಸ್ಟ್ 3ರಂದು ಆರ್ಕಾಟಿನ ನವಾಬ ಅನ್ವರ್ ಉದ್ದೀನನನ್ನು ಅಂಬರ್ ಕದನದಲ್ಲಿ ಕೊಂದರು. ಅವನ ಮಗ ಮಹಮ್ಮದ್ ಅಲಿ ತಿರುಚಿನಾಪಳ್ಳಿಗೆ ತಪ್ಪಿಸಿಕೊಂಡು ಹೋಗಿ ಅಲ್ಲಿಯ ಕೋಟೆಯಲ್ಲಿ ರಕ್ಷಣೆ ಪಡೆದ. ಚಂದಾ ಸಾಹೇಬ ಮತ್ತು ಮುಜ಼ಾಫರ್ ಜಂಗರಿಗೆ ಸಿಂಹಾಸನಗಳು ದೊರಕಿದವು. ಚಂದಾ ಸಾಹೇಬ ಆರ್ಕಾಟಿನ ನವಾಬನಾದ.

ಆದರೆ ಡೂಪ್ಲೆಕ್ಸ್ ಮತ್ತು ಅವನ ಮಿತ್ರರ ಕೂಟದ ವಿಜಯ ಬಹುಕಾಲ ಉಳಿಯಲಿಲ್ಲ. ಫ್ರೆಂಚರಿಂದ ತಮಗೆ ಉಂಟಾದ ಅಪಾಯಕಾರಿ ಪರಿಸ್ಥಿತಿಯನ್ನು ಇಂಗ್ಲಿಷರು ಬಹು ಬೇಗ ಮನಗಂಡರು. ಅವರು ಕೂಡಲೆ ಮಹಮ್ಮದ್ ಅಲಿಯ ಪಕ್ಷ ವಹಿಸಿ ಅವನಿಗೆ ಸಹಾಯ ಮಾಡಿದರು. ಇಂಗ್ಲಿಷರು ಆರ್ಕಾಟ್ ಕೋಟೆಗೆ ಮುತ್ತಿಗೆ ಹಾಕಿ ಚಂದಾ ಸಾಹೇಬನನ್ನು ಕೊಂದು, ಮಹಮ್ಮದ್ ಅಲಿಯನ್ನು ಕರ್ಣಾಟಿಕದ ನವಾಬನನ್ನಾಗಿ ಮಾಡಿದರು (1749).

ಇಂಗ್ಲಿಷರ ಮತ್ತು ಫ್ರೆಂಚರ ಈ ಪೈಪೋಟಿಯಿಂದಾಗಿ ಕರ್ಣಾಟಿಕ ಅಪಾರ ನಷ್ಟ ಅನುಭವಿಸಿತು. ಇಂಗ್ಲಿಷರ ನೆರವಿನಿಂದ ನವಾಬನೆನಿಸಿಕೊಂಡ ಮಹಮ್ಮದ್ ಅಲಿ ದಕ್ಷ ಆಡಳಿತಗಾರನಾಗಿರಲಿಲ್ಲ. ಅವನು ವಿಷಯಲಂಪಟನಾಗಿದ್ದ. ರಾಜ್ಯದ ವರಮಾನವನ್ನು ಸ್ವಂತ ಭೋಗವೈಭವಗಳಿಗಾಗಿ ವೆಚ್ಚ ಮಾಡುತ್ತಿದ್ದ. ಅದೂ ಸಾಲದಾದಾಗ ಅವನು ಅಧಿಕ ಬಡ್ಡಿ ದರದಲ್ಲಿ ಇಂಗ್ಲಿಷ್ ಕಂಪನಿಯಿಂದ ಅಪಾರ ಸಾಲ ಪಡೆದ. ಇದಕ್ಕೆ ಪ್ರತಿಯಾಗಿ ಇಂಗ್ಲಿಷ್ ಕಂಪನಿಗೆ ಕರ್ಣಾಟಿಕದ ಕೆಲವು ಜಿಲ್ಲೆಗಳ ಭೂಕಂದಾಯವನ್ನು ಬಿಟ್ಟುಕೊಟ್ಟ. ಈ ಜಿಲ್ಲೆಗಳಲ್ಲಿ ಆಡಳಿತ ವ್ಯವಸ್ಥೆ ದುರ್ಬಲಗೊಂಡು ನವಾಬನ ಪ್ರಭಾವ ಮತ್ತು ಅಧಿಕಾರಗಳು ಕಡಿಮೆಯಾಗಿ ಬ್ರಿಟಿಷರ ಪ್ರಭಾವ ಅಧಿಕವಾಯಿತು. ನವಾಬನ ಮತ್ತು ಇಂಗ್ಲಿಷರ ನಡುವಣ ಸಂಬಂಧ ವಿಷಮಿಸಿತು. ಇಂಗ್ಲಿಷರು 1787ರಲ್ಲಿ ನವಾಬನೊಡನೆ ಒಂದು ಒಪ್ಪಂದ ಮಾಡಿಕೊಂಡರು. 15ಲಕ್ಷ ಪಗೋಡಗಳನ್ನು ನವಾಬನಿಗೆ ಸಹಾಯಧನವಾಗಿ ನೀಡಿ ಕರ್ಣಾಟಿಕದ ರಕ್ಷಣೆಯ ಜವಾಬ್ದಾರಿಯನ್ನು ಅವರು ತೆಗೆದುಕೊಂಡರು. ಟಿಪ್ಪುವಿನೊಂದಿಗಿನ ಯುದ್ಧದ ಕಾಲದಲ್ಲಿ (1790–92) ಕರ್ಣಾಟಿಕದ ಸಂಪೂರ್ಣ ಹತೋಟಿಯನ್ನು ಕಂಪನಿ ಸರಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಯುದ್ಧ ಅಂತ್ಯಗೊಂಡ ಅನಂತರ 1792 ಜುಲೈ 12ರಂದು ನವಾಬನ ಮತ್ತು ಇಂಗ್ಲಿಷರ ನಡುವೆ ಮತ್ತೊಂದು ಒಪ್ಪಂದ ಏರ್ಪಟ್ಟಿತು. ನವಾಬ ಮತ್ತೆ ಕರ್ಣಾಟಿಕದ ಅಧಿಕಾರ ಪಡೆದ. ಬ್ರಿಟಿಷರಿಗೆ ರಕ್ಷಣಾ ವೆಚ್ಚಕ್ಕಾಗಿ ನೀಡಬೇಕಾದ ಮೊತ್ತವನ್ನು 9 ಲಕ್ಷ ಪಗೋಡಗಳಿಗೆ ಇಳಿಸಲಾಯಿತು.

ಮಹಮ್ಮದ್ ಅಲಿ 1795 ಅಕ್ಟೋಬರ್ 13ರಂದು ಮರಣ ಹೊಂದಿದ. ಅವನ ಮಗ ಉಮ್‌ದತ್-ಉಲ್-ಉಮ್ರ ನವಾಬನಾದ. ಇವನ ಕಾಲದಲ್ಲೂ ಕರ್ಣಾಟಿಕದ ಪರಿಸ್ಥಿತಿ ಉತ್ತಮಗೊಳ್ಳದೆ ಆಡಳಿತದ ನ್ಯೂನತೆಗಳು ಮುಂದುವರಿದವು. ಲಾರ್ಡ್ ವೆಲ್ಲೆಸ್ಲಿ ಗವರ್ನರ್-ಜನರಲ್ ಆಗಿ ಅಧಿಕಾರಕ್ಕೆ ಬಂದಾಗ ಕರ್ಣಾಟಿಕವನ್ನು ಕಂಪನಿ ಸರ್ಕಾರದ ನೇರ ಆಡಳಿತಕ್ಕೆ ಒಳಪಡಿಸಲು ನಿಶ್ಚಯಿಸಿದ. ಉಮ್‌ದತ್-ಉಲ್-ಉಮ್ರ 1801ರಲ್ಲಿ ತೀರಿಕೊಂಡ. ಅವನ ಉತ್ತರಾಧಿಕಾರಿಯಾದ ಅವನ ಮಗ ಅಲಿ ಹುಸೇನನನ್ನು ಲಾರ್ಡ್ ವೆಲ್ಲೆಸ್ಲಿ ಕಡೆಗಣಿಸಿ ಉಮ್ರನ ದಾಯಾದಿ ಅಜೀಮ್-ಉದ್-ದೌಲನೊಡನೆ ಒಪ್ಪಂದ ಮಾಡಿಕೊಂಡು ಅವನನ್ನು ಕರ್ಣಾಟಿಕದ ನವಾಬನಾಗಿ ನೇಮಕ ಮಾಡಿದ. ಅಜೀಮ್-ಉದ್-ದೌಲನಿಗೆ ಕರ್ಣಾಟಿಕದ ಭೂಕಂದಾಯದ 1/5 ಭಾಗವನ್ನು ಸಂದಾಯ ಮಾಡಲು ಒಪ್ಪಿ ಸೈನಿಕ ಮತ್ತು ಪೌರಾಡಳಿತದ ಸಂಪೂರ್ಣ ಅಧಿಕಾರವನ್ನು ಬ್ರಿಟಿಷ್ ಕಂಪನಿ ವಹಿಸಿಕೊಂಡಿತು.

**ಬಂಗಾಲ:** 18, 19ನೆಯ ಶತಮಾನಗಳಲ್ಲಿ ಬಂಗಾಲವನ್ನು ಆಳುತ್ತಿದ್ದ ಮುಸ್ಲಿಂ ಪ್ರಭುಗಳು. ಮೊಗಲ್ ಚಕ್ರವರ್ತಿ ಔರಂಗ್‌ಜೇಬ್ 1705ರಲ್ಲಿ ಮುರ್ಷಿದ್ ಕುಲೀ ಖಾನನನ್ನು (1703–27) ಬಂಗಾಲದ ರಾಜ್ಯಪಾಲನಾಗಿ ನೇಮಿಸಿದ. ಈತ ಬಲಿಷ್ಠನೂ ದಕ್ಷನೂ ಆದ ಆಡಳಿತಗಾರನಾಗಿದ್ದ. ಈತ ಢಾಕಾದಿಂದ ಮುರ್ಷಿದಾಬಾದಿಗೆ ರಾಜಧಾನಿಯನ್ನು ಬದಲಾಯಿಸಿದನಲ್ಲದೆ, ಆ ವೇಳೆಗೆ ಬಂಗಾಲದಲ್ಲಿ ಪ್ರಭಾವ ಬೆಳೆಸಿಕೊಳ್ಳುತ್ತಿದ್ದ ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ನೌಕರರು ಅತಿಯಾಗಿ ವರ್ತಿಸದಂತೆ ಕ್ರಮ ಕೈಗೊಂಡ. 1727ರಲ್ಲಿ ಕುಲೀ ಖಾನ್ ತೀರಿಕೊಂಡಾಗ ಅವನ ಸ್ಥಾನಕ್ಕೆ ಅವನ ಅಳಿಯ ಶೂಜಾ ಉದ್ದೀನ್ ಖಾನ್ (1727–39) ಬಂದ. ಇವನ ಕಾಲದಲ್ಲಿ ಬಿಹಾರ ಸುಭಾ ಇವನ ಆಡಳಿತದ ವ್ಯಾಪ್ತಿಗೆ ಒಳಪಟ್ಟಿತು. ಶೂಜಾ ಉದ್ದೀನ್ 1739ರಲ್ಲಿ ಮರಣ ಹೊಂದಿದ.

ಶೂಜಾ ಉದ್ದೀನನ ಅನಂತರ ಅಧಿಕಾರಕ್ಕೆ ಬಂದ ಇವನ ಮಗ ಸರ್ಫರಾಜ್ ಖಾನ್ (1730–40) ಬಹಳ ಕಾಲ ಆಡಳಿತ ನಡೆಸಲಿಲ್ಲ. ಒಳಜಗಳ ಮತ್ತು ದಂಗೆಗಳು ಸಾಮಾನ್ಯವಾಗಿದ್ದವು. ಲಂಚಗುಳಿತನ ಮತ್ತು ಅದಕ್ಷತೆಯಿಂದ ರಾಜ್ಯ ಜರ್ಜರಿತವಾಗಿತ್ತು. ಬಂಗಾಲದ ಸಹಾಯಕ ರಾಜ್ಯಪಾಲನಾಗಿದ್ದ ಅಲಿವರ್ದಿ ಖಾನ್ (1740–56) ತನ್ನ ಸೋದರ ಹಾಜಿ ಅಹಮದ್, ಅಲಮ್ ಚಂದ್, ಜಗತ್ ಸೇಠ್, ಫತೇ ಚಂದ್ ಇವರೊಂದಿಗೆ ಸರ್ಫರಾಜ್ ಖಾನನ ವಿರುದ್ಧ ಪಿತೂರಿ ಹೂಡಿ ಆತನನ್ನು ಕೊಂದು ಬಂಗಾಲದ ಸಿಂಹಾಸನವನ್ನು ಆಕ್ರಮಿಸಿಕೊಂಡ. ಅಲಿವರ್ದಿ ಖಾನ್ ದಕ್ಷನೂ ಪ್ರಭಾವಶಾಲಿಯೂ ಆಗಿದ್ದು ಬಂಗಾಲದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಲು ಮೊಗಲ್ ಸಾರ್ವಭೌಮನ ಅನುಮತಿ ಪಡೆದುಕೊಂಡ. ಈತ ಇಂಗ್ಲಿಷರ ಬಗ್ಗೆ ಬಿಗಿ ನೀತಿ ಅನುಸರಿಸಿದ. ಆದರೆ ಮರಾಠರು ಇವನಿಗೆ ಕಿರುಕುಳ ಕೊಡುತ್ತಿದ್ದರು. ಮರಾಠರೊಂದಿಗೆ ಶಾಂತಿಯನ್ನೇರ್ಪಡಿಸಿಕೊಳ್ಳಲು ಈತ ವರ್ಷಕ್ಕೆ 12 ಲಕ್ಷ ರೂಪಾಯಿಗಳನ್ನು ಒರಿಸ್ಸದ ಒಂದು ಭಾಗದ ಆದಾಯವನ್ನೂ ವಹಿಸಿಕೊಡುವುದಾಗಿ ಒಪ್ಪಂದ ಮಾಡಿಕೊಂಡ (1751).

ಆಲಿವರ್ದಿ 1756ರಲ್ಲಿ ಮರಣ ಹೊಂದಿದ. ಅನಂತರ ಈತನ ಮೊಮ್ಮಗ ಮಿರ್ಜಾ ಮುಹಮ್ಮದ್ ಬಂಗಾಲದ ನವಾಬನಾಗಿ ಅಧಿಕಾರಕ್ಕೆ ಬಂದ. ಈತ ನವಾಬ್ ಸಿರಾಜ್–ಉದ್–ದೌಲನೆಂದು (1756–57) ಹೆಚ್ಚು ಪ್ರಸಿದ್ಧನಾಗಿದ್ದಾನೆ. ಈತನ ಅಲ್ಪಕಾಲದ ಆಡಳಿತ ಬಂಗಾಲದ ಮತ್ತು ಭಾರತದ ಇತಿಹಾಸದಲ್ಲಿ ಮಹತ್ತ್ವಪೂರ್ಣವಾದುದು.

ಸಿರಾಜ್–ಉದ್–ದೌಲ ಪ್ರಭಾವಯುತ ವ್ಯಕ್ತಿ ಹಾಗೂ ಯೋಗ್ಯ ಆಡಳಿತಗಾರನಾಗಿದ್ದ. ಈತ ಇಂಗ್ಲಿಷರ ಕುತಂತ್ರವನ್ನು ಸಹಿಸುತ್ತಿರಲಿಲ್ಲ. ಇವರು ಅನಾವಶ್ಯಕವಾಗಿ ಭಾರತದ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದರು. ಇಂಗ್ಲಿಷರು ಬಂಗಾಲದಲ್ಲಿ ಕೋಟೆಗಳನ್ನು ನಿರ್ಮಿಸುವುದರಲ್ಲಿ ನಿರತರಾಗಿದ್ದುದನ್ನು ಇವನು ವಿರೋಧಿಸಿದ. ಇದರಿಂದ ಇಂಗ್ಲಿಷರೊಂದಿಗೆ ಘರ್ಷಣೆ ಸಂಭವಿಸಿತು. ಈತ 1756 ಜೂನ್ 4ರಂದು ಅಪಾರ ಸೈನ್ಯದೊಂದಿಗೆ ಹೊರಟು ಬ್ರಿಟಿಷರ ಕಾಸಿಮ್ ಬಜಾರಿನ ಕಾರ್ಖಾನೆಗಳನ್ನು ವಶಪಡಿಸಿಕೊಂಡು ಯುದ್ಧವನ್ನು ಮುಂದುವರಿಸಿದ. ಜೂನ್ 20ರಂದು ಕಲ್ಕತ್ತ ಇವನ ವಶವಾಯಿತು. ಬ್ರಿಟಿಷ್ ರಾಜ್ಯಪಾಲ ಡ್ರೇಕ್ ಪಲಾಯನ ಮಾಡಿ ಹಡಗಿನಲ್ಲಿ ರಕ್ಷಣೆ ಪಡೆದ. ವಿಲಿಯಂ ಕೋಟೆ ಸುಲಭವಾಗಿ ನವಾಬನ ವಶವಾಯಿತು. ಇವನು ಕಲ್ಕತ್ತವನ್ನು ವಶಪಡಿಸಿಕೊಂಡ ಘಟನೆ ಭಾರತದ ಇತಿಹಾಸದಲ್ಲಿ ಸ್ಮರಣೀಯವಾದದ್ದು. ಸಿರಾಜ್–ಉದ್–ದೌಲ 146 ಮಂದಿ ಇಂಗ್ಲಿಷ್ ಕೈದಿಗಳನ್ನು ಒಂದು ಚಿಕ್ಕ ಕೋಣೆಯಲ್ಲಿ (51.2ಮೀ x 4 ಮೀ) ಕೂಡಿ ಹಾಕಿದ್ದನೆಂದೂ ಅವರಲ್ಲಿ 123 ಮಂದಿ ಉಸಿರು ಕಟ್ಟಿ ಸತ್ತುಹೋದರೆಂದೂ ಹಾಲ್‌ವೆಲ್ ಎಂಬುವನು ಬರೆದಿರುವುದು ಕಟ್ಟುಕತೆಯೆಂದು, ಇಲ್ಲವೇ ಉತ್ಪ್ರೇಕ್ಷೆಯೆಂದು ಹೇಳಲು ಸಾಕಷ್ಟು ಆಧಾರಗಳಿವೆ.

ಕಲ್ಕತ್ತದ ಪತನಾನಂತರ ಇಂಗ್ಲಿಷರು ನವಾಬನ ಶತ್ರುಗಳೊಂದಿಗೆ ಸಂಧಾನದಲ್ಲಿ ತೊಡಗಿದರು. ಇವರು ತಮ್ಮ ಇಚ್ಛೆಯಂತೆ ವರ್ತಿಸುವಂಥ ಬೇರೊಬ್ಬನನ್ನು ಸಿರಾಜ್–ಉದ್–ದೌಲನ ಸ್ಥಾನದಲ್ಲಿ ನವಾಬನನ್ನಾಗಿ ಮಾಡಲು ಯೋಚಿಸುತ್ತಿದ್ದರು. ನವಾಬನ ದಂಡನಾಯಕನಾಗಿದ್ದ ಮೀರ್ ಜಾಫರನನ್ನು (1737–60) ಬಂಗಾಲದ ನವಾಬನನ್ನಾಗಿ ಮಾಡಲು ಸಂಚು ಹೂಡಲಾಯಿತು. ಸಿರಾಜ್–ಉದ್–ದೌಲ ತನ್ನ ದಂಡನಾಯಕನಲ್ಲಿ ಅಪಾರ ನಂಬಿಕೆಯನ್ನಿಟ್ಟುಕೊಂಡಿದ್ದುದರಿಂದ ತನ್ನ ವಿರುದ್ಧವಾದ ಪಿತೂರಿಯ ಬಗ್ಗೆ ಅರಿವಿಲ್ಲದವನಾಗಿದ್ದ. ಇಂಗ್ಲಿಷರು ಆಕ್ರಮಣದಲ್ಲಿ ತೊಡಗಿ ಪ್ಲಾಸಿ ಎಂಬಲ್ಲಿಗೆ ಮುಂದುವರಿದರು. ಮೀರ್ ಜಾಫರ್ ಆತುರಾತುರವಾಗಿ ಸೈನ್ಯದೊಂದಿಗೆ ಯುದ್ಧಭೂಮಿಗೆ ನಡೆದ. ಸೈನ್ಯದ ಎಲ್ಲ ಅಧಿಕಾರಿಗಳೊಂದಿಗೆ ಮಾಡಿಕೊಂಡಿದ್ದ ಪೂರ್ವಯೋಜಿತ ಸಂಚಿನಂತೆ ಇಂಗ್ಲಿಷರು ಯಾವುದೇ ಪ್ರತಿಭಟನೆಯನ್ನು ಎದುರಿಸಬೇಕಾಗಿ ಬರಲಿಲ್ಲ. ಇಂಗ್ಲಿಷರು ಜಯಶೀಲರಾದರು. ಮೀರ್ ಜಾಫರನನ್ನು ಬಂಗಾಲದ ನವಾಬನಾಗಿ ಘೋಷಿಸಿದರು. ಸೆರೆ ಸಿಕ್ಕ ಸಿರಾಜ್–ಉದ್–ದೌಲನನ್ನು ಕೊಲ್ಲಲಾಯಿತು.

ಮೀರ್ ಜಾಫರನೂ ಇಂಗ್ಲಿಷರೊಡನೆ ಹೊಂದಿಕೊಳ್ಳಲಾಗಲಿಲ್ಲ. ಈತ ಡಚ್ಚರೊಡನೆ ಸೇರಿ ಇಂಗ್ಲಿಷರ ವಿರುದ್ಧ ಪಿತೂರಿ ನಡೆಸಿದ. ಆದರೆ ಇಂಗ್ಲಿಷರು ಈತನ ಯೋಜನೆಗಳನ್ನು ನಿಷ್ಫಲಗೊಳಿಸಿ ಇವನನ್ನು ಪದಚ್ಯುತನಾಗಿಸಿ, ಇವನ ಅಳಿಯ ಮೀರ್ ಕಾಸಿಂನನ್ನು 1760ರಲ್ಲಿ ನವಾಬನಾಗಿ ನೇಮಿಸಿದರು. ಇಂಗ್ಲಿಷರು ಹೊಂದಿದ್ದ ಆರ್ಥಿಕ ಸವಲತ್ತುಗಳನ್ನು ಮೀರ್ ಕಾಸಿಂ (1760–63) ಸಹಿಸಲಾರದಾದ. ಪರಿಣಾಮವಾಗಿ ಬಲುಬೇಗ ಅವರೊಂದಿಗೆ ಘರ್ಷಣೆಗೆ ಎಡೆಮಾಡಿಕೊಂಡ. ಈತ ಬಂಗಾಲವನ್ನು ಕಳೆದುಕೊಂಡು ಅಯೋಧ್ಯೆಗೆ ಬಂದು ಅಲ್ಲಿಯ ನವಾಬ ಶೂಜಾ–ಉದ್–ದೌಲ ಮತ್ತು ಮೊಗಲ್ ಚಕ್ರವರ್ತಿ ಶಾಹ ಆಲಮ್‌ನೊಂದಿಗೆ ಕೂಡಿಕೊಂಡು, ಇಂಗ್ಲಿಷರಿಂದ ಬಂಗಾಲದ ಸಿಂಹಾಸನವನ್ನು ಪಡೆಯುವ ವಿಚಾರದಲ್ಲಿ ಪಿತೂರಿ ನಡೆಸಿದ. ಇವರು 1764ರಲ್ಲಿ ಬಕ್ಸರ್ ಎಂಬಲ್ಲಿ ಇಂಗ್ಲಿಷರಿಂದ ಪರಾಜಿತರಾದರು. ಮೀರ್ ಕಾಸಿಂ ಪಲಾಯನ ಮಾಡಿದ.

ಮೀರ್ ಕಾಸಿಂನೊಂದಿಗೆ ಯುದ್ಧ ಪ್ರಾರಂಭವಾದ ಕೂಡಲೆ ಇಂಗ್ಲಿಷರು ಮೀರ್ ಜಾಫರನನ್ನು ಮತ್ತೊಮ್ಮೆ (1763–65) ಬಂಗಾಲದ ನವಾಬನಾಗಿ ಘೋಷಿಸಿ ಆತನಿಂದ ಅನೇಕ ಸವಲತ್ತುಗಳನ್ನು ಪಡೆದುಕೊಂಡರು. ಈತ 1765ರಲ್ಲಿ ಮರಣಹೊಂದಿದ. ಇಂಗ್ಲಿಷರು ಇವನ ಮಗ ನಜ್ಮ್–ಉದ್–ದೌಲನೊಂದಿಗೆ ಒಪ್ಪಂದ ಮಾಡಿಕೊಂಡು, ನವಾಬನಾಗಲು (1765–66) ಅವನಿಗೆ ಅನುಮತಿ ನೀಡಿದರು. ಈ ಒಪ್ಪಂದದಂತೆ ಪೂರ್ಣ ಆಡಳಿತ ಇಂಗ್ಲಿಷರ ಹತೋಟಿಗೆ ಬಂತು. 1766–70ರಲ್ಲಿ ಸೈಫ್ ಉದ್ದೀನ್ ಅಧಿಕಾರದಲ್ಲಿದ್ದ. ಆತನೂ ಕೇವಲ ನಾಮಮಾತ್ರ ನವಾಬನಾಗಿದ್ದ. (ಎಸ್‌ವೈ.ಎ.)

**ನಾಗದ:** ಮಧ್ಯಪ್ರದೇಶ ರಾಜ್ಯದ ಉಜ್ಜಯನಿ ಜಿಲ್ಲೆಯಲ್ಲಿ ಚಂಬಲ್ ನದಿಯ ಪೂರ್ವದಂಡೆಯ ಮೇಲಿರುವ ಪುರಾತತ್ತ್ವ ನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎನ್.ಆರ್.ಬ್ಯಾನರ್ಜಿಯವರ ನೇತೃತ್ವದಲ್ಲಿ 1955–56 ರಲ್ಲಿ ಇಲ್ಲಿ ಉತ್ಖನನ ನಡೆಯಿತು. ಇಲ್ಲಿ 9.75 ಮೀ ಮಂದವಾದ ವಸತಿ ಪದರವಿದ್ದು ಇದನ್ನು 3 ಹಂತಗಳಾಗಿ ವಿಂಗಡಿಸಲಾಗಿದೆ.

ತಾಮ್ರ–ಶಿಲಾಯುಗ ಸಂಸ್ಕೃತಿಯದಾದ 1ನೆಯ ಹಂತದಲ್ಲಿ ಮಣ್ಣಿನ ಹಾಗೂ ಹಸಿ ಇಟ್ಟಿಗೆಯ ಬೃಹತ್ ಕಟ್ಟಡಗಳಿರುವುದು ಗಮನಾರ್ಹ. ಇವು ಬಹುತೇಕ ವಾಸದ ಮನೆಗಳು; ಒಂದು ಮಾತ್ರ ರಕ್ಷಣಾಗೋಡೆಯ ಬುರುಜಿನ ಭಾಗವಾಗಿರಬಹುದು. ಇಲ್ಲಿ ಸಿಕ್ಕಿರುವ ಅವಶೇಷಗಳೆಂದರೆ: ಕಪ್ಪುಚಿತ್ರಿತ ಕೆಂಪು ಮಣ್ಪಾತ್ರೆಗಳು, ಸೂಕ್ಷ್ಮಶಿಲೋಪಕರಣಗಳು ಮತ್ತು ಒಂದೆರಡು ತಾಮ್ರ ವಸ್ತುಗಳು. ಮಣ್ಪಾತ್ರೆಗಳ ಮೇಲೆ ವಿವಿಧ ಜ್ಯಾಮಿತೀಯ ಚಿತ್ರಗಳನ್ನು ಕಾಣಬಹುದು. ಒಂಟಿ ಅಥವಾ ಜೋಡಿ ಸೂರ್ಯನ ಚಿಹ್ನೆಗಳು, ಜಿಂಕೆಗಳು, ನವಿಲುಗಳ ಚಿತ್ರಗಳು ಅಪರೂಪವಾಗಿವೆ. ಒರಟಾದ ಬೂದುಬಣ್ಣದ ಪಾತ್ರೆಗಳೂ ಕೆಲವೊಂದಿವೆ. ಅಲಗುಗಳು, ಕವಣೆಗುಂಡುಗಳು, ಕುಟ್ಟಾಣಿ, ಸುಡಾವೆಮಣ್ಣಿನ ಮಣಿಗಳು, ಪ್ರಾಣಿ ಹಾಗೂ ಮಾನವರ ಚಿಕ್ಕ ಗೊಂಬೆಗಳು ಇತರ ಅವಶೇಷಗಳು.

2ನೆಯ ಹಂತ ಔತ್ತರೇಯ ಕಪ್ಪು ಮೆರುಗಿನ ಮಣ್ಪಾತ್ರೆಗಳಿಗಿಂತ ಹಿಂದಿನದು. ಕಬ್ಬಿಣದ ಬಳಕೆ ಈ ಹಂತದ ಲಕ್ಷಣವಾದರೂ ತಾಮ್ರ–ಶಿಲಾಯುಗದ ಕೆಲವು ವೈಶಿಷ್ಟ್ಯಗಳು ಈ ಹಂತದಲ್ಲಿ ಮುಂದುವರೆದವು. ಇಲ್ಲಿ ಸಿಕ್ಕಿರುವ ಕಬ್ಬಿಣದ ವಸ್ತುಗಳೆಂದರೆ ಹಿಡಿ ಇರುವ ಹಾಗೂ ಇಲ್ಲದಿರುವ ಬಾಣದ ಮೊನೆಗಳು, ಈಟಿಯ ಮೊನೆಗಳು, ಬಾಕುಗಳು, ಕೊಡಲಿ (ಕೆಲವಕ್ಕೆ ಕುಳಿಯಿದೆ), ಚಾಕು, ಅಲಗು, ಉಳಿ, ಕುಡುಗೋಲುಗಳು, ಚಮಚ, ಮೊಳೆಗಳು ಮತ್ತು ಉಂಗುರಗಳು. ಕಪ್ಪು ಲೇಪನವುಳ್ಳ ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ಪ್ರಧಾನವಾಗಿವೆ.

3 ನೆಯ ಹಂತದ ಕಾಲಮಾನ ಪ್ರ.ಶ.ಪೂ. 500–200. ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆಗಳು ಹಾಗೂ ಮತ್ತಿತರ ಮಣ್ಪಾತ್ರೆಗಳು ಈ ಕಾಲದ ಮುಖ್ಯ ಅವಶೇಷಗಳಾಗಿವೆ. ಈ ಹಂತದಲ್ಲಿ ಕಬ್ಬಿಣದ ವಸ್ತುಗಳು ಸಮೃದ್ಧವಾಗಿವೆ. ಹಿಂದಿನ ಹಂತದ ನಮೂನೆಗಳಲ್ಲದೆ ವಿವಿಧ ರೀತಿಯ ಬಾಣದ ಮೊನೆಗಳಿವೆ. ಈ ಕಾಲದ ಇನ್ನಿತರ ಅವಶೇಷಗಳೆಂದರೆ ಸುಡಾವೆಮಣ್ಣಿನ ಮೈಉಜ್ಜುವ ಬಿಲ್ಲೆ; ನಯ ಮಾಡಿದ ಕಲ್ಲಿನ ಬಿಲ್ಲೆಗಳು, ದಂತದ ಪದಕಗಳು ಮತ್ತು ಕೇಶಸೂಜಿ, ಮೂಳೆಯ ಲೇಖನಿಗಳು, ತಾಮ್ರದ ಅಂಟಿಮನಿ ಕಡ್ಡಿ ಉಂಗುರ ಮತ್ತು ಬಳೆ. ಆಟಿಗೆಗಳ ಪೈಕಿ ಸಣ್ಣ ಗಾಡಿಯ ಮೇಲಿರುವ ಚಿರತೆ ಗೊಂಬೆ ಹೆಸರಿಸಬಹುದು.*

**ನಾಗಾಯಿ:** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಒಂದು ಐತಿಹಾಸಿಕ ಸ್ಥಳ. ಹಿಂದು, ಜೈನ ಹಾಗೂ ಇಸ್ಲಾಂ ಸಂಸ್ಕೃತಿಗಳಿಗೆ ಸಂಬಂಧಿಸಿದ ವಾಸ್ತು ಅವಶೇಷಗಳಿಂದ ಪ್ರಸಿದ್ಧವಾಗಿದೆ. ಇದರ ಹೆಸರು ನಾಗವಾಪಿಯಿಂದ ಬಂದಿರಬಹುದು. ಶಾಸನಗಳಲ್ಲಿ ಇದು ನಾಗವಾವಿ ಎಂದೇ ಪ್ರಸಿದ್ಧ. ಶ್ರೀರಾಮ ವನವಾಸದಲ್ಲಿದ್ದ ಕಾಲದಲ್ಲಿ ಇಲ್ಲಿ ತಂಗಿದ್ದನೆಂದು ಪ್ರತೀತಿ. ನಿಜಾಮರ ಆಡಳಿತದ ಕಾಲದಲ್ಲಿ ಇದು ಪಾಯಿಗಾ ಇಲಾಖೆಗೆ ಸೇರಿದ್ದು ನವಾಬ್ ಆಸ್ಮರಿಯಾರ್ ಜಂಗ ಬಹದ್ದೂರ್ ಹಾಗೂ ನವಾಬ್ ಬಷೀರದ್ದೌಲಾ ಬಹದ್ದೂರ್ ಅವರಿಗೆ ಸಂಬಂಧಪಟ್ಟಿತ್ತು. 1947ರ ಅನಂತರ ಚಿತ್ತಾಪುರದ ಜೊತೆಗೆ ಗುಲ್ಬರ್ಗ ಜಿಲ್ಲೆಯಲ್ಲಿ ವಿಲೀನವಾಯಿತು.

ಈ ಗ್ರಾಮದಲ್ಲಿ ಪುರಾತನ ಅವಶೇಷಗಳು ಸು. 9ಚ.ಕಿಮೀ ವರೆಗೆ ಹಬ್ಬಿವೆ. ದೇವಾಲಯಗಳು, ಮಸೀದಿಗಳು, ಮನೆಗಳು, ಕೆರೆಗಳು, ಬಾವಿಗಳು ಮುಂತಾಗಿ ಈ ಅವಶೇಷಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಮುಖ್ಯವಾದವು ಜೋಡಿಮಂಟಪ ಗುಡಿ, ಜೈನಬಸದಿ, ಮಸೀದಿ, ದೊಡ್ಡ ಕಮಾನಿನ ಅಗಸಿ, ಮಡಿವಾಳಪ್ಪನ ಗುಡಿ, ಮಹಾದೇವ ದೇವಸ್ಥಾನ, ಶಾಸನ ದೇವಸ್ಥಾನ, ಅರವತ್ತು ಕಂಬದ ಗುಡಿ, ಕಾಲಿ ಮಸ್‌ಜಿದ್ ದರ್ಗಾ, ಕಡಲಿ ಬಸವಣ್ಣನ ಗುಡಿ, ಹಣಮಂತ ದೇವರ ಗುಡಿ, ಮಾಲಗಂಬ, ಮಲ್ಲಯ್ಯನ ಗುಡಿ, ಎಲ್ಲಮ್ಮನ ಗುಡಿ

ಇವುಗಳಲ್ಲದೆ ಹಲವಾರು ಗಣಪತಿಯ ವಿಗ್ರಹಗಳೂ ನಾಗರಕಲ್ಲುಗಳೂ ಇವೆ. ನಾಗಾಯಿಯ ಇನ್ನೊಂದು ವಿಶೇಷವೆಂದರೆ ಇಲ್ಲಿ ಅನೇಕ ನೀರಿನ ಝರಿಗಳೂ ಬಾವಿಗಳೂ ಇರುವುದು. ಇವುಗಳಲ್ಲಿ ಮುಖ್ಯವಾದುವೆಂದರೆ ನಂದಿಬಾವಿ, ಕಾಲಿಮಸ್‌ಜಿದ್ ಬಾವಡಿ, ಸಿಡ್ಲಬಾವಿ ಮತ್ತು ಎಲ್ಲಮ್ಮನ ಬಾವಿ–ಇವು ಎಲ್ಲ ಕಾಲದಲ್ಲೂ ತುಂಬಿಕೊಂಡಿರುತ್ತವೆ.

ನಾಗಾಯಿಯ ಅವಶೇಷಗಳ ಪೈಕಿ ದೇವಸ್ಥಾನಗಳು ಮತ್ತು ಬಸದಿಗಳು ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದವು. ಈ ದೇವಸ್ಥಾನಗಳಲ್ಲಿ ಅರವತ್ತು ಕಂಬದ ಗುಡಿ ಬಹು ಸುಂದರವಾಗಿದೆ. ಇಲ್ಲಿನ ಕಂಬಗಳ ಮೇಲಿನ ಚಿತ್ರದ ಕೆಲಸ ಹಾಗೂ ಶಿಲ್ಪಗಳು ಮನಸೂರೆಗೊಳ್ಳುವಂತಿವೆ. ಮಸೀದಿಗಳಲ್ಲಿಯ ಹೊಳಪಿನ ಕಂಬಗಳೂ ಚಿತ್ರದಿಂದ ಅಲಂಕೃತವಾಗಿವೆ. ಸಹಸ್ರ ದೀಪದ ಮಾಲಗಂಬ ವಿಶಿಷ್ಟವೂ ಸುಂದರವೂ ಆಗಿದೆ. ಹಣಮಂತ ದೇವರ ದೇವಾಲಯದಲ್ಲಿನ ಗೋಡೆಗಳಲ್ಲಿ ರಾಮಾಯಣದ ಚಿತ್ರಗಳಿವೆ.

12ನೆಯ ಶತಮಾನದಲ್ಲಿ ನಾಗವಾವಿಯ ಭೂಭಾಗವನ್ನು ಕಲ್ಯಾಣದ ಚಾಳುಕ್ಯರ ಸಾಮಂತರೂ ಮಾಂಡಲಿಕರೂ ಆದ ಹೈಹಯ ವಂಶದ ರಾಜರು ಆಳುತ್ತಿದ್ದರು. ಇದು ಅವರ ಪ್ರಾಂತ ಅರಲು 300ರಲ್ಲಿ ಇದ್ದಿತು. ಇಲ್ಲಿಯ ಶಾಸನವೊಂದರಲ್ಲಿ ನಾಗವಾವಿಯನ್ನು ಕುನ್ತಳ ಮಹೀತಳಕ್ಕೆ ಮುಖಮಿದೆಂಬನ್ತಿರ್ದ್ದ ಅಜಿಲು ಮುನ್ನೂರರ್ಕ್ಕೆ ತಿಲಕಮಪ್ಪನ್ತಿರ್ದ್ದ ಮಹಾಗ್ರಹಾರ ಎಂದು ವರ್ಣಿಸಿದೆ. ನಾಗಾಯಿಯಲ್ಲಿ ಒಂದು ದೊಡ್ಡ ಘಟಿಕಾಸ್ಥಾನವಿದ್ದು ಇದು ವಿದ್ಯಾಕೇಂದ್ರವಾಗಿದ್ದಿತು. ಮಧುಸೂದನ ದೇವಾಲಯ ಹಾಗೂ ತ್ರೈಪುರುಷದೇವರ ಶಾಲೆ ಈ ಘಟಿಕಾಸ್ಥಾನದ ಕೇಂದ್ರವಾಗಿದ್ದುವು. ಈ ಮಧುಸೂದನ ದೇವಾಲಯ, ತ್ರೈಪುರುಷ ಶಾಲೆ, ರಾಮೇಶ್ವರ ದೇವಸ್ಥಾನ ಮತ್ತು ರಾಮತೀರ್ಥ ಮುಂತಾದವುಗಳನ್ನು ಚಾಳುಕ್ಯ ದೊರೆ ಆಹವಮಲ್ಲ ಸೋಮೇಶ್ವರನ ಮಂತ್ರಿ ಕಾಳಿದಾಸ ದಂಡನಾಯಕ ಮಾಡಿಸಿದ. ಈ ಮಹಾಮಾಣಿಕ ಮಧುಸೂದನ ದೇವಾಲಯದ ಕಳಸ ಸುವರ್ಣದ್ದಾಗಿದ್ದು ಅದು ಆಕಾಶವನ್ನು ತಟ್ಟುತ್ತಿದೆಯೊ ಏನೋ ಎನ್ನುವಷ್ಟು ಎತ್ತರವಾಗಿತ್ತು. ದೇವಾಲಯದೊಳಗೆ ಹಲವಾರು ಸುಂದರ ಸಾಲಭಂಜಿಕೆಗಳು ರಾರಾಜಿಸುತ್ತಿದ್ದವು. ಇಲ್ಲಿ ಒಂದು ನಾಟ್ಯಶಾಲೆಯೂ ಇತ್ತು. ದೇವಸ್ಥಾನದ ಎದುರಿನಲ್ಲಿ ಒಂದು ಗರುಡಗಂಬವಿದ್ದಿತು. ದೇವಸ್ಥಾನದಲ್ಲಿ ಏಕದಂಡಿ, ತ್ರಿದಂಡಿ, ಸ್ನಾತಕ, ಬ್ರಹ್ಮಚಾರಿ, ಹಂಸ, ಪರಮಹಂಸ ಮೊದಲಾದವರಿಗೆ ಅನುಷ್ಠಾನ ಭವನಗಳಿದ್ದವು. ಚತುರ್ವೇದಗಳ ಮತ್ತು ಅದರ ಶಾಖೆಗಳ, ಭಾಟ್ಟ, ನ್ಯಾಸ, ಪ್ರಾಭಾಕರ ಮೊದಲಾದ ದರ್ಶನಗಳು, ಸಾಹಿತ್ಯ, ಶುಕ್ರನೀತಿ, ಮನುಸ್ಮೃತಿ ಮುಂತಾದವುಗಳ ಅಧ್ಯಯನಕ್ಕೆ ಅಲ್ಲಿ ಆಶ್ರಯವಿದ್ದಿತು. ಈ ವಿಷಯಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳ ಊಟ, ಬಟ್ಟೆಗೆ, ಘಟಿಕಾ ಪ್ರಹಾರಿಗೆ, ಪುರಾಣದ ಭಟ್ಟರಿಗೆ, ನೈವೇದ್ಯ ಮಾಡುವ ಬಾಣಸಿಗೆ, ಕಾಪಿನ ಘಟೆಯರರಿಗೆ, ಮದ್ದಳಿಕಾರರಿಗೆ, ಹಾಡುವವರಿಗೆ, ಪಾತ್ರದವರಿಗೆ, ಕಂಬದ ಸೂಳೆಯರಿಗೆ, ದೇವಾಲಯಕ್ಕೆ ಸುಣ್ಣ ಹಾಕುವ ಸುಣ್ಣವೆಸದವನಿಗೆ, ಕಲ್ಕುಟಿಗ, ಕಳಾಸೂತ್ರಧಾರಿ ವೋಜರುಗಳಿಗೆ ಜೀವನೋಪಾಯಕ್ಕೆ ಭೂಮಿಯನ್ನು ದಾನಕೊಟ್ಟುದಾಗಿ ಕೆಲವರಿಗೆ ಇರಲು ನಿವೇಶನಗಳನ್ನು ದತ್ತಿವಿಟ್ಟುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಈ ಎಲ್ಲರಿಂದ ಆ ಘಟಿಕಾಸ್ಥಾನ ತುಂಬಿ ನಾಲ್ನೂರ್ವರ್ ವಿಪ್ರರಿಂದ ಕೂಡಿದ ಅಗ್ರಹಾರ ನಾಗವಾವಿ ಅಭಿನವ ಬ್ರಹ್ಮಲೋಕದಂತಿದ್ದಿತಂತೆ. (ಎಸ್.ಜಿ.ವಿ.)

**ನಾಗಾರ್ಜುನ:** ಪ್ರ.ಶ.ಪೂ.15–75. ಮಾಧ್ಯಮಿಕ ಬೌದ್ಧಪಂಥದ ಪ್ರವರ್ತಕ. ಆಂಧ್ರಪ್ರದೇಶದ ವೇದಲಿ ಎಂಬ ಗ್ರಾಮದ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ. ಬೌದ್ಧ ಭಿಕ್ಷುವಾಗುವ ಮುನ್ನ ಶ್ರೋತ್ರಿಯನಾಗಿದ್ದನೆಂದೂ ಉಲ್ಲೇಖವಿದೆ. ಇವನ ಗುರು ಯಾರೆಂಬುದು ನಿಶ್ಚಿತವಾಗಿಲ್ಲವಾದರೂ ಅಶ್ವಘೋಷನೆಂದೂ ರಾಹುಲನೆಂದೂ ಸರಹನೆಂದೂ ಹೇಳುತ್ತಾರೆ. ಸಿಂಹಭದ್ರನೆಂಬ ಭಿಕ್ಷುವಿನ ಬಳಿ ಸರ್ವಾಸ್ತಿವಾದಶಾಸ್ತ್ರಗಳನ್ನು ಅಭ್ಯಸಿಸಿ, ಪ್ರಜ್ಞಾಧರನೆಂಬ ಹೆಸರಿನಿಂದ ಶ್ರಾವಕನಾದ ಈತ ಬೌದ್ಧ ಸಂಘದಲ್ಲಿ 13ನೆಯ ಆಚಾರ್ಯನಾಗಿ ನಾಗಾರ್ಜುನನೆಂಬ ಹೆಸರಿನಿಂದ ಪ್ರಸಿದ್ಧನಾದ. ಈತ ಆಂಧ್ರ ಚಕ್ರವರ್ತಿಯಾದ ಸಾತವಾಹನನ ಸಮಕಾಲೀನ. ಈ ಸಾತವಾಹನ (ಷತೋ–ಪೋಹಾನ್) ನಾಗಾರ್ಜುನನ ಶಿಷ್ಯನಾಗಿದ್ದನೆಂದು ಚೀನಿ ಯಾತ್ರಿಕ ಇತ್ಸಿಂಗ್ ಬರೆದಿದ್ದಾನೆ. ಈ ರಾಜ್ಯದಲ್ಲಿ ಧರ್ಮಬುದ್ಧಿ ಮೂಡಿಸಲೆಂದೆ ನಾಗಾರ್ಜುನ ತನ್ನ ಸಹೃಲ್ಲೇಖವೆಂಬ ಕೃತಿಯನ್ನು ರಚಿಸಿದನೆಂದು ಪ್ರತೀತಿ. ಈ ಚಕ್ರವರ್ತಿ ದಕ್ಷಿಣ ಕೋಸಲದ ದಕ್ಷಿಣ ದಿಗ್ಭಾಗದಲ್ಲಿ ವಿಹಾರವೊಂದನ್ನು ನಿರ್ಮಿಸಿ, ಅದಕ್ಕೆ ಸ್ವಲ್ಪದೂರದಲ್ಲಿ ಭ್ರಮರಗಿರಿಯೆಂಬ ಬೆಟ್ಟದ ಮೇಲೆ ನಾಗಾರ್ಜುನನಿಗಾಗಿ ಮಹಾಚೈತ್ಯ ವೊಂದನ್ನು ಕಟ್ಟಿಸಿದ. ಇದನ್ನೇ ಶ್ರೀಪರ್ವತವೆನ್ನುತ್ತಿದ್ದರು. ಈಗ ಇದು ನಾಗಾರ್ಜುನಕೊಂಡವೆನಿಸಿಕೊಂಡಿದೆ. ಇಲ್ಲೇ ನಾಗಾರ್ಜುನ ಹಲವಾರು ವರ್ಷ ವಾಸವಾಗಿದ್ದು ಧರ್ಮ ಪ್ರಸಾರ ಮಾಡಿದ. ಈ ಸ್ಥಳ ಮೊದಲೆ ಬೌದ್ಧ ಕ್ಷೇತ್ರವಾಗಿತ್ತು. ಪೂರ್ವಶೈಲಿಯ ಮತ್ತು ಪಶ್ಚಿಮ ಶೈಲಿಯ ಚೈತ್ಯಗಳು ಇಲ್ಲಿಯೇ ಇದ್ದವು. ಪೂರ್ವಶೈಲೀಯರೇ ಅಂಧಕರೆನ್ನಿಸಿಕೊಂಡ ಮಹಾಸಾಂಘಿಕರು. ಇವರಿಂದಲೇ ಮಹಾಯಾನ ಪಂಥ ಮುಂದೆ ಬೆಳೆದದ್ದು.

ನಾಗಾರ್ಜುನನಿದ್ದ ಬೆಟ್ಟದ ಬಳಿಯೇ ಇದ್ದ ಮಹಾವನವೆಂಬುದು ಮಂಜುಶ್ರೀ ಬೋಧಿಸತ್ವನ ನಾಡೆಂದು ಪ್ರತೀತಿ. ಈ ಮಂಜುಶ್ರೀ ವಿಜಯವಾಡದ ಬಳಿ ಇರುವ ಇಂದ್ರಕೀಲ ಪರ್ವತದವನೆಂದು ಚಂದ್ರಕೀರ್ತಿಯ (ನಾಗಾರ್ಜುನನ ಟೀಕಾಕಾರ) ಗ್ರಂಥದಿಂದ ತಿಳಿದುಬರುತ್ತದೆ. ಈ ವನದಲ್ಲಿ ನಾಗಾರ್ಜುನ ತಪಸ್ಸು ಮಾಡಿದನೆಂದೂ ಮಂಜುಶ್ರೀ ಅವನಿಗೆ ಕಾಣಿಸಿಕೊಂಡು ಅಕ್ಷಯಮತಿ ನಿರ್ದೇಶನ ಸೂತ್ರವನ್ನು ಬೋಧಿಸಿದನೆಂದೂ ಅದರ ಆಧಾರದ ಮೇಲೆ ನಾಗಾರ್ಜುನ ಮಾಧ್ಯಮಿಕ ಪಂಥವನ್ನು ಪರಿವರ್ತನೆ ಮಾಡಿದನೆಂದೂ ಹೇಳುತ್ತಾರೆ. ಕುಮಾರಜೀವ (ಬಸ್ಟೋನ್) ನಾಗಾರ್ಜುನನ ಜೀವಿತ ವೃತ್ತವನ್ನು ಬರೆದು ಅದರಲ್ಲಿ ಇನ್ನೊಂದು ಕಥೆಯನ್ನು ಹೀಗೆ ಹೇಳಿದ್ದಾನೆ. ಶ್ರೀಕಾಕುಳಂ ಜಿಲ್ಲೆಗೆ ಸೇರಿದ ಮಹಾನಾಗ ಒಮ್ಮೆ ನಾಗಾರ್ಜುನನನ್ನು ಬಂಧಿಸಿ ಸಮುದ್ರತಳಕ್ಕೆ ಕರೆದೊಯ್ದು ಅಲ್ಲಿ ಸಪ್ತಪಿಟಕವೆಂಬ ವಾಙ್ಮಯವನ್ನು ಅವನಿಗೆ ತೋರಿಸಿದನಂತೆ. ಮೂರು ತಿಂಗಳಲ್ಲಿ ನಾಗಾರ್ಜುನ ಅದನ್ನು ಸಂಪೂರ್ಣವಾಗಿ ಗ್ರಹಿಸಿ ಜಂಬೂದ್ವೀಪಕ್ಕೆ ಹಿಂದಿರುಗಿ ಮಾಧ್ಯಮಿಕ ಸೂತ್ರವನ್ನು ರಚಿಸಿದನಂತೆ. ಈ ಕಾರಣಕ್ಕಾಗಿ ಈ ನಾಗನಿಂದ ಪ್ರಕಟವಾದ ಈ ಪಂಥಕ್ಕೆ ಉರಗಯಾನವೆಂದೂ ಕರೆಯುತ್ತಾರೆ. ಸಮುದ್ರದ ತಳವೆಂದರೆ ಉದ್ಯಾನವೆಂದು (ಒಡಿಯಾಣ) ಕೆಲವರ ಊಹೆ. ಟಿಬೆಟಿನ ಇತಿಹಾಸಕಾರನಾದ ಲಾಮಾ ತಾರನಾಥ ಕೃಷ್ಣಾಮಂಡಳದ ಶ್ರೀಕಾಕುಳಂನಲ್ಲಿರುತ್ತಿದ್ದ ನಾಗದೇವ ಭಟ್ಟಾರಕನೆಂಬ ಬ್ರಾಹ್ಮಣ ಭಿಕ್ಷುವಿನ ಬಳಿ ಪ್ರಜ್ಞಾಪಾರಮಿತ ಮತ್ತು ಶತಸಾಹಸ್ರಿಕ ಎಂಬ ಪ್ರಾಕೃತಭಾಷೆಯ ಗ್ರಂಥಗಳಿದ್ದುವೆಂದೂ ನಾಗಾರ್ಜುನ ಇವನ್ನು ಸಂಸ್ಕೃತಕ್ಕೆ ಅನುವಾದಿಸಿದನೆಂದೂ ಬರೆಯುತ್ತಾನೆ. ಕುಮಾರಜೀವ ಹೇಳುವ ಮಹಾನಾಗನೂ ತಾರಾನಾಥ ಹೇಳುವ ನಾಗದೇವನೂ ಒಬ್ಬನೇ ಎಂದು ಹೇಳಬಹುದು.

ಪ್ರಜ್ಞಾಪಾರಮಿತಶಾಸ್ತ್ರ ಪ್ರಾಚೀನವಾದುದೆಂದೂ ಅದನ್ನು ಸ್ವೀಕರಿಸಿ ನಾಗಾರ್ಜುನ ಪ್ರಕಟಿಸಿದನೆಂಬುದು ಸಂಪ್ರದಾಯವಾದಿಗಳ ಮತ. ಆದರೆ ಪ್ರಜ್ಞಾಪಾರಮಿತವನ್ನು ನಾಗಾರ್ಜುನನೇ ಬರೆದನೆಂದು ಹೇಳುವುದು ಸಮಂಜಸ. ಇವನ ಶತಸಾಹಸ್ರಿಕ–ಪ್ರಜ್ಞಾಪಾರಮಿತ ಗ್ರಂಥಕ್ಕೆ ಮುಂಚೆ ಪ್ರಜ್ಞಾಪಾರಮಿತದ ಉಲ್ಲೇಖವೇ ಎಲ್ಲಿಯೂ ಬರುವುದಿಲ್ಲ. ಇದೊಂದೇ ಅಲ್ಲ, ಎಲ್ಲ ಮೂಲ ಮಹಾಯಾನಸೂತ್ರಗಳೂ ನಾಗಾರ್ಜುನ ಬರೆದುವೇ ಎಂದು ವಾದಿಸುವವರಿದ್ದಾರೆ. ಸದ್ಧರ್ಮಪುಂಡರೀಕಸೂತ್ರ ಮತ್ತು ಅವತಂಸಕಸೂತ್ರಗಳನ್ನೂ ನಾಗಾರ್ಜುನನೇ ರಚಿಸಿದನೆಂದೂ ಪ್ರತೀತಿ. ಇವನ ಪ್ರಮುಖ ಗ್ರಂಥವೆಂದರೆ ಮಾಧ್ಯಮಿಕ ಕಾರಿಕೆ. ಇಪ್ಪತ್ತೇಳು ಅಧ್ಯಾಯಗಳ ಈ ಗ್ರಂಥಕ್ಕೆ ವಿಗ್ರಹವ್ಯಾವರ್ತಿನಿಯೆಂಬ ಸ್ವೋಪಜ್ಞ ವೃತ್ತಿಯಿದೆ. ವಾತ್ಸ್ಯಾಯನ ಮೊದಲಾದವರು ಎತ್ತಿದ ಆಕ್ಷೇಪಗಳಿಗೆ ಸಮಾಧಾನರೂಪವಾಗಿ ಈ 72 ಕಾರಿಕೆಗಳ ವೃತ್ತಿ ರಚಿತವಾಯಿತು. ಇದು ಪ್ರಮುಖವಾಗಿ ತರ್ಕದ ಗ್ರಂಥ. ಮಾಧ್ಯಮಿಕ ಕಾರಿಕೆಗಳಲ್ಲಿ ನಿರೂಪಿಸಿದ ದಾರ್ಶನಿಕ ನಿಲವನ್ನೇ ನಾಗಾರ್ಜುನನ ಯುಕ್ತಿಷಷ್ಠಿಕಾ ಮತ್ತು ಶೂನ್ಯತಾಸಪ್ತತಿ ಎಂಬ ಗ್ರಂಥಗಳು ವಿಸ್ತರಿಸುತ್ತವೆ. ಪ್ರತೀತ್ಯ ಸಮುತ್ಪಾದಹೃದಯ ಮತ್ತು ಮಹಾಯಾನವಿಂಶಕ ಎಂಬ ಗ್ರಂಥಗಳೂ ಇವನೇ ಬರೆದವು. ಇಷ್ಟಲ್ಲದೆ ಪ್ರಮಾಣವಿಹೇಟನ, ಅಕುತೋಭಯ, ಮಧ್ಯಾಂತಾಗಮಶಾಸ್ತ್ರ, ಮಹಾಪ್ರಜ್ಞಾಪಾರಮಿತಶಾಸ್ತ್ರ, ದಶಭೂಮಿವಿಭಾಷಾ ಶಾಸ್ತ್ರ– ಇವನ್ನೂ ನಾಗಾರ್ಜುನನೇ ರಚಿಸಿದನೆಂದು ಪ್ರತೀತಿ.

ನಾಗಾರ್ಜುನ ವೈದ್ಯದಲ್ಲಿಯೂ ಜ್ಯೋತಿಷದಲ್ಲಿಯೂ ಖಗೋಳಶಾಸ್ತ್ರದಲ್ಲಿಯೂ ಪರಿಣತನಾಗಿದ್ದ. ಸುಶ್ರುತಸಂಹಿತೆಯನ್ನು ಸಂಸ್ಕರಿಸಿ ಅದಕ್ಕೊಂದು ಅನುಬಂಧವನ್ನು ಸೇರಿಸಿದನೆಂದು ಪ್ರತೀತಿ. ಈತ ನಾಗರಾಜನಾದ ವಾಸುಕಿಯಿಂದ ಕಂಠಹಾರವನ್ನು ಪಡೆದುಕೊಂಡು ಅದರ ಪ್ರಭಾವದಿಂದ ಸರ್ಪಮಂತ್ರವನ್ನು ವಶಮಾಡಿಕೊಂಡಿದ್ದನಂತೆ. ಈ ವಿಚಾರವನ್ನು ಬಾಣಭಟ್ಟ ತನ್ನ ಹರ್ಷಚರಿತೆಯಲ್ಲಿ ಉಲ್ಲೇಖಿಸಿದ್ದಾನೆ. ಪ್ರಜ್ಞಾಪಾರಮಿತೆ ನಾಗಾರ್ಜುನನಿಗೆ ಕನಸಿನಲ್ಲಿ ಪ್ರತ್ಯಕ್ಷಳಾಗಿ ರಸಶಾಸ್ತ್ರದ ಮರ್ಮವನ್ನು ಬೋಧಿಸಿದಳಂತೆ. ಇದರಿಂದಾಗಿ ನಾಗಾರ್ಜುನ ಕ್ಷುದ್ರಲೋಹಗಳನ್ನು ಬಂಗಾರಮಾಡುವ ವಿದ್ಯೆಯಲ್ಲಿ ಕುಶಲನೆಂದು ಪ್ರಖ್ಯಾತನಾಗಿದ್ದ.

ನಾಗಾರ್ಜುನನ ಪ್ರಭಾವ ಬಹುಕಾಲದವರೆಗೂ ಉಳಿಯಿತು. ಇವನ ನ್ಯಾಯ ಪದ್ಧತಿಯನ್ನು ಅನುಸರಿಸಿದ ಹಲವಾರು ದಾರ್ಶನಿಕರಲ್ಲಿ ಗೌಡಪಾದ, ಶಂಕರಾಚಾರ್ಯ, ಖಂಡನಖಂಡಖಾದ್ಯದ ಕರ್ತೃವಾದ ಶ್ರೀಹರ್ಷನೂ ಸೇರಿದ್ದಾರೆ. ಇಡೀ ನಾಡಿನಲ್ಲಿ ಇವನ ಕೀರ್ತಿ ಹರಡಿತ್ತು. ಕಲ್ಹಣ ತನ್ನ ರಾಜತರಂಗಿಣಿಯಲ್ಲಿ ಈತನನ್ನು ಬೋಧಿಸತ್ತ್ವನೆಂದೇ ವ್ಯವಹರಿಸಿ, ಕಾಶ್ಮೀರದಲ್ಲಿ ಹುಷ್ಕ, ಜುಷ್ಕ ಮತ್ತು ಕನಿಷ್ಕ ಈ ರಾಜರ ಕಾಲದಲ್ಲಿ ಬಹಳ ಕೀರ್ತಿಶಾಲಿಯಾಗಿದ್ದನೆಂದು ತಿಳಿಸಿದ್ದಾನೆ. ಮಹಾಯಾನದ ಸುಪ್ರಸಿದ್ಧ ದಾರ್ಶನಿಕನಾದ ಆರ್ಯದೇವ ಈತನ ಶಿಷ್ಯ. (ಎಸ್.ಕೆ.ಆರ್.;ಜಿ.ಎಚ್.)

**ನಾಗಾರ್ಜುನಕೊಂಡ:** ಆಂಧ್ರಪ್ರದೇಶ ರಾಜ್ಯದ ಗುಂಟೂರು ಜಿಲ್ಲೆಯ ಪಲ್ನಾಡು ತಾಲ್ಲೂಕಿನಲ್ಲಿರುವ ಸಾಂಸ್ಕೃತಿಕ ನೆಲೆ. ಪ್ರ.ಶ. ಆರಂಭಕಾಲದಲ್ಲಿ ಜೀವಿಸಿದ್ದ ಪ್ರಪಂಚಪ್ರಖ್ಯಾತ ಬೌದ್ಧ ವಿದ್ವಾಂಸ, ಮಾಧ್ಯಮಿಕ ಶಾಖೆಯ ಪ್ರವರ್ತಕ ನಾಗಾರ್ಜುನ ಇಲ್ಲಿ ವಾಸಮಾಡಿ ಸಮಾಧಿ ಹೊಂದಿದುದರಿಂದ ಈ ಪ್ರದೇಶಕ್ಕೆ ನಾಗಾರ್ಜುನಕೊಂಡ (ಬೆಟ್ಟ) ಎಂದು ಹೆಸರು ಬಂದಿದೆ. ಸು.20.5 ಚ. ಕಿಮೀ ವಿಸ್ತೀರ್ಣದ ಈ ಕಣಿವೆಯ ಉತ್ತರ, ಪೂರ್ವ ಮತ್ತು ದಕ್ಷಿಣಗಳಲ್ಲಿ ಎತ್ತರವಾದ ಬೆಟ್ಟಗಳೂ ಪಶ್ಚಿಮ ಮತ್ತು ವಾಯವ್ಯದಿಕ್ಕಿನಲ್ಲಿ ಕೃಷ್ಣನದಿಯೂ ಇದೆ. ಇಕ್ಷ್ವಾಕು ದೊರೆಗಳ ಕಾಲದ (3–4ನೆಯ ಶತಮಾನ) ಅನೇಕ ಅವಶೇಷಗಳು ಈ ಕಣಿವೆಯಲ್ಲಿ ಅವರ ರಾಜಧಾನಿಯಾದ ವಿಜಯಪುರಿಯ ನಿವೇಶನದಲ್ಲಿ ದೊರಕಿರುವುದರಿಂದ ಈ ಕಣಿವೆ ಐತಿಹಾಸಿಕ ಪ್ರಾಮುಖ್ಯ ಪಡೆದಿದೆ. ಅಲ್ಲದೆ ಅನೇಕ ಬೌದ್ಧ ವಾಸ್ತುನಿರ್ಮಾಣಗಳ ಅವಶೇಷಗಳನ್ನೂ ಇಲ್ಲಿ ಕಾಣಬಹುದು.

ಪ್ರಾಗಿತಿಹಾಸ: ಇಲ್ಲಿಯ ಆರು ನೆಲೆಗಳಲ್ಲಿ ಆದಿ ಹಳೆಶಿಲಾಯುಗದ ಉಪಕರಣಗಳು ಕಂಡುಬಂದಿವೆ. ಅವುಗಳಲ್ಲಿ ಕೈಗೊಡಲಿ, ಸೀಳುಗತ್ತಿ ಕೊಡಲಿ, ಉರುಟುಕಲ್ಲಿನ ಉಪಕರಣಗಳು ಮತ್ತು ಚಕ್ಕೆಕಲ್ಲಿನ ಉಪಕರಣಗಳು ಪ್ರಮುಖವಾದವು. ಮಧ್ಯ ಹಳೆಶಿಲಾಯುಗದ ಚಕ್ಕೆಕಲ್ಲಿನ

ಉಪಕರಣಗಳು ಒಂದೆರಡು ನೆಲೆಗಳಲ್ಲಿ ಸಿಕ್ಕಿವೆ. ಹೆರೆಯುವ, ಕೊರೆಯುವ ಉಪಕರಣಗಳು, ಮೊನೆಯಾಕೃತಿಯ ಚಕ್ಕೆಗಳು ಮೊದಲಾದವು ಈ ಹಂತದ ಪ್ರಮುಖ ಉಪಕರಣರೀತಿಗಳು. ಇವನ್ನು ಲೆವಾಲ್ವ ತಂತ್ರದಿಂದ ತಯಾರಿಸಿದ ಚಕ್ಕೆಕಲ್ಲುಗಳಿಂದ ಮಾಡಲಾಗಿದೆ. ಅಂತ್ಯ ಹಳೆಶಿಲಾಯುಗದ ಸಮಾನಾಂತರ ತೆಳುಚಕ್ಕೆಗಳ ಉಪಕರಣಗಳು ಸಹ ಕಂಡುಬರುತ್ತವೆ. ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗ ಸಂಸ್ಕೃತಿಯ ಅವಶೇಷಗಳು ಇಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿವೆ. ಆದರೆ ಈವರೆಗೆ ಉತ್ಖನನ ಮಾಡಿರುವ ನವಶಿಲಾಯುಗ ನೆಲೆಗಳು ಸೀಮಿತವಾಗಿವೆ. ನಯಗೊಳಿಸಿದ ಕೊಡಲಿಗಳು, ಉಳಿಗಳು, ಚೂಪಾದ ಮೊನೆಯುಳ್ಳ, ಉಪಕರಣ ತಯಾರಿಕೆಗೆ ಬಳಸುವ, ಫ್ಯಾಬ್ರಿಕೇಟರ್ ಮುಂತಾದ ಕಲ್ಲಿನ ಆಯುಧಗಳು, ಮೆರುಗುಗೊಳಿಸಿದ ಬೂದುಬಣ್ಣದ ಮಣ್ಪಾತ್ರೆಗಳು, ಮಕ್ಕಳ ಶವಗಳನ್ನು ಹೂತಿಟ್ಟ ಅಸ್ಥಿಮಡಕೆಗಳು–ಇವು ಆ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು. ನವಶಿಲಾಯುಗ ವಸತಿಯಿಂದ ಅನತಿದೂರದಲ್ಲಿ ರುವ ಸ್ಮಶಾನ ಆ ಜನರಿಗೆ ಸೇರಿದ್ದುದಾಗಿ ತಿಳಿದುಬಂದಿದೆ.

ಸ್ತೂಪದ ತಳಪಾಯ

ಕಬ್ಬಿಣಯುಗ ಸಂಸ್ಕೃತಿಯ ಅವಶೇಷಗಳಾದ ಬೃಹತ್ ಶಿಲಾಸಮಾಧಿಗಳು ಇಲ್ಲಿ ಹೇರಳವಾಗಿವೆ. ಈವರೆಗೆ ಉತ್ಖನನ ಮಾಡಿರುವ ಸಮಾಧಿಗಳನ್ನು ಕಲ್ಲುವೃತ್ತ, ನೆಲಕೋಣೆ, ಕಲ್ಗುಪ್ಪೆ ಮತ್ತು ಅಸ್ಥಿಮಡಕೆಗಳೆಂದು ವಿಭಾಗಿಸಬಹುದು. ಕಬ್ಬಿಣದ ಆಯುಧೋಪಕರಣಗಳು ಅಧಿಕಸಂಖ್ಯೆಯಲ್ಲೂ ತಾಮ್ರದ ವಸ್ತುಗಳು ವಿರಳವಾಗಿಯೂ ಬಳಕೆಯಲ್ಲಿದ್ದವು. ಇವರು ಸುಧಾರಿತ ವ್ಯವಸಾಯ, ಪಶುಪಾಲನೆ ಮತ್ತು ಕೆಲವು ಗೃಹಕೈಗಾರಿಕೆಗಳನ್ನು ರೂಢಿಸಿಕೊಂಡಿದ್ದರು. ನಿತ್ಯಬಳಕೆಗೆ ಕಪ್ಪು–ಕೆಂಪು ದ್ವಿವರ್ಣ, ಹೊಳೆಯುವ ಕಪ್ಪುಬಣ್ಣದ ಮತ್ತು ಒರಟಾದ ಕೆಂಪುಬಣ್ಣದ ಮಣ್ಪಾತ್ರೆಗಳನ್ನೂ ತಾಮ್ರ ಮತ್ತು ಕಬ್ಬಿಣದ ಉಪಕರಣಗಳನ್ನೂ ಬಳಸುತ್ತಿದ್ದರು. ದೇಹಾಲಂಕಾರಕ್ಕೆ ಅರೆಪ್ರಶಸ್ತ ಕಲ್ಲುಗಳ, ಶಂಖಗಳ, ಗಾಜಿನ ಮತ್ತು ಸುಡಾವೆಮಣ್ಣಿನ ಮಣಿ, ಬಳೆ, ಉಂಗುರ ಮುಂತಾದ ಆಭರಣಗಳನ್ನು ಬಳಸುತ್ತಿದ್ದರು. ಕಾಲಕ್ರಮದಲ್ಲಿ ವಿಕಾಸಗೊಂಡ ಈ ಸಂಸ್ಕೃತಿ ಇತಿಹಾಸಯುಗದ ನಾಂದಿ ಹಾಡಿತು.

ಇತಿಹಾಸ: ನಾಗಾರ್ಜುನಕೊಂಡ ಪ್ರದೇಶವನ್ನು ಮೊದಲಿಗೆ ಮಗಧ ಸಾಮ್ರಾಜ್ಯದ ನಂದ ಚಕ್ರವರ್ತಿಗಳು ವಶಪಡಿಸಿಕೊಂಡಂತೆ ತಿಳಿದುಬರುತ್ತದೆ. ಆ ತರುವಾಯ ಇದು ಮೌರ್ಯ ಸಾಮ್ರಾಜ್ಯದಲ್ಲಿ ಸೇರಿಹೋಯಿತು. ಮೌರ್ಯರ ಆಳಿಕೆಯ ಕಾಲದಲ್ಲಿ ಈ ಪ್ರದೇಶದಲ್ಲಿ ಆಂಧ್ರ, ಪುಳಿಂದ ಮುಂತಾದ ಹಲವಾರು ಪಂಗಡಗಳ ಜನರು ವಾಸಮಾಡುತ್ತಿದ್ದರು. ಪ್ರ.ಶ.ಪೂ. 232ರ ಸುಮಾರಿಗೆ, ಅಶೋಕನ ಮರಣಾನಂತರ, ಅವರೆಗೆ ಮೌರ್ಯರ ಸಾಮಂತರಾಗಿದ್ದ ಸಾತವಾಹನರು ಅಧಿಕಾರಕ್ಕೆ ಬಂದರು. ನಾಗಾರ್ಜುನಕೊಂಡ ಪ್ರದೇಶ ಸಾತವಾಹನರ ಆಳಿಕೆಯ ಪ್ರಾರಂಭದ ಕಾಲದಿಂದ ಇವರ ವಶದಲ್ಲಿತ್ತೋ ಇಲ್ಲವೋ ನಿಶ್ಚಿತವಾಗಿ ಹೇಳಲಾಗದಿದ್ದರೂ 1ನೆಯ ಶತಮಾನದಲ್ಲಿ ಗೌತಮಿಪುತ್ರ ಸಾತಕರ್ಣಿಯ ಕಾಲದಲ್ಲಿ ನಿಶ್ಚಿತವಾಗಿ ಇವರ ವಶದಲ್ಲಿತ್ತು. ಸಾತವಾಹನ ದೊರೆಗಳು ಬೌದ್ಧಧರ್ಮಕ್ಕೆ ಆಶ್ರಯ ನೀಡಿ ಈ ಪರಿಸರದಲ್ಲಿ ಹಲವಾರು ಬೌದ್ಧ ಸ್ತೂಪಗಳು, ಚೈತ್ಯಾಲಯಗಳು ಮತ್ತು ಸಂಘಾರಾಮಗಳನ್ನು ಕಟ್ಟಿಸಿದರು. ಇವರ ರಾಜಧಾನಿ ಧಾನ್ಯಕಟಕದಲ್ಲಿಯ (ಈಗಿನ ಅಮರಾವತಿ) ನಿರ್ಮಾಣಗಳು ಇವುಗಳಲ್ಲಿ ಪ್ರಮುಖವಾದವು. ಇಕ್ಷ್ವಾಕು ವಂಶದವರು ಸಾತವಾಹನರ ಸಾಮಂತರಾಗಿ (ಮಹಾತಳವಾರ) ಈ ಪ್ರದೇಶವನ್ನು ಆಳುತ್ತಿದ್ದರು (**ನೋಡಿ–ಇಕ್ಷ್ವಾಕು ವಂಶ**).

**ಧಾರ್ಮಿಕ ಸ್ಥಿತಿ:** ನಾಗಾರ್ಜುನಕೊಂಡ ಇಕ್ಷ್ವಾಕು ವಂಶದವರ ಆಳ್ವಿಕೆಯಲ್ಲಿದ್ದಾಗ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಬೌದ್ಧಧರ್ಮದ ಉಚ್ಛ್ರಾಯ ಸ್ಥಿತಿ. ಈ ದೊರೆಗಳು ವೈದಿಕ ಬ್ರಾಹ್ಮಣ ಧರ್ಮಾನುಯಾಯಿಗಳು; ಶೈವ ಧರ್ಮದ ಉಪಾಸಕರು. ಅವರು ವೈಷ್ಣವ ಧರ್ಮಕ್ಕೂ ಪ್ರೋತ್ಸಾಹ ನೀಡಿದ್ದರು. ಆದರೆ ಆ ವಂಶದ ಸ್ತ್ರೀ ಜನರು ಬೌದ್ಧಧರ್ಮವನ್ನು ಸ್ವೀಕರಿಸಿ, ಈ ಕಣಿವೆಯಲ್ಲಿರುವ ಹಲವಾರು ಬೌದ್ಧಸ್ತೂಪ, ಚೈತ್ಯಾಗಾರ, ವಿಹಾರಗಳ ನಿರ್ಮಾಣಕ್ಕೆ ಕಾರಣರಾದರು. ಸ್ವಲ್ಪಮಟ್ಟಿಗೆ ವಿಜಯಪುರಿಯ ಶ್ರೀಮಂತರೂ ವಣಿಕರೂ ಬೌದ್ಧಧರ್ಮಕ್ಕೆ ಆಶ್ರಯ ನೀಡಿದರು.

ರಾಣೀವಾಸದ ಬೌದ್ಧಮತ ಪ್ರೋತ್ಸಾಹಕರಲ್ಲಿ ಅತಿಪ್ರಮುಖಳೂ ಮಹಾತಳವಾರಿ ಶಾಂತಿಶ್ರೀ; ವಾಸಿಷ್ಠಿಪುತ್ರ ಶ್ರೀಶಾಂತಮೂಲನ ಸೋದರಿ. ಮಹಾದಾನಪತಿನಿ ಎಂದು ಬಿರುದಾಂಕಿತಳಾದ ಆಕೆ ಬೌದ್ಧಭಿಕ್ಷುಗಳ ಸಹಾಯಾರ್ಥವಾಗಿ ಅಪರಿಮಿತ ದಾನದತ್ತಿಗಳನ್ನು ನೀಡಿದ್ದಳು; ಮುಖ್ಯವಾಗಿ ನಾಗಾರ್ಜುನಕೊಂಡದಲ್ಲಿರುವ ಮಹಾಚೈತ್ಯವನ್ನು ಆಕೆ ಪುನರುಜ್ಜೀವನಗೊಳಿಸಿದಳು. ಅದರ ನಾಲ್ಕೂ ಪಕ್ಕಗಳಲ್ಲಿ ಐದೈದು ಆಯ ಸ್ತಂಭಗಳನ್ನು ಸ್ಥಾಪಿಸಿ ಅವನ್ನು ಅಲಂಕಾರ ಮಾಡಿಸಿದಳು. ಇಕ್ಷ್ವಾಕು ದೊರೆಗಳ ಇತಿಹಾಸದ ಪುನಾರಚನೆಗೆ ಸಾಧಕವಾದ ಅನೇಕ ಶಾಸನಗಳನ್ನು ಆ ಕಂಬಗಳ ಮೇಲೆ ಕಡೆಯಲಾಗಿದೆ. ಅಪರಮಹಾವಿನಸೆಲಿಯ ಪಂಥದ ಬೌದ್ಧಭಿಕ್ಷುಗಳಾಗಿ ಆ ಚೈತ್ಯವನ್ನೂ ಅದರ ಬಳಿ ಗಜಪೃಷ್ಠಾಕೃತಿಯ ಚೈತ್ಯಾಗಾರವೊಂದನ್ನೂ ಅದರ ಸುತ್ತಲ ಪ್ರಾಂಗಣ ಮತ್ತು ವಿಹಾರಗಳನ್ನೂ ಕಟ್ಟಿಸಿದಳು. ಮಹಾದೇವಿ ರುದ್ರಧರ ಭಟಾರಿಕಾ ಮಹಾಚೈತ್ಯಕ್ಕೆ ಹೊಸ ಭಾಗಗಳನ್ನು ಕಟ್ಟಿಸಿ, ಅನೇಕ ದಾನಗಳನ್ನು ಕೊಟ್ಟಳು. ಮಹಾತಳವಾರಿ ಅಡವಿ ಶಾಂತಿಶ್ರೀ ಮತ್ತು ಪೂಕಿಯ ಮನೆತನದ ಮಹಾತಳವಾರ, ಮಹಾಸೇನಾಪತಿ ವಾಸಿಷ್ಠೀಪುತ್ರ ಮಹಾಸ್ಕಂದಶ್ರೀಯ ಪತ್ನಿ, ಮಹಾಸೇನ ಪತಿನಿ ಚೂಲಶಾಂತಿ ಶ್ರೀಣೀಕಾ, ಮಹಾದೇವಿ ಛಾಠಿಶ್ರೀ ಮೊದಲಾದವರು ತಮ್ಮ ಮತ್ತು ತಮ್ಮ ಮನೆತನದವರ ಶ್ರೇಯಸ್ಸಿಗಾಗಿ ಮಹಾಚೈತ್ಯದ ಪ್ರಾಂಗಣದಲ್ಲಿ ಸ್ತಂಭಗಳನ್ನು ಸ್ಥಾಪಿಸಿದ್ದರು. ಬಹುಶ್ರುತೀಯ ಪಂಥದ ಭಿಕ್ಷುಗಳಿಗಾಗಿ ಮಹಾದೇವಿ ಭಟ್ಟಿದೇವಿ ಒಂದು ವಿಹಾರವನ್ನು ನಿರ್ಮಿಸಿದ್ದಳು. ಮಹಾದೇವಿ ಕೊಡಬಲಿ ಶ್ರೀ ಮಹಾಪಂಡಿತ ಧರ್ಮಘೋಷನ ಮುಖಾಂತರ ಮಹೀಶಾಸಕ ಪಂಥದ ಆಚಾರ್ಯರಿಗಾಗಿ ಮತ್ತೊಂದು ವಿಹಾರವನ್ನು ಕಟ್ಟಿಸಿಕೊಂಡಿದ್ದಳು.

ನಾಗಾರ್ಜುನಕೊಂಡದ ಬೌದ್ಧ ದಾನಿಗಳಲ್ಲಿ ಬಹುಶಃ ಅತ್ಯಂತ ಗಮನಾರ್ಹ ವ್ಯಕ್ತಿ ಗೋವಗಾಮದ ಬುಧಿಂಣಕನ ಪತ್ನಿಯೂ ರಾಜ್ಯಕೋಶಾಧ್ಯಕ್ಷನ ಸೋದರಪುತ್ರಿಯೂ ಆದ ಉಪಾಸಿಕೆ ಬೋಧಿಶ್ರೀ. ಅಜಂತದ ಬೌದ್ಧಾಚಾರ್ಯರ ಮತ್ತು ಸಿಂಹಳದ ಭಿಕ್ಷುಗಳ ಸೌಕರ್ಯಕ್ಕಾಗಿ ಹಾಗೂ ಕಾಶ್ಮೀರ, ಗಾಂಧಾರ, ಚೀನ, ಕಿರಾತ, ಕೋಸಲ, ಅಪರಾಂತ, ವಂಗ, ವನವಾಸಿ, ಯವನ, ದಮಿಳ ಮತ್ತು ಪಲೂರ ದೇಶಗಳಿಂದ ಬರುತ್ತಿದ್ದ ಭಿಕ್ಷುಗಳ ಉಪಯೋಗಕ್ಕಾಗಿ ಚೂಲ ಧಮ್ಮಗಿರಿಯ ವಿಹಾರದಲ್ಲಿ ಸಕಲ ಆವಶ್ಯಕತೆಗಳನ್ನು ಹೊಂದಿದ್ದ ಅಲಂಕಾರಪೂರ್ಣವಾದ ಸ್ತೂಪ ಮತ್ತು ಚೈತ್ಯಾಗಾರಗಳನ್ನು ತನ್ನ ಮತ್ತು ತನ್ನ ಬಂಧುವರ್ಗದ ಶ್ರೇಯಸ್ಸಿಗಾಗಿ ನಿರ್ಮಿಸಿದ್ದಳು. ಮತ್ತೆ ಕುಳಹ ವಿಹಾರದಲ್ಲಿ ಒಂದು ಚೈತ್ಯಾಗಾರ, ಸಿಂಹಳ ವಿಹಾರದಲ್ಲಿದ್ದ ಬೋಧಿವೃಕ್ಷಕ್ಕೆ ಮಂದಿರ, ಮಹಾಧರ್ಮಗಿರಿಯಲ್ಲಿ (ಮಹಾ ಚೈತ್ಯ) ಒಂದು ಕೋಣೆ ಮತ್ತು ಅದಕ್ಕೆ ಸೇರಿದ ವಿಹಾರದಲ್ಲಿ ಒಂದು ಸ್ತಂಭ, ದೇವಗಿರಿಯಲ್ಲಿ ಒಂದು ವಿಶಾಲ ಧ್ಯಾನಮಂದಿರ, ಪೂರ್ವಶೈಲದಲ್ಲಿ ಒಂದು ಕೊಳ, ಮೊಗಸಾಲೆ ಮತ್ತು ಮಂಟಪ, ಕಂಟಕಶೈಲದಲ್ಲಿ ಕಲ್ಲಿನ ಮಂಟಪ, ಹಿರಹಿಮುತುವ ಎಂಬಲ್ಲಿ ಮೂರು ಮತ್ತು ಪಪಿಲಾ ಎಂಬಲ್ಲಿ ಏಳು ಕೋಣೆಗಳು, ಪುಷ್ಪಗಿರಿಯಲ್ಲಿ ಒಂದು ಕಲ್ಲಿನ ಮಂಟಪ, ಚಂಡಮುಖ, ಧರ್ಮನಂದಿ ಮತ್ತು ನಾಗ ಎಂಬ ಭಿಕ್ಷುಗಳ ಮಾರ್ಗದರ್ಶನದಲ್ಲಿ ವಿಧಿಕನೆಂಬ ಶಿಲ್ಪಿ ನಿರ್ಮಿಸಿದ ವಿಹಾರಗಳು–ಇವು ಆಕೆಯ ಧಾರ್ಮಿಕ ಕಾರ್ಯಗಳಲ್ಲಿ ಕೆಲವು ಎಂದು ಶಾಸನಗಳು ತಿಳಿಸುತ್ತವೆ. ಈ ಎಲ್ಲ ದಾನಧರ್ಮ ಪ್ರೋತ್ಸಾಹಗಳಿಂದಾಗಿ ನಾಗಾರ್ಜುನಕೊಂಡ ಅತ್ಯಂತ ಪ್ರಸಿದ್ಧ ಬೌದ್ಧ ಧಾರ್ಮಿಕ ಕೇಂದ್ರವಾಗಿದ್ದು ಚೀನದಿಂದ ಸಿಂಹಳದವರೆಗಿನ ಹಲವಾರು ದೇಶಗಳಿಂದ ಬೌದ್ಧಯಾತ್ರಿಕರನ್ನೂ ಬೌದ್ಧಧರ್ಮ ವಿದ್ಯಾತುರರನ್ನೂ ಆಕರ್ಷಿಸಿತ್ತು. ಅದೇ ರೀತಿ ಅನೇಕ ಚೈತ್ಯ ವಿಹಾರಗಳನ್ನು ಕಟ್ಟಿಸಿದ ಮತ್ತೊಬ್ಬ ಉಪಾಸಿಕೆ ಚಂದ್ರಶ್ರೀ. ಆಕೆ ವಿಜಯಪುರಿಯಲ್ಲಿ ಬೌದ್ಧಧರ್ಮ ಸಮಾರಂಭಗಳನ್ನೂ ಮತೀಯ ಕ್ರಿಯಾವಿಧಿಗಳನ್ನು ಏರ್ಪಡಿಸುತ್ತಿದ್ದಳೆಂದು ಶಾಸನಗಳು ತಿಳಿಸುತ್ತವೆ. ಆಕೆ ಅಪರಮಹಾವಿನಸೆಲಿಯ ಪಂಥದ ಆಚಾರ್ಯರಿಗೆ ಮತ್ತು ಭಿಕ್ಷುಗಳಿಗೆ ಹಲವಾರು ಬಗೆಯಲ್ಲಿ ನೆರವು ನೀಡಿದ್ದಳು.

ಇಲ್ಲಿ ನೆಲಸಿದ್ದ ಹಲವು ಬೌದ್ಧಪಂಥಗಳ ಬಗ್ಗೆ ಶಾಸನಗಳಲ್ಲಿ ಮಾಹಿತಿಗಳು ಸಿಕ್ಕುತ್ತವೆ. ಥೇರವಾದ, ವಿಭಾಜವಾದ, ಮಹಾಸಾಂಘಿಕ, ಮಹೀಶಾಸನಕ, ಬಹುಶ್ರುತೀಯ, ಲೋಕೋತ್ತರವಾದ, ಮಹಾವಿಹಾರವಾಸಿ, ಅಪರಮಹಾವಿನಸೆಲಿಯ ಇವು ಅಂಥ ಪಂಥಗಳಲ್ಲಿ ಗಮನಾರ್ಹವಾದವು. ಇಲ್ಲಿ ನಡೆದ ಉತ್ಖನನಗಳಲ್ಲಿ ಈ ವಿವಿಧ ಪಂಥಗಳಿಗೆ ಸೇರಿದ ಸ್ತೂಪ, ಸ್ತೂಪ–ಚೈತ್ಯ, ಬುದ್ಧ–ಚೈತ್ಯಗಳೂ ಮೂರು ಅಥವಾ ನಾಲ್ಕು ಪಾರ್ಶ್ವಗಳಲ್ಲೂ ಕೋಣೆಗಳೂ ಮಧ್ಯದಲ್ಲಿ ಕಂಬಗಳಿಂದ ಕೂಡಿದ ಮಂಟಪಗಳೂ ಉಳ್ಳ ವಿಹಾರಗಳು ಕಂಡುಬಂದಿವೆ. ಆಯಾ ಪಂಥಗಳಿಗೆ ಸಂಬಂಧಿಸಿದ ಹೆಸರುಗಳನ್ನೂ ಅನೇಕ ವಿಹಾರಗಳಿಗೆ ಕೊಡಲಾಗಿತ್ತು; ಸಿಂಹಳದ ಭಿಕ್ಷುಗಳು ವಾಸಿಸುತ್ತಿದ್ದ ವಿಹಾರಕ್ಕೆ ಸಿಂಹಳವಿಹಾರವೆಂದು ಹೆಸರಿದ್ದಂತೆ, ಇಲ್ಲಿ ವಾಸಿಸುತ್ತಿದ್ದ ಭಿಕ್ಷುಗಳ ಮೂಲಸ್ಥಾನದ ಆದೇಶವಿರುತ್ತಿತ್ತು. ಕಾಲಕ್ರಮದಲ್ಲಿ ವಿವಿಧ ಪಂಥಗಳು ಪರಸ್ಪರ ಪ್ರಭಾವಗಳಿಗೆ ಒಳಗಾಗಿ, ಅವುಗಳ ಆಚಾರ ವಿಚಾರ ಸಂಪ್ರದಾಯಗಳಲ್ಲಿ ಸಂಕೀರ್ಣತೆ ಉಂಟಾಯಿತೆಂದು ಇಲ್ಲಿ ಸಿಕ್ಕಿರುವ ಅವಶೇಷಗಳಿಂದ ತಿಳಿದುಬರುತ್ತದೆ. ಈ ಬೌದ್ಧ ಧರ್ಮೀಯ ಅವಶೇಷಗಳಲ್ಲದೆ, ವೈದಿಕ ಧರ್ಮದ ಅನುಯಾಯಿಗಳಾದ ಇಕ್ಷ್ವಾಕು ದೊರೆಗಳು ಕಟ್ಟಿಸಿದ ಸರ್ವದೇವ, ಪುಷ್ಪಭದ್ರ, ಕಾರ್ತಿಕೇಯ, ಶಿವ, ಅಷ್ಟಭುಜಸ್ವಾಮಿ ಮುಂತಾದ ಪೌರಾಣಿಕ

ದೇವತೆಗಳ ಮಂದಿರಗಳ ಅವಶೇಷಗಳೂ ಅರಮನೆ, ಕ್ರೀಡಾಂಗಣ, ರಂಗಮಂದಿರ, ಅಶ್ವಮೇಧಾದಿ ವೈದಿಕ ಯಜ್ಞಗಳ ವೇದಿಕೆಗಳು, ಅವಭೃಥಸ್ನಾನ ಕೊಳ ಮೊದಲಾದವುಗಳ ಅಳಿದುಳಿದ ಭಾಗಗಳಿವೆ.

**ವಾಸ್ತುಶಿಲ್ಪ:** ಎ.ಎಚ್.ಲಾಂಗ್‍ಹರ್ಸ್ಟ್ 1927–31ರಲ್ಲಿ, ಟಿ.ಎನ್.ರಾಮಚಂದ್ರನ್ 1939ರಲ್ಲಿ ಮತ್ತು ಆರ್. ಸುಬ್ರಹ್ಮಣ್ಯಂ 1954–60ರಲ್ಲಿ ನಡೆಸಿದ ಪ್ರಾಕ್ತನ ಸಂಶೋಧನೆಗಳಿಂದ 60ಕ್ಕೂ ಹೆಚ್ಚಿನ ಬೌದ್ಧಸ್ತೂಪ, ಚೈತ್ಯಾಗಾರ ಮತ್ತು ವಿಹಾರಸಮುದಾಯಗಳೂ ಹಿಂದು ದೇವಾಲಯ ಹಾಗೂ ಇತರ ಕಟ್ಟಡಗಳೂ ಅಸಂಖ್ಯಾತ ಶಿಲ್ಪಗಳೂ ನಾಣ್ಯಗಳೂ ಶಾಸನಗಳೂ ಬೆಳಕಿಗೆ ಬಂದಿವೆ. ಅವು ನಾಗಾರ್ಜುನಕೊಂಡ ಕಣಿವೆಯಲ್ಲಿ ಪ್ರಶ. ಮೊದಲ ಶತಮಾನಗಳಲ್ಲಿ ಬೆಳೆದುಬಂದ ಸಂಸ್ಕೃತಿಯ ಹಲವು ಮುಖಗಳ ಪರಿಚಯ ಮಾಡಿಕೊಡುತ್ತವೆ. ಈ ಕಟ್ಟಡಗಳನ್ನು 50.80 ಸೆಂಮೀ, 25.40 ಸೆಂಮೀ, 7.62 ಸೆಂಮೀ ಗಾತ್ರದ ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದೆ. ಅಂಥ ಇಟ್ಟಿಗೆಗಳೂ ಆ ಕಾಲದಲ್ಲಿ ಬಳಕೆಯಲ್ಲಿದ್ದುದಕ್ಕೆ ಭಾರತದ ಹಲವಾರು ಪ್ರದೇಶಗಳಲ್ಲಿ ನಡೆಸಿರುವ ಉತ್ಖನನಗಳು ಸಾಕ್ಷಿಯನ್ನೊದಗಿಸುತ್ತವೆ. ಇಟ್ಟಿಗೆಯ ಗೋಡೆಗಳಿಗೆ ಸುಣ್ಣದ ಗಾರೆಯನ್ನು ಬಳಸಿರುವುದಲ್ಲದೆ ಗೋಡೆಗಳ ಮೇಲೆ ವಿವಿಧ ಅಲಂಕಾರಗಳನ್ನು ಗಾರೆಗಚ್ಚುಗಳಿಂದ ಮಾಡಲಾಗಿದೆ. ಕೆಲವು ಬಾರಿ ಬಣ್ಣಗಳನ್ನು ಬಳಿದಿರುವುದುಂಟು. ಮೇಲಂತಸ್ತಿನಿಂದ ಗೋಡೆಗಳ ಮುಖಾಂತರ ನೀರು ಹರಿದು ಹೋಗಲು ಕೊಳವೆ ಮಾರ್ಗಗಳನ್ನು ನಿರ್ಮಿಸಲಾಗಿದೆ. ಅಸ್ತಿಭಾರ, ಕಂಬಗಳು, ನೆಲಗಟ್ಟು ಮತ್ತು ಶಿಲ್ಪಗಳಿಗೆ ಬಿಳಿ ಅಥವಾ ಬೂದುಬಣ್ಣದ ಸುಣ್ಣಕಲ್ಲಿನ ಚಪ್ಪಡಿ ಅಥವಾ ದಿಮ್ಮಿಗಳನ್ನು ಬಳಸಲಾಗಿದೆ. ನಾಗಾರ್ಜುನಕೊಂಡದ ಸ್ತೂಪಗಳು ಉತ್ತರ ಭಾರತದ ಸ್ತೂಪಗಳಂತೆ ಆದ್ಯಂತ ಗಟ್ಟಿಯಾದವಲ್ಲ. ಇವುಗಳ ತಳವಿನ್ಯಾಸ ಏಕ ಕೇಂದ್ರ ಬಿಂದುವಿನ ಎರಡು ವೃತ್ತಗಳು. ಇವುಗಳೊಳಗೆ ಸಮಾನ ಅಂತರದಲ್ಲಿ ಕೇಂದ್ರ ಬಿಂದುವಿನಿಂದ ಹೊರಗಿನ ವೃತ್ತದವರೆಗೆ ಗಾಡಿ ಚಕ್ರದ ಅರೆಗಳಂತೆ ಅಡ್ಡ ಗೋಡೆಗಳು ಇದರಿಂದ ಉಂಟಾದ ವೃತ್ತಗಳೊಳಗಿನ ಖಾಲಿ ಜಾಗಗಳನ್ನು ತುಂಬಿಸಲಾಗುತ್ತಿತ್ತು. ಬೌದ್ಧರ ಧರ್ಮಚಕ್ರದ ಸಂಕೇತವಾದ ಈ ವೃತ್ತಾಕಾರದ ವೇದಿಕೆಯನ್ನು ನಿರ್ಮಿಸಿ, ಇದರ ಮೇಲೆ ಸುತ್ತಲೂ ಪ್ರದಕ್ಷಿಣಾಪಥವನ್ನುಳಿಸಿ, ಮಧ್ಯಭಾಗದಲ್ಲಿ ಅಂಡ ಅಥವಾ ಗುಂಡುದಿಮ್ಮಿಯನ್ನೂ (ಡ್ರಮ್) ಅದರ ಮೇಲೆ ಗೋಳಾಕಾರದ ಗುಮ್ಮಟವನ್ನೂ (ಡೋಮ್) ಕಟ್ಟಲಾಗುತ್ತಿತ್ತು. ನಾಗಾರ್ಜುನಕೊಂಡದ ಹೆಚ್ಚಿನ ಸ್ತೂಪಗಳಲ್ಲಿ ವೇದಿಕೆಯ ನಾಲ್ಕು ದಿಕ್ಕುಗಳಲ್ಲೂ ಆಯಕ ಪೀಠಗಳನ್ನೂ ಅವುಗಳ ಮೇಲೆ ಆಯಕಸ್ತಂಭಗಳನ್ನೂ ನಿಲ್ಲಿಸಲಾಗಿದೆ. ವಿವಿಧ ಪ್ರಮಾಣಗಳ ಇಂಥ ಹಲವಾರು ಸ್ತೂಪಗಳು ಅಲ್ಲಿ ಕಂಡುಬಂದಿವೆ. ಗುಮ್ಮಟದ ಮೇಲೆ ಕಟಕಟೆಯಲ್ಲಿ ಹರ್ಮಿಕಾ, ಅದರ ಮೇಲೆ ಛತ್ರಾವಳಿ ಇರುತ್ತಿದ್ದವು. ನಾಗಾರ್ಜುನಕೊಂಡದ ಆಯಕಪೀಠಗಳಿಂದ ಹಲವಾರು ಉತ್ತಮ ಶಿಲ್ಪಗಳು ಸಿಕ್ಕಿವೆ. ಅಲ್ಲಿರುವ ಸ್ತೂಪಗಳನ್ನು ರಚನಾ ವಿಧಾನದ ಆಧಾರದ ಮೇಲೆ ಎರಡು ರೀತಿಯದಾಗಿ ವಿಂಗಡಿಸಬಹುದು. ಇಟ್ಟಿಗೆ ಮತ್ತು ಸುಣ್ಣದಿಂದ ಕಟ್ಟಿದ, ಶಿಲ್ಪಾಲಂಕಾರವಿಲ್ಲದ ಸಾಧಾರಣ ಸ್ತೂಪಗಳು, ವೇದಿಕೆಯಿಂದ ಹಿಡಿದು ಗುಮ್ಮಟದವರೆಗೂ ಹಸನಾದ ಸುಣ್ಣಕಲ್ಲಿನಲ್ಲಿ ಕೆತ್ತಿದ ಶಿಲ್ಪಗಳಿಂದ ಅಲಂಕೃತವಾದ ಸ್ತೂಪಗಳು. ಈ ಶಿಲ್ಪಗಳನ್ನು ಕಲ್ಲಿನಲ್ಲಾಗಲಿ, ಗಚ್ಚಿನಲ್ಲಾಗಲಿ ಮಾಡಲಾಗುತ್ತಿತ್ತು. ಈ ಶಿಲ್ಪಗಳು ಗಾಂಧಾರ ಶಿಲ್ಪಶೈಲಿಯಿಂದ ಬಹುಮಟ್ಟಿಗೆ ಪ್ರಭಾವಿತವಾಗಿವೆ.

ಇಲ್ಲಿಯ ಸ್ತೂಪಗಳಲ್ಲಿ ಪ್ರಮುಖವಾದ ಮಹಾಚೈತ್ಯಸ್ತೂಪ ವೃತ್ತ ವಿನ್ಯಾಸದಲ್ಲಿದೆ, ತಳ ವಿನ್ಯಾಸದೊಳಗೆ ಅರೆಗೋಡೆಗಳಿಂದ ತ್ರಿಕೋನಾಕಾರದ ಎಂಟು ಸಣ್ಣ ಕೋಣೆಗಳು ಏರ್ಪಟ್ಟಿವೆ. ಅವುಗಳ ಪೈಕಿ ಉತ್ತರದ ಕೋಣೆಯಲ್ಲಿ ಬುದ್ಧನ ದೇಹಾವಶೇಷಗಳನ್ನು ಒಂದು ಪುಟ್ಟ ಚಿನ್ನದ ಡಬ್ಬಿಯಲ್ಲಿಡಲಾಗಿತ್ತು. ಆ ಚಿನ್ನದ ಡಬ್ಬಿಯನ್ನು ಸ್ತೂಪಾಕಾರದ ಬೆಳ್ಳಿಯ ಕರಂಡದಲ್ಲಿಡಲಾಗಿತ್ತು. ಅಲ್ಲದೆ ಹವಳ, ಮುತ್ತು, ಪಚ್ಚೆಯ ಮಣಿಗಳೂ ಸಣ್ಣ ನಾಣ್ಯಗಳೂ ಚಿನ್ನದ ಮುದ್ರಿಕೆಗಳೂ ಬೆಳ್ಳಿಯ ಕರಂಡದಲ್ಲಿದ್ದವು.

ನಾಗಾರ್ಜುನಕೊಂಡದಲ್ಲಿ ನೂರಾರು ಶಿಲ್ಪಗಳು ದೊರಕಿವೆ. ಸುಂದರ ಕೆತ್ತನೆಗಳುಳ್ಳ ಕಲ್ಲಿನ ಕಂಬಗಳು, ಅಡ್ಡತೊಲೆಗಳು, ಉಬ್ಬುಶಿಲ್ಪಗಳು ಮತ್ತು ಶಿಲ್ಪಫಲಕಗಳು ಬುದ್ಧನ ಜೀವಿತ, ಜಾತಕ ಕಥೆಗಳು ಮತ್ತು ಇತರ ಸಾಮಾಜಿಕ ಚಿತ್ರಗಳನ್ನು ರೂಪಿಸುತ್ತವೆ. ಸಾಮಾನ್ಯವಾಗಿ ಜಾತಕ ಕಥೆಗಳ ಹಲವು ಘಟನೆಗಳನ್ನು ಶಿಲ್ಪಿ ಒಂದೇ ಫಲಕದಲ್ಲಿ ರೂಪಿಸಿದ್ದಾನೆ. ಈ ಶಿಲ್ಪಗಳ ವಸ್ತುಗಳನ್ನು ಹಲವು ಪ್ರಾಚೀನ ಬೌದ್ಧ ಧಾರ್ಮಿಕ ಗ್ರಂಥಗಳಿಂದಲೂ ಚೀನ ಮತ್ತು ಸಿಂಹಳ ದೇಶಗಳಲ್ಲಿ ರೂಢಿಯಲ್ಲಿದ್ದ ಐತಿಹ್ಯಗಳಿಂದಲೂ ಆಯ್ದುಕೊಳ್ಳಲಾಗಿದೆ.

1938ರಲ್ಲಿ ನಡೆಸಿದ ಉತ್ಖನನಗಳಲ್ಲಿ ಸಿಕ್ಕಿದ ವಿಹಾರ ಸಮುದಾಯ ಗಮನಾರ್ಹ. ಒಂದು ಸ್ತೂಪ, ಎರಡು ಚೈತ್ಯಾಗಾರಗಳು, ಮಧ್ಯಭಾಗದಲ್ಲಿ ಕಂಬಗಳಿಂದ ಕೂಡಿದ ಮಂಟಪ, ಅದರ ಸುತ್ತಲೂ ಕೋಣೆಗಳಿರುವ ಒಂದು ಸಂಘಾರಾಮ ಇವು ಆ ಸಮುದಾಯದಲ್ಲಿವೆ. ಇದರ ಉತ್ತರಕ್ಕೆ ಒಂದು ಸಣ್ಣ ಕೋಣೆಯೂ ಒಂದು ಕಾರ್ಯಾಗಾರವೂ ಹೊರವಲಯ ವೃತ್ತಾಕಾರವಾಗಿ ಮತ್ತು ಒಳಭಾಗ ಚತುರಸ್ರವಾಗಿ ಇರುವ ಒಂದು ಕಟ್ಟಡವೂ ಇದೆ. ಇವೆಲ್ಲವೂ ಸೇರಿ ಆದ ಆ ಸಮುದಾಯವನ್ನು ಸ್ವಸಂಪೂರ್ಣವಾದ ಒಂದು ವಿಹಾರ ಸಂಕೀರ್ಣವೆಂದು ಪರಿಗಣಿಸಬಹುದು. ಆಯಕ ವೇದಿಕೆಯಿಂದ ಕೂಡಿದ ಆ ಸ್ತೂಪದ ವ್ಯಾಸ 12.42 ಮೀ. ಇದರ ಹೊರಮೈಯ ಶಿಲ್ಪ ಫಲಕಗಳಿಂದ ಅಲಂಕರಿಸಲ್ಪಟ್ಟಿದೆ. ಇದರ ಪೂರ್ವಭಾಗದಲ್ಲಿ ಪರಸ್ಪರ ಅಭಿಮುಖವಾಗಿದ್ದ ಎರಡು ಗಜಪೃಷ್ಠಾಕೃತಿಯ ಚೈತ್ಯಾಗಾರಗಳಿದ್ದುವು. ದಕ್ಷಿಣದ ಚೈತ್ಯಾಗಾರದಲ್ಲಿ ನಿತ್ಯಪೂಜೆಗೆಂದು ನಿರ್ಮಿಸಿದ್ದ ಸಣ್ಣ ಸ್ತೂಪವಿತ್ತು. ಪದ್ಮಪೀಠದ ಮೇಲೆ ನಿಂತ ಬುದ್ಧನ ಎರಡು ಪಾದಗಳ ನಡುವೆ ಚಿಕ್ಕ ರಂಧ್ರವಿತ್ತು. ಅದನ್ನು ಒಂದು ಕಲ್ಲಿನ ಫಲಕದಿಂದ ಮುಚ್ಚಲಾಗಿತ್ತು. ಆ ಮುಚ್ಚಳವನ್ನು ತೆಗೆದು ನೋಡಿದಾಗ 1.27 ಸೆಂಮೀ ವ್ಯಾಸ ಮತ್ತು 4.45 ಸೆಂಮೀ ಆಳದ ಆ ರಂಧ್ರದಲ್ಲಿ ಒಂದು ಚಿನ್ನದ ಸಂಪುಟದಲ್ಲಿ 95 ಮುತ್ತುಗಳು ಮತ್ತು ಅಸ್ಥಿ ಭಸ್ಮಗಳಿದ್ದವು. ವಿಗ್ರಹಪ್ರತಿಷ್ಠೆಯ ಕಾಲದಲ್ಲಿ ಧಾರ್ಮಿಕ ವಿಧಿಗೆ ಅನುಗುಣವಾಗಿ ಅವನ್ನು ಅಲ್ಲಿ ಸ್ಥಾಪಿಸಿದ್ದಿರಬಹುದು.

ಚೈತ್ಯಾಗಾರಗಳ ಪೂರ್ವಕ್ಕೆ ಸಂಘಾರಾಮವಿತ್ತು. 31ಮೀX22.5ಮೀ ವಿಸ್ತೀರ್ಣದ ಅದರ ಮೂರು ಪಾರ್ಶ್ವಗಳಲ್ಲೂ 2.7ಮೀX2.1 ಮೀ ವಿಸ್ತೀರ್ಣದ ಕೋಣೆಗಳಿದ್ದವು. ಪ್ರಾಂಗಣದ ನಡುವೆ ಕಂಬಗಳಿಂದೊಡಗೂಡಿದ ಮಂಟಪವಿತ್ತು. ಆಗ್ನೇಯ ಮೂಲೆಯಲ್ಲಿದ್ದ ಕೋಣೆಯಲ್ಲಿ ಮೂತ್ರಗೃಹವಿತ್ತು. ಮೂತ್ರಿಯಿಂದ ಕೊಳಕು ನೀರನ್ನು ಕೊಳವೆಗಳ ಮೂಲಕ ಸು.6 ಮೀ ದೂರದಲ್ಲಿ ಭೂಮಿಯೊಳಗೆ ಅಗೆದಿದ್ದ ಹಿಂಗುಗುಂಡಿಗೆ ಒಯ್ಯುವ ಏರ್ಪಾಟು

ಶಿಲ್ಪ ಫಲಕ

ಮಾಡಲಾಗಿತ್ತು. 3 ಮೀ ಉದ್ದ, 2.4 ಮೀ ಅಗಲ ಮತ್ತು 1.8 ಮೀ ಆಳವಿದ್ದ ಆ ಗುಂಡಿಯಲ್ಲಿ ಜಲ್ಲಿಕಲ್ಲು, ಉರುಟುಕಲ್ಲು, ಮರಳು ಮತ್ತು ಸುಣ್ಣವನ್ನು ಪದರಪದರವಾಗಿ ಹರಡಲಾಗಿತ್ತು. ಉತ್ತರ ಭಾಗದಲ್ಲಿದ್ದ ಕೋಣೆಗಳಿಗೆ ಹೆಚ್ಚು ಪ್ರಾಮುಖ್ಯವಿದ್ದಂತೆ ಕಾಣುತ್ತದೆ. ಅವುಗಳಲ್ಲಿ ಪಶ್ಚಿಮದಿಂದ ಮೊದಲ ಕೋಣೆಯಲ್ಲಿ ನೆಲದ ಮೇಲೆ ಕಲ್ಲಿನಲ್ಲಿ ಕೆತ್ತಿದ 38 ಸೆಂಮೀ ಎತ್ತರ, ನಡುಭಾಗದಲ್ಲಿ 26.6 ಸೆಂಮೀ ಮತ್ತು ಬಾಯಿ ಬಳಿ 10.16 ಸೆಂಮೀ ವ್ಯಾಸಗಳಿದ್ದ, ಹೊರಮೈಯಲ್ಲಿ ಅನೇಕ ಅಲಂಕಾರಗಳಿದ್ದ ಒಂದು ಕುಂಭವನ್ನು ಇಡಲಾಗಿತ್ತು. ಅದರ ಬಾಯನ್ನು 16.5 ಸೆಂಮೀ ವ್ಯಾಸದ ಎರಡು ಪದ್ಮಗಳ ಕೆತ್ತನೆಯಿದ್ದ ಫಲಕದಿಂದ ಮುಚ್ಚಲಾಗಿತ್ತು. ಆ ಮುಚ್ಚಳದ ಮೇಲೆ ಚಿತ್ರಾವಳಿಯಿತ್ತು. ಕುಂಭದಲ್ಲಿ 2 ಮಾನವ ಹಲ್ಲುಗಳಿದ್ದವು. ಈ ದಂತಾವಶೇಷಗಳು ನಾಗಾರ್ಜುನಕೊಂಡದಲ್ಲಿ ಪ್ರಶ. ಮೊದಲ ಭಾಗದಲ್ಲಿ ಜೀವಿಸಿದ್ದ ಪ್ರಸಿದ್ಧ ಬೌದ್ಧ ಪಂಡಿತ ನಾಗಾರ್ಜುನಾಚಾರ್ಯನವೆಂದು ಐತಿಹ್ಯವಿದೆ.

ಸಂಘಾರಾಮದಲ್ಲಿ ಚೈತ್ಯಾಗಾರಗಳ ನಡುವೆ ಅನೇಕ ಗಚ್ಚಿನ ಶಿಲ್ಪಗಳು ಸಿಕ್ಕಿವೆ. ಅವುಗಳಲ್ಲಿ ಹಲವು ರೀತಿಯ ಪುಷ್ಪಗಳ ಮತ್ತು ಪ್ರಾಣಿಗಳ ಚಿತ್ರಗಳಿವೆ. ಈ ಮೊದಲು ಉಲ್ಲೇಖಿಸಿದ ಕಾರ್ಯಾಗಾರ 3.9 ಮೀ ಅಗಲವಿತ್ತು. ಅದರ ಉದ್ದವನ್ನು ಪೂರ್ಣವಾಗಿ ಶೋಧಿಸಲಿಲ್ಲ. ಅದರಲ್ಲಿ 61 ಪೂರ್ಣಗೊಳಿಸಿದ ಮತ್ತು 48 ಅಪೂರ್ಣವಾದ ಶಿಲ್ಪಗಳು ಕಂಡುಬಂದಿರುವುದರಿಂದ ಅದನ್ನು ಶಿಲ್ಪಿಗಳ ಕಾರ್ಯಾಗಾರವೆಂದು ಗುರುತಿಸಲಾಗಿದೆ. ಇಲ್ಲಿ ಸಿಕ್ಕಿದ ಅಪೂರ್ಣ ಶಿಲ್ಪ ಫಲಕವೊಂದರಲ್ಲಿ ಚಾವಣಿಯ ಸೂರನ್ನು ಎಡಗೈಯಲ್ಲಿ ಹಿಡಿದು, ಬಲಗೈಯನ್ನು ಸೊಂಟದ ಮೇಲೂರಿಕೊಂಡು ತ್ರಿಭಂಗಿಯಲ್ಲಿ ನಿಂತ ಸುಂದರ ಸ್ತ್ರೀಯೊಬ್ಬಳ (ಸಾಲಭಂಜಿಕೆ) ರೇಖಾಚಿತ್ರವನ್ನು ಬಿಡಿಸಲಾಗಿದೆ. ಅವಳ ಎಡಪಕ್ಕದಲ್ಲಿ ಒಬ್ಬ ಸೇವಿಕೆ ಎರಡೂ ಕೈಯಲ್ಲಿ ತಿಲಕದ ಭರಣಿಯನ್ನು ಹಿಡಿದು ನಿಂತಿದ್ದಾಳೆ. ಸೇವಿಕೆಯ ಹಿಂಭಾಗದಲ್ಲಿರುವ ಕಂಬದಿಂದ ಆಧಾರಿತವಾದ ಚಾವಣಿಯ ಭಾಗದ ಫಲಕದ ಮೇಲೆ ಸಿಂಹದಂತಿರುವ ಪ್ರಾಣಿಯನ್ನು ಹೂಡಿರುವ ರಥದಲ್ಲಿ ಧನುರ್ಧಾರಿ ಸವಾರನ ಚಿತ್ರವನ್ನು ತೋರಿಸಲಾಗಿದೆ. ಅಲ್ಲಿಯ ಶಿಲ್ಪಿಗಳು ಉಬ್ಬುಶಿಲ್ಪಗಳನ್ನು ನಿರ್ಮಿಸಲು ಫಲಕಗಳ ಮೇಲೆ ಮೊದಲು ರೇಖಾಚಿತ್ರಗಳನ್ನು ಬಿಡಿಸಿ, ಅನಂತರ ಅವನ್ನು ಅನುಸರಿಸಿ ಕೆತ್ತನೆ ಮಾಡುತ್ತಿದ್ದರೆಂಬ ಅಂಶವನ್ನು ಈ ರೇಖಾಚಿತ್ರ ಸ್ಪಷ್ಟಗೊಳಿಸುತ್ತದೆ.

1954–60ರ ನಡುವಣ ಉತ್ಖನನಗಳಲ್ಲಿ ಒಟ್ಟು 28 ವಿಹಾರಗಳು, 10 ಸ್ತೂಪಗಳು, ಬೌದ್ಧ ಸ್ತ್ರೀದೇವತೆಗಳಲ್ಲೊಬ್ಬಳಾದ ಹಾರೀತಿಯ ಮಂದಿರ, ಕಂದಕ–ಗೋಡೆಗಳಿಂದ ಪರಿವೃತವಾದ ವಿಜಯಪುರಿ ಪ್ರದೇಶ, ಅದರೊಳಗೆ ಅಶ್ವಮೇಧ ಯಾಗವೇದಿಕೆಗಳು,

ಅರಮನೆಯಿಂದ ನದೀತೀರಕ್ಕೆ ಹೋಗುವ ಸೋಪಾನಗಳು ಮತ್ತು ಸ್ನಾನಘಟ್ಟ, ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸುತ್ತಿದ್ದ ರಂಗಮಂದಿರ, ಪುಷ್ಪಭದ್ರಸ್ವಾಮಿ, ಸರ್ವದೇವಸ್ವಾಮಿ, ಕಾರ್ತಿಕೇಯಸ್ವಾಮಿ ಮತ್ತು ನವಗ್ರಹ ದೇವತೆಗಳ ಮಂದಿರ – ಇವೆಲ್ಲವುಗಳ ವಾಸ್ತು ಶಿಲ್ಪಾವಶೇಷಗಳನ್ನು ಕಂಡುಹಿಡಿಯಲಾಗಿದೆ. ಈ ದೇವಾಲಯಗಳು ಪ್ರಾಚೀನ ವಾಸ್ತುಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಹೇಳಲಾದ ಧಾರ್ಮಿಕ ವಿಧಿಗಳಿಗೆ ಅನುಸಾರವಾಗಿ ರಚಿತವಾಗಿವೆ. ದೇವಾಲಯಗ ಳಲ್ಲಿ ಅಂತರಾಳ ಮುಖಮಂಟಪಗಳನ್ನೂ ಧ್ವಜಸ್ತಂಭಗಳನ್ನೂ ಕಾಣಬಹುದು. ತಳವಿನ್ಯಾಸ ಸಾಮಾನ್ಯವಾಗಿ ಗಜಪೃಷ್ಠಾಕೃತಿಯದಾಗಿರುತ್ತದೆ. ಹಿಂದೂ ದೇವಾಲಯಗಳು ಗಜಪೃಷ್ಠಾಕೃತಿ ಯಲ್ಲಿರುವುದು ಗಮನಾರ್ಹ. ಅಂಥ ತಲವಿನ್ಯಾಸ ಆ ಕಾಲದಲ್ಲಿ ಕೇವಲ ಬೌದ್ಧ ಚೈತ್ಯಗಳಿಗೆ ಸೀಮಿತವಾಗಿರಲಿಲ್ಲವೆಂಬುದು ದೃಢಪಡುತ್ತದೆ. ಮತ್ತೊಂದು ಗಮನಾರ್ಹ ಅಂಶವೆಂದರೆ, ಕೋಟೆಯೊಳಗಿದ್ದ ಸುರಕ್ಷಿತ ಸ್ಥಳಗಳಲ್ಲಿ, ನದೀತೀರದಲ್ಲಿ ಕೂಡ, ಹಿಂದೂ ಧಾರ್ಮಿಕ ನಿರ್ಮಾಣಗಳು ಪ್ರಧಾನವಾಗಿರುವುದು. ಅದರಿಂದ ಇಲ್ಲಿಯ ದೊರೆಗಳೂ ವೈದಿಕಧರ್ಮಾನು ಯಾಯಿಗಳಾಗಿದ್ದರೆಂಬುದು ಸ್ಪಷ್ಟಪಡುತ್ತದೆ. ಆದರೆ ಇಲ್ಲಿ ಕಂಡುಬರುವ ಕೆಲವು ಶಾಸನಗಳಿಂದ ಇಕ್ಷ್ವಾಕು ವಂಶದ ಆಳ್ವಿಕೆಗೆ ಮೊದಲು ಈ ಪ್ರದೇಶದಲ್ಲಿ ಹಲವಾರು ಕಟ್ಟಡಗಳೂ ಶಾಸನಗಳೂ ಇದ್ದುವೆಂದು ತಿಳಿದುಬರುತ್ತದೆ. ಆ ಶಾಸನಗಳ ಲಿಪಿಯ ಆಧಾರದ ಮೇಲೆ ಅವನ್ನು ಸಾತವಾಹನರ (1–2ನೆಯ ಶತಮಾನ) ಕಾಲದವೆಂದು ಹೇಳ ಬಹುದು. ಇಲ್ಲಿ ಒಂದು ಛಾಯಾಸ್ತಂಭದ (ಸ್ಮಾರಕಸ್ತಂಭ) ಮೇಲೆ ಶಾಸನ ವೊಂದಿದೆ. ಸಾತವಾಹನರ ಕಾಲದಲ್ಲಿ ಇಲ್ಲಿ ನಡೆದ ಯುದ್ಧದಲ್ಲಿ ಕುಲಹಕ ಕುಲದ ಶಾಂತಮೂಲ ಅಸು ನೀಗಿದ ನೆಂದೂ ಶಾಸನವುಳ್ಳ ಆ ಸ್ಮಾರಕಸ್ತಂಭ ವನ್ನು ಇದೇ ಸ್ಥಳದಲ್ಲಿ ನೆಡಲಾಯಿ ತೆಂದೂ ಈ ಶಾಸನ ತಿಳಿಸುತ್ತದೆ.

ಹೋತದೊಂದಿಗೆ ವ್ಯಕ್ತಿ

ವಿಜಯಪುರಿಯಲ್ಲಿರುವ ಸಾರ್ವಜನಿಕ ರಂಗಮಂಟಪ ಕುತೂಹ ಲಕಾರಿಯಾದುದು. ಇಲ್ಲಿ ನಡೆಯುತ್ತಿದ್ದ ನಾಟ್ಯ–ನೃತ್ಯಗಳನ್ನು ನೋಡಲು ಬಂದ ಪ್ರೇಕ್ಷಕವರ್ಗವೂ ಧರ್ಮಪ್ರವಚನ ಅಥವಾ ಸಾರ್ವಜನಿಕ ಭಾಷಣಗಳನ್ನು ಕೇಳಲು ಬಂದ ಶ್ರೋತೃವರ್ಗವೂ ಕೂಡಲು ನಾಲ್ಕೂ ಕಡೆಗಳಲ್ಲಿ ಮೆಟ್ಟಿಲು ಆಸನಗಳನ್ನು (ಗ್ಯಾಲರಿ) ನಿರ್ಮಿಸಲಾಗಿದೆ. ಅರೆತೆರೆದ ಆ ರಂಗಮಂಟಪದ ಉದ್ದ 17.15 ಮೀ, ಅಗಲ 14.40 ಮೀ ಗ್ಯಾಲರಿಯ ಆಸನಗಳನ್ನು ಪರಿಸರದಲ್ಲಿ ಸಿಕ್ಕುವ ಕಡಪ ಕಲ್ಲು ಚಪ್ಪಡಿಗಳಿಂದ ನಿರ್ಮಿಸಲಾಗಿದೆ. ಅದರ ನೈರುತ್ಯ ಮೂಲೆಯಲ್ಲಿ ಎತ್ತರವಾದ ಕಲ್ಲಿನ ವೇದಿಕೆ (ಪ್ರಮುಖರಿಗಾಗಿ ಇರಬಹುದು) ನಿರ್ಮಿತವಾಗಿದೆ. ಅರೆತೆರೆದ ರಂಗಮಂಟಪದಲ್ಲಿ ಸುರಿದ ಮಳೆನೀರನ್ನು ಹೊರಗೊಯ್ಯಲು ನೈಋತ್ಯ ಮೂಲೆಯಲ್ಲಿ ಒಂದು ಕೊಳವೆ ಚರಂಡಿಯಿದೆ. ಪ್ರಾಂಗಣದ ಮಧ್ಯದಲ್ಲಿ ಎತ್ತರವಾದ ದುಂಡುವೇದಿಕೆ ಇದೆ. ಗಾಯಕರು, ನಟರು, ಭಾಷಣಕಾರರು ಅದರ ಮೇಲೆ ನಿಂತು ಹಾಡುತ್ತಿದ್ದರು, ಅಭಿನಯಿಸುತ್ತಿದ್ದರು, ಭಾಷಣಮಾಡುತ್ತಿದ್ದರು ಎಂದು ಊಹಿಸಬಹುದು. ಆ ವೇದಿಕೆಯ ಮುಖಗಳ ಮೇಲೆ ಒಂದೆಡೆ ತ್ರಿರತ್ನಸಂಕೇತ, ಇನ್ನೊಂದೆಡೆ ಬಿಲ್ಲುಬಾಣಗಳ ಸಂಕೇತ, ಮತ್ತೊಂದೆಡೆ ಕಾಮಶರ ಮತ್ತು ಧನಕಸ ಆಸನ ಎಂಬ ಶಾಸನಗಳು ಇವೆ. ಈ ರಂಗಮಂಟಪದ ನಿರ್ಮಾಣದಲ್ಲಿ ಗಮನಿಸಬೇಕಾದ ಅಂಶವೆಂದರೆ, ವೇದಿಕೆಯ ಸುತ್ತಲ ಸು. 61ಮೀ ವರೆಗೆ ಧ್ವನಿ ಸ್ಪಷ್ಟವಾಗಿ ಕೇಳಿಬರುವುದಲ್ಲದೆ, ಹಂತಹಂತವಾಗಿ ಮೇಲೆ ಮತ್ತು ವೇದಿಕೆಯಿಂದ ದೂರವಾದ ಮೇಲಿನ ಆಸನಗಳಲ್ಲಿ ಕುಳಿತವರಿಗೂ ಧ್ವನಿ ಚೆನ್ನಾಗಿ ಕೇಳಿಬರುವಂತೆ ಅದರ ವಾಸ್ತು ಸಂಯೋಜನೆಯಾಗಿರುವುದು. ರಂಗಮಂಟಪದ ಎದುರಿಗೆ ಇರುವ ಗುಡ್ಡದ ಮೇಲೆ ಹಾರೀತಿ ಗುಡಿಯಿದೆ.

ನದೀತೀರದಲ್ಲಿ ಎಲ್ಲ ಕಡೆಗಳಲ್ಲಿಯೂ ಮೆಟ್ಟಿಲುಗಳಿರುವ, ಇಟ್ಟಿಗೆಗಳಿಂದ ನಿರ್ಮಿಸಲಾದ ಕ್ರೀಡಾಂಗಣ (ಅರೀನ) ಇಲ್ಲಿಯ ಇನ್ನೊಂದು ಗಮನಾರ್ಹ ಕಟ್ಟಡ. ಅದರ ವಿಸ್ತೀರ್ಣ 105.5ಮೀx104.2ಮೀ ಪಶ್ಚಿಮ ಭಾಗದ ಮೆಟ್ಟಿಲುಗಳ ಮಧ್ಯಭಾಗದಲ್ಲಿ ಎತ್ತರವಾದ ಮಂಟಪದಂಥ ವೇದಿಕೆಯಿದೆ. ಬಹುಶಃ ರಾಜಪರಿವಾರದವರು ಮತ್ತು ಇತರ ಪ್ರತಿಷ್ಠಿತ ವ್ಯಕ್ತಿಗಳು ಇಲ್ಲಿ ಕುಳಿತು ಕ್ರೀಡಾವಿನೋದಗಳನ್ನು ನೋಡಲು ಇದನ್ನು ನಿರ್ಮಿಸಿದ್ದಿರಬಹುದು. ಇದರ ಬಳಿ ಕಾರ್ತಿಕೇಯನದಿರಬಹುದಾದ ತಲೆಯಿಲ್ಲದ ಮುಂಡವೊಂದು ಸಿಕ್ಕಿದೆ. ಇದರ ದಕ್ಷಿಣಕ್ಕೆ 182.9ಮೀ ದೂರದಲ್ಲಿ ಕಲ್ಲಿನ ಕಂಬಗಳಿಂದ ಕೂಡಿದ ಮುಖಮಂಟಪ ಮತ್ತು ಇಟ್ಟಿಗೆ ಗೋಡೆಗಳಿಂದ ನಿರ್ಮಿಸಲಾದ ಮೂರು ಭಾಗಗಳುಳ್ಳ ಗಜಪೃಷ್ಠಾಕಾರದ ದೇವಾಲಯ ಇದೆ. ಇದರ ಕಂಬಗಳ ಮೇಲಿರುವ ಶಾಸನಗಳಿಂದಲೂ ಇಲ್ಲಿಂದ 0.4 ಕಿಮೀ ದೂರದಲ್ಲಿರುವ ಮಂಟಪ ಮತ್ತು ಅದರ ಅನೇಕ ಶಿಲ್ಪಗಳಿಂದಲೂ ಅವುಗಳನ್ನು ಇಕ್ಷ್ವಾಕು ದೊರೆಗಳ ಕಾಲದವೆಂದು ಸೂಚಿತವಾಗುತ್ತದೆ. ಈ ವಿಗ್ರಹಗಳಲ್ಲಿ ಕಾರ್ತಿಕೇಯ ಮೂರ್ತಿಗಳು ಹೆಚ್ಚಾಗಿವೆ. ಆ ಕಾಲದಲ್ಲಿ ಕಾರ್ತಿಕೇಯ ಆರಾಧನೆ ಪ್ರಬಲವಾಗಿದ್ದಿರಬೇಕು. ಬಹುಶಃ ಚಾಳುಕ್ಯರ ಮೂಲಸ್ಥಾನ ವಿಜಯಪುರಿಯಾಗಿತ್ತೆಂದು ಅಲ್ಲಿರುವ ಶಾಸನಗಳಿಂದ ಊಹಿಸಲಾಗಿದೆ. ಕೋಟೆಯ ಮಧ್ಯಭಾಗದಲ್ಲಿ ಹಲವು ಧಾರ್ಮಿಕ ನಿರ್ಮಾಣಗಳಿವೆ. ಅವುಗಳಲ್ಲಿ ಮುಖ್ಯವಾದ್ದು ಅಶ್ವಮೇಧಯಾಗಶಾಲೆ. ಈ ಗುಂಪಿನಲ್ಲಿ ಕೂರ್ಮಾಕೃತಿಯ ಹೋಮಕುಂಡ, ಆಹವನೀಯಾಗ್ನಿಶಾಲೆ, ಅವಭೃಥಸ್ನಾನಘಟ್ಟ, ಸ್ನಾನಘಟ್ಟದಿಂದ ಹೊರಡುವ ಕಾಲುವೆಗಳೂ ಉಪಸಂವೇಶಶಾಲೆ ಮತ್ತು ಯಾಗ ಸಾಮಗ್ರಿಗಳನ್ನು ಇಡುವ ಕೋಣೆಗಳು ಇದ್ದುವು. ಈ ಕಟ್ಟಡಗಳು ಎರಡು ಪ್ರತ್ಯೇಕ ಸ್ತರಗಳಲ್ಲಿರುವುದರಿಂದ, ಎರಡುಬಾರಿ ಅಶ್ವಮೇಧ ಯಾಗ ಮಾಡಲು ಇವನ್ನು ಉಪಯೋಗಿಸಿರಬಹುದೆಂದು ಊಹಿಸಲಾಗಿದೆ. ಅವಭೃಥಸ್ನಾನ ಘಟ್ಟ ಒಳ್ಳೆಯ ಈಜುಕೊಳದಂತಿದೆ. 8.2 ಮೀ ಚದರದ ಈ ಕೊಳದ ಆಳ 1.8 ಮೀ. ಅದರ ನಾಲ್ಕು ಪಾರ್ಶ್ವಗಳಲ್ಲೂ ಮೆಟ್ಟಿಲುಗಳಿವೆ. ಇಬ್ಬದಿಗಳಲ್ಲೂ ವಿಶಾಲವಾದ ವೇದಿಕೆಗಳು ಅವುಗಳಿಂದ ಇಳಿಯಲು ಮೆಟ್ಟಿಲುಗಳೂ ಇವೆ. ಕೊಳದ ವಾಯವ್ಯ ಮೂಲೆಯಲ್ಲಿ ಸ್ವಲ್ಪ ಎತ್ತರದಲ್ಲಿ ಕೊಳವೆ ಮಾರ್ಗವಿದ್ದು, ಅದರವರೆಗೆ ನೀರನ್ನು ತುಂಬಿರಲಾಗುತ್ತಿತ್ತು. ಬಳಿಯಲ್ಲಿ ಯಾಗದ ಕುದುರೆಯನ್ನು ಹೂತಿರುವ ಸ್ಥಳವಿದೆ. ಕುದುರೆಯ ಅಸ್ಥಿಪಂಜರದೊಂದಿಗೆ ಇತರ ಕೆಲವು ಪ್ರಾಣಿಗಳ ಮೂಳೆಗಳೂ ದೊರಕಿವೆಯಾದ್ದರಿಂದ ಕುದುರೆಯೊಂದಿಗೆ ಇನ್ನಿತರ ಪ್ರಾಣಿಗಳನ್ನು ಬಲಿಕೊಡುತ್ತಿದ್ದಿರಬಹುದೆಂದು ಊಹಿಸಲಾಗಿದೆ.

ಇದಲ್ಲದೆ ಉತ್ಖನನಗಳಲ್ಲಿ ಸಿಕ್ಕಿದ ಸಾವಿರಾರು ಶಿಲ್ಪಗಳು, ನಾಣ್ಯಗಳು, ಶಾಸನಗಳು ಮತ್ತು ಇತರ ನಿತ್ಯೋಪಯೋಗಿ ವಸ್ತುಗಳಿಂದ ಆಗಿನ ಸಾಮಾಜಿಕ–ಧಾರ್ಮಿಕ ಜೀವನ ರೀತಿನೀತಿಗಳು ಆಗಿನವರ ಉಡುಗೆ–ತೊಡುಗೆ, ದೇಹಾಲಂಕಾರ ಸಾಮಗ್ರಿಗಳು, ಕೇಶಾಲಂಕಾರ, ಗೃಹೋಪಕರಣಗಳು, ಪೀಠೋಪಕರಣಗಳು ಸಂಗೀತವಾದ್ಯಗಳು, ಆಯುಧಸಾಮಗ್ರಿಗಳು, ವಾಹನವ್ಯವಸ್ಥೆ, ಆಟಿಕೆಗಳು ಮುಂತಾದ ಅನೇಕ ವಿಷಯಗಳ ಬಗ್ಗೆ ಅಮೂಲ್ಯ ಮಾಹಿತಿಗಳು ದೊರಕುತ್ತವೆ.

ನಾಗಾರ್ಜುನಕೊಂಡ ದಕ್ಷಿಣ ಭಾರತದ ಇತಿಹಾಸದಲ್ಲಿ, ಅದರಲ್ಲೂ ಪ್ರಾಚೀನ ಇತಿಹಾಸಯುಗದಲ್ಲಿ ಅತ್ಯಂತ ಪ್ರಮುಖವಾದ ಸಾಂಸ್ಕೃತಿಕ ನೆಲೆ. (ಬಿ.ಕೆ.ಜಿ.)

**ನಾಗೇಶ್ವರ್:** ಗುಜರಾತ್ ರಾಜ್ಯದ ಜಾಮ್‌ನಗರ ಜಿಲ್ಲೆಯಲ್ಲಿ ದ್ವಾರಕೆಯ ಈಶಾನ್ಯಕ್ಕೆ 16 ಕಿಮೀ ದೂರದಲ್ಲಿ ಸಿಹಿನೀರಿನ ಸರೋವರ ಭೀಮಗಜದ ಹತ್ತಿರವಿರುವ ಹರಪ್ಪ ಸಂಸ್ಕೃತಿಯ ವಸತಿನೆಲೆ. ಈ ಸರೋವರಕ್ಕೆ ಮಣ್ಣಿನ ದಂಡೆ ಕಟ್ಟುವಾಗ ಪ್ರೌಢ ಹರಪ್ಪ ನಾಗರಿಕತೆಯ ಅವಶೇಷಗಳು ಕಂಡುಬಂದವು. ಸಾಗರದ ಶಂಖದ ಚಿಪ್ಪುಗಳೂ ಆಭರಣಗಳ ತಯಾರಿಕೆಯ ಕುರುಹುಗಳೂ ಇಲ್ಲಿ ದೊರೆತಿರುವುದು ವಿಶೇಷವಾಗಿದೆ. ಹರಪ್ಪ ಸಂಸ್ಕೃತಿಯ ಚಿಪ್ಪಿನ ಆಭರಣ ತಯಾರಿಕೆಯ ಕುರುಹುಗಳು ಮೊದಲಬಾರಿಗೆ ಪತ್ತೆಯಾದದ್ದು ಈ ನೆಲೆಯಲ್ಲಿ. ಅನಂತರ ಇಷ್ಟೇ ಮಹತ್ತ್ವವಾದ ಮತ್ತೊಂದು ಆಭರಣ ತಯಾರಿಕಾ ಕೇಂದ್ರವನ್ನು ಬಗಸ್ರದಲ್ಲಿ ಪತ್ತೆಮಾಡಲಾಯಿತು. ನಾಗೇಶ್ವರದ ಉತ್ಖನನದಲ್ಲಿ 2.6 ಮೀ ಮಂದದ ವಸತಿ ಪದರದಲ್ಲಿ ಪ್ರೌಢ ಹರಪ್ಪ ಸಂಸ್ಕೃತಿಯ ಎರಡು ಹಂತಗಳನ್ನು ಗುರುತಿಸಲಾಯಿತು. ಸಾಂಸ್ಕೃತಿಕ ವ್ಯತ್ಯಾಸಗಳಿಲ್ಲದಿದ್ದರೂ ಕಟ್ಟಡ ನಿರ್ಮಾಣ ಮತ್ತು ಮಣ್ಪಾತ್ರೆಗಳಲ್ಲಿರುವ ವ್ಯತ್ಯಾಸವನ್ನು ಗಮನಿಸಿ ಈ ಹಂತವನ್ನು 1ಎ ಮತ್ತು 1ಬಿ ಉಪಹಂತಗಳಾಗಿ ವಿಂಗಡಿಸಲಾಗಿದೆ. 1ಎ ಉಪಹಂತದಲ್ಲಿ ಮಣ್ಣಿನ ನೆಲವುಳ್ಳ ಸರಳ ಮನೆಗಳಿವೆ. ಮಣ್ಪಾತ್ರೆಗಳ ಮೇಲೆ ವರ್ಣಚಿತ್ರಗಳೂ ಗೀರುಚಿತ್ರಗಳೂ ಇದ್ದು ಇವುಗಳ ತಯಾರಿಕೆಯಲ್ಲಿ ಒರಟುತನ ಕಾಣುತ್ತದೆ. 1ಬಿ ಉಪಹಂತದಲ್ಲಿ ಶುಭ್ರ ಕೆಂಪುಬಣ್ಣ ಮತ್ತು ಚಾಕಲೇಟ್‌ಬಣ್ಣದ ಮಣ್ಪಾತ್ರೆಗಳಿವೆ. ಜೊತೆಗೆ ಬೂದು, ಕಂದು–ಬಿಳಿ ಮತ್ತು ಮಾಸಲು ಹಳದಿಬಣ್ಣಗಳ ತೆಳು ಲೇಪನವುಳ್ಳ ವಿವಿಧ ಪ್ರಕಾರದ ಪಾತ್ರೆಗಳು ದೊರಕಿವೆ. ಪ್ರಭಾಸ್ ಮಾದರಿಯ ಪಾತ್ರೆ ಬಿಟ್ಟು ಇತರ ಸ್ಥಳೀಯ ಸಂಸ್ಕೃತಿಗಳ ಪಾತ್ರೆಗಳು ದೊರೆಯದಿರುವುದು ಗಮನಾರ್ಹ. ಪಾತ್ರೆಗಳ ಆಕೃತಿ ಮತ್ತು ಅವುಗಳ ಮೇಲಿನ ಚಿತ್ರಗಳು ಬಹುಮಟ್ಟಿಗೆ ಮೊಹೆಂಜೋದಾರೊ, ಹರಪ್ಪ, ಚನ್ಹುದಾರೊ, ಸುರಕೋಟಡ ಮತ್ತು ಲೋಥಲ್‌ಗಳಲ್ಲಿಯ ಪಾತ್ರೆಗಳನ್ನು ಹೋಲುತ್ತವೆ. ಅಗೇಟ್ ಕಲ್ಲಿನ ಘನಾಕೃತಿಯ ತೂಕದಬಟ್ಟು, ಸುಡಾವೆಮಣ್ಣಿನ ತ್ರಿಕೋಣಾಕೃತಿಯ ಬಿಲ್ಲೆ, ಆಟದ ಬಂಡಿ, ಚಕ್ರ, ಬಳೆ, ಕಾರ್ನೀಲಿಯನ್ ಮಣಿಗಳು ಕೂಡ ಇಲ್ಲಿ ದೊರೆತಿವೆ.

ಈ ನೆಲೆಯ ವೈಶಿಷ್ಟ್ಯವೆಂದರೆ ಶಂಖಾಭರಣ ಉದ್ಯಮದ ಅವಶೇಷಗಳಾದ ಶಂಖದ ಚೂರುಗಳು, ಕತ್ತರಿಸಿದ ತುಂಡುಗಳು, ಪೂರ್ಣ ಬಳೆ ಹಾಗೂ ಮಣಿಗಳು. ಸಾಗರದಲ್ಲಿ ದೊರೆಯುತ್ತಿದ್ದ ಶಂಖಗಳು, ಭೀಮಗಜದ ಸಿಹಿನೀರಿನ ಸಿಹಿನೀರು, ಫಲವತ್ತಾದ ಭೂಮಿ, ಸಮುದ್ರಯಾನಕ್ಕೆ ತಕ್ಕ ದೋಣಿಗಳನ್ನು ತಯಾರಿಸಲು ಬೇಕಾಗುವ ಗಿಡಮರಗಳು ಇಲ್ಲಿ ಈ ಕೈಗಾರಿಕೆ ಅಭಿವೃದ್ಧಿಹೊಂದಲು ಅನುಕೂಲಕರವಾಗಿದ್ದವು. ಉತ್ತಮ ದರ್ಜೆಯ ಶಂಖಗಳನ್ನು ಆಳಸಮುದ್ರದಿಂದ ಸಂಗ್ರಹಿಸುತ್ತಿದ್ದಂತೆ ತೋರುತ್ತದೆ. ತೌಲನಿಕವಾಗಿ ಇಲ್ಲಿಯ ಶಂಖಾಭರಣಗಳ ಕೈಗಾರಿಕೆಯನ್ನು 3ನೆಯ ಸಹಸ್ರಮಾನದ ಉತ್ತರಕಾಲೀನ ಭಾಗದ್ದೆಂದು ನಿರ್ಣಯಿಸಬಹುದು. (ಎ.ಎಸ್.;ಎನ್.ಎಲ್.)

**ನಾಟ್ಯಶಾಸ್ತ್ರ: ನೋಡಿ–ಮೂರ್ತಿಶಿಲ್ಪ**

**ನಾಟ್ಯಶಿವಶಿಲ್ಪಗಳು: ನೋಡಿ–ಮೂರ್ತಿಶಿಲ್ಪ**

**ನಾಣ್ಯಗಳು: ಭಾರತದ ನಾಣ್ಯಗಳು:** ಭಾರತದಲ್ಲಿ ನಾಣ್ಯಗಳ ಉಗಮದ ಬಗ್ಗೆ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲ. ವೇದಗಳಲ್ಲಿ ವಸ್ತುವಿನಿಮಯದ ಉಲ್ಲೇಖವಿದೆ. ಇದರ ಅನಾನುಕೂಲವನ್ನು ತಪ್ಪಿಸಲು ಸಣ್ಣ–ಸಣ್ಣ ಚಿನ್ನದ ತುಂಡುಗಳನ್ನು ವ್ಯವಹಾರಕ್ಕೆ ಬಳಸಲು ಪ್ರಾರಂಭಿಸಲಾಯಿತು. ಕಾಲಕ್ರಮೇಣ ಅವು ನಾಣ್ಯಗಳಾಗಿ ರೂಪುಗೊಂಡವು.

ಭಾರತದಲ್ಲಿ ನಾಣ್ಯಗಳ ತಯಾರಿಕೆ ಪ್ರಾರಂಭವಾದ ಬಗ್ಗೆ ಹೇಳುವುದು ಕಷ್ಟವಾದರೂ ಪ್ರ.ಶ.ಪೂ.8ನೆಯ ಶತಮಾನದ ವೇಳೆಗೆ ಚಿನ್ನದ ಚೂರುಗಳ ಮೇಲೆ ಮುದ್ರೆಗಳನ್ನು ಒತ್ತಿ ನಾಣ್ಯಗಳನ್ನು ತಯಾರಿಸಿ ಬಳಕೆಗೆ ತರಲಾಯಿತೆಂದು ತೋರುತ್ತದೆ.

ಧಾತುಗಳನ್ನು ಮೂಸೆಯಲ್ಲಿ ಕರಗಿಸಿ ಕ್ಷಾರಗಳಿಂದ ಶುದ್ಧಗೊಳಿಸಿ ಅವುಗಳನ್ನು ಅಡಿಗಲ್ಲ ಮೇಲಿಟ್ಟು ಸುತ್ತಿಗೆಯಿಂದ ಬಡಿದು ತಗಡುಗಳಾಗಿ ಅಳತೆಗೆ ಕತ್ತರಿಸಿ ಪಡಿಯಚ್ಚಿನಲ್ಲಿ ಮುದ್ರೆ ಒತ್ತಿ ನಾಣ್ಯಗಳನ್ನು ತಯಾರಿಸುತ್ತಿದ್ದರು. ಇವನ್ನು ಮುದ್ರಾಂಕಿತ ನಾಣ್ಯಗಳೆಂದು ಕರೆಯಲಾಗಿದೆ. ಧಾತುವನ್ನು ಕರಗಿಸಿ ಪಡಿಯಚ್ಚಿನಲ್ಲಿ ಎರಕಹೊಯ್ದು ತಯಾರಿಸಿದ ನಾಣ್ಯಗಳು ಮುದ್ರೆ ಒತ್ತಿದ ನಾಣ್ಯಗಳೆಂದು ಪ್ರಸಿದ್ಧವಾದವು.

ಪಾಣಿನಿ ತನ್ನ ಅಷ್ಟಾಧ್ಯಾಯಿಯಲ್ಲಿ ಏಳು ಪ್ರಕಾರದ ನಾಣ್ಯಗಳು ಇದ್ದ ಬಗ್ಗೆ ತಿಳಿಸಿದ್ದಾನೆ. ಜನಪದಗಳು, ಗಣಗಳು, ಸ್ವತಂತ್ರರು, ಪ್ರಜಾರಾಜರುಗಳು ಹಾಗೂ ಸ್ಥಳೀಯ ಸಂಸ್ಥೆಗಳು ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಹೊಂದಿದ ಬಗ್ಗೆಯೂ ಆತ ಉಲ್ಲೇಖಿಸಿದ್ದಾನೆ. ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ನಾಣ್ಯಗಳ ತಯಾರಿಕೆಯ ಬಗ್ಗೆ ವಿವರಿಸಿದ್ದಾನೆ.

**ಮುದ್ರಾಂಕಿತ ನಾಣ್ಯಗಳು:** ಪ್ರಾರಂಭದಲ್ಲಿ ಮುದ್ರಾಂಕಿತ ನಾಣ್ಯಗಳ ಒಂದು ಮಗ್ಗುಲಲ್ಲಿ ವಿವಿಧ ಚಿಹ್ನೆಗಳಿದ್ದು, ಮತ್ತೊಂದು ಮಗ್ಗುಲಲ್ಲಿ ಚಿಹ್ನೆಯಾಗಲಿ, ಬರೆವಣಿಗೆಯಾಗಲಿ ಇರಲಿಲ್ಲ. ಅನಂತರದ ನಾಣ್ಯಗಳು ಒಂದು ಮಗ್ಗುಲಲ್ಲಿ ಬೆಟ್ಟ, ನದಿ, ಸೂರ್ಯ, ಚಂದ್ರ, ಮರ, ಸ್ವಸ್ತಿಕ, ಆನೆ, ಚಕ್ರಗಳನ್ನು ಹೊಂದಿದ್ದವು. ಹಿಂಬದಿಯಲ್ಲಿರುವ ಚಿಹ್ನೆಗಳು ವ್ಯಾಪಾರ, ಬ್ಯಾಂಕುಗಳ, ತಯಾರಕರ ಕೊಡುವಿಕೆ ಹಾಗೂ ತೆಗೆದುಕೊಳ್ಳುವುದರ ಬಗ್ಗೆ ತಿಳಿಸುತ್ತವೆ. ಯಾವುದೇ ಸಂಸ್ಥೆ ನಾಣ್ಯಗಳನ್ನು ತಯಾರಿಸಿದರೂ ಅವು ನ್ಯಾಯಬದ್ಧವಾಗಲು ರಾಜಸ್ವದ ಒಪ್ಪಿಗೆಯ ಮುದ್ರೆಯನ್ನು ಪಡೆಯಬೇಕಾಗಿತ್ತು.

ಮೌರ್ಯ ರಾಜರು ಮುದ್ರಿಸಿದ ನಾಣ್ಯಗಳಲ್ಲಿ ಒಂದೇ ರೀತಿ ಚಿಹ್ನೆಗಳಿದ್ದು ದೇಶದಲ್ಲೆಲ್ಲಾ ಚಲಾವಣೆಯಲ್ಲಿದ್ದವು. ಶೂರಸೇನ ಧಾಂಧಾರ, ಮಲ್ಲ, ಪಾಂಚಾಲ, ಕೋಸಲ, ಆಂಧ್ರ, ಕಳಿಂಗ ರಾಜ್ಯಗಳು ತಮ್ಮದೇ ಆದ ನಾಣ್ಯಗಳನ್ನು ಟಂಕಿಸಿದವು. ಈ ನಾಣ್ಯಗಳು ಸ್ಥಳದಿಂದ ಸ್ಥಳಕ್ಕೆ ತೂಕ, ಆಕಾರ, ಧಾತು ಹಾಗೂ ಲೋಹಗಳಲ್ಲಿ ವ್ಯತ್ಯಾಸವಿದ್ದು, ನಿರ್ದಿಷ್ಟ ಆಕಾರವಿಲ್ಲದೆ ಚೌಕ, ಆಯತಾಕಾರ, ವೃತ್ತಾಕಾರ, ಐದು ಹಾಗೂ ಎಂಟು ಮೂಲೆಗಳಿಂದ ಕೂಡಿದ ನಾಣ್ಯಗಳಾಗಿದ್ದವು. ಈ ನಾಣ್ಯಗಳು ಪ್ರ.ಶ.ಪೂ.8ನೆಯ ಶತಮಾನದಿಂದ 7ನೆಯ ಶತಮಾನದ ವೇಳೆಗೆ ಟಂಕಿಸಿ ಚಲಾವಣೆಗೆ ಬಂದಿರಬಹುದು.

ಸಿಂಧೂ ಕಣಿವೆಯ ನಾಗರಿಕತೆಯ ಸಂಶೋಧನೆಯಲ್ಲಿ ದೊರೆತಿರುವ ಮುದ್ರೆಗಳಲ್ಲಿ ಕಂಡುಬರುವ ಚಿತ್ರ ಹಾಗೂ ಗುರುತುಗಳು ಮುದ್ರಾಂಕಿತ ನಾಣ್ಯಗಳಲ್ಲಿ ಕಂಡುಬಂದಿವೆ.

ಮುದ್ರಾಂಕಿತ ನಾಣ್ಯಗಳು ಮೌರ್ಯರ ಕಾಲದಲ್ಲಿ ಉತ್ತರ ಭಾರತದಲ್ಲಿ ಚಲಾವಣೆಯಲ್ಲಿದ್ದು ಪ್ರ.ಶ.ಪೂ.4ನೆಯ ಶತಮಾನದ ವೇಳೆಗೆ ದಕ್ಷಿಣಭಾರತದಲ್ಲಿ ಚಲಾವಣೆಗೆ ಬಂದವು. ಮೌರ್ಯರ ಪತನದ ಅನಂತರ ಸಾತವಾಹನರು ಹಾಗೂ ಅನೇಕ ರಾಜರು ಮುದ್ರಾಂಕಿತ ನಾಣ್ಯಗಳನ್ನು ಟಂಕಿಸಿದರು.

**ಗ್ರೀಕರ ನಾಣ್ಯಗಳು:** ಮೌರ್ಯ ಸಾಮ್ರಾಜ್ಯದ ಪತನದ ಬಳಿಕ ಬ್ಯಾಕ್ಟ್ರಿಯದ ಗ್ರೀಕರು ಮಧ್ಯ ಏಷ್ಯದ ಶಕರು(ಸಿಥಿಯನ್ನರು). ಪಾರ್ಥಿಯನ್ನರು (ಪಹ್ಲವರು) ಹಾಗೂ ಪಶ್ಚಿಮದ ಶಕರು ವಾಯವ್ಯ ಭಾಗದಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿ ನಾಣ್ಯಗಳನ್ನು ಹೊರಡಿಸಿದರು.

ಪ್ರ.ಶ.ಪೂ.326ರಲ್ಲಿ ಅಲೆಕ್ಸಾಂಡರ್ ಆಕ್ರಮಣ ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯ. ಇವನು ಸಿಂಧೂ ನದಿಯನ್ನೂ ಹಿಡಾಸ್ಪಸ್ (ಜೀಲಂ) ನದಿಯನ್ನೂ ದಾಟಿ ಪುರೂರವನನ್ನು ಸೋಲಿಸಿದ. ಇವನು ಭಾರತದ ವಾಯವ್ಯ ಭಾಗದ ಅನೇಕ ಪ್ರದೇಶಗಳನ್ನು ತನ್ನ ಒಡೆತನಕ್ಕೆ ಪಡೆದನು. ಇದರ ಜ್ಞಾಪಕಾರ್ಥವಾಗಿ ಡೆಕೆಡ್ರಮ್ ಎಂಬ ಬೆಳ್ಳಿಯ ನಾಣ್ಯಗಳನ್ನು ಸೆಲ್ಯೂಕಸನು ಬ್ಯಾಬಿಲೋನಿಯದಲ್ಲಿ ಮುದ್ರಿಸಿದ. ಈ ನಾಣ್ಯದ ಒಂದು ಮಗ್ಗುಲಲ್ಲಿ ಗ್ರೀಕ್ ದೇವತೆಯ ಚಿತ್ರವಿದೆ. ನಾಣ್ಯದ ಮತ್ತೊಂದು ಭಾಗದಲ್ಲಿ ಕುದುರೆ ಸವಾರರು ಭಲ್ಲೆ ಹಿಡಿದು ಆನೆಯ ಮೇಲೆ ಆಕ್ರಮಣ ಮಾಡುವ ದೃಶ್ಯವಿದೆ. ಇದು ಅಲೆಕ್ಸಾಂಡರ್ ಮತ್ತು ಪುರೂರವನ ಯುದ್ಧಕ್ಕೆ ಸಂಬಂಧಿಸಿದ ಚಿತ್ರವೆಂದು ನಂಬಲಾಗಿದೆ.

ಗ್ರೀಕರು ತಮ್ಮ ನಾಣ್ಯಗಳಲ್ಲಿ ರಾಜನ ಹಾಗೂ ಸ್ತ್ರೀ ದೇವತೆಯ ಚಿತ್ರ ಹಾಗೂ ಗ್ರೀಕ್ ಮತ್ತು ಖರೋಷ್ಠಿ ಲಿಪಿಗಳನ್ನು ಬಳಸಿದರು. ಇವರ ನಾಣ್ಯಗಳು ಕಲಾತ್ಮಕವಾಗಿದ್ದು ವಿದೇಶಿಯರ ಇತಿಹಾಸವನ್ನು ತಿಳಿಸುತ್ತವೆ.

ಇಂಡೊ–ಬ್ಯಾಕ್ಟ್ರಿಯನ್ನರು ಎರಕದ ನಾಣ್ಯಗಳನ್ನು ಗ್ರೀಕರ ನಾಣ್ಯ ರೀತಿಯಲ್ಲಿ ಮುದ್ರಿಸಿದರು. ಡೆಮಿಟ್ರಿಯಸ್‌ನು ಮುದ್ರಿಸಿದ ನಾಣ್ಯಗಳಲ್ಲಿ ಇವನ ಚಿತ್ರವಿದ್ದು ತಲೆಯ ಮೇಲೆ ಆನೆಯ ಆಕಾರದ ಚಿತ್ರದ ಶಿರಸ್ತ್ರಾಣವಿದೆ. ಇವರ ಕೆಲವು ನಾಣ್ಯಗಳಲ್ಲಿ ಅಲೆಕ್ಸಾಂಡರ್, ಆಂಟಿಯೋಕಸ್, ಡಿಯೋಡೋಟಸ್, ಯುಥಿಮಿಡಿಸ್ ಮತ್ತು ಡಿಮಿಟ್ರಿಯಸ್ ಅವರ ಚಿತ್ರಗಳಿವೆ.

ಯೂಕ್ರೇಡಿಸ್ ತನ್ನ ತಂದೆ ಹೆಲಿಯೋಕ್ಲಿಸ್, ತಾಯಿ ಲಿಯೋಡಿಸ್ ಅವರ ಚಿತ್ರಗಳನ್ನು ನಾಣ್ಯಗಳಲ್ಲಿ ಮುದ್ರಿಸಿದ. ಇದರಂತೆ ಭಾರತೀಯ ರಾಜರು ತಮ್ಮ ಹಾಗೂ ಕುಟುಂಬದ ಚಿತ್ರಗಳನ್ನು ಸ್ತ್ರೀ ದೇವತೆಯ ಚಿತ್ರ, ಕುದುರೆ ಸವಾರ, ಆನೆ, ವೃಷಭ, ಸಿಂಹ ಹಾಗೂ ಒಂಟೆಯ ಚಿತ್ರವನ್ನು ನಾಣ್ಯದಲ್ಲಿ ಹಾಕಿಸಿದರು.

ಇವರ ನಾಣ್ಯಗಳಲ್ಲಿ ಬರವಣಿಗೆ ಇರುವುದು ಮತ್ತೊಂದು ವೈಶಿಷ್ಟ್ಯ. ಡಿಯೋಡೋಟಸ್ ಮತ್ತು ಇಥಿಡಿಯಸ್ ನಾಣ್ಯಗಳ ಹಿಮ್ಮಗ್ಗುಲಲ್ಲಿ ಗ್ರೀಕ್, ಪ್ರಾಕೃತ, ಖರೋಷ್ಠಿ ಭಾಷೆಗಳನ್ನು ಬಳಸಲಾಗಿದೆ.

ಭಾರತೀಯರು ಇಂಡೊ ಬ್ಯಾಕ್ಟ್ರಿಯನ್ನರಂತೆ ನಾಣ್ಯಗಳಲ್ಲಿ ತಮ್ಮ ಭಾವಚಿತ್ರ, ಇಷ್ಟದೇವತೆ ಹಾಗೂ ಪ್ರಚಲಿತ ಭಾಷೆಯನ್ನು ಅಚ್ಚು ಹಾಕಿಸಿದರು.

ಶಕರು ಮತ್ತು ಪಾರ್ಥಿಯನ್ನರ (ಪಹ್ಲವ) ನಾಣ್ಯಗಳು: ಮಧ್ಯ ಏಷ್ಯದಲ್ಲಿ ವಾಸಿಸುತ್ತಿದ್ದ ಶಕ ಮತ್ತು ಪಾರ್ಥಿಯನ್ನರನ್ನು ಯೂಚಿಗಳು ತಮ್ಮ ಗುಂಪಿನಿಂದ ಹೊರದೂಡಿದರು. ಇವರು ಕಿಫಿನ್ ಪ್ರದೇಶದಲ್ಲಿ ನೆಲಸಿ ತಮ್ಮ ಆಡಳಿತವನ್ನು ಸ್ಥಾಪಿಸಿದರು. ಇದು ಶಕಸ್ಥಾನ ವೆಂದಾಯಿತು. ಗ್ರೀಕರು ಇವರನ್ನು ಸಿಥಿಯನ್ನರೆಂದು ಕರೆದರು.

ಪಹ್ಲವ ಅಥವಾ ಪಾರ್ಥಿಯನ್ನರು ಈ ಪ್ರದೇಶದಲ್ಲಿ ನೆಲೆಸಿ ಒಂದು ಮತ್ತು ಎರಡನೆಯ ಶತಮಾನದಲ್ಲಿ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದರು. ಮೌಸ್ ಎಂಬುವನು ಪ್ರಬಲನಾಗಿ ಭಾರತದ ಗಡಿ ಪ್ರದೇಶದಲ್ಲಿ ಸ್ವತಂತ್ರ ಆಡಳಿತವನ್ನು ಸ್ಥಾಪಿಸಿದ.

ಮೌಸನು ಹೊರಡಿಸಿದ ನಾಣ್ಯಗಳು ಇಂಡೊ–ಬ್ಯಾಕ್ಟ್ರಿಯ ರಾಜ ಅಪಲ್ಲೊಡೊಟಸ್‌ನ ನಾಣ್ಯಗಳನ್ನು ಹೋಲುತ್ತವೆ. ಇವರ ನಾಣ್ಯಗಳಲ್ಲಿ ರಾಜನು ಕುದುರೆಯ ಮೇಲೆ ಭಲ್ಲೆ ಹಿಡಿದು ಕುಳಿತಿರುವ ಚಿತ್ರವಿದ್ದು, ಕೆಲವು ನಾಣ್ಯಗಳಲ್ಲಿ ಮನುಷ್ಯನು ಗದೆ ಮತ್ತು ತ್ರಿಶೂಲವನ್ನು ಹಿಡಿದು ನಡೆಯತ್ತಿರುವ ಚಿತ್ರವಿದೆ. ಮೌಸನು ತಾಮ್ರದ ನಾಣ್ಯಗಳನ್ನು ಹೊರಡಿಸಿದನು. ಈ ನಾಣ್ಯದ ಒಂದು ಮಗ್ಗುಲಲ್ಲಿ ಆನೆಯ ತಲೆ ಹಿಮ್ಮಗ್ಗುಲಲ್ಲಿ ದಂಡ ಹಿಡಿದ ದೇವತೆಯ ಚಿತ್ರ ಹಾಗೂ ಬರವಣಿಗೆ ಇವೆ. ಇವನ ನಾಣ್ಯಗಳಲ್ಲಿ ಮಹಾರಾಜ ಸಮೋಅಸ್ ಮತ್ತು ರಾಜಾಧಿರಾಜಸ್ ಎಂಬ ಲೇಖನ ಖರೋಷ್ಠಿ ಲಿಪಿಯಲ್ಲಿದೆ.

ಎರಡನೆಯ ಅಜಿಸನ ಅನಂತರ ಗೊಡೋಫರಸನು ಪಾರ್ಥಿಯನ್ನರ ಗುಂಪಿಗೆ ಸೇರಿದ ಪ್ರಸಿದ್ಧ ದೊರೆ. ಇವನು ತಾಮ್ರದ ನಾಣ್ಯಗಳನ್ನು ಹೊರಡಿಸಿದನು. ಈ ನಾಣ್ಯಗಳ ಮಗ್ಗುಲಲ್ಲಿ ಕುದುರೆಯ ಮೇಲೆ ಕುಳಿತ ರಾಜನ ಚಿತ್ರ, ಹಿಮ್ಮಗ್ಗುಲಲ್ಲಿ ಗ್ರೀಕ್ ದೇವತೆಯ ಚಿತ್ರ ಇವೆ.

**ಕುಷಾಣರು:** ಕುಷಾಣರು ಯೂಚಿ ಪಂಗಡಕ್ಕೆ ಸೇರಿದ ಅಲೆಮಾರಿಗಳು. ಪ್ರ.ಶ 2ನೆಯ ಶತಮಾನದಲ್ಲಿ ಚೀನದ ಗಡಿಯನ್ನು ಬಿಟ್ಟು ಬ್ಯಾಕ್ಟ್ರಿಯದಲ್ಲಿ ಬಂದು ನೆಲೆಸಿ ಕುಷಾಣರೆಂದು ಪ್ರಸಿದ್ಧರಾದರು. ಇವರು ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚುಹಾಕಿಸಿದರು. ಇವರ ನಾಣ್ಯಗಳು ಭಾರತದ ನಾಣ್ಯ ವ್ಯವಸ್ಥೆಯ ಮೇಲೆ ಪ್ರಭಾವವನ್ನು ಬೀರಿದವು. ಇದರ ಕೆಲವು ನಾಣ್ಯಗಳ ಹಿಮ್ಮಗ್ಗುಲಲ್ಲಿ ಶಿವನು ತ್ರಿಶೂಲಧಾರಿಯಾಗಿ ವೃಷಭದ ಜೊತೆ ಇರುವ ಚಿತ್ರ ಹಾಗೂ ಗ್ರೀಕ್ ಬರವಣಿಗೆ ಇದ್ದು, ಹಿಮ್ಮಗ್ಗುಲಲ್ಲಿ ಖರೋಷ್ಠಿ ಆಲೇಖವಿದೆ.

ವಿಮಕಡ್‌ಫೀಸಿಸ್‌ನ ನಾಣ್ಯದ ಒಂದು ಮುಖದಲ್ಲಿ ಬೆಸಿಲಸ್ ವಿಮಕಡ್‌ಫೀಸಿಸ್ ಎಂಬ ಗ್ರೀಕ್ ಬರವಣಿಗೆ ಇದ್ದು ಹಿಮ್ಮಗ್ಗುಲಲ್ಲಿ ನಂದಿ ಸಹಿತ ತ್ರಿಶೂಲ ಹಿಡಿದ ಶಿವನ ಚಿತ್ರವಿದ್ದು ಖರೋಷ್ಠಿ ಲಿಪಿಯಲ್ಲಿ ಮಹಾರಾಜಸ ರಾಜಾದಿರಾಜಸ ಸರ್ವಲೋಗ ಇಸ್ವರಸ ಮಹೀಶ್ವರಸ ವಿಮಕಡ್‌ಫೀಸಿಸ್ ಎಂಬ ಖರೋಷ್ಠಿ ಬರವಣಿಗೆ ಇದೆ.

ಕನಿಷ್ಕ ಇವರಲ್ಲಿ ಅತ್ಯಂತ ಪ್ರಸಿದ್ಧ ದೊರೆ. ಇವನು ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸಿದ. ಇವನ ನಾಣ್ಯದ ಒಂದು ಮಗ್ಗುಲಲ್ಲಿ ಕೈಯಲ್ಲಿ ಭಲ್ಲೆಯನ್ನು ಹಿಡಿದು ಬಲಗೈಯಿಂದ ಯಜ್ಞ ಕುಂಡಕ್ಕೆ ಅರ್ಪಿಸುತ್ತಿರುವ ಕನಿಷ್ಕನ ಚಿತ್ರವಿದ್ದು ಬ್ಯಾಸಿಲೋಸ್ ಬ್ಯಾಸಿಲೋವ ಕನಿಷ್ಕೋ ಎಂದಿದ್ದು ಹಿಮ್ಮುಖದಲ್ಲಿ ಗ್ರೀಕ್ ದೇವತೆಯು ಬಲಗೈಯನ್ನು ಮುಂದೆ ಚಾಚಿರುವ ಚಿತ್ರ ಹಾಗೂ ಗ್ರೀಕ್ ಆಲೇಖವಿದೆ.

ಕುಷಾಣರ ಕೆಲವು ನಾಣ್ಯಗಳ ಹಿಮ್ಮಗ್ಗುಲಲ್ಲಿ ಅಹುದಾ ಮಜ್ದ, ಅತ್‌ಷೋ(ಅಗ್ನಿ) ಮಿರೋ(ಸೂರ್ಯ), ಮಿಹೋ(ಚಂದ್ರ), ಓಹಿಷೋ(ವಾಯು), ಅರ್ಥೋಷೊ (ಲಕ್ಷ್ಮಿ), ಬೊದೋ (ಬುದ್ಧ) ಮೊದಲಾದ ದೇವತೆಗಳ ಚಿತ್ರಗಳಿರುವುದು ಗಮನಾರ್ಹ. ಇವರ ಕಾಲದಲ್ಲಿ ದ್ವಿಗುಣ ದೀನಾರ, ದೀನಾರ ಮತ್ತು ಕಾಲು ದೀನಾರ ಎಂಬ ಮೌಲ್ಯದ ನಾಣ್ಯಗಳಿದ್ದವು. ಕೆಲವು ನಾಣ್ಯಗಳ ಹಿಮ್ಮಗ್ಗುಲಲ್ಲಿ ಇರಾಣಿಯರ ಹೆಸರುಗಳಾದ ಮಿಹಿರ(ಸೂರ್ಯ), ಮಜ(ಚಂದ್ರ) ಓಆಗೊ(ವಾಯು), ಅಥೊ(ಅಗ್ನಿ) ಮತ್ತು ಅಥೋಕ್ಷೊ(ಲಕ್ಷ್ಮೀಯಂಥ ಸ್ತ್ರೀ ದೇವತೆ) ಹಾಗೂ ಶಕ್ಯಮುನಿ ಬುದ್ಧನ ಚಿತ್ರಗಳನ್ನು ಟಂಕಿಸಲಾಗಿದೆ.

**ಪ್ರಾಚೀನ ರಾಜ್ಯಗಳು:** ಮೌರ್ಯ ಸಾಮ್ರಾಜ್ಯದ ಪತನ ಅನೇಕ ಜನಪದ ಪಟ್ಟಣ– ರಾಜ್ಯ ಹಾಗೂ ಪ್ರಜಾರಾಜ್ಯಗಳ ಉದಯಕ್ಕೆ ಕಾರಣವಾಯಿತು. ಈ ರಾಜ್ಯಗಳು ಹೆಚ್ಚಾಗಿ ಉತ್ತರ ಭಾರತ, ಬಿಹಾರ, ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಭಾರತದಲ್ಲಿ ಅಸ್ತಿತ್ವದಲ್ಲಿದ್ದವು. ಯೌಧೇಯ, ಲಿಚ್ಛವಿ, ಮಗಧ, ಔದುಂಬರ, ಮಾಳವ ಮುಂತಾದವುಗಳಲ್ಲದೆ ಪಟ್ಟಣ ರಾಜ್ಯಗಳಾದ ಉಜ್ಜಯಿನಿ, ಮಾಧ್ಯಮಿಕ, ತ್ರಿಪುರ ಮುಂತಾದವು ಹೆಚ್ಚಾಗಿ ತಾಮ್ರದ ಹಾಗೂ ಚಿನ್ನದ ಮುದ್ರಾಂಕಿತ ನಾಣ್ಯಗಳನ್ನು ಟಂಕಿಸಿದವು.

# ನಾಣ್ಯಗಳ ಪ್ಲೇಟ್

ಇವರು ಟಂಕಿಸಿದ ಮುದ್ರಾಂಕಿತ ನಾಣ್ಯಗಳಲ್ಲಿ ನಂದಿ, ಚಕ್ರ, ಸ್ವಸ್ತಿಕ, ಚಂದ್ರ ಚಿಹ್ನೆಗಳಿದ್ದು ಸಂಸ್ಕೃತ ಅಥವಾ ಪ್ರಾಕೃತ ಭಾಷೆ ಬ್ರಾಹ್ಮಿ ಬರವಣಿಗೆಯಿದೆ. ಇವುಗಳಲ್ಲಿ ಪಟ್ಟಣದ ಮತ್ತು ರಾಜನ ಹೆಸರು ಮುದ್ರೆಗೊಂಡಿವೆ. ಹೆಚ್ಚು ಆಕರ್ಷಕವಾದ ಪಟ್ಟಣ ರಾಜ್ಯಗಳ ನಾಣ್ಯಗಳು 50 ಗ್ರೇನ್ ತೂಕದ ಬಂಗಾರದ ನಾಣ್ಯವಾಗಿವೆ. ನಾಣ್ಯದ ಒಂದು ಮಗ್ಗುಲಲ್ಲಿ ಸ್ತ್ರೀ ದೇವತೆಯು ಕಿರೀಟ ಧರಿಸಿ ವಸ್ತುವನ್ನು ಕೈಯಲ್ಲಿ ಹಿಡಿದು ನಿಂತಿರುವ ಚಿತ್ರವಿದೆ. ಹಾಗೂ ಪುಷ್ಕಲಾವತಿ ನಗರದ ದೇವತೆ ಅಂಬಾ ಎಂಬ ಬರವಣಿಗೆಯೂ ಇದೆ. ಇದರ ಮತ್ತೊಂದು ಮಗ್ಗುಲಲ್ಲಿ ವೃಷಭದ ಚಿತ್ರವಿದ್ದು ಚೌರೋಸ್ ಎಂಬ ಗ್ರೀಕ್ ಮತ್ತು ವೃಷಭ ಎಂಬ ಖರೋಷ್ಠಿ ಬರವಣಿಗೆ ಇದೆ.

ಮಗಧ ರಾಜ್ಯ ಉದಯವಾಗುವುದಕ್ಕೆ ಮೊದಲು ಪಾಂಚಾಲದಲ್ಲಿ ಕೆಲವು ಬುಡಕಟ್ಟು ಪ್ರಜಾಪ್ರಭುತ್ವ ರಾಜ್ಯಗಳು ಅಸ್ತಿತ್ವದಲ್ಲಿದ್ದವು. ಇವುಗಳ ಬಗ್ಗೆ ಸಾರ್ವಭೌಮ ಸಮುದ್ರಗುಪ್ತ ಅಲಹಾಬಾದ್ ಸ್ತಂಭಶಾಸನದಲ್ಲಿ ತಿಳಿಸಿದ್ದಾನೆ.

ಪ್ರ.ಶ.ಪೂ.7ನೆಯ ಶತಮಾನದ ಮೊದಲನೆಯ ಭಾಗದಲ್ಲಿ ಬುಡಕಟ್ಟಿನ ಪ್ರಜಾಪ್ರಭುತ್ವ ರಾಜ್ಯಗಳು ತಮ್ಮನ್ನು ಜನಪದಗಳೆಂದು ಕರೆದುಕೊಂಡವು. ಇವು ಸ್ವಂತ ನಾಣ್ಯಗಳನ್ನು ಟಂಕಿಸಿದವು. ಇವುಗಳಲ್ಲಿ ತಮ್ಮ ಹೆಸರು, ಊರು, ರಾಜ ಅಥವಾ ಮಹಾರಾಜ ಎಂಬ ಬಿರುದು ಅವರ ಅಧಿದೇವತೆಯ ಹೆಸರುಗಳನ್ನು ಬ್ರಾಹ್ಮಿ ಲಿಪಿಯಲ್ಲಿ ಮುದ್ರಿಸಲಾಗಿದೆ.

ಗಂಗಾ ಮತ್ತು ಯಮುನಾ ನದಿಗಳ ಬಯಲಿನಲ್ಲಿ ಸಾರ್ವಭೌಮ ರಾಜ್ಯಗಳಾದ ಮಥುರ, ಶೂರಸೇನ, ಅಹಿಚ್ಛತ್ರ, ಪಾಂಚಾಲ, ಕೌಶಾಂಬಿ, ವತ್ಸ, ಪ್ರಮುಖ ರಾಜ್ಯಗಳಾಗಿದ್ದವು. ಇವರ ನಾಣ್ಯಗಳಲ್ಲಿ ತಮ್ಮದೇ ಆದ ನಾಣ್ಯಗಳನ್ನು ಟಂಕಿಸಿ ಶ್ರೀಮಂತಗೊಳಿಸುವುದರ ಜೊತೆಗೆ ಅವರ ಅಸ್ತಿತ್ವದ ಮತ್ತು ಆಡಳಿತದ ಬಗ್ಗೆ ಮಾಹಿತಿಯನ್ನು ನಾಣ್ಯಗಳ ಮೂಲಕ ನೀಡಿದೆ.

ಗುಪ್ತರ ನಾಣ್ಯಗಳು: ಗುಪ್ತ ಸಾಮ್ರಾಜ್ಯ 319–495ರವರೆಗೆ ಆಡಳಿತ ನಡೆಸಿತು. ಇವರ ಕಾಲದಲ್ಲಿ ಭಾರತದ ನಾಣ್ಯಗಳ ಬೆಳವಣಿಗೆ ಹೊಸ ಆಯಾಮವನ್ನು ಪಡೆಯಿತು. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದರು. ಈ ವಂಶದ ಸ್ಥಾಪಕ ಶ್ರೀಗುಪ್ತ. ಒಂದನೆಯ ಚಂದ್ರಗುಪ್ತ ಪ್ರಸಿದ್ಧ ದೊರೆ. ಇವನು ಪಟ್ಟಕ್ಕೆ ಬಂದು ಲಿಚ್ಛವಿಯ ರಾಜಕುಮಾರಿ ಕುಮಾರದೇವಿಯನ್ನು ವಿವಾಹವಾದ. ಅದರ ಸ್ಮರಣಾರ್ಥ ನಾಣ್ಯಗಳನ್ನು ಟಂಕಿಸಿದ.

ಇದರಲ್ಲಿ ಕುಮಾರದೇವಿಯನ್ನು ಶ್ರೀಮಹಾದೇವಿ ಎಂದೂ ತನ್ನನ್ನು ಚಂದ್ರಗುಪ್ತನೆಂದೂ ಕರೆದು, ನಾಣ್ಯದ ಒಂದು ಮಗ್ಗುಲಲ್ಲಿ ತಮ್ಮಿಬ್ಬರ ಚಿತ್ರವನ್ನೂ ಮತ್ತೊಂದು ಮಗ್ಗುಲಲ್ಲಿ ಲಿಚ್ಛವಿ ಎಂದೂ ಮುದ್ರಿಸಿದ.

ಮತ್ತೊಂದು ನಾಣ್ಯದಲ್ಲಿ ನಿಂತ ರಾಜ ದಂಪತಿಗಳ ಚಿತ್ರವಿದ್ದು ಎಡಬದಿಯಲ್ಲಿ ಶ್ರೀ ಕುಮಾರದೇವಿಯೆಂದೂ ಬಲಗಡೆ ಶ್ರೀ ಚಂದ್ರಗುಪ್ತನೆಂದೂ ಆಲೇಖವಿದೆ. ಹಿಂಬದಿಯಲ್ಲಿ ಸಿಂಹದ ಮೇಲೆ ಕುಳಿತ ಕೈಗಳಲ್ಲಿ ಪಾಶವನ್ನು ಮತ್ತು ಬಹುಬೀಜಫಲ ಹಿಡಿದ ದುರ್ಗಾದೇವಿಯ ಚಿತ್ರ ಹಾಗೂ ಲಿಚ್ಛವಯ ಎಂಬ ಬರವಣಿಗೆ ಇದೆ. ಇವನ ನಾಣ್ಯಗಳಿಗೂ ಕುಷಾಣರ ನಾಣ್ಯಗಳಿಗೂ ವ್ಯತ್ಯಾಸವಿದ್ದು ನಾಣ್ಯದ ಒಂದು ಪಾರ್ಶ್ವದಲ್ಲಿ ಯಜ್ಞಕುಂಡದ ಹತ್ತಿರ ರಾಜನು ನಿಂತಿದ್ದು ಮತ್ತೊಂದು ಪಾರ್ಶ್ವದಲ್ಲಿ ಸಿಂಹಾಸನದ ಮೇಲೆ ಕುಳಿತಿರುವ ದೇವತೆಯ ಚಿತ್ರವಿದೆ.

ಸಮುದ್ರಗುಪ್ತನು ಗುಪ್ತರಲ್ಲಿ ಅತ್ಯಂತ ಪ್ರಸಿದ್ಧ ದೊರೆ. ಅಶ್ವಮೇಧಯಾಗದ ನಾಣ್ಯ, ರಾಜದಂಡ ಇರುವ ನಾಣ್ಯ, ವೀಣಾ ಚಿತ್ರದ ನಾಣ್ಯ, ಹುಲಿಯನ್ನು ಕೊಲ್ಲುತ್ತಿರುವ ನಾಣ್ಯ, ಪರಶು(ಕೊಡಲಿ) ಚಿತ್ರದ ನಾಣ್ಯ, ಬಿಲ್ಲಿನ ಚಿತ್ರ ನಾಣ್ಯಗಳನ್ನು ಈತ ಮುದ್ರಿಸಿದ.

ಸಮುದ್ರಗುಪ್ತನ ಒಂದು ಪ್ರಕಾರದ ನಾಣ್ಯದಲ್ಲಿ ಎಡಗೈಯಲ್ಲಿ ರಾಜದಂಡವನ್ನು ಬಲಗೈಯಿಂದ ಮುಂದಿರುವ ಯಜ್ಞಕುಂಡಕ್ಕೆ ಅರ್ಪಿಸುತ್ತಿರುವ ಚಿತ್ರ ಮತ್ತು ಎಡಬದಿಯಲ್ಲಿ ಗರುಡ ಧ್ವಜ ಚಿತ್ರವಿದ್ದು ಸಮುದ್ರ ಎಂಬ ಆಲೇಖವಿದೆ. ಈ ಚಿತ್ರದ ಸುತ್ತಲೂ ಸಮರಶತವಿತತ ವಿಜಯೋ ಜತರಿಪುರ್ ಅಜಿತೋದಿವಂ ಜಯತಿ ಎಂಬ ಬರವಣಿಗೆ ಇದೆ. ನಾಣ್ಯದ ಹಿಂಭಾಗದಲ್ಲಿ ಬಲಗೈಯಲ್ಲಿ ಸಸ್ಯದ ಕುಡಿಯನ್ನು ಎಡಗೈಯಲ್ಲಿ ಬಹುಬೀಜ ಫಲವನ್ನು ಹಿಡಿದು ಸಿಂಹದ ಮೇಲೆ ಕುಳಿತ ದೇವಿ ಚಿತ್ರವಿದ್ದು ಎಡಬದಿಯಲ್ಲಿ ಪರಾಕ್ರಮ ಎಂಬ ಬರಹವಿದೆ.

ಸಮುದ್ರಗುಪ್ತನ ತರುವಾಯ ಎರಡನೆಯ ಚಂದ್ರಗುಪ್ತನು ವಿಕ್ರಮಾದಿತ್ಯ ಎಂಬ ಬಿರುದನ್ನು ಪಡೆದು ಸಮುದ್ರಗುಪ್ತನ ನಾಣ್ಯ ವ್ಯವಸ್ಥೆಯನ್ನು ಮುಂದುವರೆಸಿದ. ಇವನ ಒಂದು ನಾಣ್ಯದಲ್ಲಿ ಸಿಂಹವೊಂದನ್ನು ಬಾಣದಿಂದ ಕೊಲ್ಲುತ್ತಿರುವ ಚಿತ್ರ ಮತ್ತು ನರೇಂದ್ರ ಚಂದ್ರಃಪ್ರಥಿತರಾಣೋ ರಣೇ ಜಯತ್ಯಜಯ ಭುವಿ ಸಿಂಹವಿಕ್ರಮಃ ಎಂಬ ಬರವಣಿಗೆ ಇದ್ದು ಹಿಂಬದಿಯಲ್ಲಿ ಸಿಂಹವಾಹಿನಿ ದೇವಿಯ ಚಿತ್ರ ಮತ್ತು ಸಿಂಹ ವಿಕ್ರಮ ಎಂಬ ಬರವಣಿಗೆ ಇವೆ.

ಕುಮಾರಗುಪ್ತನು ಕಾರ್ತಿಕೇಯ ಚಿತ್ರದ ನಾಣ್ಯದಲ್ಲಿ ಆನೆ ಸವಾರನು ಖಡ್ಗಮೃಗವನ್ನು ವಧಿಸುತ್ತಿರುವ ಚಿತ್ರದ ನಾಣ್ಯಗಳನ್ನು ಮುದ್ರಿಸಿದ.

ಹೂಣರ ನಾಣ್ಯಗಳು: ಹೂಣರು ಶಕ ಮತ್ತು ಯೂಚಿಗಳಂತೆ ಚೀನದ ಅಲೆಮಾರಿ ಜನಾಂಗಕ್ಕೆ ಸೇರಿದವರು. 5ನೆಯ ಶತಮಾನದ ವೇಳೆಗೆ ಗಾಂಧಾರವನ್ನು ಆಕ್ರಮಿಸಿಕೊಂಡರು. ತೋರಮಾನನ ಮಗನಾದ ಮಿಹಿರಕುಲ ಉತ್ತರ ಭಾರತವನ್ನು ಆಕ್ರಮಿಸಿಕೊಂಡು ಸಸ್ಸಾನಿಯನ್ನರ ನಾಣ್ಯಗಳ ಮಾದರಿಯಲ್ಲಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸಿದ. ನಾಣ್ಯದ ಒಂದು ಭಾಗದಲ್ಲಿ ರಾಜನ ಚಿತ್ರವಿದ್ದು ಹಿಮ್ಮಗ್ಗುಲಲ್ಲಿ ಸಸ್ಸಾನಿಯನ್ ಮಾದರಿಯ ಯಜ್ಞಕುಂಡ ಹಾಗೂ ಇಬ್ಬರು ಸೇವಕರ ಚಿತ್ರವಿದ್ದು ತೋರಣಮಾಣ ಓಬುಲ ಎಂಬ ಬಿರುದು ಬ್ರಾಹ್ಮಿ ಲಿಪಿಯಲ್ಲಿದೆ.

ಗುಪ್ತರ ಅನಂತರದ ಉತ್ತರ ಭಾರತದ ನಾಣ್ಯಗಳು: ಗುಪ್ತ ಸಾಮ್ರಾಜ್ಯದ ಪತನದ ತರುವಾಯ ಮುಸಲ್ಮಾನರು ಭಾರತಕ್ಕೆ ಬರುವವರೆಗೆ ಉತ್ತರಭಾರತದಲ್ಲಿ ಚಿನ್ನದ ನಾಣ್ಯಗಳು ಹೆಚ್ಚಾಗಿ ಬಳಕೆಯಲ್ಲಿದ್ದು, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ವಿರಳವಾಗಿದ್ದವು. ಉತ್ತರ ಭಾರತದಲ್ಲಿ ಒಂದೇ ರೀತಿಯ ನಾಣ್ಯಗಳು ಬಳಕೆ ಇರಲಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಧಾತುಗಳನ್ನು ಬಳಸಿ ತೂಕ ಹಾಗೂ ರಚನೆಯಲ್ಲಿ ವ್ಯತ್ಯಾಸವನ್ನು ಹೊಂದಿದ್ದವು. 7ನೆಯ ಶತಮಾನದ ಮೊದಲ ಭಾಗದಲ್ಲಿ ಕನ್ಯಾಕುಬ್ಜದ ರಾಜ ಶಶಾಂಕ ಹಾಗೂ ಸ್ಥಾಣೇಶ್ವರದ ಹರ್ಷವರ್ಧನ ಬಂಗಾರದ ನಾಣ್ಯಗಳನ್ನು ಹೊರಡಿಸಿದರು. ಇವುಗಳ ಒಂದು ಮಗ್ಗುಲಲ್ಲಿ ಶಿವನು ನಂದಿಯ ಮೇಲೆ ಒರಗಿರುವ ಚಿತ್ರ ಮತ್ತೊಂದು ಭಾಗದಲ್ಲಿ ಲಕ್ಷ್ಮೀಯು ಆನೆಯ ಮೇಲೆ ಕುಳಿತಿರುವ ಚಿತ್ರವಿದೆ.

ಶೀಲಾದಿತ್ಯ ಎಂಬುದು ಶ್ರೀಹರ್ಷನ ಮತ್ತೊಂದು ಹೆಸರು. ಇವನ ಬೆಳ್ಳಿಯ ನಾಣ್ಯಗಳಲ್ಲಿ ಶೀಲಾದಿತ್ಯ ಎಂದು ಟಂಕಿಸಿದ. ಈ ನಾಣ್ಯದ ಒಂದು ಮಗ್ಗುಲಲ್ಲಿ ಶ್ರೀಹರ್ಷನ ಚಿತ್ರವಿದ್ದು ಮತ್ತೊಂದು ಭಾಗದಲ್ಲಿ ನವಿಲಿನ ಚಿತ್ರ ಹಾಗೂ ಶ್ರೀ ಶೀಲಾದಿತ್ಯ ದಿವಂ ಜಯತಿ ಎಂಬ ಬರವಣಿಗೆ ಇದೆ.

**ಗದ್ಯಾಣಗಳು:** ಮಹಾರಾಷ್ಟ್ರ, ರಾಜಸ್ತಾನ, ಮಧ್ಯಪ್ರದೇಶಗಳಲ್ಲಿ ಗಾಧಿಯ ನಾಣ್ಯಗಳ ಬಳಕೆ ಇದ್ದ ಮಾಹಿತಿಗಳು ದೊರೆತಿವೆ. ಇವನ್ನು ಟಂಕಿಸಿದವರ ಬಗ್ಗೆ ಮಾಹಿತಿಗಳು ದೊರೆತಿಲ್ಲ. ಇವುಗಳಲ್ಲಿ ರಾಜರ ಚಿತ್ರವಿದ್ದು ಹೋರಾಟದ ದೃಶ್ಯಗಳು ಮುದ್ರಣಗೊಂಡಿವೆ. ಇವು ಬೆಳ್ಳಿ ಮತ್ತು ತಾಮ್ರದಿಂದ ಕೂಡಿದ ಬಿಲಾನ್ ನಾಣ್ಯಗಳಾಗಿದ್ದು ಇಂಡೊ ಸಸ್ಸಾನಿಯನ್ ನಾಣ್ಯಗಳನ್ನು ಹೋಲುತ್ತವೆ. ಕೆಲವು ನಾಣ್ಯಗಳಲ್ಲಿ ಬಿಲ್ಲನ್ನು ಹಿಡಿದ ಮನುಷ್ಯನ ಚಿತ್ರ ಇರುವ ನಾಣ್ಯಗಳೂ ದೊರಕಿವೆ.

9ನೆಯ ಶತಮಾನದ ಮಧ್ಯ ಭಾಗದ ಗಾಂಧಾರ, ಓಹಿಂದ ಪ್ರದೇಶದಲ್ಲಿ ಆಳುತ್ತಿದ್ದ ಷಾಹಿ ಮನೆತನ ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳನ್ನು ಹೊರಡಿಸಿತು. ಈ ನಾಣ್ಯಗಳ ಒಂದು ಮಗ್ಗುಲಲ್ಲಿ ಬಲಗೈಯಲ್ಲಿ ಉದ್ದನೆಯ ಭರ್ಜಿ ಹಿಡಿದ ಕುದುರೆ ಸವಾರನ ಚಿತ್ರವಿದೆ. ಮತ್ತೊಂದು ಮಗ್ಗುಲಲ್ಲಿ ಝೂಲ ಹಾಕಿಕೊಂಡು ಮಲಗಿದ ಎತ್ತಿನ ಚಿತ್ರ ಹಾಗೂ ಬರವಣಿಗೆ ಇವೆ. ಇವುಗಳನ್ನು ಸ್ಥಲಪತಿದೇವ ಹಾಗೂ ಸಾಮಂತ ದೇವ ಟಂಕಿಸಿದರೆಂದು ತಿಳಿದುಬಂದಿದೆ.

11ನೆಯ ಶತಮಾನದಲ್ಲಿ ತ್ರಿಪುರದ ಕಳಚುರಿ ರಾಜ ಗಾಂಗೇಯ ದೇವನು ಚಿನ್ನದ ನಾಣ್ಯಗಳನ್ನು ಟಂಕಿಸಿದ. ಇದರ ಒಂದು ಮಗ್ಗುಲು ಕುಳಿತಿರುವ ಲಕ್ಷ್ಮೀಯ ಚಿತ್ರವಿದ್ದು ಮತ್ತೊಂದು ಮಗ್ಗುಲಲ್ಲಿ ಮೂರು ಸಾಲುಗಳಲ್ಲಿ ಶ್ರೀ ಮದ್ಗಾಂಗದೇವ ಎಂಬ ನಾಗರೀ ಬರವಣಿಗೆ ಇದೆ.

12ನೆಯ ಶತಮಾನದಲ್ಲಿ ರತ್ನಪೂರದ ಕಳಚುರಿ ರಾಜರು ಚಿನ್ನದ ನಾಣ್ಯಗಳನ್ನು ಟಂಕಿಸಿದರು. ಈ ನಾಣ್ಯಗಳ ಒಂದು ಮಗ್ಗುಲಲ್ಲಿ ಸಿಂಹವು ಆನೆಯ ಮೇಲೆ ಎರಿಹೋಗುವ ಚಿತ್ರವಿದ್ದು ಹಿಮ್ಮುಖದಲ್ಲಿ ರಾಜನ ಹೆಸರು ಮುದ್ರಣಗೊಂಡಿವೆ.

ಚಂದೇಲ ರಾಜರ ತಾಮ್ರದ ನಾಣ್ಯಗಳಲ್ಲಿ ಹನುಮಂತನ ಚಿಹ್ನೆಯಿದೆ.

**ದಕ್ಷಿಣ ಭಾರತದ ನಾಣ್ಯಗಳು:** ದಕ್ಷಿಣ ಭಾರತದ ನಾಣ್ಯಗಳನ್ನು ಪ್ರಮುಖವಾಗಿ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಆಂಧ್ರಪ್ರದೇಶಗಳಲ್ಲಿ ಆಳಿದ ರಾಜರು ಹೊರಡಿಸಿರುವ ನಾಣ್ಯಗಳನ್ನು ಕ್ರೋಡೀಕರಿಸಿ ದಕ್ಷಿಣ ಭಾರತದ ನಾಣ್ಯಗಳೆಂದು ಕರೆಯಲಾಗಿದೆ.

ಕರೂರಿನಲ್ಲಿ ದೊರೆತ ನಾಣ್ಯಗಳು ತಮಿಳು ನಾಣ್ಯಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಿವೆ. ಇವುಗಳಲ್ಲಿ ಆನೆ, ನೀರಿನ ತೊಟ್ಟಿ, ನಾಲ್ಕು ಮೀನಿನ ಚಿತ್ರ, ಮೂರು ಕಮಾನಿನ ಬೆಟ್ಟ, ಮರ, ನದಿ, ಹುಲಿಯ ಚಿತ್ರ ಇರುವ ನಾಣ್ಯಗಳು ದೊರೆತಿವೆ. ಇವು ಪಾಂಡ್ಯ, ಚೋಳ, ಚೇರ ನಾಣ್ಯಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ತಮಿಳುನಾಡಿನಲ್ಲಿ ಸಾರ್ವಭೌಮರಾಗಿದ್ದ ಚೋಳರು ಬಂಗಾರ, ಬೆಳ್ಳಿಯ ಆಹತ ನಾಣ್ಯಗಳನ್ನು ಮುದ್ರಿಸಿದರು. ಉತ್ತಮ ಚೋಳನ ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳ ಒಂದು ಮಗ್ಗುಲಲ್ಲಿ ಉತ್ತಮ ಚೋಳ ಎಂದು ನಾಗರೀ ಲಿಪಿ ಇದ್ದು ಮತ್ತೊಂದು ಮಗ್ಗುಲಲ್ಲಿ ಬಿಲ್ಲುಗಾರನ ಚಿತ್ರ, ಕುಳಿತಿರುವ ಹುಲಿ, ಒಂದು ಗೆರೆ, ಎರಡು ಮೀನಿನ ಚಿತ್ರಗಳಿವೆ.

1ನೆಯ ರಾಜರಾಜನ ಕೆಲವು ನಾಣ್ಯಗಳಲ್ಲಿ ಬಿಲ್ಲು, ಬಾಣ, ಹುಲಿ, ಮೀನಿನ ಚಿತ್ರದೊಂದಿಗೆ ಶ್ರೀರಾಜರಾಜ ಎಂಬ ನಾಗರೀ ಬರವಣಿಗೆ ಇದೆ. 1ನೆಯ ರಾಜೇಂದ್ರನ ಕೆಲವು ನಾಣ್ಯಗಳಲ್ಲಿ ಶಂಖದ ಚಿತ್ರ, ಬಿಲ್ಲು, ಬಾಣ, ಮೀನಿನ ಚಿತ್ರವಿದ್ದು ಹಿಮ್ಮಗ್ಗುಲಲ್ಲಿ ಶ್ರೀರಾಜರಾಜ ಎಂಬ ತಮಿಳು ಲಿಪಿಬರಹ ಇದೆ. ಶ್ರೀ ರಾಜೇಂದ್ರನ ನಾಣ್ಯಗಳಲ್ಲಿ ಶ್ರೀ ರಾಜೇಂದ್ರ ಎಂದು ನಾಗರೀ ಲಿಪಿಯಲ್ಲಿದ್ದು ತಮಿಳು ಭಾಷೆಯಲ್ಲಿ ಇವನ ಬಿರುದು ಗಂಗೈಕೊಂಡ ಚೋಳನ್ ಎಂದಿದೆ. ಮೊದಲನೆಯ ಕುಲೋತ್ತುಂಗನ ನಾಣ್ಯಗಳಲ್ಲಿ ಮಲೆನಾಡುಗೊಂಡ ಚೋಳನ್ ಎಂಬ ಬರವಣಿಗೆ ಇದೆ. ಪಾಂಡ್ಯರ ತಾಮ್ರದ ನಾಣ್ಯಗಳಲ್ಲಿ ಮೀನಿನ ಚಿತ್ರ, ಕೆಲವು ನಾಣ್ಯಗಳಲ್ಲಿ ಸುಂದರ ಪಾಂಡ್ಯ ಎಂದು ಸು ಎಂಬ ಅಕ್ಷರವೂ ಮುದ್ರೆಗೊಂಡಿದೆ.

ಕೇರಳದಲ್ಲಿ ದೊರೆತಿರುವ ಬೆಳ್ಳಿಯ ನಾಣ್ಯಗಳಲ್ಲಿ ವೀರ ಕೇರಳಸ್ಯ ಎಂಬ ಸಾಲಿನ ಬರವಣಿಗೆ ನಾಗರೀ ಲಿಪಿಯಲ್ಲಿದ್ದ ಈ ಸಾಲುಗಳ ಮಧ್ಯೆ ಎಡಕ್ಕೆ ಚಲಿಸುತ್ತಿರುವ ಮೊಸಳೆಯ ಚಿತ್ರವಿದೆ. ಇನ್ನೊಂದು ಮಗ್ಗುಲಲ್ಲಿ ಶ್ರೀ ಗಂಡರಾಕುಶಸ್ಯ ಎಂಬ ಬರೆಹ ನಾಗರೀ ಲಿಪಿಯಲ್ಲಿದ್ದು ಮಧ್ಯದಲ್ಲಿ ಕುಂಭದ ಚಿತ್ರವಿದೆ.

**ಸಾತವಾಹನರ ನಾಣ್ಯಗಳು:** ಮೌರ್ಯ ಸಾಮ್ರಾಜ್ಯದ ಪತನದ ಅನಂತರ ಮೇಲೆ ದಕ್ಷಿಣ ಭಾರತದಲ್ಲಿ ಸಾತವಾಹನರು ಸ್ವತಂತ್ರರಾದರು. ಶ್ರೀಮುಖ ಇದರ ಸ್ಥಾಪಕ. ಪ್ರತಿಷ್ಠಾನ ಇವರ ರಾಜಧಾನಿ. ಇವರು ವಿದೇಶೀಯರ ಪ್ರಭಾವಕ್ಕೆ ಒಳಪಡದೆ ಸ್ವಂತ ನಾಣ್ಯಗಳನ್ನು ಮುದ್ರಿಸಿದರು. ಇವರ ನಾಣ್ಯಗಳು ವೃತ್ತಾಕಾರವಾಗಿದ್ದು ಸೀಸ, ಮಿಶ್ರ ಲೋಹ (ಪೊಟಿನ್), ಬೆಳ್ಳಿ, ತಾಮ್ರ, ಕಂಚಿನ ಲೋಹವನ್ನು ಬಳಸಿ ಟಂಕಿಸಿದರು. ಇವರ ನಾಣ್ಯಗಳು ಕರ್ನಾಟಕ, ಆಂಧ್ರ , ತಮಿಳುನಾಡು, ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರಗಳಲ್ಲಿ ದೊರೆತಿವೆ.

ಇವರ ನಾಣ್ಯಗಳ ಎರಡು ಮಗ್ಗುಲಲ್ಲೂ ಬ್ರಾಹ್ಮೀ ಲಿಪಿ ಇದ್ದು, ಬಿಲ್ಲು, ಬೆಟ್ಟ, ಮರ, ಸಿಂಹ, ಆನೆ ಹಾಗೂ ಉಜ್ಜಯನಿ ಗುರುತುಗಳಿವೆ. ಕೆಲವು ನಾಣ್ಯಗಳಲ್ಲಿ ಹಡಗಿನ ಚಿತ್ರವಿದ್ದು, ನೌಕಾಯಾನದ ಬಗ್ಗೆ ತಿಳಿಸುತ್ತವೆ. ಇವರು ಬೆಳ್ಳಿಯ ನಾಣ್ಯಗಳನ್ನೂ ಟಂಕಿಸಿ ಚಲಾವಣೆಗೆ ತಂದರು. ಸಾತವಾಹನರ ಸಾಮಂತ ರಾಜರುಗಳಾದ ಚುಟು, ಮಹಾರಥಿ, ಕುರು ಮುಂತಾದವರು ಸಾತವಾಹನರ ಮಾದರಿಯಲ್ಲೇ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದರು.

**ಬನವಾಸಿಯ ಕದಂಬರ ನಾಣ್ಯಗಳು:** ಸಾತವಾಹನರ ಅವನತಿಯಾದ ಮೇಲೆ ಕರ್ನಾಟಕದಲ್ಲಿ ಕದಂಬರು ಸ್ವತಂತ್ರ ಕನ್ನಡ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇವರು ಆಹತ ಪದ್ಧತಿಯಲ್ಲಿ ವೃತ್ತಾಕಾರದ ಚಿನ್ನದ ನಾಣ್ಯಗಳನ್ನು ಟಂಕಿಸಿದರು.

ಇವರ ನಾಣ್ಯಗಳಲ್ಲಿ ಕಮಲದ ಮುದ್ರೆ ಇರುವುದರಿಂದ ಇವು ಪದ್ಮಟಂಕ ನಾಣ್ಯಗಳೆಂದು ಪ್ರಸಿದ್ಧವಾದವು. ನಾಣ್ಯದ ಮತ್ತೊಂದು ಭಾಗದಲ್ಲಿ ಯಾವುದೇ ಬರವಣಿಗೆಯಾಗಲೀ, ಚಿತ್ರವಾಗಲೀ ಇರುವುದಿಲ್ಲ. ಇವರ ನಾಣ್ಯಗಳಲ್ಲಿ ಬಿಲ್ಲು, ಶಂಖದ ಚಿಹ್ನೆಗಳಿವೆ. ಇಂತಹ ನಾಣ್ಯಗಳನ್ನು ಬಾದಾಮಿಯ ಚಳುಕ್ಯರು ಮತ್ತು ಕಲ್ಯಾಣದ ಚಾಳುಕ್ಯರು, ಚೋಳರು ಮತ್ತು ದೇವಗಿರಿಯ ಯಾದವರು ಮುದ್ರಿಸಿ ಚಲಾವಣೆ ಮಾಡಿದರು.

10ನೆಯ ಶತಮಾನದಲ್ಲಿ ಕದಂಬರ ಒಂದು ಶಾಖೆಯು ಗೋವದಲ್ಲಿ ಪ್ರಾರಂಭವಾಗಿ ಗೋವ ಕದಂಬರೆಂದು ಪ್ರಸಿದ್ಧರಾದರು. ಸಿಂಹ ಇವರ ಲಾಂಛನವಾಗಿತ್ತು. ಕೆಲವು ನಾಣ್ಯಗಳಲ್ಲಿ ಸಿಂಹದ ಚಿತ್ರವನ್ನು ಅಳವಡಿಸಿದರು. ಇವರಲ್ಲಿ ಮೊದಲನೆಯ ಜಯಕೇಶಿ ಪ್ರಸಿದ್ಧ ದೊರೆ. ಮೊದಲನೆಯ ಜಯಸಿಂಹ ನಾಣ್ಯಗಳನ್ನು ಪ್ರಾರಂಭಿಸಿದ. ಈತನ ಒಂದು ನಾಣ್ಯದಲ್ಲಿ ಶ್ರೀ ಮಲ್ಲಿಗೇ ಭೈರವ ಮತ್ತು ಮಲವರ ಮಾರಿ ಎಂಬ ಬರವಣಿಗೆ ಇದೆ. ಇದು ಮಾಳವರನ್ನು ಸೋಲಿಸಿ ಮೊದಲನೆಯ ಜಯಕೇಶಿ ಕರೆದುಕೊಂಡ ಬಿರುದಾಗಿದೆ. ಇವನ ಮತ್ತೊಂದು ಚಿನ್ನದ ನಾಣ್ಯ 76.5 ಗ್ರೇನ್ ತೂಕ, 0,6 ಅಂಗುಲ ವ್ಯಾಸವಿದ್ದು, ಒಂದು ಮಗ್ಗುಲಲ್ಲಿ ವೃತ್ತದೊಳಗೆ ಗಜಸಿಂಹದ ಚಿತ್ರ, ಮತ್ತೊಂದು ಭಾಗದ ಮೇಲ್ಭಾಗದಲ್ಲಿ ತ್ರಿಶೂಲವಿದ್ದು, ಎರಡು ಸಾಲುಗಳಲ್ಲಿ ಶ್ರೀ ಮಲ್ಲಿಗೇ ಭೈರವ ಎಂದು ಎರಡು ಸಾಲಿನ ನಾಗರೀ ಬರವಣಿಗೆ ಇದೆ. ಇವರ ಮತ್ತೊಂದು ಶಾಖೆಯು ಹಾನಗಲ್‌ನಲ್ಲಿ ಪ್ರಾರಂಭವಾಗಿ ಹಾನಗಲ್ ಕದಂಬರೆಂದು ಪ್ರಸಿದ್ಧರಾದರು. ಕಲ್ಯಾಣ ಚಾಳುಕ್ಯರು, ದೇವಗಿರಿಯ ಯಾದವರು ಇವರ ನಾಣ್ಯಗಳನ್ನು ಅನುಸರಿಸಿದರು.

**ತಲಕಾಡಿನ ಗಂಗರ ನಾಣ್ಯಗಳು:** ತಲಕಾಡು ಇವರ ರಾಜಧಾನಿಯಾಗಿದ್ದು ಮದಗಜ ಅವರ ಚಿಹ್ನೆಯಾಗಿತ್ತು. ಇವರು ಚಿನ್ನದ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸಿದ್ದರು. ಗದ್ಯಾಣ, ಪಣ ಮತ್ತು ಹಾಗ ಎಂಬ ನಾಣ್ಯಗಳು 60 ಗ್ರೇನ್, 6 ಗ್ರೇನ್ ಹಾಗೂ 1.5 ಗ್ರೇನ್ ತೂಕವಿದ್ದವು. ಇವರ ನಾಣ್ಯಗಳಲ್ಲಿ ಶೃಂಗರಿಸಿದ ಆನೆಯ ಚಿತ್ರ, ಹಿಂಭಾಗದಲ್ಲಿ ಹೂವಿನ ಚಿತ್ರವಿದೆ. ಕೆಲವು ನಾಣ್ಯಗಳಲ್ಲಿ ಆನೆಯ ಚಿತ್ರದೊಂದಿಗೆ ಸೂರ್ಯ ಮತ್ತು ಚಂದ್ರರ ಚಿತ್ರಗಳಿದ್ದು ಹಿಂಭಾಗದಲ್ಲಿ ಶ್ರೀ ಪುರುಷ ಎಂಬ ಕನ್ನಡ ಬರವಣಿಗೆ ತಳಭಾಗದಲ್ಲಿ ಕತ್ತಿಯ ಚಿತ್ರವಿದೆ. ಹಿಂಭಾಗದಲ್ಲಿ ಶ್ರೀ ನನ್ನಿಯ ಗಂಗ ಎಂಬ ಬರವಣಿಗೆ ಇದ್ದು, ಎರಡನೆಯ ಬೂತುಗನ ಹೆಸರಿನಲ್ಲಿ ಮುದ್ರೆಗೊಂಡ ನಾಣ್ಯಗಳಾಗಿವೆ. ಇವರು ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದರು.

**ಬಾದಾಮಿ ಚಳುಕ್ಯರ ನಾಣ್ಯಗಳು:** 2ನೆಯ ಪುಲಕೇಶಿ 630ರಲ್ಲಿ ಕನೂಜ್‌ನ ಶ್ರೀ ಹರ್ಷನನ್ನು ಸೋಲಿಸಿ ಪರಮೇಶ್ವರ, ರಣವಿಕ್ರಮ ಎಂಬ ಬಿರುದನ್ನು ಧರಿಸಿದ. ವರಾಹ ಚಿಹ್ನೆ ಇವರ ಲಾಂಛನವಾಗಿತ್ತು. ಇವರು ಚಿನ್ನ ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಮುದ್ರಿಸಿದರು. ಇವರ ಶಾಸನಗಳಲ್ಲಿ ನಾಣ್ಯಗಳ ಮೌಲ್ಯಗಳಾದ ಗದ್ಯಾಣ, ಸುವರ್ಣ, ಪಾದ, ಪಾಲ ಮತ್ತು ವೀಸ ಬಗ್ಗೆ ಉಲ್ಲೇಖವಿದೆ. ಒಂದನೆಯ ವಿಕ್ರಮಾದಿತ್ಯ ಟಂಕಿಸಿದ ಚಿನ್ನದ ನಾಣ್ಯದ ಮುಂಭಾಗದಲ್ಲಿ ಮಹಾರಾಜ ಶ್ರೀ ವಿಕ್ರಮ ಎಂಬ ಬರವಣಿಗೆ ಇದ್ದು ಹಿಂಭಾಗದಲ್ಲಿ ಶೃಂಗರಿಸಿದ ವರಾಹ (ಹಂದಿಯ) ಚಿತ್ರವಿದೆ. ಇದು 117 ಗ್ರೇನ್ ತೂಗುತ್ತದೆ. ಎರಡನೆಯ ಪುಲಕೇಶಿ ತಾಮ್ರದ ನಾಣ್ಯಗಳನ್ನು ಟಂಕಿಸಿದನು.

**ರಾಷ್ಟ್ರಕೂಟರ ನಾಣ್ಯಗಳು:** ಇವರ ಶಾಸನಗಳಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳ ಉಲ್ಲೇಖವಿದೆ. ದ್ರಮ್ಮ, ಸುವರ್ಣ, ಗದ್ಯಾಣ, ಕಳಂಜು, ಕಾಸು, ಮಂಜಡಿ ಮತ್ತು ಅಕ್ಕಮ್ ನಾಣ್ಯಗಳ ಬಗ್ಗೆ ವಿವರಣೆ ಇದೆ. 96 ಗ್ರೇನ್ ತೂಕದ ಗದ್ಯಾಣ ಅತ್ಯಂತ ದೊಡ್ಡ ಚಿನ್ನದ ನಾಣ್ಯ. ಕಳಂಜು 48 ಗ್ರೇನ್, ಕಾಸು 15 ಗ್ರೇನ್, ಮಂಜಾಡಿ 2.8 ಗ್ರೇನ್, ಅಕ್ಕಮ್ 1.5 ಗ್ರೇನ್ ತೂಕದ ನಾಣ್ಯಗಳಾಗಿದ್ದವು. ರಾಷ್ಟ್ರಕೂಟರ ದೊರೆ ಮುಮ್ಮಡಿ ಕೃಷ್ಣನ ನಾಣ್ಯದ ಒಂದು ಮಗ್ಗುಲಲ್ಲಿ ಆನೆಯ ಚಿತ್ರ, ಮತ್ತೊಂದು ಮಗ್ಗುಲಲ್ಲಿ ಶ್ರೀ ಚಲಕೆನಲ್ಲಾತ ಎಂದು ಕನ್ನಡದಲ್ಲಿ ಬರವಣಿಗೆ ಇದೆ. ಈ ಪ್ರಕಾರದ ನಾಣ್ಯಗಳನ್ನು ಆನೆಪೊನ್ ಎಂದು ಕರೆಯಲಾಗಿದೆ.

**ಕಲ್ಯಾಣದ ಚಾಳುಕ್ಯರ ನಾಣ್ಯಗಳು:** ಇವರು ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸಿದರು. ಗದ್ಯಾಣ, ಹಣ, ವೀಸ, ಬೇಳೆಗಳೆಂಬ ಹೆಸರನ್ನು ಶಾಸನಗಳು ತಿಳಿಸುತ್ತವೆ. ಇವರ ನಾಣ್ಯಗಳು ಲೊಕ್ಕಿಗುಂಡಿ ಗದ್ಯಾಣ, ಲೊಕ್ಕಿಗದ್ಯಾಣವೆಂದು ಪ್ರಸಿದ್ಧವಾಗಿವೆ. ಬಳ್ಳಾರಿ ಜಿಲ್ಲೆಯ ಕುಡಿತಿನಿ ಶಾಸನ ನವಿಲಪೊನ್ ಮತ್ತು ಲೊಕ್ಕಿಪೊನ್ ಎಂದು ತಿಳಿಸುತ್ತದೆ. ಇವರ ನಾಣ್ಯಗಳ ಮೌಲ್ಯ–1 ಗದ್ಯಾಣ = 10 ಹಣ, ಒಂದು ಹಣ = 4 ಹಾಗ, 1 ಹಣ = 4 ಕಾಗಿನಿ, 1 ಹಾಗ = 4 ವೀಸ, 1 ಹಾಗ = 2 ಬೇಳೆ. ಇವರ ನಾಣ್ಯಗಳು ವೃತ್ತಾಕಾರವಾಗಿದ್ದು ಮುದ್ರೆಗಳನ್ನು ಹೊಂದಿವೆ. ನಾಣ್ಯಗಳ ಹಿಂಭಾಗದಲ್ಲಿ ರಾಜನ ಹೆಸರನ್ನು ಕನ್ನಡದಲ್ಲಿ ಮುದ್ರಿಸಲಾಗಿದೆ. ಕೆಲವು ನಾಣ್ಯಗಳಲ್ಲಿ ಶ್ರೀ ಎಂಬ ಬರವಣಿಗೆ, ಗೋಪುರ, ಆನೆ, ಸಿಂಹ, ವರಾಹ ಹಾಗೂ ಸೂರ್ಯ ಚಂದ್ರರ ಚಿತ್ರಗಳಿವೆ. ಎರಡನೆಯ ಜಯಸಿಂಹ ಹೊರಡಿಸಿದ ನಾಣ್ಯ 58 ಗ್ರೇನ್ ತೂಕವಿದ್ದು ಇದರಲ್ಲಿ ಜಯ ಅಥವಾ ಜಯಸಿಂಹ ಎಂದು ಕನ್ನಡ ಬರವಣಿಗೆ ಇದೆ. ಇವನ ಇನ್ನೊಂದು ನಾಣ್ಯದಲ್ಲಿ ಜಗದೇಕಮಲ್ಲನೆಂಬ ಬರೆಹ ದೇವಾಲಯದ ಗೋಪುರದ ಚಿತ್ರ ಇವೆ.

**ಕಳಚುರಿಗಳ ನಾಣ್ಯಗಳು:** 6ನೆಯ ಶತಮಾನದಲ್ಲಿ ಕಟಚುರಿಗಳೆಂದು ಕರೆಸಿಕೊಂಡ ಇವರು ಮಧ್ಯ ಮತ್ತು ಪಶ್ಚಿಮ ಭಾರತದಲ್ಲಿ ರಾಜ್ಯವಾಳಿದರು. ಇವರ ನಾಣ್ಯಗಳು ಅತಿ ವಿರಳ. 54 ಗ್ರೇನ್ ತೂಕವಿರುವ ಚಿನ್ನದ ನಾಣ್ಯವನ್ನು ಇವರು ಟಂಕಿಸಿದರು. ಇದರಲ್ಲಿ ರಾಯಮುರಾರಿ ಸೋವಿದೇವ ಎಂಬ ಬರವಣಿಗೆ ಇದೆ. ಇವರ ನಾಣ್ಯಗಳು ಕಲ್ಯಾಣ ಚಾಳುಕ್ಯರ ನಾಣ್ಯಗಳನ್ನು ಹೋಲುತ್ತವೆ. ಎರಡನೆಯ ಬಿಜ್ಜಳ ಮುದ್ರಿಸಿದ ಚಿನ್ನದ ನಾಣ್ಯದಲ್ಲಿ ಕಲಚೂರಿ ಎಂಬ ಬರವಣಿಗೆ ಇದೆ. ಬಸವಣ್ಣನವರ ಹೆಸರಿನಲ್ಲಿ ಮುದ್ರೆಗೊಂಡ ನಾಣ್ಯ ಇತ್ತೀಚೆಗೆ ದೊರೆತಿದ್ದು 3.4 ಗ್ರಾಂ ತೂಕವಿದ್ದು, 17 ಸೆಂಮೀ ವ್ಯಾಸವಿದೆ. ನಾಣ್ಯದ ಒಂದು ಮಗ್ಗುಲಲ್ಲಿ ಗರುಡ ಬಲಕ್ಕೆ ಹಾರುತ್ತಿರುವ ಚಿತ್ರವಿದ್ದು ಹಿಂಭಾಗದಲ್ಲಿ ಬಸವ ಬಟ್ಟರು ಎಂದು ಕನ್ನಡದಲ್ಲಿ ಮೂರು ಸಾಲಿನ ಬರವಣಿಗೆ ಇದೆ. ಇದನ್ನು ಬಸವಣ್ಣನವರ ಗೌರವಾರ್ಥ ಸೋವಿದೇವ ಮುದ್ರಿಸಿದನೆಂಬ ಮಾಹಿತಿ ದೊರೆತಿದೆ.

**ಹೊಯ್ಸಳರ ನಾಣ್ಯಗಳು:** ಬಿಟ್ಟಿದೇವ ಅಥವಾ ವಿಷ್ಣುವರ್ಧನ 1108–1152ರವರೆಗೆ ಆಡಳಿತ ನಡೆಸಿದ ಪ್ರಸಿದ್ಧ ದೊರೆ. 1116ರಲ್ಲಿ ಚೋಳರನ್ನು ಸೋಲಿಸಿ ತಲಕಾಡನ್ನು ವಶಪಡಿಸಿಕೊಂಡು ತಲಕಾಡುಗೊಂಡ ಎಂಬ ಬಿರುದನ್ನು ಪಡೆದ. ನೊಳಂಬರನ್ನು ಸೋಲಿಸಿ ನೊಳಂಬವಾಡಿಗೊಂಡ ಎಂಬ ಬಿರುದನ್ನು ಪಡೆದು, ಚಿನ್ನದ ನಾಣ್ಯಗಳನ್ನು ಟಂಕಿಸಿದ. ಅವುಗಳಲ್ಲಿ ನೊಳಂಬವಾಡಿಗೊಂಡ ಹಾಗೂ ತಲಕಾಡುಗೊಂಡ ಎಂಬ ಬಿರುದನ್ನು ಮುದ್ರಿಸಿದ.

ಎರಡನೆಯ ಬಲ್ಲಾಳ, ಸೋಮೇಶ್ವರ, ಮೂರನೆಯ ನರಸಿಂಹ ಪ್ರಸಿದ್ಧ ದೊರೆಗಳು. ಇವರು ಗದ್ಯಾಣ ಅಥವಾ ವರಾಹ, ಪೊನ್, ತಾರ, ಪಣ, ಹಾಗ, ವೀಸ, ಬೇಳೆ, ಕಾಣಿ, ಅಡ್ಡ ಎಂಬ ನಾಣ್ಯಗಳನ್ನು ಟಂಕಿಸಿದರು. ಗದ್ಯಾಣ ಇವರ ಅತ್ಯಂತ ಹೆಚ್ಚಿನ ಬೆಲೆಯ ಚಿನ್ನದ ನಾಣ್ಯ. ಇದನ್ನು ವಿಷ್ಣುವರ್ಧನನು ತನ್ನ ಮಂತ್ರಿ ಗಂಗರಾಜನ ಹೆಸರಿನಲ್ಲಿ ಮುದ್ರಿಸಿದನು. ಇದು ಗಂಗನ ಗದ್ಯಾಣ ಎಂದು ಪ್ರಸಿದ್ಧಿಯಾಯಿತು. ತಾರ ಬೆಳ್ಳಿಯ ಹಾಗೂ ಕಾಣಿ ತಾಮ್ರದ ನಾಣ್ಯ. ಇವರ ಕಾಲದಲ್ಲಿ 1 ಗದ್ಯಾಣ=1 ನಿಷ್ಕ 1 ಗದ್ಯಾಣ=10, ಪಣ= 1ಪಣ=2ಅಡ್ಡ 1ಹಾಗ=4ವೀಸ, 1ವೀಸ=2 ಬೇಳೆ, = 1ಬೇಳೆ=2ಕಾಕಿಣಿ. 1ಕಾಕಿಣಿ=2ಅರೆಕಾಕಿಣಿ ಎಂಬ ನಾಣ್ಯವ್ಯವಸ್ಥೆ ಇತ್ತು. ಇವರ ನಾಣ್ಯಗಳು ವೃತ್ತಾಕಾರವಾಗಿದ್ದು ಒಂದು ಮಗ್ಗುಲಲ್ಲಿ ದುರ್ಗೆ ಅಥವಾ ಚಾಮುಂಡಿಯು ಸಿಂಹದ ಮೇಲೆ ನಿಂತ ಚಿತ್ರವಿದ್ದು ಸಿಂಹದ ಬಾಲದ ಮೇಲೆ ಸೂರ್ಯ ಮತ್ತು ಚಂದ್ರರ ಚಿತ್ರವಿದೆ. ಹಿಂಭಾಗದಲ್ಲಿ ಶ್ರೀಮಲಪರೊಳ್ ಗಂಡ ಎಂಬ ಮೂರು ಸಾಲಿನ ಕನ್ನಡ ಬರೆಹವಿದೆ.

ವಿನಯಾದಿತ್ಯನ ನಾಣ್ಯಗಳು ಈಚೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ದೊರೆತಿವೆ. ವಿಷ್ಣುವರ್ಧನನು ರಾಮಾನುಜಾಚಾರ್ಯರ ಹೆಸರಿನಲ್ಲಿ ಮುದ್ರಿಸಿದ ತಾಮ್ರದ ನಾಣ್ಯ ಇತ್ತೀಚೆಗೆ ದಕ್ಷಿಣ ಆರ್ಕಾಟಿನ ಪೆನ್ನಾರ್ ನದಿಯ ತಿರುಕ್ಕೋಯಲೂರಿನಲ್ಲಿ ದೊರೆತಿದ್ದು 31 ಗ್ರೇನ್ ತೂಕವಿದ್ದು ವೃತ್ತಾಕಾರವಾಗಿದೆ. ನಾಣ್ಯದ ಒಂದು ಮಗ್ಗುಲಲ್ಲಿ ಪದ್ಮಾಸನದಲ್ಲಿ ದಂಡದ ಸಹಿತ ಕುಳಿತಿರುವ ರಾಮಾನುಜಾಚಾರ್ಯರ ಚಿತ್ರವಿದ್ದು, ನಾಣ್ಯದ ಹಿಂಭಾಗದಲ್ಲಿ ಶ್ರೀ ಪಟ್ಟಣ ಎಂದು ನಮೂದಿಸಿದೆ. 2ನೆಯ ನರಸಿಂಹನ ನಾಣ್ಯಗಳಲ್ಲಿ ಶ್ರೀ ಜಗದೇಕಮಲ್ಲರಾಜ ಎಂಬ ಅಕ್ಷರವಿದೆ. ಇದು 63 ಗ್ರೇನ್ ತೂಕವಿದ್ದು 0.55 ವ್ಯಾಸವನ್ನು ಹೊಂದಿದೆ.

**ಸೇವುಣ ಅಥವಾ ದೇವಗಿರಿಯ ಯಾದವರ ನಾಣ್ಯಗಳು:** ಇವರು ಕರ್ನಾಟಕ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ 1000–1336 ರವರೆಗೆ ಆಡಳಿತ ನಡೆಸಿ ತಮ್ಮ ನಾಣ್ಯಗಳನ್ನು ಟಂಕಿಸಿದರು.

5ನೆಯ ಭಿಲ್ಲಮ 1173ರಲ್ಲಿ ತಮ್ಮ ರಾಜ್ಯವನ್ನು ಸ್ವತಂತ್ರಗೊಳಿಸಿದ. ಸಿಂಘಣ, ಮಹಾದೇವ, ರಾಮಚಂದ್ರ ಪ್ರಮುಖ ದೊರೆಗಳು. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿದರು. ಇವರು ಗದ್ಯಾಣ, ಹೊನ್, ಸುವರ್ಣ, ಪಣ, ಕಾಕಿನಿ, ರೂಕ, ಬೇಳೆ, ವೀಸ, ಅರವೀಸ ಮತ್ತು ಅಚ್ಚು ಎಂಬ ನಾಣ್ಯಗಳನ್ನು ಅಚ್ಚುಹಾಕಿಸಿದರು. ಲೊಕ್ಕಿಗುಂಡಿ ಮತ್ತು

ಅಂಬಲಿ ಎಂಬಲ್ಲಿ ಟಂಕಸಾಲೆಗಳಿದ್ದವು. ಸೇವುಣರ ನಾಣ್ಯಗಳು ಹೆಚ್ಚಾಗಿ ಮುದ್ರಾಂಕಿತ ನಾಣ್ಯಗಳ ವರ್ಗಕ್ಕೆ ಸೇರಿದ್ದು ತೆಳುವಾದ ಚಿನ್ನದ ತಗಡಿನ ಮೇಲೆ ಪದ್ಮದ ಚಿತ್ರ ಅದರ ಸುತ್ತಲೂ ಕೆಲವು ಚಿಹ್ನೆ ಮತ್ತು ರಾಜನ ಹೆಸರಿದ್ದು ಮಧ್ಯಭಾಗದಲ್ಲಿ ಶ್ರೀ ಎಂಬ ಕನ್ನಡ ಅಕ್ಷರ, ಶಂಖದ ಗುರುತು ಮುದ್ರೆಗೊಂಡಿವೆ. ಉದಾಹರಣೆಗೆ ಮುಮ್ಮಡಿ ಸೇವುಣ ಚಂದ್ರನ ನಾಣ್ಯಗಳು.

ಇವರ ಕಾಲದಲ್ಲಿ ನಾಣ್ಯ ವ್ಯವಸ್ಥೆ: 1ಗದ್ಯಾಣ=1ನಿಷ್ಕ=1ಸುವರ್ಣ, 1ಗದ್ಯಾಣ= 16ದಮ್ಮ, 1ಗದ್ಯಾಣ=10ಪಣ, 1ಪಣ=4ಹಾಗ, 1ಹಾಗ=5 ವೀಸ, 1 ವೀಸ = 2ಬೇಳೆ.

**ಆಳುಪರ ನಾಣ್ಯಗಳು:** ಆಳುಪರು 9ನೆಯ ಶತಮಾನದಿಂದ 14ನೆಯ ಶತಮಾನದ ಕೊನೆಯವರೆಗೆ ದಕ್ಷಿಣ ಕನ್ನಡ ಜಿಲ್ಲೆ ಅಥವಾ ತುಳುನಾಡಿನ ಆಳುವಖೇಡದಿಂದ ಆಳಿದರು. ಪ್ರಾರಂಭದಲ್ಲಿ ಇವರ ನಾಣ್ಯಗಳನ್ನು ಮಧುರೆಯ ಪಾಂಡ್ಯರ ನಾಣ್ಯಗಳೆಂದು ಗುರುತಿಸಲಾಗಿತ್ತು. ನಾಣ್ಯಗಳಲ್ಲಿ ಕನ್ನಡ ಅಥವಾ ನಾಗರಿ ಬರೆವಣಿಗೆ ಇರುವುದರಿಂದ ಆಳುಪರ ನಾಣ್ಯಗಳೆಂದು ದೃಢಪಟ್ಟಿವೆ. ಆಳುಪರ ಶಾಸನದಲ್ಲಿ ಗದ್ಯಾಣ ಎಂಬ ಉಲ್ಲೇಖವಿದ್ದು ಪಾಂಡ್ಯ ಎಂಬ ಬರೆವಣಿಗೆ ಇದೆ. ಇವರ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳಲ್ಲಿ ಎರಡು ಅಥವಾ ಮೂರು ಮೀನಿನ ಚಿತ್ರಗಳಿವೆ. ಹಿಂಭಾಗದಲ್ಲಿ ಪಾಂಡ್ಯ ಧನಂಜಯ ಎಂಬ ಬರೆವಣಿಗೆ ಇದೆ.

**ಇಕ್ಷ್ವಾಕು ಮತ್ತು ಸಾಲಂಕಾಯನರ ನಾಣ್ಯಗಳು:** ಸಾತವಾಹನರ ಅವನತಿಯಾದ ಮೇಲೆ ಆಂಧ್ರಪ್ರದೇಶದ ನಾಗಾರ್ಜುನಕೊಂಡ ಎಂಬಲ್ಲಿ ಆಡಳಿತ ನಡೆಸಿದ ಇವರು ಇಕ್ಷ್ವಾಕುಗಳೆಂದು ಪ್ರಸಿದ್ಧರಾಗಿದ್ದಾರೆ. ಇವರು 220–300ರವರೆಗೆ ಆಡಳಿತ ನಡೆಸಿ ನಾಣ್ಯಗಳನ್ನು ಟಂಕಿಸಿದರು. ಇವುಗಳಲ್ಲಿ ಆನೆಯ ಚಿತ್ರವಿದ್ದು ಮತ್ತೊಂದು ಭಾಗದಲ್ಲಿ ಶ್ರೀ ಶಾಂತಮೂಲ ಮತ್ತು ವೀರ ಪುರಿಸದತ್ತ ಎಂಬ ಹೆಸರಿದೆ. ಸಾಲಂಕಾಯನ ಅರಸರು 4ರಿಂದ 5ನೆಯ ಶತಮಾನದಲ್ಲಿ ಆಡಳಿತ ನಡೆಸಿದರು. ಇವರ ನಾಣ್ಯಗಳ ಮೇಲೆ ಸಾಮಾನ್ಯವಾಗಿ ಗೂಳಿಯ ಚಿತ್ರ ಹಾಗೂ ಶ್ರೀ ಚಾಂಡವ ಎಂದು ಮುದ್ರಿಸಿದರು.

**ವಿಷ್ಣುಕುಂಡಿ ಅರಸರ ನಾಣ್ಯಗಳು:** ಆಂಧ್ರಪ್ರದೇಶದ ವಿಷ್ಣುಕುಂಡಿ ರಾಜರು 6ನೆಯ ಶತಮಾನದಲ್ಲಿ ಆಡಳಿತ ನಡೆಸಿದರು. ಇವರು ಹೊರಡಿಸಿದ ತಾಮ್ರದ ನಾಣ್ಯಗಳಲ್ಲಿ ಗೂಳಿ ಅಥವಾ ಸಿಂಹದ ಚಿತ್ರವಿದ್ದು, ರಾಜನ ಹೆಸರನ್ನು ಮುದ್ರಿಸಲಾಗಿದೆ. ಇವರ ನಾಣ್ಯಗಳು ಕೊಂಡಾಪುರ, ಯಲ್ಲೇಶ್ವರ ಮುಂತಾದ ಪ್ರದೇಶಗಳಲ್ಲಿ ದೊರೆತಿವೆ.

**ಪೂರ್ವ ಚಾಳುಕ್ಯರ ನಾಣ್ಯಗಳು:** 7ನೆಯ ಶತಮಾನದಿಂದ 12ನೆಯ ಶತಮಾನದವರೆಗಿನ ವೆಂಗಿಯಲ್ಲಿ ಆಡಳಿತ ನಡೆಸಿದ ಪೂರ್ವದ ಚಾಳುಕ್ಯರು ವೆಂಗಿಯ ಚಾಳುಕ್ಯರೆಂದು ಪ್ರಸಿದ್ಧರಾದರು. ಕುಬ್ಜ ವಿಷ್ಣುವರ್ಧನ ಈ ವಂಶದ ಪ್ರಥಮ ದೊರೆ. ಇವರು ಸ್ವತಂತ್ರವಾಗಿ ತಾಮ್ರ ಮತ್ತು ಮಿಶ್ರ ಲೋಹದ ನಾಣ್ಯಗಳನ್ನು ಆಂಧ್ರದ ವಿಷ್ಣುಕುಂಡಿ ನಾಣ್ಯಗಳ ರೀತಿಯಲ್ಲಿ ಟಂಕಿಸಿದರು. ವಿಷ್ಣುವರ್ಧನನ ನಾಣ್ಯಗಳಲ್ಲಿ ಸಿಂಹ ಹಾಗೂ ರಾಜ ದಂಡದ ಚಿತ್ರವಿದ್ದು ವಿಷಮಸಿದ್ಧಿ ಎಂಬ ಬರೆವಣಿಗೆ ಇದೆ. ಚಿನ್ನದ ಮುದ್ರಾಂಕಿತ ನಾಣ್ಯಗಳ ಮಾದರಿಯಲ್ಲಿ ನಾಣ್ಯವನ್ನು ಅಚ್ಚು ಹಾಕಿಸಿದರು. ಇದರಲ್ಲಿ ವರಾಹ ಚಿತ್ರವಿದ್ದು ಶ್ರೀ ಚಾಲುಕ್ಯ ಶಕ್ತಿವರ್ಮ ಎಂಬ ಬರೆವಣಿಗೆ ಇದೆ. ಹಾಗೂ ವರ್ಷವನ್ನು ಮುದ್ರಿಸಲಾಗಿದೆ. ಇದೇ ವಂಶದ 1ನೆಯ ಶಕ್ತಿವರ್ಮನ (ಸು. 1000) ನಾಣ್ಯಗಳಲ್ಲಿ ವರಾಹ ಚಿತ್ರ ಮತ್ತು ಶ್ರೀ ಚಾಲುಕ್ಯ ಚಂದ್ರಹಾಸ ಎಂದಿದೆ. ಇದರಲ್ಲಿ ಪ್ರತಿಯೊಂದು ಅಕ್ಷರವೂ ಮುದ್ರಾಂಕಿತವಾಗಿರುವುದು ಗಮನಾರ್ಹ.

**ಸಾಮಂತ ರಾಜರು ಮತ್ತು ನಾಯಕರು:** ಮಾಂಡಲಿಕರು, ಮಹಾಮಾಂಡಲಿಕರು ಸಾಮಂತರು ಹಾಗೂ ನಾಯಕರು ಸ್ವತಂತ್ರವಾಗಿ ಆಡಳಿತವನ್ನು ನಡೆಸಿ ತಮ್ಮ ತಮ್ಮ ನಾಣ್ಯಗಳನ್ನು ಹೊರಡಿಸಿದರು. ವಿಜಯನಗರದ ಸಾಮ್ರಾಜ್ಯದ ಕಾಲದಲ್ಲಿ ರಾಜಕೀಯವಾಗಿ ಒಂದು ಹೊಸ ಸಂಪ್ರದಾಯ ರೂಪುಗೊಂಡಿತು. ಈ ವ್ಯವಸ್ಥೆಯನ್ನು ಪಾಳೆಯಗಾರ ಅಥವಾ ಪಾಳೆಯಪಟ್ಟು ಎಂದು ಕರೆಯಲಾಗಿದೆ. ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಇವರನ್ನು ನೇಮಿಸಿದರು. ಇದಕ್ಕೆ ಪ್ರತಿಯಾಗಿ ಅವರು ತಮ್ಮ ಒಡೆಯರಿಗೆ ಸಕಾಲದಲ್ಲಿ ಪೊಗದಿ ಹಾಗೂ ಸೈನಿಕ ಸಹಾಯವನ್ನು ಮಾಡಬೇಕಾಗಿತ್ತು. ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಚಿತ್ರದುರ್ಗದ ನಾಯಕರಿಗೆ ಸ್ವತಂತ್ರವಾಗಿ ನಾಣ್ಯಗಳನ್ನು ಟಂಕಿಸುವ ಅಧಿಕಾರ ಇರಲಿಲ್ಲ. ಇವರು ವಿಜಯನಗರ ಅರಸರ ನಾಣ್ಯಗಳನ್ನು ಉಪಯೋಗಿ ಸುತ್ತಿದ್ದರು. ವಿಜಯನಗರ ಪತನವಾದ ಮೇಲೆ ಸ್ವತಂತ್ರವಾಗಿ ವಿಜಯನಗರ ನಾಣ್ಯಗಳ ಮಾದರಿಯಲ್ಲೇ ನಾಣ್ಯಗಳನ್ನು ಟಂಕಿಸಿದರು. ಚಿತ್ರದುರ್ಗದ ನಾಯಕರು ಒಂದು ಟಂಕಸಾಲೆಯನ್ನು ಸ್ಥಾಪಿಸಿ ಚಿನ್ನದ ದುರ್ಗಿವರಾಹ ಅಥವಾ ದುರ್ಗಿ ಪಗೋಡ ಎಂಬ ನಾಣ್ಯಗಳನ್ನು ಟಂಕಿಸಿದರು. ಇವು 52 ಗ್ರೇನ್ ತೂಕ 12 ಮಿ.ಮೀ ವ್ಯಾಸವಿದ್ದು ಒಂದು ಮಗ್ಗುಲಲ್ಲಿ ಕಿರೀಟ ಧರಿಸಿದ ದುರ್ಗಿಯ ಚಿತ್ರವಿದ್ದು ಮತ್ತೊಂದು ಭಾಗದಲ್ಲಿ ನಾಗರಿಲಿಪಿಯಲ್ಲಿ ನಾಯಕರಾಯ ಎಂಬ ಬರೆವಣಿಗೆ ಇದೆ. ಇವರ ತಾಮ್ರದ ನಾಣ್ಯಗಳು 3–4 ಗ್ರೇನ್ ತೂಕವಿದ್ದು, ದುರ್ಗಿಯ ಚಿತ್ರ, ಹಿಂಭಾಗದಲ್ಲಿ ಸೂರ್ಯಚಂದ್ರ ಚಿತ್ರವಿದ್ದು, ಕೆಳಭಾಗದಲ್ಲಿ ಮದಕರಿನಾಯಕ ಎಂದು ಮೂರು ಸಾಲು ಬರೆವಣಿಗೆ ಇದೆ. ಯಲಹಂಕದ ಪ್ರಭುಗಳು ಅಥವಾ ಮಾಗಡಿ ಕೆಂಪೇಗೌಡ, ಕೋಡಿಕೊಂಡ ಪಾಳೆಯಗಾರರು, ಚಿಕ್ಕಬಳ್ಳಾಪುರದ ಪಾಳೆಯಗಾರರು ಮುದುಗಲ್ಲಿನ ನಾಯಕರು, ಹಾಗಲವಾಡಿ ಪಾಳೆಯಗಾರರು, ನಿಡುಗಲ್ಲು ಚೋಳರು, ಗೇರುಸೊಪ್ಪೆಯ ಅರಸರು, ಸೋದೆ ಅಥವಾ ಸೋಂದೆ ಅರಸರು ತಮ್ಮ ತಮ್ಮ ನಾಣ್ಯಗಳನ್ನು ಟಂಕಿಸಿ ಕರ್ನಾಟಕ ನಾಣ್ಯ ಲೋಕವನ್ನು ಶ್ರೀಮಂತಗೊಳಿಸಿದರು.

**ಪ್ರಾರಂಭಿಕ ಮತ್ತು ಮಧ್ಯಕಾಲದ ಭಾರತ:**

**ರತ್ನಪುರದ ನಾಣ್ಯಗಳು:** ಇವರ ನಾಣ್ಯಗಳು ತ್ರಿಪುರಿ ಕಳಚುರಿ ಅರಸರ ನಾಣ್ಯಗಳಂತಿದ್ದವು. ಇವುಗಳಲ್ಲಿ ಕುಳಿತಿರುವ ದೇವಿಯ ಚಿತ್ರವಿದ್ದು ನಾಣ್ಯದ ಒಂದು ಮಗ್ಗುಲಲ್ಲಿ ಶ್ರೀ ಅಜಯ ದೇವ ಅಥವಾ ಶ್ರೀಮದ್ ಗಾಂಗೇಯದೇವ ಎಂಬ ಬರೆವಣಿಗೆ ನಾಗರಿ ಲಿಪಿಯಲ್ಲಿ ಇದೆ. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿದರು. ಇವರ ಗದ್ಯಾಣ 62 ಗ್ರೇನ್ ತೂಕವಿದ್ದು 0.8 ಮಿಮೀ ವ್ಯಾಸವಿದೆ. ಇದುವರೆಗೆ 1ನೆಯ ಪೃಥ್ವಿದೇವ, 1ನೆಯ ಜಾಜಲದೇವ, ಇಮ್ಮಡಿ ರತ್ನದೇವ, ಇಮ್ಮಡಿ ಪೃಥ್ವಿದೇವ, ಜಗದೇವ ಮತ್ತು ಪ್ರತಾಪದೇವರ ನಾಣ್ಯಗಳು ದೊರೆತಿವೆ. ಇವರ ನಾಣ್ಯಗಳ ಒಂದು ಮಗ್ಗುಲಲ್ಲಿ ಮಂಡಿಯೂರಿ ಕುಳಿತ ಭಂಗಿಯಲ್ಲಿರುವ ಹನುಮಂತನ ಚಿತ್ರ ಮತ್ತು ಸಿಂಹದ ಚಿತ್ರಗಳಿವೆ.

**ಚಂದೇಲರ ನಾಣ್ಯಗಳು:** ಜೇಜಕಭುಕ್ತಿಯ ಚಂದೇಲರು ಸು. 950 ರಿಂದ 1310 ರವರೆಗೆ ರಾಜ್ಯಭಾರಮಾಡಿದರು. ಕೀರ್ತಿವರ್ಮ, ಸಲ್ಲಕ್ಷಣವರ್ಮ, ಮದನವರ್ಮ, ಪರಮಡಿ ಮುಂತಾದವರು ಈ ವಂಶದ ಪ್ರಮುಖ ದೊರೆಗಳು. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಹೊರಡಿಸಿದರು. ಇವರ ನಾಣ್ಯದ ಒಂದು ಭಾಗದಲ್ಲಿ ದೇವತೆಯ ಹಾಗೂ ಹನುಮಂತನ ಚಿತ್ರ, ಮತ್ತೊಂದು ಭಾಗದಲ್ಲಿ ನಾಗರಿ ಬರೆವಣಿಗೆಯಲ್ಲಿ ರಾಜರ ಹೆಸರು ಇದೆ. ಹನುಮಂತ ಚಿತ್ರವಿರುವ ತಾಮ್ರದ ನಾಣ್ಯಗಳು ಅತ್ಯಂತ ಪ್ರಸಿದ್ಧವಾದವು.

**ಮಾಳವಾಡದ ಪರಮಾರರ ನಾಣ್ಯಗಳು:** ಮಧ್ಯ ಭಾರತದ ಇತಿಹಾಸದಲ್ಲಿ ಮಾಳವಾಡದ ಪರಮಾರರು ಪ್ರಮುಖರು. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಮುದ್ರಿಸಿದರು. ಇವುಗಳಲ್ಲಿ ಕುಳಿತ ದೇವತೆಯ ಚಿತ್ರ ಹಾಗೂ ನಾಗರಿ ಬರೆವಣಿಗೆಯಲ್ಲಿ ರಾಜರ ಹೆಸರುಗಳು ಇರುತ್ತಿದ್ದವು. ಉದಯಾದಿತ್ಯ, ಜಗದೇವ, ಪ್ರಸಿದ್ಧ ರಾಜರು. ಇವರ ನಾಣ್ಯಗಳು 80ಗ್ರೇನ್ ತೂಕ, 0.8ಮಿಮೀ ವ್ಯಾಸವಿರುತ್ತಿದ್ದವು ಉದಾ: ನರವರ್ಮನ ಒಂದು ಚಿನ್ನದ ನಾಣ್ಯ 80 ಗ್ರೇನ್ ತೂಕವಿದ್ದು 0.8ಮಿಮೀ ವ್ಯಾಸವಿದ್ದು ಒಂದು ಬದಿಯಲ್ಲಿ ಶ್ರೀಮದ್ ನರವರ್ಮ ದೇವ ಎಂದಿದೆ. ಹಿಂಬದಿಯಲ್ಲಿ ಕುಳಿತಿರುವ ಲಕ್ಷ್ಮೀಯ ಚಿತ್ರವಿದೆ.

**ಕನೌಜಿನ ಗಾಹಡ್ವಾಲ ರಾಜರ ನಾಣ್ಯಗಳು:** ಈ ವಂಶದ ಗೋವಿಂದಚಂದ್ರ 1114–1154ರವರೆಗೆ ಕನೂಜಿನಲ್ಲಿ ಆಡಳಿತ ನಡೆಸಿದ. ಇವನ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು 60 ಗ್ರೇನ್ ತೂಕವಿದ್ದು, 0.5ಮಿಮೀ. ವ್ಯಾಸವನ್ನು ಹೊಂದಿದ್ದವು. ಇವರ ನಾಣ್ಯಗಳಲ್ಲಿ ಶ್ರೀಮದ್ ಗೋವಿಂದ ಚಂದ್ರದೇವಾ ಎಂದು ನಾಗರೀಲಿಪಿಯಲ್ಲಿ ಬರೆದಿದೆ. ಹಿಂಭಾಗದಲ್ಲಿ ಕುಳಿತಿರುವ ಲಕ್ಷ್ಮೀಯ ಚಿತ್ರವಿದೆ.

**ಚಾಹಮಾನರ ನಾಣ್ಯಗಳು:** ಚಾಹಮಾನರು 10ನೆಯ ಶತಮಾನದಿಂದ 13ನೆಯ ಶತಮಾನದವರೆಗೆ ರಣಥಂಬೋರ್, ನಡೋಲ್ ಹಾಗೂ ಜಹಲ್‌ವಾರಗಳಲ್ಲಿ ಆಡಳಿತ ನಡೆಸಿದರು. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿದರು. ನಾಣ್ಯದ ಒಂದು ಮಗ್ಗುಲಲ್ಲಿ ದೇವತೆಯ ಚಿತ್ರ, ಬಸವ ಹಾಗೂ ಕುದುರೆ ಸವಾರನ ಚಿತ್ರ, ಮತ್ತೊಂದು ಬದಿಯಲ್ಲಿ ತಮ್ಮ ಹೆಸರಿರುವ ನಾಣ್ಯಗಳನ್ನು ಮುದ್ರಿಸಿದರು.

**ಕಾಶ್ಮೀರ ರಾಜ ಮನೆತನದ ನಾಣ್ಯಗಳು:** ಕಾಶ್ಮೀರ ರಾಜ್ಯದಲ್ಲಿ ಪ್ರಾಚೀನ ಕಾಲದಿಂದಲೂ ಅದರದೇ ಆದ ನಾಣ್ಯಗಳು ಚಲಾವಣೆಯಲ್ಲಿದ್ದವು. ಈ ಪ್ರದೇಶದಲ್ಲಿ ಬೆಳ್ಳಿ ಮತ್ತು ತಾಮ್ರದ ಇಂಡೋಗ್ರೀಕ್, ಕುಷಾಣ, ಸಸ್ಸಾನಿಯನರ ನಾಣ್ಯಗಳು ದೊರೆತಿವೆ. ಈ ನಾಣ್ಯಗಳಲ್ಲಿ ರಾಜನ ಚಿತ್ರವಿದ್ದು, ಹಿಂಬದಿಯಲ್ಲಿ ತ್ರಿಶೂಲ, ಮತ್ತೊಂದು ಬದಿಯಲ್ಲಿ ನಂದಿಯ ಹಾಗೂ ಜಯತು ವೃಷಧ್ವಜ ಎಂಬ ಬರೆವಣಿಗೆ ಇದೆ. ಕೆಲವು ನಾಣ್ಯಗಳಲ್ಲಿ ಉದಾಹರಣೆಗೆ ತೋರಮಾನ ಮತ್ತು ಪ್ರವರಸೇನರ ನಾಣ್ಯಗಳಲ್ಲಿ ಅರ್ದೋಕ್ಷೊ (ಲಕ್ಷ್ಮಿ) ಚಿತ್ರವಿದೆ. ಇವರ ತರುವಾಯ ಅಧಿಕಾರಕ್ಕೆ ಬಂದ ಉತ್ಪಲ ಮನೆತನದ ಕ್ಷೇಮಗುಪ್ತನ ನಾಣ್ಯದ ಒಂದು ಬದಿಯಲ್ಲಿ ಕ್ಷೇಮಗು ಎಂದಿದ್ದು, ಮತ್ತೊಂದು ಬದಿಯಲ್ಲಿ ಪತದೇವ ಎಂಬ ಹೆಸರಿದೆ. ಈ ಮನೆತನದ ಹರ್ಷದೇವನ ನಾಣ್ಯಗಳ ಒಂದು ಬದಿಯಲ್ಲಿ ಆನೆ ಮತ್ತೊಂದು ಬದಿಯಲ್ಲಿ ದೇವಿಯ ಚಿತ್ರ ಹಾಗೂ ಬರೆವಣಿಗೆ ಇದ್ದು ತುಂಬಾ ಸುಂದರವಾಗಿದೆ. ಕಾರಕೋಟ ಮನೆತನದ ರಾಜರುಗಳು ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸಿದರು. ಇವರು ತಮ್ಮ ಚಿತ್ರಗಳ ಜೊತೆಗೆ ತ್ರಿಶೂಲ ಹಾಗೂ ದೇವತೆಯ ಚಿತ್ರಗಳನ್ನು ಮುದ್ರಿಸಿದರು.

1346ರಲ್ಲಿ ಕಾಶ್ಮೀರವನ್ನು ಮುಸಲ್ಮಾನರು ಆಕ್ರಮಿಸಿಕೊಂಡು ಸು.250 ವರ್ಷಗಳ ಕಾಲ ಆಡಳಿತ ನಡೆಸಿದರು. ಇದನ್ನು ಆಳಿದ 16 ಜನ ಸುಲ್ತಾನರ ಒಂದೇ ರೀತಿಯ ನಾಣ್ಯಗಳು ದೊರೆತಿವೆ. ಇವುಗಳ ಮುಮ್ಮಗ್ಗುಲಲ್ಲಿ ಕಲೀಮ, ಹಿಮ್ಮಗ್ಗುಲಲ್ಲಿ ಸುಲ್ತಾನರ ಹೆಸರು, ಬಿರುದು ಹಾಗೂ ಟಂಕಸಾಲೆಯ ಹೆಸರಿವೆ. ಇವರ ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ಚೌಕಾಕಾರವಾಗಿವೆ.

19ನೆಯ ಶತಮಾನದಲ್ಲಿ ಸಿಖ್ಖರ ಮುಖಂಡ ರಣಜಿತ್‌ಸಿಂಹನು ಕಾಶ್ಮೀರದಲ್ಲಿ ಸುಲ್ತಾನರ ಆಳ್ವಿಕೆಯನ್ನು ಕೊನೆಗಾಣಿಸಿ ಸಿಖ್ಖರ ಆಡಳಿತವನ್ನು ಸ್ಥಾಪಿಸಿದ. ಇವನ ನಾಣ್ಯಗಳ ಮುಂಭಾಗದಲ್ಲಿ ಗುರುಮುಖಿ ಲಿಪಿಯಲ್ಲಿ 'ಅಕಾಲ್ ಸಹಿ ಗುರುನಾನಕ್‌ಜಿ' ಎಂದು ಟಂಕಿಸಿದ. ಅನಂತರ ಡೋಗ್ರಾ ವಂಶಜರು ಕಾಶ್ಮೀರವನ್ನು ತಮ್ಮ ಆಡಳಿತಕ್ಕೆ ತೆಗೆದುಕೊಂಡು ರಣಜಿತ್‌ಸಿಂಹನು ಹೊರಡಿಸಿದ ನಾಣ್ಯಗಳನ್ನು ಟಂಕಿಸಿದರು.

**ದೆಹಲಿ ಸುಲ್ತಾನರ ನಾಣ್ಯಗಳು:** ಭಾರತಕ್ಕೆ ಮುಸಲ್ಮಾನರ ಆಗಮನ ರಾಜಕೀಯ, ಧಾರ್ಮಿಕ ವ್ಯವಸ್ಥೆಯಲ್ಲಿ ಬದಲಾವಣೆಗೊಂಡಂತೆ ನಾಣ್ಯಗಳ ಚಲಾವಣೆ ಹಾಗೂ ನಿರ್ಮಾಣ ಕೌಶಲದಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತು. ಇವರು ತಮ್ಮ ನಾಣ್ಯಗಳಲ್ಲಿ ಮನುಷ್ಯನ ಚಿತ್ರ ಟಂಕಿಸುವುದನ್ನು ನಿಷೇಧಿಸಿದರು. ನಾಣ್ಯದ ಎರಡು ಮಗ್ಗುಲಲ್ಲೂ ಅರೇಬಿಕ್ ಅಥವಾ ಪರ್ಷಿಯನ್ ಲಿಪಿ ಹಾಗೂ ರಾಜನ ಹೆಸರನ್ನು ಮುದ್ರಿಸಲು ಪ್ರಾರಂಭಿಸಿದರು. ಮುಸಲ್ಮಾನ ರಾಜರು ಯುದ್ಧದಲ್ಲಿ ಜಯವನ್ನು ಪಡೆದಾಗ ಹಾಗೂ ವಿಶೇಷ ಸಂದರ್ಭಗಳಲ್ಲಿ ಸಂತೋಷದ ಸಂಕೇತವಾಗಿ ಹೊಸ ನಾಣ್ಯಗಳನ್ನು ಹೊರಡಿಸಿದರು. ಅವುಗಳಲ್ಲಿ ಬಿರುದು, ರಾಜನ ಹೆಸರು, ಹಿಜಿರಿ ವರ್ಷ, ಟಂಕಸಾಲೆಯ ಹೆಸರುಗಳಿವೆ. ಹನ್ನೊಂದನೆಯ ಶತಮಾನದಲ್ಲಿ ಮಹಮ್ಮದ್ ಘಜ್ನಿ ಚಿನ್ನದ ನಾಣ್ಯಗಳನ್ನು ಟಂಕಿಸಿದ. ಇದರಲ್ಲಿ ಕಲೀಮ ಬರೆವಣಿಗೆ ಇದ್ದು ಅಲ್ಲಾನನ್ನು ಹೊರತುಪಡಿಸಿ ಬೇರೆ ದೇವರಿಲ್ಲ, ಮಹಮ್ಮದನು ಅವನ ದೂತ ಎಂದು ಮುದ್ರಿಸಿದ. ಬೆಳ್ಳಿಯ ನಾಣ್ಯಗಳಲ್ಲಿ ಸಂಸ್ಕೃತ ಭಾಷೆಯನ್ನು ಬಳಸಿದನು. ಮಹಮ್ಮದ್ ಘಜ್ನಿಯ ಒಂದು ಬೆಳ್ಳಿಯ ನಾಣ್ಯ ತುಂಬಾ ಕುತೂಹಲಕಾರಿಯಾಗಿದ್ದು ಇದರಲ್ಲಿ ಕಲೀಮ ಮತ್ತು ಅಮಿನುದೌಲ-ಅಮಿಲುತ್ ಬಿಸ್ಮಿಲ್ಲಾ ಅಲ್‌ದಿಕ್ ಹಮ್ ಝುರಬ್ ಸನ್ ಎಂಬ ಬರೆವಣಿಗೆ ಪರ್ಷಿಯನ್ ಮತ್ತು ನಾಗರೀಲಿಪಿಯಲ್ಲಿದೆ. ನಾಣ್ಯದ ಮಧ್ಯದಲ್ಲಿ ಶಾರದಾ ಲಿಪಿಯಲ್ಲಿ ಇದರ ಸಂಸ್ಕೃತ ಭಾಷಾಂತರ ಹವ್ಯಕ್ತಮ್ ಏಕಮ್-ಮಹಮ್ಮದ್ ಅಮಿನುದೌಲ ಅವತಾರ ಅಯಂ ಟಕಂ ಮಹತ್ ಮಹಮ್ಮದ್ ಪುತ ಸ್ಮುವತಿ ಎಂದಿದೆ. ಇಷ್ಟೇ ಅಲ್ಲದೆ ಇವನ ಕೆಲವು ನಾಣ್ಯಗಳ ಒಂದು ಮಗ್ಗುಲಲ್ಲಿ ಲಕ್ಷ್ಮೀ, ಮತ್ತೊಂದು ಮಗ್ಗುಲಲ್ಲಿ ಮಹಮ್ಮದ್ ವಿನಿಸಮ್ ಎಂದು ನಾಗರೀಲಿಪಿಯಲ್ಲಿ ಬರೆದಿದೆ.

**ಅಲಾಉದ್ದೀನ್-ಖಿಲ್ಜಿಯ ನಾಣ್ಯಗಳು:** 1294-1316ರಲ್ಲಿ ಆಳಿದ ಅಲಾಉದ್ದೀನ್ ಖಿಲ್ಜಿಯ ನಾಣ್ಯಗಳು 100, 50, 10, ಹಾಗೂ 5 ತೊಲ ತೂಕವಿರುತ್ತಿದ್ದವು. ಅವನ ಅನಂತರ ಮುಬಾರಕ್ 150 ಮತ್ತು 200 ತೊಲದ ಹದಿನಾಲ್ಕು ಚಿನ್ನದ ನಾಣ್ಯಗಳನ್ನು ಹೊರಡಿಸಿದ. ಈತನು ಖಲೀಫರ ಹೆಸರಿಗೆ ಬದಲು ತನ್ನ ಹೆಸರನ್ನು ಅಲಾಉದ್ದೀನ್ ಎಂದು ಮುದ್ರಿಸಿರುವುದು ಗಮನಾರ್ಹ. 1325-51 ರಲ್ಲಿ ಆಳಿದ ಮಹಮ್ಮದ್- ಬಿನ್-ತುಗಲಕ್‌ನು ಅಲಾಉದ್ದೀನ್‌ಖಿಲ್ಜಿ ಹೊರಡಿಸಿದ ತಾಮ್ರದ ನಾಣ್ಯಗಳ ಮಾದರಿಯಲ್ಲಿ ಕಲೀಮವನ್ನು ಮತ್ತೆ ಮುದ್ರಿಸಿದ.

**ಶೇರ್ ಷಾನ ನಾಣ್ಯಗಳು:** 1540ರಲ್ಲಿ ಶೇರ್‌ಷಾನು ಹುಮಾಯೂನನನ್ನು ಸೋಲಿಸಿ ದೆಹಲಿಯಲ್ಲಿ ಆಡಳಿತವನ್ನು ಪ್ರಾರಂಭಿಸಿದ. ಈತನ ಆಳ್ವಿಕೆಯಲ್ಲಿ ಕೇವಲ ಐದು ವರ್ಷವಾದರೂ ಆಡಳಿತ ವ್ಯವಸ್ಥೆಯಲ್ಲಿ ಉತ್ತಮ ಬೆಳವಣಿಗೆಯನ್ನು ತಂದು ನಾಣ್ಯಗಳನ್ನು ಮುದ್ರಿಸುವಲ್ಲಿ ಹೆಚ್ಚು ಗಮನ ನೀಡಿದ. ಈತನ ನಾಣ್ಯಗಳಲ್ಲಿ ಕಲೀಮದ ಜೊತೆಗೆ ನಾಲ್ಕು ಜನ ಖಲೀಫರ ಹೆಸರು ಹಾಗೂ ನಾಗರೀ ಲಿಪಿಯಲ್ಲಿ ಶ್ರೀ ಶೇರ್‌ಷಾ ಎಂದಿವೆ. ದೆಹಲಿಯ ಸುಲ್ತಾನರ ಆಳ್ವಿಕೆ ದುರ್ಬಲವಾದ ಮೇಲೆ ಅನೇಕ ಸುಲ್ತಾನರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಅವರಲ್ಲಿ ಬಂಗಾಲದ ಸುಲ್ತಾನ, ಗುಜರಾತ್, ಮಾಳವ, ಜಾನಪುರದ ಕುತುಬ್‌ಷಾಹಿಗಳು, ಬರಿದ್‌ಷಾಹಿಗಳು ಪ್ರಮುಖರು. ಇವರು ದೆಹಲಿಯ ಸುಲ್ತಾನರ ಮಾದರಿಯಲ್ಲಿ ತಮ್ಮ ನಾಣ್ಯಗಳಲ್ಲಿ ಟಂಕಸಾಲೆಯ ಹೆಸರು, ವರ್ಷ ಹಾಗೂ ನಾಣ್ಯಗಳ ಬೆಲೆಯನ್ನು ಮುದ್ರಿಸುತ್ತಿದ್ದರು.

**ಬಹಮನಿ ಸುಲ್ತಾನರ ನಾಣ್ಯಗಳು:** ಖಿಲ್ಜಿ ಮತ್ತು ತುಗಲಕರ ದೀನಾರ್ ಎಂಬ ಚಿನ್ನದ ನಾಣ್ಯಗಳ ಮಾದರಿಯಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದರು. ಬಹಮನಿ ಸುಲ್ತಾನರ ನಾಣ್ಯಗಳು ವೃತ್ತಾಕಾರವಾಗಿದ್ದು 170ರಿಂದ 200ಗ್ರೇನ್ ತೂಕವಿರುತ್ತಿದ್ದವು. ಇವರ ನಾಣ್ಯಗಳಲ್ಲಿ ಕುರಾನಿನ ವಾಕ್ಯಗಳು, ರಾಜರ ಬಿರುದು, ಟಂಕಸಾಲೆಯ ಹೆಸರುಗಳಿದ್ದವು.

**ಬಿಜಾಪುರದ ಆದಿಲ್‌ಶಾಹಿಗಳ ನಾಣ್ಯಗಳು:** 1409ರಲ್ಲಿ ಯೂಸುಫ್ ಆದಿಲ್ ಖಾನ್ ಎಂಬುವನು ಬಿಜಾಪುರದಲ್ಲಿ ತನ್ನ ಸ್ವತಂತ್ರ ಅಧಿಕಾರವನ್ನು ಸ್ಥಾಪಿಸಿದ. ಇದರಿಂದ ಈ ವಂಶ ಆದಿಲ್ ಶಾಹಿ ವಂಶವೆಂದೇ ಹೆಸರಾಯಿತು. ಆದಿಲ್‌ಖಾನನ ತಾಮ್ರದ ಹಾಗೂ ಬೆಳ್ಳಿಯ ನಾಣ್ಯಗಳು ವೃತ್ತಾಕಾರ ಹಾಗೂ ಚೌಕಕಾರವಾಗಿದ್ದವು. ಇವರ ಕಾಲಕ್ಕೆ ಬೆಳ್ಳಿಯ ಲಾರಿನ್ ಎಂಬ ವಿಶೇಷ ನಾಣ್ಯಗಳನ್ನು ಮುದ್ರಿಸಲಾಯಿತು. ಇವು 207 ಗ್ರೇನ್‌ನಿಂದ 180, 120 ಮತ್ತು 60 ಗ್ರೇನ್ ತೂಗುತ್ತಿದ್ದವು. ಇವು ಮೂಲತಃ ಪರ್ಷಿಯನ್ ಕೊಲ್ಲಿಯ ಲಾಕ್ ಜಿಲ್ಲೆಯಲ್ಲಿ ಬಳಕೆಯಲ್ಲಿದ್ದು ವಿಶೇಷವಾಗಿ ವ್ಯಾಪಾರಕ್ಕೆ ಬಳಸಲಾಗುತ್ತಿತ್ತು. ಇವು 3.75ಮಿಮೀ ಉದ್ದವಿದ್ದು ಇವುಗಳ ಒಂದು ಬದಿಯಲ್ಲಿ ಸುಲ್ತಾನ್-ಅಲಿ-ಆದಿಲ್-ಷಾ-ದರ್ಬ್-ಇ-ಲಾರಿ ದಂಗೆ 1077 ಎಂದು ಪರ್ಷಿಯನ್ ಭಾಷೆಯಲ್ಲಿ ಮುದ್ರಿಸಲಾಗಿದೆ.

**ಬೀದರ್‌ನ ಬರೀದ್ ಶಾಹಿಗಳ ಮತ್ತು ಅಹಮದ್ ನಗರದ ನಿಜಾಮ್ ಶಾಹಿಗಳ ನಾಣ್ಯಗಳು:** ಬೀದರ್‌ನ ಬರೀದ್ ಶಾಹಿಗಳು ಬೀದರ್‌ನಿಂದ ಆಡಳಿತವನ್ನು ನಡೆಸಿ ಸ್ವತಂತ್ರವಾಗಿ ತಾಮ್ರದ ನಾಣ್ಯಗಳನ್ನು ಮಾತ್ರ ಚಲಾವಣೆಗೆ ತಂದರು. ಅಹಮದ್ ನಗರದ ನಿಜಾಮ್‌ಶಾಹಿಗಳು ಅಹಮದ್ ನಗರದಲ್ಲಿ ತಮ್ಮ ಆಡಳಿತವನ್ನು ಪ್ರಾರಂಭಿಸಿದರು. ಇವರ ನಾಣ್ಯಗಳಲ್ಲಿ ರಾಜನ ಹೆಸರು ಇರುವುದಿಲ್ಲ. ಆದರೆ ಟಂಕಸಾಲೆಯ ಹೆಸರು ಹಾಗೂ ವರ್ಷಗಳಿರುತ್ತವೆ.

**ಗೋಲ್ಕೊಂಡದ ಕುತುಬ್‌ಶಾಹಿಗಳ ನಾಣ್ಯಗಳು:** ಈಗಿನ ಆಂಧ್ರಪ್ರದೇಶದ ವಾರಂಗಲ್ ಪ್ರದೇಶದ ಗೋಲ್ಕೊಂಡದಲ್ಲಿ ಆಡಳಿತಗಾರನಾಗಿದ್ದ ಸುಲ್ತಾನ್ ಕುಲಿ-ಕುತ್ಬ್-ಉಲ್ ಮುಲ್ಕನು 1518 ರಲ್ಲಿ ಅಧಿಕಾರಕ್ಕೆ ಬಂದ. ಇವನು ಸ್ವತಂತ್ರನಾದ ನಂತರ ನಾಣ್ಯಗಳನ್ನು ಟಂಕಿಸಲಿಲ್ಲ. ಅವನ ವಾರಸುದಾರರು ವಿವಿಧ ವರ್ಗ ಹಾಗೂ ತೂಕದ ನಾಣ್ಯಗಳನ್ನು ಮುದ್ರಿಸಿದರು. ಮಹಮ್ಮದ್ ಕುಲೀಕುತಾಬ್ ಶಾ ಮತ್ತು ಮಹಮ್ಮದ್ ಕುತುಬ್ ಶಾ ಆಡಳಿತಕ್ಕೆ ಬಂದು ಅಬುಲ್ ಮುಝಫರ್ ಎಂಬ ಬಿರುದನ್ನೂ ಕೆಲವು ನಾಣ್ಯಗಳಲ್ಲಿ ಸುಲ್ತಾನ್ ಎಂದೂ ಮುದ್ರಿಸಲಾಗಿರುತ್ತಿತ್ತು.

**ಆಸಿಫ್‌ಜಾಹಿ ನಾಣ್ಯಗಳು:** ನಿಜಮ್ ಉಲ್ ಮುಲ್ಕ ಆಸೀಫ್ ಜಾ ಎಂಬಾತ 1724ರಲ್ಲಿ ಹೈದರಾಬಾದಿಗೆ ತನ್ನ ರಾಜಧಾನಿಯನ್ನು ಬದಲಾಯಿಸಿ ಸ್ವತಂತ್ರನಾದ. ನಾಜರ್‌ಜಂಗ್ ಸಲ್‌ಬತ್‌ಜಂಗ್, ನಿಜಾಮ್‌ಅಲಿ, ಮಿರ್ಜಸಿಕಂದರ್ ಹಾಗೂ ನಿಸಾರ್-ಉದೌಲ ಆಡಳಿತ ನಡೆಸಿ ತಮ್ಮ ನಾಣ್ಯಗಳನ್ನು ಹೈದರಾಬಾದಿನ ಟಂಕಸಾಲೆಯಲ್ಲಿ ಮುದ್ರಿಸಿದರು. ಆಸಿಫ್‌ಝಾನ ನಾಣ್ಯಗಳಲ್ಲಿ ರಾಜನ ಹೆಸರು ಹಾಗೂ ಟಂಕಸಾಲೆ ಮತ್ತು ವರ್ಷ ಇರುತ್ತಿತ್ತು.

**ಮೊಗಲ್ ಸಾಮ್ರಾಜ್ಯ ಕಾಲದ ನಾಣ್ಯಗಳು:** ಇವರ ಕಾಲದಲ್ಲಿ ಭಾರತದ ನಾಣ್ಯ ತಯಾರಿಕೆಯು ವೈಜ್ಞಾನಿಕವಾಗಿಯೂ ಹೆಚ್ಚು ಕಲಾತ್ಮಕವಾಗಿಯೂ ಇರುತ್ತಿತ್ತು. ಮೊಗಲ್ ದೊರೆಗಳ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ವಿವಿಧ ಅಳತೆ ಮತ್ತು ಆಕಾರಗಳಲ್ಲಿದ್ದು ಇವುಗಳ ಎರಡು ಮಗ್ಗುಲಲ್ಲೂ ಬರೆವಣಿಗೆ, ಕಲೀಮ ರಾಜನ ಹೆಸರು, ಟಂಕಸಾಲೆಯ ಹೆಸರು, ಮುದ್ರೆಗೊಂಡ ವರ್ಷ ಒಳಗೊಂಡಿವೆ. ನಾಣ್ಯಗಳಲ್ಲಿ ಚಿನ್ನದ ಮೊಹರು, ಬೆಳ್ಳಿಯ ರೂಪಿಯಾ ಹಾಗೂ ತಾಮ್ರದ ದಾಮ್ ಎಂಬ ಪ್ರಕಾರಗಳಿದ್ದವು. ಮೊಗಲರ ನಾಣ್ಯಗಳು ಪ್ರಾರಂಭದಲ್ಲಿ ವೃತ್ತಾಕಾರವಾಗಿದ್ದು ಅನಂತರ ಚೌಕಾಕಾರವಾಗಿ ಮತ್ತೆ ವೃತ್ತಾಕಾರಕ್ಕೆ ಮರಳಿದ್ದವು. ಅಕ್ಬರನ ನಾಣ್ಯಗಳಲ್ಲಿ ಕಲೀಮ, ಖಲೀಫರ ಹೆಸರು ಹಾಗೂ ಜಲಾಲುದ್ದೀನ್ ಮಹಮ್ಮದ್ ಅಕ್ಬರ್ ಬಾದ್ ಷಾ ಘಝಾ ಎಂದಿರುತ್ತಿತ್ತು. ಕೆಲವು ನಾಣ್ಯಗಳಲ್ಲಿ ಅಕ್ಬರನು ಕುದುರೆಯ ಮೇಲೆ ಕುಳಿತಿರುವ ಚಿತ್ರವಿದೆ. ಈ ದೊರೆ ರಾಮಟಂಕ ನಾಣ್ಯಗಳನ್ನು ಟಂಕಿಸಿದ. ಅಕ್ಬರನ ಅನಂತರ ಬಂದ ಜಹಾಂಗೀರನ ನಾಣ್ಯಗಳು ಅಕ್ಬರನ ನಾಣ್ಯಗಳ ರೀತಿಯಲ್ಲಿ ಇದ್ದವು. ಇವನ ಕಾಲದ ಮೇಷ ರಾಶಿಯಿಂದ ಮೀನ ರಾಶಿಯವರೆಗಿನ ಗುರುತುಗಳಿರುವ ನಾಣ್ಯಗಳು ವಿಶೇಷವಾಗಿವೆ. ಇವನ ಇಳಿ ವಯಸ್ಸಿನಲ್ಲಿ ಈತನ ರಾಣಿಯಾದ ನೂರ್‌ಜಹಾನಳು ಆಡಳಿತವನ್ನು ವಹಿಸಿಕೊಂಡು ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಬಳಕೆಗೆ ತಂದಳು. ಷಹಜಹಾನನು ಆಡಳಿತಕ್ಕೆ ಬಂದ ಮೇಲೆ ನೂರ್‌ಜಹಾನ್ ಟಂಕಿಸಿದ ಹಾಗೂ ಹನ್ನೆರಡು ರಾಶಿಗಳುಳ್ಳ ನಾಣ್ಯಗಳನ್ನು ರದ್ದುಗೊಳಿಸಿದ. ನಾಣ್ಯಗಳಲ್ಲಿ ಕುರಾನಿನ ಮುಖ್ಯ ಸಾಲುಗಳನ್ನು ಹಾಗೂ ಖಲೀಫರ ಹೆಸರುಗಳನ್ನು ಹಾಕಿಸಲು ಮತ್ತೆ ಪ್ರಾರಂಭಿಸಿದ. ಔರಂಗಜೇಬ ಹಿಂದುಗಳ ಕೈಯಿಂದ ಅಪವಿತ್ರವಾಗಬಾರದೆಂದು ಖುರಾನಿಗೆ ಸಂಬಂಧಪಟ್ಟ ಹೇಳಿಕೆಗಳನ್ನು ನಾಣ್ಯಗಳಿಂದ ತೆಗೆಸಿದ. ಇವನ ಹೆಸರು, ಬಿರುದು, ವರ್ಷ ಹಾಗೂ ಮುದ್ರಿಸಿದ ಟಂಕಸಾಲೆಯ ಹೆಸರು ಇರುತ್ತಿದ್ದವು.

**ವಿಜಯನಗರ ಸಾಮ್ರಾಜ್ಯ ಕಾಲದ ನಾಣ್ಯಗಳು:** ವಿಜಯನಗರ ಅರಸರು ನಾಣ್ಯಪದ್ಧತಿ ಯಲ್ಲಿ ಹೊಸ ಆಯಾಮವನ್ನು ನೀಡಿದರು. ಇವರ ಕಾಲವನ್ನು ನಾಣ್ಯವ್ಯವಸ್ಥೆಯ ಸುವರ್ಣಯುಗ ವೆಂದು ಕರೆಯಲಾಗಿದೆ. ಚಿನ್ನದ ನಾಣ್ಯಗಳು ಇವರ ಶ್ರೀಮಂತಿಕೆ ಹಾಗೂ ಕಲಾನೈಪುಣ್ಯದ ಸಂಕೇತವಾದರೆ ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ವೈವಿಧ್ಯಕ್ಕೆ ಹೆಸರುವಾಸಿಯಾಗಿವೆ. ಇವರ ಚಿನ್ನದ ವರಾಹ, ಗದ್ಯಾಣ, ಪಗೋಡಗಳು ಹೆಚ್ಚು ಮೌಲ್ಯದ ನಾಣ್ಯಗಳು ಇವು 52 ಗ್ರೇನ್ ನಿಂದ 13,15 ಗ್ರೇನ್ ತೂಕವಿದ್ದು ವೃತ್ತಾಕಾರವಾಗಿದ್ದವು. 'ತಾರ' ಇವರ ಬೆಳ್ಳಿಯ ನಾಣ್ಯ. ಕಾಸು, ಜಿತಲ್, ಪಣಂ, ಕಾಣಿ, ಮತ್ತು ಕಾಕಿಣಿ ತಾಮ್ರದ ನಾಣ್ಯಗಳು. ಇವು 250 ಗ್ರೇನ್‌ನಿಂದ 15 ಗ್ರೇನ್ ತೂಗುತ್ತಿದ್ದವು.

ವಿಜಯನಗರದ ಅರಸರ ನಾಣ್ಯ ವ್ಯವಸ್ಥೆಯ ಬಗ್ಗೆ ವಿದೇಶಿ ಪ್ರವಾಸಿಗಳು ವಿವರಿಸಿದ್ದಾರೆ. ಇವರು ನಾಣ್ಯಗಳ ವ್ಯವಸ್ಥೆಯನ್ನು ನೋಡಿಕೊಳ್ಳಲು ಟಂಕಸಾಲಾಧಿಕಾರಿಯನ್ನು ನೇಮಿಸಿದ್ದರು. ಇವನು ನಾಣ್ಯಗಳ ಶುದ್ಧತೆ, ನಿಖರವಾದ ತೂಕ ಹಾಗೂ ನಕಲು ನಾಣ್ಯಗಳನ್ನು ತಡೆಯುವ ಜವಾಬ್ದಾರಿಯನ್ನು ಹೊಂದಿದ್ದ. ಇವರ ಕಾಲದಲ್ಲಿ ಹಂಪೆ ಟಂಕಸಾಲೆಯ ಕೇಂದ್ರವಾಗಿದ್ದು ತಿರುಪತಿ, ಗುತ್ತಿ, ಅದೋಣಿ, ತಾಡಪತ್ರಿ, ನೆಲ್ಲೂರುಗಳಲ್ಲಿ ಟಂಕಸಾಲೆಗಳಿದ್ದವು. ಇವರು ನಾಣ್ಯಗಳಲ್ಲಿ ದೇವ ದೇವತೆಯರ ಚಿತ್ರ, ಸುಂದರ ಲಿಪಿ ಹಾಗೂ ರಾಜರ ಹೆಸರನ್ನು ದೇವನಾಗರಿ, ಕನ್ನಡ ಹಾಗೂ ತೆಲುಗು ಲಿಪಿಯಲ್ಲಿ ಮುದ್ರಿಸಲಾಗುತ್ತಿತ್ತು. ಇವರ ಚಿನ್ನದ ನಾಣ್ಯಗಳಲ್ಲಿ ರಾಜರ ಹೆಸರಿನ ಮೊದಲು ಪ್ರತಾಪ ಎಂಬ ಬಿರುದು ಇರುತ್ತಿತ್ತು.

ವಿಜಯನಗರ ಅರಸರು ಹೊಯ್ಸಳರ ನಾಣ್ಯಪದ್ಧತಿಯನ್ನು ಅನುಸರಿಸಿದರು. ಆದರೆ 1ನೆಯ ಹರಿಹರನ ನಾಣ್ಯಗಳಲ್ಲಿ ದುರ್ಗೆಯ ಬದಲಿಗೆ ಹನುಮಂತನ ಚಿತ್ರವನ್ನು ಹಾಕಿಸಲಾಯಿತು. ಇವನ ನಾಣ್ಯದ ಒಂದು ಬದಿಯಲ್ಲಿ ಮಂಡಿಯೂರಿ ಕುಳಿತ ಹನುಮಂತನ ಚಿತ್ರವಿದ್ದು, ಇನ್ನೊಂದು ಬದಿಯಲ್ಲಿ ಮೂರು ಸಾಲುಗಳಲ್ಲಿ ಶ್ರೀವೀರ ಹರಿಹರ ಎಂಬ ಕನ್ನಡ ಲಿಪಿ ಇದೆ. ವಿಜಯನಗರ ಸಾಮ್ರಾಜ್ಯದಲ್ಲಿ ಕೃಷ್ಣದೇವರಾಯ ಅತ್ಯಂತ ಪ್ರಸಿದ್ಧ ದೊರೆ. ಇವನು ತಿರುಪತಿಯ ವೆಂಕಟೇಶ್ವರನ ಭಕ್ತನಾಗಿದ್ದು ಕನಕಾಭಿಷೇಕವನ್ನು ಮಾಡಿಸಿ, ವೆಂಕಟೇಶ್ವರನ ಚಿತ್ರವನ್ನು ನಾಣ್ಯಗಳಲ್ಲಿ ಹಾಕಿಸಿದ. ಬಾಲಕೃಷ್ಣ, ಶಿವಪಾರ್ವತಿ, ಲಕ್ಷ್ಮಿ, ಬಸವ ಹಾಗೂ ಗರುಡನ ಚಿತ್ರಗಳು ಇರುತ್ತಿದ್ದವು. ಅಚ್ಯುತರಾಯನ ಆಳ್ವಿಕೆಯಲ್ಲಿ ಗಂಡಭೇರುಂಡ, ಲಕ್ಷ್ಮೀ, ಶಿವಪಾರ್ವತಿ ಹಾಗೂ ಗರುಡ ಚಿತ್ರಗಳು ನಾಣ್ಯಗಳಲ್ಲಿದ್ದವು. ರಾಮ ಸೀತೆ ಇರುವ ನಾಣ್ಯಗಳು ರಾಮ ಟಂಕ ಎಂದು ಹೆಸರುವಾಸಿಯಾಗಿದ್ದವು. ತಿರುಮಲರಾಯನು ಲಕ್ಷ್ಮಿ ಹಾಗೂ

ಹನುಮಂತನ ಚಿತ್ರಗಳನ್ನು, ಮೂರನೆಯ ವೆಂಕಟಪತಿರಾಯನು ವೆಂಕಟೇಶ್ವರ, ಶ್ರೀದೇವಿ, ಭೂದೇವಿ ಚಿತ್ರಗಳನ್ನೂ, ನಾಲ್ಕನೆಯ ಶ್ರೀರಂಗರಾಯನು ವೆಂಕಟೇಶ ಹಾಗೂ ಗಣಪತಿ ಚಿತ್ರಗಳನ್ನೂ ಕ್ರಮವಾಗಿ ನಾಣ್ಯಗಳಲ್ಲಿ ಅಚ್ಚು ಹಾಕಿಸಿದರು.

ವಿಜಯನಗರ ಅರಸರ ತರುವಾಯ ಕೆಳದಿ, ಮದುರೆ, ತಂಜಾವೂರಿನ ನಾಯಕರು ಹಾಗೂ ಮೈಸೂರಿನ ಒಡೆಯರು ವಿಜಯನಗರ ಅರಸರ ನಾಣ್ಯ ವ್ಯವಸ್ಥೆಯನ್ನು ತಮಗೆ ಇಷ್ಟವಾದ ದೇವತೆಗಳ ಚಿತ್ರ ಹಾಗೂ ಬರೆವಣಿಗೆಯನ್ನು ಮುಂದುವರೆಸಿದರು.

ಆರ್ಕಾಟಿನ ಸೌದತ್‍ಉಲ್ಲಾಖಾನ್ ಎಂಬುವನು 1710ರಲ್ಲಿ ಪ್ರಥಮ ಬಾರಿಗೆ ಸ್ವತಂತ್ರವಾಗಿ ಆರ್ಕಾಟಿನಲ್ಲಿ ನಾಣ್ಯಗಳನ್ನು ಮುದ್ರಿಸಿದ. ಇವು ಆರ್ಕಾಟಿನ ನವಾಬನ ನಾಣ್ಯಗಳೆಂದು ಪ್ರಸಿದ್ಧಿಯಾದವು.

ನಾಣ್ಯದ ಇತಿಹಾಸದಲ್ಲಿ ಅತ್ಯಂತ ಕುತೂಹಲಕಾರಿ ವಿಷಯವೆಂದರೆ 1757 ರಲ್ಲಿ ಯೂಸುಫ್‍ಖಾನನು ಮದುರೆಯಲ್ಲಿ ಟಂಕಸಾಲೆಯನ್ನು ಸ್ಥಾಪಿಸಿ ನಾಣ್ಯಗಳಲ್ಲಿ ಶಿವಲಿಂಗದ ಚಿತ್ರ ಹಾಗೂ ತಮಿಳಿನಲ್ಲಿ ಯೂಸುಫ್‍ಖಾನ್ ಎಂದು ಹಾಕಿಸಿರುವುದು. ಅನಂತರ ಮದುರೆಯ ನಾಯಕರು ತಮ್ಮ ನಾಣ್ಯಗಳಲ್ಲಿ ದೇವತೆಗಳ, ಪಕ್ಷಿಗಳ, ಬಸವ ಹಾಗೂ ಹೂವಿನ ಚಿತ್ರಗಳನ್ನೂ ತಮಿಳು ಲಿಪಿಯನ್ನೂ ಅಳವಡಿಸಿದರು. ಇದು ಅಪರೂಪದ ಸಂಗತಿ.

**ಮರಾಠರ ನಾಣ್ಯಗಳು:** 1672ರಲ್ಲಿ ಛತ್ರಪತಿ ಎಂಬ ಬಿರುದಿನೊಡನೆ ಪ್ರಖ್ಯಾತನಾದ ಶಿವಾಜಿ ಹೊನ ಎಂಬ ಚಿನ್ನದ ನಾಣ್ಯವನ್ನು ಹೊರಡಿಸಿದ. ಇದು ಶಿವಾಜಿ ಟಂಕಿಸಿದ ವಿರಳ ಹಾಗೂ ಮುಖ್ಯ ನಾಣ್ಯ. ನಾಣ್ಯದ ಒಂದು ಮಗ್ಗುಲಲ್ಲಿ ನಾಗರಿಲಿಪಿಯಲ್ಲಿ ಛತ್ರಪತಿ ಎಂಬ ಬರೆವಣಿಗೆಯಿದ್ದು, ಹಿಮ್ಮಗ್ಗುಲಲ್ಲಿ ಶ್ರೀರಾಜ ಶಿವ ಎಂದು ಮುದ್ರೆಗೊಂಡಿದೆ. ತಾಮ್ರದ ನಾಣ್ಯದ ಒಂದು ಮಗ್ಗುಲಲ್ಲಿ ಛತ್ರಪತಿ ಎಂಬ ಬರೆವಣಿಗೆ ಹಾಗೂ ಮತ್ತೊಂದು ಮಗ್ಗುಲಲ್ಲಿ ಶ್ರೀ ರಾಜಸಾಹು ಎಂಬ ಬರೆವಣಿಗೆಯಿದೆ. 1795ರಲ್ಲಿ ಎರಡನೇ ಬಾಜಿರಾಯ ಅಧಿಕಾರವನ್ನು ವಹಿಸಿಕೊಂಡು ಮರಾಠ ಒಕ್ಕೂಟದ ಚಿನ್ನ, ಬೆಳ್ಳಿ ನಾಣ್ಯಗಳನ್ನು ಮೊಗಲ್ ಸಾರ್ವಭೌಮರ ಹೆಸರಿನಲ್ಲಿ ಟಂಕಿಸಿದ. ಸಿಂಧ್ಯ, ಭೋನ್ಸ್ಲೆ ಹಾಗೂ ಹೋಳ್ಕರ್ ಮನೆತನದವರು ಹೊರಡಿಸಿದ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ಬ್ರಿಟಿಷರ ಅಧೀನದ ನಾಣ್ಯಗಳಾಗಿದ್ದವು.

**ಹೈದರ್ ಅಲಿ, ಟಿಪ್ಪುಸುಲ್ತಾನ್ ಕಾಲದ ನಾಣ್ಯಗಳು:** ಮೈಸೂರಿನ ಇತಿಹಾಸದಲ್ಲಿ ಹೈದರ್ ಅಲಿಯ ಹೆಸರು ಹಾಗೂ ಅವನು ಮುದ್ರಿಸಿದ ನಾಣ್ಯಗಳು ಶಾಶ್ವತ ಸ್ಥಾನಗಳಿಸಿವೆ. ಹೈದರ್ ಅಲಿಯು ವಿಜಯನಗರ ಹಾಗೂ ಮೊಗಲರ ನಾಣ್ಯಗಳಲ್ಲಿ ಸಣ್ಣ ಪುಟ್ಟ ಬದಲಾವಣೆಯನ್ನು ಮಾಡಿ ಚಿನ್ನದ ಪಗೋಡವನ್ನು ಚಲಾವಣೆಗೆ ತಂದನು. ಇದರ ಒಂದು ಭಾಗದಲ್ಲಿ ಶಿವ ಪಾರ್ವತಿಯ ಚಿತ್ರವಿದ್ದು, ಮತ್ತೊಂದು ಭಾಗದಲ್ಲಿ ತನ್ನ ಹೆಸರಿನ ಮೊದಲ ಅಕ್ಷರ ಹೈ ಯನ್ನು ಟಂಕಿಸಿದ. ತಾಮ್ರದ ನಾಣ್ಯಗಳಲ್ಲಿ ಆನೆಯ ಚಿತ್ರ, ಮುದ್ರೆಗೊಂಡ ವರ್ಷ ಹಾಗೂ ಟಂಕಸಾಲೆಯ ಹೆಸರು ಇರುತ್ತಿದ್ದವು.

ಹೈದರ್ ಅಲಿಯ ಅನಂತರ ಟಿಪ್ಪುಸುಲ್ತಾನನು ಮೈಸೂರಿನ ನವಾಬನಾಗಿ ನಾಣ್ಯ ಚಲಾವಣೆಗೆ ಹೊಸ ಆಯಾಮವನ್ನು ನೀಡಿದ. ಈತನ ಕಾಲದಲ್ಲಿ ಸು.16 ಟಂಕಸಾಲೆಗಳಿದ್ದು ಇವುಗಳಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ಮುದ್ರೆಗೊಂಡವು.

ಈತನು ಮೊದಲ ನಾಲ್ಕು ವರ್ಷ ಹಿಜಿರಾ ಶಕೆಯನ್ನು, ಅನಂತರ ಮೌಲೂದಿ ಪದ್ಧತಿಯನ್ನು ಅನುಸರಿಸಿ ನಾಣ್ಯಗಳನ್ನು ಮುದ್ರಿಸಿದ. ನಾಣ್ಯಗಳಲ್ಲಿ ಅಬ್ದಲ್ ಮತ್ತು ಅಖ್ತರ್ ಎಂಬ ಎರಡು ಪ್ರಕಾರಗಳ ಚಿನ್ನದ ನಾಣ್ಯಗಳನ್ನು ಟಂಕಿಸಿದ. ಈತ ಚಿನ್ನದ ನಾಲ್ಕು ಪಗೋಡ, ಎರಡು ಪಗೋಡ, ಪಗೋಡ ಮತ್ತು ಪಣಂ ಎಂಬ ಚಿನ್ನದ ನಾಣ್ಯಗಳನ್ನು ಟಂಕಿಸಿದ. ಇವು 52 ಗ್ರೇನ್ ತೂಕವಿದ್ದು, 0.75ಮಿಮೀ ವ್ಯಾಸವಿದ್ದವು. ನಾಣ್ಯದ ಒಂದು ಮಗ್ಗುಲಲ್ಲಿ ಪರ್ಷಿಯನ್ ಭಾಷೆಯಲ್ಲಿ ಉಲ್ಲೇಖವಿದ್ದು, ಹಿಮ್ಮುಖದಲ್ಲಿ ಟಂಕಸಾಲೆಯ ಹೆಸರು ಮತ್ತು ಕಾಲ ಇರುತ್ತಿತ್ತು. ಇವನ ಬೆಳ್ಳಿಯ 2 ರೂಪಾಯಿ, 1 ರೂಪಾಯಿ, ½, ¼, $^1/_{16}$, $^1/_{32}$ ರೂಪಾಯಿಗಳನ್ನು, ತಾಮ್ರದ ಕಾಸುಗಳೆಂಬ ನಾಣ್ಯಗಳನ್ನು ಚಲಾವಣೆಗೆ ತಂದ. ಇವನು ತನ್ನ ನಾಣ್ಯಗಳಲ್ಲಿ ಪ್ರವಾದಿ ಮಹಮ್ಮದ್‍ನ, ಖಲೀಫರ, ನಕ್ಷತ್ರ ಹಾಗೂ ಗ್ರಹಗಳ ಹೆಸರನ್ನು ಮುದ್ರಿಸಿದ. ಹೈದರಿ ಎಂಬ ಬೆಳ್ಳಿಯ ಎರಡು ರೂಪಾಯಿ ನಾಣ್ಯವನ್ನು ತಂದೆ ಹೈದರನ ಹೆಸರಿನಲ್ಲಿ ಪ್ರಾರಂಭಿಸಿದ. ತಾಮ್ರದ ನಾಣ್ಯಗಳಲ್ಲಿ ಆನೆಯ ಚಿತ್ರವಿರುತ್ತಿತ್ತು.

**ಮೈಸೂರು ಒಡೆಯರ ಕಾಲದ ನಾಣ್ಯಗಳು:** ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಮರುಕಳಿಸುವಂತೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಚಿನ್ನ-ಬೆಳ್ಳಿ, ತಾಮ್ರದ ನಾಣ್ಯಗಳು ವಿಜಯನಗರ ಅರಸರ ಮಾದರಿಯಲ್ಲಿ ಇರುತ್ತಿದ್ದವು. ಇವುಗಳಲ್ಲಿ ಚಾಮುಂಡಿ, ಸಿಂಹ, ಕೃಷ್ಣನ ಚಿತ್ರ, ಆನೆ, ಕುದುರೆ, ಲಿಂಗ, ಗಂಡಭೇರುಂಡ, ಲಕ್ಷ್ಮೀನರಸಿಂಹ, ನವಿಲು, ಮೀನು, ಹಂಸ, ಶಿವಪಾರ್ವತಿಯ ಚಿತ್ರಗಳನ್ನು ಅಳವಡಿಸಿ ಕನ್ನಡ, ಇಂಗ್ಲಿಷ್, ನಾಗರಿ ಹಾಗೂ ಪರ್ಷಿಯನ್ ಭಾಷೆಗಳಲ್ಲಿ ಇರುತ್ತಿದ್ದವು. 1638ರಲ್ಲಿ ಕಂಠೀರವ ನರಸರಾಜ ಒಡೆಯರ್ ಶ್ರೀರಂಗಪಟ್ಟಣದಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದರು. ಇಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ಅಚ್ಚಾಗುತ್ತಿದ್ದವು. ಇದರಲ್ಲಿ ಲಕ್ಷ್ಮೀನರಸಿಂಹ ಚಿತ್ರವಿದ್ದು ನಾಗರಿ ಲಿಪಿಯಲ್ಲಿ ಶ್ರೀ ಕಂಠೀರವ ನರಸರಾಜ ಎಂದು ಹೆಸರು ಇರುತ್ತಿತ್ತು. ಇವು ಕಂಠೀರಾಯ ಹಣವೆಂದು ಪ್ರಸಿದ್ಧವಾಗಿವೆ. ಇವು 20 ಗ್ರೇನ್ ತೂಕವಿದ್ದು, 0.4 ಮಿಮೀ ವ್ಯಾಸವುಳ್ಳ ನಾಣ್ಯಗಳಾಗಿವೆ. ದಿವಾನ್ ಪೂರ್ಣಯ್ಯನವರು ಇದೇ ಮಾದರಿಯ ನಾಣ್ಯಗಳನ್ನು ಟಂಕಿಸಿ ಗಿಡ್ಡ ಕಂಠೀರಾಯ ಹಣ ಎಂದು ಕರೆದರು. 1673ರಿಂದ 1704ರವರೆಗೆ ಬಾಲಕೃಷ್ಣ ಹಾಗೂ ಚಾಮುಂಡಿಯ ಚಿತ್ರ ಇರುವ ವರಾಹ, ಅರ್ಧ ವರಾಹ, ಹಾಗ ಎಂಬ ಚಿನ್ನದ ನಾಣ್ಯಗಳಿದ್ದವು. ಇವು 52.7 ಗ್ರೇನ್ ತೂಕ ಮತ್ತು 0.4 ಮಿಮೀ ವ್ಯಾಸವಿದ್ದು ಹಿಂಭಾಗದಲ್ಲಿ ನೃತ್ಯಭಂಗಿಯಲ್ಲಿರುವ ಬಾಲಕೃಷ್ಣನ ಚಿತ್ರವಿದ್ದು ನಾಗರೀ ಲಿಪಿಯಲ್ಲಿ ಶ್ರೀ ಚಿಕ್ಕದೇವರಾಯ ಎಂಬ ಬರೆವಣಿಗೆ ಇದೆ. 1799 ರಿಂದ 1832ರ ವರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ್‍ರವರ ಆಡಳಿತದಲ್ಲಿ ಚಿನ್ನದ ವರಾಹದ ನಾಣ್ಯಗಳನ್ನು ಚಲಾವಣೆಗೆ ತರಲಾಯಿತು. ಇವು ಇಕ್ಕೇರಿ ನಾಣ್ಯಗಳೆಂದು ಪ್ರಸಿದ್ಧಿಯಾದವು. ಇವು 52 ಗ್ರೇನ್ ತೂಕವಿದ್ದು, 0.4 ಮಿಮೀ ವ್ಯಾಸವಿದ್ದು ಇವುಗಳಲ್ಲಿ ಶಿವ ಪಾರ್ವತಿಯ ಚಿತ್ರ, ನಾಣ್ಯದ ಹಿಂಭಾಗದಲ್ಲಿ ಮೂರು ಸಾಲುಗಳಲ್ಲಿ ಶ್ರೀ ಕೃಷ್ಣರಾಜ ಎಂಬ ಬರೆವಣಿಗೆ ಇದೆ. ಇವರು 1 ರೂ., $^1/_2$ ರೂ., $^1/_4$ ರೂ., ಅಡ್ಡ, ಹಾಗ ಎಂಬ ಬೆಳ್ಳಿಯ ನಾಣ್ಯಗಳನ್ನು ಟಂಕಿಸಿದರು. 1ರೂ. ನಾಣ್ಯ ರಾಜಾ ರೂಪಾಯಿ ಎಂದು ಪ್ರಸಿದ್ಧವಾಯಿತು. ಕೆಲವು ಬೆಳ್ಳಿ ನಾಣ್ಯಗಳು ಮೈಲಿ ಹಣವೆಂದೂ ತಾಮ್ರದ ನಾಣ್ಯಗಳನ್ನು ಮೈಲೀ ಕಾಸು ಎಂದೂ ಕರೆಯುತ್ತಿದ್ದರು. ಕೆಲವು ನಾಣ್ಯಗಳಲ್ಲಿ ಆನೆಯ ಚಿತ್ರವಿದ್ದು, ಶ್ರೀ ಎಂಬ ಕನ್ನಡ ಅಕ್ಷರ, ಹಿಂಭಾಗದಲ್ಲಿ ಇಂಗ್ಲಿಷ್‍ನಲ್ಲಿ ಕ್ಯಾಷ್ ಎಂದು, ನಾಣ್ಯದ ಮೌಲ್ಯವನ್ನು ರೋಮನ್ ಸಂಖ್ಯೆ V,X,XXX ಯನ್ನು, ಟಂಕಿಸಲಾಗಿದೆ. ಕೆಲವು ನಾಣ್ಯಗಳಲ್ಲಿ ಆನೆಯ ಚಿತ್ರವಿದ್ದು, ಚಾ ಅಥವಾ ಚಾಮುಂಡಿ ಎಂಬ ಬರೆಹವಿದ್ದು, ಹಿಮ್ಮುಖದಲ್ಲಿ ಕೃಷ್ಣ ಎಂಬ ಕನ್ನಡ ಬರೆಹ ಅದರ ಸುತ್ತಲೂ ವೃತ್ತಾಕಾರದಲ್ಲಿ ಕ್ಯಾಷ್ ಹಾಗೂ ಜರಬ್ ಮಹಿಸೂರ್ ಎಂಬ ಪಾರ್ಸಿ ಲಿಪಿ ಇದೆ.

1833ರಲ್ಲಿ ಟಂಕಸಾಲೆಯನ್ನು ಮೈಸೂರಿನಿಂದ ಬೆಂಗಳೂರಿಗೆ ಬದಲಾಯಿಸಿದ ಮೇಲೆ 1843ರಲ್ಲಿ ಕೊನೆಯ ನಾಣ್ಯವನ್ನು ಇಲ್ಲಿ ಮುದ್ರಿಸಲಾಯಿತು. ಕನ್ನಡ ಅಂಕಿಯ ನಾಣ್ಯಗಳನ್ನು ಮೈಸೂರು ಒಡೆಯರು ವಿಜಯನಗರ ಅರಸರ ಮಾದರಿಯಲ್ಲಿ ಟಂಕಿಸಿದರು. ಇದರಲ್ಲಿ ಕನ್ನಡದ ಅಂಕೆಗಳಿದ್ದು ಹಿಂಭಾಗದಲ್ಲಿ ಕೇವಲ ಗೆರೆಗಳಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಮುದ್ರಿಸಿರಬಹುದೆಂದು ಊಹಿಸಲಾಗಿದೆ.

**ವಿದೇಶೀಯರ ನಾಣ್ಯಗಳು: ಪೋರ್ಚುಗೀಸರ ನಾಣ್ಯಗಳು:** ಪೋರ್ಚುಗೀಸ್ ನಾವಿಕ ವಾಸ್ಕೋಡಗಾಮ 1498ರಲ್ಲಿ ಭಾರತಕ್ಕೆ ಸಮುದ್ರ ಮಾರ್ಗದಿಂದ ಬಂದು ಕಲ್ಲಿಕೋಟೆಯಲ್ಲಿ ಝಮೋರಿನ್ ದೊರೆಯ ಅಪ್ಪಣೆಯನ್ನು ಪಡೆದು ವ್ಯಾಪಾರವನ್ನು ಪ್ರಾರಂಭಿಸಿದ. ಆಲ್ಬುಕರ್ಕ್‍ನ ಕಾಲಕ್ಕೆ ಗೋವ ಇವರ ರಾಜಧಾನಿಯಾಯಿತು. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿದರು. ಇವರ ಕ್ರುಸೋಡ ಅಥವಾ ಮನೋಲ್ ನಾಣ್ಯಗಳಲ್ಲಿ ರಾಜನ ಚಿತ್ರ ಹಾಗೂ ಶಿಲುಬೆಯ ಚಿಹ್ನೆ ಇದೆ. ಟೊಂಕ ಎಂಬುದು ಬೆಳ್ಳಿಯ ನಾಣ್ಯ. ಇದರಲ್ಲಿ ಸೆಟ್‍ಫಿಲಿಪ್ಸ್ ಹಾಗೂ ಜೋನ್ ಚಿತ್ರಗಳಿವೆ. ಅಟಿಯ ಎಂಬ ತಾಮ್ರದ ನಾಣ್ಯಗಳಲ್ಲಿ ಶಿಲುಬೆಯ ಚಿತ್ರವಿರುತ್ತಿತ್ತು.

**ಡಚ್ಚರ ನಾಣ್ಯಗಳು:** ಡಚ್ಚರು 1609ರಲ್ಲಿ ನೆದರ್ಲೆಂಡ್ ಸಂಯುಕ್ತ ಈಸ್ಟ್ ಇಂಡಿಯ ಕಂಪನಿ ಎಂಬ ಸಂಸ್ಥೆಯನ್ನು ಸೂರತ್‍ನಲ್ಲಿ ಸ್ಥಾಪಿಸಿದರು. ಇವರು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಹಾಲೆಂಡಿನಲ್ಲಿ ಟಂಕಿಸಿ ಇಲ್ಲಿ ಚಲಾವಣೆ ಮಾಡುತ್ತಿದ್ದರು. ಗಿಲ್ಡರ್ಸ್ ಎಂಬ ಬೆಳ್ಳಿಯ ಹಾಗೂ ಡುಕಡಿನ್ ಎಂಬ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದರು. ಇವರ ಬೆಳ್ಳಿಯ ನಾಣ್ಯಗಳ ಒಂದು ಬದಿಯಲ್ಲಿ ಇಂದ್ ಓರಿಯಂಟ್ ಮತ್ತು ಎರಡು ಸಿಂಹಗಳು ರಾಜಲಾಂಛನವನ್ನು ಎತ್ತಿಹಿಡಿದಿರುವುದು, ಕಂಪನಿಯ ಹೆಸರು ಹಾಗೂ ವರ್ಷ ಮುದ್ರೆಗೊಂಡಿವೆ. ಇವರ ಇನ್ನೊಂದು ಪ್ರಕಾರದ ಗಿಡರ್ ಇವರ ಬೆಳ್ಳಿಯ ನಾಣ್ಯ. ಇದರಲ್ಲಿ ದೇವಿಯ ಚಿತ್ರವಿರುತ್ತದೆ. ಇವರ ತಾಮ್ರದ ನಾಣ್ಯಗಳನ್ನು ಡ್ಯೂಯಿಟ್ ಎಂದು ಕರೆಯಲಾಗುತ್ತಿತ್ತು. ಈ ನಾಣ್ಯಗಳ ಒಂದು ಬದಿಯಲ್ಲಿ ರಾಜ, ಗುರಾಣಿ ಮತ್ತು VOC ಎಂಬ ಅಕ್ಷರಗಳಿವೆ. ಇವಲ್ಲದೆ ಇವರ ಪಗೋಡ ನಾಣ್ಯಗಳ ಒಂದು ಬದಿಯಲ್ಲಿ ಚತುರ್ಭುಜ ಲಕ್ಷ್ಮಿಯ ಚಿತ್ರವಿರುವುದು ಗಮನಾರ್ಹವಾಗಿದೆ.

**ಫ್ರೆಂಚರ ನಾಣ್ಯಗಳು:** 1664 ರಲ್ಲಿ ಫ್ರೆಂಚರು ಮಚಲಿಪಟ್ಟಣದಲ್ಲಿ ವ್ಯಾಪಾರ ಕೇಂದ್ರವನ್ನು ಸ್ಥಾಪಿಸಿ. ಸೂರತ್, ಪಾಂಡಿಚೇರಿ, ಮಾಹೆ, ಮಲಬಾರ್ ಪ್ರದೇಶಗಳಿಗೆ ವಿಸ್ತರಿಸಿದರು. ಪಾಂಡಿಚೇರಿ ಇವರ ಆಡಳಿತ ಕೇಂದ್ರವಾಗಿ, ಟಂಕಸಾಲೆಯನ್ನು ಸ್ಥಾಪಿಸಿ ವಿಜಯನಗರ ಅರಸರ ಮಾದರಿಯಲ್ಲಿ ಪಗೋಡ ಎಂಬ ಚಿನ್ನದ ನಾಣ್ಯವನ್ನು ಟಂಕಿಸಿದರು. ಇದರ ಒಂದು ಭಾಗದಲ್ಲಿ ಲಕ್ಷ್ಮಿಯ ಚಿತ್ರವಿದ್ದು ಮತ್ತೊಂದು ಭಾಗದಲ್ಲಿ ಪಾಂಡಿಚೇರಿ ಎಂದು ತೆಲುಗು ಅಥವಾ ತಮಿಳು ಲಿಪಿಯಲ್ಲಿ ಇದೆ. ಕೆಲವು ನಾಣ್ಯಗಳಲ್ಲಿ ವಿಷ್ಣುವಿನ ಚಿತ್ರವಿದೆ. ಇವರು ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದರು. ಆರ್ಕಾಟ್ ನವಾಬನ ಒಪ್ಪಿಗೆಯನ್ನು ಪಡೆದು ಮೊಗಲ್ ಮಾದರಿಯ ನಾಣ್ಯಗಳನ್ನು ಟಂಕಿಸಿ ಮೊಗಲ್ ದೊರೆ ಎರಡನೆಯ ಮಹಮ್ಮದ್ ಷಾ ಆಲಮ್‍ಗೀರ್‍ನ ಹೆಸರನ್ನು ಹಿಂಭಾಗದಲ್ಲಿ ಮುದ್ರಿಸಿದರು. ಇವರು ಪಗೋಡ ಕಾಸು, ಪಣ ಎಂಬ ನಾಣ್ಯಗಳನ್ನು ಅಚ್ಚುಹಾಕಿಸಿದರು. ಇವರ ಚಿನ್ನದ ನಾಣ್ಯದ ಒಂದು ಬದಿಯಲ್ಲಿ ಲಕ್ಷ್ಮಿಯ ಚಿತ್ರ ಮತ್ತು ಪಾಂಡಿಚೇರಿ ಎಂಬ ಬರೆವಣಿಗೆ ಇದೆ.

ಇನ್ನೊಂದು ಜನಪ್ರಿಯ ಚಿನ್ನದ ನಾಣ್ಯದಲ್ಲಿ ಭೂದೇವಿ ಮತ್ತು ಶ್ರೀದೇವಿಯೊಡನೆ ಇರುವ ವಿಷ್ಣುವಿನ ಚಿತ್ರವಿದೆ. ಇವರ ಕೆಲವು ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳಲ್ಲಿ ಟಂಕಸಾಲೆಯ ಸ್ಥಳವಾದ ಪುದುಚೇರಿ ಎಂಬ ಹೆಸರು ತೆಲುಗು ಅಥವಾ ತಮಿಳು ಭಾಷೆಯಲ್ಲಿದೆ.

**ರೋಮನ್ ನಾಣ್ಯಗಳು:** ಪ್ರ.ಶ.ಪೂ.1–ಪ್ರ.ಶ.5ನೆಯ ಶತಮಾನದ ಅವಧಿಯಲ್ಲಿ ಪ್ರಾಚೀನ ರೋಮ್ ಮತ್ತು ಬೈಜ಼ಾಂಟೀಯನ್‌ನೊಡನೆ ನಡೆಸಿದ ಬಿರುಸಿನ ಹಾಗೂ ದೊಡ್ಡ ಪ್ರಮಾಣದ ವ್ಯಾಪಾರದ ಮೂಲಕ ಬಂದು ಆಯಾಯ ಕಾಲದ ಚಕ್ರವರ್ತಿಗಳ ಕಾಲದಲ್ಲಿ ಚಲಾವಣೆಯಲ್ಲಿದ್ದ ಚಕ್ರವರ್ತಿಗಳ ಪಾರ್ಶ್ವನೋಟದ ಶಿರೋಭಾಗದ ಚಿತ್ರವುಳ್ಳ ಚಿನ್ನ ಮತ್ತು ಬೆಳ್ಳಿ ನಾಣ್ಯಗಳು ಹೇರಳ ಪ್ರಮಾಣದಲ್ಲಿ ಹಲವಾರು ಕಡೆಗಳಲ್ಲಿ ಆಕಸ್ಮಿಕವಾಗಿ ಬೆಳಕಿಗೆ ಬಂದಿವೆ. ಇವುಗಳ ಧಾತುಗಳ ಮೌಲ್ಯದ ಮೇಲೆ ಭಾರತೀಯ ವ್ಯಾಪಾರಸ್ಥರು ತಾವು ಮಾರಿದ ವಸ್ತುಗಳ ಕ್ರಯವನ್ನು ಈ ನಾಣ್ಯಗಳ ಮೂಲಕ ಪಡೆದರು. ಇವುಗಳು ಭಾರತದಲ್ಲಿ ಚಲಾವಣೆಗೆ ಬಾರದಿದ್ದುದರಿಂದ, ಇವುಗಳಿಗೆ ಕೊಂಡಿಯನ್ನು ಸೇರಿಸಿ ದಾರದಲ್ಲಿ ಪೋಣಿಸಿ ಮಾಲೆಯನ್ನು ಮಾಡಿಕೊಂಡು ಸ್ತ್ರೀಯರು ಧರಿಸುತ್ತಿದ್ದರು. ಇದರಿಂದ ನಮ್ಮಲ್ಲಿ ಕಾಸಿನ ಸರ ಎಂಬ ಹೆಸರಿನ ಸರ ಬಳಕೆಯಲ್ಲಿ ಬಂತೆಂದು ಕಾಣುತ್ತದೆ. ಇವು ಸಮಕಾಲೀನ ಸಾತವಾಹನ ಅರಸರ ನಾಣ್ಯದ ಸ್ವರೂಪದ ಮೇಲೂ ಪ್ರಭಾವವನ್ನುಂಟು ಮಾಡಿದಂತೆ ಕಾಣುತ್ತದೆ. ಇವರ ಕೆಲವು ನಾಣ್ಯಗಳ ಮೇಲೆ ರಾಜರ ತಲೆಯ ಪಾರ್ಶ್ವನೋಟದ ಚಿತ್ರವಿದೆ. ಒಟ್ಟಾರೆ ಶ್ರೀಮಂತಿಕೆ ಹೆಚ್ಚಿ ಜನರು ಮನರಂಜನೆಗಳಿಂದ ವಿಲಾಸಿ ಜೀವನವನ್ನು ನಡೆಸುತ್ತಿದ್ದುದು ಸಮಕಾಲೀನ ಶಿಲ್ಪಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕಂಡುಬರುತ್ತದೆ. ದಕ್ಷಿಣ ಭಾರತದಲ್ಲಿ ಅಲ್ಲಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಬೆಂಗಳೂರಿನ ಯಶವಂತಪುರ, ಹೆಚ್.ಎ.ಎಲ್. ವಿಮಾನ ನಿಲ್ದಾಣದ ಹತ್ತಿರ, ಅಕ್ಕಿ ಆಲೂರು **(ನೋಡಿ)** 2007ರಲ್ಲಿ ತರೀಕೆರೆಯಲ್ಲಿ (ಚಿಕ್ಕಮಗಳೂರು ಜಿಲ್ಲೆ) ಪ್ರಾಚೀನ ರೋಮ್ ಸಾಮ್ರಾಜ್ಯದ ಚಕ್ರವರ್ತಿಗಳಾದ ಅಗಸ್ಟಸ್, ಟೈಬಿರಿಯಸ್, ಬೈಜ಼ಾಂಟೀಯನ್ ಕಾಲದ ನಾಣ್ಯಗಳು ಅಲ್ಪ ಹಾಗೂ ದೊಡ್ಡ ಪ್ರಮಾಣದಲ್ಲಿ ದೊರೆತಿವೆ. ತರೀಕರೆಯ ಮಟ್ಟದಕೆರೆ ಎಂಬಲ್ಲಿ ಗೋಡುಮಣ್ಣನ್ನು ಅಗೆದು ಸಾಗಿಸುತ್ತಿರುವಾಗ ಮಣ್ಣಿನ ಕುಡಿಕೆಯಲ್ಲಿ 21 ಬಂಗಾರದ ನಾಣ್ಯಗಳು ದೊರೆತಿವೆ. ಇವು 7.5 ಗ್ರಾಂ ನಿಂದ 8.0 ಗ್ರಾಂ ವರೆಗೆ ತೂಕವಿದ್ದು, ವೃತ್ತಾಕಾರವಾಗಿವೆ. ನಾಣ್ಯದ ಮುಂಭಾಗದಲ್ಲಿ ರಾಜನ ಚಿತ್ರ, ಹಿಂಭಾಗದಲ್ಲಿ ಸ್ತ್ರೀದೇವತೆ, ಸರ್ಕಸ್‌ಚಿತ್ರ, ಗ್ಲೇಡಿಯೇಟರ್‌ರವರ ಕತ್ತಿಯವರಸೆ, ಕುದುರೆಯಸವಾರನ ಚಿತ್ರ, ಆಂಫಿಥಿಯೇಟರ್, ರಾಜನು ಭರ್ಜಿಯನ್ನು ಹಿಡಿದಿರುವ ಚಿತ್ರಗಳನ್ನು ಹೊಂದಿವೆ. ಈ ನಾಣ್ಯಗಳು 138–213ರವರೆಗೆ ಆಳಿದ ಆಂಟೋನಿಯಸ್ ಪಯಸ್ (138–161), ಮೆರಾಕಸ್ ಆರಿಲಸ್ (139–180), ಕಮೋಡಸ್ (177–192), ಹೆಲ್ವಿಸ್ ಪರ್ಟಿನೆಕ್ಸ್ (193), ಸೆಪ್ಟಿಮಿಸ್ ಸೆವಿರಸ್ (193–211), ಕರಕಲ (ಆಂಟೋನಿಯಸ್ ಪಯಸ್) ಕಾಲದ ಈ ನಾಣ್ಯಗಳು ಅಯೋರಿಯಸ್ ಎಂದು ಬೆಲೆಬಾಳುವ ಚಿನ್ನದ ನಾಣ್ಯಗಳು. ಇವು ಸಾಮಾನ್ಯ ಜನರ ಬಳಕೆಗೆ ಲಭ್ಯವಾಗಿರಲಿಲ್ಲ. 1 ನಾಣ್ಯ ಒಬ್ಬ ರೋಮನ್ ಸೈನಿಕನ ಒಂದು ತಿಂಗಳ ಸಂಬಳವಾಗಿತ್ತೆಂದು ತಿಳಿದುಬಂದಿದೆ.

**ಬ್ರಿಟಿಷರ ನಾಣ್ಯಗಳು:** ಭಾರತಕ್ಕೆ ಬಂದ ಯುರೋಪಿಯನ್ನರಲ್ಲಿ ಇಂಗ್ಲಿಷರು ಪ್ರಮುಖರು. ಇವರು ವ್ಯಾಪಾರದ ಜೊತೆಗೆ ರಾಜಕೀಯಕ್ಕೂ ಪ್ರವೇಶಿಸಿ 1947ರವರೆಗೆ ಭಾರತದ ಆಡಳಿತವನ್ನು ನಡೆಸಿ ಚಿನ್ನ, ಬೆಳ್ಳಿ, ಹಾಗೂ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದರು. ಒಂದನೆಯ ಎಲಿಜಬೆತ್ ರಾಣಿಯಿಂದ ವ್ಯಾಪಾರ ಸನ್ನದನ್ನು ಪಡೆದು 1600 ರಲ್ಲಿ ಭಾರತದಲ್ಲಿ ವ್ಯಾಪಾರವನ್ನು ಪ್ರಾರಂಭಿಸಿದರು. 1613ರಲ್ಲಿ ಸಾಮ್ರಾಟ್ ಜಹಾಂಗೀರ್‌ನಿಂದ ಸೂರತ್‌ನಲ್ಲಿ ಖಾಯಂ ವ್ಯಾಪಾರ ಮಳಿಗೆಯನ್ನು ಸ್ಥಾಪಿಸಲು ಅನುಮತಿಯನ್ನು ಪಡೆದು ಆಗ್ರ, ಅಲಹಾಬಾದ್ ಹಾಗೂ ಬೊಂಬಾಯಿಗಳಲ್ಲಿ ವ್ಯಾಪಾರಕೇಂದ್ರಗಳನ್ನು ಸ್ಥಾಪಿಸಿದರು. ಬೊಂಬಾಯಿ, ಮದರಾಸು ಹಾಗೂ ಕಲ್ಕತ್ತಗಳಲ್ಲಿ ಪ್ರೆಸಿಡೆನ್ಸಿ ಅಧಿಕಾರವನ್ನು ಜಾರಿಗೊಳಿಸಿದರು. 1639ರಲ್ಲಿ ಮದರಾಸಿನಲ್ಲಿ ಫೋರ್ಟ್ ಸೆಂಟ್ ಜಾರ್ಜ್ ಎಂಬ ವ್ಯಾಪಾರ ಕೇಂದ್ರವನ್ನು ಸ್ಥಾಪಿಸಿ 1671ರಲ್ಲಿ ಟಂಕಸಾಲೆಯನ್ನು ಪ್ರಾರಂಭಿಸಿದರು. ಇವರು ವಿಜಯನಗರ ಅರಸರ ಹಾಗೂ ಮೊಗಲ್ ನವಾಬರ ಮಾದರಿಯಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಮುದ್ರಿಸಿದರು. 1835 ರಿಂದ ಈಸ್ಟ್ ಇಂಡಿಯ ಕಂಪನಿಯು ಭಾರತದಲ್ಲಿ ಏಕರೂಪದ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದಿತು. ಈ ನಾಣ್ಯಗಳಲ್ಲಿ ಮೊಗಲ್ ಚಕ್ರವರ್ತಿಯ ಭಾವಚಿತ್ರಕ್ಕೆ ಬದಲಾಗಿ ಬ್ರಿಟಿಷ್ ಚಕ್ರವರ್ತಿಯ ಭಾವಚಿತ್ರ ಹಾಗೂ ಮೊನೊಗ್ರಾಮ್ ಹಾಕಿಸಲಾಯಿತು.

ಮದರಾಸ್ ಟಂಕಸಾಲೆಯಲ್ಲಿ ಚಿನ್ನದ ಎರಡು ಪಗೋಡ, ಒಂದು ಪಗೋಡ ನಾಣ್ಯಗಳು ಸಿದ್ಧವಾಗುತ್ತಿದ್ದವು. ಇದರ ಒಂದು ಪಾರ್ಶ್ವದಲ್ಲಿ ವೆಂಕಟೇಶ್ವರನ ಚಿತ್ರ ಮತ್ತೊಂದು ಪಾರ್ಶ್ವದಲ್ಲಿ ನಾಣ್ಯದ ಬೆಲೆಯು ಇರುತ್ತಿತ್ತು. 30 ರೂ ಬೆಲೆಯ ಎರಡು ಮೊಹರ್, 15 ರೂ ಬೆಲೆಯ ಒಂದು ಮೊಹರ್, ಹತ್ತು ರೂ. ಹಾಗೂ ಐದು ರೂ. ಬೆಲೆಯ ಚಿನ್ನದ ನಾಣ್ಯಗಳನ್ನು ಹಾಗೂ ಬೆಳ್ಳಿಯ 1 ರೂ., $^1/_2$ ರೂ. ಹಾಗೂ $^1/_4$ ರೂ ನಾಣ್ಯಗಳು ಚಲಾವಣೆಗೆ ಬಂದವು. ನಾಣ್ಯದ ಒಂದು ಮಗ್ಗುಲಲ್ಲಿ ರಾಜರ ಚಿತ್ರ, ಮತ್ತೊಂದು ಭಾಗದಲ್ಲಿ ನಾಣ್ಯದ ಬೆಲೆ ಇರುತ್ತಿತ್ತು. 40 ಕ್ಯಾಷ್, 20,10,5, ಹಾಗೂ 2 $^1/_2$ರೂ ಬೆಲೆಯ ತಾಮ್ರದ ಫಲೂಸ್‌ಗಳನ್ನು ಟಂಕಿಸಿದರು. ಇವುಗಳ ಒಂದು ಮಗ್ಗುಲಲ್ಲಿ ನಾಣ್ಯದ ಬೆಲೆ, ಇನ್ನೊಂದು ಬದಿಯಲ್ಲಿ ಪರ್ಷಿಯನ್, ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಬರೆವಣಿಗೆ ಇದೆ. ಬೆಳ್ಳಿಯ ಅರ್ಧ ಪಗೋಡ, ಕಾಲು ಪಗೋಡ, ಐದು ಪಣಂ, ಡಬಲ್ ಪಣಂ, ಎರಡು ರೂಪಾಯಿಗಳನ್ನು ಅಚ್ಚು ಹಾಕಲಾಯಿತು. ಈಸ್ಟ್ ಇಂಡಿಯ ಕಂಪನಿಯು ಮದರಾಸ್ ಟಂಕಸಾಲೆಯಂತೆ ಕಲ್ಕತ್ತ ಹಾಗೂ ಬೊಂಬಾಯಿಗಳಲ್ಲಿ ಟಂಕಸಾಲೆಯನ್ನು ಪ್ರಾರಂಭಿಸಿ ಚಿನ್ನ, ಬೆಳ್ಳಿ, ಹಾಗೂ ತಾಮ್ರದ ನಾಣ್ಯಗಳನ್ನು ಹೊರಡಿಸಲಾಯಿತು.

1857ರಲ್ಲಿ ನಡೆದ ಮೊದಲನೆಯ ಸ್ವಾತಂತ್ರ್ಯ ಯುದ್ಧದ ಅನಂತರ ಭಾರತದಲ್ಲಿ ಕಂಪನಿ ಆಡಳಿತ ಕೊನೆಗೊಂಡು ಬ್ರಿಟಿಷ್ ರಾಣಿಯ ಆಡಳಿತಕ್ಕೆ ಒಳಪಟ್ಟಿತ್ತು. ನಾಣ್ಯದಲ್ಲಿ ರಾಣಿಯ ಚಿತ್ರ, ಮತ್ತೊಂದು ಭಾಗದಲ್ಲಿ ನಾಣ್ಯದ ಬೆಲೆ ಇಂಗ್ಲಿಷ್ ಭಾಷೆಯಲ್ಲಿದ್ದು ತಳಭಾಗದಲ್ಲಿ ಇಂಡಿಯ ಎಂದು ಮುದ್ರಿಸಲಾಗಿತ್ತು. ಬ್ರಿಟಿಷ್ ಆಡಳಿತದ ನಾಣ್ಯ ಟಂಕಣೆ ಭಾರತ ಸ್ವತಂತ್ರವಾಗುವವರೆಗೆ ಮುಂದುವರೆಯಿತು. 1950ರಿಂದ ಸ್ವತಂತ್ರ ಭಾರತ ಸರ್ಕಾರ ಟಂಕಿಸಿದ ನಾಣ್ಯಗಳು ಚಲಾವಣೆಗೆ ಬಂದವು. 1957ರಲ್ಲಿ ಭಾರತ ಸರ್ಕಾರ ಡೆಸಿಮಲ್ ಪದ್ಧತಿಯನ್ನು ಅಳವಡಿಸಿಕೊಂಡಿತು. **(ಕೆ.ಎಚ್.)**

**ನಾಥಪಂಥ:** ಭಾರತದ ಒಂದು ಪ್ರಸಿದ್ಧ ಯೋಗಪಂಥ. ಗೋರಖ್‌ನಾಥ ಈ ವಿಶಿಷ್ಟ ಪಂಥದ ಪ್ರವರ್ತಕ. ಆತನ ಗುರು ಹಾಗೂ ಆದಿನಾಥನ ಶಿಷ್ಯ ಮತ್ಸ್ಯೇಂದ್ರನಾಥ ಇದರ ಸ್ಥಾಪಕ ಎನ್ನಲಾಗಿದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗಗಳಿಂದ ಕೂಡಿದ ಈ ಯೋಗಪಂಥಕ್ಕೆ ಬಹಳ ಪ್ರಾಚೀನ ಇತಿಹಾಸವಿದೆ. ಯಾವುದೇ ಒಂದು ದಾರ್ಶನಿಕ ಒಲವನ್ನೂ ಒಳಗೊಳ್ಳದೆ, ಎಲ್ಲ ವಿಚಾರವೇತ್ತರೂ ಅನುಸರಿಸಬಹುದಾದ ಈ ಯೋಗಮಾರ್ಗದ ಅರಿವು ಗುರುವಿನ ನೆರ ವಿಲ್ಲದೆ ಸಾಧ್ಯವಿಲ್ಲ; ಗುರುವಿಗೂ ಭಗವಂತನಿಗೂ ಭೇದವಿಲ್ಲ. ಇದೇ ಈ ಮಾರ್ಗದಲ್ಲಿನ ಮುಖ್ಯ ಅಂಶ. ಈ ಪ್ರಕ್ರಿಯೆಯ ಜೊತೆಗೆ ಗುರು ಪರಮಾತ್ಮರ ಐಕ್ಯ. ಶಿಷ್ಯನ ನಡವಳಿಕೆ ಮೊದಲಾದ ಕೆಲವು ತಾಂತ್ರಿಕ ಅನುಷ್ಠಾನಗಳೂ ಸೇರಿ ಇದೊಂದು ವಿಶಿಷ್ಟ ಸಂಪ್ರದಾಯವಾಗಿ ಬೆಳೆದಿದೆ.

ವ್ಯಕ್ತಿಯು ಲೋಕದ ಎಲ್ಲ ಬಂಧಕ ಸಾಮಗ್ರಿಯನ್ನು ಕೊಡವಿ ಹಾಕುವುದರಿಂದ ಅವಧೂತ ಎನಿಸುತ್ತಾನೆ. ಸಮಾಧಿಯ ತಿರುಳು ಸಮರಸಕರಣ. ಅಂದರೆ ತಾನು ಪರಮೇಶ್ವರ ಪ್ರಪಂಚ ಇತ್ಯಾದಿ ಭೇದಗಳಿಲ್ಲದೆ ಸರ್ವವೂ ಶಿವಮಯವಾಗುವುದು ಎಂದರ್ಥ. ಈ ವೈವಿಧ್ಯಮಯ ಪ್ರಪಂಚ ಶಕ್ತಿಯ ವಿಲಸಿತ. ಈ ಶಕ್ತಿಯಾದರೋ ಶಿವನಿಂದ ಬೇರೆಯಾದುದಲ್ಲ. ಸೃಷ್ಟಿಯಾಗಬೇಕಾದರೆ ಮೂಲಭೂತನಾದ ಶಿವನ ಶಕ್ತಿಯ ಮೂಲಕವೇ ಆಗಬೇಕು. ಶಿವಶಕ್ತಿಯರ ಪರಮಾರ್ಥ ಐಕ್ಯವನ್ನು ಅನುಭವಿಸುವಂಥ ನಾಥ–ಅವಸ್ಥೆಯಲ್ಲಿರುವುದೇ ಯೋಗದ ಗುರಿ. ಈ ಸ್ಥಿತಿಯನ್ನು ಪಡೆಯಲು ಕುಂಡಲಿನೀ ಚಾಲನ ಪ್ರಧಾನ ಸಹಾಯಕವಾದುದರಿಂದ ಅದನ್ನು ಪ್ರಚೋದಿಸುವ ಆಸನ, ಪ್ರಾಣಾಯಾಮಾದಿಗಳಿಗೆ ಈ ಪಂಥ ಆದ್ಯ ಗಮನ ನೀಡುತ್ತದೆ. ಈ ರೀತಿ ಹಠಯೋಗದ ಮೇಲೆ ಆಸ್ಥೆಯನ್ನು ಹೊಂದಿ ತಾಂತ್ರಿಕ ಪ್ರಕ್ರಿಯೆಗಳನ್ನು ಹೊಂದಿಸಿಕೊಂಡ ಈ ಮಾರ್ಗದ ಅನುಯಾಯಿಗಳು ಅವರದೇ ಆದ ಲಾಂಛನವನ್ನು ರೂಪಿಸಿಕೊಂಡಿದ್ದಾರೆ. ಭಸ್ಮಧಾರಣ, ಉಣ್ಣೆಯ ಜನಿವಾರ, ನಾದ (ಕೊಂಬು), ಮುದ್ರಾ (ಕಿವಿಯುಂಗರ) – ಇವು ಈ ಸಿದ್ಧಯೋಗಿಗಳನ್ನು ಇತರರಿಂದ ಬೇರ್ಪಡಿಸುತ್ತವೆ. ದೀಕ್ಷೆಪಡೆದ ಯೋಗಿಗಳ ಹೆಸರು ನಾಥ ಎಂಬುದರಲ್ಲಿ ಕೊನೆಯಾಗುತ್ತದೆ. ಮೂವತ್ತೆರಡು ಲಕ್ಷಣಗಳುಳ್ಳ ಶಿಷ್ಯ ಮೂವತ್ತಾರು ಲಕ್ಷಣಗಳುಳ್ಳ ಗುರುವಿನಲ್ಲಿ ದೀಕ್ಷೆ ಪಡೆಯುತ್ತಾನೆ. ಜ್ಞಾನ, ವಿವೇಕ, ನಿರಾಲಂಬ, ಸಂತೋಷ ಮುಂತಾದ ಎಂಟು ಗುಣಗಳಲ್ಲಿ ನಾಲ್ಕು ನಾಲ್ಕು ವಿಭಾಗ ಮಾಡಿ ಮೂವತ್ತೆರಡು ಲಕ್ಷಣಗಳನ್ನು ಹೇಳಿದ್ದಾರೆ. ಒಬ್ಬ ಗುರು ಅನೇಕರಿಗೆ ದೀಕ್ಷೆ ಕೊಡುವುದನ್ನು ನಿಷೇಧಿಸಲಾಗಿದೆ. ಈ ಮಾರ್ಗಾನುಯಾಯಿಗಳನ್ನು ನಾಥಯೋಗಿಗಳು, ಸಿದ್ಧಯೋಗಿಗಳು ಅಥವಾ ಅವಧೂತರು ಎಂದು ಕರೆಯಲಾಗುತ್ತದೆ. ಜನಸಾಮಾನ್ಯರಲ್ಲಿ ಇವರನ್ನು ಕಾನ್‌ಫಟಿ ಯೋಗಿಗಳು (ಕಿವಿ ಹರಿದವರು) ಎನ್ನಲಾಗುತ್ತದೆ. ಕಾಪಾಲಿಕ ಪಂಥ ಇವರೊಡನೆ ಸೋದರ ಸಂಬಂಧ ಹೊಂದಿದೆ. ಗೋರಖ್‌ನಾಥನಿಂದ ಈ ಪಂಥ ಭಾರತದ ಎಲ್ಲೆಡೆಯಲ್ಲಿಯೂ ಪ್ರಚಾರ ಪಡೆಯಿತು. 15ನೆಯ ಶತಮಾನದಲ್ಲಿದ್ದ ಈತ ಕಬೀರನ ಸಮಕಾಲೀನ. 14ನೆಯ ಶತಮಾನದ ಕೊನೆಯಲ್ಲಿ ಗೋರಖ್‌ನಾಥನ ಜೊತೆ ಶಿಷ್ಯನಾದ ಧರ್ಮನಾಥ ಕಚ್ಛ್ ಪ್ರದೇಶದಲ್ಲಿ ಈ ಪಂಥದ ತತ್ತ್ವಗಳನ್ನು ಪ್ರಚುರಪಡಿಸಿದನೆಂದು ಪ್ರತೀತಿ. ಜನಪದ ಕಥೆಗಳಲ್ಲಿ ಗೋರಖ್‌ನಾಥನನ್ನು ಶಿವನೆಂದೇ ಪರಿಗಣಿಸಲಾಗಿದೆ. ಈಗಲೂ ಗೋರಖ್‌ಪುರ್ ಜಿಲ್ಲೆಯ ಗೋರಖ್‌ನಾಥ್ ಎಂಬಲ್ಲಿ ಈತನ ದೇವಾಲಯವಿದೆ. ನೇಪಾಲದಲ್ಲಿ ಈ ಪಂಥದ ಆದಿಪುರುಷ ಆದಿನಾಥನನ್ನು ಆರ್ಯ ಅವಲೋಕಿತೇಶ್ವರನೆಂದು ಗುರುತಿಸುತ್ತಾರೆ. ಗೋರಖ್‌ನಾಥನೂ ಅವನ ಶಿಷ್ಯರೂ ಮೊದಲು ಬೌದ್ಧರಾಗಿದ್ದರೆಂತಲೂ ಅನಂತರ ಈಶ್ವರಭಕ್ತರಾದರೆಂತಲೂ ಟಿಬೆಟನ್ ಕಥೆಗಳು ತಿಳಿಸುತ್ತವೆ. **(ಆರ್.ಎಸ್.ಎಸ್.)**

**ನಾನಕ್, ಗುರು:** 1469–1539. ಸಿಖ್‌ಧರ್ಮಸ್ಥಾಪಕ. ಈಗ ಪಾಕಿಸ್ತಾನಕ್ಕೆ ಸೇರಿರುವ ಲಾಹೋರ್ ನಗರದ ಆಗ್ನೇಯಕ್ಕೆ ಸು.48 ಕಿಮೀ ದೂರದಲ್ಲಿರುವ ತಳವಂಡಿ ಎಂಬ ಗ್ರಾಮದಲ್ಲಿ ಹುಟ್ಟಿದ. ಈಗ ಅದು ನಾನಕಾನ ಸಾಹೀಬ್ ಎಂದು ಪ್ರಸಿದ್ಧವಾಗಿದೆ. ನಾನಕ್ ಜನ್ಮತಳೆದ ದಿನಗಳಲ್ಲಿ ಹಿಂದುಧರ್ಮ ಬಹಳ ದುಃಸ್ಥಿತಿಯಲ್ಲಿತ್ತು. ಮೊಗಲ್ ದೊರೆ ಬಾಬರ್ ಆಗ ದೆಹಲಿಯಲ್ಲಿ ಅರಸನಾಗಿದ್ದ. ನಾನಕನ ತಂದೆ ಕ್ಷತ್ರಿಯ ಜಾತಿಯ ಬೇಡಿ ಪಂಗಡದ ಬೇಸಾಯಗಾರ, ಕರಣಿಕ. ಕಾಲೂ ಎಂದು ಅವನ ಹೆಸರು. ತಾಯಿ ಹೆಸರು ತೃಪ್ತಾ.

ಚುರುಕು ಬುದ್ಧಿಯ ನಾನಕ್ ಚಿಕ್ಕಂದಿನಲ್ಲಿಯೇ ಅಧ್ಯಾತ್ಮದ ಬಗ್ಗೆ ಕುತೂಹಲ ಹೊಂದಿದ್ದ. 9 ವರ್ಷ ತುಂಬಿದಾಗ ಇವನಿಗೆ ಉಪನಯನವಾಯಿತು. ಜನಿವಾರವನ್ನು ತೊಡಿಸುವ ಸಮಯದಲ್ಲಿ ಬಾಲಕ ನಾನಕ್ ಅದರ ವಿಚಾರವಾಗಿ ಪುರೋಹಿತ ಹರ್ದಯಾಳುವಿನೊಡನೆ ಚರ್ಚಿಸಿದನಂತೆ. ಇವನಿಗೆ 14ನೆಯ ವರ್ಷದಲ್ಲಿ ಸುಲಕ್ಷಿಣಿ ಎಂಬ ಕನ್ಯೆಯೊಡನೆ ವಿವಾಹವಾಯಿತು. ಎರಡು ಮಕ್ಕಳೂ ಆದವು. ಸಂಸಾರಿಯಾದ ನಾನಕನನ್ನು ಒಂದು

ಕಸಬಿನಲ್ಲಿ ನಿಲ್ಲಿಸಲು ತಂದೆ ಪ್ರಯತ್ನಿಸಿದ. ಜೀವನೋಪಾಯಕ್ಕಾಗಿ ಪಶುಪಾಲನೆಯ ಕಸಬನ್ನು ಅವಲಂಬಿಸೆಂದು ಒಂದು ಹಿಂಡು ಎಮ್ಮೆಯನ್ನು ಕೊಂಡುಕೊಟ್ಟ. ನಾನಕನಿಗೆ ಪಶುಪಾಲನೆಯಲ್ಲಿ ಆಸಕ್ತಿ ಇರಲಿಲ್ಲ. ಎಮ್ಮೆಗಳನ್ನು ಕಾಡಿನಲ್ಲಿ ಮೇಯಲಿಕ್ಕೆ ಬಿಟ್ಟು ದೇವರ ಧ್ಯಾನದಲ್ಲಿ ಮುಳುಗಿರುತ್ತಿದ್ದ. ಒಂದು ದಿನ ಎಮ್ಮೆಗಳು ಹತ್ತಿರದ ಹೊಲಕ್ಕೆ ನುಗ್ಗಿ ಅಪಾರ ನಷ್ಟವನ್ನುಂಟು ಮಾಡಿದವು. ಹೊಲದ ಮಾಲೀಕ ಕೊಟ್ಟ ದೂರಿನಿಂದಾಗಿ ನಾನಕನ ತಂದೆ ತುಂಬ ಪೇಚಾಡಿ ಮಗನನ್ನು ವ್ಯವಸಾಯಕ್ಕೆ ಹಾಕಬೇಕೆಂದು ನಿರ್ಧರಿಸಿದ. ಅದನ್ನು ಕೇಳಿ ನಾನಕ್ ವ್ಯವಸಾಯದ ವಿಚಾರವಾಗಿ ಆಧ್ಯಾತ್ಮತತ್ತ್ವ ಸೂಸುವ ಒಂದು ಹಾಡುಕಟ್ಟಿ ಹೇಳಿದನಂತೆ. ಯಾವ ಲೌಕಿಕ ಗಳಿಕೆಯಲ್ಲಿಯೂ ಇವನ ಮನಸ್ಸು ತಲ್ಲೀನವಾಗಲಿಲ್ಲ. ಭಾವನ ಸಲಹೆ ಮೇರೆಗೆ ಸುಲ್ತಾನ್ ದೌಲತ್‌ಖಾನನ ಉಗ್ರಾಣದ ಗುಮಾಸ್ತೆಯ ಕೆಲಸಕ್ಕೆ ಸೇರಿದ. ಆ ಕೆಲಸವನ್ನು ಕೆಲಕಾಲ ಮೇಲಧಿಕಾರಿಗಳು ಮೆಚ್ಚುವಂತೆ ನಡೆಸಿದ. ಆದರೆ ಅದನ್ನು ತೊರೆದ.

ವರ್ಣಚಿತ್ರ

ಹೀಗೆ ಸುಲ್ತಾನಪುರದಲ್ಲಿ ಜೀವನ ನಡೆಸುತ್ತಿದ್ದಾಗ ಇದ್ದಕ್ಕಿದ್ದಂತೆಯೆ ಒಂದು ದಿನ ಯಾರಿಗೂ ಹೇಳದೆ ಅರಣ್ಯಕ್ಕೆ ಹೋದ. ಅಲ್ಲಿ ಮೂರು ದಿನಗಳ ಕಾಲ ಧ್ಯಾನಮಗ್ನನಾಗಿದ್ದಾಗ ಈತನಿಗೆ ತಾನು ಆರಾಧಿಸುತ್ತಿದ್ದ ರೂಪರಹಿತ ದೈವದ ಸಾಕ್ಷಾತ್ಕಾರವಾಯಿತಂತೆ. ಕಾಡಿನಿಂದ ಸುಲ್ತಾನಪುರಕ್ಕೆ ಹಿಂತಿರುಗಿದ. ಈತ ತನ್ನ ಸರ್ವಸ್ವವನ್ನು ಬಡವರಿಗೆ ದಾನ ಮಾಡಿ, ಹಿಂದು ಜೋಗಿಗಳು, ಮುಸಲ್ಮಾನ ಫಕೀರರು ಧರಿಸುವ ಎರಡು ಮಾದರಿಗಳನ್ನು ಹೋಲುವ ಬಟ್ಟೆಯನ್ನು ತೊಟ್ಟು ಬೀದಿಯಲ್ಲಿ ನಿಂತು ಹಿಂದುವೂ ಇಲ್ಲ, ಮುಸಲ್ಮಾನನೂ ಇಲ್ಲ ಎಂದು ಘೋಷಿಸಿದ. ಇವನನ್ನು ನೋಡಿದ ಜನ ಈತನಿಗೆ ಹುಚ್ಚು ಹಿಡಿದಿದೆ ಎಂದು ಭಾವಿಸಿದರು. ದೈವದ ಅಪಾರ ಮಹಿಮೆಯನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟು ಜಾತ್ಯಾತೀತ ಮಾನವ ಧರ್ಮದ ಬೀಜ ಬಿತ್ತಿದ. ತನ್ನ ಸಂದೇಶವನ್ನು ಪ್ರಚಾರ ಮಾಡಲು ದೀರ್ಘಕಾಲ ದೇಶ ಸಂಚಾರವನ್ನು ಕೈಗೊಂಡ. ದೆಹಲಿ, ಬೃಂದಾವನ, ಗೋರಖ್‌ಪುರ, ವಾರಾಣಸಿ, ಗಯ, ಕಾಮರೂಪ ಮುಂತಾದ ಸ್ಥಳಗಳಿಗೆ ಹೋಗಿ ಹಲವಾರು ಪಂಡಿತರನ್ನು ವಾದದಲ್ಲಿ ಸೋಲಿಸಿ ಅವರ ಮನಸ್ಸನ್ನು ಪರಿವರ್ತಿಸಿದ. ಅವರಲ್ಲಿ ಅನೇಕ ಜನ ಈತನ ಶಿಷ್ಯರಾದರು. ಈತ ದಕ್ಷಿಣ ಭಾರತಕ್ಕೆ ಬಂದು ಸಿಂಹಳಕ್ಕೆ ಯಾತ್ರೆ ಹೋದ. ಆಮೇಲೆ ಕಾಶ್ಮೀರಕ್ಕೆ ಹೋಗಿ ಹಿಮಾಲಯದ ಸಿದ್ಧ ಕ್ಷೇತ್ರಗಳನ್ನು ನೋಡಿಬಂದ. ಇದಾದ ಮೇಲೆ ಅರಬ್ಬಿ ರಾಷ್ಟ್ರಕ್ಕೆ ಹೋಗಿ ಮೆಕ್ಕ, ಮದೀನ ಕ್ಷೇತ್ರಗಳನ್ನು ಸಂದರ್ಶಿಸಿ ಹಿಂದಿರುಗಿದ.

ನಾನಕ್ ಐವತ್ತು ವರ್ಷಗಳ ಕಾಲ ಭಾರತದ ಒಳಗೂ ಹೊರಗೂ ಸುತ್ತಾಡಿದ. ತಾಯಿ ತಂದೆಗಳೂ ಹೆಂಡತಿಯೂ ತನ್ನನ್ನು ನೋಡಬೇಕೆಂದು ಅಪೇಕ್ಷಿಸಿದಾಗ, ತಂದೆ ತೀರಿಕೊಂಡಾಗ, ತನ್ನ ಅಂತ್ಯಕಾಲ ಸಮೀಪಿಸುವುದಕ್ಕೆ ಮುಂಚೆ–ಹೀಗೆ ಮೂರು ಬಾರಿ ನಾನಕ್ ತಳವಂಡಿಗೆ ಭೇಟಿ ಕೊಟ್ಟಿದ. ತನ್ನ ಮೆಚ್ಚಿನ ಶಿಷ್ಯ ಮರ್ಧನ ಗತಿಸಿದಾಗ ಆತನ ಮೇಲೆ ಒಂದು ಸೋಹಿಲನ್ನು ಹಾಡಿ ಆತನನ್ನು ರಾವಿ ನದಿಗೆ ಅರ್ಪಿಸಿದ. ಮರ್ಧನನ ತರುವಾಯ ಅವನ ಮಗ ನಾನಕನ ಗಾಯಕನಾದ. ತನ್ನ ಶಿಷ್ಯರಲ್ಲಿ ತುಂಬ ಮೆಚ್ಚಿಕೊಂಡಿದ್ದ ಅಂಗದ ಎಂಬಾತನನ್ನು ತನ್ನ ಅನಂತರ ಗುರುವಾಗಿ ಇರಲು ನೇಮಿಸಿದ ನಾನಕ್ 22 ಸೆಪ್ಟೆಂಬರ್ 1539ರಲ್ಲಿ ಆಶ್ವೀಜ ಶುದ್ಧ ದಶಮಿಯ ದಿನ ದೇಹವನ್ನು ತ್ಯಜಿಸಿದ; ತನ್ನ ಆತ್ಮವನ್ನು ಪರಮಾತ್ಮನಲ್ಲಿ ಬೆರೆಸಿದ. ಶಿಷ್ಯರಲ್ಲಿ ಮುಸ್ಲಿಮರಾದವರು ಗುರುವಿನ ಶವವನ್ನು ಹೂಳಬೇಕೆಂದರು; ಹಿಂದುಗಳು ಸುಡಲು ಬಯಸಿದರು. ಸಾಯುವ ಮುನ್ನ ನಾನಕ್ ಎರಡೂ ಪಕ್ಷದವರೂ ಸಂಜೆ ಕಳೆಬರದ ಮೇಲೆ ಹೂವನ್ನಿರಿಸಿರಿ, ಬೆಳಗಾದಾಗ ಯಾವ ಪಕ್ಷದ ಹೂವು ಬಾಡದೆ ಇರುತ್ತದೋ ಆ ಪಕ್ಷದವರು ದೇಹಕ್ಕೆ ತಮ್ಮ ಸಂಪ್ರದಾಯದಂತೆ ಕ್ರಿಯೆ ನಡೆಸಲಿ ಎಂದಿದ್ದನಂತೆ. ಎರಡೂ ಪಕ್ಷದವರೂ ಹೂವನ್ನಿಟ್ಟರು. ಬೆಳಗಾದಾಗ ನೋಡಿದರೆ ನಾನಕನ ದೇಹವೇ ಇರಲಿಲ್ಲವಂತೆ. ಆಗ ಹಿಂದು ಶಿಷ್ಯರು ಒಂದು ಮಂದಿರವನ್ನೂ ಮುಸ್ಲಿಮ್ ಶಿಷ್ಯರು ಒಂದು ಸಮಾಧಿಯನ್ನೂ ನಿರ್ಮಿಸಿದರು. ಪರಸ್ಪರ ವಿರೋಧವಾಗಿ ನಡೆವ ಹಿಂದು ಮುಸ್ಲಿಂ ಧರ್ಮಗಳ ಅನುಯಾಯಿಗಳಿಗೆ ಸಮನ್ವಯದ ದಾರಿಯೊಂದನ್ನು ನಾನಕ್ ತೋರಿಸಿದ. ಆ ದಾರಿಯಲ್ಲಿ ನಡೆದವರೇ ಸಿಖ್ಖರು.

(ಜಿ.ಎಚ್.;ಎಂ.ವಿ.ಐ.)

**ನಾನಾಫಡ್ನವೀಸ್:** ಇಂಗ್ಲಿಷರು ಪ್ರಬಲರಾಗುತ್ತಿದ್ದಾಗ ಮಹಾರಾಷ್ಟ್ರದಲ್ಲಿ ಮರಾಠ ಶಕ್ತಿಯನ್ನು ಸಂಘಟಿಸಿದವನು. ನಾನಾ ಫಡ್ನವೀಸನೆಂದು ಇತಿಹಾಸದಲ್ಲಿ ಪ್ರಖ್ಯಾತನಾದ ಈತನ ಹೆಸರು ಜನಾರ್ದನ್ ಭಾನು. ಈತನ ಪೂರ್ವಿಕರು ಬಾಲಾಜೀ ವಿಶ್ವನಾಥ ಮುಂತಾದ ಪೇಶ್ವೆಗಳ ಕಾಲದಲ್ಲಿ ಸರ್ಕಾರದ ಅಧಿಕಾರಿಗಳಾಗಿದ್ದರು. ತಾಯಿಯನ್ನು ಕಳೆದುಕೊಂಡು, ಪಾಣಿಪಟ್ ಯುದ್ಧರಂಗದಿಂದ ಪಾರಾಗಿ ಹಿಂದಿರುಗಿದ್ದ ಈತನನ್ನು ಪೇಶ್ವೆ 1ನೆಯ ಮಾಧವರಾಯ ಮೊದಲು ಆಪ್ತ ಕಾರ್ಯದರ್ಶಿಯನ್ನಾಗಿಯೂ ಆಮೇಲೆ ಫಡ್ನವೀಸ್ ಎಂದರೆ ರಾಷ್ಟ್ರದ ಆರ್ಥಿಕ ಮೇಲ್ವಿಚಾರಕನನ್ನಾಗಿಯೂ ನೇಮಿಸಿಕೊಂಡಿದ್ದ. ಈತ ಬುದ್ಧಿಶಾಲಿಯೆಂದು ಪ್ರಖ್ಯಾತನಾಗಿದ್ದ. ಇವನು ಪೇಶ್ವೆಯ ಕಚೇರಿಯ ಮೇಲ್ವಿಚಾರಕನಾಗಿ ಜಿಲ್ಲೆಗಳ ಮತ್ತು ಹಳ್ಳಿಗಳ ಅಧಿಕಾರಿಗಳನ್ನು ಅಂಕೆಯಲ್ಲಿಟ್ಟಿದ್ದ. ಸರ್ಕಾರದ ಎಲ್ಲ ಪತ್ರವ್ಯವಹಾರಗಳು ಇವನ ಉಸ್ತುವಾರಿಯಲ್ಲಿಯೇ ನಡೆಯುತ್ತಿದ್ದವು. ಪೇಶ್ವೆ 1ನೆಯ ಮಾಧವರಾಯನ ಮರಣಾನಂತರ (1772) ಪೇಶ್ವೆ ನಾರಾಯಣರಾಯನ ಕಾಲದಲ್ಲೂ ಈತ ಅಧಿಕಾರದಲ್ಲಿ ಮುಂದುವರಿದ. ಆದರೆ ಅಧಿಕಾರಾಕಾಂಕ್ಷಿಯಾಗಿದ್ದ ರಘೋಬನ ಸಂಚಿನಿಂದ ನಾರಾಯಣರಾಯ ಕೊಲೆಯಾದ. ರಘೋಬನೇ ಪ್ರಬಲನಾದ ಆ ವೇಳೆಗೆ ಪೇಶ್ವೆಯ ಪತ್ನಿಗೆ ಗಂಡು ಸಂತಾನವಾಯಿತು. ಪೇಶ್ವೆಯ ಅನುಯಾಯಿಗಳು ಆ ಮಗುವನ್ನು ಪೇಶ್ವೆಯೆಂದು ಪರಿಗಣಿಸಿ ಅವನ ಪರವಾಗಿ ರಾಜ್ಯವಾಳಲು ಮಂಡಲಿಯೊಂದನ್ನು ನೇಮಿಸಿದರು. ಅವರಿಗೆ ನಾನಾ ಫಡ್ನವೀಸನ ಬೆಂಬಲ ದೊರಕಿತು. ನಾರಾಯಣರಾಯನ ಕೊಲೆ ಮಾಡಿಸಿದ ರಘೋಬನ ಮೇಲೆ ಸೇಡು ತೀರಿಸಿಕೊಳ್ಳಲು ಇವನು ಪಣ ತೊಟ್ಟ. ಮಂಡಲಿಯಲ್ಲಿ ನಾನಾ ಫಡ್ನವೀಸನದೇ ಮೇಲುಗೈಯಾಗಿತ್ತು. ಇವನು ರಘೋಬನನ್ನು ಪೀಡಿಸಿದ. ರಘೋಬ ಮುಂಬಯಿಯಲ್ಲಿದ್ದ ಇಂಗ್ಲಿಷರ ನೆರವನ್ನು ಬೇಡಿದ. ಇಂಗ್ಲಿಷರು ಫಡ್ನವೀಸ್ ನೇತೃತ್ವದ ಪುಣೆ ಸರಕಾರದೊಂದಿಗೆ ಸ್ನೇಹದಿಂದಿದ್ದರಾದರೂ ಭಾರತೀಯರ ಈ ಒಳಜಗಳದಲ್ಲಿ ಪ್ರವೇಶಿಸುವ ಸಂದರ್ಭವನ್ನು ಬಳಸಿಕೊಳ್ಳದಿರಲಿಲ್ಲ. ಅವರು ರಘೋಬನ ನೆರವಿಗೆ ಬಂದರು. ಆದರೆ ಕಲ್ಕತ್ತೆಯಲ್ಲಿದ್ದ ಗವರ್ನರ್–ಜನರಲ್ ಇದನ್ನು ಒಪ್ಪಲಿಲ್ಲ. ಅವನ ಆದೇಶದಂತೆ ಮುಂಬಯಿಯ ಇಂಗ್ಲಿಷರು ಹಿಂದೆಗೆಯಬೇಕಾಯಿತು. ಅವರು ನಾನಾ ಫಡ್ನವೀಸ ನೊಂದಿಗೆ ಒಪ್ಪಂದ ಮಾಡಿಕೊಂಡರು. ಆದರೆ ಈ ಒಡಂಬಡಿಕೆ ಬಹುಕಾಲ ಮುಂದುವರಿಯ ಲಿಲ್ಲ. ನಾನಾ ಫಡ್ನವೀಸ್ ಫ್ರೆಂಚರೊಂದಿಗೆ ಸ್ನೇಹವಾಗಿದ್ದನೆಂಬ ಕಾರಣದಿಂದ ಇಂಗ್ಲಿಷರು ಮರಾಠರ ಮೇಲೆ ಯುದ್ಧ ಸಾರಿದರು. ಆದರೆ ಇಂಗ್ಲಿಷರೇ ಸೋಲಬೇಕಾಯಿತು. ಅಲ್ಲದೆ ತಮ್ಮ ವಶದಲ್ಲಿದ್ದ ಪ್ರದೇಶಗಳನ್ನು ಬಿಟ್ಟುಕೊಡಬೇಕಾಯಿತು. ಗವರ್ನರ್ ಜನರಲ್ ಇದರಿಂದ ಕೋಪಗೊಂಡು ಕರ್ನಲ್ ಗೊಡಾರ್ಡನ ನೇತೃತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳುಹಿಸಿದ. ಇದು ಪುಣೆಯ ಕಡೆಗೆ ಮುಂದುವರಿಯುತ್ತಿದ್ದಾಗ ಸೋಲನ್ನು ಅನುಭವಿಸಿತು. ನಾನಾ ಫಡ್ನವೀಸ್ ದಕ್ಷತೆಯನ್ನೂ ದೂರಾಲೋಚನಾ ಶಕ್ತಿಯನ್ನೂ ಪ್ರದರ್ಶಿಸಿದ. ಗೊಡಾರ್ಡನ ಸೋಲಿಗೆ ಇವನೇ ಮುಖ್ಯ ಕಾರಣ. ಈತ ಇಂಗ್ಲಿಷರೊಡನೆ ಸಾಲ್ಬಾಯ್ ಒಪ್ಪಂದ (1782) ಮಾಡಿಕೊಂಡು ಪೇಶ್ವೆಯ ಅಧಿಕಾರವನ್ನು ಉಳಿಸಿದ. ಮಹಾರಾಷ್ಟ್ರದ ಅಂತಃಕಲಹಗಳ ಮಧ್ಯೆ ತನ್ನ ಧ್ಯೇಯವನ್ನು ಸಾಧಿಸಿದ.

ಮರಾಠಾ ಒಕ್ಕೂಟದ ಮೇಲೆ ಅಧಿಕಾರ ಸ್ಥಾಪಿಸಬೇಕೆಂದೂ ಉತ್ತರ ಭಾರತದಲ್ಲಿ ತನ್ನ ಕೈ ಬಲಪಡಿಸಿಕೊಳ್ಳಬೇಕೆಂದೂ ಆಕಾಂಕ್ಷೆ ಹೊಂದಿದ್ದ ಮಹಾದಾಜಿ ಸಿಂಧ್ಯ ಆಗ ಇಂಗ್ಲಿಷರ ಸ್ನೇಹ ಬಯಸಿದ. ಅವರೊಂದಿಗೆ ಸಂಧಾನ ಮಾಡಿದ. ನಾನಾ ಫಡ್ನವೀಸನನ್ನೂ ಓಡಿಸಬೇಕೆಂದು ಸಿಂಧ್ಯ 1792ರಲ್ಲಿ ಪ್ರಯತ್ನಿಸಿದ. ನಾನಾ ಫಡ್ನವೀಸ್ ಬಹು ಎಚ್ಚರಿಕೆಯಿಂದ ಸಿಂಧ್ಯನ ಪ್ರಯತ್ನವನ್ನು ಮುರಿದ. 1794ರಲ್ಲಿ ಮಹಾದಾಜಿ ಸಿಂಧ್ಯ ಮರಣಹೊಂದಿದ. ನಾನಾ ಫಡ್ನವೀಸನೇ ಮಹಾರಾಷ್ಟ್ರದ ಮುಖಂಡನಾದ.

1794ರಲ್ಲಿ ನಿಜಾ಼ಮ ಮರಾಠರಿಗೆ ಕೊಡಬೇಕಾಗಿದ್ದ ಚೌತ್ ಮತ್ತು ಸರ್‌ದೇಶಮುಖಿ ಎಂಬ ತೆರಿಗೆಯನ್ನು ತಿರಸ್ಕರಿಸಿದುದೇ ಅಲ್ಲದೆ, ಮರಾಠರೇ ತನಗೆ ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ. ಅಲ್ಲದೆ ನಾನಾ ಫಡ್ನವೀಸನನ್ನು ಅವಮಾನಗೊಳಿಸಿದ. ನಾನಾ ಫಡ್ನವೀಸ್ ಮರಾಠಾ ಸರ್ದಾರರನ್ನೆಲ್ಲ ಒಟ್ಟುಗೂಡಿಸಿ ಖಾರ್ದಾ ಯುದ್ಧದಲ್ಲಿ (1795) ನಿಜಾ಼ಮನನ್ನು ಸೋಲಿಸಿದ. ಈ ವಿಜಯದಿಂದ ನಾನಾ ಫಡ್ನವೀಸನ ಕೀರ್ತಿ ಅತ್ಯುನ್ನತಿಗೆ ಏರಿತು. ಇವನು ಪರಕೀಯರ ಪ್ರವೇಶವಿಲ್ಲದೆ ಮಹಾರಾಷ್ಟ್ರದ ಘನತೆಯನ್ನು ಸ್ಥಾಪಿಸಿದ.

ಪೇಶ್ವೆ ಸವಾಯ್ ಮಾಧವರಾಯನಿಗೆ 21 ವರ್ಷ ಆಗಿದ್ದರೂ ನಾನಾ ಫಡ್ನವೀಸ್ ಅವನಿಗೆ ಅಧಿಕಾರ ಕೊಡದೆ ಅದನ್ನು ತನ್ನ ಹಿಡಿತದಲ್ಲೇ ಇಟ್ಟುಕೊಂಡಿದ್ದ. ಇದರಿಂದ ಮನನೊಂದ ಪೇಶ್ವೆ ಆತ್ಮಹತ್ಯೆ ಮಾಡಿಕೊಂಡ. ಪೇಶ್ವೆಯ ಸ್ಥಾನಕ್ಕೆ ವಿವಾದಗಳು ಪ್ರಾರಂಭವಾದವು. ನಾನಾ ಫಡ್ನವೀಸ್ ಅನೇಕ ತೊಂದರೆಗಳನ್ನು ಎದುರಿಸಬೇಕಾಯಿತು. ಕೊನೆಗೆ 2ನೆಯ ಬಾಜೀರಾಯನನ್ನು ಪೇಶ್ವೆಯನ್ನಾಗಿ ಅಂಗೀಕರಿಸಿ ತಾನು ಮುಖ್ಯಮಂತ್ರಿಯಾದ. 1797ರಲ್ಲಿ ತುಕೋಜಿರಾವ್ ಹೋಳ್ಕರನ ಮರಣಾನಂತರ ನಾನಾ ಫಡ್ನವೀಸನ ಅವನತಿ ಆರಂಭವಾಯಿತು. ಬಾಜೀರಾಯನೂ ಮಹಾದಾಜಿ ಸಿಂಧ್ಯನ ಮಗನಾದ ದೌಲತ್‌ರಾವ್ ಸಿಂಧ್ಯನೂ ಒಟ್ಟುಗೂಡಿ ನಾನಾ ಫಡ್ನವೀಸನನ್ನು ಹಿಡಿದು ಸೆರೆಯಲ್ಲಿ ಇಟ್ಟರು. 1800ರಲ್ಲಿ ನಾನಾ ಫಡ್ನವೀಸ್ ತೀರಿಕೊಂಡ.

ನಾನಾ ಫಡ್ನವೀಸ್ ಸದಾ ಗಂಭೀರವಾಗಿ, ಕಾರ್ಯತತ್ಪರನಾಗಿದ್ದ ವ್ಯಕ್ತಿ. ಮಿತಭಾಷಿ. ತನ್ನ ರಹಸ್ಯಗಳನ್ನು ಯಾರಿಗೂ ಬಿಟ್ಟುಕೊಡುತ್ತಿರಲಿಲ್ಲ. ಸರ್ಕಾರದಲ್ಲಿ ದಕ್ಷತೆಯನ್ನು ಕಾಪಾಡುವುದಕ್ಕಾಗಿ ಹಗಲಿರುಳೂ ಚಿಂತಿಸುತ್ತಿದ್ದ. ಲೆಕ್ಕಾಚಾರದಲ್ಲಿ ಅತ್ಯಂತ ನಿಪುಣನಾಗಿದ್ದ. ಕಾಗದಪತ್ರಗಳ ಪ್ರತಿಯೊಂದು ವಿವರವನ್ನೂ ಇವನು ಪರಿಶೀಲನೆ ಮಾಡುತ್ತಿದ್ದ. ಸರ್ಕಾರದ ಕಾಗದಪತ್ರಗಳನ್ನು ಅತ್ಯಂತ ಜೋಪಾನವಾಗಿ ಸುವ್ಯವಸ್ಥಿತವಾದ ರೀತಿಯಲ್ಲಿಟ್ಟಿದ್ದ. ತನ್ನ ಬುದ್ಧಿಮತ್ತೆಯಿಂದ, ಕಾರ್ಯತತ್ಪರತೆಯಿಂದ ಪೇಶ್ವೆಯ ಸ್ಥಾನಮಾನಗಳನ್ನು ರಕ್ಷಿಸಿದ. ಮಹಾರಾಷ್ಟ್ರದ ಇತಿಹಾಸವನ್ನು

ಬರೆಯಬೇಕೆಂದು 1783ರಲ್ಲಿ ಇವನು ಯೋಜನೆಯೊಂದನ್ನು ಇಟ್ಟುಕೊಂಡಿದ್ದ. ಈತ ತನ್ನ ಅಧಿಕಾರಾವಧಿಯಲ್ಲಿ ಅನೇಕ ಕಲಾಕೃತಿಗಳನ್ನು ಸಂಗ್ರಹಿಸಿದ್ದ. ಈತ ಕಲಾಭಿಮಾನಿಯೂ ಕಲಾವಿಮರ್ಶಕನೂ ಆಗಿದ್ದ. ನಾನಾ ಫಡ್ನವೀಸನ ದೃಷ್ಟಿಯೆಲ್ಲ ದಖನ್ನಿನಲ್ಲಿ ಕೇಂದ್ರೀಕೃತವಾಗಿತ್ತು. ಈತ ಅತ್ಯುನ್ನತ ಮಟ್ಟದ ದೇಶಪ್ರೇಮಿಯಾಗಿದ್ದು ಪ್ರಜೆಗಳ ಹಿತಾಸಕ್ತಿಗಳನ್ನೇ ಗಮನದಲ್ಲಿಟ್ಟಿದ್ದ. ಇಂಗ್ಲಿಷರ ಸ್ವಭಾವವನ್ನು ಅವರ ಮಹತ್ತ್ವಾಕಾಂಕ್ಷೆಗಳನ್ನೂ ಅರಿತು ಬಹು ಎಚ್ಚರಿಕೆಯಿಂದ ರಾಜಕಾರಣ ನಡೆಸಿದ. ಇಪ್ಪತ್ತು ವರ್ಷಗಳ ಕಾಲ ಇಂಗ್ಲಿಷರ ಪ್ರಭುತ್ವ ಮಹಾರಾಷ್ಟ್ರಕ್ಕೆ ಪ್ರವೇಶಿಸದಂತೆ ತಡೆದ. ಈತ ಕೊಟ್ಟ ಮಾತಿಗೆ ಎಂದೂ ತಪ್ಪುತ್ತಿರಲಿಲ್ಲ. ಇವನು ಉದಾರಿಯೂ ದಯಾವಂತನೂ ಆಗಿದ್ದ. ಆದರೆ ಈತನಲ್ಲಿದ್ದ ಅತ್ಯಂತ ದೊಡ್ಡ ದುರ್ಗುಣವೆಂದರೆ ಅಧಿಕಾರದ ವ್ಯಾಮೋಹ. ಇದರಿಂದ ಈತ ಅನೇಕ ತೊಂದರೆಗಳಿಗೆ ಈಡಾಗಿ ಮನಶ್ಶಾಂತಿ ಕಳೆದುಕೊಂಡ. ಮರಾಠರಿಗೆ ಈತನನ್ನು ಕಂಡರೆ ಭಯಗೌರವಗಳಿದ್ದುವೇ ಹೊರತು ವಿಶ್ವಾಸ ಇರಲಿಲ್ಲ. ಈತನನ್ನು ಕೊಲೆ ಮಾಡಲು ಅನೇಕರು ಅನೇಕ ಬಾರಿ ಪ್ರಯತ್ನಿಸಿ ವಿಫಲವಾದರು. ಈತ ತನ್ನ ಶತ್ರುಗಳನ್ನು ಕೊನೆಗಾಣಿಸುವವರೆಗೂ ತೃಪ್ತನಾಗುತ್ತಿರಲಿಲ್ಲ. ರಘೋಬನನ್ನೂ ಅವನ ಮಕ್ಕಳನ್ನೂ ಪೀಡಿಸಿದ. ಇವನಿಂದ ಹಿಂಸೆಗೊಳಗಾದ 2ನೆಯ ಬಾಜೀರಾಯ ನಾನಾ ಫಡ್ನವೀಸನಲ್ಲಿ ದ್ವೇಷ ಇಟ್ಟಿದ್ದುದು ಸಹಜ. ಉತ್ತರ ಭಾರತದಲ್ಲಿ ಮಹಾದಾಜಿ ಸಿಂಧ್ಯನ ಕಾರ್ಯಚಟುವಟಿಕೆಗಳ ಪ್ರಾಮುಖ್ಯವನ್ನು ನಾನಾ ಫಡ್ನವೀಸ್ ಅರಿಯಲಿಲ್ಲ. ಈತ ಸುವ್ಯವಸ್ಥಿತ ಗೂಢಾಚಾರ ಪಡೆಯನ್ನು ನೇಮಿಸಿ ಶತ್ರುಗಳನ್ನು ನಿರ್ಮೂಲ ಮಾಡಿದ. ಸವಾಯ್ ಮಾಧವರಾಯ ಪ್ರಾಪ್ತವಯಸ್ಕನಾದರೂ ಫಡ್ನವೀಸ್ ಅವನಿಗೆ ಅಧಿಕಾರವನ್ನು ಬಿಟ್ಟುಕೊಡಲಿಲ್ಲ. ತನ್ನ ಅಧಿಕಾರಾವಧಿಯಲ್ಲಿ ಕೋಟ್ಯಂತರ ರೂಪಾಯಿಗಳಷ್ಟು ಸ್ವಂತ ಆಸ್ತಿಯನ್ನು ಮಾಡಿಕೊಂಡ.

ನಾನಾ ಫಡ್ನವೀಸನನ್ನು ಮರಾಠಾ ಚಾಣಕ್ಯನೆಂದು ಕರೆಯಲಾಗುತ್ತದೆ. ಬೊಂಬಾಯಿಯಲ್ಲಿದ್ದ ಇಂಗ್ಲಿಷರ, ಗವರ್ನರ್–ಜನರಲ್ ವಾರನ್ ಹೇಸ್ಟಿಂಗ್ಸ್ ಹಾಗೂ ರಘೋಬನ ಪಿತೂರಿಗಳನ್ನು ಈತ ಮುರಿದ. ಹೈದರ್ ಅಲಿ, ನಿಜಾಮ್ ಮತ್ತು ಸಿಂಧ್ಯನ ಸಹಕಾರದಿಂದ ಇಂಗ್ಲಿಷರನ್ನು ಭಾರತದಿಂದ ಓಡಿಸಬೇಕೆಂಬ ಯೋಜನೆಯನ್ನೂ ಈತ ಸಿದ್ಧಪಡಿಸಿದ್ದ. ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಇವನು ಮಹಾದಾಜಿ ಸಿಂಧ್ಯನೊಡನೆ ಸಹಕರಿಸಿ ಮಹಾರಾಷ್ಟ್ರ ಸ್ವಾತಂತ್ರ್ಯವನ್ನು ಕಾಪಾಡಿದ. ಆಡಳಿತ ವಿಚಾರದಲ್ಲಿ ಎಷ್ಟೇ ದಕ್ಷನಾಗಿದ್ದರೂ ಸೈನ್ಯ ವ್ಯವಸ್ಥೆಗೆ ಈತ ಗಮನ ಕೊಡಲಿಲ್ಲ. ಇವನ ಮರಣಾನಂತರ ಮಹಾರಾಷ್ಟ್ರಕ್ಕೆ ದಕ್ಷ ಮುಂದಾಳುತನವಿಲ್ಲದಂತಾಗಿ ಮರಾಠರ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗಿತು. (ಎಚ್.ಜಿ.ಆರ್.)

**ನಾನಾ ಸಾಹೇಬ್:** 1824–60. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ (1857) ಹೋರಾಟಗಾರರಲ್ಲೊಬ್ಬ. ಝಾನ್ಸಿ ಲಕ್ಷ್ಮೀಬಾಯಿ, ತಾತ್ಯಾ ಟೋಪಿ ಮೊದಲಾದವರೊಂದಿಗೆ ಪ್ರಮುಖ ಪಾತ್ರ ವಹಿಸಿದ್ದಾತ. ದೊಂಡೂ ಪಂತ್ ಎಂಬುದು ಇವನ ನಿಜನಾಮ. ಈತ 1824ರಲ್ಲಿ ಜನಿಸಿದ. ಇವನು ಗಂಗಾಬಾಯಿ ಮತ್ತು ನಾರಾಯಣ ಭಟ್ ಎಂಬ ದಂಪತಿಗಳ ಮಗ. 1827 ಜೂನ್ 7ರಂದು ಮರಾಠರ ಕೊನೆಯ ಪೇಶ್ವೆ 2ನೆಯ ಬಾಜೀರಾವ್ ಇವನನ್ನು ದತ್ತು ತೆಗೆದುಕೊಂಡ. ನಾನಾ ಸಾಹೇಬ್ ಉತ್ತಮ ವಿದ್ಯಾಭ್ಯಾಸ ಪಡೆದ. ಸಂಸ್ಕೃತವನ್ನು ಚೆನ್ನಾಗಿ ವ್ಯಾಸಂಗ ಮಾಡಿದ. ಪಾಶ್ಚಾತ್ಯ ಶಿಕ್ಷಣ ಪಡೆದಿರಲಿಲ್ಲ. ಅಂದಿನ ಎಲ್ಲ ಆಂಗ್ಲೊ–ಇಂಡಿಯನ್ ಪ್ರಕಟಣೆಗಳನ್ನೂ ಇವನು ಒಬ್ಬ ಭಾಷಾಂತರಕಾರನ ಮೂಲಕ ತಿಳಿಯುತ್ತಿದ್ದ. ಸಾಂಗ್ಲಿಯ ನಾಯಕರ ಮನೆತನದ ಮಗಳೊಬ್ಬಳೊಂದಿಗೆ ನಾನಾ ಸಾಹೇಬನ ವಿವಾಹವಾಗಿತ್ತು.

ದೇಶದಲ್ಲಿ ಪ್ರಬಲರಾಗುತ್ತಿದ್ದ ಇಂಗ್ಲಿಷರ ವಿರುದ್ಧ ದೇಶೀಯ ರಾಜರು ಸಂಘಟಿತರಾಗಿ ಹೋರಾಡಬೇಕೆಂದು ಹವಣಿಸಿ 1818ರಲ್ಲಿ ಸೋತ ಬಾಜೀರಾಯನಿಗೆ ಇಂಗ್ಲಿಷರು 8 ಲಕ್ಷ ರೂಪಾಯಿಗಳ ವಾರ್ಷಿಕ ವಿರಾಮವೇತನ ನೀಡುತ್ತಿದ್ದರು. 1853ರಲ್ಲಿ ಬಾಜೀರಾಯ ಕಾಲವಾದ. ಆದರೆ ಇಂಗ್ಲಿಷರು ಅವನ ದತ್ತುಪುತ್ರನಾದ ದೊಂಡೂ ಪಂತನಿಗೆ ಇದನ್ನು ಮುಂದುವರಿಸಲಿಲ್ಲ. ಇದೊಂದು ತುಂಬ ಕಟುವಾದ ತೀರ್ಮಾನವೆಂದು ಬ್ರಿಟಿಷ್ ಇತಿಹಾಸಕಾರರೇ ಟೀಕಿಸಿದ್ದಾರೆ.

1857ರಲ್ಲಿ ಸಂಭವಿಸಿದ ಮಹಾ ಬಂಡಾಯದಲ್ಲಿ ನಾನಾ ಸಾಹೇಬನೂ ಪಾತ್ರವಹಿಸಿದ. ಜೂನ್ ತಿಂಗಳಲ್ಲಿ ಕಾನ್ಪುರದಲ್ಲಿ ನಡೆದ ಬಂಡಾಯಕ್ಕೆ ಇವನು ನಾಯಕನಾದ. ತಾನೇ ಪೇಶ್ವೆಯೆಂದು ಘೋಷಿಸಿಕೊಂಡ. ಕಾನ್ಪುರದಲ್ಲಿದ್ದ ಸು.400 ಬ್ರಿಟಿಷ್ ಸೈನಿಕರನ್ನೂ ಅವರ ಹೆಂಗಸರು ಮಕ್ಕಳನ್ನೂ ಅವನ ಸೈನ್ಯ ಸುತ್ತುವರಿಯಿತು. ಜೂನ್ 8–26ರವರೆಗೂ ಅವರು ಈ ಮುತ್ತಿಗೆಗೆ ಒಳಗಾಗಿದ್ದು 27ರಂದು ಶರಣಾಗತರಾದರು. ಅವರನ್ನು ಅಲಹಾಬಾದಿಗೆ ಸುರಕ್ಷಿತವಾಗಿ ತಲುಪಿಸಲಾಗುವುದೆಂದು ವಾಗ್ದಾನ ಮಾಡಲಾಗಿತ್ತು. ಸೈನಿಕರು ದೋಣಿಗಳಲ್ಲಿ ನದಿಯನ್ನು ದಾಟತೊಡಗಿದಾಗ ಅವರ ಮೇಲೆ ಗುಂಡಿನ ಮಳೆ ಸುರಿಯಿತು. ನಾಲ್ವರನ್ನುಳಿದು ಎಲ್ಲರೂ ಸಾವಿಗೆ ಶರಣಾದರು. ಇದಕ್ಕೆ ಪ್ರತೀಕಾರವಾಗಿ ಬ್ರಿಟಿಷ್ ಸೈನ್ಯ ರೋಷಾವೇಶದಿಂದ ಹೋರಾಡಿ ಕಾನ್ಪುರವನ್ನು ಆಕ್ರಮಿಸಿತು. ತಾತ್ಯಾ ಟೋಪಿ ನಾನಾ ಸಾಹೇಬನನ್ನು ಕೂಡಿಕೊಂಡ. ಬ್ರಿಟಿಷ್ ಸೈನ್ಯ ಹಿನ್ನಡೆಯಿತು. ಆದರೆ ಡಿಸೆಂಬರ್ 6ರಂದು ಕಾಲಿನ್ ಕ್ಯಾಂಪ್‌ಬೆಲ್ ಇವರನ್ನು ಓಡಿಸಿ ಕಾನ್ಪುರವನ್ನು ಗೆದ್ದ. ರಾಣಿ ಲಕ್ಷ್ಮೀಬಾಯಿ, ತಾತ್ಯಾ, ನಾನಾ ಸಾಹೇಬ ಇವರು ಗ್ವಾಲಿಯರನ್ನು ಹಿಡಿದರು. ಅಲ್ಲಿ ನಾನಾ ಸಾಹೇಬನನ್ನು ಪೇಶ್ವೆಯೆಂದು ಸಾರಲಾಯಿತು. ಆದರೆ ಬ್ರಿಟಿಷ್ ಸೈನ್ಯ ಸುಮ್ಮನಿರಲಿಲ್ಲ. ಲಕ್ಷ್ಮೀಬಾಯಿ 1858 ಜೂನ್ 18ರಂದು ಯುದ್ಧದಲ್ಲಿ ಮಡಿದಳು. ತಾತ್ಯಾ ತಪ್ಪಿಸಿಕೊಂಡ; 1859ರ ಏಪ್ರಿಲ್‌ನಲ್ಲಿ ಸಿಕ್ಕಿಬಿದ್ದ. ಅವನನ್ನು ಗಲ್ಲಿಗೆ ಹಾಕಲಾಯಿತು. ನಾನಾ ಸಾಹೇಬ ನೇಪಾಲದ ಅರಣ್ಯಗಳಿಗೆ ಓಡಿಹೋಗ ಬೇಕಾಯಿತು. ಅಲ್ಲಿ ಇವನು 1860ರ ಸುಮಾರಿಗೆ ತೀರಿಕೊಂಡಿರಬೇಕೆಂದು ಊಹಿಸಲಾಗಿದೆ. ಆದರೆ ಆಮೇಲೂ ಇವನು ಅನೇಕ ವರ್ಷಗಳ ಕಾಲ ಸನ್ಯಾಸಿಯಾಗಿ ಬದುಕಿದ್ದನೆಂದೂ ಆಗಾಗ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದನೆಂದೂ ಹೇಳಲಾಗಿದೆ.

ನಾನಾ ಸಾಹೇಬನಿಗೆ ತನ್ನ ಹುಟ್ಟು ಮತ್ತು ಕುಲದ ಬಗ್ಗೆ ಅಪಾರ ಹೆಮ್ಮೆಯಿತ್ತು. ಇವನು ಉದಾರಿಯಾಗಿದ್ದ. ಇಂಗ್ಲಿಷರೊಂದಿಗೆ ಒಳ್ಳೆಯ ಸಂಬಂಧ ಇದ್ದ ಕಾಲದಲ್ಲಿ ಅವರಿಗೆ ಇವನು ನೀಡುತ್ತಿದ್ದ ಸತ್ಕಾರಗಳನ್ನು ಅವರು ಮುಕ್ತಕಂಠದಿಂದ ಹೊಗಳುತ್ತಿದ್ದರಂತೆ. 1857ರ

ಬಂಡಾಯದಲ್ಲಿ ನಾನಾ ಸಾಹೇಬನ ಪಾತ್ರದ ಬಗ್ಗೆ ಕೆಲವು ಲೇಖಕರು ಮತ್ತು ಇತಿಹಾಸಕಾರರು ಅವನನ್ನು ವಿಶೇಷವಾಗಿ ಪ್ರಶಂಸಿದ್ದಾರೆ. ಬ್ರಿಟಿಷರ ವಿರುದ್ಧ ಬಂಡಾಯ ಹೂಡುವುದು ಅವನಿಗೆ ಮೊದಮೊದಲು ಇಷ್ಟವಿರಲಿಲ್ಲವೆಂದೂ ಕಾನ್ಪುರಕ್ಕೇ ಬಂಡಾಯ ಹಬ್ಬುವವರೆಗೂ ಅವನು ಬ್ರಿಟಿಷರೊಂದಿಗೆ ಒಳ್ಳೆಯ ಸಂಬಂಧವನ್ನಿರಿಸಿಕೊಂಡಿದ್ದನೆಂದೂ ಹೇಳಲಾಗಿದೆ. ಕೊನೆಯ ಪೇಶ್ವೆ 2ನೆಯ ಬಾಜೀರಾಯನ ನಿಧನಾನಂತರ ನಾನಾ ಸಾಹೇಬನಿಗೆ ವಾರ್ಷಿಕ ವೇತನ ಮತ್ತು ಸನ್ನದನ್ನು ರದ್ದುಪಡಿಸಿದ್ದಾಗ್ಯೂ ಇವನು ಬಾಜೀರಾಯನ ಆಸ್ತಿಗೆ ಉತ್ತರಾಧಿಕಾರಿಯಾಗಿದ್ದ. ವಾರ್ಷಿಕ ವೇತನವನ್ನು ಮುಂದುವರಿಸಬೇಕೆಂದು ಕಂಪನಿ ಸರ್ಕಾರಕ್ಕೆ ಇವನು ಮನವಿ ಸಲ್ಲಿಸಿದ್ದ. ಅದರಿಂದ ಪ್ರಯೋಜನವಾಗಿರಲಿಲ್ಲ. ಆದರೂ ಇವನು ಬಂಡಾಯ ಏಳುವ ಸಂಚು ಮಾಡಿರಲಿಲ್ಲವೆನ್ನಲಾಗಿದೆ. ಬಂಡಾಯದ ಸಮಯದಲ್ಲಿ ಬ್ರಿಟಿಷರ ಪರವಾಗಿ ಹೋರಾಡಲು ಇವನು ಕಳುಹಿಸಿದ್ದ ಸೈನಿಕರು ಬ್ರಿಟಿಷರ ವಿರುದ್ಧ ದಂಗೆ ಎದ್ದಾಗ ಉಂಟಾದ ಪರಿಸ್ಥಿತಿಯ ಒತ್ತಡದಿಂದಾಗಿ ಮತ್ತು ಬಂಡಾಯಗಾರರ ಬೆದರಿಕೆಯಿಂದಾಗಿ ಇವನು ಬಂಡಾಯದಲ್ಲಿ ನಾಯಕತ್ವ ವಹಿಸಬೇಕಾಯಿತೆನ್ನಲಾಗಿದೆ. ಕಾನ್ಪುರದಲ್ಲಿ ಬ್ರಿಟಿಷರ ಒಂದು ಚಿಕ್ಕ ಸೇನಾಗಾರವನ್ನು ವಶಪಡಿಸಿಕೊಂಡ ನಾನಾ ಸಾಹೇಬ್ ತನ್ನನ್ನು ಪೇಶ್ವೆ ಎಂದು ಘೋಷಿಸಿಕೊಂಡು, ಬ್ರಿಟಿಷರ ಅಧಿಕಾರವನ್ನು ಭಾರತದಿಂದ ಸಂಪೂರ್ಣವಾಗಿ ಅಳಿಸಿಹಾಕುವಂತೆ ಕರೆ ಇತ್ತ. ಆದರೆ ಬ್ರಿಟಿಷರ ವಿರುದ್ಧದ ಈ ಹೋರಾಟದಲ್ಲಿ ನಾನಾ ಸಾಹೇಬ್ ಸಮರ್ಥ ನಾಯಕತ್ವವನ್ನು ಪ್ರದರ್ಶಿಸಲಿಲ್ಲ. 1857 ಜುಲೈ 16ರಂದು ನಡೆದ ಕೊನೆಯ ಕಾದಾಟದಲ್ಲಿ ನಾನಾ ಸಾಹೇಬನ ಸೇನಾಬಲವನ್ನು ಬ್ರಿಟಿಷರು ಸಂಪೂರ್ಣವಾಗಿ ನಿರ್ನಾಮ ಮಾಡಿದರು.

ಬಂಡಾಯದಲ್ಲಿ ನಾನಾ ಸಾಹೇಬನ ಪಾತ್ರ ಪೂರ್ವನಿಯೋಜಿತವಾದ್ದಲ್ಲ ಎಂಬುದೂ ಸರಿಯಾಗಿ ವ್ಯವಸ್ಥೆಗೊಳಿಸಿದ್ದಲ್ಲವೆಂಬುದೂ ಸಿಪಾಯಿ ದಂಗೆ ಆರಂಭವಾದ ಅನಂತರ ನಾನಾ ಸಾಹೇಬ್ ಬ್ರಿಟಿಷ್ ಸರ್ಕಾರಕ್ಕೆ ಬರೆದಿದ್ದ ಪತ್ರಗಳಿಂದಲೂ ತಾತ್ಯಾಟೋಪಿ ನೀಡಿದ ಕೊನೆಯ ಹೇಳಿಕೆಯಿಂದಲೂ ತಿಳಿದುಬರುತ್ತದೆ. (ಸಿ.ಪಿ.;ಎಂ.ಎಸ್.ವಿ.ಆರ್.)

**ನಾಯ್‌ಕುಂಡ್:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗ ವಸತಿ ಹಾಗೂ ಗೋರಿನೆಲೆ. ಇದು ಪೆಂಚ್ ನದಿ ಸಮೀಪದಲ್ಲಿದೆ. ವಸತಿನೆಲೆ ನದಿ ದಂಡೆಯ ಮೇಲಿದ್ದರೆ ಗೋರಿಗಳ ನೆಲೆ ಇಲ್ಲಿಂದ 100 ಮೀ ಉತ್ತರದಲ್ಲಿದೆ. ವಸತಿಯ 2 ಕಿಮೀ ಪರಿಧಿಯೊಳಗೆ ಒಟ್ಟು 70 ಕಲ್ಲುವೃತ್ತಗಳ 5 ಸಮೂಹಗಳಿವೆ. 1970ರಲ್ಲಿ ಶೋಧಿಸಲಾದ ಈ ನೆಲೆಯಲ್ಲಿ ಡೆಕ್ಕನ್ ಕಾಲೇಜಿನ ಪುರಾತತ್ತ್ವ ವಿಭಾಗ ಮತ್ತು ಮಹಾರಾಷ್ಟ್ರ ಸರ್ಕಾರದ ಪುರಾತತ್ತ್ವ ಇಲಾಖೆ ಜಂಟಿಯಾಗಿ 1977–78 ಮತ್ತು 1979–80ರಲ್ಲಿ ಉತ್ಖನನ ನಡೆಸಿದವು.

ವಸತಿ ನೆಲೆಯ ಉತ್ಖನನದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಎರಡು ಉಪಹಂತಗಳು ಕಂಡುಬಂದವು. ಉತ್ಖನನ ಗುಂಡಿಯಲ್ಲಿ ವಸತಿ ಪದರ ಒಟ್ಟಾರೆ 1.85 ಮೀ ದಪ್ಪವಿತ್ತು. ಅತಿ ಕೆಳಗಿನ ಸ್ತರದಲ್ಲಿ ಸಿಕ್ಕಂತಹ ವಾಸದ ಗುಡಿಸಲಿನ ಅವಶೇಷಗಳು ವಿದರ್ಭ ಪ್ರಾಂತದ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯಲ್ಲಿ ಸಿಕ್ಕ ಮೊದಲ ಗೃಹಾವಶೇಷ ವೆನಿಸಿಕೊಂಡಿವೆ. ವೃತ್ತ ವಿನ್ಯಾಸದ ಈ ಗುಡಿಸಲಿನ ವ್ಯಾಸ 4.9 ಮೀ ಇದರ ಸುತ್ತ ಗೋಡೆಗೆ ಆಧಾರವಾಗಿದ್ದ ಕಂಬಗಳ ಗುಳಿಗಳು ಕಂಡುಬಂದವು. ಗುಡಿಸಲಿನ ಒಳಗೆ ಮಣ್ಣಿನ ಒಲೆ, ಬೂದಿ, ಜಾನುವಾರು–ಕುರಿ–ಹಂದಿ ಮತ್ತು ಜಿಂಕೆಗಳ ಮೂಳೆಗಳು, ಗೋದಿ ಮೊದಲಾದ ಧಾನ್ಯಾವಶೇಷಗಳು ದೊರೆತವು. ಇದರ ಮೇಲಿನ ಸ್ತರಗಳಲ್ಲಿ ಬಟಾಣಿ, ಬೇಳೆ, ಜೋಳ ಮೊದಲಾದ ಧಾನ್ಯ–ಕಾಳುಗಳು ಮತ್ತು ಬಾರಿ (ಎಲಚಿ) ಹಣ್ಣಿನ ಬೀಜಗಳೂ ಸಿಕ್ಕವು. ಇವು ಈ ಜನರ ಆಹಾರ ಪದ್ಧತಿ ಹಾಗೂ ಆರ್ಥಿಕ ಜೀವನದ ಪುರಾವೆಗಳೆನ್ನಬಹುದು. ವಸತಿ ಸಮೀಪದಲ್ಲಿ ಕಂಡುಬಂದ ಕಬ್ಬಿಣದ ಅವಶೇಷಗಳು ಈ ಜನರ ಮುಖ್ಯ ಕಸುಬಾಗಿದ್ದ ಕಬ್ಬಿಣ ಕೈಗಾರಿಕೆಯ ಪುರಾವೆಗಳಾಗಿವೆ. 1.25ಮೀ ಆಳದಲ್ಲಿ ಹುದುಗಿದ್ದ ಈ ಅವಶೇಷಗಳನ್ನು ರೆಸಿಸ್ಟಿವಿಟಿ ತಂತ್ರದಿಂದ ಪತ್ತೆಹಚ್ಚಲಾಯಿತು. ಕಬ್ಬಿಣದ ಕಿಟ್ಟ, ಬೂದಿ ಕಿಟ್ಟ, ಮಡಕೆಗಳು ಈ ಜಾಗದಲ್ಲಿ ಹೇರಳ ಪ್ರಮಾಣದಲ್ಲಿ ಕಂಡು

ಬಂದಿದ್ದವು. ಇಲ್ಲಿ ಕಬ್ಬಿಣದ ಅದಿರಿನಿಂದ ಲೋಹ ತಯಾರಿಸುತ್ತಿದ್ದ ಕುಲುಮೆಯ ಅವಶೇಷಗಳೂ ಸಿಕ್ಕಿವೆ. ಒಂದು ಸಲಕ್ಕೆ 10–12 ಕಿಗ್ರಾಂ ಅದಿರಿನಿಂದ 3–4 ಕಿಗ್ರಾಂ ನಷ್ಟು ಪರಿಶುದ್ಧ ಕಬ್ಬಿಣ ಅಥವ ಉಕ್ಕನ್ನು ತಯಾರಿಸುವ ತಂತ್ರಜ್ಞಾನವನ್ನು ಇವರು ಸಾಧಿಸಿದ್ದರು. ಸ್ಥಳೀಯವಾಗಿ ಸಿಗುವ ಅದಿರನ್ನೇ ಬಳಸಲಾಗುತ್ತಿತ್ತು. ಸಮಕಾಲೀನ ನೆಲೆಗಳಾದ ಮಹುರ್ಜರಿ, ಖಾಪ, ಗಂಗಪುರ್ ಮತ್ತು ಬೋರ್‌ಗಾಂವ್‌ಗಳಲ್ಲಿ ಸಿಕ್ಕ ಕಬ್ಬಿಣದ ಉಪಕರಣಗಳ ಲೋಹ ಸಂರಚನೆ ನಾಯ್‌ಕುಂಡ್‌ನ ಕಬ್ಬಿಣದ ಸಂರಚನೆಯನ್ನು ಹೋಲುತ್ತದೆ ಎಂಬುದು ನ್ಯೂಟ್ರಾನ್ ಆಕ್ಟಿವೇಷನ್ ಅಧ್ಯಯನದಿಂದ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ನಾಯ್‌ಕುಂಡ್ ಕಬ್ಬಿಣದ ಉತ್ಪಾದನೆ ಮತ್ತು ವಿತರಣೆಯ ಕೇಂದ್ರವಾಗಿತ್ತೆಂದು ಹೇಳಬಹುದು.

ವಸತಿ ಸಮೀಪದಲ್ಲಿರುವ ಕಲ್ಗೋರಿಗಳು ಕಲ್ಲುವೃತ್ತ ಪ್ರಕಾರದವು. ಇವುಗಳ ಪೈಕಿ 6 ಗೋರಿಗಳಲ್ಲಿ ಉತ್ಖನನ ಮಾಡಲಾಯಿತು. ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಹೊಳಪಿನ ಕಪ್ಪು ಪಾತ್ರೆ, ಅಭ್ರಕ ಮಿಶ್ರಿತ ಕೆಂಪು ಪಾತ್ರೆ ಮತ್ತು ವರ್ಣ ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಸಮಾಧಿಗಳೊಳಗೆ ದೊರೆತವು. ರಚನೆ ಮತ್ತು ಆಕಾರದಲ್ಲಿ ಇವು ವಸತಿ ನೆಲೆಯಲ್ಲಿ ದೊರೆತ ಮಣ್ಪಾತ್ರೆಗಳಂತೆಯೇ ಇವೆ. ಪಾತ್ರೆಗಳ ಮೇಲಿನ ಬಣ್ಣದ ಚಿತ್ರಗಳಲ್ಲೂ ಸಾಮ್ಯವಿದೆ. ಇದರಿಂದ ವಸತಿ ಮತ್ತು ಗೋರಿಗಳು ಸಮಕಾಲೀನವಾಗಿದ್ದು ವಸತಿ ನೆಲೆಯ ಜನಸಮುದಾಯ ದವರೇ ಇಲ್ಲಿಯ ಕಲ್ಲುವೃತ್ತಗಳ ನಿರ್ಮಾಪಕರೆಂಬುದು ಸ್ಪಷ್ಟವಾಗುತ್ತದೆ. ಸಮಾಧಿಗಳಲ್ಲಿ ಅಸ್ಥಿ ಅವಶೇಷಗಳೊಂದಿಗೆ ಇಡಲಾದ ಕಬ್ಬಿಣದ ಉಪಕರಣಗಳೆಂದರೆ ಬಾಚಿ, ಕಠಾರಿ, ಸಲಿಕೆ, ಉಳಿ, ಚಪ್ಪಟೆ ಕೊಡಲಿ ಮತ್ತು ಬಟ್ಟಲು. ಚಿನ್ನದ ತಂತಿಯ ತುಂಡುಗಳು ಮತ್ತು ಬುಗುಟೆಗಳು ಇಲ್ಲಿ ಸಿಕ್ಕ ವಿಶೇಷ ಅವಶೇಷವಾಗಿವೆ. ಕುದುರೆಯ ತಾಮ್ರದ ಆಭರಣಗಳು, ಪಕ್ಷಿಯಾಕಾರದ ಮತ್ತು ಮೊಗ್ಗಿನಾಕಾರದ ಹಿಡಿಕೆಯಿರುವ ಮುಚ್ಚಳಗಳು ಅತಿ ವಿಶಿಷ್ಟವಾದ ಮತ್ತು ಅಪರೂಪದ ಸಮಾಧಿ ಕಾಣಿಕೆಗಳಾಗಿವೆ. ಈ ಮೂಲಕ ತಿಳಿಯುವುದೇನೆಂದರೆ ಕಬ್ಬಿಣ, ತಾಮ್ರ ಮತ್ತು ಚಿನ್ನದ ತಂತ್ರಜ್ಞಾನಗಳು ಈ ಜನರಿಗೆ ತಿಳಿದಿತ್ತು. ಎರಡು ಲೋಹಗಳನ್ನು ಬಳಸಿ ವಸ್ತುವನ್ನು ತಯಾರಿಸುವ ಕುಶಲತೆಯೂ ಇವರಿಗಿತ್ತು. ಇದಕ್ಕೆ ಉದಾಹರಣೆಯೆಂದರೆ ಸಮಾಧಿಗಳಿಂದ ದೊರೆತಿರುವ ಘಂಟೆಗಳು. ಒಂದು ಘಂಟೆಯ ಮೈಭಾಗವನ್ನು ತಾಮ್ರದ ತಗಡಿನಿಂದಲೂ, ನಾಲಗೆಯನ್ನು ಕಬ್ಬಿಣದಿಂದಲೂ ಮಾಡಲಾಗಿದೆ. ಮತ್ತೊಂದು ಘಂಟೆಯಲ್ಲಿ ತಾಮ್ರದ ನಾಲಗೆಯನ್ನು ಕಬ್ಬಿಣದಿಂದ ಬೆಸೆಯಲಾಗಿದೆ.

ಸಮಾಧಿಗಳೊಳಗಿನ ಅಸ್ಥಿ ಅವಶೇಷಗಳ ವೈಜ್ಞಾನಿಕ ಅಧ್ಯಯನವನ್ನು ನಡೆಸಲಾಗಿದೆ. ಒಂದು ದವಡೆ ಹದಿವಯಸ್ಸಿನ ವ್ಯಕ್ತಿಯದೆಂದು ಗುರುತಿಸಲಾಗಿದೆ. ಮಾನವನ ಅಸ್ಥಿ ಅವಶೇಷಗಳೊಂದಿಗೆ ಕುದುರೆಯನ್ನೂ ಸಮಾಧಿ ಮಾಡಿದ ನಿದರ್ಶನಗಳು ಇಲ್ಲಿದ್ದು ಕುತೂಹಲ ಹುಟ್ಟಿಸುತ್ತವೆ. ಕಲ್ಲುವೃತ್ತ ಹಾಗೂ ವಾಸಸ್ಥಳಗಳಿಂದ ದೊರೆತ ಇದ್ದಿಲಿನ ತುಣುಕುಗಳನ್ನು ಇಂಗಾಲ–14 ತಂತ್ರಕ್ಕೆ ಒಳಪಡಿಸಲಾಗಿದ್ದು 4 ಕಾಲಮಾನಗಳು ದೊರೆತಿವೆ. ಇವು ಪ್ರ.ಶ.ಪೂ.545±105, 505±100, 690±110 ಮತ್ತು 370±120. ನಾಯ್‌ಕುಂಡ್‌ನ ವಸತಿ–ಗೋರಿ ನೆಲೆಯ ಕಾಲಾವಧಿ ಪ್ರ.ಶ.ಪೂ.6ನೆಯ ಶತಮಾನದಿಂದ ಪ್ರ.ಶ.ಪೂ. 4ನೆಯ ಶತಮಾನವೆಂದು ದೃಢವಾಗಿ ಹೇಳಬಹುದು. (ವೈ.ಎಂ.)

**ನಾಯಕರು: ಜಿಂಜಿ:** ವಿಜಯನಗರದ ಅರಸರ ಆಳಿಕೆಗೆ ಒಳಪಟ್ಟಿದ್ದ ಪ್ರಾಂತಗಳ ಲ್ಲೊಂದಾಗಿದ್ದ ಜಿಂಜಿಯಲ್ಲಿ ಅಧಿಕಾರಿಗಳಾಗಿದ್ದು, ಅನಂತರ ಆಶ್ರಿತರಾಗಿ ಕ್ರಮೇಣ ಸ್ವತಂತ್ರವಾಗಿ ಆಳುತ್ತಿದ್ದವರು. ಸು.1464ರಲ್ಲಿ ವಿಜಯನಗರದ ಪ್ರಾಂತಾಧಿಕಾರಿಗಳನ್ನು ಜಿಂಜಿ ಪ್ರಾಂತ್ಯಕ್ಕೆ ಕ್ರಮವಾಗಿ ನಿಯಮಿಸಲಾರಂಭವಾಯಿತು. ಅನಂತರ ಜಿಂಜಿಯ ನಾಯಕ ಮನೆತನ ಪ್ರಾರಂಭವಾಯಿತು. ಜಿಂಜಿ ನಾಯಕರ ಕಾಲ ಮತ್ತು ವಂಶಾವಳಿಗಳನ್ನು ಉಪಲಬ್ಧ ಆಧಾರಗಳಿಂದ ನಿರ್ದಿಷ್ಟವಾಗಿ ತಿಳಿಯುವುದು ಸಾಧ್ಯವಿಲ್ಲವಾಗಿದೆ. ಸು.1490ರ ವರೆಗೂ ಪ್ರಾಂತಾಧಿಕಾರಿಯಾಗಿದ್ದ ವೀರಪ್ಪನಾಯಕನ ತರುವಾಯ ಅಧಿಕಾರಕ್ಕೆ ಬಂದ ತುಬಾಕಿ ಕೃಷ್ಣಪ್ಪನಾಯಕ (1490–1520) ಇಂದಿನ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿರುವ ಶ್ರೀ ಮೂಷ್ಣಂ ಮತ್ತು ತಿರುಕೋಯಿಲೂರು ಪಟ್ಟಣ ದೇವಾಲಯಗಳನ್ನು ನಿರ್ಮಿಸಿದ. ಜಿಂಜಿ ಪಟ್ಟಣದ ಅವಶೇಷಗಳಲ್ಲಿ ಕಾಣುವ ದೊಡ್ಡ ಕಣಜಗಳು, ಕಲ್ಯಾಣ ಮಹಲ್, ಬೆಟ್ಟದ ಸುತ್ತ ನಿರ್ಮಿಸಿರುವ ಅಭೇದ್ಯವಾದ ಗೋಡೆಗಳು–ಇವು ಕೃಷ್ಣಪ್ಪನ ಕಾಲದಲ್ಲಿ ನಿರ್ಮಾಣ ವಾಗಿರಬೇಕೆಂದು ತೋರುತ್ತದೆ. ತುಬಾಕಿ ಕೃಷ್ಣಪ್ಪನ ಅನಂತರ ಅಚ್ಯುತ ವಿಜಯ ರಾಮಚಂದ್ರನಾಯಕ ಅಧಿಕಾರಕ್ಕೆ ಬಂದನೆಂದು ಹೇಳಲಾಗಿದೆ. ಸು.1540–41 ಕ್ಕೆ ಸಂಬಂಧಿಸಿದ ಶಾಸನದಿಂದ ತಿಳಿಯುವಂತೆ ವಿಜಯ ರಾಮಚಂದ್ರ ನಾಯಕ ವಿಜಯನಗರದ ಆಡಳಿತಕ್ಕೆ ಒಳಪಟ್ಟು ಜಿಂಜಿಯ ಪ್ರಾಂತಾಧಿ ಕಾರಿಯಾಗಿದ್ದ. ಅವನ ಅನಂತರ ಆಡಳಿತಕ್ಕೆ ಬಂದ ಮುತ್ಯಾಲ ನಾಯಕ ರಾಜಗಿರಿಯ ಬಳಿ ವೆಂಕಟರಮಣಸ್ವಾಮಿ ದೇವಾಲಯವನ್ನು ಕಟ್ಟಿಸಿದ. ಇವನ ಅನಂತರ ವೆಂಕಟಪ್ಪ ನಾಯಕ ಅಧಿಕಾರಕ್ಕೆ ಬಂದ. ಅನಂತರ ಜಿಂಜಿಯ ನಾಯಕನಾದವನು ಕೃಷ್ಣಪ್ಪ.

ಜಿಂಜಿಯ ಕೃಷ್ಣಪ್ಪನಾಯಕ ವಿಜಯನಗರದ ವೆಂಕಟಪತಿರಾಯನ ಸಮಕಾಲೀನನಾಗಿದ್ದ ನೆಂದು ತಿಳಿಯುತ್ತದೆ. ಕೃಷ್ಣಪ್ಪ ನಾಯಕ ತನ್ನ ತಂದೆಯ ಮರಣಾನಂತರ ಪಟ್ಟಕ್ಕೆ ಬರುವುದು ತಡವಾಯಿತು. ಏಕೆಂದರೆ 1586ರಲ್ಲಿ ಕೃಷ್ಣಪ್ಪ ತನ್ನ ಒಡೆಯನಾದ ವೆಂಕಟಪತಿ ರಾಯನ ವಿರುದ್ಧ ದಂಗೆ ಎದ್ದಿದ್ದ. ಕುಪಿತನಾದ ವೆಂಕಟಪತಿರಾಯ ಕೃಷ್ಣಪ್ಪನನ್ನು ಸೋಲಿಸಿ ಬಂಧನದಲ್ಲಿಟ್ಟ. ಆದರೆ ತಂಜಾವೂರಿನ ರಘುನಾಥ ನಾಯಕ ವೆಂಕಟಪತಿರಾಯನ ಮನವೊಲಿಸಿ ಕೃಷ್ಣಪ್ಪ ನಾಯಕನನ್ನು ಬಂಧವಿಮುಕ್ತನನ್ನಾಗಿ ಮಾಡಿದ. ಈ ಉಪಕಾರಕ್ಕಾಗಿ ಕೃಷ್ಣಪ್ಪನಾಯಕ ರಘುನಾಥನಾಯಕನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದ.

ಕೃಷ್ಣಪ್ಪನಾಯಕ ವೆಂಕಟಪತಿರಾಯನ ಪ್ರೀತಿವಿಶ್ವಾಸಗಳಿಗೆ ಪಾತ್ರನಾಗಿರಲಿಲ್ಲ. ಅವನು ಕ್ರಮವಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿರಲಿಲ್ಲ. ತನ್ನ ಪ್ರಥಮ ದಂಗೆಯ ಪರಾಭವದ ಅನಂತರ ವರ್ಷಗಳಲ್ಲಿ ಸ್ವಾಮಿನಿಷ್ಠೆಯನ್ನು ಕಳೆದುಕೊಂಡ. ವೆಂಕಟಪತಿರಾಯನ ಸೈನ್ಯ 1607ರಲ್ಲಿ ಕೃಷ್ಣಪ್ಪನಾಯಕನನ್ನು ಸೋಲಿಸಿತು. ಕೃಷ್ಣಪ್ಪ ಶರಣಾಗತನಾದ. ಆದರೆ ಮದುರೆ ಮತ್ತು ತಂಜಾವೂರು ನಾಯಕರ ಪ್ರಾರ್ಥನೆಯಿಂದಾಗಿ ಕೃಷ್ಣಪ್ಪ ಮತ್ತೆ ಜಿಂಜಿ ಪ್ರಾಂತ್ಯವನ್ನು ಪಡೆದ. ಕೃಷ್ಣಪ್ಪನಾಯಕ ಪೋರ್ಚುಗೀಸ್ ಮತ್ತು ಡಚ್ಚರೊಡನೆ ಸಂಬಂಧ ಇಟ್ಟುಕೊಂಡಿದ್ದ. ಅವನು ಡಚ್ ವ್ಯಾಪಾರಿಗಳಿಗೆ ಕೋಠಿಯನ್ನು ಕಟ್ಟಿಕೊಳ್ಳಲು ಅನುಮತಿನೀಡಿದ. ಕೃಷ್ಣಪ್ಪನಾಯಕನ ಆಡಳಿತದಲ್ಲಿ ಸಮರ್ಥ ಅಧಿಕಾರಿಯಾಗಿದ್ದ ಅಯ್ಯ ಎಂಬ ಬ್ರಾಹ್ಮಣ ಡಚ್ಚರಿಗೆ ನೆರವು ನೀಡಿದ. ಇದರಿಂದ ಕೃಷ್ಣಪ್ಪನಾಯಕನಿಗೆ ವಿಶೇಷ ಧನಲಾಭ ಉಂಟಾಯಿತು. ಜಿಂಜಿಯ ನಾಯಕರಲ್ಲಿ ಪ್ರಮುಖನಾಗಿದ್ದ ಕೃಷ್ಣಪ್ಪನಾಯಕ ವಿಷ್ಣು ಭಕ್ತನಾಗಿದ್ದ.

ಕೃಷ್ಣಪ್ಪನಾಯಕನ ಅನಂತರ ಅಧಿಕಾರಕ್ಕೆ ಬಂದ ಅವನ ಉತ್ತರಾಧಿಕಾರಿಗಳು ಸಮರ್ಥ ರಾಗಿರಲಿಲ್ಲ. ವರದಪ್ಪ ನಾಯಕರು ಮತ್ತು ಅಪ್ಪನಾಯಕರು ದುರ್ಬಲರಾಗಿದ್ದರು. ಜೊತೆಗೆ ಈ ಕಾಲದಲ್ಲಿ ಅನೇಕ ರಾಜಕೀಯ ಪರಿವರ್ತನೆಗಳುಂಟಾದವು. ವಿಜಯನಗರದ ಶ್ರೀರಂಗರಾಯನ ಸಾಮಂತನಾಗಿದ್ದ ಮದುರೆಯ ತಿರುಮಲನಾಯಕ ದುರಾಶೆಯಿಂದ ಕೂಡಿದ್ದು ಸ್ವತಂತ್ರ ರಾಜನಾಗಲು ಪ್ರಯತ್ನಿಸುತ್ತಿದ್ದ. ತಿರುಮಲನಾಯಕ ಕುತಂತ್ರ ಮತ್ತು ಕುಟಿಲೋಪಾಯಗಳಿಂದ ದಕ್ಷಿಣ ಭಾರತದ ರಾಜಕೀಯವನ್ನು ಅಸ್ತವ್ಯಸ್ತ ಮಾಡಿದ. ಸು.1648ರಲ್ಲಿ ಬಿಜಾಪುರದ ಸುಲ್ತಾನ ಜಿಂಜಿಯನ್ನು ಆಕ್ರಮಿಸಿದ. ಸುಲ್ತಾನರ ಸೈನ್ಯದಲ್ಲಿ ಪ್ರಭಾವಶಾಲಿಗಳಾಗಿದ್ದ ಮರಾಠರ ಪ್ರಭಾವಕ್ಕೆ ಜಿಂಜಿ ಪ್ರಾಂತ್ಯ ಒಳಪಟ್ಟಿತು.

ಜಿಂಜಿ ನಾಯಕರು ಅನೇಕ ಕೋಟೆಕೊತ್ತಲಗಳನ್ನೂ ದೇವಾಲಯ ಮತ್ತು ಮಂಟಪ ಗಳನ್ನೂ ನಿರ್ಮಿಸಿದರು. ಇವುಗಳ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದೆ. ಎರಡನೆಯ ಕೃಷ್ಣಪ್ಪನಾಯಕ ಕೃಷ್ಣಾ ಪಟ್ಟಣವನ್ನು ಕಟ್ಟಿಸಿದ. ಅವನು ಈ ಪಟ್ಟಣದಲ್ಲಿ ಚರ್ಚ್ ಕಟ್ಟಿಕೊಳ್ಳಲು ಅನುಮತಿ ನೀಡಿದ. ತಾಳಿಕೋಟೆಯ ಕದನದ ಅನಂತರವೂ ಅನೇಕ ವರ್ಷಗಳ ಕಾಲ ಜಿಂಜಿಯ ನಾಯಕರು ತಮ್ಮ ಪ್ರಭುಗಳಿಗೆ ಸ್ವಾಮಿನಿಷ್ಠೆಯಿಂದ ಗೌರವ ಸಲ್ಲಿಸುತ್ತಿದ್ದರು. ತುಬಾಕಿ ಕೃಷ್ಣಪ್ಪ ನೀರಾವರಿ ಸೌಲಭ್ಯಗಳನ್ನು ನಿರ್ಮಿಸಿದ. ಅಚ್ಯುತ ರಾಮಚಂದ್ರ ನಾಯಕ ತಿರುವಣ್ಣಾಮಲೈ ದೇವಾಲಯದ ಗೋಪುರವನ್ನೂ ಅನೇಕ ಅಗ್ರಹಾರಗಳನ್ನು ಕಟ್ಟಿಸಿದ. ಜಿಂಜಿ ನಾಯಕರ ಕಲೆ ಮತ್ತು ವಾಸ್ತುಶಿಲ್ಪ ಸಾಧನೆಗಳು ತಂಜಾವೂರು ಮತ್ತು ಮದುರೆ ನಾಯಕರಷ್ಟು ವೈಭವಯುತವಾಗಿ ಇಲ್ಲದಿದ್ದರೂ ಗಣನೀಯವಾಗಿವೆ. ಜಿಂಜಿಯ ನಾಯಕರು ಸು.2ಳಿ ಶತಮಾನಗಳ ಕಾಲ ಆ ಪ್ರದೇಶದ ನಾಯಕತ್ವವನ್ನು ವಹಿಸಿ ಅಲ್ಲಿಯ ಆರ್ಥಿಕ ಮತ್ತು ಸಾಮಾಜಿಕ ನೆಮ್ಮದಿಗೆ ಕಾರಣರಾಗಿದ್ದರು. (ಜಿ.ಆರ್.ಆರ್.)

**ತಂಜಾವೂರು:** ಸು.1532–1675. ವಿಜಯನಗರ ಸಾಮ್ರಾಜ್ಯದ ಆಶ್ರಿತರಾಗಿದ್ದು ಮುಂದೆ ಸ್ವತಂತ್ರರಾಗಿ ತಂಜಾವೂರಿನಿಂದ ಆಡಳಿತ ನಡೆಸಿದ ರಾಜಮನೆತನ. ಇವರ ಸಂತತಿ ಸು.1532 ರಲ್ಲಿ ಸೇವಪ್ಪನಾಯಕನಿಂದ ಸ್ಥಾಪಿತವಾಯಿತು. ವಿಜಯನಗರದ ಚಕ್ರವರ್ತಿಯಾದ ಅಚ್ಯುತರಾಯನ ರಾಣಿ ತಿರುಮಲಾಂಬೆಯ ತಂಗಿಯನ್ನು ಮದುವೆಯಾಗಿದ್ದ ಸೇವಪ್ಪನಾಯಕ ತನ್ನ ಜೀವನಪರ್ಯಂತ ವಿಜಯನಗರದ ಪರಮಾಧಿಕಾರಕ್ಕೆ ಮಣಿದು ಸಾರ್ವಭೌಮರಿಗೆ ನಿಷ್ಠೆಯಿಂದಿದ್ದ. ಈತನ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸುವ ಅನೇಕ ದಾನಶಾಸನಗಳಿವೆ. ಇವನ ಆಸ್ಥಾನದಲ್ಲಿ ಹಲವು ಪ್ರೌಢ ಕವಿಗಳೂ ಪಂಡಿತರೂ ಇದ್ದರು. ಅವರಲ್ಲಿ ಗೋವಿಂದ ದೀಕ್ಷಿತ ಕವಿಯ ಹೆಸರನ್ನು ಹೇಳಬಹುದು. ಇವನು ಸಾಹಿತ್ಯಸುಧಾ ಮತ್ತು ಸಂಗೀತಸುಧಾನಿಧಿ ಎಂಬ ಕೃತಿಗಳನ್ನು ರಚಿಸಿದ್ದಾನೆ.

ಸೇವಪ್ಪನಾಯಕನ ಅನಂತರ ಅವನ ಮಗ ಅಚ್ಯುತಪ್ಪನಾಯಕ ಆಳಿದ. ಈತ ತಂದೆಯ ನೀತಿಯನ್ನೇ ಅನುಸರಿಸಿದ. ಎರಡನೆಯ ಶ್ರೀರಂಗರಾಯನ ಸೋದರ ಪ್ರಾಂತ್ಯಪಾಲ ಆಗಿದ್ದ ಒಂದನೆಯ ವೆಂಕಟರಾಯನ ಪಾಲನೆಗೆ ಒಳಪಟ್ಟಿದ್ದ ತಂಜಾವೂರು, ಮದುರೆ ಹಾಗೂ ಜಿಂಜಿ ರಾಜ್ಯಗಳ ಪೈಕಿ ತಂಜಾವೂರಿನ ನಾಯಕರು ವಿಜಯನಗರದ ಸಾರ್ವಭೌಮರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮದುರೆಯ ಕೃಷ್ಣಪ್ಪನಾಯಕನ ಮಗ ವೀರಪ್ಪ ನಾಯಕ ಕಪ್ಪವನ್ನು ಸಲ್ಲಿಸದೆ ದಂಗೆ ಎದ್ದಾಗ ತಂಜಾವೂರಿನ ಅಚ್ಯುತಪ್ಪ ನಾಯಕ ಶ್ರೀರಂಗರಾಯನ ಪರವಾಗಿ ವೆಂಕಟರಾಯರೊಡನೆ ಸೇರಿ ಮದುರೆಯ ವೀರಪ್ಪನ ಮಗನ ಸೊಕ್ಕು ಮುರಿದು ಸಾರ್ವಭೌಮರಿಗೆ ಸಲ್ಲಬೇಕಾಗಿದ್ದ ಕಪ್ಪವನ್ನು ಸಲ್ಲಿಸುವಂತೆ ಮಾಡಿ ತನ್ನ ಸ್ವಾಮಿನಿಷ್ಠೆಯನ್ನು ಪ್ರಕಟಿಸಿದ್ದ. ಇವನು ಗುರುಹಿರಿಯರಲ್ಲಿ ಭಕ್ತಿ ಇಟ್ಟಿದ್ದ. ಸುಮತೀಂದ್ರ ಮಠದ ಗುರುಗಳಾದ ವಿಜಯೇಂದ್ರತೀರ್ಥರಿಗೆ ಒಂದು ಗ್ರಾಮವನ್ನು ಉಂಬಳಿಯಾಗಿ ಕೊಟ್ಟಿದ್ದನೆಂದು 1577–78ರ ಅರಿವಿಳಿಮಂಗಲಂ ತಾಮ್ರಶಾಸನದಿಂದ ತಿಳಿದುಬರುತ್ತದೆ. ಇವನು ಸ್ವಾಮಿನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದನಾದರೂ ಶ್ರೀರಂಗರಾಯನ ತರುವಾಯ ಅಧಿಕಾರಕ್ಕೆ ಬಂದ ಮುಮ್ಮಡಿ ರಾಮರಾಯನನ್ನು ಧಿಕ್ಕರಿಸಿ ಸ್ವಾತಂತ್ರ್ಯ ಘೋಷಿಸಿಕೊಂಡನೆಂದು, 1ನೆಯ ವೆಂಕಟರಾಯನ ಪರಮಾಧಿಕಾರವನ್ನು ತಂಜಾವೂರಿನ ನಾಯಕರು ಅಂಗೀಕರಿಸಲಿಲ್ಲವೆಂದೂ ಜೆಸುಯಿಟ್

ಪಾದ್ರಿಗಳ ಪತ್ರಗಳಿಂದ ತಿಳಿದುಬರುತ್ತದೆ. ಈ ಕಾರಣದಿಂದ ಕುಪಿತನಾದ ವೆಂಕಟರಾಯ ತಂಜಾವೂರಿನ ಮೇಲೆ ದಂಡೆತ್ತಿ ಬಂದನಾದರೂ ಯುದ್ಧ ಸಂಭವಿಸಿದಂತೆ ತೋರುವುದಿಲ್ಲ. ಏಕೆಂದರೆ ಅಚ್ಯುತಪ್ಪ ನಾಯಕನ ಸ್ವಾಮಿನಿಷ್ಠೆಯನ್ನು ಸಾರುವ ಹಾಗೂ ವೆಂಕಟರಾಯನ ಪರಮಾಧಿಕಾರವನ್ನು ಅವನು ಅಂಗೀಕರಿಸಿದ್ದನೆಂದು ತಿಳಿಸುವ ಉಲ್ಲೇಖಗಳು ಅವನ ಶಾಸನಗಳಲ್ಲಿಯೇ ಇವೆ. 1595ರ ಸುಮಾರಿನಲ್ಲಿ ಮದರಾಸಿನ ಬಳಿ ಇದ್ದ ಸೇಂಟ್ ತೋಮೆಗಾಗಿ ಅವರಿಬ್ಬರ ಮಧ್ಯೆ ವಿರಸವುಂಟಾಗಿತ್ತೆಂದು ಊಹಿಸಲಾಗಿದೆ. ಆದರೂ ಯುದ್ಧ ನಡೆಯಿತೆಂದು ಹೇಳಲು ಆಧಾರಗಳು ಸಿಕ್ಕಿಲ್ಲ.

1609ರಲ್ಲಿ ಮದುರೆಯ ಸಿಂಹಾಸನಕ್ಕೆ ಬಂದ ಮುತ್ತುವೀರಪ್ಪನಾಯಕ ವಿಜಯನಗರಕ್ಕೆ ಕಪ್ಪಕಾಣಿಕೆಗಳನ್ನು ಕೊಡದೆ ವಿದ್ರೋಹಿಗಳ ನಾಯಕನಾದ ಜಗರಾಯನಿಗೆ ಅಂತರ್ಯುದ್ಧದಲ್ಲಿ ಸಹಾಯಮಾಡಿದ. ಆ ಸಂದರ್ಭದಲ್ಲಿ ತಂಜಾವೂರಿನ ಅಚ್ಯುತಪ್ಪ ನಾಯಕ ವಿಜಯನಗರದ ವೆಂಕಟರಾಯನೊಂದಿಗೆ ಸಹಕರಿಸಿದ. ವೆಂಕಟರಾಯನ ಸೇನಾನಿ ಮಾಟ್ಲ ಆತನೊಂದಿಗೆ ಸೇರಿ ಮುತ್ತುವೀರಪ್ಪನನ್ನು ಸೋಲಿಸಿ ವೆಂಕಟರಾಯನ ವಿಶ್ವಾಸವನ್ನು ಗಳಿಸಿಕೊಂಡಿದ್ದ. ಇವನ ಮಗ ರಘುನಾಥ ಈ ಯುದ್ಧದಲ್ಲಿ ತೋರಿಸಿದ ಸಾಹಸಕ್ಕಾಗಿ ಪೆನುಗೊಂಡದ ದರ್ಬಾರಿನಲ್ಲಿ 1ನೆಯ ವೆಂಕಟರಾಯ ಅವನಿಗೆ ಯೋಗ್ಯ ಉಡುಗೊರೆಯಾಗಿ ಉತ್ತಮ ಕುದುರೆಗಳನ್ನೂ, ಆಭರಣಗಳನ್ನೂ ಕೊಟ್ಟು ಅವನನ್ನು ಗೌರವಿಸಿದ. ಮತ್ತೊಮ್ಮೆ 1611 ರಲ್ಲಿ ಅಚ್ಯುತಪ್ಪ ಮದುರೆಯ ಮುತ್ತುವೀರಪ್ಪನನ್ನು ಎದುರಿಸಬೇಕಾಯಿತು. ಈ ಯುದ್ಧದಲ್ಲಿ ಮುತ್ತುವೀರಪ್ಪನಿಗೆ ತಂಜಾವೂರಿನ ವಿರುದ್ಧ ಜಯ ಲಭಿಸಲಿಲ್ಲ. ಮದುರೆಯ ನಾಯಕರ ಯುದ್ಧಾಭಿಲಾಷೆಯನ್ನು ಅನುಭವಿ ರಾಜಕಾರಣಿ ಮಂತ್ರಿ ಗೋವಿಂದ ದೀಕ್ಷಿತ ಅರಿತಿದ್ದ. ತರುಣ ರಘುನಾಥ ಸಕಲ ವಿಧದಲ್ಲೂ ರಾಜ್ಯವನ್ನಾಳಲು ಮತ್ತು ಶತ್ರುಗಳನ್ನು ಎದುರಿಸಲು ಸಮರ್ಥನಾಗಿದ್ದುದರಿಂದ ಅವನನ್ನು ಸಿಂಹಾಸನಕ್ಕೆ ತರಬೇಕೆಂದು ಸಲಹೆ ಮಾಡಿದ. ಅದರಂತೆ ಅಚ್ಯುತಪ್ಪ ನಾಯಕ ಇನ್ನು ಜೀವಿಸಿದ್ದಾಗಲೇ ರಘುನಾಥ ಪಟ್ಟಕ್ಕೆ ಬಂದ. ಅಚ್ಯುತಪ್ಪ ನಾಯಕ ಅನೇಕ ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ದಾನದತ್ತಿ ಮತ್ತು ಉಂಬಳಿಗಳನ್ನು ಕೊಟ್ಟಿದ್ದ. ಆ ವೇಳೆಗಾಗಲೇ ದಕ್ಷಿಣ ಭಾರತದಲ್ಲಿ ಹರಡಿಕೊಂಡಿದ್ದ ಪೋರ್ಚುಗೀಸರೊಂದಿಗೆ ಇವನು ಸ್ನೇಹದಿಂದಲೇ ಇದ್ದ.

ಮೊದಲೇ ಸಾಹಸಿಯೆನಿಸಿಕೊಂಡಿದ್ದ ರಘುನಾಥನನ್ನು ರಾಜ್ಯದ ಭದ್ರತೆಯ ದೃಷ್ಟಿಯಿಂದ ಸಿಂಹಾಸನಕ್ಕೆ ತರಲಾಯಿತೆಂದು ಗೋವಿಂದ ದೀಕ್ಷಿತ ವಿರಚಿತ ಸಾಹಿತ್ಯ ರತ್ನಾಕರದಲ್ಲಿ ವಿವರಣೆಯಿದೆ. ಇವನ ಆಳಿಕೆಯ ಕಾಲ 1614–34. ರಘುನಾಥ ನಾಯಕ ಪೆನುಗೊಂಡದ ಆಸ್ಥಾನಕ್ಕೆ ನಿಷ್ಠೆಯಿಂದಿದ್ದ. ತನ್ನ ಸ್ವಾಮಿಯಾದ ವೆಂಕಟರಾಯನ ರಾಜಧಾನಿಯ ಮೇಲೆ ಮಹಮದೀಯರು ಧಾಳಿ ಮಾಡಿದಾಗ ರಘುನಾಥ ನೆರವಾದ. ಅಲ್ಲದೆ ಮೊರಸುನಾಡಿನಲ್ಲಿ ಉಂಟಾದ ದಂಗೆಯನ್ನು ಅಡಗಿಸುವುದರಲ್ಲೂ ಸಹಕರಿಸಿದ. ವೆಂಕಟರಾಯನ ವಿರುದ್ಧ ಜಿಂಜಿಯ ಕೃಷ್ಣಪ್ಪನಾಯಕ ದಂಗೆಯೆದ್ದಿದ್ದ. ಅವನನ್ನು ವಿಜಯನಗರದವರು ಸೆರೆ ಹಿಡಿದು ಇಟ್ಟಿದ್ದಾಗ ರಘುನಾಥ ಮಧ್ಯಪ್ರವೇಶಿಸಿ ಅವನನ್ನು ಸೆರೆಯಿಂದ ಬಿಡಿಸಿದ. ಈ ಉಪಕಾರಕ್ಕಾಗಿ ಜಿಂಜಿಯ ನಾಯಕ ರಘುನಾಥನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ.

ಮುಮ್ಮಡಿ ಶ್ರೀರಂಗರಾಯನ ಕಾಲದಲ್ಲಿ ವಿಜಯನಗರದ ಸಿಂಹಾಸನಕ್ಕಾಗಿ ಅಂತರ್ಯುದ್ಧ ಮುಂದುವರಿಯಿತು. ಅದರಲ್ಲಿ ತಂಜಾವೂರಿನ ರಘುನಾಥ ನಾಯಕ ಗಣನೀಯ ಪಾತ್ರ ವಹಿಸಿದ್ದ. ವಿದ್ರೋಹಿ ನಾಯಕನಾದ ಜಗರಾಯನೊಂದಿಗೆ ಮದುರೆ ನಾಯಕರು ಜಿಂಜಿಯ ನಾಯಕರೂ ಸಹಕರಿಸಿದ್ದರು. ಇವರ ವಿರುದ್ಧವಾಗಿ ಯಾಚಮ ನಾಯಕ ಮೊದಲಾದವರು ರಘುನಾಥನ ನಾಯಕತ್ವದಲ್ಲಿ ರಾಜಕುಮಾರ 4ನೆಯ ರಾಮದೇವನಿಗೆ ಸಿಂಹಾಸನವನ್ನು ಉಳಿಸಿಕೊಡಲು ಹೋರಾಡಿದರು. ಈ ಅಂತರ್ಯುದ್ಧದಲ್ಲಿ ರಘುನಾಥನ ಪ್ರವೇಶದಿಂದಾಗಿ ರಾಮದೇವನಿಗೆ ವಿಜಯಲಕ್ಷ್ಮಿ ಒಲಿದಳು. 1617–18 ರಲ್ಲಿ ನಡೆದ ತೋಪುರು ಕದನದಲ್ಲಿ ರಘುನಾಥ ಪ್ರಚಂಡ ವಿಜಯ ಸಾಧಿಸಿದ. ಅಚ್ಯುತಪ್ಪ ನಾಯಕನ ಹಾಗೂ ರಘುನಾಥನ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತನ ಸೋದರ ಯಜ್ಞನಾರಾಯಣ ದೀಕ್ಷಿತನ ಸಂಸ್ಕೃತ ಕಾವ್ಯ ಸಾಹಿತ್ಯರತ್ನಾಕರದಲ್ಲೂ ರಘುನಾಥನ ಆಸ್ಥಾನದಲ್ಲಿದ್ದ ಕವಯಿತ್ರಿ ರಾಮಭದ್ರಾಂಬ ರಚಿಸಿದ ರಘುನಾಥಾಭ್ಯುದಯಂ ಕಾವ್ಯದಲ್ಲೂ ಈ ಬಗ್ಗೆ ವಿವರಗಳಿವೆ.

ಮದರಾಸಿನ ಬಳಿ ಇದ್ದ ಸೇಂಟ್ ತೋಮೆಗಾಗಿ ರಘುನಾಥ ಆಸೆಪಟ್ಟಂತೆ ತೋರುತ್ತದೆ. ಆ ಕಾರಣ ವಿಜಯನಗರದವರೊಂದಿಗೆ ವಿರಸ ಉಂಟಾಗಿರಬೇಕು. ಆದ್ದರಿಂದ ಇವನು ಸ್ವಲ್ಪ ಕಾಲದ ಅನಂತರ ವಿಜಯನಗರದವರಿಗೂ ಪೋರ್ಚುಗೀಸರಿಗೂ ನಡೆದ ಯುದ್ಧದಲ್ಲಿ ಪೋರ್ಚುಗೀಸರಿಗೆ ಸಹಾಯ ಮಾಡಿದನೆಂದು ತೋರುತ್ತದೆ. ಮುಂದೆ ಅಂತರ್ಯುದ್ಧದ ಸಂದರ್ಭದಲ್ಲಿ ಈ ಸ್ಥಳ ವಿಜಯನಗರದವರ ಕೈತಪ್ಪಿ ಪೋರ್ಚುಗೀಸರ ವಶವಾಯಿತು.

ತೋಪೂರು ವಿಜಯದ ಅನಂತರ ರಘುನಾಥ ವೈಭವದಿಂದ ರಾಜ್ಯವಾಳಿದ. 1620ರ ಸುಮಾರಿಗೆ ಇವನಿಗೂ ಪೋರ್ಚುಗೀಸರಿಗೂ ವಿರಸ ಉಂಟಾಯಿತು. ರಘುನಾಥ ಅವರನ್ನು ನಾಗಪಟ್ಟಣದಿಂದ ಹೊರದೂಡಿದನಲ್ಲದೆ, ಅವರು ನೆಲೆಯೂರಿದ ಉತ್ತರ ಸಿಂಹಳವನ್ನೂ (ಈಗಿನ ಶ್ರೀಲಂಕ) ಅತಿಕ್ರಮಿಸಿದ. ಅವನು ಸಿಂಹಳವನ್ನು ಮುಟ್ಟಲು ಸಮುದ್ರದಲ್ಲಿ ನೌಕಾ ಸೇತುವೆಯನ್ನೇ ನಿರ್ಮಿಸಿದನೆಂದು, ಇವನು ಸಿಂಹಳದಲ್ಲಿ ಕಾಲಿಟ್ಟಾಗ ಪೋರ್ಚುಗೀಸರು ತಮ್ಮ ನೌಕೆಗಳನ್ನು ಹತ್ತಿ ಪಲಾಯನ ಮಾಡಿದರೆಂದು ಹೇಳಲಾಗಿದೆ. ಇವನು ಸಿಂಹಳದ ಮಿತ್ರ ಸಾಂಗಿಲಿಯನ್ನು ಮತ್ತೆ ಸಿಂಹಾಸನದ ಮೇಲೆ ಕೂರಿಸಿ ಅವನ ರಕ್ಷಣೆಗಾಗಿ ಒಂದು ಸೇನಾ ತುಕಡಿಯನ್ನು ಬಿಟ್ಟು ಹಿಂತಿರುಗಿದ. ರಘುನಾಥ ಇಂಗ್ಲಿಷರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದ. ತಂಜಾವೂರು ರಾಜ್ಯದಲ್ಲಿ ವ್ಯಾಪಾರದಲ್ಲಿ ತೊಡಗುವಂತೆ 1622ರಲ್ಲಿ ಅವರನ್ನು ಆಹ್ವಾನಿಸಿದ. ಡಚ್ಚರ ಹಡಗೊಂದು ಪೋರ್ಚುಗೀಸರ ಹಲ್ಲೆಗೆ ಗುರಿಯಾದಾಗ ಡಚ್ಚರ ನಾಯಕ ರೋಯ್ಲೆಂಟ್ ಕ್ರೇಪ್ ತಂಜಾವೂರಿನಲ್ಲಿ ಆಶ್ರಯ ಕೋರಿದ. ಅವರನ್ನು ರಘುನಾಥ ಆದರದಿಂದ ಕಂಡನಲ್ಲದೆ, ಸಿಂಹಳದಿಂದ ಬಂದಿದ್ದ ಡಚ್ ನಾಯಕ ಜೆಡ್ಡ್ ಎಂಬುವನಿಗೂ ಆಶ್ರಯ ನೀಡಿ ಟ್ರಾಂಕ್ಯುಬಾರ್ ನಲ್ಲಿ ಒಂದು ಕೋಟೆ ನಿರ್ಮಿಸಲು ಅನುಮತಿ ಕೊಟ್ಟ.

ರಘುನಾಥನ ಕಾಲದಲ್ಲಿ ತಂಜಾವೂರಿನ ಆಸ್ಥಾನ ವೈಭವಪೂರ್ಣವಾಗಿತ್ತು. ಯುದ್ಧಕೌಶಲದಲ್ಲಿ ನುರಿತಿದ್ದಂತೆಯೆ, ಇವನು ಲೇಖನಿ ಹಿಡಿದು ಕಾವ್ಯರಚನೆ ಮಾಡುವುದರಲ್ಲಿಯೂ ಪರಿಣತನಾಗಿದ್ದ. ಪಾರಿಜಾತಾಪಹರಣಂ, ವಾಲ್ಮೀಕಿಚರಿತಂ, ಅಚ್ಯುತಾಭ್ಯುದಯಂ, ಗಜೇಂದ್ರ ಮೋಕ್ಷಂ, ರುಕ್ಮಿಣೀಕೃಷ್ಣ ವಿವಾಹ ಯಕ್ಷಗಾನಂ ಮೊದಲಾದುವು ಇವನು ತೆಲುಗು ಹಾಗೂ ಸಂಸ್ಕೃತ ಭಾಷೆಗಳಲ್ಲಿ ರಚಿಸಿದ ಕೃತಿಗಳು. ಇವನು ಸಂಗೀತಸುಧಾ ಎಂಬ ಗ್ರಂಥದಲ್ಲಿ ಹೊಸ ರಾಗತಾಳಗಳನ್ನು ವಿಮರ್ಶಿಸಿದ್ದಾನೆ. ಈತ ವೀಣಾವಾದನಕ್ಕೆ ಪ್ರೋತ್ಸಾಹ ನೀಡಿದ. ತಂಜಾವೂರು ಇವನ ಕಾಲದಲ್ಲಿ ಕಲೆಗಳ ನೆಲೆಯಾಗಿ ಬೆಳೆದು ಇಂದಿಗೂ ಅದರ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಇವನು ಇಷ್ಟದೇವರಾದ ರಾಮನಿಗಾಗಿ ರಾಮೇಶ್ವರದಲ್ಲಿ ದೇವಾಲಯಗಳನ್ನು ನಿರ್ಮಿಸಿದ. ಕುಂಭಕೋಣಮ್‌ನಲ್ಲಿ ಕುಂಭೇಶ್ವರ ದೇವಸ್ಥಾನದ ಪ್ರಸಿದ್ಧ ಗೋಪುರವನ್ನೂ ಇವನು ನಿರ್ಮಿಸಿದ.

ರಘುನಾಥನ ಮಗ ವಿಜಯರಾಘವ 1634–73ರಲ್ಲಿ ಆಳಿದ. ತಂದೆಯಂತೆ ಇವನು ಪರಾಕ್ರಮಿಯಲ್ಲದಿದ್ದರೂ ಸಾಹಿತ್ಯ ಮತ್ತು ಕಲಾಪೋಷಕನಾಗಿದ್ದ. ಕಲೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ. ಇವನೇ ಹೆಸರಾಂತ ಕವಿಯಾಗಿದ್ದ. ಇವನ ರಾಜಕೀಯ ವ್ಯಕ್ತಿತ್ವ ಅಷ್ಟಾಗಿ ಪ್ರಕಾಶಕ್ಕೆ ಬರಲಿಲ್ಲ. ವಿಜಯನಗರದ ಸಾರ್ವಭೌಮರೊಂದಿಗೆ ಇವನು ಹಿಂದಿನ ನೀತಿ ಅನುಸರಿಸಲಿಲ್ಲ. ಆರನೆಯ ಶ್ರೀರಂಗ ಪೆನುಗೊಂಡದಲ್ಲಿ 1642 ರಲ್ಲಿ ವಿಜಯನಗರ ಸಿಂಹಾಸನವನ್ನೇರಿದ ಕಾಲದಲ್ಲಿ ವಿಜಯನಗರದ ವೈಭವ ಕೇವಲ ನೆನಪಾಗಿ ಮಾತ್ರ ಉಳಿದಿತ್ತು. ಅದೇ ಸಮಯವನ್ನು ಸಾಧಿಸಿ ಗೋಲ್ಕೊಂಡ ಹಾಗೂ ಬಿಜಾಪುರ ಸುಲ್ತಾನರು ವಿಜಯನಗರ ಸಾಮಂತರ ಆಳಿಕೆಯಲ್ಲಿದ್ದ ತಂಜಾವೂರು, ಮದುರೆ ಮತ್ತು ಜಿಂಜಿ ರಾಜ್ಯಗಳ ಮೇಲೆ ಧಾಳಿಮಾಡಿದರು. ಬಿಜಾಪುರದ ಸೇನಾನಿ ಷಾಜಿ ಜಿಂಜಿಯವರೆಗೂ ರಾಜ್ಯವನ್ನು ಗೆದ್ದು ಹೊಸದಾಗಿ ಆಕ್ರಮಿಸಿದ ಪ್ರಾಂತಕ್ಕೆ ತಾನೇ ಪ್ರಾಂತಪಾಲನಾದ.

ಇದೇ ಸಮಯಕ್ಕೆ ಮದುರೆಯ ತಿರುಮಲನಾಯಕ ತನ್ನ ಸ್ವಾತಂತ್ರ್ಯ ಘೋಷಿಸಲು ಯತ್ನಿಸಿದನೆಂದು ಅವನ ಮೇಲೆ ಆರನೆಯ ಶ್ರೀರಂಗರಾಯ ಹೂಡಬೇಕೆಂದಿದ್ದ ಯುದ್ಧವನ್ನು ಎದುರಿಸಲು ಮದುರೆಯ ನಾಯಕ ತಂಜಾವೂರಿನವರನ್ನೂ ಜಿಂಜಿಯವರನ್ನೂ ಆಹ್ವಾನಿಸಿದ್ದ. ಆದರೆ ಈ ಸುದ್ದಿಯನ್ನು ವಿಜಯರಾಘವ ನಾಯಕ ಶ್ರೀರಂಗರಾಯನಿಗೆ ತಿಳಿಸಿ ಅವನೊಂದಿಗೆ ಸೇರಿಕೊಂಡ. ತಂಜಾವೂರಿನ ನಾಯಕನ ವಿಶ್ವಾಸಘಾತಕತನಕ್ಕೆ ತಕ್ಕ ಶಿಕ್ಷೆ ಕೊಡಬೇಕೆಂಬ ಉದ್ದೇಶದಿಂದ ತಿರುಮಲನಾಯಕ ಗೋಲ್ಕೊಂಡದ ಸುಲ್ತಾನನೊಂದಿಗೆ ಸಂಧಿ ಮಾಡಿಕೊಂಡು ಅವನು ಹಿಂದಿನಿಂದ ಬಂದು ಶ್ರೀರಂಗರಾಯನ ಸೇನೆಯ ಮೇಲೆ ಎರಗುವಂತೆ ಮಾಡಿದ. ಹೀಗಾಗಿ ಶ್ರೀರಂಗರಾಯ ಜಿಂಜಿಯಿಂದ ಕಾಲ್ತೆಗೆಯಬೇಕಾಯಿತು. ಅನಂತರ 1650 ರಲ್ಲಿ ಶ್ರೀರಂಗ, ತಂಜಾವೂರು, ಮದುರೆ ಹಾಗೂ ಜಿಂಜಿಯ ನಾಯಕರನ್ನು ಒಟ್ಟುಗೂಡಿಸಿ, ತಂಜಾವೂರಿನ ಸಮೀಪದಲ್ಲಿ ಸುಲ್ತಾನರನ್ನು ಎದುರಿಸಲು ಸೇನೆಯನ್ನು ಸಜ್ಜುಗೊಳಿಸಿದ. ಆದರೆ ಇವರಲ್ಲಿ ಒಡಕುಂಟಾಗಿ ಶ್ರೀರಂಗ ಮೈಸೂರಿನ ರಾಜನಿಂದ ಸಹಾಯವನ್ನು ಯಾಚಿಸುವಂತಾಯಿತು. ಇಂಥ ದುಸ್ಥಿತಿಯಲ್ಲಿ ಗೋಲ್ಕೊಂಡದ ಸೇನೆ ತಂಜಾವೂರಿನ ವಿಜಯರಾಘವ ನಾಯಕನನ್ನು ಸೋಲಿಸಿತು. ಅವನು ಶರಣಾಗಿ ಸಂಧಿಮಾಡಿಕೊಂಡ. ಇದೇ ಸಮಯವನ್ನು ಸಾಧಿಸಿ ಬಿಜಾಪುರದವರೂ ಗೋಲ್ಕೊಂಡದವರನ್ನು ಸೇರಿಕೊಂಡು ಶ್ರೀರಂಗನ ಮೇಲೆ ಯುದ್ಧ ಹೂಡಿ ಅವನ ಪರಮಾಧಿಕಾರಕ್ಕೆ ಒಳಪಟ್ಟಿದ್ದ ತಂಜಾವೂರು ಹಾಗೂ ಮದುರೆ ನಾಯಕ ರಾಜ್ಯಗಳ ಮೇಲೆ ನುಗ್ಗಿದರು. ತಂಜಾವೂರಿನ ವಿಜಯರಾಘವ ನಾಯಕ ದಟ್ಟವಾದ ಕಾಡಿನಲ್ಲಿ ಅಡಗಿಕೊಂಡ. ಮುಂದೆ ಸುಲ್ತಾನರೊಂದಿಗೆ ಸಂಧಾನ ನಡೆಸಿ ಶರಣಾಗಿ ಅವರ ಸಾರ್ವಭೌಮತ್ವವನ್ನು ಅಂಗೀಕರಿಸಿದ. ಶತ್ರುಗಳು ಹಿಂತಿರುಗಿದ ಅನಂತರವೂ ತನ್ನ ಸೇನೆಯನ್ನು ಪುನಃ ಚೇತನಗೊಳಿಸಲು ವಿಜಯರಾಘವ ಯಾವ ಪ್ರಯತ್ನವನ್ನು ಮಾಡಿದಂತಿಲ್ಲ. ಪ್ರತಿಯಾಗಿ ಆ ವೇಳೆಗಾಗಲೇ ಶತ್ರುಸೇನೆಯ ಕೊಳ್ಳೆಗೆ ಒಳಗಾಗಿದ್ದ ಪ್ರಜೆಗಳ ಮೇಲೆ ಕರಭಾರವನ್ನು ಹೇರಿದ. ದೀರ್ಘಕಾಲದಿಂದಲೂ ದುರಾಕ್ರಮಣ ಹಾಗೂ ನಿರಂಕುಶ ಪ್ರಭುತ್ವಕ್ಕೆ ತಲೆಬಾಗಿದ್ದ ಪ್ರಜೆಗಳು ವಿಧಿಯಿಲ್ಲದೆ ಈ ಕರಭಾರವನ್ನು ಹೊರಬೇಕಾಯಿತು.

ಹಿಂದಿನಿಂದಲೂ ತಂಜಾವೂರು ಸಂತತಿಯ ಬಗ್ಗೆ ಅಸೂಯೆಯಿಂದಿದ್ದ ಮದುರೆಯ ನಾಯಕ ಸಂತತಿಯಲ್ಲಿ 1659–80ರವರೆಗೂ ಚೊಕ್ಕನಾಥನೆಂಬವನು ಆಳುತ್ತಿದ್ದ. ಇವನು ತಂಜಾವೂರಿನ ಮೇಲೆರಗಿ ವಿಜಯರಾಘವನನ್ನು ಯುದ್ಧದಲ್ಲಿ ಕೊಂದ. ತಂಜಾವೂರಿನ ನಾಯಕ ಶ್ರೀರಂಗರಾಯನಿಗೆ ನಿಷ್ಠೆಯಿಂದಿದ್ದುದೇ ಈ ಯುದ್ಧಕ್ಕೆ ಕಾರಣವೆಂದು ತಿಳಿಯಲಾಗಿದೆ. ಇವನ ಮಗ ಮನ್ನಾರದಾಸನೂ ಯುದ್ಧದಲ್ಲಿ ಹೋರಾಡಿ ಮಡಿದ. ಅರಮನೆಯ ಸ್ತ್ರೀಸಮೂಹ

ದವರು ಆತ್ಮಾಹುತಿ ಮಾಡಿಕೊಂಡು ತಮ್ಮ ಶೀಲವನ್ನು ಉಳಿಸಿಕೊಂಡರು. ಒಂದು ಹಸುಳೆ ಮಾತ್ರ ಸಾವಿನ ದವಡೆಯಿಂದ ಪಾರಾಯಿತು. ಆ ಮಗುವೇ ಚೆಂಗಮಲದಾಸನೆಂದು ಹೆಸರಾದದ್ದು.

ವಿಜಯರಾಘವನಾಯಕ ಉದ್ದಾಮ ಪಂಡಿತ ಹಾಗೂ ಕವಿಯಾಗಿದ್ದ. ತೆಲುಗು ಭಾಷೆಯಲ್ಲಿ ರಚಿಸಲಾದ ರಘುನಾಥಾಭ್ಯುದಯಮು ಎಂಬುದು ತಂದೆಯನ್ನು ಕುರಿತು ಇವನು ಬರೆದ ನಾಟಕ. ಇದರಲ್ಲಿ ತಂದೆಯ ಕಾಲಕ್ಕೆ ಸಂದ ಕೆಲವು ಮಹತ್ತ್ವಪೂರ್ಣ ಐತಿಹಾಸಿಕ ಘಟನೆಗಳು ನಿರೂಪಿತವಾಗಿವೆ. ಇವನ ರಾಣಿ ರಾಜಮಾಂಬ ರಚಿಸಿದ ಮನ್ನಾರುದಾಸವಿಲಾಸ ತೆಲುಗು ಯಕ್ಷಗಾನದ ಬೆಳವಣಿಗೆಗೆ ಪ್ರೋತ್ಸಾಹಕಾರಿಯಾಯಿತು. ವಿಜಯರಾಘವನ ಪೋಷಣೆಯಲ್ಲಿದ್ದ ಅನೇಕ ಕವಿಗಳಲ್ಲಿ ಚೆಮಕೂರಿ ವೆಂಕಟಕವಿ ಪ್ರಸಿದ್ಧನಾದವ. ಈತ ರಚಿಸಿದ ಸಾರಂಗಧರಚರಿತ ಮತ್ತು ವಿಜಯವಿಲಾಸ ಕೃತಿಗಳು ತೆಲುಗು ವಾಙ್ಮಯದಲ್ಲಿ ಪ್ರೌಢಕಾವ್ಯಗಳೆನಿಸಿಕೊಂಡಿವೆ. ವಿಜಯರಾಘವ ಅನೇಕ ದಾನಧರ್ಮಗಳಿಗೂ ಹೆಸರಾಗಿದ್ದ.

ಮದುರೆಯ ತಿರುಮಲನಾಯಕನ ತಂಜಾವೂರು ಧಾಳಿಯ ಕಾಲದಲ್ಲಿ ಉಳಿದುಕೊಂಡ ಚೆಂಗುಮಲದಾಸನೇ ತಂಜಾವೂರು ನಾಯಕ ಸಂತತಿಯ ಕೊನೆಯ ನಾಯಕ. ಬಿಜಾಪುರದ ಸೇನೆ ತಂಜಾವೂರನ್ನು ಆಕ್ರಮಿಸಿದಾಗ ಷಾಜಿಯ ಮಗ ಏಕೋಜಿ ಚೆಂಗುಮಲದಾಸನನ್ನು ಸಿಂಹಾಸನಕ್ಕೇರಿಸಿದ. ಆದರೆ ಕೆಲವೇ ದಿನಗಳಲ್ಲಿ ಏಕೋಜಿ ಇವನನ್ನು ಪದಚ್ಯುತಗೊಳಿಸಿ ತಾನೇ ರಾಜನಾದ. ಹೀಗೆ 1675ರಲ್ಲಿ ತಂಜಾವೂರಿನ ನಾಯಕರ ಸಂತತಿ ಅಳಿದು ಏಕೋಜಿ ಯಿಂದ ಮರಾಠರ ಸಂತತಿ ಆರಂಭವಾಯಿತು. (ಎಂ.ಎನ್.ವಿ.ಆರ್.)

**ಮದುರೆ:** ವಿಜಯನಗರದ ಒಂದು ಭಾಗವಾದ ಮದುರೆ ಪ್ರಾಂತದ ಆಡಳಿತಕ್ಕಾಗಿ ಅಮರಮಾಗಣಿ (ಪ್ರಾಂತ)ಗಳ ಒಡೆಯರನ್ನು ಅಮರನಾಯಕರೆಂದು ಕರೆಯುತ್ತಾರೆ. ಈ ಅಮರನಾಯಕರನ್ನು ನೇಮಕಗೊಳಿಸಿದಾಗ ಇವರು ಕ್ರಮೇಣ ಸ್ವತಂತ್ರ ರಾಜರಂತೆ ಆಳಿದವರು. ಕೃಷ್ಣದೇವರಾಯನಿಂದ ಅಧಿಕಾರಕ್ಕೆ ಬಂದ ನಾಗಮನಾಯಕ ಇವರ ಮೂಲ ಪುರುಷ. ಇವನ ಅನಂತರ ವಿಶ್ವನಾಥನಾಯಕ ಆಳಿದ (1529–64). ಇವನು ಮದುರೆಯ ಕೋಟೆಯನ್ನೂ ಸುಂದರೇಶ್ವರ ಮತ್ತು ಮೀನಾಕ್ಷಿ ದೇವಾಲಯವನ್ನು ನಿರ್ಮಿಸಿದ. ಈತ ಶ್ರೀರಂಗದ ದೇವಾಲಯ ವನ್ನು ಪುನರುಜ್ಜೀವನಗೊಳಿಸಿ, ವ್ಯವಸಾಯ ಮತ್ತು ನೀರಾವರಿಗೆ ಹೆಚ್ಚು ಪ್ರಾಮುಖ್ಯ ಕೊಟ್ಟ. ಈತ ಒಳ್ಳೆಯ ಯೋಧ, ಆಡಳಿತಗಾರ. ಕೊಬ್ಬಿದ ಪಾಳೆಯಗಾರ ನಾಗಮನಾಯಕನ ಉತ್ತರಾಧಿಕಾರಿಯಾದ 1ನೆಯ ತುಂಬಿಚ್ಚಿನಾಯಕನನ್ನು 1ನೆಯ ಕೃಷ್ಣಪ್ಪನಾಯಕ (1564–72) ಅಡಗಿಸಿ, ಸಿಂಹಳದ (ಶ್ರೀಲಂಕ) ದೊರೆಯಿಂದ ಕಪ್ಪಕಾಣಿಕೆ ವಸೂಲು ಮಾಡಿದ. ಕೃಷ್ಣಾಪುರಂ, ತೆಪ್ಪಾಕುಲಂ ಮುಂತಾದ ಅಗ್ರಹಾರಗಳನ್ನೂ ಕೆಲವು ದೇವಾಲಯಗಳನ್ನೂ ನಿರ್ಮಿಸಿದ. ಈತ ದಕ್ಷ ಆಡಳಿತಗಾರನೆಂದು ಸಹ ಪ್ರಸಿದ್ಧನಾಗಿದ್ದ.

1ನೆಯ ವೀರಪ್ಪ ನಾಯಕ (1572–95) ವಿಜಯನಗರದ ನಂಬಿಕಸ್ಥ ಸಾಮಂತ. ಇವನು ಚಿದಂಬರಂ, ಸೋಮೇಶ್ವರ ಮತ್ತು ಮೀನಾಕ್ಷಿ ದೇವಾಲಯಗಳನ್ನು ಅಭಿವೃದ್ಧಿ ಗೊಳಿಸಿದನಲ್ಲದೆ ಅಪಾರ ಸಂಪತ್ತನ್ನು ದಾನಮಾಡಿದ. ಈತ ಧರ್ಮಿಷ್ಠನೆಂದೂ ನಿಷ್ಪಕ್ಷಪಾತ ಆಡಳಿತಗಾರನೆಂದೂ ಹೆಸರು ಪಡೆದ.

2ನೆಯ ಕೃಷ್ಣಪ್ಪನಾಯಕನೂ (1595–1601) ವಿಧೇಯ ಸಾಮಂತ. ಇವನ ಕಾಲದಲ್ಲಿ ರಾಜ್ಯ ಸುಭದ್ರವಾಗಿ ಸುಖವಾಗಿತ್ತು. ಇವನ ತಮ್ಮ 3ನೆಯ ಕೃಷ್ಣಪ್ಪನಾಯಕ (1601–09) ತೀರಪ್ರದೇಶದಲ್ಲಿ ಪೋರ್ಚುಗೀಸರನ್ನು ತಡೆಗಟ್ಟಲು ರಾಮನಾಡಿನ ಸೇತುಪತಿಗಳ ಆಡಳಿತ ಪದ್ಧತಿಯನ್ನು ಸುವ್ಯವಸ್ಥೆಗೊಳಿಸಿದ. ಇವನು ಅಗ್ರಹಾರಗಳು, ಕೆರೆಗಳು ಮತ್ತು ದೇವಾಲಯ ಗಳನ್ನು ನಿರ್ಮಿಸಿದ. 2ನೆಯ ವೀರಪ್ಪನಾಯಕ (1609–23) ವಿಜಯನಗರದ ವಿದ್ರೋಹಿ ಜಗ್ಗರಾಯನಿಗೆ ಸಹಾಯಕನಾಗಿ, ತಂಜಾವೂರಿನ ನಾಯಕನಿಂದ ಪರಾಜಯ ಹೊಂದಿದ. ತಿರುಮಲನಾಯಕ (1623–59) ಇವನ ತಮ್ಮ. ಇವನು ವಿಜಯನಗರದಿಂದ ಸ್ವತಂತ್ರನಾದ. ತಿರುವಾಂಕೂರು, ರಾಮನಾಡು, ಮದುರೆ ಇವುಗಳಿಗೆ ಮುತ್ತಿಗೆ ಹಾಕಿದ ಮೈಸೂರಿನ ಸೈನ್ಯವನ್ನು ಸೋಲಿಸಿದ. ಇವನ ಕಾಲದಲ್ಲಿ ತಿರುಚಿಯಿಂದ ಮದುರೆಗೆ ರಾಜಧಾನಿಯ ವರ್ಗವಾಯಿತು. ಇವನು ಆಡಳಿತವನ್ನು ಸುವ್ಯವಸ್ಥೆಗೊಳಿಸಿದ. ವಿಜಯನಗರದ 3ನೆಯ ಶ್ರೀರಂಗರಾಯನನ್ನು ಈತ ಎದುರಿಸಿದ. ತೀರಪ್ರದೇಶದಲ್ಲಿ ಕಾರ್ಯನಿರತರಾಗಿದ್ದ ಯುರೋಪಿ ಯನರಿಂದ ತೆರಿಗೆಯನ್ನು ವಸೂಲಿಮಾಡುತ್ತಿದ್ದ. ಈತ ಸಾಹಸಿ, ಉದಾರಿ ಮತ್ತು ಯೋಧ. ಇವನು ಕಲೆ, ವಾಸ್ತುಶಿಲ್ಪ ಮೊದಲಾದುವುಗಳಿಗೆ ಪೋಷಕನಾಗಿ ಪ್ರಸಿದ್ಧನಾಗಿದ್ದ.

ಇವನ ತರುವಾಯ ಅನುಕ್ರಮವಾಗಿ ಮುತ್ತು ವೀರಪ್ಪನಾಯಕ ಮತ್ತು ಚೊಕ್ಕನಾಥ ನಾಯಕರು ಆಳಿದರು. ಚೊಕ್ಕನಾಥನ ಕಾಲದಲ್ಲಿ ರಾಜ್ಯದ ಅವನತಿ ಪ್ರಾರಂಭವಾಯಿತು. ಅವನ ಅನಂತರ ಮುತ್ತುವೀರಪ್ಪನಾಯಕ ಮತ್ತು ಮಂಗಮ್ಮಾಳ್ (1689–1706) ಆಳಿದರು. ಮಂಗಮ್ಮಾಳ್ ಮೊಗಲರ ಸಾಮಂತಳಾಗಿದ್ದಳು. ಇವಳು ಒಳ್ಳೆಯ ಆಡಳಿತಗಾರಳಾಗಿ, ಉದಾರಿಯಾಗಿ, ಅನೇಕ ಜನೋಪಕಾರಿ ಕೆಲಸಗಳನ್ನು ಮಾಡಿ ಪ್ರಸಿದ್ಧಳಾದಳು. ಅನಂತರ ಆಳಿದ ವಿಜಯರಂಗ ಚೊಕ್ಕನಾಥನ (1706–32) ಕಾಲದಲ್ಲಿ ಮದುರೆ ಅವನತಿಹೊಂದಿತು. ಈತ ಬೊಕ್ಕಸದ ಹಣವನ್ನೆಲ್ಲ ದಾನದತ್ತಿಗಳಿಗೆ ವಿನಿಯೋಗಿಸಿ ಬೇಜವಾಬ್ದಾರಿಯಿಂದ ವರ್ತಿಸಿದ. ಇವನ ಹೆಂಡತಿಯಾದ ಮೀನಾಕ್ಷಿಯ ಆಳಿಕೆಯ ಕಾಲದಲ್ಲಿ (1732–36) ರಾಜ್ಯದಲ್ಲಿ ಅಂತರ್ಯುದ್ಧ ಹೆಚ್ಚಿತು. ಆರ್ಕಾಟಿನ ಚಂದಾಸಾಹೇಬನ ಸೈನ್ಯ ಮುತ್ತಿಗೆ ಹಾಕಲಾಗಿ ಈಕೆ ಸೆರೆಸಿಕ್ಕಿ ಆತ್ಮಹತ್ಯೆ ಮಾಡಿಕೊಂಡಳು. ಮದುರೆಯ ನಾಯಕರ ಆಡಳಿತದಲ್ಲಿ ವಿಜಯನಗರ ಸಾಮ್ರಾಜ್ಯದ ನಾಯಕರ ಪದ್ಧತಿಯಿತ್ತು. ಲೋಕೋಪಯೋಗಿ ಕಾರ್ಯಗಳು, ದೇವಾಲಯಗಳು ನಿರ್ಮಾಣವಾದುವು. ನೀರಾವರಿ ಮತ್ತು ವ್ಯವಸಾಯ ಅಭಿವೃದ್ಧಿ ಹೊಂದಿದುವು. ಸಂಸ್ಕೃತ, ತಮಿಳು ಮತ್ತು ತೆಲುಗು ಭಾಷೆಗಳಿಗೆ ಉತ್ತೇಜನ ದೊರಕಿತು. ಕಲೆ ಮತ್ತು ವಾಸ್ತುಶಿಲ್ಪ ಅಭಿವೃದ್ಧಿ ಹೊಂದಿದುವು. ಮದುರೆ ಪ್ರಸಿದ್ಧ ವಾಸ್ತುಶಿಲ್ಪಕಲಾ ಕೇಂದ್ರವಾಯಿತು. (ವಿ.ಎಸ್.ಎಸ್.)

**ನಾಯಿ ಸ್ಮಾರಕಗಳು:** **ನೋಡಿ–ಮೂರ್ತಿಶಿಲ್ಪ**

**ನಾರಾಯಣಗುರು:** 1854–1928. ಭಾರತೀಯ ಸಂತ, ದಾರ್ಶನಿಕ, ಅನುಭಾವಿ, ಕವಿ, ಸಮಾಜಸುಧಾರಕ, ಆತ್ಮೋದ್ಧಾರ–ಲೋಕಹಿತ ಸಮನ್ವಯವನ್ನು ಬೋಧಿಸಿದ ಮಾರ್ಗದರ್ಶಕ ಗುರು. ಕೇರಳದ ರಾಜಧಾನಿ ತಿರುವನಂತಪುರಕ್ಕೆ 19 ಕಿಮೀ ದೂರದ ಚೆಂಪಾಯುಂಡಿ ಎಂಬ ಹಳ್ಳಿಯಲ್ಲಿ 1854 ಆಗಸ್ಟ್ 20ರಂದು ಜನಿಸಿದರು. ತಂದೆ ಮಾರನ್ ಎಳವ ಪಂಗಡದವರು. ವೃತ್ತಿ ಬೇಸಾಯವಾದರೂ ಸಂಸ್ಕೃತ, ಜ್ಯೋತಿಷ್ಯ, ಆಯುರ್ವೇದಗಳಲ್ಲಿ ವಿದ್ವಾಂಸರಾಗಿದ್ದು ಆಸನ್ (ಆಚಾರ್ಯ) ಎನಿಸಿಕೊಂಡು ಎಲ್ಲರ ಗೌರವ ಮನ್ನಣೆಗಳಿಗೆ ಪಾತ್ರರಾಗಿದ್ದರು. ರಾಮಾಯಣ ಮತ್ತು ಭಾರತ ವಾಚನ, ವ್ಯಾಖ್ಯಾನ ಮಾಡುತ್ತಿದ್ದುಂಟು. ಬಾಲ್ಯದಿಂದಲೇ ಗುರು ಅವರು ಪುಣ್ಯಕಥೆಗಳ ತತ್ತ್ವಾರ್ಥಗಳನ್ನೆಲ್ಲ ಗ್ರಹಿಸಿ ಉತ್ತಮ ಸಂಸ್ಕಾರ ಪಡೆದರು. ತಾಯಿ ಕುಟ್ಟಿ ಅಮ್ಮನ ಬುದ್ಧಿವಂತಿಕೆ, ಸಾತ್ವಿಕ ಮನೋಧರ್ಮ, ಸರಳವಾದ ನಡೆನುಡಿ, ಸೌಮ್ಯಸ್ವಭಾವ, ಪ್ರೀತಿ–ಕರುಣೆ ತುಂಬಿದ ಹೃದಯ ಇವೂ ಅವರಲ್ಲಿ ರಕ್ತಗತವಾಗಿ ಬಂದವು. 15ನೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಅತ್ಯಂತ ದುಃಖಿತರಾಗಿ ಹೇಳದೇ ಕೇಳದೇ ಮನೆಬಿಟ್ಟು ಹೊರಟು ಹೋದರು. 80ಕಿಮೀ ದೂರದ ಕರುನಾಗಪಲ್ಲಿಯಲ್ಲಿ ರಾಮನ್ ಪಿಳ್ಳೈ ಆಸನ್ನರ ಬಳಿ ಸು. 12 ವರ್ಷ ವಿದ್ಯಾಭ್ಯಾಸ ಮಾಡಿ ಸಂಸ್ಕೃತ, ವೇದೋಪನಿಷತ್ತುಗಳಲ್ಲಿ ಪಾರಂಗತರಾದರು. ತಂದೆಯ ಬಳಿಗೆ ಹಿಂದಿರುಗಿ ಅವರಿಂದ ವಿದ್ವಾನ್ ಎನ್ನಿಸಿಕೊಂಡರು.



ಸಾಂಸಾರಿಕ ಜೀವನದಲ್ಲಿ ಅಷ್ಟಾಗಿ ಆಸಕ್ತಿ ಇರದಿದ್ದರೂ ನಾರಾಯಣರು ಲೋಕರೂಢಿ ಯಂತೆ ಮದುವೆಯಾದರು. ಹೆಣ್ಣು ಪಕ್ಕದ ಹಳ್ಳಿಯ ವಿಷೋಪಶಮನ ಚಿಕಿತ್ಸೆಯಲ್ಲಿ ನಿಷ್ಣಾತನಾಗಿದ್ದ ದೇಶೀ ವೈದ್ಯನೊಬ್ಬನ ಮಗಳು. ಕೆಲವು ಕಾಲದಲ್ಲೇ ಹೆಂಡತಿ ತೀರಿಹೋಗಲಾಗಿ ನಾರಾಯಣರು ಸಾಂಸಾರಿಕ ಜೀವನವನ್ನು ಕೊನೆಗಾಣಿಸಿ ಪರಿವ್ರಾಜಕನಾಗಿ ಸಂಚರಿಸತೊಡಗಿದರು. ಕುಂಜನ್ ಪಿಳ್ಳೈ (ಚೆಟ್ಟಾಂಬಿಸ್ವಾಮಿ) ಮತ್ತು ಥೀಕ್ಕಾಡು ಅಯ್ಯಾವು ಎಂಬ ಇಬ್ಬರು ಗುರುಗಳು ಅವರಿಗೆ ದೊರಕಿದರು. ಕುಂಜನ್ ಪಿಳ್ಳೈ ಮಹಾಪಂಡಿತರು. ನಾರಾಯಣರ ಪ್ರತಿಭೆಯನ್ನು ಗುರುತಿಸಿ ಸಂಸ್ಕೃತದಲ್ಲಿ ಕಾವ್ಯರಚನೆ ಮಾಡಲು ಪ್ರೇರಣೆಯಿತ್ತು ಪ್ರೋತ್ಸಾಹಿಸಿದರು. ನಾರಾಯಣರು ಒಂಬತ್ತು ಶ್ಲೋಕಗಳ ನವಮಂಜರಿಯನ್ನು ರಚಿಸಿ ಗುರುವಿಗೆ ಅರ್ಪಿಸಿದರು. ಥೀಕ್ಕಾಡು ಅಯ್ಯಾವು ನಾರಾಯಣರಿಗೆ ಯೋಗವಿದ್ಯೆಯನ್ನು ಹೇಳಿಕೊಟ್ಟರು. ಅವಾವುದರಿಂದಲೂ ಅವರಿಗೆ ಶಾಂತಿ ದೊರೆಯಲಿಲ್ಲ. ಹೀಗೇಯೇ ಅಲೆದಾಡುತ್ತಿರುವಾಗ ದಾರಿಯಲ್ಲಿ ಅರುವಿಪುರಂ ಬಳಿಯ ಬಹು ರಮ್ಯವೂ ಪ್ರಶಾಂತವೂ ಆದ ಏಕಾಂತ ಸ್ಥಳವೊಂದು ಅವರ ಮನಸ್ಸನ್ನು ಸೆಳೆಯಿತು. ಅಲ್ಲಿ ನೆಲಸಿ ಧ್ಯಾನ–ತಪಸ್ಸುಗಳಲ್ಲಿ ನಿರತರಾದರು.

1888ರಲ್ಲಿ 34ರ ಹರೆಯದ ನಾರಾಯಣರು ತಮ್ಮ ಬದುಕಿನ ಮಹತ್ತ್ವದ ಘಟ್ಟವನ್ನು ಮುಟ್ಟಿದರು. ಪರಿವ್ರಾಜಕತ್ವವನ್ನು ತ್ಯಜಿಸಿದರು. ತಳಜಾತಿಗಳ ಜನರನ್ನು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳ ಮೂಲಕ ಮೇಲೆತ್ತುವ ಹೊಸ ಕಾಯಕವನ್ನು ಆರಂಭಿಸಿದರು. ಅವರ ಅತ್ಯಂತ ಕ್ರಾಂತಿಕಾರಕ ಸಾಧನೆಯೆಂದರೆ ತಿರುವನಂತಪುರ ಸಮೀಪದ ಅರುವಿಪುರಂನಲ್ಲಿ ಶಿವದೇವಾಲಯವನ್ನು ಸ್ಥಾಪಿಸಿದ್ದು, ಬ್ರಾಹ್ಮಣೇತರರಿಗೆ ವಿಗ್ರಹ ಸ್ಥಾಪನೆಯ ಹಕ್ಕಿಲ್ಲವೆಂಬುದು ಸಾಂಪ್ರದಾಯಿಕ ಕಟ್ಟಳೆ. ಗುರುಗಳ ಈ ಅಸಾಂಪ್ರದಾಯಿಕ ಕ್ರಿಯೆ ವ್ಯಾಪಕವಾಗಿ ಜನರ ಗಮನ ಸೆಳೆಯಿತು. ಇದನ್ನು ಮೇಲ್ಜಾತಿಯವರು ತೀವ್ರವಾಗಿ ವಿರೋಧಿಸಿದಾಗ, ತಾವು ಸ್ಥಾಪಿಸಿದ್ದು ಎಳವ ಶಿವನನ್ನು ಎಂದು ಅವರು ಉತ್ತರಿಸಿದರು. ತಮ್ಮದೇ ದೇವಾಲಯಗಳ ಸ್ಥಾಪನೆ ಮತ್ತು ಪುರೋಹಿತರ ನೇಮಕಗಳಂಥ ಹೊಸಸಂಪ್ರದಾಯವನ್ನು ಎಳವರಲ್ಲಿ ಇದು ಹುಟ್ಟುಹಾಕಿತು. ಇದು ಈವರೆಗೆ ಕಂಡರಿಯದಂಥ ಹೊಸ ಬೆಳವಣಿಗೆಯಾಗಿತ್ತು.

ಬ್ರಾಹ್ಮಣ ಯಾಜಮಾನ್ಯವನ್ನು ಮೀರಲು ಅವರು ದೇವಾಲಯಗಳನ್ನು ನಿರ್ಮಿಸತೊಡಗಿದರು. 1887ರಿಂದ ಅವರ ಮರಣದವರೆಗೆ (1928) ಗುರುಗಳು ಮತ್ತು ಅವರ ಅನುಯಾಯಿಗಳು ಕೇರಳದಾದ್ಯಂತ ಅನೇಕ ದೇವಾಲಯಗಳನ್ನು ನಿರ್ಮಿಸಿದರು.

1912ರಲ್ಲಿ ಮಂಗಳೂರಿಗೆ ಭೇಟಿ ಕೊಟ್ಟು ಅಲ್ಲಿನ ಬಿಲ್ಲವ ಸಮಾಜಕ್ಕೆ ಮಾರ್ಗದರ್ಶನ ಮಾಡಿ ಕುದ್ರೋಳಿಯ ಗೋಕರ್ಣನಾಥೇಶ್ವರ ದೇವಾಲಯ ನಿರ್ಮಾಣಕ್ಕೆ ಕಾರಣರಾದರು. ಇವರು ನಿರ್ಮಿಸಿದ ದೇವಾಲಯಗಳಲ್ಲಿ ಸರ್ವಜನರಿಗೂ ಮುಕ್ತ ಪ್ರವೇಶ ದೊರೆಯಿತು. ಕ್ರಮೇಣ ಗುರುಗಳು ಕ್ರಾಂತಿಕಾರಿ ವಿಚಾರಗಳನ್ನು ಪರಿಚಯಿಸಲಾರಂಭಿಸಿದರು. 1920ರಲ್ಲಿ ತ್ರಿಚೂರಿನ ಕಾರಮುಕ್ಕು ದೇವಾಲಯದಲ್ಲಿ ವಿಗ್ರಹದ ಬದಲಿಗೆ ದೀಪವನ್ನು ಸ್ಥಾಪಿಸಿದರು. 1922ರಲ್ಲಿ ಮುರುಕ್ಕುಂಪುಳ ದೇವಾಲಯದಲ್ಲಿ, ಸತ್ಯ, ಧರ್ಮ, ಪ್ರೇಮ, ದಯೆ ಎಂಬ ಶಾಸನವನ್ನು ಪ್ರತಿಷ್ಠಾಪಿಸಿದರು. ಅವರ ದೇವಾಲಯ ಸುಧಾರಣೆಯು ಕಲವಂಕೋಡ್ ದೇವಾಲಯ ನಿರ್ಮಾಣದೊಂದಿಗೆ ವಿಕಾಸದ ಆತ್ಯಂತಿಕ ಹಂತವನ್ನು ತಲುಪಿತು. ಇಲ್ಲಿ ಅವರು ಆರಾಧನೆಗಾಗಿ ಆತ್ಮಜ್ಞಾನದ ಸಂಕೇತವಾದ ಕನ್ನಡಿಯನ್ನು ಸ್ಥಾಪಿಸಿದರು. ಕೊನೆಗೆ ಮನುಷ್ಯರಿಗೆ ದೇವಾಲಯಗಳಿಗಿಂತ ಶಾಲೆಗಳೇ ಮುಖ್ಯವೆಂದು ಸಾರಿದರು.

ಗುರುಗಳು ನಾಡಿನಾದ್ಯಂತ ತುಂಬಿದ್ದ ಅಜ್ಞಾನ, ಜಾತಿವೈಷಮ್ಯ, ಅಸ್ಪೃಶ್ಯತೆ, ಮೂಢನಂಬಿಕೆ, ಪ್ರಾಣಿವಧೆ, ಮದ್ಯಪಾನ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಅಹಿಂಸಾತ್ಮಕವಾದ ಹೋರಾಟವನ್ನಾರಂಭಿಸಿದರು. ಜಾತಿರಹಿತ ಮತ್ತು ವರ್ಗರಹಿತ ಸಮಾಜ ನಿರ್ಮಾಣದ ಕನಸು ಕಂಡರು. ಜಾತಿಭೇದವನ್ನು ತೊಡೆಯಲು ಅಂತರ್ಜಾತಿಯ ವಿವಾಹಗಳು ಪ್ರಮುಖ ಸಾಧನವೆಂದು ಪ್ರತಿಪಾದಿಸಿದರು. ಸರಳ ಮದುವೆಗಳನ್ನು ಉತ್ತೇಜಿಸಿದರು. ಸಹಭೋಜನವನ್ನು ಬೆಂಬಲಿಸಿದರು. ಸಮಾನತೆಯನ್ನು ನಂಬಿದ್ದ ಗುರುಗಳು ಜಾತಿಯ ಬಗ್ಗೆ ಕೇಳಬೇಡಿ, ಮಾತಾಡಬೇಡಿ, ಯೋಚಿಸಬೇಡಿ ಎಂದರು.

ತಳಸಮುದಾಯಗಳ ಮುಖ್ಯವಾಗಿ ಎಳವ ಸಮಾಜದ ದೌರ್ಬಲ್ಯಗಳ ನಿವಾರಣೆಯ ಬಗ್ಗೆ ಆಳವಾಗಿ ಚಿಂತಿಸಿ ತಮ್ಮ ಸಮಾಜ ಸುಧಾರಣೆಯ ಯೋಜನೆಯನ್ನು ವ್ಯವಸ್ಥಿತವಾಗಿ ರೂಪಿಸಿದರು. ಕೇರಳದ ಸಾಮಾಜಿಕ ಬದುಕಿನಲ್ಲಿ ಕ್ರಾಂತಿಕಾರಕ ಪರಿವರ್ತನೆಯನ್ನು ತಂದರು. 1903ರಲ್ಲಿ ಶ್ರೀ ನಾರಾಯಣ ಧರ್ಮಪರಿಪಾಲನ ಯೋಗಮ್ ಎಂಬ ಸಂಘ ಸ್ಥಾಪಿತವಾಯಿತು. ಗುರುಗಳ ಮಾರ್ಗದರ್ಶನದಲ್ಲಿ ಸಂಘ ನಾಲ್ಕು ಕ್ಷೇತ್ರಗಳಲ್ಲಿ ಕಾರ್ಯಾರಂಭ ಮಾಡಿತು.

ಅ. ಧಾರ್ಮಿಕ: ಮೂಢನಂಬಿಕೆಗಳು, ಪ್ರಾಣಿಬಲಿ ಮತ್ತು ಕ್ಷುದ್ರದೇವತೆಗಳ ಆರಾಧನೆಯ ನಿರ್ಮೂಲನೆ; ನೈಜ ಹಿಂದೂ ಆರಾಧನೆ ಮತ್ತು ಮೌಲ್ಯಗಳ ಪ್ರಸಾರ; ಇತರ ಧರ್ಮಗಳವರಿಗೆ ತೊಂದರೆಯುಂಟಾಗದಂತೆ ಅಗತ್ಯವಿರುವೆಡೆಗಳಲ್ಲಿ ದೇವಾಲಯ ಮತ್ತು ಮಠಗಳ ಸ್ಥಾಪನೆ.

ಆ. ಶುದ್ಧ ಚಾರಿತ್ರ್ಯ ನಿರ್ಮಾಣ: ಪ್ರಾಮಾಣಿಕತೆ, ಶುಚಿತ್ವ, ನ್ಯಾಯಪರತೆ, ಉದಾತ್ತತೆ ಮತ್ತು ಸಹೋದರತ್ವಗಳ ಪ್ರಸಾರ;ಅರ್ಥಹೀನವಾದ ರೂಢಿಗತ ಸಂಪ್ರದಾಯಗಳ ನಿರ್ಮೂಲನೆ; ಕಾಲಕ್ಕೆ ತಕ್ಕ ಆಚಾರ-ವಿಚಾರಗಳ ಅನುಸರಣೆ.

ಇ. ಶಿಕ್ಷಣ: ಅಜ್ಞಾನದ ಕೆಡುಕುಗಳನ್ನೂ ಶಿಕ್ಷಣದ ಪ್ರಯೋಜನವನ್ನೂ ಮನದಟ್ಟು ಮಾಡಿಸಲು ಬೃಹತ್ಪ್ರಮಾಣದಲ್ಲಿ ಶಿಕ್ಷಣ ಪ್ರಸಾರದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದು ಶಾಲೆಗಳು ಮತ್ತು ಗ್ರಂಥಾಲಯಗಳನ್ನು ನಿರ್ಮಿಸುವುದು.

ಈ. ಉದ್ಯೋಗ: ಆತ್ಮಗೌರವ ಮತ್ತು ಸ್ವಾವಲಂಬನೆಯ ಸಾಧನೆಗಾಗಿ ಕೃಷಿ, ವಾಣಿಜ್ಯ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ; ಸರಳ ಜೀವನಕ್ಕೆ ಪ್ರೋತ್ಸಾಹ; ಕೈಗಾರಿಕೆಗಳು ಮತ್ತು ತಾಂತ್ರಿಕ ಶಾಲೆಗಳ ಸ್ಥಾಪನೆ.

ನಾರಾಯಣ ಗುರುಗಳು ಶಿವಗಿರಿಯ ಬಳಿಯ ವರ್ಕಳದಲ್ಲಿ ಗುರುಕುಲಾಶ್ರಮವನ್ನು ಸ್ಥಾಪಿಸಿದರು. ಅಲ್ಲಿ ಬಡಮಕ್ಕಳಿಗೆ, ಅನಾಥರಿಗೆ ಆಶ್ರಯಕೊಟ್ಟು ಶಿಕ್ಷಣ ಮತ್ತು ಯಾವುದಾದರೊಂದು ಕೈಕಸುಬಿನಲ್ಲಿ ತರಬೇತಿಯನ್ನು ಕೊಡುವ ವ್ಯವಸ್ಥೆ ಮಾಡಿದರು. ಆಸಕ್ತರಿಗೆ ಜಾತಿಭೇದವಿಲ್ಲದೆ ಸಂಸ್ಕೃತವನ್ನು ಕಲಿಸಿ ಧರ್ಮ ಮತ್ತು ತತ್ತ್ವಗ್ರಂಥಗಳ ಶಿಕ್ಷಣ ನೀಡಿದರು. 1913ರಲ್ಲಿ ಅಲ್ವಾಯೆಯಲ್ಲಿ ಅದ್ವೈತಾಶ್ರಮವನ್ನು ಸ್ಥಾಪಿಸಿದರು. ಸರ್ವತ್ರ ಸೋದರಭಾವದ ಪ್ರಸಾರ ಅದರ ಧ್ಯೇಯ. 1921ರಲ್ಲಿ ವಿಶ್ವಭ್ರಾತೃತ್ವವನ್ನು ಸಾರುವ ಸಮ್ಮೇಳನವನ್ನು ನಡೆಸಲಾಯಿತು. 1918 ಮತ್ತು 1923 ರಲ್ಲಿ ಗುರುಗಳು ಶ್ರೀಲಂಕಾ ಪ್ರವಾಸ ಕೈಗೊಂಡು ಓಂ ಸಹೋದರ್ಯಂ ಸರ್ವತ್ರ ತತ್ತ್ವವನ್ನು ಪ್ರಚಾರ ಮಾಡಿದರು. 1924ರಲ್ಲಿ ಅಲ್ವಾಯೆ ಆಶ್ರಮದಲ್ಲಿ ಸರ್ವಧರ್ಮ ಸಮ್ಮೇಳವನ್ನು ನಡೆಸಿದರು. ಇದರಲ್ಲಿ ಎಲ್ಲ ಧರ್ಮಗಳ ಪ್ರಮುಖರು ಭಾಗವಹಿಸಿದರು.

ಹರಿಜನರಿಗೆ ದೇವಾಲಯದಲ್ಲಿ ಪ್ರವೇಶ ದೊರಕಿಸಿಕೊಡಲು ಜರುಗಿದ ವೈಕಮ್ ಸತ್ಯಾಗ್ರಹದಲ್ಲಿ ನಾರಾಯಣ ಗುರುಗಳು ಪಾಲ್ಗೊಂಡರು. ಗಾಂಧೀಜಿ ಅವರೇ ಸ್ವತಃ ಬಂದು ಸತ್ಯಾಗ್ರಹವನ್ನು ನಡೆಸಿದರು. ಸತ್ಯಾಗ್ರಹ ಯಶಸ್ವಿಯಾಯಿತು. ಗಾಂಧೀಜಿ ಅವರು ವರ್ಕಳ ಆಶ್ರಮಕ್ಕೆ ಹೋಗಿ ಗುರುಗಳನ್ನು ಭೇಟಿಮಾಡಿದರು. ಆಶ್ರಮದಲ್ಲಿ ತಂಗುವ ಅವಕಾಶ ದೊರೆತಿದ್ದು ತಮ್ಮ ಪುಣ್ಯವೆಂದು ಮತ್ತು ಗುರುಗಳನ್ನು ಭೇಟಿಮಾಡಿದ್ದು ತಮ್ಮ ಜೀವನದ ಒಂದು ಯೋಗವೆಂದು ಗಾಂಧೀಜಿ ಹೇಳಿದರು. ಹರಿಜನರಿಗೆ ದೇವಾಲಯ ಪ್ರವೇಶದ ಹಕ್ಕು ದೊರೆಯಿತು. 1937ರಲ್ಲಿ ತಿರುವಾಂಕೂರು ರಾಜ್ಯಸರ್ಕಾರ ಭಾರತದಲ್ಲೇ ಪ್ರಪ್ರಥಮವಾಗಿ ಇಂಥದೊಂದು ಶಾಸನವನ್ನೇ ಜಾರಿಮಾಡಿತು. ವರ್ಕಳ ಆಶ್ರಮಕ್ಕೆ ಕವಿ ರವೀಂದ್ರನಾಥ ಠಾಕೂರರೂ ಭೇಟಿನೀಡಿದರು. ತಾವು ದೇಶ ವಿದೇಶಗಳಲ್ಲಿ ಪ್ರವಾಸ ಕೈಗೊಂಡಾಗ ಸಾಕಷ್ಟು ಸಂತರು ಹಾಗೂ ಮಹರ್ಷಿಗಳನ್ನು ಭೇಟಿಯಾಗಿರುವುದಾಗಿಯೂ ಆದರೆ ಕೇರಳದ ಸ್ವಾಮಿ ಶ್ರೀ ನಾರಾಯಣ ಗುರು ಅವರನ್ನು ಮೀರಿಸುವ ಆಧ್ಯಾತ್ಮಿಕ ಸಾಧಕ ಮತ್ತೊಬ್ಬನನ್ನು ಕಂಡಿಲ್ಲವೆಂದು ಹೇಳಿದರು.

**ಗುರುಗಳ ಕೃತಿಗಳು:** ಜಾತಿ ಮಿಮಾಂಸೆ, ದೈವ-ದಶಕಂ, ಅದ್ವೈತ ದೀಪಿಕಾ, ಜೀವ ಕಾರುಣ್ಯ – ದಂಡಕಂ, ಅರಿವು, ಚಿತ್-ಜಡ ಚಿಂತನಂ, ಅನುಕಂಪ ದಶಕಂ ಮುಂತಾದವು ಇವರ ಮಲೆಯಾಳಂ ಕೃತಿಗಳು, ದರ್ಶನ ಮಾಲಾ, ಬ್ರಹ್ಮವಿದ್ಯಾ ಪಂಚಕಂ, ಮುನಿಚರ್ಯ ಪಂಚಕಂ, ನಿರ್ವಿತ್ತಿ ಪಂಚಕಂ ಮುಂತಾದವು ಸಂಸ್ಕೃತ ಕೃತಿಗಳು.

**ಗುರುಗಳ ಅನುಯಾಯಿಗಳು:** ಸಾರ್ವತ್ರಿಕ ಮನ್ನಣೆ ಪಡೆದ ಗುರುಗಳ ಸಂತತ್ವ ಮತ್ತು ವಿಸ್ತೃತ ಕಾರ್ಯಯೋಜನೆಗಳು ಪ್ರಗತಿಪರ ನಾಯಕರನೇಕರು ಅವರೊಂದಿಗೆ ಕೈಜೋಡಿಸುವಂತೆ ಮಾಡಿದವು. ಅವರ ಅನುಯಾಯಿಗಳಲ್ಲಿ ಕವಿ ಕುಮಾರನ್ ಆಸನ್; ನಾಗರಿಕ ಹಕ್ಕುಗಳು ಮತ್ತು ಸಮಾನ ಉದ್ಯೋಗಾವಕಾಶಗಳ ಹೋರಾಟಗಾರ ವೈದ್ಯ ಡಾ. ಪಲ್ಪು; ನ್ಯಾಯವಾದಿ, ಬ್ಯಾಂಕರ್, ಪ್ರಕಾಶಕ ಮತ್ತು ಕೊಡುಗೈದಾನಿ ಸಿ. ಕೃಷ್ಣನ್; ಪತ್ರಕರ್ತ, ಕ್ರಾಂತಿಕಾರಿ ಮತ್ತು ನಾಗರಿಕ ಹಕ್ಕುಗಳ ಹೋರಾಟಗಾರ ಟಿ. ಕೆ. ಮಾಧವನ್; ಶಿಕ್ಷಣತಜ್ಞ ಮತ್ತು ತಳಸಮುದಾಯಗಳಲ್ಲಿ ಏಕತೆ ಮೂಡಿಸಲು ಶ್ರಮಿಸಿದ ಮೂರ್ಕೋತ ಕುಮಾರನ್; ಖ್ಯಾತ ವಿಚಾರವಾದಿ, ಮಾನವ ಏಕತೆಯ ಪ್ರತಿಪಾದಕ, ನಾಸ್ತಿಕ ಪಂಥೀಯ ಸಹೋದರನ್ ಅಯ್ಯಪ್ಪನ್ ಮೊದಲಾದವರು ಪ್ರಮುಖರು.

ಗುರುಗಳ ಆಧ್ಯಾತ್ಮಿಕ ಪರಂಪರೆಯನ್ನು ಮುಂದುವರೆಸಿದ ಶಿಷ್ಯರಲ್ಲಿ ನಟರಾಜ ಗುರು ಪ್ರಮುಖರು. ಇವರು 1923ರಲ್ಲಿ ನೀಲಗಿರಿಯಲ್ಲಿ ನಾರಾಯಣ ಗುರುಕುಲಮ್ ಅನ್ನು ಸ್ಥಾಪಿಸಿದರು. ನಿತ್ಯಚೈತನ್ಯ ಯತಿಗಳು ನಾರಾಯಣರ ಪ್ರಮುಖ ಶಿಷ್ಯರಲ್ಲೊಬ್ಬರು.

1928 ಸೆಪ್ಟೆಂಬರ್ 20 ರಂದು ತಮ್ಮ 72ನೆಯ ವಯಸ್ಸಿನಲ್ಲಿ ಗುರುಗಳು ವಿಧಿವಶರಾದರು. ಶಿವಗಿರಿಯಲ್ಲಿ ಅವರನ್ನು ಸಮಾಧಿ ಮಾಡಲಾಯಿತು. ಇಂದಿಗೂ ಹೊಸವರ್ಷದ ಮೊದಲ ದಿನದಂದು ಇಲ್ಲಿ ನಡೆಯುವ ಅಧ್ಯಾತ್ಮ ಸಮಾವೇಶದಲ್ಲಿ ಎಲ್ಲ ಧರ್ಮಗಳ ನಾಯಕರೂ ಭಾಗವಹಿಸುತ್ತಾರೆ.

ಒಂದೇ ಜಾತಿ, ಒಂದೇ ಧರ್ಮ, ಮನುಕುಲಕ್ಕೆ ಒಬ್ಬನೇ ದೇವನೆಂದು ಸಾರಿದ ಗುರುಗಳು ಮಾನವ ಏಕತೆಯ ಸಂದೇಶ ನೀಡಿದರು. ಪರಧರ್ಮ ಸಹಿಷ್ಣುತೆಯನ್ನು ಎತ್ತಿಹಿಡಿದ ಅವರು ಜಾತಿ, ಧರ್ಮ ಯಾವುದೇ ಇರಲಿ ಒಳ್ಳೆಯ ಮನುಷ್ಯರಾಗುವುದು ಮುಖ್ಯವೆಂದು ಪ್ರತಿಪಾದಿಸಿದರು. ಜಾತಿಭೇದ, ಮತಮೌಢ್ಯ, ಆರ್ಥಿಕ ಅಸಮಾನತೆಯೇ ಪ್ರಧಾನವಾಗಿರುವ ಭಾರತದ ಸಂಕೀರ್ಣ ಸನ್ನಿವೇಶದಲ್ಲಿ ತಳಸಮುದಾಯಗಳ ಪ್ರಗತಿಗೆ ಗುರುಗಳು ಅನುಸರಿಸಿದ ಮಾರ್ಗ ಅತ್ಯಂತ ವಿಶಿಷ್ಟವಾದುದು. ಸ್ಥಾಪಿತ ವ್ಯವಸ್ಥೆಯ ವಿರುದ್ಧ ನೇರ ಬಂಡೇಳದೆ, ಮೇಲ್ಜಾತಿಗಳನ್ನು ದೂರದೆ, ತಳಸಮುದಾಯಗಳಲ್ಲಿ ಆತ್ಮಗೌರವ, ಸಚ್ಚಾರಿತ್ರ್ಯ, ಸ್ವಾವಲಂಬನೆಗಳನ್ನು ಬೆಳೆಸುವ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ಅವರು ಶ್ರಮಿಸಿದರು. ಇದು ಆಧುನಿಕ ಭಾರತಕ್ಕೆ ಗುರುಗಳು ನೀಡಿದ ಅನನ್ಯ ಕೊಡುಗೆ. (ಎಂ.ಎಂ.ಕೆ.)

**ನಾರಿಮನ್, ಕುರ್ಷೀದ್ ಫ್ರಾಂಜಿ:** 1883-1948. ಭಾರತದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ. ವೀರ ನಾರಿಮನ್ ಎಂದು ಪ್ರಸಿದ್ಧರಾದ ಇವರು ಪಾರ್ಸಿ ಜನಾಂಗದವರು. 1883 ಮೇ 17ರಂದು ಮುಂಬಯಿಯ ಬಳಿಯ ಠಾಣಾದಲ್ಲಿ ಜನಿಸಿದರು. ತಂದೆ ಫ್ರಾಂಜಿಯವರು ಜಂಜೀರ್ ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸುತ್ತಿದ್ದು ಅನಂತರ ಬೆಳಗಾಂವಿಯಲ್ಲಿ ಪೊಲೀಸ್ ಅಧಿಕಾರಿಯಾಗಿದ್ದರು. ನಾರಿಮನರ ಬಾಲ್ಯ, ವಿದ್ಯಾಭ್ಯಾಸ ಪುಣೆಯ ಜೆಸ್ಯೂಯಿಟ್ ಸೇಂಟ್ ವಿನ್‍ಸ್ಟನ್ ಶಾಲೆಯಲ್ಲಿ ನಡೆಯಿತು. ಅನಂತರ ಇವರು ಡೆಕ್ಕನ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಗಳಿಸಿದರು. ಅನಂತರ ಮುಂಬಯಿಯಲ್ಲಿ ನ್ಯಾಯಶಾಸ್ತ್ರ ತರಗತಿ ಸೇರಿ ಎಲ್‍ಎಲ್.ಬಿ. ಪದವೀಧರರಾದರು. ವಿದ್ಯಾರ್ಥಿದೆಶೆಯಲ್ಲೇ ಇವರು ಸ್ವಾವಲಂಬಿಯಾಗಿರಲು ಇಚ್ಛಿಸಿ ಮುಂಬಯಿಯ ಪೊಲೀಸ್‍ನ್ಯಾಯಾಲಯದಲ್ಲಿ ದುಭಾಷಿಯಾಗಿ ಕೆಲಸಮಾಡುತ್ತಿದ್ದರು. ನ್ಯಾಯ ಪದವಿ ಪಡೆದ ಮೇಲೆ ಆ ಕೆಲಸವನ್ನು ಬಿಟ್ಟು ವಕೀಲ ವೃತ್ತಿಯನ್ನು ಆರಂಭಿಸಿದರು. ಇವರು ಮುಂಬಯಿಯ ಪ್ರಸಿದ್ಧ ಕ್ರಿಮಿನಲ್ ವಕೀಲರಾದರು. ಬೌಲಾ ಕೊಲೆ ಮೊಕದ್ದಮೆಯಲ್ಲಿ ನಾರಿಮನ್ನರು ಪ್ರಾಸಿಕ್ಯೂಷನ್ ಪರ ವಕಾಲತ್ತು ವಹಿಸಿದ್ದರು. ಕೊಲೆಗಡುಕರ ಅಪರಾಧ ರುಜುವಾತಾಗಿ ಆಪಾದಿತರು ಮರಣದಂಡನೆಗೆ ಗುರಿಯಾದರಲ್ಲದೆ, ಆ ಕೊಲೆಗೆ ಹಿನ್ನೆಲೆಯಲ್ಲಿದ್ದ ಇಂದೂರಿನ ಮಹಾರಾಜ ತುಕ್ಕೋಜಿರಾವ್ ಹೋಳ್ಕರರು ಪದಚ್ಯುತಿಗೊಂಡರು.

ನಾರಿಮನ್ನರು ಮುಂಬಯಿಯ ಅನೇಕ ಯುವಕ ಸಂಘಸಂಸ್ಥೆಗಳಲ್ಲಿ ಕೆಲಸ ಮಾಡಿ ಜನಪ್ರಿಯರಾಗಿದ್ದರು. 1919ರಲ್ಲಿ ಇವರು ಮುಂಬಯಿಯ ಗವರ್ನರ್‍ನ ಮಂಡಲಿಗೆ ಆಯ್ಕೆಗೊಂಡರು. ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರು ಅಸಹಕಾರ ಚಳವಳಿಯನ್ನಾರಂಭಿಸಿದಾಗ ನಾರಿಮನ್ನರು ಮಂಡಲಿಯ ಸದಸ್ಯತ್ವವನ್ನು ತ್ಯಜಿಸಿ ರಾಷ್ಟ್ರೀಯ ಆಂದೋಲನದಲ್ಲಿ ದುಮುಕಿದರು. 1930 ರ ಉಪ್ಪಿನ ಸತ್ಯಾಗ್ರಹದಲ್ಲಿ ಮುಂಬಯಿಯಲ್ಲಿ ಕಾನೂನು ಉಲ್ಲಂಘನೆ ಮಾಡಿ ತುರಂಗ ವಾಸವನ್ನು ಅನುಭವಿಸಿದವರಲ್ಲಿ ಇವರು ಮೊದಲಿಗರು. 1932ರಲ್ಲಿ ಕಾರಾಗೃಹದಿಂದ ಹೊರಬಂದ ಮೇಲೆ ವ್ಹೆದರ್ ಕಾಂಗ್ರೆಸ್ (ಕಾಂಗ್ರೆಸ್ ಎತ್ತ) ಎಂಬ ಗ್ರಂಥವನ್ನು ಪ್ರಕಟಿಸಿದರು. ಕಾಂಗ್ರೆಸ್ ಪಕ್ಷ ಸಾಂಸ್ಕೃತಿಕ ಮತ್ತು ನೈತಿಕ ಚಟುವಟಿಕೆಗಳಲ್ಲಿ ಕಾಲವ್ಯಯ ಮಾಡದೆ ಸ್ವಚ್ಛವಾದ ರಾಜಕೀಯ ಪಕ್ಷವಾಗಿ ಕಾರ್ಯ ನಿರ್ವಹಿಸಬೇಕೆಂದು

ಇವರ ವಾದವಾಗಿತ್ತು. 1924 ರಿಂದ 15 ವರ್ಷಗಳ ಕಾಲ ಇವರು ಮುಂಬಯಿಯ ಕಾರ್ಪೊರೇಷನ್ ಮಂಡಲಿಯ ಸದಸ್ಯರಾಗಿಯೂ 1935–36 ರಲ್ಲಿ ಮುಂಬಯಿಯ ಮೇಯರ್ ಆಗಿಯೂ ಇದ್ದರು. ನಾರಿಮನ್ನರು ಮುಂಬಯಿಯ ಪ್ರಮುಖ ಕಾಂಗ್ರೆಸ್ ನಾಯಕರಲ್ಲೊಬ್ಬರಾಗಿದ್ದರು. ಏಳು ವರ್ಷ ಮುಂಬಯಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಇವರು ಕಾರ್ಯ ನಿರ್ವಹಿಸಿದ್ದರು. 1934ರಲ್ಲಿ ಮುಂಬಯಿಯಲ್ಲಿ ಸಮಾವೇಶಗೊಂಡಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಯಶಸ್ವಿಯಾಗಲು ಅದರ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ನಾರಿಮನ್ನರು ಬಹುತೇಕ ಕಾರಣರು. ಇವರು ಕಾಂಗ್ರೆಸ್ಸಿನ ಸ್ವರಾಜ್ಯ ಪಕ್ಷದ ಅಭ್ಯರ್ಥಿಯಾಗಿ ಮುಂಬಯಿ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ವಿರೋಧ ಪಕ್ಷದ ನಾಯಕತ್ವ ವಹಿಸಿದ್ದರು. ಆಗ ಹಾರ್ವೆಯವರು ನಿರ್ವಹಿಸುತ್ತಿದ್ದ ಮುಂಬಯಿ ಅಭಿವೃದ್ಧಿ ಇಲಾಖೆಯ ಆಡಳಿತ ಅವ್ಯವಸ್ಥೆಯನ್ನು ಇವರು ಬಯಲಿಗೆಳೆದರು. ನಾರಿಮನ್ನರಿಂದ ಮಾನನಷ್ಟವಾಗಿದೆಯೆಂದು ಹಾರ್ವೆ ಮೊಕದ್ದಮೆ ಹೂಡಿದರು. ನಾರಿಮನ್ನರು ಹಾರ್ವೆಯ ವಿರುದ್ಧ ಮಾಡಿದ್ದ ಆಪಾದನೆಗಳು ರುಜುವಾತಾಗದಿದ್ದರೂ ಸಾರ್ವಜನಿಕ ಹಿತದೃಷ್ಟಿಯಿಂದ ಇವರು ಆ ಆರೋಪ ಮಾಡಿದ್ದರೆಂದು ಅದರ ಹಿಂದೆ ವೈಯಕ್ತಿಕ ದ್ವೇಷವೇನೂ ಇರಲಿಲ್ಲವೆಂದು ನ್ಯಾಯಾಲಯ ಅಭಿಪ್ರಾಯ ಪಟ್ಟು ಇವರನ್ನು ಖುಲಾಸೆ ಮಾಡಿತು. ನಾರಿಮನ್ನರ ಖ್ಯಾತಿ ವಿಶೇಷವಾಗಿ ಬೆಳೆಯಿತು. ಸರಳ ಜೀವನ, ರಾಷ್ಟ್ರಪ್ರೇಮ, ಪ್ರಜಾಪ್ರಭುತ್ವ–ಇವು ಇವರ ಜೀವನದ ಧ್ಯೇಯಗಳಾಗಿದ್ದವು.

ನಾರಿಮನ್ನರು 1937ರಲ್ಲಿ ಕೇಂದ್ರ ವಿಧಾಯಕ ಸಭೆಗೆ ಮುಂಬಯಿಯಿಂದ ಕವಾಸ್ಜಿ ಜಹಾಂಗೀರರ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಕಾಂಗ್ರೆಸ್ ಸಂಸದೀಯ ಸಮಿತಿ ಆದೇಶ ನೀಡಿತು. ಆದರೆ ಇವರು ಮುಂಬಯಿ ವಿಧಾನಸಭೆಯ ನಾಯಕರಾಗಬೇಕೆಂಬ ಉದ್ದೇಶದಿಂದ ವಿಧಾನಸಭೆಗೆ ಚುನಾಯಿತರಾಗಲಿಚ್ಛಿಸಿದರು. ಇದರಿಂದ ಸಂಸದೀಯ ಸಮಿತಿಯ ಅಧ್ಯಕ್ಷರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರ ಮತ್ತು ನಾರಿಮನ್ನರ ನಡುವೆ ಭಿನ್ನಾಭಿಪ್ರಾಯ ತಲೆದೋರಿತು. ನಾರಿಮನ್ನರು ಮುಂಬಯಿಯ ವಿಧಾನಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾಯಿತರಾದರೂ ಬಾಲಗಂಗಾಧರ ಖೇರರು ಸಂಪುಟಕ್ಕೆ ನಾರಿಮನ್ನರನ್ನು ಆಹ್ವಾನಿಸಲಿಲ್ಲ. ಅನಂತರ ಇವರು ವಿಧಾನ ಸಭೆಯ ಹಿಂದಿನ ಆಸನಗಳ ಸದಸ್ಯರಲ್ಲೊಬ್ಬರಾಗಿ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿದ್ದರು. ದೆಹಲಿ ಮತ್ತು ವಲಯದಲ್ಲಿ ನಡೆದ ಆಜಾದ್ ಹಿಂದ್ ಫೌಜ್ ವಿಚಾರಣೆಗಳಲ್ಲಿ ಭಾರತ ರಾಷ್ಟ್ರೀಯ ಸೈನಿಕರ ಪರವಾಗಿ ನಾರಿಮನ್ನರು ವಕಾಲತ್ತು ವಹಿಸಿ ದಕ್ಷತೆಯಿಂದ ವಾದಿಸಿದರು. ಮೈಸೂರು ಸಂಸ್ಥಾನದ ಜವಾಬ್ದಾರಿ ಸರ್ಕಾರ ಹೋರಾಟಕ್ಕೂ ನಾರಿಮನ್ನರು ಸ್ಫೂರ್ತಿ ನೀಡಿದ್ದರು. ಇವರು ಉದಾರಿಗಳೂ ಶಾಸ್ತ್ರೀಯ ಸಂಗೀತಪ್ರಿಯರೂ ಆಗಿದ್ದರು. ಇವರು 1948ರಲ್ಲಿ ನಿಧನರಾದರು. (ಎಂ.ಕೆ.ಎಸ್.)

**ನಾಲಂದ:** ಬಿಹಾರ ರಾಜ್ಯದ ನಾಲಂದ ಜಿಲ್ಲೆಯ ಬಾರಗಾವ್ ಗ್ರಾಮದ ಹತ್ತಿರವಿರುವ ಬೌದ್ಧ ನೆಲೆ ಹಾಗೂ ಪ್ರಸಿದ್ಧ ಪ್ರಾಚೀನ ವಿದ್ಯಾಲಯವಿದ್ದ ಸ್ಥಳ. ಪಟಣದ ಆಗ್ನೇಯಕ್ಕೆ 85ಕಿಮೀ ದೂರದಲ್ಲಿ ಮತ್ತು ರಾಜಗೀರ್‌ಗೆ (ಪ್ರಾಚೀನ ರಾಜಗೃಹ) ಉತ್ತರಕ್ಕೆ 11ಕಿಮೀ ದೂರದಲ್ಲಿದೆ.

ನಾಲಂದದ ಇತಿಹಾಸ ಪರಂಪರೆ ಪ್ರಾಚೀನವಾದುದು. ಇದು ಬುದ್ಧ–ಮಹಾವೀರರ ಕಾಲದ್ದೆಂಬ ಉಲ್ಲೇಖಗಳಿವೆ. ಜೈನ ಮತ್ತು ಪಾಲಿ ಬೌದ್ಧಸಾಹಿತ್ಯದಲ್ಲೂ ಇದರ ಬಗ್ಗೆ ಉಲ್ಲೇಖಗಳಿವೆ. ರಾಜಗೃಹದ ಬಳಿಯಿರುವ ಸಾಲಿಗ್ರಾಮ ಬುದ್ಧನ ನೆಚ್ಚಿನ ಶಿಷ್ಯನಾದ ಜೇಷ್ಠ ಸಾರಿಪುತ್ರನ ಜನ್ಮಸ್ಥಳವೆಂಬುದಾಗಿ ಮಹಾಸುದಸ್ಸಯನ ಜಾತಕ ತಿಳಿಸುತ್ತದೆ. ಇದನ್ನು 17 ನೆಯ ಶತಮಾನದ ತಾರಾನಾಥನ ಕೃತಿಯೂ ಸೇರಿದಂತೆ ಟಿಬೆಟ್ಟಿನ ಎಲ್ಲ ಗ್ರಂಥಗಳೂ ಸಮರ್ಥಿಸಿವೆ. ಆದ್ದರಿಂದ ನಾಲ, ನಾಲಕ, ನಾಲಕಗ್ರಾಮ ಹಾಗೂ ನಾಲಂದಾ–ಎಂಬುವು ಒಂದೇ ಹೆಸರಿನ ರೂಪಾಂತರಗಳೆಂದು ತಿಳಿದುಬರುತ್ತದೆ. ಇಲ್ಲಿಯ ಕೆರೆಯೊಂದರಲ್ಲಿ ನಾಲ ಎಂಬ ಹೆಸರಿನ ಸರ್ಪವೊಂದು ವಾಸವಾಗಿದ್ದುದರಿಂದ ಈ ಸ್ಥಳಕ್ಕೆ ನಾಲಂದ ಎಂಬ ಹೆಸರು ಬಂದಿತೆಂಬ ಪ್ರತೀತಿ ಪ್ರಚಲಿತವಿದ್ದುದನ್ನು ಯುವಾನ್ ಚಾಂಗ್ ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಇಲ್ಲಿಯ ಪೂರ್ವೇತಿಹಾಸವನ್ನು ತಾರಾನಾಥ ವಿವರವಾಗಿ ತಿಳಿಸುತ್ತಾನೆ. ಮಹಾಯಾನ ಪಂಥದ ದಾರ್ಶನಿಕ ಹಾಗೂ ಪ್ರಸಿದ್ಧ ರಸಾಯನಶಾಸ್ತ್ರಜ್ಞನಾದ ನಾಗಾರ್ಜುನ ಇಲ್ಲಿ ತನ್ನ ಅಧ್ಯಯನವನ್ನಾರಂಭಿಸಿ ಅನಂತರ ಇಲ್ಲಿಯ ವಿದ್ಯಾಲಯದಲ್ಲಿ ಮಹಾಪ್ರಾಚಾರ್ಯ ನಾದನೆಂದು ತಾರಾನಾಥ ತಿಳಿಸುತ್ತಾನೆ.

19ನೆಯ ಶತಮಾನದ ಆರಂಭದಲ್ಲಿ ಬುಕನನ್ ಹ್ಯಾಮಿಲ್ಟನ್ ಈ ನೆಲೆಯ ಐತಿಹಾಸಿಕ ಮಹತ್ತ್ವವನ್ನು ವರದಿಮಾಡಿದ. ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಚೀನಿ ಬೌದ್ಧಯಾತ್ರಿಕರ ಉಲ್ಲೇಖನಗಳ ಆಧಾರದ ಮೇಲೆ ಈ ಸ್ಥಳವನ್ನು ಖಚಿತವಾಗಿ ಗುರುತಿಸಿದ. 1872 ರಲ್ಲಿ ಎ.ಎಂ. ಬ್ರಾಡ್ಲೆ ಈ ಸ್ಥಳದಲ್ಲಿ ಉತ್ಖನನ ನಡೆಸಿ ಸಂಕ್ಷಿಪ್ತ ವರದಿ ಪ್ರಕಟಿಸಿದ. 1915–16 ರಿಂದ 1935–36ರವರೆಗೆ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಹೀರಾನಂದ ಶಾಸ್ತ್ರಿ, ಜೆ.ಎ. ಪೇಜ್ ಮತ್ತಿತರರು ನಡೆಸಿದ ಉತ್ಖನನಗಳಲ್ಲಿ ವಿಹಾರಗಳು, ಮಂದಿರಗಳು ಮತ್ತು ಕಟ್ಟಡಗಳು ಬೆಳಕಿಗೆ ಬಂದವು.

ಇಂಥ ಪ್ರಾಚೀನ ಪರಂಪರೆಯ ನಾಲಂದದೊಡನೆ ಬೌದ್ಧ ಸನ್ಯಾಸಿಗಳ ಸಂಬಂಧವಿದೆ. ಆದರೆ ಇಲ್ಲಿ ಈವರೆಗೆ ನಡೆದ ಉತ್ಖನನಗಳಲ್ಲಿ ಗುಪ್ತರ ಕಾಲಕ್ಕಿಂತ ಹಿಂದಿನ ಯಾವ ಅವಶೇಷಗಳೂ ದೊರೆತಿಲ್ಲ. 8–12ನೆಯ ಶತಮಾನದವರೆಗೆ ಪೂರ್ವ ಭಾರತವನ್ನಾಳಿದ ಪಾಲರ ಕಾಲದ ಸಾಂಸ್ಕೃತಿಕ ಅವಶೇಷಗಳು ವಿಪುಲವಾಗಿ ದೊರೆತಿವೆ. 5ನೆಯ ಶತಮಾನದಲ್ಲಿ ಬಂದ ಫಾಹಿಯಾನ್ ಇಲ್ಲಿ ಸ್ತೂಪವೊಂದಿತ್ತೆಂದು ಉಲ್ಲೇಖಿಸಿದ್ದಾನೆ. 7ನೆಯ ಶತಮಾನದಲ್ಲಿ ಯುವಾನ್ ಚಾಂಗ್ ಇಲ್ಲಿ ಹಲವು ವರ್ಷಗಳ ಕಾಲ ಮಹಾಲಂದ (ಮಹಾಯಾನ) ಪಂಥದ ಬಗ್ಗೆ ಅಧ್ಯಯನ ನಡೆಸಿದ. ಇಲ್ಲಿಯ ಕೆಲವು ವಿಹಾರಗಳ ಬಗ್ಗೆ ಸ್ಥೂಲ ವಿವರಗಳನ್ನು ಇವನು ಕೊಟ್ಟಿದ್ದಾನೆ. ಈ ವಿಹಾರಗಳು ಪ್ರಾಯಶಃ ಗುಪ್ತರ ಅಂತ್ಯ ಕಾಲದ್ದಿರಬಹುದು. ನಾಲಂದ ವಿದ್ಯಾರ್ಥಿಗಳು, ಅಧ್ಯಾಪಕರು, ಪ್ರಖ್ಯಾತ ವಿದ್ವಾಂಸರು, ಸನ್ಯಾಸಿ ಮತ್ತು ಭಿಕ್ಷುಗಳಿಂದ ತುಂಬಿದ ಒಂದು ಕೇಂದ್ರವಾಗಿತ್ತೆಂದು ಉಲ್ಲೇಖಿಸಿದ್ದಾನೆ. ಇವನು ಹೋದ 30 ವರ್ಷಗಳ ಅನಂತರ ಇತ್ಸಿಂಗ್ ಈ ವಿದ್ಯಾಲಯಕ್ಕೆ ಭೇಟಿಯಿತ್ತ. 8–12ನೆಯ ಶತಮಾನದ ನಡುವೆ 11 ಚೀನಿ ಮತ್ತು ಕೊರಿಯ ಪ್ರವಾಸಿಗಳು ಇಲ್ಲಿಗೆ ಭೇಟಿ ನೀಡಿದರು. ಪಾಲರು 11ನೆಯ ಶತಮಾನದಲ್ಲಿ ಇದರ ಸಮೀಪದಲ್ಲಿ ವಿಕ್ರಮಶಿಲಾ ಎಂಬ ಮತ್ತೊಂದು ವಿದ್ಯಾಕೇಂದ್ರ ಆರಂಭಿಸಿದ ಮೇಲೆ ಇದರ ಪ್ರಾಮುಖ್ಯ ಕಡಿಮೆಯಾಯಿತು.

ನಾಲಂದ ಉತ್ಖನನದಲ್ಲಿ ಸಿಕ್ಕಿರುವ ಕಟ್ಟಡ ಅವಶೇಷಗಳು ಅಧಿಕವಾಗಿ ಪಾಲರ ಕಾಲದ್ದಾಗಿವೆ. ಅತ್ಯಂತ ಕೆಳಗಿನ ಸ್ತರಗಳಲ್ಲಿ ಉದ್ದೇಶಪೂರ್ವಕವಾಗಿ ಹುಗಿದಿಟ್ಟಂತೆ ಕಾಣುವ ಅವಶೇಷಗಳಿವೆ. ಇವುಗಳಲ್ಲಿ ಗುಪ್ತ ಮತ್ತು ಮೌಖರಿ ರಾಜರುಗಳ ಮುದ್ರೆಗಳು, ಹರ್ಷವರ್ಧನ ಹಾಗೂ ಅಸ್ಸಾಮಿನ (ಕಾಮರೂಪ) ರಾಜರುಗಳ ಮುದ್ರೆಗಳೂ ಗುಪ್ತರ ಆಡಳಿತಾತ್ಮಕ ಮುದ್ರೆಗಳು ಮತ್ತು ಜೇಡಿಮಣ್ಣಿನ ನಾಣ್ಯದ ಅಚ್ಚುಗಳೂ ಉಲ್ಲೇಖಾರ್ಹ.

ಚೈತ್ಯ (ದೇವಾಲಯ) ಮತ್ತು ವಿಹಾರಗಳು ಎರಡು ಸಮಾನಾಂತರ ಸಾಲಿನಲ್ಲಿವೆ. ಚೈತ್ಯ ಪೂರ್ವಮುಖವಾಗಿ ಮತ್ತು ವಿಹಾರ ಪಶ್ಚಿಮಮುಖವಾಗಿವೆ. ಮಧ್ಯದಲ್ಲಿ ಇತರ ಗುಡಿಗಳಿವೆ. 3ನೆಯ ದೇವಾಲಯ ನಾಲಂದದ ಅತಿ ಎತ್ತರವಾದ ಸ್ಮಾರಕ. ಇದು ಏಳು ಹಂತಗಳ ನಿರ್ಮಿತಿ. 5ನೆಯ ಹಂತದಲ್ಲಿ ಇದರ ನಾಲ್ಕು ಮೂಲೆಗಳಲ್ಲಿ ಗೋಪುರಗಳನ್ನು ನಿರ್ಮಿಸಲಾಯಿತಲ್ಲದೆ ಗುಪ್ತ ಶೈಲಿಯ ಬುದ್ಧ ಮತ್ತು ಬೋಧಿಸತ್ವರ ಗಾರೆಶಿಲ್ಪಗಳಿಂದ ಮುಂಭಾಗವನ್ನು ಅಲಂಕರಿಸಲಾಯಿತು. ಪ್ರತಿ ನಿರ್ಮಾಣ ಹಂತದಲ್ಲಿ ಮಂದಿರದ ಎತ್ತರ

ನಾಲಂದ ವಿಶ್ವವಿದ್ಯಾಲಯ

ಹೆಚ್ಚುತ್ತ ಹೋಯಿತು. ಕೊನೆಯ ಹಂತದ ಮಂದಿರದ ಅವಶೇಷಗಳಲ್ಲಿ ಪ್ರತಿಷ್ಠಾಪಿಸಿದ ಬುದ್ಧ ಪ್ರತಿಮೆಯ ಪೀಠವಿದೆ. ಪ್ರತಿ ಹಂತದಲ್ಲೂ ಹೊಸ ಹರಕೆಸ್ತೂಪಗಳು ಸೇರ್ಪಡೆಯಾದವು. 5ನೆಯ ಹಂತದ ಇಂಥ ಒಂದು ಸ್ತೂಪದಲ್ಲಿ ದೊರೆತ ಜೇಡಿಮಣ್ಣಿನ ಫಲಕದಲ್ಲಿ ಪ್ರ.ಶ. 516–17ರ ಪ್ರತೀತ್ಯ–ಸಮೂತ್‌ಪಾದ–ಸೂತ್ರ ಎಂಬ ಪವಿತ್ರ ಗ್ರಂಥದ ಬರೆಹವಿದೆ. ಇಂತಹ ಕೆಲವು ಸ್ತೂಪಗೊಳಗೆ ಮಣ್ಣಿನ ಹಣತೆಗಳಿವೆ. ಏಳನೆಯ ಹಂತದಲ್ಲಿ ಮಂದಿರ 39X24 ಮೀ ವಿಸ್ತೀರ್ಣ ಹೊಂದಿತ್ತು.

12,13 ಮತ್ತು 14 ನೆಯ ದೇವಾಲಯಗಳು ಸು. 50 ಚಮೀ ವಿಸ್ತೀರ್ಣ ಹೊಂದಿದ್ದು ಚೌಕಾಕಾರವಾಗಿವೆ. ಇವೆಲ್ಲ ಎರಡು ಹಂತಗಳಲ್ಲಿ ನಿರ್ಮಾಣಗೊಂಡವು. ಇವುಗಳೊಳಗೆ ಎತ್ತರವಾದ ವೇದಿಕೆಯ ಮೇಲೆ ಬುದ್ಧನ ಗಾರೆಶಿಲ್ಪವಿದೆ. 12 ಮತ್ತು 13ನೆಯ ದೇವಾಲಯದ ಸುತ್ತ ಹರಕೆಸ್ತೂಪಗಳಿವೆ. 14 ನೆಯ ದೇವಾಲಯದಲ್ಲಿ ಭಿತ್ತಿಚಿತ್ರಗಳಿವೆ. ಮುಖ್ಯ ದೇವಾಲಯಗ ಳಿಂದ ದೂರದಲ್ಲಿರುವ 2 ನೆಯ ದೇವಾಲಯದಲ್ಲಿ ಸು. 7ನೆಯ ಶತಮಾನದ 211 ಶಿಲ್ಪಿತ ಫಲಕಗಳಿವೆ.

1ಎ, 1ಬಿ, 5, 6, 8, 9, 10 ಮತ್ತು 11ನೆಯ ವಿಹಾರಗಳು ಎರಡು ಅಂತಸ್ತಿನವು. 1,4 ಮತ್ತು 7 ವಿಹಾರಗಳು ಅನುಕ್ರಮವಾಗಿ 9,6 ಮತ್ತು 3 ಅಂತಸ್ತಿನವು. ಇವು ಚೌಕಾಕಾರ ವಾಗಿದ್ದು ಓಣಿ(ಮಾರ್ಗ)ಗಳಿಂದ ಬೇರ್ಪಟ್ಟಿವೆ. ಇವಕ್ಕೆ ಎರಡು ಅಂತಸ್ತುಗಳಿದ್ದು ಮೂಲದಲ್ಲಿ ಮರದ ಮೆಟ್ಟಿಲುಗಳಿರಬೇಕು. ಏಕೆಂದರೆ ಉತ್ಖನನದಲ್ಲಿ ಸುಟ್ಟಮರದ ತುಂಡುಗಳು ದೊರೆತಿವೆ. ಅನಂತರದಲ್ಲಿ ಗಾರೆ ಅಥವಾ ಕಲ್ಲಿನ ಮೆಟ್ಟಿಲುಗಳನ್ನು ಕಟ್ಟಲಾಗಿರಬೇಕು. ಪ್ರತಿ ವಿಹಾರದ ಮಧ್ಯದಲ್ಲಿ ಅಂಗಳವಿದ್ದು ಸುತ್ತಲೂ ಮೊಗಸಾಲೆ ಹಾಗೂ ಇದಕ್ಕೆಹೊಂದಿ ಭಿಕ್ಷುಗಳ ವಾಸದ

ಕೊಠಡಿಗಳಿವೆ. ಒಂದು ಕೊಠಡಿಯಲ್ಲಿ ಒಬ್ಬ ಅಥವಾ ಇಬ್ಬರು ಭಿಕ್ಷುಗಳು ವಾಸಿಸುತ್ತಿದ್ದರು. ಪ್ರತಿ ಕೊಠಡಿಯಲ್ಲೂ ಮಲಗಲು ಕಲ್ಲು ಅಥವಾ ಇಟ್ಟಿಗೆಯ ಒಂದು ಅಥವಾ ಎರಡು ಕಟ್ಟೆಗಳಿದ್ದವು. ಜೊತೆಗೆ ದೀಪ, ಪುಸ್ತಕ ಹಾಗೂ ವಸ್ತುಗಳನ್ನಿಡುವುದಕ್ಕೆ ವ್ಯವಸ್ಥೆ ಇತ್ತು. ಕೆಲವು ವಿಹಾರಗಳಿಗೆ ದಪ್ಪ ಗಾರೆಯ ಲೇಪನವಿದೆ. ಕೆಲವೊಂದರಲ್ಲಿ ವರ್ಣಚಿತ್ರಗಳ ಕುರುಹುಗಳಿವೆ.

ಹರಕೆಸ್ತೂಪ ಮತ್ತು ದೇವಾಲಯದ ಗೋಡೆಗಳ ಹೊರಭಾಗವನ್ನು ಕೆಲವೊಮ್ಮೆ ಕೆತ್ತನೆಯುಳ್ಳ ಇಟ್ಟಿಗೆಗಳಿಂದ ಅಲಂಕರಿಸಲಾಗಿದೆ. ಕಿನ್ನರರು, ಆಮಲಕಗಳು, ಮಣಿ ಮತ್ತು ದಾರದ ಅಲಂಕಾರಗಳು, ತ್ರಿಕೋಣ, ಚೌಕ, ದಾರದ ವಿನ್ಯಾಸ, ಹೂವಿನ ಗುಚ್ಛವುಳ್ಳ ಕುಂಡಗಳು ಮುಂತಾದ ಕೆತ್ತನೆಗಳನ್ನು ಮಾಡಲಾಗಿದೆ. ಇಟ್ಟಿಗೆಗಳನ್ನು ಜೋಡಿಸಿ ಹೂಗೊಂಚಲಿನ ಅಲಂಕರಣೆ, ಕುಂಭ, ಕಮಾನುಗಳು, ಕೀರ್ತಿಮುಖ ಮತ್ತು ಜ್ಯಾಮಿತೀಯ ವಿನ್ಯಾಸಗಳನ್ನು ರಚಿಸಲಾಗಿದೆ. ಇಟ್ಟಿಗೆಗಳನ್ನು ತಯಾರಿಸಲು ಸುತ್ತಮುತ್ತಲ ಮೆಕ್ಕಲುಭೂಮಿಯಿಂದ ಜೇಡಿಮಣ್ಣನ್ನು ತೆಗೆದಿದ್ದರಿಂದ ಇಲ್ಲಿ ಅನೇಕ ನೀರಿನ ಕೊಳಗಳಾದುವು. ಕೆಲವನ್ನು ಯುವಾನ್ ಚಾಂಗನು ಉಲ್ಲೇಖಿಸಿರುವನು.

ಇಲ್ಲಿ ಮುದ್ರೆಗಳು ಅನೇಕ ಸಂಖ್ಯೆಯಲ್ಲಿ ದೊರಕಿವೆ. ವಿಹಾರದ ಅಧಿಕಾರಿಗಳ ಮುದ್ರೆಗಳ ಮೇಲೆ ಧರ್ಮಚಕ್ರ, ಜಿಂಕೆ ಮತ್ತು ಶ್ರೀ ನಾಲಂದಾ–ಮಹಾ–ವಿಹಾರಿಯಾರ್ಯ–ಭಿಕ್ಷು–ಸಂಘಸ್ಯ ಎಂಬ ಬರೆಹವಿದೆ. ರಾಜರ, ಅಧಿಕಾರಿಗಳ, ಪ್ರಾಂತಾಡಳಿತದ ಹಲವಾರು ಮುದ್ರೆಗಳು ದೊರಕಿವೆ.

ದೊಡ್ಡ ಮತ್ತು ಸಣ್ಣ ಶಿಲಾಶಿಲ್ಪಗಳೂ ವಿಪುಲವಾಗಿವೆ. ನಾಲಂದ ಕಂಚುಗಾರಿಕೆಯ ಕೇಂದ್ರವಾಗಿತ್ತು. ಪಾಲರ ಕಾಲದಲ್ಲಿ ಕಂಚಿನ ಪ್ರತಿಮೆಗಳಿಗೆ ಈ ಸ್ಥಳ ಹೆಸರುವಾಸಿಯಾಯಿತು. ಸು. 500 ಕ್ಕೂ ಹೆಚ್ಚು ಕಂಚಿನ ಬುದ್ಧ ಮತ್ತು ತಂತ್ರಯಾನ–ವಜ್ರಯಾನ ಬೌದ್ಧದೇವತೆಗಳ ಪ್ರತಿಮೆಗಳು ಇಲ್ಲಿ ಸಿಕ್ಕಿವೆ. 13 ನೆಯ ದೇವಾಲಯದ ಸಮೀಪದಲ್ಲಿ ಇಟ್ಟಿಗೆಯಿಂದ ಕಟ್ಟಿದ ಕುಲುಮೆ ಕಂಡುಬಂದಿದೆ. ಸುಟ್ಟ ಲೋಹದ ತುಂಡುಗಳು, ಗಟ್ಟಿಗಳು ಕುಲುಮೆಯಲ್ಲಿರುವುದು ಲೋಹ ತಯಾರಿಕೆಯನ್ನು ಸೂಚಿಸುತ್ತದೆ. ಕಬ್ಬಿಣ ಹಾಗೂ ತಾಮ್ರದ ಚಪ್ಪಟೆ ಹಾಳೆ, ಚಾಕು, ಉಳಿ, ಕೊಡಲಿ, ಕುಡುಗೋಲು, ಇಕ್ಕಳ, ಸನಕೆ, ಕವಚ, ಬತ್ತಳಿಕೆ, ಈಟಿಮೊನೆ, ಚೂರಿ, ಕತ್ತಿಯ ಹಿಡಿಕೆ ಮತ್ತು ಮೊಳೆ; ಶಂಖ, ಮಣ್ಣಿನ ದೀಪ ಮತ್ತು ಬಟ್ಟಲು, ಕಂಚಿನ ಪದ್ಮರಾಗದ ಕುಂದಣವಿರುವ ವಸ್ತು, ಕಂಚಿನ ಲೋಟ ಮತ್ತು ಜಾಡಿ, ಕಲ್ಲಿನ ಕುಟ್ಟಾಣಿ, ಬೀಸುವ ಕಲ್ಲು, ಸೌಟು, ಸಾಣೆಕಲ್ಲು; ಮುದ್ರೆ, ಸ್ತೂಪ, ಫಲಕ, ಮುಂತಾದವುಗಳ ಜೇಡಿಮಣ್ಣಿನ ಅಚ್ಚುಗಳು: ಮಣ್ಣು ಮತ್ತು ಲೋಹದ ಮಸಿಕುಡಕೆ; ಕವಡೆಗಳು; ಅಲಂಕರಣೆಯ ಚಿನ್ನದ ಎಲೆಗಳು ಮತ್ತು ಮಣಿಗಳು, ಎಲುಬಿನ ಮತ್ತು ದಂತದ ಆಟದ ಸಾಮಾನು, ಬಳೆ ಮತ್ತು ಉಂಗುರಗಳು; ಕಬ್ಬಿಣದ ಆನೆಯ ಅಂಕುಶ ಜಾನುವಾರುಗಳಿಗೆ ಹಾಕುವ ಮುದ್ರೆ ಇತ್ಯಾದಿ ಅವಶೇಷಗಳು ದೊರಕಿವೆ. ಈ ವಿದ್ಯಾಕೇಂದ್ರ ಯಾವಾಗ ಮತ್ತು ಹೇಗೆ ನಾಶವಾಯಿತೆಂಬುದು ತಿಳಿಯಲಾಗಿಲ್ಲ.

(ಎನ್.ಎಲ್.)

**ನಾಲ್ಕುನಾಡು:** ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕಿನಲ್ಲಿ ನಾಪೋಕ್ಲು ನಾಡಿನಲ್ಲಿರುವ ಒಂದು ಪ್ರಾಚೀನ ಸ್ಥಳ. ನಾಪೋಕ್ಲುವಿನಿಂದ 10ಕಿಮೀ ದೂರದಲ್ಲಿದೆ. ಕೊಡಗಿನ ಪಶ್ಚಿಮಭಾಗದಲ್ಲಿ ಎತ್ತರದ ಬೆಟ್ಟಸಾಲು, ದಟ್ಟವಾಗಿ ಬೆಳೆದ ಕಾಡುಗಳಿಂದ ಸ್ವಾಭಾವಿಕವಾದ ರಕ್ಷಣೆಯನ್ನು ಪಡೆದಿದ್ದು ಕೊಡಗಿನ ಅರಸರಿಗೆ ಇದು ಭದ್ರ ನೆಲೆಯಾಗಿತ್ತು. ಸ್ವಾಭಾವಿಕ ರಕ್ಷಣೆಯ ಜೊತೆಗೆ ಈ ಗಿರಿದುರ್ಗಕ್ಕೆ ಕೊಡಗಿನ ಅರಸರು ಆಳವಾದ ಕಂದಕಗಳನ್ನು ತೋಡಿಸಿ ಮತ್ತಷ್ಟು ಭದ್ರಪಡಿಸಿದ್ದುದರಿಂದ ಶತ್ರುಗಳ ಧಾಳಿಗೆ ಅಭೇದ್ಯವೆನಿಸಿತ್ತು. ಇದಕ್ಕೆ ಸೇರಿದಂತೆಯೇ ಕೊಡಗಿನಲ್ಲಿಯೇ ಅತ್ಯುನ್ನತವಾದ ತಡಿಯಂಡಮೋಳ್ ಎಂಬ ಶಿಖರವುಳ್ಳ ಬೆಟ್ಟವಿರುವುದು. ಹಾಲೇರಿ ಮಡಿಕೇರಿಗಳ ಜೊತೆಗೆ ಕೊಡಗಿನ ಅರಸರಿಗೆ ಇದು ಮೂರನೆಯ ರಾಜಧಾನಿ. ಈಗ ಯವಕಪಾಡಿ ಎಂದು ಕರೆಯುವ ಹಳ್ಳಿಯಲ್ಲಿ ದೊಡ್ಡ ವೀರರಾಜೇಂದ್ರ 1792ರಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ. ಈ ಅರಮನೆಗಾಗಿಯೇ ಈ ಸ್ಥಳ ಈಗಲೂ ಪ್ರಸಿದ್ಧವಾಗಿದೆ. ಮಡಿಕೇರಿ ಅರಮನೆಯಷ್ಟು ದೊಡ್ಡದಲ್ಲದಿದ್ದರೂ ಇದೊಂದು ಭದ್ರವಾದ ಮತ್ತು ಸ್ಥೂಲವಾದ ಎರಡು ಅಂತಸ್ತಿನ ಕಟ್ಟಡ. ಈ ಅರಮನೆಗೆ ಇಟ್ಟಿಗೆ ಗಾರೆಗಳ ದಪ್ಪ ಗೋಡೆಗಳಿದ್ದು ಉಳಿದಂತೆ ಹೆಚ್ಚು ಮರದ ಸಾಮಾನುಗಳನ್ನೇ ಉಪಯೋಗಿಸಿದೆ. ಕೆಳಗಿನ ಅಂತಸ್ತಿನಲ್ಲಿ ದಪ್ಪಮರದ ಕಂಬಗಳಿದ್ದು, ಅವು ಬುಡದಪ್ಪವಾಗಿರೂ ಮೇಲೆ ಹೋಗುತ್ತ ಸಣ್ಣದಾಗಿವೆ. ಮೇಲಿನ ಅಂತಸ್ತಿನಲ್ಲಿ ಸುಂದರವಾದ ಕೆತ್ತನೆಯನ್ನು ಕಾಣಬಹುದು. ಮೇಲಿನ ದೊಡ್ಡ ಹಜಾರ ಅರಸನ ಒಡ್ಡೋಲಗ ಶಾಲೆಯಾಗಿತ್ತು. ಅದರ ಕಂಬಗಳು ಬುಡದಪ್ಪವಾಗಿ ಮೇಲೇರುತ್ತ ಸಣ್ಣಗಾಗುವಂತಿದ್ದು ಅಂದವಾಗಿ ಕೆತ್ತಲ್ಪಟ್ಟಿವೆ. ಮರದ ತೊಲೆಗಳು ಮತ್ತು ಹಲಗೆಗಳಿಂದ ನಿರ್ಮಿಸಿರುವ ಚಾವಣಿಯ ಒಳಭಾಗದಲ್ಲಿ ಕೆತ್ತನೆಯ ಕೆಲಸವಿದೆ ಮತ್ತು ಚಾವಣಿಯಲ್ಲಿ ಹೂ, ಬಳ್ಳಿ, ಸುರುಳಿ ಮುಂತಾದ ಅಲಂಕರಣಗಳನ್ನು ಬಣ್ಣದಿಂದ ಚಿತ್ರಿಸಿದೆ. ಮಡಿಕೇರಿಯ ಅರಮನೆಯ ಕೆಲವು ಭಾಗಗಳಲ್ಲಿ ಉಳಿದುಬಂದಿರುವಂತೆ ಇಲ್ಲಿಯೂ ಗೋಡೆಯ ಮೇಲೆ ಒಂದು ಕಾಲದಲ್ಲಿ ವ್ಯಕ್ತಿಚಿತ್ರಗಳು, ದೇವರ ಮೂರ್ತಿಗಳ ಚಿತ್ರಗಳು ತುಂಬಿದ್ದಂತೆ ತೋರುತ್ತದೆ. ಒಂದು ಕಡೆ ಜಗತಿಯಂತೆ ಉನ್ನತ ಸ್ಥಾನವೊಂದಿದ್ದು ಅಲ್ಲಿ ರಾಜನ ಸಿಂಹಾಸನವಿರುತ್ತಿತ್ತು. ಒಟ್ಟಿನಲ್ಲಿ ಕಟ್ಟಡದ ಉಳಿದ ಭಾಗಗಳು ಸರಳವಾಗಿದ್ದರೂ ಈ ಓಲಗಶಾಲೆಯನ್ನು ಸುಂದರವಾಗಿ ಅಲಂಕರಿಸಿದೆ. ಇಲ್ಲಿಯ ಮತ್ತೊಂದು ಅತ್ಯಾಕರ್ಷಕವಾದ ಕಟ್ಟಡವೆಂದರೆ ಅರಮನೆಯ ಮುಂದೆ ಬಲಭಾಗದ ಮೂಲೆಯಲ್ಲಿ ನಿಂತಿರುವ ಪುಟ್ಟದಾದ ಒಂದು ಮಂಟಪ. ಇದನ್ನು ಧಾರೆಮಂಟಪ ಎನ್ನುತ್ತಾರೆ. ದೊಡ್ಡವೀರರಾಜೇಂದ್ರ 1796ರಲ್ಲಿ ಮಹದೇವಮ್ಮನನ್ನು ಮದುವೆಯಾದಾಗ ಆ ಮದುವೆಯ ಸಮಾರಂಭಕ್ಕಾಗಿ ಈ ಪುಟ್ಟ ಮಂಟಪವನ್ನು ನಿರ್ಮಿಸಲಾಯಿತು. ಚೌಕ ವಿನ್ಯಾಸದ ಒಂದಂಕಣದ ಈ ಮಂಟಪದ ನಾಲ್ಕು ಕಡೆಯೂ ಭಾರತೀಯ–ಇಸ್ಲಾಂ ಮಾದರಿಯ ರೀತಿಯ ವೃತ್ತಭಾಗಗಳನ್ನುಳ್ಳ ಕಮಾನುಗಳಿದ್ದು ನಾಲ್ಕು ಮೂಲೆಗಳಲ್ಲಿಯೂ ಅರೆಗಂಬಗಳು, ಮೂರ್ತಿಗಳಿಂದ ಅಲಂಕೃತವಾದ ಗೂಡುಗಳು, ಗೂಡುಗಳ ಪಕ್ಕಗಳಲ್ಲಿ ಬಗೆಬಗೆಯ ಅಲಂಕರಣಗಳಿಂದ ತುಂಬಿದ ಪಟ್ಟಿಕೆಗಳು ಇವೆ. ಇವೆಲ್ಲ ತುಂಬ ನವುರಾಗಿ ನಿರ್ಮಿತವಾಗಿವೆ. ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿದ್ದು ಗಚ್ಚಿನಲ್ಲಿ ಅಲಂಕರಣಗಳನ್ನೂ ಮೂರ್ತಿಗಳನ್ನೂ ಬಿಡಿಸಿರುವ ಇದು ಅತಿ ಸುಂದರವಾದ ಮಂಟಪವೆನ್ನಬಹುದು.

ಅರಮನೆಯ ಕೆಳಭಾಗದಲ್ಲಿ ಒಂದು ಕಾಲಕ್ಕೆ ನಾಡಿನ ಕಚೇರಿಯಿತ್ತು. ಮೇಲಿನ ಅಂತಸ್ತನ್ನು ಉನ್ನತ ಅಧಿಕಾರಿಗಳು ಬಂದಾಗ ಉಳಿದುಕೊಳ್ಳಲು ಉಪಯೋಗಿಸುತ್ತಿದ್ದರು. ಈಗ ಇಲ್ಲಿ ಜೇನುಸಾಕಣೆ ಕೇಂದ್ರವೊಂದಿದೆ. ಈ ಊರಿನಲ್ಲಿ ಪನ್ನಂಗಲತಮ್ಮೆಯ ದೇವಾಲಯ ವಿದೆ. ಇದಕ್ಕೆ ನಡೆದುಕೊಳ್ಳುವವರು ಹೆಚ್ಚಾಗಿ ಹರಿಜನರು. ಏಪ್ರಿಲ್ ತಿಂಗಳಿನಲ್ಲಿ ಇಲ್ಲಿ ನಡೆಯುವ ಜಾತ್ರೆಗೆ ಅಧಿಕಸಂಖ್ಯೆಯಲ್ಲಿ ಜನರು ಸೇರುತ್ತಾರೆ.

(ಎಂ.ಎಚ್.)

**ನಾಸಿಕ್:** ಮಹಾರಾಷ್ಟ್ರ ರಾಜ್ಯದ ಒಂದು ಜಿಲ್ಲೆ ಹಾಗೂ ಆಡಳಿತ ಕೇಂದ್ರ. ಗೋದಾವರಿ ನದಿಯ ಇಕ್ಕೆಲಗಳಲ್ಲೂ ಹಬ್ಬಿರುವ ಈ ನಗರ ಒಂಬತ್ತು ಬೆಟ್ಟಗಳ ನಡುವೆ ಇದೆ. ಭಾರತದ ಪಂಚತೀರ್ಥಗಳಲ್ಲಿ ಇದೂ ಒಂದು. ಪಶ್ಚಿಮ ಕಾಶಿ ಎಂದು ಪ್ರಸಿದ್ಧವಾಗಿದೆ. ಪತಂಜಲಿಯ ಮಹಾಭಾಷ್ಯದ 6ನೆಯ ಅಧ್ಯಾಯದಲ್ಲಿ ನಾಸಿಕ್ಯ ಎಂದು ಮೊದಲ ಪ್ರಸ್ತಾಪವಿದೆ. ಕಾತ್ಯಾಯನ (ಪ್ರ.ಶ.ಪೂ.250) ಇದನ್ನು ನಾಸಕಿಯ ಎಂದು ಉಲ್ಲೇಖಿಸಿದ್ದಾನೆ. ಭೂಗೋಳ ತಜ್ಞ ಟಾಲೆಮಿಯ ಗ್ರಂಥದಲ್ಲಿ ಇದು ಅಕ್ಷಾಂಶ, ರೇಖಾಂಶದೊಡನೆ ಉಲ್ಲೇಖವಾಗಿದೆ. ವರಾಹಮಿಹಿರನ ಬೃಹತ್ ಸಂಹಿತೆ, ವಾಯು, ವರಾಹ ಪುರಾಣಗಳು ಅಥರ್ವ ಪರಿಶಿಷ್ಟ ಆವಶ್ಯಕ ಚೂರ್ಣಿ (6ನೆಯ ಶತಮಾನ), ನಂದಿಸೂತ್ರ ಮೊದಲಾದ ಗ್ರಂಥಗಳಲ್ಲಿ ನಾಸಿಕ್ಯವು ದಕ್ಷಿಣಾಪಥದಲ್ಲಿದೆ ಎಂದು ಹೇಳಿದೆ.ಅನೇಕ ಹಿಂದು, ಜೈನ ಮತ್ತು ಬೌದ್ಧ ಗ್ರಂಥಗಳಲ್ಲಿ ನಾಸಿಕವನ್ನು ನಗರಮ ದೇಶ ಅಥವಾ ಜನಪದ ಎಂದು ಉಲ್ಲೇಖಿಸಲಾಗಿದೆ.



ಪಾಂಡುಲೇಣಿ

ನಾಸಿಕ್ ಹಾಗೂ ಅದರ ದಕ್ಷಿಣಕ್ಕಿರುವ ಜೋರ್ವೆ, ಚಂದೋಳಿ, ನೆವಾಸ, ದೈಮಾಬಾದ್ ಮುಂತಾದ ಕಡೆಗಳಲ್ಲಿ ತಾಮ್ರ–ಶಿಲಾಯುಗದ ಜನವಸತಿ ಅವಶೇಷಗಳು ಸಿಕ್ಕಿವೆ. ಪ್ರ.ಶ.ಪೂ. 2ನೆಯ ಶತಮಾನದಿಂದ – ಪ್ರ.ಶ.2 ನೆಯ ಶತಮಾನದವರೆಗಿನ ಅವಧಿಯಲ್ಲಿ ನಾಸಿಕ್ ಪ್ರದೇಶ ಸಾತವಾಹನರ ಆಳಿಕೆಗೆ ಒಳಪಟ್ಟಿತ್ತು. ನಾಸಿಕ್ ಹತ್ತಿರವಿರುವ ಗುಹೆಗಳಲ್ಲಿ ಇವರ ಕಾಲದ ಅನೇಕ ಶಾಸನಗಳಿವೆ. ಪ್ರ.ಶ.1 ನೆಯ ಶತಮಾನದ ಕೊನೆಯ ವೇಳೆಗೆ ಸಾತವಾಹನರ ಪ್ರಾಬಲ್ಯ ಕಡಿಮೆಯಾಯಿತು. ಅನಂತರ ಕ್ಷಹರಾತವಂಶದ ನಹಪಾನನಿಗೆ ಈ ಪ್ರದೇಶ ಸೇರಿತು. ನಾಸಿಕ್ 10ನೆಯ ಗುಹೆಯಲ್ಲಿ ಕ್ಷಹರಾತರ ಶಾಸನಗಳಿವೆ. ಈ ಶಾಸನಗಳು ಪಶ್ಚಿಮ ಭಾರತದ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಬೀರುತ್ತವೆ. ಅನಂತರ ಈ ಪ್ರದೇಶವನ್ನು ಕ್ಷಹರಾತರಿಂದ ಗೌತಮಿಪುತ್ರ ಸಾತಕರ್ಣಿ (106–30) ಗೆದ್ದುಕೊಂಡ.

ಇಲ್ಲಿ 20ಕ್ಕೂ ಹೆಚ್ಚು ಬೌದ್ಧ ಗುಹಾದೇವಾಲಯಗಳಿವೆ. ಪಾಂಡುಲೇಣಿ ಗುಹೆಗಳೆಂದು ಕರೆಯಲಾಗುವ ಈ ಗುಹಾಲಯಗಳನ್ನು ಮೊದಲು ಭಗವಾನ್‌ಲಾಲ್ ಇಂದ್ರಜಿ ಮತ್ತು ಎಚ್. ಕಜಿನ್ಸ್ (1883 ಮತ್ತು 1908) ಅಧ್ಯಯನಕ್ಕೊಳಪಡಿಸಿದರು. ಇಲ್ಲಿ ಚೈತ್ಯ ಮತ್ತು ವಿಹಾರಗಳಿವೆ. ಇವೆಲ್ಲ ಹೀನಯಾನ ಪಂಥಕ್ಕೆ ಸೇರಿದವು. ಎರಡು ಗುಹೆಗಳಲ್ಲಿ ಮಹಾಯಾನ ಪಂಥದ ಕೆಲವು ಶಿಲ್ಪಗಳನ್ನು ಅನಂತರ ಸೇರಿಸಲಾಗಿದೆ. ಇಲ್ಲಿ ಬೋಧಿಸತ್ವ, ಪದ್ಮಪ್ರಾಣಿ, ಚಕ್ರಪಾಣಿ. ತಾರಾಭಗವತಿ ಮೊದಲಾದ ಶಿಲಾಮೂರ್ತಿಗಳಿವೆ. ಚೀನಿ ಪ್ರವಾಸಿ ಯುವಾನ್ ಚಾಂಗನು ಭಾರತಕ್ಕೆ ಬಂದಿದ್ದಾಗ ಈ ಪ್ರದೇಶ ಚಳುಕ್ಯ ಇಮ್ಮಡಿ ಪುಲಕೇಶಿಗೆ ಸೇರಿತ್ತು. ಕಲ್ಲು ಮತ್ತು ಇಟ್ಟಿಗೆಗಳಿಂದ ಕಟ್ಟಿದ ಮೂರು ಸ್ತೂಪಗಳೂ ನಗರದ ದಕ್ಷಿಣದಲ್ಲಿದ್ದ ಸಂಘಾರಾಮದಲ್ಲಿ ಬೋಧಿಸತ್ವನ ಶಿಲಾಮೂರ್ತಿಯೂ ಇದ್ದುವೆಂದು ಇವನು ತಿಳಿಸಿದ್ದಾನೆ. 1950–51 ರಲ್ಲಿ ಡೆಕ್ಕನ್ ಕಾಲೇಜಿನ ಎಚ್.ಡಿ.ಸಾಂಕಳಿಯ ಇಲ್ಲಿ ಉತ್ಖನನ ನಡೆಸಿದರು. ಇದೇ

ಸಮಯದಲ್ಲಿ ಇವರ ತಂಡ ಆದಿ ಹಳೆಶಿಲಾಯುಗದ ಕಡಿಕತ್ತಿ, ಹೆರೆಚಕ್ಕೆ ಮತ್ತು ಕೈಕೊಡಲಿಯನ್ನು ಗಂಗಪುರದ ಬಳಿ ಗೋದಾವರಿ ನದಿಯ ಸ್ತರದಲ್ಲಿ ಪತ್ತೆಮಾಡಿತು. ಉತ್ಖನನದಲ್ಲಿ 5 ಹಂತಗಳನ್ನು ಗುರುತಿಸಲಾಯಿತು.

1 ನೆಯ ಹಂತ: ಜೋರ್ವೆ ಮಾದರಿಯ ಪಾತ್ರೆ, ಬೂದುಬಣ್ಣದ ಪಾತ್ರೆ ಮತ್ತು ಕೆಂಪು ಪಾತ್ರೆಗಳು ಇಲ್ಲಿವೆ. ನಳಿಕೆಯುಳ್ಳ ಪಾತ್ರೆ, ಬಟ್ಟಲು, ಗೋಳಾಕೃತಿಯ ಜಾಡಿ ದೊರೆತಿವೆ. ಬೆಣಚುಕಲ್ಲು ಮತ್ತು ಚಕಮಕಿ ಕಲ್ಲಿನಿಂದ ಮಾಡಿದ ತ್ರಿಕೋಣ, ಅಲಗು, ಅರ್ಧಚಂದ್ರಾಕೃತಿ ಮೊದಲಾದ ಸೂಕ್ಷ್ಮಶಿಲೋಪಕರಣಗಳು ಸಿಕ್ಕಿವೆ. ಈ ಹಂತಕ್ಕೂ 2ನೆಯ ಹಂತಕ್ಕೂ ನಡುವೆ ಅಂತರವಿದೆ.

2ನೆಯ ಹಂತ: ಈ ಹಂತವನ್ನು ಎ (ಪ್ರ.ಶ.ಪೂ. 5 –3ನೆಯ ಶತಮಾನ) ಮತ್ತು ಬಿ (ಪ್ರ.ಶ.ಪೂ. 3 ನೆಯ ಶತಮಾನದಿಂದ ಪ್ರ.ಶ. 1 ನೆಯ ಶತಮಾನ) ಉಪಹಂತಗಳೆಂದು ವಿಭಾಗಿಸಲಾಗಿದೆ. ಎ ಉಪಹಂತದಲ್ಲಿ ಮಣ್ಣಿನ ಗೋಡೆಗಳು, ನೆಲಗಟ್ಟು, ಉಂಗುರ–ಬಾವಿಗಳು ಕಂಡುಬಂದಿವೆ. ಬೂದಿ, ಸುಟ್ಟು ಕರಕಲಾದ ಮರಗಳು ಹಾಗೂ ಮಣ್ಪಾತ್ರೆಗಳು ದೊರೆತಿರುವುದರಿಂದ ಈ ನೆಲೆ ಅನೇಕ ಬಾರಿ ಬೆಂಕಿಯಿಂದ ನಾಶವಾಗಿರುವಂತೆ ತೋರುತ್ತದೆ. ಔತ್ತರೇಯ ಮೆರುಗಿನ ಕಪ್ಪುಪಾತ್ರೆ, ಕೆಂಪು, ಕಪ್ಪು ಮತ್ತು ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು, ಅರೆಪ್ರಶಸ್ತ ಕಲ್ಲಿನ, ಎಲುಬು, ಗಾಜು, ಚಿಪ್ಪಿನ ಮಣಿಗಳು, ಸುಡಾವೆಮಣ್ಣಿನ ಮೈಉಜ್ಜುವ ಬಿಲ್ಲೆ, ಚಕ್ರಗಳು, ಮನುಷ್ಯಾಕೃತಿಗಳು, ಮೂಸೆ, ಬೆಣೆ (ಬಿರಟೆ), ಕಬ್ಬಿಣದ ಬಾಣದ ಮೊನೆ, ಈಟಿಯ ಮೊನೆ, ಚಾಕು, ಉಳಿ, ಸೌಟು, ಉಂಗುರ ಮತ್ತು ಮೊಳೆ, ಅರೆಯುವ ಕಲ್ಲು, ಬೀಸುವ ಕಲ್ಲು ಮತ್ತು ಆಂಟಿಮನಿ ಕಡ್ಡಿ ಸಿಕ್ಕಿವೆ. ತಕ್ಷಶಿಲೆಯಲ್ಲಿ ಸಿಕ್ಕಿರುವಂತಹ ಎಲುಬಿನ ಮೊನೆಗಳು ಇಲ್ಲಿಯೂ ಕಂಡುಬಂದಿವೆ. ಈ ಸಾಂಸ್ಕೃತಿಕ ಉಪಕರಣಗಳು ಬಿ ಹಂತದಲ್ಲೂ ಮುಂದುವರೆದವು. ಜೊತೆಗೆ ಎರಕಹೊಯ್ದ ಬರೆಹವಿಲ್ಲದ ತಾಮ್ರದ ನಾಣ್ಯಗಳು, ಕೆಲವು ಕಂದು ಬಣ್ಣದ ಲೇಪನವುಳ್ಳ ಪಾತ್ರೆ ಚೂರುಗಳು ಸಿಕ್ಕಿವೆ.

3 ನೆಯ ಹಂತ (ರೋಮನ್ ಸಂಪರ್ಕ): ಇಲ್ಲಿ ಹೊಳಪಿನ ಕೆಂಪು ಪಾತ್ರೆ, ನೀರು ದಾನಿ ಮತ್ತು ಸೆಮಿಯನ್ ಪಾತ್ರೆ ಚೂರುಗಳು ಸಿಕ್ಕಿವೆ. ಯಾವುದೇ ಕಟ್ಟಡ ಅವಶೇಷಗಳಿಲ್ಲ. ಆದರೆ ಸುಡಾವೆಮಣ್ಣಿನ ಏಕೈಕ ಹೆಂಚು ಸಿಕ್ಕಿದೆ. ಮಣಿಗಳು, ಸುಡಾವೆ ಮಣ್ಣಿನ ಮತ್ತು ಕಬ್ಬಿಣದ ವಸ್ತುಗಳಿವೆ. ರೋಮನ್ ಪಾತ್ರೆಗಳ ಆಧಾರದ ಮೇಲೆ ಈ ಹಂತದ ಕಾಲಮಾನ ಪ್ರ.ಶ. 50 ರಿಂದ 200 ಎಂದು ಅಂದಾಜುಮಾಡಲಾಗಿದೆ. ನೆಲೆಯ ಮೇಲ್ಮೈಯಲ್ಲಿ ಕ್ಷತ್ರಪ ರಾಜ ನಹಪಾನ ಮತ್ತು ಸಾತವಾಹನ ಅರಸರ ನಾಣ್ಯಗಳು ಸಿಕ್ಕಿವೆ.

4 ನೆಯ ಹಂತ (ಮುಸ್ಲಿಂ–ಮರಾಠ): ಈ ಹಂತದಲ್ಲಿ ಕಲ್ಲಿನ ಕಟ್ಟಡ ಅವಶೇಷಗಳ ಜೊತೆಯಲ್ಲಿ ಅಕ್ಬರನ ನಾಣ್ಯ ಮತ್ತು ಬರೋಡದ ಮಲ್ಹಾರರಾವ್ ಗಾಯಕವಾಡರ ನಾಣ್ಯಗಳು ಸಿಕ್ಕಿವೆ. ಸೆಲಡನ್ ಪಾತ್ರೆ ಮತ್ತು ಗಾಜು ಮೆರುಗಿನ ಪಾತ್ರೆ ದೊರೆತಿವೆ. ಬಹುವರ್ಣದ ಕೆಲವು ಗಾಜಿನ ಬಳೆ ಚೂರುಗಳು ಸಿಕ್ಕಿವೆ. ಇವುಗಳ ಆಧಾರದ ಮೇಲೆ ಈ ಹಂತದ ಕಾಲವನ್ನು 1400–1875 ಎಂದು ತಿಳಿಯಲಾಗಿದೆ. (ಎ.ಎಸ್.;ಎನ್.ಎಲ್.)

**ನಿಡುಗಲ್ಲು ಚೋಳರು:** ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು

**ನಿನೆವೆ:** ಅಸ್ಸೀರಿಯದ ಪ್ರಾಚೀನ ನಗರ, ರಾಜಧಾನಿ. ಟೈಗ್ರಿಸ್ ನದಿಯ ಪೂರ್ವತೀರದಲ್ಲಿ ಈಗಿನ ಇರಾಕಿನ ಮೋಸುಲ್ ನಗರಕ್ಕೆ ಎದುರಿನಲ್ಲಿತ್ತು. ನಿನೆವೆ ನಗರದ ಅವಶೇಷಗಳು ಮುಖ್ಯವಾಗಿ ಎರಡು ದಿಬ್ಬಗಳಲ್ಲಿವೆ. ವಾಯವ್ಯದಲ್ಲಿರುವ ಕುಯುಂಜಿಕ್‌ನಲ್ಲಿ ಅರಮನೆ ಹಾಗೂ ದೇವಾಲಯಗಳ ಅವಶೇಷಗಳಿವೆ. ಆಗ್ನೇಯದಲ್ಲಿರುವ ನಬಿ ಯೂನಿಸ್‌ನಲ್ಲಿ ಅಸ್ಸೀರಿಯನ್ ಅರಸರಿಗೆ ಸೇರಿದ ಉಗ್ರಾಣ ಮತ್ತು ಇತರ ಕಟ್ಟಡಗಳ ಪಳೆಯುಳಿಕೆಗಳಿವೆ.ಈ ಎರಡನೆಯ ದಿಬ್ಬ ಜೊನಾ ಎಂಬ ಪ್ರವಾದಿಯ ಸಮಾಧಿಯಿಂದಾಗಿ ಹೆಚ್ಚು ಪ್ರಸಿದ್ಧವಾಗಿವೆ. ಮೊದಲನೆಯ ದಿಬ್ಬದಲ್ಲಿ ಪ್ರಾಗೈತಿಹಾಸಿಕ ಅವಶೇಷಗಳೂ ಇವೆ. ನಿನೆವೆ ಪ್ರ.ಶ.ಪೂ. 18ನೆಯ ಶತಮಾನದಲ್ಲಿ 2ನೆಯ ಷಾಂಷೀ ಆದಾದನ ರಾಜಧಾನಿಯಾಯಿತು. ಆದರೆ ಇದು ಹೆಚ್ಚು ಪ್ರಸಿದ್ಧವಾದ್ದು ಸೆನ್ನಾಕೆರಿಬನ (ಪ್ರ.ಶ.ಪೂ. 705–681) ಕಾಲದಲ್ಲಿ. ಈತನ ಅರಮನೆ ಹಾಗೂ ಶಾಸನಗಳು ಇಲ್ಲಿ ದೊರೆತಿವೆ. ಇವುಗಳಿಂದ ಆಗಿನ ದುರ್ಗನಿರ್ಮಾಣ, ಪಟ್ಟಣ ವ್ಯವಸ್ಥೆ, ನೀರಾವರಿ, ಕೃಷಿ ಮುಂತಾದ ಅಂಶಗಳು ತಿಳಿದುಬರುತ್ತವೆ. ಕೊನೆಯ ಅಸ್ಸೀರಿಯದ ಅರಸರು ಈ ನಗರವನ್ನು ಮತ್ತಷ್ಟು ವಿಸ್ತರಿಸಿ ಸುವ್ಯವಸ್ಥೆಗೊಳಿಸಿದರು. ಅಸುರ್‌ಬಿನ್‌ಪಾಲ್‌ನ (ಪ್ರ.ಶ.ಪೂ. 669–626) ಅರಮನೆ ಪುರಾತತ್ತ್ವಜ್ಞರ ಹಾಗೂ ಕಲಾಭಿಜ್ಞರ ಆಸಕ್ತಿಯ ಕೇಂದ್ರವಾಗಿದೆ.

ಕುಯುಂಜಿಕ್ ದಿಬ್ಬವನ್ನು ಸಂಪೂರ್ಣವಾಗಿ ಉತ್ಖನನಮಾಡಿ ಶೋಧಿಸಿಲ್ಲ. ನೈರುತ್ಯದ ಭಾಗದಲ್ಲಿ ಸೆನ್ನಾಕೆರಿಬನ ಮತ್ತು ಉತ್ತರದಲ್ಲಿ ಅಸುರ್‌ಬಿನ್‌ಪಾಲನ ಅರಮನೆಗಳು ಈಗ ಸಿಕ್ಕಿವೆ. ಸೆನ್ನಾಕೆರಿಬನ ಅರಮನೆ ತುಂಬ ವಿಶಾಲವಾದ್ದು. ಇದು ಕೊನೆಯ ಪಕ್ಷ 80 ವಿಶಾಲವಾದ ಕೋಣೆಗಳನ್ನೊಳಗೊಂಡಿತ್ತು. ಮುಖ್ಯ ದ್ವಾರಗಳಲ್ಲಿ ಮಾನವನ ತಲೆಯುಳ್ಳ ವೃಷಭಮೂರ್ತಿಗಳಿದ್ದವು. ಕಲ್ಲುಚಪ್ಪಡಿಗಳಿಂದ ನಿರ್ಮಿತವಾದ ಗೋಡೆಗಳ ಮೇಲೆ ಅರಸನ ದಿಗ್ವಿಜಯ ಮತ್ತು ಆಸ್ಥಾನಜೀವನಕ್ಕೆ ಸಂಬಂಧಿಸಿದ ಉಬ್ಬುಚಿತ್ರಗಳನ್ನು ಬಿಡಿಸಿತ್ತು. ಈ ಶಿಲ್ಪಗಳಲ್ಲಿ ಉತ್ತಮವಾದ ಕೆಲವನ್ನು ಈಗ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿಡಲಾಗಿದೆ. ಎರಡು ಅರಮನೆಗಳ ನಡುವೆ ಇಷ್ತರ್, ನಬು ಮುಂತಾದ ದೇವತೆಗಳಿಗೆ ಸೇರಿದ ದೇವಾಲಯಗಳಿವೆ. ಇಲ್ಲಿಯ ಇಷ್ತರ್ ದೇವತೆಯ ಪ್ರಸಿದ್ಧಿ ಈಜಿಪ್ಟಿಗೂ ಹರಡಿತ್ತು. ಸೆನ್ನಾಕೆರಿಬನ ಕಾಲದಲ್ಲಿ ನಿನೆವೆ ನಗರ ಸು. 1,800 ಎಕರೆಗಳಷ್ಟು ವಿಸ್ತಾರವಾಗಿತ್ತು. ಇದಕ್ಕೆ 18 ಮಹಾದ್ವಾರಗಳಿದ್ದುವಲ್ಲದೆ, ರಕ್ಷಣೆ ಗೋಡೆಗಳಿದ್ದವು. ಬೆಟ್ಟಗುಡ್ಡಗಳಿಂದ ನೀರು 18 ಕಾಲುವೆಗಳ ಮೂಲಕ ನಗರಕ್ಕೆ ಬರುವ ವ್ಯವಸ್ಥೆ ಇತ್ತು.

ಪ್ರ.ಶ.ಪೂ.612ರಲ್ಲಿ ಸಿಯಾಕ್ಸರೀಸನ ನೇತೃತ್ವದಲ್ಲಿ ಬಂದ ಮೀಡ್ ಜನರ ಆಕ್ರಮಣಗಳಿಗೆ ಈ ಮಹಾನಗರ ತುತ್ತಾಗಿ ನಾಶವಾಯಿತು. (ಎಚ್.ಎಂ.ಎನ್.ಆರ್.;ಎಚ್.ಆರ್.ಆರ್.ಐ.)

**ನಿಮ್ರೂಡ್:** ಅಸ್ಸೀರಿಯದ ಪ್ರಾಚೀನ ನಗರವೊಂದರ ಈಗಿನ ಹೆಸರು. ಬೈಬಲಿನಲ್ಲಿ ಇದನ್ನು ಕೇಲ, ಕ್ಯಾಲ್ಹೂ ಎಂದು ಕರೆಯಲಾಗಿದೆ. ಇದು ಇರಾಕಿನ ಅಲ್–ಮಾಸಿಲ್ ರಾಜ್ಯಪಾಲಿಕೆಯಲ್ಲಿ ಮೋಸುಲ್‌ಗೆ ದಕ್ಷಿಣದಲ್ಲಿದೆ. ಪ್ರ.ಶ.ಪೂ.13ನೆಯ ಶತಮಾನದಲ್ಲಿ 1ನೆಯ ಷ್ಯಾಲ್‌ಮನೀಸರ್ ಈ ನಗರವನ್ನು ಸ್ಥಾಪಿಸಿದ. 2ನೆಯ ಅಸುರ್‌ನಾಸಿರ್‌ಪಾಲ್ (ಪ್ರ.ಶ.ಪೂ.ಸು.883–ಸು. 859) ಇದನ್ನು ತನ್ನ ರಾಜಧಾನಿ ಹಾಗೂ ಸೇನಾಕೇಂದ್ರವನ್ನಾಗಿ ಮಾಡಿಕೊಳ್ಳುವವರೆಗೆ ಇದು ಹೆಚ್ಚು ಪ್ರಸಿದ್ಧಿಗೆ ಬಂದಿರಲಿಲ್ಲ. ಅವನೂ ಅನಂತರ ಬಂದ 3ನೆಯ ಷ್ಯಾಲ್‌ಮನೀಸರನೂ ಇಲ್ಲಿ ದುರ್ಗವನ್ನೂ ಹೊರಗೋಡೆಯನ್ನೂ ಕಟ್ಟಿಸಿದರು. ಇಲ್ಲಿಯ ಅತ್ಯಂತ ಪ್ರಮುಖ ಧಾರ್ಮಿಕ ಕಟ್ಟಡವನ್ನು ರಾಣಿ ಸಾಮುರಾಮಾಟ್ ಸ್ಥಾಪಿಸಿದಳು. ನಬು ದೇವತೆಯ ಮಂದಿರ ಇದರಲ್ಲಿ ಮುಖ್ಯವಾದ್ದು. ಇಲ್ಲಿಯ ಗ್ರಂಥಾಲಯದಲ್ಲಿ ಅನೇಕ ಧಾರ್ಮಿಕ ಹಾಗೂ ಮಾಂತ್ರಿಕ ಗ್ರಂಥಗಳಿದ್ದವು; ಅಸ್ಸೀರಿಯ ದೊರೆಗಳ ವಂಶಾವಳಿಯೂ ಇತ್ತು. ಈ ನಿವೇಶನದಲ್ಲಿ ಉತ್ಖನನ ಮಾಡಿದಾಗ ದಂತದಲ್ಲಿ ಕೊರೆದ ಅನೇಕ ವಸ್ತುಗಳೂ ಇತರ ಪದಾರ್ಥಗಳೂ ದೊರಕಿವೆ. ಕೇಲ ನಗರ ಪ್ರ.ಶ.ಪೂ.7ನೆಯ ಶತಮಾನದಲ್ಲಿ ಕುಗ್ಗಿತು. ಸಾರ್ಗೋನಿಡರು ನಿನೆವೆಯನ್ನು ರಾಜಧಾನಿಯಾಗಿ ಮಾಡಿಕೊಂಡರು. ಪ್ರ.ಶ.ಪೂ.614ರಲ್ಲಿ ಇದು ಆಕ್ರಮಣಕ್ಕೊಳಗಾಗಿ ನಾಶವಾಯಿತು. ಅನಂತರ ಇದು ಗ್ರೀಕರ ಅಧೀನವಾಯಿತೆಂದು ಹೇಳಲಾಗಿದೆ. ಆದರೆ ಇದು ಮತ್ತೆ ಮೊದಲಿನ ಪ್ರಮುಖ ಸ್ಥಾನ ಗಳಿಸಲಿಲ್ಲ. (ಎಚ್.ಎಂ.ಎನ್.ಆರ್.)

**ನಿರಂಕುಶ ಪ್ರಭುತ್ವ:** ಆಧುನಿಕ ರಾಜ್ಯಶಾಸ್ತ್ರಜ್ಞರು ವಿವಿಧ ಅರ್ಥಗಳಲ್ಲಿ ಈ ಪದವನ್ನು ಬಳಸಿದ್ದಾರೆ. ಸ್ವೇಚ್ಛೆಯಿಂದ ಆಳುವ ರಾಜತ್ವ, ಏಕೈಕ ಮುಖಂಡನ ಅಧೀನದಲ್ಲಿರುವ ರಾಜ್ಯ, ಸಮಗ್ರವಾದಿ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಏಕೈಕ ಪಕ್ಷದ ಒಡೆತನ ಮುಂತಾದ ಅರ್ಥಗಳಲ್ಲಿ ಇದನ್ನು ಬಳಸಲಾಗಿದೆ. ಒಟ್ಟಿನಲ್ಲಿ ಆಳುವ ಪ್ರಭು (ಅಥವಾ ಪಕ್ಷ) ತನ್ನಲ್ಲೇ ಕಾರ್ಯಾಂಗ ಮತ್ತು ಶಾಸಕಾಂಗಗಳನ್ನು ಸೇರಿಸಿಕೊಂಡು ಯಾವ ಶಾಸನಕ್ಕಾಗಲೀ ಸಂವಿಧಾನಕ್ಕಾಗಲೀ ಬದ್ಧನಾಗದೇ ತನ್ನ ಆಜ್ಞೆಯೇ ಶಾಸನವೆಂದು ಭಾವಿಸಿ ಅದನ್ನು ಜನತೆಯ ಮೇಲೆ ಹೇರಿ ನಡೆಸುವ ಸರ್ಕಾರ ಪದ್ಧತಿ ಇದು. ಇಂಥ ಸರ್ಕಾರದಲ್ಲಿ ನ್ಯಾಯ, ಧರ್ಮ, ಆರ್ಥಿಕ, ಸಾಮಾಜಿಕ ರೀತಿ ನೀತಿಗಳು ಎಲ್ಲವೂ ಪ್ರಭುವಿನ ಆಜ್ಞೆಯಿಂದ ರೂಪಿತವಾಗುತ್ತದೆ. 17ನೆಯ ಶತಮಾನದ ಅಂತ್ಯ ಮತ್ತು 18ನೆಯ ಶತಮಾನದ ಪ್ರಾರಂಭದಲ್ಲಿ ಫ್ರಾನ್ಸ್‌ನ ದೊರೆಯಾಗಿದ್ದ 14ನೆಯ ಲೂಯಿ ಹೇಳಿದ ನಾನೇ ರಾಜ್ಯ ಎಂಬ ಮಾತು ಈ ಪದ್ಧತಿಯ ಸ್ವರೂಪವನ್ನು ತಿಳಿಸುತ್ತದೆ. ಆಧುನಿಕ ಫ್ಯಾಸಿಸ್ಟ್, ನಾಟ್ಸಿ ಮತ್ತು ಸಾಮ್ಯವಾದಿ ಸರ್ವಾಧಿಕಾರಿ ಸರ್ಕಾರಗಳು ನಿರಂಕುಶ ಪ್ರಭುತ್ವದ ಉದಾಹರಣೆಗಳು. 20ನೆಯ ಶತಮಾನದ ಮಧ್ಯದಲ್ಲಿ ನಿರಂಕುಶ ಪ್ರಭುತ್ವವೆಂದರೆ, ಪಾಶ್ಚಾತ್ಯ ಮಾದರಿಯ ಪ್ರಜಾಪ್ರಭುತ್ವಕ್ಕೆ ತೀರಾ ವಿರುದ್ಧವಾದ ಸರ್ಕಾರ ಪದ್ಧತಿ ಎಂಬ ಅಭಿಪ್ರಾಯ ಬಂದಿದೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಮೂಲಕ ಸರ್ಕಾರದ ಅಧಿಕಾರವನ್ನು ಪರಿಮಿತಗೊಳಿಸಲಾಗುತ್ತದೆ ಹಾಗೂ ಅಧಿಕಾರದ ಹಂಚಿಕೆಯಾಗಿರುತ್ತದೆ.

ಪ್ರಪಂಚದ ನಾನಾ ಭಾಗಗಳಲ್ಲಿ ಬಹಳ ಹಿಂದಿನ ಕಾಲದಿಂದಲೂ ನಿರಂಕುಶ ಪ್ರಭುತ್ವ ಇದ್ದುದನ್ನು ಕಾಣಬಹುದು. ಪ್ರಾಚೀನ ಕಾಲದ ಪೌರಸ್ತ್ಯ ರಾಜತ್ವವೂ ರಷ್ಯದಲ್ಲಿ 1917ರ ವರೆಗೆ ಇದ್ದ ಆನುವಂಶಿಕ ರಾಜತ್ವವೂ ನಿರಂಕುಶ ಪ್ರಭುತ್ವದ ಮಾದರಿಗಳು ಎನ್ನಬಹುದು. ಆಧುನಿಕ ಯುರೋಪಿನಲ್ಲಿ ಮಧ್ಯಯುಗದ ವ್ಯವಸ್ಥೆ ಮುರಿದು ಬಿದ್ದ ಮೇಲೆ ರಾಷ್ಟ್ರ ರಾಜ್ಯದ ಉದಯದ ಕಾಲದಲ್ಲಿ ಬಲಿಷ್ಠವಾದ ರಾಜತ್ವ ತಲೆದೋರಿತು. ಹಾಗೇ ಹೊಸದಾಗಿ ಉದ್ಭವಿಸಿದ ರಾಷ್ಟ್ರಗಳ ಶಕ್ತಿಯನ್ನು ಹೆಚ್ಚಿಸಲು ರಾಜನ ಬಲವನ್ನು ಹೆಚ್ಚಿಸುವ ಆವಶ್ಯಕತೆ ಆಗ ಕಂಡುಬಂತು. ಅದುವರೆಗೂ ಸರ್ಕಾರದ ಮೇಲೆ ಚರ್ಚಿನ, ಪಾಳೆಯಗಾರರ, ಸರದಾರರ ಹಾಗೂ ಸಾಮಾಜಿಕ ಸಂಪ್ರದಾಯಗಳ ಹಿಡಿತ ಬಲವಾಗಿತ್ತು. ಈ ಹಿಡಿತ ಸಡಿಲವಾಗಿ ಸರ್ಕಾರದ ಅಧಿಕಾರ ರಾಜನಲ್ಲಿ ಕೇಂದ್ರೀಕೃತವಾಗತೊಡಗಿತು. ಹೀಗೆ ಯುರೋಪಿನಲ್ಲಿ ನಿರಂಕುಶ ಪ್ರಭುತ್ವದ ಸ್ಥಾಪನೆಗೆ ರಾಜತ್ವ ಕಾರಣವಾಯಿತು.

16ನೆಯ ಶತಮಾನದ ಹೊತ್ತಿಗೆ ಯುರೋಪಿನ ಬಹುಭಾಗಗಳಲ್ಲಿ ನಿರಂಕುಶ ಪ್ರಭುತ್ವ ಜಾರಿಯಲ್ಲಿತ್ತು. 17 ಮತ್ತು 18ನೆಯ ಶತಮಾನಗಳಲ್ಲಿ ಅದು ಇನ್ನೂ ಪ್ರಬುದ್ಧಮಾನವಾಗಿಯೇ ಇತ್ತು. ಫ್ರಾನ್ಸ್, ಸ್ಪೇನ್, ಪ್ರಷ್ಯ ಮತ್ತು ಟ್ಯೂಡರ್ ಇಂಗ್ಲೆಂಡ್‌ಗಳು ಇದಕ್ಕೆ ನಿದರ್ಶನಗಳು.

ರಾಜನ ಅಧಿಕಾರ ದೈವದತ್ತವಾದದ್ದು ಎಂಬ ವಾದ ನಿರಂಕುಶ ಪ್ರಭುತ್ವದ ತಾತ್ತ್ವಿಕ ಸಮರ್ಥನೆಯಾಗಿದೆ. ರಾಜ ಎಷ್ಟೇ ಕ್ರೂರಿಯಾಗಿದ್ದರೂ ಪ್ರಜೆಗಳು ಅವನನ್ನು ಮತ್ತು ಅವನ ಕ್ರೌರ್ಯವನ್ನು ದೈವಾಜ್ಞೆ ಎಂದು ಪಾಲಿಸಬೇಕು. ತಾವು ಮಾಡಿದ ತಪ್ಪುಗಳಿಗೆ ಶಿಕ್ಷೆಯ

ರೂಪವಾಗಿ ದೇವರು ಕ್ರೂರ ರಾಜನನ್ನು ಕೊಟ್ಟಿದ್ದಾನೆಂದು ತಿಳಿದು ಅವನ ಆಜ್ಞೆಯನ್ನು ಸಂತೋಷದಿಂದ ಪಾಲಿಸುತ್ತಾ ಅವನ ಶಿಕ್ಷೆಯನ್ನು ತಮ್ಮ ಪಾಪದ ಫಲವೆಂದು ಅನುಭವಿಸಬೇಕು ಎಂದು ಭಾವಿಸಲಾಗಿತ್ತು. ಈ ವಾದ ಮಧ್ಯಯುಗದ ಧಾರ್ಮಿಕ ಸಿದ್ಧಾಂತಗಳ ಪರಿಣಾಮ. ದೇವರು ರಾಜಕೀಯ ಪ್ರಭುವಿಗೆ ಲೌಕಿಕ ಅಧಿಕಾರವನ್ನು, ಚರ್ಚಿನ ಮುಖಂಡನಿಗೆ ಧಾರ್ಮಿಕ ಅಧಿಕಾರವನ್ನು ಹಂಚುವುದರಿಂದ ಅವರಿಬ್ಬರಿಗೂ ಜನತೆಯ ಮೇಲೆ ಸಮವಾದ ಸ್ವಾಮ್ಯ ಇರಬೇಕೆಂಬುದು ಮಧ್ಯಯುಗದ ವಿಚಾರವಾಗಿತ್ತು. ಆದರೆ ನೂತನ ರಾಜರು ತಮ್ಮ ಅಧಿಕಾರ ಸಮಗ್ರವಾಗಿರಬೇಕೆಂದು ಅದರ ಬಗ್ಗೆ ತಾವು ಯಾವ ವಿಧವಾದ ಸ್ಪರ್ಧೆಯನ್ನು ಸಹಿಸುವುದಿಲ್ಲ ಎಂದು ವಾದಿಸಿದರು.

ರಾಜನ ನಿರಂಕುಶ ಪ್ರಭುತ್ವಕ್ಕೆ ಸಮರ್ಥನೆಯಾಗಿ ದೈವದತ್ತವಾದವನ್ನು ಮಾತ್ರವಲ್ಲದೆ ಇನ್ನೂ ಬೇರೆ ಬೇರೆ ವಾದವನ್ನು ಮುಂದೊಡ್ಡಲಾಯಿತು. ಶಾಂತಿ ಮತ್ತು ರಾಜ್ಯ ರಕ್ಷಣೆಯ ಸಲುವಾಗಿ ಒಬ್ಬನೇ ಪ್ರಭುವಿನ ಇಚ್ಛೆಗೆ ವಿಧೇಯತೆಯನ್ನು ಸಲ್ಲಿಸಬೇಕೆಂಬುದೇ ಈ ವಾದಗಳ ಮುಖ್ಯಾಂಶ. ಹಾಗೇ ವಿಧೇಯತೆಯನ್ನು ಪ್ರಭುವಿಗೆ ತೋರಿಸದಿದ್ದರೆ ಅನಾಯಕತ್ವ ಉಂಟಾಗಿ ಅರಾಜಕತೆ ಪ್ರಾಪ್ತವಾಗುವುದೆಂದು ತನ್ಮೂಲಕ ರಾಜಕೀಯ ಅಧಿಕಾರ ದುರ್ಬಲರ ಹಾಗೂ ಅಯೋಗ್ಯರ ಕೈ ಸೇರುವುದೆಂದುವಾದ ಮಾಡಲಾಯಿತು. ಪ್ರಾಣ ಮತ್ತು ಆಸ್ತಿಯ ರಕ್ಷಣೆಯಲ್ಲಿ ದಕ್ಷತೆಯಿರಲು ಪ್ರಭುವಿನ ಸರ್ವಾಧಿಕಾರ ಅತ್ಯಗತ್ಯ. ಆದ್ದರಿಂದ ತಮ್ಮ ಹಿತಕ್ಕೋಸ್ಕರವೇ ಪ್ರಜೆಗಳು ಪ್ರಭುವಿನ ನಿರಂಕುಶತ್ವವನ್ನು ಒಪ್ಪಿಕೊಂಡು ಅವನಿಗೆ ಬೇಷರತ್ತಾಗಿ ವಿಧೇಯರಾಗಿರಬೇಕು ಎಂಬುದು 17ನೆಯ ಶತಮಾನದ ತಾತ್ತ್ವಿಕನಾದ ಥಾಮಸ್ ಹಾಬ್ಸ್‌ನ ವಾದ. ಆದರೆ ಈತ ಪ್ರಭುವೆಂದರೆ ಕೇವಲ ರಾಜ ಎಂದು ಹೇಳಿಲ್ಲ. ಪ್ರಭುತ್ವ ಒಬ್ಬನಲ್ಲಿಯೇ ಇರಬಹುದು; ಕೆಲವರಲ್ಲಿ ಇರಬಹುದು ಅಥವಾ ಬಹುಜನರ ಪ್ರತಿನಿಧಿ ಸಭೆಯಲ್ಲಿ ಇರಬಹುದು. ಅದು ಎಲ್ಲೇ ನೆಲೆಸಿರಲಿ, ಅದಕ್ಕೆ ಸಂಪೂರ್ಣ ವಿಧೇಯತೆ ಅತ್ಯಗತ್ಯ ಎಂಬುದು ಇವನ ವಾದ. ಇವನ ಅನಂತರ ಬಂದ ಅನೇಕ ತಾತ್ತ್ವಿಕರು ಕೂಡ ಪ್ರಭುತ್ವದ ನಿರಂಕುಶ ಅಧಿಕಾರ ಚಲಾವಣೆಗೆ ಮನ್ನಣೆ ನೀಡಿದ್ದಾರೆ. ಆ ಅಧಿಕಾರ ಒಬ್ಬನಲ್ಲಿ ಅಥವಾ ಒಂದು ಸಣ್ಣ ಗುಂಪಿನಲ್ಲಿ ಕೇಂದ್ರೀಕೃತವಾಗಿರಬೇಕೆಂಬುದೇ ಅವರ ವಾದದ ತಿರುಳು.

ರೂಸೋ ಕೂಡ ನಿರಂಕುಶ ಪ್ರಭುತ್ವವನ್ನು ಸಮರ್ಥಿಸಿದ್ದಾನೆ. ಆತನ ಪ್ರಕಾರ ಪ್ರತಿಯೊಬ್ಬನಲ್ಲೂ ಎರಡು ಬಗೆಯಾದ ಇಚ್ಛೆ ಇರುತ್ತದೆ. ಒಂದು ವೈಯಕ್ತಿಕವಾದ್ದು ಮತ್ತು ಎರಡನೆಯದು ಸಾರ್ವಜನಿಕವಾದ್ದು. ವೈಯಕ್ತಿಕ ಇಚ್ಛೆ ಆತನ ಅನುಕೂಲ ಸೌಲಭ್ಯಗಳಿಗೆ ಗಮನಕೊಡುತ್ತದೆ. ಸಾರ್ವಜನಿಕ ಇಚ್ಛೆಯಾದರೋ ಸಾರ್ವಜನಿಕ ಕಲ್ಯಾಣಕ್ಕೆ ಗಮನ ಕೊಡುತ್ತದೆ. ಎಲ್ಲಿಯವರೆಗೆ ವೈಯಕ್ತಿಕ ಇಚ್ಛೆ ಸಾರ್ವಜನಿಕ ಇಚ್ಛೆಗೆ ಅನುಗುಣವಾಗಿರುತ್ತದೆಯೋ ಅಲ್ಲಿಯವರೆಗೆ ವ್ಯಕ್ತಿ ಸ್ವತಂತ್ರ. ಆದರೆ ಈ ಎರಡು ಇಚ್ಛೆಗಳಿಗೆ ವಿರೋಧ ಉಂಟಾದಾಗ ಸಾರ್ವಜನಿಕ ಇಚ್ಛೆಗಳಿಗೆ ಪ್ರಾಧಾನ್ಯ ಮತ್ತು ಮನ್ನಣೆ ನೀಡಬೇಕು. ವೈಯಕ್ತಿಕ ಇಚ್ಛೆ ಸಾರ್ವಜನಿಕ ಇಚ್ಛೆಗೆ ಅನುಗುಣವಾಗಿರುವಂತೆ ಬಲಾತ್ಕಾರವನ್ನು ಮಾಡತಕ್ಕದ್ದು. ಪ್ರತಿಯೊಂದು ರಾಜ್ಯದಲ್ಲೂ ಸಾರ್ವಜನಿಕ ಇಚ್ಛೆಯೇ ಪ್ರಭು. ಅದಕ್ಕೆ ವಿಧೇಯತೆ ತೋರಿಸುವುದೇ ಸ್ವಾತಂತ್ರ್ಯ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ಅದಕ್ಕೆ ಒಪ್ಪಿಸಿ ಅದರಿಂದ ಇನ್ನೂ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆಯುತ್ತಾನೆ. ನೈಸರ್ಗಿಕ ಸ್ಥಿತಿಯಲ್ಲಿ ವ್ಯಕ್ತಿಗೆ ಸ್ವಾತಂತ್ರ್ಯವಿತ್ತು. ಆದರೆ, ಅದು ಮೃಗಗಳು ಹೊಂದಿದ್ದ ಸ್ವಾತಂತ್ರ್ಯದಂತಿತ್ತು. ಸಾಮಾಜಿಕ ಇಚ್ಛೆಗೆ ಒಳಗಾದ ಮೇಲೆ ಮಾನವ ಬುದ್ಧಿವಂತನೂ ನೀತಿವಂತನೂ ಆದ. ಸಹಜಪ್ರವೃತ್ತಿಗೆ (ಇನ್‌ಸ್ಟಿಂಕ್ಟ್) ಬದಲಾಗಿ ನ್ಯಾಯವನ್ನು (ಜಸ್ಟಿಸ್), ತೃಷ್ಣೆಗೆ (ಅಪೆಟೈಟ್) ಬದಲಾಗಿ ಕಾನೂನನ್ನು (ಲಾ) ರಾಜ್ಯ ನೀಡುತ್ತದೆ. ಅದರ ಸದಸ್ಯತ್ವದಿಂದ ಆತ ತಿಳುವಳಿಕೆಯುಳ್ಳವನೂ ನೀತಿವಂತನೂ ಆಗುತ್ತಾನೆ. ಆದ್ದರಿಂದ ರಾಜ್ಯದ, ಪ್ರಭುವಿನ ಇಚ್ಛೆ ನಿರಂಕುಶವಾದ್ದೆಂಬುದು ರೂಸೋ ಅಭಿಪ್ರಾಯ.

ಜರ್ಮನ್ ಚಿಂತನಕಾರ ಹೆಗಲನ ಪ್ರಕಾರ ರಾಜ್ಯ ಎಂಬುದು ಸರ್ವಶಕ್ತನಾದ ದೇವರು ಇತಿಹಾಸ ಪಥದಲ್ಲಿ ಇಟ್ಟ ಅಂತಿಮ ಹೆಜ್ಜೆ. ಆದ್ದರಿಂದ ರಾಜ್ಯದ ಪರಮಾಧಿಕಾರ ಮಹೋನ್ನತ ನೀತಿಯ ವಸ್ತುವಾಗಿದೆ. ಅದಕ್ಕೆ ವಿರುದ್ಧವಾದ್ದೆಲ್ಲವೂ ಅನೈತಿಕ. ಆದ್ದರಿಂದ ರಾಜ್ಯದ ಸಾರ್ವಭೌಮತ್ವ ಶ್ರೇಷ್ಠವಾದ್ದು.

ಇಪ್ಪತ್ತನೆಯ ಶತಮಾನದ ಫ್ಯಾಸಿಸ್ಟ್, ನಾಟ್ಸಿ ಮತ್ತು ಸಾಮ್ಯವಾದಿ ಸರ್ವಾಧಿಕಾರ ಪದ್ಧತಿಗೂ ಹಿಂದಿನ ನಿರಂಕುಶ ಪ್ರಭುತ್ವಕ್ಕೂ ಅಷ್ಟೇನೂ ವ್ಯತ್ಯಾಸವಿಲ್ಲ. ಆದರೆ ತತ್ತ್ವಶಃ ರಾಜತ್ವಕ್ಕೆ ನೀಡಲಾದ ಸಮರ್ಥನೆಗಳನ್ನು ಬಳಸಿಕೊಂಡು ಸಮಯೋಚಿತವಾಗಿ ಮಾರ್ಪಡಿಸಲಾದ ಈ ಸಿದ್ಧಾಂತಗಳು ಸರ್ವಾಧಿಕಾರವನ್ನು ಪ್ರತಿಪಾದಿಸುತ್ತದೆ.

ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಹತೋಟಿಯಲ್ಲಿಡಲು ಮತ್ತು ರಾಜ್ಯ ಸುವ್ಯವಸ್ಥಿತವಾಗಿರಲು ವ್ಯಕ್ತಿ ಅಥವಾ ಪಕ್ಷದ ಸರ್ವಾಧಿಕಾರ ಅಗತ್ಯ ಎಂಬುದೇ ಈ ಸಿದ್ಧಾಂತಗಳ ತಿರುಳು. ಈ ಸಿದ್ಧಾಂತಗಳ ಪ್ರಕಾರ ರಾಜ್ಯ ಮತ್ತು ಸಮಾಜಗಳ ನಡುವೆ ವ್ಯತ್ಯಾಸವಿರುವುದಿಲ್ಲ. ಸಮಗ್ರ ಸಮಾಜದ ಏಕತೆಯನ್ನು ಸಾಧಿಸಲು ಜೀವನದ ಸರ್ವತೋಮುಖವಾದ ರೀತಿ ನೀತಿಗಳನ್ನು ನಿಯಂತ್ರಣಗೊಳಿಸಿ ವ್ಯಕ್ತಿತ್ವವನ್ನು ಸರ್ವಾಧಿಕಾರದ ಇಚ್ಛೆಗೆ ತಕ್ಕಂತೆ ನಿರೂಪಿಸುವುದೇ ಈ ಸಿದ್ಧಾಂತಗಳ ಉದ್ದೇಶ. ಈ ಉದ್ದೇಶದ ಸಾಧನೆಯಲ್ಲಿ ಸಾರ್ವಜನಿಕ ಸಹಕಾರ ಪಡೆಯಲು ಸರ್ವಾಧಿಕಾರಿ ಸರ್ಕಾರಗಳು ಸಾರ್ವಜನಿಕ ಅಭಿಪ್ರಾಯವನ್ನು ಕೃತಕವಾಗಿ ಸೃಷ್ಟಿಸುತ್ತವೆ. ಶಿಕ್ಷಣ, ಪತ್ರಿಕೆ, ರೇಡಿಯೋ, ದೂರದರ್ಶನ, ನಾಟಕ, ಚಲನಚಿತ್ರ ಪ್ರದರ್ಶನ, ಮೆರವಣಿಗೆ ಮುಂತಾದ ಸಾಧನಗಳಿಂದ ಸಾರ್ವಜನಿಕ ಅಭಿಪ್ರಾಯವನ್ನು ತನ್ನ ಇಚ್ಛೆಗೆ ಅನುಸಾರವಾಗಿ ಸರ್ವಾಧಿಕಾರಿಗಳು ಮಾರ್ಪಾಡು ಮಾಡುತ್ತಾರೆ. ರಾಜ್ಯದಲ್ಲಿ ನಿರೋಧ ಶಕ್ತಿ ಬೆಳೆಯದಂತೆ ಉಗ್ರಕ್ರಮ ಕೈಗೊಳ್ಳುತ್ತಾರೆ. ನಿರಂಕುಶ ಪ್ರಭುತ್ವ ಪ್ರಜಾಪ್ರಭುತ್ವ ವಿರೋಧಿ ಎಂಬುದು ನಿರ್ವಿವಾದ ವಿಷಯ. ಆಧುನಿಕ ಸರ್ವಾಧಿಕಾರಿ ನಿರಂಕುಶ ಪ್ರಭುಗಳು ತಮ್ಮ ಅಧಿಕಾರವನ್ನು ಸಂವಿಧಾನಾತ್ಮಕವಾಗಿ ಪಡೆಯಲು ವಿಶೇಷ ಪ್ರಯತ್ನಗಳನ್ನು ಮಾಡಿದ್ದಾರೆ. ಆದ್ದರಿಂದ ತಮ್ಮ ಸರ್ವಾಧಿಕಾರವೂ ಒಂದು ಬಗೆಯ ಪ್ರಜಾಪ್ರಭುತ್ವವೆಂದು ಅವರು ಸಾರಿ ಹೇಳುತ್ತಾರೆ. ಕಮ್ಯೂನಿಸ್ಟ್ ರಾಜ್ಯಗಳು ತಮ್ಮನ್ನು ಜನತೆಯ ಪ್ರಜಾಪ್ರಭುತ್ವ ಎಂದು ಕರೆದುಕೊಳ್ಳುತ್ತವೆ. ಪ್ರಜಾಪ್ರಭುತ್ವದಲ್ಲಿ ಪ್ರಭುವಿನ ಅಧಿಕಾರ ವ್ಯಾಪ್ತಿಯ ಮೇಲೆ ಪ್ರಜೆಗಳ ಹಿಡಿತ ಶಾಸನಬದ್ಧವಾಗಿರುತ್ತದೆ. ಆದರೆ ಕಮ್ಯುನಿಸ್ಟ್ ರಾಜ್ಯದಲ್ಲಿ ನಿರಂಕುಶ ಅಧಿಕಾರವನ್ನು ಚಲಾಯಿಸುವ ಮುಖಂಡ ಅಥವಾ ಪಕ್ಷದ ಮೇಲೆ ನಿಯಮಬದ್ಧವಾದ ಯಾವ ಮಿತಿಯೂ ಇರುವುದಿಲ್ಲ ಅಥವಾ ಅವರನ್ನು ಅಧಿಕಾರದಿಂದ ತೆಗೆದು ಹಾಕಿ ಮತ್ತೊಬ್ಬರನ್ನು ಅವರ ಸ್ಥಾನದಲ್ಲಿ ಇರಿಸುವ ಹಕ್ಕು ಜನ ಸಾಮಾನ್ಯರಿಗೆ ಇರುವುದಿಲ್ಲ. ಪಕ್ಷದ ಇಚ್ಛೆಗೆ ಅವರು ಬದ್ಧರು. ಅನೇಕ ವೇಳೆ ನಿರಂಕುಶ ಪ್ರಭುಗಳು ಜನಸಾಮಾನ್ಯರ ಆಶೋತ್ತರಗಳನ್ನು ಗಮನಕ್ಕೆ ತೆಗೆದುಕೊಂಡಿರಬಹುದು. ಅದರಿಂದ ತಮ್ಮ ಅಧಿಕಾರ ಶಾಶ್ವತವಾಗುವುದೆಂದು ಕಂಡುಬಂದಾಗ ಮಾತ್ರ ಅವರು ಹಾಗೇ ಮಾಡುವುದು ಸಾಮಾನ್ಯ. ಆದರೆ ಹಾಗೆ ಜನರ ಆಶೋತ್ತರಗಳನ್ನು ಈಡೇರಿಸಬೇಕೆಂಬ ಕಾನೂನು ಯಾವುದೂ ಇರುವುದಿಲ್ಲವಾದ್ದರಿಂದ ಅವರು ಸಾಮಾನ್ಯವಾಗಿ ಅವುಗಳ ಬಗ್ಗೆ ಉದಾಸೀನ ಭಾವ ತಳೆಯಬಹುದು. ಮೇಲಾಗಿ ಕಾನೂನು ನ್ಯಾಯಕ್ಕೆ ತಕ್ಕಂತೆ ಇರುವುದಿಲ್ಲ. ನ್ಯಾಯ-ಅನ್ಯಾಯಗಳ ವಿಮರ್ಶೆಯಲ್ಲಿ ಸರ್ವಾಧಿಕಾರಿಗಳದೇ ಕಟ್ಟಕಡೆಯ ತೀರ್ಮಾನವಾಗಿರುತ್ತದೆ.

ಇಷ್ಟಾದರೂ ನಿರಂಕುಶ ಪ್ರಭುಗಳು, ತಾವು ಮಾಡುವ ಶಾಸನಗಳು, ಕಾನೂನುಗಳು ಶ್ರೇಷ್ಠವೂ ನೀತಿಯುತವೂ ಆದವೆಂದು ಅವನ್ನು ಸಾಮಾನ್ಯರು ಅರ್ಥ ಮಾಡಿಕೊಳ್ಳಲು ಅಶಕ್ತರೆಂದು ಹೇಳುವುದುಂಟು. ರಾಷ್ಟ್ರೀಯತೆ ಹೆಸರಿನಲ್ಲಿ ಕುಲಶೀಲದ (ರೇಷಿಯಲ್ ಈತಾಸ್) ಹೆಸರಿನಲ್ಲಿ, ವರ್ಗಗಳ ಅದೃಷ್ಟದ ಹೆಸರಿನಲ್ಲಿ ನಿರಂಕುಶ ಪ್ರಭುತ್ವ ಆಧುನಿಕ ಸರ್ವಾಧಿಕಾರಿಶಾಹಿಯನ್ನು ತತ್ತ್ವಶಃ ಸಮರ್ಥಿಸುತ್ತದೆ. ಜ್ಞಾನದ ಪರಮಾವಧಿಯನ್ನು ಮತ್ತು ಸತ್ಯದ ಅಂತಿಮ ಘಟ್ಟವನ್ನು ಮುಟ್ಟಿದ ಜ್ಞಾನಿಗಳು ತಾವೇ ಎಂದು, ಆದ ಕಾರಣ ಅಧಿಕಾರ ತಮ್ಮಲ್ಲಿ ಕೇಂದ್ರೀಕೃತವಾಗಬೇಕೆಂದೂ ನಿರಂಕುಶ ಪ್ರಭುತ್ವಗಳ ವಾದ. (ಎಸ್.ಡಿ.ಎಂ.)

**ನಿಲಸಕಲ್ಲು:** ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಯ ಹುಲಿಕಲ್ಲು ಘಾಟಿ ಹತ್ತಿರ ಹೆದ್ದಾರಿಯ ಮೇಲಿರುವ ಸಣ್ಣ ಗ್ರಾಮ. ಹೆದ್ದಾರಿಯ ಬಲಬದಿಯ ಬಯಲು ಭೂಮಿಯಲ್ಲಿ ಓರೆಯಾಗಿ ನೆಟ್ಟ 2-4 ಮೀ ಎತ್ತರ, 50-60 ಸೆಂಮೀ ಅಗಲ ಮತ್ತು 15-17 ಸೆಂಮೀ ದಪ್ಪದ ಸು.20 ಕಲ್ಲುಚಪ್ಪಡಿಗಳಿವೆ. ಇವು ಕೆಳದಿ ಅರಸು ಶಿವಪ್ಪನಾಯಕನ ಕಾಲದಲ್ಲಿ ಆನೆಗಳನ್ನು ಕಟ್ಟಲು ನೆಟ್ಟಿರುವ ಕಲ್ಲುಗಳೆಂದು ಸ್ಥಳೀಯರು ತಿಳಿದಿದ್ದಾರೆ. ಇವನ್ನು ಇವರು ನಿಲಸಕಲ್ಲುಗಳೆಂದು ಕರೆಯುತ್ತಾರೆ. ಇವು ಆದಿ ಕಬ್ಬಿಣಯುಗದ ಬೃಹತ್‌ಶಿಲಾ ಸಂಸ್ಕೃತಿ ಜನ ಸಮುದಾಯದ ಸಮಾಧಿಯ ಗುರುತೆಂಬುದು ಕೇರಳದಲ್ಲಿ ನಡೆಸಲಾದ ಉತ್ಖನನಗಳಿಂದ ಖಚಿತಪಟ್ಟಿದೆ. ಶವಕುಣಿಯಿಂದ ನಿಗದಿತ ಅವಧಿಯ ಅನಂತರ ಅಸ್ಥಿಅವಶೇಷಗಳನ್ನು ಆಯ್ದು ಇನ್ನೊಂದು ಗುಂಡಿಯಲ್ಲಿ ಪ್ರಾಯಶಃ ಆಹಾರ, ಧಾನ್ಯ, ಪಾನೀಯಗಳಿಂದ ತುಂಬಿದ ಮಣ್ಪಾತ್ರೆಗಳು, ಕಬ್ಬಿಣದ ಉಪಕರಣಗಳು ಮುಂತಾದ ವಸ್ತುಗಳೊಡನೆ ವ್ಯವಸ್ಥಿತವಾಗಿಟ್ಟು ಮುಚ್ಚಿ ಕುಣಿಯ ಮೇಲೆ ಇಂಥ ಕಲ್ಲನ್ನು ನೆಡಲಾಗುತ್ತಿತ್ತು. ನಿಲಸಕಲ್ಲುಗಳ ಕಾಲಮಾನ ಪ್ರ.ಶ.ಪೂ. 800-700. ನಿಲಸಕಲ್ಲು ಗ್ರಾಮದಿಂದ ಕೆಲವು ಕಿಮೀ ಗಳ ದೂರದಲ್ಲಿರುವ ಬೈಸೆ ಮತ್ತು ಹೇರಗಲ್ ಗ್ರಾಮಗಳಲ್ಲಿಯೂ ಇಂಥ ನಿಲಸಕಲ್ಲು ನೆಲೆಗಳಿವೆ. ಇಂಥ ಕಲ್ಲುಗಳು ಪಶ್ಚಿಮ ಯುರೋಪಿನ ಕೆಲವು ಪ್ರದೇಶಗಳಲ್ಲಿ ಕಂಡುಬಂದಿವೆ. ಇವುಗಳನ್ನು ಮೆನ್‌ಹಿರ್ಸ್ ಎಂದು ಕರೆಯಲಾಗುತ್ತದೆ.



ಬೃಹತ್ ಶಿಲಾಸಂಸ್ಕೃತಿಯ ನಿಲಸಕಲ್ಲುಗಳು

ನಿಲಸಕಲ್ಲು ಗ್ರಾಮದ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ವಸತಿ ಅವಶೇಷಗಳಿರುವುದು ಗಮನಾರ್ಹ. ಹೆದ್ದಾರಿಯ ಬದಿಯಲ್ಲಿ ತೋಡಿದ ಒಂದು ಗುಂಡಿಯಲ್ಲಿ ಸು.50 ಸೆಂಮೀ ಕೆಳಗೆ ಈ ಸಂಸ್ಕೃತಿಯ ಅವಶೇಷಗಳು ಆಕಸ್ಮಿಕವಾಗಿ ಪತ್ತೆಯಾದವು.

ಇವುಗಳ ಕಾಲಮಾನ ಪ್ರಶ.ಪೂ. ಸು.2000–800. ಹೆಚ್ಚು ಮಳೆಯಾಗುವ ನಿತ್ಯ ಹರಿದ್ವರ್ಣದ ಕಾಡಿರುವ ಪ್ರದೇಶದಲ್ಲೂ ಈ ಸಂಸ್ಕೃತಿಯ ಜನರು ವಾಸಿಸುತ್ತಿದ್ದರೆಂಬುದು ಪ್ರಥಮ ಬಾರಿಗೆ ಈ ನೆಲೆಯಿಂದ ತಿಳಿದುಬಂತು. (ಎ.ಎಸ್.)

**ನೀರಾವರಿ:** ಮಳೆಯನ್ನವಲಂಬಿಸದೆ ನದಿ, ನಾಲೆ, ಬಾವಿ ಕೆರೆಗಳಿಂದ ಹೊಲಗದ್ದೆಗಳಿಗೆ ನೀರು ಹಾಯಿಸಿ ಬೇಕಾದ ಬೆಳೆ ಬೆಳೆಯುವ ಒಂದು ಪ್ರಾಚೀನ ಕೃಷಿ ಪದ್ಧತಿ. ಪ್ರಾಚೀನ ಕಾಲದಿಂದ ವ್ಯವಸಾಯಕ್ಕೆ ಭಾರತದಲ್ಲೂ ಈ ಬಗೆಯಲ್ಲಿ ನೀರು ಒದಗಿಸಲು ಮಾಡಿದ ಪ್ರಯತ್ನಗಳ ಗುರುತುಗಳಿವೆ. ನೀರಾವರಿ ಮುಖ್ಯವಾಗಿ ನದಿ, ಬಾವಿ, ಕೆರೆಗಳನ್ನು ಅವಲಂಬಿಸಿದ್ದು, ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಹರಪ್ಪ, ಮಹೆಂಜೋದಾರೊ, ಧೋಲಾವೀರ, ಸುರಕೋಟಡ ಮೊದಲಾದ ನಗರಗಳು ಸಮೃದ್ಧಿಯಾಗಿ ಬೆಳೆದಿರುವುದನ್ನು ನೋಡಿದರೆ ಇದಕ್ಕೆ ಸಾಕ್ಷಿ. ವೈದಿಕ ಸಾಹಿತ್ಯದ ಒಂದು ಭಾಗವಾದ ಕೌಶಿಕಸೂತ್ರದಲ್ಲಿ ನೀರಾವರಿ ಕಾಲುವೆಗಳ ಆರಂಭಕ್ಕೆ ಕೆಲವು ವಿಧಿವಿಧಾನಗಳನ್ನು ವಿವರಿಸಿದೆ. ಅಂಥ ಒಂದು ಮಾದರಿ: ಕಾಲುವೆ ಬಾಯಿಯ ಹತ್ತಿ ಒಂದು ಚಿನ್ನದ ತಟ್ಟೆಯ ಮೇಲೆ ಕೆಂಪು ಮತ್ತು ನೀಲಿದಾರಗಳನ್ನು ಕಟ್ಟಿ ಕಪ್ಪೆಯನ್ನು ಕುಳಿತು ಕೊಳ್ಳುವಂತೆ ಮಾಡಿ, ಅನಂತರ ಕಪ್ಪೆಯನ್ನು ಪಾಚಿಯಿಂದ ಮುಚ್ಚಿ ನೀರನ್ನು ಕಾಲುವೆಗೆ ಹರಿಸುತ್ತಿದ್ದರಂತೆ.

ಮಹಾಭಾರತದಲ್ಲಿ ನಾರದ ಮಹರ್ಷಿ, ಯುಧಿಷ್ಠಿರ ಮಹಾರಾಜನನ್ನು ಕಂಡು ರೈತರ ಯೋಗಕ್ಷೇಮವನ್ನು ಕಾಲುವೆ ಮೂಲಕ ನೀರು ಒದಗಿಸಲು ಜಲಾಶಯಗಳಲ್ಲಿ ಸಾಕಷ್ಟು ನೀರು ಇದೆಯೋ ಎಂಬ ವಿಚಾರವನ್ನು ಪ್ರಸ್ತಾಪಿಸಿದನೆಂಬ ಉಲ್ಲೇಖವಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚಂದ್ರಗುಪ್ತ ಮೌರ್ಯ ಜುನಾಗಡದಲ್ಲಿ ಕೆರೆಯನ್ನು ನಿರ್ಮಿಸಿ ನೀರಾವರಿ ವ್ಯವಸ್ಥೆ ಮಾಡಿಸಿದ ಉಲ್ಲೇಖವಿದೆ. ಮೆಗಾಸ್ತನೀಸ್‌ನ ಬರೆವಣಿಗೆಯಲ್ಲಿ ಪ್ರಾಂತಾಧಿಕಾರಿಗಳು ಭೂಮಿಯನ್ನು ಅಳತೆಮಾಡುವುದು, ಮುಖ್ಯ ತೂಬುಗಳಿಂದ ಕಾಲುವೆಗಳಿಗೆ ನೀರು ಹರಿಯುವ ವ್ಯವಸ್ಥೆಯನ್ನು ನೋಡಿಕೊಳ್ಳುವುದು, ಪ್ರತಿಯೊಬ್ಬರಿಗೂ ನ್ಯಾಯವಾಗಿ ಪಾಲು ನೀರು ಸಿಗುವಂತೆ ಮಾಡುವುದು, ನೀರಾವರಿ ಇಲಾಖೆಯ ಕರ್ತವ್ಯವಾಗಿತ್ತು ಎಂದು ಉಲ್ಲೇಖಿಸಿದ್ದಾನೆ. ರಾಜರು, ಶ್ರೀಮಂತರು, ವರ್ತಕರು, ದಂಡನಾಯಕರು, ರಾಜವಂಶದ ಸ್ತ್ರೀಯರು ಮತ್ತು ಗ್ರಾಮಸಂಸ್ಥೆಗಳು ನೀರಾವರಿಗೆ ಕೆರೆ, ಬಾವಿಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ನಂಬಿದ್ದರು. ಚಂದ್ರಗುಪ್ತ ಮೌರ್ಯನ ಪ್ರಾಂತಾಧಿಕಾರಿ ವೈಶ್ಯನಾದ ಪುಷ್ಯಗುಪ್ತ ಜುನಾಗಡದಲ್ಲಿಯ ಒಂದು ಸಣ್ಣ ಹೊಳೆಗೆ ಅಡ್ಡಕಟ್ಟಿ ಸರೋವರವನ್ನು ನಿರ್ಮಿಸಿ, ಅದಕ್ಕೆ ಸುದರ್ಶನ ಸರೋವರವೆಂದು ಹೆಸರಿಟ್ಟ. ಅಶೋಕನ ಬಂಡೆ ಶಾಸನ ಇರುವ ಬೆಟ್ಟ ಇದಕ್ಕೆ ಹತ್ತಿರದಲ್ಲಿದೆ. ಅಶೋಕ ಮೌರ್ಯನ ಕಾಲದಲ್ಲಿ ಅವನ ಪ್ರತಿನಿಧಿ ರಾಜ ತುಷಾಸ್ಪನ ನೇತೃತ್ವದಲ್ಲಿ ಈ ಪೂರಕ ಕಾಲುವೆಗಳನ್ನು ನಿರ್ಮಿಸಲಾಯಿತು. ಆದರೆ ಸು. 150 ರಲ್ಲಿ ಅತ್ಯಂತ ಭೀಕರ ಹಾಗೂ ವಿನಾಶಕಾರಿ ಚಂಡಮಾರುತದಿಂದ ಇದರ ಅಡ್ಡಕಟ್ಟೆ ಒಡೆದುಹೋಯಿತು. ಶಕಸತ್ರಪ ರುದ್ರದಾಮನ್ ಕಾಲದಲ್ಲಿ ಹಿಂದಿನ ಅಡ್ಡಕಟ್ಟೆಯ ಮೂರರಷ್ಟು ಬಲವಾದ ಹೊಸ ಅಡ್ಡಕಟ್ಟೆ ನಿರ್ಮಿಸಲಾಯಿತು. ಇವೆಲ್ಲಾ ವಿಷಯವನ್ನು ರುದ್ರದಾಮನ ಗಿರ್ನಾರ್ ಶಾಸನದಲ್ಲಿ ನಿರೂಪಿಸಲಾಗಿದೆ. ಆದರೂ 458 ರಲ್ಲಿ ಅಡ್ಡಕಟ್ಟೆ ಮತ್ತೆ ಚಂಡಮಾರುತ ದಿಂದ ಹಾಳಾಯಿತು. ಆಗ ಇದನ್ನು ಗುಪ್ತವಂಶದ ಚಕ್ರವರ್ತಿಸ್ಕಂದ ಗುಪ್ತ ಸ್ಥಳೀಯ ಪ್ರಾಂತಾಧಿಕಾರಿಯಿಂದ ದುರಸ್ತಿಗೊಳಿಸಿದ.

ಚೋಳ ಅರಸು ಕರಿಕಾಲ ಸು.190ರಲ್ಲಿ ಕಾವೇರಿ ಮತ್ತು ಕೊಲೆರುಮ್ ನದಿಗಳ ಸಂಗಮ ಪ್ರದೇಶದಲ್ಲಿ ಅಣೆಕಟ್ಟೆಯನ್ನು ನಿರ್ಮಿಸಿದ. 11ನೆಯ ಶತಮಾನದಲ್ಲಿ ಒಂದನೆಯ ರಾಜೇಂದ್ರ ಚೋಳ ತಿರುನಲ್ವೇಲಿಯಿಂದ ಸು.15ಕಿಮೀ ದೂರದಲ್ಲಿ ಗಂಗೈಕೊಂಡ ಎಂಬ ಬೃಹತ್ ಕೆರೆಯನ್ನು ಕಟ್ಟಿಸಿದ. ಇದರ ಒಡ್ಡು ಸು.26 ಕಿಮೀ ಉದ್ದವಿದೆ. ತಮಿಳುನಾಡಿನಲ್ಲಿ ಪಲ್ಲವರ ಒಂದನೆಯ ಮಹೇಂದ್ರವರ್ಮ ಮೊದಲನೆಯ ಕೆರೆ ನಿರ್ಮಿಸಿದ. ಇವನ ಮರಿ ಮೊಮ್ಮಗ ಪರಮೇಶ್ವರವರ್ಮ 7ನೆಯ ಶತಮಾನದ ಉತ್ತರಭಾಗದಲ್ಲಿ ಪರಮೇಶ್ವರ ತಟಾಕವನ್ನು ನಿರ್ಮಿಸಿದ. ಕಾವೇರಿ ಪಾಕ್ ಕೆರೆ ಅರ್ಕಾಟ್ ಜಿಲ್ಲೆಯಲ್ಲಿಯೇ ಬಹು ವಿಸ್ತಾರವಾದುದು. ಇದನ್ನು 9ನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿಸಲಾಯಿತು. (ಎ.ಎಸ್.;ಎನ್.ಎಲ್.)

**ಟೀಕಂಗಡ್ ಜಲಾಶಯ ಸಮೂಹ:** ಮಧ್ಯಪ್ರದೇಶದ ಉತ್ತರ ಭಾಗದಲ್ಲಿಯ ಮಧ್ಯಯುಗೀನ ಕಾಲದ ಒಂದು ವಿಶಿಷ್ಟ ಮಾದರಿಯ ಜಲಾಶಯ ಸಮೂಹ. ಆ ಕಾಲದ ಓರ್ಚ್ ರಾಜ್ಯದ ಒಂದು ಭಾಗ. ಆ ರಾಜ್ಯದ ಚಂದೇಲರು ಮತ್ತು ಬುಂದೇಲ್‌ಖಂಡದ ಅರಸು ಮನೆತನದವರು ಬುಂದೇಲ್‌ಖಂಡ್ ಪ್ರಸ್ಥಭೂಮಿಯ ಟೀಕಂಗಡ್‌ನಲ್ಲಿ ಹಲವಾರು ಜಲಾಶಯಗಳನ್ನು, 12ನೆಯ ಶತಮಾನದ ಮಧ್ಯದಿಂದ 19ನೆಯ ಶತಮಾನದ ಮಧ್ಯದವರೆಗೂ 18ಕ್ಕೂ ಹೆಚ್ಚು ದೊಡ್ಡ ಜಲಾಶಯಗಳನ್ನು 1000ಕ್ಕೂ ಹೆಚ್ಚು ಸಣ್ಣ ಸಣ್ಣ ಜಲಾಶಯಗಳನ್ನು ನಿರ್ಮಿಸಿದರು. ಇವುಗಳಲ್ಲಿ ಮದನ ಸಾಗರವನ್ನು ಮದನವರ್ಮನ್ ಚಂದೇಲ (1129–63); ಮಹೇದ್ರ ಸಾಗರವನ್ನು ಮಹೇಂದ್ರಸಿಂಗ್ (1817–39) ಮತ್ತು ಇವರ ನಡುವೆ ಎಂಟುಮಂದಿ ರಾಜರುಗಳು ಕಟ್ಟಿಸಿದರು. ಇವುಗಳನ್ನು ಆ ಪ್ರದೇಶದ ಭೂಜಲ ಶಕ್ತಿ ಸಮರ್ಪಕವಾಗಿ ವೃದ್ಧಿಯಾಗುವಂತೆ ನಿರ್ಮಿಸಿರುವುದು ಒಂದು ವಿಶಿಷ್ಟ ಸಂಗತಿ.

ಇವುಗಳಿಂದ ದೀರ್ಘಾವಧಿಯ ಬರಗಾಲವನ್ನೂ ಯಶಸ್ವಿಯಾಗಿ ಎದುರಿಸಲು ಸಾಧ್ಯವಾಗಿದೆ. ಜನಸಾಮಾನ್ಯರು ಹೇಳುವಂತೆ ಈ ಜಲಾಶಯ ಸಮೂಹ ಇದುವರೆಗೆ ಒಣಗಿದುದು ಇಲ್ಲ. ಒಟ್ಟಿನಲ್ಲಿ 6–10 ವರ್ಷಗಳತನಕ ನಿರಂತರ ಮಳೆ ಬರದಿದ್ದರೂ ಕೃಷಿ ಮತ್ತು ನೀರಿಗೆ ತೊಂದರೆಯಾಗುವುದಿಲ್ಲ. ಇವುಗಳ ಈ ಸಾಮರ್ಥ್ಯಕ್ಕೆ ನಾಲ್ಕು ಅಂಶಗಳು ಕಾರಣ: 1) ಪೂರ್ಣ ತುಂಬಿದ ಜಲಾಶಯದಲ್ಲಿ ಮುಂದಿನ ವರ್ಷಗಳಿಗೂ ಬೇಕಾಗುವಷ್ಟು ನೀರಿನ ಸಂಗ್ರಹದ ವ್ಯವಸ್ಥೆ; 2) ಅತಿ ದೊಡ್ಡ ನಂದನ್‌ವಾರ ಮೊದಲಾದ ಜಲಾಶಯಗಳಿಗೆ ಕಾಲುವೆಗಳನ್ನು ಕಟ್ಟದೆ ಭೂಜಲವನ್ನು ಮತ್ತೆ ಹೆಚ್ಚಿಸುವಂತೆ ಮಾಡಿ ಭೂಜಲ ಮಟ್ಟವನ್ನು ಕಾಯ್ದುಕೊಳ್ಳುವುದು; 3) ಸ್ವಾಭಾವಿಕ ಭೂಗುಣ ಮತ್ತು ಲಕ್ಷಣವನ್ನು ಸರಿಯಾಗಿ ಗ್ರಹಿಸಿ ಅತಿ ದೀರ್ಘವಾದ ಕೊಳ್ಳ ಮತ್ತು ನೀರು ಸಂಗ್ರಹಕ್ಕೆ ಅನುಕೂಲಕರವಾದ ವಿಶಾಲ ತಗ್ಗು ಬಯಲು ಪ್ರದೇಶವುಳ್ಳ ಆಯಕಟ್ಟಿನ ಸ್ಥಳದ ಆಯ್ಕೆ; 4) ಆಯ್ದುಕೊಳ್ಳಬೇಕಾದ ಕೊಳ್ಳದ ಅಕ್ಕಪಕ್ಕದಲ್ಲಿಯ ಕಲ್ಲುಬಂಡೆಗಳು ಅತಿ ದೃಢವಾಗಿ ಯಾವ ಸ್ಥಿತಿ ಮತ್ತು ಹಂತದಲ್ಲಿಯೂ ಸೋರಿಕೆಯಾಗದಂತ ಕಲ್ಲುಬಂಡೆಗಳಿರುವ ಕೊಳ್ಳ. ಇವೆಲ್ಲಾ ನಿರ್ಮಾಣ ತಂತ್ರದ ಮಹತ್ತ್ವ ವಿಷಯಗಳನ್ನು ಮೊದಲಿನಿಂದಲೂ ಅಂದಿನ ಅರಸುಮನೆತನಗಳು ಗಮನಿಸಿ ಜಲಾಶಯ ನಿರ್ಮಾಣಮಾಡಿರುವುದು. ಈ ಜಲಾಶಯಗಳಿಗೆ ಕೃಷಿ ಭೂಮಿಗೆ ನೀರು ಉಣಿಸಲು ಉದ್ದೇಶಪೂರ್ವಕವಾಗಿ ಕಾಲುವೆಗಳನ್ನು ಮಾಡಿಲ್ಲ. ಇದೊಂದು ಆಗಿನ ಶಿಲ್ಪಿಗಳ



ನಂದನ್‌ವಾರ್ ಜಲಾಶಯ

ಬುದ್ಧಿವಂತಿಕೆ ಕ್ರಮ. ಜಲಾಶಯಗಳಿಗೆ ಕಾಲುವೆಗಳನ್ನು ಒದಗಿಸಬೇಕಾದರೆ ಸ್ಥಳದ ಏರಿಳಿತ ಗಮನಿಸಿ ಇಳಕಲ್ಲು ಪ್ರದೇಶದಲ್ಲಿಯೇ ಕಾಲುವೆಗಳನ್ನು ತೋಡಬೇಕಾಗುವುದು. ಇದು ದೊಡ್ಡ ಪ್ರಮಾಣದ ಶ್ರಮದಾಯಕ ವಿಪರೀತ ಖರ್ಚಿನ ಕೆಲಸ. ಕಾಲುವೆ ನೀರು ಹಿತಮಿತವಾಗಿ ಬಳಸಬೇಕೆಂದಿದ್ದರೂ ವಾಸ್ತವವಾಗಿ ಅದರ ದುರುಪಯೋಗವಾಗುವುದೇ ಹೆಚ್ಚು. ಟೀಕಮ್ ಜಲಾಶಯ ಸಮೂಹದ ನಿರ್ಮಾಣದಲ್ಲಿ ಯಾವುದೇ ಬಗೆಯ ದುರುಪಯೋಗಕ್ಕೆ ಅವಕಾಶವಾಗಿಲ್ಲ. (ಎಸ್.ಬಿ.ಎಸ್.)

ಆಂಧ್ರ ಮತ್ತು ಕರ್ನಾಟಕದಲ್ಲಿ ಸರಣಿ ಕೆರೆಗಳು ಉಪಯೋಗದಲ್ಲಿದ್ದವು. ಆಂಧ್ರ ಪ್ರದೇಶದ ತೆಲಂಗಾಣ ಮತ್ತು ಕರ್ನಾಟಕದ ಪ್ರದೇಶಗಳ ಭೂಮಿ ಜಲಾಶಯಗಳ ನಿರ್ಮಾಣಕ್ಕೆ ಅನುಕೂಲವಾಗಿತ್ತು. ತೆಲಂಗಾಣದಲ್ಲಿ ನೀರಾವರಿ ಕೆರೆಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಈ ಪ್ರದೇಶವನ್ನು ಸಾವಿರ ಕೆರೆಗಳ ಪ್ರದೇಶ ಎಂದು ಕರೆಯುತ್ತಿದ್ದರು. ಈ ಪ್ರದೇಶಗಳಲ್ಲಿ ಕೆರೆ ಅಥವಾ ಜಲಾಶಯಗಳನ್ನು ಸರಣಿಯಾಗಿ ನಿರ್ಮಿಸುತ್ತಿದ್ದುದು ಒಂದು ವಿಶೇಷ. ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪೊರುಮಾಮಿಲ್ಲ ಪೂರ್ವಕ್ಕೆ 3ಕಿಮೀ ದೂರದಲ್ಲಿ ಅನಂತರಾಜ ಸಾಗರ ಎಂಬ ಒಂದು ದೊಡ್ಡ ಕೆರೆಯನ್ನು 14ನೆಯ ಶತಮಾನದಲ್ಲಿ ನಿರ್ಮಿಸಲಾಯಿತು. ಇದರ ನೀರಿನ ಸಂಗ್ರಹ ವಿಸ್ತಾರ ಸು.42 ಚ.ಕಿಮೀ. ಇದೇ ಗ್ರಾಮದಲ್ಲಿಯ ಒಂದು ದೇವಾಲಯದ ಹತ್ತಿರ 1369ರ ಒಂದು ಶಾಸನವಿದೆ. ಇದರಲ್ಲಿ ಈ ಕೆರೆ ನಿರ್ಮಾಣದ ಅಪರೂಪದ ಸಂಗತಿಗಳಿವೆ. ಈ ಶಾಸನದಲ್ಲಿ ಕೆರೆಯ ನಿರ್ಮಾಣಕ್ಕೆ ಬೇಕಾಗುವ ಸ್ಥಳದ ಆಯ್ಕೆ ಮತ್ತು ನಿರ್ಮಾಣದ ಬಗ್ಗೆ ಸು.12 ಅಂಶಗಳನ್ನು ವಿವರಿಸಲಾಗಿದೆ.

ಕೆರೆಯನ್ನು ಯಾರೇ ಕಟ್ಟಿಸಲಿ, ಅದರ ರಕ್ಷಣೆಯ ಹೊಣೆಯನ್ನು ಊರಿನ ಜನರು ನಿರ್ವಹಿಸುತ್ತಿದ್ದರು. ಕೆರೆ, ಕಟ್ಟೆ ಒಡೆಯಬಹುದು, ತೂಬು ಹಾಳಾಗಬಹುದು, ಮರಳಿನಿಂದ ಕೆರೆ ಹೂತು ಹೋಗಬಹುದು–ಇವುಗಳ ರಕ್ಷಣೆಗೆ ಅಥವಾ ದುರಸ್ತಿಗೆ ಹಣ ಬೇಕಾಗುತ್ತಿತ್ತು. ಇದಕ್ಕಾಗಿ ಸಮಸ್ತ ಜನರು ಸೇರಿ ಕೆರೆಗಾಗಿ ಒಂದು ಜಮೀನನ್ನು ಬಿಡುತ್ತಿದ್ದರು. ಇದನ್ನೇ ಬಿತ್ತುವಾಟ ಅಥವಾ ಬಿತ್ತುವಟ್ಟ ಎಂದು ಶಾಸನಗಳಲ್ಲಿ ಉಲ್ಲೇಖಿಸಿವೆ. ಕೆರೆಗಳ ಅಥವಾ ಕಟ್ಟೆಗಳ ಜಲನಿರ್ವಹಣೆ ಮುಖ್ಯವಾದುದ್ದಾಗಿತ್ತು. ಇದರ ವೆಚ್ಚವನ್ನು ಭರಿಸಲು ಕೆರೆಯನ್ನು ಮೀನು ಸಾಕಾಣಿಕೆಗೆ ಗುತ್ತಿಗೆಗೆ ನೀಡಿ ಅದರಿಂದ ಬಂದ ಹಣವನ್ನು ಕೆರೆ ನಿರ್ವಹಣೆಗೆ ಉಪಯೋಗಿಸುತ್ತಿದ್ದರು. ಕರ್ನಾಟಕದ ಸೂಳೆಕೆರೆ 64 ಕಿಮೀ ಸುತ್ತಳತೆಯ ವಿಸ್ತಾರವಾದ ಕೆರೆಯಾಗಿತ್ತು. ಅಯ್ಯನಕೆರೆ, ಮದಗಕೆರೆ, ವ್ಯಾಸಸಮುದ್ರ, ರಾಮಸಾಗರ ಮತ್ತು ಮೋತಿ ತಲಾಬ್ ಕೆರೆಗಳು ಮುಖ್ಯವಾಗಿದ್ದವು. ದೆಹಲಿ ಸುಲ್ತಾನರು ಮತ್ತು ಮೊಗಲರ ಕಾಲದಲ್ಲಿ ಕೂಡ ಜಲಾಶಯ ನಿರ್ಮಾಣಕ್ಕೆ ವಿಶೇಷ ಗಮನ ಕೊಡಲಾಗಿತ್ತು. ಫಿರೋಜ್ ಷಾ ತುಗಲಕ್ (1351–88) ಷಹಜಹಾನ ಇವರುಗಳು ತೋಡಿಸಿದ ಯಮುನಾ ನದಿ ಪಶ್ಚಿಮ ಬದಿಯ ಕಾಲುವೆಯನ್ನು ಬ್ರಿಟಿಷರು 1821ರಲ್ಲಿ ದುರಸ್ತಿ ಮಾಡಿಸಿದ್ದರು. ಯಮುನಾ ನದಿಯ ಪೂರ್ವ ಬದಿಯ ಕಾಲುವೆಯನ್ನು ಮೊಹಮ್ಮದ್ ಷಾ (1719–48) ಕಾಲದಲ್ಲಿ ನಿರ್ಮಿಸಲಾಯಿತು. ಇದನ್ನು ಬ್ರಿಟಿಷರು ಸರಿಪಡಿಸಿ ದುರಸ್ತಿ ಮಾಡಿದರು. ಷಹಜಹಾನನ್ನು ರಾವಿ ನದಿಯಿಂದ ಶಾಲಿಮಾರ್ ಉದ್ಯಾನವನದ ಮೂಲಕ ಲಾಹೋರ್‌ಗೆ 180 ಕಿಮೀ

ಉದ್ದದ ಕಾಲುವೆಯಿಂದ ನೀರನ್ನು ಒದಗಿಸುವಂತೆ ಮಾಡಿದ. ಇದರ ಒಂದು ಶಾಖೆಯಿಂದ ಅಮೃತಸರದ ಸುವರ್ಣ ದೇವಾಲಯಕ್ಕೆ ನೀರನ್ನು ಒದಗಿಸಲಾಯಿತು. ಬ್ರಿಟಿಷರ ಕಾಲದಲ್ಲಿ ಇದರ ಬದಲಾಗಿ ಮೇಲಿನ ಬಾರಿದೋಬ್ ಕಾಲುವೆಯನ್ನು ನಿರ್ಮಾಣ ಮಾಡಲಾಯಿತು.

19ನೆಯ ಶತಮಾನದ ಬ್ರಿಟಿಷರ ಕಾಲದಲ್ಲಿ ಬಿ.ಟಿ. ಕೌಟ್ಲೆ ಮತ್ತು ಆರ್ಥರ್ ಕಾಟನ್‌ರವರು ಮತ್ತು ಶ್ರೀರಂಗಮ್ ಹತ್ತಿರ ಕೊಲ್ಲರೂನ್ (ಕೊಲ್ಲಡಂ) ಮತ್ತು ಕಾವೇರಿ ಪ್ರದೇಶದಲ್ಲಿ

ಕೃಷ್ಣರಾಜಸಾಗರ ಜಲಾಶಯ

ಅಣೆಕಟ್ಟನ್ನು 1834 ರಲ್ಲಿ ಕಟ್ಟಿದರು. ಗೋದಾವರಿ ಜಿಲ್ಲೆಯಲ್ಲಿ ನದಿಗೆ ಅಣೆಕಟ್ಟನ್ನು 1846 ರಲ್ಲಿ ಕಟ್ಟಿಸಿ ಸು. 0.4 ಮಿಲಿಯನ್ ಹೆಕ್ಟೇರ್ ಭೂಮಿಗೆ ನೀರು ಒದಗುವಂತೆ ಮಾಡಲಾಯಿತು. ಇದರಂತೆಯೇ ಕೃಷ್ಣಾನದಿ ಮುಖಜ ಭೂಮಿಯಲ್ಲಿ ಕ್ಯಾಪ್ಟನ್ ಬರ್‍ಸ್ 1853ರಲ್ಲಿ ಜಲಾಶಯ ನಿರ್ಮಾಣ ಮಾಡಿದ. 1952ರಲ್ಲಿ ಇದರಲ್ಲಿ ಬಿರುಕು ಉಂಟಾದುದರಿಂದ ಇದರ ಮೇಲ್ಭಾಗದಲ್ಲಿ ಒಂದು ಒಡ್ಡನ್ನು ಕಟ್ಟಿ ಸು. 0.5 ಮಿಲಿಯನ್ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಲಾಯಿತು. ಗಂಗಾ ಮೇಲ್ದಂಡೆಯ ಅಣೆಕಟ್ಟನ್ನು ಕೌಟ್ಲೆ 1836–54 ರಲ್ಲಿ ನಿರ್ಮಿಸಿದ. ಆ ಸಮಯದಲ್ಲಿ ಇಡೀ ಪ್ರಪಂಚದಲ್ಲಿಯೇ ಇದೇ ಅತ್ಯಂತ ದೊಡ್ಡ ಕಾಲುವೆಯಾಗಿತ್ತು. ಇದು ಸು. 191 ಕ್ಯೂಸೆಕ್ಸ್ ನೀರನ್ನು ಒಯ್ಯುವ ಸಾಮರ್ಥ್ಯವನ್ನು ಹೊಂದಿತ್ತು. ಅನಂತರ 268 ಕ್ಯೂಸೆಕ್ಸ್ ಪ್ರಮಾಣದಲ್ಲಿ ನೀರನ್ನು ಒದಗಿಸುವಂತೆ ಮತ್ತೆ ನಿರ್ಮಿಸಲಾಯಿತು. ಅದನ್ನು 1920ರ ವೇಳೆಗೆ ಇನ್ನೂ ಉತ್ತಮಗೊಳಿಸಲಾಯಿತು. ಹೀಗೆ ಸರ್‌ಹಿಂದ್ ಕಾಲುವೆ, ಸೋಹನ್ ಮತ್ತು ಪರ, ಚಿನಾಬ್ ಕೆಳದಂಡೆ ಕಾಲುವೆಗಳು ಉತ್ತರ ಪ್ರದೇಶದಲ್ಲಿ ಗಂಗಾ, ಆಗ್ರ, ಬೆಟ್ವ ಕಾಲುವೆಗಳು. ಉತ್ತರ ಪ್ರದೇಶದಲ್ಲಿ ತಮಿಳುನಾಡಿನ ಪೆರಿಯಾರ್ ಕಾಲುವೆ, ಮಹಾರಾಷ್ಟ್ರದ ಮುಥ ಕಾಲುವೆ 1869–79 ಖಡಕ್‌ವಾಸ್ಲದಲ್ಲಿ ನೀರು ಸಂಗ್ರಹ ಮೊದಲಾದವು ನಿರ್ಮಾಣವಾದವು. ಪೆರಿಯಾರ್ ಜಲಾಶಯ ವಿಶಿಷ್ಟವಾದುದು, ಅರಬ್ಬಿ ಸಮುದ್ರಕ್ಕೆ ಹೋಗುತ್ತಿದ್ದ ನದಿ ನೀರನ್ನು ಪೂರ್ವಕ್ಕೆ ತಿರುಗುವಂತೆ ಮಾಡಲಾಗಿದೆ. 20ನೆಯ ಶತಮಾನದಲ್ಲಿ ದೇಶದಲ್ಲಿ ಹಲವಾರು ಕಡೆಗಳಲ್ಲಿ ದೊಡ್ಡ ದೊಡ್ಡ ಜಲಾಶಯಗಳು ನಿರ್ಮಾಣವಾದವು. ಬಿಹಾರಿನ ತ್ರಿವೇಣಿ ಕಾಲುವೆ ಯೋಜನೆ, ಮಹಾರಾಷ್ಟ್ರದ ಪ್ರವರ–ಗೋದಾವರಿ ಕಾಲುವೆ ಯೋಜನೆ, ನಿರಾ ಬಲದಂಡೆ ಯೋಜನೆ, ಉತ್ತರ ಪ್ರದೇಶದ ಸರ್ದ ಕಾಲುವೆ ಯೋಜನೆ, ಮಧ್ಯ ಪ್ರದೇಶದ ವೈನ್‌ಗಂಗಾ ಮತ್ತು ಮಹಾನದಿ ಕಾಲುವೆ ಯೋಜನೆ ಮುಂತಾದವು ನಿರ್ಮಾಣವಾದವು.

**ಕೃಷ್ಣರಾಜ ಸಾಗರ ಯೋಜನೆ:** ಇದರ ನಿರ್ಮಾಣದ ಪ್ರಧಾನ ಶಿಲ್ಪಿ ಎಂ. ವಿಶ್ವೇಶ್ವರಯ್ಯ, ನಿಜಾಮ್‌ಸಾಗರ (ಆಂಧ್ರಪ್ರದೇಶ), ಮೆಟ್ಟೂರು (ತಮಿಳುನಾಡು) ಈ ಯೋಜನೆಗಳು ಗಮನಾರ್ಹವಾದವು. ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿಗಳ ಸಂಗಮ ಕೃಷ್ಣರಾಜಸಾಗರ 50,000 ಹೆಕ್ಟೇರ್ ಭೂಮಿಗೆ ನೀರು ಒದಗಿಸುತ್ತದೆ. ಇದಕ್ಕೆ 1233 ಮಿಲಿಯನ್ ಕ್ಯೂಸೆಕ್ಸ್ ನೀರು ಸಂಗ್ರಹಣ ಸಾಮರ್ಥ್ಯವಿದೆ. ಇದನ್ನು ತುಂಡುಕಲ್ಲು, ಸುರ್ಕಿ ಗಾರೆಯಿಂದ ಕಟ್ಟಲಾಗಿದೆ. ಮೇಲ್ಬದಿಯನ್ನು ಕೆತ್ತಿದ ಗ್ರಾನೈಟ್ ಕಲ್ಲಿನಿಂದ ಹೊದಿಸಲಾಗಿದೆ. ಇದಕ್ಕೆ 171 ತೂಬುಗಳಿವೆ. ಇದರಲ್ಲಿ 152 ತೂಬುಗಳು ಹೆಚ್ಚುವರಿಯವು. ಉಳಿದವು ವ್ಯವಸಾಯ, ವಿದ್ಯುಚ್ಛಕ್ತಿ ಮತ್ತು ನೀರಿನ (ಪ್ರವಾಹ) ರಭಸ ತಡೆಯಲು ಉಪಯೋಗವಾಗುತ್ತವೆ. ಈ ಜಲಾಶಯ ನಿರ್ಮಾಣವನ್ನು 1924–31 ರಲ್ಲಿ ಪೂರ್ಣಗೊಳಿಸಲಾಯಿತು.

ಹಳೇ ಹೈದರಾಬಾದ್ ಸಂಸ್ಥಾನದಲ್ಲಿ ಗೋದಾವರಿ ನದಿಯ ಉಪನದಿ ಮಂಜಿರಕ್ಕೆ ಜಲಾಶಯ ನಿರ್ಮಾಣವಾಯಿತು. ಇದು ಸು. 1,10,000 ಹೆಕ್ಟೇರ್ ಭೂಮಿಗೆ ನೀರು ಒದಗಿಸುವುದು. ಇದೇ ಪ್ರಕಾರ ಮೆಟ್ಟೂರು ಜಲಾಶಯದಲ್ಲಿ ಸು. 2660 ಮಿಲಿಯನ್ ಕ್ಯೂಸೆಕ್ಸ್ ನೀರು ಸಂಗ್ರಹವಾಗುತ್ತದೆ. ಸಟ್ಲೆಜ್ ನದಿಯಿಂದ ನಿರ್ಮಿಸಲ್ಪಟ್ಟ ಬಿಕಾನೀರ್ ಪ್ರಾಂತದ ಬಿಕಾನೀರ್ ಕಾಲುವೆ 2,20,000 ಹೆಕ್ಟೇರ್ ಭೂಮಿಗೆ ನೀರು ಒದಗಿಸುತ್ತದೆ. ಇದರ ನಿರ್ಮಾಣದಲ್ಲಿ ಒಂದೆರಡು ಅಂಶಗಳು ಗಮನಾರ್ಹ. ಕಾಲುವೆ ಎರಡು ಬದಿಗಳಲ್ಲಿ ನೀರಿನಲ್ಲಿ ಗಟ್ಟಿಗೊಳ್ಳುವ ಸಾಮರ್ಥ್ಯದ ಸುಣ್ಣಕಲ್ಲು ಮತ್ತು ಕಂಕರನ್ನು ಸುಟ್ಟು ಸಿದ್ಧಪಡಿಸಿದ ಗಾರೆಯನ್ನು ಉಪಯೋಗಿಸಲಾಗಿದೆ. ಇದನ್ನು ಕಾಲುವೆಯ ತಳಕ್ಕೆ ಹಾಕಲಾಗಿದೆ. ಇದು ನೀರು ಹೀರಿಕೊಳ್ಳುವುದನ್ನು ತಡೆಯುತ್ತದೆ. ಸಮಗ್ರ ದೇಶದಲ್ಲಿ ನಿರ್ಮಿಸಲಾದ ಜಲಾಶಯಗಳಲ್ಲಿ ಒಂದು ಸಮನ್ವಯವನ್ನು ತರಲು 1927ರಲ್ಲಿ ಸೆಂಟ್ರಲ್ ಬೋರ್ಡ್ ಆಫ್ ಇರಿಗೇಷನ್ (ಕೇಂದ್ರ ನೀರಾವರಿ ಮಂಡಳಿ) ಯನ್ನು ರಚಿಸಲಾಗಿದೆ. 1949ರಲ್ಲಿ ಈ ಸಂಸ್ಥೆಯ ವ್ಯಾಪ್ತಿಯನ್ನು ಹೆಚ್ಚಿಸಿ ವಿದ್ಯುತ್ ಒಳಗೊಂಡಂತೆ ಈ ಸಂಸ್ಥೆಯನ್ನು ಕೇಂದ್ರೀಯ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂಡಲಿ ಎಂದು ಕರೆಯಲಾಯಿತು. (ಎ.ಎಸ್.;ಎನ್.ಎಲ್.)

**ನೀಲಕಂಠಶಾಸ್ತ್ರಿ, ಕೆ.ಎ.:** 1892–. ಭಾರತದ ಹೆಸರಾಂತ ಇತಿಹಾಸಕಾರರು. ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯ ಕಲ್ಲಿದೈಕುರುಚಿಯಲ್ಲಿ 1892 ಆಗಸ್ಟ್ 12ರಂದು ಜನಿಸಿದರು. ಮದರಾಸು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಸಂಸ್ಕೃತ ಮತ್ತು ಇತಿಹಾಸದಲ್ಲಿ ಪಡೆದರು. 1913–18ರವರೆಗೆ ತಿರುನೆಲ್ವೇಲಿ ಹಿಂದು ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಅನಂತರ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ 1918–20ರವರೆಗೆ ಪ್ರಾಧ್ಯಾಪಕರಾಗಿದ್ದರು.

ಚಿದಂಬರಂನಲ್ಲಿ ಅಣ್ಣಾಮಲೈ ಚೆಟ್ಟಿಯಾರ್ ಅವರ ಆಹ್ವಾನದ ಮೇರೆಗೆ ಅವರು ಸ್ಥಾಪಿಸಿದ ಕಾಲೇಜಿಗೆ ಪ್ರಾಂಶುಪಾಲರಾದರು. 20 ವಿದ್ಯಾರ್ಥಿಗಳ ಇಂಟರ್ ಮೀಡಿಯಟ್ ಕಾಲೇಜನ್ನು 700 ವಿದ್ಯಾರ್ಥಿಗಳ ವಿಶ್ವವಿದ್ಯಾಲಯವಾಗಿ ಬೆಳೆಸಿದರು. ಇಲ್ಲಿ 8 ವರ್ಷಗಳು ದುಡಿದರು. ಅನಂತರ 1929–47ರ ವರೆಗೆ ಮದರಾಸು ವಿಶ್ವವಿದ್ಯಾಲಯದ ಇತಿಹಾಸ

ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ ಮೈಸೂರಿಗೆ ಬಂದು ಹೊಸದಾಗಿ ಪ್ರಾರಂಭವಾದ ಭಾರತಶಾಸ್ತ್ರ (ಇಂಡಾಲಜಿ) ವಿಭಾಗದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು (1952–56). ಅನಂತರ ಮಲಯ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಭಾರತೀಯ ಅಧ್ಯಯನ ವಿಭಾಗಕ್ಕೆ ಪ್ರಾಧ್ಯಾಪಕರಾಗಿ ಅದರ ಉನ್ನತಿಗೆ ದುಡಿದರು. ನೇಪಾಲದ ತ್ರಿಭುವನ ವಿಶ್ವವಿದ್ಯಾಲಯದಲ್ಲಿ 2 ತಿಂಗಳಕಾಲ ಭಾರತ ಸಂಸ್ಕೃತಿ ಬಗ್ಗೆ ಉಪನ್ಯಾಸ ಮಾಡಿದರು. ಮದರಾಸಿನಲ್ಲಿ ಯುನೆಸ್ಕೊ ಸಂಸ್ಥೆ ಮದರಾಸು ವಿಶ್ವವಿದ್ಯಾಲಯದ ಸಹಯೋಗದೊಡನೆ ಆಗ್ನೇಯ ಏಷ್ಯದ ಪಾರಂಪರಿಕ ಸಂಸ್ಕೃತಿಗಳ ಅಧ್ಯಯನದ ಒಂದು ಸಂಸ್ಥೆಯನ್ನು ಸ್ಥಾಪಿಸಿ ಇವರನ್ನು ನಿರ್ದೇಶಕರನ್ನಾಗಿ ನೇಮಿಸಿತು. ಇಲ್ಲಿ 1971ರವರೆಗೆ ಕೆಲಸ ಮಾಡಿದರು.

ಭಾರತದ ಪ್ರಥಮ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರಪ್ರಸಾದರಿಗೂ ಇವರಿಗೂ ನಿಕಟವಾದ ಸ್ನೇಹವಿತ್ತು. 1946ರಲ್ಲಿ ಇವರು ಪಾಟ್ನದಲ್ಲಿ ನಡೆದ ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನ (1946), ಲಖನೌನಲ್ಲಿಯ ಆಲ್ ಇಂಡಿಯ ಓರಿಯಂಟಲ್ ಕಾನ್ಫರೆನ್ಸ್‌ನ (1951) ಅಧ್ಯಕ್ಷರಾಗಿದ್ದರು. ಇವರು 22 ಇತಿಹಾಸ ಗ್ರಂಥಗಳನ್ನೂ 159 ಸಂಶೋಧನ ಲೇಖನಗಳನ್ನೂ ಪ್ರಕಟಿಸಿದ್ದಾರೆ. 1935ರಲ್ಲಿ ಪ್ರಕಟವಾದ 2 ಸಂಪುಟಗಳ ದಿ ಚೋಳಾಸ್ ಎಂಬ ಗ್ರಂಥ ಇವರಿಗೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿತು. ಇವರಿಗೆ 1958ರಲ್ಲಿ ಪದ್ಮಭೂಷಣ ಪ್ರಶಸ್ತಿ ಲಭಿಸಿತು. (ಎ.ಎಸ್.;ಎನ್.ಎಲ್.)

**ನೂರ್‌ಜಹಾನ್:** ಪರ್ಷಿಯದ ಮಿರ್ಜಾ ಘಿಯಾಸ್ ಬೇಗ್‌ನ ಮಗಳು. ಚಕ್ರವರ್ತಿ ಜಹಾಂಗೀರನ ಪಟ್ಟದರಾಣಿ. ಮೆಹರ್–ಉನ್–ನೀಸ ಇವಳ ಮೂಲ ಹೆಸರು. ಮುಂದೆ ನೂರ್‌ಜಹಾನ್ ಎಂದು ಪ್ರಸಿದ್ಧಳು. ಈಕೆ ಕಾಂದಹಾರಲ್ಲಿ ಹುಟ್ಟಿದಳು. ಇವಳ ತಂದೆ ಮೊಗಲ್ ಚಕ್ರವರ್ತಿ ಅಕ್ಬರ್‌ನ ಬಳಿ ಉನ್ನತ ಹುದ್ದೆಯಲ್ಲಿದ್ದ. ಇವಳು ಸ್ಫುರದ್ರೂಪಿ ಮತ್ತು ಬುದ್ಧಿವಂತೆ. ಈಕೆಗೆ 17 ವರ್ಷವಿದ್ದಾಗ ಅಲಿ ಕುಲಿ ಬೇಗ್ ಇಸ್ತಾಝಿ ಎಂಬ ಒಬ್ಬ ಸಾಹಸಿ ಆಫ್ಘನ್ನನೊಡನೆ ವಿವಾಹವಾಯಿತು. ಜಹಾಂಗೀರ್ ಚಕ್ರವರ್ತಿಯಾದ ಅನಂತರ ಅಲಿ ಕುಲಿ ಬೇಗ್‌ನಿಗೆ ಬಂಗಾಲದ ಬರ್ದ್ವಾನ್ನನ್ನು ಜಹಗೀರಾಗಿ ನೀಡಿ ಷೇರ್–ಅಫಘಾನ್ ಎಂಬ ಬಿರುದನ್ನಿತ್ತ. ಅನಂತರ ಷೇರ್–ಅಫಘಾನ ದಂಗೆಗೆ ಪ್ರಚೋದನೆ ನೀಡುತ್ತಿದ್ದನೆಂಬ ಸುದ್ದಿ ತಿಳಿದು ಇವನನ್ನು ಶಿಕ್ಷಿಸಲು ಬಂಗಾಲದ ರಾಜ್ಯಪಾಲ ಕುತ್ಬುದ್ದೀನ್‌ನನ್ನು

ಕಳುಹಿಸಿದ. ಕದನದಲ್ಲಿ ಕುತ್ಬುದ್ದೀನ್ ಮಡಿದ. ಇವನ ಕಡೆಯವರು ಷೇರ್ ಅಫ಼್ಘಾನನನ್ನು ಕೊಂದು ಮೆಹರ್–ಉನ್–ನೀಸಳನ್ನು ಅವಳ ಹೆಣ್ಣು ಮಗುವಿನೊಡನೆ ಚಕ್ರವರ್ತಿಯ ಆಸ್ಥಾನಕ್ಕೆ ಕರೆತಂದರು. 1611ರಲ್ಲಿ ಇವಳನ್ನು ಜಹಾಂಗೀರನು ಮದುವೆಯಾದನು. ಇವಳಿಗೆ ನೂರ್–ಮಹಲ್ (ಅರಮನೆಯ ದೀಪ) ಎಂದೂ ಅನಂತರ ನೂರ್–ಜಹಾನ್ (ಜಗತ್ತಿನ ದೀಪ) ಎಂದೂ ಹೆಸರು ಕೊಟ್ಟನು. ಚಕ್ರವರ್ತಿಯ ಮೇಲೆ ಪ್ರಭಾವ ಬೀರಿ ಆಡಳಿತ ಸೂತ್ರವನ್ನು ತನ್ನ ಹಿಡಿತಕ್ಕೆ ತಂದುಕೊಂಡ ಇವಳು ತನ್ನ ಸಂಬಂಧಿಕರ ಹಿತದ ದೃಷ್ಟಿಯಿಂದ ಅವರಿಗೆ ಉನ್ನತ ಹುದ್ದೆಗಳನ್ನು ಕೊಡಿಸಿದಳು. ಇವಳ ಸೋದರ ಆಸಫ್‍ಖಾನನು ತನ್ನ ಮಗಳು ಅರ್ಜುಮಂದ್ ಬಾನು (ಮಮ್ತಾಜ್ ಮಹಲ್)ವನ್ನು ರಾಜಕುಮಾರ ಖುರ್ರಮ್‍ಗೆ (ಷಹಜಹಾನ್) ಕೊಟ್ಟು ವಿವಾಹ ಮಾಡಿದ. ಇವಳ ಮೊದಲ ಪತಿಯ ಮಗಳ (ಲಾಡ್ಲಿ ಬೇಗಂ)ನ್ನು ಜಹಾಂಗೀರನ ಕೊನೆಯ ಮಗ ಷಹರ್‍ಯಾರ್‍ನಿಗೆ ಕೊಟ್ಟು ವಿವಾಹ ಮಾಡಿದಳು. ತನ್ನ ಅಳಿಯನನ್ನು ಸಿಂಹಾಸನಕ್ಕೆ ತರಲು ಪ್ರಯತ್ನಿಸಿದಳು. ಇವಳು ತನ್ನದೇ ಗುಂಪೊಂದನ್ನು ಕಟ್ಟಿ ಅಧಿಕಾರ ನಡೆಸಿದಳು. ಇವಳ ಅಧಿಕಾರ, ಪ್ರಭಾವವನ್ನು ಸೇನಾಧಿಪತಿ ಮಹಬತ್‍ಖಾನ್ ಮತ್ತು ರಾಜಕುಮಾರ ಖುರ್ರಮನೂ ವಿರೋಧಿಸಿದರು. ಇವಳು ಬುದ್ಧಿವಂತಿಕೆಯಿಂದ ಅವರ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸಿದಳು. ಸರ್ವಾಧಿಕಾರಿಯಾಗಿದ್ದ ಇವಳ ಅಧಿಕಾರ 1627 ರಲ್ಲಿ ಜಹಾಂಗೀರ್ ನಿಧನನಾದ ಅನಂತರ ಕುಗ್ಗಿತು. ಕಲಾಪ್ರೇಮಿ, ಔದಾರ್ಯ ಮತ್ತು ಕರುಣೆಯುಳ್ಳವಳಾಗಿದ್ದ ಇವಳು 1611–45 ರವರೆಗೆ ಚಕ್ರವರ್ತಿನಿ ಯಂತಿದ್ದಳು. (ಎನ್.ಎಸ್.)



**ನೆಪೋಲಿಯನ್ I:** 1769–1821. ಫ್ರಾನ್ಸಿನ ಚಕ್ರವರ್ತಿ. 1769 ಆಗಸ್ಟ್ 15ರಂದು ಮೆಡಿಟರೇನಿಯನ್ ಸಮುದ್ರದಲ್ಲಿರುವ ಫ್ರೆಂಚ್ ದ್ವೀಪವಾದ ಕಾರ್ಸಿಕದ ಆಯಾಚೋದಲ್ಲಿ ಜನಿಸಿದ. ಮೊದಲು ಸ್ವಲ್ಪ ಕಾಲ ಆಟನ್ನಿನ ಶಾಲೆಯಲ್ಲೂ ಅನಂತರ ಐದು ವರ್ಷಗಳ ಕಾಲ ಬ್ರಿಯೆನ್ನಿನ ಸೈನಿಕ ಕಾಲೇಜಿನಲ್ಲೂ ಅನಂತರ ಒಂದು ವರ್ಷ ಸೈನಿಕ ಅಕಾಡೆಮಿಯಲ್ಲೂ ಶಿಕ್ಷಣ ಪಡೆದ. ಇವನು ಪ್ಯಾರಿಸ್ಸಿನಲ್ಲಿದ್ದಾಗ ತಂದೆ ತೀರಿಕೊಂಡ. ಸಂಸಾರ ಕಷ್ಟವನ್ನೆದುರಿಸಬೇಕಾಯಿತು. ಸಂಸಾರದ ಹೊಣೆಯನ್ನು ಹೊತ್ತಾಗ ಇವನಿಗೆ 16 ವರ್ಷ. ಪದವೀಧರನಾದ ಅನಂತರ ದ್ವಿತೀಯ ಲೆಫ್ಟಿನೆಂಟ್ ಆಗಿ ನೇಮಕ ಹೊಂದಿದ. 1789ರಲ್ಲಿ ಫ್ರಾನ್ಸಿನ ಕ್ರಾಂತಿ ಸಂಭವಿಸಿದಾಗ ಇವನಿಗೆ ಕೇವಲ 20 ವರ್ಷ. ಸೈನಿಕ ನೆಪೋಲಿಯನ್ನನ ಮೇಲೆ ಅದು ಪ್ರಭಾವ ಬೀರದಿದ್ದರೂ ಆ ಕ್ರಾಂತಿಯ ಪ್ರೇರಕರಾದ ವಾಲ್ಟೇರ್ ಮತ್ತು ರೂಸೋ ಇವರ ಬರೆಹಗಳಿಂದ ಪ್ರಭಾವಿತನಾಗಿ ಫ್ರಾನ್ಸಿನ ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆ ಅನಿವಾರ್ಯವೆಂದು ಭಾವಿಸಿದ್ದ. 1793ರಿಂದ ಫ್ರಾನ್ಸಿನ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಲು ಅಲ್ಲಿಯ ಸನ್ನಿವೇಶ ಸಹಕಾರಿಯಾಯಿತು. ಅದೇ ವರ್ಷ ಟೂಲಾನಿನಲ್ಲಿ ಕ್ರಾಂತಿಯ ವಿರುದ್ಧ ಸೇನೆ ಸಿದ್ಧವಾದಾಗ, ನೆಪೋಲಿಯನ್ ಕ್ರಾಂತಿಸೇನೆಯ ನಾಯಕತ್ವ ವಹಿಸಿ ಆ ನಗರವನ್ನು ವಶಪಡಿಸಿಕೊಂಡ. ಆ ಸಂದರ್ಭದಲ್ಲಿ ನೆಪೋಲಿಯನ್ ತೋರಿದ ಶೌರ್ಯಕ್ಕಾಗಿ ಇವನನ್ನು ಬ್ರಿಗೇಡಿಯರ್ ಜನರಲ್ ಹುದ್ದೆಗೆ ಏರಿಸಲಾಯಿತು. 1795ರಲ್ಲಿ ಪ್ಯಾರಿಸ್ ನಗರದಲ್ಲಿ ರಾಜನ ಕಡೆಯವರು ಗೊಂದಲವನ್ನೆಬ್ಬಿಸಿದಾಗ ಮತ್ತೆ ನೆಪೋಲಿಯನ್ ಅವರನ್ನು ಅಡಗಿಸಿದ. ಆಗ ಫ್ರಾನ್ಸಿನ ಆಡಳಿತ ನಡೆಸುತ್ತಿದ್ದ ಐವರು ಸದಸ್ಯರ ಡೈರೆಕ್ಟರಿ ಸರ್ಕಾರ ಇವನ ಪರಾಕ್ರಮವನ್ನು ಮೆಚ್ಚಿ ಇವನನ್ನು 1796ರಲ್ಲಿ ಇಟಲಿಯಲ್ಲಿದ್ದ ಫ್ರೆಂಚ್ ಸೈನ್ಯದ ದಂಡನಾಯಕನಾಗಿ ನೇಮಿಸಿತು.

ಫ್ರಾನ್ಸಿನ ಕ್ರಾಂತಿ ಮತ್ತು ವಿದೇಶಾಂಗ ನೀತಿಯ ವಿರುದ್ಧ ಯುರೋಪಿನ ರಾಷ್ಟ್ರಗಳು ಒಂದುಗೂಡಿ ಒಕ್ಕೂಟವನ್ನು ಸ್ಥಾಪಿಸಿದಾಗ ಆ ದೇಶಕ್ಕೆ ಮಹಾ ವಿಪತ್ತು ಒದಗಿತ್ತು. ಇಟಲಿಯಲ್ಲಿ ನಡೆದ ಕದನಗಳಲ್ಲಿ ನೆಪೋಲಿಯನ್ ಸಾಮರ್ಥ್ಯ ಪ್ರದರ್ಶಿಸಿ ಅದ್ಭುತ ವಿಜಯಗಳನ್ನು ಗಳಿಸಿ, ಮಹಾವೀರನೆನಿಸಿಕೊಂಡ. ಆಕಾರದಲ್ಲಿ ಕುಳ್ಳಾಗಿದ್ದ ನೆಪೋಲಿಯನ್ ಪ್ರಚಂಡ ವಿಜಯ ಗಳಿಸುವನೆಂಬ ನಂಬಿಕೆ ಇವನ ಅನುಯಾಯಿಗಳಲ್ಲಿ ಕಿಂಚಿತ್ತೂ ಇರಲಿಲ್ಲ. ಆದರೆ ಅವರಿಗೆ ಆಶ್ಚರ್ಯವಾಯಿತು. ಅವರು ಇವನನ್ನು ಲಿಟಲ್ ಕಾರ್ಪೊರಲ್ ಎಂದು ಕರೆದು ಗೌರವಿಸಿದರು. ಫ್ರೆಂಚ್ ಸರ್ಕಾರ ಇವನನ್ನು ಅಭಿನಂದಿಸಿತು. ನೆಪೋಲಿಯನ್ ಪ್ಯಾರಿಸಿಗೆ ಹಿಂತಿರುಗಿದಾಗ ಇವನಿಗೆ ಅಭೂತಪೂರ್ವ ಸ್ವಾಗತ ದೊರಕಿತು.

ಇವನು ಇಟಲಿಯ ಬಹುಭಾಗವನ್ನು ಗೆದ್ದದ್ದು ಒಂದು ಮಹಾಸಾಧನೆ. ಆದರೆ ಅಷ್ಟಕ್ಕೆ ಇವನ ಕೆಲಸ ಪೂರೈಸಲಿಲ್ಲ. ಮುಖ್ಯವಾಗಿ ಒಕ್ಕೂಟದ ಬೆನ್ನೆಲುಬಿನಂತಿದ್ದ ಬ್ರಿಟಿಷರನ್ನು ಸದೆಬಡಿದು, ಅವರ ನೌಕಾಬಲವನ್ನು ಕುಂಠಿತಗೊಳಿಸಿ ಅವರ ಸಾಮ್ರಾಜ್ಯವನ್ನು ನಾಶ ಮಾಡಿದರೆ ಮಾತ್ರ ಫ್ರಾನ್ಸಿನ ಕ್ರಾಂತಿಗೆ ವಿಜಯವೆಂದು ತಿಳಿದ ಸರ್ಕಾರ, ನೆಪೋಲಿಯನ್ನನನ್ನು ಆ ಕೆಲಸಕ್ಕೆ ನೇಮಿಸಿತು. ವ್ಯಾಪಾರವರ್ಧನೆ, ವಸಾಹತುಗಳ ಸ್ಥಾಪನೆ ಮತ್ತು ಸಾಮ್ರಾಜ್ಯದ ವಿಸ್ತರಣೆಯಲ್ಲಿ ಪರಸ್ಪರ ಸ್ಪರ್ಧಿಗಳಾಗಿದ್ದ ಫ್ರೆಂಚ್ ಮತ್ತು ಇಂಗ್ಲಿಷರ ತಿಕ್ಕಾಟದಲ್ಲಿ ಇಂಗ್ಲಿಷರನ್ನು ಸೋಲಿಸದೆ ಹೋದರೆ ಫ್ರೆಂಚರ ಭವಿಷ್ಯ ನಿರಾಶಾದಾಯಕವೆಂದು ನೆಪೋಲಿಯನ್ ತಿಳಿದಿದ್ದ. 1799 ಆಗಸ್ಟ್ ವೇಳೆಗೆ ಫ್ರಾನ್ಸಿನ ಸ್ಥಿತಿ ಹದಗೆಟ್ಟಿತ್ತು. ಡೈರೆಕ್ಟರಿಯ ಆಡಳಿತ ಕುಸಿದು ಬೀಳುವ ಸ್ಥಿತಿಯಲ್ಲಿತ್ತು. ಜನತೆಗೆ ಸರ್ಕಾರದಲ್ಲಿ ನಂಬಿಕೆ ಮರೆಯಾಗತೊಡಗಿತು. ಇಂಥ ಗಂಭೀರ ಸನ್ನಿವೇಶದಲ್ಲಿ ಸ್ವದೇಶಕ್ಕೆ ಮರಳುವುದೇ ಸರಿಯೆಂದು ಭಾವಿಸಿ ನೆಪೋಲಿಯನ್ ಫ್ರಾನ್ಸಿಗೆ ಹಿಂದಿರುಗಿದ. ಇವನಿಲ್ಲದ ಕಾಲದಲ್ಲಿ ಫ್ರಾನ್ಸಿನ ವಿರುದ್ಧ ರಷ್ಯ, ಇಂಗ್ಲೆಂಡ್ ಮತ್ತು ಆಸ್ಟ್ರಿಯಗಳು ಸೇರಿ ಒಕ್ಕೂಟ ಮಾಡಿಕೊಂಡು ಫ್ರೆಂಚರನ್ನು ಇಟಲಿಯಿಂದ ಓಡಿಸಿದವು. ಆದರೆ ರಷ್ಯ ತನ್ನ ಸೇನೆಯನ್ನು ಒಕ್ಕೂಟದಿಂದ ಹಿಂತೆಗೆದುಕೊಂಡಿದ್ದರಿಂದ ಒಕ್ಕೂಟ ಕುಸಿದುಬಿತ್ತು. ಆದರೂ ಡೈರೆಕ್ಟರಿಯ ಪ್ರತಿಷ್ಠೆ ಕುಗ್ಗಿತು. ಸರ್ಕಾರದ ದುರ್ಬಲತೆಯನ್ನು ಅರಿತ ನೆಪೋಲಿಯನ್ 1799 ನವೆಂಬರ್ 9ರಂದು ನಡೆದ ಸಂಚಿನಲ್ಲಿ ಭಾಗವಹಿಸಿ ಡೈರೆಕ್ಟರಿಯನ್ನು ತೆಗೆದುಹಾಕಿ, ಕಾನ್ಸುಲೇಟ್ ಎಂಬ ಹೊಸ ಸರ್ಕಾರವನ್ನು ಸ್ಥಾಪಿಸಲು ಸಹಾಯಕನಾದ. ಇದು 1700–1804ರವರೆಗೆ ಅಧಿಕಾರದಲ್ಲಿತ್ತು. ಮೂವರು ಕಾನ್ಸಲ್‍ಗಳಿದ್ದ ಸರ್ಕಾರದಲ್ಲಿ ನೆಪೋಲಿಯನನೇ ಪ್ರಥಮ ಕಾನ್ಸಲ್ ಆಗಿದ್ದ. ಈಜಿಪ್ಟಿನ ಆಡಳಿತದಲ್ಲಿ ಅನುಭವ ಹೊಂದಿದ್ದ ನೆಪೋಲಿಯನ್ ಫ್ರಾನ್ಸಿಗೆ ಸೂಕ್ತವಾದ ಸಂವಿಧಾನವನ್ನು ರೂಪಿಸಿದ. 1802ರಲ್ಲಿ ಇವನು ಆಜೀವ ಕಾನ್ಸಲ್ ಆದ. ಕೇವಲ ಐದು ವರ್ಷಗಳ ಅವಧಿಯಲ್ಲಿ ಇವನು ಅನೇಕ ಸುಧಾರಣೆಗಳನ್ನು ರೂಪಿಸಿ ಜಾರಿಗೆ ತಂದು ಪ್ರಪಂಚದ ಇತಿಹಾಸದಲ್ಲಿ ಅಮರತ್ವ ಪಡೆದ.

ಈತ ಫ್ರಾನ್ಸಿನ ಆಡಳಿತದ ನಾನಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ. ಇವನು ಸ್ಥಾಪಿಸಿದ ಆಡಳಿತ ಯಂತ್ರ ಫ್ರಾನ್ಸಿನ ರಾಜಕೀಯ ಸಂಸ್ಥೆಗಳಲ್ಲಿ ಶಾಶ್ವತವಾದ ಸ್ಥಾನ ಪಡೆಯಿತು. ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ಅದರ ಆದಾಯವನ್ನು ಹೆಚ್ಚಿಸಿದ. 1800ರಲ್ಲಿ ಬ್ಯಾಂಕ್ ಆಫ್ ಫ್ರಾನ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ದೇಶದ ಆರ್ಥಿಕ ಮತ್ತು ಹಣಕಾಸಿನ ವ್ಯವಹಾರವನ್ನು ಕೇಂದ್ರೀಕರಿಸಿದ. ಆಡಳಿತದಲ್ಲಿ ದಕ್ಷತೆ ಹೆಚ್ಚಿಸುವ ಸಲುವಾಗಿ ಲಂಚಕೋರ ಅಧಿಕಾರಿಗಳನ್ನು ವಜಾಮಾಡಿ ಮಿತವ್ಯಯ ನೀತಿ ಅನುಸರಿಸಿದ. ದೇಶದ ವಿದ್ಯಾಭ್ಯಾಸ ಕ್ರಮದಲ್ಲಿ ಅವಶ್ಯವಾದ ಸೂಕ್ತ ಬದಲಾವಣೆಗಳನ್ನು ಜಾರಿಗೆ ತಂದ. ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ. ದೇಶದ ವಾಣಿಜ್ಯ ಮತ್ತು ಸಾರಿಗೆ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿತವಾಯಿತು. ಫ್ರಾನ್ಸಿನ ಇಂದಿನ ಹೆದ್ದಾರಿಗಳು ಇವನ ಕಾಲದಲ್ಲಿ ನಿರ್ಮಿತವಾದವು. ಎಲ್ಲರಿಗೂ ಸಮ್ಮತವಾದ ಧಾರ್ಮಿಕ ನೀತಿಯನ್ನು ರೂಪಿಸಿದ್ದೂ ಅದೇ ಕಾಲದಲ್ಲಿ. ದೇಶದ ಮತೀಯ ಸಮಸ್ಯೆ ಜಟಿಲವಾಗಿತ್ತು; ಗುಂಪುಗಳ ನಡುವೆ ತಿಕ್ಕಾಟಕ್ಕೆ ಕಾರಣವಾಗಿತ್ತು. ಇದರಿಂದ ದೇಶದಲ್ಲಿ ಧಾರ್ಮಿಕ ಶಾಂತಿ ಇರಲಿಲ್ಲ. ಮುಖ್ಯವಾಗಿ ಕೆಥೊಲಿಕ್ ಗುಂಪಿನವರು ನೆಮ್ಮದಿಯಿಂದ ಇರಲು ಸಾಧ್ಯವಾಗಿರಲಿಲ್ಲ. ಈ ಸಮಸ್ಯೆಯನ್ನು ಪರಿಹರಿಸಿದರೆ ಮಾತ್ರ ನೆಮ್ಮದಿ, ಶಾಂತಿ ಮತ್ತು ಪ್ರಗತಿ ಸಾಧ್ಯವೆಂದು ಅರಿತ ನೆಪೋಲಿಯನ್ ತನ್ನ ಮತ್ತು ಪೋಪನ ನಡುವೆ ಶಾಂತಿಯ ಒಪ್ಪಂದ ಮಾಡಿಕೊಂಡ. ಫ್ರಾನ್ಸಿಗೆ ಮಾತ್ರವಲ್ಲದೆ ಯುರೋಪಿಗೆ ನೆಪೋಲಿಯನ್ನನ ಅತ್ಯುತ್ತಮ ಕಾಣಿಕೆಯೆಂದರೆ ಕೋಡ್ ನೆಪೋಲಿಯನ್ ಎಂಬ ಕಾನೂನು ಸಂಹಿತೆ. ಇದು ಇವನ ರಾಜನೀತಿಜ್ಞತೆಗೆ ಸಮಂಜಸವಾದ ಸಾಕ್ಷ್ಯವಾಗಿದೆ. ಹಿಂದಿನಿಂದ ನಡೆದು ಬಂದ ರೋಮನ್ ನ್ಯಾಯಪದ್ಧತಿಯನ್ನು ಅನುಸರಿಸಿ, ಸನ್ನಿವೇಶಕ್ಕೆ ತಕ್ಕಂತೆ ಅವುಗಳಲ್ಲಿ ಮಾರ್ಪಾಡುಗಳನ್ನು ಮಾಡಿ, ಆಧುನಿಕ ಕಾನೂನು ಸಂಹಿತೆಯನ್ನು ರೂಪಿಸಿದ. ಇದು ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳಲ್ಲಿ ಇಂದಿಗೂ ಮಾರ್ಗದರ್ಶಕವಾಗಿದೆ. ತರ್ಕಬದ್ಧವಾದ ಮತ್ತು ಸರಳ ಭಾಷೆಯಲ್ಲಿ ರಚಿತವಾದ ಕೋಡ್ ನೆಪೋಲಿಯನ್ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿದೆ.

ಯುರೋಪಿನ ಮೇಲೆ ಪ್ರಭುತ್ವವನ್ನು ಸ್ಥಾಪಿಸಿದರೂ ನೆಪೋಲಿಯನ್ ಸುಖಿಯಾಗಿರಲಿಲ್ಲ. ಸ್ವದೇಶಕ್ಕೆ ಸಮೀಪದಲ್ಲಿದ್ದರೂ ಸ್ವತಂತ್ರವಾದ ಪ್ರಬಲವಾದ ಇಂಗ್ಲೆಂಡನ್ನು ಸೋಲಿಸಲು, ಅದರ ಪ್ರತಿಷ್ಠೆಯನ್ನು ಕುಂದಿಸಲು ಸಾಧ್ಯವಾಗಿರಲಿಲ್ಲ. ತನ್ನ ಪರಮ ಮತ್ತು ಪ್ರಥಮ ಶತ್ರುವೆಂದು ಭಾವಿಸಿದ ಇಂಗ್ಲೆಂಡನ್ನು ಹೇಗಾದರೂ ಮಾಡಿ ಅಡಗಿಸಬೇಕೆಂದು ನಿರ್ಧರಿಸಿ ನೆಪೋಲಿಯನ್ ಆ ರಾಜ್ಯದ ವ್ಯಾಪಾರ ವಾಣಿಜ್ಯಗಳನ್ನು ತೊಡೆದುಹಾಕಲು ಹವಣಿಸಿದ. ತನಗೆ ಸೇರಿದ, ತನ್ನ ಹತೋಟಿಯಲ್ಲಿದ್ದ ಯುರೋಪಿನ ರಾಷ್ಟ್ರಗಳು ಬ್ರಿಟನ್ನಿನೊಡನೆ ಯಾವ ಬಗೆಯ ವ್ಯಾಪಾರ ಸಂಬಂಧವನ್ನೂ ಹೊಂದಿರಕೂಡದೆಂದು ಆಜ್ಞೆ ಹೊರಡಿಸಿದ. 1806ರಲ್ಲಿ ಬರ್ಲಿನ್ ಮತ್ತು ಮಿಲಾನ್ ಶಾಸನಗಳ ಮೂಲಕ ಖಂಡಾಂತರ ಪದ್ಧತಿಯನ್ನು ಜಾರಿಗೆ ತಂದ. ಇದರ ಪ್ರಕಾರ ಯುರೋಪಿನ ರಾಷ್ಟ್ರಗಳು ಇಂಗ್ಲೆಂಡಿನೊಡನೆ ಯಾವ ಸಂಬಂಧವನ್ನೂ ಹೊಂದಿರಲು ಅವಕಾಶವಿರಲಿಲ್ಲ. ಈ ಪದ್ಧತಿಯಿಂದ ಬ್ರಿಟನ್ನಿಗೆ ತೊಂದರೆಯಾದದ್ದು ನಿಜವಾದರೂ ಯುರೋಪಿನ ರಾಷ್ಟ್ರಗಳಿಗೆ ಹೆಚ್ಚು ಹಾನಿಯಾಯಿತು. ಯುರೋಪಿಗೆ ಬರುತ್ತಿದ್ದ ಆಹಾರ ಸಾಮಗ್ರಿಗಳು ನಿಂತೇ ಹೋಗಿ ಆಹಾರದ ಅಭಾವ ತಲೆದೋರಿತು. ಈ ಕ್ರಮದಿಂದಾಗಿ ನೆಪೋಲಿಯನ್ ತನ್ನ ವಿನಾಶಕ್ಕೆ ತಾನೇ ಕಾರಣ ಸೃಷ್ಟಿಸಿಕೊಂಡಂತಾಯಿತು. ನೆಪೋಲಿಯನ್ನನ ಪತನಕ್ಕೆ ಇದು ಕಾರಣವಾಯಿತು. ಈ ಪದ್ಧತಿಯ ವಿರುದ್ಧ ಪೋರ್ಚುಗೀಸರು ಮೊದಲು ದಂಗೆಯೆದ್ದರು. 1808ರಲ್ಲಿ ಸ್ಪೇನಿನ ಜನತೆ ಸ್ವದೇಶಾಭಿಮಾನದಿಂದ ಫ್ರೆಂಚ್ ಆಡಳಿತದ ವಿರುದ್ಧ ಬಂಡೆದ್ದಿತು. ವಿರೋಧಿ ಶಕ್ತಿಗಳು ಹೆಚ್ಚಿದವು. ಬ್ರಿಟಿಷರೂ ಈ ವಿರೋಧಿ ಪಂಥಕ್ಕೆ

ಬೆಂಬಲ ನೀಡಿದರು. ಇದು ಮುಂದೆ ಐಬೀರಿಯನ್ ಪರ್ಯಾಯ ದ್ವೀಪದ ಯುದ್ಧವಾಗಿ ಪರಿಣಮಿಸಿತು. ವಿರೋಧಿ ಬಣಗಳು ಹೆಚ್ಚುತ್ತಿದ್ದರೂ ನೆಪೋಲಿಯನ್ ತನ್ನನ್ನು ವಿರೋಧಿಸಿದ ಆಸ್ಟ್ರಿಯನ್ ಸೇನೆಯನ್ನು ಸೋಲಿಸಿದ. 1810ರಲ್ಲಿ ನೆಪೋಲಿಯನ್ನನ ಕೀರ್ತಿ ಉನ್ನತಿಯ ಶಿಖರ ಮುಟ್ಟಿತೆಂದು ಹೇಳಬಹುದು. ಇವನ ಸಾಮ್ರಾಜ್ಯ ಯುರೋಪಿನ ಎಲ್ಲ ಭಾಗಗಳಲ್ಲೂ ಪ್ರಸರಿಸಿತ್ತು. ರಷ್ಯದ ಚಕ್ರವರ್ತಿ ನೆಪೋಲಿಯನ್ನನ ಸ್ನೇಹಿತನಾಗಿದ್ದ. ಅದೇ ವರ್ಷದಲ್ಲಿ ಆಸ್ಟ್ರಿಯದ ಚಕ್ರವರ್ತಿಯ ತಂಗಿ ಮೇರಿ ಲೂಯಿಯನ್ನು ನೆಪೋಲಿಯನ್ ಮದುವೆಯಾದ. ಇದರಿಂದ ಇವನ ಪ್ರತಿಷ್ಠೆ ಪರಾಕಾಷ್ಠೆ ಮುಟ್ಟಿತು.

ಆದರೆ ಕೇವಲ 2 ವರ್ಷಗಳಲ್ಲಿ ನೆಪೋಲಿಯನ್ನನ ಅದೃಷ್ಟ ಇಳಿಮುಖವಾಯಿತು. 1812ರಲ್ಲಿ ರಷ್ಯನರು ಖಂಡಾಂತರ ಪದ್ಧತಿಗೆ ವಿರುದ್ಧವಾಗಿ ಇಂಗ್ಲೆಂಡಿನೊಡನೆ ವ್ಯಾಪಾರ ಪ್ರಾರಂಭಿಸಿದಾಗ ನೆಪೋಲಿಯನ್ ಸಿಟ್ಟಾಗಿ ರಷ್ಯದ ಮೇಲೆ ದಂಡೆತ್ತಿ ಹೋದ. ಬೊರೊಡಿನೊ ಯುದ್ಧದಲ್ಲಿ ರಷ್ಯನರನ್ನು ಸಂಪೂರ್ಣವಾಗಿ ಸೋಲಿಸಿ ಮಾಸ್ಕೋ ನಗರವನ್ನು ಪ್ರವೇಶಿಸಿದ. ಆದರೆ ರಷ್ಯನರು ನಗರವನ್ನೇ ತ್ಯಜಿಸಿದ್ದರಿಂದ ಇವನಿಗೆ ಯಾವ ಉಪಯೋಗವೂ ಆಗಲಿಲ್ಲ. ಜೊತೆಗೆ ರಷ್ಯದಲ್ಲಿ ಚಳಿಗಾಲ ಪ್ರಾರಂಭವಾಗಿತ್ತು. ಆಹಾರದ ಅಭಾವ, ತಡೆಯಲಾರದ ಚಳಿಯ ಕೊರೆತ ಮುಂತಾದ ತೊಂದರೆಗಳಿಂದ ಫ್ರೆಂಚ್ ಸೇನೆ ಕಷ್ಟ ಅನುಭವಿಸಿತು. ಈ ಸಂದಿಗ್ಧ ಸಮಯದಲ್ಲಿ ರಷ್ಯನರು ಫ್ರೆಂಚರ ಮೇಲೆ ಬೀಳಲು ಸನ್ನದ್ಧರಾದರು. ಹಿಮ್ಮೆಟ್ಟುತ್ತಿದ್ದ ಫ್ರೆಂಚ್ ಸೇನೆ ಅಪಾರ ನಷ್ಟ ಅನುಭವಿಸಿತು. ಸೇನೆಯ ಒಂದು ಭಾಗ ಮಾತ್ರ ಫ್ರಾನ್ಸಿಗೆ

ಮರಣಶಯ್ಯೆಯಲ್ಲಿರುವ ನೆಪೋಲಿಯನ್

ಹಿಂದಿರುಗಲು ಸಾಧ್ಯವಾಯಿತು. ರಷ್ಯದ ದುರಂತ ನೆಪೋಲಿಯನ್ನನ ಪತನಕ್ಕೆ ಅಣಿಮಾಡಿ ಕೊಟ್ಟಿತು. ನೆಪೋಲಿಯನ್ ನಿರಾಶನಾಗಿ ಹಿಂದಿರುಗಿದುದನ್ನು ತಿಳಿದು ಯುರೋಪಿನ ರಾಷ್ಟ್ರಗಳು ಇವನ ಪ್ರಭುತ್ವವನ್ನು ಕೊನೆಗೊಳಿಸಿ ಸ್ವತಂತ್ರವಾಗಲು ಹವಣಿಸಿದವು. ರಷ್ಯ, ಪ್ರಷ್ಯ, ಸ್ವೀಡನ್, ಆಸ್ಟ್ರಿಯ, ಇಂಗ್ಲೆಂಡ್– ಇವು ಫ್ರಾನ್ಸಿನ ವಿರುದ್ಧ ಗುಂಪು ಕಟ್ಟಿಕೊಂಡು ನೆಪೋಲಿಯನ್ನನನ್ನು ಎದುರಿಸಲು ಸನ್ನದ್ಧವಾದವು. ಹಲವಾರು ಕದನಗಳಲ್ಲಿ ಉತ್ತಮ ಯೋಧನನ್ನು ಕಳೆದುಕೊಂಡಿದ್ದ ನೆಪೋಲಿಯನ್ ಮತ್ತೆ ಸೇನೆಯನ್ನು ಸಜ್ಜುಗೊಳಿಸಲು ಸಾಧ್ಯವಾಗಲಿಲ್ಲ. ಆದರೂ ಇವನು ಯುದ್ಧ ನೀತಿಯಿಂದ ಹಿಂತೆಗೆಯುವ ಪ್ರಶ್ನೆಯೇ ಇರಲಿಲ್ಲ. ಇವನ ಅಳಿವು ಉಳಿವುಗಳು ಯುದ್ಧವನ್ನೇ ಅವಲಂಬಿಸಿದ್ದುವು. ಆದರೆ ಮುಂದೆ ನಡೆದ ಕದನಗಳಲ್ಲಿ ಸೋಲಿನ ಸರಪಳಿಯೇ ಬೆಳೆಯಿತು. ಒಂದೆರಡು ಕಡೆ ಗೆದ್ದರೂ ಹಲವೆಡೆಗಳಲ್ಲಿ ಇವನ ಸೇನೆಗಳು ಸೋತವು. ನೆಪೋಲಿಯನ್ ಫ್ರಾನ್ಸಿಗೆ ಹಿಂದಿರುಗಬೇಕಾಯಿತು.

1814ರಲ್ಲಿ ಒಕ್ಕೂಟ ಸೇನೆಗಳು ಫ್ರಾನ್ಸಿನ ಗಡಿ ದಾಟಿ ಡಿಸೆಂಬರ್ 31ರಂದು ರಾಜಧಾನಿಯಾದ ಪ್ಯಾರಿಸ್ ನಗರವನ್ನು ಪ್ರವೇಶಿಸಿದವು. ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಫ್ರೆಂಚ್ ಸೇನೆಯ ಬಲ ಕಡಿಮೆಯಾಗಿತ್ತು. ಈ ಪರಿಸ್ಥಿತಿಯಲ್ಲಿ ನೆಪೋಲಿಯನ್ ಯುದ್ಧವನ್ನು ಮುಂದುವರಿಸುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಇವನು ಸಿಂಹಾಸನವನ್ನು ತ್ಯಜಿಸಲು ಒಪ್ಪಿದ. ಏಪ್ರಿಲ್ 11ರಂದು ಚಕ್ರವರ್ತಿ ಪದವಿಯನ್ನು ಬಿಟ್ಟುಕೊಟ್ಟ. ಒಕ್ಕೂಟದ ನಾಯಕರು ಸಭೆ ಸೇರಿ, ನೆಪೋಲಿಯನ್ ಫ್ರಾನ್ಸನ್ನು ಬಿಟ್ಟು ಹೋಗಬೇಕೆಂದೂ ಎಲ್ಬ ದ್ವೀಪದಲ್ಲಿರಬೇಕೆಂದೂ ತೀರ್ಮಾನಿಸಿದವು. ಯುರೋಪಿನ ಭವಿಷ್ಯವನ್ನು ನಿರ್ಧರಿಸಲು, ರಾಷ್ಟ್ರಗಳ ರೂಪುರೇಖೆಗಳನ್ನು ರೂಪಿಸಲು ಒಕ್ಕೂಟದ ನಾಯಕರು ವಿಯನ್ನ ನಗರದಲ್ಲಿ ಸಭೆ ಸೇರಿದರು. ಆದರೆ ನೆಪೋಲಿಯನ್ನನಂಥ ಬಲಶಾಲಿ ಎಲ್ಬದಲ್ಲಿ ಕಾಲ ಕಳೆಯಲು ಸಾಧ್ಯವೇ ಇಲ್ಲ. ಫ್ರಾನ್ಸಿನಲ್ಲಿದ್ದ ಇವನ ಅನುಯಾಯಿಗಳು ನೆಪೋಲಿಯನ್ನನನ್ನು ಮತ್ತೆ ಬರಮಾಡಿಕೊಂಡರು. 1815 ಮಾರ್ಚ್‌ನಲ್ಲಿ ನೆಪೋಲಿಯನ್ ಹಿಂದಿರುಗಿದ. ಇವನಿಗೆ ಅದ್ಭುತ ಸ್ವಾಗತ ದೊರಕಿತು. ಬೆಂಬಲಿಗರು ಮತ್ತೆ ಇವನನ್ನು ಕೂಡಿಕೊಂಡರು. ಇವನ ಸೋಲುಗೆಲುವುಗಳಲ್ಲಿ ಪಾಲ್ಗೊಂಡಿದ್ದ ಸೈನ್ಯಾಧಿಕಾರಿಗಳು ಸೈನಿಕರೂ ನೆಪೋಲಿಯನ್ನನ ಪರವಾಗಿ ಯುದ್ಧ ಮಾಡಲು ಮುಂದೆ ಬಂದರು. ಇತ್ತಕಡೆ ಮಿತ್ರರಾಷ್ಟ್ರಗಳು ಯುರೋಪಿನ ರಾಜ್ಯಗಳ ಗಡಿಗಳನ್ನು ನಿರ್ಧರಿಸುತ್ತಿರುವಾಗ ಅತ್ತಕಡೆ ನೆಪೋಲಿಯನ್ ಮತ್ತೆ ಫ್ರಾನ್ಸಿನ ಚಕ್ರವರ್ತಿಯಾದ. ನೆಪೋಲಿಯನ್ ಸಾಕಷ್ಟು ಸೇನೆಯನ್ನು ಸಜ್ಜುಗೊಳಿಸಿ ಬೆಲ್ಜಿಯಂ ಕಡೆ ನುಗ್ಗಿದ. ಅಲ್ಲಿ ಒಕ್ಕೂಟದ ಸೇನೆಯ ದಳಪತಿಯಾದ ಡ್ಯೂಕ್ ಆಫ್ ವೆಲ್ಲಿಂಗ್ಟನ್ ಪ್ರಷ್ಯದ ಸೇನಾಧಿಪತಿ ಬ್ಲೂಷರನೊಡಗೂಡಿ ಫ್ರೆಂಚ್ ಸೇನೆಯನ್ನು ಎದುರಿಸಿದ. ಪ್ರಷ್ಯನ್ ಸೇನೆಯ ಒಂದು ತುಕಡಿಯನ್ನು ನೆಪೋಲಿಯನ್ ಸೋಲಿಸಿದರೂ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ವೆಲ್ಲಿಂಗ್ಟನ್ನನ ನೇತೃತ್ವದಲ್ಲಿ ಒಕ್ಕೂಟ ಸೇನೆ ವಾಟರ್ಲೂ ಬಳಿ ಸೇರಿತು. 1815 ಜೂನ್ 17ರಂದು ನೆಪೋಲಿಯನ್ನನ ಸೇನೆ ಅದಕ್ಕೆ ಎದುರಾಗಿ ನಿಂತಿತು. ವಾಟರ್ಲೂ ಕದನ ನೆಪೋಲಿಯನ್ನನ ಕೊನೆಯ ಕದನ. ಇವನ ಕಡೆ 74,000 ಸೈನಿಕರೂ ಮಿತ್ರರಾಷ್ಟ್ರಗಳ ಕಡೆ 68,000 ಸೈನಿಕರೂ ಎದುರುಬದುರಾಗಿ ನಿಂತು ಯುದ್ಧಮಾಡಿದರು. ವೆಲ್ಲಿಂಗ್ಟನ್ ಮತ್ತು ಬ್ಲೂಷರ್ ನಾಯಕತ್ವದಲ್ಲಿ ಒಕ್ಕೂಟದ ಸೇನೆ ಶೌರ್ಯದಿಂದ ಹೋರಾಡಿ, ನೆಪೋಲಿಯನ್ನನ ಸೇನೆಯನ್ನು ಸೋಲಿಸಿತು. ನೆಪೋಲಿಯನ್ ಶರಣಾಗತನಾಗಬೇಕಾಯಿತು. ಒಕ್ಕೂಟದ ನಾಯಕರು ಇವನನ್ನು ಸೇಂಟ್ ಹೆಲೀನ ದ್ವೀಪಕ್ಕೆ ಗಡಿಪಾರು ಮಾಡಿದರು. ನೂರು ದಿನಗಳ ಕಾಲ ಚಕ್ರವರ್ತಿ ಪದವಿಯನ್ನು ಮತ್ತೆ ಅನುಭವಿಸಿದ್ದ ನೆಪೋಲಿಯನ್ ಕೊನೆಗಾಲದ ಆರು ವರ್ಷಗಳನ್ನು ಅಟ್ಲಾಂಟಿಕ್ ಸಾಗರದ ಆ ಸಣ್ಣ ದ್ವೀಪದಲ್ಲಿ ಏಕಾಂತವಾಗಿ ಕಳೆಯಬೇಕಾಯಿತು.

ಈತ ಆಧುನಿಕ ಫ್ರಾನ್ಸಿಗೆ ಅಗತ್ಯವಾದ ಭದ್ರವಾದ ಬುನಾದಿಯನ್ನು ಹಾಕಿದ. ಅತ್ಯುನ್ನತ ಆಡಳಿತ ಯಂತ್ರ, ಕೋಡ್ ನೆಪೋಲಿಯನ್, ಸಮರ್ಥ ನ್ಯಾಯಾಂಗ ವ್ಯವಸ್ಥೆ, ಫ್ರಾನ್ಸಿನ ಬ್ಯಾಂಕ್, ವ್ಯವಸ್ಥಿತ ಹಣಕಾಸಿನ ಆಡಳಿತ, ಪ್ಯಾರಿಸ್ ವಿಶ್ವವಿದ್ಯಾಲಯ–ಇವು ಅವನು ಫ್ರಾನ್ಸಿಗೆ, ಯುರೋಪಿಗೆ ನೀಡಿದ ಉತ್ತಮ ಕೊಡುಗೆಗಳು. ಈತ 1821 ಮೇ 8ರಂದು ನಿಧನನಾದ. (ಕೆ.ಟಿ.ಆರ್.;ಎಂ.ಜಿ.))

**ನೆವಾಸ:** ಮಹಾರಾಷ್ಟ್ರ ರಾಜ್ಯದ ಅಹಮದ್‌ನಗರ ಜಿಲ್ಲೆಯಲ್ಲಿ ಪ್ರವರ ನದಿಯ ಎರಡೂ ದಂಡೆಗಳ ಮೇಲೆ ವಿಸ್ತರಿಸಿರುವ ಪುರಾತತ್ತ್ವ ನೆಲೆ. ಎಡದಂಡೆಯ ನೆಲೆಯನ್ನು ನೆವಾಸ ಬುದ್ರುಕ್ ಎಂದೂ ಬಲದಂಡೆಯ ನೆಲೆಯನ್ನು ನೆವಾಸ ಖುರ್ದ್ ಎಂದೂ ಸ್ಥಳೀಯರು ಕರೆಯುತ್ತಾರೆ. ಮಧ್ಯಯುಗೀನ ಸಾಹಿತ್ಯದಲ್ಲಿ ಈ ನೆಲೆಯನ್ನು ನಿಧಿವಾಸ ಅಥವಾ ನಿದ್ವಾಸ ಎಂದು ಉಲ್ಲೇಖಿಸಲಾಗಿದೆ. ಎಮ್.ಎನ್.ದೇಶಪಾಂಡೆ ಅವರಿಂದ ಬೆಳಕಿಗೆ ಬಂದ ಈ ನೆಲೆಯಲ್ಲಿ ಪುಣೆಯ ಡೆಕ್ಕನ್ ಕಾಲೇಜಿನ ಎಚ್.ಡಿ.ಸಾಂಕಳಿಯ ಅವರು 1954–59ರ ಅವಧಿಯಲ್ಲಿ ಉತ್ಖನನ ನಡೆಸಿದರು.

ಪ್ರಾಗಿತಿಹಾಸ: ಎಚ್.ಡಿ.ಸಾಂಕಳಿಯರ ತಂಡ ನಡೆಸಿದ ಸರ್ವೇಕ್ಷಣೆಯಲ್ಲಿ ಹಳೆಶಿಲಾ ಯುಗದ ಅವಶೇಷಗಳು ಪ್ರವರ ನದಿಯ ಪದರಗಳಲ್ಲಿ ಕಂಡುಬಂದವು. ಜಲ್ಲಿಕಲ್ಲಿನ ಪದರದಲ್ಲಿ ಆದಿ ಹಳೆಶಿಲಾಯುಗದ ಕೈಗೊಡಲಿ, ಕಡಿಕತ್ತಿ, ಚಕ್ಕೆ, ಮೂಲಶಿಲೆ, ಸುತ್ತಿಗೆ ಮತ್ತು ಕೊಚ್ಚುವ ಸಲಕರಣೆಗಳು, ಅಳಿದುಹೋದ ತಳಿಯ ಕಾಡುದನದ (ಬಾಸ್ ನಮಾಡಿಕಸ್) ದವಡೆಯ ಪಳೆಯುಳಿಕೆಗಳು ಇದ್ದವು. ಈ ಜಾತಿಯ ದನಗಳು ಹಿಮಯುಗದ ಮಧ್ಯಹಂತದಲ್ಲಿ (7,80,000–1,26,000 ವರ್ಷಗಳ ಹಿಂದೆ ಜೀವಿಸಿದ್ದವು. ಉಪಕರಣಗಳು ಡಾಲರೈಟ್ ಕಲ್ಲಿನಲ್ಲಿ ಮಾಡಿದವು. ಇಲ್ಲಿ ಜಲ್ಲಿಕಲ್ಲಿನ ಸ್ತರದ ಮೇಲೆ ಮಧ್ಯ ಹಳೆಶಿಲಾಯುಗದ ಉಪಕರಣಗಳಿರುವ ಸ್ತರವಿದೆ. ಆದರೆ ಗೋದಾವರಿಯ ದಂಡೆಯ ಮೇಲಿರುವ ಇತರ ಹಳೆಶಿಲಾಯುಗದ ನೆಲೆಗಳಾದ ಬೇಳ್ ಪಾಂಡಾರಿ, ಸುರೆಗಾಂವ್ ಮತ್ತು ಕಳೆಗಾಂವ್‌ನಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳಿರುವ ಸ್ತರದ ಕೆಳಗೆ ಬೇರಾವುದೇ ಸ್ತರವಿಲ್ಲ. ಕಳೆಗಾಂವ್‌ನಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳೊಂದಿಗೆ ಬಾಸ್ ನಮಾಡಿಕಸ್‌ನ ಪೂರ್ಣ ತಲೆಬುರುಡೆ ದೊರೆತಿದೆ. ಮೊನೆ, ಹೆರೆಚಕ್ಕೆ, ಕೊರೆಯುಳಿ, ಮೂಲಶಿಲೆ ಮತ್ತು ಚಕ್ಕೆಗಳು ಈ ಎಲ್ಲ ನೆಲೆಗಳಲ್ಲಿವೆ. ಈ ಉಪಕರಣಗಳು ಜಾಸ್ಪರ್ ಕಲ್ಲಿನಿಂದ ಮಾಡಲ್ಪಟ್ಟಿವೆ. ಕೆಲವೊಂದನ್ನು ಕ್ಯಾಲ್ಸೆಡನಿ ಮತ್ತು ಕೆಂಪುಶಿಲೆಗಳಿಂದ ತಯಾರಿಸಲಾಗಿದೆ.

ಉತ್ಖನನ: ವಸತಿ ನೆಲೆಯ ಉತ್ಖನನದಲ್ಲಿ ಅನುಕ್ರಮವಾಗಿ 4 ಸಾಂಸ್ಕೃತಿಕ ಹಂತಗಳು ತೋರಿಬಂದವು. ಇವು ತಾಮ್ರ–ಶಿಲಾಯುಗ, ಆದಿಚಾರಿತ್ರಿಕ ಹಂತ, ಭಾರತ–ರೋಮ್ ಸಂಪರ್ಕ ಹಂತ ಮತ್ತು ಮುಸಲ್ಮಾನ–ಮರಾಠ ಹಂತ. ನೆಲಗಟ್ಟು ಮತ್ತು ಸಮಾಧಿಗಳ ಆಧಾರದ ಮೇಲೆ ತಾಮ್ರ–ಶಿಲಾಯುಗವನ್ನು 5 ಉಪಹಂತಗಳಾಗಿ ವಿಭಜಿಸಲಾಗಿದೆ. ಎಲ್ಲ ಉಪಹಂತಗಳಲ್ಲಿ ಮಣ್ಪಾತ್ರೆಗಳು, ಸೂಕ್ಷ್ಮಶಿಲೋಪಕರಣಗಳು ಮತ್ತು ಉಜ್ಜಿ ನಯಗೊಳಿಸಿದ ಉಪಕರಣಗಳಿವೆ. ಮಣ್ಪಾತ್ರೆಗಳಲ್ಲಿ 4 ಪ್ರಕಾರಗಳಿವೆ: ಜೋರ್ವೆ ಮಾದರಿಯ ಪಾತ್ರೆ, ಬೂದುಬಣ್ಣದ ಪಾತ್ರೆ, ಕೆಂಪುಬಣ್ಣದ ದೊರಕು ಪಾತ್ರೆ ಮತ್ತು ಕೇಸರಿಬಣ್ಣದ ಪಾತ್ರೆ. ಜೋರ್ವೆ ಪಾತ್ರೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇವುಗಳಲ್ಲಿ ಕೆಲವೊಂದು ವಿಶೇಷ ಲಕ್ಷಣಗಳು ಕಂಡುಬಂದಿವೆ. ಉದಾ: ಈ ಪಾತ್ರೆಗಳ ಮೇಲೆ ಹಲವಾರು ಬಗೆಯ ಲೇಪನಗಳಿವೆ. ಪ್ರಧಾನ ಬಣ್ಣ ಕೆಂಪು. ಈ ಮಾದರಿಯಲ್ಲಿ ಸಾಮಾನ್ಯವಾಗಿ ನಳಿಕೆಯುಳ್ಳ ಬಟ್ಟಲಿನ ಜೊತೆಗೆ ಉದ್ದ ಕತ್ತು–ಗಿಡ್ಡ ಮೈಯ ಗಿಂಡಿ, ಆಟಿಕೆಯ ಬಟ್ಟಲು, ನಾನಾ ಬಗೆಯ ಸಿಂಬಿ ಮೊದಲಾದ ಅಪರೂಪದ ನಮೂನೆಗಳಿವೆ. ಹೆಚ್ಚಿನ ಮಣ್ಪಾತ್ರೆಗಳು ತಿಗುರಿಯ ಮೇಲೆ ಮಾಡಿದವು. ಕೆಲವೊಂದು ಭಾಗಗಳನ್ನು ಅಚ್ಚಿನಲ್ಲಿ ಮಾಡಿ ಅನಂತರ ಮೂಲ ಪಾತ್ರೆಗೆ ಜೋಡಿಸಿದ ನಿದರ್ಶನಗಳೂ ಇವೆ. ಇವಲ್ಲದೆ ಹೊರಮೈ ಮೇಲೆ ಬಿದಿರಿನ ಬುಟ್ಟಿ ಅಥವಾ ಚಾಪೆಯ

ಗುರುತಿರುವ ಒಂದೆರಡು ದಪ್ಪ ಪಾತ್ರೆ ಭಾಗಗಳಿವೆ. ಜೋರ್ವೆ ಪಾತ್ರೆಗಳ ಮೇಲೆ ಚಿತ್ರಿಸಿದ ಕಪ್ಪು ವರ್ಣಚಿತ್ರಗಳಲ್ಲಿ ನಾಯಿ ಮತ್ತು ಸುರುಳಿಯಾಕಾರದ ಕೊಂಬಿರುವ ಜಿಂಕೆಯ ಚಿತ್ರಗಳು ಗಮನಾರ್ಹ. ಉಳಿದವು ರೇಖಾವಿನ್ಯಾಸಗಳು.

ಸೂಕ್ಷ್ಮಶಿಲೋಪಕರಣಗಳಲ್ಲಿ ವಿವಿಧ ಆಕಾರದ ಶಿಲಾಗಟ್ಟಿ, ಸಮಾನಾಂತರ ಅಂಚಿನ ಚಕ್ಕೆಗಳು, ಅಲಗಿನ ಪ್ರಕಾರಗಳು, ಅರ್ಧಚಂದ್ರಾಕೃತಿ, ತ್ರಿಕೋನ, ಮೊನೆ, ಕೊರೆಯುಳಿ, ಹೆರೆಚಕ್ಕೆಗಳಿವೆ. ಇವು ಹೆಚ್ಚಾಗಿ ಕ್ಯಾಲ್ಸೆಡನಿ ಶಿಲೆಯಿಂದ ಮಾಡಲ್ಪಟ್ಟಿವೆ. ಅಗೇಟ್, ಜಾಸ್ಪರ್ ಮತ್ತು ಚರ್ಟ್ ಕಲ್ಲುಗಳನ್ನು ಅಪರೂಪಕ್ಕೆ ಬಳಸಲಾಗಿದೆ. ಬದಿ ಮೊಂಡಾಗಿಸಿದ ಅಲಗು, ಕೊರೆಯುಳಿ, ರಂಧ್ರಕ ಮತ್ತು ಹಿಡಿಕೆಗೆ ಸಿಕ್ಕಿಸುವಂತೆ ಮಾಡಿರುವ ಉಪಕರಣಗಳು ವಿಶೇಷ ನಮೂನೆಗಳಾಗಿವೆ. ಇವು ವಸತಿನೆಲೆಯಲ್ಲಿಯೇ ತಯಾರಾಗುತ್ತಿದ್ದವು.

ಉಜ್ಜಿ ನಯಗೊಳಿಸಿದ ಉಪಕರಣಗಳೆಂದರೆ ಡಾಲರೈಟ್‌ನ ಚಪ್ಪಟೆ ಕೊಡಲಿ, ಬಾಚಿ, ಉಳಿ, ಅರೆಯುವ ಗುಂಡು, ಸುತ್ತಿಗೆ, ಉಜ್ಜುವ ಸಲಕರಣೆ, ಕವಣೆ ಕಲ್ಲು ಮತ್ತು ಬಡಿಗಲ್ಲು. ಇವುಗಳನ್ನೂ ವಸತಿಯಲ್ಲಿಯೇ ಮಾಡುತ್ತಿದ್ದರು. ಇತರ ಸಾಂಸ್ಕೃತಿಕ ಅವಶೇಷಗಳಲ್ಲಿ ತಾಮ್ರದ ಬಳೆ, ಮಣಿ, ಉಂಗುರಗಳು, ಕೊಕ್ಕೆ, ಉಳಿ ಮತ್ತು ಪಾತ್ರೆ; ಅರೆಪ್ರಶಸ್ತ ಕಲ್ಲು, ಸ್ಟಿಯಟೈಟ್ ಮತ್ತು ಸುಡಾವೆಮಣ್ಣಿನ ಮಣಿಗಳು; ಸುಡಾವೆ ಮಣ್ಣಿನ ಮೈಯುಜ್ಜುವ ಬಿಲ್ಲೆ, ಹಣತೆ, ಗಾಲಿಗಳು ಮತ್ತು ಶಂಖದ ಬಳೆಗಳಿವೆ.

ಮನೆಗಳ ನೆಲಗಟ್ಟಿನ ಅಡಿಯಲ್ಲಿ ಒಟ್ಟು 131 ಸಮಾಧಿಗಳು ಕಂಡುಬಂದವು. ಇವುಗಳಲ್ಲಿ 126 ಮಕ್ಕಳದು ಮತ್ತು ಉಳಿದವು ವಯಸ್ಕರದು. ಮಕ್ಕಳ ಅಸ್ಥಿಅವಶೇಷಗಳನ್ನು 2 ಅಥವಾ 3 ಮಡಕೆಗಳೊಳಗೆ ಇಟ್ಟು ಬಾಯಿಗಳು ಕೂಡುವ ರೀತಿಯಲ್ಲಿ ಮಡಕೆಗಳನ್ನು ಕುಣಿಯೊಳಗೆ ಅಡ್ಡಲಾಗಿಟ್ಟು ಮಣ್ಣು ಮುಚ್ಚಲಾಗಿದೆ. ಚಿತ್ರಿತ ಚಿಕ್ಕ ಬಟ್ಟಲು, ಉದ್ದ ಕತ್ತಿನ ಮಡಕೆಗಳು, ಫ಼ಯಾನ್ಸ್ ಗಾಜು-ಮಂದಗೆಂಪಿನ ಕಲ್ಲು-ತಾಮ್ರದ ಮಣಿಗಳು, ತಾಮ್ರದ ಕಡಗಗಳನ್ನು ಅಸ್ಥಿಅವಶೇಷಗಳೊಂದಿಗೆ ಇಡಲಾಗಿದೆ. ವಯಸ್ಕರ ಶವವನ್ನು ಕುಣಿಯೊಳಗೆ ನೇರಭಂಗಿಯಲ್ಲಿ ಉತ್ತರ-ದಕ್ಷಿಣಾಭಿಮುಖವಾಗಿ ಹೂಳಲಾಗಿದೆ. ವಯಸ್ಕರ ಯಾವ ಅಸ್ಥಿಪಂಜರಗಳಲ್ಲೂ ಪಾದದ ಭಾಗಗಳಿಲ್ಲದಿರುವುದು ಸೋಜಿಗವಾಗಿದೆ.

ಈ ಹಂತದ ಅತ್ಯಂತ ಮೇಲಿನ ಸ್ತರ ಪ್ರ.ಶ.ಪೂ. 1250±110ರ ಅವಧಿಗೆ ಸೇರುತ್ತದೆಂಬುದು ಇಂಗಾಲ 14ರ ತಂತ್ರದಿಂದ ತಿಳಿದುಬಂದಿದೆ. ಒಟ್ಟಿನಲ್ಲಿ ತಾಮ್ರ-ಶಿಲಾಯುಗ ಹಂತ ಈ ನೆಲೆಯಲ್ಲಿ ಪ್ರ.ಶ.ಪೂ. 1500ರಲ್ಲಿ ಪ್ರಾರಂಭವಾಗಿ ಪ್ರ.ಶ.ಪೂ. 1000ದ ಹೊತ್ತಿಗೆ ಮುಕ್ತಾಯವಾಯಿತು. ಈ ಹಂತದ ಅನಂತರ ಕೆಲವು ಶತಮಾನಗಳ ಕಾಲ ಇಲ್ಲಿ ಜನವಸತಿ



ಅಡ್ಡ ಇಟ್ಟ ಜೋಡಿ ಹಾಗೂ ಮೂರು ಅಸ್ಥಿ ಪಾತ್ರೆ, ತಾಮ್ರ-ಶಿಲಾಯುಗ

ಇರಲಿಲ್ಲ. ಅನಂತರ ಇಲ್ಲಿ ನೆಲೆಯೂರಿದ ಜನರು (2ನೆಯ ಹಂತ) ಔತ್ತರೇಯ ಮೆರುಗಿನ ಕಪ್ಪುಬಣ್ಣದ ಪಾತ್ರೆ, ಕೆಂಪು-ಕಪ್ಪು ದ್ವಿವರ್ಣ ಬಗೆಯ ಪಾತ್ರೆ, ಕೆಂಪು ಲೇಪನದಡಿ ಬಿಳಿಚಿತ್ರವಿರುವ ಪಾತ್ರೆ, ಕೆಂಪು ಲೇಪದ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಈ ಸಾಂಸ್ಕೃತಿಕ ಹಂತವನ್ನು ಕಟ್ಟಡಾವಶೇಷಗಳ ಆಧಾರದ ಮೇಲೆ 6 ಉಪಹಂತಗಳಾಗಿ ವರ್ಗೀಕರಿಸಲಾಗಿದೆ. 4ನೆಯ ಉಪಹಂತದಲ್ಲಿ ಒಂದಕ್ಕಿಂತ ಹೆಚ್ಚು ಕೋಣೆಗಳುಳ್ಳ ಮನೆಗಳ ತಳಗಟ್ಟುಗಳು ದೊರಕಿವೆ. ಮನೆಗಳ ನೆಲಕ್ಕೆ ಸುಣ್ಣದ ಲೇಪವನ್ನು ಬಳಿಯಲಾಗಿದೆ. ಮನೆಯ ಆವರಣದೊಳಗೆ ನೆಲದಲ್ಲಿ ಹುಗಿದ ಧಾನ್ಯ ಶೇಖರಣೆಯ ಜಾಡಿಗಳು, ಇಂಗುಕುಣಿಗಳು ಸಿಕ್ಕಿವೆ. ಕೊನೆಯ ಉಪಹಂತದ ಉಲ್ಲೇಖಾರ್ಹ ಅವಶೇಷವೆಂದರೆ ಕಲ್ಲಿನ ಹಾಸು, ರುಬ್ಬುವ ಗುಂಡು ಮತ್ತು ಅರೆಯುವ ಕಲ್ಲುಗಳು. ತಾಮ್ರದ ತಂತಿ, ಉಂಗುರ, ಅಲಗು, ಕೊಕ್ಕೆ, ಕಂಬಿ; ಕಬ್ಬಿಣದ ಬಾಣದ ಮೊನೆ, ಉಳಿ, ಚೂರಿಯ ಅಲಗು, ಮಚ್ಚು, ಬಾಚಿ, ಸೌಟು, ಪಾತ್ರೆಗಳು; ಗಾಜಿನ ಉಂಗುರ, ಪುಟ್ಟ ಪಾತ್ರೆ, ಕಿಟ್ಟ; ಮೂಳೆಯ ಮೊನೆ; ದಂತದ ಬಾಚಣಿಗೆ; ಸುಡಾವೆಮಣ್ಣಿನ ಮೂಸೆ, ಗೊಂಬೆ, ಮನುಷ್ಯಾಕೃತಿಗಳು 2ನೆಯ ಹಂತದ ಮುಖ್ಯ ಅವಶೇಷಗಳಾಗಿವೆ. ಮುದ್ರಾಂಕಿತ ನಾಣ್ಯಗಳು ಮತ್ತು ಸಿರಿ ಸಾತವಾಹನ ನಾಣ್ಯಗಳ ಆಧಾರದ ಮೇಲೆ ಈ ಹಂತವನ್ನು ಪ್ರ.ಶ.ಪೂ. 2ನೆಯ ಶತಮಾನದ ಪೂರ್ವಾರ್ಧದಲ್ಲಿ ಇರಿಸಲಾಗಿದೆ.



ಶವಕುಣಿ

3ನೆಯ ಹಂತ 2ನೆಯ ಹಂತದಿಂದ ಮುಂದುವರೆದುದು ಕಂಡುಬಂದಿದೆ. ಈ ಹಂತದಲ್ಲಿ ಹೊಳಪಿನ ಕೆಂಪು ಪಾತ್ರೆಗಳು, ಮೆಗರಾನ್ ಮಾದರಿಯ ಪಾತ್ರೆ, ರೌಲೆಟ್ ಪಾತ್ರೆ ಮತ್ತು ಆಂಫೊರ ಜಾಡಿಗಳು ಬಳಕೆಗೆ ಬಂದವು. ಜೊತೆಗೆ ಕಪ್ಪು-ಕೆಂಪು ದ್ವಿವರ್ಣ ಪಾತ್ರೆ, ದೊರಗು ಕೆಂಪು ಪಾತ್ರೆ ಮತ್ತು ತೆಳುವಾದ ಕೆಂಪುಲೇಪದ ಪಾತ್ರೆಗಳು ಉಪಯೋಗಿಸಲ್ಪಡುತ್ತಿದ್ದವು. ಔತ್ತರೇಯ ಮೆರುಗಿನ ಕಪ್ಪುಬಣ್ಣದ ಪಾತ್ರೆಯ ಎರಡು ಚೂರುಗಳೂ ಈ ಹಂತದಲ್ಲಿ ಸಿಕ್ಕಿವೆ. ಈ ಹಂತದ ಮನೆಗಳ ರಚನೆಯೂ ಹಿಂದಿನ ಹಂತದಲ್ಲಿ ಇದ್ದಂತೆಯೇ ಇದೆ. ಸುಣ್ಣ ಲೇಪದ ನೆಲಗಟ್ಟು, ನೆಲದೊಳಗೆ ಹೂಳಿರುವ ಶೇಖರಣೆ ಜಾಡಿಗಳು ಇಲ್ಲೂ ಇವೆ. ಇಟ್ಟಿಗೆ ಮತ್ತು ಹೆಂಚಿನ ಬಳಕೆ, ಇಟ್ಟಿಗೆ ಮತ್ತು ಸುಡಾವೆಮಣ್ಣಿನ ಉಂಗುರಗಳಿಂದ ಮಾಡಿದ ಇಂಗುಕುಣಿಗಳು ವಾಸ್ತು ರಚನೆಯ ನೂತನ ಅಂಶಗಳಾಗಿವೆ. ನಾಗರ ಹೆಡೆಯ ಆಕಾರದಲ್ಲಿರುವ ಚಿನ್ನದ ಮಣಿ, ಗಾಜಿನ ಬಳೆ, ಶಂಖದ ಕಿವಿಯ ಆಭರಣಗಳು, ದಂತದ ಅಲಂಕೃತ ಬಳೆಗಳು, ಹರಕೆ ತೊಟ್ಟಿಗಳು, ಸುಡಾವೆಮಣ್ಣಿನ ಸ್ತ್ರೀ ಮಾತೃಕೆಯ ಆಕೃತಿಗಳು ಹೆಸರಿಸಬಹುದಾದ ಅವಶೇಷಗಳಾಗಿವೆ. ಮಹತ್ತ್ವದ ಆಧಾರಗಳೆಂದರೆ ಗೌತಮಿಪುತ್ರ ಸಾತಕರ್ಣಿ ಮತ್ತು ಯಜ್ಞಶ್ರೀ ಸಾತಕರ್ಣಿಯ ನಾಣ್ಯಗಳು ಮತ್ತು ರೋಮಿನ ರಾಜನಾದ ಅಗಸ್ಟಸ್‌ನ ನಾಣ್ಯದ ನಕಲುಗಳು. ಈ ಹಂತದ ಸುಟ್ಟ ಧಾನ್ಯಗಳಿಗೆ ದೊರೆತಿರುವ ಇಂಗಾಲ 14ರ ಕಾಲಮಾನ 1846±106 ವರ್ಷಗಳು. ಈ ಹಂತ ಪ್ರ.ಶ.ಪೂ. 1ನೆಯ ಶತಮಾನದಿಂದ ಪ್ರ.ಶ. 2ನೆಯ ಶತಮಾನದವರೆಗೆ ಅಸ್ತಿತ್ವದಲ್ಲಿತ್ತು. 3ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಇಲ್ಲಿ ಮತ್ತೆ ಜನವಸತಿ ಇರಲಿಲ್ಲ. 14ನೆಯ ಶತಮಾನದಲ್ಲಿ ಇಲ್ಲಿದ್ದ ವಸತಿಯ ಕುರುಹುಗಳೆಂದರೆ ತುಗಲಕ್ ಮತ್ತು ಬಹಮನಿ ರಾಜರುಗಳ ನಾಣ್ಯಗಳು, ಬಹುವರ್ಣದ ಗಾಜಿನ ಬಳೆಗಳು, ಹೊಳಪಿನ ಮಣ್ಪಾತ್ರೆಗಳು, ಹೆಂಚು, ಕಲ್ಲಿನ ಅಡಿಪಾಯಗಳು ಮತ್ತು ಪೇಶ್ವೆಗಳ ಕಾಲದ ಒಂದು ನಾಣ್ಯ. 18ನೆಯ ಶತಮಾನದ ಹೊತ್ತಿಗೆ ಈ ವಸತಿ ಅಂತ್ಯ ಕಂಡಿರಬೇಕು. (ಬಿ.ಎನ್.)

**ನೇಪಾಲ:** ಏಷ್ಯಖಂಡದ ಒಂದು ರಾಷ್ಟ್ರ. ನೇಪಾಲ ಪ್ರದೇಶಕ್ಕೂ ಗಂಗಾ ನದಿ ಬಯಲಿಗೂ ಕನಿಷ್ಠ ಪಕ್ಷ 2,500 ವರ್ಷಗಳ ಸಂಬಂಧವಿದೆ. ಗೌತಮ ಬುದ್ಧನ ಜನ್ಮಸ್ಥಳವಾದ ಲುಂಬಿನಿ ಇರುವುದು ನೇಪಾಲದಲ್ಲಿ. ನೇಪಾಲದ ಮೇಲೆ ಹಿಂದುಧರ್ಮದ ಪ್ರಭಾವವೇ ಅಲ್ಲದೆ ಬೌದ್ಧಧರ್ಮದ ಪ್ರಭಾವವೂ ಬಹಳ ಹಿಂದಿನಿಂದಲೂ ಇದ್ದುದಕ್ಕೆ ಆಧಾರಗಳಿವೆ. ಲುಂಬಿನಿಯಲ್ಲಿ ಅಶೋಕನ ಶಾಸನವಿದೆ.

**ಇತಿಹಾಸ:** ನೇಪಾಲದ ರಾಜವಂಶದ ಚರಿತ್ರೆಯನ್ನು ಗುರುತಿಸುವುದು ಸಾಧ್ಯವಾಗುವುದು 4, 5ನೆಯ ಶತಮಾನಗಳಿಂದ. ಅನಂತರವೂ ನಡುನಡುವೆ ಇತಿಹಾಸದ ಸೂತ್ರ ಕಡಿದು ಬೀಳುತ್ತದೆ. 4 ಅಥವಾ 5ನೆಯ ಶತಮಾನದಲ್ಲಿ ಇಲ್ಲಿ ಲಿಚ್ಛವಿಗಳ ಆಳಿಕೆ ಪ್ರಾರಂಭವಾಯಿತು. ಇದಕ್ಕೆ ಹಿಂದೆ ಸು.800 ವರ್ಷಗಳ ಕಾಲ ಕಿರಾತರು ಈ ಪ್ರದೇಶವನ್ನು ಆಳಿದರು. ಭಾರತೀಯ ಮೂಲದ ಪ್ರಥಮ ಹಿಂದು ದೊರೆಗಳು ಲಿಚ್ಛವಿಗಳೆನ್ನಲಾಗಿದೆ. ಇವರು ತಮ್ಮನ್ನು ಕ್ಷತ್ರಿಯರೆಂದು ಹೇಳಿಕೊಳ್ಳುತ್ತಿದ್ದರು. 500-700ರ ಅವಧಿಗೆ ಸಂಬಂಧಿಸಿದಂತೆ ಇವರನ್ನು ಕುರಿತು ಅನೇಕ ವಿವರಗಳು ದೊರಕುತ್ತವೆ. ಚೀನದೊಂದಿಗೆ ನೇಪಾಲದ ಸಂಪರ್ಕ ಬೆಳೆದದ್ದು 7ನೆಯ ಶತಮಾನದ ನಡುಗಾಲದಲ್ಲಿ. ಆದರೆ ಟಿಬೆಟ್-ಚೀನಗಳ ನಡುವೆ ಆಗಿಂದಾಗ್ಗೆ ಯುದ್ಧಗಳು ನಡೆಯುತ್ತಿದ್ದುದರಿಂದ ಈ ಸಂಪರ್ಕ ಕಡಿದುಬಿತ್ತು. 18ನೆಯ ಶತಮಾನದ ಅನಂತರವೇ ಇದು ಅವಿಚ್ಛಿನ್ನವಾಗಿ ಬೆಳೆದದ್ದು.

10–18ನೆಯ ಶತಮಾನಗಳಲ್ಲಿ ಮಲ್ಲವಂಶದ ದೊರೆಗಳು ಇಲ್ಲಿ ಆಳಿದರು. ಲಿಚ್ಛವಿಗಳು ಹಿಂದುಗಳಾಗಿದ್ದರೂ ಅವರು ವೈದಿಕಧರ್ಮವನ್ನು ಹಿಂದುಗಳಲ್ಲದವರ ಮೇಲೆ ಹೇರಿರಲಿಲ್ಲ. ಮಲ್ಲರು ಹಿಂದು ಸಾಮಾಜಿಕ ಪದ್ಧತಿಗಳನ್ನು ಜಾರಿಗೆ ತಂದರು. ಅವರ ಪೈಕಿ ಪ್ರಮುಖನಾದವನು 15ನೆಯ ಶತಮಾನದ ಆದಿಯಲ್ಲಿ ಆಳಿದ ಜಯಸ್ಥಿತಿ ಎಂಬ ದೊರೆ.

ಜಯಸ್ಥಿತಿಯ ಅನಂತರ ಬಂದವನು ಯಕ್ಷಮಲ್ಲ. ಈತ ಸು.1429–82ರಲ್ಲಿ ರಾಜ್ಯವಾಳಿದ. ಇವನು ರಾಜ್ಯವನ್ನು ತನ್ನ ಮೂವರು ಮಕ್ಕಳಲ್ಲಿ ಹಂಚಿದ. ಇವರ ಈ ಮೂರು ವಿಭಾಗಗಳಲ್ಲದೆ ಇನ್ನೂ ಹಲವು ರಾಜಕೀಯ ಘಟಕಗಳಿದ್ದುವು. ಉತ್ತರ ಭಾರತವನ್ನು ಮುಸ್ಲಿಮರು ಆಕ್ರಮಿಸಿದಾಗ ಅಲ್ಲಿಂದ ಓಡಿಬಂದ ಅನೇಕ ಹಿಂದೂ ವಂಶಗಳವರು 16ನೆಯ ಶತಮಾನದ ವೇಳೆಗೆ ನೇಪಾಲದಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಪ್ರದೇಶಗಳನ್ನು ಆಳುತ್ತಿದ್ದರು.

18ನೆಯ ಶತಮಾನದ ಆದಿಯಲ್ಲಿ ಈ ಪ್ರದೇಶಗಳಲ್ಲಿ ಒಂದನ್ನು ಷಾ ಮನೆತನದವರು ಆಳುತ್ತಿದ್ದರು. ಈ ದೊರೆಗಳು ಕ್ರಮೇಣ ಪ್ರಬಲರಾದರು. ಮಲ್ಲರ ಆಳ್ವಿಕೆಗೂ ಇವರಿಂದ ಅಪಾಯ ಒದಗಿತು. ಮಲ್ಲರು ಆ ವೇಳೆಗೆ ದುರ್ಬಲರಾಗಿದ್ದರು. ಪೃಥ್ವೀ ನಾರಾಯಣ ಷಾ ಎಂಬುವನು 1769ರಲ್ಲಿ ನೇಪಾಲ ಕಣಿವೆಯನ್ನು ಗೆದ್ದು ಕಠ್ಮಂಡುವಿಗೆ ತನ್ನ ರಾಜಧಾನಿಯನ್ನು ಬದಲಾಯಿಸಿದ. ಆಧುನಿಕ ನೇಪಾಲದ ಅಸ್ತಿಭಾರದ ರಚನೆಯಾಯಿತು. ಸ್ಥಳೀಯ ಭಿನ್ನತೆಗಳು ಕಡಿಮೆಯಾದುವು. ರಾಜಕೀಯ ಒಗ್ಗಟ್ಟು ಸಾಧಿಸಿತು. ಸ್ಥಳೀಯ ಮುಖಂಡರೊಂದಿಗೆ ಸಾಮರಸ್ಯ ಸಾಧಿಸುವುದರಲ್ಲಿ ಇವನು ಬಹಳ ಮಟ್ಟಿಗೆ ಯಶಸ್ವಿಯಾದ.

ಆದರೆ ರಾಜಮನೆತನಕ್ಕೂ ಶ್ರೀಮಂತರಿಗೂ ನಡುವೆ ಘರ್ಷಣೆಗಳು ಇದ್ದೇ ಇದ್ದುವು. 1775–1832ರ ವರೆಗಿನ ಅವಧಿಯಲ್ಲಿ ಈ ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಲು ಶ್ರೀಮಂತರು ತಮ್ಮತಮ್ಮಲ್ಲೇ ಸ್ಪರ್ಧಿಸುತ್ತಿದ್ದರು. ಈ ಅವಧಿಯಲ್ಲಿ ಮೂರು ಬಾರಿ ಅಪ್ರಾಪ್ತ ವಯಸ್ಕರು ಸಿಂಹಾಸನವನ್ನೇರಿದರು. ರಾಜ ಪಾಲಕರು ಪ್ರಭಾವ ಬೆಳಸಿಕೊಳ್ಳಲು ಯತ್ನಿಸಿದರು. 1806–37ರಲ್ಲಿ ಥಾಪಾ ಮನೆತನ ವಿಶೇಷ ಪ್ರಭಾವಶಾಲಿಯಾಯಿತು. 1846ರಲ್ಲಿ ರಾಣಾ ಮನೆತನ ಪ್ರಬಲವಾಯಿತು. ಆ ಮನೆತನದವರು ಷಾ ದೊರೆಗಳನ್ನು ಕೈಗೊಂಬೆಗಳಾಗಿ ಮಾಡಿ ತಾವೇ ಅಧಿಕಾರ ನಡೆಸಿದರು. ಅವರ ಅಧಿಕಾರ 1951ರ ವರೆಗೂ ನಡೆಯಿತು.

ನೇಪಾಲ ಆಗಿಂದಾಗ್ಗೆ ನೆರೆ ಸರ್ಕಾರಗಳೊಂದಿಗೆ ಯುದ್ಧನಿರತವಾಗಿತ್ತು. 1788–92ರಲ್ಲಿ ಚೀನ ಮತ್ತು ಟಿಬೆಟ್‌ಗಳೊಂದಿಗೂ 1809ರಲ್ಲಿ ಪಂಜಾಬಿನ ಸಿಖ್ಖರೊಂದಿಗೂ 1814–16ರಲ್ಲಿ ಬ್ರಿಟಿಷ್ ಭಾರತದೊಂದಿಗೂ 1854–56ರಲ್ಲಿ ಟಿಬೆಟಿನೊಂದಿಗೂ ಮಾಡಿದ ಯುದ್ಧಗಳಲ್ಲಿ ನೇಪಾಲದ ವಿಸ್ತರಣಶೀಲ ಪ್ರಯತ್ನಕ್ಕೆ ಪೆಟ್ಟು ಬಿತ್ತು. ಅದರ ಈಗಿನ ಗಡಿಗಳು ಖಚಿತವಾದುವು. 1951ರಲ್ಲಿ ನೇಪಾಲದ ದೊರೆಯ ಅಧಿಕಾರ ಮತ್ತೆ ಸ್ಥಾಪಿತವಾಯಿತು. ರಾಣಾ ಆಡಳಿತದ ವಿರುದ್ಧ ಬೆಳೆದ ಜನಚಳವಳಿ ಇದಕ್ಕೆ ಕಾರಣ. ದೊರೆ ತ್ರಿಭುವನ 1955ರಲ್ಲಿ ತೀರಿಕೊಂಡ. ಮಹೇಂದ್ರನ ಅಧಿಕಾರದ ಕಾಲದಲ್ಲಿ ಸಂವಿಧಾನ ಬದ್ಧ ಆಡಳಿತವನ್ನು ಸ್ಥಾಪನೆ ಮಾಡಲು ಪ್ರಯತ್ನಗಳಾದುವು. 1959ರಲ್ಲಿ ಸಂವಿಧಾನವೊಂದು ಜಾರಿಗೆ ಬಂತು. ಆದರೆ ದೊರೆಗೂ ಸಂಪುಟಕ್ಕೂ ನಡುವೆ ವಿರಸ ಬೆಳೆದು 1962ರಲ್ಲಿ 1959ರ ಸಂವಿಧಾನ ರದ್ದಾಯಿತು. ಅದರ ಬದಲು ಜಾರಿಗೆ ಬಂದ ಹೊಸ ಸಂವಿಧಾನದಲ್ಲಿ ದೊರೆಯ ಪ್ರಾಧಿಕಾರ ಪುನಃ ಸ್ಥಾಪಿತವಾಯಿತು. ಮಹೇಂದ್ರ 1972ರಲ್ಲಿ ಕಾಲವಾದ. ಮಗ ಬೀರೇಂದ್ರ ಸಿಂಹಾಸನವನ್ನೇರಿದ.

1979ರಲ್ಲಿ ಬೃಹತ್ ಸಾರ್ವತ್ರಿಕ ಗಲಭೆಗಳು ಸಂಭವಿಸಿ ಜನರಿಗೆ ಹೆಚ್ಚಿನ ಅಧಿಕಾರಕ್ಕೆ ಒತ್ತಾಯತಾಯಿತು. ದೊರೆ ಬೀರೇಂದ್ರ ರಾಷ್ಟ್ರೀಯ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಮತದಾನ ಏರ್ಪಡಿಸಿದ. ಆದರೆ ಈ ಮತದಾನ ಪ್ರಚಲಿತವಿದ್ದ ವ್ಯವಸ್ಥೆಯನ್ನು ಮುದುವರೆಸಲು ಸಮ್ಮತಿಸಿತು. 1990ರಲ್ಲಿ ಜರುಗಿದ ಚಳವಳಿ ಪ್ರಜಾಪ್ರಭುತ್ವ ಸ್ಥಾಪನೆಗೆ ಒತ್ತಾಯ ತಂದವು. 1990ರಲ್ಲಿ ರಾಜಕೀಯ ಪಕ್ಷಗಳ ಮೇಲಿನ ನಿರ್ಬಂಧ ರದ್ದುಗೊಂಡು ನೇಪಾಲ ಸಂವಿಧಾನಬದ್ಧ ರಾಜಪ್ರಭುತ್ವವನ್ನು ಒಪ್ಪಿಕೊಂಡಿತು. 1991ರಲ್ಲಿ ಬಹುಪಕ್ಷೀಯ ಪ್ರಜಾಪ್ರಭುತ್ವ ಪಕ್ಷಗಳ ಆಡಳಿತ 1994ರಲ್ಲಿ ನೇಪಾಲದ ಕಮ್ಯುನಿಸ್ಟ್ ಪಕ್ಷ ಹಾಗೂ 1999ರಲ್ಲಿ ನೇಪಾಲ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತು.

ರಾಜಪ್ರಭುತ್ವದ ಬೇರುಗಳು ಅಲುಗಾಡತೊಡಗುವ ವೇಳೆಯಲ್ಲಿ ದೊರೆ ಬೀರೇಂದ್ರನ ಮಗ ದೀಪೇಂದ್ರ 2001ರಲ್ಲಿ ನಡಸಿದ ಬರ್ಬರ ಹತ್ಯಾಕಾಂಡದಲ್ಲಿ ರಾಜ ಬೀರೇಂದ್ರ ಸೇರಿದಂತೆ ರಾಜಮನೆತನದ ಹಲವಾರು ಮಂದಿ ಸಾವನ್ನಪ್ಪಬೇಕಾಯಿತು. ಅನಂತರ ಬೀರೇಂದ್ರನ ಸಹೋದರ ಜ್ಞಾನೇಂದ್ರ ಅಧಿಕಾರಕ್ಕೆ ಬಂದರೂ ರಾಜಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲಾಗಲಿಲ್ಲ. 2006ರಲ್ಲಿ ಜರುಗಿದ ಜನತೆಯ ಬೃಹತ್ ಪ್ರಜಾಪ್ರಭುತ್ವ ಚಳವಳಿಯಿಂದಾಗಿ ನೇಪಾಲ ಪೂರ್ಣ ಪ್ರಮಾಣದ ಜನತಂತ್ರ ಆಡಳಿತಕ್ಕೆ ಮುನ್ನಡೆಯುತ್ತಿದೆ. ರಾಜಪ್ರಭುತ್ವ ತನ್ನ ಅಸ್ತಿತ್ವದ ಅಳಿವಿನ ಅಂಚಿನಲ್ಲಿದೆ. (ಕೆ.ಕೆ.ಎಸ್‌ಯು.;ಎಚ್.ವಿ.ಎಸ್.ಎಂ.)

**ನೈಟಿಂಗೇಲ್, ಫ್ಲಾರೆನ್ಸ್:** 1820–1910. ದಾದಿಸೇವೆಯ ಮೂಲಕರ್ತೃವಾಗಿ, ರೋಗಿಗಳ ಶುಶ್ರೂಷೆಯಲ್ಲಿ ಮಹಿಳೆಯರನ್ನು ತೊಡಗಿಸಿ, ಜನಾರೋಗ್ಯ ಸುಧಾರಣೆಗಳಿಗೆ ಕಾರಣಳಾದ ಇಂಗ್ಲೆಂಡಿನ ಹೆಸರಾಂತ ದಾದಿ. ಸುಸಂಸ್ಕೃತ ಸಿರಿವಂತರ ಮನೆತನದ ಹೆಣ್ಣು ಮಗಳಾಗಿ ಇಟಲಿಯ ಫ್ಲಾರೆನ್ಸಿನಲ್ಲಿ ಹುಟ್ಟಿದಳು. ಉನ್ನತ ಕುಲಕ್ಕೆ ತಕ್ಕಂತೆ ಮದುವೆಯಾಗಿ ಸಮಾಜದಲ್ಲಿ ಪ್ರತಿಷ್ಠಾವಂತಳಾಗುವಳೆಂದು ಇವಳ ತಾಯಿ ಕಾಣುತ್ತಿದ್ದ ಕನಸು ನನಸಾಗಲಿಲ್ಲ. 17ನೆಯ ವಯಸ್ಸಿನಲ್ಲೇ ಅಂತರಾತ್ಮ ಇವಳಲ್ಲಿ ಜನಸೇವೆಯೇ ದೇವರ ಸೇವೆ ಎಂಬ ಭಾವವನ್ನು ಪ್ರಚೋದಿಸಿ ಅತ್ತ ಕಡೆಗೆ ಆಕರ್ಷಿಸಿತು. ನರಳುವವರ ಸೇವೆಯನ್ನು ಈಕೆ ಆಯ್ದುಕೊಂಡಳು. ದಾದಿಯಾಗಿ ಸೇವೆ ಮಾಡಬೇಕೆಂಬ ಇವಳ ಅಚಲ ನಿರ್ಧಾರದಿಂದ ಮನೆಯಲ್ಲಿ ದೊಡ್ಡ ರಾದ್ಧಾಂತವಾಯಿತು. ಆಗಿನ ಕಾಲದಲ್ಲೂ ದಾದಿಯ ಕೆಲಸ ಕೀಳೆನಿಸಿತ್ತು; ಕೆಲವೇಳೆ ಕುಡುಕ ಸೂಳೆಯರು ದಾದಿಯರಾಗುತ್ತಿದ್ದರು. ಎಷ್ಟೇ ವಿರೋಧ ಬಂದರೂ ನೈಟಿಂಗೇಲ್ ತನ್ನ ನಿರ್ಧಾರವನ್ನು ಬದಲಿಸಲಿಲ್ಲ. ಇವಳು ಆರಾಧಿಸುತ್ತಿದ್ದ ಲಾರ್ಡ್ ಹೂಟನ್ ಮೇಲಿಂದ ಮೇಲೆ ಒತ್ತಾಯಪಡಿಸಿದರೂ ಮದುವೆಯಾಗಲು ನಿರಾಕರಿಸಿದಳು. ತನ್ನ ಕಸಬಿಗಾಗಿ ಉಳಿದೆಲ್ಲವನ್ನೂ ಬಿಡಲು ಸಿದ್ಧಳಾಗಿದ್ದಳು. ಸಂಕಟ, ನಿರಾಸೆಗಳಲ್ಲಿ ವರ್ಷಗಳೇ ಕಳೆದುವು. ಕೊನೆಗೆ ಜರ್ಮನಿಯ ಕೈಸರ್ಸ್‌ವರ್ತ್‌ನಲ್ಲಿ ದಾದಿ ಕೆಲಸದ ಮೊದಲ ಅನುಭವ

ಪಡೆಯಲು (1851) ಅವಕಾಶವಾಯಿತು. ಲಂಡನ್ನಿನ ಹಾರ್ಲಿ ರಸ್ತೆಯಲ್ಲಿದ್ದ ಕಷ್ಟಕ್ಕೀಡಾದ ಮಹಿಳಾ ರೋಗಿಗಳ ಪೋಷಕ ಸಂಸ್ಥೆಯೆಂಬ ಆಸ್ಪತ್ರೆಯಲ್ಲಿ ಮೊತ್ತಮೊದಲನೆಯ ಹುದ್ದೆ ವಹಿಸಿಕೊಳ್ಳಲು ಮನೆ ಬಿಟ್ಟು ಹೊರಟಳು (1853). ಹಾರ್ಲಿ ರಸ್ತೆಯ ಈ ಚಿಕ್ಕ ಆಸ್ಪತ್ರೆಯಲ್ಲಿ ನೈಟಿಂಗೇಲ್ ಮಾಡಿದ ಪುನರ್ವ್ಯವಸ್ಥೆಯನ್ನು ಕಣ್ಣಾರೆ ಕಂಡ ಬ್ರಿಟಿಷ್ ಮಂತ್ರಿಮಂಡಲದ ಯುದ್ಧ ಶಾಖೆಯ ಕಾರ್ಯದರ್ಶಿ ಸಿಡ್ನಿ ಹರ್ಬರ್ಟ್ ಕ್ರಿಮಿಯಕ್ಕೆ ಒಂದು ನಿಯೋಗವನ್ನು ಕರೆದೊಯ್ಯು ವಂತೆ ಇವಳಿಗೆ ಕರೆಕೊಟ್ಟ. ಮಾರ್ಚ್ 1854 ರಲ್ಲಿ ಬ್ರಿಟನ್ ರಷ್ಯದೊಂದಿಗೆ ಯುದ್ಧ ಸಾರಿತ್ತು. ಅಕ್ಟೋಬರ್ ಹೊತ್ತಿಗೆ ಬ್ರಿಟಿಷ್ ಸೇನೆ ಆಸ್ಪತ್ರೆಗಳಲ್ಲಿಯ ಕರಾಳ ಸ್ಥಿತಿಯ ವಿಷಯಗಳನ್ನು ಲಂಡನ್ನಿನ ಟೈಮ್ಸ್ ವಿಶೇಷ ಬಾತ್ಮೀದಾರ ಹೊರಗೆಡಹಿದ್ದು ಎಲ್ಲರ ಬಾಯಲ್ಲೂ ಸುದ್ದಿಯಾಗಿತ್ತು. ಅದೇ ತಿಂಗಳಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಗಾಯಾಳುಗಳನ್ನೂ ಬೇನೆ ಬಿದ್ದವರನ್ನೂ ಉಪಚರಿಸಲು 38 ಮಂದಿ ಹೆಂಗಸರ ಸಮೇತ ಕ್ರಿಮಿಯಕ್ಕೆ ಹಡಗಿನಲ್ಲಿ ಹೊರಟಳು. ಸುಮಾರು ಒಂದೇ ತಿಂಗಳಲ್ಲಿ ಇವಳ ಪೋಷಣೆಯಲ್ಲಿ 500ಕ್ಕೂ ಮೀರಿ ರೋಗಿಗಳಿದ್ದರು. ಯಾವ ಸೌಲಭ್ಯಗಳೂ ಇಲ್ಲದೆ ಕೊಳಕಾಗಿದ್ದ ದೊಡ್ಡ ಹರಕು ಮುರುಕು ಕಟ್ಟಡಗಳೇ ಆಸ್ಪತ್ರೆಗಳಾಗಿದ್ದುವು. ಗಾಳಿ, ಬೆಳಕು ಅಲ್ಲಿ ಆಡುತ್ತಿರಲಿಲ್ಲ. ಎಲ್ಲೆಲ್ಲೂ ಗಲೀಜು, ಕೊಳಕು; ಇನ್ನೂ ಹೆಚ್ಚಿನದಾಗಿ ನೀರಿಗೆ ಪರದಾಟ. ಕ್ರಿಮಿಯದ ಈ ಜನ ದೊಡ್ಡಿಗಳಲ್ಲಿ ವೈದ್ಯ ಸಾಧನಗಳು ಮತ್ತು ಪರಿಕರಗಳ ಮಾತು ಹಾಗಿರಲಿ, ಸಾಮಾನ್ಯ ಶಿಷ್ಟತೆಗೆ ಬೇಕಾದ ಅನುಕೂಲತೆಗಳೂ ಇರಲಿಲ್ಲ. ಆಸ್ಪತ್ರೆಗೆ ಸೇರಿಸಲಾದ ಪ್ರತಿ 100 ಜನರಲ್ಲಿ 42 ಮಂದಿ ಸಾಯುತ್ತಿದ್ದರು. ಅಧಿಕಾರಿಗಳ ಹೊಟ್ಟೆ ಕಿಚ್ಚು, ಕುತಂತ್ರಗಳು ಹೆಜ್ಜೆ ಹೆಜ್ಜೆಗೂ ತೊಡಕಾಗುತ್ತಿದ್ದರೂ ಕೆಲವು ಬಾರಿ ಒಂದೇ ಸಮನೆ ಬಿಡುವಿಲ್ಲದೆ ದಿನಕ್ಕೆ 20 ಗಂಟೆಗಳ ಹೊತ್ತೂ ಓಡಾಡುತ್ತ ಹಗಲಿರುಳೆನ್ನದೆ ದುಡಿದು ಅವ್ಯವಸ್ಥೆಯನ್ನು ಹತೋಟಿಗೆ ತರಲು ಮಾನವ ಸಾಮರ್ಥ್ಯಕ್ಕೆ ಮೀರಿದ ಯತ್ನಗಳನ್ನೇ ನೈಟಿಂಗೇಲ್ ಮಾಡಬೇಕಾಯಿತು. ರೋಗಿಗಳಿದ್ದ ದೊಡ್ಡ ಕೊಠಡಿ ಗಳನ್ನು ಪ್ರತಿರಾತ್ರಿಯೂ ತಾನೇ ದೀಪ ಹಿಡಿದು ಹೋಗಿ ನೋಡಿ ಬರುತ್ತಿದ್ದಳು. ಇವಳಿಗೆ ದೀಪಧಾರಿಣಿಯೆಂದು ಹೆಸರಾದುದೂ ಆಗಲೇ. ಅಲ್ಲದೆ ಸಾಮಾನ್ಯ ಸೈನಿಕನ ಚಿಕಿತ್ಸೆ ಪೋಷಣೆಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದದ್ದರಿಂದ ಸೈನಿಕರು ಇವಳನ್ನು ಪೂಜಿಸುವ ಸ್ಥಿತಿಗೆ ಬಂದಿದ್ದರು.

ಇವಳ ಈ ಮಹಾ ಸಾಧನೆಗಳ ಕತೆ ಇಂಗ್ಲೆಂಡಿಗೆ ಮುಟ್ಟಿದಾಗ ಜನ ಇವಳನ್ನು ರಾಷ್ಟ್ರೀಯ ವೀರರಮಣಿಯಾಗಿ ಆದರದಿಂದ ಕಂಡರು. ಇದರ ಮೆಚ್ಚುಗೆಯಾಗಿ ಅವರು 45,900 ಪೌಂಡು ನಿಧಿಯನ್ನು ಚಂದಾ ಕೂಡಿಸಿ ಇವಳಿಗೆ ಅರ್ಪಿಸಿದರು. ಆದರೆ ಕ್ರಿಮಿಯದಿಂದ ಹಿಂತಿರುಗಿದ ನೈಟಿಂಗೇಲ್ ನಿವೃತ್ತಳಾಗಬಯಸಿದಳು. ಸಾಮಾನ್ಯ ಸೈನಿಕನ ಕ್ಷೇಮಕ್ಕಾಗಿ ತನ್ನ ಬಾಳನ್ನೇ ಮುಡಿಪಾಗಿಟ್ಟಿದ್ದುದರಿಂದ ತನ್ನ ಜನಪ್ರಿಯತೆಯೇ ಸರ್ಕಾರಕ್ಕೆ ವಿರೋಧವಾಗುತ್ತದೆಂದು ಭಾವಿಸಿದ್ದಳು. ಪೂರ್ತಿ ನಿವೃತ್ತಳಾಗಿದ್ದವಳನ್ನು ಮುಂದೆ 1907ರಲ್ಲಿ ಪ್ರಸಿದ್ಧ ವ್ಯಕ್ತಿಗಳ ಗೌರವ ವರ್ಗಕ್ಕೆ ಚಕ್ರವರ್ತಿನಿ ಸೇರಿಸಿದಾಗ ಸೋಜಿಗವೆನಿಸಿತು; ಐವತ್ತು ವರ್ಷಗಳ ಹಿಂದೆಯೇ ಇವಳು ಸತ್ತಿರಬೇಕೆಂದು ಬಹಳ ಮಂದಿ ನಂಬಿದ್ದರು.

ವಾಸ್ತವವಾಗಿ ಐವತ್ತು ವರ್ಷಗಳ ಹಿಂದೆ ಸಿಡ್ನಿ ಹರ್ಬರ್ಟನ ನೆರವಿನಿಂದ ಸೇನೆಯಲ್ಲಿ ಸುಧಾರಣೆಗಳನ್ನು ತರಲು ಈಕೆ ಒಂದು ಚಳವಳಿಯನ್ನೇ ಆರಂಭಿಸಿದ್ದಳು. ಚಕ್ರವರ್ತಿನಿ ವಿಕ್ಟೋರಿಯಳ ಪ್ರೋತ್ಸಾಹದಿಂದ 1857ರಲ್ಲಿ ಸೇನೆಯ ಆರೋಗ್ಯ ಸ್ಥಿತಿಯ ವಿಚಾರಣೆಗಾಗಿ ಒಂದು ಆಯೋಗವನ್ನು ನೇಮಿಸುವುದರಲ್ಲಿ ಸಫಲಳಾದಳು. ಚರಿತ್ರೆಯಲ್ಲೇ ಮೊತ್ತಮೊದಲ

ಬಾರಿಗೆ ಶಾಂತಿಕಾಲದ ಸೈನಿಕನ ಆಹಾರ, ವಸತಿ, ಆರೋಗ್ಯ ವಿಚಾರಗಳನ್ನು ಶಾಸ್ತ್ರೀಯ ತನಿಖೆಗೆ ಒಳಪಡಿಸಲಾಯಿತು. ಬ್ರಿಟಿಷ್ ಸೇನೆಯ ಆರೋಗ್ಯ ಸಾಮರ್ಥ್ಯ, ಆಸ್ಪತ್ರೆ ಆಡಳಿತಗಳ ಸಂಬಂಧದ ವಿಷಯಗಳ ಮೇಲಿನ ಟಿಪ್ಪಣಿಗಳು ಎಂಬ ದೊಡ್ಡ ಸಂಪುಟವನ್ನು ಪ್ರಕಟಿಸಿದಳು (1858). ಭಾರತದಲ್ಲಿ ಸೇನೆಯ ಆರೋಗ್ಯ ಸ್ಥಿತಿಗತಿಗಳನ್ನು ತನಿಖೆ ಮಾಡಲು ಒಂದು ಆಯೋಗ ನೇಮಕವಾಗಿ (1859) ಅದರ ವರದಿಯನ್ನು ನೈಟಿಂಗೇಲಳಿಗೆ ಒಪ್ಪಿಸಲಾಯಿತು (1863).

ಇವಳ ಚಟುವಟಿಕೆಗಳಲ್ಲಿ ಸೇನೆಗಾಗಿ ಕೆಲಸ ಮಾಡುವುದೂ ಒಂದು ಭಾಗವಾಗಿತ್ತು. ಸೈನಿಕ ಆಸ್ಪತ್ರೆಗಳಿಂದ ಸಾರ್ವಜನಿಕ ಆಸ್ಪತ್ರೆಗಳಿಗೂ ಸೈನಿಕರ ದಾದಿ ಸೇವೆಯಿಂದ ಜನರ ದಾದಿ ಸೇವೆಗೂ ಸೇನೆಯ ಆರೋಗ್ಯದಿಂದ ಜನಾರೋಗ್ಯಕ್ಕೂ ಇವಳನ್ನು ತಂದದ್ದು ಕೇವಲ ರೋಗಿಗಳ ಸೇವೆಯೇ. ಸೇವೆಯ ಮೆಚ್ಚುಗೆಯಾಗಿ ತನಗೆ ಅರ್ಪಿಸಿದ್ದ ಹಣದಿಂದ ಸೇಂಟ್ ಥಾಮಸ್ ಆಸ್ಪತ್ರೆಯ ದಾದಿಯರಿಗಾಗಿ ನೈಟಿಂಗೇಲ್ ತರಬೇತಿ ಶಾಲೆಯನ್ನು ಜುಲೈ 1860ರಲ್ಲಿ ತೆರದಳು. ಇಂದಿನ ದಾದಿ ತರಬೇತಿ ಅಂದಿನಿಂದ ಮೊದಲಾಯಿತೆನ್ನ ಬಹುದು. ಭಾರತಕ್ಕೆ ಇವಳೆಂದೂ ಕಾಲಿಡಲಿಲ್ಲ. ಅದರೆ ಭಾರತದ ಮೇಲಿನ ಮಾಹಿತಿಗಳಿಗೆ ಅವಳೇ ಅಂಗೀಕೃತ ಅಧಿಕಾರಿಣಿಯಾಗಿದ್ದಳು. ತಮ್ಮ ಭಾರತೀಯ ಶಿಕ್ಷಣಕ್ಕಾಗಿ ವೈಸ್‌ರಾಯ್ ಇವಳಲ್ಲಿಗೆ ಬರುತ್ತಿದ್ದರು. ಸಾವಿರಾರು ದಾದಿಯರು ಇವಳ ಕೈಕೆಳಗೆ ತರಬೇತಾದರು. ಇವಳ ಮಾರ್ಗದರ್ಶನದಲ್ಲಿ ಜಿಲ್ಲಾ ದಾದಿಸೇವೆ ಸ್ಥಾಪನೆಯಾಯಿತು (1862). 1872ರಲ್ಲಿ ಅಧಿಕಾರ ಬಿಡುವ ತನಕ ಇವಳ ಕೆಲಸದ ಉತ್ಸಾಹ ಇಳಿಯಲಿಲ್ಲ. ಅನಂತರ ಇವಳಿಗೆ ಆಧ್ಯಾತ್ಮಯೋಗದಲ್ಲಿ ಆಸಕ್ತಿ ಹುಟ್ಟಿ ಪ್ಲೇಟೋನ ಸಂಭಾಷಣೆಗಳ ಅನುವಾದದಲ್ಲಿ ಬೆಂಜಮಿನ್ ಜೊವೆಟ್‌ಗೆ ನೆರವಾದಳು. ಕ್ರಿಸ್ತಯೋಗಧ್ಯಾನದಿಂದ ಆಯ್ದ ಭಾಗಗಳ ಒಂದು ಪುಸ್ತಕವನ್ನು ಬರೆದಳು. ಇವಳು 1910ರಲ್ಲಿ ನಿಧನಳಾದರು. ಇವಳ ಶವಸಂಸ್ಕಾರ, ಉತ್ತರಕ್ರಿಯಾದಿಗಳು ವೆಸ್ಟ್‌ಮಿನ್‌ಸ್ಟರ್ ಅಬ್ಬೆಯಲ್ಲಿ ಏರ್ಪಡಬೇಕಾಗಿತ್ತು. ಆದರೆ ಇವಳ ಮರಣಪೂರ್ವ ಇಷ್ಟದಂತೆ ಹ್ಯಾಂಪ್‌ಷೈರಿನ ಹಳ್ಳಿಯ ಇಗರ್ಜಿಯ ಶ್ಮಶಾನದ ಇವಳ ವಂಶಸ್ಥರ ರುದ್ರಭೂಮಿಯಲ್ಲಿ ಶವ ಪೆಟ್ಟಿಗೆಯನ್ನು ಇಡಲಾಯಿತು. (ಡಿ.ಎಸ್.ಎಸ್.)

**ನೈಲ್ ಕದನ:** 1798 ಆಗಸ್ಟ್ 1ರಂದು ಬ್ರಿಟಿಷ್ ಮತ್ತು ಫ್ರೆಂಚ್ ನೌಕಾಪಡೆಗಳ ನಡುವೆ ಅಲೆಗ್ಸಾಂಡ್ರಿಯದ ಬಳಿಯ ಅಬು ಕಿರ್ ಕೊಲ್ಲಿಯಲ್ಲಿ ನಡೆದ ಕದನ. ಫ್ರಾನ್ಸ್ ಜನರಲ್ ನೆಪೋಲಿಯನ್ ಬೋನಪಾರ್ಟೆ ನಾಯಕತ್ವದಲ್ಲಿ ಬಹುದೊಡ್ಡ ದಂಡಯಾತ್ರೆ ಯೊಂದನ್ನು ನಿಯೋಜಿಸಿ ಮೆಡಿಟರೇನಿಯನ್ ತೀರ ಪ್ರದೇಶದ ಬಂದರುಗಳಿಗೆ ಪಡೆಯನ್ನು ಕಳುಹಿಸಿದ್ದುದು ಬ್ರಿಟನ್ನಿಗೆ ಗೊತ್ತಾಯಿತು. ರಿಯರ್ ಅಡ್ಮಿರಲ್ ಹೊರೇಷಿಯೊ ನೆಲ್ಸನ ನೇತೃತ್ವದಲ್ಲಿದ್ದ ಹಡಗುಗಳನ್ನು ಟೂಲಾನ್‌ಗೆ ಕಳುಹಿಸಬೇಕೆಂದೂ ಅಲ್ಲಿ ಅವು ಶತ್ರುವಿನ ಮೇಲೆ ಕಣ್ಣಿಡಬೇಕೆಂದೂ, ಬೀಡುಬಿಟ್ಟಿದ್ದ ಬ್ರಿಟಿಷ್ ನೌಕಾಪಡೆಯ ನಾಯಕ ಸೇಂಟ್ ಆರ್ಲಾಗೆ ಅದು ಆಜ್ಞೆ ನೀಡಿತು. ಆದರೆ ನೆಲ್ಸನನ ಸ್ವಂತ ಹಡಗಾದ ವ್ಯಾನ್‌ಗಾರ್ಡ್‌ನ ಪಟಸ್ತಂಭ ಮುರಿದುಹೋದ್ದರಿಂದ ಅವನು ವಿಧಿಯಲ್ಲವೆ ಜಿಬ್ರಾಲ್ಟರ್ ಕಡೆಗೆ ಹಿಂದಿರುಗ ಬೇಕಾಯಿತು. ಈ ನಡುವೆ ಸೇಂಟ್‌ವಿನ್ಸೆಂಟ್‌ನ ಅರ್ಲ್ ಮತ್ತೊಂದು ದೊಡ್ಡ ನೌಕಾದಳವನ್ನು ಕಳುಹಿಸಿದ. ಈ ನೌಕಾದಳ ನೆಲ್ಸನನನ್ನು ಜೂನ್ 7ರಂದು ಸೇರಿಕೊಂಡಿತು.

ಆದರೆ ಫ್ರೆಂಚ್ ಪಡೆ ಬ್ರಿಟಿಷ್ ನೌಕಾ ಪಡೆಯ ಕಣ್ಣು ತಪ್ಪಿಸಿ ಜೂನ್ ತಿಂಗಳ ಮೊದಲ ಭಾಗದಲ್ಲಿ ಮಾಲ್ಟದ ಕಡೆ ಮೊದಲು ಪ್ರಯಾಣ ಬೆಳೆಸಿ ಅದನ್ನು ಮುತ್ತಿತು. ಈಜಿಪ್ಟಿನ ಮೇಲೆ ಆಕ್ರಮಣ ಮಾಡಬೇಕೆಂಬುದು ನೆಪೋಲಿಯನ್ನನ ಮುಖ್ಯಗುರಿಯಾಗಿತ್ತು. ಆತ ಒಂದು ವಾರದ ಮೇಲೆ ಆತ್ತ ಸಾಗಿದ. ಟೂಲಾನ್ ಖಾಲಿಯಾಗಿತ್ತು. ಫ್ರೆಂಚರ ಉದ್ದೇಶವನ್ನು ನೆಲ್ಸನ್ ಊಹಿಸಿಕೊಂಡ. ಅಲೆಗ್ಸಾಂಡ್ರಿಯಕ್ಕೆ ಹೋದ. ಅಲ್ಲಿಯ ಬಂದರು ಖಾಲಿಯಾಗಿತ್ತು. ಅವನು ಸಿಸಿಲಿಗೆ ಹಿಂದಿರುಗಿದ. ಮತ್ತೆ ಈಜಿಪ್ಟಿಗೆ ಯಾನ ಮಾಡಿದ. ಅಬು ಕಿರ್ ಕೊಲ್ಲಿಯಲ್ಲಿ ಫ್ರೆಂಚ್ ನೌಕೆಗಳನ್ನು ಪತ್ತೆ ಹಚ್ಚಿದ.

ಆಗ ರಾತ್ರಿ ಸಮೀಪಿಸುತ್ತಿತ್ತು. ಫ್ರೆಂಚರು ಭದ್ರವಾಗಿ ನೆಲೆಯೂರಿದ್ದರು. ಅವರ ರಕ್ಷಣಾ ವ್ಯೂಹ ಭದ್ರವಾಗಿತ್ತು. ಆದರೂ ನೆಲ್ಸನ್ ಅವರ ಮೇಲೆ ದಾಳಿ ಮಾಡಲು ಕ್ಯಾಪ್ಟನ್ ಥಾಮಸ್ ಫೋಲಿಗೆ ಆದೇಶ ನೀಡಿ, ತನ್ನ ನೌಕೆಯೊಂದಿಗೆ ಫ್ರೆಂಚ್ ಸೇನಾ ಮುಂಚೂಣಿಯನ್ನು ಬಳಸಿ ಅದರ ಹಿಂಬದಿಗೆ ಸಾಗಿದ. ಅವನೊಂದಿಗೆ ಇತರ ನೌಕೆಗಳು ಸೇರಿದುವು. ಫ್ರೆಂಚ್ ಸೇನೆಯ ಮೇಲೆ ಸಮುದ್ರದ ಕಡೆಯಿಂದ ಮೊದಲು ದಾಳಿ ಮಾಡಿದವನು ನೆಲ್ಸನ್. ಬ್ರಿಟಿಷರ ಕಡೆ ಒಂದು ನೌಕೆ ಮಾತ್ರ ಮರಳು ದಿಬ್ಬಕ್ಕೆ ತಾಕಿತು. ಉಳಿದ ನೌಕೆಗಳು ದಾಳಿಯಲ್ಲಿ ಸೇರಿಕೊಂಡುವು.

ಕದನ ಭೀಕರವಾಗಿತ್ತು. ನೆಲ್ಸನನ ತಲೆಗೆ ಪೆಟ್ಟು ಬಿತ್ತು. ಒಂದು ಹಡಗು ಸಿಡಿಯಿತು. ಮತ್ತೆ ಕದನ ಮುಂದುವರಿದು ಬೆಳಗಿನವರೆಗೂ ನಡೆಯಿತು. ಫ್ರೆಂಚರ ಕಡೆ ನಾಶವಾಗದೆ ಅಥವಾ ಸೆರೆ ಸಿಗದೆ ಉಳಿದ ಹಡಗುಗಳು ಎರಡು ಮಾತ್ರ. ಮರುದಿನ ಮುಂಜಾನೆ ಅಳಿದುಳಿದ ಫ್ರೆಂಚ್ ನೌಕಾ ಸೇನೆ ಅಲ್ಲಿಂದ ಪಲಾಯನ ಮಾಡಿತು. ಅದನ್ನು ತಡೆಯುವ ಸ್ಥಿತಿಯಲ್ಲಿ ಬ್ರಿಟಿಷ್ ಸೇನೆ ಇರಲಿಲ್ಲ. ನೆಲ್ಸನನ ಕಡೆ 218 ಜನ ಸತ್ತು 677 ಮಂದಿ ಗಾಯಗೊಂಡಿದ್ದರು. ಫ್ರೆಂಚರು ಇದಕ್ಕೆ ಹತ್ತು ಪಟ್ಟು ನಷ್ಟ ಅನುಭವಿಸಿದ್ದರು.

ನೈಲ್ ಕದನದ ಪರಿಣಾಮವಾಗಿ ಫ್ರೆಂಚರ ವಿಸ್ತರಣೆಯನ್ನು ಎದುರಿಸಲು ಯುರೋಪಿಗೆ ಧೈರ್ಯ ಬಂತು. ಈಜಿಪ್ಟಿನಲ್ಲಿ ನೆಪೋಲಿಯನನ ಸೇನೆ ಪ್ರತ್ಯೇಕಿಸಲ್ಪಟ್ಟು ಕೊನೆಗೆ ಸೋಲ ಬೇಕಾಯಿತು. (ಆರ್.ಜಿ.ಎಸ್.)

**ನೊಳಂಬ ವಂಶ:** ಆಗ್ನೇಯ ಕರ್ನಾಟಕ ಭಾಗದಲ್ಲಿ ಸು.750–1054ರ ವರೆಗೆ ಆಳಿದ ಒಂದು ಸಾಮಂತ ರಾಜವಂಶ. ದಕ್ಷಿಣ ಭಾರತದ, ಅದರಲ್ಲೂ ಮುಖ್ಯವಾಗಿ ಆಗ್ನೇಯ ಕರ್ನಾಟಕದ ಇತಿಹಾಸದಲ್ಲಿ ಕರ್ನಾಟಕ ಪರಂಪರೆಗೆ ಅಪಾರ ಕೊಡುಗೆ ನೀಡಿದ್ದಾರೆ. ನೊಳಂಬರ ರಾಜಧಾನಿ ಆಂಧ್ರಪ್ರದೇಶದ, ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಇಂದಿನ ಹೇಮಾವತಿ ಅಥವಾ ಪ್ರಾಚೀನ ಹೆಂಜೇರು. ಇವರ ರಾಜಲಾಂಛನ ನಂದಿ. ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ನೊಳಂಬಳಿಗೆ ಸಾಸಿರ ಎಂಬ ಸಣ್ಣ ಪ್ರದೇಶದ ಮೇಲೆ ಆಳಿಕೆ ಪ್ರಾರಂಭಿಸಿದ ನೊಳಂಬರು, 9–10ನೆಯ ಶತಮಾನಗಳಲ್ಲಿ ರಾಜಕೀಯವಾಗಿ



ಈಶ್ವರ ದೇವಾಲಯ, ಅರಸೀಕೆರೆ

ಪ್ರಬಲರಾಗಿ ನೊಳಂಬವಾಡಿ 32000 ಎಂಬ ವಿಶಾಲಪ್ರಾಂತ್ಯದ ಅಧಿಪತಿಗಳಾದರು. ಈ ಪ್ರಾಂತ್ಯ ಮುಖ್ಯವಾಗಿ ಇಂದಿನ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು, ಬಳ್ಳಾರಿ, ಅನಂತಪುರ, ಧರ್ಮಪುರಿ ಮೊದಲಾದ ಜಿಲ್ಲೆಗಳ ಭಾಗಗಳನ್ನೊಳಗೊಂಡಿತ್ತು. ಬಾದಾಮಿ ಚಳುಕ್ಯರು ಅನಂತರ ತಲಕಾಡಿನ ಗಂಗರ ಸಾಮಂತರಾಗಿ ಆಳಿಕೆ ಪ್ರಾರಂಭಿಸಿದ ನೊಳಂಬರು, ಕ್ರಮೇಣ, ರಾಜಕೀಯ ಏರುಪೇರಿನ ಲಾಭಪಡೆದು, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯರ ಮಾಂಡಳಿಕರಾಗಿ ಆಳಿದರು. ತೆಲುಗು–ಚೋಳ, ಬಾಣ, ವೈದುಂಬರನ್ನು ಸದೆ ಬಡಿದು, ರಾಷ್ಟ್ರಕೂಟರು, ತಲಕಾಡಿನ ಗಂಗರು, ಪಲ್ಲವರು, ವೆಂಗಿಯ ಚಾಳುಕ್ಯರು, ಚೋಳರು ಇವರುಗಳ ಮಿತ್ರ ವೈರಿಗಳಾಗಿ ಹಲವಾರು ಯುದ್ಧಗಳನ್ನು ಮಾಡಿ, ಗೆದ್ದು–ಸೋತು ವೀರರೆನಿಸಿಕೊಂಡವರು; ತಲಕಾಡಿನ ಗಂಗರು, ಕದಂಬರು, ಕಲ್ಯಾಣ ಚಾಳುಕ್ಯರು ಮುಂತಾದ ರಾಜವಂಶಗಳೊಂದಿಗೆ ವಿವಾಹ ಸಂಬಂಧವನ್ನು ಬೆಳೆಸಿದ್ದವರು; ವಾಸ್ತು–ಶಿಲ್ಪ ಕಲೆಯನ್ನು ಪ್ರೋತ್ಸಾಹಿಸಿ, ಬೆಳೆಸಿ ನೊಳಂಬ ಕಲಾಶೈಲಿಯೆಂಬ ವಿಶಿಷ್ಟ ವಾಸ್ತು–ಶಿಲ್ಪ ಸಂಪ್ರದಾಯದ ಉದಯಕ್ಕೆ ಕಾರಣರಾದವರು.

ಇವರ ಮೂಲಕ್ಕೆ ಸಂಬಂಧಿಸಿದಂತೆ ಪ್ರಖ್ಯಾತ ಹೇಮಾವತೀ ಸ್ತಂಭ ಶಾಸನದಲ್ಲಿ ಉಕ್ತವಾಗಿರುವಂತೆ, ನೊಳಂಬರು ಈಶ್ವರ ವಂಶಜರಾದ ಕಂಚಿಯ ಪಲ್ಲವರ ಒಂದು ಶಾಖೆ. ನೊಳಂಬ ನೃಪರ ವಿಶಿಷ್ಟ ಬಿರುದುಗಳು ಪಲ್ಲವಾನ್ವಯ, ಪಲ್ಲವಕುಲತಿಲಕ, ಪಲ್ಲವಾಭರಣ, ಪಲ್ಲವಾಧಿರಾಜ ಮುಂತಾದವು ಈ ಅಂಶವನ್ನು ದೃಢೀಕರಿಸುತ್ತದೆ ಆದರೆ ಯಾವುದೇ ರೀತಿಯ ಮೈತ್ರಿ ಅಥವಾ ಸಂಬಂಧವನ್ನು ನೊಳಂಬರು ಕಂಚಿಯ ಪಲ್ಲವರೊಂದಿಗೆ ಹೊಂದಿದ್ದರೆಂಬುದಕ್ಕೆ ಆಧಾರಗಳು ದೊರೆತಿಲ್ಲ. ಕರ್ನಾಟಕದಲ್ಲೇ ನೊಳಂಬರ ಪ್ರಪ್ರಥಮ ಆಡಳಿತ ಪ್ರಾರಂಭವಾಗಿದ್ದು. ಅಂದಿನಿಂದಲೇ ಅವರು ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಶಾಸನಗಳನ್ನು ಹೊರಡಿಸಿದರು. ಆದ್ದರಿಂದ ನೊಳಂಬ–ಪಲ್ಲವರಿಗೂ ಕಂಚಿಯ ಪಲ್ಲವರಿಗೂ ವ್ಯತ್ಯಾಸ ತೋರಿಸುವುದಕ್ಕಾಗಿ ಇವರನ್ನು ನೊಳಂಬರು ಅಥವಾ ನೊಳಂಬ–ಪಲ್ಲವರು ಎಂದೇ ಕರೆಯುವುದು ವಾಡಿಕೆ.

ಮೂಲತಃ ಪಲ್ಲವರಾದ ನೊಳಂಬರು ಬಾದಾಮಿ ಚಳುಕ್ಯರ ಮತ್ತು ಕಂಚಿಯ ಪಲ್ಲವರ ನಡುವೆ ನಡೆಯುತ್ತಿದ್ದ ಅವ್ಯಾಹತ ಕದನಗಳ ಸದುಪಯೋಗ ಪಡೆದು, ಕರ್ನಾಟಕದೊಳಕ್ಕೆ ಪ್ರವೇಶಿಸಿ, ಚಾಳುಕ್ಯರ ಆಶ್ರಯದಲ್ಲಿ ಪಲ್ಲವರ ವಿರುದ್ಧ ನಡೆದುಕೊಂಡು, ಒಂದು ಸಣ್ಣ ಪ್ರಾಂತ್ಯದ ಅಧಿಕಾರಿಗಳಾಗಿ ಆಳಲು ಪ್ರಾರಂಭಿಸಿದರೆಂದು ಊಹೆ. ಹೇಮಾವತೀ ಶಾಸನದಲ್ಲಿ ನೊಳಂಬರ ಮೂಲ ಮತ್ತು ವಂಶಾವಳಿ ಸಿಗುತ್ತದೆ. ಅದರಂತೆ ಈ ವಂಶದ ಮೂಲ ಪುರುಷ ಈಶ್ವರವಂಶಜನೂ, ಕಾಂಚೀ ಪತಿಯೂ ಆದ ತ್ರಿನಯನ ಪಲ್ಲವ ಈ ಕುಲದಲ್ಲಿ ಹುಟ್ಟಿದವರು ಮಂಗಳ ನೊಳಾಂಬಾಧಿರಾಜ. ಈತನ ಮಗ ಸಿಂಹಪೋತ, ಇವನ ಮಗ ಚಾರು ಪೊನ್ನೇರ, ಇವನ ಮಗ ಪೊಳಲ್ಚೋರ I, ಇವನ ಮಗ ಮಹೇಂದ್ರ I, ಇವನ ಮಗ ಅಯ್ಯಪದೇವ, ಇವನ ಮಕ್ಕಳು ಅಣ್ಣಿಗಬೀರನೊಳಂಬ ಮತ್ತು ಇರಿವ ನೊಳಂಬ ದಿಲೀಪ. ಕಡೆಯವನಾದ ದಿಲೀಪನೇ ಹೇಮಾವತೀ ಶಾಸನದ ದಾನಿ. ಚಿತ್ತೂರು ಜಿಲ್ಲೆಯ ನೆಲಪಲ್ಲಿ ಶಾಸನದಲ್ಲಿಯೂ ಈ ವಂಶಾವಳಿ ಬಗ್ಗೆ ಉಲ್ಲೇಖಗಳಿವೆ. ನೊಳಂಬರು ತಮ್ಮ ರಾಜಕೀಯ ನಿಷ್ಠೆಯನ್ನು ಕಲ್ಯಾಣ ಚಾಳುಕ್ಯರಿಗೆ ಬದಲಾಯಿಸಿದ್ದರು. ರಾಜಕೀಯ ನಿಷ್ಠೆ ಮತ್ತು ವೈವಾಹಿಕ ಸಂಬಂಧಗಳಿಂದಾಗಿ ಕಲ್ಯಾಣ ಚಾಳುಕ್ಯ ದೊರೆಗಳ ಬಿರುದು ಬಾವಲಿಗಳು ನೊಳಂಬ ರಾಜರ ಹೆಸರಿನೊಂದಿಗೆ ಕೂಡಿಕೊಂಡಿರುವುದನ್ನು ಕಾಣಬಹುದು.

ಕಾಳಿವಿಗ್ರಹ

ನೊಳಂಬ ವಂಶದ ಮೊದಲನೆಯ ದೊರೆ ಮಂಗಳ (ಸು. 730–75). ಈತನಿಗೆ ನೊಳಂಬಾಧಿರಾಜನೆಂಬ ಬಿರುದಿತ್ತು. ಕರ್ನಾಟ (ಚಳುಕ್ಯ)ರಿಂದ ಸ್ತುತಿಸಲ್ಪಟ್ಟವನೆಂದು ಹೇಳಿರುವುದು ಈತನನ್ನು ಬಾದಾಮಿ ಚಳುಕ್ಯರು ಸಾಮಂತನೆಂದು ಸ್ವೀಕರಿಸಿದ ಘಟನೆಯ ಸೂಚನೆಯಾಗಿದೆ. ಮಂಗಳನ ಮಗ ಸಿಂಹಪೋತ. ಈತ ಸು. 775 ರಿಂದ 805 ರವರೆಗೆ ರಾಜ್ಯವಾಳಿದ. ಈತನಿಗೆ ಕಲಿನೊಳಂಬಾಧಿರಾಜನೆಂಬ ವಿಶೇಷ ಬಿರುದಿತ್ತು. ಈತನು ತಲಕಾಡು ಗಂಗ ದೊರೆ ಶ್ರೀಪುರುಷನ ಮಗ. ಎರಡನೆಯ ಶಿವಮಾರನ ಸಾಮಂತನಾಗಿದ್ದ. ಶಿವಮಾರ ಪಟ್ಟಕ್ಕೆ ಬಂದ ಸ್ವಲ್ಪ ಸಮಯದಲ್ಲೇ ರಾಷ್ಟ್ರಕೂಟ ಚಕ್ರವರ್ತಿ ಧ್ರುವನು ಗಂಗರಾಜ್ಯವನ್ನು ಆಕ್ರಮಿಸಿಕೊಂಡು ಶಿವಮಾರನನ್ನು ಬಂಧನದಲ್ಲಿರಿಸಿದ. ಇದರಿಂದ ನೊಳಂಬರು ರಾಷ್ಟ್ರಕೂಟರ ಸಾಮಂತರಾದರು. ಸಿಂಹಪೋತನ ತರುವಾಯ ಚಾರುಪೊನ್ನೇರ (805–830) ರಾಜ್ಯವಾಳಿದ. ಈತನಿಗೆ ಪಲ್ಲವಾಧಿರಾಜ, ಪರಮೇಶ್ವರ ಮುಂತಾದ ಬಿರುದುಗಳಿದ್ದವು. ರಾಷ್ಟ್ರಕೂಟ ಮೂರನೆಯ ಗೋವಿಂದನ ಸಾಮಂತನಾಗಿ ಈತ ನೊಳಂಬಳಿಗೆ ಸಾಸಿರ (ಚಿತ್ರದುರ್ಗ ಜಿಲ್ಲೆ) ಮತ್ತು ನಿರ್ಗುಂದನಾಡು ಪ್ರಾಂತ್ಯಗಳನ್ನಾಳಿದ. ಚಾರುಪೊನ್ನೇರನ ಮಗ ಪಲ್ಲವ ಮಲ್ಲ ಅಥವಾ ಪೊಳಲ್ಚೋರ ಗಂಗದೊರೆ ಒಂದನೆಯ ರಾಚಮಲ್ಲನ ಮಗಳೂ ನೀತಿಮಾರ್ಗನ ತಂಗಿಯೂ ಆದ ಜಾಯಬ್ಬೆಯನ್ನು ವಿವಾಹವಾಗಿದ್ದ. ಇದರಿಂದ ಗಂಗ–ನೊಳಂಬರ ಮೈತ್ರಿ ಬಲವಾಯಿತು. ಚಾರುಪೊನ್ನೇರ ಒಬ್ಬ ರಾಜಕೀಯ ಧುರೀಣ. ಸಮಯಕ್ಕೆ ತಕ್ಕಂತೆ ತನ್ನ ರಾಜಕೀಯ ನಿಷ್ಠೆಯನ್ನು ರಾಷ್ಟ್ರಕೂಟರಿಗೆ ಬದಲಿಸಿದ. ಜೊತೆಗೆ ಗಂಗರೊಂದಿಗೂ ವಿವಾಹ ಸಂಬಂಧವನ್ನು ಬೆಳೆಸಿದ. ಚಾರುಪೊನ್ನೇರನ ಕಾಲದಲ್ಲಿ ಮೊಟ್ಟಮೊದಲ ಬಾರಿಗೆ ನೊಳಂಬ ಹೆಸರುಳ್ಳ ನೊಳಂಬಳಿಗೆ ಸಾಸಿರವೆಂಬ ಸಣ್ಣದಾದರೂ ಒಂದು ಪ್ರತ್ಯೇಕವಾದ ಪ್ರಾಂತ್ಯ ಉದಯವಾಯಿತು. ಚಾರುಪೊನ್ನೇರನ ಮಗ ಒಂದನೆಯ ಪೊಳಲ್ಚೋರ (ಸು.830–75). ಈತ ನೊಳಂಬಾಧಿರಾಜನೆಂಬ ಹೆಸರಿನಿಂದಲೇ ಪ್ರಸಿದ್ಧ. ತಂದೆಯ ಕೈಕೆಳಗೆ ರಾಜ್ಯವಾಳಿ, ಆಡಳಿತದ ಅನುಭವವನ್ನು ಗಳಿಸಿದ್ದನು. ಗಂಗರಾಜಕುಮಾರಿಯನ್ನು ವಿವಾಹವಾಗಿ ಗಂಗರ ಬೆಂಬಲವನ್ನು ಹೊಂದಿದ್ದನು. ಈತನ ಆಳಿಕೆಯ ಪ್ರಾರಂಭ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ರಾಜಕೀಯ ಗೊಂದಲವಿತ್ತು. ಇದರ ಸದವಕಾಶವನ್ನು ಪಡೆದ ಗಂಗರು ಸ್ವತಂತ್ರರಾದರು. ಪೊಳಲ್ಚೋರನು ಗಂಗರ ಸಾಮಂತನಾದನು. ಗಂಗರಾಜ ಒಂದನೆಯ ರಾಚಮಲ್ಲ ಮತ್ತು ಆತನ ಮಗ ಒಂದನೆಯ ನೀತಿಮಾರ್ಗ ಮಹದಾಸೆಯುಳ್ಳ ರಾಜರು. ತಮ್ಮ ರಾಜ್ಯ ವಿಸ್ತರಣೆಗಾಗಿ ಪಲ್ಲವರ ಮೇಲೆ ದಂಡ ಯಾತ್ರೆಗಳನ್ನು ಕೈಗೊಂಡನು. ನೊಳಂಬರೂ ಇವರಿಗೆ ನೆರವಾದರು. ಈ ಪ್ರಯತ್ನದಲ್ಲಿ ಗಂಗ–ನೊಳಂಬರು, ಕೋಲಾರ ಜಿಲ್ಲೆಯಲ್ಲಿ ಆಳುತ್ತಿದ್ದ, ಪಲ್ಲವ ಸಾಮಂತರಾದ ಮಹಾಬಲಿ ಬಾಣರನ್ನು, ಹೊಡೆದೋಡಿಸಿ, ಕೋಲಾರ ಮತ್ತು ಧರ್ಮಪುರಿ ಜಿಲ್ಲೆಯನ್ನು ಆಕ್ರಮಿಸಿಕೊಂಡರು. ಇಲ್ಲಿಂದ ಮುಂದೆ ಕೋಲಾರ ಜಿಲ್ಲೆ ಗಂಗಸಾಸಿರವೆಂಬ ಪ್ರಾಂತ್ಯವಾಯಿತು, ನೊಳಂಬರು, ಗಂಗರು, ಸಾಸಿರದ ಅಧಿಪತಿಗಳಾದರು. ಬಾಣರು–ನೊಳಂಬರು ನಿತ್ಯವೈರಿಗಳಾದರು. ಹಿಂದೂಪುರದ ಶಾಸನವೊಂದರಲ್ಲಿ ಗಂಗ ನೀತಿಮಾರ್ಗನ ಸಾಮಂತ ನೊಳಂಬಾಧಿ ರಾಜನು ಕಂಚಿಯವರೆಗೆ ವಿಸ್ತರಿಸಿದ್ದ ರಾಜ್ಯವನ್ನಾಳುತ್ತಿದ್ದನೆಂದು ಹೇಳಿದೆ (853). ಈ ಹೇಳಿಕೆ ಉತ್ಪ್ರೇಕ್ಷೆಯಾದರೂ ನೊಳಂಬಾಧಿರಾಜ ಪೊಳಲ್ಚೋರನು ಗಂಗರ ಸಾಮಂತನಾಗಿ ಪಲ್ಲವರ ಸೀಮೆಯವರೆಗೆ ವಿಸ್ತರಿಸಿದ್ದ ರಾಜ್ಯವನ್ನಾಳುತ್ತಿದ್ದನೆಂಬುದು ಮಾತ್ರ ಖಚಿತ. ನೊಳಂಬಾಧಿರಾಜ ಪೊಳಲ್ಚೋರ ಒಬ್ಬ ಸಮರ್ಥ ದೊರೆ. ರಾಜಕೀಯ ಮುಂದಾಲೋಚನೆ ಯಿಂದ ರಾಷ್ಟ್ರಕೂಟರ ಸಾಮಂತಿಕೆಯಿಂದ ಗಂಗರ ಸಾಮಂತಿಕೆಗೆ ಬದಲಾದ. ತಾನು ಗಂಗ ರಾಜಕುವರಿಯನ್ನು ವಿವಾಹವಾಗುವುದರ ಜೊತೆಗೆ, ಗಂಗರಾಜಪುತ್ರಿಯೊಬ್ಬಳನ್ನು ಸೊಸೆಯನ್ನಾಗಿಯೂ ಮಾಡಿಕೊಂಡ. ಕೇವಲ ನೊಳಂಬಳಿಗೆ ಸಾಸಿರ ಪ್ರಾಂತ್ಯದ ಒಡೆಯರಾಗಿದ್ದ ನೊಳಂಬರು ಪೊಳಲ್ಚೋರನ ಕಾಲದಲ್ಲಿ ಗಂಗರುಸಾಸಿರ ಪ್ರಾಂತ್ಯದ ಅಧಿಪತಿಗಳೂ ಆದರು. ಈತನ ಕಾಲದಲ್ಲಿ ಅನಂತಪುರ ಜಿಲ್ಲೆಯ ಕಂಬದೂರಿನಲ್ಲಿ ದೊಡ್ಡದೊಂದು ಕೆರೆ ನಿರ್ಮಾಣವಾಯಿತು. ಆ ಸಮಯದಲ್ಲಿ ಪೊಳಲ್ಚೋರ ಅಲ್ಲಿಯ ಹಿರಿಯರನೇಕರಿಗೆ ಬಿರುದು–ಬಾವಲಿಗಳನ್ನು ನೀಡಿ ಸತ್ಕರಿಸಿದ. ಈತನ ಕಾಲದಲ್ಲಿ ಅನೇಕ ಶಿವಾಲಯಗಳು, ವಿಷ್ಣು ವಿಗ್ರಹಗಳು ನಿರ್ಮಾಣವಾದ ಉಲ್ಲೇಖಗಳಿವೆ. ಪೊಳಲ್ಚೋರನಿಗೆ ಗಂಗರಾಜ ಕುಮಾರಿಯಿಂದ ಜನಿಸಿದ ಒಬ್ಬ ಮಗನಿದ್ದ, ಈತನೇ ನೊಳಂಬಾಧಿರಾಜ ಮಹೇಂದ್ರ (875–97).

ನೊಳಂಬಾಧಿರಾಜ ಮಹೇಂದ್ರ ಪೊಳಲ್ಚೋರನ ತರುವಾಯ ಪಟ್ಟಕ್ಕೆ ಬಂದ (ಸು.875). ಈತನ ಕಾಲದಲ್ಲಿ ದಕ್ಷಿಣ ಭಾರತದ ರಾಜಕೀಯ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆದವು. ಗಂಗ ನೀತಿಮಾರ್ಗನ ಅನಂತರ ಆತನ ಮಗ ಎರಡನೆಯ ರಾಚಮಲ್ಲ ಪಟ್ಟಕ್ಕೆ ಬಂದ (870–907). ಗಂಗ ರಾಜಕುಮಾರಿಯ ಪುತ್ರನೂ ಗಂಗ ಕುಲವಧುವಿಗೆ ವರನೂ ಆಗಿದ್ದ ಮಹೇಂದ್ರನಿಗೆ ಗಂಗರ ಸಂಪೂರ್ಣ ಬೆಂಬಲವಿತ್ತು. ಗಂಗರಿಗೆ ರಾಷ್ಟ್ರಕೂಟ ಮತ್ತು ಪಲ್ಲವರಿಂದ ತಮ್ಮ ರಾಜ್ಯ ರಕ್ಷಣೆ ಮಾಡಿಕೊಳ್ಳಲು ನೊಳಂಬರ ನೆರವಿನ ಅವಶ್ಯಕತೆಯೂ ಇತ್ತು. ತಮಿಳುನಾಡಿನಲ್ಲಿ ಪಲ್ಲವರ ಪ್ರಾಬಲ್ಯ ಕ್ಷೀಣಿಸುತ್ತಿತ್ತು. ಇವರ ಸಾಮಂತರಾದ ಮಹಾಬಲಿ ಬಾಣರು, ವೈದುಂಬರು, ತೆಲುಗು ಚೋಳರು ಸ್ವತಂತ್ರರಾಗಿ ಗಂಗರು ಸಾಸಿರ ಪ್ರಾಂತ್ಯವನ್ನು ಆಕ್ರಮಿಸಿಕೊಳ್ಳುವ ಹುನ್ನಾರ ನಡೆಸಿದ್ದರು. ಗಂಗರು ಸಾಸಿರದ ಅಧಿಪತಿಯಾಗಿದ್ದ ಮಹೇಂದ್ರ ಇವರೆಲ್ಲರನ್ನೂ ಸೋರೆಮಡಿ ಎಂಬಲ್ಲಿ ನಡೆದ ಭೀಕರ ಕದನದಲ್ಲಿ ಸೋಲಿಸಿ (ಸು. 885) ತಮಿಳುನಾಡಿನ ಧರ್ಮಪುರಿಯವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದನಲ್ಲದೆ, ಮಹಾಬಲಿಕುಲ ವಿಧ್ವಂಸಕನೆಂಬ ಬಿರುದನ್ನು ಧರಿಸಿದ (892). ಬಾಣರ ಮೇಲಿನ ಈ ವಿಜಯದಿಂದ ಉನ್ಮತ್ತನಾದ ಮಹೇಂದ್ರ, ತನ್ನ ರಾಜಕೀಯ ಮೈತ್ರಿ ಹಾಗೂ ಸಂಬಂಧವನ್ನು ಮರೆತು, ಗಂಗ ರಾಚಮಲ್ಲನ ಮೇಲೇ ಯುದ್ಧಕ್ಕೆ ಹೋದ. ಸ್ವಲ್ಪಮಟ್ಟಿಗೆ ಯಶಸ್ಸನ್ನು ಪಡೆದ ಮಹೇಂದ್ರ ಗಂಗವಾಡಿ 96000 ಪ್ರಾಂತ್ಯದ ಅಧಿಪತಿಯೆಂದೇ ಹೇಳಿಕೊಂಡ (895). ಆದರೆ ಈ ವಿಜಯ ಕ್ಷಣಿಕವಾಗಿತ್ತು. ರಾಚಮಲ್ಲ ಆ ಆಘಾತದಿಂದ ಕೂಡಲೇ ಚೇತರಿಸಿಕೊಂಡು, ತನ್ನ ಮಗ ಎರಡನೆಯ ನೀತಿಮಾರ್ಗನನ್ನು ಮಹೇಂದ್ರನ ಮೇಲೆ ಯುದ್ಧಕ್ಕೆ ಕಳುಹಿಸಿದನು. ನೀತಿಮಾರ್ಗನು, ನೊಳಂಬರ ಅನೇಕ ಅಭೇದ್ಯದುರ್ಗಗಳನ್ನು ವಶಪಡಿಸಿಕೊಂಡು, ಮಹೇಂದ್ರನನ್ನು ಯುದ್ಧದಲ್ಲಿ ಕೊಂದು, ಮಹೇಂದ್ರಾಂತಕನೆನಿಸಿಕೊಂಡನು (897). ನೊಳಂಬಾಧಿರಾಜ, ಒಬ್ಬ ಮಹತ್ವಾಕಾಂಕ್ಷಿ ದೊರೆ ಬಹಳ ಶಕ್ತಿಶಾಲಿ ಮತ್ತು ವೀರ. ಬಾಣರನ್ನು ಧ್ವಂಸಮಾಡಿದವನು. ಗಂಗರಾಜ್ಯವನ್ನೇ ಕೆಲಕಾಲ ಆಕ್ರಮಿಸಿಕೊಂಡ ಈತ, ತನ್ನ ಸಾಮ್ರಾಜ್ಯದಾಹಕ್ಕೆ ತಾನೇ ಬಲಿಯಾದ ಮಹಾಬಲಿಕುಲವಿಧ್ವಂಸಕನೆಂಬ ಈತನ ಬಿರುದು ಕೇವಲ ಉತ್ಪ್ರೇಕ್ಷೆಯಾಗಿರಲಿಲ್ಲ, ಈತನ ಮಹಾಸಾಧನೆಯೊಂದರ ನೆನಪಾಗಿಯೇ ಉಳಿಯಿತು. ಈತನು ಅಪಾರ ಶಿವಭಕ್ತ ತನ್ನ ಅರಮನೆಯನ್ನೇ ಮಹಾದೇವನಿಗೆ ನಿವೇದಿಸಿ ಮಹೇಂದ್ರೇಶ್ವರನನ್ನು ಸ್ಥಾಪಿಸಿದನೆಂದು ಬರಗೂರಿನ ಶಾಸನವೊಂದು ಹೇಳುತ್ತದೆ (878).

ನೊಳಂಬಾಧಿರಾಜ ನೊಳಿಪಯ್ಯ ಅಥವಾ ಅಯ್ಯಪದೇವನು ಮಹೇಂದ್ರನ ಅನಂತರ ನೊಳಂಬ ಸಿಂಹಾಸನವನ್ನೇರಿದ (897–934). ಈತನು ಪಟ್ಟಕ್ಕೆ ಬಂದ ಸಮಯದಲ್ಲಿ ಗಂಗರ ರಾಜಕೀಯ ಹಸ್ತಕ್ಷೇಪದಿಂದಾಗಿ ನೊಳಂಬ ರಾಜ್ಯದಲ್ಲಿ ಅಶಾಂತಿ ನೆಲೆಸಿತ್ತು.

ಆದರೆ ಅಯ್ಯಪದೇವನು ಗಂಗರಾಜಕುಮಾರಿ ಪೊಲ್ಲಬ್ಬರಸಿಯನ್ನು ವಿವಾಹವಾಗಿದ್ದುದರಿಂದ ಗಂಗನೊಳಂಬ ವೈಷಮ್ಯ ಹೆಚ್ಚು ಮುಂದುವರೆಯಲಿಲ್ಲ. ಅಯ್ಯಪದೇವನು ಶಾಂತಿಯಿಂದ ರಾಜ್ಯವಾಳುವಂತಾಯಿತು ಮತ್ತು ಈತನು ತನ್ನ ಜೀವಿತದ ಕೊನೆಯವರೆಗೆ ಗಂಗರೊಂದಿಗೆ ಮೈತ್ರಿಯಿಂದಿದ್ದನು. ಅಯ್ಯಪದೇವನು ನೊಳಂಬವಾಡಿ – 32000 ವೆಂಬ ವಿಸ್ತಾರವಾದ ಪ್ರಾಂತ್ಯದ ಅಧಿಪತಿಯಾಗಿದ್ದನು. ಈತನ ಕಾಲದಲ್ಲಿ ನೊಳಂಬರಾಜ್ಯ ಅದರ ಇತಿಹಾಸದಲ್ಲಿಯೇ ಅತ್ಯಂತ ವಿಸ್ತಾರವಾದ ರಾಜ್ಯವಾಗಿತ್ತು. ದಕ್ಷಿಣದಲ್ಲಿ ಧರ್ಮಪುರಿ, ಪೂರ್ವದಲ್ಲಿ ಚಿತ್ತೂರು, ಉತ್ತರದಲ್ಲಿ ಬಳ್ಳಾರಿ ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಗಳನ್ನು ಮೇರೆಯಾಗಿ ಹೊಂದಿದ್ದ ಈ ರಾಜ್ಯವನ್ನು ಅಯ್ಯಪದೇವನು ತನ್ನ ಮಕ್ಕಳು ಮೊಮ್ಮಕ್ಕಳುಗಳ ಸಹಾಯದೊಂದಿಗೆ ಆಳಿದ. ಆಯ್ಯಪದೇವನ ಮಗ ಬೀರನೊಳಂಬ ಅಣ್ಣಿಗನು (922) ರಾಜ್ಯದ ಉತ್ತರ ಭಾಗವನ್ನಾಳುತ್ತಿದ್ದ. ಅಣ್ಣಿಗನ ಮಗನಾದ ಇರುಳಚೋರನು (929) ಧರ್ಮಪುರಿಯ ಭಾಗವನ್ನಾಳುತ್ತಿದ್ದ. ಇರುಳಚೋರನು, ಅಣ್ಣಿಗನಿಗೂ ಚಾಳುಕ್ಯಕುಲದ ಅತ್ತಿಯಬ್ಬರಿಸಿಗೂ ಹುಟ್ಟಿದ ಮಗ. ಅಯ್ಯಪದೇವನ ಆಳಿಕೆಯ ಕಾಲದಲ್ಲಿ (922), ಆತನ ಮಗ ಅಣ್ಣಿಗನಿಗೂ ರಾಷ್ಟ್ರಕೂಟ ಮೂರನೆಯ ಇಂದ್ರನ ಸೈನ್ಯದೊಂದಿಗೆ ಸಣ್ಣಕಾಳಗವೊಂದು ನಡೆದಿತ್ತು. ತದನಂತರ ಇವರಿಬ್ಬರ ನಡುವೆ ಒಂದು ರೀತಿಯ ಸಖ್ಯವೇರ್ಪಟ್ಟಿತು. ಇದರಿಂದಾಗಿ ಅಯ್ಯಪದೇವ ರಾಷ್ಟ್ರಕೂಟ ಮೂರನೆಯ ಗೋವಿಂದನ ಕೈಕೆಳಗೆ (932) ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳನ್ನಾಳುತ್ತಿದ್ದ. ರಾಷ್ಟ್ರಕೂಟ ಕೊಡಗಿನ ಸ್ನೇಹದಿಂದಾಗಿ ಅಯ್ಯಪದೇವ ಪೂರ್ವ ಚಾಳುಕ್ಯ ದೊರೆ ಒಂದನೆಯ ಅಯ್ಯಪ ರಾಯನ (921–27) ಮೇಲೆ ಧಾಳಿಮಾಡಿದ. ಪೂರ್ವ ಚಾಳುಕ್ಯ ಮನೆತನಕ್ಕೆ ನೊಳಂಬರಿಗೂ ಇದ್ದ ವೈರ ಶತಮಾನದಷ್ಟು ಹಳೆಯದು. ಪೂರ್ವ ಚಾಳುಕ್ಯ ಗುಣಗ ವಿಜಯಾದಿತ್ಯ (ಸು.849–92) ನೊಳಂಬ ರಾಷ್ಟ್ರದ ಮಂಗಿರಾಜನನ್ನು ಕೊಂದನೆಂದು ಕೆಲವು ಪೂರ್ವ ಚಾಳುಕ್ಯ ಶಾಸನಗಳು ಹೇಳುತ್ತವೆ. ಈ ಮಂಗಿರಾಜ ಯಾರೆಂಬುದರ ಬಗ್ಗೆ ನಿಖರ ಮಾಹಿತಿ ಇಲ್ಲದಿದ್ದರೂ ಈ ಎರಡೂ ವಂಶಗಳ ನಡುವೆ ವೈಷಮ್ಯವಿತ್ತೆಂಬುದಂತೂ ಖಚಿತ. ಈ ಹಳೆಯ ವೈರದಿಂದಾಗಿ ಅಯ್ಯಪದೇವನು ಒಂದನೆಯ ಅಮ್ಮಣರಾಯನ (921–27) ಮೇಲೆ ಯುದ್ಧಹೂಡಿ, ಆತನನ್ನು ನಿರ್ಣಾಯಕವಾಗಿ ಸೋಲಿಸಿ, ಪೂರ್ವ ಚಾಳುಕ್ಯರಿಗೆ ಅತಿ ಭಯಂಕರನಾದ ವೈರಿಯೆನಿಸಿಕೊಂಡನು. ಇದೇ ಶತ್ರುತ್ವ ಮುಂದುವರೆದು ಪೂರ್ವ ಚಾಳುಕ್ಯದೊರೆ ಎರಡನೆಯ ಭೀಮನ (ಗಂಡ/ ಬೀರ ಮಹೇಂದ್ರ) ಧಾಳಿಯನ್ನು ಅಯ್ಯಪದೇವನು ಎದುರಿಸಬೇಕಾಯಿತು (934). ಆ ಕಾಲದಲ್ಲಿ ಪೂರ್ವಚಾಳುಕ್ಯ ರಾಜವಂಶದಲ್ಲಿ ಅನೇಕ ಅಂತಃಕಲಹಗಳು ನಡೆಯುತ್ತಿದ್ದವು. ಈ ರಾಜಕೀಯದಲ್ಲಿ ರಾಷ್ಟ್ರಕೂಟರು ವಿಪರೀತವಾಗಿ ಹಸ್ತಕ್ಷೇಪಮಾಡಿದ್ದರು. ಇದನ್ನು ಸಹಿಸದ ಎರಡನೆಯ ಭೀಮ (ಸು.934–47) ರಾಷ್ಟ್ರಕೂಟರು ಮತ್ತು ಆವರ ಮಿತ್ರರಾದ ನೊಳಂಬರು ಮತ್ತು ಗಂಗರ ಮೇಲೆ ಧಾಳಿಮಾಡಿದ. ಬೆಂಗಳೂರಿನ ಬಳಿಯ ತುಂಬೇಪಾಡಿ ಯಲ್ಲಿ, ಬೀರಮಹೇಂದ್ರ ಮತ್ತು ಅಯ್ಯಪದೇವನ ನಡುವೆ ಭೀಕರ ಕಾಳಗ ನಡೆಯಿತು. ಈ ಯುದ್ಧದಲ್ಲಿ ಅಯ್ಯಪದೇವನು ವೀರಮರಣವನ್ನಪ್ಪಿದ. ಪೂರ್ವ ಚಾಳುಕ್ಯ ಶಾಸನಗಳು ಅತೀ ಭಯಂಕರ ಶತ್ರುವಾದ ಅಯ್ಯಪನನ್ನು ಚಾಳುಕ್ಯ ಭೀಮನು ಯುದ್ಧದಲ್ಲಿ ಕೊಂದನೆಂದು ಹೆಮ್ಮೆಯಿಂದ ಹೇಳಿವೆ. ಹೀಗೆ ನೊಳಂಬರಾಜ್ಯವನ್ನು ಪರಾಕ್ರಮದಿಂದ ದೀರ್ಘಕಾಲ ಆಳಿದ ಅಯ್ಯಪದೇವನ ಆಳಿಕೆ ಮುಕ್ತಾಯವಾಯಿತು.

ಅಯ್ಯಪದೇವನಿಗೆ ಪೊಲ್ಲಬ್ಬರಸಿ (ಗಂಗ ವಂಶೋದ್ಭವೆ) ನಾಗಿಯಬ್ಬೆ ಮತ್ತು ಹೆಳೆಯಬ್ಬೆ ಎಂಬ ಪತ್ನಿಯರಿದ್ದರು. ಪೊಲ್ಲಬ್ಬರಸಿಯ ಮಗನೇ ಅಣ್ಣಿಗ ಬೀರನೊಳಂಬ. ಇವನ ತಮ್ಮ ಇರಿವನೊಳಂಬ ದಿಲೀಪ. ಇವರಲ್ಲದೆ ಅಯ್ಯಪದೇವನಿಗೆ ಅಂಕಯ್ಯನೆಂಬ ಮಗನೂ ಸಹ ಇದ್ದ. ಅಯ್ಯಪದೇವನಿಗೆ ನೊಳಂಬಾಧಿರಾಜ, ನೊಳಪಯ್ಯ, ನನ್ನಿಗ, ನನ್ನಿಗಾಶ್ರಯ, ನನ್ನಿನೊಳಂಬ ನೃಪ, ಏಕವಾಕ್ಯ, ಪದ್ಮಾಶ್ರಮ ಮುಂತಾದ ಬಿರುದುಗಳಿದ್ದವು ಅಯ್ಯಪದೇವನು, ತಂದೆ ಮಹೇಂದ್ರನಂತೆ, ಸಾಹಸಿ, ಧೀಮಂತ ಮತ್ತು ರಾಜಕೀಯ ಮುತ್ಸದ್ಧಿ. ಗಂಗರೊಂದಿಗೆ ಮಾಸಿದ್ದ ಸಖ್ಯವನ್ನು ಪುನಃ ಸಂಪಾದಿಸಿ ಅವರ ಗೌರವಕ್ಕೆ ಪಾತ್ರನಾದವನು. ಈ ಹಿಂದೆ ಮಂಗಿರಾಜನ ಮರಣದಿಂದ ತನ್ನ ಕುಲಕ್ಕಾಗಿದ್ದ ಅವಮಾನದ ಸೇಡನ್ನು ತೀರಿಸಿಕೊಂಡವನು. ಪೂರ್ವ ಚಾಳುಕ್ಯರಿಗೆ ಅತಿ ಭಯಂಕರ ಶತ್ರು ವೆನಿಸಿಕೊಂಡವನು. ನೊಳಂಬ – ಗಂಗ –ಚಾಳುಕ್ಯ ಈ ಮೂರು ವಂಶಗಳೂ ವೈವಾಹಿಕ ಸಂಬಂಧದಿಂದ ಕೂಡುವಂತೆ ಮಾಡಿದವನು. ಸತ್ಯಕ್ಕಾಗಿ ತನ್ನ ಜೀವವನ್ನು ಮುಡುಪಾಗಿಟ್ಟಿದ್ದನು, ಯುದ್ಧದಲ್ಲಿ ವೀರಮರಣವನ್ನಪ್ಪಿದವನು.

ಅಣ್ಣಿಗ ಬೀರನೊಳಂಬ ಅಯ್ಯಪದೇವನ ಮರಣಾನಂತರ ಪಟ್ಟಕ್ಕೆ ಬಂದ (ಸು.934–40). ಈತನ ವಿಶಿಷ್ಟ ಬಿರುದು ಬೀರ (ವೀರ) ನೊಳಂಬ ಬೀರನೊಳಂಬ ತನ್ನ ತಂದೆ ಅಯ್ಯಪದೇವನ ಕೈಕೆಳಗೆ ರಾಜ್ಯದ ಕೆಲವು ಭಾಗಗಳನ್ನಾಳುತ್ತಿದ್ದನೆಂದು (922ರಲ್ಲೇ) ಮತ್ತು ಈತನಿಗೆ (929ರಲ್ಲೇ) ರಾಜ್ಯವಾಳಲು ಯೋಗ್ಯನಾದ ಮಗನೂ (ಇರುಳ ಚೋರ) ಇದ್ದನೆಂದು ತಿಳಿದಿದೆ. ಹೀಗಾಗಿ ರಾಜ್ಯಕ್ಕೆ ಉತ್ತರಾಧಿಕಾರಿಯಾಗುವ ವೇಳೆಗೆ ಈತನಿಗೆ ಸಾಕಷ್ಟು ವಯಸ್ಸು, ಅನುಭವವೂ ಆಗಿತ್ತು. ಈತನು ಸಿಂಹಾಸನವೇರುವ ಸಮಯಕ್ಕೆ ಗಂಗರಾಜ್ಯದಲ್ಲಿ ಅನೇಕ ಬದಲಾವಣೆಗಳಾಗಿದ್ದವು. ಗಂಗರಾಜ ನೀತಿಮಾರ್ಗ ನಿಧನನಾಗಿದ್ದ. ಆತನ ಮಕ್ಕಳಾದ ಮೂರನೆಯ ರಾಚಮಲ್ಲ ಮತ್ತು ಅವನ ತಮ್ಮ ಎರಡನೆಯ ಭೂತುಗ ಇವರ ನಡುವೆ ಸಿಂಹಾಸನಕ್ಕಾಗಿ ಪೈಪೋಟಿ ಇತ್ತು. ರಾಚಮಲ್ಲ ದಕ್ಷಿಣದ ಪ್ರಾಂತ್ಯಗಳನ್ನಾಳುತ್ತಿದ್ದ. ಬೂತುಗನು ರಾಷ್ಟ್ರಕೂಟ ಮೂರನೆಯ ಕೃಷ್ಣನ ತಂಗಿಯನ್ನು ಮದುವೆಯಾಗಿ, ಅವರ ರಾಜಕೀಯ ಬೆಂಬಲದೊಂದಿಗೆ ಉತ್ತರ ಪ್ರಾಂತ್ಯದಲ್ಲಿದ್ದನು. ಗಂಗರಾಜ್ಯದ ಅಸ್ಥಿರತೆಯ ಅವಕಾಶ ಪಡೆದ ಅಣ್ಣಿಗನು, ಗಂಗರಾಜ್ಯದೊಳಗೆ ಧಾಳಿಮಾಡಿ, ಹೆಗ್ಗಡದೇವನಕೋಟೆಯ ಕೊತ್ತಮಂಗಲದವರೆಗೆ ನುಗ್ಗಿದ. ಮೊದಮೊದಲು, ಅಣ್ಣಿಗನಿಗೆ ಜಯವಾದರೂ ಕೊನೆಗೆ ರಾಚಮಲ್ಲನ ಕೈಮೇಲಾಗಿ ಅಣ್ಣಿಗನು ಪರಾಭವಗೊಂಡ. ಅಣ್ಣಿಗನ ಈ ಕುಚೋದ್ಯವನ್ನು ರಾಚಮಲ್ಲನು ಕ್ಷಮಿಸಿದನೆಂದು ಕುಡಲೂರು ಶಾಸನ ಹೇಳುತ್ತದೆ. ಈ ಕ್ಷಮಾದಾನಕ್ಕೆ ಮತ್ತೊಂದು ಕಾರಣವೂ ಇತ್ತು. ರಾಚಮಲ್ಲನಿಗೆ ತನ್ನ ತಮ್ಮನಾದ ಬೂತುಗನೇ ಶತ್ರುವಾಗಿದ್ದನು. ಹೀಗಾಗಿ ನೊಳಂಬರನ್ನು ಎದುರು ಹಾಕಿಕೊಳ್ಳುವ ಧೈರ್ಯ ರಾಚಮಲ್ಲನಿಗಿರಲಿಲ್ಲ. ಆದ್ದರಿಂದ ರಾಚಮಲ್ಲನು ಅಣ್ಣಿಗನನ್ನು ಕ್ಷಮಿಸಿ ನೊಳಂಬರನ್ನು ತನ್ನ ಪಕ್ಷಪಾತಿಗಳನ್ನಾಗಿ ಮಾಡಿಕೊಂಡ.

ದಂಪತಿಗಳು

ಅಣ್ಣಿಗನು ನೆಮ್ಮದಿಯಿಂದ ರಾಜ್ಯವಾಳಿದ (940). ಈ ಕಾಲಕ್ಕೆ ರಾಷ್ಟ್ರಕೂಟರು ಬೂತುಗನ ನೆರವಿನಲ್ಲಿ ಗಂಗರಾಚಮಲ್ಲನನ್ನು ಯುದ್ಧದಲ್ಲಿ ಕೊಂದರು. ಅಣ್ಣಿಗನೂ ರಾಷ್ಟ್ರಕೂಟರಿಂದ ಸೋಲೊಪ್ಪಿಕೊಳ್ಳಬೇಕಾಯಿತು. ಬೂತುಗ ಗಂಗರಾಜ್ಯದ ಅಧಿಪತಿಯಾದ. ಅಣ್ಣಿಗನ ತಮ್ಮ ಇರಿವನೊಳಂಬ ದಿಲೀಪನು ಗಂಗ ಬೂತುಗನ ಮಿತ್ರ. ಇದರಿಂದಾಗಿ ಅಣ್ಣಿಗನ ಅನಂತರ ನೊಳಂಬ ಸಿಂಹಾಸನವು, ಅಣ್ಣಿಗನ ಮಗ ಇರುಳ ಚೋರನಿಗೆ ಹೋಗದೇ ದಿಲೀಪನ ಪಾಲಾಯಿತು. 940 ರ ಅನಂತರ ಅಣ್ಣಿಗನ ವಿಚಾರ ತಿಳಿದಿಲ್ಲ. ಹೇಮಾವತೀ ಸ್ತಂಭಶಾಸನ ಇರಿವ ನೊಳಂಬ ದಿಲೀಪ ರಾಜ್ಯವಾಳುತ್ತಿದ್ದನೆಂದು ಹೇಳುತ್ತದೆ (942). ನೊಳಂಬರ ಮೂಲ ಹಾಗೂ ವಂಶಾವಳಿಯನ್ನು ನೀಡುವ ಈ ಶಾಸನ ಲಕುಲೀಶನ ಅವತಾರವೆಂದು ಪರಿಗಣಿಸಲ್ಪಟ್ಟಿದ್ದ ಚಿಲ್ಲುಕ ಭಟಾರರಿಗೆ ನೀಡಿದ ಕೆಲವು ದಾನಗಳನ್ನು ಹೇಳುತ್ತದೆ. ಇರಿವನೊಳಂಬ ದಿಲೀಪ ರಾಷ್ಟ್ರಕೂಟ ಮೂರನೆಯ ಕೃಷ್ಣನ ಮಿತ್ರನಾಗಿದ್ದು. ರಾಷ್ಟ್ರಕೂಟರು ಚೋಳರ ಮೇಲೆ ನಡೆಸಿದ ದಂಡಯಾತ್ರೆಯಲ್ಲಿ ಪಾಲ್ಗೊಂಡಿದ್ದ. ರಾಷ್ಟ್ರಕೂಟರ ದಂಡು ಗಜಾಂಕುಳ ಚೋಳನ ಮೇಲೆ ಯುದ್ಧಕ್ಕೆ ಹೋದಾಗ ಇಪಿಲಿ ಎಂಬಲ್ಲಿ ನಡೆದ ಕಾಳಗದಲ್ಲಿ ದಿಲೀಪನೂ ತನ್ನ ಸೈನ್ಯದೊಡನೆ ಪಾಲ್ಗೊಂಡಿದ್ದನು (949). ತಕ್ಕೋಲಂ ಎಂಬಲ್ಲಿ ಅಂತಿಮವಾಗಿ ನಡೆದ ಭೀಕರ ಸಮರದಲ್ಲಿ ಗಂಗ ಬೂತುಗನು ಚೋಳ ಯುವರಾಜ ರಾಜಾದಿತ್ಯನನ್ನು ಕೊಂದ ವಿಷಯ ಸರ್ವವಿಧಿತ. ಚೋಳರನ್ನು ಸೋಲಿಸಿ ತಮಿಳುನಾಡಿನ ಹಲವಾರು ಭಾಗಗಳನ್ನು ಆಕ್ರಮಿಸಿಕೊಂಡ ಕೃಷ್ಣನು, ತನ್ನ ಅನುಚರರಿಗೆ, ಗೆದ್ದ ರಾಜ್ಯದ ವಿವಿಧ ಭೂಭಾಗಗಳನ್ನು ಹಂಚಿದನೆಂದು ಕರ್ಹಾಡ್ ತಾಮ್ರಶಾಸನ ಹೇಳುತ್ತದೆ. ಇದರಿಂದ ಮಿತ್ರನಾದ ದಿಲೀಪನೂ ಸಹ ಉತ್ತರ ಆರ್ಕಾಟ್ ಜಿಲ್ಲೆಯ ಹಲವು ಭಾಗಗಳನ್ನು ಕೃಷ್ಣನಿಂದ ಪಡೆದ. ಈ ರಾಜ್ಯ ವಿಸ್ತೀರ್ಣದಿಂದಾಗಿ ಮಹಾಬಲಿ ಬಾಣರು, ವೈದುಂಬರು ದಿಲೀಪನ ಸಾಮಂತರಾದರು. ದಿಲೀಪನ ರಾಜ್ಯಭಾರ ಕಾಲ ನೊಳಂಬರ ಇತಿಹಾಸದಲ್ಲಿ ಒಂದು ನೆಮ್ಮದಿಯ ಕಾಲ. ಇಡೀ ರಾಜ್ಯದಲ್ಲಿ ಸುಭಿಕ್ಷ ನೆಲೆಸಿತ್ತು. ಧರ್ಮಕಾರ್ಯಗಳು ನಿರಂತರವಾಗಿ ನಡೆದವು. ತ್ರಿಭುವನ ಕರ್ತಾರ ದೇವನೆಂಬ ಶಾಕ್ತಧರ್ಮ ಪೀಠದ ಗುರು, ಆವನೀಸ್ಥಾನವನ್ನು ನಲವತ್ತು ವರ್ಷಕಾಲ ಆಳಿ (961) ಐವತ್ತು ದೇಗುಲಗಳನ್ನು ಎರಡು ಕೆರೆಗಳನ್ನೂ ಕಟ್ಟಿಸಿದ. ದಿಲೀಪನ ಕೈಕೆಳಗೆ ಆತನ ಮಕ್ಕಳು, ಮೊಮ್ಮಕ್ಕಳು, ಸಾಮಂತರು, ಅಧಿಕಾರಿಗಳು ರಾಜ್ಯದ ವಿವಿಧ ಭಾಗಗಳನ್ನಾಳುತ್ತಿದ್ದರು. ದಿಲೀಪನ ವಿಶಿಷ್ಟವಾದ ಬಿರುದುಗಳೆಂದರೆ ಏಕವಾಕ್ಯ, ಪಲ್ಲವರಾಮ, ಪಲರೊಡೆಗಂಡ, ತ್ರಿಭುವನ ಧೀರ, ಪಲ್ಲವ ಮುರಾರಿ, ಆಯ್ತರ ಜವ, ಪಲ್ಲವೊಳ್ಗಂಡ, ಪಲ್ಲವಾದಿತ್ಯ ಇತ್ಯಾದಿ. ದಿಲೀಪನು 27 ವರ್ಷಗಳ ಕಾಲದ ದೀರ್ಘ ಆಳಿಕೆ ನಡೆಸಿದನು. ಈತನ ಕಾಲವನ್ನು ನೊಳಂಬ ಇತಿಹಾಸದ ಧರ್ಮಯುಗ, ಸುವರ್ಣಯುಗ ಮತ್ತು ನೆಮ್ಮದಿ ಶಾಂತಿಯ ಯುಗವೆಂದು ಕರೆಯಬಹುದು.

ನನ್ನಿನೊಳಂಬ ಇರಿವನೊಳಂಬ ದಿಲೀಪನ ಮಗ (968–70). ಈತನ ವಿಶಿಷ್ಟವಾದ ಬಿರುದು ಛಲದಂಕಕಾರ. ಈತನು ತಂದೆಯ ಕೈಕೆಳಗೆ ರಾಜ್ಯವಾಳುತ್ತಿದ್ದ (965). ಈತನ ಪೆರ್ಗ್ಗಡೆ ಬಸವಯ್ಯನು, ನನ್ನಿನೊಳಂಬನ ಕೀರ್ತಿ ಸ್ತಂಭವನ್ನು ಆವನಿಯಲ್ಲಿ ನಿಲ್ಲಿಸಿದ್ದಾನೆ. ಅದರ ಮೇಲಿನ ಶಾಸನ ನನ್ನಿನೊಳಂಬನನ್ನು ಪಲ್ಲವರಾಮ ಪಾದಪಂಕಜ ಭ್ರಮರನೆಂದು ವರ್ಣಿಸುತ್ತದೆ. ನನ್ನಿನೊಳಂಬ ಪಟ್ಟಕ್ಕೆ ಬರುವ ವೇಳೆಗೆ ಸಾಕಷ್ಟು ವಯಸ್ಕನಾಗಿದ್ದ. ಈತನ

ಮಗ ಎರಡನೆಯ ಪೊಳಲ್ಚೋರ (965) ಈತನ ಕೈಕೆಳಗೆ ರಾಜ್ಯವಾಳುತ್ತಿದ್ದ. ನನ್ನಿನೊಳಂಬನು ಪಟ್ಟವೇರಿದ ಕಾಲ ದಕ್ಷಿಣ ಭಾರತ ರಾಜಕೀಯದ ಒಂದು ಪರ್ವಕಾಲ. ರಾಜಕೀಯವಾಗಿ ಇಲ್ಲಿ ಅನೇಕ ಬದಲಾವಣೆಗಳಾದವು. ಇಡೀ ದಕ್ಷಿಣ ಭಾರತದ ಮೇಲೆ ರಾಜಕೀಯ ಹತೋಟಿ ಹೊಂದಿದ್ದ ರಾಷ್ಟ್ರಕೂಟ ಕೃಷ್ಣ ಕಾಲವಾದ (966). ರಾಜ್ಯದಲ್ಲಿ ಅಶಾಂತಿ ನೆಲೆಸಿತ್ತು. ಈತನ ಅನಂತರ ನಾಲ್ಕನೆಯ ಇಂದ್ರ ಸಿಂಹಾಸನ ವೇರಿದ. ಗಂಗ ಬೂತುಗನ ಅನಂತರ ಪಟ್ಟವೇರಿದ ಎರಡನೆಯ ಮಾರಸಿಂಹನು ರಾಷ್ಟ್ರಕೂಟ ಬೆನ್ನೆಲುಬಾಗಿ ನಿಂತ (961–74). ಮುಂದೆ ಗಂಗರ ಮಿತ್ರನಾಗಿದ್ದ ದಿಲೀಪ ಕಾಲವಾದ (967). ನನ್ನಿನೊಳಂಬ ಪಟ್ಟವೇರಿದ. ಈ ಕಾಲಕ್ಕೆ ನೊಳಂಬರು ಬಹಳ ಪ್ರಬಲರಾಗಿದ್ದರು. ನೂರಾರು ಆನೆಗಳ ಸೈನ್ಯವನ್ನು ಹೊಂದಿದ್ದರು. ಅನೇಕ ರಾಜಕುಮಾರರು ಆಳುತ್ತಿದ್ದ ವಂಶ ಅವರದ್ದಾಗಿತ್ತು. ಗಂಗ ಮಾರಸಿಂಹ ರಾಷ್ಟ್ರಕೂಟ ಸಾಮ್ರಾಜ್ಯದ ರಕ್ಷಣೆಗೆ ಉತ್ತರದಲ್ಲಿ ಸೆಣಸುತ್ತಿರುವಾಗ ಯಾವ ಗಳಿಗೆಯಲ್ಲಾದರೂ ನೊಳಂಬರು ಗಂಗರಾಜ್ಯವನ್ನು ಆಕ್ರಮಿಸಿಕೊಳ್ಳುವ ಭಯ ಅವನಿಗಿತ್ತು. ಇದಕ್ಕಾಗಿ ಆತನು ನೊಳಂಬರನ್ನೇ ಮೊದಲು ನಾಶಮಾಡಿದ (970). ಶ್ರವಣಬೆಳ್ಗೊಳದ ಶಾಸನವೊಂದು ಗಂಗನೃಸಿಂಹನು ಅಗಾಧ ಗಜಸೈನ್ಯವನ್ನೂ ನೂರಾರು ರಾಜಕುಮಾರರ ದಂಡನ್ನೂ ಹೊಂದಿದಂತಹ ನೊಳಂಬರನ್ನು ನಾಶಮಾಡಿ ನೊಳಂಬ ಕಲಾಂತನೆಂದೆನಿಸಿಕೊಂಡನೆಂದು ಹೇಳುತ್ತದೆ (974). ಮಾರಸಿಂಹನೊಡನೆ ನಡೆದ ಈ ಭೀಕರ ಕದನದಲ್ಲಿ ನನ್ನಿನೊಳಂಬ ಮತ್ತು ಆತನ ಮಗ ಎರಡನೇ ಪೊಳಲ್ಚೋರ ಮುಂತಾದವರು ಮಡಿದಿರಬೇಕು. ಅಳಿದುಳಿದ ರಾಜಕುಮಾರರು, ರಾಜ್ಯವನ್ನು ತೊರೆದು ಓಡಿ ಹೋದರು. ಶ್ರವಣಬೆಳ್ಗೊಳದ ಶಾಸನ ಓ (ನೊಳಂಬ) ಪಲ್ಲವರೇ ಓಡಿ ಹೋಗಬೇಡಿ. ನೊಳಂಬ ಕುಲಾಂತಕ ಮಾರಸಿಂಹನು ದೈವಾಧೀನನಾಗಿದ್ದಾನೆ ಎಂದು ಕೂಗಿ ಹೇಳುತ್ತದೆ. ಮಾರಸಿಂಹನ ಈ ಮರಣವಾರ್ತೆಯನ್ನು ಧರ್ಮಪುರಿ ಜಿಲ್ಲೆಯಲ್ಲಿ ತಂಗಿದ್ದ ನೊಳಂಬರು ತಿಳಿದು ಅನಂತರವೇ ನೊಳಂಬವಾಡಿಯನ್ನು ಪ್ರವೇಶಿಸಿದರು.

ನೊಳಂಬ ಕುಲಾಂತಕ ಮಾರಸಿಂಹನ ಮರಣದಿಂದಾಗಿ ರಾಷ್ಟ್ರಕೂಟ ಸಾಮ್ರಾಜ್ಯ ಪತನದ ಹಾದಿ ಹಿಡಿಯಿತು. ಈ ಸಮಯಕ್ಕೆ ಕಲ್ಯಾಣ ಚಾಳುಕ್ಯವಂಶದ ಇಮ್ಮಡಿ ತೈಲಪದೇವ ಪ್ರಬಲನಾದ (974). ನೊಳಂಬರು ಕಲ್ಯಾಣ ಚಾಳುಕ್ಯರ ಆಶ್ರಯಕೋರಿದರು. ನನ್ನಿನೊಳಂಬನ ಮಗ ಇಮ್ಮಡಿ ಪೊಳಲ್ಚೋರ ಈತ ನೊಳಂಬ ಸಿಂಹಾಸನವನ್ನೇರುವ ಮೊದಲೇ ವಿಧಿವಶನಾದ. ಈತನ ಪತ್ನಿ ಕದಂಬ ವಂಶೋದ್ಭವೆಯಾದ ದೀವಬ್ಬರಸಿ. ಇವಳಿಗೆ ಇಬ್ಬರು ಮಕ್ಕಳು – ಎರಡನೆಯ ಮಹೇಂದ್ರ ಮತ್ತು ಎರಡನೆಯ ಇರಿವನೊಳಂಬ ಘಟೆಯಂಕಕಾರ. ಹೀಗಾಗಿ ಇಮ್ಮಡಿ ಮಹೇಂದ್ರ ನೊಳಂಬ ರಾಜತ್ವವನ್ನು ಮುಂದುವರೆಸಿದ (ಸು. 977–85). ಈತನಿಗೆ ನೊಳಂಬಾಧಿರಾಜ, ವೀರಮಹೇಂದ್ರ, ವೀರನೊಳಂಬ, ನೊಳಂಬ ನಾರಾಯಣ ಇತ್ಯಾದಿ ಬಿರುದುಗಳಿದ್ದವು. ಮಹೇಂದ್ರನು ಕಲ್ಯಾಣ ಚಾಳುಕ್ಯರ ಪ್ರಭುತ್ವವನ್ನು ಒಪ್ಪಿಕೊಂಡು, ಬಳ್ಳಾರಿ ಜಿಲ್ಲೆಯಲ್ಲಿ ಕೆಲಕಾಲ ರಾಜ್ಯವಾಳಿದನು. ಈ ಕಾಲಕ್ಕೆ ಗಂಗರ ಪ್ರಾಬಲ್ಯ ಕ್ಷೀಣಿಸಿತ್ತು. ನೊಳಂಬ ರಾಜ್ಯವನ್ನು ಗಂಗರಿಂದ ಕಸಿದು ಕೊಳ್ಳುವ ಪ್ರಯತ್ನದಲ್ಲಿ ಈತನು ಸಫಲನಾದನು. ಪ್ರಾಯಶಃ ತೈಲಪದೇವನ ಸಾಮಂತನಾಗಿ ಚೋಳ ನಾಡಿನ ಮೇಲೂ ಕೆಲವು ದಂಡೆಯಾತ್ರೆಗಳನ್ನು ಕೈಗೊಂಡನು. 981ರ ಅನಂತರ ಮಹೇಂದ್ರನ ವಿಚಾರಗಳು ತಿಳಿದಿಲ್ಲ. ಪ್ರಾಯಶಃ ಈತನು ಅನಂತರದ ಕೆಲವು ಸಮಯದಲ್ಲೇ ವಿಧಿವಶನಾಗಿರಬೇಕು. ಏಕೆಂದರೆ ಸು. 990ರ ಸುಮಾರಿಗೆ ಚೋಳರು ನೊಳಂಬವಾಡಿಯ ಆಗ್ನೇಯ ಭಾಗಗಳನ್ನು ಆಕ್ರಮಿಸಿಕೊಂಡರು. ಈ ಮಧ್ಯಂತರದಲ್ಲಿ, ಕೋಲಾರ ಜಿಲ್ಲೆಯ ಆವನಿಯಲ್ಲಿ, ಮಹೇಂದ್ರನ ತಾಯಿ, ಆತನ ಮರಣಾನಂತರ, ಆತನ ಹೆಸರಿನಲ್ಲಿ ಅನೇಕ ದಾನ–ಧರ್ಮಗಳನ್ನು ಮಾಡಿ, ದೇವಾಲಯ, ಕೆರೆಗಳನ್ನು ನಿರ್ಮಿಸಿ, ತನ್ನ ಪುಟ್ಟಮಗ ಇರಿವನೊಳಂಬನ ಸಿಂಹಾಸನಾರೋಹಣವನ್ನು ತವಕದಿಂದ ವೀಕ್ಷಿಸುತ್ತಾ, ಆತನ ಹೆಸರಿನಲ್ಲಿ ರಾಜ್ಯವಾಳುತ್ತಿದ್ದಳು. ಇದರಿಂದಾಗಿ ಮಹೇಂದ್ರ 985ರ ಸುಮಾರಿಗೆ ಕಾಲವಾಗಿರಬೇಕು.

ಮಹೇಂದ್ರನ ತರುವಾಯ ನೊಳಂಬರ ರಾಜಕೀಯ ಇತಿಹಾಸ ಒಂದು ಹೊಸತಿರುವನ್ನು ಪಡೆಯಿತು. ಮಹೇಂದ್ರನಿಗೆ ಪ್ರಾಯಶಃ ಪುತ್ರಸಂತಾನವಿರಲಿಲ್ಲ. ಈತನ ಮರಣದ ಸಮಯದಲ್ಲಿ, ಈತನ ತಮ್ಮ ಇರಿವನೊಳಂಬ ಘಟೆಯಂಕಕಾರ ಇನ್ನೂ ಅಪ್ರಾಪ್ತವಯಸ್ಸಿನ ಬಾಲಕ. ಇದರಿಂದಾಗಿ ಈತನ ತಾಯಿ ದೀವಾಂಬಿಕೆ ಅಥವಾ ದೀವಬ್ಬರಸಿ ತನ್ನ ಕಿರಿಯ ಮಗನ ಹೆಸರಿನಲ್ಲಿ ಕೆಲಕಾಲ ರಾಜ್ಯವಾಳಿದಳು. ಈಕೆ ಕದಂಬವಂಶೋದ್ಭವೆ. ವಿದ್ಯಾ–ವಿನಯವಂತೆ, ಗುಣವಂತೆ, ಧರ್ಮಭೀರು, ಉದಾರಿ ಎಂದು ಶಾಸನದಲ್ಲಿ ವರ್ಣಿತಳಾಗಿದ್ದಾಳೆ. ಸಿಂಹಾಸನಾ ರೋಹಣ ಮಾಡಿದ ಚೋಳ ಚಕ್ರವರ್ತಿ ಒಂದನೆಯ ರಾಜರಾಜ, ಅನತಿಕಾಲದಲ್ಲಿ ಗಂಗವಾಡಿ, ನೊಳಂಬವಾಡಿಗಳನ್ನಾಕ್ರಮಿಸಿಕೊಂಡ (985). ನೊಳಂಬರು ರಾಜ್ಯಭ್ರಷ್ಟರಾಗಿ, ನೊಳಂಬವಾಡಿಯನ್ನು ತ್ಯಜಿಸಿ, ಕಲ್ಯಾಣ ಚಾಳುಕ್ಯರ ಮೊರೆಹೋದರು. 1010ರಿಂದ 1024 ರವರೆಗೆ ಕಲ್ಯಾಣ ಚಾಳುಕ್ಯರ ಸಾಮಂತನಾಗಿ, ಇರಿವ ನೊಳಂಬ ಘಟೆಯಂಕಕಾರನು ಬಳ್ಳಾರಿ ಪ್ರಾಂತ್ಯದ ಕೋಗಲಿ, ಬಲ್ಲಕುಂದೆ ಕುಕ್ಕನೂರು ಮತ್ತು ಮಾಸೆಯವಾಡಿ ಪ್ರಾಂತ್ಯಗಳನ್ನಾಳಿದನು. ಇಮ್ಮಡಿ ತೈಲಪನ ಮೊಮ್ಮಗಳೂ ಸತ್ಯಾಶ್ರಯನ ಮಗಳೂ ಐದನೆಯ ವಿಕ್ರಮಾದಿತ್ಯನ ತಂಗಿಯೂ ಆಗಿದ್ದ ಮಹಾದೇವಿಯನ್ನು ಮದುವೆಯಾಗಿದ್ದ. ಮಹಾದೇವಿಯೂ ತನ್ನ ಪತಿಯ ಕೈಕೆಳಗೆ ಮರುವೊಳಲನ್ನು ಆಳಿದಳು (1024). ಇರಿವನೊಳಂಬ ಘಟೆಯಂಕಕಾರನಿಗೆ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನೆಂಬ ಮಗನಿದ್ದನು. ನೊಳಂಬ, ಚಾಳುಕ್ಯವಂಶಗಳ ಸಂಬಂಧದಿಂದ ಜನಿಸಿದ ಇನ್ನು ಮುಂದಿನ ನೊಳಂಬ ರಾಜಕುಮಾರರು ತಮ್ಮ ಹೆಸರಿನ ಜೊತೆಗೆ, ಆ ಕಾಲದಲ್ಲಿ ಆಳುತ್ತಿದ್ದ ಚಾಳುಕ್ಯ ಚಕ್ರವರ್ತಿಗಳ ವಿಶಿಷ್ಟ ಬಿರುದುಗಳನ್ನು ತಮ್ಮ ಹೆಸರಿನ ಜೊತೆಗೆ ಸೇರಿಸಿಕೊಳ್ಳುವ ಸಂಪ್ರದಾಯವಿಟ್ಟುಕೊಂಡಿದ್ದರು. ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನು ತನ್ನ ತಂದೆಯ ಕೈಕೆಳಗೆ 1018ರಲ್ಲೇ ರಾಜ್ಯವಾಳುತ್ತಿದ್ದು ತಂದೆಯ ಅನಂತರ ಪಟ್ಟಕ್ಕೆ ಬಂದು, ರಾಜ್ಯವಾಳಿದ (1024–1037). ಈತ ಚಾಳುಕ್ಯ ಜಗದೇಕಮಲ್ಲ ಎರಡನೆಯ ಜಯಸಿಂಹನ ಸಾಮಂತ (1015–42). ನೊಳಂಬವಾಡಿ 32000 ಪ್ರಾಂತ್ಯ ಮತ್ತು ಗಂಗವಾಡಿ 96000 ಪ್ರಾಂತ್ಯಗಳನ್ನಾಳುತ್ತಿದ್ದನೆಂದು ಶಾಸನವೊಂದು ಹೇಳುತ್ತದೆ. ಆದರೆ ಅದು ಕೇವಲ ಉತ್ಪ್ರೇಕ್ಷೆ. ಈತನು ನೆಮ್ಮದಿಯಿಂದ ರಾಜ್ಯವಾಳಿದನು. ಈತನ ಕಾಲದ ಯಾವುದೇ ಮಹತ್ವ ರಾಜಕೀಯ ವಿಷಯಗಳು ತಿಳಿದಿಲ್ಲ. ಈತನ ರಾಜಧಾನಿ ತುಂಗಭದ್ರಾ ತೀರದ ಕಂಪಿಲಿಯಾಗಿತ್ತು. ಈತನಿಗೆ ರಾಜಕಾರ್ಯ ನಿಪುಣನಾದ ಬ್ರಹ್ಮಾಧಿರಾಜನೆಂಬ ಮುಖ್ಯಮಂತ್ರಿಯೊಬ್ಬನಿದ್ದ.

ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನಿಗೆ ಇಬ್ಬರು ಮಕ್ಕಳು. ಇವರಲ್ಲಿ ಹಿರಿಯನು ಜಗದೇಕಮಲ್ಲ ಇಮ್ಮಡಿ ನೊಳಂಬ (1037–44) ಮತ್ತು ಕಿರಿಯವನು ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿ (1044–54). ಹಿರಿಯವನಾದ ಇಮ್ಮಡಿ ನೊಳಂಬನ ರಾಜ್ಯಭಾರಕಾಲ ಯಾವ ಪ್ರಮುಖ ರಾಜಕೀಯ ಘಟನೆಯೂ ಇಲ್ಲದೆ ನಡೆಯಿತು. ಕಿರಿಯವನಾದ ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿ ಚಾಳುಕ್ಯ ಒಂದನೆಯ ಸೋಮೇಶ್ವರನಿಂದ ಪಟ್ಟಾಭಿಷಿಕ್ತನಾದ (1044). ಈತನು ಕೋಗಳಿ 500, ಕದಂಬಳಿಗೆ 1000, ಬಲ್ಲಕುಂದೆ 300, ಕನೆಯಕಲು 300, ಕುಡಿಹರವಿ 70 ಮತ್ತು ಕರಿವೀಡಿ 30 ಪ್ರಾಂತ್ಯಗಳ ಮೇಲೆ ರಾಜ್ಯಭಾರ ನಡೆಸಿದನು. ಈತನ ರಾಜ್ಯಭಾರಕಾಲದ ಮಹತ್ವದ ಘಟನೆಗಳೇನೂ ತಿಳಿದಿಲ್ಲ. ಈತನ ಕಾಲದಲ್ಲಿ ಚಾಳುಕ್ಯರಿಗೂ – ಚೋಳರಿಗೂ ಇದ್ದ ವೈಷಮ್ಯ ಹೆಚ್ಚಾಗಿ ಅನೇಕ ಯುದ್ಧಗಳು ನಡೆದವು. ಚೋಳರ ಧಾಳಿಯಿಂದಾಗಿ ನೊಳಂಬ ರಾಜಧಾನಿ ಕಂಪಿಲಿ ಸೂರೆಯಾಯಿತು. ತುಂಗಭದ್ರಾ ತೀರದ ಕೊಪ್ಪಂ ಎಂಬಲ್ಲಿ ನಡೆದ ಭೀಕರ ಯುದ್ಧದಲ್ಲಿ ತ್ರೈಲೋಕ್ಯಮಲ್ಲನನ್ನಿನೊಳಂಬನು ಚಾಳುಕ್ಯರ ಪರವಾಗಿ ಹೋರಾಡಿ ವೀರಮರಣವನ್ನಪ್ಪಿದ (1054). ಇಲ್ಲಿಗೆ ಮೂಲ ನೊಳಂಬ ಸಂತತಿಯ ಇತಿಹಾಸ ಮುಕ್ತಾಯಗೊಂಡಿತು. (ಎಂ.ಎಸ್.ಕೆ.)

**ನೌಕಾಸೇನ ಬಂಡಾಯ:** ಭಾರತವನ್ನಾಳುತ್ತಿದ್ದ ಬ್ರಿಟಿಷ್ ಸರ್ಕಾರದ ವಿರುದ್ಧ 1946 ಫೆಬ್ರುವರಿಯಲ್ಲಿ ಭಾರತದ ರಾಯಲ್ ಇಂಡಿಯನ್ ನೌಕಾಸೇನೆಯವರು ನಡೆಸಿದ ಬಂಡಾಯ. ಬ್ರಿಟಿಷರು ಭಾರತೀಯರ ಕೈಗೆ ಅಧಿಕಾರವನ್ನು ಕೊಟ್ಟು ನಿರ್ಗಮಿಸುವ ತೀರ್ಮಾನವನ್ನು ತ್ವರೆಗೊಳಿಸಲು ಇದೂ ಕಾರಣವಾಯಿತು. ಭಾರತದ ವಿಮೋಚನೆಗಾಗಿ ಸುಭಾಷ್ ಚಂದ್ರಬೋಸರ ನೇತೃತ್ವದಲ್ಲಿ ರಚಿಸಲಾಗಿದ್ದ ಭಾರತ ರಾಷ್ಟ್ರೀಯ ಸೇನೆಯ ಯೋಧರನ್ನು ಬ್ರಿಟಿಷರು ದ್ರೋಹದ ಆಪಾದನೆಯ ಮೇಲೆ ಭಾರತದಲ್ಲಿ ವಿಚಾರಣೆಗೆ ಗುರಿಪಡಿಸಿದ್ದರು (1945). ಇದು ರಾಜಕೀಯವಾಗಿ ವಿವೇಕರಹಿತ ಕ್ರಮವಾಗಿತ್ತು. ಇದರಿಂದ ಭಾರತಾದ್ಯಂತ ಉಗ್ರಕ್ಷೋಭೆ ಉಂಟಾಯಿತು. ಈ ವಿಚಾರಣೆಯ ವಿರುದ್ಧ ಅನೇಕ ನಗರಗಳಲ್ಲಿ ಪ್ರದರ್ಶನಗಳು ನಡೆದುವು. ಪ್ರತಿಭಟನೆ ವ್ಯಕ್ತಪಟ್ಟಿತು. ನೌಕಾ ಉದ್ಯೋಗಿಗಳು ದಂಗೆ ಏಳಲು ಇದು ಪರೋಕ್ಷವಾಗಿ ಕಾರಣವಾಯಿತೆಂದು ಹೇಳಬಹುದು. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡದಿದ್ದುದರಿಂದ ದೇಶದಲ್ಲೆಲ್ಲ ಹಬ್ಬಿದ್ದ ಅಸಮಾಧಾನ ನೌಕಾಸೇನೆಗೂ ವ್ಯಾಪಿಸಿತು.

ಈ ಬಂಡಾಯ ಮೊದಲು ಮುಷ್ಕರ ರೂಪದಲ್ಲಿ ಮುಂಬಯಿಯ ಬಂದರಿನಲ್ಲಿ ಆರಂಭವಾಗಿ, ಕೊನೆಗೆ ಭಾರತದ ಇತರ ಬಂದರುಗಳಿಗೆ ಹರಡಿತು. ಕೇಂದ್ರ ಮುಷ್ಕರ ಸಮಿತಿಯ ಆದೇಶದ ಮೇರೆಗೆ ಸಿಗ್ನಲ್ ಶಾಲೆಯ ನೌಕಾ ಸಿಬ್ಬಂದಿಯವರು 1946 ಫೆಬ್ರವರಿ 18ರಂದು ಮುಷ್ಕರ ಆರಂಭಿಸಿದರು. ಇವರ ಜೊತೆಗೆ ವಿವಿಧ ನೌಕಾ ಸಿಬ್ಬಂದಿಯವರು ಸೇರಿಕೊಂಡರು. ಬ್ರಿಟಿಷರ ವರ್ಣಭೇದ ನೀತಿ, ಕಡಿಮೆ ಸಂಬಳ, ಕಳಪೆ ಆಹಾರ ವ್ಯವಸ್ಥೆ– ಇವುಗಳ ವಿರುದ್ಧವಾಗಿ ಚಳವಳಿ ನಡೆಸಿದರು. ಸ್ವಾಭಿಮಾನಕ್ಕೆ ಕುಂದು ಬರುವಂತೆ ಬ್ರಿಟಿಷ್ ನೌಕಾಧಿಕಾರಿಯೊಬ್ಬ ಮಾಡಿದ ಟೀಕೆಗಳಿಂದ ಇವರು ರೊಚ್ಚಿಗೆದ್ದಿದ್ದರು. ನೌಕಾ ವಾಹನಗಳ ಮೇಲೆ ಭಾರತದ ರಾಷ್ಟ್ರೀಯ ನೌಕೆಯ ನಾಮಫಲಕಗಳನ್ನು ಅಂಟಿಸಿ ರಾಷ್ಟ್ರಧ್ವಜವನ್ನು ಹಾರಿಸಲಾಯಿತು. ತಮ್ಮ ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಭಾರತೀಯರ ಸೈನ್ಯವನ್ನು ಇಂಡೋನೇಷ್ಯದಿಂದ ವಾಪಸ್ ಕರೆಸಿಕೊಳ್ಳಬೇಕೆಂಬುದೂ ಇವರ ಆಗ್ರಹವಾಗಿತ್ತು. ಭಾರತ ಬಿಟ್ಟು ತೊಲಗಿ, ಜೈ ಹಿಂದ್ ಎಂಬ ಘೋಷಣೆಗಳನ್ನು ಇವರು ಕೂಗಲಾರಂಭಿಸಿದರು. ಕೆಲವು ಕಡೆಗಳಲ್ಲಿ ಇವರ ಪ್ರದರ್ಶನಗಳು ಉಗ್ರವಾಗಿದ್ದುವು. ರಾಯಲ್ ಇಂಡಿಯನ್ ನೌಕೆಯ ಫ್ಲ್ಯಾಗ್ ಅಧಿಕಾರಿ ಅಡ್ಮಿರಲ್ ಗಾಡ್‌ಫ್ರಿ ಆಕಾಶವಾಣಿಯ ಮೂಲಕ ನೌಕಾ ಸಿಬ್ಬಂದಿಯನ್ನು ಉದ್ದೇಶಿಸಿ ಮಾತನಾಡಿ, ಚಳವಳಿಯನ್ನು ನಿಲ್ಲಿಸಿ ಶರಣಾಗುವಂತೆ ಕರೆ ನೀಡಿದ. ಜೊತೆಗೆ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಿದ. ನೌಕಾ ಸಿಬ್ಬಂದಿ ಮತ್ತು ಸೇನಾ ರಕ್ಷಾ ದಳದ ನಡುವೆ ಗುಂಡುಗಳ ವಿನಿಮಯವಾಯಿತು. ನೌಕಾ ಸಿಬ್ಬಂದಿಯವರು ಅಸ್ತ್ರಗಳನ್ನು

ವಶಪಡಿಸಿಕೊಂಡರು. ಇವರ ಜೊತೆಗೆ ಇತರ ನಾಗರಿಕರು ಸೇರಿ ಲೂಟಿ ಹಲ್ಲೆಗಳಲ್ಲಿ ತೊಡಗಿದುದರಿಂದ ಪರಿಸ್ಥಿತಿ ದಿನೇ ದಿನೇ ಹದಗೆಡತೊಡಗಿತು. ವಲ್ಲಭಭಾಯಿ ಪಟೇಲರು ಮಧ್ಯಪ್ರವೇಶ ಮಾಡಿದ್ದರಿಂದ ಪರಿಸ್ಥಿತಿ ಸುಧಾರಿಸಿತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಾಯಕರು ಚಳವಳಿ ನಿಲ್ಲಿಸುವಂತೆ ಮನವಿ ಮಾಡಿದಾಗ್ಯೂ ಮುಂಬಯಿಯಲ್ಲಿ ಮುಷ್ಕರ, ಹರತಾಳ, ಹಲ್ಲೆಗಳು ಮುಂದುವರಿದುವು. ಸೈನ್ಯದ ಸಹಾಯದಿಂದ ಗಲಭೆಯನ್ನು ಹತ್ತಿಕ್ಕಲಾಯಿತು. ಈ ಗಲಭೆಯ ಪರಿಣಾಮವಾಗಿ ಸು.200 ಜನಸತ್ತರು. 1946 ಫೆಬ್ರುವರಿ 23ರಂದು ಚಳವಳಿ ನಿಂತಿತು. ಯಾವ ನೌಕೋದ್ಯೋಗಿಗಳನ್ನೂ ಶಿಕ್ಷಿಸಬಾರದೆಂದು ಮೌಲನಾ ಅಬ್ದುಲ್ ಕಲಾಮ್ ಆಜಾದರು ದಂಡನಾಯಕರಿಗೆ ಮನವಿಮಾಡಿದರು.

ಮುಂಬಯಿಯಲ್ಲಿ ನಡೆದ ಘಟನೆಯ ಪರಿಣಾಮ ಇತರ ಬಂದರುಗಳಲ್ಲೂ ಕಾಣಿಸಿಕೊಂಡಿತು. ಕರಾಚಿ, ಮದರಾಸು, ಕಲ್ಕತ್ತ, ವಿಶಾಖಪಟ್ಟಣಗಳ ನೌಕಾಸಿಬ್ಬಂದಿಯವರು ಮುಂಬಯಿಯ ಸಹೋದ್ಯೋಗಿಗಳ ಬೇಡಿಕೆಗಳಿಗೆ ಬೆಂಬಲ ನೀಡಿ ಮುಷ್ಕರ ನಡೆಸಿದರು. ಹಿಂದು ನೌಕಾಸಿಬ್ಬಂದಿಯವರು ಕರಾಚಿಯಲ್ಲಿ ನಡೆಸಿದ ಪ್ರತಿಭಟನೆ ಉಗ್ರವಾಗಿ, ಹಿಂಸಾರೂಪ ತಳೆಯಿತು. ಕೊನೆಗೆ ಸೇನಾ ಪಡೆಯ ನೆರವಿನಿಂದ ಹತೋಟಿಗೆ ತರಲಾಯಿತು. ಭೂ ವಾಯು ಸೈನ್ಯಗಳು ಈ ಘಟಕಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ತಟಸ್ಥವಾಗಿರಲಿಲ್ಲ. ದೆಹಲಿ ಮತ್ತು ಮದರಾಸಿನ ವಾಯುಸೇನಾ ಸಿಬ್ಬಂದಿಯವರು ರಾಯಲ್ ಇಂಡಿಯನ್ ನೌಕಾ ಸಿಬ್ಬಂದಿಯವರಿಗೆ ಬೆಂಬಲ ನೀಡಿ ಮುಷ್ಕರ ನಡೆಸಿದರು. ಮುಂಬಯಿಯ ಅಂಧೇರಿ ಮತ್ತು ಮೆರೀನ್ ಡ್ರೈವ್‌ನ ರಾಯಲ್ ಇಂಡಿಯನ್ ಭೂಸೈನ್ಯ ಸಿಬ್ಬಂದಿಯವರು ಸಭೆ ಸೇರಿ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ನೀಡುವ ವಿಚಾರವಾಗಿ ಸಮಾಲೋಚನೆ ನಡೆಸಲು ಭಾರತಕ್ಕೆ ಬರಲಿದ್ದ ಬ್ರಿಟಿಷ್ ಸಂಪುಟ ಆಯೋಗದ ಸದಸ್ಯರ ಹೆಸರುಗಳನ್ನು ಈ ಬಂಡಾಯ ಆರಂಭವಾದ ಮರುದಿನವೇ ಪ್ರಕಟಿಸಲಾಯಿತು. ಇದರಿಂದ ಬ್ರಿಟಿಷರು ಭಾರತವನ್ನು ಬೇಗ ಬಿಡುವರೆಂಬುದು ಭಾರತೀಯರಿಗೆ ಖಚಿತವಾಯಿತು. ಬ್ರಿಟಿಷರ ಈ ನಿರ್ಧಾರಕ್ಕೆ ನೌಕಾಸೇನ ಬಂಡಾಯವೇ ಕಾರಣವೆಂದು ಭಾವಿಸುವುದಕ್ಕಾಗುವುದಿಲ್ಲವಾದರೂ ರಾಜಕೀಯ ಅತೃಪ್ತಿ ಮತ್ತು ಅಸಮಾಧಾನಗಳು ನೌಕಾಸಿಬ್ಬಂದಿಗೂ ಹರಡಿದ್ದುದು ಬ್ರಿಟಿಷರಿಗೆ ಸ್ಪಷ್ಟವಾಯಿತು. ಭಾರತದ ಸೈನ್ಯಬಲದ ಅಚಲ ನಿಷ್ಠೆ ಮತ್ತು ವಿಧೇಯತೆಯ ಬಗ್ಗೆ ಸಂದೇಹ ದೃಢವಾಗಿ ಬ್ರಿಟಿಷರಿಗೆ ಈ ಬಂಡಾಯ ಅಪಾಯದ ಮುನ್ಸೂಚನೆಯಾಗಿ ಕಾಣಿಸಿತೆನ್ನಬಹುದು. (ಎಂ.ಜಿ.)

# ಪ

**ಪಂಚಶೀಲ:** ಭಾರತದ ಪ್ರಧಾನಿ ಜವಾಹರಲಾಲ ನೆಹರು, ಚೀನ ಪ್ರಧಾನಿ ಚೌಎನ್ ಲೈ ಇವರ ನಡುವೆ 1954ರಲ್ಲಿ ಆದ ಒಂದು ಒಪ್ಪಂದ. ಸಹಬಾಳ್ವೆಯ ಐದು ತತ್ತ್ವಗಳು. ಪಂಚಶೀಲದ ಪರಿಕಲ್ಪನೆ ಸು.2,000 ವರ್ಷಗಳಿಗೂ ಹಳೆಯದು. ಆಧುನಿಕ ಯುಗದಲ್ಲಿ ಎರಡು ರಾಷ್ಟ್ರಗಳ ಪರಸ್ಪರ ಸಂಬಂಧಗಳಿಗೆ ಅನ್ವಯಿಸುವಂತೆ ಪಂಚಶೀಲವನ್ನು ಈಚೆಗೆ ರೂಪಿಸಿದ್ದು ಭಾರತ-ಚೀನ ಸ್ನೇಹದ ಸಂದರ್ಭದಲ್ಲಿ. ಅಶೋಕ ಘೋಷಿಸಿದ ಪಂಚಶೀಲ ಇದಕ್ಕೆ ಸ್ಫೂರ್ತಿ ನೀಡಿದೆ. 1. ಭೂ ಸಮಗ್ರತೆ ಮತ್ತು ಪರಮಾಧಿಕಾರದ ಪರಸ್ಪರ ಮನ್ನಣೆ; 2. ಆಕ್ರಮಣ ನಡೆಸದಿರುವುದು; 3. ಪರಸ್ಪರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು; 4. ಸಮಾನತೆ ಹಾಗೂ ಪರಸ್ಪರ ಲಾಭ ಮತ್ತು 5. ಶಾಂತಿಯುತ ಸಹಬಾಳ್ವೆ-ಇವು ಪಂಚಶೀಲದ ಸೂತ್ರಗಳು.

ಟಿಬೆಟ್‌ಗೆ ಸಂಬಂಧಿಸಿದಂತೆ ಭಾರತ ಮತ್ತು ಚೀನಗಳ ನಡುವೆ 1953 ಡಿಸೆಂಬರ್ 31ರಂದು ಪೀಕಿಂಗ್‌ನಲ್ಲಿ ಮಾತುಕತೆಗಳು ಪ್ರಾರಂಭವಾಗಿ, 1954 ಏಪ್ರಿಲ್ 9ರಂದು ಮುಕ್ತಾಯಗೊಂಡು ಅದೇ ದಿನ ಒಂದು ಒಪ್ಪಂದವಾಯಿತು. ಈ ಒಪ್ಪಂದದ ಪ್ರಸ್ತಾವನೆಯಲ್ಲಿ ಪಂಚಶೀಲದ ತತ್ತ್ವಗಳು ಇವೆ. 1954 ಜೂನ್‌ನಲ್ಲಿ ಭಾರತದ ಪ್ರಧಾನಿ ಜವಾಹರಲಾಲ ನೆಹರು ಮತ್ತು ಚೀನದ ಪ್ರಧಾನಿ ಚೌ ಎನ್-ಲೈ ದೆಹಲಿಯಲ್ಲಿ ನೀಡಿದ ಸಂಯುಕ್ತ ಹೇಳಿಕೆಯಲ್ಲಿ ಈ ಸೂತ್ರಗಳನ್ನು ಮಂಡಿಸಿದರು.

ಭಾರತ ಸ್ವಾತಂತ್ರ್ಯ ಪಡೆಯುವ ವೇಳೆಯಲ್ಲಿ ಜಗತ್ತಿನಲ್ಲಿ ಶೀತಲಯುದ್ಧ ಅಸ್ತಿತ್ವದಲ್ಲಿತ್ತು. ಸ್ವಾತಂತ್ರ್ಯ ಪಡೆದ ಅನಂತರ ನಿರಾಶ್ರಿತರ ವಲಸೆ, ಆಹಾರ ಕೊರತೆ, ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಗಡಿ ವಿರಸ ಮುಂತಾದ ಭಾರಿ ಸಮಸ್ಯೆಗಳನ್ನು ಭಾರತ ಎದುರಿಸುತ್ತಿತ್ತು. ಭಾರತಕ್ಕೆ ಶಾಂತಿ ಅಗತ್ಯವಾಗಿತ್ತು. ಬೃಹತ್ ರಾಷ್ಟ್ರಗಳ ಶೀತಲ ಯುದ್ಧದಲ್ಲಿ ಭಾರತ ಯಾವ ಪಕ್ಷವನ್ನು ಸೇರಲಿಲ್ಲ. 1947-50ರ ಅವಧಿಯಲ್ಲಿ ನೆಹರು ಅವರು ಅಲಿಪ್ತ ನೀತಿಯನ್ನು ರೂಪಿಸಿದರು. ಭಾರತ ಅದನ್ನು ಅನುಸರಿಸುತ್ತದೆ ಎಂದು ಘೋಷಿಸಿದರು. ಅಲ್ಲದೆ, ಚೈತನ್ಯಪೂರ್ಣ ಅಲಿಪ್ತ ನೀತಿಯನ್ನು ವಿವರಿಸಲು ಅವರು ಪ್ರಯತ್ನಿಸಿದರು. ಅಲಿಪ್ತತೆ ಎಂದರೆ ದೌರ್ಜನ್ಯ ಹಾಗೂ ಆಕ್ರಮಣಗಳನ್ನು ನೋಡಿ ಸಹಿಸಿಕೊಂಡಿರುವುದಲ್ಲ. ಎಲ್ಲಿ ಆಕ್ರಮಣ ನಡೆದರೂ ಭಾರತ ಅದಕ್ಕೆ ಪ್ರತಿಭಟನೆ ಸೂಚಿಸುತ್ತದೆ ಹಾಗೂ ಆಕ್ರಮಣಕ್ಕೆ ವಿರೋಧವಾದ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ. ಭಾರತ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಗಳಿಗೆ ಎಂದಿನಂತೆ ವಿರೋಧ ಸೂಚಿಸುತ್ತದೆ. ಜಗತ್ತಿನ ಯಾವುದೇ ಭಾಗದಲ್ಲಾದರೂ ವಸಾಹತುಶಾಹಿಗೆ ವಿರುದ್ಧವಾಗಿ ಸ್ವಾತಂತ್ರ್ಯ ಹೋರಾಟ ನಡೆದರೆ, ಹೋರಾಟ ನಡೆಸುವ ವಸಾಹತು ವಿರೋಧಿ ದೇಶಗಳಿಗೆ ಭಾರತ ಬೆಂಬಲ ಸೂಚಿಸುತ್ತದೆ. ಅಂದರೆ ಭಾರತ ಎಲ್ಲರ ಸ್ವಾತಂತ್ರ್ಯವನ್ನೂ ಗೌರವಿಸುತ್ತದೆ. ಪ್ರತಿಯೊಬ್ಬರೂ ಸ್ವಯಂ ನಿರ್ಣಯ ಅಧಿಕಾರ ಹೊಂದಿರುವುದರಿಂದ ತಮ್ಮದೇ ಆದ ಪರಮಾಧಿಕಾರವನ್ನು ಹೊಂದಿರುತ್ತಾರೆ. ಅಲ್ಲದೆ, ಅನ್ಯರ ಹಸ್ತಕ್ಷೇಪದ ಆವಶ್ಯಕತೆ ಆ ಜನತೆಗೆ ಇರುವುದಿಲ್ಲ. ಸೇನಾ ಮೈತ್ರಿಕೂಟಗಳಲ್ಲಿ ಹಿರಿಯ ರಾಷ್ಟ್ರಗಳು ಕಿರಿಯ ರಾಷ್ಟ್ರಗಳ ಮೇಲೆ ಪ್ರಭಾವ ಬೀರುವುದರಿಂದ ಕಿರಿಯ ರಾಷ್ಟ್ರಗಳ ವಿದೇಶಾಂಗ ನೀತಿಯಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ.

ಯಾವುದೇ ಗುಂಪು ಇಲ್ಲವೇ ಕೂಟವನ್ನು ಸೇರಲು ಭಾರತ ಬಯಸುವುದಿಲ್ಲ. ಇದು ಭಾರತದ ಮೂಲಭೂತ ನೀತಿ. ಶಾಂತಿ, ಭದ್ರತೆ ಹಾಗೂ ಮಾನವ ಅಭ್ಯುದಯಗಳಿಗಾಗಿ ನಡೆಸುವ ಎಲ್ಲ ಪ್ರಯತ್ನಗಳಲ್ಲಿ ಸಹಕರಿಸಲು ಭಾರತ ಬಯಸುತ್ತದೆ. ಇತರ ದೇಶಗಳೊಡನೆ ಸ್ನೇಹ ಮತ್ತು ಸಹಕಾರ ತತ್ತ್ವಗಳಿಗೆ ಯಾವುದೇ ವಿರೋಧವಿರಕೂಡದು. ದ್ವೇಷ ಹಿಂಸೆಗಳನ್ನು ಭಾರತ ಇಚ್ಛಿಸುವುದಿಲ್ಲ ಮತ್ತು ಅವುಗಳಿಂದ ದೂರವಿರುತ್ತದೆ. ಇತರ ದೇಶಗಳೊಡನೆ ಭಾರತ ಸ್ನೇಹ ಬಯಸುತ್ತದೆ. ಎಲ್ಲರಿಗೂ ಭಾರತದ ಬಾಗಿಲು ತೆರೆದೇ ಇರುತ್ತದೆ. ಹಿರಿಯ ರಾಷ್ಟ್ರಗಳು ಪರಸ್ಪರ ಭೇಟಿ ಮಾಡಿ, ಮಾತುಕತೆಯ ಮೂಲಕ ತಂತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ಭಾರತ ಬಯಸುತ್ತದೆ. ಇತರರು ಏನು ಮಾಡಬೇಕೆಂದು ಸಲಹೆ ನೀಡುವುದು ಭಾರತಕ್ಕೆ ಸೇರಿಲ್ಲವಾದರೂ ಕಳೆದ ಹಲವಾರು ವರ್ಷಗಳಿಂದ ಕಾಣುತ್ತಿರುವ ಅಡ್ಡಿ ಆತಂಕಗಳನ್ನು ತೊಡೆದುಹಾಕಬಹುದಷ್ಟೆ.

ಈ ತತ್ತ್ವಗಳ ಬುನಾದಿಯ ಮೇಲೆ ಭಾರತ ಇತರ ರಾಷ್ಟ್ರಗಳೊಡನೆ ಶಾಂತಿ ಹಾಗೂ ಸಹಕಾರಪೂರ್ಣ ಸಂಬಂಧ ಹೊಂದಿದೆ. ಸಮಾನತೆ, ಪರಸ್ಪರರಲ್ಲಿ ಗೌರವ ಹಾಗೂ ಸಹಬಾಳ್ವೆಯ ತತ್ತ್ವಗಳನ್ನು ಆಧರಿಸುವುದರಿಂದ, ಆಕ್ರಮಣ ಮತ್ತು ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ತಪ್ಪಿಸಿದಂತಾಗುತ್ತದೆ. ಒಂದು ರಾಷ್ಟ್ರ ಇತರ ರಾಷ್ಟ್ರಗಳ ಮೇಲೆ ಅಧಿಕಾರ ನಡೆಸಿದಾಗ, ಇಲ್ಲವೇ ಇತರ ದೇಶಗಳ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿದಾಗ ಬಿಕ್ಕಟ್ಟು ತಲೆದೋರುವುದು ಸ್ವಾಭಾವಿಕ. ಸಂಪೂರ್ಣವಾಗಿ ಮತ್ತು ಪ್ರಾಮಾಣಿಕವಾಗಿ ಎಲ್ಲ ದೇಶಗಳೂ ಪಂಚಶೀಲವನ್ನು ಒಪ್ಪಿಕೊಂಡಾಗ ಎಲ್ಲೆಡೆಯಲ್ಲಿಯೂ ಶಾಂತಿಯುಂಟಾಗಿ ಸಹಕಾರ ಏರ್ಪಡುತ್ತದೆ. ಹಾಗೆಂದ ಮಾತ್ರಕ್ಕೆ ಎಲ್ಲ ದೇಶಗಳೂ ಒಂದೇ ರೀತಿಯಲ್ಲಿರಬೇಕು, ಇಲ್ಲವೇ ಒಂದೇ ರೀತಿಯ ಧ್ಯೇಯಗಳನ್ನು ಅನುಸರಿಸಬೇಕು ಎಂದು ಅರ್ಥವಲ್ಲ. ರಾಷ್ಟ್ರಗಳು ಸ್ನೇಹದಿಂದಿರಬೇಕು. ತನಗೆ ಸರಿ ಎನಿಸಿದ ರೀತಿಯಲ್ಲಿ ಪ್ರಗತಿ ಸಾಧಿಸಲು ಪ್ರತಿಯೊಂದು ರಾಷ್ಟ್ರಕ್ಕೂ ಸ್ವಾತಂತ್ರ್ಯವಿರಬೇಕು. ಭಾರತ ಮತ್ತು ಸೋವಿಯತ್ ದೇಶಗಳಲ್ಲಿ ವಿಭಿನ್ನ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳು ಇದ್ದರೂ ಸೋವಿಯತ್ ದೇಶಗಳಲ್ಲಿ ಭಾರತ ಸ್ನೇಹದಿಂದಲೇ ಇದ್ದು ವಿವಿಧ ರೀತಿಯಲ್ಲಿ ಸಹಕರಿಸುತ್ತದೆ. ಏಕೆಂದರೆ, ಭಾರತ ಇತರ ದೇಶಗಳ ಸ್ವಾತಂತ್ರ್ಯ ಹಾಗೂ ಜೀವನ ಮಾರ್ಗಗಳನ್ನು ಗೌರವಿಸುವುದಲ್ಲದೆ, ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಲು ಬಯಸುವುದಿಲ್ಲ. ಈ ದಿಸೆಯಲ್ಲಿ ಭಾರತದ ಮಹತ್ತರ ಕೊಡುಗೆಯೇ ಪಂಚಶೀಲ. ಶಾಂತಿಯುತ ತೀರ್ಮಾನ ಹಾಗೂ ಅದಕ್ಕಿಂತ ಮಿಗಿಲಾಗಿ, ಹಸ್ತಕ್ಷೇಪ ಮಾಡದೆ ತನ್ನ ಗುರಿಯನ್ನು ತಾನೇ ರೂಪಿಸಿಕೊಳ್ಳುವುದು ಹೊಸದಲ್ಲವಾದರೂ ಅದು ಈಗ ಮುಖ್ಯವಾದ ತತ್ತ್ವವಾಗಿದೆ. ಈ ಪೂರ್ಣ ಸತ್ಯ ಹೊಸದೇನಲ್ಲ. ಆದರೆ, ಹಸ್ತಕ್ಷೇಪ ಮಾಡದಿರಬೇಕೆಂಬ ತತ್ತ್ವಕ್ಕೆ ಹೆಚ್ಚಿನ ಸಮರ್ಥನೆ ಅಗತ್ಯ. ಏಕೆಂದರೆ ಈ ಹಿಂದೆ ಹಿರಿಯ ರಾಷ್ಟ್ರಗಳು ಇತರ ರಾಷ್ಟ್ರಗಳ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿರುವುದಲ್ಲದೆ ಅವುಗಳ ಮೇಲೆ ಒತ್ತಡ ತರುವ ಮೂಲಕ ಅವು ತಮ್ಮ ಕಡೆ ಸೇರುವಂತೆ ಬಯಸುತ್ತಿದ್ದವು. ಇದು ಹಿರಿಯ ದೇಶಗಳ ಆಸಕ್ತಿಯಿಂದ ಆಗುತ್ತಿದ್ದ ಸ್ವಾಭಾವಿಕ ಪರಿಣಾಮ. ಹೀಗೆ ನಡೆದಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದು.

1954ರಲ್ಲಿ ಭಾರತ ಚೀನಗಳ ನಡುವೆ ಆದ ಒಪ್ಪಂದದ ಒಂದು ಅಂಶವಾಗಿ ಪಂಚಶೀಲ ರೂಪುಗೊಂಡರೂ 1955ರ ಬಾಂಡುಂಗ್ ಸಮ್ಮೇಳನದಲ್ಲಿ ಅದು ಸಂಘಟಿತವಾಗಿ ರೂಪುಗೊಂಡಿತು. 1954 ಸೆಪ್ಟೆಂಬರ್ 23ರಂದು ಇಂಡೋನೇಷ್ಯದ ಪ್ರಧಾನಮಂತ್ರಿಯ ಗೌರವಾರ್ಥ ನೀಡಿದ ಸತ್ಕಾರಕೂಟದಲ್ಲಿ ನೆಹರು ಅವರು ಪಂಚಶೀಲ ತತ್ತ್ವವನ್ನು ಪ್ರಚುರಪಡಿಸಿದರು. ಅನಂತರ ವಿಯೆಟ್ನಾಂ ಪ್ರಜಾಸತ್ತಾತ್ಮಕ ಗಣರಾಜ್ಯದ ಅಧ್ಯಕ್ಷ ಹೋಚೀಮಿನ್ ಪಂಚಶೀಲವನ್ನು ಒಪ್ಪಿಕೊಂಡಿರುವುದಾಗಿ ಘೋಷಿಸಿದರು. 1954 ಡಿಸೆಂಬರ್ 22ರಂದು ಯೂಗೊಸ್ಲಾವಿಯವೂ ಇದನ್ನು ಸ್ವೀಕರಿಸಿತು.

ಬರ್ಮ, ಚೀನ, ಲಾವೋಸ್, ನೇಪಾಲ, ವಿಯೆಟ್ನಾಂ ಪ್ರಜಾಸತ್ತಾತ್ಮಕ ಗಣರಾಜ್ಯ, ಯೂಗೊಸ್ಲಾವಿಯ ಹಾಗೂ ಕಾಂಬೋಡಿಯ ದೇಶಗಳು ಪಂಚಶೀಲ ತತ್ತ್ವಕ್ಕೆ ತಮ್ಮ ಒಪ್ಪಿಗೆ ನೀಡಿವೆ ಎಂದು 1955 ಏಪ್ರಿಲ್ 2 ರಂದು ಭಾರತದ ಲೋಕಸಭೆಯಲ್ಲಿ ಘೋಷಿಸ

ಲಾಯಿತು. 1955 ಏಪ್ರಿಲ್ 10ರಂದು ಅಧಿಕೃತವಾಗಿ ದೆಹಲಿಯಲ್ಲಿ ನಡೆದ ಏಷ್ಯನ್ ಸಮ್ಮೇಳನದಲ್ಲಿ ಪರಸ್ಪರರ ಅರಿವಿಗೆ ಪಂಚಶೀಲ ಆಧಾರ ಎಂಬ ನಿರ್ಣಯವನ್ನು ಮಂಡಿಸಿ ಅದಕ್ಕೆ ಬೆಂಬಲ ಸೂಚಿಸಲಾಯಿತು. ಅನಂತರ ಆಫ್ಘಾನಿಸ್ತಾನ, ಸಿರಿಯ, ಟಿಬೆಟ್ ಮತ್ತು ಸೌದಿ ಅರೇಬಿಯ ದೇಶಗಳು ಕೂಡ ಅಂತಾರಾಷ್ಟ್ರೀಯ ಸಂಬಂಧಗಳಿಗೆ ಈ ತತ್ತ್ವಗಳು ಆಧಾರವಾಗಿವೆ ಎಂದು ಪ್ರಶಂಸಿಸಿದುವು.

1955ರಲ್ಲಿ ಬಾಂಡುಂಗ್‌ನಲ್ಲಿ ಸೇರಿದ ಆಫ್ರೊ-ಏಷ್ಯನ್ ರಾಷ್ಟ್ರಗಳ ಸಮ್ಮೇಳನ ಈ ತತ್ತ್ವಗಳನ್ನು ವಿಸ್ತಾರಗೊಳಿಸಿತಲ್ಲದೆ ಮತ್ತಷ್ಟು ಬಲಪಡಿಸಿತು. 1955 ಅಕ್ಟೋಬರ್ 5 ರಂದು ಆಸ್ಟ್ರೇಲಿಯ, ಜೂನ್ 4ರಂದು ಆಸ್ಟ್ರಿಯ, ಜೂನ್ 27ರಂದು ಪೋಲೆಂಡ್ ದೇಶಗಳಿಂದಲೂ ಸೆಪ್ಟೆಂಬರ್ 27ರಂದು ಭಾರತದಲ್ಲಿಯ ಅಮೆರಿಕದ ರಾಯಭಾರಿಯಿಂದಲೂ ಪಂಚಶೀಲದ ಪರವಾಗಿ ಅಭಿಪ್ರಾಯ ವ್ಯಕ್ತಪಟ್ಟಿತು.

ಶಾಂತಿಯುತ ಸಹಜೀವನದ ತತ್ತ್ವಗಳನ್ನು ಭಾರತದ ಸಂವಿಧಾನ ಪ್ರತಿಪಾದಿಸುತ್ತದೆ. ಭಾರತ ಸತತವಾಗಿ ಸಾಂವಿಧಾನಿಕವಾಗಿ ಅಂತಾರಾಷ್ಟ್ರೀಯ ಶಾಂತಿ, ಭದ್ರತೆ ಹಾಗೂ ಮಾನವ ಹಕ್ಕುಗಳಿಗೆ ಬದ್ಧವಾಗಿ ನಡೆದುಕೊಂಡು ಬರುತ್ತಿದೆ. ರಾಷ್ಟ್ರಗಳ ಕೂಟದ ಹಾಗೂ ವಿಶ್ವಸಂಸ್ಥೆಯ ಪ್ರಣಾಳಿಕೆಗಳಲ್ಲಿ ಉಲ್ಲೇಖವಾಗಿರುವ ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ತತ್ತ್ವಗಳನ್ನು ಪಂಚಶೀಲ ಬಲಪಡಿಸಿತು.

ಪಂಚಶೀಲದ ಆದರ್ಶ ದೊಡ್ಡದಾಗಿದ್ದರೂ ವಾಸ್ತವವಾಗಿ, ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಉಳಿಸಲು, ಅದನ್ನು ಎತ್ತಿ ಹಿಡಿಯಲು ಅನೇಕ ದೇಶಗಳು ಸಾಕಷ್ಟು ಪ್ರಯತ್ನಿಸಿಲ್ಲ. ಪಂಚಶೀಲಕ್ಕೆ ಸಹಭಾಗಿಯಾಗಿದ್ದ ಚೀನ 1962ರಲ್ಲಿ ಭಾರತದ ಮೇಲೆ ಧಾಳಿ ಮಾಡಿ ಅದನ್ನು ಉಲ್ಲಂಘಿಸಿದ್ದರಿಂದ ಪಂಚಶೀಲದ ಉಪಯುಕ್ತತೆಯ ಬಗ್ಗೆ ಅದರ ಕರ್ತೃವಾದ ನೆಹರೂ ಅವರೇ ಭ್ರಮನಿರಸನ ಹೊಂದಿದ್ದರು. ಪಂಚಶೀಲ ತತ್ತ್ವವು ತೃತೀಯ ಜಗತ್ತಿನ ರಾಷ್ಟ್ರಗಳ ಪಾಲಿಗೆ ಶಾಂತಿ ಮತ್ತು ಭದ್ರತೆಯ ಪ್ರತೀಕವೆನಿಸಿದ್ದರೂ ಸಹ ಬೃಹತ್ ರಾಷ್ಟ್ರಗಳ ಆಕ್ರಮಣಕ್ಕೆ ತುತ್ತಾದ ತೃತೀಯ ಜಗತ್ತಿನ ರಾಷ್ಟ್ರಗಳ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಲು ಶಕ್ತವಾಗಿಲ್ಲದಿರುವುದು ಸತ್ಯ ಸಂಗತಿ. (ಎಂ.ಎನ್.ಎನ್.)

**ಪಂಚಾಚಾರ್ಯರು:** ಶಿವನ ಪಂಚಮುಖಗಳಿಂದ ಆವಿರ್ಭವಿಸಿದರೆನ್ನಲಾದ ಏಕೋರಾಮ, ಪಂಡಿತಾರಾಧ್ಯ, ರೇವಣ, ಮರುಳಾರಾಧ್ಯ ಮತ್ತು ವಿಶ್ವಾರಾಧ್ಯರೆಂಬ ಹೆಸರಿನ ಐವರು ಆಚಾರ್ಯರು, ವೀರಶೈವ ಧರ್ಮದ ಮೂಲ ಪುರುಷರು; ಪಂಚಪೀಠಗಳಿಗೆ ಅಧಿಪತಿಗಳು. ಇವರ ಉದ್ಭವದ ಬಗ್ಗೆ ಶಿವನು ಪಾರ್ವತಿಗೆ ತಿಳಿಸಿದನೆಂಬ ವಿಷಯ ಸ್ವಾಯಂಭಾವ ಆಗಮದಲ್ಲಿದೆ. ಬಸವಣ್ಣ ಈ ಧರ್ಮದ ಉದ್ಧಾರಕ.

**ರಂಭಾಪುರಿ ಪೀಠ:** ಈ ಪೀಠದ ಮೂಲಪುರುಷರಾದ ಜಗದ್ಗುರು ರೇಣುಕಾಚಾರ್ಯರು ಆಂಧ್ರಪ್ರದೇಶದ ಕೊಲನುಪಾಕದ (ಕೊಲ್ಲಿಪಾಕಿ) ಸೋಮೇಶ್ವರ ಶಿವಲಿಂಗದಿಂದ ಆವಿರ್ಭವಿಸಿದರೆಂದು ಪರಂಪರಾನುಗತವಾಗಿ ಬಂದಿದೆ. ಈ ಪರಂಪರೆಯ ಪ್ರಕಾರ ಕೃತಯುಗದಲ್ಲಿ ಏಕಾಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ಏಕ ವಕ್ತ್ರ ಶಿವಾಚಾರ್ಯ, ದ್ವಾಪರಯುಗದಲ್ಲಿ ರೇಣುಕಾಚಾರ್ಯ ಮತ್ತು ಕಲಿಯುಗದಲ್ಲಿ ರೇವಣಸಿದ್ಧ ಎಂಬ ಹೆಸರುಗಳಿದ್ದವೆಂದು ಸುಪ್ರಭೇದಾಗಮಾಂತರ್ಗತ ಪಂಚಾಚಾರ್ಯ ಪಂಚಮೋತ್ಪತ್ತಿ ಪ್ರಕರಣದಲ್ಲಿ ವೀರಶೈವ ಸದಾಚಾರ ಸಂಗ್ರಹದ ಪ್ರಥಮ ಪ್ರಕರಣದಲ್ಲಿ ಹೇಳಿದೆ. ಅಗಸ್ತ್ಯರಿಗೆ ಜಗದ್ಗುರು ರೇಣುಕಾಚಾರ್ಯರು ವೀರಶೈವ ಸಿದ್ಧಾಂತವಾದ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಉಪದೇಶಿಸಿದರು. ಈ ಉಪದೇಶ ಮಾಡಿದ ಮಲಯಾಚಲ ಪ್ರದೇಶದಲ್ಲಿಯೇ ಆಚಾರ್ಯರು ಪೀಠವನ್ನು ಸ್ಥಾಪಿಸಿದರು. ಅದೇ ಇಂದಿನ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನ ರಂಭಾಪುರಿ ವೀರಸಿಂಹಾಸನ ಮಹಾಪೀಠ.

ವೀರ ಎನ್ನುವ ಪದವನ್ನು ಧರ್ಮ, ಜ್ಞಾನದಲ್ಲಿ ವೀರತನ, ವೀರವೃತ್ತಿ ಮತ್ತು ಶಿವ-ಜೀವದ ಐಕ್ಯದ ವಿಶೇಷ ಅರ್ಥವನ್ನು ಸಾರುವ ಪದವಾಗಿ ವೀರಶೈವರು ಉಪಯೋಗಿಸಿದ್ದಾರೆ. ಶಿವನಲ್ಲಿಯೇ ಅಪಾರವಾದ ನಿಷ್ಠೆಯನ್ನು ಇಡುವುದು, ಎಷ್ಟೇ ತೊಂದರೆಗಳು, ದುಃಖ-ದುಮ್ಮಾನಗಳು ಒದಗಿಬಂದರೂ ವೀರಯೋಧನ ಹಾಗೆ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ತನ್ನ ನಿಷ್ಠೆಯನ್ನು ಕದಲಿಸದೇ ಭಕ್ತಿಯಿಂದ ವರ್ತಿಸುವುದೇ ವೀರ ಪದಕ್ಕಿರುವ ನಿಜವಾದ ಅರ್ಥ. ಪರಶಿವನ ಮೊದಲ ಮುಖವಾದ ಸದ್ಯೋಜಾತ ಮುಖದಿಂದ ಆವಿರ್ಭವಿಸಿದ ಜಗದ್ಗುರು ರೇಣುಕಾಚಾರ್ಯರ ಸಿಂಹಾಸನ ವೀರ ಸಿಂಹಾಸನ.ಈ ಪೀಠಕ್ಕೆ ಒಟ್ಟು 121 ಜಗದ್ಗುರುಗಳು ಆಗಿದ್ದಾರೆ. ಇವರಲ್ಲಿ 29, 113, 118, 119, 120 ಮತ್ತು 121ನೆಯ ಪೀಠಾಧಿಪತಿಗಳು ಪ್ರಮುಖರು.

119ನೆಯ ಪೀಠಾಧಿಪತಿಗಳಾದ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಉತ್ತರ ಕರ್ನಾಟಕದ ಜನತೆಯಲ್ಲಿ ಧರ್ಮಜಾಗೃತಿಯುಂಟು ಮಾಡುವುದಕ್ಕಾಗಿ ಲಕ್ಷ್ಮೇಶ್ವರದ ಹತ್ತಿರ ಮುಕ್ತಿ ಮಂದಿರವನ್ನು ಸ್ಥಾಪಿಸಿದರು. ಈಗಿನ 121ನೆಯ ಜಗದ್ಗುರು ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು. ಪೀಠದಲ್ಲಿ ನಿತ್ಯದಾಸೋಹ, ಪೀಠದ ಸೌಂದರ್ಯ ಹೆಚ್ಚಳ, ಆಡಳಿತ ಚುರುಕುತನ, ಗುರುಕುಲಸ್ಥಾಪನೆ, ಬಡವಿದ್ಯಾರ್ಥಿ ನಿಲಯ, ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ವೀರಶೈವ ಧಾರ್ಮಿಕ ಸಾಹಿತ್ಯ ಪ್ರಕಟಣೆ, ನೂತನ ಯಾತ್ರಾ ನಿವಾಸಗಳ ನಿರ್ಮಾಣ, ಸಮುದಾಯ ಭವನದ ನಿರ್ಮಾಣ ಇವೆ ಮೊದಲಾದ ಜನ ಕಲ್ಯಾಣ ಕಾರ್ಯಕ್ರಮಗಳು ಈ ಪೀಠದಲ್ಲಿ ನಡೆಯುತ್ತಿವೆ.

**ಉಜ್ಜಯಿನಿ ಪೀಠ:** ಜಗದ್ಗುರು ಮರುಳಾರಾಧ್ಯರು ಶಿವನ ವಾಮದೇವ ಮುಖದಿಂದ ವೀರಶೈವ ಧರ್ಮ ಸಂಸ್ಥಾಪನೆಗಾಗಿ ಕ್ಷಿಪ್ರಾನದಿಯ ತಟದಲ್ಲಿರುವ ವಟಕ್ಷೇತ್ರದ ಶ್ರೀ ಸಿದ್ಧೇಶ್ವರ ಲಿಂಗದಿಂದ ಬಂದಿದ್ದಾರೆಂದು ನಂಬಿಕೆ. ಕೃತಯುಗದಲ್ಲಿ ದ್ವ್ಯಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ದ್ವಿವಕ್ತ್ರ ಶಿವಾಚಾರ್ಯ, ದ್ವಾಪರಯುಗದಲ್ಲಿ ದಾರುಕ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಮರುಳಾರಾಧ್ಯ ಶಿವಾಚಾರ್ಯ ಎಂಬ ಹೆಸರುಗಳು ಇವರಿಗೆ ಇದ್ದುದಾಗಿ ಸುಪ್ರಭೇದಾಗಮಾಂತರ್ಗತ ಪಂಚಾಚಾರ್ಯ ಪಂಚಮೋತ್ಪತ್ತಿ ಪ್ರಕರಣದಲ್ಲಿ ವೀರಶೈವ ಸದಾಚಾರ ಸಂಗ್ರಹದಲ್ಲಿದೆ. ಈ ಪೀಠದ ದ್ವಾಪರಯುಗದ ಜಗದ್ಗುರು ದಾರುಕಾಚಾರ್ಯರು ನೈಮಿಷ್ಯಾರಣ್ಯದಲ್ಲಿ ವಾಸಮಾಡುತ್ತಿದ್ದ ದಧೀಚಿಗೆ ಶಿವಾದ್ವಯತ ಬೋಧಿಸಿದರಂತೆ. ಸ್ವಾಯಂಭುವಾಗಮದ ಪ್ರಕಾರ ಜಗದ್ಗುರು ಮರುಳಾರಾಧ್ಯರು ಇಂದಿನ ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ವೀರಶೈವ ಧರ್ಮೋಪದೇಶಕ್ಕಾಗಿ ಒಂದು ಪೀಠವನ್ನು ಸ್ಥಾಪಿಸಿದರು. ಇವರು ಉಜ್ಜಯಿನಿ ರಾಜ ಶ್ರೌತಪಾಲನು ಮಾಡುತ್ತಿರುವ ಯಜ್ಞಯಾಗಾದಿಗಳಲ್ಲಿ ಆಗುವ ಪ್ರಾಣಿ ಬಲಿಯ ಬಗ್ಗೆ ರಾಜನಿಗೆ ಅರಿವನ್ನು ಮೂಡಿಸಿ, ರಾಜದಂಪತಿಗಳಿಗೆ ಶಿವದೀಕ್ಷೆಯನ್ನು ಅನುಗ್ರಹಿಸಿ ವೀರಶೈವ ಪ್ರಮುಖ ತತ್ವಗಳಾದ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಳಗಳ ಅರಿವನ್ನು ಮಾಡಿಕೊಟ್ಟರು. ತದನಂತರ ಬಂದ ಮರುಳಸಿದ್ಧ ಜಗದ್ಗುರುಗಳು ವೀರಸೇನ ಮುಂತಾದ ಜೈನರಾಜರ ಉಪದ್ರವದಿಂದ ಬೇಸತ್ತು, ಜಗದ್ಗುರು ರೇವಣಸಿದ್ಧರ ಸಲಹೆಯ ಮೇರೆಗೆ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಪವಿತ್ರ ಪರಿಸರದಲ್ಲಿ ಉಜ್ಜಯಿನಿ ಸದ್ಧರ್ಮ ಸಿಂಹಾಸನವನ್ನು ಸ್ಥಾಪಿಸಿದರು. ಈ ಪ್ರದೇಶವನ್ನು ಉಜ್ಜಿನಿ ಎಂದು ಕರೆಯಲಾಗಿದೆ. ಆಕಾಲದಿಂದ ಇಲ್ಲಿಯವರೆಗೆ ಈ ಪೀಠದಲ್ಲಿ 110 ಜನ ಪೀಠಾಚಾರ್ಯರಾಗಿದ್ದಾರೆ. ವೀರಶೈವದ ಸ್ವರೂಪ, ಲಕ್ಷಣ, ಅರ್ಥ, ಮಹತ್ವದ ಬೋಧನೆ ಈ ಪೀಠದ ವೈಶಿಷ್ಟ್ಯ. ಇದನ್ನು ಸಂಚಾರ ಮಾಡುತ್ತ ಜನರಲ್ಲಿ ಸದ್ಧರ್ಮ ಜಾಗೃತಿಯನ್ನುಂಟು ಮಾಡುವವರು.

108ನೆಯ ಪೀಠಾಧಿಪತಿಗಳಾದ ಜಗದ್ಗುರು ಸಿದ್ಧಲಿಂಗರು 1916ರಲ್ಲಿ ಸ್ವತಃ 5000ರೂ ಮೂಲನಿಧಿಯೊಡನೆ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಇದು ಇಂದು ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ ಎಂಬ ಹೆಸರಿನಿಂದ ನಾಡಿನ ಹಲವು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿದೆ.

ಪ್ರಸ್ತುತ 111ನೆಯ ಪೀಠಾಧಿಪತಿಯಾದ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯರು ಇಲ್ಲಿ ನಿತ್ಯಾನ್ನ ದಾಸೋಹ, ಉಚಿತ ವಿದ್ಯಾರ್ಥಿ ನಿಲಯದಲ್ಲಿ ಹೆಚ್ಚು ವಿದ್ಯಾರ್ಥಿಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ್ದಾರೆ. ಹತ್ತು ಹಲವು ಸಮಾಜಹಿತಕಾರಕ ಚಟುವಟಿಕೆಗಳು ಇಲ್ಲಿ ನಡೆಯುತ್ತಿವೆ.

**ಕೇದಾರ ಪೀಠ:** ಭಾರತದ ಉತ್ತರ ದಿಕ್ಕಿನಲ್ಲಿರುವ ಹಿಮಾಲಯ ಪರ್ವತದ ತಪ್ಪಲಲ್ಲಿ ಕೇದಾರ ಪೀಠವಿದೆ. ಶಿವನ ಅಘೋರ ಮುಖದಿಂದ ಸಂಜಾತರಾದ ಜಗದ್ಗುರು ಏಕೋರಾಮಾರಾಧ್ಯ ಶಿವಚಾರ್ಯರು ಶಿವನ ಆದೇಶದಂತೆ ದ್ರಾಕ್ಷಾರಾಮ ಕ್ಷೇತ್ರದ ರಾಮನಾಥ ಶಿವಲಿಂಗದಿಂದ ಅವತರಿಸಿದವರು ಎಂದು ಪ್ರತೀತಿ. ಕೃತಯುಗದಲ್ಲಿ ತ್ರ್ಯಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ತ್ರಿವಕ್ತ್ರ ಶಿವಾಚಾರ್ಯ, ದ್ವಾಪರಯುಗದಲ್ಲಿ ಘಂಟಾಕರ್ಣ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಏಕೋರಾಮಾರಾಧ್ಯರೆಂದು ಖ್ಯಾತರಾಗಿದ್ದಾರೆ.

ಸ್ವಾಯಂಭುವಾಗಮದ ಪ್ರಕಾರ ಜಗದ್ಗುರು ಏಕೋರಾಮಾರಾಧ್ಯರು ಹಿಮಾಲಯದಲ್ಲಿ ಧರ್ಮಪ್ರಚಾರಕ್ಕೋಸ್ಕರ ಕೇದಾರ ವೈರಾಗ್ಯ ಸಿಂಹಾಸನ ಪೀಠವನ್ನು ಸ್ಥಾಪಿಸಿದರು. ಈ ಪೀಠ ಉತ್ತರಾಂಚಲ ಪ್ರದೇಶದ ರುದ್ರಪ್ರಯಾಗ ಜಿಲ್ಲೆಯ ಓಖೀಮಠ ಎಂಬಲ್ಲಿದೆ. ಈ ಪೀಠದ ತ್ರ್ಯಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಆ ಕಾಲದ ಸೂರ್ಯವಂಶದ ಮಾಂಧಾತ ಮಹಾರಾಜನಿಗೆ ವೀರಶೈವ ತತ್ವಗಳನ್ನು ಉಪದೇಶಿಸಿದ್ದರು. ಈ ಪೀಠದ ಘಂಟಾಕರ್ಣ ಶಿವಾಚಾರ್ಯ ಮಹಾಸ್ವಾಮಿಗಳು ಕಾಶಿಯಲ್ಲಿ ವ್ಯಾಸಮಹರ್ಷಿಗಳಿಗೆ ವೀರಶೈವ ತತ್ತ್ವೋಪದೇಶ ಮಾಡಿದರು. ಸಧ್ಯ ವ್ಯಾಸಕಾಶಿಯಲ್ಲಿರುವ ವ್ಯಾಸೇಶ್ವರ ಮಂದಿರದಲ್ಲಿ ಇರುವ ಅಂಗೈಯಲ್ಲಿ ಇಷ್ಟಲಿಂಗವನ್ನಿರಿಸಿ ಪೂಜಿಸುವ ಘಂಟಾಕರ್ಣ ಶಿವಾಚಾರ್ಯರ ಶಿಲಾಮೂರ್ತಿಯಿದೆ ಎಂದು ಹೇಳಲಾಗಿದೆ. ವ್ಯಾಸೇಶ್ವರಲಿಂಗ ಸ್ಥಾಪನೆಯ ಬಗ್ಗೆ ಕಾಶಿಖಂಡದ 95ನೆಯ ಅಧ್ಯಾಯದಲ್ಲಿದೆ.

ಹರಿಕೃಷ್ಣ ರತೋಡಿಯವರ ಗಡವಾಲ್ ಕಾ ಇತಿಹಾಸ್ ಎಂಬ ಗ್ರಂಥದಲ್ಲಿ ಈ ಪೀಠಕ್ಕೆ ಈಗ 324 ಜಗದ್ಗುರುಗಳು ಇದ್ದಾರೆ. 1008 ಜಗದ್ಗುರು ಭೀಮ ಶಂಕರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು 324ನೆಯವರು.

ಕೇದಾರ ಪೀಠ ವೈರಾಗ್ಯ ಸಿಂಹಾಸನ ಪೀಠವಾಗಿದೆ. ವೈರಾಗ್ಯವೆಂಬ ಅಂಶ ಶಿವ-ಜೀವರ ಐಕ್ಯದ ಸನ್ನಿವೇಶದಲ್ಲಿ (ಲಿಂಗಾಂಗ ಸಾಮರಸ್ಯದ ಸಂದರ್ಭದಲ್ಲಿ) ಶಿವತತ್ವದ ಪ್ರಾಪ್ತಿಗಾಗಿ, ಶಿವಜ್ಞಾನ, ಶಿವಧ್ಯಾನ, ಶಿವವ್ರತ, ಶಿವಪೂಜೆ ಎನ್ನುವ ಪಂಚಪರಿಕರಗಳನ್ನು ಸಾಧಿಸುವಾಗ ಉಂಟಾಗುವ ಅರಿಷಡ್‌ವರ್ಗಗಳ, ಸುಪ್ತವ್ಯಸನಗಳ ಮತ್ತು ಅಷ್ಟಮದಗಳ ನಿಯಂತ್ರಣವನ್ನು ವೈರಾಗ್ಯವೆಂದು ಹೇಳಲಾಗಿದೆ. ವೈರಾಗ್ಯದ ಸ್ವರೂಪವೇ ಭಗವಂತನೆಂಬ ಭಾವನೆಯೂ ಯಾವತ್ತೂ ಈ ಪೀಠದ ಒಡೆಯರು ಬೋಧಿಸುವ ಮುಖ್ಯ ಪ್ರಣಾಳಿಕೆ. ನೀಲಧ್ವಜ ಈ ಪೀಠದ ಲಾಂಛನಗಳಲ್ಲೊಂದು.

**ಶ್ರೀಶೈಲ ಪೀಠ:** ಆಂಧ್ರ ಪ್ರದೇಶದಲ್ಲಿರುವ ಶ್ರೀ ಶೈಲ ದ್ವಾದಶ ಜ್ಯೋತಿರ್ಲಿಂಗಗಳೊಂದಾದ ಮಲ್ಲಿಕಾರ್ಜುನ ಶಿವಲಿಂಗ ಹಾಗೂ ಭ್ರಮರಾಂಬಾ ದೇವಿಯವರ ಸನ್ನಿಧಾನವಾಗಿದೆ. ಜಗದ್ಗುರು ಪಂಡಿತಾರಾಧ್ಯ ಪೀಠ ಇವೆರಡು ದೇವಸ್ಥಾನಗಳ ಮಧ್ಯದಲ್ಲಿದೆ.

ಸುಪ್ರಭೇದಾಗಮದಲ್ಲಿ ಜಗದ್ಗುರು ಪಂಡಿತಾರಾಧ್ಯರು ಶ್ರೀಶೈಲ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದಿಂದ ದಿವ್ಯದೇಹಧಾರಿಗಳಾಗಿ ಆವಿರ್ಭವಿಸಿ ಶ್ರೀಶೈಲ ಕ್ಷೇತ್ರದಲ್ಲಿಯೇ ಧರ್ಮೋಪದೇಶಕ್ಕಾಗಿ ಒಂದು ಪೀಠವನ್ನು ಸಂಸ್ಥಾಪಿಸಿದರೆಂದು ಹೇಳಿದೆ. ಇದನ್ನು ಶ್ರೀಶೈಲ ಸೂರ್ಯಸಿಂಹಾಸನ ಪೀಠವೆಂದು ಕರೆಯುತ್ತಾರೆ.

ಶಿವನ ತತ್ಪುರುಷ ಮುಖ ಸಂಜಾತರಾದ ಜಗದ್ಗುರು ಪಂಡಿತಾರಾಧ್ಯರು ಪ್ರತಿಯೊಂದು ಯುಗದಲ್ಲೂ ಅವತರಿಸುವರೆಂದು ಭಾವಿಸಲಾಗಿದೆ. ಇವರು ಕೃತಯುಗದಲ್ಲಿ ಜಗದ್ಗುರು ಚತುರಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ಜಗದ್ಗುರು ಚತುರ್ವಕ್ತ್ರ ಶಿವಾಚಾರ್ಯ, ದ್ವಾಪರಯುಗದಲ್ಲಿ ಜಗದ್ಗುರು ಧೇನುಕರ್ಣ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಜಗದ್ಗುರು ಪಂಡಿತಾರಾಧ್ಯ ಶಿವಾಚಾರ್ಯ ಎಂಬ ನಾಮಗಳಿಂದ ಪ್ರಸಿದ್ಧರಾದರೆಂದು ನಿರೂಪಿಸಿದೆ.

ಈ ಪೀಠಕ್ಕೆ ಅನೇಕ ಪೀಠಾಧೀಶರು ಆಗಿಹೋಗಿರುವರೆಂದು ಅವರ ಹೆಸರುಗಳು, ಅವರ ಚರಿತ್ರೆಗಳು ಕಾಲಗರ್ಭದಲ್ಲಿ ಅಡಗಿಹೋಗಿವೆಯೆಂದು ಈಗ ಕೇವಲ 24 ಜಗದ್ಗುರುಗಳ ಹೆಸರುಗಳು ಮಾತ್ರ ಲಭ್ಯವಿದೆಯೆಂದು ಪ್ರತೀತಿ. ಇವರಲ್ಲಿ 4ನೆಯ ಪೀಠಾಧಿಪತಿಯವರಾದ ಶ್ರೀಪತಿ ಪಂಡಿತಾರಾಧ್ಯ ಜಗದ್ಗುರುಗಳು 1060ರಲ್ಲಿದ್ದು ಬ್ರಹ್ಮಸೂತ್ರಗಳಿಗೆ ವೀರಶೈವ ಪರವಾದ ಶಕ್ತಿವಿಶಿಷ್ಟಾದ್ವೈತ ಭಾಷ್ಯವನ್ನು ಬರೆದಿದ್ದಾರೆ. ಅದುವೇ ಶ್ರೀಕರಭಾಷ್ಯ. ಇವರು ಅಗ್ನಿಸ್ತಂಭನ ವಿದ್ಯೆಯನ್ನು ಸಿದ್ಧಿಪಡಿಸಿಕೊಂಡಿದ್ದರಂತೆ.

1791ರ ವರೆಗೆ ಶ್ರೀಶೈಲ ಪೀಠದ ಜಗದ್ಗುರುಗಳವರು ವಿಜಯನಗರದ ಮೊದಲಾದ ಮಹಾರಾಜರಿಗೆ ಶಿವತತ್ತ್ವೋಪದೇಶವನ್ನು ಮಾಡಿದ್ದರೆಂದು ನಂಬಲಾಗಿದೆ. 1793–94ರಲ್ಲಿ ಮುಸ್ಲಿಮರ ದಬ್ಬಾಳಿಕೆಯಿಂದ ಸಂಕಷ್ಟಕ್ಕೆ ಸಿಲುಕಿ ಆಗಿನ ಪೀಠಾಧಿಪತಿಗಳು ಕರ್ನೂಲು, ಆತ್ಮಕೂರು ಮತ್ತು ಗುಂತಕಲ್ಲುಗಳಲ್ಲಿ ಮಠಗಳನ್ನು ಸ್ಥಾಪಿಸಿದರಂತೆ.

23ನೆಯ ಪೀಠಾಧಿಪತಿಗಳಾದ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರ ಕಾಲ ಶ್ರೀ ಪೀಠದ ಗುರುಪರಂಪರೆಯಲ್ಲಿ ಸುವರ್ಣಯುಗವೆಂದು ಪರಿಗಣಿಸಲ್ಪಡುತ್ತದೆ. ಇವರು ಕಾಶಿಯಲ್ಲಿ ಅಧ್ಯಯನ ಮಾಡುತ್ತಿದ್ದಾಗ ಎಲ್ಲರ ಸಹಕಾರದಿಂದ ಕಾಶೀ ವೀರಶೈವ ವಿದ್ವತ್ ಸಂಘವನ್ನು ಪ್ರಾರಂಭಿಸಿದರು. 1936ರಲ್ಲಿ ಗಾಂಧೀಜಿಯವರ ಜೊತೆಗೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಪೀಠದ ಅಭಿವೃದ್ಧಿಗಾಗಿ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ನಿತ್ಯಾನ್ನ ಮಂದಿರವನ್ನು ನಿರ್ಮಾಣ ಮಾಡಿಸಿದರು.

ಶ್ರೀ ಪೀಠದ 24ನೆಯ ಹಾಗೂ ಪ್ರಸ್ತುತ ಪೀಠಾಧಿಪತಿಗಳು ಶ್ರೀ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು. ಇವರು ಶ್ರೀಶೈಲ ಕ್ಷೇತ್ರದಲ್ಲಿರುವ ತೆಲುಗು ವಿಶ್ವವಿದ್ಯಾಲಯದಲ್ಲಿ ವೀರಶೈವ ಸಿದ್ಧಾಂತ ಕುರಿತ ಅಧ್ಯಯನ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದ್ದಾರೆ.

ಸೂರ್ಯ, ಪ್ರಭೆಯ (ಬೆಳಕಿನ) ಸಂಕೇತ. ಪ್ರಭೆಯು ಜ್ಞಾನದ ಅಥವಾ ಸುಜ್ಞಾನದ ಇನ್ನೊಂದು ಮುಖ. ಅಧ್ಯಾತ್ಮರಂಗದಲ್ಲಿ ಅಜ್ಞಾನವನ್ನು ಅಂಧಕಾರಕ್ಕೆ ಹೋಲಿಸಲಾಗಿದೆ. ಅಜ್ಞಾನವನ್ನು ದೂರಸರಿಸಬೇಕಾದರೆ ಸುಜ್ಞಾನ ಅವಶ್ಯ. ಪ್ರಭೆ, ಬೆಳಗು, ಬೆಳಕಿನ ಪುಂಜ, ಪ್ರಭೆಯ ರಾಶಿ, ಇತ್ಯಾದಿ ಪದಗಳು ಪರಶಿವನಿಗೆ ವೀರಶೈವ ದರ್ಶನದಲ್ಲಿ ಪಾರಿಭಾಷಿಕವಾಗಿ ಬಳಸುವರು. ಸೂರ್ಯನ ಬೆಳಕಿನ ಸಮಾನವಾಗಿ ಯಾವ ಬೆಳಕೂ, ತತ್ತ್ವ ಇರಲು ಸಾಧ್ಯವಿಲ್ಲ. ಇಲ್ಲಿ ಪರಶಿವ ಇನ್ನೊಂದು ಅರ್ಥದಲ್ಲಿ ಸೂರ್ಯನ (ಬೆಳಕಿನ ಪುಂಜದ) ರೂಪದಲ್ಲಿ ಕಂಡುಬರುವನು. ಇವರು ಶಾಂತಿ ಮತ್ತು ಪರಿಶುದ್ಧತೆಯ ಪ್ರತೀಕವಾದ ಶ್ವೇತ ವರ್ಣದ ಧರ್ಮಧ್ವಜವನ್ನು ಹೊತ್ತು ಸಂಚರಿಸುತ್ತಾರೆ.

**ಕಾಶಿ ಪೀಠ:** ಸ್ವಾಯಂಭುವಾಗಮದ ಪ್ರಕಾರ ಕಾಶಿಯ ಸುಪ್ರಸಿದ್ಧ ಜ್ಯೋತಿರ್ಲಿಂಗವಾದ ವಿಶ್ವನಾಥ ಶಿವಲಿಂಗದಿಂದ ಮಹಾಶಿವರಾತ್ರಿಯ ದಿವಸ ಜಗದ್ಗುರು ವಿಶ್ವಾರಾಧ್ಯರು ಅವತರಿಸಿದರೆಂದು, ಶಿವನ ಈಶಾನ ಮುಖದಿಂದ ಆವಿರ್ಭವಿಸಿದರೆಂದು, ಕೃತಯುಗದಲ್ಲಿ ಪಂಚಾಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ಪಂಚವಕ್ತ್ರ ಶಿವಾಚಾರ್ಯ, ದ್ವಾಪರಯುಗದಲ್ಲಿ ವಿಶ್ವಕರ್ಣ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ವಿಶ್ವಾರಾಧ್ಯ ಶಿವಾಚಾರ್ಯ ಎಂಬ ಹೆಸರುಗಳಿಂದ ಪ್ರಸಿದ್ಧರಾದರೆಂದು ಹೇಳಲಾಗಿದೆ.

ಕಾಶಿ ಜ್ಞಾನಸಿಂಹಾಸನದ ದ್ವಾಪರಯುಗದ ಆಚಾರ್ಯರಾದ ಜಗದ್ಗುರು ವಿಶ್ವಕರ್ಣ ಶಿವಾಚಾರ್ಯರು ದೂರ್ವಾಸ ಮಹರ್ಷಿಗೆ ವೀರಶೈವ ತತ್ತ್ವೋಪದೇಶ ಮಾಡಿದರೆಂದು ಹೇಳಲಾಗಿದೆ. ಇವರು ಉಪದೇಶ ಮಾಡಿದ ಸ್ಥಾನವೇ ಇಂದಿನ ಜ್ಞಾನಪೀಠ ಅಥವಾ ಜಂಗಮವಾಡಿ ಮಠವೆಂದು ಪ್ರತೀತಿ.

ಕಾಶಿಜಂಗಮವಾಡಿ ಮಠ ಐತಿಹಾಸಿಕ ಶಾಸನಗಳಿಂದ ಕೂಡಿದೆ. ಶ್ರೀ ಕಾಶಿ ಪೀಠಕ್ಕೆ ಕೊಟ್ಟ ದಾನಪತ್ರಗಳಲ್ಲಿ ಕಾಶಿಜಯನಂದದೇವ ಕೊಟ್ಟ ದಾನ ಪತ್ರವೇ ಅತೀ ಪ್ರಾಚೀನವಾಗಿದೆ. ಈ ಶಾಸನದ ಪ್ರಕಾರ ಪೀಠ ಪರಂಪರೆಯ 51ನೆಯ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳಿಗೆ 574ರಲ್ಲಿ ಜಯನಂದ ರಾಜ ಭೂದಾನವನ್ನು ಮಾಡಿದ. 1429 ವರ್ಷದಷ್ಟು ಪ್ರಾಚೀನವಾದ ಈ ದಾನಪತ್ರ ಜಂಗಮವಾಡಿ ಮಠದಲ್ಲಿ ಇಂದಿಗೂ ಇದೆಯೆಂದು ಹೇಳಲಾಗಿದೆ. ನೇಪಾಲದೇಶದ ಭಕ್ತಪುರದಲ್ಲಿಯೂ ಈ ಪೀಠದ ಶಾಖಾ ಜಂಗಮಮಠ ಇದೆ. ನೇಪಾಲ ರಾಜ ವಿಶ್ವಮಲ್ಲ ಪೀಠದ 51ನೆಯ ಪೀಠಾಧಿಪತಿ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರಿಗೆ ಭೂದಾನ ಮಾಡಿದ್ದಾನೆ.

ಕಾಶಿ ಪೀಠದಲ್ಲಿ 85 ಜನ ಜಗದ್ಗುರುಗಳು ಆಗಿ ಹೋಗಿದ್ದಾರೆ. ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಜ್ಞಾನಮಂದಿರವೆಂಬ ಭವ್ಯ ಗ್ರಂಥಾಲಯವನ್ನು ಕಟ್ಟಿಸಿದ್ದಾರೆ. 85ನೆಯ ಪೀಠಾಧ್ಯಕ್ಷರಾಗಿ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಪುಣೆಯಲ್ಲಿ ವಿಶ್ವಾರಾಧ್ಯ ವಿದ್ಯಾರ್ಥಿ ನಿಲಯ ಹಾಗೂ ಮಂಗಳವೇಡೆಯಲ್ಲಿ ವಿಶ್ವಾರಾಧ್ಯ ಭೋಜನಾಲಯವನ್ನು ಸ್ಥಾಪಿಸಿದ್ದಾರೆ.

ಶ್ರೀಪೀಠದ 86ನೆಯ ಜಗದ್ಗುರುಗಳಾದ ಚಂದ್ರಶೇಖರ ಶಿವಾಚಾರ್ಯರ ಕಾಲದಲ್ಲಿ ಕಾಶೀಪೀಠದ ಇತಿಹಾಸದಲ್ಲಿ ಧಾರ್ಮಿಕ, ಶೈಕ್ಷಣಿಕ ಸಾಹಿತ್ಯಕ ಹಾಗೂ ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಶ್ರೀ ಸಿದ್ಧಾಂತ ಶಿಖಾಮಣಿ ಸಮೀಕ್ಷೆ ಎಂಬ ಸಂಶೋಧನ ಪ್ರಬಂಧಕ್ಕೆ ವಿದ್ಯಾವಾರಿಧಿ (ಪಿಎಚ್.ಡಿ.) ಪದವಿಯನ್ನೂ ಶಕ್ತಿ ವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶಃ ಎಂಬ ಮಹಾ ಪ್ರಬಂಧಕ್ಕೆ ಡಿ.ಲಿಟ್. ಪದವಿಯನ್ನೂ ಇವರು ಪಡೆದರು. ಜಗದ್ಗುರುಗಳು ಜಂಗಮವಾಡಿ ಮಹಾಮಠದಲ್ಲಿ ಜನಕಲ್ಯಾಣಾರ್ಥವಾಗಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದರೊಂದಿಗೆ ಪೀಠದಲ್ಲಿ ವಿಶ್ವಾರಾಧ್ಯ ಮಂದಿರ, ಭಕ್ತನಿವಾಸ, ಯಾತ್ರಾ ನಿವಾಸಗಳನ್ನು ನಿರ್ಮಿಸಿದ್ದಾರೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪಾಂಡಿತ್ಯವಿರುವ ಇವರು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಪ್ರವಚನ ಪ್ರವೀಣರು.

ಶ್ರೀ ಜಗದ್ಗುರು ಜ್ಞಾನ ಸಿಂಹಾಸನ ಮಹಾಪೀಠ ಇಂದಿನ ಕಾಶಿ ಕ್ಷೇತ್ರದಲ್ಲಿ ಸ್ಥಾಪಿತವಾಗಿದೆ. ಜ್ಞಾನವೆಂದರೆ, ಪರಶಿವ, ದೇವರು ಅಂತರಂಗದ ಜ್ಞಾನದ ಸ್ವರೂಪನಾದ ಗುರು ಮಾರ್ಗದರ್ಶನ ಆವಶ್ಯಕ, ಜ್ಞಾನದ ನಿಧಿಯೇ ಆದ ಪರಶಿವನೇ ಒಂದು ರೀತಿಯಲ್ಲಿ ಗುರು. ನಮಗೆ ಎಲ್ಲಿ, ಯಾವಾಗ ಜ್ಞಾನ ಉತ್ಪತ್ತಿಯಾಗುತ್ತದೆಯೋ ಅದುವೇ ನಮಗೆ ಪರಶಿವನ ಸ್ವರೂಪದ ಉತ್ಪತ್ತಿ. ವೀರಶೈವ ದರ್ಶನದಲ್ಲಿ ಪರಶಿವನಿಗೆ ಇರುವ ಪಾರಿಭಾಷಿಕ ಮತ್ತೊಂದು ಪದವೇ ಜ್ಞಾನ ಅಲೌಕಿಕ ಜ್ಞಾನವನ್ನು ಮಾತ್ರ ಜ್ಞಾನವೆಂದು ಪರಿಗಣಿಸಬೇಕಾಗುವುದು. ಈ ಅಲೌಕಿಕ ಜ್ಞಾನ ನಮ್ಮನ್ನು ಧರ್ಮವಂತರನ್ನಾಗಿ, ನೀತಿವಂತರನ್ನಾಗಿ, ಆಧ್ಯಾತ್ಮ ಜೀವಿಗಳನ್ನಾಗಿ ಮಾಡುತ್ತದೆ. ಜ್ಞಾನದ ಹಳದಿ ಧ್ವಜವನ್ನು ಹಿಡಿದು ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿರುವರು. (ಎ.ಎ.ಪಿ.)

**ಪಟ್ಟದಕಲ್ಲು:** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಪೂರ್ವಕ್ಕೆ 22ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಎಡದಂಡೆಯಲ್ಲಿರುವ ಗ್ರಾಮ. ಹಿಂದೆ ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಪ್ರಸಿದ್ಧವಾಗಿದ್ದ ಐತಿಹಾಸಿಕ ಸ್ಥಳ. ಇಲ್ಲಿರುವ ಬಾದಾಮಿಯ ಚಳುಕ್ಯರ ಕಾಲದ ದೇವಾಲಯಗಳಿಂದ ಪ್ರಾಮುಖ್ಯತೆ ಪಡೆದಿದ್ದು ಈಗ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ. ಯುನೆಸ್ಕೊ ಸಂಸ್ಥೆ ಇದನ್ನು ವಿಶ್ವ ಪರಂಪರೆ ಸ್ಮಾರಕವೆಂದು ಘೋಷಿಸಿದೆ. ಇಲ್ಲಿಗೆ ಬಾದಾಮಿ ಮತ್ತು ಐಹೊಳೆಗಳಿಂದ ಉತ್ತಮ ಮಾರ್ಗ ಸಂಪರ್ಕವಿದೆ. (ಡಿ.ಎಸ್.ಜೆ.)

ಪಟ್ಟದಕಲ್ಲಿನ ಪ್ರದೇಶ ಪ್ರಾಗಿತಿಹಾಸದ ಕಾಲದಿಂದಲೂ ಜನವಸತಿಯುಳ್ಳದ್ದಾಗಿತ್ತು. ಇಲ್ಲಿಯ ಮಲಪ್ರಭಾನದಿಯ ಪಾತ್ರದಲ್ಲಿ ಹಳೆಯ ಶಿಲಾಯುಗದ ಶಿಲೋಪಕರಣಗಳು ದೊರಕುವುದುಂಟು. ಈ ಗ್ರಾಮಕ್ಕೆ ಒಂದು ಕಿಮೀ ಪಶ್ಚಿಮದಲ್ಲಿ ಬಾಚನಗುಡ್ಡ ಗ್ರಾಮದ

ಚಳುಕ್ಯ ದೇವಾಲಯ ಸಮೂಹ

ಬಳಿ ಬೃಹತ್ ಶಿಲಾಸಮಾಧಿಗಳೂ ಅಲ್ಲಿಂದ ಸ್ವಲ್ಪ ದೂರದಲ್ಲಿ ಆದಿಚಾರಿತ್ರಿಕ ಕಾಲದ ಒಂದು ನೆಲೆಯೂ ಇವೆ. ಚಳುಕ್ಯ ಪೂರ್ವ (ಬಹುಶಃ ಕದಂಬ) ಕಾಲಕ್ಕೆ ಸಂಬಂಧಿಸಿದ ಕೆಲವು ಇಟ್ಟಿಗೆಯ ಕಟ್ಟಡಗಳ ಅವಶೇಷಗಳೂ ಪಟ್ಟದಕಲ್ಲಿನಲ್ಲಿ ದೊರಕಿವೆ. ಸಂಗಮೇಶ್ವರ ದೇವಾಲಯ ಮತ್ತು ಜೈನದೇವಾಲಯದ ಬಳಿಯಲ್ಲಿ ನಡೆಸಿದ ಉತ್ಖನನಗಳಿಂದ ಈ ಕಟ್ಟಡಗಳು ಬೆಳಕಿಗೆ ಬಂದುವು. ಪ್ರ.ಶ.2ನೆಯ ಶತಮಾನದಲ್ಲಿದ್ದ ಗ್ರೀಕ್ ಭೂಗೋಳಕಾರ ಟಾಲಮಿ ವ್ಯಾಪಾರ ಸ್ಥಳಗಳಲ್ಲಿ ಒಂದೆಂದು ಹೆಸರಿಸಿರುವ ಪೆತ್‌ರ್ಗಲ್ ಈ ಪಟ್ಟದಕಲ್ಲು ಎಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಪಟ್ಟದಕಲ್ಲು ವಿಶೇಷ ಪ್ರಾಮುಖ್ಯತೆಯನ್ನು

ಪಡೆದದ್ದು ಬಾದಾಮಿಯ ಚಳುಕ್ಯರ ಕಾಲದಲ್ಲಿ; ಅದರಲ್ಲೂ 7–8ನೆಯ ಶತಮಾನಗಳಲ್ಲಿ. ಚಳುಕ್ಯ ವಿನಯಾದಿತ್ಯನ ಒಂದು ಶಾಸನ ಇದನ್ನು ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಕರೆದಿದೆ. ಈ ಪ್ರದೇಶದ ಸುತ್ತ ನಸುಗೆಂಪು ಬಣ್ಣದ ಕಲ್ಲುಗುಡ್ಡಗಳು ಇರುವುದರಿಂದ ಕಿಸುವೊಳಲ್ ಎಂದೂ ಚಳುಕ್ಯ ಸಮ್ರಾಟರು ಇಲ್ಲಿ ತಮ್ಮ ಪಟ್ಟಬಂಧ ಮಹೋತ್ಸವವನ್ನು ನೆರವೇರಿಸಿಕೊಳ್ಳುತ್ತಿದ್ದರಿಂದ ಪಟ್ಟದ ಕಿಸುವೊಳಲ್ ಎಂದೂ ಹೆಸರಾಗಿದ್ದಂತೆ ತೋರುತ್ತದೆ. ಇಲ್ಲಿ ರಾಜರು ಪಟ್ಟಾಭಿಷಿಕ್ತ ರಾಗುತ್ತಿದ್ದ ವಿಷಯ 11–12ನೆಯ ಶತಮಾನದ ಶಾಸನಗಳಲ್ಲಿ, ಸಿಂಗರಾಜಪುರಾಣ (ಸು.1500) ಮತ್ತು ಹಮ್ಮೀರ ಕಾವ್ಯ (ಸು.1540) ಈ ಗ್ರಂಥಗಳಲ್ಲಿ ವರ್ಣಿತವಾಗಿದೆ. ಇಲ್ಲಿ ಮಲಪ್ರಭಾನದಿ ಉತ್ತರಗಾಮಿಯಾಗಿರುವುದರಿಂದ ಈ ಸ್ಥಳ ತೀರ್ಥಕ್ಷೇತ್ರವೆಂದು ಪರಿಗಣಿತವಾಗಿದ್ದು, ಸಮೀಪದ ರಾಜಧಾನಿ ಬಾದಾಮಿಯಲ್ಲಿದ್ದ ಅರಸರು ಇಲ್ಲಿ ಪಟ್ಟಬಂಧೋತ್ಸವವನ್ನು ಮಾಡಿಕೊಳ್ಳುತ್ತಿದ್ದರೆ ಆಶ್ಚರ್ಯವಿಲ್ಲ. 1162ರ ಶಾಸನವೊಂದು ಕಿಸುವೊಳಲನ್ನು ದಕ್ಷಿಣದ ಕಾಶಿಯೆಂದು ಹೇಳಿದೆ. ಈ ಊರು ಕೆಲವು ಚಳುಕ್ಯ ಅರಸರ ಕಾಲದಲ್ಲಿ ರಕ್ತಪುರ (ಕಿಸುವೊಳಲ್‌ನ ಸಂಸ್ಕೃತ ರೂಪ) ಎಂಬ ಅಭಿಧಾನದಿಂದ ಒಂದು ರಾಜಧಾನಿಯಾಗಿತ್ತೆಂದೂ ಕೆಲವು ಕಾಲ ನೆಲೆವೀಡಾಗಿತ್ತೆಂದೂ ಕೆಲವು ಚಳುಕ್ಯ ಶಾಸನಗಳಿಂದ ತಿಳಿದುಬರುತ್ತದೆ. ಇದೇ ಕಾರಣದಿಂದಾಗಿ ಈ ಊರಿನಲ್ಲಿ ತತ್ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಿತವಾದುವು.

ಮಲ್ಲಿಕಾರ್ಜುನ ದೇವಾಲಯದ ಮುಂದಿರುವ 8ನೆಯ ಶತಮಾನದ ಶಾಸನ ಸ್ತಂಭ

ಅನಂತರ ರಾಷ್ಟ್ರಕೂಟರ ಕಾಲದಲ್ಲೂ ಈ ಊರು ಪ್ರಸಿದ್ಧ ಸ್ಥಳವಾಗಿರಬೇಕೆಂಬುದು ಕವಿರಾಜಮಾರ್ಗದಲ್ಲಿ ತಿರುಳ್ಗನ್ನಡ ಸೀಮೆಯನ್ನು ವರ್ಣಿಸುವ ಪಟ್ಟಿಯಲ್ಲಿ ಬರುವ ಕಿಸುವೊಳಲ ಹೆಸರಿನಿಂದ ಊಹಿಸಬಹುದಾಗಿದೆ. ರಾಷ್ಟ್ರಕೂಟ ಕಲಿವಲ್ಲಭನ ಕಾಲದ ಶಾಸನವೊಂದು ವಿರೂಪಾಕ್ಷ ದೇವಾಲಯದ ಉತ್ತರ ದಿಶೆಯ ಮುಖಮಂಟಪದಲ್ಲಿದೆ. ಮುಂದೆ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಊರು ಕಿಸುಕಾಡು 70 ಎಂಬ ಚಿಕ್ಕ ಪ್ರಾಂತದ ಮುಖ್ಯಸ್ಥಳವಾಗಿತ್ತು. ಆ ಕಾಲದ ಕೆಲವು ಶಾಸನಗಳಲ್ಲಿ ಅಂದಿನ ರಾಜ ಮಾಂಡಳಿಕರು ಇಲ್ಲಿನ ದೇವಾಲಯಗಳಿಗೆ ದತ್ತಿಕೊಟ್ಟ ವಿವರಗಳು ದೊರಕುತ್ತವೆ. 2ನೆಯ ಸೋಮೇಶ್ವರನ (ಭುವನೈಕಮಲ್ಲ) 1070ರ ಶಾಸನವೊಂದರಲ್ಲಿ ಆತ ಕಿಸುವೊಳಲಿನ ಮೂಲಸ್ಥಾನ ದೇವರಿಗೆ 12 ಮತ್ತರು ಭೂಮಿಯನ್ನು ದತ್ತಿ ಬಿಟ್ಟ ವಿಷಯ ಬರೆದಿದೆ. ಪಟ್ಟದಕಲ್ಲಿನಲ್ಲಿ ಪಟ್ಟಾಭಿಷೇಕೋತ್ಸವ ನಡೆಯುತ್ತಿದ್ದುದನ್ನು ತಿಳಿಸಿದೆ. 1162ರ ಶಾಸನವೊಂದರಿಂದ ಈ ಭೂಭಾಗ ಎರಂಬರಗೆಯ ಸಿಂದರ ಆಡಳಿತಕ್ಕೊಳಪಟ್ಟಿತ್ತು. ಆ ಮನೆತನದ ಮಹಾಮಂಡಲೇಶ್ವರ 2ನೆಯ ಚಾವುಂಡರ ಪತ್ನಿ ದೇಮಲದೇವಿಯ ಪುತ್ರ ಆಚುಗಿ ಪಟ್ಟಣದ ಕಿಸುವೊಳಲನ್ನು ಕುಮಾರವೃತ್ತಿಯಿಂದ ವಿಶ್ವೇಶ್ವರನಿಗೆ ಸಮನೆನಿಸಿದ ವಿಜಯೇಶ್ವರ ದೇವರಿಗೆ 300 ಮತ್ತರ ಭೂಮಿಯನ್ನು ದತ್ತಿ ಬಿಟ್ಟಳು. ಕಲ್ಯಾಣದ ಚಾಳುಕ್ಯರ ಕಾಲದ ಅನಂತರ ಪಟ್ಟದಕಲ್ಲು ತನ್ನ ಉತ್ತಮಸ್ಥಿತಿಯನ್ನು ಕಳೆದುಕೊಳ್ಳಲಾರಂಭಿಸಿ ಕ್ರಮೇಣ ಈಗಿನ ಚಿಕ್ಕ ಗ್ರಾಮವಾಗಿ ಪರಿಣಮಿಸಿತು.

ಪಟ್ಟದಕಲ್ಲಿನ ಹಿರಿಮೆಗರಿಮೆಗಳಿಗೆ ಕಾರಣ ಇಲ್ಲಿಯ ದೇವಾಲಯಗಳು. ಈ ದೇವಾಲಯಗಳು ಕರ್ನಾಟಕದ ವಾಸ್ತುಶಿಲ್ಪ ಬೆಳೆವಣಿಗೆಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಭಾರತದಲ್ಲಿ ಕಂಡು ಬರುವ ಎರಡು ಪ್ರಮುಖ ವಾಸ್ತು ಪ್ರಕಾರಗಳಾದ ದ್ರಾವಿಡ ಮತ್ತು ನಾಗರ ರೀತಿಯ ದೇವಾಲಯಗಳು ಒಟ್ಟಿಗೆ ಈ ಸ್ಥಳದಲ್ಲಿ ಕಂಡುಬರುವುದು ಇಲ್ಲಿಯ ವಿಶೇಷ. ಸೌಂದರ್ಯ ದೃಷ್ಟಿಯಿಂದಲೂ ಈ ದೇವಾಲಯಗಳು ಉನ್ನತಮಟ್ಟದವು. ಹಿಂದೆ ಪಟ್ಟದಕಲ್ಲು ತೀರ್ಥಕ್ಷೇತ್ರವೆಂದೂ ಹೆಸರುಗಳಿಸಿತ್ತಾಗಿ ಈ ದೇವಾಲಯಗಳು ಬಹುಜನರನ್ನು ಆಕರ್ಷಿಸುತ್ತಿದ್ದಿರಬೇಕು. ಇಲ್ಲಿ ಈಗ ಸುಮಾರು ಹತ್ತು ದೇವಾಲಯಗಳು ಬಹುಪ್ರಸಿದ್ಧ. ಅವುಗಳಲ್ಲಿ ಒಂಬತ್ತು ಶೈವ, ಒಂದು ಜೈನ, ಜಿನಾಲಯ ಊರ ಹೊರಗೆ ಬಾದಾಮಿಯ ದಾರಿಯಲ್ಲಿದೆ. ಉಳಿದ ಒಂಬತ್ತು ದೇವಾಲಯಗಳೂ ನದಿಯ ದಂಡೆಗುಂಟ ದಕ್ಷಿಣದಿಂದ ಉತ್ತರಕ್ಕೆ ಹಬ್ಬಿಕೊಂಡಿವೆ.

ಪಟ್ಟದಕಲ್ಲಿನ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯದ ಬಹು ಸುಂದರವೂ ದೊಡ್ಡದೂ ಆದ ಕೃತಿ. ಚಳುಕ್ಯ ಇಮ್ಮಡಿ ವಿಕ್ರಮಾದಿತ್ಯ (733–45) ಮೂರು ಸಲ ಪಲ್ಲವರನ್ನು ಸೋಲಿಸಿ ಕಂಚಿಯನ್ನು ಆಕ್ರಮಿಸಿಕೊಂಡಿದ್ದರ ಜ್ಞಾಪಕಾರ್ಥವಾಗಿ ಅವನ ಒಬ್ಬ ರಾಣಿ ಲೋಕಮಹಾದೇವಿ ಈ ದೇವಾಲಯವನ್ನೂ ಇನ್ನೊಬ್ಬ ರಾಣಿ ಈ ದೇವಾಲಯದ ಪಕ್ಕದಲ್ಲಿರುವ ಮಲ್ಲಿಕಾರ್ಜುನ ದೇವಾಲಯವನ್ನೂ ಕಟ್ಟಿಸಿದರೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ (**ನೋಡಿ–ಚಾಳುಕ್ಯ ವಂಶ**).

ಪಟ್ಟದಕಲ್ಲಿನಲ್ಲಿ ಸು.30 ಶಾಸನಗಳು ಇದುವರೆಗೆ ದೊರೆತಿವೆ. ಇವುಗಳಲ್ಲಿ ಕೆಲವನ್ನು ಕಂಬಗಳಲ್ಲಿ, ಗೋಡೆಗಳಲ್ಲಿ, ತೊಲೆಗಳಲ್ಲಿ ಮತ್ತು ಶಿಲ್ಪಗಳ ಪಾದಪೀಠದಲ್ಲಿ ಕೆತ್ತಿದ್ದಾರೆ. ಅವು ಪಟ್ಟದಕಲ್ಲಿನ ದೇವಾಲಯಗಳ ರೂವಾರಿಗಳನ್ನು ಹೆಸರಿಸುತ್ತವಲ್ಲದೆ, ಆ ದೇವಾಲಯಗಳ ನಿರ್ಮಾಣಕ್ಕೆ ಕಾರಣ, ದಾನದತ್ತಿಗಳು ಇತ್ಯಾದಿಗಳನ್ನೂ ಜೊತೆಗೆ ವಿವರಿಸುತ್ತವೆ ಗಂಗಾತಟದ ಮೃಗಥಣಿಕಾದಿಂದ ಬಂದ ಜ್ಞಾನಶಿವಾಚಾರ್ಯನ ವಿಷಯವನ್ನು ತಿಳಿಸುವ ಪ್ರಸಿದ್ಧವಾದ ಪಟ್ಟದಕಲ್ಲು ಸ್ತಂಭಶಾಸನ ಮಲ್ಲಿಕಾರ್ಜುನ ದೇವಾಲಯದ ಸ್ವಲ್ಪ ಮುಂದೆ ಇದೆ.

ಒಂದು ಕಾಲದಲ್ಲಿ ಪವಿತ್ರ ಸ್ಥಳವೆಂದು ಪರಿಗಣಿತವಾಗಿದ್ದು, ಪಟ್ಟದ ಸ್ಥಾನವಾಗಿದ್ದ ಪಟ್ಟದಕಲ್ಲು ಕಲಾರಸಿಕರಿಗೆ ಹಾಗೂ ವಾಸ್ತುಶಿಲ್ಪ ವಿದ್ಯಾರ್ಥಿಗಳಿಗೆ ಇಂದಿಗೂ ಆಕರ್ಷಣೀಯ ಸ್ಥಾನವಾಗಿದೆ. ಒಂದೇ ಕಡೆ ನಾಗರ ಮತ್ತು ದ್ರಾವಿಡ ಮಾದರಿಗಳ ಉತ್ತಮ ದೇವಾಲಯಗಳನ್ನು ಕಟ್ಟಿರುವ ಏಕೈಕ ಸ್ಥಳ ಪಟ್ಟದಕಲ್ಲು. ಅಲ್ಲದೆ ಇದು ಚಳುಕ್ಯ ಶೈಲಿಯ ಕೊನೆಯ ಘಟ್ಟದ ಮಹೋನ್ನತ ಕೃತಿಗಳನ್ನೂ ಹೊಂದಿರುವ ಸ್ಥಳ. ಒಬ್ಬ ವಿದ್ವಾಂಸರ ಪ್ರಕಾರ ಇಲ್ಲಿನ ಶಿಲ್ಪಗಳು ಇಡೀ ಪಶ್ಚಿಮ ಭಾರತದಲ್ಲೇ ಅನುಪಮವಾದ ಸೌಂದರ್ಯವುಳ್ಳವು. *

**ಉತ್ಖನನ:** ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಧಾರವಾಡ ವಿಭಾಗ ಇಲ್ಲಿ ಮಲಪ್ರಭ ನದಿ ಎಡದಂಡೆಯ ಮೇಲಿರುವ ನೆಲೆಯಲ್ಲಿ ಉತ್ಖನನ ನಡೆಸಿತು (2003–2005). ಮೂರು ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು: ಬೃಹತ್‌ಶಿಲಾ–ಕಬ್ಬಿಣ ಯುಗ (ಪ್ರ.ಶ.ಪೂ.1000–300), ಆದಿಚಾರಿತ್ರಿಕ ಕಾಲ ಮತ್ತು ಉತ್ತರಕಾಲೀನ ಇತಿಹಾಸ ಕಾಲ (ಪ್ರ.ಶ.ಪೂ.3–ಪ್ರ.ಶ. 6ನೆಯ ಶತಮಾನ).

ನದಿಗೆ ಸಮೀಪದಲ್ಲಿ ಮೂರು ವಿಶಾಲ ನೈಸರ್ಗಿಕ ಸಮತಟ್ಟುಗಳಿದ್ದು ಮಧ್ಯದ ಸಮತಟ್ಟಿನಲ್ಲಿ ಬೃಹತ್‌ಶಿಲಾ–ಕಬ್ಬಿಣಯುಗದ ವಸತಿ ಅವಶೇಷಗಳಿವೆ. ಈ ಹಂತದಲ್ಲಿ ಆದಿ ಮತ್ತು ಅಂತ್ಯ ಉಪಹಂತಗಳನ್ನು ಗುರುತಿಸಲಾಗಿದೆ. ಚಿಕ್ಕಚಿಕ್ಕ ದುಂಡುಕಲ್ಲುಗಳಿಂದ ಕಟ್ಟಲಾದ ಏರಿ ಅಥವಾ ಅಡ್ಡಕಟ್ಟೆ ಅಂತ್ಯ ಹಂತದ ಗಮನಾರ್ಹ ಅವಶೇಷ. ಈ ಕಟ್ಟೆಯ ಒಟ್ಟು ಉದ್ದ 82.5ಮೀ. ಇದು ಇನ್ನೂ ವಿಸ್ತೃತವಾಗಿರಬಹುದು. ಸಮೀಪದ ಗುಡ್ಡಗಳಿಂದ ಹರಿದುಬರುವ ಮಳೆ ನೀರನ್ನು ತಡೆಹಿಡಿಯಲು ಈ ಕಟ್ಟೆಯನ್ನು ಕಟ್ಟಲಾಗಿತ್ತು. ಕೆರೆಯ ನೀರು ಮನೆವಾರ್ತೆಗೆ ಬಳಕೆಯಾಗುತ್ತಿತ್ತು. ಈ ಕಾಲದ ನೆಲೆಯಲ್ಲಿ ಕೆರೆಏರಿಯೊಂದು ಸ್ತರ ಸಂದರ್ಭದಲ್ಲಿ ಕಾಣಸಿಗುತ್ತಿರುವುದು ಇದೇ ಮೊದಲು. ಮಣ್ಪಾತ್ರೆ, ಸುಟ್ಟಮೂಳೆಯ ತುಂಡುಗಳು, ಒಲೆ/ಅಗ್ಗಿಷ್ಟಿಕೆಗಳು, ಬೂದಿ, ಸುಟ್ಟಮಣ್ಣಿನ ಗಟ್ಟಿ ಇವು ಇತರ ಸಾಂಸ್ಕೃತಿಕ ಅವಶೇಷಗಳು. ಇವಲ್ಲದೆ ಮೊದಲ ಬಾರಿಗೆ ಎರಡು ಸುಡಾವೆ ಮಣ್ಣಿನ ಮನುಷ್ಯಾಕೃತಿಯ ಗೊಂಬೆಗಳೂ ದೊರೆತಿವೆ.

ಮೇಲಿನ ಸಮತಟ್ಟಿನಲ್ಲಿರುವ ಆದಿಚಾರಿತ್ರಿಕ ಕಾಲದ ವಸತಿ ಪದರದಲ್ಲಿ ಆಯತಾಕಾರದ ಮನೆಯ ತಳಗಟ್ಟುಗಳು ಕಂಡುಬಂದಿವೆ. ಒಂದು ಮನೆಯ ಮಧ್ಯದಲ್ಲಿ ಅಂಗಳವಿದ್ದು ಸುತ್ತಲೂ ಕೋಣೆಗಳಿವೆ. ಮಣ್ಪಾತ್ರೆ, ಒಲೆ, ಗುಂಡಿಗಳು, ಜಾನುವಾರು, ಹಕ್ಕಿ, ಮೀನು–ಇವುಗಳ ಮೂಳೆ ಮತ್ತು ಸಿಹಿನೀರಿನ ಕಪ್ಪೆಚಿಪ್ಪುಗಳನ್ನೊಳಗೊಂಡ ತಿಪ್ಪೆರಾಶಿ–ಇವು ಇಲ್ಲಿಯ ಅವಶೇಷಗಳು. ಒಂದರಮೇಲೊಂದಿರುವ ಗಟ್ಟಿ ನೆಲದಂತಹ ಪದರಗಳು ಇಲ್ಲಿ ಕಂಡುಬಂದಿವೆ. 25ಮೀ ಉದ್ದ, 3ಮೀ ಅಗಲದ ಈ ಗಟ್ಟಿ ಪದರಗಳು ರಸ್ತೆಯೊಂದರ ಅಳಿದುಳಿದ ಭಾಗವಿರಬೇಕು. ಇದರ ಅಂಚಿನುದ್ದಕ್ಕೆ ಸುಣ್ಣ, ಕಬ್ಬಿಣದ ಅದಿರು, ಕಿಟ್ಟ ಮತ್ತು ಸುಟ್ಟಮಣ್ಣಿನುಂಡೆಗಳು ದೊರೆತಿರುವುದರಿಂದ ಇವು ಕುಲುಮೆಗೆ ಸಂಬಂಧಿಸಿದ ಚಟುವಟಿಕೆಗಳು ಇಲ್ಲಿ ನಡೆಯುತ್ತಿದ್ದುದನ್ನು ಸೂಚಿಸುತ್ತವೆ. ಮಣ್ಪಾತ್ರೆಗಳಲ್ಲಿ ಹೊಳಪಿನ ಕೆಂಪು ಮತ್ತು ಮಾಸಲುಗೆಂಪು, ಕಪ್ಪುಬಣ್ಣದ, ಕಪ್ಪು ಮತ್ತು ಕೆಂಪು ದ್ವಿವರ್ಣ ಮತ್ತು ಕೆಂಪು ಲೇಪನದಡಿ ಬಿಳಿಯ ಚಿತ್ರವುಳ್ಳ ಪಾತ್ರೆಗಳಿವೆ. ಅರೆಪ್ರಶಸ್ತ ಕಲ್ಲಿನ ಮಣಿಗಳು, ಶಂಖದ ಬಳೆಗಳು, ಸುಟ್ಟಮಣ್ಣಿನ ಗೊಂಬೆಗಳು ಮತ್ತು ಕಬ್ಬಿಣದ ಉಪಕರಣಗಳು ಪ್ರಮುಖ ಸಾಂಸ್ಕೃತಿಕ ವಸ್ತುಗಳು. ಬೆಳ್ಳಿಯ ಮುದ್ರಾಂಕಿತ ನಾಣ್ಯಗಳು ಹಾಗೂ ಬರೆಹವಿರುವ ಅಥವಾ ಇಲ್ಲದಿರುವ ಮಹಾರಥಿ ರಾಜಮನೆತನಕ್ಕೆ ಸೇರಿದ ತಾಮ್ರದ ಮತ್ತು ಸೀಸದ ನಾಣ್ಯಗಳು ಉಲ್ಲೇಖಾರ್ಹ. ಒಡೆದಿರುವ ಸುಟ್ಟಮಣ್ಣಿನ ಮುದ್ರಿಕೆಯೊಂದರ ಮೇಲೆ ಮ ಹ ರ ಥಿ ಸ ನ ಯ ಎಂಬ ಬ್ರಾಹ್ಮಿಲಿಪಿಯ ಅಕ್ಷರಗಳು ಕಾಣುತ್ತವೆ. ಈ ಹೆಸರಿನ ಮಹಾರಥಿ ರಾಜ ಇದುವರೆಗೂ ಇತಿಹಾಸಕಾರರ ಗಮನಕ್ಕೆ ಬಂದಿಲ್ಲ. ಮತ್ತೊಂದು ಸುಟ್ಟಮಣ್ಣಿನ ಕರಡಿಗೆ–ಪದಕದ (ಲಾಕೆಟ್) ಮೇಲೆ ಯೋಗಮುದ್ರೆಯಲ್ಲಿರುವ ಸ್ತ್ರೀ ದೇವತೆಯ ಚಿಹ್ನೆಯಿದೆ. ಈ ಪದಕ ಆದಿಚಾಳುಕ್ಯರ ಕಾಲದ್ದಿರಬಹುದು.

ಕೆಳ ಸಮತಟ್ಟಿನಲ್ಲಿ ದೇವಾಲಯದಂತೆ ತೋರುವ ಇಟ್ಟಿಗೆ ಕಟ್ಟಡವನ್ನು ಹೊರತೆಗೆಯಲಾಗಿದೆ. ಕಟ್ಟಡ ಪೂರ್ವಾಭಿಮುಖವಾಗಿದ್ದು ಇದರಲ್ಲಿ ಗರ್ಭಗೃಹ, ಹದಿನಾರು ಕಂಬಗಳ ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಗೋಡೆ ಮತ್ತು ಕಂಬಗಳ ತಳಭಾಗಗಳು ಮತ್ತು ಮುಖಮಂಟಪದ ಮೂರು ಬದಿಗಳಲ್ಲಿರುವ ಮೆಟ್ಟಿಲುಗಳು ಮಾತ್ರ ಇಂದು ಉಳಿದಿವೆ. ಸಭಾಮಂಟಪದ ಪೂರ್ವದಂಚಿನಲ್ಲಿ, ಕಂಬಗಳ ಸಾಲಿನ ಹೊರಗೆ ಆಯತಾಕಾರದ

(4.92×4 ಮೀ) ವೇದಿಕೆಯೊಂದಿದ್ದು ಇದು ನಂದಿ ಮಂಟಪವಾಗಿರುವ ಸಾಧ್ಯತೆಯಿದೆ. ಈ ವೇದಿಕೆ ಅಥವಾ ಮಂಟಪದ ಮೂರುಭಾಗಗಳಲ್ಲಿ ಗೋಡೆಗಳಿದ್ದವು. ಸಭಾಮಂಟಪದ ಪ್ರವೇಶಭಾಗದಲ್ಲಿ ಕಟಾಂಜನ ಸಹಿತವಾದ ಎರಡು ಮೆಟ್ಟಿಲುಗಳಿವೆ. ಈ ಧಾರ್ಮಿಕ ಕಟ್ಟಡದ ಸುತ್ತಲೂ ಪ್ರಾಕಾರವಿದ್ದು ಇದರ ಮುಂಭಾಗದಲ್ಲಿ ಸು.3.9 ಮೀ ದೂರದಲ್ಲಿರುವ ಎರಡು ಕೋಣೆಗಳು ಪ್ರಾಯಶಃ ಪ್ರಾಕಾರಕ್ಕೆ ತಾಗಿಕೊಂಡಂತೆ ಇದ್ದ ಪ್ರವೇಶ ಕೋಣೆಗಳಾಗಿರಬೇಕು. ಗರ್ಭಗೃಹದ ಪಶ್ಚಿಮ ಭಾಗದಲ್ಲಿ, ಪ್ರಾಕಾರದ ಪರಿಧಿಯೊಳಗೆ ಮತ್ತೊಂದು ಕೋಣೆಯಿದೆ (2.45×2.55 ಮೀ). ಇದು ಅನಂತರದ ಕಾಲದಲ್ಲಿ ಕಟ್ಟಿರುವಂತೆ ಕಾಣುತ್ತದೆ. ಧಾರ್ಮಿಕ ಕಟ್ಟಡದ ಚಾವಣಿಗೆ ಮಣ್ಣಿನ ಹೆಂಚನ್ನು ಹೊದಿಸಲಾಗಿತ್ತು. ಕಟ್ಟಡದ ಉತ್ತರ ಬದಿಯಲ್ಲಿ ಇವುಗಳ ರಾಶಿಯೇ ಇದೆ. ಇದರಲ್ಲಿ ಮೂರು ವಿಧದ ಹೆಂಚುಗಳಿವೆ. ಒಂದು ಬಗೆಯ ಹೆಂಚಿನ (22×14×2.5ಸೆಂಮೀ) ಅಂಚೊಂದನ್ನು ಹೂ ದಳದ/ಚೌಕದ ಸಾಲಿನಂತೆ ವಿನ್ಯಾಸಗೊಳಿಸಲಾಗಿದೆ. ಮತ್ತೊಂದು ತುದಿಯನ್ನು ಲಂಬಕೋನದಲ್ಲಿ ಮೇಲ್ಭಾಗಕ್ಕೆ ತಿರುಗಿಸಲಾಗಿದೆ. (ಎಂ.ವಿ.ವಿ.)

**ಪತಂಜಲಿ:** ಪ್ರ.ಶ.ಪೂ.2ನೆಯ ಶತಮಾನದಲ್ಲಿದ್ದ ವಿದ್ವಾಂಸ. ಮಹಾಭಾಷ್ಯ ಹಾಗೂ ಯೋಗಸೂತ್ರಗಳ ಕರ್ತೃ. ಚರಕ ಸಂಹಿತೆಯೂ ಈತನದೆಂದೇ ಕೆಲವರ ವಾದ. ವಿಜ್ಞಾನ ಭಿಕ್ಷುವಿನ ಯೋಗ, ವ್ಯಾಕರಣ ಮತ್ತು ವೈದ್ಯಶಾಸ್ತ್ರಗಳ ಮೂಲಕ ಮನಸ್ಸು, ಮಾತು ಮತ್ತು ಶರೀರಗಳ ದೋಷಗಳನ್ನು ಪರಿಹರಿಸಿದ ಪತಂಜಲಿಯನ್ನು ಕೊಂಡಾಡುತ್ತದೆ. ತನ್ನ ಮೂರು ಕೃತಿಗಳಿಂದ ಮನೋವಾಕ್ಕಾಯ ದೋಷಗಳನ್ನು ಕಳೆದ ಆದಿಶೇಷನೆಂದು ಪತಂಜಲಿಯನ್ನು ಕೊಂಡಾಡುವ ಚಕ್ರಪಾಣಿಯ ಶ್ಲೋಕವೂ ಇದಕ್ಕೆ ಸಂವಾದಿಯಾಗಿದೆ. ಪತಂಜಲಿಚರಿತವೆಂಬ ಕೃತಿಯನ್ನು ರಚಿಸಿದ ರಾಮಭದ್ರನ (18ನೆಯ ಶತಮಾನ) ಅಭಿಪ್ರಾಯವೂ ಇದೇ ಆಗಿದೆ. 11ನೆಯ ಶತಮಾನದಲ್ಲಿದ್ದ ಭೋಜರಾಜನೂ ಈ ಮೂರು ಗ್ರಂಥಗಳ ಕರ್ತೃವೊಬ್ಬನೇ ಎಂಬುದನ್ನು ಹೇಳುತ್ತಾನೆ. ಪಾಶ್ಚಾತ್ಯರಲ್ಲಿಯೂ ಕೆಲವರು ಯೋಗಸೂತ್ರ ಮಹಾಭಾಷ್ಯಗಳ ಕರ್ತೃ ಪತಂಜಲಿಯೊಬ್ಬನೇ ಎಂಬ ಅಭಿಪ್ರಾಯವನ್ನೊಪ್ಪುತ್ತಾರೆ. ಆದರೆ ಮಹಾಭಾಷ್ಯ ಕರ್ತೃ ಪತಂಜಲಿಯೇ ಬೇರೆ, ಯೋಗಸೂತ್ರಕಾರನೇ ಬೇರೆ ಎಂಬ ಅಭಿಪ್ರಾಯವೂ ಉಂಟು.

ಮಹಾಭಾಷ್ಯದಿಂದ ನಮಗೆ ಪತಂಜಲಿಯ ಬಗ್ಗೆ ತಿಳಿದುಬರುವ ಅಂಶಗಳಿಷ್ಟು. ಗೋನರ್ದೀಯ, ಗೋಣಿಕಾಪುತ್ರ ಎಂಬ ಉಲ್ಲೇಖಗಳು ಪತಂಜಲಿಗೇ ಅನ್ವಯಿಸುತ್ತವೆ ಎಂಬ ವಾದವನ್ನು ನಾವು ಒಪ್ಪುವ ಪಕ್ಷದಲ್ಲಿ (ಅವು ಬೇರೊಬ್ಬ ವಾರ್ತಿಕಕಾರನಿಗೆ ಅನ್ವಯಿಸುತ್ತವೆ ಎಂಬ ವಾದವೂ ಒಂದಿದೆ) ಈತ ಗೋನರ್ದದೇಶದವ, ಗೋಣಿಕಾ ಎಂಬವಳ ಮಗನಾಗುತ್ತಾನೆ. ಗೋನರ್ದ ಪ್ರದೇಶ ಯಾವುದು ಎಂದು ಇನ್ನೂ ನಿರ್ದಿಷ್ಟಗೊಂಡಿಲ್ಲ. ಇವನ ವಿದ್ಯಾಭ್ಯಾಸ ತಕ್ಷಶಿಲೆಯಲ್ಲಿ ನಡೆಯಿತೆಂದೂ ವಾಹೀಕ ಮತ್ತು ಗಾಂಧಾರದೇಶಗಳ ನಗರ, ಹಳ್ಳಿಗಳ ವಿವರವಾದ ಪರಿಚಯ ಈತನಿಗಿತ್ತೆಂದೂ ಮಹಾಭಾಷ್ಯದ ಆಂತರಿಕ ಸಾಕ್ಷ್ಯಗಳಿಂದ ತಿಳಿಯಬಹುದಾಗಿದೆ. ಗೋಣಿಕಾಪುತ್ರ ಎಂಬ ಉಲ್ಲೇಖವೊಂದನ್ನು ಬಿಟ್ಟರೆ ಇವನ ತಾಯಿತಂದೆಗಳ ಬಗ್ಗೆ ಯಾವ ವಿವರವೂ ತಿಳಿದುಬಂದಿಲ್ಲ.

ಪತಂಜಲಿಯ ಹುಟ್ಟು ಮತ್ತು ಹೆಸರಿಗೆ ಸಂಬಂಧಿಸಿದ ಹಲವಾರು ಐತಿಹ್ಯಗಳು ಪ್ರಚಾರದಲ್ಲಿವೆ. ಅವುಗಳಲ್ಲೊಂದು ಹೀಗಿದೆ: ಗೋನರ್ದದ ತಪಸ್ವಿಯೊಬ್ಬ ಸಂಧ್ಯಾಕಾಲದಲ್ಲಿ ಸೂರ್ಯನಿಗೆ ಅರ್ಘ್ಯ ನೀಡುತ್ತಿದ್ದ ಸಂದರ್ಭದಲ್ಲಿ ಆಕಾಶದಿಂದ ಆತನ ಅಂಜಲಿಯಲ್ಲಿ (ಬೊಗಸೆ) ಶಿಶುವೊಂದು ಬಿತ್ತು. ಆ ಕಾರಣದಿಂದಲೇ ಆ ಶಿಶು ಪತಂಜಲಿ ಎಂಬ ಅನ್ವರ್ಥನಾಮವನ್ನು ಪಡೆಯಿತು. ಆ ಶಿಶುವನ್ನು ತಪಸ್ವಿಯು ಗೋಣಿಕಾ ಎಂಬುವಳಿಗೆ ಕೊಟ್ಟ. ಹೀಗೆ ಪತಂಜಲಿ ಗೋಣಿಕಾ ಎಂಬುವಳ ಸಾಕುಮಗನಾದ. ಪತಂಜಲಿ ಚರಿತದಲ್ಲಿ ಬರುವ ಮತ್ತೊಂದು ಐತಿಹ್ಯ ಹೀಗಿದೆ. ಋಷಿಪುತ್ರಿ ಗೋಣಿಕಾ ಎಂಬುವಳು ಪುತ್ರ ಕಾಮನೆಯಿಂದ ಸೂರ್ಯನಿಗೆ ಅರ್ಘ್ಯ ನೀಡಿದಳು. ನಾಗರಾಜನಾದ ಶೇಷ ಆ ಸಂದರ್ಭದಲ್ಲಿ ತಪಸ್ವಿಯ ರೂಪದಲ್ಲಿ ಅವಳ ಕೈಯಲ್ಲಿ ಬಿದ್ದ. ಇದರಿಂದ ಆತನಿಗೆ ಪತಂಜಲಿ ಎಂಬ ಹೆಸರು ಬಂತು. ಅನಂತರ ಪತಂಜಲಿ ಚಿದಂಬರದಲ್ಲಿ ಶಿವಾನುಗ್ರಹದಿಂದ ಮಹಾಭಾಷ್ಯವನ್ನು ಬರೆದ. ಫಣಿಭಷಿತ ಭಾಷ್ಯ ಎಂದು ಮಹಾಭಾಷ್ಯವನ್ನು ಗುರುತಿಸಿದ ಮುಂದಣ ವೈಯಾಕರಣರೂ ಪತಂಜಲಿಯನ್ನು ಆದಿಶೇಷನ ಅವತಾರವೆಂದೂ ಗಣಿಸುತ್ತಾರೆ. ಮಹಾಭಾಷ್ಯದ ಆಂತರಿಕ ಉಲ್ಲೇಖಗಳು ಮತ್ತು ಅಲ್ಲಿ ಬರುವ ಪುಷ್ಯಮಿತ್ರನ ಪ್ರಸಂಗ ಇವುಗಳ ಆಧಾರದ ಮೇಲೆ ಪತಂಜಲಿಯ ಕಾಲ ಪ್ರ.ಶ.ಪೂ. 2ನೆಯ ಶತಮಾನವೆಂದು ವಿದ್ವಾಂಸರು ನಿರ್ಧರಿಸಿದ್ದಾರೆ.

ಈತ ಅಸಮಾನ ವೈಯಾಕರಣನೆಂಬುದಕ್ಕೆ ಮಹಾಭಾಷ್ಯವೇ ಸಾಕ್ಷಿಯಾಗಿದೆ. ಅಂದು ಬಳಕೆಯಲ್ಲಿದ್ದ ಎಲ್ಲ ಬಗೆಯ ವೈಯಾಕರಣ ಸಂಪ್ರದಾಯಗಳನ್ನೂ ಪಾಣಿನಿ ಸೂತ್ರಗಳ ಬಗೆಗಿದ್ದ ಬಗೆಬಗೆಯ ವಿವರಣೆಗಳನ್ನೂ ನಡೆಯುತ್ತಿದ್ದ ಪಾಠ–ಪ್ರವಚನಗಳ ರೀತಿಗಳನ್ನೂ ಪ್ರತ್ಯಕ್ಷ ಪರಿಶೀಲನೆಯಿಂದಲೇ ಈತ ಅರಿತಿದ್ದನೆಂಬುದು ಮಹಾಭಾಷ್ಯದ ಪರಿಶೀಲನೆಯಿಂದ ಸ್ಫುಟವಾಗುತ್ತದೆ. ಚತುರ್ವೇದಗಳು, ಧರ್ಮಸೂತ್ರ, ಶ್ರೌತಸೂತ್ರ ಇತಿಹಾಸ, ಪುರಾಣ, ನ್ಯಾಯಸೂತ್ರ ಪೂರ್ವಮೀಮಾಂಸಾ, ವೈದ್ಯಶಾಸ್ತ್ರ, ಕಾವ್ಯಗಳು ಮುಂತಾಗಿ ಅಂದು ಪ್ರಚಲಿತವಿದ್ದ ವಿದ್ಯೆಯ ಎಲ್ಲ ವಿಭಾಗಗಳಲ್ಲಿಯೂ ಇವನಿಗೆ ಆಳವಾದ ಪಾಂಡಿತ್ಯ ಪರಿಶ್ರಮಗಳಿದ್ದವು. ತನ್ನ ಕಾಲದಲ್ಲಿ ಆಡುಭಾಷೆಯಾಗಿದ್ದ ಸಂಸ್ಕೃತದ ಮೇಲೆ ಆತನಿಗೆ ಅಸಾಧಾರಣವಾದ ಅಧಿಕಾರವಿತ್ತು.

ಪತಂಜಲಿಕಾಲೀನ ಭಾರತದ ಸಮಗ್ರದರ್ಶನ ಮಾಡಿಸಲು ಈತನ ಮಹಾಭಾಷ್ಯ ಸಮರ್ಥವಾಗಿದೆ. ವಿದ್ವತ್ಪೂರ್ಣವಾದರೂ ಅತ್ಯಂತ ಸರಳವಾದ ಭಾಷ್ಯವಿದು. ಇದೇ ಪಾಣಿನಿಯ ಅಷ್ಟಾಧ್ಯಾಯೀ ಗ್ರಂಥಕ್ಕೆ ಮೊತ್ತಮೊದಲ ಮತ್ತು ಅತಿಪ್ರಾಚೀನ ಭಾಷ್ಯ. ವ್ಯಾಕರಣಶಾಸ್ತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಇದು ನಿರ್ಣಾಯಕ ಗ್ರಂಥವಾಗಿದೆ. ಪಾಣಿನಿ ಸೂತ್ರಗಳಿಗೆ ವ್ಯಾಖ್ಯಾನ ಮಾಡುವುದರ ಜೊತೆಗೆ ತಾನೇ ಅನೇಕ ಅಂಶಗಳನ್ನು ಎತ್ತಿ ಅವುಗಳನ್ನು ಕೂಲಂಕಷವಾಗಿ ವಿಚಾರಿಸಿ ತೀರ್ಮಾನಗಳನ್ನು ನೀಡಿರುವ ಸಂದರ್ಭಗಳೂ ಉಂಟು. ವ್ಯಾಕರಣಕ್ಕೆ ಸಂಬಂಧಿಸಿದಂತೆ ಇದರಲ್ಲಿ ವಿಚಾರಕ್ಕೊಳಪಡದ ಯಾವ ಸಮಸ್ಯೆಯೂ ಇಲ್ಲವೇ ಇಲ್ಲವೆನ್ನುವಷ್ಟು ವ್ಯಾಪಕವಾಗಿದೆ, ಈ ಕೃತಿ. ಆಹ್ನಿಕ ಎಂಬ ಹೆಸರುಳ್ಳ 85 ಭಾಗಗಳನ್ನು ಈ ಕೃತಿ ಒಳಗೊಂಡಿದೆ.

ಪಾತಂಜಲ ಯೋಗಸೂತ್ರ ಎಂದು ಪತಂಜಲಿಯ ಹೆಸರಿನೊಡನೆಯೇ ಖ್ಯಾತವಾಗಿರುವ ಯೋಗಸೂತ್ರ ಯೋಗದರ್ಶನದ ಆಧಾರಗ್ರಂಥವಾಗಿದೆ. ಯೋಗ ದರ್ಶನವೇ ಪಾತಂಜಲ ದರ್ಶನವೆಂದೂ ಹೆಸರುಗೊಂಡಿದೆ. ಯೋಗದರ್ಶನದ ಮೂಲ ಪ್ರವರ್ತಕನೆಂದು ಯೋಗಶಾಸ್ತ್ರಗಳು ತಿಳಿಸುವ ಹಿರಣ್ಯಗರ್ಭನ ಸಂಪ್ರದಾಯವನ್ನು ಅನುಸರಿಸಿ ಪತಂಜಲಿ ಯೋಗದರ್ಶನವನ್ನು ಬಿತ್ತರಿಸಿದನೆಂದು ತಿಳಿದುಬರುತ್ತದೆ. ಸಮಾಧಿಪಾದ, ಸಾಧನಪಾದ, ವಿಭೂತಿಪಾದ ಮತ್ತು ಕೈವಲ್ಯಪಾದಗಳೆಂಬ ನಾಲ್ಕು ಪಾದಗಳನ್ನೊಳಗೊಂಡ ಯೋಗಸೂತ್ರ ಗ್ರಂಥ. ಒಟ್ಟು 185 ಸೂತ್ರಗಳಿಂದ ಕೂಡಿದೆ. ಸಮಾಧಿಯ ಸ್ವರೂಪವನ್ನು ಮೊದಲನೆಯ ಪಾದ ವಿವರಿಸುತ್ತದೆ. ಯಮ, ನಿಯಮ, ಆಸನ, ಪ್ರಾಣಾಯಾಮ ಮತ್ತು ಪ್ರತ್ಯಾಹಾರ ಎಂಬ ಯೋಗದ ಐದು ಅಂಗಗಳು ಮತ್ತು ಸ್ವಾಧ್ಯಾಯ, ಈಶ್ವರ ಪ್ರಣಿಧಾನ ಮುಂತಾದ ವಿಷಯಗಳು ಎರಡನೆಯ ಪಾದದಲ್ಲಿವೆ. ಮೂರನೆಯ ಪಾದ ಧಾರಣಾ, ಧ್ಯಾನ, ಸಮಾಧಿ ಎಂಬ ಯೋಗದ ಉಳಿದ ಮೂರು ಅಂಗಗಳ ವಿವರಣೆಯನ್ನೊಳಗೊಂಡಿದೆ. ಸಿದ್ಧಿಗಳು ಮತ್ತು ಕೈವಲ್ಯದ ಬಗೆಗಿನ ವಿವರ ಕೊನೆಯದಾದ ಕೈವಲ್ಯಪಾದದಲ್ಲಿದೆ. ಅಷ್ಟಾಂಗಯೋಗವನ್ನು ವಿವರವಾಗಿ ಈ ಗ್ರಂಥ ಪ್ರತಿಪಾದಿಸುತ್ತದೆ. ವ್ಯಾಸಭಾಷ್ಯವೆಂಬ ಅತ್ಯಂತ ಪ್ರಾಚೀನವಾದ ಭಾಷ್ಯ ಈ ಗ್ರಂಥಕ್ಕಿದೆ. (ಸಿ.ಎಚ್.ಪಿ.)

**ಪಯ್ಯಂಪಲ್ಲಿ:** ತಮಿಳುನಾಡು ರಾಜ್ಯದ ಉತ್ತರ ಆರ್ಕಾಟ್ ಜಿಲ್ಲೆಯ ತಿರುಪತ್ತೂರು ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆ. ತಮಿಳುನಾಡಿನಲ್ಲಿ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಸಾಂಸ್ಕೃತಿಕ ಹಂತಗಳನ್ನು ಉತ್ಖನನದಲ್ಲಿ ಗುರುತಿಸಲಾದ ಏಕೈಕ ನೆಲೆ. ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಅವಶೇಷಗಳು ಶೆವ್ರಾಯ್ ಬೆಟ್ಟಶ್ರೇಣಿಯ ತಲತಪ್ಪಮಲೈ ಎಂಬ ಬೆಟ್ಟದ ಪಶ್ಚಿಮ ಮತ್ತು ದಕ್ಷಿಣ ತಪ್ಪಲುಗಳಲ್ಲಿಯೂ ಬೃಹತ್ ಶಿಲಾಯುಗದ ಅವಶೇಷಗಳು ಬೆಟ್ಟದ ಅಂಚಿನ ಕುದುರೆ ಲಾಳಾಕಾರದ ಕಣಿವೆಯಲ್ಲಿಯೂ ಇವೆ. ಎಸ್.ಆರ್. ರಾವ್ ಅವರ ನೇತೃತ್ವದಲ್ಲಿ ಇಲ್ಲಿ ಉತ್ಖನನ ನಡೆಯಿತು. ಬೃಹತ್ ಶಿಲಾಯುಗದ ಮೂರು ಶಿಲಾವೃತ್ತ ಸಮಾಧಿಗಳನ್ನೂ ಪರೀಕ್ಷಿಸಲಾಯಿತು.

ನವಶಿಲಾಯುಗ: 1ನೆಯ ಉಪಹಂತದ ಜನರು ವೃತ್ತ ಅಥವಾ ಆಯತಾಕಾರದ ಗುಂಡಿಗಳಲ್ಲಿ ವಾಸಿಸುತ್ತಿದ್ದರು. ಒಂದು ಗುಂಡಿಯನ್ನು ಕಲ್ಲಿನ ಗೋಡೆಯಿಂದ ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ದೊಡ್ಡ ಗುಂಡಿಗಳಲ್ಲಿ ಇಳಿಜಾರು ಪಥಗಳಿದ್ದವು. ಮಣ್ಣಿನ ಗೋಡೆಗೆ ಕಲ್ಲು ಹೊದಿಕೆಯಿರುವ ಒಂದು ಗುಂಡಿಯಲ್ಲಿ ವಾಸದ ಎರಡು ಹಂತಗಳಿದ್ದವು. ಮೊದಲ ಹಂತದ ನೆಲಗಟ್ಟು ಕಲ್ಲುಚಪ್ಪಡಿಯ ಹಾಸು. ಎರಡನೆಯ ಹಂತದಲ್ಲಿ ದಮ್ಮಸು ಮಾಡಿದ ಮಣ್ಣಿನ ನೆಲವಿದೆ. ಈ ಗುಂಡಿಯ ಸುತ್ತ ಭೂಮಟ್ಟದಲ್ಲಿ ಮರದ ಕಂಬಗಳ ಗುಳಿಗಳಿವೆ. ಬೊಂಬಿನ ಚಾಪೆ, ಹುಲ್ಲು, ಕಟ್ಟಿಗೆ ಮೊದಲಾದ ಪರಿಕರಗಳ ಮೇಲ್ಛಾವಣಿ ಇದ್ದಿರಬಹುದು. ಈ ಗುಂಡಿಗಳನ್ನು ಕಸದಗುಂಡಿಯಾಗಿ ಅಥವಾ ಕಾಳುಕಡ್ಡಿಗಳನ್ನು ಸಂಗ್ರಹಿಸಿಡಲು ಉಪಯೋಗಿಸಿರಬಹುದೆಂದೂ ತರ್ಕಿಸಲಾಗಿದೆ. ಎರಡನೆಯ ಉಪಹಂತದ ಗುಡಿಸಲುಗಳಲ್ಲಿ ಸಣ್ಣ ಕಲ್ಲುಗಳಿಂದ ಸಮತಲವಾಗಿ ಗಟ್ಟಿಸಿದ ನೆಲದ ಮೇಲೆ ಮಣ್ಣು ಮತ್ತು ಬೂದಿಯ ಮಿಶ್ರಣದ ಲೇಪವಿದೆ.

ಬೃಹತ್ ಶಿಲಾಯುಗ: ಈ ಹಂತದ ಗುಡಿಸಲುಗಳು ವೃತ್ತ, ಅಂಡಾಕಾರ, ಆಯತಾಕಾರದ ವಿನ್ಯಾಸಗಳಲ್ಲಿದ್ದಿರಬಹುದೆಂದು ಕಂಬಗಳ ಗುಳಿಗಳಿಂದ ಊಹಿಸಬಹುದು. ಗುಡಿಸಲಿನ ಮಧ್ಯದಲ್ಲಿ ರಂಧ್ರವಿರುವ ಕಲ್ಲಿರುವುದರಿಂದ ಇಲ್ಲಿ ಮೇಲ್ಛಾವಣಿಗೆ ಆಧಾರವಾಗಿ ಒಂದು ಕೇಂದ್ರ ಕಂಬವಿದ್ದಿರಬಹುದೆಂದು ಹೇಳಬಹುದು. ಇವು ಒಂದೇ ಕೋಣೆಯ ಗುಡಿಸಲುಗಳು. ಎರಡು ಕೋಣೆಯ ಗುಡಿಸಲುಗಳು ಅಪರೂಪ. ನೆಲವನ್ನು ಕಲ್ಲುಚೂರು ಗಳಿಂದ ಗಟ್ಟಿಸಿ ಮೇಲೆ ಸಣ್ಣ ಮರಳುಮಣ್ಣನ್ನು ಹರಡಿದೆ. ಕೆಲವು ನೆಲಗಳ ಮೇಲೆ ಸುಣ್ಣದ ಲೇಪನವಿದೆ.

ನವಶಿಲಾಯುಗದ ಜನರು ಎಲುಬು ಮತ್ತು ಕಲ್ಲಿನ ಆಯುಧೋಪಕರಣಗಳನ್ನು ಬಳಸುತ್ತಿದ್ದರು. ದಪ್ಪ ಸೂಜಿ, ಹೆರೆಯುವ ಉಪಕರಣಗಳನ್ನು ಎಲುಬಿನಿಂದ ತಯಾರಿಸಲಾಗಿದೆ. ತಯಾರಿಕೆಯ ಹಂತದಲ್ಲಿರುವ ಉಜ್ಜಿದ ಕಲ್ಲಿನ ಕೊಡಲಿಗಳು, ಸುತ್ತಿಗೆಗಳು, ಚಪ್ಪಟೆ ತೂತು ಕಲ್ಲುಗಳು ಹೆಚ್ಚಾಗಿ ಸಿಕ್ಕಿವೆ. ಬೆಣಚುಕಲ್ಲು, ಚರ್ಟ್ ಕಲ್ಲುಗಳಿಂದ ತೆಳು ನೀಳ ಅಲಗುಗಳನ್ನು ತಯಾರಿಸುವ ಒಂದು ಕಾರ್ಯಾಗಾರ ಇಲ್ಲಿ ಇತ್ತೆಂದು ತ್ಯಾಜ್ಯ ಚಕ್ಕೆಚೂರುಗಳಿಂದ ತಿಳಿಯಬಹುದು. 2ನೆಯ ಉಪಹಂತದಲ್ಲಿ ಎಲುಬಿನ ಉಪಕರಣಗಳು ಕಡಿಮೆಯಾಗಿ

ಹೆರೆಯುವ ನೀಳ ಚಕ್ಕೆಗಳು ಹೆಚ್ಚಾಗಿದ್ದವು. ಉಜ್ಜಿ ನಯಗೊಳಿಸಿದ ಕೊಡಲಿಗಳು ಮುಂದುವರೆದವು. ಗೃಹೋಪಯೋಗಿ ಕಲ್ಲಿನ ಉಪಕರಣಗಳಲ್ಲಿ ಅರೆಯುವ ಕಲ್ಲು, ಗುಂಡುಕಲ್ಲು, ಕುಟ್ಟಾಣಿ ಕಲ್ಲು ಮತ್ತು ಒನಕೆಯ ಮಾದರಿಯ ಕಲ್ಲುಗಳಿವೆ.

ನವಶಿಲಾಯುಗ ಹಂತದಲ್ಲಿ ಲೋಹ ದೊರಕಿಲ್ಲ. ಬೃಹತ್ ಶಿಲಾಯುಗ ಹಂತದಲ್ಲಿ ಕಬ್ಬಿಣವನ್ನು ಹೇರಳವಾಗಿ ಉಪಯೋಗಿಸಲಾಗುತ್ತಿತ್ತು, ಕೊಡಲಿ, ಕತ್ತಿ, ಈಟಿ ಮೊನೆ, ಬಾಣದ ಮೊನೆಗಳು, ಗುದ್ದಲಿ, ಚಿಕ್ಕ ಮೊಳೆಗಳು ಮುಂತಾದವುಗಳನ್ನು ತಯಾರಿಸಲಾಗುತ್ತಿತ್ತು. ನವಶಿಲಾಯುಗದ ಹಂತದಲ್ಲಿ ಅರೆಪ್ರಶಸ್ತ ಕಲ್ಲುಗಳ, ಕಪ್ಪೆಚಿಪ್ಪಿನ, ಗಾಜಿನ, ಮಣ್ಣಿನ ಮಣಿಗಳನ್ನು ಆಭರಣಗಳನ್ನಾಗಿ ಉಪಯೋಗಿಸಲಾಗುತ್ತಿತ್ತು. ಇವುಗಳಲ್ಲಿ ಕೆಲವು ಅಲಂಕಾರಿಕ ಕೆತ್ತನೆ ಹೊಂದಿವೆ. ಓಲೆಗಳು, ಬಳೆಗಳು ಬೃಹತ್ ಶಿಲಾಯುಗದ ಆಭರಣಗಳಾಗಿದ್ದವು. ಇವರು




**ಉತ್ಖನನದಲ್ಲಿ ದೊರೆತ ಪ್ರಾಚ್ಯಾವಶೇಷಗಳು**

ಬಂಗಾರದ ಆಭರಣಗಳನ್ನು ಧರಿಸುತ್ತಿದ್ದರೆಂಬುದಕ್ಕೆ ಇಲ್ಲಿ ದೊರೆತಿರುವ ಅಕ್ಕಸಾಲಿಗನ ಅಚ್ಚು ಸಾಕ್ಷಿ. ಉದ್ದ ಕೊಂಬುಗಳಿರುವ ದನಗಳ ಬೊಂಬೆಗಳು ನವಶಿಲಾಯುಗದಲ್ಲಿದ್ದರೆ, ಪಕ್ಷಿ, ಪ್ರಾಣಿಗಳ ಬೊಂಬೆಗಳು ಬೃಹತ್ ಶಿಲಾಯುಗದ ಸ್ತರಗಳಲ್ಲಿ ದೊರಕಿವೆ. ವ್ಯವಸಾಯ, ಪಶುಸಂಗೋಪನೆ ಮತ್ತು ಬೇಟೆ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಜನರ ಜೀವನಾಧಾರಗಳಾಗಿದ್ದವು. ಬೃಹತ್ ಶಿಲಾಯುಗದ ಹಂತದಲ್ಲಿ ಅದಿರಿನ ಗಣಿಗಾರಿಕೆ, ಲೋಹದ ಕಮ್ಮಾರಿಕೆಯಿತ್ತೆಂಬುದು ಇಲ್ಲಿ ದೊರೆತ ಕಬ್ಬಿಣದ ಕಿಟ್ಟದಿಂದ ತಿಳಿದುಬರುತ್ತದೆ. ಹುರುಳಿ ಮತ್ತು ಹೆಸರುಕಾಳುಗಳನ್ನು ಈ ಹಂತಗಳಲ್ಲಿ ಬೆಳೆಯುತ್ತಿದ್ದರು. ಸಾಕಿದ ಮತ್ತು ಬೇಟೆಯಾಡಿದ ಪ್ರಾಣಿಗಳಲ್ಲಿ ಆಕಳು, ಕುರಿ, ಜಿಂಕೆ, ಹಂದಿ, ಕೋಳಿ, ಕಾಡುಬೆಕ್ಕು ಮತ್ತು ಘೇಂಡಾಮೃಗಗಳು ಸೇರಿವೆ.

ನವಶಿಲಾಯುಗದ ಜನರ ಶವಸಂಸ್ಕಾರ ಪದ್ಧತಿಯ ಬಗ್ಗೆ ಮಾಹಿತಿಯಿಲ್ಲ. ಆದರೆ ಬೃಹತ್ ಶಿಲಾಯುಗದಲ್ಲಿ ಕಲ್ಲಿನ ವೃತ್ತದ ಮಧ್ಯೆ ನೆಲಕೋಣೆಯಲ್ಲಿ ಶವದ ಆಯ್ದ ಅಸ್ಥಿಭಾಗಗಳನ್ನು ಹೂಳುತ್ತಿದ್ದರು. ಉತ್ಖನನ ಮಾಡಿದ 3 ಸಮಾಧಿಗಳಲ್ಲಿ ಒಂದು ಅಂಡಾಕಾರ ವಿನ್ಯಾಸದಲ್ಲಿತ್ತು. ತಳದಲ್ಲಿ ಗರಸು ಮಣ್ಣನ್ನು ಹರಡಲಾಗಿತ್ತು. ಇದರಲ್ಲಿ ಇಬ್ಬರ ಅಸ್ಥಿ ಚೂರುಗಳು, ಮಡಕೆಗಳು, ಮುಚ್ಚಳಗಳು ಮತ್ತು ಕಬ್ಬಿಣದ ಆಯುಧಗಳು ದೊರೆತವು. ಎರಡನೆಯ ಸಮಾಧಿಯಲ್ಲಿ 24 ಕಾಲುಗಳ ಶವಪೆಟ್ಟಿಗೆಯಲ್ಲಿ ಮಾನವನ ಎಲುಬು ಚೂರುಗಳು ದೊರೆತವು. ಕಪ್ಪು-ಕೆಂಪು ದ್ವಿವರ್ಣದ ಮಣ್ಪಾತ್ರೆಗಳಲ್ಲಿ ಬಟ್ಟಲುಗಳು, ಮಧ್ಯದಲ್ಲಿ ತಗ್ಗಿರುವ ಮುಚ್ಚಳಗಳು ಮತ್ತು ಪೂರ್ಣ ಕಪ್ಪುಬಣ್ಣದ ಆಲಿಕೆಗಳಿದ್ದವು. ಪೂರ್ಣ ಕೆಂಪುಬಣ್ಣದ ಮಣ್ಪಾತ್ರೆಗಳೂ ಇಲ್ಲಿದ್ದವು. ಸಮಾಧಿಗಳಲ್ಲಿ ಮತ್ತು ವಾಸವ್ಯದ ಸ್ಥಳದಲ್ಲಿ ದೊರೆತ ಮಡಕೆಗಳ ಮೇಲೆ ಗೀರು ಚಿತ್ರಗಳಿವೆ.

ನವಶಿಲಾಯುಗದ ಮೊದಲನೆಯ ಉಪಹಂತದಲ್ಲಿ ಕಾಂತಿಹೀನವಾದ ಕಂದು ಮಣ್ಪಾತ್ರೆಗಳು, ಉಜ್ಜಿದ ಕಂದು ಮತ್ತು ಕೆಂಪುಪಾತ್ರೆಗಳು ದೊರೆತಿವೆ. 2ನೆಯ ಉಪಹಂತದಲ್ಲಿ ಕಂದುಪಾತ್ರೆಗಳಿದ್ದರೂ ಕೆಂಪುಪಾತ್ರೆಗಳು ಹೆಚ್ಚಾಗಿವೆ. ಕೆಲವು ಉಜ್ಜಿದ ಪಾತ್ರೆಗಳ ಕಂಠದ ಅಂಚುಗಳು ಕೆಂಪುಸುದ್ದೆಯಿಂದ ಲೇಪಿತವಾಗಿದೆ. ಇಂಥ ಮಣ್ಪಾತ್ರೆಗಳು ಈ ಹಂತದಲ್ಲಿ ಮಾತ್ರ ಕಾಣಸಿಗುತ್ತವೆ.

ಬೃಹತ್ ಶಿಲಾಯುಗ ಹಂತದಲ್ಲಿ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು, ಪೂರ್ಣ ಕಪ್ಪುಪಾತ್ರೆಗಳು ಮತ್ತು ಕೆಂಪುಪಾತ್ರೆಗಳು ದೊರಕುತ್ತವೆ. ಹೊರಭಾಗದಲ್ಲಿ ಮಾತ್ರ ಕಂದುಬಣ್ಣದ ಅಥವಾ ತಳದಲ್ಲಿ ಕಂದುಬಣ್ಣದ ಲೇಪನವಿರುವ ಒರಟಾದ ಕೆಂಪುಬಣ್ಣದ ಮಡಕೆಗಳು ವಾಸ್ತವ್ಯ ಸ್ಥಳಗಳಲ್ಲಿಯೂ ಕಿತ್ತಲೆ ಬಣ್ಣದಿಂದಲಂಕೃತವಾದ ಮಡಕೆಗಳು ಸಮಾಧಿಗಳಲ್ಲಿಯೂ ದೊರೆತಿವೆ. ಅನಿರ್ದಿಷ್ಟ ವರ್ಣಚಿತ್ರಗಳೂ ಕೆಲವು ಮಾನವ ಮತ್ತು ಮರಗಿಡಗಳ ಚಿತ್ರಗಳೂ ಕಾಣಸಿಗುತ್ತವೆ. ಕೊನೆಯ ಘಟ್ಟದಲ್ಲಿ ಆದಿ ಇತಿಹಾಸ ಕಾಲದ ಕಾವಿ ಲೇಪನದ ಬಿಳಿರೇಖಾಚಿತ್ರ ಮಣ್ಪಾತ್ರೆಗಳಿವೆ. ಉಗುರು ಮತ್ತು ಬೆರಳುಗಳ ಚುಚ್ಚು ಗುರುತಿರುವ, ಎಲೆಗಳ, ತರಂಗದಂತಿರುವ ಗುರುತುಗಳು, ತ್ರಿಕೋನಾಕಾರದ ವಿನ್ಯಾಸಗಳು, ಮೆತ್ತಿದ ಮತ್ತು ಮುದ್ರಿಸಿದ ಚಿತ್ರಗಳು ಕೆಲವು ಪಾತ್ರೆಗಳ ಮೇಲಿವೆ. ಇಂಗಾಲ 14 ವೈಜ್ಞಾನಿಕ ತಂತ್ರದಿಂದ ನಿರ್ಧರಿಸಲಾದ ನವಶಿಲಾಯುಗದ ಕಾಲಮಾನ ಪ್ರ.ಶ.ಪೂ.1725±110 ಮತ್ತು 1360±210; ಬೃಹತ್ ಶಿಲಾಯುಗದ ಕಾಲಮಾನ ಪ್ರ.ಶ.ಪೂ. 640±210 ಮತ್ತು 380±105; ಬೃಹತ್ ಶಿಲಾಯುಗದ ಆಗಮನ ಬಹುಶಃ ಪ್ರ.ಶ.ಪೂ. 1360±210-640±105 ರ ನಡುವೆ ಆಗಿರಬಹುದು. (ಸಿ.ಕೆ.ಎಂ.)

**ಪರಂಪರೆ:** ಒಂದು ದೇಶದ, ಪ್ರದೇಶದ ಅಥವಾ ಸ್ಥಳದ ಸಾಂಸ್ಕೃತಿಕ ಪರಂಪರೆ ಅಲ್ಲಿಯ ಜನರ ಚಟುವಟಿಕೆಗಳನ್ನು ಸಂಪನ್ನಗೊಳಿಸುವಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಆದ್ದರಿಂದ ಆಯಾ ಪ್ರದೇಶಗಳ ವಿಶಿಷ್ಟ ಸಾಂಸ್ಕೃತಿಕ ಪರಂಪರೆ ಮತ್ತು ಇತಿಹಾಸವನ್ನು ಮುಂದಿನ ಪೀಳಿಗೆಗಾಗಿ ಕಾಪಾಡಿಕೊಂಡು ಬರಲು ಸ್ಥಳೀಯ ಜನತೆ ಸಕ್ರಿಯವಾಗಿ ಭಾಗವಹಿಸುವುದು ಅವಶ್ಯ. ಇತ್ತೀಚಿನ ವರ್ಷಗಳಲ್ಲಿ ಪರಂಪರೆ ಪ್ರವಾಸೋದ್ಯಮ (ಹೆರಿಟೇಜ್ ಟೂರಿಸಮ್) ಎಂಬ ವಿಭಿನ್ನ ಕ್ಷೇತ್ರವನ್ನು ಗುರುತಿಸಿ ಬೆಳೆಸಲಾಗುತ್ತಿದೆ. ಇಂದಿನ ಒಟ್ಟು ಪ್ರವಾಸೋದ್ಯಮದ ಯೋಜನೆಯಲ್ಲಿ ಸೇರ್ಪಡೆಗೊಂಡಿರುವ ಈ ಕ್ಷೇತ್ರ ಉದ್ಯಮದಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಗಿದೆ. ಇಲ್ಲಿ ಪರಂಪರೆ ಎಂಬ ಪದದ ಅರ್ಥವ್ಯಾಪ್ತಿ ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುವ, ಮೌಲಿಕವಾದ ಸ್ಥಳ, ಸ್ಮಾರಕ, ವಸ್ತು ಮತ್ತು ವಿಷಯಗಳು ಎನ್ನುವುದಾಗಿದೆ. ಪರಂಪರೆ ವಂಶಾನುಕ್ರಮವಾಗಿ ಪ್ರಾಪ್ತವಾಗುವ ಪಿತ್ರಾರ್ಜಿತ ಸ್ವತ್ತು ಅಥವಾ ಆಸ್ತಿ ಎಂಬ ಅರ್ಥವನ್ನೂ ಹೊಂದಿದೆ. ಇದನ್ನು ಮೂರು ವಿಧಗಳಾಗಿ ಗುರುತಿಸಬಹುದು: ಅಗೋಚರ (ಅಮೂರ್ತ), ಗೋಚರ (ಮೂರ್ತ), ನೈಸರ್ಗಿಕ.

ಅಗೋಚರ(ಅಮೂರ್ತ)ಪರಂಪರೆಗೆ ವಿಶಾಲ ಅರ್ಥವಿದ್ದು, ಅನೂಚಾನವಾಗಿ ನಡೆದುಕೊಂಡು ಬಂದಿರುವ ಒಂದು ರಾಷ್ಟ್ರ, ರಾಜ್ಯ ದೇಶದ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜಾನಪದ ಪ್ರಕಾರಗಳನ್ನು ಒಳಗೊಂಡಿದೆ. ಇವು ಮಾನವಕುಲದ ಸಂಸ್ಕೃತಿ ಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ಇದನ್ನು ಸ್ಥೂಲವಾಗಿ ಮೌಖಿಕ ಸಂಪ್ರದಾಯಗಳು, ಪ್ರದರ್ಶನ ಕಲೆ, ಸಾಮಾಜಿಕ ಪದ್ಧತಿಗಳು, ಹಬ್ಬ ಹರಿದಿನಗಳು, ಎಂದು ಗುರುತಿಸಬಹುದು. ಕರ್ನಾಟಕ ರಾಜ್ಯಕ್ಕೆ ಭವ್ಯವಾದ ಕಲಾತ್ಮಕ ಮತ್ತು ಸಾಂಸ್ಕೃತಿಕ ಪರಂಪರೆ ಇದೆ. ಈ ನಾಡನ್ನಾಳಿದ ಪ್ರಸಿದ್ಧ ರಾಜಮನೆತನಗಳು ಇಲ್ಲಿಯ ಸಾಹಿತ್ಯ, ಸಂಗೀತ, ಕಲೆ, ನೃತ್ಯ ಮತ್ತು ನಾಟಕಗಳನ್ನು ಅಪಾರವಾಗಿ ಪೋಷಿಸಿವೆ. ಹಲವು ರಾಜರುಗಳು ಶ್ರೇಷ್ಠಸಂಗೀತಗಾರರನ್ನು,ಕಲಾವಿದರನ್ನು ಹಾಗೂ ಸಾಹಿತಿಗಳನ್ನು ತಮ್ಮ ಆಸ್ಥಾನ ಪ್ರತಿಭೆಗಳನ್ನಾಗಿ ಗುರುತಿಸಿ ಗೌರವಿಸಿ, ಪೋಷಣೆಯಿತ್ತು ಅವರ ಉನ್ನತ ಸಾಧನೆಗೆ ಸಹಾಯ ನೀಡಿದ್ದಾರೆ.

ಗೋಚರ (ಮೂರ್ತ) ಪರಂಪರೆಯನ್ನು ಐತಿಹಾಸಿಕ, ಕಲಾತ್ಮಕ, ವಾಸ್ತುಶಿಲ್ಪ ಹಾಗೂ ಪುರಾತತ್ತ್ವ ಮೌಲ್ಯವುಳ್ಳ ಪ್ರಾಚೀನ ಸ್ಮಾರಕಗಳು, ನಿರ್ಮಿತಿಗಳು ಹಾಗೂ ಪಾರಂಪರಿಕ ಕಟ್ಟಡಗಳ ರೂಪದಲ್ಲಿ ಗುರುತಿಸಬಹುದು. ಭಾರತದಲ್ಲಿ 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಆಕರ್ಷಕ ವಾಸ್ತುಶೈಲಿಯ ಕಟ್ಟಡಗಳು ನಿರ್ಮಾಣವಾದವು. ಪ್ರವಾಸಿ ಬಂಗಲೆ, ಚರ್ಚ್, ವಿಹಾರಧಾಮಗಳು, ವಿಶ್ರಾಮಿ ನಿವಾಸಗಳು ಬ್ರಿಟಿಷ್ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡವು. ಬ್ರಿಟಿಷ್ ಮಿಲಿಟರಿ ಎಂಜಿನಿಯರುಗಳು ಮತ್ತು ವಾಸ್ತುಶಿಲ್ಪಿಗಳು ಒಂದಾಗಿ ಕಂಡುಕೊಂಡಿದ್ದ ಗ್ರೀಕೊ-ರೋಮನ್ ಮತ್ತು ಸ್ಕಾಟಿಷ್-ಬರೋನಿಯನ್ ಶೈಲಿಗಳ ಹದವಾದ ಮಿಶ್ರಣವಾದ ಮಿಶ್ರಶೈಲಿಯನ್ನು ಇವುಗಳ ನಿರ್ಮಾಣದಲ್ಲಿ ಅಳವಡಿಸಲಾಯಿತು. ಇದು ಅಧಿಕಾರಿ ವರ್ಗದವರಿಗೆ ನಿರ್ಮಿಸಿದ ನಿವಾಸಗಳು ಯುರೋಪಿಯನ್ ವಾಸ್ತು ಶೈಲಿಯನ್ನು ಹೊಂದಿವೆ.

ಭಾರತೀಯ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ಪರಿಣಿತನೆನಿಸಿದ ಫರ್ಗ್ಯುಸನ್‌ನ ಪ್ರಕಾರ ಭಾರತೀಯ ವಾಸ್ತು ನಿರ್ಮಾಣಗಳು ಸೌಂದರ್ಯಾತಿಶಯದ, ವಿಲಾಸಪೂರ್ಣತೆಯ, ಸೂಕ್ಷ್ಮ ಕುಸುರಿ ಕೌಶಲ್ಯದ, ಅಪೂರ್ವ ಶೃಂಗಾರಮಯ ಸೃಷ್ಟಿಗಳಾಗಿವೆ. ಜೇಮ್ಸ್ ಬರ್ಗೆಸ್ ಅವರು ಹೇಳಿದಂತೆ ವಾಸ್ತುಶಿಲ್ಪ ಎಂಬುದು ಬೃಹತ್ ಕಟ್ಟಡಗಳ ನಿರ್ಮಾಣವಷ್ಟೇ ಅಲ್ಲ; ಅದೊಂದು ಸುಮಧುರ ಕಲೆ. ಕಟ್ಟಡಗಳನ್ನು ಅವುಗಳ ನಿರ್ದಿಷ್ಟ ಉದ್ದೇಶಗಳಿಗೆ ತಕ್ಕಂತೆ ಕಲಾತ್ಮಕವಾಗಿ ಕಟ್ಟಲಾಗುತ್ತಿತ್ತು. ಆ ಕಾಲದ ಬೌದ್ಧಿಕ ಮತ್ತು ಸಾಮಾಜಿಕ ಅಂಶಗಳ ಮೇಲೆ ಇಂತಹ ಕಟ್ಟಡಗಳು ಬೆಳಕು ಚೆಲ್ಲುತ್ತವೆ.

ಯೋಜನಾ ಪ್ರಾಧಿಕಾರ ಇಲ್ಲವೇ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಸಮಿತಿ ಅಥವಾ ತತ್ಸಮಾನ ಅಧಿಕಾರವುಳ್ಳ ಯಾವುದೇ ಸಂಸ್ಥೆಯ ನ್ಯಾಯಬದ್ಧ ಅಧೀನಕ್ಕೆ ಒಳಪಟ್ಟ ಐತಿಹಾಸಿಕ, ಸಾಂಸ್ಕೃತಿಕ ಮತ್ತು ವಾಸ್ತುಶಿಲ್ಪ ಮಹತ್ತ್ವದ ಕಲಾತ್ಮಕ ಸೌಂದರ್ಯದ ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳು ಎಂದು ಕರೆಯಲಾಗುತ್ತದೆ. ಐತಿಹಾಸಿಕ, ವೈಜ್ಞಾನಿಕ ಅಥವಾ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಕಟ್ಟಡಗಳು, ಮಹತ್ತ್ವದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ವೈಜ್ಞಾನಿಕ ಇಲ್ಲವೆ ತಾಂತ್ರಿಕ ಉನ್ನತಿಗೆ ಸಂಬಂಧಿಸಿದ ಕಟ್ಟಡಗಳು ಹಾಗೂ ಶೈಲಿ, ವಿನ್ಯಾಸ, ನಿರ್ಮಾಣ ಸಾಮಗ್ರಿಗಳಲ್ಲಿ ಪುರಾತತ್ತ್ವ ವೈಶಿಷ್ಟ್ಯವನ್ನು ಪ್ರತಿನಿಧಿಸುವ ಕಟ್ಟಡಗಳು ಪಾರಂಪರಿಕ ಕಟ್ಟಡಗಳ ಪಂಕ್ತಿಗೆ ಸೇರುತ್ತವೆ. ಒಂದು ಅಥವಾ ಒಂದಕ್ಕಿಂತ ಹೆಚ್ಚು ನಿರ್ಮಿತಿಗಳ ಕಟ್ಟಡ ಸಮುಚ್ಚಯ ಅಥವಾ ಅವುಗಳ ಆಂಶಿಕ ಭಾಗಗಳು ಯಾವುದರ ಸಂರಕ್ಷಣೆ ಐತಿಹಾಸಿಕ, ಪುರಾತಾತ್ತ್ವಿಕ, ನೈಸರ್ಗಿಕ ಅಥವಾ ಜೈವಿಕ ಕಾರಣಗಳಿಗಾಗಿ ಮಹತ್ತ್ವವುಳ್ಳದ್ದಾಗಿಯೋ ಅಂತಹ ಕಟ್ಟಡಗಳು ಮತ್ತು ಅವುಗಳ ಸಂರಕ್ಷಣೆಗಾಗಿ ಇರುವ ಬೇಲಿ ಅಥವಾ ಪ್ರತಿಬಂಧಿತ ಆವರಣ, ಕಟ್ಟಡಗಳ ಸುತ್ತಲಿನ ರಕ್ಷಿತ ಪ್ರದೇಶ-ಇವೆಲ್ಲವನ್ನು ಒಳಗೊಂಡಂತೆ ಪಾರಂಪರಿಕ ಕಟ್ಟಡಗಳ ವ್ಯಾಪ್ತಿಯನ್ನು ಗುರುತಿಸಲಾಗುತ್ತದೆ. ನೈಸರ್ಗಿಕ

ಪರಂಪರೆಯಾದ ಬೆಟ್ಟಗುಡ್ಡಗಳು, ಕೆರೆ, ಕಾಲುವೆ, ಸರೋವರ, ನದಿ, ಹಳ್ಳಕೊಳ್ಳ, ಸಮುದ್ರ, ಕಾಡು, ವೃಕ್ಷಗಳು, ಗಿಡಮರಗಳು, ಪ್ರಾಣಿ–ಪಕ್ಷಿಗಳು ಮುಂತಾದ ನಿಸರ್ಗ ನಿರ್ಮಿತವಾದವುಗಳಲ್ಲಿ ಕಾಣಬಹುದು. ಇಂತಹ ನೈಸರ್ಗಿಕ ಪರಂಪರೆಗೆ ಧಕ್ಕೆ ತರದೆ ಉಳಿಸಿಕೊಳ್ಳುವುದಕ್ಕೆ ಆದ್ಯತೆ ನೀಡಬೇಕಾಗಿದೆ.

ಪರಂಪರೆ ಆಯಾ ಪ್ರದೇಶಗಳ ಅದ್ಭುತ ಪಾರಂಪರಿಕ ಸೃಷ್ಟಿಗಳಿಗೆ ಯಾರು ಇಂದು ವಾರಸುದಾರರೆನಿಸಿಕೊಳ್ಳುತ್ತಾರೋ ಅಂತಹ ಜನರು, ಸಂಸ್ಥೆಗಳು, ಸರ್ಕಾರಗಳು ಅಥವಾ ಪರೋಕ್ಷವಾಗಿ ಇವುಗಳ ಅಸ್ಥಿತ್ವ ಹಾಗೂ ಅಭಿವೃದ್ಧಿಯಲ್ಲಿ ಆಸಕ್ತರಾದವರು ಪರಂಪರೆಯನ್ನು ಉಳಿಸಲು, ಬೆಳೆಸಲು ಪ್ರಯತ್ನಿಸುವುದು ಅವಶ್ಯ. ಏಕೆಂದರೆ ಇವು ಮಾನವನ ಅತ್ಯುನ್ನತ ಮತ್ತು ಅಪರಿಮಿತ ಕಲಾತ್ಮಕ ಕೊಡುಗೆಗಳು ಮತ್ತು ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಹಿರಿಮೆಯ ವಿಶಿಷ್ಟ ಮತ್ತು ಅಪರೂಪದ ಸಾಕ್ಷ್ಯಗಳು.

ಯಾವುದೇ ನಗರದಲ್ಲಿ ಕಾಲಕಾಲದ ಆವಶ್ಯಕತೆಗನುಗುಣವಾಗಿ ಹೊಸ ಕಟ್ಟಡಗಳು ಅಗತ್ಯವೆನಿಸಿದರೂ ನಿರ್ಮಾಣವಾಗುತ್ತಿದ್ದರೂ ಅಲ್ಲಿಯ ಹಳೆಯ ಭವ್ಯ ಕಟ್ಟಡಗಳನ್ನು ಕಳೆದುಕೊಳ್ಳಲು ಜನತೆ ಇಷ್ಟಪಡುವುದಿಲ್ಲ. ಏಕೆಂದರೆ ಅವು ನಾಡಿನ ಘನ ಇತಿಹಾಸದ ಪ್ರತೀಕಗಳಾಗಿರುತ್ತವೆ. ಪರಂಪರೆ ಬಗ್ಗೆ ಅರಿವು ಮೂಡಿಸಲು ಇತ್ತೀಚೆಗೆ ಅಂಥ ಕಟ್ಟಡಗಳ ಸಮೀಪ ವಾಯುವಿಹಾರ ಸ್ಥಳಗಳಲ್ಲಿ ಪರಂಪರೆಯ ಬಗೆಗಿನ ಪ್ರಚಾರಗಳು ಹಾಗೂ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಪಾರಂಪರಿಕ ಕಟ್ಟಡಗಳ ಇತಿಹಾಸ ಅವುಗಳ ವಾಸ್ತುಶಿಲ್ಪ ಕೌಶಲ್ಯ, ಕಲಾತ್ಮಕ ವಿನ್ಯಾಸ, ಸೌಂದರ್ಯ ಇತ್ಯಾದಿ ವಿಶೇಷತೆಗಳನ್ನು ಸಾರ್ವಜನಿಕರಿಗೆ ಪರಿಚಯಿಸಲು ಪರಂಪರೆ ವಾಯುವಿಹಾರವನ್ನು ಆಯೋಜಿಸಲಾಗುತ್ತದೆ. ಪರಂಪರೆಯ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವುದಲ್ಲದೆ ಅದರ ಅಭಿವೃದ್ಧಿಯಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಇದರ ಉದ್ದೇಶವಾಗಿದೆ. ಇದರಿಂದ ಕ್ರಮೇಣ ಜನರಲ್ಲಿ ಇಂಥ ಸ್ಮಾರಕಗಳಲ್ಲಿ ಆಸಕ್ತಿ ಮೂಡಿ ಇವುಗಳನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಅವರ ಸಹಕಾರ, ಸಹಾಯವನ್ನು ಪಡೆಯಲು ಅನುಕೂಲವಾಗುತ್ತದೆ ಮತ್ತು ತಮ್ಮ ಪರಂಪರೆಯ ಬಗ್ಗೆ ಅಭಿಮಾನ ತಳೆಯಲು ಪ್ರೇರೇಪಿತರಾಗುತ್ತಾರೆ.

ಇತ್ತೀಚೆಗೆ ಪಾರಂಪರಿಕ ಕಟ್ಟಡಗಳನ್ನು ಕುರಿತು ಚಿತ್ರಬರೆಯುವ ಸ್ಪರ್ಧೆ, ಕಲಾ ಶಿಬಿರಗಳು, ರಸಪ್ರಶ್ನೆ, ಚರ್ಚಾಕೂಟ, ವಿಚಾರಗೋಷ್ಠಿ, ಕಾರ್ಯಾಗಾರ, ಪಾರಂಪರಿಕ ಕಟ್ಟಡಗಳು ಮತ್ತು ಸ್ಮಾರಕಗಳ ಬಗ್ಗೆ ದಾಖಲೆ ಸಿದ್ಧಪಡಿಸುವುದು, ಪಾರಂಪರಿಕ ಕಟ್ಟಡಗಳ ಮುಂಭಾಗದಲ್ಲಿ ಮಾಹಿತಿ ಫಲಕ ಅಳವಡಿಸುವುದು, ಛಾಯಚಿತ್ರ ಪ್ರದರ್ಶನ, ಪಾರಂಪರಿಕ ಪ್ರದೇಶಗಳು ಹಾಗೂ ಕಟ್ಟಡಗಳ ಬಗ್ಗೆ ಪರಿಚಯ ನೀಡುವ ಲಘು ಪುಸ್ತಕಗಳು ಹಾಗೂ ಮಾರ್ಗದರ್ಶಿ ಪುಸ್ತಕಗಳು ಮುಂತಾದ ವಿವಿಧ ಕಾರ್ಯಕ್ರಮಗಳಿಂದ ಸಾರ್ವಜನಿಕರಲ್ಲಿ, ಶಿಕ್ಷಕರಲ್ಲಿ, ಶಾಲಾ, ಕಾಲೇಜು ವಿದ್ಯಾರ್ಥಿಗಳಲ್ಲಿ ಪರಂಪರೆ ರಕ್ಷಣೆ ಬಗ್ಗೆ ಪ್ರಜ್ಞೆಯನ್ನು ಬೆಳೆಸುವ ಪ್ರಯತ್ನಗಳು ನಡೆದಿವೆ. (ಜೆ.ವಿ.ಜಿ.)

**ಪರಮಾರ:** ಮಾಳವದಲ್ಲೂ ಮೌಂಟ್ ಅಬು, ವಾಗಡ, ಜಾಲೋರ್ ಭಿನ್‌ಮಾಲ್ (ಭಿಲ್ಲಮಾಲ)ಗಳಲ್ಲೂ ಆಳಿದ ರಾಜವಂಶ. ಮಾಳವದ ಪರಮಾರರ ಮೂಲಸ್ಥಾನ ರಾಜಪುಟಾಣದ ಮೌಂಟ್ ಅಬು ಎಂದು ಸಾಮಾನ್ಯವಾಗಿ ಭಾವಿಸಲಾಗಿತ್ತು. ಈ ಅಭಿಪ್ರಾಯಕ್ಕೆ ಪದ್ಮಗುಪ್ತ ಕವಿ ನಿರೂಪಿಸಿದ ಕಥೆಯೇ ಮುಖ್ಯ ಆಧಾರ. ಅನಂತರದ ಕಾಲದ ಪರಮಾರರ ಸಾಹಿತ್ಯ ಮತ್ತು ಶಾಸನಗಳು ಈ ಅಭಿಪ್ರಾಯವನ್ನೇ ಎತ್ತಿ ಹಿಡಿಯುತ್ತವೆ. ಈ ಕಥೆಯ ಪ್ರಕಾರ ವಸಿಷ್ಠಮುನಿಯ ಬಳಿ ಇದ್ದ ಕಾಮಧೇನುವನ್ನು ವಿಶ್ವಾಮಿತ್ರ ಕಳವು ಮಾಡಿದನೆಂದೂ ಅದನ್ನು ಮರಳಿ ಪಡೆಯಲು ವಶಿಷ್ಠ ಮೌಂಟ್ ಅಬುವಿನ ಮೇಲೆ ಯಜ್ಞ ಮಾಡಿದಾಗ ಕುಂಡದಿಂದ ಅಪ್ರತಿಮ ವೀರನೊಬ್ಬ ಉದಯಿಸಿ ಕಾಮಧೇನುವನ್ನು ವಿಶ್ವಾಮಿತ್ರನಿಂದ ಬಲಾತ್ಕಾರವಾಗಿ ಬಿಡಿಸಿ ತಂದು ವಸಿಷ್ಠರಿಗೆ ಒಪ್ಪಿಸಿದನೆಂದೂ ಮುನಿ ಆ ವೀರನ ಸಾಹಸವನ್ನು ಮೆಚ್ಚಿ ಪರಮಾರ (ಶತ್ರುನಾಶಕ) ಎಂದು ನಾಮಕರಣ ಮಾಡಿ ಅವನಿಗೆ ರಾಜ್ಯವನ್ನು ಅನುಗ್ರಹಿಸಿದನೆಂದೂ ವರ್ಣಿಸಲಾಗಿದೆ. ಕೃಷ್ಣರಾಜ ಅಥವಾ ಉಪೇಂದ್ರ ಎಂಬವನು ಈ ವಂಶದ ಮೂಲಪುರುಷ ಮತ್ತು ಸ್ಥಾಪಕ ಎನ್ನಲಾಗಿದೆ. ಈ ವರ್ಣನೆ ಆರಂಭಕಾಲದ ಶಾಸನಗಳಲ್ಲಿ ಕಂಡುಬರುವುದಿಲ್ಲ. ಇವರ ಅತ್ಯಂತ ಪ್ರಾಚೀನ ಶಾಸನದ ಪ್ರಕಾರ ಇವರು ರಾಷ್ಟ್ರಕೂಟ ಸಂಬಂಧಿಗಳೆಂದು ತಿಳಿದುಬರುತ್ತದೆ. ಇವರು ಆರಂಭದಲ್ಲಿ ರಾಷ್ಟ್ರಕೂಟರ ಸಾಮಂತರಾಗಿದ್ದರು.

ಧಾರಾ (ಇಂದಿನ ಧರ್) ಮೂಲ ಪರಮಾರರ ರಾಜಧಾನಿ. ಉಪೇಂದ್ರ 9ನೆಯ ಶತಮಾನದ ಆರಂಭದಲ್ಲಿದ್ದ ಸು. 812ರಲ್ಲಿ ರಾಷ್ಟ್ರಕೂಟರ ಮುಮ್ಮಡಿ ಗೋವಿಂದ ಪ್ರತೀಹಾರ 2ನೆಯ ನಾಗಭಟನಿಂದ ಮಾಳವವನ್ನು ಗೆದ್ದು ತನ್ನ ಅನುಯಾಯಿಯಾದ ಪರಮಾರ ಉಪೇಂದ್ರನಿಗೆ ನೀಡಿದ. ಬಲಿಷ್ಠರಾದ ಪ್ರತೀಹಾರರ ವಿರುದ್ಧ ಉಪೇಂದ್ರನಿಗೆ ನೆರವಾಗಿ, ಮಾಳವದ ರಕ್ಷಣೆಗಾಗಿ ಕರ್ಕ ರಾಜನನ್ನು ನೇಮಿಸಿದ. ಉಪೇಂದ್ರನ ಗಂಡುಮಕ್ಕಳು 1ನೆಯ ವೈರಿಸಿಂಹ ಮತ್ತು ಡಂಬರ ಸಿಂಹ. ಅವನ ಉತ್ತರಾಧಿಕಾರಿಗಳು ಸ್ವತಂತ್ರವಾಗಿ ವಾಗಡದಲ್ಲಿ ಆಳಿಕೆ ಮುಂದುವರಿಸಿದರು. ಹಿರಿಯ ಮಗನಾದ ವೈರಿಸಿಂಹ ಮಾಲವದಲ್ಲಿ ತನ್ನ ತಂದೆಯ ಉತ್ತರಾಧಿಕಾರಿಯಾದ. ಇವನ ತರುವಾಯ 1ನೆಯ ಸೀಯಕ, ಅನಂತರ ಅವನ ಮಗ 1ನೆಯ ವಾಕ್ಪತಿ ರಾಜ್ಯವಾಳಿದರು. ಇವರು ರಾಷ್ಟ್ರಕೂಟ 1ನೆಯ ಅಮೋಘವರ್ಷನ ಸಮಕಾಲೀನರಾಗಿದ್ದು, ಅವನನ್ನು ಆರಾಧಿಸುತ್ತಿದ್ದರೆಂದು 1ನೆಯ ಅಮೋಘವರ್ಷ ಹೇಳಿಕೊಂಡಿದ್ದಾನೆ. ಪ್ರತೀಹಾರರ ವಿರುದ್ಧ ಹೋರಾಡಲು ರಾಷ್ಟ್ರಕೂಟ 3ನೆಯ ಇಂದ್ರ ಉಜ್ಜಯಿನಿಯಲ್ಲಿ ತಂಗಿದ್ದಾಗ 1ನೆಯ ವಾಕ್ಪತಿಯ ಸೇನಾ ಸಹಾಯ ಪಡೆದನೆಂದು ತಿಳಿದುಬರುತ್ತದೆ. ಇವನ ಕಾಲದಲ್ಲಿ ಮಾಳವದ ಸೈನ್ಯ ಗಂಗಾನದಿಯ ದಂಡೆಯವರೆಗೂ ಮುನ್ನಡೆದಿತ್ತೆಂದು ಉದೇಪುರ ಪ್ರಶಸ್ತಿ ತಿಳಿಸುತ್ತದೆ. ಇವನ ತರುವಾಯ 2ನೆಯ ವೈರಿಸಿಂಹ ಮಾಳವದ ಅರಸನಾದ. 3ನೆಯ ಇಂದ್ರನ ಉತ್ತರಾಧಿಕಾರಿಗಳ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಆಂತರಿಕ ಕಲಹದಲ್ಲಿ ಮುಳುಗಿದ್ದರಿಂದ ಪ್ರತೀಹಾರರು ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ಆಕ್ರಮಣ ಮಾಡಿದರು. ಮಾಳವದ 2ನೆಯ ವೈರಿಸಿಂಹ ಅವರ ಧಾಳಿಯನ್ನು ಹಿಮ್ಮೆಟ್ಟಿಸಲು ವಿಫಲನಾದ. ಪ್ರತೀಹಾರರು ಮತ್ತು ಕಳಚುರಿಗಳು ನರ್ಮದಾ ನದಿಯವರೆಗಿನ ಪ್ರದೇಶವನ್ನು ಗೆದ್ದುಕೊಂಡು, ಉಜ್ಜಯಿನಿ ಮತ್ತು ಧಾರಾವನ್ನು ವಶಪಡಿಸಿಕೊಂಡರು. ಪ್ರತೀಹಾರರು ತಮ್ಮ ರಾಜಪ್ರತಿನಿಧಿಯನ್ನು ಉಜ್ಜಯಿನಿಯಲ್ಲಿ ನೇಮಿಸಿದರು. ಇದರ ಪರಿಣಾಮವಾಗಿ, ಪರಮಾರರ ಸಾರ್ವಭೌಮಾಧಿಕಾರ ಮಾಳವದಲ್ಲಿ ಸು. 946ರ ವೇಳೆಗೆ ಕೊನೆಗೊಂಡಿತು. 3ನೆಯ ಕೃಷ್ಣ ರಾಷ್ಟ್ರಕೂಟ ಚಕ್ರವರ್ತಿಯಾದ ಬಳಿಕ ಅವನ ನೆರವಿನಿಂದ 2ನೆಯ ವೈರಿಸಿಂಹ ಮಾಳವವನ್ನು ಗೆದ್ದುಕೊಂಡ. ಇವನ ತರುವಾಯ 2ನೆಯ ಸೀಯಕ ಪರಮಾರ ಸಿಂಹಾಸನವನ್ನೇರಿದ. ಇವನಿಗೆ ಸ್ವತಂತ್ರ ಪರಮಾರ ರಾಜ್ಯವನ್ನು ನಿರ್ಮಿಸಲು ಸನ್ನಿವೇಶ ಅನುಕೂಲವಾಗಿತ್ತು. ಇವನು 3ನೆಯ ಕೃಷ್ಣನಿಗೆ ವಿಧೇಯನಾಗಿದ್ದ. ಆದರೆ ಪ್ರತೀಹಾರ ಪ್ರಭುತ್ವ ಕ್ರಮೇಣ ಅವನತಿ ಹೊಂದುತ್ತಿದ್ದುದರಿಂದ ಸ್ವತಂತ್ರನಾಗಲು ಇವನಿಗೆ ಅವಕಾಶ ದೊರಕಿತು. ಪಶ್ಚಿಮದಲ್ಲಿ ಸಾಬರಮತಿ ನದಿಯವರೆಗೆ ಮಾಳವದ ಅಧಿಕಾರ ವಿಸ್ತರಿಸಿತು. ಇವನ ಆಳಿಕೆಯ ಉತ್ತರಾರ್ಧದಲ್ಲಿ 3ನೆಯ ಕೃಷ್ಣ ಗತಿಸಿದ್ದರಿಂದ, ರಾಷ್ಟ್ರಕೂಟರಿಂದ ಸ್ವತಂತ್ರನಾಗಲು ಇವನಿಗೆ ಅವಕಾಶ ದೊರಕಿತು. ಇವನು ಕೃಷ್ಣನ ಉತ್ತರಾಧಿಕಾರಿ ಖೊಟ್ಟಿಗನಿಗೆ ವಿಧೇಯನಾಗಿರಲು ಒಪ್ಪದೆ ದಂಗೆಯೆದ್ದ. ಪರಮಾರ ಸೈನ್ಯ ರಾಷ್ಟ್ರಕೂಟರ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿತು. ಇದರ ಪರಿಣಾಮವಾಗಿ ಮಾಳವರಾಜ್ಯದ ದಕ್ಷಿಣದ ಗಡಿ ತಪತಿ ನದಿಯವರೆಗೂ ವಿಸ್ತರಿಸಿತು. ಸ್ವತಂತ್ರ ಪರಮಾರ ರಾಜ್ಯವನ್ನು ನಿರ್ಮಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನು ಸು.948–74ರ ವರೆಗೆ ಆಳಿದ. ಇವನ ಮಕ್ಕಳಾದ ಮುಂಜ ಅಥವಾ 2ನೆಯ ವಾಕ್ಪತಿ ಮತ್ತು ಸಿಂಧುರಾಜರು ಅನುಕ್ರಮವಾಗಿ ಮಾಳವವನ್ನು ಆಳಿದರು. ಮುಂಜ ರಾಜ 974–95 ರವರೆಗೆ ಆಳಿದ. ಇವನಿಗೆ ಶ್ರೀವಲ್ಲಭ, ಪೃಥ್ವೀವಲ್ಲಭ, ಅಮೋಘವರ್ಷ ಎಂಬ ಬಿರುದುಗಳಿದ್ದುವು. ಸ್ವತಂತ್ರ ಮಾಳವ ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಇವನು ಅಧಿಕಾರಕ್ಕೆ ಬಂದಾಗ ಮಾಳವ ರಾಜ್ಯ ಉತ್ತರದಲ್ಲಿ ಜಾಲೋರ್‌ವರೆಗೂ ಪೂರ್ವದಲ್ಲಿ ಭಿಲ್ಸ ದಕ್ಷಿಣದಲ್ಲಿ ತಪತಿ ಮತ್ತು ಪಶ್ಚಿಮದಲ್ಲಿ ಸಬರಮತಿಯವರೆಗೂ ವ್ಯಾಪಿಸಿತ್ತು. ಇವನು ಇದನ್ನು ಮತ್ತಷ್ಟು ವಿಸ್ತರಿಸಲು ತನ್ನ ಶಕ್ತಿಸಾಮರ್ಥ್ಯಗಳನ್ನು ವಿನಿಯೋಗಿಸಿದ. ಮೇರುತುಂಗನ ಪ್ರಬಂಧಚಿಂತಾಮಣಿಯಲ್ಲಿ ಇವನ ಸಾಹಸವನ್ನು ವೈಭವಯುತವಾಗಿ ವರ್ಣಿಸಲಾಗಿದೆ. ಇವನು ಅನೇಕ ಸಂಸ್ಕೃತ ಕವಿಗಳಿಗೆ ಆಶ್ರಯ ನೀಡಿದ್ದನಲ್ಲದೆ, ತಾನೇ, ಸ್ವತಃ ಕವಿಯಾಗಿದ್ದ; ಸಮರ ಮತ್ತು ಶಾಂತಿಯಲ್ಲಿ ಸಮನಾಗಿ ಪ್ರಸಿದ್ಧಿಗಳಿಸಿದ್ದ. ಕಳಚುರಿಗಳು, ಹೂಣರು, ಗುಹಿಲರು ಮತ್ತು ಚಾಹಮಾನರ ಮೇಲೆ ಯಶಸ್ವಿ ಹೋರಾಟ ನಡೆಸಿದ. ತಾನು ಗೆದ್ದ ಪ್ರದೇಶಗಳ ಮೇಲೆ ಪರಮಾರ ವಂಶದ ರಾಜಕುಮಾರರನ್ನು ಆಡಳಿತಾಧಿಕಾರಿಗಳಾಗಿ ನೇಮಿಸಿದ. ಈ ರಾಜಕುಮಾರರು ಕಾಲಕ್ರಮದಲ್ಲಿ ಪ್ರತ್ಯೇಕ ಉಪಶಾಖೆಯನ್ನು ಸ್ಥಾಪಿಸಿ ಅನೇಕ ವರ್ಷಗಳವರೆಗೆ ರಾಜ್ಯವಾಳಿದರು. ಚಾಳುಕ್ಯ 2ನೆಯ ತೈಲಪನ ವಿರುದ್ಧ ಮುಂಜ ಆರು ಬಾರಿ ಯುದ್ಧಮಾಡಿದ. ಏಳನೆಯ ಬಾರಿ ತೈಲಪ ಅವನನ್ನು ಸೋಲಿಸಿ ಸೆರೆಯಲ್ಲಿಟ್ಟು ಕೊಲ್ಲಿಸಿದ (995). ಮುಂಜ ಒಳ್ಳೆಯ ಯೋಧನಾಗಿದ್ದನಲ್ಲದೆ ವಿದ್ಯಾಪಕ್ಷಪಾತಿಯಾಗಿದ್ದು ಪದ್ಮಗುಪ್ತ, ಧನಂಜಯ, ಹಲಾಯುಧ ಮೊದಲಾದವರಿಗೆ ಆಶ್ರಯದಾತನಾಗಿದ್ದ. ಇವನು ಅನೇಕ ದೇವಾಲಯಗಳನ್ನೂ ಕೆರೆಕಾಲುವೆಗಳನ್ನೂ ನಿರ್ಮಿಸಿದ. ಇವನ ತರುವಾಯ ಇವನ ಸಹೋದರ ಸಿಂಧುರಾಜ ಆಳಿದ. ಇವನು ಚಾಳುಕ್ಯರನ್ನು ಸೋಲಿಸಿ ತನ್ನ ಸಹೋದರನ ಕಾಲದಲ್ಲಿ ಕಳೆದುಹೋಗಿದ್ದ ಪ್ರದೇಶಗಳನ್ನು ಮತ್ತೆ ಪಡೆದ. ಇವನ ಆಸ್ಥಾನದಲ್ಲಿದ್ದ ಪದ್ಮ ಗುಪ್ತ ಇವನನ್ನು ಕುರಿತು ನವಸಾಹಸಾಂಕ ಎಂಬ ಕೃತಿಯನ್ನು ರಚಿಸಿದ್ದಾನೆ. ಇವನ ಕಾಲದಲ್ಲಿ ಮಾಳವ ಸ್ವತಂತ್ರ ರಾಜ್ಯವಾಗಿ ಮುಂದುವರಿಯಿತಲ್ಲದೆ. ಇದಕ್ಕೆ ಅನೇಕ ಪ್ರದೇಶಗಳು ಸೇರಿಕೊಂಡುವು. ಇವನ ತರುವಾಯ ಭೋಜರಾಜ ಪಟ್ಟಕ್ಕೆ ಬಂದ.

ಪರಮಾರರ ಅಧಿಕಾರ ಮುಂಜ ಮತ್ತು ಸಿಂಧುರಾಜರ ಕಾಲದಲ್ಲಿ ಸಂಘಟಿತವಾಗಿ, ಭೋಜನ ಕಾಲದಲ್ಲಿ ಸಾಮ್ರಾಜ್ಯದ ಶ್ರೇಣಿಯನ್ನು ಮುಟ್ಟಿತು. ಭೋಜ ಸು.1010ರ ಸಮಯದಲ್ಲಿ ಮಾಳವ ಸಿಂಹಾಸನವನ್ನೇರಿದ. ಮಾಳವದ ವೈಭವ ಇವನ ಕಾಲದಲ್ಲಿ ಉತ್ತುಂಗ ಶಿಖರವನ್ನೇರಿತು. ಮಧ್ಯಕಾಲೀನ ಭಾರತದ ಪ್ರಸಿದ್ಧ ಅರಸರಲ್ಲಿ ಇವನೊಬ್ಬ. ಇವನು 40 ವರ್ಷಗಳಿಗೂ ಹೆಚ್ಚು ಕಾಲ (1010–55) ಆಳಿಕೆ ನಡೆಸಿದ. ಭೋಜನ ದಿಗ್ವಿಜಯಗಳು ಭಾರತೀಯ ದಂತಕಥೆಗಳಲ್ಲೂ ಶಾಸನಗಳಲ್ಲೂ ಜನಪ್ರಿಯವಾಗಿವೆ. ಈತ ಚಾಳುಕ್ಯ, ಚೇದಿ ಮತ್ತು ಮುಸ್ಲಿಂ ರಾಜರ ವಿರುದ್ಧ ಸತತವಾಗಿ ಯುದ್ಧಮಾಡಿದ. ಸು.1055ರಲ್ಲಿ ಚಾಳುಕ್ಯರ ದೊರೆ 1ನೆಯ ಸೋಮೇಶ್ವರನೂ ಗುಜರಾತಿನ ದೊರೆ ಭೀಮನೂ ದಾಹಲದ ದೊರೆ ಕರ್ಣನೂ ಒಟ್ಟಾಗಿ ಭೋಜನನ್ನು ಯುದ್ಧದಲ್ಲಿ ಸೋಲಿಸಿದರು. ಸಮುದ್ರಗುಪ್ತನಂತೆ ಇವನಿಗೆ ಅಸಾಮಾನ್ಯ

ವಾದ ಸಾಮರ್ಥ್ಯವಿತ್ತು. ಈತ ರಾಮ, ಧರ್ಮಪುತ್ರ, ವಿಕ್ರಮ ಮತ್ತು ಹಾಲರಂತೆ ಪ್ರಸಿದ್ಧನಾಗಿದ್ದಾನೆ. ವಾಸ್ತು ಶಿಲ್ಪ ದೃಷ್ಟಿಯಿಂದಲೂ ಇವನ ಹೆಸರು ಅಜರಾಮರವಾಗಿದೆ. ಇವನಿಗೆ ಸಾಹಿತ್ಯದಲ್ಲಿ ಅಪಾರ ಅಭಿರುಚಿಯಿತ್ತು. ಇವನಿಗೆ ಕವಿರಾಜ ಮಾಳವ ಚಕ್ರವರ್ತಿ ಎಂಬ ಬಿರುದಿತ್ತು. ಈತ ಕಾವ್ಯ, ಖಗೋಳಶಾಸ್ತ್ರ, ವಾಸ್ತುಶಾಸ್ತ್ರ, ಮಂತ್ರಶಾಸ್ತ್ರ, ನ್ಯಾಯ, ಪಶುವೈದ್ಯ, ತತ್ತ್ವ, ವ್ಯಾಕರಣ, ಅಲಂಕಾರ ಮೊದಲಾದ ವಿಷಯಗಳ ಮೇಲೆ ಗ್ರಂಥ ರಚಿಸಿದನೆಂದು ಪ್ರತೀತಿ, ಇವನ ಕಾಲದಲ್ಲಿ ಕಾವ್ಯದ ಒಂದು ಹೊಸ ಪ್ರಕಾರ ಆರಂಭವಾಯಿತು. ಶಬ್ದಗಳನ್ನು ಚಮತ್ಕಾರವಾಗಿ ಜೋಡಿಸಿ ರಚಿಸುವ ಕಲೆ ಮುಂದೆ ಬಂತು. ಶಬ್ದದಷ್ಟೆ ಅರ್ಥಕ್ಕೆ ಪ್ರಾಧಾನ್ಯ ನೀಡಲಾಯಿತು. ಕಾವ್ಯದ ವಸ್ತುವಿನಷ್ಟೇ ಕಾವ್ಯದ ತಂತ್ರವೂ ಮುಖ್ಯವಾಯಿತು. ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು ತನ್ನ ರಾಜಧಾನಿಯಾದ ಧಾರಾ ನಗರದಲ್ಲಿ ಸರಸ್ವತಿ ದೇವಾಲಯವೆಂದು ಒಂದು ವಿಶ್ವವಿದ್ಯಾಲಯವನ್ನು ಈತ ಸ್ಥಾಪಿಸಿದ. ಪ್ರಖ್ಯಾತ ಸಂಸ್ಕೃತ ಮಹಾಕಾವ್ಯಗಳಿಂದ ಆಯ್ದ ಕೆಲವು ಸ್ವಾರಸ್ಯಕರ ಭಾಗಗಳನ್ನು ಕಲ್ಲುಗಳ ಮೇಲೆ ಕೆತ್ತಿಸಿ, ವಿದ್ಯಾಲಯದ ಗೋಡೆಗಳನ್ನು ಕಟ್ಟಲು ಆ ಕಲ್ಲುಗಳನ್ನು ಉಪಯೋಗಿಸಲಾಯಿತು. ಪ್ರಭಾಚಂದ್ರ ಸೂರಿ, ಶಾಂತಿಸೇನ ಮತ್ತು ಧನಪಾಲ ಎಂಬ ಜೈನಕವಿಗಳು ಇವನ ಆಶ್ರಿತರಾಗಿದ್ದರು. ಭೋಜ ಶೈವಪಂಥದ ಅನುಯಾಯಿಯಾಗಿದ್ದ, ಇತರ ಧರ್ಮದವರನ್ನು ಮರ್ಯಾದೆಯಿಂದ ಕಾಣುತ್ತಿದ್ದ. ವೈದಿಕ, ಜೈನ ಮತ್ತು ಬೌದ್ಧರ ನಡುವೆ ಆಗಾಗ್ಗೆ ಧಾರ್ಮಿಕ ಚರ್ಚೆಗಳು ಏರ್ಪಡುತ್ತಿದ್ದುವು. ಇವನು ಸುಂದರವಾದ ಅನೇಕ ದೇವಾಲಯಗಳನ್ನು ಮತ್ತು ಕೆರೆಗಳನ್ನು ನಿರ್ಮಿಸಿದ. ಇವನು ಕಟ್ಟಿಸಿದ ಭೋಜರಾಜರ ಸರೋವರ ಬಹು ಪ್ರಖ್ಯಾತವಾಗಿದೆ.

ಭೋಜನ ತರುವಾಯ ಪರಮಾರರ ವಂಶದ ವೈಭವ ಕ್ಷೀಣಿಸಲಾರಂಭಿಸಿತು. ಪೂರ್ವ ಮತ್ತು ಪಶ್ಚಿಮ ದಿಕ್ಕಿನ ನೆರೆಹೊರೆಯವರೊಡನೆ ಹೋರಾಡುತ್ತಿದ್ದಾಗ ಭೋಜ ಕಾಯಿಲೆಯಿಂದ ಮಡಿದ. ಮಾಳವ ಕಳಚುರಿ ಮತ್ತು ಚಾಳುಕ್ಯರ ವಶವಾಯಿತು.

ಭೋಜನ ತರುವಾಯ ಅವನ ಮಗ ಜಯಸಿಂಹ 6ನೆಯ ವಿಕ್ರಮಾದಿತ್ಯನ ಸಹಾಯದಿಂದ ಶತ್ರುಗಳನ್ನು ಓಡಿಸಿ ಮಾಳವ ಸಿಂಹಾಸನವನ್ನು ಮತ್ತೆ ಪಡೆದ. ವಿಕ್ರಮಾದಿತ್ಯ ಇವನ ಪರಮ ಮಿತ್ರನಾದ. ಆದರೆ ಇವನ ಸಹೋದರ ಚಾಳುಕ್ಯ ಚಕ್ರವರ್ತಿ 2ನೆಯ ಸೋಮೇಶ್ವರನಿಗೆ ಹಗೆಯಾದ. 6ನೆಯ ವಿಕ್ರಮಾದಿತ್ಯನ ಉದ್ದೇಶದ ಬಗ್ಗೆ ಇವನ ಕಿರಿಯ ತಮ್ಮ ಸಂಶಯಗೊಂಡ. ಜಯಸಿಂಹನನ್ನು ಶಿಕ್ಷಿಸಲು ಸೋಮೇಶ್ವರ ಗುಜರಾತಿನ ಚಾಳುಕ್ಯ ರಾಜ ಕರ್ಣನೊಡನೆ ಕೂಡಿ ಮಾಳವದ ಮೇಲೆ ಯುದ್ಧ ಹೂಡಿದ. ಇದರಲ್ಲಿ ಜಯಸಿಂಹ ಮೃತನಾದ. ಸೋಮೇಶ್ವರ ಮತ್ತು ಕರ್ಣರು ಮಾಳವವನ್ನು ವಶಪಡಿಸಿಕೊಂಡರು. ಇಂಥ ವಿಷಮ ಪರಿಸ್ಥಿತಿಯಲ್ಲಿ ಭೋಜರಾಜನ ಸಹೋದರ ಉದಯಾದಿತ್ಯ ಚಾಹಮಾನರ ನೆರವಿನಿಂದ ಶತ್ರುಗಳನ್ನು ಹಿಮ್ಮೆಟ್ಟಿಸಿ ಮಾಳವವನ್ನು ವಾಪಸು ಪಡೆದ. ಇವನ ಕಾಲದಲ್ಲಿ ಮಾಳವ ರಾಜ್ಯ ದಕ್ಷಿಣದಲ್ಲಿ ನೀಮರ್ ಜಿಲ್ಲೆ ಮತ್ತು ಉತ್ತರದಲ್ಲಿ ಜಾಲ್‌ವಾರ್‌ವರೆಗೂ ಪೂರ್ವದಲ್ಲಿ ಭಿಲ್ಸದವರೆಗೂ ಹಬ್ಬಿತ್ತೆಂದು 1080–86 ಅವಧಿಗೆ ಸಂಬಂಧಿಸಿದ ಶಾಸನಗಳು ತಿಳಿಸುತ್ತವೆ.

ಇವನ ತರುವಾಯ ಇವನ ಮಕ್ಕಳಾದ ಲಕ್ಷ್ಮಣದೇವ ಮತ್ತು ನರವರ್ಮರು ಆಳಿದರು. ಗೌಡ, ಚೋಳ ಮತ್ತು ಕಳಚುರಿಗಳೊಡನೆ ಲಕ್ಷ್ಮಣದೇವ ಯುದ್ಧಮಾಡಿದನಲ್ಲದೆ, ಉಜ್ಜಯಿನಿಯ ಮೇಲೆ ನಡೆದ ಮುಸ್ಲಿಂ ಆಕ್ರಮಣವನ್ನು ಹಿಮ್ಮೆಟ್ಟಿಸಿದ. ಇವನ ತರುವಾಯ ಇವನ ಸಹೋದರ ನರವರ್ಮ ನಿರ್ವಾಣ ನಾರಾಯಣನೆಂಬ ಬಿರುದಿನಿಂದ ಸು. 1094ರಲ್ಲಿ ಮಾಳವದ ಸಿಂಹಾಸನವನ್ನೇರಿದ. ಇವನು ಸ್ವತಃ ಕವಿಯಾಗಿದ್ದು ವಿದ್ಯಾಪೋಷಕನಾಗಿದ್ದ. ಇವನ ಅನಂತರ ಸು. 1133ರಲ್ಲಿ ಯಶೋವರ್ಮ ಪರಮಾರ ಸಿಂಹಾಸನವನ್ನೇರಿದ. ಇವನು ಅವನತಿ ಹೊಂದುತ್ತಿದ್ದ ಮಾಳವ ರಾಜ್ಯವನ್ನು ಸಂಘಟಿಸಲು ವಿಫಲನಾದ. ಅನೇಕ ಬಲಿಷ್ಠ ಸಾಮಂತ ಅರಸರು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದರು. ಚಂದೇಲರ ಮದನವರ್ಮ ಬಲಾತ್ಕಾರವಾಗಿ ಭಿಲ್ಸ ಪ್ರದೇಶವನ್ನು ಆಕ್ರಮಿಸಿಕೊಂಡ. ಗುಜರಾತಿನ ಜಯಸಿಂಹ ಸಿದ್ಧರಾಜ ಚಾಹಮಾನರೊಡಗೂಡಿ ಮಾಳವವನ್ನು ಆಕ್ರಮಿಸಿಕೊಂಡು ಯಶೋವರ್ಮನನ್ನು ಸೆರೆಹಿಡಿದ. ಯಶೋವರ್ಮನ ಮಗ ಜಯವರ್ಮ ಸಿದ್ಧರಾಜನ ಕೊನೆಗಾಲದಲ್ಲಿ ಮಾಳವ ರಾಜ್ಯವನ್ನು ಮರಳಿ ಪಡೆಯುವುದರಲ್ಲಿ. ಯಶಸ್ವಿಯಾದ. ಆದರೆ ಅವನು ಮಾಳವವನ್ನು ತನ್ನ ಸ್ವಾಧೀನದಲ್ಲಿ ಬಹಳ ಕಾಲ ಇಟ್ಟುಕೊಳ್ಳಲಾಗಲಿಲ್ಲ. ಕಲ್ಯಾಣ ಚಾಳುಕ್ಯರ ಜಗದೇಕಮಲ್ಲ ಮತ್ತು ಹೊಯ್ಸಳ 1ನೆಯ ನರಸಿಂಹರು ಮಾಳವದ ಮೇಲೆ ಧಾಳಿ ನಡೆಸಿ ಅವನ ಅಧಿಕಾರವನ್ನು ನಾಶಮಾಡಿಸಿದರು. ಮಾಳವದಲ್ಲಿ ಬಲ್ಲಾಳನೆಂಬವನನ್ನು ರಾಜನಾಗಿ ಮಾಡಲಾಯಿತು. 1143ರ ವೇಳೆಗೆ ಸಿದ್ಧರಾಜನ ಉತ್ತರಾಧಿಕಾರಿ ಕುಮಾರಪಾಲ ಮಾಳವದಲ್ಲಿ ಪ್ರತಿಷ್ಠಾಪಿಸಿದ್ದ ಬಲ್ಲಾಳನನ್ನು ಪದಚ್ಯುತಗೊಳಿಸಿ ಭಿಲ್ಸದವರೆಗಿನ ಮಾಳವ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಸು. 20 ವರ್ಷಗಳ ಕಾಲ ಮಾಳವ ಗುಜರಾತಿನ ಚಾಳುಕ್ಯರ ಅಧೀನದಲ್ಲಿತ್ತು. ಈ ಅವಧಿಯಲ್ಲಿ ಪರಮಾರ ವಂಶದ ರಾಜರನ್ನು ಮಹಾಕುಮಾರರು ಎಂದು ಕರೆಯಲಾಗುತ್ತಿತ್ತು. ಇವರು ಭೂಪಾಲ್, ನೀಮರ್, ಹೊಷಂಗಾಬಾದ್, ಖಾನ್‌ದೇಶ ಪ್ರದೇಶಗಳಲ್ಲಿ ಸಣ್ಣಪುಟ್ಟ ರಾಜರುಗಳಾಗಿ ಆಳುತ್ತಿದ್ದರು.

ಆದರೆ 12ನೆಯ ಶತಮಾನದ ಉತ್ತರಾರ್ಧದಲ್ಲಿ ಪರಮಾರ ಜಯವರ್ಮನ ಪುತ್ರ ವಿಂಧ್ಯವರ್ಮ ಚಾಳುಕ್ಯ 2ನೆಯ ಮೂಲರಾಜನನ್ನು ಸೋಲಿಸಿ ಮಾಳವದ ರಾಜ್ಯವನ್ನು ಮತ್ತೆ ಗಳಿಸಿದ. ಆದರೆ ಹೊಸದಾಗಿ ಗಳಿಸಿದ ತನ್ನ ಪೂರ್ವಿಕರ ರಾಜ್ಯವನ್ನು ಅವನು ಬಹಳ ಕಾಲ ಆಳಲಿಲ್ಲ. ದಖನ್ನಿನಲ್ಲಿ ಚಾಳುಕ್ಯರು ಅವನತಿ ಹೊಂದಿದರೂ ಅವನಿಗೆ ಶತ್ರುಗಳ ಬಾಧೆ ತಪ್ಪಲಿಲ್ಲ. ಅವರ ಸ್ಥಾನದಲ್ಲಿ ಹೊಯ್ಸಳರು ಮತ್ತು ದೇವಗಿರಿ ಸೇವುಣರು ಏಳಿಗೆ ಹೊಂದಿ ಮಾಳವದ ಮೇಲೆ ಏಕಪ್ರಕಾರವಾಗಿ ಆಕ್ರಮಣ ನಡೆಸಿದರು. ಸು. 1190ರಲ್ಲಿ ಚೋಳರೊಡನೆ ಮೈತ್ರಿ ಏರ್ಪಡಿಸಿಕೊಂಡು ಪ್ರಬಲವಾಗುತ್ತಿದ್ದ ಹೊಯ್ಸಳರ ಅಧಿಕಾರವನ್ನು ನಾಶಮಾಡಲು ಅವನು ಯತ್ನಿಸಿದ. ಆದರೆ 2ನೆಯ ಬಲ್ಲಾಳ ಇವರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ. ಸೇವುಣರ ಬಿಲ್ಲಣ ಮಾಳವ ರಾಜ್ಯದ ಮೇಲೆ ಧಾಳಿ ನಡೆಸಿ ಕೊಳ್ಳೆಹೊಡೆದ. ಇವೆಲ್ಲ ಬಾಧಕಗಳಿದ್ದಾಗ್ಯೂ ವಿಂಧ್ಯವರ್ಮ ಶತ್ರುಗಳನ್ನು ಎದುರಿಸುವುದರಲ್ಲಿ ಯಶಸ್ವಿಯಾದ. ಇವನು ಮರಣ ಹೊಂದುವ ವೇಳೆಗೆ (1193) ಪರಮಾರ ರಾಜ್ಯವನ್ನು ಸಂಘಟಿಸಿದ. ಇವನ ಉತ್ತರಾಧಿಕಾರಿ ಶುಭಾತವರ್ಮ ಗುಜರಾತಿನ ಮೇಲೆ ಆಕ್ರಮಣ ಎಸಗಿ ಅನೇಕ ಜೈನ ದೇವಾಲಯಗಳನ್ನು ಲೂಟಿ ಮಾಡಿ ಸೋಮನಾಥವನ್ನು ತಲುಪಿದ. ಆದರೆ ಇವನ ಮುನ್ನಡೆಯನ್ನು 2ನೆಯ ಭೀಮನ ಮಂತ್ರಿ ತಡೆದು ಅವನು ಗುಜರಾತಿನಿಂದ ನಿರ್ಗಮಿಸುವಂತೆ ಮಾಡಿದ. ಅನಂತರ ಇವನು ಸೇವುಣರ ಜೈತುಗಿಯಿಂದ ಸೋಲನ್ನು ಅನುಭವಿಸಬೇಕಾಯಿತು. ಇವನ ತರುವಾಯ ಇವನ ಮಗ ಅರ್ಜುನವರ್ಮ ಸು.1210ರಲ್ಲಿ ಮಾಳವದ ಅಧಿಪತಿಯಾದ. ಇವನು ಗುಜರಾತಿನೊಡನೆ ಯುದ್ಧ ಮುಂದುವರಿಸಿದ. ಕೊನೆಯಲ್ಲಿ ಈ ರಾಜ್ಯದ ರಾಜಪುತ್ರಿಯನ್ನು ವಿವಾಹವಾದ. ಈ ಎರಡು ರಾಜ್ಯಗಳ ನಡುವೆ ನಡೆದ ಯುದ್ಧವನ್ನು ಆಧರಿಸಿ ಪಾರಿಜಾತಮಂಜರಿ ಎಂಬ ನಾಟಕವನ್ನು ಅರ್ಜುನವರ್ಮನ ಗುರು ಮದನ ರಚಿಸಿದ್ದಾನೆ. ಅರ್ಜುನವರ್ಮ ತನ್ನ ಪೂರ್ವಿಕರಂತೆಯೇ ಸೇವುಣರನ್ನು ಎದುರಿಸಲು ವಿಫಲನಾದ. ಇವನು ಸ್ವತಃ ಕವಿಯಾಗಿದ್ದ. ಇವನ ಆಸ್ಥಾನದಲ್ಲಿ ಅನೇಕ ವಿದ್ವಾಂಸರಿದ್ದರು. ಇವನ ತರುವಾಯ ದೇವಪಾಲ ಪರಮಾರ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ. ಇವನ ರಾಜ್ಯ ಕೆಲವೇ ಪ್ರದೇಶಗಳಿಗೆ ಸೀಮಿತಗೊಂಡಿತ್ತು. ಇವನ ಕಾಲದಲ್ಲಿ ಮಾಳವದ ಮೇಲೆ ಮುಸ್ಲಿಮರು ಆಕ್ರಮಣ ನಡೆಸಿದರು. 1234ರಲ್ಲಿ ಇಲ್ತಮಿಷ್ ಭಿಲ್ಸವನ್ನು ವಶಪಡಿಸಿಕೊಂಡು ಉಜ್ಜಯಿನಿಯನ್ನು ಕೊಳ್ಳೆ ಹೊಡೆದ. ಅರ್ಜುನವರ್ಮನ ತರುವಾಯ ಇವನ ಮಗ ಜೈತುಗಿದೇವ ಸು.1243ರಲ್ಲಿ ಪಟ್ಟಕ್ಕೆ ಬಂದ. ಇವನ ಕಾಲದಲ್ಲಿ ಮಾಳವ ಶತ್ರುಗಳಿಗೆ ತುತ್ತಾಯಿತು. ಸೇವುಣರ ದೊರೆ ಕೃಷ್ಣ ಧಾಳಿ ನಡೆಸಿದ. 1250ರಲ್ಲಿ ಬಲ್ಲನನೂ ಅದೇ ಕಾಲದಲ್ಲಿ ಗುಜರಾತಿನ ವಾಘೇಲ ವಿಶಾಲದೇವನೂ ಧಾರವನ್ನು ಮುತ್ತಿದರು. ಇವನ ತರುವಾಯ ಕಿರಿಯ ತಮ್ಮ 2ನೆಯ ಜಯವರ್ಮ ಆಳಿದ. ಅನಂತರ 2ನೆಯ ಜಯಸಿಂಹ ರಾಜ್ಯವಾಳಿದ. ಇವನ ಕಾಲದಲ್ಲಿ ರಣಥಂಬೋರಿನ ಚಾಹಮಾನರು ಆಕ್ರಮಣ ಮಾಡಿ, ಪರಮಾರ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿದರು. ಅನಂತರ ಬಂದ 2ನೆಯ ಅರ್ಜುನವರ್ಮನಿಗೂ ಅವನ ತಂದೆಯ ಬಳಿ ಮಂತ್ರಿಯಾಗಿದ್ದವನಿಗೂ ಅಧಿಕಾರಕ್ಕಾಗಿ ಪೈಪೋಟಿ ನಡೆದು ಅವರು ತಂತಮ್ಮ ವಶದಲ್ಲಿದ್ದ ಪ್ರದೇಶಗಳನ್ನಾಳಲಾರಂಭಿಸಿದರು. 2ನೆಯ ಅರ್ಜುನವರ್ಮನ ಕಾಲದಲ್ಲಿ ರಣತಂಬೂರಿನ ಚಾಹಮಾನರು. ಸೇವುಣರು ಮತ್ತು ವಾಘೇಲರು ಮಾಳವದ ಆಕ್ರಮಣ ಎಸಗಿದರು. ಅನಂತರ ಕಾಣಿಸುವ ಪರಮಾರ ಅರಸನೆಂದರೆ 2ನೆಯ ಭೋಜ. ಇವನು 1283ರಲ್ಲಿ ಸಿಂಹಾಸನಕ್ಕೆ ಬಂದ. ಇವನ ಕಾಲದಲ್ಲಿ ಮಾಳವದ ಮೇಲೆ ಮತ್ತೆ ಚಾಹಮಾನರೂ ಸುಲ್ತಾನ್ ಜಲಾಲುದ್ದೀನ್ ಖಿಲ್ಜಿಯೂ ಆಕ್ರಮಣ ನಡೆಸಿದರು. 2ನೆಯ ಭೋಜನ ತರುವಾಯ ಮಹಲಕ್ ದೇವ ಸು.1305ರಲ್ಲಿ ಆಳುತ್ತಿದ್ದ. ಇವನ ಆಳಿಕೆಯ ಕಾಲದಲ್ಲಿ ಅಲಾಉದ್ದೀನ್ ಖಿಲ್ಜಿ ಧಾಳಿ ನಡೆಸಿದ. ಅವನೊಡನೆ ಹೋರಾಡುತ್ತಿದ್ದಾಗ ಇವನ ದಂಡನಾಯಕ ಕೊಲ್ಲಲ್ಪಟ್ಟ. ಇವನು ಐನುಲ್ ಮುಲ್ಕನಿಂದ ಕೊಲೆಗೆ ಈಡಾದ. ಕೊನೆಗೆ ಮಾಳವ ರಾಜ್ಯವನ್ನು ಮುಸ್ಲಿಮರು ಗೆದ್ದುಕೊಂಡರು.

**ಶಾಖೆಗಳು:** ಮಾಳವದ ಮೂಲ ಪರಮಾರದಿಂದ ರಾಜಪುಟಾಣದಲ್ಲಿ ನಾಲ್ಕು ಶಾಖೆಗಳು ಹುಟ್ಟಿಕೊಂಡು ಅನೇಕ ವರ್ಷಗಳ ಕಾಲ ಪ್ರತ್ಯೇಕವಾಗಿ ಆಳಿದುವು. ಮೌಂಟ್ ಅಬು, ವಾಗಡ, ಜಾಲೋರ್, ಭಿನ್ಮಾಲ್ ಶಾಖೆಗಳು ಮುಖ್ಯವಾದವು.

**ಮೌಂಟ್ ಅಬುವಿನ ಪರಮಾರರು:** 10ನೆಯ ಶತಮಾನದ ಉತ್ತರಾರ್ಧದಲ್ಲಿ ಮಾಳವದ ವಾಕ್ಪತಿ ಮುಂಜ ತನ್ನ ಪುತ್ರ ಅರಣ್ಯರಾಜನನ್ನು ಮೌಂಟ್ ಅಬುವಿನ ಅಧಿಕಾರಿಯಾಗಿ ನೇಮಿಸಿದ. ಚಂದ್ರಾವತಿ ಈ ರಾಜ್ಯದ ರಾಜಧಾನಿ. ಅರಣ್ಯರಾಜನ ಅನಂತರ ಬಂದವರು ಕೃಷ್ಣರಾಜ, ಧರಣಿವರಾಹ, ಮಹೀಪಾಲ ಮತ್ತು ದಾಂಡುಕ. ಗುಜರಾತಿನ ಚಾಳುಕ್ಯರ 1ನೆಯ ಭೀಮನಿಂದ ದಾಂಡುಕ ಪದಚ್ಯುತನಾದ (1030). ಆದರೆ ದಾಂಡುಕನಿಗೆ ಮತ್ತೆ ಸಿಂಹಾಸನ ಕೊಡಲಾಯಿತು. ಅನಂತರ ಇವನ ಮಕ್ಕಳಾದ ಪೂರ್ಣಪಾಲ, ದಂತಿವರ್ಮ ಮತ್ತು 2ನೆಯ ಕೃಷ್ಣರು ಅನುಕ್ರಮವಾಗಿ ಆಳಿದರು. ಇವರ ಪೈಕಿ ಮೊದಲನೆಯವನಾದ ಪೂರ್ಣಪಾಲ ಗುಜರಾತಿನ ಚಾಳುಕ್ಯರಿಂದ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ. 1ನೆಯ ಭೀಮ ಇದನ್ನು ಸಹಿಸದೆ ಮೌಂಟ್ ಅಬುವನ್ನು ಆಕ್ರಮಿಸಿಕೊಂಡು ತನ್ನ ಸ್ವಾಧೀನದಲ್ಲಿ ಇರಿಸಿಕೊಂಡ. ಅಂದಿನಿಂದ ಮೌಂಟ್ ಅಬು ಗುಜರಾತಿನ ಚಾಳುಕ್ಯ ರಾಜ್ಯದ ಒಂದು ಭಾಗವಾಗಿ ಉಳಿದುಕೊಂಡಿತು. 2ನೆಯ ಕೃಷ್ಣನ ತರುವಾಯ ದಂತಿವರ್ಮನ ಮಗ ಯೋಗರಾಜನೂ ಅನಂತರ ರಾಮದೇವನೂ ಅನುಕ್ರಮವಾಗಿ ರಾಜ್ಯವಾಳಿದರು. ರಾಮದೇವನ ಆಳಿಕೆಯ ಕಾಲದಲ್ಲಿ ಮೌಂಟ್ ಅಬುವಿನ ಸಿಂಹಾಸನವನ್ನು 2ನೆಯ ಕೃಷ್ಣನ ಮಗ ಕಾಕಲದೇವ ಆಕ್ರಮಿಸಿಕೊಂಡ. ಇವನ ತರುವಾಯ ವಿಕ್ರಮಸಿಂಹ ಪಟ್ಟಕ್ಕೆ ಬಂದ. ಇವನ ತರುವಾಯ

ಯಶೋವರ್ಮ, ಧಾರಾವರ್ಷ ಹೀಗೆ ಸುಮಾರು ಹತ್ತೊಂಬತ್ತು ಅರಸರು ಮೌಂಟ್ ಅಬುವಿನಲ್ಲಿ ಆಳಿಕೆ ನಡೆಸಿದರು. 1320ರಲ್ಲಿ ಈ ಪುಟ್ಟ ರಾಜ್ಯ ಮಾರವಾಡದ ಚಾಹಮಾನರ ಅಧೀನವಾಯಿತು.

**ವಾಗಡದ ಪರಮಾರರು:** 10ನೆಯ ಶತಮಾನದ ಮಧ್ಯದಲ್ಲಿ ಉಪೇಂದ್ರನ ಕಿರಿಯ ಮಗ ಡಂಬರಸಿಂಹನ ಸಂತತಿಯ ಧನಿಕ ಎಂಬವನು ವಾಗಡ ರಾಜ್ಯವನ್ನು ಸ್ಥಾಪಿಸಿದ. ಇವನ ಉತ್ತರಾಧಿಕಾರಿ ಕಂಕ ಅಥವಾ ಚಚ್ಚ. ಇವನು 2ನೆಯ ಸೀಯಕನ ಪರವಾಗಿ ರಾಷ್ಟ್ರಕೂಟರ ಖೊಟ್ಟಿಗನ ವಿರುದ್ಧ ಹೋರಾಡುವಾಗ ಯುದ್ಧದಲ್ಲಿ ಮಡಿದ. ಅನಂತರ ಚಂಪ ಮತ್ತು ಸತ್ಯರಾಜ ಅನುಕ್ರಮವಾಗಿ ಆಳಿಕೆ ನಡೆಸಿದರು. ಸತ್ಯರಾಜ ಚಾಳುಕ್ಯರ ವಿರುದ್ಧ ಭೋಜನಿಗೆ ನೆರವು ನೀಡಿದ. ಇವನ ಅನಂತರ ನಾಲ್ವರು ಆಳಿದರು. 12ನೆಯ ಶತಮಾನದ ಮಧ್ಯದಲ್ಲಿ ವಾಗಡ ರಾಜ್ಯವನ್ನು ಗುಹಿಲರು ಆಕ್ರಮಿಸಿಕೊಂಡರು.

**ಜಾಲೋರಿನ ಪರಮಾರರು:** ಮುಂಜನ ಮಗ ಚಂದ ಈ ಶಾಖೆಯ ಪ್ರಥಮದೊರೆ. ಇವನ ತರುವಾಯ ದೇವರಾಜ, ಅಪರಾಜಿತ, ವಿಜ್ಜಲ, ಧಾರಾವರ್ಷ ಮತ್ತು ವಿಶಾಲರು ಅನುಕ್ರಮವಾಗಿ ಆಳಿದರು. ಈ ಸಂತತಿಯ ಕೊನೆಯ ದೊರೆ ಕುಮಾರಪಾಲ. 12ನೆಯ ಶತಮಾನದ ಕೊನೆಯ ಭಾಗದಲ್ಲಿ ಈ ರಾಜ್ಯವನ್ನು ಚಾಹಮಾನರು ವಶಪಡಿಸಿಕೊಂಡರು.

**ಭಿನ್ಮಾಲಿನ ಪರಮಾರರು:** ಸಿಂಧುರಾಜನ ಮಗ ದುಸಲ ಈ ಶಾಖೆಯ ಸ್ಥಾಪಕ. 11ನೆಯ ಶತಮಾನದ ಪ್ರಾರಂಭದಲ್ಲಿ ಈ ಸಂತತಿಯ ದೇವರಾಜ ಎಂಬವನು ಚಾಹಮಾನರ ಮೂರು ಮಂಡಲಗಳನ್ನು ಪಡೆದ. ದೇವರಾಜನ ಮೊಮ್ಮಗ ಕೃಷ್ಣ. ಚಾಳುಕ್ಯರ 1ನೆಯ ಭೀಮ ಇವನನ್ನು ಸೆರೆಯಲ್ಲಿಟ್ಟಿದ್ದ. ಇವನ ತರುವಾಯ ಸೊಚ್ಚರಾಜ, ಉದಯರಾಜ, ಸೋಮೇಶ್ವರ ಇವರು ಸಿಂಹಾಸನವೇರಿದರು. ಉದಯರಾಜ ಪರಾಕ್ರಮಿಯಾಗಿದ್ದ. ಸೋಮೇಶ್ವರನ ಅನಂತರ ಇಬ್ಬರು ದೊರೆಗಳು ಆಳಿದರು. ಈ ರಾಜ್ಯ 13ನೆಯ ಶತಮಾನದ ಪೂರ್ವಾರ್ಧದಲ್ಲಿ ಮಾರವಾಡದ ಚಾಹಮಾನರ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟಿತು. (ಎಂ.ಜಿ.)

**ಪರ್ಸೆಪಲಿಸ್:** ಪ್ರಾಚೀನ ಇರಾನಿನ ಅಕಿಮೆನಿಯನ್ ರಾಜಧಾನಿ. ಹಳೆ ಪರ್ಷಿಯನ್ ಭಾಷೆಯಲ್ಲಿ ಇದು ಪಾರ್ಸಾ ಎನಿಸಿಕೊಂಡಿತ್ತು. ಈಗ ಈ ನಿವೇಶನಕ್ಕೆ ತಖ್ತ್-ಎ-ಜಮ್ಷಿದ್ ಎಂಬ ಹೆಸರಿದೆ. ಜಮ್ಷಿದನ ಸಿಂಹಾಸನ ಎಂದು ಇದರ ಅರ್ಥ. ಪರ್ಷಿಯದ ಪೌರಾಣಿಕ ವೀರ. ಇರಾನಿನ ನೈರುತ್ಯಕ್ಕಿರುವ ಫಾರ್ಸ್ ಪ್ರಾಂತ್ಯದಲ್ಲಿ ಷಿರಾಜ್‌ನ ಈಶಾನ್ಯಕ್ಕೆ 51 ಕಿಮೀ ದೂರದಲ್ಲಿ ಪುಲ್ವಾರ್ ಹಾಗೂ ರೂದ್-ಎ-ಕೊರ್ ನದಿಗಳ ಸಂಗಮದ ಬಳಿ ಈ ನಿವೇಶನವಿದೆ. ಇಲ್ಲಿ ಕೆಲವು ಪ್ರಾಗ್ಯೈತಿಹಾಸಿಕ ಅವಶೇಷಗಳೂ ಅಮೂಲ್ಯ ಶಾಸನಗಳೂ ಸಿಕ್ಕಿವೆ. ಪ್ರ.ಶ.ಪೂ.522-486ರಲ್ಲಿ ಆಳಿದ 1ನೆಯ ಡೇರಿಯಸ್ ಪರ್ಸೆಪಲಿಸ್ ನಗರದ ನಿರ್ಮಾಣ ಕಾರ್ಯವನ್ನಾರಂಭಿಸಿದ. ಅನಂತರ ಅವನು ತನ್ನ ರಾಜಧಾನಿಯನ್ನು ಪಸಾರ್ಗಾಡಿಯಿಂದ ಇಲ್ಲಿಗೆ ಬದಲಾಯಿಸಿದ. ಪರ್ಷಿಯದ ರಾಜಧಾನಿಯಾಗಿ ಪರ್ಸೆಪಲಿಸ್



ಸಿಂಹಾಸನದ ಸಭಾಂಗಣ

ಮೆರೆಯಿತು. ಆದರೆ ಸ್ಥಿರವಾಗಿ ವಾಸಿಸಲು ಇದು ಅಷ್ಟೊಂದು ಅನುಕೂಲಕರವಾಗಿರಲಿಲ್ಲ. ಪರ್ವತಮಯ ನಿರ್ಜನ ಪ್ರದೇಶದಲ್ಲಿದ್ದ ಈ ನಗರದಲ್ಲಿ ವಸಂತಮಾಸದಲ್ಲಿ ಮಾತ್ರ ಜನವಸತಿಯಿದ್ದಂತೆ ತೋರುತ್ತದೆ.

ಅಲೆಕ್ಸಾಂಡರ್ ಪ್ರ.ಶ.ಪೂ.330ರಲ್ಲಿ ಏಷ್ಯ ಮೈನರನ್ನು ಆಕ್ರಮಿಸುವವರೆಗೂ ಗ್ರೀಕರಿಗೂ ಈ ನಗರದ ಪರಿಚಯ ಇರಲಿಲ್ಲವೆಂದು ಹೇಳಲಾಗಿದೆ. ಅಲೆಕ್ಸಾಂಡರ್ ಪ್ರ.ಶ.ಪೂ.330ರಲ್ಲಿ ಪರ್ಸೆಪಲಿಸ್ ನಗರವನ್ನು ಕೊಳ್ಳೆಹೊಡೆದ. ಝರ್ಕ್ಸಿಸನ ಅರಮನೆಯನ್ನು ಸುಟ್ಟುಹಾಕಿದ. ಪ್ರ.ಶ.ಪೂ.316ರಲ್ಲಿ ಕೂಡ ಇದು ಮ್ಯಾಸಿಡೋನಿಯ ಸಾಮ್ರಾಜ್ಯದ ಪ್ರಾಂತ್ಯವಾದ ಪರ್ಸಿಸ್‌ನ ರಾಜಧಾನಿಯಾಗಿತ್ತು. ಸಿಲ್ಯೂಸಿಡ್ ಆಳಿಕೆಯ ಕಾಲದಲ್ಲೂ ಅನಂತರವೂ ಇದು ಅವನತಿ ಹೊಂದಿತು. ಈಗ ಅಲ್ಲಿ ಕಂಡುಬರುವ ಪ್ರಾಚ್ಯವಶೇಷಗಳು ಈ ನಗರದ ಗತವೈಭವಕ್ಕೆ ಮೂಕಸಾಕ್ಷಿಗಳಾಗಿವೆ.

ಭಗ್ನವಾಗಿರುವ ಪರ್ಸೆಪಲಿಸ್‌ನ ನಿವೇಶನ ಒಂದು ಎತ್ತರದ ದಿಣ್ಣೆ. ಪೂರ್ವದಲ್ಲಿ ಇದು ಕೂಹ್-ಎ-ರಹಮತ್ ಗುಡ್ಡವನ್ನು ಒರಗಿದೆ. ಉಳಿದ ಮೂರು ಕಡೆ ಇರುವ ಗೋಡೆ 4ಮೀ ಗಳಿಂದ 13ಮೀ ಎತ್ತರವಿದೆ. ಪೂರ್ವದ ಕಡೆ 111 ಮೆಟ್ಟಿಲುಗಳಿವೆ. ಇವನ್ನು ಹತ್ತಿ ಮೇಲಕ್ಕೆ ಬಂದರೆ ಎತ್ತರವಾದ ದಿಣ್ಣೆಯ ಪ್ರದೇಶದಲ್ಲಿ ಅನೇಕ ವಾಸ್ತುಕೃತಿಗಳ ಅವಶೇಷಗಳು ಕಾಣುತ್ತವೆ. ಹೊಳಪಾದ ಕಪ್ಪು-ಕಂದು ಬಣ್ಣದ ಶಿಲೆಯಲ್ಲಿ ನಿರ್ಮಿಸಿದ್ದ ಈ ಕಟ್ಟಡಗಳ ಭಾಗಗಳು ದೂರದಿಂದಲೇ ಗಮನ ಸೆಳೆಯುತ್ತವೆ. ದೊಡ್ಡದೊಡ್ಡ ಬಂಡೆಗಲ್ಲು

ಅರಮನೆ ಸಂಕೀರ್ಣ, ಸ್ತಂಭಗಳು

ಗಳನ್ನು ಗಾರೆ ಸಿಮೆಂಟು ಮರಳುಗಳಿಲ್ಲದೆ ಜೋಡಿಸಿ ಕಟ್ಟಿದ ಬೃಹತ್ ವಾಸ್ತುಕಟ್ಟಡಗಳ ಅದ್ಭುತವಾದ ಸ್ತಂಭರಾಶಿಗಳಿವೆ. ಇವುಗಳ ಪೈಕಿ ಹದಿಮೂರು ಕಂಬಗಳು-ಡೇರಿಯಸನ ಆಸ್ಥಾನದವು-ಇನ್ನೂ ಹಾಗೆಯೇ ನಿಂತಿವೆ. ಇನ್ನೆರಡು ಕಂಬಗಳು ಮುಖಮಂಟಪದ ಭಾಗದಲ್ಲಿ ಉಳಿದಿವೆ. ಈ ಭಾಗವನ್ನು ಡೇರಿಯಸನ ಮಗನಾದ ಝರ್ಕ್ಸಿಸ್ ಕಟ್ಟಿಸಿದ. ಈ ಎಲ್ಲ ಅವಶೇಷಗಳನ್ನು ಸೋತೂನ್ (ಸಾವಿರ ಕಂಬಗಳು) ಎಂದು ಕರೆಯಲಾಗಿದೆ.

ಡೇರಿಯಸ್ ಭವನದ ತಳಭಾಗದಲ್ಲಿ ಚಿನ್ನ ಹಾಗೂ ಬೆಳ್ಳಿಯ ಎರಡು ಫಲಕಗಳು 1933ರಲ್ಲಿ ದೊರೆತವು. ಈ ಶಾಸನಗಳಲ್ಲಿ ಕ್ಯೂನಿಫಾರ್ಮ್ ಲಿಪಿಯ ಮೂರು ರೂಪಗಳನ್ನು ಕಾಣಬಹುದು. ಇವು ಪೂರ್ವ ಪರ್ಷಿಯನ್, ಎಲಮೈಟ್ ಹಾಗೂ ಬ್ಯಾಬಿಲೋನಿಯನ್ ಪ್ರಭೇದಗಳು. ಈ ಶಾಸನಗಳು ಪರ್ಷಿಯನ್ ಸಾಮ್ರಾಜ್ಯದ ಗಡಿರೇಖೆಗಳನ್ನು ದಾಖಲಿಸುತ್ತವೆ. ಇವಲ್ಲದೆ 1ನೆಯ ಡೇರಿಯಸ್, ಝರ್ಕ್ಸಿಸ್ ಮತ್ತು 3ನೆಯ ಆರ್ಟಗ್ಸರ್ಕೀಸ್ ಕಾಲದ ಕೆಲವು ಶಿಲಾಶಾಸನಗಳೂ ಪರ್ಸೆಪಲಿಸ್‌ನಲ್ಲಿ ಸಿಕ್ಕಿವೆ. ಈ ಶಾಸನಾಧಾರಗಳಿಂದ ಇಲ್ಲಿಯ ವಾಸ್ತುಕೃತಿಗಳನ್ನು ನಿರ್ಮಿಸಿದವರನ್ನು ಹಾಗೂ ಇವುಗಳ ಕಾಲವನ್ನು ಕುರಿತು ನಿರ್ದಿಷ್ಟವಾಗಿ ತಿಳಿಯಲು ಸಾಧ್ಯವಾಗಿದೆ.

ಪರ್ಸೆಪಲಿಸ್‌ನ ದಕ್ಷಿಣಭಾಗದಲ್ಲಿರುವ ಕಟ್ಟಡವೇ ಅತ್ಯಂತ ಪ್ರಾಚೀನವಾದ್ದು. ಇಲ್ಲಿ ಡೇರಿಯಸನ ಪ್ರಸಿದ್ಧವಾದ ಪ್ರಾರ್ಥನೆಯೊಂದನ್ನು (ದೇವರೆ, ಈ ದೇಶವನ್ನು ವೈರಿಗಳಿಂದ, ಕ್ಷಾಮದಿಂದ ಹಾಗೂ ಅಸತ್ಯದಿಂದ ರಕ್ಷಿಸು) ಬರೆಯಲಾಗಿದೆ. ಅಲ್ಲದೆ ಪರ್ಷಿಯನ್, ಮೀಡಿಯನ್ ಹಾಗೂ ಎಲಮೈಟ್ ಅಧಿಕಾರಿಗಳ ಉಬ್ಬುಗೆತ್ತನೆಗಳನ್ನು ಇಲ್ಲಿ ನೋಡಬಹುದು. ಒಟ್ಟು 23 ದೃಶ್ಯಾವಳಿಗಳಲ್ಲಿ ಸಾಮ್ರಾಜ್ಯದ ದೂರಪ್ರದೇಶಗಳಿಂದ ಬಂದ ಪ್ರತಿನಿಧಿಗಳ ಚಿತ್ರಗಳಿವೆ. ರಾಷ್ಟ್ರೀಯ ಉತ್ಸವದಂದು ಇವರು ಕಾಣಿಕೆಯನ್ನು ಅರ್ಪಿಸುತ್ತಿರುವಂತೆ ಚಿತ್ರಿಸಲಾಗಿದೆ.

ತಖ್ತ್-ಎ-ಜಮಷಿದ್‌ನ ಹಿಂಭಾಗದಲ್ಲಿ (ಗುಡ್ಡದ ಬಳಿ) ಮೂರು ಸ್ಮಶಾನಗುಹೆಗಳನ್ನು ಕೊರೆಯಲಾಗಿದೆ. ಈ ಗುಹೆಗಳಲ್ಲಿ ಒಂದರ ದ್ವಾರ ಅಪೂರ್ಣ. ಇದು 3ನೆಯ ಡೇರಿಯಸನ ಗೋರಿ. ಉಳಿದವುಗಳಲ್ಲಿ ಉಬ್ಬುಗೆತ್ತನೆ ಶಿಲ್ಪಗಳಿವೆ. ಈ ಗೋರಿಗಳು ಅನುಕ್ರಮವಾಗಿ 2ನೆಯ ಮತ್ತು 3ನೆಯ ಆರ್ಟ್‌ಗ್ಸರ್ಕೀಸನವು. ರಾಜರ ಸ್ಮಶಾನಸ್ಥಳದ ಈಶಾನ್ಯಕ್ಕೆ ಸು.13ಕಿಮೀ ದೂರದಲ್ಲಿ, ಎತ್ತರವಾದ ಶಿಲಾಪರ್ವತದ ಬಳಿ ಇನ್ನೊಂದು ಸ್ಮಶಾನಗುಹೆಯನ್ನು ಕೊರೆಯಲಾಗಿದೆ. ಇದನ್ನು ನಕ್ಷೆ-ರೊಸ್ತಮ್ (ರುಸ್ತುಮನ ಚಿತ್ರ) ಎಂದು ಕರೆಯಲಾಗಿದೆ. ಇದು 1ನೆಯ ಡೇರಿಯಸ್‌ನ ಗೋರಿಯೆಂಬುದು ಇದರ ಬಳಿ ಇರುವ ಶಾಸನದಿಂದ ತಿಳಿದುಬರುತ್ತದೆ. ಇದು ಆತನ ಗುಣಾತಿಶಯಗಳನ್ನು ಹೇಳುತ್ತದೆ. ಪರ್ಸೆಪಲಿಸ್‌ನ ವಾಸ್ತುಕೃತಿಗಳಲ್ಲಿ ಎರಡು ಹಂತಗಳನ್ನು ಗುರುತಿಸಬಹುದು. ಪ್ರ.ಶ.ಪೂ.528-450ರವರೆಗಿನದು ಮೊದಲನೆಯ ಹಂತ. ಪ್ರ.ಶ.ಪೂ.450-330ರ ವರೆಗಿನದು ಎರಡನೆಯ ಹಂತ. ಈ ಎರಡು ಹಂತಗಳಲ್ಲಿ ನಿರ್ಮಿಸಲಾದ ಕಟ್ಟಡಗಳಲ್ಲಿ ಮುಖ್ಯವಾಗಿ 3ನೆಯ ಆರ್ಟ್‌ಗ್ಸರ್ಕೀಸನ ಅರಮನೆ, ಭಂಡಾರ, ಡೇರಿಯಸ್ ಮತ್ತು ಝರ್ಕಿಸರ ಸಭಾಭವನ, ಝರ್ಕಿಸರ ಮಹಾದ್ವಾರ, ನೂರು ಕಂಬಗಳ ಸಭಾಭವನ, ಕೋಟೆಗೋಡೆ, 2ನೆಯ ಮತ್ತು 3ನೆಯ ಆರ್ಟ್‌ಗ್ಸರ್ಕೀಸರ ಗುಹೆಗಳು (ಕೋಟೆಯ ಹೊರವಲಯದಲ್ಲಿ) ಇದ್ದುವು. ಇವುಗಳ ತಳಪಾಯ, ಕಂಬ ಮುಂತಾದ ಭಾಗಗಳು ಮಾತ್ರ ಈಗ ಉಳಿದಿವೆ. ಸಾಮ್ರಾಜ್ಯದ ನಾನಾಭಾಗಗಳಿಂದ ಬಂದ ವಾಸ್ತುಶಿಲ್ಪಿಗಳ ಕಲಾಪ್ರಾವೀಣ್ಯವನ್ನು ಇಲ್ಲಿ ಗುರುತಿಸಬಹುದು. ಈಗ ಇದನ್ನು ವಿಶ್ವಪರಂಪರೆ ನೆಲೆ ಎಂದು ಗುರುತಿಸಿದೆ. (ಎಚ್.ಆರ್.ಆರ್.ಬಿ.)

**ಪಲ್ಲವರಂ:** ತಮಿಳುನಾಡು ರಾಜ್ಯದ ಚೆಂಗಲ್‌ಪೇಟ್ ಜಿಲ್ಲೆಯಲ್ಲಿರುವ ಆದಿ ಹಳೆಶಿಲಾಯುಗದ ನೆಲೆ. ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಹಳೆಶಿಲಾಯುಗದ ಅವಶೇಷಗಳು ಪತ್ತೆಯಾದದ್ದು ಈ ನೆಲೆಯಲ್ಲಿ ಎಂಬುದು ಗಮನಾರ್ಹ. 1863 ಮೇ 30 ರಂದು ಆದಿ ಹಳೆಶಿಲಾಯುಗದ ಒಂದು ಕೈಗೊಡಲಿಯನ್ನು ರಾಬರ್ಟ್ ಬ್ರೂಸ್‌ಫುಟ್ ಇಲ್ಲಿ ಶೋಧಿಸಿದ. ಇದರಿಂದ ಪ್ರೇರಿತನಾದ ಫುಟ್ ಈ ಪರಿಸರವನ್ನು ಶೋಧಿಸಿ ಅನೇಕ ಹಳೆಶಿಲಾಯುಗದ ನೆಲೆಗಳನ್ನು ಬೆಳಕಿಗೆ ತಂದ. ಇಂತಹ ಇನ್ನೊಂದು ನೆಲೆ ಅತ್ತಿರಂಪಾಕ್ಕಂ (**ನೋಡಿ**).(ಎಸ್.ಪಿ.)

**ಪಲ್ಲವರು:** ದಕ್ಷಿಣಭಾರತದ ಪ್ರಸಿದ್ಧ ರಾಜವಂಶ. ಸಾತವಾಹನರ ಪತನಾನಂತರ ಅವರ ರಾಜ್ಯದ ನೈರುತ್ಯ ಭಾಗದಲ್ಲಿ ಅಂದರೆ ಬನವಾಸಿ ಅಥವಾ ವೈಜಯಂತಿ (ಶಿವಮೊಗ್ಗ ಪ್ರದೇಶ) ಭಾಗಗಳಲ್ಲಿ ಆಳುತ್ತಿದ್ದ ಚುಟುವಂಶದ ಅರಸರು ಸಾತಕರ್ಣಿ ಎಂಬ ಬಿರುದಾವಳಿಗಳನ್ನು ಹೊಂದಿದ್ದರು. ಬಹುಶಃ ಇವರು ಸಾತವಾಹನರ ಅಧೀನದಲ್ಲಿದ್ದಿರಬಹುದು. ಅದೇ ಸಮಯದಲ್ಲಿ ಅವರ ರಾಜ್ಯದ ಪೂರ್ವಕ್ಕೆ ಅಂದರೆ ಆಗ್ನೇಯ ದಕ್ಷಿಣ ಭಾರತದಲ್ಲಿ ಪಲ್ಲವರು ಕಾಂಚೀಪುರವನ್ನು ರಾಜಧಾನಿಯಾಗಿರಿಸಿಕೊಂಡು ತೊಂಡೈಮಂಡಲಮ್ ಪ್ರದೇಶವನ್ನು ಆಳುತ್ತಿದ್ದರು.

ಪ್ರಾಚೀನ ತಮಿಳು ಸಂಗಮ್ ಕಾಲದ ಸಾಹಿತ್ಯ ಪಲ್ಲವರನ್ನು ಕುರಿತು ಉಲ್ಲೇಖಿಸುವುದಿಲ್ಲ. ಆದರೆ ಸಾತವಾಹನರ ಕಾಲದಲ್ಲಿ ಅವರು ಬೇರೆಡೆಯಿಂದ ವಲಸೆ ಬಂದು ಸಾತವಾಹನರ ಬಳಿ ಮಾಂಡಳಿಕರಾಗಿ ಅಥವಾ ಸೈನ್ಯಾಧಿಕಾರಿಗಳಾಗಿ ಸೇರಿರಬಹುದೆಂದು ತರ್ಕಿಸಲಾಗಿದೆ. ಕೆಲವು ವಿದ್ವಾಂಸರು ಇವರ ಮೂಲವನ್ನು ಕುರಿತು ಹೇಳುವಾಗ ಇವರು ಪಹಲವ ಅಥವಾ ಪಾರ್ಥಿಯನ್ನರು ಎಂದು ಭಾವಿಸುತ್ತಾರೆ. ಆದರೆ ಇವರು ಸ್ಥಳೀಯ ಕುರುಂಬ ಅಥವಾ ಅದರ ಉಪಶಾಖೆಯ ಬುಡಕಟ್ಟು ವರ್ಗದವರಾಗಿರಬೇಕೆಂಬ ಅಭಿಪ್ರಾಯವಿದೆ.

ಪಲ್ಲವರ ಪ್ರಾರಂಭಿಕ ಅರಸರುಗಳನ್ನು ಕುರಿತು ತಾಮ್ರಪಟ ಶಾಸನಗಳಿಂದ ಮಾತ್ರವೇ ತಿಳಿದುಬಂದಿದೆ. ಪ್ರಾಕೃತದಲ್ಲಿರುವ ಸು. 3ನೆಯ ಶತಮಾನದ ಈ ಶಾಸನಗಳು ಸಿಂಹವರ್ಮನ್ ಮತ್ತು ಶಿವಸ್ಕಂದವರ್ಮನ ಹೆಸರುಗಳನ್ನು ಉಲ್ಲೇಖಿಸಿವೆ. ಈ ಅರಸರು ದಕ್ಷಿಣ ಭಾರತದ ಬಹುತೇಕ ಭಾಗಗಳನ್ನು ತಮ್ಮ ಅಧೀನದಲ್ಲಿರಿಸಿಕೊಂಡು, ವೈದಿಕ ಯಜ್ಞಯಾಗಾದಿಗಳನ್ನು ಮಾಡಿದರೆಂದು ತಿಳಿಯಬರುತ್ತದೆ. ಇವರ ತರುವಾಯ ಎಂಟು ಮಂದಿ ಅರಸರ ಹೆಸರುಗಳು ಸಂಸ್ಕೃತದ ತಾಮ್ರಪಟಗಳಿಂದ ತಿಳಿದುಬಂದಿದೆ. ಇವರ ಕಾಲಾನುಕ್ರಮಣಿಕೆ ಮತ್ತು ನಿಖರ ವಂಶಾವಳಿಯ ಬಗೆಗೆ ಅಸ್ಪಷ್ಟತೆಯಿದೆಯಾದರೂ ಇವರು 4 ರಿಂದ 6ನೆಯ ಶತಮಾನದವರೆಗೆ ಆಳಿದರು. ಕಂಚಿಯ ವಿಷ್ಣುಗೋಪ ಎಂಬ ಪಲ್ಲವ ಅರಸನನ್ನು ಗುಪ್ತರ ಅರಸ ಸಮುದ್ರಗುಪ್ತ ಸೋಲಿಸಿದನೆಂದು ಅಲಹಾಬಾದಿನಲ್ಲಿಯ ಈ ಅರಸನ ಶಾಸನದಿಂದ ತಿಳಿದುಬರುತ್ತದೆ.

6ನೆಯ ಶತಮಾನದ ಅಂತ್ಯದಲ್ಲಿ ಪಲ್ಲವ ಅರಸ ಸಿಂಹವಿಷ್ಣು ಆಳತೊಡಗಿದ ಕಾಲದಿಂದ ಪಲ್ಲವರನ್ನು ಕುರಿತಾದ ನಿಖರ ಮಾಹಿತಿ ದೊರಕುವುದು. ಇದೇ ಕಾಲಘಟ್ಟದಲ್ಲಿ ಪಾಂಡ್ಯರ ಅರಸ ಕಡುಂಗೋವನ ಕಾಲದಿಂದ ಈ ಮನೆತನ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಇವರೀರ್ವರೂ ಕಳಭ್ರ ಅಥವಾ ಕಳ್‌ವರ್ ಅವರುಗಳನ್ನು ಸದೆಬಡಿಯುತ್ತಾರೆ. ಇದರಿಂದ ದಕ್ಷಿಣ ಭಾರತದಲ್ಲಿ ಹೊಸ ರಾಜಕೀಯ ಮತ್ತು ಸಾಂಸ್ಕೃತಿಕ ಕಾಲಘಟ್ಟ ಪ್ರಾರಂಭವಾಗುತ್ತದೆ. ಸಿಂಹವಿಷ್ಣು (575–600) ಚೋಳರ ಬಹುತೇಕ ರಾಜ್ಯವನ್ನು ವಶಪಡಿಸಿಕೊಂಡು ಕೃಷ್ಣಾ ನದಿಯಿಂದ ಕಾವೇರಿ ನದಿಯವರೆಗಿನ ವಿಶಾಲ ಪ್ರದೇಶವನ್ನು ಆಳುತ್ತಾನೆ. ಇವನ ಮಗ ಮತ್ತು ಉತ್ತರಾಧಿಕಾರಿ ಮಹೇಂದ್ರವರ್ಮನ್ (600–630) ಅತ್ಯಂತ ಮೇಧಾವಿಯಾಗಿದ್ದು, ಸಂಸ್ಕೃತ ಭಾಷೆಯಲ್ಲಿ ಪಂಡಿತನಾಗಿದ್ದ. ಇವನು ವಿಚಿತ್ರಚಿತ್ತ; ಮತ್ತವಿಲಾಸ, ಗುಣಭರ ಮುಂತಾದ ಬಿರುದುಗಳನ್ನು ಹೊಂದಿದವನಾಗಿದ್ದು ಗುಹಾದೇವಾಲಯಗಳನ್ನು ನಿರ್ಮಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ಕಾಲದವರೆಗೆ ವಾಸ್ತುರಚನೆಯಲ್ಲಿ ಬಳಸಲಾಗುತ್ತಿದ್ದ ನಶ್ವರ ವಸ್ತುಗಳನ್ನು ಕೈಬಿಟ್ಟು ಕಲ್ಲಿನಲ್ಲಿ ದೇವತೆಗಳಿಗೆ ವಾಸಸ್ಥಳ ಏರ್ಪಡಿಸಿದನೆಂದು ಅವನು ತನ್ನ ಮಾಮಂಡೂರು ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಬಾದಾಮಿ ಚಳುಕ್ಯ ಅರಸ ಇಮ್ಮಡಿ ಪುಲಕೇಶಿಯೊಂದಿಗೆ ಮಾಡಿದ ಯುದ್ಧಗಳಲ್ಲಿ ವಾಯವ್ಯ ಭಾಗದ ರಾಜ್ಯವನ್ನು ಕಳೆದುಕೊಂಡ. ಇವನ ಕಾಲದಲ್ಲಿ ಪ್ರಾರಂಭವಾದ ಚಳುಕ್ಯ–ಪಲ್ಲವರ ಯುದ್ಧ ಸೆಣಸಾಟಗಳು ರಾಷ್ಟ್ರಕೂಟರ ಕಾಲದವರೆಗೆ ಮುಂದುವರೆಯುತ್ತವೆ.

ಒಂದನೆಯ ನರಸಿಂಹವರ್ಮ (630–668) ಮಹೇಂದ್ರವರ್ಮನ ಮಗ ಮತ್ತು ರಾಜಕೀಯ ಉತ್ತರಾಧಿಕಾರಿಯಾಗಿ ಇಮ್ಮಡಿಪುಲಕೇಶಿಯೊಂದಿಗೆ ಯುದ್ಧದಲ್ಲಿ ತೊಡಗಿಕೊಂಡು ಬಾದಾಮಿವರೆಗೆ (ವಾತಾಪಿ) ತೆರಳಿ ಅದನ್ನು ಆಕ್ರಮಿಸಿಕೊಂಡ. 642ರ ಈ ಯುದ್ಧದಲ್ಲಿ ಪುಲಕೇಶಿ ಸೋತು ಮಡಿದ. ನರಸಿಂಹವರ್ಮ ಚೋಳ, ಚೇರ ಮತ್ತು ಕಳಭ್ರರನ್ನು ಸೋಲಿಸಿದ ಹಾಗೂ ಸಿಂಹಳದ ಅರಸ ಮಾನವರ್ಮನಿಗೆ ಆಶ್ರಯ ನೀಡಿ ಸಿಂಹಳಕ್ಕೆ ನೌಕಾಪಡೆಯನ್ನು ಸಹ ಕಳುಹಿಸಿ, ಮಾನವರ್ಮನಿಗೆ ಅವನ ಸಿಂಹಳ ರಾಜ್ಯ ದೊರಕುವಲ್ಲಿ ಸಹಾಯಹಸ್ತ ನೀಡಿದ. ದಕ್ಷಿಣಭಾರತದ ಅತ್ಯಂತ ಪರಾಕ್ರಮಿ ರಾಜನಾಗಿ ಪಲ್ಲವರ ಕೀರ್ತಿಯನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರಧಾರಿಯಾಗಿದ್ದ. ಇವನ ಆಶ್ರಯದಲ್ಲಿ ಮಹಾಬಲಿಪುರದಲ್ಲಿ ಇಂದು ಪ್ರಸಿದ್ಧವಾಗಿರುವ ಅಪೂರ್ವ ಏಕ ಶಿಲಾ ದೇವಾಲಯಗಳು, ಬಂಡೆಯ ಮೇಲೆ ಬೃಹತ್ ಶಿಲಾಫಲಕಗಳು ನಿರ್ಮಾಣವಾದುವು.

ಸಂಪೂರ್ಣವಾಗಿ ಕುಸಿದ ಚಳುಕ್ಯರು 655ರಲ್ಲಿ ಇದೇ ವಂಶದ ಅರಸ ವಿಕ್ರಮಾದಿತ್ಯ ರಾಜ್ಯವನ್ನು ಪುನರುಜ್ಜೀವಗೊಳಿಸಿ ಗಂಗರು ಮತ್ತು ಪಾಂಡ್ಯರ ಸಹಾಯದಿಂದ ಪಲ್ಲವ ನಂದಿವರ್ಮ ಮತ್ತು ಅವನ ಇಬ್ಬರು ಮಕ್ಕಳಾದ ಇಮ್ಮಡಿ ಮಹೇಂದ್ರವರ್ಮ ಮತ್ತು ಪರಮೇಶ್ವರವರ್ಮನನ್ನು ಸೋಲಿಸಿದ. ಯುದ್ಧದಲ್ಲಿ ಇಮ್ಮಡಿ ಮಹೇಂದ್ರವರ್ಮ (668–670) ಮಡಿದ. ಪರಮೇಶ್ವರವರ್ಮ (670–695) ಪಾಂಡ್ಯರ ಬಳಿ ಸೋತರೂ ಬಾದಾಮಿಯ ಮೇಲೆ ದಂಡೆತ್ತಿ ಹೋದ. ಇದಕ್ಕೆ ಪ್ರತೀಕಾರವಾಗಿ ವಿಕ್ರಮಾದಿತ್ಯ ಪಲ್ಲವರ ಮೇಲೆ ಯುದ್ಧ ಸಾರಿದ. ಇವರೀರ್ವರ ಯುದ್ಧದ ಬಳಿಕ ಚಳುಕ್ಯ–ಪಲ್ಲವರ ಸೆಣಸಾಟಗಳು ಕ್ಷೀಣಿಸುತ್ತದೆ.

ಇಮ್ಮಡಿ ನರಸಿಂಹವರ್ಮ (695–722) ಪರಮೇಶವರ್ಮನ ಮಗ ಮತ್ತು ಉತ್ತರಾಧಿಕಾರಿ. ಇವನಿಗೆ ರಾಜಸಿಂಹ ಎಂಬ ಹೆಸರು ಸಹ ಇತ್ತು. ಇವನು ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ದ್ರಾವಿಡ ಮಾದರಿಯ ವಾಸ್ತು ರಚನೆಗೆ ಪ್ರೇರಕನಾದ. ಹಲವಾರು ದೇವಾಲಯಗಳನ್ನು ನಿರ್ಮಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಪ್ರಮುಖ ವಾಸ್ತುಶಿಲ್ಪ ಕಟ್ಟಡಗಳು ಇವನ ಕಾಲದಲ್ಲಿ ಪ್ರಾರಂಭವಾಯಿತು. ಕಂಚಿಯ ಕೈಲಾಸನಾಥ ದೇವಾಲಯ, ಮಹಾಬಲಿಪುರದ ಕಡಲ ಬಳಿಯ ದೇವಾಲಯಗಳನ್ನು ನಿರ್ಮಿಸಿದ. ಇವನ ಕಾಲದಲ್ಲಿ ಚಿತ್ರಕಲೆಗೆ ವಿಶೇಷ ಪ್ರೋತ್ಸಾಹವಿತ್ತು. ಇವನ ಆಸ್ಥಾನದಲ್ಲಿ ದಂಡಿ ಎಂಬ ಪ್ರಸಿದ್ಧ ಸಂಸ್ಕೃತ ಕವಿ ಇದ್ದ. 720ರಲ್ಲಿ ಅರಸನು ಚೀನಕ್ಕೆ ರಾಯಭಾರಿಗಳನ್ನು ಕಳುಹಿಸಿದ. ಇಮ್ಮಡಿ ಪರಮೇಶ್ವರವರ್ಮ ರಾಜಸಿಂಹನ ಮಗ. ಚಳುಕ್ಯರ ಆಕ್ರಮಣವನ್ನು ಎದುರಿಸಬೇಕಾಯಿತು. ಈ ಆಕ್ರಮಣದಲ್ಲಿ ರಾಜಧಾನಿ ಕಂಚಿಯನ್ನು ಚಳುಕ್ಯರಿಗೆ ಒಪ್ಪಿಸಿದ. ಯಾವ ವಾರಸುದಾರರಿಲ್ಲದೆ

ರಾಜರಾಜೇಶ್ವರ ದೇವಾಲಯ, ಕಂಚಿ

731ರಲ್ಲಿ ಮಡಿದ. ಇದೇ ಸಮಯದಲ್ಲಿ ರಾಜ್ಯದ ಪ್ರಮುಖರು ಪಲ್ಲವರ ವಂಶಕ್ಕೆ ಸೇರಿದ ಇಮ್ಮಡಿ ನಂದಿವರ್ಮ ಎಂಬ 12 ವರ್ಷದ ಬಾಲಕನಿಗೆ ಪಟ್ಟ ಕಟ್ಟಿದರು. ಇವನು ಪಲ್ಲವಮಲ್ಲ ಎಂಬ ಹೆಸರಿನೊಂದಿಗೆ ಸುದೀರ್ಘವಾಗಿ 60 ವರ್ಷಗಳ ಕಾಲ ಆಳ್ವಿಕೆ ನಡೆಸಿದ. ಪಾಂಡ್ಯರೊಂದಿಗೆ ಇವನು ಸೆಣಸಾಡಿದ. ಸೈನ್ಯಾಧಿಕಾರಿ ಉದಯಚಂದ್ರನ ಸಹಾಯದಿಂದ ಉತ್ತರದ ಅನೇಕ ರಾಜ್ಯಗಳನ್ನು ವಶಪಡಿಸಿಕೊಂಡ. ಕೊಂಗು ಮತ್ತು ಕೇರಳ ಅರಸರೊಂದಿಗೆ ಷಡ್ಯಂತ್ರ ರಚಿಸಿ ಪಾಂಡ್ಯರನ್ನು ಸೋಲಿಸುವ ಪ್ರಯತ್ನದಲ್ಲಿ ವಿಫಲನಾದ. ಇವನು ಯುವರಾಜನಾಗಿದ್ದಾಗಲೇ 730ರಲ್ಲಿ ಚಳುಕ್ಯ ಅರಸ ಇಮ್ಮಡಿ ವಿಕ್ರಮಾದಿತ್ಯ ಕಂಚಿಯನ್ನು ವಶಪಡಿಸಿಕೊಂಡ. ಆದರೆ ತನ್ನ ರಾಜ್ಯಕ್ಕೆ ಮರಳುವಾಗ ಗೆದ್ದ ಸಂಪತ್ತನ್ನು ಪಲ್ಲವರ ರಾಜ್ಯದ ದೇವಾಲಯಗಳಿಗೆ ನೀಡಿದ. ಚಳುಕ್ಯರ ಮೇಲೆ ಇಮ್ಮಡಿ ನಂದಿವರ್ಮ ಯುದ್ಧಮಾಡಿ ಸಂಪತ್ತನ್ನು ದೋಚಿದ. ರಾಷ್ಟ್ರಕೂಟ ಅರಸ ದಂತಿದುರ್ಗ ಚಳುಕ್ಯರನ್ನು ಸೋಲಿಸಿ ಕಂಚಿಯ ಮೇಲೆ ಯುದ್ಧಕ್ಕೆ ಹೋದ. ಹಲವಾರು ಸೆಣಸಾಟಗಳ ನಡುವೆಯೂ ನಂದಿವರ್ಮ ರಾಜ್ಯವನ್ನು ಉಳಿಸಿಕೊಂಡ. ಗಂಗ ಮತ್ತು ರಾಷ್ಟ್ರಕೂಟರ ನಡುವೆ ಸೆಣಸಾಟಗಳು ನಡೆದು ನಂದಿವರ್ಮನು ರಾಷ್ಟ್ರಕೂಟ ಅರಸ ಧ್ರುವನಿಗೆ ಸೋತು ಅವನಿಗೆ ಕಾಣಿಕೆಗಳನ್ನು ನೀಡಿ ಸಂಧಿಯನ್ನು ಮಾಡಿಕೊಂಡ.

ಇವನ ಉತ್ತರಾಧಿಕಾರಿ ದಂತಿವರ್ಮ (796–840) ಪಾಂಡ್ಯ ಮತ್ತು ರಾಷ್ಟ್ರಕೂಟರ ಧಾಳಿಗೆ ತುತ್ತಾಗುತ್ತಾನೆ. ಇವನ ಮುಂದಿನ ಅರಸ ಮುಮ್ಮಡಿ ನಂದಿವರ್ಮನು ಪಾಂಡ್ಯರನ್ನು ಸೋಲಿಸಿ ಸೋತ ರಾಜ್ಯವನ್ನು ವಶಪಡಿಸಿಕೊಂಡ. ಪರಾಕ್ರಮಿಯಾದ ಈ ಅರಸ ಅತ್ಯಂತ ಬಲಶಾಲಿಯಾದ ನೌಕಾ ಪಡೆಯನ್ನು ಸಜ್ಜುಗೊಳಿಸಿದ. ಇವನ ಕಾಲದ ತಮಿಳು ಶಾಸನ ಮಲಯದ ತಾಕುವಪದಲ್ಲಿ ದೊರಕಿದ್ದು ಅಲ್ಲಿ ಅವನು ವಿಷ್ಣುದೇವಾಲಯ ಮತ್ತು ಅವಣಿನಾರಣಮ್ ಎಂಬ ಕೆರೆಯನ್ನು ನಿರ್ಮಿಸಿದನೆಂದು ಉಲ್ಲೇಖಿಸಿದೆ. ಇವನು 865ರಲ್ಲಿ ಪಾಂಡ್ಯರ ಬಳಿ ಸೋತ ತರುವಾಯ ಮಡಿದ. ಮುಂದಿನ ಅರಸ ನೃಪತುಂಗ ಪಾಂಡ್ಯರೊಂದಿಗೆ ಕಾದಾಟಗಳನ್ನು ನಡೆಸಿದ. ಅಪರಾಜಿತನ ಸಹಾಯದಿಂದ 880ರಲ್ಲಿ ಪಾಂಡ್ಯರನ್ನು ಪೂರ್ಣವಾಗಿ ಸದೆಬಡಿದ. ಅಪರಾಜಿತ ಚೋಳ ಮತ್ತಿತರ ಅರಸರ ಸಹಾಯದಿಂದ ಪಾಂಡ್ಯರನ್ನು

ಸೋಲಿಸಿದ. ಈ ಅರಸನ ಬಗೆಗೆ ಸಾಕಷ್ಟು ತಿಳಿದಿಲ್ಲ. ಇವನು ನೃಪತುಂಗನ ಸಂಬಂಧಿಯಾಗಿದ್ದು ಪಲ್ಲವ ರಾಜ್ಯದ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಕೊಂಡ ವನಾಗಿದ್ದ. ನೃಪತುಂಗ 41 ವರ್ಷಗಳ ಕಾಲ ಆಳಿಕೆ ನಡೆಸಿದ.

ಅಪರಾಜಿತನ ರಾಜಕೀಯ ಕೌಶಲ ಪಲ್ಲವ ರಾಜ್ಯವನ್ನು ಸಾಕಷ್ಟು ರಕ್ಷಿಸಿದರೂ ಅವರ ಸಾಮಂತರಾಗಿದ್ದ ಚೋಳರ ಮುಖ್ಯಸ್ಥ ಆದಿತ್ಯ ಪಲ್ಲವ ಅಪರಾಜಿತನನ್ನು ಸೋಲಿಸಿ ಪಲ್ಲವ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡು ಸ್ವಾತಂತ್ರ್ಯವನ್ನು ಘೋಷಿಸಿಕೊಂಡ. 891ರ ಆಸುಪಾಸಿನಲ್ಲಿ ತೊಂಡೈಮಂಡಲಮ್‌ನ (ಪಲ್ಲವ ರಾಜ್ಯ) ಸಾಮಂತ ಅರಸರಾದ ಚೋಳರ



ವರಾಹ ಮಂಟಪ

ವಶವಾಯಿತು. ಪಲ್ಲವರ ಆಳಿಕೆ ಕೊನೆಗೊಂಡಿತು. ಮುಂದೆ ಚೋಳರು ರಾಜಕೀಯವಾಗಿ ಬೆಳೆದು ಪ್ರಬಲರಾದರು.

ಪಲ್ಲವರ ಕಾಲದಲ್ಲಿ ಮಹಾಬಲಿಪುರಂ ಅಥವಾ ಮಾಮಲ್ಲಪುರವನ್ನು ವಾಣಿಜ್ಯ ರಾಜಧಾನಿಯಾಗಿ ಮಾಡಿಕೊಂಡರು. ಈ ಕಡಲ ತೀರದ ಪಟ್ಟಣದಿಂದ ಅವರ ನೌಕಾಪಡೆಯು ಕಾರ್ಯಾಚರಣೆ ಮಾಡುತ್ತಿತ್ತು. ಈ ಊರಿನಲ್ಲಿ ಪಲ್ಲವರ ಕಾಲದ ಅನೇಕ ಗುಹಾದೇವಾಲಯಗಳು, ಏಕಶಿಲಾ ವಾಸ್ತುರಚನೆಗಳು, ದೇವಾಲಯಗಳು ಮತ್ತು ಸುಂದರ ಬೃಹತ್ ಮೂರ್ತಿಶಿಲ್ಪ ಪಟ್ಟಿಕೆಗಳು ಮತ್ತು ಉಬ್ಬುಶಿಲ್ಪಗಳಿವೆ. (ಸಿ.ಎಸ್.ವಿ.)

**ಕಲೆ:** ಆರಂಭಕಾಲದ ಪಲ್ಲವ ದೇವಾಲಯಗಳು ಇಟ್ಟಿಗೆ, ಮರ, ಮಣ್ಣು, ಗಾರೆ ಇತ್ಯಾದಿಗಳಲ್ಲಿ ನಿರ್ಮಾಣವಾಗುತ್ತಿದ್ದವು ಎಂಬುದಕ್ಕೆ ಅನೇಕ ಸಾಕ್ಷಿಗಳಿವೆ. ಆದರೆ ಕಲ್ಲಿನಲ್ಲಿ ನಿರ್ಮಾಣವಾದ ದೇವಾಲಯಗಳು, ಮಂಟಪಗಳು, ಗುಡಿಗಳು ಕಾಣಬರುವುದು 7ನೆಯ ಶತಮಾನದಿಂದ ಮುಂದಕ್ಕೆ. ಪಲ್ಲವರ ಕಲೆಯ ಉಗಮ ಮತ್ತು ವಿಕಾಸದ ವಿವಿಧ ಘಟ್ಟಗಳಿಗೆ ಅನುಗುಣವಾಗಿ ಆ ರಾಜವಂಶದ ಕೆಲವು ರಾಜರುಗಳ ರಾಜ್ಯಭಾರಕಾಲವೂ ಸುಮಾರಾಗಿ ಹೊಂದುವುದರಿಂದ ಹಾಗೂ ಆ ರಾಜರುಗಳು ಕೆಲವು ಸಂದರ್ಭಗಳಲ್ಲಿ ಆ ಕಲಾಸ್ಮಾರಕಗಳ ಪೋಷಕರುಗಳೂ ಆಗಿರುವುದರಿಂದ ಪಲ್ಲವ ಕಲಾ ವಿಕಾಸದ ವಿವಿಧ ಘಟ್ಟಗಳನ್ನು ಆಯಾ ಕಾಲದಲ್ಲಿ ಆಳಿದ ರಾಜರ ಹೆಸರುಗಳ ಮುಖಾಂತರವೇ ಕಲಾ ವಿದ್ವಾಂಸರು ಗುರುತಿಸಿರುವುದು ಒಂದು ವಿಶೇಷ. ಈ ಪ್ರಕಾರದಲ್ಲಿ ಗುರುತಿಸಿರುವ ಪಲ್ಲವ ಕಲಾ ವಿಕಾಸದ ವಿವಿಧ ಘಟ್ಟಗಳೆಂದರೆ: 1. ಮಹೇಂದ್ರ ಶೈಲಿ (ಸು.550–630), 2. ಮಾಮಲ್ಲ ಶೈಲಿ (ಸು.630–668), 3. ರಾಜಸಿಂಹ ಶೈಲಿ (ಸು.670–800) ಮತ್ತು 4. ನಂದಿವರ್ಮನ್ ಶೈಲಿ (ಸು.800–900). ಈ ರೀತಿಯ ಕಲಾಶೈಲಿಯ ಘಟ್ಟವಿಭಜನೆಯಲ್ಲೂ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಇವಲ್ಲದೆ ಪಲ್ಲವ ಶೈಲಿಯ ಅವನತಿಯ ಕಾಲವನ್ನು ಗುರುತಿಸಿ ಇದನ್ನು ಅಪರಾಜಿತ ಶೈಲಿಯೆಂದೂ ಗುರುತಿಸಿದ್ದಾರೆ. ಒಟ್ಟಿನಲ್ಲಿ ಈ ಶೈಲಿ ಸು.600–900ರವರೆಗೆ ಬಾಳಿತೆಂದು ಹೇಳಬಹುದು. ಪಲ್ಲವ ಕಲೆಯಲ್ಲಿ ಎರಡು ವಾಸ್ತು ಪ್ರಕಾರಗಳೂ ಎರಡು ಶಿಲ್ಪ ಪ್ರಕಾರಗಳೂ ಇರುವುದು ಕಾಣಬರುತ್ತದೆ. ವಾಸ್ತು ಪ್ರಕಾರಗಳೆಂದರೆ ಗುಹಾವಾಸ್ತು ಮತ್ತು ನಿರ್ಮಾಣವಾಸ್ತು. ಗುಹಾವಾಸ್ತು ಮೊದಲ ಎರಡು ಘಟ್ಟಗಳಲ್ಲಿ ಪ್ರಮುಖವಾಗಿ ಕಾಣಬರುತ್ತದೆ. ನಿರ್ಮಾಣವಾಸ್ತು ಕೊನೆಯ ಎರಡು ಘಟ್ಟಗಳಲ್ಲಿ ಪ್ರಧಾನವಾಗಿ ಕಾಣಬರುತ್ತದೆ. ಶಿಲ್ಪ ಪ್ರಕಾರದಲ್ಲಿನ ಎರಡು ವಿಧಗಳೆಂದರೆ ದೇವಾಲಯ ಶಿಲ್ಪಗಳು ಮತ್ತು ಬಯಲು ಬಂಡೆ ಶಿಲ್ಪಗಳು. ದೇವಾಲಯ ಶಿಲ್ಪಗಳಲ್ಲಿ ಗುಹಾದೇವಾಲಯ, ನಿರ್ಮಾಣ ದೇವಾಲಯಗಳಲ್ಲಿ ಕಾಣಬರುವ ಎಲ್ಲ ಶಿಲ್ಪಗಳೂ ಸೇರುತ್ತವೆ. ಬಯಲು ಶಿಲ್ಪಗಳು ಮಾತ್ರ ಕೇವಲ ಮಾಮಲ್ಲನ ಕಾಲದ ಊರಿನ ಮಧ್ಯದ ಬಯಲು ಬಂಡೆಗಳ ಮೇಲೆ ಕೊರೆದ ಉಬ್ಬು ಶಿಲ್ಪಗಳಿವು.

ಪಲ್ಲವರ ಶಿಲಾ ವಾಸ್ತು ಮತ್ತು ಶಿಲ್ಪಕಲಾ ಚಟುವಟಿಕೆಗಳು ಪ್ರಾರಂಭವಾಗುವುದು ಆ ವಂಶದ ಮೊದಲ ಪ್ರಮುಖ ದೊರೆ 1ನೆಯ ಮಹೇಂದ್ರವರ್ಮನ ಕಾಲದಿಂದ. ಈತನೇ ಮೊಟ್ಟಮೊದಲಿಗೆ ಪಲ್ಲವ ರಾಜ್ಯದಲ್ಲಿ ಗುಹಾವಾಸ್ತು ಪ್ರಕಾರವನ್ನು ಬಳಕೆಗೆ ತಂದವನು. ಈತ ಸ್ವತಃ ಒಬ್ಬ ಕಲಾವಿದ. ಈತನ ಮಂಡಗಪಟ್ಟು ಶಾಸನವು ಇಟ್ಟಿಗೆ, ಮರ, ಸುಣ್ಣ(ಗಾರೆ), ಲೋಹ ಇವುಗಳನ್ನಾವುದನ್ನೂ ಬಳಸದೆ ವಿಚಿತ್ರ ಚಿತ್ತನಿಂದ ಈ ಬ್ರಹ್ಮೇಶ್ವರ ವಿಷ್ಣು ಲಕ್ಷ್ಮಿ ಆಯತನವು ನಿರ್ಮಿಸಲ್ಪಟ್ಟಿತು ಎಂದು ಹೇಳುತ್ತದೆ. ಪಲ್ಲವ ಕಲಾ ಪ್ರಕಾರ ಪ್ರಾರಂಭದಲ್ಲಿ ಕಾಣಬರುವ ವಾಸ್ತುರೂಪಗಳೆಂದರೆ ಗುಹಾಮಂಟಪಗಳು. ಈ ಮಂಟಪಗಳು ತಳವಿನ್ಯಾಸದಲ್ಲಿ ಬಹಳ ಸಾಧಾರಣ ಕೃತಿಗಳು. ಮುಂಭಾಗ ಮಾತ್ರ ತೆರೆದ ಒಂದು ಕೈಸಾಲೆ ಅಥವಾ ಸಣ್ಣ ಹಜಾರ. ಅದರ ಹಿಂಗೋಡೆಯ ಮಧ್ಯದಲ್ಲಿ ಒಂದು ಚಿಕ್ಕದಾದ ಗರ್ಭಗುಡಿ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಮಧ್ಯದ ಕೋಣೆಯ ಇಕ್ಕೆಲಗಳಲ್ಲೂ ಒಂದೊಂದು ಸಣ್ಣ ಕೋಣೆಗಳಿರಬಹುದು. ಕೈಸಾಲೆಯ ಮುಂಭಾಗದ ಮಧ್ಯದಲ್ಲಿ ಒಂದೇ ಸಾಲಿನಲ್ಲಿ ಎರಡು ಕಂಬಗಳು ಹಾಗೂ ಸಾಲಿನ ಎರಡೂ ತುದಿಗಳಲ್ಲಿ ಒಂದೊಂದು ಅರೆಗಂಬಗಳು ಇರುತ್ತವೆ. ಕೈಸಾಲೆಯ ಪಾರ್ಶ್ವಗೋಡೆಗಳಲ್ಲಿ ವಿಶಾಲವಾದ ಒಂದೊಂದು ಕೋಷ್ಠಗಳು ಇರುವುದು ಸಾಮಾನ್ಯ. ಒಂದೇ ಗರ್ಭಗುಡಿ ಇದ್ದಲ್ಲಿ ಅದರ ಬಾಗಿಲ ಎರಡೂ ಪಾರ್ಶ್ವಗಳಲ್ಲಿ ಒಂದೊಂದು ಕೋಷ್ಠಗಳೂ ಇರಬಹುದು. ಚಾವಣಿ ಮಟ್ಟಸವಾಗಿ ನಿರಾಲಂಕೃತವಾಗಿರುತ್ತದೆ. ಮುಖಭಾಗದಲ್ಲಿ ಯಾವುದೇ ಅಲಂಕರಣ ಅಪರೂಪ ಕೋಷ್ಠಗಳಲ್ಲಿ ದ್ವಾರಪಾಲಕರ ಕೆತ್ತನೆ ಇರಬಹುದು. ಕಂಬಗಳು ತೀರಾ ಸರಳ, ಸಾಧಾರಣ. ಚೌಕಟ್ಟಾದ ದಿಂಡಿನ ಈ ಕಂಬಗಳು ಮಧ್ಯದಲ್ಲಿ ಮಾತ್ರ ಅಷ್ಟಮುಖಿದ್ದಾಗಿರುತ್ತವೆ. ಚೌಕಾಕಾರದ ದಿಂಡಿನ ಮುಮ್ಮುಖದಲ್ಲಿ ಕಮಲ ಪುಷ್ಪದ ಉಬ್ಬುಗೆತ್ತನೆ ಕಾಣಬಹುದು. ಅಂತೆಯೇ ಈ ಕಂಬಗಳ ನಡುವಣ ತೊಲೆಯ ಮುಖದಲ್ಲಿ ವ್ಯಾಳತೋರಣವೂ ಇರುವುದುಂಟು. ಈ ರೀತಿಯ ಸರಳವಾದ ಗುಹಾಮಂಟಪಗಳು ಮಹೇಂದ್ರವರ್ಮನ ಕಾಲದಲ್ಲಿ ಹಲವಾರು ನಿರ್ಮಾಣಗೊಂಡವು. ಈ ಗುಹಾಮಂಟಪಗಳೆಲ್ಲವೂ ಸ್ಥಳೀಯವಾಗಿ ಕಾಣಬರುವ ಕಣಶಿಲೆಯ ಏಕಶಿಲಾಗುಡ್ಡಗಳಲ್ಲಿ ನಿರ್ಮಾಣವಾಗಿರುವುದರಿಂದ ಇವುಗಳ ವಿಸ್ತೀರ್ಣವೂ ಚಿಕ್ಕದು ಹಾಗೂ ಕೆತ್ತನೆಗಳೂ ಕಡಿಮೆ. ಮಹೇಂದ್ರವರ್ಮನ ಕಾಲದ್ದೆಂದು ಹೇಳಲಾಗುವ ಗುಹಾಮಂಟಪಗಳನ್ನು ತಮಿಳು ನಾಡಿನ ಮಂಡಗಪಟ್ಟು, ಪಲ್ಲವರಂ, ತಿರುಚ್ಚಿರಾಪಳ್ಳಿ, ವಲ್ಲಂ, ಮಹೇಂದ್ರವಾಡಿ, ದಲವನೂರು, ಸೀಯಮಂಗಲಂ, ತಿರುಕ್ಕುಲುಕ್ಕುನ್ರಂ ಮುಂತಾದ ಕಡೆಗಳಲ್ಲಿ ಕಾಣಬಹುದು. ಆಂಧ್ರದ ವಿಜಯವಾಡದಲ್ಲಿರುವ ಮೊಗಲ್‌ರಾಜ್‌ಪುರಂ ಹಾಗೂ ಸನಿಹದ ಉಂದವಳ್ಳಿ ಮುಂತಾದ ಕಡೆಗಳಲ್ಲಿಯ ಗುಹಾಮಂಟಪಗಳು ಮಹೇಂದ್ರ ಶೈಲಿಯ ವಾಸ್ತುಕೃತಿಗಳೆಂದು ಅಭಿಪ್ರಾಯ.

ಮಹೇಂದ್ರವರ್ಮನ ಮಗನಾದ ನರಸಿಂಹವರ್ಮನ್ ಮಾಮಲ್ಲ ಚಳುಕ್ಯ ಸಾಮ್ರಾಜ್ಯವನ್ನು ಆಕ್ರಮಿಸಿ ವಾತಾಪಿಕೊಂಡನೆಂಬ ಬಿರುದು ಧರಿಸಿದ. ಚಳುಕ್ಯರ ಮೇಲಿನ ಈ ವಿಜಯದಿಂದಾಗಿ ಪಲ್ಲವ ಕಲೆ ಹೆಚ್ಚು ಶ್ರೀಮಂತವಾಯಿತು. ಚಳುಕ್ಯ ರಾಜ್ಯದ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮಹಾಕೂಟ ಮುಂತಾದೆಡೆ ನಿರ್ಮಾಣ ಹಾಗೂ ಗುಹಾವಾಸ್ತುವಿನ ಅನೇಕ ಸುಂದರ ದೇವಾಲಯಗಳು ರಚಿತವಾಗಿದ್ದವು. ಇವುಗಳ ಮಾಮಲ್ಲನ ಕಾಲದ ಪಲ್ಲವ ಕಲಾ ಸ್ಮಾರಕಗಳಿಗೆ ಪ್ರೇರಣೆಯಾದವು. ಮಾಮಲ್ಲನ ಕಾಲದ ಗುಹಾಮಂಟಪಗಳು ಮಹೇಂದ್ರ ಶೈಲಿಯ ಗುಹಾಮಂಟಪಗಳ ರೀತಿಯಲ್ಲೇ ವಿನ್ಯಾಸ ಹೊಂದಿದ್ದರೂ



ಬಂಡೆ ಮೇಲಿನ ಬೃಹತ್ ಶಿಲ್ಪಗಳು, ಮಹಾಬಲಿಪುರಂ

ಅಲಂಕರಣೆಯಲ್ಲಿ ಬಾದಾಮಿ ಗುಹಾಲಯ ಶಿಲ್ಪಗಳ ಪ್ರಭಾವ ಇಲ್ಲಿ ಕಾಣಬರುತ್ತದೆ. ಗುಹಾಮಂಡಪಗಳ ಒಳಗೋಡೆಯ ಕೋಷ್ಠಗಳಲ್ಲಿ ವಿಶಾಲವಾಗಿ ಕಡೆದ ಸುಂದರ ಪೌರಾಣಿಕ ಉಬ್ಬು ಶಿಲ್ಪಗಳು ಕಾಣಬರುತ್ತವೆ. ಸಾಧಾರಣವಾಗಿದ್ದ ಚೌಕಾಕಾರದ ಕಂಬಗಳು ಸಾಲಂಕೃತ ಸ್ತಂಭಗಳಾಗಿವೆ. ಗುಹಾಲಯದ ಮುಖಭಾಗ ವಾಸ್ತು ಅಲಂಕರಣೆಗಳಿಂದ ಕಂಗೊಳಿಸಿತು. ಅಲ್ಲದೆ ಹೊರಭಾಗದಲ್ಲಿ ಸಂಪೂರ್ಣ ವಾಸ್ತು ವಿವರಗಳನ್ನೊಳಗೊಂಡ, ವಿವಿಧಾಕಾರದ ಏಕಶಿಲಾ ದೇವಾಲಯ ಮಾದರಿಗಳು ಸೃಷ್ಟಿಯಾದವು.

ಗುಹಾಲಯಗಳ ಮುಖಭಾಗದಲ್ಲಿ ಅಧಿಷ್ಠಾನದ ದಿಂಡುಗಳು ಸುಂದರವಾದ ಕಂಬಗಳು ಮತ್ತು ಸಾಲಂಕೃತ ಪ್ರಸ್ತರಗಳು ಇವೆ. ಸಾಧಾರಣವಾದ ಕಂಬದ ಬದಲಿಗೆ ದಿಂಡಿನ ಬುಡಭಾಗದಲ್ಲಿ ಸಿಂಹಪೀಠ, ನೀಳವಾದ ದಿಂಡು, ಕುಂಭ, ಮಂಡಿ, ಫಲಕ ಮತ್ತು

ತರಂಗ ಪೋತಿಕಾ ಮುಂತಾದವುಗಳನ್ನುಳ್ಳ ಪಲ್ಲವ ಶೈಲಿಗೆ ವಿಶೇಷವೆಂದೆನಿಸಿದ ಕಂಬದ ಮಾದರಿ ರೂಪುಗೊಂಡಿತು. ಗುಹಾಲಯದ ಒಳಭಾಗದ ಭಿತ್ತಿಯಲ್ಲಿ ವಿಶಾಲ ಕೋಷ್ಠಗಳಲ್ಲಿ ಮನೋಹರವಾದ ಪೌರಾಣಿಕ ಉಬ್ಬುಶಿಲ್ಪಗಳು ರಚಿತಗೊಂಡವು. ಗುಹಾಮಂಟಪದ ಮುಖಭಾಗದ ಮೇಲ್ಭಾಗದಲ್ಲಿ ಕಂಬದ ಸಾಲಿನ ಮೇಲೆ ದಪ್ಪವಾಗಿ, ಕೂಡುಗಳಿಂದಾಲಂಕೃತವಾದ ಕಪೋತ ಮತ್ತು ವಿವಿಧ ರೀತಿಯ ಚಿಕಣಿ ಮಂಟಪಗಳ ಹಾರ ಇವುಗಳೂ ಕೂಡಿ ಗುಹಾಮಂಟಪಗಳಿಗೆ ಆಕರ್ಷಕ ಮುಂಭಾಗವನ್ನು ಒದಗಿಸಿದವು. ಮಹಾಬಲಿಪುರಂನಲ್ಲಿರುವ ತ್ರಿಮೂರ್ತಿ ಮಂಟಪ, ವರಾಹ ಮಂಟಪ ಮತ್ತು ಮಹಿಷಮರ್ದಿನಿ ಮಂಟಪ, ವ್ಯಾಘ್ರಗುಹೆ ಮುಂತಾದುವು ಮಾಮಲ್ಲ ಶೈಲಿಯ ರಚನೆಗಳು.

ಪಲ್ಲವ ಶೈಲಿಗೆ ವಿಶಿಷ್ಟವೆನಿಸಿರುವ ಮಾಮಲ್ಲನ ಕಾಲದ ಮಹಾಬಲಿಪುರಂನಲ್ಲಿರುವ ರಥಗಳೆಂದು ಕರೆಯಲಾಗುವ ಏಕಶಿಲಾವಾಸ್ತು ರೂಪಗಳು. ಇವುಗಳು ಒಂದು ಕಡೆ ಒಂದೇ ಗುಂಪಿನಲ್ಲಿ 5 ಇರುವುದರಿಂದ ಇವುಗಳನ್ನು ಸ್ಥಳೀಯವಾಗಿ ಪಂಚಪಾಂಡವ



ತ್ರಿವಿಕ್ರಮ ಮಂಟಪ, ಮಹಾಬಲಿಪುರಂ

ರಥಗಳೆಂದು ಕರೆಯುವುದುವಾಡಿಕೆ. ಇವುಗಳನ್ನು ಏಕೆ ಈ ರೀತಿಯಾಗಿ ಕಲ್ಲಿನಲ್ಲಿ ಕಡೆದಿದ್ದಾರೆಂಬುವುದಕ್ಕೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಏನೇ ಆದರೂ ಇವು ಪಲ್ಲವ ವಾಸ್ತುಶೈಲಿಗೆ ವಿಶಿಷ್ಟವಾದ ವಾಸ್ತು ಮಾದರಿಗಳಾಗಿರುವುದರಿಂದ ಇವುಗಳು ವಿಶೇಷ ಅಧ್ಯಯನದ ವಿಮರ್ಶೆಯ ವಿಷಯಗಳಾಗಿವೆ.

ಪಂಚಪಾಂಡವ ರಥಗಳೆಂದು ಕರೆಯಲಾಗುವ ಈ ವಾಸ್ತುಕೃತಿಗಳು ಏಕಶಿಲೆಯಿಂದ ಮಾಡಿದಂಥವು. ಇವುಗಳ ರಚನೆಯಲ್ಲಿ ಶಿಲ್ಪಕೆತ್ತನೆಯ ರೀತಿಯಲ್ಲಿ ಹೊರಮುಖದಿಂದ ಕೆತ್ತನೆ ಹಾಗೂ ಗುಹಾವಾಸ್ತು ಶೈಲಿಯ ರೀತಿಯಲ್ಲಿ ಒಳಭಾಗದ ಕೆತ್ತನೆಗಳನ್ನು ಮಾಡಿದ್ದಾರೆ. ಬೃಹದಾಕಾರದ ತಿಮಿಂಗಿಲಾಕೃತಿಯಲ್ಲಿ ಭೂಮಿಯಿಂದ ಹೊರಹೊಮ್ಮಿದ್ದ ಹೆಬ್ಬಂಡೆಯೊಂದನ್ನು 4 ಭಾಗಗಳಾಗಿ ಪ್ರತ್ಯೇಕಿಸಿ ಪ್ರತಿಯೊಂದು ಭಾಗವನ್ನೂ ಹೊರಮುಖದಲ್ಲಿ ಕೆತ್ತನೆ ಮಾಡಿ ವಿವಿಧಾಕೃತಿಯ ಈ ವಾಸ್ತು ಮಾದರಿಗಳನ್ನು ರಚಿಸಿದ್ದಾರೆ. ತದನಂತರ ಇವುಗಳಿಗೆ ಸೂಕ್ತಸ್ಥಳಗಳಲ್ಲಿ ದ್ವಾರಗಳನ್ನು, ಕಂಬ, ಕೈಸಾಲೆಗಳನ್ನು ಕೊರೆದು, ಒಳ ವಿನ್ಯಾಸವನ್ನು ಕೊರೆದಿದ್ದಾರೆ ಹಾಗೂ ಕೊರೆಯಲು ಪ್ರಯತ್ನಿಸಿದ್ದಾರೆ. ಈ ವಾಸ್ತು ಮಾದರಿಗಳಲ್ಲಿ ನಾಲ್ಕು ಮಾತ್ರ ಒಂದು ಸಾಲಿನಲ್ಲಿವೆ, ಉಳಿದ ಒಂದು ಪ್ರತ್ಯೇಕವಾಗಿ ಈ ಸಾಲಿನ ಮುಂಭಾಗದಲ್ಲಿದೆ. ಜೊತೆಗೆ ಒಂದೊಂದು ಪ್ರತ್ಯೇಕ ಆನೆ, ಸಿಂಹಗಳ ಶಿಲ್ಪಗಳೂ ಕಂಡರಣೆಯಾಗಿವೆ.

ಪಂಚಪಾಂಡವ ರಥಗಳಲ್ಲಿ (ಎಡದಿಂದ ಬಲಕ್ಕೆ) ದ್ರೌಪದಿ ರಥ ಸಾಲಿನಲ್ಲಿ ಮೊದಲನೆಯದು ಹಾಗೂ ಎಲ್ಲಕ್ಕಿಂತ ಚಿಕ್ಕದಾಗಿದೆ. ಚೌಕಾಕಾರದ ತಳವಿನ್ಯಾಸದ ಒಂದು ಕೋಣೆ, ಈ ಕೋಣೆಗೆ ಹೊರವಿನ್ಯಾಸದಲ್ಲಿ ಅಧಿಷ್ಠಾನ ಭಿತ್ತಿಗಳಿವೆ: ಮೇಲೆ ಗುಡಿಸಲಿನ ಚಾವಣಿಯಾಕೃತಿಯಲ್ಲಿ ಸುತ್ತಲೂ ಇಳಿಜಾರಾದ ನಾಲ್ಕು ಮೂಲೆಯ ಚಾವಣಿ ಇದೆ. ಈ ಕೋಣೆಗೆ ಮುಮ್ಮಧ್ಯದಲ್ಲಿ ಬಾಗಿಲು, ಬಾಗಿಲಿನ ಇಕ್ಕೆಲಗಳಲ್ಲಿ ಕೋಷ್ಠಗಳು, ಅವುಗಳಲ್ಲಿ ದ್ವಾರಪಾಲಕಿಯರ ಶಿಲ್ಪಗಳು ಇವೆ. ಕೋಣೆಯ ಒಳಗೆ ಎದುರುಗೋಡೆಯಲ್ಲಿ ನಿಂತಿರುವ ದುರ್ಗಾದೇವಿ ಶಿಲ್ಪವಿದೆ. ಇಡೀ ರಥ ಸಣ್ಣದಾದ, ಆಯತಾಕೃತಿಯ ವೇದಿಕೆಯ ಮೇಲೆ ನಿಂತಿದೆ. ಈ ವೇದಿಕೆಗೆ ಸುತ್ತಲೂ ಸಿಂಹಶಿಲ್ಪಗಳ ಅಲಂಕರಣೆಯೂ ಇದೆ. ಇದು ಸಣ್ಣದಾದ ದುರ್ಗಿಯ ಗುಡಿಯಾಗಿರುವುದರಿಂದ ಇದನ್ನು ದ್ರೌಪದಿಯ ಹೆಸರಿನೊಂದಿಗೆ ಸಮೀಕರಿಸಲಾಗಿದೆ.

ದ್ರೌಪದಿ ರಥದ ವೇದಿಕೆಗೆ ಹೊಂದಿಕೊಂಡಂತೆ ಇರುವ ರಥವೇ ಅರ್ಜುನ ರಥ. ಒಂದೇ ಸಮಾನ ವೇದಿಕೆಯ ಮೇಲೆ ಇವೆರಡೂ ಇರುವುದರಿಂದ ಈ ರಥವನ್ನು ಅರ್ಜುನನೊಂದಿಗೆ ಸಮೀಕರಿಸಲಾಗಿದೆ. ಇದು ಒಂದು ಸಣ್ಣ ದ್ರಾವಿಡ ದೇಗುಲದ ಮಾದರಿಯಲ್ಲಿದೆ. ಏರು ವಿನ್ಯಾಸದಲ್ಲಿ ಷಡ್ವರ್ಗಗಳನ್ನು, (ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ) ಹೊಂದಿರುವ ಈ ಗುಡಿಯು ತಳವಿನ್ಯಾಸದಲ್ಲಿ ಚೌಕಟ್ಟಾದ ಗರ್ಭಗೃಹ ಮತ್ತು ಮುಂದೆ ಎರಡು ಕಂಬಗಳ ಕೈಸಾಲೆ ಇವಿಷ್ಟನ್ನು ಮಾತ್ರ ಹೊಂದಿದೆ. ಅಧಿಷ್ಠಾನದಲ್ಲಿ ಸಾಧಾರಣ ರೀತಿಯ ದಿಂಡುಗಳಿವೆ. ಭಿತ್ತಿಯಲ್ಲಿ ಭಿತ್ತಿಪಾದಗಳು ಮಧ್ಯೆ-ಮಧ್ಯೆ ನಿಂತಿರುವ ಶೈವ ಶಿಲ್ಪಗಳ ಉಬ್ಬುಗೆತ್ತನೆ ಇವೆ. ಪ್ರಸ್ತರದಲ್ಲಿ ಕೂಡುಗಳಿಂದಾಲಂಕೃತವಾದ ಕಪೋತ ಹಾರವಿದೆ. ಮೇಲ್ಗಡೆ ಇದೇ ರೀತಿಯ ಒಂದು ತಲ, ಗ್ರೀವ ಮತ್ತು ಅಷ್ಟಮುಖದ ಶಿಖರವಿದೆ. ಒಟ್ಟಿನಲ್ಲಿ ಚಿಕ್ಕದಾಗಿ, ಚೊಕ್ಕವಾಗಿ ನಿರ್ಮಿತವಾದ ದ್ರಾವಿಡಶೈಲಿಯ ದ್ವಿತಲ ವಿಮಾನಕ್ಕೆ ಒಂದು ಉತ್ತಮ ಉದಾಹರಣೆ ಇದಾಗಿದೆ.

ಭೀಮರಥ ಪ್ರತ್ಯೇಕವಾಗಿ ನಿಂತಿರುವ ರಥ. ತಳವಿನ್ಯಾಸದಲ್ಲಿ ಇದು ಆಯತಾಕಾರದ ಕಟ್ಟಡ. ಉದ್ದ ಪಾರ್ಶ್ವಗಳಲ್ಲಿ ಕೈಸಾಲೆ ಇದೆ. ಕೈಸಾಲೆಯ ಹೊರಮುಖದಲ್ಲಿ ಕಂಬದ ಸಾಲು ಇದೆ. ಒಳಮುಖದಲ್ಲಿ ಇರಬೇಕಾಗಿದ್ದ ಕೋಣೆ, ಹಜಾರ ಇವುಗಳ ಕೆತ್ತನೆ ಅಪೂರ್ಣ. ಮೇಲಿನ ಅಗಾಧ ಭಾರಕ್ಕೆ ಆಸರೆಯಾಗಿರಲು ಈ ರೀತಿ ಅಪೂರ್ಣವಾಗಿ ಇದನ್ನು ಬಿಟ್ಟಿರಲೂ ಸಾಧ್ಯ. ಕಟ್ಟಡದ ಕಿರು ಪಾರ್ಶ್ವಗಳಲ್ಲಿ ಸಾಲಂಕೃತ ಭಿತ್ತಿಯಿದೆ. ಆದರೆ ಶಿಲ್ಪಗಳಿಲ್ಲ. ಅಧಿಷ್ಠಾನದ ದಿಂಡುಗಳ ಕೆತ್ತನೆಯಾಗಿಲ್ಲ. ಪ್ರಸ್ತರದಲ್ಲಿ ಕಪೋತ ಹಾರವಿದೆ. ಛಾವಣಿಯ ಮೇಲೆ ಮತ್ತೊಂದು ತಲವಿದೆ. ಈ ತಲದ ಭಿತ್ತಿ ಎತ್ತರವಾಗಿದ್ದು, ಒಳಭಾಗ ಘನವಾಗಿದ್ದು, ನಿಜತಲದ ಗಾತ್ರದಲ್ಲಿಯೇ ಇದೆ. ಮೇಲಿನ ತಲಕ್ಕೂ ಸಾಲಂಕೃತ ಕೋಷ್ಠಗಳೂ ಘನದ್ವಾರಗಳೂ ಇವೆ. ಪ್ರತಿಯೊಂದು ಕೋಷ್ಠ, ದ್ವಾರಗಳಿಗೂ ಲಾಳಾಕಾರದ ಮೇಲ್ಭಾಗವಿದೆ. ಇವುಗಳಲ್ಲಿ ಕಿರುಪಾರ್ಶ್ವಗಳ ಭಿತ್ತಿಯ ಕೋಷ್ಠಗಳ ಮೇಲಿನ ವಿವಿಧ ವಿನ್ಯಾಸದ, ವಿಮಾನ ಮಾದರಿಗಳು ವಿಶೇಷವಾದದ್ದು. ಮೇಲಿನ ತಲಕ್ಕೆ ಚೂಪು ಕಮಾನಿನಾಕಾರದ ಮೇಲ್ಛಾವಣಿ ಇದೆ. ಸ್ವಲ್ಪ ಉಬ್ಬಿರುವ ಇಳಿಜಾರಾದ ಮೇಲ್ಛೈ, ತುದಿಯಲ್ಲಿ ಚೂಪಾದ ಏಣುಳ್ಳ ಛಾವಣಿ, ಸಾಲಾಗಿ (ಈಗ ಇಲ್ಲದ) ಸ್ತೂಪಿಗಳು, ಛಾವಣಿಯ ಕೆಳ ಅಂಚಿನಲ್ಲಿ ಸಾಲಾಗಿ ಇರುವ ಲಾಳಾಕಾರದ ಕೋಷ್ಠದ ಮೇಲ್ಭಾಗಗಳು, ಕಿರುಪಾರ್ಶ್ವಗಳ ಬೃಹತ್ ಚೂಪು ಲಾಳಾಕಾರದ ಮುಖ, ಅದರಡಿ ಇರುವ ಸಾಲಂಕೃತ ಕೋಷ್ಠಗಳು ಇವೆಲ್ಲವೂ ಶಿಲ್ಪಿಯ ವಿಪುಲ ಕಲ್ಪನಾ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತವೆ. ಗುಡಿ ಒಳಭಾಗದಲ್ಲಿ ಅಪೂರ್ಣವಾದರೂ ಹೊರಮುಖದಲ್ಲಿ ಪರಿಮಾಣಬದ್ಧವಾದ ಸಾಲಂಕೃತ ವಾಸ್ತುಕೃತಿಯಾಗಿ ಕಾಣುತ್ತದೆ. ಇದರ ಬೃಹದಾಕೃತಿಯಿಂದಾಗಿ ಇದನ್ನು ಭೀಮರಥವೆಂದು ಕರೆದಿರುವುದರಲ್ಲಿ ಅಚ್ಚರಿಯೇನಿಲ್ಲ.

ಧರ್ಮರಾಜ ರಥ ಈ ಸಾಲಿನ ರಥಗಳಲ್ಲೆಲ್ಲಾ ಅತ್ಯಂತ ಎತ್ತರವಾಗಿ ಗಂಭೀರವಾಗಿ ಕಾಣುವ ರಥ. ಚೌಕಟ್ಟಾದ ತಲಕಟ್ಟನ್ನು ಹೊಂದಿದೆ. ಷಡ್ವರ್ಗಸಹಿತವಾದ ತ್ರಿತಲ ಮಾದರಿಯ ದ್ರಾವಿಡ ವಿಮಾನವಿದು. ಇಲ್ಲಿಯೂ ಕೆತ್ತನೆ ಅಪೂರ್ಣ. ಅಧಿಷ್ಠಾನದ ಅಲಂಕರಣೆ ಅರ್ಧಂಬರ್ಧ. ಒಳಮಧ್ಯದಲ್ಲಿ ಗರ್ಭವನ್ನು ಹಾಗೆಯೇ ಉಳಿದಿದೆ. ನಾಲ್ಕೂ ಮುಖಗಳಲ್ಲಿ ಕಂಬದ ಸಾಲುಳ್ಳ ಕೈಸಾಲೆಯಿದೆ ಹಾಗೂ ನಾಲ್ಕೂ ಮೂಲೆಗಳ ಭಿತ್ತಿಕೋಷ್ಠಗಳಲ್ಲಿ ಶಿವನ ಶಿಲ್ಪಗಳಿವೆ. ಪ್ರಸ್ತರ ಮತ್ತು ಪ್ರಾಸಾದಗಳ ಕೆತ್ತನೆ ಸಂಪೂರ್ಣವಾಗಿದೆ. ಮೆಟ್ಟಿಲು ಪಿರಮಿಡ್ಡಿನಾಕಾರದ, ತ್ರಿತಲ ದ್ರಾವಿಡ ಪ್ರಾಸಾದ ಪರಿಮಾಣಬದ್ಧವಾಗಿದೆ. ಮೇಲ್ತುದಿಯಲ್ಲಿ ಗ್ರೀವ ಮತ್ತು ಅಷ್ಟಮುಖದ ಶಿಖರವಿದೆ. ಸ್ತೂಪಿ ಕಾಣೆಯಾಗಿದೆ.

ಸಹದೇವ ಅಥವಾ ನಕುಲ-ಸಹದೇವ ರಥ ಮೇಲೆ ಹೇಳಿದ ನಾಲ್ಕೂ ರಥ ಸಾಲಿನ ಮುಂಭಾಗದಲ್ಲಿ ಪ್ರತ್ಯೇಕವಾಗಿದೆ. ಇದು ಗಜಪೃಷ್ಠಾಕಾರದ ಅಥವಾ ಚಾಪಾಕಾರದ ತಳವಿನ್ಯಾಸವನ್ನು ಹೊಂದಿದೆ. ಸಣ್ಣದಾದ ಗರ್ಭಗೃಹ ಮತ್ತು ಮುಂದೆ ಸಣ್ಣ ಕೈಸಾಲೆ ಇದೆ. ಏರುವಿನ್ಯಾಸದಲ್ಲಿ ಅಪೂರ್ಣ ಕೆತ್ತನೆಯ ಅಧಿಷ್ಠಾನ, ಪಾದಗಳಿಂದ ಕೂಡಿದ ಭಿತ್ತಿ, ಪ್ರಸ್ತರ ಇವಿಷ್ಟೂ ಇವೆ. ಮೇಲೆ ಇದೇ ರೀತಿಯ ಇನ್ನೊಂದು ತಲ, ಗ್ರೀವ ಮತ್ತು ಮಗುಚಿದ ಅರ್ಧದೋಣಿ ಆಕೃತಿಯ ಶಿಖರವಿದೆ. ಶಿಖರದ ಕೆಳ ಅಂಚಿನ ಸುತ್ತಲೂ ಕೂಡುಗಳಿವೆ. ಮುಮ್ಮುಖ ಲಾಳಾಕಾರವಾಗಿದ್ದು ಒಳಗಡೆ ವಾಸ್ತುತೋರಣದಿಂದ ಕೂಡಿದ ಕೋಷ್ಠವಿದೆ. ಈ ಗುಡಿ ವಾಸ್ತು ಗ್ರಂಥಗಳಲ್ಲಿ ಕಾಣಬರುವ ವೇಸರ ಪ್ರಕಾರದ ಅಂದರೆ ಗಜಪೃಷ್ಠಾಕಾರದ ಗುಡಿ ಮಾದರಿಗೆ ಒಂದು ಉತ್ತಮ ಉದಾಹರಣೆ. ಈ ರೀತಿಯ ಗುಡಿಯನ್ನು ಯಾವ ರೀತಿ ಕಂಡರಿಸಬೇಕೆಂದು ತೋರುವುದಕ್ಕಾಗಿ ಶಿಲ್ಪಿ ಅದರ ಪಾರ್ಶ್ವದಲ್ಲಿ ಒಂದು ಸಂಪೂರ್ಣ ಆನೆಯ ಶಿಲ್ಪವನ್ನೂ ಕೆತ್ತಿದ್ದಾನೆ.

ಇದೇ ರೀತಿಯ ರಥಗಳು ಮಹಾಬಲಿಪುರಂನಲ್ಲೇ ಇನ್ನೂ ಕೆಲವಿವೆ. ಅವುಗಳೆಂದರೆ ಗಣೇಶರಥ, ಪಿಡಾರಿರಥ ಮತ್ತು ವಲಯನ್‌ಕುಟ್ಟೆ ರಥಗಳು. ಇವುಗಳಲ್ಲಿ ಪ್ರಮುಖವಾದದ್ದು ಗಣೇಶರಥ. ಈ ರಥ ಆಯತಾಕಾರದ ತಳಕಟ್ಟನ್ನು ಹೊಂದಿದ್ದು ಗೋಪುರಾಕೃತಿಯ ಪ್ರಾಸಾದವನ್ನು ಹೊಂದಿದೆ. ಈ ಎಲ್ಲ ಏಕಶಿಲಾ ಮಾದರಿಗಳನ್ನೂ ಅವುಗಳ ಗರ್ಭವನ್ನು ಅಪೂರ್ಣ ಕೆತ್ತನೆಯಲ್ಲಿಯೇ ಉಳಿಸಿರುವ ಔಚಿತ್ಯವಾದರೂ ಏನು ಎಂಬ ಪ್ರಶ್ನೆ ಇದೆ. ಇದಕ್ಕೆ ನೀಡಲಾದ ವಿವರಣೆಗಳಲ್ಲಿ ಹೆಚ್ಚು ಸಮಂಜಸವಾದುದೆಂದರೆ ಈ ವಾಸ್ತು ಮಾದರಿಗಳು ಚಿರಕಾಲ ವಾಸ್ತುಶಿಲ್ಪಗಳಿಗೆ ದಾರಿದೀಪವಾಗಿ ಉಳಿಯಲಿ ಎಂಬ ಆಶಯದಿಂದ ಈ ರೀತಿ ರಚಿಸಿದ್ದಾರೆ ಎನ್ನುವುದು. ವಾಸ್ತುಗ್ರಂಥಗಳು ರಚನೆಯಾಗದೆ ಕೇವಲ ಸಂಪ್ರದಾಯದ ಮೇಲೆ ನಿಂತಿದ್ದ ವಾಸ್ತು ತಂತ್ರಜ್ಞಾನದ ಅನಿಶ್ಚಿತತೆಯ ಕಾಲದಲ್ಲಿ ಸ್ಪಷ್ಟವಾದ ನಿರ್ದೇಶನ ನೀಡುವುದಕ್ಕೆ ಈ ರೀತಿ ಚಿರಕಾಲ ಉಳಿಯುವ ಅಖಂಡ ಶಿಲೆಯಲ್ಲಿ ವಿವಿಧ ಮಾದರಿಗಳನ್ನು ಕೊರೆದಿದ್ದಾರೆ ಎಂಬ ವಿವರಣೆ ಹೆಚ್ಚು ಸಮಂಜಸ.

ಮಾಮಲ್ಲನ ಕಾಲದಲ್ಲಿ ಶಿಲಾ ಶಿಲ್ಪಪ್ರಕಾರದಲ್ಲಿ ಹೆಚ್ಚಿನ ಪ್ರಗತಿ ಕಾಣಬರುತ್ತದೆ. ಗುಹಾಮಂಡಪಗಳಲ್ಲಿ, ಶಿಲಾ ರಥಗಳಲ್ಲಿ ಹಾಗೂ ಬಯಲುಬಂಡೆಗಳ ಮೇಲೆ ಶಿಲ್ಪಗಳನ್ನು ಕಂಡರಿಸುವ ಪದ್ಧತಿ ಈ ಕಾಲದಲ್ಲಿ ವಿಶೇಷವಾಗಿ ಕಾಣಬರುತ್ತದೆ. ಈ ಎಲ್ಲ ಶಿಲ್ಪಗಳೂ ಉಬ್ಬುಶಿಲ್ಪಗಳೇ. ಪಲ್ಲವರ ಕಾಲದ್ದೆಂದು ಹೇಳುವ ಕೆಲವೇ ಬಿಡಿ ಶಿಲ್ಪವೆಂದರೆ ಮಹಾಬಲಿ ಪುರಂನ ಭಗೀರಥನ ತಪಸ್ಸು ಎಂದು ಕರೆಯಲಾಗುವ ಶಿಲ್ಪಸಮೂಹದ ಮುಂಭಾಗದಲ್ಲಿ ಕುಳಿತಿರುವ ಎರಡು ಕೋತಿಗಳ ಶಿಲ್ಪ ಮತ್ತು ಕೆಲವಾರು ನಂದಿಶಿಲ್ಪಗಳು. ಮಾಮಲ್ಲನ ಕಾಲದಲ್ಲಿ ಮೊಟ್ಟಮೊದಲಿಗೆ ವೈದಿಕ ದೇವ–ದೇವತೆಗಳ, ಪುರಾಣ ಪುರುಷರುಗಳ, ರಾಜವಂಶಜರ ಹಾಗೂ ಇನ್ನಿತರ ಅಲಂಕರಣ ಶಿಲ್ಪ ಕೆತ್ತನೆಯ ಪ್ರಾರಂಭ ಕಾಣಬರುತ್ತದೆ. ಮಹಿಷಮರ್ದಿನಿ ಮಂಟಪದ ಮಹಿಷಮರ್ದಿನಿ ಹಾಗೂ ಶೇಷಶಾಯಿ ವಿಷ್ಣುವಿನ ಶಿಲ್ಪಗಳು, ವರಾಹಮಂಟಪದ ವರಾಹ, ತ್ರಿವಿಕ್ರಮ ಮುಂತಾದ ಶಿಲ್ಪಗಳು, ತ್ರಿಮೂರ್ತಿ ಮಂಟಪದ ಬ್ರಹ್ಮ, ವಿಷ್ಣು, ಮಹೇಶ್ವರರು, ದ್ರೌಪದೀರಥದ ದುರ್ಗಿಯ ಶಿಲ್ಪ ಹಾಗೂ ದ್ವಾರಕನ್ನಿಕೆಯರು, ಅರ್ಜುನ ಮತ್ತು ಧರ್ಮರಾಜ ರಥದ ಮೇಲಿನ ಶಿವನ ಲೀಲಾಮೂರ್ತಿಗಳು ಇವೆಲ್ಲವೂ

ದುರ್ಗೆ, ಮಹಾಬಲಿಪುರಂ

ಪಲ್ಲವರ ಅತ್ಯಂತ ಸುಂದರ ಪ್ರಾಚೀನ ಶಿಲ್ಪಗಳು. ಪಲ್ಲವಶಿಲ್ಪಗಳು ನೋಟದಲ್ಲಿ ಸುಂದರ, ಸರಳ. ನೀಳ ಮೈಮಾಟ, ಹಿತಮಿತ ಅಲಂಕರಣ, ನಯನಮೋಹಕ ಆಕೃತಿ ಇವೆಲ್ಲವನ್ನೂ ಇವು ಹೊಂದಿರುತ್ತವೆ. ರಚನೆಯಲ್ಲಿ ಸರಳವಾದರೂ ನೋಟದಲ್ಲಿ, ಚಲನೆಯಲ್ಲಿ ಬಹಳ ಪ್ರಬಲ ಹಾಗೂ ಸತ್ವಶಾಲಿ. ಶಿಲ್ಪದ ಉದ್ದೇಶ ಮತ್ತು ಭಾವನೆಗಳನ್ನು ಮನವರಿಕೆ ಮಾಡುವುದರಲ್ಲಿ ಬಹಳ ಯಶಸ್ವಿಯಾದದ್ದು. ಇಂತಹ ಶಿಲ್ಪಗಳನ್ನು ಪಲ್ಲವ ಕಲೆಯಲ್ಲಿ ಅನೇಕಾನೇಕ ಸಂಖ್ಯೆಯಲ್ಲಿ ಕಾಣಬಹುದು.

ಪಲ್ಲವ ಕಲೆಯಲ್ಲಿ ಮಾತ್ರ ಕಾಣಬರುವ ಒಂದು ವಿಶಿಷ್ಟ ರೀತಿಯ ಶಿಲ್ಪಗಳೆಂದರೆ ಪೌರಾಣಿಕ, ಸಾಮಾಜಿಕ, ಲೌಕಿಕ ವಸ್ತು ವಿಷಯಗಳನ್ನೊಳಗೊಂಡ ಬಯಲು ಬಂಡೆಶಿಲ್ಪಗಳು. ಈ ರೀತಿಯ ಶಿಲ್ಪಗಳು ಮಹಾಬಲಿಪುರಂನಲ್ಲಿ ಮಾತ್ರ ಕಾಣಬರುತ್ತವೆ. ಪಲ್ಲವರ ರೇವುಪಟ್ಟಣವಾಗಿದ್ದ ಈ ಊರಿನಲ್ಲಿ ನಗರಾಲಂಕರಣಕ್ಕಾಗಿ, ಪುರಾಣಜ್ಞಾನಪ್ರಸಾರಕ್ಕಾಗಿ ಮಾಡಿದಂತಹ ವಿಶಾಲ ಬಂಡೆಗಳ ಮೇಲಿನ ಶಿಲ್ಪಗಳು ಇವು. ಇಂತಹ ಎರಡು ಸಂಪೂರ್ಣವಾದಂತಹ ಚಿತ್ರಗಳಲ್ಲಿ ಮೊದಲನೆಯದು ಭಗೀರಥ ಅಥವಾ ಅರ್ಜುನನ ತಪಸ್ಸು ಎಂದು ಕರೆಯಲ್ಪಡುವ ಶಿಲ್ಪ ಮತ್ತು ಮತ್ತೊಂದು ಶ್ರೀಕೃಷ್ಣನ ಗೋವರ್ಧನಗಿರಿಧಾರಿ ಸ್ವರೂಪ. ಭಗೀರಥ/ಅರ್ಜುನನ ತಪಸ್ಸಿನ ಸನ್ನಿವೇಶದ ಶಿಲ್ಪ ಬಹಳ ವಿಸ್ತಾರವೂ ಸ್ವಾರಸ್ಯಕರವೂ ಆಗಿದೆ. ವಿಶಾಲವಾದ ಎತ್ತರವಾದ ಬಂಡೆಯ ಮಧ್ಯದಲ್ಲಿ ನದಿ ಜಲಪಾತ, ಕೆಳಗೆ ನದಿತೀರ, ತೀರದಲ್ಲಿ ಆನೆಗಳ ಹಿಂಡು, ಪ್ರಾತಃಕರ್ಮದಲ್ಲಿ ನಿರತರಾಗಿರುವ ಜನರು, ಸನಿಹದ ಗುರುಕುಲ, ಕಾಡಿನ ದೃಶ್ಯ, ಕಾಡುಪ್ರಾಣಿಗಳು, ಮಧ್ಯದಲ್ಲಿ ಏಕಪಾದನಾಗಿ ತಪೋನಿರತನಾದ ಭಗೀರಥ/ಅರ್ಜುನ, ಮುಂದೆ ಪ್ರತ್ಯಕ್ಷನಾಗಿರುವ ಶಿವ, ಮೇಲ್ಭಾಗದಲ್ಲಿ ಯಕ್ಷ, ಸಿದ್ಧರಾದಿಯಾಗಿ ಚಲಿಸುತ್ತಿರುವ ದೇವ ದೇವತೆಗಳು ಇತ್ಯಾದಿ ಎಲ್ಲವೂ ವಿಶಾಲವಾಗಿ ಸವಿವರವಾಗಿ ಹಂತಹಂತದಲ್ಲಿ ರೂಪಣೆಗೊಂಡಿದೆ. ಇಷ್ಟೆಲ್ಲಾ ಗಂಭೀರ ವಿಷಯ ನಿರೂಪಣೆಯ ಮಧ್ಯದಲ್ಲಿ ಶಿಲ್ಪಿ ಸ್ವಲ್ಪಮಟ್ಟಿನ ಮನರಂಜನೆಯ ವಾತಾವರಣವನ್ನೂ ಕಲ್ಪಿಸಿದ್ದಾನೆ. ಅದೇ ಮಾರ್ಜಾಲ ಸಂನ್ಯಾಸದ ಕಥೆ. ಅರ್ಜುನ/ಭಗೀರಥನಂತೆಯೇ ನಿಂತು ತಪಸ್ಸು ಮಾಡುತ್ತಿರುವ ಬೆಕ್ಕು, ಸುತ್ತಲೂ ಭಕ್ತಿಯಿಂದ ನಿಂತಿರುವ ಇಲಿಗಳು. ಈ ವಸ್ತು ಒಂದು ರೀತಿ ವಿನೋದವೂ ಪರಿಹಾಸವೂ ಆಗಿದ್ದು ಜನರಿಗೆ ನೀತಿಬೋಧಕವೂ ಆಗಿದೆ.

ಇದೇ ಸಾಲಿಗೆ ಸೇರುವಂತಹ ಮತ್ತೊಂದು ಬಯಲು ಶಿಲ್ಪವೆಂದರೆ ಶ್ರೀಕೃಷ್ಣನ ಗೋವರ್ಧನಗಿರಿಧಾರಿ ಸನ್ನಿವೇಶ. ಮೊದಲು ಬಯಲಿನಲ್ಲಿದ್ದ ಈ ಶಿಲ್ಪಕ್ಕೆ ಅನಂತರದಲ್ಲಿ ಮುಂದುಗಡೆ ಒಂದು ಮಂಟಪವನ್ನು ನಿರ್ಮಿಸಿದ್ದಾರೆ. ವಿಶಾಲವಾಗಿರುವ ಈ ಶಿಲ್ಪದ ಪ್ರಮುಖವ್ಯಕ್ತಿ ಗಿರಿಧಾರಿ ಶ್ರೀಕೃಷ್ಣ. ನಿರಾಯಾಸವಾಗಿ ಒಂದು ಕೈಯಲ್ಲಿ ಗೋವರ್ಧನ ಗಿರಿಯನ್ನು ಎತ್ತಿಹಿಡಿದು ನಿಂತಿರುವ ಶ್ರೀಕೃಷ್ಣನ ಇಕ್ಕೆಲಗಳಲ್ಲಿ ನಂದಗೋಕುಲದ ಸರ್ವಸ್ವವನ್ನೂ ಬಿಂಬಿಸುವ, ನಿರಾಳ ದೈನಂದಿನ ಜನಜೀವನ ನಿರೂಪಿತವಾಗಿದೆ. ಗಂಡಸರು, ಹೆಂಗಸರು ತಮ್ಮ ತಮ್ಮ ದಿನನಿತ್ಯದ ಕೆಲಸಗಳಲ್ಲಿ ನಿರತರಾಗಿರುವುದು, ಪ್ರಾಣಿ, ಪಕ್ಷಿ, ಗೋಸಂಕುಲ, ಜನರ ಐಹಿಕ ವಸ್ತುಗಳು ಇತ್ಯಾದಿ ಎಲ್ಲವೂ ಸುಂದರವಾಗಿ, ಸುಸ್ಪಷ್ಟವಾಗಿ, ವಿವರವಾಗಿ ಇಲ್ಲಿ ಕಂಡರಿಸಲ್ಪಟ್ಟಿವೆ.

ಮಾಮಲ್ಲನ ಕಾಲದ ಅನಂತರ ಪಲ್ಲವರ ಕಲಾ ಪರಂಪರೆಯಲ್ಲಿ ಕೆಲವು ಬದಲಾವಣೆಗಳಾದವು. 6 ದಶಕಗಳಿಗೂ ಹೆಚ್ಚುಕಾಲ ಪ್ರಚಲಿತದಲ್ಲಿದ್ದ ಗುಹಾವಾಸ್ತುಕಲೆ ಕಡಿಮೆಯಾಗುತ್ತ ಬಂತು. ಬದಲಿಗೆ ನಿರ್ಮಾಣವಾಸ್ತು ಪ್ರಾರಂಭವಾಯಿತು. ಈ ಕಾಲಕ್ಕಾಗಲೇ ಬಾದಾಮಿ ಚಳುಕ್ಯರ ನೆಲೆಯಲ್ಲಿ ನಿರ್ಮಾಣವಾಸ್ತು ಸಾಕಷ್ಟು ಪ್ರಗತಿಯನ್ನು ಕಂಡಿತ್ತು. ಸಮಾನಾಂತರವಾಗಿ ಪಲ್ಲವ ರಾಜ್ಯದಲ್ಲೂ ದೇವಾಲಯ ನಿರ್ಮಾಣಕಾರ್ಯಗಳು ಪ್ರಾರಂಭವಾದವು. ಆ ಕಾಲಕ್ಕೆ ಪಲ್ಲವ ರಾಜವಂಶದಲ್ಲಿ ಮಾಮಲ್ಲನ ಅನಂತರ ಆತನ ಮಗ ಪರಮೇಶ್ವರವರ್ಮ ಮತ್ತು ಮೊಮ್ಮಗ ಇಮ್ಮಡಿ ನರಸಿಂಹವರ್ಮ (ರಾಜಸಿಂಹ) ಇವರುಗಳು ರಾಜ್ಯವಾಳುತ್ತಿದ್ದರು. ಈ ಕಾಲಾವಧಿಯಲ್ಲಿ ನಡೆದ ವಾಸ್ತುಕಲೆಯ ಚಟುವಟಿಕೆಯನ್ನು ರಾಜಸಿಂಹ ಶೈಲಿಯೆಂದು ಗುರುತಿಸುತ್ತಾರೆ. ಈ ಅವಧಿಯಲ್ಲಿ ನಿರ್ಮಾಣವಾದ ಗುಡಿಗಳಲ್ಲಿ ಮೂರು ದೇವಾಲಯಗಳು ಮುಖ್ಯವಾದವು. ಅವುಗಳೆಂದರೆ ಮಹಾಬಲಿಪುರಂನ ಕಡಲ ತೀರದ ದೇವಾಲಯ, ಕಂಚಿಯ ಕೈಲಾಸನಾಥ ಅಥವಾ ರಾಜಸಿಂಹೇಶ್ವರ ದೇವಾಲಯ ಮತ್ತು ವೈಕುಂಠ ಪೆರುಮಾಳ್ ದೇವಾಲಯ.

ಕಡಲ ತೀರದ ದೇವಾಲಯ ವಿಶೇಷ ರೀತಿಯ ತಳವಿನ್ಯಾಸವನ್ನು ಹೊಂದಿದೆ. ಪೂರ್ವ–ಪಶ್ಚಿಮ ವಿರುದ್ಧ ದಿಕ್ಕುಗಳತ್ತ ಮುಖಮಾಡಿರುವ ಎರಡು ಗರ್ಭಗುಡಿಗಳು, ಪೂರ್ವ ಗರ್ಭಗುಡಿಯ ಸುತ್ತಲೂ ಕಿರಿದಾದ, ಮೇಲೆ ತೆರೆದ ಪ್ರದಕ್ಷಿಣ ಪಥ ಮತ್ತು ಗುಡಿಯ ಮೇಲೆ ನೀಳವಾಗಿ, ಎತ್ತರವಾಗಿ, ಧರ್ಮರಾಜ ರಥದ ಪ್ರಾಸಾದದ ಕೃತಿಯ, ನಾಲ್ಕು ತಲದ, ದ್ರಾವಿಡ ವಿಮಾನ ಮತ್ತು ಶಿಖರ ಸ್ತೂಪಿಗಳಿವೆ. ಗರ್ಭಗೃಹದಲ್ಲಿ ಬಹುಮುಖ ದಿಂಡಿನ ಲಿಂಗ ಮತ್ತು ಹಿಂಗೋಡೆಯಲ್ಲಿ, ಕೋಷ್ಠದೊಳಗೆ ಸೋಮಸ್ಕಂದಮೂರ್ತಿಯ ಉಬ್ಬು ಶಿಲ್ಪವಿದೆ. ಗರ್ಭಗೃಹದ ಮುಂದೆ ಸಣ್ಣದಾದ ಒಂದು ಸುಕನಾಸಿಯೂ ಇದೆ. ಈ ಗರ್ಭಗೃಹದ ದ್ವಾರದ ಎದುರುಗಡೆ ಪ್ರದಕ್ಷಿಣಾಪಥದ ಗೋಡೆಗೂ ಒಂದು ದ್ವಾರವಿದ್ದು ಸಮುದ್ರದ ಕಡೆಯಿಂದ ಬರುವವರಿಗೆ ದೇವರ ದರ್ಶನವಾಗುವಂತಿದೆ. ಪಶ್ಚಿಮದ ಗರ್ಭಗೃಹ ಇದೇ ರೀತಿ ಇದ್ದು ಸ್ವಲ್ಪ ಬದಲಾದ ಅಕ್ಷರೇಖೆಯ ಮೇಲಿದೆ. ಆದರೆ ಗುಡಿಯೊಳಗೆ ಲಿಂಗವಿಲ್ಲ. ಗುಡಿಯ ಮೇಲೆ ಮೇಲೆ ಹೇಳಿದ ರೀತಿಯ ಸ್ವಲ್ಪ ಚಿಕ್ಕದಾದ ತ್ರಿತಲ ವಿಮಾನವಿದೆ. ಈ ರೀತಿಯ ಅವಳಿ ವಿಮಾನ ಪ್ರಾಸಾದವನ್ನು ಹೊಂದಿರುವ ಏಕೈಕ ದಾಕ್ಷಿಣಾತ್ಯ ದೇವಾಲಯ ಇದಾಗಿದೆ. ಪಶ್ಚಿಮದ ಗರ್ಭಗೃಹದ ಮುಂದೆ ಒಂದೇ ಅಕ್ಷದಲ್ಲಿ ಪ್ರತ್ಯೇಕವಾದ ಎರಡು ಮಂಡಪಗಳಿದ್ದವು. ಈಗ ಅವು ನಾಮಾವಶೇಷವಾಗಿವೆ. ಪಶ್ಚಿಮದ ಗರ್ಭಗೃಹದ ಹಿಂಭಾಗದಲ್ಲಿ ಅದಕ್ಕೆ ಹೊಂದಿಕೊಂಡಂತೆ ಪೂರ್ವಾಭಿಮುಖವಾದ, ಆಯತಾಕಾರದ ಕೋಣೆಯೊಂದಿದ್ದು ಅದರಲ್ಲಿ ವಿಷ್ಣುವಿನ ಶಯನಮೂರ್ತಿ ಇದೆ. ಇವೆಲ್ಲವನ್ನೂ ಆವರಿಸಿದಂತೆ ಪ್ರಾಕಾರವಿತ್ತು. ಅದೂ ಈಗ ದುಸ್ಥಿತಿಯಲ್ಲಿದೆ. ಈ ರೀತಿ ಒಂದೇ ಅಕ್ಷದಲ್ಲಿ ವಿರುದ್ಧ ದಿಕ್ಕಿನತ್ತ ಮುಖಮಾಡಿರುವ, ಅವಳಿ ಗರ್ಭಗೃಹಗಳು, ಅವುಗಳ ಮೇಲೆ ಇರುವ ಅವಳಿ ವಿಮಾನ ಪ್ರಾಸಾದಗಳು ವಾಸ್ತು ತಜ್ಞರಿಗೆ ಜಿಜ್ಞಾಸೆಯ ವಸ್ತುವಾಗಿದೆ. ಈ ದೇವಾಲಯದ ಅಧಿಷ್ಠಾನ, ಭಿತ್ತಿ, ಪ್ರಸ್ತರ – ಇವುಗಳೆಲ್ಲವೂ ಸುಂದರವಾದ ಶಿಲ್ಪ ಮತ್ತು ವಾಸ್ತು ಅಲಂಕರಣೆಗಳಿಂದ ಶೋಭಿಸುತ್ತಿತ್ತು. ಆದರೆ ಸಮುದ್ರದ ಲವಣ ಮಿಶ್ರಿತವಾದ ಗಾಳಿಯ ನಿರಂತರ ಹೊಡೆತದಿಂದಾಗಿ ಹೊರಾಲಂಕರಣ ಸಂಪೂರ್ಣ ಶಿಥಿಲವಾಗಿದೆ.

ರಾಜಸಿಂಹನ ಕಾಲದ ಎರಡನೆಯ ಮುಖ್ಯ ದೇವಾಲಯವೆಂದರೆ ಕಂಚಿಯ ಕೈಲಾಸನಾಥ ಅಥವಾ ರಾಜಸಿಂಹೇಶ್ವರ ದೇವಾಲಯ. ತಳವಿನ್ಯಾಸದಲ್ಲಿ ಗರ್ಭಗೃಹ, ಪ್ರದಕ್ಷಿಣ ಪಥ ಇವೆರಡೂ ಸೇರಿ ಮೂಲಗುಡಿಯಾಗಿತ್ತು. ಪ್ರತ್ಯೇಕವಾಗಿ ಸ್ವಲ್ಪ ಅಂತರ ಬಿಟ್ಟು ನವರಂಗ ನಿರ್ಮಾಣವಾಗಿತ್ತು. ಈ ಮಧ್ಯಂತರವನ್ನು ಅನಂತರದಲ್ಲಿ ಗೂಡಮಂಟಪವೊಂದರಿಂದ ತುಂಬಿ ಒಂದೇ ಕಟ್ಟಡವನ್ನಾಗಿ ಮಾಡಲಾಗಿದೆ. ಗುಡಿಯ ಸುತ್ತಲೂ ವಿಶಾಲವಾದ ಪ್ರಾಂಗಣ, ಪ್ರಾಕಾರ, ಪ್ರಾಕಾರದ ಒಳಮುಖದಲ್ಲಿ ಸಾಲಾಗಿ ಖಂಡಹರ್ಮ್ಯಗಳು, ಮಹಾದ್ವಾರದ ಸ್ಥಳದಲ್ಲಿ ದ್ವಾರಗುಡಿ ಮುಂತಾದುವುಗಳಿವೆ. ಗರ್ಭಗೃಹದ ಮೇಲೆ ಸು.50

ಅಡಿ ಎತ್ತರದ ಧರ್ಮರಾಜ ರಥ ಮಾದರಿಯ ಪ್ರಾಸಾದವಿದೆ. ದ್ವಾರಗುಡಿಯ ಮೇಲೂ ಸಣ್ಣ ಶಾಲಾಕಾರದ ಶಿಖರವಿದ್ದು, ಇದನ್ನು ಅನಂತರ ಕಾಲದ ದ್ವಾರಗೋಪುರಗಳ ಭ್ರೂಣಾಕೃತಿಯೆಂದು ವಿಶ್ಲೇಷಿಸಲಾಗಿದೆ. ಗರ್ಭಗುಡಿಯ ಹೊರಮುಖದಲ್ಲಿ ಸುತ್ತಲೂ ಭಿತ್ತಿಗೆ ಒತ್ತಿಕೊಂಡಂತೆ ಒಂಬತ್ತು ಸಣ್ಣಸಣ್ಣ ಗುಡಿಗಳಿವೆ. ಇವುಗಳೆಲ್ಲದರ ಹರ್ಮ್ಯಗಳು ಮೂಲಪ್ರಾಸಾದ ದೊಂದಿಗೆ ಕೂಡಿಕೊಂಡು ಬೃಹದಾಕಾರದ ಚತುಷ್ಪತಿ ವಿಮಾನವಾಗಿ ನಿಂತಿದೆ. ಗರ್ಭಗೃಹದ ಭಿತ್ತಿಯು ಪ್ರಧಾನವಾಗಿ ಶೈವಶಿಲ್ಪಗಳ ಅಲಂಕರಣೆಗಳಿಂದ ತುಂಬಿದೆ. ಪ್ರಾಕಾರ ಗೋಡೆಯ ಒಳಮುಖದಲ್ಲಿ ನಿಬಿಡವಾಗಿ ನಿರ್ಮಿತವಾಗಿರುವ ಸು.60 ಖಂಡ ಹರ್ಮ್ಯಗಳು ಈ ದೇವಾಲಯದ ವಿಶೇಷ. ಪ್ರತಿಯೊಂದು ಖಂಡಹರ್ಮ್ಯವೂ ಷಡ್ವರ್ಗ ಮಾದರಿಯ ಚಿಕ್ಕಗುಡಿ. ಒಳಭಾಗದಲ್ಲಿ ಉಬ್ಬುಗೆತ್ತನೆಯಲ್ಲಿ ದೇವತಾಶಿಲ್ಪ. ಒಂದೇ ರೀತಿಯಲ್ಲಿ ಸಾಲಾಗಿ ನಿರ್ಮಿತ ವಾಗಿರುವ ಈ ಗುಡಿಗಳು ಪ್ರಾಕಾರಕ್ಕೆ ವಿಶೇಷ ಮೆರುಗನ್ನು ನೀಡಿವೆ. ಚಾಳುಕ್ಯ ಎರಡನೆಯ ವಿಕ್ರಮಾದಿತ್ಯನು ಪಲ್ಲವ ರಾಜಧಾನಿ ಕಂಚಿಯನ್ನು ಆಕ್ರಮಿಸಿಕೊಂಡ ಕಾಲದಲ್ಲಿ ಈ ರಾಜಸಿಂಹೇಶ್ವರ ದೇವಾಲಯಕ್ಕೆ ಭೇಟಿನೀಡಿ, ದೇವಾಲಯವನ್ನೂ ಅದರ ಸಂಪತ್ತನ್ನೂ ಪರಿವೀಕ್ಷಿಸಿ, ಅವೆಲ್ಲವನ್ನು ಮತ್ತೆ ಆ ದೇಗುಲಕ್ಕೇ ಪುನಃ ಸ್ಥಾಪಿಸಿ, ಇನ್ನೂ ಅನೇಕ ದಾನಗಳನ್ನು ನೀಡಿದನೆಂದು ಅಲ್ಲಿಯ ಕನ್ನಡ ಶಾಸನವೊಂದು ಹೇಳುತ್ತದೆ. ಈ ಒಂದು ರಾಜಕೀಯ ಘಟನೆಯಿಂದಾಗಿ ಚಳುಕ್ಯ–ಪಲ್ಲವ ಸಾಂಸ್ಕೃತಿಕ ಸಂಬಂಧ ನಿಕಟಗೊಂಡು ಪಟ್ಟದಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳ ನಿರ್ಮಾಣದಲ್ಲಿ ಈ ಎರಡೂ ರಾಜ್ಯಗಳ ವಾಸ್ತುತಜ್ಞರು ಪಾಲ್ಗೊಳ್ಳುವಂತಾಯಿತೆಂದು ವಿದ್ವಾಂಸರುಗಳ ಅಭಿಪ್ರಾಯ.

ರಾಜಸಿಂಹ ಶೈಲಿಯ ಮತ್ತೊಂದು ಮುಖ್ಯ ವಾಸ್ತುಕೃತಿಯೆಂದರೆ ಕಂಚಿಯ ವೈಕುಂಠಪೆರುಮಾಳ್ ದೇವಾಲಯ. ಮರಳುಗಲ್ಲಿನಲ್ಲಿ ನಿರ್ಮಿತವಾದ ಈ ದೇವಾಲಯ ಪಲ್ಲವರ ನಿರ್ಮಾಣ ವಾಸ್ತು ಪರಂಪರೆಯಲ್ಲೇ ಅತ್ಯಂತ ಪರಿಪೂರ್ಣವಾದ ದೇವಾಲಯ ವೆಂದು ಹೆಸರುಗಳಿಸಿದೆ. ಗರ್ಭಗೃಹ, ಎರಡು ಪ್ರದಕ್ಷಿಣಪಥಗಳು, ಸುಕನಾಸಿ, ನವರಂಗ, ಅಂಗಳ, ಮಾಲಿಕಾ, ಪ್ರಾಕಾರ ಎಲ್ಲವನ್ನೂ ಹೊಂದಿದೆ. ನವರಂಗದಲ್ಲಿ ಎಂಟು ಕಂಬಗಳಿದ್ದು ಎಲ್ಲವೂ ಪಲ್ಲವ ಶೈಲಿಯ ಪ್ರತೀಕವಾದ ಸಿಂಹಪಾದ ಸ್ತಂಭಗಳು. ದೇವಾಲಯದ ಸುತ್ತಲಿನ ಕಿರಿದಾದ ಪ್ರಾಂಗಣ, ಸುತ್ತಲಿನ ಮಾಲಿಕಾ ಬಹಳ ಆಕರ್ಷಕ ನಿರ್ಮಾಣ. ಪ್ರಾಕಾರದ ಗೋಡೆಯ ಒಳಮುಖದಲ್ಲಿ ಒಂದು ಅಕಂಣದ ಕೈಸಾಲೆ ಸುತ್ತಲೂ ಇದೆ. ಕೈಸಾಲೆಯ ಮುಮ್ಮುಖದ ಕಂಬದ ಸಾಲು, ಏಕರೀತಿಯ ಸಿಂಹಪಾದ ಸ್ತಂಭಗಳಿಂದ ಕೂಡಿದೆ. ಪ್ರತಿ ಕಂಬಕ್ಕೂ ಕುಳಿತಿರುವ ಸಿಂಹದ ಬುಡಭಾಗ, ಮೇಲೆ ಉರುಳೆ ದಿಂಡು, ಕುಂಭ, ಮಂಡಿ, ಫಲಕ, ಪೋತಿಕಾ ಇವಿಷ್ಟೂ ಇವೆ. ಈ ಕೈಸಾಲೆಯ ಒಂದು ವಿಶೇಷವೆಂದರೆ, ಇದರ ಹಿಂಗೋಡೆಯಲ್ಲಿ ಉದ್ದಕ್ಕೂ ಪಲ್ಲವ ದೊರೆ ನಂದಿವರ್ಮನ್ ಪಲ್ಲವ ಮಲ್ಲನ ಹುಟ್ಟು, ಜೀವನ ಮತ್ತು ಪಟ್ಟಾಭಿಷೇಕದವರೆಗಿನ ಇತಿಹಾಸವನ್ನು ತೋರಿಸುವ ಕಥಾನಕ ಕಟ್ಟು ಶಿಲ್ಪಗಳನ್ನು ಕಡೆಯಲಾಗಿದೆ. ಚಾರಿತ್ರಿಕವಾಗಿ ಅಪರೂಪವಾದ ಈ ಶಿಲ್ಪಗಳು ಪಲ್ಲವರ ಇತಿಹಾಸದ ಅಧ್ಯಯನಕ್ಕೆ ಬಹಳ ಅಮೂಲ್ಯವಾದ ಆಕರಗಳಾಗಿವೆ.

ದೇವಾಲಯವನ್ನು ಎತ್ತರವಾದ ಪಾದಬಂಧ ಅಧಿಷ್ಠಾನದ ಮೇಲೆ ನಿರ್ಮಿಸಿದ್ದಾರೆ. ಭಿತ್ತಿಯಲ್ಲಿ ಕರ್ಣ ಮತ್ತು ಭದ್ರ ಭಾಗಗಳು ಇವೆ. ಭಿತ್ತಿ ಪಾದಗಳು, ಕೋಷ್ಠಗಳು, ಜಾಲಂಧ್ರಗಳು, ಮೇಲೆ ಕಪೋತ, ಹಾರ ಇತ್ಯಾದಿ ಸಕಲ ವಾಸ್ತು ಅಲಂಕರಣಗಳೂ ಇಲ್ಲಿ ಕಾಣುತ್ತವೆ. ಈ ಗುಡಿಯ ಏರುವಿನ್ಯಾಸದ ಒಂದು ವಿಶೇಷತೆಯೆಂದರೆ, ಚತುಷ್ತಲವಾದ ಈ ದೇವಾಲಯದ ಪ್ರತಿಯೊಂದು ತಲದಲ್ಲೂ ಒಂದೊಂದು ಗರ್ಭಗುಡಿಯಿದೆ. ಭೂಮಟ್ಟದ ಗರ್ಭಗೃಹಕ್ಕೆ ಏಕಕೇಂದ್ರದ ಎರಡು ಪ್ರದಕ್ಷಿಣ ಪಥ, ಎರಡನೆಯ ತಲಕ್ಕೆ ಒಂದು ಒಳ ಹಾಗೂ ಇನ್ನೊಂದು ಹೊರ ಪ್ರದಕ್ಷಿಣಪಥ, ಮೂರನೆಯ ತಲಕ್ಕೆ ಒಂದು ಹೊರ ಪ್ರದಕ್ಷಿಣಪಥ, ನಾಲ್ಕನೆಯ ತಲದಲ್ಲಿ, ಒಳಭಾಗ ಒಂದು ಚಿಕ್ಕ ಗೂಡಿನಂತಿದ್ದು, ಅದಕ್ಕೂ ಸುತ್ತಲೂ ಓಡಾಡಲು ಜಾಗವಿದೆ. ತುದಿಯಲ್ಲಿ ಅಷ್ಟಮುಖಾಕಾರದ ಶಿಖರವಿದೆ. ಈ ರೀತಿಯ ನಾಲ್ಕಂತಸ್ತಿನ ಗುಡಿಯ ನಿರ್ಮಾಣದ ಉದ್ದೇಶ ಕೆಳಗಿನ ಮೂರಂತಸ್ತುಗಳಲ್ಲಿ ವಿಷ್ಣುವಿನ ಆಸೀನ, ಶಯನ, ಸ್ಥಾನಕ ಮೂರ್ತಿಗಳನ್ನಿರಿಸುವುದಕ್ಕೆ. ಇದರಿಂದಾಗಿ ಕೆಳಗಿನ ಮೂರೂ ತಲಗಳು ಔಪಯೋಗಿಕವಾಗಿ ನಿರ್ಮಾಣವಾಗಿವೆ.

ನಂದಿವರ್ಮನ್ ಪಲ್ಲವ ಮಲ್ಲನ ಆಳ್ವಿಕೆ ಸು.794ರ ಹೊತ್ತಿಗೆ ಕೊನೆಗೊಂಡಿತು. ಅನಂತರ ಆಳಿದ ಪಲ್ಲವ ರಾಜರು ಹಿಂದಿನವರಂತೆ ಬಲಿಷ್ಠರಾಗಿರಲಿಲ್ಲ. ಜೊತೆಗೆ ರಾಷ್ಟ್ರಕೂಟ, ಪಾಂಡ್ಯ, ಚೋಳ ಮುಂತಾದ ರಾಜವಂಶಗಳ ಏಳಿಗೆ ಪಲ್ಲವ ವಾಸ್ತುಶಿಲ್ಪಕಲೆಯ ಏಳಿಗೆಯನ್ನು ಕುಂಠಿತಗೊಳಿಸಿತು. 800–900ರ ವರೆಗಿನ ಕಾಲದಲ್ಲಿ ನಿರ್ಮಾಣವಾದ ಪಲ್ಲವ ದೇವಾಲಯ ಗಳು ಗಾತ್ರದಲ್ಲಿ, ಗುಣಮಟ್ಟದಲ್ಲಿ ಇಳಿಮುಖವನ್ನು ಪ್ರದರ್ಶಿಸುತ್ತವೆ. ಹೀಗಾಗಿ ಈ ಕಾಲದ ದೇವಾಲಯ ನಿರ್ಮಾಣ ಘಟ್ಟವನ್ನು ಪ್ರತ್ಯೇಕವಾಗಿ ನಂದಿವರ್ಮನ್ ಶೈಲಿ ಎಂದು ಗುರುತಿಸ ಲಾಗಿದೆ. ಕೆಲವು ವಿದ್ವಾಂಸರು ಇನ್ನೂ ಮುಂದೆ ವಿಶ್ಲೇಷಿಸಿ ಈ ಘಟ್ಟದ ಅಂತಿಮ ಭಾಗದಲ್ಲಿ ಅಪರಾಜಿತ ಶೈಲಿ ಎಂಬ ಘಟ್ಟವನ್ನು ಬೇರ್ಪಡಿಸಿ ಗುರುತಿಸಿದ್ದಾರೆ. ನಂದಿವರ್ಮನ್ ಶೈಲಿಯ ಮುಖ್ಯ ದೇವಾಲಯಗಳೆಂದರೆ ಕಂಚಿಯ ಮುಕ್ತೇಶ್ವರ ಮತ್ತು ಮತಂಗೇಶ್ವರ ದೇವಾಲಯಗಳು, ಉತ್ತರ ಮೇರೂರಿನ ಸುಂದರೇಶ್ವರ ಪೆರುಮಾಳ್, ಕೈಲಾಸನಾಥ ಮತ್ತು ವೈಕುಂಠಪೆರುಮಾಳ್, ಅಲಂಬಾಕ್ಕಂನ ಸಪ್ತಮಾತೃಕಾ ಮತ್ತು ವರದರಾಜ ಪೆರುಮಾಳ್ ದೇವಾಲಯಗಳು. ಅಪರಾಜಿತ ಶೈಲಿಯದೆಂದು ಗುರುತಿಸಲಾದ ದೇವಾಲಯಗಳೆಂದರೆ ತಕ್ಕೋಲಂನ ಜಲನಾಥೇಶ್ವರ ಅಲ್ಲಿಯ ಕೆಲವು ಪಾಳುಗುಡಿಗಳು ಮತ್ತು ಸುಮಂಗಲಿ ದೇವಾಲಯ, ತಿರುತ್ತಣಿಯ ವೀರಟ್ಟಾನೇಶ್ವರ ಮತ್ತು ನೇಮಲಿಯ ವೈಕುಂಠಪೆರುಮಾಳ್ ದೇವಾಲಯ.

ನಂದಿವರ್ಮನ್ ಶೈಲಿಯ ದೇವಾಲಯಗಳಲ್ಲನೇಕವು ಸಂಕೀರ್ಣ ವಾಸ್ತುಸಾಮಗ್ರಿಗಳ ನಿರ್ಮಾಣವಾಗಿವೆ. ಇದುವರೆಗೆ ಕೇವಲ ಕಲ್ಲಿನಲ್ಲಿ ನಿರ್ಮಾಣವಾಗುತ್ತಿದ್ದ ಗುಡಿಗಳನ್ನು, ಇಟ್ಟಿಗೆ ಗಾರೆ ಮುಂತಾದವುಗಳಿಂದ ಕಟ್ಟಿದ ವಾಸ್ತುಭಾಗಗಳೊಂದಿಗೆ ಬೆರೆಸುವ ಪದ್ಧತಿ ಪ್ರಾರಂಭವಾಯಿತು. ಈ ಕಾಲದ ದೇವಾಲಯಗಳಲ್ಲಿ ಮುಂಚಿನ ಘಟ್ಟದ ದೇವಾಲಯಗಳಂತೆ ತಳವಿನ್ಯಾಸ ಕಾಣಬರುತ್ತದೆ. ಕೆಲವು ಗುಡಿಗಳು ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿವೆ (ವೀರಟ್ಟಾನೇಶ್ವರತಿರುತ್ತಣಿ). ಅಧಿಷ್ಠಾನದ ವಿಧಗಳು, ಭಿತ್ತಿಪಾದಗಳು, ಕಂಭದ ಆಕೃತಿ ಮುಂತಾದವು ಅದೇ ಹಿಂದಿನ ರೀತಿಯಲ್ಲೇ ಮುಂದುವರೆದವು. ವಿಮಾನ ಪ್ರಾಸಾದದ ನಿರೂಪಣೆಯಲ್ಲಿ ಆಯತಾಕಾರದ ತಳಕಟ್ಟಿನ ಮೇಲೆ ಗಜಪೃಷ್ಠಾಕಾರದ ಗ್ರೀವ, ಶಿಖರ ನಿರ್ಮಾಣವೂ ಆಯಿತು (ತಿರುತ್ತಣಿ). ಇಟ್ಟಿಗೆ, ಗಾರೆಯಂತಹ ಮೃದುಮಾಧ್ಯಮಗಳನ್ನು ಬಳಸಿ ವಿಮಾನ ಪ್ರಾಸಾದವನ್ನು ನಿರ್ಮಿಸುವ ಪರಿಪಾಠ ಪ್ರಾರಂಭವಾಗಿದ್ದುದರಿಂದ ಈ ಕಾಲದ ದೇವಾಲಯಗಳಲ್ಲದೆ ಅನೇಕವು ಅನಂತರದ ಕಾಲದಲ್ಲಿ ದುರಸ್ತಿಯಾಗಿವೆ.

ಪಲ್ಲವರು ಸು.300 ವರ್ಷಗಳ ಕಾಲ ಪೋಷಿಸಿ ಬೆಳೆಸಿದ ದೇವಾಲಯ ವಾಸ್ತು ಮತ್ತು ಶಿಲ್ಪಕಲೆ, ಅವರ ಅನಂತರ ಆಳಿದ ಚೋಳರ ದೇವಾಲಯ ವಾಸ್ತುಕಲೆಗೆ ಭದ್ರ ಬುನಾದಿಯನ್ನು ಒದಗಿಸಿಕೊಟ್ಟಿತು. ಚೋಳರ ದೇವಾಲಯ ವಾಸ್ತುಕಲೆ ಒಂದು ರೀತಿಯಲ್ಲಿ ಪಲ್ಲವರ ವಾಸ್ತುಕಲೆಯ ಮುಂದುವರಿಕೆ. (ಎಂ.ಎಸ್.ಕೆ.)

**ಪವಿತ್ರ ರೋಮನ್ ಸಾಮ್ರಾಜ್ಯ:** ಸು.400 ವರ್ಷಗಳ ಕಾಲ ಭೂಮಧ್ಯ ಪ್ರದೇಶದ ಹಾಗೂ ಪಶ್ಚಿಮ ಯುರೋಪಿನ ಜನರಿಗೆ ರಾಜಕೀಯ ಏಕತೆ ಮತ್ತು ಸಂರಕ್ಷಣೆ ನೀಡಿದ ಪ್ರಾಚೀನ ರೋಮನ್ ಸಾಮ್ರಾಜ್ಯ 5ನೆಯ ಶತಮಾನದಲ್ಲಿ ಅಂತ್ಯಗೊಂಡಿತು. ಇದರ ಅಂತ್ಯ 1ನೆಯ ಕಾನ್‌ಸ್ಟಾಂಟೈನ್ ಚಕ್ರವರ್ತಿ ತನ್ನ ರಾಜಧಾನಿಯನ್ನು ರೋಮ್‌ನಿಂದ ಪೂರ್ವದ ಬೈಜಾಂಟಿಯನ್‌ಗೆ (330) ವರ್ಗಾಯಿಸಿದಾಗ ಆರಂಭವಾಯಿತು. ಈ ಅವಧಿಯಲ್ಲಿ ಪಶ್ಚಿಮ ಯುರೋಪು ಜರ್ಮನ್ ಬುಡಕಟ್ಟಿಗೆ ಸೇರಿದ ಅನಾಗರಿಕರ ಧಾಳಿಗೆ ತುತ್ತಾಗಿ, ರೋಮ್ ಆಡಳಿತ ಆರ್ಥಿಕ ಮತ್ತು ಬೌದ್ಧಿಕವಾಗಿ ಶಿಥಿಲಗೊಂಡಿತು. ಪ್ರಾಚೀನ ರೋಮಿನ ಕೊನೆಯ ಚಕ್ರವರ್ತಿ ರೋಮ್ಯುಲಸ್ ಅಗಸ್ಟಸನನ್ನು ಗಾತರು ಪದಚ್ಯುತಗೊಳಿಸಿ (476) ಸಾಮ್ರಾಜ್ಯವನ್ನು ಆಕ್ರಮಿಸಿಕೊಂಡರು. ಅದರ ಸ್ಥಾನದಲ್ಲಿ ಕ್ರೈಸ್ತ ಚರ್ಚು ಹತ್ತು ಶತಮಾನಗಳ ಕಾಲ ಯುರೋಪಿಗೆ ಶಾಂತಿ ನೀಡಲು ಯತ್ನಿಸಿತು. ಇದರ ಫಲವೇ ಪವಿತ್ರ ರೋಮನ್ ಸಾಮ್ರಾಜ್ಯದ ಉದಯ. ಈ ಸಾಮ್ರಾಜ್ಯ ಪ್ರಾಚೀನ ರೋಮನ್ ಸಾಮ್ರಾಜ್ಯದ ನ್ಯಾಯಬದ್ಧ ಉತ್ತರಾಧಿಕಾರಿಯೆಂದು ಪ್ರತಿಪಾದಿತವಾಯಿತು. ಆದರೆ ವಾಸ್ತವವಾಗಿ ಬೈಜಾಂಟೀಯನ್ ಸಾಮ್ರಾಜ್ಯ (ಪೂರ್ವ ರೋಮನ್ ಸಾಮ್ರಾಜ್ಯ, 33–1543) ಪ್ರಾಚೀನ ರೋಮನ್ ಸಾಮ್ರಾಜ್ಯದಿಂದ ನೇರವಾಗಿ ಮುಂದುವರಿದ ಸಾಮ್ರಾಜ್ಯ ವಾಗಿದ್ದು, ನ್ಯಾಯಬದ್ಧ ಉತ್ತರಾಧಿಕಾರಿಯಾಗಿತ್ತು. ವಸ್ತುತಃ 5ನೆಯ ಶತಮಾನದಲ್ಲಿ ಜರ್ಮನರ ಧಾಳಿ ಆದಾಗಿನಿಂದ 9ನೆಯ ಶತಮಾನದ ಆರಂಭದಲ್ಲಿ ಚಾರ್ಲ್‌ಮೇನನ ಪಟ್ಟಾಭಿಷೇಕವಾಗುವವರೆಗೆ ಪಶ್ಚಿಮ ಯುರೋಪಿನಲ್ಲಿ ಹೆಸರಿಸುವಂಥ ಯಾವ ಸಾಮ್ರಾಜ್ಯವೂ ಅಸ್ತಿತ್ವದಲ್ಲಿರಲಿಲ್ಲ. ಚಾರ್ಲ್‌ಮೇನ್ (768–814) ತನ್ನ 46 ವರ್ಷಗಳ ಆಳಿಕೆಯ ಅವಧಿಯಲ್ಲಿ ಬರ್ಬರರ ರಾಜ್ಯಗಳನ್ನು ಖಡ್ಗದಿಂದ ಒಂದುಗೂಡಿಸಿ ಕ್ರೈಸ್ತಸಾಮ್ರಾಜ್ಯವನ್ನು ನಿರ್ಮಿಸುವುದರಲ್ಲಿ ಯಶಸ್ವಿಯಾದ. ಇವನ ಸಾಮ್ರಾಜ್ಯ ಬಾಲ್ಟಿಕ್ ಪ್ರದೇಶದಿಂದ ಮೆಡಿಟರೇನಿಯನ್ ಪ್ರದೇಶದವರೆಗೆ ವಿಸ್ತರಿಸಿತು. ಪದಚ್ಯುತಿಗೊಳ್ಳುತ್ತಿದ್ದ ಪೋಪ್ 3ನೆಯ ಲಿಯೊನಿಗೆ ರಕ್ಷಣೆಗೆ ನೀಡಿ ಅವನನ್ನು ಉಳಿಸಿದ. ಇದರಿಂದ ಸಂತುಷ್ಟನಾದ ಪೋಪ್ ಕೃತಜ್ಞತಾಪೂರ್ವಕವಾಗಿ ಸಂತ ಪೀಟರ್ ಚರ್ಚಿನಲ್ಲಿ ಚಾರ್ಲ್‌ಮೇನನಿಗೆ ಕಿರೀಟವನ್ನು ತೊಡಿಸಿ (800) ರೋಮನ್ ಚಕ್ರವರ್ತಿ ಎಂದು ಘೋಷಿಸಿದ. ಚಾರ್ಲ್‌ಮೇನ್ ಯುರೋಪಿನ ಇತಿಹಾಸದ ಮಹಾಶಯರುಗಳಲ್ಲಿ ಒಬ್ಬನಾಗಿ ವಿಜೃಂಭಿಸುತ್ತಿದ್ದಾನೆ. ಇವನು ಅಗ್ರಗಣ್ಯ ಯೋಧನೂ ದಕ್ಷ ಆಡಳಿತಗಾರನೂ ಆಗಿದ್ದುದಲ್ಲದೆ ಧರ್ಮದ ಮತ್ತು ವಿದ್ಯೆಯ ಪೋಷಕನಾಗಿದ್ದ. ಇವನ ಕಾಲದಿಂದ ಕ್ರೈಸ್ತ ಪ್ರಪಂಚದಲ್ಲಿ ಎರಡು ಸಾಮ್ರಾಜ್ಯಗಳು ಅಸ್ತಿತ್ವಕ್ಕೆ ಬಂದುವು. ಪೂರ್ವ ರೋಮನ್ ಸಾಮ್ರಾಜ್ಯದ ಜೊತೆಗೆ ಚಾರ್ಲ್‌ಮೇನನ ಸಾಮ್ರಾಜ್ಯ (ಬೈಜಾಂಟೀಯನ್) ಅಸ್ತಿತ್ವಕ್ಕೆ ಬಂತು. ಇದರ ಮುಂದುವರಿದ ಭಾಗವೇ ಪವಿತ್ರ ರೋಮನ್ ಸಾಮ್ರಾಜ್ಯ. ಇವನ ತರುವಾಯ ಮಕ್ಕಳ ನಡುವೆ ಸಾಮ್ರಾಜ್ಯ ವಿಭಜನೆಗೊಂಡು ಅವನತಿ ಹೊಂದಿತ್ತು. 962ರಲ್ಲಿ ಪೋಪ್ 12ನೆಯ ಜಾನ್ ಜರ್ಮನಿಯ ಸ್ಯಾಕ್ಸನ್ ಅರಸ 1ನೆ ಆಟೋಗೆ ಕಿರೀಟಧಾರಣೆ ನೆರವೇರಿಸಿ ಅವನನ್ನು ಪಶ್ಚಿಮ ಸಾಮ್ರಾಜ್ಯದ ಪವಿತ್ರ ರೋಮನ್ ಚಕ್ರವರ್ತಿಯೆಂದು ಘೋಷಿಸಿದ. ಇದು ಪುನಶ್ಚೇತನಗೊಂಡು ಹಳೆಯ ಸಾಮ್ರಾಜ್ಯದ ಚಾರ್ಲ್‌ಮೇನ್‌ಸಿ ಹೊಸ ಹೆಸರಾಗಿತ್ತು. ಇವು ಜರ್ಮನಿ, ನೆದರ್ಲೆಂಡ್ಸ್, ಬೊಹಿಮಿಯ, ಆಸ್ಟ್ರಿಯ, ಸ್ವಿಟ್ಜರ್‌ಲೆಂಡ್, ಬರ್ಗಂಡಿಗಳನ್ನೊಳ ಗೊಂಡಿತ್ತು. ಫ್ರಾನ್ಸ್, ಇಂಗ್ಲೆಂಡ್, ಸ್ಪೇನ್, ಸ್ಕಾಂಡಿನೇವಿಯ ಮತ್ತು ಹಂಗರಿಗಳು ಸೇರಿರಲಿಲ್ಲ. 1ನೆಯ ಆಟೋ ಮತ್ತು ಇವನ ಉತ್ತರಾಧಿಕಾರಿಗಳು ಪವಿತ್ರ ರೋಮನ್ ಸಾಮ್ರಾಜ್ಯದ ಹಿಡಿತವನ್ನು ಬಲಪಡಿಸಿದರು. ಇವನ ತರುವಾಯ ಬಂದ ಚಕ್ರವರ್ತಿಗಳನ್ನು ಪವಿತ್ರ ರೋಮನ್ ಚಕ್ರವರ್ತಿಗಳೆಂದು ಕರೆಯಲಾಗಿದೆ.

ಸ್ವತಂತ್ರ ನಗರಗಳು: ಪವಿತ್ರ ರೋಮನ್ ಸಾಮ್ರಾಜ್ಯದಲ್ಲಿ ಕೆಲವು ನಗರಗಳು ಪ್ರಸಿದ್ಧಿಗೆ ಬಂದು ಪ್ರಬಲವಾದುವು. ಇವು ಚಕ್ರವರ್ತಿ ಮತ್ತು ಅರಸರಿಂದ ಸನ್ನದು ಪಡೆದು ವಿಶೇಷ ಸೌಲಭ್ಯಗಳನ್ನು ದೊರಕಿಸಿಕೊಂಡು ಸ್ವಯಂ ಸ್ಥಳೀಯ ಸರ್ಕಾರಗಳನ್ನು ರಚಿಸಿಕೊಂಡಿದ್ದುವು. ತಮ್ಮ ಸ್ವಾತಂತ್ರ್ಯ ಮತ್ತು ವಿಶೇಷ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ತಮ್ಮವೇ ಆದ ಸೈನಿಕ ಮತ್ತು ರಾಜಕೀಯ ಕೂಟಗಳನ್ನು ರಚಿಸಿಕೊಂಡು ಸಾಮ್ರಾಟನ ಅಧಿಕಾರಕ್ಕೆ ಮತ್ತು ಸಾಮ್ರಾಜ್ಯದ ಏಕತೆಗೆ ಭಂಗ ಉಂಟು ಮಾಡುತ್ತಿದ್ದುವು. ಚಕ್ರವರ್ತಿಗಳ ಅಧಿಕಾರ ಕ್ಷೀಣಿಸಲಾರಂಭಿಸಿದಾಗ ಇವು ಸ್ವತಂತ್ರ ಗಣರಾಜ್ಯಗಳಾದುವು.

ಪ್ರಬಲ ಚುನಾಯಕರು. ಪ್ರಭಾವಶಾಲಿ ಅರಸರು ಮತ್ತು ಸ್ವತಂತ್ರ ನಗರಗಳ ಜೊತೆಗೆ ಜರ್ಮನಿಯಲ್ಲಿ ಅನೇಕ ಸರದಾರರು ತಂತಮ್ಮ ಪಾಳೆಯಪಟ್ಟುಗಳಲ್ಲಿ ಸಾರ್ವಭೌಮರ ರೀತಿಯಲ್ಲಿ ವರ್ತಿಸುತ್ತಿದ್ದರು ಇವರು ಸ್ವೇಚ್ಛಾಚಾರಿಗಳಾಗಿ ಆಗಿಂದಾಗ್ಗೆ ಕೊಳ್ಳೆ ಸುಲಿಗೆಗಳಲ್ಲಿ ನಿರಂತರವಾಗಿ ಕಾನೂನುಭಂಗ ಉಂಟುಮಾಡಿ ಸಾಮ್ರಾಜ್ಯಕ್ಕೆ ಹಿಂಸೆಯ ಮೂಲವಾಗಿದ್ದರು. ನಾಯಕರು ಮತ್ತು ಪ್ರಭುಗಳು ಹಾಗೂ ಸ್ವತಂತ್ರ ನಗರಗಳ ನಡುವೆ ಖಾಸಗಿ ಯುದ್ಧಗಳು ಪದೇ ಪದೇ ನಡೆಯುತ್ತಿದ್ದವು. ಪ್ರತಿಯೊಬ್ಬ ಸಾಮ್ರಾಟನೂ ಈ ಆಂತರಿಕ ಯುದ್ಧಗಳನ್ನು ಹತ್ತಿಕ್ಕಲು ಹೋರಾಟ ಮಾಡಬೇಕಾಗುತ್ತಿತ್ತು. ಬಲಿಷ್ಠ ಸಾಮ್ರಾಟರು ಮಾತ್ರ ತಾತ್ಕಾಲಿಕವಾಗಿ ಯಶಸ್ವಿಗಳಾಗುತ್ತಿದ್ದರು.

ಪರಿಷತ್ತು: ಪವಿತ್ರ ರೋಮನ್ ಸಾಮ್ರಾಜ್ಯ ಮಧ್ಯಯುಗದಲ್ಲಿ ಪಾರ್ಲಿಮೆಂಟರಿ ಮಾದರಿಯ ಒಂದು ಸಂಸ್ಥೆಯನ್ನು ರೂಪಿಸಿಕೊಂಡಿತು. ಇದನ್ನು ಡೈಯಟ್ ಎಂದು ಕರೆಯಲಾಗುತ್ತಿತ್ತು. ಇಂದಿನ ರೀತಿಯಲ್ಲಿ ಸಾರ್ವತ್ರಿಕ ಚುನಾವಣೆಯ ಮೂಲಕ ಪ್ರತಿನಿಧಿಗಳು ಪರಿಷತ್ತಿಗೆ ಆಯ್ಕೆಯಾಗುತ್ತಿರಲಿಲ್ಲ. ಅಂದಿನ ಪ್ರತಿನಿಧಿಗಳು ಕೆಲವು ವರ್ಗಗಳ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಿದ್ದರು. ಈ ಪರಿಷತ್ತಿನಲ್ಲಿ ಮೂರು ಅಂಗಗಳಿದ್ದವು. 1 ಚುನಾಯಕ ಕ್ಷೇತ್ರ , 2 ಲೌಕಿಕ ಮತ್ತು ಅಲೌಕಿಕ ಅರಸರ ಕ್ಷೇತ್ರ, 3 ಸ್ವತಂತ್ರ ನಗರಗಳ ಪ್ರತಿನಿಧಿಗಳ ಕ್ಷೇತ್ರ. ಚಕ್ರವರ್ತಿಯ ಆದೇಶದ ಮೇರೆಗೆ ಫ್ರಾಂಕ್‌ಫರ್ಟ್ ನಗರದಲ್ಲಿ ಈ ಪರಿಷತ್ತಿನ ಅಧಿವೇಶನ ನಡೆಯುತ್ತಿತ್ತು. ಚಕ್ರವರ್ತಿಗೆ ಸಲಹೆ ಮತ್ತು ಸಹಾಯ ನೀಡುವುದು. ಇದರ ಮುಖ್ಯ ಕಾರ್ಯವಾಗಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಇದು ಸಾಮ್ರಾಟನಿಗೆ ಶಕ್ತಿಮೂಲವಾಗುವ ಬದಲು ಹಗರಣದ ಮೂಲವಾಗುತ್ತಿತ್ತು. ಪರಿಷತ್ತಿನ ಪ್ರತಿಯೊಂದು ಅಂಗವೂ ತನ್ನ ವರ್ಗದ ಹಿತಾಸಕ್ತಿಗೆ ಮೊದಲು ಗಮನ ಹರಿಸಿ ಅನಂತರ ಚಕ್ರವರ್ತಿಯ ಹಿತಾಸಕ್ತಿಗಳ ಕಡೆಗೆ ಗಮನ ಹರಿಸುತ್ತಿತ್ತು. ವೈಯಕ್ತಿಕ ಹಿತಾಸಕ್ತಿಗಳ ಹೋರಾಟದಲ್ಲಿ ಸಾಮ್ರಾಜ್ಯಕ್ಕೆಲ್ಲ ಒಟ್ಟಾರೆ ಧಕ್ಕೆ ಬರುತ್ತಿತ್ತು.

ಚರ್ಚು ಮತ್ತು ಸಾಮ್ರಾಜ್ಯದ ನಡುವಣ ಹೋರಾಟ: ರಾಜಕೀಯ ಮತ್ತು ಸಾಮಾಜಿಕ ಬಾಧಕಗಳ ಜೊತೆಗೆ ಪೋಪ್ ಮತ್ತು ಸಾಮ್ರಾಟನ ನಡುವಣ ಘರ್ಷಣೆಗಳು ಮಧ್ಯಯುಗದಲ್ಲಿ ಪ್ರಮುಖ ಘಟನೆಗಳಾಗಿದ್ದವು ಈ ಕಲಹದಿಂದ ಸಾಮ್ರಾಜ್ಯ ಮತ್ತಷ್ಟು ಅಧೋಗತಿಗೆ ಇಳಿಯಿತು. ಫ್ರಾಂಕೋನಿಯನ್ ಚಕ್ರವರ್ತಿಗಳಾದ 4ನೆಯ ಹೆನ್ರಿ (1056–1100) ಮತ್ತು 5ನೆಯ ಹೆನ್ರಿ (1106–25) ಇವರ ಕಾಲದಲ್ಲಿ ನೇಮಕಾತಿ ಮತ್ತು ಪದವಿ ದಾನದ ವಿಷಯಗಳಲ್ಲಿ ಮೊದಲ ಬಾರಿಗೆ ವಿರಸ ಆರಂಭವಾಯಿತು. ಪೋಪ್ 7ನೆಯ ಗ್ರಿಗೋರಿ (1073–85) ಚರ್ಚಿನ ಆಡಳಿತವನ್ನು ಸುಧಾರಿಸಲು ಯತ್ನಿಸಿದಾಗ ಅಧಿಕಾರದ ವಿಷಯವಾಗಿ ಕಲಹ ಆರಂಭವಾಯಿತು. ರಾಜರು ಚರ್ಚ್ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದರೆ ಆಧ್ಯಾತ್ಮಿಕ ಮೌಲ್ಯದ ರಕ್ಷಣೆ ಕಷ್ಟವಾಗುವುದೆಂದು ಪೋಪ್ ಬಗೆದು. ಚಕ್ರವರ್ತಿಗಳು ಚರ್ಚಿನ ಅಧಿಕಾರಿಗಳನ್ನು ನೇಮಿಸುವುದನ್ನು ನಿಷೇಧಿಸಿ ಆಜ್ಞೆ ಹೊರಡಿಸಿದ. ಜರ್ಮನಿ ಮತ್ತು ಉತ್ತರ ಇಟಲಿಯಲ್ಲಿ ಪ್ರಬಲ ವಿರೋಧ ಕಾಣಿಸಿಕೊಂಡಿತು. ಪೋಪನ ಆಜ್ಞೆಯನ್ನು ಪಾಲಿಸಲು 4ನೆಯ ಹೆನ್ರಿ ನಿರಾಕರಿಸಿ ಅವನನ್ನೇ ಪದಚ್ಯುತಗೊಳಿಸಲು ಯತ್ನಿಸಿದ. ಪೋಪ್ ಇದಕ್ಕೆ ಪ್ರತಿಯಾಗಿ ಚಕ್ರವರ್ತಿಯನ್ನು ಚರ್ಚಿನಿಂದ ಹೊರಹಾಕಿದ. ಜರ್ಮನಿಯಲ್ಲಿ ದಂಗೆ ಉಂಟಾದ್ದರಿಂದ ಹೆನ್ರಿ ಭಯಗೊಂಡು. ಪೋಪನ ಕ್ಷಮೆ ಕೇಳಲು ಅವನು ತಂಗಿದ್ದ, ಇಟಲಿಯ ಕ್ಯಾನೋಸ್ ಕೋಟೆಮನೆಗೆ ಕೊರೆಯುವ ಚಳಿಗಾಲದಲ್ಲೇ ಧಾವಿಸಿದ. ಆದರೆ ಪೋಪ್ ಅವನಿಗೆ ಸಂದರ್ಶನ ನೀಡಲು ನಿರಾಕರಿಸಿದ. ಚರ್ಚಿಗೆ ಅವನನ್ನು ಮತ್ತೆ ಸೇರಿಸಿಕೊಳ್ಳಬೇಕಾದರೆ ಅಥವಾ ಅವನನ್ನು ಚಕ್ರವರ್ತಿ ಎಂದು ಮಾನ್ಯಮಾಡಬೇಕಾದರೆ ಪಾಪವಿಮೋಚನೆಗೆ ಅವನು ಬರಿಗಾಲಿನಲ್ಲಿ ಮೂರು ದಿವಸ ಚಳಿಯಲ್ಲಿ ಕ್ಯಾನೋಸ್ ಅಂಗಳದಲ್ಲಿ ನಿಲ್ಲಬೇಕೆಂದು ಆಜ್ಞಾಪಿಸಿದ (1077) ಕ್ಷಮೆ ಪಡೆದು ವಾಪಸಾದ ಅನಂತರ ಹೆನ್ರಿ ತನ್ನ ವಚನವನ್ನು ಪಾಲಿಸಲಿಲ್ಲ. ಕಲಹ ಮತ್ತೆ ಆರಂಭವಾಯಿತು. ಈ ವಿವಾದದಲ್ಲಿ ಸಾಮಂತ ಅರಸರು ಭಾಗವಹಿಸಿದ್ದರಿಂದ ಅನೇಕ ವರ್ಷಗಳವರೆಗೆ ಆಂತರಿಕ ಕದನಗಳು ಜರುಗಿದವು. ಪೋಪ್ 7ನೆಯ ಗ್ರಿಗೋರಿಯನ್ನು ರೋಮಿನಿಂದ ಹೊರಹಾಕಲಾಯಿತು. ಇವನು 1085ರಲ್ಲಿ ಗತಿಸಿದ.

ಗ್ರಿಗೋರಿ ಬಯಸಿದ್ದ ಚರ್ಚ್ ಆಡಳಿತ ಸುಧಾರಣೆಗಳು ಅವನು ಗತಿಸಿದ ಅನೇಕ ವರ್ಷಗಳಾದ ಮೇಲೆ ಅನುಷ್ಠಾನಕ್ಕೆ ಬಂದುವು. 1122ರಲ್ಲಿ ಏರ್ಪಟ್ಟ ವರ್ಮ್ಸ್ ಒಪ್ಪಂದ ಅವನ ಕನಸನ್ನು ನನಸು ಮಾಡಿತು. ಚರ್ಚಿನ ಅಧಿಕಾರಗಳನ್ನು ಚುನಾಯಿಸುವ ವಿಷಯದಲ್ಲೇ ಆಗಲಿ, ಪದವಿ ದಾನದ ವಿಷಯದಲ್ಲೇ ಆಗಲಿ, ಚಕ್ರವರ್ತಿ ಹಸ್ತಕ್ಷೇಪ ಮಾಡಬಾರದೆಂದು ಒಪ್ಪಂದವಾಯಿತು. ಅಂತಿಮವಾಗಿ ಚಕ್ರವರ್ತಿಗಳ ಅಧಿಕಾರ ಇಳಿಮುಖವಾಗುವುದಕ್ಕೂ ಪೋಪನ ಅಧಿಕಾರ ವೃದ್ಧಿಯಾಗುವುದಕ್ಕೂ ಇದು ಕಾರಣವಾಯಿತು. ಮೂರನೆ ಇನ್ನೊಸೆಂಟನ (1198–1216) ಕಾಲದಲ್ಲಿ ಚರ್ಚಿನ ಅಧಿಕಾರ ಪರಾಕಾಷ್ಠೆ ಮುಟ್ಟಿತು.

ಹೋಹೆನ್‌ಸ್ಟಾಫನ್ ಮನೆತನದ ಚಕ್ರವರ್ತಿ 1ನೆಯ ಫ್ರೆಡ್ರಿಕನ (1152–90) ಕಾಲದಲ್ಲಿ ಚರ್ಚು ಮತ್ತು ಚಕ್ರಾಧಿಪತ್ಯಗಳ ನಡುವೆ ಪುನಃ ಕಲಹ ಆರಂಭವಾಯಿತು. ಇವನು ಕೆಂಪು ಗಡ್ಡದವನೆಂದು ಪ್ರಸಿದ್ಧಿ. ಇವನು ಸಮರ್ಥ ಚಕ್ರವರ್ತಿಯಾಗಿದ್ದು, ಜರ್ಮನಿ ಪೋಲೆಂಡ್, ಡೆನ್ಮಾರ್ಕ್ ಮತ್ತು ಹಂಗರಿಗಳ ಮೇಲೆ ತನ್ನ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಿ, ಶಾಂತಿ ಸಮೃದ್ಧಿಗೆ ಕಾರಣನಾಗಿದ್ದು ಮತ್ತು ಪೂರ್ವ ರೋಮನ್ ಸಾಮ್ರಾಜ್ಯದ ಬೈಜಾಂಟೀನ್ ಚಕ್ರವರ್ತಿಗಳೊಡನೆ ಮೈತ್ರಿಯ ಒಪ್ಪಂದ ಮಾಡಿಕೊಂಡಿದ್ದ. ಇಷ್ಟಾದರೂ ಪೋಪನೊಡನೆ ಇವನ ಸಂಬಂಧ ಹದಗೆಟ್ಟಿತು. ಪೋಪ್ 3ನೆಯ ಅಲೆಕ್ಸಾಂಡರ್ ಲೌಕಿಕ ಸಾಮ್ರಾಜ್ಯಕ್ಕಿಂತ ಆಧ್ಯಾತ್ಮಿಕ ಚರ್ಚ್, ಅಧಿಕಾರ, ಸ್ಥಾನಮಾನಗಳು ಹೆಚ್ಚೆಂದು ಪ್ರತಿಪಾದಿಸಿದ. ಫ್ರೆಡ್ರಿಕ್ ಸಾಮ್ರಾಜ್ಯದ ಹಕ್ಕನ್ನು ಪ್ರತಿಪಾದಿಸಿ ಸಮರ್ಥಿಸಿದ. ಇವರ ನಡುವೆ ಕಲಹ ಆರಂಭ ವಾಯಿತು. ಪೋಪ್ 1160ರಲ್ಲಿ ಚಕ್ರವರ್ತಿಯನ್ನು ಬಹಿಷ್ಕರಿಸಿ ಅವನನ್ನು ಚರ್ಚಿನಿಂದ ಹೊರಹಾಕಿದ. ಇದಕ್ಕೆ ಪ್ರತಿಯಾಗಿ ಫ್ರೆಡ್ರಿಕ್ ಪೋಪನ ಆಜ್ಞೆಯನ್ನು ಧಿಕ್ಕರಿಸಿ ತನ್ನ ಅನುಯಾಯಿಗಳ ಬೆಂಬಲದಿಂದ ಇಟಲಿಯ ಮೇಲೆ ದಂಡೆತ್ತಿ ಹೋಗಿ ಅವನನ್ನು ಪದಚ್ಯುತಗೊಳಿಸಿ ಅವನ ಸ್ಥಾನದಲ್ಲಿ ಮತ್ತೊಬ್ಬ ಪೋಪನನ್ನು ಆರಿಸಲು ನಿರ್ಧರಿಸಿದ. ಆದರೆ ಚಕ್ರವರ್ತಿಯ ವಿರುದ್ಧ ಅಸ್ತಿತ್ವದಲ್ಲಿದ್ದ ಲಂಬಾರ್ಡ್ ಲೀಗನ್ನು ಪೋಪ್ ಬಳಸಿಕೊಂಡು ಚಕ್ರವರ್ತಿಯ ಮೇಲೆ ಯುದ್ಧ ಮಾಡಲು ಪ್ರೇರೇಪಿಸಿದ. 1176ರಲ್ಲಿ ನಡೆದ ಯುದ್ಧದಲ್ಲಿ ಚಕ್ರವರ್ತಿ ಸಂಪೂರ್ಣವಾಗಿ ಸೋತು ಒಪ್ಪಂದ ಮಾಡಿಕೊಂಡ; 3ನೆಯ ಅಲೆಕ್ಸಾಂಡರ್ ನ್ಯಾಯಬದ್ಧ ಪೋಪನೆಂದು ಒಪ್ಪಿಕೊಂಡ. ಹೀಗೆ ಚರ್ಚಿನ ಅಧಿಕಾರವನ್ನು ಮೊಟಕುಗೊಳಿಸುವು ದರಲ್ಲಾಗಲಿ ಸಾಮ್ರಾಜ್ಯದೊಳಗಿನ ವಿಚ್ಛಿದ್ರಕಾರಕ ಶಕ್ತಿಗಳನ್ನು ಶಾಶ್ವತವಾಗಿ ಹತ್ತಿಕ್ಕುವುದರಲ್ಲಾಗಲಿ ಫ್ರೆಡ್ರಿಕ್ ಸಫಲನಾಗಲಿಲ್ಲ.

ಒಂದನೆಯ ಫ್ರೆಡ್ರಿಕನ ಮೊಮ್ಮಗ 2ನೆಯ ಫ್ರೆಡ್ರಿಕನ ಕಾಲದಲ್ಲಿ ಮೂರನೆಯ ಬಾರಿಗೆ ಭಾರಿ ಕಲಹವುಂಟಾಯಿತು. ಇವನು ಸುಸಂಸ್ಕೃತ ಚಕ್ರವರ್ತಿಯಾಗಿದ್ದು ಅನೇಕ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದ. ಇವನು ವಿದ್ವಾಂಸರು ಮತ್ತು ವಿಜ್ಞಾನಿಗಳಿಗೆ ಪೋಷಕನಾಗಿದ್ದನಲ್ಲದೆ ಮುಸ್ಲಿಮರ ಮತ್ತು ಯೆಹೂದಿಗಳ ರಕ್ಷಕನಾಗಿದ್ದ. ಇವನು ರಾಜಕೀಯ ಕುಶಲಮತಿಯಾಗಿದ್ದ; ಸಾಂಪ್ರದಾಯಿಕ ಮತೀಯ ವಿಷಯದಲ್ಲಿ ನಂಬಿಕೆ ಹೊಂದಿರಲಿಲ್ಲ. ಧಾರ್ಮಿಕ ನಡವಳಿಕೆಯ ವಿಷಯದಲ್ಲಿ ಇವನು ಸಂಶಯಗ್ರಸ್ತನಾಗಿದ್ದ. ಸ್ವತಂತ್ರವಾಗಿದ್ದ ಎರಡು ಸಿಸಿಲಿ ರಾಜ್ಯಗಳನ್ನು ಫ್ರೆಡ್ರಿಕ್ ಇಟಲಿಯೊಳಗೆ ವಿಲೀನಗೊಳಿಸಿ ಒಗ್ಗೂಡಿಸಿದ. ಲೌಕಿಕ ರಾಜ್ಯವನ್ನು ನಿರ್ಮಿಸಲು ಯತ್ನಿಸಿದಾಗ ಪೋಪನ ಸಂಶಯ ಖಚಿತವಾಯಿತು. ಪೋಪ್ ಆ ನಗರರಾಜ್ಯಗಳ ಸ್ವಾತಂತ್ರ್ಯಾಪಹರಣವನ್ನು ಸಹಿಸಲಿಲ್ಲ. ಅವನು ಅವುಗಳ ಪರ ವಹಿಸಿ, ಚಕ್ರವರ್ತಿಯನ್ನು ಕ್ರೈಸ್ತ ಚರ್ಚಿನಿಂದ ಬಹಿಷ್ಕರಿಸಿದ. ಇವರಿಬ್ಬರ ನಡುವೆ ಅನೇಕ ವರ್ಷಗಳ ಕಾಲ ಸೈನಿಕ ಹಾಗೂ ವಾಕ್ ಯುದ್ಧಗಳು ಮುಂದುವರಿದುವು. ಇಟಲಿ ಜರ್ಮನಿ ಮತ್ತು ಎರಡು ಬಣಗಳೇರ್ಪಟ್ಟವು. ಕೊನೆಯಲ್ಲಿ ಪೋಪನ ಕಡೆಯವರು ಮೇಲುಗೈ ಪಡೆದರು. ಸಾಮ್ರಾಜ್ಯದ ಸೈನ್ಯವನ್ನು ಉತ್ತರ ಇಟಲಿಯಿಂದ ಹೊಡೆದೋಡಿಸಲಾಯಿತು. 1245ರಲ್ಲಿ ಪೋಪ್ ಚರ್ಚಿನ ಮಹಾಸಭೆಯ ಅಧಿವೇಶನವನ್ನು ಕರೆದು 2ನೆಯ ಫ್ರೆಡ್ರಿಕನನ್ನು ಪದಚ್ಯುತಗೊಳಿಸಿದ. ಈ ಘಟನೆ ನಡೆದ ಐದು ವರ್ಷಗಳ ಅನಂತರ ಫ್ರೆಡ್ರಿಕ್ ಗತಿಸಿದ. ಇಟಲಿ ಸಂಪೂರ್ಣವಾಗಿ ಸಾಮ್ರಾಜ್ಯದಿಂದ ಬೇರ್ಪಟ್ಟಿತು.

ಎರಡನೆಯ ಫ್ರೆಡ್ರಿಕನ ಮರಣದೊಂದಿಗೆ ಹೋಹೆನ್‌ಸ್ಟಾಫನ್ ಚಕ್ರವರ್ತಿಗಳು ಪಶ್ಚಿಮ ಯುರೋಪಿನಲ್ಲಿ ಪ್ರಬಲ ಸಾಮ್ರಾಜ್ಯ ನಿರ್ಮಿಸುವ ಕೊನೆಯ ಅವಕಾಶ ಅಂತ್ಯಗೊಂಡಿತು. 1250–73ರ ಕಾಲವನ್ನು ಕ್ರಮಪ್ರಾಪ್ತ ಸಾಮ್ರಾಟನಿಲ್ಲದ ಕಾಲ ಎಂದು ಕರೆಯಲಾಗಿದೆ. ಈ ಅವಧಿಯಲ್ಲಿ ಯುರೋಪಿನ ವಿವಿಧ ಅರಸರು ಪದವಿಗಾಗಿ ಸ್ಪರ್ಧೆ ನಡೆಸಿದರು. ಪೋಪ್ ತಾನೇ ಚಕ್ರವರ್ತಿಯನ್ನು ನೇಮಿಸುವುದಾಗಿ ಬೆದರಿಕೆ ಹಾಕಿದಾಗ ಜರ್ಮನಿಯ ನಾಯಕರು 1273ರಲ್ಲಿ ಹ್ಯಾಬ್ಸ್‌ಬರ್ಗ್ ಮನೆತನದ ರುಡಾಲ್ಫನನ್ನು ಚಕ್ರವರ್ತಿಯಾಗಿ ಚುನಾಯಿಸಿದರು. ಇವನು ಆಸ್ಟ್ರಿಯ ಪ್ರಾಂತ್ಯವನ್ನು ತನ್ನ ಮನೆತನದ ಸ್ವಾಧೀನಕ್ಕೆ ಸೇರ್ಪಡೆ ಮಾಡಿಕೊಂಡದ್ದು ಒಂದು ಪ್ರಮುಖ ಘಟನೆ. 1278ರಿಂದ 1318ರ ವರೆಗೂ ಆಸ್ಟ್ರಿಯ ಹ್ಯಾಬ್ಸ್‌ಬರ್ಗ್ ಮನೆತನದ ಸ್ವಾಧೀನದಲ್ಲೇ ಇತ್ತು. ರುಡಾಲ್ಫನ ಮರಣದ ತರುವಾಯ (1291) ಸುಮಾರು ಒಂದೂವರೆ ಶತಮಾನಗಳ ಕಾಲ ಬೇರೆ ಬೇರೆ ಅರಸುಮನೆತನದವರನ್ನು ಜರ್ಮನ್ ದೊರೆಗಳಾಗಿ ಚುನಾಯಿಸಿ, ವಿಧಿವತ್ತಾಗಿ ಪಟ್ಟಾಭಿಷೇಕ ನೆರವೇರಿಸಿ ಪವಿತ್ರ ರೋಮನ್ ಚಕ್ರವರ್ತಿಗಳೆಂದು ನಿರ್ದೇಶಿಸಲಾಗುತ್ತಿತ್ತು. ಇವರಲ್ಲಿ ಲಕ್ಸೆಂಬರ್ಗಿನ 7ನೆಯ ಹೆನ್ರಿ (1308–13), ಬವೇರಿಯದ 4ನೆಯ ಲೂಯಿ (1314–47) ಲಕ್ಸೆಂಬರ್ಗಿನ 4ನೆಯ ಚಾರ್ಲ್ಸ್ (1347–78) ಪ್ರಮುಖರು.

1437ರ ತರವಾಯ ಆಸ್ಟ್ರಿಯದ ಹ್ಯಾಬ್ಸ್‌ಬರ್ಗ್ ಮನೆತನದವರು ಅವಿಚ್ಛಿನ್ನವಾಗಿ ಪವಿತ್ರ ರೋಮನ್ ಚಕ್ರವರ್ತಿಗಳಾಗಿ ಚುನಾಯಿತರಾಗುತ್ತಿದ್ದರು. ಈ ಮನೆತನದವರು ಪೋಪನ ಮೇಲಾಗಲಿ ಇಟಲಿಯ ಪ್ರಾಂತ್ಯಗಳ ಮೇಲಾಗಲಿ ಅಧಿಕಾರ ಚಲಾಯಿಸುತ್ತಿರಲಿಲ್ಲ. ಈ ಮನೆತನದ 2ನೆಯ ಚಾರ್ಲ್ಸ್‌ನ ಕಾಲದಲ್ಲಿ (1519–56) ಸಾಮ್ರಾಜ್ಯ ನಿರ್ವೀರ್ಯವಾಗಿತ್ತು.

ಪೋಪರು ಕೆಲವು ಸಾಮ್ರಾಟರೊಡನೆ ವ್ಯಾಜ್ಯ ಮಾಡಿದರೂ ಚರ್ಚಿಗೆ ಬೆಂಬಲವಾದ ಲೌಕಿಕ ರಾಜ್ಯವೊಂದರ ಅಗತ್ಯವನ್ನು ಮನಗಂಡಿದ್ದರು. ದೊರೆಗಳು ಮತ್ತು ನಗರ ರಾಜ್ಯಗಳವರು ಚಕ್ರವರ್ತಿಯ ಅಧಿಕಾರವನ್ನು ಉಲ್ಲಂಘಿಸಿದರೂ ಚಕ್ರವರ್ತಿಯ ಪದವಿಗೆ ಗೌರವ ತೋರಿಸುತ್ತಿದ್ದರು. ಈ ಸಾಮ್ರಾಜ್ಯದ ಸುದೀರ್ಘ ಜೀವನಕ್ಕೆ ಪರಂಪರೆ ಮತ್ತು ಸಂಪ್ರದಾಯಗಳೇ ಮೂಲಶಕ್ತಿಯಾಗಿದ್ದುವೆಂದು ಹೇಳಬಹುದು. (ಎಂ.ಜಿ.)

**ಪಹಾಡಪುರ:** ಪಶ್ಚಿಮಬಂಗಾಲ ರಾಜ್ಯದಲ್ಲಿ ಕೋಲ್ಕತ–ಡಾರ್ಜಿಲಿಂಗ್ ರೈಲು ಮಾರ್ಗದ ಮೇಲಿರುವ ಜಮಾಲ್‍ಗಂಜ್ ನಿಲ್ದಾಣದ ಪಶ್ಚಿಮಕ್ಕೆ ಸು. 5 ಕಿಮೀ ದೂರದಲ್ಲಿರುವ ಒಂದು ಗ್ರಾಮ. ಬ್ರಿಟಿಷ್ ಈಸ್ಟ್ ಇಂಡಿಯ ಕಂಪೆನಿಯ ಆದೇಶದಂತೆ ಪೂರ್ವಭಾರತವನ್ನು ಪರಿವೀಕ್ಷಿಸಿದ ಹ್ಯಾಮಿಲ್ಟನ್ ಬುಕನನ್ ಮೊದಲ ಬಾರಿಗೆ ಈ ಗ್ರಾಮದ ದಿಬ್ಬವೊಂದನ್ನು ಗಮನಿಸಿ ಅದನ್ನು ತನ್ನ ವರದಿಯಲ್ಲಿ ಸೂಚಿಸಿದ (1807–12). ಅನಂತರ ವೆಸ್ಟ್‍ಮ್ಯಾಕತ್ ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಿದ. 1879ರಲ್ಲಿ ಅಲೆಗ್ಸಾಂಡರ್ ಕನ್ನಿಂಗ್‍ಹ್ಯಾಮ್ ಈ ದಿಬ್ಬದ ಬಗ್ಗೆ ತನ್ನ ವರದಿಯಲ್ಲಿ ಸೂಚಿಸಿದ. 1919ರಲ್ಲಿ ಇಲ್ಲಿಯ ದಿಬ್ಬ ಹಾಗೂ ಅದರ ಸುತ್ತಲ ಪ್ರದೇಶವನ್ನು ಪುರಾತತ್ತ್ವ ಇಲಾಖೆ ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಿತು. ಅನಂತರ ಇಲ್ಲಿ ಉತ್ಖನನಗಳು ನಡೆದುವು (1923–34).

ಪೂರ್ವಭಾರತದಲ್ಲಿ ಆಳಿದ ಪಾಲವಂಶದ ದೊರೆಗಳ ಕಾಲದಲ್ಲಿ ಬೌದ್ಧಧರ್ಮಕ್ಕೆ ವಿಶೇಷವಾದ ಉತ್ತೇಜನ ದೊರಕಿದ್ದಾಗ ಪಹಡಾಪುರ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ಇಲ್ಲಿಯ ದಾಖಲೆಗಳು ಹಾಗೂ ಪರಂಪರೆಯಲ್ಲಿ ರಾಜ ಧರ್ಮಪಾಲನ ಸೋಮಪುರದ ಮಹಾವಿಹಾರದ ಉಲ್ಲೇಖ ಇರುವುದರಿಂದ ಸೋಮಪುರ ಎಂಬುದು ಪಹಡಾಪುರದ ಹಿಂದಿನ ಹೆಸರೆಂದು ತಿಳಿದುಬರುತ್ತದೆ. ಇಲ್ಲಿಯ ಮಹಾವಿಹಾರದ ನೆನಪು ಮಹಾಯಾನ ಬೌದ್ಧ ಪರಂಪರೆಯಲ್ಲಿ ಸು.17ನೆಯ ಶತಮಾನದವರೆಗೂ ಉಳಿದು ಬಂದಿತ್ತು. ಸೋಮಪುರದ ಬೌದ್ಧ ಭಿಕ್ಷುಗಳು 10–11ನೆಯ ಶತಮಾನಗಳಲ್ಲಿ ನಾಲಂದ, ಬೋಧ್‍ಗಯಾ ಮುಂತಾದ ಬೌದ್ಧ ಕೇಂದ್ರಗಳಲ್ಲಿ ದಾನದತ್ತಿಗಳನ್ನು ನೀಡಿರುವುದು ಕಂಡುಬರುತ್ತದೆ. ಆದ್ದರಿಂದ ಈ ಕಾಲದಲ್ಲಿ ಈ ಗ್ರಾಮ ಸುಸ್ಥಿತಿಯಲ್ಲಿತ್ತೆಂಬ ವಿಷಯ ವಿದಿತವಾಗುತ್ತದೆ. ಇಲ್ಲಿ ದೊರೆತ ಕೆಲವು ಶಿಲ್ಪಗಳು ಮತ್ತು ಶಾಸನಾಧಾರಗಳು ಪಾಲರ ಕಾಲಕ್ಕಿಂತ ಹಿಂದೆಯೇ ಈ ಗ್ರಾಮ ಅಸ್ತಿತ್ವದಲ್ಲಿತ್ತೆಂಬುದನ್ನು ಸೂಚಿಸುತ್ತವೆ.

ಇಲ್ಲಿಯ ಮುಖ್ಯ ದೇವಾಲಯದ ವಿನ್ಯಾಸ ಭಾರತೀಯ ವಾಸ್ತುಕ್ಷೇತ್ರದಲ್ಲಿ ವಿಶಿಷ್ಟವಾದದ್ದು. ಬೃಹತ್‍ಭಾರತಕ್ಕೆ ಸೇರಿದ್ದ ಬರ್ಮ, ಜಾವ, ಕಾಂಬೋಡಿಯಗಳ ದೇವಾಲಯಗಳ ಮೂಲವೆನ್ನಬಹುದಾದ ಅಪೂರ್ವಶೈಲಿಯ ರಚನೆ ಇಲ್ಲಿಯದು. ಇದರಲ್ಲಿ ಶಿಲುಬೆಯಂತೆ ಮಧ್ಯದಲ್ಲಿರುವ ರಚನೆಯ ಸುತ್ತ ಮೂರು ಅಂತಸ್ತುಗಳ ಕಟ್ಟಡವಿದೆ. ನಾಲ್ಕು ಬದಿಗಳಲ್ಲಿ ಆಯತಾಕಾರದ ಚಾಚುಗಳಿವೆ. ಅವು ಅಲಂಕೃತ ಇಟ್ಟಿಗೆಗಳು ಮತ್ತು ಸಾವಿರಾರು ಮಣ್ಣಿನ ಫಲಕಗಳ ಪಟ್ಟಿಕೆಗಳಿಂದ ಕೂಡಿವೆ. ಪಟ್ಟಿಕೆಗಳ ಮೇಲೆ ಮಾನವರ ಹಾಗೂ ಪ್ರಾಣಿಗಳ ವಿವಿಧ ಭಂಗಿಗಳನ್ನು, ಪುರಾಣಕ್ಕೆ ಸಂಬಂಧಿಸಿದ ದೃಶ್ಯಗಳನ್ನು, ಜನಪದ ಬದುಕಿನ ಕ್ಷಣಗಳನ್ನು ಚಿತ್ರಿಸಲಾಗಿದೆ. ಅಧಿಷ್ಠಾನದ ಗೂಡುಗಳಲ್ಲಿ ಕುತೂಹಲಕರವಾದ, ಕಲಾತ್ಮಕವಾದ ಕಲ್ಲಿನ ಅನೇಕ ಉಬ್ಬುಶಿಲ್ಪಗಳಿವೆ. ಇಲ್ಲಿ ಅಥವಾ ಇದರ ಪರಿಸರದಲ್ಲಿ ಜೈನರ ಚತುರ್ಮುಖ ಬಸದಿ ಇದ್ದಿರಬೇಕೆಂಬ ಊಹೆ ಇದೆ. ಇಲ್ಲಿ ದೊರೆತ 5ನೆಯ ಶತಮಾನದ ತಾಮ್ರಶಾಸನವೊಂದರಲ್ಲಿ ಜಿನಾರ್ಚನೆಗೆ ಭೂದಾನ ನೀಡಿದುದರ ಉಲ್ಲೇಖವಿದೆ. ದೇವಾಲಯದ ಸುತ್ತ ವಿಹಾರವನ್ನು ಕಟ್ಟಿದೆ. ಎತ್ತರವಾದ ಜಗತಿಯ ಮೇಲೆ ನಿಂತಿರುವ ದೇವಾಲಯದ ಎರಡೂ ಪಾರ್ಶ್ವಗಳಲ್ಲಿ ಮಂಟಪಗಳುಂಟು. ಸುತ್ತ ಪ್ರದಕ್ಷಿಣ ಪಥವಿದೆ. ವಿಹಾರವನ್ನು ಪ್ರವೇಶಿಸಲು ಉತ್ತರದಲ್ಲಿ ಮಹಾದ್ವಾರವುಂಟು. ಉಳಿದ ಮೂರು ಕಡೆ ಮಧ್ಯದಲ್ಲಿ ಆರಾಧನೆ ಮಂದಿರಗಳಿವೆ. ಒಟ್ಟು ಸು. 200 ವಾಸದ ಕೋಣೆಗಳು ಇಲ್ಲಿವೆ. ಮಧ್ಯಜಾವದ ಪ್ರಾಂಬನಂನಲ್ಲಿರುವ ಎರಡು ದೇವಾಲಯಗಳ ವಿನ್ಯಾಸವನ್ನು ಪಹಡಾಪುರ ದೇವಾಲಯ ಬಹುಮಟ್ಟಿಗೆ ಹೋಲುತ್ತದೆ. ಗೋಡೆಗಳ ಮೇಲಿರುವ ಮಣ್ಣಿನ ಫಲಕಗಳ ಪ್ರಭಾವ ಬರ್ಮದ ಪಗೋಡಗಳ ಮೇಲಿನ ಫಲಕಗಳಲ್ಲಿ ಕಾಣಿಸಿಕೊಂಡಿದೆ. 10–11ನೆಯ ಶತಮಾನದಲ್ಲಿ ಇಲ್ಲಿಯ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲಾಯಿತು. ಮುಸ್ಲಿಂ ಧಾಳಿಯ ಕಾಲದವರೆಗೂ ಇಲ್ಲಿಯ ಸ್ಮಾರಕಗಳು ಸುಸ್ಥಿತಿಯಲ್ಲಿದ್ದುವು. (ಎಚ್.ಎಂ.ಎನ್.ಆರ್.)

**ಪಳಯನೂರು:** ಕೇರಳ ರಾಜ್ಯದ ತ್ರಿಶೂರ್ ಜಿಲ್ಲೆಯ ತಳ್‍ಪಳ್ಳಿ ತಾಲ್ಲೂಕಿನಲ್ಲಿರುವ ಬೃಹತ್‍ಶಿಲಾಯುಗ ಸಮಾಧಿ ನೆಲೆ. ಇಲ್ಲಿ ಆದಿ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ವೃತ್ತಸಹಿತ ನೆಲಕೋಣೆ ಪ್ರಕಾರಕ್ಕೆ ಸೇರುವ 27 ಗೋರಿಗಳಿವೆ. ಕಲ್ಲುವೃತ್ತಗಳ ವ್ಯಾಸ 4.5ಮೀ – 8 ಮೀ ಎಲ್ಲ ಗೋರಿಗಳು ಗ್ರಾನೈಟ್ ಕಲ್ಲಿನಿಂದ ರಚಿತವಾದುವು. ಬರೋಡ ಎಂ.ಎಸ್. ವಿಶ್ವವಿದ್ಯಾಲಯದ ಆರ್.ಎನ್.ಮೆಹತರವರ ಮಾರ್ಗದರ್ಶನದಲ್ಲಿ ಒಂದು ನೆಲಕೋಣೆವೃತ್ತವನ್ನು ಉತ್ಖನನ ಮಾಡಲಾಯಿತು (1974). ಗೋರಿಯ ಸುತ್ತಲಿರುವ ಒಡ್ಡೊಡ್ಡಾದ ಗ್ರಾನೈಟ್ ಕಲ್ಲುಗುಂಡುಗಳಿಂದ ರಚಿತವಾದ ವೃತ್ತದ ವ್ಯಾಸ 5 ಮೀ ಕಲ್ಮನೆಯನ್ನು ಮುಚ್ಚಿರುವ ಚಪ್ಪಡಿಕಲ್ಲಿನ ಅಳತೆ 2.25×1.5×0.35 ಮೀ. ಕಲ್ಮನೆಯಲ್ಲಿ ಬಳಸಲಾದ ಚಪ್ಪಡಿಕಲ್ಲುಗಳ ಅಳತೆ 1.4–1.74×1.2–2.2×0.2 ಮೀ. ಚಪ್ಪಡಿಕಲ್ಲುಗಳನ್ನು ಒಂದಕ್ಕೊಂದು ಆಸರೆಯಾಗಿರುವಂತೆ ಸ್ವಸ್ತಿಕ ವಿನ್ಯಾಸದಲ್ಲಿ ನಿಲ್ಲಿಸಿ ಕೋಣೆಯನ್ನು ಕಟ್ಟಲಾಗಿದೆ. ಒಂದು ಚಪ್ಪಡಿಕಲ್ಲಿನ ಮಧ್ಯದಲ್ಲಿ ವೃತ್ತಾಕಾರದ ದೊಡ್ಡ ಕಂಡಿಯಿದೆ. ಮಧ್ಯದಲ್ಲಿ ಚಪ್ಪಡಿಕಲ್ಲನ್ನು ಅಡ್ಡಲಾಗಿ ನಿಲ್ಲಿಸುವುದರ ಮೂಲಕ ಕೋಣೆಯನ್ನು ಎರಡು ಕೋಣೆಗಳಾಗಿ ವಿಭಜಿಸಲಾಗಿದೆ. ದಕ್ಷಿಣ ಭಾಗದ ಕೋಣೆಯನ್ನು ಮತ್ತೆ ಮೂರು ಉಪ–ಕೋಣೆಗಳಾಗಿ ವಿಂಗಡಿಸಲಾಗಿದೆ. ಎರಡು ಉಪ–ಕೋಣೆಗಳಲ್ಲಿ ಮಾತ್ರ ಮಣ್ಪಾತ್ರೆ, ಕಬ್ಬಿಣದ ವಸ್ತುಗಳು, ಮಂದಗೆಂಪಿನ ಕಲ್ಲಿನ ಮಣಿಗಳು ಕಂಡುಬಂದಿವೆ. ಉತ್ತರ ಭಾಗದ ಕೋಣೆಯಲ್ಲಿ ಕಬ್ಬಿಣದ ಕೊಕ್ಕೆಯೊಂದು ಸಿಕ್ಕಿದೆ.

ಕೋಣೆಯನ್ನು ಕಟ್ಟುವುದಕ್ಕಾಗಿ ಅಗೆದ ಗುಂಡಿಯ ತಳಭಾಗ ಕಿರಿದಾಗಿದ್ದು ಮೇಲ್ಭಾಗ ಅಗಲವಾಗಿತ್ತು. ಈ ಗುಂಡಿ 1.5 ಮೀ ಆಳವಾಗಿತ್ತು. ಕೋಣೆಯನ್ನು ತೆಳುಗೆಂಪು ಬಣ್ಣದ ದೊರಕಾದ ಜಂಬುಮಣ್ಣಿನಿಂದ ತುಂಬಲಾಗಿತ್ತು. ಈ ಗೋರಿಯಲ್ಲಿ ಎರಡು ಮಡಕೆ, ಒಂದು ಬಟ್ಟಲು, ಒಂದು ತಟ್ಟೆ, ಎರಡು ಮುಚ್ಚಳ ಮತ್ತು ಎರಡು ಸಿಂಬಿಗಳಿದ್ದವು. ಇವಲ್ಲದೆ ಒಂದು ದೊಡ್ಡ ಗುಡಾಣವೂ ಇತ್ತು. ಇದರ ಮೈ ಗೋಲಾಕಾರವಾಗಿದ್ದು ಬಾಯಿಯ ಅಂಚಿನಲ್ಲಿ ದುಂಡಗಿನ ದಪ್ಪ ಬಳೆಯಿದೆ. ಪೀಪಾಯಿಯಾಕಾರದಲ್ಲಿರುವ ಎಚ್ಚಿದ ಒಂಬತ್ತು ಮಂದಕೆಂಪು ಕಲ್ಲಿನ ಮಣಿಗಳು ಇತರ ಸಾಂಸ್ಕೃತಿಕ ಅವಶೇಷಗಳು.

ಕೋಣೆಯನ್ನು ಮುಚ್ಚಿದ ಮಣ್ಣಿನಲ್ಲಿಯೂ ಮಣ್ಪಾತ್ರೆಗಳ ಅನೇಕ ಚೂರುಗಳಿವೆ. ಇವು ಆಕಾರ, ಲಕ್ಷಣಗಳಲ್ಲಿ ಗೋರಿಯೊಳಗೆ ಸಿಕ್ಕ ಪಾತ್ರೆಗಳನ್ನು ಹೋಲುತ್ತವೆ.

ಪಳಯನೂರು ಮತ್ತು ಮಾಚಡ್ ಗೋರಿಗಳಲ್ಲಿ ಸಿಕ್ಕಿರುವ ಮಣ್ಪಾತ್ರೆಗಳ ಸ್ವರೂಪ ಮತ್ತು ಆಕಾರಗಳು ಒಂದೇ ರೀತಿಯವು. ಕೇರಳದ ಬೃಹತ್ ಶಿಲಾಗೋರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಮೂರು ಅಥವಾ ನಾಲ್ಕು ಕಾಲಿನ ಮಣ್ಣಿನ ಮಡಕೆಗಳು ಪಳಯನೂರಿನ ಗೋರಿಯಲ್ಲಿ ಕಾಣುವುದಿಲ್ಲ. ಇಲ್ಲಿಯ ಗೋರಿಗಳ ರಚನೆಯಲ್ಲಿ ಕೇವಲ ಗ್ರಾನೈಟ್ ಕಲ್ಲನ್ನು ಬಳಸಿರುವುದು ಗಮನಾರ್ಹ. (ಟಿ.ಎಸ್.)

**ಪಾಂಡುರಾಜರ್ ಧೀಬಿ:** ಪಶ್ಚಿಮ ಬಂಗಾಲ ರಾಜ್ಯದ ಬುರ್ದವಾನ್ ಜಿಲ್ಲೆಯಲ್ಲಿ ಅಜಯ್ ನದಿಬಯಲಿನಲ್ಲಿರುವ ಪುರಾತತ್ತ್ವ ನೆಲೆ. ದಿಬ್ಬಗಳ ರೂಪದಲ್ಲಿರುವ ಈ ನೆಲೆಯನ್ನು ಪೌರಾಣಿಕ ಪಾಂಡುರಾಜನ ನೆನಪಿನಲ್ಲಿ ಪಾಂಡುರಾಜರ್ ಧೀಬಿ ಎಂದು ಸ್ಥಳೀಯರು ಕರೆಯುತ್ತಾರೆ. ಪಶ್ಚಿಮ ಬಂಗಾಲದ ರಾಜ್ಯ ಪುರಾತತ್ತ್ವ ಇಲಾಖೆಯ ಪಿ.ಸಿ. ದಾಸ್‍ಗುಪ್ತರವರು ಇಲ್ಲಿ 1962–65ರಲ್ಲಿ ವಿಸ್ತೃತ ಉತ್ಖನನ ನಡೆಸಿದರು. ಇಲ್ಲಿ ತಾಮ್ರ–ಶಿಲಾಯುಗ (ಹಂತ 1 ಮತ್ತು 2), ಕಬ್ಬಿಣ ಯುಗ (ಹಂತ 3) ಮತ್ತು ಆದಿಚಾರಿತ್ರಿಕ ಹಾಗೂ ಮಧ್ಯಯುಗೀನ ಹಂತಗಳನ್ನು (ಹಂತ 4) ಗುರುತಿಸಲಾಗಿದೆ.

ತಾಮ್ರ–ಶಿಲಾಯುಗದ ಮೊದಲ ಹಂತದಲ್ಲಿ ಜನ ಜಂಬುಮಣ್ಣಿನ ಭೂಮಿಯ ಮೇಲೆ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಬೂದುಬಣ್ಣದ ಪಾತ್ರೆಗಳನ್ನು ಕೈಯಿಂದಲೇ ತಟ್ಟಿ ಇವರು ಮಾಡುತ್ತಿದ್ದರು. ಇಂತಹ ಪಾತ್ರೆಗಳ ಹೊರಮೇಲ್ಮೈ ಮೇಲೆ ಬತ್ತದ ಹೊಟ್ಟಿನ ಗುರುತುಗಳಿವೆ. ತಿಗುರಿಯ ಮೇಲೆ ಇವರು ಮಾಡುತ್ತಿದ್ದ ಪಾತ್ರೆಗಳೆಂದರೆ ಮಾಸಲು ಕೆಂಪುಬಣ್ಣದ ತೆಳು ಪಾತ್ರೆ ಮತ್ತು ಕಪ್ಪು–ಕೆಂಪು ದ್ವಿವರ್ಣ ಬಟ್ಟಲು ಮತ್ತು ದಾನಿಗಳು. ಮಾಸಲು ಕೆಂಪುಬಣ್ಣದ ಪಾತ್ರೆಗಳ ಮೇಲೆ ಹುರಿಹಗ್ಗವನ್ನು ಒತ್ತಿಮಾಡಿದ ಆಲಂಕಾರಿಕ ವಿನ್ಯಾಸಗಳಿವೆ. ಮೂಳೆಯ 1 ಮೊನೆ ಹಾಗೂ ಕೆಲವು ಸೂಕ್ಷ್ಮಶಿಲೋಪಕರಣಗಳು ಈ ಹಂತದಲ್ಲಿ ದೊರಕಿವೆ. ವಸತಿಯ ಪರಿಧಿಯೊಳಗೇ ಶವವನ್ನು ಹೂಳುವ ಪದ್ಧತಿ ಇಲ್ಲಿತ್ತು. ಶವವನ್ನು ಪೂರ್ವ–ಪಶ್ಚಿಮಾಭಿಮುಖವಾಗಿ ನೇರಭಂಗಿಯಲ್ಲಿ ಹೂಳಲಾಗುತ್ತಿತ್ತು. ಮಾಸಲು ಕೆಂಪುಬಣ್ಣದ ಮಡಕೆಯೊಂದರೊಳಗೆ ಅಸ್ಥಿ ಅವಶೇಷಗಳಿದ್ದುದು ಇತರ ಸಮಾಧಿ ಪದ್ಧತಿಗಳೂ ಪ್ರಚಲಿತವಿದ್ದವೆಂಬುದನ್ನು ತಿಳಿಸುತ್ತದೆ. ಈ ಹಂತದ ವಸತಿ ಸ್ತರಗಳ ಮೇಲೆ ಮರಳುಮಿಶ್ರಿತ ಹೂಳುಮಣ್ಣಿನ ದಪ್ಪ ಪದರವಿದೆ. ಅಜಯ್ ನದಿಯಲ್ಲಿ ನೆರೆ ಬಂದ ಕಾರಣ ಜನ ವಸತಿಯನ್ನು ತೊರೆದರು ಎಂಬುದು ಇದರಿಂದ ತಿಳಿಯುತ್ತದೆ. ನೆರೆಯ ನೀರು ಇಳಿದ ಅನಂತರ ಜನ ಮತ್ತೆ ಇಲ್ಲಿಗೆ ಬಂದು ನೆಲೆಸಿದರು (ತಾಮ್ರ–ಶಿಲಾಯುಗದ 2ನೆಯ ಹಂತ). ಇವರು ಆಯತಾಕಾರ/ಚೌಕಾಕಾರ/ವರ್ತುಲಾಕಾರದ ಮಣ್ಣು ಮೆತ್ತಿದ ಬೊಂಬಿನ ಮನೆಗಳನ್ನು ಕಟ್ಟಿಕೊಂಡರು. ಇವರ ಮನೆಯ ನೆಲಗಟ್ಟುಗಳು 2 ಪ್ರಕಾರದವು. ಸುಟ್ಟ ಮಣ್ಣಿನುಂಡೆಗಳನ್ನು ಗರಸು ಮಣ್ಣಿನೊಂದಿಗೆ ಬೆರೆಸಿ ಮಾಡಿದಂತಹವು ಅಥವಾ ಜೇಡಿಮಣ್ಣಿನಲ್ಲಿ ಬೆರಣಿಯನ್ನು ಮಿಶ್ರಮಾಡಿ ಹಾಸಿ ಇದರ ಮೇಲೆ ಸುಣ್ಣದ ಲೇಪವನ್ನು ಸವರಿದಂತಹವು. ಒಲೆಯ ಅವಶೇಷಗಳು ಕೆಲವು ನೆಲಗಟ್ಟುಗಳ ಮೇಲೆ ಕಂಡುಬಂದವು. ಈ ಹಂತದಲ್ಲಿ ಸಿಕ್ಕ ಸುಟ್ಟು ಕರಕಲಾದ ಅಕ್ಕಿಯ ಕಾಳುಗಳು ಮತ್ತು ಮಣ್ಪಾತ್ರೆಗಳ ಮೇಲಿರುವ ಬತ್ತದ ಹೊಟ್ಟಿನ ಗುರುತಿನಿಂದ ಬತ್ತದ ಕೃಷಿಯಾಗುತ್ತಿತ್ತೆಂದು ತಿಳಿಯುತ್ತದೆ. ಇಲ್ಲಿ ಸಿಕ್ಕ ನೀಲಗಾಯ್ ಮೂಳೆಗಳು ಬೇಟೆಯ ಗುರುತಾದರೆ ಹಂದಿ–ಎತ್ತುಗಳ ಮೂಳೆಗಳು ಪಶುಸಂಗೋಪನೆಯ ಸಾಕ್ಷ್ಯಾಧಾರಗಳೆನ್ನಬಹುದು. ಜಿಂಕೆಯ ಕೊಂಬಿನಿಂದ ತಯಾರಿಸಿದ ಬಾಣದ ಮೊನೆ ಮತ್ತು ದಬ್ಬಣಗಳು ಈ ಹಂತದಲ್ಲಿ ದೊರೆತಿವೆ. ಈ ಹಂತದಲ್ಲಿ ಸರ್ವತೋಮುಖ ಅಭಿವೃದ್ಧಿಗಳಾದವು. ತಿಗುರಿಯ ಮೇಲೆ ತಯಾರಿಸಿದ ಅನೇಕ ಬಗೆಯ ಮಣ್ಪಾತ್ರೆಗಳು ಬಳಕೆಗೆ ಬಂದವು. ಇವುಗಳಲ್ಲಿ ಹೊಳಪಿನ ಕೆಂಪುಮಣ್ಣಿನ ಪಾತ್ರೆ ಮತ್ತು ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಹೆಸರಿಸಬಹುದಾದವು. ಕಪ್ಪು–ಕೆಂಪು ದ್ವಿವರ್ಣ ಪಾತ್ರೆಯಲ್ಲಿ ಆಳವಾದ ಅಥವಾ

ಆಳವಿಲ್ಲದ ಬಟ್ಟಲು, ಬೋಗುಣಿ, ಗಿಂಡಿ ಮೊದಲಾದ ನಮೂನೆಗಳಿವೆ. ಇವುಗಳ ಮೇಲೆ ಬಿಳಿ ಅಥವಾ ಕೆನೆಬಣ್ಣದಲ್ಲಿ ಪುಟ್ಟ ಗೆರೆ, ಚುಕ್ಕಿ, ತ್ರಿಕೋನ, ಅಲೆ, ಏಣಿ, ಕಮಾನು ಮೊದಲಾದ ರೇಖಾವಿನ್ಯಾಸಗಳನ್ನು ಚಿತ್ರಿಸಲಾಗಿದೆ. ಇವಲ್ಲದೆ ಕಪ್ಪುಬಣ್ಣದ ಕಾಲಿರುವ ತಟ್ಟೆಗಳು, ಕೆಂಪುಬಣ್ಣದ ಕಾಲಿರುವ ಬಟ್ಟಲು, ತೂತಿರುವ ಬಟ್ಟಲು ಮತ್ತು ದಾನಿ, ಮಂದವಾದ ಶೇಖರಣೆ ಜಾಡಿ, ಉದ್ದ ಕತ್ತಿನ ಜಾಡಿ, ಮುಚ್ಚಳ ಮತ್ತು ತಟ್ಟೆಗಳಿವೆ. ತಾಮ್ರದ ಮೀನುಗಾಳದ ಕೊಕ್ಕೆ, ತಂತಿ, ಸುರುಳಿಯಾಕಾರದ ಮತ್ತು ಸಾಮಾನ್ಯ ಬಳೆಗಳು, ಉಂಗುರ, ಕೊಳವೆಯಾಕಾರದ ಮಣಿ; ಮೂಳೆಯ ದಬ್ಬಣ, ಮೊನೆ, ಈಟಿಗಾಳ ಮತ್ತು ಬಾಣದ ಮೊನೆ; ಅರೆಪ್ರಶಸ್ತ ಮಣಿಗಳು, ಎಚ್ಚಿದ ಕಾರ್ನೇಲಿಯನ್ ಮಣಿಗಳು ಈ ಹಂತದ ಇತರ ಸಾಂಸ್ಕೃತಿಕ ಅವಶೇಷಗಳು. ಶವಪದ್ಧತಿಯ 3 ಪ್ರಕಾರಗಳನ್ನು – ಪೂರ್ಣ ಸಮಾಧಿ, ಅಪೂರ್ಣ ಸಮಾಧಿ ಮತ್ತು ಅಸ್ಥಿಮಡಕೆ – ಈ ಹಂತದಲ್ಲಿ ಕಾಣಬಹುದಾಗಿದೆ. ಮೊದಲ ಪ್ರಕಾರಕ್ಕೆ ಸೇರುವ ಶವಕುಣಿಗಳಲ್ಲಿ 5 ಅಸ್ಥಿಪಂಜರಗಳು ನೇರಭಂಗಿಯಲ್ಲಿ ಪೂರ್ವ–ಪಶ್ಚಿಮಾಭಿಮುಖವಾಗಿವೆ. 2ನೆಯ ಪ್ರಕಾರಕ್ಕೆ ಸೇರುವ ಒಂದು ಸಮಾಧಿಯಲ್ಲಿ ತಲೆಬುರುಡೆಯನ್ನು ಪಶ್ಚಿಮಕ್ಕೆ ಮುಖವಿರುವಂತೆ ನೇರವಾಗಿ ನಿಲ್ಲಿಸಲಾಗಿತ್ತು. ಸೊಂಟ ಭಾಗದ ಮೂಳೆಗಳನ್ನು ತಲೆಬುರುಡೆಯ ಸುತ್ತಲೂ ಕೈಕಾಲುಗಳ ಉದ್ದ ಮೂಳೆಗಳನ್ನು ಬುರುಡೆಯ ಎರಡು ಪಕ್ಕದಲ್ಲೂ ಇಡಲಾಗಿತ್ತು. 3ನೆಯ ಪ್ರಕಾರದಲ್ಲಿ ಮಾಸಲು ಕೆಂಪುಬಣ್ಣದ 3 ಮಡಕೆಗಳಲ್ಲಿ ಅಸ್ಥಿ ಅವಶೇಷಗಳಿದ್ದವು. ಈ ಮಡಕೆಗಳನ್ನು ಕೆಂಪು–ಕಪ್ಪು ದ್ವಿವರ್ಣ ಬಟ್ಟಲುಗಳಿಂದ ಮುಚ್ಚಲಾಗಿತ್ತು. ಇವುಗಳ ಒಳಗೆ ತೂತುಳ್ಳ ಕೆಂಪುಬಣ್ಣದ ಮಡಕೆಗಳು, ತಾಮ್ರದ ಮತ್ತು ಅರೆಪ್ರಶಸ್ತ ಶಿಲೆಯ ಮಣಿಗಳು ಇದ್ದವು. ಈ ಸಮಾಧಿಗಳ ಕಾಲಮಾನ ಪ್ರ.ಶ.ಪೂ.1012±120 (ಇಂಗಾಲ 14).

3ನೆಯ ಹಂತ ತಾಮ್ರ–ಶಿಲಾಯುಗ ಮತ್ತು ಆದಿ ಕಬ್ಬಿಣಯುಗದ ಮಿಶ್ರ ಲಕ್ಷಣಗಳನ್ನೊಳಗೊಂಡಿದೆ. ಹಿಂದಿನ ಹಂತದ ಮಣ್ಪಾತ್ರೆಗಳ ಬಳಕೆ ಈ ಹಂತದಲ್ಲಿ ಮುಂದುವರೆಯಿತು. ಕೆಲವೊಂದು ಆಕಾರಗಳಲ್ಲಿ ಮಾತ್ರ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಚಿತ್ರಿತ ಮತ್ತು ಚಿತ್ರರಹಿತ ಕೆಂಪು ಮತ್ತು ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳ ಸಂಖ್ಯೆ ಇಳಿದು ಚಿತ್ರಿತ–ಚಿತ್ರರಹಿತ ಕಪ್ಪು ಲೇಪವುಳ್ಳ ಪಾತ್ರೆಗಳ ಸಂಖ್ಯೆ ಹೆಚ್ಚಿತು. ಕಪ್ಪುಪಾತ್ರೆಗಳಲ್ಲಿ ಕಾಲಿರುವ ತಟ್ಟೆ, ದಾನಿ, ಬಟ್ಟಲು, ಕಾಲಿರುವ ಬಟ್ಟಲು ಮೊದಲಾದ ಆಕಾರಗಳಿವೆ. ಇವುಗಳಲ್ಲಿ ಕೆಲವೊಂದರ ಹೊರಮೇಲ್ಮೈ ಮೇಲೆ ಬಿಳಿ ಅಥವಾ ಕೆನೆಬಣ್ಣದ ಚಿತ್ರಗಳಿವೆ. ಉಜ್ಜಿದ ಕಪ್ಪು ಪಾತ್ರೆಗಳು ಹೊಸ ಸೇರ್ಪಡೆ. ಇವುಗಳ ಮೇಲೆ ಹಾವನ್ನು ಕಚ್ಚಿಹಿಡಿದ ನವಿಲು, ಮೀನಿನ ಸಾಲು, ಎತ್ತು, ಅಶ್ವತ್ಥದ ಎಲೆ, ತ್ರಿಕೋನ ಮೊದಲಾದವುಗಳ ಶೈಲೀಕೃತ ಗೀರು ವಿನ್ಯಾಸಗಳಿವೆ. ಉಜ್ಜಿ ನಯಗೊಳಿಸಿದ ಕೊಡಲಿಗಳು ಈ ಹಂತದಲ್ಲಿ ಬಳಕೆಗೆ ಬಂದವು. ಒಂದು ಬದಿ ಅರೆಗೋಲಾಕಾರವಾಗಿರುವ ಈ ಪುಟ್ಟ ಚಪ್ಪಟೆ ಕೊಡಲಿಗಳು ಪೂರ್ವ ಭಾರತದ ನವಶಿಲಾಯುಗದ ಅತಿಸಾಮಾನ್ಯ ನಮೂನೆಗಳು. ಎಲೆಯಾಕಾರದಲ್ಲಿರುವ ತಾಮ್ರದ ಬಾಣದಮೊನೆ, ಬಳೆ, ಉಂಗುರ; ಮೂಳೆಯ ತೊಟ್ಟಿರುವ ಬಾಣದ ಮೊನೆ; ಕಲ್ಲಿನ ಸಮಾನಾಂತರ ಅಲಗು ಮತ್ತು ಶಂಕುವಿನಾಕಾರದ ಶಿಲಾಗಟ್ಟಿಯ ತಿರುಳು; ಸುಡಾವೆಮಣ್ಣಿನ ಮಾತೃ ದೇವತೆಗಳು ಮತ್ತು ಮಾನವ ಆಕೃತಿಗಳು; ಚಿನ್ನದ ಕೇಶ ಸೂಜಿ ಮತ್ತು ಗುಂಡುಗಳು ಈ ಹಂತದ ಇತರ ಅವಶೇಷಗಳು. ಇವಲ್ಲದೆ ಒಂದೇ ಸಾಲಿನಲ್ಲಿರುವ 6 ಅಂಡಾಕಾರದ ಗೂಡೊಲೆಗಳು ಇಲ್ಲಿ ಸಿಕ್ಕಿವೆ. ಇವುಗಳ ಸುತ್ತಮುತ್ತ ಇದ್ದ ಬೂದಿಯ ದಪ್ಪ ಪದರದೊಳಗೆ ಕಬ್ಬಿಣದ ಖಿಡ್ಡದ ತುಂಡು, ಕಬ್ಬಿಣದ ಕಿಟ್ಟ ಕಂಡುಬಂದಿದ್ದು ಇಲ್ಲಿ ಕಬ್ಬಿಣದ ಕಾರ್ಯಾಗಾರವಿದ್ದುದಕ್ಕೆ ಇವು ನೇರ ಪುರಾವೆಗಳಾಗಿವೆ.

4ನೆಯ ಹಂತ ಆದಿಚಾರಿತ್ರಿಕ ಕಾಲದಿಂದ ಮಧ್ಯಕಾಲೀನ ಯುಗದವರೆಗಿನ ಅವಧಿಯದು. 3ನೆಯ ಮತ್ತು 4ನೆಯ ಹಂತಗಳ ನಡುವೆ ಕಾಲದ ಮತ್ತು ಸಾಂಸ್ಕೃತಿಕ ಅಂತರವಿದೆ. ಮಸಿ ಕುಡಿಕೆಯಾಕಾರದ ಕೆಂಪುಬಣ್ಣದ ಬಟ್ಟಲು, ಔತ್ತರೇಯ ಮೆರುಗಿನ ಕಪ್ಪು ಪಾತ್ರೆಗಳ ಒಂದೆರಡು ಭಾಗಗಳು, ಕಪ್ಪುಬಣ್ಣದ ಬಟ್ಟಲು, ಮುದ್ರೆಯೊತ್ತಿದ ಮಡಕೆ ಚೂರುಗಳು, ತಾಮ್ರದ ಆಭರಣಗಳು, ಮಣ್ಣು ಮತ್ತು ಕಲ್ಲಿನ ಮಣಿಗಳು, ಅರೆಯುವ ಕಲ್ಲು, ಅಕ್ಕಸಾಲಿಯ ಅಚ್ಚುಗಳು, ಬಿಲ್ಲೆಯಾಕಾರದ ಚಿನ್ನದ ಒಂದು ಮಣಿ ಈ ಹಂತದ ಮುಖ್ಯ ಅವಶೇಷಗಳು. ಇಟ್ಟಿಗೆಯ ನೆಲ ಮತ್ತು ಗೋಡೆಗಳ ಮನೆಗಳು ಈ ಹಂತದಲ್ಲಿ ಕಟ್ಟಲ್ಪಟ್ಟವು. ಈ ನೆಲೆಯ ಮೇಲ್ಮೈಯಲ್ಲಿ ದೊರೆತ ಒಂದನೆಯ ಕನಿಷ್ಕನ ಚಿನ್ನದ ನಾಣ್ಯ ಗಮನಾರ್ಹ. ಗುಪ್ತರ ಅನಂತರ ಕಾಲದ ಮಧ್ಯಕಾಲೀನ ಸಂಸ್ಕೃತಿಗೆ ಸೇರುವ ಅವಶೇಷಗಳಲ್ಲಿ ಮುಖ್ಯವಾದುವೆಂದರೆ ಶಂಕುವಿನಾಕಾರದ ಸರಳ ಬಟ್ಟಲುಗಳು. (ಬಿ.ಎನ್.)

**ಪಾಂಡ್ಯರು:** ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಆಳುತ್ತಿದ್ದ ರಾಜವಂಶ. ಮದುರೈ, ತಿರುನೆಲ್ವೇಲಿ ಮತ್ತು ನಂಜಿನಾಡಿನ ಒಂದು ಭಾಗ ಈ ವಂಶದ ಆಳಿಕೆಗೆ ಒಳಪಟ್ಟಿದ್ದ ಪ್ರದೇಶ. ಮದುರೈ ಈ ಅರಸರ ರಾಜಧಾನಿಯಾಗಿತ್ತು. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಪಾಂಡ್ಯರ ಉಲ್ಲೇಖವಿದೆ. ದಕ್ಷಿಣ ಭಾರತದ ಒಂದು ಭಾಗದಲ್ಲಿ ಸಾತವಾಹನರು ಅಧಿಕಾರಾರೂಢರಾಗಿದ್ದಾಗ ಚೇರ, ಚೋಳ ಮತ್ತು ಪಾಂಡ್ಯರಾಜರು ಇತರ ಭಾಗಗಳಲ್ಲಿ ಆಳುತ್ತಿದ್ದರು. ಪಾಂಡ್ಯರ ಕಾಲ ಮತ್ತು ವಂಶಾವಳಿ ಅಸ್ಪಷ್ಟ. ಮೆಗಾಸ್ತನೀಸ್ ಇವರ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ಪ್ಲೀನಿಯ ಕಾಲದಲ್ಲಿ ಮದುರೆ ಪಾಂಡ್ಯರ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಬೈಜಾಂಟೀಯನ್ ಚಕ್ರವರ್ತಿ ಜೂಲಿಯನ್ ಪಾಂಡ್ಯರ ರಾಯಭಾರಿಗೆ ಆದರಾತಿಥ್ಯ ನೀಡಿದನೆಂದು ತಿಳಿದುಬಂದಿದೆ. ಪಾಂಡ್ಯರ ಬಂದರುಗಳು ಮತ್ತು ವ್ಯಾಪಾರ ಸ್ಥಳಗಳ ಹೆಸರುಗಳನ್ನು ಟಾಲಮಿ ತಿಳಿದಿದ್ದನೆಂದು ಹೇಳಲಾಗಿದೆ.

ಪ್ರಾಚೀನ ತಮಿಳುನಾಡಿನ ಇತಿಹಾಸವನ್ನು ತಿಳಿಯಲು ಸಂಗಮ್ ಸಾಹಿತ್ಯ ಒಂದು ಆಧಾರವಾಗಿದೆ. ಆದರೆ ಇದರ ಕಾಲದ ಬಗ್ಗೆಯೇ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಸಾಹಿತ್ಯವನ್ನು ಸೃಷ್ಟಿಸುವ ಒಂದು ಸಂಸ್ಥೆಯಾಗಿದ್ದ ಸಂಗಮ್ ಪಾಂಡ್ಯರಾಜರ ಪೋಷಣೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಮದುರೆ ಮೊದಲನೆಯ ಸಂಗಮ್‌ನ ಕೇಂದ್ರವಾಗಿತ್ತು.

ಪಾಂಡ್ಯರ ಚರಿತ್ರೆಯನ್ನು ತಿಳಿಯಲು ಕೆಲವು ತಾಮ್ರ ಮತ್ತು ಶಿಲಾ ಶಾಸನಗಳು ಆಕರಗಳಾಗಿವೆ. ಇವಲ್ಲದೆ ಯುವಾನ್‌ಚಾಂಗ್, ಮೆಗಾಸ್ತನೀಸ್ ಮತ್ತು ವೆನಿಸಿನ ಯಾತ್ರಿಕ ಮಾರ್ಕೊ ಪೋಲೊ ಇವರ ಬರವಣಿಗೆಗಳಿಂದಲೂ ಪಾಂಡ್ಯರ ಚರಿತ್ರೆಯನ್ನು ತಿಳಿಯಬಹುದು.

ಸಂಗಮ್ ಕೃತಿಗಳಲ್ಲಿ ಪಾಂಡ್ಯ ಅರಸರ ಪ್ರಸ್ತಾಪ ಬರುತ್ತದೆ. ನೆಡುಂಚೆಳಿಯನ್ ಒಬ್ಬ ಪ್ರಸಿದ್ಧ ಪಾಂಡ್ಯ ದೊರೆ. ಇವನು ಚೇರ ಮತ್ತು ಚೋಳ ರಾಜರನ್ನು ತಲಾಯಲಂಗನಮ್ ಎಂಬಲ್ಲಿ ಸೋಲಿಸಿದನೆಂದು ತಿಳಿದುಬಂದಿದೆ. ನೆಡುಂಚೆಳಿಯನನ ರಾಜಧಾನಿ ಮದುರೆ. ಈತ ಸು.210ರಲ್ಲಿ ಆಳುತ್ತಿದ್ದನೆಂದು ಇತಿಹಾಸಕಾರರ ಅಭಿಪ್ರಾಯ. ಇವನು ಕವಿಗಳಿಗೆ ಉದಾರಾಶ್ರಯ ನೀಡಿದ್ದ. ಇವನಿಂದ ಹಿಂದುಧರ್ಮಕ್ಕೆ ಪ್ರೋತ್ಸಾಹ ದೊರಕಿತು. ಇವನ ಕಾಲದಲ್ಲಿ ಹೊರದೇಶಗಳೊಡನೆ ವ್ಯಾಪಾರ ಸಾಗುತ್ತಿತ್ತು. ನೆಡುಂಚೆಳಿಯನ ಅನಂತರ ಬಂದ ರಾಜರಲ್ಲಿ ಉಗ್ರಪೆರುವಲೂಟಿ ಮುಖ್ಯನಾದವನು. ಇವನು ಸಾಹಿತ್ಯಾಭಿಮಾನಿಯಾಗಿದ್ದ. ಭೂತಪಾಂಡ್ಯನ್ ಎಂಬ ಮತ್ತೊಬ್ಬ ರಾಜನನ್ನು ಕವಿರಾಜನೆಂದು ಕರೆಯಲಾಗಿದೆ. ಭೂತಪಾಂಡ್ಯನ್ ವೀರ ಯೋಧನೂ ರಣಪರಾಕ್ರಮಿಯೂ ಉದಾರಿಯೂ ಆಗಿದ್ದ.

ಸಂಗಮ್ ಯುಗದ ಅನಂತರ ಪಾಂಡ್ಯರ ರಾಜಕೀಯ ಚರಿತ್ರೆ ಅಸ್ಪಷ್ಟ. 6ನೆಯ ಶತಮಾನದ ಕೊನೆಯ ಭಾಗದಲ್ಲಿ ಪಾಂಡ್ಯರು ದಕ್ಷಿಣಭಾರತದ ಮೇಲೆ ಪ್ರಭುತ್ವವನ್ನು ಸ್ಥಾಪಿಸಲು ಕಂಚಿಯ ಪಲ್ಲವರು ಮತ್ತು ಬಾದಾಮಿಯ ಚಳುಕ್ಯರಂತೆಯೆ ಪ್ರಯತ್ನಿಸಿದರು. ಅಂದಿನಿಂದ ಪಾಂಡ್ಯರ ಚರಿತ್ರೆ ಸ್ಪಷ್ಟವಾಗುತ್ತದೆ. 6ನೆಯ ಶತಮಾನದಲ್ಲಿ ದಕ್ಷಿಣಭಾರತಕ್ಕೆ ಭೇಟಿ ನೀಡಿದ ಚೀನಿ ಯಾತ್ರಿಕ ಯುವಾನ್‌ಚಾಂಗ್ ಪಾಂಡ್ಯರ ಪ್ರದೇಶವನ್ನು ಮೂಲಕೂಟವೆಂದೂ ಇಲ್ಲಿನ ಜನರು ವ್ಯಾಪಾರದಲ್ಲಿ ಆಸಕ್ತಿಯುಳ್ಳವರಾಗಿದ್ದರೆಂದೂ ತಿಳಿಸಿದ್ದಾನೆ. ಬೌದ್ಧಧರ್ಮ ಪಾಂಡ್ಯರ ರಾಜ್ಯದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತ್ತೆಂದೂ ಹೇಳಿದ್ದಾನೆ. ಯುವಾನ್‌ಚಾಂಗ್‌ನ ಹೇಳಿಕೆಯಿಂದ ಪಾಂಡ್ಯರಾಜ್ಯದಲ್ಲಿ ಜೈನ ದಿಗಂಬರ ಪಂಥದವರು ಹೆಚ್ಚು ಸಂಖ್ಯೆಯಲ್ಲಿದ್ದರೆಂದು ತಿಳಿದುಬರುತ್ತದೆ.

590–620ರಲ್ಲಿ ಆಳಿದ ದೊರೆ ಕಡುಂಗಾನ್. ಈತನ ಮಗ ಮಾರವರ್ಮನ್ ಅವನಿಶೂಲಮಣಿ 620–645ರಲ್ಲಿ ಆಳುತ್ತಿದ್ದ. ಕಡುಂಗಾನನ ಬಗ್ಗೆ ಹೆಚ್ಚೇನೂ ತಿಳಿಯದು. ಈತ ತನ್ನ ರಾಜ್ಯವನ್ನು ಆಕ್ರಮಿಸಿದ್ದ ಕಳಭರನ್ನು ಓಡಿಸಿದನೆಂದು ತಿಳಿದುಬರುತ್ತದೆ. ಮಾರವರ್ಮನ ಅನಂತರದ ದೊರೆ ಸೆಂದನ್ (645–670). ಈತನಿಗೆ ವಾನವನ್ ಎಂಬ ಬಿರುದಿತ್ತು. ಅನಂತರ ಬಂದ ದೊರೆ ಅರಿಕೇಸರಿ ಮಾರವರ್ಮ (ಪರಾಂಕುಶ) 670–700ರ ವರೆಗೆ ಆಳಿದ. ಇವನು ಚೇರರನ್ನು ಸೋಲಿಸಿ ರಾಜ್ಯ ವಿಸ್ತರಿಸಿದ. ಚಳುಕ್ಯ ಅರಸ 1ನೆಯ ವಿಕ್ರಮಾದಿತ್ಯನೊಡನೆ ಮಾರವರ್ಮ ಸೇರಿ ಪಲ್ಲವರ ಮೇಲೆ ಯುದ್ಧ ಮಾಡಿದ. ಪಲ್ಲವರ ಅರಸ ಪರಮೇಶ್ವರ ವರ್ಮನನ್ನು ಈತ ಸೋಲಿಸಿದ.

ಅರಿಕೇಸರಿಯ ತರುವಾಯ ಅವನ ಮಗನಾದ ರಣಧೀರ ಕೊಚ್ಚೊಡಯನ್ 700ರಲ್ಲಿ ಪಟ್ಟಕ್ಕೆ ಬಂದ. ಇವನು ತಂದೆಯಂತೆ ರಾಜ್ಯವಿಸ್ತರಣಕಾರ್ಯದಲ್ಲಿ ತೊಡಗಿ ಕೊಂಗುದೇಶವನ್ನು (ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳು) ಜಯಿಸಿ ಕೊಂಗಾರ್ ಕೊಮನ್ ಎಂಬ ಬಿರುದು ಧರಿಸಿದ.

ರಣಧೀರನ ಅನಂತರ ಇವನ ಮಗ ಮಾರವರ್ಮ 1ನೆಯ ರಾಜಸಿಂಹ ರಾಜ್ಯ ಆಳಲಾರಂಭಿಸಿದ. 730–765ರ ವರೆಗೆ ರಾಜ್ಯವಾಳಿದ ಇವನು ಪಲ್ಲವರ ಮೇಲೆ ಯುದ್ಧ ಮಾಡಿದ. ಪಲ್ಲವ ರಾಜ್ಯದಲ್ಲಿ ಸಿಂಹಾಸನಕ್ಕಾಗಿ ನಡೆಯುತ್ತಿದ್ದ ಹೋರಾಟದಲ್ಲಿ ಚಿತ್ರಮಾಯನ ಪರ ವಹಿಸಿ ಭಾರಿ ಸೈನ್ಯದೊಂದಿಗೆ ಹೊರಟು ನಂದಿಪುರಂ ರಣರಂಗದಲ್ಲಿ ನಂದಿವರ್ಮನ್ ಪಲ್ಲವಮಲ್ಲನನ್ನು ಸೆರೆಹಿಡಿದ. ಆದರೆ ಅಷ್ಟರಲ್ಲಿ ಪಲ್ಲವರ ಸೇನಾಧಿಪತಿ ಉದಯಚಂದ್ರ ಮುಂದೆ ಬಂದು ಪಾಂಡ್ಯರ ಸೈನ್ಯವನ್ನು ಎದುರಿಸಿ ನಂದಿವರ್ಮನನ್ನು ರಕ್ಷಿಸಿದ. ಚಿತ್ರಮಾಯನನ್ನು ಉದಯಚಂದ್ರ ಕೊಂದ. ಒಂದನೆಯ ರಾಜಸಿಂಹ 750ರಲ್ಲಿ ವೆನ್‌ಬೈ ಎಂಬಲ್ಲಿ ಗಂಗರು ಮತ್ತು ಚಳುಕ್ಯರನ್ನು ಜಯಿಸಿದ.

ರಾಜಸಿಂಹನ ತರುವಾಯ ಅವನ ಮಗನಾದ ಜಟಿಲ ಪರಾಂತಕ ನೆಡುಂಚೆಳಿಯನ್ ಅಥವಾ 1ನೆಯ ವರಗುಣ ಸಿಂಹಾಸನವನ್ನೇರಿದ (765–815). ಇವನು ರಾಜ್ಯ ವಿಸ್ತರಣ ಕಾರ್ಯವನ್ನು ಮುಂದುವರಿಸಿದ. ಇವನ ಕಾಲದಲ್ಲಿ ಪುನಃ ಪಲ್ಲವರು ಮತ್ತು ಪಾಂಡ್ಯರ ನಡುವೆ ಯುದ್ಧ ನಡೆಯಿತು. 1ನೆಯ ವರಗುಣ ಕಾವೇರಿ ನದಿಯ ದಕ್ಷಿಣ ತೀರದ ಪೆನ್ನಗಡಮ್ ಎಂಬಲ್ಲಿ ಪಲ್ಲವರ ಸೈನ್ಯವನ್ನು ಸೋಲಿಸಿದ. ವರಗುಣನ ವಿಸ್ತಾರಗೊಂಡ ರಾಜ್ಯ ತಿರುಚಿರಾಪಳ್ಳಿ, ಸೇಲಂ, ಕೊಯಮತ್ತೂರು ಮತ್ತು ತಿರುವಾಂಕೂರು ಜಿಲ್ಲೆಗಳನ್ನೊಳಗೊಂಡಿತ್ತು. 1ನೆಯ ವರಗುಣನ ತರುವಾಯ ಇವನ ಮಗನಾದ ಶ್ರೀಮಾರ ಶ್ರೀವಲ್ಲಭ

ಪಟ್ಟಕ್ಕೆ ಬಂದ (815–62). ಇವನು ತಂದೆಯ ನೀತಿಯನ್ನೇ ಅನುಸರಿಸಿ ರಾಜ್ಯವಿಸ್ತರಣೆಯಲ್ಲಿ ತೊಡಗಿದ. ಪಟ್ಟಕ್ಕೆ ಬಂದಮೇಲೆ ಇವನು ಸಿಂಹಳದ್ವೀಪದ ಮೇಲೆ ಧಾಳಿ ನಡೆಸಿದ. ಶ್ರೀವಲ್ಲಭನೊಡನೆ ಸಿಂಹಳ ದೊರೆ 1ನೆಯ ಸೇನ ಒಂದು ಒಪ್ಪಂದ ಮಾಡಿಕೊಂಡ. ಪಾಂಡ್ಯರ ಏಳಿಗೆಯನ್ನು ಸಹಿಸದ ಗಂಗರು, ಚೋಳರು, ಕಳಿಂಗರು ಮತ್ತು ಪಲ್ಲವರು ಒಂದಾದರು. ಈ ಒಕ್ಕೂಟದ ನೇತೃತ್ವವನ್ನು ಪಲ್ಲವರು ವಹಿಸಿದರು. ಶ್ರೀಮಾರ ಶ್ರೀವಲ್ಲಭ ಹೆದರದೆ ಕುಂಭಕೋಣಂ ಬಳಿ ಸಂಯುಕ್ತ ಸೈನ್ಯವನ್ನು ಸೋಲಿಸಿದ. ಪಲ್ಲವರು ಸೋತರು ಪುನಃ 3ನೆಯ ನಂದಿವರ್ಮನ ನೇತೃತ್ವದಲ್ಲಿ ಪಾಂಡ್ಯರ ಮೇಲೆ ಯುದ್ಧಮಾಡಿ ತೆಲ್ಲಾರು ಕದನದಲ್ಲಿ ಅವರನ್ನು ಸೋಲಿಸಿದರು. ನಂದಿವರ್ಮನ ಮಗ ನೃಪತುಂಗವರ್ಮ ಶ್ರೀವಲ್ಲಭನನ್ನು ಅರಿಸಿಲ್ ಎಂಬಲ್ಲಿ ಸೋಲಿಸಿದ. ಸಿಂಹಳದ ದೊರೆ 2ನೆಯ ಸೇನಾ ಪಲ್ಲವರೊಡನೆ ಸೇರಿ ಮದುರೆಯ ಮೇಲೆ ಯುದ್ಧಮಾಡಲು ಒಂದು ಸೈನ್ಯವನ್ನು ಕಳುಹಿಸಿದ. ಸಿಂಹಳದ ಸೈನ್ಯ ಮದುರೆಯನ್ನು ಲೂಟಿಮಾಡಿತು. ಶ್ರೀಮಾರ ಗಾಯಗೊಂಡು ಮೃತಪಟ್ಟ.

ಶ್ರೀಮಾರ ಶ್ರೀವಲ್ಲಭನ ಅನಂತರ ಅವನ ಮಗ 2ನೆಯ ವರಗುಣವರ್ಮ 862ರಲ್ಲಿ ಸಿಂಹಾಸನವನ್ನೇರಿದ. ಇವನು ಪಾಂಡ್ಯರ ಘನತೆಯನ್ನು ಹೆಚ್ಚಿಸಲು ಚೋಳರ ರಾಜ್ಯದ ಮೇಲೆ ದಂಡೆತ್ತಿಹೋದ. ಆದರೆ ಚೋಳ, ಪಲ್ಲವ ಮತ್ತು ಪಶ್ಚಿಮಗಂಗರ ಸೈನ್ಯ ಇವನನ್ನು ಸುತ್ತುಗಟ್ಟಿತು. ಸಂಯುಕ್ತ ಸೈನ್ಯದ ನಾಯಕತ್ವವನ್ನು ಪಲ್ಲವರ ಅರಸ ಅಪರಾಜಿತ ವಹಿಸಿದ್ದ. ಶ್ರೀ ಪುರಂಭಿಯಮ್ ಎಂಬಲ್ಲಿ ನಡೆದ ಯುದ್ಧದಲ್ಲಿ ಪಲ್ಲವರಿಗೆ ಜಯ ಲಭಿಸಿತು. ಶ್ರೀಪುರಂಭಿಯಮ್‌ನಲ್ಲಿ ಪಾಂಡ್ಯರು ಅನುಭವಿಸಿದ ಸೋಲು ಅವರ ಪ್ರಾಬಲ್ಯಕ್ಕೆ ಧಕ್ಕೆಯನ್ನುಂಟುಮಾಡಿತು.

ಎರಡನೆಯ ವರಗುಣನ ಅನಂತರ ಅವನ ತಮ್ಮ ಪರಾಂತಕ ವೀರನಾರಾಯಣ ಪಟ್ಟಕ್ಕೆ ಬಂದ (880–900) ಇವನ ಬಗ್ಗೆ ಹೆಚ್ಚೇನೂ ತಿಳಿದುಬಂದಿಲ್ಲ. ಪರಾಂತಕ ವೀರ ನಾರಾಯಣನ ತರುವಾಯ ಇವನ ಮಗ 2ನೆಯ ಮಾರವರ್ಮನ್ ರಾಜಸಿಂಹ ಪಾಂಡ್ಯರ ಅರಸನಾದ (900–20). ಇವನ ಕಾಲದಲ್ಲಿ ಚೋಳರ ದೊರೆ 1ನೆಯ ಪರಾಂತಕ ಪಾಂಡ್ಯ ರಾಜ್ಯದ ಮೇಲೆ ಮುತ್ತಿಗೆ ಹಾಕಿದ ರಾಜಸಿಂಹ ಸಿಂಹಳದ ಅರಸ 5ನೆಯ ಕಸ್ಸಪನ ಸಹಾಯವನ್ನು ಯಾಚಿಸಿದ. ರಾಜಸಿಂಹನಿಗೆ ಸಿಂಹಳದ ಸಹಾಯ ದೊರಕಿತು. ಆದರೆ ಚೋಳರ ದೊರೆ 1ನೆಯ ಪರಾಂತಕ ರಾಜಸಿಂಹನ ಮತ್ತು ಅವನ ಸಹಾಯಕ್ಕೆ ಬಂದ ಸಿಂಹಳದ ಸೈನ್ಯವನ್ನು ವೆಲ್ಲೂರಿನಲ್ಲಿ ನಡೆದ ಯುದ್ಧದಲ್ಲಿ ಸೋಲಿಸಿದ (915). ಸೋತ ರಾಜಸಿಂಹ ಸಿಂಹಳಕ್ಕೆ ಓಡಿಹೋದ. ಒಂದನೆಯ ಪರಾಂತಕ ಮದುರೈಕೊಂಡ ಎಂಬ ಬಿರುದನ್ನು ಧರಿಸಿದ. ಪಾಂಡ್ಯರ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಯಿತು. ಸಿಂಹಳಕ್ಕೆ ಓಡಿಹೋದ ರಾಜಸಿಂಹ ಕೆಲವು ದಿನಗಳ ಅನಂತರ ಕೇರಳಕ್ಕೆ ಹಿಂದಿರುಗಿದ. ಪಾಂಡ್ಯರು ಚೋಳರ ಅಧೀನಕ್ಕೊಳಗಾದರು.

ವೆಲ್ಲೂರು ಯುದ್ಧದ ಅನಂತರ ಸು.30 ವರ್ಷಗಳ ಕಾಲ ಪಾಂಡ್ಯರು ಚೋಳರ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದರು. ಆದರೆ ತಕ್ಕೋಲಮ್ ಯುದ್ಧದಲ್ಲಿ (949) ಪರಾಂತಕ ಸೋತ. ಅನಂತರ ಚೋಳ ರಾಜ್ಯದಲ್ಲಿ ಸಂಧಿಕಾಲವೇರ್ಪಟ್ಟಾಗ ವೀರಪಾಂಡ್ಯ ನೆಂಬಾತ ಚೋಳರನ್ನು ಜಯಿಸಿದನೆಂದು ತಿಳಿದುಬರುತ್ತದೆ. ಕೊನೆಯವರೆಗೂ ವೀರಪಾಂಡ್ಯ ಸ್ವತಂತ್ರವಾಗಿ ಆಳಿದನೆಂದು ವ್ಯಕ್ತವಾಗುತ್ತದೆ.

ಚೋಳರಿಗೂ ಪಾಂಡ್ಯರಿಗೂ ಆಗಾಗ್ಗೆ ಯುದ್ಧಗಳು ನಡೆಯುತ್ತಲೇ ಇದ್ದುವು. ರಾಜರಾಜ ಚೋಳ ಪಾಂಡ್ಯರನ್ನು ಸೋಲಿಸಿದ. ಇವನ ಮಗ 1ನೆಯ ರಾಜೇಂದ್ರನೂ ಪಾಂಡ್ಯರ ರಾಜ್ಯದ ಮೇಲೆ ಆಕ್ರಮಣ ನಡೆಸಿದ. 10ನೆಯ ಶತಮಾನದ ಅಂತ್ಯಭಾಗದಲ್ಲಿ ಪಾಂಡ್ಯರು ಮತ್ತೆ ಪ್ರಬಲರಾಗಲು ಪ್ರಯತ್ನಿಸಿದರು. ಆದರೆ ಚೋಳರ ದೊರೆ 1ನೆಯ ಕುಲೋತ್ತುಂಗ ಅವರ ಯತ್ನವನ್ನು ಭಂಗಗೊಳಿಸಿದ. ಒಂದನೆಯ ಕುಲೋತ್ತುಂಗನ ಕಾಲದಲ್ಲಿ ಪಾಂಡ್ಯರ ಏಳಿಗೆಯನ್ನು ತಡೆಗಟ್ಟಲು ಅವರ ರಾಜ್ಯದಲ್ಲಿ ಸೈನಿಕ ವಸತಿಗಳನ್ನು ಸ್ಥಾಪಿಸಲಾಯಿತು.

12ನೆಯ ಶತಮಾನದಲ್ಲಿ ಪಾಂಡ್ಯರು ಪುನಃ ಪ್ರಬಲರಾಗಲು ಪ್ರಯತ್ನಿಸಿದರು. ಆದರೆ ಪಾಂಡ್ಯ ರಾಜಕುಮಾರರಲ್ಲಿ ಸಿಂಹಾಸನಕ್ಕಾಗಿ ಕಲಹ ಪ್ರಾರಂಭವಾಯಿತು. ಕುಲಶೇಖರ ಪಾಂಡ್ಯ ಮತ್ತು ಪರಾಕ್ರಮ ಪಾಂಡ್ಯರು ಸಿಂಹಾಸನಕ್ಕಾಗಿ ಹೋರಾಡತೊಡಗಿದರು. ಪರಾಕ್ರಮ ಪಾಂಡ್ಯ ಸಿಂಹಳದ ದೊರೆಯ ಸೈನ್ಯದ ಸಹಾಯವನ್ನು ಕೋರಿದ. ಸಿಂಹಳದ ಸೈನ್ಯ ಬರುವುದಕ್ಕೆ ಮೊದಲೇ ಕುಲಶೇಖರ ತನ್ನ ಪ್ರತಿಸ್ಪರ್ಧಿಯನ್ನು ಕೊಂದ. ಸಿಂಹಳದ ಸೈನ್ಯ ಕುಲಶೇಖರನನ್ನು ಸೋಲಿಸಿತು. ಆಗ ಕುಲಶೇಖರ ಚೋಳರನ್ನು ಆಶ್ರಯಿಸಿದ. ಅವರ ಬೆಂಬಲದಿಂದ ಕುಲಶೇಖರ ಮದುರೆಯನ್ನು ಪ್ರವೇಶಿಸಿ ಸಿಂಹಳದ ಸೈನ್ಯವನ್ನು ಸೋಲಿಸಿದ.

ಕುಲಶೇಖರ ಯುದ್ಧ ಚಟುವಟಿಕೆಗಳನ್ನು ಸಹಿಸದ ಚೋಳರು ಅವನನ್ನು ರಾಜ್ಯದಿಂದ ಓಡಿಸಿ ವೀರಪಾಂಡ್ಯನಿಗೆ ಮದುರೆ ರಾಜ್ಯವನ್ನು ಬಿಟ್ಟುಕೊಟ್ಟರು. ವೀರಪಾಂಡ್ಯನೂ ಚೋಳರಿಗೆ ಅವಿಧೇಯನಾಗಿ ವರ್ತಿಸಿದ. ಆಗ ಚೋಳರ ಅರಸ ಕುಲೋತ್ತುಂಗ 1178ರಲ್ಲಿ ವೀರಪಾಂಡ್ಯ ನನ್ನು ಸೋಲಿಸಿ ಪಾಂಡ್ಯ ರಾಜ್ಯವನ್ನು ವಿಕ್ರಮಪಾಂಡ್ಯನಿಗೆ ನೀಡಿದ.

ವಿಕ್ರಮಪಾಂಡ್ಯನ ತರುವಾಯ 1190 ರಲ್ಲಿ ಜಟಾವರ್ಮನ್ ಕುಲಶೇಖರ ರಾಜನಾದ. ಕುಲಶೇಖರ ಅವಿಧೇಯತೆಯಿಂದ ಕೋಪಗೊಂಡ 3ನೆಯ ಕುಲೋತ್ತುಂಗ ಅವನ ಮೇಲೆ ಯುದ್ಧ ಮಾಡಿ ಮದುರೆಯನ್ನು ಧ್ವಂಸ ಮಾಡಿದ. 1216ರಲ್ಲಿ ಜಟಾವರ್ಮನ ತಮ್ಮನಾದ ಮಾರವರ್ಮನ್ ಸುಂದರ ಪಾಂಡ್ಯ ಪಟ್ಟಕ್ಕೆ ಬಂದ. ತನಗೂ ತನ್ನ ಅಣ್ಣನಿಗೂ ಯುದ್ಧದಲ್ಲಾದ ಅಪಮಾನದ ಸೇಡನ್ನು ತೀರಿಸಿಕೊಳ್ಳಲು ಅವನು ಚೋಳರ ರಾಜ್ಯದ ಮೇಲೆ ದಂಡೆತ್ತಿ ಹೋದ. ಉರಿಯೂರು ಮತ್ತು ತಂಜಾವೂರುಗಳನ್ನು ಸುಂದರಪಾಂಡ್ಯ ಆಕ್ರಮಿಸಿಕೊಂಡು ಕುಲೋತ್ತುಂಗನನ್ನು ಮತ್ತು ಅವನ ಮಗನಾದ 3ನೆಯ ರಾಜರಾಜನನ್ನು ರಾಜ್ಯದಿಂದ ಓಡಿಸಿದ. ತಂಜಾವೂರಿನ ಬಳಿ ಇದ್ದ ಆಯಿರತ್ತಾಲಿಯ ಚೋಳ ಪಟ್ಟಾಭಿಷೇಕ ಸಭಾಂಗಣದಲ್ಲಿ ಸುಂದರಪಾಂಡ್ಯ ವೀರಾಭಿಷೇಕ ಮಾಡಿಕೊಂಡ. ಹೀಗೆ ಸುಂದರಪಾಂಡ್ಯ ಚೋಳರ ಮೇಲೆ ಸೇಡು ತೀರಿಸಿಕೊಂಡ. ಕುಲೋತ್ತುಂಗ ಹೊಯ್ಸಳ ಇಮ್ಮಡಿ ಬಲ್ಲಾಳನ ಸೈನ್ಯಸಹಾಯವನ್ನು ಕೋರಿದ. ಕುಲೋತ್ತುಂಗನ ಸಹಾಯಕ್ಕಾಗಿ ಹೊಯ್ಸಳ ದೊರೆ ತನ್ನ ಸೈನ್ಯವನ್ನು ಕಳುಹಿಸಿಕೊಟ್ಟ. ಪಾಂಡ್ಯರ ರಾಜ್ಯದ ಮೇಲೆ ಎರಡೂ ಸೈನ್ಯಗಳು ಧಾವಿಸಿ ಬರುತ್ತಿದ್ದುದನ್ನು ಕೇಳಿ ಹೆದರಿದ ಸುಂದರ ಪಾಂಡ್ಯ ಅವರೊಡನೆ ಶಾಂತಿ ಒಪ್ಪಂದ ಮಾಡಿಕೊಂಡ. ಇದರ ಪ್ರಕಾರ ಸುಂದರಪಾಂಡ್ಯ ಪುದುಕೋಟೆಯಲ್ಲಿ ಕುಲೋತ್ತುಂಗನಿಗೆ ಅವನ ರಾಜ್ಯವನ್ನು ಹಿಂದಕ್ಕೆ ಬಿಟ್ಟುಕೊಟ್ಟ.

1218ರಲ್ಲಿ 3ನೆಯ ಕುಲೋತ್ತುಂಗ ತೀರಿಕೊಂಡ. ಇವನ ತರುವಾಯ ಆಳಲಾರಂಭಿಸಿದ 3ನೆಯ ರಾಜರಾಜನ ಕಾಲದಲ್ಲಿ ಚೋಳರಾಜ್ಯ ಅವನತಿಯ ಹಾದಿ ಹಿಡಿಯಿತು. 3ನೆಯ ರಾಜರಾಜ ಅಸಮರ್ಥನೂ ಅವಿವೇಕಿಯೂ ಆಗಿದ್ದ. ಪಾಂಡ್ಯರ ಅಧೀನಕೊಳಗಾಗಿದ್ದ ಇವನ ಕಾಲದಲ್ಲಿ ರಾಜ್ಯದಲ್ಲಿ ಗಲಭೆಗಳುಂಟಾದುವು. ಗಲಭೆಗೆ ಕಾರಣರಾದ ವಡ್ಡ ಸೈನಿಕರನ್ನು ಸುಂದರಪಾಂಡ್ಯ ಓಡಿಸಿದ. ಕಾಡವರ ನಾಯಕ ಕೊಪ್ಪೆರು ಜಿಂಗ ದಿನೇದಿನೇ ಪ್ರಬಲನಾಗಿ ಚೋಳರ ವಿರುದ್ಧ ಸುಂದರಪಾಂಡ್ಯನೊಂದಿಗೆ ಸ್ನೇಹ ಬೆಳೆಸಿಕೊಂಡ. ಚೋಳ 3ನೆಯ ರಾಜರಾಜ ಸುಂದರಪಾಂಡ್ಯನಿಗೆ ಕೊಡಬೇಕಾಗಿದ್ದ ಪೊಗದಿಯನ್ನು ಕೊಡದೆ ಅವನ ಕೋಪಕ್ಕೆ ಗುರಿಯಾದ. ಅವನು ಸೈನ್ಯಸಮೇತನಾಗಿ ಹೊರಟು ಪಾಂಡ್ಯರಾಜ್ಯದ ಮೇಲೆ ನುಗ್ಗಿದ. ಆಗ ಸುಂದರ ಪಾಂಡ್ಯ ರಾಜರಾಜನನ್ನು ಸೋಲಿಸಿದ. ಅವನಿಂದ ಅಪಾರ ಐಶ್ವರ್ಯವನ್ನು ದೋಚಿದನಲ್ಲದೆ ಮುಡಿಕೊಂಡ ಚೋಳಪುರದಲ್ಲಿ ವಿಜಯಾಭಿಷೇಕ ಮಾಡಿಕೊಂಡ. 3ನೆಯ ನರಸಿಂಹನನ್ನು ಸಂಧಿಸಲು ರಾಜರಾಜ ಪ್ರಯತ್ನಿಸಿದಾಗ ಮಾರ್ಗಮಧ್ಯದಲ್ಲಿ ಪಾಂಡ್ಯರ ಮಿತ್ರ ಕೊಪ್ಪೆರು ಜಿಂಗನಿಂದ ತೆಳ್ಳಾರು ಕದನದಲ್ಲಿ ಸೋತುಹೋದ. ರಾಜರಾಜನನ್ನು ಕೊಪ್ಪೆರು ಜಿಂಗ ಸೇಂದುಮಂಗಲದಲ್ಲಿ ಸೆರೆಯಲ್ಲಿಟ್ಟ. ಚೋಳ ರಾಜನನ್ನು ಹೇಗಾದರೂ ಮಾಡಿ ಮೊದಲಿನ ಸ್ಥಾನಕ್ಕೇರಿಸಲು ಹೊಯ್ಸಳ ನರಸಿಂಹ ಪ್ರಯತ್ನಿಸಿದ. ಅವನು ಗೋಪಯ್ಯ ಮತ್ತು ಅಪ್ಪಣ ಎಂಬ ಸೈನಾಧಿಕಾರಿಗಳ ನೇತೃತ್ವದಲ್ಲಿ ಕೊಪ್ಪೆರು ಜಿಂಗನ ವಿರುದ್ಧ ಒಂದು ಸೈನ್ಯವನ್ನು ಕಳುಹಿಸಿಕೊಟ್ಟ. ಹೊಯ್ಸಳ ಅಧಿಕಾರಿಗಳು ಕೊಪ್ಪೆರು ಜಿಂಗನ ರಾಜ್ಯವನ್ನು ಲೂಟಿ ಮಾಡಿ ರಾಜರಾಜನನ್ನು ಬಿಡಿಸಿ ಕೊಂಡರು. ಚೋಳ ಸಿಂಹಾಸನವನ್ನು ರಾಜರಾಜನಿಗೆ ನೀಡುವುದಾಗಿ ಕೊಪ್ಪೆರು ಜಿಂಗ ಹೊಯ್ಸಳ ನರಸಿಂಹನಿಗೆ ತಿಳಿಸಿದ. ಇದರಿಂದ ತೃಪ್ತನಾದ ನರಸಿಂಹ ತನ್ನ ಸೈನ್ಯಾಧಿಕಾರಿಗಳಿಗೆ ಧಾಳಿಯನ್ನು ನಿಲ್ಲಿಸಲು ಆಜ್ಞಾಪಿಸಿದ. ಇದೇ ಕಾಲದಲ್ಲಿ ಹೊಯ್ಸಳ ನರಸಿಂಹ ಪಾಂಡ್ಯರ ಅರಸನನ್ನು ಮಹೇಂದ್ರಮಂಗಳಂ ಎಂಬಲ್ಲಿ ನಡೆದ ಯುದ್ಧದಲ್ಲಿ ಸೋಲಿಸಿದ. ನರಸಿಂಹ ಚೋಳರಾಜನನ್ನು ಅವನ ರಾಜ್ಯಕ್ಕೆ ಕರೆದುಕೊಂಡು ಹೋಗಿ 1231ರಲ್ಲಿ ಅವನಿಗೆ ರಾಜ್ಯಾಭಿಷೇಕ ಮಾಡಿದ.

3ನೆಯ ರಾಜರಾಜ ಹೊಯ್ಸಳರ ಸಹಾಯದಿಂದ ಮತ್ತೆ ಸಿಂಹಾಸನವನ್ನು ಪಡೆದರೂ ಅವನು ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಪಾಂಡ್ಯರು, ಕಾಡವರು ಮತ್ತು ಕಾಕತೀಯರು ಪ್ರಬಲರಾಗಿದ್ದುದರಿಂದ ಅವನ ರಾಜ್ಯಕ್ಕೆ ನೆಮ್ಮದಿ ತಪ್ಪಿತ್ತು. ರಾಜರಾಜ ಹೊಯ್ಸಳರ ಅಧೀನದಲ್ಲೇ ಉಳಿಯಬೇಕಾಯಿತು. ಇವನ ಮರಣದ ಅನಂತರ ಬಂದ 3ನೆಯ ರಾಜೇಂದ್ರಚೋಳ ದೊರೆ ಪಾಂಡ್ಯರ ಮೇಲೆ ಯುದ್ಧ ಮಾಡಿ ಮಾರವರ್ಮನ್ 2ನೆಯ ಸುಂದರಪಾಂಡ್ಯನನ್ನು 1238ರಲ್ಲಿ ಸೋಲಿಸಿದ. ಚೋಳರು ಪ್ರಬಲರಾಗದಂತೆ ತಡೆಯಲು ಹೊಯ್ಸಳ ಸೋಮೇಶ್ವರ ಪಾಂಡ್ಯರ ಪಕ್ಷವನ್ನು ಸೇರಿದ. ಇಬ್ಬರೂ ಸೇರಿ ರಾಜೇಂದ್ರನನ್ನು ಸೋಲಿಸಿದರು. ರಾಜೇಂದ್ರ ನೆಲ್ಲೂರಿನ ಗಂಡಗೋಪಾಲನೊಡನೆ ಸ್ನೇಹ ಬೆಳೆಸಿಕೊಂಡ. ಗಂಡಗೋಪಾಲ ರಾಜೇಂದ್ರನ ಆಡಳಿತವನ್ನು ಬಲಗೊಳಿಸಿ ಹೊಯ್ಸಳರ ಶತ್ರುಗಳಾಗಿದ್ದ ವಾರಂಗಲ್ಲಿನ ಕಾಕತೀಯರೊಂದಿಗೆ ಸ್ನೇಹ ಬೆಳೆಸಿಕೊಂಡ.

ಮಾರವರ್ಮನ್ 2ನೆಯ ಸುಂದರಪಾಂಡ್ಯನ ತರುವಾಯ ಜಟಾವರ್ಮನ್ ಸುಂದರ ಪಾಂಡ್ಯ ಪಟ್ಟಕ್ಕೆ ಬಂದ (1258–68). ಜಟಾವರ್ಮನ್ ಸಮರ್ಥದೊರೆ. ಇವನ ಆಳಿಕೆಯಲ್ಲಿ ಪಾಂಡ್ಯರ ಅಧಿಕಾರ ಉನ್ನತಿಗೆ ಏರಿತು. ಪಾಂಡ್ಯರ ರಾಜ್ಯ ವೈಭವದಿಂದ ರಾರಾಜಿಸಿತು. ಜಟಾವರ್ಮನ್ ಚೇರರಾಜನಾದ ವೀರರವಿ ಉದಯಮಾರ್ತಾಂಡ ವರ್ಮನನ್ನು ಸೋಲಿಸಿ ಅವನ ರಾಜ್ಯವನ್ನು ವಶಪಡಿಸಿಕೊಂಡನಲ್ಲದೆ, ಚೋಳರನ್ನೂ ಸದೆಬಡಿದ. ಜಟಾವರ್ಮನಿಗೆ ಚೋಳರ ಅರಸ ಕಪ್ಪಕಾಣಿಕೆ ಕೊಡಲು ಒಪ್ಪಿದ. ಅನಂತರ ಜಟಾವರ್ಮ ಸಿಂಹಳದ ಮೇಲೆ ದಂಡೆತ್ತಿ ಹೋಗಿ ಅಲ್ಲಿಯ ಅರಸನಿಂದ ಅಪಾರ ಐಶ್ವರ್ಯ ಮತ್ತು ಆನೆಗಳನ್ನು ಪಡೆದುಕೊಂಡ. ಹೊಯ್ಸಳರ ಮೇಲೆ ಯುದ್ಧ ಮಾಡಿ ಕಣ್ಣಾನೂರು ಮತ್ತು ಕೊಪ್ಪಂಕೋಟೆ ಯನ್ನು ವಶಪಡಿಸಿಕೊಂಡ. ಹೊಯ್ಸಳರ ಆನೆ ಕುದುರೆಗಳು ಮತ್ತು ಐಶ್ವರ್ಯ ಪಾಂಡ್ಯರ ವಶವಾದುವು. 1262ರಲ್ಲಿ ನಡೆದ ಕದನದಲ್ಲಿ ಹೊಯ್ಸಳ ಸೋಮೇಶ್ವರ ಸುಂದರಪಾಂಡ್ಯನ ಕೈಯಿಂದಲೇ ಹತನಾದನೆಂದು ತಿಳಿಯುತ್ತದೆ. ಸುಂದರಪಾಂಡ್ಯ ಕಾಡವರ ದೊರೆ ಕೊಪ್ಪೆರು

ಜಿಂಗನನ್ನೂ ಸೋಲಿಸಿ ಅವನ ರಾಜ್ಯವನ್ನು ವಶಪಡಿಸಿಕೊಂಡ. ಸೋತ ಕೊಪ್ಪೇರು ಜಿಂಗನ ಮೇಲೆ ದಯೆ ತೋರಿಸಿ ಅವನ ರಾಜ್ಯವನ್ನು ಅವನಿಗೇ ಬಿಟ್ಟುಕೊಟ್ಟ. ಅನಂತರ ಕಾಕತೀಯ ಗಣಪತಿಯನ್ನು ಸುಂದರಪಾಂಡ್ಯ ಸೋಲಿಸಿದ. ಮಲಯಚಂದ್ರಬಾಹುವಿನ ಮಗ ಸೋತು ಸುಂದರನಿಗೆ ಶರಣಾಗತನಾದ. ನೆಲ್ಲೂರಿನಲ್ಲಿ ಸುಂದರಪಾಂಡ್ಯ ವೀರಾಭಿಷೇಕ ಮಾಡಿಕೊಂಡ. ಜಟಾವರ್ಮನ್ ಸುಂದರಪಾಂಡ್ಯ ಮಹಾರಾಜಾಧಿರಾಜ. ಶ್ರೀ ಪರಮೇಶ್ವರ ಮೊದಲಾದ ಬಿರುದುಗಳನ್ನು ಧರಿಸಿದ. ಹೀಗೆ ಸುಂದರಪಾಂಡ್ಯ ಅನೇಕರನ್ನು ಜಯಿಸಿ ಪಾಂಡ್ಯರ ಕೀರ್ತಿಯನ್ನು ಹೆಚ್ಚಿಸಿದ. ಇವನು ಯುದ್ಧಗಳಲ್ಲಿ ಗಳಿಸಿದ ಹಣವನ್ನು ಚಿದಂಬರಂ ಮತ್ತು ಶ್ರೀರಂಗದ ದೇವಾಲಯಗಳಿಗೆ ನೀಡಿದ.

ಶಿವ ಕಳುಗುಮಲೈ ದೇವಾಲಯದ ಗೋಪುರದ ಮೇಲಿರುವ ವಿಷಾಪಹಾರಿ ಶಿವ

ಪಾಂಡ್ಯ ಕೊನೆಯ ಪ್ರಮುಖ ದೊರೆ ಮಾರವರ್ಮನ್ ಕುಲಶೇಖರ (1268–1310). ಇವನು ಸಮರ್ಥ. ಇವನು 3ನೆಯ ಚೋಳನನ್ನೂ ಹೊಯ್ಸಳ ಸಾಮ್ರಾಜ್ಯದ ತಮಿಳು ನಾಡಿನ ಭಾಗದ ದೊರೆ ರಾಮನಾಥನನ್ನೂ ಸೋಲಿಸಿ ಅವರ ರಾಜ್ಯಗಳನ್ನು ವಶಪಡಿಸಿಕೊಂಡ. ಕುಲಶೇಖರನ ಅಧಿಕಾರವನ್ನು ಸಿಂಹಳದ ದೊರೆ 2ನೆಯ ಪರಾಕ್ರಮಬಾಹು ಒಪ್ಪಿಕೊಂಡ. ಮೂರನೆಯ ರಾಜೇಂದ್ರನ ಅನಂತರ ಚೋಳರಾಜರ ಹೆಸರು ತಿಳಿದುಬರುವುದಿಲ್ಲವಾದ್ದರಿಂದ ಚೋಳರಾಜ್ಯ ಪಾಂಡ್ಯರಾಜ್ಯದಲ್ಲಿ ವಿಲೀನಗೊಂಡಿರಬೇಕೆಂಬ ಅಭಿಪ್ರಾಯವನ್ನು ಅನೇಕರು ವ್ಯಕ್ತಪಡಿಸಿದ್ದಾರೆ. ಚೋಳಮಂಡಲ ಹೊಯ್ಸಳರ ಸಾಮ್ರಾಜ್ಯದ ತಮಿಳು ಜಿಲ್ಲೆಗಳು ಇವೆರಡಕ್ಕೂ ಕುಲಶೇಖರ ಮಹಾರಾಜನಾದ.

ಕುಲಶೇಖರನ ಮರಣಾಂತರ (1308–9) ಸಂಭವಿಸಿದ ಆಂತರಿಕ ಯುದ್ಧದಿಂದಲೂ ಮುಸ್ಲಿಮರ ಧಾಳಿಗಳಿಂದಲೂ ಲಾಭ ಪಡೆದು ಸಿಂಹಳ ಸ್ವತಂತ್ರವಾಯಿತು. ಕುಲಶೇಖರನ ಕೊನೆಯ ದಿನಗಳು ಸುಖಮಯವಾಗಿರಲಿಲ್ಲ ರಾಜ್ಯಕ್ಕಾಗಿ ಅವನ ಮಕ್ಕಳಲ್ಲಿ ಕಲಹವೇರ್ಪಟ್ಟಿತು. ಕುಲಶೇಖರ ತನ್ನ ಕಿರಿಯ ಮಗನಾದ ವೀರಪಾಂಡ್ಯ ಪಟ್ಟಕ್ಕೆ ಬರಬೇಕೆಂದು ಆಶಿಸಿದ. ಆದರೆ ಹಿರಿಯ ಮಗನಾದ ಸುಂದರಪಾಂಡ್ಯ ಇದನ್ನು ಒಪ್ಪದೆ ಯುದ್ಧಕ್ಕೆ ನಿಂತ. ಯುದ್ಧದಲ್ಲಿ ವೀರ ಪಾಂಡ್ಯನದೇ ಮೇಲುಗೈಯಾಯಿತು. ಇದನ್ನರಿತ ಸುಂದರಪಾಂಡ್ಯ ಮಲಿಕ್ ಕಾಫರ್‌ನ ಸಹಾಯವನ್ನು ಕೋರಿದ. ಮಲಿಕ್‌ಕಾಫರ್ ದಕ್ಷಿಣದ ರಾಜ್ಯಗಳನ್ನು ಲೂಟಿ ಮಾಡಿ ಐಶ್ವರ್ಯವನ್ನು ದೋಚಿಕೊಂಡು ಹೋದ. ಅವನ ಧಾಳಿಯ ಸಮಯದಲ್ಲಿ ವೀರ ಪಾಂಡ್ಯ ಮತ್ತು ಸುಂದರಪಾಂಡ್ಯರಿಬ್ಬರೂ ಒಟ್ಟಿಗೆ ಸೇರಿ ಶತ್ರುವಿನ ವಿರುದ್ಧ ಯುದ್ಧಮಾಡಿದರೆಂದು ಕೆಲವರು ಹೇಳಿದ್ದಾರೆ. ಮಲಿಕ್ ಕಾಫರ್ ಪಾಂಡ್ಯ ರಾಜ್ಯವನ್ನು ಬಿಟ್ಟುಹೋದ ಮೇಲೆ ವೀರಪಾಂಡ್ಯ ಮತ್ತು ಸುಂದರಪಾಂಡ್ಯರು ಪುನಃ ಯುದ್ಧದಲ್ಲಿ ತೊಡಗಿದರೆಂದು ಕಂಡುಬರುತ್ತದೆ. ವೀರ ಪಾಂಡ್ಯ ತಿರುವಾಂಕೂರಿನ ರಾಜನ ಸಹಾಯವನ್ನು ಪಡೆದುಕೊಂಡು ಸುಂದರಪಾಂಡ್ಯನನ್ನು ಎದುರಿಸಿದ. ಅಂತ್ಯದಲ್ಲಿ ವೀರಪಾಂಡ್ಯ ಸೋತನೆಂದು ತಿಳಿದುಬರುತ್ತದೆ. ಸುಂದರಪಾಂಡ್ಯನಿಗೆ ಸಿಂಹಾಸನ ದೊರಕಿತು.

ಘಿಯಾಸುದ್ದೀನ್ ತುಗಲಕ್ ದಕ್ಷಿಣದ ರಾಜ್ಯಗಳನ್ನು ನಾಶಗೊಳಿಸಲು ತನ್ನ ಮಗನಾದ ಉಲಘ್ ಖಾನನನ್ನು ಕಳುಹಿಸಿಕೊಟ್ಟ. ಇವನು ಪಾಂಡ್ಯ ರಾಜ್ಯದ ಮೇಲೆ ಧಾಳಿ ನಡೆಸಿ ಪರಾಕ್ರಮದೇವನೆಂಬವನನ್ನು ಸೆರೆಹಿಡಿದ. ಈ ಘಟನೆಯೊಂದಿಗೆ ಪಾಂಡ್ಯರ ಆಳಿಕೆ ಕೊನೆಗೊಂಡಿತು. ಪಾಂಡ್ಯರ ರಾಜ್ಯ ನಿರ್ನಾಮವಾಯಿತು.

ಯುವಾನ್‌ಚಾಂಗ್ ಪಾಂಡ್ಯರಾಜ್ಯದಲ್ಲಿ ಸಂಚರಿಸಿ ಅಲ್ಲಿನ ಜನಜೀವನವನ್ನು ವರ್ಣಿಸಿದ್ದಾನೆ. ಪಾಂಡ್ಯರ ಕಾಲದಲ್ಲಿ ರಾಜ್ಯದಲ್ಲಿ ಶಾಂತಿ ನೆಲಸಿತ್ತೆಂದು ತಿಳಿದುಬರುತ್ತದೆ. ಪಾಂಡ್ಯರು ತಮಿಳು ಸಾಹಿತ್ಯದ ಬೆಳೆವಣಿಗೆಗೆ ಉದಾರ ಪ್ರೋತ್ಸಾಹ ನೀಡಿದ್ದರು. ಹೊರದೇಶಗಳೊಡನೆ ವ್ಯಾಪಾರ ಸಾಗುತ್ತಿತ್ತು. ಮದುರೆ ಒಂದು ಮುಖ್ಯವ್ಯಾಪಾರ ಕೇಂದ್ರವಾಗಿತ್ತು. ಪಾಂಡ್ಯರ ರಾಜ್ಯದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿತ್ತೆಂದು ತಿಳಿದುಬರುತ್ತದೆ. ಶೈವ ಮತ್ತು ವೈಷ್ಣವ ಸಂತರು ಭಕ್ತಿಮಾರ್ಗವನ್ನು ಜನಪ್ರಿಯಗೊಳಿಸಿದರು. ಪಾಂಡ್ಯರು ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ ನೀಡಿದರು. ಇವರು ದ್ರಾವಿಡ ಶೈಲಿಯನ್ನು ಶ್ರೀಮಂತಗೊಳಿಸಿದರು. ಜಂಬುಕೇಶ್ವರ ದೇವಾಲಯ, ಶ್ರೀರಂಗ ದೇವಾಲಯ ಮತ್ತು ಕುಂಭಕೋಣಂ ದೇವಾಲಯ ಇವುಗಳಿಗೆ ಇವರು ಹೊಸ ಗೋಪುರಗಳನ್ನು ಕಟ್ಟಿಸಿದರು. ಹೀಗೆ ಪಾಂಡ್ಯರು ದಕ್ಷಿಣ ಭಾರತದ ಸಂಸ್ಕೃತಿಗೆ ಕೆಲವು ಕಾಣಿಕೆಗಳನ್ನು ಸಲ್ಲಿಸಿದ್ದಾರೆ. (ಟಿ.ವಿ.ಜಿಯು.)

**ವಾಸ್ತುಶಿಲ್ಪ:** ಸು.7ನೆಯ ಶತಮಾನದಲ್ಲಿ ತಮಿಳುನಾಡಿನ ಪಾಂಡ್ಯ ಮಂಡಲವೆನಿಸಿದ ಈಗಿನ ಮದುರೆ, ರಾಮನಾಥಪುರ, ತಿರುನೆಲ್ವೇಲಿ, ಕನ್ಯಾಕುಮಾರಿ ಜಿಲ್ಲೆಗಳನ್ನೂ ತಿರುಚಿರಾಪಳ್ಳಿ ಜಿಲ್ಲೆಯ ದಕ್ಷಿಣ ಭಾಗವನ್ನೂ ಕೇರಳದ ತಿರುವನಂತಪುರ ಜಿಲ್ಲೆಯನ್ನೂ ಒಳಗೊಂಡ ಪ್ರದೇಶದಲ್ಲಿ ಪಾಂಡ್ಯರು ಕಲ್ಲಿನಲ್ಲಿ ಹಲವಾರು ಗುಹೆಗಳನ್ನು ಕೊರೆಯಿಸಿದರು. ಸಾಮಂತ ಮನೆತನಗಳಾದ ಅದಿಯಮಾನ್ ಮತ್ತು ಮುತ್ತರೈಯರ್ ವಂಶಸ್ಥರೂ ಪಾಂಡ್ಯರ ಪ್ರಭಾವಕ್ಕೊಳಗಾಗಿ ತಮ್ಮ ಅಧೀನ ಪ್ರದೇಶಗಳಲ್ಲಿ ಇಂಥ ಗುಹಾಲಯಗಳನ್ನು ಕೊರೆಯಿಸಿದರು. ಇಂಥ ಸು.60 ಗುಹಾಲಯಗಳು ಈ ಪ್ರದೇಶಗಳಲ್ಲಿ ಕಂಡುಬಂದಿವೆ.

7ನೆಯ ಶತಮಾನದ ಮಧ್ಯಭಾಗದಲ್ಲಿ ತಿರುನಲ್ವೇಲಿಯ ಜಿಲ್ಲೆಯ ಮಲೈಯಡಿಕ್ಕುರಿಚಿ ಎಂಬಲ್ಲಿ ಪಾಂಡ್ಯರ ದೊರೆ ಮಾರನ್ ಶೇಂದನ್ ನಿರ್ಮಿಸಿದ ಆಲಯವೇ ಇವುಗಳಲ್ಲಿ ಅತ್ಯಂತ ಪ್ರಾಚೀನವಾದ್ದು. ಪಲ್ಲವರ ಗುಹಾಲಯಗಳಲ್ಲಿದ್ದಂತೆಯೇ ಇವುಗಳಲ್ಲೂ ಒಂದು ಮಂಟಪ, ಹಿಂಭಾಗದಲ್ಲಿ ಒಂದು ಅಥವಾ ಹೆಚ್ಚಿನ ಗುಡಿಗಳು, ಒಮ್ಮೊಮ್ಮೆ ಮಂಟಪದ ಪಕ್ಕದ ಗೋಡೆಗಳಲ್ಲೂ ಇಂಥ ಗುಡಿಗಳು; ಮುಂಭಾಗದಲ್ಲಿ ದೊಡ್ಡ ಗಾತ್ರದ ಕಂಬಗಳು. ಇವುಗಳ ಬುಡ ಹಾಗೂ ಮೇಲಿನ ಭಾಗಗಳೂ ಚೌಕಾಕಾರದವು. ಮಧ್ಯದ ಭಾಗದಲ್ಲಿ ಅಷ್ಟ ಮೂಲೆಗಳಿದ್ದು ಮೇಲ್ಭಾಗದಲ್ಲಿ ನೇರಾದ ಕೋನಮಟ್ಟವನ್ನುಳ್ಳ ಭಾರವಾದ ಬೋದಿಗೆಗಳಿವೆ. ಸ್ವಲ್ಪಮಟ್ಟಿಗೆ ಬಾಗಿದಂತೆ ಪಾರ್ಶ್ವದೃಶ್ಯವುಳ್ಳ ಅಲಂಕೃತ ಬೋದಿಗೆಗಳುಳ್ಳ ಕಂಬವನ್ನೊಳಗೊಂಡ ಮಾದರಿಗಳು ಕಂಡುಬಂದಿವೆ. ಆದರೆ ಮುಂಭಾಗದ ಮಂಟಪಗಳ ಮೇಲಿನ ಕಮಾನುಗಳಲ್ಲಿ ಸ್ಪಷ್ಟವಾಗಿ ನಿರೂಪಿಸಿದ ಕಪೋತಗಳು ಈ ಗುಹಾಲಯಗಳಲ್ಲಿ ಕಂಡುಬಂದಿಲ್ಲ. ಕೆಲವೊಮ್ಮೆ ಇವುಗಳಿಗೆ ಮಂಟಪಗಳಿಲ್ಲದೆ, ಬಂಡೆಯಲ್ಲಿ ನೇರವಾಗಿ ಗುಡಿಗಳಂಥ ಗೂಡುಗಳನ್ನೇ ಕೊರೆಯ ಲಾಗಿದೆ. ಈ ಪ್ರದೇಶದಲ್ಲಿ ಇಂಥವು ಸಾಮಾನ್ಯ.

ಮಲೈಯಡಿಕ್ಕುರಿಚಿಯ ಗುಹಾಲಯ ಹಿಂಬದಿಯಲ್ಲಿ ಗರ್ಭಗುಡಿಗಾಗಿ ಕೊರೆಯಲಾದ ಒಂದೇ ಗೂಡುಳ್ಳ ಮಂಟಪಶೈಲಿಯದು, ಏಳನೆಯ ಶತಮಾನದ ಉತ್ತರಾರ್ಧದಲ್ಲಿ ಸು.657 ರಲ್ಲಿ ಕಟ್ಟಲಾದ ಇದನ್ನು ಕಲ್ ತಿರುಕೋಯಿಲ್ ಎಂದು ಶಾಸನದಲ್ಲಿ ಕರೆಯಲಾಗಿದೆ. ರಾಮನಾಥಪುರಂ ಜಿಲ್ಲೆಯ ಪಿಳ್ಳೈಯಾರ್ ಪಟ್ಟಿದಕುನ್ನಕ್ಕುಡಿ (ಮಾಸಿಲೀಶ್ವರ ಎಂದು ಕರೆಯಲಾದ ಶಿವನ ಮೂರನೆಯ ಗುಹಾಲಯ), ಮದುರೈ ಜಿಲ್ಲೆಯ ಆನೈಮಲೈ (770) ಮತ್ತು, ಈಗ ಸುಬ್ರಹ್ಮಣ್ಯನ ದೇವಾಲಯವೆಂದು ಪ್ರಸಿದ್ಧಿ ಪಡೆದ ತಿರುಪ್ಪರನ್‌ಕುನ್ರಮ್‌ನ ಗುಹಾಲಯ– ಇವು ಪಾಂಡ್ಯರ ಪ್ರಾಚೀನ ಗುಹಾಲಯಗಳಲ್ಲಿ ಪ್ರಮುಖವಾದುವು. ತಿರುವಳ್ಳರೈ ಗುಹಾಲಯ ಅಪೂರ್ಣವಾದ್ದು. ಪ್ರಧಾನದೇವಾಲಯದ ಹೊಸ ಪ್ರಕಾರದ ಹಿಂಬದಿಯಲ್ಲಿರುವ ಕೈಸಾಲೆಯ ಎರಡೂ ಬದಿಗಳಲ್ಲಿ ಗೋಡೆಯಿಂದ ಹೊಮ್ಮಿದಂತೆ ತೋರುವ ಎರಡು ಗುಡಿ–ಗೂಡುಗಳಿವೆ. ಹಿಂಬದಿಯ ಗೋಡೆಯಲ್ಲಿ ಬ್ರಹ್ಮ, ಸ್ಕಂದ ಸೂರ್ಯ, ಗಣೇಶ ಮತ್ತು ದುರ್ಗಾ ಇವರ ಸ್ಥಾನಕ ವಿಗ್ರಹಗಳನ್ನು ಬೇರೆಬೇರೆಯಾಗಿ ವಿಭಜಿಸಿ ಕೊರೆಯಲಾಗಿದೆ. ಗೋಡೆಯ ಎರಡೂ ತುದಿಗಳಲ್ಲಿ ವಿಷ್ಣು ಹಾಗೂ ಶಿವನಿಗಾಗಿ ಗೂಡುಗಳನ್ನು ಕೊರೆದಂತಿದೆ. ಲಿಂಗವನ್ನು ಪ್ರತಿಷ್ಠಿಸಲು ಯಾವ ಪ್ರತ್ಯೇಕ ಏರ್ಪಾಡುಗಳನ್ನೂ ಇವುಗಳಲ್ಲಿ ಮಾಡಿಲ್ಲ. ಮೂಲ ಕಲ್ಲಿನಲ್ಲೇ ಲಿಂಗವನ್ನೂ ಪೀಠವನ್ನೂ ಕೊರೆಯುವುದು ಇವರ ಶೈಲಿಯ ವೈಶಿಷ್ಟ್ಯವಾಗಿತ್ತು. ಆದರೆ ಮಲೈಯಡಿಕ್ಕುರಿಚಿಯಲ್ಲಿ ಸಣ್ಣ ಪ್ರತ್ಯೇಕವಾದ ಲಿಂಗ ಮತ್ತು ಪೀಠವಿರುವುದು ಗಮನಾರ್ಹ. ಮೂಲತಃ ಈ ಗುಡಿಯಲ್ಲಿ ಲಿಂಗಪ್ರತಿಷ್ಠಾಪನೆಗೆ ಯಾವ ಸಿದ್ಧತೆಯನ್ನೂ ಮಾಡಿರಲಿಲ್ಲ. ಅನಂತರದ ಕಾಲದಲ್ಲಿ ಪೀಠಸಹಿತ ಲಿಂಗವನ್ನು ಪ್ರತಿಷ್ಠಾಪಿಸಿರಬಹುದಾಗಿದೆ.

ಇದರಿಂದ ಪಾಂಡ್ಯರ ಪ್ರಾಚೀನ ಗುಹಾಲಯಗಳಲ್ಲಿ ಎರಡು ವಿಭಿನ್ನ ಪದ್ಧತಿಗಳನ್ನು ಗುರುತಿಸಬಹುದೆಂದು ಕೆಲವರು ಸೂಚಿಸಿದ್ದಾರೆ. ಮಂಟಪದ ಶೈಲಿಯ ಗುಹಾಲಯಗಳಲ್ಲಿ ಮುಂಭಾಗದ ಕಂಬಗಳು ಬುಡದಲ್ಲಿ ಹಾಗೂ ಮೇಲ್ಭಾಗದಲ್ಲಿ ಘನಾಕೃತಿಯನ್ನು ಪಡೆದಿದ್ದು ಮಧ್ಯದ ಭಾಗ ಕೋನಗಳಲ್ಲಿರುವುದು ಸಾಮಾನ್ಯ ಲಕ್ಷಣ. ಆದರೆ ಇದರಲ್ಲೂ ವಿಭಿನ್ನತೆಗಳು ಕಂಡುಬಂದಿವೆ. ಕುಡುಮಿಯ ಮಲೆಯ ಮೇಲೈಕೋವಿಲ್‌ನಲ್ಲಿ ಮುಂಭಾಗದ ಕಂಬಗಳ ಮೇಲೆ ಕಲಶ, ಕುಂಭ ಇತ್ಯಾದಿಗಳನ್ನು ಕೊರೆದು ತೋರಿಸಲಾಗಿದೆ. ಮಲೈಯಡಿಪಟ್ಟಿಯಲ್ಲಿ ಕಂಬಗಳ ಕೆಳಭಾಗಗಳನ್ನು ಮುಂಗಾಲನ್ನೂ ಚಾಚಿ ಕುಳಿತ ಸಿಂಹಗಳಂತೆ ತೋರಿಸಲಾಗಿದೆ. ತಮಿಳುನಾಡಿನಲ್ಲಿ– ಅದರಲ್ಲೂ ತೊಂಡೈಮಂಡಲಮ್ ಪ್ರದೇಶದಲ್ಲಿ ಕಾಣಿಸಿಕೊಳ್ಳದ ಗಣೇಶ, ಸಪ್ತಮಾತೃಕೆ ಮತ್ತು ಜ್ಯೇಷ್ಠಾದೇವಿಗಳ ವಿಗ್ರಹಗಳನ್ನು ಪಾಂಡ್ಯರ ಗುಹಾಲಯಗಳಲ್ಲಿ ನೋಡಬಹುದು. ಈ ದೇವತೆಗಳ ಕಲ್ಪನೆ ಮೂಲತಃ ಚಳುಕ್ಯರದಾಗಿದ್ದು, ಗಂಗವಾಡಿಯ ಮೂಲಕ ಪಾಂಡ್ಯನಾಡಿಗೆ ಬಂದಿದೆ ಎಂದು ಭಾವಿಸಲಾಗಿದೆ. ಸಾಮಾನ್ಯವಾಗಿ ಶಿವಾಲಯಗಳಲ್ಲಿ ಕಲ್ಲಿನಲ್ಲೇ ಕೊರೆದ ಲಿಂಗ ಹಾಗೂ ಪೀಠಗಳು ಈ ಕಾಲದ ವೈಶಿಷ್ಟ್ಯವಾದರೂ ಹಿಂಬದಿಯ ಗೋಡೆಯಲ್ಲಿ ಈ ದೇವರ ಉಬ್ಬುಶಿಲ್ಪಗಳನ್ನು ಕಾಣಬಹುದಾಗಿದೆ. ಗರ್ಭಗುಡಿಯಲ್ಲಿ ಲಿಂಗಪೀಠದ ಮುಂಚಾಚಿದ ನಳಿಕೆಗಳ ಕೆಳಗೆ ನೆಲದಲ್ಲಿ ಅಭಿಷೇಕಜಲವನ್ನು ಹಿಡಿಯಲು ಸಣ್ಣದೊಂದು ಗುಂಡಿಯನ್ನು ತೋಡಿರುವುದು ಇನ್ನೊಂದು ವೈಶಿಷ್ಟ್ಯ.

ಕುಡುಮಿಯಮಲೈ, ತಿರುಮಯಮ್ (ಸತ್ಯಗಿರೀಶ್ವರ), ಮಲಯಕ್ಕೋಯಿಲ್ ಮತ್ತು ತಿರುಗೋಕರ್ಣಗಳಲ್ಲಿರುವ ಗುಹಾಲಯಗಳೆಲ್ಲಾ ಒಂದೇ ಕಾಲದವು. ಅಲ್ಲಲ್ಲಿ ಸಂಗೀತದ ಸ್ವರಗಳಿಗೆ ಸಂಬಂಧಿಸಿದ ಶಾಸನಗಳಿವೆ. ಕುಡುಮಿಯಮಲೈ ಶಾಸನ ಪೂರ್ಣವಾಗಿ ಉಳಿದು ಬಂದಿದೆ. ಇದರ ಪ್ರತಿಗಳು ಸ್ವಲ್ಪಮಟ್ಟಿಗೆ ಉಳಿದ ಕಡೆಗಳಲ್ಲಿವೆ. ಇವುಗಳೆಲ್ಲಲ್ಲ, ಬಹುಶಃ ಸಂಕೇತಪದದಂತೆ, ಪರಿವಾದಿನಿಯೆ ಎಂಬ ಪದ ಕಾಣಿಸಿದ್ದು ಇದು ಗುಣಸೇನನೆಂಬಾತ ರೂಪಿಸಿದ ವಿದ್ಯಾಪರಿವಾದಿನಿ ಎಂಬ ಒಂದು ತಂತಿವಾದ್ಯದ ಹೆಸರಾಗಿದೆ. ಇದಕ್ಕೆ ಸಂಬಂದಿಸಿದ ಸ್ವರಪ್ರಸ್ತಾರಗಳನ್ನೂ ಅರಸನೊಬ್ಬ ಪ್ರಚಾರಕ್ಕಾಗಿ ಶಾಸನಸ್ಥಗೊಳಿಸಿದ. ಈ ಅರಸ ರುದ್ರಾಚಾರ್ಯ ಎಂಬ ಶೈವಗುರುವಿನ ಶಿಷ್ಯನಾಗಿದ್ದ. ತಿರುಮಯಮ್, ತಿರುಗೋಕರ್ಣ, ಮಲಯಕ್ಕೋಯಿಲ್‌ಗಳಲ್ಲಿನ ಶಿವಾಲಯಗಳಲ್ಲಿ ಏಕಶಿಲೆಯ ಲಿಂಗಪೀಠಗಳಿವೆ. ಇವು ಕ್ರಮವಾಗಿ ದುಂಡುಚೌಕ ಮತ್ತು ಅಷ್ಟಕೋನ ಆಕಾರಗಳನ್ನು ಪಡೆದಿವೆ. ಇವುಗಳಲ್ಲಿ ಚೌಕ ಮತ್ತು ಅಷ್ಟಕೋನಾಕಾರದ ಲಿಂಗಗಳು ದುಂಡುಲಿಂಗಗಳಿಗಿಂತ ಪ್ರಾಚೀನ.

ಪಾಂಡ್ಯರ ಈ ಗುಹಾವಾಸ್ತುಶಿಲ್ಪ ಪಲ್ಲವರ ವಾಸ್ತುಶಿಲ್ಪಕ್ಕಿಂತ ಭಿನ್ನವಾಗಿರುವುದಲ್ಲದೆ ಚಳುಕ್ಯಶೈಲಿಯಿಂದ ಪ್ರಭಾವಿತವಾಗಿದೆ ಎಂಬುದನ್ನು ಈ ಗುಹಾಲಯಗಳಲ್ಲಿನ ಕಂಬಗಳು, ಮಹಾಮಂಡಪದ ಪಕ್ಕದ ಗೋಡೆಗಳಲ್ಲಿನ ಗೂಡುಗಳು. ಗರ್ಭಗುಡಿಯಲ್ಲಿ ಸೋಮಸ್ಕಂದಕ್ಕೆ ಬದಲಾದ ವಿಭಿನ್ನ ಆಕಾರಗಳ ಲಿಂಗಪೀಠಗಳು, ಏಕಶಿಲೆಯ ಲಿಂಗಗಳು, ಉಬ್ಬು ಶಿಲ್ಪಗಳು, ಮೂಲವಿಗ್ರಹದ ಜೊತೆಗೆ ಗಣೇಶ, ಜ್ಯೇಷ್ಠಾ, ಸಪ್ತಮಾತೃಕೆಗಳಿಗಾಗಿ ಒಮ್ಮೊಮ್ಮೆ ಗುಹೆಯ ಹೊರ ಆವರಣದಲ್ಲಿ ಪ್ರತ್ಯೇಕವಾದ ಗುಡಿಗಳು– ಇವು ಸೂಚಿಸುತ್ತವೆ.

ಗಟ್ಟಿಯಾದ ಗ್ರಾನೈಟ್ ಶಿಲೆಗಳನ್ನು ಬಳಸಿ, ಚಿಕ್ಕದಾದರೂ ಚೊಕ್ಕದಾದ ವಿಮಾನಗಳನ್ನು ಕಟ್ಟಿಸಿದ ಹಿರಿಮೆ ಪಾಂಡ್ಯರದು. ಇವರ ಗುಹಾಲಯಗಳ ಶೈಲಿಯನ್ನನುಸರಿಸಿ ಕಳುಗುಮಲೈಯಲ್ಲಿ ವೆಟ್ಟುವನ್‌ಕೋವಿಲ್‌ನ ಏಕಶಿಲೆಯ ವಿಮಾನವನ್ನು ಸು.800ರಲ್ಲಿ ನಿರ್ಮಿಸಲಾಯಿತು. ಎರಡು ಮೀಟರುಗಳಿಗಿಂತ ಕಡಿಮೆ ಅಗಲದ, ಚೌಕವಾದ ಬುಡವುಳ್ಳ, ಸರಳವಾದ ಅಲಂಕೃತ ಅಧಿಷ್ಠಾನ ಹೊಂದಿದ, ಚೌಕಾಕಾರದ ಏಕತಲ ವಿಮಾನದ ಕಲ್ಲಿನ ದೇವಾಲಯಗಳೂ ತಿರುಚಿರಾಪಳ್ಳಿ ಜಿಲ್ಲೆಯ ಕರಿಯಪಟ್ಟಿ, ತಿರುಪ್ಪೂರ್, ವೀಶಲೂರು ಮತ್ತು ಪನಂಗುಡಿಗಳಲ್ಲಿ ಕಾಣಬಹುದು. ಇವುಗಳ ಗರ್ಭಗುಡಿಯ ಮೇಲೆ ಚೌಕಾಕಾರದ ಗ್ರೀವ ಮತ್ತು ಶಿಖರಗಳಿವೆ. ಇವುಗಳ ಗೋಡೆಯ ಗೂಡುಗಳಲ್ಲಿ, ವಿಮಾನದ ಗೂಡುಗಳಲ್ಲಿ ಗಣೇಶ, ದುರ್ಗಾ, ದಕ್ಷಿಣಾಮೂರ್ತಿ, ವಿಷ್ಣು ಮತ್ತು ಬ್ರಹ್ಮರ ಉಬ್ಬುಶಿಲ್ಪಗಳಿರುವುದಲ್ಲದೆ ಸಪ್ತಮಾತೃಕೆಗಳಿಗೂ ಇತರ ಪರಿವಾರ ದೇವತೆಗಳಿಗೂ ಪ್ರತ್ಯೇಕವಾದ ಚೌಕಾಕಾರದ ಗುಡಿಗಳನ್ನೂ ಕಟ್ಟಿಸುವುದು ಇವರ ಶೈಲಿಯ ಒಂದು ಲಕ್ಷಣವಾಯಿತು.

10–11ನೆಯ ಶತಮಾನಗಳ ಬಳಿಕ ಇವರದೇ ಆದ ವಿಶಿಷ್ಟ ಶೈಲಿಯನ್ನು ವಿಸ್ತಾರವಾದ ಮಂಟಪಗಳಲ್ಲಿ ಗುರುತಿಸಬಹುದಾಗಿದೆ. (ಬಿ.ಆರ್.ಜಿ.)

**ಪಾಂಪೆ:** ದಕ್ಷಿಣ ಇಟಲಿಯ ಕ್ಯಾಂಪೇನಿಯ ಪ್ರದೇಶದ ನಾಪಲೀ ಪ್ರಾಂತ್ಯದಲ್ಲಿ, ಸಾರ್ನೋ ನದಿ ಮುಖಜಭೂಮಿಯ ಉತ್ತರಕ್ಕೆ ವೆಸೂವಿಯಸ್ ಅಗ್ನಿಪರ್ವತದ ಬುಡದಲ್ಲಿ, ನೇಪಲ್ಸ್ ನಗರಕ್ಕೆ 24 ಕಿಮೀ ದೂರದಲ್ಲಿದ್ದ ಪ್ರಾಚೀನ ನಗರ. ಪ್ರ.ಶ.79ರ ಆಗಸ್ಟ್ 24ರಂದು ವೆಸೂವಿಯಸ್ ಜ್ವಾಲಾಮುಖಿಯ ಸ್ಫೋಟದಿಂದ ಈ ನಗರ ಮುಚ್ಚಿಹೋಗಿ ನಾಶವಾಯಿತು. ಈಚೆಗೆ ಪ್ರಾಕ್ತನಶಾಸ್ತ್ರಜ್ಞರು ಈ ನಗರದ ನೆಲೆಯನ್ನು ಸಂಶೋಧಿಸಿದರು. ಸು.6 ಮೀ ಬೂದಿ ಮತ್ತು ಪಾಳು ಮಣ್ಣಿನಲ್ಲಿ ಹೂತುಹೋಗಿದ್ದ ನಗರದಲ್ಲಿ ಗ್ರೀಕ್ ಮತ್ತು ರೋಮನ್ ಯುಗಕ್ಕೆ ಸೇರಿದ್ದ ಮನೆಮಠಗಳು ಮತ್ತು ದಿನಬಳಕೆಯ ವಸ್ತುಗಳು ಅಚ್ಚಳಿಯದ ಸ್ಥಿತಿಯಲ್ಲಿ ದೊರಕಿದುವು. ಆ ಕಾರಣದಿಂದ ಆ ಕಾಲದ ನಗರಜೀವನದ ಪೂರ್ಣಪರಿಚಯ ಪಡೆಯಲು ಸಾಧ್ಯವಾಗಿದೆ. ಈಗ ಅದರ ಬಳಿಯಲ್ಲಿ ಒಂದು ಪಟ್ಟಣವಿದೆ. ಇದೊಂದು ಕ್ರೈಸ್ತ ಯಾತ್ರಾಸ್ಥಳ. ಇತಿಹಾಸ ಪೂರ್ವಕಾಲದಲ್ಲಿ ಪ್ರಾಯಶಃ ಪ್ರ.ಶ.ಪೂ.8ನೆಯ ಶತಮಾನದಲ್ಲಿ, ಈ ನೆಲೆಯಲ್ಲಿ ಜನವಸತಿ ಪ್ರಾರಂಭವಾಯಿತು. ಗ್ರೀಕ್ ವಸಾಹತುಗಾರರು ಇಲ್ಲಿಯ ರೇವುಪಟ್ಟಣದ ಪ್ರಯೋಜನ ಪಡೆದು ತಮ್ಮ ನೆಲೆವೀಡುಗಳನ್ನು ಸ್ಥಾಪಿಸಿದರು. ಪ್ರ.ಶ.ಪೂ.6ನೆಯ ಶತಮಾನದ ಡೋರಿಕ್ ಶೈಲಿಯ ಒಂದು ದೇವಾಲಯವನ್ನು ಇಲ್ಲಿ ಗುರುತಿಸಲಾಗಿದೆ. ರೋಮನ್ ಇತಿಹಾಸಕಾರ ಸ್ಟ್ರಾಬೋ ತಿಳಿಸಿರುವ ಎಟ್ರಸ್ಕನ್ ಆಕ್ರಮಣಕ್ಕೆ ಮಾಹಿತಿಗಳನ್ನು ಈವರೆಗೆ ಪತ್ತೆಹಚ್ಚಲಾಗಿಲ್ಲ. ಅನಂತರದ ಶತಮಾನದಲ್ಲಿ ಸಾಮ್ನೈಟ್ ಪಂಗಡದವರು ಪಾಂಪೆಯನ್ನು ವಶಪಡಿಸಿಕೊಂಡರು. ಆಗ ಪ್ರಚಲಿತವಿದ್ದ ಆಸ್ಕನ್ ಭಾಷೆ, ಜೀವನಪದ್ಧತಿ, ಮತಾಚಾರ, ಆಡಳಿತಪದ್ಧತಿ–ಇವೆಲ್ಲವೂ ಸಾಮ್ನೈಟರ ಕೊಡುಗೆಗಳು.

ಸುಮಾರು ಒಂದೂವರೆ ಶತಮಾನ ಕಾಲ ಸಾಮ್ನೈಟ್ ಗ್ರೀಕರ ವಶದಲ್ಲಿದ್ದ ಈ ನಗರದ ಮೇಲೆ ಪ್ರ.ಶ.ಪೂ.310ರಲ್ಲಿ ರೋಮನರ ದೃಷ್ಟಿಬಿದ್ದರೂ ಏನೂ ಪ್ರಯೋಜನವಾಗಲಿಲ್ಲ. ರೋಮ್ ಮತ್ತು ಕಾರ್ತೇಜಿನ ನಡುವೆ ನಡೆದ ಪ್ಯೂನಿಕ್ ಯುದ್ಧದಲ್ಲಿ ಪಾಂಪೆ ಆಸಕ್ತಿ ತೋರಿಸಲಿಲ್ಲ. ಸ್ವಲ್ಪಕಾಲದ ಅನಂತರ ಇಟಲಿಯ ಕೆಲವು ಪ್ರಾಂತ್ಯಗಳು ರೋಮನರ ವಿರುದ್ಧ ದಂಗೆಯೆದ್ದಾಗ ಪಾಂಪೆಯ ಅಧಿಕಾರಿಗಳು ತೀವ್ರ ಆಸಕ್ತಿ ವಹಿಸಿದರು. ಅದರ ಫಲವಾಗಿ ಪ್ರ.ಶ.ಪೂ.89ರಲ್ಲಿ ರೋಮಿನ ಕಾನ್ಸಲ್ ಆಗಿದ್ದ ಕಾರ್ನೀಲಿಯಸ್ ಸುಲ್ಲ ಎಂಬವನು ಪಾಂಪೆಯನ್ನು ವಶಪಡಿಸಿಕೊಂಡು ತನ್ನ ಸೋದರನ ಪುತ್ರನಾದ ಪಬ್ಲಿಯನ್ ಸುಲ್ಲನನ್ನು ಅಲ್ಲಿಯ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಆಗ ಪಾಂಪೆಯಲ್ಲಿ ರೋಮನ್ ಸಂಸ್ಕೃತಿಯ ಪ್ರಭಾವ ತೀವ್ರವಾಗಿ ಬೆಳೆಯಿತು. 59ರಲ್ಲಿ ಪಾಂಪೆಯ ಬಯಲುರಂಗಮಂದಿರದಲ್ಲುಂಟಾದ ಗಲಭೆಗಳ ಕಾರಣದಿಂದ ಆ ನಗರದಲ್ಲಿ ಖಡ್ಗಯುದ್ಧ ಪ್ರದರ್ಶನಗಳನ್ನು ಬಹಿಷ್ಕರಿಸಲಾಯಿತೆಂದು ತಿಳಿದುಬಂದಿದೆ. ವ್ಯಾಪಾರ, ವ್ಯವಸಾಯ, ನೌಕಾಯಾನ ಮುಂತಾದ ಹಲವು ಕಸಬುಗಳು ಅಭಿವೃದ್ಧಿಹೊಂದಿ ಆ ಪ್ರಾಂತ್ಯದ ಪ್ರಮುಖ ನಗರವಾಗಿ ಉತ್ಕರ್ಷಹೊಂದಿದ್ದ ಪಾಂಪೆ ಹಠಾತ್ತಾಗಿ 63ರ ಫೆಬ್ರವರಿಯಲ್ಲಿ ಸಂಭವಿಸಿದ ಭೂಕಂಪದಿಂದ ಬಹಳಮಟ್ಟಿಗೆ ನಾಶವಾಯಿತು. ಪಾಂಪೆಯ ಪ್ರಾಚೀನ ಗ್ರೀಕ್ ಸಂಸ್ಕೃತಿಜನ್ಯವಾದ ಅನೇಕ ಕಟ್ಟಡಗಳು ಆಗ ಹಾಳಾದುವು. ಜೀರ್ಣೋದ್ಧಾರಕಾರ್ಯ ನಡೆಯುತ್ತಿದ್ದಾಗ 79 ಆಗಸ್ಟ್ 24ರಂದು ವೆಸೂವಿಯಸ್ ಸ್ಫೋಟಗೊಂಡು ನಗರ ಸಂಪೂರ್ಣವಾಗಿ ಹಾಳಾಯಿತು. ತೊಂದರೆಗೀಡಾದ ಜನರ ಸಹಾಯಕ್ಕೆ ರೋಮನ್ ದಳಪತಿ ಹಿರಿಯ ಪ್ಲಿನಿ ಧಾವಿಸಿ ತಾನೇ ಪ್ರಾಣಬಿಟ್ಟನೆಂದು ಹೇಳಲಾಗಿದೆ. ಬೆಂಕಿಯ ಕಣಗಳು ಮತ್ತು ಬೂದಿಯಲ್ಲಿ ನಗರ ಹೂತುಹೋಯಿತು. ಅನಂತರ ಇಲ್ಲಿ ಪಾಳು ಮಣ್ಣು ಸೇರಿತು. ಈಗ ನಗರದ ಅವಶೇಷಗಳು ನೆಲಮಟ್ಟದಿಂದ 5–6 ಮೀಟರ್‌ಗಳಷ್ಟು ಆಳದಲ್ಲಿವೆ.

ಅಲೆಕ್ಸಾಂಡರ್ ಮತ್ತು ಅವನ ಪತ್ನಿ

ನಗರಯೋಜನೆ ಮತ್ತು ವಾಸ್ತುಶಿಲ್ಪ: ಪಾಂಪೆ ಒಂದು ದೀರ್ಘ ವೃತ್ತಾಕಾರದ ತಳಹದಿಯ ನಗರ; ಪ್ರಾಚೀನ ಕಾಲದಲ್ಲಿ ಲಾವದಿಂದಾಗಿ ಉತ್ತರದಿಂದ ದಕ್ಷಿಣಕ್ಕೆ ನಿರ್ಮಿತವಾದ ಪ್ರಾಕೃತಿಕ ಶಿಲಾರಾಶಿ ಇದನ್ನು ಕೋಟೆಯಂತೆ ರಕ್ಷಿಸುತ್ತಿತ್ತು. ನೈರುತ್ಯ ದಿಕ್ಕಿನಲ್ಲಿ ನಗರ ಪ್ರದೇಶ ಬಹುಮಟ್ಟಿಗೆ ಸಮತಟ್ಟಾಗಿತ್ತು; ಕೆಲವು ಪ್ರದೇಶಗಳಲ್ಲಿ ಹಂತಹಂತಗಳಲ್ಲಿದ್ದ ಸಮತಟ್ಟಾದ ಪ್ರದೇಶಗಳಲ್ಲಿ ಪ್ರಮುಖ ಸಾರ್ವಜನಿಕ ಮಂದಿರಗಳನ್ನೂ ದೇವಾಲಯಗಳನ್ನೂ ನಿರ್ಮಿಸಲಾಗಿತ್ತು. ಆಗ್ನೇಯ ಮೂಲೆ ತುದಿಯ ಸಮತಟ್ಟಾದ ಪ್ರದೇಶದಲ್ಲಿ ಬಯಲುರಂಗ ಮಂದಿರವನ್ನು ನಿರ್ಮಿಸಲಾಗಿತ್ತು. ನೈರುತ್ಯ ಮೂಲೆಯಲ್ಲಿ ವೀನಸ್ ದೇವತೆಯ ಮಂದಿರವಿತ್ತು. ಗ್ರೀಕ್ ವಾಸ್ತು ಪದ್ಧತಿಯಂತೆ ನಗರ ಪ್ರದೇಶದಲ್ಲಿ ಪೂರ್ವ–ಪಶ್ಚಿಮವಾಗಿಯೂ ಉತ್ತರ–ದಕ್ಷಿಣವಾಗಿಯೂ ಅನೇಕ ನೇರವಾದ ಮುಖ್ಯ ರಸ್ತೆಗಳನ್ನು ನಿರ್ಮಿಸಲಾಗಿತ್ತು. ಅವುಗಳಿಂದ ನಗರಪ್ರದೇಶ ಹಲವಾರು ಆಯಾಕಾರದ ಚೌಕಗಳಾಗಿ ವಿಭಾಗಗೊಂಡಿತ್ತು. ಹಲವು ವಾಸಗೃಹಗಳನ್ನೊಳಗೊಂಡ ಅನೇಕ ಚೌಕಗಳನ್ನು 9 ಪ್ರದೇಶಗಳಾಗಿ ವಿಂಗಡಿಸಲಾಗಿತ್ತು.

ನಗರ ನಿರ್ಮಾಣದ ಇತಿಹಾಸವನ್ನು ಆರು ಪ್ರತ್ಯೇಕ ಕಾಲಗಳಿಗೆ ನಿರ್ದೇಶಿಸಬಹುದಾಗಿದೆ: 1. ಸಾಮ್ನೈಟ್ ಪೂರ್ವಯುಗ: ಪ್ರ.ಶ.ಪೂ.420ರ ವರೆಗೆ. ಈ ಕಾಲದ ಗಮನಾರ್ಹ ಕಟ್ಟಡವೆಂದರೆ ಡೋರಿಕ್ ಶೈಲಿಯ ದೇವಾಲಯ. 2. ಆದಿ ಸಾಮ್ನೈಟ್‌ಯುಗ: ಪ್ರಶ.ಪೂ.420–250. ಈ ಕಾಲದಲ್ಲಿ ಆ ಮೊದಲ ಕಟ್ಟಡಗಳ ದುರಸ್ತಿಯ ಕೆಲಸ ನಡೆಯಿತಲ್ಲದೆ ಜ್ಯೂಪಿಟರ್ ಮಂದಿರವನ್ನು ನಿರ್ಮಿಸಲಾಯಿತು. 3. ಅಂತ್ಯ ಸಾಮ್ನೈಟ್ ಯುಗ: ಪ್ರ.ಶ.ಪೂ.250–80. ಈ ಯುಗದಲ್ಲಿ ವಿಸ್ತೃತ ಗ್ರೀಕ್ ಅಥವಾ ಹೆಲೆನಿಕ್ ಸಂಸ್ಕೃತಿಯ ಪ್ರಭಾವ ಎದ್ದುಕಾಣುತ್ತದೆ. ಹಳೆಯ ಕಟ್ಟಡಗಳ ದುರಸ್ತಿಯಾಯಿತಲ್ಲದೆ ಕೋಟೆಗೆ ರಕ್ಷಣಾ ಗೋಪುರಗಳನ್ನು ನಿರ್ಮಿಸಲಾಯಿತು. ಮುಖ್ಯ ಕಟ್ಟಡವೆಂದರೆ ಅಪೊಲೊ ಮಂದಿರ. 4. ರೋಮನ್ ವಸಾಹತು

ಯುಗ: ಪ್ರ.ಶ.ಪೂ.80–23. ಕಾಂಕ್ರೀಟ್ ಮತ್ತು ಸುಟ್ಟ ಇಟ್ಟಿಗೆಗಳ ಕಟ್ಟಡ ಪದ್ಧತಿ ಬಳಕೆಗೆ ಬಂತು. ಓಡಿಯನ್ ಪ್ರದರ್ಶನಗೃಹ, ವಿಶಾಲ ಬಯಲು ರಂಗಮಂದಿರ, ವೀನಸ್ ಮತ್ತು ಝ್ಯೂಸ್ ದೇವಾಲಯಗಳು ಪ್ರಮುಖ ಕಟ್ಟಡಗಳು. 5 ಅಗಸ್ಟಸ್ ಮತ್ತು ಜೂಲಿಯೊ–ಕ್ಲಾಡಿಯನ್ ಯುಗ: ಪ್ರ.ಶ.ಪೂ.23–ಪ್ರ.ಶ.62 ಈ ಕಾಲದಲ್ಲಿ ಕಟ್ಟಡಗಳ ಹೊರಮೈಗೆ ಅಮೃತಶಿಲೆಯ ಹೊದಿಕೆಯನ್ನು ಮತ್ತು ಗ್ರೀಕ್ ವರ್ಣಚಿತ್ರಗಳ ಮೂಲಕ ಅಲಂಕರಣವನ್ನು ಒದಗಿಸಲಾಗುತ್ತಿತ್ತು. ಹಲವಾರು ಹೊಸ ಕಟ್ಟಡಗಳನ್ನು ನಿರ್ಮಿಸಲಾಯಿತು. ಹಳೆಯ ಕಟ್ಟಡಗಳನ್ನು ನವೀಕರಿಸಲಾಯಿತು. ಫ್ಲೇವಿಯನ್ ಯುಗ: ಪ್ರ.ಶ.62–79. ಇಟ್ಟಿಗೆ ಮತ್ತು ಗಾರೆಮಿಶ್ರಣ ಹೆಚ್ಚು ಬಳಕೆಯಲ್ಲಿತ್ತು. ಅನೇಕ ಕಟ್ಟಡಗಳನ್ನು ಪುನರ್ನಿರ್ಮಿಸಲಾಯಿತು. ಐಸಿಸ್ ದೇವಿಯ ಮಂದಿರ ಗಮನಾರ್ಹ.

ಕೆಲವು ಪ್ರಮುಖ ಕಟ್ಟಡಗಳು: ಪಾಂಪೆಯ ಪ್ರಮುಖ ಸಾರ್ವಜನಿಕ ಕಟ್ಟಡಗಳು ನೈರುತ್ಯ ಮೂಲೆಯ ಸಿವಿಲ್ ಫೋರಮ್‍ನ ಭಾಗದಲ್ಲಿದ್ದುವು. ಅಲ್ಲಿದ್ದ ಕಟ್ಟಡಗಳಲ್ಲಿ ಜ್ಯೂಪಿಟರ್, ಜುನೋ ಮತ್ತು ಮಿನರ್ವ ದೇವಾಲಯಗಳ ಸಮೂಹ, ಅಪೊಲೊ ಮಂದಿರ, ನ್ಯಾಯಾಲಯಗಳಿದ್ದ ಬೆಸಲಿಕ ಇವು ಗಮನಾರ್ಹ. ಕಂಬಗಳಿಂದ ಕೂಡಿದ ಹಜಾರ, ಚಿತ್ರಗಳಿಂದ ಅಲಂಕೃತವಾದ ಗೋಡೆಗಳು ಇವು ಹೆಲೆನಿಸ್ಟಿಕ್ ಶೈಲಿಯ ಪ್ರತೀಕಗಳಾಗಿದ್ದುವು. ವಿಧಾನಪರಿಷತ್ತಿನ (ಕ್ಯೂರಿಯ) ಭವನ ಜವಳಿ ಕೆಲಸಗಾರರ ಮಹಾಸಂಘದ ಕಟ್ಟಡ ಇವು ಉಳಿದ ನಿರ್ಮಾಣಗಳ ಪೈಕಿ ಗಮನಾರ್ಹ. ಈ ನಗರದ ಆಗ್ನೇಯ ದಿಕ್ಕಿನಲ್ಲಿರುವ ಮುಕ್ಕೋನ ಚೌಕ ಬಹಳ ಪ್ರಾಚೀನ ಭಾಗಗಳಲ್ಲಿ ಒಂದು. ಅಲ್ಲಿರುವ ಡೋರಿಕ್ ಶೈಲಿಯ ದೇವಾಲಯದ ಬಳಿ ಸಾರ್ವಜನಿಕರ ಮನರಂಜನೆಗಾಗಿ ಕೆಲವು ನಾಟ್ಯಮಂದಿರಗಳನ್ನು ನಿರ್ಮಿಸಲಾಗಿತ್ತು. ಓಡಿಯನ್ ಮತ್ತು ವಿಶಾಲ ರಂಗಮಂದಿರಗಳು, ಖಡ್ಗಯುದ್ಧ ಪ್ರದರ್ಶನ ಗೃಹ, ಝ್ಯೂಸ್ ದೇವಾಲಯ ಇವು ಆ ಭಾಗದ ಮುಖ್ಯ ಕಟ್ಟಡಗಳು. ನಗರದ ಮಧ್ಯಭಾಗದಲ್ಲಿ ಸಾರ್ವಜನಿಕ ಸ್ನಾನಗೃಹಗಳನ್ನು ನಿರ್ಮಿಸಲಾಗಿತ್ತು.

ಇವಲ್ಲದೆ ಹಲವಾರು ವ್ಯಕ್ತಿಗಳ ವಾಸಗೃಹಗಳನ್ನು ಗುರುತಿಸಲಾಗಿದೆ. ಶಸ್ತ್ರವೈದ್ಯನ ಮನೆಯೆಂದು ಕರೆಯಲಾದ ಒಂದು ಕಟ್ಟಡದಲ್ಲಿ ಶಸ್ತ್ರಚಿಕಿತ್ಸೆಗೆ ಬಳಸುವ ಹಲವು ಉಪಕರಣಗಳು ದೊರಕಿವೆ. ಲ್ಯಾಬಿರಿಂತ್ ಮನೆಯೆಂದು ಹೆಸರಾದ ಮತ್ತೊಂದು ಕಟ್ಟಡದಲ್ಲಿ ವಾಸ್ತುವಿನ್ಯಾಸಕ್ಕೆ ಪೂರಕವಾದ ಅನೇಕ ಭಿತ್ತಿವರ್ಣಚಿತ್ರಗಳಿವೆ. ಇವು ಚಿತ್ರಕಲೆಯ ಬೆಳವಣಿಗೆಯ ದ್ವಿತೀಯ ಹಂತಕ್ಕೆ ಸೇರಿದವು. ನಗರದ ಕೊನೆಗಾಲದಲ್ಲಿ ಮನೆಗಳ ಗೋಡೆಗಳ ಮೇಲೆ ಗಾರೆಯ ಶಿಲ್ಪಗಳ ಅಲಂಕರಣಗಳಿದ್ದುದು ತಿಳಿದುಬರುತ್ತದೆ. ಅಲ್ಲದೆ ವಿಶಾಲವಾದ ಪಡಸಾಲೆಗಳಲ್ಲಿ ಇಟ್ಟಿಗೆ ಗಾರೆಗಳಿಂದ ನಿರ್ಮಿಸಿದ ಕಂಬಗಳಿದ್ದುವು. ಈ ಅಂಶಗಳು ರೋಮನರ ವಾಸ್ತು ಪದ್ಧತಿಯ ಪ್ರತೀಕಗಳಾಗಿದ್ದುವು.

ಚಿತ್ರ, ಶಿಲ್ಪ ಮತ್ತಿತರ ಕುಶಲ ಕಲೆಗಳು: ಪ್ರಾಚೀನ ಕಾಲದ ಅತ್ಯುತ್ತಮ ಚಿತ್ರಕಲೆಯ ನಿದರ್ಶನಗಳನ್ನು ಉಳಿಸಿಕೊಂಡ ನಗರಗಳಲ್ಲಿ ಪಾಂಪೆಯೂ ಒಂದಾಗಿತ್ತು. ಇಲ್ಲಿಯ ಚಿತ್ರಕಲೆಯನ್ನು ನಾಲ್ಕು ಹಂತಗಳಾಗಿ ವಿಂಗಡಿಸಲಾಗಿದೆ: ಮೊದಲನೆಯ ಹಂತ: (ಪ್ರ.ಶ.ಪೂ.180–80). ಈ ಕಾಲದಲ್ಲಿ ಗಾರೆಯ ಮೇಲಿನ ಚಿತ್ರಗಳು ಅಮೃತಶಿಲೆಯ ಬಣ್ಣವನ್ನು ಹೋಲುತ್ತವೆ. ಎರಡನೆಯ ಹಂತ: (ಪ್ರ.ಶ.ಪೂ.80–ಪ್ರ.ಶ.14). ಈ ಕಾಲದ ಚಿತ್ರಗಳಲ್ಲಿ ಯಥಾದೃಷ್ಟ ರೂಪಣದ ಮತ್ತು ಆಯಾಮ ನಿರೂಪಣೆಯ ಪ್ರಯತ್ನಗಳು ನಡೆದುವು. ಈ ಶೈಲಿಯಲ್ಲಿ ವಾಸ್ತು ಅಲಂಕರಣ ಪ್ರಧಾನವಾಗಿತ್ತು. ಪೌರಾಣಿಕ, ಧಾರ್ಮಿಕ ಮತ್ತು ಶೌರ್ಯ ನಿರೂಪಣೆಯ ದೃಶ್ಯಗಳಿಗೆ ಪ್ರಾಧಾನ್ಯ ದೊರಕಿತ್ತು. ಮೂರನೆಯ ಅಥವಾ ಈಜಿಪ್ಟ್ ಪ್ರಭಾವಿತ ಹಂತ: (14–62). ಈ ಕಾಲದಲ್ಲಿ ಅಲಂಕರಣ ಚಿತ್ರಗಳಿಗೆ ಪ್ರಾಮುಖ್ಯ ನೀಡಲಾಯಿತು. ಬಹಳ ಸೂಕ್ಷ್ಮವಾದ ಕೌಶಲಪೂರ್ಣವಾದ ಚಿತ್ರಗಳನ್ನು ರಚಿಸಲಾಯಿತು. ನಾಲ್ಕನೆಯ ಅಥವಾ ಭ್ರಾಮಕ ಹಂತ: (62–79). ಇಡೀ ಗೋಡೆಯ ಮೇಲೆ ವಸ್ತು ಪ್ರಾಧಾನ್ಯವಿಲ್ಲದ ಅಲಂಕಾರಮಯ ಚಿತ್ರಗಳನ್ನು ಬಿಡಿಸಲಾಗಿತ್ತು. ಶ್ರೀಮಂತರ ಗೃಹಗಳಲ್ಲಿ ವಿವಿಧ ಬಣ್ಣಗಳ ಚಿತ್ರಗಳನ್ನು ಕಾಣಬಹುದಾಗಿತ್ತು. ಹಲವು ಬಣ್ಣಗಳ ಕಲ್ಲುಗಳ ಜೋಡಣೆಯಿಂದ ಇಂಥ ವರ್ಣಾಲಂಕರಣ ಮಾಡಲಾಗುತ್ತಿತ್ತು. ಮೃಗಗೃಹದಲ್ಲಿ ವರ್ಣಚಿತ್ರದ ಅನುಕರಣೆಯಲ್ಲಿ ರಚಿಸಲಾಗಿರುವ ಇಸ್ಸಸ್‍ನ ಕದನದ ಚಿತ್ರ ಇಂಥ ಚಿತ್ರಗಳ ಪೈಕಿ ಅತ್ಯಂತ ಸುಂದರವಾದ ಕೃತಿ, ಸಿಸಿರೋನ ಭವನದಲ್ಲಿದ್ದ ವಿವಿಧ ಬಣ್ಣಗಳ ಜೋಡಣೆಯ ಇಂಥ ಮತ್ತೊಂದು ಚಿತ್ರದಲ್ಲಿ ಹೆಲೆನಿಕ್ ಯುಗದ ಜನಜೀವನ ನಿರೂಪಣೆಯ ದೃಶ್ಯಗಳನ್ನು ಕಾಣಬಹುದು.

ಇಲ್ಲಿ ದೊರಕಿರುವ ಅವಶೇಷಗಳಲ್ಲಿ ಕಂಚಿನ ಮತ್ತು ಕಲ್ಲಿನ ಹಲವಾರು ಶಿಲ್ಪ ಕೃತಿಗಳಿವೆ. ಇವುಗಳಲ್ಲಿ ಸಾರ್ವಜನಿಕ ಕಟ್ಟಡ, ಉದ್ಯಾನ ಮತ್ತು ನೀರು ಚಿಲುಮೆಗಳನ್ನು ಅಲಂಕರಿಸಲು ಬಳಸಿದ್ದ ಕಂಚಿನ ಮಾನವ ಮತ್ತು ಪ್ರಾಣಿಗಳ ಶಿಲ್ಪಗಳು ಬಹಳ ಮೋಹಕವಾಗಿವೆ. (ಬಿ.ಕೆ.ಜಿ)

**ಪಾಕಿಸ್ತಾನ:** ಮಧ್ಯ ಏಷ್ಯದ ನೈರುತ್ಯ ದಿಕ್ಕಿನಲ್ಲಿ ಹಾಗೂ ಭಾರತದ ವಾಯವ್ಯದಲ್ಲಿರುವ ಒಂದು ದೇಶ. ಪಾಕಿಸ್ತಾನ ಒಂದು ಪ್ರತ್ಯೇಕ ರಾಷ್ಟ್ರವಾದದ್ದು 1947ರಲ್ಲಾದರೂ ಈ ಪ್ರದೇಶದ ಇತಿಹಾಸ ಬಹಳ ಪ್ರಾಚೀನವಾದದ್ದು. ಇಲ್ಲಿ ವ್ಯವಸ್ಥಿತ ಪ್ರಾಕ್ತನ ಸಂಶೋಧನೆಗಳು ಹೆಚ್ಚಾಗಿ ನಡೆದಿಲ್ಲವಾದ್ದರಿಂದ ಇಲ್ಲಿನ ಆದಿಮಾನವನ ಚಟುವಟಿಕೆಗಳ ಸಮಗ್ರ ಚಿತ್ರ ದೊರೆಯದಾಗಿದೆ. ಭರತಖಂಡದ ಪ್ರಾಚೀನತಮ ಶಿಲಾಯುಗ ಸಂಸ್ಕೃತಿಗಳ ಪಳೆಯುಳಿಕೆಗಳನ್ನು ಪಂಜಾಬಿನ ಸೋಹನ್ ನದಿ ಕಣಿವೆಯಲ್ಲಿ 1935ರ ವೇಳೆಗೆ ಹೆಲ್ಮೆಟ್ ಡಿ ಟೆರ್ರ ನಾಯಕತ್ವದಲ್ಲಿ ಅಮೆರಿಕದಿಂದ ಬಂದ ಸಂಶೋಧನ ತಂಡ ಕಂಡುಹಿಡಿಯಿತು. ಅದರ ಪ್ರಕಾರ ಮಧ್ಯ ಹಿಮಯುಗದಲ್ಲಿ ಮಾನವ ಇಲ್ಲಿ ನೆಲೆಸಿದ್ದ. ಇವನು ದೊಡ್ಡ ಒರಟಾದ ಚಕ್ಕೆಕಲ್ಲಿನ ಉಪಕರಣಗಳನ್ನು ಬಳಸುತ್ತಿದ್ದ. ಆದರೆ ಅವು ಮಾನವ ನಿರ್ಮಿತವಲ್ಲವೇನೋ ಎಂಬ ಸಂದೇಹವನ್ನು ವಿದ್ವಾಂಸರು ಈಚೆಗೆ ವ್ಯಕ್ತಪಡಿಸುತ್ತಾರೆ. ಅನಂತರಕಾಲದಲ್ಲಿ, ಸೋಹನ್ ಸಂಸ್ಕೃತಿಯವೆಂದು ಹೇಳಲಾದ, ಉರುಟು ಕಲ್ಲಿನಿಂದ ಏಕಮುಖವಾದ, ಚಕ್ಕೆಗಳನ್ನು ತೆಗೆದು ನಿರ್ಮಿಸಿದ ಮಚ್ಚುಕತ್ತಿ ಮತ್ತು ತುಂಡುಕೊಡಲಿಗಳ ಬಗ್ಗೆ ಇಂಥ ಸಂದೇಹಕ್ಕೆ ಎಡೆಯಿಲ್ಲ. ವಿವಿಧ ಸಂಶೋಧಕರ ಹೇಳಿಕೆಗಳಿಗೆ ಅನುಗುಣವಾಗಿ ಈ ಸಂಸ್ಕೃತಿಗಳನ್ನು ಪ್ರ.ಶ.ಪೂ. 1500000–200000 ಕಾಲಕ್ಕೆ ನಿರ್ದೇಶಿಸಬಹುದಾಗಿದೆ. ಈ ದೀರ್ಘಕಾಲದ ಉದ್ದಕ್ಕೂ ಉಪಕರಣ ತಯಾರಿಕೆಯಲ್ಲಿ ಸುಧಾರಣೆಗಳಾಗುತ್ತಿದ್ದುದರಿಂದ, ಈ ಸಂಸ್ಕೃತಿಯ ಉಪಕರಣಗಳನ್ನು ಆದಿ ಮಧ್ಯ ಮತ್ತು ಸುಧಾರಿತ ಸೋಹನ್ ಸಂಸ್ಕೃತಿಗಳೆಂದು ಮೂರು ಗುಂಪುಗಳಾಗಿ ವಿಭಜಿಸಲಾಗಿದೆ. ಆದಿಕಾಲದಲ್ಲಿ ಉಂಡೆಕಲ್ಲುಗಳನ್ನು ಸೀಳಿ ಅವುಗಳ ಒಂದು ಪಾರ್ಶ್ವದಿಂದ ಚಕ್ಕೆಗಳನ್ನು ತೆಗೆದು ಉಪಕರಣಗಳನ್ನು ಮಾಡಲಾಗುತ್ತಿತ್ತು. ಅನಂತರದ ಕಾಲದಲ್ಲಿ ಸೀಳಿದ ಕಲ್ಲುಗಳ ಒಂದು ಅಥವಾ ಎರಡು ಮುಖಗಳಿಂದಲೂ ಚಕ್ಕೆಗಳನ್ನು ತೆಗೆದು ಉತ್ತಮ ಆಕೃತಿಯ ಮತ್ತು ಹೆಚ್ಚು ಉಪಯುಕ್ತವಾದ ಕೊಡಲಿಗಳನ್ನು ತಯಾರಿಸುತ್ತಿದ್ದುದಲ್ಲದೆ ಇವರು ಲೆವಾಲ್ವ ವಿಧಾನದಲ್ಲಿ ಮಾಡಿದ ಚಕ್ಕೆಕಲ್ಲಿನ ಉಪಕರಣಗಳನ್ನೂ ಬಳಸುತ್ತಿದ್ದರು. ಇವರ ಅರ್ಧದಷ್ಟು ಉಪಕರಣಗಳು ಇವೆ ಆಗಿದ್ದುವು. ಪಾಕಿಸ್ತಾನದ ಪಂಜಾಬ್ ಪ್ರದೇಶದಲ್ಲಿ ಚೌಂತ್ರ, ಅಡಿಯಾಲ್, ಬಲವಾಲ್ ಮತ್ತು ಫರಿಯಾಲ್ ಪ್ರದೇಶಗಳಲ್ಲಿ, ಆದಿ ಹಳೆಶಿಲಾಯುಗಕ್ಕೆ ಸೇರಿದ, ಆದರೆ ಪರ್ಯಾಯ ದ್ವೀಪೀಯ ಭಾರತದಲ್ಲಿ ಪ್ರಬಲವಾಗಿರುವ, ಕೈಗೊಡಲಿ–ಕಡಿಕತ್ತಿ ಸಂಸ್ಕೃತಿಯ ಕುರುಹುಗಳೂ ಕಂಡುಬಂದಿವೆ. ಸುಧಾರಿತ ಸೋಹನ್ ಸಂಸ್ಕೃತಿಯಲ್ಲಿ ಉರುಟು ಕಲ್ಲಿನ ಉಪಕರಣಗಳು ಬಹಳ ಕಡಿಮೆಯಾದುವಲ್ಲದೆ ಸಣ್ಣವೂ ಉತ್ತಮವಾಗಿ ತಯಾರಿಸಿದವೂ ಆಗಿದ್ದುವು; ಆದರೆ ಚಕ್ಕೆ ಕಲ್ಲಿನ ಉಪಕರಣಗಳು ಅಧಿಕ ಸಂಖ್ಯೆಯಲ್ಲಿ ಕಂಡುಬಂದುವು. ಈ ಉಪಕರಣಗಳನ್ನು ಸಾಮಾನ್ಯವಾಗಿ ಮಧ್ಯ ಹಳೆಶಿಲಾಯುಗ ಸಂಸ್ಕೃತಿಗೆ (ಪ್ರ.ಶ.ಪೂ.100000) ನಿರ್ದೇಶಿಸಲಾಗಿದೆ.

ಈಚಿನ ವರ್ಷಗಳಲ್ಲಿ ಎ.ಎಚ್.ದಾನಿಯವರು ಪೆಷಾವರ್ ಬಳಿಯ ಸಂಘಾವೊ ಗುಹೆಗಳಲ್ಲಿ ಮಧ್ಯ ಹಳೆಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ಇವು ಆಫ್ಘಾನಿಸ್ತಾನ ಮತ್ತು ಇರಾನಿನ ಇದೇ ಸಂಸ್ಕೃತಿಯ ಉಪಕರಣ ರೀತಿಗಳನ್ನು ಹೋಲುತ್ತವೆ. ಆಗಿನ ಜನ ಹೆಚ್ಚಾಗಿ ಗುಹೆಗಳಲ್ಲಿ ವಾಸಿಸುತ್ತ, ಆಹಾರ ಸಂಗ್ರಹಣೆಯಿಂದ ಜೀವನ ಸಾಗಿಸುತ್ತಿದ್ದರು. ಈ ಸಂಸ್ಕೃತಿಗಳ ಕಾಲವನ್ನು ಪ್ರ.ಶ.ಪೂ. 50000–10000 ಎಂದು ಹೇಳಬಹುದಾಗಿದೆ.

ಈವರೆಗೆ ಪರಿಶೀಲಿಸಿದ ಸಂಸ್ಕೃತಿಗಳ ಉಪಕರಣಗಳಿಂದ ಮಾತ್ರ ಆಗಿನ ಜನಜೀವನದ ರೀತಿ ಪದ್ಧತಿಗಳನ್ನು ಊಹಿಸಬೇಕಾಗಿದೆ. ಆ ಸಂಸ್ಕೃತಿಗಳ ಕರ್ತೃಗಳಾದ ಮಾನವರ ದೇಹಾವಶೇಷಗಳು ಈವರೆಗೆ ದೊರೆತಿಲ್ಲವಾದ್ದರಿಂದ ಅವರ ಸಮಗ್ರ ಚಿತ್ರ ತಿಳಿದಿಲ್ಲ. ಚೀನ, ಇಂಡೊನೇಷ್ಯ ಮತ್ತು ಮಲೇಷ್ಯಗಳಲ್ಲಿ ಇದನ್ನು ಹೋಲುವ ಸಂಸ್ಕೃತಿಗಳಿದ್ದುದರಿಂದ ಇಲ್ಲಿಯ ಜನರು ಅವರಂತೆ ಇದ್ದಿರಬಹುದು.

ಪ್ರ.ಶ.ಪೂ.5000 ದಿಂದ ಈಚೆಗೆ ಬಲೂಚಿಸ್ತಾನ ಮತ್ತು ಸಿಂಧ್ ಪ್ರದೇಶಗಳಲ್ಲಿ ಪ್ರಾಚೀನ ಜನ ನೆಲೆಸಿ ಆಹಾರೋತ್ಪಾದನೆಯತ್ತ ಮೊದಲ ಹೆಜ್ಜೆಯನ್ನಿಟ್ಟರು. ಕ್ವೆಟ್ಟ, ಜೋಬ್, ಆಮ್ರಿ–ನಾಲ್, ಎಡಿತ್‍ಷಾಹರ್ ಪ್ರದೇಶಗಳಲ್ಲಿ ಈ ಜನ ನವಶಿಲಾಯುಗದ ಅನಂತರ ತಾಮ್ರ–ಶಿಲಾಯುಗದ ಹಂತದ ಸಂಸ್ಕೃತಿಗಳನ್ನು ರೂಢಿಸಿಕೊಂಡರು. ಪಶುಪಾಲನೆ, ವ್ಯವಸಾಯ, ಮಣ್ಪಾತ್ರೆಗಳ ಉಪಯೋಗ, ಸಣ್ಣ ಗ್ರಾಮಗಳಲ್ಲಿ ಗುಡಿಸಲುಗಳಲ್ಲಿ, ಮಣ್ಣಿನ ಅಥವಾ ಹಸಿ ಇಟ್ಟಿಗೆಗಳಿಂದ ನಿರ್ಮಿಸಿದ ಮನೆಗಳಲ್ಲಿ ವಸತಿ–ಇವು ಮೊದಮೊದಲು ಇವರ ಜೀವನದ ಮುಖ್ಯ ಲಕ್ಷಣಗಳಾಗಿದ್ದುವು. ಕ್ರಮೇಣ ಅಕ್ಕಪಕ್ಕದ ದೇಶಗಳೊಂದಿಗೆ ತಾಮ್ರ, ತವರ, ಅಬ್ಸಿಡಿಯನ್ ಮುಂತಾದ ಕಚ್ಚಾ ಸಾಮಗ್ರಿಗಳಿಗಾಗಿ ವ್ಯಾಪಾರಸಂಪರ್ಕ ಬೆಳೆದಾಗ ಪರಸ್ಪರ ಸಾಂಸ್ಕೃತಿಕ ಪ್ರಭಾವಗಳು ತಲೆದೋರಲಾರಂಭಿಸಿದುವು. ಜನಸಂಖ್ಯೆ ಹೆಚ್ಚಿದಂತೆ ಹೊಸ ಪ್ರದೇಶಗಳಿಗೆ ವಸತಿಯ ವಿಸ್ತರಣೆಯಾಯಿತು. ತಾಮ್ರದ ಮೊದಲ ಉಪಯೋಗ ಬಹುಶಃ ಇರಾನಿನ ಪ್ರಭಾವದಿಂದ ಪ್ರಾರಂಭವಾಯಿತು. ವ್ಯಾಪಾರ ಬೆಳೆದಂತೆ ಅದರ ಸೌಲಭ್ಯಕ್ಕಾಗಿ ಮುದ್ರೆಗಳು ಮತ್ತು ಅವುಗಳ ಮೇಲೆ ಕೊರೆದ ಸಂಕೇತ ಲಿಪಿ ಬಳಕೆಗೆ ಬಂದುವು. ಈ ಮಧ್ಯೆ ಗ್ರಾಮಜೀವನದಲ್ಲಿ ಸುಧಾರಣೆಯಾಗಿ ವೃತ್ತಿ ಕುಶಲತೆ ಮತ್ತು ವೈವಿಧ್ಯಗಳು ಹುಟ್ಟಿಕೊಂಡವು. ಕ್ರಮೇಣ ಗ್ರಾಮಗಳ ಗಾತ್ರ ಬೆಳೆದು ಸಣ್ಣ ನಗರಗಳು, ಅವುಗಳ ಸುತ್ತ ಕೋಟೆ ಕೊತ್ತಲಗಳು, ನಗರಗಳಲ್ಲಿ ಅರಮನೆ, ದೇವಾಲಯ ಮತ್ತಿತರ ಸಾಮೂಹಿಕ ಭವನಗಳು ಅಸ್ತಿತ್ವಕ್ಕೆ ಬಂದುವು. ಅದೇ ಸುಮಾರಿನಲ್ಲಿ ದಕ್ಷಿಣ ಬಲೂಚಿಸ್ತಾನದಲ್ಲಿ ಕೃತಕ ನೀರಾವರಿ ಕಾರ್ಯಗಳು ಕಾಣಬರುತ್ತವೆ. ಹೀಗೆ ಪ್ರ.ಶ.ಪೂ.3ನೆಯ ಸಹಸ್ರಮಾನದ ಮಧ್ಯಭಾಗದಲ್ಲಿ ನಾಗರಿಕತೆಯ ಪ್ರಾರಂಭದ ಹಂತವನ್ನು ಕಾಣಬಹುದಾಗಿದೆ.

ತರುವಾಯ ಭಾರತ ಉಪಖಂಡದಲ್ಲೇ ಅನ್ಯಾದೃಶವಾದ, ಅತ್ಯಂತ ಪ್ರಗತಿಯುತವಾದ ಹರಪ್ಪ ನಾಗರಿಕತೆ ಪಾಕಿಸ್ತಾನದಲ್ಲಿ ತಲೆದೋರಿತು. ಪಂಜಾಬಿನಲ್ಲಿ ರಾವಿ ನದಿಯ ದಂಡೆಯಲ್ಲಿರುವ ಹರಪ್ಪ, ಸಿಂಧ್‍ನಲ್ಲಿ ಸಿಂಧೂ ನದಿಯ ದಂಡೆಯಲ್ಲಿರುವ ಮೊಹೆಂಜೋದಾರೊ, ಚನ್ಹುದಾರೊ, ಮಕ್ರಾನ್ ಕಡಲತೀರದಲ್ಲಿರುವ ಸುತ್ಕಜೆಂಡರ್, ಸೋಟ್‍ಕೋಖೊ, ಬಾಲಾ

ಕೋಟ ಮತ್ತು ಒಳನಾಡಿನಲ್ಲಿರುವ ದಾಬರಕೋಟ್, ಕೋಟ್‌ದಿಜಿ ಮುಂತಾದ ಹತ್ತಾರು ನೆಲೆಗಳಲ್ಲಿ ಈ ನಾಗರಿಕತೆಯ ಅವಶೇಷಗಳನ್ನು ಶೋಧಿಸಲಾಗಿದೆ. ಇವುಗಳಲ್ಲಿ ಹರಪ್ಪ, ಮೊಹೆಂಜೋದಾರೊ ಇವು ಆ ಚಕ್ರಾಧಿಪತ್ಯದ ಅವಳಿ ರಾಜಧಾನಿಗಳೆಂದೂ ಚನ್ಹುದಾರೊ ಕೈಗಾರಿಕಾ ನಗರವೆಂದೂ ಸುತ್ಕಜೆಂಡರ್, ಸೋಟ್‌ಕೋಖೊ ಮತ್ತು ಬಾಲಾಕೋಟ ರೇವು ಪಟ್ಟಣಗಳೆಂದೂ ಪರಿಗಣಿತವಾಗಿವೆ. ಮೊದಲ ಎರಡು ನಗರಗಳಲ್ಲಿ ನಡೆದ ಭೂಶೋಧನೆಗಳಿಂದ ಸುವ್ಯವಸ್ಥಿತ ನಗರಯೋಜನೆಯ ರೂಪರೇಷೆಗಳು ತಿಳಿದುಬಂದಿವೆ.

ಹರಪ್ಪ ನಾಗರಿಕತೆ ಆಳಿದ ಸ್ವಲ್ಪ ಕಾಲದ ಮೇಲೆ, ಪ್ರ.ಶ.ಪೂ.2ನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ, ಪ್ರಾಯಶಃ ಪ್ರ.ಶ.ಪೂ.1200ರ ವೇಳೆಗೆ, ಈ ಪ್ರದೇಶದಲ್ಲಿ ಗ್ರಾಮಜೀವನದ ಹಂತದಲ್ಲಿದ್ದ ಪಶುಪಾಲನ ಆರ್ಯರು ಬಂದು ನೆಲೆಸಿದರು. ಅದೇ ಸಮಯದಲ್ಲಿ ಅಥವಾ ಸ್ವಲ್ಪ ಮೊದಲು, ಪಶ್ಚಿಮ ಭಾಗದಲ್ಲಿ ಬಲೂಚಿಸ್ತಾನ ಮತ್ತು ಸಿಂಧ್ ಪ್ರದೇಶಗಳಲ್ಲಿ ಬೇರೊಂದು ಪಂಗಡದವರು ನೆಲಸಿದಂತೆ ಕಾಣುತ್ತದೆ. ಸೊಹರ್‌ಡಾಂಬ್, ನಾಲ್, ರಾಣಾಘುಂಡೈ, ಷಾಹಿತುಂಪ್, ಚನ್ಹುದಾರೊ ಮುಂತಾದ ನೆಲೆಗಳಲ್ಲಿ ಅವರ ಮಾಹಿತಿಗಳು ಕಾಣಸಿಗುತ್ತವೆ.

**ಇತಿಹಾಸ:** ಪಾಕಿಸ್ತಾನದ ಪ್ರಾಚೀನ ಇತಿಹಾಸದ ಹೆಚ್ಚಿನ ಮಾಹಿತಿಗಳು ದೊರಕದಿದ್ದರೂ ಆ ಪ್ರದೇಶ ಮಹಾಕಾವ್ಯಗಳ ಕಾಲದಿಂದಲೂ ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಮಹಾಭಾರತದ ಕೌರವರ ತಾಯಿ ಅ ಪ್ರದೇಶದ ಗಾಂಧಾರ ರಾಜ್ಯದ ರಾಜಕುಮಾರಿ, ಜನಮೇಜಯನ ಸರ್ಪಯಜ್ಞದ ಸಂಬಂಧದಲ್ಲಿ ತಕ್ಷಶಿಲೆಯ ಉಲ್ಲೇಖವಿದೆ. ಪ್ರ.ಶ.ಪೂ.7–6ನೆಯ ಶತಮಾನಗಳಿಂದಲೂ ಅದು ಪ್ರಖ್ಯಾತ ವಿದ್ಯಾ ಕೇಂದ್ರವಾಗಿತ್ತು. ಪ್ರ.ಶ.ಪೂ.5ನೆಯ ಶತಮಾನದಲ್ಲಿದ್ದ ಪಾಣಿನಿ ಆ ಪ್ರದೇಶದ ಸಾಲಾತುರದವನಾಗಿದ್ದು ತಕ್ಷಶಿಲೆಯಲ್ಲಿ ವಿದ್ಯಾಭ್ಯಾಸ ಪಡೆದ. ಅವನಿಗೂ ಮೊದಲಿನ ಶಾಕಟಾಯನ ಮತ್ತು ಶೌನಕರು ಅದೇ ಪ್ರಾಂತ್ಯದವರಾಗಿದ್ದರು. ಆ ಸುಮಾರಿನಲ್ಲಿ ತಕ್ಷಶಿಲೆ ಅಶ್ವಕ (ಅಸ್ಸಕ), ಗಾಂಧಾರ (ರಾಜಧಾನಿ; ಪುರುಷಪುರ–ಪೆಷಾವರ್) ಕಾಂಭೋಜ (ಹಜಾರ ಜಿಲ್ಲೆ) ಮುಂತಾದ ರಾಜ್ಯಗಳು, ಮತ್ತೆ ಕೆಲವು ಗಣರಾಜ್ಯಗಳು ಈ ಪ್ರದೇಶದಲ್ಲಿದ್ದುವೆಂದು ತಿಳಿದುಬರುತ್ತದೆ. ಆಗ ಪರ್ಷಿಯದ ಸಾರ್ವಭೌಮನಾದ, ಅಕೆಮಿನಿಡ್ ವಂಶದ ದರ್ಯಾವುಷ್ ಭಾರತದತ್ತ ಲಕ್ಷ್ಯಹರಿಸಿ ಗಾಂಧಾರ, ಮಕ್ರಾನ್ ಮತ್ತು ಸಿಂಧ್ ಪ್ರಾಂತ್ಯಗಳನ್ನು ವಶಪಡಿಸಿಕೊಂಡ ತರುವಾಯ ಪ್ರ.ಶ.ಪೂ.330ರಲ್ಲಿ ಅಲೆಕ್ಸಾಂಡರನ ಧಾಳಿಯವರೆಗೂ ಈ ಪ್ರದೇಶ ಪರ್ಷಿಯನರ ಅಧೀನವಾಗಿತ್ತೆಂದು ಕಾಣುತ್ತದೆ. ಅನಂತರ ಪ್ರ.ಶ.ಪೂ.326ರಲ್ಲಿ ಅಲೆಕ್ಸಾಂಡರ್ ಆ ಪ್ರದೇಶದ ಮೇಲೆ ಧಾಳಿ ಮಾಡಿದಾಗ ಅಂಭಿಯ ತಕ್ಷಶಿಲಾ ರಾಜ್ಯ, ಝೀಲಂ ಮತ್ತು ರಾವಿ ನದಿಗಳ ನಡುವೆ ಇದ್ದ ಪುರೂರವನ ರಾಜ್ಯ, ಹಿಂದೂಕುಷ್ ಪರ್ವತ ಭಾಗದಲ್ಲಿ ಶಶಿಗುಪ್ತನ ರಾಜ್ಯ, ಅಷ್ಟಕ ರಾಜನ ಪುಷ್ಕಲಾವತಿ ಇವುಗಳಲ್ಲದೆ ಅಶ್ವಕಾಯನ, ಮಸ್ಸಗ, ವಾರಣ, ಕಠ, ಮಲ್ಲ (ಮಾಳವ), ಕ್ಷುದ್ರಕ, ಸಿಬಿ, ಅರ್ಜುನಾಯಿ, ಅಂಬಷ್ಠ, ಕ್ಷತ್ರಿಯ, ಮೂಷಿಕ ಮುಂತಾದ ಗಣರಾಜ್ಯಗಳ ಜನರು ಸ್ವತಂತ್ರವಾಗಿ ಆಳುತ್ತಿದ್ದು ಗ್ರೀಕರನ್ನು ಎದುರಿಸಿದುದಾಗಿ ತಿಳಿದುಬರುತ್ತದೆ. ಆದರೆ ಅಂಭಿ, ಶಶಿಗುಪ್ತ ಮುಂತಾದವರ ವಿದ್ರೋಹದಿಂದ ಗ್ರೀಕ್ ಸೈನ್ಯ ವಾಯವ್ಯಭಾರತವನ್ನು ಆಕ್ರಮಿಸಿತು. ಆದರೆ ಅಲೆಕ್ಸಾಂಡರನ ಹಿಂದಿರುಗುವಿಕೆಯೊಂದಿಗೆ ಗ್ರೀಕರ ಅಧಿಕಾರ ಕುಸಿಯತೊಡಗಿತು. ಅಲೆಕ್ಸಾಂಡರನ ಪ್ರಾಂತ್ಯಾಧಿಕಾರಿಗಳಾದ ಫಿಲಿಪ್ಸ್ ಪಂಜಾಬ್ ಪ್ರಾಂತದಲ್ಲೂ ಪಿಥೋನ್ ಸಿಂಧ್ ಪ್ರಾಂತ್ಯದಲ್ಲೂ ಹಿಂದು ರಾಜರಾದ ಅಂಭಿ ತಕ್ಷಶಿಲೆಯಲ್ಲೂ ಪುರೂರವ ಝೀಲಂ ಪ್ರದೇಶದಲ್ಲೂ ಆಳುತ್ತಿದ್ದರು. ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಗ್ರೀಕ್ ರಾಜ್ಯಾಧಿಕಾರಿ ಸೆಲ್ಯೂಕಸ್ ನಿಕೇಟರನನ್ನು ಪ್ರ.ಶ.ಪೂ.305ರಲ್ಲಿ ಸೋಲಿಸಿದಾಗ ಪಾಕಿಸ್ತಾನದ ಬಹುಭಾಗ ಮೌರ್ಯಸಾಮ್ರಾಜ್ಯದಲ್ಲಿ ಸೇರಿಹೋಯಿತು. ತಕ್ಷಶಿಲೆಯನ್ನು ಮುಖ್ಯ ನಗರವನ್ನಾಗಿ ಹೊಂದಿದ್ದ ಗಾಂಧಾರ ಪ್ರತ್ಯೇಕ ಆಡಳಿತ ಘಟಕವಾಗಿತ್ತು. ಬಿಂದುಸಾರನ ಕಾಲದಲ್ಲಿ ಎದ್ದ ದಂಗೆಯನ್ನು ಯುವರಾಜ ಅಶೋಕ ಅಡಗಿಸಿ ಪ್ರಾಂತ್ಯಾಧಿಕಾರಿಯಾಗಿದ್ದ. ಅಶೋಕನ ಕಾಲದಲ್ಲಿ ಈ ಪ್ರದೇಶದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ಆದರೆ ಅವನ ಅದಕ್ಷ ಉತ್ತರಾಧಿಕಾರಿಗಳ ಆಳಿಕೆಯಲ್ಲಿ ವಾಯವ್ಯ ಭಾರತ ಸ್ವತಂತ್ರವಾಗಿ, ಹಲವಾರು ಸಣ್ಣ ಪುಟ್ಟ ರಾಜ್ಯಗಳು ಹುಟ್ಟಿಕೊಂಡುವು.

ಪಾಟಲಿಪುತ್ರದಲ್ಲಿ ಪುಷ್ಯಮಿತ್ರ ಸುಂಗ ಆಳುತ್ತಿದ್ದಾಗ ಬ್ಯಾಕ್ಟ್ರಿಯದಲ್ಲಿ ಆಳುತ್ತಿದ್ದ ಗ್ರೀಕರು ವಾಯವ್ಯ ಭಾರತದ ಮೇಲೆ ಧಾಳಿ ಮಾಡಿದರು. ಆಂಟಿಯೋಕಸನ ಅಳಿಯನಾದ ಡೆಮಿಟ್ರಿಯಸ್ (ಪ್ರ.ಶ.ಪೂ.190) ಪಂಜಾಬ್, ಬಲೂಚಿಸ್ತಾನ ಮತ್ತು ಸಿಂಧ್ ಪ್ರಾಂತ್ಯಗಳನ್ನು ಗೆದ್ದುಕೊಂಡಾಗ ಈ ಪ್ರದೇಶದಲ್ಲಿ ಬ್ಯಾಕ್ಟ್ರಿಯದ ಗ್ರೀಕರ ಆಡಳಿತ ಆರಂಭವಾಯಿತು. ಎರಡು ದಶಕಗಳ ಅನಂತರ ಮತ್ತೊಬ್ಬ ಗ್ರೀಕ್ ದಳಪತಿ ಯುಕ್ರಿಟೈಡಿಸ್ ಬ್ಯಾಕ್ಟ್ರಿಯ ಮತ್ತು ತಕ್ಷಶಿಲಾ ಪ್ರದೇಶಗಳನ್ನು ಆಕ್ರಮಿಸಿಕೊಂಡುದರಿಂದ ಪಾಕಿಸ್ತಾನ ಪ್ರದೇಶದಲ್ಲಿ ಎರಡು ಸ್ವತಂತ್ರ ಗ್ರೀಕ್ ಆಡಳಿತಗಳು ಅಸ್ತಿತ್ವಕ್ಕೆ ಬಂದುವು. ತಕ್ಷಶಿಲೆಯ ಅಪೋಲೊಡೋಟಸ್ ಮತ್ತು ಸಿಂಧ್ ಪ್ರಾಂತ್ಯದಲ್ಲಿ ಆಂಟಿಯಾಲ್ಕಿಡಾಸ್ ಪ್ರಮುಖರು. ಪ್ರ.ಶ.ಪೂ.80ರ ವೇಳೆಗೆ ಆರಕೋಸಿಯ ಪ್ರದೇಶದ ಶಕರು ತಕ್ಷಶಿಲೆಯನ್ನು ವಶಪಡಿಸಿಕೊಂಡರು. ಅವರಲ್ಲಿ ಪ್ರಮುಖರಾದ ಮಾವೆಸ್ ಮತ್ತು 1ನೆಯ ಅಜೆಸ್ ದೊರೆಗಳ ಅನಂತರ ಪ್ರ.ಶ.ಪೂ.20–30ರಲ್ಲಿ ಪಾರ್ಥಿಯನರು ಗೊಂಡೋಫರೆಸ್‌ನ ನೇತೃತ್ವದಲ್ಲಿ ಶಕರನ್ನು ಸೋಲಿಸಿ ವಾಯವ್ಯ ಭಾರತವನ್ನು ವಶಪಡಿಸಿಕೊಂಡರು. ಪಾರ್ಥಿಯನರ ಆಳಿಕೆಯಲ್ಲಿ 44ರಲ್ಲಿ ತ್ಯಾನದ ಅಪೋಲೋನಿಯಸ್ ತಕ್ಷಶಿಲೆಗೆ ಭೇಟಿ ನೀಡಿದುದಾಗಿ ಹೇಳಲಾಗಿದೆ.

ಪಾರ್ಥಿಯನರ ತರುವಾಯ 60ರ ಸುಮಾರಿನಲ್ಲಿ ಕುಷಾಣರು ಪಾಕಿಸ್ತಾನ ಪ್ರದೇಶವನ್ನು ವಶಪಡಿಸಿಕೊಂಡರು. ಮೊದಲು ಕುಜುಲ ಕಡ್‌ಫೀಸಿಸನೂ ತರುವಾಯ ವಿಮ ಕಡ್‌ಫೀಸಿಸನೂ ಕುಷಾಣರ ಆಡಳಿತವನ್ನು ಬಲಗೊಳಿಸಿದರು. ಅನಂತರ ಬಹುಶಃ 78ರಲ್ಲಿ ಕುಷಾಣ ವಂಶದಲ್ಲಿ ಹೆಚ್ಚು ಪ್ರಸಿದ್ಧನಾದ 1ನೆಯ ಕನಿಷ್ಕ ಸಿಂಹಾಸನಕ್ಕೆ ಬಂದಾಗ ಕುಷಾಣರಾಜ್ಯ ಇಡೀ ಪಾಕಿಸ್ತಾನ ಪ್ರದೇಶವನ್ನೂ ಈಗಿನ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಗುಜರಾತಿನ ಕೆಲವು ಪ್ರದೇಶಗಳನ್ನೂ ಒಳಗೊಂಡಿತ್ತು. ಈ ಪ್ರದೇಶದ ಇತಿಹಾಸದಲ್ಲಿ ಕುಷಾಣ ಯುಗವನ್ನು ಸುವರ್ಣಯುಗವೆಂದು ಹೇಳಬಹುದು. ಕುಷಾಣರು ಹಿಂದುಧರ್ಮದ ಶೈವ ಸಂಪ್ರದಾಯವನ್ನೂ ಕನಿಷ್ಕನ ಕಾಲದಿಂದ ಬೌದ್ಧಧರ್ಮವನ್ನೂ ಅನುಸರಿಸಿದರು. ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಇವರು ಬಹಳ ಪ್ರಗತಿ ಸಾಧಿಸಿದರು. ವಸುಬಂಧು, ಅಶ್ವಘೋಷ ಇವರು ಈ ಕಾಲದ ಪ್ರಖ್ಯಾತ ಬೌದ್ಧ ಸಾಹಿತಿಗಳು. ಈ ಕಾಲದಲ್ಲಿ ಗಾಂಧಾರ ಪ್ರದೇಶದಲ್ಲಿ ಗ್ರೀಕ್ ಮತ್ತು ಹಿಂದು ಪರಂಪರೆಗಳಿಂದ ಹುಟ್ಟಿದ ಗಾಂಧಾರ ಶಿಲ್ಪಕಲೆ ಭಾರತೀಯ ಕಲಾ ಸಂಪ್ರದಾಯದಲ್ಲಿ ಉನ್ನತವಾದ ಹೊಸ ಶೈಲಿಯನ್ನು ಬೆಳೆಸಿತು. ಮಹಾಯಾನ ಬೌದ್ಧಪಂಥ ಹುಟ್ಟಿಕೊಂಡು ಅದರ ಪ್ರಭಾವದಿಂದ ಬುದ್ಧನ ಮಾನವರೂಪದ ಶಿಲ್ಪಗಳು ಅಸ್ತಿತ್ವಕ್ಕೆ ಬಂದುವು. ಪುರುಷಪುರ (ಪೆಷಾವರ್) ಇವರ ರಾಜಧಾನಿ. ಅದರ ಸುತ್ತಮುತ್ತ ಅನೇಕ ಬೌದ್ಧಸ್ತೂಪಗಳೂ ವಿಹಾರಗಳೂ ನಿರ್ಮಿತವಾದುವು. ತಕ್ಷಶಿಲೆ, ಮಥುರ–ಇವು ಧಾರ್ಮಿಕ ಮತ್ತು ರಾಜಕೀಯ ಕೇಂದ್ರಗಳಾಗಿದ್ದುವು. ಕನಿಷ್ಕನ ಉತ್ತರಾಧಿಕಾರಿಗಳಾಗಿದ್ದ ಹುವಿಷ್ಕ ಮತ್ತು ವಾಸುದೇವರ ಆಳಿಕೆಯಲ್ಲಿ ಉನ್ನತ ಸ್ಥಿತಿಯಲ್ಲಿದ್ದ ಕುಷಾಣ ರಾಜ್ಯ ಕ್ರಮೇಣ ಕುಸಿಯಲಾರಂಭಿಸಿತ್ತು. ವಾಸುದೇವನ ಮರಣದ ಅನಂತರ (225) ಕ್ರಮೇಣ ಕ್ಷೀಣಿಸಲಾರಂಭಿಸಿದ ಕುಷಾಣ ರಾಜ್ಯ 5ನೆಯ ಶತಮಾನದವರೆಗೂ ಉಳಿದು ಬಂತು. ಆ ವೇಳೆಗೆ 226ರಲ್ಲಿ ಪರ್ಷಿಯದಲ್ಲಿ ಸ್ಥಾಪಿತವಾದ ಸಸ್ಸೇನಿಯನ್ ಚಕ್ರಾಧಿಪತ್ಯ ಮತ್ತು ಮಗಧದಲ್ಲಿ ಸ್ಥಾಪಿತವಾದ ಗುಪ್ತ ಸಾಮ್ರಾಜ್ಯ ಬಹಳ ಪ್ರಬಲವಾಗಿದ್ದುವು. 400ರಲ್ಲಿ ತಕ್ಷಶಿಲೆಗೆ ಭೇಟಿಕೊಟ್ಟ ಚೀನಿ ಬೌದ್ಧಯಾತ್ರಿಕ ಫಾಹಿಯಾನ್ ಅದರ ಬಗ್ಗೆ ಕೆಲವು ಮಾಹಿತಿಗಳನ್ನೊದಗಿಸಿದ್ದಾನೆ.

ಚೀನದ ಗಡಿ ಪ್ರದೇಶದಿಂದ ಹೊರಟ ಹೂಣರು 450ರ ಸುಮಾರಿಗೆ ಪರ್ಷಿಯ ಮತ್ತು ಭಾರತದ ದಿಕ್ಕಿನಲ್ಲಿ ಧಾಳಿಮಾಡಿದರು. ಪರ್ಷಿಯವನ್ನು ಗೆದ್ದು ಹಿಂದೂಕುಷ್ ಪರ್ವತಗಳನ್ನು ದಾಟಿ ಗಾಂಧಾರವನ್ನು ವಶಪಡಿಸಿಕೊಂಡರು. ಗುಪ್ತ ದೊರೆ ಸ್ಕಂದಗುಪ್ತ 460ರಲ್ಲಿ ಹೂಣರನ್ನು ಸೋಲಿಸಿ ಅವರು ಮುಂದುವರಿಯದಂತೆ ತಡೆದ. ಅವರ ನಾಯಕ ತೋರಮಾನ್ ಪಾಕಿಸ್ತಾನ ಪ್ರದೇಶವನ್ನೂ ಭಾರತದ ಹಲವು ಭಾಗಗಳನ್ನೂ ಆಕ್ರಮಿಸಿಕೊಂಡು ಪಂಜಾಬಿನಲ್ಲಿ ಚೀನಾಬ್ ದಂಡೆಯಲ್ಲಿದ್ದ ವೈಯಾದಿಂದ ಆಳುತ್ತಿದ್ದ. ಅವನ ಮಗ ಮಿಹಿರಕುಲ 515ರಲ್ಲಿ ಸಿಂಹಾಸನಕ್ಕೆ ಬಂದು ಸಿಯಾಲ್‌ಕೋಟ್‌ನಿಂದ ಆಳುತ್ತಿದ್ದ. ಅವನ ಪಂಗಡದ ಮತ್ತೊಂದು ಶಾಖೆ ಗಾಂಧಾರದಲ್ಲಿ ಆಳುತ್ತಿತ್ತು. ಈ ಮಧ್ಯೆ ತಕ್ಷಶಿಲೆಯ ಪ್ರಾಂತ್ಯದಿಂದ ಕಿದಾರ ಕುಷಾಣ ಮನೆತನದವರು ಆಳುತ್ತಿದ್ದರು. ಹೂಣ ರಾಜ್ಯ 563–67ರ ವೇಳೆಗೆ ಕಣ್ಮರೆಯಾಯಿತು. ಹರ್ಷನ ಕಾಲದಲ್ಲಿ ಸಿಂಧ್ ಪ್ರಾಂತ್ಯದಲ್ಲಿ ಒಂದು ಸ್ವತಂತ್ರ ರಾಜ್ಯವಿತ್ತು. ಹರ್ಷ ಅದನ್ನು ಎದುರಿಸಿದನೆಂದು ಬಾಣ ಮತ್ತು ಯುವಾನ್‌ಚಾಂಗ್ ತಿಳಿಸಿದ್ದಾರೆ. ಆ ಸಮಯದಲ್ಲಿ ಹಿಂದೂಕುಷ್ ಪರ್ವತಗಳ ದಕ್ಷಿಣದಲ್ಲಿ ಕ್ಷತ್ರಿಯ ರಾಜನ ವಶದಲ್ಲಿದ್ದ ಕಾಪಿಶ ಮತ್ತು ಸ್ವಾತ್ ಕಣಿವೆಯಲ್ಲಿ ಉದ್ಯಾನ ರಾಜ್ಯಗಳಿದ್ದುವು. ಪಂಜಾಬಿನಲ್ಲಿ ಹಲವಾರು ಸಣ್ಣ ರಾಜ್ಯಗಳಿದ್ದುವು. 7ನೆಯ ಶತಮಾನದ ಪೂರ್ವಾರ್ಧದಲ್ಲಿ ಅಸ್ತಿತ್ವಕ್ಕೆ ಬಂದ ಸಿಂಧೂ ರಾಜ್ಯ ಮುಲ್ತಾನದ ದಕ್ಷಿಣಕ್ಕೆ ಇಡೀ ಸಿಂಧ್ ಪ್ರದೇಶವನ್ನೊಳಗೊಂಡಿತ್ತು. ಬಹುಶಃ ಇಡೀ ಪಾಕಿಸ್ತಾನ ಪ್ರದೇಶ ಅದರ ವಶದಲ್ಲಿತ್ತು. ಆ ಪ್ರದೇಶದಲ್ಲಿ ರಚಿತವಾದ ಚಾಚ್‌ನಾಮಾ ಅದರ ಇತಿಹಾಸವನ್ನು ತಿಳಿಸುತ್ತದೆ. ಸಿಂಧೂ ರಾಜ್ಯದ ಪ್ರಬಲ ದೊರೆ ಚಾಚ್ ಸತ್ತ ಅನಂತರ ಅವನ ಮಗ ದಾಹರನ ಕಾಲದಲ್ಲಿ (700–708) ಅರಬರು ಸಿಂಧ್ ಪ್ರಾಂತವನ್ನು ಮುತ್ತಿದರು.

ಅರಬರು ಪ್ರಥಮವಾಗಿ ಸಿಂಧ್ ವಿರುದ್ಧ 643ರಲ್ಲಿ ನೌಕಾಧಾಳಿ ನಡೆಸಿ ವಿಫಲರಾದರು. ಮತ್ತೆ 663ರಲ್ಲಿ ಅವರ ಭೂ ಸೈನ್ಯ ಸೋತಿತು. ಮೂರನೆಯ ಸಲ ಅರಬರ ಧಾಳಿ 708ರಲ್ಲಿ ಪ್ರಾರಂಭವಾಗಿ 712ರ ವೇಳೆಗೆ ಮಹಮ್ಮದ್–ಇಬ್ನ್–ಕಾಸಿಮನ ನೇತೃತ್ವದಲ್ಲಿ ಜಯಗಳಿಸಿತು. ಆದರೆ 750ರ ವೇಳೆಗೆ ಸಿಂಧ್‌ನ ಕೆಲವು ಪ್ರದೇಶಗಳ ಮೇಲೆ ಮಾತ್ರ ಅವರು ಹತೋಟಿ ಉಳಿಸಿಕೊಂಡಿದ್ದರು. ಮುಂದೆ ಬಲಾತ್ಕಾರ ಮತಾಂತರಗಳಿಂದ ಇಸ್ಲಾಮ್ ಮತ ಇಲ್ಲಿ ಪ್ರಬಲಗೊಳ್ಳತೊಡಗಿತು. ಆಗ ಅಫ್ಘಾನಿಸ್ತಾನ ಮತ್ತು ಬಲೂಚಿಸ್ತಾನ ಪ್ರದೇಶದಲ್ಲಿ, ಕಾಬುಲ್, ಜ್ಞಾಬುಲ್ ಮತ್ತು ಸಿಂಧ್ ರಾಜ್ಯಗಳಲ್ಲಿ ಅರಬರು ನೆಲೆಸಿದ್ದರು. ಬಾಗ್ದಾದ್‌ನಲ್ಲಿ ಅಬ್ಬಾಸಿದ್ ಕಲೀಫರು 749ರಿಂದ ಪ್ರಬಲರಾಗತೊಡಗಿದಾಗ ಮತ್ತೆ ಪಾಕಿಸ್ತಾನ ಪ್ರದೇಶದಲ್ಲಿ ಇವರು ಬಲಗೊಳ್ಳತೊಡಗಿದರು. ಕಾಬುಲ್ ಮತ್ತು ಜ್ಞಾಬುಲ್ ಸ್ವತಂತ್ರವಾಗಿದ್ದರೂ ಆಗಾಗ್ಗೆ ಕಲೀಫರಿಗೆ ಕಪ್ಪ ನೀಡಬೇಕಾಗಿತ್ತು. 870ರಲ್ಲಿ ಜ್ಞಾಬುಲ್ ಆಕ್ರಮಣಕ್ಕೊಳಗಾಯಿತು. ಅಲ್ಲೂ ಮತ್ತು ಇಸ್ಲಾಂ ಧರ್ಮ ನೆಲೆಗೊಂಡಿತು. ಕಾಬುಲ್ ರಾಜ್ಯ ಹಿಂದುಶಾಹಿ ರಾಜ್ಯದಲ್ಲಿ ಸೇರಿತು. ಆದರೆ ಕ್ರಮೇಣ ಸಿಂಧ್‌ನಲ್ಲಿ ಅರಬರು ಪ್ರಾಬಲ್ಯ ಗಳಿಸಿದರು. ಅವರ ರಾಜಧಾನಿ ಮನ್ಸುರಾ (ಈಗಿನ ಪಾಕಿಸ್ತಾನ ಹೈದರಾಬಾದಿನಿಂದ ಆಗ್ನೇಯಕ್ಕೆ ಸು.69ಕಿಮೀ) ಇವರು ಗುರ್ಜರ–ಪ್ರತೀಹಾರ ಮತ್ತು ಪಾಲ ವಂಶದವರೊಂದಿಗೆ ಆಗಾಗ್ಗೆ ಹೋರಾಡಬೇಕಾಗಿತ್ತು. ಅಬ್ಬಾಸಿದರ

ಪತನದ ಅನಂತರ (ಸು.830) ಅಲ್ ಮಮೂನ್ ಕಲೀಫನಾದಾಗ ಸಿಂಧ್ ಅವನ ಅಧಿಕಾರಿಯಾದ ಮೂಸನ ವಶವಾಯಿತು. ಸಫವಿದ್ ಕಲೀಫರ ಕಾಲದಲ್ಲಿ (872–903) ಸಿಂಧ್ ಪ್ರಾಂತವನ್ನು ಮನ್ಸುರಾ ಮತ್ತು ಮುಲ್ತಾನ್‌ಗಳಾಗಿ ಒಡೆಯಲಾಯಿತು.

ಆಕ್ಸಸ್ ನದಿಯ ದಕ್ಷಿಣ ಭಾಗದಲ್ಲಿ 999ರಲ್ಲಿ ಘಜ್ನಿ ಮನೆತನ ಅಧಿಕಾರಕ್ಕೆ ಬರುವ ವೇಳೆಗೆ ಈ ರಾಜ್ಯಗಳು ಬಲಗುಂದಿದ್ದುವು. ಆದರೆ ಭಾರತದ ಮೇಲೆ ಮಹಮ್ಮದನ ಧಾಳಿಗಳಿಂದ ಪರಿಸ್ಥಿತಿ ಪೂರ್ಣವಾಗಿ ಬದಲಾಯಿತು. ಮಹಮ್ಮದನ ಮೊದಲನೆಯ ಧಾಳಿ 1000 ರಲ್ಲಿ ನಡೆಯಿತು. ಅವನ ನಿರಂತರ ಧಾಳಿಗಳ ಫಲವಾಗಿ ಪಾಕಿಸ್ತಾನ ಪ್ರದೇಶ ಅವನಿಗೆ ತಲೆಬಾಗ ಬೇಕಾಯಿತು. ಅದು 1200ರ ವರೆಗೂ ಮುಸ್ಲಿಮರ ವಶದಲ್ಲಿ ಉಳಿಯಿತು. ಘೋರಿ ಮನೆತನ ಅಧಿಕಾರಕ್ಕೆ ಬಂದ ಮೇಲೆ 1178ರಲ್ಲಿ ಘೋರಿ ಮಹಮದ್ ವಾಯವ್ಯ ಭಾರತದ ಮೇಲೆ ಆಕ್ರಮಣ ನಡೆಸಿ ಚಾಳುಕ್ಯ ಇಮ್ಮಡಿ ಮೂಲರಾಜನಿಂದ ಸೋತು ಹಿಂದಿರುಗಿದರೂ 1192ರಲ್ಲಿ ಉತ್ತರಭಾರತ ಅವನ ವಶವಾಯಿತು. ಆಗ ಪಾಕಿಸ್ತಾನ ಪ್ರದೇಶ ಅವನ ರಾಜ್ಯದಲ್ಲಿ ಸೇರಿಹೋಯಿತು. ಮಂಗೋಲರು 1229ರಿಂದ ಸಿಂಧ್ ಪ್ರಾಂತದ ಮೇಲೆ ಆಗಾಗ್ಗೆ ಧಾಳಿ ಮಾಡುತ್ತಿದ್ದರು. 1247ರಿಂದ ಅದು ಅವರ ವಶವಾಯಿತು. ಅಲಾಉದ್ದೀನ್ ಖಿಲ್ಜಿ ದೆಹಲಿಯ ಸುಲ್ತಾನನಾಗಿದ್ದಾಗ ಪಾಕಿಸ್ತಾನದ ಬಹುಭಾಗ ಖಿಲ್ಜಿ ರಾಜ್ಯದಲ್ಲಿ ಸೇರಿತ್ತು. 1303ರಲ್ಲಿ ಮಂಗೋಲರು ದೆಹಲಿಯ ಮೇಲೆ ಧಾಳಿ ನಡೆಸಿದುದರ ಫಲವಾಗಿ ಜಾಗೃತನಾದ ಅಲಾಉದ್ದೀನ್ ತನ್ನ ವಾಯವ್ಯಗಡಿ ಪ್ರದೇಶದತ್ತ ಗಮನಕೊಡಬೇಕಾಯಿತು. 1305ರಲ್ಲಿ ಮಂಗೋಲರು ಸಿಂಧ್ ಪ್ರಾಂತ್ಯದ ಮುಖಾಂತರ ಉತ್ತರ ಭಾರತದ ಕಡೆಗೆ ನುಗ್ಗಿದರು. ಆಗ ಪಂಜಾಬು ದೆಹಲಿ ಸುಲ್ತಾನರ ವಶದಲ್ಲಿತ್ತು. ಮಂಗೋಲರ ನಾಯಕರಾದ ಅಲಿ ಬೇಗ್ ಮತ್ತು ತರ್ತಾಖರನ್ನು ಸೆರೆಹಿಡಿದು ಕೊಲ್ಲಲಾಯಿತು. ಮರುವರ್ಷ ಮಂಗೋಲರ ಒಂದು ದಳ ಸಿಂಧ್ ಮುಲ್ತಾನ್ ಪ್ರದೇಶಗಳ ಮೂಲಕವೂ ಇನ್ನೊಂದು ದಳ ನಾಗೋರಿನ ಮೂಲಕವೂ ನುಗ್ಗಿದಾಗಲೂ ಅವರ ಪ್ರಯತ್ನ ವಿಫಲವಾಯಿತು. ಮತ್ತೆ 1327ರಲ್ಲಿ ತರ್ಮಾಷಿರೀನನ ನಾಯಕತ್ವದ ದಳ ಆ ಪ್ರದೇಶದ ಮೂಲಕ ದೆಹಲಿಯವರೆಗೂ ನುಗ್ಗಿ ತುಗಲಕ್ ಮಹಮ್ಮದನಿಂದ ವಿಪುಲೈಶ್ವರ್ಯವನ್ನು ಲೂಟಿ ಹೊಡೆದು ಹಿಂದಿರುಗಿತು. ಮಂಗೋಲರ ಉಪಟಳವನ್ನು ತಡೆಯುವ ಸಲುವಾಗಿ ತುಗಲಕ್ ಮಹಮ್ಮದ್ ಅವರ ಪ್ರದೇಶದ ಮೇಲೆ 1337ರಲ್ಲಿ ಧಾಳಿ ಮಾಡಿದರೂ ಪ್ರಯೋಜನವಾಗಲಿಲ್ಲ. ತರುವಾಯ ತೈಮೂರ್ 1398ರಲ್ಲಿ ಪಂಜಾಬ್, ಮುಲ್ತಾನ್ ಮುಖಾಂತರ ನುಗ್ಗಿ ದೆಹಲಿಯನ್ನು ಲೂಟಿ ಮಾಡಿದ. ಅನಂತರ ತುಗಲಕ್ ವಂಶ ಕೊನೆಗೊಂಡಿತು. ತೈಮೂರನ ಪ್ರತಿನಿಧಿ ಮಲ್ಲೂ ಸತ್ತ ಮೇಲೆ ಆಫ್ಘನ್ ಸರದಾರ ದೌಲತ್ ಖಾನ್ ಲೋದಿ ದೆಹಲಿಯಿಂದ ಆಳತೊಡಗಿದ. ಪಾಕಿಸ್ತಾನ ಪ್ರದೇಶ ಅವನ ವಶದಲ್ಲಿತ್ತು. ಖಿಜಿರ್‌ಖಾನ್ 1414ರಲ್ಲಿ ದೌಲತನನ್ನು ಸೆರೆಹಿಡಿದು ಸಯ್ಯಿದ್ ಮನೆತನದ ಆಳಿಕೆಯನ್ನು ಸ್ಥಾಪಿಸಿದ. ಪಾಕಿಸ್ತಾನ ಪ್ರದೇಶ ಅವನ ವಶವಾಯಿತು. ಆ ಮನೆತನದ ಕೊನೆಯ ಸುಲ್ತಾನನಾದ ಆಲಂ ಷಾನನ್ನು ಬಹಲೋಲ್ ಷಾ ಘಾಜಿ 1451ರಲ್ಲಿ ಸಿಂಹಾಸನದಿಂದ ತಳ್ಳಿದ. ಲೋದಿ ಮನೆತನ ಅಧಿಕಾರಕ್ಕೆ ಬಂತು. ಪಾಕಿಸ್ತಾನ ಪ್ರದೇಶ ಆ ಮನೆತನದ ವಶವಾಯಿತು.

ಹೀಗೆ ಸಾಮಾನ್ಯವಾಗಿ ಈ ಪ್ರದೇಶ ದೆಹಲಿ ಸುಲ್ತಾನರ ವಶದಲ್ಲಿದ್ದರೂ ಘಜ್ನಿಮಹಮದನ ಧಾಳಿಗಳ ತರುವಾಯ 1010ರ ಸುಮಾರಿಗೆ ಸಿಂಧ್ ಪ್ರಾಂತ್ಯದಲ್ಲಿ, ಸ್ವತಂತ್ರವಾದ, ಹಿಂದು ಮೂಲದವರಾದರೂ ಇಸ್ಲಾಮಿಗೆ ಮತಾಂತರಗೊಂಡಿದ್ದ, ಎರಡು ಮನೆತನಗಳು ಆಳುತ್ತಿದ್ದುವು. ಇವುಗಳ ಪೈಕಿ ಮನ್ಸುರಾದಿಂದ ಆಳುತ್ತಿದ್ದದ್ದು ಸೂಮ್ರ ಮನೆತನ. ಈ ಮನೆತನದವರು ಮೊದಲು ಪರಮಾರ ರಜಪುತ ವಂಶದವರೆಂದು ಹೇಳಲಾಗಿದೆ. ಇವರು ಪ್ರಾಯಶಃ ಏರುಪೇರುಗಳನ್ನುಭವಿಸುತ್ತ 1335ರ ವರೆಗೂ ಆಳುತ್ತಿದ್ದರೆಂದು ಹೇಳಲಾಗಿದೆ. ತರುವಾಯ ಸಮ್ಮಾ ವಂಶದವರು ಅಧಿಕಾರಕ್ಕೆ ಬಂದರು. ಅವರು 1527ರ ವರೆಗೆ ಆಳಿದರು ಎಂದು ಹೇಳಲಾಗಿದೆ. ದೆಹಲಿಯ ಸುಲ್ತಾನರು ಮತ್ತು ಗುಜರಾತಿನ ನವಾಬರು ಇವರ ಮೇಲೆ ಅಧಿಕಾರ ಚಲಾಯಿಸುತ್ತಿದ್ದರು. ಮೊಗಲ್ ಸಾಮ್ರಾಜ್ಯಕಾಲದ ಉದ್ದಕ್ಕೂ ಪಾಕಿಸ್ತಾನ ಪ್ರದೇಶ ಹೆಚ್ಚು ಕಡಿಮೆ ಅವರ ಆಳಿಕೆಗೊಳಪಟ್ಟಿತ್ತು. ಸಮರಕಂಡದಲ್ಲಿ ಮೊದಲು ಆಳುತ್ತಿದ್ದ ಬಾಬರ್ ಮುಲ್ತಾನ್ ಮೂಲಕ ಭಾರತವನ್ನು ಪ್ರವೇಶಿಸಿದಾಗ ಆ ಪ್ರದೇಶ ಅವನ ವಶವಾಯಿತು. ಅಕ್ಬರನ ಸಿಂಹಾಸನಾರೋಹಣ ಕಾಲದಿಂದ (1556) 1707ರ ವರೆಗೂ ಪಾಕಿಸ್ತಾನ ಪ್ರದೇಶ ಮೊಗಲರ ವಶದಲ್ಲಿತ್ತಾದರೂ ವಾಯವ್ಯ ಸರಹದ್ದಿನ ಬೆಟ್ಟ ಪ್ರದೇಶದಲ್ಲಿ ಕೆಲವು ಸ್ವತಂತ್ರ ಪಠಾಣ ಪಂಗಡಗಳು ನೆಲೆಸಿದ್ದು ಸಾಮ್ರಾಜ್ಯಕ್ಕೆ ತೊಂದರೆ ಕೊಡುತ್ತಿದ್ದುವು. ಅನಂತರ ಬಹವಾಲ್ ಪುರದಲ್ಲಿ ಒಂದು ಸ್ವತಂತ್ರ ಮುಸ್ಲಿಮ್ ರಾಜ್ಯವೂ ಪಂಜಾಬಿನಲ್ಲಿ ಸ್ವತಂತ್ರ ಸಿಖ್ ರಾಜ್ಯವೂ ಹುಟ್ಟಿಕೊಂಡುವು.

ಪರಿಸ್ಥಿತಿ ಹೀಗೆ ಕ್ಲಿಷ್ಟವಾಗಿದ್ದಾಗ ವಾಯವ್ಯ ಭಾರತ ಮತ್ತೊಮ್ಮೆ ವಿದೇಶಿ ಧಾಳಿಗೆ ತುತ್ತಾಯಿತು. ಪರ್ಷಿಯದಲ್ಲಿ ಆಳುತ್ತಿದ್ದ ನಾದಿರ್ ಷಾ ಪಂಜಾಬ್, ಮುಲ್ತಾನ್ ಪ್ರದೇಶಗಳನ್ನು ವಶಪಡಿಸಿಕೊಂಡು 1739ರ ಮಾರ್ಚ್‌ನಲ್ಲಿ ದೆಹಲಿಯವರೆಗೂ ನುಗ್ಗಿ ಬಂದ. ದೆಹಲಿ ಅವನ ವಶವಾಯಿತು. ಪಂಜಾಬ್ ಮತ್ತು ದೆಹಲಿ ಪ್ರದೇಶಗಳು ಕೊಳ್ಳೆಗೆ ಒಳಗಾದುವು. ನಾದಿರ್ ಷಾನ ಮರಣಾನಂತರ ಪರ್ಷಿಯಾದ ಅಧಿಕಾರವನ್ನು ಕಸಿದುಕೊಂಡ ಅಹ್ಮದ್ ಷಾ ಅಬ್ದಾಲಿ ಪೆಷಾವರ್ ಪ್ರದೇಶವನ್ನು ಆಕ್ರಮಿಸಿ ಲಾಹೋರ್‌ವರೆಗೂ ಮುನ್ನುಗ್ಗಿ 1747–67ರ ವರೆಗೆ ಏಳು ಬಾರಿ ಲೂಟಿ ಮಾಡಿದ. ಅಬ್ದಾಲಿ 1752ರಲ್ಲಿ ಮೀರ್ ಮನ್ನು ಎಂಬವನನ್ನು ಪಂಜಾಬಿನ ಪ್ರಾಂತಾಧಿಕಾರಿಯಾಗಿ ನೇಮಿಸಿದ. ಆ ಧಾಳಿಗಳ ಫಲವಾಗಿ ವಾಯವ್ಯ ಭಾರತದಲ್ಲಿ ಮೊಗಲರ ಅಧಿಕಾರ ಬಲಗುಂದಿ ಸಿಖ್ ರಾಜ್ಯ ಬಲಗೊಳ್ಳಲು ಸಾಧ್ಯವಾಯಿತು. ಈ ಮಧ್ಯೆ 1785ರಲ್ಲಿ ವಾಯವ್ಯ ಭಾರತದಲ್ಲಿ ಪ್ರಬಲವಾಗುತ್ತಿದ್ದ ಸಿಕ್ಕರಿಗೂ ದೆಹಲಿಯವರೆಗೆ ಪ್ರಭಾವ ಬೀರಿದ್ದ ಮರಾಠರಿಗೂ ಒಂದು ಶಾಂತಿ ಒಪ್ಪಂದವಾಗಿತ್ತು. 1797ರೊಳಗೆ ಅವರು ಮತ್ತೆ ಕಚ್ಚಾಡತೊಡಗಿದ್ದರು. ಆದರೆ ಸಿಂಧ್ ಮತ್ತು ಬಲೂಚಿಸ್ತಾನ್ ಪ್ರದೇಶಗಳು ಅತಂತ್ರವಾಗಿ ಅಡಿಗಡಿಗೂ ಬೇರೆಯವರ ದಾಸ್ಯಕ್ಕೊಳಗಾಗುತ್ತಿದ್ದುವು. ಆಫ್ಘಾನಿಸ್ತಾನದಲ್ಲಿ ಕಾಬೂಲ್ ರಾಜ್ಯ ಬಲಗೊಂಡಿದ್ದು, ವಾಯವ್ಯ ಗಡಿ ಪ್ರದೇಶ ಮತ್ತು ಬಲೂಚಿಸ್ತಾನ ಅದರ ವಶದಲ್ಲಿತ್ತು. ಈ ವೇಳೆಗೆ ಸಿಂಧ್ ಪ್ರಾಂತ್ಯ ಹೆಸರಿಗೆ ಕಾಬೂಲಿನ ವಶದಲ್ಲಿದ್ದರೂ ಹೆಚ್ಚುಕಡಿಮೆ ಸ್ವತಂತ್ರವಾಗಿತ್ತು. ಆ ಪ್ರದೇಶದಲ್ಲಿ ಮೊದಲು ನಾಲ್ಕು, ಅನಂತರ ಮೂರು ರಾಜ್ಯಗಳು ಅಸ್ತಿತ್ವದಲ್ಲಿದ್ದುವು. ಖೈರ್‌ಪುರ (ಉತ್ತರಸಿಂಧ್), ಹೈದರಾಬಾದ್ (ದಕ್ಷಿಣ ಸಿಂಧ್) ಮತ್ತು ಮೀರ್‌ಪುರ–ಇವು ಅನುಕ್ರಮವಾಗಿ ಆ ರಾಜ್ಯಗಳ ರಾಜಧಾನಿಗಳಾಗಿದ್ದುವು. ಅವುಗಳ ಅಮೀನರು ಪೂರ್ವದಲ್ಲಿ ಬ್ರಿಟಿಷರ, ವಾಯವ್ಯ ಭಾಗದಲ್ಲಿ ಪರ್ಷಿಯನರ, ಉತ್ತರದಲ್ಲಿ ಆಫ್ಘನ್ನರ ಮತ್ತು ರಷ್ಯನರ ಸಾಮ್ರಾಜ್ಯದಾಹದ ಫಲವಾಗಿ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದರು. ಪಂಜಾಬಿನಲ್ಲಿ ಸಿಕ್ಕರ ದೊರೆ ರಣಜಿತ್ ಸಿಂಗ್ ಪ್ರಬಲನಾಗಿ ಸಿಂಧ್‌ನ ಮೇಲೆ ಕಣ್ಣು ಹಾಕಿದ್ದ. ಇಂಥ ಪರಿಸ್ಥಿತಿಯಲ್ಲಿ 1843ರಲ್ಲಿ ಬ್ರಿಟಿಷ್ ಗವರ್ನರ್–ಜನರಲ್ ಆಗಿದ್ದ ಎಲ್‌ನ್‌ಬರೋ ಮತ್ತು ದಳಪತಿ ಚಾರ್ಲ್ಸ್ ನೇಪಿಯರ್ ಇವರು ಸಿಂಧನ್ನು ಆಕ್ರಮಿಸಿಕೊಂಡರು. 1839ರಲ್ಲಿ ರಣಜಿತ್‌ಸಿಂಗ್ ಸತ್ತಮೇಲೆ ಗೊಂದಲಮಯ ಸ್ಥಿತಿಯಲ್ಲಿದ್ದ ಪಂಜಾಬ್ 1841ರಲ್ಲಿ ಬ್ರಿಟಿಷರ ವಶವಾಯಿತು. ಇಷ್ಟಾದರೂ ಬ್ರಿಟಿಷರ ಆಳಿಕೆಗೆ ಈ ಪ್ರದೇಶದಲ್ಲಿ ವಿರೋಧ ಮುಂದುವರಿಯಿತು. ವಾಯವ್ಯ ಸರಹದ್ದಿನಲ್ಲಿದ್ದ ಪಠಾಣ ಬುಡಕಟ್ಟಿನ ಜನರು ಆಗಾಗ್ಗೆ ದಂಗೆಯೆದ್ದು ಲೂಟಿ ನಡೆಸುತ್ತಿದ್ದರು. ಆಫ್ಘನರೊಂದಿಗೆ ಎರಡು ಬಾರಿ ಯುದ್ಧ ನಡೆಸಿದ ಅನಂತರ ಬ್ರಿಟಿಷರು ಅವರೊಂದಿಗೆ ಒಪ್ಪಂದ ಮಾಡಿಕೊಂಡು ಡ್ಯೂರಾಂಡ್ ರೇಖೆಯನ್ನು ಗಡಿಯೆಂದು ನಿರ್ಧರಿಸಿದರು. ಆದರೂ ಆ ಪ್ರದೇಶ ಬ್ರಿಟಿಷರ ಆಳಿಕೆಗೆ ಸುಲಭವಾಗಿ ಒಳಪಡಲಿಲ್ಲ. ಅನಂತರ ಸ್ವಲ್ಪ ಕಾಲ ಶಾಂತಿ ಮುಂದುವರಿದರೂ 1919, 1925, 1930–31, 1933 ಮತ್ತು 1936–37ರಲ್ಲಿ ಮತ್ತೆ ಮತ್ತೆ ದಂಗೆಗಳಾದುವು. 1915ರಲ್ಲಿ ಅಮೀರ್ ಹಬೀಬುಲ್ಲ ಮತ್ತು ಬ್ರಿಟಿಷರ ನಡುವೆ ವೈಮನಸ್ಯವುಂಟಾಯಿತು. ಅವನ ಮಗ ಅಮಾನುಲ್ಲಾನ ಕಾಲದಲ್ಲಿ 1919ರಲ್ಲಿ ಮೂರನೆಯ ಆಫ್ಘನ್ ಯುದ್ಧ ನಡೆದು ಅಮಾನುಲ್ಲಾ ಸೋತ. ತರುವಾಯ ಈ ಪ್ರದೇಶದಲ್ಲಿ ಹೆಚ್ಚಿನ ತೊಂದರೆ ಉಂಟಾಗಲಿಲ್ಲ.

ಈ ವೇಳೆಗೆ ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಬಿರುಸಿನಿಂದ ನಡೆದಿತ್ತು. ಮೊದಲು ಹಿಂದೂ ಮುಸ್ಲಿಮರು ಒಟ್ಟಾಗಿ ಹೋರಾಡಿದರೂ ಸು.1930ರ ಸುಮಾರಿನಿಂದ ಮಹಮ್ಮದ್ ಆಲಿ ಜಿನ್ನಾರ ನೇತೃತ್ವದಲ್ಲಿ ಮುಸ್ಲಿಮರು ಪ್ರತ್ಯೇಕ ಪಾಕಿಸ್ತಾನದ ಬೇಡಿಕೆಯನ್ನಿಟ್ಟರು. ಬ್ರಿಟಿಷರ ಮತಭೇದ ನೀತಿಯ ಫಲವಾಗಿ ಪ್ರತ್ಯೇಕತಾವಾದಿಗಳ ಕೈ ಬಲಗೊಂಡಿತು. ಮೊದಲು ಭಾರತೀಯ ನಾಯಕರು ದೇಶದ ವಿಭಜನೆಯನ್ನು ವಿರೋಧಿಸಿದರಾದರೂ ಅಂತಿಮವಾಗಿ ಅಖಂಡ ಭಾರತದ ವಿಭಜನೆಯಾಗಿ, 1947ರಲ್ಲಿ ಪ್ರತ್ಯೇಕ ಪಾಕಿಸ್ತಾನ ಅಸ್ತಿತ್ವಕ್ಕೆ ಬಂತು.

ಅನಂತರದ ಸುಮಾರು ಮೂರು ದಶಕಗಳ ಕಾಲದಲ್ಲಿ ಪಾಕಿಸ್ತಾನ ಬಹುಮಟ್ಟಿಗೆ ಮಿಲಿಟರಿ ಆಡಳಿತಕ್ಕೇ ಒಳಪಟ್ಟಿದೆ. 1971ರಲ್ಲಿ ಪೂರ್ವ ಪಾಕಿಸ್ತಾನ ಪ್ರತ್ಯೇಕಗೊಂಡು ಸ್ವತಂತ್ರ ಬಾಂಗ್ಲಾ ದೇಶವಾಯಿತು. ಸೋವಿಯತ್ – ಆಫ್ಘನ್ ಯುದ್ಧಗಳಿಂದಾಗಿ 1980ರ ದಶಕದಲ್ಲಿ ಹಲವು ಆಫ್ಘನ್ನರು ಪಾಕಿಸ್ತಾನಕ್ಕೆ ವಲಸೆ ಬಂದರು. 1988ರಲ್ಲಿ ಬೆನಜಿರ್ ಭುಟ್ಟೊ ಪ್ರಥಮ ಮಹಿಳಾ ಪ್ರಧಾನಿಯಾಗಿ ಚುನಾಯಿತರಾದರು. 1990ರ ಚುನಾವಣೆಗಳಲ್ಲಿ ಸೋತ ಬೆನಜಿರ್ ಭುಟ್ಟೊ ಅನಂತರ ನವಾಜ್ ಷರೀಫ್ ಇಸ್ಲಾಮಿಕ್ ಡೆಮೊಕ್ರಾಟಿಕ್ ಅಲೈಯನ್ಸ್ ಮೂಲಕ ಜಯಗಳಿಸಿ ಪ್ರಧಾನಿಯಾದರು. 1999ರ ಅಕ್ಟೋಬರ್ 12ರಲ್ಲಿ ಪ್ರಧಾನಿಯಾಗಿದ್ದ ನವಾಜ್ ಷರೀಫ್ ಸರ್ಕಾರವನ್ನು ಅಧಿಕಾರದಿಂದ ಇಳಿಸಿ ಜನರಲ್ ಪರ್ವೆಜ್ ಮುಷರಫ್ ಅಧ್ಯಕ್ಷನಾಗಿ ಮತ್ತು ಸೇನಾ ಮುಖ್ಯಸ್ಥನಾಗಿ ಘೋಷಣೆ. ಮಿಲಿಟರಿ ಆಡಳಿತಕ್ಕೆ ಪಾಕಿಸ್ತಾನ ಒಳಗಾಯಿತು. 2002 ಏಪ್ರಿಲ್ 30ರಲ್ಲಿ ಮತ್ತೆ 5 ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಆಯ್ಕೆ. ಈ ಮಧ್ಯೆ ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿಯಾಗಿದ್ದ ಬೇನಜೀರ್ ಭುಟ್ಟೊ ಅವರು ಪಾಕಿಸ್ತಾನಕ್ಕೆ ಬಂದಾಗ ಅವರ ರಾಜಕೀಯ ಹತ್ಯೆಯಾಯಿತು. ಮುಷರಫ್ 2008 ಆಗಸ್ಟ್ 18ರಂದು ತಮ್ಮ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಬೇಕಾಗಿ ಬಂತು. ಪಾಕಿಸ್ತಾನ್ ಸೆನೆಟ್‌ರ್ ಮುಖ್ಯಸ್ಥ ಮೊಹಮದ್ ಮಿಯನ್ ಸೂಮ್ರೊ ಪ್ರಭಾರ ಅಧ್ಯಕ್ಷರಾದರು (2008). ಆಸಿಫ್ ಅಲಿ ಜರ್ದಾರಿ ಈಗಿನ ಅಧ್ಯಕ್ಷರು (2009). (ಬಿ.ಕೆ.ಜಿ.)

**ಪಾಜೆ:** ಉಡುಪಿ ಜಿಲ್ಲೆಯಲ್ಲಿ ಉಡುಪಿಯಿಂದ ದಕ್ಷಿಣಕ್ಕೆ 12 ಕಿಮೀ ದೂರದಲ್ಲಿರುವ ನವಶಿಲಾಯುಗದ ನೆಲೆ. ಇದು ಉಡುಪಿ ತಾಲ್ಲೂಕಿನ ಕುರ್ಕಾಲು ಗ್ರಾಮದ ಒಂದು ಭಾಗ. ದಟ್ಟವಾದ ಕಾಡಿನಿಂದ ಆವೃತವಾದ ಗುಡ್ಡ ಪ್ರದೇಶ. 2005ರಲ್ಲಿ ಇಲ್ಲಿ ಆಕಸ್ಮಿಕವಾಗಿ ನವಶಿಲಾಯುಗದ ಕೊಡಲಿಗಳು ದೊರೆತವು. ಅನಂತರ ಇಲ್ಲಿಂದ ಮಡಕೆ ಚೂರುಗಳನ್ನು ಸಂಗ್ರಹಿಸಲಾಯಿತು. ಕೆಲಕಾಲಾನಂತರ ಇಲ್ಲಿ ಒಂದು ಮನೆಯ ಹತ್ತಿರ ಮಣ್ಣು ಅಗೆಯುತ್ತಿದ್ದಾಗ ಇಂತಹುದೇ ವಸ್ತುಗಳು ದೊರೆತವು. ಇವೆಲ್ಲವೂ ನವಶಿಲಾಯುಗ ಸಂಸ್ಕೃತಿಯದೆಂದು ಗುರುತಿಸಲಾಗಿದೆ. ಪಶ್ಚಿಮ ಕರಾವಳಿಯಲ್ಲಿ ಗುರುತಿಸಲಾದ ನವಶಿಲಾಯುಗದ ಪ್ರಥಮ ವಸತಿ ನೆಲೆ ಇದಾಗಿದೆ.

ದಕ್ಷಿಣ ಕನ್ನಡ (ಅವಿಭಜಿತ) ಜಿಲ್ಲೆಯಲ್ಲಿ ಮಾನವ ಇತಿಹಾಸ ಹೆಚ್ಚೆಂದರೆ ಬೃಹತ್ ಶಿಲಾಯುಗದವರೆಗೆ ವಿಸ್ತರಿಸಬಹುದು ಎಂಬ ಅಭಿಪ್ರಾಯವಿತ್ತು. ಪಾಜೆಯ ಶೋಧ ಈ ನಿಟ್ಟಿನಲ್ಲಿ ಮಹತ್ತ್ವದ್ದಾಗಿದೆ. ಉಡುಪಿ- ಮಂಗಳೂರು ಜಿಲ್ಲಾ ಪ್ರದೇಶದ ಕೆಲವು ನೆಲೆಗಳಲ್ಲಿ ಬಿಡಿ ಬಿಡಿಯಾಗಿ ನವಶಿಲಾಸಂಸ್ಕೃತಿಯ ಕೊಡಲಿಗಳು ಶೋಧವಾಗಿದ್ದರೂ ಈ ಸಂಸ್ಕೃತಿಯ ಜನಸಮುದಾಯದ ವಸತಿ ನೆಲೆ ಪತ್ತೆಯಾಗುತ್ತಿರುವುದು ಇದೇ ಮೊದಲು. (ಪಿ.ಎನ್.ಎನ್.)

**ಪಾಟಲಿಪುತ್ರ:** ಬಿಹಾರ ರಾಜ್ಯದಲ್ಲಿರುವ ಪ್ರಸಿದ್ಧ ಐತಿಹಾಸಿಕ ನೆಲೆ. ಭಾರತದ ಪ್ರಾಚೀನ ಮುಖ್ಯ ನಗರಗಳಲ್ಲಿ ಒಂದು. ಇದು ಮಥುರ, ವಾರಾಣಸಿ, ಅಯೋಧ್ಯ, ರಾಜಗೃಹ ಗಳಿಗಿಂತ ಈಚಿನದೆಂದು ತಿಳಿದುಬಂದಿದೆ. ಆದರೆ ಭಾರತದ ದೊಡ್ಡ ಚಕ್ರಾಧಿಪತ್ಯಗಳ ರಾಜಧಾನಿಯಾಗಿತ್ತೆಂಬ ಗೌರವ ಇದರದು. ಪ್ರಾಚೀನಕಾಲದಲ್ಲಿ ಇದಕ್ಕೆ ಪುಷ್ಪಪುರ, ಕುಸುಮ ಪುರ ಎಂದೂ ಹೆಸರುಗಳಿದ್ದುವು. ಈಗ ಈ ಸ್ಥಳದಲ್ಲಿರುವ ನಗರದ ಹೆಸರು ಪಟನ.

ಪಾಟಲಿಪುತ್ರ ಎಂಬ ಹೆಸರಿನ ಮೂಲದ ಬಗ್ಗೆ ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಇದನ್ನು ಕುರಿತು ಅನೇಕ ಐತಿಹ್ಯಗಳಿವೆ. ದುಷ್ಟ ರಾಜನೊಬ್ಬ ಕತ್ತರಿಸಿದ ಯತಿಯ ರುಂಡದಲ್ಲಿ ಬೆಳೆದ ಪಾಟಲಿವೃಕ್ಷದಿಂದ ಈ ಹೆಸರು ಹುಟ್ಟಿತೆಂದು ಜೈನ ಗ್ರಂಥವಾದ ಪರಿಸಿಷ್ಟಪರ್ವ ತಿಳಿಸುತ್ತದೆ. ಚಂಪ ನಗರದ ರಾಜ ಉದಾಯಿ ಪ್ರ.ಶ.ಪೂ.ಸು. 460ರಲ್ಲಿ ಹೊಸ ರಾಜಧಾನಿಗೆ ನೆಲೆಯನ್ನು ಹುಡುಕುತ್ತಿದ್ದಾಗ ಆ ಪ್ರಾಂತದಲ್ಲಿ ಅಪರೂಪವಾದ ಪಾಟಲಿವೃಕ್ಷದ ಮೇಲೆ ಕುಳಿತ ಚಾಷಾ ಪಕ್ಷಿ ಸ್ವಪ್ರಯತ್ನವಿಲ್ಲದೆ ಆಹಾರವನ್ನು ಪಡೆಯುತ್ತಿದ್ದುದನ್ನು ನೋಡಿ ಅದರಿಂದ ಆಕರ್ಷಿತರಾದ ರಾಜಪರಿವಾರದವರು ಆ ನೆಲೆಯನ್ನು ಹೊಸ ರಾಜಧಾನಿಯಾಗಿ ಆರಿಸಿ ಕೊಂಡು ಅಲ್ಲಿ ನಿರ್ಮಿಸಲಾದ ನಗರಕ್ಕೆ ಪಾಟಲಿಪುತ್ರವೆಂದು ಹೆಸರಿಟ್ಟರೆಂದೂ ಐತಿಹ್ಯವಿದೆ. ವಿರಕ್ತ ಮುನಿಕುಮಾರನೊಬ್ಬ ತನ್ನ ಗೆಳೆಯರ ಚೇಷ್ಟೆಯ ಫಲವಾಗಿ ಪಾಟಲಿವೃಕ್ಷವನ್ನು ವಿವಾಹಮಾಡಿಕೊಂಡನೆಂದೂ ವಿವಾಹದ ರಾತ್ರಿ ವೃಕ್ಷದೇವತೆ ತನ್ನ ಪುತ್ರಿಯನ್ನು ಅವನಿಗೆ ಅರ್ಪಿಸಿದಳೆಂದೂ ಆ ಮುನಿಕುಮಾರನಿಗೆ ಅವಳಲ್ಲಿ ಹುಟ್ಟಿದ ಪುತ್ರನಿಗೆ ಪಾಟಲಿಪುತ್ರನೆಂದು ಹೆಸರಾಗಿ ಅಲ್ಲಿ ಬೆಳೆದ ನಗರಕ್ಕೆ ಪಾಟಲಿಪುತ್ರವೆಂದು ಹೆಸರಾಯಿತೆಂದೂ ಇನ್ನೊಂದು ಕಥೆಯಿದೆ. ಬ್ರಾಹ್ಮಣಕುಮಾರ ಪುತ್ರಕನೆಂಬವನು ಪಾಟಲಿ ಎಂಬ ರಾಜಕುಮಾರಿಯನ್ನು ಪ್ರೀತಿಸಿ ತನ್ನ ಅತಿಮಾನುಷ ಶಕ್ತಿಯಿಂದ ಆಕೆಯನ್ನು ಗಗನಮಾರ್ಗವಾಗಿ ಎತ್ತಿಕೊಂಡು ಹೋಗಿ ಗಂಗಾನದಿಯ ತೀರದ ಈ ಸ್ಥಳದಲ್ಲಿ ನೆಲೆಸಿದನೆಂದೂ ಇದು ಪಾಟಲಿಪುತ್ರ ವಾಯಿತೆಂದೂ ಇನ್ನೊಂದು ಕಥೆ ತಿಳಿಸುತ್ತದೆ.

ಇಂಥ ಅಚಾರಿತ್ರಿಕ ಸಂಗತಿಗಳನ್ನು ಬಿಟ್ಟರೆ, ಪ್ರ.ಶ.ಪೂ.495–70ರಲ್ಲಿ ಮಗಧ ರಾಜ್ಯವನ್ನಾಳುತ್ತಿದ್ದ ಅಜಾತಶತ್ರು ವೈಶಾಲಿಯ ಲಿಚ್ಛವಿ ಗಣರಾಜ್ಯದ ಉಪದ್ರವಗಳಿಂದ ಬೇಸತ್ತು ರಾಜಗೃಹದ ಬದಲು ಹೊಸ ರಾಜಧಾನಿಯಾಗಿ ಈ ನೆಲೆಯನ್ನು ಇದರ ಆಯಕಟ್ಟಿನ ಸನ್ನಿವೇಶದ ದೃಷ್ಟಿಯಿಂದ ಆರಿಸಿದನೆಂದು ಹೇಳಲಾಗಿದೆ. ಗಂಗಾ ಮತ್ತು ಶೋಣಾ ನದಿಗಳ ಸಂಗಮದಲ್ಲಿ–ಇವುಗಳ ಮತ್ತು ಗಂಡಕೀ ಹಾಗೂ ಪುನ್–ಪುನ್ ನದಿಗಳ ಮಾರ್ಗ ವಾಗಿ ನಡೆಯುತ್ತಿದ್ದ ವ್ಯಾಪಾರ ಸಂಪರ್ಕಗಳಿಂದಾಗಿ ಇದು ಮಹತ್ತ್ವದ ಕೇಂದ್ರವಾಗಿತ್ತು. ಈ ನಗರದ ಸುತ್ತ ಕೋಟೆಯನ್ನು ನಿರ್ಮಿಸಲಾಯಿತು. ಗೌತಮಬುದ್ಧ ಈ ಮಾರ್ಗವಾಗಿ ಕ್ರಮಿಸಿದಾಗ ಇದು ಪ್ರಾಮುಖ್ಯ ಪಡೆದಿರಲಿಲ್ಲವಾದರೂ ವ್ಯಾಪಾರದ ದೃಷ್ಟಿಯಿಂದ ಇದೊಂದು ಮುಖ್ಯ ನಗರವಾಗುತ್ತದೆಂದು ಬುದ್ಧ ಹೇಳಿದನೆನ್ನಲಾಗಿದೆ. ಆದರೆ ಅಜಾತಶತ್ರುವಿನ ಉತ್ತರಾಧಿಕಾರಿಯಾದ ಉದಾಯಿ ಇಲ್ಲಿಗೆ ರಾಜಧಾನಿಯನ್ನು ಸ್ಥಳಾಂತರಿಸಿದುದಾಗಿ ತಿಳಿದು ಬರುತ್ತದೆ. ಆಗ ಹೊಸ ಕಟ್ಟಡಗಳೂ ದೇವಮಂದಿರಗಳೂ ಇಲ್ಲಿ ನಿರ್ಮಾಣವಾದುವೆಂದು ಜೈನಮೂಲಗಳು ಮತ್ತು ಪುರಾಣ ಗ್ರಂಥಗಳು ತಿಳಿಸುತ್ತವೆ. ಆಯಕಟ್ಟಿನ ಮಹತ್ತ್ವದ ದೃಷ್ಟಿಯಿಂದ ಇದನ್ನು ಆರಿಸಲಾಯಿತೆಂದೇ ಸಮಕಾಲೀನ ಬೌದ್ಧ ಸಾಹಿತ್ಯವೂ ತಿಳಿಸುತ್ತದೆ. ಉದಾಯಿಯ ಅನಂತರ ಅನಿರುದ್ಧ ಮತ್ತು ಮುಂಡ ಇವರು ಪಾಟಲಿಪುತ್ರದಿಂದ ಆಳುತ್ತಿದ್ದ ರೆಂದು ಅಂಗುತ್ತರನಿಕಾಯದಿಂದ ಗೊತ್ತಾಗುತ್ತದೆ. ಅನಂತರ ಆಳಿದ ರಾಜ ನಾಗದಾಸಕ ನೆಂಬುವನು ಪುರಾಣಗಳಲ್ಲಿ ಉಕ್ತನಾದ ಶಿಶುನಾಗನೆಂದೂ ಅವನ ಕಾಲದಲ್ಲಿ ರಾಜಧಾನಿಯನ್ನು ಪಾಟಲಿಪುತ್ರದಿಂದ ರಾಜಗೃಹಕ್ಕೆ ಬದಲಾಯಿಸಲಾಯಿತೆಂದೂ ಕೆಲವು ವಿದ್ವಾಂಸರು ವಾದಿಸಿದ್ದಾರೆ. ಆದರೆ ಉದಾಯಿ ಮತ್ತು ಅಜಾತಶತ್ರುವಿಗಿಂತ ಶಿಶುನಾಗ ಹಿಂದಿನವನೆಂದೂ ಅವನ ಕಾಲದಲ್ಲಿ ರಾಜಗೃಹವೇ ರಾಜಧಾನಿಯಾಗಿತ್ತೆಂದೂ ಪುರಾಣಗಳಿಂದ ಶ್ರುತಪಡುತ್ತದೆ. ಅವಂತಿಯ ದೊರೆಯೊಂದಿಗೆ ನಾಗದಾಸಕ ಯುದ್ಧದಲ್ಲಿ ನಿರತನಾಗಿ, ಆ ರಾಜ್ಯಕ್ಕೆ ಸೇರಿದ್ದ ಕೌಶಾಂಬಿಯನ್ನು ಆಕ್ರಮಿಸಿಕೊಳ್ಳಲು ಪಾಟಲಿಪುತ್ರದಿಂದ ಜಲಮಾರ್ಗವಾಗಿ ಸೈನ್ಯವನ್ನು ಕಳಿಸಿದ್ದನೆಂದು ತಿಳಿದುಬರುತ್ತದೆ.

ಅನಂತರ ನಂದರು ಅಧಿಕಾರಕ್ಕೆ ಬಂದರು. ಇವರು ವಾಯವ್ಯದಲ್ಲಿ ಪಂಜಾಬಿನವರೆಗೂ ತಮ್ಮ ಚಕ್ರಾಧಿಪತ್ಯವನ್ನು ವಿಸ್ತರಿಸಿದರು. ಇವರ ರಾಜಧಾನಿಯಾಗಿ ಪಾಟಲಿಪುತ್ರದ ಘನತೆ ಹೆಚ್ಚಿತು. ಸೈನಿಕ ಕೇಂದ್ರವಾಗಿದ್ದ ಇದರ ಸುತ್ತ ಮರದ ಕಟಕಟೆಯ ಬೇಲಿ, ಬುರುಜುಗಳು ಮತ್ತು ಕಂದಕಗಳು ನಿರ್ಮಿತವಾದುವು. ಅವು ಸುಭದ್ರಸ್ಥಿತಿಯಲ್ಲಿದ್ದುವೆಂದು ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿದ್ದ ಗ್ರೀಕ್ ರಾಯಭಾರಿ ಮೆಗಾಸ್ತನೀಸ್ ವರ್ಣಿಸಿದ್ದಾನೆ. ಪಾಟಲಿಪುತ್ರ ಆ ಕಾಲದ ಅತ್ಯಂತ ದೊಡ್ಡ ಸಾಮ್ರಾಜ್ಯದ ರಾಜಧಾನಿಯಾಗಿದ್ದುದಲ್ಲದೆ ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಭಾರತದ ಎಲ್ಲ ಭಾಗಗಳಿಂದಲೂ ವಿದ್ಯಾವಂತರನ್ನು ಆಕರ್ಷಿಸಿತ್ತು. ಪಾಟಲಿಪುತ್ರದಲ್ಲಿ ಪಿಂಗಳ, ಪಾಣಿನಿ, ವ್ಯಾಧಿ, ವರ್ಷ, ಉಪವರ್ಷ, ಕಾತ್ಯಾಯನ ಮೊದಲಾದ ಪ್ರಮುಖ ವಿದ್ವಾಂಸರು ಬಂದು ತಂಗಿ ತಮ್ಮ ವಿದ್ವತ್ತನ್ನು ಬೆಳಗಿಸಿಕೊಂಡರೆಂದು ಕಾಶ್ಮೀರದ ಇತಿಹಾಸಕಾರ ರಾಜಶೇಖರ (10ನೆಯ ಶತಮಾನ) ಹೇಳಿದ್ದಾನೆ. ಜೈನಪಂಡಿತ ಸ್ಥೂಲಭದ್ರನ ನೇತೃತ್ವದಲ್ಲಿ ಇಲ್ಲಿ ಸೇರಿದ್ದ ಜೈನಧರ್ಮ ಸಭೆಯಲ್ಲಿ ಆ ಧರ್ಮದ ತತ್ತ್ವಗಳನ್ನು ಸ್ಥಿರೀಕರಿಸ ಲಾಯಿತು. ಅಶೋಕನ ಕಾಲದಲ್ಲಿ ಮೂರನೆಯ ಬೌದ್ಧಧರ್ಮ ಸಮ್ಮೇಳನವೂ ಇಲ್ಲಿ ಸಮಾವೇಶ ಗೊಂಡಿತ್ತು. ಹೀಗೆ ಪಾಟಲಿಪುತ್ರ ಜೈನ, ಹಿಂದು ಮತ್ತು ಬೌದ್ಧಧರ್ಮಗಳ ಕೇಂದ್ರವಾಗಿತ್ತು.

ಪ್ರ.ಶ.ಪೂ.ಸು.300ರಲ್ಲಿ ಪಾಟಲಿಪುತ್ರ ಹೇಗಿತ್ತೆಂಬುದನ್ನು ಮೆಗಾಸ್ತನೀಸನ ಬರೆವಣಿಗೆ ಗಳಿಂದ ತಿಳಿಯಬಹುದು. ಗಂಗಾ–ಶೋಣಾ ನದಿಗಳ ಸಂಗಮದ ಬಳಿ, ಗಂಗಾನದಿಯ ದಡದ ಉದ್ದಕ್ಕೂ ಇದು ಹಬ್ಬಿತ್ತು. ಇದು 14.4 ಕಿಮೀ ಉದ್ದ ಮತ್ತು 3.8 ಕಿಮೀ ಅಗಲವಾಗಿತ್ತು. ಇದರ ಸುತ್ತಳತೆ 36ಕಿಮೀ. ಇದು ಹೆಚ್ಚು ಕಡಿಮೆ ಈಗಿನ ಪಟನ ನಗರಕ್ಕೆ ಸಮವಾಗಿತ್ತು. ಇದರ ಪೂರ್ವದ ಮೇರೆ ಸುಪ್ರಸಿದ್ಧ ಸುಂದರ ಯಕ್ಷಿಯ ವಿಗ್ರಹ ಸಿಕ್ಕಿರುವ ದೀದಾರ್‌ಗಂಜ್ ವರೆಗೂ ಪ್ರಸರಿಸಿತ್ತು. ರಾಜಧಾನಿಯ ಸುತ್ತಲೂ 183 ಮೀ ಅಗಲ ಮತ್ತು 13.7 ಮೀ ಆಳದ ಕಂದಕವಿತ್ತೆಂದೂ ಅದರೊಳಕ್ಕೆ ನಗರದ ಚರಂಡಿ ನೀರನ್ನು ಬಿಡಲಾಗುತ್ತಿತ್ತೆಂದೂ ಮೆಗಾಸ್ತನೀಸ್ ಹೇಳಿದ್ದಾನೆ. ಈ ಕಂದಕಕ್ಕೆ ಗಂಗಾ–ಶೋಣಾ ನದಿಗಳ ನೀರನ್ನು ಬಿಡುತ್ತಿದ್ದರು. ಶತ್ರುಗಳು ದೋಣಿಗಳ ಸಹಾಯದಿಂದ ಕಂದಕವನ್ನು ದಾಟುವ ಯತ್ನಮಾಡಿದರೆ ನೀರು ಬಸಿದು ಹೋಗುವಂತೆ ಮಾಡಿ ಕಂದಕದ ಕೆಸರನ್ನು ದಾಟಲು ಅಸಾಧ್ಯವಾಗುವಂತೆ ಮಾಡು ತ್ತಿದ್ದರು. ಕಂದಕದ ಒಳಪಾರ್ಶ್ವದಲ್ಲಿ 31–46 ಸೆಂಮೀ ವ್ಯಾಸದ ಮತ್ತು ಸು.5 ಮೀ ಎತ್ತರದ ಮರದ ಕಂಬಗಳನ್ನು ಹೂತು ಕೋಟೆಯನ್ನು ನಿರ್ಮಿಸಿದ್ದರು. ಈಚಿನ ಭೂಶೋಧನೆ ಗಳಲ್ಲಿ ಮರದ ಕೋಟೆಬೇಲಿಯ ಅವಶೇಷಗಳು ಪಶ್ಚಿಮದಲ್ಲಿ ಲೋಹಾನಿಪುರದಿಂದ ಬಹದ್ದೂರಪುರ, ಬುಲಂದಿಬಾಘ್, ಕುಮ್ರಹಾರ, ಮಹಾರಾಜಖಂಡ ಪ್ರದೇಶಗಳ ಮೂಲಕ ಪೂರ್ವದಲ್ಲಿ ಸೆವಾಯಿಕೊಳ ಮತ್ತು ಗಾಂಧಿಕೊಳದವರೆಗಿನ ವಿಸ್ತಾರ ಪ್ರದೇಶದಲ್ಲಿ ಕಂಡು ಬಂದಿವೆ. ಮೆಗಾಸ್ತನೀಸ್ ನೀಡಿರುವ ವರ್ಣನೆಗೆ ಇವು ಮೂಕ ಸಾಕ್ಷಿಗಳಾಗಿವೆ. ಆದರೆ 4ನೆಯ ಶತಮಾನದ ವೇಳೆಗೆ ಇದರ ವಿಸ್ತೀರ್ಣ ಕಡಿಮೆಯಾಯಿತು. ಆಗಿನ ಪ್ರಾಚೀನ ನಗರ ಗಂಗಾನದಿಯ ದಂಡೆಯಿಂದ ಸ್ವಲ್ಪ ದೂರದಲ್ಲಿ ಇತ್ತೆಂದು ಕಾಣುತ್ತದೆ. ಗಂಗಾನದಿಯಿಂದ 8 ಕಿಮೀ ನಡೆದು ನಗರವನ್ನು ತಲುಪಬೇಕಾಯಿತೆಂದು ಚೀನೀ ಬೌದ್ಧ ಯಾತ್ರಿಕ ಫಾಹಿಯಾನ್ ಹೇಳಿದ್ದಾನೆ.

ಬುಲಂದಿಬಾಘ್ ಬಳಿ ನಡೆದ ಉತ್ಖನನದಲ್ಲಿ 4.4 ಮೀ ಅಂತರದಲ್ಲಿ ನೆಟ್ಟಿದ್ದ ಮರದ ಕಂಬಗಳ ಎರಡು ಸಾಲುಗಳು ಕಂಡುಬಂದುವು. ಮರದ ದಿಮ್ಮಿಗಳನ್ನು ತಲಾ 0.3 ಮೀ ದೂರದಲ್ಲಿ ಸಮತಲವಾಗಿ ಅವಕ್ಕೆ ಜೋಡಿಸಲಾಗಿತ್ತು. ಈ ಸಮತಲ ದಿಮ್ಮಿಗಳ ತುದಿಗಳನ್ನು ಕಂಬಗಳೊಳಗೆ ಹುಗಿಸಲಾಗಿತ್ತು. ಗಟ್ಟಿಸಿದ ಜಲ್ಲಿಕಲ್ಲಿನ ನೆಲಗಟ್ಟಿನ ಮೇಲೆ, ನೆಲದಲ್ಲಿ 1.5 ಮೀ ಆಳಕ್ಕೆ ಹಾಸಲಾಗಿದ್ದ ಮರದ ಹಲಗೆಗಳಲ್ಲಿ ಕಂಬಗಳನ್ನು ನೆಟ್ಟು ಭದ್ರಪಡಿಸಲಾಗಿತ್ತು. ಮರದ ಕೋಟೆಯ ಹೊರ ಮೈಗೆ ಕಬ್ಬಿಣದ ತಗಡು ಮತ್ತು ಮರದ ಹಲಗೆಗಳನ್ನು ಬಡಿದು ಬಿಗಿಪಡಿಸಲಾಗಿತ್ತು. ಮರದ ಕಂಬಗಳ ಎರಡು ಸಾಲುಗಳ ನಡುವೆ ರಕ್ಷಣಾಯೋಧರ ಚಲನಕ್ಕೆ ಅಗತ್ಯವಾದ ದಾರಿಯಿತ್ತೆಂದು ತಿಳಿದುಬರುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇಂಥ ದಾರಿಯನ್ನು ದೇವರಪಥವೆಂದು ಕರೆಯಲಾಗಿದೆ. ಪಾಟಲಿಪುತ್ರದ ಈ ಮರದ ಕೋಟೆ ಗಮನಾರ್ಹವಾಗಿತ್ತು. ನಗರಕ್ಕೆ ಭೇಟಿ ನೀಡಿದ ಯಾತ್ರಿಕರು ತಪ್ಪದೆ ಇದನ್ನು ವರ್ಣಿಸುವಂತಿತ್ತು. ಈ ಕೋಟೆಯ ಮೇಲೆ ಸು.67 ಮೀ ದೂರಕ್ಕೆ ಒಂದರಂತೆ 570 ಉನ್ನತ ಗೋಪುರಗಳಿದ್ದುವು. ಕೋಟೆಯ ಗೋಡೆ ಮತ್ತು ಕೊತ್ತಲಗಳಲ್ಲಿ ರಕ್ಷಣಾಯೋಧರು ಶತ್ರುಗಳ ಮೇಲೆ ಬಾಣಪ್ರಯೋಗ ಮಾಡಲು ಅನುಕೂಲವಾದ ರಂಧ್ರಗಳಿದ್ದುವು.

ಕೋಟೆಗೆ 64 ಬಾಗಿಲುಗಳಿದ್ದುವೆಂದು ಮೆಗಾಸ್ತನೀಸ್ ತಿಳಿಸಿದ್ದಾನೆ. ಬುಲಂದಿಬಾಘ್ ಬಳಿಯ ಉತ್ಖನನದಲ್ಲಿ ಕಂಡುಬಂದ ಒಂದು ಕೋಟೆಬಾಗಿಲಿನ ಇಬ್ಬದಿಗಳಲ್ಲಿ ಎಂಟು ಪಾರ್ಶ್ವಗಳಿದ್ದ ಮರದ ಕಂಬಗಳಿದ್ದುವು. ಬಾಗಿಲು ಬಹುಶಃ ಸು.4.5 ಮೀ ಅಗಲವಾಗಿತ್ತು. ಮುದ್ರಾರಾಕ್ಷಸ ನಾಟಕದಲ್ಲಿ ಚಂದ್ರಗುಪ್ತಮೌರ್ಯನ ಅರಮನೆಯನ್ನು ಸುಗಾಂಗವೆಂದು ಕರೆಯಲಾಗಿದೆ. ಇದರ ನಿರ್ದಿಷ್ಟ ನೆಲೆ ಮತ್ತು ನಗರದೊಳಗಿನ ರಸ್ತೆಗಳ ವಿವರ ಈವರೆಗೆ ತಿಳಿದುಬಂದಿಲ್ಲ. ಆದರೆ ಉತ್ಖನನದಲ್ಲಿ ಮರದ ಹಲಗೆಗಳಿಂದ ನಿರ್ಮಿಸಿದ ಒಳಚರಂಡಿ ವ್ಯವಸ್ಥೆಯ ಅವಶೇಷಗಳು ಕಂಡುಬಂದಿವೆ. ಒಳಚರಂಡಿಯ ಒಂದು ಭಾಗ ಮರದ ಕೋಟೆಗೋಡೆಯ ಮೂಲಕ ಹಾಯ್ದು ಹೊರಗಡೆಗೆ ಹೋಗುತ್ತದೆ.

ಮೌರ್ಯ ಸಾಮ್ರಾಜ್ಯ ಬಲಗೊಂಡಂತೆ ಪಾಟಲಿಪುತ್ರ ಉಚ್ಛ್ರಾಯ ಸ್ಥಿತಿಗೆ ಬರುತ್ತಿತ್ತು. ಅಶೋಕನ ಆಳಿಕೆಯ ಕಾಲದಲ್ಲಿ ಪಾಟಲಿಪುತ್ರದ ವ್ಯಾಪಾರ ಎಷ್ಟು ಪ್ರಾಮುಖ್ಯ ಗಳಿಸಿತ್ತೆಂದರೆ ಇದರ ದಿನಂಪ್ರತಿ ಅಬಕಾರಿ ಸುಂಕ 4 ಲಕ್ಷ ಕಾರ್ಷಪಣಗಳಷ್ಟಿತ್ತು. ಬಹುಶಃ ಚಂದ್ರಗುಪ್ತ ಮೌರ್ಯನ ಕಾಲದಲ್ಲಿಯೇ ಯೋಜಿಸಿ ನಿರ್ಮಿಸಲಾದ ವೈಭವೋಪೇತವಾದ 80 ಕಂಬಗಳ ಹಜಾರ ಅದರ ಘನತೆಗೆ ತಕ್ಕುದಾದ ವಿಶಾಲ ಅರಮನೆ. ಅಶೋಕ ನಿರ್ಮಿಸಿದನೆಂದು ಹೇಳಲಾದ ಅನೇಕ ಸ್ತೂಪಗಳು, ಚೈತ್ಯಗಳು ಮತ್ತು ವಿಹಾರಗಳು–ಇವು ಈ ನಗರದ ಶ್ರೀಮಂತಿಕೆಯ ಪ್ರತೀಕಗಳಾಗಿದ್ದುವು. ಬೌದ್ಧ ಸ್ತೂಪಗಳಲ್ಲಿ ಬುದ್ಧನ ದೇಹಾವಶೇಷವನ್ನು ಹುಗಿದಿದ್ದ ಸ್ತೂಪ, ಬೌದ್ಧ ಸಂಘಕ್ಕೆ ಆಮಲಕಫಲ ನೀಡಿದ ಸ್ಥಳದಲ್ಲಿ ನಿರ್ಮಿಸಿದ ಸ್ತೂಪ,

ಬುದ್ಧ ಇಲ್ಲಿಗೆ ಭೇಟಿಕೊಟ್ಟಾಗ ತಂಗಿದ್ದ ಸ್ಥಳದ ಸ್ತೂಪ ಮತ್ತು ಪಾಟಲಿಪುತ್ರದ ಏಳಿಗೆಯ ಬಗ್ಗೆ ಭವಿಷ್ಯ ನುಡಿದ ಸ್ಥಳದಲ್ಲಿ ನಿರ್ಮಿಸಿದ ಸ್ತೂಪ–ಇವು ಬೌದ್ಧ ಸ್ತೂಪಗಳ ಪೈಕಿ ಪ್ರಧಾನವಾಗಿದ್ದುವೆಂದು ಹೇಳಲಾಗಿದೆ. ಅಶೋಕ ನೆಡಿಸಿದ, ಶಾಸನ ಸಹಿತವಾದ ಶಿಲಾಸ್ತಂಭ 7ನೆಯ ಶತಮಾನದಲ್ಲಿ ಅಲ್ಲಿತ್ತೆಂದು ಯುವಾನ್‌ಚಾಂಗ್ ತಿಳಿಸಿದ್ದಾನೆ. ಅಶೋಕ ಕಟ್ಟಿಸಿದ ಅಶೋಕಾರಾಮ ವಿಹಾರದಲ್ಲಿ ಮೂರನೆಯ ಬೌದ್ಧ ಸಮ್ಮೇಳನ ನಡೆಯಿತಂತೆ. ಮೊಗ್ಗಲಿಪುತ್ತತಿಸ್ಸ (ಉಪಗುಪ್ತ) ಇದರ ಅಧ್ಯಕ್ಷತೆ ವಹಿಸಿದ್ದ.

ಮೌರ್ಯರ ಪತನಾನಂತರ ಪ್ರಶ.ಪೂ.2ನೆಯ ಶತಮಾನದಲ್ಲಿ ಇದರ ಉಚ್ಛ್ರಾಯಕ್ಕೆ ಸ್ವಲ್ಪ ಕುಂದುಂಟಾಯಿತು. ಆ ಶತಮಾನದ ಪ್ರಾರಂಭದಲ್ಲಿ ಗ್ರೀಕರು ಪಾಟಲಿಪುತ್ರವನ್ನು ವಶಪಡಿಸಿಕೊಂಡರೂ ಇದು ಮತ್ತೆ ಸ್ವತಂತ್ರವಾಯಿತು. ಉತ್ತರ ಭಾರತದ ಪ್ರಮುಖ ನಗರವಾಗಿ, ಸಾಂಸ್ಕೃತಿಕ ಕೇಂದ್ರವಾಗಿ ಮುಂದುವರಿಯಿತು. ಈ ನಗರ ಬೌದ್ಧಧರ್ಮದ ಕೇಂದ್ರ ವಾಗಿದ್ದರೂ ಇಲ್ಲಿ ಆಳಿದ ಶುಂಗ ದೊರೆಗಳ ಕಾಲದಲ್ಲಿ ಇಲ್ಲಿ ಅನೇಕ ವಿಹಾರಗಳು ಇದ್ದುವು. ಮಿನ್ಯಾಂಡರನ ಬೌದ್ಧ ಗುರುವಾದ ನಾಗಸೇನ ಪ್ರಶ.ಪೂ. 2ನೆಯ ಶತಮಾನದಲ್ಲಿ ಪಾಟಲಿಪುತ್ರದ ಅಶೋಕ ವಿಹಾರದಲ್ಲಿ ವಿದ್ಯಾಭ್ಯಾಸ ಮಾಡಿದನೆಂದು ಹೇಳಲಾಗಿದೆ. ಬೌದ್ಧರು ಈ ನಗರದಿಂದ ಬೌದ್ಧ ಕ್ಷೇತ್ರಗಳಿಗೆ ಯಾತ್ರೆ ಮಾಡಿ ದಾನಧರ್ಮಗಳನ್ನು ಮಾಡುತ್ತಿದ್ದರು.

ಜೈನಧರ್ಮವೂ ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಜೈನ ಸಂತ ಧರ್ಮಸಮ್ಮೇಳನವನ್ನು ನಡೆಸಿದುದಾಗಿಯೂ ಅವನ ಗೌರವಾರ್ಥವಾಗಿ ಇಲ್ಲಿ ಒಂದು ಮಂದಿರವನ್ನು ನಿರ್ಮಿಸಿದುದಾಗಿಯೂ ತಿಳಿದುಬಂದಿದೆ. ನಗರದ ಬಡಾವಣೆ ಯಾದ ಲೋಹಾನಿಪುರದಲ್ಲಿ ಮೌರ್ಯರ ಕಾಲದ ಕಲ್ಲಿನ ತೀರ್ಥಂಕರನ ಶಿಲ್ಪ ಸಿಕ್ಕಿದೆ.

ಶುಂಗರ ಅನಂತರ ಅಧಿಕಾರಕ್ಕೆ ಬಂದ ಕಾಣ್ವ ದೊರೆಗಳು 45 ವರ್ಷಗಳ ಕಾಲ ಆಳಿದರು. ಪುರಾಣಗಳ ರೀತ್ಯ ಸಾತವಾಹನವಂಶದ ಸ್ಥಾಪಕನಾದ ಸಿಮುಕನೆಂಬುವನು ಕಾಣ್ವರನ್ನು ಸೋಲಿಸಿ ಪಾಟಲಿಪುತ್ರವನ್ನು ಆಕ್ರಮಿಸಿದನೆಂದು ಹೇಳಲಾಗಿದೆ. ಅನಂತರ ಸ್ವಲ್ಪ ಕಾಲ ಪಾಟಲಿಪುತ್ರ ಗಯೆಯಿಂದ ಆಳುತ್ತಿದ್ದ ಮಿತ್ರ ದೊರೆಗಳ ವಶದಲ್ಲಿತ್ತು. 1ನೆಯ ಶತಮಾನದ ಉತ್ತರಾರ್ಧದಲ್ಲಿ ಈ ನಗರ ಕುಷಾಣರ ವಶವಾಗಿದ್ದಿರಬಹುದು. ಕುಷಾಣರ ನಾಣ್ಯಗಳೂ ಕುಷಾಣ ಶೈಲಿಯ ಮಣ್ಣಿನ ಗೊಂಬೆಗಳೂ ದೊರಕಿವೆ. ಹುವಿಷ್ಕನ ಕಾಲದಲ್ಲಿ 150ರ ವೇಳೆಗೆ ಈ ನಗರ ಶಕರ ವಶವಾಯಿತು. ಈ ಕಾಲದಲ್ಲಿ ಉದ್ದಕ್ಕೂ ಇಲ್ಲಿ ಜೈನಧರ್ಮ ಪ್ರಬಲವಾಗಿತ್ತು. ಶ್ವೇತಾಂಬರ ಮತ್ತು ದಿಗಂಬರ ಪಂಥಗಳೆರಡಕ್ಕೂ ಪವಿತ್ರವಾದ ಉಮಾ ಸ್ವಾತಿಯ ತತ್ತ್ವಾರ್ಥಸೂತ್ರವನ್ನು ಇಲ್ಲಿ ರಚಿಸಲಾಯಿತು. ಶಕ ದೊರೆಗಳು ಜೈನ ಧರ್ಮಾನು ಯಾಯಿಗಳಾಗಿದ್ದರು.

ಗುಪ್ತ ಸಾಮ್ರಾಜ್ಯದ ಶ್ರೀಗುಪ್ತನ ಕಾಲದಲ್ಲಿ ಪಾಟಲಿಪುತ್ರ ಮತ್ತೆ ರಾಜಧಾನಿಯಾಗಿ ಉತ್ತಮ ಸ್ಥಿತಿಗೆ ಬಂತು. ಆಗ ಬುದ್ಧಪೂರ್ಣಿಮೆಯ ಸಮಯದಲ್ಲಿ 20 ರಥಗಳಲ್ಲಿ ಬುದ್ಧನ ವಿಗ್ರಹಗಳನ್ನು ಮೆರವಣಿಗೆಯಲ್ಲಿ ಒಯ್ಯಲಾಗುತ್ತಿತ್ತು. ಅಶೋಕನ ಅರಮನೆ 5ನೆಯ ಶತಮಾನ ದಲ್ಲೂ ಉಳಿದುಬಂದಿತ್ತೆಂದು ಫಾಹಿಯಾನ್ ತಿಳಿಸಿದ್ದಾನೆ. ಅದೊಂದು ದೈವೀ ನಿರ್ಮಾಣದಂತೆ ಅದ್ಭುತವಾಗಿತ್ತೆಂದು ವರ್ಣಿಸಿದ್ದಾನೆ. ಕುಮ್ರಹಾರದ ಅಗೆತದಲ್ಲಿ ಮೌರ್ಯರ ಕಾಲದ ಕಂಬಗಳಿರುವ ವಿಶಾಲ ಹಜಾರ ಕಂಡುಬಂದಿದೆ.

ಗುಪ್ತಯುಗದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಪಾಟಲಿಪುತ್ರದಲ್ಲಿ ಹಲವು ಶ್ರೀಮಂತ ದಾನಿಗಳು ವೈದ್ಯಶಾಲೆಗಳನ್ನೂ ಬಡವರಿಗೆ ಅನ್ನಸತ್ರಗಳನ್ನೂ ನಡೆಸುತ್ತಿದ್ದರು. ಆ ಕಾಲದ ವಿಹಾರ ಮತ್ತು ಆಸ್ಪತ್ರೆಯಾಗಿದ್ದ ಕಟ್ಟಡವನ್ನು ಉತ್ಖನನದಲ್ಲಿ ಗುರುತಿಸಲಾಗಿದೆ. 410ರಲ್ಲಿ ಎರಡು ಬೌದ್ಧ ವಿಹಾರಗಳಿದ್ದುದಾಗಿ ಫಾಹಿಯಾನ್ ಹೇಳಿದ್ದಾನೆ. ಅವುಗಳಲ್ಲೊಂದು ಮೇಲೆ ಹೇಳಿದ ಆರೋಗ್ಯ ವಿಹಾರವಾಗಿರಬಹುದು. ಗುಪ್ತರ ಕಾಲದ ವಿಹಾರಗಳ ಗೋಡೆಗಳಲ್ಲಿದ್ದ ಗೂಡುಗಳಲ್ಲಿ ಕುಳಿತ ಬುದ್ಧ, ಹಾರುತ್ತಿರುವ ಗಂಧರ್ವ, ಮಿಥುನ ಮುಂತಾದ ಮಣ್ಣಿನ ವಿಗ್ರಹಗಳಿದ್ದುವು. ಗೋಡೆಯ ಇಟ್ಟಿಗೆಗಳ ಮೇಲೆ ಅಂದವಾದ ಕೆತ್ತನೆಗಳಿದ್ದುವು. ಪಾಟಲಿಪುತ್ರ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಫಾಹಿಯಾನ್ ಮೂರು ವರ್ಷಗಳ ಕಾಲ ಇಲ್ಲಿಯ ಗ್ರಂಥಭಂಡಾರ ಗಳಲ್ಲಿ ಬೌದ್ಧಧರ್ಮದ ಅಧ್ಯಯನ ಮಾಡುತ್ತಿದ್ದುದಾಗಿ ಹೇಳಲಾಗಿದೆ. ಭಾರತದ ಬೇರಾವ ಗ್ರಂಥ ಭಂಡಾರದಲ್ಲೂ ಸಿಕ್ಕದ ಗ್ರಂಥದ ಪ್ರತಿಗಳು ಇಲ್ಲಿ ಸಿಕ್ಕಿದುದೇ ಇದಕ್ಕೆ ಕಾರಣ.

ಗುಪ್ತರ ಕಾಲದಲ್ಲಿ ಸಹಜವಾಗಿಯೇ ಹಿಂದುಧರ್ಮ ಪಾಟಲಿಪುತ್ರದಲ್ಲಿ ಪ್ರಬಲವಾಗಿತ್ತು. ಕಾವ್ಯಮೀಮಾಂಸೆ, ರಾಜನೀತಿ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ನಿಷ್ಣಾತನಾಗಿದ್ದ 2ನೆಯ ಚಂದ್ರಗುಪ್ತನ ಮಂತ್ರಿ ಶಾಬ ಈ ನಗರದವನಾಗಿದ್ದ. ಗಣಿತ ಮತ್ತು ಜ್ಯೋತಿಶ್ಶಾಸ್ತ್ರ ವಿಶಾರದ ಆರ್ಯಭಟ 399ರಲ್ಲಿ ಈ ನಗರದಲ್ಲಿ ವಾಸವಾಗಿದ್ದ.

ಆದರೆ 637ರಲ್ಲಿ ಯುವಾನ್‌ಚಾಂಗ್ ಭೇಟಿ ನೀಡಿದಾಗ ಪಾಟಲಿಪುತ್ರ ಬಹುಮಟ್ಟಿಗೆ ಪಾಳುಬಿದ್ದಿತ್ತು. ಇದು ಗಂಗೆಯ ದಡದಲ್ಲಿ ಕೇವಲ 1,000 ನಿವಾಸಿಗಳ ಕುಗ್ರಾಮವಾಗಿತ್ತೆಂದೂ ಅಶೋಕನ ಅರಮನೆ, ವಿಹಾರಗಳು, ಸ್ತೂಪಗಳು ಮತ್ತು ಹಿಂದು ದೇವಾಲಯಗಳು ಪಾಳು ಬಿದ್ದಿದ್ದುವೆಂದೂ ಅವನು ತಿಳಿಸಿದ್ದಾನೆ. ನಗರದ ಆಗ್ನೇಯಕ್ಕೆ ಪಾಳುಬಿದ್ದ ಕುಕ್ಕುಟಾರಾಮ ವಿಹಾರ, ಆಮಲಕ ಸ್ತೂಪ, ಚೈತ್ಯ ವಿಹಾರಗಳು ಇದ್ದುವೆಂದು ಅವನು ಹೇಳಿದ್ದಾನೆ. ಸು.575ರಲ್ಲಿ ಶೋಣಾ ನದಿಯ ಪ್ರವಾಹ ಈ ನಗರವನ್ನು ನಾಶಮಾಡಿತೆಂದು ಜೈನಗ್ರಂಥ ತಿಲ್ಲೊಗಲಿ ಪೈನ್ನಿಯ ತಿಳಿಸುತ್ತದೆ. ಯುವಾನ್‌ಚಾಂಗ್ ಬರೆವಣಿಗೆಗಳಿಂದಲೂ ಭೂಶೋಧನೆ ಯಿಂದಲೂ ದೊರಕಿದ ಮಾಹಿತಿಗಳು ಈ ಜೈನಗ್ರಂಥದ ಹೇಳಿಕೆಯನ್ನು ಸಮರ್ಥಿಸುತ್ತವೆ. ಸು.600–1600ರ ವರೆಗೆ ಈ ಪ್ರದೇಶ ಪಾಳುಬಿದ್ದಿತ್ತೆಂದು ಭೂಶೋಧನೆಯ ಮಾಹಿತಿಗಳ ಆಧಾರದಿಂದ ಹೇಳಬಹುದಾಗಿದೆ.

ಆದರೂ ಪಾಟಲಿಪುತ್ರ ಪ್ರಮುಖ ವ್ಯಾಪಾರ ಮತ್ತು ನೌಕಾಯಾನ ಕೇಂದ್ರವಾಗಿತ್ತೆಂದು ಧರ್ಮಪಾಲನ ಕಾಲೀಮ್‌ಪುರ ತಾಮ್ರಶಾಸನ ಹೇಳುತ್ತದೆ. ಅವನು ಇಲ್ಲಿ ಸೈನ್ಯದೊಂದಿಗೆ ತಂಗಿದ್ದಾಗ ಉತ್ತರಭಾರತದ ಅನೇಕ ರಾಜರು ಧರ್ಮಪಾಲನಿಗೆ ತಮ್ಮ ಕಪ್ಪಕಾಣಿಕೆಗಳನ್ನು ನೀಡಿದರೆಂದು ಶಾಸನ ಹೇಳುತ್ತದೆ. ವ್ಯಾಪಾರ ಕೇಂದ್ರವಾದ ಈ ಪಟ್ಟಣ ಗಂಗಾತೀರದ ಹೊಸ ನೆಲೆಯೊಂದರಲ್ಲಿ ಇದ್ದಿರಬೇಕು. ಮುಸ್ಲಿಮರು ಬಿಹಾರವನ್ನು 1200ರ ಸುಮಾರಿನಲ್ಲಿ ಆಕ್ರಮಿಸಿದಾಗ ಪಾಟಲಿಪುತ್ರದ ನೆರೆಯಲ್ಲಿದ್ದ ಬಿಹಾರ್ ಷರೀಫ್ ಪ್ರಮುಖ ನಗರವಾಗಿತ್ತು. ಮತ್ತೆ ಮೊಗಲರ ಮತ್ತು ಬ್ರಿಟಿಷರ ಆಳಿಕೆಯ ಕಾಲದಲ್ಲಿ ಈ ಪ್ರಾಚೀನ ನಗರದ ಕೆಲವು ಭಾಗಗಳನ್ನೊಳಗೊಂಡ ಆಧುನಿಕ ಪಟಣ ನಗರ ಬೆಳೆಯಿತು. (ಬಿ.ಕೆ.ಜಿ.)

**ಪಾಟ್ನೆ:** ಮಹಾರಾಷ್ಟ್ರ ರಾಜ್ಯದ ಜಲಗಾಂವ್ ಜಿಲ್ಲೆಯಲ್ಲಿ ಜಲಗಾಂವ್‌ನಿಂದ ಸು. 16 ಕಿಮೀ ದೂರದಲ್ಲಿರುವ ಪುರಾತತ್ತ್ವ ನೆಲೆ. ಪುಣೆಯ ಡೆಕ್ಕನ್ ಕಾಲೇಜಿನ ಎಚ್.ಡಿ.ಸಾಂಕಳಿಯ ಅವರ ಮಾರ್ಗದರ್ಶನದಲ್ಲಿ ಎಸ್.ಎ. ಸಾಲಿ ಅವರು ಪಾಟ್ನೆ ಗ್ರಾಮದ ಸುತ್ತಲಿನ 9 ಚ.ಕಿಮೀ ವ್ಯಾಪ್ತಿಯಲ್ಲಿ ಪುರಾತತ್ತ್ವ ಅನ್ವೇಷಣ ಕಾರ್ಯ ಕೈಗೊಂಡು ಇದೊಂದು ಪ್ರಾಗೈತಿಹಾಸಿಕ ನೆಲೆ ಎಂಬುದನ್ನು ಗುರುತಿಸಿದರು (1971–72). ಉತ್ಖನನದಿಂದಾಗಿ ಮಧ್ಯ ಹಳೆಶಿಲಾಯುಗ, ಅಂತ್ಯಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಬೆಳಕಿಗೆ ಬಂದವು.

ಮಧ್ಯ ಹಳೆಶಿಲಾಯುಗದ ಉಪಕರಣಗಳಲ್ಲಿ ಹೆರೆಚಕ್ಕೆಮೊನೆ, ಅಲಗು ಚಕ್ಕೆ, ತಿರುಳುಗಲ್ಲು ಮತ್ತು ಕೊರೆಯುಳಿಗಳು ಮುಖ್ಯವಾದುವು. ಅಂತ್ಯ ಹಳೆಶಿಲೋಪಕರಣಗಳಲ್ಲಿ ನೀಳ ತೆಳು ಚಕ್ಕೆಗಳು ಮತ್ತೆ ಕೊರೆಯುಳಿಗಳಿವೆ. ಸಿಹಿನೀರಿನ ಚಿಪ್ಪುಗಳು, ಗುರುತಿಸಲಾಗದ ಪ್ರಾಣಿಗಳ ಎಲುಬುಗಳ ಉಪಕರಣಗಳು ಮತ್ತು ಚಿಪ್ಪಿನ ಮಣಿಗಳು ಇತರ ಪ್ರಮುಖ ಅವಶೇಷಗಳು. ಉಷ್ಟ್ರಪಕ್ಷಿಯ ಮೊಟ್ಟೆ ಚೂರುಗಳು ಇಲ್ಲಿ ಸಿಕ್ಕಿರುವುದು ವಿಶೇಷ. ಒಂದು ಚೂರಿನ ಮೇಲೆ ಗೀರು ವಿನ್ಯಾಸವಿದ್ದುದು, ಮತ್ತೊಂದು ಚೂರನ್ನು ಮಣಿಯಾಗಿ ಮಾರ್ಪಡಿಸಿರುವುದು ಮೊಟ್ಟೆಚೂರಿನ ಸಾಂಸ್ಕೃತಿಕ ಮಹತ್ತ್ವವನ್ನು ಸೂಚಿಸುತ್ತದೆ. ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗ ಹಂತಗಳ ಉಪಕರಣಗಳ ತಯಾರಿಕೆಯಲ್ಲಿ ಜಾಸ್ಪರ್ ಕಲ್ಲನ್ನು ಪ್ರಮುಖವಾಗಿ ಬಳಸಿದ್ದರೆ, ಸೂಕ್ಷ್ಮಶಿಲಾಯುಗದ ಉಪಕರಣಗಳಿಗೆ ಕ್ಯಾಲ್ಸಿಡನಿಯನ್ನು ಉಪಯೋಗಿಸಲಾಗಿದೆ. ಸೂಕ್ಷ್ಮಶಿಲಾ ಯುಗದ ಉಪಕರಣಗಳಲ್ಲಿ ವಿವಿಧ ಬಗೆಯ ಅಲಗುಗಳು, ಚಂದ್ರಾಕೃತಿ, ತ್ರಿಕೋನಾಕೃತಿ, ಅಸಮ ಚತುರ್ಭುಜ ಮೊನೆ, ಚಿಕ್ಕ ಚಿಕ್ಕ ಕೊರೆಯುಳಿಗಳಿವೆ. ಈ ಹಂತದ ಉಪಕರಣಗಳ ಜೊತೆಗೆ ಇದ್ದಿಲಿನ ಸಣ್ಣ ಚೂರುಗಳು, ಸುಟ್ಟಮಣ್ಣಿನ ಮುದ್ದೆಗಳೂ ಕಂಡು ಬಂದಿದ್ದು ಅಂದಿನ ಜನರಿಗೆ ಬೆಂಕಿಯ ಉಪಯೋಗ ತಿಳಿದಿತ್ತೆಂಬುದಕ್ಕೆ ಸಾಕ್ಷಿಯಾಗಿದೆ.

ಮಧ್ಯ ಹಳೆಶಿಲಾಯುಗದಿಂದ ಸೂಕ್ಷ್ಮಶಿಲಾಯುಗದವರೆಗಿನ ಸಂಸ್ಕೃತಿಯ ಬೆಳೆವಣಿಗೆ ಸರಕ್ರಮದಲ್ಲಿ ಸ್ಪಷ್ಟವಾಗಿ ದಾಖಲಾಗಿರುವ ಹಾಗೂ ಅಂತ್ಯ ಹಿಮಯುಗದಲ್ಲಿ ಉಷ್ಟ್ರಪಕ್ಷಿಯ ಮೊಟ್ಟೆ ಚೂರುಗಳ ಅವಶೇಷಗಳನ್ನು ಬಳಸಿದ್ದರ ಬಗ್ಗೆ ತಿಳಿಸಿಕೊಟ್ಟ ಭಾರತದ ಪ್ರಥಮ ಪ್ರಾಗೈತಿಹಾಸಿಕ ನೆಲೆಯಿದು. ಲಂಡನ್ನಿನ ಬ್ರಿಟಿಷ್ ನ್ಯಾಚುರಲ್ ಹಿಸ್ಟರಿ ವಸ್ತು ಸಂಗ್ರಹಾಲಯದ ಹ್ಯಾರಿಸನ್ ಅವರು ಈ ಪಕ್ಷಿಗಳ ಮೊಟ್ಟೆ ಕವಚದ ಅವಶೇಷಗಳನ್ನು ಪರೀಕ್ಷಿಸಿ, ಅಂತ್ಯ ಹಿಮಯುಗದಲ್ಲಿ ಇವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ.

ಈ ಗ್ರಾಮದ ಸಮೀಪದಲ್ಲಿರುವ ಗುಡ್ಡದಲ್ಲಿನ ಬೌದ್ಧ ಗುಹೆಗಳು ಮತ್ತು ಗ್ರಾಮದಲ್ಲಿಯ ಸೇವುಣರ ಕಾಲದ ದೇವಾಲಯಗಳು ಪ್ರಮುಖ ಐತಿಹಾಸಿಕ ಅವಶೇಷಗಳಾಗಿವೆ. ಸು.2–3 ನೆಯ ಶತಮಾನಕ್ಕೆ ಸಂಬಂಧಿಸಿದ ಮೂರು ಬೌದ್ಧ ಗುಹೆಗಳನ್ನು (ವಿಹಾರ) ಸ್ಥಳೀಯರು ಶೃಂಗಾರ ಚವಡಿ, ಸೀತಾನಹಾನಿ, ನಾಗಾರ್ಜುನ ಗುಹೆ ಎಂದು ಕರೆಯುತ್ತಾರೆ. ಪ್ರತಿಯೊಂದು ಗುಹೆ ಪಡಸಾಲೆ ಮತ್ತು ಗರ್ಭಗೃಹಗಳನ್ನೂ ಮುಂಭಾಗದಲ್ಲಿ ಕಲ್ಲುಬಂಡೆಯಲ್ಲಿ ಕೊರೆದ ನೀರಿನ ತೊಟ್ಟಿಗಳನ್ನೂ ಹೊಂದಿದೆ. ಗುಹೆಗಳ ಕಂಬಗಳು ಕೆತ್ತನೆಯಿಂದ ಅಲಂಕೃತಗೊಂಡಿವೆ. ನಾಗಾರ್ಜುನ ಗುಹೆಯಲ್ಲಿ ಧ್ಯಾನ ಮುದ್ರೆಯಲ್ಲಿರುವ ಬುದ್ಧನಮೂರ್ತಿಯನ್ನು ಬಿಟ್ಟರೆ ಉಳಿದ ಯಾವ ಗುಹೆಯಲ್ಲಿಯೂ ಮೂರ್ತಿಗಳಿಲ್ಲ.

ಇಲ್ಲಿಯ ಸೇವುಣ ಕಾಲದ ಮಹಾದೇವ ಮತ್ತು ದೇವಿ ದೇವಾಲಯಗಳನ್ನು ಸ್ಥಳೀಯವಾಗಿ ಹೇಮಾಡಪಂತಿ ದೇವಾಲಯಗಳೆಂದೇ ಕರೆಯಲಾಗುತ್ತದೆ. ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಮಹಾದೇವ ದೇವಾಲಯ ಗಮನಾರ್ಹವಾಗಿದ್ದು ಸುಂದರ ಕೆತ್ತನೆಯನ್ನೊಳಗೊಂಡಿದೆ. ದೇವಾಲಯದ ಅಧಿಷ್ಠಾನದ ಮೂಲೆಗಳಲ್ಲಿ ಆನೆಗಳ ಕೆತ್ತನೆ ದೇವಾಲಯವನ್ನು ಎತ್ತಿಹಿಡಿದಿರುವಂತೆ ಕಾಣುತ್ತಿದ್ದು, ಎಲ್ಲೋರದ ಕೈಲಾಸ ಗುಹಾ ದೇವಾಲಯ ವನ್ನು ನೆನಪಿಸುತ್ತದೆ. ಸಭಾಮಂಟಪದ ಪ್ರವೇಶದ್ವಾರದಲ್ಲಿರುವ ಶಕ 1095ರ (ಸು.1173) ದೇವನಾಗರಿ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿರುವ ಶಾಸನ ದೇವಾಲಯದ ಕಾಲನಿರ್ಣಯಕ್ಕೆ ಅನುವಾಗಿದೆ. ಇದೇ ಶತಮಾನದ ಇನ್ನೊಂದು ದೇವಾಲಯ ಹಳ್ಳದ ಬದಿಯಲ್ಲಿರುವ ದೇವಿ ದೇವಾಲಯ. ಮುಂಭಾಗದಲ್ಲಿರುವ ದೀಪಸ್ತಂಭಗಳು, ಸುಂದರವಾಗಿ ಕೆತ್ತಲ್ಪಟ್ಟ

ಪ್ರವೇಶದ್ವಾರ ಶಾಖೆಗಳು, ದೇವಾಲಯದ ಸುತ್ತಲಿನ ರಕ್ಷಣಾಗೋಡೆ, ಚೌಕಾಕಾರ ಮತ್ತು ಗೋಲಾಕಾರದ ಕಂಬಗಳು, ದೇವ–ದೇವತೆಗಳ ಮೂರ್ತಿಗಳನ್ನೊಳಗೊಂಡಿರುವ ದೇವ ಕೋಷ್ಠಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ. ದೇವಾಲಯದ ಹೊರಭಾಗದಲ್ಲಿರುವ 12ನೆಯ ಶತಮಾನದ ಶಾಸನ ದೇವಾಲಯದ ಕಾಲನಿರ್ಣಯಕ್ಕೆ ಆಧಾರವಾಗಿದೆ. ದೇವಾಲಯ ದ ಆವರಣದಲ್ಲಿ ಆಧುನಿಕ ಕನ್ವೇರ ಸ್ವಾಮಿಯ ಸಮಾಧಿಯಿದೆ. ಇವನು ತನ್ನ ತಪಸ್ಸಿನಿಂದ ದೇವಿಯನ್ನು ಈ ಸ್ಥಳಕ್ಕೆ ಕರೆತಂದನೆಂದು ಸ್ಥಳಪುರಾಣ ಹೇಳುತ್ತದೆ. ಪ್ರತಿವರ್ಷ ಕನ್ವೇರರಾಮನ ಹೆಸರಿನಲ್ಲಿ ಜಾತ್ರೆ ನಡೆಯುತ್ತದೆ. (ವಿ.ಎಸ್.ಬಿ.)

**ಪಾಣಿನಿ:** ಸುಪ್ರಸಿದ್ಧ ಸಂಸ್ಕೃತ ವೈಯಾಕರಣ. ತಾಯಿ ದಾಕ್ಷಾ ಅಥವಾ ದಾಕ್ಷೀ. ತಂದೆ ಶಲಂಕ, ಗಾಂಧಾರದೇಶದ ಶಲಾತುರಗ್ರಾಮದವ. ಈ ಗ್ರಾಮವನ್ನು ಸ್ವತಃ ನೋಡಿ ಬಂದ ಯುವಾನ್‍ಚಾಂಗ್, ಈಗಿನ ಓಹಿಂಡ್ (ಉದ್ಭಾಂಡ) ನಗರದಿಂದ 6.4ಕಿಮೀ ದೂರದಲ್ಲಿ ಈ ಗ್ರಾಮ ಇದ್ದುದಾಗಿಯೂ ಅಲ್ಲಿ ಪಾಣಿನಿಯ ಸ್ಮಾರಕವಾಗಿ ಸ್ಥಾಪಿತವಾಗಿದ್ದ ಪ್ರತಿಮೆಯೊಂದನ್ನು ತಾನು ಕಂಡುದಾಗಿಯೂ ಬರೆದಿದ್ದಾನೆ. ಪಾಣಿನಿಯನ್ನು ಇವನ ತಾಯಿಯ ಹೆಸರಿನ ಮೇಲೆ ದಾಕ್ಷಾ (ದಾಕ್ಷೀ) ಪುತ್ರನೆಂದೂ ತಂದೆಯ ಹೆಸರಿನ ಮೇಲೆ ಶಾಲಂಕನೆಂದೂ ಗ್ರಾಮದ ಹೆಸರಿನ ಮೇಲೆ ಶಾಲಾತುರೀಯ ಎಂದೂ ಕರೆಯುತ್ತಿದ್ದುದುಂಟು. ಶಾಲಾತುರೀಯ ಎಂಬ ರೂಪವನ್ನು ಪಾಣಿನಿಯೇ ತನ್ನ ಗ್ರಂಥದಲ್ಲಿ ವಿವರಿಸಿದ್ದಾನೆ. ಈತನಿಗೆ ಅಹಿಕ ಎಂಬ ಇನ್ನೊಂದು ಹೆಸರೂ ಇತ್ತು. ಚಂದ್ರಗುಪ್ತನ ತಂದೆ ನಂದನ ಕಾಲದಲ್ಲಿ ಪಾಟಲೀಪುತ್ರದಲ್ಲಿದ್ದ ವರ್ಷ ಎಂಬ ಆಚಾರ್ಯರಲ್ಲಿ ಪಾಣಿನಿ ಶಿಷ್ಯನಾಗಿದ್ದುದಾಗಿ ಕಥಾಸರಿತ್ಸಾಗರದಲ್ಲಿ ಹೇಳಿದೆ. ಪಾಣಿನಿ ಸಿಂಹದ ಬಾಯಿಗೆ ತುತ್ತಾಗಿ ಮರಣಕ್ಕೀಡಾದನೆಂದು ಕಥೆಯೊಂದರಿಂದ ತಿಳಿದುಬರುತ್ತದೆ.

ಪಾಣಿನಿಯ ಕಾಲವೂ ನಿಖರವಾಗಿ ತಿಳಿದುಬಂದಿಲ್ಲ. ಪ್ರ.ಶ.ಪೂರ್ವದಲ್ಲಿ ಇದ್ದನೆಂಬುದ ರಲ್ಲಿ ಅಭಿಪ್ರಾಯಭೇದವಿಲ್ಲವಾದರೂ ಬ್ರಾಹ್ಮಣಗಳ ಕಾಲಕ್ಕಿಂತ ಈಚಿನವನೆಂದೂ ಪ್ರಾಯಃ ಪ್ರಾಚೀನ ಉಪನಿಷತ್ತುಗಳ ಕಾಲದವನಿರಬೇಕೆಂದೂ ಅಭಿಪ್ರಾಯವಿದೆ. ಗೋಲ್ಡ್‍ಸ್ಟಕರ್ ಎಂಬ ಪಾಶ್ಚಾತ್ಯ ವಿದ್ವಾಂಸ ಬೌದ್ಧರ ಕಾಲಕ್ಕಿಂತ ಹಿಂದೆ ಅಂದರೆ ಪ್ರ.ಶ.ಪೂ.7ನೆಯ ಶತಮಾನದವನಿರಬೇಕೆಂದೂ ವೇಬರ್ ಎಂಬಾತ ಅಲೆಕ್ಸಾಂಡರನ ದಂಡಯಾತ್ರೆಗಳಿಗಿಂತ (ಪ್ರ.ಶ.ಪೂ.326) ಹಿಂದೆ ಪಾಣಿನಿಯ ವ್ಯಾಕರಣ ರಚಿತವಾಗಿದ್ದಿರಲು ಸಾಧ್ಯವೇ ಇಲ್ಲವೆಂದೂ ಹೇಳುತ್ತಾರೆ. ವೇಬರನ ವಾದ ಹೀಗಿದೆ: ಯವನರ ಲಿಪಿ ಎಂಬರ್ಥದಲ್ಲಿ ಯವನಾನೀ ಎಂಬ ಪದವನ್ನು ಪಾಣಿನಿ ಬಳಸಿದ್ದಾನೆ. ಅಲೆಕ್ಸಾಂಡರನ ದಂಡಯಾತ್ರೆಗಳಿಗಿಂತ ಹಿಂದೆ ಭಾರತೀಯರಿಗೆ ಯವನರ ಪರಿಚಯವಿರಲಿಲ್ಲ. ಪಾಣಿನಿ ಯವನಾನೀ ಪದ ಬಳಸಿರುವುದ ರಿಂದ ಇವನಿಗೆ ಯವನರ ಮತ್ತು ವಾಯವ್ಯ ಪ್ರಾಂತ್ಯಗಳ ಪರಿಚಯವಿತ್ತೆಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಪೂರಕವಾಗಿ ಪಾಣಿನಿಯ ಗಣಪಾಠದಲ್ಲಿ ಆಂಭಿ, ಭಗಲ ಎಂಬ ಹೆಸರುಗಳೂ ಬರುತ್ತವೆ. ಇದರಿಂದ ಪಾಣಿನಿ ಪ್ರ.ಶ.ಪೂ.4ನೆಯ ಶತಮಾನಕ್ಕಿಂತ ಹಿಂದಿನವನೆಂದು ಹೇಳಲು ಸಾಧ್ಯವೇ ಇಲ್ಲ. ಇದೂ ಅಲ್ಲದೆ ಪತಂಜಲಿಯ (ವ್ಯಾಕರಣ) ಮಹಾಭಾಷ್ಯ ಪ್ರ.ಶ.ಪೂ.2ನೆಯ ಶತಮಾನದಲ್ಲಿ ರಚಿತವಾದುದೆಂದು ಸ್ಥಿರಪಟ್ಟಿರುವುದರಿಂದ ಪಾಣಿನಿ ಪ್ರ.ಶ.ಪೂ.400ಕ್ಕಿಂತ ಈಚಿನವನಾಗಿರಲೂ ಅವಕಾಶವಿಲ್ಲ. ಸ್ವಲ್ಪ ಹೆಚ್ಚುಕಮ್ಮಿ ಹೀಗೆಯೇ ವಿಚಾರಮಾಡಿ ಕೀತ್, ವೀಲರ್, ಮ್ಯಾಕ್ಸ್ ಮುಲರ್ ಮೊದಲಾದವರು ಪಾಣಿನಿಯ ಕಾಲ ಪ್ರ.ಶ.ಪೂ.ಸು.350 ಇರಬೇಕೆಂದು ಸಿದ್ಧಾಂತ ಮಾಡಿದ್ದಾರಾದರೂ ಗೋಲ್ಡ್‍ಸ್ಟಕರ್ ಪ್ರ.ಶ.ಪೂ.7ನೆಯ ಶತಮಾನ ದವನಿರಬೇಕೆಂದೂ ಭಂಡಾರ್ಕರ್ ಪ್ರ.ಶ.ಪೂ.5ನೆಯ ಶತಮಾನಕ್ಕಿಂತ ಈಚಿನವನಿರ ಬೇಕೆಂದೂ ಬೆಲ್ವಲ್ಕರ್ ಪ್ರ.ಶ.ಪೂ.700–600ರೊಳಗಿರಬೇಕೆಂದೂ ನಾಮಾಶ್ರಯೀ ಅವರು ಪ್ರ.ಶ.ಪೂ.2400 ರಲ್ಲಿದ್ದಿರಬೇಕೆಂದೂ ವಾಸುದೇವ ಶರಣ್ ಅಗ್ರವಾಲ್ ಪ್ರ.ಶ.ಪೂ.480–410 ರೊಳಗಿರಬೇಕೆಂದೂ ಬೇರೆ ಬೇರೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಾಣಿನಿಯ ವ್ಯಾಕರಣ ಸೂತ್ರಾತ್ಮಕವಾಗಿದೆ. ಅದರಲ್ಲಿ ಒಟ್ಟು 3,981 ಸೂತ್ರಗಳಿವೆ. ಈ ಎಲ್ಲ ಸೂತ್ರಗಳೂ ಒಂದೊಂದರಲ್ಲಿಯೂ ನಾಲ್ಕು ನಾಲ್ಕು ಪಾದಗಳುಳ್ಳ ಎಂಟು ಅಧ್ಯಾಯಗಳಾಗಿ ವಿಭಾಗಿಸಲ್ಪಟ್ಟಿವೆ. ಆದ್ದರಿಂದ ಈ ವ್ಯಾಕರಣ ಗ್ರಂಥಕ್ಕೆ ಅಷ್ಟಾಧ್ಯಾಯಿ ಎಂಬ ಹೆಸರೇ ಬಳಕೆಯಲ್ಲಿದೆ. ಅಷ್ಟಕ, ಪಾಣಿನಿಯವೃತ್ತಿಸೂತ್ರ, ಅಕಾಲಕವ್ಯಾಕರಣ, ಶಾಲಾತುರೀಯ ತಂತ್ರ ಎಂಬುದು ಈ ಅಷ್ಟಾಧ್ಯಾಯಿಯ ಇತರ ಹೆಸರುಗಳು.

ಪಾಣಿನಿಯ ಕಾಲದಲ್ಲಿ ಸಂಸ್ಕೃತ ಆಡುಭಾಷೆಯಾಗಿತ್ತು. ಅಲ್ಲದೆ ಗ್ರಾಂಥಿಕ ಸಂಸ್ಕೃತ ಭಾಷೆಗೂ ವ್ಯಾವಹಾರಿಕ ಸಂಸ್ಕೃತ ಭಾಷೆಗೂ ಅಷ್ಟಾಗಿ ವ್ಯತ್ಯಾಸವಿರಲಿಲ್ಲ. ಈ ಭಾಷೆಗೇ ಲೌಕಿಕ ಭಾಷೆ ಎನ್ನುವುದು. ಇದು ವೇದಗಳ ವೈದಿಕ ಭಾಷೆಗಿಂತ ತುಂಬ ಭಿನ್ನವಾಗಿತ್ತು. ಈ ವೈದಿಕ (ಸಂಸ್ಕೃತ) ಮತ್ತು ಲೌಕಿಕ (ಸಂಸ್ಕೃತ) ಭಾಷೆಗಳೆರಡಕ್ಕೂ ಅನ್ವಯಿಸುವಂತೆ ಒಂದೆ ವ್ಯಾಕರಣವನ್ನು (ಶಬ್ದಾನುಶಾಸನ) ರಚಿಸಿದ ಕೀರ್ತಿ ಸಲ್ಲುವುದು ಪಾಣಿನಿಯೊಬ್ಬನಿಗೇ. ಅಲ್ಲದೆ ಈವರೆಗೆ ಉಪಲಬ್ಧವಾಗಿರುವ ಶಬ್ದಾನುಶಾಸನಗಳಲ್ಲಿ ಸಮಗ್ರವಾಗಿರುವುದು ಪಾಣಿನಿಯ ಅಷ್ಟಾಧ್ಯಾಯಿಯೊಂದೇ. ಇದರಲ್ಲಿನ ಸಾಂಕೇತಿಕ ಪರಿಶುದ್ಧತೆ ಮತ್ತು ಸೂತ್ರನಿರ್ಮಾಣ ಚಾತುರ್ಯ ಅನ್ಯಾದೃಶವಾದುದು.

ಪಾಣಿನಿ, ವರರುಚಿ, ಪತಂಜಲಿ–ಈ ಮೂವರನ್ನೂ ವ್ಯಾಕರಣಶಾಸ್ತ್ರದಲ್ಲಿ ಧುರೀಣರಾದ ಮುನಿತ್ರಯರೆಂದು ಭಾವಿಸಲಾಗಿದೆ. ಈ ಮೂವರೂ ಮುನಿಗಳೇ ಆಗಿದ್ದರೆಂಬುದು ಸಾಂಪ್ರದಾಯಿಕ ನಂಬಿಕೆ.

ಪಾಣಿನಿಯ ಸೂತ್ರಗಳಿಗೆ ರಚಿತವಾಗಿರುವ ಟೀಕೆಗಳಲ್ಲಿ ಅತ್ಯಂತ ಪ್ರಾಚೀನವೂ ಪ್ರಧಾನವೂ ಆದುದು ಕಾಶಿಕಾವೃತ್ತಿ. ಇದನ್ನು ಜಯಾದಿತ್ಯ, ವಾಮನ ಎಂಬ ಇಬ್ಬರು ಜೈನಪಂಡಿತರು 7ನೆಯ ಶತಮಾನದ ಪೂರ್ವಾರ್ಧದಲ್ಲಿ ರಚಿಸಿದರು. ಈ ಪಾಣಿನಿಯೂ ಜಾಂಬವತೀ ಪರಿಣಯ ಕರ್ತೃವಾದ ಪಾಣಿನಿಯೂ ಇಬ್ಬರೂ ಒಂದೇ ಎಂಬುದು ಕೆಲವರ ಅಭಿಪ್ರಾಯ. ಉಪಜಾತಿ ಛಂದಸ್ಸಿನಲ್ಲಿ ಪಾಣಿನಿ ಸಿದ್ಧಹಸ್ತನಾಗಿದ್ದನೆಂದು ಕ್ಷೇಮೇಂದ್ರ ತನ್ನ ಸುವೃತ್ತತಿಲಕದಲ್ಲಿ ಹೇಳಿದ್ದಾನೆ. (ಎಸ್.ಆರ್.ಎಎನ್.)

**ಪಾಣಿಪತ್ ಕದನಗಳು:** ಭಾರತದ ಇತಿಹಾಸದ ಮೇಲೆ ವಿಶೇಷ ಪ್ರಭಾವ ಬೀರಿ ಅದರ ಗತಿಯನ್ನೇ ಬಹಳಮಟ್ಟಿಗೆ ಬದಲಾಯಿಸಿದ ಮೂರು ನಿರ್ಣಾಯಕ ಕದನಗಳು. ಇವು ಅನುಕ್ರಮವಾಗಿ 1526, 1556 ಮತ್ತು 1761ರಲ್ಲಿ ದೆಹಲಿಯ ಉತ್ತರಕ್ಕೆ ಸು.80 ಕಿಮೀ ದೂರದಲ್ಲಿರುವ ಪಾಣಿಪತ್ ಎಂಬಲ್ಲಿ ನಡೆದುವು. ಈ ಸ್ಥಳ ಮಟ್ಟಸವಾದ ಬಯಲಾಗಿದ್ದು ಅಶ್ವದಳಗಳ ಸಂಚಾರಕ್ಕೆ ಅನುಕೂಲವಾಗಿದ್ದುದರಿಂದ ಕದನಕ್ಕೆ ಈ ಸ್ಥಳವನ್ನು ಬಳಸಿ ಕೊಳ್ಳಲಾಯಿತು. ಒಂದನೆಯ ಪಾಣಿಪತ್ ಕದನ 1526 ಏಪ್ರಿಲ್ 21ರಂದು ದೆಹಲಿಯ ಸುಲ್ತಾನ ಇಬ್ರಾಹಿಂ ಲೋದಿಗೂ ಕಾಬೂಲಿನಿಂದ ದಂಡೆತ್ತಿ ಬಂದಿದ್ದ ಮೊಗಲ್ ದೊರೆ ಬಾಬರನಿಗೂ ನಡೆಯಿತು. ಇಬ್ರಾಹಿಂ ಲೋದಿಯ ಕಡೆ ಇದ್ದ ಸೈನ್ಯದಲ್ಲಿ 1,00,000 ಜನರಿದ್ದರು. ಆದರೆ ಬಾಬರನ ಬಳಿ ಇದ್ದ ಸೈನಿಕರು ಕೇವಲ 2,000. ಆದರೆ ಬಾಬರನ ಕುಶಲ ಯುದ್ಧತಂತ್ರ ದಿಂದಾಗಿ ಅವನ ಕೈ ಮೇಲಾಯಿತು. ಅವನು ತನ್ನಲ್ಲಿದ್ದ ಫಿರಂಗಿಯನ್ನು ಅತ್ಯಂತ ಪರಿಣಾಮ ಕಾರಿಯಾಗಿ ಬಳಸಿದ. ಇಬ್ರಾಹಿಂ ಲೋದಿ ಸೋತು ಸಾವಿಗೀಡಾದ. ಬಾಬರ್ ದೆಹಲಿ ಆಗ್ರಗಳನ್ನು ಆಕ್ರಮಿಸಿಕೊಂಡು ಭಾರತದಲ್ಲಿ ಮೊಗಲ್ ಸಾಮ್ರಾಜ್ಯವನ್ನು ಸ್ಥಾಪಿಸಿದ.

ಎರಡನೆಯ ಪಾಣಿಪತ್ ಕದನ 1556 ನವೆಂಬರ್ 5ರಂದು ಆಫ್ಘನ್ ದೊರೆ ಆದಿಲ್ ಷಾ ಸುರ್‍ನ ಸಮರ್ಥ ಹಿಂದು ಸೇನಾನಿ ಹಾಗೂ ಮಂತ್ರಿ ಹೇಮುವಿಗೂ ತಂದೆಯ ಕಳೆದುಹೋಗಿದ್ದ ಸಾಮ್ರಾಜ್ಯವನ್ನು ಮತ್ತೆ ಗೆದ್ದುಕೊಳ್ಳತೊಡಗಿದ್ದ ಅಕ್ಬರ್ ಹಾಗೂ ಅವನ ಪೋಷಕ ಬೈರಾಮ್ ಖಾನನಿಗೂ ನಡೆಯಿತು. ಹೇಮುವಿನ ಸೈನ್ಯ ದೆಹಲಿಯನ್ನೂ ಆಗ್ರವನ್ನೂ ಗೆದ್ದು ಪಾಣಿಪತ್‍ನಲ್ಲಿ ಮೊಗಲ್ ಸೈನ್ಯವನ್ನು ಎದುರಿಸಿತು. ಹೇಮುವಿನ ಸೈನ್ಯ ಮೊಗಲರದಕ್ಕಿಂತ ದೊಡ್ಡದಾಗಿತ್ತು. ಅದರಲ್ಲಿ 150 ಆನೆಗಳಿದ್ದುವು. ಆರಂಭದಲ್ಲಿ ಹೇಮುವಿಗೆ ಜಯವಾಯಿತು. ಆದರೆ ಅಕಸ್ಮಾತ್ತಾಗಿ ಬಾಣವೊಂದು ಅವನ ಕಣ್ಣಿಗೆ ತಾಗಿತು. ಹೇಮುವಿಗೆ ಜ್ಞಾನ ತಪ್ಪಿತು. ತಮ್ಮ ನಾಯಕ ಬಿದ್ದುದರಿಂದ ಸೈನಿಕರು ದಿಕ್ಕೆಟ್ಟು ಓಡಿದರು. ಹೇಮು ಸೆರೆಯಾದ. ಅವನನ್ನು ಕೊಲ್ಲಲಾಯಿತು. ಎರಡನೆಯ ಕದನವೂ ನಿರ್ಣಾಯಕವಾಗಿ ಮುಕ್ತಾಯಗೊಂಡಿತು. ವಿಜಯಿ ಅಕ್ಬರ್ ದೆಹಲಿ ಆಗ್ರಗಳನ್ನು ಮತ್ತೆ ವಶಪಡಿಸಿಕೊಂಡ. ಭಾರತದಲ್ಲಿ ಪ್ರಭುತ್ವ ಸ್ಥಾಪಿಸಲು ಆಫ್ಘನರಿಗೂ ಮೊಗಲರಿಗೂ ನಡೆದಿದ್ದ ಸ್ಪರ್ಧೆಯಲ್ಲಿ ಮೊಗಲರು ಗೆದ್ದರು. ಅನಂತರ ಸು.300 ವರ್ಷಗಳ ಕಾಲ ಅವರು ದೆಹಲಿಯ ಸಿಂಹಾಸನದ ಮೇಲೆ ಕುಳಿತು ಆಳಿದರು.

ಮೂರನೆಯ ಪಾಣಿಪತ್ ಕದನ 1761 ಜನವರಿ 14ರಂದು ಆಫ್ಘನ್ ಆಕ್ರಮಣಕಾರಿ ಅಹಮದ್ ಷಾ ಅಬ್ದಾಲಿಗೂ ಮರಾಠರಿಗೂ ನಡೆಯಿತು. ಮೊಗಲ್ ಚಕ್ರವರ್ತಿ 2ನೆಯ ಷಾ ಆಲಮನ ರಕ್ಷಣೆಗಾಗಿ ಮುನ್ನುಗ್ಗಿದ್ದ ಮರಾಠರು ಮೊಗಲ್ ಸಾಮ್ರಾಜ್ಯಕ್ಕೆ ತಾವೇ ಉತ್ತರಾಧಿಕಾರಿಗಳಾಗಿ ಭಾರತವನ್ನಾಳಬೇಕೆಂದು ಆಶಿಸಿದ್ದರು. ಆದರೆ ಪಾಣಿಪತ್ ಕದನದ ಪರಿಣಾಮವಾಗಿ ಆ ನಿರೀಕ್ಷೆ ಸುಳ್ಳಾಯಿತು. ಸುಮಾರು ಎರಡೂವರೆ ತಿಂಗಳುಗಳ ಕಾಲ ಪಾಣಿಪತ್ ಬಳಿಯ ಸಣ್ಣಪುಟ್ಟ ಕದನಗಳಲ್ಲಿ ಸ್ವಲ್ಪಮಟ್ಟಿಗೆ ನಷ್ಟ ಹೊಂದಿ ಸಾಕಷ್ಟು ಆಹಾರವಿಲ್ಲದೆ ಬಳಲಿದ್ದ ಮರಾಠ ಸೈನ್ಯ ಪಾಣಿಪತ್ ಕ್ಷೇತ್ರದ ಅಬ್ದಾಲಿಯ ಸೈನ್ಯವನ್ನು ನೇರವಾಗಿ ಹಾಗೂ ಅಂತಿಮವಾಗಿ ಎದುರಿಸಿತು. ಅಬ್ದಾಲಿಗೆ ಅಯೋಧ್ಯೆಯ ನವಾಬ ಶೂಜಾ–ಉದ್–ದೌಲನೂ ನಜೀಬ್ ಖಾನನೆಂಬ ಭಾರತೀಯ ಮುಸ್ಲಿಮನೂ ನೆರವಾಗಿ ತಮ್ಮ ಸೇನೆಯನ್ನು ಎಡಬಲಗಳಲ್ಲಿ ನಿಲ್ಲಿಸಿದ್ದರು. ಮರಾಠರ ಕಡೆ ಸದಾಶಿವರಾವ್ ಭಾವೂ ದಂಡನಾಯಕನಾಗಿದ್ದ. ಇಬ್ರಾಹಿಂ ಖಾನ್ ಗಾರ್ಡಿ, ಮಲ್ಹಾರ್ ರಾವ್ ಹೋಳ್ಕರ್ ಮತ್ತು ಜಾಂಕೋಜಿ ಸಿಂಧ್ಯರು ಅವನ ನೆರವಿಗೆ ನಿಂತಿದ್ದರು. ಅಬ್ದಾಲಿಯ ಸೈನ್ಯ ಸಂಖ್ಯೆಯಲ್ಲೂ ಸಾಮರ್ಥ್ಯದಲ್ಲೂ ಮರಾಠರದಕ್ಕಿಂತ ಮಿಗಿಲಾದ್ದಾಗಿತ್ತು. ಎರಡೂ ಪಕ್ಷಗಳ ನಡುವೆ ಬಿರುಸಾದ ಕದನ ನಡೆಯಿತು. ಕದನದಲ್ಲಿ ಸದಾಶಿವರಾವ್ ಭಾವೂ, ಪೇಷ್ವೆಯ ಮಗ ಮತ್ತು ಇನ್ನೂ ಹಲವು ಪ್ರಮುಖರು ಮಡಿದರು. ಮರಾಠರ ಕಡೆ ಅಗಾಧ ಸಾವು ನೋವು ನಷ್ಟಗಳಾದುವು. ಮೂರನೆಯ ಪಾಣಿಪತ್ ಯುದ್ಧ ಭಾರತದ ಇತಿಹಾಸದಲ್ಲಿ ಇನ್ನೊಂದು ಪ್ರಮುಖ ತಿರುವಾಯಿತು. ಮೊಗಲ್ ಸಾಮ್ರಾಜ್ಯ ತನ್ನ ಶತ್ರುಗಳಾಗಿದ್ದ ಮರಾಠರ ನೆರವಿನಿಂದಲೂ ಉಳಿಯದಂತಾಯಿತು. ಮರಾಠರನ್ನೆಲ್ಲ ಒಂದುಗೂಡಿಸುವಂಥ ಪ್ರಭಾವ ಪೇಷ್ವೆಗೆ ಇರಲಿಲ್ಲವೆಂಬುದು ಸ್ಪಷ್ಟವಾಯಿತು. ಮೊಗಲ್ ಸಾಮ್ರಾಜ್ಯದ ಅಂತ್ಯದೊಡನೆ ಮರಾಠರು ಇಡೀ ಭಾರತದ ಸಾಮ್ರಾಟರಾಗಬಹುದೆಂಬ ಆಸೆ ಮುರಿದುಬಿತ್ತು. ವಿಜಯಿ ಅಬ್ದಾಲಿಯಾ ದರೂ ದೆಹಲಿಯಲ್ಲಿ ನಿಂತು ಆಳಲಾಗಲಿಲ್ಲ. ತನ್ನ ಸೇನೆ ಬಂಡಾಯವೇಳ ಬಹುದೆಂಬ ಅಂಜಿಕೆಯಿಂದಾಗಿ ಅವನು ಆಫ್ಘಾನಿಸ್ತಾನಕ್ಕೆ ಹಿಂದಿರುಗಿದ. ಮರಾಠರ ಸೋಲು, ಮೊಗಲ್ ಸಾಮ್ರಾಜ್ಯದ ಅಸ್ತಮಾನ ಭಾರತೀಯ ಮುಸ್ಲಿಮರ ಅಸಾಮರ್ಥ್ಯ ಹಾಗೂ ಅಸಂಘಟನೆ–ಇವುಗಳಿಂದ ಬ್ರಿಟಿಷರು ಭಾರತದಲ್ಲಿ ಪ್ರಬಲರಾಗಿ, ಉತ್ತರೋತ್ತರದಲ್ಲಿ ತಮ್ಮ ಸಾಮ್ರಾಜ್ಯವನ್ನು ನಿರ್ಮಿಸಿದರು. *

**ಪಾರ್ಸಿ ಕಲೆ:** ಪಶ್ಚಿಮ ಏಷ್ಯದಲ್ಲಿ ಪ್ರ.ಶ.ಪೂ.6ನೆಯ ಶತಮಾನದ ಮಧ್ಯಭಾಗದಲ್ಲಿ ಅಸ್ಸೀರಿಯ, ಕಾಲ್ಡಿಯ ಸಾಮ್ರಾಜ್ಯಗಳು ಪತನವಾದ ಅನಂತರ ಈಗಿನ ಇರಾನಿನ ಪರ್ವತ ಪ್ರದೇಶದಲ್ಲಿ ಪಾರ್ಸಿ ಸಾಮ್ರಾಜ್ಯದ ಉದಯವಾಯಿತು. ಪ್ರ.ಶ.ಪೂ.331 ರಲ್ಲಿ ಅಲೆಕ್ಸಾಂಡರ್‌ನ ಧಾಳಿಯಿಂದ ಹಾಳಾಗುವವರೆಗೂ ಅದು ಏಷ್ಯದ ಅತ್ಯಂತ ಪ್ರಭಾವಶಾಲಿ ಸಾಮ್ರಾಜ್ಯವಾಗಿತ್ತು. ಆಗ ಅಭಿವೃದ್ಧಿ ಹೊಂದಿದ ಪಾರ್ಸಿ ಕಲೆಯ ಇತಿಹಾಸದ ಕೆಲವು ಕುರುಹುಗಳು ಮಾತ್ರ ಉಳಿದುಬಂದಿವೆ.

**ವಾಸ್ತುಶಿಲ್ಪ:** ಈ ಕ್ಷೇತ್ರದಲ್ಲಿ ಬಹಳ ಪ್ರಮುಖ ಕಟ್ಟಡ ಪರ್ಸೆಪಲಿಸ್ ಅರಮನೆ. ಅಕೆಮನಿಡ್ ವಂಶದ ದರ್ಯಾವುಷ ಮತ್ತು ಕ್ಷಯರ್ಷರ (ಪ್ರ.ಶ.ಪೂ.533–465) ಕಾಲದಲ್ಲಿ ನಿರ್ಮಿತವಾದ ಅರಮನೆ ವಿಶಾಲ ಜಗತಿಯ ಮೇಲಿನ ಮಂಟಪ ಮತ್ತು ಅನೇಕ ಕೋಣೆಗಳ ನ್ನೊಳಗೊಂಡಿದೆ. ಇಕ್ಕೆಲಗಳಲ್ಲೂ ಮಾನವ ಶಿರಗಳುಳ್ಳ ಬೃಹತ್ ನಂದಿಗಳ ವಿಗ್ರಹಗಳಿರುವ ಪ್ರಾಫಿಲಾನ್ ಪ್ರವೇಶ ಜಗತಿಗೊಯ್ಯುತ್ತದೆ. ಜಗತಿಯ ಇಕ್ಕೆಲಗಳಲ್ಲೂ ಸೋಪಾನ ಪಂಕ್ತಿಗಳಿವೆ. ಈ ಪ್ರದೇಶದಲ್ಲಿ ಶಿಲೆಗಳು ವಿಪುಲವಾಗಿರುವುದರಿಂದ ಕಟ್ಟಡದ ಜಗತಿ, ಸೋಪಾನ ಶ್ರೇಣಿ, ಹೆಬ್ಬಾಗಿಲು ಮತ್ತು ಸಭಾ ಮಂಟಪದ ಕಂಬಗಳನ್ನು ಉತ್ತಮ ರೀತಿಯ ಕಲ್ಲಿನಿಂದ ನಿರ್ಮಿಸಲಾಗಿದೆ. ಆದರೆ ಗೋಡೆಗಳಿಗೆ ಸುಟ್ಟ ಇಟ್ಟಿಗೆಗಳನ್ನೂ ಚಾವಣಿ ಮತ್ತು ಸಣ್ಣ ಕಂಬಗಳಿಗೆ ಮರವನ್ನೂ ಬಳಸಲಾಗಿದೆ. ಇಲ್ಲಿಯ ಕಂಬಗಳು ವಿಶಿಷ್ಟವಾದುವು. ಅಪಾದಾನ ಸಭಾಮಂಟಪದಲ್ಲಿ 40 ಅಡಿಗಳೆತ್ತರದ ಕೃಶವಾದ ಮತ್ತು ಅರೆಗೋಳವಿಯಾಕಾರದ ಗಾಡಿಗಳುಳ್ಳ ಸುಂದರವಾದ 36 ಕಂಬಗಳು ಚಾವಣಿಗೆ ಆಧಾರ ಗಳಾಗಿವೆ. ಕಂಬಗಳ ಬೋದಿಗೆಯಲ್ಲಿ ಪರಸ್ಪರ ಬೆನ್ನಿಗಂಟಿದಂತೆ ನಾಲ್ಕು ದಿಕ್ಕುಗಳಿಗೂ ಮುಖ ಮಾಡಿ ನಂದಿ, ಸಿಂಹ ಅಥವಾ ಹದ್ದುಗಳ ಮುಖಭಾಗಗಳನ್ನು ಜೋಡಿಸಲಾಗಿದೆ. ಆ ಪ್ರಾಣಿಗಳ ತಲೆಯ ಮಧ್ಯಭಾಗದಲ್ಲಿ ಕೂಡಿಸಿದ ಮರದ ದೂಲಗಳಿಗೆ ಪ್ರಾಯಶಃ ವಿವಿಧ ಬಣ್ಣ ಮತ್ತು ಚಿನ್ನದ ತಗಡಿನ ಅಲಂಕಾರ ವಿದ್ದಿರಬಹುದು; ಅಂತೆಯೇ ಗೋಡೆಗಳಿಗೂ ವಿವಿಧ ಬಣ್ಣದ ಅಥವಾ ಗಾಜಿನ ಲೇಪದ ಅಲಂಕಾರವಿದ್ದಿರಬಹುದು. ಅರಸ ತನ್ನ ಪರಿಚಾರಕ ವರ್ಗ, ಅಂಗರಕ್ಷಕದಳ, ಸಭಾಸದರು ಮತ್ತು ಸಾಮಂತ ರಾಜ್ಯದ ಪ್ರತಿನಿಧಿಗಳಿಂದ ಸುತ್ತುವರೆದವನಾಗಿ, ರಾಜ ಗಾಂಭೀರ್ಯ ಘನತೆಗಳಿಂದ ಪ್ರವೇಶಿಸಿದಾಗ ಸಭಾಮಂಟಪದ ಭವ್ಯತೆ ಅದ್ಭುತವಾಗಿದ್ದಿರಬಹುದು.

ಈ ಅಲಂಕರಣ ಕಾರ್ಯದ ಬಹು ಅಂಶಗಳು ತತ್ಪೂರ್ವದ ಸಸೀರಿಯನದ–ಬ್ಯಾಬಿಲೋನಿಯನ್ ಕಲೆಯಿಂದ ಪ್ರಭಾವಿತವಾದಂತೆ ಕಂಡುಬಂದರೂ ಪಾರಸಿಕರು ಅವನ್ನು ತಮ್ಮ ವಾತಾವರಣದ ಆವಶ್ಯಕತೆಗಳಿಗೆ ಅಳವಡಿಸಿಕೊಂಡು ತಮ್ಮದಾಗಿಸಿಕೊಂಡು ಅವಕ್ಕೆ ಸ್ವತಂತ್ರ ವ್ಯಕ್ತಿತ್ವವನ್ನು ಕೊಟ್ಟಿದ್ದಾರೆ.

ಅನಂತರದ ಸಸೇನಿಯನ್ ಯುಗದಲ್ಲಿ ಪರ್ಷಿಯದ ವಾಸ್ತುಶಿಲ್ಪ ಹೊರಗಿನ ಪ್ರಭಾವ ಗಳನ್ನು ತನ್ನದಾಗಿಸಿಕೊಳ್ಳುವ ಸಾಮರ್ಥ್ಯವನ್ನು ಮತ್ತು ತನ್ನದೇ ಆದ ಅಂತಃಶಕ್ತಿಯನ್ನು ಪ್ರದರ್ಶಿಸುತ್ತದೆ. ಈ ಕಾಲದಲ್ಲಿ ಸಹ ಅರಮನೆ ವಾಸ್ತುಶಿಲ್ಪದ ಪ್ರಮುಖ ಪ್ರತಿನಿಧಿಯಾಗಿದೆ. ಕ್ಟೆಸಿಫಾನ್ ನಗರದ ಪ್ರ.ಶ.6ನೆಯ ಶತಮಾನದ ಅರಮನೆಯ ಭವ್ಯತೆ ಅದರ ಗೋಡೆಗಳ ಮೇಲಿದ್ದ ಸುಟ್ಟ ಮಣ್ಣಿನ ಫಲಕಗಳ ಅಲಂಕರಣ ಮತ್ತು 6ನೆಯ ಶತಮಾನದಲ್ಲಿ ಇಸ್ಲಾಮಿಯರು ಅದನ್ನು ಪಾಳುಗೆಡವಿದಾಗ ಅಲ್ಲಿತ್ತೆಂದು ಹೇಳಲಾದ ರತ್ನಗಂಬಳಿಗಳು ಮತ್ತು ಪೀಠೋಪಕರಣಗಳು–ಇವನ್ನು ಸ್ಮರಿಸಿದಾಗ ಆ ಅರಮನೆಯ ದಿವ್ಯ ವೈಭವ ಕಣ್ಣಿಗೆ ಕಟ್ಟುತ್ತದೆ. ಸಿಂಹಾಸನವಿರುವ ಕೋಣೆಯ ಚಾವಣಿಯ ತೂಗುಗುಮ್ಮಟದ ಔನ್ನತ್ಯ ಮಾನವನ ಭವ್ಯ ಕಲ್ಪನೆಗೆ ಸಾಕ್ಷಿಯಾಗಿದೆ. ಈ ಸಭಾಂಗಣದ ಮುಂಭಾಗದ ಅಡ್ಡಗೋಡೆಯನ್ನು ಅರಗಂಬ ಮತ್ತು ಕಮಾನು ವಿನ್ಯಾಸಗಳಿಂದ ಅಲಂಕರಿಸಲಾಗಿದೆ. ಅದರ ಅಂತಸ್ತುಗಳ ಜೋಡಣೆ ತುಂಬಾ ಆಕರ್ಷಣೀಯ.

ಮುಸ್ಲಿಮರ ಆಕ್ರಮಣದ ತರುವಾಯ (641). ಇಡೀ ಏಷ್ಯ ಖಂಡದಲ್ಲಿ ರೂಢಿಗೆ ಬಂದ ಇಸ್ಲಾಮಿ ವಾಸ್ತುಶಿಲ್ಪ ಶೈಲಿ ಇಲ್ಲಿಯೂ ಬಲಗೊಂಡಿತು. ಆದರೂ ಸಸೇನಿಯನ್ ಯುಗದ ಪ್ರಭಾವಗಳು ಉಳಿದು ಬಂದುವು. ಕಟ್ಟಡದ ಚಾವಣಿಗಳಲ್ಲಿ ಅರ್ಧ ಉರುಳೆ ಯಾಕಾರದ ಒಳಮಾಳಿಗೆಗಳು ಹೆಚ್ಚಾಗಿ ಬಳಕೆಯಲ್ಲಿದ್ದುವು. ಅನೇಕ ಮಸೀದಿಗಳ ಇಬ್ಬದಿಗಳಲ್ಲಿ ಅಥವಾ ನಾಲ್ಕು ಮೂಲೆಗಳಲ್ಲಿ ಕಿರುಗಂಬಗಳು (ಮಿನರೆಟ್ಟುಗಳು) ಇರುತ್ತಿದ್ದವು. ಎರಡು ಹಂತದ ಗುಮ್ಮಟಗಳು ಈ ಕಟ್ಟಡಗಳ ಮತ್ತೊಂದು ವಿಶಿಷ್ಟ ಲಕ್ಷಣ; ಹೊರಗುಮ್ಮಟ ವನ್ನು ಎತ್ತರವಾದ ಅಂಡದ ಮೇಲೆ ನಿಲ್ಲಿಸಲಾಗಿದೆ. ಈ ಕಟ್ಟಡಗಳ ಕಮಾನು ಚಾವಣಿ ಮತ್ತು ಗುಮ್ಮಟಗಳ ವಿನ್ಯಾಸ ಮತ್ತು ನಿರ್ಮಾಣ ತಂತ್ರಗಳು ಶಿಲ್ಪಿಗಳ ಸಾಹಸಿ ಚಮತ್ಕಾರದ ಉತ್ತಮ ನಿದರ್ಶನಗಳಾಗಿವೆ. ಆ ಶೈಲಿಯ ಅತ್ಯುತ್ತಮ ಕಟ್ಟಡಗಳು 16–17ನೆಯ ಶತಮಾನ ಗಳಿಗೆ ಸೇರಿದುವು. 8ನೆಯ ಶತಮಾನದಲ್ಲಿ ಸೂಕ್ಷ್ಮವೆನ್ನಲಾದ ಮರದ ಕಟ್ಟಡಗಳು ರೂಢಿಗೆ ಬಂದುವು; ಇವುಗಳ ನವುರಾದ ಕಂಬಗಳು ತೊಡರಿಕೊಂಡಂತಿರುವ ಸೂರುಗಳು, ಇವುಗಳ ಮೇಲಿನ ಅದ್ಭುತ ಕೆತ್ತನೆ, ಚಿತ್ರಕೊರೆತ, ಕಟ್ಟಡಗಳ ಸುತ್ತಲಿದ್ದ ರಮ್ಯ ಉದ್ಯಾನವನಗಳು – ಇವೆಲ್ಲವೂ ಪಾರಸಿ ಜೀವನದ ಗಮನಾರ್ಹ ಅಂಶಗಳಾಗಿದ್ದುವು.

**ಮೂರ್ತಿಶಿಲ್ಪ:** ಪರ್ಸೆಪಲಿಸ್ ಅರಮನೆಯಲ್ಲಿ ಹಲವಾರು ಭವ್ಯ ಉಬ್ಬುಶಿಲ್ಪ ಫಲಕ ಗಳಿದ್ದುವು. ಸೋಪಾನಗಳ ಪಕ್ಕದ ಗೋಡೆಗಳ ಮೇಲೆ ರಾಜಭಟರ, ಅಂಗರಕ್ಷಕದಳದ ಮತ್ತು ಸಾಮಂತರಾಜ್ಯಗಳಿಂದ ಕಪ್ಪಕಾಣಿಕೆಗಳನ್ನು ಹೊತ್ತು ತರುತ್ತಿದ್ದವರ ಶಿಲ್ಪಗಳನ್ನು ಕಡೆಯಲಾಗಿತ್ತು. ಮಾನವ ಶಿಲ್ಪಗಳನ್ನು ಸಮಾಂತರದಲ್ಲಿ ಕಡೆದು ಅವುಗಳ ನಡುವೆ ಕೆಲವು ಗಿಡಗಳ ಅಥವಾ ಕಪ್ಪಕಾಣಿಕೆಗಳನ್ನು ಹೊತ್ತು ತರುತ್ತಿದ್ದ ಶಿಲ್ಪಗಳನ್ನು ಜೋಡಿಸಲಾಗಿತ್ತು. ಶಿಲ್ಪಗಳ ಕೆತ್ತನೆ, ಜೋಡಣೆ, ವಿವರಗಳ ನಿರೂಪಣೆ, ತಾಂತ್ರಿಕ ನೈಪುಣ್ಯದ ಸಾಕ್ಷಿಗಳಾಗಿವೆ. ಇಡೀ ಕಟ್ಟಡಕ್ಕೆ ಬೆಳಕು ನೆರಳಿನ ಪರಿಣಾಮವನ್ನೊದಗಿಸುತ್ತಿದ್ದ ಫಲಕಗಳು ಅರಮನೆಯ ಔನ್ನತ್ಯವನ್ನು ತೋರಿಸುವ ಅಳತೆಗೋಲುಗಳಂತಿವೆ.

ಸಸೇನಿಯನ್ ಯುಗದ ಶಿಲಾಮೂರ್ತಿಗಳ ಉತ್ತಮ ನಿದರ್ಶನಗಳನ್ನು ಪರ್ಸೆಪಲಿಸ್ ಬಳಿಯಿರುವ ನಕ್ಷ್–ಇ–ರುಸ್ತವರ್‌ನಲ್ಲಿರುವ ಆರ್ದಷೀರ್ I ಮತ್ತು ಷಾಪೂರ್ I ದೊರೆಗಳ ಬೃಹದಾಕೃತಿಯ ಶಿಲ್ಪಗಳಲ್ಲಿ ಮತ್ತು ಕೆರ್ಮನ್‌ಷಾ ಬಳಿಯ ಒಂದು ಗ್ರಾಮದಲ್ಲಿರುವ ಖುಸ್ರು II ವಿನ ಅದ್ಭುತಶಿಲ್ಪದಲ್ಲಿ ಗುರ್ತಿಸಬಹುದು. ಖುಸ್ರುವಿನ ಮೂರ್ತಿ ಯುದ್ಧಕವಚವನ್ನು ಧರಿಸಿದೆ; ಇಸ್ಲಾಮಿಯರು ಇದನ್ನು ಬಹುಮಟ್ಟಿಗೆ ವಿಕೃತಗೊಳಿಸಿದ್ದರೂ ಈಗಲೂ ಅದರ ಭಾವಪೂರ್ಣ ಸೌಂದರ್ಯ ಗಮನಾರ್ಹವಾಗಿದೆ. ಇದರ ಅಂತಃಶಕ್ತಿ ಮತ್ತು ಭವ್ಯತೆ ಸ್ಮರಣೀಯವಾಗಿದೆ. ಇದರಲ್ಲಿ ಅಕೆಮನಿಡ್ ಶಿಲ್ಪಗಳ ಛಾಯೆ ಕಾಣುತ್ತದೆ. ಇಸ್ಲಾಮಿ ಯುಗದಲ್ಲಿ ಮತೀಯ ನಿರ್ಬಂಧದ ದೆಸೆಯಿಂದ ಮೂರ್ತಿಶಿಲ್ಪಕ್ಕೆ ಪ್ರೋತ್ಸಾಹವಿಲ್ಲವಾಯಿತು.

ಲೋಹಶಿಲ್ಪಕಲೆಯಲ್ಲಿ ಅಕೆಮಿನಿಯನ್ನರು ನಿಷ್ಣಾತರಾಗಿದ್ದರು. ಆ ಕಾಲದ ಒಂದು ಚಿನ್ನದ ತೋಳಬಂದಿಯ ಮೇಲೆ ರೆಕ್ಕೆಗಳುಳ್ಳ ಎರಡು ವಿಕೃತ ಪ್ರಾಣಿಗಳನ್ನು ರೂಪಿಸಲಾಗಿದೆ. ಇವುಗಳ ದೇಹದ ತಳಭಾಗ ಮತ್ತು ಹಿಂಗಾಲುಗಳನ್ನು ತೋಳಬಂದಿಯ ಮೇಲೆ ಉಬ್ಬುಚಿತ್ರ ರೂಪದಲ್ಲಿ ತೋರಿಸಲಾಗಿದೆ. ದುಂಡುಶಿಲ್ಪ ರೂಪದಲ್ಲಿ ರೆಕ್ಕೆ, ಎದೆಭಾಗ ಮತ್ತು ಕತ್ತುಗಳನ್ನು ತೋಳಬಂದಿಯ ಮೇಲ್ಭಾಗದಲ್ಲಿ ರೂಪಿಸಲಾಗಿದೆ; ಕೋಡುಗಳುಳ್ಳ ಸರ್ಪಗಳ ತಲೆಗಳು ಪರಸ್ಪರಾಭಿಮುಖವಾಗಿವೆ. ದೇಹದ ಮೇಲೆ ಸಣ್ಣಸಣ್ಣ ತಗ್ಗುಗಳನ್ನು ಕೊರೆಯಲಾಗಿದ್ದು ಇವುಗಳಲ್ಲಿ ಬಹುಶಃ ಬಣ್ಣದ ಶಿಲೆಯ ತುಂಡುಗಳನ್ನು ಹುದುಗಿಸಿಡಲಾಗಿತ್ತು. ಪ್ರಾಣಿಗಳ ದೇಹಗಳು ಬಹಳ ಸಾಂಕೇತಿಕವಾಗಿದ್ದರೂ ಇವುಗಳ ವೀರ್ಯವತ್ತಾದ ನಿರೂಪಣೆ ಮನತಟ್ಟುವಂತಿದೆ. ಲೋಹಕಲೆಯಲ್ಲೂ ಪಾರಸಿಕರ ಮೇಲೆ ತತ್ಪೂರ್ವ ಸಂಪ್ರದಾಯಗಳ ಛಾಯೆ ಬಿದ್ದಿರುವುದರಲ್ಲಿ ಸಂದೇಹವಿಲ್ಲವಾದರೂ ಅವರ ವೈಶಿಷ್ಟ್ಯ ಎದ್ದುಕಾಣುವಂತಿದೆ. ಲೂರಿಸ್ತಾನದಲ್ಲಿ ದೊರೆತಿರುವ ಪ್ರ.ಶ.ಪೂ.ಸು.7ನೆಯ ಶತಮಾನದ ಈಗ ಬಾಸ್ಟನ್ ವಸ್ತುಸಂಗ್ರಹಾಲಯದಲ್ಲಿರುವ ಕಂಚಿನ ದಂಡದ ಮೇಲುಹಿಡಿಕೆಯಲ್ಲಿ ಕೆತ್ತಿರುವ ಕಾಲ್ಪನಿಕ ಪ್ರಾಣಿಗಳ ಸಾದೃಶ್ಯವನ್ನು ಇಲ್ಲಿ ಕಾಣಬಹುದು.

ಸಸೇನಿಯನ್ ಯುಗದಲ್ಲಿ ಬೆಳ್ಳಿಯ ಕೆತ್ತನೆಯಲ್ಲಿ ಮೇಲೆ ಹೇಳಿದ ಭಾವಪೂರ್ಣ ಅಂತಃಸತ್ವವನ್ನು ಪ್ರದರ್ಶಿಸುವಂಥ ಹಲವಾರು ಕೃತಿಗಳನ್ನು ಕಾಣಬಹುದು. ಆ ಕಾಲದ ಒಂದು ಬೆಳ್ಳಿಯ ತಟ್ಟೆಯ ಮೇಲೆ ಖುಸ್ರು I ಬೇಟೆಯಾಡುತ್ತಿರುವ ದೃಶ್ಯವನ್ನು ಕೆತ್ತಲಾಗಿದೆ. ಸು.21 ಸೆಂಮೀ ವ್ಯಾಸವುಳ್ಳ ಆ ತಟ್ಟೆಯಲ್ಲಿ ಆರು ಚಿತ್ರಗಳನ್ನು ವೃತ್ತಾಕಾರದ ಪರಿಮಿತಿಗೆ ಹೊಂದುವಂತೆ ಕೆತ್ತಲಾಗಿದೆ. ನಾಗಾಲೋಟದಲ್ಲಿ ಓಡುತ್ತಿರುವ ರಾಜಾಶ್ವ, ಬಿಲ್ಲು ಹೂಡಿ ಬಾಣ ಪ್ರಯೋಗ ಮಾಡುತ್ತಿರುವ ದೊರೆ, ಬಾಣತಾಗಿ ಉರುಳಿದ ಇಲ್ಲವೇ ಓಡುತ್ತಿರುವ ಮೃಗಗಳು –ಇವುಗಳ ಚಿತ್ರಣ ಬಹಳ ಕೌಶಲಪೂರ್ಣವಾಗಿಯೂ ಜೀವಂತವಾಗಿಯೂ ಇವೆ. ಅವುಗಳೆಲ್ಲದರ ಸಮಗ್ರ ಜೋಡಣೆ ನಿಜಕ್ಕೂ ಅದ್ಭುತ.

ಇಸ್ಲಾಮಿ ಯುಗದ ಲೋಹಕಲೆ ಬಹಳ ಸೂಕ್ಷ್ಮವೂ ಸೌಂದರ್ಯಪೂರ್ಣವೂ ಆಗಿದೆ. ತಾಮ್ರ ಮತ್ತು ಕಂಚಿನ ವಸ್ತುಗಳ ಮೇಲೆ ಚಿನ್ನ, ಬೆಳ್ಳಿಯ ತುಂಡುಗಳನ್ನು ಹುದುಗಿಸಿ ನಿರ್ಮಿಸಿದ ವಿನ್ಯಾಸಗಳು ಅವರ ಕಲಾಜಾಣ್ಮೆ ಮತ್ತು ಸೌಂದರ್ಯಪ್ರಿಯತೆಯನ್ನು ತೋರಿಸುತ್ತವೆ. ತಮ್ಮ ಆಯುಧ ಮತ್ತು ಕವಚಗಳ ಮೇಲೆ ಇಂಥ ಚಿತ್ರಕೊರೆತಗಳನ್ನು ಹುದುಗಿಸಿ ಅಲಂಕರಿಸುವ ಕಲೆ ಮಧ್ಯಯುಗದಲ್ಲಿ 18ನೆಯ ಶತಮಾನದವರೆಗೂ ಕಂಡುಬರುತ್ತದೆ.

**ನೇಯ್ಗೆಯಲ್ಲಿ ಚಿತ್ರಕಲೆ:** ಬಟ್ಟೆಗಳ ಮೇಲಿನ ಚಿತ್ರಕಲೆಯಲ್ಲೂ ಪಾರ್ಸಿಗಳದ್ದು ಸಿದ್ಧಹಸ್ತ. ಚೀನದಿಂದ ಬರಮಾಡಿಕೊಂಡ ರೇಷ್ಮೆನೇಯ್ಗೆ ಕಲೆಯನ್ನು ಅವರು ತಮ್ಮ ದೇಶದಲ್ಲಿ ಅದ್ಭುತವಾಗಿ ಬೆಳೆಸಿಕೊಂಡರು. ತಮ್ಮ ರಾಜ ಹಾಗೂ ಶ್ರೀಮಂತ ವರ್ಗದ ಬಳಕೆಗೂ ಬೈಜಾಂಟಿಯಮ್ ಸಾಮ್ರಾಜ್ಯ ಮತ್ತು ಪಶ್ಚಿಮ ಯುರೋಪಿನ ದೇಶಗಳಿಗೆ ರಫ್ತಿಗಾಗಿಯೂ ಪ್ರಪಂಚವಿಖ್ಯಾತವಾದ ರತ್ನಗಂಬಳಿಗಳನ್ನೂ ರೇಷ್ಮೆಯ ವಸ್ತ್ರಗಳನ್ನು ಅವರು ತಯಾರಿಸು ತ್ತಿದ್ದರು. ಅವುಗಳ ಮೇಲೆ ಸಣ್ಣ ಪದಕಗಳಿಂದ ಕೂಡಿಸಲಾದ ದೊಡ್ಡ ಪದಕಗಳನ್ನು ಹೆಣೆ ಯುತ್ತಿದ್ದರು. ದೀರ್ಘ ವೃತ್ತಾಕಾರದ ಪದಕಗಳಲ್ಲಿ ಬೇಟೆಯ ದೃಶ್ಯಗಳು ಸಾಮಾನ್ಯವಾಗಿರು ತ್ತಿದ್ದವು. ಇಂಥ ಒಂದು ಪದಕದ ಮೇಲಿನ ದೃಶ್ಯದಲ್ಲಿ ಎದುರುಬದುರಾಗಿ ಹಾರುತ್ತಿರುವ ಕುದುರೆಗಳ ಮೇಲೆ ಕುಳಿತ ಇಬ್ಬರು ರಾಜರು, ಅವರಿಬ್ಬರ ನಡುವೆ ಇರುವ ರಾಜದಂಡದ ಇಕ್ಕೆಲಗಳಲ್ಲಿರುವ ಕವಲುಗಳ ಮೇಲೆ ಚಿತ್ರಿಸಲಾದ ಹಾರುತ್ತಿರುವ ಪಕ್ಷಿಗಳು, ರಾಜರು ಎಡಗೈಯಲ್ಲಿ ತಾವು ಬೇಟೆಯಲ್ಲಿ ಕೊಂದ ಸಿಂಹದ ಮರಿಗಳು, ಕುದುರೆಗಳ ಕೆಳಭಾಗದಲ್ಲಿರುವ ಕಾಡು ಪ್ರಾಣಿಗಳು–ಇವೆಲ್ಲ ಅಮೋಘವಾಗಿವೆ. ಪದಕದ ಸುತ್ತಂಚಿನಲ್ಲಿರುವ ಸಣ್ಣ ಲತಾವರ್ತುಲ ಗಳಲ್ಲೂ ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಅವುಗಳ ಚಿತ್ರಣ ಸೂಕ್ಷ್ಮವಾಗಿಯೂ ಸತ್ವಪೂರ್ಣ ವಾಗಿಯೂ ಇದೆ. ಒಟ್ಟಿನಲ್ಲಿ ಇಡೀ ದೃಶ್ಯ ಬಹಳ ರಮ್ಯ ಅಲಂಕಾರದ ಭಾವವನ್ನುಂಟು ಮಾಡುತ್ತದೆ. ಇಸ್ಲಾಮಿ ಯುಗದಲ್ಲಿ ಸಹ ಬಟ್ಟೆಗಳ ಮೇಲಿನ ಚಿತ್ರಕಲೆ ಮುಂದುವರೆಯಿತು. ಸಿಂಹ, ಹದ್ದು ಮತ್ತು ಹಲವು ಬಗೆಯ ಕಾಲ್ಪನಿಕ ಪ್ರಾಣಿಗಳನ್ನು ಜ್ಯಾಮಿತಿಯ ವಿನ್ಯಾಸಗಳ ನಡುವೆ ಚಿತ್ರಿಸುವ ನೇಯ್ಗೆ ಕಲೆ ಅನೂಚಾನವಾಗಿ ಬೆಳೆದುಬಂತು.

ಮಧ್ಯಯುಗೀನ ಮಡಕೆಕುಡಿಕೆಗಳ ಮೇಲೆ ಕಂಡುಬರುವ ಚಿತ್ರಕಲೆ ಪರ್ಷಿಯದಲ್ಲಿ 13ನೆಯ ಶತಮಾನದ ಅನಂತರ ಬಹಳ ಜನಪ್ರಿಯವಾಯಿತು. ಒರಟಾದ ಮೇಲ್ಮೈಯನ್ನು ಗಾಜಿನಂತೆ ನಯಗೊಳಿಸಿ ವಿವಿಧ ಬಣ್ಣಗಳನ್ನು ಲೇಪಿಸಿ ಆದರ ಮೇಲೆ ಹೂಬಳ್ಳಿಗಳನ್ನು ಬಹಳ ಆಕರ್ಷಕವಾಗಿ ಚಿತ್ರಿಸುತ್ತಿದ್ದರು.

**ವರ್ಣಚಿತ್ರಕಲೆ ಮತ್ತು ಆಲಂಕಾರಿಕ ಲಿಪಿ:** ಈ ಕ್ಷೇತ್ರದಲ್ಲಿ ಇಸ್ಲಾಮಿ ಯುಗದಿಂದೀಚೆಗೆ ಪಾರ್ಸಿ ಕೊಡುಗೆ ಪ್ರಾರಂಭವಾಯಿತು; ಈ ಕಲೆಯ ಪ್ರಮುಖ ಮಾಧ್ಯಮ ಮಸ್ತಕಗಳ ಹಸ್ತಪ್ರತಿಗಳು. 7ನೆಯ ಶತಮಾನದ ಉತ್ತರಾರ್ಧದ ಇರಾಕಿನ ಬಾಸ್ರಾ ಮತ್ತು ಕುಫಾ ನಗರಗಳಲ್ಲಿ, ಹದಗೊಳಿಸಿದ ಹಾಳೆಗಳ ಮೇಲೆ, ಪವಿತ್ರ ಕುರಾನಿನ ಪ್ರತಿಗಳನ್ನು ಮಾಡಲಾಗುತ್ತಿತ್ತು. ಈ ಲಿಪಿಯನ್ನು ಕುಫಿ ಲಿಪಿಯೆಂದು ಕರೆಯಲಾಗಿದೆ. 800ರ ಸುಮಾರಿಗೆ ಬಾಸ್ರಾದಲ್ಲಿದ್ದ ಪಾರ್ಸಿ ಮೂಲದ ಖೋಷ್ನಮ್ ಇಂಥ ಆಲಂಕಾರಿಕ ಹಸ್ತಪ್ರತಿಗಳನ್ನು ತಯಾರಿಸುತ್ತಿದ್ದರು. ತರುವಾಯ ಪಾರ್ಸಿಕರು ತಮ್ಮದೇ ಆದ ದುಂಡಾದ ನಸಖಿ ಲಿಪಿಯನ್ನು ಬೆಳೆಸಿಕೊಂಡರು. ಆಗಿನ ಈ ಕಲೆಯ ಆದ್ಯಪ್ರವರ್ತಕ ಇಬ್ರಾಹಿಮ್ ಸೆಗ್‍ಜಿ. 10ನೆಯ ಶತಮಾನದ ಅಂತ್ಯಕಾಲದಲ್ಲಿ ಜೀವಿಸುತ್ತಿದ್ದ ಘನಾ ಖುಸ್ರಾ ಮತ್ತೊಬ್ಬ ಪ್ರಮುಖ. 12ನೆಯ ಶತಮಾನದಲ್ಲಿ ಸೆಲ್ಜುಕ್ ದೊರೆಗಳ ಕಾಲದಲ್ಲಿ ಬಾಗ್ದಾದ್ ಶೈಲಿಯ ಲೇಖನ ಕಲೆ ಪ್ರಬಲವಾಯಿತು. ಕುರಾನಿನ ಹಸ್ತಪ್ರತಿಗಳಲ್ಲದೇ ಲೌಕಿಕ ಗ್ರಂಥಗಳನ್ನು ಆಲಂಕಾರಿಕ ಲಿಪಿಯಲ್ಲಿ ಪ್ರತಿ ಮಾಡುತ್ತಿದ್ದರು; ಇವುಗಳ ನಡುವೆ ವಿವರಣಾತ್ಮಕವಾದ ವರ್ಣಚಿತ್ರಗಳನ್ನೂ ಅಳವಡಿಸಲಾಗುತ್ತಿತ್ತು. ಇದೇ ಸಮಯದಲ್ಲಿ ಹಸ್ತಪ್ರತಿಗಳಲ್ಲಿ ಸೂಕ್ಷ್ಮವರ್ಣ ಚಿತ್ರಗಳು ಹೆಚ್ಚುಹೆಚ್ಚಾಗಿ ಬಳಕೆಗೆ ಬಂದುವು. ಕಲಾಪ್ರಿಯರಾದ ಷಾಹ ದೊರೆಗಳು ಉತ್ತಮ ಚಿತ್ರಲಿಪಿಕಾರರಿಗೆ ಆಶ್ರಯ ಪ್ರೋತ್ಸಾಹಗಳನ್ನು ನೀಡುತ್ತಿದ್ದರು. ಈ ಕಾಲದ ಸುಪ್ರಸಿದ್ಧ ಕೃತಿಗಳಲ್ಲಿ ಕುರಾನಿನ ಕೆಲವು ಪ್ರತಿಗಳೂ ಮನಾಫಿಅಲ್ ಹಯಾವನ್ ಗ್ರಂಥದ ಪ್ರತಿಗಳು ಸೇರಿವೆ.

ತೈಮೂರ್ ವಂಶದ ಮತ್ತು ಸಫಾವಿಡ್ ದೊರೆಗಳ ಕಾಲದ ಲೌಕಿಕ ಗ್ರಂಥಗಳ ಹಸ್ತಪ್ರತಿಗಳು ಅನಂತರ ಕಾಲದ ಉತ್ತಮ ಕೃತಿಗಳು. ಫಿರ್ದೂಸಿ, ನಿಜಾಮಿ ಇವರ ಕವನಗಳ ಪ್ರತಿಗಳನ್ನು ಖ್ಯಾತಚಿತ್ರಕಾರರು ತಯಾರಿಸುತ್ತಿದ್ದರು. ಈ ಚಿತ್ರಕಾರರಲ್ಲಿ ಬಿಹಜಾದ್ (1440–1536). ಷಾಹ್ ತಹ್ಮಾಸ್ಪನ (1524–1576) ಆಸ್ಥಾನಿಕರಾದ ಮಿರಾಕ್ ಮತ್ತು ಸುಲ್ತಾನ್ ಮುಹಮುದ್ ಅಗ್ರಗಣ್ಯರು. ದೊರೆಗಳ ವಿಲಾಸೀ ಜೀವನದ ಬೇಟೆ, ಸಂಗೀತ, ಪ್ರಣಯ ಮತ್ತು ಸಂತೋಷ ಕೂಟಗಳ ದೃಶ್ಯಗಳನ್ನೂ ಇಂಥ ಲೌಕಿಕ ಗ್ರಂಥಗಳಲ್ಲಿ ಚಿತ್ರಿಸಲಾಗುತ್ತಿತ್ತು. ಇಂಥ ಕೃತಿಗಳಲ್ಲಿ ಅಮೋಘವಾದದ್ದು, ನಿಜಾಮಿಯ ಲೈಲಾಮಜನು ಗ್ರಂಥದ ಪ್ರತಿ; ಇದರ ಚಿತ್ರಕಾರ ಮಿರಾಕ್. ಆಸನದ ಮೇಲೆ ಚಾವಟಿ ಹಿಡಿದು ಕುಳಿತ ಗುರು, ಅವನ ಮುಂಭಾಗದಲ್ಲಿ ವಿವಿಧ ಆಟಗಳಲ್ಲಿ ಮಗ್ನರಾದ ಶಿಷ್ಯರು, ಮಧ್ಯರಂಗದಲ್ಲಿ ಪರಸ್ಪರ ಅಭಿಮುಖರಾಗಿ ನಿಂತ ಲೈಲಾಮಜನು–ಇವರುಗಳ ಚಿತ್ರಣ ಸೂಕ್ಷ್ಮವಾದರೂ ಹೃದಯಂಗಮ ವಾಗಿದೆ. ಆದರೆ ಸಮತಲವಾಗಿದ್ದು, ನೆರಳು–ಬೆಳಕುಗಳ ರೂಪಣೆಯಿಲ್ಲವಾಗಿದೆ. ಬಣ್ಣಗಳ ಸಮನ್ವಯದಿಂದ ಅಲಂಕಾರಿಕ ಭಾವನೆ ಉಂಟಾಗಿದೆ. ಅದೇ ಕಾಲದ ಷಹನಾಮಾ ಖುಸ್ರು–ಷಿರಿನ್ ಮೊದಲಾದ ಗ್ರಂಥಗಳ ವರ್ಣಚಿತ್ರಿತ ಹಸ್ತಪ್ರತಿಗಳೂ ಈ ಗುಂಪಿಗೆ ಸೇರಿದ್ದವು.

ತೈಮೂರ್ ದೊರೆಗಳ ಆಶ್ರಿತನಾದ ಬೈಸಂಕ್ವರ್ ಮಿರ್ಜಾ ಹೆರಾಟಿನಲ್ಲಿ ಸ್ಥಾಪಿಸಿದ್ದ (1434) ಅಲಂಕಾರಿಕ ಲಿಪಿ ಶಾಲೆಯಲ್ಲಿ 40 ಮಂದಿ ಶಿಷ್ಯರಿದ್ದರು. ಆ ಶಾಲೆಯ ಅತ್ಯುತ್ತಮ ಚಿತ್ರಕಾರ ಬೆಹ್‍ಜಾದ್ (ಸು.1450–1520). ಪಾರ್ಸಿ ಚಿತ್ರಕಲೆಯಲ್ಲಿ ಅಗ್ರೇಸರನೆಂದು ಇವನನ್ನು ಗೌರವಿಸಲಾಗಿದೆ. ಇವನ ಕೃತಿಗಳು ದೇಶ ವಿದೇಶಗಳಲ್ಲಿ ಭಾರತದಲ್ಲೂ ಪ್ರಸಿದ್ಧಿ ಪಡೆದಿದ್ದವು. 16ನೆಯ ಶತಮಾನದ ಕೊನೆಗಾಲದಲ್ಲಿ ಇಸ್ಪಹಾನ್ ಶೈಲಿಯ ಚಿತ್ರಗಳು ಪ್ರಖ್ಯಾತವಾದವು. ಆ ಶೈಲಿಯ ಚಿತ್ರಕಾರರಲ್ಲಿ ಮೀರ್ ಇಮಾದ್ ಅಲ್–ಹುಸ್ನಿ (ಸು.1618) ಮತ್ತು ರಿಜ಼ಾ ಅಬ್ಬಾಸಿ ರಾಜ ಸನ್ಮಾನಕ್ಕಾಗಿ ಪ್ರತಿಸ್ಪರ್ಧಿಗಳು. ಉಸ್ತಾದ್ ಮೊಹಮ್ಮದಿಯಾದ ರೊತನ್ನ ಪ್ರಕೃತಿ ಚಿತ್ರಗಳ ಒಂದು ಹೊಸ ಸಂಪ್ರದಾಯದ ಸ್ಥಾಪಕ. ಅವನ ಶಿಷ್ಯನಾದ ರಿಜ಼ಾ ಅಬ್ಬಾಸಿಯ ನೂರಾರು ಚಿತ್ರಗಳು ಪರ್ಷಿಯ ಮತ್ತು ಭಾರತಗಳ ಸೂಕ್ಷ್ಮ ವರ್ಣಚಿತ್ರ ಸಂಗ್ರಾಹಕರ ಬಳಿ ಉಳಿದುಬಂದಿದೆ. 18ನೆಯ ಶತಮಾನ ಮತ್ತು ಅನಂತರ ಕಾಲದಲ್ಲಿ ಯುರೋಪಿನ ವರ್ಣಚಿತ್ರಗಳ ಪ್ರಭಾವ ಹೆಚ್ಚಾದರೂ 19ನೆಯ ಶತಮಾನದುದ್ದಕ್ಕೂ ಸೂಕ್ಷ್ಮಚಿತ್ರಗಳ ತಯಾರಿಕೆ ಮುಂದುವರೆಯಿತು. ಆದರೆ ಅವುಗಳಲ್ಲಿ ಭವ್ಯ ರಮ್ಯ ಶೈಲಿ ಕಣ್ಮರೆಯಾಯಿತು.

(ಬಿ.ಕೆ.ಜಿ.)

**ಪಾಲ:** 8ನೆಯ ಶತಮಾನದ ಉತ್ತರಾರ್ಧದಿಂದ 12ನೆಯ ಶತಮಾನದ ಅಂತ್ಯದವರೆಗೆ ಬಂಗಾಲವನ್ನಾಳಿದ ರಾಜವಂಶ. ಈ ವಂಶದ ಅರಸರನ್ನು ವಂಗಪತಿ ಗೌಡೇಶ್ವರರೆಂದೂ ಸೂರ್ಯವಂಶಜರೆಂದೂ ಸಮುದ್ರಸಂಭವರೆಂದೂ ಬಣ್ಣಿಸಲಾಗಿದೆ. ಈ ರಾಜರುಗಳ ಹೆಸರುಗಳು ಪಾಲ ಎಂದೇ ಕೊನೆಗೊಳ್ಳುತ್ತವೆಯಾದ್ದರಿಂದ ಇವರ ವಂಶಕ್ಕೆ ಪಾಲವಂಶವೆಂಬ ಹೆಸರು ಬಂದಿದೆ. ಪುಂಡ್ರವರ್ಧನಪುರ (ಬಾಂಗ್ಲಾ ದೇಶದ ಬೋಗರ ಜಿಲ್ಲೆಯಲ್ಲಿರುವ ಮಹಾಸ್ಥಾನಗಢ) ಇವರ ರಾಜಧಾನಿಯಾಗಿತ್ತು. ಪಾಲ ಸಾಮ್ರಾಜ್ಯವನ್ನು ಗೋಪಾಲ ದೊರೆ ಆರಂಭಿಸಿದ. ಈತ 8ನೆಯ ಶತಮಾನದ ಉತ್ತರಾರ್ಧದಲ್ಲಿ ಸಿಂಹಾಸನವನ್ನೇರಿದ. ಅನಂತರ ಇವನ ಮಗನಾದ ಧರ್ಮಪಾಲ ಸು.780 ರಲ್ಲಿ ಸಿಂಹಾಸನಾರೋಹಣ ಮಾಡಿದ. ಗೌಡ, ವಂಗ, ರಾಢ, ಮಗಧಗಳನ್ನೊಳಗೊಂಡಂತೆ ಪಾಲ ಸಾಮ್ರಾಜ್ಯ ವಿಸ್ತಾರವಾಗಿ ಬೆಳೆಯಿತು. ಉತ್ತರ ಭಾರತದ ರಾಜಕೀಯ ಇತಿಹಾಸದಲ್ಲಿ ಬಂಗಾಲದ ಸ್ಥಾನ ಔನ್ನತ್ಯಕ್ಕೇರಿತು. ಈ ಸಾಧನೆಯ ಕೀರ್ತಿ ಧರ್ಮಪಾಲನಿಗೆ ಸಲ್ಲುತ್ತದೆ. ಈತ ಪಾಲವಂಶಸ್ಥರಲ್ಲೆಲ್ಲ ಅತ್ಯಂತ ಶಕ್ತಿಶಾಲಿಯೂ ಸಮರ್ಥನೂ ಆದ ದೊರೆಯಾಗಿದ್ದ. ಮಾಳವದ ಪ್ರತಿಹಾರರೊಡನೆ ಘೋರ ಯುದ್ಧಮಾಡಿದ; ದಖನ್ನಿನ ರಾಷ್ಟ್ರಕೂಟರೊಡನೆ ಕಾದಾಡಿದ. ಗೂರ್ಜರ ಪ್ರತಿಹಾರ ದೊರೆ ವತ್ಸರಾಜ ಪಾಲ ಸಾಮ್ರಾಜ್ಯವನ್ನು ಮುತ್ತಿ ಜಯಗಳಿಸಿದ. ಆದರೆ ವತ್ಸರಾಜನನ್ನು ರಾಷ್ಟ್ರಕೂಟ ಮುಮ್ಮಡಿ ಧ್ರುವ ಸೋಲಿಸಿದ. ಆತ ತನ್ನ ಸಾಮ್ರಾಜ್ಯಕ್ಕೆ ಮರಳಿದ ಬಳಿಕ ಧರ್ಮಪಾಲ ಪುನಃ ಉತ್ತರದತ್ತ ವಿಜಯಯಾತ್ರೆ ಹೊರಟು ಕನೌಜನ್ನು ಗೆದ್ದು ಚಕ್ರಾಯುಧನನ್ನು ಅಲ್ಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದನಲ್ಲದೆ ಅಲ್ಲೊಂದು ಸಮ್ಮೇಳನವನ್ನೇ ಏರ್ಪಡಿಸಿದ. ಅದರಲ್ಲಿ ಭೋಜ, ಮತ್ಸ್ಯ, ಮದ್ರ, ಕುರು, ಯದು, ಯವನ, ಅವಂತಿ, ಗಾಂಧಾರ, ಕೀರ ಮೊದಲಾದ ರಾಜರು ಭಾಗವಹಿಸಿದ್ದರು. ಇದಾದ ಸ್ವಲ್ಪ ಕಾಲದಲ್ಲೇ ಕನೌಜಿನ ಮೇಲೆ ನಾಗಭಟ್ಟ ಧಾಳಿ ಮಾಡಿದ. ಅಲ್ಲದೆ ಮಾಂಘೇರ್ ಬಳಿ ಧರ್ಮಪಾಲನನ್ನು ಸೋಲಿಸಿದ. ಸಾಹಸವೀರನೆಂದು ಖ್ಯಾತನಾದ ಧರ್ಮಪಾಲ ಸು.815ರಲ್ಲಿ ಕಾಲವಾದ.

ಅನಂತರ ಆತನ ಪುತ್ರನಾದ ದೇವಪಾಲ ಪಟ್ಟವೇರಿದ. ಈತ ತಂದೆಯಷ್ಟೇ ಉತ್ಕಟಾ ಕಾಂಕ್ಷಿ. ರಾಜ್ಯ ವಿಸ್ತರಣಾರ್ಥವಾಗಿ ನೆರೆಯ ಅನೇಕ ರಾಜ್ಯಗಳ ಮೇಲೆ ಧಾಳಿ ಮಾಡಿದ. ಗೂರ್ಜರ ರಾಜನನ್ನು ಸೋಲಿಸಿದ. ಕಂಬೋಜ ದೇಶವನ್ನು ಪ್ರವೇಶಿಸಿದ. ಅಸ್ಸಾಮಿನ ಪ್ರಾಗ್ಜ್ಯೋತಿಷ ಉತ್ಕಲ ಮುಂತಾದವು ಇವನ ವಶವಾದವು. ಇವನು ಹಿಮಾಲಯದಿಂದ ದಕ್ಷಿಣ ತೀರದ ವರೆಗಿನ ಪ್ರದೇಶದ ಅಧಿಪತಿ ಯಾಗಿದ್ದನೆಂದೂ ಈತನ ಆಸ್ಥಾನ ಕವಿ ಬಣ್ಣಿಸುತ್ತಾನೆ. ಇವೆಲ್ಲಕ್ಕಿಂತ ಹೆಚ್ಚಾಗಿ ಈತ ಹೊರನಾಡುಗಳೊಡನೆ ಸಂಬಂಧವಿಟ್ಟುಕೊಂಡಿದ್ದ. ಸುವರ್ಣ ದ್ವೀಪದ (ಸುಮಾತ್ರ) ದೊರೆ ಬಾಲಪುತ್ರ ದೇವನ ರಾಯಭಾರಿ ದೇವಪಾಲನ ಆಸ್ಥಾನದಲ್ಲಿದ್ದನೆಂದೂ ತಿಳಿದುಬರು ತ್ತದೆ. ಸು.39 ವರ್ಷಗಳಷ್ಟು ದೀರ್ಘ ಕಾಲ ಈತ ಆಳಿ, ಬಂಗಾಲವನ್ನು ಉಚ್ಚ್ರಾಯಸ್ಥಿತಿಗೆ ತರಲು ಕಾರಣನಾದ ದಕ್ಷ ರಾಜನೆಂಬ ಖ್ಯಾತಿ ಹೊಂದಿದ. 855ರಲ್ಲಿ ಈತ ಮರಣಹೊಂದಿದ.

ಬುದ್ಧನ ವಿಗ್ರಹ

ಇವನ ಅನಂತರ ಪಾಲ ಸಾಮ್ರಾಜ್ಯದ ರಾಜಕೀಯ ಶಕ್ತಿ ಕುಂದುತ್ತ ಬಂದಿತು. ಆ ಕಾಲದಲ್ಲಿ ದೇವಪಾಲನ ಸೋದರಳಿಯ 1ನೆಯ ವಿಗ್ರಹಪಾಲ ಪಟ್ಟಕ್ಕೆ ಬಂದ. ಈತ ರಾಜ್ಯಭಾರಕ್ಕಿಂತ ಧರ್ಮಸಂಬಂಧವಾದ ಚಟುವಟಿಕೆಗಳಲ್ಲೇ ಆಸಕ್ತನಾಗಿದ್ದನೆಂದು ತೋರುತ್ತದೆ. ಕೊನೆಗೆ ಇವನು ತನ್ನ ಪುತ್ರ ನಾರಾಯಣಪಾಲನಿಗೆ ರಾಜ್ಯಭಾರವನ್ನೂ ಬಿಟ್ಟುಕೊಟ್ಟನೆಂದೂ ತಿಳಿದುಬರುತ್ತದೆ. ಪ್ರತಿಹಾರರ ಆಕ್ರಮಣದಿಂದಾಗಿ ಕಳೆದುಕೊಂಡಿದ್ದ ಪಾಲ ಸಾಮ್ರಾಜ್ಯದ ಸ್ವಲ್ಪ ಭಾಗವನ್ನು ನಾರಾಯಣಪಾಲ ಮರಳಿ ಪಡೆದ. ಈತ ಸು.54 ವರ್ಷಗಳಷ್ಟು ದೀರ್ಘ ಕಾಲ ರಾಜ್ಯಭಾರ ಮಾಡಿದನೆಂದು ಹೇಳಲಾಗಿದೆ. ಇವನ ಅನಂತರ ಸು.2–3 ತಲೆಮಾರುಗಳಲ್ಲಿ ಪಾಲರಸರ ಖ್ಯಾತಿ ಪುನಃ ಕುಗ್ಗಿತ್ತು. ಅದು ಚಂದೇಲ, ಕಳಚುರಿಗಳ ಧಾಳಿಗೆ ತುತ್ತಾಯಿತು. ಒಂದನೆಯ ಮಹೀಪಾಲ ಸು.1021 ರಲ್ಲಿ ಪಟ್ಟವೇರಿದ. ಬಂಗಾಲ ದೇಶಾಧಿಪತಿಯಾಗಿ ಪಾಲ ಸಾಮ್ರಾಜ್ಯದ ಹಿರಿಮೆಯನ್ನು ಪುನಃ ಸ್ಥಾಪಿಸಿದ. 1023ರಲ್ಲಿ ಚೋಳನಾಡಿನ ರಾಜೇಂದ್ರ ಚೋಳ ತನ್ನ ಉತ್ತರ ಭಾರತದ ದಿಗ್ವಿಜಯದ ಅಂಗವಾಗಿ ಈತನ ಮೇಲೆ ಧಾಳಿ ಮಾಡಿ ಜಯಶಾಲಿಯಾಗಿ ಮರಳಿದ. 1ನೆಯ ಮಹಿಪಾಲನ ಅನಂತರ ಅನುಕ್ರಮವಾಗಿ ಇವನ ಮಗ ನಯಪಾಲ, ಮೊಮ್ಮಗ ವಿಗ್ರಹಪಾಲ ರಾಜ್ಯವಾಳಿದರು. ಆಗ ಕಳಚುರಿಗಳೊಂದಿಗೆ ಇವರು ಯುದ್ಧ ಮಾಡಬೇಕಾಯಿತು. ಚೇದಿ ರಾಜಪುತ್ರಿಯಾದ ಯೌವನಶ್ರೀಯೊಂದಿಗೆ 3ನೆಯ ವಿಗ್ರಹಪಾಲ ವಿವಾಹವಾದನೆಂದು ಹೇಳಲಾಗಿದೆ. ಅಲ್ಲದೆ ರಾಷ್ಟ್ರಕೂಟ ವಂಶಸ್ಥಳಾದ ಒಬ್ಬಳು ರಾಣಿಯೂ ಈತನಿಗಿದ್ದಳೆಂದು ತಿಳಿದುಬರುತ್ತದೆ.

ಮುಮ್ಮಡಿ ವಿಗ್ರಹಪಾಲನ ಮೂವರು ಪುತ್ರರಾದ ಇಮ್ಮಡಿ ಮಹೀಪಾಲ, ಸುರಪಾಲ ಮತ್ತು ರಾಮಪಾಲರಲ್ಲಿ ಮೊದಲನೆಯವನು ದುರ್ಬಲ ಅರಸು. ಆತನನ್ನು ಅವನ ಅಧಿಕಾರಿ ಕೊಲೆ ಮಾಡಿದ. ಬಂಗಾಲದ ಅಧಿಕಾರ ಅವನ ಕೈಯಿಂದ ಕಳೆದುಹೋಯಿತು. ಆದರೆ ಇಮ್ಮಡಿ ಮಹೀಪಾಲನ ಕಿರಿಯ ತಮ್ಮನಾದ ರಾಮಪಾಲ ಮರಳಿ ಸಾಮ್ರಾಜ್ಯಾಧಿಕಾರವನ್ನು ಪಡೆದ. ರಾಜ್ಯ ವಿಸ್ತರಣಾರ್ಥವಾಗಿ ಹಾಗೂ ಪಾಲ ರಾಜ್ಯದ ಪ್ರಭಾವವನ್ನು ಹೆಚ್ಚಿಸುವ ಉದ್ದೇಶದಿಂದ ಇವನು ದಂಡಯಾತ್ರೆ ಹೊರಟ. ಇದರಲ್ಲಿ ಇವನಿಗೆ ಸ್ವಲ್ಪಮಟ್ಟಿಗೆ ಯಶಸ್ಸು ದೊರಕಿತು. ಈತ ಸು.1120ರಲ್ಲಿ ನಿಧನನಾದ. ಇವನು ಭದ್ರಪಡಿಸಿದ್ದ ಪಾಲ

ಸಾಮ್ರಾಜ್ಯ ಕುಮಾರಪಾಲನ ಆಳಿಕೆಯಲ್ಲಿ ಪುನಃ ಛಿದ್ರವಾಗತೊಡಗಿತು. ಮಿಥಿಲದ ನಾನ್ಯದೇವ ಬಂಗಾಲವನ್ನು ಆಕ್ರಮಿಸಿದ. ಗಾಹಡವಾಲರು ಮಗಧದ ಒಂದು ಭಾಗವನ್ನು ಕಿತ್ತುಕೊಂಡರು. ಅಂತ್ಯದಲ್ಲಿ ಪಾಲರಾಜ್ಯ ಸೇನರಸರ ಕೈವಶವಾಯಿತು. ಸು.12ನೆಯ ಶತಮಾನದ ಉತ್ತರಾರ್ಧ ದಲ್ಲಿ ಇವರ ಆಳಿಕೆ ಕೊನೆಗೊಂಡಿತು.

ಧರ್ಮದೃಷ್ಟಿ: ಪಾಲರು ಬೌದ್ಧಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದಂತೆ ತಿಳಿದುಬರುತ್ತದೆ. ಧರ್ಮಪಾಲ ವಿಕ್ರಮಶಿಲಾ ವಿಹಾರವನ್ನು ಸ್ಥಾಪಿಸಿದ. ಬೌದ್ಧ ದಾರ್ಶನಿಕನಾದ ಇಂದ್ರಗುಪ್ತನನ್ನು ನಾಲಂದ ಮಠದ ಅಧ್ಯಕ್ಷನನ್ನಾಗಿ ದೇವಪಾಲ ನೇಮಕ ಮಾಡಿದ. ನಾಲಂದ ಬೋಧ ಗಯಗಳಲ್ಲಿ ಧಾರ್ಮಿಕ ಕಟ್ಟಡಗಳನ್ನು ಮಹೀಪಾಲ ನಿರ್ಮಿಸಿದ. ವಿಕ್ರಮಶೀಲ, ನಾಲಂದ ವಿಶ್ವವಿದ್ಯಾಲಯಗಳಲ್ಲಿ ಪಾಲರು ಬೌದ್ಧ ವಿಹಾರಗಳನ್ನು ನಿರ್ಮಿಸಿದರಲ್ಲದೆ ವಿದ್ಯಾ ಪ್ರಸಾರ ಕಾರ್ಯದಲ್ಲಿ ವಿಶೇಷ ಆಸಕ್ತಿ ತೋರಿಸಿದರು. ಇದನ್ನು ದಾಖಲುಪಡಿಸುವ ಶಾಸನಗಳು ನಾಲಂದದ ಉತ್ಖನನದಲ್ಲಿ ದೊರೆತಿವೆ. ದೇವಪಾಲ ನಾಲಂದದಲ್ಲಿದ್ದ ಬೌದ್ಧ ವಿಹಾರಕ್ಕಾಗಿ ಪಂಚಗ್ರಾಮಗಳನ್ನು ದತ್ತಿ ಬಿಟ್ಟಿದ್ದನೆಂಬುದನ್ನು ಸುಂದರವಾದ ಕಂಚಿನ ಮುದ್ರಿಕೆಯನ್ನೊಳ ಗೊಂಡ ಅವನ ಒಂದು ತಾಮ್ರ ಶಾಸನ ತಿಳಿಸುತ್ತದೆ. ಸುವರ್ಣದ್ವೀಪದ ಶೈಲೇಂದ್ರ ರಾಜನಾಗಿದ್ದ ಬಾಲಪುತ್ರ ದೇವನ ವಿನಂತಿಯ ಮೇರೆಗೆ ಈ ದತ್ತಿಗಳನ್ನು ನೀಡಲಾಯಿತೆಂದು ತಿಳಿದುಬರುತ್ತದೆ. ಇದಲ್ಲದೆ ತಾರಾ, ವಾಗೀಶ್ವರೀ ವಿಗ್ರಹ ಶಾಸನಗಳು ಪಾಲರ ಆಳಿಕೆಯ ವರ್ಷಗಳನ್ನು ತಿಳಿಸುತ್ತವೆ. ಇನ್ನು ಕೆಲವು ಪಾಲ ಶಾಸನಗಳಲ್ಲಿ ಬೇರೆ ಬೇರೆ ಅಧಿಕಾರಿಗಳ ದೊಡ್ಡ ಪಟ್ಟಿಯೇ ಕಂಡುಬರುತ್ತದೆ. ಒಂದನೆಯ ಮಹೀಪಾಲನ ಖಂಗಥ ತಾಮ್ರಶಾಸನದಲ್ಲಿ ಸು.44 ಅಧಿಕಾರಿ ಗಳ ಹೆಸರುಗಳಿವೆ. ಪಾಲ ತಾಮ್ರ ಶಾಸನಗಳಿಗೆ ಸಂಬಂಧಿಸಿದಂತಿರುವ ಮುದ್ರೆಗಳಲ್ಲಿ ಬೌದ್ಧ ಧರ್ಮ ಚಕ್ರವಿರು ತ್ತಿತ್ತು. ಪಾಲ ವಂಶವನ್ನು ಆ ಶಾಸನಗಳು ಧರ್ಮಚಕ್ರಮುದ್ರಾ ಎಂದೇ ಬಣ್ಣಿಸುತ್ತವೆ. ಆದರೆ ರಾಷ್ಟ್ರಕೂಟ ಮುಮ್ಮಡಿ ಗೋವಿಂದನ ನೆಸರಿ ತಾಮ್ರಶಾಸನದ ಪ್ರಕಾರ ಧರ್ಮಪಾಲ ರಾಜನ ಬಾವುಟದ ಮೇಲೆ ಬೌದ್ಧದೇವಿ ತಾರಾಳ ಚಿತ್ರವಿತ್ತು. ನಾಲಂದ ತಾಮ್ರಶಾಸನಕ್ಕೆ ಸಂಬಂಧಿಸಿ ದಂತಿರುವ ಕಂಚಿನ ಒಂದು ಮುದ್ರೆ ಕಲಾ ನೈಪುಣ್ಯದ ದೃಷ್ಟಿಯಿಂದ ಗಮನಾರ್ಹವಾದುದು.



ಭೂಮಿ ಸ್ಪರ್ಶ ಮುದ್ರೆಯಲ್ಲಿರುವ ಬುದ್ಧ

**ಚಿತ್ರಕಲೆ:** ಭಾರತೀಯ ಚಿಕಣಿ ಚಿತ್ರ ಕಲಾಪರಂಪರೆಗೆ ಪಾಲರ ಕೊಡುಗೆ ಗಮನಾರ್ಹ. ತಾಳೆಗರಿ ಪ್ರತಿಗಳಲ್ಲಿ ಕಂಡುಬರುವ ಸೊಗಸಾದ ಚಿತ್ರಗಳು ಇದಕ್ಕೆ ನಿದರ್ಶನಗಳಾಗಿವೆ. ಕೇಂಬ್ರಿಜ್ ವಿಶ್ವವಿದ್ಯಾಲಯದ ವಾಚನಾಲಯದಲ್ಲಿ ಇಟ್ಟಿರುವ ಅಷ್ಟಸಾಹಸ್ರಿಕ ಪ್ರಜ್ಞಾಪಾರಮಿತಾ ಪಂಚರಕ್ಷ ಎಂಬ ಹಸ್ತಪ್ರತಿಯಲ್ಲಿ 51 ಚಿಕಣಿ ಚಿತ್ರಗಳಿವೆ. ಇವುಗಳಲ್ಲಿ ಹಲವು ಬೌದ್ಧ ದೇವದೇವತೆಗಳ ಚಿತ್ರಗಳು. ಸು.11ನೆಯ ಶತಮಾನದವೆಂದು ಹೇಳಲಾದ ಈ ಚಿತ್ರಗಳಲ್ಲಿ ಸಮಕಾಲೀನ ನೇಪಾಲಿ ಚಿತ್ರಗಳಲ್ಲಿ ಕಂಡುಬರುವ ತಾಂತ್ರಿಕ ಶೈಲಿ ಎದ್ದುಕಾಣುತ್ತದೆ. ಗಂಧವ್ಯೂಹ, ಸಾಧನಮೂಲ ಮುಂತಾದ ಕೃತಿಗಳಲ್ಲೂ ಪಾಲರ ವರ್ಣಚಿತ್ರಗಳಿವೆ. ಬುದ್ಧನ ಜೀವನ ಚಿತ್ರಣ, ಜಾತಕ ಕಥೆ ಮುಂತಾದುವು ಇವುಗಳಲ್ಲಿ ಚಿತ್ರಿತವಾಗಿವೆ.

**ಮಣ್ಣೂರ್ತಿಗಳು:** ಶಿಲಾಸಂಪತ್ತು ಹೇರಳವಾಗಿರುವ ಬಂಗಾಲದಲ್ಲಿ ಮಣ್ಣೂರ್ತಿಕಲೆ ವಿಶೇಷವಾಗಿ ಬೆಳೆದುಬಂತು. ವಾಸ್ತುಕೃತಿಗಳಲ್ಲಿ ಕೂಡ ಮಣ್ಣೂರ್ತಿಗಳನ್ನು ಜೋಡಿಸಲಾಗಿದೆ. ಪಹಾಡ್‌ಪುರದ ಅಮೋಘವಾದ ಸ್ತೂಪವನ್ನು ಹಲವು ಮಣ್‌ಫಲಕಗಳಿಂದ ಅಲಂಕರಿಸ ಲಾಗಿದೆ. ಬಂಕುರದಲ್ಲಿರುವ ಸಿದ್ಧೇಶ್ವರ ದೇಗುಲದಲ್ಲಿ ಭಾಗವತಕ್ಕೆ ಸಂಬಂಧಿಸಿದ ದೃಶ್ಯಗಳನ್ನು ನಿರೂಪಿಸುವ ಮಣ್ಣೂರ್ತಿಗಳಿವೆ. ಇವೆಲ್ಲವೂ ಪಾಲರ ಆಳಿಕೆಯ ಕಾಲದ ಸಾಂಸ್ಕೃತಿಕ ಹಿರಿಮೆ ಯನ್ನು, ಕಲಾಪರಂಪರೆಯನ್ನು ಸಮರ್ಥವಾಗಿ ನಿರೂಪಿಸುತ್ತವೆ. (ಎಚ್.ಆರ್.ಆರ್.ಐ.;ಎಂ.ಕೆ.ಬಿ.)

**ಪಾಲ ಮತ್ತು ಸೇನರ ಕಲೆ:** ಬೌದ್ಧ ಮತ್ತು ಹಿಂದುಧರ್ಮಗಳ ಹಲವು ಕೇಂದ್ರಗಳು ಪಾಲ–ಸೇನ ರಾಜ್ಯದಲ್ಲಿ ಬಹಳ ಕ್ರಿಯಾಶೀಲವಾಗಿದ್ದವು. ಬಿಹಾರ ಪ್ರದೇಶದಲ್ಲಿ ಬೌದ್ಧಧರ್ಮ ಈ ಕಾಲದಲ್ಲಿ ಔನ್ನತ್ಯವನ್ನು ಕಂಡಿತು. ಚೀನ, ಆಗ್ನೇಯ ಏಷ್ಯ, ನೇಪಾಲ, ಟಿಬೆಟ್ ಮುಂತಾದ ಹೊರ ನಾಡುಗಳಿಂದ ಬೌದ್ಧಧರ್ಮದ ಅಧ್ಯಯನಕ್ಕೆಂದು ಬೌದ್ಧ ಭಿಕ್ಷುಗಳು ಮತ್ತು ಯಾತ್ರಿಗಳು ಇಲ್ಲಿಗೆ ಬರುತ್ತಿದ್ದುದಲ್ಲದೆ ತಮ್ಮ ತಾಯ್ನಾಡಿಗೆ ಇಲ್ಲಿಯ ಧಾರ್ಮಿಕ, ಸಾಂಸ್ಕೃತಿಕ ಮತ್ತು ಕಲಾ ಪರಂಪರೆಯನ್ನು ಕೊಂಡೊಯ್ದರು. ವೈಷ್ಣವಧರ್ಮ ಸಹ ಬಂಗಾಲ ಪ್ರದೇಶದಲ್ಲಿ 11–12ನೆಯ ಶತಮಾನದಲ್ಲಿ ಉಚ್ಛ್ರಾಯಕ್ಕೇರಿತು. ಇದರ ಫಲವಾಗಿ 8–12ನೆಯ ಶತಮಾನ ಗಳಲ್ಲಿ ಪೂರ್ವ ಭಾರತದಲ್ಲಿ ಅಭಿವೃದ್ಧಿಗೊಂಡ ಕಲೆಯನ್ನು ಪಾಲ–ಸೇನರ ಕಲೆ ಎಂದು ಹೆಸರಿಸುವುದು ವಾಡಿಕೆ.

ಈ ವಂಶದ ಧರ್ಮಪಾಲ ಮತ್ತು ದೇವಪಾಲರ ಕಾಲದಲ್ಲಿ ಬೌದ್ಧಧರ್ಮಕ್ಕೆ ವಿಶೇಷ ಪ್ರೋತ್ಸಾಹ ದೊರೆಯಿತು. ನಾಲಂದ ಮತ್ತು ವಿಕ್ರಮಶೀಲ ವಿಹಾರಗಳು ಬೌದ್ಧರ ಪ್ರಮುಖ ವಿದ್ಯಾಕೇಂದ್ರಗಳಾಗಿ ಮೆರೆದವು. ಪಾಲರ ಮೊದಲ ಕಲಾ ಉದಾಹರಣೆಗಳು ಮಗಧ ಪ್ರದೇಶದಲ್ಲಿಯ ಬೌದ್ಧಶಿಲ್ಪಗಳು. ತದನಂತರದ ಪಾಲ ಅರಸರ ಮತ್ತು ಸೇನರ ಕಾಲದಲ್ಲಿ ಬಂಗಾಲ ಕಲಾಸೃಷ್ಟಿಯ ಆಗರವಾಯಿತು. ಅದರೊಂದಿಗೆ ಹಿಂದು ಕಲಾಕೃತಿಗಳೂ ಹೆಚ್ಚಿದವು. ತೀಕ್ಷ್ಣ ಧಾರ್ಮಿಕ ಚಟುವಟಿಕೆಯಿಂದಾಗಿ ಹಲವಾರು ಧಾರ್ಮಿಕ ಕಟ್ಟಡಗಳು ನಿರ್ಮಿತವಾದವು. ಈ ಕಟ್ಟಡಗಳು ಇಟ್ಟಿಗೆ, ಕಟ್ಟಿಗೆ ಇತ್ಯಾದಿ ಬೇಗ ನಶಿಸುವ ಸಾಮಗ್ರಿಗಳಿಂದ ಕಟ್ಟಲ್ಪಟ್ಟಿದ್ದವು. 12ನೆಯ ಶತಮಾನದ ಅಂತ್ಯದ ಹೊತ್ತಿಗೆ ಮುಸ್ಲಿಮರ ಆಕ್ರಮಣದಿಂದ ಬಿಹಾರ ಮತ್ತು ಬಂಗಾಲ ಪ್ರದೇಶದಲ್ಲಿ ಬಹುಸಂಖ್ಯೆಯಲ್ಲಿದ್ದ ಬೌದ್ಧ ಮತ್ತು ಹಿಂದು ಕಟ್ಟಡಗಳು ನಾಶವಾದವು. ಹೀಗಾಗಿ ಕಟ್ಟಡಗಳ ಬೆಳವಣಿಗೆಯನ್ನು ಗುರುತಿಸುವುದು ಸಾಧ್ಯವಾಗುತ್ತಿಲ್ಲ. ಆದರೆ ಈ ಕಾಲದ ಕಲೆಯ ಉದಾಹರಣೆಗಳಾಗಿ ದೊಡ್ಡ ಪ್ರಮಾಣದಲ್ಲಿ ಶಿಲ್ಪಗಳು ಹಾಗೂ ಕೆಲವು ವರ್ಣಚಿತ್ರಗಳು ಉಳಿದುಬಂದಿವೆ. ಲೋಹ ಶಿಲ್ಪಗಳೇ ಹೆಚ್ಚು. ಕೆಲವೇ ಕಟ್ಟಿಗೆಯ (ಉದಾ: ಬಂಗ್ಲಾದೇಶದ ವಿಕ್ರಮಪುರದಲ್ಲಿ ದೊರೆತ 11ನೆಯ ಶತಮಾನದ ಬೋಧಿಸತ್ತ್ವ ವಿಗ್ರಹ) ಶಿಲ್ಪ ಉದಾಹರಣೆಗಳೂ ಇವೆ. ಕಲ್ಲಿನ ಶಿಲ್ಪಗಳಿಗೆ ಸಾಮಾನ್ಯವಾಗಿ ಸ್ಥಳೀಯವಾಗಿ ಲಭ್ಯವಿರುವ ಬೂದು ಇಲ್ಲವೆ ಕಪ್ಪುಬಣ್ಣದ ಕ್ಲೋರೈಟಿಕ್ ಶಿಸ್ಟ್ ಶಿಲೆಯನ್ನು ಬಳಸಿದೆ. ಇವು ಹಿಂಬದಿ ಸಮತಟ್ಟಾಗಿರುವ ಉಬ್ಬುಶಿಲ್ಪ ಫಲಕಗಳು. ಹೆಚ್ಚಿನವು ಇಟ್ಟಿಗೆ–ಗಾರೆಯ ಕಟ್ಟಡಗಳ ಕೋಷ್ಠಗಳನ್ನು ಅಲಂಕರಿಸಿದ್ದವು. ಲೋಹದ ಶಿಲ್ಪಗಳು ಹೆಚ್ಚಾಗಿ ಕಂಚಿನವು; ಇನ್ನು ಕೆಲವು ಬಂಗಾರ ಮತ್ತು ಬೆಳ್ಳಿಯವು. ಅನೇಕ ಕಂಚಿನ ವಿಗ್ರಹಗಳಿಗೆ ಬಂಗಾರದ ಲೇಪವಿದೆ. ಬಿಹಾರ ಮತ್ತು ಬಂಗಾಲದ ಈ ಕಾಲದ ಶಿಲ್ಪಶೈಲಿಯಲ್ಲಿ ಬಹಳಷ್ಟು ಸಾಮ್ಯವಿದ್ದರೂ ಅವು ಬೇರೆ ಬೇರೆ ಕೇಂದ್ರಗಳಲ್ಲಿ ನಿರ್ಮಾಣವಾದಂತಿವೆ. ನಾಲಂದಾ, ಬೋಧಗಯದಂತಹ ಕೇಂದ್ರಗಳು ನಾಲ್ಕು ಶತಮಾನಗಳ ಕಾಲ ಅವಿರತ ಕಲಾ ಕೇಂದ್ರಗಳಾಗಿ ಮೆರೆದಿವೆ.

ಬಾಂಗ್ಲಾದೇಶದ ಪಹಾಡಪುರದಲ್ಲಿ (ಪ್ರಾಚೀನ ಸೋಮಪುರ) ಉತ್ಖನನಗೊಂಡಿರುವ ಮಹಾಸ್ತೂಪ ಮತ್ತು ವಿಹಾರ ಸಂಕೀರ್ಣ (8–9ನೆಯ ಶತಮಾನ) ಪಾಲರ ಕಾಲದ ಬೌದ್ಧ ವಾಸ್ತುವಿನ ಉತ್ತಮ ಉದಾಹರಣೆ. ಬಹುಶಃ ಧರ್ಮಪಾಲನ ಕಾಲದ ಈ ಸಂಕೀರ್ಣದಲ್ಲಿ ಸು.300ಮೀ ಉದ್ದಗಲದ ಚೌಕಾಕಾರದ ಸುತ್ತಣ ಗೋಡೆಯ ಒಳ ಅಂಚಿನಗುಂಟ 177 ಕೊಠಡಿಗಳು ಹಾಗೂ 4 ಮಹಾದ್ವಾರಗಳು ರಚಿತವಾಗಿವೆ. ಚೌಕದ ಮಧ್ಯದಲ್ಲಿ ತೆರೆದುಕೊಂಡಿ ರುವ ಪ್ರಾಂಗಣದಲ್ಲಿ ಪಂಚರಥ ವಿನ್ಯಾಸ, ದಕ್ಷಿಣೋತ್ತರವಾಗಿ ಸು.100 ಮೀ ಉದ್ದವಿರುವ, ಮೂರು ಮಟ್ಟಗಳಲ್ಲಿ ಮೇಲೆದ್ದಿರುವ ಜಗತಿಯ ಮೇಲೆ ಮಹಾಸ್ತೂಪ ಸಂಕೀರ್ಣವಿದೆ. ಅಧಿಷ್ಠಾನ ಮತ್ತು ಜಗತಿಯ ಗೋಡೆಗಳನ್ನು ಸುಟ್ಟಮಣ್ಣಿನ ನೂರಾರು ಉಪದೇವತೆಗಳ, ಪ್ರಾಣಿಗಳ ಹಾಗೂ ಮತ್ತಿತರ ಆಲಂಕಾರಿಕ ವಿನ್ಯಾಸಗಳ ಶಿಲ್ಪಗಳು ಅಲಂಕರಿಸಿವೆ. ಸ್ತೂಪದ ಸುತ್ತಣ ಅಂಗಣದಲ್ಲಿ ಇನ್ನೂ ಅನೇಕ ಉಪ ಕಟ್ಟಡಗಳಿವೆ. ಇಂತಹ ಇನ್ನೊಂದು ಬೌದ್ಧ ಸಂಕೀರ್ಣ ಬಿಹಾರದ ಅಂತಿಚಕ್‌ನಲ್ಲಿದ್ದ (ಇದು ವಿಕ್ರಮಶೀಲ ವಿಹಾರದ ನೆಲೆಯೆಂದು ಭಾವಿಸಲ್ಪಟ್ಟಿದೆ) ಸ್ತೂಪದ ರಚನೆಯಲ್ಲಿ ಕಂಡಿದೆ. ಈ ರೀತಿಯ ರಚನೆಗಳು ಟಿಬೆಟ್ ಮತ್ತು ಆಗ್ನೇಯ ಏಷ್ಯ ಮಟ್ಟ ಮಟ್ಟವಾಗಿ ಮೇಲೇರಿರುವ ಜಗತಿಯುಕ್ತ ಕಟ್ಟಡಗಳಿಗೆ ಸ್ಫೂರ್ತಿ ಯಾಗಿರಬಹುದು.

ಪಾಲ ಮತ್ತು ಸೇನರ ಕಾಲದ ಹಲವಾರು ಪ್ರಕಾರದ ಶಿಲ್ಪಗಳು ಸಾವಿರಾರು ಇವೆ. ನಾಲಂದದಲ್ಲಿ ದೊರೆತಿರುವ, ಈಗ ನಾಲಂದದ ವಸ್ತುಸಂಗ್ರಹಾಲಯದಲ್ಲಿರುವ, ಸು.7ನೆಯ ಶತಮಾನದ ಬೋಧಿಸತ್ತ್ವ (ಅವಲೋಕಿತೇಶ್ವರ ಅಥವಾ ಸಮಂತಭದ್ರ) ವಿಗ್ರಹ ಪಾಲ ಶಿಲ್ಪಕಲೆಯ ಪೂರ್ವಭಾವೀ ಉದಾಹರಣೆಯಾಗಿದೆ. ಸಾರನಾಥ ಶೈಲಿಯ ಪ್ರಭಾವವನ್ನು ಇಲ್ಲಿ ಗುರುತಿಸಬಹುದು. ತೆಳುವಾದ ಎತ್ತರ ಮೈಕಟ್ಟಿನ ಬೋಧಿಸತ್ತ್ವನ ಈ ಶಿಲ್ಪ ಗುಪ್ತಾಂತ್ಯ ಕಾಲದ ಶಿಲ್ಪಗಳನ್ನು ನೆನಪಿಸುತ್ತದೆ. ಕೂದಲನ್ನು ತೋರಿಸಿರುವ ರೀತಿ, ಸೀಮಿತ ಅಲಂಕಾರ ಇತ್ಯಾದಿಗಳು ಹಿಂದಿನ ಶೈಲಿಯ ಪ್ರತೀಕವಾಗಿವೆ. ಆದರೆ ಪದ್ಮಪೀಠ ಮತ್ತು ಆಭರಣಗಳ ವಿವರಗಳನ್ನು ತೋರಿಸುವ ರೀತಿ ಈ ಶೈಲಿ ಹೊಸ ಹಾದಿಯನ್ನು ತುಳಿಯುತ್ತಿರುವುದರ ಸೂಚನೆಯಾಗಿದೆ. ಬೋಧಿಸತ್ತ್ವನ ಇಕ್ಕೆಲಗಳಲ್ಲಿ ಇಬ್ಬರು ಸ್ತ್ರೀಯರಿದ್ದು, ಪ್ರಭಾಮಂಡಲದಲ್ಲಿ ಮೂರು ಜಿನ ಬುದ್ಧರು ಹಾಗೂ ಕೇಶಾಲಂಕಾರದಲ್ಲಿ ಇನ್ನೊಬ್ಬ ಬುದ್ಧನ ಚಿಕ್ಕ ಶಿಲ್ಪಗಳಿವೆ.

ನಾಲಂದದಲ್ಲಿ ದೊರೆತ 11ನೆಯ ಶತಮಾನದ ಅಂತ್ಯದ ಇನ್ನೊಂದು ಬೋಧಿಸತ್ತ್ವ (ಖಸರ್ಪಣ ಅವಲೋಕಿತೇಶ್ವರ) ಶಿಲ್ಪ ಪಾಲ–ಸೇನ ಶೈಲಿಯ ಪರಿಪೂರ್ಣ ಹಂತದ ಉದಾಹರಣೆಯಾಗಿದೆ. ಬೋಧಿಸತ್ತ್ವನು ತ್ರಿಭಂಗದಲ್ಲಿ ಪದ್ಮಪೀಠದ ಮೇಲೆ ನಿಂತಿದ್ದಾನೆ. ಶಿಲ್ಪಫಲಕದ ಮೇಲ್ಭಾಗ ಚೂಪು ಕಮಾನಿನಂತೆ ಅಲಂಕೃತವಾಗಿದೆ. ಪ್ರಭಾವಳಿಯಲ್ಲಿ 5 ಜಿನ ಬುದ್ಧರ ಕೆತ್ತನೆಯಿದೆ. ಬೋಧಿಸತ್ತ್ವನ ಇಕ್ಕೆಲಗಳಲ್ಲಿ ಅವನ ಪ್ರತೀಹಾರ ದೇವತೆಗಳಾದ ತಾರಾ ಮತ್ತು ಸುಧನಕುಮಾರ (ಬಲಕ್ಕೆ) ಹಾಗೂ ಭೃಕುಟಿ ಮತ್ತು ಹಯಗ್ರೀವ (ಎಡಕ್ಕೆ) ಇವರನ್ನು ತೋರಿಸಿದೆ. ಮೂಲತಃ ಈ ವಿಗ್ರಹದಲ್ಲಿರುವ ವ್ಯಕ್ತಿಗಳಿಗೆ ಬೌದ್ಧ ಗ್ರಂಥಗಳಲ್ಲಿ ಹೇಳಿರುವಂತೆ ಅವರವರಿಗೆ ಯೋಗ್ಯವೆನಿಸುವ ಬಣ್ಣ ಬಳಿದಿದ್ದಿರಬಹುದು. ಆಲಂಕಾರಿಕ ವಿವರಗಳಿಗೆ ಬಹಳಷ್ಟು ಒತ್ತು ಕೊಟ್ಟಿರುವುದು ಇಲ್ಲಿ ಕಾಣುತ್ತದೆ. ಇದೇ ರೀತಿಯ ಬೌದ್ಧ

ಪ್ರತಿಮಾಲಕ್ಷಣ ವಿವರಗಳಿಗೆ ಗಮನವಿತ್ತು ನಿರ್ಮಿಸಲ್ಪಟ್ಟ ಹಲವಾರು ಬೋಧಿಸತ್ತ್ವ ವಿಗ್ರಹಗಳು ಬಿಹಾರ ಬಂಗಾಲಗಳಲ್ಲಿ ದೊರೆತಿವೆ. ಕೊಲಗಾಂಗ್‍ನ (ಪೂರ್ವ ಬಿಹಾರ) ಷಡಕ್ಷರೀ ಅವಲೋಕಿತೇಶ್ವರ, ಸುಲ್ತಾನಗಂಜದಲ್ಲಿ (ಬಿಹಾರ) ದೊರೆತ ಸಿಂಹನಾದ ಅವಲೋಕಿತೇಶ್ವರ, ತಪಂದಿಘಿಯಲ್ಲಿ (ಪಶ್ಚಿಮ ಬಂಗಾಲ) ದೊರೆತ ಅವಲೋಕಿತೇಶ್ವರ ವಿಗ್ರಹಗಳು ಸು.11–12ನೆಯ ಶತಮಾನದವು. ಇವುಗಳಲ್ಲಿ ಕೊನೆಯ ಶಿಲ್ಪದಲ್ಲಿ ಆಳವಾದ ಕೆತ್ತನೆಗೆ ಶಿಲ್ಪಿಗಳು ಗಮನಹರಿಸಿರುವುದು ಗೋಚರಿಸುತ್ತದೆ.

ಪಾಲ–ಸೇನರ ಕಾಲದ ಬುದ್ಧ ವಿಗ್ರಹಗಳೂ ಬಹುಸಂಖ್ಯೆಯಲ್ಲಿವೆ. ಇವು ಹೆಚ್ಚಾಗಿ ಭೂಮಿಸ್ಪರ್ಶಮುದ್ರೆಯಲ್ಲಿರುವ ಬುದ್ಧನ ಶಿಲ್ಪಗಳೆಂಬುದು ವಿಶೇಷ. ಈ ಶಿಲ್ಪಪರಿಕಲ್ಪನೆಗೂ ಬುದ್ಧನಿಗೆ ಜ್ಞಾನಪ್ರಾಪ್ತಿಯಾದ ಬೋಧಗಯ ನೆಲೆಗೂ ಬಹಳ ಹತ್ತಿರದ ನಂಟು ಇದ್ದಹಾಗಿದೆ. ಬೋಧಗಯದ ಮಹಾಬೋಧಿ ದೇಗುಲದಲ್ಲಿರುವ ಪಾಲ–ಸೇನರ ಕಾಲದ ಶಾಕ್ಯಮುನಿ ಬುದ್ಧನ ಭೂಮಿಸ್ಪರ್ಶ, ಮುದ್ರೆಯಲ್ಲಿರುವ ವಿಗ್ರಹ ಬುದ್ಧನ ಮಾರವಿಜಯದ ಪ್ರತೀಕ. ಪಾಲ–ಸೇನರ ಶಿಲ್ಪಗಳಿಗೆ ಇದು ಮಾದರಿಯೊದಗಿಸಿದಂತಿದೆ. ಸಾಮಾನ್ಯವಾಗಿ ಇಂತಹ ವಿಗ್ರಹಗಳಲ್ಲಿ ಬುದ್ಧನ ಜೀವನದ ಏಳು ಇಲ್ಲವೆ ಎಂಟು ಪ್ರಮುಖ ಘಟನೆಗಳನ್ನೂ ತೋರಿಸುವುದುಂಟು. ನಾಲಂದದ ಸಮೀಪದಲ್ಲಿರುವ ಜಗದೀಶಪುರದಲ್ಲಿ ದೊರೆತ ಸು.10ನೆಯ ಶತಮಾನದ ಇಂತಹ ಒಂದು ವಿಗ್ರಹದಲ್ಲಿ ಭೂಮಿಸ್ಪರ್ಶಮುದ್ರೆಯಲ್ಲಿರುವ ಬುದ್ಧನು ಬೋಧಿ ವೃಕ್ಷದ ಕೆಳಗೆ ಕುಳಿತಿರುವಂತೆ ಹಾಗೂ ಮಾರನ ಸೈನ್ಯ ಅವನ ಮೇಲೆ ಧಾಳಿಯಿಟ್ಟಿರುವಂತೆ ತೋರಿಸಿದೆ. ಇದರಲ್ಲಿ ಬುದ್ಧನ ಸುತ್ತ ತೋರಿಸಿರುವ ಇತರ ಏಳು ದೃಶ್ಯಗಳೆಂದರೆ ಮಂಗ ಬುದ್ಧನಿಗೆ ಜೇನು ನೀಡುತ್ತಿರುವುದು, ಬುದ್ಧನ ಪ್ರಥಮೋಪದೇಶ, ತ್ರಯಾತ್ರಿಂಶ ಸ್ವರ್ಗದಿಂದ ಇಳಿದುಬರುತ್ತಿರುವ ಬುದ್ಧ, ಮಹಾಪರಿನಿರ್ವಾಣ, ನಾಲಾಗಿರಿ ಆನೆಯ ಮದವಿಳಿಸಿರುವ ಬುದ್ಧ, ಶ್ರಾವಸ್ತಿಯ ಪವಾಡ ಹಾಗೂ ಬುದ್ಧನ ಜನನ.

ಪಾಲ ಮತ್ತು ಸೇನರ ಕಾಲದ ಶಿಲ್ಪಗಳಲ್ಲಿ ಶಾಕ್ಯಮುನಿ ಬುದ್ಧ ಅಂದರೆ ನಿರ್ವಾಣಕಾಯ ಪರಿಲ್ಪನೆಗೆ ಪ್ರಾಧಾನ್ಯ ನೀಡಿರುವುದರೊಂದಿಗೆ ಜಿನ ಬುದ್ಧರ ಅಥವಾ ಸಂಭೋಗಕಾಯ ಪರಿಕಲ್ಪನೆಗೂ ಗಮನಹರಿಸಲಾಗಿದೆ. ಪಶ್ಚಿಮ ಬಂಗಾಲದ ಬರೆಯ ಎಂಬಲ್ಲಿ ದೊರೆತಿರುವ ಭೂಮಿಸ್ಪರ್ಷಮುದ್ರೆಯಲ್ಲಿರುವ ಅಕ್ಷೋಭ್ಯ ಬುದ್ಧನ ವಿಗ್ರಹ 11ನೆಯ ಶತಮಾನದ ಅಂತಹ ಉದಾಹರಣೆ ಒದಗಿಸುತ್ತದೆ. ಶಾಕ್ಯಮುನಿ ಬುದ್ಧನಂತೆಯೇ ಕಂಡರೂ ಪೀಠದಲ್ಲಿ ಆನೆಯನ್ನು ವಾಹನವಾಗಿ ತೋರಿಸಿರುವುದರಿಂದ ಇದು ಅಕ್ಷೋಭ್ಯ ಬುದ್ಧನ ವಿಗ್ರಹವೆಂಬುದು ಅರಿವಾಗುತ್ತದೆ. ಪ್ರಭಾವಳಿಯಲ್ಲಿ ಮಧ್ಯದಲ್ಲಿರುವ ಅಕ್ಷೋಭ್ಯನನ್ನೂ ಒಳಗೊಂಡಂತೆ ಅವನಿಂದ ಮೂಡುವ ಐದು ಜಿನ ಬುದ್ಧರನ್ನು ತೋರಿಸಿದೆ. ಇದಲ್ಲದೆ ಇವನು ವಜ್ರಕುಲದವನೆಂದು ಸೂಚಿಸಲು ಎರಡು ವಜ್ರಗಳನ್ನು ಇಕ್ಕೆಲಗಳಲ್ಲಿ ತೋರಿಸಿದೆ. ಬಿಹಾರದ ಭಾಗಲಪುರ ಜಿಲ್ಲೆಯಲ್ಲಿ ದೊರೆತ (ಈಗ ಕೋಲ್ಕತದ ವಂಗೀಯ ಸಾಹಿತ್ಯ ಪರಿಷತ್ ಕಟ್ಟಡದಲ್ಲಿರುವ) ರತ್ನಸಂಭವನ ಶಿಲ್ಪ ಜಿನ ಬುದ್ಧ ಶಿಲ್ಪಗಳ ಇನ್ನೊಂದು ಉದಾಹರಣೆ. ಕುದುರೆ ರತ್ನಸಂಭವನ ವಾಹನ.

ತಾಂತ್ರಿಕ ಸ್ವರೂಪದ ಬೌದ್ಧ ಶಿಲ್ಪಗಳಲ್ಲಿ ಕ್ರೋಧಕಾಯ (ಸಿಡುಕಿನ ದೇವತೆಗಳು) ಪರಿಕಲ್ಪನೆಯನ್ನು ಪ್ರಕಟಿಸುವ ವಿಗ್ರಹಗಳೂ ಪಾಲ–ಸೇನರ ಕಾಲದ ಶಿಲ್ಪಗಳಲ್ಲಿವೆ. ಅಕ್ಷೋಭ್ಯನಿಂದ ಹುಟ್ಟಿಕೊಳ್ಳುವ ಹೇರುಕ ಇಂತಹ ಒಬ್ಬ ದೇವತೆ. ಬಾಂಗ್ಲಾದೇಶದ ಸುಭಾಪುರದ ಶಿಲ್ಪದಲ್ಲಿ ಹೇರುಕನನ್ನು ಪದ್ಮಪೀಠದ ಮೇಲೆ ಅರ್ಧಪರ್ಯಂಕಾಸನದಲ್ಲಿ ನಿಂತಿರುವ, ಉಬ್ಬುಗಣ್ಣಿನ, ಕೋರೆದಾಡೆಯಿರುವ, ರುಂಡಮಾಲೆ ಧರಿಸಿರುವ, ಖಟ್ವಾಂಗಧಾರಿಯಂತೆ ತೋರಿಸಲಾಗಿದೆ. ಈ ಕ್ರುದ್ಧದೇವತೆಯ ಆರಾಧನೆಯಿಂದ ಬುದ್ಧತ್ವದ ಆಕಾಂಕ್ಷಿಗಳಿಗೆ ತೊಂದರೆ ಕೊಡುವ ಮಾರರ ವಿನಾಶವಾಗುತ್ತದೆಂಬ ನಂಬಿಕೆಯಿದೆ.

ಹೇರುಕ ಪ್ರಕಾರದ ದೇವತೆಗಳನ್ನು ಕೆಲವು ಸಲ ಒಂಟಿಯಾಗಿಯೂ ಇನ್ನು ಕೆಲವು ಸಲ ಸ್ತ್ರೀಯೊಂದಿಗೆ ಯುಗನದ್ಧ ರೀತಿಯಲ್ಲಿ, ಅಂದರೆ ಮೈಥುನದಲ್ಲಿರುವಂತೆಯೂ ತೋರಿಸುವುದುಂಟು. ಇಂಥ ದೇವತೆಗಳನ್ನು ಹೇವಜ್ರ ಎಂದು ಕರೆಯಲಾಗುತ್ತದೆ. ಪಹಾಡಪುರದಲ್ಲಿ (ಬಾಂಗ್ಲಾದೇಶ) ಅನೇಕ ಕೈಗಳುಳ್ಳ ಹೇವಜ್ರನ ಸು.12ನೆಯ ಶತಮಾನದ ಚಿಕ್ಕ ವಿಗ್ರಹ ದೊರೆತಿದೆ. ಇಲ್ಲಿ ಸ್ತ್ರೀಯು ಪ್ರಜ್ಞೆ ಅಥವಾ ಜ್ಞಾನವನ್ನೂ ಪುರುಷನು ಉಪಾಯ ಅಥವಾ ಜ್ಞಾನವನ್ನು ಸಾಧಿಸುವ ವಿಧಾನವನ್ನೂ ಸಾಂಕೇತಿಕವಾಗಿ ಭಾವಿಸಲಾಗುತ್ತದೆ. ಇವೆರಡೂ ಸೇರಿದಾಗ ವ್ಯತ್ಯಾಸ ಇಲ್ಲದಾಗುತ್ತದೆ. ಇದರ ಮೂಲಕ ಶೂನ್ಯತೆಯನ್ನು ಸಾಧಿಸುವ ಪ್ರಯತ್ನವಾಗುತ್ತದೆ. ಅಕ್ಷೋಭ್ಯನಿಂದ ಹುಟ್ಟಿಕೊಂಡುದೆಂದು ನಂಬಲಾದ ಪರ್ಣಶಬರೀ ಎಂಬ ಕ್ರೋಧಕಾಯ ಸ್ತ್ರೀದೇವತೆ ಕೂಡ ತಾಂತ್ರಿಕ ಬೌದ್ಧರಲ್ಲಿ ಆರಾಧನೆಗೊಳ್ಳುತ್ತಿತ್ತು. ಈಗ ಡಾಕ ವಸ್ತುಸಂಗ್ರಹಾಲಯ ದಲ್ಲಿರುವ ಸು.11ನೆಯ ಶತಮಾನದ ಪಾಲ ಶೈಲಿಯಲ್ಲಿರುವ ಪರ್ಣಶಬರೀ ವಿಗ್ರಹ ಬಂಗ್ಲಾದೇಶದ ವಿಕ್ರಮಪುರದಲ್ಲಿ ದೊರೆತದ್ದು. ಆರು ಕೈಗಳುಳ್ಳ, ಕುಬ್ಜೆಯಂತಿರುವ ಈ ದೇವತೆ ಕೈಗಳಲ್ಲಿ ವಜ್ರ, ಎಲೆಗಳ ಗುಚ್ಚ, ಬಿಲ್ಲು, ಬಾಣಧರಿಸಿ ಮನುಷ್ಯರೂಪದಲ್ಲಿರುವ ವಿಘ್ನಕಾರಿ ಶಕ್ತಿಗಳನ್ನು ತುಳಿಯುತ್ತಿದ್ದಾಳೆ. ಇವನ ಒಂದು ಕೈ ಬೆದರಿಸುವ ತರ್ಜನೀ ಮುದ್ರೆಯಲ್ಲಿದೆ. ಉಬ್ಬುಗಣ್ಣಿನ, ಕೋರೆದಾಡೆಗಳುಳ್ಳ, ಜ್ವಾಲೆಗಳಂತಿರುವ ಕೂದಲುಗಳುಳ್ಳ ಈಕೆಯ ಆರಾಧನೆಯಿಂದ ಭಯ ಪೀಡಿತರ ಭಯ ನಾಶವಾಗುವುದೆಂದು ನಂಬಿಕೆಯಿದೆ.

ನೂರಾರು ಸಂಖ್ಯೆಯಲ್ಲಿರುವ ಲೋಹದ ವಿಗ್ರಹಗಳು ಬಿಹಾರ–ಬಂಗಾಲ ಪ್ರದೇಶಗಳಲ್ಲಿ ದೊರೆತಿದ್ದು, ಪಾಲ–ಸೇನರ ಕಾಲದಲ್ಲಿ ಈ ಪ್ರದೇಶ ಲೋಹದ ವಿಗ್ರಹಗಳನ್ನು ತಯಾರಿಸುವ ಪ್ರಮುಖ ನೆಲೆಗಳಿದ್ದಿರಬೇಕೆಂದು ಸೂಚಿಸುತ್ತವೆ. ದಕ್ಷಿಣ ಬಿಹಾರದ ನಾಲಂದ ಮತ್ತು ಕುರ್ಕಿಹಾರ ನೆಲೆಗಳಲ್ಲಿ ಇವು ಬಹು ಸಂಖ್ಯೆಯಲ್ಲಿ ದೊರೆತಿವೆ. ಇವುಗಳಲ್ಲಿ ನಾಲಂದದ ವಿಗ್ರಹಗಳು ಚಿಕ್ಕವೂ ಪ್ರತಿಮಾವಿವರಗಳಲ್ಲಿ ಕಡಿಮೆ ಸಂಕೀರ್ಣವೂ ಹೆಚ್ಚು ಸರಳವೂ ಆಗಿವೆ. ನಾಲಂದದಲ್ಲಿ ದೊರೆತ ಸು.9ನೆಯ ಶತಮಾನದ ಒಂದು ಕಂಚಿನ ವಿಗ್ರಹದಲ್ಲಿ ಬುದ್ಧನನ್ನು ಪದ್ಮಪೀಠದ ಮೇಲೆ, ಪರ್ಯಂಕಾಸನದಲ್ಲಿ, ಕೈಗಳನ್ನು ಧರ್ಮಚಕ್ರಪ್ರವರ್ತನ ಮುದ್ರೆಯಲ್ಲಿರಿಸಿ ಕುಳಿತಿರುವಂತೆ ತೋರಿಸಿದೆ. ಪೀಠದ ಕೆಳಭಾಗದಲ್ಲಿ ಧರ್ಮಚಕ್ರವನ್ನೂ ಅದರ ಇಕ್ಕೆಲಗಳಲ್ಲಿ ಕುಳಿತಿರುವ ಜಿಂಕೆಗಳನ್ನೂ ತೋರಿಸಿರುವುದರಿಂದ ಇದು ಪ್ರಥಮೋಪದೇಶದ ಪ್ರತಿನಿಧಿಯೆಂದು ಅರಿವಾಗುತ್ತದೆ. ದುಂಡಾಗಿರುವ ಪ್ರಭಾಮಂಡಲದ ಅಂಚಿನಗುಂಟ ಜ್ವಾಲೆಗಳಿದ್ದು, ಇದು ಪ್ರಭಾವಲಯವಾಗಿಯೂ ಬುದ್ಧನ ತೇಜಸ್ಸಿನ ಸಂಕೇತವಾಗಿಯೂ ಏಕಕಾಲದಲ್ಲಿ ವರ್ತಿಸುತ್ತಿದೆ. ಪ್ರಭಾಮಂಡಲದ ಮೇಲ್ಗಡೆ ಛತ್ರಿಯನ್ನು ತೋರಿಸಿರುವುದು ಈ ವಿಗ್ರಹಗಳಲ್ಲಿ ಸಾಮಾನ್ಯ. ಇವು ಮುಖಲಕ್ಷಣದಲ್ಲಿ, ಬಾಲಕ ದೇಹದ ಪ್ರಮಾಣದಲ್ಲಿ, ವಸ್ತ್ರದ ನಿರೂಪಣೆಯಲ್ಲಿ ಗುಪ್ತರ ಶೈಲಿಗೆ ಸಮೀಪವಾಗಿದೆ.

ಸು.10ನೆಯ ಶತಮಾನದ, ಕುರ್ಕಿಹಾರದಲ್ಲಿ ದೊರೆತಿರುವ ಭೂಮಿಸ್ಪರ್ಶಮುದ್ರೆಯಲ್ಲಿರುವ ಶಾಕ್ಯಮುನಿ ಬುದ್ಧನ ಬೆಳ್ಳಿಲೇಪನಯುಕ್ತ ವಿಗ್ರಹ ಶೈಲಿ ಮತ್ತು ಪ್ರತಿಮಾ ವಿವರಗಳಲ್ಲಿ ಸಾಕಷ್ಟು ಪ್ರಗತಿಯನ್ನು ತೋರಿಸುತ್ತದೆ. ಗುಪ್ತರ ಶೈಲಿಯ ಕುರುಹುಗಳಾವವೂ ಇಲ್ಲಿಲ್ಲ. ಬುದ್ಧ ಸಿಂಹಾಸನದ ಮೇಲಿರುವ ಪದ್ಮಪೀಠದ ಮೇಲೆ ಪರ್ಯಂಕಾಸನದಲ್ಲಿ ಕುಳಿತಿದ್ದಾನೆ. ಅವನ ಶರೀರ ಎತ್ತರವಾಗಿದ್ದು ಮುಂಡ ಭಾಗ ಗೋಮುಖ ರೂಪದಲ್ಲಿದೆ. ಇದು ಪ್ರೌಢ ಪಾಲ ಶೈಲಿಯ ಪ್ರಮುಖ ಲಕ್ಷಣವೆನಿಸಿದೆ. ಪ್ರಭಾಮಂಡಲವನ್ನು ಬೇರೆಯದಾಗಿಯೇ ತೋರಿಸಲಾಗಿದ್ದು, ಪ್ರಭಾವಳಿಯ ಅಲಂಕಾರ ಸಿಂಹಾಸನದ ಅಂಗವಾಗಿ ಮೇಲೆದ್ದಿದೆ. ಪ್ರಭಾವಳಿಯ ತುದಿಯಲ್ಲಿರುವ ಕೀರ್ತಿಮುಖದ ಬಾಯಿಂದ ಸಸ್ಯಾಲಂಕಾರ ಇಕ್ಕೆಲಗಳಲ್ಲಿ ಇಳಿದಿದೆ. ಹಿಂಭಾಗದಲ್ಲಿರುವ ದಂಡ ಛತ್ರಿಗೆ ಆಧಾರವಾಗಿತ್ತು.

ಅವಲೋಕಿತೇಶ್ವರ

ನಾಲಂದದಲ್ಲಿ ದೊರೆತ, 11ನೆಯ ಶತಮಾನದ, ಈಗ ದೆಹಲಿಯ ರಾಷ್ಟ್ರೀಯ ಸಂಗ್ರಹಾಲ ಯದಲ್ಲಿರುವ ಆದಿ ಬುದ್ಧ ಸರ್ವವಿದ್ ವಿರೋಚನನ ವಿಗ್ರಹ, ಕುರ್ಕಿಹಾರದಲ್ಲಿ ದೊರೆತ, ಸುಮಾರು ಅದೇ ಕಾಲದ, ಈಗ ಪಟಣ ವಸ್ತುಸಂಗ್ರಹಾಲಯದಲ್ಲಿರುವ ಸಮಪಾದದಲ್ಲಿ ನಿಂತಿರುವ ಬುದ್ಧ ಮುಂತಾದವು ಅಂತ್ಯ ಪಾಲರ ಕಾಲದಲ್ಲಿಯೂ ಲೋಹ ಶಿಲ್ಪಕಲೆ ಗುಣಶೀಲ ಮಟ್ಟದಲ್ಲಿ ಕಡಿಮೆಯಾಗಿಲ್ಲ. ಕುರ್ಕಿಹಾರದಲ್ಲಿ ದೊರೆತ ಸು.12ನೆಯ ಶತಮಾನದ, ಅವಲೋಕಿತೇಶ್ವರನ ಒಂದು ರೂಪವಾದ ಲೋಕನಾಥನ ಬಂಗಾರ ಲೇಪನವುಳ್ಳ ಕಂಚಿನ ವಿಗ್ರಹ ಪಾಲರ ಕಾಲದ ಲೋಹಶಿಲ್ಪಗಳಲ್ಲಿಯೆ ಉತ್ಕೃಷ್ಟವಾದುದು. ನಿಶ್ಚಿತ ಶೈಲಿಯ ಮುಖ, ಕೋನ ಕೋನವಾಗಿರುವ ದೇಹದ ಭಂಗಿ ಇಲ್ಲಿದ್ದಾಗ್ಯೂ ದೇಹದ ಏರಿಳಿತಗಳ ಭಾವ ಲಯಗಳು ಪರಿಣಾಮಕಾರಿಯಾಗಿವೆ. ಇವಲ್ಲದೇ ಬಿಹಾರಿನ ಫತೇಪುರದ ಬೋಧಿಸತ್ತ್ವ ಮೈತ್ರೇಯ (ಸು.11ನೆಯ ಶತಮಾನ, ಬೋಧಗಯ ವಸ್ತುಸಂಗ್ರಹಾಲಯ), ಬಾಂಗ್ಲಾದೇಶದ ಝೆವಾರಿಯ ಭೂಮಿಸ್ಪರ್ಶಮುದ್ರೆಯಲ್ಲಿರುವ ಬುದ್ಧ (ಕೋಲ್ಕತದ ಇಂಡಿಯನ್ ಮ್ಯೂಸಿಯಂ) ಮುಂತಾದ ಸೌಮ್ಯ ಬೌದ್ಧ ಮೂರ್ತಿಗಳೂ ಬಿಹಾರದ ಪಾಥರ್ಘಾತದಲ್ಲಿ ದೊರೆತ ಸಂವರ (ಹೇರುಕ ಪ್ರಕಾರದ ದೇವತೆ, ಕೋಲ್ಕತದ ಇಂಡಿಯನ್ ಮ್ಯೂಸಿಯಂ), ಕುರಿಹಾರದಲ್ಲಿ ದೊರೆತ ಹಯಗ್ರೀವ (ಅವಲೋಕಿತೇಶ್ವರನ ಕ್ರುದ್ಧರೂಪ, ಪಟಣ ವಸ್ತುಸಂಗ್ರಹಾಲಯ) ಮುಂತಾದ ಭಯಂಕರ ಮೂರ್ತಿಗಳೂ ಪಾಲರ ಕಾಲದಲ್ಲಿ ಲೋಹದಲ್ಲಿ ತಯಾರಾಗಿವೆ.

ಹಲವು ಶೈವ–ವೈಷ್ಣವ ಶಿಲ್ಪ ಕಲೆಯ ಉದಾಹರಣೆಗಳೂ ಪಾಲ–ಸೇನರ ಕಾಲದ್ದಿವೆ. ಬಿಹಾರದ ಲಖಿಸರಾಯಿಯಲ್ಲಿ ದೊರೆತಿರುವ ಸು.8ನೆಯ ಶತಮಾನದ ಕಪ್ಪುಶಿಲೆಯ ಸೂರ್ಯ ಶಿಲ್ಪ, ರಾಜಗೀರದ ಸುಮಾರು ಅದೇ ಕಾಲದ ಉಮಾಮಹೇಶ್ವರ ಶಿಲ್ಪ ಉತ್ತರ–ಮಧ್ಯಭಾರತದ ಗುಪ್ತ–ಗುಪ್ತೋತ್ತರ ಶಿಲ್ಪಶೈಲಿಗೆ ನಿಕಟವಾಗಿವೆ. ಇವು ಸಮಕಾಲೀನ ಬೌದ್ಧ ಶಿಲ್ಪಗಳಿಂದ ಭಿನ್ನರೂಪದ್ದಾಗಿರುವುದನ್ನು ಗಮನಿಸಬಹುದು. 9ನೆಯ ಶತಮಾನದ ಹೊತ್ತಿಗೆ ಬೌದ್ಧ ಮತ್ತು ಹಿಂದು ಶಿಲ್ಪಶೈಲಿಗಳ ಅಂತರ ಇಲ್ಲದಾಗಿದೆ. ಬಾಂಗ್ಲಾದೇಶದ ನಾರಾಯಣಪುರದಲ್ಲಿ ದೊರೆತಿರುವ, ಮಹೀಪಾಲನ ಕಾಲದ 10–11ನೆಯ ಶತಮಾನದ ಗಣೇಶ ಶಿಲ್ಪ (ಈಗ ಡಾಕ ವಸ್ತುಸಂಗ್ರಹಾಲಯದಲ್ಲಿದೆ) ಇದಕ್ಕೆ ಒಳ್ಳೆಯ ಉದಾಹರಣೆಯೊದಗಿಸುತ್ತದೆ. ಪದ್ಮಪೀಠದ ಅಲಂಕಾರ ವಿವರ, ಹಾರ, ಪ್ರಭಾವಳಿಯ ಅಂಚಿನುದ್ದಕ್ಕೆ ಜ್ವಾಲೆಗಳು (ಪದ್ಮದಲಗಳು) ಮುಂತಾದ ಲಕ್ಷಣಗಳು ಸಮಕಾಲೀನ ಬೌದ್ಧಶಿಲ್ಪ ಶೈಲಿಗೆ ಸಮಾನವಾಗಿವೆ.

ಪಾಲ–ಸೇನರ ಅಂತ್ಯಕಾಲದಲ್ಲಿ ಬಿಹಾರ–ಬಂಗಾಲಗಳಲ್ಲಿ ಬೌದ್ಧಧರ್ಮಕ್ಕಿಂತ ವೈಷ್ಣವಧರ್ಮ ಅತ್ಯುನ್ನತಿಯಲ್ಲಿತ್ತು. ಹೀಗಾಗಿ ವಿಷ್ಣು ಮತ್ತು ಅವನ ವಿವಿಧ ರೂಪಗಳ ಶಿಲ್ಪಗಳು ಬಹುಸಂಖ್ಯೆಯಲ್ಲಿವೆ. ಸೂರ್ಯ ಮತ್ತು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಒಂದಾದ ತ್ರಿವಿಕ್ರಮ ವಿಗ್ರಹಗಳು ಅತಿ ಹೆಚ್ಚು ಸಂಖ್ಯೆಯಲ್ಲಿವೆ. ಪಶ್ಚಿಮ ಬಂಗಾಲದ ಬಲೂರಘಾಟ ಎಂಬಲ್ಲಿ ದೊರೆತಿರುವ ವಿಗ್ರಹದಲ್ಲಿ (12ನೆಯ ಶತಮಾನ, ಕೋಲ್ಕತದ ಇಂಡಿಯನ್ ಮ್ಯೂಸಿಯಂ) ಸಮಪಾದದಲ್ಲಿ ಚತುರ್ಭುಜನಾಗಿ ಪದ್ಮಪೀಠದ ಮೇಲೆ ನಿಂತಿರುವ ತ್ರಿವಿಕ್ರಮ (ಕೆಳ ಬಲಗೈಯಿಂದ ಪ್ರಾರಂಭಿಸಿ ಪ್ರದಕ್ಷಿಣಾಕಾರವಾಗಿ) ಪದ್ಮ, ಗದಾ, ಚಕ್ರ ಮತ್ತು ಶಂಖ ಧರಿಸಿದ್ದಾನೆ. ಇವನ ಇಕ್ಕೆಲಗಳಲ್ಲಿ ಚಾಮರಧಾರಿ ಸ್ತ್ರೀ ಮತ್ತು ವೀಣಾಪಾಣಿ ಸರಸ್ವತಿ ನಿಂತಿದ್ದಾರೆ. ಪಾಲಶೈಲಿಯಲ್ಲಿ ಆಲಂಕಾರಿಕ ವಿವರಗಳನ್ನೆಲ್ಲ ಈ ಶಿಲ್ಪದಲ್ಲಿ ಕಾಣಬಹುದು.

ಇತರ ಹಿಂದು ವಿಗ್ರಹಗಳಲ್ಲಿ ವಿಕ್ರಮಪುರ ಶಿವಲಿಂಗಾರಾಧನೆಯಲ್ಲಿ ತೊಡಗಿರುವ ಸ್ತ್ರೀದೇವತೆ, ಪುರಪರದ ಅರ್ಧನಾರೀಶ್ವರ ಮತ್ತು ಪಲ್ಗಿರಿಯಲ್ಲಿ (ಇವೆಲ್ಲ ಸ್ಥಳಗಳೂ ಬಾಂಗ್ಲಾದೇಶ ದಲ್ಲಿವೆ) ದೊರೆತ ಶಿವ ನಟರಾಜ ಮುಂತಾದವು ಉಲ್ಲೇಖನೀಯವಾಗಿವೆ. ಇವುಗಳಲ್ಲಿ ಮೊದಲನೆಯ ಶಿಲ್ಪದಲ್ಲಿ ದೊಡ್ಡ ಲಿಂಗದಿಂದೆದ್ದಿರುವ ಚತುರ್ಭುಜ ಸ್ತ್ರೀದೇವತೆಯ ಚಿತ್ರಣವಿದೆ. ಇವನ ಮೇಲಣ ಕೈಗಳು ಅಕ್ಷಮಾಲೆ ಮತ್ತು ಪುಸ್ತಕ ಹಿಡಿದಿವೆ. ಕೆಳ ಕೈಗಳು ಒಂದರ ಮೇಲೊಂದಾಗಿ ಧ್ಯಾನ ಮುದ್ರೆಯಲ್ಲಿವೆ. ಹಣೆಯಲ್ಲಿ ಮೂರನೆಯ ಕಣ್ಣನ್ನು ತೋರಿಸಿದೆ. ಎದೆಯಮೇಲೆ ಮೈಗಂಟಿಕೊಂಡು ಅಲೆಯಲೆಯಾಗಿರುವ ವಸ್ತ್ರ ಮತ್ತು ಆಭರಣದ ವಿವರಗಳು ಪಾಲ ಶೈಲಿಯ ಪ್ರತೀಕ. ಬಹುಶಃ ಧ್ಯಾನ–ಜ್ಞಾನ ಮುಖೇನ ಶಿವಸಾಯುಜ್ಯ ಸಾಧಿಸಿರುವ ಪಾರ್ವತಿಯ ಶಿಲ್ಪ ಇದೆಂದು ಕಾಣುತ್ತದೆ. ನಂದಿಯ ಮೇಲೆ ನರ್ತಿಸುವ ಶಿವ ನಟರಾಜ ಶಿಲ್ಪಗಳು ಪಾಲ–ಸೇನ ಶಿಲ್ಪಿಗಳು ಸೃಜಿಸಿದ ಹೊಸ ಪ್ರಕಾರದ ಪ್ರತಿಮೆಗಳಾಗಿವೆ. ಪಲ್ಗಿರಿಯಲ್ಲಿ ದೊರೆತ ಒಂದು ಶಿಲ್ಪದಲ್ಲಿ ಊರ್ಧ್ವಲಿಂಗಿಯಾಗಿ ನಂದಿಯ ಮೇಲೆ ನರ್ತಿಸುತ್ತಿರುವ ಅಷ್ಟಭುಜ ಶಿವನ ಕೈಗಳಲ್ಲಿ ತ್ರಿಶೂಲ, ಪರಶು,ವಜ್ರ, ಖಡ್ಗ, ಖೇಟಕ, ಖಟ್ವಾಂಗ ಮುಂತಾದ ಆಯುಧಗಳಿವೆ. ಇಕ್ಕೆಲಗಳಲ್ಲಿ ಅವನ ಪತ್ನಿಯರಾದ ಪಾರ್ವತಿ ಮತ್ತು ಗಂಗೆ ತಮ್ಮ ವಾಹನಗಳಾದ ಸಿಂಹ ಮತ್ತು ಮಕರದ ಮೇಲೆ ತ್ರಿಭಂಗಿಯಲ್ಲಿ ನಿಂತಿದ್ದಾರೆ. ಶಿಲ್ಪಫಲಕದ ಚೂಪುಕಮಾನಿನಾಕಾರದ ಮೇಲ್ಭಾಗದಲ್ಲಿ ಮಾಲಾವಾಹಕರು ಮತ್ತು ಉಪದೇವತೆಗಳ ಚಿಕ್ಕ ಶಿಲ್ಪಗಳಿವೆ. ಕೆಳಭಾಗದಲ್ಲಿ ಗಣಗಳ, ಭಕ್ತರ ಕೆತ್ತನೆಗಳಿವೆ. ಇದೊಂದು ಪಾಲರ ಕಾಲದ ಮನಮೋಹಕ ಶಿಲ್ಪ.

ಪಾಲ–ಸೇನರ ಕಾಲದಲ್ಲಿ ಹಿಂದು ಶಿಲ್ಪಗಳು ಲೋಹದಲ್ಲಿಯೂ ಇವೆ. ಕುರ್ಕಿಹಾರದಲ್ಲಿ ದೊರೆತ ದೇವಪಾಲನ ಕಾಲದ (9ನೆಯ ಶತಮಾನ) ಕಂಚಿನ ಬಲರಾಮ ವಿಗ್ರಹ ಅದೇ ನೆಲೆಯ ಬೌದ್ಧ ಲೋಹ ಶಿಲ್ಪಗಳಷ್ಟೇ ಉತ್ಕೃಷ್ಟವಾಗಿದೆ. ಇದು ಈಗ ಪಟಣ ವಸ್ತುಸಂಗ್ರಹಾಲಯ ದಲ್ಲಿದೆ. ಈ ಚತುರ್ಭುಜ ವಿಗ್ರಹದಲ್ಲಿ ವಿಷ್ಣುವಿನ ಆಯುಧಗಳನ್ನೇ ಹಿಡಿದಿದ್ದರೂ ಬಲರಾಮನ ವಿಗ್ರಹವೆಂದು ಅವನ ಶಿರದ ಹಿಂದಿರುವ ಏಳು ಹೆಡೆಯ ಸರ್ಪದಿಂದ ಗುರುತಿಸಬಹುದು. ಪ್ರಭಾವಳಿಯ ವಿವರಗಳು ಸೂಕ್ಷ್ಮತರವೂ ಆಕರ್ಷಕವೂ ಆಗಿವೆ.

ಬೆಳ್ಳಿ–ಬಂಗಾರದ ವಿಗ್ರಹಗಳೂ ಈ ಕಾಲದಲ್ಲಿ ತಯಾರಾದುವೆಂಬುದು ಉಲ್ಲೇಖಾರ್ಹ ವಾಗಿದೆ. ತ್ರಿವಿಕ್ರಮನ ಒಂದು ಸುಂದರ ಬೆಳ್ಳಿಯ ವಿಗ್ರಹ ಬಾಂಗ್ಲಾದೇಶದ ವಿಕ್ರಮಪುರದಲ್ಲಿ ದೊರೆತಿದೆ. ಪದ್ಮ, ಗದಾ, ಚಕ್ರ, ಶಂಖ ಧರಿಸಿರುವ ಸಮಪಾದದಲ್ಲಿ ಪದ್ಮಪೀಠದ ಮೇಲೆ ನಿಂತಿರುವ ತ್ರಿವಿಕ್ರಮನ ಪಾರ್ಶ್ವಗಳಲ್ಲಿ ಪದ್ಮಪೀಠಗಳ ಮೇಲೆ ಲಕ್ಷ್ಮೀ ಮತ್ತು ಸರಸ್ವತಿ ಆಕರ್ಷಕ ಭಂಗಿಯಲ್ಲಿವೆ. ಪೀಠದ ಕೆಳಭಾಗದಲ್ಲಿ ಕೈಮುಗಿದು ಕುಳಿತಿರುವ ಗರುಡನಿದ್ದಾನೆ. ಪ್ರಭಾಮಂಡಲದ ಹೊರ ಅಂಚಿನಗುಂಟ ಜ್ವಾಲೆಗಳಿದ್ದು, ಮೇಲ್ಗಡೆ ಕೀರ್ತಿಮುಖವಿದೆ. ಪಾಲ–ಸೇನರ ಕಾಲದ ಲೋಹಶಿಲ್ಪ ತಂತ್ರಜ್ಞಾನದ ಉತ್ಕೃಷ್ಟತೆ ಈ ವಿಗ್ರಹದಲ್ಲಿ ಸಾಕಾರಗೊಂಡಿದೆ.

ಪಾಲ–ಸೇನ ವಾಸ್ತು ಮತ್ತು ಶಿಲ್ಪಕಲೆ ಕೇವಲ ಪೂರ್ವಭಾರತಕ್ಕೆ ಸೀಮಿತವಾಗಿ ಉಳಿಯಲಿಲ್ಲ. ಮುಖ್ಯವಾಗಿ ತಂತ್ರಯಾನ ಬೌದ್ಧ ಪರಿಕಲ್ಪನೆಗಳೊಂದಿಗೆ ಇವುಗಳ ಮೂರ್ತಿಲಕ್ಷಣಗಳೂ ಶೈಲಿಯೂ ಇಲ್ಲಿಂದ ನೇಪಾಲ, ಟಿಬೆಟ್, ಕಾಶ್ಮೀರ, ಆಗ್ನೇಯ ಏಷ್ಯ ಮುಂತಾದ ಪ್ರದೇಶಗಳಲ್ಲಿಯೂ ಪ್ರಸರಿಸಿರುವುದು ಗಮನಾರ್ಹ. (ಎಸ್.ವಿ.ಪಿ.)

**ಪಾಶುಪತ:** ಒಂದು ಶೈವ ಪಂಥ; ಮಹಾಭಾರತದಲ್ಲಿ ಇದರ ಉಲ್ಲೇಖವಿದೆ. ಪ್ರಾರಂಭ ದಲ್ಲಿ ಇದಕ್ಕೆ ಪಶುಪತಿಯ ಮತವೆಂತಲೂ ಮುಂದೆ ಪುರಾಣಗಳಲ್ಲಿ ಉಲ್ಲೇಖವಾಗಿರುವಂತೆ ಶಿವ (ಪತಿ) ತನ್ನ ಸೃಷ್ಟಿಯಿಂದಾದ ಜೀವಿಗಳನ್ನು (ಪಶು) ಭವಬಂಧನದಿಂದ (ಪಾಶ) ಬಿಡಿಸುವ ಮತವೆಂತಲೂ ಇದರ ಅನುಯಾಯಿಗಳೇ ಪಾಶುಪತರೆಂತಲೂ ಹೇಳಿದೆ.

ಆದಿಯಲ್ಲಿ ಈ ಮತದ ಸ್ಥಾಪಕ ಶಿವನೆಂತಲೂ ಇದರ ತತ್ತ್ವಗಳನ್ನು ರಹಸ್ಯವಾಗಿ ಕೆಲವು ಋಷಿಗಳಿಗೆ ಮಾತ್ರ ತಿಳಿಸಿದನೆಂತಲೂ ಹೇಳಲಾಗಿದೆ. ಈ ತತ್ತ್ವಗಳು ಜನಸಾಮಾನ್ಯ ರನ್ನು ಹೇಗೆ ಮುಟ್ಟಿದವು ಎನ್ನಲಿಕ್ಕೆ ಒಂದು ಕಥೆಯಿದೆ: ಶಿವ ಒಮ್ಮೆ ಸ್ಮಶಾನವೊಂದರಲ್ಲಿ ಲಕುಲ ಅಥವಾ ದಂಡದ ಪಕ್ಕದಲ್ಲಿದ್ದ ಅನಾಮಧೇಯ ಶವವೊಂದರಲ್ಲಿ ಸೇರಿಕೊಂಡನೆಂದೂ ಹೀಗೆ ಶವವನ್ನು ಸೇರಿದ ಶಿವ ಕೆಲವು ಶಿಷ್ಯರನ್ನು ಆರಿಸಿಕೊಂಡು ಈ ಮತದ ತತ್ತ್ವಗಳನ್ನು ಬಿತ್ತರಿಸಿದನೆಂದೂ ಅವೇ ಪಾಶುಪತ ಅಥವಾ ಲಕುಲ ಪಂಥದ ತತ್ತ್ವಗಳಾದವೆಂದೂ ಹೇಳಲಾಗಿದೆ. ಕೌಶಿಕ, ಗಾರ್ಗೇಯ, ಕೌರುಶ, ಮೈತ್ರೇಯ–ಈ ನಾಲ್ಕು ಜನರೇ ಶಿವ ಆರಿಸಿಕೊಂಡ ಆ ಶಿಷ್ಯರು. ಮುಂದೆ ಇವರು ಪಾಶುಪತ ಪಂಥದ ಉಪಪಂಥಗಳನ್ನು ಗುಜರಾತ್ ಹಾಗೂ ರಾಜಸ್ತಾನಗಳಲ್ಲಿ ಸ್ಥಾಪಿಸಿದರು. ಹರ್ಷನ (648) ಕಾಲದಲ್ಲಿ ಈ ಪಂಥ ಸರ್ವತೋಮುಖವಾದ ಅಭಿವೃದ್ಧಿ ಹೊಂದಿ ಅನೇಕ ಶಾಖೆಗಳನ್ನು ಪಡೆಯಿತಾದರೂ ಮುಂದೆ ತನ್ನಲ್ಲಿದ್ದ ನೀತಿಭ್ರಷ್ಟತೆ ಹಾಗೂ ಅಧಿಕಾರ ವ್ಯಾಮೋಹಗಳಿಂದಾಗಿ ಇದು ಶಂಕರ ಮತ್ತು ಕುಮಾರಿಲರಿಂದ ತೀವ್ರ ಖಂಡನೆಗೆ ಗುರಿಯಾಯಿತು.

11ನೆಯ ಶತಮಾನದ ವೇಳೆಗೆ ಪಾಶುಪತದ ಇನ್ನೊಂದು ಶಾಖೆಯಾದ ಕಾಳಾಮುಖ ಪಂಥದವರು ಪ್ರಮುಖರಾದರು. ಇವರು ಹಣೆಯಲ್ಲಿ ಕಪ್ಪು ತಿಲಕವನ್ನು ಇಡುತ್ತಿದ್ದುದರಿಂದ ಇವರು ಕಾಳಾಮುಖರೆಂದೇ ಪ್ರಸಿದ್ಧರಾದರು. ಮುಂದೆ ಈ ಶಾಖೆ ಕಾಪಾಲಿಕರು, ಕಾನ್‌ಫಟರು, ಅಘೋರರು ಮುಂತಾದ ವಾಮಾಚಾರ ಪಂಥಗಳಿಗೆ ದಾರಿ ಮಾಡಿಕೊಟ್ಟಿತು.

ಪಾಶುಪತ ಪಂಥದ ಸಿದ್ಧಾಂತ ಭೇದಾಭೇದ (ದ್ವೈತ–ಅದ್ವೈತ). ಈ ಸಿದ್ಧಾಂತವನ್ನು 5 ವರ್ಗಗಳಾಗಿ ವಿಂಗಡಿಸಲಾಗಿದೆ: 1. ಕಾರಣ: ಸೃಷ್ಟಿ– ಸ್ಥಿತಿ, ಲಯಗಳಿಗೆ ಕಾರಣವಾದುದು. 2. ಕಾರ್ಯ: ಜ್ಞಾನ, ಪ್ರಜ್ಞೆ, ಆತ್ಮಗಳಿಂದಾಗುವ ಪ್ರಯೋಜನ 3. ಯೋಗ: ಪರಮಾತ್ಮನಲ್ಲಿ ಐಕ್ಯವಾಗುವ ವಿಧಾನ, 4. ವಿಧಿ: ಕರ್ಮಬಂಧನ, 5. ದುಃಖಾಂತ: ಪ್ರಾಪಂಚಿಕ ದುಃಖಗಳಿಂದ ದೂರವಾಗಿ ಮೋಕ್ಷ ಮಾರ್ಗವನ್ನು ಪಡೆವ ವಿಧಾನ. ತಪಸ್ಸು, ಲೋಭ ಮತ್ತು ಕೋಪಗಳನ್ನು ಬಿಡುವುದು. ಕ್ಷಮಾಗುಣವನ್ನು ವರ್ಧಿಸುವುದು ಮತ್ತು ಪ್ರಣವವನ್ನು ಉಚ್ಚರಿಸುವುದು– ಇವೇ ಇದರ ಆರಂಭಿಕ ನಿಯಮಗಳು. ಈ ತತ್ತ್ವಗಳ ಮುಖ್ಯ ಉದ್ದೇಶ ಧ್ಯಾನ, ಮಂತ್ರಗಳಿಂದ ಪರಿಶುದ್ಧತೆ ಪಡೆದು ಊರ್ಧ್ವಮುಖನಾಗಿ ಪರಮಾತ್ಮನಲ್ಲಿ ಒಂದಾಗುವುದು. ಈ ಸಿದ್ಧಿಯನ್ನು ಪಡೆಯಲು ಪಾಶುಪತರು ಗೀತೆ, ನೃತ್ಯ, ಆರ್ಭಟ ಮತ್ತು ಗೂಳಿಗಳಂತೆ ಜೋರಾಗಿ ಕೂಗುವುದು ಇತ್ಯಾದಿ ಮಾರ್ಗಗಳನ್ನು ಅನುಸರಿಸುತ್ತಿದ್ದರು. ಈ ತತ್ತ್ವಗಳ ಆಚರಣೆ ಕ್ರಮೇಣ ಕುಂಠಿತವಾಗಿ ಅವನತಿಗೊಳ್ಳಲಾರಂಭಿಸಿತು. ಈ ಪಂಥದವರೆನಿಸಿದ ಪಾಶುಪತರು ಮತ್ತು ಲಕುಲೀಶರು ಮಾಟಮಂತ್ರಗಳಲ್ಲಿ ತೊಡಗಿ ಋಜುಮಾರ್ಗ ತಪ್ಪಿದವ ರಾಗಿ, ಮದ್ಯ ಮಾಂಸಗಳ ಸೇವನೆಯಲ್ಲಿ ತೊಡಗಿ ವಾಮಾಚಾರಗಳಿಗಿಳಿದು ಕೊಲೆಗೆಳೆಸಿ, ನರಭಕ್ಷಕರಾಗಿ ದುರ್ಮಾರ್ಗ ಪ್ರವೃತ್ತರಾದುದ ರಿಂದ ಈ ಪಂಥ ಕ್ರಮೇಣ ಕ್ಷಯಿಸಿತು. (ಎಂ.ಜಿ.ಎನ್.;ಎ.ಎಲ್.ಎಸ್.)

**ಪಾಳವಾಯ್:** ಆಂಧ್ರಪ್ರದೇಶ ರಾಜ್ಯದ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗಿ ನಗರದ ಆಗ್ನೇಯಕ್ಕೆ ಸು. 8ಕಿಮೀ ದೂರದಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಇಲ್ಲಿ ನಾಲ್ಕು ಬೂದಿದಿಬ್ಬಗಳೂ ನವಶಿಲಾಯುಗದ ವಸತಿ ನೆಲೆಯೂ ಇದೆ.

ಬೂದಿದಿಬ್ಬದ ಉತ್ಖನನದಲ್ಲಿ ಮೂರು ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ. ನವಶಿಲಾಯುಗದ ಪೂರ್ವದ್ದಾಗಿರುವ 1ನೆಯ ಹಂತದಲ್ಲಿ ಚಕ್ಕೆಗಳು ಹಾಗೂ ಸೂಕ್ಷ್ಮ ಶಿಲೋಪಕರಣಗಳಿವೆ. 2ನೆಯ ಹಂತದಲ್ಲಿ ನವಶಿಲಾಯುಗ ಸಂಸ್ಕೃತಿಯ ಗುಡಿಸಲುಗಳ ತಳಗಟ್ಟುಗಳಿವೆ. ಈ ಹಂತದ ಬಹು ಮುಖ್ಯ ಅವಶೇಷವೆಂದರೆ ಚೂಪು ಮೊನೆಯುಳ್ಳ ಉಜ್ಜಿದ ಎಲುಬಿನ ಕೊಡಲಿ. 3ನೆಯ ಹಂತದಲ್ಲಿ ಕಬ್ಬಿಣದ ಉಪಯೋಗ ಕಂಡುಬರುತ್ತದೆ. ವಸತಿ ಅವಶೇಷಗಳ ನಡುವೆಯೇ 4 ಅಸ್ಥಿಮಡಕೆಗಳು ಸಿಕ್ಕಿವೆ.

ಮತ್ತೊಂದು ಬೂದಿದಿಬ್ಬದ ಉತ್ಖನನದಲ್ಲಿ ನವಶಿಲಾಯುಗದ ಉಜ್ಜಿ ನುಣುಪಾಗಿಸಿದ ಎರಡು ಪೂರ್ಣ ಎಲುಬಿನ ಕೊಡಲಿಗಳು ದೊರಕಿವೆ. ಜೊತೆಗೆ ಎರಡು ನೆಲಗಟ್ಟುಗಳು, ಪೂರ್ಣವಾಗಿ ಉಜ್ಜಿ ತಯಾರಿಸಿರುವ ಕೊಡಲಿಗಳು ದೊರಕಿವೆ.

ಮೂರನೆಯ ಬೂದಿಗುಡ್ಡದ ಆಗ್ನೇಯ ಭಾಗದಲ್ಲಿ ಮೂರು ವಸತಿ ನೆಲೆಗಳು ಕಂಡುಬಂದಿವೆ. ಬೂದಿಗುಡ್ಡಗಳಿಗೂ ಮತ್ತು ವಾಸಸ್ಥಾನಗಳಿಗೂ ಇರುವ ಸಂಬಂಧವನ್ನು ತಿಳಿಯಲು ಎರಡು ಚಿಕ್ಕ ಗುಂಡಿಗಳನ್ನು ಅಗೆಯಲಾಯಿತು. ಒಂದು ಗುಂಡಿಯಲ್ಲಿ ನಾಲ್ಕು ಸಮಾಧಿಗಳು ದೊರಕಿವೆ. ಈ ಸಮಾಧಿಗಳು ಭೂಮಟ್ಟದಿಂದ ಸು.10 ಸೆಂಮೀ ಆಳದಲ್ಲಿವೆ. ಈ ಅಲ್ಪ ಉತ್ಖನನಗಳಲ್ಲಿ ಕಂದು ಮಣ್ಪಾತ್ರೆಗಳಲ್ಲದೆ ವಸತಿ ಅವಶೇಷಗಳು ಲಭ್ಯವಾಗಿವೆ. ಮತ್ತೊಂದು ಗುಂಡಿಯಲ್ಲಿ ನುಣುಪಾದ ಕಲ್ಲಿನ ಕೊಡಲಿಗಳು, ಉಜ್ಜು ಕಲ್ಲುಗಳು, ಕವಣೆ ಕಲ್ಲು, ಸುತ್ತಿಗೆ ಕಲ್ಲುಗಳು ಮತ್ತು ಮಣ್ಪಾತ್ರೆಗಳು ದೊರಕಿವೆ. (ಸಿ.ಕೆ.ಎಂ.)

**ಪಾಳೆಯಗಾರರು:** ಕರ್ನಾಟಕದಲ್ಲಿ ಆಡಳಿತ ನಡೆಸಿದ ಸಣ್ಣಪುಟ್ಟ ರಾಜಮನೆತನಗಳು ನಾಡಿನ ಇತಿಹಾಸ, ಸಂಸ್ಕೃತಿಗಳನ್ನು ಸಂಪನ್ನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ದೊಡ್ಡ ರಾಜರುಗಳ ಅಸ್ತಿತ್ವ ಇಂಥ ಪುಟ್ಟ ರಾಜವಂಶಗಳ ತಳಹದಿಯ ಮೇಲೆ ಭದ್ರವಾಗಿತ್ತು. ಆಗಾಗ್ಗೆ ಸಂಭವಿಸಿದ ಕೆಲವು ಚಾರಿತ್ರಿಕ ಘಟನೆಗಳಿಂದ ಚಿಕ್ಕ ಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರಿಗೆ ಸಾಮಂತರು, ದೇಸಾಯರು ಪಾಳೆಯಗಾರರು ಎಂದು ಕರೆಯುವುದು ಅವರು ಆಳುತ್ತಿದ್ದ ಭೂ ವಿಸ್ತಾರ, ಸಂಪತ್ತು, ಸೈನ್ಯ, ಶಕ್ತಿಯಾಧಾರಿತವಾಗಿತ್ತು. ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾವಿಭಾಗ, ಶಿಬಿರ, ಠಾಣ್ಯ ಎಂಬ ಅರ್ಥವನ್ನು ಸೂಚಿಸುತ್ತದೆ. ಅದರ ಆಡಳಿತದ ಮುಖ್ಯಸ್ಥರೇ ಪಾಳೆಯಗಾರರು. ತ್ಯಾಗಜೀವನ, ಸಾಹಸ ಕಾರ್ಯಗಳು, ದಾನ ಔದಾರ್ಯಗಳು, ಧರ್ಮಪ್ರಸಾರ, ಸಾಹಿತ್ಯ ಪೋಷಣೆ ಪ್ರಚಾರ, ಸಂಗೀತ, ನಾಟ್ಯ, ಶಿಲ್ಪ, ಚಿತ್ರಕಲೆಗಳಿಗೆ ಇವರು ಕೊಟ್ಟ ಉತ್ತೇಜನ, ಜೀವರಕ್ಷಕ ವೈದ್ಯಶಾಲೆ, ಕೆರೆಕಟ್ಟೆ ಬಾವಿಗಳನ್ನು ಕಟ್ಟಿಸಿಕೊಟ್ಟ ಸಾಮಾಜಿಕ ಸೇವಾ ಕಾರ್ಯಗಳಿಂದಾಗಿ ಇವರು ಹೆಸರಾಗಿದ್ದಾರೆ. ಇವರು ಮಹಾರಾಜರುಗಳಿಗೆ ಕಪ್ಪ ಕಾಣಿಕೆಗಳನ್ನು ಕೊಟ್ಟು ಅವರನ್ನು ಸಂತೃಪ್ತರಾಗಿರುವಂತೆ ಮಾಡುತ್ತಿದ್ದರಲ್ಲದೆ ಅವರ ಪರವಾಗಿ ಯುದ್ಧಗಳಲ್ಲಿ ಹೋರಾಡಿ ಜಯಗಳಿಸಿಕೊಡುತ್ತಿದ್ದರು. ಪ್ರಭುಭಕ್ತಿಯ ಪರಾಕಾಷ್ಠೆಗೆ ಇವರು ಮಾದರಿಯಾಗಿದ್ದರು.

ಕರ್ನಾಟಕದಲ್ಲಿ ಸು. 13ನೆಯ ಶತಮಾನದ ಅಂತ್ಯದವರೆಗೂ ಕೆಲವು ಮನೆತನದವರು ಕೆಲವು ಪ್ರದೇಶಗಳ ಮೇಲೆ ಆಂತರಿಕ ಆಡಳಿತಕ್ಕೆ ಸಂಬಂಧಿಸಿದಂತೆ ಬಹುತೇಕ ಸ್ವತಂತ್ರರಾಗಿ ಆಡಳಿತ ನಡೆಸುತ್ತಿದ್ದರು. ಆದರೆ 14ನೆಯ ಶತಮಾನದ ಆದಿ ಭಾಗದಲ್ಲಿ ನಡೆದ ಮುಸಲ್ಮಾನ ಅರಸರ ಧಾಳಿಗಳಿಂದ ಇಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ಆರಂಭವಾಯಿತು. ಹೊಯ್ಸಳ 3ನೆಯ ಬಲ್ಲಾಳನ ಕಾಲದ ಹೊತ್ತಿಗೆ ಸ್ಥಳೀಯ ಸಾಮಂತ ಮನೆತನಗಳ ಪಾರಂಪರ್ಯ ಸಂಸ್ಥಾನಗಳು ಮರೆಯಾಗುತ್ತ ಬಂದವು. ರಾಜನೇ ನೇರವಾಗಿ ಕೆಲವು ದಂಡನಾಯಕರಿಗೆ ಕೆಲವು ಪ್ರದೇಶಗಳನ್ನು ಆಳುವ ಅಧಿಕಾರ ವಹಿಸಿಕೊಡುವ ರೂಢಿ ಬೆಳೆಯಿತು. ಈ ಅಧಿಕಾರಿಗಳು ರಾಜನಿಂದ ದೊರಕಿದ ಪ್ರದೇಶಗಳ ಆದಾಯಗಳನ್ನು ಅನುಭವಿಸಿಕೊಂಡು ಉತ್ತಮವಾದ ಸೈನ್ಯವನ್ನು ಸಜ್ಜಾಗಿರಿಸಿಕೊಂಡು ರಾಜನಿಗೆ ಆವಶ್ಯಕತೆ ಬಂದಾಗ ಸೈನ್ಯಸಹಾಯ ವನ್ನೂ ಒದಗಿಸಬೇಕಾಗುತ್ತಿತ್ತು. ಈ ವ್ಯವಸ್ಥೆಯೇ ಮುಂದುವರಿದು ಪಾಳೆಯ ಪಟ್ಟುಗಳ ಸ್ಥಾಪನೆಗೆ ನಾಂದಿಯಾಯಿತು. ಈ ಲೇಖನದಲ್ಲಿ ಕಾಲಾನುಕ್ರಮದಲ್ಲಿ ಕೆಲವು ಪಾಳೆಯಗಾರ ವಂಶಗಳನ್ನು ಕುರಿತು ವಿವರಗಳನ್ನು ನೀಡಿದೆ. *

**ಆವತಿ ಪಾಳೆಯಗಾರರು:** 14–18ನೆಯ ಶತಮಾನಗಳ ಅವಧಿಯಲ್ಲಿ ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಈ ವಂಶದ ಶಾಖೆಗಳವರು ಪಾಳೆಯಪಟ್ಟುಗಳನ್ನು ಸ್ಥಾಪಿಸಿ ಆಳಿದರು.

ಸು.14ನೆಯ ಶತಮಾನದಲ್ಲಿ ಏಳು ಜನ ರೈತರು ತಮ್ಮ ಕುಟುಂಬ ಸಮೇತರಾಗಿ ಕಂಚಿಯ ಹತ್ತಿರದ ಯಣಮಂಜಿ ಪುತ್ತೂರು ಎಂಬ ಸ್ಥಳದಿಂದ (ಆತ್ತೂರು ಎಂಬ ಹೇಳಿಕೆಯೂ ಇದೆ). ನಂದಿದುರ್ಗದ ಪೂರ್ವಕ್ಕಿರುವ ರಾಮಸ್ವಾಮಿ ಬೆಟ್ಟದ ಬಳಿ ಬಂದು ತಂಗಿದರು. ಮೂಲತಃ ತೆಲುಗರಾದ ಇವರು ಮೊರಸು ಒಕ್ಕಲು ಎಂದು ಕರೆಯಲ್ಪಡುತ್ತಿದ್ದರು. ಇವರು ಭೈರವ ದೇವರ ಆರಾಧಕರು. ಇವರ ನಾಯಕ ರಣಭೈರೇಗೌಡ. ಇವನು ತನ್ನ ಏಕಮಾತ್ರ ಪುತ್ರಿ ದೊಡ್ಡಮ್ಮನನ್ನು ದುಷ್ಟ ಪಾಳೆಯಗಾರನೊಬ್ಬನಿಂದ ರಕ್ಷಿಸುವ ಸಲುವಾಗಿ ತನ್ನ ಊರನ್ನು ತ್ಯಜಿಸಿ ದೇವನಹಳ್ಳಿಯ ಉತ್ತರದಲ್ಲಿರುವ ಆಹುತಿಯಲ್ಲಿ (ಈಗಿನ ಆವತಿ) ನೆಲಸಿದ. ರಣಭೈರೇಗೌಡನ ಜೊತೆಯಲ್ಲಿ ಮಲ್ಲಭೈರೇಗೌಡ, ಸಣ್ಣಭೈರೇಗೌಡ, ವೀರೇಗೌಡ ಎಂಬ ಅವನ ತಮ್ಮಂದಿರೂ ಜಯಗೌಡ, ಸಣ್ಣಭೈರೇಗೌಡ, ಮಲ್ಲಭೈರೇಗೌಡ ಎಂಬ ಮಕ್ಕಳೂ ಇದ್ದರು. ಸ್ವಲ್ಪ ಕಾಲದಲ್ಲಿಯೇ ಇವರೆಲ್ಲ ಬೇರೆ ಬೇರೆ ಭಾಗಗಳಿಗೆ ಹೋಗಬೇಕೆಂದು ತೀರ್ಮಾನಿಸಿಕೊಂಡರು. ರಣಭೈರೇಗೌಡ ಆವತಿಯಲ್ಲಿಯೇ ನೆಲಸಿದ. ಅವನ ಮಕ್ಕಳು ದೇವನಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಈ ಸ್ಥಳಗಳಲ್ಲಿ ಪಾಳೆಯಪಟ್ಟುಗಳನ್ನು ಸ್ಥಾಪಿಸಿದರು. ಸಣ್ಣಭೈರೇಗೌಡ ಹೊಳವನಹಳ್ಳಿಯಲ್ಲಿ ನೆಲಸಿ ತುಮಕೂರು ಜಿಲ್ಲೆಯ ಕೊರಟಗೆರೆಯನ್ನು ಸ್ಥಾಪಿಸಿದ. ಈ ವಂಶದ ತಿಮ್ಮೇಗೌಡ ಜಂಗಮಕೋಟೆಯ ಹತ್ತಿರದಲ್ಲಿರುವ ಸುಗಟೂರಿಗೆ ಹೋಗಿ ಕೋಲಾರ ಮತ್ತು ಪುಂಗನೂರಿನ ಪಾಳೆಯಗಾರನಾಗಿ ಹೊಸಕೋಟೆ ಯನ್ನು ಸ್ಥಾಪಿಸಿದ. ಏಳನೆಯವನಾದ ಜಯಗೌಡ ಯಲಹಂಕದಲ್ಲಿ ನೆಲಸಿದ. ಇವನ ವಂಶಸ್ಥರು ಬೆಂಗಳೂರು ಮತ್ತು ಮಾಗಡಿ ಪಾಳೆಯಪಟ್ಟುಗಳನ್ನು ಸ್ಥಾಪಿಸಿದರು, ಅಲ್ಲದೆ ಆವತಿ ಕುಲದ ಇತರ ಶಾಖೆಗಳವರು ಗುಡಿಬಂಡೆ, ಮದ್ದಗಿರಿ, ಮಿಡಿಗೇಶಿ, ಹೆಬ್ಬೂರು, ಕುಣಿಗಲು, ಗುಬ್ಬಿ, ಆನೇಕಲ್ಲು, ನಂದಿ, ಹೊಸಕೋಟೆ, ಮುಳಬಾಗಿಲು, ಸರ್ಜಾಪುರ ಮೊದಲಾದೆಡೆಗಳಲ್ಲೂ ನೆಲಸಿದರು. (ಎಚ್.ವಿ.ಎಸ್.)

**ಉಮ್ಮತ್ತೂರು ಪಾಳೆಯಗಾರರು:** 15ನೆಯ ಶತಮಾನದ ಅಂತ್ಯ ಮತ್ತು 16ನೆಯ ಶತಮಾನದ ಆದಿಭಾಗಗಳಲ್ಲಿ ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮತ್ತು ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಆಳುತ್ತಿದ್ದ ಪಾಳೆಯಗಾರರು. ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿನ ನಂಜನಗೂಡು–ಯಳಂದೂರು ರಸ್ತೆಯಲ್ಲಿ ಈಗ ಒಂದು ಚಿಕ್ಕ ಗ್ರಾಮವಾಗಿರುವ ಉಮ್ಮತ್ತೂರು ಇವರ ರಾಜಧಾನಿ. ಈ ವಂಶದ ಕೆಲವರು ಬೆಟ್ಟದ ಕೋಟೆ ಮತ್ತು ತೆರಕಣಾಂಬಿಯಲ್ಲಿ ಸಹ ಆಳುತ್ತಿದ್ದಂತೆ ತೋರುತ್ತದೆ.

ಮೂಲಾಧಾರಗಳು ಬಹು ವಿರಳವಾಗಿರುವುದರಿಂದ ಈ ವಂಶದ ಇತಿಹಾಸ ಅಸ್ಪಷ್ಟ. ಶಾಸನಗಳ ಪ್ರಕಾರ ಈ ವಂಶದ ಆದ್ಯ ಹನುಮಪ್ಪ ಒಡೆಯ. ಇವನ ಮಗ ಇಮ್ಮಡಿರಾಯ ಒಡೆಯ. ಇವನಿಗೆ ಸೋಮರಾಯ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವನ ಹಿರಿಯ ಮಗ ದೇವಣ್ಣ ಒಡೆಯ. ಈತ ಚೇರ, ಚೋಳ, ಪಾಂಡ್ಯ ಮೂವರುರಾಯರ ಗಂಡ, ನೀಲಗಿರಿ ಸಾಧಾರ ಒಡೆಯ, ನೀಲಗಿರಿ ನಾಡಾಳ್ವ ಇತ್ಯಾದಿ ಬಿರುದುಗಳನ್ನು ಧರಿಸಿ ಮೂಡಣ ಕೋಟೆಯಲ್ಲಿ (ಪ್ರಾಯಶಃ ಗುಂಡ್ಲುಪೇಟೆ ಬಳಿಯ ಗೋಪಾಲಸ್ವಾಮಿಬೆಟ್ಟ) ಆಳಿಕೆ ನಡೆಸುತ್ತಿದ್ದ (ಸು.1488–1504). ಇದೇ ಬಿರುದುಗಳಿರುವ ಗೋವಣ್ಣ ಒಡೆಯ (1504) ದೇವಣ್ಣನ ಮಗ. ದೇವಣ್ಣನ ಇನ್ನೊಬ್ಬ ಮಗ ಚಿಕ್ಕರಾಯ (ಮಲ್ಲರಾಜ) ಪೆನುಗೊಂಡೆ ಚಕ್ರೇಶ್ವರ ಎಂಬ ಬಿರುದಿನೊಡನೆ ತೆರಕಣಾಂಬಿಯಿಂದ ಆಳುತ್ತಿದ್ದ (ಸು.1505–12). ಇವನ ರಾಜ್ಯ ಕೊಯಮತ್ತೂರು ಜಿಲ್ಲೆಯ ಅವನಾಸಿ ತಾಲ್ಲೂಕಿನ ಭಾಗಗಳನ್ನೂ ಒಳಗೊಂಡಂತೆ ತೋರುತ್ತದೆ. ಇವನ ಚಿಕ್ಕಪ್ಪ, ಅಂದರೆ ದೇವಣ್ಣ ಒಡೆಯನ ತಮ್ಮ ನಂಜರಾಜ ಉಮ್ಮತ್ತೂರಿನಲ್ಲಿ ಆಳಿಕೆ ನಡೆಸಿದ (ಸು.1482–1504). ಇವನಿಗೆ ಫೇಣಾಂಕ ಚಕ್ರೇಶ್ವರ, ಪೆಸಾಳಿ ಹನುಮ ಇತ್ಯಾದಿ ಬಿರುದುಗಳಿದ್ದವು. ಇವನ ರಾಜ್ಯ ಮೈಸೂರು ಜಿಲ್ಲೆಯ ದಕ್ಷಿಣ ಭಾಗವಲ್ಲದೆ ಕೊಯಮತ್ತೂರು ಜಿಲ್ಲೆಯ ಭಾಗಗಳಿಗೂ ಹಬ್ಬಿತ್ತು. ವಿಜಯನಗರ ದ ಕೃಷ್ಣದೇವರಾಯ ಪಟ್ಟಕ್ಕೆ ಬಂದ ತರುಣದಲ್ಲಿ (1509–12) ಉಮ್ಮತ್ತೂರು ಪಾಳೆಯಗಾರನನ್ನು ನಿಗ್ರಹಿಸಿ ತನ್ನ ಪ್ರತಿನಿಧಿಯನ್ನು ಇಲ್ಲಿಯ ಆಡಳಿತಕ್ಕೆ ನೇಮಿಸಿದ. ಈತ ಸೋಲಿಸಿದ ರಾಜನ ಹೆಸರು ಗಂಗರಾಜ ಎಂದು ಸಾಹಿತ್ಯಿಕ ಮೂಲಗಳಲ್ಲಿ ದೊರೆತರೂ ಈತ ನಂಜರಾಜ ಇರಬಹುದೆಂದು ಊಹಿಸಲಾಗಿದೆ. ಆದರೆ ಈ ನಂಜರಾಜ ಉಮ್ಮತ್ತೂರನ್ನು ಕಳೆದುಕೊಂಡರೂ ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಸು.1519ರವರೆಗೂ ಉಳಿಸಿಕೊಂಡಿರಬಹು ದೆಂದು ಅಲ್ಲಿ ದೊರಕಿರುವ ಕೆಲವು ಶಾಸನಗಳಿಂದ ಊಹಿಸಬಹುದಾಗಿದೆ. *

ಉಮ್ಮತ್ತೂರಿನ ನಾಯಕರಿಗೂ ಕಳಲೆ ಒಡೆಯರಿಗೂ ಹಗೆತನವಿತ್ತು. ಒಮ್ಮೆ ಉಮ್ಮತ್ತೂರಿನ ನಾಯಕನೊಬ್ಬ ಕಳಲೆ ಮನೆತನದ ಎಲ್ಲರನ್ನೂ ವಂಚನೆಯಿಂದ ಕೊಲ್ಲಿಸಿದನೆಂದೂ ಆಗ ಒಬ್ಬ ಬಾಲಕ ಮಾತ್ರ ತಪ್ಪಿಸಿಕೊಂಡು ಅನಂತರ ತನ್ನ ಮನೆತನದ ಆಳಿಕೆಯನ್ನು ಪುನಃ ಸ್ಥಾಪಿಸಿದನೆಂದೂ ತಿಳಿದುಬರುತ್ತದೆ. 1612ರಲ್ಲಿ ವಿಜಯನಗರದ ವೆಂಕಟಪತಿರಾಯ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿ ಶ್ರೀರಂಗಪಟ್ಟಣ ಮತ್ತು ಉಮ್ಮತ್ತೂರುಗಳನ್ನು ರಾಜ ಒಡೆಯರಿಗೆ ನೀಡಿದುದಾಗಿ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ದೊರೆತಿರುವ ಶಾಸನವೊಂದರಿಂದ ತಿಳಿದುಬರುತ್ತದೆ. 1613ರಲ್ಲಿ ರಾಜ ಒಡೆಯ ಉಮ್ಮತ್ತೂರಿನ ಮೇಲೆ ದಂಡೆತ್ತಿ ಹೋಗಿ ಅಲ್ಲಿನ ಪಾಳೆಯಗಾರರನ್ನು ಸೋಲಿಸಿ ಅವನ ರಾಜ್ಯವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡ. ಈ ಅನಂತರ ಕಾಲದ ಉಮ್ಮತ್ತೂರಿನ ಪಾಳೆಯಗಾರರು ಯಾರು, ಇವರಿಗೂ ಮೊದಲಿನ ನಂಜರಾಜ ಇತ್ಯಾದಿ ಪಾಳೆಯಗಾರರಿಗೂ ಇದ್ದ ಸಂಬಂಧವೇನೆಂದು ತಿಳಿಯುವುದಿಲ್ಲ. (ಜಿ.ಆರ್.ಆರ್.)

**ಕನಕಗಿರಿಯ ಪಾಳೆಯಗಾರರು:** ವಿಜಯನಗರ ಅರಸರ ಅನೇಕ ಸಾಮಂತ ಮನೆತನಗಳಲ್ಲಿ ಒಂದು. ಇವರ ಇತಿಹಾಸ 15ನೆಯ ಶತಮಾನದ ಮಧ್ಯದಲ್ಲಿ ಆರಂಭವಾಗುತ್ತದೆ. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ 12 ಗ್ರಾಮಗಳನ್ನು ಉಂಬಳಿಯಾಗಿ ಪಡೆದ ಗುಜ್ಜಲ ವಂಶದ ಪರಸಪ್ಪನಾಯಕ ಇಲ್ಲಿನ ಕನಕಾಚಲ ಲಕ್ಷ್ಮೀನರಸಿಂಹ ದೇವರ ಗರ್ಭಾಲಯವನ್ನು ಕಟ್ಟಿಸಿ ಹೊಸ ಊರಿನ ಸ್ಥಾಪನೆಗೆ ಕಾರಣನಾದ. ಇವನ ವಂಶದ ನಾಯಕರು ಮುಂದೆ ಪ್ರಬಲರಾಗಿ 40 ಲಕ್ಷ ವರಹಗಳ ಆದಾಯದ ಪ್ರಾಂತವನ್ನು ಗಳಿಸಿ ಕೊಂಡು ವಿಜಯನಗರದ ಅರಸರ ಬಲಪಾರ್ಶ್ವದ ಮರ್ಯಾದೆಗಳನ್ನು ಹೊಂದಿದ ಪಾಳೆಯಗಾರರಾಗಿದ್ದರು. ಕೃಷ್ಣದೇವರಾಯನ ಆಮುಕ್ತಮಾಲ್ಯದ ಗ್ರಂಥದಲ್ಲಿ ಕನಕಗಿರಿಯ ಪ್ರಸ್ತಾಪವಿದೆ. ವಿಜಯನಗರ ನಾಶವಾದ ಅನಂತರ ಈ ನಾಯಕರಲ್ಲಿ ಕೆಲವರು ಬಿಜಾಪುರದ ಪರವಾಗಿಯೂ ಹೋರಾಡಿದಂತೆ ದಾಖಲೆಗಳಿವೆ. ವಿಜಯನಗರದ ಅರಸರಾದ ಸಾಳುವ ನರಸಿಂಹ, ಕೃಷ್ಣದೇವರಾಯ, ಅಚ್ಯುತರಾಯ ಇವರೆಲ್ಲ ಕನಕಗಿರಿಯ ದೇವಸ್ಥಾನಕ್ಕೆ ಗ್ರಾಮ ಗಳನ್ನು ದತ್ತಿ ಕೊಟ್ಟಿದ್ದಕ್ಕೆ ಕನಕಾಚಲ ದೇವಸ್ಥಾನದಲ್ಲಿ ಶಿಲಾಶಾಸನಗಳಿವೆ.

ಪರಸಪ್ಪನಾಯಕನ ಮಗ ನವಾಬ ಉಡಿಚಿನಾಯಕ ಪ್ರಭಾವಶಾಲಿ ದೊರೆಯಾಗಿದ್ದ. ಏಳು ಗ್ರಾಮಗಳನ್ನು ಸೇರಿಸಿ ಕನಕಗಿರಿಯನ್ನು ಈತ ವಿಸ್ತರಿಸಿದ. ಗಂಗಾವತಿ ಹತ್ತಿರವಿರುವ ಎಮ್ಮಿಗುಡ್ಡದಲ್ಲಿ ಈತ ಕೋಟೆ ಕಟ್ಟಿಸಿದ. ಕನಕಗಿರಿಯಲ್ಲೇ ಮುನ್ನೂರಕ್ಕಿಂತ ಹೆಚ್ಚು ದೇವಾಲಯಗಳನ್ನು ಕಟ್ಟಿಸಿದನಂತೆ. ಇಲ್ಲಿನ ಮುಖ್ಯ ದೇವಾಲಯದ ಪ್ರಾಕಾರ, ಗೋಪುರ ಗಳನ್ನೆಲ್ಲ ಈತನೇ ಕಟ್ಟಿಸಿದ. ಈ ದೇವಾಲಯದಲ್ಲಿರುವ ಮಧ್ಯರಂಗ ಶಿಲ್ಪಕಲೆಯ ಒಂದು ಅದ್ಭುತ. ಇದು 54 ಮೀ ಉದ್ದ ಹಾಗೂ 10.80 ಮೀ ಅಗಲವಿರುವ ಒಂದು ನಾಟ್ಯ ಶಾಲೆ. ಮಧ್ಯ ಯಾವ ಆಧಾರವೂ ಇಲ್ಲದೆ ಪಕ್ಕದ ಸಿಂಹಸ್ತಂಭಗಳ ಮೇಲೆ ನಿಂತಿದೆ. ನವಾಬ ಉಡಿಚಿನಾಯಕನ ಮಗ ಕೆಲವಡಿ ಉಡಿಚಿನಾಯಕ ಹಾಗೂ ಅವನ ರಾಣಿಯರು ದೇವಸ್ಥಾನ ಗಳಲ್ಲೆಲ್ಲ ಸುಂದರವಾದ ಪೌರಾಣಿಕ ಪ್ರತಿಮೆಗಳನ್ನು ಮಾಡಿಸಿದರು. ಅನಂತರ ಬಂದ ಕನಕಯ್ಯ ಉಡಿಚಿನಾಯಕ ಊರಿನ ಎರಡು ಬದಿಯಲ್ಲಿ ವಿಶಾಲವಾದ ಪುಷ್ಕರಣಿಗಳನ್ನೂ ಅವನ ತಮ್ಮನಾದ ವೆಂಕಟಪ್ಪನಾಯಕ ಜಲಕ್ರೀಡಾ ಮಹಲನ್ನೂ (ವೆಂಕಟಪತಿ ಬಾವಿ) ಕಟ್ಟಿಸಿದ. ಹಂಪೆಯ ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಗೋಪುರ ಕನಕಗಿರಿಯ ನಾಯಕರು ಕಟ್ಟಿಸಿದ್ದು.

ಅನಂತರ ಬಂದ ಹೀರೆ ರಂಗಪ್ಪನಾಯಕ ಕವಿಗಳಿಗೂ ಪಂಡಿತರಿಗೂ ಆಶ್ರಯವಿತ್ತಿದ್ದ. ಕನ್ನಡದಲ್ಲಿ ಭಟ್ಟಂಗಿ ದಂಡಕಗಳನ್ನು ರಚಿಸಿರುವ ಹಾಗೂ ಘಳಿಗೆಯಲ್ಲಿ ನೂರು ಶ್ಲೋಕ ರಚಿಸಬಲ್ಲನೆಂಬ ಖ್ಯಾತಿಯಿದ್ದ ಜಯವೆಂಕಟಾಚಾರ್ಯ, ಶ್ರೀಕೃಷ್ಣಪಾರಿಜಾತ ನಾಟಕ ರಚಿಸಿದ ಅಪರಾಳ ತಮ್ಮಣ್ಣ, ಚಿದಾನಂದ ಅವಧೂತ ಇವರು ಈ ಪಾಳೆಗಾರನ ಆಶ್ರಯದಲ್ಲಿದ್ದವರು.

ಕೊನೆಯ ಪಾಳೆಯಗಾರ ಹಿರೇನಾಯಕನ ಕಾಲದಲ್ಲಿ ಕನಕಗಿರಿ ರಾಜ್ಯ ಹರಿಹರ, ದಾವಣಗೆರೆಯವರೆಗೆ ಬೆಳೆದಿತ್ತು. ಆದರೆ ಸುತ್ತಲಿನ ಶತ್ರುಗಳ ಬಗ್ಗೆ ಇವನಿಗೆ ಎಚ್ಚರವಿರಲಿಲ್ಲ. ಹೈದರಾಬಾದಿನ ನಿಜಾಮ ಕನಕಗಿರಿಯ ನಾಯಕನ ಬಂಧುವೇ ಆದ ಸುರಪುರದ ಪಾಮ ನಾಯಕನ ಮೂಲಕ ಕನಕಗಿರಿಯ ಮೇಲೆ ಧಾಳಿ ಮಾಡಿಸಿ ನಾಯಕನನ್ನು ಸೆರೆಹಿಡಿದು ಹೈದರಾಬಾದಿನಲ್ಲಿ ಕೊಲ್ಲಿಸಿದ. ನಾಯಕನ ಮನೆತನಕ್ಕೆ 16 ಹಳ್ಳಿಗಳನ್ನು ಮಾತ್ರ ಕೊಡಲಾಯಿತು. ಸುರಪುರದ ಪಾಮನಾಯಕನಿಗೆ ಕನಕಗಿರಿಯ ದಮನ ಮಾಡಿದುದಕ್ಕಾಗಿ ರುಸೂಮು, ಜಾಗೀರುಗಳು ಸಿಕ್ಕವು. ಆದರೆ ಅನತಿ ಕಾಲದಲ್ಲೇ ಸುರಪುರದ ಗತಿಯೂ ಕನಕಗಿರಿಯಂತೆಯೇ ಆಯಿತು. ಕನಕಗಿರಿಯ ಮೇಲೆ ಟಿಪ್ಪುವಿನ ಧಾಳಿಯೂ ಒಮ್ಮೆ ಆದಂತೆ, ಅಲ್ಲದೆ ಈ ನಾಯಕರು ಮರಾಠರನ್ನೂ ಎದುರಿಸಿದಂತೆ ದಾಖಲೆಗಳಿವೆ. (ಜಿ.ಆರ್.ಪಿ)

**ಗುಂತಗೋಳ ಪಾಳೆಯಗಾರರು:** 1491–1948. ಮೂಲತಃ ಕಂಚಿಯಿಂದ ಬಂದ ಇವರು ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ (1489–1686) ಒಂದು ಸಂಸ್ಥಾನವನ್ನು ಸ್ಥಾಪಿಸಿ ಬ್ರಿಟಿಷ್ ಮತ್ತು ಹೈದರಾಬಾದ್ ನಿಜಾಮ ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಳಿಕೆ ನಡೆಸಿದ್ದರು. ಗುಂತಗೋಳ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಿಂದ 30 ಕಿಮೀ ದೂರದಲ್ಲಿದೆ.

ಇವರ ಮೊದಲ ರಾಜಧಾನಿ ಜಲದುರ್ಗ. ಅನಂತರ ಗುಂತಗೋಳಕ್ಕೆ ಬಂದು ನೆಲೆಸಿದರು. ಈ ಸ್ಥಳೀಯ ಪ್ರಭುಗಳ ಮೂಲಪುರುಷ ಕಾಳಭೈರವನಾಯಕ. ಇವನ ಅನಂತರ ಅಮರಪ್ಪನಾಯಕ, ಬಸಪ್ಪನಾಯಕ, ಶ್ರೀನಿವಾಸನಾಯಕ, ರಾಯಪ್ಪನಾಯಕ, ನರಸಿಂಹ ನಾಯಕ ಆಳಿಕೆ ಮಾಡಿದರು. ಇವರಿಗೆ ಬಹರಿಬಹಾದ್ದೂರ್, ನಾಯಕಾಚಾರ್ಯ, ಮಹಾನಾಯಕ ಎಂಬ ಬಿರುದುಗಳನ್ನು ಆದಿಲ್‌ಶಾಹಿಗಳು ನೀಡಿದ್ದರು. ಇವರ ಆಡಳಿತಕ್ಕೆ ಸು. 130 ಹಳ್ಳಿಗಳು ಸೇರಿದ್ದವು. ಪಾಟೀಲ, ಕುಲಕರ್ಣಿ, ನಾಡಗೌಡ, ದೇಸಾಯಿ ಎಂಬ ಅಧಿಕಾರಿಗಳು ಸ್ಥಳೀಯ ಆಡಳಿತವನ್ನು ನಿರ್ವಹಿಸುತ್ತಿದ್ದರು. ಇವರಲ್ಲಿ ಕಾಲಾಪುರದ ನಾಡಗೌಡರು, ನೀರಲಕೇರಿಯ ನಾಡಗೌಡರು, ಬೆಲ್ಲದ ಮರಡಿಯ ದೇಸಾಯಿಗಳು ಪ್ರಮುಖರಾಗಿದ್ದರು.

ಇವರ ಕುಲದೇವರು ಕಂಚಿಯ ಏಕಾಮ್ರೇಶ್ವರ. ಆರಾಧ್ಯದೈವ ಗೋನಾವಾಟ್ಲದ ವೇಣುಗೋಪಾಲ. ಇವರ ರಾಜಗುರುಗಳು ದೇವರಭೂಪೂರದ ಜಗದಂಡ ಮಹಾಸ್ವಾಮಿಗಳು. ಚಿತ್ತರಗಿ ಇಳಕಲ್ಲು ಮಹಾಂತಸ್ವಾಮಿಗಳ ಮಠ, ಶ್ರೀ ಹಿರೇಮಠ, ಶ್ರೀಕಿದ್‌ಮತಿಮಠಗಳಿಗೆ ಭಕ್ತರಾಗಿದ್ದರು. ರಾಜಾ ರಾಯಪ್ಪನಾಯಕ ಆಧ್ಯಾತ್ಮಿಕ ಪುರುಷನೂ ನರಸಿಂಹನಾಯಕ ಕಲಾಪ್ರೇಮಿಯೂ ಅಮರೇಶ್ವರ ಕಲಾ ಸಂಘವನ್ನು ಹುಟ್ಟು ಹಾಕಿದ. ಇವನ ಆಸ್ಥಾನದಲ್ಲಿ ಬಸಣ್ಣ ಜಾವೂರ ಎಂಬ ಪ್ರಸಿದ್ಧ ರಂಗ ಕಲಾವಿದನಿದ್ದ. ಅಮರೇಶ್ವರ, ಗೋನವಾಟ್ಲದ ಗೋಪಾಲಸ್ವಾಮಿ, ಮಾಳಗುಂಡಮ್ಮ, ವೀರಯೋಧ, ಕಾಳಭೈರವ, ಶರಣ ಗಂಗಪ್ಪಯ್ಯ ಮೊದಲಾದ ದೇವಾಲಯಗಳನ್ನು, ಅಮರೇಶ್ವರ ಬಾವಿ, ದರ್ಬಾರ ಬಾವಿ, ರಾಜರ ಕೆರೆ, ಗಿರಿಸೀಮೆ ಕೆರೆಗಳನ್ನು ನಿರ್ಮಿಸಿದ. ಇವನ ಸುಸಜ್ಜಿತವಾದ ಅರಮನೆಯನ್ನು ಗುಂತಗೋಳದಲ್ಲಿ ಇಂದಿಗೂ ಕಾಣಬಹುದು. ಈ ಪ್ರಭುಗಳು ಕೋಟೆಯನ್ನು ನಿರ್ಮಿಸಿದ್ದರು. ಕೋಟೆಯ ಕಾವಲುಗಾರನ ಹೆಂಡತಿ ಮಾಳಗುಂಡಮ್ಮಳೆಂಬ ಮಹಿಳೆ ಸಂಸ್ಥಾನದ ರಕ್ಷಣೆಗಾಗಿ ಹೋರಾಡಿ ಮಡಿದ ಕತೆ ಜನಪದ ಸಾಹಿತ್ಯದಲ್ಲಿ ಜನಜನಿತವಾಗಿದೆ. ಈ ವಂಶಸ್ಥರು ಗುಡಗುಂಟಿ, ಗುಂತಗೋಳದಲ್ಲಿ ಇಂದಿಗೂ ನೆಲೆಸಿದ್ದಾರೆ.

**ಗುಡಗುಂಟಿ ಪಾಳೆಯಗಾರರು:** ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಲಿಂಗಸುಗೂರಿಗೆ 19ಕಿಮೀ ದೂರದಲ್ಲಿರುವ (ಸು.3 ಶತಮಾನಗಳ ಕಾಲ ಆಳಿದ) ಗುಡಗುಂಟಿಯ ಒಂದು ಸ್ಥಳೀಯ ಅರಸು ಮನೆತನ. ಇವರು ಗೋಸಲ ವಂಶದವರು. ಜಕ್ಕಪ್ಪದೇಸಾಯಿ ಹಿರಿಯ ಮಗ. ಗಡ್ಡಿಲಿಂಗನಾಯಕ ಈ ಮನೆತನದ ಸ್ಥಾಪಕ. ಈ ಸಂದರ್ಭದಲ್ಲಿ ಕಕ್ಕೇರಿ ಪ್ರದೇಶ ಬಿಜಾಪುರದ ಆದಿಲ್‌ಶಾಹಿಗಳ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟಿದ್ದರಿಂದ ಗಡ್ಡಿಲಿಂಗನಾಯಕ ಗುಡಗುಂಟಿ ಪರಗಣದ ಸರದೇಸಾಯಿಯಾಗಿ ಬಡ್ತಿ ಹೊಂದಿ ಆಳಿಕೆ ಪ್ರಾರಂಭಿಸಿದ. ಇವನು ಬಿಜಾಪುರದ ಆದಿಲ್‌ಶಾಹಿಗಳ ಜೊತೆ ಹೋದಾಗ ಷೇಖ್‌ಮಿನಹಾಜ ಸರದಾರನಿಂದ ಕೊಲ್ಲಲ್ಪಟ್ಟ. ಅನಂತರ ಪಾಮನಾಯಕ, ಲಿಂಗನಾಯಕ, ಜಡಿಸೋಮಪ್ಪ ನಾಯಕ ಅನುಕ್ರಮವಾಗಿ ಆಡಳಿತ ನಡೆಸಿದರು. ಜಡಿಸೋಮಪ್ಪನಾಯಕ ಬಿಜಾಪುರದಲ್ಲಿ ತನ್ನ ಶೌರ್ಯ ಸಾಹಸಗಳನ್ನು ಪ್ರದರ್ಶಿಸಿದ್ದಕ್ಕಾಗಿ ಸರ್ಜಾಬಹದ್ದೂರ್ ಎಂಬ ಬಿರುದು ಪಡೆದ. ಈತನಿಗೆ 1669ರಲ್ಲಿ 2ನೆಯ ಅಲಿ ಆದಿಲ್‌ಷಾನಿಂದ ಒಂದು ಫಾರಸಿ ಸನ್ನದು ದೊರಕಿತ್ತು. ಅನಂತರ 2ನೆಯ ಲಿಂಗನಾಯಕ, ಸೋಮಪ್ಪನಾಯಕ, ಸೋಮಲಿಂಗನಾಯಕ, ರಾಣಿ ಕಾಟಮ್ಮ ಆಳಿಕೆ ಮಾಡಿದರು. ಕೊನೆಯ ಅರಸ ಜಡಿಸೋಮಪ್ಪನಾಯಕ (1901–48). ಇವನಿಗೆ ತಿಪ್ಪರಾಜಾ ಸರ್ಜಾಬಹದ್ದೂರ್ ಎಂಬ ಬಿರುದಿತ್ತು.

ಆಡಳಿತದ ಅನುಕೂಲಕ್ಕಾಗಿ ಮೌಲ್, ಫೌಜದಾರಿ, ದಿವಾನಿ, ಪೊಲೀಸ್ ಎಂಬ ನಾಲ್ಕು ವಿಭಾಗಗಳಿದ್ದವು. ಪ್ರಜೆಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದ ಇವರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಇವರು ಎಲ್ಲಾ ಧರ್ಮದವರನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದರು. ಕಕ್ಕೇರಿಯ ಸೋಮನಾಥ ಇವರ ಕುಲದೈವ. ಗುಡಗುಂಟಿಯ ಅಮರೇಶ್ವರ ಆರಾಧ್ಯ ದೈವ. ಪ್ರತಿವರ್ಷ ನಡೆಯುವ ಅಮರೇಶ್ವರನ ರಥೋತ್ಸವದಲ್ಲಿ ಈ ಮನೆತನದ ಪ್ರಭುಗಳು ಫಲಪುಷ್ಪಗಳನ್ನು ಅರ್ಪಿಸಿದ ಬಳಿಕವೇ ರಥ ಸಾಗುತ್ತಿತ್ತು. ಇದು ಇಂದಿಗೂ ಮುಂದುವರೆದಿದೆ. ಇವರು ಕಲೆ, ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಅನೇಕ ದೇವಾಲಯ, ಮಸೀದಿ, ಕೋಟೆ, ಕೆರೆ, ಬಾವಿಗಳನ್ನು ನಿರ್ಮಿಸಿದ್ದಾರೆ. ಇವರು ನಿರ್ಮಿಸಿದ ಅರಮನೆ ಇಂದಿಗೂ ಸುಸಜ್ಜಿತವಾಗಿದೆ. ಇಲ್ಲಿಯ ರಂಗಮಹಲ್ ಮತ್ತು ದರ್ಬಾರ್ ಹಾಲ್‌ಗಳು ಸೊಗಸಾಗಿವೆ. (ಎ.ವೈ.)

**ಗುಮ್ಮನಾಯಕನ ಪಾಳೆಯಗಾರರು:** ವಿಜಯನಗರ ಸ್ಥಾಪನೆಗೆ ನೂರು ವರ್ಷದ ಮೊದಲೇ ಆರಂಭವಾದ ಪಾಳೆಯಪಟ್ಟು. ಇಂದಿನ ಬಾಗೇಪಲ್ಲಿ ತಾಲ್ಲೂಕು ಹಾಗೂ ಆಂಧ್ರಕ್ಕೆ ಸೇರಿರುವ ಕೊಡಿಕೊಂಡ, ಗೋರಂಟ್ಲ, ಕಂದಕೂರು ಇತ್ಯಾದಿ ಪ್ರದೇಶಗಳೆಲ್ಲ ಕೂಡಿ ಗುಮ್ಮನಾಯಕನ ಪಾಳೆಯಪಟ್ಟು ಆಗಿತ್ತು. ಇದರ ವಿಸ್ತಾರ ಕೋಲಾರದ ಪೂರ್ವಭಾಗದಿಂದ ಹಿಡಿದು ಬಾಗೇಪಲ್ಲಿಯ ಉತ್ತರಭಾಗದಲ್ಲಿ ಸಾಕಷ್ಟು ಪ್ರದೇಶದವರೆಗೆ ಹರಡಿಕೊಂಡಿದ್ದುದರ ಸೂಚನೆ ಇದೆ.

1242ರಲ್ಲಿ ನಾರಸಿಂಹನಾಯಕ ತನ್ನ ತಮ್ಮ ಖಾದ್ರಿಪತಿನಾಯಕನೊಡನೆ ಕೋಲಾರ ತಾಲ್ಲೂಕಿನ ಪಾತಪಾಳಯ ಗ್ರಾಮಕ್ಕೆ ಬಂದು, ಅಲ್ಲಿದ್ದ ಗುಮ್ಮರೆಡ್ಡಿ, ಲಕ್ಕರೆಡ್ಡಿ ಎಂಬ ಧನಿಕರಿಂದ ನಿಧಿ ನೆರವನ್ನು ಪಡೆದು ಪಾಳೆಯಪಟ್ಟು ಸ್ಥಾಪಿಸಿದ. ಚಿನ್ನಮನಾಯಕ ಈ ವಂಶದ ಮೂರನೆಯ ದೊರೆ. ಸಮ್ಮನಾಯಕನ ಹಾಳ್ಯ ಇವನ ರಾಜಧಾನಿ. ಇದೇ ಕಲ್ಯಾಣನಗರ. ಈತ ಪಾಳೆಯಪಟ್ಟಿನ ಎಲ್ಲ ಲಕ್ಷಣಗಳನ್ನು ಇದರಲ್ಲಿ ಅಳವಡಿಸಿದ. ಬೆಟ್ಟದ ಮೇಲೆ ಕೋಟೆ ಕಟ್ಟಿಸಿ ಅಲ್ಲಿದ್ದ ದೋಣೆಯ ಬಳಿ ಅಕ್ಕಗಾರು ದೇವತೆಗೆ ಗುಡಿ ನಿರ್ಮಿಸಿದ. ದೋಣೆಗೆ ಕರ್ವಿಕಲ ದೋಣೆ ಎಂಬ ಹೆಸರಿಟ್ಟ. ಇವನಿಗೆ ವಿರೋಧಿಯಾಗಿ ಜನಪೀಡಕನಾಗಿದ್ದ ನೆರೆಯ ಉತ್ತರದ ಗುಟ್ಟಪಾಳೆಯದ ಪಾಳೆಯಗಾರ ಯರಮಾಚಿ ಪೆಮ್ಮನಾಯಕನನ್ನು ಸೋಲಿಸಿ ಓಡಿಸಿ ಅವನ ಗುಟ್ಟಪಾಳ್ಯ ಮುದ್ದೇಪಲ್ಲಿಯನ್ನೂ ತನ್ನ ಪಾಳೆಯ ಪಟ್ಟಿಗೆ ಸೇರಿಸಿದ. ಗುಮ್ಮನಾಯಕನ ಪಾಳ್ಯದ ಬಳಿ ತಾಯಿಯ ಹೆಸರಿನಲ್ಲಿ ದೊಡ್ಡಮ್ಮನ ಕೆರೆ ಕಟ್ಟಿಸಿದ. ರೈತರನ್ನಿಟ್ಟು ಅದರ ಅಚ್ಚುಕಟ್ಟು ಪ್ರದೇಶದಲ್ಲಿ ಸಾಗುವಳಿ ಮಾಡಿಸಿದ. ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು, 10ನೆಯ ಶತಮಾನದ ತಮಿಳು ಶಾಸನದಲ್ಲಿ ಆರ್ಕಾಟ್ ಜಿಲ್ಲೆಯ ಚೋಳ ಸಾಮಂತ ಮಂಚಾನನ ದಾಯಾದಿ ಖಾದ್ರಿಪತಿನಾಯಕ. ವೈದುಂಬ ದಿಲೀಪನ ಸಾಮಂತ. ಇವನೇ ಮೂಲ ಪುರುಷ ಎಂದಿದೆ. ಇನ್ನೊಂದು ಹಯವದನರಾಯರ ರೀತ್ಯಾ ಪಾಳೆಯಪಟ್ಟಿನಲ್ಲಿ ಗುಮ್ಮನಾಯ್ಕನೆಂಬ ಬೇಡ ಮುಖಂಡನಿದ್ದು ಪಾತಪಾಳ್ಯದ ನಾಯಕರನ್ನು ಸೋಲಿಸಿ ಪಾಳ್ಯವನ್ನು ವಶಪಡಿಸಿಕೊಂಡು ಸೋದರರೊಡಗೂಡಿ ರಾಜ್ಯ ವಿಸ್ತರಿಸಿದ.

ದೊಡ್ಡಕದರಪ್ಪನಾಯಕ ಸಾಗುವಳಿಯ ಸುಧಾರಣೆ ಮಾಡುವಲ್ಲಿ ಗ್ರಾಮಲೆಕ್ಕಿಗರನ್ನು ನೇಮಿಸಿ ಕಂದಾಯವನ್ನು ಶಿಸ್ತುಗೊಳಿಸಿದ. ಆಡಳಿತದ ಅನುಕೂಲಕ್ಕಾಗಿ ಅಟ್ಟವಣೆ ಚಾವಡಿ, ಬೊಕ್ಕಸದ ಚಾವಡಿ, ನಾಣ್ಯದ ಚಾವಡಿ, ಗೋವಿನ ಚಾವಡಿ, ಸುಂಕದ ಚಾವಡಿಗಳನ್ನು ನಿರ್ಮಿಸಿದ. ಟಂಕಸಾಲೆಯನ್ನು ಆರಂಭಿಸಿ ಗುಮ್ಮನಾಯಕನ ಪಾಳ್ಯದಿಂದ ನಂದಿ–ತ್ರಿಶೂಲ ಸಂಕೇತವಿರುವ ನಾಣ್ಯಗಳನ್ನು ಚಲಾವಣೆಗೆ ತಂದ. ಇವನ ಅನಂತರ 2ನೆಯ ನಾರಸಿಂಹ ನಾಯಕ (1473–82) ಆಳಿದ. 2ನೆಯ ಕದರಪ್ಪನಾಯಕ ಪಟ್ಟಕ್ಕೆ ಬಂದದಿ ಇಡಗೂರು ಚೆನ್ನಗಾನಪಲ್ಲಿ ಸಂಸ್ಥಾನದ ರಂಗರಾಜ ಪಾಳೆಯಗಾರ ಪೊಗದಿಕೊಡದೆ ಗರ್ವತೋರಲು, ವಿಜಯನಗರದರಸನ ಆಣತಿಯಂತೆ ಅವನ ಮೇಲೇರಿ ಹೋಗಿ ಮಣಿಸಿದ. ನವರಾತ್ರಿಯ ಸಂದರ್ಭದಲ್ಲಿ ಒಡ್ಡೋಲಗವನ್ನು ವಿಜೃಂಭಣೆಯಿಂದ ನಡೆಸುತ್ತಿದ್ದ.

1548–84ರ ವರೆಗೆ ಆಳಿದ ವೀರದಾಸಪ್ಪನಾಯಕ (1548–84) ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ವಿಜಯನಗರದ ಪರವಾಗಿ ಹೋರಾಡಿದ. ಆಗ ವಿಜಯನಗರ ಪತನವಾದರೂ ಪಾಳೆಯಪಟ್ಟಿನವರೆಲ್ಲ ತಮ್ಮ ಸೀಮೆಯನ್ನು ಸ್ವತಂತ್ರವಾಗಿ ಉಳಿಸಿಕೊಂಡರು. ಇವನ ಮುಂದಿನ ದೊರೆ 3ನೆಯ ವಸಂತನಾಯಕ. ಮೊಗಲ್ ಚಕ್ರವರ್ತಿಗಳ ಪರವಾಗಿ ದಿಲಾವರ್ ಖಾನ್ ಎಂಬುವವನು ಸೀರ್ಯದಲ್ಲಿದ್ದು ದೇಶೀಯ ರಾಜ್ಯಗಳಿಗೆ ಉಪಟಳ ನೀಡುತ್ತಿದ್ದ. ಆಗ ವಿಜಯನಗರದ ಶ್ರೀರಂಗರಾಯರ ಕೋರಿಕೆಯ ಮೇರೆಗೆ ರಂಗರಾಜನ ಸೇನೆಯೊಡನೆ ಹೋಗಿ ದಿಲಾವರ್‌ನನ್ನು ಎದುರಿಸಿ ಸೆರೆ ಹಿಡಿದು ಶ್ರೀರಂಗರಾಯನಿಗೆ ಒಪ್ಪಿಸಿದ. 4ನೆಯ ನರಸಿಂಹನಾಯಕ ಪಾಳೆಯದ ಬೆಟ್ಟದ ಬುಡದಲ್ಲಿದ್ದ ಅರಮನೆಯನ್ನು ಹೊಸದಾಗಿ ಕಟ್ಟಿಸಿ, ರಾಣಿವಾಸದ ಕೋಟೆಯನ್ನು ನಿರ್ಮಿಸಿದ.

ಅನಂತರ ಬಂಗಾರ ತಿಮ್ಮನಾಯಕ (1680–1728), 3ನೆಯ ಕದರಪ್ಪನಾಯಕ (1728–40). ಮರಾಠರ 1ನೆಯ ಪೇಶ್ವೆ ಬಾಜಿರಾಯ ಪ್ರಬಲನಾಗಿ ಗುಮ್ಮನಾಯಕ ಪಾಳಯದ ಹುಟ್ಟುವಳಿ ಗಮನಿಸಿ ನಿಗದಿ ಮಾಡಿದ ಪೊಗದಿಯನ್ನು ಕೊಟ್ಟ; 5ನೆಯ ನಾರಸಿಂಹನಾಯಕನ ಕಾಲದಲ್ಲಿ (1740) ಮರಾಠರಿಂದ 24 ಸಾವಿರ ರೂಪಾಯಿಗಳಿಗೆ ಒಪ್ಪಿಗೆ ಪಡೆದುಕೊಂಡು ಗೋರಂಟ್ಲ ಪ್ರದೇಶದಲ್ಲಿ ಕೋಟೆ, ಜಲಾಶಯ ನಿರ್ಮಿಸಿ ಸಾಗುವಳಿಗೆ ಅನುಕೂಲ ಮಾಡಲಾಯಿತು. ಹೈದರ್ ಅಲಿ 1760ರಲ್ಲಿ ಗುಮ್ಮನಾಯಕ ಪಾಳೆಯದ ಮೇಲೆ ಆಕ್ರಮಣಮಾಡಿ. ಪೊಗದಿಯನ್ನು ಪಡೆಯಲಾರಂಭಿಸಿದ (1760–65). 4ನೆಯ ವಸಂತನಾಯಕನ ಕಾಲದಲ್ಲೂ ಇದು ನಡೆದು ಬಂತು. 6ನೆಯ ನಾರಸಿಂಹನಾಯಕನ ಕಾಲದಲ್ಲಿ (1765–1803) ಟಿಪ್ಪುವಿನ ಅಧಿಕಾರಿ ಮೀರ್‌ಸಾದಿಕನಿಗೆ ಪಾಳೆಯಪಟ್ಟು ವಶವಾಗಿ ರಾಜಧಾನಿ ಪತನವಾಯಿತು. ರಾಮಕ್ಕ ತೀರಿಕೊಂಡಳು. ಆದರೂ ನಾಯಕನು ಇಂಗ್ಲಿಷರಿಗೆ ನೆರವಾಗಿ ಟಿಪ್ಪು ಪತನದಲ್ಲಿ ಭಾಗಿಯಾದರೂ ಇವನ ನೆರವಿಗೆ ಬರದೆ ಕೈಬಿಟ್ಟರು. ಪೂರ್ಣಯ್ಯನೂ ಕೋಟೆಯನ್ನು ಬಿಟ್ಟುಕೊಡಲಿಲ್ಲ. ಆ ಕೊರಗಿನಲ್ಲಿ ನಾಯಕ ನಿಧನವಾದ. ವಿಜಯನಗರ ಕಾಲದಲ್ಲಿ ಒಂದನೆಯ ವರ್ಗದ ಅಮರನಾಯಕ ಪಾಳೆಯಪಟ್ಟು ಆಗಿ ಮೈಸೂರು ಯುದ್ಧದ ಅನಂತರ ತನ್ನ ಆಡಳಿತದ ಇತಿಶ್ರೀಯನ್ನು ಕಂಡಿತು. (ಎಸ್.ಆರ್.)

**ಚನ್ನಪಟ್ಟಣದ ಪಾಳೆಯಗಾರರು:** 16–17ನೆಯ ಶತಮಾನಗಳಲ್ಲಿ ಪೆನುಗೊಂಡೆಯ ವಿಜಯನಗರದ ಸಂತತಿಯವರ ಸಾಮಂತರಾಗಿ ಚೆನ್ನಪಟ್ಟಣದಿಂದ ಆಳಿದ ಪಾಳೆಯಗಾರರು. ಮೂಲತಃ ಇವರು ಬಾರಾಮಹಲ್ ಪ್ರದೇಶಕ್ಕೆ ಸೇರಿದವರು. ತೆಲುಗು ಬಣಜಿಗ ಕುಲದವರು. ಈ ವಂಶದ ಮೂಲಪುರುಷ ರಾಣೋಜಿರಾಯ. ಆದರೆ ಈ ವಂಶದ ಯಶಸ್ಸು ಹಾಗೂ ಪ್ರಭಾವವನ್ನು ಹೆಚ್ಚಿಸಲು ಕಾರಣನಾದವನು 1ನೆಯ ಜಗದೇವರಾಯ.

1ನೆಯ ಜಗದೇವರಾಯ ಪೆನುಗೊಂಡೆಯಲ್ಲಿ ಆಳುತ್ತಿದ್ದ ಅರವೀಡು ಮನೆತನದ ತಿಮ್ಮರಾಜನ ಮಾವ. 1577ರಲ್ಲಿ ಬಿಜಾಪುರ ಮತ್ತು ಅಹಮದ್‌ನಗರದ ಸುಲ್ತಾನರು ಪೆನುಗೊಂಡೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರಲು ತಿಮ್ಮರಾಜ ತನ್ನ ರಾಜಧಾನಿಯನ್ನು ಚಂದ್ರಗಿರಿಗೆ ವರ್ಗಾಯಿಸಿದ್ದ. ಇದರಿಂದಾಗಿ ಆಕ್ರಮಣವನ್ನು ಎದುರಿಸುವ ಜವಾಬ್ದಾರಿ ಜಗದೇವರಾಯನ ಪಾಲಿಗೆ ಬಂತು. ಹುಟ್ಟು ಸಾಹಸಿಯೂ ವೀರ ಯೋಧನೂ ಆದ ಜಗದೇವರಾಯ, ಬಿಜಾಪುರದ ಸೇನೆಯನ್ನು ಹಿಮ್ಮೆಟ್ಟಿಸಿ ಪೆನುಗೊಂಡೆಯನ್ನು ವಿಪತ್ತಿನಿಂದ ಪಾರುಮಾಡಿದ. ಇದರಿಂದ ಸಂತೋಷಗೊಂಡ ತಿಮ್ಮರಾಜ ಒಂಬತ್ತು ಲಕ್ಷ ಪಗೋಡಗಳ ವರಮಾನವುಳ್ಳ ದೊಡ್ಡ ಜಿಲ್ಲೆಯೊಂದನ್ನು ಜಗದೇವರಾಯನಿಗೆ ಕೊಟ್ಟ. ಈ ಪ್ರದೇಶ ಬಾರಾಮಹಲಿನಿಂದ ಪಶ್ಚಿಮಘಟ್ಟಗಳವರೆಗೆ ವ್ಯಾಪಿಸಿದ್ದು ಮುಳಬಾಗಿಲು, ಪಿರಿಯಾಪಟ್ಟಣ, ಕಾನಕಾನಹಳ್ಳಿ ಮತ್ತು ಬೂದಿಹಾಳು– ಇವು ಸೇರಿದ್ದುವು. ಹೊಸದಾಗಿ ಪಡೆದ ಈ ದೊಡ್ಡ ರಾಜ್ಯದ ವ್ಯವಸ್ಥೆಗೆ ಅನುಕೂಲವಾಗಲು ಈ ಪ್ರದೇಶದ ಕೇಂದ್ರದಲ್ಲಿದ್ದ ಚನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಕೋಟೆಯನ್ನು ಕಟ್ಟಿಸಿದ. ಅಂದಿನಿಂದ ಈ ಮನೆತನದ ಪಾಳೆಯಗಾರರಿಗೆ ಚನ್ನಪಟ್ಟಣದ ಪಾಳೆಯಗಾರರು ಎಂಬ ಹೆಸರಾಯಿತು.

ಜಗದೇವರಾಯ 15 ವರ್ಷಗಳ ತನ್ನ ಆಳಿಕೆಯ ಅವಧಿಯಲ್ಲಿ ಚನ್ನಪಟ್ಟಣ ರಾಜ್ಯಕ್ಕೆ ಒಂದು ರೂಪವನ್ನು ತಂದುಕೊಟ್ಟ. ಕೆಲವು ಗ್ರಾಂಥಿಕ ಮೂಲಗಳಲ್ಲಿ ಈ ವಂಶದವರ ಅನುಕ್ರಮವನ್ನು ಹೀಗೆ ಸೂಚಿಸಲಾಗಿದೆ: ರಾಣೋಜಿರಾಯ, 2ನೆಯ ಜಗದೇವರಾಯ (ಆಳಿಕೆ 15ವರ್ಷ), 3ನೆಯ ಜಗದೇವರಾಯ (8 ವರ್ಷ), ಕುಮಾರ ಜಗದೇವರಾಯ (7 ವರ್ಷ) ಮತ್ತು ಅಂಕುಶರಾಯ (16 ವರ್ಷ). 1623ಕ್ಕೆ ಸೇರಿದ ಒಂದು ಶಾಸನದಲ್ಲಿ ಚನ್ನಪಟ್ಟಣದ ಪಾಳೆಯಗಾರರ ಅನುಕ್ರಮ ಈ ರೀತಿ ಇದೆ: ರಾಣ ಪೆದಜಗದೇವರಾಯ, ಅವನ ಮಗ ಜಗದೇವರಾಯ, ಅವನ ಮಗ 2ನೆಯ ಕುಮಾರ ಜಗದೇವರಾಯ (1623). 1630ರಲ್ಲಿ ಮೈಸೂರಿನ ಚಾಮರಾಜ ಒಡೆಯರು ಚನ್ನಪಟ್ಟಣವನ್ನು ವಶಪಡಿಸಿಕೊಂಡರು. ಇದರೊಂದಿಗೆ ಈ ರಾಜ್ಯದ ಇತರ ಭಾಗಗಳಾಗಿದ್ದ ಕಾನಕಾನಹಳ್ಳಿ, ಪಿರಿಯಾಪಟ್ಟಣಗಳೂ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾದ್ದಲ್ಲದೆ ಚನ್ನಪಟ್ಟಣದ ಪಾಳೆಯಗಾರರ ಆಳಿಕೆಯೂ ಕೊನೆಗೊಂಡಿತು. (ಎಚ್.ವಿ.ಎಸ್.)

**ದೇವದುರ್ಗದ ಪಾಳೆಯಗಾರರು:** ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಆಳಿದ ಪಾಳೆಯಪಟ್ಟು. ಈ ಮನೆತನದ ಮೂಲಪುರುಷ ಸೋಮಜಂಪಲ ಭೂಮಿ ಪತಿ ರಂಗಪ್ಪನಾಯಕ. ಆದರೆ ಈ ಮನೆತನದ ಇತಿಹಾಸ ವಾಸುದೇವನಾಯಕನ ಅನಂತರ ತಿಳಿದುಬರುತ್ತದೆ. ಈತ ಚಂದನಕೇರಿ ಮತ್ತು ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಆಳಿಕೆಯನ್ನು ಪ್ರಾರಂಭಿಸಿದ. ರಾಜಧಾನಿಯನ್ನು ಚಂದನಕೇರಿಯಿಂದ ದೇವದುರ್ಗಕ್ಕೆ ವರ್ಗಾಯಿಸಿದ. ಆಗ ದೇವದುರ್ಗದ ಅಧೀನದಲ್ಲಿದ್ದ ಏಳು ಪ್ರಮುಖ ಗ್ರಾಮಗಳಿಗೆ ತನ್ನ ಏಳು ಜನ ಮಕ್ಕಳನ್ನು ಅಧಿಕಾರಿಗಳಾಗಿ ನೇಮಿಸಿದ. ಹಿರಿಯ ಮಗ ಕಿಲಚನಾಯಕನನ್ನು ತನ್ನೊಡನೆ ಉಳಿಸಿಕೊಂಡ. ಸಣ್ಣ ಕಿಲಚನಾಯಕನನ್ನು ಅರಕೇರಿಗೆ, ವೆಂಕಟಪ್ಪನಾಯಕನನ್ನು ಮುಂಡರಗಿಗೆ, ವಾಸುದೇವನಾಯಕನನ್ನು ಜಾಲಹಳ್ಳಿಗೆ, ಕೃಷ್ಣಪ್ಪನಾಯಕನನ್ನು ರಾಮದುರ್ಗಕ್ಕೆ, ರಂಗಪ್ಪನಾಯಕನನನ್ನು ಕ್ಯಾದಿಗೇರಿಗೆ, ತಿಮ್ಮಪ್ಪನಾಯಕನನ್ನು ಗಲಗಿಗೆ ಕಳುಹಿಸಿದ.

1705ರಲ್ಲಿ ಸುರಪುರದ ವಾಗಿನಗೇರಿಯನ್ನು ಔರಂಗಜೇಬ ಮುತ್ತಿಗೆ ಹಾಕಿದಾಗ ವಾಸುದೇವನಾಯಕ ಅವನ ಜೊತೆಗಿದ್ದ. ಸುರಪುರದ ಪಿಡ್ಡನಾಯಕನನ್ನು ಜಯಿಸುವಲ್ಲಿ ಸಹಾಯ ಮಾಡಿದ್ದಕ್ಕಾಗಿ ಈತನಿಗೆ ರಾಯಚೂರು ಪ್ರಾಂತ್ಯದ ಜಮೀನ್ದಾರಿಕ ವಾಸುದೇವ ನಾಯಕನ ತರುವಾಯ ಈತನ ಹಿರಿಯ ಮಗ ಕಿಲಚನಾಯಕ ಅಧಿಕಾರಕ್ಕೆ ಬರದ. ಈ ಮಧ್ಯ ಸುರಪುರ ಹಾಗೂ ಗುಡಗುಂಟಿ ಅರಸರಿಗೆ ಮನಸ್ತಾಪವಾಯಿತು. ಜೊತೆಗೆ ಸುರಪುರದ ಬಂಡುಕೋರರು ತಮ್ಮ ಅರಸ ಮೊಂಡಗೈ ವೆಂಕಟಪ್ಪನಾಯಕನನ್ನು ಸೆರೆಯಲ್ಲಿಟ್ಟರು. ಕಿಲಚನಾಯಕ ಸುರಪುರದ ಮೂರುಕೇರಿಯ ಬೇಡರನ್ನು ಒಟ್ಟುಗೂಡಿಸಿ ಅರಸನನ್ನು ಬಿಡುಗಡೆ ಮಾಡಿದರು.

ಕ್ಯಾದಿಗೇರಿಯ ಮೇಲೆ ಧಾಳಿ ಮಾಡಿದ. ಈತನ ಅನಂತರ ಚಿಕ್ಕಕೇಶವನಾಯಕ ದೇವದುರ್ಗದ ಅರಸನಾದ. ಈತನ ಅಧಿಕಾರಾವಧಿಯಲ್ಲಿ ಈ ಸಂಸ್ಥಾನದ ವಾರ್ಷಿಕ ಆದಾಯ ಮೂರು ಲಕ್ಷ ರೂಪಾಯಿಯಿತ್ತು. ಈತ ವಾರಕೊಮ್ಮೆ ದೇವದುರ್ಗದಲ್ಲಿ ಸಂತೆ ನಡೆಯುವಂತೆ ಮಾಡಿದನಲ್ಲದೆ ನಿಜಾಂಪೇಟೆ ಸತ್ಯಂಪೇಟೆ, ಪ್ರದೇಶಗಳಲ್ಲಿ ಕೋಟೆ ಕಟ್ಟಿಸಿದ. ಈತನ ಅವಧಿಯಲ್ಲಿ 1766ರಲ್ಲಿ ಹೈದರಾಬಾದ್ ಮೇಲೆ ದಂಡಯಾತ್ರೆ ಹೊರಟ ಪೇಷ್ವೆ ಮತ್ತು ನಿಜಾಮನ ಉಭಯ ಪಡೆಗಳು ದೇವದುರ್ಗದಲ್ಲಿ ಬೀಡುಬಿಟ್ಟವು. ಈತನ ತರುವಾಯ ಕೊಳ್ಳಿರಂಗಪ್ಪನಾಯಕ ಅಧಿಕಾರ ಸ್ವೀಕರಿಸಿದ. ಈತ ದೇವದುರ್ಗದ ಪ್ರಸಿದ್ಧ ಅರಸ, ಅನೇಕ ಜನೋಪಯೋಗಿ ಕೆಲಸಗಳನ್ನು ಮಾಡಿದ. ಸುರಪುರದ 2ನೆಯ ವೆಂಕಟಪ್ಪನಾಯಕ ದಂಡಿನ ಮುಖ್ಯಸ್ಥರನ್ನು ನೇಮಕಮಾಡಿ, ದೇವದುರ್ಗದ ರಂಗಪ್ಪನಾಯಕನನ್ನು ಸೆರೆಹಿಡಿದು ತರಬೇಕೆಂದು ಆಜ್ಞೆ ಮಾಡಿದ. ಆಗ ರಂಗಪ್ಪನಾಯಕ ತಲೆಮರೆಸಿಕೊಂಡು ದೇವದುರ್ಗದ ಬೆಟ್ಟದ ಪೂರ್ವಕ್ಕಿದ್ದ ಮದ್ದಿನ ಮನೆಯಲ್ಲಿ ಅಡಗಿ ಕುಳಿತ. ಸಿಡಿಮದ್ದಿಗೆ ಬೆಂಕಿ ಹತ್ತಿಕೊಂಡಿದ್ದರಿಂದ ಇವನೂ ಇವನ ಪರಿವಾರವೂ ಈತನನ್ನು ಬೆನ್ನಟ್ಟಿದ್ದ ಸುರಪುರದ ಸೈನ್ಯವೂ ಸಿಡಿಮದ್ದಿಗೆ ಆಹುತಿಯಾಯಿತು. ಈ ಘಟನೆಯಿಂದ ಈತನಿಗೆ ಕೊಳ್ಳಿರಂಗಪ್ಪ ನಾಯಕನೆಂಬ ಹೆಸರು ಪ್ರಾಪ್ತವಾಯಿತು. ಅನಂತರ ಈತನ ಮಗ ಕೃಷ್ಣಪ್ಪನಾಯಕ ದೇವದುರ್ಗದ ಅರಸನಾದ. ಆ ವೇಳೆಗೆ ಬ್ರಿಟಿಷರು ಈ ಸಂಸ್ಥಾನವನ್ನು ಆಕ್ರಮಿಸಿಕೊಂಡರು. ಅನಂತರ ಹೈದರಾಬಾದ್ ನಿಜಾಮನ ಒಪ್ಪಂದದ ಮೇರೆಗೆ 1948 ಸೆಪ್ಟೆಂಬರ್ 18ರಲ್ಲಿ ಅವರ ಆಡಳಿತಕ್ಕೆ ಒಳಪಟ್ಟಿತು.

ಈ ಅರಸರ ಮನೆದೇವರು ಮಾನಸಗಲ್ಲ ರಂಗನಾಥ. ಈ ಮನೆತನದವರು ಮಠಗಳಿಗೆ ದಾನದತ್ತಿಯನ್ನು ನೀಡಿದ್ದರಲ್ಲದೆ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಇವುಗಳಲ್ಲಿ ಮಾನಸಗಲ್ಲಿನ ರಂಗನಾಥ, ಚಂದನಕೇರಿಯ ಹನುಮಪ್ಪ, ಗೂಗಲ್ಲಿನ ಅಲ್ಲಮಪ್ರಭು, ದೇವದುರ್ಗದ ಗೋಪಾಲಸ್ವಾಮಿ, ಕ್ಯಾದಿಗೇರಿಯ ವೀರಭದ್ರ, ಜಾಲಹಳ್ಳಿಯ ರಂಗನಾಥ ಪ್ರಮುಖವಾದವುಗಳು. ಚಂದನಕೇರಿಯಲ್ಲಿ ಇವರ ಹಳೆಯ ಅರಮನೆ ಅವಶೇಷಗಳನ್ನು ಇಂದಿಗೂ ಗುರುತಿಸಬಹುದು. ದೇವದುರ್ಗ ವಿಶಾಲವಾದ ಅರಮನೆಯನ್ನು ರಂಗಪ್ಪನಾಯಕ ಕಟ್ಟಿಸಿದ. ಈಗ ಈ ಅರಮನೆಯ ಬಹಳಷ್ಟು ಶಿಥಿಲಗೊಂಡಿದೆ, ಒಂದು ಭಾಗ ಮಾತ್ರ ಉಳಿದಿದೆ. ಈ ಅರಮನೆ ಪ್ರವೇಶದ್ವಾರ ಮತ್ತು ಗೋಡೆಗಳು ಬಹಳ ಸುಂದರವಾಗಿವೆ. (ಎ.ಪೈ.)

**ದೇವನಹಳ್ಳಿ ಪಾಳೆಯಗಾರರು:** 16–18ನೆಯ ಶತಮಾನದ ಮಧ್ಯಭಾಗದವರೆಗೆ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಿಂದ ಆ ಸುತ್ತಣ ಪ್ರಾಂತವನ್ನು ಆಳುತ್ತಿದ್ದ ಪಾಳೆಯಗಾರರು. ದೇವನಹಳ್ಳಿಗೆ ಮೊದಲು ದೇವ ಎಂಬುವನು ಮುಖ್ಯಸ್ಥನಾಗಿದ್ದುದರಿಂದ ಅದಕ್ಕೆ ದೇವನದೊಡ್ಡಿ ಎಂಬ ಹೆಸರಿದ್ದು ಒಂದು ಚಿಕ್ಕ ಹಳ್ಳಿಯಾಗಿತ್ತು. ಕಂಚಿಯಿಂದ ನಿರಾಶ್ರಿತನಾಗಿ ಬಂದು ಆವತಿಯಲ್ಲಿ ನೆಲೆಸಿದ್ದವನೊಬ್ಬನ ಮಗ ಮಲ್ಲಭೈರೇಗೌಡ 1501ರಲ್ಲಿ ದೇವನದೊಡ್ಡಿಯಲ್ಲಿ ಕೋಟೆಯನ್ನು ಕಟ್ಟಿ ಅದಕ್ಕೆ ದೇವನಹಳ್ಳಿ ಅಥವಾ ದೇವಂಡಹಳ್ಳಿ ಎಂದು ಹೆಸರಿಟ್ಟು, ಅದರ ಆಡಳಿತವನ್ನು ಆತನ ಸಹೋದರ ಸಣ್ಣಭೈರೇಗೌಡನಿಗೆ ವಹಿಸಿದ. ಸಣ್ಣಭೈರೇಗೌಡ 40 ವರ್ಷಗಳ ಕಾಲ ಆಳಿ ಆ ಪ್ರದೇಶವನ್ನು ಅಭಿವೃದ್ಧಿಗೆ ತಂದ. ಅವನ ಮಗ ಭೈರೇಗೌಡ 25 ವರ್ಷಗಳ ಕಾಲ ಆಳಿದ. ಅನಂತರ ಪುತ್ರಾನುಕ್ರಮವಾಗಿ ದಯಾಳು ಬೈಚೇಗೌಡ 37 ವರ್ಷ, ಮುದ್ದಭೈರೇಗೌಡ 20 ವರ್ಷ, 2ನೆಯ ಭೈರೇಗೌಡ 37 ವರ್ಷ, ಗೋಪಾಲಗೌಡ 35 ವರ್ಷ, ದೊಡ್ಡಭೈರೇಗೌಡ 54 ವರ್ಷ ಪಾಳೆಯಗಾರರಾಗಿದ್ದರು. ದೊಡ್ಡಭೈರೇಗೌಡನ ಮಗ ತಂಗಪ್ಪಗೌಡ ಹತ್ತು ತಿಂಗಳು ಆಳಿ ಮಕ್ಕಳಿಲ್ಲದೆ ಮಡಿದ. ಅನಂತರ ಅವನ ಬಂಧು ಚಿಕ್ಕಬಳ್ಳಾಪುರದ ಚಿಕ್ಕಪ್ಪಗೌಡ ಪಾಳೆಯಗಾರನಾದ. ಇವನ ಕಾಲದಲ್ಲಿ ಮೈಸೂರಿನ ದಳವಾಯಿ ನಂಜಯ್ಯ ದೇವನಹಳ್ಳಿಗೆ ಮುತ್ತಿಗೆ ಹಾಕಿದ (1749). ಈ ಮುತ್ತಿಗೆ ಎಂಟು ತಿಂಗಳುಗಳ ಕಾಲ ಮುಂದುವರಿದು ಕೊನೆಗೆ ಪಾಳೆಯಗಾರ ಸೋತ. ದೇವನಹಳ್ಳಿ ಮೈಸೂರಿನ ಪ್ರಭುತ್ವವನ್ನು ಒಪ್ಪಿಕೊಂಡಿತು. ಹೈದರ್ ಅಲಿಯ ಯುದ್ಧ ಪರಾಕ್ರಮ ಮೊದಲ ಬಾರಿಗೆ ಬೆಳಕಿಗೆ ಬಂದುದು ಈ ಯುದ್ಧದಲ್ಲಿ. ಹೈದರ್ ದೇವನಹಳ್ಳಿಗೆ ತೆರಳಿದಾಗ, ಚಿಕ್ಕಪ್ಪಗೌಡ, ಗುತ್ತಿಯ ನಾಯಕ ಮುರಾರಿ ನಾಯಕನ ಸ್ನೇಹವನ್ನು ಸಂಪಾದಿಸಿ, ಆತನ ಸೈನ್ಯವನ್ನು ಚಿಕ್ಕಬಳ್ಳಾಪುರದ ಕೋಟೆಯ ರಕ್ಷಣೆಗೆ ನೇಮಿಸಿ, ತಾನು ನಂದಿದುರ್ಗಕ್ಕೆ ಪಲಾಯನ ಮಾಡಿದ. ಆದರೆ ಹೈದರ್ ಚಿಕ್ಕಪ್ಪಗೌಡನನ್ನು ಸೆರೆಹಿಡಿದು ಅವನನ್ನು ಮತ್ತು ಅವನ ಕುಟುಂಬದವರನ್ನು ಬೆಂಗಳೂರಿನಲ್ಲಿ ಸೆರೆಯಲ್ಲಿಟ್ಟ. ಅಲ್ಲಿ ಚಿಕ್ಕಪ್ಪಗೌಡ ಮೃತನಾದ. ದೇವನಹಳ್ಳಿ ಮೈಸೂರು ರಾಜ್ಯಕ್ಕೆ ಸೇರಿಹೋಯಿತು. (ಎ.ವಿ.ವಿ.;ಎಂ.ಕೆ.ಬಿ.)

**ದೊಡ್ಡಬಳ್ಳಾಪುರದ ಪಾಳೆಯಗಾರರು:** ಸು. 1539–1638. ಆವತಿ ವಂಶದ ಪಾಳೆಯಗಾರರ ಒಂದು ಶಾಖೆ. ಈ ಶಾಖೆಯವರ ಇತಿಹಾಸ ಹಲವಾರು ಅಸ್ಪಷ್ಟ ವಿವರಗಳನ್ನೊಳಗೊಂಡಿದೆ. ಸ್ಥಳೀಯ ದಾಖಲೆಗಳು ಈ ವಂಶದ ಇತಿಹಾಸವನ್ನು ಹೀಗೆ ತಿಳಿಸುತ್ತವೆ: ಸ್ಥಿತಿವಂತನಾದ ಮಲ್ಲಭೈರೇಗೌಡ ಪೆನುಗೊಂಡದ ರಾಜನಿಂದ ನೆರೆಯ ಪಾಳೆಯಗಾರರನ್ನು ದಂಡಿಸುವ ಅಧಿಕಾರ ಪಡೆದು ಒಂದು ಲಕ್ಷ ಪಗೋಡಗಳನ್ನು ಕೊಡುವ ರಾಜ್ಯವನ್ನು ವಶಪಡಿಸಿಕೊಂಡ. ಇದರ ಆಡಳಿತ ನಿರ್ವಹಣೆಗಾಗಿ ತನ್ನ ಸೋದರ ಹಾವಳಿ ಭೈರೇಗೌಡನನ್ನು (I) ನೇಮಿಸಿದ. ಈತ 20 ವರ್ಷಗಳು ರಾಜ್ಯವಾಳಿ ತೀರಿಕೊಂಡ. ಇವನ ಅನಂತರ ದೊಡ್ಡ ಹಾವಳಿ ಭೈರೇಗೌಡ (II) 25 ವರ್ಷಗಳೂ ಅವನ ಪುತ್ರ ಹಾವಳಿ ಭೈರೇಗೌಡ (III) 40 ವರ್ಷಗಳೂ ರಾಜ್ಯವಾಳಿದರು. ಹಾವಳಿ ಭೈರೇಗೌಡ ನಿಧನನಾದಾಗ ಅವನ ಮಗ ಚಿಕ್ಕಪ್ಪಗೌಡ ಅಪ್ರಾಪ್ತ ವಯಸ್ಕನಾದುದರಿಂದ, ಹಾವಳಿ ಭೈರೇಗೌಡನ ಸೋದರನ ಮಗ ಹಾಗೂ ದಳವಾಯಿಯಾಗಿದ್ದ ತಮ್ಮಣ್ಣಗೌಡ ಶ್ರದ್ಧೆ, ನಿಷ್ಠೆಯಿಂದ 10 ವರ್ಷ ರಾಜ್ಯವಾಳಿ ಆಗ್ಗೆ ಪ್ರಾಪ್ತ ವಯಸ್ಕನಾಗಿದ್ದ ಚಿಕ್ಕಪ್ಪಗೌಡನಿಗೆ ಅಧಿಕಾರ ವಹಿಸಿ ನಿವೃತ್ತನಾದ. ಚಿಕ್ಕಪ್ಪಗೌಡ ಅಧಿಕಾರ ಸ್ವೀಕರಿಸಿದ ಮೂರು ವರ್ಷಗಳಲ್ಲಿ ಬಿಜಾಪುರದ ಸೇನಾನಿ ರಣದುಲ್ಲಾಖಾನ್ ದೊಡ್ಡಬಳ್ಳಾಪುರವನ್ನು ವಶಪಡಿಸಿಕೊಂಡಾಗ ಪಾಳೆಯಗಾರರ ಆಳಿಕೆ ಕೊನೆಗೊಂಡಿತು (ಸು.1637–38). (ಎಚ್.ವಿ.ಎಸ್.)

**ನಾಗಮಂಗಲದ ಪಾಳೆಯಗಾರರು:** 15ನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯನಗರದ ಅರಸರ ಆಶ್ರಯದಲ್ಲಿ ನಾಗಮಂಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆ ಸುತ್ತಿನ ಪ್ರದೇಶವನ್ನು ಆಳುತ್ತಿದ್ದ ಒಂದು ಸಾಮಂತ ಮನೆತನ. ಶಾಸನಗಳಿಂದ ತಿಳಿದುಬರುವ ಮಾಹಿತಿಗಳ ಪ್ರಕಾರ ಇವರು ಲೋಹಿತವಂಶಕ್ಕೆ ಸೇರಿದವರು. ಈ ವಂಶದ ಅರಸರಲ್ಲಿ ಶಿಂಗಣ್ಣವೊಡೆಯ ಹಾಗೂ ಆತನ ಪುತ್ರ ತಿಮ್ಮಣ್ಣದಂಡನಾಯಕ ಪ್ರಸಿದ್ಧರು. ತಿಮ್ಮಣ್ಣ ವಿಜಯನಗರದ ಮಲ್ಲಿಕಾರ್ಜುನನ (1446– 65) ಕಾಲದಲ್ಲಿ ಮಹಾ ಪ್ರಧಾನ ಎಂಬ

ಹುದ್ದೆಯನ್ನು ಪಡೆದಿದ್ದ. ಇವನಿಗೆ ದೇವರಾಜನೆಂಬ ಒಬ್ಬ ತಮ್ಮನಿದ್ದ. ಇವರು ಪರಮ ಭಾಗವತರೂ ವೈಷ್ಣವರೂ ಆಗಿದ್ದರು. ಇವರು ಶಿಂಗಣ್ಣವೊಡೆಯನ ಸತಿ ಸೀತಾಂಬಿಕಾ ಹೆಸರಿನಲ್ಲಿ ಪಾಂಡವಪುರ ತಾಲ್ಲೂಕಿನ ಹರವು ಗ್ರಾಮದ ಹತ್ತಿರ ಹೊಸವೂರ ಎಂಬುದನ್ನು ಸೀತಾಪುರವೆಂದು ಮಾರ್ಪಡಿಸಿ ಅಲ್ಲಿ ರಾಮಚಂದ್ರದೇವರ ದೇವಸ್ಥಾನ ಕಟ್ಟಿಸಿ ಅನೇಕ ದಾನದತ್ತಿಗಳನ್ನು ಬಿಟ್ಟರು. ತಿಮ್ಮಣ್ಣದಂಡನಾಥ ಹಾಗೂ ಆತನ ಸತಿ ರಂಗಾಂಬಿಕಾ ಇವರು ಮೇಲುಕೋಟೆಯ ದೇವಸ್ಥಾನಕ್ಕೆ ವಿಶೇಷ ದತ್ತಿಗಳನ್ನು ಕೊಟ್ಟರು. ತಿಮ್ಮಣ್ಣನಿಗೆ ಯಾದವಗಿರಿ (ಮೇಲುಕೋಟೆ) ಜೀರ್ಣೋದ್ಧಾರಕ ಎಂಬ ಬಿರುದೂ ಇದ್ದಿತು. ಮೇಲುಕೋಟೆಯಲ್ಲಿನ ದೇವಸ್ಥಾನದ ಮತ್ತು ರಾಮಾನುಜ ಸಭೆಯ ಚಟುವಟಿಕೆಗಳು ಸಾಂಗವಾಗಿ ನಡೆಯಲೆಂದು ರಂಗಾಂಬಿಕೆಯು ಬಲ್ಲೇನಹಳ್ಳಿ ಹಾಗೂ ಯಲವದಪಲ್ಲಿ ಗ್ರಾಮಗಳನ್ನು ದತ್ತಿ ಕೊಟ್ಟಳು. ದೇವರಾಜ ಕಾವೇರಿ ನದಿಗೆ ಹೊಸದಾಗಿ ಕಟ್ಟೆಯೊಂದನ್ನು ಕಟ್ಟಿಸಿ ಸೀತಾಪುರ, ಹರವು ಗ್ರಾಮಗಳ ಮುಖಾಂತರ ಕಾಲುವೆಯೊಂದನ್ನು ಒಯ್ಯುವ ಕೆಲಸವನ್ನು ಮಾಡಿದ (ತನ್ನಿಮಿತ್ತ ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕುಗಳ ಕೆಲ ಗ್ರಾಮಗಳಿಗೆ ನೀರಾವರಿ ಸೌಲಭ್ಯ ದೊರೆಯಿತು). ನಾಗಮಂಗಲದ ಕೋಟೆಯನ್ನು ಸು.1270ರಲ್ಲಿ ಈ ವಂಶದ ಜೈವಿಡಣನಾಯಕ ಕಟ್ಟಿಸಿದನೆಂಬ ಹೇಳಿಕೆ ಇದೆ. 16ನೆಯ ಶತಮಾನದ ಅಂತ್ಯದ ಹೊತ್ತಿಗೆ ಲೋಹಿತವಂಶದ ಪ್ರಭುಗಳು ತಮ್ಮ ಅಧಿಕಾರವನ್ನು ಕಳೆದುಕೊಂಡರು. ಆಗ ಚನ್ನಪಟ್ಟಣದಿಂದ ಆಳುತ್ತಿದ್ದ ಸಾಳುವವಂಶದ ಜಗದೇವರಾಯನ ಆಳಿಕೆಗೆ ನಾಗಮಂಗಲವೂ ಒಳಪಟ್ಟಿತ್ತು. (ಎಸ್.ಜಿ.ಎ.)

**ಬಸವಾಪಟ್ಟಣದ ಪಾಳೆಯಗಾರರು:** ಸು.1540–1636. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿರುವ ಬಸವಾಪಟ್ಟಣದಿಂದ ಆ ಸುತ್ತಣ ಪ್ರಾಂತ್ಯವನ್ನು ಆಳುತ್ತಿದ್ದ ಪಾಳೆಯಗಾರರು. ಈ ವಂಶದ ಮೂಲಪುರುಷ ವಿಜಯನಗರದಿಂದ ಬಂದ ಧೂಮರಾಜ. ಈತ ಧೂಮನಬೆಟ್ಟ ಎಂಬಲ್ಲಿ ನೆಲಸಿದನೆಂದು ಪ್ರತೀತಿ. ಇವನಿಗೆ ಇಬ್ಬರು ಗಂಡುಮಕ್ಕಳು– ಕೊಂಗಣನಾಯಕ ಮತ್ತು ರಾಮಪ್ಪನಾಯಕ. ಕೊಂಗಣನಾಯಕ ಅಧಿಕಾರಕ್ಕೆ ಬಂದ ಮೇಲೆ ಬಸವಾಪಟ್ಟಣದಲ್ಲಿ ಕೋಟೆಯನ್ನು ಕಟ್ಟಿ ಅನಂತಪುರದಿಂದ ಮಾಯಕೊಂಡ ಮತ್ತು ಹರಿಹರದಿಂದ ತರೀಕೆರೆವರೆಗಿನ ವಿಸ್ತಾರವಾದ ಪ್ರದೇಶವನ್ನು ವಶಪಡಿಸಿಕೊಂಡ. ಕೊಂಗಣನಾಯಕನ ಅನಂತರ ವೀರ ಹನುಮಪ್ಪನಾಯಕ ಅಧಿಪತಿಯಾದ. ಈತ ವಿಜಯನಗರದ ಸೇನೆಯಲ್ಲಿ ದಳಪತಿಯಾಗಿದ್ದು ಬಹಮನಿ ರಾಜ್ಯಗಳೊಡನೆ ನಡೆದ ಯುದ್ಧಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಇದರಿಂದಾಗಿ ವಿಜಯನಗರದ ಸಾಮ್ರಾಟರು ಈ ಪಾಳೆಯಪಟ್ಟಿನ ಅಸ್ತಿತ್ವಕ್ಕೆ ಒಪ್ಪಿಗೆ ಇತ್ತುದಲ್ಲದೆ ಸಂತೆಬೆನ್ನೂರನ್ನೂ ಕೊಟ್ಟರು. ಹನುಮಪ್ಪ ಸ್ವತಃ ರಾಜ್ಯವನ್ನು ವಿಸ್ತರಿಸಿದ. ಅನಂತರ 2ನೆಯ ಹನುಮಪ್ಪನಾಯಕ, ಹುಚ್ಚು ಹನುಮಪ್ಪ ನಾಯಕ ಮತ್ತು ಕೊಂಗಣನಾಯಕ ಅಧಿಪತಿಗಳಾದರು. 1636ರಲ್ಲಿ ಬಿಜಾಪುರದ ಸುಲ್ತಾನನ ಪರವಾಗಿ ಅವನ ದಂಡನಾಯಕ ರಣದುಲ್ಲಾಖಾನ ದಂಡೆತ್ತಿಬಂದು ಬಸವಾಪಟ್ಟಣವನ್ನು ವಶಪಡಿಸಿಕೊಂಡಾಗ ಕೊಂಗಣನಾಯಕ ತರೀಕೆರೆಯಲ್ಲಿ ತಳವೂರಿದ. ಮುಂದೆ ಈತನ ವಂಶಸ್ಥರು ತರೀಕೆರೆ ಪಾಳೆಯಗಾರರು ಎಂದು ಪ್ರಸಿದ್ಧರಾದರು. (ಕೆ.ಟಿ.ಆರ್.;ಎಂ.ಕೆ.ಬಿ.)

**ಬೇಲೂರು ಪಾಳೆಯಗಾರರು:** 14–19ನೆಯ ಶತಮಾನಗಳ ಅವಧಿಯಲ್ಲಿ ಆಗಿದಾಂಗ್ಗೆ ಬೇಲೂರು ಮತ್ತು ಸುತ್ತಣ ಪ್ರದೇಶವನ್ನು ಆಳಿದ ಪಾಳೆಯಗಾರರು. ಇವರನ್ನು ಬಲಂ ಪಾಳೆಯಗಾರರು ಎಂದೂ ಪಾಳೆಯಪಟ್ಟನ್ನು ಬೇಲೂರು ಅಥವಾ ವೇಲಾಪುರ ಪಾಳೆಯಪಟ್ಟು ಎಂದೂ ಕರೆಯುವುದುಂಟು. ಈ ಪಾಳೆಯಗಾರರು ಮೂಲತಃ ಬೇಲೂರಿನವರಾದ್ದ ರಿಂದ ಶಾಸನಗಳಲ್ಲಿ ಮಣಿನಾಗಪುರವರಾಧೀಶ್ವರ ಎಂಬ ಬಿರುದಿನ ಜೊತೆಗೆ ತಮ್ಮ ಹೆಸರಿನ ಹಿಂದೆ ಬೇಲೂರಿನವರು ಎಂದು ಹೇಳಿಕೊಳ್ಳುತ್ತಾರೆ. ಮಣಿನಾಗಪುರ ಬಹುಶಃ ಈಗಿನ ಮಂಜರಾಬಾದ್. ತಮ್ಮ ರಾಜಧಾನಿಯನ್ನು ಕಾಲಕ್ರಮದಲ್ಲಿ ಸಕಲೇಶಪುರದ ಬಳಿಯ ಐಗೂರಿಗೆ ಸ್ಥಳಾಂತರಿಸಿದ್ದರಿಂದ ಐಗೂರು ಪಾಳೆಯಗಾರರೆಂದೂ ಪರಿಚಿತರಾಗಿದ್ದಾರೆ.

1397ರಲ್ಲಿ ಈ ಪ್ರದೇಶವನ್ನು ವಿಜಯನಗರದ ಅರಸರು ಸಿಂಗಪ್ಪನಾಯಕನಿಗೆ ವಹಿಸಿಕೊಟ್ಟರು. ಸಿಂಗಪ್ಪನಾಯಕನ ತಂದೆ ಮಂಚಯ್ಯನಾಯಕ ವಿಜಯನಗರದ ಸೈನ್ಯದಲ್ಲಿ ದಂಡನಾಯಕ ನಾಗಿದ್ದ ಎಂಬ ಹೇಳಿಕೆ ಇದೆ. ಗಿರಿಯಪ್ಪನಾಯಕ ಮತ್ತು ತಿಮ್ಮಪ್ಪನಾಯಕ ಎಂಬಿಬ್ಬರು ಈ ವಂಶದವರು ಎಂದು ಮಾತ್ರ ತಿಳಿದುಬರುತ್ತದೆ. ಪೋತಪನಾಯಕ ಕೃಷ್ಣದೇವರಾಯನ ಖಾಸಾ ಸಂಚಿಯವನಾಗಿದ್ದ. ಅವನ ಮಗ ಯರಕೃಷ್ಣಪ್ಪನಾಯಕನಿಗೆ ಕೃಷ್ಣದೇವರಾಯ ಬೇಲೂರು ಭಾಗದ ಆಡಳಿತವನ್ನು ನಿಷ್ಠೆಯ ಮತ್ತು ಯುದ್ಧದಲ್ಲಿ ಷರತ್ತಿನ ಮೇಲೆ ವಹಿಸಿಕೊಟ್ಟ. 1524ರಲ್ಲಿ ಯರಕೃಷ್ಣಪ್ಪನಾಯಕನ ಹೆಸರು ಶಾಸನಗಳಲ್ಲಿ ಮೊದಲು ಗೋಚರಿಸುತ್ತದೆ. ಅನಂತರದ ದಾಖಲೆಗಳಲ್ಲಿ ಯರಕೃಷ್ಣಪ್ಪನಾಯಕನೇ ವಂಶದ ಮೂಲಪುರುಷ ಎಂದು ಹೇಳಲಾಗಿದೆ. ಈ ಪಾಳೆಯಗಾರರ ಅನುಕ್ರಮ ಈ ರೀತಿ ಇದೆ: 1.ಪೋತಪನಾಯಕ, 2.ಯರ ಕೃಷ್ಣಪ್ಪನಾಯಕ (1524), 3.ವೆಂಕಟಾದ್ರಿನಾಯಕ, 4.ಕೃಷ್ಣಪ್ಪನಾಯಕ, 5.ಚಿಕ್ಕನಾಯಕ (ಹೆಂಡತಿ, ಪದ್ಮಾಜಿ), 6.ಲಕ್ಷ್ಮಪ್ಪನಾಯಕ (1588), 7.ನರಸಿಂಹನಾಯಕ, 8.ವೆಂಕಟಾದ್ರಿನಾಯಕ (1637), 9.ರಂಗಪ್ಪನಾಯಕ, 10.ನಾರಸಿಂಹನಾಯಕ (1661), 11.ಕೃಷ್ಣಪ್ಪನಾಯಕ, 12.ವೆಂಕಟಾದ್ರಿನಾಯಕ (1675), 13.ಕೃಷ್ಣಪ್ಪನಾಯಕ (1691 ಮತ್ತು 1693), 14.ಕೃಷ್ಣಪ್ಪನಾಯಕ (1712), 15.ವೆಂಕಟಪ್ಪನಾಯಕ (1736 ಮತ್ತು 1751), 16.ಕೃಷ್ಣಪ್ಪನಾಯಕ (1755), 17.ವೆಂಕಟಾದ್ರಿನಾಯಕ (1790 ಮತ್ತು 1802). ಇವರಲ್ಲಿ ಎಂಟನೆಯವನಾದ ವೆಂಕಟಾದ್ರಿ ಯನ್ನು 1637ರ ಶಾಸನದಲ್ಲಿ ತುರಕದಳ ವಿಭಾಡ ಎಂದು ಸಂಬೋಧಿಸಲಾಗಿದೆ. ಇಕ್ಕೇರಿಯ ಶಿವಪ್ಪನಾಯಕ 1657ರಲ್ಲಿ ನಾರಸಿಂಹನಾಯಕನ ಮೇಲೆ ಧಾಳಿ ಎಸಗಿದ. ಮತ್ತೆ ವೆಂಕಟಾದ್ರಿ ನಾಯಕನ ಕಾಲದಲ್ಲಿ ಶಿವಪ್ಪನಾಯಕನ ಅಳಿಯ ಶಿವಲಿಂಗನಾಯಕ ಈ ಪಾಳೆಯಪಟ್ಟಿನ ಮೇಲೆ ಧಾಳಿಮಾಡಿ ಸ್ವಲ್ಪಭಾಗ ಕಿತ್ತುಕೊಂಡ. 1675ರಲ್ಲಿ ವೆಂಕಟಾದ್ರಿನಾಯಕ ಬೇಲೂರ ಸೀಮೆಯ ಲಕ್ಕುಂದನಾಡಿನ ಗುಮ್ಮನಹಳ್ಳಿಯನ್ನು ಪುಟ್ಟಯ್ಯನೆಂಬುವವನಿಗೆ ಉಂಬಳಿಯಾಗಿ ಕೊಟ್ಟ. 1693ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯ ಈ ಪಾಳೆಯಪಟ್ಟಿನ ಕೆಲವು ಭಾಗವನ್ನು ಕೃಷ್ಣಪ್ಪನಾಯಕನಿಂದ ಗೆದ್ದುಕೊಂಡ. 1736ರಲ್ಲಿ ವೆಂಕಟಪ್ಪ ನಾಯಕ ಬೇಲೂರು ಚೆನ್ನಕೇಶವ ದೇವಾಲಯಕ್ಕೆ ಗೋಪುರ ನಿರ್ಮಿಸಿ ಕಲಶ ಸ್ಥಾಪಿಸಿದ. ಇವನ ಮಗ ಕೃಷ್ಣಪ್ಪನಾಯಕ ಕೈವಲ್ಯ ಎಂಬ ಯೋಗಿಗೆ ಮೂದ್ರವಳ್ಳಿ ಎಂಬ ಗ್ರಾಮದೊಂದಿಗೆ ದಾನಮಾಡಿದ. ಈ ಕೃಷ್ಣಪ್ಪನಾಯಕ ಕಾರನ್‌ವಾಲೀಸನ ನೆರವಿಗೆ ಬಂದಿದ್ದ ಮರಾಠ ಸೈನ್ಯದೊಂದಿಗೆ ಸೇರಿಕೊಂಡ. ಇದು ಟಿಪ್ಪುವಿನ ಕೋಪಕ್ಕೆ ಕಾರಣವಾಗಿ ಅದನ್ನು ತಿಳಿದ ನಾಯಕ ಕೊಡಗಿಗೆ ಓಡಿಹೋದ. ಬ್ರಿಟಿಷರಿಗೂ ಟಿಪ್ಪುವಿಗೂ ಒಪ್ಪಂದವಾದ ಮೇಲೆ ನಾಯಕ ಮತ್ತೆ ಪಾಳೆಯಪಟ್ಟಿಗೆ ಹಿಂದಿರುಗಿದ. ಆದರೆ ಆ ಮೊದಲಿದ್ದ ಎಲ್ಲ ಭಾಗ ಇವನಿಗೆ ದಕ್ಕಲಿಲ್ಲ. ಆದ್ದರಿಂದ ಇವನು ಐಗೂರನ್ನು ತನ್ನ ಕೇಂದ್ರವಾಗಿ ಮಾಡಿಕೊಂಡು ಆಳತೊಡಗಿದ. ಇವನ ಮಗ ವೆಂಕಟಾದ್ರಿ ನಾಯಕ 1799–1800ರಲ್ಲಿ ಬಲವಾದ ಕೋಟೆ ಕಟ್ಟಿಸಿ ಬ್ರಿಟಿಷರನ್ನು ಎದುರಿಸಿದ. ಕಡೆಗೆ 1802ರಲ್ಲಿ ನಾಯಕ ಓಡಿಹೋಗಬೇಕಾಯಿತು. ಬ್ರಿಟಿಷರು ಇವನನ್ನು ಹಿಡಿದು ಉಗ್ಗಿಹಳ್ಳಿಯಲ್ಲಿ ನೇಣುಹಾಕಿದರು (1802). (ಸಿ.ಕೆ.ಎನ್.)

**ಮತ್ತೋಡು ಪಾಳೆಯಗಾರರು:** ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿರುವ ಮತ್ತೋಡಿನಿಂದ ಆಳಿದ (1604–1779) ಪಾಳೆಯಗಾರರು. ಪ್ರಸಿದ್ಧ ಬೇಟೆಗಾರನೂ ಶೂರನೂ ಆಗಿದ್ದ ಗಿರಿಯಪ್ಪನಾಯಕ ಈ ಮನೆತನದ ಸ್ಥಾಪಕ. ಈತನ ಪರಾಕ್ರಮವನ್ನು ಬೂದಿಹಾಳದ ಪಾಳೆಯಗಾರರಿಂದ ತಿಳಿದ ಪೆನುಗೊಂಡೆಯ ಅರಸ ವೆಂಕಟಪತಿರಾಯ ಇವನನ್ನು ತನ್ನ ಆಸ್ಥಾನಕ್ಕೆ ಕರೆಯಿಸಿಕೊಂಡು ಸತ್ಕರಿಸಿದ. ತರುವಾಯ ಈತನ ಮಗ ದೊಡ್ಡಳನಾಯಕ ಮತ್ತೋಡಿನಲ್ಲಿ ಒಂದು ಕೋಟೆ, ದೇವಾಲಯ ಮತ್ತು ಅರಮನೆಯನ್ನು ಕಟ್ಟಿಸಿದ. ಅನಂತರ ಅಧಿಕಾರಕ್ಕೆ ಬಂದವನು ಸಂಗಪ್ಪನಾಯಕ. ಈತ ಅಭಿವೃದ್ಧಿಗೆ ಆದ್ಯತೆ ನೀಡಿದ ಎಂಬುದಕ್ಕೆ 1685ರಲ್ಲಿ ಹೊನ್ನಪ್ಪ ಎಂಬುವವನಿಗೆ ಹೊಲವನ್ನು ದಾನವಾಗಿ ನೀಡಿದ ಶಾಸನವೊಂದು ಸಾಕ್ಷಿ ಅನಂತರ ಇವನ ಮಗ ದೊಡ್ಡಹಾಲಪ್ಪನಾಯಕ ಪಟ್ಟಕ್ಕೆ ಬಂದ. ಮತ್ತೋಡಿನ ಅರಸರಲ್ಲಿ ಪ್ರಮುಖನಾದ ಈತ ಧರ್ಮಾಭಿಮಾನಿ, ವಿದ್ಯಾಪ್ರೇಮಿ ಹಾಗೂ ದಕ್ಷ ಆಡಳಿತಗಾರ. ಇವನು ತನ್ನ ಆಳಿಕೆಯಲ್ಲಿ ಮತ್ತೋಡನ್ನು ಒಂದು ಸುಂದರ ನಗರವನ್ನಾಗಿ ನಿರ್ಮಾಣ ಮಾಡಲು ಶ್ರಮಿಸಿದ. ಆಡಳಿತ ಸುಗಮವಾಗಿ ನಡೆಯಲೆಂದು ಸಚಿವರಿಗೆ, ಹಿರಿಯ ಅಧಿಕಾರಿಗಳಿಗೆ ಸಚಿವಾಲಯಗಳನ್ನು ನಿರ್ಮಿಸಿದ. 1707ರಲ್ಲಿ ಮುರಿಗೆಸ್ವಾಮಿಗಳಿಗೆ ಮಠ ಕಟ್ಟಿಸಿ, ಅರೆಹಳ್ಳಿ ಎಂಬ ಗ್ರಾಮವನ್ನು ದತ್ತಿಯಾಗಿ ನೀಡಿದ. ಹಲವಾರು ದೇವಾಲಯ ಗಳನ್ನು ಜೀರ್ಣೋದ್ಧಾರ ಮಾಡಿದ.

ಅನಂತರ ಸಿದ್ದಪ್ಪನಾಯಕ ಅಧಿಕಾರಕ್ಕೆ ಬಂದ. ಇವನು 1747ರಲ್ಲಿ ಹಾಕಿಸಿದ ಶಾಸನವೊಂದರಲ್ಲಿ ಕಲ್ಲಯ್ಯ ಎಂಬ ಬಾಲಕನಿಗೆ ಹಾಲು ಬೆಣ್ಣೆಯ ಸಲುವಾಗಿ ಆನಿಗಟ್ಟಹಳ್ಳಿಯಲ್ಲಿ ಭೂಮಿಯನ್ನು ನೀಡಿದನೆಂದು ತಿಳಿದುಬರುತ್ತದೆ. ಇವನಿಗೆ ಹಾಲಪ್ಪನಾಯಕ, ಸಂಗಪ್ಪನಾಯಕ ಮತ್ತು ದೊಡ್ಡಳನಾಯಕ ಎಂಬ ಮಕ್ಕಳು. ಹಾಲಪ್ಪನಾಯಕ ಘನಪಂಡಿತನೂ ಆಗಿದ್ದ. ಇವನ ಕಾಲದಲ್ಲಿ ಮದಕರಿನಾಯಕ 3000 ಪಗೋಡಗಳಿಗೆ ಬದಲಾಗಿ 4000 ಪಗೋಡ ಗಳನ್ನು ಕೇಳಿದ. ಹಾಲಪ್ಪನಾಯಕ ನಿರಾಕರಿಸಿ ಮತ್ತೋಡು ಮತ್ತು ಚಿತ್ರದುರ್ಗದ ನಡುವಿನ ಸಂಬಂಧ ಹದಗೆಟ್ಟಿತು. ಇದೇ ಸಂದರ್ಭದಲ್ಲಿ (1772) ಹೈದರ್ ಅಲಿ ಚಿತ್ರದುರ್ಗದ ಮೇಲೆ ಧಾಳಿ ಮಾಡಿದ. ಆಗ ಹಾಲಪ್ಪನಾಯಕ ಅವನ ಜೊತೆ ಸೇರಿದ. ಆದರೆ ಹೈದರ್ ಅಲಿಗೆ ಜಯ ಲಭಿಸಲಿಲ್ಲ. ಮತ್ತೋಡನ್ನು ಆಕ್ರಮಿಸಿ ಹಾಲಪ್ಪನಾಯಕನನ್ನು ಚಿತ್ರದುರ್ಗದಲ್ಲಿ ಸೆರೆಯಲ್ಲಿಟ್ಟ.

ಹೈದರ್ ಅಲಿ 1776ರಲ್ಲಿ ಮತ್ತೆ ಚಿತ್ರದುರ್ಗದ ಮೇಲೆ ಧಾಳಿ ಮಾಡಿ ಮದಕರಿನಾಯಕ ನನ್ನು ಬಂಧಿಸಿದ. ಹಾಲಪ್ಪನಾಯಕನಿಗೆ ಮತ್ತೋಡಿನ ಪಟ್ಟ ಸಿಗಲಿಲ್ಲ.

ಈ ಪಾಳೆಯಗಾರರು ಅನೇಕ ಮಠಗಳು ಮತ್ತು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದ್ದ ಇವರು ಅನೇಕ ಕೆರೆ ಕಾಲುವೆಗಳನ್ನು, ಬಾವಿಗಳನ್ನು ಕಟ್ಟಿಸಿದರು. ಇಂದಿಗೂ ಇವುಗಳನ್ನು ನೋಡಬಹುದಾಗಿದೆ. ಕಲಾವಿದರು ಹಾಗೂ ಶಿಲ್ಪಿಗಳು ಇವರ ಆಸ್ಥಾನದಲ್ಲಿದ್ದರು. ಇವರ ಕಾಲದಲ್ಲಿ ತಯಾರಾಗುತ್ತಿದ್ದ ಗಾಜಿನ ಬಳೆಗಳು ವಿಶಿಷ್ಟವಾದವು. ಮುರಿಗಾಮಠ ಮತ್ತು ಅರಮನೆಗಳಲ್ಲಿ ಚಿತ್ರಕಲಾವಿದರು ಅನೇಕ ಭಿತ್ತಿಚಿತ್ರಗಳನ್ನು ಬಿಡಿಸಿದ್ದರು. (ಎ.ವೈ.)

**ಸುಗಟೂರು ಪಾಳೆಯಗಾರರು:** ಕೋಲಾರ ಜಿಲ್ಲೆಯ ಸುಗಟೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆ ಸುತ್ತಣ ಪ್ರದೇಶಗಳನ್ನು ಆಳಿದ ಒಂದು ಮಾಂಡಲಿಕ ಮನೆತನ. ಈ ಕುಲದ ಪಾಳೆಯಗಾರರಿಗೆ ತಮ್ಮೇಗೌಡ ಎಂಬ ಕುಲನಾಮವಿತ್ತು. ಮುಸಲ್ಮಾನರು ಪೆನುಗೊಂಡೆಯನ್ನು ಆಕ್ರಮಿಸಿದಾಗ, ತಮ್ಮೇಗೌಡ ಸಲ್ಲಿಸಿದ ಸಹಾಯಕ್ಕೆ ಕೃತಜ್ಞತಾರೂಪವಾಗಿ

ಅವನಿಗೆ ಪೆನುಗೊಂಡೆಯ ಅರಸನು ಚಿಕ್ಕರಾಯ ಎಂಬ ಬಿರುದನ್ನು ದಯಪಾಲಿಸಿದ. ತಮ್ಮೇಗೌಡನ ಪತ್ನಿ ವೀರಮಾಂಬೆ. ಈ ದಂಪತಿಗಳ ಮಗ 2ನೆಯ ತಮ್ಮಭೂಪಾಲ. ಇವನು ಭೀಮನದುರ್ಗವನ್ನು ಹಿಡಿದು ಕರ್ಣಾಟಕ ರಾಜನ ಶತ್ರುಗಳನ್ನು ನಾಶಮಾಡಿದ. ಇದಕ್ಕೆ ಪ್ರತಿಯಾಗಿ ಕರ್ಣಾಟಕ ರಾಜನಿಂದ ಸುವರ್ಣ ವೃಷಭಧ್ವಜವನ್ನು ಪಡೆದ (1632). ಇವನ ಪತ್ನಿ ವೆಂಕಟಾಂಬೆ. ಇವರ ಮಗ 3ನೆಯ ತಮ್ಮಭೂಪ.

ಹೊಸಕೋಟೆದುರ್ಗ ತಮ್ಮೇಗೌಡನಿಂದ 1595ರಲ್ಲಿ ನಿರ್ಮಿತವಾಯಿತು. ಆತ ಇಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದ. ಈತ ಒಂದು ಸೈನ್ಯ ಸಜ್ಜುಗೊಳಿಸಿಕೊಂಡು ಆನೇಕಲ್ಲು, ಮುಳಬಾಗಲು, ಪುಂಗನೂರು ಪ್ರಾಂತ್ಯಗಳನ್ನು ಜಯಿಸಿ ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಈ ಕಾಲಕ್ಕೆ ಬಿಜಾಪುರದ ಚಿಕ್ಕಣ್ಣಸೆಟ್ಟಿ, ಕಳಸಣ್ಣಸೆಟ್ಟಿ ಎಂಬ ವ್ಯಾಪಾರಿಗಳಿಬ್ಬರು ಬಂದು ತಮ್ಮೇಗೌಡನಲ್ಲಿ ಆಶ್ರಯ ಬೇಡಿದರು. ತಮ್ಮೇಗೌಡ ಚಿಕ್ಕಣ್ಣಸೆಟ್ಟಿಯನ್ನು ಕೋಲಾರಕ್ಕೂ ಕಳಸಣ್ಣ ಸೆಟ್ಟಿಯನ್ನು ಹೊಸಕೋಟೆಗೂ ಪಟ್ಟಣಸೆಟ್ಟಿಗಳನ್ನಾಗಿ ನೇಮಿಸಿದ. ತಮ್ಮೇಗೌಡ 1632ರ ವರೆಗೆ ಅಧಿಕಾರದಲ್ಲಿದ್ದ. ಇವನ ಉತ್ತರಾಧಿಕಾರಿ 2ನೆಯ ತಮ್ಮೇಗೌಡ. ಇವನಿಗೆ ಇಬ್ಬರು ಪುತ್ರರಿದ್ದರು. ಈತ ತನ್ನ ಮರಣಕಾಲಕ್ಕೆ ಪಾಳೆಯವನ್ನು ವಿಭಾಗಿಸಿ ಹೊಸಕೋಟೆಯನ್ನು ಒಬ್ಬನಿಗೂ (3ನೆಯ ತಮ್ಮೇಗೌಡ) ಕೋಲಾರವನ್ನು ಇನ್ನೊಬ್ಬನಿಗೂ ನೀಡಿದ. ಉದ್ದಾಮ ಕವಿಯಾಗಿದ್ದ ಈತ ನಾಲ್ಕು ಸಾವಿರ ಷಟ್ಪದಿಗಳಿಂದ ಕೂಡಿದ ಶಂಕರವಿಜಯ ಎಂಬ ಕಾವ್ಯವನ್ನು ಕನ್ನಡದಲ್ಲಿ ರಚಿಸಿದ್ದಾನೆ. ರಸಿಕ ಮನೋರಂಜನಿ, ಕೌಮುದೀವ್ಯಾಖ್ಯಾನ ಎಂಬ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಈತ ರಚಿಸಿದ ಸೌಂದರೇಶ ಚರಿತ್ರಮು, ರಾಜೇಂದ್ರಚೋಳ ಚರಿತ್ರಮು, ಕುಮಾರಾರ್ಜುನೀಯ ಎಂಬ ಕೃತಿಗಳು ತೆಲುಗಿನಲ್ಲಿವೆ. ಇವುಗಳ ಜೊತೆಗೆ ಶಿವದರ್ಪಣ ಎಂಬ ಗ್ರಂಥವನ್ನು ವಿದ್ವಾಂಸರಿಂದ ಬರೆಯಿಸಿದ. ಇವನ ಬಳಿ ಅಮೂಲ್ಯ ಗ್ರಂಥಭಂಡಾರವಿತ್ತು. ಹೊಸಕೋಟೆಯಲ್ಲಿರುವ ದ್ರಾವಿಡ ಶೈಲಿಯ ಅವಿಮುಕ್ತೇಶ್ವರ ದೇವಾಲಯ ನಿರ್ಮಾಣವಾದದ್ದು ಇವನ ಕಾಲದಲ್ಲೇ.

ಕೆಲಕಾಲಾನಂತರ ಸುಗಟೂರು ಪಾಳೆಯಪಟ್ಟು ಬಿಜಾಪುರ ನವಾಬನ ಕೈವಶವಾಗಿ ಆಗ ಬಿಜಾಪುರದ ಮಾಂಡಲಿಕನಾಗಿ ಬೆಂಗಳೂರಲ್ಲಿ ನೆಲಸಿದ್ದ ಶಹಾಜಿಗೆ ಜಹಗೀರಿಯ ರೂಪದಲ್ಲಿ ಸೇರಿತು. 1663ರಲ್ಲಿ ಈ ಪ್ರಾಂತಗಳು ಮೊಗಲ್ ದಳಪತಿ ಖಾಸಿಂಖಾನನ ವಶವಾದುವು. ಅನಂತರ ಶಿರಾ ಪ್ರಾಂತ್ಯದ ಭಾಗವಾದುವು. 1756ರಲ್ಲಿ ಹೊಸಕೋಟೆಯನ್ನು ಮೈಸೂರು ಸೇನೆಗಳು ಜಯಿಸಿದುವು. ಮರುವರ್ಷವೇ ಅದು ಮರಾಠರ ಕೈವಶವಾಯಿತು. ಹೊಸಕೋಟೆ ಹೀಗೆ ಹಲವಾರು ಬಾರಿ ಹಸ್ತಾಂತರವಾಗಿ ಕೊನೆಗೆ ಹೈದರ್ ಅಲಿಯ ವಶಕ್ಕೆ ಬಂದು 1761ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸೇರ್ಪಡೆ ಹೊಂದಿತು. (ಎಂ.ಕೆ.ಬಿ.)

**ಹರಪನಹಳ್ಳಿ ಪಾಳೆಯಗಾರರು:** ಬಳ್ಳಾರಿ ಜಿಲ್ಲೆಯ ಪಾಳೆಯಗಾರರಲ್ಲಿ ಪ್ರಬಲವಾಗಿದ್ದ ಮನೆತನ. ಜಾತಿಯಲ್ಲಿ ಬೇಡರಾಗಿದ್ದ ಇವರು ಅನಂತರ ವೀರಶೈವ ಧರ್ಮವನ್ನು ಸ್ವೀಕರಿಸಿದರು. ಇವರಿಗೆ ಒಟ್ಟು 460 ಹಳ್ಳಿಗಳು ಸೇರಿದ್ದು, ಎಂಟು ಲಕ್ಷ ರೂಪಾಯಿಗಳ ವಾರ್ಷಿಕ ವರಮಾನವಿತ್ತು. ಈ ವಂಶದ ಮೂಲಪುರುಷ ದಾದಯ್ಯನಾಯಕ. ವಿಜಯನಗರ ಪತನಾನಂತರ ಈತ ತನ್ನ ಅನುಯಾಯಿಗಳ ಬೆಂಬಲಪಡೆದು ನಾಯಕನಾಗಿ ಬಾಗಳಿ ಮತ್ತು ಅದರ ಸುತ್ತಣ ಪ್ರದೇಶವನ್ನು ಆಳಲಾರಂಭಿಸಿದ.

ದಾದಯ್ಯನ ಸಂಬಂಧಿ ಜಕ್ಕಣ್ಣನಾಯಕ ಚಿತ್ರದುರ್ಗದ ಪಾಳೆಯಗಾರನಾಗಿದ್ದ. ನೆರೆಯ ಪಾಳೆಯಗಾರನಾಗಿದ್ದ ಕೆಂಗಣ್ಣನಾಯಕ ಈತನ ಮೇಲೆ ಯುದ್ಧಕ್ಕೆ ಬಂದಾಗ ಜಕ್ಕಣ್ಣನಾಯಕ ದಾದಯ್ಯನ ಸಹಾಯವನ್ನು ಕೋರಿದ. ದಾದಯ್ಯನು ಕೆಂಗಣ್ಣನಾಯಕನನ್ನು ಎದುರಿಸಿ ಸೋಲಿಸಿದ. ಉಪಕೃತನಾದ ಜಕ್ಕಣ್ಣನಾಯಕ ತನ್ನ ಮಗಳು ಹೊನ್ನಾಯಿ ನಾಯಕಿಯನ್ನು ದಾದಯ್ಯನಿಗೆ ಕೊಟ್ಟು ಮದುವೆ ಮಾಡಿದನಲ್ಲದೆ ಚಿತ್ರದುರ್ಗ ಪ್ರಾಂತದ ಸ್ವಲ್ಪ ಭಾಗವನ್ನೂ ಉಚ್ಚಂಗಿದುರ್ಗವನ್ನೂ ಬಳುವಳಿಯಾಗಿ ಕೊಟ್ಟ. ಕೆಲಕಾಲಾನಂತರ ದಾದಯ್ಯನಾಯಕನಿಗೂ ಜಕ್ಕಣ್ಣನಾಯಕನಿಗೂ ವಿರಸವುಂಟಾಗಿ ಯುದ್ಧ ನಡೆಯಿತು. ಆ ಸಮಯದಲ್ಲಿ ಹೊನ್ನಾಯಿ ತಂದೆಯ ಕಡೆ ತನ್ನ ಒಲವನ್ನು ವ್ಯಕ್ತಪಡಿಸಿದಳು. ಆಗ ದಾದಯ್ಯ ಆಕೆಯನ್ನು ಉಚ್ಚಂಗಿದುರ್ಗದ ಶಿಖರದ ಮೇಲಿಂದ ಕೆಳಗಿನ ಕೆರೆಗೆ ತಳ್ಳಿ ಕೊಂದ ಎಂಬುದು ಕಥೆ. ಈಗಲೂ ಈ ಕೆರೆಗೆ ಹೊನ್ನಾಯಿಕೆರೆ ಎಂದೇ ಹೆಸರು. ಅನಂತರ ದಾದಯ್ಯ ಅಕ್ಕಪಕ್ಕದ ಪಾಳೆಯಗಾರರಾದ ಜರಮಲೆಯ ನಾಯಕನ ಮಗಳು ಜಂಪಾನಾಗತಿಯನ್ನೂ ಗುಡಿಕೋಟೆ ಪಾಳೆಯಗಾರನ ಮಗಳಾದ ಭರಮನಾಗತಿಯನ್ನೂ ವಿವಾಹವಾದ. ದಾದಯ್ಯ ಬಿಜಾಪುರದ ಸುಲ್ತಾನರಿಗೆ ಅಧೀನನಾಗಿದ್ದಂತೆ ತೋರುತ್ತದೆ. ಇವನು 1592ರಲ್ಲಿ ನಿಧನನಾದ.

ದಾದಯ್ಯನ ಅನಂತರ ಆಳಿದ ಪ್ರಮುಖ ಪಾಳೆಯಗಾರರು: ರಂಗನಾಯಕ (ಸು.1592–1616); ಬರ್ಮಣ್ಣನಾಯಕ (ಸು.1616–50); ಓಬಣ್ಣನಾಯಕ (ಸು.1650–55); ವೀರನಾಯಕ (ಸು.1655–67); ಮುಮ್ಮಡಿನಾಯಕ (ಸು.1667–87); ಬಸವಂತನಾಯಕ (ಕೊಟ್ರಪ್ಪನಾಯಕ, ಸು.1687–1705); ಮರಿಕೊಟ್ರಪ್ಪನಾಯಕ (ಸು.1705–15); ಬಸವಂತನಾಯಕ (1715–21). ಬಸವಂತನಾಯಕನಿಗೆ ಮಕ್ಕಳಿರಲಿಲ್ಲ. ಇವನ ಅನಂತರ ಈ ವಂಶಕ್ಕೆ ದತ್ತುಮಗನಾಗಿ ಬಂದ ಇವನ ಸಂಬಂಧಿಯೊಬ್ಬ ಮುದಿಬಸಪ್ಪನಾಯಕ ಎಂಬ ಹೆಸರಿನಿಂದ ರಾಜ್ಯವಾಳಿದ (ಸು.1741–42). ಅನಂತರ ಈತನ ಹಿರಿಯ ಮಗ ವೀರಬಸಪ್ಪನಾಯಕ ಅಧಿಕಾರಕ್ಕೆ ಬಂದ. ಅನಂತರ ಈತನ ಮಗ ಸೋಮಶೇಖರನಾಯಕ ಪಟ್ಟಕ್ಕೆ ಬಂದ.

ಸೋಮಶೇಖರನಾಯಕ (ಸು.1742–66) ಹರಪನಹಳ್ಳಿ ಪಾಳೆಯಗಾರರಲ್ಲಿ ಪ್ರಸಿದ್ಧನಾದವನು. ಈತ ಪರಾಕ್ರಮಿ ಮತ್ತು ದಕ್ಷ ಆಡಳಿತಗಾರ. ರಾಯದುರ್ಗದ ಪಾಳೆಯಗಾರರೊಂದಿಗೆ ಸೇರಿ, ಚಿತ್ರದುರ್ಗದ ಕೋಟೆಯನ್ನು ಮುತ್ತುವುದರಲ್ಲಿ ಬಿದನೂರು ನಾಯಕರಿಗೆ ಸಹಾಯಕನಾಗಿದ್ದ. ಈತನ ಆಡಳಿತಾವಧಿಯಲ್ಲಿ ಹರಪನಹಳ್ಳಿ ವೈಭವದ ಸ್ಥಿತಿಯಲ್ಲಿತ್ತು.

ಹರಪನಹಳ್ಳಿ ಪಾಳೆಯಗಾರರು ದಕ್ಷರೂ ಪರಾಕ್ರಮಿಗಳೂ ಆಗಿದ್ದರೂ ಸ್ವತಂತ್ರವಾಗಿ ಆಳಲಿಲ್ಲ. ಬಿಜಾಪುರದ ಆದಿಲ್‌ಶಾಹಿ ಅರಸರಿಗೆ ಕಪ್ಪ ಕೊಡುತ್ತಿದ್ದರಲ್ಲದೆ ಅವರಿಗೆ ನೆರವಾಗಿ ಯುದ್ಧಗಳಲ್ಲೂ ಭಾಗವಹಿಸುತ್ತಿದ್ದರು. ಕಾಲಕ್ರಮೇಣ ಈ ವಂಶದ ನಾಯಕರು ಅಭಿವೃದ್ಧಿಗೆ ಬಂದರು. ಆದಿಲ್‌ಶಾಹಿ ಆಳಿಕೆಯ ಅನಂತರ ಮರಾಠರು ಪ್ರಬಲರಾದಾಗ ಹರಪನಹಳ್ಳಿ ಪಾಳೆಯಗಾರರು ಅವರಿಗೂ ಕಪ್ಪವನ್ನು ಒಪ್ಪಿಸುತ್ತಿದ್ದರು. ಹೈದರ್ ಹರಪನಹಳ್ಳಿ ಪ್ರಾಂತಕ್ಕೆ ದಂಡೆತ್ತಿ ಬಂದಿದ್ದಾಗ ಈ ಪಾಳೆಯಗಾರರು ಅವನಿಗೆ ಸಹಾಯಕರಾಗಿದ್ದರು.

ಸೋಮಶೇಖರನಾಯಕನ ಮರಣಾನಂತರ ಈತನ ಪತ್ನಿ ಸೋಮಮ್ಮಾಜಿ ಗಂಡನ ಸಂಬಂಧಿಯೊಬ್ಬನನ್ನು ರಾಜ್ಯಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಿದಳು. ಈತ ವೀರಬಸಪ್ಪನಾಯಕ ಎಂಬ ಹೆಸರಿನಿಂದ ಆಳಿದ (ಸು.1766–68). ಈತನ ಅನಂತರ ಸೋಮಮ್ಮಾಜಿ ಮತ್ತೊಬ್ಬ ಸಂಬಂಧಿ ಬಸಪ್ಪನಾಯಕನನ್ನು (ಸು.1768–87) ಪಟ್ಟಕ್ಕೆ ತಂದಳು. ಹೈದರ್ ಅಲಿ 1775ರಲ್ಲಿ ಹರಪನಹಳ್ಳಿಯ ಮೇಲೆ ಮತ್ತೆ ಧಾಳಿ ಮಾಡಿ ಕಪ್ಪ ವಸೂಲಿ ಮಾಡಿದ. 1787ರಲ್ಲಿ ಬಸಪ್ಪನಾಯಕನನ್ನು ಟಿಪ್ಪು ಹಿಡಿದು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟನಲ್ಲದೆ, ಆತನ ಅನೇಕ ಸಂಬಂಧಿಗಳನ್ನು ಚಿತ್ರದುರ್ಗದಲ್ಲಿ ಬಂಧಿಸಿದ. ಅವರಲ್ಲಿ ಬಸವಪ್ಪನಾಯಕನ ಒಬ್ಬ ಪತ್ನಿ ಮತ್ತು ಮಗ ಸೋಮಶೇಖರನಾಯಕ ಸೇರಿದ್ದರು. 1792ರಲ್ಲಿ ಮರಾಠ ದಳಪತಿ ಪರಶುರಾಮ ಭಾವು ಹರಪನಹಳ್ಳಿ ಪ್ರದೇಶದಲ್ಲಿ ಯುದ್ಧನಿರತನಾಗಿದ್ದಾಗ ಸೋಮಶೇಖರನಾಯಕನಿಗೆ ರಾಜ್ಯವನ್ನು ದಕ್ಕಿಸಿಕೊಡಲು ಪ್ರಯತ್ನಿಸಿದ. ಆದರೆ ಟಿಪ್ಪು ಹರಪನಹಳ್ಳಿಯ ಮೇಲೆ ಧಾಳಿ ಮಾಡಿ ಇವರನ್ನೆಲ್ಲ ಅಲ್ಲಿಂದ ಓಡಿಸಿದ. 1799ರಲ್ಲಿ ಟಿಪ್ಪು ನಿಧನನಾದ ಮೇಲೆ ಹರಪನಹಳ್ಳಿಯ ದಿವಾನನಾಗಿದ್ದವನು ಸೋಮಶೇಖರನಾಯಕನನ್ನು ಮತ್ತೆ ಮರಾಠ ಪ್ರದೇಶದಿಂದ ಕರೆತಂದು ಹರಪನಹಳ್ಳಿಯನ್ನು ಆಕ್ರಮಿಸಿಕೊಂಡ. ಶೀಘ್ರದಲ್ಲಿಯೇ ಈಸ್ಟ್ ಇಂಡಿಯ ಕಂಪನಿಯ ದಳಪತಿ ಹ್ಯಾರಿಸ್ ಈ ಪ್ರದೇಶವನ್ನು ಕಂಪನಿಯ ಸ್ವಾಧೀನಕ್ಕೆ ತರಲು ನಿರತನಾಗಿದ್ದಾಗ ಸೋಮಶೇಖರನಾಯಕ ಮತ್ತು ಆತನ ದಿವಾನ ಇಬ್ಬರೂ ಕಂಪನಿಗೆ ಕಪ್ಪ ಒಪ್ಪಿಸಿ, ತಮ್ಮ ಪ್ರದೇಶದ ಆಳಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರಲ್ಲಿ ಆದ ಒಪ್ಪಂದ ಸೋಮಶೇಖರನಾಯಕನಿಗೆ ಅನುಕೂಲವಾಗಿರಲಿಲ್ಲ. 1825ರಲ್ಲಿ ಸೋಮಶೇಖರನಾಯಕ ತೀರಿಕೊಂಡ. ಈ ವಂಶಸ್ಥರ ಹಕ್ಕನ್ನು ಕಂಪನಿ ಮಾನ್ಯ ಮಾಡಲಿಲ್ಲ. ಇದರೊಂದಿಗೆ ಹರಪನಹಳ್ಳಿ ಪಾಳೆಯಪಟ್ಟು ಕೊನೆಗೊಂಡಿತು. (ಎಚ್.ವಿ.ಎಸ್.)

**ಹೊಳೆನರಸೀಪುರ ಪಾಳೆಯಗಾರರು:** ಬೇಲೂರಿನ ನಾಯಕರಿಂದ ಪ್ರತ್ಯೇಕಗೊಂಡ ಮನೆತನವೊಂದು ಹೊಳೆನರಸೀಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಸ್ವಲ್ಪಕಾಲ ಹೊಳೆನರಸೀಪುರದ ಸುತ್ತಮುತ್ತಲಿನ ಪ್ರದೇಶವನ್ನು ಆಳಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಬೇಲೂರಿನ ನಾಯಕರ ಗೋತ್ರ, ಸೂತ್ರ, ಶಾಖೆ ಮತ್ತು ಬಿರುದುಗಳನ್ನೇ ಇವರು ಹೊಂದಿದ್ದಾರೆ. ಇವರು ಆಳಿದ ಕಾಲ 16–17ನೆಯ ಶತಮಾನಗಳು. ವಿಜಯನಗರದ ಕೃಷ್ಣದೇವರಾಯನಿಂದ ಇವರಿಗೆ ಉಂಬಳಿಯಾಗಿ ಈ ಪ್ರದೇಶ ಪ್ರಾಪ್ತವಾಗಿತ್ತು. ಈ ಪಾಳೆಯಗಾರರ ವಂಶಾವಳಿ ಹೀಗಿದೆ:



ಈ ಅಧಿಪರು ಮಾಡಿದ ಕೆಲವು ದಾನಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಬೇಲೂರು ನಾಯಕರಿಂದ ಇವರು ಯಾವ ಹಂತದಲ್ಲಿ ಬೇರ್ಪಟ್ಟು ಸ್ವತಂತ್ರರಾದರೆಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. (ಎಚ್.ಎಂ.ಎನ್.ಆರ್.)

**ಪಿಟ್‌ರಿವರ್ಸ್:** 1827–1900. ಬ್ರಿಟಿಷ್ ಪುರಾತತ್ತ್ವಜ್ಞ. ಉತ್ಖನನಕಾರರ ಸಾಮ್ರಾಟನೆಂದು ಪ್ರಸಿದ್ಧ. ಬ್ರಿಟನ್ನಿನ ಯಾರ್ಕ್‌ಷೈರಿನ ಹೋಪ್‌ಹಾಲ್‌ನಲ್ಲಿ 1827 ರಲ್ಲಿ ಜನಿಸಿದ. ಆಗಸ್ಟಸ್ ಹೆನ್ರಿ ಲೇನ್–ಫಾಕ್ಸ್ ಎಂಬುದು ಈತನ ಮೂಲ ಹೆಸರು. ಈತ 19ನೆಯ ವಯಸ್ಸಿನಲ್ಲಿ ಸೈನ್ಯಕ್ಕೆ ಸೇರಿದ; 35 ವರ್ಷಗಳ ಕಾಲ ಅಲ್ಲಿ ಮಹತ್ವಪೂರ್ಣ ಸೇವೆ ಸಲ್ಲಿಸಿ ಲೆಫ್ಟಿನಂಟ್–ಜನರಲ್ ಸ್ಥಾನಕ್ಕೆ ಏರಿದ. 1880ರಲ್ಲಿ ರಿವರ್ಸ್ ಭೂಆಸ್ತಿಗೆ ಒಡೆಯನಾದಾಗ ಇವನಿಗೆ ಪಿಟ್‌ರಿವರ್ಸ್ ಎಂಬ ಹೆಸರೂ ಶ್ರೀಮಂತ ಪದವಿಯೂ ಬಂದುವು. ಪ್ರಾಕ್ತನ ಉತ್ಖನನಗಳಲ್ಲಿ ಈತ ರೂಢಿಗೆ ತಂದ ನಿಖರತೆ, ಉತ್ಖನನ ಪದ್ಧತಿಯಲ್ಲಿ ದಾಖಲಾತಿ ಮತ್ತು ವರದಿಗಳ ಪ್ರಕಟಣ ಕಾರ್ಯದಲ್ಲಿ ನಿರ್ಮಿಸಿದ ಉನ್ನತ ಮಟ್ಟಗಳು–ಇವು ಇತ್ತೀಚಿನವರೆಗೂ ಆದರ್ಶಪ್ರಾಯವಾಗಿ ಉಳಿದಿವೆ.

ಈತನ ಶಾಸ್ತ್ರೀಯ ಕೊಡುಗೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. 1845–80 ರವರೆಗೆ ಸೈನ್ಯದಲ್ಲಿ ಸಿಡಿಮದ್ದಿನ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಪ್ರಾಚೀನ ಕಾಲದಿಂದಲೂ ಬಂದೂಕುಗಳ ತಯಾರಿಕೆಯಲ್ಲಿ ಉಂಟಾದ ಸುಧಾರಣೆಗಳನ್ನು ಅಭ್ಯಸಿಸಲಾರಂಭಿಸಿದ. ಈ ಅಧ್ಯಯನದಲ್ಲಿ ಬಂದೂಕುಗಳ ಕಲಾವಂತಿಕೆ–ನಿರ್ಮಾಣ ಕೌಶಲಗಳಿಗೆ ಪ್ರಾಧಾನ್ಯ ನೀಡದೆ ಅವುಗಳ ರೂಪರೇಷೆ ಮತ್ತು ಉಪಯುಕ್ತತೆಗಳನ್ನು ತಳಹದಿ ಮಾಡಿಕೊಂಡು ವರ್ಗೀಕರಣ ಮಾಡಿದ. ಕ್ರಮೇಣ ಈ ವರ್ಗೀಕರಣ ಸೂತ್ರವನ್ನು ಪ್ರಾಕ್ತನಶಾಸ್ತ್ರ ಮತ್ತು ಮಾನವ ಶಾಸ್ತ್ರಗಳಲ್ಲೂ ಬಳಸಬಹುದೆಂಬುದನ್ನು ತೋರಿಸಿದ. ಯಾವುದೇ ಸಂಸ್ಕೃತಿಯ ಸಂಪೂರ್ಣ ಪರಿಚಯ ಪಡೆಯಲು ಅದರ ವಿಕಾಸವನ್ನು ಅರಿಯಲು ಆ ಸಂಸ್ಕೃತಿಯ ವಿಶಿಷ್ಟ ವಸ್ತುಗಳಿಗಿಂತ ಸಾಮಾನ್ಯ ವಸ್ತುಗಳ ಅಧ್ಯಯನ ಸಾಧಕವೆಂದು ವಾದಿಸಿದ. ಇವನ ಸಮಕಾಲೀನನಾಗಿದ್ದ ಫ್ಲಿಂಡರ್ಸ್ ಪೆಟ್ರಿಯೂ ಇಂಥ ಅಭಿಪ್ರಾಯವುಳ್ಳವನಾಗಿದ್ದು ಇವರಿಬ್ಬರೂ ಆಗಿನ ಇತರ ಸಂಶೋಧಕರಿಗಿಂತ ಭಿನ್ನವಾದ ಹಾದಿಯನ್ನು ತುಳಿದಿದ್ದರು. ಚಾರ್ಲ್ಸ್ ಡಾರ್ವಿನ್ನನ ವಿಕಾಸವಾದದ ಪ್ರಭಾವದ ಛಾಯೆಯನ್ನು ಈ ಪದ್ಧತಿಯಲ್ಲಿ ಕಾಣಬಹುದಾದರೂ, ಸಂಸ್ಕೃತಿಗಳಲ್ಲಿ ಉಂಟಾಗಿರಬಹುದಾದ ಅವನತಿಯ ಚಿಹ್ನೆಗಳನ್ನು ಈತ ನಿರ್ಲಕ್ಷಿಸಲಿಲ್ಲ. ಈತ ವಿಫುಲವಾಗಿ ಸಂಗ್ರಹಿಸಿದ್ದ ಬಂದೂಕುಗಳನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದಲ್ಲಿ ಇವನ ಹೆಸರುಳ್ಳ ಪ್ರತ್ಯೇಕ ವಿಭಾಗದಲ್ಲಿ ಪ್ರದರ್ಶಿಸಲಾಯಿತು. ಈತ ಪ್ರಿಮಿಟಿವ್ ವಾರ್‌ಫೇರ್ ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದ್ದಾನೆ (1867–69).

1880ರಲ್ಲಿ ಪಿತ್ರಾರ್ಜಿತ ಭೂ ಆಸ್ತಿಯೊಂದಿಗೆ ಶ್ರೀಮಂತನಾದ ಮೇಲೆ. ಆಗ ಇವನು ಸೈನ್ಯ ಸೇವೆಯನ್ನು ತ್ಯಜಿಸಿ ವಿಲ್ಟ್‌ಷೈರಿನ ರಷ್‌ಮೋರ್‌ನಲ್ಲಿ ಕ್ರ್ಯಾನ್‌ಬೋರ್ನ್ ಚೇಸ್‌ನಲ್ಲಿ ತನಗೆ ದೊರಕಿದ ಜಮೀನಿನಲ್ಲಿ ಪ್ರಾಕ್ತನ ಅವಶೇಷಗಳ ಸಂಶೋಧನೆಗೆ ಗಮನಹರಿಸಿದ. ಮುಂದೆ ಇಲ್ಲಿ ಅನೇಕ ಉತ್ಖನನಗಳನ್ನು ಶಾಸ್ತ್ರೀಯವಾಗಿ ಮತ್ತು ನಿರ್ದುಷ್ಟ ಪದ್ಧತಿಗಳಿಗೆ ಅನುಸಾರವಾಗಿ ನಡೆಸಿದ. ತನ್ನ ಸಂಶೋಧನೆಗಳ ಫಲಿತಾಂಶವನ್ನು ಎಕ್ಸ್‌ಕವೇಷನ್ಸ್ ಇನ್ ಕ್ರ್ಯಾನ್‌ಬೋರ್ನ್‌ಚೇಸ್ (1887) ಎಂಬ ವಿಸ್ತೃತ ವರದಿಯಲ್ಲಿ ತನ್ನ ಸ್ವಂತ ಖರ್ಚಿನಲ್ಲಿ ಪ್ರಕಟಿಸಿದ. ಉತ್ಖನನಗಳನ್ನು ಮುಂದುವರಿಸಿದ. ಈ ಕುರಿತ ವರದಿಗಳು ಇನ್ನೂ ಮೂರು ಸಂಪುಟಗಳಲ್ಲಿ ಹೊರಬಿದ್ದುವು. ಬ್ರಿಟನ್ನಿನಲ್ಲಿ ರೋಮನ್ನರ ಅವಶೇಷಗಳಿದ್ದ ವುಡ್ ಕಟ್ಸ್, ರಾದರ್ಲೆ ಸೌಲ್ ಲಾಜ್, ಹಾಂಡ್ಲೆಹಿಲ್ ಮತ್ತು ಮಾರ್ಟಿನ್ ಡೌನ್ ಎಂಬ ಹಳ್ಳಿಗಳ ಬಳಿಯಲ್ಲಿ ಈತ ಅಧ್ಯಯನ ನಡೆಸಿದ. ಈ ಪ್ರಾಕ್ತನ ಸಂಶೋಧನೆಗಳೊಂದಿಗೆ ಐತಿಹಾಸಿಕ ಹಾಗೂ ಮಾನವಶಾಸ್ತ್ರೀಯ ಸಂಶೋಧನೆಗಳನ್ನೂ ಮಾಡಿ, ಲಾಕ್ಸ್ ಅಂಡ್ ಕೀಸ್ (1883), ಕಿಂಗ್ ಜಾನ್ಸ್ ಹೌಸ್, ಟೋಲ್ಲಾರ್ಡ್ ರಾಯಲ್ (1890) ಮತ್ತು ವರ್ಕ್ಸ್ ಆಫ್ ಆರ್ಟ್ಸ್ ಫ್ರಮ್ ಡೆನಿನ್ (1900) ಎಂಬ ಕೃತಿಗಳನ್ನು ಪ್ರಕಟಿಸಿದ.

ಈತ ಉತ್ಖನನಶಾಸ್ತ್ರದ ರೀತಿನೀತಿಗಳ ಮೂಲ ಶೋಧಕನಲ್ಲದಿದ್ದರೂ ತನಗೆ ಹಿಂದಿನವರಾದ ವಿಲಿಯಮ್ ಕನಿಂಗ್‌ಟನ್, ರಿಚರ್ಡ್ ಕೋಲ್ಟ್‌ಹೋರ್ ಮೊದಲಾದ ಪುರಾತತ್ವಜ್ಞರ ರೀತಿನೀತಿಗಳನ್ನು ಅಳವಡಿಸಿಕೊಂಡು ತನ್ನ ಪ್ರತಿಭೆಯಿಂದ ಅವಕ್ಕೆ ಒಂದು ಶಾಸ್ತ್ರೀಯ ನಿಖರತೆಯನ್ನು ನೀಡಿದ. ಪದರಶಾಸ್ತ್ರವನ್ನು ಆಧಾರವಾಗಿಟ್ಟುಕೊಂಡು ಮಾನವ ವಸತಿಗಳ ಉತ್ಖನನಗಳ ಸಂಶೋಧನೆ ಮಾಡಿದ ಮೊದಲಿಗರಲ್ಲಿ ಈತನೂ ಒಬ್ಬ. ಮೂರು ಆಯಾಮಗಳ ಬದ್ಧ ಅಳತೆಯ ಪದ್ಧತಿಯನ್ನು ಉತ್ಖನನಗಳಿಗೆ ಅಳವಡಿಸಿಕೊಂಡವರಲ್ಲಿಯೂ ಈತನೇ ಮೊದಲಿಗ. ಉತ್ಖನನದಲ್ಲಿ ದೊರಕಿದ ಎಲ್ಲ ವಸ್ತುಗಳನ್ನು, ಮಹತ್ವದವಲ್ಲವೆಂದು ತೋರುವ ವಸ್ತುಗಳನ್ನೂ ಕೂಡ ದಾಖಲೆ ಮಾಡಬೇಕೆಂದು ಇವನು ವಾದಿಸಿದ. ಪ್ರಾಕ್ತನಶಾಸ್ತ್ರದಲ್ಲಿ ಈ ಪದ್ಧತಿಗಳ ಮಹತ್ವ ಈಗಿನ ಸಂಶೋಧಕರಿಗೆ ಚೆನ್ನಾಗಿ ಮನವರಿಕೆಯಾಗಿದೆ. (ಬಿ.ಕೆ.ಜಿ.)

**ಪಿಪ್ರಹ್ವ:** ಉತ್ತರಪ್ರದೇಶ ರಾಜ್ಯದ ಬಸ್ತಿ ಜಿಲ್ಲೆಯಲ್ಲಿರುವ ಪ್ರಾಚೀನ ಬೌದ್ಧ ಕೇಂದ್ರ. ಇಲ್ಲಿ ಸ್ತೂಪ ಹಾಗೂ ವಿಹಾರಗಳ ಅವಶೇಷಗಳು ಉತ್ಖನನದಲ್ಲಿ ಬೆಳಕಿಗೆ ಬಂದಿವೆ. 1897ರಲ್ಲಿ ಡಬ್ಲ್ಯು.ಬಿ.ಪೇಪೆ ಸ್ತೂಪದ ಮಧ್ಯಭಾಗದಲ್ಲಿ ಉತ್ಖನನ ನಡೆಸಿದಾಗ 5.6 ಮೀ ಆಳದಲ್ಲಿ ಮರಳುಗಲ್ಲಿನ ಪೆಟ್ಟಿಗೆ ಕಂಡುಬಂದಿತು. ಇದರೊಳಗೆ ಸ್ಫಟಿಕ ಹಾಗೂ ಸ್ಟಿಯಟೈಟಿನಿಂದ ಮಾಡಿದ 5 ಕರಂಡಕಗಳಿದ್ದುವು. ಸ್ಟಿಯಟೈಟಿನ ಕರಂಡಕವೊಂದರ ಮೇಲಿದ್ದ ಶಾಸನದಲ್ಲಿ ಸೂಕಿತಿಭತಿನಮ್ ಸಭತಿನಿಕನಮ್ ಸಪುತದಲನಮ್ ಇಯಂ ಸಲಿಲ ನಿಧನೆ ಬುದಸ ಭಗವತೆ ಸತಿಯನಮ್ (ಸುಕೀರ್ತಿ ಮತ್ತು ಆತನ ಸಹೋದರರು, ಸಹೋದರಿಯರು ಗಂಡುಮಕ್ಕಳು, ಅವರ ಪತ್ನಿಯರು ಶಾಕ್ಯ ಭಗವಾನ್ ಬುದ್ಧನ ಶರೀರಾವಶೇಷಗಳುಳ್ಳ ಕರಂಡಕವನ್ನು ನೀಡಿದರು) ಎಂದಿದೆ. ಇದರ ಆಧಾರದ ಮೇಲೆ ಬ್ಯೂಲರ್ ಇಲ್ಲಿರುವ ಅವಶೇಷಗಳು ಬುದ್ಧನದೆಂದು ತರ್ಕಿಸಿದ. ಇವು ಬುದ್ಧನ ಬಳಗದವರ ಅವಶೇಷಗಳೆಂಬುದು ಫ್ಲೀಟ್‌ನ ಅಭಿಪ್ರಾಯ. ಶಾಕ್ಯರು ಕಪಿಲವಸ್ತುವಿನಲ್ಲಿ ನಿರ್ಮಿಸಿದ ಬುದ್ಧನ ಅವಶೇಷಗಳುಳ್ಳ ಸ್ತೂಪ ಇದಾಗಿರಬಹುದೆಂಬ ಅಭಿಪ್ರಾಯಕ್ಕೆ ಈ ಶಾಸನ ಎಡೆಮಾಡಿಕೊಟ್ಟಿತು. ಈ ಸ್ಥಳವೇ ಕಪಿಲವಸ್ತುವಾಗಿರಬಹುದಾದ ಸಾಧ್ಯತೆಯನ್ನೂ ಇದು ಎತ್ತಿಹಿಡಿಯಿತು. ಅಲ್ಲದೆ ಫಾಹಿಯಾನನ ಕೃತಿಯಲ್ಲಿ ಕಪಿಲವಸ್ತು ಲುಂಬಿನಿಯಿಂದ 14.5 ಕಿಮೀ ದೂರದಲ್ಲಿದೆ ಎಂಬ ಉಲ್ಲೇಖವಿದ್ದು ಇದು ಪಿಪ್ರಹ್ವ ಹಾಗೂ ಲುಂಬಿನಿಯ ನಡುವಿನ ಅಂತರದೊಂದಿಗೆ ತಾಳೆಯಾಗುತ್ತದೆ.

1971–72ರಲ್ಲಿ ಕೆ.ಎಂ.ಶ್ರೀವಾಸ್ತವ ಅವರು ಮತ್ತೆ ಸ್ತೂಪದ ಉತ್ಖನನ ನಡೆಸಿದರು. 6 ಮೀ ಆಳದಲ್ಲಿ ಪೇಪೆ ಕಂಡುಹಿಡಿದ ಮರಳುಗಲ್ಲಿನ ಪೆಟ್ಟಿಗೆಯ ಕೆಳಭಾಗದಲ್ಲಿ 2 ಸುಟ್ಟಇಟ್ಟಿಗೆಯ ಸಣ್ಣಕೋಣೆಗಳಿದ್ದು ಅಲ್ಲಿ ಬಳಪಕಲ್ಲಿನ ಕರಂಡಕಗಳು ದೊರೆತವು. 2 ಕರಂಡಕಗಳೊಳಗೆ ಸುಟ್ಟ ಮೂಳೆಗಳಿದ್ದವು. ಇವು ಔತ್ತರೇಯ ಮೆರುಗಿನ ಕಪ್ಪುಮಣ್ಪಾತ್ರೆಯ ಹಂತಕ್ಕೆ ಸಮಕಾಲೀನವಾದುವು. 1973ರಲ್ಲಿ ಸ್ತೂಪದ ಸುತ್ತಲಿನ 4 ವಿಹಾರಗಳ ಅವಶೇಷಗಳನ್ನು ಹೊರತೆಗೆಯಲಾಯಿತು. ಪೂರ್ವ ಭಾಗದಲ್ಲಿದ್ದ ವಿಹಾರದ ಕೋಣೆಗಳಲ್ಲಿ ದೊರೆತ ಸುಟ್ಟಮಣ್ಣಿನ ಮುದ್ರಾಂಕನಗಳ ಮೇಲೆ ಪ್ರ.ಶ.1–2ನೆಯ ಶತಮಾನದ ಬ್ರಾಹ್ಮಿಲಿಪಿಯ (ದೇವಪುತ್ರ–ವಿಹಾರೇ, ಕಪಿಲವಸ್ತು–ಭಿಕ್ಕುಸಂಘಸ್ಯ) ಬರೆಹವಿರುವುದು ಮಹತ್ತ್ವದ ವಿಷಯ. ಈ ಸ್ಥಳವೇ ಕಪಿಲವಸ್ತು ಎಂಬುದು ಇದರಿಂದ ಖಚಿತಪಟ್ಟಿತು. ನೆಲೆಯ ವಾಯವ್ಯ ಅಂಚಿನಲ್ಲಿ ಇಟ್ಟಿಗೆಯ ನೆಲವಿದ್ದ ಸಭಾಭವನದ ಅವಶೇಷಗಳಿವೆ.

ಪ್ರ.ಶ.ಪೂ.5–ಪ್ರ.ಶ.3ನೆಯ ಶತಮಾನದವರೆಗೆ ಪ್ರಮುಖ ಬೌದ್ಧಕೇಂದ್ರವಾಗಿದ್ದ ಈ ನೆಲೆ ಅಗ್ನಿ ಅನಾಹುತದಿಂದ ನಿರ್ನಾಮವಾಯಿತು. ಕುಷಾಣ ಹಾಗೂ ಅಯೋಧ್ಯ ತಾಮ್ರ ನಾಣ್ಯಗಳು, ತಾಮ್ರ ಹಾಗೂ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳು, ತಾಮ್ರದ ಬಟ್ಟಲು ಹಾಗೂ ತಟ್ಟೆ, ಕಬ್ಬಿಣದ ಕೊಕ್ಕೆ–ಮೊಳೆ, ಸುಡಾವೆಮಣ್ಣಿನ ಮಣಿ ಮತ್ತು ಔತ್ತರೇಯ ಮೆರುಗಿನ ಪಾತ್ರೆ ಚೂರುಗಳು ಇಲ್ಲಿ ಸಿಕ್ಕ ಇತರ ಅವಶೇಷಗಳಾಗಿವೆ. (ಜಿ.ಎಸ್‌ಎಮ್.)

**ಪಿಯತ್ರೊ ಡೆಲ್ಲಾವೆಲ್ಲ:** 1586–1652. ವಿಜಯನಗರ ಸಾಮ್ರಾಜ್ಯದ ಸಮಕಾಲೀನದಲ್ಲಿ ಭಾರತಕ್ಕೆ ಭೇಟಿ ನೀಡಿದ ಇಟಲಿಯ ಪ್ರಸಿದ್ಧ ಪ್ರವಾಸಿ ಹಾಗೂ ಶ್ರೇಷ್ಠ ಕಥನಕಾರ. 1586 ನವೆಂಬರ್ 1ರಂದು ರೋಮ್‌ನಲ್ಲಿ ಜನಿಸಿದ. ತಂದೆ ಪೊಂಪಿಯೋ ಡೆಲ್ಲಾವೆಲ್ಲ; ತಾಯಿ ಗಿಯೋವನ್ನ ಆಲ್ಬೆರಿನಿ. ರೋಮ್‌ನಲ್ಲಿ ಡೆಲ್ಲಾವೆಲ್ಲನದು ಹೆಸರಾಂತ ಪುರಾತನ ಮನೆತನವಾಗಿದ್ದು ಈ ಪೀಳಿಗೆಯವರು ಕಾರ್ಡಿನೆಲ್‌ಗಳೂ ಆಗಿದ್ದರು. ಎಡ್ವರ್ಡ್ ಗ್ರೇರವರು ಪೋಪ್ ಹಾನೋರಿಯಸ್ IIIರವರಲ್ಲಿ ರುಸ್ಟಿಕೋ, ಲಿಯೋ X ಕಾಲದಲ್ಲಿ ಆಂಡ್ರಿಯಾ ಡೆಲ್ಲಾವೆಲ್ಲ ಪೀಳಿಗೆಗೆ ಸೇರಿದವರೆಂದು ಉಲ್ಲೇಖಿಸಿದ್ದಾರೆ. ರೋಮಿನ ಚರ್ಚ್ ರಸ್ತೆಯೊಂದಕ್ಕೆ ಸೇಂಟ್ ಆಂಡ್ರಿಯಾ ಡೆಲ್ಲಾವೆಲ್ಲ ಎಂಬ ಹೆಸರೂ ಇದೆ. ವಿದ್ಯಾಭ್ಯಾಸ ಕುರಿತಂತೆ ಮಾಹಿತಿಗಳು ಅಲಭ್ಯವಾಗಿದ್ದರೂ ಶ್ರೇಷ್ಠ ವಿದ್ವಾಂಸನಾಗಿದ್ದ ಇವನು ಇಟಲಿಯ ಬಹುಭಾಗವನ್ನು ಸುತ್ತಿ ಪ್ರವಾಸಿ ಕಥನಕಾರನೆಂದು ಪ್ರಸಿದ್ಧನಾಗಿದ್ದ. ರೋಮ್‌ನ ವಿಜ್ಞಾನ ಹಾಗೂ ಸಾಹಿತ್ಯ ಅಕಾಡೆಮಿಯದ ಉಮೋರಿಸ್ತಿಯದ ಮುಖ್ಯಸ್ಥನಾಗಿದ್ದ. ಡೆಲ್ಲಾವೆಲ್ಲ ಬೆಯತ್ರೀಚೆ ಬೊರಾಚ್ಚ ಮತ್ತು ಮಾನ್ನೈ ಎಂಬ ಇಬ್ಬರು ಪತ್ನಿಯರು. ಪರ್ಷಿಯ ಹಾಗೂ ತುರ್ಕಿ ನಡುವೆ ನಡೆದ ಕದನದಲ್ಲಿ ಹೆದರದೆ ಹೆಂಡತಿಯೊಂದಿಗೆ ಪ್ರವಾಸ ಹೊರಟಾಗ ಮಾನ್ನೈಯೂ ಹಿಂಬಾಲಿಸಿದಳು. ರಕ್ತವನ್ನು ಕಂಡು ಬೆದರದ, ಗುಂಡಿನ ಶಬ್ದಕ್ಕೆ ಅಂಜದ ಕೆಚ್ಚೆದೆಯ ವೀರ ರಮಣಿ ಮಾನ್ನೈ ಎಂದು ತನ್ನ ಹೆಂಡತಿಯನ್ನು ಹೊಗಳಿದ್ದಾನೆ. ಇವನು ಹಲವು ಕಾಲ ಸೈನಿಕನಾಗಿಯೂ ಸೇವೆ ಸಲ್ಲಿಸಿದ.

ಪರ್ಸೆಪಲಿಸ್ ಮತ್ತು ಷಿರಾಜ್ ನಗರಗಳ ಪುರಾತತ್ತ್ವ ಅವಶೇಷ ವೀಕ್ಷಣೆಗೆ 1621 ನವೆಂಬರ್ 1ರಂದು ಹೊರಟ. ಮುಂದುವರಿದು ಪರ್ಷಿಯನ್ ಖಾರಿಯನ್ನು ಸೇರಿದ. ಹೋರ್ಮಸ್ ಬಳಿ 1622 ಡಿಸೆಂಬರ್ 30ರಂದು ತುಂಬಿದ ಹೆರಿಗೆಯ ಕಾರಣದಿಂದ ಮಾನ್ನೈ ಕಾಲವಾದಳು. ಇವನು ಈ ದುರಂತವನ್ನು ದುಃಖಭರಿತನಾಗಿ ತನ್ನ ಪತ್ರದಲ್ಲಿ ತೋಡಿಕೊಂಡಿದ್ದಾನೆ. ತನ್ನ ಹೆಂಡತಿ ಶವವನ್ನು ತನ್ನ ದೇಶದಲ್ಲಿಯೇ ಶವಸಂಸ್ಕಾರ ನೆರವೇರಿಸುವ ಉದ್ದೇಶದಿಂದ ಶವಕ್ಕೆ ಸುಗಂಧ ದ್ರವ್ಯ ಲೇಪಿಸಿದ ಪೆಟ್ಟಿಗೆಯಲ್ಲಿಟ್ಟು ಮಾರಿಯಾ ತಿನಾತಿನ್ ದಿ ಜೀಬಾ ಜಾರ್ಜಿಯನ್‌ಯೊಂದಿಗೆ ಹಡಗಿನಲ್ಲಿ ಹೊರಟು ಇಂಡಿಯ ಸಮುದ್ರ ತೀರಕ್ಕೆ ಬಂದ. ಅಲ್ಲಿಂದ ದಕ್ಷಿಣಕ್ಕೆ ಸಮುದ್ರಯಾನ ಮಾಡಿ ಗುಡ್ ಹೋಪ್ ಭೂಶಿರ ಬಳಸಿ ತನ್ನ ಪತ್ನಿಯ ಶವ ಸಹಿತ 1623 ಜನವರಿ 16 ರಂದು ಭಾರತಕ್ಕೆ ಹಡಗಿನೊಂದಿಗೆ ಪ್ರಯಾಣ ಬೆಳೆಸಿದ. 1623 ಫೆಬ್ರವರಿ 10ರಂದು ಸೂರತ್ ತಲುಪಿ, ಅಲ್ಲಿಂದ ಗೋವದ ಮೂಲಕ ಕರ್ನಾಟಕದ ಹೊನ್ನಾವರ, ಕೆಳದಿ, ಇಕ್ಕೇರಿ (ಕೆಳದಿ ರಾಜಧಾನಿ) ಬಾರ್ಸೆಲೋರ್ (ಬಸರೂರು), ಮಂಗಳೂರು, ಉಲ್ಲಾಳ, ಮನೇಲೆಗಳಿಗೆ ಭೇಟಿ ನೀಡಿದ. ಅಲ್ಲಿಂದ ಕ್ಯಾಲಿಕಟ್ಟೆ (ಕಲ್ಲಿಕೋಟೆ) ಮೂಲಕ ಗೋವಕ್ಕೆ 1624 ನವೆಂಬರ್ 16 ರಂದು ಗೋವಕ್ಕೆ ಹಿಂದಿರುಗಿದ. ಮಸ್ಕಟ್‌ಗೆ ಹಡಗಿನಲ್ಲಿ 1624 ನವೆಂಬರ್ 16 ರಂದು ಹೊರಟು ಅಲ್ಲಿಂದ

ಕಾರವಾನ್ ಮೂಲಕ ಅಲೆಪ್ಪೋಗೆ ಹೋಗಿ, ಅಲ್ಲಿ ಹಡಗು ಏರಿ ಸೈಪ್ರಸ್, ಮಾಲ್ಟ ಮತ್ತು ಸಿಸಿಲಿಗಳ ಮುಖಾಂತರ ನೇಪಲ್ಸನ್ನು 1626 ಫೆಬ್ರವರಿ 5 ರಂದು ತಲುಪಿದ. ಅಲ್ಲಿಂದ 1626 ಮಾರ್ಚ್ 28ರಂದು ತನ್ನ ತಾಯ್ನಾಡಾದ ರೋಮ್ ಅನ್ನು ತಲುಪಿದ. ಈಜಿಪ್ಟಿನ ಪಿರಮಿಡ್ ಪ್ರವೇಶಿಸಿದ ಪ್ರಥಮ ಪ್ರವಾಸಿ ಎಂಬ ಹೆಗ್ಗಳಿಕೆ ಇವನದ್ದು. ಪುರಾತತ್ತ್ವ ಸಂಗ್ರಹಾಸಕ್ತಿಯಿದ್ದ ಈತನ ಕಾಲದ ಪಳೆಯುಳಿಕೆಗಳು ಡ್ರೆಸ್ಡನ್ ಮತ್ತು ತ್ರಿಯೇಸ್ತೆ ವಸ್ತುಸಂಗ್ರಹಾಲಯದಲ್ಲಿವೆ. ಕೆಳದಿ ಇತಿಹಾಸದ ಹಲವು ಮಾದರಿಗಳನ್ನು ತ್ರಿಯೇಸ್ತೆ ವಸ್ತುಸಂಗ್ರಹಾಲಯದಿಂದ ಕೆಳದಿ ವಸ್ತುಸಂಗ್ರಹಾಲಯಕ್ಕೆ ತರಿಸಿದ್ದು ಇಲ್ಲಿ ಗಮನಿಸಬಹುದು.

ಇವನು 17ನೆಯ ಶತಮಾನದಲ್ಲಿ ಕೆಳದಿ ರಾಜ್ಯದಲ್ಲಿ ಹಲವಾರು ದಿನಗಳ ಕಾಲ ವಾಸ ಮಾಡಿ ರಚಿಸಿದ ಪ್ರವಾಸಿ ಕಥನಗಳು ಪುರಾತತ್ತ್ವ ಇತಿಹಾಸದ ಹಿನ್ನೆಲೆಯಿಂದ ಅಪೂರ್ವ ಆಕರಗಳಾಗಿವೆ. ಇಟಲಿ ಭಾಷೆಯಲ್ಲಿದ್ದ ಇದನ್ನು ಎಡ್ವರ್ಡ್ ಗ್ರೇ ಇಂಗ್ಲಿಷ್‌ಗೆ ಭಾಷಾಂತರಿಸಿದ. ಇದು ಬಹುಪಾಲು ಕೆಳದಿ ಇತಿಹಾಸ ಮತ್ತು ಸಂಸ್ಕೃತಿಗಳನ್ನೇ ಒಳಗೊಂಡಿದೆ. 1650–58ರಲ್ಲಿ ಇಟಲಿ ಭಾಷೆಯಲ್ಲಿರುವ ವಿಯಜ್ಜಿ (ಪ್ರವಾಸಿ ಕಥನ) 1662–64 ರಲ್ಲಿ ಫ್ರೆಂಚ್ ಭಾಷೆಗೂ 1674ರಲ್ಲಿ ಜರ್ಮನ್ ಭಾಷೆಗೂ ಅನುವಾದವಾಗಿ, ಭಾರತ, ಕನ್ನಡನಾಡಿನ ಇತಿಹಾಸ ಇಂಗ್ಲಿಷ್‌ನಲ್ಲಿ 1664ರಲ್ಲಿ ಅನುವಾದಗೊಂಡು 1892ರಲ್ಲಿ ಹಕ್ಲುಯಿತ್ ಸೊಸೈಟಿ 2 ಸಂಪುಟಗಳಲ್ಲಿ ಪ್ರಕಟಿಸಿತು. ಭಾರತ ಪ್ರವಾಸಿ ಕಥನ ಕುರಿತು ಇವನಷ್ಟು ನಿಖರವಾಗಿ ಮತ್ತು ವಿಸ್ತಾರವಾಗಿ ವರ್ಣಿಸಿದವರಿಲ್ಲವೆಂದು ಸರ್ ಹೆನ್ರಿಯೂಲ್ ಶ್ಲಾಘಿಸಿದ್ದಾನೆ. ಈತನ ಪ್ರವಾಸಿ ಕಥನದಲ್ಲಿರುವ ಕೆಳದಿ ರಾಜ್ಯದ ದೇವಾಲಯಗಳು, ಕೋಟೆಗಳು, ಪುಷ್ಕರಣಿಗಳು, ರಥಗಳು, ಮಾರ್ಗಗಳು, ಪ್ರಾಚೀನ ಹಸ್ತಪ್ರತಿಗಳು, ದೀಪೋತ್ಸವಗಳು, ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವರ್ಣನೆಗಳ ಬಹುತೇಕ ಪಳೆಯುಳಿಕೆಗಳನ್ನು ಕೆಳದಿ ವಸ್ತುಸಂಗ್ರಹಾಲಯದ ಶೇಖರಣೆಗಳಲ್ಲಿ ಈಗಲೂ ಸೂಕ್ಷ್ಮವಾಗಿ ಗಮನಿಸಬಹುದು. ಆ ಕಾಲದ ವಿದ್ಯಾಭ್ಯಾಸ ಕ್ರಮದ ಈತನ ವರ್ಣನೆ, 19ನೆಯ ಶತಕಗಳವರೆಗೂ ಇದ್ದುದನ್ನು ಕಂಡುಕೊಳ್ಳಬಹುದು. ನಿರ್ಮಾಣ ಹಂತದ ಅಮೂಲ್ಯ ಪುರಾತತ್ತ್ವ ಕೆಳದಿ ದೇಗುಲವೊಂದನ್ನು ಇವನು ಕಣ್ಣಾರೆ ಕಂಡು ರೇಖಾಚಿತ್ರದಲ್ಲಿ ಸೆರೆ ಹಿಡಿದು ಅಳವಡಿಸಿರುವುದನ್ನು ಇಟಲಿ ಭಾಷೆಯ ಕಥನದಲ್ಲಿ ಕಾಣಬಹುದು. ಈತ 1652 ಏಪ್ರಿಲ್ 21ರಂದು ರೋಂನಲ್ಲಿ ನಿಧನನಾದ. (ಕೆ.ಜಿ.ಜಿ.)

**ಪಿರಮಿಡ್ಡುಗಳು:** ವಾಸ್ತುಶಿಲ್ಪದಲ್ಲಿ ಕಲ್ಲು ಅಥವಾ ಇಟ್ಟಿಗೆಗಳನ್ನು ಬಳಸಿ ನಿರ್ಮಿಸಿದ ಪಂಚಮುಖ ಘನಾಕೃತಿಯ ಭವ್ಯ ಕಟ್ಟಡಗಳು. ಪಿರಮಿಡ್ಡಿನಲ್ಲಿ ಆಯಾಕಾರದ ಅಡಿಪಾಯವಿದ್ದು, ಒಂದು ಮುಖ ಮತ್ತು ಇಳಿಜಾರಾದ ತ್ರಿಕೋಣಾಕಾರದ ನಾಲ್ಕು ಮುಖಗಳು ಕಟ್ಟಡದ ತುದಿಯಲ್ಲಿ ಒಂದು ಬಿಂದುವಿನಲ್ಲಿ ಕೂಡುವುವು. ಸರಳವಾಗಿ ಹೇಳುವುದಾದರೆ ಪಿರಮಿಡ್ಡು ಕಲ್ಲಿನಲ್ಲಿ ನಿರ್ಮಿಸಿದ್ದಾದರೂ ಅದರ ಆಕಾರ ಮರಳುರಾಶಿಯಂತಿರುತ್ತದೆ. ಪಿರಮಿಡ್ಡು ಎಂದ ಕೂಡಲೇ ಪ್ರಾಚೀನ ಈಜಿಪ್ಟಿನ ಭವ್ಯ ರಾಜರ ಸಮಾಧಿಗಳು ನೆನಪಿಗೆ ಬರುತ್ತವೆ. ಈಜಿಪ್ಟ್, ಸೂಡಾನ್, ಇಥಿಯೋಪಿಯ, ಮೆಕ್ಸಿಕೊ ಮೊದಲಾದ ಪ್ರಪಂಚದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಇವುಗಳ ನಿರ್ಮಾಣವಾಗಿದ್ದರೂ ಪ್ರಾಚೀನ ಈಜಿಪ್ಟಿನ ಅರಸರ ಸಮಾಧಿಗಳಿಗೆ ನಿರ್ಮಿಸಿದ ಪಿರಮಿಡ್ಡುಗಳ ಪ್ರಪಂಚದ ಏಳು ಅದ್ಭುತಗಳಲ್ಲಿ ಸೇರಿ ಪ್ರಸಿದ್ಧವೆನಿಸಿವೆ.

ಪ್ರಾಚೀನ ಈಜಿಪ್ಟಿನ ಭಾಷೆಯಲ್ಲಿ ಪಿರಮಿಡ್ಡಿಗೆ ಮೇರ್ ಎಂಬ ಪದ ಬಳಕೆಯಲ್ಲಿತ್ತು. ಗ್ರೀಕ್ ಭಾಷೆಯಲ್ಲಿ ಬಹುವಚನ ರೂಪದ ಪಿರಮಿಡೀಸ್ ಎಂಬ ಪದ ಇದೆ. ಅದಕ್ಕೆ ಪಿರಮಿಡ್ಡಿನ ಎತ್ತರವನ್ನು ಸೂಚಿಸುವ ಅರ್ಥವಿದೆ. ಈಜಿಪ್ಟಿನ ಪಿರಮಿಡ್ಡುಗಳು ಪ್ರಾಚೀನ ರಾಜವಂಶಗಳ ಕಾಲಕ್ಕೆ ಅಂದರೆ ಮೂರನೆಯ ರಾಜಮನೆತನದಿಂದ ಟಾಲಮಿ ದೊರೆಗಳ ಆಳಿಕೆ ಕಾಲದವರೆಗೂ ಅಂದರೆ ಸು.2700 ವರ್ಷಗಳಷ್ಟು ಕಾಲ ನಿರ್ಮಿತವಾಗುತ್ತಿದ್ದರೂ ಅವುಗಳ ಉಚ್ಛ್ರಾಯ ಕಾಲವೆಂದರೆ 4 ನೆಯ ರಾಜ ಮನೆತನದ ಕಾಲ (ಪ್ರ.ಶ.ಪೂ.2700–2560). ಪ್ರ.ಶ.ಪೂ.5ನೆಯ ಶತಮಾನದಲ್ಲಿ ಗ್ರೀಕ್ ಇತಿಹಾಸಕಾರ ಹಿರೋಡಾಟಸ್ ತನ್ನ ವರ್ಣನೆಯಿಂದ ಈಜಿಪ್ಟಿನ, ಅದರಲ್ಲೂ 4 ರಾಜವಂಶಗಳ, ಕುಫು, ಖಾಫ್ರೆ ಮತ್ತು ಮೆನ್‌ಕುರೆ ದೊರೆಗಳ ಗೀಜಾ ಬಳಿಯಿರುವ ಮೂರು ಪಿರಮಿಡ್ಡುಗಳನ್ನು ಪ್ರಪಂಚಪ್ರದ್ಧವಾಗುವಂತೆ ಮಾಡಿದ್ದಾನೆ. ಅತ್ಯಂತ ದೊಡ್ಡದಾದ ಮತ್ತು ಪ್ರಾಚೀನವಾದ ಮೂರು ಪಿರಮಿಡ್ಡುಗಳು ಒಂದೇ ಸ್ಥಳದಲ್ಲಿ ನಿರ್ಮಾಣವಾಗಿರುವುದು ಇವುಗಳ ಪ್ರಸಿದ್ಧಿಗೆ ಮುಖ್ಯ ಕಾರಣ. ಗೀಜಾ ಪಿರಮಿಡ್ಡುಗಳು ಫ್ಯಾರೋ ದೊರೆಗಳ ಭವ್ಯತೆ ಮತ್ತು ಶಕ್ತಿ ಸಾಹಸಗಳ ಕುರುಹುಗಳೆಂದು ಪರಿಗಣಿಸಲಾಗಿವೆ. ಈಚಿನ ಕಾಲದಲ್ಲಿ ಪಿರಮಿಡ್ಡುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದುದೇ ಅಲ್ಲದೆ, ಕುಫುವಿನ ಬೃಹತ್ ಪಿರಮಿಡ್ಡಿನ ಯಂತ್ರಶಿಲ್ಪಿಕ ವಿವರಗಳನ್ನು ಒದಗಿಸಿದ ಕೀರ್ತಿ 1880–82 ನಡುವೆ ಸಂಶೋಧನೆ ಮಾಡಿದ ಸರ್ ಫ್ಲಿಂಡರ್ಸ್ ಪೆಟ್ರಿಗೆ ಸಲ್ಲುತ್ತದೆ. ಪಿರಮಿಡ್ಡುಗಳ ರಚನಾತಂತ್ರಗಳ, ಅವುಗಳ ಉದ್ದೇಶಗಳ ಬಗೆಗೂ ಅನೇಕ ಸಂಗತಿಗಳನ್ನು ತಿಳಿಸಿದ್ದಾನೆ. ಈತನ ಗ್ರಂಥ ದಿ ಪಿರಮಿಡ್ಸ್ ಅಂಡ್ ಟೆಂಪಲ್ಸ್ ಆಫ್ ಈಜಿಪ್ಟ್ ಒಂದು ಉತ್ತಮ ಗ್ರಂಥ. ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ನಡೆಸಿದ ಐ.ಇ.ಎಸ್. ಎಡ್ವರ್ಡ್ಸನ ದಿ ಪಿರಮಿಡ್ಸ್ ಆಫ್ ಈಜಿಪ್ಟ್ ಮತ್ತೊಂದು ಉತ್ತಮ ಗ್ರಂಥ (1947).

ಅನೇಕ ಪಿರಮಿಡ್ಡುಗಳು ಈಗ ಸಂಪೂರ್ಣವಾಗಿ ನಾಶವಾಗಿವೆ. ಇವುಗಳಲ್ಲಿ ಇಟ್ಟಿದ್ದ ಚಿನ್ನ, ವಜ್ರ, ರತ್ನಗಳ ಸಂಪತ್ತನ್ನು ಲೂಟಿ ಮಾಡುವ ಪ್ರವೃತ್ತಿ ಪಿರಮಿಡ್ಡುಗಳ ನಿರ್ಮಾಣ ಕಾಲದಲ್ಲೇ ಪ್ರಾರಂಭವಾಗಿತ್ತು. ಈಚಿನ ಕಾಲದಲ್ಲಿ ಅವುಗಳ ನಿರ್ಮಾಣಕ್ಕಾಗಿ ಬಳಸಿದ ಕಲ್ಲುಗಳನ್ನು ಕಿತ್ತು ಆಧುನಿಕ ನಗರಗಳನ್ನು ನಿರ್ಮಿಸಲು ಬಳಸಲಾಗುತ್ತಿದೆ. ಪ್ರಾಚೀನ ಮೆಂಫಿಸ್ ಅಥವಾ ಆಧುನಿಕ ಕೈರೋ ಸನಿಯದಿಂದ ಹಿಡಿದು ದಕ್ಷಿಣದಲ್ಲಿದ್ದ ಥೀಬ್ಸ್ ನಗರ ನಿವೇಶನದವರೆಗೂ ಅಂದರೆ ಸು.800 ಕಿಮೀ ಪ್ರದೇಶದಲ್ಲಿ ವಿವಿಧ ಪ್ರಮಾಣದ ನೂರಾರು ಪಿರಮಿಡ್ಡುಗಳು ಉಳಿದು ಬಂದಿವೆ. ಮೊದಲ ಕಾಲದ ಪಿರಮಿಡ್ಡುಗಳು ರಾಜರ ಸಮಾಧಿಗಳಾಗಿದ್ದವು. ಅನಂತರದ ಕಾಲದಲ್ಲಿ ಉಚ್ಚ ರಾಜಕೀಯ ವ್ಯಕ್ತಿಗಳು, ಶ್ರೀಮಂತರೂ ತಮ್ಮ ಮರಣೋತ್ತರ ವಸತಿಗಾಗಿ ಸಣ್ಣ ಪ್ರಮಾಣದ ಪಿರಮಿಡ್ಡುಗಳನ್ನು ನಿರ್ಮಿಸುತ್ತಿದ್ದರು. ಮೃತರ ಶರೀರವನ್ನು ನಷ್ಟವಾಗದಂತೆ ಸಂರಕ್ಷಿಸದಿದ್ದರೆ ಪ್ರೇತ ಲೋಕದಲ್ಲಿ ಅವರ ಆತ್ಮ ಉಳಿಯುವುದಿಲ್ಲವೆಂಬ ಈಜಿಪ್ಟಿನ ಜನರ ನಂಬಿಕೆಗನುಸಾರವಾಗಿ ಅರಸರ, ಶ್ರೀಮಂತ ವರ್ಗದವರ ಮೃತ ದೇಹಗಳನ್ನು ಈ ಪಿರಮಿಡ್ಡುಗಳಲ್ಲಿ ಸುಭದ್ರವಾಗಿ ಇಡಲಾಗುತ್ತಿತ್ತು. ದೇಹವನ್ನು ಪಿರಮಿಡ್ಡಿನೊಳಗಿನ ಸಮಾಧಿ ಕೋಣೆಯಲ್ಲೋ ಅಥವಾ ಅದರ ಕೆಳಗಡೆ ಕಲ್ಲಿನಲ್ಲಿ ಕೊರೆದ ಕೋಣೆಯಲ್ಲೋ ಹುಗಿದಿಡಲಾಗುತ್ತಿತ್ತು.



ಪಿರಮಿಡ್ಡುಗಳು, ಗೀಜಾ

ಪ್ರಾಚೀನ ರಾಜವಂಶಗಳ ಕಾಲದಲ್ಲಿ (ಪ್ರ.ಶ.ಪೂ.2700–2300) ಪಿರಮಿಡ್ಡಿನ ಘಟಕಗಳು ಹೀಗಿರುತ್ತಿದ್ದುವು: 1.ಸಮಾಧಿಯ ಮೇಲೆ ಕಟ್ಟಿದ ಅಥವಾ ಸಮಾಧಿಯನ್ನೊಳಗೊಂಡ ಪಿರಮಿಡ್ಡು, 2.ಎತ್ತರವಾದ ಪ್ರದೇಶದಲ್ಲಿ ನಿಂತಿರುವ ಪಿರಮಿಡ್ಡನ್ನು ಆವರಿಸಿದ ವಿಶಾಲ ಪ್ರಾಂಗಣ, 3. ಅದಕ್ಕೆ ಹೊಂದಿದಂತೆ ಕಟ್ಟಲಾದ ಶವಮಂದಿರ, 4. ಶವಮಂದಿರದಿಂದ ನದಿ ದಂಡೆಯವರೆಗೆ ಹೋಗುವ ಆವೃತ ಮಾರ್ಗ ಮತ್ತು 5. ನದಿಯ ದಂಡೆಯಲ್ಲಿ ನಿರ್ಮಿತವಾದ ಬಲಿ ಮಂಟಪ. ಈ ಸಾಧಾರಣ ಅಂಶಗಳಲ್ಲದೇ ಮಹತ್ವಪೂರ್ಣ ಪಿರಮಿಡ್ಡುಗಳಲ್ಲಿ ಕೆಲವು ಹೆಚ್ಚಿನ ಘಟಕಗಳನ್ನು ಕಾಣಬಹುದು. ಕುಫುವಿನ ಪಿರಮಿಡ್ಡಿನ ಸುತ್ತ ರಾಜಮನೆತನದವರ ಸಣ್ಣ ಪ್ರಮಾಣದ ಪಿರಮಿಡ್ಡುಗಳು, ಶ್ರೀಮಂತ ವರ್ಗದವರ ಮಸ್ತಾಬ ಗೋರಿಗಳು ಅಧಿಕ ಸಂಖ್ಯೆಯಲ್ಲಿವೆ. 1954ರಲ್ಲಿ ಬೆಳಕಿಗೆ ಬಂದ ರಾಜನ ದೇಹವನ್ನು ಅವನ ಪಿತೃ ರಾ ದೇವತೆಯ ಲೋಕಕ್ಕೆ ಸಾಗಿಸಲು ಬಳಸಲಾಗುತ್ತಿತ್ತೆಂದು ನಂಬಲಾದ ಸೌರ ದೋಣಿ ಇಲ್ಲಿಯ ಒಂದು ವಿಶಿಷ್ಟಾಂಶವಾಗಿದೆ. ಖಾಫ್ರೆ ಪಿರಮಿಡ್ಡಿನ ಆವೃತ ಮಾರ್ಗದ ಬದಿಯಲ್ಲಿ ಬೃಹದಾಕಾರದ ಸ್ಫಿಂಕ್ಸ್ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಇದೊಂದು ಘನತೆ ಗಾಂಭೀರ್ಯದಿಂದ ಕೂಡಿದ, ಶಿಲ್ಪ ಕೌಶಲದಲ್ಲಿ ಅಮೋಘವಾದ, ಸುಂದರ ಕೃತಿ.

ಪಿರಮಿಡ್ಡುಗಳ ನಿರ್ಮಾಣದ ಉದ್ದೇಶದ ಬಗ್ಗೆ ಹಲವಾರು ವಾದಗಳಿವೆ. ಸರಳವಾದ ಅಭಿಪ್ರಾಯವೆಂದರೆ ಅರಸನ ಮರಣೋತ್ತರ ವಸತಿಗಾಗಿ ಭವ್ಯ ಮಂದಿರವನ್ನು ನಿರ್ಮಿಸುವುದು. ಐ.ಇ.ಎಸ್.ಎಡ್ವರ್ಡ್ ಹೇಳುವಂತೆ ಈಜಿಪ್ಟಿನ ಮುಖ್ಯ ದೇವತೆ ಸೂರ್ಯನ ಲೋಕ ಅಂತರಿಕ್ಷಕ್ಕೆ ಹೋಗುವ ಮೆಟ್ಟಿಲುಗಳ ಶ್ರೇಣಿಯೆಂಬ ಅಭಿಪ್ರಾಯಕ್ಕೆ ಸಕ್ಕಾರದ ಮೆಟ್ಟಿಲು ಪಿರಮಿಡ್ಡು ಸಾಧಕವಾಗಿದೆ. ನಿಜವಾದ ಪಿರಮಿಡ್ಡಿನಾಕಾರ ಆಕಾಶದಿಂದ ಭೂಮಿಗೆ ಬರುವ ಸೂರ್ಯನ ರಶ್ಮಿಯ ಪ್ರತೀಕವೆಂಬ ವಾದ ಸದ್ಯಕ್ಕೆ ವಿಶ್ವಾಸನೀಯವಾಗಿ ಕಾಣುತ್ತದೆ.

ಪಿರಮಿಡ್ಡುಗಳ ಉಗಮದ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲವಾದರೂ ಪ್ರಾಚೀನ ಕಾಲದಿಂದಲೂ ಅಲ್ಲಿ ರೂಢಿಯಲ್ಲಿದ್ದ ಸಮಾಧಿಗಳನ್ನು ಸಂಶೋಧಿಸಿದ ವಿದ್ವಾಂಸರ ಅಭಿಪ್ರಾಯ ವಿಶ್ವಸನೀಯ. ರಾಜ ಮನೆತನಗಳ ಆರಂಭ ಕಾಲದಲ್ಲಿ ಅಂದರೆ ಮೊದಲನೆಯ ರಾಜವಂಶದ ಕಾಲದಲ್ಲಿ ಅರಸರ ಶ್ರೀಮಂತರ ಶವಗಳನ್ನು ಮಸ್ತಾಬ ಗೋರಿಗಳಲ್ಲಿ ಹುಗಿಯುತ್ತಿದ್ದರು. ಭಾಗಶಃ ಭೂಮಿಯೊಳಗೂ ಭಾಗಶಃ ಭೂಮಿಯ ಮೇಲೂ ಇರುತ್ತಿದ್ದ ಈ ಮಸ್ತಾಬ ಗೋರಿ ಆಯಾಕಾರದ ಮೇಜಿನಂತೆ ಅಥವಾ ವಿಶಾಲವಾದ ಜಗಲಿಯಂತೆ ಇರುತ್ತಿತ್ತು. ಮೂರನೆಯ ರಾಜವಂಶದ ಜೋಸರ್ ದೊರೆ ಮಹತ್ವಾಕಾಂಕ್ಷಿಯಾಗಿ ತನ್ನ ವಾಸ್ತುಶಾಸ್ತ್ರಜ್ಞ ಇಮ್‌ಹೋಟೆಪ್‌ನ ನೇತೃತ್ವದಲ್ಲಿ ದೊಡ್ಡ ಮಸ್ತಾಬವನ್ನು ನಿರ್ಮಿಸತೊಡಗಿದ. ಇಡಿ ಮಸ್ತಾಬವನ್ನು ಕಲ್ಲಿನಲ್ಲಿ ನಿರ್ಮಿಸಿದ್ದುದಲ್ಲದೇ ಇದರ ಮಹತ್ವವನ್ನು ಹೆಚ್ಚಿಸಲು ಕ್ರಮೇಣ

ಸಣ್ಣದಾಗುವ, ಚೌಕಾಕಾರದ ಮಸ್ತಾಬಗಳನ್ನು ಒಂದರ ಮೇಲೊಂದರಂತೆ ನಿರ್ಮಿಸಲಾಯಿತು. ಮೂಲ ಮಸ್ತಾಬ ಸು. 63ಮೀ ಉದ್ದಗಲ ಮತ್ತು ಸು. 85ಮೀ ಎತ್ತರವಿತ್ತು. ಅದರ ಸುತ್ತಲೂ ಇನ್ನಿತರ ಕಟ್ಟಡಗಳನ್ನು ಸೇರಿಸಲಾಯಿತು. ಅದರ ಎತ್ತರವನ್ನು ಹೆಚ್ಚಿಸಲು ಕ್ರಮೇಣ ಕಿರಿದಾಗುವ ಚೌಕಾಕಾರದ ಆರು ಮಸ್ತಾಬಗಳನ್ನು ಅದರ ಮೇಲೆ ನಿರ್ಮಿಸಲಾಯಿತು. ಅಂತ್ಯಾವಸ್ಥೆಯಲ್ಲಿ ಅದು ಸು.121X109.5ಮೀ ವಿಸ್ತೀರ್ಣ ಮತ್ತು ಸು.611ಮೀ ಎತ್ತರವಿತ್ತು. ಸಕ್ಕಾರ ಎಂಬಲ್ಲಿರುವ ಈ ಕಟ್ಟಡವನ್ನು ಜೋಸರನ ಮೆಟ್ಟಿಲು ಪಿರಮಿಡ್ ಎಂದು ಕರೆಯಲಾಗಿದೆ. ಪಿರಮಿಡ್ಡಿನ ಭೂಗತ ಭಾಗದಲ್ಲಿ ಅತಿ ತೊಡಕಾದ ಮೊಗಸಾಲೆಗಳೂ ಮತ್ತು ಕೋಣೆಗಳೂ ಇವೆ. ಮಧ್ಯಭಾಗದ ಕೊಳವೆಗಂಬ ಸು.251ಮೀ ಆಳವಾಗಿಯೂ ಸು.82ಮೀ ಅಗಲವಾಗಿಯೂ ಇದೆ. ಇದರ ಕೆಳಭಾಗದಲ್ಲಿ ಶವಕೋಣೆ ಇದೆ. ಪಿರಮಿಡ್ಡಿನ ಸುತ್ತಲ ಸು.275ಮೀ–ಸು. 281 ಮೀ ವಿಸ್ತೀರ್ಣದ ಪ್ರಾಂಗಣದಲ್ಲಿ ಅರಸನ ಮರಣೋತ್ತರ ಕಾಲದ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ಸಣ್ಣ ಕಟ್ಟಡಗಳ ಅವಶೇಷಗಳಿವೆ. ಸಕ್ಕಾರದಿಂದ ಅನತಿ ದೂರದಲ್ಲಿರುವ ದಷ್ಟೂರ್ ಎಂಬಲ್ಲಿರುವ ಪಿರಮಿಡ್ಡು ಮುಂದಿನ ಹಂತವನ್ನು ಪ್ರತಿನಿಧಿಸುತ್ತದೆ. 4 ನೆಯ ರಾಜವಂಶದ ಸ್ನೆಫೆರು ಅರಸನಿಂದ ಕಟ್ಟಿಸಲಾದ ಈ ಪಿರಮಿಡ್ಡಿನ ಅಸ್ತಿವಾರ ಸು.190ಮೀ ಚಚ್ಚೌಕನಾಗಿದ್ದು ಸು.68ಮೀ ಎತ್ತರ ಇದೆ. ಈ ಕಟ್ಟಡದ ವೈಶಿಷ್ಟ್ಯವೆಂದರೆ ಇದರ ಎತ್ತರದ ಮಧ್ಯಭಾಗದವರೆಗೂ ಇಳಿಜಾರು ಕಡಿದಾಗಿದ್ದು, ನೆಲಕ್ಕೆ ಹೋದಂತೆ ಹೆಚ್ಚು ಬಾಗಿದೆ. ಅದೇ ದೊರೆಯಿಂದ ನಿರ್ಮಿತವಾದ ಮೇಡುಮ್‌ನಲ್ಲಿರುವ ಮತ್ತೊಂದು ಪಿರಮಿಡ್ಡು 8 ಅಂತಸ್ತುಗಳ ಮಸ್ತಾಬ ಪಿರಮಿಡ್ಡಿನಾಕಾರದಲ್ಲಿ ನಿರ್ಮಿತವಾದುದಾದರೂ ಇದಕ್ಕೆ ಮೆಟ್ಟಿಲಾದ ಜಗಲಿಗಳನ್ನು ಕಲ್ಲುಗಳಿಂದ ತುಂಬಿ ಇಳಿಜಾರಾದ ಸಮತಲ ಹೊರಮೈಯನ್ನು ನಿರ್ಮಿಸಲಾಗಿದೆ. ಇದನ್ನು ನಿಜವಾದ ಪಿರಮಿಡ್ಡಿನಾಕೃತಿಯ ಮೊದಲ ಕಟ್ಟಡವೆಂದು ಹೇಳಬಹುದು. ಈ ಪಿರಮಿಡ್ಡನ್ನು ಈಜಿಪ್ಟಿನಲ್ಲಿಯೇ ಅತ್ಯಂತ ಭವ್ಯ ನಿರ್ಮಾಣವೆಂದು ಎಂ.ಎ.ಮರ್ರೆ ಅಭಿಪ್ರಾಯಪಡುತ್ತಾರೆ. ಮಾನವ ನಿರ್ಮಿತ ಪ್ರಪಂಚದ ಕಟ್ಟಡಗಳಲ್ಲಿ ಇದಕ್ಕೆ ಸಮನಾದುದು ಬೇರಿಲ್ಲವಂತೆ. ಮೂರಂತಸ್ತುಗಳಿಲ್ಲ ಇದರ ಆಕೃತಿಯೇ ಇದರ ವೈಶಿಷ್ಟ್ಯ. ಅದರ ಶವಮಂದಿರದ ಘನವಾದ ಕಂಬಗಳ ಮುಂದೆ ಇದರ ಚಾವಣಿ ರಟ್ಟಿನಲ್ಲಿ ಮಾಡಿದಂತೆ ಭಾಸವಾಗುತ್ತದೆ. ಆದರೆ ಯೋಜನಾಹಂತದಿಂದ ಕಡೆಯವರೆಗೂ ನಿಜವಾದ ಪಿರಮಿಡ್ಡಿನಂತೆ ನಿರ್ಮಿಸಿದ ಪಿರಮಿಡ್ಡನ್ನು ದಷ್ಟೂರ್‌ನಲ್ಲಿರುವ ಉತ್ತರ ಶಿಲೆಯ ಪಿರಮಿಡ್ಡಿನಲ್ಲಿ ಕಾಣಬಹುದು. ಸ್ನೆಫೆರು ನಿರ್ಮಿಸಿದನೆಂದು ಹೇಳಲಾದ ಇದರ ಅಡಿಪಾಯದ ಉದ್ದಗಲ ಸು.95ಮೀ ಮತ್ತು ಎತ್ತರ ಸು.106 ಮೀಗಳು; ಅಂದರೆ ಸುಪ್ರಸಿದ್ಧ ಗೀಜಾದ ಪಿರಮಿಡ್ಡುಗಳ ಪ್ರಮಾಣಕ್ಕೆ ಹೆಚ್ಚುಕಡಿಮೆ ಇದು ಸರಿ ಹೋಲುತ್ತದೆ.

ಮುಂದಿನ ಮತ್ತು ವಿಕಾಸದ ಪರಮೋಚ್ಚ ಹಂತದ ನಿದರ್ಶನಗಳೆಂದರೆ ಕೈರೋ ನಗರದ ನೈರುತ್ಯ ದಿಕ್ಕಿನಲ್ಲಿ ಮರಳುಗಾಡಿನ ಮಧ್ಯೆ ಶಿಲಾಮಯ ಪ್ರಸ್ಥಭೂಮಿಯ ಮೇಲೆ ನಿರ್ಮಿತವಾಗಿರುವ ಗೀಜ಼ಾ ಪಿರಮಿಡ್ಡುಗಳು. ಇವನ್ನು ನಾಲ್ಕನೆಯ ರಾಜ ಮನೆತನದ (ಪ್ರ.ಶ.ಪೂ.2720–2560) ಕುಫು (ಚಿಯೋಪ್ಸ್), ಖಾಫ್ರೆ (ಖೆಫ್ರೆನ್) ಮತ್ತು ಮೆಂಕುರೆ (ಮೈಸಿರಿನಸ್) ದೊರೆಗಳು ಕಟ್ಟಿಸಿದರು. ಇವನ್ನು ಪ್ರಪಂಚದ ಏಳು ಪ್ರಾಚೀನ ಅದ್ಭುತಗಳಲ್ಲಿ ಹಿರೋಡಾಟಸ್ ಸೇರಿಸಿದ್ದಾನೆ. ಈ ಗುಂಪಿನಲ್ಲಿ ಅತ್ಯಂತ ದೊಡ್ಡದೂ ಪುರಾತನವೂ ಆದ ಕುಫುವಿನ ಪಿರಮಿಡ್ಡು ಸು.232 ಮೀ ಉದ್ದಗಲದ 13 ಎಕರೆ ವಿಸ್ತೀರ್ಣದ ಮತ್ತು ಸು.148 ಮೀ ಎತ್ತರದ ಬೃಹತ್ ನಿರ್ಮಾಣ. ಇದರ ನಿರ್ಮಾಣ ಕಾಲ ಪ್ರ.ಶ.ಪೂ.ಸು. 2720. ಇದರ ಪಾರ್ಶ್ವಗಳು $51^0 52'$ ಕೋನದಲ್ಲಿವೆ ಮತ್ತು ಪ್ರತಿ ಮೂಲೆಯೂ ದಿಕ್ಕುಗಳಿಗೆ ಸರಿಯಾಗಿವೆ. ಕಟ್ಟಡದ ಒಳಭಾಗವನ್ನು ಹಳದಿಬಣ್ಣದ ಸುಣ್ಣದ ಕಲ್ಲಿನ ದಿಮ್ಮಿಗಳಿಂದ ನಿರ್ಮಿಸಲಾಗಿದೆ. ಒಳಗಿನ ಮೊಗಸಾಲೆಗಳಿಗೆ ಜಬಾಲ್‌ತುರಾ ಪ್ರಾಂತ್ಯದ ಸುಣ್ಣಕಲ್ಲನ್ನು ಉಪಯೋಗಿಸಲಾಗಿದೆ. ಶವಕೋಣೆಯ ನಿರ್ಮಾಣಕ್ಕೆ ಆಸ್ವಾನ್ ಪ್ರಾಂತ್ಯದ ಗ್ರಾನೈಟ್ ಶಿಲೆಯ ದೊಡ್ಡ ದಿಮ್ಮಿಗಳನ್ನು ಬಳಸಲಾಗಿದೆ. ಸರಾಸರಿ ಸು.2.54 ಮೆಟ್ರಿಕ್ ಟನ್ ತೂಕದ 23,00,000 ಕಲ್ಲು ದಿಮ್ಮಿಗಳನ್ನು ಇದರ ನಿರ್ಮಾಣಕ್ಕೆ ಬಳಸಲಾಗಿದೆ ಎಂದರೆ ಕೌಶಲ್ಯ ಮತ್ತು ಯಂತ್ರಶಾಸ್ತ್ರದ ಪ್ರಾವೀಣ್ಯಕ್ಕೆ ಈ ಕಟ್ಟಡ ಉತ್ತಮ ನಿದರ್ಶನವೆನ್ನಬಹುದು. ಅದರ ಯೋಜನೆಯ ಪರಿಪಕ್ವತೆ ಮತ್ತು ಕಲ್ಲು ಕೆಲಸದ ನಿಖರತೆ ನಿಜಕ್ಕೂ ಅದ್ಭುತವಾಗಿವೆ. ಅಷ್ಟು ಭಾರದ ಕಲ್ಲು ದಿಮ್ಮಿಗಳನ್ನು ಎತ್ತಲು (ಕೆಲವು ದಿಮ್ಮಿಗಳು 16.25 ಮೆಟ್ರಿಕ್ ಟನ್ ತೂಕದ್ದಾಗಿವೆ) ಇಳಿಜಾರಾದ ರಸ್ತೆಗಳನ್ನು ನಿರ್ಮಿಸಿದ್ದರೆಂದು ಊಹಿಸಲಾಗಿದೆ. ಅಷ್ಟು ದೊಡ್ಡ ದಿಮ್ಮಿಗಳನ್ನು ಕೂಡಿಸಿರುವ ಸಂಧಿಗಳು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾಗಿವೆ. ಇದರ ಪಾರ್ಶ್ವಗಳೂ ಸು.233ಮೀ ಉದ್ದವಿದ್ದರೂ ವಕ್ರತೆ 1/2 ಡಿಗ್ರಿಗಳಷ್ಟೂ ಇಲ್ಲ. ಇದರ ನಾಲ್ಕು ಕೋನಗಳು ನಿರ್ದಿಷ್ಟ $90^0$ ಗೆ ಸಮವಾಗಿವೆ. ಹೀರೊಡಾಟಸನ ಹೇಳಿಕೆಯಂತೆ ಕಲ್ಲುದಿಮ್ಮಿಗಳನ್ನು ಪಿರಮಿಡ್ಡಿನ ನಿವೇಶನಕ್ಕೆ ಸಾಗಿಸಲು ರಸ್ತೆ ನಿರ್ಮಾಣ ಕಾರ್ಯಕ್ಕೆ 10 ವರ್ಷ ಹಿಡಿಯಿತೆಂದು ನಿರ್ಮಾಣ ಕಾರ್ಯ ಮುಗಿಸಲು ಮತ್ತೆ 20 ವರ್ಷಗಳಾದುವೆಂದೂ ತಿಳಿದುಬರುತ್ತದೆ. 1,00,000 ಜನರು ಅದರ ನಿರ್ಮಾಣಕ್ಕೆ ಶ್ರಮಿಸಿದರೆಂದು ಹೇಳಲಾಗಿದೆ.

ಪಿರಮಿಡ್ಡಿನೊಳಕ್ಕೆ ಹೋಗುವ ಮಾರ್ಗ ಇದರ ಉತ್ತರದಿಕ್ಕಿನಲ್ಲಿ ಭೂಮಟ್ಟದಿಂದ ಸು.18ಮೀ ಎತ್ತರದಲ್ಲಿದೆ. ಕಟ್ಟಡದೊಳಗಿನ ಇಳಿಜಾರಾದ ಮಾರ್ಗ ಒಳಕೋಣೆಗೆ ಸಾಗುತ್ತದೆ. ಅಲ್ಲಿಂದ ಮುಂದೆ ಭೂ ಮಟ್ಟದಿಂದ ತಳಕ್ಕೆ ಒಂದು ಸುರಂಗಮಾರ್ಗ ಹೋಗಿ ಒಳಗಿನ ಶವಕೋಣೆಯನ್ನು ತಲುಪುತ್ತದೆ. ಮತ್ತೊಂದು ಮಾರ್ಗ ಹೆಚ್ಚು ಕಡಿಮೆ ಸಮಾನಾಂತರವಾಗಿ ಮುನ್‌ಸಾಗಿ ರಾಣಿಯ ಕೋಣೆಯನ್ನು ತಲುಪುತ್ತದೆ. ಒಳಕೋಣೆಯಿಂದ ಮತ್ತೊಂದು ಮಾರ್ಗ ಮೇಲ್ಮುಖವಾಗಿ ಸಾಗಿ ಸು.8.5 ಮೀಗಳೆತ್ತರ ಮತ್ತು ಸು.47 ಮೀಗಳುದ್ದದ ಮೊಗಸಾಲೆಗೆ ಹೋಗುತ್ತದೆ. ಮೊಗಸಾಲೆಯ ತುದಿಯಲ್ಲಿ ರಾಜನ ಕೋಣೆ ಅಥವಾ ಮುಖ್ಯ ಶವಕೋಣೆ ಇದೆ. ಇದರ ಪ್ರಮಾಣ ಹೀಗಿದೆ: ಸು.10ಮೀx5ಮೀx3ಮೀ ರಾಜನ ಕೋಣೆ ಭೂಮಟ್ಟದಿಂದ ಸು.42 ಮೀ ಎತ್ತರದಲ್ಲಿದೆ. ಈ ಕೋಣೆಯಿಂದ ಪಿರಮಿಡ್ಡಿನ

ಅಮುನ್‌ರೇ ದೇವಾಲಯ, ಕಾರ್ನಾಕ್

ಹೊರಕ್ಕೆ ಎರಡು ಬೆಳಕಿನ ಕೊಳವೆಕಿಂಡಿಗಳಿವೆ. ರಾಜನ ಕೋಣೆಯಲ್ಲಿ ಬರಿದಾದ ಕೆಂಪು ಗ್ರಾನೈಟ್ ಶಿಲೆಯ ಶವ ತೊಟ್ಟಿಯಿದೆ. ಕೋಣೆಯ ಮೇಲೆ ಗ್ರಾನೈಟ್ ಚಪ್ಪಡಿಗಳಿಂದ ಪ್ರತ್ಯೇಕಿಸಲ್ಪಟ್ಟ 5 ಅಂತಸ್ತುಗಳಿವೆ. ಬಹುಶಃ ಬೃಹತ್ ಪಿರಮಿಡ್ಡಿನ ಅಗ್ರಭಾಗದ ಭಾರವನ್ನು ವಹಿಸಲು ಇಂಥ ಖಾಲಿ ಅಂತಸ್ತುಗಳನ್ನು ನಿರ್ಮಿಸಿರಬಹುದು. ಪಿರಮಿಡ್ಡಿನ ಸುತ್ತಲೂ ಹೊರವಲಯದಲ್ಲಿ ಅನೇಕ ಸಣ್ಣಪುಟ್ಟ ಕಟ್ಟಡಗಳಿವೆ. ಇವುಗಳ ಸುತ್ತಲೂ ಎತ್ತರವಾದ ಪ್ರಾಕಾರವಿತ್ತು. ಇದು ಈಗ ಜೀರ್ಣಾವಸ್ಥೆಗೆ ಬಂದಿದೆ. ಪ್ರಾಕಾರದ ಪೂರ್ವಭಾಗದಲ್ಲಿ ಶವಮಂದಿರವಿದ್ದು ಇಲ್ಲಿ ಬಹುಶಃ ಬಲಿ ನಿವೇದನೆ ಮಾಡುತ್ತಿದ್ದಿರಬಹುದು. ಇದರಿಂದ ನದಿದಂಡೆಗೆ ಹೋಗುವ ಆವೃತ ಮಾರ್ಗವಿದೆ. ಆವೃತಮಾರ್ಗದ ತುದಿಯಲ್ಲಿದ್ದಿರಬಹುದಾದ ಬಲಿಮಂಟಪ ಈಗ ಕಾಣದಾಗಿದೆ. ಪಿರಮಿಡ್ಡಿನ ಈ ಪ್ರವೇಶಮಾರ್ಗದ ಬಾಯನ್ನು ಭಾರವಾದ ಆದರೆ, ನಿಖರವಾಗಿ ಹೊಂದುವ ಕಲ್ಲಿನ ದಿಮ್ಮಿಯಿಂದ ಮುಚ್ಚಲಾಗಿತ್ತು. ಬಾಗಿಲಿನ ಸ್ಥಳ ಗೊತ್ತಾಗದಂತೆ ಕಟ್ಟಡದ ಇಡೀ ಹೊರಮೈಯನ್ನು ಚಪ್ಪಡಿಗಳಿಂದ ಆವರಿಸಲಾಗಿತ್ತು. ಎಲ್ಲ ಪಿರಮಿಡ್ಡುಗಳಿಗೂ ಇದು ಸಾಧಾರಣ ಅಂಶವಾಗಿದ್ದರೂ ಭಗ್ನಾವಸ್ಥೆಯಲ್ಲಿರುವ ಪಿರಮಿಡ್ಡುಗಳಲ್ಲಿ ಮೇಲುಹೊದಿಕೆಗಳ ಚಪ್ಪಡಿಗಳನ್ನು 16–17ನೆಯ ಶತಮಾನದಲ್ಲಿ ಕೈರೋ ನಗರ ನಿರ್ಮಾಣಕಾರ್ಯಕ್ಕಾಗಿ ಲೂಟಿ ಮಾಡಿಕೊಂಡು ಹೋಗಲಾಗಿದೆ. ಖಾಫ್ರೆಯ ಪಿರಮಿಡ್ಡು ಕುಫುವಿನ ಪಿರಮಿಡ್ಡಿಗಿಂತಲೂ ಸ್ವಲ್ಪ ಸಣ್ಣ ಪ್ರಮಾಣದ್ದಾಗಿದೆ. ಆದರೆ, ಉದ್ದಗಲ ಸು.217ಮೀ, ಎತ್ತರ ಸು.145ಮೀ ಆದರೆ, ಕುಫುವಿನ ಪಿರಮಿಡ್ಡಿಗಿಂತಲೂ ಎತ್ತರಸ್ಥಾನದಲ್ಲಿರುವುದರಿಂದ ದೊಡ್ಡದಾಗಿ ಕಾಣುತ್ತದೆ. ಅನಂತರ ಅರಸನಾದ ಮೆಂಕುರೆಯ ಪಿರಮಿಡ್ಡು ಕುಫುವಿನ ಪಿರಮಿಡ್ಡಿನಲ್ಲಿ ಅರ್ಧದಷ್ಟು ಮಾತ್ರ ದೊಡ್ಡದಾಗಿದೆ. ಇವುಗಳ ಹಿಂಭಾಗದಲ್ಲಿ ಶ್ರೀಮಂತ ವರ್ಗದವರ ಮಸ್ತಾಬ ಗೋರಿಗಳು ಸಾಲುಸಾಲಾಗಿವೆ. ಅರಸರ ಅಧಿಕಾರಿಗಳೂ ಸೇವಕರೂ ಆಗಿದ್ದವರ ಸಮಾಧಿಗಾಗಿ ಈ ಮಸ್ತಾಬಗಳು.

ಐದನೆಯ ರಾಜವಂಶದ ಅರಸರು (ಪ್ರ.ಶ.ಪೂ.2560–2420) ಸಕ್ಕಾಡಿ ಮತ್ತು ಗೀಜ಼ಾಗಳ ನಡುವೆ ಇರುವ ಅಬೂಷಿರ್ ಎಂಬಲ್ಲಿ ತಮ್ಮ ಪಿರಮಿಡ್ಡುಗಳನ್ನು ನಿರ್ಮಿಸಿದ್ದಾರೆ. ಆರನೆಯ ರಾಜವಂಶದವರು (ಪ್ರ.ಶ.ಪೂ.2420–2294) ಸಕ್ಕಾಡಿದಲ್ಲಿ ತಮ್ಮ ಪೂರ್ವಜರ ಸಮಾಧಿಗಳ ಬಳಿ ತಮ್ಮ ಪಿರಮಿಡ್ಡುಗಳನ್ನು ನಿರ್ಮಿಸಿದ್ದಾರೆ. ನಾಲ್ಕನೆಯ ರಾಜವಂಶ ಕಾಲದ ಪಿರಮಿಡ್ಡುಗಳೊಂದಿಗೆ ಹೋಲಿಸಿದರೆ ಸಣ್ಣವು ತಾಂತ್ರಿಕವಾಗಿ ಕೆಳಮಟ್ಟದವೂ ಆಗಿದ್ದರೂ ಐತಿಹಾಸಿಕವಾಗಿ ಇವು ಮಹತ್ತ್ವಪೂರ್ಣವಾದವು. ಇವುಗಳ ಒಳಕೋಣೆಗಳ ಗೋಡೆಗಳಲ್ಲಿ ಈಜಿಪ್ಟಿನ ಜನರ ಮರಣೋತ್ತರ ಜೀವನದ ಬಗೆಗಿನ ನಂಬಿಕೆ ಆಚಾರಗಳ ಮೇಲೆ ಬೆಳಕು ಚೆಲ್ಲುವ ವಿಷಯಗಳನ್ನು ಶಾಸನಗಳ ರೂಪದಲ್ಲಿ ಕೊರೆಯಲಾಗಿದೆ.

ಈಜಿಪ್ಟಿನ ಇತಿಹಾಸದಲ್ಲಿ ಮೊದಲ ಅಂಧಕಾರ ಯುಗದಲ್ಲಿ (ಪ್ರ.ಶ.ಪೂ.2294–2132) ಪ್ರಮುಖ ಕಟ್ಟಡಗಳ ನಿರ್ಮಾಣವೇನು ಆಗಲಿಲ್ಲ. 11ನೆಯ ರಾಜವಂಶ ಯುಗದಲ್ಲಿ (ಪ್ರ.ಶ.ಪೂ.2132–2000) ತೀಬ್ಸ್ ನಗರವನ್ನು ರಾಜಧಾನಿಯಾಗಿ ಮಾಡಿಕೊಂಡ ಅರಸರು ಲುಕ್ಸರ್ ಬಳಿ ನೈಲ್ ನದಿ ದಂಡೆಯಲ್ಲಿ ಕಟ್ಟಿಸಿದ ಡಯರ್ ಎಲ್ ಬಾಹ್ರಿಯ ದೇವಾಲಯದ ಮೇಲೆ ಪಿರಮಿಡ್ಡನ್ನು ಕಟ್ಟಿಸಿದರು. 12ನೆಯ ರಾಜವಂಶದ ಕಾಲದಲ್ಲಿ (ಪ್ರ.ಶ.ಪೂ.2000–

1777) ಪಿರಮಿಡ್ಡುಗಳ ನಿರ್ಮಾಣ ಕಾರ್ಯ ಮತ್ತೆ ಭರದಿಂದ ಸಾಗಿತು. 1ನೆಯ ಅಮೆನಮ್ ಹಟ್ ಮತ್ತು 1ನೆಯ ಸೆನುಸ್ರೆಟ್ ದೊರೆಗಳ ಪಿರಮಿಡ್ಡುಗಳನ್ನು ದಷ್ಷೂರ್ ಬಳಿಯ ಲಿಫ್ಟ್ ಎಂಬಲ್ಲಿ ಕಾಣಬಹುದಾಗಿದೆ. ಇವು ಕುಫು–ಖಾಫ್ರೆ ಪಿರಮಿಡ್ಡುಗಳಷ್ಟು ದೊಡ್ಡವೂ ಭವ್ಯವೂ ಆಗಿಲ್ಲದಿದ್ದರೂ ಗಮನಾರ್ಹವಾಗಿವೆ. ಇವುಗಳೊಳಗಿನ ಸುರಂಗ ಮಾರ್ಗಗಳು ಬಹಳ ಕ್ಲಿಷ್ಟವಾಗಿದ್ದು ಸಮಾಧಿಘಾತುಕರಿಂದ ಪಿರಮಿಡ್ಡುಗಳ ಸಂಪತ್ತನ್ನು ರಕ್ಷಿಸಲು ಉಪಯುಕ್ತವಾಗಿವೆ.

ಮಧ್ಯಯುಗದ ಪಿರಮಿಡ್ಡುಗಳು ಬಹಳಷ್ಟು ಹಾಳಾಗಿವೆ. ಇದಕ್ಕೆ ಪ್ರಮುಖ ಕಾರಣವೆಂದರೆ ಅವನ್ನು ಒಣಗಿದ ಇಟ್ಟಿಗೆಗಳಿಂದ ಕಟ್ಟಿ ಹೊರಮೈಗೆ ಸುಣ್ಣಕಲ್ಲಿನ ಚಪ್ಪಡಿಗಳ ಹೊದಿಕೆಯನ್ನು ಹೊದಿಸಿದ್ದು ಆಧುನಿಕರು ಈ ಚಪ್ಪಡಿಗಳನ್ನು ತೆಗೆದುಕೊಂಡು ಹೋದ ಅನಂತರ ಇಟ್ಟಿಗೆಗಳು ಮಳೆಗಾಳಿಗಳ ಹೊಡೆತಕ್ಕೆ ಸಿಕ್ಕಿ ನೆಲಸಮವಾಗತೊಡಗಿದವು.

ಮಧ್ಯಯುಗದ ಅನಂತರ (ಪ್ರ.ಶ.ಪೂ.ಸು.1700) ಮತ್ತೆ 18ನೆಯ ರಾಜಮನೆತನದ ಅರಸರು (ಪ್ರ.ಶ.ಪೂ.1573–1350) ಪಿರಮಿಡ್ಡುಗಳ ಬದಲು ಪರ್ವತಗರ್ಭದಲ್ಲಿ ಕೊರೆದ ರಹಸ್ಯ ಸಮಾಧಿ ಕೋಣೆಗಳಲ್ಲಿ ಮೃತದೇಹವನ್ನು ಹುಗಿಯುತ್ತಿದ್ದರು. ಈ ರಾಜವಂಶದ 1ನೆಯ ಅಹಮೋಸನ ಹುಸಿ ಪಿರಮಿಡ್ಡು ಹಿಂದಿನ ಪದ್ಧತಿಯ ಸ್ಮಾರಕವೆನ್ನಬಹುದಾಗಿದೆ. 23ನೆಯ ರಾಜವಂಶದ ಪಿಯಾಂಖಿ ದೊರೆಯ ಕಾಲದಲ್ಲಿ ಪ್ರಾಚೀನ ಸಾಂಸ್ಕೃತಿಕ ಮತ್ತು ಮತೀಯ ಆಚಾರ ಪದ್ಧತಿಗಳನ್ನು ಪುನರುಜ್ಜೀವನಗೊಳಿಸಿದಾಗ ಪಿರಮಿಡ್ಡುಗಳ ನಿರ್ಮಾಣ ಮತ್ತೆ ರೂಢಿಗೆ ಬಂತು. ಇಂಥ ಅನೇಕ ಪಿರಮಿಡ್ಡುಗಳನ್ನು ಅಬಿಡಾಸ್ ಪ್ರದೇಶದಲ್ಲಿ ಕಾಣಬಹುದು.

ಪಿರಮಿಡ್ಡುಗಳು ಮುಖ್ಯವಾಗಿ ರಾಜರ ರಾಜವಂಶೀಯರ ಸಮಾಧಿಗಳು. ಈಜಿಪ್ಟಿನ ಮತೀಯ ನಂಬಿಕೆಗನುಸಾರವಾಗಿ ರಾಜ ಭೂಮಿಗಿಳಿದು ಬಂದು ಪ್ರಜಾರಕ್ಷಣೆ ಮಾಡುತ್ತಿದ್ದ ಸಾಕ್ಷಾತ್ ದೇವರು. ಮತ್ತೊಂದು ನಂಬಿಕೆಗನುಗುಣವಾಗಿ ಇವರ ಪ್ರೇತ ಲೋಕದ ಅಧಿಪತಿ ಯಾದ ಓಸಿರಿಸ್ ರಾಜನಾಗಿ ಭೂಮಿಗೆ ಬರುತ್ತಿದ್ದ. ಅವನು ಮತ್ತೆ ಸಾವಿನ ರೂಪದಲ್ಲಿ ಪ್ರೇತಲೋಕಕ್ಕೆ ಹೋದಾಗ ಇವನ ಮರಣೋತ್ತರ ಜೀವನದ ಸೌಕರ್ಯಕ್ಕಾಗಿ ಇವನ ಘನತೆಗೆ ತಕ್ಕುದಾದ ಅರಮನೆ, ದಾಸ–ದಾಸಿಯರು, ಆಹಾರ ಪಾನೀಯಗಳು ಮುಂತಾದ ಸಕಲ ಸೌಲಭ್ಯಗಳನ್ನು ರಾಜನ ಜೀವಿತ ಕಾಲದಲ್ಲಿಯೇ ನಿರ್ಮಿಸುತ್ತಿದ್ದರು. ಅಪಾರ ಐಶ್ವರ್ಯದ ಆಸೆಯಿಂದ ಅಂಥ ರಾಜರ ಸಮಾಧಿಗಳನ್ನು ಅತಿ ಪ್ರಾಚೀನ ಕಾಲದಿಂದಲೂ ಕಳ್ಳರು ಲೂಟಿ ಮಾಡುತ್ತಿದ್ದರು. ಆದುದರಿಂದ ಬಹಳ ಶ್ರಮದಿಂದ ಅಭೇದ್ಯವಾಗಿರಲೆಂದು ಪಿರಮಿಡ್ಡುಗಳನ್ನು ಅಪಾರ ವೆಚ್ಚದಿಂದ ನಿರ್ಮಿಸಲಾಗುತ್ತಿತ್ತು. ಇವುಗಳ ಪ್ರವೇಶ ಮಾರ್ಗಗಳನ್ನು ಜನರ ಕಣ್ಣಿಗೆ ಬೀಳದಂತೆ ದೊಡ್ಡ ಶಿಲಾದಿಮ್ಮಿಗಳಿಂದ ಮುಚ್ಚಿ ಇವುಗಳ ಮೇಲೆ ಹಾಸುಗಲ್ಲುಗಳನ್ನು ಹೊದ್ದಿಸಿ ಮರೆಮಾಡಲಾಗುತ್ತಿತ್ತು. ಒಳಗಿನ ಪ್ರವೇಶ ಮಾರ್ಗಗಳನ್ನು ಬಹಳ ಕ್ಲಿಷ್ಟವಾದ ಯೋಜನೆಯಿಂದ ನಿರ್ಮಿಸಲಾಗುತ್ತಿತ್ತು. ಇಷ್ಟಾದರೂ ಅವುಗಳು ಸುರಕ್ಷಿತವಾಗಿರಲಿಲ್ಲ. ಆದುದರಿಂದಲೇ ಸಾಮ್ರಾಜ್ಯ ಯುಗದ ಚಕ್ರವರ್ತಿಗಳು ತಮ್ಮ ಸಮಾಧಿಗಳನ್ನು ದುರ್ಗಮವಾದ ಮರಳುಗಾಡಿನ ಆಚೆಯ ಭಾಗದಲ್ಲಿ ಅನೂಹ್ಯ ಪರ್ವತ ಗರ್ಭಗಳಲ್ಲಿ ಕೊರೆದ ರಹಸ್ಯ ಕೋಣೆಗಳಲ್ಲಿ ನಿರ್ಮಿಸುತ್ತಿದ್ದರು. ಆದರೂ ಅವು ಸುರಕ್ಷಿತವಾಗಿರಲಿಲ್ಲ. ಪ್ರ.ಶ.ಪೂ.13ನೆಯ

ಓಸಿರಿಸ್ ಸ್ತಂಭಗಳು

ಶತಮಾನದ ಚಕ್ರವರ್ತಿ 2ನೆಯ ರ್ಯಾಮ್ಸೆಸ್, ಸಮಾಧಿ ಕಳ್ಳರನ್ನು ಪತ್ತೆ ಹಚ್ಚಿ ಇವರ ವಿಚಾರಣೆ ಮಾಡುವುದಕ್ಕಾಗಿ ಒಂದು ಆಯೋಗವನ್ನು ನಿರ್ಮಿಸಿದ್ದ ವಿಷಯ ಲಿಖಿತ ದಾಖಲೆಗಳಲ್ಲಿ ಕಂಡುಬರುತ್ತದೆ. ಪ್ರ.ಶ.ಪೂ.5ನೆಯ ಶತಮಾನದಲ್ಲಿದ್ದ ಹಿರೋಡಾಟಸ್ ಸಹ ಸಮಾಧಿ ಕಳ್ಳರ ಗುಂಪುಗಳ ಪ್ರಸ್ತಾಪ ಮಾಡಿದ್ದಾನೆ.

ಪಿರಮಿಡ್ಡುಗಳ ಒಳಕೋಣೆಗಳ ಗೋಡೆಗಳ ಮೇಲೆ, ಆ ಕೋಣೆಯಲ್ಲಿ ಇಟ್ಟಿರುತ್ತಿದ್ದ ಶವ ತೊಟ್ಟಿಗಳ ಕೊರೆದ ಅಥವಾ ಬಣ್ಣಗಳಲ್ಲಿ ಚಿತ್ರಿಸಿದ ಹಲವಾರು ದೃಶ್ಯಗಳು, ಶಾಸನಗಳು ಆ ಕಾಲದ ಸಾಮಾಜಿಕ, ಧಾರ್ಮಿಕ ಜೀವನಗಳನ್ನು ತಿಳಿಯಲು ಬಹಳ ಉಪಯುಕ್ತವಾಗಿವೆ. ರಾಜನ ಅರಮನೆ ವಾಸಿಗಳ ಜೀವನಕ್ಕೆ ಸಂಬಂಧಿಸಿದ ಅನೇಕ ದೃಶ್ಯಗಳನ್ನು ಅಲ್ಲಿ ಚಿತ್ರಿಸಿದ್ದಾರೆ. ಆ ಕಾಲದ ಉಡುಪುಗಳು, ಆಭರಣಗಳು, ನೃತ್ಯ, ವಾದ್ಯ, ಸಂಗೀತಗಾರರ ಗುಂಪುಗಳು, ಧಾರ್ಮಿಕ ವಿಧಿಗಳ ಆಚರಣೆಗಳು ಮೊದಲಾದ ಸಂಗತಿಗಳು ಈ ಚಿತ್ರಗಳಿಂದ ತಿಳಿದು ಬರುತ್ತವೆ. ಅಲ್ಲಿರುವ ಬರವಣಿಗೆಗಳಿಂದ ಅನೇಕ ರಾಜಕೀಯ ಸಂಗತಿಗಳು ವಂಶಾವಳಿಯ ವಿವರಗಳು ತಿಳಿದು ಬರುತ್ತವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಆ ಸಮಾಧಿಗಳ ಮೇಲೆ ಬರೆದಿರುವ ಸತ್ತವರಿಗೆ ಸಂಬಂಧಿಸಿದ ಗ್ರಂಥಗಳು ಆ ಜನರ ಧಾರ್ಮಿಕ ಅದರಲ್ಲೂ ಮರಣೋತ್ತರ ಜೀವನಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಯಲು ಬಹಳ ಉಪಯುಕ್ತವಾಗಿವೆ.

ಮಧ್ಯ ಅಮೆರಿಕದ ಪ್ರದೇಶಗಳಲ್ಲಿ ಪ್ರಚಲಿತಶಕದ ಆರಂಭದಲ್ಲಿ ವ್ಯವಸಾಯ ಮತ್ತು ಪಶುಸಂಗೋಪನ ವೃತ್ತಿ ಪ್ರಧಾನವಾದ ಗ್ರಾಮೀಣ ಸಂಸ್ಕೃತಿಗಳ ಕಾಲದಲ್ಲಿ ಧಾರ್ಮಿಕ ಆಚಾರ–ವಿಚಾರಗಳಿಗೆ ಸಾಧಕವಾಗಿ ಪಿರಮಿಡ್ಡಿನಾಕಾರದ ದಿಬ್ಬ ಅಥವಾ ಒಂದರ ಮೇಲೆ



ಸ್ಫಿಂಕ್ಸ್

ಒಂದರಂತೆ ಕಿರಿದಾಗುತ್ತ ಹೋಗುವ ವಿವಿಧ ಹಂತಗಳಲ್ಲಿ ಜಗಲಿಗಳನ್ನು ಕಟ್ಟಲಾರಂಭಿಸಿದರು. ಇಂಥ ಪಿರಮಿಡ್ಡುಗಳ ಮೇಲೆ ದೇವಾಲಯಗಳನ್ನು ಕಟ್ಟಲಾಗುತ್ತಿತ್ತು. ದೇವಾಲಯಗಳಿಗೆ ಪ್ರವೇಶಿಸಲು ಮೆಟ್ಟಿಲುಗಳನ್ನು ಪಿರಮಿಡ್ಡುಗಳ ಸುತ್ತ ಅರಸರಿಗೆ ಮತ್ತು ಪುರೋಹಿತರಿಗೆ ವಸತಿ ಗೃಹಗಳನ್ನು ನಿರ್ಮಿಸಲಾಗುತ್ತಿತ್ತು. ಹೊರಭಾಗದಿಂದ ನೋಡಲು ಅವು ಮನೋಹರವಾಗಿದ್ದರೂ, ಕಮಾನುಗಳ ಬಳಕೆ ಇಲ್ಲದ ಇಕ್ಕಟ್ಟಾದ ಪ್ರವೇಶ ಮಾರ್ಗಗಳಿಂದ ಕೂಡಿರುತ್ತಿದ್ದ, ಗಾಳಿ ಬೆಳಕುಗಳಿಲ್ಲದ ಕೋಣೆಗಳಿಂದ ಕೂಡಿದ ಒಳಭಾಗ, ಆರ್ಷೇಯವೂ ನಾಜೂಕಿಲ್ಲದವೂ ಆಗಿರುತ್ತಿದ್ದವು. ಈಕ್ವಡಾರ್ ಕರಾವಳಿ ಪ್ರದೇಶದಲ್ಲಿ ಈ ಪಿರಮಿಡ್ಡುಗಳ ಹೊರಭಾಗಕ್ಕೆ ಕಲ್ಲಿನ ಹೊದಿಕೆಗಳನ್ನೊದಗಿಸಲಾಗಿತ್ತು. ಈ ಪ್ರದೇಶದಲ್ಲಿ ಮಾಯಾ ಸಂಸ್ಕೃತಿ ಕಾಲದ ತಿಯೋಟ್‍ಹುಕನ್ ನಗರದ ಸೂರ್ಯ ಮತ್ತು ಚಂದ್ರ ದೇವತೆಗಳ ಪಿರಮಿಡ್ಡುಗಳು ಪ್ರಸಿದ್ಧವಾದುವು. ಸ್ವಲ್ಪ ಕಾಲಾನಂತರ ಮೇಲ್ಭಾಗ ಸಮತಲವಾಗಿದ್ದ ಪಿರಮಿಡ್ಡುಗಳನ್ನು ಆಯಾಕಾರದ ಪ್ರಾಂಗಣದಲ್ಲಿ ನಿರ್ಮಿಸುತ್ತಿದ್ದರು. ಪಿರಮಿಡ್ಡುಗಳ ಮೇಲಿನ ದೇವಾಲಯಗಳನ್ನು ಶಿಲ್ಪಗಳಿಂದ ಅಲಂಕರಿಸಲಾಗುತ್ತಿತ್ತು. ಪೆರು ರಾಜ್ಯದ ಉತ್ತರ ಕರಾವಳಿ ಪ್ರದೇಶದಲ್ಲಿ ಬೃಹದ್ಗಾತ್ರದ ಮೇಲ್ಭಾಗ ಸಮತಟ್ಟಾದ, ಪಿರಮಿಡ್ಡುಗಳನ್ನು ಹಸಿ ಇಟ್ಟಿಗೆಗಳಲ್ಲಿ ಕಟ್ಟಲಾಗುತ್ತಿತ್ತು. ವಿರುಕೊಳ್ಳದಲ್ಲಿರುವ ಗಲಿನಾಜೋ ಪಿರಮಿಡ್ಡು ಒಂದು ಧಾರ್ಮಿಕ ಕೇಂದ್ರವಾಗಿತ್ತು. ಇದರ ಸುತ್ತಮುತ್ತ ಹಸಿ ಇಟ್ಟಿಗೆಗಳಿಂದ ಕಟ್ಟಿದ 20,000 ಕೋಣೆಗಳಿದ್ದವು. ದೊಡ್ಡ ಕೋಣೆಗಳೂ ಪ್ರಾಂಗಣಗಳು ಮತ್ತು ಮೊಗಸಾಲೆಗಳನ್ನು ಒಳಗೊಂಡ ಬೃಹತ್ ಪ್ರಮಾಣದ ಕಟ್ಟಡಗಳನ್ನು ಪಿರಮಿಡ್ಡುಗಳ ಬಳಿ ಕಟ್ಟಲಾಗಿತ್ತು. ಕ್ರಮೇಣ ಪ್ರ.ಶ.900ರ ಸುಮಾರಿಗೆ ಪೆರು ಮತ್ತು ಮಧ್ಯ ಅಮೆರಿಕ ಪ್ರದೇಶಗಳಲ್ಲಿ ಪಿರಮಿಡ್ಡು ನಿರ್ಮಾಣ ಕಾರ್ಯ ಸ್ಥಗಿತಗೊಳ್ಳಲಾರಂಭಿಸಿತು. ಆದಾಗ್ಯೂ ನಗರ–ಸಂಸ್ಕೃತಿ ಬೆಳೆಯಲಾರಂಭಿಸಿದಾಗ ಪಿರಮಿಡ್ಡುಗಳ ಅರಮನೆಗಳ ಸುತ್ತ ದೊಡ್ಡ ನಗರಗಳು ಹುಟ್ಟಿಕೊಂಡವು. ಪೆರು ಪ್ರದೇಶದಲ್ಲಿ 1000–1532ರ ನಡುವೆ ಇಂಕ ಸಂಸ್ಕೃತಿ ಪ್ರಬಲವಾಯಿತು. ಈ ಕಾಲದಲ್ಲಿ ಸುಯೋಜಿತ ನಗರ ಯೋಜನೆ ಬಳಕೆಗೆ ಬಂತು. ಬಹಳ ವಿಸ್ತಾರವಾದ ವಾಸ್ತು ನಿರ್ಮಾಣಗಳ ಮಧ್ಯೆ ಪಿರಮಿಡ್ಡುಗಳನ್ನು ಸಣ್ಣ ಗಾತ್ರದಲ್ಲಿ ನಿರ್ಮಿಸುತ್ತಿದ್ದುದರಿಂದ ಇವುಗಳ ಪ್ರಾಧಾನ್ಯ ಕಡಿಮೆಯಾಯಿತು. (ಬಿ.ಕೆ.ಜಿ.; ಎಚ್.ಸಿ.ಕೆ.)

**ನಿರ್ಮಾಣ ವಿಧಾನ:** ಬೃಹದಾಕಾರದ ಪಿರಮಿಡ್ಡುಗಳನ್ನು ಆ ಕಾಲದಲ್ಲಿ ಹೇಗೆ ಕಟ್ಟಿದರೆಂಬುದು ಕುತೂಹಲದ ಸಂಗತಿ. ಕೈರೋ ನಗರದ ಹೊರವಲಯದಲ್ಲಿರುವ 4500 ವರ್ಷ ಹಳೆಯದಾದ ಕುಫು ರಾಜನ ಪಿರಮಿಡ್ಡಿನ ನಿರ್ಮಾಣ ವಿಧಾನ ಕುರಿತು 8 ವರ್ಷಗಳ ಕಾಲ ಸಂಶೋಧನೆ ನಡೆಸಿರುವ ಜೀನ್–ಪಿಯರ್ ಹೌಡಿನ್ ಎಂಬ ವಾಸ್ತುಶಿಲ್ಪ ಶಾಸ್ತ್ರಜ್ಞ ಒಂದು ಹೊಸ ಸಿದ್ಧಾಂತವನ್ನು ಮಂಡಿಸಿದ್ದಾನೆ. ಈ ಸಿದ್ಧಾಂತದ ಪ್ರಕಾರ, ಈ ಪಿರಮಿಡ್ಡಿನ ಭಾರಿ ಗಾತ್ರದ ಕಲ್ಲುಗಳನ್ನು ಪಿರಮಿಡ್ಡಿನ ಒಳಭಾಗದಲ್ಲಿ ಕಟ್ಟಿಕೊಂಡ ಇಳಿಜಾರಿನ ಮೂಲಕ ಅವುಗಳ ನಿಗದಿತ ಸ್ಥಾನದಲ್ಲಿ ಇರಿಸಲಾಯಿತು. ಪ್ರತಿಯೊಂದು 2ಟನ್ ತೂಗುವ ಸು.3 ದಶಲಕ್ಷ ಕಲ್ಲುಗಳನ್ನು ಪಿರಮಿಡ್ಡಿನ ಹೊರಸುತ್ತಿನಲ್ಲಿ ಕಟ್ಟಿದ ಇಳಿಜಾರಿನ ಮೂಲಕ ಮೇಲೇರಿಸಲಾಗಿದೆ ಎಂದು ಇತರ ತಜ್ಞರು ವಾದಿಸುತ್ತಾರೆ. ಹೌಡಿನ್ ತನ್ನ ಸಿದ್ಧಾಂತವನ್ನು ಗಣಕಯಂತ್ರ–ಆಧರಿತ ಮಾದರಿಗಳ ಮೂಲಕ ಸ್ಪಷ್ಟಪಡಿಸಿದ್ದಾನೆ. ಈ ವಿಧಾನ ಬಳಸಿ

ಪಿರಮಿಡ್ಡನ್ನು ಹೇಗೆ ಕಟ್ಟಲಾಗಿದೆ ಎಂಬುದನ್ನು ಇವನು ಗಣಕಯಂತ್ರದಲ್ಲಿ ಮೂರು ಆಯಾಮಗಳ ಚಿತ್ರಗಳ ಮೂಲಕ ಸೃಷ್ಟಿಸಿದ್ದಾನೆ. ಇದರಂತೆ, ತಳದಿಂದ 43ಮೀ ಎತ್ತರದ ತನಕ ಕಲ್ಲುಗಳನ್ನು ಪಿರಮಿಡ್ಡಿನ ಹೊರಸುತ್ತಿನಲ್ಲಿದ್ದ ಇಳಿಜಾರಿನ ಮೂಲಕ ಮೇಲೇರಿಸಲಾಯಿತು. ಈ ಹಂತವನ್ನು ತಲುಪಿದ ಅನಂತರ ಪಿರಮಿಡ್ಡಿನ ಒಳಗೆ ಇಳಿಜಾರನ್ನು ನಿರ್ಮಿಸಿ, 137ಮೀ ಎತ್ತರದಲ್ಲಿರುವ ಶಿಖರಕಲ್ಲಿನ ಸಹಿತ ಉಳಿದೆಲ್ಲ ಕಲ್ಲುಗಳನ್ನು ಕೂರಿಸಲಾಯಿತು.

ಈ ಪಿರಮಿಡ್ಡಿನ ಮುಖ್ಯ ಗ್ಯಾಲರಿಯಲ್ಲಿರುವ ಪ್ರತಿಭಾರದಂತೆ ಬಳಕೆಯಾದ ಭಾರೀ ಕಲ್ಲುಗಳು ಈಜಿಪ್ಟ್ ಶಾಸ್ತ್ರಜ್ಞರಿಗೆ ಒಂದು ಒಗಟಾಗಿವೆ. ರಾಜನ ಸಮಾಧಿಕೋಣೆಯ ಮೇಲ್ಭಾಗದಲ್ಲಿರುವ 60ಟನ್ ತೂಕದ 5 ಗ್ರಾನೈಟ್ ತೊಲೆಗಳನ್ನು ಮೇಲೇರಿಸಿ ಜೋಡಿಸುವಲ್ಲಿ ಇವುಗಳ ಉಪಯೋಗ ಪಡೆದಿರಬಹುದು.

ಹೌಡಿನ್‌ನ ಪ್ರಕಾರ ಕಲ್ಲುಗಳನ್ನೇರಿಸಲು ಪಿರಮಿಡ್ಡಿನ ಹೊರಭಾಗದಲ್ಲಿ ಕೆಳಗಿನಿಂದ ಮೇಲಿನವರೆಗೆ ಒಂದೇ ಇಳಿಜಾರನ್ನು ನಿರ್ಮಿಸಿದಲ್ಲಿ ಅದರಿಂದ ನಿರ್ಮಾಣ ಕೆಲಸಕ್ಕೆ ತೊಡಕಾಗುವ ಸಂಭವವೇ ಹೆಚ್ಚು. ಅಥವಾ ಪಿರಮಿಡ್ಡಿನ ಪ್ರತಿಯೊಂದು ಬದಿಯಲ್ಲಿ ಪ್ರತ್ಯೇಕ ಇಳಿಜಾರನ್ನು ಅಡ್ಡಕ್ಕೆ, ಅಂದರೆ ಬದಿಗೆ ಸಮಾನಾಂತರವಾಗಿ ಕಟ್ಟಿದಲ್ಲಿ, ಇಳಿಜಾರುಗಳನ್ನು ಕಟ್ಟಲೇ ಲಕ್ಷಾಂತರ ಕಲ್ಲುಗಳು ಬೇಕಾಗುತ್ತಿದ್ದವು. ಪಿರಮಿಡ್ಡಿನ ಹೊರಭಾಗದಲ್ಲಿ ಇಳಿಜಾರುಗಳ ಯಾವುದೇ ಕುರುಹುಗಳು ಇಲ್ಲದಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ. ಹೌಡಿನ್‌ನ ವಿಧಾನದ ಪ್ರಕಾರ ಪಿರಮಿಡ್ಡನ್ನು ಕಟ್ಟಲು 4,000 ಜನರು ಸಾಕಾದರೆ, ಇತರ ಸಿದ್ಧಾಂತಿಗಳ ಅಂದಾಜಿನಲ್ಲಿ 1,00,000 ಜನರ ಶ್ರಮ ಇದಕ್ಕೆ ಅಗತ್ಯ. ರೇಡಾರ್ ಮತ್ತಿತರ ನಿರಪಾಯಕಾರಿ ಸಾಧನಗಳನ್ನು ಬಳಸಿ ತನ್ನ ಸಿದ್ಧಾಂತವನ್ನು ಮರು ಪರಿಶೀಲಿಸುವ ಯೋಜನೆಯೊಂದನ್ನು ಸದ್ಯಕ್ಕೆ ರೂಪಿಸಲಾಗುತ್ತಿದೆ. (ವಿ.ಎಸ್.)

**ಪಿರಾಕ್:** ಪಾಕಿಸ್ತಾನದ ಕಚ್ಛ್ ಮೈದಾನದ ಉತ್ತರಕ್ಕೆ ಬೋಲನ್ ನದಿಯ ಜಲಾನಯನ ಪ್ರದೇಶದಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಇದರ ಸಮೀಪದಲ್ಲಿ ಮೆಹರ್‌ಗಡ ಹಾಗೂ ನೌಶಾರೊ ನೆಲೆಗಳಿವೆ. ಆದಿ ಹರಪ್ಪ ಹಂತದಲ್ಲಿ ಮೆಹರ್‌ಗಡ ವಸತಿಯನ್ನು ತೊರೆದು ಜನ ನೌಶಾರೊನಲ್ಲಿ ನೆಲೆ ನಿಂತರು. ಪ್ರೌಢ ಹರಪ್ಪ ಕಾಲದಲ್ಲಿ ವಸತಿ ಮತ್ತೆ ಇಲ್ಲಿಂದ ಪಿರಾಕ್‌ಗೆ ಬದಲಾಯಿಸಲ್ಪಟ್ಟಿತು. ಪ್ರ.ಶ.ಪೂ.1900–1800ರ ಅನಂತರ ಇಲ್ಲಿಯೂ ಕೆಲಕಾಲ ಜನವಸತಿ ಇರಲಿಲ್ಲ. ಅನಂತರ ಪ್ರ.ಶ.ಪೂ. ಮೊದಲ ಸಹಸ್ರಮಾನದ ಮಧ್ಯ ಭಾಗದವರೆಗೆ ಇಲ್ಲಿ ಜನ ವಸತಿ ಇತ್ತು. ಸು.10 ಹೆಕ್ಟೇರ್ ವಿಸ್ತಾರವಿರುವ ಈ ನೆಲೆಯಲ್ಲಿ ಉತ್ಖನನ ನಡೆದು (1968–74) ಮೂರು ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ.

ಹಂತ I: ಹಸಿ ಇಟ್ಟಿಗೆಯ ನೆಲಗಟ್ಟಿರುವ ವಿಸ್ತಾರವಾದ ಕಟ್ಟಡ ಬೆಳಕಿಗೆ ಬಂದಿದೆ. ಕೈಯಿಂದ ತಯಾರಿಸಿದ ಒರಟಾದ ಮಣ್ಪಾತ್ರೆಗಳ ಮೇಲೆ ಬಿಡಿಸಿದ ವರ್ಣಚಿತ್ರಗಳು ಈ ಪ್ರದೇಶದಲ್ಲಿ ಮೊದಲಿನಿಂದಲೇ ನಡೆದುಬಂದ ಸಂಪ್ರದಾಯದ ವರ್ಣಚಿತ್ರಗಳನ್ನು ಹೋಲುತ್ತವೆ. ಕೆಲವು ಪಾತ್ರೆಗಳ ಮೇಲ್ಭಾಗದಲ್ಲಿ ಮೆತ್ತಿದ ಅರಳಿನ ಪಟ್ಟಿಗಳನ್ನು ಬೆರಳಚ್ಚಿನಿಂದ ಅಲಂಕರಿಸಲಾಗಿದೆ. ಸುಟ್ಟ ಹಾಗೂ ಸುಡದೆ ತಯಾರಿಸಿದ ಮಣ್ಣಿನ ಕುದುರೆ ಹಾಗೂ ಒಂಟೆಯ ಗೊಂಬೆಗಳನ್ನು ವರದಿ ಮಾಡಲಾಗಿದೆ. ಈ ಪ್ರಾಣಿಗಳ ನಿಜ ಅಸ್ಥಿ ಅವಶೇಷಗಳೂ ಈ ಕಾಲದಿಂದ ಪ್ರಾಪ್ತವಾಗಿವೆ. ಮಹತ್ತ್ವಪೂರ್ಣ ಅವಶೇಷಗಳೆಂದರೆ ಸುಟ್ಟಮಣ್ಣಿನ ವೃತ್ತಾಕಾರದ ಅಥವಾ ವಕ್ರಾಕಾರದ ಬಿರಡೆಯೋಪಾದಿಯಂಥ ಮುದ್ರೆಗಳು. ಇವುಗಳ ಬಳಕೆ ಸರ್ವೇಸಾಮಾನ್ಯವಾಗಿತ್ತು. ತಾಮ್ರ ಹಾಗೂ ಕಂಚಿನ ವಸ್ತುಗಳೊಂದಿಗೆ ಕಲ್ಲಿನ ಅಲಗುಗಳನ್ನೂ ಉಪಯೋಗಿಸಲಾಗುತ್ತಿತ್ತು.

ಹಂತ II: ಈ ಅವಧಿಯಲ್ಲಿಯೂ ಹಂತ Iರ ಅವಶೇಷಗಳೇ ಮುಂದುವರೆದವು. ಆದರೆ ಸುಟ್ಟ ಹಾಗೂ ಸುಡದೇ ಇದ್ದ ಮಣ್ಣಿನ ಬ್ಯಾಕ್ಟ್ರಿಯದ ಒಂಟೆಗಳು ಹಾಗೂ ಕುದುರೆಗಳ ಗೊಂಬೆಗಳಲ್ಲದೆ, ಮಾನವ ಗೊಂಬೆಗಳೂ ಅಧಿಕ ಸಂಖ್ಯೆಯಲ್ಲಿ ದೊರೆತಿವೆ; ಇದರಲ್ಲಿ ಸವಾರಯುಕ್ತ ಕುದುರೆ ಹಾಗೂ ಒಂಟೆಗಳ ಗೊಂಬೆಗಳೂ ಇವೆ. ಅಧಿಕ ಸಂಖ್ಯೆ ಯಲ್ಲಿರುವ ತಾಮ್ರ ಹಾಗೂ ಕಂಚಿನ ಉಪಕರಣಗಳೊಂದಿಗೆ ಈ ಕಾಲದಲ್ಲಿ ಕಬ್ಬಿಣದ ತುಣುಕುಗಳನ್ನು ಪ್ರಥಮ ಬಾರಿಗೆ ಪತ್ತೆಹಚ್ಚಲಾಗಿದೆ. ಅಂದರೆ ಪ್ರ.ಶ.ಪೂ.ಸು.1000ಕ್ಕೂ ಮೊದಲೇ ಕಬ್ಬಿಣದ ಬಳಕೆ ಆರಂಭವಾಗಿತ್ತೆನ್ನಬಹುದು.

ಹಂತ III: ಈ ಅವಧಿಯಲ್ಲಿಯೂ ಹಂತ IIರ ಅವಶೇಷಗಳು ಮುಂದುವರೆದವು. ಆದರೆ ಕಬ್ಬಿಣದ ಉಪಕರಣಗಳ ಸಂಖ್ಯೆ ಅತ್ಯಧಿಕವಾಯಿತು. ಈ ಕಾಲಾವಧಿಯಲ್ಲಿ ಮೊದಲಿನಿಂದಲೂ ಉಪಯೋಗದಲ್ಲಿದ್ದ ವರ್ಣಚಿತ್ರಿತ ಮಣ್ಪಾತ್ರೆಗಳು ಕ್ರಮೇಣವಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಅವುಗಳ ಸ್ಥಾನಗಳಲ್ಲಿ ಸಾದಾಬೂದು–ಕಪ್ಪು ವರ್ಣದ ಮಣ್ಪಾತ್ರೆಗಳನ್ನು ದಿನನಿತ್ಯದ ಉಪಯೋಗದಲ್ಲಿ ಕಾಣಬಹುದು. ಇಂಗಾಲ–14ರ ಕಾಲನಿರ್ಣಯದಂತೆ ಈ ಅವಧಿಯನ್ನು ಪ್ರ.ಶ.ಪೂ.ಸು.1000–800 ಹಾಗೂ ಪ್ರ.ಶ.ಪೂ.ಸು.1370–40 ಎಂದು ನಿರ್ಧರಿಸಲಾಗಿದೆ.

ಈ ನೆಲೆಯಿಂದ ಮೂರು ತಳಿಯ ಗೋದಿ ಹಾಗೂ ಎರಡು ತಳಿಯ ಜವೆಯೊಂದಿಗೆ ಬತ್ತ ಹಾಗೂ ಜೋಳಗಳನ್ನು ವರದಿ ಮಾಡಲಾಗಿದೆ. ಬತ್ತ ಹಾಗೂ ಜೋಳ ಈ ಪ್ರದೇಶದಲ್ಲಿ ಒಂದೇ ಕಾಲಾವಧಿಯಲ್ಲಿರುವುದು ಪ್ರಾಂತೀಯ ಕೃಷಿ ಬೆಳವಣಿಗೆಯ ಸೂಚಕವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. (ಎಲ್.ಎಸ್.ಆರ್.)

**ಪೀಡಕ ಪ್ರಭುತ್ವ:** ಕ್ರೂರವೂ ದಮನಕಾರಿಯೂ ನಿರಂಕುಶವೂ ಆದ ಸಂವೈಧಾನಿಕ ಕಾನೂನಿನ ಬೆಂಬಲವಿಲ್ಲದ ಆಳಿಕೆ (ಟಿರನಿ). ಗ್ರೀಸಿನ ಪ್ರಾಚೀನ ನಗರ ರಾಜ್ಯಗಳಲ್ಲಿ ಜನವರ್ಗ ಹಾಗೂ ಶ್ರೀಮಂತ ಅಥವಾ ಕುಲೀನವರ್ಗದ ನಡುವಣ ಘರ್ಷಣೆಯಲ್ಲಿ ಸಾಮಾನ್ಯವಾಗಿ ಪೀಡಕ ಪ್ರಭುಗಳು ಅಧಿಕಾರಕ್ಕೆ ಬರುತ್ತಿದ್ದರು. ಗ್ರೀಕ್ ಪೀಡಕ ಪ್ರಭುಗಳಲ್ಲಿ ಪ್ರಸಿದ್ಧರಾದವರು ಕಾರಿಂತಿನ ಪೆರಿಯಾಂಡರ್, ಪಿಸಿಸ್ಟ್ರಾಟಸ್, ಹಿಪಾರ್ಕಸ್, ಅಥೆನ್ಸಿನ ಹಿಪಿಯಾಸ್, ಗೆಲಾನ್, 1ನೆಯ ಮತ್ತು 2ನೆಯ ಹೈಯರೋ, ಡಯೋನೀಸಿಯಸ್ (ಹಿರಿಯ ಮತ್ತು ಕಿರಿಯ). ಅನುವಂಶೀಯ ರಾಜರಂತಲ್ಲದ ಈ ನಿರಂಕುಶ ಪ್ರಭುಗಳು ಸ್ವಪ್ರಯತ್ನದಿಂದ ಅಧಿಕಾರಕ್ಕೆ ಬಂದು, ಪೂರ್ವನಿದರ್ಶನದ ಆಧಾರವುಳ್ಳ ಸಂವಿಧಾನಗಳಿಗೆ ಹೆಚ್ಚಿನ ಮಹತ್ವ ನೀಡದೆ ಆಳಿದರು. ಇವರಲ್ಲಿ ಕೆಲವರು ಸಮರ್ಥರೂ ಜನಪ್ರಿಯರೂ ಆಗಿದ್ದರು. ಗ್ರೀಕ್ ಪ್ರಜಾಪ್ರಭುತ್ವದ ಉದಯದಿಂದ ಏಕವ್ಯಕ್ತಿ ಆಳಿಕೆ ತನ್ನ ಮಹತ್ವವನ್ನು ಕಳೆದುಕೊಂಡಿತು. ಪ್ರ.ಶ.ಪೂ.4ನೆಯ ಶತಮಾನದ ವೇಳೆಗೆ ಪೀಡಕ ಪ್ರಭುತ್ವದ ಬಗ್ಗೆ ಆಳವಾದ ದ್ವೇಷ ಬೇರೂರಿತು. ಪ್ಲೇಟೋ ವಿವೇಕಿಯಾದ ದೊರೆಗೆ ಪ್ರಥಮ ಸ್ಥಾನವನ್ನೂ ನಿರಂಕುಶನಾದ ಪ್ರಭುವಿಗೆ ಕೊನೆಯ ಸ್ಥಾನವನ್ನೂ ನೀಡಿದ್ದ.

ಈ ವ್ಯತ್ಯಾಸ ಮಧ್ಯಯುಗದ ರಾಜಕೀಯ ತತ್ತ್ವಶಾಸ್ತ್ರದ ಮುಖ್ಯ ಗುರಿಯಾಯಿತು. ರಾಜ ಪ್ರಭುತ್ವವೇ ಪ್ರಧಾನ ಸರ್ಕಾರ ಪದ್ಧತಿಯಾಗಿದ್ದರೂ ಮಧ್ಯಯುಗದ ದೊರೆಗಳು ಸಂವಿಧಾನಕ್ಕೆ ಅನುಗುಣವಾಗಿ ಆಳುತ್ತಿದ್ದರೇ ಹೊರತು ನಿರಂಕುಶ ಪ್ರಭುಗಳಾಗಿರಲಿಲ್ಲ. ಈ ದೊರೆಗಳ, ಅಧಿಕಾರಿಗಳ ಮೇಲೆ ನಿರ್ದಿಷ್ಟ ರಾಜ್ಯಗಳ ವಸಾಹತು ಕಾನೂನು, ಸಾಂಪ್ರದಾಯಿಕ ಕಾನೂನು ಹಾಗೂ ದೈವಿಕ ಮತ್ತು ನೈಸರ್ಗಿಕ ಕಾನೂನು ಇರುತ್ತಿದ್ದುವು. ಇಲ್ಲವೇ ಇಡೀ ಮಾನವವರ್ಗದ ಆಳಿಕೆಗಾಗಿ ದೇವರಿಂದ ಬಂದವೆಂದು ಭಾವಿಸಲಾದ ನಿಯಮಗಳ ನಿಯಂತ್ರಣವಿತ್ತು. ದೊರೆಯ ಅಧಿಕಾರ ದೇವರಿಂದ ಬಂದದ್ದು ಎಂದು ಬಹುತೇಕ ಎಲ್ಲರೂ ಒಪ್ಪಿದ್ದರಾದರೂ ಪೀಡಕನ ಅಧಿಕಾರದ ಬಗ್ಗೆ ಅಷ್ಟು ಸ್ಪಷ್ಟವಾದ ಪರಿಕಲ್ಪನೆಯಿರಲಿಲ್ಲ. ಜನರನ್ನು ಶಿಕ್ಷಿಸಲು ದೇವರೇ ಪೀಡಕರನ್ನು ಕಳುಹಿಸುತ್ತಿದ್ದ ಎಂದು ಕೆಲವು ದೇವತಾಶಾಸ್ತ್ರಜ್ಞರು ನಂಬಿದ್ದರು.

16–17ನೆಯ ಶತಮಾನಗಳಲ್ಲಿ ನಿರಂಕುಶ ಪ್ರಭುತ್ವದ ಉದಯದೊಂದಿಗೆ ಪೀಡಕ ರಾಜನನ್ನು ಕುರಿತ ಮಧ್ಯಯುಗೀಯ ಸಿದ್ಧಾಂತ ವಿಮರ್ಶೆಗೆ ಒಳಗಾಯಿತು; ಸಂವೈಧಾನಿಕ ಸಿದ್ಧಾಂತದ ಪ್ರತಿಪಾದಕರ ಪ್ರಭಾವಕ್ಕೆ ಒಳಗಾಯಿತು. ಇಂಗ್ಲೆಂಡಿನಲ್ಲಿ 1ನೆಯ ಚಾರ್ಲ್ಸ್ ದೊರೆ (1625–49) ರಾಜ್ಯಶಾಸನವನ್ನು ಪದೇ ಪದೇ ಉಲ್ಲಂಘಿಸುತ್ತ ಪೀಡಕ ಪ್ರಭುವಾದಾಗ ಅವನನ್ನು ಕಾನೂನಿನ ಕಕ್ಷೆಗೆ ಒಳಪಡಿಸಿ ಅವನಿಗೆ ಮರಣದಂಡನೆ ವಿಧಿಸಲಾಯಿತು. ಇದೇ ರೀತಿ 3ನೆಯ ಜಾರ್ಜ್‌ನ ಪೀಡಕ ನಡತೆಯಿಂದಾಗಿ ಅಮೆರಿಕದಲ್ಲಿ ಕ್ರಾಂತಿಯುಂಟಾಗಿ ಅದು ಸ್ವಾತಂತ್ರ್ಯ ಘೋಷಿಸಿಕೊಂಡಿತು (1776). ಆಧುನಿಕ ಯುಗದಲ್ಲಿ ಸಂವಿಧಾನಬದ್ಧ ಸರ್ಕಾರ ಪದ್ಧತಿ ವಿಶೇಷ ಮಹತ್ತ್ವಗಳಿಸಿದೆ. (ಎಂ.ಎಸ್.ಎಸ್.)

**ಪುಣೆ:** ಮಹಾರಾಷ್ಟ್ರ ರಾಜ್ಯದ ಜಿಲ್ಲಾ ಕೇಂದ್ರ ಹಾಗೂ ಸಾಂಸ್ಕೃತಿಕ ನಗರ. ಇದು ಆದಿಹಳೆಶಿಲಾಯುಗದ ಮಾನವ ವಾಸಸ್ಥಾನವೂ ಆಗಿತ್ತೆಂಬುದು ಮೂಳ–ಮೂತ ನದಿಯ ಎಡ ದಂಡೆಯ ಮೇಲೆ ದೊರೆತ ಕೈಗೊಡಲಿಗಳು, ಶಿಲಾಯುಗದ ಇತರ ಉಪಕರಣಗಳು ಮತ್ತು ನದಿಯ ಉರುಟು ಕಲ್ಲುಗಳು ಮುಂತಾದವುಗಳಿಂದ ಖಚಿತಪಟ್ಟಿದೆ. ಮಧ್ಯ ಹಳೆಶಿಲಾಯುಗದ ಕೊರೆಯುಳಿಗಳೂ ದೊರೆತಿವೆ. ಇಲ್ಲಿಯ ಡೆಕ್ಕನ್ ಕಾಲೇಜ್ ಆವರಣದಲ್ಲಿ ಮನೆಯೊಂದರ ಅಡಿಪಾಯ ತೋಡುವಾಗ ಕೆಂಪು ಜಿಗುಟುಮಣ್ಣಿನ ಪದರದ ಹಳೆ ಶಿಲಾಯುಗದ ತಿರಳುಕಲ್ಲುಗಳು ದೊರೆತಿದ್ದು, ಇದು ಬಹುಶಃ ಆ ಸಂಸ್ಕೃತಿಯ ಮಾನವನ ನೆಲೆಯಾಗಿರಬಹುದೆಂದು ಎಚ್.ಡಿ.ಸಾಂಕಳಿಯ ಅವರ ಅಭಿಪ್ರಾಯ. (ವಿ.ಎಸ್.ಬಿ.)

**ಪುನ್ನಾಟ:** ಪ್ರಾಚೀನ ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದ ಒಂದು ಭೌಗೋಳಿಕ ಘಟಕ. ಇದರ ವಿಸ್ತೀರ್ಣ ಅಸ್ಪಷ್ಟ. 6ನೆಯ ಶತಮಾನದ ಒಂದು ಶಾಸನದ ಪ್ರಕಾರ ಇದು ಕಾವೇರಿ–ಕಬಿನಿ ನದಿಗಳು ಹರಿಯುವ ಪ್ರದೇಶ, ಅಂದರೆ ಈಗಿನ ಮೈಸೂರು ಜಿಲ್ಲೆ ಕಿತ್ಥಿಪುರ ಅಥವಾ ಕೀರ್ತಿಪುರ (ಹೆಗ್ಗಡದೇವನಕೋಟೆ ತಾಲ್ಲೂಕಿನ ಬೇಚಿರಾಗ್ ಕಿತ್ತೂರು ಗ್ರಾಮ) ಇಲ್ಲಿಯ ಮುಖ್ಯಪಟ್ಟಣ ಮತ್ತು ರಾಜಧಾನಿ. ಆದರೆ ಪುನ್ನಾಟದ ಎಲ್ಲೆಗಳು ಕಾಲಕಾಲಕ್ಕೆ ಬದಲಾಗಿರಬಹುದೆಂದು ತೋರುತ್ತದೆ. ಒಂದು ಕಾಲದಲ್ಲಿ ಪುನ್ನಾಟ ಇಂದಿನ ಮೈಸೂರು ಜಿಲ್ಲೆಯಲ್ಲದೆ ಸುತ್ತಣ ಕೊಯಮತ್ತೂರು, ಕೊಡಗು, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳ ಭಾಗಗಳನ್ನೂ ಒಳಗೊಂಡಿದ್ದಿರಬಹುದು. ಒಬ್ಬ ವಿದ್ವಾಂಸರ ಪ್ರಕಾರ ಪುನ್ನಾಟವು ನದಿ ಝರಿಗಳು ಹರಿಯುವ ಪ್ರದೇಶ ಎಂದು ಸೂಚಿಸುವ ಪುನಲ್ ಮತ್ತು ನಾಡು ಎಂಬ ಕನ್ನಡ ಪದಗಳ ಸಂಯುಕ್ತ ರೂಪ. ಪುನ್ನಾಟವನ್ನು ಪುಂರಾಷ್ಟ್ರವೆಂದು ಒಂದು ಶಾಸನದಲ್ಲಿ ಕರೆದಿದ್ದರೆ ಪೂನಾಡು, ಪುದಲ್ನಾಡು ಎಂಬ ರೂಪಗಳೂ ದೊರಕುತ್ತವೆ. ಪದಿನಾಡು ಎಂಬುದೂ ಪುನ್ನಾಡಿನ ರೂಪಾಂತರ ಇರಬಹುದೇ ಎಂಬುದಕ್ಕೆ ವಿದ್ವಾಂಸರಲ್ಲಿ ಒಮ್ಮತವಿಲ್ಲ.

ಪುನ್ನಾಟ ದೇಶಕ್ಕೆ ಬಹು ಪ್ರಾಚೀನವಾದ ಉಲ್ಲೇಖಗಳು ದೊರಕುತ್ತವೆ. ಈಜಿಪ್ಟಿನ 18ನೆಯ ರಾಜವಂಶದ ಅರಸರುಗಳ, ಪ್ರ.ಶ.ಪೂ.15–14ನೆಯ ಶತಮಾನದ ದಾಖಲೆಗಳಲ್ಲಿ ದೊರಕುವ ಪುಂಟ್ ಪುನ್ನಾಟವಿರಬಹುದೆಂದು ಕೆಲವು ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲೆ ಕೆಲವು ಪುರಾತತ್ತ್ವಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಒಂದು ಪ್ರತೀತಿಯಂತೆ ಮಗಧ

ರಾಜ್ಯದಿಂದ ಜೈನಸಂಘ ಭದ್ರಬಾಹುವಿನ ಮುಂದಾಳತ್ವದಲ್ಲಿ ದಕ್ಷಿಣಕ್ಕೆ ವಲಸೆ ಬಂದುದಾಗಿಯೂ ಶ್ರವಣಬೆಳಗೊಳಕ್ಕೆ ಬಂದಾಗ ತನ್ನ ಅಂತ್ಯ ಸಮೀಪಿಸಿದುದನ್ನು ಅರಿತ ಭದ್ರಬಾಹು ಅಲ್ಲೇ ಉಳಿದುಕೊಂಡಂತೆಯೂ ತಿಳಿದುಬರುತ್ತದೆ. ಹರಿಷೇಣನ ಬೃಹತ್ಕಥಾಕೋಶದಲ್ಲಿ (931) ಭದ್ರಬಾಹುವಿನ ಮಾತಿನಂತೆ ಜೈನಸಂಘ ದಕ್ಷಿಣದಲ್ಲಿದ್ದ ಪುನ್ನಾಟ ವಿಷಯಕ್ಕೆ ಹೋಯಿತು ಎಂದು ಹೇಳಿದೆ. ಇದರಂತೆ ಪುನ್ನಾಟ ರಾಜ್ಯ ಪ್ರ.ಶ.ಪೂ.3ನೆಯ ಶತಮಾನದಲ್ಲಿಯೇ ಅಸ್ತಿತ್ವದಲ್ಲಿದ್ದಿತೆನ್ನಬಹುದು.

ಪ್ರಸಕ್ತಶಕಾರಂಭದಲ್ಲಿ ರೋಮ್ ಚಕ್ರಾಧಿಪತ್ಯಕ್ಕೂ ಈ ರಾಜ್ಯಕ್ಕೂ ವ್ಯಾಪಾರ ಸಂಬಂಧ ಬೆಳೆದು ಬಂದಿದ್ದಿರಬೇಕು. ಪ್ಲಿನಿ ಭಾರತದ ಪಚ್ಚೆಯ ಹರಳುಗಳ ಮೇಲೆ ರೋಮನ್ ಕುಶಲಕಲೆಗಾರರು ಕೆತ್ತನೆ ಮಾಡಿರುವ ವಿಷಯ ತಿಳಿಸಿದ್ದಾನೆ. ಸು.2ನೆಯ ಶತಮಾನದ ಟಾಲಮಿ ಎಂಬ ಗ್ರೀಕ್ ಭೂಗೋಳಕಾರ ಪೌನ್ನಟ ಪಚ್ಚೆಕಲ್ಲುಗಳಿಗೆ ಪ್ರಸಿದ್ಧವಾಗಿತ್ತೆಂದು ಹೇಳಿದ್ದಾನೆ. ಕೊಯಮತ್ತೂರು ಜಿಲ್ಲೆಯ ಭಾಗಗಳಲ್ಲಿ ಪಚ್ಚೆಯ ಕಲ್ಲು ಇತ್ತೀಚಿನವರೆಗೆ ದೊರೆಯುತ್ತಿದ್ದುದು ಮತ್ತು ಆ ಭಾಗದಲ್ಲಿ ಅನೇಕ ರೋಮನ್ ನಾಣ್ಯಗಳು ದೊರೆತಿರುವುದೂ ರೋಮನ್ ವ್ಯಾಪಾರಿಗಳು ಇಲ್ಲಿಂದ ಪಚ್ಚೆಯ ಕಲ್ಲುಗಳನ್ನು ಸಾಗಿಸುತ್ತಿದ್ದರೆಂಬುದಕ್ಕೆ ಪುಷ್ಟಿ ಕೊಡುತ್ತವೆ.

4ನೆಯ ಶತಮಾನದಲ್ಲಿ ಕದಂಬ ಮೂಲಪುರುಷ ಮಯೂರಶರ್ಮ ಇತರ ಅನೇಕ ರಾಜಮನೆತನಗಳ ಜೊತೆಗೆ ಪುನ್ನಾಟರನ್ನು ಸೋಲಿಸಿದನೆಂದು ಚಂದ್ರವಳ್ಳಿಯಲ್ಲಿರುವ ಶಾಸನದಿಂದ ವ್ಯಕ್ತವಾಗುತ್ತದೆ. ಪುನ್ನಾಟ ರಾಜರೆಂದು ಪ್ರಸಿದ್ಧವಾಗಿರುವ 5–7ನೆಯ ಶತಮಾನಗಳಲ್ಲಿ ಈ ಪ್ರದೇಶದಲ್ಲಿ ಆಳಿದ ವಂಶದವರ ಮೂರು ತಾಮ್ರಶಾಸನಗಳು ಇದುವರೆಗೆ ದೊರೆತಿವೆ. ಕೊಮರಲಿಂಗಂ ತಾಮ್ರಶಾಸನದಲ್ಲಿ ಪುನ್ನಾಟ ರಾಜ ರವಿದತ್ತ ರಾಜಧಾನಿ ಕಿತ್ಥಿಪುರದಲ್ಲಿದ್ದು ದಾನಮಾಡಿದುದಾಗಿ ತಿಳಿಸುವುದರಿಂದ ಕಿತ್ಥಿಪುರ ಅಥವಾ ಕೀರ್ತಿಪುರ ಇವರ ರಾಜಧಾನಿಯಾಗಿತ್ತೆಂಬುದು ಸ್ಪಷ್ಟ. ಕಬಿನಿ ನದಿಯ ದಡದಲ್ಲಿರುವ ಈಗಿನ ಕಿತ್ತೂರು ಹಿಂದಿನ ಕೀರ್ತಿಪುರವಾಗಿತ್ತೆಂದು ಅಲ್ಲಿಯ ಒಂದು ಶಾಸನದಿಂದ ಸಿದ್ಧಪಡುತ್ತದೆ. ಈ ವಂಶದ ಮೂಲಪುರುಷ ತಾಮ್ರಕಾಶ್ಯಪ (ಇವನು ಮಿಕನೆಂಬುವನ ಮಗನೆಂದು ಒಂದು ಶಾಸನ ತಿಳಿಸುತ್ತದೆ). ಈ ತಾಮ್ರಕಾಶ್ಯಪನ ಮಗ ರಾಜಾದಿತ್ಯ. ಇವನ ವಂಶದಲ್ಲಿ ಮುಂದೆ ಕಾಣಿಸಿ ಕೊಳ್ಳುವವನು ವಿಷ್ಣುದಾಸ. ಈ ವಿಷ್ಣುದಾಸನ ಮಗ ರಾಷ್ಟ್ರವರ್ಮ (ಸು.475) ಕದಂಬ ವಂಶದ ಪ್ರಭಾವತಿ ಎಂಬುವಳನ್ನು ಮದುವೆಯಾಗಿದ್ದ. ಈತನಿಗೆ ಮೂವರು ಮಕ್ಕಳು–ಮಾಂಬಳ್ಳಿ ಶಾಸನವನ್ನು ಹಾಕಿಸಿದ ಪೃಥ್ವೀಪತಿ (ಸು.520), ಸ್ಕಂದವರ್ಮ (ಸು.525) ಮತ್ತು ಕೊಮರಲಿಂಗಂ ಶಾಸನದ ಕರ್ತೃ ರವಿದತ್ತನ ಮುತ್ತಾತನಾದ ನಾಗದತ್ತ (ಸು.530). ಗಂಗ ಅವಿನೀತ ಮತ್ತು ದುರ್ವಿನೀತರ ಶಾಸನಗಳು, ಅವಿನೀತ ಪುನ್ನಾಟ ರಾಜ ಸ್ಕಂದವರ್ಮನ ಮಗಳನ್ನು ಮದುವೆಯಾಗಿದ್ದನೆಂದು ತಿಳಿಸುತ್ತವೆ. ಸ್ಕಂದವರ್ಮನ ಮಗಳ ಹೆಸರು ಜೇಷ್ಠಾ ಎಂದು ಒಂದು ತಾಮ್ರಶಾಸನದಲ್ಲಿ ಹೇಳಿದೆ. ಕೊಮರಲಿಂಗಂ ಶಾಸನದಲ್ಲಿ ಈ ವಂಶಾವಳಿ ಹೀಗೆ ಮುಂದುವರೆದಿದೆ; ನಾಗದತ್ತನ ಮಗ ಭುಜಂಗಾದಿ ರಾಜ (ಸು.575), ಅವನ ಮಗ ಸ್ಕಂದವರ್ಮ (ಸು.625), ಆ ಸ್ಕಂದವರ್ಮನ ಮಗ ಶಾಸನ ಕರ್ತೃವಾದ ಪುನ್ನಾಟ ರಾಜ ರವಿದತ್ತ (ಸು.650). ಈ ಶಾಸನಗಳಿಂದ ಇವರ ಕಾಲ ಸ್ಪಷ್ಟವಾಗುವುದಿಲ್ಲ. ಆದರೆ ಗಂಗ ಅವಿನೀತನ ಸಮಕಾಲೀನನಾಗಿ ಸ್ಕಂದವರ್ಮನಿದ್ದನೆಂದು ತಿಳಿಯುವುದರಿಂದ ಅದರ ಆಧಾರದ ಮೇಲೆ ಪುನ್ನಾಟ ರಾಜರ ಕಾಲವನ್ನೂ ಸ್ಥೂಲವಾಗಿ ಊಹಿಸಬಹುದು. ದುರ್ವಿನೀತನ ಶಾಸನಗಳಲ್ಲಿ ಅವನನ್ನು ಪೌನ್ನಾಟಾಧಿಪತಿನಾ ಎಂದಿರುವುದರಿಂದ ಅವನ ಕಾಲದಲ್ಲಿ ಈ ಪುನ್ನಾಟ ರಾಜ್ಯ ಗಂಗರಾಜ್ಯದ ಭಾಗವಾಗಿ ಹೋಗಿರಬೇಕು. ಗಂಗ ಶಿವಮಾರನ ಶಾಸನವೊಂದರಿಂದ ಪುನ್ನಾಟ ರಾಜ್ಯ ಮೊದಲು 6000 ವಿಷಯವಾಗಿತ್ತೆಂದು ತಿಳಿದುಬರುತ್ತದೆ. ಮುಂದೆ ಅದು ಪುನ್ನಾಟ 10000 ರಾಜ್ಯವಾಗಿದ್ದುದಾಗಿ ಹಲವು ಶಾಸನಗಳಲ್ಲಿ ಕಂಡುಬರುತ್ತದೆ.

ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಂಡುಬರುವ ಪುನ್ನಾಡು 70 ಮತ್ತು ದೇವನಹಳ್ಳಿ ಶಾಸನಗಳೆರಡರಲ್ಲಿ ಬರುವ ಪುನ್ನಾಟರಸರು ಎಂಬುದಕ್ಕೂ ಈ ಪ್ರಸಿದ್ಧವಾದ ಪುನ್ನಾಟ ರಾಜ್ಯಕ್ಕೂ ಸಂಬಂಧವೇನು ಎನ್ನುವುದು ತಿಳಿಯದು. (ಎಂ.ಎಚ್.)

ಪುನ್ನಾಟ ದೇಶ ದಕ್ಷಿಣ ಭಾರತದಲ್ಲಿ ಜೈನಧರ್ಮದ ಮುಖ್ಯ ಕೇಂದ್ರವಾಗಿತ್ತು. ಈ ನಾಡಿನಲ್ಲಿ ಪ್ರಚಲಿತವಾಗಿದ್ದ ಒಂದು ಜೈನ ಸಂಘವನ್ನು ರಾಜಧಾನಿ ಕಿತ್ತೂರಿನ ಹೆಸರಲ್ಲಿ ಕಿತ್ತೂರ ಸಂಘ ಎಂದು ಕರೆಯಲಾಗಿದೆ. ಇಲ್ಲಿಂದ ವಲಸೆ ಹೋಗಿ ಗುಜರಾತ್ ಮತ್ತು ಸುತ್ತಲಿನ ಪ್ರದೇಶದಲ್ಲಿ ನೆಲಸಿದ್ದ ಯತಿಗಳ ಸಂಘ ಪುನ್ನಾಟ ಸಂಘವೆಂದು ಪ್ರಸಿದ್ಧವಾಯಿತು.

ಜಿನಸೇನಾಚಾರ್ಯರು ತಮ್ಮ ಹರಿವಂಶದಲ್ಲಿ ಬೃಹತ್‌ಗಣ ಇಲ್ಲವೇ ಪುನ್ನಾಟ ಸಂಘದ ಹೆಸರನ್ನು ಉಲ್ಲೇಖಿಸಿದ್ದಾರೆ. ಈ ಸಂಘದ ಬಗ್ಗೆ ವಿಪುಲ ಸಂಗತಿಗಳು ದೊರೆಯದಿದ್ದರೂ ಜಿನಸೇನ ಮತ್ತು ಹರಿಸೇನರು ಒದಗಿಸಿದ ಸಂಗತಿಗಳು ಇದೊಂದು ಜೈನ ಯತಿಗಳ ಪವಿತ್ರ ಸಂಘವಾಗಿತ್ತೆಂದೂ ಇದು ಗುಜರಾತಿನ ವರ್ಧಮಾನಪುರ ಮತ್ತು ಅದರ ನೆರೆಹೊರೆಯ ಪ್ರದೇಶದಲ್ಲಿ 8ನೆಯ ಶತಮಾನದ ಆರಂಭದ ಕಾಲಕ್ಕೆ ಸ್ಥಾಪಿತವಾಗಿರಬಹುದೆಂದೂ ಊಹಿಸಬಹುದು. ಲಾಡಬಾಗಡ (ಲಾಟ ವರ್ಗಟ ಅಥವಾ ಲಾಟಬಾಗಟ) ಎಂಬ ಸಂಘವೂ ಕಾಲಾಂತರದಲ್ಲಿ ಪುನ್ನಾಟ ಸಂಘಕ್ಕೆ ಹೊಂದಿಕೊಂಡುಹೋದಂತೆ ತೋರುತ್ತದೆ. (ಪಿ.ಬಿ.ಬಿ.)

**ಪುರಾತತ್ತ್ವ:** ಮನುಕುಲದ ಸಂಸ್ಕೃತಿಗಳು ಕಾಲಗರ್ಭದಲ್ಲಿ ಉಳಿಸಿಹೋದ ಅವಶೇಷಗಳನ್ನು ಅನ್ವೇಷಿಸಿ, ಉತ್ಖನನದಿಂದ ಹೊರತೆಗೆದು, ಇವುಗಳ ಆಧಾರದಿಂದ ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸುವ ಅಧ್ಯಯನ ಶಿಸ್ತು. ವಿವಿಧ ಪ್ರದೇಶಗಳಲ್ಲಿಯ ಜನಸಮುದಾಯಗಳ ಇತಿಹಾಸವನ್ನು ತಿಳಿಯಲು ಹಾಗೂ ಪುನಾರಚಿಸಲು ಸಾಹಿತ್ಯ ಪ್ರಮುಖ ಆಕರವೆಂಬುದು ತಿಳಿದ ಸಂಗತಿ. 18–19ನೆಯ ಶತಮಾನಗಳಲ್ಲಿ ಅನಿರೀಕ್ಷಿತ ಪರಿಸರದಲ್ಲಿ ಅಸಾಮಾನ್ಯ ವಿಚಿತ್ರ ವಸ್ತುಗಳು ಕೆಲವು ಕುತೂಹಲಿಗಳ ಗಮನ ಸೆಳೆದವು. ಸಾಹಿತ್ಯ ಹಾಗೂ ಇತರ ಆಕರಗಳಿಂದ ಅದುವರೆಗೆ ಅಲ್ಪ ಸ್ವಲ್ಪ ತಿಳಿದಿದ್ದ ಇತಿಹಾಸ ಕಾಲಘಟ್ಟಕ್ಕಿಂತ ಬಹಳ ಹಿಂದೆಯೇ ಮಾನವನ ಅಸ್ತಿತ್ವವಿದ್ದುದನ್ನು ಇಂಥ ಅಧ್ಯಯನ ಸೂಚಿಸಿತು. ಈ ಮಾನವನ ಜೀವನ ವಿಧಾನವನ್ನು ಗ್ರಹಿಸುವುದು ಸಾಧ್ಯವೆಂಬುದೂ ಇದರಿಂದ ತಿಳಿಯಿತು. ಕಲ್ಲು, ಮಣ್ಣು, ಲೋಹ, ಎಲುಬು, ದಂತ ಮುಂತಾದವುಗಳಿಂದ ಮಾಡಿದ ಈ ವಸ್ತುಗಳನ್ನು ತಮ್ಮ ರಕ್ಷಣೆ, ಜೀವನಾಭರಣಕೋಸ್ಕರ ಆಯಾ ಜನರು ಮಾಡಿಕೊಂಡಿದ್ದರೆಂಬುದು ಇವುಗಳ ಕ್ರಮಬದ್ಧ ಅಧ್ಯಯನದಿಂದ ತಿಳಿದು ಬಂತು. ಕ್ರಮೇಣ ಇಂಥ ವಸ್ತುಗಳ, ಮನುಷ್ಯ ಹಾಗೂ ಪ್ರಾಣಿಗಳ ಅಸ್ಥಿಗಳಿದ್ದ ನೆಲೆಗಳ ಹುಡುಕಾಟ ಮತ್ತು ಅಧ್ಯಯನ ಒಂದು ಶಾಸ್ತ್ರವಾಗಿ ಬೆಳೆಯಿತು. ಈ ಪ್ರಕಾರದ ಅಧ್ಯಯನಗಳಿಗೆ ಒಳಪಡಿಸಬಹುದಾದ ವಸ್ತು ಅವಶೇಷಗಳೇ ಪುರಾತತ್ತ್ವ ಆಕರಗಳು. ಇಂಥ ಆಕರಗಳ ವೈಜ್ಞಾನಿಕ ಅಧ್ಯಯನವೇ ಪುರಾತತ್ತ್ವಶಾಸ್ತ್ರ (ಆರ್ಕಿಯಾಲಜಿ). ಈ ಅಧ್ಯಯನ ಕೇವಲ ಇತಿಹಾಸ ಪೂರ್ವದ, ಅಂದರೆ ಪ್ರಾಗಿತಿಹಾಸ ಕಾಲದ ಜನಸಂಸ್ಕೃತಿಗಳ ಅವಶೇಷಗಳ ಅಧ್ಯಯನಕ್ಕೆ ಸೀಮಿತವಾಗಿಲ್ಲ. ಇತಿಹಾಸ ಕಾಲದ ನಗರ–ಗ್ರಾಮಗಳ ವಿನ್ಯಾಸ, ಕೋಟೆ–ಕೊತ್ತಳ, ಕೆರೆ–ಬಾವಿ, ಮನೆ–ಅರಮನೆ, ಶಿಲೆ, ಮಣ್ಣು, ದಂತ ಹಾಗೂ ಲೋಹ ವಸ್ತುಗಳು, ನಾಣ್ಯ, ವರ್ಣಚಿತ್ರ ಮೊದಲಾದ ರಾಜ–ಮಹಾರಾಜರ, ವರಿಷ್ಠ ಅಧಿಕಾರಿಗಳು ಹೊರಡಿಸಿದ, ಲೋಕೋಪಯೋಗಿ ಕಾರ್ಯಗಳಿಗೆ ಸಂಬಂಧಿಸಿದ ಶಾಸನಗಳು ಪುರಾತತ್ತ್ವ ಅಧ್ಯಯನ ವ್ಯಾಪ್ತಿಯಲ್ಲಿ ಬರುತ್ತವೆ. ಇವುಗಳ ಅಧ್ಯಯನದಿಂದ ಆಯಾಯ ಕಾಲದ ಜನಸಮುದಾಯಗಳ ರಕ್ಷಣಾ ವಿಧಾನಗಳು, ವಾಸ್ತು–ಮೂರ್ತಿ–ಶಿಲ್ಪ ಕಲೆ, ವಾಣಿಜ್ಯ, ಚಲಾವಣೆಯಲ್ಲಿದ್ದ ನಾಣ್ಯ ಪ್ರಕಾರಗಳು, ಭಾಷೆ, ಲಿಪಿಗಳ ಬೆಳೆವಣಿಗೆ ಮೊದಲಾದ ಸ್ವಾರಸ್ಯಕರ ಹಾಗೂ ಮಹತ್ತ್ವದ ವಿಷಯಗಳ ಸ್ಪಷ್ಟ, ನಂಬಲರ್ಹ ಚಿತ್ರ ದೊರೆಯುತ್ತದೆ.

1960ರ ದಶಕದ ತನಕ ಪುರಾತತ್ತ್ವ ಸಂಶೋಧನೆ ಕ್ರಮಬದ್ಧ ವಿಧಾನಗಳಿಂದ ಆಕರಗಳ ಸಂಗ್ರಹ, ಅವುಗಳ ವೈಜ್ಞಾನಿಕ ಅಧ್ಯಯನ ಮತ್ತು ವಿವರಣೆಗಷ್ಟೇ ಸೀಮಿತವಾಗಿತ್ತು. ಅನಂತರ ಪುರಾತತ್ತ್ವ ಆಕರಗಳಿಂದ ಆಯಾಯ ಕಾಲದ ಪರಿಸರ, ಅವು ಅಲ್ಲಿದ್ದ ಜನ ಸಮುದಾಯಗಳಿಗೆ ಒಡ್ಡುತ್ತಿದ್ದ ಸವಾಲುಗಳು, ಅವುಗಳಿಗೆ ಅನುಗುಣವಾಗಿ ತಮ್ಮ ಜೀವನವನ್ನು ಸುಗಮ ಮತ್ತು ವೃದ್ಧಿ ಮಾಡಿಕೊಳ್ಳಲು ಸಮುದಾಯಗಳು ಬೆಳೆಸಿಕೊಂಡ ಸೂಕ್ಷ್ಮ ತಿಳಿವಳಿಕೆ, ತಂತ್ರಜ್ಞಾನ ಬೆಳೆವಣಿಗೆ, ಸಾಧನೆ, ಏಳು–ಬೀಳುಗಳು, ಸಾಂಸ್ಕೃತಿಕ ಪ್ರಸರಣ ಮೊದಲಾದ ಒಳನೋಟಗಳನ್ನು ಪಡೆಯುವ ಪ್ರಯತ್ನಗಳು ಸುಧಾರಣೆಯಾಗುತ್ತ ಸಾಗಿವೆ. ಈ ಅಧ್ಯಯನಗಳಲ್ಲಿ ನಾನಾ ವಿಜ್ಞಾನಿಗಳ ಪಾತ್ರ ಹಾಗೂ ವೈಜ್ಞಾನಿಕ ವಿಧಾನಗಳ ಬಳಕೆ ಇತ್ತೀಚಿನ ದಶಕಗಳಲ್ಲಿ ಹೆಚ್ಚಾಗುತ್ತಿದ್ದು ಪುರಾತತ್ತ್ವ ಬಹುಮಟ್ಟಿಗೆ ಒಂದು ವೈಜ್ಞಾನಿಕ ಶಾಸ್ತ್ರವೇ ಆಗುತ್ತಿದೆ. ಈ ರೀತಿ ವಸ್ತು ಅವಶೇಷ–ನೆಲೆಗಳನ್ನು ಗುರುತಿಸಿ, ಲಕ್ಷಾನುಗಟ್ಟಲೆ ವರ್ಷಗಳ ಹಿಂದಿನಿಂದ ನಡೆದು ಬಂದ ಮಾನವನ ದೈಹಿಕ, ಮಾನಸಿಕ ಮತ್ತು ಸಾಂಸ್ಕೃತಿಕ ಬೆಳೆವಣಿಗೆಯನ್ನು ಗುರುತಿಸುವ ಹಾಗೂ ಇದರ ಬಗ್ಗೆ ವಿವರಗಳನ್ನು ಪಡೆಯುವ ಈ ಅಧ್ಯಯನದ ಪ್ರಗತಿಯ ಒಂದು ಸ್ಥೂಲ ಚಿತ್ರವನ್ನು ಇಲ್ಲಿ ನಿರೂಪಿಸಲಾಗಿದೆ. (ಎ.ಎಸ್.)

**ಪುರಾತತ್ತ್ವ ಶಾಸ್ತ್ರದ ಬೆಳೆವಣಿಗೆ (ಪ್ರಪಂಚ):** ಪುರಾತತ್ತ್ವಶಾಸ್ತ್ರ ಕುತೂಹಲ ಮತ್ತು ಬೆರಗಿನಿಂದ ಕೂಡಿದ ಒಂದು ಸಾಹಸ. ಮನುಕುಲದ ಇತಿಹಾಸವನ್ನು ಒಳಗೊಂಡದ್ದು. ಮಾನವ ಬೇರೆಬೇರೆ ಮೂಲದಿಂದ ಬಂದಿದ್ದರೂ ಎಲ್ಲರೂ ಒಂದೇ ಎಂಬುದನ್ನು ಹೇಳುವಂಥದ್ದು. ಆಧುನಿಕ ಪುರಾತತ್ತ್ವಶಾಸ್ತ್ರ ಜನಪ್ರಿಯ ಸಿನಿಮಾ ಮತ್ತು ಸಾಹಿತ್ಯ ಕೃತಿಗಳಲ್ಲೂ ಈಗ ಜಾಗ ಪಡೆದಿದೆ. ಪುರಾತತ್ತ್ವಶಾಸ್ತ್ರಜ್ಞ ಎಂದ ಕೂಡಲೇ ನಮಗೆ ನೆನಪಾಗುವುದು ಬೆಳ್ಳಿತೆರೆಯ ಕಾಂಬೋಡಿಯದ ಯಮ ದೇಗುಲದಲ್ಲಿರುವ ಇಂಡಿಯಾನ ಜೋನ್ಸ್ ಅಥವಾ ಸಮಾಧಿ ಮೇಲಿನ ಲಾರಾ ಕ್ರಾಫ್ಟ್. ಆದರೆ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ನೂರಾರು ವರ್ಷಗಳಿಂದ ಪ್ರಯತ್ನಿಸುತ್ತಲೇ ಇರುವ ನಿಜವಾದ ಪುರಾತತ್ತ್ವಶಾಸ್ತ್ರಜ್ಞರೂ ಇದ್ದಾರೆ. ಹಳೆಯ ಆಂಟಿಕ್ವೇರಿಯನಿಸಂನಿಂದ ಅತ್ಯಾಧುನಿಕ ಆರ್ಕಿಯಾಲಜಿಯವರೆಗೆ, ಬ್ರಯಾನ್ ಎಂ. ಫಾಗನ್ ಮಾತಿನಲ್ಲಿ ಹೇಳುವುದಾದರೆ ಪುರಾತತ್ತ್ವಶಾಸ್ತ್ರ ಎಂದರೆ ನಿಧಿಯೊಂದರ ಹುಡುಕಾಟವಲ್ಲ; ಅದೊಂದು ಶುದ್ಧ ವಿಜ್ಞಾನ; ಕಟು ವಾಸ್ತವದ ಸಾಹಸಮಯ ಕತೆ.

ಪುರಾತತ್ತ್ವಶಾಸ್ತ್ರದ ಆರಂಭ: ಕುತೂಹಲದ ಸಂಗತಿ ಎಂದರೆ ಪ್ರ.ಶ.ಪೂ. 6ನೆಯ ಶತಮಾನದ ಬ್ಯಾಬಿಲೋನಿಯನ್ನರ ರಾಜ ನಬೋನಿಡಸ್ ಪ್ರಪಂಚದ ಹಳೆಯ ಪುರಾತತ್ತ್ವಜ್ಞ. ಯುದ್ಧ, ಆಡಳಿತಗಳ ನಡುವೆ ಪುರಾತತ್ತ್ವದ ಬಗ್ಗೆ ಆಸಕ್ತಿ ಉಳಿಸಿಕೊಂಡಿದ್ದ ಆತ ಹಳೇ ದೇವಾಲಯವೊಂದನ್ನು ತಳಪಾಯದ ಸಮೇತ ಉತ್ಖನನ ಮಾಡಿದ.

ಯುರೋಪಿನಲ್ಲಿ ಮಧ್ಯಯುಗದ ಪುನರುಜ್ಜೀವನ ನಡೆಯುತ್ತಿದ್ದಾಗ ಇಟಲಿ ಮತ್ತು ಗ್ರೀಸ್ ದೇಶಗಳ ಪುರಾತತ್ತ್ವದ ಬಗ್ಗೆ ಇದೇ ಬಗೆಯ ಪ್ರಯತ್ನಗಳು ನಡೆದವು. ಆದರೆ ಪುರಾತತ್ತ್ವ, ಲಲಿತಕಲೆಗಳ ಬಗ್ಗೆ ಹಗುರ ಆಸಕ್ತಿಯ ಡಿಲಿಟ್ಯಾಂಟಿಗಳು ಎಂದು ಕರೆಯಲ್ಪಡುವ

ಜನರೇ ಹೆಚ್ಚು ಕಂಡುಬಂದರು. ಇಂಗ್ಲಿಷ್ ಸಮಾಜದ ಶ್ರೀಮಂತ ಸಮುದಾಯಕ್ಕೆ ಸೇರಿದ ಇವರಿಗೆ ಇತಿಹಾಸ ಹಲವು ರಹಸ್ಯಗಳ ಗಣಿಯಾಗಿ ಕಂಡಿತು. ಹಲವು ವರ್ಷಗಳ ಕಾಲ ಪುರಾತತ್ತ್ವ ವಸ್ತುಗಳನ್ನು ಪರಿಶೀಲಿಸುತ್ತಲೇ ಕಳೆದ ವಿಲಿಯಂ ಸ್ಟಕಲಿ, ಅಮೆರಿಕನ್–ಇಂಡಿಯನ್ ಶಸ್ತ್ರಾಸ್ತ್ರಗಳಿಂದ ಹಿಡಿದು ಹಳೆಕಾಲದ ನಾಣ್ಯಗಳವರೆಗೂ ಸಿಕ್ಕಿದ್ದೆಲ್ಲವನ್ನೂ ಸಂಗ್ರಹಿಸುತ್ತಿದ್ದ ಓಲೆ ವಾರ್ಮ್‌ನಂಥವರು ಇಲ್ಲಿ ಕಂಡುಬಂದರು. ಹಳೆಯ ವಸ್ತುಗಳನ್ನು ಸಂಗ್ರಹಿಸುವ ಈ ಉತ್ಸಾಹದ ಕೆಲಸಕ್ಕೆ ಪ್ರತಿ ತಿಂಗಳೂ ಈ ಬ್ರಿಟಿಷ್ ನಾಗರಿಕರು ಸೊಸೈಟಿ ಆಫ್ ಆಂಟಿಕ್ವೆರೀಸ್ ಆಫ್ ಲಂಡನ್ (1717), ಸೊಸೈಟಿ ಆಫ್ ಡಿಲಿಟ್ಯಾಂಟಿ (1732) ಮೂಲಕ ನೀರೆರೆದರು. 17ನೆಯ ಶತಮಾನದಿಂದೀಚೆಗೆ ಈ ಕೆಲಸ ಹವ್ಯಾಸವಾಗಿ ಮಾರ್ಪಟ್ಟಿತು. ಸಾಲಿಸ್‌ಬರಿಯಲ್ಲಿ ಸಮಾಧಿ ಮೇಲಿನ ಗುಡ್ಡೆಯನ್ನು ಅಗೆಯಲಾರಂಭಿಸಿದ ಉಣ್ಣೆ ವ್ಯಾಪಾರಿ ವಿಲಿಯಂ ಕನ್ನಿಂಗ್‌ಟನ್‌ನಿಂದ ಹಿಡಿದು ವರ್ಜೀನಿಯದ ತನ್ನ ಭೂಮಿಯಲ್ಲಿ ಸಮಾಧಿ ಅಗೆಯಲು ಶುರುಮಾಡಿದ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷ ಥಾಮಸ್ ಜೆಫರ್‌ಸನ್‌ವರೆಗೆ ಎಲ್ಲರೂ ಉತ್ಖನನ ಪಂಡಿತರಾಗಲು ಹೊರಟರು. ಇವರಿಂದ ಗ್ರೇವ್ ಡಿಗ್ಗರ್ಸ್ ಎಂಬ ನುಡಿಗಟ್ಟೇ ರೂಪುಗೊಂಡಿತು. ಆ ಕಾಲದ ಬುದ್ಧಿಜೀವಿಗಳು ಈ ಪ್ರಪಂಚ ಪ್ರಶ.ಪೂ.2004ರ ಅಕ್ಟೋಬರ್ 22ರಂದು ಸೃಷ್ಟಿಯಾಯಿತು ಎಂದು ನಂಬಿದ್ದರು. ಡೇನಿಶ್ ಆಂಟಿಕ್ವೆರಿ ರಸಮಸ್ ನೀರಪ್‌ಗೆ ತಾನು ಸಂಗ್ರಹಿಸಿದ್ದು ಕ್ರೈಸ್ತಧರ್ಮಕ್ಕಿಂತಲೂ ಪುರಾತನವಾದದ್ದು ಎಂದು ಗೊತ್ತಿತ್ತು. ಆದರೆ ಕಾಲಾನುಕ್ರಮದಲ್ಲಿ ಅದನ್ನು ಜೋಡಿಸುವುದು ಹೇಗೆ ಎಂಬುದು ತಿಳಿದಿರಲಿಲ್ಲ. ಹೀಗಾಗಿ 1807ರಲ್ಲಿ ರೂಪಿಸಿದ ನ್ಯಾಷನಲ್ ಮ್ಯೂಸಿಯಂ ಆಫ್ ಡೆನ್ಮಾರ್ಕ್‌ನಲ್ಲಿರುವ ಈತನ ಸಂಗ್ರಹವನ್ನು ಸರಳವಾಗಿ ಜಂಬಲ್ ಎನ್ನಬಹುದು. ಆದರೆ ವ್ಯಾಪಾರಿಯೊಬ್ಬನ ಮಗನಾದ ಕ್ರಿಶ್ಚಿಯನ್ ಜರ್ಗೆನ್‌ಸನ್ ಥಾಮ್‌ಸನ್ ಎಂಬ ಕ್ಯುರೇಟರ್ 1836ರಲ್ಲಿ ರೂಪಿಸಿದ ತ್ರಿಯುಗ ಸಿದ್ಧಾಂತ (**ನೋಡಿ**) ಪರಿಣಾಮಕಾರಿಯಾಗಿತ್ತು. ಸಂಗ್ರಹಾಲಯದಲ್ಲಿದ್ದ ವಸ್ತುಗಳನ್ನು ಆತ ಶಿಲಾಯುಗ, ಕಂಚಿನ ಯುಗ ಮತ್ತು ಕಬ್ಬಿಣಯುಗ ಎಂದು ವಿಂಗಡಿಸಿ ಜೋಡಿಸಿಟ್ಟ. ಈಗಲೂ ಅನುಸರಿಸುವ ಈ ವಿಧಾನದ ಬಗ್ಗೆ 1848ರಲ್ಲಿ ಎ ಗೈಡ್ ಟು ನಾರ್ದರ್ನ್ ಆಂಟಿಕ್ವಿಟಿಸ್ ಎಂಬ ಇಂಗ್ಲಿಷ್ ಕೃತಿಯನ್ನು ಪ್ರಕಟಿಸಿದ.

1837ರಲ್ಲಿ ಬಂದ ಜಾಕ್ವೆಸ್ ಬುಷರ್ ದ ಪರ್ತಸ್ ಕೊಡುಗೆಯೂ ದೊಡ್ಡದು. ಬೈಬಲ್ ಕಾಲದ ಕಲ್ಲಿನ ಕೊಡಲಿಗಳನ್ನು ಸೋಮ್ ನದಿ ಕಣಿವೆಯಲ್ಲಿ ಹುಡುಕಾಡಿ ಸಂಗ್ರಹಿಸಿದ. ಆದರೆ ಈ ಎಲ್ಲಕ್ಕೂ ಮಹತ್ತ್ವದ ಕೊಡುಗೆ ವಿಕಾಸವಾದದ ಹರಿಕಾರ ಚಾರ್ಲ್ಸ್ ಡಾರ್ವಿನ್ನನದು. ಆರಿಜನ್ ಆಫ್ ಸ್ಪೀಷಿಸ್ ಎಂಬ ಕೃತಿಯನ್ನು 1859ರಲ್ಲಿ ಪ್ರಕಟಿಸಿದ ಈತ ಆಕಸ್ಮಿಕವಾಗಿ ಹೋರಾಟ ನಡೆಸುವ ಗತಿಯೆ ವಿಕಾಸವಾದದ ಮೂಲ ಎಂದು ಹೇಳಿದ. ಆದರೆ ಚರ್ಚಿನ ಭಯ ಅವನ ಮಾತುಗಳನ್ನು ಅದುಮಿತು. ಆದರೆ ಮನುಷ್ಯರಿಗೆ ಚಿಂಪಾಜಿ ರೀತಿಯ ವಂಶಜರು ಇದ್ದರು ಎಂದು ಬ್ರಿಟಿಷ್ ಜೀವವಿಜ್ಞಾನಿ ಥಾಮಸ್ ಹೆನ್ರಿ ದಿಟ್ಟವಾಗಿ ಹೇಳಿದ ಪರಿಣಾಮ ವಿಕ್ಟೋರಿಯನ್ ಯುಗದಲ್ಲಿ ತೀವ್ರ ವಿವಾದಕ್ಕೆ ಒಳಗಾಯಿತು. ಈತನ ಮಾತಿಗೆ ಸಾಕ್ಷಿ ಎಂಬಂತೆ ಶಿಲಾಯುಗದ್ದೆನ್ನಲಾದ ಅತಿ ಪ್ರಾಚೀನ ಮಾನವನ ಅಸ್ಥಿಪಂಜರವೊಂದು 1857ರಲ್ಲಿ ಜರ್ಮನಿಯ ಹಳ್ಳಿಯೊಂದರಲ್ಲಿ ಪತ್ತೆಯಾಯಿತು. ಮಾನವ ವಂಶಜರ ಬಗ್ಗೆ ಇದ್ದ ಅನುಮಾನ ಕೊನೆಗೊಂಡಿತು. ಪುರಾತತ್ತ್ವ ಕ್ಷೇತ್ರಕ್ಕೆ ಇವರ ಕೊಡುಗೆಯೂ ಮಹತ್ತ್ವದ್ದು.

ಭೂತಕಾಲದ ಬಗ್ಗೆ ಕುತೂಹಲವುಳ್ಳವರಲ್ಲಿ ಎರಡು ಬಗೆ. ವಸ್ತುಅವಶೇಷಗಳನ್ನು ಎಚ್ಚರಿಕೆ, ಬದ್ಧತೆಯಿಂದ ಉತ್ಖನನಮಾಡಿ ಮನುಕುಲದ ಇತಿಹಾಸದ ಅಧ್ಯಯನಕ್ಕೆ ವಿಶಿಷ್ಟ ಕೊಡುಗೆ ನೀಡುವ ಪುರಾತತ್ತ್ವಶಾಸ್ತ್ರಜ್ಞರು ಹಾಗೂ ಸ್ವಂತ ಖುಷಿ ಹಾಗೂ ಸ್ವಾರ್ಥಕ್ಕಾಗಿ ವಸ್ತುಗಳನ್ನು ಸಂಗ್ರಹಿಸುವ ನಿಧಿ ಶೋಧಕರು. 19ನೆಯ ಶತಮಾನದಲ್ಲಿ ಪ್ರಾಚೀನ ಈಜಿಪ್ಟ್, ಈಜಿಯನ್ ಮತ್ತು ಮೆಸಪೊಟೇಮಿಯ ಪತ್ತೆಯಾಗುವುದರ ಜೊತೆಗೆ ಪ್ರಾಚೀನ ಈಜಿಪ್ಟ್‌ನ ಪುರಾತನ ವಸ್ತುಗಳ ಸಂಗ್ರಹಕಾರ ಜಿಯೊವನ್ನಿ ಬಟಿಸ್ಟ್ ಬಿಲ್ಜೋನಿ ಪ್ರಪಂಚಕ್ಕೆ ಪರಿಚಯವಾದ. ಈತನ ಈಜಿಪ್ಟ್‌ನ ನಿಧಿಶೋಧವೆಲ್ಲವೂ ಬ್ರಿಟಿಷ್ ಮ್ಯೂಸಿಯಂನಲ್ಲಿವೆ. ಲಾಡ್ ಎಲ್ಗಿನ್ ಎಂಬಾತ ಅಮೃತಶಿಲೆ ಪತ್ತೆಹಚ್ಚಿದ. ದುರಂತ ಎಂದರೆ ನಿಧಿ ಶೋಧಿಸಿ ಧನಿಕರಾಗಲು ಹೊರಟ ಈ ಇಬ್ಬರೂ ಭಿಕಾರಿಗಳಾಗಿ ಸತ್ತದ್ದು. ಇಂಥ ನಿಧಿಶೋಧಕರ ನಡುವೆ ಪುರಾತತ್ತ್ವಶಾಸ್ತ್ರಕ್ಕೆ ಕಿಂಚಿತ್ತಾದರೂ ಕೊಡುಗೆ ನೀಡಬೇಕೆಂಬ ಆಸೆ ಇಟ್ಟುಕೊಂಡಿದ್ದವರೂ ಇದ್ದರು. 1822ರಲ್ಲಿ ಜೀನ್ ಫ್ರಾಂಕಾಯಿಸ್ ಚಾಂಪೊಲಿಯನ್ ಎಂಬ ಫ್ರೆಂಚ್‌ಮನ್ ಒಬ್ಬ ನೆಪೋಲಿಯನ್ ಬೋನಪಾರ್ಟ್ ಮಿಲಿಟರಿ ಕಾರ್ಯಾಚರಣೆ ಸಂದರ್ಭದಲ್ಲಿ ಈಜಿಪ್ಟ್‌ನಲ್ಲಿ ಕಂಡುಹಿಡಿದ ಎರಡು ಭಾಷಾ ನಿರೂಪಣೆಯುಳ್ಳ ರೋಸೆಟ ಶಿಲೆ ಹಾಗೂ ಇರಾನ್ ಮತ್ತು ಇರಾಕ್ ನಡುವಿನ ಶಿಲೆಗಳಲ್ಲಿಯ ವಿವರಗಳನ್ನು 1835ರಲ್ಲಿ ಪಡಿಯಚ್ಚು ಮಾಡಿದ ಹೆನ್ರಿ ರಾಲಿನ್‌ಸನ್‌ನ ಕೆಲಸ ಪುರಾತತ್ತ್ವ ಕ್ಷೇತ್ರದ ಭವಿಷ್ಯಕ್ಕೆ ಪ್ರಮುಖ ಸಾಧನೆಗಳಾದವು.

ಇದೇ ವೇಳೆ ಪೂರ್ವ ಪುರಾತತ್ತ್ವಶಾಸ್ತ್ರದಲ್ಲಿ ಮತ್ತು ಮೆಸಪೊಟೇಮಿಯದಲ್ಲಾದ ಪ್ರಥಮ ಉತ್ಖನನದ ಜೊತೆ ಪಾಲ್ ಎಮ್ಯೆಲ್ ಬೊಟ್ಟ ಎಂಬ ಫ್ರೆಂಚ್ ರಾಯಭಾರಿ ನಿನೆವೆ ನಗರವನ್ನು 1842ರಲ್ಲಿ ಮತ್ತು ಕೊರ್ಸಾಬಾದ್ ನಗರವನ್ನು 1843ರಲ್ಲಿ ಕಂಡುಹಿಡಿದ. ಅದೇ ವೇಳೆ ಬ್ರಿಟಿಷ್ ಅಧಿಕಾರಿ ಆಸ್ಟಿನ್ ಹೆನ್ರಿ ಲಾಯರ್ಡ್ 1845ರಲ್ಲಿ ನಿಮ್ರುದ್‌ನಲ್ಲಿ ಉತ್ಖನನ ನಡೆಸುತ್ತಿದ್ದ. ಆದರೆ ಇವರಿಬ್ಬರೂ ಕಳೆದುಹೋದ ಈ ನಗರಗಳ ಅನ್ವೇಷಣೆ ಸಂದರ್ಭದಲ್ಲಿ ಲಭ್ಯವಿದ್ದ ಹಳೇ ವಿಧಾನವನ್ನು ಸಮರ್ಥವಾಗಿ ಅನುಸರಿಸಿದರು. ಈ ಕ್ಷೇತ್ರದ ಮತ್ತೊಂದು ಮಹತ್ತ್ವದ ಹೆಸರು ಜರ್ಮನ್ ಬ್ಯಾಂಕರ್ ಹೆನ್ರಿಕ್ ಶ್ಲೀಮನ್. ಈತ 1870–1880ರಲ್ಲಿ ಟ್ರಾಯ್ ಮತ್ತು ಮೈಸಿನ್ ನಗರಗಳ ಅನ್ವೇಷಣೆಯ ಸಾಹಸಿಗ. ಕಾಲವನ್ನು ನಿರ್ಧರಿಸುವಲ್ಲಿ ವಸ್ತುವೊಂದರ ಹಲವು ಪದರಗಳ ಅನ್ವೇಷಣೆ ಕುರಿತು ಮೊದಲು ಮಾತನಾಡಿದವನು. ಇವರ ಉತ್ಖನನ ತಂತ್ರಗಳೇನೇ ಇರಲಿ, ಭ್ರಷ್ಟ ಅಧಿಕಾರಿ, ದಲ್ಲಾಳಿಗಳಿಂದ ಇವರು ಅಪರೂಪದ ವಸ್ತುಗಳನ್ನು ಕಾಪಾಡಿದರು. ಸಾರ್ವಜನಿಕರ ಗಮನ ಸೆಳೆದರು. ಇದು ಇವರ ಮಹತ್ತ್ವದ ಕೊಡುಗೆ.

ಪುರಾತತ್ತ್ವಶಾಸ್ತ್ರದ ನೋಟ–ನಿಲುವು ಕ್ರಮೇಣ ಬದಲಾಗತೊಡಗಿತು. 19ನೆಯ ಶತಮಾನದಲ್ಲಿ ಮಹತ್ತ್ವದ್ದೇನಾದರೂ ಹೆಕ್ಕುವೆ ಎನ್ನುತ್ತಲೇ ಪುರಾತತ್ತ್ವಶಾಸ್ತ್ರಜ್ಞ ನೆಲವನ್ನು ಅಗೆಯುತ್ತಿದ್ದ. ಅನಂತರ ವ್ಯಕ್ತಿಯ ಜಾಗಕ್ಕೆ ಸಮುದಾಯ ಬಂದುನಿಂತಿದೆ. ಉತ್ಖನನ ಈಗ ಸಾಮೂಹಿಕ ಕಾಯಕ. ಹಾರೆ, ಪಿಕಾಸಿ, ಗುದ್ದಲಿ ಹಿಡಿದು ಒಂದೇ ದಿನಕ್ಕೆ 31 ಸಮಾಧಿ ಬಗೆಯುತ್ತಿದ್ದ ಅಂದಿನ ಸಂಶೋಧಕನಿಗೂ ಕಂಪಾಸ್, ಬ್ರಶ್, ಟ್ರೋವೆಲಗಳನ್ನು ಹಿಡಿದು ಸೂಕ್ಷ್ಮಕಣ್ಣುಗಳಿಂದ ವರ್ಷಗಟ್ಟಲೆ ಸಂಶೋಧನೆ ಮಾಡುವ ಇಂದಿನ ಸಂಶೋಧಕನಿಗೂ ಅಪಾರ ವ್ಯತ್ಯಾಸ ಉಂಟು. ಇದೇ ನಿಧಿಶೋಧಕರು ಮತ್ತು ವಿಜ್ಞಾನದ ಶಿಸ್ತಿನವರ ವ್ಯತ್ಯಾಸ. 19ನೆಯ ಶತಮಾನದ ಎಲ್ಲ ಸಂಶೋಧಕರೂ ವೈಜ್ಞಾನಿಕ ಉತ್ಖನನವನ್ನೇ ಆಶ್ರಯಿಸಿದ್ದರು. ಜನರಲ್ ಆಗಸ್ಟಸ್ ಲೇನ್–ಫಾಕ್ಸ್ ಪಿಟ್ ರಿವರ್ಸ್ 1887ರಲ್ಲಿ ತಾನು ವೃತ್ತಿಜೀವನದಲ್ಲಿ ಕಲಿತ ಎಲ್ಲ ಶಿಸ್ತನ್ನೂ ಉತ್ಖನನಕ್ಕೆ ಅಳವಡಿಸಿದ. ಸಿಕ್ಕಿದ ವಸ್ತುವಷ್ಟೇ ಮುಖ್ಯವಾಗದೆ, ಅದು ಇದ್ದ ಸ್ಥಿತಿಯಲ್ಲಿಯ ಎಲ್ಲವನ್ನೂ ದಾಖಲಿಸಿದ. ರೂಪುರೇಷೆ, ವಿಭಾಗಕ್ರಮ, ಮಾದರಿಗಳನ್ನು ರೂಪಿಸಿ ದಕ್ಷಿಣ ಇಂಗ್ಲೆಂಡ್‌ನ ಕ್ರಾನ್‌ಬೋರ್ನ್ ಚೇಸ್‌ನಲ್ಲಿ ಪ್ರಕಟಿಸಿದ. ಆಧುನಿಕ ಪುರಾತತ್ತ್ವಶಾಸ್ತ್ರಜ್ಞನ ನಿಜರೂಪ ತೋರಿಸಿದ. ಆತನ ಕಿರಿಯ ಸಮಕಾಲೀನ ವಿಲಿಯಂ ಮಾಥ್ಯೂ ಫ್ಲಿಂಡರ್ಸ್ ಪೆಟ್ರಿ (1853–1942) ಈಜಿಪ್ಟಿನ ನಾಕೊಡದಲ್ಲಿಯ ಗೋರಿಗಳ ಕಾಲಾನುಕ್ರಮವನ್ನು ವಿಂಗಡಿಸುವಲ್ಲಿ ಅತ್ಯದ್ಭುತ ತಂತ್ರವನ್ನು ಅನುಸರಿಸಿದ.

ಭಾರತದಲ್ಲಿ ಪುರಾತತ್ತ್ವಶಾಸ್ತ್ರದ ಮೇಲೆ ವೈಜ್ಞಾನಿಕ ಬೆಳಕು ಬಿದ್ದಿದ್ದು ಸರ್ ಮಾರ್ಟಿಮರ್ ವೀಲರ್ ಪುರಾತತ್ತ್ವಶಾಸ್ತ್ರದ ಡೈರೆಕ್ಟರ್ ಜನರಲ್ ಆಗಿದ್ದ 1944–48ರ ಅವಧಿಯಲ್ಲಿ. ಈತ ರೂಪಿಸಿದ ತರಬೇತಿ ಶಾಲೆ ದೇಶಕ್ಕೆ ಹಲವು ಶ್ರೇಷ್ಠ ಪುರಾತತ್ತ್ವಶಾಸ್ತ್ರಜ್ಞರನ್ನು ನೀಡಿತು.

ಇಂಕ ಮತ್ತು ಮಾಯಾ ಜನರಿಗೆ ಸಂಬಂಧಿಸಿದ ದಕ್ಷಿಣ ಅಮೆರಿಕದ ಪುರಾತತ್ತ್ವಶಾಸ್ತ್ರಕ್ಕೆ ಇಬ್ಬರು ವಿದ್ವಾಂಸರು ಮಹತ್ತ್ವದ ಕೊಡುಗೆ ನೀಡಿದರು. ಮ್ಯಾಕ್ಸ್ ಹುಲೆ (1856–1944) ಎಂಬ ಜರ್ಮನ್ ವಿದ್ವಾಂಸ 1890ರಲ್ಲಿ ಪಚಕೆಮಾಕ್‌ನಲ್ಲಿ ಪೆರು ನಾಗರಿಕತೆಗೆ ಸಂಬಂಧಿಸಿದ ಮಹತ್ತ್ವದ ಉತ್ಖನನ ಮಾಡಿದ. ಹಾರ್ವರ್ಡ್‌ನಲ್ಲಿ ಶಿಕ್ಷಣ ಪಡೆದ ಆಲ್‌ಫ್ರೆಡ್ ವಿ ಕಿಡ್ಡರ್ 1915ರಲ್ಲಿ ನೈರುತ್ಯ ಪಿಕಾಸ್ ಪುಬ್ಲೋನಲ್ಲಿ ಉತ್ಖನನ ನಡೆಸಿ ದಕ್ಷಿಣ ಅಮೆರಿಕಕ್ಕೆ ಪುರಾತತ್ತ್ವಶಾಸ್ತ್ರ ಕ್ಷೇತ್ರದ ಭೂಪಟದಲ್ಲಿ ಸ್ಥಾನ ಕಲ್ಪಿಸಿದ.

ಕಳೆದುಹೋದ ನಗರಗಳ ಬಗ್ಗೆ, ಉತ್ಖನನದ ಬಗ್ಗೆ ನಿಮ್ಮ ಕಲ್ಪನೆಗಳನ್ನು ಬಿಟ್ಟುಬಿಡಿ ಎಂದು ದಿಟ್ಟವಾಗಿ ಹೇಳಿದವನೆಂದರೆ ಇಂಡಿಯಾನ ಜೋನ್ಸ್. 1989ನಲ್ಲಿ ಬಂದ ಇಂಡಿಯಾನ ಜೋನ್ಸ್ ಅಂಡ್ ಲಾಸ್ಟ್ ಕ್ರುಸೇಡ್‌ನಲ್ಲಿ ಆತ ಹೀಗೆ ಹೇಳಿದ: ಶೇ.70ರಷ್ಟು ಪುರಾತತ್ತ್ವಶಾಸ್ತ್ರದ ಕೆಲಸ ನಡೆದಿರುವುದು ಗ್ರಂಥಾಲಯ, ಸಂಶೋಧನೆ ಮತ್ತು ಅಧ್ಯಯನದಲ್ಲಿ. ಉತ್ಖನನದ ಆಚೆಗೂ ಈ ಶಾಸ್ತ್ರಕ್ಕೆ ತನ್ನದೆ ರೀತಿಯ ಸಂಶೋಧಕರು, ಚಿಂತಕರಿದ್ದಾರೆ. 20ನೆಯ ಶತಮಾನದ ಮೊದಲ ಅರ್ಧಭಾಗದಲ್ಲಿ ಅಂಥ ಹಲವು ಪ್ರಪಂಚ ದರ್ಜೆಯ ವಿದ್ವಾಂಸರು ಮೂಡಿಬಂದರು.

ಇದು ಯಾವ ಕಾಲದ ಚಹರೆ: ಗತಕಾಲದ ಪಳೆಯುಳಿಕೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು ದೊಡ್ಡ ಸವಾಲು. ಹಳೆಯ ನಾಗರಿಕತೆಗಳ ಉತ್ಖನನದ ಸಂದರ್ಭದಲ್ಲೂ ಪ್ರಾದೇಶಿಕವಾಗಿ ಇವುಗಳನ್ನು ಗುರುತಿಸುವ ಜವಾಬ್ದಾರಿ ಎದುರಾಗಿತ್ತು. ಮಾಯಾ ಪುರಾತತ್ತ್ವಶಾಸ್ತ್ರದ ಸಂದರ್ಭದಲ್ಲಿ ಆಲ್‌ಫ್ರೆಡ್ ಮಾಡ್‌ಸ್ಲೆ (1850–1931), ಮ್ಯಾಕ್ಸ್ ಹುಲೆ (1856–1944) ಪೆರು ನಾಗರಿಕತೆ ಬಗ್ಗೆ ಕ್ರಮಬದ್ಧ ಕಾಲಾನುಕ್ರಮಣಿಕೆ ನೀಡಿದರು. ಫ್ಲಿಂಡರ್ಸ್ ಪೆಟ್ರಿ 1880ರಲ್ಲಿ ಈಜಿಪ್ಟ್‌ನ ಟುಟುಂಕಮನ್ ದೊರೆಯ ಗೋರಿಯ ಕಾಲವನ್ನೂ ನಿಗದಿ ಪಡಿಸುವಲ್ಲಿ ಯಶಸ್ವಿಯಾದ. ಬಾಲ್ಕನ್ನರ ಜೊತೆಗಿನ ಬಾಂಧವ್ಯ ಆರ್ಥರ್ ಇವಾನನು 1900ರಲ್ಲಿ ಮೈನೋಸ್ ದೊರೆಯ ಅರಮನೆಯನ್ನು ಕ್ರೀಟ್ ದ್ವೀಪದಲ್ಲಿ ಕಂಡುಹಿಡಿಯಲು ದಾರಿ ಮಾಡಿತು. ಈಜಿಯನ್ ಕಾಲಘಟ್ಟವನ್ನು ಗುರುತಿಸುವಲ್ಲಿ ಈ ಅಂಶ ಪ್ರಮುಖ ಪಾತ್ರ ವಹಿಸಿತು. ಅಂತಿಮವಾಗಿ ಲಿಯೊನಾರ್ಡ್ ವೂಲಿ ಎಂಬ ವಿದ್ವಾಂಸ ಉರ್‌ನಲ್ಲಿ 1922ರಲ್ಲಿ ಮಾಡಿದ ಪ್ರಯತ್ನ ವಿಶೇಷವಾದದ್ದು.

ಒಂದರ ಜೊತೆ ಇನ್ನೊಂದು ಹೋಲಿಸಿ ಕಾಲವನ್ನು ಅಂದಾಜು ಮಾಡುವ ಈ ಬಗೆಯ ಕಾಲಾನುಕ್ರಮಣಿಕೆ ಅಂತಿಮ ಏನಲ್ಲ. ಆದರೆ ಬೇಕಾಗಿದ್ದದ್ದು ಕಾಲದ ಕುರಿತು ಖಚಿತತೆ. ಹೀಗಾಗಿ ಅರಿಜೋನ ವಿಶ್ವವಿದ್ಯಾಲಯದ ಆಂಡ್ರ್ಯೂ ಇ ಡಗ್ಲಾಸ್ ಎಂಬ ವಿದ್ವಾಂಸ 1900ರಲ್ಲಿ ಡೆಂಡ್ರೋಕ್ರೊನಾಲಜಿ ಅಥವಾ ಟ್ರೀ ರಿಂಗ್ (ಮರದ ಕಾಂಡವೊಂದರ ಪದರಗಳನ್ನು ಅಧ್ಯಯನ ಮಾಡಿ ಅದರ ಕಾಲ ಗುರುತಿಸುವುದು) ಎಂಬ ವಿಧಾನವನ್ನು ಪರಿಚಯಿಸಿದ. ಸೋಜಿಗ ಹುಟ್ಟಿಸಿದರೂ ಇದು ಸರಳ ಪರಿಕಲ್ಪನೆ. ಮರಕ್ಕೆ ವಯಸ್ಸಾದಂತೆ ವರ್ಷಕೊಮ್ಮೆ ಕಾಂಡದಲ್ಲಿ ಕಾಣಿಸುವ ಕಪ್ಪನೆಯ ವರ್ತುಲವನ್ನು ಗಮನಿಸಿ ವಿಜ್ಞಾನಿಗಳು ಮರದ ಆಯಸ್ಸು

ಎಣಿಸುವಂತೆ ಪುರಾತತ್ತ್ವಶಾಸ್ತ್ರಜ್ಞರೂ ಮಾಡಬಹುದು. ಆದರೆ ಈ ದಿನಾಂಕ ನಿಗದಿಯ ಮಹತ್ತ್ವದ ವಿಧಾನ 1949ರಲ್ಲಿ ಕಂಡುಬಂತು. ಅಮೆರಿಕನ್ ವಿಲ್ಲರ್ಡ್ ಲಿಬ್ಬಿ ರೇಡಿಯೋ ಕಾರ್ಬನ್ ಡೇಟಿಂಗ್ (ಇಂಗಾಲ–14) ಪದ್ಧತಿ ಕಂಡುಹಿಡಿದ. ಎಲ್ಲ ಜೀವಂತ ವಸ್ತು–ಸಂಗತಿಗಳು ತಮ್ಮ ಜೀವಿತಾವಧಿಯಲ್ಲಿ ಪರಿಸರದಿಂದ ಇಂಗಾಲ–14 ಅನ್ನು ಹೀರುತ್ತವೆ. ಈ ಪ್ರಕ್ರಿಯೆ ಜೀವಿ ಸತ್ತ ಅನಂತರ ನಿಲ್ಲುತ್ತದೆ. ಅನಂತರ ಅದು ಕರಗತೊಡಗುತ್ತದೆ. ಅಂದರೆ 5,730±40 ವರ್ಷದ ಅವಧಿಯಲ್ಲಿ ಅದರ ಅರ್ಧದಷ್ಟು ಮಾತ್ರ ಉಳಿದಿರುತ್ತದೆ. ಹೀಗಾಗಿ ಉಳಿದ ಕಾರ್ಬನ್ ಪ್ರಮಾಣವನ್ನು ಗಮನಿಸಿ ಸತ್ತ ವಸ್ತುವೊಂದರ ಕಾಲಮಾನವನ್ನು ಅಂದಾಜಿಸಬಹುದು.

ಆಧುನಿಕ ಪುರಾತತ್ತ್ವಶಾಸ್ತ್ರಜ್ಞರು ಗತಕಾಲವನ್ನು ಕೇಂದ್ರೀಕರಿಸಿದ ವಿಜ್ಞಾನಿಗಳು, ಉತ್ಖನನಗೊಂಡ ವಸ್ತುವನ್ನು ಮುಂದಿಟ್ಟುಕೊಂಡು ಖಚಿತ ಪ್ರಶ್ನೆಗಳನ್ನು ಉತ್ತರಿಸಲು ಯತ್ನಿಸುವವರು ಎನ್ನುತ್ತಾನೆ ಜೇ ಪ್ರಾಂಚರ್. ಕ್ಷೇತ್ರಕಾರ್ಯ ಮುಗಿಸಿದ ಬಳಿಕ ಈ ವಸ್ತುಗಳು ಅವರಿಗೆ ಹಲವು ಹೊಳಹುಗಳನ್ನು ನೀಡುತ್ತವೆ. ನಾಗರಿಕತೆ ಏಕೆ ಉತ್ತರ ದಿಕ್ಕಿನಲ್ಲೆ ವಿಕಾಸಗೊಂಡಿತು ಎಂಬುದು ಅಂತಹದೊಂದು ಹೊಳಹು. ಇದನ್ನು 1936ರಲ್ಲಿ ಹೇಳಿದವನು ಆಸ್ಟ್ರೇಲಿಯನ್ ಪುರಾತತ್ತ್ವಶಾಸ್ತ್ರಜ್ಞ ಗೋರ್ಡನ್ ಚೈಲ್ಡ್. ಕೃಷಿ ಪ್ರಗತಿ ಕಾಣುವ ಮುನ್ನ ನಿಯೋಲಿತಿಕ್ (ನವಶಿಲಾಯುಗ) ಕ್ರಾಂತಿ, ಅನಂತರ ಅರ್ಬನ್ ಕ್ರಾಂತಿ ಆ ಮೂಲಕ ನಾಗರಿಕತೆಯ ಉದಯವಾಯಿತು ಎಂದು ಆತ ಹೇಳಿದ. ಎಲ್ಲ ನಾಗರಿಕತೆಗಳೂ ಪೂರ್ವದಿಂದ ಯುರೋಪಿನ ಕಡೆಗೆ ಹಬ್ಬಿದವು ಎಂಬ ಮಾತಿಗಿಂತ ಹೆಚ್ಚಾಗಿ ಈ ಮಾತನ್ನು ಭಿನ್ನಾಭಿಪ್ರಾಯಗಳ ನಡುವೆಯೂ ಒಪ್ಪಬಹುದು.

ಹಲವು ಕಷ್ಟ–ನಷ್ಟಗಳ ಜೊತೆಗೆ ಜೀವ ಸಂಸ್ಕೃತಿ ಹಿಂದೆ ಹೇಗಿತ್ತು ಎಂಬುದರ ಕುರಿತು ಕುತೂಹಲ ಇದ್ದೇ ಇರುತ್ತದೆ. ಮಾನವಶಾಸ್ತ್ರಜ್ಞ ಜೂಲಿಯನ್ ಸ್ಟೀವರ್ಡ್ ಪ್ರಕಾರ ಮನುಷ್ಯರು ಪರಸ್ಪರ ಸಂವಾದದ ಜೊತೆಗೆ ಪ್ರಕೃತಿಯ ಜೊತೆಗೂ ಒಡನಾಟ ಏರ್ಪಡಿಸಿಕೊಂಡಿದ್ದರು. ಆ ಸಂಬಂಧವೇ ಸಾಂಸ್ಕೃತಿಕ ಬದಲಾವಣೆಗೂ ಕಾರಣ. ಇದನ್ನೇ ಆತ ಸಾಂಸ್ಕೃತಿಕ ಏಕಾಲಜಿ ಎಂದು ಕರೆದ. ಆತನ ಜೊತೆಗಿದ್ದ ಗೋರ್ಡನ್ ವಿಲ್ಲೆ 1940ರಲ್ಲಿ ಸೆಟ್ಲ್‌ಮೆಂಟ್ ಆರ್ಕಿಯಾಲಜಿ ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ. ಪೆರು ಕಣಿವೆ ಮತ್ತು ಪೆರುವಿನಲ್ಲಿ ಭೂಪಟ ಹಿಡಿದು ಉತ್ಖನನ, ಸಮೀಕ್ಷೆ ಮೂಲಕ ಈತ ಸಂಗ್ರಹಿಸಿದ್ದೆಲ್ಲವನ್ನೂ ಅಲ್ಲಿಯ ಬದಲಾದ ಪರಿಸರದ ನಡುವೆ ಗಮನಿಸಿದ. ಅಂದಿನ ಮನುಷ್ಯ ಕೂಡ ಹೇಗೆ ಇವುಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಿದ್ದ ಎಂದು ಅರಿಯಲು ಯತ್ನಿಸಿದ.

1950ರ ಶುರುವಿನಲ್ಲಿ ಗ್ರಹಾಂ ಕ್ಲಾರ್ಕ್ ಈಶಾನ್ಯ ಬ್ರಿಟನ್ನಿನ ಸ್ಟಾರ್‌ಕಾರ್ ಎಂಬಲ್ಲಿ ಉತ್ಖನನ ಮಾಡಿದ. ಈತ ಪರಿಸರದ ಜೊತೆಗಿನ ಮನುಷ್ಯರ ಹೊಂದಾಣಿಕೆಯನ್ನು ಅಧ್ಯಯನ ಮಾಡುವ ಮೂಲಕ ಪ್ರಾಚೀನ ಸಮಾಜದ ಬಗ್ಗೆ ಸಮಗ್ರವಾಗಿ ತಿಳಿದುಕೊಳ್ಳಬಹುದು ಎಂದು ಪ್ರತಿಪಾದಿಸಿದ. ತಜ್ಞರ ಸಹಾಯ ಪಡೆದ ಈತ ಪ್ರಾಣಿಗಳ ಮೂಳೆ ಮತ್ತು ಸಸ್ಯದ ಪಳೆಯುಳಿಕೆಗಳನ್ನು ಅಧ್ಯಯನ ಮಾಡಿದ. ಕೇವಲ ಗತಕಾಲದ ಪ್ರಕೃತಿ ಪರಿಸರವನ್ನು ಅರ್ಥ ಮಾಡಿಕೊಳ್ಳಲಷ್ಟೆ ಅಲ್ಲದೆ, ಅಂದಿನವರ ಆಹಾರ ಪದ್ಧತಿಯ ಬಗ್ಗೆ ಅರಿಯಲೂ ಪ್ರಯತ್ನಿಸಿದ. ಹೀಗಾಗಿ ಈ ಅಧ್ಯಯನ ಪುರಾತತ್ತ್ವಶಾಸ್ತ್ರದ ಪರಿಸರಾತ್ಮಕ ಸಂಶೋಧನೆಯಲ್ಲಿ ಮೈಲುಗಲ್ಲಾಗಿ ಗಮನ ಸೆಳೆಯಿತು.

60ರ ದಶಕ ಮರೆಯಲಾಗದ ದಶಕ. ಪುರಾತತ್ತ್ವಶಾಸ್ತ್ರದಲ್ಲಿ ಆಶ್ಚರ್ಯಕರ ಘಟನೆಗಳು ನಡೆದವು. 60ರ ದಶಕದ ಕ್ರಾಂತಿ ಈ ಕ್ಷೇತ್ರದಲ್ಲೂ ಅಸಮಾಧಾನದ ಹೊಗೆಯನ್ನು ಹುಟ್ಟುಹಾಕಿತು. ಉತ್ಖನನದ ತಂತ್ರಗಳ ಬಗ್ಗೆಯಷ್ಟೇ ಅಲ್ಲದೆ ಗತಕಾಲವನ್ನು ಪುರಾತತ್ತ್ವಶಾಸ್ತ್ರಜ್ಞರು ವಿವರಿಸಿದ ಬಗ್ಗೆಯೂ ಆಕ್ಷೇಪಗಳು ಹುಟ್ಟಿಕೊಂಡವು. ಇದರ ಬೆನ್ನಲ್ಲೇ ಲೂಯಿಸ್ ಬಿನ್‌ಫರ್ಡ್‌ನ ನೇತೃತ್ವದಲ್ಲಿ ಹೊಸ ಪುರಾತತ್ತ್ವಶಾಸ್ತ್ರಜ್ಞರ ಸಂತತಿ ಹುಟ್ಟಿಕೊಂಡಿತು.

ಪುರಾತತ್ತ್ವಶಾಸ್ತ್ರವನ್ನು ಹೊಸದಾಗಿ ಮಂಡಿಸುವ ಯುವ ಪಡೆಯೊಂದು ಅಮೆರಿಕದಲ್ಲಿ ಹುಟ್ಟಿಕೊಂಡಿತು. ಇವರೆಲ್ಲ ಸೇರಿ ನವ ಪುರಾತತ್ತ್ವಶಾಸ್ತ್ರ (**ನೋಡಿ**) ಎಂಬ ಪರಿಕಲ್ಪನೆಯನ್ನು ರೂಪಿಸಿದರು. ಅವರ ನಿಯಮಗಳು ಹೀಗಿವೆ: ಇವರು ಗತಕಾಲದ ಬಗೆಗಿನ ಹೇಳಿಕೆಯಲ್ಲಿ ಸಾಮಾನ್ಯ ತರ್ಕ ಇರಬೇಕು ಎಂದರು; ಪುರಾತತ್ತ್ವಶಾಸ್ತ್ರ ಲೆಕ್ಕಶಾಸ್ತ್ರವಲ್ಲ. ಸುಮ್ಮನೆ ಲೆಕ್ಕ ಬಿಡಿಸುವುದರ ಬದಲು ಪುರಾತತ್ತ್ವಶಾಸ್ತ್ರಜ್ಞ ಗತಕಾಲದ ಬಗ್ಗೆ ಅವನದೇ ಹೊಳಹು ನೀಡಬೇಕು; ಉತ್ಖನನ ಮತ್ತು ಸಂಶೋಧನೆ ಗತಕಾಲದ ಹಲವು ಪ್ರಶ್ನೆಗಳಿಗೆ ಉತ್ತರ ಕೊಡಬೇಕೆ ಹೊರತು ಅನಗತ್ಯ ಮಾಹಿತಿ ಕೊಡುವುದು ಸರಿಯಲ್ಲ; ಇತಿಹಾಸದಿಂದ ವಿಜ್ಞಾನದೆಡೆಗೆ ಸರಿದ ಹೊಸಬರು ಅನ್ಯಶಿಸ್ತಿನ ಅಧ್ಯಯನದ ಕಡೆಗೂ ಗಮನ ಹರಿಸಿದರು. ಪುರಾತತ್ತ್ವಶಾಸ್ತ್ರದ ಪುನರ್‌ನಿರ್ಮಾಣದಲ್ಲಿ ಕಂಪ್ಯೂಟರ್ ತಂತ್ರಗಳ ಬಳಕೆ ಹಾಗೂ ಭೂಗೋಳದ ಮಹತ್ತ್ವದ ಕುರಿತು ಡೇವಿಡ್ ಎಲ್. ಕ್ಲಾರ್ಕ್ ಒತ್ತಿ ಹೇಳಿದ; ಸಂಸ್ಕೃತಿ ಏಕರೂಪಿಯಾದದ್ದಲ್ಲ. ಅಲ್ಲಿ ಜನಜೀವನ, ವ್ಯಾಪಾರ, ತಂತ್ರಜ್ಞಾನ, ಜನಸಂಖ್ಯೆ ಮೊದಲಾದ ಉಪಸಂಸ್ಕೃತಿಯ ಅಂಶಗಳನ್ನು ಅಧ್ಯಯನ ಮಾಡಬೇಕು; ಅದೂ ಕೇವಲ ವಸ್ತುವಿಂಗಡಣೆ ಮತ್ತು ವಿಭಾಗಕ್ರಮದ ಮೂಲಕ ನಡೆದರೆ ಸಾಲದೆಂದರು. ಬಿನ್‌ಫರ್ಡ್ ನವ ಪುರಾತತ್ತ್ವಶಾಸ್ತ್ರವನ್ನು ಪ್ರಯೋಗದ ನೆಲೆಗೆ ಇಳಿಸಿದ. ಆತನಿಗೆ ಗತಕಾಲದ ಬದಲಾವಣೆಗಳು ಮತ್ತು ಚಹರೆಗಳ ಬಗ್ಗೆ ತನ್ನ ಚಿಂತನೆಗಳನ್ನು ದಾಖಲಿಸಬೇಕಿತ್ತು. ಹೀಗಾಗಿ ಈತ ಕ್ರಾಂತಿಕಾರಕವಾದ ಎಥ್ನೊ–ಆರ್ಕಿಯಾಲಜಿ ಪರಿಕಲ್ಪನೆಯನ್ನು ಹುಟ್ಟುಹಾಕಿದ. ಎಸ್ಕಿಮೋಗಳಂಥ ಆಧುನಿಕ ಸಮುದಾಯ ಬೇಟೆಯಾಡಲು ಬಳಸುವ ಸಾಧನೋಪಕರಣಗಳ ಅಧ್ಯಯನದಿಂದ ಪೂರ್ವೇತಿಹಾಸದ ಸಮಾಜದ ಬಗ್ಗೆ ಅರಿಯಬಹುದು ಎಂದು ಹೇಳಿದ. 1969 ರಿಂದ 1973ರವರೆಗೆ ಇಂಥ ಬೇಟೆ ಸಮುದಾಯಗಳ ಜೊತೆಗೆ ಜೀವಿಸಿದ ಈತ ಅವರ ವರ್ತನೆಗಳನ್ನು ಅಧ್ಯಯನ ಮಾಡಿದ. ಹೀಗೆ ಪುರಾತತ್ತ್ವಶಾಸ್ತ್ರದ ಹೊಸ ಪರಿಕಲ್ಪನೆ ಹುಟ್ಟಿತು.

ಪುರಾತತ್ತ್ವದ ಹೆಗ್ಗುರುತುಗಳು: 60ರ ದಶಕದ ಆರ್ಥಿಕ ಅಭಿವೃದ್ಧಿ ರಸ್ತೆ, ಅಣೆಕಟ್ಟು ಮತ್ತು ಕಟ್ಟಡಗಳ ನಿರ್ಮಾಣಕ್ಕೆ ದಾರಿ ಮಾಡಿತು. ಪರಿಣಾಮವಾಗಿ ಹಲವು ಪ್ರಾಚೀನ ಸ್ಥಳ, ವಸ್ತುಗಳು ನಾಶವಾದವು. ಪುರಾತತ್ತ್ವ ವಸ್ತು ಅವಶೇಷಗಳನ್ನು ರಕ್ಷಿಸುವ ಪ್ರಯತ್ನಗಳೂ ಶುರುವಾದವು. ಈಜಿಪ್ಟ್‌ನಲ್ಲಿ ಆಸ್ವಾನ್ ಅಣೆಕಟ್ಟು ನಿರ್ಮಾಣ ಮತ್ತು ನೈಲ್ ನದಿಯ ನೀರಿನ ಮಟ್ಟದಲ್ಲಿನ ಹೆಚ್ಚಳದ ಪರಿಣಾಮವಾಗಿ ನಾಶವಾಗಲಿದ್ದ ಪುರಾತನ ಸ್ಮಾರಕಗಳನ್ನು ರಕ್ಷಿಸಲು ನಡೆದ ಪ್ರಯತ್ನ ಇಡೀ ಪ್ರಪಂಚದ ಗಮನ ಸೆಳೆಯಿತು. ಯುನೆಸ್ಕೊ ಪ್ರಯತ್ನದ ಪರಿಣಾಮವಾಗಿ ಅಬು ಸಿಂಬೆಲ್‌ನಲ್ಲಿದ್ದ ಪ್ರಖ್ಯಾತ ದೇವಾಲಯದ ಮುಖಮಂಟಪವೂ ಸೇರಿದಂತೆ ಎಲ್ಲವನ್ನೂ ಹಂತಹಂತವಾಗಿ ಎತ್ತರದ ಜಾಗಕ್ಕೆ ಸ್ಥಳಾಂತರಿಸಲಾಯಿತು. ಈಗಲೂ ಅದನ್ನು ನೋಡಲು ಪ್ರಪಂಚದ ಎಲ್ಲ ಕಡೆಯಿಂದ ಪ್ರವಾಸಿಗರು ಬರುತ್ತಾರೆ.

ಸಾಗರ ಪುರಾತತ್ತ್ವಶಾಸ್ತ್ರ: ನೀರೊಳಗೆ ಹಳೆಯದನ್ನು ಹುಡುಕುವುದು ಕೂಡ ಜಾರ್ಜ್ ಬಾಸ್ ಪ್ರಕಾರ ಪುರಾತತ್ತ್ವಶಾಸ್ತ್ರವೇ. ಬೆಟ್ಟಗುಡ್ಡಗಳ ಮೇಲೆ ಉತ್ಖನನ ನಡೆಯುತ್ತದೆ. ಎಂದೋ ಮುಳುಗಿ ಹೋದ ಹಡಗಿನೊಳಗಿದ್ದ ವಸ್ತುಗಳು, ಹಳೆ ಕಾಲದ ಬಂದರು ಕೂಡ ವಿಶೇಷವೇ. ಕಂಚಿನಯುಗಕ್ಕೆ ಸೇರಿದ ಹಳೆಯ ಹಡಗೊಂದನ್ನು 1960ರಲ್ಲಿ ಜಾರ್ಜ್ ಬಾಸ್ ಟರ್ಕಿಯ ದಕ್ಷಿಣ ಬಂದರಿನಲ್ಲಿ ಪತ್ತೆ ಹಚ್ಚಿದ. ಬಳಿಕ ಇಂಥದೊಂದು ಸಂಶೋಧನ ಶಿಸ್ತು ಕಣ್ಣುಬಿಟ್ಟಿತು. ಸಾಗರ ಪುರಾತತ್ತ್ವಶಾಸ್ತ್ರಕ್ಕೆ ಬಾಸ್ ಮತ್ತು ಆತನ ತಂಡ ಹಲವು ತಂತ್ರಗಳನ್ನು ಕೊಡುಗೆ ನೀಡಿದೆ. ಅವೆಲ್ಲ ಈಗಲೂ ಬಳಕೆಯಲ್ಲಿವೆ.

ಪೋಸ್ಟ್ ಪ್ರೊಸೆಶುಯಲಿಸ್ಟ್ಸ್ (ಸಂರಚನವಾದಿಗಳು) ಎಂದು ತಮ್ಮನ್ನು ತಾವೇ ಕರೆದುಕೊಂಡ ನವ ಪುರಾತತ್ತ್ವಶಾಸ್ತ್ರದ ವಿರೋಧಿಗಳ ಗುಂಪು ಇದೇ ದಶಕದಲ್ಲಿ ಕಾಣಿಸಿಕೊಂಡಿತು. ಇಯಾನ್ ಹಾಡರ್, ಮೈಕೆಲ್ ಶಾಂಕ್ಸ್, ಕ್ರಿಸ್ಟಫರ್ ಟಿಲ್ಲೆ ಮೊದಲಾದ ವರಿದ್ದ ಈ ಗುಂಪಿಗೆ ವ್ಯಾಪಕ ಬೆಂಬಲವೂ ದೊರಕಿತು. ಅವರ ವಾದವಿದು: ಪುರಾತತ್ತ್ವಶಾಸ್ತ್ರದ ಎಲ್ಲವೂ ಇತಿಹಾಸಕ್ಕೆ ಸೇರಿದವು. ಹೀಗಾಗಿ ಗತಕಾಲವನ್ನು ವಿಶಾಲವಾಗಿ ವಿಶ್ಲೇಷಣೆ ಮಾಡಬೇಕು. ಸಮಷ್ಟಿಗಿಂತ ವ್ಯಷ್ಟಿಯೇ ಮುಖ್ಯ; ವಸ್ತು ಸಂಸ್ಕೃತಿಯನ್ನು ನವ ಪುರಾತತ್ತ್ವಶಾಸ್ತ್ರಜ್ಞರು ಕಡೆಗಣಿಸಿದ್ದಾರೆ. ಆದರೆ ಹಳೆಯ ಸಮಾಜದ ನೈಜ ಚಿತ್ರಣ ಅವುಗಳಿಂದಲೇ ಸಾಧ್ಯ; ಹಿಂದಿನವರ ನಂಬಿಕೆಗಳು, ಆಲೋಚನೆಗಳು ಮತ್ತು ಕೆಲಸ ಕಾರ್ಯಗಳನ್ನು ನಿರ್ಲಕ್ಷಿಸುವಂತಿಲ್ಲ. ಆ ಕಾಲದ ಸಮಾಜದ ನೈಜ ಚಿತ್ರಣ ದೊರಕುವುದೇ ಇಂಥಹ ವಸ್ತು–ಚಿಂತನೆ–ಸಾಮಗ್ರಿಗಳಿಂದ. ವಸ್ತುಗಳು ಹೇಗೆ ಭೂಮಿ ಸೇರುತ್ತವೆ ಮತ್ತು ಆಮೇಲೆ ಅವಕ್ಕೆ ಏನಾಗುತ್ತದೆ ಎಂಬುದನ್ನು ಕುರಿತು ಪುರಾತತ್ತ್ವಶಾಸ್ತ್ರ ಕ್ಷೇತ್ರದ ಯಾರಿಗೆ ಆದರೂ ಕುತೂಹಲ ಇದ್ದೇ ಇರುತ್ತದೆ. ಈ ಕುರಿತು ಅಮೆರಿಕದ ಮೈಕೆಲ್ ಶಿಫರ್‌ಗೆ ಆತನದೇ ಆದ ಕೆಲವು ನಂಬಿಕೆಗಳಿದ್ದವು. ಪುರಾತತ್ತ್ವಶಾಸ್ತ್ರದಲ್ಲಿ ಆತನ ಪ್ರಕಾರ ಸಾಂಸ್ಕೃತಿಕ ಮತ್ತು ಸಹಜ/ಪ್ರಾಕೃತಿಕ ಎಂದು ಕರೆಯಲಾಗುವ ಎರಡು (ಸಿ–ಟ್ರಾನ್ಸ್‌ಫಾರ್ಮ್ಸ್ ಮತ್ತು ಎನ್–ಟ್ರಾನ್ಸ್‌ಫಾರ್ಮ್ಸ್) ಪರಿವರ್ತನ ಪ್ರಕ್ರಿಯೆಗಳು ನಡೆಯುತ್ತವೆ. ಹೀಗಾಗಿ ನಾವು ಇವತ್ತೇನು ಮಾಡುತ್ತಿದ್ದೇವೆಯೋ ಅದನ್ನೆ ಹಿಂದಿನವರು ತೋಚಿದಂತೆ ಮಾಡಿದ್ದರು. ಮನೆ ಕಟ್ಟಿದ್ದರು, ಕಲಾಕೃತಿಗಳನ್ನು ರಚಿಸಿದ್ದರು. ಹೊಲವನ್ನು ಉತ್ತಿದ್ದರು. ಕ್ರಮೇಣ ಹಳೆ ಸಾಧನೋಪಕರಣ ಗಳನ್ನು ಪಕ್ಕಕ್ಕಿಟ್ಟು ಹೊಸದಕ್ಕಾಗಿ ಹುಡುಕಾಡಿದ್ದರು, ಕಂಡುಕೊಂಡಿದ್ದರು. ಹೊಸ ತಲೆಮಾರಿಗೆ ಜಾಗ ಮಾಡಿಕೊಟ್ಟರು. ಅಕಸ್ಮಾತ್ ಆಗಿ ನಡೆದ ಇವೆಲ್ಲವೂ ಸಾಂಸ್ಕೃತಿಕ ಪರಿವರ್ತನ ಪ್ರಕ್ರಿಯೆಯ ಭಾಗ. ಕ್ರಮೇಣ ಅವುಗಳೆಲ್ಲದರ ಮೇಲೆ ಕಾಲದ ನೆರಳು ಬಿತ್ತು. ಕಲ್ಲು–ಮಣ್ಣಿನ ರಾಶಿ ಬಿತ್ತು. ನೆಲ ಕೊರೆವ ಪ್ರಾಣಿಗಳಿಂದ ಹಾನಿಗೊಳಗಾದವು. ಕೆಲವನ್ನು ಪ್ರವಾಹ ಕೊಚ್ಚಿಕೊಂಡು ಹೋಯಿತು. ಅಚಾನಕ್ಕಾಗಿ ನಡೆದ ಸಾಂಸ್ಕೃತಿಕ ಎಂದು ಕರೆಯಲಾಗದ ಈ ಎಲ್ಲ ಪ್ರಕ್ರಿಯೆಗಳು ಸಹಜ/ಪ್ರಾಕೃತಿಕ ಪರಿವರ್ತನ ಪ್ರಕ್ರಿಯೆಯ ಭಾಗ. ಹಳೆಯದನ್ನು ಮತ್ತೆ ಕಟ್ಟಲು ಇವೆಲ್ಲವೂ ಸಾಕ್ಷ್ಯ ನೀಡುತ್ತವೆ. ಸುಮ್ಮನೆ ಹೇಳುವುದಾದರೆ, ಎಷ್ಟೋ ವರ್ಷದ ಮೂಳೆಯ ಮೇಲಿನ ಗುರುತನ್ನು ನೋಡಿದ ಪುರಾತತ್ತ್ವಶಾಸ್ತ್ರಜ್ಞ ಅದು ಯಾವುದಾದರೂ ಪ್ರಾಣಿಯ ಹಲ್ಲಿನ ಗುರುತೋ ಅಥವಾ ಮನುಷ್ಯರೇ ಯಾವುದಾದರೂ ಆಯುಧದಿಂದ ಮಾಡಿದ ಹಲ್ಲೆಯ ಗುರುತೋ ಎಂದು ಅಂದಾಜು ಮಾಡಬಲ್ಲ. ಆತ ಎಲ್ಲೆ ನಿಂತರೂ ಸಾಂಸ್ಕೃತಿಕ ಮತ್ತು ಸಹಜ/ ಪ್ರಾಕೃತಿಕ ಎಂದು ಕರೆಯಲಾಗುವ ಪರಿವರ್ತನ ಪ್ರಕ್ರಿಯೆಗಳ ಬಗ್ಗೆ ಆತನಿಗೆ ಅರಿವಿರಲೇಬೇಕು. ಹೀಗಾಗಿ ಪುರಾತತ್ತ್ವಶಾಸ್ತ್ರಕ್ಕೆ ಸಾಮಗ್ರಿ ಒದಗಿಸುವ ಸ್ಥಳವೊಂದು ಹೇಗೆ ರೂಪುಗೊಳ್ಳುತ್ತದೆ ಎಂಬುದು ಮಹತ್ತ್ವದ ಪ್ರಶ್ನೆ. ಈ ಕ್ಷೇತ್ರದಲ್ಲಿ ಬಹಳಷ್ಟು ಸ್ಥಳಗಳನ್ನು ಮೌಂಡ್ಸ್ (ದಿಬ್ಬ) ಎಂದೇ ಕರೆಯುತ್ತಾರೆ. ಏಕೆಂದರೆ ಅದು ನೂರಾರು ವರ್ಷ ಅಥವಾ ಯುಗಗಳಲ್ಲಿ ನಡೆದುಹೋಗಿದ್ದರ ಕುರುಹು. ಮುಚ್ಚಿಹೋದ ಯಾವುದೇ ಸ್ಥಳದಲ್ಲಿ ಕ್ರಮೇಣ ಮಣ್ಣು ಮೇಲೇಳುತ್ತದೆ. ಎಷ್ಟೋ ವರ್ಷಗಳ ಅನಂತರ ಅದೇ ನೆಲದಲ್ಲಿ ಹೊಸ ಜನ ಬದುಕಲಾರಂಭಿಸುತ್ತಾರೆ. ಅಲ್ಲಿ ಹೊಸ ಚಟುವಟಿಕೆಗಳು ಕಾಣಿಸಿಕೊಳ್ಳುತ್ತವೆ.

ಕ್ರಮೇಣ ಹೊಸದರ ಹಿನ್ನೆಲೆಯಲ್ಲಿ ಹಳೆಯದು ಹೋಳೆಯತೊಡಗುತ್ತದೆ. ಅದನ್ನೆ ಸ್ಟ್ರ್ಯಾಟಿಗ್ರಫಿ ಎನ್ನುತ್ತಾರೆ. ಅಂದರೆ ನೆಲದ ಮೇಲಿನ ಕಪ್ಪು ಪದರ ಅಲ್ಲಿ ಏನನ್ನೋ ಸುಟ್ಟಿರುವ ಕುರಿತು ಸೂಚನೆ ನೀಡುತ್ತದೆ. ಬರಡು ನೆಲವೊಂದು ಅಲ್ಲಿ ಏನೂ ನಡೆದಿಲ್ಲ ಎಂದೂ ಹೇಳಲು ಸಾಧ್ಯವಿದೆ.

ಪುರಾತತ್ತ್ವಶಾಸ್ತ್ರ ಒಂದು ವಿಜ್ಞಾನವಾಗಿ ಕಣ್ತೆರೆದ ದಿನದಿಂದಲೂ ಮೂಲದ ಹುಡುಕಾಟ ಪುರಾತತ್ತ್ವಶಾಸ್ತ್ರಜ್ಞರ ಪ್ರಧಾನ ಆಸಕ್ತಿಯಾಗೇ ಉಳಿದಿದೆ. ಪ್ರಪಂಚದಲ್ಲಿ ಕೃಷಿಯ ಮೂಲ ಎಲ್ಲಿದೆ ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ 1940–50ರ ದಶಕದಲ್ಲಿ ರಾಬರ್ಟ್ ಬ್ರೇಯ್ಡ್‌ವುಡ್ ಇರಾಕ್‌ನ ಕುರ್ದಿಸ್ತಾನ್‌ನಲ್ಲಿ ಉತ್ಖನನ ಮಾಡಿದ. ಹಳ್ಳಿ ಜೀವನದ ಬಗ್ಗೆ ಮೆಕ್ಸಿಕೊದ ಆಕ್ಸಕ್ ಕಣಿವೆಯಲ್ಲಿ ಕೆಂಟ್ ಫ್ಲಾನರಿಗೆ ಮಹತ್ತ್ವದ ಸುಳಿವುಗಳು ದೊರೆತವು. ಮನುಷ್ಯಕುಲದ ಮೂಲ ರೂಪಗಳಿಗಾಗಿ ಲೂಯಿ ಮತ್ತು ಮೇರಿ ಲೀಕಿ ಸು.24 ವರ್ಷಗಳ ಕಾಲ ಸತತವಾಗಿ ತಾಂಜಾನಿಯದಲ್ಲಿ ಹುಡುಕಾಟ ನಡೆಸಿದರು. ಹಳೆಯದರ ಹುಡುಕಾಟದಲ್ಲಿ ಪುರಾತತ್ತ್ವಶಾಸ್ತ್ರವೂ ಬೆಳೆಯಿತು. ಎಲ್ಲ ರಾಷ್ಟ್ರಗಳು ಮರೆತುಹೋದ ತಮ್ಮ ಮಹಾಸಾಮ್ರಾಜ್ಯಗಳ ಬಗೆಗೆ ಹುಡುಕಾಟ ನಡೆಸಿವೆ. ಮುಂದೊಂದು ದಿನ ಈ ಎಲ್ಲ ರಾಷ್ಟ್ರಗಳೂ ಪುರಾತತ್ತ್ವಕ್ಷೇತ್ರದಲ್ಲಿ ಜೊತೆಗೇ ಸಾಗಬಹುದು. ಪುರಾತತ್ತ್ವಶಾಸ್ತ್ರ ಮೊದಲು ಕುತೂಹಲದ ಕ್ರಿಯೆಯಾಗಿತ್ತು. ಈಗ ಶುದ್ಧ ವಿಜ್ಞಾನವಾಗಿದೆ. ಅಲ್ಲಿಂದ ಇಲ್ಲಿವರೆಗೆ ಈ ಪ್ರಯಾಣ ನಡೆದಿದೆ. ಅದರ ಹುಡುಕಾಟದ ಹೆಚ್ಚುಗಾರಿಕೆ ಬಗ್ಗೆ ಮಾತನಾಡಿದ ಬಳಿಕವೂ ಸಾಹಸ ನಿಲ್ಲುವುದಿಲ್ಲ ಎಂಬುದನ್ನು ಮರೆಯು ವಂತಿಲ್ಲ. ಸಾಹಸಕ್ಕೆ ಏನಾದರೂ ಹೆಸರಿರುವುದಾದರೆ ಅದು ಪುರಾತತ್ತ್ವಶಾಸ್ತ್ರ ಮಾತ್ರ. (ವಿ.ಎಸ್.ಎಚ್.;ಎ.ಆರ್.)

**ಪುರಾತತ್ತ್ವಶಾಸ್ತ್ರದ ಬೆಳವಣಿಗೆ (ಭಾರತ):** ಭಾರತದಲ್ಲಿ ಏಷ್ಯಾಟಿಕ್ ಸಂಸ್ಥೆ ಸ್ಥಾಪನೆಗೊಳ್ಳುವ ಮೊದಲೇ ಪುರಾತಾತ್ತ್ವಿಕ ಅಧ್ಯಯನದಲ್ಲಿ ಆಸಕ್ತಿ ಕೆರಳಿತ್ತು. 16ನೆಯ ಶತಮಾನಕ್ಕೆ ಹಿಂದೆಯೆ ಐರೋಪ್ಯ ಪ್ರವಾಸಿಗರ ಕಥನಗಳಲ್ಲಿ ಭಾರತದ ಸ್ಮಾರಕಗಳನ್ನು ಕುರಿತ ಉಲ್ಲೇಖಗಳಿವೆ. ಈ ಪ್ರವಾಸಿಗರು ಎಲಿಫೆಂಟ, ಕಾನ್ಹೇರಿ, ಎಲ್ಲೋರ ಮತ್ತಿತರ ಪ್ರಾಚೀನ ಸ್ಮಾರಕಗಳಿಗೆ ಭೇಟಿ ನೀಡಿ ಅವುಗಳನ್ನು ವಿವರವಾಗಿ ದಾಖಲಿಸುವುದರೊಂದಿಗೆ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ನೀಡಿದ್ದಾರೆ. ಇವನ್ನು ಹೊರತುಪಡಿಸಿ ಫ್ರೆಂಚ್ ವಿದ್ವಾಂಸರು ತಮ್ಮ ಬರೆಹಗಳಲ್ಲಿ ದಕ್ಷಿಣ ಭಾರತದ ದೇವಾಲಯಗಳನ್ನು ಅತ್ಯಂತ ಆಸಕ್ತಿಯಿಂದ ದಾಖಲಿಸಿದ್ದಾರೆ. ಇವೆಲ್ಲ ಭಾರತದ ಪುರಾತಾತ್ತ್ವಿಕ ದಾಖಲೀಕರಣದ ಮೊದಲ ಹೆಜ್ಜೆಯಾಗಿದೆ. ಈ ಪ್ರಕ್ರಿಯೆ 18–19ನೆಯ ಶತಮಾನದಲ್ಲಿ ಮುಂದುವರೆದು, ಇಪ್ಪತ್ತನೆಯ ಶತಮಾನದ ಮಧ್ಯಭಾಗದಿಂದ ಪುರಾತತ್ತ್ವಶಾಸ್ತ್ರದ ಕ್ರಮಬದ್ಧ ಅಧ್ಯಯನಕ್ಕೆ ವಿದ್ವಾಂಸರು ಪ್ರಾಮುಖ್ಯ ನೀಡಲು ಪ್ರಾರಂಭಿಸಿದರು.

ಕಲ್ಕತ್ತದಲ್ಲಿ 1784 ಜನವರಿ 15 ರಂದು ಏಷ್ಯಾಟಿಕ್ ಸೊಸೈಟಿ ಪ್ರಾರಂಭವಾಯಿತು. ಪುರಾತತ್ತ್ವ ಸಂಶೋಧನೆ ವ್ಯವಸ್ಥಿತವಾಗಿ ಸಾಗುವಂತೆ ಮಾಡುವುದು ಇದರ ಗುರಿಯಾಗಿತ್ತು. ಅಖಂಡ ಭಾರತದ ಪ್ರಾಚ್ಯವಸ್ತು ಮತ್ತು ಸಾಹಿತ್ಯ ಕೃತಿಗಳನ್ನು ರಕ್ಷಿಸುವ ಗುರಿಯನ್ನಿಟ್ಟುಕೊಂಡು ಸರ್ ವಿಲಿಯಂ ಜೋನ್ಸ್ ನೇತೃತ್ವ ವಹಿಸಿದ. 1788ರಲ್ಲಿ ದಿ ಏಷ್ಯಾಟಿಕ್ ರಿಸರ್ಚಸ್ ಎಂಬ ನಿಯತಕಾಲಿಕೆಯನ್ನು ಸೊಸೈಟಿ ಪ್ರಾರಂಭಿಸಿತು. ಸೊಸೈಟಿಯ ಸದಸ್ಯರಿಂದ, ವಿದ್ವಾಂಸರಿಂದ ಪುರಾತತ್ತ್ವ ವಸ್ತುಗಳು ಸಂಗ್ರಹಿಸಲ್ಪಟ್ಟವು. ಬಂಗಾಲದಲ್ಲಿ ಪ್ರಾರಂಭವಾದ ಈ ಸಂಸ್ಥೆಯ ಮಾದರಿಯನ್ನನುಸರಿಸಿ ಬೊಂಬಾಯಿ ಮತ್ತು ಮದರಾಸ್‌ಗಳಲ್ಲಿ ಸಾಹಿತ್ಯ ಸಂಸ್ಥೆಗಳು, ಸಂಘಗಳು ಅಸ್ತಿತ್ವಕ್ಕೆ ಬಂದವು. ವಿವಿಧ ಪ್ರಕಾರಗಳ ವಿಷಯಗಳನ್ನು ತನ್ನ ವ್ಯಾಪ್ತಿಯಲ್ಲಿಟ್ಟುಕೊಂಡಿದ್ದರಿಂದ, ಕ್ರಮಬದ್ಧ ಪುರಾತತ್ತ್ವಕ್ಕೆ ಪ್ರಾಮುಖ್ಯ ಕೊಡಲು ಈ ಸಂಸ್ಥೆಗೆ ಅವಕಾಶವಾಗಲಿಲ್ಲ. ಸಾಹಿತ್ಯಾಧ್ಯಯನಕ್ಕೆ ಹೆಚ್ಚು ಮಹತ್ತ್ವ ನೀಡಲಾಯಿತು. ಮೊತ್ತಮೊದಲು ಸರ್ ವಿಲಿಯಂ ಜೋನ್ಸ್ ಗ್ರೀಕರು ಉಲ್ಲೇಖಿಸಿರುವ ಸ್ಯಾಂಡ್ರೋಕೊಟ್ಟೊಸ್‌ನು ಚಂದ್ರಗುಪ್ತ ಮೌರ್ಯನೆಂದೂ ಪಾಲಿಬೋಥ್ರ ಮೌರ್ಯರ ರಾಜಧಾನಿಯಾಗಿದ್ದ ಪಾಟಲಿಪುತ್ರವೆಂದೂ ಗುರುತಿಸಿದ. ಇವನ ಸಹೋದ್ಯೋಗಿಯಾಗಿದ್ದ ಚಾರ್ಲ್ಸ್ ವಿಲ್ಕಿನ್ಸ್ ಗುಪ್ತ ಮತ್ತು ಕುಟಿಲ ಲಿಪಿಗಳನ್ನು ಓದುವ ಮೂಲಕ ಭಾರತೀಯ ಶಾಸನಶಾಸ್ತ್ರ ಅಧ್ಯಯನಕ್ಕೆ ನಾಂದಿ ಹಾಡಿದ. ಇವೆಲ್ಲ ಕೇವಲ ವೈಯಕ್ತಿಕ ಪ್ರಯತ್ನಗಳಾಗಿದ್ದುವು. ಆದರೆ ಆಂಗ್ಲ ಸರ್ಕಾರವೂ ಈ ಕುರಿತಂತೆ ಸ್ವಲ್ಪ ಆಸಕ್ತಿವಹಿಸಿತು. 1800ರಲ್ಲಿ ಗವರ್ನರ್ ಜನರಲ್ ಮಾರ್ಕ್ವಿಸ್ ವೆಲ್ಲೆಸ್ಲಿಯೂ ಫ್ರಾನ್ಸಿಸ್ ಬುಕನನ್ ಅನ್ನು ಮೈಸೂರು ಪ್ರಾಂತವನ್ನು ಸರ್ವೇಕ್ಷಣೆ ಮಾಡಲು ನಿಯೋಜಿಸಿದ. ಭಾರತ ಸರ್ಕಾರ ಮೊದಲು ಈತನ ವರದಿಯನ್ನು ಪ್ರಕಟಿಸಿತು. ಮುಂದಿನ ಎಂಟು ವರ್ಷಗಳಲ್ಲಿ ಬುಕನನ್ ದಿನಾಜಪುರ, ರಂಗಪುರ, ಪೂರ್ಣಿಯಾ, ಬಾಗಲಪುರ ಜಿಲ್ಲೆಗಳಲ್ಲಿ ಸರ್ವೇಕ್ಷಣೆ ಮಾಡಿದ. ಇವುಗಳ ವರದಿ ಅಪ್ರಕಟಿತವಾಗಿಯೇ ಉಳಿಯಿತು. ಪ್ರಾಚೀನ ನೆಲೆ, ಕಟ್ಟಡಗಳ ವಿವರವಾದ ನಕ್ಷೆ ಮತ್ತು ರೇಖಾಚಿತ್ರ ತೆಗೆದವರಲ್ಲಿ ಈತ ಮೊದಲಿಗನಾಗಿದ್ದಾನೆ.

1833ರಲ್ಲಿ ಜೇಮ್ಸ್ ಪ್ರಿನ್ಸೆಪ್ ಏಷ್ಯಾಟಿಕ್ ಸಂಸ್ಥೆಯ ಕಾರ್ಯದರ್ಶಿಯಾಗಿ ನೇಮಕವಾದ. ಈತ ಅಶೋಕನ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳ ಶಾಸನಗಳನ್ನು ಸ್ಥಳೀಯ ಪಂಡಿತರ ಸಹಾಯದಿಂದ ಓದುವ ಪ್ರಯತ್ನ ಮಾಡಿ ಕ್ರಮೇಣ ಯಶಸ್ವಿಯಾದ. ಅಶೋಕ ಚಕ್ರವರ್ತಿಯ ಸಮಕಾಲೀನ ಯುವದೊರೆಗಳು, ಮೂರನೆಯ ಅಂತಿಯೋಕಸ್, ಟಾಲಮಿ–ಫಿಲಾಡೆಲ್ಫೋಸ್ ಎಂದು ಗುರುತಿಸುವಲ್ಲಿ ಯಶಸ್ವಿಯಾದ. ಜೇಮ್ಸ್ ಫರ್ಗ್ಯೂಸನ್ ಭಾರತದಲ್ಲಿಯ ವಿವಿಧ ಪ್ರಾಚೀನ ಸ್ಥಳಗಳಲ್ಲಿ ಅನ್ವೇಷಣೆ ಕೈಗೊಂಡ. 1829 ರಿಂದ 1847 ರವರೆಗೆ ವ್ಯಾಪಕ ಅಧ್ಯಯನ ಮಾಡಿ ವಾಸ್ತುಶಿಲ್ಪದ ವೈಶಿಷ್ಟ್ಯವನ್ನು ಆಧರಿಸಿ ಪ್ರಾಚೀನ ಕಟ್ಟಡಗಳ ವರ್ಗೀಕರಣ ಮಾಡಿದ.

1861ರಲ್ಲಿ ಬ್ರಿಟಿಷ್ ಸರ್ಕಾರ ಪುರಾತತ್ತ್ವ ವಿಭಾಗವನ್ನು ಸ್ಥಾಪಿಸಿದ ಅನಂತರ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಪುರಾತತ್ತ್ವ ಸರ್ವೇಕ್ಷಣಾಕಾರನಾಗಿ ನೇಮಿಸಲ್ಪಟ್ಟ. ಆದರೆ 1866ರಲ್ಲಿ ಸರ್ಕಾರ ಈ ವಿಭಾಗವನ್ನು ರದ್ದುಗೊಳಿಸಿತು. 1870ರಲ್ಲಿ ಅಂದಿನ ಗೃಹ ಇಲಾಖೆಯ ಕಾರ್ಯದರ್ಶಿಯಾಗಿದ್ದ ಇ.ಸಿ.ಬೇಲೆ ಎಂಬಾತನ ಪ್ರಯತ್ನದಿಂದ ಪುರಾತತ್ತ್ವ ಇಲಾಖೆ ಮತ್ತೆ ಸ್ಥಾಪಿತವಾಯಿತು. ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಪುರಾತತ್ತ್ವ ಇಲಾಖೆಯ ಮಹಾ ನಿರ್ದೇಶಕನಾಗಿ 1871ರ ಫೆಬ್ರವರಿಯಿಂದ ಕಾರ್ಯಾರಂಭಮಾಡಿದ. ಇವನ ಇಬ್ಬರು ಸಹಾಯಕರಾದ ಬೆಗಲರ್ ಮತ್ತು ಕಾರ್ಲೈಲ್ ದೆಹಲಿ ಮತ್ತು ಆಗ್ರಗಳಲ್ಲಿ ಸರ್ವೇಕ್ಷಣೆ ಮಾಡಿದರು. 1872ರಲ್ಲಿ ರಾಜಪುತಾನ, ಬುಂದೇಲಖಂಡ, ಮಥುರ, ಬೋಧಗಯ ಮತ್ತು ಗೌಡ ಪ್ರದೇಶಗಳಲ್ಲಿ, 1873ರಲ್ಲಿ ಪಂಜಾಬ್‌ನಲ್ಲಿ ಪ್ರಾಚೀನ ನೆಲೆಗಳನ್ನು ಶೋಧಿಸಿದರು. ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ 1873ರಿಂದ 1877ರ ಅವಧಿಯಲ್ಲಿ ಬಾರ್ಹುತ್ ಸ್ತೂಪವನ್ನೂ ಅಶೋಕನ ಅನಂತರದ ಕಾಲಕ್ಕೆ ಸೇರಿದ ಹಲವಾರು ಸ್ತಂಭ ಬೋದಿಗೆಗಳನ್ನೂ ಗುಪ್ತ ಮತ್ತು ಗುಪ್ತರ ಅನಂತರ ಕಾಲದ ವಾಸ್ತುಶಿಲ್ಪ ಭಾಗಗಳನ್ನೂ ಕಂಡುಹಿಡಿದ.

1872ರಲ್ಲಿ ಜೇಮ್ಸ್ ಬರ್ಜೆಸ್ ಇಂಡಿಯನ್ ಆಂಟಿಕ್ವರಿ ಎಂಬ ಸಂಶೋಧನ ನಿಯತಕಾಲಿಕೆಯ ಪ್ರಕಟಣೆಯನ್ನು ಆರಂಭಿಸಿದ. ಕೆಲವು ಶಾಸನ ಪ್ರತಿಗಳನ್ನೂ ಪ್ರಕಟಿಸಿದ. 1877ರಲ್ಲಿ ಕಾರ್ಪಸ್ ಇನ್ಸ್‌ಕ್ರಿಪ್ಷನಮ್ ಇಂಡಿಕಾರಮ್‌ನ ಮೊದಲ ಸಂಪುಟ ಪ್ರಕಟವಾಯಿತು. ಅಶೋಕ ಮತ್ತು ಆತನ ಮೊಮ್ಮಗನ ಕಾಲಕ್ಕೆ ಸೇರಿದ ಶಾಸನಗಳ ಸಂಪಾದನ ಕಾರ್ಯ ಮಾಡಿದ. ಜೆ.ಎಫ್.ಫ್ಲೀಟನ ನಿರ್ದೇಶನದಂತೆ, ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಪ್ರತ್ಯೇಕವಾದ ಶಾಸನ ವಿಭಾಗ ಆರಂಭಿಸಲ್ಪಟ್ಟಿತು.

ಭಾರತೀಯ ಪುರಾತತ್ತ್ವ ಬೆಳವಣಿಗೆಗೆ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಕೊಡುಗೆ ಅಪಾರ. ಸರ್ವೇಕ್ಷಣಾ ಕಾರ್ಯ, ನೆಲೆ ಶೋಧನೆ, ಪ್ರಾಚ್ಯವಸ್ತುಗಳ ಶೋಧನೆ, ಇವುಗಳ ದಾಖಲೀಕರಣ ಕೆಲಸದಲ್ಲಿ ಏಕರೂಪತೆ ತರುವ ಜವಾಬ್ದಾರಿ ಈತನದಾಯಿತು. ಅದಕ್ಕಾಗಿಯೇ ಆತನನ್ನು ಭಾರತೀಯ ಪುರಾತತ್ತ್ವ ಪಿತಾಮಹ ಎಂದು ಕರೆಯಲಾಗುತ್ತದೆ.

ಜೇಮ್ಸ್ ಬರ್ಜೆಸ್ ಭಾರತದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಪುರಾತತ್ತ್ವ ಅನ್ವೇಷಣೆ ಕಾರ್ಯದಲ್ಲಿ ತಾಂತ್ರಿಕ ತಜ್ಞನಾಗಿ ಮಹತ್ತ್ವದ ಪಾತ್ರ ವಹಿಸಿದ (1873). ಈತ ಬೆಳಗಾಂವಿ ಮತ್ತು ಕಲಾದಗಿ ಜಿಲ್ಲೆಗಳಲ್ಲಿ ಕೆಲಸ ಪ್ರಾರಂಭಿಸಿದ. ಮುಂದೆ ಕಾಥೇವಾಡ ಮತ್ತು ಕಚ್ಛ್ ಪ್ರದೇಶಗಳಲ್ಲಿ, 1875–76 ರವರೆಗೆ ಅಂದಿನ ನಿಜಾಮ ಆಳ್ವಿಕೆ ಸೀಮೆಯ ಪಶ್ಚಿಮ ಭಾಗ, 1876–77ರಲ್ಲಿ ಪಶ್ಚಿಮ ಭಾರತದ ಬೌದ್ಧ ಗುಹಾಲಯಗಳ ಸರ್ವೇಕ್ಷಣೆ ಮಾಡಿದ. 1877ರ ಅನಂತರ ದಕ್ಷಿಣ ಭಾರತದ ಕಡೆ ಗಮನ ಕೇಂದ್ರೀಕರಿಸಿ, ವಿಜಯವಾಡದ ಪ್ರಾಚ್ಯಾವಶೇಷಗಳನ್ನು, ಅಮರಾವತಿ ಸ್ತೂಪವನ್ನು, ಧಾರವಾಡ ಜಿಲ್ಲೆಯ ಚಾಳುಕ್ಯ ದೇವಾಲಯಗಳ ಸರ್ವೇಕ್ಷಣೆ ಮಾಡಿದ. ಈತನ ಸಹಾಯಕ ಅಲೆಕ್ಸಾಂಡರ್ ರೀ, ಮಹಾಬಲಿಪುರಂ ಮತ್ತು ಹಂಪೆಯಲ್ಲಿ ಸರ್ವೇಕ್ಷಣೆ ಮಾಡಿದ. ಗುಜರಾತ್‌ನ ಇಸ್ಲಾಂ ವಾಸ್ತುಶಿಲ್ಪದ ಕಡೆಗೆ ದೃಷ್ಟಿಹರಿಸಿದ.

ಭಾರತೀಯ ಪುರಾತತ್ತ್ವ ಅನ್ವೇಷಣೆಯ ಮಹಾನಿರ್ದೇಶಕನಾಗಿ ಈತನ ಉದ್ದೇಶ ಮತ್ತು ರೀತಿ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್‌ನಿಗಿಂತ ಭಿನ್ನವಾಗಿತ್ತು. ಈತ ವಾಸ್ತುಶಿಲ್ಪ ಸರ್ವೇಕ್ಷಣೆಗೆ ಹೆಚ್ಚು ಮಹತ್ವ ನೀಡಿದ. ಈತನ ಕಾಲದಲ್ಲಿ ಫರರ್ ಮತ್ತು ಸ್ಮಿತ್ ಜೌನಪುರದ ಶರ್ಕೆ ವಾಸ್ತುಶಿಲ್ಪ ಕುರಿತು ಶೋಧನೆ ನಡೆಸಿದರು. ಬರ್ಜೆಸ್ 1889ರಲ್ಲಿ ನಿವೃತ್ತನಾದ.

ಬರ್ಜೆಸ್‌ನ ಅನಂತರದ ಕಾಲದಲ್ಲಿ ಪುರಾತತ್ತ್ವ ಕೆಲಸ ಸ್ಥಗಿತವಾಯಿತು. ಕೇಂದ್ರ ಸರ್ಕಾರ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯನ್ನು ರದ್ದುಗೊಳಿಸಿತು. ಈ ಸ್ಥಿತಿ ಲಾರ್ಡ್ ಕರ್ಜನ್ ಭಾರತಕ್ಕೆ ಹೊಸ ವೈಸರಾಯ್ ಆಗಿ ಬರುವವರೆಗೆ (1899) ಮುಂದುವರೆಯಿತು. ಈತ ಭಾರತೀಯ ಇತಿಹಾಸ, ಪುರಾತತ್ತ್ವ ಮತ್ತು ವಾಸ್ತುಶಿಲ್ಪದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ. ಹೀಗಾಗಿ ಪುರಾತತ್ತ್ವ ಇಲಾಖೆಯನ್ನು ಪುನಾರಚಿಸಲು ಹೆಚ್ಚು ಪ್ರಯತ್ನ ನಡೆಸಿದ. ಇದರಿಂದ ಭಾರತೀಯ ಪುರಾತತ್ತ್ವ ಇಲಾಖೆ ಪುನಃ ಸ್ಥಿರವಾಗಿ ನಿಲ್ಲುವಂತಾಯಿತು ಮತ್ತು ಸರ್ ಜಾನ್ ಮಾರ್ಷಲ್ ಮಹಾ ನಿರ್ದೇಶಕನಾಗಿ ನೇಮಿಸಲ್ಪಟ್ಟ (1902). ಹುದ್ದೆಗೆ ಬಂದ ಒಂದೇ ವರ್ಷದಲ್ಲಿ ಉತ್ಖನನ, ಪುನರುತ್ಥಾನ ಮತ್ತು ವಸ್ತುಸಂಗ್ರಹಾಲಯದ ಸಂರಕ್ಷಣೆ ಮೊದಲಾದವುಗಳಿಗೆ ಸಂಬಂಧಿಸಿದ ನೀತಿ ನಿಯಮ ಕಾಯಿದೆಗಳನ್ನು ಇವನು ರಚಿಸಿದ. ಸರ್ಕಾರ 1904 ಜುಲೈ 7ರಂದು ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಯ್ದೆಯನ್ನು ಪ್ರಥಮ ಬಾರಿಗೆ ಜಾರಿಗೆ ತಂದಿತು. 1915ರ ಅವಧಿಯಲ್ಲಿ ಮೊಹೆಂಜೋದಾರೊ, ತಕ್ಷಶಿಲ, ಸಾರನಾಥ, ನಾಲಂದ ನೆಲೆಗಳಲ್ಲಿ ಉತ್ಖನನ ಮಾಡಲಾಯಿತು.

1920–21ರಲ್ಲಿ ಮಾರ್ಷಲ್ ಮತ್ತು ಇವನ ಸಹೋದ್ಯೋಗಿಗಳಾದ ಆರ್. ಡಿ. ಬ್ಯಾನರ್ಜಿ ಮತ್ತು ಸಾಹ್ನಿಯವರು ಹರಪ್ಪ ಮತ್ತು ಮೊಹೆಂಜೋದಾರೊವಿನಲ್ಲಿ ನಡೆಸಿದ ಉತ್ಖನನಗಳು ಭಾರತೀಯ ಪುರಾತತ್ತ್ವ ಸಂಶೋಧನೆಯ ಮಹತ್ತ್ವದ ಹೊಸ ದಾಖಲೆಯನ್ನು ಸ್ಥಾಪಿಸಿದ್ದಲ್ಲದೆ ಹೊಸ ಅಧ್ಯಾಯವನ್ನು ಆರಂಭಿಸಿದವು.

1928ರಲ್ಲಿ ಸರ್ ಜಾನ್ ಮಾರ್ಷಲ್ ನಿವೃತ್ತನಾದ ಅನಂತರ ಎಚ್. ಹಾರ್ಗ್ರೀವ್ ಅಧಿಕಾರಕ್ಕೆ ಬಂದ. 1931ರ ಜುಲೈ ತಿಂಗಳಲ್ಲಿ ರಾವ್ ಬಹದೂರ್ ದಯಾರಾಮ ಸಾಹ್ನಿಯವರು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಧಿಕಾರ ವಹಿಸಿಕೊಂಡು 1935ರಲ್ಲಿ ಮಹಾ ನಿರ್ದೇಶಕರಾದರು. ಇದೇ ವರ್ಷ ಸರ್ಕಾರ ವಿದೇಶಿ ವಿದ್ವಾಂಸ ಸರ್ ಲಿಯೊನಾರ್ಡ್ ವೂಲಿಯನ್ನು ಪುರಾತತ್ತ್ವ ಸರ್ವೇಕ್ಷಣೆ ಬಗ್ಗೆ ಅಭಿಪ್ರಾಯ ಪಡೆಯಲು ಕರೆಸಲಾಯಿತು. ವೂಲಿ ಭಾರತದಲ್ಲಿ 4 ತಿಂಗಳು ಇದ್ದು, ಈ ಕಾಲದಲ್ಲಿ 45 ಸ್ಥಳಗಳಿಗೆ ಭೇಟಿ ನೀಡಿ ವಿವರವಾದ ವರದಿ ತಯಾರಿಸಿದ. ಸ್ಮಾರಕಗಳ ಪುನರುತ್ಥಾನ ಮತ್ತು ಶಾಸನ ಕಾರ್ಯಗಳ ಶ್ಲಾಘನೆಯನ್ನು ಹೊರತುಪಡಿಸಿ ವಿಭಾಗದ ನೀತಿ ಮತ್ತು ತಂತ್ರಗಳನ್ನು ಕಟುವಾಗಿ ಈ ವರದಿಯಲ್ಲಿ ಟೀಕಿಸಲಾಗಿತ್ತು. ಉತ್ಖನನ ದಿಂದ ಸಂಗ್ರಹಿಸಿದ ಪ್ರಾಚ್ಯವಸ್ತುಗಳ ರಕ್ಷಣೆ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಉತ್ಖನನಗಳನ್ನು ನಡೆಸಬೇಕಾದ ಹಾಗೂ ವಿಭಾಗದ ಅಧಿಕಾರಿಗಳಿಗೆ ತರಬೇತಿ ನೀಡಬೇಕಾದ ಆವಶ್ಯಕತೆ ಇದೆಯೆಂದು ವರದಿಯಲ್ಲಿ ತಿಳಿಸಲಾಯಿತು. ಇದರಂತೆ 1940–44 ರವರೆಗೆ ಅಹಿಚ್ಛತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಖನನ ನಡೆಯಿತು.

ದೀಕ್ಷಿತ್‌ರವರು ಗುಜರಾತಿನ ಸಾಬರಮತಿ ಬಯಲಿನಲ್ಲಿ ಅನ್ವೇಷಣೆ ಮಾಡಲು ಮೊದಲ ಬಾರಿಗೆ ಭಾರತೀಯ ಪ್ರಾಗಿತಿಹಾಸ ತಜ್ಞರನ್ನು ಸಂಘಟಿಸಿದರು. ಈ ಕಾಲದಲ್ಲಿ ಕಲ್ಕತ್ತ ವಿಶ್ವವಿದ್ಯಾಲಯ, ಬಂಗಾಲದ ದಿನಾಜಪುರ ಜಿಲ್ಲೆಯ ಬನಗರದಲ್ಲಿ ಪ್ರಾಚೀನ ನಿವೇಶನ ಉತ್ಖನನ ಮಾಡಲು ಅನುಮತಿ ತೆಗೆದುಕೊಂಡ ಮೊದಲ ವಿಶ್ವವಿದ್ಯಾಲಯವಾಗಿತ್ತು. ದೀಕ್ಷಿತರ ಅನಂತರ 1944ರಲ್ಲಿ ಸರ್ ಮಾರ್ಟಿಮರ್ ವೀಲರ್ **(ನೋಡಿ)** ಭಾರತೀಯ ಪುರಾತತ್ತ್ವ ಇಲಾಖೆಯ ಅಧಿಕಾರ ವಹಿಸಿಕೊಂಡ.

ಭಾರತೀಯ ಪುರಾತತ್ತ್ವದಲ್ಲಿ ನವಯುಗ: ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕನಾಗಿ ಸರ್ ಮಾರ್ಟಿಮರ್ ವೀಲರ್‌ನ ನೇಮಕವಾದ ಅನಂತರ ಭಾರತೀಯ ಶಾಸನಶಾಸ್ತ್ರ ನವಯುಗದಲ್ಲಿ ಕಾಲಿರಿಸಿತು. ಅಧಿಕಾರ ವಹಿಸಿಕೊಳ್ಳುವ ಮೊದಲು ವೀಲರ್ ಪುರಾತತ್ತ್ವದಲ್ಲಿ ಮತ್ತು ಸೈನಿಕನಾಗಿ ಶಿಸ್ತು ಮೊದಲಾದ ವಿಷಯಗಳಲ್ಲಿ ಸಾಕಷ್ಟು ಅನುಭವ ಪಡೆದಿದ್ದ. ಈ ಅನುಭವ ಪುರಾತತ್ತ್ವ ಕ್ಷೇತ್ರದ ಮೇಲೂ ಪ್ರಭಾವ ಬೀರಿತು. ಭಾರತದಲ್ಲಿ ಕೇವಲ ನಾಲ್ಕು ವರ್ಷಗಳ ಕಾಲ ಇದ್ದರೂ ಈತನ ಶಿಸ್ತು, ಕ್ಷೇತ್ರಕಾರ್ಯ ದಕ್ಷತೆ ಮಾದರಿಯಾಗಿ ಭಾರತೀಯ ಪುರಾತತ್ತ್ವಜ್ಞರು ಋಣಿಯಾಗಿರುವಂತೆ ಮಾಡಿತು. ವೀಲರ್ ಪುರಾತತ್ತ್ವದ ಮಹಾನಿರ್ದೇಶಕನಾಗಿ ನೇಮಕಗೊಳ್ಳುವ ಮೊದಲು ಉತ್ಖನನ, ಅನ್ವೇಷಣೆ, ಸರ್ವೇಕ್ಷಣೆ ಮೊದಲಾದವು ಕ್ರಮಬದ್ಧವಾಗಿ ನಡೆಯುತ್ತಿರಲಿಲ್ಲ. ಈತ ಭಾರತೀಯ ಯುವ ವಿದ್ವಾಂಸರಿಗೆ, ಉತ್ಖನನದ ಹೊಸ ತಂತ್ರಗಳನ್ನು ತಿಳಿಸಿದ ಪುರಾತತ್ತ್ವಜ್ಞ. ಈ ಮುಂಚೆ ಸಂರಕ್ಷಣೆಯ ಕೆಲಸ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಿಂದ ನಡೆಯಲ್ಪಡುತ್ತಿತ್ತು. ಸ್ಮಾರಕಗಳನ್ನು ವಶಕ್ಕೆ ತೆಗೆದುಕೊಳ್ಳುವಲ್ಲಿ, ಭಾರತದೆಲ್ಲೆಡೆಯಲ್ಲಿ ಸರ್ವೇಕ್ಷಣೆ ಕೈಗೊಳ್ಳುವಲ್ಲಿ, ವಿವಿಧ ವೃತ್ತ ಅಥವಾ ವಲಯಗಳನ್ನು ಪುನರ್‌ಸಂಘಟಿಸಿ, ಎಲ್ಲ ವಲಯಗಳಲ್ಲಿ ಪುರಾತತ್ತ್ವಶಾಸ್ತ್ರಜ್ಞ, ಉಪಪುರಾತತ್ತ್ವಶಾಸ್ತ್ರಜ್ಞ, ಸಹಾಯಕ ಪುರಾತತ್ತ್ವಶಾಸ್ತ್ರಜ್ಞ ಮತ್ತು ಸರ್ವೇಕ್ಷಣಾ ಕಾರ್ಯಕ್ಕಾಗಿ ಅಗತ್ಯವಾದ ಸಿಬ್ಬಂದಿಯನ್ನು ರಚಿಸುವಲ್ಲಿ ಇವನು ಸಫಲನಾದ. ಈ ಯೋಜನೆಯಂತೆ ಪ್ರಾಗಿತಿಹಾಸ ವಿಭಾಗಕ್ಕೆ ಪ್ರಾಗಿತಿಹಾಸ ಪುರಾತತ್ತ್ವಜ್ಞ ಹುದ್ದೆಯನ್ನು ಸೃಷ್ಟಿಸಲಾಯಿತು. ಈ ಹೊಸ ಯೋಜನೆ ಸರ್ವೇಕ್ಷಣೆ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆಯನ್ನೂ ಒಳಗೊಂಡಿತ್ತು. ಅಖಂಡ ಏಷ್ಯದ ವಸ್ತುಗಳನ್ನು ಪ್ರದರ್ಶಿಸಲು ಸೆಂಟರ್ ಏಷ್ಯನ್ ವಸ್ತುಸಂಗ್ರಹಾಲಯವೂ ಸ್ಥಾಪಿತವಾಯಿತು. ಇವೆಲ್ಲವುಗಳಿಂದ ಕೇಂದ್ರಕಾರ್ಯಾಲಯದಲ್ಲಿ ಹಿರಿಯ ಹುದ್ದೆ ಅವಶ್ಯವೆಂಬುದನ್ನು ಅರಿತು, ಉಪ ಮಹಾನಿರ್ದೇಶಕ ಹುದ್ದೆ ನಿರ್ಮಿತವಾಯಿತು.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಆವಶ್ಯಕವಾದ ಕಾರ್ಯಗಳನ್ನು ಪರಿಶೀಲಿಸಲು ಮತ್ತು ಇಲಾಖೆಗೆ ಸಲಹೆ ನೀಡಲು 1945ರಲ್ಲಿ ಕೇಂದ್ರ ಪುರಾತತ್ತ್ವ ಸಲಹಾ ಸಮಿತಿ ರೂಪುಗೊಂಡಿತು. ಪ್ರಾರಂಭದಲ್ಲಿ ವೀಲರ್ ಪ್ರಾಯೋಗಿಕ ತರಬೇತಿಗೆ ಮಹತ್ತ್ವ ನೀಡಿದ. ಇವನು ವಿಭಾಗದ ಸಿಬ್ಬಂದಿಗೆ ಸಂರಕ್ಷಣೆ ಕುರಿತು ತರಬೇತಿ ನೀಡಿದ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಉಳಿದ ಸಂಸ್ಥೆಗಳಿಗೂ ಉತ್ಖನನಗಳಲ್ಲಿ ಪ್ರಾಯೋಗಿಕ ತರಬೇತಿ ನೀಡಲು ಉತ್ತೇಜಿಸಿದ. ಕ್ಷೇತ್ರಕಾರ್ಯಗಳಲ್ಲಿ ಪುರಾತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲ ವೈಜ್ಞಾನಿಕ ಶಾಖೆಗಳಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಪುರಾತತ್ತ್ವ ವಿದ್ಯಾಸಂಸ್ಥೆಯ ಸ್ಥಾಪನೆಯ ಆವಶ್ಯಕತೆ ಇದೆಯೆಂಬುದನ್ನು ವೀಲರ್ ಮನಗಂಡ. ವೈಜ್ಞಾನಿಕವಾಗಿ ಉತ್ಖನನ ಕೈಗೊಂಡ. ಉತ್ಖನನ ಮಾಡುವ ಮೊದಲು ಸರಿಯಾದ ಅಧ್ಯಯನ ಮತ್ತು ಪೂರ್ವಸಿದ್ಧತೆ ಮಾಡಬೇಕೆಂದ. ನೆಲೆಯಲ್ಲಿ ಸ್ತರವಿಂಗಡನೆಯ ತತ್ತ್ವ ಮತ್ತು ಸಾಂಸ್ಕೃತಿಕ ಮಹತ್ತ್ವವನ್ನರಿಯಲು ಸರ್ವೇಕ್ಷಣಾ ವಿಧಾನವನ್ನು ಅನುಸರಿಸಿದ. ಉತ್ಖನನದ ನಿವೇಶನದ ಸಿಬ್ಬಂದಿಗೆ ದಾಖಲೆಗಳನ್ನು ಮಾಡುವ, ಛಾಯಾಚಿತ್ರ ಮಾಡುವ ಜ್ಞಾನವಿರಬೇಕೆಂದ. ಇಂಥ ಪರಿಣಿತಿಯನ್ನು ತರಬೇತಿಯನ್ನು ನೀಡಿ ವೃದ್ಧಿಸುವಲ್ಲಿ ವೀಲರ್ ಪ್ರಯತ್ನಿಸಿದ. ಉತ್ಖನನ ಮಾಡುವುದಷ್ಟೇ ಅಲ್ಲ ವರದಿಯನ್ನು ಹೊರತರಬೇಕೆಂಬುದು ಇವನ ಇಚ್ಛೆಯಾಗಿತ್ತು.

ವೀಲರ್‌ನ ಆಡಳಿತಾವಧಿಯಲ್ಲಿ ಭಾರತದ ವಾಯುವ್ಯ ಭಾಗ ಮತ್ತು ದಕ್ಷಿಣ ಭಾರತದ ಕಡೆಗೂ ಹೆಚ್ಚು ಗಮನ ನೀಡಲಾಯಿತು. ತಕ್ಷಶಿಲೆಯ ನಿವೇಶನ ಇವನ ಗಮನ ಸೆಳೆಯಿತು. ಅನಂತರ ದಕ್ಷಿಣದ ಪಾಂಡಿಚೇರಿಯ ಬಳಿಯಿದ್ದ ಅರಿಕಮೇಡು ನಿವೇಶನವನ್ನು ಉತ್ಖನನಕ್ಕೆಂದು ಆಯ್ಕೆ ಮಾಡಿಕೊಂಡ. 1945ರಲ್ಲಿ ಈ ಸ್ಥಳವನ್ನು ಉತ್ಖನನ ಮಾಡಲಾಯಿತು. ದಕ್ಷಿಣಭಾರತದ ಬೃಹತ್ ಶಿಲಾಸಂಸ್ಕೃತಿಯ ಕಾಲಮಾನಗಳನ್ನು ಗುರುತಿಸುವ ಸಲುವಾಗಿ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯನ್ನು ವೀಲರ್ ಆಯ್ಕೆಮಾಡಿಕೊಂಡು ಹತ್ತಿರದಲ್ಲಿಯೆ ಇದ್ದ 10 ಬೃಹತ್ ಶಿಲಾಗೋರಿಗಳನ್ನು ಉತ್ಖನನ ಮಾಡಿದ. ದಕ್ಷಿಣ ಭಾರತದಲ್ಲಿ ತರುವಾಯದ ಉತ್ಖನನ ಮತ್ತು ಅಧ್ಯಯನಕ್ಕೆ ಬ್ರಹ್ಮಗಿರಿ ಉತ್ಖನನ ಒಂದು ಮಾದರಿಯಾಯಿತು.

ವೀಲರ್ ಏಪ್ರಿಲ್ 1948ರಲ್ಲಿ ಎನ್.ಪಿ.ಚಕ್ರವರ್ತಿಗೆ ಅಧಿಕಾರವನ್ನು ಹಸ್ತಾಂತರಿಸಿದ. ಈತನ ಕಾಲದಲ್ಲಿ ನವದೆಹಲಿಯಲ್ಲಿ ದೊಡ್ಡಪ್ರಮಾಣದಲ್ಲಿ ಭಾರತೀಯ ಕಲಾವಸ್ತುಗಳ ಕುರಿತು ಪ್ರದರ್ಶನ ನಡೆಯಿತು. ರಾಯಲ್ ಅಕಾಡೆಮಿಯ ಮುಂದಾಳತ್ವದಲ್ಲಿ, 1948ರಲ್ಲಿ ಲಂಡನ್‌ನಲ್ಲಿ ಈ ವಸ್ತು ಪ್ರದರ್ಶನವನ್ನು ನಡೆಸಿದ. ಡಿಸೆಂಬರ್‌ನಲ್ಲಿ ಎಫ್.ಇ.ಝ್ಯಾಯ್‌ನರ್ ಭಾರತಕ್ಕೆ ಭೇಟಿ ನೀಡಿದ. ಚಕ್ರವರ್ತಿ ಜೂನ್ 1950ರಲ್ಲಿ ನಿವೃತ್ತರಾದ ಅನಂತರ, ಮಹಾ ನಿರ್ದೇಶಕರಾಗಿ ಮಾಧವ ಸ್ವರೂಪ ವತ್ಸರವರು ರಾಷ್ಟ್ರೀಯ ಸ್ಮಾರಕಗಳ ಸಂರಕ್ಷಣೆಯ ಕುರಿತು ವಿವರವಾದ ಟಿಪ್ಪಣಿಯೊಂದನ್ನು ತಯಾರಿಸಿದರು. 1951ರಲ್ಲಿ ಸರ್ಕಾರ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ತ್ವ ನಿವೇಶನಗಳ ಕಾಯ್ದೆಯನ್ನು ಜಾರಿಗೆ ತಂದಿತು. 1953ರಲ್ಲಿ ಎ. ಘೋಷ್ ಭಾರತೀಯ ಪುರಾತತ್ತ್ವ ಸರ್ವೇಕ್ಷಣೆಯ ಅಧಿಕಾರವನ್ನು ವಹಿಸಿಕೊಂಡರು. ಈ ಅವಧಿಯಲ್ಲಿ ಭಾರತದಲ್ಲಿ ಸಿಂಧೂ–ಸರಸ್ವತಿ ನಾಗರಿಕತೆಗೆ ಸಂಬಂಧಿಸಿದ ನೆಲೆಗಳಿಗೇ ಪೂರ್ತಿಯಾಗಿ ಗಮನ ಹರಿಸಲಾಯಿತು. ರಾಜಸ್ತಾನ, ಪಂಜಾಬ್, ಗುಜರಾತ್ ರಾಜ್ಯಗಳಲ್ಲಿ ಅನ್ವೇಷಣೆ ಈ ದೃಷ್ಟಿಯಿಂದ ಕೈಗೊಂಡು ರಾಜಸ್ತಾನದ ಕಾಲಿಬಂಗನ್, ಪಂಜಾಬ್‌ನ ರೋಪರ್, ಗುಜರಾತ್‌ನ ಲೋಥಲ್ ಮುಂತಾದ ನೆಲೆಗಳನ್ನು ಗುರುತಿಸಲಾಯಿತು. ಈ ಇಲಾಖೆಯ ಬಿ.ಬಿ.ಲಾಲ್ ಹಸ್ತಿನಾಪುರ ನೆಲೆಯಲ್ಲಿ ಉತ್ಖನನ ಮಾಡಿದರು. ಪುರಾತತ್ತ್ವ ನೆಲೆಗಳ ಮಹತ್ತ್ವವನ್ನು ಬೆಳಕಿಗೆ ತರಲು ಭಾರತದ ಹಲವಾರು ಭಾಗಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ಸರ್ವೇಕ್ಷಣೆ ಮಾಡಲು ಇವರು ಪ್ರೋತ್ಸಾಹಿಸಿದರು.

1958ರಲ್ಲಿ ಸರ್ಕಾರ ಪುರಾತತ್ತ್ವ ಸಂಪತ್ತನ್ನು ಸಂರಕ್ಷಿಸಲು ಪ್ರಾಚೀನ ಸ್ಮಾರಕ ಪುರಾತತ್ತ್ವ ನಿವೇಶನಗಳ ಕಾಯ್ದೆಯನ್ನು ಜಾರಿಗೆ ತಂದಿತು. 1960–70ರ ದಶಕದ ಸರ್ವೇಕ್ಷಣ ಇಲಾಖೆಯ ಮಹತ್ವದ ಹಂತ. ಈ ಅವಧಿಯಲ್ಲಿ ಹಲವಾರು ಪ್ರಮುಖ ನೆಲೆಗಳು ಉತ್ಖನನಕ್ಕೊಳಗಾದವು. ಕಲಾವಸ್ತು, ಪ್ರಾಚ್ಯವಸ್ತುಗಳು ಮತ್ತು ಮೂರ್ತಿಶಿಲ್ಪಗಳು ಭಾರತದ ಹೊರಗಡೆ ಹೋಗಬಾರದೆಂಬ ನಿಟ್ಟಿನಲ್ಲಿ ಕಾನೂನಿನ್ವಯ ಸರ್ಕಾರ ಪ್ರಾಚ್ಯವಸ್ತು ಕಲಾನಿಧಿಯ ಕಾಯ್ದೆಯನ್ನು 1972ರಲ್ಲಿ ಜಾರಿಗೆ ತಂದಿತು.

1957ರಿಂದ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕೆಲವು ಮಹತ್ತ್ವ ಯೋಜನೆಗಳನ್ನು ಹಾಕಿಕೊಂಡಿದೆ. ಒಂದನೆಯದಾಗಿ ದೇಶದ ಪ್ರತಿಯೊಂದು ಹಳ್ಳಿಯಲ್ಲಿ ಪ್ರಾಗಿತಿಹಾಸ ಕಾಲದಿಂದ 1900 ವರೆಗಿನ ಎಲ್ಲ ಪ್ರಕಾರದ ಪ್ರಾಚ್ಯಾವಶೇಷ ಹಾಗೂ ಸ್ಮಾರಕಗಳನ್ನು ಶೋಧಿಸಿ ರೇಖಾ–ಛಾಯಾ ಚಿತ್ರಗಳನ್ನು ಮಾಡಿ, ವ್ಯವಸ್ಥಿತ ವೈಜ್ಞಾನಿಕ ಟಿಪ್ಪಣಿಗಳ ಸಹಿತ ಪೂರ್ಣದಾಖಲೆ ಮಾಡಿಕೊಳ್ಳುವುದು ಮತ್ತು ಆಯಾಯ ಪ್ರದೇಶಗಳಲ್ಲಿಯ ಪುರಾತತ್ತ್ವ ಸಮಸ್ಯೆಗಳಿಗನುಗುಣವಾಗಿ ಲಂಬ ಹಾಗೂ ವಿಸ್ತೃತ ಉತ್ಖನನ ಮಾಡಿ ಕ್ರಮಬದ್ಧ ವರದಿಗಳನ್ನು ಸಿದ್ಧ ಮಾಡುವುದು. ಎರಡನೆಯದಾಗಿ, ನಶಿಸಿಹೋಗಬಹುದಾದ ಪುರಾತತ್ತ್ವ ಪುರಾವೆಗಳನ್ನು (ಉದಾ: ಪ್ರಾಗಿತಿಹಾಸ ಕಾಲದ ಗವಿಚಿತ್ರಗಳು, ಅಜಂತ ವರ್ಣಚಿತ್ರಗಳು ಆಧುನಿಕ ಪ್ರಗತಿಪರ ಯೋಜನೆಗಳ ಅನುಷ್ಠಾನದಲ್ಲಿ ಅಜ್ಞಾನವಶಾತ್ ಹಾಳಾಗುವಂತವು ಇತ್ಯಾದಿ) ವಸ್ತುನಿಷ್ಠವಾಗಿ ವಿವರವಾಗಿ ದಾಖಲಿಸುವುದು. ಮೂರನೆಯದಾಗಿ, ನಮ್ಮ ದೇಶದಿಂದ ಯಾವುದೇ ಮೌಲಿಕ ಪ್ರಾಚ್ಯಾವಶೇಷಗಳ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟುವುದು. ಇವುಗಳನ್ನು 1957ರಿಂದಲೇ ಕಾರ್ಯರೂಪಕ್ಕೆ ತರಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪುರಾತತ್ತ್ವ ಇಲಾಖೆಗಳಲ್ಲಿ ಹಳ್ಳಿ–ಹಳ್ಳಿಯಲ್ಲಿಯ ಪುರಾತತ್ತ್ವ ಅವಶೇಷಗಳ ಶೋಧನೆಗೆ (ವಿಲೇಜ್ ಟು ವಿಲೇಜ್ ಸರ್ವೆ) ತರಬೇತಿಯನ್ನು ಪಡೆದ ಯೋಗ್ಯ ಯುವಕರು ಅಸಿಸ್ಟೆಂಟ್ ಆರ್ಕಿಯಾಲಜಿಸ್ಟ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಕೆಲವು ವಿಶ್ವವಿದ್ಯಾಲಯಗಳ ಪುರಾತತ್ತ್ವ/ಇತಿಹಾಸ ವಿಭಾಗಗಳು, ಸಂಶೋಧನ ಸಂಸ್ಥೆಗಳ ತಮ್ಮ ತಮ್ಮ ವಿದ್ಯಾರ್ಥಿಗಳಿಗೆ ಎಂ.ಫಿಲ್, ಪಿಎಚ್‌ಡಿ. ಸಂಶೋಧನೆಗಳಿಗೆ ಇಂಥ ಕ್ಷೇತ್ರ ಕಾರ್ಯವನ್ನೇ ಕೊಡುತ್ತಿವೆ. ಇದರಿಂದ ದೊಡ್ಡ ಪ್ರಮಾಣದಲ್ಲಿಯೆ ಪ್ರತಿವರ್ಷವೂ ಇತಿಹಾಸದಲ್ಲಿ, ಸಂಸ್ಕೃತಿ ಅಧ್ಯಯನದಲ್ಲಿರುವ ಪ್ರಚಲಿತ ಅನಿಸಿಕೆಗಳು, ಸಿದ್ಧಾಂತ, ಅಭಿಪ್ರಾಯ ಗಳನ್ನು ತೀವ್ರವಾಗಿ ಪುನರ್ವಿಮರ್ಶೆ ಮಾಡಬೇಕಾಗುವಂಥ ಶೋಧನೆಗಳು ಆಗುತ್ತಿವೆ. ನಮ್ಮ ದೇಶದ ವಿಸ್ತಾರ, ಹತ್ತಾರು ಸಾವಿರ ವರ್ಷಗಳ ನಿರಂತರ ಇತಿಹಾಸ ಮತ್ತು ಸಾಂಸ್ಕೃತಿಕ ಸಂಪತ್ತನ್ನು ನೆನೆಸಿಕೊಂಡರೆ ಇದು ಕಡಿಮೆಯೆ.

ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಎರಡು ಮುಖ್ಯ ಕ್ರಮಗಳನ್ನು ತೆಗೆದುಕೊಂಡಿದೆ. ಪುರಾತತ್ತ್ವ ಇಲ್ಲವೆ ಪುರಾತತ್ತ್ವ ತರಹದ ಸಾಮಾನುಗಳನ್ನು ಬೇರೆ ದೇಶಗಳಿಗೆ ಕಳುಹಿಸುವುದಾದರೆ ಅವನ್ನು ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಧಿಕೃತ ತಜ್ಞರ ಸಮಿತಿಯ (ಅಡ್ವೈಸರಿ ಕಮಿಟಿ ಫಾರ್ ಎಕ್ಸ್‌ಪೋರ್ಟ್ ಆಫ್ ನಾನ್–ಆಂಟಿಕ್ವಿಟೀಸ್) ಮುಂದೆ ಅದನ್ನು ಪರಿಶೀಲನೆಗೆ ತರುವುದು. ಸಮಿತಿ ಪುರಾತತ್ತ್ವ ಮಹತ್ತ್ವವಿಲ್ಲವೆಂದು

ಅಧಿಕೃತವಾಗಿ ತಿಳಿಸಿದುದನ್ನು ಪರದೇಶಗಳಿಗೆ ಕಳುಹಿಸಬಹುದು, ಮಾರಬಹುದು. ಎರಡನೆಯ ಕ್ರಮವನ್ನು ರಾಜ್ಯಸರ್ಕಾರಗಳಿಗೆ ವಹಿಸಿದೆ. ರಾಜ್ಯ ಸರ್ಕಾರದ ಪುರಾತತ್ತ್ವ ಇಲಾಖೆಯಲ್ಲಿ ಪುರಾತತ್ತ್ವ ಅವಶೇಷಗಳ ನೋಂದಣಿ (ಆಫೀಸ್ ಆಫ್ ದಿ ರಿಜಿಸ್ಟರಿಂಗ್ ಆಫೀಸರ್) ಕಛೇರಿಯೊಂದಿದೆ. ಭಾರತದಲ್ಲಿ ಯಾರೇ ಪುರಾತತ್ತ್ವ ಸಾಮಾನುಗಳನ್ನು ತಮ್ಮಲ್ಲಿಯೆ ಇಟ್ಟುಕೊಳ್ಳುವುದಾದರೆ, ಅವರ ಸ್ವಂತದ್ದೆ ಆಗಿದ್ದರೂ ಕೂಡ, ಈ ಕಛೇರಿಯಲ್ಲಿ ಅವೆಲ್ಲವನ್ನೂ ಕ್ರಮಬದ್ಧವಾಗಿ ನೋಂದಣಿ ಮಾಡಿಸಲೇಬೇಕು. ಇಲ್ಲದಿದ್ದಲ್ಲಿ ಹೀಗಿಟ್ಟುಕೊಳ್ಳುವುದು ಕಾನೂನು ಬಾಹಿರವಾಗಿ ಅಂಥ ವ್ಯಕ್ತಿಯೂ ಶಿಕ್ಷಾರ್ಹ.

ಪುರಾತತ್ತ್ವ ಕ್ಷೇತ್ರದಲ್ಲಿ ವಸ್ತುನಿಷ್ಠ ಅಧ್ಯಯನಕೋಸ್ಕರ ಸರಿ ಹೊಂದುವ ಇತರ ವಿಜ್ಞಾನಗಳ ತಂತ್ರ ಮತ್ತು ಮಾದರಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದಕ್ಕೋಸ್ಕರ ಪ್ರತ್ಯೇಕ ಪ್ರಯೋಗ ಶಾಲೆಗಳನ್ನು ಸ್ಥಾಪಿಸಲಾಗಿದೆ/ಲಾಗುತ್ತಿದೆ. ಕೇಂದ್ರ ಹಾಗೂ ಕೆಲವು ರಾಜ್ಯ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಗಳಲ್ಲಿ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಕೆಮಿಕಲ್ ಬ್ರ್ಯಾಂಚ್ (ರಸಾಯನ ಶಾಸ್ತ್ರವಿಭಾಗ), ಪೇಲಿಯೋ ಬಾಟನಿ, ಪೇಲಿಯೋ ಝೂವಾಲಜಿ, ಆಂಥ್ರೊಪಾಲಜಿ, ಮರೀನ್ ಆರ್ಕಿಯಾಲಜಿ ಮೊದಲಾದ ವಿಭಾಗಗಳನ್ನು ಬೆಳೆಸಲಾಗಿದೆ. ಅಧ್ಯಯನ ಕ್ಷೇತ್ರದಲ್ಲಿ ಕೂಡ ಹೊಸ ಹೊಸ ಆಯಾಮಗಳನ್ನು ತರಲಾಗುತ್ತಿದೆ. ಸ್ಮಾರಕ ಸಂರಕ್ಷಣೆಯಲ್ಲಿಯೂ ಮೂಲಸ್ವರೂಪಕ್ಕೆ ಸ್ವಲ್ಪವೂ ಧಕ್ಕೆಯಾಗದಂತೆ ಸ್ಮಾರಕಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಉದಾ: ಹಂಪಿ, ಬಾದಾಮಿ-ಐಹೊಳೆ-ಪಟ್ಟದಕಲ್ಲು. ಇದು ನಮ್ಮ ದೇಶಕ್ಕೆ ಲಾಭದಾಯಕವೂ ಆಗಿದೆ. (ಎಸ್.ಕೆ.)

**ಪುರಾತತ್ತ್ವ ಅಧ್ಯಯನ ವಿಧಾನ:** ಗತ ಸಂಸ್ಕೃತಿಗಳ ಪುನಾರಚನೆ ಪುರಾತತ್ತ್ವ ಶಾಸ್ತ್ರಜ್ಞನ ಗುರಿಯಾಗಿದ್ದು ಅದು ಪ್ರಾಚ್ಯವಸ್ತು ಹಾಗೂ ಪುರಾತತ್ತ್ವ ಅವಶೇಷಗಳ ಅಧ್ಯಯನ ವನ್ನು ಅವಲಂಬಿಸಿದೆ. ಇಂಥ ಅವಶೇಷಗಳುಳ್ಳ ನೆಲೆಗಳನ್ನು ಶೋಧಿಸುವುದು ಅವುಗಳ ಅಧ್ಯಯನದಷ್ಟೇ ಮಹತ್ತ್ವದ್ದಾಗಿದೆ. ಕ್ಷೇತ್ರಕಾರ್ಯದಲ್ಲಿ ಮುಖ್ಯವಾಗಿ ಎರಡು ಬಗೆಯ ತಂತ್ರಗಳನ್ನು ಬಳಸಲಾಗುತ್ತದೆ: ಅನ್ವೇಷಣೆ ಹಾಗೂ ಉತ್ಖನನ.

ಅನ್ವೇಷಣೆ: ಪ್ರಾಚ್ಯವಸ್ತುಗಳು ಮತ್ತು ಪುರಾತತ್ತ್ವ ನೆಲೆಗಳು ಅನೇಕ ಸಲ ಆಕಸ್ಮಿಕವಾಗಿ ಕಂಡುಹಿಡಿಯಲ್ಪಟ್ಟಿದ್ದುಂಟು. ಕಾಲುವೆಗಾಗಿ ನೆಲ ತೋಡುವಾಗ, ಹೊಲ ಉಳುವಾಗ, ರಸ್ತೆ ನಿರ್ಮಿಸುವಾಗ, ಕಟ್ಟಡಗಳಿಗೆ ತಳಪಾಯತೋಡುವಾಗ ಅನಿರೀಕ್ಷಿತವಾಗಿ ಪ್ರಾಚ್ಯವಸ್ತುಗಳು, ಪ್ರಾಚೀನ ನೆಲೆಗಳು ಕಣ್ಣಿಗೆ ಬೀಳುವುದು ಸಾಮಾನ್ಯ. ಹೊಲ ಉಳುವಾಗ ದಕ್ಷಿಣ ಭಾರತದಲ್ಲಿ ಅನೇಕ ಕಡೆ ರೋಮನ್ ನಾಣ್ಯ ನಿಧಿಗಳು ದೊರೆತಿವೆ. ಉತ್ತರ ಭಾರತದಲ್ಲಿ ಕೆಲವೆಡೆಗಳಲ್ಲಿ ಕಾಲುವೆ ತೋಡುವಾಗ ತಾಮ್ರೋಪಕರಣ ಗುಡ್ಡೆ ಎಂದು ಕರೆಯಲಾಗುವ ತಾಮ್ರದ ಉಪಕರಣಗಳ ಸಂಗ್ರಹಗಳು ದೊರೆತಿವೆ. ಪ್ರಪಂಚಪ್ರಸಿದ್ಧವಾದ ಹರಪ್ಪ ನೆಲೆ ಬೆಳಕಿಗೆ ಬಂದುದು ಹೀಗೆಯೇ. ಯುರೋಪಿನಲ್ಲಿ ಇಂಗ್ಲೆಂಡಿನಿಂದ ಪೋಲೆಂಡ ದವರೆಗಿನ ಪ್ರದೇಶದಲ್ಲಿ ಅನೇಕ ಮಧ್ಯ ಹಳೆಶಿಲಾಯುಗದ ನೆಲೆಗಳು ಶೋಧವಾದದ್ದು ಬಲವಾಗಿ ಗಾಳಿ ಬೀಸುತ್ತಿದ್ದುದರಿಂದ.

ಅನ್ವೇಷಣೆಯ ಉದ್ದೇಶಗಳು: ಒಂದು ಪ್ರದೇಶದಲ್ಲಿ ಪುರಾತತ್ತ್ವ ನೆಲೆಗಳನ್ನು ಶೋಧಿಸು ವುದಕ್ಕಾಗಿ ಉದ್ದೇಶಪೂರ್ವಕವಾಗಿ ವ್ಯವಸ್ಥಿತ ಸರ್ವೇಕ್ಷಣ ಕಾರ್ಯವನ್ನು ಕೈಗೊಳ್ಳುವುದು ಅಗತ್ಯ. ಉತ್ಖನನ ಮಾಡದೆ ಕೇವಲ ಮೇಲ್ಮೈ ಲಕ್ಷಣಗಳ ಆಧಾರದ ಮೇಲೆಯೇ ವ್ಯವಸ್ಥಿತವಾಗಿ ನೆಲೆಗಳನ್ನು ಶೋಧಿಸಿ, ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿ, ದಾಖಲು ಮಾಡಿ ಅವುಗಳ ಅಧ್ಯಯನಕ್ಕೆ ಅನುವು ಮಾಡಿಕೊಡಲಾಗುವುದು. ಅನ್ವೇಷಣೆಯಿಂದ ಆಯಾ ಪ್ರದೇಶಗಳಲ್ಲಿ ಇದ್ದಿರಬಹುದಾದ ಸಂಸ್ಕೃತಿಗಳ ಬಗ್ಗೆ ಕುರುಹುಗಳು ದೊರೆಯುತ್ತವೆ. ವಿವಿಧ ನೆಲೆಗಳ ಮೇಲ್ಮೈ ಲಕ್ಷಣಗಳ ಪರೀಕ್ಷೆಯಿಂದ ಉತ್ಖನನಕ್ಕೆ ಯೋಗ್ಯವಾದ ನಿವೇಶನವನ್ನು ನಿರ್ಧರಿಸು ವುದರಲ್ಲಿ ಅನ್ವೇಷಣೆ ಪ್ರಮುಖ ಪಾತ್ರ ವಹಿಸುತ್ತದೆ.

ಅನ್ವೇಷಣೆಯ ಬಗೆಗಳು:

1. ಸಾಮಾನ್ಯ ಸರ್ವೇಕ್ಷಣೆ: ಯಾವುದಾದರೊಂದು ಪ್ರದೇಶದ ಎಲ್ಲ ಕಾಲಗಳ ಅವಶೇಷಗಳನ್ನು ಅರಿತುಕೊಳ್ಳುವುದಕ್ಕಾಗಿ ಕೈಗೊಳ್ಳುವ ಕ್ಷೇತ್ರಾನ್ವೇಷಣೆ ಸಾಮಾನ್ಯ ಸರ್ವೇಕ್ಷಣ. ಶಿಲಾಯುಗದ ನೆಲೆ, ವಸತಿ ದಿಬ್ಬ, ಸಮಾಧಿ ನೆಲೆ, ಕೋಟೆ, ದೇಗುಲ, ಶಿಲ್ಪ, ನಾಣ್ಯ, ಶಾಸನ ಮುಂತಾದ ಎಲ್ಲ ಬಗೆಯ ಪ್ರಾಚ್ಯವಸ್ತುಗಳನ್ನು ವ್ಯವಸ್ಥಿತವಾಗಿ ದಾಖಲು ಮಾಡಿಕೊಳ್ಳ ಲಾಗುತ್ತದೆ. ಕಲ್ಲಿನ ಉಪಕರಣಗಳು, ಮಣಿಗಳು, ಮುದ್ರೆಗಳು, ಮಡಕೆ ಚೂರುಗಳು ಮುಂತಾದ ಚಿಕ್ಕ ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಲಾಗುತ್ತದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಹಾಗೂ ರಾಜ್ಯ ಪುರಾತತ್ತ್ವ ಇಲಾಖೆಗಳು ನಿರ್ದಿಷ್ಟ ಪ್ರದೇಶಗಳ ಪ್ರತಿಯೊಂದು ಹಳ್ಳಿಯಲ್ಲಿಯ ಪ್ರಾಚ್ಯ ಅವಶೇಷಗಳನ್ನು ದಾಖಲು ಮಾಡಿಕೊಳ್ಳುವ ಕಾರ್ಯಕ್ರಮವನ್ನಿಟ್ಟುಕೊಂಡು ಕಾರ್ಯಪ್ರವೃತ್ತವಾಗಿವೆ.

2. ಸಮಸ್ಯೆ-ಆಧಾರಿತ ಸರ್ವೇಕ್ಷಣೆ (ಪ್ರಾಬ್ಲಮ್-ಓರಿಯೆಂಟೆಡ್ ಎಕ್ಸ್‌ಪ್ಲೊರೇಷನ್): ಯಾವುದಾದರೊಂದು ನಿರ್ದಿಷ್ಟ ಸಮಸ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅದನ್ನು ಬಗೆಹರಿಸು ವುದಕ್ಕಾಗಿ ನಡೆಸುವ ಸರ್ವೇಕ್ಷಣೆ. ವಿ.ಡಿ.ಕೃಷ್ಣಸ್ವಾಮಿಯವರು ದಕ್ಷಿಣ ಭಾರತದಲ್ಲಿ ಕೈಗೊಂಡ ಬೃಹತ್ ಶಿಲಾಸಮಾಧಿಗಳ ಸರ್ವೇಕ್ಷಣೆ ಇದಕ್ಕೊಂದು ಉತ್ತಮ ಉದಾಹರಣೆ. ಬೃಹತ್ ಶಿಲಾಸಮಾಧಿಗಳ ಅಧ್ಯಯನ ಮತ್ತು ವರ್ಗೀಕರಣ ಇವರ ಮುಖ್ಯ ಉದ್ದೇಶವಾಗಿತ್ತು. ಅ.ಸುಂದರ ಅವರು ಉತ್ತರ ಕರ್ನಾಟಕದಲ್ಲಿ ನಡೆಸಿದ ಸರ್ವೇಕ್ಷಣದಲ್ಲಿಯೂ ಬೃಹತ್ ಶಿಲಾಸಮಾಧಿಗಳ ವರ್ಗೀಕರಣ, ಕಾಲಾನುಪೂರ್ವಿ ಮುಂತಾದ ಉದ್ದೇಶಗಳನ್ನಿಟ್ಟು ಕೊಳ್ಳಲಾಗಿತ್ತು. ಇದರಿಂದ ಅನೇಕ ಹೊಸ ಮಾದರಿಯ ಬೃಹತ್ ಶಿಲಾಸಮಾಧಿಗಳು ಗುರುತಿಸಲ್ಪಟ್ಟವು.

**ಸರ್ವೇಕ್ಷಣ ವಿಧಾನಗಳು:** ಶಿಲಾಯುಗ ಕಾಲದ ನೆಲೆಗಳ ಅನ್ವೇಷಣೆಯಲ್ಲಿ ಅನ್ವೇಷಕ ಮುಖ್ಯವಾಗಿ ಭೂವೈಜ್ಞಾನಿಕ ದೃಷ್ಟಿಯಿಂದ ನದಿಯಲ್ಲಿ ಸಂಚಯನಗೊಂಡ ಸ್ತರ, ಶಿಲೆ ಮತ್ತು ಮಣ್ಣಿನ ಸ್ವರೂಪ, ಪಳೆಯುಳಿಕೆ, ಕಲ್ಲಿನ ಉಪಕರಣ ಮುಂತಾದವುಗಳನ್ನು ಗಮನಿಸಿ ಅಧ್ಯಯನ ಮಾಡಬೇಕಾಗುತ್ತದೆ. ಅನ್ವೇಷಣೆ ನಡೆಸುತ್ತಿರುವ ಪ್ರದೇಶದ ಭೂವಿಜ್ಞಾನದ ಸ್ಪಷ್ಟ ಪರಿಕಲ್ಪನೆಯಿರಬೇಕಾಗುತ್ತದೆ. ಕೆಲವೆಡೆಗಳಲ್ಲಿ ದನಕಾಯುವವರು, ಬೇಟೆಗಾರರು ಬೆಟ್ಟಗಳಲ್ಲಿಯ ಗವಿ ಮುಂತಾದವುಗಳನ್ನು ಕಂಡುಹಿಡಿಯುವದಕ್ಕೆ ಸಹಾಯಕರಾಗುತ್ತಾರೆ. ಇಂಥ ಗವಿ ಮುಂತಾದವುಗಳನ್ನು ಸಂದರ್ಶಿಸಿ ಅವುಗಳಲ್ಲಿ ಬಂಡೆಚಿತ್ರ, ಕಲ್ಲಿನ ಉಪಕರಣ ಇತ್ಯಾದಿಗಳು ದೊರಕುತ್ತವೆಯೋ ಎಂದು ಕಂಡುಕೊಳ್ಳಬೇಕು. ಇತಿಹಾಸ ಕಾಲದ ನೆಲೆಗಳನ್ನು ಗುರುತಿಸುವುದಕ್ಕೆ ಹಾಗೂ ವಿವರಗಳನ್ನು ದಾಖಲು ಮಾಡಿಕೊಳ್ಳಲಿಕ್ಕೆ ಸಾಹಿತ್ಯ, ಶಾಸನ ಮತ್ತು ಸಾಂಪ್ರದಾಯಿಕ ಸಾಮಗ್ರಿಗಳೂ ಉಪಯೋಗವಾಗುತ್ತವೆ. ಆ ಪ್ರದೇಶದ ಐತಿಹಾಸಿಕ ವಿವರ ಮುಂತಾದವುಗಳನ್ನೂ ಮುಂಚಿತವಾಗಿ ಅರಿತುಕೊಂಡು ಸರ್ವೇಕ್ಷಣ ಕಾರ್ಯ ನಡೆಸಬೇಕಾಗುತ್ತದೆ.

ಪುರಾತತ್ತ್ವ ಸರ್ವೇಕ್ಷಣ ಕಾರ್ಯದಲ್ಲಿ ನೆರವಾಗುವ ವಿಷಯಗಳು ಹೀಗಿವೆ:

1. ನಕಾಶೆಗಳ ಅಧ್ಯಯನ: ಪುರಾತತ್ತ್ವ ಅನ್ವೇಷಣೆಯಲ್ಲಿ ಉಪಯುಕ್ತವಾಗುವ ನಕಾಶೆಗಳೆಂದರೆ ಭಾರತೀಯ ಸರ್ವೇಕ್ಷಣ ಇಲಾಖೆಯ 1 ಇಂಚು=4 ಮೈಲು ಸ್ಕೇಲನ್ನು ಅಳವಡಿಸಿರುವ ಟೋಪೋ ಶೀಟುಗಳು. ಟೋಪೋ ಶೀಟುಗಳಲ್ಲಿ ಪಟ್ಟಣಗಳು, ಗ್ರಾಮಗಳು, ಕೊಪ್ಪಲುಗಳು, ಹೆದ್ದಾರಿಗಳು, ಚಿಕ್ಕ ರಸ್ತೆಗಳು, ಬಂಡಿದಾರಿಗಳು, ರೈಲುದಾರಿಗಳು ಹಾಗೂ ನಿಲ್ದಾಣಗಳು ಇತ್ಯಾದಿ ವಿಷಯಗಳು ಸೂಚಿಸಲ್ಪಟ್ಟಿರುತ್ತವೆ. ಶತಮಾನಗಳಷ್ಟು ಹಳೆಯ ನಕಾಶೆಗಳಲ್ಲಿ ಇಂದಿನ ನಕಾಶೆಗಳಲ್ಲಿ ಕಾಣಿಸಲಾಗಿರದ ಕೆಲವು ಲಕ್ಷಣಗಳನ್ನು ತೋರಿಸಿರುವ ಸಾಧ್ಯತೆಯಿರುತ್ತದೆ. ದಕ್ಷಿಣ ಭಾರತದ ಹಳೆಯ ನಕಾಶೆಗಳಲ್ಲಿ ಕೆಲವು ಸ್ಥಳಗಳಲ್ಲಿ ಪುರಾತತ್ತ್ವ ಪೊರೊಂಬೋಕು ಎಂದು ಗುರುತಿಸಲಾಗಿದ್ದು ಇವು ಬೃಹತ್ ಶಿಲಾಸಮಾಧಿಗಳಿದ್ದ ಸ್ಥಳಗಳನ್ನು ಸೂಚಿಸುತ್ತವೆ. ಆದರೆ ಹೊಸ ನಕಾಶೆಗಳಲ್ಲಿ ಈ ಸ್ಥಳಗಳನ್ನು ಸಾಗುವಳಿ ಭೂಮಿಗಳೆಂದು ದಾಖಲು ಮಾಡಿರುವುದರಿಂದ ಅಲ್ಲಿದ್ದ ಪ್ರಾಚೀನ ನೆಲೆಗಳು ಸಾಗುವಳಿಯಿಂದಾಗಿ ನಾಶವಾಗಿವೆಯೆಂದು ಗೊತ್ತಾಗುತ್ತದೆ.

2. ಭೂಮಿಯ ಮೇಲ್ಮೈಲಕ್ಷಣಗಳು: ಸಾಮಾನ್ಯ ನಕಾಶೆಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ದೊರೆಯುವ ಶಿಲೆ, ಖನಿಜ, ಮಣ್ಣು, ಪ್ರಾಣಿ ಮತ್ತು ಸಸ್ಯಗಳ ವಿವರಗಳನ್ನು ಸೂಚಿಸಲಾಗಿರುವುದಿಲ್ಲ. ಭೂವೈಜ್ಞಾನಿಕ ನಕಾಶೆಗಳು, ವರದಿಗಳು ಇಂಥ ವಿವರಗಳನ್ನು ಒಳಗೊಂಡಿರುತ್ತವೆ. ಜಿಲ್ಲಾ ಗೆಜೆಟಿಯರ್, ಇಂಪೀರಿಯಲ್ ಗೆಜೆಟಿಯರ್ ಮುಂತಾದವು ಇಂಥ ವಿವರಗಳಿಗೆ ಉತ್ತಮ ಆಕರ ಗ್ರಂಥಗಳಾಗಿವೆ.

(ಅ) ಕಣಿವೆ ಮಾರ್ಗಗಳು: ಜನಸಂಚಾರಕ್ಕೂ, ವಿಚಾರಗಳ ಪ್ರಸರಣಕ್ಕೂ ಪ್ರಾಚೀನ ಕಾಲದಲ್ಲಿ ಕಣಿವೆ ಮಾರ್ಗಗಳು ವಹಿಸುತ್ತಿದ್ದ ಪಾತ್ರ ಪ್ರಮುಖವಾಗಿತ್ತು. ಗ್ರೀಕ್, ಪರ್ಷಿಯನ್, ಸಿಥಿಯನ್, ಕುಷಾಣ, ಹೂಣ, ಟರ್ಕ್, ಮಂಗೋಲ ಮುಂತಾದ ವಿದೇಶೀಯರು ಭಾರತವನ್ನು ಪ್ರವೇಶಿಸಲು ವಾಯವ್ಯ ದಿಕ್ಕಿನಲ್ಲಿದ್ದ ಬೋಲನ್ ಮತ್ತು ಖೈಬರ್ ಕಣಿವೆ ಮಾರ್ಗಗಳು ಹಾದಿಯೊದಗಿಸಿದ್ದವು. ಪಶ್ಚಿಮ ಘಟ್ಟದಲ್ಲಿದ್ದ ಪಾಲ್ಘಾಟ್ ಕಣಿವೆ ಮಾರ್ಗ ಕೇರಳ ಮತ್ತು ತಮಿಳುನಾಡು ನಡುವಿನ ಸಾಂಸ್ಕೃತಿಕ ಸಂಪರ್ಕಕ್ಕೆ ಮಹತ್ವದ್ದಾಗಿತ್ತು. ಕಣಿವೆ ಮಾರ್ಗಗಳ ಜ್ಞಾನದಿಂದ ಪ್ರಾಚೀನ ಸಂಚಾರ ಮತ್ತು ಸಾಂಸ್ಕೃತಿಕ ಸಂಪರ್ಕ ಪಥಗಳನ್ನು ಗುರುತಿಸುವುದು ಸುಲಭವಾಗುತ್ತದೆ.

(ಆ) ನದಿಗಳು: ಇತಿಹಾಸಪೂರ್ವ ಕಾಲದ ನೆಲೆಗಳು ಭಾರತದ ಎಲ್ಲ ಮುಖ್ಯ ನದಿಗಳ ದಡದಲ್ಲಿ ಕಂಡುಬಂದಿವೆ. ಸಿಂಧೂ ನಾಗರಿಕತೆಯ ಬೆಳವಣಿಗೆಯಲ್ಲಿ ನದಿಗಳು ಮಹತ್ವದ ಪಾತ್ರವಹಿಸಿದ್ದವು. ಪ್ರ.ಶ.ಪೂ. 1ನೆಯ ಸಹಸ್ರಮಾನದಲ್ಲಿ ಗಂಗಾ ನದಿಯ ಬಯಲಿನಲ್ಲಿದ್ದ ಹಸ್ತಿನಾಪುರ, ಕೌಶಾಂಬಿ, ಅಹಿಚ್ಛತ್ರ ಮುಂತಾದೆಡೆಗಳಲ್ಲಿ ದೊಡ್ಡ ದೊಡ್ಡ ಪ್ರಾಚೀನ ವಸತಿಯನ್ನು ಸೂಚಿಸುವ ದಿಬ್ಬಗಳು ಕಂಡುಬಂದಿವೆ. ಶಿಪ್ರಾ ನದಿಯ ತೀರದಲ್ಲಿ ಉಜ್ಜಯಿನಿ (ಗುಪ್ತರ ರಾಜಧಾನಿ), ಕೃಷ್ಣಾ ನದಿಯ ತೀರದಲ್ಲಿ ಧಾನ್ಯಕಟಕ (ಅಮರಾವತಿ) ಹಾಗೂ ವಿಜಯಪುರಿ (ನಾಗಾರ್ಜುನಕೊಂಡ, ಇಕ್ಷ್ವಾಕು ಮನೆತನದ ರಾಜಧಾನಿ), ಮಲಪ್ರಭಾನದಿಯ ತೀರದಲ್ಲಿ ಪಟ್ಟದಕಲ್ಲು ಹಾಗೂ ಐಹೊಳೆ (ಬಾದಾಮಿ ಚಳುಕ್ಯರ ಕಾಲದ ಮಹತ್ವದ ಸ್ಥಳಗಳು), ತುಂಗಭದ್ರಾ ನದಿಯ ತೀರದ ಹಂಪೆ (ವಿಜಯನಗರ ಅರಸರ ರಾಜಧಾನಿ), ಕಾವೇರಿಯ ತೀರದ ತಲಕಾಡು (ಗಂಗರ ರಾಜಧಾನಿ), ಉರೈಯೂರು (ಚೋಳರ ರಾಜಧಾನಿ), ವೈಗೈ ನದಿಯ ತೀರದ ಮದುರೆ (ಪಾಂಡ್ಯರ ರಾಜಧಾನಿ), ಮುಂತಾದವು ನದಿಗಳ ತೀರದಲ್ಲಿಯ ಇತಿಹಾಸ ಕಾಲದ ನೆಲೆಗಳ ಉದಾಹರಣೆಯೊದ ಗಿಸುತ್ತವೆ. ನದೀಮುಖಗಳು ಪ್ರಾಚೀನ ಕಾಲದಲ್ಲಿ ಬಂದರುಗಳಾಗಿ ಉಪಯುಕ್ತವಾಗಿದ್ದವು. ಕೆರೆ-ಸರೋವರಗಳ ಆಸುಪಾಸಿನಲ್ಲಿಯೂ ಪ್ರಾಚೀನ ನೆಲೆಗಳಿರುವ ಸಾಧ್ಯತೆಯಿದೆ.

3. ಜನಾಂಗ ವಿವರಣೆ: ಬೇಟೆಗಾರಿಕೆ, ಆಹಾರಸಂಗ್ರಹಣೆ ಹಂತದಲ್ಲಿರುವ ಅಥವಾ ಸರಳ ಸಾಗುವಳಿ ವಿಧಾನಗಳನ್ನು ಅನುಸರಿಸುತ್ತಿರುವ ಬುಡಕಟ್ಟಿನ ಜನಾಂಗಗಳು ಇರುವ ಪ್ರದೇಶಗಳಲ್ಲಿ, ಅನ್ವೇಷಕ ಇಂಥ ಜನಾಂಗಗಳ ಜನಜೀವನವನ್ನು ಕುರಿತು ವಿವರಗಳನ್ನು ಸಂಗ್ರಹಿಸುವುದು ಬಹಳ ಉಪಯುಕ್ತವಾಗುತ್ತದೆ.

4. ಐತಿಹಾಸಿಕ ಸಾಹಿತ್ಯ: ಆಯಾ ಪ್ರದೇಶದ ಪ್ರಾಚೀನ ಸಾಹಿತ್ಯ, ಮಹಾಕಾವ್ಯಗಳು, ಪ್ರವಾಸ ಕಥನಗಳು, ಶಾಸನಗಳು ಇತ್ಯಾದಿಗಳು ಅನ್ವೇಷಣೆಗೆ ಅಗತ್ಯವಿರುವ ಹಿನ್ನೆಲೆಯನ್ನು ಒದಗಿಸುತ್ತವೆ. ಬೌದ್ಧ ಸಾಹಿತ್ಯದಲ್ಲಿ ಉಲ್ಲೇಖಿತ ಸ್ಥಳಗಳು ಬೌದ್ಧ ನೆಲೆಗಳ ಶೋಧನೆಗೆ ಸರಿಯಾದ ಸೂತ್ರಗಳನ್ನೊದಗಿಸುತ್ತವೆ. ಮಹಾಭಾರತ, ರಾಮಾಯಣ, ಪುರಾಣಗಳಲ್ಲಿ ಉಕ್ತವಾದ ಪರಂಪರಾಗತ ಇತಿಹಾಸ ಪುರಾತತ್ತ್ವ ಅನ್ವೇಷಣೆಗೆ ಸಹಕಾರಿಯಾಗಿದೆ. ಮಹಾಭಾರತ, ರಾಮಾಯಣಗಳ ಆಧಾರದ ಮೇಲೆ ಗಂಗಾ–ಯಮುನಾ ಬಯಲಿನಲ್ಲಿ ಅನೇಕ ಪೂರ್ವಭಾವಿ ಇತಿಹಾಸ ಕಾಲದ ನೆಲೆಗಳನ್ನು ಶೋಧಿಸುವುದು ಸಾಧ್ಯವಾಗಿದೆ. ಪ್ಲಿನಿ, ಸ್ಟ್ರಾಬೊ, ಟಾಲಮಿ ಮುಂತಾದವರು ಪ್ರಾಚೀನ ಭಾರತದ ಭೂಗೋಳ ವಿಷಯದ ಬಗ್ಗೆ ಬರೆದ ವಿವರಗಳು ಪ್ರಸಕ್ತಶಕದ ಆರಂಭ ಕಾಲದ ಹಲವಾರು ಮುಖ್ಯ ಪಟ್ಟಣಗಳನ್ನು, ವ್ಯಾಪಾರ ಕೇಂದ್ರಗಳನ್ನು, ಬಂದರುಗಳನ್ನು ಗುರುತಿಸುವುದಕ್ಕೆ ಸಹಾಯ ಮಾಡಿವೆ. ಚೀನಿ ಪ್ರವಾಸಿಗಳಾದ ಫಾಹಿಯಾನ್, ಯುವಾನ್‌ಚಾಂಗ್, ಇತ್ಸಿಂಗ್ ಮುಂತಾದವರ ಬರೆವಣಿಗೆಗಳಿಂದಾಗಿ ಉತ್ತರ ಭಾರತದ ಅನೇಕ ಬೌದ್ಧನೆಲೆಗಳನ್ನು ಶೋಧಿಸಲು ಕನ್ನಿಂಗ್ ಹ್ಯಾಮನಿಗೆ ಸಾಧ್ಯವಾಯಿತು. ಪ್ರಾಚೀನ ಶಾಸನಗಳುಳ್ಳ ಸ್ಥಳಗಳು ಪ್ರಾಚೀನ ನೆಲೆಗಳನ್ನು ಗುರುತಿಸುವುದಕ್ಕೆ ಸಹಾಯಕವಾಗಿವೆ. ಬ್ರಹ್ಮಗಿರಿಯ (ಚಿತ್ರದುರ್ಗ ಜಿಲ್ಲೆ) ಅಶೋಕನ ಶಿಲಾಶಾಸನದಲ್ಲಿ ಉಲ್ಲೇಖಿತವಾದ ಇಸಿಲ ಪಟ್ಟಣ ಆ ನೆಲೆಯಲ್ಲಿ ಕಂಡುಬಂದ ಇತಿಹಾಸ ಆರಂಭ ಕಾಲದ ಅವಶೇಷಗಳಿಂದ ಸೂಚಿತವಾಗಿದೆ.

5. ಪ್ರಕಟಿತ ವರದಿಗಳು: ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ವಾರ್ಷಿಕ ವರದಿಗಳು, ರಾಜ್ಯ ಸರ್ಕಾರಗಳು ಪ್ರಕಟಿಸಿರುವ ವಾರ್ಷಿಕ ವರದಿಗಳು, ಗೆಜೆಟಿಯರುಗಳು, ಕನ್ನಡ ಸಂಶೋಧನ ಸಂಸ್ಥೆಯ ವಾರ್ಷಿಕ ವರದಿಗಳು, ಕ್ಷೇತ್ರಾನ್ವೇಷಣೆಯಲ್ಲಿ ಬಹಳಷ್ಟು ಪ್ರಯೋಜನಕಾರಿಯಾಗುತ್ತವೆ. ಇಂಡಿಯನ್ ಆರ್ಕಿಯಾಲಜಿ ಎ ರಿವ್ಯೂ ಎಂಬ ವಾರ್ಷಿಕ ವರದಿಗಳನ್ನು ಅಗತ್ಯ ಗಮನಿಸಬೇಕು.

6. ಸ್ಥಳಪುರಾಣಗಳು, ದಂತಕತೆಗಳು: ವಿವಿಧ ಸ್ಥಳಗಳಲ್ಲಿ ಬೇರೆ ಬೇರೆ ಸ್ಥಳಪುರಾಣಗಳು, ದಂತಕತೆಗಳು, ಜನಪದ ಕಥೆಗಳು, ಜನಪದ ಗೀತೆಗಳು ಪ್ರಚಲಿತವಾಗಿರುತ್ತವೆ. ಅವು ಪರಂಪರೆಯನ್ನು ಸೂಚಿಸುವುದರಿಂದ ಅವುಗಳಲ್ಲಿ ಕೆಲಮಟ್ಟಿಗಾದರೂ ತಥ್ಯವಿರುವ ಸಾಧ್ಯತೆ ಇರುತ್ತದೆ. ಆದುದರಿಂದ ಅವುಗಳನ್ನು ಟಿಪ್ಪಣಿ ಮಾಡಿಕೊಂಡು ಗ್ರಾಮಸ್ಥರು ತೋರಿಸುವ ಸ್ಥಳಗಳನ್ನು ಸರಿಯಾಗಿ ಪರೀಕ್ಷಿಸಿ ಅಲ್ಲಿ ಪ್ರಾಚೀನ ವಸತಿಯ ಕುರುಹುಗಳೇನಾದರೂ ಇವೆಯೋ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು.

7. ಸ್ಥಳನಾಮಗಳು: ಕೆಲವೊಮ್ಮೆ ಸ್ಥಳನಾಮಗಳು ಪುರಾತತ್ತ್ವ ಅನ್ವೇಷಣೆಯಲ್ಲಿ ಪ್ರಾಚೀನ ನಿವೇಶನಗಳ ಸುಳಿವು ಕೊಡುವುದುಂಟು. ಉದಾ: ಕೆಲವು ಗ್ರಾಮಗಳಲ್ಲಿ ಪಾಂಡವರ ಮನೆ, ಮೋರಿಯರ ಮನೆ ಎಂದು ತೋರಿಸಲಾಗುವ ಸ್ಥಳಗಳು ಸಾಮಾನ್ಯವಾಗಿ ಪ್ರಾಚೀನ ಗವಿಗಳಾಗಲೀ ಬೃಹತ್ ಶಿಲಾಸಮಾಧಿಗಳಾಗಲೀ ಆಗಿರುತ್ತವೆ. ಇನ್ನು ಕೆಲವೆಡೆ ನಿಲಸುಗಲ್ಲು, ಬೂದಿಹಾಳು, ಬೂದಿತಿಟ್ಟು ಮುಂತಾದ ಸ್ಥಳಗಳಿರುತ್ತವೆ. ನಿಲಸುಗಲ್ಲು ಎಂಬಲ್ಲಿ (ಶಿವಮೊಗ್ಗ ಜಿಲ್ಲೆ) ಬೃಹತ್‌ಶಿಲಾಯುಗದ ನಿಲಸುಗಲ್ಲುಗಳು (ನಿಲ್ಲಿಸಿದ ಕಲ್ಲುಗಳು ಇರುವ ಸ್ಥಳ) ಕಂಡುಬಂದಿವೆ. ಬೂದಿಹಾಳು, ಬೂದಿತಿಟ್ಟು ಮುಂತಾದ ಹೆಸರುಳ್ಳ ಗ್ರಾಮಗಳಲ್ಲಿ ಕೆಲವು ಸಲ ಬೂದಿದಿಬ್ಬಗಳು ಶೋಧವಾಗಿವೆ.

**ವೈಜ್ಞಾನಿಕ ಅನ್ವೇಷಣಾ ವಿಧಾನಗಳು:** ವೈಜ್ಞಾನಿಕ ಉಪಕರಣಗಳ ಹಾಗೂ ಉಪಗ್ರಹ ಚಿತ್ರಗಳ ನೆರವಿನಿಂದಲೂ ಭೂಮಿಯಡಿಯಲ್ಲಿ ಹುದುಗಿರುವ ಅವಶೇಷಗಳನ್ನು ಪತ್ತೆಹಚ್ಚಬಹುದು.

**ಕಾಂತೀಯ ಸರ್ವೇಕ್ಷಣೆ:** ದಿಕ್ಸೂಚಿಯನ್ನು ಕಬ್ಬಿಣದ ವಸ್ತುವಿನ ಸಮೀಪ ತಂದಾಗ ದಿಕ್ಸೂಚಿ ಆ ವಸ್ತುವಿನೆಡೆಗೆ ಬಾಗುತ್ತದೆ. ಕಬ್ಬಿಣ ಧಾತುವಿಗೆ ಸಂಬಂಧಿಸಿದ ಕಾಂತೀಯ ಕ್ಷೋಭೆ ಇದಕ್ಕೆ ಕಾರಣವಾಗಿದೆ. ಇದರಂತೆ ಮಣ್ಣಿನಲ್ಲಿ ಹುದುಗಿರುವ ಪ್ರಾಚ್ಯಾವಶೇಷಗಳು ಮಂದವಾದ ಕಾಂತೀಯ ಕ್ಷೋಭೆಯನ್ನು ತೋರಿಸುತ್ತವೆ. ಈ ಕ್ಷೋಭೆಗಳು ಮಣ್ಣಿನಲ್ಲಿರುವ ಅತಿ ಕಡಿಮೆ ಪ್ರಮಾಣದ ಕಬ್ಬಿಣದ ಆಕ್ಸೈಡುಗಳ ಸ್ಥಿತಿಯಲ್ಲಿನ ಮಂದ ವ್ಯತ್ಯಾಸಗಳಿಂದ ಉಂಟಾಗುತ್ತವೆ. ಕುಲುಮೆ, ಒಲೆ ಮುಂತಾದ ಸುಟ್ಟಮಣ್ಣಿನ ಆಕೃತಿಗಳು ಸ್ಥಳೀಯ ಕಾಂತಕ್ಷೇತ್ರದ ತೀಕ್ಷ್ಣತೆಯಲ್ಲಿ ಹೆಚ್ಚಿನ ಬದಲಾವಣೆಗಳನ್ನು ತೋರಿಸುತ್ತವೆ. ಏಕೆಂದರೆ, ಇಂಥ ಆಕೃತಿಗಳು ಸುಟ್ಟು ತಣ್ಣಗಾದ ಮೇಲೆ ಆಯಾ ಸ್ಥಳದಲ್ಲಿಯ ಪೃಥ್ವಿಯ ಕಾಂತಕ್ಷೇತ್ರಕ್ಕನುಗುಣವಾಗಿ ಮಂದವಾದ ಶಾಶ್ವತ ಕಾಂತಗುಣವನ್ನು ಪಡೆದುಕೊಂಡಿರುತ್ತವೆ. ಇದಕ್ಕೆ ಔಷ್ಣಿಕ ಶೇಷಕಾಂತತೆ (ಥರ್ಮೊ ರೆಮ್ನೆಂಟ್ ಮ್ಯಾಗ್ನೆಟಿಸಂ) ಎಂದು ಕರೆಯಲಾಗುತ್ತದೆ. ಗುಂಡಿ, ಕುಣಿ, ಕಾಲುವೆ ಮುಂತಾದವುಗಳಲ್ಲಿ ತುಂಬಿಕೊಂಡಿರುವ ಮಣ್ಣು ಸುತ್ತಲಿನ ಮಣ್ಣಿಗಿಂತ ಹೆಚ್ಚಿನ ಪ್ರಮಾಣದ ಮಂದ ಕಾಂತಗುಣವನ್ನು ಪಡೆದಿರುತ್ತದೆ. ಇದಕ್ಕೆ ವಿರುದ್ಧವಾಗಿ ಗೋಡೆ, ರಸ್ತೆ ಮುಂತಾದ ದೃಢ ಅವಶೇಷಗಳು ಸುತ್ತುವರಿದ ಮಣ್ಣಿಗಿಂತ ಕಡಿಮೆ ಪ್ರಮಾಣದ ಕಾಂತಗುಣವನ್ನು ಪಡೆದಿರುತ್ತವೆ. ಈ ತತ್ತ್ವವನ್ನು ಆಧಾರವಾಗಿಟ್ಟುಕೊಂಡು ಪುರಾತತ್ತ್ವ ನೆಲೆಯ ಕಾಂತೀಯ ಸರ್ವೇಕ್ಷಣೆಯನ್ನು ನಡೆಸಲಾಗುತ್ತದೆ.

ಕಾಂತೀಯ ಸರ್ವೇಕ್ಷಣೆಯಲ್ಲಿ ಪ್ರೋಟಾನ್ ಕಾಂತಮಾಪಕ (ಮ್ಯಾಗ್ನೆಟೊಮೀಟರ್) ಎಂಬ ಕಾಂತಕ್ಷೇತ್ರದ ತೀಕ್ಷ್ಣತೆಯನ್ನಳೆಯುವ ಸೂಕ್ಷ್ಮಗ್ರಾಹಿಯಾದ ಉಪಕರಣವನ್ನು ಬಳಸಲಾಗುತ್ತದೆ. ಪ್ರತಿ 30 ಸೆಂಮೀ ದೂರಕ್ಕೊಂದರಂತೆ ಎಲೆಕ್ಟ್ರೋಡುಗಳನ್ನು ನೆಲದಲ್ಲಿ ಸೇರಿಸಿ ಎಲೆಕ್ಟ್ರೋಡುಗಳ ನಡುವೆ ಉಂಟಾಗುವ ಕಾಂತೀಯ ಕ್ಷೋಭೆಗಳನ್ನು ಪ್ರೋಟಾನ್ ಕಾಂತಮಾಪಕದ ಸಹಾಯದಿಂದ ಟಿಪ್ಪಣಿ ಮಾಡಿಕೊಳ್ಳಲಾಗುತ್ತದೆ. ಮೂರು ಜನರನ್ನೊಳಗೊಂಡ ಸರ್ವೇಕ್ಷಣ ತಂಡ ಈ ವಿಧಾನದಿಂದ ಒಂದೇ ದಿನದಲ್ಲಿ ಅನೇಕ ಎಕರೆಗಳಷ್ಟು ಪ್ರದೇಶದಲ್ಲಿ ಸರ್ವೇಕ್ಷಣೆ ಮಾಡಬಹುದಾಗಿದೆ.

ಕಾಂತೀಯ ಸರ್ವೇಕ್ಷಣ ವಿಧಾನದ ಬಳಕೆಯಲ್ಲಿ ಕೆಲವು ಸಮಸ್ಯೆಗಳಿವೆ. ಪ್ರೋಟಾನ್ ಕಾಂತಮಾಪಕ ಸೂಕ್ಷ್ಮಗ್ರಾಹಿಯಾಗಿರುವುದರಿಂದ ಸರ್ವೇಕ್ಷಣೆ ಮಾಡಲಾಗುತ್ತಿರುವ ನೆಲೆಯ ಸಮೀಪದಲ್ಲಿರುವ ವಿದ್ಯುತ್ ತಂತಿಗಳು, ನೀರಿನ ಕೊಳವೆಗಳು, ದೂರವಾಣಿ ತಂತಿಗಳು, ಸಂಗ್ರಹಿಸಲಾದ ಕಬ್ಬಿಣದ ವಸ್ತುಗಳು, ಕಟ್ಟಡಗಳಲ್ಲಿ ಬಳಸಲಾಗಿರುವ ಕಬ್ಬಿಣ ಇತ್ಯಾದಿಗಳಿಂದ ತೀವ್ರ ಉತ್ತೇಜನಕ್ಕೊಳಗಾಗುತ್ತದೆ. ಇದರಿಂದಾಗಿ ನಗರಗಳ ಸಮೀಪದಲ್ಲಿರುವ ನೆಲೆಗಳಲ್ಲಿ ಈ ವಿಧಾನದ ಬಳಕೆ ಹೆಚ್ಚು ಫಲದಾಯಕವಾಗಲಾರದು.

1958ರಲ್ಲಿ ಪುರಾತತ್ತ್ವ ನೆಲೆಯ ಸರ್ವೇಕ್ಷಣೆಯಲ್ಲಿ ಐಟ್‌ಕಿನ್ಸ್ ಮೊದಲಾದವರು ಈ ವಿಧಾನವನ್ನು ಮೊದಲ ಬಾರಿಗೆ ಸಫಲವಾಗಿ ಬಳಸಿದರು. ಭಾರತದಲ್ಲಿ ಈ ವಿಧಾನ ಹೆಚ್ಚು ಪ್ರಚಲಿತವಾಗಿಲ್ಲ. ಕಾವೇರಿಪಟ್ಟಣ ಮತ್ತು ಮದುರೆ (ತಮಿಳುನಾಡು) ಮುಂತಾದ ಕಡೆಗಳಲ್ಲಿ ಈ ವಿಧಾನದಿಂದ ಸರ್ವೇಕ್ಷಣೆ ನಡೆಸಲಾಯಿತಾದರೂ ಅದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ.

ವಿದ್ಯುತ್ ಪ್ರತಿರೋಧ ಸರ್ವೇಕ್ಷಣೆ: ಧಾತು ಅಂಶವನ್ನೊಳಗೊಂಡ ಕೆಲವು ಖನಿಜಗಳನ್ನು ಹೊರತುಪಡಿಸಿ ಒಣಮಣ್ಣು ಮತ್ತು ಶಿಲೆಗಳು ವಿದ್ಯುತ್ ಪ್ರತಿರೋಧಕಗಳಾಗಿರುತ್ತವೆ. ಆದರೆ ತೇವಾಂಶವಿರುವಾಗ ಇವುಗಳ ವಿದ್ಯುತ್ ಪ್ರತಿರೋಧಕ ಗುಣ ಸಾಕಷ್ಟು ಕಡಿಮೆಯಾಗುತ್ತದೆ. ಅಂದರೆ ಮಣ್ಣಿನ ಮತ್ತು ಶಿಲೆಗಳ ವಿದ್ಯುತ್ ಪ್ರತಿರೋಧದ ಪ್ರಮಾಣ ಅವುಗಳಲ್ಲಿ ಸೇರಿಕೊಂಡಿರುವ ನೀರು, ನೀರಿನಲ್ಲಿರುವ ಲವಣ ಹಾಗೂ ಜೈವಿಕ ಮೂಲದ ಆಮ್ಲಗಳ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ಈ ತತ್ತ್ವವನ್ನಾಧರಿಸಿ ಪುರಾತತ್ತ್ವ ನೆಲೆಯನ್ನು ವಿದ್ಯುತ್ ಪ್ರತಿರೋಧ ಸರ್ವೇಕ್ಷಣೆಗೆ ಒಳಪಡಿಸಬಹುದು. ವಿದ್ಯುತ್ ಪ್ರತಿರೋಧ ಸರ್ವೇಕ್ಷಣ ವಿಧಾನದಲ್ಲಿ ಲೋಹದ ವಿದ್ಯುತ್ ವಾಹಕಗಳನ್ನು ನೆಲದಲ್ಲಿ ಸೇರಿಸಿ ವಿದ್ಯುತ್ ಹರಿಸಲಾಗುತ್ತದೆ. ಉಪಕರಣಗಳ ಸಹಾಯದಿಂದ ಆ ಸ್ಥಳದಲ್ಲಿ ವಿದ್ಯುತ್ ಪ್ರತಿರೋಧದ ಪ್ರಮಾಣವನ್ನು ಕಂಡುಕೊಳ್ಳಲಾಗುತ್ತದೆ. ನೆಲದಲ್ಲಿ ಹುದುಗಿರುವ ಅವಶೇಷಗಳ ಸ್ವರೂಪಕ್ಕನುಸಾರವಾಗಿ ವಿದ್ಯುತ್ ಪ್ರತಿರೋಧ ಬದಲಾಗುತ್ತ ಹೋಗುತ್ತದೆ. ಗುಂಡಿ, ಕುಣಿ ಮುಂತಾದ ಋಣ ಆಕೃತಿಗಳಿರುವಲ್ಲಿ ವಿದ್ಯುತ್ ಪ್ರತಿರೋಧ ಕಡಿಮೆ ಇರುತ್ತದೆ. ತದ್ವಿರುದ್ಧವಾಗಿ ದೃಢವಾದ ಗೋಡೆ, ನೆಲ, ಬೀದಿ ಮುಂತಾದ ಘನ ಆಕೃತಿಗಳಿರುವಲ್ಲಿ ವಿದ್ಯುತ್ ಪ್ರತಿರೋಧ ಹೆಚ್ಚಾಗಿರುತ್ತದೆ. ಈ ವಿಧಾನವನ್ನು ಮುಖ್ಯವಾಗಿ ನೆಲೆಯಲ್ಲಿ ಹುದುಗಿರುವ ಗೋಡೆ, ಬೀದಿ, ಕಂದಕ, ಕಾಲುವೆ ಮುಂತಾದ ಅವಶೇಷಗಳ ಸ್ಥೂಲ ರೂಪರೇಷೆಗಳನ್ನು ಕಂಡುಕೊಳ್ಳಲು ಬಳಸಲಾಗುತ್ತದೆ. ಕುಣಿ ಹಾಗೂ ಕುಲುಮೆಗಳನ್ನೂ ಸಹ ಈ ವಿಧಾನದಿಂದ ಗುರುತಿಸಬಹುದು. ವಿದ್ಯುತ್ ಪ್ರತಿರೋಧದ ವ್ಯತ್ಯಾಸಗಳನ್ನು ದಾಖಲು ಮಾಡಿಕೊಳ್ಳಲು ಮೆಗ್ಗರ್‌ಅರ್ತ್ ಟೆಸ್ಟರ್ (ಮೆಗ್ಗರ್ ಭೂಪರೀಕ್ಷಕ) ಎಂಬ ಉಪಕರಣವನ್ನು ಉಪಯೋಗಿಸಲಾಗುತ್ತದೆ.

ಕಾಂತೀಯ ಸರ್ವೇಕ್ಷಣೆಗೆ ಹೋಲಿಸಿದರೆ ವಿದ್ಯುತ್ ಪ್ರತಿರೋಧ ಸರ್ವೇಕ್ಷಣ ವಿಧಾನದಿಂದ ಕೆಲವು ಹೆಚ್ಚಿನ ಪ್ರಯೋಜನಗಳಿವೆ. ಈ ವಿಧಾನ ತೀರ ಸರಳವೂ ಕಡಿಮೆ ವೆಚ್ಚದ್ದೂ ಆಗಿದೆ. ಉಪಕರಣಗಳು ಸುಲಭವಾಗಿ ದೊರೆಯುತ್ತವೆ. ವಿದ್ಯುತ್ ತಂತಿಗಳಿಂದಾಗಲೀ, ಕಬ್ಬಿಣ ಇತ್ಯಾದಿಗಳ ಇರುವಿಕೆಯಿಂದಾಗಲೀ ಯಾವ ತೊಂದರೆಯೂ ಆಗದು. ಇದರಿಂದ ನಗರಗಳ ಮಧ್ಯದಲ್ಲಿರುವ ನೆಲೆಗಳಲ್ಲಿಯೂ ಈ ವಿಧಾನದ ಪ್ರಯೋಜನ ಪಡೆಯಬಹುದು.

ಮಳೆ, ಭೂಗರ್ಭ ಲಕ್ಷಣ, ಸಸ್ಯ ಇವುಗಳ ಪ್ರಭಾವ ವಿದ್ಯುತ್ ಪ್ರತಿರೋಧ ಸರ್ವೇಕ್ಷಣೆಯಲ್ಲಿ ಕಂಡುಬರುತ್ತದೆ. ಹೆಚ್ಚು ಮಳೆಯಾಗಿದ್ದರೆ ನೆಲೆಯ ಮಣ್ಣು ಹೆಚ್ಚು ತೇವವಾಗಿ ವಿದ್ಯುತ್ ವಹನ ಎಲ್ಲೆಡೆ ಒಂದೇ ಬಗೆಯಾಗಿ ಆಗಬಹುದು. ಇದರಿಂದ ಹುದುಗಿರುವ ಅವಶೇಷಗಳ ಪ್ರತಿರೋಧ ಪ್ರಮಾಣ ಗೊತ್ತಾಗುವುದಿಲ್ಲ. ನೆಲೆಯ ಮೇಲ್ಮೈಯಲ್ಲಿ ಕೆಲವೆಡೆ ಹುಲ್ಲು ಬೆಳೆದಿದ್ದು ಇನ್ನು ಕೆಲವೆಡೆ ಹುಲ್ಲು ಇರದಿದ್ದರೆ ಸಹ ವಿದ್ಯುತ್ ಪ್ರತಿರೋಧ ಸರ್ವೇಕ್ಷಣೆಗೆ ತೊಂದರೆಯಾಗುತ್ತದೆ. ಏಕೆಂದರೆ ಹುಲ್ಲು ಬೆಳೆದ ಪ್ರದೇಶದಲ್ಲಿ ನೆಲದ ತೇವಾಂಶ ಹೆಚ್ಚಾಗಿರುತ್ತದೆ.

ಪುರಾತತ್ತ್ವ ನೆಲೆಗಳ ಸರ್ವೇಕ್ಷಣೆಯಲ್ಲಿ ಈ ವಿಧಾನವನ್ನು 1947ರಲ್ಲಿ ಆರ್.ಜೆ.ಸಿ. ಅಟ್ಕಿನ್‌ಸನ್ ಮೊದಲು ಬಳಸಿದ. ಈ ವಿಧಾನದಿಂದ ಕ್ರಾವ್ಲೇ ಎಂಬಲ್ಲಿ ಬಳಪಕಲ್ಲಿನಿಂದ ನಿರ್ಮಿಸಿದ ರೋಮನ್ ಕಾಲದ ರಸ್ತೆಯನ್ನೂ ಡಾರ್ಚೆಸ್ಟರ್ ಎಂಬಲ್ಲಿ ನವಶಿಲಾಯುಗದ

ಕಂದಕವನ್ನೂ ಗುರುತಿಸಲಾಗಿದೆ. ಭಾರತದಲ್ಲಿ ಈ ವಿಧಾನವನ್ನು ಹೆಚ್ಚು ಬಳಸಿಲ್ಲ. ಮಹಾರಾಷ್ಟ್ರದ ನಾಯ್‌ಕುಂಡ್ (ನಾಗಪುರ ಜಿಲ್ಲೆ) ಎಂಬ ಬೃಹತ್‌ಶಿಲಾಸಮಾಧಿ ನೆಲೆಯಲ್ಲಿ ಈ ವಿಧಾನದಿಂದ ಪ್ರ.ಶ.ಪೂ.ಸು.700ರಲ್ಲಿ ಕಬ್ಬಿಣ ತಯಾರಿಸುವ ಕುಲುಮೆಯನ್ನು ಕಂಡುಹಿಡಿಯಲಾಯಿತು. ವಾರಂಗಲ್ಲಿನಲ್ಲಿ (ಆಂಧ್ರಪ್ರದೇಶ) ಕಾಕತೀಯರ ಕಾಲದ ಕೋಟೆಯ ರೂಪರೇಷೆಯನ್ನು ನಿರ್ಧರಿಸಲು ಈ ವಿಧಾನದಿಂದ ಪ್ರಯತ್ನಿಸಲಾಗಿದೆ.

ವಿದ್ಯುತ್ ಕಾಂತೀಯ ಸರ್ವೇಕ್ಷಣೆ: ವಿದ್ಯುತ್ ಕಾಂತೀಯ ಸರ್ವೇಕ್ಷಣ ಉಪಕರಣವನ್ನು ಬಳಸಿ ನೆಲದಲ್ಲಿ ಹುದುಗಿರುವ ಲೋಹದ ವಸ್ತುಗಳನ್ನು ಗುರುತಿಸಬಹುದು. ನಾಣ್ಯಗಳು ಮತ್ತು ಲೋಹದ ವಸ್ತುಗಳಿರುವ ಸ್ಥಳಗಳನ್ನು ಗುರುತಿಸಲು ಇದು ಸಹಾಯಕಾರಿ.

ಶಬ್ದವನ್ನಾಧರಿಸಿ ನಡೆಸುವ ಸರ್ವೇಕ್ಷಣ: ನೆಲೆಯ ಮೇಲ್ಮೈಯನ್ನು ತಟ್ಟಿ ಅದರಿಂದ ಬರುವ ಸಪ್ಪಳದ ಆಧಾರದ ಮೇಲೆ ನಡೆಸುವ ಸರ್ವೇಕ್ಷಣೆಯಿದು. ಗಟ್ಟಿಯಾದ ಮಣ್ಣುಳ್ಳ ಸ್ಥಳವನ್ನು ತಟ್ಟುವುದರಿಂದ ಹೊರಡುವ ಶಬ್ದ ಸಡಿಲ ಮಣ್ಣುಳ್ಳ ಸ್ಥಳದ್ದಕ್ಕಿಂತ ಬೇರೆಯಾಗಿರುತ್ತದೆ. ಈ ವಿಧಾನದಿಂದ ನೆಲದಲ್ಲಿ ಹುದುಗಿರುವ ಅವಶೇಷಗಳ ಸ್ವರೂಪವನ್ನು ಕೆಲಮಟ್ಟಿಗೆ ಅರಿತುಕೊಳ್ಳಬಹುದು.

ಮಣ್ಣಿನ ರಾಸಾಯನಿಕ ಪರೀಕ್ಷೆ: ಪ್ರಾಚೀನ ವಸತಿ ನಿವೇಶನಗಳ ಮಣ್ಣಿನಲ್ಲಿ ಫಾಸ್ಫೇಟ್ ಮತ್ತು ಸಾವಯವ ಪದಾರ್ಥಗಳ ಪ್ರಮಾಣ ಹೆಚ್ಚಾಗಿರುತ್ತದೆ. ಈ ಮಣ್ಣನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಿ ಫಾಸ್ಫೇಟಿನ ಪ್ರಮಾಣವನ್ನು ಕಂಡುಕೊಳ್ಳಬಹುದು. ಪ್ರಾಚೀನ ನೆಲೆಯ ವಿವಿಧ ಸ್ಥಳಗಳಲ್ಲಿ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ ಅವುಗಳನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಿ ನೆಲೆಯ ಪರಿಧಿಯನ್ನು ನಿರ್ಧರಿಸಬಹುದು. ಡೆನ್ಮಾರ್ಕ್, ಇಟಲಿ, ಇಂಗ್ಲೆಂಡ್ ಮುಂತಾದೆಡೆಗಳಲ್ಲಿ ಪ್ರಾಚೀನ ನೆಲೆಗಳ ಗಡಿಯನ್ನು ನಿರ್ಧರಿಸಲು ಈ ವಿಧಾನವನ್ನು ಸಫಲವಾಗಿ ಬಳಸಲಾಗಿದೆ. ಡೆನ್ಮಾರ್ಕ್‌ನ ಕೋಪನ್‌ಹೇಗನ್ ಸಮೀಪದಲ್ಲಿರುವ ಸ್ವಾಪ್ ಎಂಬ ಪ್ರಾಚೀನ ನೆಲೆಯನ್ನು ಈ ವಿಧಾನದಿಂದ ಶೋಧಿಸಲಾಯಿತು. ಸುಮಾರು 80 ಹೆಕ್ಟೇರ್ ಪ್ರದೇಶದಲ್ಲಿ 250 ಕಡೆಗಳಲ್ಲಿ ಮಣ್ಣಿನ ಮಾದರಿಯನ್ನು ಸಂಗ್ರಹಿಸಿ ಅವುಗಳ ರಾಸಾಯನಿಕ ವಿಶ್ಲೇಷಣೆಯನ್ನು ಆಧರಿಸಿ ಈ ಶೋಧನೆ ಮಾಡಲಾಯಿತು. ಗುಜರಾತಿನ ನಾಗೇಶ್ವರ ಎಂಬ ಹರಪ್ಪ ನಾಗರಿಕತೆಯ ನೆಲೆಯಲ್ಲಿ ಸಹ ಈ ವಿಧಾನದ ಉಪಯೋಗ ಮಾಡಲಾಗಿದೆ. ಈ ನೆಲೆಯನ್ನು ಚೌಕಗಳುಳ್ಳ ಜಾಲಂದ್ರ ವಿನ್ಯಾಸದಲ್ಲಿ ವಿಂಗಡಿಸಿ ವಿವಿಧ ಚೌಕಗಳಲ್ಲಿಯ ಮಣ್ಣಿನ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಲಾಯಿತು. ಫಾಸ್ಫೇಟಿನ ಪ್ರಮಾಣ ಹೆಚ್ಚಾಗಿದ್ದ ಚೌಕಗಳಲ್ಲಿ ಉತ್ಖನನ ಮಾಡಲಾಯಿತು. ಇದರಿಂದ ನೆಲೆಯ ಈ ಭಾಗಗಳಲ್ಲಿ ಚಿಪ್ಪಿನ ಉದ್ಯಮವಿದ್ದುದು ಕಂಡುಬಂದಿತು. (ಎಸ್.ವಿ.ಪಿ.)

**ವ್ಯೋಮ ಛಾಯಾಗ್ರಹಣ:** ಬಾಹ್ಯಾಕಾಶದಿಂದ ಭೂಮಿಯಾಳದ ಅವಶೇಷಗಳನ್ನು ಪತ್ತೆ ಹಚ್ಚಲು ಮತ್ತು ನಕಾಶೆ ರೂಪಿಸಲು ಬಳಸುವ ವೈಜ್ಞಾನಿಕ ಛಾಯಾಗ್ರಹಣ ವಿಧಾನ. ವ್ಯೋಮ ಛಾಯಾಗ್ರಹಣದಿಂದ ಇನ್‌ಫ್ರಾರೆಡ್ ಚಿತ್ರಗಳನ್ನು ಪಡೆಯಲಾಗುತ್ತದೆ. ಈ ಬಗೆಯ ಛಾಯಾಗ್ರಹಣದಿಂದ ಭೂಮಿಯಡಿಯಲ್ಲಿ ಹುದುಗಿರುವ ಪುರಾತತ್ತ್ವ ನೆಲೆಗಳನ್ನೂ ಅವಶೇಷಗಳನ್ನೂ ಗುರುತಿಸಬಹುದಾಗಿದೆ. ಇನ್‌ಫ್ರಾರೆಡ್ ಛಾಯಾಚಿತ್ರದ ವರ್ಣಸಂಯೋಜನೆ ಸಾಮಾನ್ಯ ಛಾಯಾಚಿತ್ರಗಳಿಗಿಂತ ಭಿನ್ನವಾಗಿದ್ದು ಮೂಲತಃ ಕೆಂಪು ಬಣ್ಣದ ವಸ್ತುಗಳು ಹಸುರಾಗಿಯೂ ಹಸುರು ಬಣ್ಣದವು ನೀಲಿಯಾಗಿಯೂ ಕಾಣುತ್ತವೆ. ಅಲ್ಲದೆ ಶಾಖೋತ್ಪತ್ತಿ ಮಾಡುವ ಎಲ್ಲ ವಸ್ತುಗಳೂ ಕೆಂಪುಬಣ್ಣ ಪಡೆಯುತ್ತವೆ. ಈ ವರ್ಗಕ್ಕೆ ಗಿಡ–ಮರಗಳೂ ಸೇರುತ್ತವೆ. ಪುರಾತತ್ತ್ವ ಅವಶೇಷಗಳು ಮಣ್ಣಿನಲ್ಲಿ ಮುಚ್ಚಿಹೋದಾಗ ಅವು ಮಣ್ಣಿನ ನೈಸರ್ಗಿಕ ಕ್ರಿಯೆಗೆ ತಡೆಯೊಡ್ಡಿ ಅಂತರ್ಜಲದ ಮಟ್ಟದಲ್ಲಿ ಏರುಪೇರು ಉಂಟುಮಾಡುತ್ತವೆ. ಇದರಿಂದ ಈ ಸ್ಥಳದಲ್ಲಿಯ ಸಸ್ಯಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇಂತಹ ಸೂಕ್ಷ್ಮ ಬದಲಾವಣೆಗಳು ಭೂಮಟ್ಟದಲ್ಲಿ ಗೋಚರಿಸುವುದಿಲ್ಲ; ಆದರೆ ಇವನ್ನು ಇನ್‌ಫ್ರಾರೆಡ್ ಛಾಯಾಚಿತ್ರಗಳಲ್ಲಿ ಗುರುತಿಸಬಹುದು. ಹುದುಗಿರುವ ಕಟ್ಟಡಾವಶೇಷಗಳು, ಸಮಾಧಿ, ಒಲೆಗಳು, ಪ್ರಾಚೀನ ಮಾರ್ಗಗಳು ಮತ್ತಿತರ ಅವಶೇಷಗಳು ಇಂಥ ಛಾಯಾಚಿತ್ರಗಳಲ್ಲಿ ಭಿನ್ನ ವರ್ಣಸಂಯೋಜನೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

(ಅ) ಇಮೇಜಿಂಗ್ ರಾಡಾರ್: ಮೋಡ ಕವಿದ ವಾತಾವರಣದಲ್ಲಾಗಲೀ ದಟ್ಟ ಅರಣ್ಯ ಪ್ರದೇಶದಲ್ಲಾಗಲೀ ಬಾಹ್ಯಾಕಾಶ ನಕಾಶೆಯನ್ನು (ಏರಿಯಲ್ ಮ್ಯಾಪಿಂಗ್) ತಯಾರಿಸುವುದು ಈ ಮುಂಚೆ ಕಷ್ಟಸಾಧ್ಯವಾಗಿತ್ತು. ಇಂತಹ ಪರಿಸರ ಅಥವಾ ಪರಿಸ್ಥಿತಿಯಲ್ಲಿ ಇಮೇಜಿಂಗ್ ರಾಡಾರ್‌ನ ಸಹಾಯದಿಂದ ನಕಾಶೆಗಳನ್ನು ಸುಲಭವಾಗಿ ಇಂದು ತಯಾರಿಸಬಹುದು. ಅಲ್ಲದೆ ಇಮೇಜಿಂಗ್ ರಾಡಾರ್‌ನಿಂದ ಹೊಮ್ಮುವ ತರಂಗಗಳು ಸು. 2ಮೀ ಆಳದವರೆಗಿನ ಭೂಸ್ತರಗಳಲ್ಲಿ ಹೋಗಬಲ್ಲವು. ಈ ಮೂಲಕ ಬರಿಗಣ್ಣಿಗೆ ಅಥವಾ ನೇರವಾಗಿ ಗೋಚರವಾಗದ ಅವಶೇಷಗಳನ್ನು ಪತ್ತೆಹಚ್ಚಬಹುದು. ವಿಶೇಷವಾಗಿ ಮರಳುಗಾಡು ಅಥವಾ ಗಿಡಗಂಟಿಗಳು ದಟ್ಟವಾಗಿ ಬೆಳೆದ ಪ್ರದೇಶದಲ್ಲಿರಬಹುದಾದ ಪುರಾತನ ನೆಲೆಗಳನ್ನು ಗುರುತಿಸುವಲ್ಲಿ ಈ ತಂತ್ರ ಅತ್ಯುಪಯುಕ್ತ.

(ಆ) ಗ್ರೌಂಡ್ ಪೆನಿಟ್ರೇಟಿಂಗ್ ರಾಡಾರ್ (ಜಿ.ಪಿ.ಆರ್): ರೇಡಿಯೋ ತರಂಗಗಳ ಮೂಲಕ ಭೂಮಿಯಡಿಯ ಸ್ತರಗಳ ಸಾಂದ್ರತೆಯಲ್ಲಿರುವ ವ್ಯತ್ಯಾಸಗಳನ್ನು ಈ ರಾಡಾರ್ ಗ್ರಹಿಸಬಲ್ಲದು. ಇದು ಹುದುಗಿಹೋದ ಅವಶೇಷಗಳನ್ನು ಪತ್ತೆಹಚ್ಚುವಲ್ಲಿ ನೆರವಾಗುತ್ತದೆ.

(ಇ) ಮ್ಯಾಗ್ನಟೋಮೀಟರ್: ಈ ವಿಧಾನ ಭೂಮಿಯ ಅಯಸ್ಕಾಂತೀಯ ಕ್ಷೇತ್ರವನ್ನು ಅವಲಂಬಿಸಿದೆ. ಹುದುಗಿಹೋದ ಪುರಾತನ ಅವಶೇಷಗಳು ಭೂಮಿಯ ಅಯಸ್ಕಾಂತೀಯ ಕ್ಷೇತ್ರದಲ್ಲಿ ಕೆಲವೊಂದು ಬದಲಾವಣೆಯನ್ನು ಉಂಟುಮಾಡುತ್ತವೆ. ಇಂತಹ ಬದಲಾವಣೆಗಳನ್ನು ಗುರುತಿಸುವುದೇ ಅಯಸ್ಕಾಂತೀಯ ಸರ್ವೇಕ್ಷಣೆಯ ಗುರಿ. ಒಲೆ, ಕುಲುಮೆ, ಇಟ್ಟಿಗೆ, ಗೋಡೆಯ ಪಾಯ, ಗುಂಡಿ–ಸಮಾಧಿ ಮೊದಲಾದವುಗಳನ್ನು ಈ ವಿಧಾನದಿಂದ ಶೋಧಿಸಬಹುದು.

(ಈ) ಜಿಯೋಫಿಸಿಕಲ್ ಡಿಫ್ರ್ಯಾಕ್ಷನ್ ಟೋಮೊಗ್ರಫಿ (ಜಿ.ಡಿ.ಟಿ.): ಮಣ್ಣಿನಲ್ಲಿ ಅಡಗಿರುವ ವಸ್ತುಗಳನ್ನು ಪತ್ತೆಮಾಡುವ ಮತ್ತೊಂದು ವಿಧಾನ. ಈ ಉಪಕರಣ ಧ್ವನಿ ತರಂಗಗಳನ್ನು ಹೊರಹೊಮ್ಮಿಸುತ್ತದೆ. ಭೂಮಿಯಡಿಯಲ್ಲಿರುವ ವಸ್ತುಗಳನ್ನು ಸ್ಪರ್ಶಿಸಿದೊಡನೆ ಈ ತರಂಗಗಳು ಹಿಂದಕ್ಕೆ ಪುಟಿಯುತ್ತವೆ. ಇದನ್ನು ಧ್ವನಿವರ್ಧಕಗಳ ಮೂಲಕ ಸೆರೆಹಿಡಿದು ಕಂಪ್ಯೂಟರ್‌ಗೆ ವರ್ಗಾಯಿಸಲಾಗುತ್ತದೆ. ಈ ದತ್ತಾಂಶದಿಂದ ಭೂಮಿಯಡಿಯ ವಸ್ತುವಿನ 3 ಆಯಾಮದ ಮಾದರಿಯನ್ನು ಕಂಪ್ಯೂಟರ್‌ನಲ್ಲಿ ತಯಾರಿಸಬಹುದು.

(ಉ) ರ್‍ಯಾಪಿಡ್ ಪ್ರೋಟೋಟೈಪಿಂಗ್ ಅಥವಾ ಸಿಂಟೆರಿಂಗ್: ಪುರಾತನ ವಸ್ತುವಿನ ಮಾದರಿಯನ್ನು ತಯಾರಿಸುವಲ್ಲಿ ಈ ವಿಧಾನ ಸಹಾಯಕಾರಿ. ನೈಲಾನ್ ಅಥವಾ ಪಾಲಿ ಕಾರ್ಬೋನೇಟ್ (ಪ್ಲಾಸ್ಟಿಕ್) ಪುಡಿಯನ್ನು ಪದರ ಪದರವಾಗಿ ಲೇಸರ್‌ನ ಸಹಾಯದಿಂದ ಕೂಡಿಸಿ ಮಾದರಿಯನ್ನು ತಯಾರಿಸಲಾಗುತ್ತದೆ. ಈ ವಿಧಾನ ಎಷ್ಟು ನಿಖರವಾದುದೆಂದರೆ ಶಿಲೋಪಕರಣಗಳ ದೀರ್ಘ ಬಳಕೆಯಿಂದ ಉಂಟಾಗುವ ಸವೆತದ ವಿನ್ಯಾಸವನ್ನೂ ಮಾದರಿಯಲ್ಲಿ ಪಡಿಮೂಡಿಸಬಹುದು. ಈ ವಿಧಾನದಿಂದ ಅಲ್ಪ ಶ್ರಮ ಹಾಗೂ ಸಮಯದಲ್ಲಿ ಪುರಾತನ ಅವಶೇಷಗಳ ನಿಖರ ಮಾದರಿಗಳನ್ನು ತಯಾರಿಸಬಹುದಾಗಿದೆ.

(ಊ) ವರ್ಚುಯಲ್ ರಿ ಕನ್‌ಸ್ಟ್ರಕ್ಷನ್: ಪುರಾತತ್ತ್ವ ಅವಶೇಷಗಳು ಹೆಚ್ಚಾಗಿ ಶಿಥಿಲ ಸ್ಥಿತಿಯಲ್ಲಿ ದೊರೆಯುತ್ತವೆ. ತ್ರುಟಿತವಾದ ಅವಶೇಷಗಳನ್ನು ಕೈಯಲ್ಲಿ ಜೋಡಿಸುವಾಗ ಅವು ಮತ್ತಷ್ಟು ತ್ರುಟಿತವಾಗುವ ಸಾಧ್ಯತೆಯೇ ಹೆಚ್ಚು. ಇಂತಹ ಸಂದರ್ಭದಲ್ಲಿ ಡಿಜಿಟಲ್ ಸ್ಕ್ಯಾನರ್ಸ್ ಮತ್ತು ಗ್ರಾಫಿಕ್ಸ್ ತಂತ್ರಾಂಶಗಳು ಉಪಯುಕ್ತ. ಒಡೆದುಹೋದ ಅವಶೇಷವೊಂದರ ಎಲ್ಲ ಚೂರುಗಳನ್ನು ಸ್ಕ್ಯಾನ್ ಮಾಡಿ, ಕಂಪ್ಯೂಟರ್ ಪರದೆಯ ಮೇಲೆ ಅವುಗಳ ಚಿತ್ರವನ್ನು ಒಂದಕ್ಕೊಂದು ಹೊಂದಿಸಿ ಅವಶೇಷದ ಪೂರ್ಣ ರೂಪವೇನೆಂಬುದನ್ನು ತಿಳಿಯಬಹುದು. ಕಲಾಕೃತಿಯಂತಹ 3 ಆಯಾಮವಿರುವ ವಸ್ತುವಿನ ಪುನರ್ಜೋಡಣೆಯಲ್ಲಿ ಈ ವಿಧಾನ ಹೆಚ್ಚು ಉಪಯುಕ್ತ. (ಎಸ್.ವಿ.ಪಿ.ಎಚ್.)

**ದೂರಸಂವೇದನೆ:** ದೂರದ ವಸ್ತು ಅಥವಾ ವಿದ್ಯಮಾನವೊಂದರ ಬಗ್ಗೆ ಮಾಹಿತಿಯನ್ನು ಅದರೊಂದಿಗೆ ಯಾವುದೇ ಬಗೆಯ ಭೌತಿಕ ಸಂಪರ್ಕ ಹೊಂದದೆ ಸಂಗ್ರಹಿಸುವ ವಿಧಾನ (ರಿಮೋಟ್ ಸೆನ್ಸಿಂಗ್). ಈ ಪದ ಮೊದಲು ಬಳಕೆಗೆ ಬಂದದ್ದು ಸು.1970ರಲ್ಲಿ. ಪುರಾತತ್ತ್ವ ನೆಲೆಗಳು ಅನೇಕ ವೇಳೆ ನಮಗೆ ಭಗ್ನಾವಶೇಷಗಳ ರೂಪದಲ್ಲಿ ಮಾತ್ರ ದೊರಕುತ್ತವೆ. ನೆಲಮಟ್ಟದಲ್ಲಿ ಅವುಗಳ ವಿನ್ಯಾಸದ ಸಮಗ್ರ ಸ್ವರೂಪ ನಮಗೆ ದೊರಕುವುದು ಕಷ್ಟ. ಮೇಲ್ಮೈ ಕೆಳಗಿನ (ಸಬ್‌ಸರ್‌ಫೇಸ್) ಪ್ರಾಚೀನ ಲಕ್ಷಣಗಳು ರೇಖೀಯ (ಲೀನಿಯರ್) ಮತ್ತು ಇತರ ಜ್ಯಾಮಿತೀಯ ಆಕಾರಗಳಲ್ಲಿ, ಮೇಲ್ಮೈ ಮೇಲೆ ಸಸ್ಯವರ್ಗ ಅಥವಾ ಭೂಮಿಯ ಗುರುತುಗಳ ಮೂಲಕ ಹೊರಹೊಮ್ಮುತ್ತವೆ. ಬಾಹ್ಯಾಕಾಶ ನೆಲೆಗಳಿಂದ ಒಂದು ಪ್ರದೇಶವನ್ನು ದೂರಸಂವೇದನ ವಿಧಾನ ಬಳಸಿ ವೀಕ್ಷಿಸುವ ವಿಧಾನ ಇಂಥ ನಿವೇಶನಗಳನ್ನು ಪರೀಕ್ಷಿಸಲು ಎಡೆಮಾಡಿಕೊಟ್ಟಿದೆ. ಬಾಹ್ಯಾಕಾಶ ನೆಲೆಯಿಂದ ಪಡೆದ ಚಿತ್ರಗಳನ್ನು ಬಳಸಿ ಪುರಾತತ್ತ್ವ ನಿವೇಶನಗಳಲ್ಲಿ ಸಂಶೋಧನೆ ಮಾಡಬೇಕಾದರೆ ಮೊದಲು ಸ್ಥಳದ ರೋಹಿತದ (ಸ್ಪೆಕ್ಟ್ರಲ್) ಮತ್ತು ಕ್ಷಣಿಕ ಪೃಥಕ್ಕರಣದ (ಟೆಂಪೊರಲ್ ರೆಸಲ್ಯೂಷನ್) ಚಿತ್ರಗಳ ಸ್ವರೂಪವನ್ನು ತೀರ್ಮಾನಿಸಬೇಕು. ಪ್ರಾಚೀನ ಲಕ್ಷಣಗಳು ಬೇಸಗೆಯಲ್ಲಿ ಅಥವಾ ಬರಗಾಲದಲ್ಲಿ ಗೋಚರವಾಗುತ್ತವೆ. ಏಕೆಂದರೆ ಕಾಲುವೆ, ನಾಲೆ, ಕಂದಕದಂಥ ಮೇಲ್ಮೈ ಕೆಳಗಿನ ರಚನೆಗಳ ಕಾರಣದಿಂದಾಗಿ ಹೆಚ್ಚು ತೇವಾಂಶವನ್ನು ಹೊಂದಿರುವ ಪ್ರದೇಶಗಳು ಎದ್ದುಕಾಣುತ್ತವೆ. ಅಂತೆಯೇ ಹೆಚ್ಚು ತೇವಾಂಶದ ಸಂದರ್ಭಗಳಲ್ಲಿ ಮೇಲ್ಮೈ ಅಡಿಯ ರಚನೆಗಳಲ್ಲಿ ಬೆಳೆ ಗುರುತುಗಳ (ಕ್ರಾಪ್‌ಮಾರ್ಕ್ಸ್) ಅಭಾವದಿಂದಾಗಿ ಅಡಿಪಾಯ ಅಥವಾ ಹುದುಗಿರುವ ಗೋಡೆಗಳಂಥ ರಚನೆಗಳು ಎದ್ದು ಕಾಣುತ್ತವೆ.

ಬಾಹ್ಯಾಕಾಶ ನೆಲೆಯಿಂದ ತಲಕಾಡು ಪ್ರದೇಶದ ಚಿತ್ರಗಳನ್ನು ಪಡೆದು ವಿಶ್ಲೇಷಿಸಲಾಯಿತು. ಅಲ್ಲಿನ ಅಸಹಜವಾದ ರೇಖೀಯ ಹಾಗೂ ಜ್ಯಾಮಿತೀಯ ಆಕಾರಗಳನ್ನು ಗುರುತಿಸಿ, ಅದು ಉತ್ಖನನಕ್ಕೆ ಯೋಗ್ಯವಾಗಿದೆಯೆಂದು ಭಾವಿಸಲಾಯಿತು. ಈ ಪ್ರದೇಶದ ವಿಲಕ್ಷಣವಾದ ಭೌಗೋಳಿಕ ವಿನ್ಯಾಸದಿಂದಾಗಿ ಈ ಪ್ರಾಚೀನ ಪಟ್ಟಣದ ಬಹುಭಾಗ ಗಾಳಿಯ ಹೊಡೆತದಿಂದ ಕಾವೇರಿನದಿಯ ಮರಳಿನಿಂದ ಮುಚ್ಚಿಹೋಗಿದೆ. ಭಾರತೀಯ ಹಾಗೂ ಅಮೆರಿಕನ್ ಉಪಗ್ರಹಗಳ ದೂರಸಂವೇದನ ವಿಧಾನದಿಂದ ದೊರೆತ ಮಾಹಿತಿಗಳನ್ನು ವಿಶ್ಲೇಷಿಸಲಾಯಿತು.

ಮೂರು ಆಯಾಮ ಮಾದರಿಗಳು (3ಡಿ ಮಾಡಲ್ಸ್), ದ್ವಿವಿಮಿತೀಯ ಭೂಪಟಗಳಿಗಿಂತ ಹೆಚ್ಚಿನ ಮಾಹಿತಿಗಳನ್ನು ಒದಗಿಸುತ್ತವೆ. ಭೂದೃಶ್ಯವನ್ನು ಮೂರು ಆಯಾಮ ಮಾದರಿಯಲ್ಲಿ ನಿಜಕಾಲದಲ್ಲಿ (ರಿಯಲ್‌ಟೈಮ್) ಚಿತ್ರೀಕರಿಸಿಕೊಂಡರೆ ಭೂದೃಶ್ಯದ ನಾನಾ ಕಣ್ನೆಲೆ ಚಿತ್ರಗಳು ದೊರೆಯುತ್ತವೆ. ಬಾದಾಮಿ ನಿವೇಶನದ 3ಡಿ ಚಿತ್ರೀಕರಣ ವಿಶ್ಲೇಷಣೆಯನ್ನು ನಡೆಸಲಾಯಿತು.

ಬಾದಾಮಿಯ ಭೂಪ್ರದೇಶ ಕಲ್ಲುಬಂಡೆಗಳಿಂದ ಕೂಡಿದೆ. ಈ ಭೂದೃಶ್ಯದಲ್ಲಿ ಸ್ಥಳೀಯ ಬಂಡೆಗಳನ್ನು ಕಡಿದು, ಕೆತ್ತಿ ಮಾಡಲಾದ ಅನೇಕ ಸ್ಮಾರಕಗಳು ಚದರಿದಂತಿವೆ. ಒಂದು ಪುರಾತತ್ತ್ವ ನಿವೇಶನದ ಸುತ್ತ, ಅದನ್ನು ತಲುಪಲು ರಸ್ತೆಗಳು, ಸೇತುವೆಗಳು ಮತ್ತು ಹಗ್ಗಮಾರ್ಗಗಳನ್ನೋ ಆ ಪ್ರದೇಶದ ಸುತ್ತ ಕಾಲುವೆಗಳು, ಕಾರ್ಖಾನೆ ಗಳನ್ನೋ ರೂಪಿಸುವಾಗ ಪ್ರಾಕ್ತನ ಅವಶೇಷಗಳಿಗೆ ತೊಂದರೆಯಾಗದಂತೆ ಎಚ್ಚರವಹಿಸಬೇಕು. ಇಂಥ ಕಡೆ 3ಡಿ ದೃಶ್ಯೀಕರಣ ವಿಧಾನ ಉಪಯೋಗಕ್ಕೆ ಬರುತ್ತದೆ. (ಆರ್.ಎಂ.ಬಿ.)

ದೂರಸಂವೇದನ ತಂತ್ರವನ್ನು ಪುರಾತತ್ತ್ವ ಕ್ಷೇತ್ರದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಪುರಾ–ವಾತಾವರಣ (ಪೇಲಿಯೋ ಎನ್‌ವಿರಾನ್‌ಮೆಂಟ್), ಭೂರೂಪಶಾಸ್ತ್ರ (ಜಿಯೊಮಾರ್ಫಾಲಜಿ), ಪ್ರಾಚೀನ ನಾಗರಿಕತೆಗಳ ಉಗಮ–ವಿಕಾಸ–ಅವನತಿ ಮುಂತಾದ ಅಧ್ಯಯನಗಳಲ್ಲಿ ಈ ತಂತ್ರ ಉಪಯುಕ್ತ. ಅಂತೆಯೇ ಪುರಾತತ್ತ್ವ ನೆಲೆ ಅಥವಾ ಸ್ಮಾರಕಗಳ ಪರಿವೀಕ್ಷಣೆ, ನಿರ್ವಹಣೆ ಮತ್ತು ಸಂರಕ್ಷಣೆಯಲ್ಲಿಯೂ ಇದು ನೆರವಾಗಬಲ್ಲದು. ಅನೇಕ ದಿಬ್ಬಗಳಿರುವ ಸ್ಥಳಗಳಲ್ಲಿ ನೈಸರ್ಗಿಕ ಹಾಗೂ ಪುರಾತತ್ತ್ವ ದಿಬ್ಬಗಳ ನಡುವಣ ವ್ಯತ್ಯಾಸವನ್ನು ಗುರುತಿಸುವಲ್ಲಿಯೂ ನೈಸರ್ಗಿಕವಾಗಿ ಅಥವಾ ಆಧುನಿಕ ನಗರಗಳ ಗರ್ಭದಲ್ಲಿ ಅಡಗಿರುವ ನೆಲೆಗಳನ್ನು ಪತ್ತೆಹಚ್ಚುವಲ್ಲಿಯೂ ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಉದಾ: ಹೈದರಾಬಾದು ನಗರದಡಿಯಲ್ಲಿ ಮುಚ್ಚಿಹೋಗಿದ್ದ ಪ್ರಾಚೀನ ಮಣ್ಣಿನಕೋಟೆಯನ್ನು ಕಂಡುಹಿಡಿಯಲು ಸಾಧ್ಯವಾದದ್ದು ಈ ವಿಧಾನದಿಂದ. ಭೂಮೇಲ್ಮೈಯಲ್ಲಿ ಯಾವ ಲಕ್ಷಣಗಳೂ ಗೋಚರಿಸದಿರುವ ಈ ಕೋಟೆಯ ಅಧ್ಯಯನವನ್ನು ಹೈದರಾಬಾದಿನ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಏಜೆನ್ಸಿಯ ತಂತ್ರಜ್ಞರು ಕೈಗೊಂಡಿದ್ದಾರೆ.

ನದೀಪಾತ್ರ ಹಾಗೂ ಕರಾವಳಿ ತೀರದಲ್ಲಾದ ಬದಲಾವಣೆಗಳು, ಸಮುದ್ರದ ಏರಿಳಿತ, ಭೂರಚನೆಯಲ್ಲುಂಟಾಗುವ ಏರುಪೇರುಗಳು ಕೆಲವೊಂದು ಪುರಾತತ್ತ್ವ ನೆಲೆಗಳ ಸ್ಥಿತಿಗತಿಯನ್ನು ಬದಲಾಯಿಸಿದ್ದುಂಟು. ಇಂತಹ ಸಂದರ್ಭದಲ್ಲಿ ದೂರಸಂವೇದನೆಯಿಂದ ತೆಗೆದ ಛಾಯಾಚಿತ್ರಗಳು ಅತ್ಯುಪಯುಕ್ತ ಮಾಹಿತಿ ಒದಗಿಸಬಲ್ಲವು. ನದಿಗಳ ಪುರಾತನ ಹರಿವು, ಪ್ರಾಚೀನ ಕರಾವಳಿ ತೀರ ಮುಂತಾದ ಭೂಲಕ್ಷಣಗಳು ಈ ಛಾಯಾಚಿತ್ರಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಸರಸ್ವತಿ ನದಿಯ ಅಧ್ಯಯನದಲ್ಲಿ ದೂರಸಂವೇದನ ತಂತ್ರ ಮಹತ್ತರ ಪಾತ್ರ ವಹಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಸಿಂಧೂ–ಸರಸ್ವತಿ ಸಂಸ್ಕೃತಿಯ ಅವನತಿಗೆ ಸರಸ್ವತಿ ನದಿಯ ಬತ್ತುವಿಕೆ ಮೂಲಕಾರಣಗಳಲ್ಲೊಂದು ಎಂಬ ನಿಲುವಿಗೆ ಈ ಅಧ್ಯಯನ ವೈಜ್ಞಾನಿಕ ಆಧಾರ ನೀಡಿದೆ.

ಪುರಾತತ್ತ್ವ ನೆಲೆಯ ಸಂರಕ್ಷಣೆಯ ಸಂದರ್ಭದಲ್ಲಿ ನೆಲೆಯ ವ್ಯಾಪ್ತಿಯನ್ನು ಈ ವಿಧಾನದಿಂದ ನಿಖರವಾಗಿ ಗುರುತಿಸಬಹುದಾಗಿದೆ. ಅಲ್ಲದೆ ನೆಲೆಯಲ್ಲಿರುವ ಕಟ್ಟಡಗಳ ಸ್ವರೂಪ–ವ್ಯಾಪ್ತಿಯನ್ನು ಸುಲಭವಾಗಿ ಗ್ರಹಿಸಬಹುದು. ಸ್ಮಾರಕ ಅಥವಾ ನೆಲೆಯ ಸುತ್ತಮುತ್ತಲಿನ ಸ್ವಾಭಾವಿಕ ಪರಿಸರ ಬದಲಾಗದಂತೆ ಕಾಯ್ದುಕೊಳ್ಳುವುದು ಸಂರಕ್ಷಣೆಯ ಒಂದು ಭಾಗ. ಇಂತಹ ಪರಿವೀಕ್ಷಣೆಯನ್ನು ದೂರಸಂವೇದನೆಯ ಆಧಾರದಿಂದ ಸುಗಮವಾಗಿ ನಿರ್ವಹಿಸಬಹುದು; ನೆಲೆಗೆ ಆಗಾಗ್ಗೆ ಭೇಟಿನೀಡುವ ಅಗತ್ಯವಿಲ್ಲ. ನೆಲೆಯ ಆಸುಪಾಸಿನಲ್ಲಾಗುವ ಮಾರ್ಪಾಡುಗಳ ಮೇಲೆ ನಿಗವಿಡುವುದೂ ಸಾಧ್ಯ. ಪ್ರಾಚೀನ ನಗರ ನೆಲೆಗಳ ಸಂಪೂರ್ಣ ಉತ್ಖನನ ಸಾಧ್ಯವಾಗದಿದ್ದಂತಹ ಸಂದರ್ಭದಲ್ಲಿ ಈ ವಿಧಾನವನ್ನು ಬಳಸಿ ಹೆಚ್ಚು ಫಲದಾಯಕವಾದಂತಹ ಭಾಗಗಳನ್ನು ಗುರುತಿಸಿ ಅಂತಹ ಸ್ಥಳಗಳಲ್ಲಿ ಮಾತ್ರ ಉತ್ಖನನ ಕೈಗೊಳ್ಳಬಹುದು. ಪ್ರಾಚೀನ ಪಟ್ಟಣ ಅಥವಾ ನಗರದ ಉಗಮ ಮತ್ತು ಬೆಳವಣಿಗೆಯನ್ನು ದೂರಸಂವೇದನೆಯ ನೆರವಿನಿಂದ ಹಂತಹಂತವಾಗಿ ತಿಳಿಯಬಹುದು. ನಗರ ರಚನಾ ವಿನ್ಯಾಸದ ಬಗೆಗಿನ ಕೂಲಂಕಷ ಅಧ್ಯಯನವೂ ಇದರಿಂದ ಸಾಧ್ಯ. (ಎ.ಟಿ.)

**ಉತ್ಖನನ:** ಪುರಾತನ ನೆಲೆಯನ್ನು ವ್ಯವಸ್ಥಿತವಾಗಿಯೂ ಶಾಸ್ತ್ರೀಯವಾಗಿಯೂ ಅಗೆಯುವ ಕಾರ್ಯವೇ ಉತ್ಖನನ (ಎಕ್ಸ್‌ಕವೇಷನ್). ಪುರಾತತ್ತ್ವ ಶಾಸ್ತ್ರದಲ್ಲಿ ಬಳಸಲ್ಪಡುವ ತಂತ್ರಗಳಲ್ಲಿ ಅತಿ ಮುಖ್ಯವಾದುದು. ಮೂಲ ಸಾಮಗ್ರಿಗಳನ್ನು ಅವುಗಳ ಖಚಿತ ಸಂದರ್ಭದಲ್ಲಿ ಪಡೆಯುವುದಕ್ಕಾಗಿ ಪುರಾತತ್ತ್ವಜ್ಞ ಉತ್ಖನನ ಕೈಗೊಳ್ಳುವನು. ಸಂಸ್ಕೃತಿಗಳ ಕಾಲಾನುಕ್ರಮವನ್ನೂ ಆಯಾ ಸಂಸ್ಕೃತಿಗಳ ವಿವಿಧ ಮುಖಗಳನ್ನೂ ಇತಿಹಾಸವನ್ನೂ ಸರಿಯಾಗಿ, ವಿವರವಾಗಿ ತಿಳಿದುಕೊಳ್ಳಲು ವ್ಯವಸ್ಥಿತ ಉತ್ಖನನವನ್ನು ಕೈಗೊಳ್ಳುವುದು ಹಾಗೂ ಉತ್ಖನನದ ಸರಿಯಾದ ದಾಖಲೆಗಳನ್ನಿಡುವುದು ಅತ್ಯವಶ್ಯ.

ಉತ್ಖನನ ಪುನರಾವೃತ್ತಿ ಮಾಡಲು ಸಾಧ್ಯವಿಲ್ಲದ ಪ್ರಯೋಗ. ಏಕೆಂದರೆ ಉತ್ಖನನವೆಂಬ ಪ್ರಯೋಗದಲ್ಲಿ ಮೂಲ ನೆಲೆ ಮತ್ತು ಅದರಲ್ಲಿ ಅಡಗಿರುವ ಮಾನವನ ಸಂಸ್ಕೃತಿಯ ಕುರುಹುಗಳು–ಕೆಲವು ಸ್ಥಿರ ಮತ್ತು ಚರ ಪ್ರಾಚ್ಯವಸ್ತುಗಳನ್ನುಳಿದು – ನಾಶವಾಗಿ ಹೋಗುತ್ತವೆ. ಉತ್ಖನನ ಮುಕ್ತಾಯಗೊಂಡಾಗ ಉಳಿಯುವುದು ಪುರಾತತ್ತ್ವಜ್ಞ ಅದರ ಬಗ್ಗೆ ಬರೆದಿಟ್ಟಿರುವ ಲಿಖಿತ ದಾಖಲೆಗಳು, ಚಿತ್ರಗಳು, ಛಾಯಾಚಿತ್ರಗಳು ಮಾತ್ರ. ಇವೇ ಆ ನೆಲೆಯಲ್ಲಿದ್ದ ಸಂಸ್ಕೃತಿಯ ಪುನಾರಚನೆಗೆ ಪ್ರಯೋಜನವಾಗುವ ಪುರಾವೆಗಳು. ಆಧುನಿಕ ಉತ್ಖನನ ತಂತ್ರಗಳು ದಾಖಲೆಗಳನ್ನು ಸಾಧ್ಯವಾದಷ್ಟು ಸಮಗ್ರವಾಗಿರಿಸುವ ಪ್ರಯತ್ನಗಳಾಗಿವೆ. ಇದಕ್ಕಾಗಿ ಉತ್ಖನನದಲ್ಲಿ ಬೇರೆ ಬೇರೆ ವಿಜ್ಞಾನಗಳಲ್ಲಿ ಪರಿಣತರಾದ ತಜ್ಞರ ಪ್ರಯೋಜನ ಪಡೆಯಲಾಗುತ್ತದೆ. ಉತ್ಖನನದಲ್ಲಿ ಪ್ರಾಚ್ಯಾವಶೇಷಗಳ ಸಂದರ್ಭವನ್ನು ಸರಿಯಾಗಿ ಕಂಡುಕೊಳ್ಳಲು ಸ್ತರವಿಂಗಡನ ಪದ್ಧತಿಯನ್ನು (ಸ್ಟ್ರ್ಯಾಟಿಗ್ರಫಿ) ಅಳವಡಿಸಲಾಗುತ್ತದೆ.

ಯಾವುದೊಂದು ನೆಲೆ ಒಂದೇ ಜನಾಂಗದವರಿಂದ ಅಥವಾ ಕಾಲಕಾಲಕ್ಕೆ ವಿವಿಧ ಜನಾಂಗದವರಿಂದ ದೀರ್ಘಕಾಲದವರೆಗೆ ವಸತಿಗಾಗಿ ಉಪಯೋಗಿಸಲ್ಪಟ್ಟರೆ, ಆಯಾ ಜನಾಂಗಗಳ ಸಾಂಸ್ಕೃತಿಕ ಅವಶೇಷಗಳು ಅಲ್ಲಿ ಶೇಖರಣೆಯಾಗಿ ನೆಲೆ ದಿಬ್ಬದ ರೂಪ ತಾಳುತ್ತದೆ. ಈ ಕ್ರಿಯೆಯಲ್ಲಿ ವಸತಿ ಅವಶೇಷಗಳು ಮಣ್ಣಿನ ಬಣ್ಣ, ಸ್ವರೂಪ, ಗುಣ, ಘಟಕ, ಸಡಿಲತೆ ಮುಂತಾದವುಗಳಿಗನುಗುಣವಾಗಿ ಬೇರೆ ಬೇರೆ ಸ್ತರ ಅಥವಾ ಪದರಗಳಾಗಿ ಶೇಖರಣೆಯಾಗುತ್ತವೆ. ದಿಬ್ಬವನ್ನು ಲಂಬವಾಗಿ ಛೇದಿಸಿದರೆ, ಅವಶೇಷಗಳುಳ್ಳ ವಿವಿಧ ಸ್ತರಗಳು ಒಂದರ ಮೇಲೊಂದರಂತೆ ಕಾಣಿಸಿಕೊಳ್ಳುತ್ತವೆ. ಹೀಗೆ ಉಂಟಾದ ಸ್ತರಗಳಲ್ಲಿ ತೀರ ತಳದಲ್ಲಿ ನೈಸರ್ಗಿಕ ಮಣ್ಣಿನ ಮೇಲೆ ಶೇಖರಣೆಯಾಗಿರುವ ಸ್ತರ ನೆಲೆಯಲ್ಲಿಯ ಅತಿ ಪ್ರಾಚೀನ ಸಂಸ್ಕೃತಿಯ ಅವಶೇಷಗಳನ್ನೂ ಅನಂತರದ ಸ್ತರಗಳು ಅನುಕ್ರಮವಾಗಿ ಅನಂತರದ ಸಾಂಸ್ಕೃತಿಕ ಅವಶೇಷಗಳನ್ನೂ ತೀರ ಮೇಲಿನ, ದಿಬ್ಬದ ಹೊದಿಕೆಯಂತಿರುವ ಸ್ತರ ಅಲ್ಲಿದ್ದ ಕೊನೆಯ ಸಂಸ್ಕೃತಿಯ (ಕಾಲಮಾನದಲ್ಲಿ ತೀರ ಈಚಿನ) ಅವಶೇಷಗಳನ್ನೂ ಒಳಗೊಂಡಿರುತ್ತವೆ. ಈ ರೀತಿಯಾಗಿ ವಸತಿ ದಿಬ್ಬದ ಸ್ತರಕ್ರಮ ನೆಲೆಯಲ್ಲಿದ್ದ ಸಂಸ್ಕೃತಿಗಳ ಕಾಲಾನುಕ್ರಮದ (ಸಾಪೇಕ್ಷ ಕಾಲ ನಿರ್ಣಯದ) ದಾಖಲೆಯಾಗಿದೆ.

**ಉತ್ಖನನ ವಿಧಾನಗಳು:** ನೆಲೆಯ ಸ್ವರೂಪ ಹಾಗೂ ಉತ್ಖನನದ ಉದ್ದೇಶಗಳನ್ನು ಆಧರಿಸಿ ವಿವಿಧ ವಿಧಾನಗಳನ್ನು ರೂಪಿಸಿಕೊಳ್ಳಲಾಗಿದೆ.

1. ನಿರಂಕುಶ ಉತ್ಖನನ: ಈ ವಿಧಾನದಲ್ಲಿ ಸ್ತರವಿಂಗಡನೆಗೆ ಗಮನವೀಯಲಾಗುವುದಿಲ್ಲ. ನಿರ್ದಿಷ್ಟ ಆಳದಷ್ಟು (ಉದಾ: 20ಸೆಂಮೀ ದಪ್ಪ) ಮಣ್ಣನ್ನು ಉತ್ಖನನ ಗುಂಡಿಯಿಂದ ಒಂದೇ ಮಟ್ಟದಲ್ಲಿ ತೋಡಲಾಗುತ್ತದೆ. ಇದರಲ್ಲಿ ದೊರೆಯುವ ಪ್ರಾಚ್ಯವಸ್ತುಗಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಅನಂತರ ಅಷ್ಟೇ ಆಳದ ಮಣ್ಣನ್ನು ಮತ್ತೆ ಸಮತಟ್ಟಾಗಿ ತೋಡುವುದು. ಪ್ರಾಚ್ಯವಸ್ತುಗಳನ್ನು ಅವು ದೊರೆತ ಮಟ್ಟಗಳಿಗನುಗುಣವಾಗಿ ದಾಖಲು ಮಾಡಲಾಗುತ್ತದೆ. ಪ್ರಾಚ್ಯವಸ್ತು ದೊರೆತ ಮಟ್ಟ ಅದರ ಸಾಪೇಕ್ಷ ಕಾಲಮಾನದ ಸೂಚಿಯಾಗಿದೆಯೆಂದು ತಿಳಿಯಲಾಗುತ್ತದೆ.

2. ಸ್ತರವಿಂಗಡನಾತ್ಮಕ ಉತ್ಖನನ: ಸ್ತರವಿಂಗಡನೆಯ ತತ್ತ್ವವನ್ನು ಗಮನದಲ್ಲಿರಿಸಿಕೊಂಡು ನಡೆಸಲಾಗುವ ಉತ್ಖನನ.

ನೆಲೆಯ ಸ್ವರೂಪಕ್ಕನುಗುಣವಾಗಿ (ವಸತಿ, ಸ್ಮಶಾನ ಇತ್ಯಾದಿ) ಕೆಲವು ಉತ್ಖನನ ವಿಧಾನಗಳನ್ನು ಕಲ್ಪಿಸಲಾಗಿದೆ.

ವಸತಿ ನೆಲೆಯ ಉತ್ಖನನ ವಿಧಾನಗಳು: ಸ್ವರೂಪಕ್ಕನುಗುಣವಾಗಿ ಎರಡು ವಿಧಾನಗಳನ್ನು ಕಲ್ಪಿಸಲಾಗಿದೆ: (1) ಲಂಬ ಉತ್ಖನನ, (2) ವಿಸ್ತೃತ ಅಥವಾ ಸಮತಲ ಉತ್ಖನನ. ಈ ಎರಡೂ ವಿಧಾನಗಳಲ್ಲಿ ಮೂಲ ತತ್ತ್ವವಾದ ಸ್ತರವಿಂಗಡನೆಯನ್ನು ಗಮನದಲ್ಲಿರಿಸಲಾಗುವುದು.

(1) ಲಂಬ ಉತ್ಖನನ: ನೆಲೆಯಲ್ಲಿ ಆಯ್ದ ಸ್ಥಳಗಳಲ್ಲಿ ಚೌಕ ಅಥವಾ ಆಯತ ಗುಂಡಿಗಳನ್ನು ಬಾವಿಯನ್ನು ತೋಡುವಂತೆ ಮೇಲಿನಿಂದ ಕೆಳಗೆ ಲಂಬವಾಗಿ ನೈಸರ್ಗಿಕ ಮಣ್ಣಿನವರೆಗೆ ಅಗೆಯಲಾಗುತ್ತದೆ. ನೆಲೆಯಲ್ಲಿದ್ದ ಸಂಸ್ಕೃತಿಗಳ ಆನುಪೂರ್ವಿಯನ್ನು (ಕಾಲಾನುಕ್ರಮವನ್ನು) ಕಂಡುಕೊಳ್ಳುವುದು ಇದರ ಮುಖ್ಯ ಉದ್ದೇಶ. ಲಂಬ ಉತ್ಖನನ ಪರಿಮಿತ ಉತ್ಖನನವಾಗಿದೆ. ಸಾಮಾನ್ಯವಾಗಿ ಉತ್ಖನನಕ್ಕೆಂದು ಆಯ್ಕೆಯಾದ ನೆಲೆಯಲ್ಲಿ ಪರೀಕ್ಷಾರ್ಥವಾಗಿ ಲಂಬ ಉತ್ಖನನವನ್ನು ಜರುಗಿಸಲಾಗುತ್ತದೆ. ಇತಿಹಾಸಪೂರ್ವ ಕಾಲದ ನೆಲೆಗಳ ಸ್ಥೂಲ ವಿವರಗಳನ್ನು ಅರಿತುಕೊಳ್ಳಲು ಈ ವಿಧಾನ ಹೆಚ್ಚು ಉಪಯುಕ್ತವಾಗಿದೆ.

ಲಂಬ ಉತ್ಖನನ ಹಣ, ಕಾಲದ ದೃಷ್ಟಿಯಿಂದ ಮಿತವ್ಯಯಕಾರಿ. ನಿರ್ದಿಷ್ಟ ಸಮಸ್ಯೆಯ ದೃಷ್ಟಿಯಿಂದ ಮಾಡುವ ಅಧ್ಯಯನಗಳಿಗೆ ಇದು ಪೂರಕವಾಗಿದೆ. ಅನ್ವೇಷಣೆಗಳಿಂದ ಕಂಡುಬಂದ ಎರಡು ಅಥವಾ ಹೆಚ್ಚು ನೆಲೆಗಳ ಸಾಂಸ್ಕೃತಿಕ ಆನುಪೂರ್ವಿಯನ್ನು ಹೋಲಿಸಿ ನೋಡಲು ಲಂಬ ಉತ್ಖನನ ಪ್ರಯೋಜನಕಾರಿ. ನೆಲೆಯ ಮೇಲ್ಮೈಯಲ್ಲಿ ಕಾಣಬರದಿರುವ ಕೋಟೆ ಅಥವಾ ಕಟ್ಟಡದ ಗೋಡೆಗಳ ರೂಪರೇಷೆಗಳನ್ನು ಸ್ಥೂಲವಾಗಿ ನಿರ್ಧರಿಸಲು ಸಹ ಈ ವಿಧಾನ ಸಹಕಾರಿ. ಇದರಿಂದ ನೆಲೆಯಲ್ಲಿಯ ಸ್ತರಕ್ರಮದ ಸ್ವರೂಪ ಕೂಡ ಗೊತ್ತಾಗುತ್ತದೆ. ಲಂಬ ಉತ್ಖನನ ವಿಸ್ತೃತ ಉತ್ಖನನಕ್ಕೆ ಪೂರ್ವಭಾವಿಯೂ ಪೂರಕವೂ ಆಗಿದೆ.

ಆಯತ ವಿನ್ಯಾಸ ವ್ಯವಸ್ಥೆಯ ಉತ್ಖನನ ಮತ್ತು ಮೂರು–ಆಯಾಮ ದಾಖಲೆ: ಆಯತಾಕಾರದ ವಿನ್ಯಾಸವನ್ನಳವಡಿಸಲಾದ, ಕೆಲವು ವಿಶಿಷ್ಟ ಸಮಸ್ಯೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ನಡೆಸಲಾಗುವ ಲಂಬ ಉತ್ಖನನದ ರೂಪಾಂತರ. ಈ ಬಗೆಯ ಉತ್ಖನನ ಗುಂಡಿಗಳು ಪರೀಕ್ಷಾ ಗುಂಡಿಗಳಿಗಿಂತ ಹೆಚ್ಚು ವಿಶಾಲವಾಗಿದ್ದು ದಾಖಲೆಗಳನ್ನಿಡುವುದಕ್ಕೆ ಅನುಕೂಲಕರವಾಗಿರುತ್ತದೆ. ಇದರಿಂದಾಗಿ ಮಾರ್ಟಿಮರ್ ವೀಲರ್ ಈ ವಿಧಾನವನ್ನು ಸಬ್‌ಸ್ಟ್ಯಾಂಟಿವ್ ಡಿಗ್ಗಿಂಗ್ ಎಂದು ಕರೆದಿದ್ದಾನೆ. ಕೋಟೆಯ ಗೋಡೆಗಳಿಗೆ ಅಡ್ಡಗುಂಡಿ ತೋಡುವುದು ಇದಕ್ಕೊಂದು ಉದಾಹರಣೆ. ಇಂತಹ ಉತ್ಖನನ ಗುಂಡಿಗಳಿಂದ ಕೋಟೆಯ ಗೋಡೆಗೂ ಕೋಟೆಯ ಒಳಗಿನ ವಸತಿಗಳ ಆನುಪೂರ್ವಿಗೂ ಇರುವ ಕಾಲ ಸಂಬಂಧವನ್ನು ಕಂಡುಕೊಳ್ಳಬಹುದು. ನೆಲೆಯಲ್ಲಿದ್ದ ಸಂಸ್ಕೃತಿಗಳ ಕಾಲಾನುಪೂರ್ವಿಯನ್ನು ಸಹ ಈ ವಿಧಾನದಿಂದ ಕಂಡುಕೊಳ್ಳಬಹುದು. ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಉದ್ದವಾಗಿ ಗುಂಡಿಯನ್ನು ತೋಡಲಾಗುತ್ತದೆ. ಇಂತಹ ಗುಂಡಿಯನ್ನು ಅವಶ್ಯಕತೆಗೆ ತಕ್ಕಂತೆ ಉದ್ದುದ್ದವಾಗಿ ವಿಸ್ತರಿಸಲಾಗುತ್ತದೆಯೇ ವಿನಃ ಅಡ್ಡಡ್ಡವಾಗಿಯಲ್ಲ. ಉತ್ಖನನಕ್ಕೆಂದು ಆಯ್ದ ಸ್ಥಳದಲ್ಲಿ

ಮೊದಲು ಮೂಲ ಸೂತ್ರರೇಖೆಯನ್ನು ನಿರ್ಧರಿಸಿ ಆ ರೇಖೆಗುಂಟ ಪ್ರತಿ ಮೀಟರಿಗೊಂದರಂತೆ ಬಲವಾಗಿ ಗೂಟಗಳನ್ನು ನೆಡಲಾಗುತ್ತದೆ. ತೋಡಬೇಕಾಗಿರುವ ಗುಂಡಿಯ ಅಡ್ಡಳತೆಯನ್ನು ನಿರ್ಧರಿಸಿ ಆ ಅಳತೆಗನುಗುಣವಾಗಿ ಮೂಲ ಸೂತ್ರರೇಖೆಗೆ ಸಮಾನಾಂತರವಾಗಿಯೂ ಮೊದಲು ನೆಟ್ಟ ಗೂಟಗಳಿಗೆ ಸರಿಹೊಂದುವಂತೆಯೂ ಇನ್ನೊಂದು ಸಾಲು ಗೂಟಗಳನ್ನು ನೆಡಲಾಗುತ್ತದೆ. ಹೀಗೆ ನೆಡಲಾದ ಗೂಟಗಳಿಂದ ಪ್ರಾಚ್ಯ ಅವಶೇಷಗಳನ್ನು 3–ಆಯಾಮ ವಿಧಾನದಿಂದ (3–ಡಿ) ದಾಖಲು ಮಾಡುವುದು ಸುಲಭವಾಗುತ್ತದೆ. ಹೆಚ್ಚು ವಿಶಾಲವಾಗಬಹುದಾದ ಆಯತ ವಿನ್ಯಾಸ ವ್ಯವಸ್ಥೆಯ ಉತ್ಖನನದಲ್ಲಿ ಗುಂಡಿಯ ನಡುನಡುವೆ, ಸಮಾನ ಅಂತರಗಳಲ್ಲಿ (ಸಾಮಾನ್ಯವಾಗಿ 3ಮೀ) ಅಡ್ಡಗೋಡೆಗಳನ್ನು ಉಳಿಸಿಕೊಳ್ಳಬಹುದು. ಇದರಿಂದ ಸರಿಯಾದ ಸ್ತರವಿಂಗಡನೆಗೂ, ಕೂಲಿ ಆಳುಗಳ ಚಲನವಲನೆಗೂ ಗುಂಡಿಯ ವಿವಿಧ ಭಾಗಗಳ ಪರಿವೀಕ್ಷಣೆಗೂ ಅನುಕೂಲವಾಗುತ್ತದೆ. ಉತ್ಖನನದ ಕೊನೆಯಲ್ಲಿ ಈ ಅಡ್ಡಗೋಡೆಗಳನ್ನು ತೆಗೆದು ಉತ್ಖನನಗೊಂಡ ಪ್ರದೇಶವನ್ನು ಪೂರ್ಣವಾಗಿ ಅನಾವರಣಗೊಳಿಸಬಹುದು.

ಆಯತ ವಿನ್ಯಾಸ ವ್ಯವಸ್ಥೆಯ ಉತ್ಖನನದಲ್ಲಿ ದೊರೆಯುವ ಅವಶೇಷಗಳನ್ನು 3–ಆಯಾಮ ವಿಧಾನದಿಂದ ದಾಖಲು ಮಾಡಿಕೊಳ್ಳಲಾಗುತ್ತದೆ. ಪ್ರಾಚ್ಯವಸ್ತು ದೊರೆತ ಸಂದರ್ಭ, ಸ್ಥಿತಿ, ಸ್ತರ ಮುಂತಾದವುಗಳನ್ನು ಸರಿಯಾಗಿ ನಿರ್ಧರಿಸಲು ಉದ್ದ, ಅಗಲ, ಎತ್ತರ ಅಥವಾ ಆಳಗಳನ್ನೊಳಗೊಂಡ ಮೂರು ಅಳತೆಗಳನ್ನು (ಆಯಾಮಗಳನ್ನು) ದಾಖಲು ಮಾಡಿಕೊಳ್ಳಲಾಗುತ್ತದೆ. ಅದರಿಂದಲೇ ಈ ವಿಧಾನಕ್ಕೆ 3–ಆಯಾಮ ದಾಖಲೆ ಎಂದು ಕರೆಯಲಾಗಿದೆ. ಉತ್ಖನನ ಗುಂಡಿಯನ್ನು ಅಡ್ಡವಾಗಿ ವಿಸ್ತಾರಗೊಳಿಸಲು ಸಾಧ್ಯವಿಲ್ಲದಿರುವುದು ಆಯತ ವಿನ್ಯಾಸ ವ್ಯವಸ್ಥೆಯ ಒಂದು ಕೊರತೆ. ಈ ವ್ಯವಸ್ಥೆಯ ಇನ್ನೊಂದು ಕೊರತೆಯೆಂದರೆ ನೆಲೆಯಲ್ಲಿದ್ದ ಸಂಸ್ಕೃತಿಗಳ ಹೆಚ್ಚಿನ ವಿವರಗಳನ್ನು ಅರಿತುಕೊಳ್ಳಲು ಸಾಧ್ಯವಾಗದಿರುವುದು.

(2) ವಿಸ್ತೃತ ಉತ್ಖನನ ಅಥವಾ ಸಮತಲ ಉತ್ಖನನ: ನೆಲೆಯಲ್ಲಿದ್ದ ಸಂಸ್ಕೃತಿಗಳ ವಿವರವಾದ ಅಧ್ಯಯನ ನಡೆಸುವುದಕ್ಕಾಗಿ ಆಯಾ ಸಂಸ್ಕೃತಿಗಳ ಅವಶೇಷಗಳುಳ್ಳ ಪ್ರದೇಶವನ್ನು ಹೆಚ್ಚು ಹೆಚ್ಚು ಅನಾವರಣಗೊಳಿಸಬೇಕಾಗುತ್ತದೆ. ಹೀಗೆ ಧಾರ್ಮಿಕ, ಆರ್ಥಿಕ, ಸಾಮಾಜಿಕ ಇತ್ಯಾದಿ ಸಾಂಸ್ಕೃತಿಕ ವಿಷಯಗಳನ್ನು ಸಾಕಷ್ಟು ವಿವರವಾಗಿ ಕಂಡುಕೊಳ್ಳುವ ದೃಷ್ಟಿಯಿಂದ ನೆಲೆಯಲ್ಲಿ ವಿಸ್ತಾರವಾದ ಪ್ರದೇಶವನ್ನು ಉತ್ಖನನ ಮಾಡುವುದಕ್ಕೆ ವಿಸ್ತೃತ ಅಥವಾ ಸಮತಲ ಉತ್ಖನನ ಎಂದು ಕರೆಯಲಾಗುತ್ತದೆ.

ವಿಸ್ತೃತ ಉತ್ಖನನವನ್ನು ನಡೆಸಲು ಎರಡು ರೀತಿಯ ವಿಧಾನಗಳನ್ನು ಅನುಸರಿಸಬಹುದು: (ಅ) ಚೌಕೋನಜಾಲ ವಿನ್ಯಾಸ ವ್ಯವಸ್ಥೆಯ ಉತ್ಖನನ (ಆ) ಮುಕ್ತ ವ್ಯವಸ್ಥೆಯ ಉತ್ಖನನ.

(ಅ) ಚೌಕೋನಜಾಲ ವಿನ್ಯಾಸ ವ್ಯವಸ್ಥೆ: ಉತ್ಖನನ ಮಾಡುವುದಕ್ಕೂ ಉತ್ಖನನದಲ್ಲಿ ದೊರೆಯುವ ಅವಶೇಷಗಳನ್ನು ಸರಿಯಾಗಿ ದಾಖಲು ಮಾಡಿಕೊಳ್ಳುವುದಕ್ಕೂ ಸರಿಯಾದ ಸ್ತರವಿಂಗಡನೆಗೂ ಅನುಕೂಲವಾಗುವಂತೆ ಚೌಕಗಳನ್ನು ಆಧರಿಸಿದ ಚೌಕೋನಜಾಲ ವಿನ್ಯಾಸ ವ್ಯವಸ್ಥೆಯನ್ನು ಬಳಸಲಾಗುತ್ತದೆ. ಇದಕ್ಕಾಗಿ ನೆಲೆಯಲ್ಲಿ ಉತ್ಖನನಗೊಳ್ಳುವ ಪ್ರದೇಶವನ್ನು ಒಂದೇ ಅಳತೆಯ ಚಚ್ಚೌಕಗಳಾಗಿ ಒಂದರ ಪಕ್ಕದಲ್ಲೊಂದು ಚೌಕಬರುವಂತೆ ವಿಂಗಡಿಸಲಾಗುತ್ತದೆ. ಪ್ರತಿ ಎರಡು ಚೌಕಗಳ ನಡುವೆ ಅಡ್ಡಗೋಡೆ (ಬಾಕ್) ಉಳಿಯುವಂತೆ ವ್ಯವಸ್ಥೆ ಮಾಡಿ ಚೌಕ ಗುಂಡಿಗಳನ್ನು ತೋಡಲಾಗುತ್ತದೆ. ಹೀಗೆ ವಿಂಗಡಿಸಲ್ಪಟ್ಟ ಚೌಕಗಳ ವಿನ್ಯಾಸ ಚೌಕಗಳಿಂದುಂಟಾದ ಜಾಲ ವಿನ್ಯಾಸದಂತೆ ಕಾಣುತ್ತದೆ.

(ಆ) ಮುಕ್ತ ವ್ಯವಸ್ಥೆಯ ಉತ್ಖನನ: ವಿಸ್ತೃತ ಉತ್ಖನನದಲ್ಲಿ ಇತ್ತೀಚೆಗೆ ಹೆಚ್ಚು ಬಳಕೆಯಾಗು ತ್ತಿರುವ ಇನ್ನೊಂದು ಕ್ರಮ. ಈ ರೀತಿಯ ಉತ್ಖನನ ಕ್ರಮದಲ್ಲಿ ನೆಲೆಯ ಮೇಲ್ಮೈಯಲ್ಲಿ ನಿರ್ದಿಷ್ಟ ಪ್ರದೇಶವನ್ನು ಗುರುತಿಸಿ ಮುಕ್ತವಾಗಿ ಸ್ತರಗಳಿಗನುಗುಣವಾಗಿ ಉತ್ಖನನ ಮಾಡಲಾಗು ತ್ತದೆ. ಉತ್ಖನನಗೊಳ್ಳುವ ಪ್ರದೇಶದ ವಿಸ್ತಾರ ಹೆಚ್ಚಾಗಿರುವುದರಿಂದ ಪ್ರಾಚ್ಯವಸ್ತುಗಳನ್ನು ದಾಖಲು ಮಾಡಿಕೊಳ್ಳಲು ಅನುಕೂಲವಾಗುವಂತೆ ಚೌಕಗಳನ್ನಾಧರಿಸಿದ ವಿನ್ಯಾಸ ವ್ಯವಸ್ಥೆಯನ್ನು ಅಳವಡಿಸಲಾಗುತ್ತದೆ. ಆದರೆ ಅಡ್ಡಗೋಡೆಗಳನ್ನು ಉಳಿಸಿಕೊಳ್ಳಲಾಗುವುದಿಲ್ಲ. ಈ ವಿಧಾನದ ಪ್ರತಿಪಾದಕರು ಅಡ್ಡಗೋಡೆಗಳು ದಾಖಲೆಗಳ ಸಮಗ್ರತೆಗೆ ಅಡಚಣೆಯಾಗು ತ್ತವೆಂದು ಭಾವಿಸುತ್ತಾರೆ. ಈ ವಿಧಾನದ ಪ್ರತಿಪಾದಕರಲ್ಲಿ ಆಂಗ್ಲ ಪುರಾತತ್ತ್ವಜ್ಞ ಫಿಲಿಪ್ ಬಾರ್ಕರ್ ಪ್ರಮುಖನಾಗಿದ್ದಾನೆ.

ಸ್ಮಶಾಣ ನಿವೇಶನದ ಉತ್ಖನನ: ಕೆಲವು ವಿಶಿಷ್ಟ ಬಗೆಯ ಸಮಾಧಿ ದಿನ್ನೆಗಳು ಮತ್ತು ಬೃಹತ್ ಶಿಲಾಸಮಾಧಿಗಳ ಉತ್ಖನನಕ್ಕೆ ಚತುರ್ಭಾಗ ಪದ್ಧತಿಯನ್ನು ಅಳವಡಿಸಲಾಗುತ್ತದೆ. ಬೃಹತ್ ಶಿಲಾಯುಗದ ಶಿಲಾವೃತ್ತ ಸಮಾಧಿ ಹಾಗೂ ಶವಕುಣಿಗಳ ಉತ್ಖನನದಲ್ಲಿ ಚತುರ್ಭಾಗ ಪದ್ಧತಿಯನ್ನು ಬಳಸಲಾಗುತ್ತದೆ.

ಚತುರ್ಭಾಗ ಉತ್ಖನನ ಪದ್ಧತಿ: ಸಮಾಧಿಯ ವೃತ್ತವನ್ನು ನಾಲ್ಕು ಸಮಭಾಗಗಳಾಗಿ ವಿಂಗಡಿಸಬೇಕು. ಅನಂತರ ಒಂದಕ್ಕೊಂದು ವಿರುದ್ಧವಾಗಿರುವ ಭಾಗಗಳಲ್ಲಿ ಕ್ರಮವಾಗಿ ಉತ್ಖನನ ಮಾಡಬೇಕು. ಅನಂತರ ಉಳಿದೆರಡು ಭಾಗಗಳನ್ನು ಅಡ್ಡಗೋಡೆಗಳನ್ನು ಉಳಿಸಿಕೊಂಡು ಉತ್ಖನನ ಮಾಡಬೇಕು. ಇದರಿಂದ ಯಾವುದೇ ವೃತ್ತಭಾಗವನ್ನು ಉತ್ಖನನ ಮಾಡುವಾಗಲೂ ಸ್ತರವಿಂಗಡನೆಗೆ ಅನುಕೂಲವಾಗುತ್ತದೆ. ಸಮಾಧಿಯನ್ನು ಯಾವ ಕಾಲದಲ್ಲಾದರೂ ಅಗೆದು ಕೆಡಿಸಿದ್ದರೆ ಸ್ತರವಿಂಗಡನೆಯಿಂದ ಗೊತ್ತಾಗುತ್ತದೆ. ಒಂದೇ ಸಮಾಧಿಯಲ್ಲಿ ಒಂದಕ್ಕಿಂತ ಹೆಚ್ಚು ಶವಗಳು ಹೂಳಲ್ಪಟ್ಟಿದ್ದರೆ ಅವುಗಳಲ್ಲಿ ಯಾವುದು ಮೊದಲಿನದು ಯಾವುದು ಅನಂತರದ್ದು ಎಂದು ಕಂಡುಕೊಳ್ಳುವುದು ಸ್ತರವಿಂಗಡನೆಯಿಂದ ಮಾತ್ರ ಸಾಧ್ಯ. ಮಧ್ಯದಲ್ಲಿ ಉಳಿಸಿಕೊಂಡಿರುವ ಅಡ್ಡಗೋಡೆಗಳನ್ನು ಸರಿಯಾಗಿ ಅಧ್ಯಯನ ಮಾಡಿದರೆ ಶವದ ಕುಣಿಯನ್ನು ನೆಲದಲ್ಲಿ ಅಗೆದಿರುವ ರೀತಿ, ಅದರೊಳಗಿನ ಶವ ಸಂಸ್ಕಾರದ ವಸ್ತುಗಳು ಇರುವ ಸ್ಥಿತಿ, ಸ್ಥಾನ, ಕುಣಿಯಲ್ಲಿಯ ಮಣ್ಣಿನ ಸ್ವರೂಪ ಮತ್ತು ಮಣ್ಣನ್ನು ತುಂಬಿರುವ ರೀತಿ, ಅದರಲ್ಲಿ ಕಲ್ಲುರಾಶಿಯ ಹಾಗೂ ಕಲ್ಲಿನ ವೃತ್ತಾಕಾರದ ಕಟ್ಟೆಯ ಜೋಡಣೆ ಇವೆಲ್ಲ ಸ್ಪಷ್ಟವಾಗಿ ತಿಳಿದುಬರುತ್ತವೆ. ಇವನ್ನೆಲ್ಲ ಸರಿಯಾಗಿ, ಸಮಗ್ರವಾಗಿ ರೇಖಾಚಿತ್ರ, ನಕ್ಷೆ, ಛಾಯಾಚಿತ್ರ ಮುಂತಾದವುಗಳಿಂದ ದಾಖಲು ಮಾಡಿಕೊಂಡ ಅನಂತರ ಶವಸಂಸ್ಕಾರದ ವಸ್ತುಗಳನ್ನೆಲ್ಲ ಪೂರ್ಣವಾಗಿ ಕಾಣುವ ಹಾಗೆ ಮಾಡಿ, ಪೂರ್ಣ ವಿವರಗಳನ್ನು ದಾಖಲು ಮಾಡಿಕೊಳ್ಳಬೇಕು. ಇದಾದ ಅನಂತರವೇ ಶವ ಸಂಸ್ಕಾರದ ವಸ್ತುಗಳನ್ನು ಸಂಗ್ರಹಿಸಿ ಅವುಗಳನ್ನು ಕೂಲಂಕಷ ಪರೀಕ್ಷೆಗೊಳಪಡಿಸಬೇಕು.

ಬ್ರಹ್ಮಗಿರಿಯಲ್ಲಿ (ಚಿತ್ರದುರ್ಗ ಜಿಲ್ಲೆ) 1947ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯವರು ಬಹು ದಕ್ಷತೆಯಿಂದ ಬೃಹತ್ ಶಿಲಾಸಮಾಧಿಗಳನ್ನು ಅಗೆದರು. ಬೃಹತ್ ಚಪ್ಪಡಿಕಲ್ಲುಗಳನ್ನು ಉಪಯೋಗಿಸಿ ನಿರ್ಮಿಸಲಾಗಿರುವ ಕೋಣೆಯಂಥ ಸಮಾಧಿಗಳನ್ನು ಉತ್ಖನನ ಮಾಡುವ ಮೊದಲು ಕೋಣೆಯ ಹೊರಭಾಗಗಳು ಸ್ಪಷ್ಟವಾಗಿ ಕಾಣುವಂತೆ ಮಾಡಬೇಕು. ಕೋಣೆಯ ಮೇಲೆ ಮುಚ್ಚಿರುವ ಚಪ್ಪಡಿಕಲ್ಲನ್ನು ತೆಗೆದಿರಿಸಬೇಕು. ಅನಂತರ ಕೋಣೆಯ ಒಳಭಾಗವನ್ನು ಉತ್ಖನನ ಮಾಡುವಾಗ ಮೊದಲು ಅರ್ಧಭಾಗವನ್ನೂ ಕೊನೆಗೆ ಇನ್ನರ್ಧ ಭಾಗವನ್ನೂ ದಕ್ಷತೆಯಿಂದ ಸಾವಕಾಶವಾಗಿ ಅಗೆಯಬೇಕು. ದೊರೆಯುವ ಎಲ್ಲ ವಸ್ತುಗಳನ್ನೂ ವಿವರಗಳನ್ನೂ ಸಚಿತ್ರವಾಗಿ ದಾಖಲು ಮಾಡಿಕೊಳ್ಳಬೇಕು. ಕೋಣೆಯಂಥ ಸಮಾಧಿಯ ರಚನೆ ಯಾವ ರೀತಿಯಿಂದಲೂ ಹಾಳಾಗದಂತೆ ನೋಡಿಕೊಳ್ಳಬೇಕು. ಉತ್ಖನನ ಮುಗಿದ ಅನಂತರ ಚಪ್ಪಡಿಕಲ್ಲನ್ನು ಮೊದಲಿದ್ದಂತೆಯೇ ಇರಿಸಬೇಕು. (ಎಸ್.ವಿ.ಪಿ.)

ಲಾಟ್ ವಿಧಾನ: ವಿಸ್ತೃತ ಉತ್ಖನನದಲ್ಲಿ ಬಳಸುವ ಅಗೆತದ ವಿಧಾನ. ಇದರಲ್ಲಿ ಉತ್ಖನನಕ್ಕೆ ಆಯ್ಕೆ ಮಾಡಿಕೊಂಡ ಜಾಗವನ್ನು ಮೊದಲಿಗೆ 5x5ಮೀ ಚೌಕ ಅಥವಾ ಗುಂಡಿಗಳಾಗಿ ವಿಭಜಿಸಲಾಗುತ್ತದೆ. ಗುಂಡಿಗಳನ್ನು ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳಿಂದ ಹೆಸರಿಸಲಾಗುತ್ತದೆ. (ಎ 1, 2, 3, .... ಬಿ 1, 2, 3,.... ಸಿ1, 2, 3.... ಇತ್ಯಾದಿ). ಪ್ರತಿಯೊಂದು ಗುಂಡಿಯನ್ನು ಮತ್ತೆ 2.5x2.5ಮೀ ನ ನಾಲ್ಕು ಸಮ ಭಾಗಗಳಾಗಿ ಗೋಡೆಗಳು ಉಳಿಯದಂತೆ ವಿಭಜಿಸಲಾಗುತ್ತದೆ. ಈ ಭಾಗಗಳನ್ನು ಆಗ್ನೇಯ, ನೈರುತ್ಯ, ವಾಯುವ್ಯ, ಈಶಾನ್ಯ ಎಂದು ಗುರುತಿಸಲಾಗುತ್ತದೆ. ಅಗೆತವನ್ನು ಒಮ್ಮೆಗೆ ಯಾವುದಾದರೊಂದು ಭಾಗದಲ್ಲಿ ನಡೆಸಲಾಗುತ್ತದೆ. ಅಗತ್ಯವಿದ್ದಲ್ಲಿ ಉಳಿದ ಭಾಗಗಳಲ್ಲಿ ಏಕಕಾಲಕ್ಕೆ ಅಗೆತವನ್ನು ಕೈಗೊಳ್ಳಬಹುದು. ಪ್ರತಿ ಅಗೆತಕ್ಕೆ ಕೊಡುವ ಸಂಖ್ಯೆಯನ್ನು ಲಾಟ್ ಸಂಖ್ಯೆ ಎನ್ನುತ್ತಾರೆ. ಗುಂಡಿಯ ಈಶಾನ್ಯ ಭಾಗದಲ್ಲಿನ ಮೊದಲ ಅಗೆತದ ಅಥವಾ ಲಾಟ್ ಸಂಖ್ಯೆ 101 ಎಂದಿಟ್ಟುಕೊಂಡರೆ, ಆಗ್ನೇಯ ಭಾಗದಲ್ಲಿ ಮೊದಲ ಅಗೆತ 201, ನೈರುತ್ಯದಲ್ಲಿ 401 ಮತ್ತು ವಾಯವ್ಯದಲ್ಲಿ 801 ಆಗುತ್ತದೆ. ಎರಡನೆಯ ಅಗೆತದ ಸಂಖ್ಯೆ ಅನುಕ್ರಮವಾಗಿ 002, 202, 402 ಮತ್ತು 802 ಆಗುತ್ತದೆ. ಈ ಕ್ರಮಾಂಕದ ಪ್ರಕಾರ ಗುಂಡಿಯ ಪ್ರತಿ ಭಾಗದಲ್ಲಿ 200 ಅಗೆತಗಳನ್ನು ನಡೆಸುವಷ್ಟು ಅವಕಾಶವಿರುತ್ತದೆ. ಈ ಅಂತರ ಇನ್ನೂರೇ ಆಗಿರಬೇಕೆಂದೇನಿಲ್ಲ. ಇದನ್ನು ಸಂದರ್ಭಕ್ಕೆ ತಕ್ಕಂತೆ ನಿರ್ಧರಿಸಿಕೊಳ್ಳಬಹುದು.

ಅಗೆತದಲ್ಲಿ ಸಿಗುವ ಪ್ರಾಚ್ಯ ಅವಶೇಷಗಳನ್ನು ಆಯಾ ಗುಂಡಿಯ ಹೆಸರು, ಅಗೆಯಲಾದ ಭಾಗ, ಲಾಟ್ ಸಂಖ್ಯೆ, ಆಳ ಮತ್ತು ಪದರದ ಸಂಖ್ಯೆಯೊಂದಿಗೆ ದಾಖಲಿಸಲಾಗುತ್ತದೆ [ಉದಾ; ವಸ್ತು – ಕಲ್ಲಿನ ಮಣಿ; ಗುಂಡಿ–ಎ 1; ಭಾಗ ಈಶಾನ್ಯ; ಲಾಟ್ ಸಂಖ್ಯೆ 001; ಆಳ–08 ಸೆಂಮೀ.; ಪದರ –(1)]. ಪ್ರತಿ ಅಗೆತದ ಅನಂತರ ಅಗೆಯಲಾದ ಆಳವನ್ನು ಯಾವುದಾದರೊಂದು ಖಚಿತ ಬಿಂದುವಿನಿಂದ ಸಾಮಾನ್ಯವಾಗಿ ನೆಲೆ/ದಿಬ್ಬದ ಅತಿ ಎತ್ತರದ ಭಾಗದಿಂದ –ದಾರ ಮತ್ತು ಸ್ಪಿರಿಟ್ ಲೆವೆಲ್ ಅನ್ನು ಬಳಸಿ ಅಳೆಯಲಾಗುತ್ತದೆ. ಮುಖ್ಯ ಅವಶೇಷವೇನಾದರೂ ಸಿಕ್ಕಲ್ಲಿ ಅದರ ನಿಖರ ಸ್ಥಾನವನ್ನು 3–ಆಯಾಮಗಳೊಂದಿಗೆ ದಾಖಲು ಮಾಡಿಕೊಳ್ಳಲಾಗುತ್ತದೆ. ಗುಂಡಿಯಲ್ಲಿಯ ಸ್ತರಗಳನ್ನು ನೆಲೆಯ ಎತ್ತರದ ಭಾಗದಲ್ಲಿ ಪ್ರಾರಂಭದಲ್ಲಿಯೇ ಅಗೆಯಲಾಗುವ ಪರೀಕ್ಷಕ ಗುಂಡಿಯಲ್ಲಿಯ ಸ್ತರಕ್ರಮದೊಂದಿಗೆ ಹೋಲಿಸಿ ಗುರುತಿಸಲಾಗುತ್ತದೆ. ಅಗೆಯುತ್ತಿರುವಾಗಲೇ ಗುಂಡಿಯಲ್ಲಿಯ ಸ್ತರಗಳನ್ನು ಗುರುತಿಸಲಾಗುತ್ತದೆ. ವಸತಿಮಣ್ಣಿನ ಬಣ್ಣ, ರಚನೆ ಮತ್ತು ಅದರಲ್ಲಿನ ಸಾಂಸ್ಕೃತಿಕ ಅವಶೇಷಗಳು ಹೋಲಿಕೆಯಲ್ಲಿ ನೆರವಾಗುತ್ತವೆ.

ಹ್ಯಾರಿಸ್ ಮ್ಯಾಟ್ರಿಕ್ಸ್ ಪದ್ಧತಿ: ಭೂ ಉತ್ಖನನದಲ್ಲಿ ಬಳಸುವ ಒಂದು ವಿಶಿಷ್ಟ ಪದ್ಧತಿ. ಇದು ಸಾಮಾನ್ಯ ಬಳಕೆಯಲ್ಲಿರುವ ಚೌಕೋನ ಗುಂಡಿಗಳ ಜಾಲ ಮತ್ತು ಪದರ ಅನುಕ್ರಮವನ್ನು ಗುರುತಿಸುವ ವಿಧಾನಕ್ಕಿಂತ ಭಿನ್ನವಾಗಿದೆ. ಶಿಶುಪಾಲಗಡದ ವಿಸ್ತೃತ ಉತ್ಖನನದಲ್ಲಿ (2006–09) ಈ ಪದ್ಧತಿಯನ್ನು ಅನುಸರಿಸಲಾಯಿತು. ಪುರಾತತ್ತ್ವ ನೆಲೆಯಲ್ಲಿರುವ ಸೂಕ್ಷ್ಮ ಪದರ ಅಥವಾ ಉಪಪದರಗಳನ್ನು ಗುರುತಿಸುವುದು ಈ ಪದ್ಧತಿಯಿಂದ ಸಾಧ್ಯವಾಗುತ್ತದೆ. ಈ ವಿಧಾನದಲ್ಲಿ ವಿವಿಧ ವಸತಿ ಮಣ್ಣಿನ ಪದರ/ಉಪಪದರಗಳನ್ನು ಮತ್ತು ಅವಶೇಷಗಳನ್ನು

ಅವು ಶೇಖರವಾದ ರೀತಿಯಲ್ಲೇ ಎಳೆ ಎಳೆಯಾಗಿ ಹೊರಗೆ ತೆರೆಯಲಾಗುತ್ತದೆ. ಅನಂತರ ಅವಶೇಷಗಳನ್ನು ಅವುಗಳ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಮೀಕರಿಸಲಾಗುತ್ತದೆ. ಪ್ರತಿ ಅವಶೇಷ/ಲೋಕಸ್‌ಗೆ ಸಂಬಂಧಿಸಿದಂತೆ ಈ ಮುಂದಿನ ಮಾಹಿತಿಗಳನ್ನು ಉತ್ಖನನದ ಸಮಯದಲ್ಲಿ ಸಂಗ್ರಹಿಸ ಲಾಗುತ್ತದೆ: ಉತ್ಖನನಕಾರರ ಹೆಸರು ಮತ್ತು ದಿನಾಂಕ; ಗುಂಡಿಯ ಸಂಖ್ಯೆ/ಹೆಸರು (ಎ,ಬಿ,ಸಿ ಇತ್ಯಾದಿ); ಲೋಕಸ್ ಸಂಖ್ಯೆ (1, 2, 3 ಇತ್ಯಾದಿ); ಮಣ್ಣಿನ ಪಾತ್ರೆಗಳ ತೂಕ ಮತ್ತು ಚೀಲಗಳ ಸಂಖ್ಯೆ; ದೊರೆತ ಇತರ ಪ್ರಾಚ್ಯವಸ್ತುಗಳು ಮತ್ತು ಅವುಗಳ ವಿವರಣೆ; ಅಗೆಯುವ ಮೊದಲು ಮತ್ತು ಅನಂತರ ನೆಲೆಯ ಮೇಲ್ಮೈಯಿಂದ ಆಳ–ವನ್ನು ಗುರುತಿಸಿಕೊಳ್ಳಬೇಕು. ಅಂತೆಯೇ ಲೋಕಸ್/ಅವಶೇಷದ ಉದ್ದಗಲ (ಮೀಟರಿನಲ್ಲಿ) ಗುರುತಿಸಿಕೊಳ್ಳಬೇಕು; ಲೋಕಸ್/ಅವಶೇಷದ ಸ್ಥೂಲ ವಿವರಣೆ: ಉದಾ. ಮೇಲ್ಮಣ್ಣು–ಅವಶೇಷರಹಿತ ಪದರವೇ/ವಸತಿ ಪದರವೇ/ಗೃಹವ್ಯವಸ್ಥೆಯೇ ವಾಸ್ತುರಚನೆಯೇ ಇತ್ಯಾದಿ ಮತ್ತು ಇದನ್ನು ಪ್ರತ್ಯೇಕವಾಗಿ ಅಗೆಯುತ್ತಿರುವ ಕಾರಣ; ಮಾತೃಕೆಯ ಅಂಕಣ: ಈ ಅಂಕಣದಲ್ಲಿ ಆಯಾ ದಿನ ಅಗೆದ ಲೋಕಸ್/ ಅವಶೇಷಗಳ ನಡುವಿನ ಸಂಬಂಧವನ್ನು ರೇಖಾಚಿತ್ರದ ರೂಪದಲ್ಲಿ ಕೆಳಕಂಡಂತೆ ತೋರಿಸಲಾಗುತ್ತದೆ:

ಮೇಲಿನ ಚಿತ್ರದಲ್ಲಿ ಎ–ಗುಂಡಿಯ ಮೊದಲ ಲೋಕಸ್‌ಅನ್ನು ಎ1 ಸೂಚಿಸುತ್ತದೆ. ಅಗೆತ ಅಷ್ಟೂ ಜಾಗದಲ್ಲಿ ಮುಂದುವರೆದದ್ದನ್ನು ಎ2 ತಿಳಿಸುತ್ತದೆ. ಎ2 ವಿನ ಜಾಗವನ್ನು 3 ಲೋಕಸ್ ಆಗಿ ವಿಂಗಡಿಸಿ ಅಗೆದದ್ದನ್ನು ಎ3, ಎ4 ಮತ್ತು ಎ5 ಸೂಚಿಸುತ್ತದೆ. ಅಂತಿಮ ಮಾತೃಕೆಯ ರೇಖಾಚಿತ್ರದಲ್ಲಿ ಪ್ರತಿ ಗುಂಡಿಯಲ್ಲಿ ಅಗೆಯಲಾದ ಎಲ್ಲ ಲೋಕಸ್‌ಗಳ ಸಂಬಂಧವನ್ನು ಇದೇ ರೀತಿಯಲ್ಲಿ ತೋರಿಸಲಾಗುತ್ತದೆ.

ಒಂದು ವೇಳೆ ಇದೇ ಬಗೆಯ ವಸತಿಮಣ್ಣು ಅಕ್ಕಪಕ್ಕದ ಗುಂಡಿಗಳಲ್ಲಿ ಕಂಡುಬಂದಲ್ಲಿ, ಆ ಲೋಕಸ್‌ಗಳ ಸಂಖ್ಯೆಯನ್ನು ಇಲ್ಲಿ ನಮೂದಿಸಬೇಕು; ಮಣ್ಣಿನ ಬಣ್ಣ ಮತ್ತು ರಚನೆ (ಒಣಗಿದ/ತೇವವಾದ/ಸಡಿಲವಾದ/ಸಾಂದ್ರವಾದ ಇತ್ಯಾದಿ) ಮತ್ತು ಅದರೊಟ್ಟಿಗೆ ಬೆರೆತ ಮಣ್ಣಿನ ಪಾತ್ರೆ ಚೂರುಗಳ/ಕಲ್ಲಿನ ತುಂಡುಗಳ ಶೇಕಡಾವಾರು ಪ್ರಮಾಣ (ಅಂದಾಜಿನಲ್ಲಿ); ಕೊನೆಯಲ್ಲಿ ಲೋಕಸ್‌ಅನ್ನು ಕುರಿತು ಸಣ್ಣದೊಂದು ಟಿಪ್ಪಣಿ (ಮುಖ್ಯವಾಗಿ ಲೋಕಸ್‌ನ ಬಗ್ಗೆ ಉತ್ಖನನಕಾರರ ಅಭಿಪ್ರಾಯ) ಮತ್ತು ಲೋಕಸ್‌ನ ಕರಡು ಚಿತ್ರ (ಲೋಕಸ್‌ನ ಆಕಾರ–ಆಯತ/ಚೌಕ/ವೃತ್ತ/ ಅರ್ಧಚಂದ್ರಾಕೃತಿ ಇತ್ಯಾದಿ). ಬಳೆ–ಮಣಿ–ಕಲ್ಲು ಮುಂತಾದ ವಸ್ತುಗಳು ದೊರೆತಲ್ಲಿ ಅವು ಸಿಕ್ಕ ಜಾಗವನ್ನು ಇದರಲ್ಲಿ ಗುರುತುಮಾಡಬೇಕು.

ಆದಿಚಾರಿತ್ರಿಕ–ಮಧ್ಯಕಾಲೀನಯುಗದ ಶಿಶುಪಾಲಗಡದ ನೆಲೆಯಲ್ಲಿ ಉತ್ಖನನಕ್ಕೊಳಪಟ್ಟ ಜಾಗ ಸೀಮಿತವಾಗಿದ್ದು ಇದನ್ನು ಆಯತ ಮತ್ತು ಚೌಕಾಕಾರದ ಗುಂಡಿಗಳಾಗಿ ವಿಭಜಿಸಲಾಗಿದೆ. ಈ ಗುಂಡಿಗಳನ್ನು ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳಿಂದ ಗುರುತಿಸಲಾಗಿದೆ (ಎ,ಬಿ,ಸಿ,ಡಿ ಇತ್ಯಾದಿ). ಅಲ್ಲದೆ ಹ್ಯಾರಿಸ್ ಪದ್ಧತಿಯಲ್ಲಿ ಗುಂಡಿಗಳನ್ನು ನಿಗದಿತ/ನಿರ್ದಿಷ್ಟ ಘಟಕಗಳಂತೆ ಪರಿಗಣಿಸುವುದಿಲ್ಲ; ಗುಂಡಿಗಳ ನಡುವೆ ಗೋಡೆಗಳನ್ನು (ಬಾಕ್) ಉಳಿಸುವುದಿಲ್ಲ ಎಂಬುದನ್ನು ಇಲ್ಲಿ ನೆನಪಿಡಬೇಕು. ಹಾಗಾಗಿ ಅಗತ್ಯವಿದ್ದಲ್ಲಿ ಗುಂಡಿಯ ಸೀಮೆಗಳನ್ನು ವಿಸ್ತರಿಸಿ ಅಕ್ಕಪಕ್ಕದ ಗುಂಡಿಗಳ ಭಾಗಗಳನ್ನು ಇದರೊಳಗೆ ಸೇರಿಸಿಕೊಳ್ಳಬಹುದು. ಇಲ್ಲಿ ವಿಶೇಷವಾಗಿ ಅವಶೇಷಕ್ಕೆ ಹಾಗೂ ಅದರ ಸಾಂಸ್ಕೃತಿಕ ಮತ್ತು ಕಾಲಾನುಕ್ರಮಣೆಯ ಸಂದರ್ಭಕ್ಕೆ ಮಹತ್ತ್ವವನ್ನು ನೀಡಲಾಗುತ್ತದೆ. ಇಂಥ ಅವಶೇಷ ವಾಸ್ತುರಚನೆಯಾಗಿರಬಹುದು (ಕಟ್ಟಡ, ಕೊಠಡಿ, ಗೋಡೆ, ಮೆಟ್ಟಿಲು ಇತ್ಯಾದಿ), ಒಲೆ–ಗುಂಡಿ–ದಂಡೆ–ಸಮಾಧಿ–ಚರಂಡಿ ಮೊದಲಾದವುಗಳಾಗಿರಬಹುದು ಅಥವಾ ಬರಿ ಮಣ್ಣಿನ/ವಸತಿಮಣ್ಣಿನ ಪದರವಿದ್ದರೂ ಇರಬಹುದು. ಇಂತಹ ಪ್ರತಿಯೊಂದು ಅವಶೇಷವನ್ನೂ ಒಂದು ಲೋಕಸ್ ಅಥವಾ ಘಟಕವೆಂದು ಗುರುತಿಸಿ ಪ್ರತ್ಯೇಕವಾಗಿ ಅಗೆಯಲಾಗುತ್ತದೆ. ಅವಶೇಷದ ವ್ಯಾಪ್ತಿ ಒಂದೇ ಗುಂಡಿಯೊಳಗೆ ಇರಬಹುದು ಅಥವಾ ಗುಂಡಿಯ ಹೊರಗೆ ಚಾಚಿರಬಹುದು. ಇಂತಹ ಸಂದರ್ಭದಲ್ಲಿ ಅವಶೇಷವನ್ನು ಪೂರ್ಣವಾಗಿ ಹೊರತೆಗೆಯುವುದಕ್ಕೆ ಪ್ರಾಧಾನ್ಯತೆ ನೀಡಲಾಗುತ್ತದೆಯೇ ಹೊರತು ಗುಂಡಿಯ ಸೀಮೆಗಳಿಗಲ್ಲ; ಅವಶೇಷ ವಿಸ್ತರಿಸುವ ಗುಂಡಿಗಳ ಭಾಗಗಳನ್ನು ಮೂಲ ಗುಂಡಿಗೆ ಆಗ ತಾತ್ಕಾಲಿಕವಾಗಿ ಸೇರಿಸಿಕೊಳ್ಳಲಾಗುತ್ತದೆ. ಪ್ರತಿ ಅವಶೇಷಕ್ಕೆ ಲೋಕಸ್ ಸಂಖ್ಯೆಯೊಂದನ್ನು ಅನುಕ್ರಮವಾಗಿ ಕೊಡಲಾಗುತ್ತದೆ (ಉದಾ: ಎ-1 ರಲ್ಲಿ ಎ ಗುಂಡಿಯ ಹೆಸರಾದರೆ, 1 ಅವಶೇಷದ ಸಂಖ್ಯೆಯಾಗುತ್ತದೆ). ಒಂದು ಗುಂಡಿಯೊಳಗೆ ಒಂದಕ್ಕಿಂತ ಹೆಚ್ಚು ಅವಶೇಷ ಒಂದೇ ಮಟ್ಟದಲ್ಲಿ ಕಂಡುಬಂದಲ್ಲಿ, ಅವೆಲ್ಲವನ್ನು ಅನುಕ್ರಮ ಸಂಖ್ಯೆಗಳೊಂದಿಗೆ ಬೇರೆಬೇರೆಯಾಗಿ ಹೊರತೆಗೆಯಲಾಗುತ್ತದೆ (ಉದಾ: ಎ1, ಎ2, ಎ3, ಇತ್ಯಾದಿ). ಹಾಗಾಗಿ ಪ್ರತಿಯೊಂದು ಅವಶೇಷಕ್ಕೂ ಅದರದ್ದೇ ಆದ ಒಂದು ಸಂಖ್ಯೆ ಇರುತ್ತದೆ. ಗೋಡೆಗಳನ್ನೂ ಲೋಕಸ್ ಸಂಖ್ಯೆಯಿಂದಲೇ ಗುರುತಿಸಲಾಗುತ್ತದೆ. ಅಗೆಯುತ್ತಿರುವ ಜಾಗದಲ್ಲಿ ವಸತಿಮಣ್ಣಿನ ಪದರ ಮಾತ್ರವಿದ್ದರೆ ಮಣ್ಣಿನ ಬಣ್ಣ ಮತ್ತು ರಚನೆಗನುಸಾರವಾಗಿ ಅದನ್ನು ಅಗೆಯಲಾಗುತ್ತದೆ. ಒಂದೇ ಗುಂಡಿಯಲ್ಲಿ 2 ವಿಭಿನ್ನ ಮಣ್ಣಿನ ಪದರಗಳು ಕಂಡುಬಂದಲ್ಲಿ ಅವೆರಡನ್ನು ಪ್ರತ್ಯೇಕ ಲೋಕಸ್ ಸಂಖ್ಯೆಯಡಿಯಲ್ಲಿ ಬೇರೆಬೇರೆಯಾಗಿ ಅಗೆಯಲಾಗುತ್ತದೆ. ಇನ್ನೊಂದು ಮಣ್ಣಿನ ಪದರ ಆರಂಭವಾದಾಗ ಸಂಖ್ಯೆ ಮತ್ತೆ ಬದಲಾಗುತ್ತದೆ. (ವಿ.ಎಸ್.)

**ಉತ್ಖನನ: ದಾಖಲೆಯ ವಿಧಾನಗಳು:** ಉತ್ಖನನ ಕೊನೆಗೊಂಡಾಗ ಟಿಪ್ಪಣಿ, ಚಿತ್ರ, ಛಾಯಾಚಿತ್ರ, ಪ್ರಾಚ್ಯವಸ್ತು ಇತ್ಯಾದಿಗಳನ್ನೊಳಗೊಂಡ ದಾಖಲೆಗಳು ಮಾತ್ರ ಉಳಿದುಕೊಳ್ಳುತ್ತವೆ. ಉತ್ಖನನ ಎಷ್ಟೇ ಉತ್ತಮ ಮಟ್ಟದ್ದಾಗಿದ್ದರೂ ಅದರಿಂದ ಪಡೆದುಕೊಂಡ ವಿವರಗಳನ್ನು ಸಂಪೂರ್ಣವಾಗಿ ದಾಖಲು ಮಾಡದೇ ಹೋದರೆ, ಬರೆವಣಿಗೆಯ ರೂಪದಲ್ಲಿ ಪ್ರಕಟವಾಗದೇ ಉಳಿದರೆ, ಅದು ಕೇವಲ ಹಣ–ಕಾಲ ವ್ಯಯಮಾಡಿದಂತೆ ಆಗುತ್ತದೆ. ಉತ್ಖನನಗೊಂಡ ನೆಲೆ ಇರುವ ಸರಿಯಾದ ಸ್ಥಳವನ್ನು ಸೂಚಿಸುವ ನಕಾಶೆ, ನೆಲೆಯ ಮೇಲ್ಮೈಯ ಏರುತಗ್ಗುಗಳನ್ನು ಸೂಚಿಸುವ ನಕಾಶೆ, ನೆಲೆಯಲ್ಲಿ ತೋಡಲಾದ ಉತ್ಖನನ ಗುಂಡಿಗಳನ್ನು ನಿರ್ದಿಷ್ಟವಾಗಿ ಸೂಚಿಸುವ ನಕಾಶೆ, ನೆಲೆಯಲ್ಲಿಯ ಸಂಸ್ಕೃತಿಗಳ ಕಾಲಾನುಪೂರ್ವಿಯನ್ನು ಸೂಚಿಸುವ ಗುಂಡಿ ಗೋಡೆಗಳ (ಟ್ರೆಂಚ್ ಸೆಕ್ಷನ್) ಚಿತ್ರಗಳು, ಪ್ರಾಚ್ಯಾವಶೇಷಗಳ ಹಾಗೂ ಪ್ರಾಚ್ಯವಸ್ತುಗಳ ಸಂದರ್ಭವನ್ನು ಸೂಚಿಸುವ ಛಾಯಾಚಿತ್ರಗಳು ಮುಂತಾದ ಸಾದೃಶ ದಾಖಲೆಗಳನ್ನಷ್ಟೇ ಅಲ್ಲದೆ ಉತ್ಖನನದ ಪ್ರತಿನಿತ್ಯದ ಪ್ರಗತಿಯನ್ನು ಸೂಚಿಸುವ ಟಿಪ್ಪಣಿ ಪುಸ್ತಕಗಳು, ಪ್ರಾಚ್ಯವಸ್ತುಗಳನ್ನು ನೋಂದಾಣಿಸುವ ಪುಸ್ತಕಗಳು ಮುಂತಾದ ಲಿಖಿತ ದಾಖಲೆಗಳನ್ನೂ ಇಡುವುದು ಉತ್ಖನನಕಾರನ ಕರ್ತವ್ಯ.

ಸ್ತರವಿಂಗಡನೆಯ ದಾಖಲೆ: ಉತ್ಖನನದಿಂದ ಬೆಳಕಿಗೆ ಬರುವ ಕಟ್ಟಡಗಳ ಅವಶೇಷಗಳು, ಸಮಾಧಿಗಳು ಮುಂತಾದವು ಹಾಗೂ ನೆಲೆಯ ಸ್ತರವಿಂಗಡನೆ ಇವುಗಳ ಪರಸ್ಪರ ಸಂಬಂಧಗಳನ್ನು ರೇಖಾಚಿತ್ರಗಳ ಮುಖಾಂತರ ಸ್ಪಷ್ಟವಾಗಿ ತೋರಿಸಬಹುದು. ಇದಕ್ಕಾಗಿ ಸ್ತರವಿಂಗಡನೆಯನ್ನು ಸೂಚಿಸುವ ಟ್ರೆಂಚ್ ಸೆಕ್ಷನ್ ಚಿತ್ರ ಮತ್ತು ಉತ್ಖನನಗೊಂಡ ಕಟ್ಟಡ ಇತ್ಯಾದಿ ಅವಶೇಷಗಳ ತಲವಿನ್ಯಾಸಗಳನ್ನು ತಯಾರಿಸಲಾಗುತ್ತದೆ. ಅಚ್ಚುಕಟ್ಟಾಗಿಯೂ ಕೂಲಂಕಷವಾಗಿಯೂ ಬರೆಯಲ್ಪಟ್ಟಿರುವ ಈ ಚಿತ್ರಗಳು ಉತ್ಖನನದ ಮುಖ್ಯ ದಾಖಲೆಗಳೆಂದು ಪರಿಗಣಿಸಲ್ಪಡುತ್ತದೆ.

ಮಡಕೆಗಳ ವಿಂಗಡನೆಗೆ ಅಂಕಣ (ಪಾಟರಿ ಯಾರ್ಡ್): ಮಣ್ಪಾತ್ರೆ ಚೂರುಗಳು ಸಹಸ್ರಗಟ್ಟಲೆ ದೊರೆಯುತ್ತವಾದುದರಿಂದ ಅವುಗಳನ್ನು ವ್ಯವಸ್ಥಿತವಾಗಿ ದಾಖಲು ಮಾಡುವ ಕಾರ್ಯ ಸುಲಭವಲ್ಲ. ಪ್ರತಿಯೊಂದು ಸ್ತರದಲ್ಲಿ ದೊರೆಯುವ ಮಣ್ಪಾತ್ರೆಗಳ ಚೂರುಗಳನ್ನು ಬೇರೆ ಬೇರೆಯಾಗಿ ಇಡಬೇಕು. ಈ ವಿಂಗಡನೆಗಾಗಿ ಉತ್ಖನನ ಗುಂಡಿಗಳಿಂದ ಸ್ವಲ್ಪ ದೂರದಲ್ಲಿ ಮಡಕೆಗಳ ಅಂಕಣವನ್ನು ಸ್ಥಾಪಿಸುವುದು ಅವಶ್ಯ. ಉತ್ಖನನದಲ್ಲಿ ದೊರೆತ ಮಣ್ಪಾತ್ರೆಗಳನ್ನು ಅವುಗಳ ವಿವರಗಳುಳ್ಳ ಪಟ್ಟಿಯೊಂದಿಗೆ ಅಂಕಣಕ್ಕೆ ಕಳುಹಿಸಲಾಗುತ್ತದೆ. ನೆಲೆಯ ಹೆಸರು, ಮಡಕೆಗಳು ದೊರೆತ ಗುಂಡಿ ಅಥವಾ ಚೌಕದ ಸಂಖ್ಯೆ, ಸ್ತರ ಸಂಖ್ಯೆ, ಆಳ, ಉತ್ಖನನ ಗುಂಡಿಯ ಮೇಲ್ವಿಚಾರಕನ ಹೆಸರು ಮುಂತಾದ ವಿವರಗಳನ್ನು ಇಂಥ ಪಟ್ಟಿ ಒಳಗೊಂಡಿರುತ್ತದೆ. ಅಂಕಣಕ್ಕೆ ತರಲಾದ ಮಣ್ಪಾತ್ರೆಗಳ ಅವಶೇಷಗಳನ್ನು ವಿಂಗಡಿಸಿ ಅವುಗಳನ್ನು ನಿರ್ದಿಷ್ಟ ಚೌಕಗಳಲ್ಲಿ ಇರಿಸಲಾಗುತ್ತದೆ. ಅನಂತರ ಮಡಕೆಗಳ ವರ್ಗೀಕರಣ ಕಾರ್ಯ ನಡೆಯುತ್ತದೆ. ವರ್ಗೀಕರಿಸಲಾದ ಮಡಕೆಗಳ ಸ್ಕೇಲಿಗನು ಗುಣವಾದ ಚಿತ್ರಗಳನ್ನು ಡ್ರಾಯಿಂಗ್ ಹಾಳೆಯ ಮೇಲೆ ಇಂಡಿಯನ್ ಇಂಕಿನಿಂದ ಬರೆಯಬೇಕು.

ಛಾಯಾಚಿತ್ರಗ್ರಹಣ: ಅನ್ವೇಷಣೆ, ಉತ್ಖನನ, ವಿಮರ್ಶೆ ಮುಂತಾದ ಪುರಾತತ್ತ್ವ ಅಧ್ಯಯನದ ಎಲ್ಲ ಹಂತಗಳಲ್ಲಿಯೂ ಛಾಯಾಚಿತ್ರಗ್ರಹಣದ ಪಾತ್ರ ಹಿರಿದಾದುದು. ಪ್ರಾಚ್ಯವಸ್ತುಗಳು, ಕಟ್ಟಡಗಳು, ಇತರ ಅವಶೇಷಗಳು ಇತ್ಯಾದಿಗಳನ್ನಷ್ಟೇ ಅಲ್ಲದೆ ಉತ್ಖನನದಲ್ಲಿ ದೊರೆಯುವ ಪುರಾವೆಗಳನ್ನು ಛಾಯಾಚಿತ್ರಗಳ ರೂಪದಲ್ಲಿ ದಾಖಲು ಮಾಡಿಡುವುದು ಅತ್ಯವಶ್ಯ.

ಉತ್ಖನನದ ವರದಿ: ಉತ್ಖನನದಲ್ಲಿ ಸಂಗ್ರಹಿಸಲಾದ ಪ್ರಾಚ್ಯವಸ್ತುಗಳ ವಿಂಗಡನೆ, ವಿಶ್ಲೇಷಣೆ ಮತ್ತು ವಿವರಗಳನ್ನೊಳಗೊಂಡ ವರದಿಯನ್ನು ತಯಾರಿಸಿ ಪ್ರಕಟಿಸುವುದು ಅಂತಿಮ ಹಂತದ ಕೆಲಸ. ವರದಿ ಪ್ರಕಟಗೊಳ್ಳುವವರೆಗೂ ಉತ್ಖನನ ಕಾರ್ಯ ಕೊನೆಗೊಳ್ಳದು. ಉತ್ಖನನದ ವರದಿ ಎರಡು ಮುಖ್ಯ ಘಟಕಗಳನ್ನೊಳಗೊಂಡಿರುತ್ತದೆ: ಉತ್ಖನನದಿಂದ ದೊರೆತ ಪುರಾವೆಗಳನ್ನು ಹೆಚ್ಚಿನ ಪರಾಮರ್ಶೆ ಮಾಡದೇ ಇದ್ದಕ್ಕಿದ್ದಂತೆ ವಿವರಿಸುವುದು. ಈ ವಿವರಗಳಿಗೆ ಪೂರಕವಾಗುವಂತೆ ಚಿತ್ರಗಳು, ಛಾಯಾ ಚಿತ್ರಗಳು, ಇತರ ಸಂಬಂಧಿತ ಸಾಮಗ್ರಿಗಳನ್ನು ಓದುಗರ ಮುಂದಿಡುವುದು; ಉತ್ಖನನದಲ್ಲಿ ದೊರೆತ ಪುರಾವೆಗಳ ಮತ್ತು ಪ್ರಾಚ್ಯಾವಶೇಷಗಳ ವಿಂಗಡನೆ, ವಿಶ್ಲೇಷಣೆ, ವಿವರಗಳ ಅಧ್ಯಯನಗಳಿಂದ ಕಂಡುಬಂದ ವಿಷಯಗಳನ್ನು ಐತಿಹಾಸಿಕ ಅಥವಾ ಸೈದ್ಧಾಂತಿಕ ಚೌಕಟ್ಟಿನೊಳಗೆ ಪರಾಮರ್ಶೆ ಮಾಡುವುದು. (ಎಸ್.ವಿ.ಪಿ.)

**ಪ್ರಾಚ್ಯವಸ್ತುಗಳ ವಿಶ್ಲೇಷಣೆಯಲ್ಲಿ ವೈಜ್ಞಾನಿಕ ವಿಧಾನಗಳು:** ಉತ್ಖನನದಿಂದ ಹೊರತೆಗೆದ ಕೆಲವೊಂದು ಅವಶೇಷಗಳನ್ನು (ಉದಾ: ಮಣ್ಪಾತ್ರೆ, ಲೋಹವಸ್ತು) ಅಧಿಕೃತ ಮಾಹಿತಿಗಾಗಿ ಹಲವು ಬಗೆಯ ವಿಶ್ಲೇಷಣೆಗೆ ಒಳಪಡಿಲಾಗುತ್ತದೆ. ಪ್ರಾಚ್ಯವಸ್ತು ಸ್ಥಳೀಯವಾದುದೇ ಇಲ್ಲವೇ ಬೇರೆಡೆಯಿಂದ ಆಮದಾದುದೇ, ಅದರ ತಯಾರಿಕಾ ವಿಧಾನ, ಕಾಲಮಾನ ಮುಂತಾದ ಉಪಯುಕ್ತ ಮಾಹಿತಿಯನ್ನು ಈ ಬಗೆಯ ವಿಶ್ಲೇಷಣೆಗಳಿಂದ ಪಡೆಯಬಹುದು. ಆಧುನಿಕ ತಂತ್ರಜ್ಞಾನ ಸಾಧನೆ ಯಿಂದಾಗಿ ಈ ಸೂಕ್ಷ್ಮತಮ ವಿಶ್ಲೇಷಣೆಯಲ್ಲಿ ಕೆಲವೇ ಮಿಲಿಗ್ರಾಂನಷ್ಟು ನಮೂನೆಯ (ಸ್ಯಾಂಪಲ್) ಆವಶ್ಯಕತೆ ಇರುವುದು ಒಂದು ವಿಶೇಷ ಸೌಲಭ್ಯ. ಏಕೆಂದರೆ ಅಮೂಲ್ಯವಾದ ಪ್ರಾಚ್ಯವಸ್ತು ಗಳಿಂದ ದೊಡ್ಡ ಪ್ರಮಾಣದ ನಮೂನೆಗಳನ್ನು ಹೊರತೆಗೆದು ಅವುಗಳನ್ನು ಛೇದಗೊಳಿಸುವುದು ಸಾಧ್ಯವಾಗದ ಮಾತು.

ರಾಸಾಯನಿಕ ವಿಶ್ಲೇಷಣೆಯಿಂದ ವಸ್ತುವಿನಲ್ಲಿರುವ ಪ್ರಧಾನ ರಾಸಾಯನಿಕ ಧಾತುಗಳು ಮತ್ತು ಅವುಗಳ ನಿರ್ದಿಷ್ಟ ಪ್ರಮಾಣಗಳು ತಿಳಿಯುತ್ತವೆ. ಆದರೆ ವಸ್ತುವಿನಲ್ಲಿ ದಶಲಕ್ಷದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಹಲವು ಧಾತುಗಳಿರುತ್ತವೆ. ಇವುಗಳನ್ನು ಅಣಿಮ ಧಾತುಗಳು (ಟ್ರೇಸ್ ಎಲಿಮೆಂಟ್ಸ್) ಎಂದು ಕರೆಯುತ್ತಾರೆ. ಅಣಿಮ ಧಾತುಗಳ ವೈಜ್ಞಾನಿಕ ವಿಶ್ಲೇಷಣೆಯಿಂದ ಆ ಲೋಹದ ಮೂಲ ಗೊತ್ತಾಗುತ್ತದೆ. ಇದರಿಂದ ವಸ್ತುವಿನ ಉಗಮ ಸ್ಥಳ ತಿಳಿದುಬರುತ್ತದೆ. ಉದಾ: ಹರಪ್ಪ ಮತ್ತು ಮೊಹೆಂಜೋದಾರೊವಿನಲ್ಲಿ ದೊರೆತ ಕಂಚಿನ ವಸ್ತುಗಳ ರಾಸಾಯನಿಕ ವಿಶ್ಲೇಷಣೆಯಿಂದ ಅವುಗಳಲ್ಲಿ ನಿಕ್ಕಲ್ ಧಾತು ಅಲ್ಪ ಪ್ರಮಾಣದಲ್ಲಿ ಇರುವುದು ಕಂಡುಬಂತು. ರಾಜಸ್ತಾನದ ತಾಮ್ರ ಖನಿಜಗಳಲ್ಲಿ ಮಾತ್ರ ನಿಕ್ಕಲ್ ಇರುವುದು ಮತ್ತು ದೇಶದ ಇತರ ಪ್ರಾಂತದಲ್ಲಿಯ ಖನಿಜಗಳಲ್ಲಿ ಇದು ಸ್ವಲ್ಪವೂ ಇಲ್ಲದಿರುವುದು ತಿಳಿದ ವಿಷಯ. ಇದರಿಂದ ಸಿಂಧೂ–ಸರಸ್ವತಿ ಸಂಸ್ಕೃತಿಯ ತಾಮ್ರ ಮತ್ತು ಕಂಚಿನ ವಸ್ತುಗಳು ಯಾವ ಖನಿಜಗಳಿಂದ ಉಗಮಿಸಿರಬಹುದೆಂಬುದು ತಿಳಿಯಬರುತ್ತದೆ. ಎರಡನೆಯದಾಗಿ ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ಲೋಹಾತ್ಮಕ ಎಂಬ ವಿಶೇಷ ರೀತಿಯ ಪರೀಕ್ಷೆಗೆ ಒಳಪಡಿಸುವುದರ ಮೂಲಕ, ಲೋಹದ ವಸ್ತುಗಳ ತಯಾರಿಕೆಯ ವಿಧಾನವನ್ನು ಕಂಡುಹಿಡಿಯಬಹುದು.

ಪ್ರಾಚ್ಯವಸ್ತುಗಳ ಪರಿಶೀಲನೆಯಲ್ಲಿ ಕ್ಷ–ಕಿರಣಗಳು ಹಲವು ರೀತಿಯಲ್ಲಿ ಉಪಯುಕ್ತವಾಗಿವೆ. ವಸ್ತುವಿನಲ್ಲಿರುವ ಪ್ರಧಾನ ಧಾತುಗಳ ಪರಿಮಾಣವನ್ನು ಅತ್ಯಂತ ನಿರ್ದಿಷ್ಟವಾಗಿ ಅಳೆಯುವುದಕ್ಕೆ ರಾಸಾಯನಿಕ ವಿಶ್ಲೇಷಣೆಯ ಮಾರ್ಗ ಎಲ್ಲದಕ್ಕಿಂತ ಶ್ರೇಷ್ಠ. ಆದರೆ ಇದಕ್ಕೆ ಸಾಕಷ್ಟು ದೊಡ್ಡಪ್ರಮಾಣದ ನಮೂನೆಯ ಆವಶ್ಯಕತೆಯಿರುವುದರಿಂದ ಪ್ರಾಚ್ಯವಸ್ತುಗಳ ಸಂಶೋಧನೆಯಲ್ಲಿ ಇದು ಹೆಚ್ಚು ಉಪಯೋಗವಾಗುವುದಿಲ್ಲ. ಅತಿ ಸಣ್ಣ ಪ್ರಮಾಣದ (ಎಂದರೆ ಕೆಲವೇ ಮಿಲಿಗ್ರಾಂಗಳಷ್ಟು) ನಮೂನೆ ಮಾತ್ರ ಸಾಕಾಗುವ ಹಲವು ಆಧುನಿಕ ವೈಜ್ಞಾನಿಕ ವಿಶ್ಲೇಷಣಾ ಕ್ರಮಗಳನ್ನು ಇಲ್ಲಿ ವಿವರಿಸಲಾಗಿದೆ.

1. ಆಪ್ಟಿಕಲ್ ಎಮಿಷನ್ ಸ್ಪೆಕ್ಟ್ರೋಮೆಟ್ರಿ: ವಿಶೇಷವಾಗಿ ಲೋಹದ ವಸ್ತುಗಳಲ್ಲಿ ಅಣಿಮ ಧಾತುಗಳನ್ನು ಗುರುತಿಸಿ ಅವುಗಳ ಪ್ರಮಾಣಗಳನ್ನು ಅಳೆಯುವುದರಲ್ಲಿ ಇದು ಹೆಚ್ಚು ಉಪಯುಕ್ತವಾಗಿದೆ. ಶೇ.10ಕ್ಕಿಂತ ಜಾಸ್ತಿ ಇರುವ ಧಾತುಗಳ ಪರಿಮಾಣವನ್ನು ಅಳೆಯುವುದರಲ್ಲಿ ನಿರ್ದಿಷ್ಟತೆ ಕಡಿಮೆಯಾಗುವುದರಿಂದ, ಪ್ರಧಾನ ಧಾತುಗಳ ಗಣನೆಗೆ ಅಟಾಮಿಕ್ ಅಬ್‌ಸಾರ್ಪ್‌ಷನ್ ಸ್ಪೆಕ್ಟ್ರೋಮೆಟ್ರಿಯಂಥ ವಿಧಾನವನ್ನೂ ಜೊತೆಯಲ್ಲಿ ಬಳಸಿದರೆ ವಸ್ತುವಿನ ಪೂರ್ಣವಾದ ವಿಶ್ಲೇಷಣೆಗೆ ಅನುಕೂಲವಾಗುತ್ತದೆ.

ವಸ್ತುವನ್ನು ಸೂಕ್ತವಾದ ದ್ರಾವಕದಲ್ಲಿ ಕರಗಿಸಿ ಅದರ ಮೂಲಕ ಶಕ್ತಿಯುತವಾದ ವಿದ್ಯುತ್ ಕಣ ಸಾಗುವುದಾದರೆ, ಹೊರಬೀಳುವ ಬೆಳಕು ವಸ್ತುವಿನಲ್ಲಿರುವ ಧಾತುಗಳ ಮೇಲೆ ಆಧರಿತವಾಗಿದ್ದು, ಪ್ರತಿಯೊಂದು ಧಾತುವಿಗೂ ತನ್ನದೇ ಆದ ಒಂದು ಗೆರೆ ವ್ಯಕ್ತವಾಗುತ್ತದೆ. ಈ ಬೆಳಕಿನ ಗೆರೆಗಳನ್ನು ಛಾಯಾಚಿತ್ರ ಫಿಲ್ಮ್‌ಗಳ ಮೇಲೆ ಪಡೆಯಬಹುದು. ಈ ಗೆರೆಗಳು ಬೆಳಕಿನ ಆಯಾ ಅಲೆದೂರಗಳ (ವೇವ್‌ಲೆಂತ್) ಮೇಲೆ ಆಧರಿತವಾಗಿವೆ. ಮೈಕ್ರೊಡೆನ್ಸಿಟೋಮೀಟರ್ ಎಂಬ ಉಪಕರಣದ ಸಹಾಯದಿಂದ ಗೆರೆಯ ತೀವ್ರತೆಯನ್ನು ಅಳೆಯುವುದರ ಮೂಲಕ ಆಯಾ ಧಾತು ಯಾವ ಪರಿಮಾಣದಲ್ಲಿದೆಯೆಂಬುದು ತಿಳಿಯಬರುತ್ತದೆ.

2. ಕ್ಷ–ಕಿರಣ ವಿಧಾನಗಳು: ಕ್ಷ–ಕಿರಣ ಛಾಯಾ ಚಿತ್ರವಿಧಾನ: ತೈಲಚಿತ್ರಗಳ ಪರಿಶೋಧನೆಯಲ್ಲಿ ಕ್ಷ–ಕಿರಣಗಳು ಉಪಯುಕ್ತ. ಹಾಗೆಯೇ ಇನ್ನೂ ಶಕ್ತಿಯುತವಾದ ಕಿರಣಗಳ ಉಪಯೋಗದಿಂದ ಲೋಹದ ವಸ್ತುಗಳ ಪರಿಶೀಲನೆಯೂ ಸಾಧ್ಯ. ಅಮೂಲ್ಯ ವಸ್ತುಗಳ ಕ್ಷ–ಕಿರಣ ಛಾಯಾಚಿತ್ರಗಳನ್ನು ವಿವಿಧ ಕೋನಗಳಿಂದ ತೆಗೆದರೆ ಅದರ ತಯಾರಿಕೆಯಲ್ಲಿ ಆಗಿರಬಹುದಾದ ಸಣ್ಣ ದೋಷಗಳೂ ಕಂಡುಬರುತ್ತವೆ. ಈ ಛಾಯಾಚಿತ್ರಗಳು ವಸ್ತುವಿನ ನೈಜ ಸ್ವರೂಪವನ್ನು ಗುರುತಿಸುವುದರಲ್ಲಿ, ಮನುಷ್ಯರ ಬೆರಳು ಗುರುತುಗಳಂತೆ ವೈಶಿಷ್ಟ್ಯತೆ ಹೊಂದಿರುವುದರಿಂದ, ಇವನ್ನು ಬೆರಳು ಮುದ್ರಿಕೆ ಎಂದೇ ಕರೆಯುತ್ತಾರೆ. ಛಾಯಾಚಿತ್ರಗಳ ಸಹಾಯದಿಂದ ಒಂದು ವಸ್ತು ನೈಜವೇ ಅಥವಾ ಕೃತಕವೇ ಎಂಬುದನ್ನು ಕಂಡುಹಿಡಿಯಬಹುದು. ಚೋಳರ ಕಾಲದ ಹಲವು ಕಂಚಿನ ಪ್ರತಿಮೆಗಳ ಕ್ಷ–ಕಿರಣ ಛಾಯಾಚಿತ್ರಗಳನ್ನು ಈ ಬಗೆಯಲ್ಲಿ ಸಂಗ್ರಹಿಸಲಾಗಿದೆ.

ಎಕ್ಸ್–ರೇ ಫ್ಲೋರಸೆನ್ಸ್: ಒಂದು ವಸ್ತುವಿನ ಮೇಲೆ ಶಕ್ತಿಯುತವಾದ, ಎಂದರೆ ಸು.50 ಕೆವಿಯಷ್ಟು ಶಕ್ತಿಯ, ಕ್ಷ–ಕಿರಣಗಳನ್ನು ಪ್ರಯೋಗಿಸುವುದರಿಂದ ವಸ್ತುವಿನ ಒಳಗಿನ ವಿದ್ಯುತ್ಕಣ ಶ್ರೇಣಿಗಳು ಪ್ರಚೋದಿಸಲ್ಪಟ್ಟು, ವಸ್ತುವಿನಲ್ಲಿರುವ ವಿವಿಧ ಧಾತುಗಳನ್ನವಲಂಬಿಸಿ ಬೇರೆ ಬೇರೆ ರೀತಿಯ ಕ್ಷ–ಕಿರಣಗಳು ಹೊರಬೀಳುತ್ತವೆ. ಹೀಗಾಗಿ ಧಾತುಗಳನ್ನು ಗುರುತಿಸುವುದರಲ್ಲಿಯೂ ಕ್ಷ–ಕಿರಣದ ಶಕ್ತಿ ಮಟ್ಟವನ್ನು ಅಳೆಯುವುದರ ಮೂಲಕ ಆ ಧಾತುವಿನ ಪರಿಮಾಣವನ್ನು ಅಳೆಯುವುದರಲ್ಲಿಯೂ ಈ ವಿಧಾನ ಉಪಯುಕ್ತವಾಗಿದೆ. ಇದಕ್ಕೆ ವಸ್ತುವಿನಿಂದ ನಮೂನೆಯನ್ನು ಹೊರತೆಗೆಯುವ ಅಗತ್ಯವಿಲ್ಲ. ವಸ್ತುವಿನ ಮೇಲೆ ನೇರವಾಗಿಯೇ ಕ್ಷ–ಕಿರಣಗಳ ಪ್ರಯೋಗವಾಗುತ್ತದೆ. ಹೀಗಾಗಿ ಇದೊಂದು ಅವಿಧ್ವಂಸಕ ವಿಧಾನವಾಗಿದೆ.

ಎಕ್ಸ್–ರೇ ಡಿಫ್ರ್ಯಾಕ್ಷನ್: ಕಣರಚನೆ ಎಂದು ಹೇಳಲ್ಪಡುವ ಧಾತು ರಚನಾ ವಿನ್ಯಾಸವುಳ್ಳ ಒಂದು ವಸ್ತುವಿನ ಮೇಲೆ ಕ್ಷಕಿರಣಗಳನ್ನು ಪ್ರಯೋಗಿಸಿದಾಗ, ಧಾತು ರಚನಾ ವಿನ್ಯಾಸಕ್ಕನುಗುಣವಾಗಿ ಕಿರಣಗಳು ವಿಯೋಜನೆ ಹೊಂದುತ್ತವೆ. ಈ ವಿಯೋಜನೆಯ ಸ್ವರೂಪವನ್ನು ಗೆರೆಗಳ ರೂಪದಲ್ಲಿ ಛಾಯಾಚಿತ್ರವಾಗಿ ಪಡೆಯಬಹುದು. ಪ್ರತಿಯೊಂದು ವಸ್ತುವಿನ ಈ ವಿಯೋಜನಾ ಚಿತ್ರವೂ ಅದರದ್ದೇ ಆದ ಪ್ರತ್ಯೇಕತೆಯನ್ನು ಹೊಂದಿರುತ್ತದೆ. ಈ ವಿಧಾನದಲ್ಲಿ ವಸ್ತುವಿನ ಧಾತು ರಚನಾ ವಿನ್ಯಾಸವನ್ನೂ ಗುರುತಿಸುವುದು ಸಾಧ್ಯವಾಗುವುದರಿಂದ, ರಾಸಾಯನಿಕ ಸಂಯೋಜಿತ ವಸ್ತುವನ್ನು ನೇರವಾಗಿ ತಿಳಿಯಲು ಸಾಧ್ಯ. ಉದಾ: ಈ ವಿಧಾನದಿಂದ ವರ್ಣಚಿತ್ರಗಳಲ್ಲಿ ಉಪಯೋಗಿಸಲ್ಪಟ್ಟಿರುವ ಖನಿಜಮೂಲದ ವರ್ಣಗಳನ್ನು ಗುರುತಿಸುವುದು ಸಾಧ್ಯ. ಹಾಗೆಯೇ ತುಕ್ಕು ಹಿಡಿದಿರುವ ಲೋಹದ ವಸ್ತುಗಳ ಮೇಲಿನ ರಾಸಾಯನಿಕ ದ್ರವ್ಯಗಳನ್ನು ಗುರುತಿಸುವುದು ಸಾಧ್ಯವಾಗುವುದರಿಂದ, ವಸ್ತುವಿನ ಸಂರಕ್ಷಣಾ ಕಾರ್ಯದಲ್ಲಿ ಸಹಾಯವಾಗುತ್ತದೆ.

3. ಲೇಸರ್ ಆಧಾರಿತ ವಿಧಾನಗಳು: ಲೇಸರ್ ಎಂದು ಕರೆಯಲ್ಪಡುವ ಕ್ರೋಡೀಕೃತ ಬೆಳಕಿನ ಕಿರಣವನ್ನು ಉಪಯೋಗಿಸಿ ತೆಗೆಯುವ ಛಾಯಾಚಿತ್ರಗಳನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಈ ವಿಧಾನದಿಂದ ವಸ್ತುವಿನ ಹೊರಮೈಯಲ್ಲದೆ ಒಳಗಿನ ಭಾಗಗಳನ್ನೂ ಚಿತ್ರಿಸುವುದು ಸಾಧ್ಯವಾಗುತ್ತದೆ. ಕ್ಷ–ಕಿರಣಗಳ ಛಾಯಾಚಿತ್ರಗಳು ಒಂದು ವಸ್ತುವಿನ ವೈಶಿಷ್ಟ್ಯವನ್ನು ಚಿತ್ರಿಸುವುದಕ್ಕಾಗಿ ಉಪಯೋಗಿಸಲ್ಪಡುವುದರ ಜೊತೆಗೆ ಹಾಲೋಗ್ರ್ಯಾಮ್‌ಗಳೂ ಇದೇ ಉದ್ದೇಶಕ್ಕೆ ಸಹಕಾರಿಯಾಗುತ್ತವೆ.

ದಿ ಲೇಸರ್ ಬೀಮ್ ಮೈಕ್ರೋಪ್ರೋಬ್: ಆಪ್ಟಿಕಲ್ ಎಮಿಷನ್ ಸ್ಪೆಕ್ಟ್ರೋಮೆಟ್ರಿಯಲ್ಲಿ ಉಪಯೋಗಿಸಲ್ಪಟ್ಟ ಶಕ್ತಿಯುತವಾದ ವಿದ್ಯುತ್ ಕಿಡಿಗೆ ಬದಲಾಗಿ, ಅದೇ ರೀತಿಯ ಶಕ್ತಿ ಪಡೆದಿರುವ ಬೆಳಕಿನ ಕಿರಣವನ್ನು ಉಪಯೋಗಿಸಿ ವಸ್ತುವಿನಿಂದ ಹೊರಬೀಳುವ ಬೆಳಕಿನ ವಿಶ್ಲೇಷಣೆಯ ಮೂಲಕ, ಆ ವಿಧಾನದಲ್ಲಿ ಹೇಳಿದಂತೆಯೇ ವಿವಿಧ ಧಾತುಗಳ ಅಸ್ತಿತ್ವ ಮತ್ತು ಪರಿಮಾಣ ಎರಡನ್ನೂ ಗುರುತಿಸಬಹುದು. ಈ ವಿಧಾನದ ವಿಶೇಷತೆಯೆಂದರೆ ಇದಕ್ಕೆ ವಸ್ತುವಿನಿಂದ ನಮೂನೆಯನ್ನು ಹೊರತೆಗೆಯಬೇಕಾಗಿಲ್ಲ. ವಸ್ತುವಿನ ಮೇಲೆಯೇ ಲೇಸರ್ ಅನ್ನು ಪ್ರಯೋಗಿಸಬಹುದು. ಕಣ್ಣಿಗೆ ಕಾಣದಷ್ಟು ಸಣ್ಣ ಪ್ರಮಾಣದಲ್ಲಿ ವಸ್ತುವಿನ ಹೊರಮೈ ಸುಡಲ್ಪಡುತ್ತದೆ. ಹೀಗಾಗಿ ಇದೂ ಅವಿಧ್ವಂಸಕ ವಿಧಾನವೇ ಆಗಿದೆ.

ದಿ ಎಲೆಕ್ಟ್ರಾನ್ ಬೀಮ್ ಮೈಕ್ರೋಪ್ರೋಬ್: ವೇಗವಾಗಿ ಸಂಚರಿಸುವ ವಿದ್ಯುತ್ಕಣಗಳನ್ನು ಅಯಸ್ಕಾಂತದ ಪ್ರಭಾವಕ್ಕೊಳಪಡಿಸಿ, ವಸ್ತುವಿನ 1/100 ಮಿಮೀ ಸಣ್ಣ ಪ್ರದೇಶದಲ್ಲಿ ಕೇಂದ್ರೀಕರಿಸಬಹುದು. ಈ ಶಕ್ತಿಯುತ ವಿದ್ಯುತ್ಕಣಗಳ ಧಾಳಿಯ ಪ್ರಭಾವದಿಂದ ಕ್ಷ–ಕಿರಣಗಳು ಹೊರಬೀಳುತ್ತವೆ. ಕ್ಷ–ಕಿರಣಗಳ ವಿಶ್ಲೇಷಣೆಯಿಂದ ವಸ್ತುವಿನಲ್ಲಿರುವ ವಿವಿಧ ಧಾತುಗಳು ಮತ್ತು ಅವುಗಳ ಪರಿಮಾಣಗಳನ್ನು ಅಳೆಯಬಹುದು. ವರ್ಣಚಿತ್ರಗಳಲ್ಲಿಯ ವಿವಿಧ ವರ್ಣಗಳನ್ನು ಗುರುತಿಸುವುದರಲ್ಲಿ ಈ ವಿಧಾನವನ್ನು ಉಪಯೋಗಿಸಲಾಗಿದೆ. ಅಂತೆಯೇ ಲೋಹ, ಶಿಲೆ ಮತ್ತು ಮಣ್ಣಿನ ವಸ್ತುಗಳಲ್ಲಿ ಸೇರಿರಬಹುದಾದ ಸಣ್ಣ ಪ್ರಮಾಣದ ಬಾಹ್ಯಾಂಶಗಳನ್ನು ಗುರುತಿಸುವುದರಲ್ಲಿಯೂ ಇದರ ಉಪಯೋಗ ಕಂಡು ಬಂದಿದೆ.

ವಿಕಿರಣತೆ ಆಧಾರಿತ ವಿಧಾನ– ನ್ಯೂಟ್ರಾನ್ ಆಕ್ಟಿವೇಷನ್ ಅನಾಲಿಸಿಸ್: ಒಂದು ವಸ್ತುವನ್ನು ನ್ಯೂಟ್ರಾನ್‌ಗಳ ಧಾಳಿಗೆ ಒಳಪಡಿಸಿದಾಗ, ನ್ಯೂಟ್ರಾನ್‌ಗಳು ವಸ್ತುವಿನಲ್ಲಿರುವ ಧಾತುಗಳ ಕೇಂದ್ರಬಿಂದುವಿನೊಂದಿಗೆ ಪ್ರತಿಕ್ರಿಯಿಸಿ, ತತ್ಕಾಲಕ್ಕೆ ಅಲ್ಪಾಯಸ್ಸಿನ, ವಿಕಿರಣತಾ ಗುಣವುಳ್ಳ ಹೊಸಧಾತುಗಳಾಗುತ್ತವೆ. ಇವುಗಳಿಂದ ಹೊರ ಸೂಸಲ್ಪಡುವ ಗಾಮ ಕಿರಣಗಳನ್ನು ಮತ್ತು ಈ ಹೊಸಧಾತುಗಳ ಅರ್ಧಾಯುವನ್ನು ಅಳೆಯುವುದರಿಂದ ವಸ್ತುವಿನಲ್ಲಿರುವ ಧಾತುಗಳು ಮತ್ತು ಅವುಗಳ ಪರಿಮಾಣಗಳನ್ನು ಗುರುತಿಸಬಹುದು. ಅವಿಧ್ವಂಸಕವಾದ ಈ ವಿಧಾನ ಅತ್ಯಂತ ನಿರ್ದಿಷ್ಟವೂ ಸೂಕ್ಷ್ಮವೂ ಆಗಿದ್ದು ದಶಲಕ್ಷಕ್ಕೆ ಒಂದು ಭಾಗದಷ್ಟು ಕಡಿಮೆ ಪ್ರಮಾಣದಲ್ಲಿರುವ ಧಾತುವನ್ನು ಸಹ ಗುರುತಿಸಬಹುದು. ಇತರ ವಿಧಾನಗಳಲ್ಲಿ ಕಂಡುಹಿಡಿಯಲಾಗದಷ್ಟು ಸೂಕ್ಷ್ಮವಾಗಿದ್ದು, ತಪ್ಪಿ ಹೋಗಿರುವ ಧಾತುಗಳನ್ನೂ ಈ ವಿಧಾನದಲ್ಲಿ ಗುರುತಿಸುವುದು ಸಾಧ್ಯ. ಎರಡನೆಯದಾಗಿ ನ್ಯೂಟ್ರಾನ್‌ಗಳ ತೀವ್ರ ಪ್ರವೇಶ ಶಕ್ತಿಯಿಂದಾಗಿ ವಸ್ತುವಿನ ಹೊರಮೈ ಮಾತ್ರವಲ್ಲದೆ ಅದರ ಪರಿಪೂರ್ಣ ಧಾತುರಚನಾ ಸ್ವರೂಪ ತಿಳಿಯಲಾಗುತ್ತದೆ. (ಎಸ್.ಎಸ್.ಆರ್.)

**ಪುರಾತತ್ತ್ವದಲ್ಲಿ ಡಿಎನ್‌ಎ ಅಧ್ಯಯನ:** ಅಣು ಜೀವವಿಜ್ಞಾನದ (ಮಾಲಿಕ್ಯುಲರ್ ಸಿಸ್ಟಮ್ಯಾಟಿಕ್) ಒಂದು ಪ್ರಮುಖ ಅಧ್ಯಯನ ಶಾಖೆ. ಪುರಾತತ್ತ್ವ ಕ್ಷೇತ್ರದಲ್ಲಿ ಇತ್ತೀಚೆಗೆ ಸೇರ್ಪಡೆಗೊಂಡಿದೆ. ಕಳೆದೆರಡು ದಶಕಗಳಿಂದ ಅಣುಜೀವ ವಿಜ್ಞಾನ ಕ್ಷೇತ್ರದಲ್ಲಿ ಡಿಎನ್‌ಎ–ಆರ್‌ಎನ್‌ಎ ಸರಣಿ, ಮೈಟೊಕಾಂಡ್ರಿಯ ಡಿಎನ್‌ಎಗಳ ರಚನೆಯನ್ನು ಕುರಿತು ಸಂಶೋಧನೆಗಳು ನಡೆಯುತ್ತಿದ್ದು ಇದರಿಂದ ಅನೇಕ ಸಸ್ತನಿ ಜೀವಿಗಳ ಜೀವವಿಕಾಸ ಸರಣಿಯಲ್ಲಿ ಕಳೆದುಹೋದ ಕೊಂಡಿಗಳನ್ನು ಗುರುತಿಸುವುದು ಸಾಧ್ಯವಾಗಿದೆ. ಪುರಾತತ್ತ್ವ–ಮಾನವಶಾಸ್ತ್ರ ಕ್ಷೇತ್ರದಲ್ಲಿ ಜಟಿಲ ಸವಾಲು ಗಳಾಗಿರುವ ಪ್ರಾಚೀನ ಜನಾಂಗಗಳ ಸಂರಚನೆ–ವಲಸೆಯ ಮಾರ್ಗಗಳು, ಭಾಷೆಯ ವಿಕಾಸ, ಕೃಷಿಯ ಉಗಮ, ಪಶುಸಂಗೋಪನೆಯ ಮೂಲ ಮುಂತಾದ ವಿಷಯಗಳಿಗೆ ಕುರುಹುಗಳನ್ನು ಶೋಧಿಸುವಲ್ಲಿ ಡಿಎನ್‌ಎ ಅಧ್ಯಯನ ಒಂದು ವರವಾಗಿದೆ.

ಪುರಾತತ್ತ್ವ ಕ್ಷೇತ್ರದಲ್ಲಿ ಡಿಎನ್‌ಎ ಅಧ್ಯಯನಕ್ಕೆ ಎರಡು ಮಗ್ಗಲುಗಳಿವೆ. ಒಂದು, ಸಮಕಾಲೀನ ಜನಾಂಗಗಳಿಂದ (ಮಾನವ, ಪ್ರಾಣಿ–ಪಕ್ಷಿ ಸಂಕುಲ) ಡಿಎನ್‌ಎ ಕಣಗಳನ್ನು ಸಂಗ್ರಹಿಸಿ ಇದರ ಆಧಾರದ ಮೇಲೆ ವಿಕಾಸ ಕ್ರಿಯೆಯ ಎಳೆಗಳನ್ನು ಸೃಷ್ಟಿಸುವುದು; ಮತ್ತೊಂದು, ಪುರಾತನ ಅವಶೇಷಗಳಿಂದ ಸಂಗ್ರಹಿಸಿದ ಡಿಎನ್‌ಎ (ಎ–ಡಿಎನ್‌ಎ) ಅಧ್ಯಯನ.

ಎಲ್ಲ ಜೀವಿಗಳೂ ಡಿಎನ್‌ಎ ಕಣಗಳನ್ನು ಆನುವಂಶಿಕವಾಗಿ ಪಡೆದಿರುತ್ತವೆ. ಪುರುಷ ವಂಶವಾಹಿಗಳಲ್ಲಿರುವ (ವೈ ಕ್ರೋಮೋಸೋಮ್) ಡಿಎನ್‌ಎ ಸರಣಿಗಳಿಂದ ಪಿತೃ–ಸಂಬಂಧಿ ವಂಶಾವಳಿಯನ್ನೂ ಮೈಟೊಕಾಂಡ್ರಿಯ ಡಿಎನ್‌ಎಯಿಂದ (ಎಂಟಿ–ಡಿಎನ್‌ಎ) ಮಾತೃವಂಶೀಯ ಎಳೆಗಳನ್ನೂ ಗುರುತಿಸಬಹುದಾಗಿದೆ. 55,000–85,000 ವರ್ಷಗಳ ಹಿಂದಿನ ಕಾಲಾವಧಿಯಲ್ಲಿ ಆಫ್ರಿಕದಿಂದ ಹೊರಬಂದ ಜನರೇ ಇಂದು ಪ್ರಪಂಚ ದಾದ್ಯಂತ ಹರಡಿರುವ ಸಂಗತಿ ಇಂತಹ ಅಧ್ಯಯನದಿಂದ ತಿಳಿದುಬಂದಿದೆ. ಇದನ್ನು ಮೈಟೊಕಾಂಡ್ರಿಯಲ್ ಈವ್ ಸಿದ್ಧಾಂತ ಎಂದು ಕರೆಯಲಾಗುತ್ತದೆ. ಪ್ರಾಚೀನ ಡಿಎನ್‌ಎ ಅಧ್ಯಯನ 1980ರ ದಶಕದಲ್ಲಿ ಪ್ರಾರಂಭವಾಯಿತು. ಹಲವಾರು ಸಸ್ಯ ಹಾಗೂ ಪ್ರಾಣಿಗಳ ಪಳೆಯುಳಿಕೆಗಳಿಂದಲೂ ಈಜಿಪ್ಟಿನ ಮಮ್ಮಿಗಳಿಂದಲೂ ಡಿಎನ್‌ಎಯನ್ನು (ಎ–ಡಿಎನ್‌ಎ) ಪ್ರತ್ಯೇಕಿಸಿ ಅಧ್ಯಯನಕ್ಕೆ ಈಗಾಗಲೇ ಒಳಪಡಿಸಲಾಗಿದೆ. ಹೈದರಾಬಾದಿನಲ್ಲಿರುವ ಸೆಂಟರ್ ಫಾರ್ ಸೆಲ್ಯುಲಾರ್ ಅಂಡ್ ಮಾಲಿಕ್ಯುಲರ್ ಬಯಾಲಜಿಯಲ್ಲಿ ಸಂಶೋಧನೆಗಾಗಿಯೇ ಒಂದು ಪ್ರಯೋಗಶಾಲೆಯನ್ನು ತೆರೆಯಲಾಗಿದೆ. ಹಿಮಾಲಯದಲ್ಲಿರುವ ರೂಪ್‌ಕುಂಡ್ ಸರೋವರದ ದಂಡೆಯಲ್ಲಿ ಚದುರಿದ್ದ ಮಾನವ ಅವಶೇಷಗಳಿಂದ ಸಂಗ್ರಹಿಸಲಾದ (ಎಂಟಿ–ಡಿಎನ್‌ಎ) ಅಧ್ಯಯನ ಇಲ್ಲಿ ಈಗ ನಡೆಯುತ್ತಿದೆ. ಈ ಜನರ ಮೂಲ ಒಂದು ರಹಸ್ಯವಾಗಿದ್ದು ಇದನ್ನು ಭೇದಿಸುವಲ್ಲಿ ಫಲಿತಾಂಶ ಸಹಕಾರಿಯಾಗಬಲ್ಲದು. (ಜೆ.ಪಿ.ಪಿ.)

ಡಿಎನ್‌ಎ ತಂತ್ರದಿಂದ ಪಶ್ಚಿಮ ಜರ್ಮನಿಯಲ್ಲಿಯ ಫೆಲ್‌ಡೊಫೆರ್ ಗವಿಯಲ್ಲಿ ಮತ್ತು ಉತ್ತರ ಕಾಕಸಸ್‌ನಲ್ಲಿಯ ಮೆಜ್ಮೈಸ್ಕಯ ಗುಹೆಯಲ್ಲಿ ದೊರೆತ ನಿಯಾಂಡರ್ತಲ್ ಮಾನವನ ಪಳೆಯುಳಿಕೆಗಳನ್ನು ವಿಶ್ಲೇಷಿಸಲಾಗಿದೆ. ಈಚೆಗೆ ಕ್ರೊವೇಷಿಯ ಹತ್ತಿರದ ವಿಂದಿಜ ಗುಹೆಯಲ್ಲಿ ದೊರೆತ ಇಂಥ ಪಳೆಯುಳಿಕೆಗಳನ್ನು ಸ್ಟ್ರಿಂಗೆರ್ ಈ ವೈಜ್ಞಾನಿಕ ವಿಧಾನದಿಂದ ವಿಶ್ಲೇಷಿಸಿದ್ದಾರೆ. ಈ ಪಳೆಯುಳಿಕೆಗಳು ಸು.42000 ವರ್ಷಗಳಷ್ಟು ಹಿಂದಿನವು.

(ಎ.ಎಸ್.;ಎನ್.ಎಲ್.)

**ಪುರಾತತ್ತ್ವ ಅವಶೇಷಗಳ ಕಾಲನಿರ್ಣಯ–ವೈಜ್ಞಾನಿಕ ವಿಧಾನಗಳು:** ಯಾವುದೇ ಜನಾಂಗದ ಅಥವಾ ಸಂಸ್ಕೃತಿಯ ಬಗ್ಗೆ ಗಮನಹರಿಸುವಾಗ ಅದು ಎಷ್ಟು ವರ್ಷಗಳ ಹಿಂದಿನದು ಎಂದು ತಿಳಿಯುವುದು ಒಂದು ಮುಖ್ಯವಾದ ಮತ್ತು ಕುತೂಹಲಕಾರಿ ಅಂಶ. ಹೀಗಾಗಿ ಪುರಾತತ್ತ್ವ ಕ್ಷೇತ್ರದಲ್ಲಿ ಕಾಲನಿರ್ಣಯ (ಡೇಟಿಂಗ್) ಪ್ರಮುಖ ಸ್ಥಾನ ಪಡೆದಿದೆ.

ಕಾಲನಿರ್ಣಯ ವಿಧಾನಗಳಲ್ಲಿ ಎರಡು ವಿಧ: ಸಾಪೇಕ್ಷ ಕಾಲನಿರ್ಣಯ (ರಿಲೇಟಿವ್ ಡೇಟಿಂಗ್) ಮತ್ತು ನಿರಪೇಕ್ಷ ಕಾಲನಿರ್ಣಯ (ಆಬ್ಸಲ್ಯೂಟ್ ಡೇಟಿಂಗ್). ಉತ್ಖನನದ ಸಂದರ್ಭದಲ್ಲಿ ಕೆಳಮಟ್ಟದಲ್ಲಿ ದೊರೆತ ವಸ್ತುಗಳು ಅವಕ್ಕಿಂತ ಮೇಲ್ಮಟ್ಟದಲ್ಲಿ ದೊರೆತ ವಸ್ತುಗಳಿಗಿಂತ ಹಳೆಯವೆಂಬುದು ಖಚಿತ. ಅದೇ ರೀತಿ ಒಂದು ನಿಗದಿತ ಕಾಲದ್ದೆಂದು ತಿಳಿಯಲ್ಪಟ್ಟ ವಸ್ತುವಿನೊಡಗೂಡಿ ದೊರೆತ ಇತರ ವಸ್ತುಗಳೂ ಅದೇ ಕಾಲದ್ದೆಂದು ಊಹಿಸಬಹುದು. ಶಿಲ್ಪಗಳು, ವರ್ಣಚಿತ್ರಗಳು ಮುಂತಾದವುಗಳನ್ನು ಅವುಗಳ ಶೈಲಿಯ ಆಧಾರದ ಮೇಲೆ ಕಾಲನಿರ್ಣಯ ಮಾಡುವುದುಂಟು. ಇದು ಸಾಪೇಕ್ಷ ಕಾಲನಿರ್ಣಯ. ಒಂದು ವಸ್ತುವಿನ ಕಾಲವನ್ನು ನೇರವಾಗಿ ಅದರ ಪರೀಕ್ಷೆಯ ಮೂಲಕವೇ ನಿಷ್ಕರ್ಷಿಸುವ ವಿಧಾನ ನಿರಪೇಕ್ಷ ಕಾಲನಿರ್ಣಯ. ಕಳೆದ 50–60 ವರ್ಷಗಳಲ್ಲಿ ವಿಜ್ಞಾನ ಸಾಧಿಸಿರುವ ಅದ್ಭುತ ಪ್ರಗತಿಯಿಂದಾಗಿ ಹಲವು ವಿಶೇಷ ವೈಜ್ಞಾನಿಕ ವಿಧಾನಗಳು ನಿರಪೇಕ್ಷ ಕಾಲನಿರ್ಣಯ ಕಾರ್ಯದಲ್ಲಿ ಪುರಾತತ್ತ್ವ ಸಂಶೋಧಕರ ಸಹಾಯಕ್ಕೆ ಒದಗಿಬಂದಿವೆ. ಈ ಆಧುನಿಕ ವೈಜ್ಞಾನಿಕ ವಿಧಾನಗಳಲ್ಲಿ ರೇಡಿಯೋವಿಕಿರಣ (ರೇಡಿಯೊ ಆಕ್ಟಿವಿಟಿ) ಪ್ರಕ್ರಿಯೆಯ ಮೇಲೆ ಆಧಾರಿತವಾದ ವಿಧಾನಗಳನ್ನು ಗಮನಿಸಬಹುದು.

1) ಇಂಗಾಲ–14 (ಕಾರ್ಬನ್–14 ಅಥವಾ ರೇಡಿಯೊ ಕಾರ್ಬನ್)ವಿಧಾನ: ರೇಡಿಯೋವಿಕಿರಣ ಪ್ರಕ್ರಿಯೆಯನ್ನು ಉಪಯೋಗಿಸಿ ಪುರಾತನ ವಸ್ತುಗಳ ಕಾಲನಿರ್ಣಯ ಮಾಡುವ ವಿಧಾನಗಳಲ್ಲಿ ಈ ವಿಧಾನ ಪ್ರಮುಖವೂ ಪ್ರಸಿದ್ಧವೂ ಆಗಿದೆ. ಪ್ರತಿಯೊಂದು ಮೂಲಧಾತುವಿಗೂ (ಎಲಿಮೆಂಟ್) ಪರಮಾಣು ಸಂಖ್ಯೆ (ಅಟಾಮಿಕ್ ನಂಬರ್) ಹಾಗೂ ಪರಮಾಣು ತೂಕ (ಅಟಾಮಿಕ್ ವೇಟ್) ಎಂಬ ಎರಡು ವೈಶಿಷ್ಟ್ಯಗಳುಂಟು. ಪರಮಾಣುವಿನ ಕೇಂದ್ರದ ಬೀಜಾಣುವಿನಲ್ಲಿ (ನ್ಯೂಕ್ಲಿಯಸ್) ಇರುವ ಪ್ರೋಟಾನ್‌ಗಳ ಸಂಖ್ಯೆಯೇ ಪರಮಾಣು ಸಂಖ್ಯೆಯಾದರೆ ಬೀಜಾಣುವಿನಲ್ಲಿರುವ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳ ಒಟ್ಟು ಸಂಖ್ಯೆಯೇ ಪರಮಾಣು ತೂಕವಾಗುತ್ತದೆ. ಯಾವಧಾತುವಿಗೂ ಪ್ರೋಟಾನ್‌ಗಳ ಸಂಖ್ಯೆ ನಿಗದಿತ ವಾದ್ದರಿಂದ ಪರಮಾಣು ಸಂಖ್ಯೆ ನಿಖರವಾಗಿರುತ್ತದೆ. ಆದರೆ ನ್ಯೂಟ್ರಾನ್‌ಗಳ ಸಂಖ್ಯೆಯಲ್ಲಿ ವ್ಯತ್ಯಾಸವಿರುವುದು ಸಾಧ್ಯ. ಹೀಗಾಗಿ ಒಂದೇ ಮೂಲಧಾತುವಿನ ಪರಮಾಣುಗಳು ಬೇರೆ ಬೇರೆ ಪರಮಾಣು ತೂಕವನ್ನು ಹೊಂದಿರುವುದು ಸಾಧ್ಯ. ಈ ರೀತಿಯಾಗಿ ಒಂದೇ ಮೂಲಧಾತುವಿನ ಬೇರೆ ಬೇರೆ ಪರಮಾಣು ತೂಕವುಳ್ಳ ಪರಮಾಣುಗಳನ್ನು ಸಮಸ್ಥಾನಿ (ಐಸೊಟೋಪ್)ಗಳೆಂದು ಕರೆಯಲಾಗಿದೆ.

ಇಂಗಾಲದ ಪರಮಾಣು ತೂಕ 12. ಆದರೆ ಪರಮಾಣು ತೂಕ 13 ರ ಇಂಗಾಲ ಸಮಸ್ಥಾನಿಗಳೂ ಉಂಟು. ಇವು ಶೇ. 1ರ ಪ್ರಮಾಣದಲ್ಲಿರುತ್ತವೆ. ಇದಕ್ಕಿಂತ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅಂದರೆ ಪ್ರತಿ ಲಕ್ಷ ಕೋಟಿ ($10^{12}$) ಇಂಗಾಲ 12 ರ ಪರಮಾಣುಗಳಿಗೆ ಒಂದರಂತೆ ಇಂಗಾಲ–14 ಎಂಬ ಸಮಸ್ಥಾನಿಯೂ ನಿಸರ್ಗದಲ್ಲಿದೆ. ಈ ಇಂಗಾಲ–14 ಸಮಸ್ಥಾನಿಗೆ ರೇಡಿಯೋ ವಿಕಿರಣ ಗುಣಲಕ್ಷಣವಿರುವುದರಿಂದ ಇದು ಅಸ್ಥಿರ ಸಮಸ್ಥಾನಿಯಾಗಿದೆ.

ಸು.1946ರಲ್ಲಿ ಇಂಗಾಲ–14ರ ಅಸ್ತಿತ್ವ ಕಂಡುಹಿಡಿಯಲ್ಪಟ್ಟಿತು. ಅನಂತರ 1949ರಲ್ಲಿ ಅಮೆರಿಕದ ಪ್ರಸಿದ್ಧ ವಿಜ್ಞಾನಿ ವಿಲ್ಲರ್ಡ್ ಲಿಬ್ಬಿ ಇಂಗಾಲ–14 ರ ವಿಕಿರಣ ಗುಣಲಕ್ಷಣವನ್ನು ಉಪಯೋಗಿಸಿ ಪುರಾತನ ಅವಶೇಷಗಳ ಕಾಲ ನಿರ್ಣಯ ಮಾಡುವುದು ಸಾಧ್ಯವೆಂಬುದನ್ನು ನಿರೂಪಿಸಿದ.

ತಾತ್ವಿಕ ಹಿನ್ನಲೆ: ಬಾಹ್ಯಾಕಾಶದಿಂದ ವಿಶ್ವಕಿರಣಗಳು (ಕಾಸ್ಮಿಕ್ ರೇಸ್) ನಮ್ಮ ವಾಯುಮಂಡಲದ ಮೇಲೆ ಧಾಳಿ ನಡೆಸುತ್ತಲೇ ಇರುತ್ತವೆ. ಭೂಮಿಗಿಂತ ಸು.8ಕಿಮೀ ಎತ್ತರದಲ್ಲಿ, ವಿಶ್ವಕಿರಣಗಳಲ್ಲಿನ ನ್ಯೂಟ್ರಾನ್‌ಗಳು ವಾಯುಮಂಡಲದಲ್ಲಿ ಹೇರಳವಾಗಿರುವ ನೈಟ್ರೋಜನ್ ಪರಮಾಣುಗಳೊಂದಿಗೆ ಸಂಘಟಿಸಿ, ವಿಕಿರಣಶೀಲ ಇಂಗಾಲ–14 ಪರಮಾಣು ಗಳನ್ನು ಸೃಷ್ಟಿಸುತ್ತವೆ: $N^{14}+ n=C^{14}+H$. ಇಂಗಾಲ–14 ವಾಯುಮಂಡಲದ ಆಮ್ಲಜನಕ ದೊಂದಿಗೆ ಸಂಯೋಗ ಹೊಂದಿ ಇಂಗಾಲಾಮ್ಲ (ಕಾರ್ಬನ್ ಡೈ ಆಕ್ಸೈಡ್) ಉತ್ಪತ್ತಿಯಾ ಗುತ್ತದೆ. ಈ ಇಂಗಾಲಮ್ಲ ನಿಧಾನವಾಗಿ ಭೂಮಿಯತ್ತ ಚಲಿಸಿ ಇದನ್ನು ಭೂಮಿಯಲ್ಲಿನ ಸಸ್ಯಗಳು ದ್ಯುತಿಸಂಶ್ಲೇಷಣೆ (ಫೋಟೊಸಿಂಥಸಿಸ್) ಪ್ರಕ್ರಿಯೆಯಿಂದ ಹೀರಿಕೊಳ್ಳುತ್ತವೆ. ಈ ಸಸ್ಯಗಳನ್ನು ಪ್ರಾಣಿಗಳು ತಿನ್ನುವುದರಿಂದ ಇಂಗಾಲ–14 ಪ್ರಾಣಿವರ್ಗ ವನ್ನೂ ಸೇರುತ್ತದೆ. ಹಾಗೆಯೇ ಸಮುದ್ರದ ನೀರಿನಲ್ಲಿಯೂ ಮಿಶ್ರಿತವಾಗುತ್ತದೆ. ಹೀಗಾಗಿ ಭೂಮಿಯಾದ್ಯಂತ ಇಂಗಾಲ–14 ವ್ಯಾಪಿಸಿ ಸ್ವಲ್ಪ ಸಮಯದ ಅನಂತರ ಇದರ ಪ್ರಮಾಣ ಎಲ್ಲ ವಸ್ತುಗಳಲ್ಲಿಯೂ ಸಮಾನ ಸ್ಥಿತಿಯನ್ನು ಹೊಂದುತ್ತದೆ. ಬಾಹ್ಯಾಕಾಶದಲ್ಲಿ ಸತತವಾಗಿ ಉತ್ಪತ್ತಿಯಾಗುತ್ತಿರುವ ಇಂಗಾಲ–14 ಮತ್ತು ವಿಕಿರಣ ಪ್ರಕ್ರಿಯೆಯಿಂದ ನಶಿಸುತ್ತಿರುವ ಇಂಗಾಲ–14 ಇವೆರಡರ ಪ್ರಮಾಣಗಳ ಸಮತೋಲನೆಯಿಂದ, ಭೂಮಿಯಲ್ಲಿ ಎಲ್ಲೆಡೆಯೂ ಇಂಗಾಲ–14ರ ಪ್ರಮಾಣ ಏಕರೀತಿಯಲ್ಲಿಯೇ ಉಳಿಯುತ್ತದೆ. ಈ ಸಮಸ್ಥಿತಿ ಸಸ್ಯಗಳು (ಅಥವಾ ಜಂತುಗಳು) ಜೀವಂತವಾಗಿರುವವರೆಗೆ ಮಾತ್ರ ಇರುತ್ತದೆ. ಉದಾ: ಮರವನ್ನು ಕಡಿದರೆ, ಮೃತವಾದರೆ, ಈ ವಿನಿಮಯ ನಿಂತುಹೋಗುವುದರಿಂದ ಇಂಗಾಲ–14ರ ಪ್ರಮಾಣ ವಿಕಿರಣ ಪ್ರಕ್ರಿಯೆಯಿಂದಾಗಿ ಕ್ರಮೇಣ ಕಡಿಮೆಯಾಗ ತೊಡಗುತ್ತದೆ. ಯಾವ ವಿಕಿರಣಶೀಲ ಧಾತುವಿಗೂ ತನ್ನ ಪ್ರಮಾಣದಲ್ಲಿ ಅರ್ಧದಷ್ಟು ಕಡಿಮೆಯಾಗಲು ಹಿಡಿಯುವ ಸಮಯವನ್ನು ಅದರ ಅರ್ಧಾಯು (ಹಾಫ್ ಲೈಫ್) ಎಂದು ಹೇಳುತ್ತಾರೆ. ಇಂಗಾಲ–14 ರ ಅರ್ಧಾಯು ಮೊದಲಿಗೆ 5,568 ವರ್ಷಗಳೆಂದು ಅಂದಾಜು ಮಾಡಲಾಗಿತ್ತು. ಅನಂತರ ಅನೇಕ ಪ್ರಯೋಗಗಳಿಂದ ಈಗ ಸರ್ವಸಮ್ಮತವಾಗಿ 5,730±40 ವರ್ಷಗಳೆಂದು ಪರಿಗಣಿಸಲ್ಪಟ್ಟಿದೆ. ಇಂಗಾಲ ಭೌತವಸ್ತುಗಳಲ್ಲಿ ಸರ್ವವ್ಯಾಪಕವಾದ ಧಾತುವಾದ್ದರಿಂದ, ಇಂಗಾಲ–14 ರ ವಿಕಿರಣಶೀಲತೆ ವಸ್ತುಗಳ ಕಾಲನಿರ್ಣಯಕ್ಕೆ ಅನುಕೂಲವಾದ ಸಾಧನವೊಂದನ್ನು ದೊರಕಿಸಿದೆ.

ಒಂದು ವಸ್ತುವಿನಲ್ಲಿರುವ ಇಂಗಾಲ–14 ರ ಪ್ರಮಾಣವನ್ನು ಅದರ ವಿಕಿರಣ ಪ್ರಕ್ರಿಯೆಯ ಗಣನೆಯ ಮೂಲಕ ನಿರ್ಧರಿಸಿದರೆ, ಆ ವಸ್ತು ಮೃತವಾಗಿ (ಎಂದರೆ ಮಾನವನ ಉಪಯೋಗಕ್ಕಾಗಿ ಬಳಸಲ್ಪಟ್ಟು) ಎಷ್ಟು ವರ್ಷಗಳು ಕಳೆದಿವೆ ಎಂದು ನಿರ್ಧರಿಸಬಹುದು. ಇದನ್ನು ಪ್ರಪ್ರಥಮವಾಗಿ ಅಮೆರಿಕದ ವಿಜ್ಞಾನಿ ವಿಲ್ಲರ್ಡ್ ಲಿಬ್ಬಿ 1949ರಲ್ಲಿ ಪ್ರಯೋಗದಲ್ಲಿ ಸಾಧಿಸಿದ. ಈ ಸಾಧನೆಗಾಗಿ ಇವನಿಗೆ ನೊಬೆಲ್ ಬಹುಮಾನ ದೊರೆಯಿತು. ಈ ಕಾಲ ನಿರ್ಣಯ ಅತ್ಯಂತ ವಿಶ್ವಾಸಾರ್ಹವಾದ ಕಾಲನಿರ್ಣಯ ವಿಧಾನವೆಂದು ಪರಿಗಣಿಸಲ್ಪಟ್ಟಿದೆ.

ತಾಂತ್ರಿಕ ವಿವರಗಳು: ನಿರ್ಜೀವ (ಇನ್‌ಆರ್ಗ್ಯಾನಿಕ್) ವಸ್ತುಗಳಿಗಿಂತ ಜೈವಿಕ (ಆರ್ಗ್ಯಾನಿಕ್) ವಸ್ತುಗಳಲ್ಲಿರುವ ಇಂಗಾಲಾಂಶ ಕಾಲ ಗಣನೆಗೆ ಹೆಚ್ಚು ಯೋಗ್ಯವಾಗಿರುವುದು ಕಂಡುಬಂದಿದೆ. ಏಕೆಂದರೆ ಈ ವಸ್ತುಗಳಲ್ಲಿ ಇತರ ಧಾತುಗಳೊಂದಿಗೆ ಇಂಗಾಲದ ಸಂಯೋಗ ಅತಿಧೃಡವಾಗಿರದೆ ಇಂಗಾಲ ಶುದ್ಧವಾಗಿ ಹಾಗೂ ಅಧಿಕ ಪ್ರಮಾಣದಲ್ಲಿ ಗಣನಾಕಾರ್ಯಕ್ಕೆ ದೊರೆಯುತ್ತದೆ. ಉದಾ: ಇದ್ದಿಲು, ಮರ, ಧಾನ್ಯಗಳ ಕಾಳುಗಳು ಮುಂತಾದವು ಕಾಲನಿರ್ಣಯಕ್ಕೆ ಯೋಗ್ಯ ವಸ್ತುಗಳು. ಸಮುದ್ರದ ದಡದಲ್ಲಿರುವ ಕಪ್ಪೆಚಿಪ್ಪು, ಶಂಖ, ಸುಣ್ಣದಕಲ್ಲು ಮುಂತಾದವಲ್ಲಿ ಸಹ ಇಂಗಾಲ ಕಾರ್ಬೊನೇಟ್ ರೂಪದಲ್ಲಿ ಇರುವುದಾದರೂ ಇವುಗಳನ್ನು ಕಾಲಗಣನೆಗೆ ಉಪಯೋಗಿಸಬೇಕಾದರೆ, ಬಹುದೊಡ್ಡ ಪ್ರಮಾಣದ ನಮೂನೆಗಳು ಅವಶ್ಯವಾಗುತ್ತವೆ ಮತ್ತು ಫಲಿತಾಂಶಗಳು ಯಾವಾಗಲೂ ತೃಪ್ತಿಕರವಾಗಿರುವುದಿಲ್ಲ. ನಮೂನೆಯ ಶೇಖರಣೆಯನ್ನು ಜಾಗರೂಕತೆಯಿಂದ ಮಾಡಬೇಕಾ ಗುತ್ತದೆ. ಏಕೆಂದರೆ ಅಲ್ಪಸ್ವಲ್ಪ ಆಧುನಿಕ ವಸ್ತುಗಳ ಸಂಪರ್ಕವಿದ್ದರೂ ಕಾಲ ನಿರ್ಣಯದಲ್ಲಿ ಬಹಳ ವ್ಯತ್ಯಾಸ ಬರುವುದು ಸಾಧ್ಯ.

ವಿಲ್ಲರ್ಡ್ ಲಿಬ್ಬಿ ಮೊದಲಿಗೆ ಈ ವಿಧಾನವನ್ನು ಬಳಸಿದಾಗ ಇಂಗಾಲವನ್ನು ಘನರೂಪ ದಲ್ಲಿಯೇ ಉಪಯೋಗಿಸಿ ಕಾಲಗಣನೆಯನ್ನು ಮಾಡಲಾಯಿತು. ಇದರಲ್ಲಿ ಕೆಲವು ನ್ಯೂನತೆಗಳು ಕಂಡುಬಂದವು. ಈಗ ಇಂಗಾಲವನ್ನು ವಾಯುರೂಪಕ್ಕೆ ಬದಲಾಯಿಸಿ, ಎಂದರೆ ಇಂಗಾಲಾಮ್ಲ, ಮೀಥೇನ್ ಅಥವಾ ಅಸಿಟಲೀನ್ ಈ ಯಾವುದಾದರೊಂದು ಅನಿಲವಾಗಿ ಮಾರ್ಪಡಿಸಿ, ಗ್ಯಾಸ್ ಕೌಂಟರ್ ಎಂಬ ಉಪಕರಣವನ್ನು ಉಪಯೋಗಿಸಿ ಇಂಗಾಲ–14 ರ ವಿಕಿರಣತೆಯ ಪ್ರಮಾಣವನ್ನು ಜಾಗರೂಕತೆಯಿಂದ ಅಳೆಯಲಾಗುತ್ತದೆ. ಕೆಲವೊಮ್ಮೆ ದ್ರವರೂಪದಲ್ಲಿ ಬೆಂಜೀನಾಗಿ ಮಾರ್ಪಡಿಸಿ ಲಿಕ್ವಿಡ್ ಸಿಂಟಿಲೇಷನ್ ಕೌಂಟರ್ ಎಂಬ ಉಪಕರಣದ ಸಹಾಯದಿಂದ ಗಣನೆ ಮಾಡಲಾಗುತ್ತದೆ. ಹೊರಗಿನಿಂದ ಬರಬಹು ದಾದ ವಿಕಿರಣಗಳನ್ನು ತಡೆಯಲು ಎಂಟು ಇಂಚು ಮಂದದ ಉಕ್ಕಿನ ಕವಚದೊಳಗೆ ನಮೂನೆಯನ್ನು ಇಡಲಾಗುತ್ತದೆ. ಹೊರಗೆ ವಿಶ್ವಕಿರಣಗಳ ಪ್ರಭಾವವನ್ನು ತಡೆಗಟ್ಟಲು ವಿಶೇಷ ಕೌಂಟರುಗಳನ್ನು ಬಳಸಲಾಗುತ್ತದೆ.

ಇಂಗಾಲ–14ರ ಉತ್ಪತ್ತಿದರದಲ್ಲಿ ಹಾಗೂ ವಿಕಿರಣತೆಯ ಪ್ರಕ್ರಿಯೆಯಲ್ಲಿ ಸ್ವಾಭಾವಿಕವಾಗಿ ಸ್ವಲ್ಪಮಟ್ಟಿನ ಅನಿಶ್ಚಿತತೆ ಇರುವುದರಿಂದ ಈ ವಿಧಾನದಿಂದ ಅಳೆಯಲ್ಪಟ್ಟ ಕಾಲ ಪ್ರಮಾಣವನ್ನು ಒಂದು ಅನಿಶ್ಚಿತತಾ ಸೂಚಿಯೊಂದಿಗೆ ಹೇಳಲಾಗುತ್ತದೆ. ಉದಾ: $3600\pm100$ ವರ್ಷಗಳು. ವಸ್ತುವಿನ ಕಾಲ ಪ್ರಮಾಣದೊಂದಿಗೆ ಹೋಲಿಸಿದರೆ ಈ ಅನಿಶ್ಚಿತತೆ ಬಹಳ ಕಡಿಮೆ ಇರುವುದರಿಂದ ಹೆಚ್ಚಿನ ವ್ಯತ್ಯಾಸವೇನೂ ಆಗುವುದಿಲ್ಲ.

ಈ ವಿಧಾನದಿಂದ ಅಳೆಯಲ್ಪಟ್ಟ ಕಾಲ ಪ್ರಮಾಣಗಳನ್ನು ಮತ್ತಷ್ಟು ದೃಢಪಡಿಸುವ ಸಲುವಾಗಿ ಇದಕ್ಕಿಂತ ನಿಷ್ಕೃಷ್ಟವೆಂದು ಹೇಳಬಹುದಾದ ವೃಕ್ಷ ವಾರ್ಷಿಕವರ್ತುಲ ಗಣನೆಯಿಂದ (ಟ್ರೀ ರಿಂಗ್ ಡೇಟಿಂಗ್) ನಿಷ್ಕರ್ಷಿಸಲ್ಪಟ್ಟ ಕಾಲ ಪ್ರಮಾಣಗಳೊಂದಿಗೆ ಹೋಲಿಸಿ ಬೇಕಾಗುವ ತಿದ್ದುಪಡಿಗಳನ್ನು ಮಾಡಲಾಗಿದೆ. ಈ ತಿದ್ದುಪಡಿಗಳು ಮೊದಲಿಗೆ ಅಮೆರಿಕದ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಮ್ಯೂಸಿಯಂ, ಅಪ್ಲೈಡ್ ಸೈನ್ಸ್ ಸೆಂಟರ್ ಫಾರ್ ಆರ್ಕಿಯಾಲಜಿ ಇವರಿಂದ ಮಾಡಲ್ಪಟ್ಟಿದ್ದರಿಂದ ಇದನ್ನು ಮಸ್ಕಾ ತಿದ್ದುಪಡಿಗಳು (ಕ್ಯಾಲಿಬ್ರೇಷನ್) ಎಂದೇ ಕರೆಯಲಾಗಿದೆ. ಈ ವಿಧಾನದಿಂದ ಸು. 50 ಸಾವಿರ ವರ್ಷಗಳಷ್ಟು ಹಿಂದಿನ ವಸ್ತುಗಳ ಕಾಲನಿರ್ಣಯವನ್ನು ಮಾಡಲಾಗಿದೆ. ಇದಕ್ಕಿಂತ ಹಳೆಯ ವಸ್ತುಗಳಲ್ಲಿ ಇಂಗಾಲ–14 ರ ಅಂಶ ಬಹಳ ಕಡಿಮೆ ಇರುವುದರಿಂದ ಗಣನೆ ಕಷ್ಟವಾಗಬಹುದು. ಅದೇ ರೀತಿ ಕೆಲವು ನೂರು ವರ್ಷಗಳಿಗಿಂತ ಈಚಿನ ವಸ್ತುಗಳ ಕಾಲಗಣನೆಯೂ ಉಪಯುಕ್ತವಲ್ಲ. ಏಕೆಂದರೆ ಈ ಕಾಲ ಪ್ರಮಾಣದಲ್ಲಿ 100–200 ವರ್ಷಗಳ ಅನಿಶ್ಚಿತತೆ ಅತಿ ದೊಡ್ಡದಾಗುತ್ತದೆ.

2) ಉಷ್ಣತಾ ದೀಪ್ತಿ (ಥರ್ಮೋಲ್ಯೂಮಿನಿಸೆನ್ಸ್): ಪುರಾತತ್ತ್ವ ಕ್ಷೇತ್ರದಲ್ಲಿ ಬೇರೆ ಬೇರೆ ಯುಗಗಳ ಸಂಸ್ಕೃತಿಗಳನ್ನು ಗುರುತಿಸುವುದರಲ್ಲಿ ಆಯಾ ಸಮಯಗಳಲ್ಲಿ ಉಪಯೋಗಿಸಲ್ಪಟ್ಟ ಮಣ್ಪಾತ್ರೆಗಳ ಅಧ್ಯಯನ ಬಹುಮುಖ್ಯವಾಗಿರುವುದರಿಂದ ಇವನ್ನು ಪುರಾತತ್ತ್ವದ ಅಕ್ಷರಮಾಲೆಗಳೆಂದೇ ಹೇಳಲಾಗಿದೆ. ಮಣ್ಪಾತ್ರೆಗಳಿಗೇ ಪ್ರತ್ಯೇಕ ರೂಪದಲ್ಲಿ ಅನ್ವಯಿಸುವ ಕಾಲನಿರ್ಣಯ ಪದ್ಧತಿಯೊಂದು ಇದೆ. ಈ ಕಾಲನಿರ್ಣಯ ವಿಧಾನವೇ ಉಷ್ಣತಾ ದೀಪ್ತಿ (ಔಷ್ಣದೀಪ್ತಿ). ಇದರಿಂದ ಮಣ್ಪಾತ್ರೆ ಸು.$500^{\circ}$ ಗಳಿಗಿಂತ ಹೆಚ್ಚು ಉಷ್ಣಾಂಶಕ್ಕೆ ಒಳಪಡಿಸಲ್ಪಟ್ಟು ಎಷ್ಟು ಕಾಲ ಸಂದಿದೆ ಎಂಬುದನ್ನು ಗಣಿಸಬಹುದು; ಜೇಡಿಮಣ್ಣಿನ ಸುಡುವಿಕೆಯಿಂದ ಮಣ್ಪಾತ್ರೆ ತಯಾರಾಗಿ ಎಷ್ಟು ವರ್ಷಗಳು ಕಳೆದಿವೆ ಎಂಬುದು ತಿಳಿದುಬರುತ್ತದೆ.

ಮೂಲತತ್ತ್ವ: ನೆಲದ ಮಣ್ಣಿನಲ್ಲಿ ದಶಲಕ್ಷಕ್ಕೆ ಕೆಲವು ಭಾಗಗಳಷ್ಟು ಕಡಿಮೆ ಪ್ರಮಾಣದಲ್ಲಿರುವ ಯುರೇನಿಯಂ, ಥೋರಿಯಂ ಮತ್ತು ಪೊಟಾಸಿಯಂ–40 ಎಂಬ ವಿಕಿರಣಶೀಲ ಧಾತುಗಳಿಂದ ಹೊರಡುತ್ತಿರುವ $\alpha$, $\beta$ ಮತ್ತು $\gamma$ ವಿಕಿರಣಗಳ ಪ್ರಭಾವ ಮಣ್ಣಿನ ಮೇಲೆ ಆಗುತ್ತಲೇ ಇರುತ್ತದೆ. ಈ ಶಕ್ತಿಶಾಲಿ ವಿಕಿರಣಗಳ ಪ್ರಭಾವದಿಂದಾಗಿ ಮಣ್ಣಿನ ಪರಮಾಣುಗಳ ವಿದ್ಯುತ್ ಕಣಗಳು (ಎಲೆಕ್ಟ್ರಾನ್) ತಮ್ಮ ಸಾಮಾನ್ಯ ಸ್ಥಿತಿಗಿಂತ ಅಧಿಕ ಶಕ್ತಿಯುತವಾದ ಸ್ಥಿತಿಗೆ (ಹೈಯರ್ ಎನರ್ಜಿ ಲೆವೆಲ್) ತಳ್ಳಲ್ಪಟ್ಟು ಅಲ್ಲಿಯೇ ಉಳಿದುಬಿಡುತ್ತವೆ. ಇದೊಂದು ಅಸಹಜ ಸ್ಥಿತಿ. ಇವು ಪುನಃ ತಮ್ಮ ಸಾಮಾನ್ಯ ಸ್ಥಿತಿಗೆ ಹಿಂತಿರುಗಬೇಕಾದರೆ ಬಾಹ್ಯಶಕ್ತಿಯ ಪ್ರಯೋಗ ಅಗತ್ಯ. ಈ ಬಾಹ್ಯಶಕ್ತಿ ಉಷ್ಣತೆಯೂ ಆಗಿರಬಹುದು.

ಮಣ್ಪಾತ್ರೆಗಳನ್ನು ತಯಾರು ಮಾಡುವಾಗ ಜೇಡಿಮಣ್ಣನ್ನು ಸುಟ್ಟು (ಸು.$500^{\circ}$ ಗಳಿಗಿಂತ ಹೆಚ್ಚು ಉಷ್ಣಾಂಶಕ್ಕೆ ಒಳಪಡಿಸಿ) ತಯಾರುಮಾಡಲಾಗುತ್ತದೆ. ಈ ಪ್ರಮಾಣದ ಉಷ್ಣತೆಯ ಪ್ರಭಾವದಿಂದಾಗಿ, ತಮಗೆ ಅಸಹಜವಾದ ಅಧಿಕ ಶಕ್ತಿ ಸ್ಥಿತಿಯಲ್ಲಿ ಸಿಕ್ಕಿರುವ ವಿದ್ಯುತ್ಕಣಗಳು ಬಿಡುಗಡೆಹೊಂದಿ ತಮ್ಮ ಸಹಜ ಸ್ಥಿತಿಗೆ ಹಿಂತಿರುಗುತ್ತವೆ. ಶೇಖರಿತ ಶಕ್ತಿಯೂ ಬಿಡುಗಡೆ ಹೊಂದಿ ಬೆಳಕಿನ ಕಣಗಳ ರೂಪದಲ್ಲಿ ಹೊರಬೀಳುತ್ತವೆ. ಈ ಬೆಳಕಿಗೆ ಉಷ್ಣತಾ ದೀಪ್ತಿ ಎಂದು ಹೆಸರು. ಈ ಬೆಳಕು ಸಾಮಾನ್ಯ ದೃಷ್ಟಿಗೆ ಗೋಚರ ವಾಗುವುದಿಲ್ಲ. ಆದರೆ ಸೂಕ್ಷ್ಮಯಂತ್ರಗಳ ಸಹಾಯದಿಂದ ಇದನ್ನು ಅಳೆಯಲು ಸಾಧ್ಯ.

ಮಣ್ಪಾತ್ರೆಯ ತಯಾರಿಕೆಯ ಸಮಯದಲ್ಲಿ ಮಣ್ಣಿನಲ್ಲಿ ಶೇಖರಿತವಾಗಿದ್ದ ಶಕ್ತಿ ಮೇಲೆ ಹೇಳಿದ ರೀತಿ ಪೂರ್ತಿಯಾಗಿ ವಿಸರ್ಜಿಸಲ್ಪಟ್ಟು, ಸಾಮಾನ್ಯ ಸ್ಥಿತಿ ಏರ್ಪಟ್ಟ ಅನಂತರ, ಮಣ್ಪಾತ್ರೆಯೊಳಗೆ ಇರುವ ವಿಕಿರಣಶೀಲ ಧಾತುಗಳ ಪ್ರಭಾವದಿಂದಲೂ ಹೊರಗಿನ ವಿಕಿರಣತಾ ಪ್ರಭಾವಗಳಿಂದಾಗಿಯೂ ಅದರೊಳಗೆ ಶಕ್ತಿಯ ಶೇಖರಣೆ ಪುನಃ ಪ್ರಾರಂಭವಾಗುತ್ತದೆ (ಇದು ಗಡಿಯಾರದ ಮುಳ್ಳನ್ನು ಸೊನ್ನೆಗೆ ಹಿಂತಿರುಗಿಸಿ ಅದು ಪುನಃ ಚಲಿಸುವಂತೆ). ಪ್ರಾಚೀನ ಮಣ್ಪಾತ್ರೆಯ ಉಷ್ಣತಾದೀಪ್ತಿಯನ್ನು ಅಳೆದರೆ ದೀಪ್ತಿಯ ಪ್ರಮಾಣ ಮಣ್ಪಾತ್ರೆ ತಯಾರಾಗಿ ಅದು ಇಲ್ಲಿನವರೆಗೆ ಪಡೆದಿರುವ ಒಟ್ಟು ವಿಕಿರಣತಾ ಪ್ರಮಾಣದ ಮೇಲೆ ಆಧಾರಿತವಾಗಿರುತ್ತದೆ. ಒಂದು ವರ್ಷದ ಕಾಲಾವಧಿಯಲ್ಲಿ ಅದು ಪಡೆದಿರಬಹುದಾದ ವಿಕಿರಣತಾ ಪ್ರಮಾಣವನ್ನು ಅಳೆಯುವುದರ ಮೂಲಕ ಮಣ್ಪಾತ್ರೆ ತಯಾರಾಗಿ ಎಷ್ಟು ವರ್ಷಗಳು ಸಂದಿವೆ ಎಂಬುದನ್ನು ಗಣಿಸಬಹುದು.

ಪ್ರಾಯೋಗಿಕ ವಿವರ: ಪ್ರಾಚೀನ ಮಣ್ಪಾತ್ರೆಯ ಪುಡಿಯ ರೂಪದಲ್ಲಿ ಅದರ ನಮೂನೆ ಯನ್ನು ಪಡೆಯಲಾಗುತ್ತದೆ. ವಿದ್ಯುತ್ ಸಾಧನಗಳನ್ನು ಉಪಯೋಗಿಸದೆ ಹಸ್ತಚಾಲಿತ ಸಲಕರಣೆಗಳ ಉಪಯೋಗದಿಂದಲೇ ಮಣ್ಪಾತ್ರೆಯನ್ನು ಕೊರೆದು ಪುಡಿಯನ್ನು ಶೇಖರಿಸ ಬಹುದು. ಏಕೆಂದರೆ ನಮೂನೆ ಶಾಖಕ್ಕೆ ಒಳಗಾಗಬಾರದು. ಪುಡಿಯನ್ನು ಉಕ್ಕಿನ ತೆಳು ಪಟ್ಟಿಯ ಮೇಲಿರಿಸಿ ವಿದ್ಯುತ್ ಮೂಲದಿಂದ ಪಡೆಯಲಾಗುವ $500^{\circ}$ ಉಷ್ಣಾಂಶವನ್ನು ಬಹಳ ಕಡಿಮೆ ಸಮಯದಲ್ಲಿಯೇ ಹೊಂದುವ ರೀತಿಯಲ್ಲಿ ಶೀಘ್ರಗತಿಯಲ್ಲಿ ಶಾಖಗೊಳಿಸಲಾಗುತ್ತದೆ. ಉಷ್ಣಾಂಶ ಏರುತ್ತಿರುವಂತೆಯೇ ಫೋಟೋ ಮಲ್ಟಿಪ್ಲೈಯರ್ ಎಂಬ ಯಂತ್ರದ ಮೂಲಕ ನಮೂನೆಯಿಂದ ಹೊರಬೀಳುತ್ತಿರುವ ಬೆಳಕಿನ ಪ್ರಮಾಣವನ್ನು ಅಳೆಯಲಾಗುತ್ತದೆ. ಜೊತೆಯಲ್ಲಿಯೇ ಉಷ್ಣಾಂಶವನ್ನು ಮತ್ತು ಅದಕ್ಕೆ ಅನುಗುಣವಾಗಿ ಹೊರಬೀಳುತ್ತಿರುವ ಬೆಳಕಿನ ಪ್ರಮಾಣವನ್ನು ರೇಖಾಚಿತ್ರದಲ್ಲಿ ದಾಖಲಿಸಲಾಗುತ್ತದೆ. ಹೀಗೆ ರೂಪುಗೊಳ್ಳುವ ರೇಖೆಗೆ ದೀಪ್ತಿರೇಖೆ (ಗ್ಲೋಕರ್ವ್) ಎನ್ನಲಾಗುತ್ತದೆ. ಈ ದೀಪ್ತಿ ರೇಖೆಯ ಶಿಖರವೇ ನಮೂನೆಯ ಉಷ್ಣತಾ ದೀಪ್ತಿಯ ಪ್ರಮಾಣವನ್ನು ತೋರಿಸುತ್ತದೆ.

ಮಣ್ಪಾತ್ರೆಯ ಸ್ವಾಭಾವಿಕ ಉಷ್ಣತಾ ದೀಪ್ತಿಯ ಪ್ರಮಾಣವನ್ನು ತಿಳಿದ ಬಳಿಕ, ಆ ಮಣ್ಪಾತ್ರೆಯ ಮೇಲೆ ನಿರ್ದಿಷ್ಟವಾದ ಒಂದು ವಿಕಿರಣತೆಯನ್ನು ಪ್ರಯೋಗಿಸಿ, ಅದರ ಪ್ರಭಾವದಿಂದ ಉಂಟಾಗುವ ಉಷ್ಣತಾ ದೀಪ್ತಿಯನ್ನು ಅಳೆಯಲಾಗುತ್ತದೆ. ಇದನ್ನು ಸೃಷ್ಟಿತ ಉಷ್ಣತಾದೀಪ್ತಿ ಎಂದು ಕರೆಯಬಹುದು.

ಕಡೆಯದಾಗಿ ನಮೂನೆಯನ್ನು ಅದರ ಸ್ವಾಭಾವಿಕ ಪರಿಸರದಲ್ಲಿಯೇ ಒಂದು ವರ್ಷ ಕಾಲದವರೆಗೆ ಇರಿಸಿ, ಅದು ತನ್ನೊಳಗೆ ಇರುವ ವಿಕಿರಣಶೀಲ ಧಾತುಗಳ ಪ್ರಭಾವದಿಂದಲೂ ಹೊರಗಿನ ಪ್ರಭಾವಗಳಿಂದಾಗಿಯೂ ಒಂದು ವರ್ಷದ ಅವಧಿಯಲ್ಲಿ ಪಡೆದಿರುವ ವಿಕಿರಣತೆಯ ಪ್ರಮಾಣವನ್ನು ಅಳೆಯಲಾಗುತ್ತದೆ. ಇದನ್ನು ಸ್ವಾಭಾವಿಕ ವಿಕಿರಣತಾ ಗತಿ (ನ್ಯಾಚುರಲ್ ಡೋಸ್ ರೇಟ್) ಎಂದು ಕರೆಯಲಾಗುತ್ತದೆ. ಕಾಲನಿರ್ಣಯ ಸೂತ್ರ ಹೀಗಿದೆ:

$$\text{ಕಾಲಪ್ರಮಾಣ} = \frac{\text{ಸ್ವಾಭಾವಿಕ ಉಷ್ಣತಾದೀಪ್ತಿ}}{\text{ಸ್ವಾಭಾವಿಕ ವಿಕಿರಣತಾ ಗತಿ}} \times \frac{\text{ಸೃಷ್ಟಿತ ಉಷ್ಣತಾದೀಪ್ತಿ}}{\text{ಸ್ವಾಭಾವಿಕ ವಿಕಿರಣತಾ ಗತಿ}}$$

ಈ ವಿಧಾನವನ್ನು ಉಪಯೋಗಿಸಿ 10 ಸಾವಿರ ವರ್ಷಗಳಿಗೂ ಹಳೆಯದಾದ ಮಣ್ಪಾತ್ರೆಗಳ ಕಾಲನಿರ್ಣಯವನ್ನು ಯಶಸ್ವಿಯಾಗಿ ಮಾಡಲಾಗಿದೆ. ಕೆಲವು ನೂರು ವರ್ಷಗಳ ಈಚಿನ ವಸ್ತುಗಳ ಕಾಲವನ್ನು ಅಳೆಯಬೇಕಾದರೆ ಅವುಗಳಲ್ಲಿ ವಿಕಿರಣಶೀಲ ಧಾತುಗಳ ಅಂಶ ಅಧಿಕವಾಗಿ ಇರಬೇಕು.

3) ಎಲೆಕ್ಟ್ರಾನ್ ಸ್ಪಿನ್ ರೆಸೊನೆನ್ಸ್ (ಇಎಸ್ಆರ್): ವಿದ್ಯುತ್ ಕಣಗಳಿಗೆ ಅವುಗಳ ಸತತ ಸುತ್ತುವಿಕೆಯ ಪರಿಣಾಮವಾಗಿ ಕಾಂತೀಯತೆಯೂ ಉಂಟಾಗಿ ಇದರಿಂದ ಕಾಂತೀಯ ಚಾಲನೆ (ಮ್ಯಾಗ್ನೆಟಿಕ್ ಮೂವ್‌ಮೆಂಟ್) ಉಂಟಾಗುತ್ತದೆ. ಸಾಮಾನ್ಯವಾಗಿ ಪರಮಾಣುಗಳಲ್ಲಿ ಎರಡು ವಿದ್ಯುತ್ ಕಣಗಳು ಸೇರಿರುವುದರಿಂದ, ಒಂದರ ಕಾಂತೀಯ ಚಾಲನೆ ಮತ್ತೊಂದ ರದಕ್ಕೆ ವಿರುದ್ಧವಾಗಿದ್ದು, ಒಟ್ಟಿನಲ್ಲಿ ಕಾಂತೀಯ ಚಾಲನೆ ರದ್ದಾಗುತ್ತದೆ.

ಆದರೆ ಉಷ್ಣತಾ ದೀಪ್ತಿಯ ವಿವರಣೆಯಲ್ಲಿ ಹೇಳಿದಂತೆ, ಕೆಲವು ವಿದ್ಯುತ್ ಕಣಗಳು ಅಧಿಕ ಶಕ್ತಿಯುತ ಸ್ಥಿತಿಗೆ ತಳ್ಳಲ್ಪಟ್ಟು ಅಸ್ಥಿರ ಸ್ಥಿತಿಯಲ್ಲಿರುವಂತಹವು, ಜೋಡಿ ಸೇರದೆ ಏಕಾಂಗಿಯಾಗಿಯೇ ಇರುತ್ತವೆ. ಇಂತಹ ವಿದ್ಯುತ್ ಕಣಗಳಲ್ಲಿ ಕಾಂತೀಯತೆಯ ಪ್ರಭಾವದಿಂದ ಉಂಟಾಗುವ ಗುಣಲಕ್ಷಣಗಳೂ ಇರುತ್ತವೆ. ಇವುಗಳಲ್ಲಿ ಇಎಸ್ಆರ್ ಎಂಬುದೂ ಒಂದು.

ಪರೀಕ್ಷಿಸಬೇಕಾದ ವಸ್ತುವನ್ನು ಒಂದು ಶಕ್ತಿಯುತ ಕಾಂತೀಯ ವಲಯದೊಳಗಿರಿಸಿ, ಮೈಕ್ರೋವೇವ್ ಕಿರಣಗಳನ್ನು ವಿದ್ಯುತ್ ಕಣಗಳೊಂದಿಗೆ ಪ್ರತಿಕ್ರಿಯಿಸುವಂತೆ ಮಾಡುವುದರಿಂದ ಇಎಸ್ಆರ್ ಪ್ರಕ್ರಿಯೆಯನ್ನು ಪರಿಶೀಲಿಸಬಹುದು. ಈ ಪರೀಕ್ಷೆಯಲ್ಲಿಯೂ ಬಹುಪಾಲು ಉಷ್ಣತಾ ದೀಪ್ತಿಯ ಪ್ರಯೋಗದಲ್ಲಿ ದೊರೆತ ವಿಷಯಗಳೇ ಕಂಡುಬರುವುದರಿಂದ, ಇದನ್ನು ಉಷ್ಣತಾ ದೀಪ್ತಿಗೆ ಸಂಬಂಧಿಸಿದ ಕಾಲನಿರ್ಣಯ ವಿಧಾನವೆಂದೇ ಹೇಳಬಹುದು.

4) ಪೊಟಾಸಿಯಮ್–ಆರ್ಗಾನ್ ವಿಧಾನ: ಭೂಮಿಯ ಸಮಗ್ರ ಭೌತದ್ರವ್ಯದಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿರುವ ಮೂಲಧಾತುಗಳಲ್ಲಿ ಪೊಟಾಸಿಯಮ್ ಧಾತು ಏಳನೆಯ ಸ್ಥಾನದಲ್ಲಿದೆ. ಇದು ಶೇ.26ರಷ್ಟಿದ್ದು ಸರ್ವವ್ಯಾಪಿಯಾಗಿರುವ ಧಾತುಗಳಲ್ಲಿ ಒಂದಾಗಿದೆ. ಕಲ್ಲಿನಲ್ಲಿರುವ ಮೈಕ, ಫೆಲ್ಡ್‌ಸ್ಪಾರ್ ಮುಂತಾದ ಖನಿಜಗಳಲ್ಲಿ ಗಣನೀಯ ಪ್ರಮಾಣದಲ್ಲಿರುತ್ತದೆ.

ಪೊಟಾಸಿಯಮ್‌ನ $K^{40}$ ಎಂಬ ಸಮಸ್ಥಾನಿಯು ವಿಕಿರಣಶೀಲವಾಗಿದ್ದು, ವಿದ್ಯುತ್ ಕಣ ಗ್ರಹಣ ಎಂಬ ಪ್ರಕ್ರಿಯೆಯ ಮೂಲಕ ಆರ್ಗಾನ್$^{40}$ ($Ar^{40}$) ಎಂಬ ಅನಿಲವಾಗಿ ಮಾರ್ಪಡುತ್ತದೆ. ಕಲ್ಲಿನಲ್ಲಿರುವ ಪೊಟಾಸಿಯಮ್$^{40}$ ಈ ರೀತಿ ಆರ್ಗಾನ್$^{40}$ ಆಗಿ ಪರಿವರ್ತಿಸಿ ದಾಗ, ಆರ್ಗಾನ್ ಪರಮಾಣುಗಳು ಕಲ್ಲಿನಲ್ಲಿಯೇ ಉಳಿದುಬಿಡುತ್ತವೆ. ಇವು ಹೊರಬೀಳಬೇಕಾ ದರೆ ಅತಿ ದೊಡ್ಡ ಪ್ರಮಾಣದ ಶಾಖದ ಅಗತ್ಯವಿರುತ್ತದೆ.

ಜ್ವಾಲಾಮುಖಿಯಿಂದ ಹೊರಬಿದ್ದ ಶಿಲಾರಸ ಕ್ರಮೇಣ ತಣ್ಣಗಾಗಿ ಜ್ವಾಲಾಮುಖಿ ಜನಿತ ಶಿಲಾ ಸಂಚಯಗಳ ನಿರ್ಮಾಣವಾದ ಅನಂತರ ಈ ಶಿಲೆಗಳಲ್ಲಿನ ಪೊಟಾಸಿಯಮ್$^{40}$ ($K^{40}$)ನ ವಿಕಿರಣಶೀಲ ಪರಿವರ್ತನೆ ಪ್ರಾರಂಭವಾಗುತ್ತದೆ. $K^{40}$ ರ ಅರ್ಧಾಯು $1.31\times10^{9}$ ವರ್ಷಗಳು ಎಂದರೆ ಸು.13 ಸಾವಿರ ಲಕ್ಷ ವರ್ಷಗಳು ಎಂದು ನಿರ್ಣಯಿಸಲಾಗಿದೆ. ಶಿಲೆಯಲ್ಲಿರುವ $K^{40}$ ಮತ್ತು $Ar^{40}$ ಇವುಗಳ ಪ್ರಮಾಣವನ್ನು ಅಳೆಯುವುದರ ಮೂಲಕ ಶಿಲೆ ಉತ್ಪನ್ನವಾಗಿ ಎಷ್ಟು ವರ್ಷಗಳು ಸಂದಿವೆ ಎಂಬುದನ್ನು ಗಣಿಸಬಹುದು.

$K^{40}$ ರ ಅರ್ಧಾಯುವಿನ ಅತಿ ದೊಡ್ಡ ಪ್ರಮಾಣದಿಂದಾಗಿ ಈ ಕಾಲನಿರ್ಣಯ ವಿಧಾನ ಪುರಾತತ್ತ್ವ ಸಂಶೋಧಕರಿಗೆ, ಎಂದರೆ ಕೆಲವು ಸಾವಿರ ವರ್ಷಗಳಷ್ಟು ಮಾತ್ರ ಹಳೆಯದಾದ ವಸ್ತುಗಳ ಅಧ್ಯಯನ ಮಾಡುವವರಿಗೆ, ಉಪಯುಕ್ತವಲ್ಲ. ಭೂ ವಿಜ್ಞಾನಿಗಳು ಹಲವು ದಶಲಕ್ಷ ವರ್ಷಗಳಷ್ಟು ಹಳೆಯದಾದ ಶಿಲೆಗಳ ಕಾಲನಿರ್ಣಯಕ್ಕೆ ಇದನ್ನು ಉಪಯೋಗಿಸುತ್ತಾರೆ.

ಆದರೆ ಮಾನವಶಾಸ್ತ್ರಜ್ಞರಿಂದ ಪುರಾತನ ಮಾನವರೂಪ ವಾನರಗಳ (ಹೋಮಿನೈಡ್ಸ್) ಕಾಲವನ್ನು ತಿಳಿಯುವುದರಲ್ಲಿ ಈ ವಿಧಾನ ಉಪಯೋಗಿಸಲ್ಪಟ್ಟಿದೆ. 1960ರ ದಶಕದಲ್ಲಿ ಪೂರ್ವ ಆಫ್ರಿಕದ ಓಲ್ಡುವಾಯ್ ಗಾರ್ಜ್ ಎಂಬ ಸ್ಥಳದಲ್ಲಿ ಜ್ವಾಲಾಮುಖಿ ಜನಿತ ಶಿಲಾ ಸಂಚಯದ ಕೆಳಗಡೆ ದೊರೆತ ಜಿಂಜಾಂಥ್ರೊಪಸ್ ಎಂಬ ಮಾನವರೂಪ ವಾನರದ ಅವಶೇಷಗಳ ಪರೀಕ್ಷೆಯ ಅನಂತರ ಅದರ ಕಾಲ 1.75 ದಶಲಕ್ಷ ವರ್ಷಗಳೆಂದು ನಿರ್ಣಯಿಸಲ್ಪಟ್ಟಿತು, ಅದುವರೆಗೆ ಪ್ರಪ್ರಥಮ ಮಾನವರೂಪ ವಾನರದ ಕಾಲ ಎಷ್ಟೆಂದು ಊಹಿಸಲ್ಪಟ್ಟಿತ್ತೋ ಅದರ ಎರಡರಷ್ಟು ಸ್ಪಷ್ಟವಾದ ಕಾಲಪ್ರಮಾಣ ಈ ಪರೀಕ್ಷೆಯಲ್ಲಿ ತಿಳಿದುಬಂದಿತು.

5) ಯುರೇನಿಯಂ ವಿಚ್ಛೇದನ ಮಾರ್ಗ ವಿಧಾನ (ಯುರೇನಿಯಮ್ ಫಿಷನ್ ಟ್ರಾಕ್ ಡೇಟಿಂಗ್): ವಿಕಿರಣಶೀಲ ಧಾತುಗಳಲ್ಲಿ ಪ್ರಮುಖವಾದ ಯುರೇನಿಯಂನ ಪರಮಾಣುವಿಗೆ ವಿಕಿರಣತೆಯಲ್ಲದೆ ತನ್ನಷ್ಟಕ್ಕೆ ತಾನೇ ವಿಚ್ಛಿನ್ನವಾಗಿ ಎರಡು ಭಾಗಗಳಾಗುವ ಗುಣವಿದೆ. ಅದರ $U^{238}$ ಎಂಬ ಸಮಸ್ಥಾನೀಯ ಗುಣವನ್ನು ಉಪಯೋಗಿಸಿ ಪುರಾತನ ಶಿಲಾ ವಸ್ತುಗಳ ಕಾಲನಿರ್ಣಯ ಮಾಡುವುದು ಸಾಧ್ಯ.

$U^{238}$ ಪರಮಾಣು ವಿಚ್ಛಿನ್ನವಾಗುವಾಗ ಬಹುದೊಡ್ಡ ಪ್ರಮಾಣದ ಶಕ್ತಿ ಉದ್ಭವಿಸಿ ಇದರಿಂದ ವಸ್ತುವಿನೊಳಗೆ ಸು.10 ಮೈಕ್ರಾನ್‌ನಷ್ಟು ದೊಡ್ಡ ಛೇದವುಂಟಾಗುತ್ತದೆ. ಈ ಛೇದವನ್ನು ರಾಸಾಯನಿಕ ಪ್ರಕ್ರಿಯೆಯಿಂದ, ಸೂಕ್ಷ್ಮದರ್ಶಕಯಂತ್ರದಲ್ಲಿ ಕಾಣುವಂತೆ ಮಾಡಬಹುದು. $U^{238}$ ನ ವಿಚ್ಛಿನ್ನದ ಗತಿ ತಿಳಿದಿರುವುದರಿಂದ, ಒಂದು ವಸ್ತುವಿನಲ್ಲಿ (ಖನಿಜಗಳು, ಜ್ವಾಲಾಮುಖಿಜನಿತ ಗಾಜು ಮುಂತಾದವು) ಸೂಕ್ಷ್ಮಯಂತ್ರದಿಂದ ಪರೀಕ್ಷಿಸಿ ವಿಚ್ಛಿನ್ನ ಮಾರ್ಗಗಳ (ಎಂದರೆ ಛೇದ) ಸಂಖ್ಯೆಯನ್ನು ಮತ್ತು ಬೇರೆ ವೈಜ್ಞಾನಿಕ ವಿಧಾನಗಳಿಂದ ವಸ್ತುವಿನಲ್ಲಿರುವ ಯುರೇನಿಯಂನ ಪ್ರಮಾಣವನ್ನು ಅಳೆದರೆ, ಆ ವಸ್ತುವಿನ ಕಾಲವನ್ನು ಗಣಿಸುವುದು ಸಾಧ್ಯ. ಈ ವಿಧಾನ ಕೂಡ ಕೆಲವು ಲಕ್ಷ ವರ್ಷಗಳ ಕಾಲನಿರ್ಣಯಕ್ಕೆ ಯೋಗ್ಯವಾಗಿರುವುದರಿಂದ ಪುರಾತತ್ತ್ವಜ್ಞರಿಗಿಂತ ಮಾನವಶಾಸ್ತ್ರಜ್ಞರಿಗೆ ಹೆಚ್ಚು ಉಪಯುಕ್ತ.

6) ಯುರೇನಿಯಂ – ಥೋರಿಯಂ ವಿಧಾನ: ಭೌತವಸ್ತುಗಳಲ್ಲಿ ಅಲ್ಪಪ್ರಮಾಣದಲ್ಲಿ ಯಾವಾಗಲೂ ಇರುವಂತಹ ವಿಕಿರಣಶೀಲ ಧಾತುಗಳಾದ ಯುರೇನಿಯಂ ಮತ್ತು ಥೋರಿಯಂ ಇವುಗಳ ಅರ್ಧಾಯುಗಳನ್ನು ಉಪಯೋಗಿಸಿ ಮತ್ತು ನಿರ್ದಿಷ್ಟ ವಸ್ತುವಿನಲ್ಲಿ ಈ ಎರಡು ಧಾತುಗಳ ಪ್ರಮಾಣವನ್ನು ಆಧುನಿಕ ವೈಜ್ಞಾನಿಕ ವಿಧಾನಗಳಿಂದ ಖಚಿತವಾಗಿ ಅಳೆಯುವುದರ ಮೂಲಕ, ಆ ವಸ್ತುವಿನ ಕಾಲವನ್ನು ನಿರ್ಣಯಿಸುವುದು ಸಾಧ್ಯವಾಗುತ್ತದೆ. ಯುರೇನಿಯಂನ ವಿಕಿರಣಶೀಲ ಸಮಸ್ಥಾನಿಯಾದ $U^{238}$ ನ ಅರ್ಧಾಯು 447 ಕೋಟಿ ವರ್ಷಗಳು. ಥೋರಿಯಂನ $Th^{230}$ ರ ಅರ್ಧಾಯು ಕೇವಲ 75,380 ವರ್ಷಗಳು. ಐಸೊಟೋಪ್ ಡೈಲೂಷನ್ ಮಾಸ್ ಸ್ಪೆಕ್ಟ್ರೊಮೀಟರ್ (ಐಡಿಎಮ್‌ಎಸ್) ಎಂಬ ಸೂಕ್ಷ್ಮ ವೈಜ್ಞಾನಿಕ ವಿಧಾನದ ಸಹಾಯದಿಂದ $U^{238}$ ಮತ್ತು $Th^{230}$ ಗಳ ಪ್ರಮಾಣವನ್ನು ಅಳೆಯಲಾಗುತ್ತದೆ. ಈ ಕಾಲನಿರ್ಣಯ ವಿಧಾನದಿಂದ, ಸಮುದ್ರ ತಳದ ಸಂಚಯನಗಳು, ಮೂಳೆ, ಮರ, ಹವಳ, ಶಿಲೆ, ಮಣ್ಣು ಮುಂತಾದವುಗಳ ಕಾಲ ನಿಷ್ಕರ್ಷೆ ಮಾಡಲಾಗಿದೆ. ಇಂಗಾಲ–14 ವಿಧಾನದಿಂದ ಅಳೆಯಲ್ಪಟ್ಟ ಕಾಲಮಾನಗಳೊಡನೆ ಸರಿತೂಗಿಸಿ, ಇವುಗಳನ್ನು ಖಚಿತಗೊಳಿಸಲಾಗಿದೆ.

ಪ್ರಕಾಶೋದ್ದೀಪಿತ ದೀಪ್ತಿ (ಆಪ್ಟಿಕಲ್ ಸ್ಟಿಮ್ಯುಲೇಟೆಡ್ ಲ್ಯೂಮಿನಿಸೆನ್ಸ್ (ಓಎಸ್‌ಎಲ್): ಈ ಕಾಲನಿರ್ಣಯ ವಿಧಾನವೂ ಉಷ್ಣತಾ ದೀಪ್ತಿ ವಿಧಾನವನ್ನು ಹೋಲುತ್ತದೆ. ಉಷ್ಣತೆಯ ಪ್ರಭಾವದಿಂದ ಶೇಖರಿಸಲ್ಪಟ್ಟ ಶಕ್ತಿ ವಿಸರ್ಜಿತವಾಗಿ ಪುನಃ ಶಕ್ತಿ ಶೇಖರಣೆ ಪ್ರಾರಂಭವಾಗುವಂತೆ ಬೆಳಕಿನ ಪ್ರಭಾವದಿಂದಾಗಿ ಮಣ್ಣಿನ ಪರಮಾಣುಗಳಲ್ಲಿನ ವಿದ್ಯುತ್ ಕಣಗಳು ಸ್ಥಳಪಲ್ಲಟ ಹೊಂದಿ ಶಕ್ತಿ ಶೇಖರಣೆ ಪುನಃ ಪ್ರಾರಂಭವಾಗುತ್ತದೆ. ಒಂದು ನಿರ್ದಿಷ್ಟ ಪ್ರಮಾಣದ ಬೆಳಕಿನ ಶಕ್ತಿಗೆ ಒಳಪಟ್ಟ ಸಂಚಯನದ(ಡೆಪಾಸಿಟ್) ಕಣಗಳನ್ನು, ನೈಸರ್ಗಿಕವಾಗಿ ಬೆಳಕಿನ ಪ್ರಭಾವವನ್ನು ಪಡೆಯುತ್ತಾ ಬಂದಿರುವ ಸಂಚಯನದ ಕಣಗಳೊಡನೆ ಹೋಲಿಸುವುದರಿಂದ, ನೈಸರ್ಗಿಕ ಸಂಚಯನಗಳ ಕಾಲವನ್ನು ನಿಷ್ಕರ್ಷಿಸಬಹುದು.

ಯಾವ ಉಷ್ಣತೆಗೂ ಒಳಪಡದಿರುವ 5 ಲಕ್ಷ ವರ್ಷಗಳಷ್ಟು ಹಳೆಯ ಸಂಚಯನಗಳ ಕಾಲನಿರ್ಣಯವನ್ನು ಈ ವಿಧಾನದಿಂದ ಮಾಡಲಾಗಿದೆ. ನೀರಿನಿಂದ ಸಾಗಿಸಲ್ಪಟ್ಟು ಶೇಖರಿತವಾದ ಮರಳು ಮತ್ತು ಮಣ್ಣಿನ ಸಂಚಯನಗಳ ಕಾಲವನ್ನು ಈ ವಿಧಾನದಿಂದ ಅಳೆಯಬಹುದಾಗಿದೆ. ಏಕೆಂದರೆ ಇವು ಬೆಳಕಿನಿಂದ ಪ್ರಭಾವಿತವಾಗಿರುತ್ತವೆ. ಬೆಳಕಿನ ಪ್ರವೇಶವೇ ಇಲ್ಲದೆ ರೂಪುಗೊಳ್ಳುವ ಸಂಚಯನಗಳಿಗೆ, ಎಂದರೆ ಹಿಮನದಿಗಳಿಂದ ಉಂಟಾಗಿರುವ ಸಂಚಯನಗಳು, ಈ ವಿಧಾನ ಅನ್ವಯಿಸುವುದಿಲ್ಲ.

ವೃಕ್ಷವಾರ್ಧಿಕ ವರ್ತುಲ ವಿಧಾನ (ಡೆಂಡ್ರೊಕ್ರೊನಾಲಜಿ): ಅಮೆರಿಕದ ವಿಜ್ಞಾನಿ ಎ.ಇ. ಡಗ್ಲಾಸ್ ಎಂಬಾತ ಮೊದಲಿಗೆ ಸೂರ್ಯನ ಕಲೆಗಳು ಮತ್ತು ಹವಾಗುಣದ ಬದಲಾವಣೆಗಳು ಇವುಗಳೊಡನೆ ಮರಗಳ ವಾರ್ಧಿಕ ವರ್ತುಲಗಳಿಗೆ (ಗ್ರೋತ್ ರಿಂಗ್ಸ್) ಇರುವ ಸಂಬಂಧವನ್ನು ಸಂಶೋಧಿಸುವ ಪ್ರಯತ್ನದಲ್ಲಿ ತೊಡಗಿದ್ದಾಗ, ಈ ವಿಧಾನದಿಂದ ಅವಶೇಷ ಗಳ ಕಾಲನಿರ್ಣಯವನ್ನೂ ಮಾಡಬಹುದು ಎಂಬ ಅಂಶ ಗೋಚರವಾಯಿತು.

ಮಣ್ಣಿನಿಂದ ತೇವ ಮತ್ತು ಇತರ ಪೌಷ್ಟಿಕಾಂಶಗಳನ್ನು ಪಡೆದು ಮರ ಬೆಳೆಯುತ್ತಿದ್ದಂತೆ, ಪ್ರತಿ ವರ್ಷಕ್ಕೆ ಒಂದರಂತೆ ಅದರ ಕಾಂಡದೊಳಗೆ ಒಂದು ವರ್ತುಲದ ಆಕಾರದಲ್ಲಿ ಈ ಬೆಳೆವಣಿಗೆ ರೂಪುಗೊಳ್ಳುತ್ತದೆ. ಕಡಿದ ಮರದ ಕಾಂಡದ ಅಡ್ಡಭಾಗವನ್ನು ಪರೀಕ್ಷಿಸಿದರೆ ಒಂದರೊಳಗೊಂದರಂತೆ ಅನೇಕ ವರ್ತುಲಗಳು ಕಂಡುಬರುತ್ತವೆ. ಅವುಗಳ ಒಟ್ಟು ಸಂಖ್ಯೆ ಮರ ಎಷ್ಟು ವರ್ಷಗಳ ಕಾಲ ಜೀವಂತವಾಗಿತ್ತೆಂಬುದನ್ನು ತಿಳಿಯಪಡಿಸುತ್ತದೆ. ಈ ಬೆಳೆವಣಿಗೆಯ ವರ್ತುಲಗಳು ಉಂಟಾಗುವುದರಲ್ಲಿ ಒಂದು ವೈಶಿಷ್ಟ್ಯವೆಂದರೆ ಮಳೆ ಚೆನ್ನಾಗಿದ್ದು ಮರದ ಬೆಳೆವಣಿಗೆ ಚೆನ್ನಾಗಿದ್ದ ವರ್ಷದಲ್ಲಿ ವರ್ತುಲ ಅಗಲವಾಗಿಯೂ ವಾತಾವರಣ ಶುಷ್ಕವಾಗಿದ್ದು ಬೆಳೆವಣಿಗೆ ಕಡಿಮೆಯಾಗಿರುವ ವರ್ಷದಲ್ಲಿ ವರ್ತುಲ ಕಿರಿದಾಗಿಯೂ ರೂಪುಗೊಳ್ಳುತ್ತದೆ. ಇದರಿಂದಾಗಿ ಹಲವು ವರ್ತುಲಗಳನ್ನು ಒಟ್ಟಿಗೆ ನೋಡುವಾಗ ಅವುಗಳ ಪ್ರಮಾಣ ಭೇದದಿಂದಾಗಿ ಒಂದೊಂದು ವರ್ತುಲ ಸಮೂಹಕ್ಕೆ ಒಂದೊಂದು ಪ್ರತ್ಯೇಕ ರೂಪವಿರುತ್ತದೆ. ಪ್ರಾಂತದಲ್ಲಿ ಬೆಳೆಯುವ ಎಲ್ಲಾ ಮರಗಳಲ್ಲಿಯೂ ವರ್ತುಲಗಳು ಒಂದೇ ರೀತಿ ರೂಪುಗೊಳ್ಳುವುದರಿಂದ ವರ್ತುಲಗಳ ನಮೂನೆಯೂ ಏಕರೀತಿಯಲ್ಲಿರುತ್ತದೆ. ವರ್ತುಲ ಸಮೂಹಗಳಿಗೆ ಇರುವ ಈ ಪ್ರತ್ಯೇಕತೆಯಿಂದಲೇ ಕಾಲನಿರ್ಣಯ ಸಾಧ್ಯವಾಗುತ್ತದೆ. ವರ್ತುಲಗಳು ಒಂದೇ ಪ್ರಮಾಣದಲ್ಲಿದ್ದರೆ ಅವುಗಳು ಕಾಲಗಣನೆಗೆ ಉಪಯುಕ್ತವಲ್ಲ.

ಕಾಲನಿರ್ಣಯ ಮಾಡಬೇಕಾದ ಹಳೆಯ ಮರವನ್ನು, ಕಾಲ ನಿಷ್ಕರ್ಷಿಸಲ್ಪಟ್ಟ ಅದೇ ಪ್ರಾಂತದ ಒಂದು ಮರದೊಡನೆ ಹೋಲಿಸುವಾಗ, ಒಂದೇ ರೀತಿಯ ವರ್ತುಲ ಸಮೂಹ ರಚನೆಯನ್ನು ಎರಡು ಮರಗಳಲ್ಲಿಯೂ ಗುರುತಿಸಿದರೆ, ಆ ರಚನೆ ಸಮಕಾಲೀನದ್ದೆಂದು ತಿಳಿಯುವುದರಿಂದ, ಅಲ್ಲಿಂದ ಮುಂದೆ ಹಳೆಯ ಮರದ ಕಾಲವನ್ನು ಗಣಿಸಬಹುದು.

ಅಮೆರಿಕದ ನೈರುತ್ಯ ಭಾಗದಲ್ಲಿ ಅಮೆರಿಕದ ಪೂರ್ವನಿವಾಸಿಗಳು ತಮ್ಮ ಮನೆಗಳ ನಿರ್ಮಾಣಕ್ಕಾಗಿ ಉಪಯೋಗಿಸಿದ್ದ ಮರಗಳನ್ನು ಈ ಮೇಲೆ ಹೇಳಿದ ರೀತಿಯಲ್ಲಿ ಪರೀಕ್ಷಿಸಿ, ಅವುಗಳಲ್ಲಿ ಎಲ್ಲಕ್ಕಿಂತ ಹಳೆಯವು ಸು. 7,500 ವರ್ಷಗಳಷ್ಟು ಹಿಂದಿನವೆಂದು ಕಂಡುಬಂದಿದೆ. ಇವುಗಳು ಬ್ರಿಸ್ಟಲ್‌ಕೋನ್ ಪೈನ್ ಎಂದು ಕರೆಯಲ್ಪಡುವ ತಾಳೆಮರದ ಜಾತಿಯ ಮರಗಳು. ಇವುಗಳಲ್ಲಿ ವಾರ್ಧಿಕ ವರ್ತುಲಗಳು ಸ್ಪಷ್ಟವಾಗಿ ಕಾಣುತ್ತವೆ.

ಇದೇ ರೀತಿ ಕಾಲಗಣನೆಗೆ ಯೋಗ್ಯವಾದ ಇನ್ನೊಂದು ಮರ ಅಮೆರಿಕದ ಕಾಡುಗಳಲ್ಲಿ ಬೆಳೆಯುವ ಜೈಂಟ್ ಸೆಕೋಯ. ಈ ಮರ ಸಾವಿರಾರು ವರ್ಷ ಜೀವಂತವಾಗಿರುತ್ತದೆ. ಇದರಲ್ಲಿ ವರ್ತುಲ ರಚನೆ ಸ್ಪಷ್ಟವಾಗಿರುತ್ತದೆ. ಈ ಮರವನ್ನು ಉಪಯೋಗಿಸಿ, ಈ ವಿಧಾನದ ಸಹಾಯದಿಂದ, ಇಂಗಾಲ–14ರಿಂದ ಕಾಲನಿರ್ಣಯ ಮಾಡುವಾಗ ಉಂಟಾದ ಕೆಲವು ವ್ಯತ್ಯಾಸಗಳನ್ನು ಸರಿಪಡಿಸಿ, ಆ ಕಾಲಪ್ರಮಾಣವನ್ನು ದೃಢಪಡಿಸಲಾಗಿದೆ. ಈ ವಿಧಾನವನ್ನು ಪುರಾತತ್ತ್ವಜ್ಞರು ರಷ್ಯ, ಮಧ್ಯಪ್ರಾಚ್ಯದಲ್ಲಿ ಉಪಯೋಗಿಸಿದ್ದಾರೆ.

ಪುರಾಕಾಂತೀಯತೆ (ಆರ್ಕಿಯೊ ಮ್ಯಾಗ್ನೆಟಿಸಮ್): ಹಲವು ಶತಮಾನಗಳ ಹಿಂದೆ ಭೂಮಿಯ ನಕ್ಷೆಯನ್ನು ತಯಾರಿಸಿದ ಭೂಗೋಳಶಾಸ್ತ್ರಜ್ಞರು ಭೌಗೋಳಿಕ ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಭೂಮಿ ಸುತ್ತುವ ಅಕ್ಷದ ಊಹಾ ಧ್ರುವಗಳಾಗಿ ಪರಿಗಣಿಸಿದರು. ಈ ಆಧಾರದ ಮೇಲೆ ವ್ಯಾವಹಾರಿಕವಾಗಿ ಉತ್ತರ ದಕ್ಷಿಣ ಮತ್ತು ಇತರ ದಿಕ್ಕುಗಳು ಗುರುತಿಸ ಲ್ಪಡುತ್ತವೆ. ಹಲವು ಶತಮಾನಗಳಿಂದ ನಾವಿಕರು ಮತ್ತು ಇತರ ಜನರು ಅಯಸ್ಕಾಂತವನ್ನು ದಿಕ್ಸೂಚಿಯಾಗಿ ಬಳಸುತ್ತಾ ಬಂದಿದ್ದಾರೆ. ದಿಕ್ಸೂಚಿ ತೋರಿಸುವ ಉತ್ತರ–ದಕ್ಷಿಣ ಧ್ರುವಗಳಿಗೂ ಭೌಗೋಳಿಕ ಉತ್ತರ–ದಕ್ಷಿಣ ಧ್ರುವಗಳಿಗೂ ವ್ಯತ್ಯಾಸವಿರುವುದು ಬಹಳ ಹಿಂದೆಯೇ ಗಮನಿಸಲ್ಪಟ್ಟಿತ್ತು. ಮೊದಲಿಗೆ ಇದರ ಕಾರಣ ಸ್ಪಷ್ಟವಾಗಿರಲಿಲ್ಲವಾದರೂ 16ನೆಯ ಶತಮಾನದಲ್ಲಿ ವಿಜ್ಞಾನಿಗಳು ನಮ್ಮ ಭೂಮಿಯೇ ಒಂದು ಭಾರಿ ಅಯಸ್ಕಾಂತದ ಗುಣವನ್ನು ಹೊಂದಿದೆ ಎಂಬುದನ್ನು ಕಂಡುಹಿಡಿದರು.

ಅನಂತರದ ಸಂಶೋಧನೆಗಳ ಮೂಲಕ ಭೂಮಿಯ ಕಾಂತೀಯ ಶಕ್ತಿ (ಫೀಲ್ಡ್ ಇಂಟೆನ್ಸಿಟಿ (ಎಫ್)), ಕಾಂತೀಯ ದಿಶೆ (ಡಿಕ್ಲಿನೇಷನ್ (ಡಿ)) ಮತ್ತು ಕಾಂತೀಯ ಆಕರ್ಷಣೆ (ಇನ್‌ಕ್ಲಿನೇಷನ್ (ಐ)) ಈ 3 ಗುಣಗಳು ಏಕರೀತಿಯಾಗಿರುವುದಿಲ್ಲ, ಕಾಲಕ್ರಮೇಣ ಈ ಮೂರರಲ್ಲಿಯೂ ಬದಲಾವಣೆ ಉಂಟಾಗುತ್ತದೆ ಎಂಬ ಅಂಶ ಕಂಡುಹಿಡಿಯಲ್ಪಟ್ಟಿತು. ಇದಲ್ಲದೆ ಭೂಮಿಯ ವಿವಿಧ ಭಾಗಗಳಲ್ಲಿ ಇವುಗಳ ಪ್ರಮಾಣ ಬೇರೆ ಬೇರೆಯಾಗಿರುತ್ತದೆ. ಭೂಮಿಯ ಹಲವು ದೇಶಗಳಲ್ಲಿ ಈ 3 ಕಾಂತೀಯ ಲಕ್ಷಣಗಳ ಕಾಲಾನುಸಾರ ಬದಲಾವಣೆಗಳನ್ನು 16ನೆಯ ಶತಮಾನದಿಂದೀಚೆಗೆ ದಾಖಲಿಸುತ್ತ ಬಂದು ಇಂದಿನವರೆಗಿನ ನಕ್ಷೆಗಳನ್ನು ತಯಾರಿಸಲಾಗಿದೆ.

ಕಲ್ಲಿನಲ್ಲಿ ಮತ್ತು ಮಣ್ಣಿನಲ್ಲಿ ಕಬ್ಬಿಣದ ಖನಿಜಗಳಿರುವುದರಿಂದ ಇವುಗಳು ಕಾಂತೀಯತೆ ಯನ್ನು ಪಡೆಯುತ್ತವೆ. ಶಿಲೆಗಳ ಕಾಂತೀಯತೆಯ ಅಧ್ಯಯನ ಭೂವಿಜ್ಞಾನಿಗಳಿಗೆ ಉಪಯುಕ್ತವಾದರೆ, ಮಣ್ಣಿನ ವಸ್ತುಗಳ ಕಾಂತೀಯತೆ ಪುರಾತತ್ತ್ವಜ್ಞರಿಗೆ ಈ ವಸ್ತುಗಳ ಕಾಲನಿರ್ಣಯ ಮಾಡುವುದರಲ್ಲಿ ಒಂದು ಮುಖ್ಯ ಸಾಧನವನ್ನು ಒದಗಿಸಿದೆ.

ಮಡಕೆ, ಇಟ್ಟಿಗೆ, ಹೆಂಚು ಮುಂತಾದ ಮಣ್ಣಿನ ವಸ್ತುಗಳು ಸು.$650^0$–$700^0$ ಉಷ್ಣತೆಯಲ್ಲಿ ಸುಡಲ್ಪಟ್ಟು ಅನಂತರ ತಣ್ಣಗಾಗಿ ಸಾಮಾನ್ಯ ಉಷ್ಣತಸ್ಥಿತಿಗೆ ಹಿಂತಿರುಗುವಾಗ, ಅವುಗಳು ಭೂಮಿಯಿಂದ ಕಾಂತೀಯತೆಯನ್ನು ಪಡೆಯುತ್ತವೆ. ಇದನ್ನು ಶೇಷ ಕಾಂತೀಯತೆ (ರೆಮ್ನಂಟ್ ಮ್ಯಾಗ್ನೆಟಿಸಂ) ಎಂದು ಕರೆಯಲಾಗುತ್ತದೆ. ಅವುಗಳಲ್ಲಿರುವ ಕಾಂತೀಯ ಶಕ್ತಿ (ಎಫ್) ಮತ್ತು ಕಾಂತೀಯ ದಿಶೆ (ಡಿ) ಮುಂತಾದವು, ಆ ವಸ್ತುಗಳು ತಯಾರಾದಾಗ ಭೂಮಿಯಲ್ಲಿದ್ದ ಕಾಂತೀಯ ಶಕ್ತಿ ಮತ್ತು ಕಾಂತೀಯ ದಿಶೆಗಳನ್ನು ಪ್ರತಿಬಿಂಬಿಸುತ್ತವೆ. ಭೂಮಿಯ ಯಾವ ಪ್ರಾಂತದಲ್ಲಿ ಈ ಕಾಂತೀಯ ಗುಣಗಳು ಯಾವ ಕಾಲಘಟ್ಟದಲ್ಲಿ ಯಾವ ರೀತಿಯಲ್ಲಿ ಮತ್ತು ಯಾವ ಪ್ರಮಾಣದಲ್ಲಿದ್ದುವು ಎಂಬುದು ಈಗಾಗಲೇ ತಯಾರಿಸಲ್ಪಟ್ಟಿರುವ ನಕ್ಷೆಗಳ ಮೂಲಕ ತಿಳಿಯುವುದರಿಂದ, ಒಂದು ಪ್ರಾಂತದ ಮಣ್ಣಿನ ವಸ್ತುವಿನ ಈ ಕಾಂತೀಯ ಗುಣಗಳನ್ನು ಅಳೆಯುವುದರ ಮೂಲಕ ಅದರ ಕಾಲ ನಿಷ್ಕರ್ಷೆಯನ್ನು ಮಾಡಬಹುದು.

ಕಾಂತೀಯ ಅಂಶಗಳನ್ನು ಅಳೆಯುವುದರಲ್ಲಿ ಮ್ಯಾಗ್ನೆಟೊಮೀಟರ್ ಎಂಬ ಸೂಕ್ಷ್ಮ ಯಂತ್ರ ಉಪಯೋಗಿಸಲ್ಪಡುತ್ತದೆ. ಕಾಂತೀಯ ದಿಶೆಯನ್ನು ತಿಳಿಯುವುದರಲ್ಲಿ ವಸ್ತುಗಳು ಸುಡಲ್ಪಡುವಾಗ ಯಾವ ದಿಶೆಯಲ್ಲಿ ಸಜ್ಜಿತವಾಗಿದ್ದವು ಎಂಬುದನ್ನು ತಿಳಿಯುವುದು ಅವಶ್ಯವಾಗಿದೆ. ಇಟ್ಟಿಗೆ, ಮಡಕೆ ಮುಂತಾದವು ನೇರವಾಗಿಯೇ ಸುಡಲ್ಪಡುವುದರಿಂದ ಈ ಅಂಶ ತಿಳಿದಿರುತ್ತದೆ. ವಸ್ತುಗಳನ್ನು ಸುಡಲು ಉಪಯೋಗಿಸುವ ಒಲೆಗಳು ಒಂದೇ ಸ್ಥಳದಲ್ಲಿರುವುದರಿಂದ ಈ ಪರೀಕ್ಷೆಗೆ ಹೆಚ್ಚು ಸೂಕ್ತವಾಗಿವೆ.

ಬೇರೆ ವಿಧಾನಗಳಿಂದ ಕಾಲ ಮೊದಲೇ ಖಚಿತವಾಗಿ ನಿಷ್ಕರ್ಷಿಸಲ್ಪಟ್ಟ ನಮೂನೆಗಳ ಮೇಲೆ ಈ ವಿಧಾನವನ್ನು ಪ್ರಯೋಗಿಸಿ ಇದನ್ನು ಇನ್ನೂ ದೃಢಪಡಿಸಲಾಗಿದೆ.

ಇಂಗ್ಲೆಂಡ್, ಇಟಲಿ, ರಷ್ಯ, ಮೆಕ್ಸಿಕೊ, ಜಪಾನ್ ಮುಂತಾದ ದೇಶಗಳಲ್ಲಿ ಪುರಾತನ ವಸ್ತುಗಳ ಶೇಷ ಕಾಂತೀಯತೆಯನ್ನು ಅಳೆಯುವುದರ ಮೂಲಕ ಭೂಮಿಯ ಕಾಂತೀಯತೆಯ ಬದಲಾವಣೆಗಳನ್ನು ಸು.5 ಸಾವಿರ ವರ್ಷದ ಹಿಂದಿನ ಕಾಲದವರೆಗೆ ದಾಖಲಿಸಲಾಗಿದೆ. ಕಾಂತೀಯ ದಿಶೆ ಸು.500 ವರ್ಷಗಳಲ್ಲಿ $3^0$ ಗಳವರೆಗೆ ಪೂರ್ಣ ಬದಲಾವಣೆ ಹೊಂದಿ ಪುನಃ ತನ್ನ ಪೂರ್ವ ಪ್ರಮಾಣಕ್ಕೆ ಹಿಂತಿರುಗುತ್ತದೆ ಎಂದೂ ಕಾಂತೀಯ ಆಕರ್ಷಣೆ ಸು.1000 ವರ್ಷಗಳಲ್ಲಿ $70^0$ ಯವರೆಗೆ ಪೂರ್ಣ ಬದಲಾವಣೆ ಹೊಂದುವುದಾಗಿಯೂ ತಿಳಿದುಬಂದಿದೆ.

ಖಗೋಳ ವಿಜ್ಞಾನ ವಿಧಾನ (ಆಸ್ಟ್ರೊನಾಮಿಕಲ್ ಮೆಥಡ್): ಸರ್ ನಾರ್ಮನ್ ಲಾಕ್ಯರ್ ಎಂಬ ಖಗೋಳ ವಿಜ್ಞಾನಿ ಈ ವಿಜ್ಞಾನದ ಉಪಯೋಗದಿಂದ ಇಂಗ್ಲೆಂಡಿನ ಸ್ಟೋನ್‌ಹೆಂಜ್ ಎಂಬ ಪ್ರಾಗೈತಿಹಾಸಿಕ ಸ್ಮಾರಕದ ಕಾಲನಿರ್ಣಯವನ್ನು ಮಾಡಿದ. ಸೂರ್ಯೋದಯದ ಸಮಯದಲ್ಲಿ ಆಕಾಶದಲ್ಲಿನ ಸೂರ್ಯನ ಸ್ಥಾನ ಈಗಿರುವುದಕ್ಕಿಂತ ಪ್ರಾಚೀನ ಕಾಲದಲ್ಲಿ ವ್ಯತ್ಯಾಸವಾಗಿತ್ತು. ಕಳೆದ ಸು.6000 ವರ್ಷಗಳಲ್ಲಿ ಈ ವ್ಯತ್ಯಾಸ $0.85^0$ ಇದೆ ಎಂದೂ ಅಂದರೆ ಪ್ರತಿ ಶತಮಾನಕ್ಕೂ $0.02^0$ ವ್ಯತ್ಯಾಸವಾಗುತ್ತದೆಂದೂ ಗಣಿಸಲ್ಪಟ್ಟಿದೆ.

ಸ್ಟೋನ್‌ಹೆಂಜ್ ಸ್ಮಾರಕದ ಕಲ್ಲುಗಳು ಸಜ್ಜಿತವಾಗಿರುವ ಅಕ್ಷವನ್ನು ಗುರುತುಮಾಡಿ, ಅದರಿಂದ ಅಂದಿನ ಸೂರ್ಯೋದಯ ಸ್ಥಾನ, ಖಗೋಳಿಕ ಉತ್ತರ–ದಕ್ಷಿಣ ದಿಶೆಯಿಂದ ಎಷ್ಟು ವ್ಯತ್ಯಾಸವಾಯಿತು ಎಂಬುದನ್ನು ಗುರುತಿಸಿ ಅದನ್ನು ಇಂದಿನ ವ್ಯತ್ಯಾಸಕ್ಕೆ ಹೋಲಿಸಿ ಸ್ಮಾರಕದ ಕಾಲವನ್ನು ನಿರ್ಣಯ ಮಾಡಲಾಯಿತು.

ಆಮ್ಲಜನಕ ಸಂಯೋಜನೀಯ ಇಂಗಾಲದ ಪ್ರಮಾಣ (ಆಕ್ಸಿಡೈಸಬಲ್ ಕಾರ್ಬನ್ ರೇಷ್ಯೊ (ಓಸಿಆರ್)): ಮಣ್ಣಿನಲ್ಲಿರುವ ಜೈವಿಕಾಂಶ ಎಂದರೆ ಕೊಳೆತ ಎಲೆ ಮುಂತಾದ ಸಸ್ಯಜನಿತ ವಸ್ತುಗಳು ಮತ್ತು ಇದ್ದಿಲು ಇವು ಆ ಸ್ಥಳದ ಜನ ನಿವಾಸ ಮತ್ತು ಆ ಸ್ಥಳ ಜನರಿಂದ ತ್ಯಜಿಸಲ್ಪಟ್ಟ ಅನಂತರ ಉಂಟಾದ ವ್ಯತ್ಯಾಸಗಳು ಇವುಗಳನ್ನು ಪ್ರತಿಬಿಂಬಿಸುತ್ತವಲ್ಲದೆ ಕಾಲ ಕ್ರಮೇಣ ಹೊಂದುವ ರಾಸಾಯನಿಕ ಬದಲಾವಣೆಗಳಿಂದಾಗಿ, ಆಮ್ಲಜನಕದೊಂದಿಗೆ ಶೀಘ್ರವಾಗಿ ಪ್ರತಿಕ್ರಿಯಿಸುವ ಗುಣವನ್ನು ಪಡೆಯುತ್ತವೆ. ಸೂಕ್ತ ರಾಸಾಯನಿಕ ವಿಧಾನಗಳಿಂದ ಮಣ್ಣಿನಲ್ಲಿರುವ ಇಂತಹ ವಸ್ತುಗಳ ಪ್ರಮಾಣವನ್ನು ಅಳೆಯಬಹುದು. ಈ ಪ್ರಮಾಣವನ್ನು ಮಣ್ಣಿನಲ್ಲಿರುವ ಒಟ್ಟು ಇಂಗಾಲಾಂಶದ ಪ್ರಮಾಣದೊಂದಿಗೆ ಹೋಲಿಸಿದರೆ, ಆ ಸ್ಥಳದ ಕಾಲವನ್ನು ನಿಷ್ಕರ್ಷಿಸಬಹುದು. ಈ ರಾಸಾಯನಿಕ ಕಾಲನಿರ್ಣಯ ವಿಧಾನ ಸುಲಭವಾಗಿದ್ದು ಕಡಿಮೆ ಖರ್ಚಿನಲ್ಲಿ ಮಾಡಬಹುದಾಗಿದ್ದರೂ ಇದು ತೀರಾ ಇತ್ತೀಚಿನದಾಗಿದ್ದು (90ರ ದಶಕ) ಇದರ ಮೂಲತತ್ತ್ವ ಮತ್ತು ಪ್ರಾಯೋಗಿಕ ಕ್ರಮಗಳನ್ನು ವಿಜ್ಞಾನಿಗಳು ಪೂರ್ಣವಾಗಿ ಒಪ್ಪಿಲ್ಲವಾದ್ದರಿಂದ ಇದನ್ನು ಇನ್ನೂ ಹೆಚ್ಚು ಪ್ರಯೋಗಗಳ ಮೂಲಕ ಪರಿಷ್ಕೃತಗೊಳಿಸಬೇಕಾಗಿದೆ.

ಸಾಪೇಕ್ಷ ಕಾಲನಿರ್ಣಯ ವಿಧಾನಗಳು (ರಿಲೇಟಿವ್ ಡೇಟಿಂಗ್ ಮೆಥಡ್ಸ್): ಫ್ಲೋರಿನ್ ವಿಧಾನ (ಫ್ಲೋರಿನ್ ಡೇಟಿಂಗ್): ಭೂಮಿಯಡಿಯಲ್ಲಿ ಹೂಳಲ್ಪಟ್ಟಿರುವ ಅಸ್ಥಿಪಂಜರಗಳು ನಾನಾ ವಿಧವಾದ ರಾಸಾಯನಿಕ ಕ್ರಿಯೆಗಳಿಗೆ ಒಳಗಾಗುತ್ತವೆ. ಭೂಮಿಯೊಳಗೆ ಹರಿಯುವ ನೀರಿನಲ್ಲಿ ಅಲ್ಪ ಪ್ರಮಾಣದಲ್ಲಿ ಫ್ಲೋರಿನ್ ಧಾತು ಯಾವಾಗಲೂ ಇರುತ್ತದೆ. ಇದು ಮೂಳೆಯೊಂದಿಗೆ ರಾಸಾಯನಿಕವಾಗಿ ಪ್ರತಿಕ್ರಿಯಿಸಿ, ಫ್ಲೋರಪಟೈಟ್ ಎಂಬ ನೀರಿನಲ್ಲಿ ಸುಲಭವಾಗಿ ಕರಗದ ರಾಸಾಯನಿಕ ದ್ರವ್ಯವಾಗಿ ಮಾರ್ಪಟ್ಟು ಮೂಳೆಯೊಳಗೆ ಸೇರಿಬಿಡುತ್ತದೆ. ಈ ರಾಸಾಯನಿಕ ಪ್ರಕ್ರಿಯೆಯ ಗತಿ ಆಯಾ ಪ್ರಾಂತದ ಭೂಮಿಯೊಳಗಿನ ರಾಸಾಯನಿಕ ಸ್ಥಿತಿಯ ಮೇಲೆ ಆಧಾರಿತವಾಗಿದ್ದು, ಕಾಲಕಳೆದಂತೆ ಮೂಳೆಯೊಳಗೆ ಸೇರುವ ಫ್ಲೋರಿನ್‌ನ ಅಂಶ ಜಾಸ್ತಿಯಾಗುತ್ತ ಹೋಗುತ್ತದೆ. ಭೂಮಿ ಯೊಳಗಿನ ಅಸ್ಥಿಪಂಜರ, ಮೂಳೆಯಿಂದ ಮಾಡಲ್ಪಟ್ಟ ಉಪಕರಣಗಳು ಮುಂತಾದವನ್ನು ರಾಸಾಯನಿಕ ಪರಿಶೀಲನೆಗೆ ಒಳಪಡಿಸಿ ಅವುಗಳಲ್ಲಿನ ಫ್ಲೋರಿನ್ ಧಾತುವಿನ ಪ್ರಮಾಣವನ್ನು ನಿಷ್ಕರ್ಷಿಸಿದಾಗ ಫ್ಲೋರಿನ್ ಅಂಶ ಜಾಸ್ತಿ ಇರುವ ಮೂಳೆಯ ವಸ್ತು ಅದು ಕಡಿಮೆ ಇರುವ ವಸ್ತುವಿಗಿಂತ ಹಳೆಯದೆಂದು ತಿಳಿಯಬರುತ್ತದೆ.

ಈ ವಿಧಾನದಿಂದ ಒಂದು ಮೂಳೆಯ ವಸ್ತು ಅದರೊಡನೆಯೇ ದೊರೆತ ಇತರ ಮೂಳೆಯ ವಸ್ತುಗಳಿಗಿಂತ ಹಳೆಯದೆ ಅಲ್ಲವೇ ಎಂಬುದನ್ನು ತೀರ್ಮಾನಿಸಬಹುದು. ಇದರ ಉಪಯೋಗದಿಂದ ಈಚಿನ, ಪ್ರಾಗೈತಿಹಾಸಿಕ ಕಾಲದ ಮತ್ತು ಇನ್ನೂ ಹಿಂದಿನ ಹಿಮಯುಗದ ಮೂಳೆಯ ಮತ್ತು ಖನಿಜವಾಗಿ ಮಾರ್ಪಟ್ಟ (ಫಾಸಿಲ್ಡ್) ಮೂಳೆಯ ವಸ್ತುಗಳನ್ನು ಗುರುತಿಸಲಾಗಿದೆ. ಇಂಗ್ಲೆಂಡಿನ ಪಿಲ್ಟ್‌ಡೌನ್ ಎಂಬಲ್ಲಿ ದೊರೆತ ಪುರಾತನ ಮಂಗಮಾನವನದ್ದೆಂದು ನಂಬಲಾಗಿದ್ದ ತಲೆಬುರುಡೆ 1949ರಲ್ಲಿ ನಡೆಸಲ್ಪಟ್ಟ ಫ್ಲೋರಿನ್ ಪರಿಶೀಲನೆಯಿಂದಾಗಿ ಕೃತಕವೆಂದೂ ಯಾರೋ ಬೇಕೆಂದೇ ನಡೆಸಿದ ಮೋಸಕೃತ್ಯವೆಂದೂ ತಿಳಿದುಬಂತು. ಈ ಪರಿಶೀಲನೆಯಲ್ಲಿ ತಲೆಯ ಭಾಗ ಹಳೆಯದಾಗಿದ್ದರೂ ದವಡೆಯ ಮೂಳೆ ಮತ್ತು ಹಲ್ಲುಗಳು ಆಧುನಿಕ ಕಾಲದವೆಂದೂ ಯಾರೋ ಅದಕ್ಕೆ ಹಳೆಯ ರೂಪವನ್ನು ಕೊಟ್ಟು ಜೋಡಿಸಿಟ್ಟಿದ್ದಾರೆಂದೂ ತಿಳಿಯಿತು.

ಅಬ್ಸಿಡಿಯನ್ ಜಲಸಂಯೋಜನೆ ವಿಧಾನ (ಅಬ್ಸಿಡಿಯನ್ ಹೈಡ್ರೇಷನ್ ಮೆಥೆಡ್): ಜ್ವಾಲಾಮುಖಿಗಳ ಶಿಲಾರಸ ಶೀಘ್ರಗತಿಯಲ್ಲಿ ತಣ್ಣಗಾಗುವುದರಿಂದ ಉಂಟಾಗುವ ಗಾಜಿನ ಗುಣವುಳ್ಳ ಶಿಲಾರಸ ಶಿಲೆ (ಅಬ್ಸಿಡಿಯನ್). ಇದೊಂದು ಬಗೆಯ ನೈಸರ್ಗಿಕ ಗಾಜು. ಇದರ ಬಣ್ಣ ಸಾಧಾರಣ ವಾಗಿ ಕಪ್ಪು. ಆದರೆ ಇದು ಹಸುರು, ಕಂದು, ಬೂದುಬಣ್ಣ, ಪಾರದರ್ಶಕ ಬಿಳಿ ಮುಂತಾದ ಬೇರೆ ಬೇರೆ ಬಣ್ಣಗಳಲ್ಲಿಯೂ ಇರುತ್ತದೆ. ಪ್ರಾಗೈತಿಹಾಸಿಕ ಕಾಲದಲ್ಲಿ ಹರಿತವಾದ ಶಿಲೋಪಕರಣಗಳನ್ನು ತಯಾರಿಸುವುದರಲ್ಲಿ ಇದು ಬಹಳವಾಗಿ ಉಪಯೋಗಿಸಲ್ಪಟ್ಟಿದೆ. ಇದರ ವಿಶೇಷ ಗುಣವೆಂದರೆ ಉಪಕರಣ ತಯಾರಿಕೆಗೆ ಈ ಕಲ್ಲು ಛೇದಿಸಲ್ಪಟ್ಟ ಅನಂತರ ಅದರ ಮೇಲ್ಮೈ ತೇವವನ್ನು ಹೀರುವುದು. ಈ ಜಲಸಂಯೋಜನ ಗುಣವನ್ನು ಉಪಯೋಗಿಸಿ ತುಲನಾತ್ಮಕ ಕಾಲನಿರ್ಣಯ ಮಾಡುವುದರಲ್ಲಿ ಇದನ್ನು ಉಪಯೋಗಿಸಲಾಗಿದೆ. ಕೆಲವು ನಿಯಂತ್ರಿತ ಸಂದರ್ಭಗಳಲ್ಲಿ ವಸ್ತುಗಳ ನಿರಪೇಕ್ಷ ಕಾಲನಿರ್ಣಯವೂ ಸಾಧ್ಯವಾಗುತ್ತದೆ.

ಇರ್ವಿಂಗ್ ಫ್ರೀಡ್‌ಮನ್ ಮತ್ತು ಆರ್.ಎಲ್.ಸ್ಮಿತ್ ಎಂಬ ವಿಜ್ಞಾನಿಗಳು 1960ರಲ್ಲಿ ಈ ವಿಧಾನದ ಗತಿಯನ್ನು ನಿರ್ಣಯಿಸುವ ಅಂಶಗಳನ್ನು ಪರಿಶೋಧಿಸಿ, ಅವು ಅಬ್ಸಿಡಿಯನ್‌ನ ರಾಸಾಯನಿಕ ಸಂಯೋಜನೆ, ಉಷ್ಣಾಂಶ ಮತ್ತು ತೇವಾಂಶ ಎಂಬ ನಿಧಾರಕ್ಕೆ ಬಂದರು. ಈ ಅಂಶಗಳ ನಿಯಂತ್ರಣದಿಂದ ಒಂದು ಅಬ್ಸಿಡಿಯನ್ ವಸ್ತುವಿನ ನಿರಪೇಕ್ಷ ಕಾಲನಿರ್ಣಯವನ್ನೂ ಮಾಡಲು ಸಾಧ್ಯವೆಂದು ಅಭಿಪ್ರಾಯಪಟ್ಟರು. ಅಬ್ಸಿಡಿಯನ್ ನಮೂನೆಯನ್ನು ಸೂಕ್ಷ್ಮದರ್ಶಕ ಯಂತ್ರದ ಮೂಲಕ ವೀಕ್ಷಿಸಿದಾಗ ಸ್ವೀಕೃತ ಜಲದ ಪದರ ಗೋಚರವಾಗುತ್ತದೆ. ಮೈಕ್ರಾನ್ ಪ್ರಮಾಣದಲ್ಲಿರುವ ಈ ಜಲಪದರದ ಅಳತೆಯೇ ವಸ್ತುವಿನ ಕಾಲವನ್ನು ಸೂಚಿಸುತ್ತದೆ. ಈ ಅಳತೆ ಜಾಸ್ತಿಯಾಗಿದ್ದಷ್ಟು ವಸ್ತು ಹೆಚ್ಚು ಪ್ರಾಚೀನವಾದುದೆಂದು ತಿಳಿದುಬರುತ್ತದೆ.

ಸಸ್ಯರೇಣುಗಳ ವಿಶ್ಲೇಷಣೆ (ಪೋಲನ್ ಅನಾಲಿಸಿಸ್): ಲಕ್ಷಾಂತರ ವರ್ಷಗಳಷ್ಟು ಹಿಂದಿದ್ದ ಸಸ್ಯವರ್ಗ ಮತ್ತು ಕಾಲದಿಂದ ಕಾಲಕ್ಕೆ ಉಂಟಾದ ಹವಾಮಾನದ ಬದಲಾವಣೆಗಳು ಮುಂತಾದವನ್ನು ಆ ಕಾಲದಿಂದ ಇನ್ನೂ ಉಳಿದುಬಂದಿರುವ ಸಸ್ಯರೇಣುಗಳ ಪರೀಕ್ಷೆಯಿಂದ ನಿರ್ಣಯಿಸುವುದು ಸಾಧ್ಯವಾಗುತ್ತದೆ. ಸಸ್ಯರೇಣುಗಳ ಮೇಲ್ಮೈ ಹೊರ ಪ್ರಭಾವಗಳಿಗೆ ಒಳಗಾಗದಷ್ಟು ದಾರ್ಢ್ಯತೆ ಹೊಂದಿರುವುದರಿಂದ ಇವುಗಳು ಇಷ್ಟು ದೀರ್ಘಕಾಲ ಉಳಿಯುತ್ತವೆ. ಉದಾ: ಅಮೆರಿಕದಲ್ಲಿನ ಮಿನಿಸೋಟದ ಹಿಮಯುಗದ ಸರೋವರಗಳ ತಳದಲ್ಲಿ ಸು.12ಮೀ ಮಂದದ ಮಣ್ಣಿನ ಸಂಚಯನಗಳಿದ್ದುವು. ಕೊಳವೆಯ ಮೂಲಕ ಶೇಖರಿಸಿದ ಮಣ್ಣಿನ ನಮೂನೆಯನ್ನು ಪರೀಕ್ಷಿಸಿದಾಗ ಬೇರೆ ಬೇರೆ ಕಾಲಘಟ್ಟದಲ್ಲಿ ಶೇಖರಿತವಾದ ಸಸ್ಯರೇಣುಗಳ ಸರಣಿಯೇ ದೊರೆತು, ಆ ಪ್ರಾಂತದಲ್ಲಿನ ವಿವಿಧ ಕಾಲಗಳ ವಿವಿಧ ಸಸ್ಯಸ್ಥಿತಿಯ ಮಾಹಿತಿ ದೊರೆಯಿತು. ಈ ಬಗೆಯ ಅಧ್ಯಯನವನ್ನು ಮೊದಲಿಗೆ ಸ್ವೀಡನ್ ದೇಶದ ಭೂವಿಜ್ಞಾನಿ ವಾನ್‌ಪೋಸ್ಟ್ ಎಂಬಾತ 1916ರಲ್ಲಿ ಮಾಡಿದ. ತಯಾರಾದ ಸಸ್ಯರೇಣು ನಕ್ಷೆಯಿಂದ ಒಂದು ಪ್ರಾಂತದಲ್ಲಿನ ಬಹುಪ್ರಾಚೀನ ಕಾಲದ ಸಸ್ಯವರ್ಗಗಳು, ಹವಾಮಾನದ ಬದಲಾವಣೆಗಳು ಮತ್ತು ಸಮುದ್ರ ತಳದ ಏರಿಳಿತಗಳನ್ನು ಗುರುತಿಸಬಹುದಾಗಿದೆ.

**ಪ್ರಾಚ್ಯವಸ್ತುಗಳ ವೈಜ್ಞಾನಿಕ ಸಂರಕ್ಷಣೆ:** ಅಧ್ಯಯನಕ್ಕೆ ಸಹಾಯಕ ರೀತಿಯಲ್ಲಿ ದೊರಕುವ ಪ್ರಾಚ್ಯವಸ್ತುಗಳ ಸಕ್ರಮ ಸಂರಕ್ಷಣೆ. ಪುರಾತತ್ತ್ವ ಸಂಶೋಧಕರು ಪ್ರಾಚೀನ ಕಾಲದ ಮಾನವನ ಜೀವನ ವಿಧಾನಗಳ ಮತ್ತು ಆಗಿನ ಸಾಂಸ್ಕೃತಿಕ ನೆಲೆಗಳ ಅಧ್ಯಯನ ಮಾಡುವಾಗ, ಆಗ ಉಪಯೋಗಿಸುತ್ತಿದ್ದ ಗೃಹೋಪಯೋಗಿ ವಸ್ತುಗಳು, ಸಲಕರಣೆಗಳು, ಆಯುಧಗಳು ಮತ್ತು ಬಿಟ್ಟು ಹೋಗಿರುವ ಕಲಾವಶೇಷಗಳು–ಇವುಗಳ ಅಧ್ಯಯನ ಅವಶ್ಯವಾಗುತ್ತದೆ. ಈ ದೃಷ್ಟಿಯಿಂದ ಪ್ರಾಚ್ಯವಸ್ತುಗಳ ವೈಜ್ಞಾನಿಕ ಸಂರಕ್ಷಣೆ ಮುಖ್ಯವೆನಿಸಿದೆ.

ಪ್ರಾಚೀನ ವಸ್ತುಗಳು ಶಿಥಿಲ ಹೊಂದುವ ವಿಧಾನಗಳು ಮತ್ತು ಅದರ ಕಾರಣಗಳು: ಒಂದು ವಸ್ತು ಮೊದಲಿಗೆ ಭೂಮಿಯೊಳಗೆ ಸೇರಿದಾಗ, ತನ್ನ ಸುತ್ತಲಿನ ಮಣ್ಣಿನೊಂದಿಗೆ ರಾಸಾಯನಿಕ ಪ್ರಕ್ರಿಯೆಗೆ ಒಳಗಾಗುತ್ತದೆ. ಈ ಪ್ರಕ್ರಿಯೆ ಕಾಲಕ್ರಮೇಣ ಕ್ಷೀಣಿಸಿ ವಸ್ತು ತನ್ನ ವಾತಾವರಣದೊಂದಿಗೆ ಒಂದು ಸಮಸ್ಥಿತಿಯನ್ನು ಹೊಂದಿ ಮತ್ತೇನೂ ಮಾರ್ಪಾಟುಗಳು ಉಂಟಾಗದೆ ಒಂದೇ ರೀತಿಯಲ್ಲಿ ಬಹುಕಾಲದವರೆಗೆ ಇರುತ್ತದೆ.

ಉತ್ಖನನದ ಅನಂತರ, ಹೊರತೆಗೆಯಲ್ಪಟ್ಟ ವಸ್ತು ಬದಲಾದ ವಾತಾವರಣಕ್ಕೆ ಒಳಗಾಗುವುದರಿಂದ, ಅದರ ಸ್ಥಿತಿಯಲ್ಲಿ ಮಾರ್ಪಾಡುಗಳುಂಟಾಗಿ ಬಹುಬೇಗ ಶಿಥಿಲ ಹೊಂದುವ ಸಂಭವವಿರುತ್ತದೆ. ಉದಾ: ತಾಮ್ರ, ಕಂಚು, ಬೆಳ್ಳಿ ಮುಂತಾದ ಲೋಹದ ವಸ್ತುಗಳು ಭೂಮಿಯಿಂದ ಹೊರತೆಗೆಯಲ್ಪಟ್ಟ ಅನಂತರ ರಾಸಾಯನಿಕ ಪ್ರಕ್ರಿಯೆಯಿಂದ ನಶಿಸುವುದನ್ನು ಕಾಣಬಹುದು. ಹಾಗೆಯೇ ತೇವದ ವಾತಾವರಣದಲ್ಲಿ ಬಹುಕಾಲ ಇದ್ದ ಮರದ ವಸ್ತುಗಳು ಹೊರಬಂದ ಅನಂತರ ಬೇಗ ಒಣಗುವುದರಿಂದ, ವಿರೂಪ ಹೊಂದಿ ನಶಿಸುತ್ತವೆ. ಈ ಕಾರಣಗಳಿಂದಾಗಿ ಉತ್ಖನನ ಮಾಡಿ ಹೊರತೆಗೆಯಲ್ಪಟ್ಟ ಪ್ರಾಚ್ಯವಸ್ತುಗಳ ವಿಚಾರದಲ್ಲಿ ಸೂಕ್ತ ಪ್ರಥಮ ಚಿಕಿತ್ಸೆಯ ಮಾರ್ಗಗಳನ್ನು ಅನುಸರಿಸಿ ಅವುಗಳನ್ನು ವೈಜ್ಞಾನಿಕ ಸಂರಕ್ಷಣೆಗಾಗಿ ಪ್ರಯೋಗಶಾಲೆಗೆ ಕಳುಹಿಸುವುದು ಅಗತ್ಯ.

ಬಿಸಿಲು, ಮಳೆ ಮುಂತಾದ ನೈಸರ್ಗಿಕ ಶಕ್ತಿಗಳ ಪ್ರಭಾವಕ್ಕೆ ನೇರವಾಗಿ ಒಳಗಾಗುವುದರಿಂದ ಪುರಾತನ ಅವಶೇಷ ಮತ್ತು ಕಟ್ಟಡಗಳು ಹಾಗೂ ಇವಕ್ಕಿಂತ ಹೆಚ್ಚು ಸುರಕ್ಷಿತವಾಗಿ ಸಂಗ್ರಹಾಲಯಗಳ ಒಳಗೆ ಇಡಲ್ಪಟ್ಟಿರುವ ಪ್ರಾಚ್ಯವಸ್ತುಗಳು, ಕಾಲಕ್ರಮೇಣ ವಾತಾವರಣದ ಪ್ರಭಾವದಿಂದ ಸ್ವಲ್ಪ ಸ್ವಲ್ಪವಾಗಿ ಮಾರ್ಪಾಟು ಹೊಂದಿ ಶಿಥಿಲವಾಗತೊಡಗುತ್ತವೆ. ಈ ಬದಲಾವಣೆಗಳು ಭೌತಿಕ ಅಥವಾ ರಾಸಾಯನಿಕ ರೂಪದ್ದಾಗಿರಬಹುದು ಅಥವಾ ಎರಡರ ಸಮ್ಮಿಶ್ರಣವಿರಬಹುದು.

ಉಷ್ಣತೆ, ತೇವ, ಬೆಳಕು, ವಾಯುಮಾಲಿನ್ಯ, ಸೂಕ್ಷ್ಮ ಸಸ್ಯರಾಶಿ ಮತ್ತು ಜೀವಾಣುಗಳು, ಮಾನವನ ಅಜ್ಞಾನ ಹಾಗೂ ನಿರ್ಲಕ್ಷ್ಯದಿಂದಲೂ ಪ್ರಾಚ್ಯವಸ್ತುಗಳು ಶಿಥಿಲಗೊಳ್ಳುತ್ತವೆ.

ಸಂರಕ್ಷಣಾ ವಿಧಾನಗಳು: ಪ್ರಾಚ್ಯವಸ್ತುಗಳನ್ನು ಉತ್ತಮ ಸ್ಥಿತಿಯಲ್ಲಿ ಬಹುಕಾಲದವರೆಗೆ ರಕ್ಷಿಸಬೇಕಾದರೆ ವಸ್ತುಸಂಗ್ರಹಾಲಯದಲ್ಲಿ ಹವಾಮಾನ ನಿಯಂತ್ರಣದ ಅಗತ್ಯವಿದೆ. $20^0$–$22^0$ ರ ಉಷ್ಣಾಂಶ ಮತ್ತು ಶೇ. 50–55 ತೇವಾಂಶ ಮಟ್ಟದಲ್ಲಿ ನಿಯಂತ್ರಿಸುವುದು ಸಾಧ್ಯವಾದರೆ ಅತ್ಯುತ್ತಮ. ಇದಕ್ಕೆ ಹೆಚ್ಚಿನ ಧನಸೌಲಭ್ಯ ಬೇಕಾಗುವುದರಿಂದ ಸಣ್ಣ ಸಂಗ್ರಹಾಲಯಗಳಿಗೆ ಇದು ಸಾಧ್ಯವಾಗದೇ ಇರಬಹುದು. ಇಂಥ ಸಂದರ್ಭದಲ್ಲಿ ಸಂಗ್ರಹಾಲಯದೊಳಗೆ ಗಾಳಿಯ ಸಂಚಾರ ಸರಾಗವಾಗಿ ಇರುವಂತೆ ಮಾಡುವುದರಿಂದ ತೇವಾಂಶವನ್ನು ನಿಯಂತ್ರಿಸುವುದು ಸಾಧ್ಯವಾಗುತ್ತದೆ. ಹೊರಗಿನಿಂದ ಬರುವ ಧೂಳನ್ನು ತಡೆಯಲು ಪರದೆಗಳನ್ನು ಬಳಸಬೇಕು. ಬೇಸಗೆ ಕಾಲದಲ್ಲಿ, ಉಷ್ಣಾಂಶವನ್ನು ಕಡಿಮೆ ಮಾಡಲು ಕಿಟಕಿಗಳ ಹೊರಗೆ ಖಸ್–ಖಸ್ ಚಾಪೆಗಳನ್ನು ತೂಗುಹಾಕಿ ಆಗಿಂದಾಗ್ಗೆ ಅವುಗಳ ಮೇಲೆ ನೀರನ್ನು ಸಿಂಪಡಿಸುತ್ತಿರಬೇಕು. ಸಂಗ್ರಹಾಲಯದ ಹೊರಗೆ ಮರಗಳನ್ನು ನೆಡುವುದರಿಂದ ವಾಯುವನ್ನು ಮಲಿನಗೊಳಿಸುವ ಅನಿಲಗಳನ್ನು ತಡೆಗಟ್ಟುವುದು ಬಹುಮಟ್ಟಿಗೆ ಸಾಧ್ಯವಾಗುತ್ತದೆ. ಹಾಗೆಯೇ ಬೆಳಕಿನ ನಿಯಂತ್ರಣವೂ ಅಗತ್ಯ. ಬೆಳಕಿನಲ್ಲಿರುವ ಅತಿನೇರಳೆ (ಯುವಿ) ಎಂಬ ಅಂಶ ಜಾಸ್ತಿಯಾಗಿರುವ ಫ್ಲೊರಸೆಂಟ್ ಟ್ಯೂಬುಗಳನ್ನು ಅಥವಾ ಬಲ್ಬುಗಳನ್ನು ಉಪಯೋಗಿಸುವಾಗ ಅದಕ್ಕೆ ಪ್ರತ್ಯೇಕ ಜಾಗರೂಕ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಇವುಗಳ ಬದಲು ಸಾಧಾರಣ ಟಂಗ್‌ಸ್ಟನ್ ಬಲ್ಬುಗಳನ್ನು ಉಪಯೋಗಿಸಿದರೆ ಇವುಗಳಿಂದ ಉಷ್ಣತೆ ಜಾಸ್ತಿಯಾಗುವ ಸಂಭವವಿರುವುದರಿಂದ ಇವುಗಳನ್ನು ವಸ್ತುಗಳಿಂದ ಸಾಕಷ್ಟು ದೂರದಲ್ಲಿಡಬೇಕಾಗುತ್ತದೆ. ಪ್ರಕಾಶದ ಪ್ರಮಾಣವನ್ನು ಕೂಡ ಸೂಚಿತ ಮಿತಿಯೊಳಗಿರುವಂತೆ ನಿಯಂತ್ರಿಸಬೇಕು. ಜಲಚಿತ್ರಗಳು, ರೇಷ್ಮೆ ಅರಿವೆಗಳು ಮುಂತಾದ ಸೂಕ್ಷ್ಮ ವಸ್ತುಗಳ ಮೇಲೆ ಶೇ. 50–55 ಲಕ್ಸ್ ಪ್ರಮಾಣಕ್ಕಿಂತ ಹೆಚ್ಚು ಪ್ರಕಾಶ ಬೀಳದಂತೆ ನೋಡಿಕೊಳ್ಳಬೇಕು.

1. ಮಣ್ಣಿನ ವಸ್ತುಗಳು: ಭೂಮಿಯ ಅಡಿಯಲ್ಲಿ ಬಹುಕಾಲವಿದ್ದರೂ ಸರಿಯಾಗಿ ಸುಡಲ್ಪಟ್ಟಿದ್ದರೆ ಮಣ್ಣಿನ ವಸ್ತುಗಳು ಒಳ್ಳೆಯ ಸ್ಥಿತಿಯಲ್ಲಿಯೇ ಇರುತ್ತವೆ. ಸುಡಲ್ಪಡದೆ ಕೇವಲ ಬಿಸಿಲಿನಲ್ಲಿ ಒಣಗಿಸಲ್ಪಟ್ಟ ವಸ್ತುಗಳು ಮತ್ತು ಕಡಿಮೆ ಶಾಖದಲ್ಲಿ ಸುಡಲ್ಪಟ್ಟ ವಸ್ತುಗಳು ಭೂಮಿಯಡಿಯ ಸುತ್ತಲಿನ ತೇವದಿಂದಾಗಿ ಮೃದುಗೊಂಡು ಹೊರತೆಗೆಯುವಾಗ ಒಡೆಯುವ ಸಂಭವವಿರುತ್ತದೆ. ವಸ್ತುಗಳನ್ನು ಹೊರತೆಗೆದ ಅನಂತರ ಅವುಗಳಿಗೆ ಅಂಟಿಕೊಂಡಿರುವ ಮಣ್ಣನ್ನು ಮೃದುವಾದ ಕುಂಚದಿಂದ ತೆಗೆಯಬಹುದು. ಚೆನ್ನಾಗಿ ಸುಡಲ್ಪಟ್ಟ ವಸ್ತುಗಳನ್ನು ನೀರಿನಿಂದ ಸ್ವಚ್ಛಗೊಳಿಸಬಹುದು. ಇತರ ವಸ್ತುಗಳನ್ನು ಒದ್ದೆ ಮಾಡಿದ ಹತ್ತಿಯ ಉಂಡೆಗಳ ಸಹಾಯದಿಂದ ಶುಚಿಗೊಳಿಸಬಹುದು. ಮಡಕೆಯ ಚೂರುಗಳ ಮೇಲೆ ವರ್ಣಗಳು ಇದ್ದಲ್ಲಿ ಅವುಗಳನ್ನು ಆಲ್ಕೊಹಾಲ್‌ನಿಂದ ಸ್ವಚ್ಛಗೊಳಿಸುವುದು ಒಳಿತು.

ವಸ್ತುಗಳು ಭೂಮಿಯಡಿಯಲ್ಲಿರುವಾಗ ಸುತ್ತಲಿನ ಲವಣ ಮಿಶ್ರಿತ ನೀರು ಅವುಗಳೊಳಗೆ ಪ್ರವೇಶಿಸಿ ಅವುಗಳನ್ನು ಹೊರತೆಗೆದ ಅನಂತರ ಆ ನೀರು ಆವಿಯಾಗಿ ಲವಣದ ಪದರಗಳು ವಸ್ತುವಿನ ಮೇಲೆ ನಿಲ್ಲುವ ಸಂಭವವಿರುತ್ತದೆ. ವಸ್ತುವಿನೊಳಗೂ ಲವಣಗಳು ಉಳಿಯಬಹುದು. ಇವುಗಳನ್ನು ಪೂರ್ಣವಾಗಿ ಶುಚಿಗೊಳಿಸದಿದ್ದರೆ ವಸ್ತುವಿಗೆ ಹಾನಿಯುಂಟಾಗುತ್ತದೆ. ಲವಣಗಳ ನಿವಾರಣೆಗಾಗಿ, ಚೆನ್ನಾಗಿ ಸುಡಲ್ಪಟ್ಟ ವಸ್ತುವಾದರೆ ಅದನ್ನು ಕೆಲವು ಘಂಟೆಗಳ ಕಾಲ ಸ್ವಚ್ಛವಾದ ಲವಣರಹಿತ ನೀರಿನಲ್ಲಿ ಮುಳುಗಿಸಿಡಬಹುದು. ಇತರ ವಸ್ತುಗಳಿಂದ ಲವಣವನ್ನು ತೆಗೆಯಲು ಕಾಗದದ ತಿರುಳನ್ನು ಸ್ವಚ್ಛ ನೀರಿನಲ್ಲಿ ಅದ್ದಿ ವಸ್ತುವಿನ ಮೇಲೆ ಲೇಪಮಾಡಿ ಕೆಲವು ಗಂಟೆಗಳ ಅನಂತರ ಅದನ್ನು ಜಾಗ್ರತೆಯಿಂದ ತೆಗೆಯಬೇಕು. ಸರಿಯಾಗಿ ಸುಡಲ್ಪಡದ ವಸ್ತುಗಳನ್ನು ದೃಢಪಡಿಸುವ ಸಲುವಾಗಿ ಅದನ್ನು ಪುನಃ ಸು. $600^0$–$700^0$ ಶಾಖದಲ್ಲಿ ಭಟ್ಟಿಯಲ್ಲಿ ಸುಡುವ ಕ್ರಮವನ್ನು ಕೆಲವು ವೇಳೆ ಅನುಸರಿಸ ಬೇಕಾಗುತ್ತದೆ. ಒಡೆದ ಮಡಕೆಯ ಬಹುಭಾಗದ ಚೂರುಗಳು ದೊರೆತಲ್ಲಿ ಅವುಗಳನ್ನು ಜೋಡಿಸಿ ಮಡಕೆಯನ್ನು ಪುನರ್ನಿರ್ಮಿಸಲಾಗುತ್ತದೆ. ಇದಕ್ಕೆ ಬೇಕಾಗುವ ಅಂಟು ಪದಾರ್ಥ ಚೂರು ಗಳನ್ನು ಒಟ್ಟುಗೂಡಿಸುವುದರಲ್ಲಿ ಸಾಕಷ್ಟು ಶಕ್ತಿಯುತವಾಗಿ ಇರಬೇಕಲ್ಲದೆ ಅದರ ದುರಸ್ತಿ ಕಾರ್ಯ ತೃಪ್ತಿಕರವಾಗಿಲ್ಲದಲ್ಲಿ ಚೂರುಗಳನ್ನು ಮತ್ತೆ ಬೇರ್ಪಡಿಸಬೇಕಾದರೆ ಅದನ್ನು ಬಿಡಿಸಲು ಸರಾಗವಾಗಿರುವಂತೆಯೂ ಇರಬೇಕು. ಪಾಲಿವಿನೈಲ್ ಅಸಿಟೇಟ್‌ನ ಒಂದು ರೂಪವಾದ ಫೆವಿಕಾಲ್ ಎಂಬ ಸಾಮಾನ್ಯ ಬಳಕೆಯಲ್ಲಿರುವ ಅಂಟು ಪದಾರ್ಥವನ್ನು ಈ ಜೋಡಣೆಯ ಕೆಲಸಕ್ಕೆ ಹೆಚ್ಚಾಗಿ ಬಳಸುತ್ತಾರೆ. ಒಡೆದ ಮಡಕೆಯ ಕೆಲವು ಚೂರುಗಳು ದೊರೆಯದಿದ್ದಲ್ಲಿ ಆ ಭಾಗಗಳಿಗೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ಬಳಸಿ ಪೂರ್ಣಗೊಳಿಸಲಾಗುತ್ತದೆ.

2) ಲೋಹದ ವಸ್ತುಗಳು: ಕಬ್ಬಿಣದ ವಸ್ತುಗಳು: ಕಬ್ಬಿಣ ತುಕ್ಕು ಹಿಡಿಯುವ ವಸ್ತು. ನಿಸರ್ಗದಲ್ಲಿ ಲೋಹಗಳು ಆಮ್ಲಜನಕ, ಗಂಧಕ, ಕ್ಲೋರಿನ್ ಮುಂತಾದ ಲೋಹೇತರ ಧಾತುಗಳೊಂದಿಗೆ ಸಂಯೋಗಗೊಂಡು ಖನಿಜ ರೂಪದಲ್ಲಿರುತ್ತವೆ. ಇದು ಅವುಗಳ ನೈಜ ಸ್ವರೂಪ. ಅತಿಯಾದ ಉಷ್ಣತೆ ಮುಂತಾದ ಬೃಹತ್ ಶಕ್ತಿಯ ಪ್ರಯೋಗದಿಂದ, ಖನಿಜದಿಂದ ಲೋಹಗಳನ್ನು ಪ್ರತ್ಯೇಕಿಸಲಾಗುತ್ತದೆ. ಈ ಹೊಸ ಶುದ್ಧ ಲೋಹ ರೂಪ ಅವುಗಳಿಗೆ ಅಸ್ವಾಭಾವಿಕವಾಗಿರುವುದರಿಂದ ಲೋಹಗಳು ಪುನಃ ಪ್ರಾಣವಾಯು ಮುಂತಾದ ಧಾತುಗಳೊಂದಿಗೆ ಸಂಯೋಜಿಸಿ ತಮ್ಮ ಮೊದಲಿನ ಸ್ವಾಭಾವಿಕ ಖನಿಜ ರೂಪಕ್ಕೆ ಹಿಂತಿರುಗುವ ಗುಣ ಹೊಂದಿರುತ್ತವೆ. ಕಬ್ಬಿಣ ತುಕ್ಕು ಹಿಡಿಯುವುದಕ್ಕೆ, ತಾಮ್ರ ಮತ್ತು ಕಂಚಿನ ವಸ್ತುಗಳ ಮೇಲೆ ಮೊದಲು ಕಂದುಬಣ್ಣದ ಅನಂತರ ಹಸುರು, ನೀಲಿ ಬಣ್ಣದ ಪದರುಗಳು ಏರ್ಪಡುವುದಕ್ಕೆ, ಬೆಳ್ಳಿ ಮಾಸುವುದಕ್ಕೆ – ಇದೆಲ್ಲದಕ್ಕೂ ಇದೇ ಮೂಲ ಕಾರಣ. ಉತ್ಕೃಷ್ಟ ಲೋಹ ಎಂದು ಕರೆಯಲ್ಪಡುವ ಬಂಗಾರ ಮಾತ್ರ ಈ ನಿಯಮಕ್ಕೆ ವಿರುದ್ಧ. ಇದು ಪ್ರಕೃತಿಯಲ್ಲಿಯೂ ಶುದ್ಧ ಲೋಹದ ರೂಪದಲ್ಲಿಯೇ ದೊರಕುತ್ತದೆ.

ತುಕ್ಕು ಹಿಡಿದ ಕಬ್ಬಿಣದ ವಸ್ತುವಿನ ರಾಸಾಯನಿಕ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಮೊದಲು, ಅದರೊಳಗೆ ಪೂರ್ಣವಾದ ಮತ್ತು ದೃಢವಾದ ಲೋಹದ ಮಧ್ಯ ಭಾಗವಿದೆಯೇ ಎಂಬುದನ್ನು ಪರೀಕ್ಷಿಸಿ ಗುರುತಿಸಬೇಕು. ಈ ಪರೀಕ್ಷೆಯನ್ನು ಚಾಕು, ದಪ್ಪ ಸೂಜಿ ಮುಂತಾದ ಸಲಕರಣೆಗಳೊಂದಿಗೆ ಅಯಸ್ಕಾಂತವನ್ನು ಬಳಸಿ ನಡೆಸಬೇಕು. ಕೆಲವು ವೇಳೆ ಕ್ಷ–ಕಿರಣದ ಉಪಯೋಗವೂ ಅಗತ್ಯವಾಗಬಹುದು.

(i) ವಿದ್ಯುಚ್ಛಕ್ತಿಯ ಪ್ರಯೋಗ (ಎಲೆಕ್ಟ್ರೊಲೈಟಿಕ್ ಮೆಥೆಡ್): ಈ ವಿಧಾನದಲ್ಲಿ ಶೇ.5 ಸೋಡಿಯಮ್ ಹೈಡ್ರಾಕ್ಸೈಡ್ (NaOH) ದ್ರಾವಕದಲ್ಲಿ ಸಣ್ಣ ಲೋಹದ ಕಂಬಿಗಳಿಂದ ಸುತ್ತಲ್ಪಟ್ಟ ವಸ್ತುವನ್ನು (ಇದು ಕೆಥೋಡ್ ಎಂಬ ಧ್ರುವವಾಗುತ್ತದೆ) ಮುಳುಗಿಸಿ, ಆನೋಡ್ ಎಂಬ ಧ್ರುವಕ್ಕೆ ಉಕ್ಕಿನ ತಗಡನ್ನು ಉಪಯೋಗಿಸಿ, ಎರಡು ಧ್ರುವಗಳನ್ನು ಕಂಬಿಯಿಂದ ಜೋಡಿಸಿ, ಸು. 10–15 ಆಂಪೈರ್‌ನಷ್ಟು ಶಕ್ತಿಯ ವಿದ್ಯುತ್ ಪ್ರವಾಹವನ್ನು 6–12 ವೋಲ್ಟ್ ಪ್ರಮಾಣದ ಬ್ಯಾಟರಿಯ ಮೂಲಕ ಚಾಲನೆ ಮಾಡಿ ಹಲವು ಗಂಟೆಗಳ ಕಾಲ ಈ ಪ್ರಕ್ರಿಯೆಯನ್ನು ಮುಂದುವರಿಸಲಾಗುತ್ತದೆ. ಎಲೆಕ್ಟ್ರೊಲೈಟ್ ಗುಣವುಳ್ಳ ಲವಣದ್ರಾವಕದಿಂದ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದ ಮೂಲಕ ವಿದ್ಯುಚ್ಛಕ್ತಿಯ ಪ್ರವೇಶದಿಂದಾಗಿ, ಕ್ಯಾಥೋಡ್‌ನ ಕಡೆ ಪ್ರವಹಿಸುವ ಶಕ್ತಿಯುತವಾದ ನೇಸೆಂಟ್ ಹೈಡ್ರೋಜನ್‌ನ (ಆಗಲೇ ಜನಿತವಾದ ಹೈಡ್ರೊಜನ್ ಅನಿಲ) ಪ್ರಕ್ರಿಯೆಯಿಂದ ವಸ್ತುವಿನ ಮೇಲಿರುವ ತುಕ್ಕು ಕ್ರಮೇಣ ಕರಗುತ್ತದೆ. ಕೆಲವು ಗಂಟೆಗಳ ನಂತರ ವಸ್ತುವನ್ನು ಹೊರತೆಗೆದು ಬ್ರಷ್‌ನಿಂದ ಜಾಗ್ರತೆಯಾಗಿ ಉಜ್ಜಿ, ನಲ್ಲಿಯ ನೀರಿನಿಂದ ತೊಳೆಯಲಾಗುತ್ತದೆ. ತುಕ್ಕನ್ನು ಪೂರ್ಣ ಹೋಗಲಾಡಿಸಲು ಈ ಮೇಲೆ ಹೇಳಿದ ಕ್ರಮಗಳನ್ನು ಕೆಲವು ಬಾರಿ ಪುನಃಪುನಃ ನಡೆಸಬೇಕಾಗಬಹುದು. ಕಡೆಯಲ್ಲಿ ವಸ್ತುವನ್ನು ಭಟ್ಟಿಯಿಳಿಸಿದ ನೀರಿನಲ್ಲಿ ಕೆಲವು ಬಾರಿ, ಎಂದರೆ ಕ್ಲೋರೈಡ್ ಎಂಬ ರಾಸಾಯನಿಕ ಅಂಶ ಪೂರ್ಣವಾಗಿ ಹೋಗುವವರೆಗೆ ಮುಳುಗಿಸಿ ಅನಂತರ ವಸ್ತುವನ್ನು ಸಾಧಾರಣ ವಾತಾವರಣದಲ್ಲಿ ಒಣಗಿಸಿ, ಆವಶ್ಯಕವಾದರೆ ತೇವ ಪೂರ್ಣ ಹೋಗುವಂತೆ ಸು. $105^0$ ಯ ಶಾಖದಲ್ಲಿ ಭಟ್ಟಿಯಲ್ಲಿ ಒಂದೆರಡು ಗಂಟೆಗಳ ಕಾಲ ಇಡಬೇಕು. ತುಕ್ಕು ಹಿಡಿಯುವುದು ಮರುಕಳಿಸದೆ ಇರಬೇಕಾದರೆ, ವಸ್ತುವನ್ನು ಶುಷ್ಕ ವಾತಾವರಣದಲ್ಲಿಡುವುದು ಅವಶ್ಯ. ಇಂಥ ವಸ್ತುವಿಗೆ ಆಕ್ಸಿಲೇಟ್ ರಾಸಾಯನಿಕ ವಸ್ತುವಿನ ಲೇಪವನ್ನೂ ಮಾಡುವ ಪದ್ಧತಿಯಿದೆ.

(ii) ವಿದ್ಯುತ್ ರಾಸಾಯನಿಕ ವಿಧಾನ (ಎಲೆಕ್ಟ್ರೊಕೆಮಿಕಲ್ ಮೆಥೆಡ್): ಈ ಹಿಂದೆಯೇ ವಿವರಿಸಿರುವಂತೆ ಲೋಹಧಾತುಗಳು ಇತರ ಲೋಹೇತರ ಧಾತುಗಳೊಂದಿಗೆ ಪ್ರತಿಕ್ರಿಯಿಸಿ ರಾಸಾಯನಿಕ ಬದಲಾವಣೆಗಳಿಗೆ ಒಳಗಾಗುವ ಸ್ವಾಭಾವಿಕ ಗುಣವನ್ನು ಹೊಂದಿವೆ. ಈ

ಗುಣ ಕಡಿಮೆಯಿರುವ ಲೋಹವಾದ ಬಂಗಾರವನ್ನು ಪ್ರಥಮ ಸ್ಥಾನದಲ್ಲಿರಿಸಿ ಅನಂತರ ಕ್ರಮೇಣ ಈ ರಾಸಾಯನಿಕ ಗುಣದ ಆಧಿಕ್ಯಕ್ಕನುಗುಣವಾಗಿ ಬೆಳ್ಳಿ, ತಾಮ್ರ, ಸೀಸ, ತವರ, ಕಬ್ಬಿಣ, ಸತು ಮುಂತಾದ ಲೋಹಗಳ ಪಟ್ಟಿಯನ್ನು ಅನುಕ್ರಮವಾಗಿ ತಯಾರಿಸಲಾಗಿದೆ. ಇದನ್ನು ವಿದ್ಯುತ್ ರಾಸಾಯನಿಕ ಪಟ್ಟಿ (ಎಲೆಕ್ಟ್ರೋಕೆಮಿಕಲ್ ಟೇಬಲ್) ಎಂದು ಕರೆಯುತ್ತಾರೆ.

ಎರಡು ಲೋಹಗಳ ತುಂಡುಗಳನ್ನು ಎಲೆಕ್ಟ್ರೊಲೈಟ್ ಗುಣವುಳ್ಳ ದ್ರಾವಕದಲ್ಲಿ ಒಂದೇ ಸಾರಿ ಮುಳುಗಿಸಿದಾಗ, ಈ ಪಟ್ಟಿಯಲ್ಲಿ ಕೆಳಗಿನ ಸ್ಥಾನದಲ್ಲಿರುವ ಲೋಹ ತ್ವರೆಯಿಂದ ಪ್ರತಿಕ್ರಿಯಿಸಿ ಕರಗುತ್ತಾ ಹೋಗಿ, ಅದರ ಜೊತೆಯ ಲೋಹ ಅದಕ್ಕಿಂತ ಮೇಲಿನ ಸ್ಥಾನದ್ದಾದರೆ ಅದು ಸುರಕ್ಷಿತವಾಗಿರುತ್ತದೆ. ಈ ತತ್ತ್ವವನ್ನು ಉಪಯೋಗಿಸಿ ತುಕ್ಕು ಹಿಡಿದ ಲೋಹದ ವಸ್ತುಗಳ ಶುದ್ಧೀಕರಣ ಮಾಡಬಹುದು. ಒಂದು ಎನಾಮಲ್ ಪರಾತದೊಳಗೆ ವಸ್ತುವನ್ನಿರಿಸಿ ಸುತ್ತಲೂ ಸತುವಿನ (ಜಿಂಕ್) ತುಂಡುಗಳನ್ನಿರಿಸಿ, ಈ ಎಲ್ಲವೂ ಮುಳುಗುವಷ್ಟು ಪ್ರಮಾಣದಲ್ಲಿ ಶೇ.5 ರಷ್ಟು ಸೋಡಿಯಂ ಹೈಡ್ರಾಕ್ಸೈಡ್ ದ್ರಾವಕವನ್ನು ಹಾಕಿ, ಅದನ್ನು ಕುದಿಯುವ ಉಷ್ಣಮಾನದಲ್ಲಿ ಒಂದೆರಡು ಗಂಟೆಗಳ ಕಾಲ ಇಡಬೇಕು. ದ್ರಾವಕ ಕುದ್ದು ಕಡಿಮೆಯಾಗುತ್ತಾ ಹೋದಂತೆ, ಮೇಲಿಂದ ಮೇಲೆ ದ್ರಾವಕವನ್ನು ಹಾಕುತ್ತಾ ವಸ್ತು ಪೂರ್ಣ ಮುಳುಗಿರುವಂತೆ ನೋಡಿಕೊಳ್ಳಬೇಕು. ಅನಂತರ ವಸ್ತುವನ್ನು ಕುಂಚದಿಂದ ಸ್ವಚ್ಛ ಮಾಡಿ ನಲ್ಲಿಯ ನೀರಿನಲ್ಲಿ ತೊಳೆಯಬೇಕು. ಅನಂತರ ಹಿಂದಿನ ವಿಧಾನದಲ್ಲಿ ಹೇಳಿದಂತಹ ಕ್ರಮಗಳಿಂದ ಸಂರಕ್ಷಿಸಬೇಕು.

ರಾಸಾಯನಿಕ ವಿಧಾನಗಳು: ಕತ್ತಿ, ಕಠಾರಿ ಮುಂತಾದ ಆಯುಧಗಳು ಅಥವಾ ಇತರ ಕಬ್ಬಿಣದ ಗೃಹೋಪಯೋಗಿ ವಸ್ತುಗಳ ಮೇಲೆ ತುಕ್ಕಿನ ಪದರ ಅಧಿಕ ದಟ್ಟವಾಗಿಲ್ಲದ ಸಂದರ್ಭಗಳಲ್ಲಿ ಫಾಸ್‌ಫರಿಕ್ ಆಸಿಡ್, ಇಥೈಲೀನ್ ಡಯಮೈನ್ ಟೆಟ್ರಸೆಟಿಕ್ ಆಸಿಡ್ ಮುಂತಾದ ರಾಸಾಯನಿಕ ವಸ್ತುಗಳ ಸಹಾಯದಿಂದ ತುಕ್ಕನ್ನು ನಿವಾರಿಸಿ ವಸ್ತುಗಳನ್ನು ಸಂರಕ್ಷಿಸಬಹುದು. ಫಾಸ್‌ಫರಿಕ್ ಆಸಿಡ್‌ನ ಉಪಯೋಗದಿಂದಾಗುವ ಮತ್ತೊಂದು ಪ್ರಯೋಜನವೆಂದರೆ, ಅದರ ಪ್ರಯೋಗದ ಅನಂತರ ವಸ್ತುವಿನ ಮೇಲೆ ಐರನ್ ಫಾಸ್‌ಫೇಟ್ ಎಂಬ ರಾಸಾಯನಿಕ ವಸ್ತುವಿನ ಅದೃಶ್ಯ ಪದರವೊಂದು ಏರ್ಪಟ್ಟು ಮುಂದೆ ವಸ್ತು ತುಕ್ಕು ಹಿಡಿಯದಂತೆ ರಕ್ಷಿಸುತ್ತದೆ.

ವಸ್ತುಸಂಗ್ರಹಾಲಯದಲ್ಲಿರುವ ವಸ್ತುಗಳ ಮೇಲೆ ತುಕ್ಕಿನ ಕೆಲವು ಕಲೆಗಳು ಮಾತ್ರ ಇರುವುದಾದರೆ, ವಸ್ತುವನ್ನು ಕೆಲವು ಕಾಲ ಸೀಮೆಎಣ್ಣೆಯಲ್ಲಿ ನೆನೆಸಿ ಕಲೆಗಳನ್ನು ಹಿತ್ತಾಳೆ ಕುಂಚದ ಸಹಾಯದಿಂದ ತೆಗೆಯಬಹುದು.

(ಆ) ತಾಮ್ರ ಮತ್ತು ಅದರ ಮಿಶ್ರಲೋಹಗಳು: ಪಾತ್ರೆಗಳ ತಯಾರಿಕೆಯಲ್ಲಿ ಈಗ ತಾಮ್ರ ಬಳಕೆಯಲ್ಲಿದ್ದರೂ ಪ್ರಾಚೀನ ಕಾಲದಲ್ಲಿ ಇತರ ಧಾತುಗಳೊಂದಿಗೆ ಬೆರೆತು ಮಿಶ್ರಲೋಹವಾಗಿಯೇ ಉಪಯೋಗಿಸಲ್ಪಟ್ಟಿರುವುದು ಕಂಡುಬಂದಿದೆ. ತಾಮ್ರದೊಡನೆ ವಿವಿಧ ಪ್ರಮಾಣದಲ್ಲಿ ತವರವನ್ನು ಮಿಶ್ರಮಾಡಿದರೆ ಉಂಟಾಗುವ ಮಿಶ್ರ ಲೋಹಕ್ಕೆ ಕಂಚು ಎಂದೂ ಅದೇ ಪ್ರಕಾರ ಸತುವಿನೊಡನೆ ಮಿಶ್ರ ಹೊಂದಿದರೆ ಹಿತ್ತಾಳೆ ಎಂದೂ ಹೆಸರು.

ತಾಮ್ರ, ಕಂಚು ಅಥವಾ ಹಿತ್ತಾಳೆಯ ವಸ್ತುಗಳು ಹೊಸದಾಗಿರುವಾಗ ಹೊಳೆಯುತ್ತಿರುತ್ತವೆ. ಅನಂತರ ಕಾಲ ಸಂದಂತೆ ಬಣ್ಣ ಮಾಸಿ ಕಂದುಬಣ್ಣಕ್ಕೆ ತಿರುಗುತ್ತವೆ. ಇದಕ್ಕೆ ಕಾರಣ ತಾಮ್ರದ ಧಾತು ವಾತಾವರಣದಲ್ಲಿನ ಪ್ರಾಣವಾಯುವಿನೊಂದಿಗೆ ಪ್ರತಿಕ್ರಿಯಿಸಿ ಮೊದಲಿಗೆ ಕುಪ್ರಸ್ ಆಕ್ಸೈಡ್ ($Cu_2O$) ಮತ್ತು ಅದುವೇ ಕುಪ್ರಿಕ್ ಆಕ್ಸೈಡ್ (CuO) ಆಗಿ ಮಾರ್ಪಟ್ಟು ವಸ್ತುವಿನ ಹೊರಮೈ ಪೂರ್ಣವಾಗಿ ಈ ಆಕ್ಸೈಡ್‌ಗಳಿಂದ ವ್ಯಾಪಿಸಲ್ಪಟ್ಟು, ಕಿಲುಬು (ಪ್ಯಾಟಿನ) ಎಂದು ಕರೆಯಲ್ಪಡುವ ಒಂದು ಹೊಸ ಮೇಲ್ಪದರವುಂಟಾಗಿ ಲೋಹದ ಒಳಮೈ ಮತ್ತಷ್ಟು ರಾಸಾಯನಿಕ ಪ್ರಕ್ರಿಯೆಗೆ ಒಳಗಾಗದಂತೆ ಕಾಪಾಡುತ್ತದೆ. ಅನಂತರ ವಾತಾವರಣದಲ್ಲಿನ ಇಂಗಾಲಾಮ್ಲದೊಡನೆ ಪ್ರತಿಕ್ರಿಯಿಸಿ ಮಲಕೈಟ್ $[CuCO_3,Cu(OH)_2]$ ಎಂಬ ಹಸುರು ಬಣ್ಣದ ಕಿಲುಬು ಉಂಟಾಗುವುದೂ ಉಂಟು. ಕೆಲವು ಪ್ರದೇಶಗಳ (ಉದಾ: ಚೀನ) ಕಂಚಿನ ಪ್ರಾಚ್ಯವಸ್ತುಗಳ ಮೇಲೆ ನೀಲಿಬಣ್ಣದ ಅಝುರೈಟ್ $(2CuCO_3Cu(OH)_2)$ ಎಂಬ ಕಿಲುಬನ್ನು ಕಾಣಬಹುದು. ಈ ಹಂತದಲ್ಲಿ ಕಿಲುಬು ನೋಡಲು ಅಂದವಾಗಿಯೂ ಲೋಹದ ಒಳಮೈ ರಕ್ಷಕವಾಗಿಯೂ ಇರುವುದರಿಂದ ಇದನ್ನು ನೋಬಲ್ ಪ್ಯಾಟಿನ ಎಂದು ಕರೆಯುತ್ತಾರೆ.

ಆದರೆ ಯಾವುದೇ ಕಾರಣದಿಂದ ಕ್ಲೋರಿನ್ ಧಾತುವಿನ ಪ್ರವೇಶವುಂಟಾದಾಗ ಬೇಸಿಕ್ ಕುಪ್ರಿಕ್ ಕ್ಲೋರೈಡ್ ಉಂಟಾಗಿ ತಾಮ್ರದ (ಕಂಚಿನ) ವಸ್ತುವಿನ ಮೇಲೆ ಹಸುರು ಬಣ್ಣದ ಚುಕ್ಕಿಗಳು ಮತ್ತು ಕಲೆಗಳು ಹರಡಲು ಶುರುವಾಗುತ್ತವೆ. ಇದನ್ನು ಕಂಚಿನ ವ್ಯಾಧಿ ಎಂದು ಕರೆಯುತ್ತಾರೆ. ತಕ್ಷಣ ತಕ್ಕ ಕ್ರಮ ತೆಗೆದುಕೊಳ್ಳದಿದ್ದರೆ ಇದು ಲೋಹವನ್ನು ಪೂರ್ಣ ನಾಶಮಾಡುವ ಸಾಧ್ಯತೆಯಿರುತ್ತದೆ.

ಪೂರ್ಣ ಶುದ್ಧೀಕರಣ: ಒಂದು ವಸ್ತುವಿನ ಮೇಲ್ಮೈ ನಶಿಸುವ ಪ್ರಕ್ರಿಯೆಗೊಳಗಾಗಿ ಬಹಳ ಹದಗೆಟ್ಟಿರುವಾಗ ಅದನ್ನು ಪೂರ್ಣವಾಗಿ ಶುದ್ಧಗೊಳಿಸಬೇಕಾಗುತ್ತದೆ. ಅಂದರೆ ಕಿಲುಬು ಸಹಿತ ಅದರ ಮೇಲಿರುವ ಎಲ್ಲ ಪದರಗಳನ್ನೂ ರಾಸಾಯನಿಕ ಕ್ರಿಯೆಯಿಂದ ತೆಗೆಯಬೇಕಾಗುತ್ತದೆ. ಇಲ್ಲವಾದರೆ ಲೋಹದ ಒಳಮೈಗೆ ಹಾನಿಯುಂಟಾಗುತ್ತದೆ. ಇದನ್ನು ಸ್ಟ್ರಿಪ್ಪಿಂಗ್ ವಿಧಾನ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ತಾಮ್ರದ ನಾಣ್ಯಗಳನ್ನು ಶುದ್ಧ ಮಾಡಬೇಕಾದಾಗ ಈ ಪದ್ಧತಿಯೇ ಹೆಚ್ಚು ಚಾಲ್ತಿಯಲ್ಲಿದೆ. ಸ್ಟ್ರಿಪ್ಪಿಂಗ್ ಪದ್ಧತಿಯನ್ನು ಕಬ್ಬಿಣದ ವಸ್ತುಗಳ ಸಂರಕ್ಷಣೆಯನ್ನು ವಿವರಿಸುವಾಗ ಹೇಳಿರುವಂತೆ ಎಲೆಕ್ಟ್ರೊಲೈಟಿಕ್ ಮತ್ತು ಎಲೆಕ್ಟ್ರೊಕೆಮಿಕಲ್ ಕ್ರಮಗಳಲ್ಲಿ ಅದೇ ರಾಸಾಯನಿಕಗಳನ್ನು ಬಳಸಿ ನಡೆಸಬಹುದು.

ಪ್ಯಾಟಿನವನ್ನು ಉಳಿಸಬೇಕಾದಾಗ: (ಅ) ಒಂದು ಕಂಚಿನ ವಿಗ್ರಹ ಅಥವಾ ಇತರ ವಸ್ತುವಿಗೆ ನೋಬಲ್ ಪ್ಯಾಟಿನ ಇದ್ದರೆ ಕಿಲುಬನ್ನು ಉಳಿಸಿ, ಮೇಲಿರುವ ಕಲೆಗಳನ್ನು ಮಾತ್ರ ನಿವಾರಿಸುವ ರೀತಿಯಲ್ಲಿ ಶುದ್ಧೀಕರಣ ಕಾರ್ಯವನ್ನು ಮಾಡಬೇಕಾಗುತ್ತದೆ. ಇದು ಕಲಾತ್ಮಕ ದೃಷ್ಟಿಯಿಂದಲೂ ಪ್ರತಿಮೆಯ ನೈಜ ಸ್ವರೂಪವನ್ನು ಉಳಿಸುವುದಕ್ಕಾಗಿಯೂ ಅವಶ್ಯವಾಗುತ್ತದೆ.

(ಇ) ಬೆಳ್ಳಿಯ ವಸ್ತುಗಳು: ಬೆಳ್ಳಿಯ ಪಾತ್ರೆಗಳು, ಆಭರಣಗಳು ಮೊದಲಾದವು ಕಾಲ ಕ್ರಮೇಣ ಕಪ್ಪಾಗುವುದನ್ನು ದೈನಂದಿನ ಜೀವನದಲ್ಲಿಯೂ ಕಾಣಬಹುದು.

(i) ದೊಡ್ಡ ಪಟ್ಟಣಗಳಲ್ಲಿ ವಾತಾವರಣದ ಹವೆಯಲ್ಲಿ ಹೈಡ್ರೋಕ್ಲೋರಿಕ್ ಆಮ್ಲವೂ (HC1) ಹೈಡ್ರೋಜನ್ ಸಲ್ಫೈಡ್ ($H_2S$) ಎಂಬ ಅನಿಲವೂ ಸಣ್ಣ ಪ್ರಮಾಣದಲ್ಲಿ ಇರುತ್ತವೆ. ಇವು ಬೆಳ್ಳಿಯ ವಸ್ತುಗಳೊಡನೆ ಪ್ರತಿಕ್ರಿಯಿಸುವುದರಿಂದ ಬೆಳ್ಳಿಯ ಮೇಲೆ ಸಿಲ್ವರ್ ಕ್ಲೋರೈಡ್ (AgCl) ಮತ್ತು ಸಿಲ್ವರ್ ಸಲ್‌ಫೈಡ್ ($Ag_2S$) ಎಂಬ ರಾಸಾಯನಿಕ ವಸ್ತುಗಳು ಉತ್ಪತ್ತಿಯಾಗುತ್ತವೆ. ಸಿಲ್ವರ್ ಕ್ಲೋರೈಡ್ ಎಂಬುದು ಮೊದಲಿಗೆ ಬಿಳಿಯ ಬಣ್ಣದಲ್ಲಿದ್ದರೂ ಬೆಳಕಿನೊಡನೆ ಪ್ರತಿಕ್ರಿಯಿಸುವ ಗುಣ ಹೊಂದಿರುವುದರಿಂದ ಕ್ರಮೇಣ ಬೂದು ಮತ್ತು ಕಪ್ಪುಬಣ್ಣಕ್ಕೆ ತಿರುಗುತ್ತದೆ. ಸಿಲ್ವರ್ ಸಲ್‌ಫೈಡ್ ಎಂಬುದು ಉತ್ಪತ್ತಿಯಲ್ಲಿಯೇ ಕಪ್ಪುಬಣ್ಣದ್ದಾಗಿರುತ್ತದೆ. ಇವೆರಡರ ಕಾರಣದಿಂದ ಬೆಳ್ಳಿಯ ವಸ್ತು ಕಪ್ಪುಬಣ್ಣಕ್ಕೆ ತಿರುಗುತ್ತದೆ.

ವಸ್ತುವನ್ನು ಶೇ.10ರಷ್ಟು ಅಮೋನಿಯ (NaOH) ದ್ರಾವಕದಲ್ಲಿ ಕೆಲವು ಗಂಟೆಗಳ ಕಾಲ ಮುಳುಗಿಸಿ ಇಡುವುದರಿಂದ ಸಿಲ್ವರ್ ಕ್ಲೋರೈಡ್ ಪೂರ್ಣವಾಗಿ ಕರಗುತ್ತದೆ. ಸಿಲ್ವರ್ ಸಲ್‌ಫೈಡ್ ಮತ್ತು ಸಿಲ್ವರ್ ಆಕ್ಸೈಡ್ ಇವುಗಳು ಇದ್ದಪಕ್ಷದಲ್ಲಿ, ವಸ್ತುವಿನ ಹೊರಮೈ ಕಪ್ಪಾಗಿಯೇ ಉಳಿದಿದ್ದರೆ ವಸ್ತುವನ್ನು ಶೇ.10ರಷ್ಟು ಪ್ರಮಾಣದ ಥಯೋಯೂರಿಯ ದ್ರಾವಕದಲ್ಲಿ ಒಂದೆರಡು ಗಂಟೆಗಳ ಕಾಲ ಮುಳುಗಿಸಿಟ್ಟು ಚೆನ್ನಾಗಿ ಕುಂಚದಿಂದ ಸ್ವಚ್ಛ ಮಾಡಿ ತೊಳೆಯಬೇಕು.

(ii) ಬೆಳ್ಳಿಯ ನಾಣ್ಯಗಳಲ್ಲಿ ತಾಮ್ರದ ಅಂಶ ಕೆಲವು ಬಾರಿ ಹೆಚ್ಚಾಗಿ ಇರುವುದರಿಂದ ನೀಲಿಬಣ್ಣದ, ತಾಮ್ರ ನಶಿಸುವುದಕ್ಕೆ ಕಾರಣವಾದ, ರಾಸಾಯನಿಕ ವಸ್ತುಗಳು ನಾಣ್ಯದ ಮೇಲೆ ಪೂರ್ಣ ಆವರಿಸುವುದರಿಂದ ಅದು ತಾಮ್ರದ ನಾಣ್ಯದಂತೆಯೇ ಕಾಣುತ್ತಿರುತ್ತದೆ. ಇಂತಹ ಬೆಳ್ಳಿ ನಾಣ್ಯಗಳನ್ನು ಶೇ.20ರಷ್ಟು ಫಾರ್‌ಮಿಕ್ ಆಸಿಡ್‌ನಲ್ಲಿ ಕುದಿಯುವ ಉಷ್ಣ ಪ್ರಮಾಣದಲ್ಲಿ 30 ನಿಮಿಷಗಳು ಇಡುವುದರಿಂದ ನೀಲಿಬಣ್ಣದ ತಾಮ್ರದ ಅಂಶಗಳು ಪೂರ್ಣ ಕರಗಿ ನಾಣ್ಯ ತನ್ನ ಸಹಜ ರೂಪಕ್ಕೆ ಹಿಂತಿರುಗುತ್ತದೆ.

(ಈ) ಸೀಸದ ವಸ್ತುಗಳು: ಸೀಸದ ನಾಣ್ಯಗಳು ಬಹಳ ಪುರಾತನ ಕಾಲದಿಂದ ಉಪಯೋಗದಲ್ಲಿವೆ. ಸೀಸದ ಸ್ವಾಭಾವಿಕ ರಂಗು ಬೂದುಬಣ್ಣವಾದರೂ ಅದು ವಾತಾವರಣದ ಇಂಗಾಲಾಮ್ಲದೊಡನೆ ತಕ್ಷಣ ಪ್ರತಿಕ್ರಿಯಿಸುವ ಸ್ವಭಾವವನ್ನು ಹೊಂದಿರುವುದರಿಂದ ಸೀಸದ ವಸ್ತುವಿನ ಮೇಲೆ ಬಿಳಿಯ ಬಣ್ಣದ $PbCO_3$, $Pb(OH)_2$ ಎಂಬ ರಾಸಾಯನಿಕ ವಸ್ತುವಿನ ಪದರ ಏರ್ಪಡುತ್ತದೆ. ಮಧ್ಯಯುಗೀನಕಾಲದಲ್ಲಿ ಚಿತ್ರ ನಿರ್ಮಾಣದಲ್ಲಿ ಬಹಳವಾಗಿ ಬಳಕೆಯಲ್ಲಿದ್ದ ಲೆಡ್‌ವೈಟ್ ಎಂಬ ಬಣ್ಣ ಇದೇ ರಾಸಾಯನಿಕ ವಸ್ತುವಾಗಿತ್ತು ಎಂಬುದು ಸ್ವಾರಸ್ಯಕರ.

ಈ ರೀತಿ ಕಿಲುಬುಗಟ್ಟಿದ ನಾಣ್ಯ ಅಥವಾ ವಸ್ತುವನ್ನು ಮೊದಲಿಗೆ ಶೇ.10ರಷ್ಟು ಪ್ರಮಾಣದ ಹೈಡ್ರೋಕ್ಲೋರಿಕ್ ಆಮ್ಲದಲ್ಲಿ ಮುಳುಗಿಸಿಡಬೇಕು. ಆಮ್ಲದ ಪ್ರತಿಕ್ರಿಯೆಯಿಂದ ಇಂಗಾಲಾಮ್ಲ ಹೊರಬೀಳುವುದು. ಇದು ದ್ರಾವಕದ ಮೇಲೆ ಗುಳ್ಳೆಗಳುಂಟಾಗುವುದರಿಂದ ತಿಳಿಯುತ್ತದೆ. ಈ ಪ್ರಕ್ರಿಯೆಯನ್ನು ಒಂದೆರಡು ಗಂಟೆಗಳ ಕಾಲ ಎಂದರೆ ಗುಳ್ಳೆಗಳು ಬರುವುದು ಪೂರ್ಣವಾಗಿ ನಿಲ್ಲುವವರೆಗೆ ನಡೆಸಬೇಕು. ಅನಂತರವೂ ವಸ್ತುವಿನ ಮೇಲೆ ಲೆಡ್ ಆಕ್ಸೈಡ್‌ನ ತಿಳಿಹಳದಿ ಅಥವಾ ಕಂದುಬಣ್ಣದ ಕಲೆಗಳು ಇದ್ದ ಪಕ್ಷದಲ್ಲಿ ಶೇ.10 ರಷ್ಟು ಪ್ರಮಾಣದ ಅಮೋನಿಯಮ್ ಅಸಿಟೇಟ್ ದ್ರಾವಕದಲ್ಲಿ ಒಂದು ರಾತ್ರಿ ಇಡಬೇಕು. ನೀರಿನಲ್ಲಿರುವ ಇಂಗಾಲಾಮ್ಲವನ್ನು ಪೂರ್ಣ ಹೋಗಲಾಡಿಸುವುದಕ್ಕಾಗಿ ಕೊನೆಯಲ್ಲಿ ವಸ್ತುವನ್ನು ಬಿಸಿನೀರಿನಲ್ಲಿ ಒಂದೆರಡು ಬಾರಿ ತೊಳೆದು, ಕುದಿಸಿ, ಆರಿಸಿದ ಭಟ್ಟಿ ಇಳಿಸಿದ ನೀರಿನಲ್ಲಿ ಎರಡು ಮೂರು ಬಾರಿ ಅದ್ದಿ ಅನಂತರ ಕೊಠಡಿಯ ಉಷ್ಣತೆಯಲ್ಲಿಯೇ ಒಣಗಿಸಬೇಕು. ಈ ರೀತಿ ಶುದ್ಧೀಕರಿಸಿದ ಸೀಸದ ವಸ್ತುವನ್ನು ಬರಿಗೈಯಿಂದ ಮುಟ್ಟಬಾರದು. ಅದರ ಸಂರಕ್ಷಣೆಗಾಗಿ ಮೇಣದ ಲೇಪವನ್ನು ಕೊಡಬೇಕು. ಸೀಸದ ವಸ್ತುಗಳನ್ನು ಮರದ ಕಪಾಟುಗಳಲ್ಲಿ ಇಡಬಾರದು. ಏಕೆಂದರೆ ಮರದಿಂದ ಹೊರಸೂಸುವ ಜೈವಿಕ ಆಮ್ಲಗಳ ಪ್ರಭಾವ ಅದರ ಮೇಲೆ ಉಂಟಾಗುತ್ತದೆ. ಉಕ್ಕಿನ ಬೀರುಗಳೊಳಗೆ ಇರಿಸಬಹುದು.

(ಉ) ಮರದ ವಸ್ತುಗಳು: ಮರದಂತಹ ಜೈವಿಕ ವಸ್ತುಗಳು ಬೂಷ್ಟು ಮೊದಲಾದ ಸೂಕ್ಷ್ಮ ಸಸ್ಯಜೀವಿಗಳಿಂದ ಮತ್ತು ಕ್ರಿಮಿಕೀಟಗಳಿಂದ ಬಾಧಿಸಲ್ಪಟ್ಟು ತ್ವರೆಯಾಗಿ ಶಿಥಿಲಗೊಳ್ಳುವ ಸಾಧ್ಯತೆಯಿರುತ್ತದೆ.

(i) ಕ್ರಿಮಿಕೀಟಗಳಿದ್ದ ಪಕ್ಷದಲ್ಲಿ ಅಂತಹ ಮರದ ವಸ್ತುವನ್ನು ಫ್ಯುಮಿಗೇಷನ್ ವಿಧಾನದಿಂದ ಸೂಕ್ತ ರಾಸಾಯನಿಕ ಹೊಗೆಯಲ್ಲಿ ಕೆಲವು ಕಾಲ ಇರಿಸಿ ಕ್ರಿಮಿಕೀಟಗಳನ್ನು ಸಂಪೂರ್ಣವಾಗಿ ನಾಶಗೊಳಿಸಬಹುದು. ಕಾರ್ಬನ್-ಡೈ-ಸಲ್ಫೈಡ್ ($CS_2$) ಎಂಬ ದ್ರಾವಕವನ್ನು ಈ ಕ್ರಿಯೆಗೆ ಬಳಸಲಾಗುತ್ತದೆ. ಗಾಳಿ ಪ್ರವೇಶಿಸದ ಕಪಾಟಿನಲ್ಲಿ ವಸ್ತುವಿನೊಡನೆ ಈ ದ್ರಾವಕವನ್ನು ಒಂದು ಬಟ್ಟಲಿನಲ್ಲಿ ಒಂದು ವಾರದ ಕಾಲ ಇಡಬೇಕು. ಇದು ಸಾಧಾರಣ ಉಷ್ಣಾಂಶದಲ್ಲಿಯೇ ಹವೆಯಾಗಿ ಪರಿವರ್ತಿತವಾಗಿ, ಹವೆ ಕಪಾಟಿನೊಳಗೆ ಪೂರ್ತಿಯಾಗಿ ತುಂಬಿಕೊಂಡು ಕ್ರಿಮಿಗಳನ್ನು ನಾಶಮಾಡುತ್ತದೆ.

(ii) ಬೂಷ್ಟಿನಿಂದ ಬಾಧಿತವಾದ ವಸ್ತುಗಳನ್ನು ಮೊದಲಿಗೆ ಕುಂಚದಿಂದ ಅನಂತರ ಆಲ್ಕೋಹಾಲ್‌ನಿಂದ ಶುದ್ಧ ಮಾಡಿ ಶೇ.2ರಷ್ಟು ಪ್ರಮಾಣದ ಸೋಡಿಯಂ ಪೆಂಟಾಕ್ಲೋರೋಫ್ಲಿನೇಟ್ ದ್ರಾವಕವನ್ನು ಹಚ್ಚುವುದರಿಂದ ಮುಂದೆ ಬೂಷ್ಟು ಬೆಳೆಯುವುದು ತಡೆಗಟ್ಟಲ್ಪಡುತ್ತದೆ.

(iii) ಕೀಟಗಳ ಆಕ್ರಮಣದಿಂದ ದುರ್ಬಲಗೊಂಡಿರುವ ವಸ್ತುಗಳನ್ನು ಕರಗಿಸಿದ ಮೇಣ ಮತ್ತು ಗುಗ್ಗುಳದ ಮಿಶ್ರಣದಲ್ಲಿ ಮುಳುಗಿಸಿ ಹೊರತೆಗೆದ ಅನಂತರ ಮಿಶ್ರಣ ಗಟ್ಟಿಗೊಳ್ಳಬೇಕು. ಈ ರೀತಿಯಿಂದ ವಸ್ತುವನ್ನು ದೃಢಪಡಿಸುವುದು ಒಂದು ಪದ್ಧತಿ. ಈಚೆಗೆ ಈ ಕ್ರಿಯೆಗೆ ಪಾಲಿಮರ್ಸ್ ಎಂದು ಕರೆಯುವ, ಸಾಧಾರಣ ಉಷ್ಣಾಂಶದಲ್ಲಿಯೇ ಗಟ್ಟಿಯಾಗಬಲ್ಲ ರಾಸಾಯನಿಕ ವಸ್ತುಗಳನ್ನು ಉಪಯೋಗಿಸಲಾಗುತ್ತಿದೆ.

(iv) ಉತ್ಖನನದಿಂದ ಹೊರತೆಗೆಯಲ್ಪಟ್ಟ ಅಥವಾ ನೀರಿನೊಳಗೆ ಬಹುಕಾಲ ಇದ್ದ ಮರದ ವಸ್ತುಗಳ ನಿರ್ವಹಣೆಯಲ್ಲಿ ವಿಶೇಷವಾದ ಜಾಗರೂಕತೆ ವಹಿಸಬೇಕಾಗುತ್ತದೆ. ಏಕೆಂದರೆ ಹೊರಗಿನ ವಾತಾವರಣದಲ್ಲಿ ಬೇಗ ಒಣಗುವುದರಿಂದ ಇವು ವಿರೂಪಗೊಂಡು ಶೀಘ್ರವಾಗಿ ನಶಿಸುತ್ತವೆ. ಜೀವಕೋಶದೊಳಗಿನ ನೀರು ಆವಿಯಾಗಿ ಹೊರಬೀಳುವುದರಿಂದ, ಅವುಗಳು ಕುಗ್ಗಿ ಮರದ ಆಕೃತಿಯಲ್ಲಿ ಅನಪೇಕ್ಷಿತ ಬದಲಾವಣೆಗಳುಂಟಾಗಿ ವಸ್ತು ಬೇಗ ಹಾಳಾಗುತ್ತದೆ.

ಸಂರಕ್ಷಣೆಯ ಕಾರ್ಯಕ್ಕಾಗಿ ಹೊರತೆಗೆಯಲ್ಪಟ್ಟ ವಸ್ತುಗಳನ್ನು ಪ್ರಯೋಗಶಾಲೆಗೆ ಕಳುಹಿಸುವವರೆಗೂ ಒದ್ದೆ ಬಟ್ಟೆಯಿಂದ ಸುತ್ತಿ ಇಡಬೇಕು. ಈ ರೀತಿಯ ಮರದ ವಸ್ತುಗಳ ಸಂರಕ್ಷಣೆಯಲ್ಲಿ ಪಾಲಿಥಿಲೀನ್ ಗ್ಲೈಕೋಲ್ ಪಿಇಜಿ ಎಂಬ ರಾಸಾಯನಿಕ ವಸ್ತುವನ್ನು ಬಳಸಲಾಗುತ್ತದೆ. ಆಶ್ಚರ್ಯವೆಂದರೆ ಇದರಲ್ಲಿ ಮೇಣದ ಎಲ್ಲ ಲಕ್ಷಣಗಳಿದ್ದರೂ ಇದು ನೀರಿನಲ್ಲಿ ಕರಗುವ ಗುಣವುಳ್ಳದ್ದಾಗಿದೆ. ಶೇ.10 ಪ್ರಮಾಣದ ಪಿಇಜಿ ದ್ರಾವಕದಲ್ಲಿ ವಸ್ತುವನ್ನು ಮುಳುಗಿಸಿ ಭಟ್ಟಿಯಲ್ಲಿ ಇರಿಸಿ ಉಷ್ಣಾಂಶವನ್ನು ಕ್ರಮೇಣ ಹೆಚ್ಚಿಸಿ ಸು.$60^0$ಯಲ್ಲಿ ಕೆಲವು ದಿನಗಳವರೆಗೆ ಇಡಬೇಕಾಗುತ್ತದೆ. ವಸ್ತುವಿನ ಜೀವಕೋಶಗಳೊಳಗಿನ ನೀರು ಕ್ರಮೇಣ ಹೊರಬಂದು ಅದರ ಜಾಗದಲ್ಲಿ ಪಿಇಜಿ ಸೇರುವುದರಿಂದ ಜೀವಕೋಶಗಳ ಆಕೃತಿ ಹಾಗೆಯೇ ಉಳಿಯುತ್ತದೆ. ಪ್ರಕ್ರಿಯೆ ಪೂರ್ಣಗೊಂಡ ಅನಂತರ ವಸ್ತುವನ್ನು ಹೊರತೆಗೆದು ಅದರ ಮೇಲ್ಮೈಯಲ್ಲಿ ಶೇಖರಣೆಗೊಂಡ ಹೆಚ್ಚಿನ ಪಿಇಜಿಯನ್ನು ಬಿಸಿನೀರಿನ ಸಹಾಯದಿಂದ ತೆಗೆಯಲಾಗುತ್ತದೆ.

(v) ಸಂಗ್ರಹಾಲಯಗಳಲ್ಲಿರುವ ಮರದ ವಸ್ತುಗಳು ಹಾಳಾಗದಂತೆ ಮುಂಜಾಗ್ರತೆ ಕ್ರಮವಾಗಿ ಶೇ.2ರಷ್ಟು ಪ್ರಮಾಣದ ಬೀಚ್‌ವುಡ್ ಕ್ರಿಯೊಸೊಟೊ ಎಂಬ ದ್ರಾವಕವನ್ನು ಲೇಪಿಸಿ ಅವುಗಳನ್ನು ಸಂರಕ್ಷಿಸಲಾಗುತ್ತದೆ.

(vi) ವರ್ಣರಂಜಿತ ಮರದ ವಸ್ತುಗಳ ಶುದ್ಧೀಕರಣಕ್ಕಾಗಿ ಸಾಮಾನ್ಯವಾಗಿ ಚಿತ್ರಗಳಲ್ಲಿ ಉಪಯೋಗಿಸಲ್ಪಡುವ ಜೈವಿಕ ದ್ರಾವಕಗಳನ್ನೇ ಪ್ರಯೋಗಿಸಲಾಗುತ್ತದೆ. ಅವುಗಳ ಸಂರಕ್ಷಣೆಗಾಗಿ ಕೊನೆಯಲ್ಲಿ ಶೇ.1ರಷ್ಟು ಪ್ರಮಾಣದ ಪಾಲಿವಿನಿಲ್ ಅಸಿಟೇಟ್ ದ್ರಾವಕವನ್ನು ಲೇಪಿಸಲಾಗುತ್ತದೆ.

(ಎಸ್.ಎಸ್.ಆರ್.)

**ಭಾರತ ಪುರಾತತ್ತ್ವ ಕಾನೂನು:** ಭಾರತದ ಸಾಂಸ್ಕೃತಿಕ ಸಂಪತ್ತು ಸ್ಮಾರಕ, ಪುರಾತತ್ತ್ವ ನೆಲೆ ಮತ್ತು ಐತಿಹಾಸಿಕ ಅವಶೇಷ, ಶಾಸನ, ಹಸ್ತಪ್ರತಿ, ನಾಣ್ಯ, ಮೂರ್ತಿ, ವರ್ಣಚಿತ್ರಗಳು ಹಾಗೂ ಕಲೆ, ಧರ್ಮ, ಸಾಹಿತ್ಯ, ಗುಡಿಕೈಗಾರಿಕೆ ವಿವಿಧ ಕಲಾತ್ಮಕ ವಸ್ತುಗಳನ್ನೊಳಗೊಂಡದ್ದು. ಆದರೆ ಈ ಸಂಪತ್ತು ವಿಧ್ವಂಸಕ ಕೃತ್ಯ, ಕಳ್ಳತನ, ನಿಧಿಗಾಗಿ ಸ್ಮಾರಕ ಹಾಗೂ ಪುರಾತತ್ತ್ವ ನೆಲೆಗಳ ಅಗೆತ, ನಿಷಿದ್ಧ ವ್ಯಾಪಾರ, ಪರಿಸರ ಮಾಲಿನ್ಯ, ನಗರೀಕರಣ ಮುಂತಾದ ಅಪಾಯಕಾರಿ ಕೃತ್ಯಗಳಿಗೆ ಒಳಗಾಗಿದೆ. ಇವನ್ನು ಸಂರಕ್ಷಿಸಲು ಕೆಲವು ಕಾನೂನುಗಳನ್ನು ಜಾರಿಗೆ ತರಲಾಗಿದೆ. ಸೂಕ್ತ ನಿರ್ವಹಣೆ ಹಾಗೂ ಸಂರಕ್ಷಣೆ ಉದ್ದೇಶದಿಂದ ಇವುಗಳನ್ನು ಆಗಿಂದಾಗ್ಗೆ ಪರಿಷ್ಕರಿಸಲಾಗುತ್ತದೆ. ಭಾರತದಲ್ಲಿ ಪ್ರಸ್ತುತ ಏನ್ಷಿಯಂಟ್ ಮಾನ್ಯುಮೆಂಟ್ಸ್ ಅಂಡ್ ಆರ್ಕಿಯಲಾಜಿಕಲ್ ಸೈಟ್ಸ್ ಅಂಡ್ ರಿಮೇನ್ಸ್ ಆಕ್ಟ್, 1958; ಇಂಡಿಯನ್ ಟ್ರೆಷರ್ ಟ್ರೋವ್ ಆಕ್ಟ್ 1878 ಮತ್ತು ಆಂಟಿಕ್ವಿಟೀಸ್ ಅಂಡ್ ಆರ್ಟ್ ಟ್ರೆಷರ್ಸ್ ಆಕ್ಟ್ 1972 ಎಂಬ ಶಾಸನಗಳಿವೆ. ಇವುಗಳಲ್ಲಿ ಮೊದಲನೆಯದು ಸ್ಥಿರ, ಉಳಿದೆರಡು ಚರ ಸಂಪತ್ತುಗಳನ್ನು ರಕ್ಷಿಸುತ್ತವೆ. ಇದಲ್ಲದೆ ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ತಮ್ಮದೇ ಆದ ಈ ರೀತಿಯ ನಿಯಮಗಳನ್ನು ಜಾರಿಗೆ ತಂದಿವೆ. ಏನ್ಷಿಯಂಟ್ ಮಾನ್ಯುಮೆಂಟ್ಸ್ ಅಂಡ್ ಆರ್ಕಿಯಲಾಜಿಕಲ್ ಸೈಟ್ಸ್ ಅಂಡ್ ರಿಮೇನ್ಸ್ ಆಕ್ಟ್ 1958: ರಾಷ್ಟ್ರೀಯ ಮಹತ್ತ್ವದ ಪ್ರಾಚೀನ ಹಾಗೂ ಐತಿಹಾಸಿಕ ಸ್ಮಾರಕ ಮತ್ತು ಪುರಾತತ್ತ್ವ ನೆಲೆ ಹಾಗೂ ಅವಶೇಷಗಳ ರಕ್ಷಣೆ ಮತ್ತು ಉತ್ಖನನ ನಿಯಂತ್ರಣ ಹಾಗೂ ಮೂರ್ತಿಗಳು ಮತ್ತು ಆ ಬಗೆಯ ಇನ್ನಿತರೆ ವಸ್ತುಗಳ ಸಂರಕ್ಷಣೆಗಾಗಿ ಈ ಶಾಸನವನ್ನು 1958ರಲ್ಲಿ ಮತ್ತು ಇದೇ ಬಗೆಯ ಶಾಸನವನ್ನು 1959ರಿಂದ ವಿಧಿಸಲಾಗಿದೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರು, ಕೇಂದ್ರ ಸರ್ಕಾರದ ಅನುಮತಿಯಿಂದ ಯಾವುದೇ ರಕ್ಷಿತ ಸ್ಮಾರಕವನ್ನು ಖರೀದಿಸುವ, ಗುತ್ತಿಗೆಪಡೆಯುವ, ಕಾಣಿಕೆಯಾಗಿ ಸ್ವೀಕರಿಸುವ ಅಥವಾ ವಾರಸುದಾರರಿಲ್ಲದ ಸ್ಮಾರಕಕ್ಕೆ ಪೋಷಕರಾಗುವ ಹಾಗೂ ಸ್ಮಾರಕಗಳ ಮಾಲೀಕರು ಇಚ್ಛಿಸಿದಲ್ಲಿ ಮಹಾ ನಿರ್ದೇಶಕರನ್ನು ಪೋಷಕರನ್ನಾಗಿಸುವ ಮತ್ತು ಸ್ಮಾರಕಗಳಲ್ಲಿ ಸಾಂಪ್ರದಾಯಿಕ ಪೂಜಾಪಾಠಗಳಿಗೆ ಯಾವುದೇ ತರಹದ ಆತಂಕಗಳನ್ನೊಡ್ಡದ ಅವಕಾಶಗಳನ್ನು ಮಾಡಲಾಗಿದೆ (5ನೆಯ ಕಲಂನಡಿ). ಯಾವುದಾದರೂ ರಕ್ಷಿತ ಸ್ಮಾರಕ ಹಾಳಾಗುವ, ದುರುಪಯೋಗ, ವಿಧ್ವಂಸಕ ಕೃತ್ಯ ಮುಂತಾದ ಅಪಾಯಗಳ ಅಂಚಿನಲ್ಲಿದ್ದಾಗ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ರಕ್ಷಿಸಲು ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ನೀಡಲಾಗಿದೆ (13ನೆಯ ಕಲಂನಡಿ). ಕೇಂದ್ರ ಸರ್ಕಾರದ ಮೇಲ್ವಿಚಾರಣೆ ಯಲ್ಲಿರುವ ರಕ್ಷಿತ ಸ್ಮಾರಕಗಳು ಪೂಜಾ ಸ್ಥಳ ಅಥವಾ ದೇವಸ್ಥಾನಗಳಾಗಿದ್ದಲ್ಲಿ ಅವುಗಳ ಮೂಲ ಸ್ವರೂಪಕ್ಕೆ ಧಕ್ಕೆಯಾಗುವ ದುರುಪಯೋಗವನ್ನು ನಿಬಂಧಿಸಲಾಗಿದೆ (16ನೆಯ ಕಲಂ) ಹಾಗೂ ಸ್ವಾಧೀನ ಪಡಿಸಿಕೊಂಡ ಸ್ಮಾರಕ ಅಥವಾ ಸ್ವೀಕರಿಸಿದ ಸ್ಮಾರಕ ಅಥವಾ ಅದರ ಯಾವುದೇ ಭಾಗದಲ್ಲಿ ಪೂಜಾಪಾಠಗಳು ಅಥವಾ ನೈಮಿತ್ತಗಳು ನಡೆಯುತ್ತಿದ್ದಲ್ಲಿ (13ನೆಯ ಕಲಂ) ಅಂಥ ಸ್ಮಾರಕಗಳನ್ನು ವಾಯುಮಾಲಿನ್ಯ ಹಾಗೂ ಕಳಂಕಗಳಿಂದ ರಕ್ಷಿಸುವ ಪೂರ್ವಸಿದ್ಧತೆಗಳನ್ನು ಜಿಲ್ಲಾಧಿಕಾರಿಗಳು ಮಾಡುವಂತೆ ಹೇಳಲಾಗಿದೆ.

ನಗರೀಕರಣ, ಬಹು ಅಂತಸ್ತಿನ ಕಟ್ಟಡಗಳು, ಗಣಿಗಾರಿಕೆ, ಕಲ್ಲುಗಣಿಗಾರಿಕೆ, ಉತ್ಖನನ, ಮದ್ದುಗಾರಿಕೆ ಹಾಗೂ ಪರಿಸರ ಮಾಲಿನ್ಯ ಮುಂತಾದವುಗಳು ಸ್ಮಾರಕಗಳ ಮೂಲ ಸ್ವರೂಪಕ್ಕೆ ಧಕ್ಕೆಯನ್ನುಂಟುಮಾಡುವುದಲ್ಲದೆ ಅವುಗಳ ಸೌಂದರ್ಯವನ್ನು ಹಾಳುಮಾಡುತ್ತವೆ. ಈ ರೀತಿಯ ಅಕ್ರಮ ಚಟುವಟಿಕೆಗಳಿಂದ ಸ್ಮಾರಕವನ್ನು ರಕ್ಷಿಸಲು ಒಡೆಯನಾಗಲಿ ಅಥವಾ ಅಲ್ಲಿ ವಾಸಿಸುವವನಾಗಲಿ ರಕ್ಷಿತ ಪ್ರದೇಶದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಅಥವಾ ಅಂತಹ ಯಾವುದೇ ರೀತಿಯ ಚಟುವಟಿಕೆಗಳನ್ನು ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಮಾಡುವಂತಿಲ್ಲ (19ನೆಯ ಕಲಂ).

ರಕ್ಷಿತ ಸ್ಮಾರಕದ ಹತ್ತಿರ ಅಥವಾ ಪಕ್ಕದಲ್ಲಿರುವ ಸ್ಥಳವನ್ನು ಗಣಿಗಾರಿಕೆ ಹಾಗೂ ಕಟ್ಟಡ ನಿರ್ಮಾಣದ ಚಟುವಟಿಕೆಗಳ ನಿಬಂಧಕ್ಕಾಗಿ ನಿಷೇಧಿತ ಅಥವಾ ನಿಯಂತ್ರಿತ ಪ್ರದೇಶವೆಂದು ಘೋಷಿಸಬಹುದೆಂದು ಏನ್ಷಿಯಂಟ್ ಮಾನ್ಯುಮೆಂಟ್ಸ್ ಅಂಡ್ ಆರ್ಕಿಯಲಾಜಿಕಲ್ ಸೈಟ್ಸ್ ಅಂಡ್ ರಿಮೇನ್ಸ್ ರೂಲ್ಸ್ 1959ರ 31ನೆಯ ನಿಯಮದಲ್ಲಿ ಹೇಳಲಾಗಿದೆ.

ಪುರಾತತ್ತ್ವಾಧಿಕಾರಿ ಅಥವಾ ಅವರ ಅಧಿಕೃತ ಪ್ರತಿನಿಧಿ ಅಥವಾ ಅಧಿಕೃತ ಅನುಮತಿ ಪಡೆದ ಯಾವುದೇ ವ್ಯಕ್ತಿ ಜಿಲ್ಲಾಧಿಕಾರಿ ಹಾಗೂ ರಕ್ಷಿತ ಪ್ರದೇಶದ ಒಡೆಯನ ಗಮನಕ್ಕೆ ತಂದು ಯಾವುದೇ ರಕ್ಷಿತ ಪ್ರದೇಶದಲ್ಲಿ ಉತ್ಖನನ ಮಾಡಬಹುದು (21ನೆಯ ಕಲಂ). 23ನೆಯ ಕಲಂನಂತೆ ಉತ್ಖನನದಲ್ಲಿ ದೊರೆತ ವಿವಿಧ ಪುರಾವಶೇಷಗಳನ್ನು ಆದಷ್ಟು ಬೇಗ ಪರೀಕ್ಷಿಸಿ, ಅವುಗಳ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು; ಉತ್ಖನನ ಮುಕ್ತಾಯವಾದ ಕೂಡಲೆ ದೊರೆತ ಪುರಾವಶೇಷಗಳ ವಿವರಗಳನ್ನು ಭೂಮಾಲೀಕನಿಗೆ ತಿಳಿಸಬೇಕು; ಪುರಾವಶೇಷಗಳ ಖರೀದಿಯ ಅನುಮತಿ ಸಿಗುವವರೆಗೆ, ಅವುಗಳನ್ನು ಪುರಾತತ್ತ್ವಾಧಿಕಾರಿ ಅಥವಾ ಉತ್ಖನನದ ಅನುಮತಿಯನ್ನು ಪಡೆದವರು ಅವುಗಳನ್ನು ಸುರಕ್ಷಿತವಾಗಿಡಬೇಕು; ಕೇಂದ್ರ ಸರ್ಕಾರ ಪುರಾವಶೇಷಗಳ ವರದಿ ಸ್ವೀಕರಿಸಿದ ಮೇಲೆ, ಅವುಗಳನ್ನು ಮಾರುಕಟ್ಟೆಯ ಬೆಲೆಯಲ್ಲಿ ಕಡ್ಡಾಯವಾಗಿ ಖರೀದಿಸಬೇಕು; ಕಡ್ಡಾಯವಾಗಿ ಖರೀದಿಸಿದಾಗ ಅವು ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಡುತ್ತವೆ (23ನೆಯ ಕಲಂ).

ಈ ಶಾಸನದ ವಿವಿಧ ನಿಯಮಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ.

ಇಂಡಿಯನ್ ಟ್ರೆಷರ್ ಟ್ರೋವ್ ಆಕ್ಟ್ 1878: ಭಾರತದಲ್ಲಿ ಆಗಿಂದಾಗ್ಗೆ ಅನೇಕ ನಿಧಿಗಳು ಆಕಸ್ಮಿಕವಾಗಿ ದೊರೆಯುತ್ತವೆ. ಇವುಗಳಲ್ಲಿ ಹೆಚ್ಚಾಗಿ ನಾಣ್ಯ ಹಾಗೂ ಪದಕ, ತಾಮ್ರ ಶಾಸನ ಫಲಕ, ಆಭರಣ ಮತ್ತು ವಿರಳವಾಗಿ ಮೂರ್ತಿಗಳಿದ್ದು ಇವು ಐತಿಹಾಸಿಕ ಹಾಗೂ ಪುರಾತಾತ್ತ್ವಿಕ ಮಹತ್ತ್ವಗಳುಳ್ಳವಾಗಿರುತ್ತವೆ. ಇಂತಹ ನಿಧಿಗಳನ್ನು ಸಂರಕ್ಷಿಸಲು ಈ ಕಾನೂನನ್ನು ಜಾರಿಗೆ ತರಲಾಗಿದೆ. ಈ ಕಾನೂನಿನ ವಿವಿಧ ನಿಯಮಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ಮತ್ತು ದಂಡವನ್ನು ವಿಧಿಸುವ ಅವಕಾಶಗಳಿವೆ. ನಿಧಿ ದೊರೆತವನು ಅದರ ವಿವರಗಳನ್ನು ಕೊಡದಿದ್ದಲ್ಲಿ ಅಥವಾ ಅದನ್ನು ಖಜಾನೆಯಲ್ಲಿ ಜಮಾಮಾಡದಿದ್ದಲ್ಲಿ ಅಥವಾ ನಿಧಿಯ ಸ್ವರೂಪವನ್ನು ಗೋಪ್ಯವಿಡಲು ಅದರಲ್ಲಿ ಏನಾದರೂ ಮಾರ್ಪಾಡುಗಳನ್ನು ಮಾಡಿದಲ್ಲಿ ಅಂಥವರು ನಿಧಿ ಅಥವಾ ಅದರ ಬೆಲೆಯಷ್ಟು ಹಣದ ಹಕ್ಕನ್ನು ಕಳೆದುಕೊಳ್ಳುವರು ಮತ್ತು ಅವರು ತಪ್ಪಿತಸ್ಥರೆಂದು ರುಜುವಾತಾದಲ್ಲಿ ಅಂಥವರಿಗೆ ಒಂದು ವರ್ಷದವರೆಗಿನ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಇವೆರಡನ್ನೂ ವಿಧಿಸಲಾಗುತ್ತದೆ.

ಆಂಟಿಕ್ವಿಟೀಸ್ ಅಂಡ್ ಆರ್ಟ್ ಟ್ರೆಷರ್ಸ್ ಆಕ್ಟ್ 1972: ಪುರಾವಶೇಷ ಹಾಗೂ ಹಸ್ತಪ್ರತಿಗಳ ಕಡ್ಡಾಯವಾದ ನೋಂದಣಿ; ಪುರಾವಶೇಷ ಮತ್ತು ಕಲಾವಸ್ತುಗಳ ಸಕ್ರಮವಾದ ವ್ಯಾಪಾರ; ನಿಷಿದ್ಧ ವ್ಯಾಪಾರ, ರಫ್ತು ಮತ್ತು ಕಳ್ಳಸಾಗಾಣಿಕೆಯ ನಿಯಂತ್ರಣ ಹಾಗೂ ಅತ್ಯಮೂಲ್ಯವಾದ ಕಲಾತ್ಮಕ ವಸ್ತುಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಂರಕ್ಷಿಸಲು ಅವುಗಳ ಸ್ವಾಧೀನಕ್ಕೆ ಈ ಕಾಯಿದೆ ಅವಕಾಶ ಮಾಡಿಕೊಡುತ್ತದೆ. ಈ ಕಾನೂನು ಹಾಗೂ ಆಂಟಿಕ್ವಿಟೀಸ್ ಅಂಡ್ ಆರ್ಟ್ ಟ್ರೆಷರ್ಸ್ ರೂಲ್ಸ್ 1973 ಇವು 1976ರಿಂದ ಜಾರಿಯಲ್ಲಿವೆ.

ಕೇಂದ್ರ ಸರ್ಕಾರ ಆಗಿಂದಾಗ್ಗೆ ನೋಂದಾಯಿಸುವ ಪುರಾವಶೇಷಗಳನ್ನು ನಿರ್ಧರಿಸಿ ಪ್ರಕಟಗೊಳಿಸಬೇಕೆಂದು ತಿಳಿಸುತ್ತದೆ. ಕಲ್ಲು, ಸುಡಾವೆ ಮಣ್ಣು, ಲೋಹ, ಆನೆದಂತ ಹಾಗೂ ಎಲುಬಿನಲ್ಲಿ ಮಾಡಿದ ಯಾವುದೇ ಮೂರ್ತಿಗಳು, ಕಾಗದ, ಮರ, ಬಟ್ಟೆ, ಚರ್ಮ, ಕಾಷ್ಠ ಮತ್ತು ಇವುಗಳಿಂದ ಮಾಡಿದ ವರ್ಣಚಿತ್ರಗಳು; ವರ್ಣಚಿತ್ರ, ರೇಖಾಚಿತ್ರ ಹಾಗೂ ಹಸ್ತಪ್ರತಿಗಳು ಮತ್ತು ಮರದಲ್ಲಿ ಮಾಡಿದ ಮೂರ್ತಿಯ ಆಕೃತಿಗಳನ್ನು ಕಡ್ಡಾಯವಾಗಿ ನೋಂದಾಯಿಸಬೇಕು. ಯಾವುದೇ ಪುರಾವಶೇಷ ಅಥವಾ ಕಲಾವಸ್ತುಗಳನ್ನು ಸಾರ್ವಜನಿಕ ಸ್ಥಳದಲ್ಲಿ ಸುರಕ್ಷಿತವಾಗಿಡಲು ಕೇಂದ್ರ ಸರ್ಕಾರ ಅವುಗಳನ್ನು ಕಡ್ಡಾಯವಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಯಾವುದೇ ಪುರಾವಶೇಷ ಅಥವಾ ಕಲಾವಸ್ತುವನ್ನು ಕಡ್ಡಾಯವಾಗಿ ಸ್ವಾಧೀನ ಮಾಡಿಕೊಂಡಾಗ ಸೂಕ್ತವಾದ ಪರಿಹಾರವನ್ನೂ ಅದರ ಮೊತ್ತವನ್ನೂ ನಿರ್ಧರಿಸುವ ವಿವರಗಳಿವೆ. ಯಾವುದೇ ವಸ್ತು ಅಥವಾ ಹಸ್ತಪ್ರತಿ ಅಥವಾ ದಾಖಲೆ ಅಥವಾ ಕಲಾವಸ್ತು ಪುರಾವಶೇಷವಾಗಿದೆಯೇ ಎಂಬ ಪ್ರಶ್ನೆ ಉದ್ಭವಿಸಿದಾಗ ನಿಯಮಾನುಸಾರ ಅದನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರು ನಿರ್ಧರಿಸುವರು; ಅವರ ನಿರ್ಣಯವೇ ಅಂತಿಮ. (ಪಿ.ಸಿ.ಬಿ.)

**ಪುರಾನಖಿಲಾ:** ದೆಹಲಿಯಲ್ಲಿರುವ ಹಳೆಕೋಟೆ ಅಥವಾ ಪುರಾನಖಿಲಾ. ಯಮುನಾ ನದಿಯ ತಟದ ಮೇಲಿದ್ದ ಒಂದು ಪ್ರಾಚೀನ ವಸತಿ ದಿಬ್ಬದ ಮೇಲೆ ಕಟ್ಟಲಾಗಿದೆ. 20ನೆಯ ಶತಮಾನದ ಆರಂಭದವರೆಗೆ ಈ ಹಳೆಕೋಟೆ ದಿಬ್ಬದ ಮೇಲೆ ಇಂದರ್‌ಪತ್ ನಾಮದ ಗ್ರಾಮವಿತ್ತು. ಭಾರತೀಯ ಸಾಹಿತ್ಯ ಹಾಗೂ ಸಂಪ್ರದಾಯಕ್ಕೆ ಪುಷ್ಟಿಕೊಟ್ಟಂತೆ, ಇಂದರ್‌ಪತ್ ದಿಬ್ಬವೇ ಮಹಾಭಾರತದಲ್ಲಿ ಪ್ರಸಿದ್ಧಿ ಪಡೆದ, ಮಯನಿರ್ಮಿತ ಪಾಂಡವರ ರಾಜಧಾನಿ ಇಂದ್ರಪ್ರಸ್ಥವಾಗಿರಬಹುದೆಂದು ವಿದ್ವಾಂಸರು ಗುರುತಿಸಿದ್ದಾರೆ.

ಪುರಾನಖಿಲಾವನ್ನು ಪ್ರಥಮ ಬಾರಿಗೆ ಅನ್ವೇಷಿಸಿದವರು ಸರ್ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್. 1913–14ರಲ್ಲಿ ಇಲ್ಲಿ ಪ್ರತಿಹಾರ ವಂಶದ ಭೋಜನ (836–85) ಶಿಲಾಲೇಖವನ್ನು ಕಂಡುಹಿಡಿಯಲಾಯಿತು. ಈ ಪ್ರಾಚೀನ ದಿಬ್ಬದ ಸಂಸ್ಕೃತಿ ಹಾಗೂ ಕಾಲಾವಧಿಯ ಮಹತ್ತ್ವವನ್ನು ತಿಳಿಯಲು ಭಾರತೀಯ ಪುರಾತತ್ತ್ವ ಸರ್ವೇಕ್ಷಣದ ಇಲಾಖೆಯ ಬಿ.ಬಿ. ಲಾಲ್ ಕೆಲ ಪರೀಕ್ಷಾ ಗುಂಡಿಗಳನ್ನು ಅಗೆದಿದ್ದರು (1954–55). ಆದರೆ 1969–70 ರಿಂದ 1972–73ರ ವರೆಗೆ ಇಲ್ಲಿ ವಿಸ್ತೃತ ಉತ್ಖನನ ನಡೆಸಲಾಯಿತು. 8 ಅನುಕ್ರಮ ಸಾಂಸ್ಕೃತಿಕ ಹಂತಗಳನ್ನು ಬೆಳಕಿಗೆ ತರಲಾಯಿತು.

ಪ್ರಥಮಬಾರಿ ಅಗೆದ ಪರೀಕ್ಷಾ ಗುಂಡಿಗಳಿಂದ ವರ್ಣಚಿತ್ರಿತ ಬೂದುವರ್ಣದ ಮಣ್ಪಾತ್ರೆಗಳ ತುಂಡುಗಳು ದೊರಕಿದ್ದವು. ಆದರೆ, ವಿಸ್ತೃತ ಉತ್ಖನನದಿಂದ ಈ ಸಂಸ್ಕೃತಿಯ ನಿಚ್ಚಳ ಪದರ ಕಂಡುಬರಲಿಲ್ಲ. ಚಿತ್ರಿತ ಬೂದುವರ್ಣ ಮಡಕೆಗಳ ತುಣುಕುಗಳು ಹಾಗೂ ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆಗಳಿರುವ ಕೆಳಗಿನ ಸ್ತರಗಳು ಈ ಎರಡೂ ಸಂಸ್ಕೃತಿಗಳ ಸಂಧಿಕಾಲವನ್ನು ಪ್ರತಿನಿಧಿಸುತ್ತವೆ ಎಂಬ ಅನುಮಾನವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಈ ಸಂಸ್ಕೃತಿಯ ಕಾಲಾವಧಿ ಬಹುಶಃ ಪ್ರ.ಶ.ಪೂ.ಸು.1000 ವರ್ಷವಿರಬಹುದೆಂದು ಹೇಳಲಾಗಿದೆ.

ಹಂತ1: ಮೌರ್ಯರ ಕಾಲ (ಪ್ರ.ಶ.ಪೂ.4–3 ನೆಯ ಶತಮಾನ): ಹಸಿ ಇಟ್ಟಿಗೆಯಿಂದ ಕಟ್ಟಿದ ಮನೆಗಳು ಹಾಗೂ ಗುಡಿಸಲುಗಳಲ್ಲದೆ, ಸುಟ್ಟ ಇಟ್ಟಿಗೆಯ ನಾಲೆಗಳು, ಸುಟ್ಟಮಣ್ಣಿನ ಬಳೆಗಳಿರುವ ಬಾವಿಗಳು, ಒಲೆಗಳನ್ನು ಈ ಹಂತದಲ್ಲಿ ಬೆಳಕಿಗೆ ತರಲಾಗಿದೆ. ಮುಖ್ಯವಾದ ಅವಶೇಷಗಳೆಂದರೆ: ಸುಟ್ಟಮಣ್ಣಿನ ಮಾನವ ಮತ್ತು ಪ್ರಾಣಿ ಬೊಂಬೆಗಳು; ಸೇಯಂಕರಸ ಹಾಗೂ ಸ್ವಾತಿ (?) ರಖಿತಸ ಎಂಬ ಅಂಕಿತವುಳ್ಳ ಸುಟ್ಟಮಣ್ಣಿನ ಮುದ್ರೆಗಳು; ತಳಭಾಗದಲ್ಲಿ ಅಚ್ಚೊತ್ತಿ ತೆಗೆದ ಆನೆಚಿತ್ರವುಳ್ಳ ಔತ್ತರೇಯ ಮೆರುಗಿನ ಕಪ್ಪು ತಟ್ಟೆ; ಚಕಮಕಿಕಲ್ಲಿನ ಉಂಗುರ ಮತ್ತು ಚಕ್ರಗಳು; ಅಂಕಿತ ರಹಿತ ನಾಣ್ಯ; ಗುಡ್ಡ, ಗಿಡ ಮತ್ತು ಸಂಧಿ ಸಂಕೇತಗಳುಳ್ಳ ಹಸಿಮಣ್ಣಿನ ಮುದ್ರಾಂಕನ ಮಣ್ಪಾತ್ರೆಗಳೆಂದರೆ; ಬೂದುಬಣ್ಣದ ಮಡಕೆ, ಕಪ್ಪುಬಣ್ಣದ ಲೇಪಿತಮಡಕೆ ಹಾಗೂ ಕೆಂಪುಬಣ್ಣದ ಮಡಕೆಗಳು.

ಹಂತ2: ಶುಂಗರ ಕಾಲ (ಪ್ರ.ಶ.ಪೂ.2–1ನೆಯ ಶತಮಾನ): ಈ ಕಾಲದಲ್ಲಿ ಮಣ್ಣಿನಗಾರೆಯನ್ನುಪಯೋಗಿಸಿ ಕಲ್ಲು ಮತ್ತು ಹಸಿ ಇಟ್ಟಿಗೆಗಳಿಂದ ಕಟ್ಟಡಗಳನ್ನು ಕಟ್ಟಲಾಗಿತ್ತು. ಗೋಡೆಗಳಿಗೆ ಹಸಿಮಣ್ಣಿನ ಗಿಲಾವು ಮಾಡಲಾಗಿತ್ತು. ಮನೆಯ ನೆಲಗಟ್ಟನ್ನು ದಮ್ಮಸು ಮಾಡಲಾಗಿತ್ತು ಕೆಲವೆಡೆ ಹಸಿ ಇಟ್ಟಿಗೆಗಳಿಂದ ತಯಾರಿಸಲಾಗಿತ್ತು. ಮುಖ್ಯ ಅವಶೇಷಗಳೆಂದರೆ; ಹೇರಳವಾಗಿ ದೊರೆತ ದೇವತೆಗಳ, ಮಿಥುನಗಳ, ವೇಣುಬಾರಿಸುವವನ ಶಿಲ್ಪ, ಸುಟ್ಟಮಣ್ಣಿನ ಫಲಕಗಳು, ಚಿಕ್ಕ ಸುರಿನಾಳವುಳ್ಳ ಮಾನವಾಕಾರದ ಕುಂಭ, ಬ್ರಾಹ್ಮಿಲಿಪಿ ಅಂಕಿತ ಮುದ್ರೆಗಳು ಹಾಗೂ ಮುದ್ರಾಂಕನಗಳು, ಅರೆಪ್ರಶಸ್ತ ಕಲ್ಲಿನ ಹಾಗೂ ಸುಟ್ಟಮಣ್ಣಿನ ಮಣಿಗಳು, ಎಲುಬಿನ ಮೊನೆಗಳು. ಔತ್ತರೇಯ ಮೆರುಗಿನ ಕಪ್ಪುಬಣ್ಣದ ಹಾಗೂ ಇನ್ನಿತರ ಮಡಕೆಗಳು ಬಳಕೆಯಲ್ಲಿ ಮುಂದುವರೆದವು.

ಹಂತ3: ಶಕ –ಕುಷಾಣರ ಕಾಲ (ಪ್ರ.ಶ.1–3 ನೆಯ ಶತಮಾನ): ಈ ಅವಧಿಯಲ್ಲಿ ಸುಟ್ಟ ಇಟ್ಟಿಗೆ ಮತ್ತು ಹಸಿ ಇಟ್ಟಿಗೆಯ ಮನೆಗಳನ್ನು ನೋಡಬಹುದು. ಕೆಲವೊಂದು ಕೋಣೆಗಳ ನೆಲವನ್ನು ಇಟ್ಟಿಗೆಯಿಂದ ಮಾಡಲಾಗಿದೆ. ಒಂದು ಮನೆಗೆ ಸೋಪಾನವಿದೆ. ಮುಖ್ಯ ಅವಶೇಷಗಳು ಇಂತಿವೆ; ಹರಕೆಯ ತಟ್ಟೆಗಳು, ಒಂದು ಅಥವಾ ಎರಡು ಅಚ್ಚುಗಳಿಂದ ತಯಾರಿಸಿದ ಸುಟ್ಟ ಮಣ್ಣಿನ ಬೊಂಬೆಗಳು, ಕುಷಾಣರ ಹಾಗೂ ಯೌಧೇಯರ ತಾಮ್ರದ ನಾಣ್ಯಗಳು, ದಂತದ ಹಿಡಿಕೆ, ಮುದ್ರಿತ ಮಡಕೆ ಚೂರುಗಳು ಇತ್ಯಾದಿ.

ಹಂತ4: ಗುಪ್ತರ ಕಾಲ (4–6 ನೆಯ ಶತಮಾನ): ಈ ಹಂತದಲ್ಲಿಯೂ ಸುಟ್ಟ ಇಟ್ಟಿಗೆಗಳನ್ನು ಬಳಸಿ ಕಟ್ಟಡಗಳನ್ನು ಕಟ್ಟಲಾಗಿದೆ. ಮುಖ್ಯ ಅವಶೇಷಗಳು: ಸುಟ್ಟಮಣ್ಣಿನ ಮಾನವ ಬೊಂಬೆಗಳು, ಶಂಖದ ಬಳೆಯ ತುಂಡು, ಸುಟ್ಟಮಣ್ಣಿನ ಮುದ್ರೆಗಳು ಹಾಗೂ ಮುದ್ರಾಂಕನಗಳು, ಮಥುರಾ ಕೆಂಪುಕಲ್ಲಿನ ಭಗ್ನ ಹೊಂದಿದ ಏಕಮುಖಲಿಂಗ, ಅಚ್ಚಿನಿಂದ ತಯಾರಿಸಿದ ಮಣ್ಪಾತ್ರೆಗಳು.

ಹಂತ5: ಗುಪ್ತೋತ್ತರ ಕಾಲ (7–9ನೆಯ ಶತಮಾನ): ಈ ಕಾಲದಲ್ಲಿಯೂ ಪೂರ್ವ ಕಾಲದ ಇಟ್ಟಿಗೆಗಳನ್ನುಪಯೋಗಿಸಿ ಕಟ್ಟಡಗಳನ್ನು ಕಟ್ಟುವ ಸಂಪ್ರದಾಯ ಮುಂದುವರೆ ಯಿತು. ವಿವಿಧ ಆಕಾರದ ಒಲೆಗಳನ್ನು ಬೆಳಕಿಗೆ ತರಲಾಗಿದೆ, ಕೆಲವಂತೂ ಆಧುನಿಕ ತಂದೂರುಗಳನ್ನು ಹೋಲುತ್ತವೆ. ಮುಖ್ಯ ಅವಶೇಷಗಳು: ಭಗ್ನಹೊಂದಿದ ಸುಟ್ಟಮಣ್ಣಿನ ಬೊಂಬೆಗಳು, ಭಗ್ನವಾದ ಕಲ್ಲಿನ ಸುಂದರ ಶಿಲ್ಪ, ಕೆಂಪು ಬಣ್ಣದ ಮಡಕೆಗಳು.

ಹಂತ6: ರಾಜಪೂತರ ಕಾಲ (10–12ನೆಯ ಶತಮಾನ): ಈ ಕಾಲದಲ್ಲಿಯೂ ಪ್ರಾಚೀನ ಇಟ್ಟಿಗೆಗಳನ್ನು ಉಪಯೋಗಿಸಿ ಕಟ್ಟಡಗಳನ್ನು ಕಟ್ಟುವ ಸಂಪ್ರದಾಯ ಮುಂದುವರೆಯಿತು. ಹಸಿ ಹಾಗೂ ಸುಟ್ಟ ಇಟ್ಟಿಗೆಗಳನ್ನು ಬೆರಸಿ ಕಟ್ಟಿದ ಕಟ್ಟಡಗಳೂ ಇವೆ. ಕೆಲವು ಕಟ್ಟಡಗಳನ್ನು ಕೇವಲ ಒರಟು ಕಲ್ಲಿನಿಂದ ಕಟ್ಟಲಾಗಿದೆ. ಮುಖ್ಯ ಅವಶೇಷಗಳೆಂದರೆ; ವೃಷಭ ಹಾಗೂ ಕುದುರೆ ಸವಾರನುಳ್ಳ ತಾಮ್ರದ ನಾಣ್ಯಗಳು, ಜನಪದ ಶೈಲಿಯಲ್ಲಿ ತಯಾರಿಸಿದ ಸುಟ್ಟಮಣ್ಣಿನ ಬೊಂಬೆಗಳು, ಮಣಿಗಳು, ನಾಗರಿಲಿಪಿ ಶಾಸನವುಳ್ಳ ಮಣ್ಪಾತ್ರೆಯ ತುಣುಕು, ತಾಮ್ರದ ಕಿಂಕಿಣಿ (ಗೆಜ್ಜೆ) ಹಾಗೂ ಇನ್ನಿತರ ವಸ್ತುಗಳನ್ನು ಶೇಖರಿಸಿಟ್ಟಿದ್ದ ಸುರಿಮಾರ್ಗವುಳ್ಳ ಹೂಜಿ, ಸುರಾಹಿಗಳನ್ನು ಹೋಲುವ ಎತ್ತರವಾದ ಕತ್ತುಳ್ಳ ಜಾಡಿ, ಕೆತ್ತಿದ ಕಲ್ಲಿನ ಫಲಕಗಳು ಹಾಗೂ ಒಂದು ಚಿಕ್ಕ ವಿಷ್ಣುವಿನ ವಿಗ್ರಹ.

ಹಂತ7: ಸುಲ್ತಾನರ ಕಾಲ (13–15 ನೆಯ ಶತಮಾನ): ಪೂರ್ವಕಾಲದ ಸುಟ್ಟ ಇಟ್ಟಿಗೆಗಳ ಉಪಯೋಗ ಈ ಅವಧಿಯಲ್ಲಿಯೂ ಮುಂದುವರೆಯಿತು. ಕೆಲ ಕಟ್ಟಡಗಳನ್ನು ಭಾಗಶಃ ಕಡಿದು ತಯಾರಿಸಿದ ಒರಟು ಕಲ್ಲಿನಿಂದ ಕಟ್ಟಲಾಗಿವೆ. ಮಧ್ಯಯುಗೀನ ಕಾಲದ ವಿಶಿಷ್ಟ ಲಕ್ಷಣವಾದ ಹೊಳಪಿನ ಮಣ್ಪಾತ್ರೆಗಳು ಬಳಕೆಗೆ ಬಂದವು. ಈ ಸ್ತರಗಳಿಂದ ದೆಹಲಿಸುಲ್ತಾನರ ಕಾಲದ ನಾಣ್ಯಗಳೂ ದೊರಕಿವೆ.

ಹಂತ8: ಮೊಗಲರಕಾಲ (16–19 ನೆಯ ಶತಮಾನ): ಅನೇಕ ಹಂತಗಳಲ್ಲಿ ಕಟ್ಟಿದ ಕಟ್ಟಡಗಳನ್ನು ಬೆಳಕಿಗೆ ತರಲಾಗಿವೆ. ಅವುಗಳಲ್ಲಿ ಮುಖ್ಯವಾದವು: ಸಭಾಗಾರ, ಸುಣ್ಣದ ಗಿಲಾವು ಮಾಡಿದ ನೆಲಗಟ್ಟುಳ್ಳ ಸುಟ್ಟ ಇಟ್ಟಿಗೆಯ ಮನೆ, ಸ್ನಾನಗೃಹ ಸಂಕೀರ್ಣ, ನೆಲಮಾಳಿಗೆಯುಳ್ಳ ಕಟ್ಟಡ ಇತ್ಯಾದಿ. ಲಖೌರಿ ಇಟ್ಟಿಗೆ, ಒರಟು ಕಲ್ಲು ಹಾಗೂ ಸುಣ್ಣದ ಗಾರೆಯಿಂದ ಭವನಗಳನ್ನು ಕಟ್ಟಲಾಗಿವೆ. ಮುಖ್ಯ ಅವಶೇಷಗಳು: ಸುಟ್ಟಮಣ್ಣಿನ ನೆಲಗಟ್ಟಿನ ಹೆಂಚು, ಹೊಳಪಿನ ಮಣ್ಪಾತ್ರೆಗಳ ತುಂಡುಗಳು, ಚೀನದ ಪಿಂಗಾಣಿ ಪಾತ್ರೆಗಳು, ಸೆಲಡನ್ ಮಣ್ಪಾತ್ರೆಗಳು, ಕಾಗದೋಪರಿಯಂತಹ ಬೂದುಬಣ್ಣದ ವಿಶಿಷ್ಟ ಮಣ್ಪಾತ್ರೆ, ಕಾಜಿನ ಕುಪ್ಪಿಗಳ ತುಂಡುಗಳು, ಸುಟ್ಟಮಣ್ಣಿನ ಪೀಠಯುಕ್ತ ದೀಪ, ಬಂಗಾರದ ತಗಡು, ಅನೇಕ ತಾಮ್ರದ ನಾಣ್ಯಗಳು, ಕರ್ಣಾ ಭರಣ ಹಾಗೂ ಸಿಫಣಿಕಯೆಂದು ದೇವನಾಗರಿ ಲಿಪಿಯಲ್ಲಿ ಬರೆದ ಒಂದು ಸುವರ್ಣ ನಾಣ್ಯ. ಈ ಎಲ್ಲ ಹಂತಗಳ ಸಾಂಸ್ಕೃತಿಕ ಅವಶೇಷಗಳನ್ನೊಳಗೊಂಡ ಪ್ರಾಚೀನ ದಿಬ್ಬದ ಮೇಲೆ ಪ್ರಥಮ ಬಾರಿಗೆ ಮೊಗಲ್ ವಂಶದ ಹುಮಾಯುನನು ದೀನ ಪನಾಹ ಎಂಬ ಹೆಸರಿನ ನಗರವನ್ನು ಕಟ್ಟಿಸಿದ. ಆದರೆ ಮುಂದೆ ಸೂರವಂಶದ ಶೇರ್‌ಶಹ ಈ ನಗರವನ್ನು ಧ್ವಂಸಮಾಡಿ ಇದೇ ಸ್ಥಾನದಲ್ಲಿ ಪುರಾನಖಿಲಾ ಅರ್ಥಾತ್ ಹಳೆಕೋಟೆಯನ್ನು ಕಟ್ಟಿಸಿದ. ಸು. 2 ಕಿಮೀ. ಪರಿಧಿಯನ್ನು ಹೊಂದಿದ ಬುರುಜುಗಳುಳ್ಳ ಕೋಟೆಗೋಡೆಯ ತಳವಿನ್ಯಾಸ ಅಸಮಭುಜ ಆಯತಾಕಾರದಂತಿದೆ. ಉತ್ತರ, ದಕ್ಷಿಣ ಹಾಗೂ ಪಶ್ಚಿಮ ದಿಶೆಯ ಗೋಡೆಗಳಲ್ಲಿ ಪ್ರವೇಶದ್ವಾರಗಳನ್ನು ಕಲ್ಪಿಸಲಾಗಿದೆ. ಕೆಂಪು ಮರಳುಕಲ್ಲಿನಲ್ಲಿ ಕಟ್ಟಿದ ಪ್ರವೇಶದ್ವಾರಗಳು ಎರಡು ಮಹಡಿಗಳುಳ್ಳವಾಗಿದ್ದು, ಮೇಲೆ ಛತ್ರಿಗಳನ್ನು ಹೊಂದಿವೆ. ಕೋಟೆಗೋಡೆಗೆ ಹೊಂದಿಕೊಂಡು ಒಳಭಾಗದಲ್ಲಿ ಎರಡು ಅಂಕಣಗಳುಳ್ಳ ಕೋಣೆಗಳಿವೆ. ಕೋಟೆಯ ಒಳಭಾಗದಲ್ಲಿರುವ ಮುಖ್ಯ ಕಟ್ಟಡಗಳಲ್ಲಿ ಕಿಲಾ–ಏ–ಕುಹನಾ ಮಸೀದಿಯೂ ಒಂದು. ಇದನ್ನು ಶೇರ್‌ಶಹ ಸೂರನು ಕಟ್ಟಿಸಿದ. ಈ ಮಸೀದಿಯ ದಕ್ಷಿಣಕ್ಕೆ ಕೆಂಪು ಮರಳುಕಲ್ಲಿನಿಂದ ಕಟ್ಟಿಸಿದ, ಅಷ್ಟಕೋನ ತಳದ ಶೇರ್ ಮಂಡಲ್ ಹೆಸರಿನ ಎರಡು ಅಂತಸ್ತಿನ ಕಟ್ಟಡವಿದೆ. ಇದನ್ನು ತನ್ನ ಮನೋವಿಹಾರಕ್ಕಾಗಿ ಶೇರ್‌ಶಹ ಸೂರನು ಕಟ್ಟಿಸಿರಬಹುದೆಂದು ಅನುಮಾನಿಸ ಲಾಗಿದೆ. ಮುಂದೆ, ಹುಮಾಯುನನು ಪುನಃ ದೆಹಲಿಯನ್ನು ಗೆದ್ದುಕೊಂಡ ನಂತರ ಶೇರ್‌ಮಂಡಲ್ ಕಟ್ಟಡವನ್ನು ಗ್ರಂಥಾಲಯವಾಗಿ ಉಪಯೋಗಿಸಿದ್ದನೆಂದು ನಂಬಲಾಗಿದೆ. 1556ರಲ್ಲಿ ಒಂದು ದಿನ ಈ ಕಟ್ಟಡದಿಂದ ಇಳಿದು ಬರುವಾಗ ಕಾಲುಜಾರಿ ಬಿದ್ದ ಪೆಟ್ಟಿನಿಂದಾಗಿ ಹುಮಾಯುನನು ನಿಧನನಾದ. (ಎಲ್.ಎಸ್.ಆರ್.)

**ಪುಷ್ಯಭೂತಿ ಮನೆತನ:** ದೆಹಲಿಯ ಸಮೀಪದ ಸ್ಥಾನೇಶ್ವರದಲ್ಲಿ ಪುಷ್ಯಭೂತಿ ಎಂಬುವನಿಂದ ಆರಂಭವಾದ ರಾಜವಂಶ. ಗುಪ್ತ ಸಾಮ್ರಾಜ್ಯದ ಪತನದಿಂದ ಸಂಭವಿಸಿದ ಅರಾಜಕತೆಯ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ಈ ಮನೆತನದವರು ಇತಿಹಾಸದಲ್ಲಿ ಸ್ಥಾನೇಶ್ವರದ ವರ್ಧನರೆಂದೂ ಪ್ರಸಿದ್ಧರಾಗಿದ್ದಾರೆ. ಪುಷ್ಯಭೂತಿ ಸು.455ರಲ್ಲಿ ಸಣ್ಣ ರಾಜ್ಯವೊಂದರ ನಿರ್ಮಾಣಕ್ಕೆ ಬುನಾದಿ ಹಾಕಿದನೆಂದು ತಿಳಿದುಬರುತ್ತದೆ. ಪುಷ್ಯಭೂತಿಯನ್ನು ಬಾಣ ಹಲವಾರು ವಿಶೇಷಣಗಳಿಂದ ಹೊಗಳಿದ್ದನಾದರೂ ಇದರಿಂದ ಅವನ ರಾಜಕೀಯ ಸಾಧನೆಗಳ ಬಗ್ಗೆ ನಿರ್ದಿಷ್ಟ ಅಭಿಪ್ರಾಯವನ್ನು ಹೇಳಲು ಸಾಧ್ಯವಾಗುವುದಿಲ್ಲ. ಈ ಮನೆತನದ ರಾಜರು ಚಂದ್ರವಂಶದ ಕ್ಷತ್ರಿಯರೆಂದು ಹೇಳಲಾಗಿದೆ. ಪರಮ ಶಿವಭಕ್ತನಾದ ಪುಷ್ಯಭೂತಿಯನ್ನು ಪರಮ ಮಹೇಶ್ವರನೆಂದು ಬಾಣ ಕರೆದಿದ್ದಾನೆ. ಇವನ ಮರಣಾನಂತರ ಆಳಿದ ದೊರೆಗಳ ನಾಮಾವಳಿ ಮತ್ತು ಸಾಧನೆಗಳ ವಿಚಾರವಾಗಿ ಬಾಣನ ಕೃತಿಯಿಂದ ಯಾವ ಹೆಚ್ಚಿನ ಮಾಹಿತಿಯೂ ದೊರೆಯುವುದಿಲ್ಲ. ಪುಷ್ಯಭೂತಿಯಿಂದ ಪ್ರಭಾಕರ ವರ್ಧನನವರೆಗೂ ಆಳಿದ ಈ ವಂಶದ ರಾಜರು ಸಮರ್ಥ ಯೋಧರಾಗಿದ್ದರೆಂಬ ಅಂಶ ಮಾತ್ರ ವ್ಯಕ್ತವಾಗುತ್ತದೆ. ಹರ್ಷನಿಗಿಂತ ಹಿಂದೆ ಆಳಿದ ಈ ಸಂತತಿಯ ದೊರೆಗಳ ಪಟ್ಟಿ ಹರ್ಷನ ಕಾಲದ ಹಲವು ಶಾಸನಗಳಿಂದ ದೊರೆಯುತ್ತದೆ. ಆದರೆ ಇವುಗಳಲ್ಲಿ ಪುಷ್ಯಭೂತಿಯ ಹೆಸರು ಇಲ್ಲ. ಈ ಶಾಸನಗಳಲ್ಲಿ ಕೊಟ್ಟಿರುವ ವಂಶಾವಳಿ ನರವರ್ಧನನಿಂದ ಪ್ರಾರಂಭವಾಗುತ್ತದೆ. ನರವರ್ಧನ ಮತ್ತು ಪುಷ್ಯಭೂತಿಯ ಆಳಿಕೆಗಳ ನಡುವೆ 45 ಅಥವಾ 50 ವರ್ಷಗಳ ಅಂತರವಿರಬೇಕೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಅವನ ಅನಂತರ ಆಳಿದ ಈ ಸಂತತಿಯ ರಾಜರ ಆಳಿಕೆಯ ಕಾಲಗಳನ್ನು ಈ ರೀತಿ ನಿರ್ಧರಿಸಲಾಗಿದೆ: ಪುಷ್ಯಭೂತಿ (ಸು.455–75), ನರವರ್ಧನ (ಸು.505–25), 1ನೆಯ ರಾಜ್ಯವರ್ಧನ (ಸು.525–45), ಆದಿತ್ಯವರ್ಧನ (ಸು.545–65), ಪ್ರಭಾಕರವರ್ಧನ (ಸು.565–605), 2ನೆಯ ರಾಜ್ಯವರ್ಧನ (ಸು.605–06), ಹರ್ಷವರ್ಧನ (606–47).

ಪುಷ್ಯಭೂತಿ ಮತ್ತು ನರವರ್ಧನರ ನಡುವೆ ಇಬ್ಬರು ಅಥವಾ ಮೂವರು ರಾಜರು ಆಳಿರಬೇಕೆಂದು ಅಭಿಪ್ರಾಯಪಡಲಾಗಿದೆ. ಆದರೆ ಇವರ ಹೆಸರುಗಳು ತಿಳಿದುಬಂದಿಲ್ಲ. ನರವರ್ಧನನನ್ನು ಶಾಸನಗಳಲ್ಲಿ ಮಹಾರಾಜನೆಂದು ಕರೆದಿದ್ದರೂ ಇವನು ಗುಪ್ತರ ಸಾಮಂತನಾಗಿದ್ದಿರಬೇಕು. ಇವನ ರಾಣಿ ವಜ್ರಿಣಿದೇವಿ. ಇವನ ಅನಂತರ ಆಳಿದ 1ನೆಯ ರಾಜ್ಯವರ್ಧನನ ಕಾಲದಲ್ಲಿ ಗುಪ್ತರೊಂದಿಗೆ ವೈವಾಹಿಕ ಸಂಬಂಧವೇರ್ಪಟ್ಟಿತು. ರಾಜ್ಯವರ್ಧನನ ಮಗ ಆದಿತ್ಯವರ್ಧನ ಕೊನೆಯ ಗುಪ್ತರ ರಾಜನಾದ ಮಹಾಸೇನಗುಪ್ತನ ಸಹೋದರಿ ಮಹಾಸೇನ ಗುಪ್ತದೇವಿಯನ್ನು ವಿವಾಹವಾದುದ್ದು ರಾಜಕೀಯ ದೃಷ್ಟಿಯಿಂದ ಬಹಳ ಮಹತ್ವಪೂರ್ಣ ಘಟನೆ. ಈ ವಿವಾಹ ಸಂಬಂಧದಿಂದ ಆದಿತ್ಯವರ್ಧನನ ಪುಟ್ಟ ರಾಜ್ಯದ ವಿಸ್ತರಣೆಗೆ ಅನುಕೂಲವಾಗಿರಬಹುದು. ಅವನ ಅನಂತರ ಆಳಿದ ಪ್ರಭಾಕರವರ್ಧನ ಸಮರ್ಥನೂ ಶೂರನೂ ಆಗಿದ್ದು ಸ್ವತಂತ್ರ ರಾಜನೆನಿಸಿಕೊಂಡ. ಬಾಣ ಇವನನ್ನು ಮಹಾರಾಜಾಧಿರಾಜ, ಪರಮಭಟ್ಟಾರಕ ಎಂದು ವರ್ಣಿಸಿದ್ದಾನೆ. ಪ್ರಭಾಕರವರ್ಧನ ಸಿಂಧೂ ಮತ್ತು ಲಾಟ ಪ್ರಾಂತಗಳನ್ನು ಆಕ್ರಮಿಸಿ ತನ್ನ ರಾಜ್ಯದ ಘನತೆಯನ್ನು ಎತ್ತರಿಸಿದ. ಅವನ ಅನಂತರ ಪಟ್ಟಕ್ಕೆ ಬಂದ 2 ನೆಯ ರಾಜವರ್ಧನನ ಆಳಿಕೆ ಆಕಸ್ಮಿಕವಾಗಿ ಕೊನೆಗೊಂಡಾಗ ಅವನ ಸಹೋದರ ಹರ್ಷವರ್ಧನ ಪಟ್ಟಕ್ಕೆ ಬಂದ. ಇತಿಹಾಸ ಪ್ರಸಿದ್ಧನಾದ ಹರ್ಷ ಚಕ್ರವರ್ತಿ ತನ್ನ ಧರ್ಮ, ಸಾಹಿತ್ಯ ಪೋಷಣೆ ಮೊದಲಾದ ಬಹುಮುಖ್ಯ ಸಾಧನೆಗಳಿಂದ ಖ್ಯಾತನಾಗಿದ್ದಾನೆ. ಹರ್ಷವರ್ಧನನಿಗೆ ಮಕ್ಕಳಿರಲಿಲ್ಲ. ಅವನ ಸು.40 ವರ್ಷಗಳ ಆಳಿಕೆಯೊಂದಿಗೆ ಪುಷ್ಯಭೂತಿ ವಂಶ ಕೊನೆಗೊಂಡಿತು. (ಎಸ್‌ಎಚ್‌ಐ.)

**ಪೃಥ್ವೀರಾಜ:** 12ನೆಯ ಶತಮಾನದಲ್ಲಿ ಅಜ್ಮೀರ, ದೆಹಲಿಗಳನ್ನಾಳುತ್ತಿದ್ದ ಚಾಹಮಾನ (ಚೌಹಾಣ) ವಂಶದ ದೊರೆ. ಸೋಮೇಶ್ವರನ ಮಗ. ಇವನ ತಾಯಿ ಕರ್ಪೂರದೇವಿ. ಈಕೆ ತ್ರಿಪುರಿಯ ಹೈಹಯ ವಂಶದ ಅಚಲರಾಜನ ಮಗಳು. ತಂದೆಯ ಆಳಿಕೆಯ ಕಾಲದಲ್ಲಿ ಪೃಥ್ವೀರಾಜ ಸಾಹಿತ್ಯ, ಕಲೆ, ಸಮರ ವಿದ್ಯೆಗಳಲ್ಲಿ ಪಾರಂಗತನಾದ. 1177ರಲ್ಲಿ ಸೋಮೇಶ್ವರ ಮಡಿದಾಗ ಪೃಥ್ವೀರಾಜ ಇನ್ನೂ ಬಾಲಕನಾಗಿದ್ದುದರಿಂದ ತಾಯಿ ಕರ್ಪೂರ ದೇವಿ ಇವನ ಪರವಾಗಿ ರಾಜ್ಯವಾಳಿದಳು. ಆ ಸಮಯದಲ್ಲಿ ಕದಂಬವಾಸ ಮುಖ್ಯಮಂತ್ರಿಯಾಗಿ ಇವರಿಗೆ ನೆರವಾದ. ಭುವನೈಕಮಲ್ಲ ಎಂಬವನು ಮಹಾದಂಡನಾಯಕನಾಗಿದ್ದ. ರಾಣಿಯ ಆಳಿಕೆಯ ಕಾಲದಲ್ಲಿ ಅಜಯಮೇರು (ಅಜ್ಮೀರ್) ಉಚ್ಛ್ರಾಯ ಸ್ಥಿತಿಗೆ ಏರಿತು. ಪೃಥ್ವೀರಾಜ ಪ್ರಾಪ್ತ ವಯಸ್ಕನಾದ ಕೂಡಲೇ ಸಿಂಹಾಸನವೇರಿ ರಾಜ್ಯಸೂತ್ರಗಳನ್ನು ಕೈಗೆತೆಗೆದುಕೊಂಡ. ಇವನಿಗೆ ಅನೇಕ ಪತ್ನಿಯರಿದ್ದರೆಂದು ಚಾಂಡ್ ಬರ್ದಾಯಿಯ ಪೃಥ್ವೀರಾಜ ರಾಸೋ ಎಂಬ ಗ್ರಂಥದಿಂದ ತಿಳಿಯುತ್ತದೆ. ಅಬೂ ಪ್ರಾಂತದ ದೊರೆ ಪರಮಾರ ಚೈತನ್ಯನ ಮಗಳಾದ ಇಚ್ಛಣಿದೇವಿ ಪಟ್ಟಮಹಿಷಿಯಾಗಿದ್ದಳು. ಇತರ ರಾಣಿಯರಲ್ಲಿ ದೇವಗಿರಿ ಯಾದವ ವಂಶದ ಬಾಣ ದೊರೆಯ ಮಗಳು ಶಶಿವ್ರತಾ, ಕನೌಜಿನ ಗಾಹಡವಾಲ ವಂಶದ ಜಯಚಂದ್ರನ ಮಗಳು ಸಂಯೋಗಿತಾ (ಸಂಯುಕ್ತ) ಮುಖ್ಯರು.

ಸಂಯೋಗಿತೆಯನ್ನು ಪೃಥ್ವೀರಾಜ ವಿವಾಹವಾದ ಬಗ್ಗೆ ಒಂದು ದಂತಕತೆಯಿದೆ. ಪೃಥ್ವೀರಾಜ ವಿಜಯ ಎಂಬ ಗ್ರಂಥದ ಪ್ರಕಾರ ಸಂಯೋಗಿತೆ (ಸಂಯುಕ್ತೆ) ಅಪೂರ್ವ ರೂಪ ಲಾವಣ್ಯಗಳುಳ್ಳ ಸುಂದರಿ ಎಂದು ಆ ಕಾಲದಲ್ಲಿ ಖ್ಯಾತಿ ಪಡೆದಿದ್ದಳು. ಅವಳಿಗೆ ತಕ್ಕ ವರನನ್ನು ಹುಡುಕಲು ಜಯಚಂದ್ರ ರಜಪೂತ ಪದ್ಧತಿಯಂತೆ ಸ್ವಯಂವರ ಏರ್ಪಡಿಸಿದ. ಅದಕ್ಕೆ ಬರಬೇಕೆಂದು ಅನೇಕ ರಾಜರಿಗೆ ಆಮಂತ್ರಣ ನೀಡಿದ. ಆದರೆ ಪೃಥ್ವೀರಾಜನಿಗೆ ಆಹ್ವಾನ ಹೋಗಿರಲಿಲ್ಲ. ಪೃಥ್ವೀರಾಜನನ್ನು ಬಿಟ್ಟು ಅನ್ಯರನ್ನು ವರಿಸಲು ಸಂಯೋಗಿತೆ (ಸಂಯುಕ್ತೆ) ಸಿದ್ಧಳಿರಲಿಲ್ಲ. ಸ್ವಯಂವರದ ಸಮಯದಲ್ಲಿ ಪೃಥ್ವೀರಾಜ ಸಂಯೋಗಿತೆಯನ್ನು (ಸಂಯುಕ್ತೆಯನ್ನು) ಅಪಹರಿಸಿಕೊಂಡು ಹೋಗಿ ವಿವಾಹವಾದ. ಈ ಘಟನೆಗೆ ಚಾರಿತ್ರಿಕ ಆಧಾರಗಳು ದೊರಕುವುದಿಲ್ಲವಾದರೂ ಜಯಚಂದ್ರನಿಗೂ ಪೃಥ್ವೀರಾಜನಿಗೂ ವೈರತ್ವವಿತ್ತೆನ್ನಬಹುದು.

ಪಂಜಾಬನ್ನು ಆಳುತ್ತಿದ್ದ ಘಜ್ನವೀಡರ ಮನೆತನವನ್ನು ಸೋಲಿಸಿದ ಮಹಮ್ಮದ್ ಘೋರಿಗೂ ನೆರೆಯ ಪೃಥ್ವೀರಾಜನಿಗೂ 1191ರಲ್ಲಿ ಯುದ್ಧ ಅನಿವಾರ್ಯವೆನಿಸಿತು. ಈ ಉತ್ಕಟ ಸಮಯದಲ್ಲಿ ಜಯಚಂದ್ರ ಪೃಥ್ವೀರಾಜನಿಗೆ ನೆರವಾಗಲಿಲ್ಲ. ಇತರ ಹಲವು ರಾಜರು ಇವನಿಗೆ ಬೆಂಬಲವಾಗಿ ನಿಂತರು. ಪೃಥ್ವೀರಾಜ 3,00,000 ಅಶ್ವಗಳು ಮತ್ತು 3,000 ಆನೆಗಳಿಂದ ಕೂಡಿದ ಸೈನ್ಯದೊಡನೆ ಘೋರಿಯನ್ನು ಎದುರಿಸಿದನೆಂದು ಫೆರಿಸ್ತ ಎಂಬ ಇತಿಹಾಸಕಾರ ಹೇಳುತ್ತಾನೆ. ದೆಹಲಿಯ ಸಮೀಪದ ಸ್ಥಾನೇಶ್ವರದ ಬಳಿಯ ತರೈನ್‌ನಲ್ಲಿ ಯುದ್ಧ ನಡೆಯಿತು. ಪೃಥ್ವೀರಾಜನ ಸೈನಿಕರ ಮುಂದೆ ಘೋರಿಯ ಸೈನಿಕರು ಹಿಮ್ಮೆಟ್ಟಿದರು. ಸುಲ್ತಾನ ರಣರಂಗದಿಂದ ಓಡಿ ಹೋದ, ಪೃಥ್ವೀರಾಜನಿಗೆ ಜಯ ಲಭಿಸಿತು.

ಮಹಮ್ಮದ್ ಘೋರಿ ಘಜ್ನಿಗೆ ಹಿಂತಿರುಗಿ ಪೃಥ್ವೀರಾಜನ ಮೇಲೆ ಸೇಡು ತೀರಿಸಿಕೊಳ್ಳಲು ಅಪಾರ ಸಿದ್ಧತೆಯಲ್ಲಿ ತೊಡಗಿದ. ಈ ಅವಧಿಯಲ್ಲಿ ಬರಲಿರುವ ಅಪಾಯವನ್ನು ಊಹಿಸಿ ಪೃಥ್ವೀರಾಜನೂ ಸೇನಾ ಸಿದ್ಧತೆಯಲ್ಲಿ ತೊಡಗಿದ್ದ. ಇವನ ಬಳಿ 3,00,000 ಕುದುರೆಗಳೂ 3,000 ಆನೆಗಳೂ ಅಸಂಖ್ಯಾತ ಪದಾತಿ ಸೈನ್ಯವೂ ಯುದ್ಧಕ್ಕೆ ಸಿದ್ಧವಾಗಿತ್ತು. ಭಾರತದ ಅನೇಕ ದೊರೆಗಳು ಇವನ ಬೆಂಬಲಕ್ಕೆ ನಿಂತಿದ್ದರು. 1192ರಲ್ಲಿ ಮಹಮ್ಮದ್ ಘೋರಿ ಮತ್ತೆ ದಂಡೆತ್ತಿ ಬಂದ. ಪೃಥ್ವೀರಾಜ ತನ್ನ ದಂಡನಾಯಕರಾದ ಉದಯರಾಜ ಮತ್ತು ಗೋವಿಂದರಾಜರೊಡನೆ ಹೊರಟು ಘೋರಿಯ ಸೈನ್ಯವನ್ನು ಸ್ಥಾನೇಶ್ವರದ ಬಳಿಯಲ್ಲೇ ಎದುರಿಸಿದ. ಇದನ್ನೆ ಎರಡನೆಯ ತರೈನ್ ಯುದ್ಧವೆನ್ನುವರು. ಇದರಲ್ಲಿ ಪೃಥ್ವೀರಾಜನ ಹಿಂದು ಸೈನಿಕರು ಈ ಬಾರಿಯೂ ಜಯ ತಮಗೆ ಖಂಡಿತವೆಂದು ಅಜಾಗರೂಕರಾಗಿದ್ದರು. ನದಿಯ ಸಮೀಪದಲ್ಲಿ ಬೀಡುಬಿಟ್ಟಿದ್ದ ಪೃಥ್ವೀರಾಜನ ಸೈನಿಕರು ರಾತ್ರಿ ಯುದ್ಧದ ನಿರೀಕ್ಷಣೆಯಿಲ್ಲದೆ ಮೈಮರೆತು ಮಲಗಿದ್ದಾಗ ಮಹಮ್ಮದ್ ಘೋರಿ ಬೇರೊಂದು ಕಡೆ ತನ್ನ ಸೈನ್ಯದೊಡನೆ ಹೊರಟು ನದಿಯನ್ನು ದಾಟಿ ಪೃಥ್ವೀರಾಜನ ಶಿಬಿರದ ಮೇಲೆ ಹಠಾತ್ತನೆ ಧಾಳಿ ಇಟ್ಟ. ಹೋರಾಟ ಉಗ್ರವಾಯಿತು. ಪೃಥ್ವೀರಾಜನ ಕಡೆ ಒಂದು ಲಕ್ಷ ಸೈನಿಕರು ಮಡಿದರು. ಸ್ವಾಮಿನಿಷ್ಠ ಸೇವಕ ಗೋವಿಂದರಾಜ ಹೋರಾಡುತ್ತಲೇ ರಣರಂಗದಲ್ಲಿ ಮಡಿದ. ಇಂಥ ವಿಪತ್ತಿನ ಸಮಯದಲ್ಲಿ ಪೃಥ್ವೀರಾಜ ತಾನು ಏರಿದ್ದ ಆನೆಯಿಂದ ಇಳಿದು ಕುದುರೆಯನ್ನೇರಿ ತಪ್ಪಿಸಿಕೊಳ್ಳಲು ಯತ್ನಿಸಿದ. ಆದರೆ ಶತ್ರು ಸೈನಿಕರಿಗೆ ಸೆರೆ ಸಿಕ್ಕಿದ. ಮಹಮ್ಮದ್ ಘೋರಿ ಇವನನ್ನು ಕ್ರೂರವಾಗಿ ಕೊಲ್ಲಿಸಿದ. 1192ರ ಎರಡನೆಯ ತರೈನ್ ಯುದ್ಧದಲ್ಲಿ ಮಹಮ್ಮದ್ ಘೋರಿಯ ವಿಜಯ ಮತ್ತು ಪೃಥ್ವೀರಾಜನ ಮರಣದೊಂದಿಗೆ ಭಾರತದಲ್ಲಿ ಟರ್ಕರ ಆಡಳಿತ ಹಾಗೂ ಇಸ್ಲಾಂ ಧರ್ಮದ ಪ್ರಸಾರಕ್ಕೆ ಮುಂದೆ ಭಾರತದಲ್ಲಿ ದೆಹಲಿ ಸಾಮ್ರಾಜ್ಯ ಸ್ಥಾಪನೆಗೆ ಇದು ನಾಂದಿಯಾಗಿ ಅಸ್ತಿಭಾರ ಹಾಕಿದಂತಾಯಿತು. (ಎಸ್.ಕೆ.ಟಿ.)

**ಪೆದ್ದಬಂಕೂರು:** ಆಂಧ್ರಪ್ರದೇಶ ರಾಜ್ಯದ ಕರೀಮನಗರ ಜಿಲ್ಲೆಯ ಐತಿಹಾಸಿಕ ಸ್ಥಳ. ಇಲ್ಲಿ ನಡೆದ ಉತ್ಖನನದಲ್ಲಿ 2 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು: ಬೃಹತ್ ಶಿಲಾಯುಗ, ಸಾತವಾಹನ. ಉತ್ಖನನದಲ್ಲಿ ಸಾತವಾಹನ ಕಾಲದ ಚೌಕಾಕಾರದ ಇಟ್ಟಿಗೆಯ ಕಟ್ಟಡವೊಂದನ್ನು (30 ಮೀ) ಗುರುತಿಸಲಾಗಿದೆ. ಈ ಕಟ್ಟಡವನ್ನು ಅಂಕುಡೊಂಕಾದ ಕಲ್ಲುಗಳ ಬುನಾದಿಯ ಮೇಲೆ ನಿರ್ಮಿಸಲಾಗಿದೆ. ಈ ಕಟ್ಟಡದ ಈಶಾನ್ಯಕ್ಕೆ ಬೆಣೆಯಾಕಾರದ ಇಟ್ಟಿಗೆಗಳಿಂದ ಕಟ್ಟಿರುವ ಬಾವಿಯಿದೆ. ಇಲ್ಲಿಂದ 50 ಮೀ ದೂರದಲ್ಲಿ ನೀರಿನ ಚೌಕಾಕಾರದ ತೊಟ್ಟಿಯಿದೆ. ಇದರ ಸಮೀಪದಲ್ಲಿ 10.30X7.65ಮೀ ಅಳತೆಯ ಅಂಡಾಕೃತಿಯ ಒಂದು ಮಂದಿರವಿದೆ. ಇವುಗಳ ಜೊತೆಗೆ ಅಂಕುಡೊಂಕಾದ ಕಲ್ಲುಗಳಿಂದ ನಿರ್ಮಿಸಲಾಗಿರುವ ವೃತ್ತಾಕಾರದ ಅಧಿಷ್ಠಾನವುಳ್ಳ ಕಟ್ಟೆಗಳಿವೆ. ಇಲ್ಲಿ ದೊರೆತಿರುವ ಅವಶೇಷಗಳ ಆಧಾರದಿಂದ ಈ ಮಂದಿರ 3ನೆಯ ಶತಮಾನಕ್ಕೆ ಸೇರಿರಬಹುದೆಂದು ಅಭಿಪ್ರಾಯವಿದೆ. ಕಬ್ಬಿಣ, ತಾಮ್ರ, ಬೆಳ್ಳಿ, ಸುಡಾವೆಮಣ್ಣಿನ ಆಕೃತಿಗಳು, ಮಣಿಗಳು, ಮುದ್ರೆಯೊತ್ತಿದ ಬೆಳ್ಳಿಯ ನಾಣ್ಯಗಳ ಸಂಗ್ರಹ ಹಾಗೂ ಸಾತವಾಹನರ ತಾಮ್ರದ ನಾಣ್ಯಗಳು ಇಲ್ಲಿ ದೊರೆತಿವೆ. (ಎಸ್.ಕೆ.ಜಿ.)

**ಪೆಲೊಪೊನೇಷ್ಯನ್ ಯುದ್ಧ:** ಪ್ರ.ಶ.ಪೂ.431–404. ಪ್ರಾಚೀನ ಗ್ರೀಸಿನಲ್ಲಿ ದೀರ್ಘ ಶತ್ರುಗಳಾಗಿದ್ದ ಅಥೆನ್ಸ್ ಮತ್ತು ಸ್ಪಾರ್ಟಗಳ ನಡುವೆ ನಡೆದ ಯುದ್ಧ. ಆಶ್ರಿತ ರಾಜ್ಯಗಳ ಒಡೆತನಕ್ಕಾಗಿ ಸ್ಪಾರ್ಟದ ಮಿತ್ರ ರಾಜ್ಯವಾದ ಕಾರ್ತೇಜ್‌ಗೂ ಅಥೆನ್ಸ್‌ಗೂ ನಡೆದ ಬಡಿದಾಟವೇ ಯುದ್ಧಕ್ಕೆ ಕಾರಣ. ಪ್ರ.ಶ.ಪೂ.431ರಲ್ಲಿ ಸ್ಪಾರ್ಟದ ಸೈನ್ಯ ಆಟಿಕಕ್ಕೆ ಮುತ್ತಿಗೆ ಹಾಕಿತು. ಅಥೆನ್ಸ್‌ನ ನೌಕೆ ಸ್ಪಾರ್ಟದ ಮಿತ್ರ ರಾಜ್ಯಗಳ ಮೇಲೆ ಧಾಳಿ ಮಾಡಿ ವಿಜಯ ಗಳಿಸಿತು. ಆ ವೇಳೆಗೆ ಸಂಭವಿಸಿದ ಪ್ಲೇಗಿನಿಂದಾಗಿ ಅಥೆನ್ಸಿನ ಕಾಲು ಸಂಖ್ಯೆಯ ಜನ ಪ್ರಾಣಬಿಟ್ಟರು. ಪೆರಿಕ್ಲಿಸ್ ತೀರಿಕೊಂಡ. ಆದರೂ ಅಥೆನ್ಸ್ ಜಗ್ಗಲಿಲ್ಲ. ಸ್ಪಾರ್ಟದ ಶಾಂತಿಯ

ಬಯಕೆಯನ್ನು ಅದು ತಳ್ಳಿ ಹಾಕಿತು. ಆದರೆ ಅನಂತರ ಪರಿಸ್ಥಿತಿ ಬದಲಾಯಿತು. ಸೇನಾನಿ ಬ್ರ್ಯಾಸಿಡಾಸನ ನಾಯಕತ್ವದಲ್ಲಿ ಸ್ಪಾರ್ಟ ಹೋರಾಟ ಮುಂದುವರಿಸಿತು. ಆಂಫಿಪೊಲಿಸ್‌ನಲ್ಲಿ ನಡೆದ ಕದನದಲ್ಲಿ (ಪ್ರ.ಶ.ಪೂ.424) ಸ್ಪಾರ್ಟನರು ಜಯಗಳಿಸಿದರು. ಅಥೆನ್ಸ್ ನಾಯಕ ನಿಸಿಯಾಸ್ ಶಾಂತಿ ಮಾಡಿಕೊಂಡ. ಆದರೆ ಈ ಶಾಂತಿ ಬಹುಕಾಲ ಉಳಿಯಲಿಲ್ಲ. ಅಥೆನ್ಸ್ ಸೇನಾನಿ ಅಲ್ಸಿಬಿಯಾಡೀಸ್‌ನ ಪ್ರಚೋದನೆಯಿಂದ ಸ್ಪಾರ್ಟದ ಮಿತ್ರ ರಾಜ್ಯಗಳು ದಂಗೆಯೆದ್ದವು. ಸಿರಾಕ್ಯೂಸಿನ ಮೇಲೆ ದಂಡೆತ್ತಿ ಹೋಗಲು ಅವನು ಹವಣಿಸಿದ. ಪವಿತ್ರ ಕ್ಷೇತ್ರವನ್ನು ಅಪವಿತ್ರಗೊಳಿಸಿದ ಆಪಾದನೆಗೆ ಅವನು ಗುರಿಯಾದ. ನಿಸಿಯಾಸ್ ಕೈಗೊಂಡ ದಂಡಯಾತ್ರೆ ಅನಾಹುತದಲ್ಲಿ ಪರ್ಯವಸಾನಗೊಂಡಿತು (ಪ್ರ.ಶ.ಪೂ.413). ಅಲ್ಸಿಬಿಯಾಡೀಸ್ ಸ್ಪಾರ್ಟಕ್ಕೆ ಹೋಗಿ ನೌಕಾಸೈನ್ಯವೊಂದನ್ನು ನಿರ್ಮಿಸಲು ಅದಕ್ಕೆ ಸಹಾಯ ಮಾಡಿದ. ಅವನು ಮತ್ತೆ ಅಥೆನ್ಸ್‌ಗೆ ಹಿಂತಿರುಗಿ ಸ್ಪಾರ್ಟನರ ಮೇಲೆ ಯುದ್ಧಮಾಡಿ ಗೆದ್ದ. ಆದರೆ ಲಿಸಾಂಡರ್ ಎಂಬವನ ನಾಯಕತ್ವದಲ್ಲಿ ಸ್ಪಾರ್ಟ ಪ್ರಬಲವಾಯಿತು. ಆರ್ಜಿನೂಸೀ ದ್ವೀಪಸ್ತೋಮ ಪ್ರದೇಶದಲ್ಲಿ ನಡೆದ ನೌಕಾ ಕದನದಲ್ಲಿ ಅಥೆನ್ಸ್ ಗೆದ್ದಿತಾದರೂ ಏಜಸ್ಪಾಟಮಾಸ್‌ನಲ್ಲಿ ಅಥೆನ್ಸ್ ನೌಕಾಬಲಕ್ಕೆ ಸ್ಪಾರ್ಟನರು ಭಾರಿ ಪೆಟ್ಟು ಕೊಟ್ಟರು (ಪ್ರ.ಶ.ಪೂ.405). ಪ್ರ.ಶ.ಪೂ. 404ರಲ್ಲಿ ಅಥೆನ್ಸ್ ಶರಣಾಯಿತು. ಅದು ಮತ್ತೆ ತನ್ನ ಹಳೆಯ ವೈಭವವನ್ನು ಗಳಿಸಲಿಲ್ಲ. ಮುಂದೆ ಸ್ವಲ್ಪ ಕಾಲ ಸ್ಪಾರ್ಟ ಗ್ರೀಸಿನ ರಾಣಿಯಾಗಿ ಮೆರೆಯಿತು. ಹೀಗೆ ಪೆಲೊಪೊನೇಷ್ಯನ್ ಯುದ್ಧ ಅಥೆನ್ಸಿನ ಪ್ರಾಬಲ್ಯವನ್ನು ಮುರಿಯುವುದಕ್ಕೆ ಕಾರಣವಾಯಿತು. ಪ್ರತಿಯೊಂದು ರಾಜ್ಯವೂ ಅಥೆನ್ಸಿನ ನಾಯಕತ್ವವನ್ನು ಸಹಿಸದೆ ಕರುಬುತ್ತಿದ್ದವು. ಕಾರ್ತೇಜ್ ಅಥೆನ್ಸಿನ ವಾಣಿಜ್ಯ ಶತ್ರು. ಸ್ಪಾರ್ಟ ಅಥೆನ್ಸ್ ರಾಜ್ಯದ ಪ್ರಗತಿಗೆ ವಿರೋಧ ತೋರಿಸಿತು. ತನ್ನ ಸೇನಾ ಬಲದಿಂದ ನಾಯಕತ್ವ ಪಡೆಯಬೇಕೆಂದು ಸ್ಪಾರ್ಟ ಆಶಿಸಿತು. ಇತರ ಕೆಲವು ರಾಜ್ಯಗಳು ಅಥೆನ್ಸಿನ ರಾಜಕೀಯ ದಬ್ಬಾಳಿಕೆಯನ್ನು ನಿರ್ಮೂಲ ಮಾಡಬೇಕೆಂದು ಗುಟ್ಟಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದವು. ಹೀಗೆ ಇತರ ರಾಜ್ಯಗಳ ದ್ವೇಷಾಸೂಯೆಗಳ ಫಲವಾಗಿ ಅಥೆನ್ಸ್ ಅವನತಿಗೆ ಈಡಾಯಿತು. ಅದು ತನ್ನ ನಾಯಕತ್ವವನ್ನು ಕಳೆದುಕೊಂಡು ಗ್ರೀಸಿನ ಎರಡನೆಯ ದರ್ಜೆಯ ರಾಜ್ಯವಾಗಿ ಪರಿಣಮಿಸಿತು.

ಒಂದು ರೀತಿಯಲ್ಲಿ ಈ ಯುದ್ಧವೂ ಮೂಲತತ್ತ್ವಗಳ ಭಿನ್ನತೆಯ ಫಲವಾದ ಯುದ್ಧವಾಗಿತ್ತು. ಇದು ಎರಡು ಬೇರೆ ಕುಲಗಳ, ಎರಡು ಬೇರೆ ರಾಜ್ಯ ವ್ಯವಸ್ಥೆಗಳ ಯುದ್ಧ; ಅಯೋನಿಯನ್ ಮತ್ತು ಡೋರಿಯನರ ನಡುವೆ, ಪ್ರಜಾಪ್ರಭುತ್ವ ಮತ್ತು ಶ್ರೀಮಂತರ ಪ್ರಭುತ್ವದ ನಡುವೆ ನೌಕಾಶಕ್ತಿ ರಾಜ್ಯ ಮತ್ತು ಭೂಶಕ್ತಿ ರಾಜ್ಯದ ನಡುವೆ ನಡೆದ ಯುದ್ಧ. ಅಥೆನ್ಸ್ ರಾಜ್ಯದ ನಾಯಕತ್ವ ಅಯೋನಿಯನ್ನರದು, ಸ್ಪಾರ್ಟದ ನಾಯಕತ್ವ ಡೋರಿಯನರದು. ಅಥೆನ್ಸ್ ಪ್ರಜಾಪ್ರಭುತ್ವದ ಬೀಡಾಗಿತ್ತು. ಸ್ಪಾರ್ಟ ತನ್ನ ಸೇನಾಬಲದಿಂದ ಭೂ ಪ್ರದೇಶದಲ್ಲಿ ತನ್ನ ಶಕ್ತಿಯನ್ನು ಹರಡಿತು. ಭೂ ಸೇನಾಬಲದ ರಾಜ್ಯ ತನ್ನ ಶತ್ರುವಿನ ಸಮುದ್ರ ಪ್ರದೇಶದ ಮೇಲೆ ದಂಡಯಾತ್ರೆ ಮಾಡಿತು. ನೌಕಾ ಸೇನಾಬಲದ ರಾಜ್ಯ ತನ್ನ ಶತ್ರುವಿನ ಸಮುದ್ರ ಪ್ರದೇಶದ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿತು. ಆಟಿಕ, ತ್ರೇಸ್, ಪಶ್ಚಿಮ ಗ್ರೀಸ್ ಇವೇ ಈ ಯುದ್ಧದ ಮುಖ್ಯ ರಂಗಭೂಮಿಗಳಾಗಿದ್ದವು. (ಬಿ.ಎಸ್.ಕೆ.)

**ಪೇಷ್ವೆ:** ಶಿವಾಜಿ ಮರಾಠ ರಾಜ್ಯ ಸ್ಥಾಪಿಸಿದಾಗ ಅಸ್ತಿತ್ವಕ್ಕೆ ಬಂದ ಒಂದು ಹುದ್ದೆ. ಶಿವಾಜಿ ರಚಿಸಿದ ಸಚಿವ ಮಂಡಲದಲ್ಲಿ ಅಷ್ಟ ಪ್ರಧಾನರಿದ್ದರು. ಮುಖ್ಯ ಪ್ರಧಾನನನ್ನು ಪೇಷ್ವೆ ಎಂದು ಕರೆಯಲಾಗುತ್ತಿತ್ತು. ನಾಗರಿಕ ಆಡಳಿತದಲ್ಲಿ ಪೇಷ್ವೆಯರದು ಪ್ರಧಾನ ಹೊಣೆಗಾರಿಕೆ.

1707ರಲ್ಲಿ ಔರಂಗ್‌ಜೇಬನ ಮರಣಾನಂತರ ಶಿವಾಜಿಯ ಹಿರಿಯ ಮಗ ಸಾಂಬಾಜಿಯ ಮಗನಾದ ಸಾಹುವನ್ನು ಮೊಗಲರು ಬಿಡುಗಡೆ ಮಾಡಿದಾಗ ಮರಾಠ ರಾಜ್ಯದಲ್ಲಿ ವಿಶಿಷ್ಟ ಪರಿಸ್ಥಿತಿ ಉಂಟಾಯಿತು. ಬಹುಸಂಖ್ಯಾತ ಸರದಾರರ ಬೆಂಬಲದಿಂದ ಸಾಹು ಸಾತಾರಾದಲ್ಲಿ ಮರಾಠ ರಾಜ್ಯದ ಸಿಂಹಾಸನವೇರಲು ಸಾಧ್ಯವಾಯಿತು. ರಾಜ ಸಾಹು 1713ರಲ್ಲಿ ಬಾಲಾಜಿ ವಿಶ್ವನಾಥನನ್ನು ಪೇಷ್ವೆಯಾಗಿ ನೇಮಿಸಿದ. ಈ ಘಟನೆ ಮರಾಠ ರಾಜ್ಯದ ಇತಿಹಾಸದಲ್ಲೇ ಹೊಸ ಅಧ್ಯಾಯ ತೆರೆಯಿತು. ಅಲ್ಲಿಂದ ಮುಂದೆ ಮರಾಠ ಸಾಮ್ರಾಜ್ಯ ಅಸ್ತಿತ್ವದಲ್ಲಿರುವವರೆಗೂ ಬಾಲಾಜಿ ವಿಶ್ವನಾಥನ ವಂಶಸ್ಥರೇ ಪೇಷ್ವೆಗಳಾಗಿದ್ದರು. ಮರಾಠಾ ರಾಜ್ಯದ ಹಾಗೂ ಭಾರತದ ರಾಜಕೀಯದಲ್ಲಿ ಅವರು ಪ್ರಮುಖ ಪಾತ್ರವಹಿಸಿದರು.

ಬಾಲಾಜಿ ವಿಶ್ವನಾಥ ಸಮರ್ಥ ರಾಜಕಾರಣಿ ಹಾಗೂ ಯುದ್ಧ ನಿಪುಣನಾಗಿದ್ದ. ಇವನ ಸಾಮರ್ಥ್ಯದಿಂದಾಗಿ ಉಳಿದ ಮಂತ್ರಿಗಳಿಗಿಂತ ಪೇಷ್ವೆಯ ಸ್ಥಾನಮಾನಗಳು ಹೆಚ್ಚಿದವು. ಇವನು 1720ರ ಏಪ್ರಿಲ್‌ನಲ್ಲಿ ನಿಧನನಾದ. ಆ ವೇಳೆಗೆ ಮರಾಠ ರಾಜ್ಯ ಭಾರತದ ರಾಜಕೀಯ ಭೂಪಟದಲ್ಲಿ ಸ್ಥಿರವಾದ ಸ್ಥಾನ ಪಡೆದು ಆ ಕಾಲದ ಪ್ರಬಲ ಶಕ್ತಿಗಳಲ್ಲೊಂದೆನಿಸಿತು. ಇವನ ಅಧಿಕಾರದ ಅವಧಿಯಲ್ಲಿ ರಾಜನ ಆಳಿಕೆಯಿಂದ ಪೇಷ್ವೆಯ ಆಳಿಕೆಗೆ ಪರಿವರ್ತನೆ ಆಯಿತೆಂದು ಪರಿಗಣಿಸಲಾಗಿದೆ.

ಬಾಲಾಜಿ ವಿಶ್ವನಾಥನ ತರುವಾಯ ಇವನ ಮಗ 1ನೆಯ ಬಾಜೀರಾಯ ಪೇಷ್ವೆಯಾಗಿ ನೇಮಿತನಾದ. ಬಾಜೀರಾಯ ಕುಸಿಯುತ್ತಿದ್ದ ಮೊಗಲ್ ಸಾಮ್ರಾಜ್ಯದ ಬಗ್ಗೆ ಆಕ್ರಮಣಶೀಲ ನೀತಿಯನ್ನು ಅನುಸರಿಸಬೇಕೆಂದು ಪ್ರತಿಪಾದಿಸಿದ. ನಿಜಾಮ ಕೆಲವು ಮರಾಠ ಸರದಾರರು ಮತ್ತು ತಾರಾಬಾಯಿಯೊಡಗೂಡಿ, ಪ್ರವರ್ಧಮಾನಕ್ಕೆ ಬರುತ್ತಿದ್ದ ಮರಾಠ ಸಾಮ್ರಾಜ್ಯವನ್ನು ಬುಡದಲ್ಲೇ ಕತ್ತರಿಸಲು ಯತ್ನಿಸಿದ. ಅವರ ಸಂಯುಕ್ತ ಸೈನ್ಯ ಒಂದು ಹಂತದಲ್ಲಿ ಪುಣೆಯನ್ನೂ ಆಕ್ರಮಿಸಿಕೊಂಡಿತು. ಆದರೆ ಬಾಜೀರಾಯನ ಶೌರ್ಯ ಹಾಗೂ ಯುದ್ಧತಂತ್ರಗಳ ಮುಂದೆ ಮೊಗಲರು ನಿಲ್ಲದಾದರು. 1728ರ ಪಾಲ್ಖೇಡ್ ಯುದ್ಧದಲ್ಲಿ ನಿಜಾಮ ಸೋತು ಬಾಜೀರಾಯನೊಂದಿಗೆ ಒಪ್ಪಂದ ಮಾಡಿಕೊಂಡ. ಇದರ ಪ್ರಕಾರ ಮೊಗಲರು ರಾಜ ಸಾಹುವನ್ನು ಛತ್ರಪತಿ ಎಂದು ಒಪ್ಪಿಕೊಳ್ಳಲಾಯಿತು. 1731ರಲ್ಲಿ ಕೊಲ್ಲಾಪುರದಿಂದ ಆಳುತ್ತಿದ್ದ ಶಂಭೂಜಿಗೆ ಮಾನ್ಯತೆ ನೀಡಿ ಅಧೀನ ರಾಜನ ಸ್ಥಾನಮಾನ ಕೊಡಲಾಯಿತು.

1720ರ ದಶಕವಿಡೀ ಗುಜರಾತ್ ಮತ್ತು ಮಾಳ್ವಗಳ ಪರಮಾಧಿಕಾರದ ಬಗ್ಗೆ ಮರಾಠರಿಗೂ ಮೊಗಲರಿಗೂ ಸಂಘರ್ಷಣೆಗಳು ನಡೆಯುತ್ತಲೇ ಇದ್ದವು. 1731ರ ಹೊತ್ತಿಗೆ ಬಾಜೀರಾಯ ಈ ಪ್ರದೇಶಗಳಲ್ಲಿ ಮರಾಠರು ಮೇಲುಗೈ ಸಾಧಿಸುವಂತೆ ಮಾಡಿದ್ದಲ್ಲದೆ ನಿಜಾಮನಿಂದ ಮರಾಠರು ಉತ್ತರ ಭಾರತದಲ್ಲಿ ನಡೆಸಬಹುದಾದ ಕಾರ್ಯಾಚರಣೆಯಲ್ಲಿ ಮಧ್ಯ ಪ್ರವೇಶಿಸದಂತೆ ಭರವಸೆ ಪಡೆದ. ಬುಂಡೇಲರಿಗೆ ನೆರವು ನೀಡುವ ನೆಪದಲ್ಲಿ ಪೇಷ್ವೆ ಮರಾಠ ಸೈನ್ಯವನ್ನು ಉತ್ತರ ಭಾರತದೊಳಗೆ ನುಗ್ಗಿಸಿದ. ದೆಹಲಿಗೆ ಬೆದರಿಕೆ ಹಾಕಿ ಮೊಗಲ್ ಸಾಮ್ರಾಟ ಮರಾಠರ ಷರತ್ತುಗಳನ್ನು ಒಪ್ಪುವಂತೆ ಮಾಡಿದ. ಬಾಜೀರಾಯ 1740ರಲ್ಲಿ ನಿಧನನಾದಾಗ ನರ್ಮದಾ ಮತ್ತು ಚಂಬಲ್‌ಗಳ ದಕ್ಷಿಣದ ಪ್ರದೇಶ ಮರಾಠರ ಅಧೀನಕ್ಕೆ ಬಂದಿತ್ತು.

ಒಂದನೆಯ ಬಾಜೀರಾಯನ ನಿಧನಾನಂತರ ಅವನ ಹಿರಿಯ ಮಗ ನಾನಾ ಸಾಹೇಬ 1740ರಲ್ಲಿ ಪೇಷ್ವೆಯಾಗಿ ನೇಮಿತನಾದ. ಇವನ ಕಾಲದಲ್ಲಿ ಪೇಷ್ವೆಯ ಅಧಿಕಾರ ಅಬಾಧಿತವಾಗಿ ಸಾಗಿತ್ತು. ಮರಾಠ ಸೈನ್ಯ ರಾಜಸ್ತಾನದಿಂದ ಹಿಡಿದು ಬಂಗಾಲದವರೆಗೂ ಉತ್ತರ ಪ್ರದೇಶದಿಂದ ಹಿಡಿದು ತಮಿಳುನಾಡಿನವರೆಗೂ ತನ್ನ ಬಲಪ್ರದರ್ಶನ ನಡೆಸಿತು. ಇವನ ಕಾಲದಲ್ಲಿ ನ್ಯಾಯಾಡಳಿತ ಉನ್ನತವಾಗಿತ್ತು. ಆದರೆ, ಮರಾಠ ಆಸ್ಥಾನ ನಾನಾ ಬಗೆಯ ಕಾರಸ್ಥಾನಗಳ ಹುತ್ತವಾಗಿತ್ತು. ಪೇಷ್ವೆಯ ಹುದ್ದೆ ಆನುವಂಶಿಕವೆಂಬುದು ಅಧಿಕೃತವಾಗಿ ಸ್ಥಾಪಿತವಾದದ್ದು ಆಗಲೇ. ರಾಜ ಸಾಹು ಸಾಯುವುದಕ್ಕೆ ಸ್ವಲ್ಪ ಮುಂಚೆ 1740ರಲ್ಲಿ ಪೇಷ್ವೆ ಹುದ್ದೆಯನ್ನು ಆನುವಂಶಿಕವೆಂದು ಘೋಷಿಸಿದ. ರಾಜಮನೆತನವನ್ನು ಮುಂದುವರಿಸುವ ಹೊಣೆಯನ್ನು ಪೇಷ್ವೆಗೆ ವಹಿಸಲಾಯಿತು. ಇದರಿಂದ ಪೇಷ್ವೆ ಶಾಸನಬದ್ಧ ಆಡಳಿತದಲ್ಲಿ ಪರಮೋಚ್ಚ ಸ್ಥಾನ ಪಡೆದ. ರಾಜ ಹಿನ್ನೆಲೆಗೆ ಸರಿಯುವಂತಾಯಿತು. ಸಾಹು ಬದುಕಿರುವ ವರೆಗೂ ಪೇಷ್ವೆಗಳು ರಾಜನಿಗೆ ವಿಧೇಯರಾಗಿದ್ದರು. ಆದರೆ ಅವನ ಉತ್ತರಾಧಿಕಾರಿಯಾದ ರಾಮರಾಜನ ಕಾಲದಲ್ಲಿ ಸಾಮ್ರಾಜ್ಯದ ವ್ಯವಹಾರಗಳಲ್ಲಿ ಪೇಷ್ವೆಯದೇ ಕೊನೆಯಮಾತಾಯಿತು. ಸಾತಾರದಿಂದ ಪುಣೆಗೆ ಇದರ ರಾಜಧಾನಿಯನ್ನು ವರ್ಗಾಯಿಸಲಾಯಿತು.

ನಾನಾಸಾಹೇಬ ದಕ್ಷಿಣ ಭಾರತದ ರಾಜಕೀಯ ವಿದ್ಯಮಾನಗಳಿಗೆ ಹೆಚ್ಚು ಪ್ರಾಮುಖ್ಯ ನೀಡಿದ. ತನ್ನ ಹಿತರಕ್ಷಣೆಯ ಆತುರದಲ್ಲಿ ಇಂಗ್ಲಿಷರಿಗೆ ಮಹಾರಾಷ್ಟ್ರದಲ್ಲಿ ಕೆಲವೊಂದು ಸ್ಥಳಗಳನ್ನು ಬಿಟ್ಟುಕೊಟ್ಟ. ಮರಾಠರು 1758ರಲ್ಲಿ ಪಂಜಾಬನ್ನು ಜಯಿಸಿ ಅಹಮದ್ ಷಾ ಅಬ್ದಾಲಿಯ ಮಗ ತೈಮೂರನನ್ನು ಅಲ್ಲಿಂದ ಹೊರದೂಡಿದರು. ಆದರೆ 1761ರಲ್ಲಿ ಪಾಣಿಪಟ್‌ನಲ್ಲಿ ನಡೆದ ಕದನದಲ್ಲಿ ಅಹಮ್ಮದ್ ಷಾ ಅಬ್ದಾಲಿಯಿಂದ ಮರಾಠರು ಸೋತರು. ನಾನಾಸಾಹೇಬ ಪುಣೆಗೆ ಹಿಂದಿರುಗಿದ ಕೂಡಲೇ ತೀರಿಕೊಂಡ.

ಅನಂತರ ಪೇಷ್ವೆಯ ಪ್ರಾಬಲ್ಯ ಪ್ರಶ್ನಾತೀತವಾಗಿ ಉಳಿಯಲಿಲ್ಲ. ನಾನಾ ಸಾಹೇಬನ ಮಗ ಮಾಧವರಾಯ ತನ್ನ ವಂಶದ ಹಿರಿಯ ರಘೋಬನ ಹಿಡಿತದಿಂದ ಬಿಡುಗಡೆಯಾಗಲು ಬಹಳಷ್ಟು ಶ್ರಮಿಸಬೇಕಾಯಿತು. ಕೆಲವು ಮರಾಠ ಸರದಾರರು ದಖನ್ ಸುಬೇದಾರನೊಂದಿಗೆ ಸೇರಿಕೊಂಡು ಮರಾಠ ಸಾಮ್ರಾಜ್ಯವನ್ನೇ ದುರ್ಬಲಗೊಳಿಸುವ ಪ್ರಯತ್ನಕ್ಕೆ ಕೈ ಹಾಕಿದರು. ಜೊತೆಗೆ ಮರಾಠರು ದಕ್ಷಿಣ ಭಾರತದಲ್ಲಿ ಗೊತ್ತು ಗುರಿ ಇಲ್ಲದೆ ಯುದ್ಧಗಳಲ್ಲಿ ತೊಡಗಿ ಅಮೂಲ್ಯ ಸಂಪನ್ಮೂಲವನ್ನೂ ಕಾಲವನ್ನೂ ವ್ಯಯ ಮಾಡಿದರು. 1769–72ರ ಅವಧಿಯಲ್ಲಿ ಉತ್ತರ ಭಾರತದಲ್ಲಿ ಮತ್ತೆ ಮರಾಠರು ತಮ್ಮ ಶೌರ್ಯ ಮೆರೆದರು. ರಜಪೂತರು, ಜಾಟರು, ಆಫ್ಘನರು, ಪಠಾಣರು, ರೋಹಿಲರು, ಮರಾಠ ಸೈನ್ಯಕ್ಕೆ ತಲೆ ಬಾಗಿದರು. 1764ರಿಂದ ಬ್ರಿಟಿಷರ ಆಶ್ರಯದಲ್ಲಿದ್ದ ನಾಮಮಾತ್ರ ಮೊಗಲ್ ಸಾಮ್ರಾಟನನ್ನು ಮರಾಠರು ತಮ್ಮ ಆಶ್ರಯಕ್ಕೆ ಸೆಳೆದುಕೊಂಡರು. ಆದರೆ ಮರಾಠರ ಈ ಯಶಸ್ಸುಗಳು ಬಹುಕಾಲ ಬಾಳಲಿಲ್ಲ. 1772ರಲ್ಲಿ ಪೇಷ್ವೆ ಮಾಧವರಾಯ ಅಕಾಲ ಮರಣ ಹೊಂದಿದ. ಮರಾಠ ಒಕ್ಕೂಟಕ್ಕೆ ಇದರಿಂದ ಭಾರಿ ಪೆಟ್ಟು ಬಿತ್ತು. ಮಾಧವರಾಯನ ಉತ್ತರಾಧಿಕಾರಿ 1773ರಲ್ಲಿ ಕೊಲೆಯಾದ. ತರುವಾಯ ಯಾದವೀ ಕಲಹದಿಂದ ಮರಾಠರ ಪ್ರಾಬಲ್ಯ ಕಡಿಮೆಯಾಗುತ್ತ ಹೋಯಿತು.

ಮಾಧವರಾಯ ನಿಧನನಾದ ಮೇಲೆ ಹುಟ್ಟಿದ ಸವಾಯಿ ಮಾಧವರಾಯನನ್ನು ಪೇಷ್ವೆಯಾಗಿ ಮಾಡಲಾಯಿತು. ನಾನಾಪಡ್ನವೀಸ ರಾಜ್ಯದ ಪ್ರತಿನಿಧಿಯಾದ. ಆದರೆ ರಘೋಬನ ಸ್ವಾರ್ಥದಿಂದಾಗಿ ಸಾಲ್‌ಸೆಟ್‌ದ್ವೀಪ ಬ್ರಿಟಿಷರಿಗೆ ಹೋಗುವಂತಾಯಿತು. ದಕ್ಷಿಣದಲ್ಲಿ ನಿಜಾಮನನ್ನಾಗಲಿ, ಹೈದರ್‌ಅಲಿಯನ್ನಾಗಲಿ ಅನಂತರ ಟಿಪ್ಪುವನ್ನಾಗಲಿ ಮರಾಠರು ಒಟ್ಟಾಗಿ ಎದುರಿಸುವ ದಿನಗಳು ಮುಗಿದಿದ್ದುವು. ದೇಶೀಯ ಶಕ್ತಿಗಳೆಲ್ಲ ಒಂದಾಗಿ ಇಂಗ್ಲಿಷರನ್ನು ಎದುರಿಸುವ ಪರಿಸ್ಥಿತಿ ಇರಲಿಲ್ಲ.

ಪೇಷ್ವೆ ಮತ್ತು ಮಹದಾಜಿಸಿಂಧ್ಯನ ವೈಯುಕ್ತಿಕ ವೈಷಮ್ಯ ಹಾಗೂ ಮಹತ್ವಾಕಾಂಕ್ಷೆಗಳು ಮರಾಠ ಸಾಮ್ರಾಜ್ಯವನ್ನು ಹೋಳು ಮಾಡಿದುವು. ಮಹದಾಜಿ 1794ರಲ್ಲಿ ನಿಧನನಾದಾಗ ಉತ್ತರ ಭಾರತದಲ್ಲಿ ಮರಾಠರ ನೆಲೆಗೆ ಕೊಡಲಿ ಪೆಟ್ಟು ಬಿತ್ತು. ನಾನಾಫಡ್ನವೀಸ ಪೇಷ್ವೆಯನ್ನು ಅಂಕಿತದಲ್ಲಿಟ್ಟುಕೊಂಡು ಆಡಳಿತ ನಡೆಸುತ್ತಿದ್ದ. ಸವಾಯಿ ಮಾಧವರಾಯ 1795ರಲ್ಲಿ

ದುರ್ಮರಣಕ್ಕೀಡಾದಾಗ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಅನಂತರ ಅಧಿಕಾರಕ್ಕಾಗಿ ಕಲಹ ನಡೆದು ಎರಡನೆಯ ಬಾಜೀರಾಯ ಪೇಷ್ವೆಯಾದ. ಈತ ಕುತಂತ್ರಿ, ಸ್ವಾರ್ಥಪರ, ಸಂಕುಚಿತ ಮನೋಭಾವದವನಾಗಿದ್ದ. 1802–18ರಲ್ಲಿ ಬ್ರಿಟಿಷರು ಎಲ್ಲ ಮರಾಠ ಸರದಾರರನ್ನು ಬಿಡಿ ಬಿಡಿಯಾಗಿ ಸೋಲಿಸಿದರು. 1818ರಲ್ಲಿ ಮಹೊ ಎಂಬಲ್ಲಿ ಎರಡನೆಯ ಬಾಜೀರಾಯ ಬ್ರಿಟಿಷರಿಗೆ ಶರಣಾಗತನಾದ. ಈ ಘಟನೆಯೊಂದಿಗೆ ಪೇಷ್ವೆಗಳ ಕಾಲ ಮುಗಿಯಿತು.(ಡಿ.ಎಸ್.ಜಿ.)

**ಪೈಠಣ:** ಮಹಾರಾಷ್ಟ್ರ ರಾಜ್ಯದ ಅಹಮದ್ ನಗರ ಜಿಲ್ಲೆಯಲ್ಲಿರುವ ಆದಿಚಾರಿತ್ರಿಕ ಮತ್ತು ಮಧ್ಯಯುಗೀನ ಕಾಲದ ವಸತಿ ನೆಲೆ. ಇದು ಗೋದಾವರಿಯ ಎಡದಂಡೆಯ ಮೇಲಿದೆ. ಹೈದರಾಬಾದಿನ ನಿಜಾಮ್ ಸಂಸ್ಥಾನದ ಪುರಾತತ್ತ್ವ ವಿಭಾಗ 1937ರಲ್ಲಿ ಸೈಯದ್ ಯೂಸುಫ್ ಅವರ ನಿರ್ದೇಶನದಲ್ಲಿ ಇಲ್ಲಿ ಉತ್ಖನನ ನಡೆಸಿತು. ಸಾತವಾಹನ, ತುಗಲಕ್–ಮೊಗಲ್–ಬಹಮನಿ ಹಾಗೂ ಬ್ರಿಟಿಷ್ ಕಾಲಾವಧಿಯ ಅವಶೇಷಗಳನ್ನು ಈ ಉತ್ಖನನದಲ್ಲಿ ಹೊರತೆಗೆಯ ಲಾಯಿತು. 1965ರಲ್ಲಿ ಮಹಾರಾಷ್ಟ್ರ ರಾಜ್ಯ ಪುರಾತತ್ತ್ವ ಇಲಾಖೆಯ ಎಂ.ಜಿ.ದೀಕ್ಷಿತರು ಸ್ತರಕ್ರಮವನ್ನು ಅರಿಯುವ ಉದ್ದೇಶದಿಂದ ಇಲ್ಲಿ ಒಂದು ಪರೀಕ್ಷೆ ಗುಂಡಿಯನ್ನು ಅಗೆದರು. ಇದರಲ್ಲಿ ಮೂರು ಸಾಂಸ್ಕೃತಿಕ ಹಂತಗಳು ಕಂಡುಬಂದವು: ಸಾತವಾಹನ (ಪ್ರ.ಶ.ಪೂ.300–ಪ್ರ.ಶ.100), ರಾಷ್ಟ್ರಕೂಟ (600–800) ಮತ್ತು ಮಧ್ಯಯುಗೀನ ಕಾಲದ ಅಂತ್ಯ ಭಾಗ (1700–1800). 1995ರಲ್ಲಿ ರಾಜ್ಯ ಪುರಾತತ್ತ್ವ ಇಲಾಖೆ ಔರಂಗಾಬಾದಿನ ಬಾಬಾಸಾಹೇಬ್ ಅಂಬೇಡ್ಕರ್ ಮರಾಠವಾಡ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಇಲ್ಲಿ ಸಣ್ಣಮಟ್ಟದ ಉತ್ಖನನ ನಡೆಸಿತು. 1996–97ರಲ್ಲಿ ಜೇಮ್ಸ್ ಹೊವೆಲ್ ಮತ್ತು ಕಾಂಬ್ಳೆಯವರ ತಂಡ ಇಲ್ಲಿ ಮತ್ತೆ ಉತ್ಖನನ ಕೈಗೊಂಡಿತು.

1965ರ ಉತ್ಖನನದಲ್ಲಿ ಸಿಕ್ಕ ಆದಿ ಸಾತವಾಹನ ಕಾಲದ ಅವಶೇಷಗಳೆಂದರೆ ಗಜಲಕ್ಷ್ಮಿ ಚಿಹ್ನೆಯುಳ್ಳ ತಾಮ್ರ ಮಿಶ್ರ ಲೋಹದ 2 ನಾಣ್ಯಗಳು, ಗಾಜಿನ ಮಣಿಗಳು, ದಂತದ ಕಾಡಿಗೆ ಕಡ್ಡಿ ಮತ್ತು ಸಿಂಹದ ಶಿರ, ಕೆಯೊಲಿನ್‌ನಿಂದ ಮಾಡಿದ ಮಟ್ಟ ಸ್ತ್ರೀ ಮೂರ್ತಿಗಳು, ಸುಡಾವೆಮಣ್ಣಿನ ಮಣಿಗಳು, ಸವೆದುಹೋದ ಔತ್ತರೇಯ ಮೆರಗಿನ ಕಪ್ಪುಪಾತ್ರೆ ಚೂರುಗಳು ಮತ್ತು ಕಾಲುಳ್ಳ ಅರೆಯುವ ಕಲ್ಲು. ಆಯತಾಕಾರದ ಎರಡು ಇಟ್ಟಿಗೆ ಕಟ್ಟಡಗಳ ಗೋಡೆಗಳು, ವರ್ತುಲಾಕಾರದ ಮೂರು ಇಟ್ಟಿಗೆ ಕಟ್ಟಡಗಳು ಮತ್ತು ಚರಂಡಿ ಈ ಹಂತದ ಕಟ್ಟಡಾವ ಶೇಷಗಳು. ಈ ಹಂತದ ಸ್ತರದ ಮೇಲೆ ಹೂಳುಮಣ್ಣಿನ ದಪ್ಪ ಪದರವಿದೆ (100–500). ಇದು ನೆರೆ ನಿಕ್ಷೇಪವಾಗಿರುವ ಸಾಧ್ಯತೆಯಿದೆ. ಎರಡನೆಯ ಹಂತದಲ್ಲಿ ಪಾಳುಬಿದ್ದ ದೊಡ್ಡ ಇಟ್ಟಿಗೆಯ ದೇಗುಲವೊಂದರ ಅಧಿಷ್ಠಾನ ಮತ್ತು ಜಂಘ ಭಾಗಗಳು ಕಂಡುಬಂದವು. ಇದರ ಅಡಿಪಾಯದಲ್ಲಿ ಕಬ್ಬಿಣದ ಉಪಕರಣಗಳೂ ಕಿಟ್ಟದ ತುಂಡುಗಳೂ ಇದ್ದವು. ಈ ದೇಗುಲ ರಾಷ್ಟ್ರಕೂಟರ ನಿರ್ಮಾಣವಿರಬೇಕು. ಮೂರನೆಯ ಹಂತದಲ್ಲಿ ನೆಲಮಾಳಿಗೆಯ ಭಾಗಗಳು, ಒಡ್ಡೊಡ್ಡಾದ ಕೆಂಪು ಮಣ್ಪಾತ್ರೆಗಳು ಸಿಕ್ಕವು. ಇವು 18–19ನೆಯ ಶತಮಾನದವು.

1996–97ರ ಉತ್ಖನನದಿಂದ 73 ಮತ್ತು ನೆಲೆಯ ಮೇಲ್ಮೈಯಿಂದ 18 ವಿವಿಧಾಕಾರದ ನಾಣ್ಯಗಳನ್ನು ಸಂಗ್ರಹಿಸಲಾಯಿತು. ಎರಡು ಸೀಸದ ನಾಣ್ಯಗಳನ್ನು ಹೊರತುಪಡಿಸಿ ಉಳಿದವು ತಾಮ್ರಮಿಶ್ರ ಲೋಹದಿಂದ ಮಾಡಿದವು. ಹೆಚ್ಚಿನವು ಬಹಳ ಸವೆದಿವೆ. ಒಂದು ನಾಣ್ಯದ ಮೇಲೆ ಉಜ್ಜಯಿನಿ, ಮೂರು ಕಮಾನಿನ ಗುಡ್ಡ ಹಾಗೂ ಸೂರ್ಯನ ಚಿಹ್ನೆಗಳಿವೆ. ಕೆಲವು ನಾಣ್ಯಗಳ ಮೇಲೆ ಆನೆ, ಕುದುರೆ, ಸಿಂಹ(?) ಮುಂತಾದ ಪ್ರಾಣಿಗಳ ಚಿಹ್ನೆಗಳಿವೆ. ಆನೆ ಚಿಹ್ನೆಯುಳ್ಳ ಒಂದು ನಾಣ್ಯದ ಮೇಲೆ ..........ಮಾವಿಸ ಎಂಬ ಅರ್ಧ ಅಳಿದ ಬರೆಹವಿದೆ. ಇದು ಸಾತವಾಹನ ರಾಜನಾದ ಪುಳುಮಾವಿಯ ನಾಣ್ಯ ಎಂಬುದು ಖಚಿತ. ಕೆಲವು ಆನೆ ಚಿಹ್ನೆಯ ನಾಣ್ಯಗಳ ಮತ್ತೊಂದು ಮುಖದ ಮೇಲೆ ಉಜ್ಜಯಿನಿ ಚಿಹ್ನೆಯಿದೆ. ನೆಲೆಯ ಮೇಲ್ಮೈಯಿಂದ ಹೆಕ್ಕಿದ ನಾಣ್ಯವೊಂದರ ಮುಖದ ಮೇಲೆ ಕುದುರೆ ಹಾಗೂ ಬಿಲ್ಲು–ಬಾಣದ ಚಿಹ್ನೆಗಳಿವೆ. ಈ ಎಲ್ಲ ನಾಣ್ಯಗಳು ಸಾತವಾಹನರದ್ದಾಗಿವೆ. ಒಟ್ಟಿನಲ್ಲಿ 1996–97ರಲ್ಲಿ ದೊರೆತ ನಾಣ್ಯಗಳು ಮೌರ್ಯೋತ್ತರ, ಸಾತವಾಹನ, ಕ್ಷತ್ರಪ ಕಾಲಾವಧಿಗಳಿಗೆ ಸೇರುತ್ತವೆ. 2 ನಾಣ್ಯಗಳು ಮುಸಲ್ಮಾನ ರಾಜರದ್ದಾಗಿವೆ. ಈ ನಾಣ್ಯಗಳ ಜೊತೆ ದೊರೆತ ಅವಶೇಷಗಳೆಂದರೆ ಅಗೇಟ್, ಕ್ಯಾಲ್ಸೆಡನಿ, ಜಾಸ್ಪರ್, ಸ್ಫಟಿಕ ಮುಂತಾದ ಅರೆಪ್ರಶಸ್ತ ಕಲ್ಲಿನ ಮಣಿಗಳು, ಗಾಜು ಮತ್ತು ಸುಡಾವೆಮಣ್ಣಿನ ಮಣಿಗಳು, ಮಣ್ಣಿನ ಬಳೆಗಳು, ಆಟಿಕೆಯ ಚಕ್ರಗಳು, ತಕಲಿ, ಮೂಳೆಯ ಪಿನ್ನು, ಮೊನೆ, ಬಳೆ, ಬಿಲ್ಲೆಗಳು, ಸುಡಾವೆಮಣ್ಣಿನ ಆನೆ–ಹಕ್ಕಿ ಮೊದಲಾದ ಬೊಂಬೆಗಳು, ಕಬ್ಬಿಣದ ಮೊಳೆ, ಬಾಣದ ಮೊನೆ, ಸೂಜಿ, ಉಳಿ ಮತ್ತು ಚೂರಿಯ ಅಲಗುಗಳು. (ವಿ.ಇ.ಎಸ್.ವಿ.)

**ಪೈಸ್ರ:** ಉತ್ತರಪ್ರದೇಶ ರಾಜ್ಯದ ಮಾಂಘೀರ್ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಉತ್ಖನನದಲ್ಲಿ ಆದಿ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗದ ಅವಶೇಷಗಳು ಬೆಳಕಿಗೆ ಬಂದಿವೆ. ಆದಿ ಹಳೆಶಿಲಾಯುಗದಲ್ಲಿ ಜನ ಸರಳವಾದ ಆಸರೆಗಳನ್ನು ಮಾಡಿಕೊಂಡಿದ್ದ ಕುರುಹುಗಳು ದೊರೆತಿರುವುದು ಒಂದು ಅಪರೂಪದ ಸಂಗತಿ. ಸೂಕ್ಷ್ಮ ಶಿಲಾಯುಗದಲ್ಲಿ ಇದು ಉಪಕರಣಗಳನ್ನು ತಯಾರಿಸುವ ಕೈಗಾರಿಕಾ ನೆಲೆಯಾಗಿತ್ತು. *

**ಪೋರ್ಕಳಮ್:** ಕೇರಳ ರಾಜ್ಯದ ತ್ರಿಶೂರ್ ಜಿಲ್ಲೆಯ ತಲ್‌ಪಳ್ಳಿ ತಾಲ್ಲೂಕಿನಲ್ಲಿರುವ ಬೃಹತ್‌ಶಿಲಾಯುಗದ ಅಸ್ಥಿಮಡಕೆಗಳ ನೆಲೆ. ಈ ನೆಲೆ ಮರಳುಮಿಶ್ರಿತ ಜೇಡಿಮಣ್ಣು ಅಥವಾ ಸಣ್ಣ ಜಲ್ಲಿಕಲ್ಲಿನ ಪದರದಿಂದ ಮುಚ್ಚಿರುವ ಇಳಿಜಾರಾದ ಜಂಬುಕಲ್ಲಿನ ತಳಬಂಡೆಯ ಮೇಲಿದೆ. ಬಿ.ಕೆ.ಥಾಪರ್ ಅವರು 1948ರಲ್ಲಿ ಇಲ್ಲಿನ ಒಂದು ಅಸ್ಥಿಮಡಕೆಯನ್ನು ಉತ್ಖನನ ದಿಂದ ಹೊರತೆಗೆದರು. ಅಸ್ಥಿಮಡಕೆಯ ಸುತ್ತ ಜಂಬುಕಲ್ಲಿನ ಸೈಜುಗಲ್ಲುಗಳಿಂದ ನಿರ್ಮಿಸಿದ 2.3ಮೀ ವ್ಯಾಸದ ವೃತ್ತವಿದೆ. ವೃತ್ತದ ಕೇಂದ್ರದಲ್ಲಿ ಗ್ರಾನೈಟಿನ ಚಪ್ಪಡಿಕಲ್ಲನ್ನು ಹೇರಲಾಗಿದೆ. ಸುಮಾರು 1ಮೀ ವ್ಯಾಸದ ಹಾಗೂ 1.5ಮೀ ಆಳದ ಗುಂಡಿಯನ್ನು ಮಣ್ಣು ಮತ್ತು ಅದರ ಕೆಳಗಿರುವ ಜಂಬುಕಲ್ಲಿನ ನಿಕ್ಷೇಪದಲ್ಲಿ ಅಗೆದು ಅದರೊಳಗೆ ಈ ಅಸ್ಥಿಮಡಕೆಯನ್ನು ಇರಿಸಲಾಗಿದೆ. ಈ ಮಡಕೆಯ ಒಳಗೆ, ತಳಭಾಗದಲ್ಲಿ ಏಳು ಮಡಕೆಗಳು, ಮೂರು ಕಬ್ಬಿಣದ ಉಪಕರಣಗಳು ಮತ್ತು 48 ಕಾರ್ನೇಲಿಯನ್ ಮಣಿಗಳು ಇದ್ದವು. ಅಸ್ಥಿಮಡಕೆಯನ್ನು ಮುಚ್ಚಳದಿಂದ ಮುಚ್ಚಲಾಗಿತ್ತು. ಮಡಕೆಯ ಒಳಗೆ ಮಣ್ಣನ್ನು ತುಂಬಿರಲಿಲ್ಲ. ಆದರೆ ಇದನ್ನಿರಿಸಿದ ಗುಂಡಿಯನ್ನು ಜಲ್ಲಿಕಲ್ಲುಮಿಶ್ರಿತ ಮಣ್ಣಿನಿಂದ ಮುಚ್ಚಳದವರೆಗೆ ಮುಚ್ಚಲಾಗಿತ್ತು. ಹೀಗೆ ಮುಚ್ಚಿದ ಅನಂತರ 18 ಮಡಕೆಗಳನ್ನು ಮುಚ್ಚಳದ ಮೇಲೆ ಜೋಡಿಸಿ ಅನಂತರ ಈ ಜಾಗದಲ್ಲಿ ಒಂದು ಸಣ್ಣ ದಿಬ್ಬವಾಗುವ ರೀತಿಯಲ್ಲಿ ಮೇಲೆ ಹೇಳಿದ ಮಣ್ಣನ್ನೇ ತುಂಬಿ ಅದರ ಮೇಲೆ ಕಲ್ಲಿನ ಚಪ್ಪಡಿಯನ್ನು ಇರಿಸಲಾಗಿದೆ.

ಅಸ್ಥಿಮಡಕೆ ಮಾಸಲು ಕೆಂಪುಬಣ್ಣದ್ದು. ಇದರ ಗಾತ್ರ ಗುಡಾಣದಷ್ಟು. ಭುಜಭಾಗ ಗೋಲವಾಗಿದ್ದು ಮೈ ಉದ್ದಕ್ಕೆ ಸಪೂರವಾಗಿದೆ. ತಳ ಪುಟ್ಟದಾಗಿದ್ದು ವೃತ್ತಾಕಾರವಾಗಿದೆ. ಮಡಕೆಯ ಹೊರಮೈಯಲ್ಲಿ ಭುಜಭಾಗದ ಮೇಲೆ ಅಂಟಿಸಿ ಮಾಡಲಾದ ಮಣ್ಣಿನ ದಪ್ಪ ಪಟ್ಟಿಯಿದೆ. ಈ ಪಟ್ಟಿಯನ್ನು ಬೆರಳ ತುದಿಯಿಂದ ಕ್ರಮವಾಗಿ ಒತ್ತಿ ಅಲಂಕರಿಸಲಾಗಿದೆ. ಮಡಕೆಯ ಒಳಭಾಗದಲ್ಲಿ ಕುತ್ತಿಗೆಯ ಕೆಳಗೆ ಐದು ಕೊಕ್ಕೆಗಳಿದ್ದುದು ವಿಶೇಷ. ಇವುಗಳಲ್ಲಿ ಮೂರು ಸ್ವಸ್ಥಾನದಲ್ಲಿಯೇ ಇದ್ದರೆ ಇನ್ನೆರಡು ಕೆಳಗೆ ಬಿದ್ದಿದ್ದವು. ಯಾವುದೋ ವಸ್ತುವನ್ನು ಇವಕ್ಕೆ ತೂಗುಹಾಕಿದ್ದಿರಬೇಕು. ಆದಿಚನ್ನಲೂರಿನ ಕೆಲವು ಅಸ್ಥಿಮಡಕೆಗಳಲ್ಲೂ ಇಂತಹ ಕೊಕ್ಕೆಗಳಿವೆ. ಅಸ್ಥಿಮಡಕೆಯೊಳಗಿದ್ದ ಮಣ್ಪಾತ್ರೆಗಳು ತಿಗುರಿಯ ಮೇಲೆ ತಯಾರಾದವು. ಕಪ್ಪು–ಕೆಂಪು ದ್ವಿವರ್ಣ ಹಾಗೂ ಕಪ್ಪುಬಣ್ಣದ ಪಾತ್ರೆಗಳು ಇಲ್ಲಿವೆ. ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳಲ್ಲಿ ಆಳವಿಲ್ಲದ ಮತ್ತು ಆಳವಾದ ಬಟ್ಟಲು ಹಾಗೂ ತಟ್ಟೆಗಳಿವೆ. ಆಳವಾದ ಬಟ್ಟಲು, ಮುಚ್ಚಳ ಮತ್ತು ವೃತ್ತಾಕಾರದ ಸಿಂಬಿಗಳು ಕಪ್ಪುಬಣ್ಣದ ಪಾತ್ರೆ ಬಗೆಗಳು. ಇವಲ್ಲದೆ, ಕೆಂಪುಲೇಪನವುಳ್ಳ ಮೂರು ಪಾತ್ರೆಗಳಿವೆ. ಇವುಗಳಲ್ಲಿ ನಾಲ್ಕುಕಾಲಿನ ಎರಡು ಮಡಕೆಗಳು, ಒಂದು ಸುಡಾವೆಮಣ್ಣಿನ ಮಣಿ, 48 ಎಚ್ಚಿದ ಕಾರ್ನೇಲಿಯನ್ ಮಣಿಗಳು ಮತ್ತು ಆರು ಲೋಹದ ಮಣಿಗಳು ಇತರ ಅವಶೇಷಗಳು. ಎಚ್ಚಿದ ಮಣಿಗಳು ಪೀಪಾಯಿ, ಗೋಲ ಹಾಗೂ ಕೊಳವೆಯಾಕಾರಗಳಲ್ಲಿವೆ. ಅಲಗು, ಚೂಪುತುದಿಯುಳ್ಳ ಸಲಾಕೆ ಮತ್ತು ಹಿಡಿಕೆಯಲ್ಲಿ ಸಿಕ್ಕಿಸುವಂತಿರುವ ಚೂರಿ ಇಲ್ಲಿ ದೊರೆತ ಕಬ್ಬಿಣ ಉಪಕರಣಗಳು. ತುಲನಾತ್ಮಕ ಆಧಾರದ ಮೇಲೆ ಈ ಗೋರಿಯನ್ನು ಪ್ರ.ಶ.ಪೂ.200–ಪ್ರ.ಶ.1ನೆಯ ಶತಮಾನದ ನಡುವಿನ ಅವಧಿಯಲ್ಲಿ ಇಡಲಾಗಿದೆ. (ಟಿ.ಎಸ್.)

**ಪೋರ್ಚುಗೀಸರು:** ಸಮುದ್ರ ಮಾರ್ಗವಾಗಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಭಾರತಕ್ಕೆ ಬಂದ ಪ್ರಥಮ ಯುರೋಪಿಯನ್ ವ್ಯಾಪಾರಿಗಳೇ ಪೋರ್ಚುಗೀಸರು. ವಾಸ್ಕೋಡಗಾಮನ ನಾಯಕತ್ವದಲ್ಲಿ ನಾಲ್ಕು ಹಡಗುಗಳಲ್ಲಿ 1498 ಮೇ 20ರಂದು ಭಾರತದ ನೆಲದ ಮೇಲೆ ಕಾಲಿಟ್ಟರು. ಆಗ ಮಲಬಾರ್ ಪ್ರದೇಶದ ದೊರೆ ಜಾಮೊರಿನ್ನನ ಔದಾರ್ಯದಿಂದಾಗಿ ಕಲ್ಲಿಕೋಟೆಯ ಬಳಿಯಿರುವ ಕೊಚ್ಚಿ ಮತ್ತು ಕಣ್ಣಾನೂರುಗಳಿಗೆ ಭೇಟಿ ನೀಡಿ ಅನಂತರ ಪೋರ್ಚುಗಲ್ಲಿಗೆ ಹಿಂದಿರುಗಿದರು. ಇವರು ಭಾರತಕ್ಕೆ ಬಂದ ಕಾಲ ಅನುಕೂಲಕರವಾಗಿತ್ತು. ಉತ್ತರ ಭಾರತದಲ್ಲಿ ದೆಹಲಿಯ ಸುಲ್ತಾನರ ಆಳಿಕೆ ದುರ್ಬಲ ವಾಗಿತ್ತು. ದಕ್ಷಿಣದಲ್ಲಿ ಬಹಮನಿ ರಾಜ್ಯಗಳು ಪ್ರಾಬಲ್ಯ ಹೊಂದುತ್ತಿದ್ದುವು. ಭಾರತದಲ್ಲಿ ಹೇಳಿಕೊಳ್ಳುವಂಥ ಪ್ರಬಲ ರಾಜ್ಯ ಯಾವುದೂ ಇರಲಿಲ್ಲ. ಸಮುದ್ರದ ಮೂಲಕ ಬಂದ ವಿದೇಶಿಯರನ್ನು ಎದುರಿಸಬಲ್ಲ ನೌಕಾಸಾಮರ್ಥ್ಯ ಯಾವ ರಾಜ್ಯಕ್ಕೂ ಇರಲಿಲ್ಲ. ಆಗ ಪೋರ್ಚುಗೀಸರಿಗೆ ಅಡ್ಡಿಯಾಗಿದ್ದವರೆಂದರೆ ಅರಬ್ ವ್ಯಾಪಾರಿಗಳು. ಭಾರತದ ವ್ಯಾಪಾರ ಅವರ ಹಿಡಿತದಲ್ಲಿತ್ತು.

1502ರಲ್ಲಿ ವಾಸ್ಕೋಡಗಾಮ ಮತ್ತೆ ಭಾರತಕ್ಕೆ ಬಂದ. ಅರಬ್ ವ್ಯಾಪಾರಿಗಳನ್ನು ದೂರ ಇಟ್ಟು, ಪೋರ್ಚುಗೀಸರಿಗೆ ವ್ಯಾಪಾರದ ಏಕಸ್ವಾಮ್ಯವನ್ನು ನೀಡಬೇಕೆಂಬುದು ಜಾಮೊರಿನ್ ದೊರೆಗೆ ಪೋರ್ಚುಗೀಸರ ಬೇಡಿಕೆಯಾಗಿತ್ತು. ದೊರೆ ಇದಕ್ಕೆ ಒಪ್ಪದ್ದರಿಂದ ಪೋರ್ಚುಗೀಸರೊಂದಿಗೆ ವಿರಸ ಬೆಳೆಯಿತು. ಆದರೆ ಭಾರತದೊಂದಿಗೆ ಪೋರ್ಚುಗೀಸರ ವ್ಯಾಪಾರವೂ ಬೆಳೆಯುತ್ತಿತ್ತು. 1505ರಲ್ಲಿ ಪ್ರಥಮ ಪೋರ್ಚುಗೀಸ್ ವೈಸ್‌ರಾಯಿಯಾಗಿ ಫ್ರಾನ್ಸಿಸ್ಕೊದೆ ಆಲ್ಮೇಯಿದ (1505–10) ನೇಮಕವಾದ. ಅರಬ್ಬಿ ಸಮುದ್ರದಲ್ಲಿ ಪೋರ್ಚುಗೀಸ್ ನೌಕೆಗೂ ಈಜಿಪ್ಟ್ ಮತ್ತು ಗುಜರಾತಿ ಸಂಯುಕ್ತ ನೌಕಾಬಲಕ್ಕೂ ನಡೆದ ಕದನದಲ್ಲಿ ಪೋರ್ಚುಗೀಸರ ಕೈ ಮೇಲಾಯಿತು. ಅನಂತರ ಪೋರ್ಚುಗೀಸ್ ಗವರ್ನರ್ ಆಗಿ ಬಂದವನು ಆಲ್ಬುಕರ್ಕ್. ಭಾರತದಲ್ಲಿ ಪೋರ್ಚುಗೀಸ್ ಆಳಿಕೆಗೆ ಇವನು ದೃಢವಾದ ಅಸ್ತಿಭಾರ ಹಾಕಿದ. ಪಶ್ಚಿಮದಿಂದ ಹಿಂದೂ ಮಹಾಸಾಗರ ಪ್ರದೇಶಕ್ಕೆ ಬರುವ ಎಲ್ಲ ಸಮುದ್ರ ಮಾರ್ಗಗಳ ಮೇಲೂ ಪೋರ್ಚುಗೀಸರು ಹಿಡಿತ ಸ್ಥಾಪಿಸಿದರು. ಇದರಿಂದ ಅರಬ್ ನೌಕಾಬಲ ಕುಗ್ಗಿತು. ಬಹುಕಾಲ ಭಾರತದಲ್ಲಿ ಗವರ್ನರ್ ಆಗಿದ್ದ ಈತ ಗೋವೆಯನ್ನು ಗೆದ್ದು ಪೋರ್ಚುಗೀಸ್ ಧ್ವಜವನ್ನು ಅಲ್ಲಿ ಏರಿಸಿದ. ಪೋರ್ಚುಗೀಸರ ಆಳಿಕೆಯನ್ನು ಸುಭದ್ರವಾಗಿರಿಸಲು ಸಕಲ

ಸನ್ನಾಹಗಳನ್ನು ನಡೆಸಿ ಅಲ್ಲಿಯ ನಿವಾಸಿಗಳ ವಿಶ್ವಾಸ ಸಂಪಾದಿಸಲು ಉದ್ಯುಕ್ತನಾದ. ಆದರೆ, ಮುಸಲ್ಮಾನರ ಮೇಲೆ ಅವನಿಗೆ ಕ್ರೋಧವಿತ್ತು. ಅವರು ಪಶ್ಚಿಮ ತೀರದ ವ್ಯಾಪಾರವನ್ನೆಲ್ಲ ತಮ್ಮ ಕೈಯ್ಯಲ್ಲಿಟ್ಟುಕೊಂಡಿದ್ದರೆಂಬುದೇ ಈ ಕ್ರೋಧಕ್ಕೆ ಕಾರಣ.

ಗೋವೆಯ ಮೇಲೆ ಆಲ್ಬುಕರ್ಕ್ ಮೊದಲನೆಯ ಸಲ ದಂಡೆತ್ತಿ ಬಂದಾಗ ಪ್ರತಿಭಟನೆ ಪ್ರಬಲವಾಗಿದ್ದರಿಂದ ಅವನ ಯತ್ನ ಫಲಿಸಲಿಲ್ಲ. ತರುವಾಯ ಅವನು ಸ್ಥಳೀಯ ಪ್ರಮುಖನೊಬ್ಬನ ನೆರವಿನಿಂದ ಮತ್ತೊಮ್ಮೆ ಆಕ್ರಮಣದ ಪ್ರಯತ್ನ ನಡೆಸಿದ. ಆ ಕಾಲಕ್ಕೆ ಗೋವೆ ಬಿಜಾಪುರದ ದೊರೆ ಇಸ್ಮಾಯಿಲ್ ಆದಿಲ್‌ಶಾಹನ ಆಳಿಕೆಗೆ ಒಳಪಟ್ಟಿತ್ತು. ಆ ಆಕ್ರಮಣದ ಪ್ರಯತ್ನದಲ್ಲಿ ಆಲ್ಬುಕರ್ಕ್‌ನಿಗೆ ವಿಜಯ ದೊರಕಿತು. 1510ರ ಅಂತ್ಯದಲ್ಲಿ ಗೋವೆ ಸಂಪೂರ್ಣವಾಗಿ ಅವನ ವಶವಾಗಿಬಿಟ್ಟಿತು. ಅಲ್ಲಿಯ ಮುಸಲ್ಮಾನರು ತಮಗೆ ದ್ರೋಹ ಬಗೆದರೆಂದು ಅವರನ್ನು ಆಲ್ಬುಕರ್ಕ್ ನಿಷ್ಕರುಣೆಯಿಂದ ಕೊಂದು ಊರನ್ನು ಲೂಟಿ ಮಾಡಿದನಲ್ಲದೆ ಕೋಟೆ ಕೊತ್ತಲಗಳನ್ನು ಸರಿಪಡಿಸಿ ಭದ್ರಪಡಿಸಿದ. ಆ ಆಕ್ರಮಣ ಕಾರ್ಯದಲ್ಲಿ ಅವನಿಗೆ ಪೋರ್ಚುಗೀಸ್ ದೊರೆಯ ಸಂಪೂರ್ಣ ಬೆಂಬಲ ಸಹಾಯಗಳಿದ್ದವು.

ಹಿಂದೆ ವಿಜಯನಗರದ ಅರಸರ ಅಧೀನದಲ್ಲಿದ್ದು ಬಹಮನಿ ಸುಲ್ತಾನನ ವಶಕ್ಕೆ ಹೋಗಿದ್ದ ಗೋವೆಯನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ವಿಜಯನಗರ ದೊರೆ ಕೃಷ್ಣದೇವರಾಯ ಯೋಚಿಸಿದ. ಅಷ್ಟರಲ್ಲಿ ಪೋರ್ಚುಗೀಸರು ಇದನ್ನು ಆಕ್ರಮಿಸಿಕೊಂಡರಾದ್ದರಿಂದ ಕೃಷ್ಣದೇವರಾಯನ ಉದ್ದೇಶ ಫಲಿಸಲಿಲ್ಲ. ಆದರೂ ಅವನು ಪೋರ್ಚುಗೀಸರ ವಿರೋಧ ಕಟ್ಟಿಕೊಳ್ಳಲಿಲ್ಲ. ಕೃಷ್ಣದೇವರಾಯನ ದಂಡಯಾತ್ರೆಗಳಿಗೆ ಪೋರ್ಚುಗೀಸರಿಂದ ಶಸ್ತ್ರಾಸ್ತ್ರಗಳ ರೂಪದಲ್ಲಿ ನೆರವು ಅವಶ್ಯವಾಗಿತ್ತು. ಆದ್ದರಿಂದ ಅವರೊಡನೆ ಸಖ್ಯ ಬೆಳೆಸಿದ. ಗೋವೆಯಲ್ಲಿ ಪೋರ್ಚುಗೀಸರು ನೆಲೆಯೂರಲು ಇದು ಸಹಾಯಕವಾಯಿತು.

ಪೋರ್ಚುಗೀಸರು ಗೋವೆಯನ್ನು ಆಕ್ರಮಿಸಿಕೊಂಡ ಮೇಲೆ ಅಲ್ಲಲ್ಲಿದ್ದ ಸಣ್ಣಪುಟ್ಟ ಸ್ಥಳೀಯ ಪ್ರಭುಗಳೊಡನೆ ಸ್ನೇಹ ಸಂಪಾದಿಸಿ, ವ್ಯಾಪಾರಕ್ಕೆ ಅವರಿಂದ ಅನೇಕ ರಿಯಾಯಿತಿಗಳನ್ನು ಪಡೆದು, ಕಡೆಗೆ ಆ ಪ್ರದೇಶಗಳನ್ನು ತಮ್ಮ ಆಳಿಕೆಗೆ ಒಳಪಡಿಸಿಕೊಂಡರು. ಹೀಗೆ ಅವರು ಎರಡು ಶತಮಾನಗಳಲ್ಲಿ ತಮ್ಮ ಆಳಿಕೆಯನ್ನು ವಿಸ್ತರಿಸಿ ಬೇರು ಬಿಟ್ಟರು. ಅದರ ಆಳಿಕೆ ಕೇವಲ ಗೋವೆಗೆ ಮಾತ್ರ ಸೀಮಿತವಾಗಲಿಲ್ಲ. ಇವರು ಪಶ್ಚಿಮ ತೀರದ ರಾಜರುಗಳ ಸ್ನೇಹ ವಿಶ್ವಾಸಗಳನ್ನು ಗಳಿಸಿದ್ದರು. ಇವರ ಪ್ರಭಾವ ಅತ್ತ ಕಡೆಯೂ ಹಬ್ಬಿತು. ಅಹಮದಾಬಾದಿನ ಮುಸ್ಲಿಂ ದೊರೆ ತನ್ನ ರಾಯಭಾರಿಯನ್ನು ಆಲ್ಬುಕರ್ಕನಲ್ಲಿಗೆ ಕಳುಹಿಸಿ ಸ್ನೇಹ ಹಸ್ತ ನೀಡಿದ. ಅದುವರೆಗೂ ವೈರಿ ಎನಿಸಿದ್ದ ಕಲ್ಲಿಕೋಟೆಯ ಜಾಮೊರಿನ್ ಸಹ ಸ್ನೇಹಕ್ಕಾಗಿ ಕಾತರನಾದ. ಆದರೆ, ಆಲ್ಬುಕರ್ಕನ ಷರತ್ತುಗಳಿಗೆ ಜಾಮೊರಿನ್ ಒಪ್ಪದಿದ್ದುದರಿಂದ ಸ್ನೇಹ ಸಂಧಾನ ಮುರಿದುಬಿತ್ತು.

ವ್ಯಾಪಾರದ ಹೆಸರಿನಲ್ಲಿ ಪೋರ್ಚುಗೀಸ್ ಆಡಳಿತ ಮುಖಂಡರು ಬಂಗಾಲದತ್ತ ಸಹ ತಮ್ಮ ದೃಷ್ಟಿಯನ್ನು ಹೊರಳಿಸಿ, ಚಿತ್ತಗಾಂಗ್, ಹೂಗ್ಲಿ ಮುಂತಾದೆಡೆಗಳಲ್ಲಿ ಕೋಠಿಗಳನ್ನು ಸ್ಥಾಪಿಸಿದರು; ಬಂಗಾಲದ ದೊರೆಯೊಡನೆ ಸಖ್ಯ ಬೆಳೆಸಿದರು. ಮುಸ್ಲಿಂ ರಾಜರ ಹಾಗೂ ತುರ್ಕಿಯ ಆಕ್ರಮಣವನ್ನು ತಡೆಗಟ್ಟುವ ಉದ್ದೇಶದಿಂದ ಗುಜರಾತಿನಲ್ಲಿ ಬಲವಾದ ಕೋಟೆಯನ್ನು ನಿರ್ಮಿಸಬೇಕೆಂಬ ಆಸೆ ಪೋರ್ಚುಗೀಸ್ ಆಡಳಿತಗಾರರಲ್ಲಿ ಉಂಟಾಯಿತು. ಗುಜರಾತಿನ ದೊರೆ ಬಹಾದೂರ್‌ಶಾಹ ಬೇಸಿನ್ ದ್ವೀಪವನ್ನು ಪೋರ್ಚುಗೀಸರಿಗೆ ದಾನ ಮಾಡಿದ. ಇದು ಮುಂದೆ ಪೋರ್ಚುಗೀಸರ ಉತ್ತರದ ರಾಜಧಾನಿಯಾಯಿತು. ಇಲ್ಲಿ ಇವರು ಕೋಟೆಯನ್ನು ನಿರ್ಮಿಸಿದರು. ಜೊತೆಗೆ ದಿಯು ಎಂಬ ಸ್ಥಳದ ಮೇಲೆ ಕಣ್ಣಿಟ್ಟು, ಅದನ್ನೂ ಬಹಾದ್ದೂರ್‌ಶಾಹನಿಂದ ಪಡೆದು, ಅಲ್ಲೂ ಪೋರ್ಚುಗೀಸರು ಕೋಟೆ ಕಟ್ಟಿ ಸೇನೆಯನ್ನಿಟ್ಟರು. ಆದರೆ, ಪೋರ್ಚುಗೀಸರಿಗೆ ದಿಯು ಸುರಕ್ಷಿತವಾಗಿರಲಿಲ್ಲ. ತುರ್ಕಿ ಸೇನೆ ಸಮುದ್ರದ ಮೂಲಕವೂ ಗುಜರಾತಿನ ದೊರೆ 3ನೆಯ ಮಹಮದ್ ಭೂಮಿಯ ಮೂಲಕವೂ ಅದಕ್ಕೆ ಮುತ್ತಿಗೆ ಹಾಕಿದರು. ಪೋರ್ಚುಗೀಸ್ ಸೇನೆ ಈ ಮುತ್ತಿಗೆಯನ್ನು ಪ್ರತಿಭಟಿಸಿ ನಿಂತು ಶತ್ರುಗಳು ಪಲಾಯನವಾಗುವಂತೆ ಮಾಡಿ ದಿಯುವನ್ನು ರಕ್ಷಿಸಿತು. ಸ್ವಲ್ಪ ಕಾಲದ ಅನಂತರ ಬಿಜಾಪುರದ ದೊರೆ ಕೆಲವು ಪ್ರದೇಶಗಳನ್ನು ಪೋರ್ಚುಗೀಸರಿಗೆ ಒಪ್ಪಿಸಿದ. ಪೋರ್ಚುಗೀಸರು ತಮ್ಮ ಪ್ರದೇಶಗಳನ್ನು ಬಲಪಡಿಸಿಕೊಳ್ಳುತ್ತಿದ್ದರೂ ಹೊರಗಿನ ಧಾಳಿಯ ಭಯ ತಪ್ಪಲಿಲ್ಲ. ಕೆಲವು ವರ್ಷಗಳ ತರುವಾಯ ಬಿಜಾಪುರದ ಆಲಿ ಅದಿಲ್ ಶಾಹ ಗೋವೆಯ ಮೇಲೆ ಒಂದು ಲಕ್ಷ ಸೈನಿಕರು ಮತ್ತು ಎರಡು ಸಾವಿರ ಆನೆಗಳೊಂದಿಗೆ ದಂಡೆತ್ತಿ ಬಂದ. ಇವನಿಗೆ ಕಲ್ಲಿಕೋಟೆಯ ಜಾಮೊರಿನ್ ದೊರೆಯೇ ಮೊದಲಾದವರು ಸಹಾಯ ನೀಡಿದರು. ಪೋರ್ಚುಗೀಸರಿಗೆ ಮಿತ್ರರಾಗಿದ್ದ ಒಬ್ಬೊಬ್ಬ ಹಿಂದೂ ರಾಜರು ಆಗ ತಿರುಗಿ ಬಿದ್ದರು. ಆಗಂತೂ ಪೋರ್ಚುಗೀಸರಿಗೆ ಬಹಳ ಕಷ್ಟದ ಕಾಲ ಬಂತು. 10 ತಿಂಗಳುಗಳ ಕಾಲ ನಡೆದ ಧಾಳಿಯಲ್ಲಿ ಕೊನೆಗೆ ಆದಿಲ್ ಷಾ ಪಲಾಯನ ಮಾಡಿದ. ಇವನಿಗೆ ಸಹಾಯ ಮಾಡಿದವರ ಮೇಲೆ ಕ್ರೂರ ರೀತಿಯಲ್ಲಿ ಪೋರ್ಚುಗೀಸರು ಸೇಡು ತೀರಿಸಿಕೊಂಡರು. ಹೀಗೆ ಪೋರ್ಚುಗೀಸರಿಗೆ ಒದಗಿದ್ದ ವಿಪತ್ತು ಪಾರಾಯಿತು. ಆದರೆ, ಅವನತಿಯ ಕಾಲವೂ ಆರಂಭವಾಯಿತು.

ಡಚ್ಚರ ಮತ್ತು ಇಂಗ್ಲಿಷರ ಪ್ರಾಬಲ್ಯದಿಂದ ಪೋರ್ಚುಗೀಸರ ಆಳಿಕೆಯ ವರ್ಚಸ್ಸು ಕುಂದಿತು. ಸಮುದ್ರ ಮಾರ್ಗದ ಮೇಲೆ ಇವರ ಹತೋಟಿ ತಪ್ಪತೊಡಗಿತು. 16ನೆಯ ಶತಮಾನದಲ್ಲಿ ಇದು ಆರಂಭವಾಯಿತು. ಡಚ್ಚರು ಗೋವೆಯನ್ನು ಮುತ್ತಿದರು. ಕಣ್ಣಾನೂರಿನಿಂದ ಅವರು ಪೋರ್ಚುಗೀಸರನ್ನು ಬಡಿದಟ್ಟಿದರು. ಸ್ವಲ್ಪ ಕಾಲದ ಅನಂತರ ಇಂಗ್ಲಿಷರೂ ಪ್ರಬಲರಾಗತೊಡಗಿದರು. ಅವರು ಕ್ಯಾಂಬೆ ಮತ್ತು ಸೂರತ್ತುಗಳನ್ನು ಮುತ್ತಿ ಜಯಗಳಿಸಿದರು. 17ನೆಯ ಶತಮಾನದ ಮಧ್ಯಭಾಗದ ವೇಳೆಗೆ ಪೋರ್ಚುಗಲ್ಲಿನ ಏಷ್ಯ ವ್ಯಾಪಾರ ಕುಸಿಯಿತು. ಮೊಗಲ್ ಚಕ್ರವರ್ತಿ ಷಹಜಹಾನ್ ಹೂಗ್ಲಿಯನ್ನು ವಶಪಡಿಸಿಕೊಂಡು ಸಾವಿರಾರು ಪೋರ್ಚುಗೀಸ್ ಸೈನಿಕರನ್ನು ಸೆರೆಹಿಡಿದ. ಮುಂದೆ ಮರಾಠರೂ ಪೋರ್ಚುಗೀಸ್ ಪ್ರದೇಶಗಳನ್ನು ಮುತ್ತಿ ಲೂಟಿ ಮಾಡಿ ಬೇಸಿನ್ನನ್ನು ಕಿತ್ತುಕೊಂಡರು. ಮುಂಬಯಿಯನ್ನು ಪೋರ್ಚುಗೀಸರು ಇಂಗ್ಲಿಷರಿಗೆ ಬಳುವಳಿಯಾಗಿ ಕೊಡಬೇಕಾದ ಪ್ರಸಂಗ ಒದಗಿತು. ಇಷ್ಟೆಲ್ಲ ಏರುಪೇರುಗಳಾದ ಅನಂತರ ಪೋರ್ಚುಗೀಸರಿಗೆ ಉಳಿದ ಪ್ರದೇಶಗಳೆಂದರೆ ಗೋವ, ದಿಯು ಮತ್ತು ಡಾಮನ್. ಇಲ್ಲಿ ಇವರು ಸು.450 ವರ್ಷಗಳ ಕಾಲ ಆಳಿಕೆ ನಡೆಸಿ, ಆ ಪ್ರದೇಶಗಳಲ್ಲಿ ತಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ರೂಢಿಸಲು ಯತ್ನಿಸಿದರು. ದಬ್ಬಾಳಿಕೆ, ದೌರ್ಜನ್ಯ, ಅನ್ಯ ಮತ ದ್ವೇಷ ಮುಂತಾದವು ಇವರ ಆಳಿಕೆಯ ವೈಶಿಷ್ಟ್ಯಗಳು. ಇವರ ಸಂಖ್ಯೆ ಬಹಳ ಕಡಿಮೆಯಿದ್ದುದರಿಂದ ಪೋರ್ಚುಗೀಸ್ ನಾವಿಕರೊಂದಿಗೆ ಸ್ಥಳೀಯ ವಿಧವೆಯರ, ಅಪಹೃತ ಸ್ತ್ರೀಯರ ವಿವಾಹ ಏರ್ಪಡಿಸಲು ಇವರು ಯತ್ನಿಸಿದರು. ಇವರಿಂದ ಹುಟ್ಟಿದವರು ಮುಂದೆ ತಮಗೆ ವಿಧೇಯರಾಗಿರುವರೆಂಬುದು ಇವರ ಕನಸಾಗಿತ್ತು. ಆದರೆ ಅಂಥವರಿಂದ ಇವರಿಗೆ ಹೆಚ್ಚಿನ ಪ್ರಯೋಜನವಾಗಲಿಲ್ಲ. ಭಾರತದಲ್ಲಿ ಪ್ರಬಲರಾದ ಬ್ರಿಟಿಷರು ಫ್ರೆಂಚರನ್ನು ಬಹುತೇಕ ಭಾರತದಿಂದ ಓಡಿಸಿದಂತೆ ಪೋರ್ಚುಗೀಸರನ್ನು ಓಡಿಸಬಹುದಾಗಿತ್ತು. ಆದರೆ, ನೆಪೋಲಿಯನ್ ಯುದ್ಧಗಳಲ್ಲಿ ಪೋರ್ಚುಗಲ್ಲು ಬ್ರಿಟನ್ನಿನ ಮಿತ್ರದೇಶವಾಗಿದ್ದುದರಿಂದ ಗೋವ, ಡಾಮನ್, ದಿಯುಗಳಲ್ಲಿ ಇವರ ಆಳಿಕೆ ಮುಂದುವರಿಯಿತು.

ಭಾರತ ಸ್ವತಂತ್ರವಾದ ಮೇಲೆ ದೇಶದಲ್ಲಿ ಪೋರ್ಚುಗೀಸರ ಸ್ವಾಸ್ಥ್ಯ ಮುಂದುವರಿಯಗೊಡುವುದು ಸಾಧುವೆನಿಸಲಿಲ್ಲ. ಪೋರ್ಚುಗೀಸ್ ಆಡಳಿತದ ವಿರುದ್ಧ ಅಲ್ಲಿಯ ಜನರ ಚಳವಳಿ ಪ್ರಬಲವಾಯಿತು. ಪೋರ್ಚುಗೀಸ್ ಪ್ರದೇಶಗಳನ್ನು ಭಾರತಕ್ಕೆ ವಹಿಸಿಕೊಡುವ ಬಗ್ಗೆ ನಡೆದ ಸಂಧಾನಗಳು ಫಲಿಸಲಿಲ್ಲ. ಕೊನೆಗೆ 1960ರಲ್ಲಿ ಭಾರತದ ಸೇನೆ ಈ ಪ್ರದೇಶಗಳನ್ನು ವಿಮೋಚನೆಗೊಳಿಸಿತು. (ಕೆ.ಜಿ.)

**ಪೌಣಾರ್:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯಲ್ಲಿ ವರ್ಧಾನದಿಯ ಉಪನದಿ ಧಾಮ್‌ನ ಬಲದಂಡೆ ಮೇಲಿರುವ ಪುರಾತತ್ತ್ವ ನೆಲೆ. ಇಲ್ಲಿರುವ ಒಂದು ದಿಬ್ಬದ ಮೇಲೆ ಮಧ್ಯಯುಗದ ಕೋಟೆಯ ಅವಶೇಷಗಳು ಇರುವುದರಿಂದ ಇದನ್ನು ಸ್ಥಳೀಯರು ಖಿಲಾ ಎಂದು ಕರೆಯುವರು. ಇದು 3–5ನೆಯ ಶತಮಾನಗಳ ನಡುವೆ ವಿದರ್ಭ ಪ್ರದೇಶವನ್ನು ಆಳಿದ ವಾಕಾಟಕರ ರಾಜಧಾನಿಯಾಗಿತ್ತು. ಮಿರಾಶಿಯವರ ಅಭಿಪ್ರಾಯದಲ್ಲಿ, ವಾಕಾಟಕರ ಮೊದಲ ರಾಜಧಾನಿ ನಂದಿವರ್ಧನ (ಈಗಿನ ನಾಗಪುರ ಜಿಲ್ಲೆಯ ರಾಮಟೇಕ್ ಸಮೀಪದ ನಗರ್‌ಧಾನ). ಅನಂತರ ಎರಡನೆಯ ಪ್ರವರಸೇನ ತನ್ನ ಆಳಿಕೆಯ 11ನೆಯ ವರ್ಷದಲ್ಲಿ ರಾಜಧಾನಿಯನ್ನು ಪ್ರವರಪುರಕ್ಕೆ ಬದಲಾಯಿಸಿದ. ಆದರೂ ವಾಕಾಟಕರ ಯಾವುದೇ ದಾಖಲೆಗಳಲ್ಲಿ ಪ್ರವರಪುರ ರಾಜಧಾನಿಯಾಗಿತ್ತು ಎನ್ನುವುದಕ್ಕೆ ಆಧಾರಗಳಿಲ್ಲ. ಆದರೆ ಪ್ರವರಪುರದಿಂದ ಅನೇಕ ದಾನಪತ್ರಗಳನ್ನು ನೀಡಿದ್ದ ಉಲ್ಲೇಖಗಳಿವೆ. 1967ರಲ್ಲಿ ನಾಗಪುರ ವಿಶ್ವವಿದ್ಯಾಲಯ ಈ ದಿಬ್ಬವನ್ನು ಉತ್ಖನನಮಾಡಿ ನಾಲ್ಕು ಸಾಂಸ್ಕೃತಿಕ ಹಂತಗಳನ್ನು ತೆರೆದಿಟ್ಟಿದೆ.

ಹಂತ 1: ಇಲ್ಲಿ ಕಪ್ಪು–ಕೆಂಪು ದ್ವಿವರ್ಣ ಹಾಗೂ ಕಪ್ಪು ಬಣ್ಣದ ಚಿತ್ರವುಳ್ಳ ದೊರಕು ಕೆಂಪು ಪಾತ್ರೆಗಳಿವೆ. 2ನೆಯ ಪ್ರಕಾರದ ಪಾತ್ರೆಗಳು ವಿದರ್ಭ ಪ್ರಾಂತಕ್ಕೆ ಸೀಮಿತವಾದುವು. ಮಣ್ಪಾತ್ರೆಗಳನ್ನು ಕೈಯಿಂದ ಮತ್ತು ತಿಗುರಿಯಿಂದ ತಯಾರಿಸಲಾಗಿದೆ. ಲಂಬರೇಖೆಗಳು, ತ್ರಿಕೋಣಗಳು ಮತ್ತು ನಕ್ಷತ್ರಾಕಾರದ ಚಿತ್ರಗಳು ಹೆಚ್ಚಾಗಿವೆ. ಪಾತ್ರೆಗಳಲ್ಲಿ ಮಧ್ಯಮಗಾತ್ರದ ಹೂಜಿಗಳು ಪ್ರಧಾನವಾಗಿವೆ. ಲೋಹದ ಕುರುಹು ಇಲ್ಲದಿರುವುದರಿಂದ ಈ ಹಂತ ಕಬ್ಬಿಣದ ಯುಗಕ್ಕಿಂತ ಹಿಂದಿನದಾಗಿದ್ದು ಇದರ ಕಾಲಮಾನ ಪ್ರ.ಶ.ಪೂ.ಸು.1000–800 ಎಂದು ನಿರ್ಧರಿಸಬಹುದು.

ಹಂತ 2: ಪ್ರ.ಶ.ಪೂ.3–4ನೆಯ ಶತಮಾನದಲ್ಲಿ ಪ್ರಾರಂಭವಾದ ಈ ಹಂತದ ಮುಖ್ಯ ಲಕ್ಷಣ ಪೂರ್ಣಪ್ರಮಾಣದಲ್ಲಿ ಬೆಳೆದಿದ್ದ ಕಬ್ಬಿಣ ಲೋಹ ತಾಂತ್ರಿಕತೆ. ಹಿಂದಿನ ಹಂತದಲ್ಲಿದ್ದ ಕಪ್ಪುಬಣ್ಣದ ಚಿತ್ತಾರಗಳಿದ್ದ ಕೆಂಪುಮಡಕೆ ಕಾಣುವುದಿಲ್ಲ. ಕಪ್ಪು –ಕೆಂಪು ದ್ವಿವರ್ಣ ಪಾತ್ರೆಗಳು ಈ ಹಂತದಲ್ಲೂ ಮುಂದುವರೆದಿವೆ. ಹೊಳಪಿನ ಕೆಂಪುಮಡಕೆಗಳ ಬಳಕೆಯ ಆಧಾರದ ಮೇಲೆ ಈ ಹಂತವನ್ನು ಎ– (ಪ್ರ.ಶ.ಪೂ.ಸು.4–1ನೆಯ ಶತಮಾನ) ಮತ್ತು ಬಿ (ಪ್ರ.ಶ.ಪೂ.ಸು.1–ಪ್ರ.ಶ.2ನೆಯ ಶತಮಾನ) ಎಂದು ವಿಂಗಡಿಸಲಾಗಿದೆ. ಮಧ್ಯ ಹೂಜಿಯ ಚೂರುಗಳನ್ನು ಬಿ ಹಂತದಿಂದ ಸಂಗ್ರಹಿಸಲಾಗಿದೆ.

ಹಂತ 3: ಕೆಂಪುಬಣ್ಣದ ಮಣ್ಪಾತ್ರೆಗಳು ಮತ್ತು ಸುಟ್ಟ ಇಟ್ಟಿಗೆಗಳು ಈ ಕಾಲಾವಧಿಯ ಲಕ್ಷಣಗಳಾಗಿವೆ. ಈ ಹಂತದ ಬಹುತೇಕ ಕಾಲದಲ್ಲಿ ಈ ಪ್ರದೇಶ ವಿಷ್ಣುಕುಂಡಿ ಮನೆತನದ ಆಳಿಕೆಯಲ್ಲಿತ್ತು. ಉತ್ಖನನದಲ್ಲಿ ಈ ಮನೆತನದ ಅರಸರ ನಾಣ್ಯಗಳು ಅಪಾರ ಸಂಖ್ಯೆಯಲ್ಲಿ ಸಿಕ್ಕಿವೆ.

ಹಂತ 4: ಚೀನಿ ಸೆಲಡನ್ ಪಾತ್ರೆಗಳು, ಗಾಜಿನಂತೆ ಹೊಳಪುಳ್ಳ ಪಾತ್ರೆಗಳು ಮತ್ತು ಬಣ್ಣ ಬಣ್ಣದ ಗಾಜಿನ ಬಳೆಗಳು ಮುಖ್ಯ ಲಕ್ಷಣಗಳಾಗಿರುವ ಈ ಹಂತದ ಕಾಲಾವಧಿಯನ್ನು ಸು. 10–15ನೆಯ ಶತಮಾನದ ನಡುವಿನದು ಎಂದು ನಿರ್ಣಯಿಸಬಹುದು. ಮಹಮದ್

ಬಿನ್ ತುಗಲಕ್‌ನ ನಾಣ್ಯವೊಂದು ದೊರಕಿದೆ. ಸೈಜುಗಲ್ಲುಗಳಿಂದ ಕಟ್ಟಿದ ಕೋಟೆಯ ಗೋಡೆಗಳು ಮಧ್ಯಯುಗೀನ ಕಾಲಕ್ಕೆ ಸೇರಿದವು. ಗುಪ್ತರ ವಾಸ್ತುಶಿಲ್ಪ ವೈಭವವನ್ನು ಸಾರುವ ದೇವಾಲಯದ ಅವಶೇಷಗಳನ್ನು ನದಿಯ ಮತ್ತೊಂದು ದಂಡೆಯ ಮೇಲೆ ಶೋಧಿಸಲಾಗಿದೆ. ಈ ಪ್ರದೇಶದಲ್ಲಿ ಮನೆ ಕಟ್ಟಲು ತಳಪಾಯ ತೋಡುತ್ತಿದ್ದಾಗ ಆಕಸ್ಮಿಕವಾಗಿ ಒಂದಷ್ಟು ವಿಗ್ರಹಗಳು ದೊರಕಿವೆ. ಇವು ರಾಮಾಯಣದ ಘಟನೆಗಳನ್ನು ನಿರೂಪಿಸುತ್ತವೆ. ಅಂಧಕಾಸುರನನ್ನು ಸಂಹರಿಸುತ್ತಿರುವ ಶಿವನ ಮೂರ್ತಿಯೂ ಇದೆ. ವಿಗ್ರಹಗಳ ಕಾಲ 4–5ನೆಯ ಶತಮಾನ. ಇವುಗಳಲ್ಲದೆ 6ನೆಯ ಶತಮಾನಕ್ಕೆ ಸೇರಿದ ಗಂಗಾಮಾತೆಯ ದೊಡ್ಡ ವಿಗ್ರಹ ದೊರಕಿದೆ. ವಿಗ್ರಹದ ಪಾದಪೀಠದಲ್ಲಿ ಗಂಗಾಭಗವತಿ ಎಂಬ ಶಾಸನವಿದೆ. (ಎ.ಎಸ್.)

**ಪೌಣಿ:** ಮಹಾರಾಷ್ಟ್ರ ರಾಜ್ಯದ ಭಂಡಾರ ಜಿಲ್ಲೆಯಲ್ಲಿ ವೇನ್‌ಗಂಗ ನದಿ ದಂಡೆಯ ಮೇಲಿರುವ ಐತಿಹಾಸಿಕ ಸ್ಥಳ. 1897ರಲ್ಲಿ ಕಾಸೆನ್ಸ್ ಅನಂತರ ಜೆ.ಮಾರ್ಷಲ್ ಮತ್ತು ಹಾರ್‌ಗ್ರಿವ್ಸ್‌ರವರು ಇಲ್ಲಿ ಸದೃಢವಾದ ಕೋಟೆಗೋಡೆಗಳು ಮತ್ತು ಕಂದಕಗಳನ್ನು ಗುರುತಿಸಿದರು. 1936ರಲ್ಲಿ ಜಿ.ಸಿ.ಚಂದ್ರರವರು ಇಲ್ಲಿ ಮೂರು ಕಡೆಗಳಲ್ಲಿ ದಿಬ್ಬಗಳಿದ್ದುದನ್ನು ಕುರಿತು ವರದಿ ಮಾಡಿದ್ದರು. ಇವು ಹರ್ದೊಲಾಲ ಟೇಕಡಿ, ಜಗನ್ನಾಥ ಟೇಕಡಿ ಮತ್ತು ಗೋಡ ಘಾಟ್. ಈ ಸ್ಥಳಗಳಲ್ಲಿ ಬೌದ್ಧ ಸ್ತೂಪಗಳಿರುವ ಸಾಧ್ಯತೆಯನ್ನು ಇವರು ಸೂಚಿಸಿದ್ದರು. ಅನಂತರ ಇಲ್ಲಿ ಎರಡನೆಯ ಶತಮಾನಕ್ಕೆ ಸೇರಿದ ಬ್ರಾಹ್ಮಿ ಶಾಸನಗಳು ಮತ್ತು ಸಣ್ಣ ವಿಗ್ರಹಗಳನ್ನು ಶೋಧಿಸಿ ತೆಗೆಯಲಾಯಿತು. ಅನಂತರ ಕ್ಷಾತ್ರಪ ರೂಪಿಯಮ್ಮನ ಶಾಸನವಿರುವ ಛಾಯಾ ಸ್ತಂಭ ಮತ್ತು ವಾಕಾಟಕ ಅರಸ ಎರಡನೆಯ ಪ್ರವರಸೇನನ ತಾಮ್ರಪಟ ಪತ್ತೆಯಾದುವು.

1968ರಲ್ಲಿ ಜಗನ್ನಾಥ ಟೇಕಡಿಯ ಸಮೀಪ ಬೃಹತ್‌ಶಿಲೆಯ ಶಿರೋಭಾಗದಲ್ಲಿ ಆದಿಬ್ರಾಹ್ಮಿ ಲಿಪಿಯ ಎರಡು ಶಾಸನಗಳಿದ್ದುದನ್ನು ಗಮನಿಸಲಾಯಿತು. ಅನಂತರ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಒಂದು ಬೃಹತ್ ಶಿಲಾಯಕ್ಷ ಮತ್ತು ಶಾಸನವಿರುವ ಕಟಾಂಜನದ ಕಂಬಗಳು, ಸ್ತ್ರೀಯ ಚಿತ್ರವಿರುವ ಮಣ್ಣಿನ ಬಿಲ್ಲೆಗಳನ್ನು ಬೆಳಕಿಗೆ ತಂದಿತು.

ಇಲ್ಲಿ ಮೂರು ದಿಬ್ಬಗಳಿವೆ. ಜಗನ್ನಾಥ ಟೇಕಡಿಯಲ್ಲಿರುವ ಸ್ತೂಪ ದಿಬ್ಬದ ಎತ್ತರ 6ಮೀ. ಈ ದಿಬ್ಬದ ಮೇಲೆ ಇತ್ತೀಚಿನ ಜಗನ್ನಾಥ ದೇವಾಲಯವಿದೆ. ಹರ್ದೊಲಾಲ ಟೇಕಡಿ ನಗರದ ವಾಯವ್ಯದಲ್ಲಿದ್ದು ನೆಲಮಟ್ಟದಿಂದ 7ಮೀ ಎತ್ತರವಾಗಿದೆ. ಇದೇ ಎತ್ತರದ ಚಂದಕಪುರ ಟೇಕಡಿ ದಕ್ಷಿಣ ದಿಕ್ಕಿನಲ್ಲಿದೆ. ಈ ಮೂರು ದಿಬ್ಬಗಳಲ್ಲಿ ನಾಗಪುರ ವಿಶ್ವವಿದ್ಯಾಲಯ ಉತ್ಖನನ ನಡೆಸಿತು. ಜಗನ್ನಾಥ ಟೇಕಡಿ ಮತ್ತು ಚಂದಕಪುರ ಟೇಕಡಿಯ ನಡುವಿನ ಪ್ರದೇಶದಲ್ಲಿ ಇಟ್ಟಿಗೆ ಕಟ್ಟಡಗಳ ಅವಶೇಷಗಳಿವೆ. ಇಲ್ಲಿ ಬೌದ್ಧ ವಿಹಾರವಿದ್ದಿರಬಹುದು.

ಜಗನ್ನಾಥ ಟೇಕಡಿಯಲ್ಲಿ ಸ್ತೂಪ ಸೇರಿದಂತೆ ಅನೇಕ ಪುರಾತನ ವಸ್ತುಗಳು ದೊರಕಿವೆ. ಈ ಸ್ತೂಪಕ್ಕೆ ಕಾಲಾನಂತರದಲ್ಲಿ ದೃಢವಾದ ಕಟಾಂಜನವಿರುವ ವಿಸ್ತಾರವಾದ ಪ್ರದಕ್ಷಿಣಾಪಥವನ್ನು ಸೇರಿಸಿ ಅಂದಗೊಳಿಸಲಾಗಿತ್ತು. ಅಷ್ಟದಿಕ್ಕುಗಳಲ್ಲಿ ಕೆತ್ತನೆಗಳಿಂದ ಅಲಂಕೃತವಾದ ದ್ವಾರಗಳು ಇದ್ದುವು. ಸ್ತೂಪದ ಸುತ್ತಳತೆ 32.8ಮೀ. ಸುಟ್ಟ ಇಟ್ಟಿಗೆಯನ್ನು ನಿರ್ಮಾಣಕ್ಕೆ ಬಳಸಲಾಗಿದೆ. ಔತ್ತರೇಯ ಮೆರುಗಿನ ಕಪ್ಪುವರ್ಣದ ಮಣ್ಪಾತ್ರೆಗಳುಳ್ಳ ಸಾಂಸ್ಕೃತಿಕ ಹಂತದಲ್ಲಿ ಇದನ್ನು ನಿರ್ಮಿಸಲಾಯಿತು. ಈ ಸ್ತೂಪದ ಎರಡನೆಯ ಹಂತದ ನಿರ್ಮಾಣ ಬಹಳ ಕಾಲದ ಅನಂತರ ನಡೆದಿರಬಹುದು. ಈ ಹಂತದಲ್ಲಿ ಸ್ತೂಪದ ಸುತ್ತಳತೆಯನ್ನು ಹೆಚ್ಚಿಸಲಾಯಿತು. ಪ್ರದಕ್ಷಿಣ ಪಥವನ್ನು ಸುಣ್ಣ ಮತ್ತು ಅಭ್ರಕದ ಲೇಪನದಿಂದ ದೃಢಗೊಳಿಸಲಾಯಿತು. ಗುಮ್ಮಟದ ಮೇಲ್ಮೈ ಮೇಲೆ ಇಟ್ಟಿಗೆಯ ಹೊದಿಕೆ ಮಾಡಲಾಯಿತು. ಮರದ ಕಂಬಗಳನ್ನು ನಿಲ್ಲಿಸಲು ಅನುವಾಗುವಂತೆ ಗುಮ್ಮಟದ ಸುತ್ತ ಇಟ್ಟಿಗೆಯ ಸಾಲನ್ನು ಕಟ್ಟಲಾಯಿತು. ಮರದ ಕಟಾಂಜನವನ್ನು ಗುಮ್ಮಟದ ಭಾಗವಾಗಿ ಕಾಣುವಂತೆ ರೂಪಿಸುವ ಆಲೋಚನೆಯಿರಬಹುದು. ಅನಂತರ ಮರದ ಕಂಬಗಳ ಬದಲಿಗೆ ಅಷ್ಟಕೋನಾಕೃತಿಯ ಕಲ್ಲಿನ ಕಂಬಗಳನ್ನು ಇಲ್ಲಿ ನಿಲ್ಲಿಸಲಾಯಿತು. ಕಂಬಗಳ ಮೇಲೆ ಯಕ್ಷ ಶಿಲ್ಪಗಳನ್ನು ಕೆತ್ತಲಾಯಿತು. ಸ್ತೂಪದ ಹೊರಗೋಡೆಗೆ ತಾಗಿರುವ ಕಟಾಂಜನದ ಸುತ್ತ ದಮ್ಮಸು ಮಾಡಿದ ಕಂದುಬಣ್ಣದ ಮಣ್ಣನ್ನು ಹಾಸಿರುವ 2.78ಮೀ ಅಗಲದ ಪ್ರದಕ್ಷಿಣಪಥವನ್ನು ರಚಿಸಲಾಯಿತು. ಇದರ ಸುತ್ತ ಮರಳುಗಲ್ಲಿನ ಪ್ರಾಕಾರದ ಗೋಡೆ ಇದೆ. ಕಟಾಂಜನದಲ್ಲಿರುವ ಕಂಬಗಳ ಒಳ ಮತ್ತು ಹೊರ ಮುಖಗಳಲ್ಲಿ ಯಕ್ಷ, ನಾಗಾ ಮುಚಲಿಂದ, ಭಕ್ತ ಸಮೂಹ ಮತ್ತು ಬೌದ್ಧಕಲೆಯ ಮುಖ್ಯ ಸಂಕೇತಗಳಾದ ಚೈತ್ಯ ವೃಕ್ಷ, ಧರ್ಮಚಕ್ರಗಳನ್ನು ಅಂದವಾಗಿ ಕೆತ್ತಲಾಗಿದೆ. ಬಹುತೇಕ ಕಂಬಗಳಲ್ಲಿ ದಾನ ಶಾಸನಗಳಿವೆ.

ಪ್ರ.ಶ.ಪೂ.2–1ನೆಯ ಶತಮಾನದಲ್ಲಿ ಇದು ದೊಡ್ಡ ಸ್ತೂಪವಾಗಿರಬಹುದು. ಗುಮ್ಮಟದ ಮೇಲೆ ಹರ್ಮಿಕಾ ಮತ್ತು ಛತ್ರಾವಳಿ ಇದ್ದಿರಬೇಕು. ಛತ್ರಾವಳಿಯ ತುಂಡುಗಳು ಉತ್ಖನನದಲ್ಲಿ ದೊರಕಿವೆ. ಸ್ತೂಪದ ಮುಂದೆ ಕೊಳವೆಯಾಕಾರದ ಏಕಶಿಲೆಯ ಭವ್ಯ ಕಂಬವಿದ್ದು ಅದರ ಮುಕುಟದಲ್ಲಿ ಧರ್ಮಚಕ್ರವಿದ್ದಂತೆ ಕಾಣುತ್ತದೆ.

ಈ ಸ್ತೂಪ ಸಾತವಾಹನ–ಕ್ಷತ್ರಪರ ಕಾಲದಲ್ಲಿ ಅವನತಿ ಹೊಂದಿರಬಹುದು. ಒರಟಾದ ಕೆತ್ತನೆಗಳು, ಸಾತವಾಹನರ ಕೊನೆಯ ಅರಸರ ನಾಣ್ಯಗಳು ಮತ್ತು ಕೆಂಪುಮಣ್ಣಿನ ಮಡಕೆಗಳು ಅವನತಿಯ ಕಾಲವನ್ನು ದೃಢೀಕರಿಸುತ್ತವೆ.

ಚಂದಕಪುರದ ಟೇಕಡಿಯಲ್ಲಿ ಸ್ತೂಪದ ಕುರುಹುಗಳಿವೆ. ಸ್ತೂಪ 41.6ಮೀ ಸುತ್ತಳತೆಯನ್ನು ಹೊಂದಿದೆ. ಕಟಾಂಜನ ಅಥವಾ ಪ್ರವೇಶದ್ವಾರಗಳಿಲ್ಲ. ಇಲ್ಲಿ ನಿರ್ಮಾಣ ಕೌಶಲ್ಯ ಜಗನ್ನಾಥದಕ್ಕಿಂತ ಭಿನ್ನವಾಗಿದೆ. ನಾಣ್ಯ ಮತ್ತು ಮಣ್ಪಾತ್ರೆಗಳ ನೆರವಿಂದ ಸ್ತೂಪದ ಕಾಲ ಪ್ರ.ಶ.ಪೂ.1 ಮತ್ತು 2ನೆಯ ಶತಮಾನ ಎಂದು ನಿಗದಿ ಮಾಡಬಹುದು. ಹರ್ದೊಲಾಲ ಟೇಕಡಿಯಲ್ಲಿ ಕಟ್ಟಡ ಅವಶೇಷಗಳಿಲ್ಲ. (ಎ.ಎಸ್.)

**ಪ್ಯಾಲಸ್ತೀನ್:** ಮೆಡಿಟರೇನಿಯನ್ ಸಮುದ್ರಕ್ಕೆ ಆಗ್ನೇಯದಲ್ಲಿ ಬೈಬಲ್ಲಿನ ನಾಡೆಂದು ಪ್ರಸಿದ್ಧವಾಗಿ, ಬೈಬಲ್ಲಿನಲ್ಲಿ ಹಾಲು ಮತ್ತು ಜೇನುತುಪ್ಪ ಹರಿಯುವ ಭೂಮಿಯೆಂದು ಉಕ್ತವಾಗಿರುವ ಪ್ರದೇಶ. ಕ್ಯನಾನ್ ಅಥವಾ ಇಸ್ರೇಲ್ ಎಂದೂ ಕರೆಯಲ್ಪಡುತ್ತಿತ್ತು. ಬೈಬಲ್ಲಿನ ಕಾಲದಲ್ಲಿ ಇಲ್ಲಿಯ ಸಮುದ್ರ ತೀರದಲ್ಲಿ ವಾಸಿಸುತ್ತಿದ್ದ ಫಿಲಿಸ್ತೀನ್ ಜನರಿಂದ ಇದರ ಹೆಸರು ಪ್ಯಾಲಸ್ತೀನ್ ಎಂದಾಗಿದೆ. ಮಧ್ಯಪ್ರಾಚ್ಯದ ದೇಶವಾಗಿ 1923–1928ರ ವರೆಗೆ ಆದೇಶಿತ ಪ್ರದೇಶವಾಗಿ ಬ್ರಿಟಿಷ್ ಆಳಿಕೆಗೆ ಒಳಪಟ್ಟು ಈಗ ಇಸ್ರೇಲ್, ಫ್ರಾನ್ಸ್, ಜೋರ್ಡನ್ ಮತ್ತು ಈಜಿಪ್ಟ್ ದೇಶಗಳ ನಡುವೆ ವಿಭಾಗಿಸಲ್ಪಟ್ಟಿದೆ. ಈಜಿಪ್ಷಿನವರು ಹಿಟ್ಟೈಟರು, ಅಸ್ಸೀರಿಯನ್ನರು ಮತ್ತು ಬಾಬಿಲೋನಿಯರು, ಫಿನಿಷಿಯನ್ನರು ಮತ್ತು ಪ್ಯಾಲಸ್ತೀನರು, ಗ್ರೀಕರು ಮತ್ತು ರೋಮನ್ನರು, ಫ್ರಾಂಕ್ ವೀರರು ಮತ್ತು ಸಾರಸನ್ನರು ಇಲ್ಲಿ ಹೋರಾಡಿ ತಮ್ಮ ಹೆಜ್ಜೆಯ ಗುರುತನ್ನು ಬಿಟ್ಟಿದ್ದಾರೆ. ಎಲ್ಲರಿಗಿಂತ ಹೆಚ್ಚಾಗಿ ಯಹೂದ್ಯರು ಮತ್ತು ಅರಬರು ಈ ನಾಡಿನಲ್ಲಿದ್ದು ಇಲ್ಲಿಯ ಆಗುಹೋಗುಗಳಲ್ಲಿ ಭಾಗವಹಿಸಿದ್ದಾರೆ.

ಪ್ಯಾಲಸ್ತೀನಿನ ಒಂದು ಭಾಗವಾದ ಜುಡಿಯ ಹೀಬ್ರೂ ಅಥವಾ ಯಹೂದ್ಯರ ನಾಡು. ಪ್ರಾಗೈತಿಹಾಸಿಕ ಕಾಲದಿಂದಲೂ ಪ್ಯಾಲಸ್ತೀನಿನಲ್ಲಿ ಜನವಸತಿ ಇತ್ತು. ಹಳೆ ಶಿಲಾಯುಗ, ಹಾಗೂ ನವಶಿಲಾಯುಗಗಳ ಅವಶೇಷಗಳು ದೊರೆತಿವೆ. ಪೂರ್ವದ ಹಲವು ಸಾಮ್ರಾಜ್ಯಗಳು ಇಲ್ಲಿ ಆಳಿದ್ದುಂಟು. ಇವುಗಳ ಪೈಕಿ ಪ್ರಾಚೀನ ಈಜಿಪ್ಟ್ ಅಸ್ಸೀರಿಯ, ಬ್ಯಾಬಿಲೋನಿಯ, ಪರ್ಷಿಯ ಇವು ಮುಖ್ಯವಾದವು. ಟಾಲಮಿ, ಸೆಲ್ಯೂಸಿಡ್, ರೋಮನ್ಸ್, ಬೈಜಾಂಟೀಯನ್, ಉಮ್ಮಯ್ಯದ್, ಅಬ್ಬಸಿಡ್, ಫಾಟಿಮಿಡ್, ಕ್ರುಸೇಡರ್ಸ್, ಅಯ್ಯುಬಿಡ್, ಮಮ್ಲೂಕ್ ಮತ್ತು ಆಟೋಮನ್ ತುರ್ಕ್ ಪ್ರಮುಖರು ಇಲ್ಲಿ ಆಳಿದರು. ಸು.3,500 ವರ್ಷಗಳಿಂದಲೂ ಯಹೂದ್ಯರು ಇಲ್ಲಿಯ ಚರಿತ್ರೆಯಲ್ಲಿ ಕಂಡುಬರುತ್ತಾರೆ. ಇತ್ತೀಚಿನವರೆಗೆ ಅವರು ಬೇರೆ ಬೇರೆ ದೇಶಗಳ ಜನರೊಡನೆ ಬೆರೆತು ವಾಸಿಸುತ್ತಾ ಅಂತಾರಾಷ್ಟ್ರೀಯ ಜನರೆನಿಸಿದ್ದರು. ಇವರು ಇಸ್ರೇಲ್ ಶಿಶುಗಳೆಂದು ಬೈಬಲ್‌ನಲ್ಲಿದೆ. ಇವರಿಗೆ ತಮ್ಮ ದೈವ ಯಹೋವನಲ್ಲಿ ಬಹಳ ಭಕ್ತಿ ಮತ್ತು ನಂಬಿಕೆ. ಇವರ ಮತ ಸರಳವಾದುದು. ಆದರೆ, ಜುಡಿಯ ರೋಮನ್ ಚಕ್ರಾಧಿಪತ್ಯದ ಭಾಗವಾದ ಮೇಲೆ ಯಹೂದ್ಯರ ಮತದಲ್ಲಿ ಬದಲಾವಣೆಗಳಾದವು. ಯಹೂದ್ಯರನ್ನು ಪರಕೀಯರ ದಾಸ್ಯದಿಂದ ವಿಮೋಚನೆ ಮಾಡಲು ಯೇಸುಕ್ರಿಸ್ತ ಪ್ರಯತ್ನಿಸಿದ. ಪ್ಯಾಲಸ್ತೀನಿನಲ್ಲಿನ ಜೆರುಸಲೇಮ್ ನಗರದಲ್ಲಿ ಮಹಮದ್ ಪೈಗಂಬರ್ ಸ್ವರ್ಗಕ್ಕೇರಿದನೆಂದೇ ಅವನ ಅನುಯಾಯಿಗಳು ನಂಬುತ್ತಾರೆ. ಈ ರೀತಿ ಪ್ಯಾಲಸ್ತೀನ್ ಯಹೂದಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ನಾಡಾಗಿದೆ.

ಪ್ರ.ಶ.ಪೂ.ಸು.15ನೆಯ ಶತಮಾನದಲ್ಲೇ ಹೀಬ್ರು ಬಣಗಳು ಈಜಿಪ್ಟಿನಿಂದ ಪ್ಯಾಲಸ್ತೀನಿಗೆ ಬಂದು ಅಲ್ಲಿಯ ನಿವಾಸಿಗಳೊಡನೆ ಬೆರೆತವು. ಇಲ್ಲಿಂದ ಮುಂದೆ ಪ್ರ.ಶ.ಪೂ.70ರ ವರೆಗೆ ಪ್ಯಾಲಸ್ತೀನಿನ ಚರಿತ್ರೆ ಇಸ್ರೇಲ್ ಮತ್ತು ಜಡಿಯಗಳ ಚರಿತ್ರೆಯೇ ಆಗಿದೆ. 636ರಲ್ಲಿ ಕಲೀಫ್ ಓಮರ್ ಜೆರೂಸಲೇಮ್ ನಗರವನ್ನು ಹಿಡಿದುಕೊಂಡ ಮೇಲೆ ಯಹೂದ್ಯರ ಮತ್ತು ಕ್ರೈಸ್ತರನ್ನೊಳಗೊಂಡ ಈ ನಾಡನ್ನು ಮುಂದೆ 400 ವರ್ಷಗಳ ಕಾಲ ಮುಸ್ಲಿಮರು ಆಳಿದ ಮೇಲೆ 1065ರಲ್ಲಿ ಈ ನಾಡು ಸೆಲ್‌ಜುಕ್ ತುರುಕರ ವಶವಾಯಿತು, ಅವರಿಂದ ಕ್ರೈಸ್ತ ಯಾತ್ರಿಕರಿಗುಂಟಾದ ಕಿರುಕುಳಗಳ ದೆಸೆಯಿಂದ 7 ಧರ್ಮ ಯುದ್ಧಗಳು ನಡೆದು 1099ರಲ್ಲಿ ಲ್ಯಾಟಿನ್ ರಾಜ್ಯವೆನಿಸಿದ ಜೆರುಸಲೇಮ್ ಸ್ಥಾಪಿತವಾಯಿತು. ಇಂಗ್ಲೆಂಡಿನ 1ನೆಯ ರಿಚರ್ಡನು ಧರ್ಮ ಯುದ್ಧದಲ್ಲಿ ಭಾಗವಹಿಸಿದ್ದ, ಮುಂದೆ ಪ್ಯಾಲಸ್ತೀನ್ ತುರ್ಕಿ ಚಕ್ರಾಧಿಪತ್ಯದ ಭಾಗವಾಯಿತು. ನೆಪೋಲಿಯನ್ 1799ರಲ್ಲಿ ಎಕ್ರೆಗೆ ಮುತ್ತಿಗೆ ಹಾಕಿ ವಿಫಲನಾದ. 1832–1840ರ ವರೆಗೆ ಪ್ಯಾಲಸ್ತೀನ್ ಈಜಿಪ್ಟಿನ ಆಳಿಕೆಗೆ ಬಂದು ಇಂಗ್ಲೆಂಡ್ ಆಸ್ಟ್ರಿಯಗಳ ಸಹಾಯದಿಂದ ಮತ್ತೆ ತುರ್ಕಿಯ ವಶವಾಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ (1917 ಡಿಸೆಂಬರ್ 11) ಬ್ರಿಟಿಷ್ ಸೈನ್ಯ ಜನರಲ್ ಅಲೆನಬಿ ನೇತೃತ್ವದಲ್ಲಿ ಜೆರುಸಲೇಮ್ ನಗರವನ್ನು ಪ್ರವೇಶಿಸಿ ಶತಮಾನಗಳ ತುರ್ಕಿ ಆಡಳಿತವನ್ನು ಕೊನೆಗಾಣಿಸಿತು. 1923ರಲ್ಲಿ ಪ್ಯಾಲಸ್ತೀನ್ ಬ್ರಿಟಿಷ್ ಅದೇಶಿಕ ಆಳಿಕೆಗೆ ಒಳಪಟ್ಟಿತು. 1917ರಲ್ಲಿ ಪ್ಯಾಲಸ್ತೀನ್‌ನಲ್ಲಿರುವ ಯಹೂದ್ಯರ ಜನಾಂಗಗಳ ನಾಗರಿಕ ಮತ್ತು ಮತೀಯ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರದಂತೆ ಪ್ಯಾಲಸ್ತೀನಿನಲ್ಲಿ ಈ ಜನಾಂಗಕ್ಕೆ ತೌರು ರಾಷ್ಟ್ರವನ್ನು ಸ್ಥಾಪಿಸುವುದು. ಅರಬರು ಇದನ್ನು ವಿರೋಧಿಸಿದರು. ಆಗ ಪ್ಯಾಲಸ್ತೀನನಲ್ಲಿ ಬ್ರಿಟಿಷ್ ಹೈಕಮಿಷನರ್ ಆಗಿದ್ದ ಸರ್ ಹರ್ಬರ್ಟ್ ಸ್ಯಾಮ್ಯುಯಲ್ (ಯಹೂದ್ಯ) ಅರಬರನ್ನು ಸಮಾಧಾನಪಡಿಸಿ ಒಪ್ಪಿಸಿದ. ಪ್ಯಾಲಸ್ತೀನಿಗೆ ಸಾವಿರಗಟ್ಟಲೆ ಯಹೂದ್ಯರು ಬಂದು ನೆಲಸತೊಡಗಿದರು. ಯಹೂದ್ಯರು ಕೈಗಾರಿಕೆ ಮತ್ತು ವ್ಯವಸಾಯಗಳನ್ನು ಬೆಳೆಸಿದರು.

**ಅರಬ್ ಯಹೂದಿ ಕಲಹ:** ಯಹೂದ್ಯರ ಸಂಖ್ಯೆ ಹೆಚ್ಚಿ ಅವರು ರಾಜಕೀಯ ಮೇಲುಗೈ ಪಡೆದು ಅಧಿಕಾರ ನಡೆಸುವರೆಂಬುದನ್ನೂ ಪ್ಯಾಲಸ್ತೀನ್ ದೇಶವನ್ನು ಅರಬ್ ರಾಜ್ಯದಲ್ಲಿ ಸಂಯೋಜನಗೊಳಿಸುವುದಕ್ಕೆ ವಿರೋಧವಾಗುತ್ತಿರುವುದನ್ನೂ ಕಂಡು ಅಸಮಾಧಾನಗೊಂಡ

ಅರಬರಿಗೂ ಯಹೂದ್ಯರಿಗೂ ವೈಮನಸ್ಯ ಉಂಟಾಗಿ ತಿಕ್ಕಾಟ ಆರಂಭವಾಯಿತು. 1929ರಲ್ಲಿ ಮತೀಯ ಗಲಭೆಗಳು ನಡೆದು ಎರಡು ಪಂಗಡಗಳಲ್ಲೂ ಅನೇಕರು ಸತ್ತರು. ಯಹೂದ್ಯರು ವಲಸೆ ಬರುವುದರ ವಿರುದ್ಧ 1933 ಮತ್ತು 1934ರಲ್ಲಿ ಅರಬರು ಪ್ರದರ್ಶನ ನಡೆಸಿದರು. ಯಹೂದ್ಯರು ವಲಸೆ ಬರುವುದನ್ನು ತಡೆಗಟ್ಟಿದ್ದಕ್ಕಾಗಿ ಬ್ರಿಟಿಷರ ವಿರುದ್ಧ ಯಹೂದ್ಯರು ಪ್ರದರ್ಶನ ನಡೆಸಿದರು. 1937ರ ರಾಯಲ್ ಕಮಿಷನ್ ವರದಿಯ ಪ್ರಕಾರ ಪ್ಯಾಲಸ್ತೀನ್ ದೇಶವನ್ನು ಯಹೂದ್ಯರು ಮತ್ತು ಅರಬರ ನಡುವೆ ವಿಭಾಗ ಮಾಡುವುದಕ್ಕೆ ತೀವ್ರ ವಿರೋಧಗಳು ತಲೆದೋರಿದವು. 1938ರ ಜುಲೈ–ಅಕ್ಟೋಬರ್ ಅವಧಿಯಲ್ಲಿ ಗಲಭೆಗಳ ಸಂದರ್ಭದಲ್ಲಿ ಬ್ರಿಟಿಷರು ಸೈನ್ಯ ಕರೆಸಿಕೊಳ್ಳಬೇಕಾಯಿತು. ಅನೇಕ ಯಹೂದ್ಯರು ಮತ್ತು ಅರಬರು ಸತ್ತರು. 1939ರಲ್ಲಿ ಪರಸ್ಪರ ರಾಜೀ ಮಾಡಿಸುವ ಪ್ರಯತ್ನಗಳು ವಿಫಲವಾದುವು. ಇದೇ ವೇಳೆಗೆ ಎರಡನೆಯ ಮಹಾಯುದ್ಧ ಪ್ರಾರಂಭವಾದ್ದರಿಂದ ಪ್ಯಾಲಸ್ತೀನ್ ಗಲಭೆಗಳು ಅಡಗಿದುವು. ನಾಜಿಗಳಿಗೆ ಅಂಜಿದ ಯಹೂದ್ಯರು ಸಂಯುಕ್ತ ರಾಷ್ಟ್ರಗಳಿಗೆ ಬೆಂಬಲ ಕೊಟ್ಟರು.

ಎರಡನೆಯ ಮಹಾಯುದ್ಧ ಮುಗಿಯುತ್ತಿದ್ದಂತೆಯೇ ಮತ್ತೆ ಸಮಸ್ಯೆಗಳು ತಲೆದೋರಿದುವು. ಯಹೂದ್ಯರ ಉದ್ದೇಶಗಳನ್ನು ಪ್ರತಿಭಟಿಸಲು ಅರಬ್ ಲೀಗ್ ವ್ಯವಸ್ಥೆಗೊಂಡಿತ್ತು. 1945ರ ಆಗಸ್ಟ್‌ನಲ್ಲಿ ಲಂಡನ್ನಿನಲ್ಲಿ ಸಭೆ ಸೇರಿದ್ದ ವಿಶ್ವ ಯಹೂದ್ಯ ಕಾಂಗ್ರೆಸ್ ಪ್ಯಾಲಸ್ತೀನ್‌ನಲ್ಲಿ ತಕ್ಷಣ ಯಹೂದ್ಯ ರಾಷ್ಟ್ರ ಸ್ಥಾಪನೆಗೆ ಒತ್ತಾಯಪಡಿಸಿತು. 1946ರಲ್ಲಿ, ಗ್ರ್ಯಾಂಡ್ ಮಫ್ತಿ ಆಫ್ ಜೆರುಸಲೆಮ್‌ನ ಗ್ರ್ಯಾಂಡ್ ಮಫ್ತಿ ಹಾಜ್ ಅಮೀನ್ ಎಲ್ ಹುಸೇನಿ ಅರಬರ ನಾಯಕನಾದ. ಯಹೂದ್ಯರು ವಲಸೆ ಬರುವುದರ ವಿರುದ್ಧ ಅನೇಕ ಪ್ರದರ್ಶನಗಳೂ ವಿನಾಶಕಾರಿ ಕೃತ್ಯಗಳೂ ನಡೆದುವು. ಬ್ರಿಟಿಷ್ ಅಧಿಕಾರಿಗಳನ್ನು ಸೈನಿಕರನ್ನೂ ಯಹೂದ್ಯರು ಕೊಲೆ ಮಾಡಿದರು. ಪ್ಯಾಲಸ್ತೀನ್ ವಿಭಾಗವಾಗಬೇಕೆಂದು 1945ರ ಕೊನೆಯಲ್ಲಿ ಆಂಗ್ಲೋ ಅಮೆರಿಕನ್ ಸಮಿತಿಯೊಂದು ಸಲಹೆ ಮಾಡಿತು. ಇದನ್ನು ದೇಶದ ಎಲ್ಲ ರಾಜಕೀಯ ಪಕ್ಷಗಳು ವಿರೋಧಿಸಿದುವು. 1947ರ ನವೆಂಬರ್ 29ರಂದು ವಿಶ್ವರಾಷ್ಟ್ರ ಸಂಸ್ಥೆಯ ಸಾಮಾನ್ಯ ಸಭೆಯು ಪ್ಯಾಲಸ್ತೀನಿನ ವಿಭಜನೆಗೆ ಮತ ನೀಡಿದ್ದನ್ನು ತಿಳಿದು ಮತ್ತೆ ಪ್ಯಾಲಸ್ತೀನಿನಲ್ಲಿ ಗಲಭೆಗಳು ನಡೆದು ಎರಡು ಪಕ್ಷಗಳಲ್ಲೂ ನೂರಾರು ಜನರು ಹತರಾದರು. ಹಿಂಸಾಕೃತ್ಯಗಳು ಮುಂದುವರಿಯುತ್ತಿದ್ದಾಗಲೇ ಯಹೂದ್ಯರ ಸಂಘವು ತಾತ್ಕಾಲಿಕ ಸರ್ಕಾರವನ್ನು ರಚಿಸುವ ವ್ಯವಸ್ಥೆಗೆ ಕೈಹಾಕಿತು. ವಿಶ್ವಸಂಸ್ಥೆ ಪ್ಯಾಲಸ್ತೀನ್ ವಿಭಜನೆಯನ್ನು ರದ್ದುಗೊಳಿಸಿರುವುದಾಗಿ ಘೋಷಿಸಿತು. ಆದರೆ, ಮುಂದೇನು ಎಂಬುದನ್ನು ನಿರ್ಧರಿಸಲು ಸಮರ್ಥವಾಗಲಿಲ್ಲ. 1948 ಮೇ 15ರಂದು ಮುಕ್ತಾಯಗೊಳ್ಳಲಿದ್ದ ತನ್ನ ಆದೇಶಿತ ಅಧಿಕಾರದ ಆಳಿಕೆಯನ್ನು ಮುಂದುವರಿಸಲು ಬ್ರಿಟನ್ ಒಪ್ಪಲಿಲ್ಲ. ಅದು ಅಲ್ಲಿಂದ ವಾಪಸಾಗಲು ನಿರ್ಧರಿಸಿತು. ಮೇ 14ರ ಮಧ್ಯರಾತ್ರಿಗೆ ಸ್ವಲ್ಪ ಮುಂಚೆ ಯಹೂದ್ಯ ರಾಷ್ಟ್ರೀಯ ಮಂಡಲಿ ಇಸ್ರೇಲ್ ರಾಷ್ಟ್ರ ಉದಯವಾಯಿತೆಂದು ಪ್ರಕಟಿಸಿತು. ಮೇ 15ರಂದು ಬ್ರಿಟಿಷ್ ಆಳಿಕೆ ಅಂತ್ಯಗೊಂಡಾಗ ಅರಬ್ ಲೀಗಿನ ವಿವಿಧ ರಾಜ್ಯಗಳು ಪ್ಯಾಲಸ್ತೀನನ್ನು ಮುತ್ತಿದುವು. ಒಂಬತ್ತು ತಿಂಗಳ ಕಾಲ ಪದೇಪದೇ ಹೋರಾಟ ನಡೆಯಿತು. ಪ್ಯಾಲಸ್ತೀನಿನಲ್ಲಿದ್ದ ಸಂಸ್ಥೆಯ ಮಧ್ಯಸ್ಥಿಕೆಗಾರ ಸ್ವೀಡನ್ನಿನ ಕೌಂಟ್‌ಫೋಕ್ ಬೆರ್ನಾರ್‌ಡಟ್ ಸೆಪ್ಟಂಬರ್ 17ರಂದು ಕೊಲೆಯಾದ. ಅನಂತರ ಬಂದವನು ರಾಲ್ಫ್ ಬುಂಚ್ ಎಂಬ ಅಮೆರಿಕನ್. ಈತ ಇಸ್ರೇಲಿಗೂ ಅರಬ್ ರಾಷ್ಟ್ರಗಳಾದ ಈಜಿಪ್ಟ್, ಲೆಬನಾನ್, ಸಿರಿಯ ಮತ್ತು ಟ್ರಾನ್ಸ್ ಜೋರ್ಡಾನ್‌ಗಳಿಗೂ ನಡುವೆ ಯುದ್ಧ ವಿರಾಮ ಏರ್ಪಡಿಸಿದ. ಒಪ್ಪಂದದ ಪ್ರಕಾರ ಗಾಜಾ ತೀರಪ್ರದೇಶವನ್ನು ಮತ್ತು ದಕ್ಷಿಣ ಪ್ಯಾಲಸ್ತೀನಿನ ಎಲ್ ಅಜ್. ಪ್ರದೇಶವನ್ನು ಈಜಿಪ್ಟ್ ಪಡೆಯಿತು. 1950 ಏಪ್ರಿಲ್ 24ರಂದು ಅರಬ್ ಪ್ಯಾಲಸ್ತೀನ ಮತ್ತು ಟ್ರಾನ್ಸ್ ಜೋರ್ಡಾನ್‌ಗಳು ಒಂದುಗೂಡಿ ಹ್ಯಾಷೆಮೈಟ್ ಜೋರ್ಡಾನ್ ಎಂಬ ಒಂದೇ ರಾಜ್ಯವಾಯಿತು. ಈ ರೀತಿಯಾಗಿ ಪ್ಯಾಲಸ್ತೀನ್ ವಿಭಜನೆಯಾಗಿ ಇಸ್ರೇಲ್, ಈಜಿಪ್ಟ್ ಮತ್ತು ಜೋರ್ಡಾನ್‌ಗಳಲ್ಲಿ ಸೇರಿ ಹೋಯಿತು.

ಪ್ಯಾಲಸ್ತೀನನ್ನು ಪವಿತ್ರ ಭೂಮಿ ಎಂದು ಕರೆಯಲಾಗಿದೆ. ಜುಡಾಯಿಸಂ, ಕ್ರೈಸ್ತಧರ್ಮ ಹಾಗೂ ಇಸ್ಲಾಂ ಧರ್ಮದವರಿಗೆ ಇದೊಂದು ಪುಣ್ಯಕ್ಷೇತ್ರ. ಜುಡಾಯಿಸಂ ಮತೀಯರು ಇದನ್ನು ದೇವರೇ ವರವಾಗಿ ನೀಡಿದನೆಂದು ಸಾಂಪ್ರದಾಯಿಕವಾಗಿ ನಂಬುತ್ತಾರೆ. ಕ್ರೈಸ್ತರಿಗೆ ಇದು ಧಾರ್ಮಿಕ ಚಟುವಟಿಕೆಗಳ ನೆಲೆ; ಪವಿತ್ರ ಕೇಂದ್ರ. ಈ ಪ್ರದೇಶದ ತುಂಬ ಇವರ ಅನೇಕ ಪುಣ್ಯಕ್ಷೇತ್ರಗಳಿವೆ. ಮುಸ್ಲಿಮರಿಗೆ ಪ್ಯಾಲಸ್ತೀನಿನ ಕೆಲವು ಸ್ಥಳಗಳು ಪ್ರವಾದಿ ಮಹಮ್ಮದ್ ಜೀವನದೊಂದಿಗೆ ಸಂಬಂಧವುಳ್ಳವಂಥವು. ಪ್ಯಾಲಸ್ತೀನ್ ಪ್ರದೇಶದ ಗುಹೆ ಯೊಂದರಲ್ಲಿ ಪ್ರಾಚೀನತಮ ಹಸ್ತಪ್ರತಿ ದೊರೆತಿದೆ. ಇದುವರೆಗೆ ಗೊತ್ತಿರುವಂತೆ ಇದು ಅತ್ಯಂತ ಪ್ರಾಚೀನ ಹಸ್ತಪ್ರತಿಗಳಲ್ಲೊಂದು. ಹಳೆಯ ಒಡಂಬಡಿಕೆಯ ಈ ಹಸ್ತಪ್ರತಿಯನ್ನು ದಿ ಡೆಡ್ ಸೀ ಸ್ಕ್ರಾಲ್ಸ್ ಎಂದು ಕರೆಯುತ್ತಾರೆ (**ನೋಡಿ–ಮೃತಸರೋವರದ ಸುರುಳಿಗಳು**). ಇದು ಪುರಾತತ್ತ್ವಜ್ಞರ ಗಮನ ಸೆಳೆದಿದ್ದು ಈ ಪ್ರದೇಶದ ಹಲವೆಡೆಗಳಲ್ಲಿ ಉತ್ಖನನ ನಡೆಸಲಾಗಿದೆ.

1967ರ ಜೂನ್ ತಿಂಗಳಲ್ಲಿ ನಡೆದ 6 ದಿನದ ಯುದ್ಧದಲ್ಲಿ ಇಸ್ರೇಲು ನೆರೆಯ ಸಿರಿಯದ ಗೋಲಾನ್ ಹೈಟ್ಸ್‌ನ್ನು ಆಕ್ರಮಿಸಿಕೊಂಡಿತು. ಕ್ಯಾಂಪ್‌ಡೇವಿಡ್ ಒಪ್ಪಂದದ ಪ್ರಕಾರ ಸೈನ್ಯ ಪ್ರದೇಶವನ್ನು ಇಸ್ರೇಲ್ ಈಜಿಪ್ಟಿಗೆ ಹಿಂದಿರುಗಿಸಿದೆ. ಇಸ್ರೇಲ್ ರಾಜ್ಯದ ಉದಯ ಹಾಗೂ ಅದರ ಆಕ್ರಮಣ ಯುದ್ಧಗಳಿಂದ ಪ್ಯಾಲಸ್ತೀನ್ ಪ್ರದೇಶದ ಅರಬರು ಪ್ರತಿಭಟಿಸಿದ್ದುಂಟು. ಪ್ಯಾಲಸ್ತೀನ್‌ನ ದೊಡ್ಡ ನಗರಗಳೆಂದರೆ ಗಾಜ಼ ಹೆಬ್ರಾನ್ ಮತ್ತು ನಬ್ಲಸ್. ಇಲ್ಲಿಯವರು ಅರಾಬಿಕ್, ಹೀಬ್ರು ಮತ್ತು ಇಂಗ್ಲಿಷ್ ಭಾಷೆಯನ್ನು ಹೆಚ್ಚಾಗಿ ಬಳಸುತ್ತಾರೆ. (ಎ.ಎಚ್.ಎಸ್.; ಎಚ್.ಆರ್.ಆರ್.ಬಿ.)

**ಪ್ಯೂನಿಕ್ ಯುದ್ಧಗಳು:** ಮೆಡಿಟರೇನಿಯನ್ ಮೇಲಿನ ಹತೋಟಿಗಾಗಿ ರೋಮ್ ಮತ್ತು ಕಾರ್ಥೇಜ್‌ಗಳ ನಡುವೆ ನಡೆದ ಮೂರು ಯುದ್ಧಗಳ ಸರಣಿ. ಕಾರ್ಥೇಜಿನ ಫೊನಿಷಿಯ ವರ್ತಕರನ್ನು ರೋಮನ್ನರು ಫೋನಿಯೆಂದು ಕರೆಯುತ್ತಿದ್ದುದರಿಂದ ಇವರ ನಡುವಿನ ಯುದ್ಧಗಳನ್ನು ಪ್ಯೂನಿಕ್ ಅಥವಾ ಕಾರ್ಥೆಜಿನ ಯುದ್ಧಗಳೆಂದು ಕರೆಯಲಾಗಿದೆ. ಪ್ಯೂನಿಕ್ ಯುದ್ಧಗಳು ಆರಂಭವಾದಾಗ ಕಾರ್ಥೇಜ್ ಒಂದು ಮಹಾಶಕ್ತಿಯಾಗಿತ್ತು. ಉತ್ತರ ಆಫ್ರಿಕ ಮತ್ತು ಮೆಡಿಟರೇನಿಯನ್ ದ್ವೀಪಗಳ ಮೇಲೂ ಆ ಪ್ರದೇಶದ ವಾಣಿಜ್ಯದ ಮೇಲೂ ಪ್ರಭುತ್ವ ಪಡೆದಿತ್ತು. ಯುದ್ಧ ಮುಗಿದಾಗ ಕಾರ್ಥೇಜ್ ನಾಶವಾಗಿತ್ತು. ಚೀನದ ಪಶ್ಚಿಮಕ್ಕೆ ರೋಮ್ ಅತ್ಯಂತ ಪ್ರಬಲಶಕ್ತಿಯಾಗಿತ್ತು. ಒಂದನೆಯ ಪ್ಯೂನಿಕ್ ಯುದ್ಧ ನಡೆದದ್ದು ಪ್ರ.ಶ.ಪೂ.264–41ರಲ್ಲಿ. ಮೆಸಾನಕ್ಕೂ ಸಿರಕ್ಯೂಸಿಗೂ ನಡುವಣ ವ್ಯಾಜ್ಯದಲ್ಲಿ ತನಗೆ ನೆರವು ನೀಡಬೇಕೆಂದು ರೋಮ್, ಕಾರ್ಥೇಜ್ ಎರಡಕ್ಕೂ ಮೆಸಾನ ಮೊರೆಯಿಟ್ಟಿತು. ಕಾರ್ಥೇಜಿನಿಯನ್ನರು ಮೊದಲು ಒಂದು ಶಾಂತಿ ಏರ್ಪಡಿಸಿದರು. ಆದರೆ ಅನಂತರ ಬಂದ ರೋಮನರು ಅವರನ್ನು ಹೊರತಳ್ಳಿ ಪೂರ್ವ ಸಿಸಿಲಿಯನ್ನು ಆಕ್ರಮಿಸಿಕೊಂಡರು. ಮೈಲೇ ಎಂಬಲ್ಲಿ ಪ್ರ.ಶ.ಪೂ.260ರಲ್ಲೂ ಎಕ್ನಾಮಸ್ ಭೂಶಿರದ ಬಳಿಯಲ್ಲಿ 256ರಲ್ಲೂ ನಡೆದ ಕದನಗಳಲ್ಲಿ ರೋಮನರು ಜಯಗಳಿಸಿದರು. ಆದರೆ ಆಫ್ರಿಕದ ಮೇಲೆ ಅವರು ನಡೆಸಿದ ದಂಡಯಾತ್ರೆ ವಿಫಲಗೊಂಡಿತು. ಸಿಸಿಲಿಯಲ್ಲಿರುವ ಲಿಲಿಬೀಯಮ್ ರೇವುಪಟ್ಟಣವನ್ನು ರೋಮನರು ಹಿಡಿಯದಂತೆ ಕಾರ್ಥೇಜಿನ ಸೇನಾನಿ ಹ್ಯಮಿಲ್ಕಾರ್ ಬಾರ್ಕ ತಡೆದ. ಆದರೆ ಸಿಸಿಲಿಯ ಪಶ್ಚಿಮ ತೀರದ ಬಳಿಯ ಈಗೇಡಿಯನ್ ದ್ವೀಪಗಳ ಬಳಿಯಲ್ಲಿ ಪ್ರ.ಶ.ಪೂ.241ರಲ್ಲಿ ನಡೆದ ಕದನದಲ್ಲಿ ರೋಮನರು ಗೆದ್ದರು. ಕಾರ್ಥೇಜಿಯನರು ಶಾಂತಿಯನ್ನು ಬಯಸಿದರು.

ಸಿಸಿಲಿಯನ್ನು ಪಡೆದುಕೊಂಡಿದ್ದ ರೋಮನರು ಕೌಲನ್ನು ಉಲ್ಲಂಘಿಸಿ ಸಾರ್ಡೀನಿಯ ಮತ್ತು ಕಾರ್ಸಿಕವನ್ನು ಗೆಲ್ಲಲು ದಂಡೆತ್ತಿದರು. ಕಾರ್ಥೇಜಿನಿಯನರು ಸ್ಪೇನಿನಲ್ಲಿರುವ ಹ್ಯಾನಿಬಾಲನ ನೇತೃತ್ವದಲ್ಲಿ ಸಗಂಟಮ್ ಅನ್ನು ಹಿಡಿದುಕೊಂಡಾಗ ರೋಮ್ ಕಾರ್ಥೇಜಿನ ಮೇಲೆ ಮತ್ತೆ ಯುದ್ಧ ಸಾರಿತು (ಪ್ರ.ಶ.ಪೂ.219). ಎರಡನೆಯ ಪ್ಯೂನಿಕ್ ಯುದ್ಧ ಪ್ರಶ.ಪೂ.218–201ರ ವರೆಗೆ ನಡೆಯಿತು. ಇದು ಹ್ಯಾನಿಬ್ಯಾಲಿಕ್ ಯುದ್ಧವೆಂದೂ ಹೆಸರಾಗಿದೆ. ಮೂರು ಪ್ಯೂನಿಕ್ ಯುದ್ಧಗಳಲ್ಲಿ ಇದು ಅತ್ಯಂತ ಪ್ರಸಿದ್ಧವಾದ್ದು. ಹ್ಯಾನಿಬಾಲ್ ಇಟಲಿಯ ಮೇಲೆ ಆಕ್ರಮಣ ನಡೆಸಿ ವಿಜಯ ಗಳಿಸಿದ. ಆದರೆ ಸೈನ್ಯಕ್ಕೆ ಬೇಕಾದ ಸರಬರಾಜು ಸಕಾಲದಲ್ಲಿ ಬಾರದ್ದರಿಂದಲೂ ಇಟಲಿಯ ಮೆಟಾರಸ್ ನದಿಯ ಬಳಿ ನಡೆದ ಕದನದಲ್ಲಿ (ಪ್ರ.ಶ.ಪೂ.207) ಅವನ ಸೋದರ ಹ್ಯಾಸ್ಡ್ರುಬಲ್ ಸೋತದ್ದರಿಂದಲೂ ಅವನ ದಂಡಯಾತ್ರೆ ವಿಫಲಗೊಂಡಿತು. ಸಿಪಿಯೊ ಆಫ್ರಿಕಾನಸ್ ಮೇಜರನ ಆಕ್ರಮಣದಿಂದ ಕಾರ್ಥೇಜನ್ನು ರಕ್ಷಿಸಲು ಅವನು ಆಫ್ರಿಕಕ್ಕೆ ಬಂದ. ಆದರೆ ಜಾಮ ಕದನದಲ್ಲಿ ಅವನಿಗೆ ಸೋಲಾಯಿತು. (ಪ್ರ.ಶ.ಪೂ.202). ಕಾರ್ಥೇಜ್ ತನ್ನ ಸ್ಪ್ಯಾನಿಷ್ ಪ್ರಾಂತವನ್ನೂ ತನ್ನ ಯುದ್ಧ ನೌಕೆಗಳನ್ನೂ ಒಪ್ಪಿಸಬೇಕಾಯಿತು.

ಈ ಆಘಾತದಿಂದ ಕಾರ್ಥೇಜ್ ಚೇತರಿಸಿಕೊಳ್ಳಲಾರದೆ ಹೋಯಿತು. ಆದಾಗ್ಯೂ ರೋಮಿನ ನಾಯಕ ಹಿರಿಯ ಕ್ಯಾಟೋಗೆ (ಪ್ರ.ಶ.ಪೂ. 234–149) ಕಾರ್ಥೇಜನ್ನು ನೆಲಸಮಗೊಳಿಸುವವರೆಗೂ ಸಮಾಧಾನವಿರಲಿಲ್ಲ. ಮೂರನೆಯ ಪ್ಯೂನಿಕ್ ಯುದ್ಧಕ್ಕೆ (ಪ್ರ.ಶ.ಪೂ.149–146) ಒಂದು ನೆವ ಬೇಕಾಗಿತ್ತು. ರೋಮಿನ ಮಿತ್ರದೇಶವಾದ ಮ್ಯಾಸಿನಿಸದ ಆಕ್ರಮಣವನ್ನು ಕಾರ್ಥೇಜ್ ಎದುರಿಸಿ ಕೌಲನ್ನು ಉಲ್ಲಂಘಿಸಿದೆಯೆಂದು ಹೇಳಿ ರೋಮ್ ಯುದ್ಧ ಸಾರಿತು. ಕಾರ್ಥೇಜ್ ಮುತ್ತಿಗೆಗೆ ಒಳಗಾಯಿತು. ಆದರೂ ಕಾರ್ಥೇಜ್ ಶರಣಾಗಲಿಲ್ಲ. ಕಿರಿಯ ಸಿಪಿಯೋ ಆಫ್ರಿಕಾನಸ್ ಮೈನರ್ ಅದನ್ನು ಗೆದ್ದು ನೆಲಸಮಮಾಡಿದ. (ಬಿ.ಎಸ್.ಆರ್.ಆರ್.)

**ಪ್ರಜಾಮಿತ್ರ ಮಂಡಳಿ:** ಆಧುನಿಕ ಮೈಸೂರು ಸಂಸ್ಥಾನದ ಮೊದಲ ರಾಜಕೀಯ ಸಂಘಟನೆ. ಈ ಮಂಡಳಿ ಸರಕಾರಿ ಸೇವೆಗಳ ಮೇಲಿನ ಬ್ರಾಹ್ಮಣವರ್ಗದ ಏಕಸ್ವಾಮ್ಯವನ್ನು, ನಗರ ಪ್ರದೇಶಗಳಲ್ಲಿ ಈ ವರ್ಗ ಅನುಭವಿಸುತ್ತಿದ್ದ ಸವಲತ್ತುಗಳನ್ನು ಮತ್ತು ರಾಜಕೀಯ ರಂಗದಲ್ಲಿನ ಯಜಮಾನಿಕೆಗಳನ್ನು ಪ್ರಶ್ನಿಸಿ ಬಹುಸಂಖ್ಯಾತರಾದ ಬ್ರಾಹ್ಮಣೇತರರಲ್ಲಿ ಮೂಡಿದ ಎಚ್ಚರದ ಸಂಕೇತ. ಈ ಸಂಘಟನೆಯ ಸ್ಥಾಪನೆಗೆ ಅಗತ್ಯವಾದ ಭೂಮಿಕೆಯನ್ನು ಸಂಸ್ಥಾನದ ಪ್ರಮುಖ ಜಾತಿಗಳಿಂದ ಒಕ್ಕಲಿಗ, ಲಿಂಗಾಯಿತ ಮತ್ತು ಕುರುಬ ಜಾತಿಯ ಸಂಘಗಳು, ಅರಮನೆಯ ಒಳ ಆವರಣದ ಬೆಂಬಲದಿಂದ ಸಿದ್ಧಪಡಿಸಿದ್ದವು. 1909ರಲ್ಲಿ ಮಹಾರಾಜ ಕಾಲೇಜಿಗೆ ಪ್ರಾಧ್ಯಾಪಕರಾಗಿ ಬಂದ ಸಿ.ಆರ್.ರೆಡ್ಡಿ ತಮ್ಮ ಸ್ಥಾನ ಮತ್ತು ವೈಯಕ್ತಿಕ ವರ್ಚಸ್ಸಿನ ಬಲದಿಂದ ಅರಮನೆಯ ಒಳಆವರಣಕ್ಕೆ ಪ್ರವೇಶಿಸಿದರು. ಬ್ರಾಹ್ಮಣರ ಯಜಮಾನಿಕೆ ಮತ್ತು ದರ್ಪದಿಂದ ಅಸಂತುಷ್ಟವಾಗಿದ್ದ ಅರಮನೆಯ ಒಳ ಆವರಣವನ್ನು ಸಿ.ಆರ್.ರೆಡ್ಡಿ ಬ್ರಾಹ್ಮಣೇತರ ನಾಯಕಗಣದೊಂದಿಗೆ ಬೆಸೆದರು. ಸಿ.ಆರ್.ರೆಡ್ಡಿ ಯವರ ಪ್ರಯತ್ನದಿಂದ ಲಿಂಗಾಯತ, ಒಕ್ಕಲಿಗ, ಕುರುಬ ಮತ್ತು ಮುಸ್ಲಿಂ ಸಮುದಾಯಗಳ ಮುಖಂಡರುಗಳ

ನ್ನೊಳಗೊಂಡ ರಾಜಕೀಯ ಸಂಘಟನೆ ಪ್ರಜಾಮಿತ್ರ ಮಂಡಳಿ ಎಂಬ ಹೆಸರಿನಲ್ಲಿ 1917ರಲ್ಲಿ ಆರಂಭವಾಯಿತು. ನವೆಂಬರ್ 1917ರಲ್ಲಿ ಮಂಡಳಿ ಬೆಂಗಳೂರಿನಲ್ಲಿ ಏರ್ಪಡಿಸಿದ ರಾಜಕೀಯ ಸಭೆ ಸಂಸ್ಥಾನದಲ್ಲಿ ಮೊದಲನೆಯದಾಗಿತ್ತು. ಪತ್ರಿಕೆಗಳು ಮತ್ತು ಪ್ರಜಾಪ್ರತಿನಿಧಿಗಳ ಸಭೆಗಳ ಭಾಷಣಗಳ ಮೂಲಕ ಬ್ರಾಹ್ಮಣೇತರರ ಬಗ್ಗೆ ಸಹಾನುಭೂತಿಯ ವಾತಾವರಣ ಸಹ ಸೃಷ್ಟಿಯಾಯಿತು.

1918ರ ಜೂನ್ ತಿಂಗಳಲ್ಲಿ ಸಿ.ಆರ್.ರೆಡ್ಡಿಯವರು ಮಿತ್ರ ಮಂಡಳಿ ನಾಯಕರ ನಿಯೋಗವನ್ನು ಮಹಾರಾಜರ ಭೇಟಿಗೆ ಕರೆದೊಯ್ದರು. ಮಂಡಳಿ ಮಹಾರಾಜರಿಗೆ ಮನವಿಯನ್ನು ಅರ್ಪಿಸಿ ಬ್ರಾಹ್ಮಣೇತರರಿಗೆ ವಿದ್ಯಾಭ್ಯಾಸ ಮತ್ತು ಸರಕಾರಿ ನೌಕರಿಗಳಲ್ಲಿ ಮೀಸಲಾತಿಯನ್ನು ಬೇಡಿತು. ಸರ್ಕಾರ ಬಹುಬೇಗ ಸ್ಪಂದಿಸಿತು. 1918ರ ಆಗಸ್ಟ್ ತಿಂಗಳಲ್ಲಿ ಸರ್‌ಲೆಸ್ಲಿ ಮಿಲ್ಲರ್‌ರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ಕೊಡುವ ಬಗ್ಗೆ ವರದಿ ನೀಡಲು ಸೂಚಿಸಿತು. ಈ ಸಮಿತಿ 1919ರ ಆಗಸ್ಟ್‌ನಲ್ಲಿ ವರದಿ ಸಲ್ಲಿಸಿ ಬ್ರಾಹ್ಮಣೇತರರಿಗೆ ಶಿಕ್ಷಣ ಮತ್ತು ಸರಕಾರಿ ನೌಕರಿಯಲ್ಲಿ ಮೀಸಲಾತಿ ನೀಡಲು ಶಿಫಾರಸು ಮಾಡಿತು. ಇದನ್ನು ದಿವಾನ್ ಎಂ. ವಿಶ್ವೇಶ್ವರಯ್ಯನವರು ಕೆಲವು ಕಾರಣಗಳನ್ನು ನೀಡಿ ವಿರೋಧಿಸಿದರು. ಈ ವೇಳೆಗಾಗಲೇ ಅರಮನೆ ಮತ್ತು ದಿವಾನ್ ವಿಶ್ವೇಶ್ವರಯ್ಯನವರ ನಡುವೆ ಆರಂಭವಾಗಿದ್ದ ಶೀತಲ ಸಮರ ಬ್ರಾಹ್ಮಣೇತರರ ಮೀಸಲಾತಿ ವಿಷಯದಿಂದ ಮತ್ತಷ್ಟು ತೀವ್ರವಾಯಿತು. ತಾವು ನಂಬಿದ್ದ ತತ್ತ್ವಗಳನ್ನು ಬಿಡದ ದಿವಾನ್ ವಿಶ್ವೇಶ್ವರಯ್ಯನವರು ತಮ್ಮ ಪದವಿಗೆ ರಾಜೀನಾಮೆ ನೀಡಿದರು. ಮಹಾರಾಜರ ಸೋದರಳಿಯ ಸರ್ದಾರ್ ಕಾಂತರಾಜೇ ಅರಸರು ದಿವಾನರಾದರು. 1921ರಲ್ಲಿ ಮಿಲ್ಲರ್ ಸಮಿತಿಯ ಶಿಫಾರಸ್ಸುಗಳು ಅನುಷ್ಠಾನಗೊಂಡವು (**ನೋಡಿ–ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗಗಳು**). (ಎ.ಎನ್.)

**ಪ್ರತಾಪಸಿಂಹ, ರಾಣಾ: 1572–97**. ಮೇವಾಡದ ದೊರೆ. ಬಪ್ಪರಾವುಲ ವಂಶಕ್ಕೆ ಸೇರಿದವನು. ಈತ ಉದಯಸಿಂಹನ ಮಗ. ಮಹಾವೀರ, ದೇಶಪ್ರೇಮಿ, ಮೇವಾಡದ ಸ್ವಾತಂತ್ರ್ಯಕ್ಕಾಗಿ ಅಕ್ಬರನನ್ನು ಎದುರಿಸಿ ಹೋರಾಡಿದವನು.

ಅಕ್ಬರ್ ತನ್ನ ಪ್ರಚಂಡ ಸೇನಾಬಲದೊಂದಿಗೆ ರಾಜಸ್ಥಾನದ ಮೇಲೆ ಬಿರುಗಾಳಿಯಂತೆ ಧಾಳಿಯಿಟ್ಟು ಮಾರವಾಡ, ಅಂಬರ್, ಬಿಕನೀರ್ ಮತ್ತು ಟೋಂದಿ ರಾಜ್ಯಗಳನ್ನು ಗೆದ್ದು ಮೇವಾರದ ಕಡೆ ತಿರುಗಿದ. ಅವನು 1567ರಲ್ಲಿ ಚಿತ್ತೂರನ್ನು ಮುತ್ತಿದ. ಉದಯಸಿಂಹ ಅವನ ಮುಂದೆ ನಿಲ್ಲಲಾರದೆ ಓಡಿಹೋಗಿ ಕಮಲ ಮೇರುವಿನಲ್ಲಿ ನಿಂತು ಗೋಗುಂಡ ಕೋಟೆಯನ್ನು ಬಲಪಡಿಸಿದ. ಅವನ ನೆಚ್ಚಿನ ಸಂಗಡಿಗರಾದ ಜಯಮಲ್ಲ ಮತ್ತು ಪಟ್ಟರು ಮಡಿದರು. ಚಿತ್ತೂರು ಕೋಟೆ ಅಕ್ಬರನ ವಶವಾಯಿತು. ಅಲ್ಲಿಯ ದೇವಿ ಮಂದಿರದಲ್ಲಿದ್ದ ಬೃಹತ್‌ಗಾತ್ರದ ನಗಾರಿಯನ್ನು ಅಕ್ಬರ್ ಆಗ್ರಕ್ಕೆ ಸಾಗಿಸಿದ. ಉದಯಸಿಂಹ 1572ರಲ್ಲಿ ನಿಧನನಾದಾಗ ಪ್ರತಾಪಸಿಂಹ ಕಮಲಮೇರುವಿನಲ್ಲಿ ಪಟ್ಟಕ್ಕೆ ಬಂದು ತಂದೆಯ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಿದ. ರಾಜಸ್ಥಾನದ ಸಣ್ಣದೊಡ್ಡ ದೊರೆಗಳು ಅಕ್ಬರನ ಪ್ರಚಂಡ ಸೈನ್ಯದ ಮುಂದೆ ನಿಲ್ಲಲಾರದೆ ಒಬ್ಬೊಬ್ಬರಾಗಿ ಸೋತು ಶರಣಾದರು. ಆದರೆ ಪ್ರತಾಪಸಿಂಹ ಸ್ವಾತಂತ್ರ್ಯವನ್ನು ಕಳೆದುಕೊಂಡು ಮೊಗಲರ ಸ್ನೇಹಹಸ್ತವನ್ನು ಸ್ವೀಕರಿಸಲು ಸಿದ್ಧನಿರಲಿಲ್ಲ. ಉಳಿದ ರಾಜಪುತ್ರರಂತೆ ಮೊಗಲರೊಡನೆ ದೇಹ ಸಂಬಂಧವನ್ನು ಬೆಳೆಸಿ ಅವರ ಊಳಿಗ ಮಾಡುವ ಆಸೆಗೆ ಬಲಿಯಾಗಲಿಲ್ಲ. ತಾನು ಬಪ್ಪರಾವುಲನ ವಂಶದ ಕುಡಿ, ಮರ್ತ್ಯಲೋಕದ ಮಾನವನಿಗೆ ತಲೆಬಾಗಲಾರೆ ಎಂಬ ದೃಢಸಂಕಲ್ಪ ಇವನದು.

ಪ್ರತಾಪಸಿಂಹನೊಂದಿಗೆ ಯುದ್ಧಮಾಡಲು ಅಂಬರಿನ ರಾಜ ಮಾನಸಿಂಹ ಮತ್ತು ಅಸಫ್‌ಖಾನರ ನೇತೃತ್ವದಲ್ಲಿ ಬಂದ ಮೊಗಲ್ ಸೈನ್ಯವನ್ನು ಗೋಗುಂಡ ಕೋಟೆಗೆ 32ಕಿಮೀ ದೂರದಲ್ಲಿದ್ದ ಹಳದಿಘಾಟ್‌ನಲ್ಲಿ ಪ್ರತಾಪಸಿಂಹ ಎದುರಿಸಿದ. ಎರಡೂ ಪಡೆಗಳ ಸೈನ್ಯಗಳ ನಡುವೆ ಕದನ ನಡೆದು ಪ್ರತಾಪಸಿಂಹ ಸಂಪೂರ್ಣವಾಗಿ ಸೋತ. ಇವನು ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಲು ತೀರ್ಮಾನಿಸಿ, ಶತ್ರುಗಳು ಬಂದು ತನ್ನನ್ನು ಕೈಸೆರೆ ಹಿಡಿಯುವ ಮೊದಲೇ ಕುದುರೆಯನ್ನೇರಿ ಅರಾವಳಿ ಗುಡ್ಡಗಳಿಗೆ ಹೋಗಿ ತಲೆ ತಪ್ಪಿಸಿಕೊಂಡ. ಇವನನ್ನು ಉಳಿಸುವ ಸಲುವಾಗಿ ಇವನ ನೆಚ್ಚಿನ ಸೇವಕ ಜಾಲಮುಖಂಡನೊಬ್ಬ ಪ್ರತಾಪಸಿಂಹನಂತೆ ವೇಷ ಧರಿಸಿ, ಸತ್ತಿಗೆ ಹಿಡಿದು ಶತ್ರುಗಳಿಗೆ ಸೆರೆಸಿಕ್ಕಿ ಅವರಿಂದ ಹತನಾದ. ಅರಾವಳಿ ಗುಡ್ಡಗಾಡನ್ನು ಸೇರಿದ ಪ್ರತಾಪಸಿಂಹ ಚಿತ್ತೂರು ಮತ್ತೆ ತನ್ನ ವಶವಾಗುವವರೆಗೆ ಹಾಸಿಗೆಯ ಮೇಲೆ ಮಲಗುವುದಿಲ್ಲವೆಂದೂ ಬೆಳ್ಳಿ ಬಂಗಾರದ ತಟ್ಟೆಯಲ್ಲಿ ಊಟಮಾಡುವುದಿಲ್ಲವೆಂದೂ ಪ್ರತಿಜ್ಞೆ ಮಾಡಿ, ಹುಲ್ಲಿನ ಹಾಸಿಗೆಯ ಮೇಲೆ ಮಲಗಿ ಗೆಡ್ಡೆ ಗೆಣಸುಗಳನ್ನು ತಿಂದು ಕಾಲಯಾಪನ ಮಾಡಿದ. ಮೊಗಲ್ ಸೈನ್ಯ ಇವನನ್ನು ಬೆನ್ನಟ್ಟುತ್ತಲೇ ಇತ್ತು. ಎಲ್ಲೆಲ್ಲೂ ಶತ್ರುಗಳ ಸೈನಿಕರೂ ಮೊಗಲರ ಗೂಢಚಾರರೂ ತುಂಬಿದ್ದರು. ಅವರಿಂದ ತಪ್ಪಿಸಿಕೊಳ್ಳಲು ಪ್ರತಾಪಸಿಂಹ ಹೆಂಡತಿಮಕ್ಕಳೊಂದಿಗೆ ಅಲೆಮಾರಿಯಾಗಿ ಅಲೆದಾಡ ಬೇಕಾಯಿತು. ಎಷ್ಟೋ ಬಾರಿ ತನ್ನ ಮಗನನ್ನು, ಬುಟ್ಟಿಯಲ್ಲಿ ಕೂಡಿಸಿ ಶತ್ರುಗಳಿಂದ ಪಾರುಮಾಡಬೇಕಾಯಿತು. ಒಮ್ಮೆ ಇವನನ್ನು ಹಿಡಿಯಲು ಬಂದ ಗೂಢಚಾರನೊಬ್ಬ ಪ್ರತಾಪಸಿಂಹನ ರಿಕ್ತಾವಸ್ಥೆಯನ್ನು ನೋಡಿ ಕಂಬನಿಮಿಡಿದನೆಂದು ಹೇಳಲಾಗಿದೆ.

ಪ್ರತಾಪಸಿಂಹ ಹೀಗೆ ಅನೇಕ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡನಾದರೂ ಇವನ ಹೋರಾಟ ವ್ಯರ್ಥಸಾಹಸವಾಯಿತು. ಇವನು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೇ ತಾನು ಆರಂಭಿಸಿದ ಕೆಲಸವನ್ನು ಸಾಧಿಸುವ ಹೊಣೆಗಾರಿಕೆಯನ್ನು ತನ್ನ ಮಗ ಅಮರಸಿಂಹನಿಗೆ ಒಪ್ಪಿಸಿ 57ನೆಯ ವಯಸ್ಸಿನಲ್ಲಿ 1597 ಜನವರಿ 19 ರಂದು ನಿಧನನಾದ. ಮೊಗಲರ ಆಕ್ರಮಣದ ವಿರುದ್ಧ ಕೊನೆಯವರೆಗೂ ಹೋರಾಟ ನಡೆಸಿದ ರಜಪೂತ ದೊರೆ ಇವನೊಬ್ಬನೇ. ಮುಂದೆ ಅಮರಸಿಂಹ 1614ರಲ್ಲಿ ಚಕ್ರವರ್ತಿ ಜಹಾಂಗೀರನಿಗೆ ಮಣಿಯಬೇಕಾಯಿತು. (ಎಸ್.ಕೆ.ಬಿ.)

**ಪ್ರಥಮ ಸ್ವಾತಂತ್ರ್ಯ ಸಮರ–1857:** ಆಧುನಿಕ ಭಾರತದ ಇತಿಹಾಸ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖವಾದ ಘಟನೆ. 1857ರ ದಂಗೆಗೆ ಹಲವಾರು ಕಾರಣಗಳಿವೆಯಾದರೂ ಪ್ರಮುಖವಾಗಿ ಎರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಾಗಿದೆ. ಸರ್.ಜಾನ್ ಲಾರೆನ್ಸ್‌ನ ಪ್ರಕಾರ ಈ ಘಟನೆ ಕ್ರಾಂತಿಯಲ್ಲವೆಂದೂ ಅದರ ಮೂಲವನ್ನು ಸೈನ್ಯದ ದಂಗೆಯಲ್ಲಿ ಕಾಣಬಹುದೆಂದೂ ಅದಕ್ಕೆ ಕೊಬ್ಬು ಸವರಿದ ತೋಟಾಗಳೇ ಕಾರಣವೆಂದೂ ಇದರಲ್ಲಿ ಪಿತೂರಿಯ ಹಿನ್ನೆಲೆಯಾಗಲೀ ಬ್ರಿಟಿಷರ ಆಳಿಕೆಯನ್ನು ನಾಶಮಾಡುವ ಗುರಿಯಾಗಲೀ ಇರಲಿಲ್ಲವೆಂದೂ ಹೇಳಿದ್ದಾರೆ. ದಂಗೆ ದುರಭಿಮಾನ ಮತ್ತು ಸ್ವಾರ್ಥದ ದಂಗೆಯಾಗಿದ್ದು, ಸಮರ್ಥವಾದ ನಾಯಕತ್ವವಾಗಲೀ ಜನತೆಯ ಬೆಂಬಲವಾಗಲೀ ಇರಲಿಲ್ಲವೆಂದೂ ಸರ್.ಜಾನ್ ಸೀಲೀ ಹೇಳಿದ್ದಾನೆ. ಸರ್.ಜಾನ್ ಔಟ್‌ರಾಮ್‌ನ ಪ್ರಕಾರ ಇದು ಜನಪ್ರಿಯ ದಂಗೆಯ ಮೊದಲ ಹಂತ. ಆದರೆ ಭಾರತೀಯ ರಾಷ್ಟ್ರೀಯವಾದಿಗಳು 1857ರ ದಂಗೆಯನ್ನು ಭಾರತದ ಸ್ವಾತಂತ್ರ್ಯಸಮರವೆಂದು ಹೇಳಿದ್ದಾರೆ. ಭಾರತದ ಸ್ವಾತಂತ್ರ್ಯಸಮರ ಎಂಬ ಗ್ರಂಥದ ಲೇಖಕರಾದ ವಿ.ಡಿ.ಸಾವರ್ಕರ್‌ರು ಹೇಗೆ ದಂಗೆ ಸ್ವಾತಂತ್ರ್ಯ ಸಮರದ ಲಕ್ಷಣಗಳನ್ನು ಹೊಂದಿದೆ ಎಂಬುದನ್ನು ಪ್ರತಿಪಾದಿಸಿದ್ದಾರೆ. ಅಶೋಕ ಮೆಹತಾರವರು ಕ್ರಾಂತಿಯ ರಾಷ್ಟ್ರೀಯ ಲಕ್ಷಣದ ಬಗ್ಗೆ ತಮ್ಮ ಪುಸ್ತಕದಲ್ಲಿ ವಿವೇಚಿಸಿದ್ದಾರೆ. ಸಾವರ್ಕರ್ ಮತ್ತು ಮೆಹತಾರವರನ್ನು ಸಮರ್ಥಿಸುತ್ತಾ ಬ್ರಿಟಿಷ್ ಇತಿಹಾಸಕಾರನಾದ ಥಾಮಸನ್ 1857ರ ದಂಗೆ ವಾಸ್ತವವಾಗಿ ಸ್ವಾತಂತ್ರ್ಯಯುದ್ಧವೆಂದು ಪರಿಗಣಿಸಿದ್ದಾನೆ. ಕ್ರಾಂತಿಯ ಸ್ವಭಾವವನ್ನು ವಿವೇಚಿಸುತ್ತಾ ಎಸ್.ಬಿ.ಚೌಧರಿಯವರು ಅದರ ನಾಗರಿಕ ಮತ್ತುಸೈನಿಕ ಅಂಶಗಳನ್ನು ಬೇರ್ಪಡಿಸಿ ಆ ದಂಗೆಯಲ್ಲಿ ಜನತೆಯ ಪಾತ್ರವೇನು ಎಂಬುದನ್ನು ವಿವರಿಸಿದ್ದಾರೆ.

ಪ್ರಸಿದ್ಧ ಇತಿಹಾಸಕಾರರಾದ ಆರ್.ಸಿ.ಮುಜುಂದಾರ್ ಮತ್ತು ಎಸ್.ಎನ್.ಸೇನರು ಇತ್ತೀಚೆಗೆ 1857ರ ಘಟನೆಗೆ ಸಂಬಂಧಿಸಿದ ಎಲ್ಲ ಅಧಿಕೃತ ಮತ್ತು ಅನಧಿಕೃತ ದಾಖಲೆಗಳನ್ನು ಪರಿಶೀಲಿಸಿದರಾದರೂ ಅವರು ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸದೆ. ಈ ಘಟನೆಗಳ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಅರ್ಥೈಸಿದ್ದಾರೆ. 1857ರ ದಂಗೆ ಯಾವ ಜಾಗರೂಕತೆಯ ಯೋಜನೆಯ ಪರಿಣಾಮವಾಗಲೀ ಅಥವಾ ಅದರ ಹಿಂದೆ ಯಾವ ಪ್ರಭಾವಶಾಲಿ ವ್ಯಕ್ತಿಯ ಕೈವಾಡವಾಗಲೀ ಇರಲಿಲ್ಲವೆಂಬುದು ಇಬ್ಬರ ಅಭಿಪ್ರಾಯವಾಗಿದೆ. ಸೇನರ ಪ್ರಕಾರ 19ನೆಯ ಶತಮಾನದಲ್ಲಿ ಭಾರತ ಭೌಗೋಳಿಕಪದವಾಗಿ ಭಾರತೀಯ ರಾಷ್ಟ್ರೀಯತೆ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು.

1857ರ ಕ್ರಾಂತಿ ಸ್ವಾತಂತ್ರ್ಯಯುದ್ಧವಾಗಿತ್ತೆಂದು ಸೇನರು ಭಾವಿಸಿ. ಧರ್ಮಕ್ಕೋಸ್ಕರ ಪ್ರಾರಂಭವಾದ ಹೋರಾಟ ಸ್ವಾತಂತ್ರ್ಯಯುದ್ಧವಾಗಿ ಕೊನೆಗೊಂಡಿತು ಎಂದಿದ್ದಾರೆ. ಆದರೆ ಮಜುಂದಾರರು 1857ರ ದಂಗೆ ಸ್ವಾತಂತ್ರ್ಯಯುದ್ಧವಲ್ಲವೆಂದಿದ್ದಾರೆ. ಈ ದಂಗೆ ವಿವಿಧ ಪ್ರದೇಶಗಳಲ್ಲಿ ವಿವಿಧ ಸ್ವರೂಪ ಹೊಂದಿತ್ತು. ಮುಖ್ಯವಾಗಿ ದಂಗೆಯಲ್ಲಿ ಪ್ರಧಾನಪಾತ್ರ ವಹಿಸಿದವರು ಸಿಪಾಯಿಗಳು. ಮಜುಂದಾರರೂ 1857ರ ದಂಗೆಯನ್ನು ಕುರಿತು ಅದು ಶೀಘ್ರದಲ್ಲಿಯೇ ಬಲಿಷ್ಠ ಬ್ರಿಟಿಷ್ ಶಕ್ತಿಗೆ ಸವಾಲಾಯಿತ್ತೆಂದಿದ್ದಾರೆ.

ಬ್ರಿಟಿಷ್ ಇತಿಹಾಸಕಾರರು ಸೈನಿಕ ಕುಂದುಕೊರತೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಕೊಬ್ಬು ಸವರಿದ ತೋಟಾಗಳೇ 1857ರ ದಂಗೆಗೆ ಕಾರಣವೆಂದರೆ ಆಧುನಿಕ ಭಾರತೀಯ ಇತಿಹಾಸಕಾರರು ಈ ವಾದವನ್ನು ಒಪ್ಪದೆ, ಕ್ರಾಂತಿಯ ಕಾರಣಗಳು ಗಹನವಾಗಿದ್ದು, ಅವುಗಳನ್ನು ತಿಳಿಯಬೇಕಾದರೆ ಒಂದು ಶತಮಾನದ ಬ್ರಿಟಿಷರ ಆಳಿಕೆಯನ್ನು ಪರಿಶೀಲಿಸ ಬೇಕಾಗುತ್ತದೆ ಎಂದಿದ್ದಾರೆ. ಗ್ರೊವರ್ ಹೇಳುವ ಹಾಗೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕಾರಣಗಳಿಂದ ಶೇಖರವಾಗಿದ್ದ, ಸುಲಭವಾಗಿ ಹತ್ತಿಕೊಳ್ಳ ಬಹುದಾದ ವಸ್ತುವಿನ ಮೇಲೆ ಎಸೆದಂತಹ ಬೆಂಕಿಕಡ್ಡಿಯಂತೆ ಇತ್ತು – ಕೊಬ್ಬು ಸವರಿದ ತೋಟಾಗಳು ಮತ್ತು ಸೈನಿಕರ ದಂಗೆ.

ರಾಜಕೀಯವಾಗಿ ಬ್ರಿಟಿಷರು ತಮ್ಮ ವಿಸ್ತರಣಾ ನೀತಿಯಿಂದ ತಮ್ಮ ಆಳಿಕೆಯನ್ನು ಭದ್ರಪಡಿಸಿಕೊಂಡಿದ್ದರು. ಈ ಆಕ್ರಮಣ ನೀತಿಯಲ್ಲಿ ಡಾಲ್‌ಹೌಸಿಯ ಸಾಮ್ರಾಜ್ಯಕ್ಕೆ ರಾಜ್ಯಗಳನ್ನು ಸೇರಿಸಿಕೊಳ್ಳುವ ನೀತಿಯೇ ಕೊನೆಯ ಹಂತವಾಗಿತ್ತು. ದತ್ತು ಮಕ್ಕಳಿಗೆ ರಾಜ್ಯದ ಹಕ್ಕಿಲ್ಲವೆಂಬ ತತ್ತ್ವವನ್ನು ಜಾರಿಗೆ ತಂದುದರಿಂದ ರಾಜರಲ್ಲಿ ಮತ್ತು ಅವರ ಪ್ರಜೆಗಳಲ್ಲಿ ಅತೃಪ್ತಿ ಮತ್ತು ಅಶಾಂತಿ ತಲೆದೋರಿತು. ಮೋಸದಿಂದ ರಾಜ್ಯಗಳನ್ನು ಕಸಿದುಕೊಳ್ಳುವುದು ಬ್ರಿಟಿಷರ ಧೋರಣೆ ಎಂದು ಜನತೆ ಭಾವಿಸಿದರು. ಔದ್ ಪ್ರಾಂತ್ಯವನ್ನು ಸಾಮ್ರಾಜ್ಯಕ್ಕೆ

ಸೇರಿಸಿಕೊಂಡಿದ್ದು ಜನತೆಯ ರಾಜನಿಷ್ಠೆಯನ್ನು ರಕ್ಷಿಸುವುದಕ್ಕಾಗಿ ಎಂದು ಭಾವಿಸಲಾಯಿತು. ಜನರ ಮತ್ತು ಸರ್ಕಾರದ ನಡುವೆ ಸಹಕಾರವಿಲ್ಲದೆ ಹೋದುದೇ ಭಾರತೀಯ ದಂಗೆಗೆ ಕಾರಣವಾಯಿತೆಂದು ಸರ್.ಅಹಮದ್‌ಖಾನ್ ಹೇಳಿದ್ದಾರೆ.

ಸೈನಿಕ ಕ್ಷೇತ್ರದಲ್ಲಿ ಅನೇಕ ನ್ಯೂನತೆಗಳಿದ್ದವು. ಭಾರತೀಯ ಸೈನಿಕರಲ್ಲಿ ಅಶಾಂತಿಯ ಹೊಗೆಯಾಡುತ್ತಿತ್ತು. ಸುಭೇದಾರನ ಸಂಬಳ ಐರೋಪ್ಯ ಸೈನಿಕನ ಸಂಬಳಕ್ಕಿಂತ ಕಡಿಮೆಯಿತ್ತು. ಭಾರತೀಯ ಸೈನಿಕರಿಗೆ ಬಡ್ತಿಯ ಅವಕಾಶವೇ ಇರಲಿಲ್ಲ. ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ ಭಾರತೀಯ ಸೈನಿಕರಲ್ಲಿ ನಂಬಿಕೆಯೇ ಇರಲಿಲ್ಲ. ಹೀಗಾಗಿ ಭಾರತೀಯ ಸೈನಿಕರ ಸ್ಥಿತಿ ಶೋಚನೀಯವಾಗಿತ್ತು. ಬಂಗಾಲಿ ಸೈನಿಕರು ಸಮುದ್ರಯಾನವನ್ನು ನಿಷೇಧಿಸಿದ್ದರೂ ಅವರನ್ನು ದೇಶದ ಹೊರಗಡೆಯ ಸೇವೆಗಳಿಗೆ ಕಳುಹಿಸಲಾಗುತ್ತಿತ್ತು. ಇಂತಹ ಸಂದಿಗ್ಧ ಸಮಯದಲ್ಲಿ ಕೊಬ್ಬು ಸವರಿದ ತೋಟಾಗಳನ್ನು ಉಪಯೋಗಿಸಲು ಬಲಾತ್ಕರಿಸಿದ್ದು ಅಶಾಂತಿಯ ಹೊಗೆಯನ್ನು ಜ್ವಾಲೆಯನ್ನಾಗಿ ಪರಿವರ್ತಿಸಿತು. ಇದರ ಜೊತೆಗೆ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳೂ ಸೇರಿಸಿಕೊಂಡು ಕ್ರಾಂತಿ ಉಗ್ರರೂಪ ತಳೆಯಿತು. (ಎಸ್.ಜಿ.)

**ಪ್ರಭಾಸ್ ಪಾಠಣ್:** ಗುಜರಾತ್ ರಾಜ್ಯದ ಜುನಾಗಡ್ ಜಿಲ್ಲೆಯಲ್ಲಿರುವ ತಾಮ್ರ–ಶಿಲಾಯುಗ ನೆಲೆ. ಸೋಮನಾಥ್ ಎಂದೂ ಕರೆಯಲಾಗುವ ಈ ನೆಲೆ ಹಿರಣ್ ನದಿ ಮುಖದಲ್ಲಿದೆ. 5 ದಿಬ್ಬಗಳಿರುವ ಈ ನೆಲೆಯಲ್ಲಿ ಗುಜರಾತ್ ರಾಜ್ಯ ಪುರಾತತ್ತ್ವ ಇಲಾಖೆ ಹಾಗೂ ಬರೋಡದ ಎಂ.ಎಸ್.ವಿಶ್ವವಿದ್ಯಾಲಯ 1956ರಲ್ಲಿ ಜಂಟಿಯಾಗಿ ಉತ್ಖನನ ನಡೆಸಿದವು. 1972, 1976, 1977ರಲ್ಲಿ ಪುಣೆಯ ಡೆಕ್ಕನ್ ಕಾಲೇಜು ಗುಜರಾತ್ ರಾಜ್ಯ ಪುರಾತತ್ತ್ವ ಇಲಾಖೆಯ ಸಹಯೋಗದೊಂದಿಗೆ ಇಲ್ಲಿ ವಿಸ್ತೃತ ಉತ್ಖನನ ನಡೆಸಿತು. ಪ್ರ.ಶ.ಪೂ.2000–ಪ್ರ.ಶ.6ನೆಯ ಶತಮಾನದ ಅವಧಿಯ 5 ಹಂತಗಳು ಇಲ್ಲಿ ಕಂಡುಬಂದವು.

ಒಂದನೆಯ ಹಂತದ (ಪ್ರ.ಶ.ಪೂ.ಸು.2000–1800) ಅವಶೇಷಗಳು ಭಾಗಶಃ ನದಿಯ ನೆರೆಮಣ್ಣಿನ ಸ್ತರದಲ್ಲಿವೆ. ಈ ಹಂತದ ಜನ ಕ್ಯಾಲ್ಸೆಡನಿ ಅಲಗುಗಳನ್ನೂ ಕಪ್ಪು–ಕೆಂಪು ದ್ವಿವರ್ಣ ಹಾಗೂ ಒರಟು ಕೆಂಪುಪಾತ್ರೆಗಳನ್ನೂ ಬಳಸುತ್ತಿದ್ದರು. ಗುಜರಾತ್ ಪ್ರದೇಶದ ಅಂತ್ಯ ಹರಪ್ಪ ಸಂಸ್ಕೃತಿಯ ಮಣ್ಪಾತ್ರೆಗಳನ್ನು ಹೋಲುವ ಕಪ್ಪು ಚಿತ್ರವುಳ್ಳ ಕೆಂಪುಪಾತ್ರೆಯೂ ಆಗ ಸೀಮಿತ ಬಳಕೆಯಲ್ಲಿತ್ತು. ಫಯಾನ್ಸ್ ಹಾಗೂ ಚಿಪ್ಪಿನ ಮಣಿಗಳೂ ಲಭಿಸಿರುವ ಈ ಹಂತದಿಂದ ಪಡೆದ ಕಾಲಮಾನ ಪ್ರ.ಶ.ಪೂ.2410–110. ಇದು ನೆರೆಮಣ್ಣಿನ ಸ್ತರವಾಗಿರುವುದರಿಂದ ಈ ಕಾಲಮಾನದ ನಿಖರತೆಯ ಬಗ್ಗೆ ಅನುಮಾನವಿದೆ.

2ನೆಯ ಹಂತದ (ಪ್ರ.ಶ.ಪೂ.ಸು.1800–1500) ಹೊಸ ಬಗೆಯ ಮಣ್ಪಾತ್ರೆಗಳನ್ನು ಪ್ರಭಾಸ್ ಪಾತ್ರೆ ಎಂದು ಹೆಸರಿಸಲಾಗಿದೆ. ಗುಲಾಬಿ ಅಥವಾ ಕಿತ್ತಳೆಬಣ್ಣದ ಲೇಪವುಳ್ಳ, ನುಣುಪು ಮಣ್ಣಿನಿಂದ ಮಾಡಿರುವ ಈ ಪಾತ್ರೆಗಳನ್ನು ನೇರಳೆ ಅಥವಾ ಕಂದುಬಣ್ಣದಿಂದ ಚಿತ್ರಿಸಲಾಗಿದೆ. ಚಿತ್ರಗಳು ಹೆಚ್ಚಾಗಿ ಜ್ಯಾಮಿತೀಯ ವಿನ್ಯಾಸವುಳ್ಳವು. ಈ ಪಾತ್ರೆಗಳ ಆಕಾರಗಳು ಹರಪ್ಪ ಪಾತ್ರೆಗಳ ಅನುಕರಣೆಯಾಗಿವೆ. ಫಯಾನ್ಸ್ ಮತ್ತು ಸ್ಟಿಯಟೈಟಿನ ಅನೇಕ ವಿಧದ ಮಣಿಗಳು ಇಲ್ಲಿವೆ. ಸ್ಟಿಯಟೈಟಿನ ಸೂಕ್ಷ್ಮ ಮಣಿಗಳು ಉಲ್ಲೇಖಾರ್ಹ. ಮಿಲಿಯೊಲೈಟ್ ಸುಣ್ಣಕಲ್ಲಿನಿಂದ ಕಟ್ಟಿದ ಆಯತಾಕಾರದ ಮನೆಯೊಂದರ ತಳಪಾಯ ಇಲ್ಲಿ ಕಂಡುಬಂದಿದೆ.

3ನೆಯ ಹಂತದಲ್ಲಿ (ಪ್ರ.ಶ.ಪೂ.1500–1200) ಪ್ರಭಾಸ್ ಪಾತ್ರೆಗಳ ಬಳಕೆ ಮುಂದುವರೆದುದರ ಜೊತೆಗೆ ಮಿರುಗುವ ಕೆಂಪುಪಾತ್ರೆ ಬಳಕೆಗೆ ಬಂದಿತು. ಮಣ್ಣಿನ ಗಾರೆಯಲ್ಲಿ ಮಿಲಿಯೊಲೈಟ್ ಸುಣ್ಣಕಲ್ಲಿನಿಂದ ಕಟ್ಟಿದ ಒಂದು ಕಟ್ಟಡ ಸಂಕೀರ್ಣ ಈ ಹಂತದ ಮಹತ್ತ್ವದ ಅವಶೇಷ. ಹಲವಾರು ಸಣ್ಣ ಚೌಕಕೋಣೆಗಳನ್ನೂ ಕೆಲವು ವಿಶಾಲ ಕೋಣೆಗಳನ್ನೂ ಹೊಂದಿರುವ ಈ ಕಟ್ಟಡ ವಸತಿಗಾಗಿ ಕಟ್ಟಿದ್ದಲ್ಲವೆಂಬುದು ಸಾಂದರ್ಭಿಕ ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡುತ್ತದೆ. ಗಿಡ್ಡ ಗೋಡೆಗಳಿರುವ ಈ ಕಟ್ಟಡಕ್ಕೆ ಚಾವಣಿಯಿದ್ದಂತೆ ತೋರುವುದಿಲ್ಲ. ಕಪ್ಪುಮಣ್ಣಿನುಂಡೆಗಳನ್ನು ಹಾಸಿ ದಮ್ಮಸು ಮಾಡಿದ ನೆಲಗಟ್ಟಿದ್ದರೂ ಜಾಗರೂಕತೆ ವಹಿಸಿದ ಲಕ್ಷಣಗಳಿಲ್ಲ. ವಾಸದ ಕುರುಹುಗಳಾದ ಬೂದಿ, ಒಲೆ, ಇದ್ದಿಲು ಮೊದಲಾದುವು ಇಲ್ಲಿಲ್ಲ. ಹಾಗಾಗಿ ಇದು ದಾಸ್ತಾನು ಗೃಹ ಅಥವಾ ಇನ್ನಾವುದೇ ಸಾರ್ವಜನಿಕ ಕಟ್ಟಡವಾಗಿರಬೇಕು. ಈ ಹಂತದ ಇತರ ಅವಶೇಷಗಳು ತಾಮ್ರ–ಶಿಲಾಯುಗದ ಲಕ್ಷಣಗಳಿಂದ ಕೂಡಿವೆ. ಇವೆಂದರೆ ಕ್ಯಾಲ್ಸೆಡನಿಯ ಅಲಗು–ಚಕ್ಕೆಗಳು, ಅರೆಪ್ರಶಸ್ತಕಲ್ಲಿನ, ಫಯಾನ್ಸ್–ಸ್ಟಿಯಟೈಟಿನ ಮಣಿಗಳು ಇತ್ಯಾದಿ. ಸ್ಟಿಯಟೈಟಿನ ವಿಶಿಷ್ಟ ತಾಯಿತ–ಮುದ್ರೆ ಇಲ್ಲಿ ಸಿಕ್ಕಿದ್ದು ಇದರ ಒಂದು ಮುಖದ ಮೇಲೆ 7, ಮತ್ತೊಂದು ಮುಖದ ಮೇಲೆ 5 ಶೈಲೀಕೃತ ಜಿಂಕೆ ಚಿತ್ರವನ್ನು ಕೊರೆಯಲಾಗಿದೆ. ಇದು ಶೈಲಿಯಲ್ಲಿ ಹರಪ್ಪ ಸಂಸ್ಕೃತಿಯ ಮುದ್ರೆಗಳನ್ನು ಹೋಲುತ್ತದೆ. ಹೂವಿನಾಕೃತಿಯ ಚಿನ್ನದ ಓಲೆಯೂ ಈ ಹಂತದಲ್ಲಿ ಸಿಕ್ಕಿದೆ. ಹರಪ್ಪ ಮಾದರಿಯ ಚರ್ಟ್‌ಕಲ್ಲಿನ ತೂಕದ ಬಟ್ಟುಗಳನ್ನು ಉಪಯೋಗಿಸುತ್ತಿದ್ದ ಈ ಜನ ಸಂಪದ್ಭರಿತರಾಗಿದ್ದರು ಎಂಬುದು ಇದರಿಂದ ತಿಳಿಯುತ್ತದೆ. ಈ ಹಂತದ ಕೊನೆಯಲ್ಲಿ ಇವರು ವಸತಿಯನ್ನು ತೊರೆದರು. ಪ್ರ.ಶ.ಪೂ.4ನೆಯ ಶತಮಾನದಲ್ಲಿ ಇಲ್ಲಿ ಕೋಟೆಯಿಂದಾವೃತವಾದ ವಸತಿ ನಿರ್ಮಾಣವಾಯಿತು. ಇಲ್ಲಿಯ ಕೋಟೆ ಕಲ್ಲಿನಿಂದ ಕಟ್ಟಲ್ಪಟ್ಟಿದ್ದು 4 ದಿಕ್ಕಿನಲ್ಲಿ ಬುರುಜುಗಳನ್ನು ಹೊಂದಿತ್ತು. ಈ ಕಾಲದಲ್ಲಿ ಜನ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ಈ ಹಂತ ಕೊನೆಗೊಂಡದ್ದು ಪ್ರ.ಶ.ಪೂ.1ನೆಯ ಶತಮಾನದಲ್ಲಿ. 5ನೆಯ ಹಂತದ (ಪ್ರ.ಶ.ಪೂ.1ನೆಯ– ಪ್ರ.ಶ.6ನೆಯ ಶತಮಾನ) ವಿಶಿಷ್ಟ ಲಕ್ಷಣ ಹೊಳಪಿನ ಕೆಂಪುಪಾತ್ರೆ.. ರೋಮ್ ಸಂಪರ್ಕ ಸಂಕೇತವಾದ ಮದ್ಯಜಾಡಿಯ ಚೂರುಗಳೂ ಗುಪ್ತ ಶೈಲಿಯಲ್ಲಿರುವ ಸುಡಾವೆಮಣ್ಣಿನ ಆಕೃತಿಗಳೂ ಇಲ್ಲಿವೆ. (ವೈ.ಎಂ.)

**ಪ್ರಾಗೈತಿಹಾಸಿಕ ಶಿಲೋಪಕರಣ ತಂತ್ರಜ್ಞಾನ:** ಶಿಲಾಯುಗದ ಮಾನವನ ದೈನಂದಿನ ಚಟುವಟಿಕೆಗಳಲ್ಲಿ ಶಿಲೋಪಕರಣ ತಯಾರಿಕೆಯೂ ಒಂದು. ಶಿಲಾಯುಗದ ಪ್ರತಿ ಹಂತದಲ್ಲಿಯೂ ವಿಶಿಷ್ಟವಾದ ಉಪಕರಣ ಸಮುಚ್ಚಯ ಮತ್ತು ತಂತ್ರಜ್ಞಾನವನ್ನು ಕಾಣಬಹುದು. ಪರಿಸರ ಬದಲಾದಂತೆಲ್ಲ ಮಾನವ ಜೀವನಶೈಲಿ ಬದಲಾಗಿ ಇದಕ್ಕನುಗುಣವಾಗಿ ಉಪಕರಣಗಳ ಆಕಾರ–ಬಗೆಗಳಲ್ಲಿ ಬದಲಾವಣೆಗಳಾದವು; ತಂತ್ರಜ್ಞಾನದಲ್ಲಿ ಸುಧಾರಣೆಗಳಾದವು. ಉಪಕರಣಗಳ ತಯಾರಿಕೆಯ ವಿಧಾನವನ್ನು ಅವುಗಳ ಮೇಲಿರುವ ಕೆಲವು ನಿರ್ದಿಷ್ಟ ಗುರುತುಗಳಿಂದ ಸ್ವಲ್ಪಮಟ್ಟಿಗೆ ಊಹಿಸಬಹುದು. ಈ ಪ್ರಕ್ರಿಯೆಯನ್ನು ನಿಖರವಾಗಿ ಅರ್ಥಮಾಡಿಕೊಳ್ಳಲು ಪ್ರಾಗೈತಿಹಾಸಿಕ ತಜ್ಞರು ಎರಡು ಮಾರ್ಗಗಳನ್ನು ಅವಲಂಬಿಸಿದ್ದಾರೆ. ಅವು ಪ್ರಾಯೋಗಿಕ ಮಾರ್ಗ ಮತ್ತು ಜನಾಂಗೀಯ ಅಧ್ಯಯನ ಮಾರ್ಗ. ಮೊದಲನೆಯದು ಉಪಕರಣಗಳನ್ನು ಸ್ವತಃ ತಯಾರಿಸಿ ಈ ಕ್ರಿಯೆಯು ಒಳಗೊಳ್ಳುವ ಹಂತಗಳನ್ನು ಅರಿಯುವ ಪ್ರಯತ್ನವಾದರೆ ಎರಡನೆಯದು ಕೆಲವು ಆದಿವಾಸಿ ಪಂಗಡಗಳಲ್ಲಿ ಇಂದಿಗೂ ಬಳಕೆಯಲ್ಲಿರುವ ಶಿಲೋಪಕರಣಗಳು ಮತ್ತು ಅದರ ತಂತ್ರಜ್ಞಾನವನ್ನು ಅಭ್ಯಸಿಸುವುದರ ಮೂಲಕ ಪ್ರಾಗೈತಿಹಾಸಿಕ ತಂತ್ರಗಳನ್ನು ಮರುಸೃಷ್ಟಿಸುವ ಪ್ರಯತ್ನ. ಉಪಕರಣ ತಯಾರಿಕೆ ಸುಲಭಸಾಧ್ಯ ಚಟುವಟಿಕೆಯಲ್ಲ; ಇದು ಕಲ್ಲಿನ ಭೌತಿಕ ಗುಣಲಕ್ಷಣಗಳ ತಿಳಿವಳಿಕೆ, ಬೇಕಾದ ಆಕಾರಕ್ಕೆ ಆಯ್ದ ಕಲ್ಲನ್ನು ಕೆತ್ತುವ ಜಾಣ್ಮೆ, ನಿಪುಣತೆ ಮತ್ತು ಅದಕ್ಕೆ ತಕ್ಕ ಪರಿಶ್ರಮ, ಅನುಭವ–ಇವೆಲ್ಲವನ್ನು ಒಳಗೊಂಡ ಒಂದು ಸಂಕೀರ್ಣ ಕ್ರಿಯೆ ಎಂಬುದು ಇಂತಹ ಅಧ್ಯಯನಗಳಿಂದ ತಿಳಿದುಬಂದಿದೆ.




**1) ಕೊಂಬಿನ ತಂತ್ರ, 2) ನೇರ ಹೊಡೆತ ತಂತ್ರ, 3) ಹಗುರ ಸುತ್ತಿಗೆ ತಂತ್ರ**

**ಆದಿ ಹಳೆಶಿಲಾಯುಗ:** ಆದಿ ಹಳೆಶಿಲಾಯುಗದ ಮುಖ್ಯ ಉಪಕರಣಗಳೆಂದರೆ ವಿವಿಧ ಆಕಾರದ ಕೈಗೊಡಲಿ, ಕಡಿಕತ್ತಿ, ಕೊಚ್ಚುಗತ್ತಿ, ಕೊಚ್ಚುವ ಮತ್ತು ಚೂರಿಯಂತಹ ಉಪಕರಣಗಳು, ಮೊನೆ ಮತ್ತು ಹೆರೆಚಕ್ಕೆ. ಕೊಚ್ಚುಗತ್ತಿಯನ್ನು ನದಿಯ ಉರುಟುಕಲ್ಲು ಅಥವಾ ದೊಡ್ಡ ದಪ್ಪಚಕ್ಕೆಯಿಂದ ಮಾಡಲಾಗುತ್ತಿತ್ತು. ಇತರ ಉಪಕರಣಗಳು ಸಾಮಾನ್ಯವಾಗಿ ದೊಡ್ಡಚಕ್ಕೆಗಳಿಂದಲೇ ಮಾಡಲ್ಪಡುತ್ತಿದ್ದವು. ಸ್ಥಳೀಯವಾಗಿ ಲಭ್ಯವಿರುವ ಕಲ್ಲುಗಳನ್ನೇ ಹೆಚ್ಚಾಗಿ ಆಯಲಾಗುತ್ತಿತ್ತು. ಕ್ವಾರ್ಟ್ಸೈಟ್, ಬಸಾಲ್ಟ್, ಮರಳುಗಲ್ಲು, ಸುಣ್ಣಕಲ್ಲು, ಚರ್ಟ್‌ಗಳನ್ನು ಸಾಮಾನ್ಯವಾಗಿ ಮತ್ತು ರೂಪಾಂತರಿತ ಕಲ್ಲುಗಳು ಹಾಗೂ ಗ್ರಾನೈಟ್ ಅನ್ನು ವಿರಳವಾಗಿ ಉಪಕರಣ ತಯಾರಿಕೆಗೆ ಬಳಸಲಾಗಿದೆ. ಭಾರತದ ಆದಿ ಹಳೆಶಿಲಾಯುಗದಲ್ಲಿ ಅಶೂಲಿಯನ್ ಸಂಸ್ಕೃತಿಯ ಗುಣಲಕ್ಷಣಗಳು ಪ್ರಧಾನವಾಗಿವೆ. ಇದರ ಪೂರ್ವದಲ್ಲಿದ್ದ, ಆಫ್ರಿಕದ ಓಲ್ಡೊವಾನ್ ಸಂಸ್ಕೃತಿಯನ್ನು ಹೋಲುವ, ಶುದ್ಧ ಉರುಟುಗಲ್ಲು ಉಪಕರಣ ಸಮುಚ್ಚಯ (ಪೆಬಲ್ ಟೂಲ್ ಕಲ್ಚರ್) ಭಾರತದಲ್ಲಿ ನಿಖರ ಭೂಸ್ತರದಲ್ಲಿ ಇದುವರೆಗೂ ಕಾಣಸಿಕ್ಕಿಲ್ಲ. ಆದಿ ಹಳೆಶಿಲಾಯುಗದ ಉಪಕರಣ ತಯಾರಿಕೆ ತಂತ್ರಗಳು ಹೀಗಿವೆ:

ಆಯ್ದಶಿಲೆಯಿಂದ (ನದಿಯ ಉರುಟುಕಲ್ಲು, ದೊಡ್ಡ ಕಲ್ಲು ತುಂಡು) ಮೊದಲು ಚಕ್ಕೆಗಳನ್ನು ತೆಗೆಯಲಾಗುತ್ತದೆ. ಮೂಲಶಿಲೆಗೆ (ಕೋರ್) ಚಕ್ಕೆ ಅಂಟಿದ್ದ ಭಾಗ ಚಕ್ಕೆ ಒಳಬದಿಯಾದರೆ (ವೆಂಟ್ರಲ್ ಸೈಡ್). ಇದರ ಮತ್ತೊಂದು ಬದಿ ಹೊರಬದಿ (ಡಾರ್ಸಲ್ ಸೈಡ್). ಚಕ್ಕೆಯನ್ನು ತೆಗೆದಾಗ ಹೊಡೆತದ ಪರಿಣಾಮವಾಗಿ ಚಕ್ಕೆಯ ಒಳಬದಿಯ ತುದಿಯಲ್ಲಿ ಹೊಡೆತ ಬಿದ್ದ ಬಿಂದುವಿನಲ್ಲಿ ಉಬ್ಬು ಉಂಟಾಗುತ್ತದೆ (ಪಾಸಿಟಿವ್ ಬಲ್ಬ್) ಹಾಗೂ ಮೂಲಶಿಲೆಯಲ್ಲಿ ಇದಕ್ಕನುಗುಣವಾದ ಜಾಗದಲ್ಲಿ ತಗ್ಗು (ನೆಗೆಟಿವ್ ಬಲ್ಬ್) ಉಂಟಾಗುತ್ತದೆ. ಅಂದರೆ ಚಕ್ಕೆಯನ್ನು ಮತ್ತೆ ಮೂಲಶಿಲೆಗೆ ಜೋಡಿಸಿದಾಗ, ಚಕ್ಕೆಯ (ಧನಾತ್ಮಕ) ಉಬ್ಬು ಮೂಲಶಿಲೆಯ (ಋಣಾತ್ಮಕ) ತಗ್ಗಿಗೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಚಕ್ಕೆ ತೆಗೆಯಲು ಅನುಕೂಲವಾಗುವುದಕ್ಕೆ ಮೂಲಶಿಲೆಯ ಮೇಲೆ ಅಂಚನ್ನು ಸಾಮಾನ್ಯವಾಗಿ ಮಟ್ಟ

(ಸ್ಟ್ರೈಕಿಂಗ್ ಪ್ಲಾಟ್‌ಫಾರ್ಮ್) ಮಾಡಿಕೊಳ್ಳಲಾಗುತ್ತದೆ. ಈ ಸಮತಟ್ಟಾದ ಅಂಚಿನ ಮೇಲೆ ಹೊಡೆದಾಗ ಆ ಅಂಚಿನಿಂದ ಚಕ್ಕೆಯೇಳುತ್ತದೆ. ಸಮತಟ್ಟಿನ ಸ್ವಲ್ಪ ಭಾಗವೂ ಸಾಮಾನ್ಯವಾಗಿ ಚಕ್ಕೆಯಲ್ಲಿ ಉಳಿದಿರುತ್ತದೆ. ಹೀಗೆ ಚಕ್ಕೆಯ ಒಂದು ತುದಿಯಲ್ಲಿ ಸಮತಟ್ಟು ಮತ್ತು ಅದಕ್ಕೆ ತಾಗಿ ಕೆಳಗೆ (ಒಳಬದಿಯಲ್ಲಿ) ಉಬ್ಬು ಇರುತ್ತದೆ. ಚಕ್ಕೆಯ ಸಮತಟ್ಟ ಮತ್ತು ಉಬ್ಬಿನ ನಡುವೆ ಉಂಟಾಗುವ ಕೋನ ಚಕ್ಕೆಕೋನ. ಈ ಕೋನ ಸಾಮಾನ್ಯವಾಗಿ 90°ಗಿಂತ ಹೆಚ್ಚಾಗಿರುತ್ತದೆ. ಮೂಲಶಿಲೆಯಿಂದ ತೆಗೆಯುವ ಮೊದಲ ಸುತ್ತಿನ ಚಕ್ಕೆಗಳ ಹೊರಬದಿಯಲ್ಲಿ ಮೂಲಶಿಲೆಯ ನೈಸರ್ಗಿಕ ಮೇಲ್ಮೈ (ಕಾರ್ಟೆಕ್ಸ್) ಇರುತ್ತದೆ. ಎರಡನೆಯ ಸುತ್ತಿನ ಚಕ್ಕೆಗಳ ಹೊರಬದಿಯಲ್ಲಿ ಮೊದಲನೆ ಸುತ್ತಿನ ಚಕ್ಕೆಗಳಿಂದ ಉಂಟಾದ ಋಣಾತ್ಮಕ ತಗ್ಗು/ಚಕ್ಕೆ ಗುರುತುಗಳಿರುತ್ತವೆ. ಚಕ್ಕೆಯಿಂದ ತಯಾರಾದ ಉಪಕರಣ ಚಕ್ಕೆ ಉಪಕರಣ. ಮೂಲಶಿಲೆಯನ್ನೇ ನೇರವಾಗಿ ಉಪಕರಣದ ರೂಪಕ್ಕೆ ತಂದರೆ (ಬಂಡೆಯಿಂದ ಶಿಲ್ಪ ಕೆತ್ತುವ ರೀತಿಯಲ್ಲಿ) ಅದು ತಿರಳುಗಲ್ಲು ಉಪಕರಣ.



ಆದಿ ಹಳೆಶಿಲಾಯುಗದ ಭಲ್ಲೆ

**ಬಡಿಗಲ್ಲು ಅಥವಾ ಒಂದರಿಂದ ಮತ್ತೊಂದು ಕಲ್ಲನ್ನು ಹೊಡೆಯುವ ತಂತ್ರ:** ನದಿಯ ದೊಡ್ಡ ದುಂಡುಗಲ್ಲು ಅಥವಾ ಯಾವುದೇ ಕಲ್ಲುತುಂಡನ್ನು ಭೂಮಿಯೊಳಗೆ ಹುದುಗಿರುವ ಬಡಿಗಲ್ಲು ಅಥವಾ ದೊಡ್ಡಕಲ್ಲಿನ ಅಂಚಿನ ಮೇಲೆ ಜೋರಾಗಿ ಕುಟ್ಟಲಾಗುತ್ತದೆ. ಆಗ ಕುಟ್ಟಿದ ಕಲ್ಲಿನಿಂದ ದೊಡ್ಡಗಾತ್ರದ ಚಕ್ಕೆಯೇಳುತ್ತದೆ. ಇಂತಹ ಚಕ್ಕೆಯಲ್ಲಿ ಉಬ್ಬು ಬಹಳ ದೊಡ್ಡದಾಗಿರುತ್ತದೆ. ಹೊರಬದಿಯಲ್ಲಿ ನೈಸರ್ಗಿಕ ಮೇಲ್ಮೈ ಇರುತ್ತದೆ. ಚಕ್ಕೆಕೋನ ವಿಶಾಲ ಕೋನವಾಗಿರುತ್ತದೆ. ಇಂತಹ ಚಕ್ಕೆಗಳಿಂದ ಕೈಗೊಡಲಿ, ಚೂರಿಯಂತಹ ಉಪಕರಣ ಮತ್ತು ಹೆರೆಚಕ್ಕೆಗಳನ್ನು ತಯಾರಿಸಲಾಗುತ್ತಿತ್ತು. ನರ್ಮದ ನದಿಪಾತ್ರದ ಕೆಲವು ಸಮುಚ್ಚಯಗಳಲ್ಲಿ ಮತ್ತು ಸೋಹನ್ ನದಿಪಾತ್ರದ ಆದಿ ಹಂತದ ಸಮುಚ್ಚಯಗಳಲ್ಲಿ ಈ ತಂತ್ರ ಬಳಕೆಯಾದಂತೆ ಕಾಣುತ್ತದೆ.

**ನೇರ ಹೊಡೆತ ಅಥವಾ ಭಾರ ಸುತ್ತಿಗೆಕಲ್ಲಿನ ತಂತ್ರ:** (ಹಾರ್ಡ್ ಹ್ಯಾಮರ್) ಈ ವಿಧಾನದಲ್ಲಿ ಉಪಕರಣಕ್ಕಾಗಿ ಆಯ್ದ ಶಿಲೆಗಿಂತ ಸುತ್ತಿಗೆಯಾಗಿ ಬಳಸುವ ಕಲ್ಲು ಹೆಚ್ಚು ತೂಕದ್ದಾಗಿರುತ್ತದೆ. ನದಿಯ ದೊಡ್ಡ ದುಂಡುಗಲ್ಲು ಅಥವಾ ಶಿಲಾಗಟ್ಟಿಯನ್ನು ಎಡಗೈಯಲ್ಲಿ ಹಿಡಿದುಕೊಂಡು ಇದರ ಅಂಚಿನ ಮೇಲೆ ಬಲಗೈಯಲ್ಲಿ ಹಿಡಿದ ಸುತ್ತಿಗೆಕಲ್ಲಿನಿಂದ ಓರೆಯಾಗಿ ಹೊಡೆಯಲಾಗುತ್ತದೆ. ಎರಡನೆ ಚಕ್ಕೆ ಎಬ್ಬಿಸುವಾಗ ಮೂಲಶಿಲೆಯನ್ನು ಕೆಳಗುಮೇಲೆ ತಿರುಗಿಸಿಕೊಂಡು ಇದೇ ವಿಧಾನವನ್ನು ಪುನರಾವರ್ತಿಸಲಾಗುತ್ತದೆ. ಹೀಗೆ ಕೆಳಗುಮೇಲೆ ತಿರುಗಿಸಿಕೊಳ್ಳುತ್ತಾ ಉಪಕರಣಕ್ಕೆ ನಿರ್ದಿಷ್ಟ ಆಕಾರ–ಅಳತೆಯ ಚಕ್ಕೆ ಸಿಗುವವರೆಗೆ ಚಕ್ಕೆಗಳನ್ನು ತೆಗೆಯಲಾಗುತ್ತದೆ. ಇಂತಹ ಚಕ್ಕೆಗಳಿಂದ ಮಾಡಿದ ಉಪಕರಣಗಳ ಅಂಚು ಅಂಕುಡೊಂಕಾಗಿರುತ್ತದೆ. ಕೈಗೊಡಲಿ, ಕೊಚ್ಚುವ ಹಾಗೂ ಬಹುಮುಖ ಉಪಕರಣಗಳು ಈ ವಿಧಾನದಿಂದ ತಯಾರಾಗಿರಬಹುದು.

**ಕ್ಲ್ಯಾಕ್ಟೋನಿಯನ್ ತಂತ್ರ:** ಇಂಗ್ಲೆಂಡಿನ ಕ್ಲ್ಯಾಕ್ಟನ್–ಆನ್–ಸೀ ನೆಲೆಯಲ್ಲಿ ಮೊಟ್ಟಮೊದಲು ಈ ತಂತ್ರವನ್ನು ಗುರುತಿಸಿದ್ದರಿಂದ ಇದಕ್ಕೆ ಈ ಹೆಸರು. ಈ ವಿಧಾನದಲ್ಲಿ ಉಪಯೋಗಿಸುವ ಮೂಲಶಿಲಾಗಟ್ಟಿ ನಿರ್ದಿಷ್ಟ ಆಕಾರದಲ್ಲಿರಬೇಕು. ಇದರ ಮುಖಗಳು ಸುಮಾರಾಗಿ ಸಮತಟ್ಟಾಗಿದ್ದು ಒಂದನ್ನೊಂದು ಸಂಧಿಸುವ ರೀತಿಯಲ್ಲಿರಬೇಕು. ಇಂತಹ ಶಿಲಾಗಟ್ಟಿಯ ಯಾವುದಾದರೊಂದು ಸಮತಟ್ಟು ಮುಖದ ಮೇಲೆ, ಅಂಚಿನ ಹತ್ತಿರ ಬಲವಾಗಿ ಹೊಡೆದು ಮೊದಲು ಒಂದು ಚಕ್ಕೆ ಎಬ್ಬಿಸಲಾಗುತ್ತದೆ. ಮೂಲಶಿಲೆಯ ಮೇಲೆ ಈ ಚಕ್ಕೆಯಿಂದಾದ ತಗ್ಗನ್ನು (ಚಕ್ಕೆ ಗುರುತು) ದಂಡೆಯಂತೆ ಬಳಸಿಕೊಂಡು ಶಿಲಾಗಟ್ಟಿಯ ಅಂಚಿನುದಕ್ಕೂ ಚಕ್ಕೆ ತೆಗೆಯಲಾಗುತ್ತದೆ. ಸಾಧ್ಯವಾದಷ್ಟು ಚಕ್ಕೆ ತೆಗೆದ ಅನಂತರ ಉಳಿವ ತಿರುಳು ಬೈಕೋನ್ ಆಕಾರದಲ್ಲಿ ಇರುತ್ತದೆ. ಈ ತಿರುಳಿನ ಅಂಚುಗಳು ಅಂಕೊಡೊಂಕಾಗಿ ಆದರೆ ಹರಿತವಾಗಿ ಇರುತ್ತವೆ. ಮಹೇಶ್ವರ್ ಹಳ್ಳಿಯ (ಮಧ್ಯಪ್ರದೇಶ) ಬಳಿ ನರ್ಮದ ನದಿತೀರದಲ್ಲಿರುವ ಸಮುಚ್ಚಯದಲ್ಲಿ ಇಂತಹ ಮೂಲಶಿಲೆಯ ತಿರುಳನ್ನು ಕಡಿಕತ್ತಿಯಾಗಿ ಬಳಸಲಾಗಿರುವುದು ಕಂಡುಬಂದಿದೆ.

**ಕೋಂಬೇವ ತಂತ್ರ:** ಈ ವಿಧಾನದಲ್ಲಿ ಉಬ್ಬು ಪ್ರಧಾನವಾಗಿರುವ ದೊಡ್ಡಗಾತ್ರದ ಚಕ್ಕೆಯನ್ನು ಮೂಲಶಿಲೆಯಾಗಿ ಬಳಸಲಾಗುತ್ತದೆ. ಈ ಚಕ್ಕೆಯ ಉಬ್ಬಿನ ಮೇಲೆ ಅಥವಾ ಮಧ್ಯದಲ್ಲಿ ಹೊಡೆದಾಗ ಎಬ್ಬಿಸಿದ ಚಕ್ಕೆಯ ಇನ್ನೊಂದು ಬದಿಯಲ್ಲೂ ಉಬ್ಬು ಇರುತ್ತದೆ. ಆದ್ದರಿಂದ ಇಂಥ ಚಕ್ಕೆಗಳಲ್ಲಿ ಎರಡೂ ಬದಿಗಳಲ್ಲೂ ಉಬ್ಬಿರುತ್ತದೆ. ಇಂಥ ಚಕ್ಕೆ ದಪ್ಪಕ್ಕೆ ಅರೆಗೋಲವಾಗಿದ್ದು ಇದನ್ನು ಹಿಡಿದುಕೊಳ್ಳಲು ಅನುಕೂಲವಾಗಿರುವಂತಿರುತ್ತದೆ. ಚಕ್ಕೆಯ ಸುತ್ತಲಿನ ಅಂಚು ತೆಳುವಾಗಿ ಹರಿತವಾಗಿರುತ್ತದೆ. ಇಂತಹ ಚಕ್ಕೆಗಳಿಂದ ಕಡಿಕತ್ತಿಗಳನ್ನು ಮಾಡಲಾಗುತ್ತಿತ್ತು. ಕೀನ್ಯದ (ಆಫ್ರಿಕ) ಕೋಂಬೇವ ನೆಲೆಯಲ್ಲಿ ಈ ತಂತ್ರವನ್ನು ಮೊದಲಬಾರಿಗೆ ಗುರುತಿಸಲಾಯಿತು. ಆದಿಹಳೆಶಿಲಾಯುಗದ ನೆಲೆಗಳಾದ ಮಹರಾಷ್ಟ್ರದ ಚಿರ್ಕಿ–ನೆವಾಸ ಮತ್ತು ಮೋರ್‌ಗಾಂವ್‌ನಲ್ಲಿ ಕೋಂಬೇವ ಚಕ್ಕೆ, ಕಡಿಕತ್ತಿಗಳು ಸಿಕ್ಕಿವೆ.

**ಚೆಲ್ಲಿಯನ್:** ಫ್ರಾನ್ಸಿನ ಚೆಲ್ಲಿಸ್ ಎಂಬಲ್ಲಿ ದೊರೆತ ಒರಟು ಕೈಗೊಡಲಿ ಮಾದರಿಗಳನ್ನು ಚೆಲ್ಲಿಯನ್ ಎಂದು ಕರೆಯಲಾಗುತ್ತದೆ. ಈ ಕೈಗೊಡಲಿಗಳ ಮೇಲ್ಮೈ ಮೇಲೆ ಆಳವಾದ ಚಕ್ಕೆ ಗುರುತುಗಳು ಇರುತ್ತವೆ. ಉಪಕರಣದ ಆಕಾರ ಅಂಕುಡೊಂಕಾಗಿರುತ್ತದೆ. ಹಿಡಿಯುವ ಬದಿ ದಪ್ಪವಾಗಿದ್ದು ಮೊಂಡಾಗಿರುತ್ತದೆ. ಈ ರೀತಿಯ ಕೈಗೊಡಲಿಗಳನ್ನು ಭಾರದ ಸುತ್ತಿಗೆಕಲ್ಲಿನಿಂದ ನೇರ ಹೊಡೆತ ತಂತ್ರದಿಂದ ತಯಾರಿಸಲಾಗಿದೆ.

**ಅಬೆವಿಲಿಯನ್:** ಫ್ರಾನ್ಸಿನ ಅಬೆವಿಲ್‌ನಲ್ಲಿ ದೊರೆತ ಒರಟು ಕೈಗೊಡಲಿಗಳು ಚೆಲ್ಲಿಯನ್ ಮಾದರಿಯನ್ನು ಹೋಲುತ್ತವೆ. ಇವು ಸುತ್ತಿಗೆ ವಿಧಾನ ಅಥವಾ ಬಡಿಗಲ್ಲು ವಿಧಾನದಿಂದ ತಯಾರಾಗಿರಬೇಕು. ಈ ಕೊಡಲಿಗಳ ಮೇಲೂ ಆಳವಾದ ಚಕ್ಕೆಗುರುತುಗಳಿದ್ದು ಆಕಾರ ಅಂಕುಡೊಂಕಾಗಿರುತ್ತದೆ.

**ಅಶೂಲಿಯನ್:** ಕೈಗೊಡಲಿ ತಯಾರಿಕೆಯ ತಂತ್ರಗಳಲ್ಲಿ ಅತ್ಯಂತ ಸುಸಜ್ಜಿತವಾದುದು. ಮೂಳೆ, ಮರ ಅಥವಾ ಕಲ್ಲಿನ ಕೊಳವೆಯಾಕಾರದ ಹಗುರ ಸುತ್ತಿಗೆಯಿಂದ ಒಂದು ಹದದಲ್ಲಿ, ಕೌಶಲದಿಂದ ಚಕ್ಕೆಯೆಬ್ಬಿಸಿ ರೂಪಿಸಿದ ಕೊಡಲಿಗಳಿವು. ಇವುಗಳ ಮೇಲ್ಮೈಯಲ್ಲಿರುವ ಚಕ್ಕೆಗುರುತುಗಳು ಕೂಡಲೆ ಗಮನಕ್ಕೆ ಬಾರದಂತೆ ಇರುತ್ತವೆ. ಆಕಾರ ಸಮರೂಪದಲ್ಲಿರುತ್ತದೆ. ಈ ಕೊಡಲಿಗಳು ಸ್ವಲ್ಪ ಚಪ್ಪಟೆಯಾಗಿರುತ್ತವೆ.

**ಮರದ/ಎಲುಬಿನ ಹಗುರ ಸುತ್ತಿಗೆ ತಂತ್ರ (ಸಾಫ್ಟ್ ಹ್ಯಾಮರ್):** ಕಲ್ಲಿನ ಸುತ್ತಿಗೆ ಬಳಸಿ ತೆಗೆದ ಚಕ್ಕೆಗಳು ಸಾಮಾನ್ಯವಾಗಿ ದಪ್ಪವಾಗಿದ್ದು, ಅಂಕುಡೊಂಕಾದ ಅಂಚು, ಓರೆಕೋರೆಯಾದ ಮೇಲ್ಮೈ, ಆಳ ತಗ್ಗುಗಳಿಂದ ಕೂಡಿರುತ್ತವೆ. ಆದರೆ ಮೂಳೆ ಅಥವಾ ಮರದ ಸುತ್ತಿಗೆಯನ್ನು ಉಪಯೋಗಿಸಿದಾಗ ಹೊಡೆತದ ಮೇಲೆ ಪೂರ್ಣ ನಿಯಂತ್ರಣವಿರುತ್ತದೆ. ಇಂಥ ಸುತ್ತಿಗೆಯಿಂದ ಒಂದು ಹದದಲ್ಲಿ ದೊಡ್ಡಚಕ್ಕೆಯ ಮೇಲೆ ಹೊಡೆದಾಗ ತೆಳುವಾದ ಚಪ್ಪಟೆಯಾಗಿರುವ ಪುಡಿ ಚಕ್ಕೆಗಳು ಹೊರಬೀಳುತ್ತವೆ. ಇವುಗಳ ಉಬ್ಬು ಚಪ್ಪಟೆಯಾಗಿ ಕಂಡೂಕಾಣದಂತಿರುತ್ತದೆ. ಅನೇಕ ಸಣ್ಣಪುಟ್ಟ ಚಕ್ಕೆಗಳನ್ನು ನಿಯೋಜಿತ ರೀತಿಯಲ್ಲಿ ಎಚ್ಚರಿಕೆಯಿಂದ ತೆಗೆದು ಈ ದೊಡ್ಡ ಚಕ್ಕೆಯನ್ನು ಬೇಕಾದ ರೀತಿಯಲ್ಲಿ ಉಪಕರಣವನ್ನಾಗಿ ಮಾರ್ಪಡಿಸಲಾಗುತ್ತದೆ. ಇಂತಹ ಉಪಕರಣಗಳ ಮೇಲ್ಮೈ ನಯವಾಗಿದ್ದು ಅಂಚು ನೇರವಾಗಿರುತ್ತದೆ. ಅಂದವಾಗಿ, ಸಮರೇಖೆಯಲ್ಲಿರುವ ಅಶೂಲಿಯನ್ ಮಾದರಿಯ ಕೈಗೊಡಲಿಗಳು ಮತ್ತು ಕಡಿಕತ್ತಿಗಳನ್ನು ಈ ತಂತ್ರದಿಂದ ತಯಾರಿಸಿರುವರು. ಈ ತಂತ್ರವನ್ನು ಅಶೂಲಿಯನ್ ತಂತ್ರವೆಂದೂ ಹೇಳುತ್ತಾರೆ.



ಬಡಿಗಲ್ಲು ತಂತ್ರ

**ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗ:** ಮಧ್ಯ ಹಳೆಶಿಲಾಯುಗದಲ್ಲಿ ಸಣ್ಣಚಕ್ಕೆಗಳಿಂದ ತಯಾರಾದ ಉಪಕರಣಗಳು ತೀರಸಾಮಾನ್ಯ. ಚಕ್ಕೆಗಳನ್ನು ಪೂರ್ವನಿರ್ಧರಿತ ಆಕಾರ–ಗಾತ್ರಗಳಲ್ಲಿ ತೆಗೆಯಲಾಗುತ್ತಿತ್ತು. ಇದಕ್ಕಾಗಿ ಮೂಲಶಿಲಾಗಟ್ಟಿಯನ್ನು ಮೊದಲಿಗೆ ಒಂದು ನಿರ್ದಿಷ್ಟ ರೂಪ–ಅಳತೆಯಲ್ಲಿ ಸಿದ್ಧಪಡಿಸಿಕೊಳ್ಳಲಾಗುತಿತ್ತು. ಅನಂತರ ಚಕ್ಕೆಗಳನ್ನು ಅತ್ಯಂತ ಜಾಗರೂಕತೆಯಿಂದ ಕುಶಲತೆಯಿಂದ ತೆಗೆಯಲಾಗುತ್ತಿತ್ತು. ಬಗೆಬಗೆಯ ಹೆರೆಚಕ್ಕೆ ಮತ್ತು ಮೊನೆಗಳು ಮಧ್ಯ ಹಳೆಶಿಲಾಯುಗದ ವಿಶಿಷ್ಟ ಉಪಕರಣಗಳು. ಚಕ್ಕೆಗಳ ಅಂಚಿನಲ್ಲಿ ವಿಶೇಷವಾಗಿ ಹೆರೆಚಕ್ಕೆಯಲ್ಲಿ ಅತಿಸೂಕ್ಷ್ಮ ಚಕ್ಕೆಗಳನ್ನು (ರಿಟಚ್) ತೆಗೆಯಲಾಗಿರುತ್ತದೆ. ಕ್ವಾರ್ಟ್ಜೈಟ್‌ನಲ್ಲಿ ಮಾಡಿದ ಉಪಕರಣಗಳು ಅತಿಸಾಮಾನ್ಯ. ಜಾಸ್ಪರ್, ಅಗೇಟ್, ಚರ್ಟ್, ಸುಣ್ಣಕಲ್ಲು ಸಾಮಾನ್ಯವಾಗಿ ಬಳಕೆಯಾದ ಇತರ ಶಿಲಾಪ್ರಭೇದಗಳು.

**ಲೆವಾಲ್ವ ತಂತ್ರ:** ಈ ವಿಧಾನದಲ್ಲಿ ಮೊದಲಿಗೆ ಶಿಲಾಗಟ್ಟಿಯ ಯಾವುದಾದರೊಂದು ಭಾಗದಲ್ಲಿ ಮೊನಚು ತುದಿಗಳನ್ನು ತರಿದು ನಯಮಾಡಿಕೊಳ್ಳಲಾಗುತ್ತದೆ. ನಂತರ ಒಂದು ಬಿಂದುವಿನ ಸುತ್ತ ವೃತ್ತ/ಅಂಡಾಕಾರದಲ್ಲಿ ಚಕ್ಕೆಗಳನ್ನು ಎಬ್ಬಿಸಿ, ಶಿಲಾಗಟ್ಟಿಯ ಅಂಕುಡೊಂಕಾದ ನೈಸರ್ಗಿಕ ಮೇಲ್ಮೈಯನ್ನು ತೆಗೆದುಬಿಡಲಾಗುತ್ತದೆ. ಚಕ್ಕೆಗುರುತುಗಳು ಮಧ್ಯಬಿಂದುವಿನಲ್ಲಿ ಸೇರುವಂತೆ ಮೂಡುತ್ತವೆ. ಅನಂತರ ಶಿಲಾಗಟ್ಟಿಯ ಒಂದು ಅಂಚಿನಲ್ಲಿ (ಹೊಡೆತಕ್ಕೆ ಅನುಕೂಲವಾಗಲು) ಉಳಿಯಿಂದ ಅತಿಸೂಕ್ಷ್ಮ ಚಕ್ಕೆಗಳನ್ನೆಬ್ಬಿಸಿ, ಪುಟ್ಟಮಟ್ಟಸ ದಂಡೆಯನ್ನು

ಮಾಡಿಕೊಳ್ಳಲಾಗುತ್ತದೆ. ಕೊನೆಯದಾಗಿ, ಯಾವುದೇ ಸಲಕರಣೆಯಿಂದ ನೇರವಾಗಿ ಅಥವಾ ಸುತ್ತಿಗೆ ಯನ್ನು ಮಧ್ಯೆಯಿಟ್ಟುಕೊಂಡು ದಂಡೆಯ ಮೇಲೆ ಹೊಡೆದು ಚಕ್ಕೆ ತೆಗೆಯಲಾಗುತ್ತದೆ. ಅತ್ಯಂತ ಕರಾರುವಾಕ್ಕಾಗಿ ತೆಗೆದ ಈ ಚಕ್ಕೆ ತೆಳುವಾಗಿ, ತ್ರಿಕೋನ ಅಥವಾ ಅಂಡಾಕಾರದಲ್ಲಿ ಇರುತ್ತದೆ. ಇದರ ಒಳಬದಿ ನುಣುಪಾಗಿ ಸಮತಟ್ಟಾಗಿದ್ದರೆ, ಹೊರಬದಿಯಲ್ಲಿ ಆಳವಿಲ್ಲದ ಮಧ್ಯ ಬಿಂದುವಿನಲ್ಲಿ ಸೇರುವ ತ್ರಿಕೋನಾ ಕಾರದ ಚಕ್ಕೆಗುರುತುಗಳಿರುತ್ತವೆ. ಈ ಚಕ್ಕೆಯನ್ನು ನೇರವಾಗಿ ಉಪಕರಣದಂತೆ ಉಪಯೋಗಿಸಬಹುದು. ಚಕ್ಕೆ ತೆಗೆದ ಅನಂತರ




1) ಲೆವಾಲ್ವ ತಂತ್ರ, 2) ಅಲಗು ತೆಗೆವ ತಂತ್ರ

ತಿರುಳು ಆಮೆಚಿಪ್ಪಿನಂತೆ ಕಾಣುವುದರಿಂದ ಇಂತಹ ಶಿಲಾಗಟ್ಟಿಯನ್ನು ಆಮೆ ತಿರುಳೆಂದೇ ಕರೆಯಲಾಗುತ್ತದೆ. ಈ ತಂತ್ರದಿಂದ ತೆಗೆದ ಚಕ್ಕೆಗಳು ಪ್ಯಾರಿಸ್ ಬಳಿಯ ಲೆವಾಲ್ವ ಪರೆತ್ ಎಂಬಲ್ಲಿ ಮೊದಲಿಗೆ ಕಂಡುಬಂದದ್ದರಿಂದ ಈ ತಂತ್ರಕ್ಕೆ ಲೆವಾಲ್ವ ಎಂದೇ ಹೆಸರು.

**ಮೌಸ್ಟೀರಿಯನ್ ತಂತ್ರ:** ಈ ತಂತ್ರ ಲೆವಾಲ್ವ ತಂತ್ರವನ್ನು ಹೋಲುತ್ತವೆ. ಈ ತಂತ್ರದಲ್ಲಿ ಒಂದು ಬದಿ ಸಮತಟ್ಟಾಗಿರುವ ದೊಡ್ಡ ಗಾತ್ರದ ಚಕ್ಕೆ ಅಥವಾ ಕನಿಷ್ಠ ಒಂದು ಮುಖ ಸಮತಟ್ಟಾಗಿರುವ ಶಿಲಾಗಟ್ಟಿಯನ್ನು ಆಯ್ದುಕೊಂಡು ಸಮತಟ್ಟಾದ ಭಾಗದ ಅಂಚಿನ ಮೇಲೆ ಲಂಬಕೋನದಲ್ಲಿ ಹೊಡೆಯಲಾಗುತ್ತದೆ. ಈ ರೀತಿ ತೆಗೆದ ಚಕ್ಕೆ ಗೋಲಾಕಾರವಾಗಿ ಅಥವಾ ಬಹುಭುಜವುಳ್ಳದಾಗಿರುತ್ತದೆ. ಚಕ್ಕೆ ಎದ್ದ ಜಾಗದಲ್ಲೂ ಇದೇ ಆಕಾರದ ಚಕ್ಕೆಗುರುತು ಮೂಡುತ್ತದೆ. ಶಿಲಾಗಟ್ಟಿಯನ್ನು ವೃತ್ತಾಕಾರದಲ್ಲಿ ತಿರುಗಿಸಿಕೊಳ್ಳುತ್ತಾ ಸಮತಟ್ಟಾದ ಮುಖದ ಸುತ್ತಲ ಅಂಚಿನ ಮೇಲೆ ಲಂಬರೇಖೆಯಲ್ಲಿ ಹೊಡೆದು ಚಕ್ಕೆಗಳನ್ನು ತೆಗೆದ ಅನಂತರ ಉಳಿವ ತಿರುಳು ಬಿಲ್ಲೆಯಾಕಾರದಲ್ಲಿರುತ್ತದೆ. ಹಾಗಾಗಿ ಇದನ್ನು ಬಿಲ್ಲೆಯಾಕಾರದ ತಿರುಳಿನ ತಂತ್ರವೆಂದೂ ಹೇಳುತ್ತಾರೆ. ಅಂಡಾಕಾರದ ಕೈಗೊಡಲಿಗಳನ್ನು ಈ ಮಾದರಿಯ ಚಕ್ಕೆಗಳಿಂದ ಸುಲಭವಾಗಿ ರಚಿಸಬಹುದು.

ಫ್ರಾನ್ಸಿನ ಲ ಮೌಸ್ಟಿಯರ್ ಎಂಬ ಗುಹಾನೆಲೆಯಲ್ಲಿ ಇಂತಹ ಉಪಕರಣಗಳು ಬೆಳಕಿಗೆ ಬಂದಿದ್ದರಿಂದ ಈ ತಂತ್ರಕ್ಕೆ ಮೌಸ್ಟೀರಿಯನ್ ಎಂದು ಹೆಸರು. ಲೆವಾಲ್ವ ಮತ್ತು ಮೌಸ್ಟೀರಿಯನ್ ತಂತ್ರಗಳಿಂದ ಇಚ್ಛಿಸಿದ ಆಕಾರದಲ್ಲಿ ಚಕ್ಕೆಯನ್ನು ತೆಗೆಯುವುದು ಸಾಧ್ಯ.

ಅಂತ್ಯಹಳೆಶಿಲಾಯುಗದ ವಿಶಿಷ್ಟತೆ ಅಲಗು ತಂತ್ರಜ್ಞಾನ. ಒಂದು ಆಕಾರಕ್ಕೆ ಸಿದ್ಧಪಡಿಸಿಕೊಂಡ ಮೂಲಶಿಲಾಗಟ್ಟಿಯಿಂದ ಏಕಕಾಲಕ್ಕೆ ಸತತವಾಗಿ ಅನೇಕ ನೀಳವಾದ ಸಮಾನಾಂತರ ಅಲಗುಗಳನ್ನು ತೆಗೆಯುವ ತಂತ್ರಜ್ಞಾನವಿದು. ಅಲಗು (ಅಂದರೆ ಸಮಾನಾಂತರ ಬದಿಗಳಿರುವ ತೆಳುವಾದ ಚಕ್ಕೆ) ಮತ್ತು ಇದರ ಅನೇಕ ರೂಪಗಳು, ಕೊರಗ/ಕೊರೆಯುಳಿ (ಬ್ಯೂರಿನ್–ಬೋರರ್) ಈ ಕಾಲದಲ್ಲಿ ಹೆಚ್ಚಾಗಿ ಬಳಸಲ್ಪಟ್ಟವು. ಅಲಗು ತಂತ್ರಜ್ಞಾನ ನವಶಿಲಾಯುಗ ಮತ್ತು ತಾಮ್ರ–ಶಿಲಾಯುಗ ಕಾಲದಲ್ಲಿ ಸುಧಾರಣೆಗೊಳಗಾಯಿತು. ಅಲಗು ತಯಾರಿಕೆಯ ಕೆಲವು ವಿಧಾನಗಳು ಹೀಗಿವೆ.

**ಒತ್ತಡ ಅಥವಾ ಅದುಮಿಕೆಯಿಂದ ಅಲಗು ತೆಗೆವ ತಂತ್ರ:** ಮೊದಲಿಗೆ ಶಿಲಾಗಟ್ಟಿಯನ್ನು ಕೊಳವೆ ಅಥವಾ ಮೃದಂಗದ ಆಕಾರದಲ್ಲಿ ಕೆತ್ತಿಕೊಳ್ಳಲಾಗುತ್ತದೆ. ಶಿಲಾಗಟ್ಟಿಯ ಮೇಲ್ಮೈ ನುಣುಪಾಗಿದ್ದರೆ ಇದನ್ನು ಕಲ್ಲಿನಿಂದ ಉಜ್ಜಿ ದೊರಕು ಮಾಡಿಕೊಳ್ಳಲಾಗುತ್ತದೆ. ಅನಂತರ ಶಿಲಾಗಟ್ಟಿಯನ್ನು ನೆಟ್ಟಗೆ ನಿಲ್ಲಿಸಿಕೊಳ್ಳುತ್ತಾರೆ. ಇದರ ಮೇಲ್ಭಾಗ ಹೆಚ್ಚುಕಡಿಮೆ ಸಮತಟ್ಟಾಗಿ ಗೋಲವಾಗಿ ಇರುತ್ತದೆ. ಈ ಗೋಲ ಅಂಚಿನ ಸುತ್ತಲೂ ಅತಿಸೂಕ್ಷ್ಮ ಚಕ್ಕೆಗಳನ್ನು ತೆಗೆದು ಪುಟ್ಟಪುಟ್ಟ ಸಮತಟ್ಟು ದಂಡೆಗಳನ್ನು ಮಾಡಲಾಗುತ್ತದೆ. ಅಂಚಿನಲ್ಲಿ ಹಾಗೆಯೇ (ದಂಡೆಯಿಲ್ಲದಿದ್ದಾಗ) ಒತ್ತಿದಾಗ ಸಲಕರಣೆ ಜಾರುವ ಸಂಭವ ಹೆಚ್ಚು; ದಂಡೆಯಿದ್ದಲ್ಲಿ ಅಲಗು ತೆಗೆಯಲು ಉಪಯೋಗಿಸುವ ಸಲಕರಣೆ ಮತ್ತು ಪ್ರಯೋಗಿಸುವ ಬಲ ಎರಡರ ಮೇಲೂ ಹಿಡಿತ ಸಾಧ್ಯವಾಗುತ್ತದೆ. ಅನಂತರ ಮೊದಲನೆಯ ಸುತ್ತಿನ ಚಕ್ಕೆಗಳನ್ನು ಎರಡು ಚಕ್ಕೆಗಳ ಮಧ್ಯೆ ಜಾಗಬಿಡುವಂತೆ ಉದ್ದುದ್ದಕ್ಕೆ ತೆಗೆಯಲಾಗುತ್ತದೆ. ಆಗ ಚಕ್ಕೆಯೆದ್ದ ಜಾಗದಲ್ಲಿ ತಗ್ಗಾಗಿದ್ದು ಇದರ ಅಂಚುಗಳಲ್ಲಿ ಜಾಗಬಿಟ್ಟ ಕಡೆಗಳಲ್ಲಿ ಮುಂದೆಚಾಚಿದ ಏಣುಗಳು (ಕ್ರೆಸ್ಟೆಡ್ ರಿಜ್) ಉಂಟಾಗುತ್ತವೆ. ಏಣುಗಳನ್ನು ಮಾಡಿಕೊಂಡ ಅನಂತರ ಶಿಲಾಗಟ್ಟಿಯನ್ನು ಇದೇ ಭಂಗಿಯಲ್ಲಿ ಪಾದಗಳ ನಡುವೆ ಹಿಡಿದಿಟ್ಟುಕೊಳ್ಳಲಾಗುತ್ತದೆ. 1–1.20ಮೀ ನಷ್ಟು 4–5ಸೆಂಮೀ ದಪ್ಪದ ಕೋಲಿನ ತುದಿಗೆ ಚೂಪು ತುದಿಯುಳ್ಳ ಮೂಳೆ ಅಥವಾ ಕೊಂಬಿನ ತುಂಡನ್ನು ಕಟ್ಟಿಕೊಳ್ಳುತ್ತಾರೆ. ಇದರ ಚೂಪು ತುದಿಯನ್ನು ಶಿಲಾಗಟ್ಟಿಯ ಅಂಚಿನ ಮೇಲೆ ಮಾಡಿಕೊಂಡ ಪುಟ್ಟದಂಡೆಯ ಮೇಲೆ ನೇರವಾಗಿ (ದಂಡೆಗೆ ಲಂಬಕೋನದಲ್ಲಿ) ಇರಿಸಿ ಜೋರಾಗಿ ಅದುಮಿದಾಗ ತೆಳುವಾದ ನೀಳ ತೆಳು ಚಕ್ಕೆ ಅಥವಾ ಅಲಗು ಏಳುತ್ತದೆ.

**ನೇರಹೊಡೆತದ ತಂತ್ರ:** ಮೇಲಿನ ತಂತ್ರದಂತೆ ಶಿಲಾಗಟ್ಟಿಯನ್ನು ಕೊಳವೆಯ ಆಕಾರದಲ್ಲಿ ಕೆತ್ತಿಕೊಳ್ಳುತ್ತಾರೆ. ಅನಂತರ ಮೇಲ್ಭಾಗದ ಗೋಲ ಅಂಚಿನಲ್ಲಿ ಒಂದು ಪುಟ್ಟ ಸಮತಟ್ಟು ದಂಡೆಯನ್ನು ಮಾಡಿಕೊಳ್ಳುತ್ತಾರೆ. ಈ ದಂಡೆಯ ಮೇಲೆ ಮರದ ಉಳಿಸುತ್ತಿಗೆಯ ಚೂಪು ತುದಿಯನ್ನಿರಿಸಿ (ಲಂಬರೇಖೆಯಲ್ಲಿ) ಮರದ ಸುತ್ತಿಗೆಯಿಂದ ಅದನ್ನು ಮೆಲ್ಲಗೆ ಕುಟ್ಟುತ್ತಾರೆ. ಆಗ ನೀಳ ತೆಳುಚಕ್ಕೆ ಏಳುತ್ತದೆ. ಶಿಲಾಗಟ್ಟಿಯನ್ನು ಸ್ವಲ್ಪ ತಿರುಗಿಸಿಕೊಂಡು ಮೊದಲನೆಯ ಚಕ್ಕೆಯ ಪಕ್ಕದಲ್ಲಿ ಮತ್ತೊಂದು ಚಕ್ಕೆಯನ್ನು ಇದೇ ರೀತಿ ತೆಗೆಯುತ್ತಾರೆ. ಹೀಗೆ ಶಿಲಾಗಟ್ಟಿಯನ್ನು ವೃತ್ತಾಕಾರವಾಗಿ ತಿರುಗಿಸಿಕೊಳ್ಳುತ್ತಾ ಅಂಚಿನಿಂದ ಸತತವಾಗಿ ನೀಳ ತೆಳುಚಕ್ಕೆಗಳನ್ನು ತೆಗೆಯಲಾಗುತ್ತದೆ. ಗರಿಷ್ಠ ಚಕ್ಕೆಗಳನ್ನು ತೆಗೆದ ಅನಂತರ ಉಳಿವ ತಿರುಳನ್ನು ಫ್ಲೂಟೆಡ್ ಕೋರ್ ಎನ್ನುತ್ತಾರೆ. ಇದು ಪುಟ್ಟದಾಗಿ ಕೊಳವೆ ಅಥವಾ ತ್ರಿಕೋನಾಕಾರದಲ್ಲಿ (ಪಿಸ್ತೂಲಿನ ಗುಂಡಿನಂತೆ) ಇದ್ದು ಇದರ ಮೇಲ್ಮೈಯಲ್ಲಿ ಉದ್ದ ಸಮಾನಾಂತರ ಚಕ್ಕೆಗುರುತುಗಳು ಒಂದರಪಕ್ಕ ಒಂದು ಮೂಡಿರುತ್ತವೆ.

**ಅಲಗಿನ ಮಾರ್ಪಾಡುಗಳು (ರೀ ಟಚಿಂಗ್):** ಅಂಚನ್ನು ಗಟ್ಟಿ ಹಾಗೂ ಹರಿತಗೊಳಿಸುವುದಕ್ಕಾಗಿ ಅಥವಾ ಅದನ್ನು ಮೊಂಡುಗೊಳಿಸಿ ಹಿಡಿಕೆಗೆ ಸಿಕ್ಕಿಸಲು ಅನುಕೂಲವಾಗುವಂತೆ ಅಲಗಿನ ಒಂದು ಅಥವಾ ಎರಡೂ ಅಂಚುಗಳಲ್ಲಿ ಅತಿಸೂಕ್ಷ್ಮ ಚಕ್ಕೆಗಳನ್ನು ತೆಗೆಯುತ್ತಿದ್ದರು. ಅಬೆವಿಲಿಯನ್ ಮತ್ತು ಅಶೂಲಿಯನ್ ಮಾದರಿಯ ಕೈಗೊಡಲಿಗಳಲ್ಲಿ ಹಾಗೂ ಮೌಸ್ಟೀರಿಯನ್ ಮಾದರಿಯ ಮೊನೆಗಳಲ್ಲೂ ಈ ರೀತಿ ಮಾರ್ಪಡಿಸಿದ ನಿದರ್ಶನಗಳಿವೆ. ಆದರೆ ಈ ತಂತ್ರ ರೂಢಿಗೆ ಬಂದದ್ದು ಅಂತ್ಯ ಹಳೆಶಿಲಾಯುಗದಲ್ಲಿ. ಸೂಕ್ಷ್ಮಶಿಲಾಯುಗದ ಅವಧಿಯಲ್ಲಿ ಇದು ತಂತ್ರಜ್ಞಾನದ ವಿಶಿಷ್ಟ ಲಕ್ಷಣವೇ ಆಗಿಬಿಟ್ಟಿತು. ಮಹಾರಾಷ್ಟ್ರದ ವಾಳ್ಕಿ ಮತ್ತು ದೈಮಾಬಾದಿನ ತಾಮ್ರ–ಶಿಲಾಯುಗ ವಸತಿ ನೆಲೆಗಳಲ್ಲಿ ಮೂಳೆಯ ಹಿಡಿಕೆಗೆ ಸಿಕ್ಕಿಸಿದ ಅಲಗುಗಳು ಸಿಕ್ಕಿವೆ.

**ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗ:** ಸೂಕ್ಷ್ಮಶಿಲಾಯುಗದ ತಂತ್ರಜ್ಞಾನ ಅಂತ್ಯ ಹಳೆಶಿಲಾಯುಗದ ತಂತ್ರಜ್ಞಾನದಿಂದ ಬೆಳೆದದ್ದು. ಸೂಕ್ಷ್ಮಶಿಲಾಯುಗದಲ್ಲಿ ಜ್ಯಾಮಿತೀಯ ಮತ್ತು ಅನಿರ್ದಿಷ್ಟಾಕಾರದ ಉಪಕರಣಗಳಿವೆ. ಜ್ಯಾಮಿತೀಯ ಉಪಕರಣಗಳಾದ ತ್ರಿಕೋನ ಅರ್ಧಚಂದ್ರಾಕೃತಿ, ಅಸಮ ಚತುರ್ಭುಜ ಮುಂತಾದವು ಈ ಹಂತದಲ್ಲಿ ಮೊದಲಬಾರಿಗೆ ಕಾಣಿಸಿಕೊಳ್ಳುತ್ತವೆ. ಇವನ್ನು ಮೂಳೆ ಅಥವಾ ಮರದ ಹಿಡಿಕೆಗೆ ಸಿಕ್ಕಿಸಿ ಸಂಯುಕ್ತ ಉಪಕರಣಗಳನ್ನು ಮಾಡಲಾಗುತ್ತಿತ್ತು. ಚರ್ಟ್, ಜಾಸ್ಪರ್, ಸ್ಫಟಿಕ ಶಿಲೆ, ಬೆಣಚುಕಲ್ಲು, ಅಗೇಟ್ ಮತ್ತು ಮಂದಗೆಂಪಿನ ಕಲ್ಲುಗಳು ಮುಖ್ಯವಾಗಿ ಬಳಕೆಯಾದ ಶಿಲಾಪ್ರಭೇದಗಳು.



ಒತ್ತಡದಿಂದ ಅಲಗು ತೆಗೆವ ತಂತ್ರ

**ಒತ್ತಡ ಮತ್ತು ಶಾಖ ವಿಧಾನ:** ಈ ತಂತ್ರದಿಂದ ತಯಾರಾದ ಉಪಕರಣಗಳು ಬಾಗೋರಿನ (ರಾಜಸ್ತಾನ) ಸೂಕ್ಷ್ಮಶಿಲಾಯುಗ, ಮೆಹರ್‌ಗಡದ (ಬಲೂಚಿಸ್ತಾನ) ನವಶಿಲಾ ಯುಗ ಮತ್ತು ನವ್ದತೋಲಿಯ (ಮಹಾರಾಷ್ಟ್ರ) ತಾಮ್ರ–ಶಿಲಾಯುಗ ನೆಲೆಗಳಲ್ಲಿ ಹಾಗೂ ಹರಪ್ಪ ಸಂಸ್ಕೃತಿಯ ವಸತಿನೆಲೆಗಳಲ್ಲಿ ಕಂಡುಬಂದಿವೆ. ಈ ವಿಧಾನದಲ್ಲಿ ಮೊದಲಿಗೆ ಅಗೇಟ್‌ನಂತಹ ಶಿಲಾಗಟ್ಟಿಗಳನ್ನು ಶಾಖಕೊಟ್ಟು ಕಾಯಿಸಿಕೊಳ್ಳಲಾಗುತ್ತದೆ. ಇದರಿಂದ ಚಕ್ಕೆಗಳು ಸುಲಭವಾಗಿ ಏಳುತ್ತವೆ. ಶಿಲಾಗಟ್ಟಿಯನ್ನು ಕೊಳವೆಯಾಕಾರದಲ್ಲಿ ಕೆತ್ತಿಕೊಂಡು ಅದುಮಿ ತೆಗೆವ ತಂತ್ರದಿಂದ ಬಹುಶಃ ಮೂರು ಕೋನಗಳಲ್ಲಿ ಮೂರು ಏಣುಗಳು ಉಂಟಾಗುವಂತೆ ಪ್ರಥಮ ಸುತ್ತಿನ ಚಕ್ಕೆಗಳನ್ನು ತೆಗೆಯುತ್ತಿದ್ದರು. ಅನಂತರ ಒಂದು ಏಣನ್ನು ಚಕ್ಕೆಯ ರೂಪದಲ್ಲಿ ತೆಗೆದುಬಿಡಲಾಗುತ್ತಿತ್ತು. ಎರಡು ಏಣುಗಳ ನಡುವಿನ ಜಾಗದಲ್ಲಿ ಅಂಚಿನ ಮೇಲೆ ಪುಟ್ಟ ದಂಡೆಗಳನ್ನು ಮಾಡಿಕೊಂಡು ಮತ್ತೆ ಇದೇ ತಂತ್ರದಿಂದ ಚಕ್ಕೆಗಳನ್ನು ತೆಗೆಯಲಾಗುತ್ತಿತ್ತು. ಈ ಚಕ್ಕೆಗಳ ಅಂಚಿನಲ್ಲಿ

ಆವಶ್ಯಕತೆಗೆ ತಕ್ಕಂತೆ ಅತಿಸೂಕ್ಷ್ಮ ಚಕ್ಕೆಗಳನ್ನು ತೆಗೆದು ಇವನ್ನು ಜ್ಯಾಮಿತೀಯ ಹಾಗೂ ಅನಿರ್ದಿಷ್ಟಾಕಾರದ ಉಪಕರಣಗಳಾಗಿ ಮಾರ್ಪಡಿಸಲಾಗುತ್ತಿತ್ತು. ನವಶಿಲಾಯುಗದಲ್ಲಿ ಉಪಕರಣಗಳನ್ನು ಉಜ್ಜಿ ನಯಗೊಳಿಸುವ ಪದ್ಧತಿ ಜಾರಿಗೆ ಬಂತು. ಇಂತಹ ಉಪಕರಣಗಳಿಗೆ ಡಾಲರೈಟ್, ಮರಳುಕಲ್ಲು ಮೊದಲಾದ ಮೃದುಕಲ್ಲುಗಳು ಉಪಯುಕ್ತವಾಗಿದ್ದವು. ಈ ವಿಧಾನದಲ್ಲಿ ಉಪಕರಣಕ್ಕೆ ಸೂಕ್ತವಾದ ಆಕಾರ–ಗಾತ್ರದಲ್ಲಿರುವ ನದಿಯ ದುಂಡುಕಲ್ಲು ಅಥವಾ ಕಲ್ಲುತುಂಡನ್ನು ಆಯ್ದುಕೊಂಡು ಇದರ ಮೇಲ್ಮೈಯ ಏರುತಗ್ಗು, ಓರೆಕೋರೆಗಳನ್ನು ಕುಟ್ಟಿ ತೆಗೆದು (ಪೆಕಿಂಗ್) ಸರಿಸಮ ಮಾಡಲಾಗುತ್ತಿತ್ತು. ಬಂಡೆಗಳ ಮೇಲೆ ಸ್ವಾಭಾವಿಕವಾಗಿ ಇರುವ ಗುಳಿಗಳಲ್ಲಿ ಮರಳಿನಂತಹ ದೊರಕಾದ ವಸ್ತುವನ್ನು (ಸಾಣೆಗಾಗಿ) ತುಂಬಿಕೊಂಡು ಇದರ ಮೇಲೆ ಉಪಕರಣವನ್ನು ಉದ್ದುದ್ದಕ್ಕೆ ಉಜ್ಜಿ ನಯಗೊಳಿಸಲಾಗುತ್ತಿತ್ತು (ಗ್ರೈಡಿಂಗ್). ಚಪ್ಪಟೆ ಕೊಡಲಿ, ಬೆಣೆ, ಉಳಿ, ಬಾಚಿ ಮುಂತಾದ ಉಪಕರಣಗಳು ಈ ರೀತಿಯಲ್ಲಿ ತಯಾರಾದುವು. (ಪಿ.ಎಸ್.ಜಿ.)

**ಪ್ಲಾಸಿ ಕದನ:** ಬಂಗಾಲದ ನವಾಬ ಸಿರಾಜ್–ಉದ್–ದೌಲನ ಸೈನ್ಯಕ್ಕೂ ರಾಬರ್ಟ್ ಕ್ಲೈವನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯಕ್ಕೂ 1757ರಲ್ಲಿ ನಡೆದ ಕದನ. 1756ರಲ್ಲಿ ಆಲಿವರ್ದಿ ಖಾನ್ ಮರಣ ಹೊಂದಲು, ಸಿರಾಜ್–ಉದ್–ದೌಲ ಬಂಗಾಲದ ನವಾಬನಾದ. ಸಿರಾಜನ ಉತ್ತರಾಧಿಕಾರವನ್ನು ವಿರೋಧಿಸಿದ ಗುಂಪಿನೊಂದಿಗೆ ಬ್ರಿಟಿಷರು ಸ್ನೇಹ ಬೆಳೆಸಿದ್ದರಿಂದ ಅವನು ಅಸಮಾಧಾನಗೊಂಡ. ಅಲ್ಲದೆ ಅವನ ವಿರೋಧಿ ಹಿಂದು ವರ್ತಕನೊಬ್ಬನಿಗೆ ಬ್ರಿಟಿಷರು ಆಶ್ರಯ ನೀಡಿದ್ದರು. ಬ್ರಿಟಿಷರೂ ಫ್ರೆಂಚರೂ ತಮ್ಮ ಕೋಠಿಗಳ ಸುತ್ತಲೂ ಕೋಟೆಕೊತ್ತಳಗಳನ್ನು ನಿರ್ಮಿಸಿಕೊಳ್ಳುವುದನ್ನು ಕೂಡಲೇ ನಿಲ್ಲಿಸಬೇಕೆಂದು ಅವನು ತಿಳಿಸಿದ. ಫ್ರೆಂಚರು ಅವನೊಂದಿಗೆ ಸಂಧಿ ಏರ್ಪಡಿಸಿಕೊಂಡರು. ಆದರೆ ಬ್ರಿಟಿಷರು ಅವನ ಸೂಚನೆಯನ್ನು ತಿರಸ್ಕರಿಸಿದರು. ಕೂಡಲೇ ಅವನು ಬ್ರಿಟಿಷರಿಗೆ ಸೇರಿದ ಕಾಸಿಮ್ ಬಜಾರ್ ಕೋಠಿಯನ್ನು ವಶಪಡಿಸಿಕೊಂಡ. ಸೇನಾ ಸಮೇತನಾಗಿ ಕಲ್ಕತ್ತದತ್ತ ಮುನ್ನಡೆದ. ಈ ಅನಿರೀಕ್ಷಿತ ಆಕ್ರಮಣದಿಂದ ಕಂಗೆಟ್ಟ ಬ್ರಿಟಿಷರು ವಿಲಿಯಮ್ ಕೋಟೆಗೆ ಪಲಾಯನ ಮಾಡಿದರು. ಕೆಲವೇ ದಿನಗಳಲ್ಲಿ ಬ್ರಿಟಿಷರ ಎಲ್ಲ ಕೋಠಿಗಳೂ ಇತರ ನೆಲೆಗಳೂ ನವಾಬನ ವಶವಾದವು. ಮದರಾಸಿನಲ್ಲಿದ್ದ ಇಂಗ್ಲಿಷ್ ಕಂಪನಿ ಸರ್ಕಾರ ಸಿರಾಜನ ವಿರುದ್ಧ ಸೈನಿಕ ಕಾರ್ಯಾಚರಣೆಯನ್ನು ಕೈಗೊಳ್ಳಲು ರಾಬರ್ಟ್ ಕ್ಲೈವನನ್ನು ನೇಮಿಸಿತು. 1757 ಜನವರಿಯಲ್ಲಿ ಕ್ಲೈವ್ ಕೋಲ್ಕತ್ತವನ್ನೂ ಹೂಗ್ಲಿಯನ್ನೂ ಮರಳಿ ಪಡೆದ. ಏರ್ಪಟ್ಟ ಒಪ್ಪಂದವೊಂದರಂತೆ ಬ್ರಿಟಿಷರು ಬಂಗಾಲದಲ್ಲಿ ತಮ್ಮ ಮೊದಲಿನ ಸ್ಥಾನ ಪಡೆದರು. ನವಾಬ ಯುದ್ಧ ಪರಿಹಾರವನ್ನು ನೀಡಬೇಕಾಯಿತು. ಅಲ್ಲದೆ ಬ್ರಿಟಿಷರು ಕೋಲ್ಕತ್ತದ ಸುತ್ತಲೂ ಕೋಟೆಯನ್ನು ಕಟ್ಟಲೂ ತಮ್ಮವೇ ಆದ ನಾಣ್ಯಗಳನ್ನು ಟಂಕಿಸಲೂ ಅವರು ಫುಲ್ಟಾ ನಗರದಲ್ಲಿ ನೆಲೆಸಲೂ ಅನುಮತಿ ನೀಡಿದ. ಈ ಮಧ್ಯೆ ನವಾಬ ಫ್ರೆಂಚರ ಬಗ್ಗೆ ಅನುಕಂಪವನ್ನೂ ಫ್ರೆಂಚ್ ಸೇನಾನಿ ಬುಸ್ಸಿಯೊಂದಿಗೆ ಸ್ನೇಹ ಸಂಪರ್ಕವನ್ನೂ ಹೊಂದಿರುವನೆಂಬುದನ್ನು ತಿಳಿದ ಕ್ಲೈವ್ ಮತ್ತು ನೌಕಾಧಿಪತಿ ವಾಟ್ಸನ್ ಫ್ರೆಂಚ್ ನೆಲೆ ಚಂದ್ರನಾಗೂರ್ ಮೇಲೆ ಧಾಳಿ ಮಾಡಿದರು. ಹಿಂದಿನ ಒಪ್ಪಂದದಂತೆ ನವಾಬ ಬ್ರಿಟಿಷರ ಸ್ನೇಹಿತನಾದುದರಿಂದ ಮಧ್ಯ ಪ್ರವೇಶಿಸುವಂತಿರಲಿಲ್ಲ. ಇಂಗ್ಲಿಷರು ಅದನ್ನೇ ಚಂದ್ರನಾಗೂರ್ ಆಕ್ರಮಣಕ್ಕೆ ನವಾಬನ ಒಪ್ಪಿಗೆ ಎಂದು ಬಗೆದರು.

ಅಷ್ಟರಲ್ಲಿ ಸಿರಾಜನ ಸೇನಾನಿ ಮೀರ್ ಜಾಫರನ ನೇತೃತ್ವದಲ್ಲಿ ನವಾಬನ ಪದಚ್ಯುತಿಗಾಗಿ ಮುರ್ಷಿದಾಬಾದಿನಲ್ಲಿ ಒಳಸಂಚೊಂದು ನಡೆಯುತ್ತಿತ್ತು. ಸಿರಾಜ್ ಇಂಗ್ಲಿಷರ ಮಿತ್ರನಾಗಿದ್ದರೂ ಕ್ಲೈವ್ ಒಳಸಂಚಿಗೆ ಬೆಂಬಲ ನೀಡಿದ. ಮುರ್ಷಿದಾಬಾದಿನಲ್ಲಿ ಬ್ರಿಟಿಷ್ ಸರ್ಕಾರದ ಪ್ರತಿನಿಧಿಯಾಗಿದ್ದ ವಾಟ್ಸ್ ಮತ್ತು ಮೀರ್‌ಜಾಫರ್ ಇವರ ನಡುವೆ ರಹಸ್ಯ ಒಪ್ಪಂದವೇರ್ಪಟ್ಟಿತು. ಕ್ಲೈವ್ ಮತ್ತು ನವಾಬನ ನಡುವೆ ಕದನ ಆರಂಭವಾದರೆ ಮೀರ್ ಜಾಫರ್ ತನ್ನ ಅನುಯಾಯಿಗಳೊಂದಿಗೆ ತಟಸ್ಥನಾಗಿರಬೇಕೆಂಬುದಾಗಿ ಒಡಂಬಡಿಕೆಯಾಯಿತು. ಬ್ರಿಟಿಷ್‌ಸೇನಾ ಮತ್ತು ನೌಕಾಪಡೆಗಳ ಬಲಸಂವರ್ಧನೆಗಾಗಿ ಅಪಾರ ಹಣವನ್ನು ಒದಗಿಸಲು ಮೀರ್ ಜಾಫರ್ ಒಪ್ಪಿದ.

ನಿರಾಶ್ರಿತರಾದ ಫ್ರೆಂಚರಿಗೆ ಸಿರಾಜ್–ಉದ್–ದೌಲ ರಕ್ಷಣೆ ನೀಡಿದ್ದೇ ನೆವವಾಗಿ ಇಂಗ್ಲಿಷರು ಸಿರಾಜ್–ಉದ್–ದೌಲನ ವಿರುದ್ಧ ಯುದ್ಧ ಹೂಡಿದರು. ಇಂಗ್ಲಿಷರೊಡನೆ ಮೀರ್ ಜಾಫರನೂ ಇತರರೂ ಹೂಡಿದ್ದ ಸಂಚು ನವಾಬನಿಗೆ ಗೊತ್ತಾಗಲಿಲ್ಲ. ನವಾಬ ಪ್ಲಾಸಿ ಎಂಬಲ್ಲಿ ತನ್ನ ಸೈನ್ಯವನ್ನು ಜಮಾಯಿಸಿದ. ಪ್ಲಾಸಿಗೆ 24 ಕಿಮೀ ದೂರದ ಕಾಟ್ವಾ ಎಂಬಲ್ಲಿ ಕ್ಲೈವ್ ತನ್ನ ಸೇನೆಯನ್ನು ಜಮಾಯಿಸಿದ. 1757 ಜೂನ್ 22 ರಂದು ರಾತ್ರಿ ಕ್ಲೈವ್ ಭಾಗೀರಥಿ ನದಿಯನ್ನು ದಾಟಿ ಪ್ಲಾಸಿಯನ್ನು ತಲುಪಿದ. 23ರಂದು ಬೆಳಗ್ಗೆ ಕದನ ಆರಂಭವಾಯಿತು. ನವಾಬನ ಕಡೆ ಮೀರ್‌ಜಾಫರ್ ಮತ್ತು ರಾಮ್‌ದುರ್ಲಭರ ನೇತೃತ್ವದಲ್ಲಿದ್ದ ಸೈನ್ಯಗಳು ಯುದ್ಧಮಾಡದೆ ತೆಪ್ಪಗಿದ್ದವು. ಮೀರ್ ಜಾಫರ್ ನವಾಬನಲ್ಲಿ ನಿಷ್ಠೆಯಿಂದ ಪ್ರತಿಭಟನೆ ಸಲ್ಲಿಸಿದ್ದರೆ ಇಂಗ್ಲಿಷ್ ಸೇನೆಯನ್ನು ನಿರ್ಮೂಲಗೊಳಿಸಬಹುದಾಗಿತ್ತು. ಫ್ರೆಂಚರ ಬೆಂಬಲವಿದ್ದ ಮೋಹನಲಾಲ್ ಮತ್ತು ಮೀರ್‌ಮದನರ ಸಣ್ಣ ಪಡೆಗಳು ಮಾತ್ರ ಹೋರಾಟ ನಡೆಸಿದುವು–ಗುಂಡೊಂದಕ್ಕೆ ಮೀರ್‌ಮದನ್ ಬಲಿಯಾದ. ನವಾಬ ಮೀರ್ ಜಾಫರನ ಸಲಹೆಯಂತೆ ಸೈನ್ಯವನ್ನು ಹಿಂದಕ್ಕೆ ಬರಲು ಸೂಚನೆ ನೀಡಿದ. ಮುನ್ನುಗ್ಗಿ ಹೋರಾಡುತ್ತಿದ್ದ ಮೋಹನ್‌ಲಾಲನಿಗೆ ಯುದ್ಧ ತ್ಯಜಿಸುವಂತೆ ನವಾಬನ ಆಜ್ಞೆ ತಲುಪಿತು. ವಿಧಿಯಿಲ್ಲದೆ ಮೋಹನ್‌ಲಾಲ್ ಹಿನ್ನಡೆದ.

24ರಂದು ಬೆಳಗ್ಗೆ ಸಿರಾಜ್–ಉದ್–ದೌಲ ಮುರ್ಷಿದಾಬಾದನ್ನು ತಲುಪಿದ. ಸೋಲಿನ ಸುದ್ದಿ ಎಲ್ಲೆಲ್ಲೂ ಹಬ್ಬಿತ್ತು. ಸೈನಿಕರು ಗಾಬರಿಯಿಂದ ಚದುರಿ ಹೋಗಿದ್ದರು. ಹಣದ ಪ್ರಲೋಭನಕ್ಕೂ ಅವರು ಒಪ್ಪಲಿಲ್ಲ. ಕೊನೆಗೆ ಸಿರಾಜ್–ಉದ್–ದೌಲ ತನ್ನ ಹೆಂಡತಿಯೊಡನೆ ಪಲಾಯನ ಮಾಡಿದ. ಮೀರ್ ಜಾಫರ್ 25ರಂದು ಮುರ್ಷಿದಾಬಾದಿಗೆ ಬಂದ. ಕೆಲವು ದಿನಗಳ ಅನಂತರ ಕ್ಲೈವ್ ಆಗಮಿಸಿದ. ಇಂಗ್ಲಿಷರು ಮೀರ್ ಜಾಫರ್ ಬಂಗಾಲದ ಮಗ ಮೀರಾನನ ಆಜ್ಞೆಯಂತೆ ಅವನನ್ನು ಕೊಲೆ ಮಾಡಲಾಯಿತು. ಕ್ಲೈವನೂ ಅವನ ಸಹೋದ್ಯೋಗಿಗಳೂ ಮೀರ್ ಜಾಫರ್‌ನಿಂದ ಯಥೇಚ್ಛ ಬಹುಮಾನ ಪಡೆದರು. ಕಂಪನಿಗೆ ಅಗಾಧ ಹಣವೂ ಇಪ್ಪತ್ನಾಲ್ಕು ಪರಗಣಗಳ ಪ್ರದೇಶವೂ ಬಂದುವು. ಪ್ಲಾಸಿ ಕದನ ಬಲು ದೊಡ್ಡದಲ್ಲದಿದ್ದರೂ ಅದರ ಪರಿಣಾಮ ತೀವ್ರವಾದದ್ದಾಗಿತ್ತು. ಬಂಗಾಲವನ್ನೂ ಕ್ರಮೇಣ ಇಡೀ ಭಾರತವನ್ನೂ ಬ್ರಿಟಿಷರು ಗೆಲ್ಲಲು ಇದು ಹಾದಿ ಮಾಡಿಕೊಟ್ಟಿತು. (ಸಿ.ಬಿ.ಆರ್.)

**ಪ್ಲಿನಿ:** 23–79. ರೋಮನ್ ವಿದ್ವಾಂಸ. ಪ್ಲಿನಿಯಸ್ ಸಿಕಂಡಸ್ ಎಂಬುದು ಈತನ ಲ್ಯಾಟಿನ್ ಹೆಸರು. ಹಿರಿಯ ಪ್ಲಿನಿ ಎಂದು ಪ್ರಸಿದ್ಧನಾಗಿದ್ದಾನೆ. ಇಟಲಿಯ ಕೋಮೊ (ಕೋಮಮ್) ಎಂಬಲ್ಲಿ 23ರಲ್ಲಿ ಜನಿಸಿದ. ವೆಸೂವಿಯಸ್ ಅಗ್ನಿಪರ್ವತದ ಸ್ಫೋಟವನ್ನು ಹತ್ತಿರದಿಂದ ವೀಕ್ಷಿಸಲು ಯತ್ನಿಸಿ 79ರಲ್ಲಿ ಕಾಲವಾದ. ರೋಮಿನಲ್ಲಿ ಉತ್ತಮ ಗುರುಗಳಿಂದ ವಿದ್ಯೆ ಕಲಿತು ಜರ್ಮನಿಯಲ್ಲೂ ಆಫ್ರಿಕದಲ್ಲೂ ಸೈನಿಕನಾಗಿ ಸೇವೆ ಸಲ್ಲಿಸಿದ. ಸ್ಪೇನಿನಲ್ಲಿ ನಿಯೋಗಿಯಾಗಿ ಕೆಲಸ ಮಾಡಿದ. ಸೈನಿಕನ ಕರ್ತವ್ಯಗಳ ನಡುವೆ ವೇಳೆ ಮಾಡಿಕೊಂಡು ಜರ್ಮನಿಕ್ ಯುದ್ಧದ ಇತಿಹಾಸವನ್ನು ಪ್ರಾರಂಭಿಸಿ 29 ಸಂಪುಟಗಳನ್ನು ಮುಗಿಸಿದ. ಇತಿಹಾಸ, ಅಲಂಕಾರಶಾಸ್ತ್ರ, ಪ್ರಾಕೃತಿಕವಿಜ್ಞಾನ, ಯುದ್ಧವಿಜ್ಞಾನ ಮುಂತಾದ ನಾನಾ ಕ್ಷೇತ್ರಗಳಲ್ಲಿ ಇವನು ಗ್ರಂಥಗಳನ್ನು ರಚಿಸಿದ. ಇವನು ಅಭ್ಯಾಸಮಾಡಿದ ಪುಸ್ತಕಗಳಿಂದೆಲ್ಲ ಟಿಪ್ಪಣಿ ಬರೆದಿಟ್ಟುಕೊಂಡ. ಇಂಥ ಟಿಪ್ಪಣಿಗಳ ಆಧಾರದ ಮೇಲೆ ಪ್ರಾಕೃತಿಕ ಇತಿಹಾಸವನ್ನು (ಹಿಸ್ಟೋರಿಯ ನ್ಯಾಚುರಾಲಿಸ್) ಬರೆದು ಪ್ರಕಟಿಸಿದ. ಇದೊಂದೇ ಇಂದು ಲಭ್ಯವಿರುವ ಇವನ ಗ್ರಂಥ. ಇದರಲ್ಲಿ 37 ಪುಸ್ತಕಗಳು (ವಿಭಾಗಗಳು) ಇವೆ. ಸು. 2,000 ಗ್ರಂಥಗಳಿಂದ ವಿಷಯ ಸಂಗ್ರಹಿಸಿ ಇದನ್ನು ಬರೆದದ್ದಾಗಿ ಪ್ಲಿನಿ ಹೇಳಿಕೊಂಡಿದ್ದಾನೆ. ಪ್ರಕೃತಿ ವಿಜ್ಞಾನದ ವಿಶ್ವಕೋಶ ಸದೃಶಗ್ರಂಥವಿದು. ಪ್ರಕೃತಿಯ ವ್ಯಾಪಕಾರ್ಥವನ್ನು ಗಮನಿಸಿ, ಅದರ ಕಕ್ಷೆಯಲ್ಲಿ ಬರುವ ಅನೇಕ ವಿಷಯಗಳನ್ನು ಅನುಲಕ್ಷಿಸಿ, ಈ ಗ್ರಂಥವನ್ನು ಬರೆದಿದ್ದಾನೆ. 1609ರಲ್ಲಿ ಇದರ ಮೊದಲನೆಯ ಆವೃತ್ತಿ ಪ್ರಕಟವಾಯಿತು. ಇತಿಹಾಸ ಸಂಶೋಧಕರಿಗೆ ಇದು ಒಂದು ಆಕರವಾಗಿದೆ. ಇದರಲ್ಲಿ 1ನೆಯ ಶತಮಾನದ ಜೀವನವನ್ನು ಅರಿಯಬಹುದು. ಈ ಗ್ರಂಥದ 6ನೆಯ ಪುಸ್ತಕದಲ್ಲಿ ಶ್ರೀಲಂಕ ಮತ್ತು ಭಾರತದ ಬಗ್ಗೆ ವಿವರಗಳಿವೆ. ಭಾರತ ಮತ್ತು ರೋಮ್‌ಗಳ ನಡುವೆ ಸಾಗುತ್ತಿದ್ದ ವ್ಯಾಪಾರದ ಕಾರಣ, ರೋಮ್ ಜನರ ಹಣಕಾಸು ಪರಿಸ್ಥಿತಿ, ಭಾರತದ ಮುತ್ತು, ಹವಳ, ರೇಷ್ಮೆ, ವಜ್ರ, ವೈಡೂರ್ಯಗಳ ಬಗ್ಗೆ ರೋಮನ್ ಸ್ತ್ರೀಯರಿಗೆ ಇದ್ದ ವ್ಯಾಮೋಹ ಮುಂತಾದವೆಲ್ಲವುಗಳ ವರ್ಣನೆಯನ್ನು ಇಲ್ಲಿ ಕಾಣಬಹುದು.

ಹಿರಿಯ ಪ್ಲಿನಿಯ ಸೋದರಳಿಯ ಪ್ಲಿನಿಯಸ್ ಸಿಸಿಲಿಯಸ್ ಸೆಕಂಡಸ್ (62–113) ಕಿರಿಯ ಪ್ಲಿನಿಯೆಂದು ಹೆಸರಾಗಿದ್ದಾನೆ. ಇವನ ಪತ್ರಗಳು ಪ್ರಸಿದ್ಧವಾಗಿವೆ. ಬಿಥಿನಿಯ ಮತ್ತು ಪಾಂಟಿಕಗಳಲ್ಲಿ ಕ್ರೈಸ್ತರನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು ಕುರಿತು ಚಕ್ರವರ್ತಿ ಟ್ರಾಜನನಿಗೆ ಬರೆದ ಪತ್ರವೂ ಇವುಗಳಲ್ಲಿ ಸೇರಿದೆ. ಕ್ರೈಸ್ತಧರ್ಮವನ್ನು ಕುರಿತ ಅತ್ಯಂತ ಪ್ರಾಚೀನ ಉಲ್ಲೇಖಗಳಲ್ಲಿ ಇದೂ ಒಂದು ಎಂದು ಹೇಳಲಾಗಿದೆ. (ಜಿ.ಆರ್.ಕೆ.)

**ಪ್ಲೇಟೋ:** ಪ್ರ.ಶ.ಪೂ. 427–347. ಪ್ರಾಚೀನ ಗ್ರೀಸ್ ದೇಶದ ತತ್ತ್ವಜ್ಞಾನಿಗಳಲ್ಲಿ ಅಗ್ರಗಣ್ಯ. ಪಾಶ್ಚಾತ್ಯ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ದೇದೀಪ್ಯಮಾನವಾದ ಸ್ಥಾನ ಇವನದು. ಹುಟ್ಟಿದ್ದು ಅಥೆನ್ಸಿನ ಶ್ರೀಮಂತ ಕುಟುಂಬದಲ್ಲಿ. ತಂದೆ ಅರಿಸ್ಟಾನ್, ತಾಯಿ ಪೆರಿಕ್ಟಿಯೋನ್. ಪೆರಿಕ್ಲೀಸ್‌ನ ನಾಯಕತ್ವದ ರಾಜ್ಯಾಡಳಿತದಲ್ಲಿ ಈತನಿಗೆ ಪ್ರಮುಖ ಸ್ಥಾನವಿತ್ತು.

ಪ್ಲೇಟೋನ ಜೀವನದಲ್ಲಿ ಕೆಲವೊಂದು ಸಣ್ಣ ಘಟನೆಗಳನ್ನು ಬಿಟ್ಟರೆ ಅಷ್ಟೇನೂ ಸಾಹಸಪೂರ್ಣವಾದ ಅಂಶಗಳಿಲ್ಲ. ಒಂದು ವಿಶ್ವವಿದ್ಯಾಲಯವನ್ನು ಈತ ಸಂಸ್ಥಾಪಿಸಿ ನಡೆಸಿದನಲ್ಲದೆ ಅಧ್ಯಯನ ಸಂಶೋಧನೆಗಳಲ್ಲಿಯೇ ಹೆಚ್ಚು ಕಾಲ ಕಳೆದ. ಆದರೆ ಬೌದ್ಧಿಕ ಚಿಂತನೆಯ ಶೋಧನೆಗಳಲ್ಲಿ ಈತನನ್ನು ಸರಿಗಟ್ಟುವವರ ಇಲ್ಲವೆನ್ನಬಹುದು. ಇಂದ್ರಿಯ ಗೋಚರವಾದ ಜಗತ್ತಿನ ಆಚೆಗೆ ಒಂದು ಶಾಶ್ವತ ಮೂಲತತ್ತ್ವ ಆಧಾರವಾಗಿರುತ್ತದೆ, ಎಳ್ಳಷ್ಟೂ ಏರುಪೇರಿಲ್ಲದಂಥ ಕರಾರುವಾಕ್ಕಾದ ನಿಯಮಗಳಿಗನುಸಾರವಾಗಿ ಜಗತ್ತನ್ನು ನಡೆಸುವುದೆಂದೂ ಅದರ ಪರಸ್ವರೂಪವೇ ಗುಡ್ (ಶಿವ) ಎಂದೂ ಒಂದು ಆದರ್ಶವನ್ನು ಪ್ಲೇಟೋ ಒದಗಿಸಿದ್ದಾನೆ.

ಮೊದಲು ರಾಜಕೀಯ ಕ್ಷೇತ್ರದಲ್ಲಿ ಹೆಸರು ಗಳಿಸಬೇಕೆಂಬುದೇ ಇವನ ಗುರಿಯಾಗಿತ್ತು. ಪೆಲೊಪೊನೇಷ್ಯನ್ ಯುದ್ಧದಲ್ಲಿ ಸ್ಪಾರ್ಟನರಿಂದ ಅಥೆನ್ಸ್ ಪರಾಜಿತವಾದಾಗ ಇದಕ್ಕೆ ಒಂದು ಅವಕಾಶವೂ ದೊರೆಯಿತು. ಪ್ರ.ಶ.ಪೂ. 404ರಲ್ಲಿ ಸ್ಪಾರ್ಟನರ ಬೆಂಬಲದಿಂದ ಅಧಿಕಾರಕ್ಕೆ

ಬಂದ ಕೆಲವರು ಪ್ಲೇಟೋನ ಆಪ್ತರೂ ಬಂಧುಗಳೂ ಆಗಿದ್ದರು. ಆದರೆ ಅವರ ದುರ್ವರ್ತನೆಗಳಿಗೆ ಹೇಸಿದ ಪ್ಲೇಟೋ ಅವರೊಡನೆ ಅಧಿಕಾರಕ್ಕೆ ಬಾರದೆ ಉಳಿದ. ಅವರನ್ನು ಗದ್ದುಗೆಯಿಂದಿಳಿಸಿ ಮುಂದೆ ಬಂದ ಪ್ರಜಾರಾಜ್ಯದಲ್ಲಿ ಸೇರಬೇಕೆನ್ನುವಷ್ಟರಲ್ಲಿಯೇ ತನ್ನ ಹಿರಿಯ ಮಿತ್ರ ಸಾಕ್ರಟೀಸನನ್ನು ಸರ್ಕಾರ ವಿಚಾರಣೆಗೆ ಗುರಿಪಡಿಸಿ ಅವನಿಗೆ ಮರಣ ದಂಡನೆಯನ್ನು ವಿಧಿಸಿತು. ಇದರಿಂದ ಮನನೊಂದು ತನ್ನ ಅಧಿಕಾರದ ಆಸೆಯನ್ನೇ ತೊರೆದು, ಅಥೆನ್ಸ್‌ನಗರವನ್ನು ಬಿಟ್ಟು, ಮೆಗಾರ ಎಂಬ ನಗರದಲ್ಲಿದ್ದ ತನ್ನ ಮಿತ್ರನೊಡನೆ ವಾಸ ಮಾಡುತ್ತ, ಸಾಕ್ರಟೀಸನ ಸಮರ್ಥನೆಗೆ ನೆರವಾಗುವಂಥ ರಚನೆಯನ್ನು ಆರಂಭಿಸಿದ.

ಪ್ರ.ಶ.ಪೂ.ಸು.388ರಲ್ಲಿ ಪ್ಲೇಟೋ ಸಿರಕ್ಯೂಸ್ ಒಡೆಯನಾದ 1ನೆಯ ಡೈಯನೀಷಿಯಸನ ಆಸ್ಥಾನವನ್ನು ಸಂದರ್ಶಿಸಿದ. ಅಲ್ಲಿ ಅನುಗ್ರಹಕ್ಕೆ ಬದಲು ಆಗ್ರಹಕ್ಕೆ ಗುರಿಯಾಗಿ, ದ್ವೀಪಾಂತರದಲ್ಲಿ ಗುಲಾಮನಾಗಬೇಕಾದ ದುರ್ಗತಿ ಒದಗಿತು. ಹೇಗೊ ಸುದೈವದಿಂದ ಮಿತ್ರನೊಬ್ಬನ ಸಕಾಲಿಕದ್ರವ್ಯ ಸಹಾಯದಿಂದ ಅದು ದೂರವಾಯಿತು. ಇದೇ ಪ್ರವಾಸ ಕಾಲದಲ್ಲಿ ಪೈಥಾಗರಸ್ ಪಂಥದ ಗಣಿತಶಾಸ್ತ್ರಜ್ಞನಾದ ಆರ್ಕೈಟಸನ ಸಂಪರ್ಕ ದೊರೆಯಿತು. ಎಲ್ಲ ಶಾಸ್ತ್ರಗಳಿಗೂ ಪರಸ್ಪರ ಸಂಬಂಧವುಂಟು, ಮುಖ್ಯವಾಗಿ ಗಣಿತಶಾಸ್ತ್ರವಂತೂ ಎಲ್ಲ ಬಗೆಯ ಸಂಶೋಧನೆಗೂ ಉಪಕರಣವಾಗಬಲ್ಲದು ಎಂಬುದನ್ನು ಮನಗಂಡು ಅಥೆನ್ಸಿಗೆ ಮರಳಿ ತಾತ್ತ್ವಿಕ ಸಂಶೋಧನೆಗೆ ಮೀಸಲಾದ ಒಂದು ವಿದ್ಯಾಕೇಂದ್ರವನ್ನು ಪ್ರ.ಶ.ಪೂ.387ರಲ್ಲಿ ಸ್ಥಾಪಿಸಿದ. ಇದನ್ನು ಜಗತ್ತಿನ ಮೊದಲ ವಿಶ್ವವಿದ್ಯಾಲಯವೆನ್ನಬಹುದು. ಇದರ ಹೆಸರು ಅಕಾಡಮಿ. ಪ್ರ.ಶ.ಪೂ.367ರಲ್ಲಿ ಸಿಸಿಲಿಯ ಪ್ರಭು ಮೊದಲನೆಯ ಡೈಯನೀಷಿಯಸನ ನಿಧನಾನಂತರ ಪಟ್ಟಕ್ಕೆ ಬಂದ ಅವನ ಮಗ ಎರಡನೆಯ ಡೈಯನೀಷಿಯಸ್ ತನ್ನ ಚಿಕ್ಕಪ್ಪ ಡಯಾನ್‌ನ ಮೂಲಕ ಈತನನ್ನು ಮತ್ತೆ ಆಸ್ಥಾನಕ್ಕೆ ಕರೆಸಿದ. ರಾಜನಿಗೆ ತತ್ತ್ವಶಾಸ್ತ್ರವನ್ನು ಕಲಿಸುವ ಕೆಲಸವನ್ನು ಅಲ್ಲಿ ಈತ ಕೈಗೊಂಡ. ಗುರುಶಿಷ್ಯರಿಗೆ ತಾಳಮೇಳ ತಪ್ಪಿದ್ದರ ಫಲವಾಗಿ ಡಯಾನನೊಂದಿಗೆ ಸಿಸಿಲಿಯನ್ನು ತ್ಯಜಿಸಬೇಕಾಗಿ ಬಂತು. ಮತ್ತೆ ಪ್ರ.ಶ.ಪೂ.361ರಲ್ಲಿ ಡಯಾನನ ಕುಟುಂಬವನ್ನು ಶಿಕ್ಷೆಯಿಂದ ತಪ್ಪಿಸಲೆಂದು ಮೂರನೆಯ ಬಾರಿಗೆ ಸಿರಕ್ಯೂಸಿಗೆ ಬಂದರೂ ಪ್ರಯೋಜನವಾಗದೆ ಹಾಗೆಯೆ ಹಿಂತಿರುಗಿದ. ಮುಂದೆ ಪ್ರ.ಶ.ಪೂ.355ರಲ್ಲಿ ಡಯಾನ ಅಕಾಡಮಿಯ ಮಿತ್ರರ ಸಹಾಯದಿಂದ ಡೈಯನೀಷಿಯಸ್‌ನನ್ನು ರಾಜ್ಯಭ್ರಷ್ಟಗೊಳಿಸಿ ವಿಜಯಿಯಾದರೂ ಪ್ರ.ಶ.ಪೂ.354ರಲ್ಲಿಯೇ ಹತನಾದ. ಪ್ಲೇಟೋವಿನ 7ನೆಯ ಮತ್ತು 8ನೆಯ ಪತ್ರಗಳು ಸಿಸಿಲಿಯಲ್ಲಿ ತಾನೆಸಗಿದ ಕಾರ್ಯಭಾರದ ಸಮರ್ಥನೆಗೆ ಮೀಸಲಾಗಿವೆ.

ಈ ನಡುವೆ ಯೂಡಾಕ್ಸಸ್ ಎಂಬ ತತ್ತ್ವಜ್ಞ ಪ್ಲೇಟೋವಿನ ಅಕಾಡೆಮಿ ಹಾಗೂ ತತ್ತ್ವಗಳನ್ನು ಖಂಡಿಸಿ ನೂತನ ವಿಚಾರಗಳನ್ನು ಮುಂದಿಡತೊಡಗಿದ್ದರಿಂದ ಆ ಹೊಸ ಅಭಿಪ್ರಾಯಗಳ ನಿರಾಕರಣೆಗಾಗಿ ಪ್ಲೇಟೋ ಪಾರ್ಮೆನೈಡೀಸ್ ಮತ್ತು ಫಿಲಿಬಸ್ ಎಂಬ ಗ್ರಂಥಗಳ ರಚನೆಗೆ ಹೊರಡಬೇಕಾಯಿತು. ಮತ್ತೊಮ್ಮೆ ಸಿಸಿಲಿಗೆ ಪ್ರವಾಸ ಮಾಡಿ ಬಂದ ಬಳಿಕ ತನ್ನ ಅಕಾಡಮಿಯನ್ನು ನಡೆಸಲು ಆದರ್ಶ ನಿಯಮಾವಳಿಗಳನ್ನು ರಚಿಸಲು ಶ್ರಮಿಸಿದ. ಪ್ಲೇಟೋ ಅವಿವಾಹಿತನಾಗಿಯೆ ಉಳಿದಂತೆ ತೋರುತ್ತದೆ. ಪ್ರ.ಶ.ಪೂ.347ರಲ್ಲಿ ಪ್ಲೇಟೋ ನಿಧನ ಹೊಂದಿದ. ಆದರೆ ಅಕಾಡೆಮಿ ಮಾತ್ರಪ್ರ.ಶ.ಪೂ.529ರವರೆಗೆ ಊರ್ಜಿತವಾಗಿತ್ತು.

ಪ್ಲೇಟೋ ಬರೆದನೆನ್ನುವ ಮಿಕ್ಕ 13 ಪತ್ರಗಳ ಬಗ್ಗೆ ಸಂಶಯವಿದೆ. ಎಷ್ಟೋ ದಂತಕಥೆಗಳನ್ನು ಇವನ ವಿಷಯಕ್ಕೆ ಮುಂದಿನವರೂ ಕಟ್ಟಿದ್ದಾರೆ. ನೇಪಲ್ಸ್ ನಗರದ ನ್ಯಾಷನಲ್ ಮ್ಯೂಸಿಯಂನಲ್ಲಿ ಇವನ ಪ್ರತಿಮೆಯಿದೆ. ಪ್ಲೇಟೋನಲ್ಲಿ ತಾರ್ಕಿಕತೆ, ಸೂಕ್ಷ್ಮ ವೈಚಾರಿಕ ಪ್ರಖರತೆ, ಋಷಿಯ ಮತ್ತು ಮಹಾಕವಿಯ ದರ್ಶನ ಪ್ರತಿಭೆ, ಧರ್ಮಶಾಸ್ತ್ರಕಾರನ ನೀತಿನಿಷ್ಠೆ– ಈ ಮೂರರ ಅಪೂರ್ವ ತ್ರಿವೇಣಿಸಂಗಮವಿದೆ. ಇದೇ ಇವನ ವೈಶಿಷ್ಟ್ಯ. ಇವನ ಎಲ್ಲ ಗ್ರಂಥಗಳಲ್ಲೂ ಉನ್ನತ ಮಟ್ಟದಲ್ಲಿ ಈ ಗುಣಗಳು ಪ್ರತಿಬಿಂಬಿಸುವುದನ್ನು ನೋಡಬಹುದು.

ಗ್ರೀಕರ ದೋಷಪೂರ್ಣ ಸಾಮಾಜಿಕ ಹಾಗೂ ರಾಜಕೀಯ ಜೀವನವನ್ನು ತಿದ್ದಿ ಉದಾತ್ತಗೊಳಿಸುವುದು ಇವನ ಮೂಲೋದ್ದೇಶವಾಗಿತ್ತು. ಪ್ರಜಾಪ್ರಭುತ್ವಕ್ಕೆ ನೆಲೆಯಾಗಿದ್ದ ಅಥೆನ್ಸ್ ಸಮಾಜವನ್ನು ಆಳವಾಗಿಯೂ ವಿಶಾಲವಾಗಿಯೂ ಅಧ್ಯಯನ ಮಾಡುವುದು ಅಲ್ಲಿಯ ಲೋಪದೋಷಗಳನ್ನು ಅರಿತು, ಅವುಗಳ ಸುಧಾರಣೆಯ ಮಾರ್ಗಗಳನ್ನು ಸೂಚಿಸುವುದು–ಇದಕ್ಕಾಗಿ ಈತ ತುಂಬ ಶ್ರಮಿಸಿದ. ಈ ಸಮಕಾಲೀನ ಸಮಸ್ಯೆಯ ಪರಿಹಾರ ದೊರೆಯಲು ಮೂಲಭೂತ ತಾತ್ತ್ವಿಕ ಆಧಾರದ ಅಗತ್ಯವುಂಟೆಂದು ಇವನಿಗೆ ಮನವರಿಕೆಯಾಯಿತು. ಆದ್ದರಿಂದ ಮಾನವ ಜೀವನದ ಶಾಶ್ವತ ನೀತಿ ಮೌಲ್ಯಗಳ ಸಂಶೋಧನೆಗೆ ಹೊರಟ. ಈತನ ಚಿಂತನಧಾರೆಯ ಎಲ್ಲ ಮುಖಗಳಲ್ಲಿಯೂ ಆದರ್ಶವಾದ ಎದ್ದು ಕಾಣುತ್ತದೆ.

ತಾರ್ಕಿಕ ಹಾಗೂ ತಾತ್ತ್ವಿಕ ಸಮಸ್ಯೆಗಳನ್ನು ಚರ್ಚಿಸುವಾಗ ಪ್ಲೇಟೋ ತನ್ನ ಪೂರ್ವಸೂರಿಗಳಾದ ಸಾಕ್ರಟೀಸ್ ಮೊದಲಾದವರ ಕೆಲವೊಂದು ಅಭಿಪ್ರಾಯಗಳನ್ನು ಎತ್ತಿಕೊಳ್ಳುತ್ತಾನೆ. ಅಂದಿನ ಗ್ರೀಸಿನಲ್ಲಿ ಮುಖ್ಯ ಅಧ್ಯಾಪಕರೆಲ್ಲ ಸೋಫಿಸ್ಟರಾಗಿದ್ದರು. ಒಂದರ್ಥದಲ್ಲಿ ಸಾಕ್ರಟೀಸನೂ ವಾದಿಯೆ ಎನ್ನಬಹುದು. ಈ ಪ್ರಖ್ಯಾತ ವಾದಿ–ವಾಗ್ಮಿಗಳು ನಾನಾ ಬಗೆಯ ಕುತರ್ಕಗಳನ್ನೂ ಕುಯುಕ್ತಿಗಳನ್ನೂ ಪ್ರಚಾರಕ್ಕೆ ತಂದಿದ್ದರು. ಅವನ್ನು ಸಾಧಾರಣವಾಗಿ ನಿರಾಕರಿಸುವುದೆ ಪ್ಲೇಟೋಗೆ ಮೊದಲ ಕರ್ತವ್ಯವಾಯಿತು. ಸಾಮಾನ್ಯ ಅಥವಾ ಜಾತಿ(ಸಮಷ್ಟಿ) ಮತ್ತು ವ್ಯಕ್ತಿಗಳ (ವ್ಯಷ್ಟಿ) ವಾಸ್ತವ ಸಂಬಂಧವನ್ನು ನಿರ್ದೇಶಿಸಲು ಪ್ಲೇಟೋ ತುಂಬ ಶ್ರಮಪಟ್ಟಿದ್ದಾನೆ.

**ನೀತಿಮೀಮಾಂಸೆ:** ನೀತಿ ಮತ್ತು ನಡತೆಯನ್ನು ನಿಯಮಿಸುವ ತತ್ತ್ವಗಳು ಯಾವುವೆಂಬುದರ ಕೂಲಂಕಷ ವಿಮರ್ಶೆಯನ್ನು ನೀತಿಶಾಸ್ತ್ರ, ರಾಜಶಾಸ್ತ್ರಗಳೆರಡಕ್ಕೂ ಅನ್ವಯಿಸುವಂತೆ ಮೊಟ್ಟಮೊದಲು ಮಾಡಿದ ಯಶಸ್ಸು ಪ್ಲೇಟೋಗೆ ಸೇರುತ್ತದೆ. ಇವನ ಸುನೀತಿಯ ಅಥವಾ ಧರ್ಮದ (ಗುಡ್) ಆದರ್ಶ, ಪ್ರಜಾರಾಜ್ಯದಲ್ಲಿ ಸಾಧಿಸಬೇಕಾದ ಮೌಲ್ಯ. ತನ್ನ ರಿಪಬ್ಲಿಕ್ ಗ್ರಂಥದಲ್ಲಿ ಈತ ಒಂದು ಸುಸಂಘಟಿತವಾದ ರಾಜ್ಯವ್ಯವಸ್ಥೆಯ ಸಾಮಾಜಿಕ ವರ್ತನೆಯ ಆಧಾರದ ಮೇಲಿಂದ ಮಾತ್ರ ವ್ಯಕ್ತಿಯ ನೈತಿಕತೆಯನ್ನು ನಿರೂಪಿಸಿದ್ದಾನೆ.

ಪ್ಲೇಟೋ ಪ್ರಭಾವ ಅಸಂಖ್ಯ ತತ್ತ್ವಚಿಂತಕರ ಮೇಲೆ ಹೇಗೋ ಹಾಗೆ ಅಗಣಿತ ಕವಿಗಳ ಮೇಲೂ ಅನೇಕ ಶತಮಾನಗಳವರೆಗೆ ಅಗಾಧವಾಗಿದ್ದುದು ಕಾಣುತ್ತದೆ. ಇವನಿಂದ ಸ್ಫೂರ್ತಿ ಪಡೆಯದ ತತ್ತ್ವಜ್ಞಾನಿಗಳೆ ಯುರೋಪಿನಲ್ಲಿ ಇಲ್ಲವೆನ್ನಬಹುದು. ಇವನ ಶಿಷ್ಯರು ಇವನ ತತ್ತ್ವಗಳ ಪ್ರಸಾರಕ್ಕೆ ಮುಂದಾದರೂ ಯಾರೂ ಅರಿಸ್ಟಾಟಲನಷ್ಟು ಯಶಸ್ವಿಯಾಗಲಿಲ್ಲ. ಪ್ಲೇಟೋ ತತ್ತ್ವಗಳಿಗೆ ಶಾಸ್ತ್ರೀಯ ಸ್ವರೂಪವನ್ನು ಒದಗಿಸಿ ವಿಚಾರವನ್ನು ಮುಂದುವರಿಸಿದ ಕೀರ್ತಿ ಅರಿಸ್ಟಾಟಲನಿಗೆ ಸಲ್ಲಬೇಕು.



ಪ್ಲೇಟೋ ಗ್ರಂಥಗಳೆಲ್ಲ ಉಪಲಬ್ಧವಾಗಿವೆ. ಅವುಗಳ ಪ್ರಮಾಣ 8 ಆಧುನಿಕ ಸಂಪುಟ ಗಳಷ್ಟಿದೆ. ವಿಶ್ವದ ತಾತ್ತ್ವಿಕವಿವೇಚನೆಯ ಉತ್ತುಂಗ ಶಿಖರವನ್ನು ನಾವು ಅಲ್ಲಿ ಸಂದರ್ಶಿಸುವಂತೆ ಉನ್ನತ ಮಟ್ಟದ ವಾಗ್ವಿಲಾಸವನ್ನೂ ಕಾಣುತ್ತೇವೆ. ಆದ್ದರಿಂದ ಅವು ತಾತ್ತ್ವಿಕ ದೃಷ್ಟಿಯಂತೆ ಸಾಹಿತ್ಯದೃಷ್ಟಿಯಿಂದಲೂ ಮಹನೀಯವೆನಿಸಿವೆ. ತತ್ತ್ವಶಾಸ್ತ್ರವೇನೆಂದು ಯಾರಾದರೂ ಕೇಳಿದರೆ ಪ್ಲೇಟೋವನ್ನು ಓದಿ ತಿಳಿ ಎಂದು ಉತ್ತರಿಸು ವಂತಿದೆ. ತತ್ತ್ವಶಾಸ್ತ್ರವೆಂಬ ಪದವನ್ನು ಮೊದಲು ಬಳಸಿದವನೇ ಪ್ಲೇಟೋ, ಅದನ್ನು ಸರ್ವಾಂಗೀಣವಾಗಿ ವಿವೇಚಿಸಿದವನೂ ಆತನೇ. ಇಲ್ಲಿ ನಾವು ಮೊದಲ ಬಾರಿಗೆ ಕಾಣುವ ವ್ಯವಸ್ಥಿತ ತತ್ತ್ವಚಿಂತನೆ ಸಾಕ್ರಟೀಸ್ ಮತ್ತು ಅವನ ಪೂರ್ವಿಕರಾರಲ್ಲಿಯೂ ಕಾಣಸಿಗದು.

ಪ್ಲೇಟೋ ಬರೆದುದೆಲ್ಲ ಹೆಚ್ಚಾಗಿ ಸಂವಾದ ಅಥವಾ ಸಂಭಾಷಣೆಯ ಶೈಲಿಯಲ್ಲಿದೆ. ಈ ಚಿಂತನಮಾರ್ಗವನ್ನು ಪ್ಲೇಟೋ ರಾಜಕೀಯ ಕ್ಷೇತ್ರಕ್ಕೆ ಅನ್ವಯಿಸಿ ಬರೆದ ಸಂವಾದಗಳನ್ನು ರಿಪಬ್ಲಿಕ್ (ಪ್ರಜಾರಾಜ್ಯ) ಮತ್ತು ಲಾಸ್ (ಆಡಳಿತ ನೀತಿಗಳು) ಮುಖ್ಯವಾದ ರಚನೆಗಳೆನಿಸಿವೆ.

**ರಿಪಬ್ಲಿಕ್:** ಇದು ಪ್ಲೇಟೋ ಆದರ್ಶರಾಜ್ಯದ ಚಿತ್ರವನ್ನೊದಗಿಸುವ ಗ್ರಂಥ. ತನ್ನ ಆದರ್ಶರಾಜ್ಯವನ್ನು ಪ್ಲೇಟೋ ಕ್ಯಾಲಪೋಲಿಸ್ ಎಂದು ಕರೆದಿದ್ದಾನೆ. ಗ್ರಾಮೀಣ ಸಮಾಜದ ಆಡಳಿತದಿಂದ ಹಿಡಿದು ಒಂದು ನಗರ ರಾಜ್ಯದ ನಿರ್ವಹಣೆಯವರೆಗೆ ಅದರ ವ್ಯಾಪ್ತಿ ಗುಣಕರ್ಮಗಳ ವಿಭಾಗವನ್ನಾಶ್ರಯಿಸಿ ಜನರಲ್ಲಿ ಮೂರು ವರ್ಗಗಳುಂಟು. ಪಾಲಕರು, ಸಹಾಯಕರು ಮತ್ತು ಕಾರ್ಮಿಕರು ಪ್ಲೇಟೋನ ವಿಚಾರಗಳೆಲ್ಲ ಹೆಚ್ಚಾಗಿ ಮೊದಲ ಎರಡು ವರ್ಗದವರಿಗೆ ಎಂದರೆ ರಾಜ್ಯಪಾಲಕರಿಗೆ ಮತ್ತು ಸೈನಿಕರಿಗೆ ಅನ್ವಯಿಸುತ್ತವೆ. ಆ ವರ್ಗಗಳ ಸ್ತ್ರೀಪುರುಷರಿಗೆ ಸಂಪೂರ್ಣ ರಾಜ್ಯಾಧಿಕಾರವಿರುತ್ತದೆ. ಅದಕ್ಕೆ ಪ್ರತಿಯಾಗಿ ಅವರು ಸ್ವಂತ ಆಸ್ತಿಗೂ ಸ್ವಂತ ಕುಟುಂಬಕ್ಕೂ ಎರವಾಗಬೇಕು. ಅವರ ಉತ್ತಮ ಬೀಜದಿಂದ ವಂಶವರ್ಧನೆಯಾಗುವ ವ್ಯವಸ್ಥೆಯಿರುತ್ತದೆ. ರಾಜ್ಯದ ಮಿಕ್ಕ ವರ್ಗಗಳಿಗೆ ಪ್ರಭುತ್ವದಲ್ಲಿ ಪಾಲಾಗಲೀ ಉಚ್ಚಶಿಕ್ಷಣದ ಅಗತ್ಯವಾಗಲೀ ಇರುವುದಿಲ್ಲ. ಒಳ್ಳೆಯ ರೈತರು ಇಲ್ಲವೇ ಕೆಲಸಗಾರರಾಗುವುದಷ್ಟೆ ಅವರ ಕಸಬು. ಬಾಹ್ಯಯುದ್ಧಗಳ ಆಂತರಿಕ ಆಡಳಿತಕಾರ್ಯಗಳ ಎಲ್ಲ ಹೊಣೆಯೂ ಪಾಲಕವರ್ಗದವರಿಗೇ. ಅವರು ತತ್ತ್ವಜ್ಞಾನಿಗಳಾಗುವುದರಿಂದ ಅದು ಚಿರಕಾಲ ಬಾಳುತ್ತದೆ: ಅದರಲ್ಲಿ ಕವಿಗಳಿಗೆ ಮಾತ್ರಪ್ರವೇಶವಿಲ್ಲ. ಏಕೆಂದರೆ ಅವರು ಸತ್ಯಾನ್ವೇಷಿಗಳಲ್ಲ; ಸ್ವಕಲ್ಪನಾಪ್ರಿಯರು. ಅವರ ವರ್ಣನೆಯೆಲ್ಲ ಮೂಲಸತ್ತ್ವದ ಅನುಕರಣೆಯ ಅನುಕರಣೆ. ಅವರಿಂದ ಅನೀತಿಗೂ ಪ್ರಚೋದನೆ ದೊರೆಯುತ್ತದೆ. ಯಾವ ಪರಿವರ್ತನೆಗಳಿಗೂ ಆದರ್ಶ ರಾಜ್ಯದಲ್ಲಿ ಅವಕಾಶವಿಲ್ಲ. ಇಷ್ಟಾದರೂ ಮನುಷ್ಯ ಸ್ವಭಾವದ ಫಲವಾಗಿ ಯುಗಾಂತರದಲ್ಲಿ ಆದರ್ಶ ರಾಜ್ಯದಲ್ಲಿಯೂ ಅವನತಿಯುಂಟಾಗಿ ಪ್ರಜಾರಾಜ್ಯ ಹಾಗೂ ಏಕಾಧಿಪತ್ಯಗಳ ದುರ್ದೆಸೆಯೊದಗಬಹುದೆಂದು ಪ್ಲೇಟೋ ಅಭಿಪ್ರಾಯ.

**ಲಾಸ್:** ಪ್ಲೇಟೋವಿನ ಆದರ್ಶರಾಜ್ಯ ಒಂದು ಕಾಲ್ಪನಿಕ ಮಾಯಪ್ರಪಂಚವಾದರೆ, ಇವನ ಆಡಳಿತನೀತಿಗಳನ್ನು ಹೇಳುವ ಈ ಗ್ರಂಥ ಅತ್ಯಂತ ಕಾರ್ಯಕಾರಿಯಾಗಿದೆ. ಇದು ಸೂಚಿಸುವ ರಾಜ್ಯವ್ಯವಸ್ಥೆಯಲ್ಲಿ ಶಿಷ್ಯರು ಕೂಡ ಸ್ವಂತ ಆಸ್ತಿಗಳನ್ನೂ ಹೆಂಡಿರು ಮಕ್ಕಳನ್ನೂ ಹೊಂದಿರಬಹುದು. ಸಮಾಜದ ಕೆಳವರ್ಗದವರಿಗೆ ಕೂಡ ಹಕ್ಕುಗಳೂ ಅಧಿಕಾರಗಳೂ ಉಂಟು; ಅವರಿಗೆ ರಾಜ್ಯ ಸೂತ್ರ ನೇರವಾಗಿ ಮಾತ್ರ ದೊರೆಯದು. ಒಳ್ಳೆಯ ಶಿಕ್ಷಣ

ಪಡೆದರೂ ಒಡೆಯರು ತತ್ತ್ವಜ್ಞಾನಿಗಳೇ ಆಗಿರಬೇಕೆಂಬ ಒತ್ತಾಯವಿಲ್ಲ. ಸ್ತ್ರೀಯರು ಯುದ್ಧ ಪಟುಗಳಾಗಬೇಕಾಗಿಲ್ಲ. ಚುನಾವಣೆಗಳನ್ನು ಹೇಗೆ ನಡೆಸಬೇಕು, ನ್ಯಾಯಾಲಯಗಳಲ್ಲಿ ಯಾವ ನಿಯಾಮಾವಳಿಗಳಿರಬೇಕು, ಹಬ್ಬಗಳ ಆಚರಣೆ, ವ್ಯಾಪಾರ, ಶಿಕ್ಷಣ, ವ್ಯವಸಾಯ–ಇತ್ಯಾದಿಗಳ ಬಗ್ಗೆ ವಿಧಿನಿಷೇಧಗಳು, ಕಡೆಗೆ ಗರ್ಭಿಣಿಯರ ಪಥ್ಯ, ಮಕ್ಕಳ ಆಟ ಮುಂತಾದ ವನ್ನು ಕೂಡ ನಿಯಮಿಸುವ ಸೂತ್ರಗಳನ್ನು ಈ ಗ್ರಂಥ ಒಳಗೊಂಡಿದೆ.

**ಫೀಡ್ರಸ್:** ಈ ಗ್ರಂಥದ ಮುಖ್ಯ ಉದ್ದೇಶವೆಂದರೆ ಸುಬದ್ಧ ವ್ಯಕ್ತಿತ್ವ ಕಲೆಗೆ ತಾರ್ಕಿಕ ಯುಕ್ತಿ ಹಾಗೂ ಮನುಷ್ಯನ ರಾಗಾವೇಶಗಳ ಶಾಸ್ತ್ರೀಯ ಅಧ್ಯಯನ ಈ ಎರಡರ ಸಮರ್ಥ ನೆಲೆಗಟ್ಟನ್ನು ಒದಗಿಸುವುದು. ಆದರೆ ಇದಕ್ಕೆ ಅಂಗವಾಗಿ ಪ್ರೇಮದ ಮನೋವೃತ್ತಿಯ ವಿವೇಚನೆ ಯನ್ನೂ ಇಲ್ಲಿ ಒದಗಿಸಿದ್ದಾನೆ. ಅಲೌಕಿಕ ಪ್ರೇಮ ಅಥವಾ ಭಾವನೆಯೋಗದ ವಿಷಯಗಳ ಶಾಶ್ವತ ಚಿದಾಕಾರಗಳೇ (ಫಾರ್ಮ್) ಎಂದಿಲ್ಲಿ ನಿರ್ಣಯಿಸಲಾಗಿದೆ. ದೇಹಧಾರಣೆ ಗೂ ಮುನ್ನ ಆತ್ಮ ಈ ಮೂಲ ತತ್ತ್ವದರ್ಶನವನ್ನು ಹೊಂದಿರುತ್ತದೆ ಎಂದು ತರ್ಕ. ಸೌಂದರ್ಯದ ಮೂಲ ಚಿದಾಕಾರವನ್ನು ಇಂದ್ರಿಯಾನುಭವ ತಟ್ಟನೆ ಅಭಿವ್ಯಕ್ತಗೊಳಿಸುವು ದುಂಟು; ಅದನ್ನೆ ನಿಷ್ಕಾರಣ ಅನುರಾಗವೆನ್ನುವರು. ಹೀಗೆ ಕಾಂತಾನುರಾಗದಿಂದ ಪರವಶನಾದ ಕಾಮಿಗೆ ಅಂತರಾತ್ಮದ ಗರಿಗಳು ಮತ್ತೆ ಬೆಳೆಯತೊಡಗಿವೆಯೆಂದೆ ಅರ್ಥೈಸಬೇಕು; ಆತ್ಮ ತನ್ನ ಪರಮಾನಂದವನ್ನು ಪಡೆಯುವ ವಿಕಾಸಪಥದಲ್ಲಿ ಪ್ರೇಮವೂ ಒಂದು ಮೊದಲ ಹೆಜ್ಜೆ.

**ಟಿಮೇಯಸ್:** ಇದರಲ್ಲಿ ಜಗತ್ತಿನ ಸೃಷ್ಟಿವಾದದ ವಿವೇಚನೆಯಿದೆ. ಭೌತಿಕ ತತ್ತ್ವದ ಮತ್ತು ಜೀವತತ್ತ್ವದ ನಿರೂಪಣೆಯೂ ಇದೆ. ಶಾಶ್ವತ ಸತ್ತೆ ಮತ್ತು ಕ್ಷಣಿಕ ಪರಿವರ್ತನೆಗಳಲ್ಲಿರುವ ವ್ಯತ್ಯಾಸವನ್ನು ತಿಳಿಸಿ, ಪೂರ್ಣ ಸಾಕ್ಷಾತ್ಕಾರಕ್ಕೆ ಶಾಶ್ವತ ಸತ್ತೆ ಮಾತ್ರ ವಿಷಯವಾಗಬಲ್ಲದೆಂದು ಇಲ್ಲಿ ಸಿದ್ಧಾಂತ ಮಾಡಲಾಗಿದೆ.

ಅಪಾಲೊಜಿ, ಯೂತಿಫ್ರೊ ಮತ್ತು ಕ್ರೀಟೋ–ಈ ಮೂರು ಗ್ರಂಥಗಳು ವಿಚಾರಣೆಯ ಕಾಲದಲ್ಲಿ, ಅದಕ್ಕೆ ಮೊದಲು ಮತ್ತು ಅನಂತರ, ಸಾಕ್ರಟೀಸ್ ಹೇಗಿದ್ದನೆಂಬುದನ್ನು ವಿವರಿಸ ಲೆಂದೇ ರಚಿತವಾಗಿವೆ. ಸಾಕ್ರಟೀಸನ ಮೂಲಭೂತ ನಿಲವು ಹಾಗೂ ಉದ್ದೇಶಗಳ ಬಗೆಗೆ ತಪ್ಪು ಅಭಿಪ್ರಾಯಗಳನ್ನು ತಪ್ಪಿಸುವುದು ಇವುಗಳ ಗುರಿ.

**ತಿಯೋಟಿಟಸ್:** ಜ್ಞಾನದ ತಾತ್ತ್ವಿಕ ಲಕ್ಷಣವೇನು ಎಂಬುದೇ ಇಲ್ಲಿಯ ಮೂಲಭೂತ ಪ್ರಶ್ನೆ. ಪ್ಲೇಟೋ ಇಲ್ಲಿ ಪ್ರತಿಪಾದಿಸುವಂತೆ (1) ಕೇವಲ ಇಂದ್ರಿಯ ಸಂವೇದನೆ ಅಥವಾ ಚಿದಾಕಾರರಹಿತ ಪ್ರತ್ಯಕ್ಷ ಜ್ಞಾನವೆನಿಸಲಾರದು (2) ತತ್ತ್ವ ಶಾಸ್ತ್ರದಲ್ಲಿ ಕೇವಲ ಸಾಪೇಕ್ಷತಾವಾದವಾಗಲೀ ಕೇವಲ ಪ್ರಾಮಾಣ್ಯವಾಗಲೀ ಅಶಕ್ಯ. ಇಲ್ಲಿ ಪ್ಲೇಟೋ ಅನಿಶ್ಚಿತ ಅಭಿಪ್ರಾಯ ಹಾಗೂ ನಿಶ್ಚಿತಜ್ಞಾನಗಳ ಅಂತರವನ್ನು ಸ್ಪಷ್ಟಪಡಿಸಲು ಯತ್ನಿಸಿದ್ದಾನೆ. ಪಾರಿಭಾಷಿಕ ವಾದ ಚಿದಾಕಾರಗಳ ಮಾತನ್ನೆತ್ತುವುದಿಲ್ಲ. ಇಂದ್ರಿಯಗೋಚರವಾಗಿರುವ ವಸ್ತುಸಂವೇದನೆಗೂ ಇಂದ್ರಿಯಾತೀತ ಧರ್ಮಗಳ –ಉದಾಹರಣೆಗೆ: ಸಂಖ್ಯೆ, ಸಾಮ್ಯ, ಅಭೇದ, ಅಸ್ತಿತ್ವ, ಒಳಿತು ಇತ್ಯಾದಿ–ಪರಿಜ್ಞಾನಕ್ಕೂ ಅಂತರವನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ. ಇಂದ್ರಿಯಕ್ರಿಯೆ ಹಾಗೂ ಜ್ಞಾನಕ್ರಿಯೆಗಳು ಬೇರೆಬೇರೆಯೇ ಸರಿ ಎನ್ನಲಾಗಿದೆ.

**ಫಿಲೆಬಸ್:** ಇದರಲ್ಲಿ ಒಳಿತಿನ ಬಗ್ಗೆ ಪರಿಪಕ್ವ ವಿವೇಚನೆಯನ್ನು ಕಾಣುತ್ತೇವೆ. ಒಳಿತು ಒಂದು ಸುಖಕರ ಸಂವೇದನೆಯೊ ಇಲ್ಲವೆ ಜ್ಞಾನಕ್ರಿಯೆಯೊ ಎಂಬುದು ಇಲ್ಲಿನ ಸಮಸ್ಯೆ. ಸಾಕ್ರಟೀಸನ ಸಹಕಾರ ಈ ಸಮಸ್ಯೆಗೆ ಒಂದು ಸೂಕ್ತ ಪರಿಹಾರವನ್ನು ತೋರಿಸುತ್ತದೆ.

**ಸಿಂಪೋಸಿಯಮ್:** ಫೀಡ್ರಸಿನಲ್ಲಿರುವಂತೆ ಇಲ್ಲಿಯೂ ಪ್ರೇಮದ ಮೀಮಾಂಸೆ ಇಂದ್ರಿಯ ಸ್ತರದಿಂದ ಆರಂಭವಾಗಿ ಪರಮಾತ್ಮನೊಡನೆ ಆತ್ಮದ ಐಕ್ಯವಾಗುವ ಸಾಕ್ಷಾತ್ಕಾರದವರೆಗೂ ಸಾಗುತ್ತದೆ. ಸಾಕ್ರಟೀಸ್ ಇಂಥ ಜೀವನ್ಮುಕ್ತನಾದ ವ್ಯಕ್ತಿಯಾದರೆ ಕೇವಲ ಪ್ರಾಪಂಚಿಕ ಸುಖಕ್ಕಾಗಿ ಆಧ್ಯಾತ್ಮಿಕ ಆನಂದವನ್ನು ಬಲಿಗೊಟ್ಟ ಆಲ್ಸಿಬಿಡೀಸ್ ಅವನಿಗೆ ತೀರ ವಿರುದ್ಧಸ್ವಭಾವ ದ ವ್ಯಕ್ತಿಯಾಗಿ ಇಲ್ಲಿ ಚಿತ್ರಿತವಾಗಿದ್ದಾರೆ.

ಪ್ಲೇಟೋ ಗ್ರೀಕರಲ್ಲೆಲ್ಲ ಉತ್ತಮ ಗದ್ಯಲೇಖಕನೆಂಬ ಕೀರ್ತಿಯನ್ನು ಗಳಿಸಿದ್ದಾನೆ. ಇವನಲ್ಲಿ ಶಬ್ದಸಂಪತ್ತು, ಸೂಕ್ಷ್ಮ ಅರ್ಥವ್ಯಕ್ತಿ, ಸಹಜಸುಂದರ ಸಂವಾದಶೈಲಿ, ಉತ್ತಮ ವ್ಯಕ್ತಿತ್ವಕಲೆ, ಪ್ರತಿಭಾಸ್ಫೂರ್ತಿ, ಸರಸತೆ, ಹಾಸ್ಯ, ವಿಡಂಬನೆ, ಗಾಂಭೀರ್ಯ, ಸಮಯೋಚಿತವಾದ ಭಾಷಾಮಾಧುರ್ಯ ಹಾಗೂ ಕಾರ್ಕಶ್ಯ, ಉಪಮಾ–ರೂಪಕಾದಿ ಅಲಂಕಾರಗಳ ಸೌಂದರ್ಯ, ಪಾತ್ರಚಿತ್ರಣ ಸಾಮರ್ಥ್ಯ–ಎಲ್ಲವೂ ಸಮರಸವಾಗಿ ಸಮ್ಮಿಳಿತ ವಾಗಿರುವುದರಿಂದ ಶೈಲಿ ನಿರುಪಮವಾಗಿದೆ. ಇವನ ಗ್ರಂಥಗಳಲ್ಲಿ ಕೆಲವು ವರ್ಣನಾತ್ಮಕ; ಕೆಲವು ಪ್ರಭಾವ ಪ್ರಚೋದಕ; ಎಲ್ಲವೂ ತತ್ತ್ವಶಾಸ್ತ್ರದ ವಿಷಯ ವಿಶ್ಲೇಷಣೆಯಲ್ಲಿ ಪ್ರಮಾಣಕ. ಈತ ನಾಟಕತಂತ್ರ ಹಾಗೂ ಭಾಷಣಕಲೆಗಳೆರಡನ್ನೂ ಸಮಯೋಚಿತವಾಗಿ ಬಳಸಿದ್ದಾನೆ. ಇವನು ಮುಖ್ಯವಾಗಿ ತರುಣ ಶ್ರೋತೃಗಳನ್ನೇ ಉದ್ದೇಶಿಸಿ ಬರೆದಿದ್ದಾನೆ; ಪರಿಣಾಮಕಾರಿ ಯಾಗಿ ತನ್ನ ಚಿಂತನೆಗಳನ್ನು ಪ್ರಕಟಿಸಿದ್ದಾನೆ. (ಕೆ.ಕೆ.;ಎಸ್.ವಿ.ಆರ್.)

**ಫರ್ಗ್ಯುಸನ್, ಜೇಮ್ಸ್:** 1808–1886 ಸ್ಕಾಟ್ಲೆಂಡಿನ ಕೈಗಾರಿಕೋದ್ಯಮಿ, ವಾಸ್ತುಶಿಲ್ಪ ಶಾಸ್ತ್ರಜ್ಞ. 1808ರ ಫೆಬ್ರವರಿ 22ರಂದು ಸ್ಕಾಟ್ಲೆಂಡಿನ ಅಯರ್‌ನಲ್ಲಿ ಜನಿಸಿದ. ತಂದೆ ವಿಲಿಯಂ ಫರ್ಗ್ಯುಸನ್ ಸೈನ್ಯದಲ್ಲಿ ಶಸ್ತ್ರವೈದ್ಯನಾಗಿದ್ದ. ಜೇಮ್ಸ್ ಫರ್ಗ್ಯುಸನ್ ಎಡಿನ್‌ಬರೊದಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದ. ಉದ್ಯಮದಲ್ಲಿ ತೊಡಗಿ ಸು.27ನೆಯ ವಯಸ್ಸಿನಲ್ಲಿ ನೀಲಿಯ ವ್ಯಾಪಾರ ಸಂಬಂಧವಾಗಿ ಕೋಲ್ಕತಕ್ಕೆ ಬಂದ. ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಇವನು ವಿಶೇಷ ಲಾಭ ಗಳಿಸಿದ. ಆ ಲಾಭದಿಂದ ಇವನು ತನ್ನ ಇಡೀ ಜೀವಮಾನವನ್ನು ಸುಖವಾಗಿ ಕಳೆಯಬಹುದಾಗಿತ್ತು. ಆದರೆ ವ್ಯಾಪಾರವನ್ನು ಮುಂದುವರಿಸಿದ. ವ್ಯವಹಾರದಲ್ಲಿ ನಷ್ಟ ಸಂಭವಿಸಿತು. 1835–42ರಲ್ಲಿ ಈತ ಭಾರತದ ಅನೇಕ ಪುರಾತನ ಸ್ಥಳಗಳನ್ನೂ ದೇವಾಲಯಗಳನ್ನೂ ಸಂದರ್ಶಿಸಿದ. ಆ ಸಂದರ್ಭದಲ್ಲಿ ಇವನಿಗೆ ಭಾರತೀಯ ವಾಸ್ತು ಹಾಗೂ ಶಿಲ್ಪದಲ್ಲಿ ವಿಶೇಷ ಆಸಕ್ತಿ ಬೆಳೆಯಿತು; ಗಾಢವಾದ ಅಧ್ಯಯನದಲ್ಲಿ ತೊಡಗಿದ. 1845ರಲ್ಲಿ ಈತ ಭಾರತವನ್ನು ಬಿಟ್ಟು ತನ್ನ ದೇಶಕ್ಕೆ ಹಿಂದಿರುಗಿ ವ್ಯವಸಾಯದಲ್ಲಿ ನಿರತನಾದ. 1856–58ರಲ್ಲಿ ಇವನು ಕ್ರಿಸ್ಟಲ್ ಪ್ಯಾಲೇಸ್ ಕಂಪನಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ. ಬಿಡುವಿನ ಸಮಯದಲ್ಲಿ ವಾಸ್ತುಶಿಲ್ಪದ ಅಧ್ಯಯನವನ್ನು ಮುಂದುವರಿಸಿ ಈ ವಿಷಯವನ್ನು ಕುರಿತು ಲೇಖನಗಳನ್ನು ಬರೆಯುತ್ತಿದ್ದ. ಈತ ರಾಯಲ್ ಏಷ್ಯಾಟಿಕ್ ಸೊಸೈಟಿಯ ಸದಸ್ಯನಾದ; ಅನಂತರ ಇವನಿಗೆ ಈ ಸಂಸ್ಥೆಯ ಉಪಾಧ್ಯಕ್ಷ ಸ್ಥಾನ ಲಭಿಸಿತು. 1857ರಲ್ಲಿ ಇಂಗ್ಲೆಂಡಿನ ರಾಜಕೀಯ ಸುರಕ್ಷಣಾ ಆಯೋಗದ ಸದಸ್ಯತ್ವವೂ ಈತನಿಗೆ ದೊರೆಯಿತು. ಇವನು ನಿರ್ಮಾಣ ವಿಭಾಗದ ಆಯುಕ್ತನಾದ. ಈ ಅಧಿಕಾರದಲ್ಲಿದ್ದಾಗ ಪ್ರಾಚೀನ ಕಟ್ಟಡಗಳ ಪೂರ್ಣ ರಕ್ಷಣೆಯ ಹೊಣೆ ನಿರ್ವಹಿಸಿದ. ಸು. 40 ವರ್ಷಗಳ ಅಧ್ಯಯನ ಹಾಗೂ ನಿರೀಕ್ಷಣೆಗಳ ಅನುಭವದಿಂದ ಪ್ರಪಂಚದ ವಾಸ್ತುಶಿಲ್ಪವನ್ನು ಕುರಿತು ಇವನು ಅನೇಕ ಪ್ರೌಢ ಗ್ರಂಥಗಳನ್ನು ರಚಿಸಿದ. ಕರ್ನಾಟಕದ ಅನೇಕ ದೇವಸ್ಥಾನಗಳನ್ನು ಕುರಿತು ಇವನು ಮಾಡಿರುವ ಅಧ್ಯಯನಗಳು ಗಮನಾರ್ಹವಾಗಿವೆ. ಇವನ ಕೆಲವು ಮುಖ್ಯ ಕೃತಿಗಳು: ಪಿಕ್ಚರಿಸ್ಕ್ ಇಲ್ಲಸ್ಟ್ರೇಷನ್ಸ್ ಆಫ್ ಏನ್ಷಿಯಂಟ್ ಆರ್ಕಿಟೆಕ್ಚರ್ ಇನ್ ಹಿಂದೂಸ್ತಾನ್; ದಿ ರಾಕ್ ಕಟ್ ಟೆಂಪಲ್ಸ್ ಆಫ್ ಇಂಡಿಯ; ಎ ಹ್ಯಾಂಡ್ ಬುಕ್ ಆಫ್ ಆರ್ಕಿಟೆಕ್ಚರ್; ಎ ಹಿಸ್ಟೊರಿ ಆಫ್ ದಿ ಮಾಡರ್ನ್ ಸ್ಟೈಲ್ಸ್ ಆಫ್ ಆರ್ಕಿಟೆಕ್ಚರ್; ಎ ಹಿಸ್ಟೊರಿ ಆಫ್ ಆರ್ಕಿಟೆಕ್ಚರ್ ಇನ್ ಆಲ್ ಕಂಟ್ರೀಸ್; ಹಿಸ್ಟೊರಿ ಆಫ್ ಇಂಡಿಯನ್ ಅಂಡ್ ಈಸ್ಟರ್ನ್ ಆರ್ಕಿಟೆಕ್ಚರ್; ಟ್ರೀ ಆಂಡ್ ಸರ್ಪೆಂಟ್ ವರ್ಷಿಪ್; ದಿ ಪಾರ್ತೆನಾನ್. ಇವನಿಗೆ ಡಿ.ಸಿ.ಎಲ್., ಎಫ್.ಆರ್.ಎಸ್., ಎಫ್.ಜಿ.ಎಸ್. ಮತ್ತು ಎಲ್.ಎಲ್.ಡಿ. ಪದವಿಗಳು ದೊರಕಿದ್ದುವು. ಇವನಿಗೆ ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಟಿಷ್ ಆರ್ಕಿಟೆಕ್ಟ್ಸ್ ಸಂಸ್ಥೆ ಸ್ವರ್ಣಪದಕ ನೀಡಿತು.ಈತ 1886ರ ಜನವರಿ 9ರಂದು ನಿಧನನಾದ. (ಎಸ್.ಜಿ.ಎ.)

**ಫಾಹಿಯಾನ್:** ಚೀನದ ಬೌದ್ಧ ಸನ್ಯಾಸಿ, ಯಾತ್ರಿಕ, ಲೇಖಕ. ಷಾನ್ಸಿಯಲ್ಲಿ ಜನಿಸಿದ. ಚಾಂಗ್ ಆನ್‌ನಲ್ಲಿ (ಆಧುನಿಕ ಷೀಯಾನ್) ಬೌದ್ಧಧರ್ಮವನ್ನು ಕುರಿತು ಅಧ್ಯಯನ ಮಾಡಿದ. ಇವನ ಹಿಂದಿನ ಹೆಸರು ಕುಂಗ್ ಎಂಬುದಾಗಿತ್ತು. ಎಳೆಯ ವಯಸ್ಸಿನಲ್ಲೇ ಈತನನ್ನು ಬೌದ್ಧಸನ್ಯಾಸಿ ಮಠದಲ್ಲಿ ಶಿಷ್ಯತ್ವಕ್ಕೆ ಸೇರಿಸಿಕೊಂಡು ಫಾಹಿಯಾನ್, ಧರ್ಮಪ್ರಕಾಶ ಎಂಬ ಆಶ್ರಮನಾಮವನ್ನು ಕೊಡಲಾಯಿತು. 399ರಲ್ಲಿ ಇವನ ಚಾಂಗ್ ಆನ್‌ನಿಂದ ಯಾತ್ರೆಗಾಗಿ ಹೊರಟಾಗ ಈತನಿಗಾಗಲೇ 65ವರ್ಷ ವಯಸ್ಸಾಗಿತ್ತು. 413ರಲ್ಲಿ ಇವನು ಚಿಯೆಂಗ್‌ಕಾಂಗ್ ತಲುಪಿದ. ಹಿಂದಿರುಗಿದ ಒಂದು ವರ್ಷದ ಬಳಿಕ ತನ್ನ ಪ್ರವಾಸಕಥನವನ್ನು ಬರೆದಿಟ್ಟ.

ಒಂಬತ್ತೋ ಹತ್ತೋ ಭಿಕ್ಷುಗಳೊಡನೆ ಹೊರಟಿದ್ದ ಈತ ಮರಳುಗಾಡುಗಳನ್ನೂ ಪಾಮಿರ್ ಪ್ರಸ್ಥಭೂಮಿಯನ್ನೂ ಹಾದು ಉತ್ತರ, ಮಧ್ಯ ಮತ್ತು ಪೂರ್ವ ಭಾರತದಲ್ಲೆಲ್ಲ ಸಂಚರಿಸಿ ದಖನ್ನಿನವರೆಗೂ ಬಂದು, ಸಿಂಹಳ ಮತ್ತು ಸುಮಾತ್ರಗಳ ಮೂಲಕ ಹಿಂದೂಸಾಗರ ಮತ್ತು ಚೀನ ಸಮುದ್ರವನ್ನು ದಾಟಿ, ಸುಮಾರು ಹದಿನೈದು ವರ್ಷಗಳ ವೈಶಿಷ್ಟ್ಯಪೂರ್ಣ ವಿದೇಶಪ್ರವಾಸವನ್ನು ಮುಗಿಸಿ ಚೀನದ ಲಾವೋಶಾನ್ ಬಂದರಿನಲ್ಲಿ ಬಂದಿಳಿದ. ತಾನು ಕೈಗೊಂಡಿದ್ದ ಕೆಲಸವನ್ನು–ಎಂದರೆ ಬೌದ್ಧಧರ್ಮದ ತವರಿನಿಂದ ಪವಿತ್ರ ಬೌದ್ಧಧರ್ಮಗ್ರಂಥ ಗಳನ್ನು, ಮುಖ್ಯವಾಗಿ ವಿನಯ ಪಿಟಕದ ನಿಜಪ್ರತಿಯನ್ನು, ತೆಗೆದುಕೊಂಡು ಬರಬೇಕೆಂಬ ಧ್ಯೇಯವನ್ನು ಸಾಧಿಸಲು ಈತ ದೃಢನಿಶ್ಚಯ ತಳೆದಿದ್ದ. ಮಧ್ಯ ರಾಜ್ಯವನ್ನು (ಉತ್ತರ ಭಾರತ) ತಲುಪಲು ಇವನಿಗೆ ಆರು ವರ್ಷಗಳು ಹಿಡಿದುವು. ಅಲ್ಲೇ ಇವನು 6ವರ್ಷಗಳನ್ನು ಕಳೆದ. ಚಿಂಗ್‌ಚೋವನ್ನು ತಲುಪುವುದಕ್ಕೆ ಮೊದಲು ಮರುಪ್ರಯಾಣದಲ್ಲಿ ಮೂರು ವರ್ಷಗಳನ್ನು ಕಳೆದ. ಪಶ್ಚಿಮದ ಮರುಭೂಮಿಯಿಂದ ಹಿಡಿದು ಭಾರತದ ಭೂಭಾಗದವರೆಗಿನ ಸುಮಾರು ಮೂವತ್ತು ರಾಷ್ಟ್ರಗಳಲ್ಲಿ ಈತ ಸಂಚರಿಸಿದ. ಪ್ರವಾಸಕಾಲದಲ್ಲಿ ಆದ ಭೇಟಿಮಾಡಿದ ಭಿಕ್ಷುಗಳ ಸದಾಚಾರ ಮತ್ತು ಧಾರ್ಮಿಕ ಬೋಧನೆಗಳನ್ನು ಕುರಿತ ವಿಚಾರಗಳನ್ನು ಚೀನದಲ್ಲಿದ್ದ ಭಿಕ್ಷುಗಳಿಗೆ ತಿಳಿಸುವುದಕ್ಕಾಗಿ ಅಪಾರ ಕಷ್ಟಸಂಕಟಗಳನ್ನೂ ಅಪಾಯಗಳನ್ನೂ ಎದುರಿಸಿದ. ಶ್ರದ್ಧೆಯುಳ್ಳವರು ತನ್ನ ಅನುಭವಗಳನ್ನು ಹಂಚಿಕೊಳ್ಳಲೆಂಬ ಉದ್ದೇಶದಿಂದ ಬಿದಿರು ಮತ್ತು ರೇಷ್ಮೆಯ ವಸ್ತ್ರದ ಮೇಲೆ ತನ್ನ ಪ್ರವಾಸದ ರೂಪರೇಷೆಗಳನ್ನು ಚಿತ್ರಿಸಿದ್ದಾನೆ. ಹೀಗೆಂದು ಈತ ತನ್ನ ದಾಖಲೆಯ ಉಪಸಂಹಾರದಲ್ಲಿ ನುಡಿದಿದ್ದಾನೆ. ಚೀನಕ್ಕೆ ಹಿಂದಿರುಗಿದ ಮೇಲೆ ಬೌದ್ಧ ಅನರ್ಘ್ಯ ಕೃತಿಗಳನ್ನು ಶೀಘ್ರವಾಗಿ ಭಾಷಾಂತರಿಸಬೇಕೆಂಬ ಧ್ಯೇಯ ಇವನಿಗೆ ಎಷ್ಟು ಪ್ರಬಲವಾಗಿತ್ತೆಂದರೆ, ಈತ ಮೊದಲು ಯೋಚಿಸಿದ್ದಂತೆ ಚಾಂಗ್ ಆನಿನ ವಿಹಾರಕ್ಕೆ ಹೋಗಿ ಸೇರಿಕೊಳ್ಳುವುದಕ್ಕೆ ಬದಲಾಗಿ ಚಿಯೆಂಗ್‌ಕಾಂಗ್‌ಗೆ (ನ್ಯಾನ್‌ಕಿಂಗ್) ಹೋಗಿ, ಬುದ್ಧಭದ್ರನೆಂಬ ಭಾರತೀಯ ಭಿಕ್ಷುವೊಬ್ಬನ ನೆರವಿನಿಂದ ಆ ಸೂತ್ರಗಳನ್ನು ಭಾಷಾಂತರಿಸಿದ.

ಗುಪ್ತವಂಶದ ಸಮ್ರಾಟ ವಿಕ್ರಮಾದಿತ್ಯನ ಆಡಳಿತದ ಅವಧಿಯಲ್ಲಿ ಫಾಹಿಯಾನ್ ಭಾರತಕ್ಕೆ ಬಂದಿದ್ದ. ಭಾರತೀಯ ಇತಿಹಾಸದ ಆ ಸಮೃದ್ಧ ಅವಧಿಯ ಐತಿಹಾಸಿಕ ಸಾಕ್ಷ್ಯಗಳಲ್ಲಿ ಅತ್ಯಂತ ಮಹತ್ತ್ವಪೂರ್ಣವಾದ್ದೆಂದರೆ ಬಹುಶಃ ಫಾಹಿಯಾನನ ದಾಖಲೆಯೇ. ಅಶೋಕ ಶಾಸನದ ಅದ್ಭುತವಾದ ಏಕಶಿಲಾ ಸ್ತಂಭಗಳು, ಬೌದ್ಧಸ್ತೂಪಗಳು, ದೇವಾಲಯಗಳು, ವಿಹಾರಗಳು ಮತ್ತಿತರ ಸ್ಮಾರಕಗಳು–ಇವುಗಳ ಬಗ್ಗೆ ಈತನ ವಿವರಣೆ ಈ ಅವಧಿಯನ್ನು ಕುರಿತ ಸಂಶೋಧನೆಗಳಿಗೆ ಅತ್ಯಂತ ಉಪಯುಕ್ತ ಸಾಮಾಗ್ರಿಯನ್ನು ಒದಗಿಸುತ್ತದೆ. ಗೋಬಿ ಮರುಭೂಮಿಯ ಬಗ್ಗೆಯೂ ಈತ ಬರೆದಿದ್ದಾನೆ. ಇವನು ಖೋತಾನ್ ಎಂಬಲ್ಲಿಗೆ ಬಂದಾಗ ರಾಜ–ಅತಿಥಿಯಂತೆ ಈತನನ್ನು ಗೋಮತೀ ವಿಹಾರದಲ್ಲಿ ಇಳಿಸಲಾಯಿತು. 3,000 ಭಿಕ್ಷುಗಳು ಒಟ್ಟಾಗಿ ವಾಸಮಾಡುತ್ತಿದ್ದಾರೆಂದೂ ಭಿಕ್ಷುಗಳ ಜೀವನ ವಿವರಗಳನ್ನು ಸಮಗ್ರವಾಗಿ ನೀಡಿದ್ದಾನೆ. ಆದರೆ ಫಾಹಿಯಾನ್ ವರ್ಣಿಸಿರುವ ಖೋತಾನ್ ಇಂದು ಉಳಿದಿಲ್ಲ.

ಈತ ಭಾರತಕ್ಕೆ ಬರುವ ಹಾದಿಯಲ್ಲಿ ಖಾಲ್ಚಾದಲ್ಲಿ ಪಂಚಪರಿಷತ್ತನ್ನು ನೋಡಿದ. ಇದು ಐದು ವರ್ಷಗಳಿಗೊಮ್ಮೆ ನಡೆಯುತ್ತಿದ್ದ ಮೇಳ. ಫಾಹಿಯಾನ್ ಹಗ್ಗದ ಸೇತುವೆಯ ಮೂಲಕ ಸಿಂಧೂನದಿಯನ್ನು ದಾಟಿ–ಉದ್ಯಾನ, ಗಾಂಧಾರ ಮತ್ತು ತಕ್ಷಶಿಲೆಗಳಿಗೆ ಭೇಟಿಕೊಟ್ಟು ಅಲ್ಲಿಂದ ಮುಂದೆ ಪೆಷಾವರಕ್ಕೆ ತೆರಳಿ ಅಲ್ಲಿ ಕನಿಷ್ಕನ ಮಹಾಸ್ತೂಪವನ್ನು ನೋಡಿದ. ಯಾತ್ರಿಕರು ಅದುವರೆಗೆ ನೋಡಿದ ಸ್ತೂಪ ಮತ್ತು ದೇವಾಲಯಗಳಲ್ಲಿ ಯಾವುದೂ ವೈಭವದಲ್ಲಾಗಲಿ, ಗಾಂಭೀರ್ಯದಲ್ಲಾಗಲೀ ಇದಕ್ಕೆ ಹೆಗಲೆಣೆಯಾಗಿ ನಿಲ್ಲಲಾರದು ಎಂದು ಇದರ ಬಗ್ಗೆ ಈತ ಹೇಳಿದ್ದಾನೆ. ಇವನು ನಗರಹರಕ್ಕೂ (ಇಂದಿನ ಹದ್ದಾ) ಭೇಟಿ ಕೊಟ್ಟು, ಅಲ್ಲಿಯ ದೇವಾಯತನವೊಂದರಲ್ಲಿ ಬುದ್ಧನ ಅವಶೇಷಗಳನ್ನು ನೋಡಿದ್ದನ್ನು ಬರೆದಿದ್ದಾನೆ. ಪಂಜಾಬಿನ ಮೂಲಕ ಪೂರ್ವದಿಕ್ಕಿನತ್ತ ಪ್ರಯಾಣಮಾಡಿ ಮಥುರವನ್ನು ತಲುಪಿದ. ಇದು ಗುಪ್ತ ಸಾಮ್ರಾಜ್ಯದ ಹೃದಯಸ್ಥಾನದಲ್ಲಿದ್ದು ಪ್ರವರ್ಧಮಾನವಾದ ಬೌದ್ಧಕೇಂದ್ರವಾಗಿತ್ತು. ಈ ಸ್ಥಳದ ಬಗ್ಗೆ ವಿವರಗಳನ್ನು ನೀಡಿದ್ದಾನೆ. ಅಪರಾಧದ ಉಗ್ರತೆಗನುಗುಣವಾಗಿ ಅಪರಾಧಿಗಳಿಗೆ ದಂಡವನ್ನು ವಿಧಿಸಲಾಗುತ್ತದೆ. ರಾಜ್ಯಾದ್ಯಂತ ಯಾರೂ ಯಾವುದೇ ಜೀವಿಯನ್ನೂ ಕೊಲ್ಲುವುದಿಲ್ಲ. ಯಾರೂ ಮದ್ಯಪಾನ ಮಾಡುವುದಿಲ್ಲ. ಇಲ್ಲಿಯ ಜನರು ಶ್ರೀಮಂತರೂ ಪ್ರವರ್ಧಮಾನರೂ ಆಗಿದ್ದಾರೆ. ಹೃದಯದ ಔದಾರ್ಯವನ್ನು ತೋರುವಲ್ಲಿ, ನೆರೆಹೊರೆಯವರ ಬಗ್ಗೆ ಕರ್ತವ್ಯದ ನಿರ್ವಹಣೆಯಲ್ಲಿ ಒಬ್ಬರು ಮತ್ತೊಬ್ಬರ ಆದರ್ಶವನ್ನು ಅನುಕರಿಸುತ್ತಾರೆ ಎಂದು ಹೇಳಿದ್ದಾನೆ. ಪಾಳಿ ಮತ್ತು ಸಂಸ್ಕೃತವನ್ನು ಬರೆಯಲು, ಮಾತನಾಡಲು ಹಾಗೂ ಧರ್ಮ ಗ್ರಂಥಗಳ ಪ್ರತಿಗಳನ್ನು ತಯಾರಿಸಿಕೊಳ್ಳಲು ಮೂರು ವರ್ಷಗಳನ್ನು ವಿನಿಯೋಗಿಸಿದ ಮೇಲೆ, ಈತ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಮಾಡುತ್ತ ತಾಮ್ಲುಕ್ಕನ್ನು (ಇಂದಿನ ಪಶ್ಚಿಮ ಬಂಗಾಲ) ತಲುಪಿದ. ಅಲ್ಲಿಂದ ಬೃಹತ್ ವ್ಯಾಪಾರಿ ಹಡಗೊಂದರಲ್ಲಿ ಸಿಂಹಳಕ್ಕೆ ಪ್ರಯಾಣಮಾಡಿದ. ಸಿಂಹಳದಲ್ಲಿ ಎರಡು ವರ್ಷಗಳನ್ನು ಕಳೆದು ಜಾವದ ಮೂಲಕ ಸ್ವದೇಶಕ್ಕೆ ಹಿಂದಿರುಗಿದ. (ಬಿ.ಟಿ.)

**ಫರ್ಮಾನ:** ಹರಿಯಾಣ ರಾಜ್ಯದ ರೋಹತಕ್ ಜಿಲ್ಲೆಯಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಸು.20 ಹೆಕ್ಟೇರ್ ವಿಸ್ತೀರ್ಣದ ಈ ನೆಲೆಯಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಆಶ್ರಯದಲ್ಲಿ ಜಪಾನಿನ ಕ್ಯೋಟೊ ರಿಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ಹ್ಯುಮಾನಿಟಿ ಅಂಡ್ ನೇಚರ್, ಪುಣೆಯ ಡೆಕ್ಕನ್ ಕಾಲೇಜು ಹಾಗೂ ರೋಹತಕ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾಲಯ 2006–2009ರ ನಡುವೆ ನಡೆಸಿದ ಉತ್ಖನನದಲ್ಲಿ ವಸತಿ ಅವಶೇಷಗಳು

ನಗರ ವಿನ್ಯಾಸ

ಹಾಗೂ ಸಮಾಧಿಗಳು ಕಂಡುಬಂದಿವೆ. ವಸತಿ ಅವಶೇಷಗಳು ಆದಿ ಹರಪ್ಪ (ಹಾಕ್ರ ಸಂಸ್ಕೃತಿ: ಪ್ರ.ಶ.ಪೂ.ಸು.3500–2600) ಹಾಗೂ ಪ್ರೌಢ ಹರಪ್ಪ (ಪ್ರ.ಶ.ಪೂ.ಸು.2500–2000) ಕಾಲದವಾದರೆ ಸಮಾಧಿಗಳು ಪ್ರೌಢ ಹರಪ್ಪ ಹಂತದವು. ವಸತಿಗುಂಡಿಗಳು ಹಾಗೂ ಕಡುಗಂದುಬಣ್ಣದ ಮಣ್ಪಾತ್ರೆಗಳು ಆದಿ ಹಂತದ ಪ್ರಮುಖ ಅವಶೇಷಗಳಾದರೆ ಚದುರಂಗ ವಿನ್ಯಾಸದ ನಗರಾವಶೇಷಗಳು ಪ್ರೌಢ ಹಂತದ ವೈಶಿಷ್ಟ್ಯ. ವಸತಿಯ ವಾಯವ್ಯಕ್ಕೆ 900ಮೀ ದೂರದಲ್ಲಿ ಸ್ಮಶಾನ ನೆಲೆಯಿದ್ದು ಇಲ್ಲಿ 70 ಸಮಾಧಿಗಳಲ್ಲಿ ಉತ್ಖನನ ನಡೆಯಿತು. ಈ ಸಂಖ್ಯೆಯಲ್ಲಿ ಪ್ರೌಢ ಹರಪ್ಪ ಕಾಲದ ಸಮಾಧಿಗಳು ಭಾರತದಲ್ಲಿ ಕಂಡುಬಂದಿರುವುದು ಇದೇ ಮೊದಲು. ಪೂರ್ಣ ಅಥವಾ ಪ್ರಾಥಮಿಕ, ಅಪೂರ್ಣ ಹಾಗೂ ಸಾಂಕೇತಿಕ–ಈ ಮೂರು ಪ್ರಕಾರದ ಸಮಾಧಿಗಳು ಇಲ್ಲಿವೆ. ಎಲ್ಲವೂ ಆಯತಾಕಾರದ ಶವಕುಣಿಗಳು. ಪೂರ್ಣ ಸಮಾಧಿಗಳಲ್ಲಿ ಶವವನ್ನು ಉತ್ತರ–ದಕ್ಷಿಣಾಭಿಮುಖವಾಗಿ ಹೂಳಲಾಗಿದ್ದರೆ ಅಪೂರ್ಣ ಸಮಾಧಿಗಳಲ್ಲಿ ಕೆಲವೊಂದು ಆಯ್ದ ಮೂಳೆಗಳನ್ನು ಇಡಲಾಗಿದೆ. ಸಾಂಕೇತಿಕ ಸಮಾಧಿಗಳಲ್ಲಿ ಯಾವ ಅವಶೇಷಗಳೂ ಇಲ್ಲ. ಎಲ್ಲ ಪ್ರಕಾರದ ಸಮಾಧಿಗಳಲ್ಲಿಯೂ ಪ್ರೌಢ ಹರಪ್ಪ ಮಾದರಿಯ ಮಣ್ಪಾತ್ರೆಗಳು, ಜಾಸ್ಪರ್–ಕಾರ್ನೇಲಿಯನ್ ಮಣಿಗಳು ಹಾಗೂ ತಾಮ್ರ–ಶಂಖದ ಬಳೆಗಳಿದ್ದವು. ಸಮಾಧಿಯಲ್ಲಿ ದೊರೆತಿರುವ ಮಣ್ಪಾತ್ರೆ ಮುಂತಾದ ಅವಶೇಷಗಳು ಈ ಪ್ರದೇಶದ ಇತರ ಹರಪ್ಪ ನಗರಗಳ ಅವಶೇಷಗಳಿಗಿಂತ ಭಿನ್ನವಾಗಿವೆ. ಈ ಶವಕಣಿಗಳಲ್ಲಿಯ ಅಸ್ಥಿಅವಶೇಷಗಳ ಡಿಎನ್‌ಎ ಪರೀಕ್ಷೆಯಿಂದ ಈ ಜನಸಮುದಾಯದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುವ ಸಾಧ್ಯತೆಯಿದೆ. (ವಿ.ಎಸ್.ಎಚ್.)

**ಫಿರ್ದೂಸಿ:** ಸು.940–1020. ಪರ್ಷಿಯನ್ ಭಾಷೆಯ ಮೊದಲ ಸುಪ್ರಸಿದ್ಧ ಕವಿ. ಷಹನಾಮಾ ಕಾವ್ಯದ ಕರ್ತೃ. ಅಬುಲ್ ಕಾಸಿಮ್ ಬಿನ್ ಮನ್ಸೂರ್ ಎಂಬುದು ಮೂಲ ಹೆಸರು. ಫಿರ್ದೂಸಿ ಎಂಬುದು ಕಾವ್ಯನಾಮ. ಪರ್ಷಿಯನ್ ಭಾಷೆಯಲ್ಲಿ ಈ ಪದಕ್ಕೆ ಸ್ವರ್ಗ ಎಂಬ ಅರ್ಥವಿದೆ. ಟೆಹರಾನಿನಿಂದ ಸು.960 ಕಿಮೀ ದೂರದಲ್ಲಿರುವ ಖೋರಾಸಾನ್‌ನ ಪ್ರಾಚೀನ ಪಟ್ಟಣವಾದ ತೂಸ್ ಸಮೀಪದ ಬಾಜ್ ಎಂಬ ಸ್ಥಳದಲ್ಲಿ ಜನಿಸಿದ. ಷಹನಾಮಾದಲ್ಲಿ ಈತನ ಕೆಲವು ಜೀವನ ವಿವರಗಳು ದೊರೆಯುತ್ತವೆ. ಅದರಂತೆ ಕವಿಗೆ ಮಸೂದ್ ಎಂಬ ಒಬ್ಬ ತಮ್ಮನಿದ್ದನೆಂದೂ ಇವನ ವೈವಾಹಿಕ ಜೀವನ ಬಹುಬೇಗ ಆರಂಭವಾಯಿತೆಂದೂ ಇವನಿಗೆ ಇಬ್ಬರು ಮಕ್ಕಳಿದ್ದರೆಂದೂ ತಿಳಿದುಬರುತ್ತದೆ. ಹೆಂಡತಿ ಮತ್ತು ಮಕ್ಕಳ ಹೆಸರುಗಳನ್ನು ಕವಿ ಎಲ್ಲೂ ಹೇಳಿಕೊಂಡಿಲ್ಲ. ಈತ ಘಜ್ನಿ ಮಹಮದನ (ಸು.998–1030) ಆಸ್ಥಾನ ಕವಿಯಾಗಿ ಮನ್ನಣೆ ಪಡೆದ. ಸುಲ್ತಾನ ಮಹಮದ್‌ನಿಗೂ ಇವನಿಗೂ ಗಾಢಸ್ನೇಹವಿತ್ತೆಂದೂ ಈ ಸ್ನೇಹದ ಗುರುತಾಗಿ ಕವಿ ಷಹನಾಮಾ ಕಾವ್ಯವನ್ನು ಆಸ್ಥಾನ ಕವಿಯಾಗುವುದಕ್ಕೆ ಮುನ್ನವೇ ರಚಿಸಲಾರಂಭಿಸಿದ್ದನೆ ಅಥವಾ ಆಸ್ಥಾನಕವಿಯಾದ ಅನಂತರ ರಚನೆಗೆ ಕೈ ಹಾಕಿದ್ದನೆ ಎಂಬ ವಿಷಯದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಘಜ್ನಿ ಮಹಮದನು ಗೆಳೆಯ ಫಿರ್ದೂಸಿ ರಚಿಸುವ ಕಾವ್ಯದ ಪ್ರತಿ ಸಾಲಿಗೆ ಒಂದು ಚಿನ್ನದನಾಣ್ಯ (ದಿನಾರ್) ಕೊಡುತ್ತೇನೆಂದು ಹೇಳಿ ಕೊನೆಯಲ್ಲಿ ಬೆಳ್ಳಿಯ ನಾಣ್ಯಗಳನ್ನು (ದಿರಾಮ್ಸ್) ನೀಡಲು ಬಂದನೆಂದೂ ಕವಿ ಅದನ್ನು ನಿರಾಕರಿಸಿ ರಾಜನ ಆಸ್ಥಾನ ಬಿಟ್ಟು ತನ್ನ ಹುಟ್ಟೂರಿಗೆ ಹಿಂದಿರುಗಿದನೆಂದೂ ಮಹಮದ್ ತನ್ನ ತಪ್ಪನ್ನು ಅರಿತು ಚಿನ್ನದ ನಾಣ್ಯಗಳನ್ನು ಒಂಟೆಗಳ ಮೇಲೆ ಹೇರಿ ಕಳುಹಿಸಿಕೊಟ್ಟನೆಂತಲೂ ಊರಿನ ಒಂದು ಕಡೆಯಿಂದ ಒಂಟೆಗಳು ಬರುತ್ತಿದ್ದಂತೆ ಮತ್ತೊಂದೆಡೆಯಿಂದ ಕವಿಯ ಮೃತದೇಹವನ್ನು ಹೊರಕ್ಕೆ ತರುತ್ತಿದ್ದರಂತೆ; ಎಂಬ ಒಂದು ಹೇಳಿಕೆಯೂ ಈ ಕವಿಜೀವನದ ಚರಿತ್ರೆಯಲ್ಲಿ ಸೇರಿದೆ. (ಎಲ್.ಆರ್.ಕೆ.)

ಪ್ರಪಂಚದ ಮಹಾಕಾವ್ಯಗಳಲ್ಲಿ ಒಂದಾದ ಷಹನಾಮಾ ಒಂದು ಬೃಹತ್ ವೀರ ಕಾವ್ಯ. ದ್ವಿಪದಿ ಪದ್ಯಗಳನ್ನೊಳಗೊಂಡಿರುವ ಈ ಕಾವ್ಯ ಪರ್ಷಿಯನ್ ಭಾಷೆಯಲ್ಲಿಯೇ ಬಹು ಸರಳ ಹಾಗೂ ಜನಪ್ರಿಯ ಛಂದಸ್ಸೆಂದು ಪ್ರಸಿದ್ಧವಾಗಿರುವ ಬಹರ್–ಇ–ತಾ ಖರಬ್ ಛಂದಸ್ಸಿನಲ್ಲಿ (ಮಸ್ನವಿ) ರಚಿತವಾಗಿದೆ. ಇದರ ರಚನೆ ಸು. 980ರಲ್ಲಿ ಆರಂಭವಾಗಿ ಸು.1010ರಲ್ಲಿ ಮುಗಿಯಿತು. ಇರಾನಿನ ರಾಷ್ಟ್ರೀಯ ಕಾವ್ಯವೆಂದು ಪರಿಗಣಿತವಾಗಿದೆ. ಇವನ್ನು 80 ಅಧ್ಯಾಯಗಳಾಗಿ ವಿಭಾಗಿಸಲಾಗಿದ್ದು ಈ ಅಧ್ಯಾಯಗಳನ್ನು ದಾಸ್ತಾನ್ ಎಂದು ಕರೆಯಲಾಗಿದೆ. ಷಹನಾಮಾ ಎಂದರೆ ಪರ್ಷಿಯನ್ ಭಾಷೆಯಲ್ಲಿ ರಾಜರ ಪುಸ್ತಕ ಎಂದರ್ಥ. ಸೃಷ್ಟಿಯ ಆದಿಯಿಂದ ಸಸ್ಸಾನಿಯನ್ ಸಾಮ್ರಾಜ್ಯವನ್ನು ಸು.637ರಲ್ಲಿ ಅರಬರು ವಶಪಡಿಸಿಕೊಳ್ಳುವವರೆಗೆ ಈ ಕಾವ್ಯದ ವಿಸ್ತಾರವಿದೆ.

ಇರಾನ್ ಸಾಮ್ರಾಜ್ಯದ ವೈಭವ ಹಾಗೂ ಪತನವನ್ನು ಈ ಕಾವ್ಯ ಸವಿಸ್ತಾರವಾಗಿ ವರ್ಣಿಸುತ್ತದೆ. ಕಲ್ಪನೆ, ಪುರಾಣ, ಚರಿತ್ರೆ–ಈ ಮೂರೂ ಕಾವ್ಯದಲ್ಲಿ ಒಂದಾಗಿ ಬೆಸೆದುಕೊಂಡಿವೆ. ಇತಿಹಾಸಕ್ಕಿಂತ ಪುರಾಣದ ಅಂಶವೇ ಕೃತಿಯಲ್ಲಿ ಮೇಲುಗೈಯಾಗಿದೆ. ಕಾವ್ಯದುದ್ದಕ್ಕೂ ಕವಿ ಪ್ರತಿಭೆ ಮಿಂಚಿದೆ. ಅನೇಕ ಸುಂದರ ಆಖ್ಯಾಯಿಕೆಗಳು ಕಾವ್ಯ ರಸಿಕರ ಮನಸ್ಸನ್ನು ಸೂರೆಗೊಳ್ಳುತ್ತವೆ. ನಿರೂಪಣೆ, ವರ್ಣನೆ, ವ್ಯಕ್ತಿಚಿತ್ರಣದಲ್ಲಿ ಕವಿ ಪ್ರಥಮದರ್ಜೆಯ ಕಲೆಗಾರಿಕೆಯನ್ನು ಮೆರೆದಿದ್ದಾನೆ. ಫರೀದುನ್ ಕಥೆಗಳು, ಜಾಲ್ ಮತ್ತು ರುಬ್ಬಾ, ರುಸ್ತುಮ್ ಮತ್ತು ಸೊಹ್ರಾಬ್‌ಸಿಯೊವುಶ್ ಇಸ್ತಂದಿಯಾರ್, ಬೆಸುನ್, ರುಸ್ತುಮನ ರಕ್ಷಾ ಕುದುರೆ, ರುಸ್ತುಮನ ತಾಯಿ ರುದಾಬಿ, ರುಸ್ತುಮನ ಹೆಂಡತಿ ತಹಮೀನ, ತುರಾನಿಯನ್ ಮಗಳು ಫಿರಂಗಿಸ್ –ಈ ಎಲ್ಲ ಪಾತ್ರಗಳೂ ಓದುಗರ ಮನಸ್ಸನ್ನು ಸಂಪೂರ್ಣವಾಗಿ ಸೆರೆಹಿಡಿಯುವಂತೆ ಚಿತ್ರಿತವಾಗಿವೆ.

ಷಹನಾಮಾ ಇರಾನ್ ಇತಿಹಾಸವನ್ನು ಅನುಕ್ರಮವಾಗಿ ಚಿತ್ರಿಸುವ ಉದ್ದೇಶದಿಂದ ಹೊರಟರೂ ಇತಿಹಾಸ ಒಂದು ನೆಪಮಾತ್ರ, ಸಾಹಿತ್ಯದ ಸೊಗಸೇ ಇಲ್ಲಿ ಪ್ರಧಾನ. ಫಿರ್ದೂಸಿಯ ಸಮಕಾಲೀನನಾಗಿದ್ದು ಅಕಾಲಮೃತ್ಯುವಿಗೆ ತುತ್ತಾದ ಪರ್ಷಿಯನ್ ಭಾಷೆಯ ಮೊದಲ ಕವಿ. ದಕೀಕೀ ಕವಿಯ (ಸು.930–77) ಅಪೂರ್ಣ ಕಾವ್ಯ ಷಹನಾಮಾಕ್ಕೆ ಮಾದರಿ. ದಕೀಕೀ ಇರಾನ್ ಚರಿತ್ರೆಯನ್ನೇ ಕುರಿತು ರಚಿಸಿದ ಸು.1,000 ಪದ್ಯಗಳನ್ನು ಫಿರ್ದೂಸಿ ತನ್ನ ಕಾವ್ಯದಲ್ಲಿ ಸಂಪೂರ್ಣವಾಗಿ ಬಳಸಿಕೊಂಡಿದ್ದಾನೆ. ಪರ್ಷಿಯದ ಜನಪದ ಸಾಹಿತ್ಯ ಕೂಡ ಷಹನಾಮಾ ಕಾವ್ಯಕ್ಕೆ ಜೀವತುಂಬುವಲ್ಲಿ ಕವಿಗೆ ನೆರವಾಗಿದೆ. ಕಾವ್ಯದಲ್ಲಿ ಬರುವ

ಯುದ್ಧ ವರ್ಣನೆಗಳು, ಯುದ್ಧ ಕಲೆಗೆ ಸಂಬಂಧಪಟ್ಟ ವಿವರಗಳು ಸಮೃದ್ಧವಾಗಿದ್ದು ಕವಿಯ ಲೋಕಾನುಭವದ ದಟ್ಟಜ್ಞಾನಕ್ಕೆ ಪ್ರತೀಕವಾಗಿವೆ. ಕೋಟೆಕಾಳಗ, ಕತ್ತಿವರಸೆ, ಬಿಲ್ಲುವಿದ್ಯೆ, ಕುದುರೆಸವಾರಿ–ಈ ಬಗೆಯ ಯುದ್ಧ ಕೌಶಲದ ವರ್ಣನೆಗಳು ಕಣ್ಣಿಗೆ ಕಟ್ಟುವಂತಿದ್ದು ಗತಕಾಲವನ್ನು ಮೂರ್ತಗೊಳಿಸುತ್ತವೆ. ಇದರಿಂದ ಕವಿಗೆ ಯುದ್ಧ ಕಲೆಯಲ್ಲಿ ಸಾಕಷ್ಟು ಪ್ರತ್ಯಕ್ಷಾನುಭವ ಇತ್ತೆಂದು ಊಹಿಸಬಹುದಾಗಿದೆ.

ಪರ್ಷಿಯನ್ ಸಾಹಿತ್ಯದಲ್ಲಿ ಷಹನಾಮಾಕ್ಕೆ ಉನ್ನತ ಸ್ಥಾನವಿದೆ. ಪ್ರಪಂಚದ ನಾನಾ ಭಾಷೆಗಳಿಗೆ ಈ ಕಾವ್ಯ ಪದ್ಯ ಹಾಗೂ ಗದ್ಯ ರೂಪದಲ್ಲಿ ಅನುವಾದವಾಗಿದೆ. 19ನೆಯ ಶತಮಾನದವರೆಗೆ ಹಸ್ತಪ್ರತಿ ರೂಪದಲ್ಲೇ ಇದ್ದ ಈ ಕಾವ್ಯವನ್ನು ಫ್ರಾನ್ಸ್ ಸರ್ಕಾರ ಫ್ರೆಂಚ್ ಭಾಷೆಗೆ ಭಾಷಾಂತರ ಮಾಡಿಸಿ 6 ಸಂಪುಟಗಳಲ್ಲಿ ಪ್ರಕಟಿಸಿತು (1831–68). ಅನಂತರ ಇಂಗ್ಲಿಷ್, ಜರ್ಮನ್ ಮುಂತಾದ ಭಾಷೆಗಳಲ್ಲಿ ಅದರ ಅನುವಾದ ಪ್ರಕಟವಾಯಿತು. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಬಹುಬಣ್ಣಗಳ ಚಿತ್ರಗಳೊಡನೆ ಅನೇಕ ಉಪಯುಕ್ತ ಪಾಂಡಿತ್ಯ ಪರಿಕರಗಳನ್ನು ಸೇರಿಸಿ ಎರಡು ಸಂಪುಟಗಳಲ್ಲಿ ಷಹನಾಮಾವನ್ನು ಹೊರತಂದಿದೆ (1982). ಪರ್ಷಿಯನ್ ಸಾಹಿತ್ಯದ ಮೇಲಂತೂ ಇದರ ಪ್ರಭಾವ ಅಪಾರ. ಷಹನಾಮಾದ ಅನೇಕ ಆಖ್ಯಾಯಿಕೆಗಳು ಕಾವ್ಯ, ನಾಟಕ ಇತ್ಯಾದಿ ಸ್ವತಂತ್ರ ರಚನೆಗಳಾಗಿ ಪುನರ್ ಸೃಷ್ಟಿಗೊಂಡಿವೆ. ಕುವೆಂಪು ಅವರು ತಮ್ಮ ಶ್ರೀರಾಮಾಯಣ ದರ್ಶನಂ ಮಹಾಕೃತಿಯಲ್ಲಿ ಫಿರ್ದೂಸಿಯನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ವಿ. ಸೀತಾರಾಮಯ್ಯನವರು ರುಸ್ತುಮ್ ಮತ್ತು ಸೊಹ್ರಾಬ್ ಪ್ರಸಂಗವನ್ನೆತ್ತಿಕೊಂಡು ಒಂದು ಅತ್ಯುತ್ತಮ ನಾಟಕವನ್ನು ಕನ್ನಡದಲ್ಲಿ ರಚಿಸಿದ್ದಾರೆ. ಮ್ಯಾಥ್ಯೂ ಆರ್ನಾಲ್ಡ್ ಇಂಗ್ಲಿಷಿನಲ್ಲಿ ರಚಿಸಿರುವ ಸೊಹ್ರಾಬ್ ಮತ್ತು ರುಸ್ತುಮ್ ಎಂಬ ಕವನ ಸುಪ್ರಸಿದ್ಧವಾಗಿದೆ.

ಫಿರ್ದೂಸಿಯೇ ರಚಿಸಿದನೆನ್ನಲಾದ ಯೊಸುಫ್–ಒ–ಜಾಲಿಖಾ ಮಸ್ನವಿ ಛಂದಸ್ಸಿನಲ್ಲಿ ರುವ ಒಂದು ಪ್ರಣಯಕಾವ್ಯ, ಹೋಮರನ ಇಲಿಯಡ್ ಕಾವ್ಯದಷ್ಟು ದೀರ್ಘವಾಗಿದೆ. ಕುರಾನಿನಲ್ಲಿಯ ಒಂದು ಕಥೆ ಈ ಕೃತಿಗೆ ಆಕರ. ಸುಲ್ತಾನ ಮಹಮದನ ಆಶ್ರಯ ತೊರೆದು ಫಿರ್ದೂಸಿ ಇರಾಕ್ ರಾಜನೊಬ್ಬನ ಆಶ್ರಯದಲ್ಲಿದ್ದ ಅವಧಿಯಲ್ಲಿ ಈ ಕಾವ್ಯ ರಚಿತವಾಯಿತೆಂದು ತಿಳಿದುಬರುತ್ತದೆ. ಆದರೆ ಯೊಸಫ್–ಒ–ಜಾಲಿಖಾ ಫಿರ್ದೂಸಿಯೇ ರಚಿಸಿದನೆಂಬ ಬಗ್ಗೆ ನಿಖರವಾದ ಮಾಹಿತಿಯಿಲ್ಲ. ಸುಲ್ತಾನ ಮಹಮದನನ್ನು ಮೂದಲಿಸಿ ರಚಿತವಾಗಿರುವ ಇವನದೇ ಎನ್ನಲಾದ, ಈ ಕುರಿತು ಭಿನ್ನಾಭಿಪ್ರಾಯಗಳಿರುವ ವಿಡಂಬನ ಕಾವ್ಯ ನಿಜಾಮಿ. ಈ ವಿಡಂಬನ ಕಾವ್ಯದ ನೂರು ದ್ವಿಪದಿಗಳು ದೊರಕಿವೆ. ಷಹನಾಮಾ ಗ್ರಂಥದಿಂದ ಪದ್ಯಸಾಲುಗಳನ್ನು ಅಲ್ಲಿ ಇಲ್ಲಿ ಆಯ್ದು ಸಂಕಲಿಸಿದ್ದು ಈ ಕೃತಿ ಎಂಬ ಅಭಿಪ್ರಾಯವೂ ವಿದ್ವಾಂಸರಲ್ಲಿದೆ.

1934ರಲ್ಲಿ ಇರಾನ್‌ನಲ್ಲಿ ಫಿರ್ದೂಸಿಯ 1000ವರ್ಷದ ವರ್ಧಂತಿಯನ್ನು ಆಚರಿಸ ಲಾಯಿತು. ತೂಸ್‌ನಲ್ಲಿರುವ ಈತನ ಸಮಾಧಿ ಇಂದು ಯಾತ್ರಾಸ್ಥಳವಾಗಿ ಪ್ರಸಿದ್ಧವಾಗಿದೆ.*

**ಫಿನಿಷಿಯ:** ಪಶ್ಚಿಮ ಸಿರಿಯ ಪ್ರದೇಶದಲ್ಲಿ ಪ್ರಾಚೀನಕಾಲದಲ್ಲಿದ್ದ ಒಂದು ನಾಡು. ಆಗ (ಪ್ರ.ಶ.ಪೂ.ಸು.1600) ಇದು ಆಕರ್, ಟೈರ್, ಸಿಡನ್ ಮುಂತಾದ ನಗರರಾಜ್ಯಗಳಿಂದ ಕೂಡಿತ್ತು. ಫಿನಿಷಿಯದ ಪ್ರಾಚೀನ ಚರಿತ್ರೆ ಅಸ್ಪಷ್ಟವಾದ್ದು. ಫಿನಿಷಿಯನ್ನರ ನಾಗರಿಕತೆಯ ವಿಚಾರವಾಗಿ ನಿರ್ದಿಷ್ಟ ಆಧಾರಗಳಿಲ್ಲ. ಇವರು ಸೆಮಿಟಿಕ್ ಮೂಲದವರಾದ್ದರಿಂದ ಇವರ ನಾಗರಿಕತೆಯನ್ನು ಸೆಮಿಟಿಕ್ ನಾಗರಿಕತೆ ಎಂದು ಕರೆಯಲಾಗಿದೆ. ಬಹುಶಃ ಪ್ರ.ಶ.ಪೂ.3000ದಲ್ಲಿ ಪರ್ಷಿಯ ಕೊಲ್ಲಿ ಪ್ರದೇಶದಿಂದ ಬಿಟ್ಟು ಬಂದು ಇವರು ಫಿನಿಷಿಯ ಭಾಗದಲ್ಲಿ ನೆಲೆಸಿದರೆಂದು ಅಭಿಪ್ರಾಯಪಡಲಾಗಿದೆ.

ಫಿನಿಷಿಯನರು ಕ್ಯಾನಾನೈಟರೆಂದು ತಿಳಿದುಬಂದಿದೆ. ಇವರ ಭಾಷೆ ಸೆಮಿಟಿಕ್ ಗುಂಪಿನದು. ಹೀಬ್ರೂ ಮತ್ತು ಫಿನಿಷಿಯನ್ ಭಾಷೆಗಳಲ್ಲಿ ಹೆಚ್ಚು ಹೋಲಿಕೆ ಕಂಡುಬರುತ್ತದೆ. ಫಿನಿಷಿಯನರು ಈಜಿಪ್ಟ್ ಜನರ ಮತಕ್ಕೆ ಸೇರಿದವರೆಂದು ಕ್ರೈಸ್ತಧರ್ಮ ಗ್ರಂಥಗಳಿಂದ ತಿಳಿಯುತ್ತದೆ. ಫಿನಿಷಿಯ ಪ್ರದೇಶ ಸಮುದ್ರ ಮತ್ತು ಪರ್ವತಶ್ರೇಣಿಯಿಂದ ಸುತ್ತುವರಿಯಲ್ಪಟ್ಟಿದ್ದು ವ್ಯವಸಾಯಕ್ಕೆ ಯೋಗ್ಯವಾಗಿರಲಿಲ್ಲ. ಆದ್ದರಿಂದ ಅವರು ವ್ಯಾಪಾರವನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದರು. ಕಾಲಕ್ರಮದಲ್ಲಿ ಅವರು ವ್ಯಾಪಾರವನ್ನು ಅಭಿವೃದ್ಧಿಗೊಳಿಸಿಕೊಂಡು ಪ್ರಖ್ಯಾತರಾದರು. ಮೆಡಿಟರೇನಿಯನ್ ಕರಾವಳಿಯಲ್ಲಿ ಫಿನಿಷಿಯನರು ಅನೇಕ ವಸಾಹತುಗಳನ್ನು ಸ್ಥಾಪಿಸಿ, ನಗರಗಳನ್ನು ನಿರ್ಮಿಸಿಕೊಂಡಿದ್ದರು. ಇವರು ಸಾಹಸಿಗಳೂ ವ್ಯಾಪಾರ ಚತುರರೂ ಕಷ್ಟಸಹಿಷ್ಣುಗಳೂ ಆಗಿದ್ದು ಪ್ರಪಂಚದ ನಾಗರಿಕತೆಗೆ ಹಲವು ಕಾಣಿಕೆಗಳನ್ನು ನೀಡಿದರು.

ಪ್ರಾಚೀನ ಈಜಿಪ್ಟಿನ ದೊರೆ 1ನೆಯ ಅಮಾಸಿಸ್ (ಪ್ರ.ಶ.ಪೂ.ಸು.1580–57) ರಾಜ್ಯವನ್ನು ವಿಸ್ತರಿಸಿದಾಗ ಇತಿಹಾಸದ ಪುಟಗಳಲ್ಲಿ ಫಿನಿಷಿಯ ಕಾಣಿಸಿಕೊಂಡಿತು. ಅನಂತರ 3ನೆಯ ಥೂಟ್‌ಮೋಸೆ (ಪ್ರ.ಶ.ಪೂ.ಸು.1503–1496, 1493–81) ಫಿನಿಷಿಯದ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿಕೊಂಡ. 4ನೆಯ ಅಮಿನೋಫಿಸನ (ಪ್ರ.ಶ.ಪೂ.ಸು.1375–58) ತರುವಾಯ ಈಜಿಪ್ಟ್ ಫಿನಿಷಿಯದ ಮೇಲೆ ತನ್ನ ಹಿಡಿತವನ್ನು ಕಳೆದುಕೊಂಡಿತು. ಅದರೆ 2ನೆಯ ರ್‍ಯಾಮ್ಸೇಸ್ (ಪ್ರ.ಶ.ಪೂ.1292–25) ಮತ್ತೊಮ್ಮೆ ಫಿನಿಷಿಯ ಪ್ರಾಂತ್ಯವನ್ನು ಜಯಿಸಿ ಈಜಿಪ್ಟಿನ ಅಧಿಕಾರವನ್ನು ಹೆಚ್ಚಿಸಿದ. 3ನೆಯ ರ್‍ಯಾಮ್ಸೆಸನ ಕಾಲದಿಂದ (ಪ್ರ.ಶ.ಪೂ.1198–67) ಈಜಿಪ್ಟ್ ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿತು.

ಈಜಿಪ್ಟಿನ ದೊರೆಗಳ ಆಳ್ವಿಕೆಯ ಅನಂತರ ಅಸ್ಸೀರಿಯನರ ಆಕ್ರಮಣದವರೆಗಿನ ಕಾಲದಲ್ಲಿ ಫಿನಿಷಿಯದ ನಗರರಾಜ್ಯಗಳಲ್ಲಿ ಅಧಿರಾಜರಿರಲಿಲ್ಲ. ಗೀಬಲ್ ರಾಜ್ಯ ತನ್ನದೇ ಆದ ರಾಜರುಗಳ ಅಧೀನದಲ್ಲಿತ್ತು. ಪ್ರ.ಶ.ಪೂ.10ನೆಯ ಶತಮಾನದಲ್ಲಿ ಆಳಿದ ರಾಜರೆಂದರೆ ಹಿರಮ್, ಇಥೋಬಾಲ್ ಮತ್ತು ಅಬಿಬಾಲ್. ಈ ಕಾಲದಲ್ಲಿ ಫಿನಿಷಿಯನರ ನಗರವಾಗಿದ್ದ ಟೈರ್ ಪ್ರವರ್ಧಮಾನಕ್ಕೆ ಬಂತು. 1ನೆಯ ಹಿರಮ್ ಟೈರ್‌ನಲ್ಲಿ ಪ್ರ.ಶ.ಪೂ.970–936ರ ವರೆಗೆ ಆಳಿದ. ಈತನ ಕಾಲದಲ್ಲಿ ಫಿನಿಷಿಯನರು ಇಸ್ರೇಲಿನೊಡನೆ ಸ್ನೇಹಸಂಪರ್ಕವನ್ನೇರ್ಪಡಿಸಿ ಕೊಂಡಿದ್ದರು. ಸಾಲೊಮನ್ ದೊರೆಯ ಕಾಲದಲ್ಲಿ ಈ ಸ್ನೇಹ ಸಂಪರ್ಕ ಮತ್ತಷ್ಟು ಹೆಚ್ಚಿತು. ಸಾಲೊಮನ್ ಮತ್ತು ಹಿರಮ್ ಜೊತೆಗೂಡಿ ಅಕ್ಬ ಕೊಲ್ಲಿಯ ಮೇಲೆ ವ್ಯಾಪಾರಕ್ಕೋಸ್ಕರ ಆಕ್ರಮಣ ನಡೆಸಿದರು. ಹಿರಮ್‌ನ ಅನಂತರ ಇಥೋಬಾಲ್ ರಾಜ್ಯವಾಳಿದ.

ಪ್ರ.ಶ.ಪೂ.876–605ರ ವರೆಗೆ ಇದನ್ನು ಅಸ್ಸಿರಿಯನ್ನರು ಆಕ್ರಮಿಸಿಕೊಂಡಿದ್ದರು. ಇಥೋಬಾಲ್ ಆಳ್ವಿಕೆಯ ಅನಂತರ ಫಿನಿಷಿಯದ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಯಿತು. ಅದು ಅಸ್ಸಿರಿಯದ ಆಕ್ರಮಣಕ್ಕೊಳಗಾಯಿತು. ಅಸ್ಸಿರಿಯದ ದೊರೆ 2ನೆಯ ಅಸುರ್‌ನಾಸಿರ್ ಪಾಲ್ ಎಂಬವನು ಟೈರ್, ಸಿಡನ್ ಮತ್ತು ಬಿಬ್ಲಸ್‌ನ ದೊರೆಗಳಿಂದಲೂ ಈತನ ಮಗನಾದ 3ನೆಯ ಷಾಲ್ಮನೀಸರ್ ಟೈರ್ ಮತ್ತು ಸಿಡನ್ ನಗರಗಳಿಂದಲೂ ಕಪ್ಪಕಾಣಿಕೆಗಳನ್ನು ಪಡೆದುಕೊಳ್ಳುತ್ತಿದ್ದನೆಂದು ತಿಳಿದುಬಂದಿದೆ. ಪ್ರ.ಶ.ಪೂ.741ರ ವೇಳೆಗೆ 3ನೆಯ ಟಿಗ್ಲಾತ್ ಪಿಲೀಸರ್ ಕೂಡ ಕಪ್ಪಕಾಣಿಕೆಯನ್ನು ಪಡೆಯತೊಡಗಿದ. ಅಸ್ಸಿರಿಯದ ದೊರೆ ಸೆನಾಕೆರೀಬ್, ಸಿಡನ್‌ನ ದೊರೆಯನ್ನು ಸೋಲಿಸಿ ಓಡಿಸಿ, ಆ ದೊರೆಯ ಸ್ಥಾನದಲ್ಲಿ ಇನ್ನೊಬ್ಬನನ್ನು ಕೂರಿಸಿದ. ಪ್ರ.ಶ.ಪೂ.668ರಲ್ಲಿ ಅಸುರ್‌ಬಿನಿಪಾಲ್ ಟೈರ್ ನಗರವನ್ನು ವಶಪಡಿಸಿಕೊಂಡ. ಅನಂತರ ಟೈರ್ ನಗರ ನವ ಬ್ಯಾಬಿಲೋನಿಯನ್ ದೊರೆ ನೆಬುಚೆಡ್ನೆಸರನ ವಶವಾಯಿತು. ಕಾರ್ಕಮಿಷ್ ಕದನದ (ಪ್ರ.ಶ.ಪೂ.605) ಅನಂತರ ಕಾಲ್ಡಿಯನ್ನರು (ನವ ಬ್ಯಾಬಿಲೋನಿಯನರು) ಪಶ್ಚಿಮ ಏಷ್ಯದ ಅಧಿಪತಿಗಳಾದರು.

ಪ್ರ.ಶ.ಪೂ.538ರ ವೇಳೆಗೆ ಫಿನಿಷಿಯ ಪ್ರದೇಶ ಪರ್ಷಿಯನ್ ಸಾಮ್ರಾಜ್ಯದ ಭಾಗವಾಯಿತು. ಸಿಡನ್ ನಗರ ಪ್ರವರ್ಧಮಾನವಾಯಿತು. ಫಿನಿಷಿಯದಲ್ಲಿ ಶಾಂತಿ ಮತ್ತು ಸಮೃದ್ಧಿ ನೆಲಸಿದುವು, 4ನೆಯ ಶತಮಾನದಲ್ಲಿ ಅರಸನಾಗಿದ್ದ 1ನೆಯ ಸ್ಟ್ರೇಟನ್ ಅಥೆನ್ಸಿನೊಡನೆ ಸ್ನೇಹಸಂಪರ್ಕ ವನ್ನೇರ್ಪಡಿಸಿಕೊಂಡಿದ್ದ. ಈತನ ಕಾಲದಲ್ಲಿ ಟೈರ್ ನಗರವನ್ನು ಸಾಲಮೀಸ್‌ನ ದೊರೆ ಇವಾಗೊರಸ್ ವಶಪಡಿಸಿಕೊಂಡ. ಸಿಡನ್ ನಗರ ಪರ್ಷಿಯನ್ನರ ವಿರುದ್ಧ ದಂಗೆ ಎದ್ದಿತು. ಅಲ್ಲಿಯ ಜನರು ಸಿರಿಯದ ಸತ್ರಪರನ್ನು ತಮ್ಮ ದೇಶದಿಂದ ಓಡಿಸಿದರು. ಸಿಡನ್‌ನ ಕೊನೆಯ ಅರಸನೇ 2ನೆಯ ಸ್ಟ್ರಾಟನ್.

ಡೇರಿಯಸ್ ದೊರೆಯ ಕಾಲದಿಂದ ಪರ್ಷಿಯಾದ ದೊರೆಗಳು ತಮ್ಮ ಅಧೀನದ ರಾಜ್ಯಗಳಿಗೆ ಪ್ರತ್ಯೇಕ ನಾಣ್ಯಗಳನ್ನು ಹೊರಡಿಸುವ ಅಧಿಕಾರ ನೀಡಿದರು. ಬಿಬ್ಲಸ್, ಸಿಡನ್ ಮತ್ತು ಟೈರ್ ನಗರಗಳು ತಮ್ಮದೇ ಆದ ನಾಣ್ಯಪದ್ಧತಿಗಳನ್ನು ಅನುಸರಿಸಲಾರಂಭಿಸಿದುವು. ಪ್ರ.ಶ.ಪೂ.333ರಲ್ಲಿ ಅಲೆಗ್ಸಾಂಡರ್ ಫಿನಿಷಿಯದ ಮೇಲೆ ದಂಡೆತ್ತಿಹೋಗಿ ಟೈರ್ ನಗರವನ್ನು ವಶಪಡಿಸಿಕೊಂಡ. ಪ್ರ.ಶ.ಪೂ.312ರಲ್ಲಿ ಟಾಲಮಿ ತನ್ನ ದಂಡನಾಯಕನಾಗಿದ್ದ ಫಿಲೊಕ್ಲೆಸನನ್ನು ಸಿಡನ್‌ನ ಅರಸನನ್ನಾಗಿ ಮಾಡಿದ. ಅದರೆ ಈತ ಬಹಳ ಕಾಲ ಆಳಲಿಲ್ಲವೆಂದು ತಿಳಿಯುತ್ತದೆ. ತರುವಾಯ ಪ್ರ.ಶ.ಪೂ.3ನೆಯ ಶತಮಾನದ ಆದಿಭಾಗದಲ್ಲಿ ದೇಶೀಯ ರಾಜಸಂತತಿಯ ಆಳ್ವಿಕೆ ಇದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಇವರ ಆಳ್ವಿಕೆ ಪ್ರ.ಶ.ಪೂ.250ರಲ್ಲಿ ಕೊನೆಗೊಂಡಿತು. ಪ್ರ.ಶ.ಪೂ.140ರ ವೇಳೆಗೆ ಟೈರ್ ನಗರ ಸ್ವತಂತ್ರವಾಯಿತು.

ಪ್ರ.ಶ.ಪೂ.64ರಲ್ಲಿ, ಅಂದರೆ ಪಾಂಪೆಯ ಕಾಲದಲ್ಲಿ ಫಿನಿಷಿಯ ರೋಮಿನ ಒಂದು ಪ್ರಾಂತ್ಯವಾಗಿದ್ದ ಸಿರಿಯದೊಡನೆ ಸೇರಿಕೊಂಡಿತು. ಸಿಡನ್ ಮತ್ತು ಟೈರ್ ನಗರಗಳಿಗೆ ಸ್ವಯಂ ಆಡಳಿತವನ್ನು ರಚಿಸಿಕೊಳ್ಳುವ ಅಧಿಕಾರವನ್ನು ನೀಡಲಾಯಿತು. ಈ ಕಾಲದಲ್ಲಿ ಈ ನಗರಗಳು ಅಭಿವೃದ್ಧಿ ಹೊಂದಿದುವು. ಇವುಗಳ ವ್ಯಾಪಾರ ಹೆಚ್ಚಿತು. ಅನಂತರ ಫಿನಿಷಿಯ ಪ್ಯಾಲಸ್ತೀನಿನ ವಶವಾಯಿತು.

**ಆರ್ಥಿಕ ಜೀವನ:** ಫಿನಿಷಿಯನರ ರಾಜಕೀಯ ಇತಿಹಾಸಕ್ಕಿಂತ ಇವರ ಆರ್ಥಿಕ ಜೀವನವೂ ಇವರ ಇತರ ಕೊಡುಗೆಗಳೂ ಮಾನವನ ನಾಗರಿಕತೆಯ ಇತಿಹಾಸದಲ್ಲಿ ಗಮನಾರ್ಹವಾಗಿವೆ.

ಫಿನಿಷಿಯನರು ಸಾಹಸಿಗಳೂ ವ್ಯಾಪಾರ ಚತುರರೂ ಶಕ್ತಿವಂತರೂ ಆಗಿದ್ದರು. ಇವರು ಮುಖ್ಯ ಬಂದರುಗಳಾದ ಟೈರ್, ಸಿಡನ್ ಮತ್ತು ಬಿಬ್ಲಸ್‌ಗಳ ಮೂಲಕ ದೂರದೇಶ ಗಳೊಡನೆ ವ್ಯಾಪಾರ ನಡೆಸುತ್ತಿದ್ದರು. ಸೈಪ್ರಸ್, ಕ್ರೀಟ್ ಮತ್ತು ಈಜಿಯನ್ ಸಮುದ್ರ ದ್ವೀಪಗಳಲ್ಲಿ, ಕಪ್ಪುಸಮುದ್ರದ ಬಂದರುಗಳಲ್ಲಿ, ಸಾರ್ಡಿನಿಯ, ಮಾರ್‌ಸೆಲ್ಸ್, ಕ್ಯಾಡಿಜ್ ಕಾರ್ನ್‌ವಾಲ್, ಕಾರ್ತೇಜ್ ಮುಂತಾದ ಕಡೆಗಳಲ್ಲಿ ವ್ಯಾಪಾರ ಸಂಸ್ಥೆಗಳನ್ನು ಸ್ಥಾಪಿಸಿದರು. ಮಾಲ್ಟ, ಸಿಸಿಲಿ ಮತ್ತು ಕಾರ್ಸಿಕದಲ್ಲಿ ರಕ್ಷಣೆಗಾಗಿ ಸೈನ್ಯವನ್ನಿಟ್ಟುಕೊಂಡಿದ್ದರು.

ಇವರು ಸ್ಪೇನ್‌ನಿಂದ ಬೆಳ್ಳಿ, ಸೀಸ ಮತ್ತು ಕಬ್ಬಿಣವನ್ನು ಕಾರ್ನ್‌ವಾಲ್‌ನಿಂದ ಟಿನ್, ಆಫ್ರಿಕದಿಂದ ಉಷ್ಟ್ರಪಕ್ಷಿಯ ಗರಿಗಳು ಮತ್ತು ಚಿನ್ನ, ಭಾರತದಿಂದ ಸಂಬಾರ ಮತ್ತು ಹತ್ತಿ ವಸ್ತುಗಳನ್ನು, ಅರೇಬಿಯದಿಂದ ಹಾಲುಮಡ್ಡಿ ಮತ್ತು ಸುಗಂಧ ದ್ರವ್ಯಗಳನ್ನು, ಸಿರಿಯದಿಂದ ಮದ್ಯವನ್ನು ತರುತ್ತಿದ್ದರು. ಇವರು ಹೋದ ಕಡೆಗಳಲ್ಲಿ ತಮ್ಮ ವಸ್ತುಗಳನ್ನು ಮಾರಿ ಅಲ್ಲಿ ದೊರೆಯುತ್ತಿದ್ದ ವಸ್ತುಗಳನ್ನು ಉಪಯೋಗಿಸಿಕೊಂಡು ಬಗೆಬಗೆಯ ವಸ್ತುಗಳನ್ನು ತಯಾರಿಸಿ

ಬೇರೆ ದೇಶಗಳಿಗೆ ಮಾರುತ್ತಿದ್ದರು. ಈ ರೀತಿಯ ವ್ಯಾಪಾರ ಅನೇಕ ಜನರಿಗೆ ಉದ್ಯೋಗ ಒದಗಿಸಿ ಕೊಟ್ಟಿತ್ತಲ್ಲದೆ ದೇಶದ ಪ್ರಗತಿಗೂ ಕಾರಣವಾಯಿತು. ಫಿನಿಷಿಯನರು ಆಗಾಗ ಕಡಲುಗಳ್ಳತನದಲ್ಲೂ ಗುಲಾಮರ ವ್ಯಾಪಾರದಲ್ಲೂ ತೊಡಗುತ್ತಿದ್ದರೆಂದು ಯಹೂದ್ಯರ ಬರವಣಿಗೆಗಳಿಂದ ತಿಳಿದುಬಂದಿದೆ. ಫಿನಿಷಿಯನರ ಸಾಮರ್ಥ್ಯಕ್ಕೆ ಅಸಾಧ್ಯವಾದ್ದು ಯಾವುದೂ ಇರಲಿಲ್ಲ ಎಂದು ಅವರು ಅಭಿಪ್ರಾಯ ಪಟ್ಟಿರುತ್ತಾರೆ. ಇವರು ಅಟ್ಲಾಂಟಿಕ್ ಸಾಗರದಲ್ಲಿ ಯಾನ ಮಾಡುತ್ತಿದ್ದರು. ಸಿಲೀ ದ್ವೀಪಗಳಿಂದ ಕಬ್ಬಿಣವನ್ನು ತರುತ್ತಿದ್ದರು. ರೋಮನರೊಡನೆ ವ್ಯಾಪಾರದಲ್ಲಿ ಪೈಪೋಟಿ ನಡೆಸುತ್ತಿದ್ದರು. ಪ್ರತಿಯೊಂದು ದೇಶಕ್ಕೂ ಆ ದೇಶ ಹೊಂದದ ವಸ್ತುಗಳನ್ನು ಫಿನಿಷಿಯನ್ನರು ನೀಡುತ್ತಿದ್ದರೆಂದು ಹೇಳಲಾಗಿದೆ.

ದೂರ ದೇಶಗಳೊಡನೆ ವ್ಯಾಪಾರ ನಡೆಸಲು ಮೆಡಿಟರೇನಿಯನ್ ಸಮುದ್ರದ ಪೂರ್ವತೀರದಲ್ಲಿ ಇವರು ಹಲವು ಬಂದರುಗಳನ್ನು ನಿರ್ಮಿಸಿಕೊಂಡಿದ್ದರು. ತರುವಾಯ ಉತ್ತರ ಆಫ್ರಿಕದಲ್ಲಿ ಕಾರ್ತೇಜ್ ಪಟ್ಟಣವನ್ನು ಪ್ರ.ಶ.ಪೂ. 800ರಲ್ಲಿ ಸ್ಥಾಪಿಸಿಕೊಂಡರು. ಕಾರ್ತೇಜ್ ಫಿನಿಷಿಯನರ ಒಂದು ವಸಾಹತಾಗಿತ್ತು. ಕಾಲಕ್ರಮದಲ್ಲಿ ಕಾರ್ತೇಜ್ ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿ ಬೆಳೆಯಿತು. ವ್ಯಾಪಾರ ವಸ್ತು ವಸಾಹತುಗಳ ನಿರ್ಮಾಣ ದಿಂದಾಗಿ ಫಿನಿಷಿಯನರು ಪ್ರ.ಶ.ಪೂ. 6ನೆಯ ಶತಮಾನದ ವೇಳೆಗೆ ಪ್ರಬಲರಾದರು. ಅವರ ಏಳಿಗೆಯನ್ನು ನೋಡಿದ ರೋಮನರು ಮೆಡಿಟರೇನಿಯನ್ ಸಮುದ್ರದ ಮೇಲೆ ತಮ್ಮ ಹಿಡಿತವನಿಟ್ಟುಕೊಳ್ಳಲು ಬಯಸಿ ಒಂದು ಶತಮಾನ ಕಾಲ ಹೋರಾಡಿ ಕಾರ್ತೇಜ್ ಪಟ್ಟಣವನ್ನು ವಶಪಡಿಸಿಕೊಂಡರು. ಫಿನಿಷಿಯನರು ಪ್ರಪಂಚದ ಪಶ್ಚಿಮ ಭಾಗದಲ್ಲಿ ಒಂದು ಪ್ರಬಲ ನೌಕಾಬಲಕ್ಕೆ ಅಡಿಪಾಯ ಹಾಕಿದರು. ಫಿನಿಷಿಯನರು ಪ್ರಾಚೀನ ಕಾಲದ ಸಾಹಸಿ ನಾವಿಕರೆಂದು ಪ್ರಸಿದ್ಧರಾಗಿದ್ದರು.

**ಕೊಡುಗೆಗಳು:** ಕಷ್ಟಸಹಿಷ್ಣುಗಳಾಗಿದ್ದು, ಪ್ರಖ್ಯಾತ ವ್ಯಾಪಾರಗಾರರಾಗಿ, ಮೆಡಿಟರೇನಿಯನ್ ಸಮುದ್ರದಲ್ಲಿ ವಸಾಹತುಗಳನ್ನು ಸ್ಥಾಪಿಸಿ, ತೀರಪ್ರದೇಶದಲ್ಲಿ ಅನೇಕ ಪಟ್ಟಣಗಳು ಮತ್ತು ಬಂದರುಗಳನ್ನು ನಿರ್ಮಿಸಿಕೊಂಡು ಆ ಮೂಲಕ ಇವರು ಪ್ರಪಂಚ ನಾಗರಿಕತೆಗೆ ಹಲವು ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಈಜಿಪ್ಟ್‌ಗೆ ಹರಡಿದ ಫಿನಿಷಿಯನ್ನರು ನಾಗರಿಕತೆಯ ಇತಿಹಾಸ ದಲ್ಲಿ ಪ್ರಸಿದ್ಧರಾಗಿದ್ದಾರೆ. ಫಿನಿಷಿಯನರು ಪೂರ್ವ ರಾಷ್ಟ್ರಗಳಿಗೆ ಭೇಟಿ ನೀಡಿ ಅಲ್ಲಿಯ ಜನರ ಜ್ಞಾನ ಮತ್ತು ಜೀವನಮಾರ್ಗವನ್ನು ಅರಿತರು.

ಕಮಲ, ಸ್ಫಿಂಕ್ಸ್ ವಿಗ್ರಹ, ಅನೇಕ ರೆಕ್ಕೆಗಳುಳ್ಳ ರಾಕ್ಷಸರ ವಿಗ್ರಹ ಮುಂತಾದವು ಪಾಶ್ಚಾತ್ಯರಿಗೆ ಫಿನಿಷಿಯನ್ ಶಿಲ್ಪಿಗಳಿಂದ ಪರಿಚಯವಾದುವು ಎಂದು ಹೇಳಲಾಗಿದೆ. ವಿವಿಧ ರೀತಿಯ ಉಡುಪುಗಳನ್ನು ಇವರು ಇತರ ದೇಶಗಳಿಗೆ ಪರಿಚಯ ಮಾಡಿಕೊಟ್ಟರು. ಇವರು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಕೊಂಡಿಯಂತ್ತಿದ್ದರು. ಇವರು ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಪ್ರಖ್ಯಾತರಾಗಿದ್ದರು. ಅನೇಕ ದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದು ಅಲ್ಲಿಯ ಜನರಲ್ಲಿ ಇತರರ ವಸ್ತುಗಳ ಬಗ್ಗೆ ಆಸಕ್ತಿ ಮೂಡುವಂತೆ ಮಾಡಿದರು.

ಫಿನಿಷಿಯನರು ಕೈಗಾರಿಕೆ ಮತ್ತು ಕುಶಲವಿದ್ಯೆಗಳಲ್ಲಿ ಪ್ರಾವೀಣ್ಯ ಪಡೆದಿದ್ದರೆಂಬುದು ಹೋಮರ್ (ಪ್ರ.ಶ.ಪೂ.9–8ನೆಯ ಶತಮಾನ) ಕವಿಯ ವರ್ಣನೆಯಿಂದ ತಿಳಿದುಬರುತ್ತದೆ. ಇವರು ಕೈಗಾರಿಕೆಯಲ್ಲಿ ಮುಂದುವರಿದಿದ್ದರು. ಬಟ್ಟೆ ತಯಾರಿಕೆ ಇವರ ಒಂದು ಮುಖ್ಯ ಕೈಗಾರಿಕೆಯಾಗಿತ್ತು. ಇವರು ಬಟ್ಟೆಗೆ ಹಾಕುತ್ತಿದ್ದ ಕೆಂಪುಬಣ್ಣ ಬೇರೆ ಯಾರಿಗೂ ತಿಳಿದಿರಲಿಲ್ಲ ವೆಂದು ವ್ಯಕ್ತವಾಗುತ್ತದೆ. ಇವರು ಒಂದು ಜಾತಿಯ ಮೀನಿನ ಶರೀರದ ಸಣ್ಣ ಚೀಲವೊಂದರಲ್ಲಿ ಸಿಕ್ಕಿದ ವಸ್ತುಗಳನ್ನು ಉಪಯೋಗಿಸಿಕೊಂಡು ವಿಶೇಷ ರೀತಿಯ ಬಣ್ಣವನ್ನು ತಯಾರಿಸು ತ್ತಿದ್ದರು. ಗಾಜಿನ ತಯಾರಿಕೆಯೂ ಇವರಿಗೆ ಗೊತ್ತಿತ್ತು. ಅದರಿಂದ ಇವರು ಅನೇಕ ಉತ್ತಮ ವಸ್ತುಗಳನ್ನು ತಯಾರಿಸುತ್ತಿದ್ದರು. ಗಾಜು ಇವರ ವ್ಯಾಪಾರದ ಒಂದು ವಿಶೇಷ ಸರಕಾಗಿತ್ತು. ಇವರು ತಾಮ್ರ ಮತ್ತು ಕಂಚಿನಿಂದ ಆಯುಧಗಳನ್ನು ತಯಾರಿಸಿಕೊಳ್ಳುತ್ತಿದ್ದರು ದಂತದಲ್ಲಿ ಸುಂದರ ಕೆತ್ತನೆ ಕೆಲಸ ಮಾಡುತ್ತಿದ್ದರು. ಇವರು ಲೋಹಗೆಲಸದಲ್ಲಿ ನುರಿತಿದ್ದರು. ಕುಶಲ ಶಿಲ್ಪಿಗಳು ಚಿನ್ನ, ಬೆಳ್ಳಿ, ಕಂಚು ಮುಂತಾದ ಲೋಹಗಳಲ್ಲಿ ಮೂರ್ತಿಗಳೇ ಮುಂತಾದ ವನ್ನು ನಿರ್ಮಿಸುತ್ತಿದ್ದರು. ಇವರು ಗಣಿ ಕೆಲಸದಲ್ಲಿ ಪರಿಶ್ರಮ ಪಡೆದಿದ್ದರು.

ಅಸ್ಸೀರಿಯನ್ ದೊರೆಗಳು ತಮ್ಮ ಅರಮನೆಗಳಲ್ಲಿ ಪೀಠೋಪಕರಣಗಳನ್ನು ತಯಾರಿಸಲು ಇವರನ್ನು ನೇಮಿಸಿಕೊಳ್ಳುತ್ತಿದ್ದರು. ಹೀಬ್ರು ದೊರೆ ಸಾಲೊಮನ್ ಜೆರುಸಲೇಮ್‌ನಲ್ಲಿ ದೇವಾಲಯ ನಿರ್ಮಿಸಲು ಫಿನಿಷಿಯದ ವಾಸ್ತುಶಿಲ್ಪಿಗಳನ್ನು ನೇಮಿಸಿಕೊಂಡಿದ್ದನೆಂದು ತಿಳಿದುಬಂದಿದೆ.

ವ್ಯವಹಾರ ಚತುರತೆ ಮತ್ತು ವ್ಯಾಪಾರದಿಂದ ಪ್ರಬಲರಾದ ಫಿನಿಷಿಯನರು ಲಿಪಿಯ ರೂಪದಲ್ಲಿ ಮಹತ್ತರವಾದ ಮತ್ತು ಶಾಶ್ವತವಾದ ಕಾಣಿಕೆಯನ್ನು ಸಲ್ಲಿಸಿರುತ್ತಾರೆ. ಈಜಿಪ್ಟ್ ಮತ್ತಿತರ ಹಿಂದಿನ ನಾಗರಿಕತೆಗಳಲ್ಲಿ ಚಿತ್ರಲಿಪಿ ಬಳಕೆಯಲ್ಲಿತ್ತು. ಫಿನಿಷಿಯನರು ಅಕ್ಷರಗಳನ್ನು ರೂಢಿಗೆ ತಂದರು. ಫಿನಿಷಿಯನರ ವ್ಯಾಪಾರ ಹೆಚ್ಚಲಾಗಿ ಇವರು ಅದರ ಲೆಕ್ಕಪತ್ರಗಳನ್ನು ಇಟ್ಟುಕೊಳ್ಳಬೇಕಾಯಿತು. ಆದ್ದರಿಂದ ಇವರು ಬರವಣಿಗೆಯ ವಿಧಾನವನ್ನು ಕಂಡುಹಿಡಿದು ಅಕ್ಷರಗಳನ್ನು ರೂಢಿಗೆ ತಂದುಕೊಂಡರು. ಇವರ ವರ್ಣಮಾಲೆಯಲ್ಲಿ 22 ಅಕ್ಷರಗಳಿದ್ದುವು. ಇವುಗಳಲ್ಲಿ ಮೊದಲನೆಯದು ಅಲೆಫ್, ಎರಡನೆಯದು ಬೆತ್. ಗ್ರೀಕರು ತಮ್ಮ ವರ್ಣಮಾಲೆ ಯಲ್ಲಿ ಇವನ್ನು ಆಲ್ಫ, ಬೀಟ ಎಂದು ಕರೆದರು. ವರ್ಣಮಾಲೆಗೆ ಆಲ್ಫಬೆಟ್ ಎಂಬ ಹೆಸರು ರೂಢಿಗೆ ಬಂತು. ಹೀಗೆ ಫಿನಿಷಿಯನರ ಅಕ್ಷರಮಾಲೆಯನ್ನು ಅನುಸರಿಸಿ ಬೆಳೆಸಿದ ಗ್ರೀಕರು 22 ಅಕ್ಷರಗಳ ಜೊತೆಗೆ 4 ಸ್ವರಾಕ್ಷರಗಳನ್ನು ಸೇರಿಸಿ ಯುರೋಪಿಗೆ ನೀಡಿದರು. ಮಾನವನ ನಾಗರಿಕತೆಗೆ ಇದೊಂದು ಮಹತ್ವದ ಕೊಡುಗೆಯಾಗಿದೆ.

ಫಿನಿಷಿಯನರು ಕಾಗದ, ಲೇಖನಿ ಮತ್ತು ಶಾಯಿಯ ಉಪಯೋಗವನ್ನು ತಿಳಿದಿದ್ದು ಇವನ್ನು ಯುರೋಪಿನ ಜನರಿಗೆ ಪರಿಚಯಮಾಡಿಕೊಟ್ಟರು. ಬಿಬ್ಲಸ್ ನಗರ ಕಾಗದಕ್ಕೆ ಹೆಸರಾಗಿತ್ತು. ಬೈಬಲ್ ಎಂಬ ಪದ ಫಿನಿಷಿಯನರ ಬಿಬ್ಲಸ್ ಎಂಬುದರಿಂದ ಬಂದಿದೆ ಎಂಬುದು ಕೆಲವರ ಅಭಿಪ್ರಾಯ.

ಫಿನಿಷಿಯನರು ನೌಕಾಯಾನದಲ್ಲಿ ಪ್ರಸಿದ್ಧರಾಗಿದ್ದರು. ಅಸ್ಸೀರಿಯನ್ ದೊರೆ ಸೆನಾಕೆರಿಬ್ ಮತ್ತು ಅಲೆಕ್ಸಾಂಡರ್ ಫಿನಿಷಿಯದ ನಾವಿಕರನ್ನು ನೌಕಾಯುದ್ಧಕ್ಕಾಗಿ ಮತ್ತು ವಸ್ತುಗಳ ರಫ್ತಿಗಾಗಿ ನೇಮಿಸಿಕೊಂಡಿದ್ದರು. ಇವರು ರೋಮನರನ್ನು ಎದುರಿಸುವಷ್ಟು ಸಮರ್ಥವಾದ ನೌಕಾಬಲ ಹೊಂದಿದ್ದರು; ಹಡಗು, ದೋಣಿಗಳನ್ನು ನಿರ್ಮಿಸಿಕೊಳ್ಳುವುದರಲ್ಲೂ ಪ್ರವೀಣರಾಗಿದ್ದರು.

ಮರದಿಂದಲೂ ಕಲ್ಲಿನಿಂದಲೂ ದೇವಾಲಯಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಇವರು ಸಂಚರಿಸಿದ ಕಡೆಗಳಲ್ಲಿ ಮತ್ತು ಇವರ ವಸಾಹತುಗಳಲ್ಲಿ ತಮ್ಮ ಮತವನ್ನು ಪ್ರಚಾರಕ್ಕೆ ತಂದರು. ಇವರು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನೂ ಸೆಮಿಟಿಕ್ ಗುಂಪಿನವರು ಪೂಜಿಸುತ್ತಿದ್ದ ಬಾಲ್ ಎಂಬ ದೇವರನ್ನೂ ಪೂಜಿಸುತ್ತಿದ್ದರು. ಬಿಬ್ಲಸ್ ನಗರದ ದೇವರ ಹೆಸರು ಎಲ್. ಅಶ್‌ತರ್ತೆ ಎಂಬುದು ಇವರ ಒಂದು ಹೆಣ್ಣು ದೇವತೆ. ಇವರಲ್ಲಿ ನರಬಲಿಯನ್ನು ಕೊಡುವ ಕ್ರೂರಪದ್ಧತಿಯಿತ್ತು. ಇವರು ಬಹುದೇವತಾರಾಧಕರಾಗಿದ್ದರು. ಮೆಲೋಖ್ ಎಂಬ ದೇವರಿಗೆ ಮಕ್ಕಳನ್ನು ಬಲಿ ಕೊಡುತ್ತಿದ್ದರು. ಫಿನಿಷಿಯನರು ಖಗೋಳಶಾಸ್ತ್ರ, ಗಣಿತಶಾಸ್ತ್ರಗಳಲ್ಲಿ ಜ್ಞಾನ ಸಂಪಾದಿಸಿದ್ದರು. ಫಿನಿಷಿಯದಲ್ಲಿ ಪ್ರ.ಶ.ಪೂ. 12ನೆಯ ಶತಮಾನದಲ್ಲಿ ಸಂಚೋನಿಯಾತನ್ ಎಂಬ ಇತಿಹಾಸಕಾರ ಮತ್ತು ಮೋಸ್ಕಸ್ ಎಂಬ ತತ್ತ್ವಜ್ಞಾನಿ ಜೀವಿಸಿದ್ದರೆಂದು ತಿಳಿದುಬರುತ್ತದೆ. (ಟಿ.ವಿ.ಜಿಯು.; ಎಂ.ವಿ.ಎಸ್‌ಆರ್.)

**ಫ್ಲಿಂಡರ್ಸ್ ಪೆಟ್ರಿ, ಸರ್ ವಿಲಿಯಂ ಮ್ಯಾಥ್ಯೂ:** 1853–1942. ಈಜಿಪ್ಟ್ ನಾಗರಿಕತೆಯ ಆಂಗ್ಲ ಪುರಾತತ್ತ್ವಜ್ಞ ಮತ್ತು ಪುರಾತತ್ತ್ವಶಾಸ್ತ್ರದ ಶೋಧನೆ ಮತ್ತು ಅಧ್ಯಯನದಲ್ಲಿ ಕ್ರಮಬದ್ಧ ವಿಧಾನವನ್ನು ತಂದವನು. ಚಾರ್ಲ್ಟನ್ (ಕೆಂಟ್, ಈಗಿನ ಲಂಡನ್ನಿನ ಆಗ್ನೇಯ ಭಾಗ) ಇವನ ಜನ್ಮಸ್ಥಳ. ಇವನ ಮನೆತನದವರು ಕ್ರೈಸ್ತಧರ್ಮದ ಶ್ರದ್ಧಾಳುಗಳು. ಮನೆಯಲ್ಲಿಯೇ ವಿದ್ಯಾಭ್ಯಾಸ. ಇವನ ತಂದೆ ಇವನಿಗೆ ಕರಾರುವಾಕ್ಕಾಗಿ ಭೂಮಿ, ಕಟ್ಟಡಗಳ ನಕಾಶೆ ಹೇಗೆ ಮಾಡಬೇಕೆಂಬುದನ್ನು ಕಲಿಸಿದ್ದರು. ಇದು ಇವನು ಭವಿಷ್ಯದಲ್ಲಿ ಈಜಿಪ್ಟ್ ಮತ್ತು ಲೆವಾಂಟ್‌ನಲ್ಲಿ ಪ್ರಾಚೀನ ನಿವೇಶನಗಳನ್ನು ಕಟ್ಟಡಗಳನ್ನು ವ್ಯವಸ್ಥಿತ ಅಧ್ಯಯನ ಮಾಡಲು ತಳಪಾಯ ಹಾಕಿದಂತಾಯಿತು. 8ನೇ ವಯಸ್ಸಿನ ಹೊತ್ತಿಗೆ ಫ್ರೆಂಚ್, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳನ್ನು ಕಲಿತಿದ್ದನು. ಇದೇ ಸಮಯದಲ್ಲಿ ವೈಟ್ ದ್ವೀಪದಲ್ಲಿಯ ಬ್ರೇಡಿಂಗ್ ರೋಮನ್ ಸೌಧದೊಳಗಿನ ಮಣ್ಣನ್ನು ಅವಶೇಷಗಳನ್ನು ಹೇಗೆ ಸಲಿಕೆಗಳಿಂದ ಹಿಂದು ಮುಂದೆ ನೋಡದೆ ತೆಗೆದು ಹಾಕುತ್ತಿದ್ದುದನ್ನು ನೋಡಿದ ಇವನ ಸ್ನೇಹಿತರು ವಿವರಿಸಿದಾಗ ಪೆಟ್ರಿ ಖತಿಗೊಂಡು

ಮಣ್ಣನ್ನು ನಿಧಾನವಾಗಿ ಒಂದೊಂದೆ ಇಂಚಿನಷ್ಟು ತೆಗೆದು ಅದರೊಳಗಿನ ವಸ್ತುಗಳನ್ನು ಬಿಡಿಸಿ ಅವುಗಳಿರುವ ಸಂದರ್ಭಗಳನ್ನು ಸರಿಯಾಗಿ ತಿಳಿದು ಕೊಳ್ಳಬೇಕೆಂದು ಪ್ರತಿಭಟಿಸಿದುದು ಆಶ್ಚರ್ಯವೇ ಸರಿ.

ಇವನ ಪುರಾತತ್ತ್ವ ಸಂಶೋಧನೆ ರೋಮನ್–ಬ್ರಿಟಿಷ್ ಕಾಲದ ಬ್ರಿಟಿಷ್ ಕ್ಯಾಂಪ್ ನೆಲೆಯ ರೇಖಾಗಣಿತದ ಮೂಲಕ ವಿನ್ಯಾಸವನ್ನು ತಿಳಿಯುವ ಪ್ರಯತ್ನದಿಂದ ಆರಂಭವಾಯಿತೆ ನ್ನಬಹುದು. 19ನೆ ವಯಸ್ಸಿನಲ್ಲಿ ಇಂಗ್ಲೆಂಡಿನ ಸ್ಟೋನ್ ಹೆಂಜ್ ವಿನ್ಯಾಸವನ್ನು ತ್ರಿಕೋಣ ರೇಖಾಗಣಿತದ ವಿಧಾನದಿಂದ ತಿಳಿಯಲು ಪ್ರಯತ್ನಿಸಿದನು. 1880ರಲ್ಲಿ ಗೀಜ಼ಾದಲ್ಲಿಯ ಬೃಹತ್ ಪಿರಮಿಡ್ಡನ್ನು ಈ ವಿಧಾನದಿಂದಲೆ ಇದರ ರಚನಾ ಕ್ರಮವನ್ನು ತಿಳಿಯಲು ಪ್ರಯತ್ನಿಸಿದನು. ಈ ಹಿಂದೆ ಇದರ ನಿರ್ಮಿತಿಯ ವಿಧಾನದ ಬಗ್ಗೆ ಇದ್ದ ವರದಿಗಳ ಆಧಾರದ ಮೇಲೆ ಭಿನ್ನ ಭಿನ್ನ ಅಭಿಪ್ರಾಯಗಳನ್ನು ಮಂಡಿಸಲಾಗಿತ್ತು. ಆದರೆ ತ್ರಿಕೋಣ ಮಾಪನ ಕ್ರಮದಿಂದ ವೈಜ್ಞಾನಿಕವಾಗಿ ಇದರ ರಚನಾಕ್ರಮವನ್ನು ವಿಶ್ಲೇಷಿಸಿ ದವರಲ್ಲಿ ಪೆಟ್ರಿಯೆ ಮೊದಲು. ಈ ಪ್ರಕಾರದ ಇವನ ಬರವಣಿಗೆಗಳು ಈ ಪಿರಮಿಡ್ ಪ್ರಸ್ತಭೂಮಿಯ ಮೂಲ ವಿಷಯಗಳನ್ನು ತಿಳಿಸುವ ಇಂದಿಗೂ ಮುಖ್ಯ ಆಕರಗಳಾಗಿವೆ.

ಇವನ ಕಾಲಕ್ಕಾಗಲೆ ಈಜಿಪ್ಟ್ ನಾಗರಿಕತೆ ನೆಲೆಗಳು ದೊಡ್ಡ ಪ್ರಮಾಣದಲ್ಲಿ ನಾಶವಾಗುತ್ತಿದ್ದುದನ್ನು ನೋಡಿ ಆದಷ್ಟು ಬೇಗ ಸಾಧ್ಯವಾದಷ್ಟು ಉಳಿಸಿಕೊಳ್ಳಬೇಕೆಂಬ ಪ್ರಯತ್ನ ಮಾಡಲು ಆರಂಭಿಸಿದನು. 1880ರ ಕೊನೆಯಲ್ಲಿ ಇಂಗ್ಲೆಂಡಿಗೆ ಹಿಂದಿರುಗಿ ತಾನು ಅಧ್ಯಯನ ಮಾಡಿದ ವಿಷಯ ಗಳ ಬಗ್ಗೆ ಹಲವಾರು ಲೇಖನಗಳನ್ನು ಬರೆದನು. ಈಜಿಪ್ಟ್ ಎಕ್ಸ್‌ಪ್ಲೋರೇಶನ್ ಫಂಡ್ (ಈಗ ಈಜಿಪ್ಟ್ ಎಕ್ಸ್‌ಪ್ಲೋರೇಶನ್ ಸೊಸೈಟಿ) ಇದರ ಪೋಷಕಿ ಹಾಗೂ ಸುದ್ದಿ ವರದಿಗಾರಳಾದ ಅಮೆಲಿಯ ಎಡ್ವರ್ಡ್ಸ್ ಪೆಟ್ರಿಯ ಶೋಧನೆಗಳನ್ನು ಬೆಂಬಲಿಸಿದಳು. ತತ್ಪರಿಣಾಮವಾಗಿ ಇವನನ್ನು ಯೂನಿವರ್ಸಿಟಿ ಕಾಲೇಜ್, ಲಂಡನ್ ಇದರಲ್ಲಿ ಈಜಿಪ್ಟಾಲಜಿ ಪೀಠದ ಪ್ರಾಧ್ಯಾಪಕನನ್ನಾಗಿ ನೇಮಿಸಲಾಯಿತು. 1884ರಲ್ಲಿ ಈಜಿಪ್ಟಿಗೆ ಬಂದು ತನ್ನ ಶೋಧನೆಗಳನ್ನು ಮುಂದುವರೆಸಿದನು. 170 ಕೆಲಸಗಾರರೊಂದಿಗೆ ತನಿಸ್‌ನಲ್ಲಿಯ ಈಜಿಪ್ಟ್ ನವ ಸಾಮ್ರಾಜ್ಯ ಹಂತದ ನೆಲೆಯ ಉತ್ಖನನ ಅಧ್ಯಯನದಿಂದ ಆರಂಭವಾಗಿ ನೈಲ್ ನದಿಯ ದೋಣಿಯಾನ ದಿಂದ ಆಯಾಯ ಪ್ರದೇಶಗಳಲ್ಲಿ ಕಂಡುಬರುವ ನೆಲೆಗಳ ಅವಶೇಷಗಳ ಹಾಗೂ ಆಸ್ವಾನ ಹತ್ತಿರದ ಸೆಹೆಲ್ ದ್ವೀಪದ ಕಡಿದಾದ ಬೆಟ್ಟಗಳಲ್ಲಿಯ ಅಸಂಖ್ಯಾತ ಶಾಸನಗಳ ಛಾಯಾ ಚಿತ್ರಗಳನ್ನು ತೆಗೆದುಕೊಂಡನು. ಫಯೂಮ್‌ನಲ್ಲಿ ಪ್ರ.ಶ.ಪೂ.30ರ ನಂತರದ ಗೋರಿಗಳು, ವ್ಯಕ್ತಿ ಚಿತ್ರಗಳು ಮಮ್ಮಿಗಳ ಮೇಲಿನ ಶಾಸನ ಪ್ರತಿಗಳನ್ನು ಸಂಗ್ರಹಿಸಿಕೊಂಡನು. ಫೇರೋಗಳ ಪಿರಮಿಡ್ಡುಗಳನ್ನು ಕಟ್ಟುವ ಕೆಲಸಗಾರರ ವಾಸಗ್ರಾಮವನ್ನು ಪತ್ತೆ ಮಾಡಿದನು. ಅನಂತರ ಇವನ ಶೋಧನ ಕಾರ್ಯ 1890ರಿಂದ ಪ್ಯಾಲಿಸ್ತೈನಿನಲ್ಲಿಯ ಟೆಲ್–ಎಲ್–ಹೆಸಿ ನೆಲೆಯ ಉತ್ಖನನದಿಂದ ಆರಂಭವಾಯಿತು. ಇದೆ ಈ ಪವಿತ್ರ ಭೂಮಿಯಲ್ಲಿ ಇದೇ ಪ್ರಥಮ ವೈಜ್ಞಾನಿಕ ಉತ್ಖನನ. ಬೈಬಲ್ಲಿನ ಹಿನ್ನೋಮ ಎಂದು ಹೆಸರಿಸಲಾದ ಜೆರುಸಲೇಂನಲ್ಲಿಯ ವಡಿ ಅಲ್–ರಬಬಹದಲ್ಲಿ ಆದಿ ಕಬ್ಬಿಣಯುಗದ ಮತ್ತು ಆದಿ ರೋಮನ್ನರ ಕಾಲದ ಗೋರಿಗಳ ಸರ್ವೇಕ್ಷಣೆಯನ್ನು ಮಾಡಿದುದಲ್ಲದೆ ಎರಡು ಭಿನ್ನ ಪ್ರಕಾರಗಳ ಮೆಟ್ರಿಕ್ ಮಾಪನ ಪದ್ಧತಿಗಳನ್ನು ಕಂಡುಹಿಡಿದನು. 1891ರಲ್ಲಿ ನವ ಸಾಮ್ರಾಜ್ಯದ ಟಲ್–ಎಲ್–ಅಮರ್ನದಲ್ಲಿಯ ಅಟೆನ್ ದೇವತೆಯ ದೇವಾಲಯದ ತೋಟದ ಬೇಟೆ ದೃಶ್ಯ, ಪ್ರಾಣಿ ಮೊದಲಾದ ವರ್ಣ ಚಿತ್ರಿತ 90ಚ.ಮೀ ನಷ್ಟು ಹಾಸು ನೆಲವನ್ನು ಅನಾವರಣಗೊಳಿಸಲಾಯಿತು. ಈಗ ಇದೊಂದು ಪ್ರವಾಸಿ ಆಕರ್ಷಣೆಯಾಗಿದೆ.

1892ರಲ್ಲಿ ಲಂಡನ್ನಿನ ಯೂನಿವರ್ಸಿಟಿ ಕಾಲೇಜಿನಲ್ಲಿ ಅಮೆಲಿಯ ಎಡ್ವರ್ಡ್ಸ್ ಸ್ಥಾಪಿಸಿದ ದಿ ಎಡ್ವರ್ಡ್ಸ್ ಪ್ರೊಫೆಸರ್ ಆಫ್ ಈಜಿಪ್ಷಿಯನ್ ಆರ್ಕಿಯಾಲಜಿ ಅಂಡ್ ಫಿಲಾಲಜಿ ಪೀಠಕ್ಕೆ ಪೆಟ್ರಿಯನ್ನು ಪ್ರಥಮ ಪ್ರಾಧ್ಯಾಪಕರನ್ನಾಗಿ ನೇಮಿಸಲಾಯಿತು. ಪೆಟ್ರಿಯ ಈಜಿಪ್ಟಿನಲ್ಲಿ ತನ್ನ ಉತ್ಖನನ ಕಾರ್ಯವನ್ನು ಮುಂದುವರೆಸಿದನು ಮತ್ತು ಅನೇಕ ಪುರಾತತ್ತ್ವವಿದರಿಗೆ ತರಬೇತಿಯನ್ನು ಕೊಟ್ಟನು. ಹೀಗೆ ತರಬೇತಿ ಪಡೆದವರಲ್ಲಿ ಹೋವರ್ಡ್ ಕಾರ್ಟರ್ **(ನೋಡಿ)** ಒಬ್ಬ. 1913ರಲ್ಲಿ ತನ್ನಲ್ಲಿದ್ದ ಈಜಿಪ್ಟ್ ನಾಗರಿಕತೆಯ ಎಲ್ಲಾ ಸಾಂಸ್ಕೃತಿಕ ವಸ್ತುಗಳನ್ನು ಕಾಲೇಜಿಗೆ ಮಾರಿದನು. ಇವೆಲ್ಲವನ್ನು ಪೆಟ್ರಿ ಮ್ಯೂಸಿಯಂ ಆಫ್ ಈಜಿಪ್ಷಿಯನ್ ಆರ್ಕಿಯಾಲಜಿ ಇದರಲ್ಲಿ ಪ್ರದರ್ಶಿಸಲಾಗಿದೆ.

ಇವನ ಅತ್ಯಂತ ಮಹತ್ತ್ವದ ಶೋಧನೆಗಳಲ್ಲಿ ಒಂದು ಇ ಸಿ ರಿ ಆಲ್ (ಇಸ್ರೇಲ್) ಎಂಬ ಉಲ್ಲೇಖವುಳ್ಳ ಮೆರೆಸ್ಪತಹ್ ದಂಡಯಾತ್ರೆ ಶಾಸನ. 2ನೆಯ ರ‍್ಯಾಮ್ಸೆಸ್‌ನ ಮಗ ಮೆರೆಸ್ಪತಹ್ 3ನೆ ಅಮೆನೊಫಿಸ್ ಸಮಾಧಿಯನ್ನು ಒಡೆದು ಇದರ ಭಗ್ನಾವಶೇಷಗಳಿಂದ ಕಟ್ಟಿಸಿದ ಮೆರೆಸ್ಪತಹ್ ದೇವಾಲಯದ ಉತ್ಖನನದಲ್ಲಿ ಈ ಶಾಸನವು ಸಿಕ್ಕಿತು. ಈಜಿಪ್ಟ್ ಶಾಸನಗಳಲ್ಲಿ ಪ್ರಥಮ ಬಾರಿಗೆ ಇಸ್ರೇಲ್ ಉಲ್ಲೇಖ ಬರುವುದು ಈ ಶಾಸನದಲ್ಲೆ ಮೊದಲು. ಆದ್ದರಿಂದ ಇದು ಇಸ್ರೇಲ್ ಶಾಸನವೆಂದೆ ಪ್ರಖ್ಯಾತವಾಗಿದೆ.

1928ರಲ್ಲಿ ಲುಕ್ಸರ್‌ನಲ್ಲಿ ಅತಿ ದೊಡ್ಡ ಸ್ಮಶಾನ ನೆಲೆಯ ಉತ್ಖನನವನ್ನು ಹೊಸ ವಿಧಾನದಿಂದ ಕೈಗೊಂಡನು. ಈ ಮಧ್ಯೆ 1926ರಿಂದಲೆ ಕೊನೆಯವರೆಗೂ ಪ್ಯಾಲಸ್ತೀನಿನಲ್ಲಿಯ ಟೆಲ್–ಎಲ್–ಜೆಮ್ಮಹ್, ಟೆಲ್–ಎಲ್–ಅಜ್ಜುಲ್ ಹಾಗು ಇನ್ನೂ ಇತರ ಕೆಲವು ಮಹತ್ತ್ವದ ನೆಲೆಗಳಲ್ಲಿ ಉತ್ಖನನಗಳನ್ನು ಮುಂದುವರೆಸಿದನು. 1933ರಲ್ಲಿ ನಿವೃತ್ತಿಯಾದ ಮೇಲೆ ಜೆರುಸಲೇಂನಲ್ಲಿಯ ಬ್ರಿಟಿಷ್ ಸ್ಕೂಲ್ ಆಫ್ ಆರ್ಕಿಯಾಲಜಿಯಲ್ಲಿ ತನ್ನ ಪತ್ನಿಯೊಡನೆ ನೆಲೆಸಿದನು. ಇಲ್ಲಿಯೆ 1942ರಲ್ಲಿ ಮೃತನಾದನು. (ಎ.ಎಸ್.)

**ಫ್ಲೀಟ್, ಜೆ.ಎಫ್.:** 1847–1917. ಭರತಖಂಡಕ್ಕೂ ಕನ್ನಡನಾಡಿಗೂ ವಿಶೇಷವಾದ ಸೇವೆ ಸಲ್ಲಿಸಿದ ಪಾಶ್ಚಾತ್ಯ ವಿದ್ವಾಂಸರಲ್ಲೊಬ್ಬ. ಜಾನ್ ಫೆಯ್ಥ್‌ಫುಲ್ ಫ್ಲೀಟ್ ಇವನ ಪೂರ್ಣ ಹೆಸರು. ಇಂಗ್ಲೆಂಡಿನ ಚಿಸ್ವಿಕ್‌ನಲ್ಲಿ ಜನಿಸಿದ. ಜಾನ್ ಜಾರ್ಜ್ ಫ್ಲೀಟ್ ಮತ್ತು ಎಸ್ತರ್ ಫೆಯ್ತ್‌ಫುಲ್ ಇವನ ತಂದೆ ತಾಯಿಗಳು. ವಿದ್ಯಾಭ್ಯಾಸ ಲಂಡನ್ ವಿಶ್ವವಿದ್ಯಾಲಯದಲ್ಲಿ. ಐಚ್ಛಿಕ ಭಾಷೆಯಾಗಿ ಸಂಸ್ಕೃತವನ್ನು ಅಭ್ಯಾಸಮಾಡಿದ. 1865ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸಿಗೆ ನೇಮಕಗೊಂಡು ಮುಂಬಯಿ ಸರ್ಕಾರದ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಯನ್ನು ನಿರ್ವಹಿಸಲು ಮೊಟ್ಟಮೊದಲು 1867ರಲ್ಲಿ ಭಾರತಕ್ಕೆ ಬಂದ. ಕೊಲ್ಲಾಪುರ, ಸೋಲಾಪುರ, ಬೆಳಗಾಂವಿ ಮುಂತಾದ ಸ್ಥಳಗಳಲ್ಲಿ ಕೆಲಸಮಾಡಿದ. ಅಸಿಸ್ಟೆಂಟ್ ಕಲೆಕ್ಟರ್, ವಿದ್ಯಾಧಿಕಾರಿ, ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟ್, ಶಾಸನಶಾಸ್ತ್ರಜ್ಞ, ಜೂನಿಯರ್ ಕಲೆಕ್ಟರ್, ಸೀನಿಯರ್ ಕಲೆಕ್ಟರ್, ಕಸ್ಟಮ್ಸ್ ಕಮಿಷನರ್ ಮುಂತಾದ ಹುದ್ದೆಗಳನ್ನು ನಿರ್ವಹಿಸಿ 1897ರಲ್ಲಿ ನಿವೃತ್ತನಾದ. ಫ್ಲೀಟ್ ಸಮರ್ಥ ಆಡಳಿತಾಧಿಕಾರಿಯಾಗಿದ್ದಂತೆಯೇ ಶ್ರೇಷ್ಠ ಸಂಶೋಧಕನೂ ಆಗಿದ್ದ. ತನ್ನ ಅಧಿಕೃತ ಕರ್ತವ್ಯಗಳೊಡನೆ ವೈಯಕ್ತಿಕ ಅಧ್ಯಯನಗಳನ್ನೂ ನಿರ್ವಹಿಸುತ್ತಿದ್ದ. ಭಾರತಕ್ಕೆ ಬಂದೊಡನೆಯೆ ಇವನು ಮುಂಬಯಿ ಪ್ರಾಂತದ ಶಾಸನಗಳ ಸಂಶೋಧನೆಗೆ ತೊಡಗಿದ. ಮೊದಮೊದಲು ಇವನ ಲೇಖನಗಳು ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆಯ ಪತ್ರಿಕೆಯಲ್ಲಿ ಪ್ರಕಟವಾದುವು. 1872ರಲ್ಲಿ ಇಂಡಿಯನ್

ಆಂಟಿಕ್ವೆರಿ ಪತ್ರಿಕೆ ಪ್ರಾರಂಭವಾದಾಗ ಫ್ಲೀಟ್ ಅದರಲ್ಲಿ ಬರೆಯತೊಡಗಿದ; ಏಳು ವರ್ಷಗಳ ಕಾಲ (1885–91) ಇದರ ಸಂಪಾದಕನಾಗಿದ್ದ. ಶಾಸನಕ್ಷೇತ್ರದಲ್ಲಿ ಫ್ಲೀಟ್ ಹೆಸರು ದೊಡ್ಡದು; ಭಾರತೀಯ ಶಾಸನಶಾಸ್ತ್ರ ಪಿತಾಮಹ ಎಂದು ಇವನನ್ನು ಕರೆಯಬಹುದು. ಶಾಸನ ಶಾಸ್ತ್ರವಲ್ಲದೆ ಭೂಗೋಳ, ಖಗೋಳ, ಇತಿಹಾಸ, ಭಾಷಾಶಾಸ್ತ್ರ, ಲಿಪಿಶಾಸ್ತ್ರ ಮುಂತಾದವುಗಳಲ್ಲಿ ಇವನು ಪರಿಣತನಾ ಗಿದ್ದ. ಸಂಸ್ಕೃತ, ಕನ್ನಡ ಸಾಹಿತ್ಯಗಳಲ್ಲಿ ಇವನಿಗೆ ಆಳವಾದ ಪರಿಶ್ರಮವಿತ್ತು. ಈತ ಬರೆದ ಪಾಳಿ, ಸಂಸ್ಕೃತ ಮತ್ತು ಹಳಗನ್ನಡ ಶಾಸನಗಳು ಎಂಬ ಕೃತಿ 1878ರಲ್ಲಿ ಪ್ರಕಟವಾಯಿತು. ಗುಪ್ತಯುಗದ ಪ್ರಾರಂಭ ವನ್ನು ನಿರ್ಣಯಿಸುವ ಮತ್ತು ಗುಪ್ತರ ಕಾಲದ ಅಧ್ಯಯನದ ಬಗ್ಗೆ ಬಹು ಉಪ ಯುಕ್ತವಾದ ಪ್ರಾಚೀನ ಗುಪ್ತರಾಜರು ಮತ್ತು ಅವರ ಉತ್ತರಾಧಿಕಾರಿಗಳ ಶಾಸನಗಳು ಎಂಬ ಮಹತ್ತ್ವದ ಕೃತಿ 1888ರಲ್ಲಿ ಹೊರಬಂತು. ಮುಂಬಯಿ ಪ್ರಾಂತದ ಕನ್ನಡ ಜಿಲ್ಲೆಗಳ ರಾಜವಂಶಗಳು ಎಂಬ ಮತ್ತೊಂದು ಅಮೂಲ್ಯಗ್ರಂಥ 1895ರಲ್ಲಿ ಪ್ರಕಟವಾಯಿತು. ಈತ ನಿವೃತ್ತನಾಗಿ ಇಂಗ್ಲೆಂಡಿಗೆ ಮರಳಿದ ಮೇಲೂ ತನ್ನ ಅಧ್ಯಯನವನ್ನು ಮುಂದುವರಿಸಿ ಎಪಿಗ್ರಾಫಿಯ ಇಂಡಿಕ, ಇಂಪೀರಿಯಲ್ ಗೆಜೆಟಿಯರ್ ಮುಂತಾದ ಸಂಪುಟಗಳಿಗೆ ನಿಯತವಾಗಿ ಬರೆಯುತ್ತಿದ್ದ. ಇಂಪೀರಿಯಲ್ ಗೆಜೆಟಿಯರ್‌ನ 2ನೆಯ ಸಂಪುಟದಲ್ಲಿ ಪ್ರಕಟಗೊಂಡಿರುವ ಶಾಸನಶಾಸ್ತ್ರ ಎಂಬ ಇವನ ದೀರ್ಘ ಲೇಖನ ಇಂದಿಗೂ ಪ್ರಮಾಣಭೂತವಾಗಿದೆ.

ಫ್ಲೀಟ್‌ನ ಕಾರ್ಯ ಅಖಿಲಭಾರತ ವ್ಯಾಪ್ತಿಯದಾದರೂ ಕರ್ನಾಟಕದೊಡನೆ ಇವನಿಗಿದ್ದ ಸಂಬಂಧ ಬಹು ನಿಕಟವೂ ಆತ್ಮೀಯವೂ ಆದುದಾಗಿತ್ತು. 1872ರಲ್ಲಿ ಇವನು ಮುಂಬಯಿ ಪ್ರಾಂತದ ದಕ್ಷಿಣ ವಿಭಾಗದ ವಿದ್ಯಾಧಿಕಾರಿಯಾದ ಮೇಲೆ ಕನ್ನಡ ಭಾಷೆ ಸಾಹಿತ್ಯಗಳನ್ನು ಅಭ್ಯಸಿಸಿ ನೂರಾರು ಕನ್ನಡ ಶಾಸನಗಳನ್ನು ಟೀಕೆ ಟಿಪ್ಪಣಿಗಳೊಡನೆ ಪ್ರಕಟಿಸಿದ. ಈ ರಂಗದಲ್ಲಿ ಇವನು ರೈಸ್‌ನಂತೆ ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾನೆ. ಹಳೆಯ ಮೈಸೂರು ರೈಸ್‌ನ ಕಾರ್ಯಕ್ಷೇತ್ರವಾದರೆ ಫ್ಲೀಟನದು ಉತ್ತರ ಕರ್ನಾಟಕ.

ಹಲವು ಕನ್ನಡ ಲಾವಣಿಗಳನ್ನು ಸಂಗ್ರಹಿಸಿ, ಇಂಗ್ಲಿಷ್ ಅನುವಾದ ಸಹಿತ ಪ್ರಕಟಿಸಿ ಕನ್ನಡ ಜನಪದ ಸಾಹಿತ್ಯ ಸಂಗ್ರಹಕ್ಕೆ ಆದ್ಯನಾದ ಕೀರ್ತಿಯೂ ಫ್ಲೀಟ್‌ನಿಗೆ ಸಲ್ಲಬೇಕು. ಕವಿರಾಜಮಾರ್ಗದ ಕರ್ತೃತ್ವದ ಬಗ್ಗೆಯೂ ಇವನು ವಿಚಾರ ಮಾಡಿದ್ದಾನೆ. ಕನ್ನಡ ಭಾಷೆ ಸಾಹಿತ್ಯಗಳ ಬಗ್ಗೆ ಇವನಿಗೆ ಬಹಳ ಅಭಿಮಾನವಿತ್ತು. (ಸಿ.ಪಿ.ಕೆ.;ಕೆ.ಆರ್.)

**ಫೂ ಖಾವೋ ಥಾಂಗ್:** ಥೈಲೆಂಡ್ ದೇಶದ ಒಂದು ನಗರ. ಇಲ್ಲಿ ಇತ್ತೀಚೆಗೆ ಫ್ರಾನ್ಸ್ ದೇಶದ ರಾಷ್ಟ್ರೀಯ ವಿಜ್ಞಾನ ಕೇಂದ್ರ ಮತ್ತು ಥೈಲೆಂಡಿನ ಸಿಲ್ಪಕೊರನ್ ವಿಶ್ವವಿದ್ಯಾಲಯದ ಥಾಯ್–ಫ್ರೆಂಚ್ ಪುರಾತತ್ತ್ವ ತಂಡ ನಡೆಸಿದ ಉತ್ಖನನದಲ್ಲಿ ದೊರೆತ ಮಣ್ಪಾತ್ರೆಗಳ ಚೂರುಗಳಲ್ಲಿ ಒಂದರ ಮೇಲೆ ಗೀಚಿದ ಮೂರು ಅಕ್ಷರಗಳ ಒಂದು ಸಾಲನ್ನು ಗುರುತಿಸಲಾಗಿದೆ. ಇವುಗಳ ಲಕ್ಷಣಗಳನ್ನು ಪರಿಶೀಲಿಸಿ ಇವು ಸು.2ನೆಯ ಶತಮಾನದ ತಮಿಳು_ಬ್ರಾಹ್ಮಿ ಎಂದೂ ಈ ಅಕ್ಷರಗಳನ್ನು ತು ರ ಒ ಎಂದೂ ಓದಲಾಗಿದೆ. ಐರಾವತ ಮಹಾದೇವನ್ ಅವರು ಇದು ಬಹುಶಃ ತಮಿಳು ಭಾಷೆಯ ತುರುವೋನ್ ಶಬ್ದವೆಂದು ಅಭಿಪ್ರಾಯಪಟ್ಟಿದ್ದಾರೆ. ತುರುವೋನ್ ಎಂದರೆ ಸನ್ಯಾಸಿ ಎಂದರ್ಥ. ಥೈಲೆಂಡಿಗೆ ಹೋದ ತಮಿಳುನಾಡಿನ ಒಬ್ಬ ಬೌದ್ಧ ಭಿಕ್ಷುವಿನ ಪಾತ್ರೆಯ ತುಣುಕು ಇದಾಗಿರಬಹುದೆಂದು ಅಭಿಪ್ರಾಯಪಡಲಾಗಿದೆ. ಪ್ರಾಚೀನ ಆಗ್ನೇಯ ರಾಷ್ಟ್ರಗಳಲ್ಲಿ ಇದುವರೆಗೂ ದೊರೆತ ಶಾಸನಗಳಲ್ಲಿ ಇದೇ ಅತ್ಯಂತ ಪ್ರಾಚೀನ ತಮಿಳು ಭಾಷೆಯ ಶಾಸನವೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ದಕ್ಷಿಣ ಥೈಲೆಂಡಿನ ಕುವನ್ ಲುಕ್ ಪತ್ ರೇವು ಪಟ್ಟಣದಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಿರುವ 3–4ನೆಯ ಶತಮಾನದ ತಮಿಳು–ಬ್ರಾಹ್ಮಿ ಲಿಪಿಯಲ್ಲಿಯ ತಮಿಳು ಭಾಷೆಯ ಶಿಲಾಶಾಸನವನ್ನು ನೆನಪಿಸಿಕೊಳ್ಳಬಹುದು. (ಎ.ಎಸ್.)

# ಬ

**ಬಂಗವಾಡಿಯ ಬಂಗರು:** ತುಳುನಾಡಿನಲ್ಲಿ ಆಳಿದ ಒಂದು ಜೈನ ಸಾಮಂತ ಮನೆತನ. ಹೊಯ್ಸಳರ ಕಾಲದಲ್ಲಿ ಪ್ರಕಟಗೊಂಡು, ವಿಜಯನಗರಕಾಲದಲ್ಲಿ ವಿಜೃಂಭಿಸಿ, ಕೆಳದಿ ಕಾಲದಲ್ಲಿ ಸೊರಗಿ, ಬ್ರಿಟಿಷರ ಕಾಲದಲ್ಲಿ ಆತ್ಮಾರ್ಪಣೆ ಮಾಡಿಕೊಂಡು ಈಗಲೂ ಉಳಿದಿರುವ ರಾಜಮನೆತನ ಇವರದು. ವ್ಯವಸಾಯ, ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಂದ ರಾಜ್ಯವನ್ನು ಸಂಪತ್ಭರಿತವನ್ನಾಗಿ ಮಾಡಿದ್ದ ಈ ರಾಜರನ್ನು ಆ ಕಾಲದ ಜನ ಹಣವಿನ ಬಂಗ ಎಂದು ಸಂಬೋಧಿಸಿದ್ದರು.

ಇವರ ಮೂಲದ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ತಲಕಾಡಿನ ಗಂಗರೊಂದಿಗೆ ಇವರ ಮೂಲ ಇರಬಹುದು ಎಂದು ಅಭಿಪ್ರಾಯವಿದೆ. ಚೋಳರಿಂದ ಸೋತ ಗಂಗರು ಘಟ್ಟ ಇಳಿದು ಸುರಕ್ಷಿತ ಸ್ಥಳವನ್ನು ಅರಸುತ್ತಾ ಇಲ್ಲಿಗೆ ಬಂದರು. ಇಂದಿನ ಬೆಳ್ತಂಗಡಿ ತಾಲ್ಲೂಕಿನ ಘಟ್ಟಪ್ರದೇಶದ ಬುಡದಲ್ಲಿ ಸುರಕ್ಷಿತ ತಾಣ ಹುಡುಕಿ ಅಲ್ಲಿ ನೆಲೆನಿಂತರು, ನಿಂತ ಸ್ಥಳವನ್ನು ಬಂಗವಾಡಿ ಎಂತಲೂ ತಮ್ಮನ್ನು ಬಂಗರು ಎಂದೂ ಕರೆದುಕೊಂಡರು. ಹೊಯ್ಸಳ ವಿಷ್ಣುವರ್ಧನನ ಮಗ ಒಂದನೆಯ ನರಸಿಂಹ ಇವರಿಗೊಂದು ಪುಟ್ಟರಾಜ್ಯ ಕಟ್ಟಿಕೊಟ್ಟ. ಅಂದಿನಿಂದ ಬಂಗವಾಡಿ ರಾಜಧಾನಿಯಾಗಿ ಬೆಳೆಯಿತು. ಬಂಗರು ರಾಜರಾಗಿ ಪ್ರವರ್ಧಮಾನಕ್ಕೆ ಬಂದರು ಎಂಬುದು ಒಂದು ನಂಬಿಕೆ. ಈ ಬಂಗವಾಡಿಗೂ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಬಂಗವಾಡಿಗೂ ಊಹಾತ್ಮಕ ಸಂಬಂಧವನ್ನು ಇದರಲ್ಲಿ ಬೆಸೆಯಲಾಗಿದೆ. ಚೋಳ, ಗಂಗ ಮತ್ತು ಹೊಯ್ಸಳ ಇತಿಹಾಸವನ್ನು ಗಮನಿಸಿದಾಗ ಮೇಲಿನ ಕಥೆಯನ್ನು ಪುಷ್ಟೀಕರಿಸಬಲ್ಲ ಯಾವ ದಾಖಲೆಯೂ ಲಭ್ಯವಿಲ್ಲ.

ಕುಂದಾಪುರ ತಾಲ್ಲೂಕಿನ ಬೈಂದೂರು ಸಮೀಪ ಗಂಗನಾಡು ಎಂಬ ಆಡಳಿತ ಭಾಗ ವಿಜಯನಗರ ಕಾಲದಲ್ಲಿತ್ತು. ಈಗಲೂ ಆ ಪ್ರದೇಶ ಅದೇ ಹೆಸರಿನಿಂದ ಕರೆಯಲ್ಪಟ್ಟಿದೆ. ಇದರ ಆಳ್ವಿಕೆಯನ್ನು ಜೈನ ಸಾಮಂತ ವಂಶವೊಂದು ನಡೆಸುತ್ತಿತ್ತು. ಇದಕ್ಕೂ ಬಂಗವಾಡಿಗೂ ಏನಾದರೂ ಸಂಬಂಧ ಇತ್ತೆ ಎನ್ನುವುದು ಹೊಸ ಶೋಧಗಳಿಂದ ತಿಳಿಯಬೇಕಷ್ಟೆ. ರಾಜ ಕಾಮಿರಾಯ ಬಂಗ ಅರಸನ ಆಶ್ರಿತ ಕವಿ ವಿಜಯವರ್ಣೀ ಬರೆದಿರುವ ಶೃಂಗಾರಾರ್ಣವ ಚಂದ್ರಿಕಾ ಎಂಬ ಗ್ರಂಥದಲ್ಲಿ ಬಂಗ–ಹೊಯ್ಸಳ ಕಥೆಯನ್ನು ಉಲ್ಲೇಖಿಸಲಾಗಿದೆ. ಐತಿಹಾಸಿಕವಾಗಿ ನೋಡುವುದಾದರೆ ಮೂಲ್ಕಿ ಬಪ್ಪನಾಡಿನ 1410ಕ್ಕೆ ಸೇರುವ ಶಿಲಾಶಾಸನದಲ್ಲಿ ಪಾಂಡ್ಯಪ್ಪರಸರಾಜ ಬಂಗರು ಎಂಬ ಉಲ್ಲೇಖವಿದೆ. ಶಾಸನೋಕ್ತವಾಗಿ ಕಾಣಿಸಿಕೊಳ್ಳುವ ಪ್ರಥಮ ಬಂಗರಾಜ ಈತ. ಇಲ್ಲಿಂದ ಮುಂದೆ ಶಾಸನಗಳಲ್ಲಿ ಬಂಗರಾಜರ ಹೆಸರು ಇರುವುದನ್ನು ಕಾಣಬಹುದು. 1340ರ ಹೊಯ್ಸಳ ಮೂರನೆಯ ಬಲ್ಲಾಳನ ತೇಕಕಾರಂದೂರು ಶಾಸನದಲ್ಲಿ ಬಂಗರು ಅಜಿಲರು ಕೊಟೆಗ್ರಾಮವನ್ನು ಕೆಡಿಸಿದಕ್ಕೆ ರಾಜ ಹೊಯ್ಸಳ ಬಲ್ಲಾಳ ಅವರಿಗೆ ದಂಡವಿಧಿಸಿದ ಮಾಹಿತಿ ಇದೆ.

ಆದರೆ ಇದಕ್ಕೂ ಹಿಂದೆ ಆಳುಪರಾಣಿ ಬಲ್ಲಮಹಾದೇವಿಯ 1281ಕ್ಕೆ ಸೇರುವ ಕೆಂಜೂರು (ಅಮ್ಮಂಜಿ) ಶಾಸನ ಬಂಗರ ಬಳಿಯ ಕೇಶವ ಸೆಟ್ಟಿಯನ್ನು ಉಲ್ಲೇಖಿಸಿದೆ. ಬಂಗವಂಶಕ್ಕೆ ಸೇರಿದ ಹಲ–ಕೆಲವು ಮಂದಿ ತುಳುನಾಡಿನ ಬೇರೆಬೇರೆ ಸ್ಥಳಗಳಲ್ಲಿ ತಮ್ಮದೇ ಆದ ಉದ್ಯೋಗ ನಿರತರಾಗಿ ವಾಸವಾಗಿದ್ದಿರಬೇಕು. ಅಂತು ಹದಿಮೂರನೆಯ ಉತ್ತರಾರ್ಧದಿಂದ ಬಂಗರ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ.

ಪಾಂಡ್ಯಪ್ಪರಸ ಬಂಗನನ್ನು ಪ್ರಥಮವಾಗಿ ಹೆಸರಿಸಲ್ಪಟ್ಟ ಬಂಗರಾಜ ಎಂದು ಗುರುತಿಸಬಹುದು. ಅನಂತರ ಬಂದವರು ವಿಠ್ಠಲದೇವಿ ಬಂಗ ಮತ್ತು ಈಕೆಯ ಮಗ ಪಾಂಡ್ಯಪ್ಪರಸಬಂಗ 1418–40. ಬಸವಣ್ಣರಸ ಬಂಗ ಆದರೆ ಇವನ ಹಿಂದೆ ಮತ್ತು ಮುಂದೆ ಇದ್ದವರೊಂದಿಗೆ ಇವನ ಸಂಬಂಧ ಏನೆಂದು ತಿಳಿಯುವುದಿಲ್ಲ. ಅನಂತರ ಬಂದ ಕಾಮಿರಾಯ ಅರಸ ಬಂಗ (ಸು. 1460–80) ಈತ ಕವಿ ವಿಜಯವರ್ಣಿಯ ಪೋಷಕ. ಈತ ಕಳಸ–ಕಾರ್ಕಳದ ದೊರೆ ಪಾಂಡ್ಯಪ್ಪರಸನೊಂದಿಗೆ ಕಾದಾಟ ತ್ಯಜಿಸಿ ಪರಸ್ಪರ ರಕ್ಷಣಾ ಒಪ್ಪಂದವೊಂದನ್ನೂ (1416) ಮಾಡಿಕೊಂಡ. ಇದೇ ರೀತಿಯಲ್ಲಿ ಬೈಲಂಗಡಿಯ ಮೂಲರಾಜ ಪೆನ್ನೆಂಣ ಮೂಲನೊಂದಿಗೂ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡ. ಹೊಸದಾಗಿ ದೊರೆತ (ನಿಡುಗಲ್ಲು) ಶಾಸನದಲ್ಲಿ ಈ ವಿಷಯವಿದೆ. ಆದರೆ ಈತ ಮಾಡಿರಬಹುದಾದ ಯಾವುದೋ ತಪ್ಪಿಗೆ ಶಿಕ್ಷೆ ಅನುಭವಿಸಿದ. ಮಂಗಳೂರಿನ ರಾಜ್ಯಪಾಲನಾದ ವಿಠ್ಠರಸವೊಡೆಯನು ಕೊಡಿಯಾಲದಲ್ಲಿದ್ದ ಬಂಗರ ಮನೆಯನ್ನು ಸುಟ್ಟುಹಾಕಿ ನೀರುಮಾರ್ಗ ಎಂಬ ಗ್ರಾಮವನ್ನು ಹಾಳು ಮಾಡಿ ಪ್ರಾಯಶಃ ಅಲ್ಲಿಯವರೆಗಿನ ಭೂ ಪ್ರದೇಶವನ್ನು ತನ್ನ ವಶಮಾಡಿಕೊಂಡು ಪರಿಹಾರರೂಪದಲ್ಲಿ ಬಂಗರಾಜನಿಗೆ ಉಜಿರೆ ಗ್ರಾಮ ಕೊಟ್ಟ.

ಕಾಮಿರಾಯ ಅರಸ ಬಂಗನ ತರುವಾಯ ಆಳಿದವರು ವೀರನರಸಿಂಹಬಂಗ (1480–28), ವೀರನರಸಿಂಹ ಲಕ್ಷ್ಮಪ್ಪರಸ ಬಂಗ (1528–58), ವೀರನರಸಿಂಹ ಶಂಕರಾ ದೇವಿ (ಬಂಗರಾಜ ಒಡೆಯ ಸು.1558–90). ವೀರನರಸಿಂಹ ಲಕ್ಷ್ಮಪ್ಪರಸ ಬಂಗ (1590–1630) ಮತ್ತು ವೀರನರಸಿಂಹ ಶಂಕರಾದೇವಿ (1630–80). ಇವರುಗಳ ಬಗ್ಗೆ ದೊರೆತಿರುವ ಮಾಹಿತಿ ತೀರ ಅಲ್ಪ. ಗುರುವಾಯನ ಕೆರೆ ಬಸದಿಗೆ ದಾನ ಮಾಡಿದ (1484). ಚೌಟರೊಂದಿಗೆ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡಿದ್ದ. ನರಸಿಂಹನ ಅನಂತರ ಬಂದ ಲಕ್ಷ್ಮಪ್ಪರಸ ಬಂಗ ಅಜಿಲರೊಂದಿಗೆ ಯುದ್ಧ ಮಾಡಿದ ಮತ್ತು ತಾನು ಮದುವೆಯಾಗಿದ್ದ ಜೈಲಗಂಡಿ ಮೂಲವಂಶದ ರಾಜಕುಮಾರಿ ಸೋಮಲಾದೇವಿಯಿಂದ ತನ್ನ ಅಂತ್ಯ ಕಂಡುಕೊಂಡ. ಈ ವೇಳೆಗೆ ವಿಜಯನಗರದ ಪತನವಾಗಿ ಇಡೀ ತುಳುನಾಡು ಕೆಳದಿ ಅರಸರ ವಶವಾಗಿತ್ತು. ಪೋರ್ಚುಗೀಸರು ತಮ್ಮ ಪ್ರಾಬಲ್ಯವನ್ನು ವೃದ್ಧಿಸಿಕೊಂಡಿದ್ದರು. ಬಯಲಂಗಡಿ ಬಸದಿಯನ್ನು 1611ರ ಶಾಸನದ ಪ್ರಕಾರ ವೀರನರಸಿಂಹ ಲಕ್ಷ್ಮಪ್ಪರಸ ಬಂಗನು ತನ್ನ ರಾಜ್ಯವನ್ನು ಕೆಳದಿ ಅರಸರ ಪ್ರಾಬಲ್ಯದಿಂದ ಕಳೆದುಕೊಂಡು ಒಂದು ಸಣ್ಣ ಪ್ರದೇಶದ ಒಡೆಯನಾಗಿದ್ದು ಅದನ್ನು ತೋಟವಾಡಿಯಿಂದ ಆಳುತ್ತಿದ್ದ. ವೀರನರಸಿಂಹ ಲಕ್ಷ್ಮಪ್ಪರಸ ಬಂಗನು ಉಲ್ಲಾಳದ ಚೌಟರಾಜಕುಮಾರಿ ಅಬ್ಬಕ್ಕದೇವಿಯನ್ನು ಮದುವೆಯಾಗಿದ್ದ. ಈರ್ವರ ಸಂಬಂಧ ಮಧುರವಾಗಿರಲಿಲ್ಲ. ಇಟಲಿಯ ಪ್ರವಾಸಿಗನಾದ ಡೆಲ್ಲಾವೆಲ್ಲ ಈ ಬಗ್ಗೆ ವಿವರ ನೀಡಿದ್ದಾನೆ. ಕುಂಟುತ್ತಾ ಸಾಗಿದ ಬಂಗರಾಜ್ಯಕ್ಕೆ ಊರುಗೋಲಾದವರು ವೀರನರಸಿಂಹ ಲಕ್ಷ್ಮಪ್ಪರಸನ ಸೋದರಿ ಶಂಕರಾದೇವಿ. ಆದರೆ ಕೆಳದಿ ಅರಸರ ಸೈನಿಕ ಕಾರ್ಯಾಚರಣೆ ಬಂಗರನ್ನು ದುರ್ಬರಸ್ಥಿತಿಗೆ ತಳ್ಳಿತು. ಗುಟುಕುಜೀವವಿದ್ದ ಈ ಅರಸರಿಗೆ ಹೈದರ್ ಆಲಿಯ ಆಗಮನ ಮತ್ತೊಂದು ಆಘಾತನೀಡಿತು (1763–64). 1799ರಲ್ಲಿ ಟಿಪ್ಪುಸುಲ್ತಾನನ ಮರಣದಿಂದ (ನಾಲ್ಕನೆಯ ಮೈಸೂರು ಯುದ್ಧ) ಬ್ರಿಟಿಷರು ಕರಾವಳಿಯ ಮೇಲೆ ತಮ್ಮ ಹಿಡಿತ ಸಾಧಿಸಿದರು. ಜನರ ಮನಸ್ಸನ್ನು ತಮ್ಮತ್ತ ಒಲಿಸಿಕೊಳ್ಳುವ ಸಲುವಾಗಿ ಬಂಗರಾಜ ಲಕ್ಷ್ಮಪ್ಪರಸ ಬಂಗನಿಗೆ ಪಟ್ಟಾಭಿಷೇಕ ನೆರವೇರಿಸಿದರು (1800). ಆದರೆ ಕೊಡಗಿನ ಕಲ್ಯಾಣಸ್ವಾಮಿ ಬ್ರಿಟಿಷರ ವಿರುದ್ಧ ನಡೆಸಿದ ದಂಗೆಯಲ್ಲಿ (1833) ಸೇರಿಕೊಂಡ ಲಕ್ಷ್ಮಪ್ಪರಸಬಂಗನನ್ನು ಬ್ರಿಟಿಷರು ಸೆರೆಹಿಡಿದು ಮಂಗಳೂರಿನ ಬಿಕ್ರನಕಟ್ಟೆಯಲ್ಲಿ (1837) ಗಲ್ಲಿಗೇರಿಸಿದರು. ಹಳೆಯ ನೆನಪುಗಳನ್ನು ಹೊತ್ತ ಕುಟುಂಬ ಬಂಗವಾಡಿಯಲ್ಲಿ ಈಗಲೂ ಇದೆ.

12ನೆಯ ಶತಮಾನದಿಂದ 19ನೆಯ ಶತಮಾನದ ವರೆಗಿನ ಬಂಗರ ವಂಶಾವಳಿ ಆಶ್ಚರ್ಯ ಹುಟ್ಟಿಸುವಷ್ಟು ಕರಾರುವಾಕ್ಕಾಗಿದೆ. ಆದರೆ ಶಾಸನಗಳು ಕೊಡುವ ಮಾಹಿತಿಗೂ ಕೈಫಿಯತ್ತಿನ ಮಾಹಿತಿಗೂ ಬಹಳ ಅಂತರವಿದೆ. ಬಂಗರ ಬಗ್ಗೆ ಬರೆದಿರುವ ವಿದ್ವಾಂಸರು ಕೈಫಿಯತ್ ಮಾಹಿತಿಯನ್ನು ಅವಲಂಬಿಸಿದ್ದಾರೆ. ಆದರೆ ಕೆಲವೆಡೆಗಳಲ್ಲಿ ತಪ್ಪು ವಿವರಗಳಿವೆ.

ಸಾಂಸ್ಕೃತಿಕವಾಗಿ ಇವರ ಕೊಡುಗೆ ಅಲ್ಪ. ಬೇರೆಯವರು ಕಟ್ಟಿಸಿದ ಬಸದಿ, ದೇವಾಲಯಗಳಿಗೆ ಇವರು ದಾನಕೊಟ್ಟಿದ್ದನ್ನು ಕಾಣಬಹುದು. ಇವರ ಉಚ್ಛ್ರಾಯ ಕಾಲದಲ್ಲಿ ಕವಿ ವಿಜಯವರ್ಣಿಯನ್ನು ಮಾತ್ರ ಕಾಣುತ್ತೇವೆ. ಇಲ್ಲಿದ್ದ ಒಂದೇ ಒಂದು ಚೋದ್ಯ ಸಂಗತಿ ಎಂದರೆ ಮುನಿ ಲಲಿತ ಕೀರ್ತಿಭಟ್ಟಾರಕರ ದಿವ್ಯ ಉಪಸ್ಥಿತಿಯಲ್ಲಿ ಶ್ರವಣ ಕುಂಡದಲ್ಲಿ ಗೊತ್ತಾದ ದಿನ ಮತ್ತು ಸಮಯದಲ್ಲಿ ಕಲ್ಲುಗುಂಡುಗಳು ನೀರಿನಲ್ಲಿ ತೇಲುತ್ತಿದ್ದುದು, ಈಗ ಈ ವಾರ್ಷಿಕ ಉತ್ಸವ ನಿಂತುಹೋಗಿದೆ. (ಪಿ.ಎನ್.ಎನ್.)

**ಬಂಗಾಲದ ವಿಭಜನೆ:** 1905–1917. ಲಾರ್ಡ್ ಕರ್ಜನ್ ಭಾರತದ ವೈಸರಾಯಿಯಾಗಿದ್ದ ಕಾಲದಲ್ಲಿ ನಡೆದ ಚಾರಿತ್ರಿಕ ಘಟನೆ. ಜನಾಭಿಪ್ರಾಯ ಪಡೆಯದೇ ಕರ್ಜನ್ ಕೈಗೊಂಡ ಈ ವಿಭಜನೆಯ ಬಗೆಗೆ ಚರಿತ್ರಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ದೇಶೀಯವಾದಿಗಳು ಇದನ್ನು ಭಾರತದಲ್ಲಿ ಒಡೆದು ಆಳುವ ನೀತಿಯನ್ನು ಅನುಸರಿಸಿ ಭಾರತೀಯರನ್ನು ಅಶಕ್ತಗೊಳಿಸಲು ಮಾಡಿರುವ ತಂತ್ರ ಎಂಬುದಾಗಿ ವಾದಿಸಿದ್ದಾರೆ. ಬ್ರಿಟಿಷರು ಲಕ್ಷಾಂತರ ಭಾರತೀಯರ ಆಸೆ, ಆಕಾಂಕ್ಷೆ ನಂಬಿಕೆಗಳಿಗೆ ಭಂಗವುಂಟುಮಾಡಿ ಅವರ ಮನನೋಯಿಸಿದರು. ಗಾಂಧೀಜಿಯವರ ಅಭಿಪ್ರಾಯದಂತೆ ಬಂಗಾಲದ ವಿಭಜನೆ ಬ್ರಿಟಿಷ್ ಸಾಮ್ರಾಜ್ಯದ ವಿಭಜನೆಗೆ ದಾರಿ ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ. ಗೋಪಾಲ್‌ಪುರ, ಕಚ್ಛ್, ಸಿಲ್ಹೆಟ ಈ ಮೂರು ಪ್ರಾಂತ್ಯದಲ್ಲಿ ಬಂಗಾಲಿ ಭಾಷೆ ಮಾತನಾಡುವ ಜಿಲ್ಲೆಗಳನ್ನು ಸೇರಿಸಿ 1874ರಲ್ಲಿ ಅಸ್ಸಾಂ ಎಂಬ ಹೊಸ ಪ್ರಾಂತ್ಯವನ್ನು ಮಾಡಲಾಗಿತ್ತು. ಬಂಗಾಲ, ಬಿಹಾರ, ಒರಿಸ್ಸ ಮತ್ತು ಚೋಟಾನಾಗಪುರ ಇವುಗಳನ್ನು ಸೇರಿಸಿ ಬಂಗಾಲ ಪ್ರಾಂತ್ಯವನ್ನು ಮಾಡಲಾಗಿತ್ತು. ಬಂಗಾಲ ಪ್ರಾಂತ್ಯ ಬ್ರಿಟಿಷ್ ಭಾರತದಲ್ಲಿ ಅತೀ ಹೆಚ್ಚು ಜನಸಂಖ್ಯೆ ಇರುವ ಪ್ರಾಂತ್ಯವಾಗಿತ್ತು. ಇಷ್ಟು ದೊಡ್ಡದಾದ ಪ್ರಾಂತ್ಯವನ್ನು ಒಬ್ಬ ವೈಸರಾಯ್ ಆಡಳಿತ ಮಾಡುವುದು ಕಷ್ಟದ ಕೆಲಸ. ಜೊತೆಗೆ ಆಡಳಿತಾತ್ಮಕ ತೊಂದರೆಗಳಿರುವುದರಿಂದ ಅದನ್ನು ವಿಭಾಗ ಮಾಡಬೇಕೆಂದು ಬ್ರಿಟಿಷ್ ಸರ್ಕಾರ ತೀರ್ಮಾನಿಸಿತು. ಕರ್ಜನ್ ಸರ್ಕಾರ ಚಿತ್ತಗಾಂಗ್ ವಿಭಾಗ, ಡಾಕ ಮತ್ತು ಮೆನ್‌ಸಿಂಗ್ ಈ ಮೂರು ಪ್ರಾಂತ್ಯಗಳನ್ನು ಬಂಗಾಲ ಪ್ರಾಂತ್ಯದಿಂದ ವಿಭಜಿಸಬೇಕೆಂದು ತೀರ್ಮಾನಿಸಲಾಗಿತ್ತು (1903). ಈ ಪ್ರದೇಶಗಳ ಜೊತೆಗೆ ಅಸ್ಸಾಂ ಕೂಡ ಸೇರಿತ್ತು. ಸರ್ಕಾರದ ವಿರುದ್ಧವಾಗಿ ವಿರೋಧಿಸಲು ಈ ಬಂಗಾಲ ವಿಭಜನೆಯ ಪ್ರಕಟಣೆ ಸಾಕಾಗಲಿಲ್ಲ. ವೃತ್ತಿಪರ ರಾಜಕಾರಣಿಗಳಷ್ಟೇ ಅಲ್ಲ ಜಮಿನ್ದಾರರು ಮತ್ತು ಜನಸಾಮಾನ್ಯ ಹಿಂದು – ಮುಸ್ಲಿಂ ಕೂಡ ಇದರಲ್ಲಿ ಭಾಗವಹಿಸಿದ್ದರು. ಆಂಗ್ಲೊ–ಇಂಡಿಯನ್ ಪತ್ರಿಕೆಯಾದ ಇಂಗ್ಲೀಷ್ ಮ್ಯಾನ್ ಮತ್ತು ಯುರೋಪಿಯನ್ ಬೆಂಗಾಲ ಚೇಂಬರ್ಸ್ ಆಫ್ ಕಾಮರ್ಸ್ (ಯುರೋಪಿನ

ವರ್ತಕರ ಸಂಘ) ಕೂಡಾ ಈ ಬಂಗಾಲ ವಿಭಜನೆಯನ್ನು ವಿರೋಧಿಸಿದವು. ಪಟ್ಟಣ ಹಳ್ಳಿಗಳಲ್ಲಿ ಬಂಗಾಲ ವಿಭಜನ ವಿರೋಧಿ ಸಭೆಗಳು ಪ್ರಾರಂಭಗೊಂಡು 2 ತಿಂಗಳೊಳಗೆ ಪೂರ್ವಬಂಗಾಳದಲ್ಲಿ 500ಕ್ಕಿಂತ ಹೆಚ್ಚು ಈ ರೀತಿಯ ಸಭೆಗಳು ನಡೆದವು. ಕರಪತ್ರಗಳ ಮೂಲಕ ಈ ಬಂಗಾಲ ವಿಭಜನೆಯಿಂದ ಭಾರತೀಯರಿಗೆ ಉಂಟಾಗುತ್ತಿದ್ದ ದುಷ್ಪರಿಣಾಮ ಗಳನ್ನು ಮುದ್ರಿಸಿ ವಿತರಿಸಲಾಗುತ್ತಿತ್ತು. ಲಾರ್ಡ್ ಕರ್ಜನ್ ಪೂರ್ವ ಬಂಗಾಲಕ್ಕೆ ಭೇಟಿನೀಡಿ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಈ ವಿರೋಧಿ ಚಳವಳಿಯ ವಿರುದ್ಧ ಕಾನೂನು ಸಿದ್ಧಪಡಿಸಿದ. 1903–04ರಲ್ಲಿ ಈ ಕಾನೂನನ್ನು ಜಾರಿಗೆ ತರಲಾಯಿತು.

1905ರ ಮೇನಲ್ಲಿ ಲಂಡನ್ ಸ್ಟ್ಯಾಂಡರ್ಡ್ ಪತ್ರಿಕೆ ಬಂಗಾಲ ವಿಭಜನೆಗೆ ಭಾರತದ ಗೃಹ ಕಾರ್ಯದರ್ಶಿ ಒಪ್ಪಿಗೆ ನೀಡಿದ್ದಾರೆ ಎಂದು ವರದಿಮಾಡಿತು. ಭಾರತೀಯರ ಮೇಲೆ ದಯೆ ಇಲ್ಲದ ಲಾರ್ಡ್ ಕರ್ಜನ್ 15 ಜಿಲ್ಲೆಗಳನ್ನು ಸೇರಿಸಿ ಒಂದು ಹೊಸ ಪ್ರಾಂತ ಪೂರ್ವ ಬಂಗಾಲ ರೂಪಿಸಿದ. ಅದರಲ್ಲಿ ಅಸ್ಸಾಂ ಕೂಡಾ ಸೇರಿತು. ಡಾಕಾ ಅದರ ರಾಜಧಾನಿಯಾಯಿತು. ಇನ್ನೊಂದು ಭಾಗವನ್ನು ಪಶ್ಚಿಮ ಬಂಗ್ಲಾ ಪ್ರಾಂತವನ್ನಾಗಿ ಮಾಡಿ 1905ರಲ್ಲಿ ಸರ್ಕಾರ ಆದೇಶ ಹೊರಡಿಸಿತು. ಪಶ್ಚಿಮ ಬಂಗಾಲದ ರಾಜಧಾನಿ ಕಲ್ಕತ್ತವಾಗಿತ್ತು.

ಈ ಆದೇಶ ಹೊರಬಿದ್ದ ತಕ್ಷಣ ಭಾರತಾದ್ಯಂತ ಬಂಗಾಲ ವಿಭಜನೆಯನ್ನು ವಿರೋಧಿಸಿ ಚಳವಳಿ ಆರಂಭವಾಯಿತು. ಬಂಗಾಳಿ ಹಾಗೂ ಇತರೆ ಭಾಷೆಯ ಪತ್ರಿಕೆಗಳು ಇದನ್ನು ದೊಡ್ಡ ದೇಶೀಯ ದುರಂತ ಎಂದು ಬಣ್ಣಿಸಿ, ಇದರ ದುಷ್ಪರಿಣಾಮಗಳನ್ನು ವಿವರಿಸಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದವು. ಹಿಂದು–ಮುಸ್ಲಿಮರು ಸಾವಿರಾರು ಸಂಖ್ಯೆಯಲ್ಲಿ ಭಾಗ ವಹಿಸಿದರು. ಸಭೆಗಳಲ್ಲಿ ಕೈಗೊಳ್ಳುತ್ತಿದ್ದ ನಿರ್ಧಾರಗಳನ್ನು ಆಗಾಗ ಸರ್ಕಾರಕ್ಕೆ ತಿಳಿಸಲಾಗುತ್ತಿತ್ತು. ವಿದ್ಯಾವಂತರು, ಮಹಾರಾಜರು, ನವಾಬರು, ಕಲ್ಕತ್ತ ಟೌನ್‌ಹಾಲ್‌ನಲ್ಲಿ ಸಭೆ ಸೇರಿ ಬಂಗಾಲ ವಿಭಜನೆಯನ್ನು ವಿರೋಧಿಸಿದರು. ಬಂಗಾಲದ ಜಮೀನ್ದಾರರ ಸಂಘ ಮತ್ತು ಬ್ರಿಟಿಷ್ ಇಂಡಿಯ ಅಸೋಸಿಯೇಷನ್ ಮುಂತಾದ ಅನೇಕ ಸಂಘ ಸಂಸ್ಥೆಗಳು ಸರ್ಕಾರಕ್ಕೆ ಬಂಗಾಳ ವಿಭಜನೆಯನ್ನು ವಿರೋಧಿಸಿ ಮನವಿಪತ್ರವನ್ನು ಕಳುಹಿಸಿದರು. ಎಲ್ಲಾ ವರ್ಗಕ್ಕೂ ಸೇರಿದ್ದ ಜನ ಸಭೆ ಸೇರಿ ಬಂಗಾಲ ವಿಭಜನೆಯನ್ನು ವಿರೋಧಿಸಿ 70 ಸಾವಿರ ಜನರ ಸಹಿ ಸಂಗ್ರಹಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಇವುಗಳ ಮುಖಾಂತರ ಬಂಗಾಲ ವಿಭಜನೆಗೆ ಜನರ ವಿರೋಧ ಲಾರ್ಡ್ ಕರ್ಜನ್‌ಗೆ ತಿಳಿಯಿತು. ಬಂಗಾಳಿ ದೇಶೀಯ ಶಕ್ತಿ ಕರ್ಜನನಿಗೆ ಅರ್ಥವಾಯಿತು. ಬಂಗಾಲದ ವಿಭಜನೆ ಮುಂದುವರೆದರೆ ಬ್ರಿಟಿಷ್ ಸರ್ಕಾರಕ್ಕೆ ಬರಬಹುದಾದ ಆಪತ್ತುಗಳ ಬಗ್ಗೆಯೂ ಸರ್ಕಾರಕ್ಕೆ ಮನವರಿಕೆಯಾಯಿತು. ಆದರೆ ಕರ್ಜನನಿಗೆ ಇನ್ನೊಂದು ರೀತಿಯ ಯೋಚನೆ ಇತ್ತು. ಬಂಗಾಲಿ ಮಾತನಾಡುವ ಪ್ರಾಂತಗಳನ್ನು ಇಬ್ಭಾಗಮಾಡುವ ಯೋಚನೆಯನ್ನು ಉತ್ತರ ಮತ್ತು ಅಸ್ಸಾಂ ಸೇರಿ ಪೂರ್ವ ಬಂಗಾಲ. ಬಿಹಾರ, ಒರಿಸ್ಸ ಸೇರಿ ಪಶ್ಚಿಮ ಬಂಗಾಲ, ರಚಿಸುವುದು ಕರ್ಜನ್‌ನ ಗುರಿಯಾಗಿತ್ತು. ಪೂರ್ವ ಬಂಗಾಲದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿ, ಹಿಂದುಳಿದಿದ್ದ ಮುಸ್ಲಿಮರು ಅಲ್ಲಿಯ ಹಿಂದುಗಳಿಗಿಂತ ಬ್ರಿಟಿಷ್‌ರಿಗೆ ಕೃತಜ್ಞರಾಗಿದ್ದರು. ಇನ್ನೊಂದು ಕಡೆ ಬಿಹಾರ ಮತ್ತು ಒರಿಸ್ಸ ಸೇರಿ ಬಂಗಾಲಿಗಳು ಹೆಚ್ಚು ಸಂಖ್ಯೆಯಲ್ಲಿ ಇದ್ದರು. ಅದಕ್ಕಾಗಿ ಬಂಗಾಲವನ್ನು ಪೂರ್ವ ಬಂಗಾಲ ಮತ್ತು ಪಶ್ಚಿಮ ಬಂಗಾಲವನ್ನಾಗಿ ವಿಭಾಗಿಸಬಹುದು ಎಂದು ಕರ್ಜನ್ ಯೋಚಿಸಿದ್ದ.

ಕರ್ಜನ್‌ನ ನೀತಿಯನ್ನು ವಿರೋಧಿಸಿದವರಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಸೇರಿ ಎರಡು ಪ್ರಾಂತಗಳಲ್ಲೂ ಹಿಂದುಗಳು ಅಲ್ಪ ಸಂಖ್ಯಾತರಾಗಿದ್ದು, ಹಿಂದು ಮುಸ್ಲಿಮರ ಮಧ್ಯೆ ಒಂದು ಭದ್ರವಾದ ಗೆರೆ ಎಳೆದು ಭಾರತೀಯರಲ್ಲಿದ್ದ ಏಕತೆಯನ್ನು ಮುರಿದರು. ಆದರೆ ಈ ಸತ್ಯಾಂಶವನ್ನು ಸರ್ಕಾರ ಬಹಳ ರಹಸ್ಯವಾಗಿ ಇಟ್ಟುಕೊಂಡಿತ್ತು. ಈ ಸಮಯದಲ್ಲಿ ಅನೇಕ ಹಿಂಸಾತ್ಮಕ ವಿರೋಧಿ ಚಳವಳಿ ಬಂಗಾಲದಾದ್ಯಂತ ನಡೆಯಿತು. ಸುರೇಂದ್ರನಾಥ್ ಮುಂತಾದ ಪತ್ರಿಕೋದ್ಯಮಿಗಳು ಕರ್ಜನ್ ನೀತಿಯನ್ನು ತೀವ್ರವಾಗಿ ವಿರೋಧಿಸಿದರು. ಭಾರತದ ವರ್ತಕರ ಸಂಘ ಮತ್ತು ಆಂಗ್ಲೊ–ಇಂಡಿಯನ್ ಪತ್ರಕರ್ತರ ಸಂಘದ ಪ್ರಮುಖ ವ್ಯಕ್ತಿಗಳಾದ ಅಂಬಿಕಾ ಚರಸ್, ಮುಜುಂದಾರ್, ಭೂಪೇಂದ್ರನಾಥ್ ಬಸು ಮುಂತಾದವರು ಬಂಗಾಲದ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿ ಭಾಷಣ ಮಾಡಿದರು. ದುರಾದೃಷ್ಟ ವಷಾತ್ ಅದರ ಮೂರನೇ ದಿನವೇ ಬಂಗಾಲ ವಿಭಜನೆಯನ್ನು ಅಧಿಕೃತವಾಗಿ ಪ್ರಕಟಿಸಲಾಯಿತು. ಲೆಫ್ಟಿನೆಂಟ್ ಗವರ್ನರ್‌ನನ್ನು ಉದ್ದೇಶಿಸಿ ಮಜುಂದಾರ್ ಸ್ವಾಮಿ ಅತೀ ಘೋರವಾದ ಅಪರಾಧವನ್ನು ಮಾಡಿದರೂ ಅವನಿಗೂ ಶಿಕ್ಷೆ ವಿಧಿಸುವ ಮುಂಚೆ ಆತನ ಅಪರಾಧವನ್ನು ತಿಳಿಯುವ ಹಕ್ಕಿದೆ. ಆದರೆ ಸರ್ಕಾರ 30 ಮಿಲಿಯನ್ ನಿರ್ದೋಷಿ ಪ್ರಜೆಗಳನ್ನು ನಿರ್ದಯವಾಗಿ ಅವರ ಅಪರಾಧವೇನು ಎಂಬುದನ್ನೂ ತಿಳಸದೇ ವಿಚಾರಣೆ ನಡೆಸಿದೆ ಎಂದು ತಿಳಿಸಿದರು.

ಪತ್ರಿಕೆಗಳು ಈ ಘಟನೆಯನ್ನು ತೀವ್ರವಾಗಿ ವಿರೋಧಿಸಿದವು. ಹೊಸದಾಗಿ ರೂಪಿಸ ಲಾದ ಪ್ರಾಂತದಲ್ಲಿ 17 ದಶಲಕ್ಷ ಜನ ಇದ್ದು, ಹಿಂದಿ ಮಾತನಾಡುವವರು ಇಪ್ಪತ್ತು ದಶ ಲಕ್ಷ ಜನರಿದ್ದು, ಉಳಿದವರು ಒರಿಯ ಮಾತನಾಡುವವರಿದ್ದರು. ಬಂಗಾಲ ಪ್ರಾಂತದಲ್ಲಿ ಈ ರೀತಿ ವಿಭಾಗಿಸುವುದರಿಂದ ಬಂಗಾಳಿಗಳು ಬಂಗಾಲ ಪ್ರಾಂತದ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಾರೆ. ಈ ಒಂದು ಅಂಶದ ಆಧಾರದ ಮೇಲೆ ಹಿಂದುಗಳನ್ನೂ ಮುಸ್ಲಿಮರು ಸಂಪೂರ್ಣವಾಗಿ ಬೆಂಬಲಿಸಿದರು.

ಇಂಗ್ಲಿಷ್ ಪತ್ರಿಕೆಗಳಾದ ಪಯನೀಯರ್ ಮತ್ತು ಇಂಗ್ಲಿಷ್ ಮೇಲ್‌ಗಳೂ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿದವು. ಇಂಗ್ಲೆಂಡಿನಲ್ಲೂ ವಿಭಜನೆಯ ಬಗ್ಗೆ ವಿರೋಧ ವ್ಯಕ್ತವಾಯಿತು. 1905 ಜುಲೈ 20 ರಂದು ಬಂಗಾಲ ವಿಭಜನೆಯನ್ನು ಅಧಿಕೃತವಾಗಿ ಪ್ರಕಟಿಸಿದಾಗಿನಿಂದಲೂ ಇಂಗ್ಲಿಷ್ ಶಿಕ್ಷಣಪಡೆದ ಮೇಲ್ವರ್ಗದವರು ಸುರೇಂದ್ರನಾಥ್ ಬ್ಯಾನರ್ಜಿಯವರ ನಾಯಕತ್ವದಲ್ಲಿ ಈ ವಿಭಜನೆಯನ್ನು ವಿರೋಧಿಸಿ ಚಳವಳಿ ಆರಂಭಿಸಿದರು. ಜನರು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿದರು. ಅಮೃತ್ ಬಜಾರ್ ಪತ್ರಿಕೆಯೂ ಇಂಗ್ಲಿಷ್ ವಸ್ತುಗಳನ್ನು ಬಹಿಷ್ಕರಿಸುವಂತೆ ಪ್ರಕಟಿಸಿತು.

ಬಂಗಾಲದ ವಿಭಜನೆ ಹಾಗೂ ಅದರ ವಿರುದ್ಧ ನಡೆದ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ಚಳವಳಿಗಳು ಬಂಗಾಲಿಗರನ್ನು ರಾಜಕೀಯ ವಿರುದ್ಧ ನಡೆಯುತ್ತಿದ್ದ ಚಳವಳಿ ವಿಶಾಲನೆಲೆಯನ್ನು ಪಡೆದು ಸ್ವರಾಜ್ಯಗಳಿಕೆಯ ಚಳವಳಿಯಾಗಿ ಮಾರ್ಪಟ್ಟಿತು. ಹಾಗೆಯೇ ಬ್ರಿಟಿಷ್ ವಿರೋಧ ನೀತಿಯನ್ನು ಮತ್ತು ಸ್ವಾತಂತ್ರ್ಯದ ಹಂಬಲವನ್ನು ಜನತೆಯಲ್ಲಿ ಬೆಳೆಸಿದವು. ಬಂಗಾಳಿ ಯುವಜನತೆ ಶಕ್ತಿ ದೇವತೆಯ ಸಂಕೇತವಾದ ದುರ್ಗೆಯನ್ನು ಪೂಜಿಸಿ ದೇಶ ಸೇವೆಗಾಗಿ ಮಾನಸಿಕ, ದೈಹಿಕ, ನೈತಿಕ ಹಾಗೂ ಆಧ್ಯಾತ್ಮಿಕ ಶಕ್ತಿಯನ್ನು ಪಡೆಯುವಂತೆ ಕರೆ ನೀಡಲಾಯಿತು. ಜುಲೈ 21ರಂದು ದಿನಾಜ್‌ಪುರ್ ಮಹಾರಾಜರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಲಾಲ್ ಮೋಹನ್ ಘೋಷ್ ಮಾತನಾಡಿ ಡಿಸ್ಟ್ರಿಕ್ಟ್ ಬೋರ್ಡ್ ಮುನಿಸಿಪಲ್ ಕಮಿಷನ್, ಪಂಚಾಯತ್, ಮ್ಯಾಜಿಸ್ಟ್ರೇಟರ್‌ಗಳು ಬಂಗಾಲ ವಿಭಜನೆಯನ್ನು ವಿರೋಧಿಸಿ ರಾಜೀನಾಮೆ ನೀಡಲಿದ್ದಾರೆ ಎಂದು ಪ್ರಕಟಿಸಿದರು. 1906ರಲ್ಲಿ ಬಂಗಾಲದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು ಆರಂಭಗೊಂಡು, ಕ್ರಾಂತಿಕಾರಿಗಳು ತಮ್ಮ ಯೋಜನೆಗಳನ್ನು ಜಾರಿ ಗೊಳಿಸಲು ದರೋಡೆಗೆ ಕೈ ಹಾಕಿದರು. 1907ರಲ್ಲಿ ಬಂಗಾಲ ಮತ್ತು ಪೂರ್ವ ಬಂಗಾಲಗಳ ಉಪಗವರ್ನರ್‌ಗಳನ್ನು ಕೊಲ್ಲಲು ನಡೆಸಿದ ಸಂಚು ವಿಫಲವಾದವು. (ಎಂ.ಎಸ್.)

**ಬಗಸ್ರ:** ಗುಜರಾತ್ ರಾಜ್ಯದ ರಾಜ್‌ಕೋಟ್ ಜಿಲ್ಲೆಯಲ್ಲಿರುವ ಹರಪ್ಪ ಸಂಸ್ಕೃತಿಯ ವಸತಿ ನೆಲೆ ಮತ್ತು ತಾಮ್ರ ಕೈಗಾರಿಕೆ ಕೇಂದ್ರ. ಗೋಲಾ ಧೋರೊ ಎಂದು ಸ್ಥಳೀಯವಾಗಿ ಕರೆಯಲ್ಪಡುವ ಈ ನೆಲೆ ಬಗಸ್ರ ಹಳ್ಳಿಯಿಂದ ಅರ್ಧ ಕಿಮೀ ದೂರದಲ್ಲಿ, ಕಚ್ಛ್ ಜಲಸಂಧಿಯ ಆಗ್ನೇಯ ತೀರದಲ್ಲಿದೆ. 2 ಹೆ. ವ್ಯಾಪ್ತಿಯಲ್ಲಿರುವ ಈ ನೆಲೆ ಪ್ರೌಢ ಹರಪ್ಪ ಸಂಸ್ಕೃತಿಯದಾಗಿದ್ದು, ಜೊತೆಗೆ ಸೌರಾಷ್ಟ್ರದ (ದಕ್ಷಿಣ ಗುಜರಾತ್) ಸೋರಥ್ ಹರಪ್ಪ ಮತ್ತು ಉತ್ತರ ಗುಜರಾತಿನ ಅನರ್ತದಂತಹ ಪ್ರಾದೇಶಿಕ ತಾಮ್ರ–ಶಿಲಾಯುಗ ಸಂಸ್ಕೃತಿಗಳ ಅಂಶಗಳನ್ನು ಮೈಗೂಡಿಸಿ ಕೊಂಡಿತ್ತು.



ಶಂಖ ಚಿಪ್ಪಿನ ಆಭರಣಗಳು

ಬಗಸ್ರದಲ್ಲಿ 1996ರಿಂದ ಹತ್ತು ವರ್ಷಗಳ ಕಾಲ ಸತತ ಉತ್ಖನನ ನಡೆಯಿತು. ಉತ್ಖನನದಲ್ಲಿ 7.75ಮೀ ದಪ್ಪದ, ಬೆಳವಣಿಗೆಯ ನಾಲ್ಕು ಹಂತಗಳನ್ನು ತೋರುವ ಹರಪ್ಪ ಸಂಸ್ಕೃತಿಯ ವಸತಿ ಪದರ ಕಂಡುಬಂದಿತು. ಮೊದಲ ಮೂರು ಹಂತಗಳಲ್ಲಿ ವಸತಿ ಹರಪ್ಪ ಸಂಸ್ಕೃತಿಯ ಪ್ರೌಢಾವಸ್ಥೆಯೆಂದು ಹೇಳಲಾಗುವ ನಗರದ ಹಂತದಲ್ಲಿ ಇತ್ತು. ಮೊದಲನೆಯ ಹಂತದಲ್ಲಿ ಸಣ್ಣ ಕೃಷಿಕ ಹಳ್ಳಿಯಿಂದ ವಸತಿ ಬೆಳೆದಿರುವಂತೆ ಕಾಣುತ್ತದೆ. ಈ ಹಂತದಲ್ಲಿ ಹರಪ್ಪ ಮಾದರಿಯ ಮಣ್ಣಿನ ಇಟ್ಟಿಗೆಗಳಿಂದ (1:2:4 ಪ್ರಮಾಣ) ಕಟ್ಟಿದ ಮನೆಗಳಿದ್ದವು. ಎರಡನೆಯ ಹಂತದಲ್ಲಿ ಬೃಹತ್ತಾದ ಒಂದು ಕೋಟೆ ಗೋಡೆಯನ್ನು ವಸತಿಯ ಉತ್ತರಾರ್ಧ ಭಾಗದಲ್ಲಿ ಮೂರು ಹಂತಗಳಲ್ಲಿ ಕಟ್ಟಲಾಯಿತು. ಸು. 5.2ಮೀ ದಪ್ಪವಿದ್ದ ಈ ಕೋಟೆ ಗೋಡೆಯಿಂದ ಆವೃತವಾದ ಜಾಗ 50X50ಮೀ ಮಾತ್ರವಿದ್ದು ಇದರೊಳಗೆ ಮನೆಗಳು ಮತ್ತು ಕರಕುಶಲ ಕಾರ್ಯಾಗಾರಗಳು ಇದ್ದವು. ಈ ಕೋಟೆ ವಸತಿಯ ಅಂತ್ಯದವರೆಗೂ (ಪ್ರ.ಶ.ಪೂ.ಸು.1700) ಅಸ್ತಿತ್ವದಲ್ಲಿತ್ತು. ಕೋಟೆಯ ಹೊರಗೆ, ಅಂದರೆ ಉಳಿದ ದಕ್ಷಿಣಾರ್ಧ ಭಾಗದಲ್ಲಿ ಜನವಸತಿ ಹಾಗೇ ಮುಂದುವರೆದಂತೆ ಕಾಣುತ್ತದೆ. ಈ ಹಂತದಲ್ಲಿ ವಸತಿ ಅತ್ಯಂತ ಸಮೃದ್ಧವಾಗಿತ್ತು. ಶಂಖೋದ್ಯಮದ ಅವಶೇಷಗಳು,

ಉತ್ಕೃಷ್ಟವಾದ ತಾಮ್ರದ ಉಪಕರಣಗಳು, ತ್ರಿಕೋಣಾಕಾರದ ಸುಡಾವೆ ಮಣ್ಣಿನ ಬಿಲ್ಲೆಗಳು, ಮಣ್ಣಿನ ಚಕ್ರ ಹಾಗೂ ಗಾಡಿಯ ಬಂಧ, ಚೌಕಾಕಾರದ ಅಗೇಟ್‌ಕಲ್ಲಿನ ತೂಕದ ಬಟ್ಟು, ನೀಲಿಕಲ್ಲಿನ (ವೈಡೂರ್ಯ) ಮತ್ತು ಮಂದಗೆಂಪು ಕಲ್ಲಿನ ಮಣಿಗಳು ಇವೆಲ್ಲವು ಈ ಹಂತದಲ್ಲಿವೆ. ಈ ಹಂತದ ಮಣ್ಣಿನ ಪಾತ್ರೆಗಳಲ್ಲಿ ಮೂರು ವಿಶಿಷ್ಟ ಬಗೆಗಳಿವೆ. ಇವು ಹರಪ್ಪ ಮಾದರಿಯ ಪಾತ್ರೆ, ಉತ್ತರ ಗುಜರಾತಿನ ಅನರ್ತ ಮಾದರಿಯ ಪಾತ್ರೆ ಮತ್ತು ಸ್ಥಳೀಯ ಪಾತ್ರೆಗಳು. ಮೂರನೆಯ ಹಂತ ನಗರ ಹಂತದ ಅಂತ್ಯ ಭಾಗ. ನಾಲ್ಕನೆಯ ಹಂತ ಇದರ ತರುವಾಯದ ಹಂತ. ಇವೆರಡು ಹಂತಗಳಲ್ಲಿ ಸೋರಥ್ ಹರಪ್ಪ ಸಂಸ್ಕೃತಿಯ ಲಕ್ಷಣಗಳು ಪ್ರಧಾನವಾಗಿವೆ.

ಹರಪ್ಪ ಸಂಸ್ಕೃತಿಯ ಕೇಂದ್ರ ವಲಯದಿಂದ ಬಹು ದೂರದಲ್ಲಿದ್ದ ಈ ಸಣ್ಣ ವಸತಿ ಒಂದು ಪ್ರಮುಖ ಕೇಂದ್ರವಾಗಿ ಬೆಳೆಯಲು ಸಾಧ್ಯವಾದದ್ದು ಇಲ್ಲಿದ್ದ ಕರಕುಶಲ ಕೈಗಾರಿಕೆಗಳು ಮತ್ತು ತಾಮ್ರದ ವಸ್ತುಗಳ ಉದ್ಯಮದಿಂದ. ಇಲ್ಲಿ ಶಂಖ, ಅರೆಪ್ರಶಸ್ತ ಮಣಿಗಳು, ಫಯಾನ್ಸ್ ಗಾಜು ಮೊದಲಾದುವುಗಳಿಂದ ಕರಕುಶಲ ವಸ್ತುಗಳನ್ನು ಮಾಡಲಾಗುತ್ತಿತ್ತು. ಅಲ್ಲದೆ ಶಂಖ, ಜಾಸ್ಪರ್ ಕಲ್ಲು ಮುಂತಾದ ಕಚ್ಚಾವಸ್ತುಗಳನ್ನು ಇಲ್ಲಿಂದ ಇತರ ಹರಪ್ಪ ಸಂಸ್ಕೃತಿಯ ಕಾರ್ಯಾಗಾರಗಳಿಗೆ ಒದಗಿಸಲಾಗುತ್ತಿತ್ತು. ಇಲ್ಲಿ ಈ ಎಲ್ಲ ಕಚ್ಚಾವಸ್ತುಗಳ ಭಂಡಾರವೂ ಇದ್ದಿತ್ತು. ಅಷ್ಟೇ ಅಲ್ಲದೆ ವಸತಿಯ ಆರಂಭದಿಂದಲೇ ಇಲ್ಲಿ ತಾಮ್ರೋಪಕರಣಗಳ ಕೈಗಾರಿಕೆ ಯಿತ್ತು. ವಿವಿಧ ಬಗೆಯ ತಾಮ್ರದ ಉಪಕರಣಗಳು, ಪಾತ್ರೆಗಳು ಮತ್ತು ವಿಶೇಷವಾದ ಚೂರಿಗಳನ್ನು ಇಲ್ಲಿ ದೊಡ್ಡ ಪ್ರಮಾಣದಲ್ಲಿ ತಯಾರಿಸಲಾಗುತ್ತಿತ್ತು. ಮೊದಲನೆಯ ಹಂತದಲ್ಲಿ ತಾಮ್ರದ ವಸ್ತುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಸುಸ್ಥಿತಿಯಲ್ಲಿವೆ. ಸಟ್ಟುಗದಂತಿರುವ ತ್ರಿಕೋಣಾಕಾರದ ವಸ್ತು ಮತ್ತು ಮಾಟವಾದ ತಾಮ್ರದ ತಂತಿಗಳು ಈ ಹಂತದ ವಿಶಿಷ್ಟ ಉಪಕರಣಗಳು. ಎರಡನೆಯ ಹಂತದ ಉಪಕರಣಗಳಲ್ಲಿ ಹೆಸರಿಸಬಹುದಾದುವು ಕಿಲುಬುಗಟ್ಟಿದ ದಪ್ಪ ತಂತಿಗಳು, ಒಂದು ದೊಡ್ಡ ಭರ್ಜಿಯ ಮೊನೆ, ಒಂದು ದಪ್ಪ ಉಳಿ, ಮೀನುಗಾಳದ ಕೊಕ್ಕೆಗಳು, ಸುರುಳಿಗಳು ಮತ್ತು ಮೊನೆಯಿರುವ ಉದ್ದದ ಸೂಜಿ. ತಾಮ್ರೋಪಕರಣಗಳಲ್ಲಿ ವಿಶಿಷ್ಟವಾದುವು ಸುಸ್ಥಿತಿಯಲ್ಲಿದ್ದ ಮೂಳೆಯ ಹಿಡಿಕೆ ಅಥವಾ ಒರೆಯ ಸಹಿತವಾದ ಚೂರಿಗಳು. ಇವು ಕೋಟೆಯ ಹೊರಗೆ, ವಸತಿಯ ದಕ್ಷಿಣಾರ್ಧ ಭಾಗದಲ್ಲಿ, ಪ್ರಾಣಿಗಳ ಮತ್ತು ಮೀನಿನ ಮೂಳೆಯ ರಾಶಿಯೊಂದಿಗೆ ಕಂಡುಬಂದವು. ಈ ಹಿನ್ನೆಲೆಯಲ್ಲಿ ಇವು ಕಸಾಯಿ ಮತ್ತು ಮೀನಿನ ಸಂಸ್ಕರಣೆಯಲ್ಲಿ ಉಪಯೋಗಿಸುತ್ತಿದ್ದ ಸಾಧನವಾಗಿರಬಹುದೆಂಬುದು ಉತ್ಖನನಕಾರರ ಅಭಿಪ್ರಾಯ. ಇಲ್ಲಿ ಸಿಕ್ಕ ಮತ್ತೊಂದು ವಿಶಿಷ್ಟ ಆಯುಧ ಪರಶುವಿನ ಆಕಾರದಲ್ಲಿರುವ ಸಣ್ಣ ಯುದ್ಧ ಕೊಡಲಿ. ಇದಕ್ಕೆ ಧಾರ್ಮಿಕ ಮಹತ್ತ್ವವಿದ್ದಂತೆ ಕಾಣುತ್ತದೆ. ಮತ್ತೊಂದು ಕುತೂಹಲಕಾರಿಯಾದ ಅನ್ವೇಷಣೆ ತಾಮ್ರೋಪ ಕರಣಗಳನ್ನು ಸಂಗ್ರಹಿಸಿಟ್ಟಿದ್ದ ಮಧ್ಯಮ ಗಾತ್ರದ, ಅಗಲಬಾಯಿಯ ತಾಮ್ರದ ಚರಿಗೆ. ಇದು ಕೋಟೆಯ ದಕ್ಷಿಣ ಗೋಡೆಗೆ ತಾಗಿ ಇದ್ದ ಗುಂಡಿಯೊಂದರಲ್ಲಿ ನಗರದ ಅಂತ್ಯ ಹಂತಕ್ಕೆ ಸೇರುವ ಸ್ತರದಲ್ಲಿ ಕಂಡುಬಂದಿತು. ಹರಪ್ಪ ಸಂಸ್ಕೃತಿಗೆ ಅನನ್ಯವಾದ ಕಮಾನಿನಂತಹ ಅಲಗುಳ್ಳ ಒಂದು ಸಣ್ಣ ಕೊಡಲಿ, ವಿವಿಧ ಅಳತೆಯ ತಾಮ್ರ/ಕಂಚಿನ ಆರು ಬಳೆಗಳು ಇದರೊಳಗಿದ್ದವು. ಲೋಹದ ಮರುಬಳಕೆಗಾಗಿ ಇವನ್ನು ಕೂಡಿಟ್ಟಿರಬೇಕು ಎಂದು ಉತ್ಖನನಕಾರರು ತಿಳಿಸುತ್ತಾರೆ.

ನಾಲ್ಕನೆಯ ಹಂತದಲ್ಲಿ (ನಗರದ ತರುವಾಯದ ಹಂತ) ತಾಮ್ರದ ಒಂದು ಘನವಾದ ಉಳಿ/ತಂತಿ ಮತ್ತು ಒಂದು ಆಯತಾಕಾರದ ಚೂರಿ ಸಿಕ್ಕಿದುವು. ಚೂರಿ ಹರಪ್ಪ ಸಂಸ್ಕೃತಿಯ ನೆಲೆಗಳಾದ ಗುಜರಾತಿನ ಕುಂತಾಸಿ ಮತ್ತು ರೋಜಡಿಯಲ್ಲಿ ಸಮಕಾಲೀನ ಸಾಂಸ್ಕೃತಿಕ ಪದರದಲ್ಲಿ ದೊರೆತಿರುವ ಚೂರಿಗಳನ್ನು ಹೋಲುತ್ತದೆ.

ಅದಿರನ್ನು ಕರಗಿಸಿ ಲೋಹ ಮಾಡುತ್ತಿದ್ದುದರ ಮತ್ತು ಉಪಕರಣ ತಯಾರಿಕೆಯ ಯಾವ ನಿಖರ ಅವಶೇಷಗಳೂ ಬಗಸ್ರ ಉತ್ಖನನದಲ್ಲಿ ದೊರೆತಿಲ್ಲ. ಉತ್ಖನನದಲ್ಲಿ ಸಿಕ್ಕಿರುವ ತಾಮ್ರ ಅಥವಾ ತಾಮ್ರದ ಕಿಟ್ಟದ ತುಣುಕುಗಳು ಅಂಟಿಕೊಂಡಿರುವ ಒಂದೆರಡು ಸುಟ್ಟ ಮಣ್ಣಿನುಂಡೆಗಳು ಉತ್ಖನನಕಾರರ ಪ್ರಕಾರ ತಾಮ್ರ ಕೈಗಾರಿಕೆಯ ಅವಶೇಷಗಳೇ ಆಗಿವೆ. ಅವರ ಪ್ರಕಾರ ಇವು ಪ್ರಾಯಶಃ ಲೋಹದ ಗಟ್ಟಿಗಳನ್ನು ಕರಗಿಸುತ್ತಿದ್ದ ಮೂಸೆಯ ಭಾಗಗಳು. ಮರಳಿನ ಅಚ್ಚಿನಲ್ಲಿ ತಾಮ್ರ ವಸ್ತುಗಳನ್ನು ಮಾಡುವ ಸಂಪ್ರದಾಯ ಇಲ್ಲಿದ್ದಿದ್ದಾದರೆ ಅಂತಹ ಅಚ್ಚುಗಳ ಅವಶೇಷಗಳು ಪುರಾತತ್ತ್ವ ನೆಲೆಗಳಲ್ಲಿ ದೊರೆಯುವ ಸಾಧ್ಯತೆ ಕಡಿಮೆ.

ಸಣ್ಣ ವಸತಿಯಾಗಿದ್ದರೂ ಬಗಸ್ರ ಒಂದು ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರವಾಗಿ ಬೆಳೆಯಲು ಕಾರಣ ಇದರ ಭೌಗೋಳಿಕ ಸ್ಥಾನ. ಪ್ರ.ಶ.ಪೂ.3000–2000ದ ಅವಧಿಯಲ್ಲಿ ಹರಪ್ಪ ಸಂಸ್ಕೃತಿ ಮತ್ತು ಗುಜರಾತಿನ ಪ್ರಾದೇಶಿಕ ತಾಮ್ರ–ಶಿಲಾಯುಗ ಸಂಸ್ಕೃತಿಗಳ ನಡುವೆ ವ್ಯಾಪಾರ ಸಂಪರ್ಕ ನಿಕಟವಾಗಿತ್ತು. ಗುಜರಾತಿನ ಪ್ರದೇಶಗಳಾದ ಕಚ್ಛ್, ಸೌರಾಷ್ಟ್ರ ಮತ್ತು ಉತ್ತರ ಗುಜರಾತಿನ ಮಧ್ಯದಲ್ಲಿದ್ದ ಬಗಸ್ರ ವಸತಿಗೆ ಇದು ವರದಾನವಾಯಿತು. ಹೀಗಾಗಿ ಹರಪ್ಪ ಸಂಸ್ಕೃತಿಯ ಆರ್ಥಿಕ ಬೆಳವಣಿಗೆಯಲ್ಲಿ ಕೈಗಾರಿಕೆಗಳ ಬೀಡಾಗಿದ್ದ ಬಗಸ್ರ ಮುಖ್ಯ ಪಾತ್ರವಹಿಸಿತು. ಹರಪ್ಪ ಸಂಸ್ಕೃತಿಯ ಛಾಪುಗಳಲ್ಲೊಂದಾದ ಕಂಡರಿಸಿದ ಸ್ಟಿಯಟೈಟಿನ 8ಮುದ್ರೆಗಳು ಇಲ್ಲಿ ದೊರೆತಿರುವುದು ವಾಣಿಜ್ಯ ವಲಯದಲ್ಲಿ ಬಗಸ್ರ ಗಳಿಸಿದ್ದ ಮಹತ್ತ್ವಕ್ಕೆ ಒಂದು ನಿದರ್ಶನವಾಗಿವೆ. (ಪಿ.ಎಸ್.ಜೆ.)

**ಬರ್ಟನ್, ಸ್ಟೀನ್:** 1926–96. ಹೆಸರಾಂತ ಇತಿಹಾಸ ವಿದ್ವಾಂಸ. ಅಮೆರಿಕದ ಇಲಿನಾಯ್ಸ್‌ನಲ್ಲಿ ಜನಿಸಿದ. 2ನೆಯ ಮಹಾಯುದ್ಧದಲ್ಲಿ ಭಾಗವಹಿಸಿದ್ದ. 1945ರಲ್ಲಿ ಇಲಿನಾಯ್ಸ್ ವಿಶ್ವವಿದ್ಯಾಲಯ ಪ್ರವೇಶಿಸಿ ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿದಿದ್ದರೂ ನೇರವಾಗಿ ಸ್ನಾತಕೋತ್ತರ ಪದವಿ ತರಗತಿಗೆ ಇವನನ್ನು ಸೇರಿಸಿಕೊಳ್ಳಲಾಯಿತು. ರಾಬರ್ಟ್‌ಕ್ರೇನ್ ಮಾರ್ಗದರ್ಶನದಲ್ಲಿ 1954ರಲ್ಲಿ ಎಂ.ಎ.ಪದವಿ ಪಡೆದ. 1957ರಲ್ಲಿ ದಕ್ಷಿಣ ಭಾರತದ ತಿರುಪತಿ ದೇವಾಲಯದ ಮಧ್ಯಕಾಲೀನ ಆರ್ಥಿಕ ಕಾರ್ಯ ನಿರ್ವಹಣೆ ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದ. ಅನಂತರ 1965ರ ವರೆಗೆ ಮಿನ್ನೆಸೊಟ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕನಾಗಿದ್ದ. 1965–83ರ ವರೆಗೆ ಹವಾಯ್ ವಿಶ್ವವಿದ್ಯಾಲಯದಲ್ಲಿ ದುಡಿದ. ಸಂದರ್ಶಕ ಪ್ರಾಧ್ಯಾಪಕನಾಗಿ ಶಿಕಾಗೊ, ಪೆನ್ಸಿಲ್‌ವೇನಿಯ, ವಾಷಿಂಗ್‌ಟನ್, ಕ್ಯಾಲಿಫೋರ್ನಿಯ, ಬರ್ಕ್ಲೆ ವಿಶ್ವವಿದ್ಯಾಲಯಗಳಲ್ಲಿಯೂ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿಯ ಇತಿಹಾಸ ಅಧ್ಯಯನ ಕೇಂದ್ರದಲ್ಲಿ ಸಂಶೋಧನೆ, ಅಧ್ಯಾಪನೆ ನಡೆಸಿದ. ಬರೆಹಗಾರಳಾದ ದೊರೊತಿ ಸ್ಟೀನ್ ಎಂಬಾಕೆಯನ್ನು ವಿವಾಹವಾದ (1983). ಲಂಡನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಏಷ್ಯನ್ ಅಂಡ್ ಆಫ್ರಿಕನ್ ಸ್ಟಡೀಸ್‌ನಲ್ಲಿ ಪ್ರಾಧ್ಯಾಪಕರ ತಂಡದಲ್ಲಿ ಸಂಶೋಧನ ಸಂಯೋಜಕನಾಗಿ ನೇಮಕವಾದನು.

ದಕ್ಷಿಣ ಏಷ್ಯ ಇತಿಹಾಸ ಅಧ್ಯಯನ ಬರ್ಟನ್ ಅವರ ವಿಶೇಷ ಕಾರ್ಯಕ್ಷೇತ್ರ ಅದರಲ್ಲಿಯೂ ವಸಾಹತು ಶಾಹಿ ದಕ್ಷಿಣ ಭಾರತ ಅಧ್ಯಯನಕ್ಕೇ ಹೆಚ್ಚು ಒತ್ತು. 1960ರ ದಶಕದಲ್ಲಿ ದಕ್ಷಿಣ ಭಾರತದ ರಾಜ್ಯಗಳ ಸ್ವರೂಪ ಲಕ್ಷಣವನ್ನು ಆಳವಾಗಿ ಅಧ್ಯಯನ ಮಾಡಿದ. ಇವನಿಗೆ ಚೋಳ ಸಾಮ್ರಾಜ್ಯದ ಕೇಂದ್ರೀಕೃತ ಆಡಳಿತ ಅಸ್ತಿತ್ವದ ವಿಷಯವಾಗಿ ಸಂದೇಹವಿತ್ತು. ಇವನು ವಿಭಜಿತ ರಾಜ್ಯಗಳ ಪರಿಕಲ್ಪನೆಯನ್ನು ಮುಂದಿಟ್ಟ. ಇದನ್ನು ಪೆಸೆಂಟ್ ಸ್ಟೇಟ್ ಅಂಡ್ ಸೊಸೈಟಿ ಇನ್ ಮಿಡಿವಲ್ ಸೌತ್ ಇಂಡಿಯ (1980) ಎಂಬ ಕೃತಿಯಲ್ಲಿ ಪ್ರತಿಪಾದಿಸಿದ. ನಿವೃತ್ತಿ ಅನಂತರ ಇವನು ಬರೆವಣಿಗೆಗೆ ಹೆಚ್ಚು ತೊಡಗಿಕೊಂಡ. ಶಿಕಾಗೊ ವಿಶ್ವವಿದ್ಯಾಲಯದ ಎ ಹಿಸ್ಟರಿಕಲ್ ಅಟ್ಲಾಸ್ ಆಫ್ ಸೌತ್ ಏಷ್ಯ ಯೋಜನೆಗೆ ಇವನು ಸಕ್ರಿಯ ಸಲಹೆಗಾರನಾಗಿದ್ದ. ಆ ಕೃತಿ 1978ರಲ್ಲಿ ಪ್ರಕಟವಾಯಿತು. (ಎ.ಎಸ್.;ಎನ್.ಎಲ್)

**ಬಡಗಕಜಕಾರು:** ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿರುವ ಬೃಹತ್‌ಶಿಲಾ ಸಮಾಧಿ ನೆಲೆ. ಪಿ.ಗುರುರಾಜಭಟ್ಟರು ಇದನ್ನು ಪತ್ತೆಹಚ್ಚಿದರು. ಈ ಸಮಾಧಿಗಳನ್ನು ಸ್ಥಳೀಯರು ಪಾಂಡವರ ಕಲ್ಲೆಂದು ಕರೆಯುತ್ತಾರೆ. ಇಲ್ಲಿಯ ಕೆಲವು ನೆಲಕೋಣೆ ಗೋರಿಗಳು ಉತ್ತರ ಕರ್ನಾಟಕದ ಬೃಹತ್ ಶಿಲಾಯುಗದ ದಾರಿಯುಳ್ಳ ನೆಲಕೋಣೆ ಗೋರಿಗಳನ್ನು ಹೋಲುತ್ತವೆ. ಆಯತ ಕೋಣೆಯಾಕಾರದ ಈ ಗೋರಿಗಳನ್ನು ನಾಲ್ಕು ಬದಿಗಳಲ್ಲಿ ನೆಟ್ಟುನಿಲ್ಲಿಸಿದ ಕಲ್ಲುಚಪ್ಪಡಿಗಳ ಮೇಲೆ ಮುಚ್ಚಳೋಪಾದಿಯಂತೆ ಇನ್ನೊಂದು ದೊಡ್ಡ ಚಪ್ಪಡಿಕಲ್ಲನ್ನಿಟ್ಟು ಕಟ್ಟಲಾಗಿರುತ್ತದೆ. ಒಂದು ಕಲ್ಲುಚಪ್ಪಡಿಯಲ್ಲಿ ವರ್ತುಲಾಕಾರದ ಕಂಡಿ ಇರುತ್ತದೆ. ಕೆಲವೊಂದು ಕೋಣೆಗೋರಿಗಳಿಗೆ ಕಂಡಿ ಇರುವ ಕಲ್ಲುಚಪ್ಪಡಿಯ ಮುಂದೆ ಎಡ–ಬಲ ಭಾಗದಲ್ಲಿ



ಬೃಹತ್ ಶಿಲಾಸಂಸ್ಕೃತಿಯ ಕಂಡಿಕೋಣೆ ಗೋರಿ

ಕಲ್ಲುಹಲಗೆಗಳನ್ನಿಟ್ಟು ವಿಶೇಷ ಕಿರುದಾರಿಯನ್ನು ಕಲ್ಪಿಸಲಾಗಿರುತ್ತದೆ. ಅಲ್ಲದೆ ಇಂತಹ ಕೋಣೆಗಳ ಹೊರಬದಿಯಲ್ಲಿ ಸುತ್ತಲೂ ಕಲ್ಲುಗಳನ್ನು ಮಂಡಲಾಕಾರದಲ್ಲಿ ಇಡಲಾಗಿರುತ್ತದೆ. ಈ ಕೋಣೆಗಳ ಒಳಭಾಗದ ಉದ್ದಳತೆ ಸು.1.6ಮೀx1.5ಮೀ ನಿಂದ 2.2ಮೀx3ಮೀ; ಎತ್ತರ 1–1.1 ಮೀ. ವೃತ್ತಾಕಾರದ ಕಂಡಿಯ ವ್ಯಾಸ 45–50 ಸೆಂಮೀ. ಇದರ ಮುಂಭಾಗ ದಲ್ಲಿಯ ಮಾರ್ಗ 90ಸೆಂಮೀ ನಿಂದ 1.3ಮೀ ಉದ್ದವಾಗಿದ್ದು, ಅಗಲ 1 ರಿಂದ 0.7ಮೀ ಇರುತ್ತದೆ. ಮುಚ್ಚಳಕಲ್ಲಿನ ಅಳತೆ 3.5ಮೀx 2.3ಮೀx0.3ಮೀ ನಿಂದ 4ಮೀx 2ಮೀx0.26ಮೀ ಇರುತ್ತದೆ.

ಬೆಂಚನ್ನು ಹೋಲುವ ಇನ್ನೊಂದು ತರಹದ ಗೋರಿಗಳೂ ಇಲ್ಲಿವೆ. ಸಾಮಾನ್ಯವಾಗಿ ಇಂತಹ ಗೋರಿಗಳಲ್ಲಿ ಎರಡು ಬದಿಗಳಲ್ಲಿ ಮಾತ್ರ ನೆಟ್ಟು ನಿಲ್ಲಿಸಿದ ಕಲ್ಲುಗಳ ಮೇಲೆ ಕಲ್ಲುಚಪ್ಪಡಿಯನ್ನಿಡಲಾಗಿರುತ್ತದೆ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಮಾದರಿಯ ಪ್ರತ್ಯೇಕ ಗೋರಿಗಳಿರಬಹುದೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಇವು ಈಗ ಮೂಲ ಸ್ವರೂಪದಲ್ಲಿಯೇ ಇಲ್ಲವೆ ಭಗ್ನಾವಶೇಷವೊ ಖಚಿತವಾಗಿಲ್ಲ. ಈ ಶಿಲಾಗೋರಿಗಳ ಪರಿಸರದಲ್ಲಿಯೇ ಸ್ಥಳೀಯರ ಅಗೆತದಲ್ಲಿ ಅಸ್ಥಿಪಾತ್ರೆಗಳು ಆಕಸ್ಮಿಕವಾಗಿ ಕಂಡುಬಂದದ್ದನ್ನು

ಶ್ರೀಭಟ್ಟರು ವರದಿ ಮಾಡಿದ್ದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎಲ್.ಎಸ್. ರಾವ್ ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಭಗ್ನಗೊಂಡ ಅನೇಕ ಅಸ್ಥಿಪಾತ್ರೆಗಳನ್ನು ಪತ್ತೆಹಚ್ಚಿದರು. ಇಂತಹ ಎರಡು ಪಾತ್ರೆಗಳನ್ನು ಜಾಗರೂಕತೆಯಿಂದ ಉತ್ಖನನಮಾಡಲಾಯಿತು. ಈ ಪಾತ್ರೆಗಳ ಮೇಲಿನ ಅರ್ಧಭಾಗ ಇರಲಿಲ್ಲ. ಒಂದು ಪಾತ್ರೆ ಕೆಂಪುಬಣ್ಣದ ಒರಟು ಜೇಡಿಮಣ್ಣಿನಿಂದ ತಯಾರಿಸಿದ್ದು ದುಂಡಾದ ತಳವನ್ನು ಹೊಂದಿದ್ದರೆ, ಇನ್ನೊಂದು ದಪ್ಪಗಿರುವ ಹೊಳಪುಳ್ಳ ಕಪ್ಪು– ಕೆಂಪು ದ್ವಿವರ್ಣ ಒರಟು ಜೇಡಿಮಣ್ಣಿನ ಪಾತ್ರೆಯಾಗಿತ್ತು. ಮೊದಲನೆಯ ಅಸ್ಥಿಪಾತ್ರೆಯೊಳಗೆ ಎರಡು ತೆಳ್ಳನೆಯ ಹಾಗೂ ಕೆಂಪುಬಣ್ಣದ ಬಟ್ಟಲುಗಳ ಜೊತೆಗೆ ಒಂದು ಕಬ್ಬಿಣದ ಉಳಿ ಹಾಗೂ ಇದ್ದಿಲು ಚೂರುಗಳಿದ್ದವು. ಎರಡನೆಯ ಅಸ್ಥಿಪಾತ್ರೆಯೊಳಗೆ ಆರು ಸಣ್ಣ ಬಟ್ಟಲು ಗಳಲ್ಲದೆ ಸವೆದಿರುವ ಎಲುಬಿನ ತುಂಡುಗಳಿದ್ದವು. (ಎಲ್.ಎಸ್.ಆರ್.)

**ಬದನವಾಳು:** ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಒಂದು ಗ್ರಾಮ. ನರಸಾಂಬುಧಿ ಎಂದೂ ಕರೆಯಲಾಗುತ್ತಿತ್ತು. ಈ ಗ್ರಾಮದಲ್ಲಿ ಒಟ್ಟು ಐದು ಶಾಸನಗಳು ದೊರಕಿವೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಈ ಗ್ರಾಮದಲ್ಲಿ ಖಾದಿ ಉತ್ಪಾದನ ಕೇಂದ್ರವೊಂದನ್ನು ಸ್ಥಾಪಿಸಲಾಯಿತು. ಈ ಕೇಂದ್ರದಲ್ಲಿ ಖಾದಿ ಬಟ್ಟೆ ತಯಾರಿಸುವುದರ ಜೊತೆಗೆ ಹತ್ತಿಯಿಂದ ನೂಲು ಬಿಡಿಸುವ, ಬಣ್ಣ ಹಾಕುವ ವಿಭಾಗಗಳನ್ನು ಸ್ಥಾಪಿಸಿ, ತರಬೇತಿ ನೀಡುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿತ್ತು. ಪ್ರಮುಖವಾಗಿ ಸಾಮಾಜಿಕವಾಗಿ ಹಿಂದುಳಿದಿರುವ ಹರಿಜನರಿಗೆ ಈ ಖಾದಿಕೇಂದ್ರದಲ್ಲಿ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದ್ದುದು ಮೈಸೂರು ಸಂಸ್ಥಾನದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳ ದೃಷ್ಟಿಯಿಂದ ಗಮನಾರ್ಹ. ಅಂದಿನ ದಿನಗಳಲ್ಲಿ ಹಿಂದುಳಿದವರು, ದೀನದಲಿತರು, ಬಡವರು, ಮೊದಲಾದ ವರ ಬಗೆಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಕೇವಲ ಅಧಿಕಾರ ಆಡಳಿತಗಳಲ್ಲಿ ಮಾತ್ರ ಅವಕಾಶ ನೀಡದೆ ರಾಜ್ಯದ ಸಂಪತ್ತು ಸಂಪನ್ಮೂಲ ಗಳಲ್ಲಿಯೂ ಜನಸಾಮಾನ್ಯರಿಗೆ ಪಾಲು ನೀಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಈ ಗ್ರಾಮದಲ್ಲಿ ತೆರೆಯಲ್ಪಟ್ಟ ಖಾದಿ ಕೇಂದ್ರ ಹರಿಜನರಿಗೆ, ವಿಶೇಷವಾಗಿ ಆ ಜನಾಂಗದ ಸ್ತ್ರೀಯರಿಗೆ ನೂಲುವ ಮತ್ತು ನೇಯುವುದರ ಬಗೆಗೆ ತರಬೇತಿ ನೀಡಿ ಅವರಿಗೆ ಉದ್ಯೋಗಾವಕಾಶ ಒದಗಿಸಿ, ಅವರ ಆದಾಯದಲ್ಲಿ ಹೆಚ್ಚಳವಾಗಿ ಅವರ ಆರ್ಥಿಕ ಮತ್ತು ಸಾಮಾಜಿಕ ಬದುಕು ಹಸನಾಗುವಂತೆ ಮಾಡಿದರು. ಇಂತಹ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಳನ್ನು ಕೇಳಿ ಸಂತೋಷಗೊಂಡ ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದ ಪ್ರಚಾರಕ್ಕಾಗಿ ಕರ್ನಾಟಕಕ್ಕೆ ಬಂದಿದ್ದಾಗ ಮೈಸೂರು ಸಂಸ್ಥಾನಕ್ಕೂ ಆಗಮಿಸಿದ್ದರು. ರೈಲು ಸಂಪರ್ಕವಿದ್ದ ಬದನವಾಳು, ತಗಡೂರು ಮುಂತಾದ ಗ್ರಾಮಗಳಿಗೆ ಕ್ರಮವಾಗಿ 1927 ಮತ್ತು 1936ರಲ್ಲಿ ಒಂದು ವಿಶೇಷವಾಗಿ ಬದನವಾಳುವಿನಲ್ಲಿದ್ದ ಖಾದಿಕೇಂದ್ರಕ್ಕೆ ಭೇಟಿ ನೀಡಿ ಖಾದಿ ಉತ್ಪಾದನೆಯನ್ನು ಪರಿಶೀಲಿಸಿ ಮೈಸೂರು ರಾಜರು ಮತ್ತು ದಿವಾನರ ಸೇವೆಯನ್ನು ಕೊಂಡಾಡಿದರು. ಬ್ರಿಟಿಷ್ ವಸಾಹತು ಸಂಸ್ಥಾನವೊಂದರಲ್ಲಿ ಖಾದಿ ಉತ್ಪಾದನೆ, ಚರಕದ ಬಳಕೆ, ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಧಾರ ಮುಂತಾದ ತಮ್ಮ ರಚನಾತ್ಮಕ ಕಾರ್ಯಕ್ರಮಗಳು ಅನುಷ್ಠಾನಗೊಂಡಿರುವುದನ್ನು ನೋಡಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದರಲ್ಲದೆ, ನಾಲ್ವಡಿಯವರನ್ನು ರಾಜರ್ಷಿ ಎಂದು ಸಂಬೋಧಿಸಿ ಗೌರವಿಸಿದರು. ಹೀಗೆ ಗಾಂಧೀಜಿ ಭೇಟಿ ನೀಡಿದ್ದ ಬದನವಾಳು ಗ್ರಾಮ ಮೈಸೂರು ರಾಜರ ಪ್ರೋತ್ಸಾಹದಿಂದ ಅಭಿವೃದ್ಧಿ ಹೊಂದಿ ಒಂದು ಮಾದರಿ ಗ್ರಾಮವಾಗಿ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. (ಎನ್‌ಆರ್.)

**ಬನವಾಸಿ:** ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಆಗ್ನೇಯಕ್ಕೆ ಸು.22 ಕಿಮೀ ದೂರದಲ್ಲಿ ವರದಾ ನದಿಯ ಎಡದಂಡೆಯ ಮೇಲಿರುವ ಪ್ರಸಿದ್ಧ ಐತಿಹಾಸಿಕ ಸ್ಥಳ. ಕದಂಬರ ರಾಜಧಾನಿ. ಹಿಂದೆ ಈ ಊರಿಗೆ ಜಯಂತಿ (ಜಯಂತೀಪುರ), ಸಂಜಯಂತಿ, ವೈಜಯಂತಿ ಎಂಬ ಹೆಸರುಗಳೂ ಇದ್ದುವು. ಕನಕಾವತಿ ಅಥವಾ ಕನಕಪುರ ಎಂಬ ಹೆಸರೂ ಈ ಗ್ರಾಮಕ್ಕೆ ಇದ್ದಿತೆನ್ನಲು ಶಾಸನಾಧಾರಗಳಿವೆ. ಬನವಾಸಿ ಸಂಸ್ಕೃತದ ವನವಾಸಿ ಎಂಬುದರ ಕನ್ನಡ ರೂಪ.

ಇಂದಿನ ಬನವಾಸಿ ಗ್ರಾಮ ನದಿ ದಂಡೆಯ ಮೇಲಿರುವ ಒಂದು ಪ್ರಾಚೀನ ಕೋಟೆಯ ಮಧ್ಯದಲ್ಲಿದೆ. ಮಧುಕೇಶ್ವರ ದೇವಾಲಯ ಈಗಿನ ಗ್ರಾಮದ ಪ್ರಧಾನ ಆಕರ್ಷಣೆ. ದೇವಾಲಯ ಜಂಬುಕಲ್ಲಿನ ಪ್ರಾಕಾರದಿಂದ ಆವೃತವಾದ ವಿಶಾಲವಾದ ಪ್ರಾಂಗಣದ ಮಧ್ಯೆ ಇದೆ. ಇದರ ಗರ್ಭಗೃಹ ಮತ್ತು ಸುಕನಾಸಿಯ ಭಾಗಗಳು ಪಟ್ಟದಕಲ್ಲಿನ ಬಾದಾಮಿ ಚಳುಕ್ಯ ದೇವಾಲಯಗಳ ಮಾದರಿಯಲ್ಲಿರುವುದರಿಂದ ಈ ಭಾಗ ಬಹುಶಃ 8ನೆಯ ಶತಮಾನದಲ್ಲಿ ಕಟ್ಟಿದ್ದೆಂದು ಊಹಿಸಲಾಗಿದೆ. ಇಲ್ಲಿರುವ ಮೂಲ ಲಿಂಗ ಇನ್ನೂ ಹಳೆಯದಿರಬಹುದು. ಸುಕನಾಸಿಯ ಮುಂದೆ ಒಂದು ವಿಶಾಲವಾದ ಸ್ತಂಭ ಮಂಟಪವಿದೆ. ಇದರ ಕಂಬಗಳು ಕಲ್ಯಾಣ ಚಾಳುಕ್ಯ ಶೈಲಿಯವು. ಈ ಕಂಬಗಳು ಮತ್ತು ಮಂಟಪದ ಅಂಚಿನಲ್ಲಿ ಸುತ್ತಲೂ ಇರುವ ಕಕ್ಷಾಸನಗಳ ಮೇಲೆ ಎದ್ದಿರುವ ಚಿಕ್ಕ ಕಂಬಗಳು ಛತ್ತನ್ನು ಎತ್ತಿಹಿಡಿದಿವೆ. ಮಂಟಪದ ಮಧ್ಯದ ಚಾವಣಿ ಮಟ್ಟವಾಗಿದ್ದರೆ ಸುತ್ತಲಿನ ಕಕ್ಷಾಸನದ ಮೇಲೆ ಇರುವ ಚಾವಣಿ ಇಳಿಜಾರಾಗಿದೆ. ಸಹ ಕಕ್ಷಾಸನಗಳು ಮತ್ತು ಅವುಗಳ ಹೊರಮೈಯಲ್ಲಿರುವ ಶಿಲ್ಪಕೆತ್ತನೆಯ ವಿನ್ಯಾಸ ಸಹ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿ ಇರುವುದರಿಂದ ಈ ಮಂಟಪ ಸು.11–12ನೆಯ ಶತಮಾನದಲ್ಲಿ ರಚಿತವಾದದ್ದೆಂದು ಹೇಳಬಹುದು. ಆದರೆ ಈ ಮಂಟಪವನ್ನು ವಿಜಯನಗರದ ಒಂದನೆಯ ಹರಿಹರನ ಕಾಲದಲ್ಲಿ ಅವನ ಮಂತ್ರಿ ಚೌಡಮಾಧವ ಕಟ್ಟಿಸಿದಂತೆ ಶಾಸನೋಲ್ಲೇಖವಿದೆ. ಇವನು ಮೊದಲಿನ ಮಂಟಪವನ್ನು ಜೀರ್ಣೋದ್ಧಾರ ಮಾಡಿರಬಹುದು. ಮಂಟಪದ ಒಳಗೆ ಒಂದು ಬದಿಯಲ್ಲಿ ಬಳಪದ ಕಲ್ಲಿನಲ್ಲಿ ಮಾಡಿದ ಸು.6ಅಡಿ ಎತ್ತರದ ಒಂದು ಮಂದಾಸನ ಇದೆ. ಇದು ಬಹುಶಃ ಸೋದೆಯ ಅರಸರ ಕೊಡುಗೆ. ಇದೊಂದು ಸುಂದರ ಕೃತಿ. ಆದಿಶೇಷ ಮತ್ತು ಅಷ್ಟದಿಗ್ಗಜಗಳು ಭೂಲೋಕವನ್ನು ಹೊತ್ತು ನಿಂತಿರುತ್ತವೆ ಎಂಬುದನ್ನು ತಿಳಿಯಪಡಿಸುವ ರೀತಿಯಲ್ಲಿ ಕೆಳಗೆ ಪಾತಾಳಲೋಕ, ಮಧ್ಯದಲ್ಲಿ ಭೂಲೋಕ ಮತ್ತು ಮೇಲ್ಭಾಗದಲ್ಲಿ ದೇವಲೋಕ–ಇವುಗಳ ಕೆತ್ತನೆಗಳು ಈ ಮಂದಾಸನದಲ್ಲಿವೆ. ಮಧುಕೇಶ್ವರಾಲ

ಮಧುಕೇಶ್ವರ ದೇವಾಲಯದಲ್ಲಿರುವ ನಂದಿ

ಯದ ಪ್ರಾಂಗಣದಲ್ಲಿಯೇ ಎಡಬಲಗಳಲ್ಲಿ ಪಾರ್ವತಿ ಮತ್ತು ಸದಾಶಿವ ಗುಡಿಗಳಿವೆ. ಇವು ಸು.15–16ನೆಯ ಶತಮಾನದವು. ಪ್ರಾಕಾರದ ಗೋಡೆಗೆ ಸೇರಿದಂತೆ ಸುತ್ತಲೂ ಚಿಕ್ಕ ಗುಡಿಗಳಿದ್ದು ಇವುಗಳಲ್ಲಿ ಲಿಂಗ, ದಿಕ್ಪಾಲಕರು, ನಾಗ ಮೊದಲಾದ ಶಿಲ್ಪಗಳನ್ನಿಡಲಾಗಿದೆ. ಇಲ್ಲಿಯ ಒಂದು ನಾಗಶಿಲ್ಪ 3ನೆಯ ಶತಮಾನದ್ದು. ಪ್ರಾಕಾರದೊಳಗೆ ದಕ್ಷಿಣದ ಗೋಡೆಗೆ ಹೊಂದಿಕೊಂಡಂತಿರುವ ಮಂಟಪವೊಂದರಲ್ಲಿ ಬನವಾಸಿಯ ಹೆಮ್ಮೆಯೆನ್ನಬಹುದಾದ ಒಂದು ಕಲ್ಲುಮಂಚ ಇದೆ. ಇದು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಚತುರ ಶಿಲ್ಪಕೃತಿ. ಇದರ ನಾಲ್ಕು ಕಂಬಗಳು, ಮೇಲ್ಚಪ್ಪರಗಳು, ಗಿಳಿಗಳು ಹಾಗೂ ಸಿಂಹಗಳು ಮುಂತಾದ ಮುದ್ದಾದ ಕೆತ್ತನೆಗಳನ್ನು ಹೊಂದಿವೆ. ಈ ಕಲ್ಲಿನ ಮಂಚವನ್ನು 1629ರಲ್ಲಿ ಸೋದೆಯ ಅರಸ ರಘುನಾಥನಾಯಕ ವಸಂತ ಋತುವಿನಲ್ಲಿ ದೇವರ ಉಪಯೋಗಕ್ಕೆಂದು ಮಾಡಿಸಿಕೊಟ್ಟ ನೆಂದು ಅದರ ಮೇಲಿನ ಸಂಸ್ಕೃತ ಶಾಸನ ತಿಳಿಸುತ್ತದೆ. ವರ್ಷಂಪ್ರತಿ ಮಧುಕೇಶ್ವರನ ರಥೋತ್ಸವ ನಡೆಯುತ್ತದೆ. ಆಗ ಉಪಯೋಗಿಸುವ 6ಮೀ ಉದ್ದಗಲದ 6.60ಮೀ ಎತ್ತರದ ಭವ್ಯವಾದ ರಥ ಸೋದೆಯ ರಾಮಚಂದ್ರನಾಯಕ 1608ರಲ್ಲಿ ದಾನವಾಗಿ ನೀಡಿದ್ದು.

ಈ ಗ್ರಾಮದಲ್ಲಿ 10–12ನೆಯ ಶತಮಾನಗಳಲ್ಲಿ ಕಟ್ಟಿರಬಹುದಾದ ಬಸದಿಯೊಂದು ಇದೆ. 8ನೆಯ ತೀರ್ಥಂಕರ ಚಂದ್ರಪ್ರಭನ ಒಂದಡಿ ಎತ್ತರದ ಮೂರ್ತಿ ಇಲ್ಲಿದೆ. ಮೂರ್ತಿ ಹಳೆಯದು. ಕಟ್ಟಡವನ್ನು ಪೂರ್ಣವಾಗಿ ನವೀಕರಿಸಲಾಗಿದೆ. ವೀರಶೈವ ಪಂಗಡಕ್ಕೆ ಸೇರಿದ ಪ್ರಭುದೇವ ಹಾಗೂ ಬಸವೇಶ್ವರರ ಎರಡು ಗುಡಿಗಳು ಈ ಗ್ರಾಮದಲ್ಲಿವೆ. ಪ್ರಭುದೇವರ ಗುಡಿ ಸು.14–15ನೆಯ ಶತಮಾನದ್ದು. ಹೊಳೆಮಠ, ಹಿರಿಮಠ, ಚಿಕ್ಕಮಠ, ಚೌಕೀಮಠ ಮತ್ತು ಹಾಲುಮಠಗಳೆಂಬ ಐದು ವೀರಶೈವ ಮಠಗಳೂ ಇಲ್ಲಿವೆ. ಹೊಳೆಮಠದಲ್ಲಿ ವಿರಕ್ತಸ್ವಾಮಿಗಳು ಶಿವಾನುಭವ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಮಧುಕೇಶ್ವರಾಲಯದಿಂದ ಸು. 1ಕಿಮೀ ದೂರದಲ್ಲಿ ಹಳೆಯ (ಆದಿ) ಬನವಾಸಿಯ ದೇವಾಲಯವಿದೆ. ಇದರಲ್ಲಿ ಶಿವ ಮತ್ತು ಪಾರ್ವತಿಯರೆನ್ನಲಾದ ಎರಡು ಗುಡಿಗಳಿವೆ. ಮಣ್ಣಿನ ದಿಬ್ಬಗಳು, ಗೋಡೆಗಳು, ಕಟ್ಟಡಗಳ ಅವಶೇಷಗಳು ಇವೆ. ಇವು ಬಹುಹಿಂದೆ ವಾಸಯೋಗ್ಯವಾಗಿತ್ತೆಂಬುದನ್ನು ಸೂಚಿಸುತ್ತವೆ.

ಬನವಾಸಿ ಕೋಟೆಯ ಪ್ರಸ್ತಾಪ ಚಳುಕ್ಯ ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನ ದಲ್ಲಿಯೇ (634) ಬಂದಿದೆ. ಆದರೆ ಕೋಟೆ ಇನ್ನೂ ಪ್ರಾಚೀನವಾದುದು. ಕೆಲವೆಡೆ ಸು. 6.0–9.0ಮೀ ಎತ್ತರವಿರುವ ಈ ಕೋಟೆಯ ಗೋಡೆಯನ್ನು ಹಲವು ಹಂತಗಳಲ್ಲಿ ಕಟ್ಟಿದ್ದಿರ ಬೇಕು. ಅತ್ಯಂತ ಕೆಳಮಟ್ಟದ ವರಸೆಗಳಲ್ಲಿ 1–2ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ದೊಡ್ಡ ಚಪ್ಪಟೆ ಇಟ್ಟಿಗೆಗಳನ್ನು ಕಾಣಬಹುದು. ಮೇಲುಭಾಗದಲ್ಲಿರುವ ದಪ್ಪ ಜಂಬಿಟ್ಟಿಗೆಯ ಗೋಡೆ ಬಹುಶಃ ವಿಜಯನಗರದ ಕಾಲದಲ್ಲಿ ಕಟ್ಟಲಾದುದು.

ಬನವಾಸಿ ಕರ್ನಾಟಕದ ಅತ್ಯಂತ ಪ್ರಾಚೀನ ಪಟ್ಟಣಗಳಲ್ಲೊಂದು. ಇದರ ಬಗ್ಗೆ ಹಲವು ಪೌರಾಣಿಕ ಉಲ್ಲೇಖಗಳಿವೆ. ಮಧು ಮತ್ತು ಕೈಟಭರೆಂಬಿಬ್ಬರು ಸೋದರರು ಇಲ್ಲಿಯ ವನದಲ್ಲಿ ನೆಲೆಸಿದ್ದು, ಹಿರಿಯವನಾದ ಮಧು ಮಧುಕೇಶ್ವರಾಲಯವನ್ನು ಕಟ್ಟಿಸಿದನೆಂದೂ ಈ ಈರ್ವರನ್ನು ವಿಷ್ಣು ವನವಾಸಿಯಲ್ಲಿಯೇ ಕೊಂದನೆಂದೂ ಒಂದು ಕಥೆ ಇದೆ.

ಪಂಚಪಾಂಡವರು ಇಲ್ಲಿಯೇ ತಮ್ಮ ವನವಾಸವನ್ನು ಕಳೆದರೆಂದೂ ಒಂದು ಪ್ರತೀತಿ. ಅವರಲ್ಲಿ ಒಬ್ಬನಾದ ಸಹದೇವ ತನ್ನ ದಿಗ್ವಿಜಯ ಯಾತ್ರೆಯಲ್ಲಿ ಸಂಜಯಂತೀ ನಗರವನ್ನು ಗೆದ್ದನೆಂದು ಮಹಾಭಾರತದಲ್ಲಿ ಹೇಳಿದೆ.

ಐತಿಹಾಸಿಕವಾಗಿ ಬನವಾಸಿ ಮೌರ್ಯರ ಕಾಲದಿಂದಲೂ ಖ್ಯಾತಿವೆತ್ತಿದೆ. ಅಶೋಕ ಚಕ್ರವರ್ತಿ ಬೌದ್ಧಧರ್ಮ ಪ್ರಚಾರಕ್ಕೆಂದು ಕಳುಹಿಸಿದ ಬೌದ್ಧಭಿಕ್ಷುಗಳಲ್ಲಿ ಒಬ್ಬನಾದ ರಕ್ಷಿತ ಬನವಾಸಿಗೆ ಬಂದು ಬೌದ್ಧಧರ್ಮಪ್ರಚಾರ ಮಾಡಿದನೆಂದೂ ಶ್ರೀಲಂಕೆಯ ದುತ್ತಗಾಮನಿ (ಪ್ರ.ಶ.ಪೂ.1ನೆಯ ಶತಮಾನ) ಎಂಬ ಅರಸ ಅನುರಾಧಪುರದಲ್ಲಿ ಕಟ್ಟಿಸಿದ ಮಹಾಸ್ತೂಪದ ಆರಂಭೋತ್ಸವಕ್ಕೆ ಬನವಾಸಿಯಿಂದ ಮಹಾಥೇರ ಚಂದ್ರಗುಪ್ತ 80,000 ಬೌದ್ಧಭಿಕ್ಷುಗಳೊಡಗೂಡಿ ಹೋದನೆಂದೂ ಸಿಂಹಳದ ಮಹಾವಂಶ ಗ್ರಂಥದಿಂದ ತಿಳಿದುಬರುತ್ತದೆ. 1ನೆಯ ಶತಮಾನದಲ್ಲಿದ್ದ ಟಾಲಮಿ ಬನೌಸಿಯನ್ನು ಹೆಸರಿಸಿ, ಇದನ್ನು ಗುಜರಾತಿನ ಬರಿಗಜಕ್ಕೆ (ಬ್ರೋಚ್) ಆಗ್ನೇಯಕ್ಕಿರುವ ನಗರ ಎಂದಿರುವನಾದರೂ ಅದು ಬನವಾಸಿಯನ್ನು ಉದ್ದೇಶಿಸಿದ್ದಾಗಿರಬಹುದು. ನಾಗಾರ್ಜುನಕೊಂಡದಲ್ಲಿ ದೊರೆತ ಶಾಸನವೊಂದರಲ್ಲಿ ಸಿಂಹಳ ದೇಶದ ಭಿಕ್ಷುಗಳು ಬೌದ್ಧಧರ್ಮ ಪ್ರಚಾರ ಮಾಡಿದ ದೇಶಗಳಲ್ಲಿ ವನವಾಸಿಯೂ ಒಂದೆಂದು ಹೇಳಿದೆ. ಇನ್ನೊಂದು ಶಾಸನದಲ್ಲಿ ಥೇರವಾದಿಗಳು ವಿಭಜವಾದಿಗಳು ಆದ ಬೌದ್ಧಧರ್ಮ ಪ್ರಚಾರಕರು ಬೌದ್ಧಧರ್ಮಾವಲಂಬಿಗಳಾಗಿ ಪರಿವರ್ತಿಸಿದ ಇತರ ದೇಶಗಳ ಜನರಲ್ಲಿ ವನವಾಸಿಯ ಜನರೂ ಉಲ್ಲೇಖಿಸಲ್ಪಟ್ಟಿದ್ದಾರೆ.

ಸಾತವಾಹನರ ಅರಸ ಗೌತಮೀಪುತ್ರ ಸಾತಕರ್ಣಿಯ ನೇರವಾದ ಆಡಳಿತ ಕಕ್ಷೆಗೆ ಬನವಾಸಿ ಒಳಪಟ್ಟಿತ್ತು. ಈತ ವಿಜಯ ವೈಜಯಂತಿಯಲ್ಲಿ (ಅಂದರೆ ಬನವಾಸಿ) ತನ್ನ ಸೈನ್ಯದೊಡನೆ ಬೀಡುಬಿಟ್ಟಿದ್ದನೆಂದು ನಾಸಿಕದ ಶಾಸನದಲ್ಲಿ ಹೇಳಿದೆ. ಇದರಲ್ಲಿ ಉಕ್ತನಾದ ಅಮಾತ್ಯ ಶಿವಗುಪ್ತನೂ ಬನವಾಸಿಯಲ್ಲಿ ಅಧಿಕಾರದಲ್ಲಿದ್ದಿರಬಹುದು. ಬ್ರಾಹ್ಮಿ ಲಿಪಿಯಲ್ಲಿಯ ಪ್ರಾಕೃತ ಶಾಸನವೊಂದು ಇತ್ತೀಚೆಗೆ ಬನವಾಸಿಯಲ್ಲಿ ದೊರೆತಿದೆ. 2ನೆಯ ಶತಮಾನದ ಈ ಶಾಸನದಲ್ಲಿ ಇದು ವಾಸಠೀಪುತ ಸಿವಸಿರಿ ಪುಳುಮಾವಿಯ ಮಹಾದೇವಿಯ ಸ್ಮಾರಕಶಿಲೆ ಎಂದೂ ಹೇಳಿದೆ. ಈ ಸಿವಸಿರಿ ಸಾತವಾಹನ ವಾಸಿಷ್ಠೀಪುತ್ರ ಪುಳುಮಾವಿಯ ಅನಂತರ ಅಧಿಕಾರಕ್ಕೆ ಬಂದ ಶಿವಶ್ರೀ ಪುಳುಮಾವಿಯಾಗಿರಬಹುದು. ಸಾತವಾಹನರ ಸಾಮಂತರೂ ಆ ಮನೆತನದ ಶಾಖೆಯೊಂದಕ್ಕೆ ಸೇರಿದ್ದವರೂ ಆದ ಚುಟುಗಳ (ಚುಟು ಸಾತಕರ್ಣಿ) ನಾಣ್ಯಗಳು ಈ ಪ್ರದೇಶದಲ್ಲಿ ದೊರಕಿರುವುದು ಈ ಪ್ರದೇಶ ಚುಟುಗಳ ಆಳಿಕೆಗೊಳಪಟ್ಟಿತ್ತೆಂದು ಸೂಚಿಸುತ್ತದೆ. ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿಯ ಮಗಳಾದ ಶಿವಸ್ಕಂದನಾಗಶ್ರೀ ತನ್ನ ತಂದೆಯ ಆಳಿಕೆಯ 12ನೆಯ ವರ್ಷದಲ್ಲಿ ನಾಗಪ್ರತಿಮೆಯೊಂದನ್ನು ಮಾಡಿಸಿ, ಒಂದು ಕೊಳವನ್ನು ಕಟ್ಟಿಸಿ, ವಿಹಾರವೊಂದನ್ನು ಸ್ಥಾಪಿಸಿದುದಾಗಿ ಬನವಾಸಿಯಲ್ಲೇ ಇರುವ ನಾಗಪ್ರತಿಮೆಯ ಶಾಸನ ಹೇಳಿದೆ. 278ರಲ್ಲಿ ಆಭೀರಕುಲದ ವಾಸಿಷ್ಠೀಪುತ್ರ ವಸುಷೇಣನು ಸೇಟಗಿರಿಯಲ್ಲಿ ಅಷ್ಟಭುಜಸ್ವಾಮಿಯ ಪ್ರತಿಷ್ಠಾಪನೆ ಮಾಡಿದಾಗ ಅದರಲ್ಲಿ ಬನವಾಸಿಯ ವಿಷ್ಣುರುದ್ರ ಶಿವಲಾನಂದ ಸಾತಕರ್ಣಿ ಭಾಗವಹಿಸಿದ್ದ. ಇವನು ಚುಟುಕುಲದವನೇ ಆಗಿರಬಹುದು. ಪ್ರ.ಶ.ಪೂ.1ನೆಯ ಶತಮಾನದಲ್ಲಿ ಈ ಊರಿನವನಾದ ಭೂತಪಾಲ ಎಂಬ ಒಬ್ಬ ಶೆಟ್ಟಿ ಪುಣೆ ಜಿಲ್ಲೆಯ ಕಾರ್ಲೆಯಲ್ಲಿ ಒಂದು ಬೃಹತ್ ಚೈತ್ಯಾಲಯವನ್ನು ಕಲ್ಲಿನಲ್ಲಿ ಕೊರೆಸಿದ. 4–6ನೆಯ ಶತಮಾನಗಳಲ್ಲಿ ಬನವಾಸಿ ಆದಿ ಕದಂಬರ ರಾಜಧಾನಿ ಯಾಗಿತ್ತು. ಕದಂಬ ಮೃಗೇಶವರ್ಮನ ಅತ್ಯಂತ ಚೆಲುವಾದ ತುಂಡು ಸ್ತಂಭ ಶಾಸನ, ಸು.5ನೆಯ ಶತಮಾನದ ಚತುರ್ಭುಜ ವಿಷ್ಣು ಶಿಲ್ಪವೂ ದೊರೆತಿವೆ. ಚಳುಕ್ಯ ರಾಜ್ಯ ಸ್ಥಾಪನೆ ಯಾದೊಡನೆ ಆ ವಂಶದ ಮೊದಲ ಅರಸರ ಪರಿಶ್ರಮದಿಂದ ಬನವಾಸಿ ಅವರ ರಾಜ್ಯಕ್ಕೆ ಸೇರಿತು. ಆ ಕಾಲದಲ್ಲಿ ಅವರ ಸಾಮಂತಾಧಿಪತಿಗಳು ಇಲ್ಲಿ ಆಳುತ್ತಿದ್ದರು. ಉದಾಹರಣೆಗೆ ವಿನಯಾದಿತ್ಯನ ಮಗಳಾದ ಕುಂಕುಮ ಮಹಾದೇವಿಯನ್ನು ಲಗ್ನವಾಗಿದ್ದ ಆಳುಪ ವಂಶದ ಚಿತ್ರವಾಹನ ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ. 8ನೆಯ ಶತಮಾನದ ವೇಳೆಗೆ ಬನವಾಸಿ ಪನ್ನಿರ್ಚ್ಛಾಸಿರ ಎಂಬ ಪ್ರಾಂತ ಕಾಣಿಸಿಕೊಳ್ಳುತ್ತದೆ. ಈ ಪ್ರಾಂತ ತುಂಗಭದ್ರೆಯಿಂದ ವರದೆಯವರೆಗೂ ಹಬ್ಬಿತ್ತು. ಇದರ ಮುಖ್ಯಸ್ಥಳ ಬನವಾಸಿಯೇ. 10ನೆಯ ಶತಮಾನದ ಅಂತ್ಯದಲ್ಲಿ ಕಲ್ಯಾಣದ ಚಾಳುಕ್ಯರ ರಾಜ್ಯಸ್ಥಾಪನೆಯಾದಾಗ ಬನವಾಸಿಯಲ್ಲಿ ಹಾನಗಲ್ಲು ಶಾಖೆಗೆ ಸೇರಿದ ಕದಂಬರು ಸಾಮಂತರಾಗಿ ಆಳತೊಡಗಿದರು. ಆಗಾಗ್ಗೆ ಅರಸ ತನ್ನ ಅಧಿಕಾರಿಗಳನ್ನು ಅಲ್ಲಿಯ ಪ್ರಾಂತಾಧಿಕಾರಿಗಳಾಗಿ, ಬಹುಶಃ ಮೇಲ್ವಿಚಾರಣೆಗೆ ನೇಮಿಸುತ್ತಿದ್ದ. ಭುವನೈಕಮಲ್ಲ ಸೋಮೇಶ್ವರ, ಅವನ ಅನಂತರ ಆರನೆಯ ವಿಕ್ರಮಾದಿತ್ಯ ಇವನು ಯುವರಾಜನಾಗಿ ದ್ದಾಗ ಬನವಾಸಿ ದೇಶವನ್ನಾಳುತ್ತಿದ್ದರು. ವಿಕ್ರಮಾದಿತ್ಯ ತನ್ನ ಅಣ್ಣನನ್ನು ಸೋಲಿಸುವ ಮುನ್ನ ಬನವಾಸಿಯಲ್ಲಿ ನಿಂತು ತನ್ನ ಬಲವನ್ನು ವೃದ್ಧಿಸಿಕೊಂಡ. ಅರಸನಾದ ಬಳಿಕ ತನ್ನ ತಮ್ಮ ಯುವರಾಜ ಜಯಸಿಂಹನನ್ನು ಕೆಲಕಾಲ ಅಲ್ಲಿ ಸಾಮಂತನಾಗಿ ನಿಲ್ಲಿಸಿದ. ಬನವಾಸಿ ಹೊಯ್ಸಳರ, ಸೇವುಣರ, ಕಳಚುರಿಗಳ ಮುತ್ತಿಗೆಗೆ ಈಡಾಯಿತು. ಅರಿಕೇಸರಿಯ ಆಸ್ಥಾನದಲ್ಲಿದ್ದ ಆದಿಕವಿ ಪಂಪ ತನ್ನ ಕಾವ್ಯದಲ್ಲಿ ಬನವಾಸಿ ದೇಶವನ್ನು ಮನದುಂಬಿ ಸ್ಮರಿಸಿದ್ದಾನೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಬನವಾಸಿಮಂಡಲ ವಿಜಯನಗರದ ಒಂದು ಪ್ರಾಂತವಾಯಿತು. ಗೋವ ನಗರವನ್ನು ಗೆದ್ದ ಇಮ್ಮಡಿ ಬುಕ್ಕ ಮತ್ತು ಹರಿಹರರ ಅಧೀನದಲ್ಲಿದ್ದ ಚೌಂಡಮಾಧವ ಈ ಪ್ರಾಂತದ ಅಧಿಕಾರಿಗಳಲ್ಲಿ ಒಬ್ಬ. ವಿಜಯನಗರದ ಪತನದ ಕಾಲದಲ್ಲಿ ಬೀಳಗಿ ಮತ್ತು ಸ್ವಾದಿ ಅರಸುಮನೆತನಗಳು ಪ್ರವರ್ಧಮಾನಕ್ಕೆ ಬಂದುವು. ಈ ಸ್ವಾದಿ ಮನೆತನಕ್ಕೆ ಸೇರಿದ ಅರಸಪ್ಪನಾಯಕನ ಅಧೀನದಲ್ಲಿ ಬನವಾಸಿ ಇತ್ತು. ಈತ ಬನವಾಸಿ ದೇವಾಲಯಕ್ಕೆ ದಾನಗಳನ್ನು ನೀಡಿದ. ಅನಂತರ ಬಂದ ರಘುನಾಥನಾಯಕ ದೇವಾಲಯದಲ್ಲಿನ ಕಲ್ಲುಮಂಟಪ, ಕಲ್ಲುಮಂಚಗಳನ್ನು ದೇವರಿಗಾಗಿ ಮಾಡಿಸಿಕೊಟ್ಟ. 17ನೆಯ ಶತಮಾನದಿಂದ ಬನವಾಸಿ ತನ್ನ ಪ್ರಾಚೀನ ಗರಿಮೆಯನ್ನು ಸೂಚಿಸುವ ಅವಶೇಷಗಳೊಂದಿಗೆ ಒಂದು ಸಾಧಾರಣ ಗ್ರಾಮವಾಗಿ ಉಳಿದುಕೊಂಡಿದೆ. (ಬಿ.ಆರ್.ಜಿ.)

**ಪುರಾತತ್ತ್ವ:** ಬನವಾಸಿಯ ದಕ್ಷಿಣಭಾಗಕ್ಕೆ ವರದಾನದಿಯ ತೀರದಲ್ಲಿ ಇಟ್ಟಿಗೆಯ ಗೋಡೆಗಳಿಂದ ಸುತ್ತುವರೆದ ದೋಣಿಗುಡ್ಡವೆಂಬ ದಿಬ್ಬವಿದೆ. ಈ ಪ್ರದೇಶದಲ್ಲಿ ಚುಟುಕುಲಾನಂದ ಮತ್ತು ಮುಡಾನಂದರ ನಾಣ್ಯಗಳ ಜೊತೆಗೆ ಆ ಕಾಲದ ಮಡಕೆಗಳು ದೊರಕಿದವು. ಕದಂಬ ದೇವಾಲಯವೊಂದು ವರದಾ ನದಿಯ ದಂಡೆಯಲ್ಲಿದೆ. ಇಲ್ಲಿ ಸು. 1 ಚ.ಕಿಮೀ ವ್ಯಾಪ್ತಿಯಲ್ಲಿ ಅನೇಕ ದಿಬ್ಬಗಳಿವೆ. ಇವುಗಳಲ್ಲಿ ಕೆಲವು ಸಾತವಾಹನರ ಕಾಲದ ದಿಬ್ಬಗಳಾಗಿದ್ದಂತೆ



ಕಲ್ಲಿನ ಮಂಚ

ಕಾಣುತ್ತದೆ. ಈ ಪ್ರದೇಶದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆಯ ಸಹಯೋಗದಲ್ಲಿ 1970 ಮತ್ತು 71ರಲ್ಲಿ ಉತ್ಖನನ ನಡೆಸಿತು. ದೋಣಿಗುಡ್ಡವನ್ನು ಉತ್ಖನನಕ್ಕಾಗಿ ಆರಿಸಿಕೊಳ್ಳಲಾಯಿತು. ಇಲ್ಲಿ ಗಜಪೃಷ್ಠಾಕಾರ ಅಥವಾ ಅರ್ಧವೃತ್ತಾಕಾರದ ತಳವಿರುವ ಸಾತವಾಹನರ ಕಾಲದ ಕಟ್ಟಡ ಪತ್ತೆಯಾಯಿತು. ಇದು ಸುಟ್ಟ ಇಟ್ಟಿಗೆಗಳಿಂದ ನಿರ್ಮಿತವಾಗಿದೆ. ಇಟ್ಟಿಗೆ 43x22x7ಸೆಂಮೀ ಗಾತ್ರದಲ್ಲಿದೆ.

ಮತ್ತೊಂದು ಉತ್ಖನನ ಗುಂಡಿಯಲ್ಲಿ ಸಾತವಾಹನರ ಕಾಲಕ್ಕೆ ಸೇರಿದ ದೊಡ್ಡ ಗಾತ್ರದ ಇಟ್ಟಿಗೆಗಳಿಂದ ನಿರ್ಮಿತವಾದ ಗೋಡೆಯ ಅವಶೇಷಗಳು ಮತ್ತು ಕಂದು ಬಣ್ಣದ ಚಿತ್ರಿತ ಮಡಕೆಗಳು, ರೌಲೆಟ್ ಮಾದರಿಯ ಪಾತ್ರೆಗಳು ಹಾಗೂ ಕಪ್ಪು ಮತ್ತು ಕೆಂಪು ದ್ವಿವರ್ಣ ಪಾತ್ರೆಗಳು ಸಿಕ್ಕಿವೆ. ಇವು 1ನೆಯ ಶತಮಾನದ ಕಾಲದ್ದೆಂದು ನಿರ್ಣಯಿಸ ಬಹುದು. ಇದೇ ರೀತಿಯ ಇನ್ನಿತರ ಪ್ರಾಚ್ಯಾವಶೇಷಗಳು ಜೈನದೇವಸ್ಥಾನದ ಉತ್ತರಕ್ಕೆ ಈ ಕೋಟೆಯ ಒಳಭಾಗದಲ್ಲಿ ದೊರೆತಿವೆ.

3ನೆಯ ಗುಡಿಯಲ್ಲಿ ಉತ್ಖನನದಲ್ಲಿ 2ಮೀ ಅಗಲ ಮತ್ತು 2ಮೀ ಉದ್ದವಿರುವ ಪ್ರಾಚೀನ ದೇವಸ್ಥಾನದ ಅವಶೇಷಗಳು ದೊರಕಿದವು. ಪೀಠದ ಜೊತೆಯಲ್ಲಿರುವ ಲಿಂಗ ಈ ಗುಂಡಿಯ ವಾಯವ್ಯಭಾಗದಲ್ಲಿ ಸಿಕ್ಕಿದ್ದು ಇದು ಇಟ್ಟಿಗೆ ಕೋಟೆಗೋಡೆಗಳಿಗೆ ಹೊಂದಿಕೊಂಡಂತೆ ಇದೆ. ಈ ಸ್ಥಳದಲ್ಲಿಯೇ ಚೌಕಾಕಾರದ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿರುವ ಮೃಗೇಶವರ್ಮನ ಶಾಸನ ದೊರಕಿತು. ಈ ಶಾಸನದಲ್ಲಿ ಕದಂಬರ ರಾಜರಾದ ಕಾಕುತ್ಥ್ಸವರ್ಮ, ಶಾಂತಿವರ್ಮ ಮತ್ತು ಮೃಗೇಶವರ್ಮರನ್ನು ಉಲ್ಲೇಖಿಸಲಾಗಿದೆ.

4ನೆಯ ಗುಂಡಿಯಲ್ಲಿ ಇನ್ನೊಂದು ಗಜಪೃಷ್ಠ ವಿನ್ಯಾಸದ ಇಟ್ಟಿಗೆ ಕಟ್ಟಡ ಅನಾವರಣಗೊಂಡಿತು. 22.5x12.5ಮೀ ಅಳತೆಯ ಈ ಕಟ್ಟಡದ ಕೆಳಭಾಗದಲ್ಲಿ ಮೊದಲನೆಯ ಶತಮಾನದ ಅನಂತರ ಕಾಲದ ರೌಲೆಟ್ ಮಡಕೆಗಳು ಮತ್ತು ಕಂದುಬಣ್ಣ ಲೇಪಿತ ಚಿತ್ರಿತ ಮಡಕೆಗಳು ದೊರಕಿವೆ.ಮೇಲೆ ತಿಳಿಸಿದ ಎರಡೂ ಧಾರ್ಮಿಕ ಕಟ್ಟಡಗಳು ಸಣ್ಣಪುಟ್ಟ ವ್ಯತ್ಯಾಸಗಳನ್ನು ಹೊರತು ಪಡಿಸಿದರೆ ಮಿಕ್ಕಂತೆ ಒಂದೇ ರೀತಿಯಲ್ಲಿವೆ. ಎರಡೂ ಪ್ರದಕ್ಷಿಣಾಪಥದಂತಹ ವಾಸ್ತುವನ್ನು ಹೊಂದಿವೆ. ಎರಡನೆಯ ಕಟ್ಟಡದ ಉತ್ಖನನದಲ್ಲಿ ದೊರೆತ ಒಂದು ಮೂರ್ತಿ

ಶಿಲ್ಪವನ್ನು ಸ್ಕಂದನ ಶಿಲ್ಪವೆಂದು ನಾಗಾರ್ಜುನಕೊಂಡದ ಕಾರ್ತಿಕೇಯನ ಶಿಲ್ಪದ ಜೊತೆಗೆ ಹೋಲಿಸಿ ನಿರ್ಣಯಿಸಲಾಗಿದೆ. ಈ ಶಿಲ್ಪದ ಕಾಲ ಸು.2ನೆಯ ಶತಮಾನ. ಇಲ್ಲಿ ಸಿಕ್ಕಿರುವ ಪ್ರಾಚ್ಯಾವ ಶೇಷಗಳು, ಮಡಕೆಗಳು ಹಾಗೂ ಇಟ್ಟಿಗೆಗಳ ಆಕಾರಗಳ ಆಧಾರದ ಮೇಲೆ ಈ ಎರಡೂ ಕಟ್ಟಡಗಳು ಸಾತವಾಹನರ ಕಾಲದ್ದೆಂದು ನಿರ್ಧರಿಸಲಾಗಿದೆ.

ಇಲ್ಲಿ ಆಹತ ನಾಣ್ಯಗಳು–2, ಸಾತವಾಹನರ ನಾಣ್ಯಗಳು–3, ಮಹಾರಠಿ ನಾಣ್ಯಗಳು–1, ಚುಟು ನಾಣ್ಯಗಳು–2, ಮೈಸೂರು ಒಡೆಯರ ನಾಣ್ಯಗಳು–2, ಬ್ರಿಟಿಷರ ಕಾಲದ ನಾಣ್ಯಗಳು–2 ಹೀಗೆ ಒಟ್ಟು ಹನ್ನೊಂದು ನಾಣ್ಯಗಳು ದೊರೆತಿದ್ದು ಇವು ಬೆಳ್ಳಿ, ಸೀಸ ಮತ್ತು ತಾಮ್ರಗಳಿಂದ ಮಾಡಲ್ಪಟ್ಟಿವೆ. ಇದಲ್ಲದೇ ಈ ಉತ್ಖನನಗಳಿಂದ ಸುಟ್ಟಮಣ್ಣಿನ ಗೊಂಬೆಗಳ ಭಾಗಗಳು ಮತ್ತು ಲೋಹದ ವಸ್ತುಗಳು ಸಿಕ್ಕಿವೆ. (ಕೆ.ಎಂ.ಎ.)

1994–96ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವೃತ್ತ ಇಲ್ಲಿ ಉತ್ಖನನವನ್ನು ನಡೆಸಿತು.ಈ ಉತ್ಖನನದಲ್ಲಿ ನಾಲ್ಕು ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ. ಇವು ಚುಟು, ಸಾತವಾಹನ, ಕದಂಬ ಹಾಗೂ ಕದಂಬೋತ್ತರ ಹಂತ. ಚುಟು ಹಂತದಲ್ಲಿ ಬೆಳ್ಳಿಯ ಒಂದು ಮುದ್ರಾಂಕಿತ ನಾಣ್ಯ ದೊರೆತಿರುವುದರಿಂದ ಈ ಹಂತ ಪ್ರಸಕ್ತಶಕ ಪೂರ್ವದ ಕಾಲದ್ದೆಂದು ಉತ್ಖನನಕಾರರ ಅಭಿಪ್ರಾಯ. ಮುಡಾನಂದ ಹಾಗೂ ಶಿವಲಾನಂದರ ಸೀಸ ಹಾಗೂ ತಾಮ್ರ ನಾಣ್ಯಗಳೂ ಸಡಕನನ ಒಂದು ನಾಣ್ಯವೂ ಈ ಹಂತದಲ್ಲಿ ಸಿಕ್ಕಿವೆ. ಅರೆಪ್ರಶಸ್ತ ಕಲ್ಲಿನ ಮಣಿಗಳನ್ನು ತಯಾರಿಸುತ್ತಿದ್ದ ಕಾರ್ಯಾಗಾರದ ಅವಶೇಷ ಹಾಗೂ ಕಾಗದದಷ್ಟು ತೆಳುವಾದ ಗಾಜಿನ ಹಾಳೆಗಳು ಇಲ್ಲಿ ದೊರೆತಿರುವುದು ಮಹತ್ತ್ವಪೂರ್ಣ. ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಹೊಳಪಿನ ಕೆಂಪುಪಾತ್ರೆ ಹಾಗೂ ಕಡುಗಂದು ಬಣ್ಣದ ಪಾತ್ರೆಗಳು ಈ ಕಾಲದ ಮಣ್ಪಾತ್ರೆಗಳಾಗಿವೆ. ಸಾತವಾಹನ ಹಂತದ ಮುಖ್ಯ ಅವಶೇಷವೆಂದರೆ ಇಟ್ಟಿಗೆಯಿಂದ ಕಟ್ಟಿದ ಬೃಹತ್ ಪ್ರಾಕಾರ ಗೋಡೆ. ಸೀಸ ಹಾಗೂ ತಾಮ್ರದ ಕಿಲುಬು ಹಿಡಿದ ನಾಣ್ಯಗಳ ಒಂದು ಗುಡ್ಡೆ ಮೂಸೆ ಸಹಿತವಾಗಿ ಇಲ್ಲಿ ಕಂಡುಬಂದಿದ್ದು ಇದು ಟಂಕಸಾಲೆಯ ಕುರುಹಾಗಿರಬಹುದೆಂದು ಅನುಮಾನಿಸಲಾಗಿದೆ. ಸುಡಾವೆಮಣ್ಣಿನ ಹಾರಿತಿ ಯಕ್ಷಿ, ಬುದ್ಧ ಹಾಗೂ ಬೋಧಿಸತ್ತ್ವರ ಪುಟ್ಟ ಶಿಲ್ಪಗಳು ಇಲ್ಲಿ ಸಿಕ್ಕಿದ್ದು ಇದರಿಂದ ಬನವಾಸಿಯಲ್ಲಿ ಬೌದ್ಧಧರ್ಮದ ಪ್ರಾಚೀನತೆಗೆ ಮೊದಲಬಾರಿ ಸ್ತರಾಧಾರ ದೊರೆತಿರುವುದಾಗಿ ಉತ್ಖನನಕಾರರು ತಿಳಿಸಿದ್ದಾರೆ. ಪ್ರ.ಶ.ಪೂ.2ನೆಯ ಶತಮಾನದ ಬ್ರಾಹ್ಮಿಯಲ್ಲಿ ಮಿಗ್ದ ಎಂಬ ಬರೆಹವುಳ್ಳ ಬಳಪಕಲ್ಲಿನ ಕರಂಡಿಕೆ, ಅವಳಿ ಮೀನುಗಳಿಂದಾ ವೃತವಾದ ಕಮಲದ ಲಾಂಛನವುಳ್ಳ ಮುದ್ರೆ, ಟಗರಿನ ಶಿರದ ಆಕಾರದಲ್ಲಿದ್ದು ಹಿಡಿಕೆಯಿರುವ ಮುದ್ರೆ ಇವು ಈ ಹಂತದ ಇತರ ಗಮನಾರ್ಹ ಅವಶೇಷಗಳಾಗಿವೆ. ಮುದ್ರೆಗಳು ವರ್ತಕರಿಗೆ ಸಂಬಂಧಿಸಿದವಾಗಿರಬೇಕು. ರೌಲೆಟ್ ಪಾತ್ರೆ, ಅಭ್ರಕಯುಕ್ತ ಪಾತ್ರೆ, ಅರೆಟೈನ್ ಪಾತ್ರೆಯ ನಕಲು, ಕಾವಿ ಲೇಪನದಡಿ ಬಿಳಿಚಿತ್ರವುಳ್ಳ ಪಾತ್ರೆಯ ಚೂರುಗಳು ಈ ಹಂತದಲ್ಲಿ ದೊರಕಿವೆ. ಈ ಹಂತ ಕ್ರಮೇಣ ಕದಂಬ ಹಂತದೊಂದಿಗೆ ಬೆರೆಯುತ್ತದೆ. ಕದಂಬ ಹಂತದಲ್ಲಿ ವಿವಿಧ ಪ್ರಕಾರದ ಕೆಂಪು ಹಾಗೂ ಬೂದುಬಣ್ಣದ ಪಾತ್ರೆಗಳು, ಅರೆಪ್ರಶಸ್ತ ಶಿಲೆ, ಗಾಜು ಹಾಗೂ ಸುಡಾವೆಮಣ್ಣಿನ ಮಣಿಗಳು, ಸುಡಾವೆಮಣ್ಣಿನ ಭಗ್ನ ಗೊಂಬೆಗಳು ಹಾಗೂ ಕಬ್ಬಿಣದ ಮೊಳೆಗಳು ದೊರೆತಿವೆ. ಅಸ್ತವ್ಯಸ್ತವಾಗಿದ್ದ ಕದಂಬೋತ್ತರ ಕಾಲದ ಸ್ತರಗಳಲ್ಲಿ ಶಿಸ್ಟ್ ಕಲ್ಲಿನಲ್ಲಿ ಕೆತ್ತಿದ ಕಾಳಿಯ ವಿಗ್ರಹದ ಭಾಗ, ಇಟ್ಟಿಗೆ ಚೂರುಗಳು, ಗಾಜಿನ ಮಣಿ ಹಾಗೂ ಬಳೆಚೂರುಗಳಲ್ಲದೆ ಕೆಂಪು ಹಾಗೂ ಬೂದುಬಣ್ಣದ ಒರಟು ಪಾತ್ರೆಗಳು ಕಂಡುಬಂದವು. (ವಿ.ಎಸ್.)

**ಬನಹಳ್ಳಿ:** ಕೋಲಾರ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಬೆಳ್ಳಿಗುಡ್ಡ ಎಂಬ ಬೆಟ್ಟದ ಕಲ್ಲಾಸರೆ ಮತ್ತು ಸಮತಟ್ಟುಗಳಲ್ಲಿ ವಿವಿಧ ಕಾಲಾವಧಿಯ ಅವಶೇಷಗಳು ಪತ್ತೆಯಾಗಿವೆ. 1973–74ರಲ್ಲಿ ಹಾಗೂ 1983–87ರ ನಡುವೆ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ತಂಡ ಇಲ್ಲಿ ಉತ್ಖನನ ನಡೆಸಿದಾಗ 4 ಸಾಂಸ್ಕೃತಿಕ ಹಂತಗಳು ಕಂಡುಬಂದವು: ನವಶಿಲಾಯುಗ (1ಎ ಹಂತ), ನವಶಿಲಾ–ತಾಮ್ರಯುಗ (1ಬಿ), ತಾಮ್ರಶಿಲಾಯುಗ–ಕಬ್ಬಿಣಯುಗ (2ನೆಯ ಹಂತ), ಕಬ್ಬಿಣಯುಗ (3ನೆಯ ಹಂತ) ಮತ್ತು ಆದಿ ಚಾರಿತ್ರಿಕ ಕಾಲ (4ನೆಯ ಹಂತ).

ನವಶಿಲಾಯುಗ ಹಂತದಲ್ಲಿ (1ಎ) ಕೈಯಿಂದ ಮಾಡಿದ ಸುಟ್ಟಿರುವ ಹಾಗೂ ಬಿಸಿಲಿನಲ್ಲಿ ಒಣಗಿಸಿದ ಮಣ್ಪಾತ್ರೆಗಳು, ಉಜ್ಜಿ ನಯಗೊಳಿಸಿದ ಕೊಡಲಿ, ಅಲಗು ಮತ್ತಿತ್ತರ ಸೂಕ್ಷ್ಮಶಿಲೋಪಕರಣಗಳು, ಮೂಳೆಯ ಮೊನೆ, ಕಲ್ಲಿನ ಮಣಿಗಳಲ್ಲದೆ ವರ್ತುಲಾಕಾರದ ಮನೆಯ ತಳಗಟ್ಟುಗಳು ಕಂಡುಬಂದವು. 1ಬಿ ಹಂತದಲ್ಲಿ ತಾಮ್ರದ ಅರ ಸಿಕ್ಕಿದ್ದರಿಂದ ಇದನ್ನು ನವಶಿಲಾ–ತಾಮ್ರಯುಗ ಹಂತವೆಂದು ಪರಿಗಣಿಸಲಾಗಿದೆ. ತಿಗುರಿಯ ಮೇಲೆ ಮಣ್ಪಾತ್ರೆಗಳನ್ನು ತಯಾರಿಸಿ ಅವನ್ನು ತಲೆಕೆಳಗಾಗಿಟ್ಟು ಸುಡುವ ತಂತ್ರಗಾರಿಕೆ ಈ ಹಂತದಲ್ಲಿ ಬಳಕೆಗೆ ಬಂತು. 2 ಅಸ್ಥಿಮಡಕೆಗಳು ಇಲ್ಲಿ ಕಂಡುಬಂದಿದ್ದು ಒಂದರಲ್ಲಿ ಹಸುಳೆಯ, ಮತ್ತೊಂದರಲ್ಲಿ ಮಗುವಿನ ಅಸ್ಥಿ ಅವಶೇಷಗಳಿದ್ದವು. 2ನೆಯ ಹಂತದಲ್ಲಿ ತಾಮ್ರ–ಶಿಲಾಯುಗ ಸಂಸ್ಕೃತಿಗಿಂತ ಹೆಚ್ಚಾಗಿ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳಿದ್ದವು. 6 ಸಮಾಧಿಗಳನ್ನು ಇಲ್ಲಿ ಹೊರತೆಗೆಯಲಾಯಿತು. ಅಂಡಾಕಾರದ ಆಳವಿಲ್ಲದ ಕುಣಿಗಳೊಳಗೆ ಶವವನ್ನು ಉತ್ತರ–ದಕ್ಷಿಣಾಭಿಮುಖವಾಗಿ ನೇರಭಂಗಿಯಲ್ಲಿ ಹೂಳಲಾಗಿತ್ತು. ಸಮಾಧಿಯ ಮೇಲೆ ಗುರುತಾಗಿ ಕಲ್ಲುತುಂಡುಗಳನ್ನು ಒತ್ತಿ ಹಾಸಲಾಗಿತ್ತು ಇಲ್ಲವೇ ಕಲ್ಲು ಚಪ್ಪಡಿಯನ್ನು ಇಡಲಾಗಿತ್ತು. ಸಮಾಧಿಗಳೊಳಗಿದ್ದ ವಸ್ತುಗಳೆಂದರೆ ಕೈಯಿಂದ ಮಾಡಿದ ಬೂದು ಹಾಗೂ ಕೆಂಬಣ್ಣದ ಪಾತ್ರೆಗಳು ಹಾಗೂ ಸೂಕ್ಷ್ಮಶಿಲೋಪಕರಣಗಳು. ಈ ಹಂತದಲ್ಲಿ ಬಾಣದ ಮೊನೆ, ಕೊಕ್ಕೆ, ಮೊಳೆ, ಉಂಗುರ, ಮಚ್ಚು ಮುಂತಾದ ಕಬ್ಬಿಣ ಉಪಕರಣಗಳ ಸ್ಥಳೀಯ ತಯಾರಿಕೆ ಪ್ರಾರಂಭಗೊಂಡಿತು. 3ನೆಯ ಹಂತದಲ್ಲಿ ಸಾಲು ಕುಲುಮೆಗಳು, ಬಡಿಗಲ್ಲು, ಕಬ್ಬಿಣದ ಅದಿರು, ಕಿಟ್ಟದ ಮಂದ ಪದರ ಮೊದಲಾದ ಅವಶೇಷಗಳು ಸು. 125ಚ.ಮೀ ಜಾಗದಲ್ಲಿ ಹರಡಿದ್ದು ದೊಡ್ಡ ಕಬ್ಬಿಣ ಕಾರ್ಯಾಗಾರವೊಂದು ಅಸ್ತಿತ್ವಕ್ಕೆ ಬಂದುದನ್ನು ಸೂಚಿಸುತ್ತವೆ. ಕುಲುಮೆಗಳಲ್ಲಿ ಎರಡರಲ್ಲಿ ಗಾಳಿಯೂದಲು ಕಿಂಡಿಗಳಿದ್ದು ಉಳಿದವು ಕಬ್ಬಿಣ ಕಾಯಿಸಲು ಮಾಡಿದ್ದಿರಬಹುದಾದ ಒಲೆಗಳಾಗಿರಬಹುದು.

1ಬಿ ಮತ್ತು 2ನೆಯ ಹಂತದಲ್ಲಿ ತಿಗುರಿಯ ಮೇಲೆ ತಯಾರಿಸಿದ ಮಣ್ಪಾತ್ರೆಗಳ ಸಂಖ್ಯೆ ಅಧಿಕವಾಗಿದೆ. ಚಿತ್ರಿತ ಮಣ್ಪಾತ್ರೆಗಳಿದ್ದರೂ ವಿರಳ. ಕೆಂಪು ಮೇಲ್ಮೈ ಮೇಲೆ ಕಪ್ಪು ಬಣ್ಣದಲ್ಲಿಯೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳನ್ನು ಅಪರೂಪವಾಗಿ ಬಿಳಿಯ ಬಣ್ಣದಿಂದಲೂ ಚಿತ್ರಿಸಲಾಗಿದೆ. 1ಬಿ ಹಂತದ ಕೆಂಪು ಪಾತ್ರೆಯೊಂದರ ಮೇಲೆ ಕೊಂಬಿರುವ ಗೂಳಿ ಮತ್ತು ಒಂಟೆಯ ಚುಕ್ಕಿ ಚಿತ್ರಗಳು ಕಂಡುಬಂದವು. ಕೈಯಿಂದ ಮಾಡಿದ ಬೂದುಬಣ್ಣದ ಪಾತ್ರೆಯೊಂದರ ಭುಜದ ಮೇಲೆ ಅಂಟಿಸಿ ಮಾಡಿದ ಅಲಂಕರಣವೂ ಇದಕ್ಕೆ ತಾಗಿ ಗೀರು ಚಿತ್ರವೂ ಇತ್ತು. ಶಿಲೋಪಕರಣಗಳಲ್ಲಿ 2 ವರ್ಗಗಳಿವೆ. ಡಾಲರೈಟ್‌ನಲ್ಲಿ ಮಾಡಿದ ಉಜ್ಜಿ ನಯಗೊಳಿಸಿದ ಉಪಕರಣಗಳಲ್ಲಿ ಕೊಡಲಿ, ಉಳಿ, ಅರೆಯುವ ಗುಂಡು ಮುಖ್ಯವಾದುವು. ಸೂಕ್ಷ್ಮಶಿಲೋಪಕರಣಗಳು 1ಎ ಹಂತದಲ್ಲಿ ಅಧಿಕವಾಗಿದ್ದು ಅಲಗು, ಅರ್ಧಚಂದ್ರಾಕೃತಿ, ಚಕ್ಕೆ ಮುಂತಾದ ನಮೂನೆಗಳು ಪ್ರಮುಖವಾಗಿವೆ.

ಕಾಲಮಾನ: 1ಎ ಹಂತ– ಪ್ರ.ಶ.ಪೂ.ಸು.1800; 1ಬಿ ಹಂತ – ಪ್ರ.ಶ.ಪೂ.ಸು.1600; 2ನೆಯ ಹಂತ–ಪ್ರ.ಶ.ಪೂ.ಸು.1200; 3ನೆಯ ಹಂತ–ಪ್ರ.ಶ.ಪೂ.ಸು.600. ಉತ್ಖನನಕಾರರ ಪ್ರಕಾರ ಕೋಲಾರ ಪ್ರದೇಶದ ನವಶಿಲಾಯುಗ ಸಂಸ್ಕೃತಿ ಕಾವೇರಿ ಬಯಲಿನ ಸಂಸ್ಕೃತಿಗಿಂತ ಭಿನ್ನವಾಗಿದೆ. ತುಂಗಭದ್ರ ಬಯಲಿನಲ್ಲಿ ಕಂಡುಬರುವಂತೆ ಕೋಲಾರ ಪ್ರದೇಶದಲ್ಲಿಯೂ ನವಶಿಲಾಯುಗದ ಜನ ಆರಂಭದಲ್ಲಿ ಗ್ರಾನೈಟ್ ಬೆಟ್ಟಗಳ ಇಳಿಜಾರು–ಸಮತಟ್ಟುಗಳಲ್ಲಿ ವಾಸ್ತವ್ಯ ಹೂಡಿದರು. ಅನಂತಪುರ–ಕರ್ನೂಲ್ ಪ್ರದೇಶದ ಸಮಕಾಲೀನ ವಸತಿಗಳೊಂದಿಗೆ ಸಂಪರ್ಕವೇರ್ಪಟ್ಟ ಅನಂತರ ತಾಮ್ರ–ಕಬ್ಬಿಣ ತಂತ್ರಜ್ಞಾನವನ್ನು ಇವರು ಪಡೆದಿರಬಹುದು. (ಬಿ.ಎನ್.)

**ಬನಾವಳಿ:** ಹರಿಯಾಣ ರಾಜ್ಯದ ಫತೇಹಬಾದ್ ಜಿಲ್ಲೆಯಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಇದು ಬತ್ತಿಹೋದ ಸರಸ್ವತಿ ನದಿಯ ಬಲದಂಡೆಯಲ್ಲಿದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಆರ್.ಎಸ್.ಬಿಷ್ಟ್ ಇಲ್ಲಿ 1974–77 ಹಾಗೂ 1983–88 ರಲ್ಲಿ ಉತ್ಖನನ ನಡೆಸಿದರು. ಹರಪ್ಪ ಸಂಸ್ಕೃತಿಯ ಮೂರು ಹಂತಗಳನ್ನು ಇಲ್ಲಿ ಗುರುತಿಸಲಾಗಿದೆ. 1ನೆಯ ಹಂತ ಆದಿ ಹರಪ್ಪ (ಕಾಲಿಬಂಗನ್) ಸಂಸ್ಕೃತಿ. ಈ ಹಂತವನ್ನು ಮೂರು ಉಪಹಂತಗಳನ್ನಾಗಿ ವಿಭಜಿಸಲಾಗಿದೆ. ಇವು: ಸುರಕ್ಷಾಪೂರ್ವದ ಹಂತ, ಸುರಕ್ಷಾಹಂತ ಮತ್ತು ಸಂಕ್ರಮಣ ಹಂತ (ಪೂರ್ವಭಾವಿ ಹರಪ್ಪ). 2ನೆಯ ಹಂತ ಪ್ರೌಢ ಹರಪ್ಪ ಹಾಗೂ 3ನೆಯ ಹಂತ ಅಂತ್ಯ ಹರಪ್ಪ (ಬನಾವಳಿ–ಬಾರ ಸಂಸ್ಕೃತಿ).

ಆದಿ ಹರಪ್ಪ: ಮೊದಲನೆಯ ಉಪಹಂತದಲ್ಲಿ ರಕ್ಷಣಾಗೋಡೆಯಿಲ್ಲದೆ ಊರನ್ನು ಸ್ಥಾಪಿಸಲಾಯಿತು. ಎರಡನೆಯ ಉಪಹಂತದಲ್ಲಿ ಊರಿನ ಸುತ್ತಲೂ ಹಸಿ ಇಟ್ಟಿಗೆಗಳಿಂದ ಕೋಟೆಗೋಡೆಯನ್ನು ನಿರ್ಮಿಸಲಾಯಿತು. ಸೀಮಿತ ಉತ್ಖನನದಿಂದಾಗಿ ಊರಿನ ರಚನೆಯ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲ. ಈ ಹಂತದ ಮನೆಗಳಲ್ಲಿ ವಿರಳವಾಗಿ ಸುಟ್ಟ ಇಟ್ಟಿಗೆಯನ್ನೂ ಅಧಿಕವಾಗಿ ಹಸಿ ಇಟ್ಟಿಗೆಗಳನ್ನೂ ಬಳಸಲಾಗಿದೆ. ಇಟ್ಟಿಗೆಗಳು 3:2:1ರ ಅನುಪಾತದಲ್ಲಿವೆ. ಮನೆಯೊಳಗೆ ಇಟ್ಟಿಗೆಗಳಿಂದ ಮಾಡಿದ ಅಥವಾ ಕುಟ್ಟಿ ಗಟ್ಟಿ ಮಾಡಿದ ಮಣ್ಣಿನ ನೆಲಗಟ್ಟಿದೆ. ಜೊತೆಗೆ ಒಲೆ ಅಥವಾ ಭಟ್ಟಿ ಹಾಗೂ ಧಾನ್ಯ ಶೇಖರಣ ಗುಂಡಿಗಳಿವೆ.



ಸುಡಾವೆ ಮಣ್ಣಿನ ನೇಗಿಲಿನ ಮಾದರಿ

ಈ ಉಪಹಂತಗಳ ಮಣ್ಪಾತ್ರೆಗಳು ಆಕಾರ, ವರ್ಣಚಿತ್ರ ಹಾಗೂ ಶೈಲಿಯಲ್ಲಿ ಕಾಲಿಬಂಗನ್‌ನ ಮಣ್ಪಾತ್ರೆಗಳನ್ನು ಹೋಲುತ್ತವೆ. ಈ ಉಪಹಂತಗಳಿಂದ ದೊರೆತ ಇನ್ನಿತರ ಅವಶೇಷಗಳು: ಅರೆಪ್ರಶಸ್ತ ಶಿಲೆಗಳಾದ ವೈಡೂರ್ಯ, ಕಾರ್ನೀಲಿಯನ್, ಸ್ಟಿಯಟೈಟ್, ಫಯಾನ್ಸ್ ಮತ್ತು ಮಣ್ಣು, ಬಂಗಾರ, ಶಂಖ, ಎಲುಬಿನ ಮಣಿಗಳು; ಚಿಪ್ಪು, ಫಯಾನ್ಸ್,

ತಾಮ್ರ ಹಾಗೂ ಸುಟ್ಟ ಮಣ್ಣಿನ ಅಲಂಕೃತ ಬಳೆಗಳು, ತಾಮ್ರದ ಹಿಡಿಕೆ ಹಾಗೂ ಸೌಟು, ಬೆಣಚುಕಲ್ಲಿನ ಒಂದು ಅಲಗು, ಎಲುಬಿನ ಮೊನೆ ಮತ್ತು ಸೂಜಿಗಳು, ಸುಟ್ಟ ಮಣ್ಣಿನ ಪ್ರಾಣಿಗೊಂಬೆಗಳು.

ಆದಿ ಮತ್ತು ಪ್ರೌಢ ಹರಪ್ಪ ನಡುವಣ ಸ್ಥಿತ್ಯಂತರ ಘಟ್ಟವಾದ ಮೂರನೆಯ ಉಪಹಂತ ವಿಕಾಸ ದೃಷ್ಟಿಯಿಂದ ಮುಖ್ಯ. ಈ ಅವಧಿಯಲ್ಲಿ ನಗರವನ್ನು ಯೋಜನಾಬದ್ಧ ರೀತಿಯಲ್ಲಿ ನವನಿರ್ಮಾಣಕ್ಕೊಳಪಡಿಸಲಾಯಿತು. ಪ್ರೌಢ ಹರಪ್ಪ ಕಾಲದ ನಗರ ಲಕ್ಷಣಗಳು ಈ ಹಂತದಲ್ಲಿ ಅಂಕುರಿತವಾದವು. ಪ್ರಥಮ ಬಾರಿಗೆ ನಗರವನ್ನು ಎರಡು ಭಾಗಗಳಾಗಿ ವಿಭಜಿಸಲಾಯಿತು. ಆದಿ ಹರಪ್ಪ ಕಾಲದ ಕೋಟೆಗೋಡೆಯನ್ನು ಅವಶ್ಯವಿದ್ದೆಡೆಯಲ್ಲಿ ವಿಸ್ತರಿಸಿ ದುರ್ಗ ಅಥವಾ ಮೇಲ್ನಗರಕ್ಕಾಗಿ (ಸಿಟಡಲ್) ಸ್ಥಾನವನ್ನು ಕಲ್ಪಿಸಲಾಯಿತು. ಇದಕ್ಕೆ ಹೊಂದಿದಂತೆ ಸಾಮಾನ್ಯ ಪ್ರಜೆಗಳಿಗಾಗಿ ಕೆಳನಗರವನ್ನು (ಲೋಯರ್ ಟೌನ್) ನಿರ್ಮಿಸಲಾಯಿತು. ಮೇಲ್ನಗರದ ಕಟ್ಟಡಗಳ ತಳವಿನ್ಯಾಸ ವಿಶೇಷವಾಗಿ ಗಮನ ಸೆಳೆಯುತ್ತದೆ. ಇವು ಗಜಪೃಷ್ಠಾಕಾರವಾಗಿದ್ದು, ಪೃಷ್ಠಭಾಗದಲ್ಲಿ ಬೂದಿಯಿಂದ ತುಂಬಿದ, ಗಜಪೃಷ್ಠಾಕಾರದ ಪುಟ್ಟ ಅಗ್ನಿಸ್ಥಾನವಿದೆ. ಈ ಕಟ್ಟಡಗಳಿಂದ ಚಕಮಕಿಕಲ್ಲಿನ ಎರಡು ಬೈರಿಗೆ ಮೊಳೆಗಳು (ಡ್ರಿಲ್ ಬಿಟ್ಸ್) ದೊರಕಿವೆ. ಸಾಂದರ್ಭಿಕ ಸಾಕ್ಷ್ಯಾಧಾರದ ಮೇಲೆ ಈ ಕಟ್ಟಡಗಳು ಔದ್ಯೋಗಿಕ ಸ್ಥಾನಗಳಾಗಿರಬೇಕೆಂದು ಉತ್ಖನನಕಾರರು ಊಹಿಸಿದ್ದಾರೆ. ಆದಿ ಹರಪ್ಪ ಕಾಲದ ಇಟ್ಟಿಗೆಗಳೊಂದಿಗೆ 4:2:1 ಅನುಪಾತದ ಇಟ್ಟಿಗೆಗಳು ಈ ಸಮಯದಲ್ಲಿ ಬಳಕೆಗೆ ಬಂದವು. ತ್ರಿಕೋಣಾಕಾರದ ಹಾಗೂ 8 ಸಂಖ್ಯೆಯನ್ನು ಹೋಲುವ ಸುಟ್ಟ ಮಣ್ಣಿನ ಬಿಲ್ಲೆಗಳು, ಚಕಮಕಿ ಕಲ್ಲಿನ ನೀಳ ಅಲಗುಗಳು ಪ್ರಥಮ ಬಾರಿಗೆ ಚಾಲ್ತಿಗೆ ಬಂದವು. ಸ್ಟಿಯಟೈಟ್ ಮಣಿಗಳು ಅಧಿಕವಾದುವು. ಆದಿಹರಪ್ಪ ಕಾಲದ ಮಣ್ಪಾತ್ರೆಗಳ ಜೊತೆಗೆ ಹೊಸಬಗೆಯ ಗಾಢಕೆಂಪು ಬಣ್ಣದ ಲೇಪನವುಳ್ಳ ಮಣ್ಪಾತ್ರೆಗಳು ತಯಾರಾದುವು.



**ಪುನಾರಚಿತ ನಗರ**

ಪ್ರೌಢ ಹರಪ್ಪ ಹಂತದಲ್ಲಿ ನಗರದ ಪುನರ್‌ನಿರ್ಮಾಣ ಕಾರ್ಯ ಮುಂದುವರೆಯಿತು. ಆದರೆ ಈ ಹಂತದ ನಗರ ಯೋಜನೆ ಸಮಕಾಲೀನ ನಗರ ಮಾದರಿಗೆ ವ್ಯತಿರಿಕ್ತವಾಗಿದೆ. ಈ ಹಂತದಲ್ಲಿ ಇಡಿ ನಗರ ವಿಷಮಭುಜ ಚೌಕೋನಾಕಾರದ (ಟ್ರಪೀಸಿಯಮ್) ಕೋಟೆಗೋಡೆಯಿಂದ ಆವೃತವಾಗಿತ್ತು. ಒಳಗೆ ಅರ್ಧಚಂದ್ರಾಕೃತಿಯಾಕಾರದಲ್ಲಿ ಮತ್ತೊಂದು ಗೋಡೆಯನ್ನು ಕಟ್ಟಿ, ನಗರವನ್ನು ಮೇಲ್‌ನಗರ ಮತ್ತು ಕೆಳನಗರಗಳಾಗಿ ವಿಭಜಿಸಲಾಯಿತು. ಈ ಎರಡು ಭಾಗಗಳ ನಡುವೆ ಎರಡು ಪ್ರವೇಶದ್ವಾರಗಳಿದ್ದವು. ಮೇಲ್‌ನಗರ ಎತ್ತರ ಸ್ಥಾನದಲ್ಲಿದ್ದರಿಂದ ಪ್ರವೇಶದ್ವಾರಗಳ ಮುಂದೆ ಪಾವಟಿಗೆಗಳನ್ನು ಕಟ್ಟಲಾಯಿತು. ಕೋಟೆಗೋಡೆಯಲ್ಲಿ ಅವಶ್ಯವಿದ್ದೆಡೆ ಬುರುಜು ಹಾಗೂ ಪ್ರವೇಶದ್ವಾರಗಳನ್ನು ಕಲ್ಪಿಸಲಾಯಿತು. ಇಲ್ಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಪೂರ್ವಭಾಗದ ಕೋಟೆ ಗೋಡೆಯಿಂದಾಚೆ ಕಂದಕವಿದೆ. ಈ ಭಾಗದ ಪ್ರವೇಶದ್ವಾರದಡಿಯಲ್ಲಿ ಕಟ್ಟಿರುವ ಚರಂಡಿಯ ಮೂಲಕ ನಗರದೊಳಗಿಂದ ಬರುವ ಮಳೆನೀರು ಕಂದಕಕ್ಕೆ ಬೀಳುವಂತೆ ವ್ಯವಸ್ಥೆ ಮಾಡಲಾಗಿತ್ತು. ನಗರದ ಮುಖ್ಯ ಬೀದಿಗಳು ಹಾಗೂ ಓಣಿಗಳನ್ನು ಚದುರಂಗ ವಿನ್ಯಾಸದಲ್ಲಿ ಒಂದನ್ನೊಂದು ಸಂಧಿಸುವಂತೆ ನಿರ್ಮಿಸಿರಲಿಲ್ಲ, ಬದಲಿಗೆ ನಗರದ ಕೇಂದ್ರಭಾಗದಿಂದ ಬೀದಿಗಳು (ಸು.4–5) ಸೂರ್ಯನ ಕಿರಣಗಳಂತೆ ನಾಲ್ಕೂ ದಿಕ್ಕಿಗೆ ಚಾಚಿದ್ದವು. ಪ್ರೌಢ ಹರಪ್ಪ ಸಂಸ್ಕೃತಿಯ ಲಕ್ಷಣಗಳಲ್ಲೊಂದಾದ ಚರಂಡಿ ವ್ಯವಸ್ಥೆ ಇಲ್ಲಿರಲಿಲ್ಲ. ಆದರೆ, ಮನೆಗಳ ಮಲಿನ ನೀರನ್ನು ಇಟ್ಟಿಗೆನಾಲೆಗಳ ಮುಖಾಂತರ ಬೀದಿಯಲ್ಲಿ ಹುಗಿದ ದೊಡ್ಡ ಗಡಿಗೆಗಳಲ್ಲಿ ಸಂಗ್ರಹಿಸಲಾಗುತ್ತಿತ್ತು. ಇಲ್ಲಿ ಅನೇಕ ಕೋಣೆಗಳ ವಿಶಾಲ ಮನೆಗಳಿದ್ದವು. ನೆಲಗಟ್ಟನ್ನು ಇಟ್ಟಿಗೆಯ ಹಾಸು ಅಥವಾ ದಮ್ಮಸು ಮಾಡಿದ ಮಣ್ಣಿನಿಂದ ಮಾಡಲಾಗಿದೆ. ವ್ಯಾಪಾರಿಗಳ ಹಾಗೂ ಉದ್ಯೋಗಸ್ಥರ ಮನೆಗಳಲ್ಲಿ ಮುದ್ರೆಗಳು, ತೂಕದಬಟ್ಟುಗಳ ಜೊತೆಗೆ ನೆಲಗಟ್ಟಿನಲ್ಲಿ ಹೂತಿದ್ದ ಮಣ್ಪಾತ್ರೆಗಳು, ಅರೆಪ್ರಶಸ್ತ ಕಲ್ಲಿನ ಮಣಿಗಳು, ಬಂಗಾರದ ಮಣಿಗಳು ದೊರೆತಿವೆ. ಸಾಮಾನ್ಯವಾಗಿ ಪ್ರತಿ ಮನೆಯಲ್ಲಿಯೂ ಒಂದು ಕೋಣೆಯಲ್ಲಿ ಚೌಕೋನದ ಅಗ್ನಿಕುಂಡವಿದ್ದು (ಇಟ್ಟಿಗೆಸಹಿತ ಅಥವಾ ಇಟ್ಟಿಗೆರಹಿತ), ಅದರ ನಡುವೆ ಮಣ್ಣಿನ ಗೂಟದಂತಹ ರಚನೆಯಿದೆ. ಇಂಥ ಅಗ್ನಿಕುಂಡಗಳು ಕಾಲಿಬಂಗನ್‌ನಲ್ಲೂ ಕಾಣಸಿಗುತ್ತವೆ. ಬೀದಿಗೆ ಹೊಂದಿ ಇದ್ದ ಮನೆಗಳ ಹೊರಗೋಡೆಯ ತಾಗಿ ಕಟ್ಟೆಗಳನ್ನು ಅಥವಾ ದನಗಳಿಗಾಗಿ ಕೊಟ್ಟಿಗೆಗಳನ್ನು ರಚಿಸಲಾಗಿದೆ. ಕಟ್ಟಡಗಳು ಸೆಗಣಿ, ಬೂದಿ ಅಥವಾ ಹೊಟ್ಟು ಮಿಶ್ರಿತ ಮಣ್ಣಿನ ಗಾರೆಯ ಲೇಪನವನ್ನು ಹೊಂದಿದ್ದವು.

ಈ ಹಂತದಲ್ಲಿ ಸುಟ್ಟ ಹಾಗೂ ಹಸಿಇಟ್ಟಿಗೆಗಳನ್ನು 4:2:1 ಅನುಪಾತದಲ್ಲಿ ತಯಾರಿಸಲಾಗುತ್ತಿತ್ತು. ಸುಟ್ಟಇಟ್ಟಿಗೆಗಳನ್ನು ಬಾವಿ, ಬಚ್ಚಲು ಹಾಗೂ ಚರಂಡಿಗಳಲ್ಲಿ ಮಾತ್ರ ಬಳಸಲಾಗಿದೆ. ಕೋಟೆ ಹಾಗೂ ಇನ್ನುಳಿದ ಕಟ್ಟಡಗಳನ್ನು ಹಸಿಇಟ್ಟಿಗೆಯಿಂದ ನಿರ್ಮಿಸಲಾಗಿದೆ.

ಇಲ್ಲಿ ದೊರೆತ ಅವಶೇಷಗಳು ನಗರದ ಸಮೃದ್ಧಿಯನ್ನು ಸೂಚಿಸುತ್ತವೆ. ಇಂತಹ ಒಂದು ಅವಶೇಷವೆಂದರೆ ಸುಟ್ಟಮಣ್ಣಿನ ನೇಗಿಲು. ಹರಪ್ಪ ಸಂಸ್ಕೃತಿ ಕೃಷಿಪ್ರಧಾನವಾದದ್ದು ಎಂಬುದಕ್ಕೆ ಇದೊಂದು ನಿದರ್ಶನ. ಇಲ್ಲಿ ದೊರೆತ ಅನೇಕ ಮುದ್ರೆಗಳಿಂದ ಈ ನಗರ ವ್ಯಾಪಾರಕೇಂದ್ರವೂ ಆಗಿತ್ತು ಎಂಬುದು ದೃಢಪಡುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿರುವ ಬಂಗಾರ ಹಾಗೂ ವೈಡೂರ್ಯ ವಸ್ತುಗಳು ನಗರದ ಪ್ರಾಮುಖ್ಯವನ್ನು ಎತ್ತಿ ತೋರುತ್ತವೆ. ಅಲ್ಲದೆ, ಅರೆಪ್ರಶಸ್ತ ಕಲ್ಲಿನಲ್ಲಿ, ಚಿಪ್ಪಿನಿಂದ, ಎಲುಬಿನಿಂದ, ಫಯಾನ್ಸ್, ಸ್ಟಿಯಟೈಟ್ ಹಾಗೂ ಮಣ್ಣಿನಿಂದ ತಯಾರಿಸಿದ ಅನೇಕ ಮಣಿಗಳು, ಕರ್ಣಾಭರಣಗಳು ಹಾಗೂ ಸುಟ್ಟಮಣ್ಣಿನ ಬಳೆಗಳು ಹಾಗೂ ಕಡಗಗಳು ಇಲ್ಲಿ ದೊರೆತಿವೆ. ಸುಟ್ಟಮಣ್ಣಿನ ಮಾನವಾಕಾರದ ಗೊಂಬೆಗಳಿಂದ ಆಗಿನ ಕಾಲದ ಆಲಂಕಾರಿಕ ಆಭರಣಗಳ ಚಿತ್ರಣ ದೊರೆಯುತ್ತದೆ. ಹೋರಿ, ಎಮ್ಮೆ, ಟಗರು, ಜಿಂಕೆ, ಖಡ್ಗಮೃಗ, ನಾಯಿ, ಹುಲಿ, ಕುದುರೆ ಮತ್ತು ಪಕ್ಷಿಗಳ ಗೊಂಬೆಗಳನ್ನು ಸುಟ್ಟಮಣ್ಣಿನಿಂದ ತಯಾರಿಸಲಾಗಿದೆ. ಸುಟ್ಟಮಣ್ಣಿನ ಚಕ್ಕಡಿಗಳ ಚೌಕಟ್ಟುಗಳು, ಬಿಲ್ಲೆ, ಗಾಲಿಗಳು ಇಲ್ಲಿ ದೊರಕಿವೆ. ತಾಮ್ರದ ಉಪಕರಣಗಳೆಂದರೆ ಬಾಣದ ಹಾಗೂ ಈಟಿಯ ಮೊನೆಗಳು, ಕುಡುಗೋಲು, ಉಳಿ, ಮೀನಿನ ಗಾಳ, ಉಂಗುರ, ಪಿನ್ನುಗಳು. ಚರ್ಟ್ ಅಲಗು, ತಿರುಳುಗಲ್ಲು ಹಾಗೂ ಚಕ್ಕೆ, ತೂಕದಬಟ್ಟುಗಳು ಇತರ ಅವಶೇಷಗಳಾಗಿವೆ.

ಅಂತ್ಯ ಹರಪ್ಪ ಸಂಸ್ಕೃತಿ (ಬನಾವಳಿ–ಬಾರ): ಹಿಂದಿನ ಹಂತದ ಪೂರ್ವಭಾಗದ ಕೋಟೆಗೋಡೆಗೆ ಹೊಂದಿ ಇದ್ದ ಅವಶೇಷಗಳು ಈ ಸಂಸ್ಕೃತಿಯವು. ಸ್ತರಗಳ ದೃಷ್ಟಿಯಿಂದ ಇದು ಪ್ರೌಢ ಹರಪ್ಪ ಸಂಸ್ಕೃತಿಯ ಅನಂತರದ ಸಾಂಸ್ಕೃತಿಕ ಘಟ್ಟ. ಆದರೆ ಈ ಅವಶೇಷಗಳು ಪಂಜಾಬ್ ರಾಜ್ಯದ ಸಮಕಾಲೀನ ಬಾರ ಸಂಸ್ಕೃತಿಯ ಅವಶೇಷಗಳನ್ನು ಹೋಲುವುದರಿಂದ ಉತ್ಖನನಕಾರರು ಈ ಸಂಸ್ಕೃತಿಯನ್ನು ಬನಾವಳಿ–ಬಾರ ಸಂಸ್ಕೃತಿಯೆಂದು ಕರೆದಿದ್ದಾರೆ. ಈ ಹಂತದ ವಸತಿಯಲ್ಲಿ ನಗರದ ಲಕ್ಷಣಗಳಿಲ್ಲ. ಇಲ್ಲಿ ಸಾಮಾಜಿಕ ಹಾಗೂ ಪೌರಾಡಳಿತ ವ್ಯವಸ್ಥೆ ಅವನತಿಗೊಂಡಿದೆ. ಆದಿ ಹರಪ್ಪ ಲಕ್ಷಣಗಳು ಈ ಹಂತದಲ್ಲಿ ಮರುಕಳಿಸಿದಂತೆ ತೋರುತ್ತದೆ. ಈ ಕಾಲದ ಕಟ್ಟಡಗಳಲ್ಲಿ ಇಟ್ಟಿಗೆಗಳ ಬಳಕೆಯಿಲ್ಲ. ಗೋಡೆಗಳನ್ನು ಮಣ್ಣಿನಿಂದ ಕಟ್ಟಲಾಗಿದೆ. ನೆಲಗಟ್ಟಿನಲ್ಲಿ ತೋಡಿದ ಧಾನ್ಯ ಶೇಖರಣೆ ಗುಂಡಿಗಳು, ಮಣ್ಣಿನಿಂದ ಅಥವಾ ಸುಣ್ಣದಿಂದ ತಯಾರಿಸಿದ ಧಾನ್ಯದ ಹಗೇವುಗಳು, ತಂದೂರು ಒಲೆಗಳು ಸಾಮಾನ್ಯವಾಗಿ ಎಲ್ಲ ಮನೆಗಳಲ್ಲಿ ಕಾಣಸಿಗುತ್ತವೆ. ಮಣ್ಪಾತ್ರೆಗಳೂ ಆದಿ ಹರಪ್ಪ ಸಂಪ್ರದಾಯದ ಪುನರಾವೃತ್ತಿಯಂತೆ ಕಂಡುಬರುತ್ತವೆ. ಹರಪ್ಪ ಕಾಲದ ಮುದ್ರೆಗಳು, ತೂಕದಬಟ್ಟುಗಳು, ಅಲಗುಗಳು ಈ ಕಾಲದಲ್ಲಿ ಬಳಕೆಯಲ್ಲಿರಲಿಲ್ಲ. ತಾಮ್ರದ ಉಪಕರಣಗಳ ಸಂಖ್ಯೆ ಕಡಿಮೆ ಯಾಗಿದೆ. ತ್ರಿಕೋನಾಕಾರದ ಸುಟ್ಟಮಣ್ಣಿನ ಬಿಲ್ಲೆಗಳೂ ಇಲ್ಲಿಲ್ಲ. ಆದರೆ ಫಯಾನ್ಸಿನಿಂದ ತಯಾರಿಸಿದ ಬಳೆಗಳು, ಕಾಲಂದಿಗೆ, ಉಂಗುರಗಳು, ಮಣಿಗಳು ಹಾಗೂ ಅಶ್ವತ್ಥ ಎಲೆಯಾಕಾರದ ಕರ್ಣಾಭರಣಗಳು ಹೇರಳವಾಗಿ ದೊರೆತಿವೆ. ಅರೆಪ್ರಶಸ್ತ ಶಿಲೆಗಳ ಮಣಿಗಳೂ ಸಿಕ್ಕಿವೆ.

ಪ್ರೌಢ ಹರಪ್ಪ ಹಂತದಿಂದ ದೊರೆತ ಇಂಗಾಲ–14 ತಂತ್ರ ಕಾಲಮಾನಗಳು: ಪ್ರಶ.ಪೂ.2560–1965, ಪ್ರಶ.ಪೂ.2425–1995, ಪ್ರಶ.ಪೂ.1700–1415. (ಎಲ್.ಎಸ್.ಆರ್.)

**ಬಬ್ರುವಾಡ:** ಉತ್ತರ ಕನ್ನಡ ಜಿಲ್ಲೆಯ ಅಂಕೋಲದಿಂದ 2ಕಿಮೀ ದೂರದಲ್ಲಿ ಸಮುದ್ರದ ಅಂಚಿನಲ್ಲಿರುವ ಸಣ್ಣಗ್ರಾಮ. 1977ರಲ್ಲಿ ಇಲ್ಲಿ ಬಬ್ರದೇವಾಲಯದಲ್ಲಿದ್ದ ದುಂಡು ಶಿಲ್ಪದ ಬುದ್ಧಮೂರ್ತಿ ಬೆಳಕಿಗೆ ಬಂದಿತು. ಬುದ್ಧನು ಅರಳಿದ ಕಮಲದ ಪೀಠದ ಮೇಲೆ ಸಿದ್ಧಾಸನದಲ್ಲಿ ಕುಳಿತಂತೆ ಬಿಂಬಿಸಲಾಗಿದೆ. ಹಸ್ತಗಳು ಧ್ಯಾನ ಮುದ್ರೆಯಲ್ಲಿವೆ. ಹಿಂಬದಿಯಲ್ಲಿ ಒರಗು ದಿಂಬು ಇದ್ದು ಮಕರದ ಆನಿಕೆಯಿದೆ. ಉಟ್ಟ ಧೋತ್ರ ಮೊಳಕಾಲಿನವರೆಗೆ ತೋರಿಸಲಾಗಿದೆ. ಎದೆಯ ಮೇಲೆ ಬ್ರಹ್ಮವಸ್ತ್ರವಿದೆ. ಗುಂಗುರು ಕೂದಲು ಗಂಭೀರವದನ, ನೀಳ ಕಿವಿಗಳು, ವಿಶಾಲವಾದ ಎದೆ ಮನಮುಟ್ಟುವಂತಿವೆ. ಕಮಲ ಪೀಠದಲ್ಲಿಯ ದಳಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಶೈಲಿಯ ಆಧಾರದ ಮೇಲೆ ಇದು ಸು.5ನೆಯ ಶತಮಾನದ್ದೆಂದು ಹೇಳಬಹುದು. ಕುಳಿತ ಭಂಗಿಯಲ್ಲಿಯ ಬುದ್ಧನ ಮೂರ್ತಿ ಅಪರೂಪವಾಗಿದೆ. ಸ್ಥಳೀಯವಾಗಿ ಇದನ್ನು ಬಬ್ರದೇವರೆಂದು ಕರೆದಿರುವುದು ಅರ್ಥಗರ್ಭಿತ. ಅಂದರೆ ಕಂದು ಕೆಂಚು ಬಣ್ಣ. ವಿಷ್ಣು ಸಹಸ್ರನಾಮದಲ್ಲಿ ದೇವರಿಗೆ ಬಭ್ರ ಹೆಸರೂ ಇದೆ. ಇದು ಬುದ್ಧನು ವಿಷ್ಣು ಅವತಾರವೆಂದು ಪುರಾಣೋಕ್ತಿಯನ್ನು ಪುಷ್ಟೀಕರಿಸುವಂತಿದೆ. (ಎ.ಎಸ್.;ಎನ್.ಎಲ್.)

**ಬರೀದ್ ಶಾಹಿ ಆಳ್ವಿಕೆ:** 1529–1619. ಬಹಮನಿ ರಾಜ್ಯದ ಅನಂತರ ಅಸ್ತಿತ್ವಕ್ಕೆ ಬಂದ ಐದು ಶಾಹಿ ರಾಜಮನೆತನಗಳಲ್ಲಿ ಒಂದು. ಮಂತ್ರಿಸ್ಥಾನದಿಂದಲೇ ಅಧಿಕಾರವನ್ನು ವಶಪಡಿಸಿಕೊಂಡು ಬಹಮನಿ ರಾಜರ ಹೆಸರಿನಲ್ಲಿ ರಾಜ್ಯ ಆಳಲು ಆರಂಭಿಸಿದ ಖಾಸಿಮ್

ಬರೀದ್ ಈ ಶಾಹಿ ಮನೆತನದ ಮೂಲಪುರುಷ. ಇವನು ಜಾರ್ಜಿಯದಿಂದ ಬಂದು ಬಹಮನಿಯ ದೊರೆ 3ನೆಯ ಮಹಮ್ಮದನ ಕಾಲದಲ್ಲಿ ಸುಲ್ತಾನನ ಸೇವೆಗೆ ಸೇರಿದ್ದ. 1493ರಲ್ಲಿ ಕೊಂಕಣ ಹಾಗೂ ಪಶ್ಚಿಮ ಕರಾವಳಿಯಲ್ಲಿ ಬಂಡಾಯವೆದ್ದ ಬಹಾದ್ದೂರ್ ಗಿಲಾನಿಯೆಂಬ ಬಹಮನಿ ಅಧಿಕಾರಿಯನ್ನು ದೊರೆಯ ಜೊತೆಗೂಡಿ ಯುದ್ಧಮಾಡಿ ಸೋಲಿಸಿದ. ರಾಜಧಾನಿ ಬಿದರೆಯಲ್ಲಿ ಮುಖ್ಯಮಂತ್ರಿ ಮಹ್ಮೂದ್ ಗಾವಾನ್‌ನ ಹತ್ಯೆಯಿಂದ ತೆರವಾದ ಆ ಸ್ಥಾನಕ್ಕೆ ಶಿಹಾಬುದ್ದೀನ್ ಮಹಮ್ಮದ್ ಖಾಸಿಂ ಬರೀದನನ್ನು 1492ರಲ್ಲಿ ಪ್ರಧಾನಮಂತ್ರಿಯಾಗಿ ನೇಮಿಸಿದ. ಬರೀದ್ ಮಂತ್ರಿ ಸ್ಥಾನವನ್ನು ಸ್ವೀಕರಿಸಿ ತನ್ನ ಸ್ಥಾನವನ್ನು ಭದ್ರ ಪಡಿಸಿಕೊಂಡ. ಬಹಮನೀವಂಶದ ಕೊನೆಯ ನಾಲ್ಕು ಜನ ರಾಜರಲ್ಲಿ ಶಿಹಾಬುದ್ದೀನ್ (1482–1518) ಕೇವಲ ಸುಖಲೋಲುಪನೂ ಅಶಕ್ತನೂ ಆದಕಾರಣ ಆತ ಮಂತ್ರಿಗಳ ಕೈಗೊಂಬೆಯಾದ. ಅನಂತರ ಪಟ್ಟಕ್ಕೆ ಬಂದ ಅಹಮ್ಮದ್, ವಲಿಯುಲ್ಲಾ ಹಾಗೂ ಕಲೀಮುಲ್ಲಾ ಇವರೆಲ್ಲರೂ ಹೆಸರಿಗೆ ಮಾತ್ರ ಸುಲ್ತಾನರಾಗಿದ್ದರು. ಅಧಿಕಾರ, ಆಡಳಿತವೆಲ್ಲ ಮುಖ್ಯ ವಜೀರರಾಗಿದ್ದ ಬರೀದ್‌ಶಾಹಿ ಮನೆತನದವರ ಹಿಡಿತದಲ್ಲಿತ್ತು. ಖಾಸಿಮ್ ಬರೀದ್ 1504ರಲ್ಲಿ ನಿಧನನಾಗಲು ಇವನ ಮಗ ಅಮೀರ್ ಅಲಿ ಬರೀದ್ ಮುಖ್ಯಮಂತ್ರಿಯಾದ. ತಂದೆಯಂತೆ ಇವನೂ ಸರ್ವಾಧಿಕಾರಿಯಾಗಿದ್ದ. ಈ ಕಾಲದಲ್ಲಿ ಬಿಜಾಪುರ, ಗೋಲ್ಕೊಂಡ ಮತ್ತು ಅಹಮದ್‌ನಗರಗಳ ಜಹಗೀರುದಾರರುಗಳು ಸ್ವತಂತ್ರರಾಗಿದ್ದರು. ವಿಜಯನಗರದ ಕೃಷ್ಣದೇವರಾಯ ಬಹಮನಿ ರಾಜರಿಂದ ರಾಯಚೂರು ದೋಆಬ್ ಭೂಪ್ರದೇಶವನ್ನು ತನ್ನ ವಶಮಾಡಿಕೊಂಡ. ಈ ಎಲ್ಲವನ್ನೂ ಜಾಗರೂಕನಾಗಿ ನಿರೀಕ್ಷಿಸುತ್ತಿದ್ದ ಅಮೀರ್ 1529ರಲ್ಲಿ ಸ್ವತಂತ್ರನಾದ. ಬರೀದ್ ಶಾಹಿ, ಆದಿಲ್‌ಶಾಹಿ ಮತ್ತು ಗೋಲ್ಕೊಂಡದ ಕುತುಬ್‌ಶಾಹಿ ಮನೆತನಗಳ ಒಳಗೊಳಗೇ ಕಚ್ಚಾಟ ನಡೆದಿತ್ತು. ಅಮೀರ್ ಬರೀದ್ ಒಮ್ಮೆ ಆದಿಲ್‌ಶಾಹಿ ಇನ್ನೊಮ್ಮೆ ಗೋಲ್ಕೊಂಡ ಮಗದೊಮ್ಮೆ ಅಹಮ್ಮದ್‌ನಗರದ ನಿಜಾಮ್ ಶಾಹೀ ದೊರೆಗಳ ಜೊತೆ ಸ್ನೇಹಬೆಳೆಸಿ ಒಬ್ಬರು ಇನ್ನೊಬ್ಬರ ಜೊತೆ ಯುದ್ಧ ಮಾಡುವಂತೆ ಮಾಡಿ ತಾನು ಅಧಿಕಾರದಲ್ಲಿರಲು ಹವಣಿಸುತ್ತಿದ್ದ. ಇದರಿಂದಾಗಿ ಇವನು ದಖನ್ನಿನ ನರಿ ಎಂಬ ಹೆಸರಿಗೆ ಪಕ್ಕಾದ. ಬಿಜಾಪುರದ ಆದಿಲ್‌ಶಾಹಿ ದೊರೆ ಇಸ್ಮಾಯಿಲ್ ಆದಿಲ್‌ಖಾನ್ 1529ರಲ್ಲಿ ಬಿದರೆ(ಬೀದರ್) ಕೋಟೆಯನ್ನು ಗೆದ್ದು ಅಮೀರ್ ಬರೀದನನ್ನು ಬಂಧಿಸಿದ. ಬರೀದ್ 1530ರಲ್ಲಿ ರಾಯಚೂರು ಮತ್ತು ಮುದ್ಗಲ್ಲು ಪ್ರದೇಶಗಳನ್ನು ಬಿಜಾಪುರಕ್ಕೆ ವಹಿಸಿಕೊಡುವಲ್ಲಿ ಸಹಾಯ ಮಾಡಿದುದರಿಂದ ಸೆರೆಯಿಂದ ಬಿಡುಗಡೆ ಪಡೆದುದಲ್ಲದೆ ಬಿದರೆಯನ್ನು ಹಿಂದಕ್ಕೆ ಪಡೆದ. ಈತ 1542ರಲ್ಲಿ ದೌಲತಾಬಾದಿನಲ್ಲಿ ನಿಧನನಾದ. ತರುವಾಯ ಇವನ ಮಗ ಅಲಿಬರೀದ್ (1542–80) ಅಧಿಕಾರಕ್ಕೆ ಬಂದು ಷಾ ಎಂಬ ಸಾರ್ವಭೌಮ ಸೂಚಕ ಬಿರುದನ್ನು ಇಟ್ಟುಕೊಂಡು ಪ್ರಥಮ ಬರೀದ್ ಶಾಹಿ ಸುಲ್ತಾನನಾದ.

ಅಲಿಬರೀದ್ ಬಿಜಾಪುರದ ತಾನೀಪುರದ ತಾನೀಬೀಬಿಯನ್ನು ಮದುವೆಯಾಗಿದ್ದ. ಶಾಹೀ ಮನೆತನಗಳಲ್ಲಿ ಯುದ್ಧ ಸಾಮಾನ್ಯ ವಿಷಯವಾಗಿತ್ತು. ಅಲಿಬರೀದ್ ಹಾಗೂ ಬಿಜಾಪುರದ ಸೈನ್ಯ ಒಟ್ಟುಗೂಡಿ ಅಹಮದ್‌ನಗರ (ನಿಜಾಮ್ ಶಾಹಿ), ಬೀರಾರ್ (ಇಮಾದ್ ಶಾಹಿ), ಗೋಲ್ಕೊಂಡ (ಕುತುಬ್ ಶಾಹಿ) ಮತ್ತು ವಿಜಯನಗರ ದೊರೆಗಳ ವಿರುದ್ಧ ಯುದ್ಧ ಮಾಡಿತು. ಆದರೆ ಇವರ ಜಂಟಿ ಸೈನ್ಯ ಸೋತಿತು. ಮುಂದೆ ಬಿಜಾಪುರ ಮತ್ತು ಅಹಮ್ಮದ್ ನಗರದ ಸುಲ್ತಾನರ ಮಧ್ಯೆ ಗುಪ್ತ ಒಪ್ಪಂದವಾಗಿ ಅಹಮ್ಮದ್‌ನಗರದವರು ಬಿದರೆಯನ್ನು ಮುತ್ತಿ ವಶಪಡಿಸಿಕೊಂಡರು. ಅಲಿಬರೀದ್ ಸೆರೆಯಾಳಾದ. ಇತ್ತ ಗೋಲ್ಕೊಂಡದವರೂ ಪ್ರಬಲರಾಗಿ ತಮ್ಮ ರಾಜ್ಯದ ಎಲ್ಲೆಗಳನ್ನು ಹಿಗ್ಗಿಸಿಕೊಂಡರೂ ಅಲಿ ಬರೀದನ ಬಿಡುಗಡೆಗೆ ಸಹಾಯ ಮಾಡಿದರು. 1548ರಲ್ಲಿ ಅಲಿಬರೀದ್ ಬಿಡುಗಡೆ ಹೊಂದಿದ. ಬಿದರೆ ರಾಜ್ಯದ ಕೆಲವು ಪ್ರದೇಶಗಳು ಗೋಲ್ಕೊಂಡದ ಕುತುಬ್‌ಶಾಹಿಯವರ ಪಾಲಾದುವು. ಅಲಿಬರೀದನ ಕಾಲಕ್ಕೆ ಬರೀದ್‌ಶಾಹಿ ಮನೆತನ ತನ್ನ ಹಿರಿಮೆಯನ್ನು ಮುಟ್ಟಿ ಅನಂತರ ಇಳಿಮುಖವಾಗುತ್ತ ಬಂತು. ಅಲಿಬರೀದ್ ವಿಜಯನಗರದ ವಿರುದ್ಧ ನಡೆದ ತಾಳೀಕೋಟೆ ಯುದ್ಧದಲ್ಲಿ ದಖನ್ನಿನ ಸುಲ್ತಾನರ ಒಕ್ಕೂಟದಲ್ಲಿ ಸೇರಿದ್ದ. ಸುಲ್ತಾನರುಗಳು ಗೆದ್ದರೂ ಬಿದರೆಗೇನೂ ಪ್ರಯೋಜನವಾಗಲಿಲ್ಲ. ಅಹಮ್ಮದ್ ನಗರದ ನಿಜಾಮ್ ಷಾ ಬಿದರೆ ರಾಜ್ಯದ ಹೆಚ್ಚು ಭಾಗಗಳನ್ನು ಗೆದ್ದುಕೊಂಡ. ಅಲಿಬರೀದ್ 1580ರಲ್ಲಿ ಮರಣಹೊಂದಿದ.

ಅಲಿಬರೀದನ ಅನಂತರ ಇವನ ಮಗ ಇಬ್ರಾಹಿಮ್ ಬರೀದ್ (1580–87) ಸು.7 ವರ್ಷಕಾಲ ರಾಜ್ಯವಾಳಿದ. ಅನಂತರ ಇವನ ತಮ್ಮ 2ನೆಯ ಖಾಸಿಮ್ ಬರೀದ್ (1587–91) ರಾಜ್ಯವಾಳಿದ. 2ನೆಯ ಖಾಸಿಮ್ ಬರೀದನ ಮರಣಾನಂತರ ಈತನ ಎಳೆವಯಸ್ಸಿನ ಪುತ್ರ ಪಟ್ಟವೇರಿದ. ರಾಜ ಸಂಬಂಧಿಯೊಬ್ಬ ಈ ಬಾಲಕನನ್ನು ಪದಚ್ಯುತಿಗೊಳಿಸಿ 2ನೆಯ ಅಮೀರ್ ಬರೀದ್ ಷಾ ಎಂಬ ಹೆಸರಿನಿಂದ ಸುಮಾರು ಹತ್ತು ವರ್ಷ ಕಾಲ ರಾಜ್ಯವಾಳಿದ. ಅನಂತರ ಇವನ ಮಗ ಮಿರ್ಜಾ ಅಲಿ ಬರೀದ್ 1601–09ರ ಅವಧಿಯಲ್ಲಿ ರಾಜ್ಯವಾಳಿದ. ಅನಂತರ 3ನೆಯ ಅಮೀರ್ ಬರೀದ್ ಷಾ ಎಂಬವನು 1609ರಲ್ಲಿ ಪಟ್ಟಕ್ಕೆ ಬಂದ. ಇವರೆಲ್ಲರೂ ದುರ್ಬಲರಾಗಿದ್ದು ದಿನೇ ದಿನೇ ಬರೀದ್ ಶಾಹಿ ಮನೆತನದ ಆಳಿಕೆ ಕುಗ್ಗುತ್ತ ನಡೆದು ಬಿದರೆ ರಾಜ್ಯ ದುರ್ಬಲವಾಯಿತು. ಇವನೇ ಬರೀದ್ ಶಾಹಿ ವಂಶದ ಕೊನೆಯ ಸುಲ್ತಾನ. ಇವನು 1616ರಲ್ಲಿ ದಖನ್ನಿನ ಸುಲ್ತಾನರೊಡನೆ ಮೊಗಲರನ್ನು ಎದುರಿಸಿದುದೊಂದೆ ಉಲ್ಲೇಖನಾರ್ಹ ವಿಷಯ. 1619ರಲ್ಲಿ ಬಿಜಾಪುರದ 2ನೆಯ ಇಬ್ರಾಹಿಮ್ ಆದಿಲ್‌ಷಾ ಬಿದರೆಯನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡಾಗ ಬರೀದ್ ಶಾಹಿ ಆಳ್ವಿಕೆಯ ಅಂತ್ಯವಾಯಿತು. ಬಿದರೆಯ ಹಾಗೂ ಅದರ ಸುತ್ತ ಇನ್ನೂ ಉಳಿದಿರುವ ಕಟ್ಟಡಗಳು, ಕೋಟೆ ಮತ್ತು ತೋಪುಗಳು ಬರೀದ್ ಶಾಹಿ ಮನೆತನದವರ ಇತಿಹಾಸವನ್ನೂ ಅವರ ವಾಸ್ತು ಶಿಲ್ಪಕಲೆ ಯನ್ನೂ ಯುದ್ಧದಲ್ಲಿ ಅವರು ಬಳಸಿದ ಆಯುಧಗಳನ್ನೂ ಸೂಚಿಸುವ ದಾಖಲೆಗಳಾಗಿವೆ. ಕಟ್ಟಡಗಳಲ್ಲಿ ಮುಖ್ಯವಾದವೆಂದರೆ ಬರೀದ್ ಶಾಹಿ ರಾಜರ ಗುಂಬಜ್‌ಗಳು, ರಂಗೀನ್ ಮಹಲ್, ಗಗನ್‌ಮಹಲ್, ತರ್ಕಿಷ್ ಮಹಲ್, ಚೀನಿಮಹಲ್, ನಗೀನಾಮಹಲ್ ಮತ್ತು ಶಾಹೀ ಸ್ನಾನಗೃಹ. ಗುಂಬಜ್‌ಗಳಲ್ಲಿ ಅತಿ ಮುಖ್ಯವಾದದ್ದೂ ಸುಂದರವಾದದ್ದೂ ಎಂದರೆ ಅಲಿಬರೀದ್ ದೊರೆಯದು. ಸಮಾಧಿಯನ್ನು ಸಂಪೂರ್ಣ ಅಮೃತಶಿಲೆಯಿಂದ ಕಟ್ಟಿದೆ. ಒಳಗಿನ ಗೋಡೆಗಳಲ್ಲಿ ಚೀನಿ ಕರಕೌಶಲದ ಚಿತ್ರಗಳಿವೆ. ಅಲ್ಲಲ್ಲಿ ಶಾಸನ ಹಾಗೂ ಹೂಬಳ್ಳಿಗಳನ್ನು ಬಂಗಾರದ ಬಣ್ಣದಲ್ಲಿ ಬಿಡಿಸಿದೆ. ಅಲಿಬರೀದ್ ಕಟ್ಟಿಸಿದ ರಂಗೀನ್ ಮಹಲ್ ಅಲಂಕರಣದಿಂದ ಕೂಡಿದೆ. ಇಲ್ಲಿ ಸುಂದರವಾದ ನಾಜೂಕಿನ ಮರದ ಕೆತ್ತನೆಗಳಿವೆ. ಚಿತ್ರಗಳಿಗೆ ಇಲ್ಲಿ ಜೋಡಿಸಿ ರುವ ಮುತ್ತಿನಗುಚ್ಛಗಳು, ತುಂಬಾ ಆಕರ್ಷಕವಾಗಿವೆ.

ಬಿದರೆ ಕೋಟೆಯನ್ನು ಬಹಮನಿ ರಾಜರ ಕಾಲದಲ್ಲಿ ಕಟ್ಟಿದ್ದಾದರೂ ರಂಗೀನ್ ಮಹಲ್ ಬಳಿಯ ಬುರುಜೊಂದು ಬರೀದ್‌ಶಾಹಿ ರಾಜರ ಎರಡು ತೋಪುಗಳನ್ನು ಇಂದಿಗೂ ಹೊತ್ತುನಿಂತಿದೆ. ಇದರಲ್ಲಿ ಒಂದು ತೋಪು ಬಿಜಾಪುರದ ಮುಲ್ಕ ಮೈದಾನ್ ತೋಪನ್ನು ಹೋಲುತ್ತದೆ. ಇದರ ಮೇಲೆ ಖಾಸಿಮ್ ಬರೀದ್ ಷಾನ ಹೆಸರನ್ನು ಸುವರ್ಣಾಕ್ಷರ ಗಳಲ್ಲಿ ಬರೆದಿದೆ. ಈ ದೊಡ್ಡ ತೋಪಿನ ಬಳಿಯಲ್ಲೇ ಅಲಿಬರೀದ್ ಷಾನ ಕಾಲದ ತುಂಬ ಉದ್ದವಾದ ಒಂದು ತೋಪಿದೆ. (ಎಸ್.ಜಿ.ವಿ.)

**ಬರೊರ:** ಭಾರತ ಮತ್ತು ಪಾಕಿಸ್ತಾನದ ಗಡಿಯಲ್ಲಿ ಶಿವಾಲಿಕ್ ಪರ್ವತಗಳ ದಕ್ಷಿಣಕ್ಕೆ ಸಿಂಧೂನದಿ ಮತ್ತು ಥಾರ್ ಮರುಭೂಮಿಯ ಮಧ್ಯಭಾಗದಲ್ಲಿರುವ ಪುರಾತನ ಅವಶೇಷ ಗಳಿಂದ ಕೂಡಿದ ವಿಶಾಲ ಪ್ರದೇಶ. ಇಲ್ಲಿ ಹರಿಯುವ ಘಗ್ಗರ್, ಚೌತಂಗ ಮತ್ತು ದೃಶದ್ವತಿ ನದಿಗಳು ಪಾಕಿಸ್ತಾನ ಪ್ರವೇಶಿಸಿ ಹಕ್ರಾ ಮತ್ತು ನಾರ ಎಂಬ ಹೆಸರು ಪಡೆಯುತ್ತವೆ. ಈಗ ಈ ನದಿಗಳು ಬತ್ತಿಹೋಗಿವೆ. ಈ ನದಿಗಳನ್ನು ಪ್ರಾಚೀನ ಸರಸ್ವತಿ ಎಂದು ತಿಳಿಯ ಲಾಗಿದೆ. 1916–17 ರಲ್ಲಿ ಎಲ್.ಪಿ. ಟೆಸ್ಸಿಟೊರಿ ಈ ಪ್ರದೇಶವನ್ನು ಅನ್ವೇಷಿಸಿದ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಮಲಾನಂದ ಘೋಷ್ ಅವರು 1950–53 ರಲ್ಲಿ ಘಗ್ಗರ್ ನದಿ ತೀರದಲ್ಲಿ ಸರ್ವೇಕ್ಷಣೆ ಕೈಗೊಂಡು ಕಾಲಿಬಂಗನ್ ಮತ್ತು ಬರೊರ ನೆಲೆಗಳನ್ನು ಶೋಧಿಸಿದರು. ಬರೊರದಲ್ಲಿ 2003–5 ರಲ್ಲಿ ಉತ್ಖನನ ನಡೆಯಿತು. ಅನುಕ್ರಮ ವಾಗಿ ಮೂರು ಹಂತಗಳನ್ನು ಗುರುತಿಸಲಾಗಿದೆ. ಇವು ಹರಪ್ಪ ಪೂರ್ವ ಸಂಸ್ಕೃತಿ (ಪ್ರೀ ಹರಪ್ಪನ್), ಆದಿಹರಪ್ಪ ಸಂಸ್ಕೃತಿ ಮತ್ತು ಪ್ರೌಢ ಹರಪ್ಪ ಸಂಸ್ಕೃತಿ.

ಹಂತ 1: ಇಲ್ಲಿ ಹರಪ್ಪ ಪೂರ್ವ ಸಂಸ್ಕೃತಿಯ ಅವಶೇಷಗಳು ದೊರಕಿರುವುದು ವಿಶೇಷ. ಈ ಹಂತದಲ್ಲಿ ಮಣ್ಣಿನ ಅಥವಾ ಇಟ್ಟಿಗೆಯ ಯಾವುದೇ ಕಟ್ಟಡ ದೊರಕಿಲ್ಲ. ಆದರೆ ಮರದ ಕಂಬದ ಗುಳಿಗಳ ಗುರುತು, ಬೂದಿಯ ಪದರಗಳಿಂದ ಜನರು ಗುಡಿಸಲು ಗಳಲ್ಲಿ ವಾಸಿಸುತ್ತಿದ್ದರೆಂದು ಊಹಿಸಬಹುದು. ಗುಡಿಸಲುಗಳ ತಡಿಕೆ ಗೋಡೆಯ ಭಾಗಗಳೂ ಸಿಕ್ಕಿವೆ. ಈ ಕಾಲದ ಮಣ್ಪಾತ್ರೆಗಳು ತಿಗುರಿಯ ಮೇಲೆ ಮಾಡಿದವು. ಇವು ಮಬ್ಬುಗೆಂಪು ಹಾಗೂ ಕಪ್ಪುಬಣ್ಣದ ಸರಳ ಪಾತ್ರೆಗಳು. ಕೆಲವು ಪಾತ್ರೆಗಳನ್ನು ಮಂದಗತಿಯಲ್ಲಿ ತಿರುಗುವ ಹಲಗೆಯ ಮೇಲೆ ಮಾಡಿದ್ದು ಕಡಿಮೆ ಉರಿಯಲ್ಲಿ ಸುಡಲಾಗಿದೆ. ಕಲಶ, ಹೂಜಿ, ಜಾಡಿಗಳು ಮತ್ತು ವಿವಿಧ ಗಾತ್ರದ ಮಡಕೆಗಳು ಮತ್ತು ಬಟ್ಟಲುಗಳು ಸಾಮಾನ್ಯವಾಗಿವೆ.

ಹಂತ 2: ಆದಿಹರಪ್ಪ ಕಾಲದಲ್ಲಿ ಹಸಿಇಟ್ಟಿಗೆಯಿಂದ ಮನೆಗಳನ್ನು ಕಟ್ಟುವುದು ಪ್ರಾರಂಭವಾದರೂ ಜನರು ಗುಡಿಸಲುಗಳಲ್ಲೇ ಹೆಚ್ಚಾಗಿ ವಾಸಿಸುತ್ತಿದ್ದಿರಬೇಕು. 4 ಪ್ರತ್ಯೇಕ ಇಟ್ಟಿಗೆ ಗೋಡೆಗಳ ಭಾಗಗಳು ಮಾತ್ರ ಇಲ್ಲಿ ದೊರಕಿವೆ. ಗೋಡೆಯಲ್ಲಿ ಮಣ್ಣನ್ನು ಗಾರೆ ಯಂತೆ ಉಪಯೋಗಿಸಲಾಗಿದೆ.ಇಟ್ಟಿಗೆಗಳು 50x20–25x8–10 ಸೆಂಮೀ ಇವೆ. ಇವು ಆದಿ ಹರಪ್ಪ ಕಾಲದ 1:2:3 ಅನುಪಾತದ ಇಟ್ಟಿಗೆಯಲ್ಲ. ಮಣ್ಪಾತ್ರೆಗಳಲ್ಲಿ ನವೀನ ಆಕಾರಗಳು ಹೆಚ್ಚಾದವು. ಚಿತ್ರಾಕೃತಿಗಳಲ್ಲೂ ವೈವಿಧ್ಯ ಉಂಟಾಯಿತು. ಮಣ್ಪಾತ್ರೆಗಳು ವೇಗವಾಗಿ ತಿರುಗುವ ತಿಗುರಿಯ ಮೇಲೆ ಮಾಡಿದವು. ಮಬ್ಬುಗೆಂಪು ಬಣ್ಣದ ಪಾತ್ರೆಗಳ ಮೇಲೆ ಕಪ್ಪುಬಣ್ಣದಲ್ಲಿ ರೇಖಾಚಿತ್ರ ಬಿಡಿಸಿ ನಡುವಿನ ಭಾಗವನ್ನು ಬಿಳಿಬಣ್ಣದಿಂದ ತುಂಬಲಾಗಿದೆ. ಪ್ರಾಣಿ–ಸಸ್ಯ ಗಳ ಚಿತ್ರಗಳಲ್ಲದೆ ಗೆರೆ, ಪಟ್ಟೆ, ಚುಕ್ಕೆಗಳು, ಬಲೆಯಂತಹ ರಚನೆ, ವೃತ್ತಗಳು ಮುಂತಾದುವನ್ನು ಕಾಣಬಹುದು. ಬೋಗುಣಿ, ಬಟ್ಟಲು, ಮುಚ್ಚಳ, ಕಾಲಿರುವ ತಟ್ಟೆ ಮುಂತಾದ ಪಾತ್ರೆಗಳು ಬಳಕೆಯಲ್ಲಿದ್ದುವು.

ಹಂತ 3: ಪ್ರೌಢಹರಪ್ಪ ವಸತಿಯ ಕೆಲಭಾಗಗಳನ್ನಷ್ಟೆ ಉತ್ಖನನದಲ್ಲಿ ಅನಾವರಣಗೊಳಿಸ ಲಾಯಿತು. ಉತ್ತರ–ದಕ್ಷಿಣ ಮತ್ತು ಪೂರ್ವ–ಪಶ್ಚಿಮವಾಗಿ ಚಾಚಿರುವ ದಾರಿ ಹಾಗೂ ಓಣಿಗಳು ಈ ನಗರದಲ್ಲಿ ಒಂದು ವಿನ್ಯಾಸವನ್ನು ಅನುಸರಿಸಿರುವುದನ್ನು ಸೂಚಿಸುತ್ತವೆ. ಮನೆಗಳಲ್ಲಿ ಬೂದಿ, ಸುಟ್ಟ ಮೂಳೆಗಳು ಮತ್ತು ಇದ್ದಿಲು ತುಂಬಿರುವ ಅಗ್ಗಿಷ್ಟಿಕೆಗಳು ಕಂಡುಬಂದಿವೆ. ನಗರದ ಉತ್ತರ ಭಾಗದಲ್ಲಿ 3.55ಮೀ ಅಗಲದ ಕೋಟೆಗೋಡೆ ಕಂಡು ಬಂದಿದೆ. ಅವಶೇಷಗಳಲ್ಲಿ ಸುಟ್ಟಮಣ್ಣು, ಕಲ್ಲು, ಶಂಖ, ಮೂಳೆ, ದಂತ, ಬಳಪದಕಲ್ಲು,

ತಾಮ್ರ ಮತ್ತು ಚಿನ್ನದ ವಸ್ತುಗಳಲ್ಲದೆ ಮನುಷ್ಯ ಮತ್ತು ಪ್ರಾಣಿಗಳ ಸುಡಾವೆಮಣ್ಣಿನ ಗೊಂಬೆ, ಮಣಿ, ಬಳೆಗಳು, ಲೋಲಕ, ಪಟ್ಟ ಗಾಲಿಗಳು, ಎತ್ತಿನಗಾಡಿ, ಬುಗುರಿ ಇತ್ಯಾದಿ ದೊರಕಿವೆ. ಪ್ರಾಣಿಗಳ ಆಕೃತಿಗಳಲ್ಲಿ ನಾಯಿ, ಹಸು, ಟಗರು ಮತ್ತು ಎತ್ತು ಇವೆ. ಪಕ್ಷಿಯ ಆಕಾರದ ಸೀಟಿ, ತ್ರಿಕೋಣಾಕಾರ ಮತ್ತು ಚತುರ್ಮುಖದ ಆಟದ ಬಟ್ಟು, ಕೊರೆದು ಮಾಡಿದ ವೃತ್ತಾಕಾರದ ವಿನ್ಯಾಸವುಳ್ಳ ನೆಲಕ್ಕೆ ಹಾಸುವ ಬಿಲ್ಲೆಗಳು ಗಮನಾರ್ಹ. ಕಾರ್ನೇಲಿಯನ್, ಅಗೇಟ್, ಜಾಸ್ಪರ್, ವೈಡೂರ್ಯ ಮುಂತಾದ ಕಲ್ಲುಗಳ ಮಣಿಗಳು, ಚರ್ಟ್‌ನ ನೀಳ ಚಕ್ಕೆಗಳು, ತೂಕದ ಬಟ್ಟು, ಒನಕೆ, ಅರೆಯುವ ಕಲ್ಲು, ಶಂಖದ ಬಳೆ, ಉಂಗುರ, ಮೂಳೆಯ ಮಣಿಗಳು, ಚೂರಿ, ಚೂಪಾದ ತೂತು ಮಾಡುವ ಉಪಕರಣ, ಚಿನ್ನದ ವಿವಿಧ ರೀತಿಯ ಮಣಿಗಳು, ಬಳಪದ ಕಲ್ಲಿನ ಮತ್ತು ಶಂಖದಲ್ಲಿ ಮಾಡಿರುವ ಮುದ್ರೆಗಳು ದೊರಕಿವೆ. ಆಮ್ಲದಿಂದ ಕೊರೆದು ತುಂಬಿದ ಬಿಳಿವರ್ಣದ ರೇಖಾಕೃತಿಗಳುಳ್ಳ ಕಾರ್ನೇಲಿಯನ್ ಕಲ್ಲಿನ ಮಣಿಗಳು ಮತ್ತು ಬಳಪದಕಲ್ಲಿನಲ್ಲಿ ತಯಾರಿಸಿದ ಅಂದದ ಮಣಿಗಳು ಗಮನಾರ್ಹ. ತಾಮ್ರದ ಉಪಕರಣಗಳಲ್ಲಿ ಬಾಣ, ಮೀನು ಹಿಡಿಯುವ ಗಾಳ, ಭರ್ಜಿ, ಉಳಿ, ಬಳೆಗಳು, ಉಂಗುರ ಮುಂತಾದ ಆಭರಣಗಳು ದೊರಕಿವೆ. (ಯು.ಎಸ್.)

**ಬಲೂಚಿಸ್ತಾನ:** ಪಾಕಿಸ್ತಾನದ ನೈರುತ್ಯ ಭಾಗದಲ್ಲಿರುವ ಪ್ರಾಂತ. ಇದರ ಉತ್ತರದಲ್ಲಿ ಆಫ್ಘಾನಿಸ್ತಾನ, ಪೂರ್ವದಲ್ಲಿ ಪಾಕಿಸ್ತಾನದ ವಾಯವ್ಯ ಗಡಿ ಪ್ರಾಂತ, ಪಂಜಾಬ್ ಮತ್ತು ಸಿಂಧ್ ಪ್ರಾಂತಗಳು, ದಕ್ಷಿಣದಲ್ಲಿ ಅರಬ್ಬಿ ಸಮುದ್ರ, ಪಶ್ಚಿಮದಲ್ಲಿ ಇರಾನ್ ಇವೆ. ಮುಖ್ಯ ಪಟ್ಟಣ ಕ್ವೆಟ್ಟ.

**ಪುರಾತತ್ತ್ವ:** ಕಡಿದಾದ ಹಿಮಾಲಯ ಪರ್ವತ ಶ್ರೇಣಿಗಳು ಮತ್ತು ಪರಸ್ಪರ ಸಂಪರ್ಕ ವಿಲ್ಲದ ಕಿರಿದಾದ ಕಣಿವೆಗಳಿಂದ ಕೂಡಿದ, ಸುಲಭವಾಗಿ ಹೋಗಲು ಸಾಧ್ಯವಾಗದ ಭೂಪ್ರದೇಶ ಬಲೂಚಿಸ್ತಾನ. ಇದೇ ಕಾರಣಕ್ಕಾಗಿಯೋ ಏನೋ ಬಲೂಚಿಸ್ತಾನದಲ್ಲಿ ಶಿಲಾಯುಗದ ಅವಶೇಷಗಳು ಅತಿವಿರಳ. ಎಚ್.ಡಿ. ಸಾಂಕಳಿಯ ತಿಳಿಸುವಂತೆ ರಾಣಾಘುಂಡೈ ಮತ್ತು ನಾಲ್‌ನಲ್ಲಿ ಸಿಕ್ಕಿರುವ ಉಜ್ಜಿ ನಯಗೊಳಿಸಿದ ಒಂದೆರಡು ಕೊಡಲಿಗಳನ್ನು ಹೊರತುಪಡಿಸಿದರೆ ಬಲೂಚಿಸ್ತಾನದಲ್ಲಿ ಶಿಲಾಯುಗದ ಅವಶೇಷಗಳು ಇದುವರೆಗೆ ಕಣ್ಣಿಗೆ ಬಿದ್ದಿಲ್ಲ.

ಉತ್ತರದ ಜೋಬ್ ಕಣಿವೆಯಿಂದ ಇರಾನಿನ ಮಕ್ರಾನ್ ಕಡಲತೀರದವರೆಗಿನ ಪ್ರದೇಶದಲ್ಲಿ ಸು.5000 ಕಲ್ಲುಗ್ಗೊರಿಗಳಿವೆ. ಇವು ಕುದುರೆ, ಕಬ್ಬಿಣದ ಆಯುಧ–ಉಪಕರಣಗಳು, ಮಣ್ಪಾತ್ರೆ ಮತ್ತು ಲೋಹಪಾತ್ರೆಗಳನ್ನು ಬಳಸುತ್ತಿದ್ದ, ಪ್ರಾಯಶಃ ಹಿಟ್ಟೈಟ್ ಸಾಮ್ರಾಜ್ಯ ಒಡೆದುಹೋದ ಅನಂತರದ ಇರಾನಿನ ಒಂದು ಜನ ಸಮುದಾಯದಿಂದ ನಿರ್ಮಿಸಲ್ಪಟ್ಟಿವೆ. ಇವರ ವಸತಿನೆಲೆಗಳು ದಂಬಕೊಹ್ ಮತ್ತು ಮಕ್ರಾನ್ ಕಡಲತೀರ ಪ್ರದೇಶವನ್ನು ಬಿಟ್ಟರೆ ಬೇರೆ ಎಲ್ಲಿಯೂ ಕಂಡುಬಂದಿಲ್ಲ. ಇವರ ಜೀವನಶೈಲಿ–ಸಂಪ್ರದಾಯಗಳು ಇವರು ನಿರ್ಮಿಸಿದ ಕಲ್ಲುಗ್ಗೆಗಳ ಉತ್ಖನನಗಳಿಂದ ಮಾತ್ರ ತಿಳಿದಿದೆ. ಈ ಸಂಸ್ಕೃತಿಯ ಕಾಲಮಾನ ಪ್ರಶ.ಪೂ.1ನೆಯ ಸಹಸ್ರಮಾನದ ಆದಿಭಾಗದಿಂದ ಪ್ರ.ಶ.1ನೆಯ ಶತಮಾನದ ಆದಿಭಾಗ.

ಈ ಕಲ್ಲುಗ್ಗೆಗಳಲ್ಲಿ ಕಲ್ಲುತುಂಡುಗಳನ್ನು ಆಯತಾಕಾರ ಅಥವಾ ವೃತ್ತವಿನ್ಯಾಸದಲ್ಲಿ ಅಲ್ಲಲ್ಲಿ ರಾಶಿ ಹಾಕಿದಂತಿದೆ. ಇವುಗಳಲ್ಲಿ ಶವವನ್ನು ಹೊರಗಿಟ್ಟು ಇಲ್ಲವೆ ದಹನ ಮಾಡಿದ ಅನಂತರ ಸಂಗ್ರಹಿಸಿದ ಅಳಿದುಳಿದ ಅಸ್ಥಿಅವಶೇಷಗಳು, ಬಾಣದ ಮೊನೆ ಮುಂತಾದ ಕಬ್ಬಿಣ ಉಪಕರಣಗಳು, ಮಣ್ಪಾತ್ರೆಗಳು, ಲೋಹಪಾತ್ರೆಗಳಿದ್ದುವು. ಆದರೆ ಈ ಪ್ರದೇಶದ ಉತ್ತರ ಮತ್ತು ಪೂರ್ವಭಾಗದ ಕಲ್ಲುಗ್ಗೆಗಳಲ್ಲಿ ದಹನ ಅನಂತರ ಸಂಗ್ರಹಿಸಿದ ಅಸ್ಥಿಗಳು ಮತ್ತು ವರ್ಣಚಿತ್ರಾಲಂಕರಣವಿಲ್ಲದ ಮಣ್ಪಾತ್ರೆಗಳಿದ್ದರೆ ದಕ್ಷಿಣಭಾಗದ ಕಲ್ಲುಗ್ಗೆಗಳಲ್ಲಿ ವರ್ಣ ರೇಖಾಚಿತ್ರಗಳಿಂದ ಅಲಂಕೃತ ಮಣ್ಪಾತ್ರೆಗಳು, ಹೊರಗಿಟ್ಟ ಶವದ ಅಸ್ಥಿಅವಶೇಷಗಳಿದ್ದುವು. ಮುಗಲ್‌ಘುಂಡೈ, ಸೂರ್‌ಜಂಗಲ್ (ಉತ್ತರ ಬಲೂಚಿಸ್ತಾನ), ಕ್ವೆಟ್ಟ ಬಯಲು (ಮಧ್ಯ ಬಲೂಚಿಸ್ತಾನ), ಕುಲ್ಲಿ, ಜಿವನ್ರಿ, ದಂಬಕೊಹ್ (ದಕ್ಷಿಣ ಬಲೂಚಿಸ್ತಾನ), ಜಿವನ್ರಿ, ಘನುಚ್, ಥಂಪಿಗಬ್ರಹ (ಪರ್ಷಿಯ), ಕರಾಚಿ ಉತ್ತರಕ್ಕೆ ಲಾಬೆಲ ಬಯಲುಗಳಲ್ಲಿ ಕಲ್ಲುಗ್ಗೆಗಳಿವೆ. ಹಲವಾರು ಕಲ್ಲುಗ್ಗೆಗಳಲ್ಲಿ 1–3ನೆಯ ಶತಮಾನದ ಗಾಜಿನಂತೆ ಹೊಳಪಿರುವ ಮಣ್ಪಾತ್ರೆಗಳು, ಗ್ರೀಕೊ–ರೋಮನ್ ಕಂಡರಣೆ ಮುದ್ರೆ ಮುಂತಾದವು ದೊರೆತಿರುವುದರಿಂದ ಈ ಕಲ್ಲುಗ್ಗೆಗಳ ಕಾಲಮಾನ ಪ್ರ.ಶ.ಪೂ.ಸು.600–ಪ್ರ.ಶ.500 ಎಂದು ನಿಗದಿಪಡಿಸಲಾಗಿದೆ. (ಎ.ಎಸ್.)

ಇರಾನ್, ಆಫ್ಘಾನಿಸ್ತಾನ ಮತ್ತು ಸಿಂಧೂ ನದಿಬಯಲನ್ನು ಬಲೂಚಿಸ್ತಾನದ ಕಣಿವೆಗಳಿಗೆ ಜೋಡಿಸುವ ಹಲವಾರು ಕಿರುಹಾದಿಗಳು ಬಲೂಚಿಸ್ತಾನದ ಪರ್ವತ ಶೃಂಖಲೆಗಳಲ್ಲಿವೆ. ಪಶ್ಚಿಮ ಶ್ರೇಣಿಗಳಲ್ಲಿರುವ ಇಂತಹ ಒಂದು ಮಾರ್ಗದ ಮೂಲಕ ಈಶಾನ್ಯ ಇರಾನಿನಿಂದ ಪಶುಪಾಲಕ–ಕೃಷಿಕ ಪಂಗಡಗಳು ಈ ಪರ್ವತ ಪ್ರದೇಶಕ್ಕೆ ಹಂತಹಂತವಾಗಿ ವಲಸೆಬಂದು ನೆಲೆಸತೊಡಗಿದಾಗ ಇಲ್ಲಿ ಸಂಸ್ಕೃತಿ–ನಾಗರಿಕತೆಗಳು ಕ್ರಮೇಣ ಬೆಳೆಯತೊಡಗಿದವು. ಈ ಮಧ್ಯೆ ಸಿಂಧೂ–ಸರಸ್ವತಿ ನಾಗರಿಕತೆಯ ಪ್ರಭಾವ ಈ ಪ್ರದೇಶಕ್ಕೆ ವಿಸ್ತರಿಸಿತು. ಕಾಲಕ್ರಮೇಣ ಬಲೂಚಿಸ್ತಾನದಲ್ಲಿ ಈ ನಾಗರಿಕತೆ ಹರಡಿತು. ಇದರ ಅವನತಿಯೊಂದಿಗೆ ಝುಕರ್ ಮೊದಲಾದ ಸ್ಥಳೀಯ ಸಂಸ್ಕೃತಿಗಳು ಪುನರುತ್ಥಾನಗೊಂಡವು.

ಬಲೂಚಿಸ್ತಾನದ ಆಗ್ನೇಯ ಭಾಗಕ್ಕೆ ಹೊಂದಿಕೊಂಡಿರುವ ಸಿಂಧೂ–ಸರಸ್ವತಿ ನದಿಬಯಲುಗಳಲ್ಲಿ ಪ್ರ.ಶ.ಪೂ.9ನೆಯ ಸಹಸ್ರಮಾನದಲ್ಲಿ ಸ್ಥಾಯಿಜೀವನ ಪ್ರಾರಂಭಗೊಂಡ ಲಕ್ಷಣಗಳು ಕಾಣುತ್ತವೆ. ಕುರಿ–ಮೇಕೆಗಳ ಪಾಲನೆ, ವನ್ಯಧಾನ್ಯಗಳ ಅರಿವು ಹಾಗೂ ಬಳಕೆ ಮುಂತಾದ ಕುರುಹುಗಳು ಈ ಅವಧಿಯ ವಸತಿನೆಲೆಗಳಲ್ಲಿವೆ. ಪ್ರ.ಶ.ಪೂ.6ನೆಯ ಸಹಸ್ರಮಾನದ ಹೊತ್ತಿಗೆ ಈ ವಸತಿಗಳು ಹಳ್ಳಿಗಳಾಗಿ ಬೆಳೆದಿದ್ದವು. ಕುಂಭಕಲೆ, ಧಾನ್ಯ–ಕಾಳುಗಳ ವ್ಯವಸಾಯ, ಪಶು ಸಂಗೋಪನೆ–ಇವೆಲ್ಲವನ್ನೂ ಈ ಸಮುದಾಯಗಳು ಪೂರ್ಣಪ್ರಮಾಣದಲ್ಲಿ ರೂಢಿಸಿಕೊಂಡಿದ್ದವು.

ಆಫ್ಘಾನಿಸ್ತಾನದ ಅಕ್‌ಕುಪ್ರುಕ್‌ನಲ್ಲಿ ಪ್ರ.ಶ.ಪೂ.9ನೆಯ ಸಹಸ್ರಮಾನದ ಹೊತ್ತಿಗೆ ನವಶಿಲಾಯುಗ ಸಂಸ್ಕೃತಿ ಪ್ರಾರಂಭಗೊಂಡಿತು. ಅಕ್‌ಕುಪ್ರುಕ್‌ನ ಮಣ್ಪಾತ್ರೆರಹಿತ ನವಶಿಲಾಯುಗ ಹಂತಕ್ಕೆ ನಿರ್ಣಯಿಸಲಾಗಿರುವ ಎರಡು ಇಂಗಾಲ–14 ಕಾಲಮಾನಗಳು– ಪ್ರ.ಶ.ಪೂ. 8565±240 ಮತ್ತು ಪ್ರ.ಶ.ಪೂ. 6960±105. ಕುರಿ–ಮೇಕೆ ಸಂಗೋಪನೆ ಈ ಹಂತದ ಜನರ ಒಂದು ಕಸಬಾಗಿತ್ತು. ಈ ಹಂತದ ತರುವಾಯದ ಮಣ್ಪಾತ್ರೆಸಹಿತ ನವಶಿಲಾಯುಗ ಹಂತಕ್ಕೆ 4 ಇಂಗಾಲ–14 ಕಾಲಮಾನಗಳಿವೆ–ಪ್ರ.ಶ.ಪೂ.5806, 5638, 5292/5286/5241, 3307–3110. ಪ್ರ.ಶ.ಪೂ.6ನೆಯ ಸಹಸ್ರಮಾನದಲ್ಲಿ ಈ ಪ್ರದೇಶದಲ್ಲಿ ಮಣ್ಪಾತ್ರೆಗಳ ಉಪಯೋಗ ಶುರುವಾಯಿತು ಎಂಬುದು ಸ್ಪಷ್ಟ.

ಇಡೀ ದಕ್ಷಿಣ ಏಷ್ಯದಲ್ಲೇ ಮುಖ್ಯ ವಸತಿನೆಲೆಗಳಲ್ಲೊಂದು ಮೆಹರ್‌ಗಡ. ಸು.250 ಹೆ. ಜಾಗದಲ್ಲಿ ವ್ಯಾಪಿಸಿರುವ ಈ ನೆಲೆ ಸಿಂಧೂ ನದಿಬಯಲಿನ ಪಶ್ಚಿಮ ಅಂಚಿಗೆ ತಾಗಿರುವ ಪರ್ವತ ಶ್ರೇಣಿಯ ತಪ್ಪಲಿನಲ್ಲಿ, ಬೋಲನ್ ಕಣಿವೆಯ ಪ್ರವೇಶ ದ್ವಾರದಲ್ಲಿದೆ. ಈ ಕಣಿವೆ ಸಿಂಧೂ ಬಯಲನ್ನು ಪಶ್ಚಿಮ ಆಫ್ಘಾನಿಸ್ತಾನ, ಬಲೂಚಿಸ್ತಾನ ಮತ್ತು ಪೂರ್ವ ಇರಾನ್ ಪ್ರದೇಶಕ್ಕೆ ಸೇರಿಸುವ ಮುಖ್ಯ ಮಾರ್ಗಗಳಲ್ಲೊಂದಾಗಿರುವುದು ಗಮನಾರ್ಹ. 1974ರಲ್ಲಿ ಬೆಳಕಿಗೆಬಂದ ಈ ನೆಲೆಯಲ್ಲಿ ಫ್ರೆಂಚ್ ತಂಡವೊಂದು 1974–86ರವರೆಗೆ ಜೀನ್–ಫ್ರ್ಯಾಂಕೊಸ್ ಜಾರಿಜ್ ನಿರ್ದೇಶನದಲ್ಲಿ ಸತತ ಉತ್ಖನನ ನಡೆಸಿತು. ಪ್ರ.ಶ.ಪೂ. 7000/6000–ಪ್ರ.ಶ.ಪೂ.2500 ರವರೆಗಿನ ಸಾಂಸ್ಕೃತಿಕ ಅವಶೇಷಗಳು ಸತತ ಕಾಲಾನು ಕ್ರಮಣಿಕೆಯಲ್ಲಿ ಇಲ್ಲಿ ಕಂಡುಬಂದವು. ಗೋದಿ–ಜವೆಯ ಸಾಗುವಳಿ ಮತ್ತು ಪಶುಪಾಲನೆಯ ಅತಿಪ್ರಾಚೀನ ಅವಶೇಷಗಳಿರುವ ನೆಲೆಗಳಲ್ಲಿ ಮೆಹರ್‌ಗಡ ಒಂದಾಗಿರುವುದು ಮಹತ್ತ್ವಪೂರ್ಣ.



ವರ್ಣ ಚಿತ್ರಾಲಂಕೃತ ಮಣ್ಣಿನ ಸ್ತ್ರೀ ಗೊಂಬೆ

ಮೆಹರ್‌ಗಡದಲ್ಲಿ ಮೊಟ್ಟ ಮೊದಲ ವಸತಿ ನವಶಿಲಾಯುಗದ ಮಣ್ಪಾತ್ರೆರಹಿತ ಉಪಹಂತಕ್ಕೆ ಸೇರುವ (ಉಪಹಂತ 1ಎ) ಒಂದು ಸಣ್ಣ ಹಳ್ಳಿ. ಈ ಜನ ಹಸಿ ಇಟ್ಟಿಗೆಯಿಂದ ಕಟ್ಟಿದ ಸರಳ ಮನೆಗಳಲ್ಲಿ ವಾಸಿಸುತ್ತಿದ್ದರು. ಎರಡು–ಮೂರು ತರಹದ ಗೋದಿ ಮತ್ತು ಜವೆಯನ್ನು ಇವರು ಬೆಳೆಯುತ್ತಿದ್ದರಲ್ಲದೆ ಖರ್ಜೂರ, ಬೋರೆ ಮುಂತಾದ ಹಣ್ಣುಗಳನ್ನೂ ಸಂಗ್ರಹಿಸುತ್ತಿದ್ದರು. ಕುರಿ, ಮೇಕೆ, ಎಮ್ಮೆ ಜಾನುವಾರುಗಳನ್ನು ಇವರು ಸಾಕಿಕೊಂಡಿದ್ದರು. ಪಶ್ಚಿಮ ಏಷ್ಯದ ನವಶಿಲಾಯುಗದ ನೆಲೆಗಳಲ್ಲಿ ಜಾನುವಾರುಗಳ ಕುರುಹು ಇಲ್ಲದಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ನಯಗೊಳಿಸಿದ ಕೊಡಲಿ, ಉಳಿ, ಬಾಚಿ, ಸಮಾನಾಂತರ ಸೂಕ್ಷ್ಮ ಅಲಗು, ಕೊರೆಗ, ಹೆರೆಚಕ್ಕೆ, ತ್ರಿಕೋನ, ಅರ್ಧಚಂದ್ರಾಕೃತಿ, ಕಿರು ಕೊರಗ ಮುಂತಾದ ಕಲ್ಲಿನ ಉಪಕರಣಗಳನ್ನೂ ಮೂಳೆಯ ದಬ್ಬಣಗಳನ್ನೂ ಇವರು ಬಳಸುತ್ತಿದ್ದರು. ಶಂಖ, ಸುಣ್ಣಕಲ್ಲು, ಮರಳುಕಲ್ಲು, ವೈಡೂರ್ಯ ಮುಂತಾದುವುಗಳಿಂದ ಮಾಡಿದ ಮಣಿಗಳೂ ಸುಡಾವೆಮಣ್ಣಿನ ಸರಳ ಸ್ತ್ರೀ ಮತ್ತು ಪ್ರಾಣಿ ಆಕೃತಿಗಳೂ ಇಲ್ಲಿ ದೊರೆತಿವೆ. ಸಮಾಧಿ ಕಾಣಿಕೆಗಳೊಂದಿಗೆ ಹೆಣವನ್ನು ಹೂಳುವ ಪದ್ಧತಿ ಇವರಲ್ಲಿತ್ತು. ಒಂದು ಸಮಾಧಿಯಲ್ಲಿ ತಾಮ್ರದ ಮಣಿ ಮತ್ತೊಂದರಲ್ಲಿ ನಯಗೊಳಿಸಿದ ಕೊಡಲಿಯನ್ನು ಇಟ್ಟಿರುವುದು ವಿಶೇಷ. ಪ್ರ.ಶ.ಪೂ.7000/6000ದ ಸಮಯದಲ್ಲಿ ಪ್ರಾರಂಭಗೊಂಡ ಈ ಜೀವನಕ್ರಮ ಪ್ರ.ಶ.ಪೂ.5500ರವರೆಗೆ ಇದೇ ರೀತಿಯಲ್ಲಿತ್ತು. ಅನಂತರ ಜನ ಮಣ್ಪಾತ್ರೆಗಳ ಬಳಕೆಯನ್ನು ತಿಳಿದುಕೊಂಡರು. ಇದರೊಂದಿಗೆ ಮಣ್ಪಾತ್ರೆಸಹಿತ ನವಶಿಲಾಯುಗ ಉಪಹಂತ (ಉಪಹಂತ 1ಬಿ) ಪ್ರಾರಂಭಗೊಂಡಿತು. ಪ್ರ.ಶ.ಪೂ.4600ರವರೆಗೆ ಮುಂದುವರೆದ ಈ ಹಂತದಲ್ಲಿ ಎಲ್ಲ ವಲಯಗಳಲ್ಲಿ ಸುಧಾರಣೆಗಳಾದವು. ಬೇಸಾಯ ಮತ್ತು ಪಶು ಸಂಗೋಪನೆ ಮುಂದುವರೆಯಿತು. ಹೊರಮೈ ಮೇಲೆ ಬಿದಿರಿನ ಬುಟ್ಟಿಯ ಗುರುತುಳ್ಳ ದೊರಕಾದ ಮಣ್ಪಾತ್ರೆಗಳನ್ನು ಈ ಜನ ಉಪಯೋಗಿಸತೊಡಗಿದರು. ಇವು ಕೈಯಿಂದಲೇ ತಟ್ಟಿಮಾಡಿದ ಪಾತ್ರೆಗಳು. ಕರಕುಶಲ ಚಟುವಟಿಕೆಗಳು ಈ ಉಪಹಂತದಲ್ಲಿ ಬಿರುಸುಗೊಂಡವು. ಫಯಾನ್ಸ್ ಮಣಿಗಳು ತಯಾರಾಗತೊಡಗಿದವು. ಸುಡಾವೆಮಣ್ಣಿನ ಆಕೃತಿಗಳು ಉನ್ನತಗೊಂಡವು;

ಸ್ತ್ರೀ ಆಕೃತಿಗಳ ಆಭರಣ–ಕೇಶವಿನ್ಯಾಸಗಳಲ್ಲಿ ವೈವಿಧ್ಯ ಬೆಳೆಯಿತು. ಇಲ್ಲಿ ದೊರೆತ ಹಲವಾರು ವೈಡೂರ್ಯ ಮಣಿಗಳು ಸಂಪರ್ಕದ ಸಂಕೇತವಾಗಿವೆ; ಈ ಕಲ್ಲಿನ ನಿಕ್ಷೇಪ ಅಪರೂಪವಾಗಿದ್ದು ಅಫ್ಘಾನಿಸ್ತಾನದ ಬದಕ್ಷನ್ ಎಂಬ ಪ್ರದೇಶದಲ್ಲಿದೆ. ಕೈಕಾಲು ಮಡಿಸಿದ ಭಂಗಿಗಳಲ್ಲಿರುವ ಎರಡು ಸಮಾಧಿಗಳು ಈ ಉಪಹಂತದಲ್ಲಿದ್ದು ಎರಡರಲ್ಲೂ ಕೆಂಪುಬಣ್ಣವನ್ನು ಮೂಳೆಗಳಿಗೆ ಲೇಪಿಸಲಾಗಿದೆ. ಕೆಮ್ಮಣ್ಣಿನ ಉಂಡೆಗಳೂ ಈ ಸಮಾಧಿಗಳೊಳಗೆ ಕಂಡುಬಂದಿವೆ. ಸಮಾಧಿಗಳು ವಸತಿಯ ಪರಿಧಿಯ ಹೊರಗಿವೆ. ನವಶಿಲಾಯುಗದ ಈ ಎರಡು ಉಪಹಂತಗಳಿಂದ ಒಟ್ಟು 8 ಪರಿಷ್ಕೃತ ಇಂಗಾಲ–14 ಕಾಲಮಾನಗಳು ದೊರೆತಿದ್ದು ಇವು ಪ್ರ.ಶ.ಪೂ.5980ರಿಂದ ಪ್ರ.ಶ.ಪೂ.4360ರ ನಡುವೆ ಇವೆ.

ಕಂಚಿನ ಯುಗದ ವರ್ಣ ಚಿತ್ರತ ಮಣ್ಣಿನ ಲೋಟ, ಲೋರಲೈ

2ನೆಯ ಹಂತದ (ಪ್ರ.ಶ.ಪೂ. 4500–4000) ಆದಿ ಭಾಗದಲ್ಲಿ (ಉಪಹಂತ IIಎ) ಬಿದಿರು ಬುಟ್ಟಿಯ ಗುರುತುಳ್ಳ ದೊರಕಾದ ಮಣ್ಪಾತ್ರೆಗಳ ಉಪಯೋಗ ಹೆಚ್ಚಾದರೆ ಅಂತ್ಯದ ಹೊತ್ತಿಗೆ ತಿಗುರಿ ಮೇಲೆ ಮಣ್ಪಾತ್ರೆ ಮಾಡುವ ಪದ್ಧತಿ ಆಚರಣೆಗೆ ಬಂದಿತು. ಅಲ್ಲದೆ, ಕಲ್ಲಿನ ಕೊಡಲಿ–ಬಾಚಿಗಳ ಉಪಯೋಗ ಕಡಿಮೆಯಾಗಿ ಅಲಗು, ಕಿರು ಅಲಗು, ಮೂಳೆಯ ದಬ್ಬಣಗಳ ಬಳಕೆ ಹೆಚ್ಚಾಯಿತು. ತಾಮ್ರದ ಉಪಕರಣಗಳ ತಯಾರಿಕೆಯೂ ಜೊತೆಯಲ್ಲಿ ಸಾಗುತ್ತಿತ್ತು. 3ನೆಯ ಹಂತದಲ್ಲಿ (ಪ್ರ.ಶ.ಪೂ.4000–3500) ಮಣ್ಪಾತ್ರೆಗಳನ್ನು ಬಣ್ಣದ ಚಿತ್ರಗಳಿಂದ ಅಲಂಕರಿಸುವ ಸಂಪ್ರದಾಯ ಬೆಳೆಯಿತು. ಪ್ರಾಣಿ–ಪಕ್ಷಿ ಮೊದಲಾದುವುಗಳ ಚಿತ್ರಗಳನ್ನೇ ಹೆಚ್ಚಾಗಿ ಪಾತ್ರೆಗಳ ಮೇಲೆ ಬಣ್ಣದಲ್ಲಿ ಬಿಡಿಸಲಾಗುತ್ತಿತ್ತು. ದೊಡ್ಡದೊಡ್ಡ ಕಣಜಗಳೂ ಈ ಹಂತದಲ್ಲಿ ಕಂಡುಬರುತ್ತವೆ. 4ನೆಯ ಹಂತ ಪ್ರ.ಶ.ಪೂ.3500–3000 ದ ವರೆಗೂ 5ನೆಯ ಹಂತ ಪ್ರ.ಶ.ಪೂ.3000ದ ಆದಿ ಭಾಗದಲ್ಲಿಯೂ ಮುಂದುವರೆದವು. ಪ್ರ.ಶ.ಪೂ.2470ರ (ಇಂಗಾಲ–14 ಕಾಲಮಾನ) ಸುಮಾರಿಗೆ ಸೇರುವ 6ನೆಯ ಹಂತದಲ್ಲಿ ಬಲೂಚಿಸ್ತಾನ, ಅಫ್ಘಾನಿಸ್ತಾನ, ಇರಾನ್ ಮತ್ತು ಸಿಂಧೂ ಬಯಲಿನ ನಡುವೆ ಪರಸ್ಪರ ಸಂಪರ್ಕವಿದ್ದುದು ಈ ಹಂತದ ಮಣ್ಪಾತ್ರೆಗಳ ಮೇಲಾದ ಪ್ರಭಾವದಿಂದ ತಿಳಿಯುತ್ತದೆ. 7ನೆಯ ಹಂತವನ್ನು ಮಣ್ಪಾತ್ರೆಗಳ ಆಧಾರದ ಮೇಲೆ ಪ್ರ.ಶ.ಪೂ.2500ರ ಆಸುಪಾಸಿನಲ್ಲಿ ಇಡಲಾಗಿದೆ. ಈ ಹಂತದಲ್ಲಿ ಝೋಬ್ ಶೈಲಿಯ ಸುಡಾವೆಮಣ್ಣಿನ ಆಕೃತಿಗಳು, ಹಸಿ ಇಟ್ಟಿಗೆಯ ದೊಡ್ಡ ವೇದಿಕೆಗಳು ಮೊದಲಾದ ಅವಶೇಷಗಳಿವೆ. 8ನೆಯ ಹಂತದಲ್ಲಿ ವಸತಿ ಅಂತ್ಯ ಹರಪ್ಪ ಸಂಸ್ಕೃತಿಯ ಲಕ್ಷಣಗಳನ್ನೊಳಗೊಂಡಿತ್ತು.

ಈ ಪ್ರದೇಶದಲ್ಲಿರುವ ಕಿಲೆಗುಲ್ ಮೊಹಮ್ಮದ್, ಗುಮ್ಲ ಮತ್ತು ರೆಹಮಾನ್‌ಢೇರಿ ವಸತಿ ನೆಲೆಗಳಲ್ಲೂ ಮೆಹರ್‌ಗಡಕ್ಕೆ ಸಮಾನವಾದ ಸಾಂಸ್ಕೃತಿಕ ಅನುಕ್ರಮಣಿಕೆಯಿದೆ. ಮಣ್ಪಾತ್ರೆರಹಿತ ನವಶಿಲಾಯುಗದ ಹಂತದಿಂದ ಹರಪ್ಪ ನಾಗರಿಕತೆಯವರೆಗಿನ ಸಮಗ್ರ ಚಿತ್ರಣವನ್ನು ಈ ಎಲ್ಲ ನೆಲೆಗಳು ಒಟ್ಟಾಗಿ ಕಟ್ಟಿಕೊಟ್ಟಿವೆ.

ಮೆಹರ್‌ಗಡದ 6ನೆಯ ಹಂತದ ವೇಳೆಗೆ ಹತ್ತಿರದಲ್ಲಿಯೇ ಇರುವ ನೌಶಾರೊ ಎಂಬ ಸ್ಥಳದಲ್ಲಿ ವಸತಿ ಸ್ಥಾಪಿತವಾಯಿತು. ಈ ವಸತಿಯ 2ನೆಯ ಹಂತದಲ್ಲಿ ಪ್ರೌಢ ಹರಪ್ಪ ಸಂಸ್ಕೃತಿಯ ಮಣ್ಪಾತ್ರೆಗಳಿವೆ. ಕೆಲವು ಮಣ್ಪಾತ್ರೆಗಳ ಮೇಲೆ ಹರಪ್ಪ ಲಿಪಿಯೆಂದು ಹೇಳಲಾಗುವ ಚಿಹ್ನೆಗಳಿವೆ. ನೌಶಾರೊನ 1ನೆಯ ಹಂತದ ಅಂತ್ಯದಲ್ಲಿ ಮತ್ತು ಗುಮ್ಲ ವಸತಿನೆಲೆಯ 3–4ನೆಯ ಹಂತಗಳ ನಡುವಿನ ಸ್ತರಗಳಲ್ಲಿ ವಸತಿಗೆ ಭಾರಿ ಪ್ರಮಾಣದಲ್ಲಿ ಬೆಂಕಿಬಿದ್ದಿರುವಂತೆ ತೋರುತ್ತದೆ.

ಉತ್ತರ ಬಲೂಚಿಸ್ತಾನದಲ್ಲಿರುವ ರಾಣಾಘುಂಡೈ ವಸತಿನೆಲೆಯ 1ನೆಯ ಹಂತದಲ್ಲಿ ಚಕಮಕಿ ಕಲ್ಲಿನ ಅಲಗು, ಮೊನೆಗಳು, ಮೂಳೆಯಿಂದ ಮಾಡಿದ ಕಣ್ಣಿರುವ ದಬ್ಬಣ, ಕೈಯಿಂದ ತಟ್ಟಿ ಮಾಡಿದ ಸರಳ ಮಣ್ಪಾತ್ರೆಗಳು, ಜಾನುವಾರು, ಮೇಕೆ ಮತ್ತು ಕತ್ತೆಯ ಮೂಳೆಗಳು ಮೊದಲಾದ ಅಂತ್ಯ ನವಶಿಲಾಯುಗದ ಅವಶೇಷಗಳಿವೆ. 2ನೆಯ ಹಂತದಲ್ಲಿ ತಿಗುರಿಯ ಮೇಲೆ ಮಾಡಿದ ಕೆಂಪು ಮಣ್ಪಾತ್ರೆಗಳಿವೆ. ಇದೇ ಪ್ರದೇಶದಲ್ಲಿರುವ ದಾಬರ್‌ಕೋಟ್ ವಸತಿನೆಲೆಯ ಮಧ್ಯಮ ಸ್ತರಗಳಲ್ಲಿ ಪ್ರೌಢ ಹರಪ್ಪ ಸಂಸ್ಕೃತಿಯ ವಸ್ತುಗಳೊಂದಿಗೆ ಸ್ಥಳೀಯವಾದ ಸುಡಾವೆಮಣ್ಣಿನ ಆಕೃತಿಗಳಿರುವುದು ವಿವಿಧ ಸಂಸ್ಕೃತಿಗಳ ನಡುವಿನ ಸಂಪರ್ಕವನ್ನು ಸೂಚಿಸುತ್ತದೆ.

ಕಿಲೆಗುಲ್ ಮೊಹಮ್ಮದ್‌ನಿಂದ 15 ಕಿಮೀ ಪಶ್ಚಿಮಕ್ಕಿರುವ ದಾಂಬ್‌ಸಾದಾತ್ ವಸತಿ ನೆಲೆಯಲ್ಲಿ 1ನೆಯ ಹಂತದಲ್ಲಿ ಕೆಚಿಬೇಗ್ ಮಾದರಿಯ ಮಣ್ಪಾತ್ರೆಗಳಿವೆ (ಇಂತಹ ಪಾತ್ರೆಗಳು ಕಿಲೆಗುಲ್ ಮೊಹಮ್ಮದ್‌ನಲ್ಲಿ 4ನೆಯ ಹಂತದಲ್ಲಿವೆ). 2ನೆಯ ಹಂತದಲ್ಲಿ ಕ್ವೆಟ್ಟ ಮಾದರಿಯ ಮಣ್ಪಾತ್ರೆ, ಫೈಜ್‌ಮೊಹಮ್ಮದ್ ಮಾದರಿಯ ಬೂದುಬಣ್ಣದ ಮಣ್ಪಾತ್ರೆಗಳಿವೆ. ಪ್ರೌಢ ಹರಪ್ಪ ಸಂಸ್ಕೃತಿಗೆ ಸಮಕಾಲೀನವಾದ 3ನೆಯ ಹಂತದಲ್ಲಿ ದಾಂಬ್‌ಸಾದಾತ್ ಮಾದರಿಯ ಪಾತ್ರೆಗಳಿವೆ.

ಸಿಂಧೂ ನದಿಬಯಲಿನ ಸಮೀಪದಲ್ಲಿರುವ ಗೋಮಲ್ ಬಯಲಿನಲ್ಲಿ ಗುಮ್ಲ ಮತ್ತು ರೆಹಮಾನ್‌ಢೇರಿ ವಸತಿ ನೆಲೆಗಳು ಪ್ರಮುಖವಾದುವು. ಗುಮ್ಲದ 1ನೆಯ ಹಂತದಲ್ಲಿ ವಿವಿಧ ಸೂಕ್ಷ್ಮಶಿಲೋಪಕರಣಗಳು, ಅರೆಯುವ ಕಲ್ಲು, ರುಬ್ಬುವ ಗುಂಡುಗಳಿವೆ. ಇವು ಮಣ್ಪಾತ್ರೆರಹಿತ ನವಶಿಲಾಯುಗ ಹಂತದ ಅವಶೇಷಗಳಂತಿವೆ. 2ನೆಯ ಹಂತದಲ್ಲಿ ತಾಮ್ರ ಮತ್ತು ಕಂಚಿನ ವಸ್ತುಗಳು, ತಿಗುರಿ ಮೇಲೆ ಮಾಡಿದ ಮಣ್ಪಾತ್ರೆಗಳು, ಕಲ್ಲು ಮತ್ತು ಮೂಳೆಯ ಉಪಕರಣಗಳು, ಸುಡಾವೆಮಣ್ಣಿನ ಮನುಷ್ಯ ಮತ್ತು ಪ್ರಾಣಿಯ ಆಕೃತಿಗಳು ಇವೆ. 2ನೆಯ ಹಂತದ ಅನಂತರ ಇಲ್ಲಿ ತಾತ್ಕಾಲಿಕವಾಗಿ ವಸತಿಯಿರಲಿಲ್ಲವೆಂಬುದು 2 ಮತ್ತು 3ನೆಯ ಹಂತಗಳ ನಡುವಿರುವ ಅವಶೇಷರಹಿತ ಸ್ತರಗಳಿಂದ ತಿಳಿಯುತ್ತದೆ. ಕೆಲಕಾಲದ ಅನಂತರ ಇಲ್ಲಿ ಮತ್ತೆ ಎದ್ದ ವಸತಿ 3ನೆಯ ಹಂತಕ್ಕೆ ಸೇರುತ್ತದೆ. ಈ ಹಂತದಲ್ಲಿ 1:2:4 ಅನುಪಾತದಲ್ಲಿರುವ (28×13×7 ಸೆಂಮೀ) ಹರಪ್ಪ ಮಾದರಿಯ ಹಸಿ ಇಟ್ಟಿಗೆಯ ಮನೆಗಳಿದ್ದವು. ಬಾಯಿ ಮತ್ತು ಕುತ್ತಿಗೆಯ ಮೇಲೆ ಕೋಟ್‌ದಿಜಿ ಮಾದರಿಯ ದಪ್ಪ ಪಟ್ಟಿಗಳನ್ನೂ ತಲೆಯ ಮೇಲೆ ಕೊಂಬಿರುವ ಮನುಷ್ಯನ ಚಿತ್ರವನ್ನೂ ಬಣ್ಣದಲ್ಲಿ ಚಿತ್ರಿಸಲಾಗಿರುವ ಮಣ್ಪಾತ್ರೆಗಳಿರುವ ಈ ಹಂತದ ಕಾಲಾವಧಿ ಪ್ರ.ಶ.ಪೂ.2800–2700 (ಇಂಗಾಲ–14). ಈ ಹಂತದ ಅನಂತರ ಕೆಲಕಾಲ ಇಲ್ಲಿ ಮತ್ತೆ ವಸತಿ ಇರಲಿಲ್ಲ. ತದನಂತರ ಹುಟ್ಟಿದ ವಸತಿಯಲ್ಲಿ (4ನೆಯ ಹಂತ) ಪ್ರೌಢ ಹರಪ್ಪ ಸಂಸ್ಕೃತಿಯ ಲಕ್ಷಣಗಳಾದ ಸುಡಾವೆಮಣ್ಣಿನ ಆಟಿಕೆ ಗಾಡಿಗಳು, ಗಾಲಿಗಳು ಮತ್ತು ತ್ರಿಕೋನಾಕಾರದ ಬಿಲ್ಲೆಗಳು, ಹಸಿ ಇಟ್ಟಿಗೆಯಿಂದ ಕಟ್ಟಿದ ದೊಡ್ಡ ವೇದಿಕೆಗಳು ಕಂಡುಬರುತ್ತವೆ.

ರೆಹಮಾನ್‌ಢೇರಿಯ 1ನೆಯ ಹಂತದಲ್ಲಿ ಸ್ಥಳೀಯವಾಗಿ ತಯಾರಾಗುತ್ತಿದ್ದ ಕೆಂಪುಬಣ್ಣದ ಬಟ್ಟಲು, ಬೋಗುಣಿಗಳೊಂದಿಗೆ ಕೋಟ್‌ದಿಜಿ ಮಾದರಿಯ ಮಣ್ಪಾತ್ರೆಗಳೂ ಇವೆ. ಕೋಟ್‌ದಿಜಿಯ ಛಾಪುಗಳಲ್ಲೊಂದಾದ ತಲೆಯ ಮೇಲೆ ಕೊಂಬಿರುವ ಮನುಷ್ಯನ ಬಣ್ಣದ ಚಿತ್ರ ಕೆಲವು ಮಣ್ಪಾತ್ರೆಗಳ ಮೇಲಿದೆ. ಅಂಚಿನಲ್ಲಿ 2 ತೂತುಗಳಿರುವ ದಂತದ ಮುದ್ರೆಯೊಂದು ಈ ಹಂತದಿಂದ ಲಭಿಸಿದೆ. ಇದರ ಮೇಲೆ ಮೂಡಿಸಿದ 2 ಚೇಳು ಬೆಟ್ಟದ ಹೋತ, 2 ಚೇಳು ಮತ್ತು 1ಕಪ್ಪೆಯ ಚಿತ್ರಗಳು ಕುತೂಹಲಕಾರಿ. ಪ್ರ.ಶ.ಪೂ.3000ದ (ಇಂಗಾಲ 14) ಆಸುಪಾಸಿನ ಈ ಹಂತ ಮೆಹರ್‌ಗಡದ 4ನೆಯ ಹಂತಕ್ಕೆ ಸಮಕಾಲೀನವಾಗುತ್ತದೆ. 2ನೆಯ ಹಂತದಲ್ಲಿ ಕೋಟ್‌ದಿಜಿ ಮಾದರಿಯ ಮಣ್ಪಾತ್ರೆಗಳೇ ಹೆಚ್ಚಾಗಿವೆ. 3ನೆಯ ಹಂತದಲ್ಲಿ ಹರಪ್ಪ ಸಾಂಸ್ಕೃತಿಕ ಲಕ್ಷಣಗಳಿವೆ.

ತಕ್ಷಶಿಲದ ವಿಸ್ತರಣೆಯಾಗಿರುವ ಸರಾಯ್‌ಖೋಲ್ ಮತ್ತೊಂದು ಮುಖ್ಯ ನೆಲೆ. ಇಲ್ಲಿಯ 1ನೆಯ ಹಂತದಲ್ಲಿ ನಯಗೊಳಿಸಿದ ಕಲ್ಲಿನ ಕೊಡಲಿಗಳು, ಚರ್ಟ್ ಮತ್ತು ಚಕಮಕಿ ಕಲ್ಲಿನ ಅಲಗುಗಳು, ಮೂಳೆಯ ಮೊನೆಗಳು, ಉಜ್ಜಿದ ಮೇಲ್ಮೈಯ–ತಳದಲ್ಲಿ

ಕಂಚಿನ ಪಾತ್ರೆ ಮತ್ತು ಕಬ್ಬಿಣದ ಬಾಣದ ಮೊನೆ

ಚಾಪೆ ಗುರುತುಳ್ಳ ಬೂದುಬಣ್ಣದ ಬಟ್ಟಲುಗಳು ಇವೆ. ಈ ಹಂತ ಪ್ರ.ಶ.ಪೂ.3000–2800ರ (ಇಂಗಾಲ–14) ನಡುವೆ ಇತ್ತು. 2ನೆಯ ಹಂತದಲ್ಲಿ ವಸತಿ ಹಾಗೆಯೇ ಮುಂದುವರೆದರೂ ಕೋಟ್‌ದಿಜಿ ಸಂಸ್ಕೃತಿಯ ಪ್ರಭಾವ ಬಹುವಾಗಿ ಕಂಡುಬರುತ್ತದೆ. ಈ ಹಂತದಲ್ಲಿ ಗುಮ್ಲ ಮತ್ತು ರೆಹಮಾನ್‌ಢೇರಿಯಲ್ಲಿರುವಂತಹ ಸುಡಾವೆಮಣ್ಣಿನ ಸ್ತ್ರೀ ಆಕೃತಿಗಳಿವೆ ಮತ್ತು ತಾಮ್ರ ಹಾಗೂ ಕಂಚಿನ ವಸ್ತುಗಳಿವೆ. ಆದರೆ ಪ್ರೌಢ ಹರಪ್ಪ ಸಂಸ್ಕೃತಿಯ ಯಾವ ಲಕ್ಷಣಗಳೂ ಇಲ್ಲ. ಈ ಹಂತದ ಕಾಲಾವಧಿ ಪ್ರ.ಶ.ಪೂ.2500–2200 (ಇಂಗಾಲ–14).

ಜಲೀಲಪುರದ ವಸತಿನೆಲೆಯಲ್ಲೂ ಆದಿಹರಪ್ಪ ಸಂಸ್ಕೃತಿಗೆ ಸಮಕಾಲೀನವಾದ ಸಾಂಸ್ಕೃತಿಕ ಹಂತವಿದೆ. ಕೋಟ್‌ದಿಜಿ ವಸತಿನೆಲೆಯಲ್ಲಿ ಪ್ರೌಢ ಹರಪ್ಪ ಸಾಂಸ್ಕೃತಿಕ ಹಂತದ ವಸತಿಸ್ತರಗಳ ಕೆಳಗೆ 5ಮೀ ದಪ್ಪದ ವಸತಿಪದರವಿದ್ದು ಇದರಲ್ಲಿ ಸುಡಾವೆಮಣ್ಣಿನ

ಬಿಲ್ಲೆಗಳು, ತಲೆಯ ಮೇಲೆ ಕೊಂಬಿರುವ ಮನುಷ್ಯನ ಚಿತ್ರವುಳ್ಳ ಮಣ್ಪಾತ್ರೆಗಳೇ ಮೊದಲಾದ ಕೋಟ್‌ದಿಜಿ ಎಂದೇ ಕರೆಯಲಾಗುವ ಸಂಸ್ಕೃತಿಯ ಲಕ್ಷಣಗಳಿವೆ. ಈ ಸಂಸ್ಕೃತಿಯ ಆರಂಭ ಕಾಲ ಪ್ರ.ಶ.ಪೂ.ಸು.3000 ವರ್ಷ. ಆಮ್ರಿ (**ನೋಡಿ**) ಮತ್ತು ಬಾಲಾಕೋಟ್ ಸಂಸ್ಕೃತಿಗಳು ಪ್ರ.ಶ.ಪೂ.3500ರ ಹೊತ್ತಿಗೆ ಬೆಳೆದವು.

ಹರಪ್ಪ ವಸತಿನೆಲೆಯಲ್ಲಿ ಇತ್ತೀಚೆಗೆ ನಡೆದ ಉತ್ಖನನ ಪ್ರೌಢ ಹರಪ್ಪ ಸಂಸ್ಕೃತಿಯ ಪೂರ್ವಕಾಲೀನ ಇತಿಹಾಸದ ಬಗ್ಗೆ ಹೊಸ ಮಾಹಿತಿಯನ್ನೊದಗಿಸಿದೆ. ಪ್ರೌಢ ಹರಪ್ಪ ಸಂಸ್ಕೃತಿಗೆ ಪೂರ್ವದ ಎರಡು ಹಂತಗಳು ಇಲ್ಲಿವೆ. 2ನೆಯ ಹಂತದಲ್ಲಿ ತಿಗುರಿಯ ಸಹಾಯವಿಲ್ಲದೆ ಕೈಯಿಂದ ತಟ್ಟಿ ಮಾಡಿದ ಮಣ್ಪಾತ್ರೆಗಳು, ಬಲೂಚಿಸ್ತಾನದಲ್ಲಿರುವ ಚೆರ್ಟ್ ನಿಕ್ಷೇಪದಿಂದ ತಯಾರಾದ ಅಲಗುಗಳು, ಮಕ್ರನ್ ಸಮುದ್ರತೀರದಿಂದ ಬಂದ ಶಂಖದ ವಸ್ತುಗಳ ಜೊತೆಗೆ ಹರಪ್ಪ ಲಿಪಿ ಎನ್ನುವ ಚಿಹ್ನೆಗಳುಳ್ಳ ವಸ್ತುಗಳು ಇವೆ. ಒಂದನೆಯ ಹಂತದ ಆದಿ ಸ್ತರಗಳು ಇಂಗಾಲ-14 ಕಾಲನಿರ್ಣಯದ ಪ್ರಕಾರ ಪ್ರ.ಶ.ಪೂ.3338-3202ರ ಸಮಯಕ್ಕೆ ಸೇರುತ್ತವೆ. ಅಂದರೆ, ಹರಪ್ಪ ನೆಲೆಯಲ್ಲಿಯೂ ಪ್ರ.ಶ.ಪೂ.4ನೆಯ ಸಹಸ್ರಮಾನದ ಮಧ್ಯದಲ್ಲಿ ನಾಗರಿಕತೆ ಬೆಳೆಯತೊಡಗಿತ್ತು. (ಬಿ.ಆರ್.ಎಂ.)

**ಇತಿಹಾಸ:** ಕ್ವೆಟ್ಟ, ಟಾಗ್ರೊ, ಕುಲಿ ಮತ್ತು ನಾಲ್-ಈ ಸ್ಥಳಗಳಲ್ಲಿ ನೆಲೆಸಿದ್ದ ಸಂಸ್ಕೃತಿ ದಕ್ಷಿಣ ಏಷ್ಯ ಮತ್ತು ಪಶ್ಚಿಮ ಏಷ್ಯ ಪ್ರದೇಶಗಳ ಸಂಸ್ಕೃತಿಗಳಿಗೆ ಸಂಪರ್ಕ ಕಲ್ಪಿಸಿತ್ತು. ಬಲೂಚಿ ಪ್ರದೇಶದ ಪ್ರಾರಂಭಿಕ ಇತಿಹಾಸದ ಬಗ್ಗೆ ಮಾಹಿತಿಗಳಿಲ್ಲ. ಈ ಪ್ರದೇಶ ಅಸ್ಸೀರಿಯ ಮತ್ತು ಮೀಡಿಯಗಳಿಗೆ ಅಧೀನವಾಗಿತ್ತೆಂದು ಅಭಿಪ್ರಾಯಪಡಲಾಗಿದೆ. ಪರ್ಷಿಯದ ಸಾಮ್ರಾಟ 2ನೆಯ ಡೇರಿಯಸ್ (ಪ್ರ.ಶ.ಪೂ.521-486) ಇದನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಅಲೆಕ್ಸಾಂಡರ್ ಪ್ರ.ಶ.ಪೂ.330ರಲ್ಲಿ 3ನೆಯ ಡೇರಿಯಸನನ್ನು ಸೋಲಿಸಿ ಬಲೂಚಿ ಪ್ರದೇಶ ವನ್ನು ಗ್ರೀಕ್ ಆಡಳಿತಕ್ಕೊಳಪಡಿಸಿದ. ಆಗ ಬಲೂಚಿಸ್ತಾನ ಗೆಡ್ರೋಷಿಯದ ಭಾಗವಾಗಿತ್ತು. ಅಲೆಕ್ಸಾಂಡರನ ತರುವಾಯ ಇದು 1ನೆಯ ಸೆಲ್ಯೂಕಸ್ ಮತ್ತು ಚಂದ್ರಗುಪ್ತಮೌರ್ಯ, ಇಂಡೊ-ಗ್ರೀಕರು ಹಾಗೂ ಪಾರ್ಥಿಯನರು (ಪ್ರ.ಶ.ಪೂ.3ನೆಯ-2ನೆಯ ಶತಮಾನ), ಸಿಥಿಯನರು (ಪ್ರ.ಶ.ಪೂ.100-ಪ್ರ.ಶ.200)-ಇವರ ರಾಜಕೀಯ ಪ್ರಾಬಲ್ಯಕ್ಕೆ ಒಳಪಟ್ಟಿತ್ತು. ಬಲೂಚಿಸ್ತಾನದ ಮಧ್ಯ ಹಾಗೂ ಈಶಾನ್ಯ ಭಾಗಗಳು 470-520ರ ವರೆಗೆ ತುರ್ಕಿ ಜನರ ಹಾಗೂ 3-7ನೆಯ ಶತಮಾನಗಳವರೆಗೆ ಪರ್ಷಿಯದ ಸಸಾನೀಡ್ ಮನೆತನದವರ ವಶದಲ್ಲಿದ್ದುವು. 7ನೆಯ ಶತಮಾನದ ಕೊನೆಯ ಹೊತ್ತಿಗೆ ಸಸಾನೀಡರ ಬಲ ಕುಗ್ಗಲು ಸಿಂಧ್ ಪ್ರದೇಶದ ಆರ್ಯರು ಬಲೂಚಿಸ್ತಾನದ ಮೇಲೆ ಪ್ರಭುತ್ವ ಸ್ಥಾಪಿಸಿದರು. ತರುವಾಯ ಅರಬ್ಬರ ಆಕ್ರಮಣವಾಯಿತು. 711ರಲ್ಲಿ ಮಹಮ್ಮದ್-ಬಿನ್-ಅಲ್‌ಖಾಸಿಂ ಈ ನಾಡನ್ನು ಗೆದ್ದ. ಅಮೇಲೆ ಇದು ಊಮೈಯದ್ ಮತ್ತು ಅಬ್ಬಾಸಿದ್ ಆಡಳಿತಕ್ಕೆ ಸೇರಿದ್ದ ಸಿಂಧ್ ಪ್ರಾಂತದ ಭಾಗವಾಯಿತು. 11ನೆಯ ಶತಮಾನದಲ್ಲಿ ಇದು ವಿವಿಧ ಆಡಳಿತಗಳ ಪಾಲಾಗಿ 1595-1638ರಲ್ಲಿ ಮೊಗಲ್ ಸಾಮ್ರಾಜ್ಯಕ್ಕೆ ಸೇರಿತ್ತು.

ಬಲೂಚಿಸ್ತಾನಕ್ಕೆ ಮೊದಲು ಬಂದು ನೆಲೆಸಿದವರು ಬ್ರಾಹುಇಗಳು. 14ನೆಯ ಶತಮಾನದ ಹೊತ್ತಿಗೆ ಅವರು ಬಲೂಚಿಸ್ತಾನದ ಮಧ್ಯಭಾಗದಲ್ಲಿ ಕಲಾತ್ ಪಾಳೆಯವನ್ನು ಕಟ್ಟಿಕೊಂಡರು. 18ನೆಯ ಶತಮಾನದಲ್ಲಿ ರೀಂದರು ಸಿಬಿ ರಾಜ್ಯವನ್ನು ಕಟ್ಟಿದರು. ಅದರ ರಾಜಧಾನಿ ಫಾತೆಪುರ್ ಲಾಷಾರ್ ಬುಡಕಟ್ಟಿನವರು ಕ್ವೆಟ್ಟ ರಾಜ್ಯವನ್ನು ಸ್ಥಾಪಿಸಿದರು. ಅದರ ರಾಜಧಾನಿ ಗಂಡಾವ. 1490-1520ರಲ್ಲಿ ನಡೆದ ರೀಂದ್-ಲಾಷಾರ್ ಯುದ್ಧದಿಂದ ರೀಂದ್ ಮತ್ತು ಲಾಷಾರ್ ಜನರಲ್ಲಿ ಬಹುಮಂದಿ ಪಂಜಾಬ್, ಸಿಂಧ್ ಮತ್ತು ಗುಜರಾತ್ ಪ್ರದೇಶಗಳಿಗೆ ಹೋಗಿ ನೆಲೆಸಿದರು.

1666ರ ಹೊತ್ತಿಗೆ ಬ್ರಾಹುಇ ಬಲೂಚರು ತಮ್ಮ ಪ್ರಭುತ್ವವನ್ನು ಕಲಾತ್ ರಾಜ್ಯದಲ್ಲಿ ಮತ್ತೆ ಸ್ಥಾಪಿಸಿದರು. ಅವರಲ್ಲಿ ಪ್ರಸಿದ್ಧನಾದ ನಸೀರ್ ಖಾನ್ (1750-93) ವಿವಿಧ ಬುಡ ಕಟ್ಟುಗಳ ಜನರ ಪ್ರದೇಶಗಳನ್ನು ಸಂಘಟಿಸಿ ರಾಜಕೀಯ ಹಾಗೂ ಸಾಮಾಜಿಕ ಸಂಸ್ಥೆಗಳನ್ನು ರೂಪಿಸಿದ. ಬಲೂಚಿ ಸೈನ್ಯವನ್ನು ಬಲಗೊಳಿಸಿದ. ಪರ್ಷಿಯದ ನಾದಿರ್ ಷಾ, ಆಫ್ಘಾನಿಸ್ತಾನದ ಅಹಮದ್ ಷಾ ದುರಾನಿ ಇವರಿಬ್ಬರೊಡನೆ ಮೈತ್ರಿ ಬೆಳೆಸಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದ.

1875ರಲ್ಲಿ ಬಲೂಚಿಸ್ತಾನದಲ್ಲಿ ಬ್ರಿಟಿಷರ ಪ್ರಭಾವ ಹೆಚ್ಚಿತು. ಬ್ರಿಟಿಷರು 1877ರಲ್ಲಿ ಕ್ವೆಟ್ಟ ನಗರವನ್ನು ಆಕ್ರಮಿಸಿದರು. ಆಫ್ಘನ್‌ಯುದ್ಧ (1878-79) ನಡೆದ ಮೇಲೆ ಬ್ರಿಟಿಷರು ಆಫ್ಘಾನಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಂಡುದಲ್ಲದೆ ಕಲಾತ್ ಪ್ರಾಂತದ ಪಾಳೆಯಗಾರ ರೊಡನೆ ಕರಾರು ಮಾಡಿಕೊಂಡು ತಾವು ಪಡೆದುಕೊಂಡ ಬಲೂಚಿ ಪ್ರದೇಶಗಳನ್ನು ಕೂಡಿಸಿ ಬ್ರಿಟಿಷ್ ಬಲೂಚಿಸ್ತಾನ ಹಾಗೂ ಬಲೂಚಿ ಬುಡಕಟ್ಟುಗಳ ಪ್ರದೇಶವನ್ನು ಸ್ಥಾಪಿಸಿದರು (1896). ಕಲಾತ್ ಬ್ರಿಟಿಷ್ ಆಶ್ರಿತ ಸಂಸ್ಥಾನವಾಯಿತು. 1947ರಲ್ಲಿ ಬ್ರಿಟಿಷ್ ಬಲೂಚಿಸ್ತಾನ ಪಾಕಿಸ್ತಾನಕ್ಕೆ ಸೇರಿತು. ಒಂದು ವರ್ಷದ ತರುವಾಯ ಕಲಾತ್ ಸಂಸ್ಥಾನ ಪಾಕಿಸ್ತಾನದಲ್ಲಿ ವಿಲೀನಗೊಂಡಿತು. 1970ರಲ್ಲಿ ಬಲೂಚಿಸ್ತಾನ ಈಗಿನ ರೂಪದಲ್ಲಿ ಪಾಕಿಸ್ತಾನದ ಪ್ರಾಂತ ವಾಯಿತು. (ವಿ.ಜಿ.ಕೆ.)

**ಬಸವ ಕಲ್ಯಾಣ:** ಬೀದರ್ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಬೀದರ್‌ನಿಂದ ದಕ್ಷಿಣಕ್ಕೆ 60ಕಿಮೀ ದೂರದಲ್ಲಿದೆ. ಈ ನಗರ ಅನೇಕ ಅರಸು ಮನೆತನಗಳಿಗೆ ರಾಜಧಾನಿಯಾಗಿ ಮೆರೆಯಿತು (ಕಲ್ಯಾಣ ಚಾಳುಕ್ಯ ಮತ್ತು ಕಳಚುರಿ). ರಾಷ್ಟ್ರಕೂಟರನ್ನು ಸೋಲಿಸಿ ಮಳಖೇಡ ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಚಾಳುಕ್ಯರು ವೈರಿಗಳ ಕಾಟವನ್ನು ತಾಳಲಾರದೆ ತಮ್ಮ ರಾಜಧಾನಿ ನಗರವನ್ನು ಏತಗಿರಿ, ಪೊಟ್ಟಳಕೆರೆಗಳಿಗೆ ವರ್ಗಾವಣೆ ಮಾಡಿ ಆಳಿಕೆ ನಡೆಸಿದರು. ಮುಂದೆ ಕಲ್ಯಾಣಪುರ-ಇಂದಿನ ಬಸವಕಲ್ಯಾಣವನ್ನು ಸುಮಾರು ಒಂದು ಶತಮಾನದವರೆಗೆ ರಾಜಧಾನಿಯನ್ನಾಗಿ ಮಾಡಿಕೊಂಡರು. ಚೋಳರು ಕಲ್ಯಾಣಪುರದ ಕೋಟೆಯನ್ನು ಮುತ್ತಿ ಎರಡು ಸಲ ಸುಟ್ಟಿದ್ದರು. ಆದರೂ ಚಾಳುಕ್ಯರ ವೈವಿಧ್ಯಮಯ ರಾಜಕೀಯ, ಸಾಮಾಜಿಕ, ಧಾರ್ಮಿಕ, ಕಲೆ-ವಾಸ್ತುಶಿಲ್ಪ, ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ಜರುಗಿದವು.

ಚಾಳುಕ್ಯರನ್ನು ಸೋಲಿಸಿ ಅಲ್ಪಕಾಲ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದವರು ಕಳಚುರಿ ಮನೆತನದ ಬಿಜ್ಜಳ (1162-83). ಬಸವಣ್ಣನ ಮುಂದಾಳತ್ವದಲ್ಲಿ ಸಾಮಾಜಿಕ-ಧಾರ್ಮಿಕ ಕ್ರಾಂತಿ ಜರುಗಿತು. ಚಾಳುಕ್ಯರು ಪುನಃ ಈ ರಾಜಧಾನಿಯನ್ನು ಗೆದ್ದುಕೊಂಡು ಸ್ವಲ್ಪಕಾಲ ಆಳಿಕೆ ನಡೆಸಿದರು. ಮುಂದೆ ಚಾಳುಕ್ಯರ ಸಾಮಂತರಲ್ಲೇ ಸ್ವತಂತ್ರರಾಗಲು ಪೈಪೋಟಿ ಯುದ್ಧಗಳು ಜರುಗಿದವು. ಈ ಕಾರಣದಿಂದ ಈ ನಗರ ಸೇವುಣರ ಮತ್ತು ಕಾಕತೀಯರ ಅಧೀನಕ್ಕೊಳಪಟ್ಟಿತು. ಮುಂದೆ ಈ ನಗರ ತುಗಲಕ್, ಬಹಮನಿ, ವಿಜಯನಗರ, ಆದಿಲ್‌ಶಾಹಿ, ಮೊಗಲ್ ಮತ್ತು ನವಾಬರ ಅಧೀನದಲ್ಲಿದ್ದಿತ್ತು.

ಕಲ್ಯಾಣದ ಪರಿಸರದಲ್ಲಿ ಸು. 11-12ನೆಯ ಶತಮಾನಗಳಲ್ಲಿ ತ್ರಿಪುರಾಂತಕೇಶ್ವರ, ತ್ರ್ಯಂಬಕೇಶ್ವರ, ಮಧುಕೇಶ್ವರ, ಭೀಮೇಶ್ವರ ಮತ್ತು ಸಿದ್ಧೇಶ್ವರ ದೇವಾಲಯಗಳು ಇದ್ದವೆಂದು ಶಾಸನಗಳು ತಿಳಿಸುತ್ತವೆ. ಆಗಿನ ಹೆಚ್ಚಿನ ದೇವಾಲಯಗಳ ಮೂಲ ಕಟ್ಟಡಗಳು ಅಳಿದಿವೆ; ಅವಶೇಷಗಳು ಚದುರಿವೆ. ಸಮೀಪದ ನಾರಾಯಣಪುರ ಮತ್ತು ಶಿವಪುರದ ದೇವಾಲಯಗಳು ತಮ್ಮ ವಾಸ್ತು-ಶಿಲ್ಪಕಲೆಯನ್ನು ಎತ್ತಿ ತೋರಿಸುತ್ತವೆ. ವೈಷ್ಣವ ದೇವಾಲಯಗಳಲ್ಲಿ ಕೇಶವ, ನಾರಾಯಣ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈ ದೇವಾಲಯಗಳ ಮೂಲಕಟ್ಟಡಗಳು ಅಳಿದಿವೆ; ಅವಶೇಷಗಳು ನಗರದಲ್ಲಿ ಹರಡಿಕೊಂಡಿವೆ. ವೈಷ್ಣವ ಶಿಲ್ಪಗಳಲ್ಲಿ ಮುಖ್ಯ ಶಿಲ್ಪಗಳೆಂದರೆ ಕೇಶವ, ಗರುಡಾರೂಢ ಲಕ್ಷ್ಮಿ-ನಾರಾಯಣ, ರಾಮ-ಹನುಮ, ಹನುಮಾರೂಢ ಲಕ್ಷ್ಮಣ, ಹನುಮ-ಅಕ್ಷಯ ಕುಮಾರರ ಹೋರಾಟ, ವಾಲಿ, ರಾವಣ, ಕೃಷ್ಣ-ಯಶೋದೆ, ಶಕುನಿವಧೆ, ಭೂವರಾಹ, ಅನಂತಶಯನ, ಗೋಪಾಲಕೃಷ್ಣ, ನರಸಿಂಹ, ಕೂರ್ಮ, ಗರುಡ, ಯೋಗ-ನಾರಾಯಣ, ಸೂರ್ಯ ಮತ್ತು ಬ್ರಹ್ಮ. ಇಲ್ಲಿಯ ಕೆಲವು ಶಿಲ್ಪಗಳಲ್ಲಿ ಉತ್ತರ ಭಾರತದ ಶಿಲ್ಪಶೈಲಿಯ ಪ್ರಭಾವವನ್ನು ಕಾಣಬಹುದು.

ಶಾಕ್ತ ಆರಾಧನೆಗೆ ಸಂಬಂಧಿಸಿದಂತೆ 11-12ನೆಯ ಶತಮಾನದ ಮಹಿಷಾಸುರಮರ್ದಿನಿ, ಮಹಾಲಕ್ಷ್ಮಿ, ಚಾಮುಂಡಿ, ದುರ್ಗಾಪರಮೇಶ್ವರಿ, ಗೂರ್ಜರ ಮಲಯಮತಿ ಮಹಾದೇವಿ ಮುಂತಾದ ದೇವಾಲಯ ಮತ್ತು ಶಿಲ್ಪಗಳು ಈ ನಗರದಲ್ಲಿ ಇದ್ದವೆಂದು ಇಲ್ಲಿಯ ಶಾಸನ ಗಳು ತಿಳಿಸುತ್ತವೆ. ಆರನೆಯ ವಿಕ್ರಮಾದಿತ್ಯನ ಒಬ್ಬ ರಾಣಿಯ ಹೆಸರು ಗೂರ್ಜರ ಮಲ ಯಮತಿ ಮಹಾದೇವಿ.



ಮಾಚಿದೇವನ ಹೊಂಡ

ನಾಗ ಆರಾಧನೆ: ನಾಗ ಆರಾಧನೆಯ ಈ ನಗರದಲ್ಲಿ 12ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತು. ಇದರಿಂದಾಗಿ ಈ ಕಾಲದ ಅನೇಕ ವೈವಿಧ್ಯಮಯ ನಾಗ ಶಿಲ್ಪಗಳು ಈ ನಗರದಲ್ಲಿ ಚದುರಿಹೋಗಿವೆ.

ದತ್ತಾತ್ರೇಯ ಆರಾಧನೆ: ಇಲ್ಲಿಯ ದತ್ತಾತ್ರೆಯ ಪರಂಪರೆಗೆ ಸೇರಿದ ಭವ್ಯವಾದ ಸದಾನಂದ ಮಠ ಪ್ರಸಿದ್ಧವಾದುದು.

ಜೈನ ಬಸದಿ-ಶಿಲ್ಪಗಳು: ಇಲ್ಲಿಯ ಒಂದು ಶಾಸನದಲ್ಲಿ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಜೀರ್ಣೋದ್ಧಾರಗೊಂಡ ಚಂದ್ರಪ್ರಭೇಂದ್ರಾಲಯದ ಉಲ್ಲೇಖವಿದೆ. ಹತ್ತನೆಯ ಶತಮಾನದ ಕೊನೆಯಲ್ಲಿದ್ದ ಅತ್ತಿಮಬ್ಬೆ ಇದನ್ನು ಜೀರ್ಣೋದ್ಧಾರ ಮಾಡಿದಳೆಂದು ಹೇಳಲಾಗಿದೆ. ಈ ಕಾಲದ ಜೈನಧರ್ಮದ ವಾಸ್ತು ಶಿಲ್ಪಾವಶೇಷಗಳು ಚದುರಿಹೋಗಿವೆ.

ಮುಸ್ಲಿಂ ಸ್ಮಾರಕಗಳು: ಫೀರ್ ಬಾಷಾ ಬಂಗಲೆ, ಶೇರ್ ಸವಾರ್ ಬಾತ್ ಸವಾಯ ದರ್ಗಾ, ಮಸೀದಿಗಳು (ಕೋಟೆ ಮತ್ತು ನಗರ), ಸಯ್ಯದ್ ಪೀರ್‌ಷಾ ದರ್ಗಾ, ಮದೀನ ಮಸೀದಿ, ಈದ್ಗಾ ಮೈದಾನ, ಬಾವಿ ಮತ್ತು ಅನೇಕ ಗೋರಿಗಳಿವೆ.

ಬೃಂದಾವನ: ಈ ನಗರದ ಗೋಸಾಯಿಗಲ್ಲಿಯಲ್ಲಿ ಗೋಸಾಯಿ ಮನೆತನಗಳಿದ್ದು ಆ ವಂಶಸ್ಥರ ಸಮಾಧಿ ಬೃಂದಾವನಗಳಿವೆ.

ನಗರದ ಗುಹೆಗಳು: ನಗರದಲ್ಲಿ ಪೊಲೀಸ್ ಸ್ಟೇಷನ್ ಸಮೀಪ ಲ್ಯಾಟರೈಟ್ ದಿಬ್ಬವಿದ್ದು ಅದರ ಪೂರ್ವಮುಖದಲ್ಲಿ ಸಾಲಾಗಿ ಸು. 12 ಗುಹೆಗಳನ್ನು ಕೊರೆಯಲಾಗಿದೆ. ಕೆಲವಕ್ಕೆ ಛತ್ತಿದೆ; ಉಳಿದವಕ್ಕೆ ಛತ್ತಿರುವುದಿಲ್ಲ. ಒಂದು ದೊಡ್ಡದು (ಐದನೆಯ ಗುಹೆಯಲ್ಲಿ) ಇಪ್ಪತ್ತು ಕಂಬಗಳು ನಾಲ್ಕು ಸಾಲುಗಳಲ್ಲಿವೆ. ಈ ಗುಹೆ 16ಮೀ ಉದ್ದ, 9ಮೀ ಅಗಲವಿದೆ. ಅದರ ಮುಂಭಾಗದಲ್ಲಿ ಛತ್ತಿನ ಮೇಲಿನ ಗೋಡೆಗೆ ಹೊಂದಿದಂತೆ ಭವ್ಯವಾದ ಆನೆಯನ್ನು ಕೊರೆಯಲಾಗಿತ್ತು. ಈಗ ಕೇವಲ ಅದರ ಕಾಲುಗಳು ಉಳಿದಿವೆ.

ಕೋಟೆ: ಹೊರ ಕೋಟೆ ಗೋಡೆಯ ಸುತ್ತಲೂ ಆಳವಾದ ಕಂದಕವಿದೆ. ಇಲ್ಲಿಯ ಕೋಟೆ ಮೂರು ಸುತ್ತಿನದು ಅನೇಕ ದ್ವಾರಗಳಿವೆ. ಕೋಟೆ ಗೋಡೆಗಳಿಗೆ ಹೊಂದಿಸಿ ಬುರುಜುಗಳಿವೆ. ಮುಖ್ಯ ದ್ವಾರದ ಪ್ರವೇಶಕ್ಕೆ ದಪ್ಪನೆಯ ಭವ್ಯವಾದ ಮರದ ಕದಗಳಿವೆ.



ಬಸವ ಕಲ್ಯಾಣದ ಕೋಟೆ

ಕೋಟೆಯ ಒಳಗಡೆ ಬರೂಹಖಾನ್ ಕಟ್ಟಡ, ಅಧಿಕಾರಿ–ಸೈನ್ಯದಳದವರ ಕಟ್ಟಡ, ಬಾವಿ, ಅರಮನೆ (ಈಗ ವಸ್ತುಸಂಗ್ರಹಾಲಯ), ದೇವಾಲಯ, ರಾಜ್‌ಮಹಲ್, ನೃತ್ಯಮಹಲ್, ರಂಗೀನ ಮಹಲ್, ಹೈದರ್‌ಮಹಲ್, ಚಿಲುಮೆ, ಫಿರಂಗಿ, ಗರಡಿಮನೆ, ಮಸೀದಿ ಮುಂತಾದ ಕಟ್ಟಡಗಳಿವೆ. ಕಲ್ಯಾಣ ಚಾಲುಕ್ಯರು ಈ ಕೋಟೆ–ಅರಮನೆಯನ್ನು ಸು. 1048ರಲ್ಲಿ ಕಟ್ಟಿದರು. ಎರಡು ಸಲ ಚೋಳರು 1048–1050ರಲ್ಲಿ ಈ ಕೋಟೆಗೆ ಬೆಂಕಿ ಹಚ್ಚಿ ಸುಟ್ಟರೆಂದು ಹೇಳಲಾಗಿದೆ. ಚಾಲುಕ್ಯರ ಕಾಲದಲ್ಲಿ ಈ ಕೋಟೆ ಅರಮನೆಗೆ ಉನ್ನತವರ್ಗದ ಮಂತ್ರಿ, ಅಧಿಕಾರಿಗಳನ್ನು ನೇಮಿಸಿದ್ದು ಶಾಸನಗಳಿಂದ ತಿಳಿಯುತ್ತದೆ. ಈ ಕೋಟೆ ತರುವಾಯ ಸೇವುಣ, ಕಾಕತೀಯ, ತುಗಲಕ್, ಬಹಮನಿ, ವಿಜಯನಗರ ಆದಿಲ್‌ಶಾಹಿ, ಮೊಗಲ್ ಮತ್ತು ನವಾಬರ ವಶದಲ್ಲಿದ್ದಿತು. ಈಗಿನ ಕೋಟೆಯನ್ನು 16–17ನೆಯ ಶತಮಾನದ ಕೊನೆಯ ಭಾಗದಲ್ಲಿ ಕಟ್ಟಲಾಗಿದೆ.

ಮುದ್ರಾವಣ: ಈ ಕೋಟೆಗೆ ಹೊಂದಿ ಒಂದು ದೊಡ್ಡ ಮುದ್ರಾವಣವಿತ್ತು. ಮುದ್ರಾವಣ ವೆಂದರೆ ಬಟ್ಟೆಗಳನ್ನು ಮಾರುವ ಸ್ಥಳವಿರಬೇಕು. ಈ ಮುದ್ರಾವಣದಲ್ಲಿ ಟಂಕಶಾಲೆ, ಸಿಂಪಿಗರ ಓಣಿ, ಹಾದಿಗಳು, ಮನೆಗಳು ಮತ್ತು ಬ್ರಹ್ಮ ದೇವಾಲಯವಿದ್ದವೆಂದು ಶಾಸನಗಳು ತಿಳಿಸುತ್ತವೆ. ಈ ಮುದ್ರಾವಣದಲ್ಲಿ ಘಳಿಸಾಸರು, ನಖರರು, ದೂಸಿಗರು, ರಾಜಶ್ರೇಷ್ಠಿ, ವಡ್ಡವ್ಯವಹಾರಿಗಳಿದ್ದರೆಂದೂ ತಿಳಿಯುತ್ತದೆ. ಕೋಟೆ, ಮುದ್ರಾವಣ, ಅರಮನೆ ಮತ್ತು ಕಲ್ಯಾಣದ ಪಟ್ಟಣ ಆಡಳಿತವನ್ನು ನೋಡಿಕೊಳ್ಳಲು ಉನ್ನತಮಟ್ಟದ ವಿವಿಧ ಮಂತ್ರಿ ಮತ್ತು ಅಧಿಕಾರಿಗಳಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.

ಶಿವಶರಣರ ತಾಣಗಳು: ಇಲ್ಲಿ ಶಿವಶರಣರು ಬಸವಣ್ಣನವರ ಮಾರ್ಗದರ್ಶನದಲ್ಲಿ ಈ ಅನುಭವ ಮಂಟಪವನ್ನು ಸ್ಥಾಪಿಸಿದರು. ದೇಶದ ಅನೇಕ ಭಾಗಗಳಿಂದ ಬಂದ ಜನರು ಈ ಪರಿವಾರದಲ್ಲಿ ಸೇರಿ ಮನುಕುಲದ ಉದ್ಧಾರಕ್ಕಾಗಿ ತಮ್ಮ ವಿಚಾರಗಳನ್ನು ಅನುಭವ ಮಂಟಪದಲ್ಲಿ ಚರ್ಚಿಸುತ್ತಿದ್ದರು. ಸರಳ ಕನ್ನಡದಲ್ಲಿ ಅವರು ರಚಿಸಿದ ವಚನಗಳು ಜನಸಾಮಾನ್ಯ ರಿಗೂ ತಲುಪಿದವು. ಅವುಗಳ ಸಾರದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ರಾಂತಿಯ ವಿಚಾರಗಳು ಮೂಡಿವೆ. ಈ ಶಿವಶರಣರು ಕಲ್ಯಾಣ ಪರಿಸರದಲ್ಲಿ ಗುಹೆಗಳಲ್ಲಿ ನೆಲಸಿದ ಪುರಾವೆಗಳಿವೆ. ಈ ಗುಹೆಗಳಲ್ಲಿ ನುಲಿಯ ಚಂದಯ್ಯನ ಗುಹೆ, ಅಕ್ಕ ನಾಗಮ್ಮನ ಗುಹೆ, ಅರಿವಿನ ಮನೆ, ಪರುಷ ಕಟ್ಟೆ, ಬಂದವರ ಓಣಿ, ಕಂಬಾಳಿಮಠ, ಬಸವಣ್ಣನ ದೇವಾಲಯ, ಅಂಬಿಗರ ಚೌಡಯ್ಯನ ಗುಹೆ, ಡೋಹರ ಕಕ್ಕಯ್ಯನ ಮಠ, ಉರಿಲಿಂಗ ಪೆದ್ದಿ ಮಠ, ಪ್ರಭುದೇವರ ಗದ್ದುಗೆ, ಅರುಹಿನ ಮನೆ, ಚನ್ನಬಸವಣ್ಣನ ಗುಹೆ, ಮಡಿವಾಳ ಮಾಚಯ್ಯನ ಮಂದಿರ, ಘನಲಿಂಗ ರುದ್ರಮುನಿ ಶಿವಚಾರ್ಯರ ಗುಹೆ, ಹರಳಯ್ಯನ ಗುಹೆ, ವಿಜ್ಞಾನೇಶ್ವರನ ಗುಹೆ, ಪಂಚಸೂತ್ರ ಗುಹೆ ಮುಖ್ಯವಾಗಿ ಕಾಣಿಸುತ್ತವೆ. ಬಸವಕಲ್ಯಾಣಕ್ಕೆ ಸಮೀಪದ ನಾರಾಯಣಪುರದಲ್ಲಿ ಬೋರಯ್ಯನ ಮಠ, ಮುದ್ದಯ್ಯನ ಪೀಠ ಮಠ, ಸಕಲೇಶಮಾದರಸ ಮಂದಿರ, ಮುಗ್ಧ ಸಂಗಯ್ಯನ ಸಮಾಧಿ, ಘಟ್ಟವಾಳಯ್ಯನ ದೇವಾಲಯಗಳಿವೆ. ಪಕ್ಕದ ಶಿವಪುರದಲ್ಲಿ ಸಂಗಯ್ಯನ ಗುಹೆ, ಉಲ್ಲಾಳದ ಬೊಮ್ಮಯ್ಯನ ಮಂದಿರ ಬೇಲೂರಿನ ಶರಣರ ಗುಹೆ, ಮೋಳಿಗೆಯ ಮೋಳಿಗೆ ಮಾರಯ್ಯನ ಗುಹೆಗಳು ಪ್ರಸಿದ್ಧವಾಗಿವೆ. ಕಲ್ಯಾಣದಲ್ಲಿ 101 ವೀರಶೈವರ ಮಠಗಳು ಈ ಶರಣರ ಕಾಲದಲ್ಲಿದ್ದವೆಂದು ಪ್ರತೀತಿ. ಈಗ ಇಲ್ಲಿ ಕಟ್ಟಿಗಿಮಠ, ಗಚ್ಚಿನಮಠ, ಹುಲುಕುಂಟ ಮಠ, ಗುಂಡಯ್ಯನ ಮಠ, ಚೌಕಿಮಠ, ರಾಚಯ್ಯನ ಮಠ ಮುಂತಾದ ಮಠಗಳು ಉಳಿದುಕೊಂಡಿವೆ.

ದತ್ತಾತ್ರೇಯ ದೇವಾಲಯ, ವಿಠೋಬ ದೇವಾಲಯ, ವಿಠಲೇಶ್ವರ ಮಂದಿರ, ಮಾಣಿಕ ಪ್ರಭು ದೇವಾಲಯ, ಬಾಲಾಜಿ ಮಂದಿರ, ಮಾರುತಿ ಮಂದಿರ, ಮಹಾದೇವ ದೇವಾಲಯ, ಭವಾನಿ ಮಂದಿರ, ಶಿವರಾಂ ಮಹಾರಾಜ ಮಠ, ಶಿವಲಿಂಗ ಗಾಡಿಮಠ, ಶಿವಲಿಂಗಯ್ಯ ಮಠ, ಗದ್ಗಿ ಮಠ, ಶಾನಭೋಗ ಮಠ ಇತ್ಯಾದಿ. (ಆರ್.ಎಮ್.ಎಸ್.)

**ಬಸವಣ್ಣ:** 12ನೆಯ ಶತಮಾನದಲ್ಲಿದ್ದ ಶಿವಶರಣ, ಪ್ರಸಿದ್ಧ ವಚನಕಾರ, ಕರ್ನಾಟಕದಲ್ಲಿ ನಡೆದ ಧಾರ್ಮಿಕ ಸಾಮಾಜಿಕ ಮಹಾಕ್ರಾಂತಿಯೊಂದರ ನೇತಾರ. ಬಿಜಾಪುರ ಜಿಲ್ಲೆಯ ಬಾಗೇವಾಡಿ ಎಂಬಲ್ಲಿ ಮಾದರಸ ಹಾಗೂ ಮಾದಲಾಂಬಿಕೆ ಎಂಬ ಶೈವ ಬ್ರಾಹ್ಮಣ ದಂಪತಿಗಳ ಮಗನಾಗಿ ಜನಿಸಿದರು. ಆ ದಂಪತಿಗಳಿಗೆ ಬಹುಕಾಲ ಮಕ್ಕಳಾಗದ ಕಾರಣ ದೀರ್ಘಕಾಲದ ವೃಷಭನ ಪೂಜೆಯಿಂದ ಹುಟ್ಟಿದ ಮಗುವಿಗೆ ಬಸವ ಎಂದು ಹೆಸರಿಟ್ಟರೆಂದು ಪ್ರತೀತಿ.

ಬಸವಣ್ಣನವರ ಬಾಲ್ಯ ಜೀವನ ಕುತೂಹಲಕಾರಿಯಾದುದು. ಎಂಟು ವರ್ಷದ ಬಾಲಕರಾಗಿದ್ದಾಗಲೇ ಅವರ ಉಪನಯನದ ಸಂದರ್ಭದಲ್ಲಿ ಧಾರ್ಮಿಕ ವಿಚಾರಗಳನ್ನು ಒರೆಗಲ್ಲಿಗೆ ಹಚ್ಚುವ ಪ್ರೌಢ ವಿಚಾರಸರಣಿ ಗೋಚರವಾಯಿತು. ಬಸವಣ್ಣನವರು ಆ ವಯಸ್ಸಿನಲ್ಲಿ ನಡೆಯಬೇಕಾಗಿದ್ದ ಉಪನಯನವನ್ನು ಒಪ್ಪದೆ ಅದನ್ನು ತಿರಸ್ಕರಿಸಿ ನಡೆದರೆಂದು ಕೆಲವು ಪುರಾಣ ಕೃತಿಗಳು ತಿಳಿಸಿದರೆ, ಮೊದಲು ಉಪನಯನವಾಯಿತೆಂದು, ಕೆಲವು ಕಾಲದ ಅನಂತರ ಯಜ್ಞೋಪವೀತವನ್ನು ಕಿತ್ತು ಹಾಕಿದನೆಂದು ಕವಿ ಹರಿಹರ ಹೇಳುತ್ತಾನೆ. ಅದೇನೆ ಇರಲಿ ವೈದಿಕ ಧರ್ಮ ಚತುರ್ವರ್ಣದ ವಿಭಜನೆಯನ್ನು ಅದರಿಂದ ಸಮಾಜದಲ್ಲಿ ಉಂಟಾದ ಮೇಲು ಕೀಳುಗಳನ್ನು ಇವರು ಒಪ್ಪಿಕೊಳ್ಳಲಾರದೆ ಹೋದರೆಂಬುದು ಸತ್ಯ ಸಂಗತಿ. ಈ ಘಟನೆ ನಡೆದ ಅನಂತರ ಬಸವಣ್ಣನವರು ಹುಟ್ಟೂರನ್ನು ಬಿಟ್ಟು ಸಂಗಮ ಕ್ಷೇತ್ರಕ್ಕೆ ಹೊರಟು ಹೋದರು. ಆ ಸಂದರ್ಭದಲ್ಲಿ ತಮ್ಮನ್ನು ಬಿಟ್ಟಿರಲಾರದ ಅಕ್ಕ ನಾಗಮ್ಮನೂ ಬಸವಣ್ಣನನ್ನು ಹಿಂಬಾಲಿಸಿದಳು. ಆ ವೇಳೆಗೆ ಆಕೆಗೆ ಮದುವೆಯಾಗಿದ್ದ ಅವಳ ಪತಿ ಶಿವಸ್ವಾಮಿ ಬಹುಶ: ಸಂಗಮದವನೇ ಆಗಿದ್ದಂತೆ ತೋರುತ್ತದೆ. ಆ ಕಾಲದಲ್ಲಿ ಸಂಗಮ ಕ್ಷೇತ್ರ ಪ್ರಸಿದ್ಧ ಅಗ್ರಹಾರವಾಗಿತ್ತು. ಅದರ ಸ್ಥಾನಪತಿಗಳಾದ ಲಾಕುಲಿಶ ಈಶಾನ್ಯ ಶೈವಗುರು ಜಾತಿವೇದಮುನಿ ಅಥವಾ ಈಶಾನ್ಯ ಗುರುಗಳು ಸಂಗಮೇಶ್ವರ ಸ್ವಾಮಿಗಳೆಂದು ಪ್ರಸಿದ್ಧರಾಗಿದ್ದರು.

ಬಸವಣ್ಣನವರು ಕೂಡಲ ಸಂಗಮ ಕ್ಷೇತ್ರದಲ್ಲಿ ಹತ್ತು ಹನ್ನೆರಡು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದರು. ಕೃಷ್ಣ ಮಲಾಪಹಾರಿ ನದಿಗಳ ಸುಂದರ ಸಂಗಮದಲ್ಲಿ ಇವರ ಹೃದಯ ಭಾವನೆಗಳಿಗೆ ಅನುಭವದ ಶ್ರೀಮಂತಿಕೆ ದೊರೆಯಿತು. ಸಂಗಮೇಶ್ವರ ಗುರುಗಳು ಇವರ ವೈಚಾರಿಕ ಬೆಳವಣಿಗೆಗಳಿಗೆ ಗೊಬ್ಬರ ಹಾಕಿ ಅದು ತಿರುಗಬೇಕಾದ ದಿಕ್ಕನ್ನು ನಿರ್ದೇಶಿಸಿದರು.

ಮಂಗಳವಾಡದಲ್ಲಿ ಕಳಚೂರಿ ಬಿಜ್ಜಳನ ಬಳಿಯಲ್ಲಿ ಭಂಡಾರಿಯಾಗಿದ್ದ ಇವರ ಸೋದರ ಮಾವನಾಗಿದ್ದ ಬಲದೇವ ತನ್ನ ಒಬ್ಬಳೇ ಮಗಳು ಗಂಗಾಂಬಿಕೆಯನ್ನು ಬಸವಣ್ಣನ ವರಿಗೆ ಮದುವೆ ಮಾಡಿ ಕೊಡಲು ಪ್ರಯತ್ನಿಸಿದರು. ಇವರ ಜೀವನದಲ್ಲೊಂದು ತಿರುಗು ಘಟ್ಟವಾಯಿತೆನ್ನಬೇಕು. ಬಹುಶ: ಗುರುಗಳೇ ಬಸವಣ್ಣನವರನ್ನು ಮದುವೆಗೆ ಒಪ್ಪಿಸಿ ಸಂಗಮದಿಂದ ಮಂಗಳವಾಡಕ್ಕೆ ಕಳುಹಿಸಲು ಕಾರಣವಾಗಿರಬೇಕು. ಬಸವಣ್ಣನವರ ಜೊತೆ ಶಿವಸ್ವಾಮಿ ನಾಗಮ್ಮನವರೂ ಹೊರಟುಬಂದಂತೆ ತೋರುತ್ತದೆ. ಆ ವೇಳೆಗಾಗಲೆ ಅವರಿಗೆ ಚೆನ್ನಬಸವಣ್ಣನೆಂಬ ಮಗ ಹುಟ್ಟಿದ್ದ. ಆತ ಹತ್ತು ವರ್ಷ ಬಾಲಕ ಆತನೂ ತನ್ನ ತಂದೆ ತಾಯಿಗಳ ಜೊತೆ ಬಸವಣ್ಣನವರನ್ನು ಹಿಂಬಾಲಿಸಿರಬೇಕೆಂದು ತೋರುತ್ತದೆ.

ಬಸವಣ್ಣನವರು ಮಂಗಳವಾಡಕ್ಕೆ ಬಂದ ಮೇಲೆ ಗಂಗಾಂಬಿಕೆಯ ಜೊತೆಗೆ ನೀಲಾಂಬಿಕೆ ಯನ್ನು ಮದುವೆಯಾದರು. ನೀಲಾಂಬಿಕೆ ಬಹುಶಃ ಸಿದ್ಧರಸನ ಮಗಳಾಗಿದ್ದು ಚಿಕ್ಕಂದಿನಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡು ಬಿಜ್ಜಳನ ಆಶ್ರಯದಲ್ಲಿ ಬೆಳೆದು ಆತನ ಸಾಕು ತಂಗಿಯಾಗಿರಬೇಕೆಂಬುದು ವಿದ್ವಾಂಸ ಅಭಿಪ್ರಾಯ. ಗಂಗಾಂಬಿಕೆ, ನೀಲಾಂಬಿಕೆಯರು ಅಗಲಲಾರದ ಆತ್ಮೀಯ ಸೋದರಿಯರಾಗಿ ಬೆಳೆದಿದ್ದರು. ಬಸವಣ್ಣನವರು ಬಹುಶಃ ಈ ಕಾರಣಕ್ಕಾಗಿ ನೀಲಾಂಬಿಕೆಯನ್ನು ಮದುವೆಯಾಗಬೇಕಾಗಿ ಬಂದಿರಬೇಕು. ಆದರೆ ಅದಕ್ಕೆ ಸ್ಪಷ್ಟ ಕಾರಣ ತಿಳಿಯದು.

ಬಿಜ್ಜಳನ ಭಂಡಾರದಲ್ಲಿ ಬಸವಣ್ಣನವರಿಗೆ ಒಂದು ಕೆಲಸವೂ ದೊರೆಯಿತು. ದುಡಿಯದೇ ತಿನ್ನುವ ಹಕ್ಕಿಲ್ಲವೆಂಬುದನ್ನು ನಿಶ್ಚಿತವಾಗಿ ನಂಬಿದ್ದ ಇವರು ರಾಜಾಸ್ಥಾನದಲ್ಲಿ ಕೆಲಸವನ್ನು ಒಪ್ಪಿಕೊಳ್ಳಲು ಹಿಂದೆ ಮುಂದೆ ನೋಡಲಿಲ್ಲ. ಮುಂದೆ ಸ್ವಲ್ಪ ಕಾಲದಲ್ಲಿಯೇ ಬಲದೇವ ದೈವಾಧೀನನಾಗಲು ಆಸ್ಥಾನಕ್ಕೆ ಬಸವಣ್ಣನವರನ್ನೇ ರಾಜ್ಯದ ಭಂಡಾರಿಯಾಗಿ ಬಿಜ್ಜಳ ನೇಮಿಸಿದ. ಹೀಗೆ ರಾಜ್ಯದ ಭಂಡಾರಿಯಾದುದರ ಸಾಧನೆಯೂ ಬೆಳೆಯುತ್ತಾ ಭಕ್ತ ಭಂಡಾರಿಯೂ ಆಗಿ ಪರಿಣಮಿಸಿದರು. ತಮ್ಮ ಜೊತೆಗೆ ಇವರ ಆಂತರಿಕ ಆಧ್ಯಾತ್ಮಿಕ

ದೃಷ್ಟಿಯ ಕ್ರಾಂತಿಕಾರಕ ಭಾವನೆಗಳನ್ನು ಸಮಾಜದ ಮೇಲೂ ಬೀರತೊಡಗಿದರು. ವ್ಯಕ್ತಿಯ ಯೋಗ್ಯತೆಯನ್ನು ಹುಟ್ಟಿನಿಂದಲೇ ಅಳೆಯುವುದನ್ನು ತೊಡೆದುಹಾಕಿ ಗುಣದಿಂದ ಯೋಗ್ಯತೆಯನ್ನು ನಿರ್ಧರಿಸಬೇಕೆಂದು ಮನಮುಟ್ಟುವಂತೆ ಸಾರಿದರು.

ಈ ವೇಳೆಗೆ ಬಹುಶಃ ಬಸವಣ್ಣನವರು ಮಂಗಳವಾಡಕ್ಕೆ ಬಂದ ಒಂದೆರಡು ವರ್ಷಗಳಲ್ಲಿಯೇ ಅಂದಿನ ರಾಜಕೀಯ ಬದಲಾವಣೆ ತಲೆದೋರಿತು. 3ನೆಯ ಸೋಮೇಶ್ವರನ ಕಾಲಾನಂತರ ಚಾಳುಕ್ಯರು ದುರ್ಬಲರಾದರು. ಅವರ ಸಾಮಂತರಾಗಿದ್ದ ಬಿಜ್ಜಳ ಚಾಳುಕ್ಯ ಚಕ್ರವರ್ತಿ ತೈಲಪನನ್ನು ತಳ್ಳಿ ತಾನೇ ಸಿಂಹಾಸನವನ್ನೇರಿದ ಅನಂತರ ಆತ ಮಂಗಳವಾಡದಿಂದ ಕಲ್ಯಾಣಕ್ಕೆ ಬರಬೇಕಾಯಿತು. ತನ್ನ ವಿಶ್ವಾಸದಿಂದ ಬಂಧಿಸಿ ಬಸವಣ್ಣನವರನ್ನು ಕಲ್ಯಾಣಕ್ಕೆ ಬರುವಂತೆ ಮಾಡಿ ಇಡೀ ರಾಜ್ಯದ ಮಹಾಭಂಡಾರಿಯನ್ನಾಗಿ ಇವರನ್ನು ನೇಮಿಸಿದ. ಇದರಿಂದ ಬಸವಣ್ಣನವರ ಅಧಿಕಾರ ಕ್ಷೇತ್ರ ಹಾಗೂ ಧಾರ್ಮಿಕ ಕ್ಷೇತ್ರ ವ್ಯಾಪಕವಾದವು.

ಸು.12 ವರ್ಷಗಳ ಕಾಲ ಕಲ್ಯಾಣ ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಈ ಅಲ್ಪಾವಧಿಯಲ್ಲಿ ಇವರು ಸಾಧಿಸಿದ ಪರಿಣಾಮ, ಜನಜೀವನದ ಮೇಲೆ ಬೀರಿದ ಪ್ರಭಾವ ಅದ್ವಿತೀಯವಾದುದು. ಬಸವಣ್ಣನವರು ಇಡೀ ಯುಗವನ್ನು ಎಚ್ಚರಿಸಿದ ಯುಗ ಪ್ರವರ್ತಕ ಶಕ್ತಿಯಾಗಿ ಪರಿಣಮಿಸಿದರು. ಧರ್ಮ ಸಾರ್ವತ್ರಿಕ ಶಕ್ತಿಯಾಗಿ ಸಮಷ್ಟಿ ಮನಸ್ಸನ್ನು ಮುಟ್ಟಿತು. ಆ ಯುಗದ ಮಹಾ ವ್ಯಕ್ತಿಗಳೆಲ್ಲರನ್ನೂ ಬಸವಣ್ಣನವರ ವ್ಯಕ್ತಿತ್ವ ಕಲ್ಯಾಣದತ್ತ ಆಕರ್ಷಿಸಿತು. ಚುಂಬಕ ಗಾಳಿಯಂತೆ ಅಸಂಖ್ಯಾತ ಸಾಧಕರನ್ನು, ಶರಣರನ್ನು ಸೆಳೆಯಿತು. ಅವರೆಲ್ಲರನ್ನು ಅನುಭವಮಂಟಪದಲ್ಲಿ ಸಮಾವೇಶಗೊಳಿಸಿ ಅವರ ವಿಚಾರ ಮಂಥನದಿಂದ ಬಸವಣ್ಣನವರು ಧಾರ್ಮಿಕ ನವನೀತಿಯನ್ನು ತೆಗೆದರು. ಅಲ್ಲಮಪ್ರಭುವಿನಂತಹ ಮಹಾಮೇರು ಸದೃಶ ವ್ಯಕ್ತಿಗಳು ಬಸವಣ್ಣನವರ ವ್ಯಕ್ತಿತ್ವಕ್ಕೆ ಮಾರುಹೋಗಿ ಕಲ್ಯಾಣರಲ್ಲಿ ಕೆಲವು ಕಾಲ ಅನುಭವ ಮಂಟಪವನ್ನು ನಿರ್ದೇಶಿಸಿದರು.

ಹೀಗಿರುವಲ್ಲಿ ಬಸವಣ್ಣನವರ ಕ್ರಾಂತಿಕಾರಕ ಭಾವನೆಗಳು ವೈದಿಕತೆಯನ್ನು ಕೆರಳಿಸಿದುವು. ಇವರನ್ನು ಪದಚ್ಯುತಿಗೊಳಿಸಲು ಆಗದವರು ಹವಣಿಸಿದರು. ಬಸವಣ್ಣನವರು ರಾಜ್ಯ ಭಂಡಾರದ ಹಣವನ್ನು ದುರ್ವಿನಿಯೋಗ ಮಾಡಿ ದಾಸೋಹ ನಡೆಸುತ್ತಿರುವರೆಂದು ಬಿಜ್ಜಳನ ಬಳಿಯಲ್ಲಿ ದೂರಿದರು. ಇನ್ನೂ ಅನೇಕ ಆರೋಪಗಳನ್ನು ಇವರ ಮೇಲೆ ಹೊರಿಸಿದರು. ಅವೆಲ್ಲ ವ್ಯರ್ಥವಾದವು. ಆದರೆ ಅಸ್ಪೃಶ್ಯರ ಹರಳಯ್ಯನವರ ಮಗನಿಗೂ ಬ್ರಾಹ್ಮಣ ಮಧುವರಸನ ಮಗಳಿಗೂ ವಿವಾಹವನ್ನು ಮಾಡಿದಾಗ ಅದನ್ನು ವೈದಿಕ ಸಮಾಜ ಅರಗಿಸಿಕೊಳ್ಳಲಾರದೇ ಹೋಯಿತು. ವರ್ಣಸಂಕರವಾಯಿತೆಂದು ಹುಯ್ಲೆಬ್ಬಿಸಿದರು. ಇವ ರೊಡನೆ ರಾಜಕೀಯ ಪಿತೂರಿಯೂ ಸೇರಿ ಹರಳಯ್ಯ, ಮಧುವರಸರಿಗೆ ಬಿಜ್ಜಳ ಮರಣ ದಂಡನೆ ವಿಧಿಸುವಂತಾಯಿತು. ಅದಾದ ಸ್ವಲ್ಪ ಕಾಲದಲ್ಲಿಯೇ ಬಿಜ್ಜಳನ ಕೊಲೆಯೂ ಆಯಿತು. ಈ ಅಪರಾಧವನ್ನು ಶರಣರ ತಲೆಯ ಮೇಲೆ ಹಾಕುವ ಕುಟಿಲ ರಾಜಕೀಯವೂ ನಡೆಯಿತು. ಇದರಿಂದಾಗಿ ಕಲ್ಯಾಣದಲ್ಲಿ ಬಸವಣ್ಣನವರ ಕಾರ್ಯ ಚಟುವಟಿಕೆ ಧ್ವಂಸ ಗೊಂಡಿತು. ಬೇಸರಗೊಂಡು ಕಲ್ಯಾಣವನ್ನು ಬಿಟ್ಟು ಕೂಡಲ ಸಂಗಮ ಕ್ಷೇತ್ರಕ್ಕೆ ತೆರಳಿದ ಬಸವಣ್ಣನವರು ಅಲ್ಲೇ ಐಕ್ಯವಾದರು. ಈ ಘಟನೆ 1167–68ರಲ್ಲಿ ಸಂಭವಿಸಿರಬೇಕೆಂದು ವಿದ್ವಾಂಸರು ನಿರ್ಧರಿಸಿದ್ದಾರೆ.

ಇದು ಒಂದು ರೀತಿಯಲ್ಲಿ ಬಸವಣ್ಣನವರ ಜೀವನಕಥೆಯ ರೂಪರೇಷೆ; ಲೌಕಿಕರ ಅಧಿಕಾರದಲ್ಲಿದ್ದು ಆಂತರಿಕವಾಗಿ ಮಹಾನುಭವಿಯಾದರು. ಇವರ ವಚನಗಳಲ್ಲಿ ಅದರ ಉಜ್ವಲವಾದ ಚಿತ್ರಣ ಮೂಡಿ ಬಂದಿದೆ. ತ್ರಿವಿಧ ದಾಸೋಹದಿಂದ ಷಟ್‌ಸ್ಥಲದ ನಿಚ್ಚಣಿಕೆಯನ್ನೇರಿ ಅಂಗಾಂಗ ಸಾಮರಸ್ಯದ ನಿಲುವಿಗೊಂದುದನ್ನು ಅಲ್ಲಿ ಕಾಣಬಹುದು. ಅಂತೆಯೇ ಸಾಮಾಜಿಕ ಮತ್ತು ಧಾರ್ಮಿಕವಾದ ಇವರ ವಿಚಾರಧಾರೆಗಳು ಕಾಲದೇಶಗಳ ಹಂಗನ್ನು ಹರಿದು ಎಲ್ಲ ದೇಶ ಕಾಲಗಳಿಗೂ ಮಾನ್ಯವಾಗಿ ನಿಲ್ಲಬಲ್ಲ ಸಾರ್ವತ್ರಿಕತೆಯನ್ನು, ಜೀವಂತಿಕೆಯನ್ನು ಪಡೆದಿವೆ.

ಬಸವಣ್ಣನವರು ಕವಿ ಹೃದಯವುಳ್ಳ ವಚನಕಾರರು. ಇವರ ವಚನಗಳಲ್ಲಿ ಭಾವಗೀತೆಯ ತೀವ್ರತೆ ಹಾಗೂ ಮಧುರತೆಗಳು ಕಂಡುಬರುತ್ತವೆ. ಇದುವರೆಗೆ ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಇವರ ವಚನಗಳು ದೊರೆತಿವೆ. ಕೂಡಲ ಸಂಗಮ ದೇವ ಎಂಬುದು ಇವರ ವಚನಗಳ ಅಂಕಿತ. ಈ ವಚನಗಳು ಬಸವಣ್ಣನವರ ಸಾಮಾಜಿಕ ಹಾಗೂ ಧಾರ್ಮಿಕ ಜೀವನದ ಬಹುಮುಖ ಅನುಭವಗಳ ಮೇಲೆ ಬೆಳಕು ಚೆಲ್ಲುತ್ತವೆಯಲ್ಲದೆ ಇವರ ಜೀವನ ದೃಷ್ಟಿಯನ್ನು ಪ್ರತಿಪಾದಿಸುತ್ತವೆ. ಬಸವಣ್ಣನವರ ಮೂಲ ಉದ್ದೇಶ ಸಾಹಿತ್ಯ ರಚನೆಯಲ್ಲದಿದ್ದರೂ ಇವರ ವಚನಗಳು ಉತ್ತಮ ಕಾವ್ಯದ ಎಲ್ಲ ಅಂಶಗಳನ್ನು ಒಳಗೊಂಡಿವೆ. ತಾನು ಹೇಳಬೇಕೆಂದು ಯೋಚಿಸಿದ ವಿಷಯವನ್ನು ಸರಳಭಾಷೆಯಲ್ಲಿ ನೇರವಾಗಿ ಸಮಯೋಚಿತ ದೃಷ್ಟಾಂತಗಳ ಹೋಲಿಕೆಗಳ ಮೂಲಕ ಮನಮುಟ್ಟುವಂತೆ ಹೇಳುವರು. ಇವರ ಯಾವ ವಚನದಲ್ಲಿಯೂ ಭಾಷೆಯ ಅಬ್ಬರವಾಗಲೀ ಭಾವದ ಕ್ಲಿಷ್ಟ ಹಾಗೂ ಸಂದಿಗ್ಧ ಅಭಿವ್ಯಕ್ತಿಯಾಗಲೀ ಕಂಡುಬರುವುದಿಲ್ಲ. ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು ಎಂಬ ಬಸವಣ್ಣನವರ ಮಾತು ಅವರ ವಚನಗಳಿಗೆ ಸಂಪೂರ್ಣ ಅನ್ವಯವಾಗುತ್ತದೆ. ಬಸವಣ್ಣನವರ ವಚನಗಳಲ್ಲಿ ಸೂಕ್ಷ್ಮವಾಗಿ ಗುರುತಿಸುವ ಇನ್ನೊಂದು ಅಂಶವೆಂದರೆ ಸಮಸ್ಯೆಯ ಸುಳಿಗೆ ಸಿಲುಕಿದ ಸಾಧಕನೊಬ್ಬನ ಮನಸ್ಸಿನ ಅಂತರಂಗದ ತಳಮಳವನ್ನು ಚಂಚಲ ಸ್ವರೂಪವನ್ನು ಪರಿಣಾಮಕಾರಿಯಾಗಿ ಚಿತ್ರಿಸಿರುವ ವಿನಮ್ರ ರೀತಿ. ಇವರ ಸ್ವವಿಮರ್ಶೆಯ ವಚನಗಳಲ್ಲಿ ಈ ಅಂಶ ಘನೀಭವಿಸಿದೆ–ಎನ್ನುವ ಚಿತ್ರ ಅತ್ತಿಯ ಹಣ್ಣು ನೋಡಯ್ಯ; ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆನ್ನ ಬಾಳುವೆ; ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯ; ಓತಿ ಬೇಲಿ ಏರಿದಂತೆ ಎನ್ನ ಮನವಯ್ಯ– ಈ ಮುಂತಾದ ವಚನಗಳು ಶುದ್ಧ ಭಾವಗೀತೆಯ ಸತ್ವವನ್ನೆ ಒಳಗೊಂಡಿವೆ.

ಇಹಲೋಕದ ಜೀವನವನ್ನು ಸಾಧನೆಯ ಮಾರ್ಗಕ್ಕೆ ಅಳವಡಿಸಿಕೊಳ್ಳುವುದೇ ಬಸವಣ್ಣನವರು ಬೋಧಿಸಿದ ಮುಖ್ಯ ತತ್ತ್ವ. ಅದಕ್ಕೆ ಜಾತಿ ಮತ ಉದ್ಯೋಗ ವಯಸ್ಸು ಯಾವುದೂ ಅಡ್ಡಿಯಾಗಲಾರದು. ಇಂಥ ನೈತಿಕ ಜೀವನವನ್ನು ಸಮಾಜಕ್ಕೆ ಸಮತೆಯನ್ನು ಸಾಧಿಸುವ ಸಾಹಸ ಇವರದು. ಕೊಲ್ಲುವವನೇ ಮಾದಿಗ, ಹೊಲಸು ತಿನ್ನುವವನೇ ಹೊಲೆಯ. ಕುಲವೇನೋ ಅವಂದಿರ ಕುಲವೇನೋ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲ ಸಂಗಮ ಶರಣರೆಲ್ಲ ಕುಲಜರು–ಎಂದು ಹೇಳಿದುದು ಮಾತ್ರವಲ್ಲ ಅದನ್ನು ಅಕ್ಷರಶಃ ಆಚರಣೆಗೂ ತಂದರು. ಹರಳಯ್ಯ ಮಧುವಯ್ಯ ಡೋಹರ ಕಕ್ಕಯ್ಯ, ಶಿವನಾಗವಯ್ಯ ಮೊದಲಾದ ಅಸ್ಪೃಶ್ಯರು ಬಸವ ತತ್ತ್ವದ ಆಶ್ರಯವನ್ನು ಪಡೆದು ಶರಣರಾದರು.

ಇಹಲೋಕದ ಜೀವನವನ್ನು ಸಾಧನೆಯ ಸನ್ಮಾರ್ಗಕ್ಕೆ ಅಳವಡಿಸಿಕೊಳ್ಳುವುದೇ ಬಸವಣ್ಣನವರು ಬೋಧಿಸಿದ ಮುಖ್ಯ ತತ್ತ್ವ. ಬಸವಣ್ಣನವರ ಕಾಯಕದ ಕಲ್ಪನೆ ಸಮಗ್ರ ಜೀವನ ದರ್ಶನವನ್ನು ಒಳಗೊಳ್ಳುತ್ತದೆ. ವ್ಯಕ್ತಿ ಕೈಗೊಂಡ ಉದ್ಯೋಗ ಸಮಾಜದ ಆವಶ್ಯಕತೆಗಳನ್ನು ಪೂರೈಸುವಂತಿರಬೇಕು. ಅದರ ಫಲ ತನಗೆ ಮಾತ್ರವೇ ಅಲ್ಲದೆ ಸಮಾಜಕ್ಕೂ ದೊರೆಯಬೇಕು. ಆಗ ಸ್ವಾರ್ಥ ಅಳಿದು ವಿಶ್ವ ಶಕ್ತಿ ಅಂತರಂಗದೊಳಗೆ ಇಳಿದು ಬರಲು ಸಹಾಯಕವಾಗುತ್ತದೆ. ಶರಣ ಪ್ರೇರಿತ ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಉದ್ಯೋಗ ಗಳನ್ನು ಮಾಡಲೇಬೇಕು. ಅಲ್ಲದೆ ಈ ಕಾರ್ಯತತ್ತ್ವದ ಇನ್ನೊಂದು ಮುಖ್ಯವಾದ ಅಂಶವೆಂದರೆ ಅಂದಂದಿನ ಕಾಯಕ ಅಂದಂದು ಮಾಡಿ ಶುದ್ಧರಾಗಬೇಕು. ಅಂದರೆ ತನಗೆ ಅಗತ್ಯವಾದುದಕ್ಕಿಂತ ಹೆಚ್ಚಾಗಿ ಶೇಖರಿಸಿಕೊಳ್ಳಬಾರದು. ಇದು ಸಮಾಜೋ–ಧಾರ್ಮಿಕ ತಳಹದಿಯಾಗಿ ಸ್ತ್ರೀ ಪುರುಷರೆಂಬ ಭೇದವನ್ನು ಅಳಿಸಿ ಹಾಕಿತು. ಅಕ್ಕಮಹಾದೇವಿ, ಲಕ್ಕಮ್ಮ, ಲಿಂಗಮ್ಮ, ಗಂಗಾಂಬಿಕೆ, ನೀಲಾಂಬಿಕೆ ಮೊದಲಾದ ಶರಣೆಯರು ಇದಕ್ಕೆ ಉಜ್ವಲ ಸಾಕ್ಷಿಯಾಗಿದ್ದಾರೆ.

ಬಸವಣ್ಣನವರ ಧಾರ್ಮಿಕ ಆಚರಣೆಯ ಇನ್ನೊಂದು ಮುಖ್ಯವಾದ ಅಂಶವೆಂದರೆ ಅವರವರ ಪೂಜೆಯನ್ನು ಅವರವರೇ ಮಾಡಬೇಕು. ಅವರ ಉದ್ಧಾರವನ್ನು ಅವರೇ ಕಂಡುಕೊಳ್ಳಬೇಕು ಎಂಬುದು. ತನ್ನ ಪರವಾಗಿ ಇನ್ನಾರೋ ಪೂಜೆಯನ್ನು ಮಾಡುವರು ಧಾರ್ಮಿಕ ಶೋಷಣೆಗೆ ಕಾರಣವಾಗುತ್ತದೆ. ತಾನುಂಬ ಊಟವನು ತನ್ನಾಶ್ರಯದ ರತಿಸುಖವನು ಬೇರೆ ಮತ್ತೊಬ್ಬರ ಕೈಯಿಂದ ಮಾಡಿಸುವರೆ? ಎಂಬ ಸಾದೃಶ್ಯದಿಂದ ಬಸವಣ್ಣನವರು ಕಟುವಾಗಿ ಅದನ್ನು ನಿರಾಕರಿಸಿದರು. ಹಾಗೆಯೆ ಪ್ರಾಣಿವಧೆಗೆ ಕಾರಣವಾದ ಯಜ್ಞ ಯಾಗಾದಿಗಳನ್ನು, ಕರ್ಮವಾದವನ್ನು ಅಂಧಶ್ರದ್ಧೆಯನ್ನು ಖಂಡಿಸಿದ್ದಾರೆ.

ಇವರ ಕೆಲವು ವಚನಗಳಲ್ಲಿ ಸಾಮಾಜಿಕ ವಿಡಂಬನೆ ಮೊನಚಾಗಿ ಬಂದಿದೆ. ಶ್ರೀಮಂತಿಕೆ ಮದವೇರಿದ ಲೋಲುಪರನ್ನು ಕುರಿತು ಹೇಳಿರುವ ವಚನ:

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಹೋಗಲು
ಒಡನೆ ನುಡಿವರು ಕೂಡಲಸಂಗಮದೇವ

ನೂರೆಂಟು ದೇವರುಗಳನ್ನು ಪೂಜಿಸುವ ಅವಿವೇಕಿಗಳನ್ನು ಕುರಿತು ಹೇಳಿರುವ ವಚನ:

ಮಡಿಕೆ ದೈವ ಮೊರ ದೈವ ಬೀದಿಯ ಕಲ್ಲು ದೈವ
ಹಣಿಗೆ ದೈವ ಬಿಲ್ಲನಾರಿ ದೈವ ಕಾಣಿರೋ
ಕೊಳಗ ದೈವ ಗಿಣಿಲು ದೈವ ಕಾಣಿರೋ
ದೈವ ದೈವವೆಂದು ಕಾಲಿಡಲಿಂಬಿಲ್ಲ
ದೈವನೊಬ್ಬನೇ ಕೂಡಲಸಂಗಮದೇವ

ಬಸವಣ್ಣನವರ ವೈಚಾರಿಕ ದೃಷ್ಟಿಕೋನ ಬೌದ್ಧಿಕ ವಿಕಾಸಕ್ಕೆ, ಧಾರ್ಮಿಕ ಸ್ವಾತಂತ್ರ್ಯಕ್ಕೆ, ಆಧ್ಯಾತ್ಮ ಸಾಧನೆಗೆ ತಳಹದಿಯಾಗಿದೆ. ಕನ್ನಡ ಭಾಷೆ ಒಂದು ಅಪೂರ್ವವಾದ ಶಕ್ತಿಯನ್ನು, ಶ್ರೀಮಂತಿಕೆಯನ್ನು ಇವರ ವಚನಗಳಿಂದ ಪಡೆಯಿತು. ಇವರ ಮಾತು ಮಾಣಿಕ್ಯದ ದೀಪ್ತಿಯಾಯಿತು, ನುಡಿದುದೆಲ್ಲ ಧರ್ಮವಾಯಿತು. ಇವರು ಯುಗಪ್ರವರ್ತಕ ಶಕ್ತಿಯಾಗಿ ಪರಿಣಮಿಸಿದರು. (ಸಿ.ಪಿ.;*)

**ಬಹಮನಿ ವಂಶ:** ಉತ್ತರ ಕರ್ನಾಟಕ ಮತ್ತು ದಖನ್ನಿನ ಬಹುಭಾಗದ ಮೇಲೆ ಒಡೆತನ ನಡೆಸಿದ ಮತ್ತು ಕರ್ನಾಟಕದಲ್ಲಿ ನೆಲೆಯೂರಿದ ಪ್ರಥಮ ಇಸ್ಲಾಂ ರಾಜ್ಯ (1347–1538). ಹಸನ್‌ಗಂಗು ಎಂಬುವವನಿಂದ 1347ರಲ್ಲಿ ಸ್ಥಾಪನೆಯಾಯಿತು. ಸು.2 ಶತಮಾನಗಳ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಈ ರಾಜ್ಯ ಪ್ರಮುಖ ಪಾತ್ರ ವಹಿಸಿತು. ದೆಹಲಿಯ ಸುಲ್ತಾನ ಮಹಮ್ಮದ್–ಬಿನ್–ತುಗಲಕನ ಆಳಿಕೆಯ ಕಾಲದಲ್ಲಿ ಅವನ ದುರಾಡಳಿತದ

ವಿರುದ್ಧ ದಖನ್ನಿನ ಸರದಾರರು ದಂಗೆಯೆದ್ದು ದೌಲತಾಬಾದ್ ಕೋಟೆಯನ್ನು ಸ್ವಾಧೀನಪಡಿಸಿಕೊಂಡು ತಮ್ಮಲ್ಲೇ ಒಬ್ಬನಾದ ಆಫ್ಘನ್ ಇಸ್ಮಾಯಿಲ್ ಮುಖ್ ಎಂಬುವನನ್ನು ನಾಸಿರುದ್ದೀನ್ ಷಾ ಎಂಬ ಬಿರುದು ನೀಡಿ ದಖನ್ನಿನ ರಾಜನೆಂದು ಘೋಷಿಸಿದರು. ಇಸ್ಮಾಯಿಲ್ ಮುಖ್ ವೃದ್ಧ, ಸುಖಲೋಲುಪ, ಜವಾಬ್ದಾರಿ ಸ್ಥಾನಕ್ಕೆ ಅನರ್ಹನೆನಿಸಿದ. ಸ್ವಲ್ಪ ಕಾಲದಲ್ಲಿಯೇ ಈತ ತನಗಿಂತಲೂ ಸಮರ್ಥನಾದ ಹಸನ್ ಗಂಗುವಿಗೆ ಅಧಿಕಾರ ಬಿಟ್ಟುಕೊಟ್ಟ. ದಖನ್ನಿನ ಸರದಾರರು ಇವನನ್ನು ಅಬುಲ್ ಮುಜಫರ್ ಅಲಾಉದ್ದೀನ್ ಹಸನ್ ಬಹಮನ್ ಷಾ ಎಂಬ ಬಿರುದಿನಿಂದ 1347 ಆಗಸ್ಟ್ 3ರಂದು ರಾಜನೆಂದು ಘೋಷಿಸಿದರು.

ಹಸನ್ ಪರ್ಷಿಯಯನ್ ವೀರ ಇಸ್ ಫಂದಿಯಾರ್‌ನ ಮಗ ಬಹುಮನನ ಸಂತತಿಯವನೆಂದು ಕೆಲವರ ಅಭಿಪ್ರಾಯ. ಕೆ. ಆರ್. ಕಾನುಂಗೋ ಅವರ ಪ್ರಕಾರ ಈ ಸಂತತಿಯ ಮೂಲಪುರುಷ ಹಸನ್ ಗಂಗು ಮತಾಂತರಗೊಂಡ ರೈನ್ ಎಂಬ ಹಿಂದು ಪಂಗಡಕ್ಕೆ ಸೇರಿದವ. ಗಂಗೂ ಎಂಬುದು ಪಶ್ಚಿಮ ಪಂಜಾಬಿನಲ್ಲಿದ್ದ ರೈನ ಪಂಗಡದ ಉಪಶಾಖೆ ಎಂದು ಈ ವಿಷಯದ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದಾರೆ. ಹಸನ್ ಬಡತನದಲ್ಲಿ ಹುಟ್ಟಿ, ತನ್ನ ಸ್ವಸಾಮರ್ಥ್ಯದಿಂದ ಉಚ್ಚ ಸ್ಥಾನಕ್ಕೇರಿದ ಎಂಬುದು ನಿರ್ವಿವಾದದ ಸಂಗತಿ.

ಬಹಮನಿ ರಾಜ್ಯದ ಆಳಿಕೆಯ ಕಾಲವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು: ಗುಲ್ಬರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಕಾಲ (1347–1422) ಮತ್ತು ಬೀದರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಕಾಲ (ಜೂನ್ 1424–1528). ಇದಾದನಂತರದ ಬಹುಮನಿ ರಾಜ್ಯ ಐದು ಷಾಹಿ ರಾಜ್ಯಗಳಾಗಿ ಒಡೆದು ಹೋಯಿತು. ಈ ಎರಡೂ ಕಾಲಗಳಲ್ಲಿ ಬಹಮನಿ ರಾಜ್ಯ ವಿಸ್ತರಣೆ ಮತ್ತು ವಿಜಯನಗರದೊಡನೆ ಸತತವಾಗಿ ಯುದ್ಧ ನಡೆಯಲಾರಂಭಿಸಿತು. ಮೊದಲನೆಯ ದೊರೆ ಅಲಾಉದ್ದೀನ್ ಹಸನ್ ಬಹಮನ್ ಷಾ (1347–58) ದೂರದೃಷ್ಟಿಯುಳ್ಳ ಸಮರ್ಥ ದೊರೆ. ರಾಜಧಾನಿಯನ್ನು ದೌಲತಾಬಾದಿನಿಂದ ಗುಲ್ಬರ್ಗಕ್ಕೆ ಬದಲಾಯಿಸಿ ಅದಕ್ಕೆ ಅಹಸಾನಬಾದ್ ಎಂದು ಹೆಸರಿಟ್ಟ. ರಾಜಧಾನಿಯಾದ ಸ್ವಲ್ಪಕಾಲದಲ್ಲಿ ಗುಲ್ಬರ್ಗ ನಗರ ಪ್ರಸಿದ್ಧಿಗೆ ಬಂದಿತಲ್ಲದೆ, ಅಲ್ಲಿ ಅರಮನೆ, ಪೇಟೆಬೀದಿ, ಮಸೀದಿ ಮತ್ತು ಇತರ ಅನೇಕ ಸಾರ್ವಜನಿಕ ಕಟ್ಟಡಗಳು ತಲೆಯೆತ್ತಿದುವು. ಇದು ದಖನ್ನಿನ ಕೇಂದ್ರದಲ್ಲಿದ್ದುದರಿಂದ ಈ ನಗರ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದ ಪ್ರದೇಶಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗಿತ್ತು. ಅಧಿಕಾರ ಸ್ಥಾಪಿಸಿದ ತತ್‌ಕ್ಷಣ ಬಹಮನ್ ಷಾ ಚಿಕ್ಕಮುಟ್ಟ ಪಾಳೆಯಗಾರರನ್ನು ತನ್ನ ಹತೋಟಿಗೆ ಒಳಪಡಿಸಿದ. ದಖನ್ನಿನಲ್ಲಿದ್ದ ತುಗಲಕ್‌ನ ಸೇನೆಯನ್ನು ಹೊಡೆದೋಡಿಸಲು ನಾಸಿಕ್ ನಗರಕ್ಕೆ ಈತ ಸೇನೆಯ ತುಕಡಿಯೊಂದನ್ನು ಕಳುಹಿಸಿದ. ಬಿಜಾಪುರವನ್ನು ಆಕ್ರಮಿಸಿಕೊಂಡು ಕೊಲ್ಲಾಪುರ, ಮತ್ತು ಕೊಂಕಣ ಬಂದರುಗಳಾದ ದಾಬೋಲ್ ಮತ್ತು ಖಾರೆ ಪಟ್ಟಣಗಳನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಗುಲ್ಬರ್ಗದ ಪೂರ್ವ ಮತ್ತು ದಕ್ಷಿಣ ಭಾಗಗಳಿಗೆ ದಂಡಯಾತ್ರೆ ಕೈಗೊಂಡ. ಸೂರೆ ಮಾಡಿದ ನಿಧಿಯಿಂದ ಬಲವಾದ ಸೇನೆ ಕಟ್ಟಿದ. ಈತನ ರಾಜ್ಯ ಉತ್ತರದಲ್ಲಿ ವೈನಗಂಗಾ ನದಿಯಿಂದ ದಕ್ಷಿಣದಲ್ಲಿ ಕೃಷ್ಣ ನದಿಯವರೆಗೂ ಪಶ್ಚಿಮದಲ್ಲಿ ದೌಲತಾಬಾದ್‌ನಿಂದ ಪೂರ್ವದಲ್ಲಿ ಬೋಂಗೀರ್ ನಡುವೆ ವ್ಯಾಪಿಸಿತ್ತು. ಆಡಳಿತ ವ್ಯವಸ್ಥೆಗಾಗಿ ಈತ ತನ್ನ ರಾಜ್ಯವನ್ನು ಗುಲ್ಬರ್ಗ, ದೌಲತಾಬಾದ್, ಬೀರಾರ್ ಮತ್ತು ಬೀದರ್ ಎಂಬ ನಾಲ್ಕು ಪ್ರಾಂತ್ಯಗಳಾಗಿ ವಿಂಗಡಿಸಿ, ಪ್ರಾಂತ್ಯಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟ. ಈತನ ಸಾಹಸ ಕಾರ್ಯಗಳು ದಕ್ಷಿಣದ ಪ್ರಬಲ ರಾಜ್ಯಗಳಾದ ವಾರಂಗಲ್ ಮತ್ತು ವಿಜಯನಗರಗಳ ಗಮನ ಸೆಳೆಯುವಂತೆ ಮಾಡಿದುವು. ಸಮಕಾಲೀನ ಬರೆಹಗಾರರು, ಈತ ನಿಷ್ಪಕ್ಷಪಾತ ದೊರೆ, ಪ್ರಜಾರಕ್ಷಕ ಹಾಗೂ ಧರ್ಮಶ್ರದ್ಧೆಯುಳ್ಳವ, ಇವನ ಆಳಿಕೆಯ ಕಾಲದಲ್ಲಿ ಇವನ ಪ್ರಜೆಗಳೂ ಸೈನಿಕರೂ ಸಂಪೂರ್ಣವಾಗಿ ತೃಪ್ತ ಜೀವನ ನಡೆಸುತ್ತಿದ್ದರೆಂದು ಪ್ರಶಂಸಿಸಿದ್ದಾರೆ. ಹಸನ್ ಗಂಗು 1358ರಲ್ಲಿ ಮರಣ ಹೊಂದಿದ ಮೇಲೆ ಅವನ ಮಗ ಒಂದನೆಯ ಮಹಮ್ಮದ್ (1358–75)ಸಿಂಹಾಸನವೇರಿದ. ಈತನ ಆಳಿಕೆಯ ಉದ್ದಕ್ಕೂ ವಿಜಯನಗರದೊಡನೆ ಸತತವಾಗಿ ಯುದ್ಧ ನಡೆಯಿತು. ವಾರಂಗಲ್ ಮತ್ತು ವಿಜಯನಗರಗಳು ಒಂದು ಗೂಡಿ ಬಹಮನಿ ರಾಜ್ಯದ ಮೇಲೆ ಧಾಳಿ ನಡೆಸಿದುವು. ಮಹಮ್ಮದ್ ಈ ಧಾಳಿಯನ್ನು ಯಶಸ್ವಿಯಾಗಿ ಎದುರಿಸಿದ.

ಮತೀಯವಾದ ಅಂಶಕ್ಕಿಂತ ರಾಜಕೀಯ ಮತ್ತು ಆರ್ಥಿಕ ಅಂಶಗಳೇ ಬಹಮನಿ ವಿಜಯನಗರಗಳ ನಡುವಣ ಕಹಿ ಸಂಬಂಧಗಳಿಗೆ ಪ್ರೇರಕಶಕ್ತಿಯಾಗಿದ್ದುವು. ವಾರಂಗಲ್ ಕಾಪಯ ನಾಯಕ ಕಾಟಾಲ ಕೋಟೆಯನ್ನೂ ಬುಕ್ಕ ಕೃಷ್ಣಾ–ತುಂಗ ನಡುವಣ ಪ್ರದೇಶವನ್ನೂ ಬಿಟ್ಟುಕೊಡುವಂತೆ ಬಹಮನಿ ಸುಲ್ತಾನನನ್ನು ಕೇಳಿಕೊಂಡರು. ಈ ಬೇಡಿಕೆಯನ್ನು ನಿರಾಕರಿಸಿದ್ದಲ್ಲದೆ ಮಹಮ್ಮದ್ ಎರಡೂ ರಾಜ್ಯಗಳ ಮೇಲೆ ತನ್ನದೆ ಆದ ಬೇಡಿಕೆಯನ್ನು ಮುಂದಿಟ್ಟಾಗ ಅದು ಯುದ್ಧದಲ್ಲಿ ಪರ್ಯವಸಾನಗೊಂಡಿತು. 1362ರಲ್ಲಿ ಬುಕ್ಕ ರಾಯಚೂರು ದೋಆಬ್ ಮೇಲೆ ದಾಳಿಮಾಡಿದ. ವಾರಂಗಲ್‌ನ ಸೇನೆ ಕೌಲಾಸ್ ಕೋಟೆಯನ್ನು ಮುತ್ತಿತು. ಮಹಮ್ಮದ್ ಕಾಪಯನಾಯಕನ ಮೇಲೆ ಎರಗಿ ಅವನನ್ನು ಸೋಲಿಸಿ ಯುದ್ಧದ ಪರಿಹಾರ ಕೊಡುವಂತೆ ಒಪ್ಪಿಸಿದ. 1363ರಲ್ಲಿ ಮತ್ತೆ ಯುದ್ಧ ಆರಂಭವಾಗಿ ಅದರಲ್ಲೂ ವಾರಂಗಲ್ಲಿನ ದೊರೆ ಸೋತುಹೋದನಲ್ಲದೇ ಗೋಲ್ಕೊಂಡ ಕೋಟೆಯನ್ನೊಪ್ಪಿಸಿದ. ಅದು ಬಹಮನಿ ರಾಜ್ಯದ ಖಾಯಂ ಗಡಿಯಾಯಿತು. ಮಹಮ್ಮದ್ ಹೆಚ್ಚಿನ ಐಶ್ವರ್ಯವನ್ನು ಸೂರೆ ಮಾಡಿದ್ದರ ಜೊತೆಗೆ, ವಜ್ರವೈಡೂರ್ಯಖಚಿತ ಸಿಂಹಾಸನವನ್ನು ಪಡೆದುಕೊಂಡ. ಈ ಸಿಂಹಾಸನವೇ ಬಹಮನಿ ಮನೆತನದ ರಾಜಸಿಂಹಾಸನವಾಗಿ ಉಳಿಯಿತು. ವಿಜಯನಗರದ ವಿರುದ್ಧವೂ ಈತ ಜಯಶೀಲನಾಗಿ ಮುದ್ಗಲ್ಲನ್ನು ಪಡೆದ.

ಮಹಮ್ಮದ್‌ನ ಉತ್ತರಾಧಿಕಾರಿಗಳು ಅಷ್ಟು ಸಮರ್ಥರಾಗಿರಲಿಲ್ಲ. ಈತನ ಮಗ ಮುಜಾಹಿದ್ (1375–78) ಮೂರು ವರ್ಷಗಳ ಕಾಲ ಆಳಿದ. ವಿಜಯನಗರದ ಮೇಲೆ ನಡೆಸಿದ ಯುದ್ಧದಿಂದ ಹಿಂತಿರುಗಿ ಬರುತ್ತಿದ್ದಾಗ ಇವನ ದಾಯಾದಿ ದಾವೂದ್ ಎಂಬಾತ ಇವನನ್ನು ಕೊಲೆ ಮಾಡಿದ. ಮುಂದೆ ದಾವೂದನಿಗೂ ಅದೇ ಗತಿಯಾಯಿತು. ದಾವೂದನ ತಮ್ಮ 2ನೆಯ ಮಹಮದ್ (1378–97) ಸಿಂಹಾಸನ ಏರಿದ. ಈ ಹದಗೆಟ್ಟ ದುಃಸ್ಥಿತಿಯನ್ನು ಉಪಯೋಗಿಸಿಕೊಂಡು ವಿಜಯನಗರದ ಸೇನೆ ಗೋವ ಸೇರಿದಂತೆ ಪಶ್ಚಿಮ ಕರಾವಳಿಯ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿತು. ಸುಸಂಸ್ಕೃತನಾಗಿದ್ದ 2ನೆಯ ಮಹಮದ್‌ನ ಆಳಿಕೆ ಶಾಂತಿಪೂರ್ಣವಾಗಿತ್ತು. ಸಾಧುಸಂತರು ಮತ್ತು ಪಂಡಿತರಿಗೆ ತನ್ನ ಆಸ್ಥಾನದಲ್ಲಿ ಆಶ್ರಯ ನೀಡಿದ. ಸ್ವತಃ ಪಂಡಿತನಾಗಿದ್ದ ಈ ಸುಲ್ತಾನನನ್ನು ಪ್ರಜೆಗಳು ಆದರದಿಂದ ಗೌರವಿಸಿದರು. ಕ್ಷಾಮ ತಲೆದೋರಿದಾಗ ಮಾಳವ ಮತ್ತು ಗುಜರಾತ್‌ಗಳಿಂದ ಧಾನ್ಯವನ್ನು ಆಮದು ಮಾಡಿಕೊಂಡ. ಅನಾಥಾಲಯಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಿದ.

2ನೆಯ ಮಹಮದ್‌ನ ಅನಂತರ 2ನೆಯ ಘಿಯಾಸುದ್ದೀನ್ ಸಿಂಹಾಸನಕ್ಕೆ ಬಂದು ಸ್ವಲ್ಪಕಾಲ ಆಳಿ, ಆಸ್ಥಾನದ ಕುತಂತ್ರಗಳಿಗೆ ಬಲಿಯಾಗಿ ಸಿಂಹಾಸನ ಕಳೆದುಕೊಂಡ.

ಅನಂತರ ಅಧಿಕಾರಕ್ಕೆ ಬಂದವನು ತಾಜುದ್ದೀನ್ ಫಿರೋಜ್ (1397–1422). 1397, 1406 ಮತ್ತು 1417 ರಲ್ಲಿ ಈತ ವಿಜಯನಗರದ ಮೇಲೆ ಯುದ್ಧ ನಡೆಸಿದ್ದರಿಂದ ಈತನ ಆಳಿಕೆ ಪ್ರಸಿದ್ಧಿ ಪಡೆಯಿತು. ಗುಲ್ಬರ್ಗದಲ್ಲಿ ಸಿಂಹಾಸನಕ್ಕಾಗಿ ಹೋರಾಟ ನಡೆಯುತ್ತಿದ್ದ ಸಂದರ್ಭ ಉಪಯೋಗಿಸಿಕೊಂಡು 2ನೆಯ ಹರಿಹರ ಬಹಮನಿ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಸಾಗರ ಕೋಟೆಯನ್ನು ಆಕ್ರಮಿಸಿದ. ಸಮರ್ಥನಾಗಿದ್ದ ಫಿರೋಜ್ ಆ ಕೋಟೆಯನ್ನು ಮುತ್ತಿ ಪುನಃ ವಶಪಡಿಸಿಕೊಂಡು, ಕೃಷ್ಣಾ ನದಿ ದಾಟಿ ವಿಜಯನಗರದ ಮೇಲೆ ಹಠಾತ್ ಧಾಳಿ ನಡೆಸಿದ. ಈ ಯುದ್ಧಗಳಿಂದ ಎರಡುಪಕ್ಷಗಳಿಗೂ ಯಾವ ರೀತಿಯ ಜಯವೂ ದೊರಕಲಿಲ್ಲ. ಮಧ್ಯಪ್ರದೇಶದ ಕೇರ್ಲಾದ ರಾಜ ನರಸಿಂಗರಾಯನ ಮೇಲೆ ಯುದ್ಧ ಮಾಡಿ ಅವನನ್ನು ಫಿರೋಜ್ ಸೋಲಿಸಿದ. ತೆಲಂಗಾಣದ ಕಾತಯ ವೇಮನನ್ನು ಶರಣಾಗತನಾಗುವಂತೆ ಮಾಡಿದ. ಆದರೆ ಅವನು ಬಹಮನಿ ಸೇನೆಯ ದಂಡನಾಯಕ ಆಲಿಖಾನನನ್ನು ಸೋಲಿಸಿ ತನ್ನ ಪ್ರಾಬಲ್ಯವನ್ನು ಮತ್ತೆ ಪಡೆದ. 1406ರಲ್ಲಿ ದೇವರಾಯನೊಡನೆ ನಡೆದ ಯುದ್ಧದಲ್ಲಿ ಫಿರೋಜನಿಗೆ ಜಯ ದೊರೆಯಿತೆಂದು ಫೆರಿಸ್ತ ಹೇಳಿದ್ದಾನೆ. 1417–20ರಲ್ಲಿ ನಡೆದ ಮೂರನೆಯ ಯುದ್ಧದಲ್ಲಿ ಹಾನಗಲ್ ಕೋಟೆಯನ್ನು ಮುತ್ತಿದಾಗ ವಿಜಯನಗರದ ಸೇನೆ ಫಿರೋಜನನ್ನು ಹಿಮ್ಮೆಟ್ಟುವಂತೆ ಮಾಡಿತು.

ವಿಜಯನಗರದ ಮತ್ತು ಬಹಮನಿಗಳ ನಡುವಣ ದೀರ್ಘಕಾಲದ ಯುದ್ಧದಿಂದ ಯಾವ ಪರಿಣಾಮವೂ ಆಗಲಿಲ್ಲ. ಯಥಾಸ್ಥಿತಿಯೇ ಮುಂದುವರಿಯಿತು. ರಾಯಚೂರ್ ದೋ ಅಬ್ ವಿಜಯನಗರದ ಕೈಯಲ್ಲೇ ಉಳಿಯಿತು. ಫಿರೋಜನ ಸೋಲಿನಿಂದ ಅವನಿಗೆ ತನ್ನ ರಾಜ್ಯದಲ್ಲಿ ಅನೇಕ ತೊಂದರೆಗಳು ಉಂಟಾದವು. ಅವನ ತಮ್ಮ ಅಹಮದ್ ಮತ್ತು ಮಗ ಹಸನ್ ನಡುವೆ ಭಿನ್ನತೆ ತಲೆದೋರಿತು. ಅಹಮದ್‌ಗೆ ಸೇನೆ ಬೆಂಬಲ ನೀಡಿತು. ಅವನು ರಾಜಧಾನಿಯನ್ನು ಮುತ್ತಿದ. ತಮ್ಮನ ಪರವಾಗಿ ಫಿರೋಜ್ ಸಿಂಹಾಸನ ತ್ಯಾಗಮಾಡಿದ ಕೆಲವು ದಿವಸಗಳ ತರುವಾಯ ಫಿರೋಜ್ ಮರಣಹೊಂದಿದ. 1422ರ ಸೆಪ್ಟೆಂಬರಿನಲ್ಲಿ ಅಹ್ಮದ್ ಸಿಂಹಾಸನ ಏರಿದ. ಫಿರೋಜ್ ಒಳ್ಳೆಯ ದೊರೆ, ಪಂಡಿತ. ಅವನು ತತ್ತ್ವಶಾಸ್ತ್ರಜ್ಞರಿಗೂ ಕವಿಗಳಿಗೂ ಇತಿಹಾಸಕಾರರಿಗೂ ಆಶ್ರಯ ನೀಡಿದ. ಖಗೋಳಶಾಸ್ತ್ರದಲ್ಲಿ ಅಪಾರ ಆಸಕ್ತಿ. ಈತ ದೌಲತಾಬಾದಿನಲ್ಲಿ ಒಂದು ವೀಕ್ಷಣಾಲಯವನ್ನು ಸ್ಥಾಪಿಸಿದ. ಭೀಮಾನದಿಯ ದಂಡೆಯ ಮೇಲೆ ಫಿರೋಜಾಬಾದ್ ಎಂಬ ಹೊಸನಗರವನ್ನು ನಿರ್ಮಿಸಿದ. ದಾಬಲ್ ಮತ್ತು ಚೌಲ್ ಬಂದರುಗಳನ್ನು ಅಭಿವೃದ್ಧಿಪಡಿಸಿದ. ಪರ್ಷಿಯ, ಅರೇಬಿಯ, ಆಫ್ರಿಕ ಮತ್ತು ಯುರೋಪ್ ದೇಶಗಳ ಹಡಗುಗಳು ಈ ಬಂದರುಗಳಿಗೆ ಬರುತ್ತಿದ್ದವು.

1422 ಸೆಪ್ಟೆಂಬರ್ 22ರಂದು ಶಿಹಾಬುದ್ದೀನ್ ಅಹ್ಮದ್ ಸಿಂಹಾಸನಕ್ಕೆ ಬಂದ. ಜೂನಿನಲ್ಲಿ ಅಹ್ಮದ್ ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರಿಗೆ ಬದಲಾಯಿಸಿದ, ವಾರಂಗಲ್ಲಿನ ಕಡೆಗೆ ರಾಜ್ಯ ವಿಸ್ತರಿಸಿದ. ಇವನ ಕಾಲದಲ್ಲಿ ಆಸ್ಥಾನದ ಸರದಾರರ ನಡುವೆ ಅಧಿಕಾರಕ್ಕಾಗಿ ಅಂತಃಕಲಹ ಉಂಟಾಗಿ ಎರಡು ಪ್ರಮುಖ ಪಕ್ಷಗಳೇರ್ಪಟ್ಟು ರಾಜ್ಯದ ಏಕತೆ ಮತ್ತು ಸಮಗ್ರತೆಗೆ ಅಪಾಯ ಒದಗಿತು. ಒಂದು ಕಡೆ ದಖನ್ನಿನ ಸರದಾರರು ಮತ್ತೊಂದು ಕಡೆ ಪರದೇಶಿ ಸರದಾರರ ನಡುವೆ ಸ್ಥಾನಮಾನಗಳಿಗಾಗಿ ಪೈಪೋಟಿ ಆರಂಭವಾಗಿ ಅನೇಕ ಕೊಲೆ ಸುಲಿಗೆಗೆ ಕಾರಣವಾದವು. ದಖನ್ನಿನ ಪಕ್ಷದಲ್ಲಿ ಸ್ಥಳೀಯ ಮುಸ್ಲಿಮ್ ಸರದಾರರು ಮತ್ತು ಆಫ್ರಿಕನ್ ಮಿತ್ರರು, ವಿದೇಶಿ ಸರದಾರರಲ್ಲಿ ಟರ್ಕರು, ಅರಬರು, ಪರ್ಷಿಯನ್ನರು ಮತ್ತು ಮುಘಲರು ಪ್ರಮುಖರಾಗಿದ್ದರು. ಸ್ಥಳೀಯರಿಗಿಂತ ವಿದೇಶೀ ಪಕ್ಷದವರು ರಾಜ್ಯದಲ್ಲಿ ಅನೇಕ ಉನ್ನತ ಹುದ್ದೆಗಳನ್ನು ಆಕ್ರಮಿಸಿಕೊಂಡಿದ್ದುದರಿಂದ ಸ್ಥಳೀಯರಿಗೆ ಅವರ ಬಗ್ಗೆ ಅಸೂಯೆ ಮೂಡಿತು. ಧಾರ್ಮಿಕ ಭೇದಗಳಿಂದ ಇದು ಮತ್ತಷ್ಟು ತೀವ್ರಗೊಂಡಿತು. ದಖನ್ನಿನ ಜನರು ಪ್ರಧಾನವಾಗಿ ಸುನ್ನಿ ಪಂಥಕ್ಕೆ

ಸೇರಿದವರಾಗಿದ್ದಾರೆ. ಅವರ ಎದುರಾಳಿಗಳು ಷಿಯಾ ಪಂಗಡಕ್ಕೆ ಸೇರಿದವರಾಗಿದ್ದರು. ಹೀಗಾಗಿ ಬಹಮನಿ ರಾಜ್ಯದ ಇತಿಹಾಸ ಇನ್ನು ಮುಂದೆ ಪಿತೂರಿ, ಕೊಲೆಗಳ ಕಥೆಯಾಗಿದ್ದು ಇದು ರಾಜ್ಯ ಛಿದ್ರಗೊಳ್ಳುವತನಕವೂ ಅದರ ಜೀವಸತ್ತ್ವವನ್ನು ಹೀರಿತು.

ಅಹ್ಮದ್ ಪ್ರಬಲವಾದ ವಿದೇಶಾಂಗ ನೀತಿಯನ್ನು ಅನುಸರಿಸಿ ವಿಜಯನಗರದ ಮೇಲೆ ಯುದ್ಧ ಘೋಷಿಸಿದ. ಫೆರಿಸ್ತನ ಪ್ರಕಾರ ಬಹಮನಿ ಸೇನೆಗೆ ಗೆಲುವಾಯಿತು. ಮಾಳ್ವ ಮತ್ತು ಗುಜರಾತ್‌ಗಳೊಡನೆ ಬಹಮನಿ ರಾಜ್ಯ ಈ ಕಾಲದಲ್ಲಿ ಸಂಪರ್ಕ ಪಡೆಯಿತು. ಮಾಳ್ವದ ಮುಸ್ಲಿಮ್ ದೊರೆಯ ಮೇಲೆ ಅಹ್ಮದ್ ದಂಡೆತ್ತಿ ಹೋಗಿ ಅವನನ್ನು ಸದೆಬಡಿದ. ಆದರೆ ಗುಜರಾತಿನ ಮೇಲೆ ಅವನ ಧಾಳಿ ವಿಫಲವಾಯಿತು. 1430ರಲ್ಲಿ ನಡೆಸಿದ ಎರಡನೆಯ ದಂಡಯಾತ್ರೆಯೂ ವಿಫಲವಾಯಿತು. 1433ರಲ್ಲಿ ತೆಲಂಗಾಣದತ್ತ ನಡೆದು ವಾರಂಗಲ್ ಮೊದಲಾದ ಕೆಲವು ಭಾಗಗಳನ್ನು ವಶಪಡಿಸಿಕೊಂಡ. ಅಹ್ಮದ್ 1436 ಏಪ್ರಿಲ್ 17ರಂದು ನಿಧನನಾದ. ಒಂದನೆಯ ಅಹ್ಮದ್‌ನ ಹಿರಿಯ ಮಗ ಅಲಾಉದ್ದೀನ್ ಅಹ್ಮದ್ ಪಟ್ಟಕ್ಕೆ ಬಂದ (1436–58). ವಿಜಯನಗರದ 2ನೆಯ ದೇವರಾಯನನ್ನು ಸೋಲಿಸಿ ಸಂಗಮೇಶ್ವರ ಮತ್ತು ಖಾನ್‌ದೇಶದ ರಾಜರುಗಳನ್ನು ಹತ್ತಿಕ್ಕಿದ. ತನ್ನ ತಂದೆಯ ಗೋರಿಯ ಮೇಲೆ ಭವ್ಯವಾದ ಗೋಳವನ್ನು ನಿರ್ಮಿಸಿದ. 1436ರಲ್ಲಿ ಮತ್ತು 1443ರಲ್ಲಿ ವಿಜಯನಗರ 'ದೊಡನೆ ದೋ ಆಬ್‌ನಲ್ಲಿ ಯುದ್ಧಗಳು ನಡೆದುವು. ಅಲಾಉದ್ದೀನ್ ಕೊಂಕಣದ ಪಾಳೆಯಗಾರ ರನ್ನು ಶರಣಾಗತರಾಗುವಂತೆ ಮಾಡಿದ. ಪ್ರಸಿದ್ಧ ಮಹ್ಮೂದ್ ಗಾವಾನ್ ಇವನ ಮಂತ್ರಿಯಾಗಿದ್ದ.

2ನೆಯ ಅಲಾಉದ್ದೀನ್ ಅಹ್ಮದ್‌ನ ಮರಣಾನಂತರ ಅವನ ಹಿರಿಯ ಮಗ ಹುಮಾಯೂನ್ ಪಟ್ಟಕ್ಕೆ ಬಂದು (1458–61) ಮೂರು ವರ್ಷಗಳ ಆಳಿಕೆ ನಡೆಸಿದ. ಇವನ ಮಗ ನಿಜಾಮುದ್ದೀನ್ ಅಹ್ಮದ್ (1461–63) ಸಿಂಹಾಸನಕ್ಕೆ ಬಂದಾಗ ಅವನು ಎಂಟು ವರ್ಷದ ಬಾಲಕ. ಈ ಕಾಲದಲ್ಲಿ ಮಹ್ಮೂದ್ ಗಾವಾನ್ ಸಮರ್ಥ ಆಡಳಿತ ನಡೆಸಿದ. ಸುಲ್ತಾನ ಅಪ್ರಾಪ್ತವಯಸ್ಕನಾದ್ದರಿಂದ ಒಂದು ರಾಜಪ್ರತಿನಿಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಸುಲ್ತಾನನ ತಾಯಿ ಮತ್ತು ಪ್ರಧಾನಿಯೂ ಈ ಪ್ರತಿನಿಧಿ ಮಂಡಲಿ ಯಲ್ಲಿದ್ದರು. ಸುಲ್ತಾನನ ತಾಯಿ ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಒಬ್ಬ ಸಮರ್ಥ ಮಹಿಳೆಯಾಗಿದ್ದು, ಗಾವಾನನಂಥ ಶ್ರೇಷ್ಠ ಆಡಳಿತಾಧಿಕಾರಿಯನ್ನು ಆಯ್ಕೆಮಾಡಿ ರಾಜ್ಯ ಕಷ್ಟಕಾಲದಲ್ಲಿದ್ದಾಗ ಅದನ್ನು ಕಾಪಾಡುವ ಹೊಣೆ ಹೊತ್ತಳು. ಒರಿಸ್ಸದ ದೊರೆ ಕಪಿಲೇಂದ್ರ ಈ ಸಂದರ್ಭ ಉಪಯೋಗಿಸಿಕೊಂಡು ಬೀದರಿನ ಮೇಲೆ ದಂಡಯಾತ್ರೆ ಕೈಗೊಂಡಾಗ ಗಾವಾನ್ ಅವನನ್ನು ಹಿಮ್ಮೆಟ್ಟಿಸಿದ. ಮಾಳ್ವದ ದೊರೆ ಇದನ್ನೇ ಅನುಸರಿಸಿದಾಗ ಗುಜರಾತಿನ ಸಹಾಯದಿಂದ ಗಾವಾನ್ ಅವನನ್ನು ಹಿಂದಕ್ಕಟ್ಟಿದ. ನಿಜಾಮುದ್ದೀನ್ ಅಹ್ಮದ್‌ನ ಮರಣಾನಂತರ ಅವನ ಕಿರಿಯ ತಮ್ಮ 3ನೆಯ ಮಹಮ್ಮದ್ (1463–82) ಪಟ್ಟಕ್ಕೆ ಬಂದ. 1466ರ ತನಕ ರಾಜಪ್ರತಿನಿಧಿ ಮಂಡಲಿ ಅಸ್ತಿತ್ವದಲ್ಲಿತ್ತು. ಆ ವರ್ಷ ಗಾವಾನ್ ಪ್ರಧಾನಮಂತ್ರಿ ಯಾಗಿ ನೇಮಿಸಲ್ಪಟ್ಟ. ಗಾವಾನನ ಯುದ್ಧ ನಿಪುಣತೆಯಿಂದಾಗಿ, ರಾಜ್ಯ ಒರಿಸ್ಸದಿಂದ ಗೋವದವರೆಗೆ ವಿಸ್ತರಿಸಿತು. ಹುಬ್ಬಳ್ಳಿ, ಬೆಳಗಾಂವಿ ಮತ್ತು ಬಾಗಲಕೋಟೆ ಗೆದ್ದು ಉತ್ತರ ಕರ್ನಾಟಕ ಹಾಗೂ ಕೊಂಕಣದ ಕರಾವಳಿ ಪ್ರದೇಶವನ್ನು ಸಂಪೂರ್ಣವಾಗಿ ತನ್ನ ಆಡಳಿತಕ್ಕೆ ಸೇರಿಸಿಕೊಂಡು ವಿಜಯನಗರದ ಅಧೀನದಲ್ಲಿದ್ದ ಗೋವವನ್ನು ವಶಪಡಿಸಿಕೊಂಡ. ಇದೆಲ್ಲದರ ಪರಿಣಾಮವಾಗಿ ರಾಜ್ಯದ ಐಶ್ವರ್ಯ ಹೆಚ್ಚಿತು. ಗಾವಾನನ ನೇತೃತ್ವದಲ್ಲಿ ಸುಲ್ತಾನ ರಣರಂಗದಲ್ಲಿ ಧೈರ್ಯ ಪ್ರದರ್ಶಿಸಿ ಲಷ್ಕರಿ ಎಂಬ ಬಿರುದಿಗೆ ಪಾತ್ರನಾದ. ಕಂಚಿ ಯವರೆಗೂ ಅವನು ನಡೆಸಿದ ಧಾಳಿ ಹೆಸರಾದದ್ದು.

ಗಾವಾನ್ ಪ್ರತಿಯೊಂದು ಇಲಾಖೆಯನ್ನೂ ಸುಧಾರಣೆಗೆ ಒಳಪಡಿಸಿದ. ಹಣಕಾಸು ನ್ಯಾಯಾಡಳಿತ ಮತ್ತು ವಿದ್ಯಾಭ್ಯಾಸ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದ. ಪ್ರಾಂತ್ಯಗಳ ಸಂಖ್ಯೆ ದ್ವಿಗುಣವಾಯಿತು. ಪ್ರಾಂತ್ಯಾಧಿಕಾರಿಗಳ ಹೆಚ್ಚಿನ ಅಧಿಕಾರವನ್ನು ಮೊಟಕುಗೊಳಿಸಿ ಕೇಂದ್ರವನ್ನು ಬಲಪಡಿಸಿ ಪ್ರಾಂತೀಯ ಮನೋಭಾವನೆಯನ್ನು ಹತ್ತಿಕ್ಕಿದ. ಹೊಸ ಕಂದಾಯ ಪದ್ಧತಿ ಜಾರಿಗೆ ತಂದ. ಭೂಮಿಯನ್ನು ಅಳೆಸಿ ಕಂದಾಯವನ್ನು ಹಣದ ರೂಪದಲ್ಲಿ ಕೊಡುವ ಕ್ರಮ ಜಾರಿಗೆ ತಂದ. ಸೇನೆಯನ್ನು ಸುಧಾರಿಸಿ ಅದರ ಶಕ್ತಿಯನ್ನು ಹೆಚ್ಚಿಸಿದ. ಭ್ರಷ್ಟಾಚಾರವನ್ನು ನಿರ್ಮೂಲ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟ. ಸಾಹಿತ್ಯ ಕಲೆಗೆ ಪ್ರೋತ್ಸಾಹ ನೀಡಿದ. 1461ರಲ್ಲಿ ರಾಜಧಾನಿ ಬೀದರಿನಲ್ಲಿ ಮದರಸಾವನ್ನು ಸ್ಥಾಪಿಸಿದ. ಸ್ವತಃ ಪಂಡಿತನಾಗಿದ್ದ ಗಾವಾನ್ ಅನೇಕ ಶಾಸ್ತ್ರಗಳನ್ನು ಅಭ್ಯಾಸ ಮಾಡಿದ. ಮದರಸಾಕ್ಕೆ ಅನೇಕ ಪಂಡಿತರನ್ನು ಆಹ್ವಾನಿಸಿದ. ಮೂರು ಅಂತಸ್ತುಳ್ಳ ಈ ಕಾಲೇಜಿನಲ್ಲಿ ಪ್ರಾಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಸ್ಥಳಾವಕಾಶ ಮಾಡಿಕೊಡಲಾಗಿದ್ದಿತು. ಗಾವಾನನ ಬಳಿ ಇದ್ದ ಪುಸ್ತಕ ಭಂಡಾರದಲ್ಲಿ 1000 ಹಸ್ತಪ್ರತಿಗಳಿದ್ದುವು. ಗ್ರಂಥಾಲಯದಲ್ಲಿ 3000 ಹಸ್ತಪ್ರತಿಗಳಿದ್ದುವು.

ಗಾವಾನನ ಆಡಳಿತ ವಿಚಕ್ಷಣತೆ ಹಾಗೂ ಸರ್ಕಾರದ ಮೇಲಿನ ಅವನ ಹತೋಟಿಯಿಂದ ದಖ್ಖನ್ ಸರದಾರರಿಗೆ ಅಸೂಯೆಯುಂಟಾಯಿತು. ಅವನನ್ನು ಕೊಲೆ ಮಾಡಲು ಯೋಚಿಸಿದರು. ದಖನ್ ಮತ್ತು ವಿದೇಶೀ ಸರದಾರರ ನಡುವೆ ಮನಸ್ತಾಪ ಉಂಟಾಯಿತು. ಗಾವಾನ್ ಸ್ವಲ್ಪಕಾಲ ಬುದ್ಧಿವಂತಿಕೆಯಿಂದ ಈ ಎರಡು ಪಕ್ಷಗಳನ್ನು ಹತೋಟಿಯಲ್ಲಿಟ್ಟು ಕೊಳ್ಳಲು ಯತ್ನಿಸಿದ. ಆದರೂ ದಖನೀ ಸರದಾರರ ಕುತಂತ್ರಕ್ಕೆ ಬಲಿಯಾಗಬೇಕಾಗಿ ಬಂತು. ಗಾವಾನನ ಮರಣದಿಂದ ಬಹಮನೀರಾಜ್ಯದ ಶಕ್ತಿ ಉಡುಗಿಹೋಯಿತೆನ್ನಬಹುದು.

3ನೆಯ ಮಹಮ್ಮದ್‌ನ ಅನಂತರ ಶಿಹಾಬುದ್ದೀನ್ ಮಹ್ಮೂದ್ (1482–1518) ಪಟ್ಟಕ್ಕೆ ಬಂದ. ಇವನಿಗೆ ವೈಯಕ್ತಿಕ ಸತ್ತ್ವವಾಗಲಿ ರಾಜ್ಯದ ಐಕ್ಯವನ್ನು ಉಳಿಸಿಕೊಳ್ಳಲು ನೆರವಾಗಬಲ್ಲ ದಕ್ಷಮಂತ್ರಿಯ ಮಾರ್ಗದರ್ಶನವಾಗಲಿ ದೊರಕಲಿಲ್ಲ. ದಖನಿ ಮತ್ತು ಪರದೇಶೀ ಸರದಾರರ ನಡುವೆ ದ್ವೇಷಾಸೂಯೆ ನೂರ್ಮಡಿಗೊಂಡಿತು. ಪ್ರಾಂತೀಯ ಗವರ್ನರುಗಳು ಈ ಅನಾಯಕತ್ವ ಪರಿಸ್ಥಿತಿಯ ಅವಕಾಶವನ್ನು ತಮ್ಮ ತಮ್ಮ ಸ್ವಾತಂತ್ರ್ಯ ಘೋಷಿಸಲು ಉಪಯೋಗಿಸಿಕೊಂಡರು. ಮಹಮ್ಮದ್‌ನ ನಾಮ ಮಾತ್ರದ ಅಧಿಕಾರ ರಾಜಧಾನಿಯ ಸುತ್ತ ಮುತ್ತಲ ಭಾಗಗಳಿಗೆ ಸೀಮಿತವಾಗಿತ್ತು. ಇವನು ಮತ್ತು ಇವನ ನಾಲ್ವರು ಉತ್ತರಾಧಿಕಾರಿಗಳು ತುರ್ಕಿವಂಶದ ಖಾಸಿಮ್ ಬರೀದ್ ಅನಂತರ ದಖನ್ನಿನ ನರಿ ಎಂದು ಪ್ರಸಿದ್ಧನಾದ ಅವನ ಮಗ ಅಮೀರ್ ಅಲಿ ಬರೀದ್‌ರ ಕೈಗೊಂಬೆಗಳಾಗಿದ್ದರು. ಈ ಸಂತತಿಯ ಕೊನೆಯ ದೊರೆ ಕಲೀಮುಲ್ಲಾ ಕಳೆದುಹೋಗಿದ್ದ ತನ್ನ ರಾಜ್ಯದ ಭಾಗವನ್ನು ಮತ್ತೆ ಪಡೆಯಲು ಬಾಬರನ ನೆರವನ್ನು ಪಡೆಯಲು ರಹಸ್ಯವಾಗಿ ಪ್ರಯತ್ನಿಸಿ ನಿರಾಶನಾದ. ಸು.1538ರಲ್ಲಿ ಈತ ಕಾಲವಾದ ಮೇಲೆ ಸು.180ವರ್ಷಗಳ ಆಳಿಕೆಯ ಬಹಮನಿ ಮನೆತನ ಕೊನೆಗೊಂಡಿತು. ಮುಂದೆ ಆಸ್ಥಾನದ ಎರಡು ಪಕ್ಷಗಳಿಗೂ ಅದರಲ್ಲೂ ದಖನ್ ಪಕ್ಷ ನಾಯಕ ಹಸನ್ ನಿಜಾಮ್ ಉಲ್ ಮುಲ್ಕ್ ಮತ್ತು ಪರದೇಶಿಗಳ ಪಕ್ಷದ ನಾಯಕ ಯೂಸುಫ್ ಆದಿಲ್ ಖಾನರ ನಡುವೆ ಪ್ರತಿಸ್ಪರ್ಧೆ ಹೆಚ್ಚುತ್ತ ನಡೆಯಿತು. ಕೊನೆಗೆ ಪರದೇಶಿ ಪಕ್ಷ ಬಿಜಾಪುರಕ್ಕೆ ನಿರ್ಗಮಿಸಿತು. ಅದರ ನಾಯಕ ಆದಿಲ್‌ಖಾನ್ ಸ್ವತಂತ್ರ ರಾಜ್ಯ ಕಟ್ಟಿದ. ಬಹಮನಿರಾಜ್ಯ ಐದು ಶಾಹಿರಾಜ್ಯಗಳಾಗಿ ಒಡೆಯಿತು. ಅವುಗಳೇ ಬಿಜಾಪುರದ ಆದಿಲ್ ಶಾಹಿ, ಗೋಲ್ಕೊಂಡದ ಕುತುಬ್ ಶಾಹಿ, ಅಹಮದ್ ನಗರದ ನಿಜಾಂಶಾಹಿ, ಬಿರಾರಿನ ಇಮಾಮ್ ಶಾಹಿ ಮತ್ತು ಬಿದರೆಯ ಬರೀದ್ ಶಾಹಿ ರಾಜ್ಯಗಳು. (ಬಿ.ಎಸ್.ಎ.)

**ಆಡಳಿತ:** ದೆಹಲಿ ಸುಲ್ತಾನರ ಆಡಳಿತಕ್ಕಿಂತ ಬಹಮನಿ ಸುಲ್ತಾನರ ಆಡಳಿತ ಹೆಚ್ಚು ಭಿನ್ನವಾಗಿರಲಿಲ್ಲ. ರಾಜನೇ ರಾಜ್ಯದ ಪ್ರಮುಖ ನ್ಯಾಯಾಧೀಶ, ಮುಖ್ಯ ಸೇನಾಪತಿ ಮತ್ತು ಧಾರ್ಮಿಕ ಮುಖಂಡ. ರಾಜ ದೇವರ ಪ್ರತಿನಿಧಿ ಎಂಬ ನಂಬಿಕೆಯಿತ್ತು. ಅವನ ಅಧಿಕಾರ ಸೀಮಾತೀತ. ದೇಶದ ವ್ಯವಹಾರಗಳಲ್ಲಿ ಸುಲ್ತಾನ ಮಂತ್ರಿಗಳ ಸಲಹೆ ಕೇಳುತ್ತಿದ್ದ. ಗಾವಾನನು ಸುಮಾರು 30ವರ್ಷ ಮಂತ್ರಿಯಾಗಿದ್ದ ಕಾಲದಲ್ಲಿ ಸುಲ್ತಾನ ನೆಪಮಾತ್ರಕ್ಕಿದ್ದನೆಂದು ಹೇಳಬಹುದು. ರಾಜಾಜ್ಞೆಗಳೆಲ್ಲ ಮುಖ್ಯಮಂತ್ರಿಯ ಮೂಲಕವೇ ಹೋಗಬೇಕಾಗಿತ್ತು. ಅಮೀರಿ ಜುಮ್ಲ ಎಂದು ಅರ್ಥಮಂತ್ರಿಯನ್ನು ವಿದೇಶಾಂಗ ಮಂತ್ರಿಯನ್ನು ಅಷಾಫ್ ಎಂದೂ ನ್ಯಾಯಾಡಳಿತ ಮುಖ್ಯಸ್ಥನಿಗೆ ಸದರ್–ಇ–ಜಹಾನ್ ಎಂದೂ ಕರೆಯುತ್ತಿದ್ದರು. ಸಾಮಾನ್ಯ ವ್ಯವಹಾರಗಳ ನಿರ್ವಹಣೆಯನ್ನು ದೇಸಾಯಿ ನೋಡಿಕೊಳ್ಳುತ್ತಿದ್ದ. ವಜೀರ್, ಕೊತ್ವಾಲ್ ಮತ್ತು ದಿವಾನ್‌ರೆಂಬ ಉಪಮಂತ್ರಿಗಳಿದ್ದರು.

ಪ್ರಾಂತ್ಯಗಳ ಗವರ್ನರ್‌ಗಳಿಗೆ ತರಫ್‌ದಾರರೆಂದು ಕರೆಯುತ್ತಿದ್ದರು. ಬಹಮನಿ ರಾಜ್ಯದ ಸ್ಥಾಪಕ ಹಸನ್‌ಗಂಗು ರಾಜ್ಯವನ್ನು ನಾಲ್ಕು ತರಫ್‌ಗಳಾಗಿ ವಿಂಗಡಿಸಿದ್ದ. ಈ ಪ್ರಾಂತ್ಯಾಧಿಕಾರಿಗಳು ಹೆಚ್ಚಿನ ಅಧಿಕಾರ ಪಡೆದಿದ್ದರು. ಗಾವಾನ್ ಅವರ ಅಧಿಕಾರ ಕಡಿಮೆ ಮಾಡಿದ. ಹಸನ್‌ಖಾನ್ ಮತ್ತು ಮಲಿಕ್‌ಗಳೆಂಬ ಬಿರುದನ್ನು ಸೃಷ್ಟಿಸಿದ. ಅಧಿಕಾರ ವರ್ಗದ ವರಿಷ್ಠರಿಗೆ ಕುತುಬ್–ಉಲ್–ಮುಲ್ಕ್ ಮತ್ತು ಖ್ವಾಜಾ–ಜಹಾನ್ ಎಂಬ ಬಿರುದುಗಳನ್ನು ನೀಡುತ್ತಿದ್ದರು. ಅವರು ಅಧಿಕಾರವರ್ಗದ ಉಕ್ಕಿನ ಚೌಕಟ್ಟಿನಂತಿದ್ದರು. ಕಂದಾಯ ವಸೂಲಿ, ಸೇನೆಯ ಜಮಾವಣೆ, ಸೇನೆಯ ನಾಯಕತ್ವ ಮತ್ತು ಅಧಿಕಾರಿಗಳ ನೇಮಕ ಇವು ಪ್ರಾಂತ್ಯಾಧಿಕಾರಿ ಗಳ ಕರ್ತವ್ಯಗಳಾಗಿದ್ದುವು. ಒಂದೇ ಕಡೆ ತಳವೂರದಂತೆ ಮಾಡಲು ತರಫ್‌ದಾರರನ್ನು ಬೇರೆ ಬೇರೆ ಕಡೆಗೆ ವರ್ಗಾಯಿಸುವ ಸಂಪ್ರದಾಯವಿತ್ತು. ಮಹ್ಮೂದ್ ಗಾವಾನ್ ರಾಜ್ಯಗಳನ್ನು ಎಂಟು ವಿಭಾಗಗಳಾಗಿ ವಿಂಗಡಿಸಿದ. ಕೆಲವು ವೇಳೆ ಒಂದಕ್ಕಿಂತ ಹೆಚ್ಚು ತರಫ್‌ದಾರರು ಬಹಮನಿ ಆಸ್ಥಾನದಲ್ಲಿ ಮಂತ್ರಿಗಳಾಗಿರುತ್ತಿದ್ದುದುಂಟು. ಉದಾಹರಣೆಗೆ ಮಹ್ಮೂದ್ ಗಾವಾನ್ ಕೇಂದ್ರದಲ್ಲಿ ಪ್ರಧಾನಮಂತ್ರಿಯಾಗಿದ್ದುದಲ್ಲದೆ ಬಿಜಾಪುರ ವಿಭಾಗದ ತರಫ್‌ದಾರನೂ ಆಗಿದ್ದ. ಇದರ ಜೊತೆಗೆ ಅವನು ಅಮೀರಿ ಜುಮ್ಲಾ ಸಹ ಆಗಿದ್ದ. ತರಫ್‌ಗಳನ್ನೂ ಸರ್ಕಾರಗಳಾಗಿ, ಸರ್ಕಾರಗಳನ್ನು ಪರಗಣಗಳಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಪರಗಣದಲ್ಲೂ ಗೊತ್ತಾದ ಸಂಖ್ಯೆಯ ಹಳ್ಳಿಗಳಿರುತ್ತಿದ್ದುವು. ಗ್ರಾಮಾಡಳಿತ ಪ್ರಾಥಮಿಕ ಘಟಕವಾಗಿತ್ತು. ಆಡಳಿತ ಈ ಬಗೆಯ ಅಡಿಗಲ್ಲಿನ ಮೇಲೆ ನಿಂತಿತ್ತು.

**ಶಾಸನಗಳು:** ಬಹಮನಿ ಸುಲ್ತಾನರ ಶಾಸನಗಳು ವಿಶೇಷವಾಗಿ ಕಂಡುಬಂದಿರುವುದು ಪಾರಸೀ ಮತ್ತು ಅರಬ್ಬಿ ಭಾಷೆಗಳಲ್ಲಿ. ಅಪರೂಪವಾಗಿ ಸಂಸ್ಕೃತ, ಕನ್ನಡ, ತೆಲುಗು, ಮರಾಠಿ ಮುಂತಾದ ಸ್ಥಳೀಯ ಭಾಷೆಗಳನ್ನು ಬಳಸಿದ ದ್ವಿಭಾಷಾ ಶಾಸನಗಳು ಕಾಣಿಸಿಕೊಂಡಿವೆ. ಆರಂಭದ ಶಾಸನಗಳಿರುವುದು ಅರಬ್ಬಿ ಭಾಷೆಯ ಗದ್ಯದಲ್ಲೆ. ಅನಂತರ ಬಳಕೆಗೆ ಬಂದ ಪಾರಸಿ ಭಾಷೆಯ ಶಾಸನಗಳು ಹೆಚ್ಚು ಹೆಚ್ಚು ಪದ್ಯಶೈಲಿಯನ್ನು ಆಶ್ರಯಿಸಿವೆ. ಈ ಭಾಷೆಯ ಗದ್ಯ ಶಾಸನಗಳು ಆರಂಭದಲ್ಲೆ ಬಳಕೆಯಲ್ಲಿದ್ದುವು. ಮಹಮ್ಮದೀಯ ಶಾಸನಗಳು ಸಾಮಾನ್ಯವಾಗಿ ಭಾಷಾ ದೃಷ್ಟಿಯಿಂದ ಗಮನಾರ್ಹವಾದದ್ದು. ಆದರೆ ಬಹಮನಿ ಸುಲ್ತಾನರ ಪಾರಸೀ ಭಾಷೆಯ ಪದ್ಯ ಶಾಸನಗಳಲ್ಲಿ ಕಾಣಿಸಿಕೊಂಡಿರುವುದು ಕಲುಷಿತ ಭಾಷೆ. ವ್ಯಾಕರಣ ಹಾಗೂ ಛಂದಸ್ಸಿನ ನಿಯಮಗಳನ್ನು ಪಾಲಿಸದ ಈ ಶಾಸನಗಳಲ್ಲಿ ದೋಷಗಳೇ ಹೆಚ್ಚು. ಆದರೆ ಬಳಸಿದ ಲಿಪಿಮಾತ್ರ ಕಾಗದಗಳ ಮೇಲಿನ ಬರೆಹಗಳಷ್ಟೇ ಸುಂದರ ಅಲಂಕಾರಿಕ.

ಕುಫಿ, ನಸ್ಖ್, ಥುಲ್ತ್, ನಸ್ತಾಲಿಕ್ ಹಾಗೂ ತುಘ್ರಾ ಇವರು ಬಳಸಿದ ಲಿಪಿಗಳು. ಇವುಗಳಲ್ಲೆ ಹೆಚ್ಚು ಅಲಂಕಾರಿಕವಾದದ್ದು ನಸ್ಖ್‌ಲಿಪಿ. ಬಿಲ್ಲು ಮತ್ತು ಬಾಣದ ಆಕಾರದಲ್ಲಿ ಅಥವಾ ಧ್ವಜಗಳನ್ನು ಎತ್ತಿಹಿಡಿದ ಸೈನ್ಯ ಶಿಸ್ತಿನಿಂದ ಮುಂದುವರಿಯುತ್ತಿರುವ ರೀತಿಯಲ್ಲಿ ಈ ಅಕ್ಷರಗಳನ್ನು ಜೋಡಿಸಲಾಗಿದೆ. ತುಘ್ರಾ ಶೈಲಿಯಲ್ಲಿ ಅಕ್ಷರಗಳನ್ನು ಪಕ್ಷಿಗಳ ಅಥವಾ ಪ್ರಾಣಿಗಳ ಆಕಾರದಲ್ಲಿ ಜೋಡಿಸಲಾಗಿದೆ. ಇವುಗಳಲ್ಲಿ ಸಿಂಹ ಅಥವಾ ಹುಲಿಯ ಚಿತ್ರ ಹೋಲುವ ಅಕ್ಷರ ಜೋಡಣೆ ಪ್ರಮುಖವಾಗಿದ್ದು ಇದು ಸೂಚಿಸುವುದು ದೈವ ಸಿಂಹವೆನಿಸಿದ ಆಲಿಯನ್ನು. ಆದರೆ ಇವನ್ನು ದೃಷ್ಟಿದೋಷಪರಿಹಾರಕ್ಕಾಗಿ ಬಳಸಲಾಗಿದೆ ಎಂಬ ಒಂದು ಅಭಿಪ್ರಾಯವಿದೆ. ಇಂತಹ ಲಿಪಿಯನ್ನು ಸಾಧಾರಣವಾಗಿ ದಖ್ಖನ್ನಿನ ಕೋಟೆ ಗಳ ಗೋಡೆಗಳ ಮೇಲೆ ಕಾಣಬಹುದು. ಥುಲ್ತ್ ಹಾಗೂ ಸನ್ತಾಲಿಕ್‌ಗಳು ನಸ್ಖ್‌ನ ಉಪಶೈಲಿಗಳು.

ಈ ಶಾಸನಗಳನ್ನು ಬಲುಮಟ್ಟಿಗೆ ಮಸೀದಿ, ಗೋರಿ ಅಥವಾ ಧಾರ್ಮಿಕ ಕಟ್ಟಡಗಳಲ್ಲಿ ಬರೆಸಲಾಗಿದೆ. ಇವುಗಳಲ್ಲಿ ಸಾಮಾನ್ಯವಾಗಿ ಸುಲ್ತಾನರ ಹೆಸರು, ಕಟ್ಟಡ ಕಟ್ಟಿಸಿದವನ ಹೆಸರು, ಶಾಸನದ (ಅಥವಾ ಕಟ್ಟಡ ಕಟ್ಟಿಸಿದ) ಕಾಲಗಳನ್ನು ಒಳಗೊಂಡ ವಿವರಗಳಿವೆ. ಕೋಟೆ, ಬಾಗಿಲುವಾಡ, ಬಾವಿ, ಮುಂತಾದವನ್ನು ಕಟ್ಟಿಸಿದ ಅಥವಾ ಜೀರ್ಣೋದ್ಧಾರ ಮಾಡಿಸಿದ ಸಂದರ್ಭಗಳಲ್ಲಿಯೂ ಶಾಸನಗಳನ್ನು ಕೆತ್ತಿಸಲಾಗಿದೆ. ಕತ್ತಿ, ಬಂದೂಕು ಮುಂತಾದ ಶಸ್ತ್ರಾಸ್ತ್ರಗಳ ಮೇಲೂ ಮುದ್ರೆಗಳು, ಪತ್ರಗಳು ಮುಂತಾದ ದೈನಂದಿನ ಬಳಕೆಯ ವಸ್ತುಗಳ ಮೇಲೂ ಶಾಸನಗಳನ್ನು ಕೆತ್ತಿಸಿರುವ ಉದಾಹರಣೆಗಳಿವೆ. ಇದು ಆ ಕಾಲದ ಪದ್ಧತಿಯಾಗಿತ್ತು ಎನ್ನಬಹುದು. ನಯಗೊಳಿಸಿದ ಶಿಲೆಗಳನ್ನು ಶಾಸನಗಳಿಗೆ ಬಳಸಲಾಗಿದೆ. ಈ ಅವಧಿಯಲ್ಲಿ ಯಾವ ಒಂದು ತಾಮ್ರಶಾಸನವೂ ಕಂಡುಬಂದಿಲ್ಲ. ಕೆಲವೊಮ್ಮೆ ಶಾಸನ ಕಲ್ಲುಗಳನ್ನು ಅವುಗಳ ಸಂರಕ್ಷಣೆಗಾಗಿ ಸ್ಥಾನಪಲ್ಲಟಗೊಳಿಸಿರುವುದರಿಂದ ಹಲವಾರು ಸಂದರ್ಭಗಳಲ್ಲಿ ಮಸೀದಿಗಳಲ್ಲಿ ಇರಬಹುದಾದ ಶಾಸನಗಳು ಗೋರಿಗಳ ಮೇಲೂ ಗೋರಿಯ ಶಾಸನಗಳು ಮಸೀದಿಗಳ ಮೇಲೂ ಕಾಣಿಸಿಕೊಂಡಿವೆ. ಕಲ್ಲಿನೊಳಗೆ ಅಕ್ಷರಗಳನ್ನು ಕೊರೆಯುವ ಪದ್ಧತಿಯ ಜೊತೆಗೆ ಸುತ್ತಲಿನ ಭಾಗವನ್ನು ತೆಗೆದು ಅಕ್ಷರಗಳು ಉಬ್ಬಿದಂತೆ ಕಡೆದಿರುವುದೂ ಬರೆಹದ ವೈಶಿಷ್ಟ್ಯವಾಗಿದೆ.

ಬಹಮನಿ ಸುಲ್ತಾನರ ಕಾಲಕ್ಕೆ ಕಾಗದದ ಬಳಕೆ ತಿಳಿದಿತ್ತಾದ್ದರಿಂದ ಶಾಸನಗಳನ್ನು ಕೊರೆಯಿಸುವ ಪದ್ಧತಿ ಕ್ರಮೇಣ ಕಡಿಮೆಯಾಗುತ್ತ ಬಂತು. ಇದರಿಂದ ವಿಶೇಷ ಪ್ರಯೋಜನ ಕಂಡುಬರಲಿಲ್ಲವೆಂದೇ ಈ ಸಮಕಾಲೀನ ಶಾಸನಗಳಲ್ಲಿ ಐತಿಹಾಸಿಕವಾಗಿ ಮಹತ್ತ್ವದ್ದೆನಿಸುವ ಯಾವ ಶಾಸನಗಳೂ ಕಾಣಿಸಿಕೊಂಡಿಲ್ಲ. ಆದರೂ ಕೆಲವು ಸಂದರ್ಭಗಳಲ್ಲಿ ಅರಸರ ವಂಶಾವಳಿ ಆಳಿಕೆಯ ಕಾಲ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಲಭಿಸುವ ವಿವರಗಳು ಸಮಕಾಲೀನ ಇತಿಹಾಸಕಾರರ, ಯಾತ್ರಿಕರ ಬರೆವಣಿಗೆಗಳಲ್ಲಿನ ಹೇಳಿಕೆಗಳಿಗೆ ಪುಷ್ಟಿ ನೀಡುತ್ತವೆ ಅಥವಾ ಆ ಹೇಳಿಕೆಗಳನ್ನು ಅಲ್ಲಗಳೆಯುತ್ತದೆ.

**ನಾಣ್ಯಗಳು:** ಬಹಮನಿ ಸುಲ್ತಾನರು ನಾಣ್ಯಗಳನ್ನು ಚಿನ್ನ, ಬೆಳ್ಳಿ ಮತ್ತು ತಾಮ್ರದ ಲೋಹಗಳಲ್ಲಿ ಅಚ್ಚು ಹಾಕಿಸಿದ್ದಾರೆ. ವಿನ್ಯಾಸ, ತೂಕ ಮತ್ತಿತರ ವಿಷಯಗಳಲ್ಲೂ ಇವರ ನಾಣ್ಯಗಳು ಸಮಕಾಲೀನ ದೆಹಲಿಯ ಸುಲ್ತಾನರ ನಾಣ್ಯಗಳನ್ನೇ ಹೋಲುತ್ತವೆ. ಇವರು ಅಚ್ಚು ಹಾಕಿಸಿದ ಟಂಕಗಳು ಮಹಮ್ಮದ್–ಬಿನ್–ತುಗಲಕ್‌ನ ದೀನಾರ್‌ಗಳಷ್ಟೇ ತೂಕವನ್ನು ಹೊಂದಿದ್ದವು. ಚಿನ್ನದ ನಾಣ್ಯಗಳ ತೂಕ ಸು.170–199 ಗ್ರೇನ್‌ಗಳು. ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ಸಾಮಾನ್ಯವಾಗಿ ಸು.170 ಗ್ರೇನ್ ತೂಕದವು. ಆದರೆ ತಾಮ್ರದ ನಾಣ್ಯಗಳಲ್ಲಿ ಅತಿ ಹೆಚ್ಚಿನ ತೂಕದ ನಾಣ್ಯ 260 ಗ್ರೇನ್. ಅತಿಕಿರಿದಾದ ನಾಣ್ಯ ಕೇವಲ 26 ಗ್ರೇನ್ ತೂಕ ಪಡೆದಿತ್ತು. ನಾಣ್ಯಗಳು ವೃತ್ತಾಕಾರದಲ್ಲಿದ್ದು ಅವುಗಳ ಎರಡೂ ಕಡೆಗಳಲ್ಲಿ ಆಲೇಖಗಳಿರುತ್ತವೆ. ಆಯಾಕಾರದ ನಾಣ್ಯಗಳು ಬಹಳ ಕಡಿಮೆ ಪ್ರಮಾಣದಲ್ಲಿವೆ. ಗುಲ್ಬರ್ಗ (ಅಹಸಾನಾಬಾದ್), ಬೀದರ್ (ಮಹಮ್ಮದಾಬಾದ್) ಮತ್ತು ದೌಲತಾಬಾದ್‌ಗಳಲ್ಲಿ (ಫುತಹಬಾದ್) ಇವರ ಟಂಕಸಾಲೆಗಳಿದ್ದುವು.

1ನೆಯ, 2ನೆಯ ಹಾಗೂ 3ನೆಯ ಮಹಮ್ಮದ್, ಮುಜಾಹಿದ್, ಫಿರೋಜ್ 2ನೆಯ ಹಾಗೂ 3ನೆಯ ಅಹಮದ್, ಹುಮಾಯೂನ್ ಮತ್ತು ಮಹ್ಮೂದರ ಆಳಿಕೆಯಕಾಲದ ಚಿನ್ನದ ನಾಣ್ಯಗಳು ದೊರೆತಿವೆ. ಈ ನಾಣ್ಯಗಳ ಮುಖಗಳಲ್ಲಿ ಸುಲ್ತಾನನ ಹಾಗೂ ಒಮ್ಮೊಮ್ಮೆ ಅವನ ತಂದೆಯ ಹೆಸರು, ಅವನ ಬಿರುದುಗಳು ಹಾಗೂ ಕುರಾನಿನಿಂದ ಉದ್ಧೃತವಾದ ವಾಕ್ಯಗಳನ್ನೂ ಆಲೇಖಗಳಾಗಿ ಖಂಡರಿಸಲಾಗಿದೆ. ಅಲಾಉದ್ದೀನ್ ಬಹಮನ್ ಬೆಳ್ಳಿಯ ನಾಣ್ಯದಲ್ಲಿ ಸುದೀರ್ಘವಾದ ಅಸ್ ಸುಲ್ತಾನೂಲ್ ಅಜಮ್ ಅಲಾದ್‌ದು ಸ್ಯಾವದ್ದೀನ್ ಅಬುಲ್ ಮುಝಾಫರ್ ಬಹಮನ್ ಷಾ ಅಸ್ ಸುಲ್ತಾನ್ ಎಂಬ ನಾಲ್ಕು ಸಾಲುಗಳ ಅಲೇಖ್ಯವಿದೆ. ಅತಿ ಹಿರಿದಾದ 196 ಗ್ರೈನ್ ತೂಕದ ಒಂದನೆಯ ಮಹಮ್ಮದನ ಚಿನ್ನದ ನಾಣ್ಯ ಅಹಸಾನಾಬಾದಿನ ಟಂಕಸಾಲೆಯಲ್ಲಿ ಅಚ್ಚಾಗಿದ್ದು, ಇದನ್ನು ಈ ಸುಲ್ತಾನ ಚಲಾವಣೆಗೆ ತಂದನೆಂಬುದರ ಬಗೆಗೆ ಏಕಾಭಿಪ್ರಾಯವಿಲ್ಲ. ಇದರ ಹಿಮ್ಮುಖದಲ್ಲಿ ಮಹಮ್ಮದ್ ಹಸನ್ ಬಹಮನೀ ಎಂಬ ಹೆಸರು ಮಾತ್ರ ಇರುವುದು ಸಂದೇಹಕ್ಕೆಡೆ ಮಾಡಲು ಕಾರಣವಾಗಿದೆ. ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಟಂಕಿಸಿದ ಫಿರೋಜನ ಚಿನ್ನದ ನಾಣ್ಯದ ಸುತ್ತಲೂ ಬುರಿಬಾಹಜರ್ ದಿನಾರ್ ದಾರಲ್ ಮುಲ್ಕ್ ಅಹಸಾನಾಬಾದ್ ಎಂಬ ಆಲೇಖವಿದೆ. ಇದರ ವರ್ಷವನ್ನು 800 ಎಂದು ಸೂಚಿಸಿದೆ. ಸಾಮಾನ್ಯವಾಗಿ ಟಂಕಸಾಲೆಗಳನ್ನು ಸೂಚಿಸುವ ಆಲೇಖ ಜುರಿದಾಬೇ ಹಜರತ್ ಅಥವಾ ಹಿಘಾಜರತ್ ಅಹಸಾನಾಬಾದ್ (ಮಹಮ್ಮದಾಬಾದ್) ಎಂದಿರುತ್ತದೆ. ಫಿರೋಜನ ತಾಮ್ರದ ನಾಣ್ಯಗಳಲ್ಲಿ ಕೆಲವು ಆಯಾಕಾರವುಳ್ಳವು. ಹುಮಾಯೂನ್ ಚಲಾವಣೆಗೆ ತಂದ ಎರಡು ವಿಧದ ಚಿನ್ನದ ಟಂಕಗಳಲ್ಲಿ ಒಂದರ ಮುಮ್ಮುಖದಲ್ಲಿ ಅಬ್‌ಮುತವಕ್ಕಿಲ್ ಅಲೈಲ್ಲಾಹಿಬ್ ಖವಿಯಿಲ್ ಘನಿ ಅಬ್ದುಲ್ ಮುಘಜಿ ಎಂದೂ ಹಿಮ್ಮುಖದಲ್ಲಿ ಅಲ್ಲಾದ್ದ್ಯುನವದ್ದೀನ್ ಹುಮಾಯೂನ್ ಷಾ ಬಿನ್ ಅಹ್ಮದ್ ಅಲ್ ವಲಿಯಲ್ ಬಹಮನಿ ಎಂದೂ ಆಲೇಖಗಳನ್ನು ಕೆತ್ತಲಾಗಿದೆ. ಮುಜಾಹಿದ್‌ನ ಬೆಳ್ಳಿ ನಾಣ್ಯದ ಮುಮ್ಮುಖದ ಚೌಕದಲ್ಲಿ ಅಲ್ ಮುವಾಯ್ಯಿದ್ ಬಿನಸ್ತಲ್ಲಾ ಯಮಿನೂಲ್ ಖಿಲಾಫತ್ ನಸಿರು ಅಮಿರಿಲ್ ಮೂಮಿನಿನ್ ಎಂದು ಕೆತ್ತಲಾದ ಆಲೇಖದ ಬರೆವಣಿಗೆ ಕಲಾತ್ಮಕವಾಗಿದ್ದು ಗಮನಾರ್ಹವಾಗಿದೆ. ಹಿಜಾರಾ ಕಾಲ ಗಣನೆಯ 779ನೆಯ ವರ್ಷದಲ್ಲಿ ಟಂಕಿಸಲಾದ ಈ ನಾಣ್ಯ 170 ಗ್ರೈನ್ ತೂಕ ಪಡೆದಿದೆ. ಇದನ್ನು ಅಹಸಾನಾಬಾದ್ ಟಂಕ ಸಾಲೆಯಲ್ಲಿ ಅಚ್ಚುಹಾಕಲಾಗಿತ್ತು. 1397ರಲ್ಲಿ ಕೇವಲ ಎರಡು ತಿಂಗಳು ಆಳಿದ ಘಿಯಾಸುದ್ದೀನ್ ಬೆಳ್ಳಿಯ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿದ್ದು ಉಲ್ಲೇಖನೀಯ. ಇವುಗಳಲ್ಲಿ ಈತನನ್ನು ತಹಂತನ್‌ಷಾ ಎಂಬ ಬಿರುದಿನಿಂದ ಕರೆಯಲಾಗಿದೆ. ಆದ್ದರಿಂದ ಇದು ಘಿಯಾಸುದ್ದೀನನದೆಂಬುದನ್ನು ಸಂದೇಹಿಸಲಾಗಿತ್ತು. ತಹಂತನ್ ಎಂಬುದನ್ನು ಬಹಮನ್ ಎಂದು ಕೆಲವರು ಓದಿದ್ದರಾದರೂ ಅದು ತಹಂತನ್ ಎಂಬುದೇ ಸರಿಯೆಂದು ಈಗ ಖಚಿತಗೊಳಿಸಲಾಗಿದೆ. ಇತ್ತೀಚೆಗೆ ಇಂತಹ ನಾಣ್ಯಗಳು ಇನ್ನಷ್ಟು ದೊರೆತಿವೆ. (ಬಿ.ಆರ್.ಜಿ.)

**ವಾಸ್ತುಶಿಲ್ಪ:** ಬಹಮನಿ ವಾಸ್ತುಶಿಲ್ಪ ಬಲುಮಟ್ಟಿಗೆ ಗುಲ್ಬರ್ಗ ಮತ್ತು ಬೀದರ್‌ಗಳಿಗೆ ಸೀಮಿತವಾಗಿದೆ. ಆರಂಭದಲ್ಲಿ ಸುಲ್ತಾನರು ಗುಲ್ಬರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡಾಗ ಅಲ್ಲಿ ಕೋಟೆ, ಮಸೀದಿ ಮುಂತಾದ ಇತರ ಕಟ್ಟಡಗಳನ್ನು ಕಟ್ಟಿಸಿದರು. ಕರ್ನಾಟಕದಲ್ಲಿ ಇಸ್ಲಾಮ್ ಸಂಪ್ರದಾಯಕ್ಕೆ ಸೇರಿದ ವಾಸ್ತುಶಿಲ್ಪ ಶೈಲಿ ರೂಢಿಗೆ ತಂದ ಶ್ರೇಯಸ್ಸು ಬಹಮನೀ ಸುಲ್ತಾನರದು. ಗುಲ್ಬರ್ಗದ ಕೋಟೆ ಅಲಾಉದ್ದೀನ್‌ನ (1347–50) ಕಾಲದ ಸು. 3ಕಿಮೀ ಸುತ್ತಳತೆಯ ಸುಭದ್ರವಾದ ಕಟ್ಟಡ. 15.25ಮೀ ದಪ್ಪದ ಹೊರ ಗೋಡೆಯ ಸುತ್ತಲೂ 9.14ಮೀ ಅಗಲದ ಆಳವಾದ ಕಂದಕ. ಒಳಭಾಗದಲ್ಲಿರುವ ಶಿಲೆಯ ಮೇಲೆಯೇ ಕಟ್ಟಲಾದ ಗೋಡೆತಳ ಶಿಲೆಯ ಏರು ತಗ್ಗುಗಳನ್ನೇ ಅನುಸರಿಸಿದೆ. ಗೋಡೆಗಳ ಮೇಲೆ ಒಮ್ಮೊಮ್ಮೆ 3ಮೀ ಎತ್ತರದ ಏಕಶಿಲೆಯ ತೆನೆಗಳು. ಕೋಟೆಯೊಳಗಿನ ಕಟ್ಟಡಗಳೆಲ್ಲ ಈಗ ನೆಲಸಮವಾಗಿವೆ. ಆದರೆ ಒಂದನೆಯ ಮಹಮ್ಮದನ ಕಾಲದಲ್ಲಿ ಕಟ್ಟಲಾದ ಜುಮ್ಮಾಮಸೀದಿ ಇನ್ನೂ ಉಳಿದಿದೆ. 65845364ಚ.ಮೀ ಅಳತೆಯ ಈ ದೊಡ್ಡ ಮಸೀದಿಯ ಶಿಲ್ಪಿ ಇರಾನ್ ದೇಶದ ಕ್ವಾಜಿ ಪ್ರಾಂತ್ಯದಿಂದ ಬಂದ ರಫಿ ಎಂಬಾತನೆಂದು ತಿಳಿದುಬಂದಿದೆ. ಒಳಹಜಾರದಲ್ಲಿ ಉದ್ದಗಲಗಳಲ್ಲಿ ಹಬ್ಬಿರುವ ಕಮಾನುಗಂಬಗಳ ಅಂಕಣಗಳಿರುವುದು ಇದರ ವೈಶಿಷ್ಟ್ಯ. ಒಂದೊಂದು ಅಂಕಣದ ಮೇಲೆಯೂ ಒಂದೊಂದು ಗುಮ್ಮಟವಿರುವುದು. ಕಮಾನುಗಂಬಗಳು ಹೆಚ್ಚು ಎತ್ತರವಾಗಿಲ್ಲ. ಆದರೆ ಪ್ರಾರ್ಥನಾಮಂದಿರದ ಕಮಾನುಗಳು ಇವುಗಳಿಗಿಂತ ಎತ್ತರವಾಗಿದ್ದು ಆ ಅಂಕಣಗಳ ಮೇಲಿನ ಹಿಂಬದಿಯ ಗುಮ್ಮಟಗಳು ಸಹ ಇತರ ಗುಮ್ಮಟಗಳಿಗಿಂತ ಎತ್ತರವಾಗಿವೆ. ಮಸೀದಿಯ ಮುಂಭಾಗ ಹಾಗೂ ಎರಡೂ ಪಕ್ಕಗಳು ತೆರೆದಿದ್ದು ಹಿಂಭಾಗದಲ್ಲಿ ಮಾತ್ರ ಮಟ್ಟ ಗೋಡೆಯಿದೆ. ಪ್ರವೇಶದ್ವಾರವಿರುವ ಪೂರ್ವಭಾಗದ ಕಮಾನಿನ ಚಾವಣಿಯ ಮೇಲೆ ಮೂಲೆಗಳಲ್ಲಿ ತೆಳುವಾದ ಅಷ್ಟೇನೂ ಎತ್ತರವಿಲ್ಲದ ಸ್ತಂಭಗೋಪುರಗಳಿವೆ. ಮಸೀದಿಯ ಮೇಲೇರಿ ಹೋಗಲು ಮುಂಭಾಗದ ಎಡಮೂಲೆಯಲ್ಲಿ ಮೆಟ್ಟಲುಗಳಿದ್ದು ಅದರ ಮೇಲೆ ನಿಂತಾಗ ಸಣ್ಣ ದೊಡ್ಡ ಗುಮ್ಮಟಗಳ ರಾಶಿಯೇ ಕಣ್ಣಿಗೆ ಬೀಳುತ್ತದೆ. ಸ್ಪೇನಿನ ಕಾರ್ಡೋವದ ಮಸೀದಿ ಯನ್ನು ಇದು ಹೋಲುತ್ತದೆ ಎಂಬುದು ಅಭಿಪ್ರಾಯ. ಆದರೆ ಶಿಲ್ಪಿ ಸಮಕಾಲೀನ ತುರ್ಕಿ ಮಸೀದಿಗಳ ಬೈಜಾಂಟೀಯನ್ ಶೈಲಿಯನ್ನು ಅನುಸರಿಸಿದ್ದಾನೆಂದು ಯಾಜ್ದಾನಿಯವರು ಸೂಚಿಸಿದ್ದಾರೆ.

ಸಮಕಾಲೀನ ಷಾ ಬಜಾರ್ ಮಸೀದಿ ಜುಮ್ಮಾಮಸೀದಿಯ ಶೈಲಿಗಿಂತ ಭಿನ್ನವಾದುದು. ಮುಂಭಾಗದಲ್ಲಿ ಕಮಾನಿನ ಪ್ರವೇಶದ್ವಾರವುಳ್ಳ ಇದರ ಎರಡೂ ಕಡೆಗಳಲ್ಲಿ ಎತ್ತರದ ಮಿನಾರುಗಳಿವೆ. ಇದರ ಹಿಂದೆ ತೆರೆದ ಅಂಗಳ ಅದರ ಹಿಂದಕ್ಕೆ ಮುಚ್ಚಿದ ಹಜಾರ. ಇದು ಪ್ರಾರ್ಥನಾಮಂದಿರ. 45.72x18.29ಚ.ಕಿಮೀ ವಿಸ್ತಾರವಾಗಿದೆ. ಹಜಾರದ ಮುಂಭಾಗದಲ್ಲಿ 15ಕಮಾನುಗಳಿದ್ದು ಇದೇ ನೇರದಲ್ಲಿ ಪ್ರತಿ ಸಾಲಿನಲ್ಲೂ ಕಮಾನುಗಳು. ಇದರ ಗೋಡೆಗಳು ಒಳಬಾಗಿದಂತೆ ತೋರುತ್ತವೆ. ಬಹಮನಿ ಅರಸರ ಮತ್ತು ಅವರ ಪರಿವಾರದವರ ಏಳು ಸಮಾಧಿಗಳ ಸಮೂಹ ಹಫ್ತ್‌ಗುಂಬಜ್. ನಾಲ್ಕು ಸಮಾಧಿಗಳು ಸುಲ್ತಾನರದು. ಮುಜಾಹಿದ್ ಹಾಗೂ ಫಿರೋಜರ ಸಮಾಧಿಗಳು ಇವುಗಳಲ್ಲಿ ಸೇರಿವೆ. ಫಿರೋಜನ ಸಮಾಧಿಯ (48.16x23.77ಚ.ಕಿಮೀ) ಗೋಡೆಗಳ ಎತ್ತರ 12.8ಮೀ. ಮೇಲುಗಡೆ 9.14ಮೀ ಎತ್ತರದ ಎರಡು ಅರ್ಧವೃತ್ತಾಕಾರದ ಗುಮ್ಮಟಗಳಿವೆ. ಒಳಗಿನ ಎರಡು ಸಮಾಧಿ ಗೃಹಗಳು ಚೌಕಾಕಾರದಲ್ಲಿದ್ದು ಅವಕ್ಕೆ ಎರಡಂತಸ್ತಿನ ಅಲಂಕೃತ ಕಮಾನುಗಳಿವೆ.

ಬೀದರಿನ ಕಟ್ಟಡಗಳಲ್ಲಿ ಅರಮನೆ ಹಾಗೂ ಗಾವಾನನ ಮದರಸಾ ಗಮನಾರ್ಹ. ಇವುಗಳಲ್ಲಿ ಪರ್ಷಿಯನ್ ಶೈಲಿಯ ಪ್ರಭಾವ ಕಂಡುಬರುತ್ತದೆ. ಮದರಸಾವನ್ನು 1472ರಲ್ಲಿ ಕಟ್ಟಲಾಯಿತು. 68.48x54.86ಚ.ಕಿಮೀ ವಿಸ್ತಾರದ ಈ ಕಟ್ಟಡದ ಸುತ್ತಲೂ ವಿದ್ಯಾರ್ಥಿಗಳಿಗೂ

ಅಧ್ಯಾಪಕರಿಗೂ ಕೋಣೆಗಳ ಮಧ್ಯದಲ್ಲಿ ವಿಶಾಲವಾದ ಪ್ರಾಂಗಣ. ಬಿದರೆಯ ಕೋಟೆಯೊಳಗೆ ವಾಸಗೃಹಗಳಾಗಿದ್ದ ತಖ್ತ್‌ಮಹಲ್, ಜನಾನಾಮಹಲ್, ಕಾರಂಜಿಗಳು, ಹಮಾಮ್‌ಗಳು ಅವಶೇಷಗಳಾಗಿ ಉಳಿದಿವೆ. ಕೋಟೆ ಗುಲ್ಬರ್ಗದ ಕೋಟೆಗಿಂತಲೂ ದೊಡ್ಡದು, ಆದರೆ ವಿನ್ಯಾಸದಲ್ಲಿ ಕಟ್ಟುವಿಕೆಯಲ್ಲಿ ಹೆಚ್ಚಿನ ವಿಶೇಷಗಳೇನೂ ಇಲ್ಲ. ಇಲ್ಲಿರುವ ಬಹಮನಿಯರ ಹನ್ನೆರಡು ಸಮಾಧಿಗಳಲ್ಲಿ ಸ್ಥಳೀಯ ದಖನೀ ಶೈಲಿಯನ್ನು ಗುರುತಿಸಬಹುದು. (ಎಸ್.ಎಸ್.)

**ಬಹಾಯಿ:** ಇಂದಿನ ಇರಾನ್ ದೇಶದಲ್ಲಿ ಪ್ರಚಲಿತವಿರುವ ಒಂದು ಧರ್ಮ. ಷಿಯ ಪಂಥದ ಬಹಾವುಲ್ಲಾ ಎಂಬುವವನಿಂದ 19ನೆಯ ಶತಮಾನದಲ್ಲಿ ಪ್ರಚಾರಕ್ಕೆ ಬಂದಿತು. ಈತ 1863ರಲ್ಲಿ ಬಾಗ್ದಾದ್‌ನಲ್ಲಿ ತನಗೆ ದೈವಸಾಕ್ಷಾತ್ಕಾರವಾಯಿತೆಂದು ಘೋಷಿಸಿಕೊಂಡ. ಇಮಾಮ್‌ರ ಪುನರುತ್ಥಾನಕ ಎಂದು ಕರೆದುಕೊಂಡ. ಪರ್ಷಿಯ ಸಮಾಜದ ಕುಲೀನ ಮನೆತನದವನಾದ ಈತ ಪರ್ಷಿಯ ಸಮಾಜದಲ್ಲಿ ಬೇರೂರಿದ್ದ ಮೂಲಭೂತವಾದ ಮತ್ತು ಭ್ರಷ್ಟಾಚಾರದ ವಿರುದ್ಧ ಜನರಲ್ಲಿ ಜಾಗೃತಿ ತರಲು ಸುಧಾರಣಾ ಚಳವಳಿ ಪ್ರಾರಂಭಿಸಿದ. ಈ ಚಳವಳಿಯ ಬೆಂಬಲಿಗರನ್ನು ಬಾಬ್‌ಗಳೆಂದು ಕರೆಯಲಾಗುತ್ತದೆ. ಭ್ರಷ್ಟಾಚಾರ ವಿರುದ್ಧ ಚಳವಳಿಯ ಕಾರಣಕ್ಕಾಗಿ ಈತ ಹಲವಾರು ವರ್ಷಗಳ ಕಾಲ ದೇಶಭ್ರಷ್ಟನಾಗಿರಬೇಕಾಯಿತು.

ಬಹಾವುಲ್ಲಾ ಬೋಧಿಸಿದ ಧರ್ಮವನ್ನು ಬಹಾಯಿ ಧರ್ಮವೆನ್ನುವರು. ಆದರೆ ಬಹುತೇಕ ಜನರು ಇದನ್ನು ಒಂದು ಪ್ರತ್ಯೇಕ ಧರ್ಮವೆಂದು ಒಪ್ಪುವುದಿಲ್ಲ. ಈ ಧರ್ಮದ ಪ್ರಕಾರ ಮನುಷ್ಯನು ಲೌಕಿಕ ಬಂಧನಗಳಿಂದ ಮುಕ್ತನಾಗಿ ಪೂರ್ಣ ಸ್ವಾತಂತ್ರ್ಯದ ಅನುಭವವನ್ನು ಹೊಂದಬಹುದಾಗಿದೆ. ಬಹಾವುಲ್ಲನ ಬರೆಹ, ಲೇಖನಗಳು ಷಿಯ ಸಮುದಾಯದಲ್ಲಿ ತುಂಬಾ ಗೌರವಕ್ಕೆ ಪಾತ್ರವಾಗಿವೆ. ಬಹುತೇಕ ಇವನ ಲೇಖನಗಳು ಪ್ರಪಂಚದ ಪ್ರಮುಖ ಧರ್ಮಗಳ ತಿರುಳನ್ನು ಒಳಗೊಂಡಿದ್ದು, ಎಲ್ಲ ಧರ್ಮಗಳ ಏಕತೆಯನ್ನು ಪ್ರತಿಪಾದಿಸುತ್ತವೆ. ಬಹಾಯಿ ಧರ್ಮದ ತಿರುಳು ಮಾನವೀಯತೆಯನ್ನು ಎತ್ತಿಹಿಡಿಯುವುದಾಗಿದೆ. ಸಾಮಾಜಿಕ ಮೌಲ್ಯಗಳಿಗೆ ಪ್ರಾತಿನಿಧ್ಯ ನೀಡುವ ಈ ಧರ್ಮದಲ್ಲಿ ಧರ್ಮಗುರು ಪರಂಪರೆಯ ಸಂಪ್ರದಾಯ ಇಲ್ಲದಿರುವುದು ಗಮನಾರ್ಹ.

ಈ ಧರ್ಮದಲ್ಲಿ 19ನೆಯ ಸಂಖ್ಯೆಗೆ ತುಂಬಾ ಪ್ರಾಮುಖ್ಯ ಇದೆ. ಹೀಗಾಗಿ ಇವರ ಪಂಚಾಂಗದಲ್ಲಿ 19 ಮಾಸಗಳಿವೆ. 19 ದಿವಸಗಳ ಮಾಸವಿದ್ದು, ಪ್ರತಿವರ್ಷ 19 ದಿವಸ ಉಪವಾಸವಿರಬೇಕು. ಪ್ರತಿನಿತ್ಯ ಪ್ರಾರ್ಥನೆ ಕಡ್ಡಾಯ. ಬಹಾಯಿ ಧರ್ಮ ಪ್ರತಿಪಾದಿಸುವಂತೆ, ದೇವರು ತನ್ನ ವಾಣಿಯನ್ನು ಪ್ರವಾದಿಗಳ ಮೂಲಕ ಜನತೆಗೆ ಕಳುಹಿಸುತ್ತಾನೆ. ಈ ಲೋಕದ ಅಂತಿಮದಲ್ಲಿ ಎಲ್ಲ ಧರ್ಮಗಳು ಒಂದಾಗಿ, ಮನುಷ್ಯರೆಲ್ಲರೂ ಒಂದಾಗುತ್ತಾರೆ ಎಂಬುದಾಗಿದೆ. ಬಹಾಯಿ ಧರ್ಮ ಯಾವುದೇ ಮತಭೇದ, ಜಾತಿಭೇದ, ಜನಾಂಗಿಯ ಭೇದ, ಗಂಡು–ಹೆಣ್ಣೆಂಬ ಲಿಂಗಭೇದವನ್ನು ಬೆಂಬಲಿಸುವುದಿಲ್ಲ.

ಈ ಧರ್ಮದ ಅನುಯಾಯಿಗಳು ಒಂದು ಮಿಶ್ರ ಭಾಷೆಯನ್ನು ಆಡಳಿತ ಭಾಷೆಯಾಗಿ ಬಳಸುತ್ತಾರೆ ಮತ್ತು ವಿಶ್ವವೇ ಒಂದು ಸರ್ಕಾರವೆಂದು ಪರಿಗಣಿಸುತ್ತಾರೆ. ಬಹಾಯಿ ಪಂಥದಲ್ಲೂ ಎರಡು ಗುಂಪುಗಳು ಅಸ್ತಿತ್ವದಲ್ಲಿವೆ. ಆಟೋಮನ್ ಸುಲ್ತಾನರ ಆಡಳಿತ ಕಾಲದಲ್ಲಿ ಇವರ ಬೋಧನೆಗೆ ತುಂಬಾ ತೊಂದರೆಯಾಯಿತು. 1960 ರಲ್ಲಿ ಈ ಧರ್ಮದ ಪ್ರಭಾವ ವಿಸ್ತಾರಗೊಂಡರೂ 1979ರ ಇರಾನಿನ ಕ್ರಾಂತಿಯ ಅನಂತರದಲ್ಲಿ ಬಹಾಯಿಗಳು ಧಾರ್ಮಿಕ ವಿರೋಧವನ್ನು ಎದುರಿಸುತ್ತಿದ್ದರೂ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಧರ್ಮ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಇವರ ದೇವಾಲಯಗಳು ತುಂಬಾ ಆಕರ್ಷಣೀಯವಾಗಿವೆ. ಬಹಾಯಿಯವರ ಪ್ರಮುಖ ಧಾರ್ಮಿಕ ಸ್ಥಳಗಳೆಂದರೆ ಇಸ್ರೇಲಿನಲ್ಲಿರುವ ಹೈಫಾ, ಬಹಾವಿಲ್ಲಾರನ್ನು ಬಂಧನಕ್ಕೆ ಒಳಪಡಿಸಿದ ಅಕ್ರೆ. ಇತ್ತೀಚಿನ ದಿನಗಳಲ್ಲಿ ಬಹಾಯಿ ಧರ್ಮೀಯರ ಸಂಖ್ಯೆ ಕ್ಷೀಣಿಸತೊಡಗಿದೆ. (ಸಿ.ಜಿ.ಎಸ್.)

**ಬಾಂಗ್ಲಾದೇಶ:** ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಬಾಂಗ್ಲಾದೇಶ ಬಂಗಾಲ ಪ್ರಾಂತ್ಯದ ಪೂರ್ವಭಾಗವಾಗಿದ್ದು ಭಾರತಕ್ಕೆ ಸೇರಿತ್ತು. 1947ರಲ್ಲಿ ಭಾರತದ ವಿಭಜನೆಯಾದಾಗ ಪಾಕಿಸ್ತಾನಕ್ಕೆ ಸೇರಿ ಪೂರ್ವಪಾಕಿಸ್ತಾನ ಎನಿಸಿಕೊಂಡಿತು. ಪೂರ್ವ ಪಾಕಿಸ್ತಾನಕ್ಕೆ ಸ್ವಾಯತ್ತತೆ ಬೇಕೆಂದು ಅವಾಮಿ ಲೀಗ್ ಎಂಬ ಸಂಸ್ಥೆಯಿಂದ ಚಳವಳಿ ಆರಂಭವಾಯಿತು. ಇದಕ್ಕೆ ಷೇಕ್ ಮುಜೀಬುರ್ ರೆಹಮಾನ್ ನಾಯಕರಾಗಿದ್ದರು. 1971ರಲ್ಲಿ ಈ ಚಳವಳಿ ಉಲ್ಬಣಗೊಂಡು ಬಾಂಗ್ಲಾ ಸ್ವಾತಂತ್ರ್ಯ ಸಮರವಾಗಿ ಪರಿಣಮಿಸಿ ಬಾಂಗ್ಲಾದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ನಿರಾಶ್ರಿತರು ಭಾರತಕ್ಕೆ ಬರತೊಡಗಿದರು. ಭಾರತ–ಪಾಕಿಸ್ತಾನಗಳ ನಡುವೆ ಹದಿಮೂರು ದಿನಗಳ ಕಾಲ ಯುದ್ಧ ನಡೆಯಿತು. ಬಾಂಗ್ಲಾ ವಿಮೋಚನಾ ಸೇನೆಯ (ಮುಕ್ತಿ ಬಾಹಿನಿ) ನೆರವಿಗೆ ಹೋದ ಭಾರತ ಸೇನೆ ಆ ದೇಶವನ್ನು ಪಾಕಿಸ್ತಾನದಿಂದ ವಿಮೋಚನೆಗೊಳಿಸಿತು. 1971ರ ಡಿಸೆಂಬರ್ 16ರಂದು ಸ್ವತಂತ್ರ ಬಾಂಗ್ಲಾದೇಶದ ಉದಯವಾಯಿತು.

ಪಾಕಿಸ್ತಾನದಲ್ಲಿ ಬಂಧನದಲ್ಲಿರಿಸಿದ್ದ ಷೇಖ್ ಮುಜೀಬುರ್ ರೆಹಮಾನ್‌ರವರ ಬಿಡುಗಡೆಯಾಗಿ 1972ರ ಜನವರಿಯಲ್ಲಿ ಅವರು ಬಾಂಗ್ಲಾದೇಶದ ಪ್ರಥಮ ಪ್ರಧಾನಿಯಾದರು. ಆ ವರ್ಷದ ನವೆಂಬರ್ 4ರಂದು ಅಲ್ಲಿಯ ಸಂವಿಧಾನ ಸಭೆಯಲ್ಲಿ ಸಂಸದೀಯ ಪ್ರರೂಪಿ ಪ್ರಜಾಪ್ರಭುತ್ವ ಸಂವಿಧಾನದ ಸ್ವೀಕಾರವಾಯಿತು. ಡಿಸೆಂಬರ್ 16ರಂದು ಹೊಸ ಸಂವಿಧಾನ ಜಾರಿಗೆ ಬಂದಿತು.

1975ರಲ್ಲಿ ಮಹತ್ತ್ವದ ಬದಲಾವಣೆಗಳಾದುವು. ಹಳೆಯ ಸಂವಿಧಾನವನ್ನು ರದ್ದು ಮಾಡಿ ಅಧ್ಯಕ್ಷೀಯ ಮಾದರಿಯ ಸರಕಾರದ ಸಂವಿಧಾನವನ್ನು ಜಾರಿಗೆ ತರಲಾಯಿತು. ಜನವರಿ 26ರಂದು ಷೇಖ್ ಮುಜೀಬುರ್ ರಹಮಾನರೇ ಅಧ್ಯಕ್ಷರಾದರು. ಷೇಖ್ ಅಧ್ಯಕ್ಷತೆಯ ಬಾಂಗ್ಲಾ ದೇಶ ಕೃಷಿಕ ಶ್ರಮಿಕ ಅವಾಮಿ ಲೀಗ್ ಅನ್ನು ಹೊರತುಪಡಿಸಿ ಉಳಿದೆಲ್ಲ ರಾಜಕೀಯ ಪಕ್ಷಗಳನ್ನೂ ನಿಷೇಧಿಸಲಾಯಿತು. 1975 ಆಗಸ್ಟ್ 15ರಂದು ಸೇನಾ ಕ್ಷಿಪ್ರಾಕ್ರಮಣವಾಗಿ ಬಾಂಗ್ಲಾ ದೇಶದ ಅಧ್ಯಕ್ಷ ಷೇಖ್ ಮುಜೀಬುರ್ ರೆಹಮಾನರೂ ಪ್ರಧಾನಿ ಮೊಹಮದ್ ಮನ್ಸೂರ್ ಆಲಿಯೂ ಷೇಖರ ಕುಟುಂಬದ ಬಹುತೇಕ ಸದಸ್ಯರೂ ಕೊಲೆಯಾದರು. ಖಂಡೇಕರ್ ಮುಷ್ತಾಕ್ ಅಹಮದ್‌ರನ್ನು ಅಧ್ಯಕ್ಷರಾಗಿ ನೇಮಿಸಲಾಯಿತು. ನವೆಂಬರಿನಲ್ಲಿ ಅಹಮದ್‌ರನ್ನು ಅಧ್ಯಕ್ಷತೆಯಿಂದ ಇಳಿಸಿ ಜನರಲ್ ಜಿಯಾ–ಉರ್ ರಹಮಾನರು ತಾವೇ ಅಧಿಕಾರ ಸೂತ್ರ ವಹಿಸಿಕೊಂಡರು. 1977ರ ಏಪ್ರಿಲ್‌ನಲ್ಲಿ ಅವರೇ ಅಧ್ಯಕ್ಷರಾದರು. ಮೇ ತಿಂಗಳಿನಲ್ಲಿ ನಡೆದ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಅವರಿಗೆ ಬಹುಮತ ಲಭಿಸಿತು. 1979ರ ಫೆಬ್ರುವರಿಯ ಚುನಾವಣೆಯಲ್ಲಿ ಜನರಲ್ ಜಿಯಾ–ಉರ್ ರಹಮಾನರ ಬಾಂಗ್ಲಾದೇಶ್ ನ್ಯಾಷನಲಿಷ್ಟ್ ಪಾರ್ಟಿಯೇ ಆಡಳಿತ ಪಕ್ಷವಾಗಿ ಚುನಾಯಿತವಾಯಿತು.

1981 ಮೇ 30ರಂದು ಅಧ್ಯಕ್ಷ ಜಿಯಾ–ಉರ್ ರಹಮಾನ್ ಕೊಲೆಯಾದರು. ಅಬ್ದುಲ್ ಸತ್ತಾರ್ ತಾತ್ಕಾಲಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದರು. ನವೆಂಬರ್ 15ರ ಚುನಾವಣೆಯಲ್ಲಿ ಅವರೇ ಆಯ್ಕೆಯಾದರು.

1982 ಮಾರ್ಚ್ 24ರಂದು ಇನ್ನೊಂದು ಸೇನಾಕ್ಷಿಪ್ರಾಕ್ರಮಣ ನಡೆಯಿತು. ಅಬ್ದುಲ್ ಸತ್ತಾರ್ ಉಚ್ಚಾಟನೆಗೊಂಡರು. ಮುಖ್ಯ ಲಷ್ಕರಿ ಶಾಸನ ಆಡಳಿತಗಾರನಾದ ಲೆ.ಜ.ಎಚ್.ಎಂ. ಎರ್ಷಾದರು ರಾಜಕಾರಣವನ್ನು ಶುದ್ಧೀಕರಿಸುವ ಉದ್ದೇಶದಿಂದ ಎಲ್ಲ ರಾಜಕೀಯ ಪಕ್ಷಗಳನ್ನೂ ನಿಷೇಧಿಸಿದರಲ್ಲದೆ ರಾಜಕೀಯ ಅಪರಾಧಗಳ ವಿಚಾರಣೆಗಾಗಿ ಲಷ್ಕರಿ ನ್ಯಾಯಾಲಯಗಳನ್ನು ಸ್ಥಾಪಿಸಿದರು. ಬಾಂಗ್ಲಾ ದೇಶದ ಕೈಗಾರಿಕೆಗಳ ರಕ್ಷಣೆ ಹಾಗೂ ಬೆಳವಣಿಗೆಗಾಗಿ ಎಂಟು ಅಂಶಗಳ ಆರ್ಥಿಕ ಕಾರ್ಯಕ್ರಮವೊಂದನ್ನು ಘೋಷಿಸಲಾಯಿತು. ಲೆ.ಜ.ಎಚ್.ಎಂ. ಎರ್ಷಾದರನ್ನು ಸೇನಾ ಮುಖ್ಯಸ್ಥರನ್ನಾಗಿ ಅವರ ಅಧಿಕಾರಾವಧಿಯನ್ನು 1984 ನವೆಂಬರ್ ಕೊನೆಯವರಗೆ ವಿಸ್ತರಿಸಲಾಯಿತು.

ಎರ್ಷದ್ 1983ರಲ್ಲಿ ಅಧ್ಯಕ್ಷರಾದರು. ಎರ್ಷದ್ 1986ರ ಮೇನಲ್ಲಿ ಬಾಂಗ್ಲಾದೇಶದ ಸಂಸತ್ತಿಗೆ ಚುನಾವಣೆ ನಡೆಸಿದರು. ಸೈನ್ಯಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ ನಾಗರಿಕ ಅಭ್ಯರ್ಥಿಯಾಗಿ, ಜಾತಿಯ ದಳ ಎಂಬ ರಾಜಕೀಯ ಪಕ್ಷದ ಮೂಲಕ ಎರ್ಷದ್ ಚುನಾವಣೆಗೆ ನಿಂತು ಅಧ್ಯಕ್ಷರಾಗಿ ಆಯ್ಕೆಯಾದರು. ಸೇನಾಡಳಿತವನ್ನು ಕೊನೆಗೊಳಿಸಿ ಸಂವಿಧಾನ ಬದ್ಧ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತಂದರು. 1990ರಲ್ಲಿ ಎರ್ಷದ್ ಸರ್ಕಾರದ ವಿರುದ್ಧ ಹಿಂಸಾತ್ಮಕ ಹೋರಾಟಗಳು ನಡೆದವು. 1991ರ ಫೆಬ್ರವರಿಯಲ್ಲಿ ನಡೆದ ಚುನಾವಣೆ ಗಳಲ್ಲಿ ಹಿಂದಿನ ಅಧ್ಯಕ್ಷ ಜಿಯಾರವರ ವಿಧವಾ ಪತ್ನಿ ಖಾಲಿದಾ ಜಿಯಾ ಪ್ರಥಮ ಮಹಿಳಾ ಪ್ರಧಾನಿಯಾಗಿ ಆಯ್ಕೆಯಾದರು. 1991ರ ಸೆಪ್ಟೆಂಬರ್‌ನಲ್ಲಿ ಸಂವಿಧಾನ ತಿದ್ದುಪಡಿ ಮಾಡಿ ಅಧ್ಯಕ್ಷರ ಬದಲು ಪ್ರಧಾನಿಗೆ ಹೆಚ್ಚು ಅಧಿಕಾರ ನೀಡಲಾಯಿತು. 1996ರ ಜೂನ್‌ನಲ್ಲಿ ನಡೆದ ಚುನಾವಣೆಗಳಲ್ಲಿ ಅವಾಮಿ ಲೀಗ್ ಬಹುಮತಗಳಿಸಿ ಹಿಂದಿನ ಷೇಕ್ ಮುಜಿಬ್‌ರವರ ಮಗಳಾದ ಷೇಕ್ ಹಸೀನಾ ಪ್ರಧಾನಿಯಾದರು. (ಎಚ್.ಎಸ್.ಕೆ.)

**ಬಾಕ್ಸರ್ ದಂಗೆ:** ಚೀನದ ಆಧುನಿಕ ಇತಿಹಾಸದ ಒಂದು ಪ್ರಮುಖ ಘಟನೆ. ವಿದೇಶಿಯರ ವಿರುದ್ಧ ಈ ದಂಗೆ ನಡೆಯಿತು. ವಿದೇಶಿಯರ ಬಗ್ಗೆ ಚೀನಿಯರಿಗಿದ್ದ ದ್ವೇಷವೇ ಈ ದಂಗೆಗೆ ಮುಖ್ಯಕಾರಣ. 1899ರಲ್ಲಿ ಇಂತಹ ವಿದೇಶಿ ವಿರುದ್ಧವಾದ ದಂಗೆಗಳು ಅಲ್ಲಲ್ಲಿ ಆರಂಭವಾಯಿತು. ವಿದೇಶಿ ರಾಷ್ಟ್ರಗಳು ಚೀನದಲ್ಲಿ ನಡೆದುಕೊಂಡ ರೀತಿನೀತಿಗಳು ಇಂತಹ ದಂಗೆಗಳ ಅರ್ಥವನ್ನು ವಿವರಿಸುತ್ತವೆ. ಕ್ರೈಸ್ತ ಮತ ಪ್ರಚಾರಕರು ಚೀನದೇಶದ ಒಳಪ್ರದೇಶಗಳಲ್ಲಿ ನಡೆಸುತ್ತಿದ್ದ ಕಾರ್ಯಕ್ರಮಗಳು ಮತ್ತೊಂದು ಕಾರಣವಾಯಿತು. ಮೊದಲು ಕ್ರಿಸ್ತಧರ್ಮಕ್ಕೆ ಮತಾಂತರಗೊಂಡ ಚೀನಿಯರ ವಿರುದ್ಧ ಈ ದಂಗೆಗಳು ದೇಶದಲ್ಲಿ ನಡೆದವು. ಆಗ ವಿದೇಶಿಯರು ಹೆಚ್ಚಾಗಿ ಈ ದಂಗೆಗೆ ತುತ್ತಾಗಿರಲಿಲ್ಲ. ಮತಾಂತರಗೊಂಡ ಚೀನಿಕ್ರೈಸ್ತರ ಸ್ಥಾನಮಾನಗಳು, ಅವರ ನಡವಳಿಕೆಗಳು, ಇವರ ಮತ್ತು ಮಿಷಿನರಿಗಳ ಸಂಬಂಧ ಮತ್ತು ಇವರೆಲ್ಲರೂ ಕ್ರಿಶ್ಚಿಯನ್ನರಲ್ಲದ ಚೀನಿಯರೊಡನೆ ಹೊಂದಿದ್ದ ಸಂಬಂಧಗಳು ದ್ವೇಷಕ್ಕೆ ಕಾರಣಗಳಾಗಿದ್ದವು. ಚೀನಿ ಕ್ರೈಸ್ತರನ್ನು, ಕ್ರೈಸ್ತರಲ್ಲದ ಚೀನಿಯರು ವಿಶ್ವಾಸಘಾತುಕರೆಂದು ಧರ್ಮದ್ರೋಹಿಗಳೆಂದು ಪರಿಗಣಿಸಿದ್ದರು. ವಿದೇಶಿಯರಿಂದ ಪಡೆಯುತ್ತಿದ್ದ ನೆರವು ಮತ್ತು ಅವರಿಗಿದ್ದ ವಿಶೇಷ ರಿಯಾಯಿತಿಗಳು ಚೀನಿಯರನ್ನು ರೊಚ್ಚಿಗೆಬ್ಬಿಸಿದ್ದವು. ಮತಾಂತರಗೊಂಡದ್ದಕ್ಕೆ ಸೌಲಭ್ಯಗಳನ್ನು ಪಡೆಯುತ್ತಿದ್ದರು. ಚೀನಿ ಕ್ರೈಸ್ತರು ನಡೆಸುತ್ತಿದ್ದ ಪೂಜಾವಿಧಾನಗಳು ವಿಚಿತ್ರವಾಗಿ ತೋರಿದವು. ಪರಂಪರೆಯಿಂದ ಬಂದಿದ್ದ ವಿಧಿ ಸಂಸ್ಕಾರಗಳನ್ನು ಮರೆತುಬಿಟ್ಟಿದ್ದರು. ಪ್ರಾಚೀನ ಆಚಾರ್ಯರು ಬೋಧಿಸಿದ ತತ್ತ್ವಗಳ ಬಗ್ಗೆ ಉದಾಸೀನ ಭಾವನೆ ವ್ಯಕ್ತಪಡಿಸಲು ಆರಂಭಿಸಿದರು. ಹಬ್ಬಹರಿದಿನಗಳಲ್ಲಿ ಕಾಣಿಕೆ ಕೊಡು ವುದನ್ನು ಚೀನಿ ಕ್ರೈಸ್ತರು ನಿಲ್ಲಿಸಿದರು. ಧಾರ್ಮಿಕ ವಿಧಿ ವಿಧಾನಗಳನ್ನು ಧಿಕ್ಕರಿಸುತ್ತಿದ್ದರು. ಬೇರೆಯವರೊಡನೆ ಬೆರೆಯದೆ ಕ್ರೈಸ್ತ ಧರ್ಮ ನಂಬಿಕೆಗಳಲ್ಲಿ ಕ್ರೈಸ್ತರಷ್ಟೇ ಅಭಿಮಾನ ಹೊಂದಿದ್ದರು.

ಕ್ರಿಶ್ಚಿಯನ್ನರು ಅನೇಕ ಭಯಂಕರ ತಂತ್ರಪೂಜೆಗಳಲ್ಲಿ ಅಮಾನುಷಕೃತ್ಯಗಳಲ್ಲಿ ತಜ್ಞರಾಗಿರುತ್ತಾರೆಂದು, ಮಕ್ಕಳ ಕಣ್ಣುಗಳನ್ನು ಕೀಳುತ್ತಾರೆಂದೂ ಚೀನಿಯರು ನಂಬಿದ್ದರು. ಕೆಥೊಲಿಕ್ ಮತ್ತು ಪ್ರಾಟೆಸ್ಟೆಂಟ್ ಮಿಷನರಿಗಳು ಮತಾಂತರಗೊಂಡ ಚೀನಿಯರ ಪರವಾಗಿ ವ್ಯಾಜ್ಯಗಳಲ್ಲಿ ಭಾಗವಹಿಸುವುದು, ಮಿಷನರಿಗಳು ಹಮ್ಮಿನಿಂದ ನಡೆಯುವುದೂ ಜಗಳಕ್ಕೆ ಕರೆಯುವಂತಿತ್ತು. ಚೀನಿ ಅಧಿಕಾರಿಗಳು ಅವರಿಗೆ ಗೌರವ ಕೊಡಬೇಕಾಗಿತ್ತು. ಇದರಿಂದ ಅಧಿಕಾರಿಗಳು ಕ್ರಿಶ್ಚಿಯನ್ನರನ್ನು ದ್ವೇಷಿಸುವಂತಾಯಿತು. ಈ ಎಲ್ಲಾ ಕಾರಣಗಳು ಬಾಕ್ಸರ್ ದಂಗೆಗೆ ಹಿನ್ನೆಲೆಯಾಗಿ ಕಂಡಿತು. ಇದಕ್ಕೆ ಐರೋಪ್ಯ ರಾಷ್ಟ್ರಗಳ ಆಕ್ರಮಣವೂ ಸೇರಿಕೊಂಡಿತು. ಚೀನದೇಶವನ್ನು ಹರಿದು ಹಂಚಿಕೊಳ್ಳುತ್ತಾರೆ ಎಂಬ ಭಯಮೂಡಿತು. 1899ರಲ್ಲಿ ವಿದೇಶಿ ರಾಷ್ಟ್ರಗಳ ಆಕ್ರಮಣಕ್ಕೆ ಒಂದು ನಿರ್ಧಾರವನ್ನು ಕೈಗೊಳ್ಳಲಾಯಿತು. ಆದರೆ ಈ ಯತ್ನಗಳು 1899ಕ್ಕೆ ಹಿಂದೆ ವಿದೇಶಿಯರು ಗಳಿಸಿಕೊಂಡ ಸೌಲಭ್ಯಗಳಿಗೆ ಹೊರತಾಗಿತ್ತು. 1897–98ರ ಘಟನೆಗಳು ಜನರಿಗೆ ಅವುಗಳ ಅರ್ಥವನ್ನು ಗ್ರಹಿಸುವಂತೆ ಮಾಡಿದವು.

ಬಾಕ್ಸರ್ ದಂಗೆಗೆ ಮೊದಲು ಅತೃಪ್ತಿಯ ಕಿಡಿ ಮೊದಲು ಪ್ರಾಂತಗಳಲ್ಲಿ ಕಾಣಿಸಿಕೊಂಡಿತು. 1899ರಲ್ಲಿ ಪೀಕಿಂಗ್ ನಗರದಲ್ಲಿ ಸ್ಥಿತಿ ಹದಗೆಟ್ಟಿತು. ವಿದೇಶಿ ರಾಯಭಾರಿ ಕಛೇರಿಗಳು ತಮ್ಮ ಭದ್ರತಾ ಪಡೆಯ ಸಂಖ್ಯೆಯನ್ನು ಹೆಚ್ಚಿಸಿಕೊಂಡವು. ವಿದೇಶಿಯರನ್ನು ಚೀನದಲ್ಲಿ ಹೇಳಹೆಸರಿಲ್ಲದಂತೆ ಮಾಡುವ, ಅವರ ಪ್ರಭಾವವನ್ನು ಅಳಿಸಿಹಾಕುವ ಚಳವಳಿಯೊಂದು ಆಗಲೇ ಹುಟ್ಟಿಕೊಂಡಿದೆ ಎಂದು ವಿದೇಶಿಯರ ಚೀನಿ ಮಿತ್ರರು ತಿಳಿಸಿದರು. ವಿದೇಶಿಯರು ಈ ಎಚ್ಚರಿಕೆಯ ಮಾತುಗಳಿಗೆ ಗಮನಕೊಡಲಿಲ್ಲ.

ಷಾನ್‍ಡುಂಗ್ ಪ್ರಾಂತ್ಯದ ವಿದೇಶಿಯರ ಬಗ್ಗೆ ಹೆಚ್ಚಿನ ತಿರಸ್ಕಾರದ ದ್ವೇಷಗಳಿದ್ದವು. ಚೀನಿ ಕ್ರೈಸ್ತರ ಮೇಲೆ ಹಲ್ಲೆಗಳನ್ನು ನಡೆಸುತ್ತಿವೆ ಎಂಬುದರ ಬಗ್ಗೆ ವರದಿಗಳ ಮೇಲೆ ವರದಿಗಳು ರಾಜಧಾನಿ ಪೀಕಿಂಗ್ ನಗರಕ್ಕೆ ಬರುತ್ತಿದ್ದವು. ಇಂತಹ ಸುಸಂಘಟಿತ ಗುಂಪುಗಳಲ್ಲಿ ಹೆಚ್ಚು ಜನಪ್ರಿಯವಾದದ್ದು ಏಕತೆಯುಳ್ಳ ಮುಷ್ಟಿ ಸಂಸ್ಥೆ (ಸೊಸೈಟಿ ಆಫ್ ರೈಟೋರಿಯಸ್ ಅಂಡ್ ಹಾರ್ಮೊನೊಷಿಯಸ್ ಫಸ್ಟ್) ಎಂಬುದು. ಈ ಸಂಸ್ಥೆಯ ಸದಸ್ಯರಿಗೆ ವಿದೇಶಿಯರು ಬಾಕ್ಸರ್ಸ್ ಎಂಬ ಹೆಸರನ್ನು ಕೊಟ್ಟರು. ಏಕೆಂದರೆ ಅವರು ಸಂಸ್ಥೆಯಲ್ಲಿ ನಡೆಸುತ್ತಿದ್ದ ದೈಹಿಕ ವ್ಯಾಯಾಮ ಐರೋಪ್ಯರ ಬಾಕ್ಸಿಂಗ್ ಅಥವಾ ಮುಷ್ಟಿ ಸ್ಪರ್ಧೆಯನ್ನು ಹೋಲುತ್ತಿತ್ತು. ಬಾಕ್ಸರ್ ತತ್ತ್ವಗಳು ಷಾನ್‍ಡುಗ್ ಪ್ರಾಂತದಿಂದ ಪ್ರಾಂತಕ್ಕೆ ಹಬ್ಬಿತು. 1900ರ ಹೊತ್ತಿಗೆ ಪೀಕಿಂಗ್ ನಗರದಲ್ಲಿ ಈ ಸಂಸ್ಥೆಯ ಸದಸ್ಯರು ತಮ್ಮ ಕಾರ್ಯತಂತ್ರ ಆರಂಭಿಸಿದ್ದರು. ಮೊದಲಿನಿಂದಲೂ ರಾಜಾಸ್ಥಾನದವರಿಂದ ಇವರಿಗೆ ಬೆಂಬಲವಿತ್ತು. ಪ್ರಾಂತ್ಯಾಧಿಕಾರಿಗಳು ಇವರಿಗೆ ಸಹಾನುಭೂತಿ ತೋರಿಸುತ್ತಿದ್ದರು. ಬಾಕ್ಸರ್‌ಗಳು ಪೀಕಿಂಗ್ ವಿದೇಶಿ ರಾಯಭಾರಿ ಕಛೇರಿಗಳನ್ನು ಮುತ್ತಿದಾಗ, ಮಂಚು ಸರ್ಕಾರ ಅಧಿಕೃತವಾಗಿ ಇವರಿಗೆ ಬೆಂಬಲ ಸೂಚಿಸಿತು. ಮಂಚು ಸರ್ಕಾರಕ್ಕೂ ಬಾಕ್ಸರ್‌ಗಳಿಗೂ ನಡುವೆ ಇದ್ದ ಅಧಿಕೃತ ಸಂಬಂಧಗಳ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟ. ಆದರೆ ಕೊನೆಯ ಘಟ್ಟದಲ್ಲಿ ಮಂಚುಗಳು ಬಾಕ್ಸರ್ ದಂಗೆಗೆ ಬೆಂಬಲ ತೋರಿಸಿದರೆಂಬುದು ನಿರ್ವಿವಾದ.

ಪೀಕಿಂಗ್ ನಗರದಲ್ಲಿ ಬಾಕ್ಸರ್‌ಗಳು ತಮ್ಮ ಹತೋಟಿಯನ್ನು ಸ್ಥಾಪಿಸಿದ ಮೇಲೆ ವಿದೇಶಿ ರಾಯಭಾರಿ ಕಛೇರಿಗಳ ಭಾಗಶಃ ಮುತ್ತಿಗೆಯ ಸ್ಥಿತಿ ಆರಂಭವಾಯಿತು. ರಾಯಭಾರಿ ಕಛೇರಿಗಳು ಹೊರ ಪ್ರಪಂಚದೊಡನೆ ಹೊಂದಿದ್ದ ಸಂಪರ್ಕಗಳನ್ನು ತಪ್ಪಿಸಲಾಯಿತು. ಇದರ ಪರಿಣಾಮವಾಗಿ ವಿದೇಶಿಯರ ರಕ್ಷಣೆಗೆ ಹೆಚ್ಚಿನ ಸೇನೆ ಕರೆಸುವ ಪ್ರಯತ್ನ ನಡೆಯಿತು. ವಿದೇಶಿಯರ ಸೇನೆ ಮೊದಲು ಟೀನ್‍ಟ್ಸಿನ್‌ಗೆ ಮುತ್ತಿಗೆ ಹಾಕಲು ನಿರ್ಧರಿಸಿತು. ಅಲ್ಲಿಯ ಕೋಟೆಗಳನ್ನು ಉಡಾಯಿಸಲಾಯಿತು. ಇದರಿಂದ ಚೀನ ಮತ್ತು ವಿದೇಶಿ ಸರ್ಕಾರಗಳ ನಡುವೆ ಯುದ್ಧ ಸ್ಥಿತಿ ಬಂದಿತು. ಮಂಚುಸೇನೆ ಮತ್ತು ಮಂಚುಗಳ ಆಸ್ಥಾನ ದವರು ಈಗ ಅಧಿಕೃತವಾಗಿ, ಬಹಿರಂಗವಾಗಿ ಬಾಕ್ಸರ್‌ಗಳಿಗೆ ಬೆಂಬಲ ನೀಡಿದರು. ಇಲ್ಲಿ ಯವರೆಗೆ ಭಾಗಶಃ ಮುತ್ತಿಗೆಯಲ್ಲಿದ್ದ ವಿದೇಶಿ ರಾಯಭಾರಿಗಳೂ ಈ ಘಟನೆಯನಂತರ ಪೂರ್ಣ ಮುತ್ತಿಗೆಯ ಸ್ಥಿತಿಗೆ ಒಳಗಾದರು. ಅವರ ಮೇಲೆ ಬಾಕ್ಸರ್‌ಗಳು ಸುಸಂಘಟಿತವಾದ ಹಲ್ಲೆಗಳನ್ನು ಆರಂಭಿಸಿದರು.

21 ಜೂನ್‍ನಿಂದ 14ರ ಆಗಸ್ಟ್ 1900ರ ಅವಧಿಯಲ್ಲಿ ಈ ರೀತಿಯ ಮುತ್ತಿಗೆ ಮುಂದುವರಿಯಿತು. ಕೊನೆಗೆ ವಿದೇಶಿಯರ ಸೇನೆಯೊಂದು ಬಂಧನದಲ್ಲಿ ಪ್ರಾಣಾಪಾಯಸ್ಥಿತಿ ಮುಟ್ಟಿದ್ದ ರಾಯಭಾರಿ ಕಛೇರಿಯವರ ಸಹಾಯಕ್ಕೆ ಬಂದು ದಂಗೆಕೋರರನ್ನು ಹತ್ತಿಕ್ಕಿತು. ಯಾಂಗ್ ಸೀ ನದಿ ಬಯಲಿನ ಮತ್ತು ದಕ್ಷಿಣ ಪ್ರಾಂತಗಳ ಅಧಿಕಾರಿಗಳು ಬಾಕ್ಸರ್ ದಂಗೆಯಲ್ಲಿ ಭಾಗವಹಿಸಲಿಲ್ಲ. ಮಂಚುಸರ್ಕಾರ ವಿದೇಶಿಯರನ್ನು ಸಮುದ್ರಕ್ಕೆ ಎಸೆಯಿರಿ ಎಂಬ ಆಜ್ಞೆಯನ್ನು ಕಳುಹಿಸಿದಾಗ್ಯೂ, ಈ ಅಧಿಕಾರಿಗಳು ಆ ಆಜ್ಞೆಯನ್ನು ಪಾಲಿಸಲಿಲ್ಲ. ಆದುದರಿಂದ ವಿದೇಶಿ ಸೇನೆಯು ಉತ್ತರದಲ್ಲಿ ಮಾತ್ರ ಬಾಕ್ಸರ್‌ಗಳ ವಿರುದ್ಧ ಹೋರಾಡ ಬೇಕಾಯಿತು. 1901 ಸೆಪ್ಟೆಂಬರ್ 7ರಂದು ಮಂಚು ಸರ್ಕಾರ ಹಾಗೂ ಇತರೆ 11 ವಿದೇಶಿಯರು ಶಾಂತಿ ಒಪ್ಪಂದಕ್ಕೆ ಬಂದು ಬಾಕ್ಸರ್ ಒಪ್ಪಂದವಾಗುವುದರ ಮೂಲಕ ದಂಗೆಗೆ ತೆರೆಬಿತ್ತು.

ದಂಗೆಯಿಂದಾಗಿ ಚೀನಿಯರ ದೌರ್ಬಲ್ಯ ವ್ಯಕ್ತವಾಯಿತು. ವಿದೇಶಿ ರಾಷ್ಟ್ರಗಳು ಚೀನದ ಮೇಲೆ ಹತೋಟಿ ಸಾಧಿಸುವಂತಾಯಿತು. ಮಿತ್ರ ರಾಷ್ಟ್ರಗಳ ಸೇನೆ ಪೀಕಿಂಗ್‍ನಗರದ ಸಮೀಪ ಬಂದಾಗ ಮಂಚು ಆಸ್ಥಾನದ ಜನ ರಾಜಧಾನಿಯಿಂದ ಓಡಿಹೋದರು. 1860ರಲ್ಲೂ ಇಂತಹ ಸಂದರ್ಭದಲ್ಲೇ ಮಂಚುಗಳು ಓಡಿಹೋಗಿದ್ದರು. ವಿದೇಶಿಯರು ಪೀಕಿಂಗ್‍ನಲ್ಲಿ ತಮ್ಮ ಹತೋಟಿಯನ್ನು ಸ್ಥಾಪಿಸಿದರು. ಚೀನದ ಭವಿಷ್ಯವನ್ನು ಮತ್ತೊಮ್ಮೆ ತೀರ್ಮಾನಿಸುವ ಕಾಲ ಒದಗಿಬಂತು. ವಿದೇಶಿಯರ ಮುಂದೆ ಮೂರು ಪರಿಹಾರಗಳು ಇದ್ದವು.

ಚೀನವನ್ನು ತಮ್ಮಲ್ಲೇ ಹಂಚಿಕೊಳ್ಳುವುದು, ಅಂತಾರಾಷ್ಟ್ರೀಯ ಬೆಂಬಲದಿಂದ ಹೊಸರಾಜಮನೆತನವನ್ನು ಸಿಂಹಾಸನಕ್ಕೆ ತರುವುದು, ಮಂಚುಗಳನ್ನು ಪೀಕಿಂಗ್‍ಗೆ ವಾಪಸ್ ಕರೆತರುವುದು; ಅವರಿಗೆ ಬೆಂಬಲ ಕೊಟ್ಟು, ಚೀನದಲ್ಲಿ ಆಧುನಿಕ ರೀತಿಯ ಸರ್ಕಾರ ರಚಿಸಿ, ಸುಧಾರಣೆಗಳನ್ನು ಜಾರಿಗೆ ತರುವುದು.

ಅಮೆರಿಕ ಮೂರನೆಯ ಪರಿಹಾರಕ್ಕೆ ಬೆಂಬಲ ಕೊಟ್ಟಿತು. ಉಳಿದ ರಾಷ್ಟ್ರಗಳನ್ನು ಈ ನೀತಿಗೆ ಬೆಂಬಲ ಸೂಚಿಸುವಂತೆ ಒತ್ತಾಯಿಸಿತು. ಈ ರೀತಿಯಾಗಿ ಮಂಚು ಆಳಿಕೆಗೆ ಮತ್ತೆ ಹನ್ನೊಂದು ವರ್ಷ ಆಯಸ್ಸು ಬಂತು. ರಾಯಭಾರಿಗಳ ಕಛೇರಿಗೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಅಮೇರಿಕ ವಿದೇಶಾಂಗ ಕಾರ್ಯದರ್ಶಿ ತೆರೆದ ಬಾಗಿಲು ನೀತಿಯ ಪ್ರತಿಪಾದಕ ಜಾನ್‍ಹೇ ವಿದೇಶಗಳಲ್ಲಿದ್ದ ಅಮೆರಿಕದ ರಾಯಭಾರಿಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಈ ರೀತಿ ತಿಳಿಸಿದ: ಖಾಯಂ ಆಗಿ ಚೀನಾಕ್ಕೆ ಕ್ಷೇಮ, ಶಾಂತಿ ಮತ್ತು ಚೀನಿಯರ ರಾಜ್ಯ ರಕ್ಷಣೆ, ಅಂತಾರಾಷ್ಟ್ರೀಯ ಕಾನೂನಿನ ಪ್ರಕಾರ ಚೀನಿಯರಿಗೆ ಮಿತ್ರರಾಷ್ಟ್ರಗಳಿಂದ ಸಲ್ಲಬೇಕಾದ ಗೌರವ, ಚೀನಿ ಸಾಮ್ರಾಜ್ಯದಲ್ಲಿ ಎಲ್ಲಾ ರಾಷ್ಟ್ರಗಳಿಗೂ ಸಮವಾದ ಅವಕಾಶಗಳು–ಇವಿಷ್ಟನ್ನು ಅಮೇರಿಕ ಚೀನಾಕ್ಕೆ ತರಲು ಯತ್ನಿಸುತ್ತಿದೆ ಮತ್ತು ಅದೇ ಅಮೇರಿಕಾದ ನೀತಿ. ಚೀನಿ ಸರ್ಕಾರದೊಡನೆ ವಿದೇಶಿಯರ ಒಪ್ಪಂದ ಮಾಡಿಕೊಳ್ಳುವಲ್ಲಿ ಸಹಕರಿಸಬೇಕೆಂದು ಹೇ ಘೋಷಿಸಿದ. ಅಮೆರಿಕದ ಈ ನೀತಿ ಇತರ ವಿದೇಶಿ ರಾಷ್ಟ್ರಗಳಿಗೆ ಹಿಡಿಸಿತು. ಚೀನಿ ಸರ್ಕಾರಕ್ಕೆ ಎಲ್ಲರೂ ಒಟ್ಟಾಗಿ ಸಾಮಾನ್ಯವಾದ ಬೇಡಿಕೆಗಳನ್ನು ಮಂಡಿಸಬೇಕೆಂದು ನಿರ್ಧರಿಸಲಾಯಿತು. ಅದರೆ ಕೊನೆಗೆ ಈ ವಿಷಯದಲ್ಲಿ ಒಮ್ಮತವಿರಲಿಲ್ಲ. ಇದರಿಂದ 1901ರವರೆಗೂ ಒಪ್ಪಂದದ ಮಾತುಕತೆಗಳು ಮುಂದುವರೆದವು. ಆ ವರ್ಷ ಬಾಕ್ಸರ್ ಒಪ್ಪಂದಕ್ಕೆ ಸಹಿಹಾಕಲಾಯಿತು.

ಚೀನದೇಶ ದಂಗೆಯ ಮೂಲಕ ವಿದೇಶಿಯರನ್ನು ದೇಶದಿಂದ ಹೊಡೆದಟ್ಟಬೇಕೆಂದು ನಡೆಸಿದ ಪ್ರಯತ್ನದ ಫಲವಾಗಿ 450,000,000 ಟೇಲ್ ಹಣವನ್ನು ಚೀನ ಯುದ್ಧದ ಖರ್ಚೆಂದು ವಿದೇಶಿಯರಿಗೆ ಕೊಡಬೇಕಾಯಿತು. ಈ ಹಣವನ್ನು ವಿದೇಶಿ ಸುಂಕ ಮತ್ತು ಉಪ್ಪಿನ ಕರಗಳಿಂದ ಬಂದ ಆದಾಯದಲ್ಲಿ ಕೊಡತಕ್ಕದ್ದೆಂದು ನಿರ್ಧಾರವಾಯಿತು. ಇದರಿಂದ ಹಣಕಾಸಿನ ಮುಗ್ಗಟ್ಟು ಹೆಚ್ಚಿತು. ಶೇ. 5ರಷ್ಟು ಆಮದು–ರಫ್ತು ಸುಂಕವನ್ನು ಹೆಚ್ಚಿಸ ಲಾಯಿತು. ಚೀನಕ್ಕೆ ಯುದ್ಧ ಖರ್ಚನ್ನು ತುಂಬಿಕೊಡಲು ಶಕ್ತಿ ಬರಬೇಕೆಂದು ಹೀಗೆ ಮಾಡಲಾಯಿತು. ಕೆಲವು ಅಧಿಕಾರಿಗಳನ್ನು ಮರಣ ದಂಡನೆ ಅಥವಾ ಇತರ ರೀತಿಯಲ್ಲಿ ದಂಡಿಸತಕ್ಕದ್ದು, ರಾಜಧಾನಿಯಲ್ಲಿ ಖಾಯಂ ಆಗಿ ವಿದೇಶಿ ಸೇನೆ, ರಾಯಭಾರಿ ಕಛೇರಿಗಳು ಸಂರಕ್ಷಣೆಯ ಸಲುವಾಗಿ ಇರತಕ್ಕದ್ದು. ಪೀಕಿಂಗ್‍ನಿಂದ ಸಮುದ್ರತೀರದ ವರೆಗಿನ ಮಾರ್ಗದಲ್ಲಿ ವಿದೇಶಿಯರ ರಕ್ಷಣಾವ್ಯವಸ್ಥೆಯನ್ನು ಕೈಗೊಳ್ಳುವ ಅಧಿಕಾರ ಕೊಡಲ್ಪಟ್ಟಿತು, ವಿದೇಶಿ ವ್ಯವಹಾರಗಳ ಕಛೇರಿಯೊಂದರ ಸ್ಥಾಪನೆ ಮತ್ತು ಚಕ್ರವರ್ತಿಯನ್ನು ನೋಡುವಾಗ ನಡೆದುಕೊಳ್ಳುವ ರೀತಿನೀತಿಗಳಲ್ಲಿ ಬದಲಾವಣೆ, ವಿದೇಶಿಯರ ವಿರುದ್ಧ ಭಾಗವಹಿಸಿದ ನಗರಗಳಲ್ಲಿ 5 ವರ್ಷಗಳ ಕಾಲ ಸರ್ಕಾರಿ ಪರೀಕ್ಷೆಗಳನ್ನು ರದ್ದುಪಡಿಸುವುದು, ಎರಡು ವರ್ಷಗಳ ಕಾಲ ಚೀನಾ ಹೊರದೇಶಗಳಿಂದ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳಕೂಡದು. ಈ ಕಾಲಾವಧಿಯನ್ನು ಎರಡು ಸಾರಿ ವಿಸ್ತರಿಸುವ ಹಕ್ಕು ವಿದೇಶಿಯರಿಗೆ ಸೇರಿದ್ದು ಇದಿಷ್ಟು ಅಧಿಕೃತ ಒಪ್ಪಂದದ ಪರಿಣಾಮಗಳು. 1908ರಲ್ಲಿ ಚೀನದಿಂದ ಪಡೆದಿದ್ದ ಪರಿಹಾರದ ಸ್ವಲ್ಪಭಾಗವನ್ನು ಮತ್ತೆ ಚೀನಕ್ಕೆ ಹಿಂದಿರುಗಿಸಿ ಶಿಕ್ಷಣ ವ್ಯವಸ್ಥೆಯ ಉನ್ನತಿಗಾಗಿ ಬಳಸಲು ಸೂಚಿಸಲಾಯಿತು. ಜಪಾನ್ ಹಾಗೂ ಬ್ರಿಟನ್ ಸಹ ಇದನ್ನೆ ಪಾಲಿಸಿದವು. ಒಟ್ಟಾರೆಯಾಗಿ ಬಾಕ್ಸರ್ ದಂಗೆ ಚೀನದೇಶದ ಬದಲಾಗಬೇಕಾದ ರಾಜಕೀಯ ವ್ಯವಸ್ಥೆಯ ಮುನ್ನುಡಿಯಾಯಿತು. (ಆರ್.ಆರ್.)

**ಬಾಗಿಮೊಹರಿ:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯಲ್ಲಿರುವ ಬೃಹತ್‍ಶಿಲಾ ಸಂಸ್ಕೃತಿಯ ನೆಲೆ. ವಸತಿ ನೆಲೆ ಮತ್ತು ಗೋರಿಗಳ ಮಧ್ಯದಲ್ಲಿ ಕೋಳಾರ ನದಿ ಹರಿಯುತ್ತದೆ. ಡೆಕ್ಕನ್ ಕಾಲೇಜಿನ ಪುರಾತತ್ತ್ವ ವಿಭಾಗದ ತಂಡ ಈ ನೆಲೆಯಲ್ಲಿ 1982–84 ಮತ್ತು 1990–92ರವರೆಗೆ ಉತ್ಖನನ ನಡೆಸಿತು.

ಮೂರು ಹೊಸ ಪ್ರಕಾರದ ಗೋರಿಗಳು ಉತ್ಖನನದಿಂದ ತಿಳಿದುಬಂದವು. ಮೊದಲ ಪ್ರಕಾರದ ಗೋರಿಯಲ್ಲಿ ಸ್ಥಳೀಯವಾಗಿ ದೊರೆಯುವ ನೈಸರ್ಗಿಕ ಗುಂಡುಕಲ್ಲುಗಳನ್ನೇ ಶವಕುಣಿಯಲ್ಲಿ ಆಯತಾಕಾರ ವಿನ್ಯಾಸದಲ್ಲಿ ಜೋಡಿಸಿದ್ದು ಅದನ್ನು ಮತ್ತೆ 2 ಭಾಗಗಳಾಗಿ ವಿಂಗಡಿಸಲಾಗಿತ್ತು. ಈ ಸಮಾಧಿಯಲ್ಲಿ ಅಸ್ಥಿ ಅವಶೇಷಗಳಿರಲಿಲ್ಲ. ಒಂದು ಕಲ್ಲಿನ ಉಂಗುರ ಮಾತ್ರ ಸಿಕ್ಕಿತು. ಮತ್ತೊಂದು ಪ್ರಕಾರದ ಗೋರಿಯಲ್ಲಿ ಒಂದಕ್ಕೊಂದು ತಾಗಿದ 8 ಸಂಖ್ಯೆಯ ವಿನ್ಯಾಸದಲ್ಲಿರುವ ಕಲ್ಲುವೃತ್ತಗಳಿದ್ದವು. ಇವುಗಳಲ್ಲಿ ಮನುಷ್ಯನ ಅಸ್ಥಿ ಅವಶೇಷಗಳು ಹಾಗೂ ಮತ್ತಿತರ ಸಮಾಧಿ ಅವಶೇಷಗಳು ಕಂಡುಬಂದವು. 3ನೆಯ ಪ್ರಕಾರದ ಗೋರಿಗಳ ಶವಕುಣಿಯಲ್ಲಿ ತಳದಲ್ಲಿ ಇಳಿಜಾರಾದ ತಳಬಂಡೆಯಿದ್ದಿತ್ತು. ಒಂದು ಗೋರಿಯಲ್ಲಿ ಇಂತಹ ಬಂಡೆಯ ಮೇಲೆ ಮನುಷ್ಯನ ಕೈಮೂಳೆಯೊಂದಿಗೆ 21 ತಾಮ್ರದ ಬಳೆಗಳು ದೊರೆತಿರುವುದು ವಿಶೇಷ. ವಸತಿ ನೆಲೆಯಲ್ಲಿ ಅಗೆದ ಒಂದು ಗುಂಡಿಯಲ್ಲಿ ಬೃಹತ್

ಶಿಲಾಯುಗದ ಅವಶೇಷಗಳು ಮಾತ್ರ ಇದ್ದರೆ ಇನ್ನೊಂದರಲ್ಲಿ ಈ ಅವಶೇಷಗಳ ಪದರದ ಮೇಲೆ ಆದಿ ಚಾರಿತ್ರಿಕ ಮತ್ತು ಚಾರಿತ್ರಿಕ ಕಾಲದ ಅವಶೇಷಗಳ ಪದರ ಕಂಡುಬಂದವು. ಬೃಹತ್ ಶಿಲಾಯುಗದ ಸ್ತರಗಳಲ್ಲಿ ವೃತ್ತಾಕಾರದ ಗುಡಿಸಲುಗಳ ತಳಗಟ್ಟು–ನೆಲಗಟ್ಟುಗಳೂ ಧಾನ್ಯ ಮತ್ತು ಮೇವು ಸಂಗ್ರಹಣೆಗಾಗಿ ಮಾಡಿದ್ದ ಗುಳಿಗಳೂ ಇದ್ದವು. ಗೋದಿ, ಜವೆ, ಉದ್ದು, ಅಕ್ಕಿ ಮೊದಲಾದ ಅರೆಸುಟ್ಟ ಧಾನ್ಯಗಳು ಇಲ್ಲಿ ಸಿಕ್ಕವು. ದನ, ಕುರಿ, ಮೇಕೆ ಮತ್ತು ಹಂದಿಯ ಮೂಳೆಗಳು ಅಧಿಕ ಸಂಖ್ಯೆಯಲ್ಲಿದ್ದವು. ಸುಸ್ಥಿತಿಯಲ್ಲಿರುವ ಪಕ್ಷಿಮೂಳೆಗಳೂ ಕಂಡುಬಂದವು. ಕಪ್ಪುಬಣ್ಣದ ಚಿತ್ರವುಳ್ಳ ಕೆಂಪು ಮಣ್ಪಾತ್ರೆಗಳು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಇವು ಸಮಕಾಲೀನ ನೆಲೆಗಳಾದ ನಾಯ್‌ಕುಂಡ್, ಖೈರ್‌ವಾಡ, ತಕಲ್‌ಘಾಟ್‌ಗಳಲ್ಲಿ ದೊರೆತ ಬೃಹತ್‌ಶಿಲಾ ಸಂಸ್ಕೃತಿಯ ಪಾತ್ರೆಗಳನ್ನು ಹೋಲುತ್ತವೆ. ಇಂಗಾಲ–14 ತಂತ್ರದ ಪ್ರಕಾರ ಈ ನೆಲೆ ಪ್ರ.ಶ.ಪೂ.750±100–450±90ರ ಅವಧಿಯದು. (ವೈ.ಎಚ್.)

**ಬಾಗೋರ್:** ರಾಜಸ್ತಾನ ರಾಜ್ಯದ ಭಿಲವಾಡ ಜಿಲ್ಲೆಯಲ್ಲಿರುವ ಸೂಕ್ಷ್ಮಶಿಲಾಯುಗ ನೆಲೆ. ಬಾಣಾಸ್ ನದಿಯ ಉಪನದಿ ಕೊಠಾರಿಯ ಎಡದಂಡೆಯ ಮಹಾಸತಿ ಎಂದು ಕರೆಯಲ್ಪಡುವ ಮರಳುದಿಣ್ಣೆಯ ಮೇಲಿದೆ. ಇದರ ವಿಸ್ತೀರ್ಣ 200ಮೀX150ಮೀ; ಎತ್ತರ 6ಮೀ. 1967ರಲ್ಲಿ ಎಲ್.ಎಸ್. ಲೆಶ್ನಿಕ್ ಮತ್ತು ವಿ.ಎನ್. ಮಿಶ್ರ ಈ ನೆಲೆಯನ್ನು ಶೋಧಿಸಿದರು. ಅನಂತರ ಪುಣೆಯ ಡೆಕ್ಕನ್ ಕಾಲೇಜು ಮತ್ತು ರಾಜಸ್ತಾನದ ರಾಜ್ಯ ಪುರಾತತ್ತ್ವ ವಿಭಾಗ ಮತ್ತು ಸಂಗ್ರಹಾಲಯ 3 ವರ್ಷಗಳ ಕಾಲ (1968–70) ಮಿಶ್ರ ಅವರ ನಿರ್ದೇಶನದಲ್ಲಿ ವಿಸ್ತೃತ ಉತ್ಖನನ ನಡೆಸಿದವು. ಉತ್ಖನನದಲ್ಲಿ ಮರಳಿನ ಬಣ್ಣದ ಆಧಾರದ ಮೇಲೆ 5 ಸ್ತರಗಳನ್ನು ಪ್ರತ್ಯೇಕಿಸಲಾಗಿದೆ. ಹೆಚ್ಚಿನ ಪ್ರಾಚ್ಯಾವಶೇಷಗಳು 2ನೆಯ ಸ್ತರದಲ್ಲಿವೆ. 3ನೆಯ ಸ್ತರದ ಮೇಲಿನರ್ಧಭಾಗದಲ್ಲಿ ಅವಶೇಷಗಳು ಇವೆ; ಕೆಳಭಾಗದಲ್ಲಿ ಅವು ಕಂಡುಬರುವುದಿಲ್ಲ. 4 ಮತ್ತು 5ನೆಯ ಸ್ತರಗಳು ಅವಶೇಷರಹಿತ ಸ್ತರಗಳು.

ವಸತಿ ಪದರ 1.5ಮೀ ದಪ್ಪವಿದ್ದು 2 ಸಾಂಸ್ಕೃತಿಕ ಹಂತಗಳನ್ನು ಹೊಂದಿದೆ. 1ನೆಯ ಹಂತ ಸೂಕ್ಷ್ಮಶಿಲಾಯುಗದ ಅಂತ್ಯ ಭಾಗದ್ದು. ಇದರಲ್ಲಿ 2 ಉಪಹಂತಗಳಿವೆ. 1ನೆಯ ಉಪಹಂತದಲ್ಲಿ (ಪ್ರಶ.ಪೂ.5000–2500) ಸೂಕ್ಷ್ಮಶಿಲೋಪಕರಣಗಳು ಮತ್ತು ಪ್ರಾಣಿಮೂಳೆಗಳು ಹೇರಳವಾಗಿವೆ. ಬೇಟೆ, ಆಹಾರ ಸಂಗ್ರಹಣೆ ಮತ್ತು ಪಶುಪಾಲನೆ ಈ ಹಂತದ ಜನರ ಜೀವನಶೈಲಿಯಾಗಿತ್ತು. ಮಣ್ಣು ಮೆತ್ತಿದ ಬೊಂಬಿನ ಗುಡಿಸಲುಗಳಲ್ಲಿ ಇವರು ವಾಸಿಸುತ್ತಿದ್ದರು. ಮನೆಯೊಳಗಿನ ನೆಲವನ್ನು ಜಲ್ಲಿಕಲ್ಲಿನಿಂದ ಗಟ್ಟಿಗೊಳಿಸುತ್ತಿದ್ದರು. ಶವವನ್ನು ನೇರಭಂಗಿಯಲ್ಲಿ ವಸತಿಯ ಜಾಗದಲ್ಲೇ ಹೂಳುತ್ತಿದ್ದರು. 2ನೆಯ ಉಪಹಂತದಲ್ಲಿ (ಪ್ರ.ಶ.ಪೂ.ಸು.2500–1000) ಸೂಕ್ಷ್ಮಶಿಲೋಪಕರಣ ಮತ್ತು ಪ್ರಾಣಿಮೂಳೆಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ತಾಮ್ರದ ಉಪಕರಣಗಳು ತಿಗುರಿಯ ಉಪಯೋಗವಿಲ್ಲದೆ ಕೈಯಿಂದ ಮಾಡಲಾದ ಮಣ್ಪಾತ್ರೆಗಳು ಇಲ್ಲಿ ಮೊದಲ ಬಾರಿಗೆ ಕಂಡುಬರುತ್ತವೆ. ಮಡಕೆಗಳ ಮೇಲೆ ಸರಳ ಗೀರಿನ ವಿನ್ಯಾಸಗಳಿವೆ. ಕಲ್ಲಿನ ಹಾಗೂ ಮೂಳೆಯ ಮಣಿಗಳೂ ಹೊಸ ಸಾಂಸ್ಕೃತಿಕ ಲಕ್ಷಣಗಳಾಗಿವೆ. ಮನೆಗಳ ರಚನೆಯಲ್ಲಿ ಬದಲಾವಣೆಗಳಿಲ್ಲ. ಅರೆಯುವ ಕಲ್ಲು, ಸುತ್ತಿಗೆಕಲ್ಲು, ಉಂಗುರಕಲ್ಲುಗಳು ಇಲ್ಲಿ ದೊರೆತ ಇತರ ಅವಶೇಷಗಳು. ಶವಗಳನ್ನು ಕೈಕಾಲು ಮಡಿಸಿದ ಭಂಗಿಯಲ್ಲಿ ಪಶ್ಚಿಮ–ಪೂರ್ವಾಭಿಮುಖವಾಗಿ ಹೂಳಲಾಗಿದೆ. ಶವಕುಣಿಗಳಲ್ಲಿ ಶವಸಂಸ್ಕಾರ ಸಮಯದಲ್ಲಿ ಬಂಧುಬಳಗದವರಿಟ್ಟ ಮಣ್ಪಾತ್ರೆ, ಲೋಹದ ವಸ್ತುಗಳು, ಆಭರಣ ಮುಂತಾದವು ಗಣನೀಯವಾಗಿವೆ. ಈ ಹಂತದಲ್ಲಿ ಕೃಷಿ ಪ್ರಾರಂಭವಾಗಿರುವ ಸಾಧ್ಯತೆಗಳಿವೆ. ಒಟ್ಟಾರೆ ಲೌಕಿಕ ಸಮೃದ್ಧಿ ಸುಭದ್ರ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತದೆ. ಈ ಹಂತದಲ್ಲಿ ಜನರು ತಮ್ಮ ಕಾಲದ ರೈತಾಪಿ ಹಳ್ಳಿಗಳೊಂದಿಗೆ ಒಡನಾಟ ಬೆಳೆಸಿಕೊಂಡಿದ್ದರಿಂದ ಆ ಸಂಸ್ಕೃತಿಯ ಲಕ್ಷಣಗಳನ್ನು ಕೆಲಮಟ್ಟಿಗೆ ತಮ್ಮದಾಗಿಸಿ ಕೊಂಡಿರ ಬಹುದು. ಈ ಸಾಂಸ್ಕೃತಿಕ ಪ್ರಕ್ರಿಯೆಯ ದೃಷ್ಟಿಯಿಂದ ಬಾಗೋರ್‌ನ ಉತ್ಖನನ ಮಹತ್ತ್ವದ್ದಾಗಿದೆ.

2ನೆಯ ಹಂತದ (ಪ್ರ.ಶ.ಪೂ.ಸು.500–ಪ್ರ.ಶ.200) ಅವಶೇಷಗಳು ಕಬ್ಬಿಣಯುಗಕ್ಕೆ ಸೇರಿದವು. ಸೂಕ್ಷ್ಮಶಿಲೋಪಕರಣಗಳು ಮತ್ತು ಪ್ರಾಣಿಮೂಳೆಗಳು ಈ ಹಂತದಲ್ಲಿ ಅತಿ ವಿರಳವಾಗಿವೆ. ಮಣ್ಪಾತ್ರೆಗಳು ತಿಗುರಿಯಿಂದ ತಯಾರಾಗಿದ್ದು ಅಧಿಕ ಸಂಖ್ಯೆಯಲ್ಲಿ ದೊರಕಿವೆ. ಗಾಜಿನ ಮಣಿಗಳು ಮೊದಲ ಬಾರಿಗೆ ಕಾಣುತ್ತವೆ. ಗೃಹನಿರ್ಮಾಣದಲ್ಲಿ ಕಲ್ಲಿನ ಜೊತೆಗೆ ಇಟ್ಟಿಗೆ ಮತ್ತು ಹೆಂಚುಗಳ ಉಪಯೋಗ ಕಂಡುಬರುತ್ತದೆ. 1 ಮತ್ತು 2ನೆಯ ಹಂತಗಳ ಅವಶೇಷಗಳನ್ನು ಹೋಲಿಸಿದಾಗ ಅವುಗಳಲ್ಲಿ ಸಾಂಸ್ಕೃತಿಕ ವಿಕಸನವಾಗಲೀ ಸಾಮ್ಯವಾಗಲೀ ಕಂಡುಬರುವುದಿಲ್ಲ. ಹಾಗಾಗಿ ಮೊದಲ ಹಂತದ ಜನರು ವಸತಿಯನ್ನು ಬಿಟ್ಟುಹೋಗಿರುವುದು ಸ್ಪಷ್ಟ.

ಸೂಕ್ಷ್ಮಶಿಲೋಪಕರಣಗಳು: ತ್ರಿಕೋಣ ಮೊದಲಾದ ನಿರ್ದಿಷ್ಟ ಆಕೃತಿಯ ಉಪಕರಣಗಳು ಈ ಸಮುಚ್ಚಯದ ವೈಶಿಷ್ಟ್ಯ. ಇವನ್ನು ಸೂಕ್ಷ್ಮಅಲಗುಗಳಿಂದ ರೂಪುಗೊಳಿಸಲಾಗಿದೆ. ಇವು ಬೇಟೆಗೆ ಸೂಕ್ತವಾದುವು. ಸಂಗ್ರಹದಲ್ಲಿ 40ಕ್ಕೂ ಹೆಚ್ಚು ನಮೂನೆಗಳಿವೆ. ಸಾಮಾನ್ಯವಾದುವೆಂದರೆ ವಿವಿಧ ಬಗೆಯ ಅಲಗುಗಳು, ತ್ರಿಕೋಣ, ಅಸಮ ಚತುರ್ಭುಜ, ಬಾಣದ ಮೊನೆ, ಅರ್ಧಚಂದ್ರಾಕೃತಿ ಮತ್ತು ವಜ್ರಾಕೃತಿಯ ಉಪಕರಣಗಳು. ಬಹುತೇಕ ಉಪಕರಣಗಳು 15–20 ಮಿಮೀ ಅಳತೆಯೊಳಗಿವೆ. ಬೆಣಚುಕಲ್ಲು ಮತ್ತು ಚಕಮಕಿಕಲ್ಲಿನಿಂದ ಇವನ್ನು ಮಾಡಲಾಗಿದೆ. ಉಪಕರಣಗಳ ಸಣ್ಣ ಆಕಾರ, ಜ್ಯಾಮಿತೀಯ ನಿಖರತೆ ಮತ್ತು ಸಮರೂಪತೆ ಉತ್ಕೃಷ್ಟ ಮಟ್ಟದ ಕೌಶಲವನ್ನು ತೋರುತ್ತವೆ. ದೊಡ್ಡ ಚಕ್ಕೆ ಅಥವಾ ಮೂಲ ಶಿಲಾಗಟ್ಟಿಗಳಿಂದ ತಯಾರಾದ ಉಪಕರಣಗಳು ಕಡಿಮೆ. ಕೊರೆಯುಳಿ ಮತ್ತು ವಿವಿಧ ನಮೂನೆಯ ಹೆರೆಚಕ್ಕೆಗಳು ಈ ವರ್ಗಕ್ಕೆ ಸೇರುತ್ತವೆ. ಉಪಕರಣಗಳು ಈ ನೆಲೆಯಲ್ಲಿಯೇ ತಯಾರಾಗಿವೆ.

ತಾಮ್ರದ ಉಪಕರಣಗಳು: 3 ಬಾಣದ ಮೊನೆಗಳು, 1 ಭರ್ಜಿಯ ಮೊನೆ ಮತ್ತು 1 ತೆಳು ಸಲಾಕೆ 2ನೆಯ ಉಪಹಂತದ ಶವಕುಣಿಗಳಲ್ಲಿದ್ದುವು. ಬಾಣದ ಮೊನೆಗಳ ಕೆಳಬದಿಯಲ್ಲಿ 2 ಸಣ್ಣ ತೂತುಗಳಿದ್ದು ಈ ಮೊನೆಗಳನ್ನು ಲೋಹದ ತಂತಿ ಅಥವಾ ಹುರಿಯಿಂದ ಕೋಲಿಗೆ ಸಿಕ್ಕಿಸಲಾಗುತ್ತಿತ್ತು. ಈ ಉಪಕರಣಗಳು ಇದೇ ವಸತಿಯಲ್ಲಿ ತಯಾರಾಗಿರುವ ಕುರುಹುಗಳಿಲ್ಲ. ಹಾಗಾಗಿ ಇವನ್ನು ಸಮೀಪದ ಹರಪ್ಪ ಸಂಸ್ಕೃತಿಯ ಅಥವಾ ತಾಮ್ರ–ಶಿಲಾಯುಗ ಸಂಸ್ಕೃತಿಯ ವಸತಿಗಳಿಂದ ಪಡೆದಿರುವ ಸಾಧ್ಯತೆಯಿದೆ.

ಕಬ್ಬಿಣದ ಉಪಕರಣಗಳು: ಸಣ್ಣ ಕಬ್ಬಿಣದ ತುಣುಕುಗಳು ಮತ್ತು 2 ಪೂರ್ಣ ಬಾಣದ ಮೊನೆಗಳು 2ನೆಯ ಹಂತದ ಪದರದಿಂದ ದೊರೆತಿವೆ.



ಸೂಕ್ಷ್ಮಶಿಲಾಯುಗದ ಉಪಕರಣಗಳು

ಮಣ್ಪಾತ್ರೆಗಳು: ಮೊದಲನೆಯ ಹಂತದಲ್ಲಿ ಮಣ್ಪಾತ್ರೆಗಳಿಲ್ಲ. 2ನೆಯ ಉಪಹಂತದ ಪಾತ್ರೆಗಳು ಅಭ್ರಕಯುಕ್ತ ದೊರಗುಮಣ್ಣಿನಿಂದ ತಯಾರಾಗಿವೆ. ಒಂದು ಅಥವಾ ಎರಡೂ ಮೇಲ್ಮೈ ಮೇಲೆ ಹೊಳಪುಗೆಂಪಿನ ತೆಳುಲೇಪನವಿದೆ. ಆವಗೆಯಲ್ಲಿ ಕಡಿಮೆ ತಾಪದಲ್ಲಿ ಸುಟ್ಟಿರುವುದರಿಂದ ಪಾತ್ರೆಗಳು ಶಿಥಿಲವಾಗಿವೆ. ಇವುಗಳ ಒಳಮೇಲ್ಮೈಯಲ್ಲಿ ಚಕ್ರದ ತಿರುಗುವಿಕೆ ಯಿಂದಾಗುವ ಸಮಾನಾಂತರ ಗೆರೆಗಳ ಗುರುತಿಲ್ಲ. ಹಾಗಾಗಿ ಇವನ್ನು ಮಂದಗತಿಯಿಂದ ತಿರುಗುವ ಚಕ್ರ ಅಥವಾ ಮರದ ಹಲಗೆಯನ್ನು ಬಳಸಿ ಮಾಡಲಾಗಿದೆ. ಅಗಲ ಬಾಯಿಯ ಜಾಡಿಗಳು, ಆಳವಾದ ಸಣ್ಣ ಬೋಗುಣಿಗಳು, ಆಳವಿಲ್ಲದ ಅಗಲವಾದ ಬೋಗುಣಿಗಳು, ಸಣ್ಣ ಮಡಕೆಗಳು ಮತ್ತು ಬಟ್ಟಲುಗಳು ಕಂಡುಬಂದಿವೆ. ಇವುಗಳ ಮೇಲೆ ಸರಳ ಗೀರಿನ ರೇಖಾವಿನ್ಯಾಸಗಳಿವೆ. ಆಕಾರ, ಅಲಂಕಾರದ ವಿನ್ಯಾಸಗಳಲ್ಲಿ ಈ ಪಾತ್ರೆಗಳು ಸಮಕಾಲೀನ ತಾಮ್ರ–ಶಿಲಾಯುಗ ಸಂಸ್ಕೃತಿಯ ಪಾತ್ರೆಗಳನ್ನು ಹೋಲುತ್ತವೆ.

2ನೆಯ ಹಂತದ ಮಣ್ಪಾತ್ರೆಗಳು ತಿಗುರಿಯ ಸಹಾಯದಿಂದ ತಯಾರಾದುವು. ಹೆಚ್ಚು ಕಾಣಸಿಗುವ ಆಕಾರಗಳೆಂದರೆ ದೊಡ್ಡ ಜಾಡಿಗಳು, ಸಣ್ಣ ಕುಡಿಕೆಗಳು ಮತ್ತು ಅಗಲಬಾಯಿಯ ಪುಟ್ಟ ತಳವಿರುವ ಬಟ್ಟಲುಗಳು. ಈ ಪಾತ್ರೆಗಳಲ್ಲಿ ಅಲಂಕರಣೆ ವಿರಳ.

ಕಟ್ಟಡಗಳು: ಮೊದಲ ಹಂತದಲ್ಲಿ ಜಲ್ಲಿಕಲ್ಲಿನಿಂದ ಗಟ್ಟಿಗೊಳಿಸಿದ ನೆಲಗಟ್ಟುಗಳು ಉಳಿದಿವೆ. ಕೆಲವೊಂದು ವರ್ತುಲಕಾರದಲ್ಲಿವೆ. ಇವಲ್ಲದೆ 40–70ಸೆಂಮೀ ಉದ್ದಗಲದ ಒತ್ತಿ ತುಂಬಿದ ಕಲ್ಲಿನ ನೆಲಗಳು ಕಂಡುಬಂದಿದ್ದು ಇವುಗಳ ಮೇಲೆ ಮೂಳೆಯ ಸಾಂದ್ರತೆ ಹೆಚ್ಚಿದೆ. ಇಂತಹ ನೆಲಗಳು ಕಸಾಯಿ ಪಟ್ಟಿಗಳಾಗಿರುವ ಸಾಧ್ಯತೆಯಿದೆ. 2ನೆಯ ಹಂತದಲ್ಲಿ ಸುಟ್ಟ ಇಟ್ಟಿಗೆಗಳ ಭಾಗಗಳು, ಹೆಂಚುಗಳು ಹಾಗೂ ಕಲ್ಲಿನ ಗೋಡೆಯ ಭಾಗಗಳು ಕಂಡುಬಂದಿವೆ.

ಆಭರಣಗಳು: ಮೊದಲ ಹಂತದ 2ನೆಯ ಉಪಹಂತದಲ್ಲಿ ಅರೆಪ್ರಶಸ್ತ ಕಲ್ಲಿನ (ಅಗೇಟ್, ಮಂದಗೆಂಪಿನ ಕಲ್ಲು, ಗಾರ್ನೆಟ್) ಮಣಿಗಳು ಮತ್ತು ಮೂಳೆಯ ಪುಟ್ಟ ಮಣಿಗಳು ಲಭಿಸಿವೆ. ಈ ಹಂತದ ಶವಕುಣಿಯೊಂದರಲ್ಲಿ ಅಸ್ಥಿಪಂಜರದ ಕುತ್ತಿಗೆ ಮತ್ತು ಎದೆಯ ಮೇಲೆ ಶಿಥಿಲವಾದ ಸರವೊಂದರ 38 ಮಣಿಗಳಿದ್ದುವು. 2ನೆಯ ಹಂತದಲ್ಲಿ ಗಾಜಿನ ಮಣಿಗಳು ಮತ್ತು ಕಲ್ಲಿನ ಪದಕಗಳು ದೊರೆತಿವೆ.

ಕಲ್ಲು ಮತ್ತು ಸುಟ್ಟಮಣ್ಣಿನ ವಸ್ತುಗಳು: ಸುತ್ತಿಗೆ ಕಲ್ಲುಗಳು ಹೇರಳವಾಗಿ ದೊರೆತಿವೆ. ಸೂಕ್ಷ್ಮಶಿಲೋಪಕರಣಗಳ ತಯಾರಿಕೆಯಲ್ಲಿ ಮತ್ತು ಪ್ರಾಣಿಮೂಳೆಗಳನ್ನು ತುಂಡು ಮಾಡುವುದಕ್ಕೆ ಇವು ಬಳಕೆಯಾಗಿರಬೇಕು. ಇನ್ನು ಕೆಲವು ಕವಣೆಕಲ್ಲುಗಳ ರೂಪದಲ್ಲಿ ಬಳಕೆಯಾಗಿರಬಹುದು. ಅರೆಯುವ ಕಲ್ಲುಗಳು ಎರಡೂ ಹಂತಗಳಲ್ಲಿವೆ. ಮೊದಲ ಹಂತದ 2ನೆಯ ಉಪಹಂತದಲ್ಲಿ 2 ಉಂಗುರ ಕಲ್ಲುಗಳು ದೊರೆತಿವೆ. ಇವನ್ನು ಎಲ್ಲೆಡೆ ಕೃಷಿ ಉಪಕರಣವೆಂದು ಅರ್ಥೈಸಲಾಗಿದೆ. ಸುಟ್ಟಮಣ್ಣಿನ ಏಕೈಕ ವಸ್ತುವೆಂದರೆ ತುಂಡಾದ ಕದಿರಣಿಗೆ–ಗುಂಡಿ. ಇದು 2ನೆಯ ಉಪಹಂತದ ಶವಕುಣಿಯೊಂದರಲ್ಲಿ ದೊರೆತಿದೆ.

ಆಹಾರ ಮತ್ತು ಆರ್ಥಿಕ ಸ್ಥಿತಿ: ಮೊದಲ ಹಂತದಲ್ಲಿ ಪ್ರಾಣಿಮೂಳೆಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಮಾಂಸಾಹಾರ ಪ್ರಧಾನವಾಗಿತ್ತೆಂದು ಹೇಳಬಹುದು. ಮೊದಲ ಉಪಹಂತದ ಸಾಕುಪ್ರಾಣಿಗಳೆಂದರೆ ಜಾನುವಾರು, ಕುರಿ–ಮೇಕೆ, ಎಮ್ಮೆ ಮತ್ತು ಹಂದಿ. ಪ್ರ.ಶ.ಪೂ.5000ದ ಸುಮಾರಿಗೆ ಪಶುಸಾಕಣೆ ಭಾರತದಲ್ಲಿ ಪ್ರಾರಂಭವಾಗಿತ್ತೆಂಬುದು

ಮಹತ್ತ್ವದ ವಿಷಯ. ವನ್ಯಪ್ರಾಣಿಗಳಲ್ಲಿ ಕೃಷ್ಣಮೃಗ, ಜಿಂಕೆಯ ಜಾತಿಗಳು, ಮೊಲ, ಕಾಡುಹಂದಿ, ಮುಂಗುಸಿ, ನರಿ, ಆಮೆ, ಮೀನು ಮತ್ತು ಕಪ್ಪೆ ಮುಖ್ಯವಾದವು. ಶೇ.70ರಷ್ಟು ಮೂಳೆಗಳಲ್ಲಿ ಸುಟ್ಟ ಚಿಹ್ನೆಗಳಿವೆ. ಒಟ್ಟಾರೆ ಈ ಹಂತದಲ್ಲಿ ಜನರು ಬೇಟೆ ಮತ್ತು ಪಶುಪಾಲನೆಯನ್ನು ಅವಲಂಬಿಸಿದ್ದರು. 2ನೆಯ ಉಪಹಂತದಲ್ಲಿ ಬೇಟೆಯ ಪ್ರಾಧಾನ್ಯ ತಗ್ಗಿದಂತೆ ತೋರುತ್ತದೆ. ಈ ಹಂತದಲ್ಲಿ ವ್ಯವಸಾಯ ಆಹಾರೋತ್ಪನ್ನದ ಮಾರ್ಗಗಳ ಲ್ಲೊಂದಾಗಿದ್ದು ಇದಕ್ಕೆ ಕಾರಣವಾಗಿರಬಹುದು. 2ನೆಯ ಹಂತದಲ್ಲಿ ಮೂಳೆಗಳು ಅತಿ ಕಡಿಮೆ.

ಶವಸಂಸ್ಕಾರ ಪದ್ಧತಿ: ಉತ್ಖನನದಲ್ಲಿ ಒಟ್ಟು 5 ಶವಕುಣಿಗಳು ದೊರೆತಿವೆ. ಇವುಗಳಲ್ಲಿ ಒಂದು ಮಧ್ಯಕಾಲೀನಯುಗದ್ದು. ಉಳಿದವು ಸೂಕ್ಷ್ಮಶಿಲಾಯುಗದವು. 1ನೆಯ ಉಪಹಂತದ ಅಸ್ಥಿ ಅವಶೇಷ ಮಧ್ಯವಯಸ್ಕ ಮಹಿಳೆಯದ್ದಾಗಿದೆ. ಶವವನ್ನು ಕುಣಿಯಲ್ಲಿ ನೇರಭಂಗಿಯಲ್ಲಿ ತಲೆ ಪಶ್ಚಿಮಕ್ಕಿರುವಂತೆ ಹೂಳಲಾಗಿದೆ. ಇದರಲ್ಲಿ ಇತರ ವಸ್ತುಗಳೇನೂ ದೊರೆತಿಲ್ಲ. 2ನೆಯ ಉಪಹಂತದಲ್ಲಿ ಅಸ್ಥಿಪಂಜರಗಳ ಕೈಕಾಲು ಮೂಳೆಗಳು ಮಡಿಸಿವೆ. ಮಧ್ಯವಯಸ್ಕ ಮಹಿಳೆ, ಪುರುಷ ಮತ್ತು ಏಳೆಂಟು ವರ್ಷದ ಮಗುವೊಂದರ ಅಸ್ಥಿಪಂಜರಗಳಿವು. ಒಂದು ಶವಕುಣಿಯಲ್ಲಿ ತಾಮ್ರದ 2 ಬಾಣಗಳ ಮೊನೆ, ಮತ್ತೊಂದರಲ್ಲಿ ತಾಮ್ರದ ಭರ್ಜಿಯ ಮೊನೆ, ಬಾಣದ ಮೊನೆ ಮತ್ತು ಸಲಾಕೆ ಸಿಕ್ಕಿವೆ. ಮಣಿಗಳ ಶಿಥಿಲವಾದ ಹಾರ ಮತ್ತು ಮಣ್ಣಿನ ತಕಲಿಗಳು ಈ ಶವಕುಣಿಯಲ್ಲಿ ಕಂಡುಬಂದಿರುವುದು ವಿಶೇಷ.

ಮೊದಲನೆಯ ಹಂತದಿಂದ ದೊರೆತ ಇಂಗಾಲ–14ರ ಕಾಲಮಾನಗಳು (ಪರಿಷ್ಕೃತ) ಇಂತಿವೆ: ಪ್ರ.ಶ.ಪೂ.5365–4965, ಪ್ರ.ಶ.ಪೂ.4570–4385, ಪ್ರ.ಶ.ಪೂ.3955–3775, ಪ್ರ.ಶ.ಪೂ.3400–3160 ಮತ್ತು ಪ್ರ.ಶ.ಪೂ.2650–2315. ಮೊದಲ 3 ಕಾಲಾವಧಿಗಳು 1ನೆಯ ಉಪಹಂತಕ್ಕೂ ಉಳಿದೆರಡು 2ನೆಯ ಉಪಹಂತಕ್ಕೂ ಅನ್ವಯಿಸುತ್ತವೆ. 1ನೆಯ ಉಪಹಂತದ ವಸತಿಯು ಪ್ರ.ಶ.ಪೂಸು.5000ದ ಹೊತ್ತಿಗೆ ಪ್ರಾರಂಭವಾಗಿರುವುದರಲ್ಲಿ ಸಂಶಯವಿಲ್ಲ. 2ನೆಯ ಉಪಹಂತ ಪ್ರ.ಶ.ಪೂ.2500ರ ಅವಧಿಯದು. 2ನೆಯ ಹಂತದ ಕಾಲಾವಧಿಯನ್ನು ಇಂಗಾಲ–14ರ ಕ್ರಮದಿಂದ ನಿರ್ಧರಿಸಲಾಗಿಲ್ಲ. ಪ್ರಾಚ್ಯಾವಶೇಷಗಳ ಆಧಾರದ ಮೇಲೆ ಇದರ ಆರಂಭಕಾಲ ಪ್ರ.ಶ.ಪೂ.600–500 ಎಂದು ಊಹಿಸಬಹುದು.

2001–02ರಲ್ಲಿ ಡೆಕ್ಕನ್ ಕಾಲೇಜಿನ ಶಿಂಧೆ ಅವರ ನಿರ್ದೇಶನದಲ್ಲಿ ಇಲ್ಲಿ ಲಂಬ ಉತ್ಖನನ ನಡೆಯಿತು. ಈ ಉತ್ಖನನದಲ್ಲಿ ಸೂಕ್ಷ್ಮಶಿಲಾಯುಗದ ಕುರುಹುಗಳು ಮಾತ್ರ ಲಭಿಸಿವೆ.

ಸೂಕ್ಷ್ಮಶಿಲಾಯುಗ ಅವಶೇಷಗಳನ್ನು ಮಣ್ಪಾತ್ರೆರಹಿತ ಮತ್ತು ಮಣ್ಪಾತ್ರೆಸಹಿತ ಹಂತಗಳಾಗಿ ವಿಭಜಿಸಲಾಗಿದೆ. ಮಣ್ಪಾತ್ರೆರಹಿತ ಹಂತದಲ್ಲಿ 2 ನೆಲಗಟ್ಟುಗಳನ್ನು ಅನಾವರಣಗೊಳಿಸಲಾಗಿದೆ. ನೆಲಗಳ ಮೇಲೆ ಸೂಕ್ಷ್ಮಶಿಲೋಪಕರಣಗಳು, ತ್ಯಾಜ್ಯ ಚಕ್ಕೆಚೂರುಗಳು, ಪ್ರಾಣಿಮೂಳೆಗಳು, ಆಹಾರ ಸಂಸ್ಕರಣೆಯ ಸಾಧನಗಳು ಕಂಡುಬಂದಿದ್ದು ಇವು ದೀರ್ಘ ಕಾಲದ ವಸತಿಯನ್ನು ಸೂಚಿಸುತ್ತವೆ.

ಮಣ್ಪಾತ್ರೆಸಹಿತ ಹಂತದಲ್ಲಿ ಅಲಗಿನ ಸಮುಚ್ಚಯ, ವಾಸಗೃಹ ಅವಶೇಷಗಳ ಜೊತೆಗೆ ಮಣ್ಪಾತ್ರೆಯ ಬಳಕೆ ಮೊದಲ ಬಾರಿಗೆ ಕಂಡುಬರುತ್ತದೆ. ಮಣ್ಪಾತ್ರೆಗಳು ಕೆಂಪು ಬಣ್ಣದವಾಗಿದ್ದು ದೊರಗಾದ ಮಣ್ಣಿನಿಂದ ತಯಾರಾಗಿವೆ. ಹುಲ್ಲು ಮತ್ತು ಮರಳನ್ನು ಮಣ್ಣಿನ ಜೊತೆ ಬೆರೆಸಲಾಗಿದೆ. ಮಂದಗತಿಯಲ್ಲಿ ತಿರುಗುವ ಹಲಗೆಯ ಮೇಲೆ ಇವುಗಳನ್ನು ಮಾಡಲಾಗಿದೆ. ಸರಿಯಾಗಿ ಸುಡದಿದ್ದ ಕಾರಣ ಇವು ಶಿಥಿಲವಾಗಿವೆ. ಕೆಲವೊಂದು ಚೂರುಗಳಲ್ಲಿ ಗೀರಿನ ವಿನ್ಯಾಸಗಳಿವೆ. ಇವು ಈ ಪ್ರಾಂತದ ಅತ್ಯಂತ ಪ್ರಾಚೀನ ಮಣ್ಪಾತ್ರೆ ಚೂರುಗಳಾಗಿವೆ. ಈ ಹಂತದ ಕಟ್ಟಡ ಅವಶೇಷಗಳಲ್ಲಿ 2 ಉಪಹಂತಗಳನ್ನು ಗುರುತಿಸಲಾಗಿದೆ. ಎರಡರಲ್ಲೂ ನೆಲಗಳ ಅವಶೇಷಗಳಿವೆ. ಎರಡೂ ಹಂತಗಳಲ್ಲಿ ಸೂಕ್ಷ್ಮಶಿಲೋಪಕರಣಗಳು ವಸತಿಯಲ್ಲಿಯೇ ತಯಾರಾಗಿವೆ. ಹೆಚ್ಚಿನ ಉಪಕರಣಗಳನ್ನು ಬೆಣಚುಕಲ್ಲಿನಿಂದ ಮಾಡಲಾಗಿದೆ. ಉಳಿದವು ಚಕಮಕಿಕಲ್ಲಿನ ಉಪಕರಣಗಳು. ಅಸಮ ಚತುರ್ಭುಜ, ವಿವಿಧ ನಮೂನೆಯ ಅಲಗುಗಳು, ವಜ್ರಾಕೃತಿ, ಅರ್ಧ ಚಂದ್ರಾಕೃತಿ, ಮೊನೆ ಮತ್ತು ಬಾಣದ ಮೊನೆಗಳಿವೆ. ಹೆಚ್ಚಿನ ಉಪಕರಣಗಳು 20–40 ಮಿಮೀನೊಳಗಿವೆ.

ಎ.ಎಂ.ಎಸ್. ಕಾಲನಿರ್ಣಯದಂತೆ (ಪರಿಷ್ಕೃತ)ಮಣ್ಪಾತ್ರೆರಹಿತ ಹಂತ 5680ರ ಅವಧಿಯದೂ ಮಣ್ಪಾತ್ರೆಸಹಿತ ಹಂತ ಪ್ರ.ಶ.ಪೂ.4490ರ ಅವಧಿಯದೂ ಆಗಿವೆ. ಬಾಗೋರ್‌ನ ಸೂಕ್ಷ್ಮಶಿಲಾಯುಗ ವಸತಿ ಅರೆ–ವಲಸೆ ಸ್ವರೂಪದ್ದಾಗಿರಬೇಕು. (ವಿ.ಎಸ್.)

**ಬಾಣ:** 7ನೆಯ ಶತಮಾನ. ಸಂಸ್ಕೃತದ ಉದ್ದಾಮ ಪಂಡಿತ. ಸಂಸ್ಕೃತ ಗದ್ಯ ಸಾಹಿತ್ಯದಲ್ಲಿ ಈತನ ಕೀರ್ತಿ ಅಜರಾಮರವಾದುದು. ಹರ್ಷಚರಿತೆ ಹಾಗೂ ಕಾದಂಬರಿಗಳು ಇವನ ಪ್ರಮುಖ ಕೃತಿಗಳು. ಹರ್ಷಚರಿತೆಯ ಆರಂಭದಲ್ಲಿ ಇವನ ಆತ್ಮವೃತ್ತ ವರ್ಣಿತವಾಗಿದೆ. ಶೋಣಾನದಿಯ ಸಮೀಪದಲ್ಲಿರುವ ಪ್ರೀತಿಕೂಟವೆಂಬ ಅಗ್ರಹಾರದಲ್ಲಿ (ಪ್ರಾಯಶಃ ಇದು ಬಿಹಾರ್ ಪ್ರಾಂತ್ಯದ ಪಶ್ಚಿಮ ಭಾಗದಲ್ಲಿದ್ದಿರಬೇಕು) ಜನಿಸಿದನು. ತಾಯಿ ರಾಜದೇವಿ ವಾತ್ಸ್ಯಾಯನ ವಂಶಕ್ಕೆ ಸೇರಿದವಳು. ತಂದೆ ಚಿತ್ರಭಾನು. ಬಾಲ್ಯದಲ್ಲಿಯೇ ಮಾತೃವಿಯೋಗವಾಗಿ ಈತ ತಂದೆಯ ರಕ್ಷಣೆಯಲ್ಲಿ ಬೆಳೆದ. ಆದರೆ 14ನೆಯ ವಯಸ್ಸಿನಲ್ಲಿ ಇವನ ತಂದೆಯೂ ತೀರಿಕೊಂಡ. ದುಃಖಿತನಾದ ಬಾಣ ಕೆಲಕಾಲ ದೇಶಾಟನೆ ಮಾಡಿಬಂದ. ಹೀಗೆ ಬಂದ ಬಾಣನ ಲೋಕಾನುಭವ ಹಾಗೂ ವಿದ್ಯಾಪಾಂಡಿತ್ಯ ಗುರುತಿಸಿದ ಶ್ರೀಹರ್ಷನ ಸಂಬಂಧಿ ಕೃಷ್ಣ ಎಂಬಾತ ಈತನ ಬಗೆಗೆ ಶ್ರೀಹರ್ಷನಿಗೆ ತಿಳಿಸಿದ. ಶ್ರೀಹರ್ಷ ಇವನನ್ನು ಕರೆಯಿಸಿಕೊಂಡು ಆಸ್ಥಾನ ಪಂಡಿತನನ್ನಾಗಿ ಮಾಡಿಕೊಂಡ. ಬಾಣನೇ ತನ್ನ ವಂಶಾವಳಿಯನ್ನು ಹರ್ಷಚರಿತದಲ್ಲಿ ಗದ್ಯರೂಪದಲ್ಲಿಯೂ ಕಾದಂಬರಿಯಲ್ಲಿ ಪದ್ಯ ರೂಪದಲ್ಲಿಯೂ ಹೇಳಿಕೊಂಡಿದ್ದಾನೆ.

ಈತ ಆಸ್ಥಾನಪಂಡಿತನಾದ ಮೇಲೆ ತನ್ನ ಆಶ್ರಯದಾತನ ಜೀವನ ಚರಿತ್ರೆಯನ್ನು ಗದ್ಯರೂಪದಲ್ಲಿ ಬರೆದು ಅದನ್ನು ಹರ್ಷಚರಿತವೆಂದು ಕರೆದಿದ್ದಾನೆ. ಇದಲ್ಲದೆ ಕಾದಂಬರಿ ಮತ್ತು ಚಂಡೀಶತಕವೆಂಬ ಗ್ರಂಥಗಳನ್ನು ರಚಿಸಿದ್ದಾನೆ. ರತ್ನಾವಳಿ ಎಂಬ ನಾಟಕ ಈತನ ರಚನೆ. ಪಾರ್ವತೀಪರಿಣಯವೆಂಬ ನಾಟಕವನ್ನು ಈತನೇ ಬರೆದಿರುವುದಾಗಿ ಕೆಲವರು ಹೇಳುತ್ತಾರೆ. ಈತ ಬರೆದನೆಂದು ಹೇಳುವ ಶ್ಲೋಕಬದ್ಧ ಕಾದಂಬರಿ ಮತ್ತು ಮುಕುಟ ತಾಡಿತಕವೆಂಬ ಗ್ರಂಥಗಳು ಉಪಲಬ್ಧವಿಲ್ಲ. ಹರ್ಷಚರಿತ ಐತಿಹಾಸಿಕ ಅಥವಾ ಚಾರಿತ್ರಿಕ ಕಾವ್ಯವೆನಿಸಿದರೆ, ಕಾದಂಬರಿ ಕಲ್ಪಿತ ಕಥೆಯ ಜಾತಿಗೆ ಸೇರಿದೆ. ಹರ್ಷಚರಿತವನ್ನು ಆಖ್ಯಾಯಿಕೆಯೆಂದೂ ಕಾದಂಬರಿಯನ್ನು ಕಥೆಯೆಂದೂ ಆಲಂಕಾರಿಕರು ಕರೆಯುತ್ತಾರೆ. ಕಾದಂಬರಿಯಲ್ಲಿ ಶೃಂಗಾರರಸವೂ ಹರ್ಷಚರಿತದಲ್ಲಿ ಕರುಣರಸವೂ ಚಂಡೀಶತಕದಲ್ಲಿ ವೀರರಸವೂ ಪ್ರಧಾನವೆನಿಸಿವೆ. ಕಾದಂಬರಿಯಲ್ಲಿ ಪೂರ್ವಭಾಗವೆಂದೂ ಉತ್ತರಭಾಗವೆಂದೂ ಎರಡು ಭಾಗಗಳಿರುವುವು. ಪೂರ್ವ ಭಾಗವನ್ನು ಬಾಣನು ಬರೆದನೆಂದೂ ಉತ್ತರಾರ್ಧವನ್ನು ಇವನ ಮಗ ಪುಲಿಂದಭಟ್ಟ ಬರೆದನೆಂದೂ ಪ್ರತೀತಿ. ಕಾದಂಬರಿಯ ಕಥಾವಸ್ತು ಕೇವಲ ಒಂದು ಜನ್ಮಕ್ಕೆ ಸಂಬಂಧಿಸಿದುದಾಗಿರದೆ ಚಂದ್ರಾಪೀಡ ಮತ್ತು ಪುಂಡರೀಕ ಇವರ ಮೂರು ಜನ್ಮಗಳ ಕಥೆ.

ಚಂಡೀಶತಕದ ಕಥಾಭಾಗವನ್ನು ಕವಿ ದೇವಿಮಾಹಾತ್ಮ್ಯದಿಂದ ಆರಿಸಿಕೊಂಡಿದ್ದಾನೆ. ಇದರಲ್ಲಿ ಬೀಭತ್ಸ, ರೌದ್ರ, ಅದ್ಭುತ, ಭಯಾನಕ, ವೀರರಸ ವರ್ಣನೆಗಳು ಮೂರ್ತಿಮತ್ತಾಗಿ ಎದುರಿಗೆ ನಿಂತಂತೆ ತೋರುವುವು. ಇದು ಬಾಣನ ಸರ್ವೋತ್ಕೃಷ್ಟ ರಚನೆ. ಭಾಷೆ ಭಾವ, ಶಬ್ದ ಮತ್ತು ಅರ್ಥಗಳ ಉಚಿತ ಸಮ್ಮಿಳನ ಇದರಲ್ಲಿದೆ. ವರ್ಣನೆಗಳು ಶ್ರೇಷ್ಠವಾಗಿವೆ. ಅಲಂಕಾರ ಮತ್ತು ರಸಗಳ ಮಧುರ ಮಿಲನದಲ್ಲಿ ಭಾಷೆ ಮತ್ತು ಭಾವಗಳ ಸಂಪರ್ಕದಲ್ಲಿ, ಕಲ್ಪನೆ ಮತ್ತು ವರ್ಣನೆಯ ಅನುರೂಪ ಸಂಘಟನೆಯಲ್ಲಿ ಈ ಕಾವ್ಯ ಸಂಸ್ಕೃತ ಸಾಹಿತ್ಯದಲ್ಲಿ ಅನುಪಮವಾದುದು. ಪಾತ್ರಗಳ ಚಾರಿತ್ರ್ಯವನ್ನು ಚಿತ್ರಿಸುವಲ್ಲಿ ಬಾಣನಿಗೆ ಅದ್ಭುತ ಕಲೆಗಾರಿಕೆಯಿದೆ. ಪಾತ್ರಗಳು ಸಜೀವವಾಗಿ ಚಿತ್ರಿತವಾಗಿವೆ. ಇವನ ಶೈಲಿಯೂ ಆದರ್ಶಪ್ರಾಯವಾದುದು. ಗದ್ಯರಚನೆಯಲ್ಲಿ ಈತ ಅತ್ಯಂತ ಪ್ರವೀಣ.

ಹರ್ಷಚರಿತ ಒಂದು ಚಾರಿತ್ರಿಕ ಕಾವ್ಯ. ಎಂಟು ಉಚ್ಛ್ವಾಸಗಳಿಂದ ಕೂಡಿದ ಇದರಲ್ಲಿ ಬಾಣ ತನ್ನ ಆಶ್ರಯದಾತನಾದ ಹರ್ಷವರ್ಧನನ ಜೀವನ ಚರಿತ್ರೆ ತಿಳಿಸಿದ್ದಾನೆ. ಇದರಲ್ಲಿ ಮೊದಲಿಂದ ಕೊನೆಯವರೆಗೂ ಕರುಣರಸವೇ ತುಂಬಿದೆ. ದುಃಖಗಳು ಮೇಲಿಂದ ಮೇಲೆ ಒದಗುತ್ತವೆ ಎಂಬುದಕ್ಕೆ ಹರ್ಷನ ಜೀವನ ಉತ್ತಮ ನಿದರ್ಶನವಾಗಿದೆ. ಎಷ್ಟೇ ಕಷ್ಟನಷ್ಟಗಳು ಸಂಭವಿಸಿದರೂ ಹರ್ಷ ತನ್ನ ಮನಃಸ್ಥೈರ್ಯ, ಸಮಾಧಾನಗಳನ್ನು ಕಳೆದುಕೊಳ್ಳಲಿಲ್ಲವೆಂಬ ದಿವ್ಯವಾದ ಆದರ್ಶವನ್ನು ಹರ್ಷಚರಿತ ಪರಿಣಾಮಕಾರಿಯಾಗುವಂತೆ ಬೋಧಿಸುತ್ತದೆ. (ಟಿ.ಜಿ.ಎಸ್.)

**ಬಾದಾಮಿ:** ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ ಹಾಗೂ ಮುಖ್ಯ ಪಟ್ಟಣ. ಇತಿಹಾಸ ಪ್ರಸಿದ್ಧ ಸ್ಥಳ. ಬಿಜಾಪುರದಿಂದ 113ಕಿಮೀ ದಕ್ಷಿಣದಲ್ಲಿ ಹುಬ್ಬಳ್ಳಿ–ಸೊಲ್ಲಾಪುರ ರೈಲುಮಾರ್ಗದಲ್ಲಿದೆ. ಬಾದಾಮಿ ಪಟ್ಟಣದ ಸನ್ನಿವೇಶ ಬಹು ಸುಂದರವಾದುದು. ನಸುಗೆಂಪು ಮರಳುಕಲ್ಲಿನ ಗುಡ್ಡದ ಗಜಪೃಷ್ಠಾಕಾರದ ಕಣಿವೆಯ ಮಧ್ಯದಲ್ಲಿ ಇರುವ ಅಗಸ್ತ್ಯ ಸರೋವರ ಎಂಬ ವಿಶಾಲವಾದ ಕೆರೆಯ ಪಶ್ಚಿಮ ಭಾಗದಲ್ಲಿ ಈ ಪಟ್ಟಣ ಹಬ್ಬಿದೆ. ಹಿಂದೆ ಇದಕ್ಕೆ ವಾತಾಪಿ ಎಂಬ ಹೆಸರೂ ಇತ್ತೆಂದು ಸ್ಥಳೀಯ ಪ್ರತೀತಿ. 6–8ನೆಯ ಶತಮಾನಗಳಲ್ಲಿ ಕರ್ನಾಟಕದ ಹೆಮ್ಮೆಯ ಸಾಮ್ರಾಜ್ಯವಾಗಿ ಮೆರೆದ ಚಳುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಆ ಕಾಲದಲ್ಲಿ ಕಗ್ಗಲ್ಲಿನಲ್ಲಿ ಕೊರೆದಿರುವ ಮತ್ತು ಕಟ್ಟಿದ ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳು ಇಂದಿಗೂ ಉಳಿದುಬಂದಿದ್ದು ಪ್ರೇಕ್ಷಣೀಯ ಸ್ಥಳವಾಗಿದೆ.

ಚಳುಕ್ಯರ ಕಾಲಕ್ಕೂ ಪೂರ್ವದಲ್ಲಿ ಇದು ಬಹುಶಃ ಒಂದು ಸುಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿತ್ತು. ಗ್ರೀಕ್ ಭೂಗೋಳಕಾರ ಟಾಲಮಿ (ಸು.150) ತನ್ನ ಪುಸ್ತಕದಲ್ಲಿ ಬಾದಾಮಿಯನ್ನೂ ಉಲ್ಲೇಖಿಸಿದ್ದಾನೆ. ಇದನ್ನು ಒಪ್ಪುವ ಹಾಗೆ ಸರೋವರದ ಉತ್ತರ ಬದಿಯ ಗುಡ್ಡದ ಇಕ್ಕಟ್ಟಿನ ಸಂಧಿಗಳಲ್ಲಿ ಇತಿಹಾಸದ ಪ್ರಾರಂಭಕಾಲದ (ಪ್ರ.ಶ.ಪೂ.3ನೆಯ ಶತಮಾನ) ಮಣ್ಣಿನ ಪಾತ್ರೆಗಳ ಚೂರುಗಳೂ ಮತ್ತು ಆ ಕಾಲದ ಅಥವಾ ಸ್ವಲ್ಪ ಅನಂತರ ಕಾಲದ ಕಟ್ಟಡಗಳ ಅವಶೇಷಗಳೂ ದೊರಕಿವೆ. ಚಳುಕ್ಯ ಚಕ್ರವರ್ತಿ ಒಂದನೆಯ ಪುಲಕೇಶಿ ಇಲ್ಲಿ ಮೊದಲು ಕೋಟೆ ಕಟ್ಟುವಾಗಲೇ ಇದು ದೊಡ್ಡ ಪಟ್ಟಣವಾಗಿರಬೇಕು. ಏಕೆಂದರೆ ಇವನ ಶಾಸನದಲ್ಲಿ ಈ ಊರನ್ನು ವಾತಾಪ್ಯಧಿಷ್ಠಾನವೆಂದು ವರ್ಣಿಸಲಾಗಿದೆ. ಅಧಿಷ್ಠಾನವೆಂದರೆ ರಾಜಧಾನಿ ಎಂಬ ಅರ್ಥವಷ್ಟೇ ಅಲ್ಲದೆ ದೊಡ್ಡ ಪಟ್ಟಣವೆಂದೂ ಆಗುವುದು.

ಬಾದಾಮಿಯ ಉತ್ತರ ಗುಡ್ಡದ ಬದಿಯಲ್ಲಿ ವಿಶಾಲ ಬಯಲಿದ್ದು, ಅದರ ಅಂಚಿನ ಗುಡ್ಡದ ಸಾಲಿನಲ್ಲಿ ಕೆಲವು ಗವಿಗಳಿವೆ. ನಾಲ್ಕು ಗವಿಗಳಲ್ಲಿ ವರ್ಣಚಿತ್ರಗಳಿವೆ. ಅವುಗಳಲ್ಲಿ ಎರಡು ಪ್ರಾಗೈತಿಹಾಸಿಕ ಕಾಲದ್ದು. ಒಂದರಲ್ಲಿ ಮುಸಿಯದ ರೇಖಾ ಚಿತ್ರವಿದ್ದು ಮತ್ತೊಂದರಲ್ಲಿ ವಿಚಿತ್ರ ಪ್ರಾಣಿಯ ಮತ್ತು ಭೂತ ಸ್ವರೂಪದ ಮನುಷ್ಯನ ಚಿತ್ರಗಳು ಬಿಳಿ–ಕಪ್ಪು ದ್ವಿವರ್ಣಗಳಲ್ಲಿ

ಮತ್ತು ಅಚ್ಚಕಪ್ಪು ಬಣ್ಣಗಳಲ್ಲಿ ಇವೆ. ಈ ಚಿತ್ರಗಳ ವಸ್ತು ಮತ್ತು ಶೈಲಿಯ ಮೇಲೆ ಇದು ಶಿಲಾಯುಗದ ಅಂತ್ಯಭಾಗದ ಕಾಲದ್ದಿರಬಹುದೆಂದು ಊಹಿಸಲಾಗಿದೆ. ಬಾದಾಮಿಯಿಂದ ಸು. 1ಕಿಮೀ ದೂರದಲ್ಲಿ ಬಾದಾಮಿ–ಬನಶಂಕರಿ ರಸ್ತೆಯ ಎಡ ಬದಿಯ ಬೆಟ್ಟದ ಒಂದು ಕಲ್ಲಾಸರೆಯಲ್ಲಿ ಅತಿ ಅಪರೂಪದ ಬೇಟೆಗಾರರ, ಪ್ರಾಣಿಗಳ (ಕಾಡು ಹಂದಿ) ಕೆಮ್ಮಣ್ಣಿನ ಚಿತ್ರಗಳಿವೆ. ಇವುಗಳ ಶೈಲಿ ಲಕ್ಷಣಗಳಿಂದ ಇವು ಅಂತ್ಯ ಹಳೆಶಿಲಾಯುಗವೆಂದು ಹೇಳಬಹುದು ಇಲ್ಲಿಂದ ಸು.2ಮೀ ದೂರದಲ್ಲಿ ಉತ್ತರಕ್ಕೆ, ಬಾದಾಮಿ–ಮಹಾಕೂಟದ ಒಳ ರಸ್ತೆಯ ಬಲಬದಿಯ ಒಂದು ದೊಡ್ಡ ಗವಿಯಲ್ಲಿ ಕೆಮ್ಮಣ್ಣಿನಲ್ಲಿ ಎಳೆದ ಪ್ರಾಣಿಗಳ ಹಾಗೂ ಅಸ್ಪಷ್ಟವಾದ



ಕುಬ್ಜಗಣಗಳು, ಬಾದಾಮಿ

ರೇಖಾಚಿತ್ರಗಳು ಹಾಗೂ ಬಿಳಿಬಣ್ಣದಲ್ಲಿ ಬರೆದ 4–5ನೆಯ ಶತಮಾನದ ಒಂದು ಸಾಲಿನ ಎರಡು ಶಾಸನಗಳೂ ಇವೆ. ಆದಿ ಇತಿಹಾಸ ಕಾಲದ ಪ್ರಾಚ್ಯಾವಶೇಷಗಳೂ ಆದಿ ಹಳೆ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಕೈಗೊಡಲಿ, ಬಾಚಿ ಮೊದಲಾದ ಉಪಕರಣಗಳೂ ಈ ಊರಿನ ಉತ್ತರ ಬದಿಯ ಕೊಳ್ಳದಲ್ಲಿ ದೊರೆತಿವೆ. ಈ ಗವಿಯಿಂದ ಮತ್ತೆ 3ಕಿಮೀ ದೂರದಲ್ಲಿ ಸ್ಥಳೀಕವಾಗಿ ಶಿಡ್ಲಫಡಿ ಎಂದು ಕರೆಯಲಾದ ಒಂದು ಗವಿಯಲ್ಲೂ ಆನೆ, ಪಕ್ಷಿ ಮುಂತಾದ ಚಿತ್ರಗಳಿವೆ ಮತ್ತು ಇಲ್ಲಿ ನವಶಿಲಾಯುಗ ಸಂಸ್ಕೃತಿಯ ಮಣ್ಪಾತ್ರೆ ಮತ್ತು ಶಿಲಾಯುಧಗಳ ಅವಶೇಷಗಳನ್ನು, ಇದಕ್ಕೂ ಹಿಂದಿನ ಆದಿ ಹಳೆಯ ಶಿಲಾಯುಗದ ಕೆಲವು ಕಲ್ಲಿನ ಉಪಕರಣಗಳನ್ನು ಹಿಂದೆ ಶೋಧಿಸಲಾಗಿತ್ತು. ಬಾದಾಮಿಯ ನೈರುತ್ಯ ಮತ್ತು ಈಶಾನ್ಯ ದಿಕ್ಕಿಗೆ ಅನುಕ್ರಮವಾಗಿ ಸು.8 ಮತ್ತು 18 ಕಿಮೀ ದೂರದಲ್ಲಿರುವ ಚೋಳಗುಡ್ಡ ಮತ್ತು ನಂದಿಕೇಶ್ವರದ ಬಳಿಯ ಮಲಪ್ರಭಾ ನದಿ ಪಾತ್ರದಲ್ಲಿ ಆದಿ ಹಳೆಶಿಲಾಯುಗದ ಆಯುಧಗಳು ದೊರೆತಿವೆ. ಹೀಗೆ ಬಾದಾಮಿ ಪ್ರದೇಶ ಆದಿ ಹಳೆಯ ಶಿಲಾಯುಗದಿಂದಲೂ ಮಾನವನ ನೆಲೆವೀಡಾಗಿದ್ದು, ಮುಂದೆ ಸುಸಂಸ್ಕೃತ ವಾಣಿಜ್ಯಕೇಂದ್ರವಾಗಿ ಬೆಳೆದು ಕೊನೆಯಲ್ಲಿ ಒಂದು ಮಹಾ ಸಾಮ್ರಾಜ್ಯದ ರಾಜಧಾನಿಯಾಗಿ ಕೀರ್ತಿಶಿಖರವನ್ನೇರಿತು ಎಂದು ಹೇಳಬಹುದು.

ಚಳುಕ್ಯರ ಕಾಲದ ಅನಂತರವೂ ಬಾದಾಮಿ ಆ ಪ್ರದೇಶದಲ್ಲಿ ತನ್ನ ಪ್ರಾಮುಖ್ಯ ಉಳಿಸಿಕೊಂಡಿದ್ದಂತೆ ತೋರುತ್ತದೆ. ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಳುಕ್ಯರ ಕಾಲದ ಅವಶೇಷಗಳು ಹೆಚ್ಚಾಗಿಲ್ಲ. ಆದರೆ 1339ರ ಒಂದು ಶಾಸನದಲ್ಲಿ ವಿಜಯನಗರದ ದೊರೆ ಮೊದಲನೆಯ ಹರಿಹರ 2,000 ಮಹಾಜನಗಳಿಗೆ ಬಾದಾಮಿಯನ್ನು ಕೊಟ್ಟು, ಉತ್ತರದ ಕಡೆಯ ಕೋಟೆಯನ್ನು ಕಟ್ಟಲು ಆಣತಿ ಮಾಡಿದಂತಿದೆ. ಕೃಷ್ಣದೇವರಾಯನ ಕಾಲದವರೆಗೂ ಬಾದಾಮಿ ವಿಜಯನಗರದ ಆಡಳಿತಕ್ಕೊಳಪಟ್ಟಿದ್ದು, ಅನಂತರ ಆದಿಲ್ ಶಾಹಿ ದೊರೆಗಳ ಕೈಸೇರಿತು. 1746ರಲ್ಲಿ ಸವಣೂರು ನವಾಬ ಮತ್ತು ಮೂರನೆಯ ಪೇಷ್ವೆಯ ನಡುವೆ ಸಂಧಾನವಾಗಿ ಬಾದಾಮಿಯನ್ನು ಪೇಷ್ವೆಗೆ ಕೊಡಲು ಒಪ್ಪಿಗೆಯಾದರೂ ಪೇಷ್ವೆ ಮತ್ತು ಹೈದರಾಬಾದಿನ ನಿಜಾಮ ಇಬ್ಬರೂ ಸೇರಿ ಸವಣೂರು ನವಾಬನ ಮೇಲೆ ದಂಡೆತ್ತಿ ಬಂದಾಗ 1756ರಲ್ಲಿ ಈ ಊರು ಪೇಷ್ವೆಗೆ ಸೇರಿತು. 1778ರಲ್ಲಿ ದಕ್ಷಿಣ ಬಿಜಾಪುರದ ಕೆಲವು ಪ್ರದೇಶಗಳೊಡನೆ ಬಾದಾಮಿಯನ್ನು ಹೈದರ್ ಪಡೆದುಕೊಂಡ. 1786ರಲ್ಲಿ ನಾನಾ ಫಡ್ನವೀಸನ ಕೈಕೆಳಗಿನ ಮರಾಠ ಸೈನ್ಯ ಮತ್ತು ನಿಜಾಮನ ಸೈನ್ಯ ಸೇರಿ ನಾಲ್ಕು ವಾರಗಳ ಕಾಲ ಮುತ್ತಿ ಬಾದಾಮಿಯನ್ನು ವಶಪಡಿಸಿಕೊಂಡವು. 1818ರ ಮರಾಠ ಯುದ್ಧದಲ್ಲಿ ಜನರಲ್ ಮನ್ರೋ ಬಾದಾಮಿಯನ್ನು ಮುತ್ತಿ ವಶಪಡಿಸಿಕೊಂಡ. 1840ರಲ್ಲಿ ನರಸಿಂಹ ದತ್ತಾತ್ರೇಯ (ನರಸಿಂಗರಾವ್) ಎಂಬ ಕುರುಡ ತನ್ನ 125 ಅರಬರ ದಂಡಿನೊಡನೆ ಬಂದು ಬಾದಾಮಿಯನ್ನು ಮುತ್ತಿ ಲೂಟಿ ಹೊಡೆದು ತಾನೇ ದೊರೆಯೆಂದು ಘೋಷಿಸಿಕೊಂಡ. ಒಂದು ವಾರದ ಒಳಗೇ ಒಂದು ಚಿಕ್ಕ ಬ್ರಿಟಿಷ್ ಸೈನ್ಯ ಬಾದಾಮಿಗೆ ಬಂದು ಇವರನ್ನೆಲ್ಲಾ ಸೆರೆಹಿಡಿಯಿತು. 1845ರಲ್ಲಿ ಇಲ್ಲಿಯ ಕೋಟೆಗಳು ಹಾಳುಬಿದ್ದವು. ಅನಂತರ ಈ ಊರು ಒಂದು ಸಾಮಾನ್ಯ ಸ್ಥಳವಾಯಿತು. ಇಂದು ಬಾದಾಮಿಯಲ್ಲಿ ಎರಡು ಹಾಳುಬಿದ್ದ ಕೋಟೆಗಳೂ ನಾಲ್ಕು ಗುಹಾಂತರ ದೇವಾಲಯಗಳೂ ಅನೇಕ ಭಗ್ನ ದೇವಾಲಯಗಳೂ ಕೆಲವು ಶಾಸನಗಳೂ ಉಳಿದು ಬಂದಿವೆ (**ನೋಡಿ–ಚಾಳುಕ್ಯವಂಶ**).

ಕೋಟೆಗಳು: ಬಾದಾಮಿಯ ಉತ್ತರ ಮತ್ತು ದಕ್ಷಿಣದ ಬೆಟ್ಟಗಳ ಮೇಲೆ ಎರಡು ಬಲವಾದ ಕೋಟೆಗಳಿವೆ. ಉತ್ತರದ ಕಡೆಯ ಕೋಟೆಯನ್ನು ಬಾವನ್ ಬಂಡೆ ಕೋಟೆಯೆಂದೂ ದಕ್ಷಿಣ ಕಡೆಯ ಕೋಟೆಯನ್ನು ರಣಮಂಡಲ ಕೋಟೆಯೆಂದೂ ಕರೆಯುತ್ತಾರೆ. ಎರಡೂ ಕೋಟೆಗಳ ಮಧ್ಯೆ 270ಮೀ ಅಂತರವಿದ್ದು ಎರಡೂ ನೆಲಮಟ್ಟದಿಂದ ಸು.72ಮೀ ಎತ್ತರದಲ್ಲಿವೆ. ಉತ್ತರದ ಕೋಟೆಗೆ ಹೋಗಲು ಊರಿನ ಒಳಗಿನಿಂದ ಮಾರ್ಗವಿದೆ. ಮೇಲೆ ಗುಡ್ಡದ ಅಂಚಿನುದ್ದಕ್ಕೂ ಅಲ್ಲಲ್ಲಿ ಹಾಳಾಗಿರುವ ಕೋಟೆಗೋಡೆ ಇದೆ. ಬಾದಾಮಿಯ ಅತ್ಯಂತ ಪ್ರಾಚೀನ ಶಾಸನ ಈ ಕೋಟೆಗೆ ಸಂಬಂಧಿಸಿದ್ದು. ಇದು ಗುಡ್ಡದಲ್ಲಿ ಒಂದು ಬಹು ಇಕ್ಕಟ್ಟಾದ ಕಣಿವೆಯಲ್ಲಿ ಎತ್ತರ ಹಾಗೂ ಕಡಿದಾದ ಬಂಡೆಯ ಮೇಲೆ ಇದೆ. ಶ್ರೌತ ವಿಧಿಗಳಿಗನುಸಾರವಾಗಿ ಅಶ್ವಮೇಧ ಮೊದಲಾದ ಯಜ್ಞಗಳನ್ನೂ ಹಿರಣ್ಯಗರ್ಭ ಮುಂತಾದ ಮಹಾ ದಾನಗಳನ್ನೂ ಮಾಡಿದ ಚಳುಕ್ಯ ವಲ್ಲಭೇಶ್ವರನು (ಒಂದನೆಯ ಪುಲಕೇಶಿ) ಅನುಕೂಲಕರವಾದ ಈ ಗುಡ್ಡದ ಮೇಲಿರುವ ವಾತಾಪಿ ಅಧಿಷ್ಠಾನದಲ್ಲಿ ಮೇಲಿಂದಾಗಲಿ ಕೆಳಗಿಂದಾಗಲಿ ಅಭೇದ್ಯವಾದ ಕೋಟೆಯನ್ನು ಶಕವರ್ಷ 465ರಲ್ಲಿ (543) ಕಟ್ಟಿಸಿದನೆಂದು ಈ ಶಾಸನ ತಿಳಿಸುತ್ತದೆ. ಆದರೆ ಚಳುಕ್ಯರ ಕಾಲದ್ದೆಂದು ಸ್ಪಷ್ಟವಾಗಿ ಗುರುತಿಸಬಹುದಾದ ಕೋಟೆಯ ಭಾಗಗಳು ಉಳಿದು ಬಂದಿಲ್ಲವೆಂದೇ ಹೇಳಬಹುದು. ಮುಂದೆ ರಾಷ್ಟ್ರಕೂಟರ ಕಾಲದಲ್ಲೂ ವಿಜಯನಗರ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲೂ ಇದನ್ನು ವಿಸ್ತರಿಸಲಾಗಿದೆ. ದಕ್ಷಿಣ ಗುಡ್ಡದ ಮೇಲಿನ ಕೋಟೆ 18ನೆಯ ಶತಮಾನದ್ದು. ಇದು ಫಿರಂಗಿ ಹಾರಿಸಲು ಅನುಕೂಲವಿರುವ ಮತ್ತು ಫಿರಂಗಿ ಹೊಡೆತವನ್ನು ತಡೆಯಬಲ್ಲ ಭದ್ರವಾದ ಕಟ್ಟಡ. ಎರಡೂ ಕೋಟೆಗಳಿಗೆ ಅನೇಕ ಕಲ್ಲುಮೆಟ್ಟಿಲುಗಳೂ ಕಿರಿದಾದ ಪ್ರವೇಶದ್ವಾರಗಳೂ ಇವೆ. ಕೋಟೆಗೋಡೆಗಳ ನಿರ್ಮಾಣದ ರೀತಿ ಅವುಗಳ ಹೊರಬದಿಯಲ್ಲಿ ಕೊತ್ತಳದ ಆಕಾರ, ಗೋಡೆಯ ಮೇಲೆ ಇರುವ ರಕ್ಷಣಾ ಕಟಾಂಜನದ ಸ್ವರೂಪದಿಂದ ಆಯಾಯ ಕಾಲದ ವಿವಿಧ ಭಾಗಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಉದಾಹರಣೆಗೆ ಗೋಡೆಗಳಲ್ಲಿ ಗಾರೆಯ ಉಪಯೋಗ ಮತ್ತು ಮೇಲಿನ ರಕ್ಷಣಾ ಕಟಾಂಜನ–ಇವು ಹೈದರ್, ಟಿಪ್ಪುಸುಲ್ತಾನರ ಕಾಲದಲ್ಲಿ ಕಟ್ಟಿಸಿದ ಭಾಗಗಳ ವೈಶಿಷ್ಟ್ಯ.

ಅಗಸ್ತ್ಯತೀರ್ಥದ ಉತ್ತರದಂಡೆಯ ಮೇಲೆ ಸು.10–12ನೆಯ ಶತಮಾನದ ಎರಡು ದೊಡ್ಡ ಮತ್ತು ಎರಡು ಸಣ್ಣ ದೇವಾಲಯಗಳಿವೆ. ದೊಡ್ಡ ದೇವಾಲಯಗಳ ಶಿಖರ ಕದಂಬನಗರ ಶೈಲಿಯಲ್ಲಿವೆ. ಇವುಗಳಲ್ಲಿ ಒಂದು ಮೂಲತಃ ವಿಷ್ಣುದೇವಾಲಯ. ಇದರ ಮುಖಮಂಟಪ ಬಿದ್ದುಹೋಗಿದೆ. ಮತ್ತೊಂದರಲ್ಲಿ ಮುಖಮಂಟಪ, ಸಭಾಮಂಟಪ, ಅಂತರಾಳ ಮತ್ತು ಗರ್ಭಗೃಹಗಳಿವೆ. ಇದು ಶಿವದೇವಾಲಯ.

ಶಿವನ ನರ್ತನ ಶಿಲ್ಪ

ಅಗಸ್ತ್ಯತೀರ್ಥದ ಪಶ್ಚಿಮ ದಂಡೆಯ ಮೇಲೆ ಕಲ್ಯಾಣ ಚಾಳುಕ್ಯ ಶೈಲಿಯ ಒಂದು ಹಾಳುಬಿದ್ದ ದೇವಾಲಯವಿದೆ. ಇದನ್ನು ಸ್ಥಳೀಕವಾಗಿ ಎಲ್ಲಮ್ಮ ದೇವಾಲಯವೆಂದು ಕರೆಯುತ್ತಾರೆ. ಇದರಲ್ಲಿರುವ ಚಾಳುಕ್ಯ ಜಗದೇಕಮಲ್ಲನ ಶಾಸನದಲ್ಲಿ ಇದನ್ನು ಯೋಗೀಶ್ವರ ದೇವಾಲಯವೆಂದು ಕರೆಯಲಾಗಿದೆ. ಇದರ ಮುಖಮಂಟಪ ಮತ್ತು ಸಭಾಮಂಟಪದ ಸ್ವಲ್ಪಭಾಗ ಬಿದ್ದುಹೋಗಿವೆ. ಇದರ ಶಿಖರ ಕದಂಬ ನಾಗರಶೈಲಿಯಲ್ಲಿದೆ. ಇದರ ಸುಕನಾಸಿಯ

ಮುಂಬದಿಯಲ್ಲಿ ಧ್ಯಾನಸ್ಥ ವಿಷ್ಣುವಿನ ಉಬ್ಬುಶಿಲ್ಪವಿದೆ. ಬಹುಶಃ ಈ ದೇವಾಲಯ ಮೂಲತಃ ಯೋಗೀಶ್ವರನೆಂದು ಕರೆಯಲಾದ ವಿಷ್ಣು ದೇವಾಲಯವಾಗಿರಬೇಕು. ಇದರ ಸಮೀಪದಲ್ಲೆ ದತ್ತಾತ್ರೇಯ, ಸ್ವಲ್ಪ ದೂರದಲ್ಲಿ ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ದೇವಾಲಯ ಗಳಿವೆ. ಮೊದಲನೆಯದನ್ನು ಬಿಟ್ಟು ಉಳಿದೆಲ್ಲವೂ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿವೆ. ಪ್ರತಿಯೊಂದರಲ್ಲೂ ಮೊದಲು ಗರ್ಭಗುಡಿ, ಅಂತರಾಳ, ಸಭಾಮಂಟಪ ಮತ್ತು ಮುಖ ಮಂಟಪಗಳಿದ್ದವು. ಈ ದೇವಾಲಯಗಳೆಲ್ಲಾ ಯಾವ ಮೂರ್ತಿಶಿಲ್ಪಗಳ ಅಲಂಕರಣಗಳಿಲ್ಲದೆ ತೀರಾ ಸರಳವಾಗಿವೆ. ದತ್ತಾತ್ರೇಯನ ಗರ್ಭಗುಡಿಯಲ್ಲಿ ಪೂಜೆಗೊಳ್ಳುತ್ತಿರುವ ದತ್ತಾತ್ರೇಯನ ಮೂರ್ತಿಮಾತ್ರ ಕಲ್ಯಾಣ ಚಾಳುಕ್ಯ ಮೂರ್ತಿಶಿಲ್ಪದ ಒಂದು ಉತ್ತಮ ಕಲಾಕೃತಿ. ಪದ್ಮಾಸನದಲ್ಲಿ ರುವ ಚತುರ್ಭುಜ ವಿಷ್ಣುಮೂರ್ತಿಯ ಕೆಳಗಿನ ಎರಡು ಕೈಗಳು ಧ್ಯಾನಮುದ್ರೆಯಲ್ಲಿವೆ. ಮೇಲಿನ ಬಲ ಎಡಗೈಗಳಲ್ಲಿ ಚಕ್ರ ಶಂಖಗಳಿವೆ. ಮಕರ ತೋರಣ ಮತ್ತು ಸಿಂಹಲಲಾಟವುಳ್ಳ ಪ್ರಭಾವಳಿಯ ಮೇಲ್ಭಾಗದಲ್ಲಿ ವಿಷ್ಣುವಿನ ಹತ್ತು ಅವತಾರಗಳ ಸಣ್ಣ ಸಣ್ಣ ಚಿತ್ರಗಳಿವೆ. ಪೀಠದ ಮುಂಬದಿಯಲ್ಲಿ ಗರುಡ, ನಂದಿ ಮತ್ತು ಹಂಸಗಳ ಚಿತ್ರಗಳಿವೆ. ಈ ಮೂರ್ತಿ ಮೂಲತಃ ಯೋಗೀಶ್ವರ ದೇವಾಲಯದ್ದಾಗಿದ್ದು, ಅದು ಹಾಳಾದ ಮೇಲೆ ಈಗಿನ ದೇವಾಲಯಕ್ಕೆ ಸ್ಥಳಾಂತರವಾಗಿರಬೇಕು.

ಮಲ್ಲಿಕಾರ್ಜುನ ದೇವಾಲಯದ ಹತ್ತಿರ ಪ್ರಸನ್ನವೆಂಕಟದಾಸರ ಕಟ್ಟೆಯಿದೆ. ಇಲ್ಲಿ ಅವರು ಕುಳಿತುಕೊಳ್ಳುತ್ತಿದ್ದರೆಂಬ ನಂಬುಗೆಯಿದೆ. ಈ ದೇವಾಲಯದ ಸ್ವಲ್ಪ ದೂರದಲ್ಲಿ ವಿಜಯನಗರಕಾಲದ ಒಂದು ದೇವಾಲಯವಿದೆ. ಇದು ಕಾಲಾಂತರದಲ್ಲಿ ಮಸೀದಿಯಾಗಿ ಬದಲಾವಣೆಗೊಂಡಿದ್ದು ಈಗಲೂ ಹಾಗೆಯೇ ಉಪಯೋಗಿಸಲಾಗುತ್ತಿದೆ.

ಅಗಸ್ತ್ಯತೀರ್ಥದ ಆಗ್ನೇಯಕ್ಕೆ ಒಂದು ಬಂಡೆಯ ಮೇಲೆ ಮೊದಲಿದ್ದ ಚಳುಕ್ಯ ಕಾಲದ ಒಂದು ಶಾಸನದ ಮೇಲೆ ಬ್ರಹ್ಮ, ವಿಷ್ಣು, ಶಿವ, ಗಣೇಶ, ಮಹಿಷಮರ್ದಿನಿಯ ಮೂರ್ತಿಗಳನ್ನು ಕಡೆಯಲಾಗಿದೆ. ಇಲ್ಲಿಂದ ಸ್ವಲ್ಪ ಮುಂದೆ ಇನ್ನೊಂದು ಬಂಡೆಯ ಮೇಲೆ ಅನಂತಶಯನನ ಮೂರ್ತಿಯೊಂದಿದ್ದು ಅದಕ್ಕೆ ಒಂದು ಸಣ್ಣ ಕಲ್ಲಿನ ಗುಡಿಯನ್ನು ಕಟ್ಟಲಾಗಿದೆ. ಅದರ ಸಮೀಪದಲ್ಲೇ ಒಂದು ನೈಸರ್ಗಿಕ ಗವಿಯಲ್ಲಿ ಒಂದು ಮರದ ಬುಡ ದಲ್ಲಿ ಸಿಂಹಪೀಠದ ಮೇಲೆ ಧ್ಯಾನಾಸಕ್ತನಾದ ಮಹಾರಾಜನಂತಿರುವ ಮಹಾಪುರುಷನ ಭವ್ಯವಾದ ಶಿಲ್ಪವಿದೆ. ಇದರ ಬಲಕ್ಕೆ ಒಬ್ಬ ಯೋಗಿಯ ಸಣ್ಣ ಉಬ್ಬುಶಿಲ್ಪವಿದೆ. ಇದನ್ನು ಸ್ಥಳೀಕವಾಗಿ ಕೋಷ್ಠರಾಯನೆಂದು ಕರೆಯಲಾಗುತ್ತದೆ. ಇದು ಪ್ರಾಯಶಃ ಒಂದನೆಯ ಕೀರ್ತಿವರ್ಮ ಮತ್ತು ಜೈನಧರ್ಮದ ಜೀವಂತಸ್ವಾಮಿ ಇರಬಹುದೆಂದು ಅಭಿಪ್ರಾಯಪಡಲಾಗಿದೆ.

ಲಯಣಗಳ ಹತ್ತಿರ ಒಂದು ಎತ್ತರದ ಭವ್ಯ ಹಾಗೂ ಸರಳವಾದ ಗುಮ್ಮಟ ಇದೆ. ಇದು ಹೈದರ್-ಟಿಪ್ಪು ಕಾಲದ್ದು.

ಈ ವಾಸ್ತು ಅವಶೇಷಗಳು ಮತ್ತು ತತ್ಸಂಬಂಧಿತ ಶಾಸನಗಳಲ್ಲದೆ ಬಾದಾಮಿಯಲ್ಲಿ ಕೆಲವು ಇತರ ಶಾಸನಗಳೂ ಇವೆ. ಅಗಸ್ತ್ಯ ಸರೋವರದ ಉತ್ತರದಲ್ಲಿ ಉತ್ತರ ಗುಡ್ಡದ ಬುಡದಲ್ಲಿ ಮೇಗಣ ಕೋಟೆಗೆ ಹೋಗುವ ಬಾಗಿಲಿನ ಎದುರಿಗೆ ಸ್ವಲ್ಪದೂರದಲ್ಲಿ ಇರುವ ಒಂದು ಬಂಡೆಯ ಮೇಲೆ ಕಂಚಿಯ ಪಲ್ಲವ ಅರಸ ಮಹಾಮಲ್ಲನ (ಒಂದನೆಯ ನರಸಿಂಹ ವರ್ಮ) ಕಾಲದ ಗ್ರಂಥಾಕ್ಷರಗಳಲ್ಲಿ ಬರೆದ ಒಂದು ಸಂಸ್ಕೃತ ಶಾಸನವಿದೆ. ಆ ಚಕ್ರವರ್ತಿ 642ರಲ್ಲಿ ಬಾದಾಮಿಯನ್ನು ಗೆದ್ದಾಗ ಈ ಶಾಸನವನ್ನು ಬರೆಸಿದ. ಬತ್ತೇರಪ್ಪನ ಗುಡಿಯ ಹತ್ತಿರ ಬಿದ್ದಿದ್ದ ಒಂದು ಒಡೆದ ಶಾಸನದಲ್ಲಿ ಅಶ್ವಮೇಧಯಜ್ಞವನ್ನು ನೆರವೇರಿಸಿ ಅವಭೃತಸ್ನಾನ ಮಾಡಿದ ಇಮ್ಮಡಿ ಪುಲಕೇಶಿಯ ಉಲ್ಲೇಖವಿದೆ (ಈಗ ಈ ಶಾಸನವನ್ನು ಕರ್ನಾಟಕ ವಿಶ್ವ ವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರಿಸಲಾಗಿದೆ). ಉತ್ತರ ಗುಡ್ಡದ ಪೂರ್ವದ ಕಡಿದಾದ ಬದಿಯಲ್ಲಿರುವ ಒಂದು ಶಾಸನ ಕಪ್ಪೆ ಅರಭಟ್ಟನ ಶಾಸನವೆಂದು ಪ್ರಸಿದ್ಧವಾಗಿದೆ. ಇದು ತ್ರಿಪದಿಯಲ್ಲಿದ್ದು ಕನ್ನಡ ಸಾಹಿತ್ಯದ ಅತ್ಯಂತ ಪ್ರಾಚೀನ ಛಂದಸ್ಸಿಗೆ ಮಾದರಿಯಾಗಿದೆ. ಕಪ್ಪೆ ಅರಭಟ್ಟನ ಕಲಿತನ, ಸ್ವಾಭಿಮಾನ ಹಾಗೂ ಮಾನವೇ ಶೀಲವಂತನಿಗೆ ಪ್ರಾಣ ಎಂಬ ಆದರ್ಶ ಇವನ್ನು ಓದುಗನ ಮನಮುಟ್ಟುವಂತೆ ಚೆನ್ನಾಗಿ ವರ್ಣಿಸಲಾಗಿದೆ. ಪ್ರಾರಂಭದಲ್ಲಿ ಆದರ್ಶತ್ವವನ್ನು ತಿಳಿಸುವ ಎರಡುಸಾಲು ಸಂಸ್ಕೃತದಲ್ಲಿದೆ. ಪ್ರಾಯಶಃ ಈ ಶಾಸನ 7ನೆಯ ಶತಮಾನದ ಅಂತ್ಯಭಾಗದ್ದು.

ಬಾದಾಮಿಯ ಈಶಾನ್ಯದಿಕ್ಕಿಗೆ ಮಹಾಕೂಟಕ್ಕೆ ಹೋಗುವ ಹಾದಿಯಲ್ಲಿ ಸಿಬಾರ ಕಟ್ಟೆಯ ಹತ್ತಿರ ಬಂಡೆಯ ಮೇಲೆ ಮೂರು ನಾಲ್ಕು ಕನ್ನಡ ಶಾಸನಗಳಿವೆ. ಇವುಗಳ ಸಮೀಪದಲ್ಲೆ ಗಣೇಶ, ಶಿವಲಿಂಗ, ನಾಗರಾಜನ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಒಂದು ಶಾಸನದಲ್ಲಿ ವಿನ(ನಾ)ಯಕ ಮತ್ತು ಫಣೀಂದ್ರ ಶಿಲ್ಪಗಳನ್ನು ಧರ್ಮಣ್ಣನೆಂಬುವನು ಮಾಡಿಸಿದ ವಿಷಯವಿದೆ. ಮತ್ತೊಂದರಲ್ಲಿಯೂ ಇವನೇ ಗಣಪತಿ ಮತ್ತು ನಾಗಕುಮಾರ ಪ್ರತಿಮೆಗಳನ್ನು ಮಾಡಿಸಿದನೆಂದಿದೆ. ಇನ್ನೊಂದರಲ್ಲಿ ಈ ಗುಡ್ಡದ ಪ್ರಕೃತಿ ಸೌಂದರ್ಯವನ್ನು ಸುಂದರವಾಗಿ ವರ್ಣಿಸಿದೆ. ಇವಲ್ಲದೆ ಅಲ್ಲಲ್ಲಿ ಶ್ರೀಬಹುಪ್ರಿಯನ್, ಶ್ರೀಗೋಇನ್ದ, ವಿಪ್ರನ್, ಶ್ರೀಅಕ್ಷರಮೇರು, ಶ್ರೀಗುಣಪಾಲನ್, ಶ್ರೀಪ್ರಸನ್ನಬುದ್ಧಿ ಇತ್ಯಾದಿ ಕೇವಲ ವ್ಯಕ್ತಿಗಳ ಹೆಸರು ಸೂಚಿಸುವ ಒಂದೊಂದು ಸಾಲಿನ ಶಾಸನಗಳು ಹಲವಾರು ಇವೆ.

ಪೂರ್ವದಂಡೆಯ ಮೇಲಿರುವ ಭೂತನಾಥ ದೇವಾಲಯಗಳ ಗುಂಪಿನಿಂದ ಮತ್ತೆ ಪೂರ್ವಕ್ಕೆ ಗುಡ್ಡದ ಕಣಿವೆ ಮಾರ್ಗದಲ್ಲಿ ಹೋದರೆ ಮೇಲೆ ಬಲಬದಿಯಲ್ಲಿ ಒಂದು ನೈಸರ್ಗಿಕ ಗವಿ ಮತ್ತು ನೀರಿನ ಹೊಂಡ ಇವೆ. ಈ ಸ್ಥಳಕ್ಕೆ ಅರಳೀತೀರ್ಥ ಎಂದು ಹೆಸರು. ಇದರಲ್ಲಿ ಶಿವ, ಸೂರ್ಯ, ಅನಂತಶಯನ, ನರಸಿಂಹ, ಲಕ್ಷ್ಮಿ ಮೊದಲಾದ ಉಬ್ಬುಚಿತ್ರಗಳಿದ್ದು ಸು. 15ನೆಯ ಶತಮಾನದ ಒಂದು ನಾಗರಿಲಿಪಿಯ ಶಾಸನವಿದೆ. ಹಾರಿತಿ ಗೋತ್ರದ ರವಿ ತ್ರಿದಂಡಿಗೆ ಒಲಿದು ಮಹಾಲಕ್ಷ್ಮಿಯು ಕೊಲ್ಲಾಪುರದಿಂದ ಇಲ್ಲಿಗೆ ಬಂದಳೆಂದು ಆ ಶಾಸನ ತಿಳಿಸುತ್ತದೆ.

ಬಾದಾಮಿಯಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಒಂದು ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಕಟ್ಟಿಸಿದೆ. ಇದರಲ್ಲಿ ಶಿಡ್ಲಫಡಿಯ ಪ್ರಾಗೈತಿಹಾಸಿಕ ಅವಶೇಷಗಳುಳ್ಳ ನೈಸರ್ಗಿಕ ಗವಿಯ ಒಂದು ಮಾದರಿಯನ್ನೂ ವೈಷ್ಣವ ಲಯಣದ ವರ್ಣಚಿತ್ರದ ಒಂದು ಪ್ರತಿಯನ್ನೂ ಮತ್ತು ಇಲ್ಲಿಯ ಹಾಗೂ ಪಟ್ಟದಕಲ್ಲಿನ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಭಗ್ನ ಮೂರ್ತಿಶಿಲ್ಪಗಳ ಸಂಗ್ರಹವನ್ನೂ ಇಡಲಾಗಿದೆ. ಯುನೆಸ್ಕೊ ಇಲ್ಲಿನ ದೇವಾಲಯಗಳಿಗೆ ವಿಶ್ವ ಪರಂಪರೆ ನಿರ್ಮಾಣಗಳೆಂದು ಮನ್ನಣೆ ನೀಡಲು ಚಿಂತಿಸಿದೆ. ಇತ್ತೀಚೆಗೆ ಪ್ರವಾಸೋದ್ಯಮ ಇಲಾಖೆಯೂ ಇತ್ತ ಹೆಚ್ಚು ಗಮನಹರಿಸಿದೆ. (ಎ.ಎಸ್.)

**ಬಾನ್ ಚಿಯಾಂಗ್:** ಥೈಲೆಂಡ್ ದೇಶದ ಉಡೋನ್ ಥಾನಿ ಪ್ರಾಂತದ ನೊಂಗ್ ಹಾನ್ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. 1957ರಲ್ಲಿ ಪತ್ತೆಯಾದ ಈ ನೆಲೆಯಲ್ಲಿ 1962 ರಲ್ಲಿ ಉತ್ಖನನ ಮಾಡಲಾಯಿತು. ಹಲವಾರು ಅಸ್ಥಿಪಂಜರಗಳ ಜೊತೆಗೆ ಕಂಚಿನ ವಿವಿಧ ಪಾತ್ರೆಗಳೂ ಅಕ್ಕಿಕಾಳಿನ ಅವಶೇಷಗಳೂ ದೊರೆತವು. ಇದು ಪ್ರಾಯಶಃ ಕಂಚಿನ ಯುಗದ ಕೃಷಿಕರ ನೆಲೆಯೆಂದು ಕಾಣುತ್ತದೆ. ಇಲ್ಲಿಯ ಶವಕುಣಿಗಳನ್ನು ನವ ಶಿಲಾಯುಗ, ಕಂಚಿನ ಯುಗ ಮತ್ತು ಕಬ್ಬಿಣ ಯುಗ ಕಾಲದ್ದೆಂದು ವಿಂಗಡಿಸಲಾಗಿದೆ. ಇಲ್ಲಿಯ ಅತ್ಯಂತ ಪ್ರಾಚೀನ ಶವಕುಣಿಗಳಲ್ಲಿ ಯಾವುದೇ ಕಂಚಿನ ಸಾಮಾನುಗಳಿಲ್ಲದಿದ್ದುದರಿಂದ ಇವು ಬಹುಶಃ ನೂತನ ಶಿಲಾಯುಗದವೆಂದು ಪರಿಗಣಿಸಲಾಗಿದೆ. ಕಂಚಿನ ಯುಗದ ಮಣ್ಣಿನ ಪಾತ್ರೆಗಳನ್ನು ಔಷ್ಣದೀಪ್ತಿ ತಂತ್ರದಿಂದ ಪ್ರ.ಶ.ಪೂ.ಸು.4420-3400ರ ವರೆಗಿನ ಕಾಲದ್ದೆಂದು ನಿರ್ಧರಿಸಲಾಯಿತು. ಇದು ವಿಶ್ವದ ಅತ್ಯಂತ ಪ್ರಾಚೀನ ಕಂಚಿನ ಯುಗದ ನೆಲೆಯೆಂದು ತಿಳಿಯಲಾಗಿತ್ತು. ಆದರೆ 1974-75ರ ಉತ್ಖನನದಲ್ಲಿ ದೊರೆತ ಇಂಗಾಲ-14ರ ಕಾಲಮಾನ ದಿಂದ ಅತ್ಯಂತ ಪ್ರಾಚೀನ ಶವ ಕುಣಿಗಳು ಪ್ರ.ಶ.ಪೂ.2100-ಪ್ರ.ಶ.200ದ ವರೆಗಿನದೆಂದು ಖಚಿತವಾಗಿ ನಿರ್ಧರಿಸಲಾಗಿದೆ. ಈ ನೆಲೆಯಲ್ಲಿ ದೊರೆತ ಕಂಚಿನ ಮೂಸೆ ಮತ್ತು ತುಣುಕುಗಳಿಂದ ಇಲ್ಲಿ ಕಂಚಿನ ಯುಗ ಪ್ರ.ಶ.ಪೂ.ಸು.2000ದಲ್ಲಿ ಆರಂಭವಾಯಿತೆನ್ನಬಹುದು. ಕಂಚಿನ ಕಡಗ, ಉಂಗುರ, ಕಾಲಂದಿಗೆ (ನೂಪುರ), ತಂತಿ, ಈಟಿ ಮೊನೆಗಳು, ಕೊಡಲಿ, ಉಜ್ಜು ಗೊರಡು, ಕೊಕ್ಕೆ, ಚಿಕ್ಕ ಗಂಟೆಗಳು ಮತ್ತು ಅಲಗುಗಳು ಗಮನಾರ್ಹ. ಈ ನೆಲೆ ವಿಶ್ವಪರಂಪರೆಯ ಪಟ್ಟಿಯಲ್ಲಿ 1992ರಲ್ಲಿ ಸೇರಿತು. (ಎ.ಎಸ್.;ಎನ್.ಎಲ್.)

**ಬಾಬರ್:** 1483-1530. ಮೊಗಲ್ ಸಾಮ್ರಾಜ್ಯ ಸ್ಥಾಪಕ. ಕವಿ, ದಿನಚರಿಕಾರ. 1483 ಫೆಬ್ರುವರಿ 15ರಂದು ಜನಿಸಿದ. ಇವನ ನಿಜವಾದ ಹೆಸರು ಜಹಿರುದ್ದೀನ್ ಮಹಮದ್. ತಂದೆಯ ಕಡೆಯಿಂದ ತೈಮೂರ್ ತಾಯಿಯ ಕಡೆಯಿಂದ ಚೆಂಗೇಜ್‍ಖಾನ್ ವಂಶಸ್ಥ. 11ನೆಯ ವಯಸ್ಸಿನಲ್ಲಿ ಇವನ ತಂದೆ ತೀರಿಕೊಂಡ. ಫರಗಣ ಎಂಬ ಸಣ್ಣ ಸಂಸ್ಥಾನಕ್ಕೆ ಆಗ ಇವನು ಉತ್ತರಾಧಿಕಾರಿಯಾದ. ಬಲುಬೇಗನೆ ಅಲ್ಲಿಂದ ಹೊರದೂಡಲ್ಪಟ್ಟ. ಜೀವನದ ಪ್ರಾರಂಭದಲ್ಲೇ ಕಹಿ ಉಂಡರೂ ಇವನೊಬ್ಬ ಮಹತ್ವಾಕಾಂಕ್ಷಿ. 21ನೆಯ ವಯಸ್ಸಿನವನಾದಾಗ ಕಾಬೂಲನ್ನು ಆಕ್ರಮಿಸಿದ (1504). ತನ್ನ ಪೂರ್ವಿಕ ತೈಮೂರನ ರಾಜಧಾನಿಯಾಗಿದ್ದ ಸಮರಖಂಡ್ ಜಯಿಸಲು ಪ್ರಯತ್ನಿಸಿ ವಿಫಲನಾದ. ಹೀಗೆ ಸೋತಿದ್ದೇ ಬಾಬರನಿಗೆ ತನ್ನ ಅದೃಷ್ಟವನ್ನು ಭಾರತದಲ್ಲಿ ಪರೀಕ್ಷಿಸಬೇಕೆಂಬ ಆಸೆ ಅಂಕುರಿಸಲು ಕಾರಣ.

ಭಾರತದ ರಾಜಕೀಯ ಪರಿಸ್ಥಿತಿ ಬಾಬರನ ಆಸೆಯ ಬೇರಿಗೆ ನೀರೆರೆಯಿತು. ದೆಹಲಿಯ ಸುಲ್ತಾನರು ತಮ್ಮ ಹಳೆಯ ಪ್ರದೇಶಗಳನ್ನೆಲ್ಲ ಕಳೆದುಕೊಂಡು ಛಿದ್ರವಾಗುವ ಸ್ಥಿತಿ ತಲಪಿದ್ದರು. ದಖ್ಖನ್ ಪ್ರದೇಶ ದೆಹಲಿಯಿಂದ ಪ್ರತ್ಯೇಕಗೊಂಡು ಬಹಳ ದಿನಗಳಾಗಿದ್ದುವು. ಉತ್ತರ ಭಾರತದಲ್ಲಿ ಕೂಡ ಕಾಶ್ಮೀರ, ಮಾಳವ, ಗುಜರಾತ್, ಬಂಗಾಲಗಳು ಪ್ರತ್ಯೇಕ ಆಫ್ಘನ್ ಆಡಳಿತಗಾರರ ಕೈಯಲ್ಲಿ ಸರ್ವತಂತ್ರವಾಗಿದ್ದವು. ರಾಜಪುಟಾನದಲ್ಲಿ ರಾಜಪೂತ ಮುಖ್ಯರು ಸ್ವತಂತ್ರರಾಗಿದ್ದರು. ಅಲ್ಲಿ ಆಳುತ್ತಿದ್ದ ಮೇವಾರದ ರಾಣಾಸಂಗ್ರಾಮ ಸಿಂಹ ಉತ್ತರ ಭಾರತದಲ್ಲಿ ದೇಶೀಯ ಆಡಳಿತವನ್ನು ಪುನಃ ಸ್ಥಾಪಿಸಲು ಯೋಚಿಸುತ್ತಿದ್ದ. ಪಂಜಾಬ್ ದೌಲತ್‍ಖಾನ್ ಎಂಬ ಸರ್ದಾರನ ಅಂಕಿತದಲ್ಲಿತ್ತು. ಇಬ್ರಾಹಿಮ್ ಲೋದಿ ದೆಹಲಿಯ ಸಿಂಹಾಸನದಲ್ಲಿ ಕುಳಿತಿರುವ ಬಗ್ಗೆ ಅವನ ಚಿಕ್ಕಪ್ಪ ಆಲಮ್‍ಖಾನ್‍ನಿಗೆ ಅಸಮಧಾನವಿತ್ತು. ಬಾಬರನ ಧಾಳಿಯ ವೇಳೆ ಭಾರತದಲ್ಲಿ ಪ್ರಬಲ ಸಾಮ್ರಾಜ್ಯವೇ ಇರಲಿಲ್ಲ. ಭಾರತದ ಪ್ರಾಂತ್ಯಗಳಲ್ಲಿಯ ಪರಸ್ಪರ ಕಚ್ಚಾಟಗಳೇ ಬಾಬರನಿಗೆ ಸಹಾಯ ಮಾಡಿದುವು. ದೌಲತ್‍ಖಾನ್ ಮತ್ತು ಆಲಮ್‍ಖಾನ್‍ರು ಬಾಬರನನ್ನು ಭಾರತಕ್ಕೆ ಧಾಳಿ ಮಾಡಲು ಆಹ್ವಾನಿಸಿದರು. ತೈಮೂರನ ಹಾಗೆಯೇ ಬಾಬರ್ ದೆಹಲಿ ಸುಲ್ತಾನನನ್ನು ಮಣ್ಣು ಮುಕ್ಕಿಸಿ ತಮ್ಮಿಬ್ಬರಲ್ಲಿ ಒಬ್ಬರಿಗೆ ಅಧಿಕಾರ ಕೊಡುವನೆಂದು ಅವರು ಭಾವಿಸಿದ್ದರು. ಅವರ ಆಹ್ವಾನವನ್ನು ಸಂತೋಷ ದಿಂದ ಒಪ್ಪಿಕೊಂಡ ಬಾಬರ್ 1524ರಲ್ಲಿ ಪಂಜಾಬ್ ಪ್ರವೇಶಿಸಿದ. ಲಾಹೋರನ್ನು ಆಕ್ರಮಿಸಿ ಭಾರತದಲ್ಲೇ ಉಳಿಯುವ ಇಚ್ಛೆ ವ್ಯಕ್ತಪಡಿಸಿದ. ಇದು ದೌಲತ್‍ಖಾನ್ ಮತ್ತು ಆಲಮ್‍ಖಾನ್ ರನ್ನು ಕಂಗೆಡಿಸಿತು. ಅವರು ಬಾಬರನನ್ನು ಕೈಬಿಟ್ಟರು. ಇದರಿಂದ ಇವನು ಕಾಬೂಲಿಗೆ ಹಿಂದಿರುಗಬೇಕಾದ್ದು ಅನಿವಾರ್ಯವಾಯಿತು. ಮರುವರ್ಷ ಬೃಹತ್ ಸೈನ್ಯ ತೆಗೆದುಕೊಂಡು ಬಾಬರ್ ಪುನಃ

ಬಂದ. ದೌಲತ್‌ಖಾನ್ ಶರಣಾಗುವಂತೆ ಮಾಡಿದ. 1526 ಏಪ್ರಿಲ್ 21ರಂದು ನಡೆದ ಪಾಣಿಪತ್ ಕದನದಲ್ಲಿ ಇಬ್ರಾಹಿಮ್ ಲೋದಿಯನ್ನು ಸೋಲಿಸಿ ಕೊಂದ. ಈ ವಿಜಯದಿಂದ ದೆಹಲಿ ಮತ್ತು ಆಗ್ರಾಗಳು ಬಾಬರನ ವಶವಾದುವು. ಇವನ ಪ್ರಭುತ್ವವನ್ನು ಭಾರತದ ವಿವಿಧ ಪ್ರಾಂತ್ಯದಲ್ಲಿ ಆಳುತ್ತಿದ್ದ ಆಫ್ಘನ್ ಮುಖ್ಯಸ್ಥರಾಗಲೀ ಮೇವಾಡದ ರಾಣಾ ಸಂಗ್ರಾಮಸಿಂಹನಾಗಲೀ ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಆದರೆ ರಾಜಪುತರು ಮತ್ತು ಆಫ್ಘನರು ಒಟ್ಟಾಗುವುದು ಸಾಧ್ಯವಾಗದ್ದರಿಂದ ಬಾಬರ್ ಅವರನ್ನು ಪ್ರತ್ಯೇಕವಾಗಿ ಎದುರಿಸಿದ. 1527 ಮಾರ್ಚ್ 16ರಂದು ರಾಣಾನನ್ನು ಲಖನೌದಲ್ಲಿ ಸೋಲಿಸಿದ ಅನಂತರ ಜಮ್ಮುವನ್ನು ದಾಟಿ ಚಾಂದೇರಿ ಕೋಟೆಗೆ ಮುತ್ತಿಗೆ ಹಾಕಿದ. ಹೀಗೆ ರಾಜಪುತರ ವಿರೋಧವನ್ನು ಧೈರ್ಯದಿಂದ ಎದುರಿಸಿದ. ಎರಡು ವರ್ಷಗಳ ಅನಂತರ ಗೋಗ್ರ ಕದನದಲ್ಲಿ ಬಿಹಾರ್ ಮತ್ತು ಬಂಗಾಲಗಳ ಆಫ್ಘನ್‌ರನ್ನೂ ಪರಾಭವಗೊಳಿಸಿದ. ಈ ಮೂರು ವಿಜಯಗಳು ಬಾಬರನನ್ನು ದೆಹಲಿಯ ದೊರೆಯಾಗಿ ಮಾಡಿದವು. ಬಾಬರ್ ಹೀಗೆ ಭಾರತದಲ್ಲಿ ಮೊಗಲ್ ಸಾಮ್ರಾಜ್ಯ ಸ್ಥಾಪಿಸಿದ. ಈತ ಬಲು ಬೇಗನೆ ಮೃತನಾದ್ದರಿಂದ (1530 ಡಿಸೆಂಬರ್ 20) ಸಾಮ್ರಾಜ್ಯವನ್ನು ಒಂದು ಸುವ್ಯವಸ್ಥಿತ ಆಡಳಿತಕ್ಕೆ ತರುವುದು ಸಾಧ್ಯವಾಗಲಿಲ್ಲ. ಇವನ ಉತ್ತರಾಧಿಕಾರಿಯಾಗಿ ಮಗ ಹುಮಾಯೂನ್ ಪಟ್ಟಕ್ಕೆ ಬಂದ.

ಬಾಬರ್ ಕೇವಲ ಅದೃಷ್ಟದ ಮೇಲೆ ಬಂದವನಲ್ಲ. ಈತ ಜೀವನದಲ್ಲಿ ಹಲವು ಸಂಕಷ್ಟಗಳನ್ನು ಎದುರಿಸಿ ದೆಹಲಿಯ ಸಿಂಹಾಸನವನ್ನು ಏರಿದ. ತುರ್ಕಿ ಭಾಷೆಯಲ್ಲಿ ಬಾಬರ್ ಬರೆದ ನೆನಪುಗಳು ಇವನ ಸಾಹಿತ್ಯಕ ಅಭಿರುಚಿಗೆ ದ್ಯೋತಕ. ಬಾಬರನ ನೆನಪುಗಳನ್ನು ಇವನ ಮೊಮ್ಮಗ ಅಕ್ಬರ್(1556–1605) ಪರ್ಷಿಯನ್ ಭಾಷೆಗೆ ಭಾಷಾಂತರಿಸಲು ವ್ಯವಸ್ಥೆ ಮಾಡಿದ. (ಕೆ.ಟಿ.ಆರ್.)

ಬಾಬರ್‌ನಾಮ: ಬಾಬರನ ಆತ್ಮಕಥನ. ಇದನ್ನು ತುಜಕ್–ಇ–ಬಾಬರಿ, ವಕಿಯತ್–ಇ–ಬಾಬರಿ ಎಂದು ಕರೆಯಲಾಗುತ್ತದೆ. ಚಗಕೈ ತರ್ಕಿ ಭಾಷೆಯಲ್ಲಿ ರಚಿಸಲ್ಪಟ್ಟಿದೆ. ಇದರಲ್ಲಿ ಬಾಬರನ ಜೀವನದ 48 ವರ್ಷಗಳ ಬದುಕಿನಲ್ಲಿ, 18 ವರ್ಷಗಳ ಸಾಧನೆಯನ್ನು ವಿವರಿಸಲಾಗಿದೆ. ಜೊತೆಗೆ ಇವನ ಕಾಲದ ಸಾಂಸ್ಕೃತಿಕ, ಸಾಮಾಜಿಕ ಸ್ಥಿತಿ–ಗತಿಗಳನ್ನು ವಿವರವಾಗಿ ಬರೆಯಲಾಗಿದೆ. ಈ ಕೃತಿಯನ್ನು ಪರ್ಷಿಯನ್ ಭಾಷೆಗೆ 3ಬಾರಿ ಅನುವಾದ ಮಾಡಲಾಗಿದೆ. ಹುಮಾಯೂನ್ ಕಾಲದಲ್ಲಿ ಮೊದಲು ಜೈನ್‌ಖಾನ್‌ನಿಂದ ಅನಂತರ ಪಾಯಂದಹಸನ್‌ನಿಂದ ಅನಂತರ ಅಕ್ಬರ್ ಮತ್ತು ಷಹಜಹಾನ್ ಕಾಲದಲ್ಲಿ ಅನುವಾದಗೊಂಡಿತು. ಇತ್ತೀಚೆಗೆ ಯುರೋಪಿಯನ್ ಮತ್ತು ಏಷ್ಯನ್ ಭಾಷೆಗಳಿಗೂ ಅನುವಾದಗೊಂಡಿದೆ. ವಿದ್ವಾಂಸರಾದ ಲೇಡನ್, ಎರ್ಸಿನ್, ಎಲ್.ಕಿಂಗ್ ಮತ್ತು ಎ. ಎಸ್. ಬೆವರಿಜ್ಜ್ ಇವರಿಂದ ತುರ್ಕಿಭಾಷೆಯಿಂದ ನೇರವಾಗಿ ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿದ್ದರಿಂದ ಇದನ್ನು ಅಧಿಕೃತ ಅನುವಾದವೆಂದು ಭಾವಿಸಲಾಗಿದೆ. ಸಮಕಾಲೀನ ಭಾರತದ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ವಾಯುಗುಣ, ಭಾರತೀಯರ ಸಾಮಾಜಿಕ, ಸಾಂಸ್ಕೃತಿಕ, ಪ್ರಾಕೃತಿಕ, ಆರ್ಥಿಕ ಚಟುವಟಿಕೆಗಳ ಬಗ್ಗೆ ಇಲ್ಲಿ ವಿಪುಲ ಮಾಹಿತಿ ದೊರಕುತ್ತವೆ. ಈ ಕೃತಿಯಲ್ಲಿ ಭಾರತೀಯರನ್ನು ಹಿಂದೀಸ್ ಎಂದು ಸಂಭೋದಿಸಲಾಗಿದೆ. ಭಾರತೀಯರು ಜ್ಞಾನ, ಕೈಗಾರಿಕೆ, ಕುಶಲಕಲೆಗಳು, ಆಡಳಿತ, ಆಧ್ಯಾತ್ಮಿಕತೆ ಮೊದಲಾದುವುಗಳಲ್ಲಿ ಮುಸ್ಲಿಮರು ಹಾಗೂ ಇತರ ವಿದೇಶಿಯರಿಗಿಂತ ಶ್ರೇಷ್ಠರೆಂದು ವಿವರಿಸಲಾಗಿದೆ. ಇಲ್ಲಿಯ ಬಡಜನರು ಕೊಳಕರೆಂದು ಅವರಿಗೆ ಸಾಮಾಜಿಕ ಸಂಪರ್ಕ ಕಡಿಮೆ ಎಂದೂ ಹೇಳಲಾಗಿದೆ. ಬಜಾರಿನಲ್ಲಿ ಒಳ್ಳೆಯ ರೊಟ್ಟಿ ಸಿಗುವುದಿಲ್ಲವೆಂದೂ ಬಿಸಿನೀರಿನ ಸ್ನಾನವಾಗಲೀ ಮೇಣದ ಬತ್ತಿಯ ಬಳಕೆಯಾಗಲೀ ಇರಲಿಲ್ಲವೆಂದೂ ಹೇಳಿದೆ. ಭಾರತದಲ್ಲಿ ವಿವಿಧ ಬಗೆಯ ವಸ್ತುಗಳು, ತರಕಾರಿ ಹಣ್ಣುಗಳು, ದವಸಧಾನ್ಯಗಳು ಯಥೇಚ್ಛವಾಗಿ ಲಭ್ಯವಿದ್ದರೂ ಒಣದ್ರಾಕ್ಷಿ, ಖರ್ಜೂರ, ತಂಪು ಪಾನೀಯಗಳು ಸಿಗುವುದಿಲ್ಲ ಎಂದು ಹೇಳಲಾಗಿದೆ.

ಭಾರತದ ರಾಜಕೀಯ ಪ್ರಸ್ತಾಪವೂ ಈ ಕೃತಿಯಲ್ಲಿ ಸಾಕಷ್ಟಿದೆ. ಸಣ್ಣಪುಟ್ಟ ರಾಜ್ಯಗಳು ಅಸ್ತಿತ್ವದಲ್ಲಿದ್ದು, ಅವುಗಳಲ್ಲಿ ಪರಸ್ಪರ ಈರ್ಷೆ, ದ್ವೇಷ ಭಾವನೆಗಳ ವಿಚಾರ ತಿಳಿಸಲಾಗಿದೆ. ಏಕೀಕೃತ ಹಾಗೂ ಸಮರ್ಥ ರಾಜ್ಯವೊಂದರ ಕೊರತೆಯಿಂದಾಗಿ ಪ್ರಜೆಗಳಿಗೆ ಉತ್ತಮ ಸರ್ಕಾರವಾಗಲೀ ಆಡಳಿತಾತ್ಮಕ ನೆರವಾಗಲಿ ಸಿಗುತ್ತಿರಲಿಲ್ಲವೆಂದು ನಮೂದಿಸಲಾಗಿದೆ. ಭಾರತೀಯರ ಕೃಷಿ ಪದ್ಧತಿ, ನೀರಾವರಿ ಸೌಕರ್ಯ, ಕುಶಲಕರ್ಮಿಗಳ ಕಲಾನಿಪುಣತೆ, ವ್ಯಾಪಾರ ವಾಣಿಜ್ಯ ಮೊದಲಾದವುಗಳ ಬಗ್ಗೆಯೂ ಚರ್ಚಿಸಲಾಗಿದೆ. ಮೊಗಲರ ಇತಿಹಾಸ ರಚನೆಯಲ್ಲಿ ಈ ಕೃತಿಗೆ ವಿಶೇಷ ಮನ್ನಣೆ ದೊರಕಿದೆ. (ಎಸ್‌ಆರ್.)

**ಬಾಮಿಯಾನ್:** ಆಫ್ಘಾನಿಸ್ತಾನ ದೇಶದ ಒಂದು ಪ್ರಾಂತ್ಯ ಮತ್ತು ಆಡಳಿತ ಕೇಂದ್ರ ನಗರ. ಕಾಬುಲ್‌ನಿಂದ 230ಕಿಮೀ ವಾಯವ್ಯಕ್ಕಿದೆ. ಬಾಮಿಯಾನ್ ಕಣಿವೆಯ ಬೆಟ್ಟದಲ್ಲಿ ಕೆತ್ತಿರುವ ಬುದ್ಧನ ಎರಡು ಬೃಹತ್ ಶಿಲ್ಪಗಳಿಂದಾಗಿ ಪ್ರಸಿದ್ಧಿಯಾಗಿದೆ. ಈ ಶಿಲ್ಪಗಳು 6ನೆಯ ಶತಮಾನದ ಭಾರತ ಮತ್ತು ಗ್ರೀಕ್ ಶೈಲಿಯಲ್ಲಿವೆ. ಇಲ್ಲಿ ಹಿಂದು ಮತ್ತು ಬೌದ್ಧರ ಅನೇಕ ಮಠ ಮತ್ತು ವಿಹಾರಗಳಿದ್ದವು. ಭಾರತ–ಗ್ರೀಕ್ ಕಲೆಯ ಹಾಗೂ ತತ್ವಜ್ಞಾನ, ಧರ್ಮ ಇವುಗಳ ಒಂದು ಕೇಂದ್ರವಾಗಿತ್ತು. ಮುಖ್ಯವಾಗಿ 2–9ನೆಯ ಶತಮಾನದಲ್ಲಿ ಇಸ್ಲಾಮಿನ ಆಕ್ರಮಣವಾಗುವವರೆಗೂ ಇದೊಂದು ಬೌದ್ಧಧರ್ಮದ ನೆಲೆಯಾಗಿತ್ತು. ಇಲ್ಲಿನ ಬೆಟ್ಟದ ಗವಿಗಳ ವಿಹಾರಗಳಲ್ಲಿ ಬೌದ್ಧ ಸನ್ಯಾಸಿಗಳು ಇರುತ್ತಿದ್ದರು. ಗವಿಗಳನ್ನು ಸುಂದರವಾದ ವರ್ಣಚಿತ್ರಗಳಿಂದ ಅಲಂಕರಿಸುತ್ತಿದ್ದರು. ನಿಂತ ಭಂಗಿಯಲ್ಲಿರುವ ಎರಡು ಬುದ್ಧನ ವಿಗ್ರಹಗಳು 55ಮೀ ಎತ್ತರ ಇದ್ದವು. ಇವು ಈ ಪ್ರದೇಶದಲ್ಲೆಲ್ಲಾ ಎದ್ದು ಕಾಣುವಂತ ಬೃಹತ್ ಶಿಲ್ಪಗಳು. ಇವುಗಳನ್ನು ವಿಶ್ವಪರಂಪರೆಯ ಸ್ಮಾರಕ ಪಟ್ಟಿಗಳಿಗೆ ಸೇರಿಸಲಾಗಿತ್ತು. ಚಿಕ್ಕ ವಿಗ್ರಹವನ್ನು 507ರಲ್ಲಿ ಮತ್ತು ದೊಡ್ಡ ವಿಗ್ರಹವನ್ನು 554 ರಲ್ಲಿ ಕೆತ್ತಲಾಗಿತ್ತು.ಈ ಕೆತ್ತನೆಯಲ್ಲಿ ಒಂದು ವೈಶಿಷ್ಟ್ಯವಿದೆ. ಈ ವಿಗ್ರಹಗಳ ದೇಹದ ಪ್ರಮುಖ ಭಾಗವನ್ನು ಬೆಟ್ಟದ ಮರಳು ಕಲ್ಲಿನಲ್ಲಿ ಮಾತ್ರ ಕೆತ್ತಿದ್ದು ಉಳಿದ ಭಾಗಗಳನ್ನು ಹುಲ್ಲಿನ ಮಿಶ್ರಣದ ಜೇಡಿಮಣ್ಣಿನಿಂದ ರೂಪಿಸಲಾಗಿತ್ತು. ಇದರ ಮೇಲೆ ಗಾರೆಯನ್ನು ಉಪಯೋಗಿಸಿ ಅದರ ಮೇಲೆ ವಿವಿಧ ವರ್ಣಗಳಿಂದ ಮುಖ, ಕೈ ಮತ್ತು ವಸ್ತ್ರದ ಮಡಿಕೆಗಳು ಕಾಣುವಂತೆ ಅಲಂಕರಿಸಲಾಗಿತ್ತು. ದೊಡ್ಡ ಶಿಲ್ಪವನ್ನು ಕಡುಗೆಂಪು ಬಣ್ಣದಿಂದ ಮತ್ತು ಸಣ್ಣ ಶಿಲ್ಪವನ್ನು ವಿವಿಧ ಬಣ್ಣಗಳಿಂದ ಅಲಂಕರಿಸಲಾಗಿತ್ತು. ಈ ಶಿಲ್ಪಗಳ ತೋಳು ಮತ್ತು ಕೈಗಳನ್ನು ಹುಲ್ಲು ಮತ್ತು ಜೇಡಿ ಮಣ್ಣಿನ ಮಿಶ್ರಣದಿಂದ ಮರದ ಕಾಪು ತೊಡಿಗೆಯ ಮೇಲೆ ರೂಪಿಸಲಾಗಿದೆ. ಮುಖಗಳನ್ನು ಮರದ ಮುಖವಾಡಗಳಿಂದ ಮಾಡಲಾಗಿತ್ತು. ಕಾಲಾಂತರದಲ್ಲಿ ಹೀಗೆ ಸೇರಿಸಿದ ಭಾಗಗಳು ನಶಿಸಿ ಹೋಗುತ್ತ ಬಂದವು. ಈ ವಿಗ್ರಹಗಳ ಮೈಮೇಲೆ ಕಾಣುತ್ತಿದ್ದ ತೂತುಗಳು ಮೆತ್ತಿದ್ದ ಮಣ್ಣನ್ನು ಗಟ್ಟಿಯಾಗಿ ಆಧರಿಸಲು ಮರದ ಗೂಟಗಳನ್ನು ಹುಗಿಯಲು ಮಾಡಿದವುಗಳಾಗಿವೆ. ಈ ಸ್ಥಳವನ್ನು ಯಾತ್ರಿಕ ಯುವಾನ್ ಚಾಂಗ್ ಸು. 630ರಲ್ಲಿ ಸಂದರ್ಶಿಸಿದ್ದ. ಇಲ್ಲಿ ಸಾವಿರಕ್ಕೂ ಹೆಚ್ಚು ಬೌದ್ಧ ಭಿಕ್ಷುಗಳು ಹತ್ತು ವಿಹಾರಗಳಲ್ಲಿ ಇದ್ದರೆಂದು ಮತ್ತು ಬುದ್ಧನ ವಿಗ್ರಹಗಳನ್ನು ಚಿನ್ನ ಮತ್ತು ಬೆಲೆಬಾಳುವ ಹರಳಿನ ಆಭರಣಗಳಿಂದ ಅಲಂಕರಿಸಲ್ಪಟ್ಟಿದ್ದವೆಂದು ತಿಳಿಸಿದ್ದಾನೆ. ಇವೆರಡು ವಿಗ್ರಹಗಳಿಗಿಂತ ದೊಡ್ಡದಾದ ಮಹಾಪರಿನಿರ್ವಾಣ ಬುದ್ಧನ ವಿಗ್ರಹ ಇದ್ದಿತೆಂದು ಹೇಳಿರುವುದು ವಿಶೇಷ ಸಂಗತಿ. ಈಗ ಮಹಾಪರಿನಿರ್ವಾಣ ಬುದ್ಧನ ವಿಗ್ರಹವನ್ನು ನಾಶಪಡಿಸಲಾಗಿದೆಯೆಂದು ನಂಬಿದ್ದರೂ ಕೆಲವು ಪುರಾತತ್ವಜ್ಞರು ಈಗಲೂ ಶೋಧಿಸುತ್ತಿದ್ದಾರೆ.

ಬೃಹತ್ ಬುದ್ಧ ಶಿಲ್ಪ

ಮಹಮದ್ ಘಜ್ನಿ ಆಫ್ಘಾನಿಸ್ತಾನ ಗೆದ್ದುಕೊಂಡಾಗ ಬೌದ್ಧ ವಿಹಾರಗಳನ್ನು ಲೂಟಿ ಮಾಡಿದನಾದರೂ ವಿಗ್ರಹಗಳನ್ನು, ಚಿತ್ರಗಳನ್ನು ಹಾಳು ಮಾಡಲಿಲ್ಲ. ಆದರೆ ಔರಂಗಜೇಬ್ ಮದ್ದು ಗುಂಡುಗಳಿಂದ ಇವನ್ನು ನಾಶಪಡಿಸಲು ಪ್ರಯತ್ನಿಸಿದ. ಹಾಗೇ ನಾದಿರ್ ಶಾ ಕೂಡ ನಾಶಪಡಿಸಲು ಪ್ರಯತ್ನ ಮಾಡಿದ್ದ. 1999 ರ ಜುಲೈನಲ್ಲಿ ಮುಲ್ಲ ಮೊಹಮ್ಮದ್ ಒಮರ್ ಈ ಬುದ್ಧನ ವಿಗ್ರಹವನ್ನು ಉಳಿಸುವ ಪರವಾಗಿ ಶಾಸನ ಹೊರಡಿಸಿದ. ಏಕೆಂದರೆ ಆಫ್ಘಾನಿಸ್ತಾನದಲ್ಲಿ ಬೌದ್ಧ ಸಮೂಹ ಇಲ್ಲದಿದ್ದುದರಿಂದ ಈ ವಿಗ್ರಹಗಳು ಪೂಜೆಗೊಳ್ಳುವುದು ಸಾಧ್ಯವಿಲ್ಲ ಮತ್ತು ಈ ದೇಶಕ್ಕೆ ಅಂತಾರಾಷ್ಟ್ರೀಯ ಪ್ರವಾಸಿಗಳು ಈ ವಿಗ್ರಹವನ್ನು ನೋಡಲು ಬರುವುದರಿಂದ ದೇಶಕ್ಕೆ ಆದಾಯವಾಗುವುದರಿಂದ ತಾಲಿಬಾನರು, ಈ ವಿಗ್ರಹಗಳನ್ನು ಸರ್ಕಾರ ರಕ್ಷಿಸಬೇಕೆ ಹೊರತು ನಾಶಮಾಡಬಾರದೆಂದು ಘೋಷಿಸಿದರು. ಆದರೆ ಆಫ್ಘಾನಿಸ್ತಾನದ ಮೂಲಭೂತ ವಾದಿಗಳು ಇಸ್ಲಾಂ ಧರ್ಮ ಆಚರಿಸದ ಪಂಗಡಗಳ ವಿರುದ್ಧ ಚಳವಳಿ ಆರಂಭಿಸಿದರು. ಕ್ರಮೇಣ 2001ರ ಮಾರ್ಚ್‌ನಲ್ಲಿ ಕಾಬೂಲ್‌ನಲ್ಲಿರುವ ಏಜೆನ್ಸಿ ಫ್ರಾನ್ಸ್ ಪ್ರೆಸ್ ಪ್ರಕಾರ ಮೂಲಭೂತವಾದಿ ಧಾರ್ಮಿಕ ವರ್ಗದ ಹೇಳಿಕೆಯಂತೆ ಇಸ್ಲಾಂ ಧರ್ಮದ ಅಮೀರರ ನ್ಯಾಯಾಲಯದ ತೀರ್ಮಾನದಂತೆ ಆಫ್ಘಾನಿಸ್ತಾನದ ಎಲ್ಲ ಮೂರ್ತಿಗಳನ್ನು ಹಿಂದೆ ಖಾಫಿರರು (ಇಸ್ಲಾಂ ಧರ್ಮದವರಲ್ಲದವರು) ಪೂಜೆ ಮಾಡುತ್ತಿದ್ದರಿಂದ ಅವುಗಳನ್ನು ನಾಶ ಮಾಡಬೇಕೆಂದು ತೀರ್ಮಾನಿಸಲಾಯಿತು. ವಿಶ್ವಸಂಸ್ಥೆಯ ಯುನೆಸ್ಕೊ ಭಾಗದ ಮಹಾ ನಿರ್ದೇಶಕರ ಪ್ರಕಾರ ಆರ್ಗನೈಜೇಶನ್ ಆಫ್ ದಿ ಇಸ್ಲಾಮಿಕ್ ಕಾನ್ಫರೆನ್ಸ್ ಸಂಸ್ಥೆ 54 ದೇಶಗಳು ತಾಲಿಬಾನ್ ಸರ್ಕಾರಕ್ಕೆ ಮಾನ್ಯತೆಯನ್ನು ಕೊಡಲಾಗಿತ್ತು. ಈ ದೇಶಗಳ ರಾಯಭಾರಿಗಳು ಸಭೆಯಲ್ಲಿ ಪಾಕಿಸ್ತಾನ, ಸೌದಿ ಅರೇಬಿಯ, ಅರಬ್ ಸಂಯುಕ್ತ ರಾಷ್ಟ್ರಗಳು ಹಾಗೂ ಇತರ ದೇಶಗಳು ಒಮ್ಮತದಿಂದ ಈ ವಿಗ್ರಹಗಳನ್ನು ಉಳಿಸಬೇಕೆಂದು ತೀರ್ಮಾನಿಸಲಾಯಿತಾದರೂ ತಾಲಿಬಾನ್ ಸರ್ಕಾರದ ಧಾರ್ಮಿಕ ಮಂತ್ರಿ ಇದನ್ನು ನಾಶಗೊಳಿಸುವುದು ನ್ಯಾಯವೆಂದು ಹೇಳಿ ವಿಗ್ರಹಗಳನ್ನು ಸ್ಫೋಟಕ ದ್ರವ್ಯಗಳಿಂದ ಸಂಪೂರ್ಣವಾಗಿ ನಾಶಪಡಿಸಿದ. ಈ ಕಾರ್ಯ ಸುಮಾರು ಒಂದು ತಿಂಗಳ ಕಾಲ ಸತತವಾಗಿ ನಡೆಯಿತು. ಈಗ ಈ ವಿಗ್ರಹಗಳ ಅಲ್ಪ ಸ್ವಲ್ಪ ಲಕ್ಷಣಗಳನ್ನು ಮಾತ್ರ ಗುರುತಿಸಬಹುದಾಗಿದೆ. ಬೌದ್ಧ ಗವಿ ಹಾಗೂ ವಿಹಾರಗಳು ಕೊಂಚ ಉಳಿದು

ಕೊಂಡಿವೆ. ತಾಲಿಬಾನ್ ಯುದ್ಧದ ಅನಂತರ ಆಫ್ಘಾನಿಸ್ತಾನದ ಪುನರ್‌ನಿರ್ಮಾಣದ ಕಾರ್ಯದಲ್ಲಿ ಜಪಾನ್ ಸರ್ಕಾರ, ಆಫ್ಘಾನಿಸ್ತಾನ್ ಇನ್‌ಸ್ಟಿಟ್ಯೂಟ್ ಇನ್ ಬುಬೆನ್ ಡಾರ್ಫ್, ಸ್ವಿಟ್ಜರ್ಲೆಂಡ್ ಇತರ ಹಲವಾರು ಸಂಘ ಸಂಸ್ಥೆಗಳು, ಜ್ಯೂರಿಚ್‌ನಲ್ಲಿಯ ಇ.ಟಿ.ಎಚ್. ಜೊತೆಗೆ ಅನಸ್ಟಲೊಸಿಸ್ ತಂತ್ರದಿಂದ ಈ ವಿಗ್ರಹಗಳನ್ನು ಮತ್ತೆ ಮೂಲರೂಪದಲ್ಲಿ ಪ್ರತಿಷ್ಠಾಪಿಸಲು ಪ್ರಯತ್ನಗಳು ನಡೆದಿವೆ.

ಅತ್ಯಂತ ಪ್ರಾಚೀನ ತೈಲ ವರ್ಣಚಿತ್ರ

2002ರ ಮೇನಲ್ಲಿ ಬಾಮಿಯಾನ್ ಬುದ್ಧನ ಮಾದರಿಯ ಬುದ್ಧನ ವಿಗ್ರಹವನ್ನು ಶ್ರೀಲಂಕದಲ್ಲಿ ಒಂದು ಕಡಿದಾದ ಬೆಟ್ಟದ ಭಾಗದಲ್ಲಿ ಕೆತ್ತಲಾಗಿದೆ. 2004ರ ಡಿಸೆಂಬರ್‌ನಲ್ಲಿ ಜಪಾನಿನ ಸಂಶೋಧಕರು ಈ ವರ್ಣಚಿತ್ರಗಳ ಹಿನ್ನೆಲೆಯ ಫಲಕದಲ್ಲಿಯ ಹುಲ್ಲುಕಡ್ಡಿಗಳ ನಾರಿನ ರೇಡಿಯೊ ಐಸೊಟೋಪ್ ಆಕ್ಸೀವ್‌ಗಳನ್ನು ವಿಶ್ಲೇಷಣೆ ಮಾಡಿದಾಗ ಬಾಮಿಯಾನ ಗವಿಗಳ ಚಿತ್ರಗಳು ಇದುವರೆಗೂ ತಿಳಿದಂತೆ 6–8ನೆಯ ಶತಮಾನದ್ದಾಗಿರದೆ 5–9ನೆಯ ಶತಮಾನದವೆಂದು ತಿಳಿದುಬಂದಿದೆ. ಈಗಿನ ಆಫ್ಘಾನಿಸ್ತಾನ ಸರ್ಕಾರ ಜಪಾನಿನ ಕಲಾವಿದ ಹಿರೊಯಮಗತನನ್ನು ನಿಯುಕ್ತಿಗೊಳಿಸಿ 14ಲೇಸರ್ ಸಿಸ್ಟಮ್ಸ್ ತಂತ್ರವಿಧಾನದಿಂದ ಮೂಲ ವಿಗ್ರಹಗಳಿದ್ದ ಸ್ಥಳದಲ್ಲಿ ಈ ವಿಗ್ರಹಗಳ ಚಿತ್ರ ಬೀಳುವಂತೆ ಮಾಡಿ ಪುನರ್ ರಚಿಸುವ ವ್ಯವಸ್ಥೆ ಮಾಡಿದೆ. ಈ ಯೋಜನೆಗೆ ಸು. 9ಮಿಲಿಯನ್ ಡಾಲರ್ ಖರ್ಚಾಗಬಹುದೆನ್ನಲಾಗಿದೆ. ವಿಶ್ವಸಂಸ್ಥೆಯ ಅನುಮೋದನೆಗಾಗಿ ನಿರೀಕ್ಷಿಸಲಾಗುತ್ತಿದೆ. ಒಪ್ಪಿಗೆ ದೊರೆತರೆ 2012ರ ಜೂನ್ ಹೊತ್ತಿಗೆ ಇದರ ಪುನರ್ ರಚನೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ನಡುವೆ ಯುನೆಸ್ಕೊ ದಿಂದ 1.3ಮಿಲಿಯನ್ ಡಾಲರ್ ಧನಸಹಾಯ ಪಡೆದು ಈ ಯೋಜನೆಯ ಪರವಾಗಿ ವಿಗ್ರಹನಾಶದ ಸ್ಥಳದಲ್ಲಿ ಬಿದ್ದಿರುವ ಮಣ್ಣಿನ ಮುದ್ದೆಗಳು, ಗಾರೆ ಚೂರುಗಳು ರಾಶಿ ಹಲವಾರು ಟನ್ ತೂಕದ ಕಲ್ಲು ತುಣುಕುಗಳನ್ನು ಸಂಗ್ರಹಿಸಲಾಗಿದೆ. (ಎ.ಎಸ್.;ಎನ್.ಎಲ್.)

**ಬಾರಕೂರು:** ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ಸೀತಾನದಿಯ ದಂಡೆಯ ಮೇಲಿರುವ ಒಂದು ಸ್ಥಳ. ಸ್ವಾಭಾವಿಕ ಬಂದರು ಆಗಿದ್ದುದರಿಂದ ಹಾಗೂ ಅರಬ್ಬಿಸಮುದ್ರದ ಮೂಲಕ ಪಶ್ಚಿಮ ದೇಶಗಳೊಡನೆ ವ್ಯಾಪಾರ ಸಂಬಂಧವಿದ್ದುದರಿಂದ ಈ ಊರಿಗೆ ಮಹತ್ತ್ವ ದೊರೆಯಿತು. ವಿಜಯನಗರದ ಅರಸರ ಆಳಿಕೆ ಆರಂಭವಾಗುತ್ತಿದ್ದಂತೆಯೇ ಒಂದನೆಯ ಹರಿಹರ ಈ ಊರನ್ನು ಪ್ರಾಂತಪಾಲರ ಆಡಳಿತ ಕೇಂದ್ರವನ್ನಾಗಿ ಘೋಷಿಸಿದ. ಊರ ಹೊರಗೆ, ನೀರಿನ ಸೆಲೆಗೆ ಹತ್ತಿರವಿದ್ದ ಉತ್ತರದ ಭೂಮಿಯಲ್ಲಿ ಕೋಟೆಯನ್ನು ಕಟ್ಟಿಸಿದ. ಈ ಊರಿನ ಕಂದಕ ಸಹಿತವಾದ ಕೋಟೆ ಮತ್ತು ಅದರೊಳಗಿದ್ದ ಕಟ್ಟಡಗಳ ಉತ್ಖನನ ಕಾರ್ಯವನ್ನು ಎಂ.ಎಚ್.ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿ (ಮಿಥಿಕ್ ಸೊಸೈಟಿ, ಬೆಂಗಳೂರು) ಮತ್ತು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಬೆಂಗಳೂರು ವಲಯ ಜೊತೆಗೂಡಿ 2003ರಲ್ಲಿ ಕೈಗೊಂಡರು. ಬಿ. ನರಸಿಂಹಯ್ಯ, ಎಸ್. ನಾಗರಾಜು, ಎಸ್.ಎಚ್. ಹಳಕಟ್ಟಿ ಮೊದಲಾದವರ ಮಾರ್ಗದರ್ಶನದಲ್ಲಿ ನಡೆಸಿದ ಉತ್ಖನನ ಕಾರ್ಯ ಮೂರು ವರ್ಷಗಳ ಕಾಲ ಮುಂದುವರಿಯಿತು. ಈ ಪ್ರಾಂತೀಯ ರಾಜಧಾನಿಯ ರಚನೆ ಹಾಗೂ ನಕ್ಷೆಯನ್ನು ಪ್ರಧಾನ ರಾಜಧಾನಿ ವಿಜಯನಗರದ ನಕ್ಷೆ ಮತ್ತು ರಚನೆಗಳೊಡನೆ ತುಲನೆ ಮಾಡಿ ಅಧ್ಯಯನ ನಡೆಸುವುದು ಉತ್ಖನನಗಳ ಮುಖ್ಯ ಉದ್ದೇಶವಾಗಿತ್ತು.

ಕೋಟೆಯೊಳಗಿನ ಉತ್ತರಾರ್ಧ ಪ್ರದೇಶದಲ್ಲಿ ನಡೆದ (2003–05)ಉತ್ಖನನದಲ್ಲಿ 40ಕ್ಕೂ ಹೆಚ್ಚು ನಿರ್ಮಿತಿಗಳು ಕಂಡುಬಂದವು. ಅತಿ ಮಹತ್ತ್ವದ ಕಟ್ಟಡ ಎಂದರೆ ಪ್ರಾಂತಪಾಲರ ಶ್ರೋತೃಸಭಾಂಗಣ. ಇದರ ವಿಸ್ತೀರ್ಣ 1200ಚ.ಕಿಮೀ. ಇದಕ್ಕೆ ಪೂರ್ವದಿಂದ ಪಶ್ಚಿಮಕ್ಕೆ 15.60ಮೀ ಮತ್ತು ಉತ್ತರದಿಂದ ದಕ್ಷಿಣಕ್ಕೆ 13.75ಮೀ ಅಳತೆಯ ಒಂದು ಮಧ್ಯದ ಅಂಗಣವಿದೆ. ಗಣ್ಯರು ಪ್ರವೇಶಿಸುತ್ತಿದ್ದ ಪ್ರಮುಖ ದ್ವಾರವನ್ನು ಪೂರ್ವಭಾಗದಲ್ಲಿ ಗುರುತಿಸಲಾಗಿದೆ. ಇದು ಕೋಟೆಯ ಪ್ರಧಾನ ಪ್ರವೇಶದ್ವಾರಕ್ಕೆ ನೇರವಾಗಿದೆ. ಇದರ ಪೂರ್ವ, ದಕ್ಷಿಣ ಹಾಗೂ ಪಶ್ಚಿಮ ಭಾಗಗಳಲ್ಲಿ ಗಣ್ಯರು ಕುಳಿತುಕೊಳ್ಳುವುದಕ್ಕಾಗಿ ಎತ್ತರದ ವೇದಿಕೆಗಳಿದ್ದವು. ದಕ್ಷಿಣದ ವೇದಿಕೆಯಲ್ಲಿ ಇನ್ನೂ ಎತ್ತರದ ಭಾಗ ಪ್ರಾಂತಪಾಲನ ಪೀಠ ವಾಗಿತ್ತೆಂದು ಗುರುತಿಸಲಾಗಿದೆ. ಇದರ ಹಿಂಭಾಗದಲ್ಲಿ ಖಾಸಗಿ ದ್ವಾರವಿದ್ದು, ಇಲ್ಲಿಂದ ಪ್ರಾಂತಪಾಲನ ಪ್ರಸಾಧನ ಕೋಣೆಗೆ ಹೋಗಬಹುದಿತ್ತು. ಉತ್ತರಭಾಗದ ಗೋಡೆಯಲ್ಲಿಯ ಇನ್ನೊಂದು ಬಾಗಿಲಿನಿಂದ ಪ್ರಾಂತಪಾಲರ ವಾಸಗೃಹಕ್ಕೆ ಸುರಕ್ಷಿತವಾದ ಒಳಮಾರ್ಗವಿತ್ತು. ಜಂಬಿಟ್ಟಿಗೆಯಿಂದ ಮಾಡಿದ ಏಳು ಸಣ್ಣ ಪೀಠಗಳಿದ್ದು ಅವು ಮಧ್ಯದ ಛಾವಣಿಯ ಬೃಹತ್ ಮರಕಂಬಗಳಿಗೆ ಆಧಾರವಾಗಿದ್ದವು. ಮರದ ಚೌಕಟ್ಟಿನ ಮೇಲೆ ನಾಡಹೆಂಚುಗಳನ್ನು ಜೋಡಿಸಿ ಮಧ್ಯದ ಚಾವಣಿಯನ್ನು ರೂಪಿಸಲಾಗಿತ್ತು.

ಶ್ರೋತೃಸಭಾಂಗಣದ ಪಶ್ಚಿಮ ಪಾರ್ಶ್ವದಲ್ಲಿದ್ದ ಪ್ರಾಂತಪಾಲರ ಖಾಸಗಿ ಗೃಹಗಳನ್ನು ನಕ್ಷೆ, ವಿನ್ಯಾಸ ದೃಷ್ಟಿಯಿಂದ ವಿಜಯನಗರದ ಗಣ್ಯರ ನಿವಾಸಗಳಿಗೆ ಹೋಲಿಸಬಹುದು. ಎರಡು ಅಂತಸ್ತು ಹೊಂದಿದ್ದ ಇವುಗಳಲ್ಲಿ ನಾಡಹೆಂಚಿನ ಚಾವಣಿಗೆ ಮರದ ಕಂಬಗಳು ಆಧಾರವಾಗಿರುತ್ತಿದ್ದವು. ಇವುಗಳಿಗೆ ಸ್ಥಳೀಯ ಕಲ್ಲಿನ ಒಂದು ಸುತ್ತುಗೋಡೆ ಇರುತ್ತಿತ್ತು. ಶ್ರೋತೃ ಸಭಾಂಗಣದ ಪೂರ್ವಕ್ಕೆ ಇನ್ನೊಂದು ಕಟ್ಟಡದ ಅವಶೇಷಗಳಿವೆ. ಇದನ್ನು ಅಶ್ವಲಾಯವೆಂದು ತಾತ್ಕಾಲಿಕವಾಗಿ ಗುರುತಿಸಲಾಗಿದೆ. ಪೂರ್ವ–ಪಶ್ಚಿಮವಾಗಿ 8.8ಮೀ ಮತ್ತು ದಕ್ಷಿಣೋತ್ತರವಾಗಿ 5ಮೀ ವಿಸ್ತೀರ್ಣದ ಈ ಕಟ್ಟಡದಲ್ಲಿ ಎಂಟು ಕುದುರೆಗಳನ್ನು ಇಡಲು ಬಿಡಿ ಕೋಣೆಗಳಿದ್ದವು. ಕುದುರೆಗಳಿಗೆ ಆಹಾರ ನೀರು ಕೊಡಲು ಉತ್ತರದಲ್ಲಿ ಬಾನೆಗಳನ್ನು ರೂಪಿಸಲಾಗಿತ್ತು.

ಕುದುರೆಲಾಯದ ಈಶಾನ್ಯದಲ್ಲಿ ಆಯಾಕಾರದ ಸಭಾಂಗಣವಿದೆ. ನೆಲಕ್ಕೆ ಕಲ್ಲುಚಪ್ಪಡಿ ಗಳನ್ನು ಹಾಸಿದೆ. ಉತ್ತರದಲ್ಲಿರುವ ಉತ್ತರದ ವೇದಿಕೆಗೆ ಪಶ್ಚಿಮದ ಕಡೆ ಕಿರಿದಾದ ಪ್ರವೇಶ ದ್ವಾರವಿದೆ. ಪೂರ್ವ–ಪಶ್ಚಿಮ ಪಾರ್ಶ್ವದ ನಡುಭಾಗದಲ್ಲಿ ಸಭಾಂಗಣಕ್ಕೆ ಪ್ರವೇಶದ್ವಾರವಿದೆ. ಇದನ್ನು ನಾಟ್ಯಶಾಲೆ ಎಂದು ಗುತುತಿಸಲಾಗಿದೆ. ಇದರ ಪೂರ್ವ ಭಾಗದಲ್ಲಿರುವ ಕಟ್ಟಡ ಪೂರ್ವ–ಪಶ್ಚಿಮವಾಗಿ 42.8ಮೀ ಮತ್ತು ದಕ್ಷಿಣೋತ್ತರವಾಗಿ 15.55ಮೀ ವಿಸ್ತೀರ್ಣವಿದೆ. ಇದನ್ನು ದಾಸ್ತಾನು ಮಳಿಗೆ ಎಂದು ಗುರುತಿಸಿದೆ. ಇವೆರಡೂ ವಿಭಿನ್ನರಚನೆಗಳಾಗಿದ್ದು, ಇವನ್ನು ಪೂರ್ವ–ಪಶ್ಚಿಮವಾಗಿ ಸಾಗುವ ಪಥ ಪ್ರತ್ಯೇಕಿಸುತ್ತದೆ. ದೇಗುಲ ವಾಸ್ತುವಿನ ಲಕ್ಷಣಗಳನ್ನು ಒಳಗೊಂಡಂತಿರುವ ಈ ನಿರ್ಮಿತಿಗೆ ಎಂಬತ್ತು ಕುಳ್ಳಗಿನ ಸ್ತಂಭಗಳಿವೆ. ಇವು ವಿವಿಧ ಎತ್ತರಗಳಲಿವೆ. ವಿವಿಧ ವಸ್ತುಗಳನ್ನು ದಾಸ್ತಾನು ಮಾಡಲು ಹಾಕಿದ ಹಲಗೆಗಳಿಗೆ ಈ ರಚನೆಯ ಕಂಬಗಳು ಆಧಾರವಾಗಿದ್ದವು. ಇದಕ್ಕೆ ನಾಡಹೆಂಚಿನ ಚಾವಣಿ ಇದ್ದಿತು.

ಕೋಟೆ ಬಾಗಿಲು ಮತ್ತು ಶ್ರೋತೃ ಸಭಾಂಗಣದ ನಡುವೆ ಸುಂದರವಾಗಿ ರಚಿಸಿದ ಪಥವಿದ್ದಿತು. ಕೆಂಪುಮಣ್ಣನ್ನು ತುಂಬಿ ದಮ್ಮಸು ಮಾಡಲಾಗಿದೆ. ಇದರ ಎರಡೂ ಪಾರ್ಶ್ವಗಳಲ್ಲಿ, ನಿಯತದೂರದಲ್ಲಿ ರಕ್ಷಕರಿಗಾಗಿ ಗೂಡುಗಳಿದ್ದವು. ಈ ಪಥದ ದಕ್ಷಿಣ ದ್ವಾರದ ಸಮೀಪ ಪಾಳು ರಚನೆಯೊಂದು ಪತ್ತೆಯಾಯಿತು. 12.25ಮೀ ಪ್ರದೇಶವನ್ನು ಒಳಗೊಂಡಿರುವ ಇದು ಸಾಮುದಾಯಿಕ ಪಾಕಶಾಲೆ ಎಂದು ಗುರುತಿಸಬಹುದು. ಏಕೆಂದರೆ ಜಗಲಿಗಳು, ದೊಡ್ಡ ಪಾತ್ರೆಗಳನ್ನು ಇರಿಸಲು ಮಾಡಿರುವ ವ್ಯವಸ್ಥೆ, ಒಡೆದ ಒಲೆಗಳು ಕಟ್ಟಿದ ಅಟ್ಟಣಿಗೆಗಳು, ರುಬ್ಬುಗಲ್ಲು, ಪಾತ್ರೆ ತೊಳೆಯಲು ಸ್ಥಳ ಇದ್ದು, ಪಶ್ಚಿಮದಲ್ಲಿ ಹೆಚ್ಚು ಎತ್ತರದಲ್ಲಿದ್ದ ಹಜಾರಕ್ಕೆ ಪಾಕಶಾಲೆಯನ್ನು ಜೋಡಿಸಲಾಗಿತ್ತು. ಉತ್ಖನನದಿಂದ ಬೆಳಕಿಗೆ ಬಂದ ಇತರ ಕಟ್ಟಡಗಳು ಪ್ರಮುಖವೆಂದು ತೋರದಿದ್ದರೂ ಪ್ರಾಂತಪಾಲರ ಸೇವಕವರ್ಗದ ನಿವಾಸಗಳಾಗಿದ್ದಿರ ಬಹುದು. ಇವು ಸುಸ್ಥಿತಿಯಲ್ಲಿಲ್ಲ. ಎಲ್ಲ ಕಟ್ಟಡಗಳಿಗೆ ಜಂಬಿಟ್ಟಿಗೆಯನ್ನು ಬಳಸಿದೆ.

ಮಧ್ಯಕಾಲೀನ ಅವಧಿಯ ಮಣ್ಪಾತ್ರೆಗಳು ಇಲ್ಲಿ ದೊರೆತಿವೆ. ಅಲ್ಪ ಪ್ರಮಾಣದಲ್ಲಿ ಚೀನಿ ಪಾತ್ರೆಗಳು ದೊರೆತಿರುವುದು ಗಮನಾರ್ಹ. ಇವುಗಳ ಜೊತೆಗೆ ಅಕ್ಕಸಾಲಿಗರು ಬಳಸುವ ಚಿಕ್ಕ ಸುತ್ತಿಗೆ, ಸುಟ್ಟಮಣ್ಣಿನ ಕಿರು ಶಿವಲಿಂಗಗಳು, ಪ್ರಶಸ್ತ ಶಿಲೆಯ ಮಣಿ ಮತ್ತು ಬೇರೆ ಬೇರೆ ಸಾಮಗ್ರಿಗಳಿಂದ ತಯಾರಿಸಿದ ಬಳೆಗಳು, ಸುಟ್ಟಮಣ್ಣಿನ ಬೃಹತ್ ಮಣಿಗಳು ಇವನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಪ್ರಾಣಿಗಳ ಅಲಂಕರಣಕ್ಕಾಗಿ ಬಳಕೆಯಾಗಿದ್ದಿರ ಬಹುದು. ಶಿಲಾಪಾತ್ರೆಗಳ ತುಣುಕುಗಳು, ಬೇರೆ ಬೇರೆ ಪ್ರಮಾಣದ ಸುಗಂಧದಾನಿಗಳು, ನಳಿಗೆ ಪಾತ್ರೆಗಳು ಮುಂತಾದವು ಇತರ ಪ್ರಾಚೀನವಸ್ತು ವಿಶೇಷಗಳು. (ಬಿ.ಎನ್.)

**ಬಾಲಚಂದ್ರಾಕೃತಿಯ ಭೂಭಾಗ:** ಮೆಡಿಟರೇನಿಯನ್ ಸಮುದ್ರದ ಪೂರ್ವ ತೀರದಿಂದ ಈಶಾನ್ಯದಲ್ಲಿರುವ ಸಿರಿಯದ ಮರುಭೂಮಿ–ಜಜೀರಾ–ಮೆಸಪೊಟೇಮಿಯದ ಮೂಲಕ ಪೂರ್ವದಲ್ಲಿರುವ ಪರ್ಷಿಯನ್ ಕೊಲ್ಲಿಯವರೆಗೆ ಕಮಾನಿನಾಕಾರದಲ್ಲಿ ಚಾಚಿರುವ ಫಲವತ್ತಾದ ಭೂಭಾಗ. ಇದರ ಭೌಗೋಳಿಕ ಆಕಾರದ ಮೇಲೆ ಫರ್ಟೈಲ್ ಕ್ರೆಸೆಂಟ್ ಎಂದು ಕರೆಯಲಾಗಿದೆ. ಹೀಗೆ ಕರೆದವರು ಶಿಕಾಗೊ ವಿಶ್ವವಿದ್ಯಾಲಯದ ಜೇಮ್ಸ್ ಹೆನ್ರಿ ಬ್ರೆಸ್ಟೆಡ್. ಸು. 4,00,000–5,00,000ಚ.ಕಿಮೀ ವಿಸ್ತೀರ್ಣದ ಈ ಪ್ರದೇಶ ಇಸ್ರೇಲ್, ಗಾಜಾ ಪಟ್ಟಿ, ಲೆಬನನ್ ದೇಶಗಳನ್ನೂ ಜೋರ್ಡಾನ್, ಸಿರಿಯ, ಇರಾಕ್, ಆಗ್ನೇಯ ಟರ್ಕಿ ಮತ್ತು ನೈರುತ್ಯ ಇರಾನಿನ ಕೆಲಭಾಗಗಳನ್ನೂ ಒಳಗೊಳ್ಳುತ್ತದೆ. ಇಂದು ಮಧ್ಯಪ್ರಾಚ್ಯದ ಭಾಗವಾಗಿರುವ ಈ ಪ್ರದೇಶದ ವ್ಯಾಪ್ತಿಯಲ್ಲಿ ಹಿಂದೆ ಲೆವಂಟ್ (ಟರ್ಕಿ ಮತ್ತು ನೆರೆಹೊರೆಯ ದೇಶ), ಪ್ರಾಚೀನ ಮೆಸಪೊಟೇಮಿಯ ಮತ್ತು ಪ್ರಾಚೀನ ಈಜಿಪ್ಟ್ ದೇಶಗಳು ಸೇರಿದ್ದವು. ಈ ಪ್ರದೇಶ ಮಹತ್ತ್ವದ ಪುರಾತತ್ತ್ವ ಅವಶೇಷಗಳಿಂದ ಕೂಡಿದೆ. ಆದಿಮಾನವ ಮತ್ತು ಆಧುನಿಕ ಮಾನವರ (ಹೋಮೊ ಸೇಪಿಯನ್ಸ್) ಪಳೆಯುಳಿಕೆಗಳು (ಉದಾ: ಇಸ್ರೇಲಿನ ಕೆಬರ ಗುಹೆ),

ಆದಿ ಹಿಮಯುಗದ ಬೇಟೆ–ಸಸ್ಯ ಸಂಗ್ರಹಣೆಯನ್ನಾಧರಿಸಿದ ಸಮುದಾಯಗಳ ವಸತಿ ಅವಶೇಷಗಳು ಮತ್ತು ಅಂತ್ಯ ಹಳೆಶಿಲಾಯುಗೋತ್ತರ ಸಂಸ್ಕೃತಿ ಯಾದ ನಟುಫಿಯನ್ ವರ್ಗಕ್ಕೆ ಸೇರುವ ಅರೆ–ವಲಸೆ ನೆಲೆಗಳು ಇಲ್ಲಿ ಅನೇಕ ಸಂಖ್ಯೆಯಲ್ಲಿವೆ. ಎಲ್ಲಕ್ಕಿಂತ ಮಿಗಿಲಾಗಿ, ಕೃಷಿಯ ಆರಂಭಿಕ ಹಂತದ ಪುರಾತತ್ತ್ವ ದಾಖಲೆಗಳು ಇಲ್ಲಿದ್ದು ಈ ಪ್ರದೇಶದ ಗರಿಮೆಯನ್ನು ಹೆಚ್ಚಿಸಿವೆ. ಇದುವರೆಗೆ ಅತ್ಯಂತ ಪ್ರಾಚೀನವೆಂದು ಪರಿಗಣಿಸಲಾದ ಕೃಷಿಕ ವಸತಿ ನೆಲೆಗಳು ಇರುವುದು ಜೋರ್ಡನ್ ಪ್ರದೇಶ ಮತ್ತು ಯೂಫ್ರಟೀಸ್ ನದಿಯ ಮೇಲಿನ ಬಯಲುಗಳಲ್ಲಿ. ಮಣ್ಪಾತ್ರೆರಹಿತ ನವಶಿಲಾಯುಗ ಹಂತಕ್ಕೆ ಸೇರುವ ಈ ನೆಲೆಗಳಲ್ಲಿ ಪ್ರ.ಶ.ಪೂ.9000 ವರ್ಷಗಳಷ್ಟು ಹಿಂದೆಯೇ ಕೃಷಿ ಆರಂಭವಾಯಿತು. ಜೆರಿಕೊದಲ್ಲಿ ಯ ವಸತಿ ನೆಲೆ ಒಂದು ಉತ್ತಮ ಉದಾಹರಣೆ. ತರುವಾಯದ ಕಂಚಿನ ಯುಗದಲ್ಲಿ ಇಲ್ಲಿ ಮತ್ತು ಮೆಸಪೊಟೇಮಿಯದಲ್ಲಿ ಸಂಕೀರ್ಣ ಸಮಾಜಗಳು ಎಲ್ಲೆಡೆಗಿಂತ ಮೊದಲೇ ಬೆಳೆದವು. ಬರೆವಣಿಗೆಯೂ ಇಲ್ಲಿ ಬಹುಬೇಗ ರೂಢಿಗೆ ಬಂತು. ಈ ಎಲ್ಲ ಕಾರಣಗಳಿಂದಾಗಿ ಈ ಪ್ರದೇಶವನ್ನು ನಾಗರಿಕತೆಯ ತೊಟ್ಟಿಲು ಎಂದು ಕರೆಯುವುದಿದೆ.

ನದಿಯ ನೀರು, ಫಲವತ್ತಾದ ಬಯಲು, ಉತ್ತಮ ಹವಾಮಾನ, ಪ್ರಾದೇಶಿಕ ವೈವಿಧ್ಯ ಇವೇ ಮೊದಲಾದ ಅಂಶಗಳು ಈ ಪ್ರದೇಶದಲ್ಲಿ ಕೃಷಿಯ ಉಗಮಕ್ಕೆ ಪೂರಕವಾದವು. ಇಲ್ಲಿಯ ಹವಾಮಾನ ವಾರ್ಷಿಕ ಬೆಳೆಯಾಗುವ ಖಾದ್ಯ ಸಸ್ಯಗಳಿಗೆ ಅನುಕೂಲಕರವಾಗಿದ್ದರೆ ಭೂವೈವಿಧ್ಯ ಕೃಷಿಯ ಪ್ರಯೋಗಗಳನ್ನು ನಡೆಸಲು ಒಂದು ಉತ್ತಮ ಭೂಮಿಕೆಯನ್ನು ಒದಗಿಸಿತು. ಎಲ್ಲಕ್ಕಿಂತ ಮುಖ್ಯವಾಗಿ ಗೋದಿ, ಜವೆ, ಕಡಲೆ, ಬಟಾಣಿ, ಕೆಂಪುತೊಗರಿ, ಕಹಿಕಾಳಿನ ಗಿಡ (ಬಿಟ್ಟರ್ ವೆಟ್ಚ್) ಮತ್ತು ಅಗಸೆಯ ವನ್ಯ ಪ್ರಜಾತಿಗಳು ಈ ಪ್ರದೇಶದಲ್ಲಿ ಬೆಳೆಯುತ್ತಿದ್ದುದರಿಂದ ಇವನ್ನು ಕೃಷಿಗೆ ಒಗ್ಗಿಸಿಕೊಳ್ಳುವುದು ಸಾಧ್ಯವಾಯಿತು. ಅಂತೆಯೇ ವನ್ಯಜಾತಿಯ ದನ, ಕುರಿ, ಮೇಕೆ ಮತ್ತು ಹಂದಿಗಳು ಇಲ್ಲಿದ್ದುದರಿಂದ ನವಶಿಲಾಯುಗದಲ್ಲಿ ಇವನ್ನು ಪಳಗಿಸಿ ಸಾಕಿಕೊಳ್ಳುವುದು ಸಾಧ್ಯವಾಯಿತು. (ವಿ.ಎಸ್.)

**ಬಾಲಕೃಷ್ಣ ಥಾಪರ್:** 1921–95. ಭಾರತದ ಹೆಸರಾಂತ ಪುರಾತತ್ತ್ವಜ್ಞ. ಜನ್ಮಸ್ಥಳ ಲೂದಿಯಾನ (ಪಂಜಾಬ್ ಪ್ರಾಂತ). ಇಲ್ಲಿನ ಸರ್ಕಾರಿ ಕಾಲೇಜಿನಲ್ಲಿ ಓದಿ ಪದವಿಯನ್ನೂ ಲಾಹೋರಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಇತಿಹಾಸದಲ್ಲಿ ಎಂ.ಎ. (1947) ಪದವಿಯನ್ನೂ ಪಡೆದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ತಕ್ಷಶಿಲೆ ಉತ್ಖನನದಲ್ಲಿ ಸ್ಕೂಲ್ ಆಫ್ ಫೀಲ್ಡ್ ಆರ್ಕಿಯಾಲಜಿಯಿಂದ (ಈಗಿನ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿ) ಉತ್ತಮ ತರಬೇತಿ ಪಡೆದು 1947ರಲ್ಲಿ ಇದೇ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ತಮ್ಮ ಸತತ ಆದರ್ಶಪ್ರಾಯ ಪರಿಶ್ರಮದಿಂದ ಹಂತಹಂತವಾಗಿ ಮೇಲೇರಿ ಇದೇ ಇಲಾಖೆಯ ಮಹಾನಿರ್ದೇಶಕರಾದರು (1977). ನಿವೃತ್ತಿಯ ಅನಂತರ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಕಿಯಲಾಜಿಕಲ್ ಕಲ್ಚರಲ್ ಹೆರಿಟೇಜ್ ಸಂಸ್ಥೆಯ ಕಾರ್ಯದರ್ಶಿ; ಸೆಂಟರ್ ಫಾರ್ ಕಲ್ಚರಲ್ ರಿಸೋರ್ಸಸ್ ಅಂಡ್ ಟ್ರೇನಿಂಗ್ ಇದರ ಕಾರ್ಯಾಧ್ಯಕ್ಷ (1982–95); ಇಂಡಿಯನ್ ಆರ್ಕಿಯಾಲಾಜಿಕಲ್ ಸೊಸೈಟಿಯ ಸಾಮಾನ್ಯ ಕಾರ್ಯದರ್ಶಿ ಮತ್ತು ಈ ಸೊಸೈಟಿಯ ಪುರಾತತ್ತ್ವ ವಾರ್ಷಿಕ ನಿಯತಕಾಲಿಕೆಯ ಸಂಪಾದಕ; ಇಂಟರ್ ನ್ಯಾಷನಲ್ ಕೌನ್ಸಿಲ್ ಆಫ್ ಮ್ಯೂಸಿಯಮ್ಸ್‌ನ ಕಾರ್ಯಾಂಗದ ಉಪಾಧ್ಯಕ್ಷ; ಪರ್ಮನೆಂಟ್ ಕೌನ್ಸಿಲ್ ಕಾಂಗ್ರೆಸ್ ಇಂಟರ್ ನ್ಯಾಷನಲ್ ದ ಸೈನ್ಸಸ್ ಪ್ರಿ ಹಿಸ್ಟಾರಿಕ್ಸ್ ಅಂಡ್ ಪ್ರೋಟೊ ಹಿಸ್ಟಾರಿಕ್ಸ್ ಸದಸ್ಯರಾಗಿ ಕಾರ್ಯನಿರ್ವಹಿಸಿದರು. 1994ರಲ್ಲಿ ದೆಹಲಿಯಲ್ಲಿ ನಡೆದ ವಿಶ್ವ ಪುರಾತತ್ತ್ವ ಸಮ್ಮೇಳನ ಸಮಿತಿಯ ಉಪಾಧ್ಯಕ್ಷರಾಗಿದ್ದರು.

1959ರಲ್ಲಿ ಜರ್ಮನಿಯ ಹೈಡಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಪಶ್ಚಿಮ ಏಷ್ಯ ಪುರಾತತ್ತ್ವದ ವಿಶೇಷ ಅಧ್ಯಯನಕ್ಕಾಗಿ ಅಲೆಗ್ಸಾಂಡರ್ ಹ್ಯೂಮ್‌ಬೋಲ್ಟ್ ಫೆಲೋಷಿಪ್ ಪಡೆದರು. 1981ರಲ್ಲಿ ಜವಾಹರಲಾಲ್ ನೆಹರು ಫೆಲೋಷಿಪ್ ದೊರಕಿತು. ಹಸ್ತಿನಾಪುರ, ಶಿಶುಪಾಲಗಡ, ರೋಪರ್, ಕೌಶಾಂಬಿ, ಪುರಾಣಖಿಲಾ, ಕಾಲಿಬಂಗನ್ ಮೊದಲಾದ ಮಹತ್ತ್ವದ ಪುರಾತತ್ತ್ವ ನೆಲೆಗಳ ಉತ್ಖನನಗಳಲ್ಲಿ ಸಹಭಾಗಿಯಾಗಿದ್ದರು. ಪೋರ್ಕಳಂ (1948), ಸೋಮನಾಥ (1949–50), ಮಸ್ಕಿ (1953–54), ಪ್ರಕಾಶ್ (1954–55), ಕುಚೈ (1961–62), ಜುನಾಪಾನಿ (1961–62)–ಈ ನೆಲೆಗಳ ಉತ್ಖನನಗಳನ್ನು ಸ್ವತಂತ್ರವಾಗಿ ಮಾಡಿ ಮೊದಲಿಗೆ ಮೂರು ಉತ್ಖನನಗಳ ಪೂರ್ಣ ವರದಿಗಳನ್ನು ಇಲಾಖೆಯ ಏನ್ಷಿಯಂಟ್ ಇಂಡಿಯ ಸಂಪುಟಗಳಲ್ಲಿ ಮತ್ತು ಹಲವಾರು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. 1975ರಲ್ಲಿ ಆಫ್ಘಾನಿಸ್ತಾನದ ಫರಾ ಕಣಿವೆಯ ಬೇಗ್ರಾಂ ಸ್ಥಳಾನ್ವೇಷಣೆಯ ಯೋಜನೆ ತಂಡದ ನಾಯಕರಾಗಿ ಕೆಲಸ ನಿರ್ವಹಿಸಿದರು. ನವಶಿಲಾಯುಗ, ಹರಪ್ಪ ಮತ್ತು ದಕ್ಷಿಣ ಭಾರತದ ತಾಮ್ರ–ಶಿಲಾ ಮತ್ತು ಬೃಹತ್ ಶಿಲಾ ಸಂಸ್ಕೃತಿಗಳ ಕ್ಷೇತ್ರಗಳಲ್ಲಿ ಇವರಿಗೆ ವಿಶೇಷ ಪರಿಶ್ರಮವಿತ್ತು. ಅಚ್ಚುಕಟ್ಟಾದ ಮತ್ತು ಕ್ರಮಬದ್ಧವಾದ ಇವರ ಉತ್ಖನನ ವರದಿಗಳು ಪುರಾತತ್ತ್ವ ಯುವ ಸಂಶೋಧಕರಿಗೆ ಅತ್ಯುತ್ತಮ ಮಾದರಿಗಳೆಂದು ಹೆಸರಾಗಿವೆ. 1993ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. (ಎ.ಎಸ್.)

**ಬಾಲಾಥಲ್:** ರಾಜಸ್ತಾನ ರಾಜ್ಯದ ಉದಯಪುರ ಜಿಲ್ಲೆಯಲ್ಲಿರುವ ತಾಮ್ರ–ಶಿಲಾಯುಗದ ನೆಲೆ. ಇದು 7ಮೀ ಎತ್ತರದ ದಿಬ್ಬವಾಗಿದ್ದು ಸು. ಐದು ಎಕರೆ ಪ್ರದೇಶದಲ್ಲಿ ಹರಡಿದೆ. ವಿ.ಎನ್.ಮಿಶ್ರರಿಂದ ಬೆಳಕಿಗೆ ಬಂದ ಈ ನೆಲೆಯಲ್ಲಿ ಪುಣೆಯ ಡೆಕ್ಕನ್ ಕಾಲೇಜು ಉದಯಪುರದ ರಾಜಸ್ತಾನ ವಿದ್ಯಾಪೀಠದ ಸಹಯೋಗದಲ್ಲಿ 1994–2000ರವರೆಗೆ ಉತ್ಖನನ ನಡೆಸಿತು. ಈ ನೆಲೆ ರಾಜಸ್ತಾನದ ಮೇವಾರ್ ಪ್ರಾಂತದ ಅಹಾರ್ ಸಂಸ್ಕೃತಿಗೆ ಒಂದು ಉತ್ತಮ ನಿದರ್ಶನ. ಇದಕ್ಕೆ ಸಮಕಾಲೀನವಾದ, ಉತ್ಖನನಗೊಂಡ ಇತರ ನೆಲೆಗಳೆಂದರೆ ಅಹಾರ್, ಗಿಲುಂಡ್ ಮತ್ತು ಓಜಿಯಾನ.

ಇಲ್ಲಿ ಎರಡು ಸಾಂಸ್ಕೃತಿಕ ಹಂತಗಳಿವೆ. ಇವು ತಾಮ್ರ–ಶಿಲಾಯುಗ ಮತ್ತು ಆದಿಚಾರಿತ್ರಿಕ ಕಾಲ. ಈ ಹಂತಗಳ ನಡುವೆ ಅವಶೇಷರಹಿತ ಸ್ತರವಿದೆ.

ತಾಮ್ರ–ಶಿಲಾಯುಗ ಹಂತದಲ್ಲಿ ಕಟ್ಟಡಾವಶೇಷ ಮತ್ತು ವಸ್ತುಸಂಸ್ಕೃತಿಯ ಆಧಾರದ ಮೇಲೆ ಅನುಕ್ರಮವಾಗಿ ಎರಡು ಉಪಹಂತಗಳನ್ನು ಗುರುತಿಸಲಾಗಿದೆ. ಮೊದಲ ಉಪಹಂತದ (ಫೇಸ್ ಎ) ಮನೆಗಳು ಚಿಕ್ಕದಾಗಿ ಸರಳವಾಗಿದ್ದವು. ಇವು ಸಾಮಾನ್ಯವಾಗಿ ವರ್ತುಲ ವಿನ್ಯಾಸದಲ್ಲಿದ್ದವು. ಇವುಗಳಿಗೆ ಮಣ್ಣು ಮೆತ್ತಿದ ಬೊಂಬಿನ ಗೋಡೆಗಳಿದ್ದುವು ಎಂಬುದಕ್ಕೆ ಸುಟ್ಟ ಮಣ್ಣಿನಗೋಡೆಯ ಭಾಗಗಳು ಮತ್ತು ಒಣಹುಲ್ಲುಕಡ್ಡಿ ಅಥವಾ ಸುಣ್ಣಮಿಶ್ರಿತ ಮಣ್ಣಿನ ಲೇಪದ ಗಟ್ಟಿನೆಲಗಳು ಪುಷ್ಟೀಕರಿಸುತ್ತವೆ. ನೆಲಗಳಲ್ಲಿ ಆಧಾರ ಕಂಬಗಳಿಗಾಗಿ ಮಾಡಿದ ಗುಳಿಗಳಿವೆ. ಈ ಹಂತದಲ್ಲಿ ಕಲ್ಲು ಮತ್ತು ಮಣ್ಣಿನ ಇಟ್ಟಿಗೆಗಳ ಮನೆಗಳು ವಿರಳ.



ಸಿದ್ಧಾಸನದಲ್ಲಿರುವ ಸಮಾಧಿ

ಮಣ್ಪಾತ್ರೆಗಳಲ್ಲಿ ಬಿಳಿ ಚಿತ್ರವುಳ್ಳ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ದಪ್ಪದ ಕೆಂಪುಪಾತ್ರೆ ಮತ್ತು ಬೂದುಬಣ್ಣದ ಪಾತ್ರೆ ಮುಖ್ಯವಾದುವು. ಹೊರ ಮತ್ತು ಒಳಮೇಲ್ಮೈಯಲ್ಲಿ ಬಿಳಿ ಬಣ್ಣದಲ್ಲಿ ರೇಖಾವಿನ್ಯಾಸಗಳಿಂದ ಅಲಂಕೃತವಾಗಿದ್ದ ಕಪ್ಪು–ಕೆಂಪು ದ್ವಿವರ್ಣ ಬಟ್ಟಲುಗಳು ವಿಶೇಷವಾಗಿವೆ. ಚಿಕ್ಕ ಮತ್ತು ಅಗಲ ಬಾಯಿಯ ಹಂಡೆಯಾಕಾರದ ದಪ್ಪ ಕೆಂಪು ಜಾಡಿಗಳು ಶೇಖರಣೆಗೆ ಉಪಯುಕ್ತವಾದುವು. ಈ ಪಾತ್ರೆಗಳ ಕಂಠಕ್ಕೆ ಮತ್ತು ಭುಜದ ಮೇಲ್ಮೈಯಲ್ಲಿ ಹೊಳಪುಳ್ಳ ಕೆಂಪುಮಣ್ಣಿನ ಲೇಪವಿದೆ. ಬೂದುಬಣ್ಣದ ಪಾತ್ರೆಗಳ ವರ್ಗದಲ್ಲಿ ಅಗಲ ಬಾಯಿಯ ಸಣ್ಣ ಪಾತ್ರೆಗಳು, ತವ ಮತ್ತು ಮುಚ್ಚಳಗಳು ಹೆಚ್ಚಾಗಿವೆ. ಈ ಪಾತ್ರೆಗಳು ದೊರಕು ಮಣ್ಣಿನಿಂದ ಮಾಡಲ್ಪಟ್ಟಿವೆ. ಇವು ಹೆಚ್ಚಿನ ತಾಪದಲ್ಲಿ ಒಂದೇ ಸಮನಾಗಿ ಸುಟ್ಟವಲ್ಲ. ಈ ಎರಡೂ ವರ್ಗಗಳ ಪಾತ್ರೆಗಳ ಹೊರಮೈಯ ಮಧ್ಯಭಾಗದಲ್ಲಿ ವಿವಿಧ ಗೀರುವಿನ್ಯಾಸಗಳಿಂದ ಮತ್ತು ಮೆತ್ತಿದ ಮಣ್ಣಿನ ತೆಳುಪಟ್ಟಿಗಳಿಂದ ಅಲಂಕೃತವಾಗಿದ್ದುವು. ಬೂದುಬಣ್ಣದ ಪಾತ್ರೆಗಳ ತಳವನ್ನು ಮಣ್ಣು–ಮರಳು–ಬೂದಿಯ ಮಿಶ್ರಣದಿಂದ ದೊರಗು ಮಾಡಲಾಗಿದ್ದು ಕೆಲವೊಂದರಲ್ಲಿ ಮಸಿಯ ಚಿಹ್ನೆಯಿದೆ. ಈ ವರ್ಗದ ಪಾತ್ರೆಗಳು ಅಡುಗೆ ಮಾಡಲು ಬಳಕೆಯಾಗುತ್ತಿದ್ದವು. ಇವಲ್ಲದೆ ಮಾಸಲು ಕಂದುಬಣ್ಣ ಅಥವಾ ಕೆನೆಬಣ್ಣದ ಲೇಪವುಳ್ಳ ಪಾತ್ರೆ ಮತ್ತು ರಿಸರ್ವ್ ಸ್ಲಿಪ್‌ವೇರ್ ಪಾತ್ರೆಗಳು ಈ ಹಂತದಲ್ಲಿ ವಿರಳವಾಗಿ ಕಂಡುಬರುತ್ತವೆ.

ಎರಡನೆಯ ಉಪಹಂತದಲ್ಲಿ (ಫೇಸ್ ಬಿ) ಕಟ್ಟಡಗಳ ರಚನಾ ವಿಧಾನದಲ್ಲಿ ಬದಲಾವಣೆಗಳೂ ವಸ್ತು ಸಂಸ್ಕೃತಿಯಲ್ಲಿ ಹೊಸತನವೂ ಕಂಡುಬರುತ್ತದೆ. ಗ್ರಾನೈಟ್, ಮಣ್ಣು ಮತ್ತು ಹಸಿಇಟ್ಟಿಗೆಗಳನ್ನು ಈ ಹಂತದ ಕಟ್ಟಡಗಳಲ್ಲಿ ಪ್ರಧಾನವಾಗಿ ಬಳಸಲಾಗಿದೆ. ಮೂರು ವಸತಿ ಸಂಕೀರ್ಣಗಳು, ಸುತ್ತಲೂ ಗೋಡೆಯಿಂದಾವೃತವಾಗಿದ್ದ ಒಂದು ಆವರಣ, ಸಣ್ಣ ಅಥವಾ ಹಲವು ಕೊಠಡಿಗಳುಳ್ಳ ಮನೆಗಳ ಅವಶೇಷಗಳನ್ನು ಹೊರತೆಗೆಯಲಾಗಿದೆ. ವಸತಿ ಸಂಕೀರ್ಣಗಳ ನಡುವೆ 2ಮೀ ಅಗಲದ ರಸ್ತೆ, 1.1ಮೀ ಅಗಲದ ಕಾಲುದಾರಿಗಳು ಹಾದುಹೋಗಿವೆ. ಇವುಗಳೊಳಗಿನ ಕೊಠಡಿಗಳು ಕಲ್ಲು ಮತ್ತು ಮಣ್ಣಿನ ಇಟ್ಟಿಗೆಗಳಿಂದ ಕಟ್ಟಲಾಗಿದ್ದು ಸಾಕಷ್ಟು ವಿಶಾಲವಾಗಿವೆ. ಒಂದು ಸಂಕೀರ್ಣದಲ್ಲಿ 11 ಕೋಣೆಗಳಿವೆ. ವಸತಿ ರಚನಾಕ್ರಮದ ಆರಂಭದ ಲಕ್ಷಣಗಳು ಇಲ್ಲಿ ಸೂಚಿತವಾಗಿದೆ.

ಇಲ್ಲಿನ ಮಹತ್ತ್ವಪೂರ್ಣ ಅನ್ವೇಷಣೆಯೆಂದರೆ ಸುತ್ತಲೂ ಎತ್ತರದ ಗೋಡೆಯಿಂದ ಆವೃತವಾದ ಆಯತಾಕಾರದ (37ಮೀX27ಮೀ) ಆವರಣ. ಇದು ವಸತಿಯ ಮಧ್ಯಭಾಗದಲ್ಲಿದ್ದು ಸು. 550ಚ.ಮೀ ಜಾಗದಲ್ಲಿ ಆವರಿಸಿದೆ. ಇದರ ಗೋಡೆಯ ಅಗಲ 5–6.5ಮೀ

ಮತ್ತು ಎತ್ತರ 3.5–4ಮೀ. ಎರಡು ಕಲ್ಲು ಗೋಡೆಗಳ ನಡುವೆ ಮಣ್ಣು ಮತ್ತು ಇಟ್ಟಿಗೆಚೂರುಗಳನ್ನು ತುಂಬಿ ಕಟ್ಟಿದ ರಕ್ಷಣಾಗೋಡೆಯಿದು. ಗೋಡೆಯ ಹೊರಭಾಗದಲ್ಲಿ ಮೂರು ಕೋನಗಳಲ್ಲಿ ಬುರುಜುಗಳಿವೆ. ಈ ಕಟ್ಟಡದ ನಿರ್ದಿಷ್ಟ ಬಳಕೆಯನ್ನು ತಿಳಿಯಲು ಯಾವುದೇ ಆಧಾರಗಳಿಲ್ಲ. ಉತ್ಖನನಕಾರರ ಪ್ರಕಾರ ಈ ಕಟ್ಟಡವನ್ನು ತಾಮ್ರ–ಶಿಲಾಯುಗದ ಅಂತ್ಯ ಭಾಗದಲ್ಲಿ ಯಾವುದೋ ಕಾರಣದಿಂದ ತೊರೆದಿರಬೇಕು; ಅನಂತರ ಈ ಆವರಣವನ್ನು ಸೆಗಣಿಯ ಶೇಖರಣೆಗಾಗಿ ಬಳಸಿರಬೇಕು. ಆವರಣದೊಳಗಿನ ಮೇಲ್ಪದರಗಳಲ್ಲಿ (ಸು.2–2.5ಮೀ ದಪ್ಪ) ಸುಟ್ಟ ಸೆಗಣಿ, ಸುಟ್ಟಮಣ್ಣು ಮತ್ತು ಬೂದಿಯಿರುವುದು ಈ ಅಭಿಪ್ರಾಯಕ್ಕೆ ಕಾರಣ.

ಎರಡೂ ಉಪಹಂತಗಳ ಮನೆಗಳಲ್ಲಿಯೂ ಲಾಳಾಕೃತಿಯ ಮಣ್ಣಿನ ಒಲೆದಂಡೆಗಳು, ಅರೆಯುವ ಕಲ್ಲುಗಳು, ವರ್ತುಲ ಮಣ್ಣಿನ ದಂಡೆಗಳು, ಧಾನ್ಯದ ಕಣಜಗಳ ದಂಡೆಗಳು, ಅಗ್ಗಿಷ್ಟಿಕೆ ಮುಂತಾದ ಗೃಹೋಪಯೋಗಿ ಸಾಧನಗಳಿವೆ. ಮೂರು ಒಲೆಗಳುಳ್ಳ ದಂಡೆಗಳು ಅತಿ ಸಾಮಾನ್ಯ.

ತಾಮ್ರ–ಶಿಲಾಯುಗ ಕಟ್ಟಡ ಅವಶೇಷ

ಎರಡನೆಯ ಉಪಹಂತದ ಮತ್ತೊಂದು ಅನನ್ಯ ಶೋಧನೆಯೆಂದರೆ ಮಡಕೆಯ ಆವಿಗೆಯ ಅವಶೇಷಗಳು. ಎರಡು ಆವಿಗೆಗಳನ್ನು ಇಲ್ಲಿ ಪತ್ತೆಹಚ್ಚಲಾಗಿದೆ. ಇವುಗಳೊಳಗೆ ಅಲ್ಲೇ ಕುಸಿದು ಬಿರುಕುಬಿಟ್ಟ ಅಥವಾ ಒಡೆದ ಪಾತ್ರೆಗಳು ಸಿಕ್ಕಿವೆ. ಕೆಲವಷ್ಟು ಪಾತ್ರೆಗಳಾದರೂ ಸ್ಥಳೀಯವಾಗಿಯೇ ತಯಾರಾಗುತ್ತಿದ್ದುದಕ್ಕೆ ಇದು ಸಾಕ್ಷಿ. ಈ ಉಪಹಂತದ ಪಾತ್ರೆಗಳ ಗುಣಮಟ್ಟದಲ್ಲಿಯೂ ಸುಧಾರಣೆ ಕಂಡುಬರುತ್ತದೆ. ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಹಿಂದಿನ ಹಂತಕ್ಕಿಂತ ಉತ್ತಮವಾಗಿವೆ. ಅಲ್ಲದೆ, ಕೆಂಪು ಮತ್ತು ಬೂದುಬಣ್ಣದ ಪಾತ್ರೆಗಳ ಮೇಲಿನ ಗೀರು ರೇಖಾವಿನ್ಯಾಸಗಳಲ್ಲಿಯೂ ಹೆಚ್ಚಿನ ವೈವಿಧ್ಯ ಕಂಡುಬರುತ್ತದೆ. ಎರಡು ಹೊಸ ಬಗೆಯ ಮಣ್ಪಾತ್ರೆಗಳು–ತೆಳುವಾದ ಕೆಂಪು ಪಾತ್ರೆ ಮತ್ತು ಟ್ಯಾನ್‌ವೇರ್– ಮೊದಲ ಬಾರಿಗೆ ಇಲ್ಲಿ ಕಾಣಸಿಗುತ್ತವೆ. ಈ ಪಾತ್ರೆಗಳು ನಯವಾದ ಮಣ್ಣಿನಿಂದ ತಯಾರಾಗಿರುವುದಲ್ಲದೆ ಅತ್ಯಂತ ಹೊಳಪಿನ ಮೇಲ್ಮೈ ಲೇಪನ ಹೊಂದಿವೆ. ಹೆಚ್ಚಿನ ತಾಪದಲ್ಲಿ ಚೆನ್ನಾಗಿ ಸುಟ್ಟ ಈ ಪಾತ್ರೆಗಳನ್ನು ತಟ್ಟಿದಾಗ ಲೋಹದ ದನಿ ಕೇಳುತ್ತದೆ. ಗಟ್ಟಿಮುಟ್ಟಾದ ಟ್ಯಾನ್‌ವೇರ್‌ನಲ್ಲಿ ಕಂಡುಬರುವ ವಿಶಿಷ್ಟ ಆಕಾರವೆಂದರೆ ಕಾಲಿರುವ ತಟ್ಟೆ. ಟ್ಯಾನ್‌ವೇರ್‌ನ ಆಕಾರ ಮತ್ತು ರಚನೆ ಗುಜರಾತ್–ರಾಜಸ್ತಾನದ ಹರಪ್ಪ ಸಂಸ್ಕೃತಿಯ ವಸತಿಗಳ ಮಣ್ಪಾತ್ರೆಗಳನ್ನು ಹೋಲುತ್ತವೆ. ತೆಳುವಾದ ಕೆಂಪುಪಾತ್ರೆಗಳಲ್ಲಿ ಗೀರಿನ ತ್ರಿಕೋಣ ರೇಖಾಚಿತ್ರಗಳುಳ್ಳ ದುಂಡು ಬಟ್ಟಲುಗಳು ಮುಖ್ಯವಾಗಿ ಕಂಡುಬರುತ್ತವೆ. ರಿಸರ್ವ್ ಸ್ಲಿಪ್‌ವೇರ್‌ನ ಪ್ರಮಾಣ ಈ ಹಂತದಲ್ಲಿ ಹೆಚ್ಚುತ್ತದೆ. ಈ ಪಾತ್ರೆಗಳ ಮೇಲೆ ಮೊದಲು ತೆಳುಗೆಂಪು ಬಣ್ಣದ ಮಣ್ಣಿನ ಲೇಪವನ್ನು ಹಚ್ಚಲಾಗುತ್ತಿತ್ತು. ಇದು ಒಣಗಿದ ಮೇಲೆ ಕಪ್ಪು, ಮಾಸಲು ಕಂದುಬಣ್ಣ ಅಥವಾ ಕಡುಗೆಂಪು ಬಣ್ಣದ ದಪ್ಪ ಲೇಪನವನ್ನು ಮತ್ತೆ ಬಳಿಯಲಾಗುತ್ತಿತ್ತು. ಈ ಲೇಪ ಪೂರ್ತಿಯಾಗಿ ಒಣಗುವ ಮುಂಚೆ ಅದನ್ನು ಮೊನಚಾದ ಸಾಧನದಿಂದ ಕೆರೆಯುವುದರಿಂದ ಬಗೆಬಗೆಯ ವಿನ್ಯಾಸಗಳನ್ನು ಮೂಡಿಸಲಾಗುತ್ತಿತ್ತು. ಕೆರೆದು ತೆಗೆದ ಭಾಗಗಳಲ್ಲಿ ಒಳಗಿನ ತೆಳುಗೆಂಪು ಲೇಪ ಎದ್ದು ತೋರುತ್ತದೆ. ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಟ್ಯಾನ್‌ವೇರ್ ಮತ್ತು ತೆಳುವಾದ ಕೆಂಪುಪಾತ್ರೆಗಳು ಉತ್ಕೃಷ್ಟ ದರ್ಜೆಗೆ ಸೇರಿದವು; ಇವನ್ನು ಆಹಾರ–ಪಾನೀಯ ಸೇವನೆಗಾಗಿ ಮಾತ್ರ ಬಳಸಲಾಗುತ್ತಿತ್ತು.

ಕೆಳದರ್ಜೆಯ ಹಾಗೂ ಉತ್ಕೃಷ್ಟ ದರ್ಜೆಯ ಮಣ್ಪಾತ್ರೆಗಳ ಇರುವಿಕೆ, ಕಟ್ಟಡಗಳ ಗಾತ್ರ–ಆಕಾರ ಮತ್ತು ಗುಣಮಟ್ಟದಲ್ಲಿಯ ವ್ಯತ್ಯಾಸ, ವಸತಿ ರಚನಾಕ್ರಮದ ಲಕ್ಷಣಗಳು, ವಿಸ್ತಾರ ಗೋಡೆಯಿಂದ ಆವೃತವಾದ ಆವರಣ ಇವೆಲ್ಲವೂ ಇಲ್ಲಿಯ ತಾಮ್ರ–ಶಿಲಾಯುಗ ಸಮುದಾಯದಲ್ಲಿನ ವರ್ಗಭೇದದ ಸಂಕೇತಗಳಾಗಿವೆ. ಈ ಹಂತದ ತಂತ್ರಜ್ಞಾನ ತಾಮ್ರ ಮತ್ತು ಶಿಲೆಯ ಉಪಕರಣಗಳನ್ನು ಆಧರಿಸಿತ್ತು. ಚಪ್ಪಟೆ ಕೊಡಲಿಗಳು, ಉಳಿ, ಮಚ್ಚು, ಅಲಗುಗಳು ಎರಡೂ ಉಪಹಂತಗಳ ಸ್ತರಗಳಲ್ಲಿ ದೊರೆತಿವೆ. ಕಲ್ಲಿನ ನೀಳ ಅಲಗುಗಳು, ಸೂಕ್ಷ್ಮ ಶಿಲೋಪಕರಣಗಳು, ಮೂಳೆಯ ಉಪಕರಣಗಳು, ದುಂಡಾದ ಕವಣೆಕಲ್ಲುಗಳು, ಅರೆಯುವ ಸಾಧನಗಳು, ಸುತ್ತಿಗೆಕಲ್ಲುಗಳು ಅಧಿಕ ಸಂಖ್ಯೆಯಲ್ಲಿಲ್ಲ. ಎರಡನೆಯ ಉಪಹಂತದಲ್ಲಿ ಶಿಲೋಪಕರಣಗಳು ಇಲ್ಲವೆಂದೇ ಹೇಳಬಹುದು. ಸುಡಾವೆಮಣ್ಣಿನ ಆಕೃತಿಗಳು ಮುಖ್ಯವಾಗಿ ಸಣ್ಣ ಗೂಳಿಗಳು, ಅರೆಪ್ರಶಸ್ತ ಕಲ್ಲು (ಅಗೇಟ್ ಮತ್ತು ಮಂದಗೆಂಪಿನ ಕಲ್ಲು), ಸ್ಟಿಯಟೈಟ್ ಮತ್ತು ಮಣ್ಣಿನ ಮಣಿಗಳು ಎರಡೂ ಹಂತಗಳಲ್ಲಿ ಕಾಣುವ ಪ್ರಾಚ್ಯಾವಶೇಷಗಳಾಗಿವೆ.

ಸುಟ್ಟ ಧಾನ್ಯಗಳ ಅವಶೇಷಗಳು ಮತ್ತು ಪ್ರಾಣಿಮೂಳೆಗಳು ಎರಡೂ ಉಪಹಂತಗಳಲ್ಲಿ ಅಪಾರ ಸಂಖ್ಯೆಯಲ್ಲಿ ದೊರೆತಿವೆ. ಗೋಧಿ, ಜವೆ, ಹೆಸರು, ಉದ್ದು, ಬಟಾಣಿ, ನವಣೆ–ಸಜ್ಜೆಯಂತಹ ಸಣ್ಣಕಾಳುಗಳ ಬೇಸಾಯ, ಜಾನುವಾರು, ಎಮ್ಮೆ, ಕುರಿ–ಮೇಕೆ, ಹಂದಿ ಮುಂತಾದ ಪ್ರಾಣಿಗಳ ಸಾಕಣೆ ಆರ್ಥಿಕ ಜೀವನದ ಅಂಗಗಳಾಗಿದ್ದವು. ನೀಲಗಾಯ್, ಕೃಷ್ಣಮೃಗ, ಜಿಂಕೆ, ಕಾಡುಹಂದಿ, ಮೊಲ ಮತ್ತು ಹಕ್ಕಿಗಳ ಶಿಕಾರಿಯೂ ಆಗಾಗ್ಗೆ ನಡೆಯುತ್ತಿತ್ತು.

ಒಟ್ಟಿನಲ್ಲಿ ಈ ಅವಶೇಷಗಳು ಅಹಾರ್ ಸಂಸ್ಕೃತಿಯ ಹುಟ್ಟು ಮತ್ತು ಬೆಳವಣಿಗೆಯನ್ನು ಅರಿಯುವ ನಿಟ್ಟಿನಲ್ಲಿ ಮಹತ್ತ್ವದ ಕೊಡುಗೆಯಾಗಿವೆ. ಈ ಕಾಲದ ಮತ್ತು ಸಂಸ್ಕೃತಿಯ ಇನ್ನಾವುದೇ ವಸತಿ ನೆಲೆಗಳಲ್ಲಿ ಇಷ್ಟು ವಿಸ್ತಾರವಾದ ವಾಸ್ತುರಚನೆಗಳಿಲ್ಲ. ಇಲ್ಲಿಯ ಎರಡನೆ ಹಂತದ ಮತ್ತು ಹರಪ್ಪ ಸಂಸ್ಕೃತಿಯ ವಾಸ್ತುಶೈಲಿಯಗಳಲ್ಲಿಯ ಸಾಮ್ಯ ಗಮನಿಸಬೇಕಾದ ಅಂಶ. ಈ ಹಂತದಲ್ಲಿ ಕಂಡುಬರುವ ಇತರ ನೂತನ ಅಂಶಗಳೂ ಹರಪ್ಪ ಸಂಸ್ಕೃತಿಯ ಪ್ರಭಾವವನ್ನು ಸೂಚಿಸುತ್ತವೆ. ಬಾಲಾಥಲ್‌ನ ಜನರು ಸಮೀಪದ ಹರಪ್ಪ ಸಂಸ್ಕೃತಿಯ ವಸತಿಗಳೊಂದಿಗೆ ಸಂಪರ್ಕ ಬೆಳೆಸಿದ್ದಿರಬೇಕು ಎಂದು ಉತ್ಖನನಕಾರರು ಅಭಿಪ್ರಾಯ ಪಡುತ್ತಾರೆ. ಜನವಸತಿ ಪ್ರ.ಶ.ಪೂ.3700–3000ದ ನಡುವೆ ಪ್ರಾರಂಭವಾಗಿ ಪ್ರ.ಶ.ಪೂ.ಸು. 1800ರ ವೇಳೆಗೆ ಕೊನೆಗೊಂಡಿತು ಎಂಬುದನ್ನು ಇಂಗಾಲ–14ರ ಕಾಲನಿರ್ಣಯ ತಿಳಿಸುತ್ತದೆ.

ಸು.1000 ವರ್ಷಗಳ ಅನಂತರ ಮತ್ತೆ ಇಲ್ಲಿ ಜನವಸತಿ ಸ್ಥಾಪಿತವಾಯಿತು. ಆದಿಚಾರಿತ್ರಿಕ ಕಾಲಕ್ಕೆ ಸೇರುವ ಈ ಸಂಸ್ಕೃತಿಯ ವಿಶಿಷ್ಟ ಅಂಶವೆಂದರೆ ಕಬ್ಬಿಣ ತಂತ್ರಜ್ಞಾನ. ಅವಶೇಷಗಳು ದಿಬ್ಬದ ಮಧ್ಯಭಾಗದಲ್ಲಿ ಮಾತ್ರ ಇರುವುದರಿಂದ ಇದು ಸಣ್ಣ ವಸತಿಯಾಗಿತ್ತೆಂದು ತೀರ್ಮಾನಿಸಬಹುದು. ಈ ಹಂತದಲ್ಲಿ ಆಯತ ಅಥವಾ ವರ್ತುಲಾಕಾರದ ಮಣ್ಣು ಮೆತ್ತಿದ ಬೊಂಬಿನ ಮನೆಗಳು ಸಾಮಾನ್ಯವಾಗಿವೆ. ನೆಲವನ್ನು ಕಲ್ಲು ಮತ್ತು ಮಣ್ಣಿನ ಮಿಶ್ರಣ ಹಾಸಿ ಗಟ್ಟಿಗೊಳಿಸಲಾಗಿದೆ. ಅರೆಯುವ ಕಲ್ಲುಗಳು ಮಣ್ಣಿನ ಮನೆಗಳ ಆವರಣದೊಳಗಿವೆ. ಚರಂಡಿ ತೂಬುಗಳು, ಮಣ್ಣಿನ ಬಳೆಯಿಳಿಸಿದ ಬಾವಿಗಳು (ವ್ಯಾಸ– 68ಸೆಂಮೀ) ಚರಂಡಿ ವ್ಯವಸ್ಥೆಯ ಕುರುಹುಗಳಾಗಿವೆ. ಸು.5 ಕಬ್ಬಿಣದ ಕುಲುಮೆಗಳ ಅವಶೇಷಗಳೂ ಸಿಕ್ಕಿವೆ. ವರ್ತುಲಾಕಾರದ ಈ ಕುಲುಮೆಗಳು ಮಣ್ಣಿನ ಗೋಡೆಗಳನ್ನು ಹೊಂದಿದ್ದಿರಬೇಕು. ಬೂದಿ ಮತ್ತು ಕೆಂಡದಿಂದ ಕೂಡಿದ ಈ ಕುಲುಮೆಗಳು ತೀವ್ರ ಕೈಗಾರಿಕಾ ಚಟುವಟಿಕೆಗಳನ್ನು ಸೂಚಿಸುತ್ತವೆ. ದೊಡ್ಡ ಪ್ರಮಾಣದಲ್ಲಿ ಕಬ್ಬಿಣ ಉಪಕರಣಗಳ ಉತ್ಪಾದನೆ ಇಲ್ಲಿ ನಡೆಯುತ್ತಿತ್ತು ಎಂಬುದು ಉಪಕರಣಗಳ ಸಂಖ್ಯೆಯಿಂದ ತಿಳಿದುಬರುತ್ತದೆ. ಇವು ಸುತ್ತಮುತ್ತಲಿನ ವಸತಿಗಳಲ್ಲಿ ಮಾರಾಟವಾಗುತ್ತಿದ್ದುದು ನಿಶ್ಚಿತ. ಉಪಕರಣಗಳಲ್ಲಿ ವೈವಿಧ್ಯವಿದೆ. ಕೊಡಲಿ, ಬಾಣದ ಮೊನೆ, ಭರ್ಜಿಯ ಮೊನೆ, ಚೂರಿ, ನೀಳ ಅಲಗು, ಉಳಿ, ಸಲಿಕೆ/ಹಾರೆ, ನೇಗಿಲಿನ ಗುಳ, ಪಿಕಾಸಿ, ಮೊಳೆ, ಗಂಟೆ ಹೀಗೆ ಹಲವಾರು ಬಗೆಗಳಿವೆ. ಒಂದಕ್ಕೊಂದು ಅಂಟಿಕೊಂಡ ಉಪಕರಣಗಳ ದೊಡ್ಡ ಗಟ್ಟಿ ಸಹ ಸಿಕ್ಕಿದೆ.

ಇತರ ಅವಶೇಷಗಳೆಂದರೆ ಮನುಷ್ಯ ಮತ್ತು ಪ್ರಾಣಿಗಳ ಮಣ್ಣಿನ ಆಕೃತಿಗಳು, ಆಟದಕಾಯಿಗಳು, ಗಾಜು, ಮಣ್ಣು ಮತ್ತು ಶಂಖದ ಬಳೆಗಳು, ಗಾಜು, ಮಣ್ಣು ಮತ್ತು ಅರೆಪ್ರಶಸ್ತ ಕಲ್ಲುಗಳ (ಮಂದಗೆಂಪಿನ ಕಲ್ಲು, ಜಾಸ್ಪರ್, ಅಗೇಟ್ ಮತ್ತು ಗಾರ್ನೆಟ್) ಮಣಿಗಳು, ಕವಣೆಕಲ್ಲು, ದೀಪಗಳು, ಮೈಯುಜ್ಜುವ ಮಣ್ಣಿನ ಬಿಲ್ಲೆಗಳು ಮತ್ತು ದಂತದ ವಸ್ತುಗಳು. ವಿಶೇಷವಾದುವೆಂದರೆ ತಾಮ್ರದ ಎರಡು ನಾಣ್ಯಗಳು ಮತ್ತು ಮಣ್ಣಿನ ಎರಡು ಮೊಹರುಗಳು. ಒಂದು ನಾಣ್ಯ ದುಂಡಗಿದ್ದು ಒಂದು ಕಡೆ ಆನೆಯ ಚಿತ್ರ ಮತ್ತೊಂದು ಕಡೆ ಮೂರು ಕಮಾನಿನ ಬೆಟ್ಟ ಮತ್ತು ಅರ್ಧಚಂದ್ರಾಕೃತಿಯನ್ನು ಹೊಂದಿದೆ. ಈ ನಾಣ್ಯವನ್ನು ಅಚ್ಚಿನಿಂದ ಮಾಡಲಾಗಿದೆ. ಇದು ಬರೆಹವಿಲ್ಲದ ಮೌರ್ಯ ನಾಣ್ಯಗಳ ಗುಂಪಿಗೆ ಸೇರುತ್ತದೆ. ಮತ್ತೊಂದು ನಾಣ್ಯ ಆಯತಾಕಾರದಲ್ಲಿದ್ದು ಸಾಕಷ್ಟು ಸವೆದಿದೆ. ಒಂದು ಮೊಹರಿನಲ್ಲಿ ಬ್ರಾಹ್ಮಿ ಅಕ್ಷರಗಳಿವೆ. ಇನ್ನೊಂದರಲ್ಲಿ ಒಂದು ಎತ್ತಿನ ಗಾಡಿ, ಮೂರು ಕಮಾನಿನ ಬೆಟ್ಟ ಮತ್ತು ಕತ್ತರಿಯಾಕಾರವನ್ನು ಕೆತ್ತಲಾಗಿದೆ.

ಮಣ್ಪಾತ್ರೆಗಳಲ್ಲಿ ಕೆಂಪು ಮತ್ತು ಬೂದುಬಣ್ಣದ ಪಾತ್ರೆಗಳು ಹೆಚ್ಚು ಕಂಡುಬರುತ್ತವೆ. ಇವು ಉತ್ತಮ ಗುಣಮಟ್ಟದವಲ್ಲ. ಈ ಎರಡೂ ವರ್ಗಗಳಲ್ಲಿ ಮಡಕೆ, ತಟ್ಟೆ, ಬೋಗುಣಿ, ಬಟ್ಟಲು, ಮುಚ್ಚಳ ಮತ್ತು ಜಾಡಿಗಳು ಸಿಗುತ್ತವೆ. ಕೆಂಪುಬಣ್ಣದ ವರ್ಗದಲ್ಲಿ ಹಣತೆ, ಆಟದ ಸಾಮಾನುಗಳು ಇವೆ. ಬೂದುಬಣ್ಣದ ವರ್ಗದಲ್ಲಿ ಕೆಲವು ಉತ್ತಮ ದರ್ಜೆಯ ತಟ್ಟೆ ಹಾಗೂ ಮಡಕೆಗಳಿವೆ. ಇವಲ್ಲದೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಲೇಪನವಿರುವ ಪಾತ್ರೆ ಮತ್ತು ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳ ಕೆಲವು ಚೂರುಗಳು ಸಿಕ್ಕಿವೆ. ಕೃಷಿ (ಬತ್ತ, ಜವೆ, ಗೋಧಿ, ಉದ್ದು, ಹೆಸರು, ಬಟಾಣಿ, ಸಣ್ಣ ಕಾಳುಗಳು, ಕಡಲೆ), ಪಶು

ಸಾಕಣೆ ಮತ್ತು ಬೇಟೆ ಈ ಕಾಲದ ಜನರ ಜೀವನಾಧಾರವಾಗಿದ್ದವು. ತಾಮ್ರ–ಶಿಲಾಯುಗದ ಅವಶೇಷಗಳಿಗೆ ಹೋಲಿಸಿದರೆ ಜಾನುವಾರುಗಳ ಮೂಳೆಗಳ ಸಂಖ್ಯೆಯಲ್ಲಿ ಗಣನೀಯವಾದ ಏರಿಕೆ ಕಾಣುತ್ತದೆ. ವನ್ಯಪ್ರಾಣಿಗಳ ಮೂಳೆಗಳು ಬೆರಳೆಣಿಕೆಯಷ್ಟಿವೆ.

ಈ ಹಂತದಿಂದ ದೊರೆತ ಇಂಗಾಲ–14ರ ಪರಿಷ್ಕೃತ ಕಾಲಮಾನಗಳು ಪ್ರ.ಶ.ಪೂ. 760–400–ಪ್ರಶ.130–380 ರ ಅವಧಿಯ ಒಳಗಿವೆ. ಹಾಗಾಗಿ ಆದಿಚಾರಿತ್ರಿಕ ಅವಶೇಷಗಳನ್ನು ಪ್ರ.ಶ.ಪೂ.6ನೆಯ–ಪ್ರ.ಶ.4ನೆಯ ಶತಮಾನದ ಅವಧಿಗೆ ಸೇರಿಸಬಹುದು. ಮೌರ್ಯರಿಗಿಂತ ಮುಂಚಿನ ಕಾಲದಿಂದ ಕುಷಾಣರವರೆಗೆ ಈ ಕಾಲಘಟ್ಟ ಚಾಚುತ್ತದೆ. (ವಿ.ಎಸ್.)

**ಬಾರ್ಹುತ್:** ಮಧ್ಯಪ್ರದೇಶ ರಾಜ್ಯದ ಸತ್ನ ಜಿಲ್ಲೆಯಲ್ಲಿರುವ ಬೌದ್ಧ ನೆಲೆ. ಮಹಿಯಾರ ನದಿಬಯಲಿನಲ್ಲಿದೆ. ಪ್ರಾಚೀನ ಕಾಲದಲ್ಲಿ ಈ ನೆಲೆ ಸಾಂಚಿ ಮತ್ತು ಪಾಟಲಿಪುತ್ರಗಳನ್ನು ಜೋಡಿಸುವ ವ್ಯಾಪಾರ ಮಾರ್ಗದಲ್ಲಿತ್ತು. ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ 1873ರಲ್ಲಿ ಇಲ್ಲಿ ಸ್ತೂಪದ ಅವಶೇಷಗಳನ್ನು ಬೆಳಕಿಗೆ ತಂದಿದ್ದಲ್ಲದೆ ಒಂದು ಪ್ರಾಚೀನ ಪಟ್ಟಣದ ಅವಶೇಷಗಳನ್ನೂ ಗುರುತಿಸಿದ. ಕೆಲವರ್ಷಗಳ ಅನಂತರ ಕಳಚುರಿ ಕಾಲದ ಬೌದ್ಧ ದೇವಾಲಯವನ್ನೂ ಬುದ್ಧ ಮೂರ್ತಿಗಳನ್ನೂ ಇವನು ಶೋಧಿಸಿದ.



ಸ್ತೂಪದ ಸುತ್ತು ಬೇಲಿ

ಈ ನೆಲೆ ಪ್ರಸಿದ್ಧವಾಗಿರುವುದು ಇಲ್ಲಿಯ ಶುಂಗರ ಕಾಲದ ಸ್ತೂಪದ ಅವಶೇಷಗಳಿಂದಾಗಿ. ಇಲ್ಲಿಯ ಸ್ತೂಪವನ್ನು ಬಹುಶಃ ಅಶೋಕನ ಕಾಲದಲ್ಲಿ ಸಂಪೂರ್ಣವಾಗಿ ಇಟ್ಟಿಗೆಯಲ್ಲಿ ಕಟ್ಟಲಾಗಿತ್ತು ಹಾಗೂ ಅದಕ್ಕೆ ಸುಣ್ಣಗಾರೆಯನ್ನು ಲೇಪಿಸಲಾಗಿತ್ತು. ಇದರ ವ್ಯಾಸ ಸು.22ಮೀ ಇತ್ತು. ಈ ಸ್ತೂಪದ ಪರಿಧಿಯಲ್ಲಿ ಶುಂಗ ಕಾಲದಲ್ಲಿ ಕೆಂಪು ಮರಳುಗಲ್ಲಿನ ಪಾದವೇದಿಯನ್ನೂ ಇದರ ನಾಲ್ಕು ಮುಖಗಳಲ್ಲಿ ನಾಲ್ಕು ತೋರಣಗಳನ್ನೂ ನಿರ್ಮಿಸಲಾಯಿತು. ಪಾದವೇದಿಯ ವ್ಯಾಸ 26.4ಮೀ. ಇದಕ್ಕೆ ಲಂಬವಾಗಿ ನಿಲ್ಲಿಸಿದ ಸ್ತಂಭಗಳು, ಅಡ್ಡಲಾಗಿ ಅವುಗಳೊಳಗೆ ತೂರಿಸಿದ ಮೂರು ಕಂಬಿ (ಸೂಚಿ)ಗಳೂ ಹಾಗೂ ವೇದಿಯ ಮೇಲ್ಭಾಗವನ್ನು ಮುಚ್ಚುವ ಉಷ್ಣೀಷಗಳೂ, ಸ್ತಂಭ ಮತ್ತು ಸೂಚಿಗಳು ಸೇರುವಲ್ಲಿ ಕಂಬಗಳ ಮೇಲೆ ವರ್ತುಲಾಕೃತಿಯ ಮಂಡಲಗಳಿವೆ. ಒಂದು ತೋರಣದ ಮೇಲೆ ಶುಂಗರು ರಾಜ್ಯವಾಳುತ್ತಿದ್ದಾಗ ಧನಭೂತಿಯೆಂಬುವನು ಇದನ್ನು ಕಟ್ಟಿಸಿದ್ದಾಗಿ ಶಾಸನೋಲ್ಲೇಖವಿದೆ. ವಿದ್ವಾಂಸರ ಪ್ರಕಾರ ಪ್ರ.ಶ.ಪೂ.2ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಈ ಪಾದವೇದಿ ನಿರ್ಮಾಣವಾಗಿದೆ. ಕನ್ನಿಂಗ್‌ಹ್ಯಾಮ್ ಭೇಟಿಮಾಡಿದಾಗ ಈ ಸ್ತೂಪ ಸಂಪೂರ್ಣ ನಾಶವಾಗಿತ್ತು ಹಾಗೂ ಪಾದವೇದಿಯ ಭಾಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಇವನು ಇವನ್ನು ಕೋಲ್ಕತದ ಇಂಡಿಯನ್ ಮ್ಯೂಸಿಯಂಗೆ ಸಾಗಿಸಿ ಅಳಿದುಳಿದ ಶಿಲ್ಪಗಳನ್ನು ಮೂಲರೂಪದಲ್ಲಿ ಜೋಡಿಸಿ ರಕ್ಷಿಸಿದ. ಈಗ ಕೆಲವು ಶಿಲ್ಪಗಳು ದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲೂ ಇವೆ.

ಬಾರ್ಹುತ್ ಸ್ತೂಪದ ಮೂಲರೂಪ ಸಿಗದಿದ್ದರೂ ಅಲ್ಲಿಯ ಶಿಲ್ಪಗಳಲ್ಲಿ ಸಮಕಾಲೀನ ಸ್ತೂಪಗಳ ಚಿತ್ರಗಳು ಸಿಗುತ್ತವೆ. ಇವುಗಳ ಪ್ರಕಾರ ಈ ಸ್ತೂಪವನ್ನು ವರ್ತುಲಾಕಾರದ ವೇದಿಕೆಯ ಮೇಲೆ ಕಟ್ಟಲಾಗಿತ್ತು. ಅರ್ಧವರ್ತುಲಾಕೃತಿಯ ಅಂಡವನ್ನು ಹೊಂದಿದ್ದು ಅಂಡದ ಸುತ್ತಲೂ ಪ್ರದಕ್ಷಿಣಾಪಥ ಇತ್ತು. ಅಂಡದ ಮೇಲೆ ಹರ್ಮಿಕ ಹಾಗೂ ಛತ್ರಾವಳಿಗಳಿದ್ದವು. ಸ್ತೂಪದ ಪಾದದ ಸುತ್ತ ಅದಕ್ಕೆ ಪ್ರಾಕಾರದಂತೆ ಬೇಲಿ (ಪಾದವೇದಿ) ಇತ್ತು. ವೇದಿಕೆಗಳ ಹಾಗೂ ತೋರಣಗಳ ಮೇಲೆ ಶಿಲ್ಪಗಳು ಕೆತ್ತಲ್ಪಟ್ಟಿವೆ. ಕೆಲವು ಕಂಬಗಳ ಮೇಲೆ ಯಕ್ಷರು ಕೈಮುಗಿದು ನಿಂತಿದ್ದರೆ ಉಳಿದ ಭಾಗಗಳಲ್ಲಿ ಆಯತಾಕೃತಿಯ ಹಾಗೂ ವರ್ತುಲಾಕೃತಿಯ ಚೌಕಟ್ಟುಗಳೊಳಗೆ ಬುದ್ಧನ ಜೀವನದ ಘಟನೆಗಳು ಹಾಗೂ ಜಾತಕ ಕಥೆಗಳನ್ನು ಕೆತ್ತಲಾಗಿದೆ. ಉಷ್ಣೀಷದ ಮೇಲೆ ಸಂಪತ್ಸಮೃದ್ಧಿಯ ಸಂಕೇತವಾದ ಕಲ್ಪಲತೆ ಬಳಸಿಕೊಂಡು ಹೋದಹಾಗೆ ಕೆತ್ತಲಾಗಿದೆ. ಇದರ ಮಧ್ಯದಲ್ಲಿ ಅಲ್ಲಲ್ಲಿ ಲೌಕಿಕ ದೃಶ್ಯಗಳು ಹಾಗೂ ಜಾತಕ ದೃಶ್ಯಗಳು ಚಿತ್ರಿತವಾಗಿವೆ. ಭಾರಹೂತದ ದೃಶ್ಯಗಳಿಗೆಲ್ಲ ಸೂಕ್ತ ಶೀರ್ಷಿಕೆ ನೀಡಿ ಸಂದರ್ಭವನ್ನು ಸೂಚಿಸಲಾಗಿದೆ. ಇಲ್ಲಿ ಕೈಮುಗಿದು ನಿಂತಿರುವ ಶಿಲ್ಪಗಳಲ್ಲಿ ಮಣಿಭದ್ರ, ಸೂಚಿಲೋಮ ಮುಂತಾದ ಯಕ್ಷರೂ, ಸಿರಿಮಾ, ಚುಲುಕೋಕ, ಮಹಾಕೋಕ, ಚಂದಾ ಮುಂತಾದ ಯಕ್ಷಿಯರೂ, ಸೂರ್ಯ ದೇವತೆಯೂ ಹಾಗೂ ಬುದ್ಧನ ಪೂಜೆ ಮಾಡಲು ಬಂದ ಅಜಾತಶತ್ರು, ಪ್ರಸೇನಜಿತ ಮುಂತಾದ ರಾಜರೂ, ದೇವೇಂದ್ರ, ಏರಪಟ್ಟ ನಾಗರಾಜ ಮುಂತಾದ ದೇವತೆಗಳೂ ಇದ್ದಾರೆ. ಬುದ್ಧನ ಜೀವನದೃಶ್ಯಗಳಲ್ಲಿ ಎಲ್ಲೂ ಆತನ ಆಕೃತಿಯನ್ನು ತೋರಿಸಿಲ್ಲ. ಬದಲಾಗಿ ಆತನಿಗೆ ಸಂಬಂಧಿಸಿದ ಸಂಕೇತಗಳಾದ ಬೋಧಿವೃಕ್ಷ, ಸಿಂಹಾಸನ, ಧರ್ಮಚಕ್ರ, ಧ್ವಜಸ್ತಂಭ, ಸ್ತೂಪ ಮುಂತಾದವುಗಳನ್ನು ನೋಡಬಹುದು. ಬುದ್ಧನ ಜೀವನದ ಘಟನೆಗಳನ್ನೂ ಇವುಗಳ ಮೂಲಕವೇ ಸಂಕೇತಿಸಲಾಗುತ್ತದೆ. ಗರ್ಭಾವತರಣದಲ್ಲಿ ಆನೆಯನ್ನೂ, ಪುರಾಭಿನ್ನಿಷ್ಕ್ರಮಣದಲ್ಲಿ ಕುದುರೆಯನ್ನೂ, ಜ್ಞಾನೋದಯಕ್ಕೆ ಬೋಧಿವೃಕ್ಷವನ್ನೂ, ಧರ್ಮಚಕ್ರಪರಿವರ್ತನ ಅಥವಾ ಬುದ್ಧನ ಪ್ರವಚನದ ದೃಶ್ಯಕ್ಕೆ ಧರ್ಮಚಕ್ರವನ್ನೂ, ಮಹಾಪರಿನಿರ್ವಾಣಕ್ಕೆ ಸ್ತೂಪವನ್ನೂ ತೋರಿಸಲಾಗಿದೆ. ಅಂದರೆ ಶುಂಗ ಕಾಲದಲ್ಲಿ ಬುದ್ಧನು ದೇವತಾಪುರುಷನಾಗಿ ಅವನನ್ನೂ ಪೂಜಿಸುವ ಸಂಪ್ರದಾಯ ಬೆಳೆದುಬಂದರೂ ಅದು ಮಾನವಾಕೃತಿಯ ಪೂಜೆಯಾಗಿ ಮಾರ್ಪಾಟ್ಟಿರಲಿಲ್ಲ. ಬುದ್ಧನ ಜೀವನದ ಘಟನೆಗಳಲ್ಲಿ ಅನಾಥಪಿಂಡಕನು ಬುದ್ಧನಿಗಾಗಿ ಜೇತವನವನ್ನು ಖರೀದಿಸುವ ದೃಶ್ಯ, ಸುಧರ್ಮ ದೇವಸಭೆ, ಬುದ್ಧನ ಅವಶೇಷಗಳನ್ನು ರಾಜರು ಒಯ್ಯುತ್ತಿರುವುದು ಮುಂತಾದವೂ ಮಹತ್ತ್ವಪೂರ್ಣವಾಗಿವೆ. (ಆರ್.ಎಚ್.)

**ಬಿಳಿಗಿ ಅರಸು ಮನೆತನ: ನೋಡಿ–ಕರ್ನಾಟಕದ ಕಿರು ಅರಸು ಮನೆತನ**

**ಬಿಜಾಪುರ:** ಕರ್ನಾಟಕದ ಒಂದು ಜಿಲ್ಲೆ, ಆಡಳಿತ ಕೇಂದ್ರ. ಸೊಲ್ಲಾಪುರದ ದಕ್ಷಿಣಕ್ಕೆ 96ಕಿಮೀ ದೂರದಲ್ಲೂ ಬೆಂಗಳೂರಿನಿಂದ ವಾಯವ್ಯಕ್ಕೆ 579ಕಿಮೀ ದೂರದಲ್ಲೂ ಇದೆ.

ಚಾರಿತ್ರಿಕವಾಗಿ ಬಿಜಾಪುರ ಆದಿಲ್‌ಶಾಹಿ ಅರಸರ ರಾಜಧಾನಿಯಾಗಿತ್ತು. ಬಿಜಾಪುರದ ಮೂಲ ಹೆಸರು ವಿಜಯಪುರ. ಊರೊಳಗಿನ ಕಲ್ಯಾಣ ಚಾಳುಕ್ಯ ಕಾಲದ ಒಂದು ಹಾಳುಬಿದ್ದ ದೇವಾಲಯ ಕಂಬಗಳ ಮೇಲಿರುವ ಶಾಸನಗಳು 1036ರ ಸುಮಾರಿಗೆ ಈ ಹೆಸರು ಬಳಕೆಯಲ್ಲಿತ್ತೆಂಬುದನ್ನು ತೋರಿಸುತ್ತವೆ. ಸು.1100ರಲ್ಲಿ ನಾಗಚಂದ್ರ ಬರೆದ ಮಲ್ಲಿನಾಥಪುರಾಣದಲ್ಲಿ ವಿಜಯಪುರದ ಹೆಸರು ಬರುತ್ತದೆ. ಬಹಮನಿ ರಾಜ್ಯ ಸ್ಥಾಪನೆಯಾದಾಗ (1347) ಬಿಜಾಪುರ ಅದರ ಒಂದು ಮುಖ್ಯ ಭಾಗವಾಗಿದ್ದು ಗುಲ್ಬರ್ಗ ಪ್ರಾಂತಕ್ಕೆ ಸೇರಿತ್ತು. 1478ರಲ್ಲಿ ಈ ಸುತ್ತಣ ಪ್ರದೇಶ ಸೇರಿದ ಒಂದು ಪ್ರಾಂತ ರಚನೆಯಾಗಿ ಬಿಜಾಪುರವೇ ಅದರ ಕೇಂದ್ರವಾಯಿತು. ಇಲ್ಲಿಯ ಪ್ರಾಂತಾಧಿಕಾರಿ ಯೂಸುಫ್ ಆದಿಲ್ ಖಾನ್ ಸ್ವತಂತ್ರನಾಗಿ ಆದಿಲ್‌ಶಾಹಿ ರಾಜ್ಯ ಸ್ಥಾಪನೆಯಾದಾಗ (1489) ಇದೇ ಅದರ ರಾಜಧಾನಿಯಾಯಿತು. 1686ರಲ್ಲಿ ಔರಂಗಜೇಬ್ ಈ ಪಟ್ಟಣವನ್ನು ವಶಪಡಿಸಿಕೊಂಡ ಅನಂತರ ಇದರ ಪ್ರಾಮುಖ್ಯತೆ ಇಳಿಮುಖವಾಗಲಾರಂಭಿಸಿತು. ಮುಂದೆ ಮೊಗಲರು, ಹೈದರಾಬಾದಿನ ನಿಜಾಮರು, ಪೇಶ್ವೆಗಳು–ಇವರಲ್ಲಿ ಕೈ ಬದಲಾಗುತ್ತಿದ್ದ ಪಟ್ಟಣ 1818ರಲ್ಲಿ ಬ್ರಿಟಿಷರ ವಶವಾಗಿ ಮುಂಬಯಿ ಪ್ರಾಂತ್ಯಕ್ಕೆ ಸೇರಿತು.

ಬಿಜಾಪುರ ಮತ್ತು ಪರಿಸರದಲ್ಲಿ ಬಹಮನಿ ಹಾಗೂ ಶಾಹಿಸುಲ್ತಾನರು ಕಟ್ಟಿಸಿದ 300ಕ್ಕೂ ಹೆಚ್ಚು ಪ್ರಾಚೀನ ಕಟ್ಟಡಗಳೂ ಕೋಟೆ ಕೊತ್ತಲಗಳೂ ಪ್ರೇಕ್ಷಣೀಯ ಸ್ಥಳಗಳೂ ಇವೆ (**ನೋಡಿ–ಆದಿಲ್‌ಶಾಹಿ ವಂಶ**).



ಜಾಮಿ ಮಸೀದಿ, ಮಿಹ್ರಬ್

ಅಮೀನ್ ದರ್ಗಾ: ಬಿಜಾಪುರದ ಪವಿತ್ರ ಸ್ಥಳಗಳಲ್ಲೊಂದು. ಪಟ್ಟಣದಿಂದ ಪಶ್ಚಿಮಕ್ಕೆ ಸುಮಾರು 1¼ ಕಿಮೀ ದೂರದಲ್ಲಿದೆ. ಇದು ಹಜರತ್ ಖ್ವಾಜಾ ಅಮೀನುದ್ದೀನ್ ಎಂಬ ಸಂತರ ಸಮಾಧಿ. 1664ರಲ್ಲಿ ಇವರು ಮರಣಹೊಂದಿದಾಗ ಅಫ್ಜಲ್‌ಖಾನ್ ಇದನ್ನು ಕಟ್ಟಿಸಿದನೆನ್ನಲಾಗಿದೆ. ಎತ್ತರದ ಪ್ರದೇಶದಲ್ಲಿರುವ ಈ ದರ್ಗಾ ಈ ಸುತ್ತಿಗೆ ಒಂದು ಮುಖ್ಯ ಗುರುತು ತಾಣ.

ಸಂಗೀತ ಮಹಲ್: ಬಿಜಾಪುರದಿಂದ ಪಶ್ಚಿಮಕ್ಕೆ 5 ಕಿಮೀ ದೂರದಲ್ಲಿ ಎರಡನೆಯ ಇಬ್ರಾಹಿಂ ಆದಿಲ್ ಷಾ ಕಟ್ಟಿಸಿದ ನವರಸಪುರ ಪಟ್ಟಣದ ಮಧ್ಯೆ ಇರುವ ಅರಮನೆ. ವಾಸ್ತುವಿನ್ಯಾಸದಲ್ಲಿ ಗಗನ ಮಹಲನ್ನು ಹೋಲುವ ಈ ಕಟ್ಟಡ ಎತ್ತರದ ಸುತ್ತು ಪ್ರಾಕಾರದ ಮಧ್ಯೆ ಇದೆ. ಕಟ್ಟಡ ಬಹಳ ಶಿಥಿಲವಾಗಿದೆ. ಹಿನ್ನೆಲೆಯಲ್ಲಿ ಬೆಟ್ಟಸಾಲು, ಎರಡು ಪಕ್ಕಗಳಲ್ಲಿ ಹರಿಯುವ ಚಿಕ್ಕ ಝರಿ ಮತ್ತು ಅನೇಕ ಅರಮನೆಗಳ ಅವಶೇಷಗಳ ಮಧ್ಯೆ ಇರುವ ಈ ಕಟ್ಟಡದ ಸನ್ನಿವೇಶ ಆಕರ್ಷಕವಾಗಿದೆ.

ಐನುಲ್‌ಮುಲ್ಕ್‌ನ ಸಮಾಧಿ ಮತ್ತು ಮಸೀದಿ: ಪಟ್ಟಣದ ಪೂರ್ವಕ್ಕೆ ಸು.2 ಕಿಮೀ ದೂರದಲ್ಲಿ ವಿಶಾಲ ಮೈದಾನದ ಮಧ್ಯದಲ್ಲಿ ಏಕೈಕವಾಗಿ ಎದ್ದಿರುವ ಐನುಲ್ ಮುಲ್ಕ್ ಕನಾನಿ ಎಂಬುವನ

ಸಮಾಧಿ. ಓರಣವಾದ ಗುಮ್ಮಟವಿರುವ ಚಚ್ಚೌಕ ವಿನ್ಯಾಸದ ಬೃಹತ್ ಕಟ್ಟಡ. ಇದರ ಸಮೀಪವಿರುವ ಮಸೀದಿಯೂ ಸುಂದರಕೃತಿ. ಐನುಲ್ ಮುಲ್ಕ್ ಕನಾನಿ ಒಂದನೆಯ ಇಬ್ರಾಹಿಂ ಆದಿಲ್‌ಷಾನ ಆಸ್ಥಾನಿಕನಾಗಿದ್ದು ಅವನ ವಿರುದ್ಧ ದಂಗೆಯೆದ್ದು 1556ರಲ್ಲಿ ಹತನಾದ.

ರುಕ್ಮಾಂಗದ ಪಂಡಿತ ಸಮಾಧಿ: ಪಟ್ಟಣದ ಆಗ್ನೇಯದಲ್ಲಿ ಕೋಟೆಯ ಹೊರಗೆ ಈ ಸಮಾಧಿಯಿದೆ. ರುಕ್ಮಾಂಗದ ಪಂಡಿತರು ಆದಿಲ್‌ಶಾಹಿ ಆಸ್ಥಾನದ ನ್ಯಾಯಾಧಿಕಾರಿಯೊಬ್ಬರ ಮಗನಾಗಿ 1610ರಲ್ಲಿ ಜನಿಸಿದರು. ಇವರು ಒಳ್ಳೆಯ ಸಂಗೀತಗಾರರಾಗಿ, ವೈದ್ಯರಾಗಿ, ಯೋಗಿಗಳಾಗಿ, ಪವಾಡ ಪುರುಷರಾಗಿ ಪ್ರಸಿದ್ಧರಾಗಿದ್ದರಂತೆ. ಇವರ ಗೌರವಾರ್ಥ ಇಲ್ಲಿ ವರ್ಷಂಪ್ರತಿ ಉತ್ಸವ ನಡೆಯುತ್ತದೆ.

ಇತರೆ: ಒಂದು ಕಾಲದಲ್ಲಿ ಇಡೀ ಭಾರತದಲ್ಲೇ ವೈಭವದ ನಗರವಾಗಿ ಬೆಳೆದಿದ್ದ ಬಿಜಾಪುರದ ಎಲ್ಲೆಡೆಯಲ್ಲಿಯೂ ಇಂದು ಆ ಕಾಲದ ಭವ್ಯ ಕಟ್ಟಡಗಳ ಅವಶೇಷಗಳನ್ನು ಕಾಣಬಹುದು. ಕೇಂದ್ರ ಪುರಾತತ್ತ್ವ ಇಲಾಖೆ ಮುಖ್ಯವಾದ ಕೆಲವನ್ನು ಆರಿಸಿ ರಕ್ಷಿಸಿರುವವುಗಳ ಸಂಖ್ಯೆಯೇ ಸು.300ರಷ್ಟು. ಮೇಲೆ ವಿವರಿಸಿರುವವುಗಳಲ್ಲದೆ ಎರಡು ಅಂತಸ್ತುಗಳಲ್ಲಿ ಕಟ್ಟಲಾಗಿರುವ ಅಂಡು ಮಸೀದಿ (1608), ಔರಂಗಜೇಬ್ ಕಟ್ಟಿಸಿದ ಈದ್ಗಾ (1687), ಚಾಂದಬೀಬಿ ಕಟ್ಟಿಸಿದ ಬುಖಾರಿ ಮಸೀದಿ, ಛೋಟಾ ಆಸಾರ್ ಎಂಬ ಚಿಕ್ಕ ಮಸೀದಿ–ಇವೂ ಉಲ್ಲೇಖನಾರ್ಹ. ಬಿಜಾಪುರದ ಈಗಿನ ಪ್ರವಾಸಿಮಂದಿರ ಸಹ ಮೂಲತಃ ಆದಿಲ್‌ಶಾಹಿ ಕಾಲದ ಕಟ್ಟಡ, ಯಾಕೂತ್ ದಾಬೂಲಿ ಎಂಬುವನ ಮಹಲ್.

ಈ ಪ್ರಾಚೀನ ಕಟ್ಟಡಗಳಲ್ಲದೆ ಬಿಜಾಪುರದಲ್ಲಿ ಈಚೆಗೆ ರಚಿತವಾಗಿರುವ ಬಾಲಾಜಿ ಮಂದಿರ, ಮಹಾಲಕ್ಷ್ಮಿ ದೇವಾಲಯ, ನರಸಿಂಹ ದೇವಾಲಯ, ರಾಮಮಂದಿರ, ಸಿದ್ಧೇಶ್ವರ ದೇವಾಲಯ, ಬೃಹತ್ ಶಿವಲಿಂಗ ದೇವಾಲಯ ಮೊದಲಾದುವೂ ಸ್ಥಳೀಯವಾಗಿ ಪ್ರಸಿದ್ಧವಾಗಿವೆ. (ಎಸ್.ಎನ್.)

**ಬಿಪಿನ್ ಚಂದ್ರ:** ಆಧುನಿಕ ಭಾರತದ ಆರ್ಥಿಕ ಮತ್ತು ಸಾಮಾಜಿಕ ಇತಿಹಾಸದ ಹೆಸರಾಂತ ವಿದ್ವಾಂಸರು. ಹಿಮಾಚಲ ಪ್ರದೇಶದ ಕಾಂಗ್ರ ಕಣಿವೆ ಪ್ರದೇಶದಲ್ಲಿ 1928ರಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಬಿಪಿನ್ ಚಂದ್ರಸೂದ್. ಲಾಹೋರ್ ಕ್ರಿಶ್ಚಿಯನ್ ಕಾಲೇಜು, ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಇವರ ವಿದ್ಯಾಭ್ಯಾಸ ವಾಯಿತು. ದೆಹಲಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು. ಅನೇಕ ವರ್ಷಗಳು ದೆಹಲಿಯ ಹಿಂದು ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. 1973–74ರಲ್ಲಿ ಯು.ಜಿ.ಸಿ.ಯ ರಾಷ್ಟ್ರೀಯ ಉಪನ್ಯಾಸಕರಾಗಿ, ದೆಹಲಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಈಗ ಇದೇ ವಿಶ್ವವಿದ್ಯಾಲಯದಲ್ಲಿ ವಿಶ್ರಾಂತ ಪ್ರಾಧ್ಯಾಪಕರಾಗಿದ್ದಾರೆ. ಇವರು ಮೆಕ್ಸಿಕೊದಲ್ಲಿ ಎಚ್ ಕೊಲೆಜಿಯೋ ಕಾಲೇಜಿನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1985ರಲ್ಲಿ ಭಾರತೀಯ ಇತಿಹಾಸ ಪರಿಷತ್‌ನ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ದೆಹಲಿಯ ನ್ಯಾಶನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರಾಗಿದ್ದಾರೆ. ಭಾರತದಲ್ಲಿನ ಕೋಮುವಾದದ ವಿರುದ್ಧದ ಹೋರಾಟದಲ್ಲಿ ಇವರ ಹೆಸರು ಪ್ರಮುಖವಾದುದು. ರೈಸ್ ಎಂಡ್ ಗ್ರೋತ್ ಆಫ್ ಎಕನಾಮಿಕ್ ನ್ಯಾಷನಲಿಸಂ, ನ್ಯಾಷನಲಿಸಂ ಅಂಡ್ ಕಲೋನಿಯಲಿಸಂ ಇನ್ ಮಾಡರ್ನ್ ಇಂಡಿಯ, ಕಮ್ಯೂನಲಿಸಂ ಇನ್ ಮಾಡರ್ನ್ ಇಂಡಿಯ – ಇವು ಇವರ ಕೆಲವು ಮುಖ್ಯ ಗ್ರಂಥಗಳು. (ಎ.ಎಸ್.;ಎನ್.ಎಲ್.)

**ಬಿಲ್ಹಣ:** 11ನೆಯ ಶತಮಾನದ ಉತ್ತರಾರ್ಧ. ಸಂಸ್ಕೃತ ಕವಿ. ಈತ ಕಾಶ್ಮೀರದವನು. ಜನ್ಮಭೂಮಿ ಪ್ರವರಪುರಕ್ಕೆ ಸು.5ಕಿಮೀ ದೂರದಲ್ಲಿರುವ ಖೋಣಮುಖ. ಮುತ್ತಾತ ಮುಕ್ತಿಕಲಶ, ತಾತ ರಾಜಕಲಶ, ತಂದೆ ಜ್ಯೇಷ್ಠಕಲಶ. ಎಲ್ಲರೂ ಅಗ್ನಿಹೋತ್ರಿಗಳು; ವೇದ, ವೇದಾಂತ ಹಾಗೂ ಶಾಸ್ತ್ರ ಪ್ರವೀಣರು. ಜ್ಯೇಷ್ಠಕಲಶ ಮಹಾ ಭಾಷ್ಯಕ್ಕೆ ಒಂದು ವ್ಯಾಖ್ಯಾನ ಬರೆದಿರುವನೆನ್ನಲಾಗಿದೆ. ತಾಯಿ ನಾಗದೇವಿ; ಅಣ್ಣ ಇಷ್ಟಾರಾಮ; ತಮ್ಮ ಆನಂದ. ವಿದ್ಯಾಭ್ಯಾಸ ಕಾಶ್ಮೀರದಲ್ಲಿ. ಈತನ ವಂಶದಲ್ಲಿ ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಕ್ಕೆ ಹೆಚ್ಚು ಆದ್ಯತೆ. ವಿದ್ಯಾವಂತನಾದ ಮೇಲೆ ಪಾಂಡಿತ್ಯ ಪ್ರದರ್ಶನಕ್ಕಾಗಿ ಭಾರತ ಯಾತ್ರೆ ಮಾಡಿದ. ಈ ಸಂಪ್ರದಾಯ ಬಾಣನೇ ಮುಂತಾದ ಬಹಳ ಕವಿಗಳಲ್ಲಿ ಕಂಡುಬರುವುದು. ಕಾಶ್ಮೀರ, ಬೃಂದಾವನ, ಮಥುರಾ, ಕಾಶಿ, ಕನ್ಯಾಕುಬ್ಜ, ಧಾರಾ, ಗುಜರಾತ್ ಮುಂತಾದ ಊರುಗಳಲ್ಲಿ ಸುತ್ತಿ ದಕ್ಷಿಣ ಭಾರತದ ಕಲ್ಯಾಣ ಚಾಳುಕ್ಯ ವಂಶದ ರಾಜನಾದ ಆರನೆಯ ವಿಕ್ರಮಾದಿತ್ಯನ (1073–1127) ಆಸ್ಥಾನಕ್ಕೆ ಬಂದ. ಗುಣಗ್ರಾಹಿಯಾದ ರಾಜ ಈತನನ್ನು ಸತ್ಕರಿಸಿ ವಿದ್ಯಾಪತಿ ಎಂಬ ಉಪಾಧಿಕೊಟ್ಟ. ಬಿಲ್ಹಣ ಜೀವನಪೂರ್ತಿ ಅಲ್ಲಿಯೇ ಇದ್ದು ಕೊನೆಯ ದಿನಗಳನ್ನು ಕಾಶಿಯಲ್ಲೋ ಗಂಗಾನದಿ ದಡದಲ್ಲೊ ಕಳೆದಿರಬೇಕು ಎನ್ನಲಾಗಿದೆ.

ಇವನ ಮೂರು ಕಾವ್ಯಗಳು ಪ್ರಸಿದ್ಧವಾಗಿವೆ. 1. ವಿಕ್ರಮಾಂಕದೇವ ಚರಿತೆ, ಇದು ಮಹಾಕಾವ್ಯ. 2. ಕರ್ಣಸುಂದರಿ (ನಾಟಕ). 3.ಚೋರಪಂಚಾಶಿಕಾ (ಗೀತನಾಟಕ). ವಿಕ್ರಮಾಂಕದೇವ ಚರಿತ ಐತಿಹಾಸಿಕ ಮಹಾಕಾವ್ಯ. ಇದರಲ್ಲಿ ವೀರರಸ ಪ್ರಧಾನವಾಗಿದೆ. ನಾಟಕದಲ್ಲಿ ಶೃಂಗಾರರಸ ಪ್ರಧಾನವಾಗಿದೆ. ಚೋರಪಂಚಶಿಕಾದಲ್ಲಿ ವಿಶೇಷವಾಗಿ ವಿಯೋಗ ಪ್ರಾಚುರ್ಯವಿದೆ. ಮೂರು ಪ್ರಖ್ಯಾತ ಕಾವ್ಯ ಗ್ರಂಥಗಳು. ವಿಕ್ರಮಾಂಕದೇವ ಚರಿತೆ ಚಾಲುಕ್ಯ ವಂಶದ ರಾಜನಾದ ವಿಕ್ರಮಾದಿತ್ಯನ ಐತಿಹಾಸಿಕ ಚರಿತೆಯ ವರ್ಣನೆಯಿದೆ. ವೀರರಸದಿಂದ ಕೂಡಿದ ಈ ಮಹಾಕಾವ್ಯದಲ್ಲಿ ಋತುಗಳ ಮತ್ತು ಪ್ರಕೃತಿ ಚಿತ್ರಣ ಸೊಗಸಾಗಿ ಬಂದಿದೆ. ವೈದರ್ಭಿ ಶೈಲಿಯಲ್ಲಿ ರಚಿತವಾಗಿರುವ ಇದರ ಭಾಷೆ ಸರಳ ಮತ್ತು ಸ್ಪಷ್ಟ. ಕಾಳಿದಾಸನ ಪ್ರಭಾವ ವಿಶೇಷವಾಗಿ ಕಾಣಬರುತ್ತದೆ. ಈತ ಶಿವಸ್ತುತಿ ಎಂಬ ಕಾವ್ಯವನ್ನೂ ಬರೆದಿದ್ದಾನೆ ಎನ್ನಲಾಗಿದೆ.

ಕರ್ಣಸುಂದರೀ ಕವಿಯು ಚಾಳುಕ್ಯ ರಾಜಾಸ್ಥಾನದಲ್ಲಿದ್ದಾಗ ಬರೆದ ನಾಟಕ. ವಿಕ್ರಮದೇವ (ಚಾಳುಕ್ಯರಾಜ) ತನಗಿತ್ತ ರಾಜಮನ್ನಣೆಗೆ ಮಾರುಹೋಗಿ ಆ ಚಾಳುಕ್ಯವಂಶದ ರಾಜನೊಬ್ಬ ಕರ್ಣದೇವ (ಭೀಮದೇವನ ಮಗ) ವಿದ್ಯಾಧರಸುಂದರಿಯೋರ್ವಳೊಡನೆ ಬೆಳೆದ ಪ್ರೇಮ ಕಥೆಯೊಂದನ್ನು ಇಲ್ಲಿ ಚಿತ್ರಿಸಲಾಗಿದೆ.

ಚೋರಪಂಚಾಶಿಕಾ, ನೂರಾರು ಪದ್ಯಗಳಲ್ಲಿ ಪ್ರೇಮಿಗಳೀರ್ವರ ಮಧುರ ಬಾಂಧವ್ಯವನ್ನು ಉನ್ಮಾದಕ ಶೃಂಗಾರದಿಂದ ಚಿತ್ರಿಸಿರುವ ರಸಿಕ ಕಾವ್ಯ. ಈ ರಸಿಕ ಕೃತಿಗೆ ಗಣಪತಿಶರ್ಮ ಮತ್ತು ರಾಮೋಪಾಧ್ಯಾಯ ಬಸವೇಶ್ವರ ಎಂಬವರು ವ್ಯಾಖ್ಯಾನ ಬರೆದಿದ್ದಾರೆ. (ಜಿ.ಎಂ.)

**ಬಿಸ್ಮಾರ್ಕ್, ಆಟೋಫಾನ್:** 1815–98. 19ನೆಯ ಶತಮಾನದ ಯುರೋಪಿನ ಪ್ರಸಿದ್ಧ ಅರಸರಲ್ಲಿ ಅದ್ವಿತೀಯ ವ್ಯಕ್ತಿ ಹಾಗೂ ರಾಜನಿಪುಣ. ಇವನು ಬರ್ಲಿನ್‌ನ ಪೂರ್ವಭಾಗದ, ಪ್ರಷ್ಯದ ಹಳೆಯ ಪ್ರಾಂತ್ಯವಾದ ಮಾರ್ಕ್‌ಬಾರ್ಡನ್ ಬರ್ಗಿನ, ಆಸ್ಟ್ರೋ–ಪ್ರಷ್ಯದ ಕುಟುಂಬದಲ್ಲಿ 1815ರಲ್ಲಿ ಜನಿಸಿದ. ಈತನ ತಂದೆ ಫರ್ಡಿನ್ಯಾಂಡ್–ವಾನ್–ಬಿಸ್ಮಾರ್ಕ್ ಭೂ ಒಡೆತನ ಹೊಂದಿದ್ದು, ಕೆಲಕಾಲದವರೆಗೆ ಪ್ರಷ್ಯದ ಸೇನೆಯಲ್ಲಿ ಅಧಿಕಾರಿಯಾಗಿದ್ದ. ಈತನ ತಾಯಿ ವಿಲ್‌ಹೆಟ್‌ಮೇನ್‌ಕೆನ್ ಮೂಲತಃ ಶ್ರೀಮಂತ ಮನೆತನಕ್ಕೆ ಸೇರಿದವಳಾಗಿದ್ದಳು. ವಿದ್ಯಾಭ್ಯಾಸ ಮುಗಿಸಿದ ಅನಂತರ ಇವನು ಒಂದು ಸಣ್ಣ ಇಲಾಖೆಯಲ್ಲಿ ಅಧಿಕಾರಿಯಾಗಿ ನೇಮಕಗೊಂಡ. ತರುವಾಯ ಹೊಸದಾಗಿ ನಿರ್ಮಾಣಗೊಂಡ ಪ್ರಷ್ಯದ ಮಂತ್ರಿಮಂಡಲದ ಸದಸ್ಯನಾದ. ಇಲ್ಲಿ ಇವನು ರಾಜನ ಸ್ಥಾನ ಹೊಂದಿ, ಪ್ರತಿಗಾಮಿ ರಾಜಕಾರಣಿಯಾಗಿ ಮೆರೆದ. ಅನಂತರ 1858ರಲ್ಲಿ ರಷ್ಯಾದಲ್ಲಿ ಪ್ರಷ್ಯದ ರಾಯಭಾರಿಯಾಗಿ ಸೇವೆ ಸಲ್ಲಿಸಿದ. 1862ರಲ್ಲಿ ಈತನನ್ನು ಪ್ರಷ್ಯದ ರಾಯಭಾರಿಯಾಗಿ ಫ್ರಾನ್ಸ್‌ಗೆ ಕಳುಹಿಸಲಾಯಿತು. ಅಟ್ಟೊ ಎಡ್ವರ್ಡ್ ಲಿಯೋಪೋಲ್ಡ್, ರಾಜಕುಮಾರ, ವಾನ್ ಬಿಸ್ಮಾರ್ಕ್, ಲೆನಿನ್‌ಬರ್ಗ್‌ನ ಡ್ಯೂಕನು 1862–90ರವರೆಗೆ, ಪ್ರಷ್ಯದ ಪ್ರಧಾನಮಂತ್ರಿ ಹಾಗೂ ಅಧ್ಯಕ್ಷನಾಗಿದ್ದ ಈತ ಜರ್ಮನಿಯ ಹರಿದುಹೋದ ರಾಜ್ಯಗಳನ್ನು ಒಂದುಗೂಡಿಸಿ ಏಕೀಕರಣ ಹೊಂದಲು ಶ್ರಮಿಸಿದ. ಈತ 1867ರಿಂದ ಉತ್ತರಜರ್ಮನಿ ಒಕ್ಕೂಟದ ಛಾನ್ಸೆಲರ್ ಆದ. 1871ರಲ್ಲಿ ಜರ್ಮನಿಯು ಸಾಮ್ರಾಜ್ಯವಾದಾಗ, ಅದರ ಮೊದಲ ಛಾನ್ಸೆಲರ್ ಆಗಿ ನೇಮಕಗೊಂಡ. 1865ರಲ್ಲಿ ಸ್ಕೂಹಾನ್ ಹ್ಯಾಸೆನ್ ಬಿಸ್ಮಾರ್ಕ್‌ನ ಕೌಂಟ್ ಆಗಿ ನೇಮಕಗೊಂಡ. 1870ರಲ್ಲಿ ಲಾಯನ್‌ಬರ್ಗ್‌ನ ಡ್ಯೂಕನಾದ. ಕೊನೆಗೆ 1871ರಲ್ಲಿ ಇವನು ರಾಜಕುಮಾರನಾದ. ತನ್ನನ್ನು ಕೆಲಸದಿಂದ ಹೊರಹಾಕುವ ಸಮಯದಲ್ಲಿ ನೀಡಿದ ಡ್ಯೂಕನ ಬಿರುದುಗಳನ್ನು ಮೊದಲಿಗೆ ಆತ ನಿರಾಕರಿಸಿದರೂ ಕೊನೆಯಲ್ಲಿ ಅದನ್ನು ಒಪ್ಪಿಕೊಂಡ. ಕಾರಣ ಅದು ಸಾರ್ವಭೌಮನಲ್ಲದ ಒಬ್ಬ ಅಧಿಕಾರಿಗೆ ದೊರೆಯುವ ಅತಿ ಘನತೆಯ ಬಿರುದಾಗಿತ್ತು. ಇವನು ಕಬ್ಬಿಣದ ಛಾನ್ಸೆಲರ್ ಅಂತಲೂ ಹೆಸರುವಾಸಿಯಾಗಿದ್ದಾನೆ.



1861 ಪ್ರಷ್ಯದ ಹೊಸ ರಾಜನಾಗಿ ಒಂದನೆಯ ವಿಲಿಯಮ್ ಆಡಳಿತದ ಚುಕ್ಕಾಣಿಯನ್ನು ಹಿಡಿದ. ಹೊಸ ರಾಜ ಮೇಲಿಂದ ಮೇಲೆ, ಅತಿಯಾದ ಉದಾರ ಮನೋಭಾವನೆ ಹೊಂದಿದ್ದ ಪ್ರಷ್ಯದ ಡಯಟ್ ಜೊತೆ ಜಗಳವಾಡುತ್ತಿದ್ದ. ಆದ್ದರಿಂದ ರಾಜ ವಿಲಿಯಂ ಇವನನ್ನು ಮಂತ್ರಿಯಾಗಿ, ಅಧ್ಯಕ್ಷನಾಗಿ ಹಾಗೂ ವಿದೇಶಾಂಗ ಮಂತ್ರಿಯಾಗಿ ನೇಮಿಸಿದ. ಇವನ ವಿರುದ್ಧವಾಗಿ, ಮೇಲಿಂದ ಮೇಲೆ ರಾಜ ಒಂದನೆಯ ವಿಲಿಯಂಗೆ ಮೇಲ್ಮನೆ ಅಥವಾ ಬುಂಡೆಸ್ರಾಟ್‌ನಿಂದ ದೂರುಗಳು ಬಂದರೂ ರಾಜ ಇವನನ್ನು ಅಧಿಕಾರದಿಂದ ತೆಗೆಯಲಿಲ್ಲ. ಜರ್ಮನ್ ಒಕ್ಕೂಟದ ಸದಸ್ಯರನ್ನೆಲ್ಲ ಒಂದು ರಾಷ್ಟ್ರದಲ್ಲಿ ಸೇರಿಸುವಲ್ಲಿ ಈತನ ಪಾತ್ರ ಪ್ರಮುಖವಾದುದು. ಇವನು ಮಂತ್ರಿ ಹಾಗೂ ಅಧ್ಯಕ್ಷನಾಗಿ ಜರ್ಮನಿ ಏಕೀಕರಣವನ್ನು ಕುರಿತು ತನ್ನ ಮೊದಲ ಭಾಷಣದಲ್ಲಿ ನೀಡಿದ ಹೇಳಿಕೆ ಪ್ರಖ್ಯಾತವಾಗಿದೆ. ಇವನ ಪ್ರಕಾರ ಜರ್ಮನಿಯ ಐಕ್ಯತೆ ಯುದ್ಧಗಳಿಂದ ಮಾತ್ರ ಸಾಧ್ಯ. ಶಾಂತಿ ಸಂಧಾನಗಳಿಂದ ಅಲ್ಲ. ಈ ನಂಬಿಕೆಯನ್ನು ಇವನು ತನ್ನ ಪ್ರಖ್ಯಾತ ಹೇಳಿಕೆಯೊಂದರಲ್ಲಿ ಸ್ಪಷ್ಟಪಡಿಸಿದ್ದಾನೆ. ಭಾಷಣಗಳಿಂದಾಗಲೀ ಮತ್ತು ಬಹುಮತಗಳಿಂದಾಗಲೀ ಬೃಹತ್ ಸಮಸ್ಯೆಗಳು ಬಗೆಹರಿಯುವುದಿಲ್ಲ. ಇದು 1848 ಮತ್ತು 1849ರ ದೊಡ್ಡ ತಪ್ಪು, ಅದು ರಕ್ತ ಮತ್ತು ಕಬ್ಬಿಣದಿಂದ. 1870ರ ಫ್ರಾಂಕೋ–ಪ್ರಷ್ಯನ್ ಕದನ ಪ್ರಷ್ಯಾಗೆ ದೊಡ್ಡ ಪ್ರಮಾಣದ ಜಯ ತಂದುಕೊಟ್ಟಿತು. ಇದರಿಂದ ಪ್ರೇರಿತನಾದ ಬಿಸ್ಮಾರ್ಕನು, ಜರ್ಮನಿಯಲ್ಲಿ ಏಕೀಕರಣ ಸ್ಥಾಪಿಸಲು ನಿರ್ಧರಿಸಿದ.

ಅಲ್ಲದೆ ಈತನ ಎಲ್ಲಾ ಒಪ್ಪಂದಗಳು ಕೈಗೂಡಿದವು. 1871 ಜನವರಿ 18ರಂದು ರಾಜ ವಿಲಿಯಂ, ಜರ್ಮನಿಯ ಚಕ್ರವರ್ತಿಯಾದ. ಹಾಗೆಯೇ ಇವನು ಜರ್ಮನಿಯ ಸಾರ್ವಭೌಮ ಛಾನ್ಸೆಲರ್ ಆದ. ಮುಂದಿನ ವರ್ಷಗಳಲ್ಲಿ ಇವನ ಪ್ರಮುಖ ರಾಜಕೀಯ ಉದ್ದೇಶವೆಂದರೆ, ಜರ್ಮನಿಯಲ್ಲಿ ಕೆಥೊಲಿಕರ ಪ್ರಭಾವವನ್ನು ಮೊಟಕುಗೊಳಿಸುವುದು. ಈ ಯೋಜನೆಯನ್ನು ಸಾಂಸ್ಕೃತಿಕ ಸಂಘರ್ಷ ಎಂದು ಕರೆಯಲಾಗಿದೆ. ಈ ಸಂಘರ್ಷವು ಕೆಥೊಲಿಕ್‌ನ ಸೆಂಟರ್ ಪಕ್ಷವನ್ನು ಬಲಶಾಲಿಯನ್ನಾಗಿಸಿತು. ಹಾಗಾಗಿ ಇವನು 1878ರಲ್ಲಿ ಸಾಂಸ್ಕೃತಿಕ ಸಂಘರ್ಷವನ್ನು ತೊರೆದ.

ಇವನು ಸಮಾಜವಾದಿಗಳ ಹೋರಾಟ ಹಾಗೂ ಸಮಾಜವಾದಿ ಪ್ರಜಾಸತ್ತಾತ್ಮಕ ಪಕ್ಷದ ಬೆಳೆವಣಿಗೆಯಿಂದ ಚಿಂತಿತನಾಗಿದ್ದ. ಇದರಿಂದ ಬೇಸರಗೊಂಡು ಸಮಾಜವಾದಿಗಳನ್ನು ಮತ್ತು ಅವರ ಸಿದ್ಧಾಂತವನ್ನು ಜರ್ಮನಿಯಲ್ಲಿ ಹತ್ತಿಕ್ಕಲು ಪ್ರಯತ್ನಿಸಿದ. ಕಾರ್ಮಿಕರ ಕ್ಷೇಮಕ್ಕಾಗಿ ಹಲವಾರು ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತರುವ ಮುಖಾಂತರ ಅವರನ್ನು ಸಮಾಧಾನ ಪಡಿಸಿದ. 1883ರಲ್ಲಿ ಕಾರ್ಮಿಕರಿಗೆ ರೋಗರುಜಿನಾದಿಗಳ ವಿರುದ್ಧ ವಿಮೆ ಮಾಡಿಸುವ ಕಾನೂನು ಜಾರಿಗೆ ಬಂದಿತು. 1884ರಲ್ಲಿ ಗಿರಣಿ ಮಾಲೀಕರು ಕಾರ್ಮಿಕರಿಗೆ ಅಪಘಾತ ವಿಮೆ ಮಾಡಿಸುವುದು ಕಡ್ಡಾಯವಾಯಿತು. 1889ರಲ್ಲಿ ಕಾರ್ಮಿಕರಿಗೆ, ಅಶಕ್ತ ಮತ್ತು ವೃದ್ಧಾಪ್ಯ ವಿಮೆ ಯೋಜನೆ ಜಾರಿಗೆ ಬಂದಿತು. ಇತರ ಕಾನೂನುಗಳು, ಮಹಿಳೆಯರು ಮತ್ತು ಮಕ್ಕಳ ದುಡಿಮೆಯನ್ನು ನಿಲ್ಲಿಸಿತು. ಈ ಸುಧಾರಣೆಗಳನ್ನು ಯುರೋಪಿನ ಮೊದಲ ಕಾರ್ಮಿಕ ಕಾನೂನುಗಳೆಂದು ಪರಿಗಣಿಸಲಾಗಿದೆ.

ಇವನು ಪಾಲಿಸಿದ ವಿದೇಶಾಂಗ ನೀತಿ, ಅವನ ರಾಜನೀತಿ ನೈಪುಣ್ಯ ಹಾಗೂ ರಾಜತಂತ್ರ ಕೌಶಲ್ಯಕ್ಕೆ ಅತ್ಯುತ್ತಮ ನಿದರ್ಶನ. ಜರ್ಮನಿಯ ಪ್ರಾಬಲ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಶಾಂತಿ ನೆಲೆಸುವಂತೆ ನೋಡಿಕೊಂಡ. ರೂಸೋ-ತುರ್ಕರ ಕದನದಲ್ಲಿ ರಷ್ಯ ಒಟ್ಟೊಮನ್ ಸಾಮ್ರಾಜ್ಯದ ಮೇಲೆ ಜಯ ಸಾಧಿಸಿದಾಗ, ಇವನು 1878ರ ಬರ್ಲಿನ್ ಕಾಂಗ್ರೆಸ್ ಒಪ್ಪಂದದಲ್ಲಿ ನೆರವಾದ. ತದನಂತರ ಸ್ಯಾನ್‌ಸ್ಟಿಫಾನೋ ಒಪ್ಪಂದದಲ್ಲಿ ಬರ್ಲಿನ್ ಒಪ್ಪಂದವನ್ನು ಮರು ಪರಿಶೀಲಿಸಿ, ರಷ್ಯಗೆ ದೊರೆತ ಹಲವಾರು ರಿಯಾಯಿತಿಗಳನ್ನು ಕಡಿತಗೊಳಿಸಲಾಯಿತು. ಇದರಿಂದ ಬೇಸರಗೊಂಡ ರಷ್ಯ ಜಯದ ವಿಷಯದಲ್ಲಿ ಇವನ ಸಂಧಾನದ ಕ್ರಮವನ್ನು ಖಂಡಿಸಿದ. ಮೂವರು ಸಾಮ್ರಾಟರ ಒಕ್ಕೂಟ ಮುರಿದುಬಿದ್ದ ಕಾರಣ ಇವನು 1879ರಲ್ಲಿ ಆಸ್ಟ್ರಿಯ ಜೊತೆ ದ್ವಿಪಕ್ಷ ಒಪ್ಪಂದವನ್ನು ಮಾಡಿಕೊಂಡ. ತರುವಾಯ 1882ರಲ್ಲಿ ಇಟಲಿಯ ಈ ಒಕ್ಕೂಟವನ್ನು ಸೇರಿದಾಗ ಇದು ತ್ರಿಪಕ್ಷ ಒಪ್ಪಂದವಾಗಿ ಮಾರ್ಪಾಡಾಯಿತು. ರಷ್ಯದ ಜೊತೆ ಉತ್ತಮ ಸಂಬಂಧವನ್ನು ಹೊಂದಲು ನಡೆಸಿದ ಇವನ ಪ್ರಯತ್ನ ವಿಫಲವಾಯಿತು. ಮೂವರು ಚಕ್ರವರ್ತಿಗಳ ಒಕ್ಕೂಟ 1881ರಲ್ಲಿ ಮರು ಸ್ಥಾಪಿತವಾದರೂ ತಕ್ಷಣವೇ ಮುರಿದುಬಿದ್ದಿತು. ಅಲ್ಲದೆ 1887ರ ಒಪ್ಪಂದ 1890ರಲ್ಲಿ ಅಂತ್ಯ ಕಂಡಿತು.

ಇವನು ತನ್ನ ಆಳಿಕೆಯ ಮೊದಲಲ್ಲಿ ವಸಾಹತು ವಿಸ್ತರಣೆ ಕುರಿತಂತೆ ಯಾವುದೇ ಆಸಕ್ತಿ ಹೊಂದಿರಲಿಲ್ಲ. ಕಾರಣ ವಸಾಹತುಗಳನ್ನು ಪಡೆದು, ಅದರ ರಕ್ಷಣಾ ಜವಾಬ್ದಾರಿಯನ್ನು ಹೊಂದಿ, ತನ್ನ ಸಂಪತ್ತನ್ನು ಕಳೆದುಕೊಳ್ಳುವ ಮನಸ್ಸಿರಲಿಲ್ಲ. ಆದರೆ 1880ರ ಆರಂಭದಲ್ಲಿ ಜರ್ಮನಿ ಆಫ್ರಿಕವನ್ನು ಪಡೆಯಲು ಇತರ ಯುರೋಪಿನ ಶಕ್ತಿಗಳ ಜೊತೆ ಸೇರಿಕೊಂಡಿತು.

ಜರ್ಮನಿಯ ಹೊಸರಾಜನಾದ ಎರಡನೆಯ ವಿಲಿಯಂ 1888ರಲ್ಲಿ ಸಿಂಹಾಸನ ರೂಢನಾದ. ರಾಜ ಇವನ ವಿದೇಶಾಂಗ ನೀತಿಯನ್ನು ತಿರಸ್ಕರಿಸಿದ. ಹಾಗೆಯೇ ಇವನು ರಾಜು ವಿಲಿಯಂ ತಂದ ಸುಧಾರಣಾನೀತಿಗಳನ್ನು ಕನಿಷ್ಠ ಮರ್ಯಾದೆಯಿಂದ ಕಂಡ. ಅಲ್ಲದೆ 1890ರ ಆರಂಭದಲ್ಲಿ ಸಮಾಜವಾದಿಗಳ ವಿರುದ್ಧ ಕಾನೂನನ್ನು ಜಾರಿಗೆ ತರಲು ಪ್ರಯತ್ನಿಸಿದ. ಇಲ್ಲಿಂದ ಇವನು ಮತ್ತು ಎರಡನೆಯ ವಿಲಿಯಂನ ನಡುವೆ ತಿಕ್ಕಾಟ ಪ್ರಾರಂಭವಾಯಿತು. ಕಾರಣ ಇವನು ಜರ್ಮನಿಯ ರಾಜಕೀಯದಲ್ಲಿ ತನಗಿದ್ದ ಅಧಿಕಾರವನ್ನು ಯಾರೊಂದಿಗೂ ಅನುಭವಿಸಲೂ ತಯಾರಿರಲಿಲ್ಲ, ಅಂತಹದರಲ್ಲಿ ಎರಡನೆಯ ವಿಲಿಯಂ ಇವನ ಎಲ್ಲ ವಿಷಯಗಳಲ್ಲಿ ಕೈ ಹಾಕಿ ಸ್ವತಂತ್ರವಾಗಿ ವರ್ತಿಸತೊಡಗಿದುದು ಇವನಿಗೆ ನುಂಗಲಾರದ ತುತ್ತಾಯಿತು. ಬೇಸರಗೊಂಡು ಇವನು 1890ರಲ್ಲಿ ತನ್ನ ಪದವಿಗೆ ರಾಜೀನಾಮೆ ಯಿತ್ತು ನಿವೃತ್ತಿ ಹೊಂದಿದ್ದ. ಆಗ ಈತನಿಗೆ 75 ವರ್ಷ. ಇದೇ ಸಮಯದಲ್ಲಿ ಈತನಿಗೆ ಲಯನ್‌ಬರ್ಗ್‌ನ ಡ್ಯೂಕನೆಂದು ಬಿರುದು ನೀಡಲಾಯಿತು. ಇವನು ತನ್ನ ಕೊನೆಯ ದಿನಗಳನ್ನು, ತನ್ನ ಜೀವನದ ನೆನಪುಗಳನ್ನು ಮೆಲಕು ಹಾಕುತ್ತಾ ಕಳೆದ. 1898ರಲ್ಲಿ ಇವನು ಫ್ರೈಡರಿಚ್ಸ್‌ರ್ಕ್‌ನಲ್ಲಿ ನಿಧನನಾದ. ಅಲ್ಲಿ ಈತನ ಸಮಾಧಿ ಇದೆ. (ಎಸ್‌ಯು.ಎಸ್.)

**ಬೀಕರ್ ಸಂಸ್ಕೃತಿ:** ಪಶ್ಚಿಮ ಯುರೋಪ್ ಖಂಡದ ಅಂತಿಮ ನವಶಿಲಾಯುಗ -ಆದಿ ಕಂಚಿನಯುಗದ ಪ್ರ.ಶ.ಪೂ.2800-1900 ಕಾಲಮಾನದ ಒಂದು ಪ್ರಾಗೈತಿಹಾಸಿಕ ಸಂಸ್ಕೃತಿ. ಪುರಾತತ್ತ್ವಜ್ಞ ಜಾನ್ ಅಬರ್‌ಕ್ರಾಂಬಿ ಈ ಸಂಸ್ಕೃತಿಯ ವಿಶಿಷ್ಟ ಪಾನಬಟ್ಟಲು ಮಾದರಿಯನ್ನು (ಬೀಕರ್) ಗುರುತಿಸಿ ಅದೇ ಹೆಸರನ್ನು ಈ ಸಂಸ್ಕೃತಿಗೆ ಕೊಟ್ಟ. ಈ ವಿಶಿಷ್ಟ ಪಾತ್ರೆ ಬೋರಲು ಹಾಕಿದ ಗಂಟೆಯಾಕಾರದಲ್ಲಿರುವ ಅಂಚಿನಲ್ಲಿ ಮೂತಿಯುಳ್ಳ ಲೋಟ. ಮಾದಕ ಪಾನೀಯವನ್ನು ಕುಡಿಯಲು ಇದನ್ನು ಉಪಯೋಗ ಮಾಡುತ್ತಿದ್ದರು. ಕೆಲವು ಲೋಟಗಳಲ್ಲಿ ಬಿಯರ್ ಮತ್ತು ಹುಳಿಬಂದ ಜೇನುತುಪ್ಪದಿಂದ ತಯಾರಾದ ಮಾದಕ ದ್ರವ್ಯಗಳು ಲೋಟಕ್ಕೆ ಅಂಟಿರುವುದನ್ನೂ ಗುರುತಿಸಲಾಗಿದೆ. ಈ ಪ್ರಕಾರದ ಲೋಟಗಳಲ್ಲಿ ತಾಮ್ರದ ಅದಿರನ್ನು ಕರಗಿಸಿ ಲೋಹವನ್ನಾಗಿ ಪರಿವರ್ತಿಸಲು ಭಟ್ಟಿಯನ್ನು ಉಪಯೋಗಿಸಲಾಗುತ್ತಿತ್ತು. ಮತ್ತೆ ಕೆಲವು ಲೋಟಗಳಲ್ಲಿ ಜೈವಿಕ ಪದಾರ್ಥಗಳ ಅವಶೇಷಗಳಿದ್ದವು. ಈ ಲೋಟಗಳ ಮೇಲೆ ಹುರಿಯ ಉಬ್ಬು ಚಿತ್ರ, ಹಲ್ಲಿನ ಗುರುತಿನ ಮುದ್ರೆ ಮೊದಲಾದ ಚಿತ್ರಗಳ ಅಲಂಕಾರಗಳಿದ್ದವು. ಶವವನ್ನು ಕುಣಿಯಲ್ಲಿ ಇಲ್ಲವೇ ಬೃಹತ್ ಶಿಲಾ ಕೋಣೆಗಳಲ್ಲಿ ಹೂಳುವ ಪದ್ಧತಿಯಿತ್ತು. ಇವರು ಬಿಲ್ಲು, ಬಾಣ ಅಲ್ಲದೆ ತಾಮ್ರದ ಕಠಾರಿ ಮತ್ತು ಈಟಿ ಮೊನೆಗಳನ್ನು ಬೇಟೆಯಲ್ಲಿ ಉಪಯೋಗಿಸುತ್ತಿದ್ದರು. ಇವರು ತಾಮ್ರ ಮತ್ತು ಚಿನ್ನದ ನಿಕ್ಷೇಪಗಳನ್ನು ಹುಡುಕುತ್ತಾ ಲೋಹ ತಂತ್ರಗಾರಿಕೆಯನ್ನು ಯುರೋಪ್ ಖಂಡದ ಹಲವು ಪ್ರದೇಶಗಳಲ್ಲಿ ಹರಡುವಂತೆ ಮಾಡಿದರು. ಕ್ರಮೇಣ ಇವರು ಗಂಡುಗೊಡಲಿ (ಬ್ಯಾಟಲ್ ಆ್ಯಕ್ಸ್) ಸಂಸ್ಕೃತಿಯ ಜನರೊಡನೆ ಬೆರೆತು ಮಧ್ಯ ಯುರೋಪಿನಿಂದ ಪೂರ್ವ ಇಂಗ್ಲೆಂಡಿನವರೆಗೆ ಹರಡಿದರು. (ಎ.ಎಸ್.;ಎನ್.ಎಲ್.)

**ಬೀದರ್:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣ. ಇದರ ಹಿಂದಿನ ಹೆಸರು ಬಿದರೆ. ಮಹಮ್ಮದಾಬಾದ್-ಬೀದರ್ ಎಂದೂ ಬಳಕೆಯಲ್ಲಿದೆ. ಬೆಂಗಳೂರಿನ ಉತ್ತರಕ್ಕೆ 670ಕಿಮೀ ದೂರದಲ್ಲೂ ಗುಲ್ಬರ್ಗಕ್ಕೆ ಈಶಾನ್ಯದಲ್ಲಿ 122ಕಿಮೀ ದೂರದಲ್ಲೂ ಇದೆ.

ಬಿದರೆ ಪ್ರಾಚೀನವಾದ ಪಟ್ಟಣ. ಇತಿಹಾಸಪ್ರಸಿದ್ಧ ಸ್ಥಳ. ಮಹಾಭಾರತದ ಕಾಲಕ್ಕೆ ಇದು ವಿದುರ ನಗರವೆಂದು ಪ್ರಸಿದ್ಧಿ ಪಡೆದಿತ್ತೆಂದೂ ನಳ-ದಮಯಂತಿಯರ ಪ್ರಣಯದ ಉದ್ಯಾನವೆಂದೂ ಪ್ರತೀತಿ. ರಾಜಾ ಭೀಮಸೇನನ ರಾಜಧಾನಿ ಇದೇ ಆಗಿತ್ತೆಂದು ಊಹೆ. ಇದಕ್ಕೆ ಬಿದರೂರುಪುರವೆಂತಲೂ ಕರೆದದ್ದುಂಟು. ಬರಬರುತ್ತ ಬಿದರೆ ಅನೇಕ ಹೆಸರುಗಳನ್ನು ಹೊಂದಿ ಇಸ್ಲಾಮೀ ಸುಲ್ತಾನರ ಆಳಿಕೆಯಲ್ಲಿ ಮಹಮ್ಮದಾಬಾದ್-ಬೀದರ್ ಎಂದೂ

ಸೋಲಾ ಕಂಬ ಮಸೀದಿ

ಕರೆಯಲಾಗಿತ್ತು. ಚಾರಿತ್ರಿಕವಾಗಿ ಈ ಪಟ್ಟಣದಲ್ಲಿಯೇ ದೊರಕಿರುವ ಕೆಲವು ನವಶಿಲಾಯುಗದ ಆಯುಧಗಳು ಈ ಪಟ್ಟಣದ ಪ್ರಾಚೀನತೆಯನ್ನು ಸೂಚಿಸುತ್ತವೆ. ಕಲ್ಯಾಣದ ಚಾಳುಕ್ಯರ ಕಾಲದಿಂದಲೂ ಇದು ಪ್ರಸಿದ್ಧವಾಗಿತ್ತೆಂದು ಇಲ್ಲಿ ದೊರೆತಿರುವ ಅನೇಕ ಚಾಳುಕ್ಯ ರೀತಿಯ ಶಿಲ್ಪಗಳು ಮತ್ತು ಶಾಸನಗಳಿಂದ ವ್ಯಕ್ತವಾಗುತ್ತದೆ. ಚಾಳುಕ್ಯರ ಬಲ ಕುಗ್ಗಿದ ಮೇಲೆ ವಾರಂಗಲ್ಲಿನ ಕಾಕತೀಯರು ಇದರ ಮೇಲೆ ಆಧಿಪತ್ಯ ಹೊಂದಿದ್ದರು. ಮಹಮ್ಮದ್-ಬಿನ್-ತುಘಲಕ್ ಕಾಕತೀಯರ ಮೇಲೆ ದಂಡೆತ್ತಿ ಬಂದಾಗ ಬಿದರೆಯನ್ನು ಮುತ್ತಿ (ಸು.1325) ಅದನ್ನು ಗೆದ್ದುದಾಗಿ ತಿಳಿದುಬರುತ್ತದೆ. ಇದಕ್ಕೆ ಆಗಲೇ ಒಂದು ಬಲವಾದ ಕೋಟೆಯಿತ್ತು. ಇದನ್ನು ವಶಪಡಿಸಿಕೊಳ್ಳಲು ತುಘಲಕನು ಹೆಚ್ಚು ಶ್ರಮ ಪಡಬೇಕಾಯಿತು. ಮುಂದೆ ಬೀದರ್ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತು. ಹಿಂದಿನ ಕಾಲದ ದೇವಾಲಯಗಳು, ಬಸದಿಗಳು ಮುಂತಾದವುಗಳ ಕುರುಹುಗಳನ್ನು ಇಲ್ಲಿ ದೊರೆಯುವ ಶಿಲ್ಪದ ತುಣುಕುಗಳಿಂದ ಮಾತ್ರ ಗುರುತಿಸಬಹುದು. ಇಲ್ಲಿದ್ದ ಕೋಟೆಯೊ ಮುಂದೆ ಬಹಮನಿ ಸುಲ್ತಾನರು ಕಟ್ಟಿಸಿದ ವಿಸ್ತಾರವಾದ ಕೋಟೆಯೊಳಗೆ ಸೇರಿಹೋಯಿತು.

1341ರಲ್ಲಿ ಮಹಮ್ಮದ್-ಬಿನ್-ತುಘಲಕನ ಅಧೀನದಲ್ಲಿ ನಸ್ರತ್‌ಖಾನ್ ಬೀದರ್‌ನಿಂದ ಆಳತೊಡಗಿದ. ಆದರೆ 1345ರಲ್ಲಿ ಅವನು ದಂಗೆಯೆದ್ದ. ಅದನ್ನು ಅಡಗಿಸಲು ಬಂದ ಅಮೀರ್ ಅಲಿ ತಾನೇ ಗುಲ್ಬರ್ಗ, ಬೀದರ್ ಗಳನ್ನು ಗೆದ್ದು ಆಳಲಾರಂಭಿಸಿದ. ಕುತ್ಲೂಖಾನ ಅವನನ್ನು ಸೋಲಿಸಿ ಸೆರೆಹಿಡಿದರೂ ಮುಂದೆ 1347ರಲ್ಲಿ ಜಫರ್‌ಖಾನ ತುಘಲಕನ ಸೈನ್ಯವನ್ನು ಸೋಲಿಸಿ ದಖನ್ನಿಗೆ ತಾನೇ ಸ್ವತಂತ್ರ ರಾಜನಾಗಿ ಆಳತೊಡಗಿದ. ಅವನು ತನ್ನ ರಾಜ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದಾಗ ಬಿದರೆ ಒಂದು ಪ್ರಾಂತದ ಮುಖ್ಯ ಪಟ್ಟಣವಾಗಿ ಅಭಿವೃದ್ಧಿ ಹೊಂದತೊಡಗಿತು. ಮೊದಲು ಆಳಿದ ಬಹಮನಿ ಅರಸರ ಕಾಲದಲ್ಲಿ ಬೆಳೆಯುತ್ತ ಹೋದ ಈ ಊರು ದಕ್ಷಿಣದ ದೊಡ್ಡ ನಗರಗಳಲ್ಲಿ ಒಂದೆಂದು ಖ್ಯಾತಿಪಡೆಯಿತು. ಇಮ್ಮಡಿ ಮಹಮ್ಮದ್ ಷಾ ಇಲ್ಲಿ ಶಾಲೆಗಳನ್ನು ತೆರೆದಿದ್ದ. ಇಲ್ಲಿನ ಕೋಟೆ ಕೊತ್ತಲಗಳನ್ನು ಬಲಪಡಿಸಿದ. ಬಹಮನಿ ರಾಜ್ಯದ ಏಳನೆಯ ದೊರೆ ಷಂಸುದ್ದೀನನನ್ನು ಇಲ್ಲಿಯೇ ಬಂಧನದಲ್ಲಿಡಲಾಗಿತ್ತು. 1424ರಲ್ಲಿ ಬಹಮನಿ ಅರಸ ಅಹ್ಮದ್ ತನ್ನ ರಾಜಧಾನಿ ಯನ್ನು ಗುಲ್ಬರ್ಗದಿಂದ ಬೀದರ್‌ಗೆ ಬದಲಾಯಿಸಿದ. ಅಂದಿನಿಂದ ಬೀದರ್ ಸ್ವರೂಪ

ಬದಲಾಯಿತು. ವಿಸ್ತಾರವಾದ ರಾಜ್ಯದ ರಾಜಧಾನಿಯಾದ ಮೇಲೆ ಬಲವಾದ ಕೋಟೆಯನ್ನು ನಿರ್ಮಿಸಿ ಫಿರಂಗಿಗಳನ್ನಳವಡಿಸಲಾಯಿತು. ಸುಲ್ತಾನ ಕೋಟೆಯಲ್ಲಿ ಒಂದು ದೊಡ್ಡ ಅರಮನೆಯನ್ನು ಕಟ್ಟಿಸಿದ. ಇತರ ಸರದಾರರೂ ತಮತಮಗೆ ಭವ್ಯವಾದ ಕಟ್ಟಡಗಳನ್ನು ನಿರ್ಮಿಸಿಕೊಂಡರು. ಅನೇಕ ಮಸೀದಿಗಳೇ ಮುಂತಾದ ಬೃಹತ್ ಕಟ್ಟಡಗಳು ನಿರ್ಮಾಣವಾದವು. 15ನೆಯ ಶತಮಾನದ ಪ್ರಥಮಾರ್ಧದಲ್ಲಿ ಬೀದರ್ ಹಲವು ಧಾಳಿಗಳಿಗೆ ಈಡಾಗಿತ್ತು. 1460–61ರ ಸುಮಾರಿನಲ್ಲಿ ಮಾಳವದ ಮಹಮ್ಮದ್ ಖಿಲ್ಜಿ ಬೀದರನ್ನು ಮುತ್ತಿ ಕೆಲಕಾಲ ವಶಪಡಿಸಿಕೊಂಡಿದ್ದು ಇಲ್ಲಿನ ಹಲವು ಕಟ್ಟಡಗಳನ್ನು ನಾಶಮಾಡಿದ. ಆದರೆ ಇದನ್ನು ನಿಜಾಂ ಷಾ (1461–63) ಪುನರ್ನಿರ್ಮಿಸಿದ. ಬಹಮನಿಯರ ಅನಂತರವೂ ಈ ಪಟ್ಟಣ ಬರೀದ್‌ಶಾಹಿಗಳ ಆಳ್ವಿಕೆಯಲ್ಲಿ ರಾಜಧಾನಿಯಾಗಿಯೇ ಮೆರೆಯಿತು. 1619ರಲ್ಲಿ ಬೀದರ್ ಆದಿಲ್‌ಶಾಹಿಗಳ ವಶವಾಯಿತಾದರೂ ಪಟ್ಟಣದ ಪ್ರಾಮುಖ್ಯತೆ ಅಷ್ಟೇನೂ ಇಳಿಯಲಿಲ್ಲ. ಇಬ್ರಾಹಿಂ ಆದಿಲ್‌ಷಾನ ಕಾಲದಲ್ಲಿ ಅವನ ಅಧಿಕಾರಿಯಾಗಿದ್ದ ಮಲ್ಲಿಕ್ ಮರ್ಜಾನ ಬಿದರೆಯ ಕೋಟೆ ಮತ್ತು ಅರಮನೆಗಳನ್ನು ದುರಸ್ತುಪಡಿಸಿದ. 1656ರಲ್ಲಿ ಔರಂಗಜೇಬ್ ಇಲ್ಲಿಗೆ ಮುತ್ತಿಗೆ ಹಾಕಿ ಗೆದ್ದು ಇದನ್ನು ಮುಗಲ್ ಚಕ್ರಾಧಿಪತ್ಯಕ್ಕೆ ಸೇರಿಸಿಕೊಂಡ. ಆಗ ಬಿದರೆಯ ಹೆಸರು ಜಾಫರಾಬಾದ್ ಎಂದಾಯಿತು. ಅನಂತರ ಹಲವು ಮೊಗಲ್ ಅಧಿಕಾರಿಗಳು ಇಲ್ಲಿ ಆಡಳಿತ ನಡೆಸಿದರು. ಕೊನೆಗೆ 1724ರಲ್ಲಿ ನಿಜಾಮ್–ಉಲ್–ಮುಲ್ಕ್ ಆಸಫ್ ಝಾ ಸ್ವತಂತ್ರನಾದಾಗ ಈ ಪಟ್ಟಣ ಅವನ ರಾಜ್ಯಕ್ಕೆ ಸೇರಿತು. ಅನಂತರ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಮುಂದೆ ಜಿಲ್ಲೆಯ ಮುಖ್ಯ ಪಟ್ಟಣವಾಗಿ ಮಾತ್ರ ಉಳಿಯಿತು. ಇಲ್ಲಿನ ಕಟ್ಟಡಗಳು ಅರಮನೆಗಳು ಕ್ರಮೇಣ ನಶಿಸುತ್ತ ಬಂದುವು.

ಈ ಪಟ್ಟಣದ ಸುತ್ತ ಅನೇಕ ನೀರಿನ ಝರಿಗಳಿರುವುದು ಒಂದು ವಿಶೇಷ. ಇಂಥವುಗಳಲ್ಲಿ ಒಂದಾದ ಪಾಪನಾಶಿನಿ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿನ ಬೃಹದಾಕಾರದ ಸ್ವಯಂಭೂ ಶಿವಲಿಂಗ ಯಾತ್ರಿಕರ, ಭಕ್ತರ ಮನಸ್ಸನ್ನು ಆಕರ್ಷಿಸುತ್ತದೆ. ಗುಹಾಂತರ ದೇವಾಲಯವೆಂದು ಪ್ರಸಿದ್ಧವಾದ ನರಸಿಂಹ ಝರಣಿ ಇನ್ನೊಂದು ಕ್ಷೇತ್ರ. ನಾಡಿನ ನಾನಾ ಕಡೆಗಳಿಂದ ಇಲ್ಲಿಗೆ ಜನರು ಬರುತ್ತಾರೆ. ಇಲ್ಲಿನ ವಿಶೇಷವೆಂದರೆ ಗುಹೆಯಲ್ಲಿರುವ ನರಸಿಂಹ ದೇವರ ದರ್ಶನಕ್ಕೆ ಹೋಗಬೇಕಾದರೆ ಎದೆಮಟ್ಟದ ನೀರಿನಲ್ಲಿಯೇ ಹೋಗಬೇಕು. ನೀರಿನ ಪಾತಳಿ ಎಲ್ಲ ಕಾಲದಲ್ಲಿಯೂ ಒಂದೇ ಪ್ರಮಾಣದಲ್ಲಿರುತ್ತದೆ. ಭಕ್ತರು ಈ ಕ್ಷೇತ್ರದಲ್ಲಿ ಅನೇಕ ಮಂಗಳ ಕಾರ್ಯಗಳನ್ನು ಮಾಡುತ್ತಾರೆ. ಗುರುನಾನಕರು ಬೀದರ್‌ಗೆ ಬಂದ ಒಂದು ಸಂದರ್ಭದಲ್ಲಿ ಅವರ ಪಾದಸ್ಪರ್ಶದಿಂದ ಚಿಮ್ಮಿ ಬಂದದ್ದೆನ್ನುವ ನಾನಕ್ ಝರಾ ಬಹು ಪ್ರಸಿದ್ಧ. ಸಿಖ್ ಜನರಿಗೆ ಪವಿತ್ರವಾದ ಈ ಸ್ಥಳದಲ್ಲಿ ಈಗ ಸುಂದರ ಕಟ್ಟಡಗಳು ನಿರ್ಮಾಣವಾಗಿವೆ. ಶುಕ್ರಾಚಾರ್ಯರು ಅನುಷ್ಠಾನ ಮಾಡಿದ ಸ್ಥಳವೆಂದು ಶುಕ್ಲತೀರ್ಥ ಪ್ರಸಿದ್ಧಿ ಪಡೆದಿದೆ. ಬೀದರ್‌ನಿಂದ 2 ಕಿಮೀ ದೂರದಲ್ಲಿರುವ ಅನಂತಶಯನ ಮಂದಿರದಲ್ಲಿರುವ ಅನಂತಶಯನ ದೇವರ ಮೂರ್ತಿ ಬಹಳ ಸುಂದರವಾಗಿದೆ. ಬೀದರ್‌ನಲ್ಲಿ ಮುಸ್ಲಿಮರ ಪವಿತ್ರಕ್ಷೇತ್ರಗಳು ಹಲವಿವೆ. ಮುಲ್ತಾನಿ ಪಾಷಾ ದರ್ಗಾ, ಅಬುಲ್ ಫೈಜ ದರ್ಗಾ, ಅಷ್ಟೂರಿನ ಗುಂಬಜಗಳು ಅತ್ಯಂತ ಪ್ರಸಿದ್ಧವಾಗಿವೆ.

ಬೀದರ್‌ನಲ್ಲಿ ಅಳಿದುಳಿದಿರುವ ಅನೇಕ ಪ್ರಾಚೀನ ಕಟ್ಟಡಗಳು ಒಂದು ಕಾಲದಲ್ಲಿ ಈ ನಗರ ಮೆರೆದ ವೈಭವದ ಸ್ವರೂಪವನ್ನು ಕೆಲಮಟ್ಟಿಗೆ ಸಾರುತ್ತವೆ. ಇಲ್ಲಿನ ಕೋಟೆ ಈ ಪಟ್ಟಣದ ಬಹುಭಾಗವನ್ನು ಒಳಗೊಂಡಿದೆ. ಅನೇಕ ಹೆಬ್ಬಾಗಿಲು ಬುರುಜುಗಳಿಂದಲೂ ಎತ್ತರವಾದ ಕಲ್ಲಿನ ಗೋಡೆಗಳಿಂದಲೂ ನಿರ್ಮಿತವಾಗಿರುವ ಈ ಕೋಟೆಯ ಸುತ್ತಲೂ ಹುಟ್ಟುಬಂಡೆಯಲ್ಲಿಯೇ ಆಳ ಹಾಗೂ ಅಗಲವಾಗಿ ಕೊರೆದ ಕಂದಕವಿದೆ. ಅಹ್ಮದ್ ಷಾ 1429ರಲ್ಲಿ ಈ ಕೋಟೆಯ ನಿರ್ಮಾಣಕಾರ್ಯವನ್ನು ಆರಂಭಿಸಿ 1432ರಲ್ಲಿ ಪೂರೈಸಿದ. ಮಾಳವದ ಮಹಮ್ಮದ್ ಖಿಲ್ಜಿ ಒಮ್ಮೆ ನಾಶಮಾಡಿದ ಈ ಕೋಟೆಯನ್ನು ಮೊದಲಿದ್ದಂತೆಯೇ ನಿಜಾಮ ಷಾ (1461–63) ಮತ್ತೆ ಕಟ್ಟಿಸಿದ. ಅನಂತರ ಮಹಮ್ಮದ್ ಷಾನ ಕಾಲದಲ್ಲಿ (1463–82) ಮದ್ದಿನ ಬಳಕೆ ಹೆಚ್ಚಾದುದರಿಂದ ಅದಕ್ಕನುಗುಣವಾಗಿ ಕೋಟೆಯ ರಚನೆ ಬದಲಾವಣೆ ಹೊಂದಿ ಫಿರಂಗಿಗಳನ್ನು ಅಳವಡಿಸಿದುದಲ್ಲದೆ ಗೋಡೆಗಳನ್ನು ಮತ್ತಷ್ಟು ಭದ್ರಪಡಿಸಲಾಯಿತು.

ಕೋಟೆಯ ಒಳಗಿರುವ ತಖ್ತ್‌ಮಹಲ್ ಅಹ್ಮದ್ ಷಾ ಕಟ್ಟಿಸಿದ ಅರಮನೆ. ಈ ಅರಮನೆಯ ಮುಂದೆ ವಿಶಾಲವಾದ ಭವ್ಯ ಸಭಾಂಗಣವಿದ್ದು ಅಲ್ಲಿ ಸುಲ್ತಾನನ ಪ್ರಸಿದ್ಧವಾದ ಸಿಂಹಾಸನ ವಿರುತ್ತಿದ್ದುದರಿಂದ ಅದಕ್ಕೆ ಈ ಹೆಸರು ಬಂದಿದೆ. ಗುಮ್ಮಟದ ಒಳಭಾಗದಲ್ಲಿ ಬಳ್ಳಿಗಳು, ರೇಖಾಕೃತಿಗಳು ಮತ್ತು ಅಲಂಕಾರಾಕ್ಷರಗಳನ್ನು ಮನೋಹರವಾದ ರೀತಿಯಲ್ಲಿ ಬಿಡಿಸಿತ್ತು. ಈಗ ಕಟ್ಟಡದ ಬಹು ಭಾಗ ಬಿದ್ದುಹೋಗಿದೆ. ಬಿದರೆಯಲ್ಲಿರುವ ಜಾಮಿ ಮಸೀದಿ ಮತ್ತು ಸೋಲಾಕಂಭಾ ಮಸೀದಿಗಳು ಇದೇ ಕಾಲದ ಉತ್ತಮ ನಿರ್ಮಾಣಗಳು.

ಬೀದರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಬಹಮನಿ ಅರಸ ಅಹ್ಮದ್ ಷಾನ ಗೋರಿ ಬೀದರ್‌ಗೆ ಸೇರಿದಂತೆಯೇ ಇರುವ ಅಷ್ಟೂರಿನಲ್ಲಿದೆ. ಈ ಗೋರಿಯನ್ನು ಅಹ್ಮದನ ಮಗ 2ನೆಯ ಅಲಾಉದ್ದೀನ್ (1436–58) ಕಟ್ಟಿಸಿದ. 2ನೆಯ ಅಲಾಉದ್ದೀನನ ಗೋರಿ ಮತ್ತು ಹಜರತ್ ಖಲೀಲುಲ್ಲಾನ ಗೋರಿ (ಚೌಖಂಡಿ)–ಈ ಎರಡೂ ಕಟ್ಟಡಗಳೂ ಉನ್ನತವೂ ಭವ್ಯವೂ ಆಗಿವೆ.

ಗುಂಬಜ್ ದರ್ವಾಜಾಕ್ಕೆ ಹೊಂದಿಕೊಂಡಂತೆ ಇರುವ ಷಾ ಬರುಜು ಮಹಮ್ಮದ್ ಷಾನ ಕಾಲದ್ದು. ಅವನು ಕೊಲೆ ಸಂಚೊಂದರಿಂದ ಪಾರಾಗಿದ್ದರ ನೆನಪಿಗಾಗಿ ಇದನ್ನು ಕಟ್ಟಿಸಿದ. ಮಹಮ್ಮದ್‌ಷಾನ ಗೋರಿ ಸಹ ದೊಡ್ಡ ಕಟ್ಟಡ.

ಪಟ್ಟಣದ ಮಧ್ಯದಲ್ಲಿರುವ ಪ್ರಸಿದ್ಧವಾದ ಮಹ್ಮೂದ್ ಗಾವಾನನ ಮದರಸಾ ಭಾರತದಲ್ಲಿಯೇ ಒಂದು ಅಪರೂಪದ ಕಟ್ಟಡ. ಪರ್ಷಿಯ ದೇಶದ ಮದರಸಾಗಳ ಮಾದರಿಯಲ್ಲಿರುವ ಈ ಕಟ್ಟಡ ವಿಶಾಲವಾದುದಾಗಿತ್ತು. ಇದು ನಡುವೆ ಪ್ರಾಂಗಣ ಮತ್ತು ಸುತ್ತಲೂ ತರಗತಿಯ ಕೋಣೆಗಳು, ಪ್ರಾರ್ಥನೆಯ ಹಜಾರ, ಪುಸ್ತಕ ಭಂಡಾರ, ಪ್ರಾಧ್ಯಾಪಕರ ಕೋಣೆಗಳು, ವಿದ್ಯಾರ್ಥಿಗಳ ಕೋಣೆ ಇತ್ಯಾದಿಗಳೊಡನೆ ಮೂರಂತಸ್ತಿನಲ್ಲಿ ಮೇಲೆದ್ದಿರುವ ಕಟ್ಟಡ. ಇದರ ಎರಡು ಕಡೆಯೂ ಉನ್ನತವಾದ ಮಿನಾರುಗಳಿದ್ದುವು. ಈ ಕಟ್ಟಡದ ಮುಕ್ಕಾಲು ಭಾಗ ಈಗ ಬಿದ್ದುಹೋಗಿದೆ. ಮಿನಾರಿನ ಮೇಲೆ ಬಗೆಬಗೆಯ ರೀತಿಯಲ್ಲಿ ಬಣ್ಣ ಬಣ್ಣದ ಸೂಡು ಚಿತ್ರಗಳ ಬಿಲ್ಲೆಗಳಿದ್ದ ಕುರುಹನ್ನು ಈಗಲೂ ಕಾಣಬಹುದು.

ಬಹಮನಿ ಅರಸರ ಕಾಲದ ಈ ಮೇಲಿನ ಕಟ್ಟಡಗಳೆಲ್ಲಾ ಅವರ ಆಳ್ವಿಕೆಯಲ್ಲಿ ಇಲ್ಲಿ ಬೆಳೆದ ಹಿಂದು–ಮುಸ್ಲಿಂ ವಾಸ್ತುರೀತಿಯ ಉತ್ತಮ ಉದಾಹರಣೆಗಳಾಗಿವೆ. ಇವುಗಳಲ್ಲಿ ಸ್ಥೂಲತೆ ಎದ್ದುಕಾಣುತ್ತದೆ. ಅತಿ ದಪ್ಪನಾಗಿ ಭಾರವಾಗಿರುವಂತೆ ಭಾಸವಾಗುತ್ತದೆ. ಇವುಗಳಲ್ಲಿ ಅನೇಕ ಬಗೆಯ ಕಮಾನುಗಳನ್ನು ಉಪಯೋಗಿಸಲಾಗಿದೆ. ಬಣ್ಣಬಣ್ಣದ ಚಿತ್ರಕೆಲಸಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ. ಸೂಡುಚಿತ್ರಗಳ ಬಿಲ್ಲೆಗಳನ್ನು ಹೇರಳವಾಗಿ ವಿನಿಯೋಗಿಸಲಾಗಿದೆ. ಅಲಂಕರಣಕ್ಕೆ ಹಿಂದು ರೀತಿಯನ್ನು ಹೆಚ್ಚಾಗಿ ಬಳಸಲಾಗಿದೆ.

ಗುರುನಾನಕ್ ಮಂದಿರ

ಬರೀದ್‌ಶಾಹಿ ಸುಲ್ತಾನರು ಬೀದರ್‌ನಲ್ಲಿ ಸ್ವತಂತ್ರರಾಗಿ ಆಳಲಾರಂಭಿಸಿದ ಮೇಲೆ ಕಟ್ಟಡಗಳ ನಿರ್ಮಾಣದ ರೀತಿಯಲ್ಲಿ ನಿರ್ದಿಷ್ಟವಾದ ಬದಲಾವಣೆಗಳಾದುವು. ಅಲಿಬರೀದ್ ಕಟ್ಟಿಸಿದ ಕಟ್ಟಡಗಳಲ್ಲಿ ರಂಗೀನ್ ಮಹಲ್ ಮತ್ತು ಅವನು ತನಗಾಗಿ ಕಟ್ಟಿಸಿಕೊಂಡ ಗೋರಿ (1577) ಮುಖ್ಯವಾದುವು. ಬಣ್ಣ ಬಣ್ಣದ ಬಿಲ್ಲೆಗಳಿಂದ ಅಲಂಕೃತವಾಗಿದ್ದುದರಿಂದ ಅವನ ಅರಮನೆಗೆ ರಂಗೀನ್ ಮಹಲ್ ಎಂಬ ಹೆಸರು ಬಂದಿತು. ಈ ಅರಮನೆಯ ಮುಖ್ಯ ಆಕರ್ಷಣೆಯೆಂದರೆ ಅದರಲ್ಲಿರುವ ಸುಂದರವಾದ ಅತ್ಯಂತ ನಾಜೂಕಿನ ಮರದ ಕೆತ್ತನೆ ಮತ್ತು ಚಿತ್ರಗಳಿಗೆ ಧಾರಾಳವಾಗಿ ಬಳಸಿರುವ ಮುತ್ತಿನ ಚಿಪ್ಪುಗಳು. ಆದರೆ ಅದರಲ್ಲಿ ವಿಸ್ತಾರ ಅಥವಾ ಭವ್ಯತೆಯ ಅಭಾವ ಎದ್ದುಕಾಣುತ್ತದೆ. ಅದರಲ್ಲಿ ಮುಖ್ಯ ಹಜಾರ, ಅದರ ಪಕ್ಕಗಳಲ್ಲಿ ಎರಡೆರಡು ಮತ್ತು ಹಿಂದೆ ನಾಲ್ಕು ಕೋಣೆಗಳು ಇವೆ. ಮಧ್ಯದ ಹಜಾರದ ನಾಲ್ಕು ಕಂಬಗಳು ಅತಿ ಸೂಕ್ಷ್ಮವಾದ ಕೆತ್ತನೆಯಿಂದ ಕೂಡಿವೆ. ಅಲಿಬರೀದನ ಗೋರಿಯ ಮೇಲಿನ ಗುಮ್ಮಟ ಕಟ್ಟಡದ ಗಾತ್ರಕ್ಕೆ ತುಂಬ ದೊಡ್ಡದಾಗಿದ್ದು ಭಾರವಾಗಿರುವಂತೆ ಭಾಸವಾಗುತ್ತದೆ. ಕಟ್ಟಡ ಬಹಮನೀ ಸುಲ್ತಾನರ ಗೋರಿಗಳಂತೆ ಸ್ಥೂಲವಾಗಿ ಮೊದ್ದು ಮೊದ್ದಾಗಿಲ್ಲದೆ ಅದರಲ್ಲಿ ನಾಜೂಕಿನ ಶಿಲ್ಪವನ್ನು ಕಾಣಬಹುದು. ಚೌಕಾಕೃತಿಯ ಕಟ್ಟಡದ ನಾಲ್ಕು ಕಡೆಯೂ ತೆರೆದ ಕಮಾನುಗಳಿದ್ದು ಮಂಟಪದಂತೆ ಕಾಣುವ ಅದರ ಹೊರಗೋಡೆಯ ಮೇಲಿನ ಪಟ್ಟಿಕೆಗಳ ಅಲಂಕರಣದಲ್ಲಿ ಮಧ್ಯದ ಗುಮ್ಮಟದ ಅನುಕರಣೆ ಇರುವುದು ಹಿಂದು ಶೈಲಿಯ ಪ್ರಭಾವವನ್ನು ಸೂಚಿಸುತ್ತದೆ. ಈ ಊರಿನಲ್ಲಿರುವ ಕಾಲಿ ಮಸೀದಿ ಈ ಕಾಲದ ಚಿಕ್ಕದಾದ ಸುಂದರವಾದ ಕಟ್ಟಡ. ಕರಿಯ ಕಲ್ಲಿನಿಂದ ಕಟ್ಟಿರುವುದರಿಂದ ಈ ಹೆಸರು ಬಂದಿದೆ. ಬೀದರ್ ಆದಿಲ್‌ಶಾಹಿಗಳಿಗೆ ಸೇರಿಹೋದ ಮೇಲೆ ಇಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯಲಿಲ್ಲ. ಹಜರತ್ ಮಕಾನ್ ಖಾದ್ರಿ ದರ್ಗಾ, ಖಬಾರಿ ಮಸೀದಿಯಂತಹ ಕೆಲವು ಕಟ್ಟಡಗಳು ಈ ಕಾಲದಲ್ಲಿ ನಿರ್ಮಿತವಾದುವಾದರೂ ಅವುಗಳಿಗೆ ಯಾವ ಪ್ರಾಮುಖ್ಯವೂ ಇಲ್ಲ.

ಮೊಗಲರ ಆಳಿಕೆಯಲ್ಲಿ ಕೋಟೆಯನ್ನು ಭದ್ರಪಡಿಸಿದುದಲ್ಲದೆ ಕೆಲವು ಮಸೀದಿಗಳನ್ನು ಕಟ್ಟಲಾಯಿತು. ಝರಣಿ ನರಸಿಂಹ ಕ್ಷೇತ್ರದ ಬಳಿ ಔರಂಗಜೇಬ್ ಕಟ್ಟಿಸಿದ ಮಸೀದಿ ಅಂಥವುಗಳಲ್ಲೊಂದು. ಬೀದರ್‌ನಲ್ಲಿ ಮೊಗಲ್ ಅಧಿಕಾರಿಯಾಗಿದ್ದ ಹುಸಾಮುದ್ದೀನ್‌ಖಾನನ ಕಾಲದಲ್ಲಿ ಒಂದು ಮಸೀದಿ ಮತ್ತು ಚಾಂದಿನೀ ಚಬೂತರಗಳನ್ನು ಕಟ್ಟಲಾಯಿತು. ಆದರೆ ಈ ಕಾಲದ ಕಟ್ಟಡಗಳು ಕಲೆಯ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದಿಲ್ಲ. (ಎಂ.ಎಚ್.;ಎಲ್.ಆರ್.ಕೆ.)

**ಬೀಬಿ-ಕ-ಮಕ್ಬರ:** ಮಹಾರಾಷ್ಟ್ರ ರಾಜ್ಯದ ಔರಂಗಾಬಾದಿನಲ್ಲಿರುವ ಪ್ರಸಿದ್ಧ ತಾಜ್‌ಮಹಲ್ ಕಟ್ಟಡದಂತಿರುವ ಒಂದು ಸುಂದರ ನಿರ್ಮಾಣ. ಇದು ಮೊಗಲ್ ಚಕ್ರವರ್ತಿ ಔರಂಗಜೇಬ್‌ನ ರಾಣಿ ರಬಿಯ-ವುಲ್-ದುರಾನಿ ಅಥವಾ ದಿಲ್‌ರಾಸ್ ಬಾನು ಬೇಗಂ ಗೋರಿಯ ಮೇಲೆ ನಿರ್ಮಿಸಿದ ಸಮಾಧಿ ಮಂದಿರ. ಇದನ್ನು ಔರಂಗಜೇಬ್ ಮತ್ತು ದಿಲ್ ರಾಸ್ ಬಾನು ಬೇಗಂ ಮಗನಾದ ರಾಜಕುಮಾರ ಅಜ್ಞಹರ್ ತಾಯಿಯ ನೆನಪಿನಲ್ಲಿ 1650-57ರಲ್ಲಿ ನಿರ್ಮಿಸಿದನೆಂಬ ಅಭಿಪ್ರಾಯವಿದೆ. ಮಹಾದ್ವಾರದಲ್ಲಿರುವ ಒಂದು ಶಾಸನ,



ಬೀಬಿ-ಕ-ಮಕ್ಬರ

ಹಿಜಿರಾ 1071 ರಲ್ಲಿ ಶಿಲ್ಪಿ ಅತ್-ವುಲ್ಲಾ ವಿನ್ಯಾಸವನ್ನು ರೂಪಿಸಿದ ಮತ್ತು ಹನ್ಸ್‌ಪತ್ ರೈ ಮೇಲ್ವಿಚಾರಣೆ ಮಾಡಿದರೆಂದು ತಿಳಿಸುತ್ತದೆ. ಈ ಸಮಾಧಿ ಮಂದಿರ ತಾಜ್ ಮಹಲನ್ನೂ ಹೋಲುವುದರಿಂದ ಇದನ್ನು ದಖನ್ನಿನ ತಾಜ್ ಮಹಲ್ ಎಂದು ಹೇಳುವರು. ಈ ಮಂದಿರ ನಿರ್ಮಿಸಲು 6,68,203=7 (ಆರು ಲಕ್ಷದ ಅರವತ್ತೆಂಟು ಸಾವಿರದ ಇನ್ನೂರ ಮೂರು ರೂಪಾಯಿ ಮತ್ತು ಏಳು ಆಣೆ) ವೆಚ್ಚವಾಗಿದೆ ಎಂದು ತವರಿಖ್ ನಾಮಹ್‌ನಲ್ಲಿ ಗುಲಾಮ್ ಮುಸ್ತಫ್ ಉಲ್ಲೇಖಿಸಿದ್ದಾನೆ.

ಮೊಗಲ್ ವಾಸ್ತುಶಿಲ್ಪ ಶೈಲಿ, ಮೊಗಲ್ ಉದ್ಯಾನ ಮತ್ತು ನೀರಿನ ಕಾಲುವೆಗಳಿಂದ ಪ್ರಸಿದ್ಧವಾಗಿರುವ ದಖನ್ನಿನ ಮಧ್ಯಕಾಲೀನ ಸ್ಮಾರಕ ಇದೊಂದೆ. ಇದರ ಸುಂದರವಾದ ಕುಸುರಿನ ಕೆಲಸದ ಹಿತ್ತಾಳೆ ಬಾಗಿಲುಗಳು, ಶಂಖಗಾರೆಯ ಎಲೆ ಬಳ್ಳಿಗಳ ಉಬ್ಬು ಅಲಂಕರಣೆ, ಅಮೃತ ಶಿಲೆಯ ತೆರೆಗಳು ಈ ಕಾಲದ ಭಾರತದ ಕಲೆಯ ಔನ್ನತ್ಯಕ್ಕೆ ನಿದರ್ಶನವಾಗಿದೆ. ಇದು ಸು.458×275 ಮೀ ವಿಸ್ತೀರ್ಣವುಳ್ಳ ಆವರಣದಲ್ಲಿದೆ. ಉದ್ಯಾನವನ ನೀರಿನ ಕಾಲುವೆ ಮತ್ತು ಚಿಮ್ಮುವ ನೀರಿನ ಬುಗ್ಗೆಗಳಿಂದ ಸುತ್ತುವರಿದಿದೆ. ದಕ್ಷಿಣ ಭಾಗದಲ್ಲಿರುವ ಪ್ರವೇಶ ದ್ವಾರದಲ್ಲಿ ಎಲೆ ಗೊಂಚಲಿನ ಬಳ್ಳಿಯ ವಿನ್ಯಾಸದಿಂದ ಹಿತ್ತಾಳೆಯಲ್ಲಿ ಅಲಂಕರಿಸಿದ ಮರದ ಬಾಗಿಲಿದೆ. ಉಳಿದ ಮೂರು ಕಡೆಯ ಗೋಡೆಯ ಮಧ್ಯದಲ್ಲಿ ತೆರೆದ ಮಂಟಪವಿದೆ. ಅದನ್ನು ಮಸೀದಿಯಂತೆ ಉಪಯೋಗಿಸಲಾಗುತ್ತಿದೆ. ದಿವಾನ್-ಎ-ಆಮ್ ಮತ್ತು ದಿವಾನ್-ಎ-ಖಾಸ್ ಕಟ್ಟಡಗಳಿವೆ. ಈ ಕಟ್ಟಡಗಳಲ್ಲಿ (ಈಗಲೂ ಹಿಂದಿನ ಹೊಳಪು, ಕಾಂತಿಯನ್ನೊಳಗೊಂಡ, ವಿವಿಧ ವರ್ಣಗಳ)ಮೊಗಲ್ ಮತ್ತು ನಿಜಾಮ್ ಕಾಲದ ಸುಂದರ ವರ್ಣ ಚಿತ್ರಗಳಿವೆ. ಸಾಧಾರಣವಾದ ತೆರೆಗೋಡೆ ಮುಖ್ಯ ಮಂದಿರಕ್ಕೆ ಒಯ್ಯುತ್ತದೆ. ಸಮಾಧಿ ಮಂದಿರಕ್ಕೆ ಪಶ್ಚಿಮದಲ್ಲಿ ಇರುವ ಮಸೀದಿಯನ್ನು ನಿಜಾಮರ (1857)ಕಾಲದಲ್ಲಿ ಕಟ್ಟಲಾಗಿದೆ. ಇದು ನಾಲ್ಕು ಕಮಾನುಗಳು ಮತ್ತು ನಾಲ್ಕು ಮೂಲೆಯಲ್ಲಿನ ಚಿಕ್ಕ ಮಿನಾರುಗಳಿಂದ ಕೂಡಿದೆ.

ಸಮಾಧಿ ಮಂದಿರ ಎತ್ತರವಾದ ಚಚ್ಚೌಕವಾಗಿರುವ ಜಗತಿಯ ಮೇಲಿದ್ದು ಹತ್ತಲು ನಾಲ್ಕು ಕಡೆಯೂ ಮೆಟ್ಟಲುಗಳಿವೆ. ಆದರೆ ನಿರ್ಮಾಣವಾದ ಅನಂತರ ಪಶ್ಚಿಮ ದಿಕ್ಕಿನಲ್ಲಿರುವುದನ್ನು ಮುಚ್ಚಲಾಗಿದೆ. ಕಟ್ಟಡ ಸುಂದರ ಕೆತ್ತನೆಯಿಂದ ಕೂಡಿದೆ. ನೆಲಮಾಳಿಗೆಯಲ್ಲಿ ಗೋರಿಯಿದೆ. ಇದರ ಮಧ್ಯಭಾಗವನ್ನು ಕಂದು ಬಣ್ಣದ ಅಗ್ನಿಶಿಲೆಯಿಂದ ರಚಿಸಲಾಗಿದೆ. ಮೆಟ್ಟಲುಗಳಿಂದ ಇಳಿದರೆ ಮಧ್ಯ ಗೋರಿಯಿದೆ. ಹೆಚ್ಚು ಅಲಂಕರಿಸಿದ ಅಮೃತಶಿಲೆಯ ಅಡ್ಡತೆರೆಯೊಂದು ಸಮಾಧಿಯನ್ನು ಸುತ್ತುವರೆದಿದೆ. ಸುತ್ತಲಿರುವ ಅಷ್ಟಕೋನಾಕೃತಿಯ ಕೈಸಾಲೆಯಿಂದ ನೆಲಮಾಳಿಗೆಯಲ್ಲಿರುವ ಸಮಾಧಿ ಕಾಣುತ್ತದೆ. ಸಮಾಧಿ ಮಂದಿರ ಮಧ್ಯದ ಗುಮ್ಮಟದಲ್ಲಿ ಕೆತ್ತನೆಯಿರುವ ಜಾಲರಿ ಗವಾಕ್ಷಿಯ ಜತೆಯಲ್ಲಿ ಪುಷ್ಪ ಅಲಂಕಾರದ ಫಲಕಗಳಿವೆ. ಬೀಬಿ-ಕ-ಮಕ್ಬರ ತನ್ನ ಸೂಕ್ಷ್ಮವಾದ ಪುಷ್ಪ ಮತ್ತು ಎಲೆಗೊಂಚಲ ಅಲಂಕಾರದಲ್ಲಿ ಆಗ್ರಾದ ತಾಜಮಹಲನ್ನು ಹೋಲುತ್ತದೆ ಹಾಗೂ ದಖನ್ನಿನ ಸುಂದರ ಕಟ್ಟಡಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆ. (ಕೆ.ವಿ.ಆರ್.)

**ಬೀರಬಲ್:** 1528-86. ಮುಗಲ್ ಚಕ್ರವರ್ತಿ ಅಕ್ಬರನ ಆಸ್ಥಾನದಲ್ಲಿದ್ದ ಒಬ್ಬ ಕವಿ, ಯೋಧ ಮತ್ತು ಮುತ್ಸದ್ದಿ. ಬೀರಬಲ್ಲನನ್ನು ಕುರಿತಂತೆ ನಿಖರವಾದ ಸಂಗತಿಗಳೇನೂ ತಿಳಿದು ಬರುವುದಿಲ್ಲ. ಇವನ ಬುದ್ಧಿ ಚಾತುರ್ಯಕ್ಕೆ ನಿದರ್ಶನವಾಗುವ ಅನೇಕ ಕಥೆಗಳು ಜನಪ್ರಿಯವಾಗಿವೆ. ಅವುಗಳಿಂದ ಇವನ ಬಗ್ಗೆ ಕೆಲವು ವಿಷಯಗಳು ಅಸ್ಪಷ್ಟವಾಗಿ ತಿಳಿದು ಬರುತ್ತವೆ. ಅಕ್ಬರನ ನಿಕಟವರ್ತಿಯೂ ಅಚ್ಚುಮೆಚ್ಚಿನವನೂ ಆಗಿದ್ದ ಇವನ ಹೆಸರು ಮಹೇಶದಾಸ್ ಬೀರಬಲ್. ಇವನೊಬ್ಬ ರಜಪೂತ ಮುಖಂಡನೆಂದೂ ಹೇಳುವರು. ಉತ್ತರ ಪ್ರದೇಶ ರಾಜ್ಯದ ನೈರುತ್ಯ ದಿಕ್ಕಿನಲ್ಲಿ ಯಮುನಾನದಿ ದಡದ ಮೇಲಿರುವ ಕಾಲ್ಪೀ ಎಂಬ ಗ್ರಾಮದಲ್ಲಿ (ಈಗ ಒಂದು ಪಟ್ಟಣ) 1528ರಲ್ಲಿ ಜನಿಸಿದನೆಂದು ತಿಳಿದುಬರುತ್ತದೆಯಾದರೂ ಈತನ ಜನ್ಮಸ್ಥಳ ಕುರಿತು ವಾದವಿವಾದಗಳಿವೆ. ಈತ ಕವಿಯಾಗಿ ತನ್ನ ಜೀವನ ಪ್ರಾರಂಭಿಸಿದನೆಂದೂ ಚಕ್ರವರ್ತಿ ಮತ್ತು ಅಬುಲ್ ಫಜಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಿದ್ದನೆಂದೂ ತಿಳಿದು ಬರುವುದು. ಈತ ಸಾಧಾರಣ ಲೆಕ್ಕಿಗನ ಸ್ಥಾನದಿಂದ ಸ್ವಪ್ರತಿಭೆ, ಪರಿಶ್ರಮ ಹಾಗೂ ಚತುರತೆಯ ಫಲವಾಗಿ ರಾಜನ ಪ್ರೀತಿಗೆ ಪಾತ್ರನಾಗಿ ಉನ್ನತ ಪದವಿಗೇರಿದನೆಂದು ಹೇಳುವರು. ಅಕ್ಬರನ ಸಖ್ಯ ಗಳಿಸುವುದಕ್ಕೆ ಮೊದಲು ಬೀರಬಲ್ ಕೆಲಕಾಲ ಭಥಾದ ರಾಜಾ ರಾಮಚಂದ್ರನ ಸೇವೆಯಲ್ಲೂ ಅನಂತರ ಅಂಬರರಾಜನ ಆಸ್ಥಾನದಲ್ಲೂ ಇದ್ದನೆಂದು ಹೇಳುವುದಲ್ಲದೆ ಅಕ್ಬರನ ದೃಷ್ಟಿಗೆ ಈತ ಹೇಗೆ ಬಿದ್ದ ಮತ್ತು ಇವರಿಬ್ಬರ ಮಧ್ಯೆ ಗೆಳೆತನ ಹೇಗೆ ಬೆಳೆಯಿತೆಂಬುದಕ್ಕೆ ಕೆಲವು ಕಲ್ಪಿತವೆನ್ನುವ ಹೇಳಿಕೆಗಳೂ ಉಂಟು. ಒಟ್ಟಿನಲ್ಲಿ ಪ್ರೌಢ ವಿದ್ಯಾಭ್ಯಾಸವಿಲ್ಲದಿದ್ದರೂ ಬೀರಬಲ್ ತನ್ನ ಚಾಕಚಕ್ಯತೆ ಮತ್ತು ಹಾಸ್ಯ ಪ್ರವೃತ್ತಿಯಿಂದಾಗಿ ಅಕ್ಬರನ ಸೇವೆಯಲ್ಲಿದ್ದ ಪ್ರಮುಖ ಆಸ್ಥಾನಿಕರಲ್ಲಿ ಒಬ್ಬನಾಗಿದ್ದನೆನ್ನಬಹುದು. ಈತನ ಹಾಸ್ಯ ಚಟಾಕಿಗಳ ಚತುರತೆಯ ಕಥೆಗಳು ಪ್ರಸಿದ್ಧವಾಗಿವೆ. ಕವಿಯಾದ ಈತನಿಗೆ ಅಕ್ಬರ್ ಕವಿಪ್ರಿಯನೆಂಬ ಬಿರುದನ್ನು ನೀಡಿದ್ದ. ಹಿಂದಿಯಲ್ಲಿ ಈತ ಕವಿತೆಗಳನ್ನು ರಚಿಸಿದ್ದನೆನ್ನುವರು. ಹಿಂದಿನ ಪಂಜಾಬ್ ಪ್ರಾಂತದ ಕಾಂಗ್ರ ಜಿಲ್ಲೆಯ ನಾಗರಕೋಟ್‌ನ ಜಹಗೀರಿಯನ್ನು ಪಡೆದಿದ್ದಲ್ಲದೆ ರಾಜನೆಂಬ ಬಿರುದನ್ನು ಪಡೆದು ರಾಜಾ ಬೀರಬಲ್ ಎಂದು ಗೌರವಿಸಲ್ಪಟ್ಟ ಕೂಡ. ಮುಂದೆ ಕಲೆಂಜರ್ ಮತ್ತು ಬುಂದೇಲ್‌ಖಂಡ ಪ್ರದೇಶವನ್ನು ಜಹಗೀರಿಯಾಗಿ ಪಡೆದ. ಕಾಲಕ್ರಮದಲ್ಲಿ 2,000 ಸೈನಿಕ ಪಡೆಯ ಅಧಿಕಾರಿಯಾಗಿ ಬಡ್ತಿಗೊಂಡ. 1583ರಲ್ಲಿ ಬಾದಷಹನಿಂದ ನ್ಯಾಯಪಾಲನೆಯ ಮುಖ್ಯ ಅಧಿಕಾರಿಯಾಗಿ ನೇಮಕಗೊಂಡ. ಆಸ್ಥಾನದ ದಿನನಿತ್ಯದ ಹಣದ ವಹಿವಾಟನ್ನು ನೋಡಿಕೊಳ್ಳುತ್ತಿದ್ದ. ಅನೇಕ ಸಂದರ್ಭಗಳಲ್ಲಿ ಹಿಂದೂ ರಾಜನ ಜೊತೆ ಸಂಧಾನ ನಡೆಸಲೂ ಇವನನ್ನು ಅಕ್ಬರ್ ಕಳುಹಿಸಿಕೊಡುತ್ತಿದ್ದ. ಎಲ್ಲಕ್ಕೂ ಮಿಗಿಲಾಗಿ ಅಕ್ಬರನ ನಿಕಟವರ್ತಿ ಆಗಿದ್ದ.

ಅಕ್ಬರನ ದೀನ್-ಇ-ಇಲಾಹಿ ಹೊಸ ಧರ್ಮವನ್ನು ಅಂಗೀಕರಿಸಿದ ಪ್ರಮುಖರಲ್ಲಿ ಬೀರಬಲ್ ಒಬ್ಬ. ಬೀರಬಲ್ ಸೂರ್ಯನ ಆರಾಧಕನಾಗಿದ್ದು ಅಕ್ಬರನೂ ಸೂರ್ಯ ನಮಸ್ಕಾರ ಮಾಡುವಂತೆ ಪ್ರಭಾವ ಬೀರಿದ್ದನೆಂದು ಹೇಳುವುದುಂಟು. ಅಕ್ಬರ್ ಏರ್ಪಡಿಸುತ್ತಿದ್ದ ಧರ್ಮ ಸಂಬಂಧಿತ ಚರ್ಚೆಗಳಲ್ಲಿ ಈತ ಪಾಲ್ಗೊಳ್ಳುತ್ತಿದ್ದ. ಅಕ್ಬರ್ ಹಿಂದೂ ಧರ್ಮದ ಬಗ್ಗೆ ಗೌರವ ತಳೆಯುವಂತೆ ಮಾಡುವಲ್ಲಿ ಬೀರಬಲ್ ಅಪಾರ ಪ್ರಭಾವ ಬೀರಿದ್ದ. 1586ರಲ್ಲಿ ಯೂಸುಫ್ ಜಾ ಮೇಲಿನ ಕಾರ್ಯಾಚರಣೆಯಲ್ಲಿ ಮುಗಲ್ ಸೈನ್ಯದ ಮುಂದಾಳಾಗಿ ಕಾದಾಡುತ್ತಿದ್ದಾಗ ಮರಣ ಹೊಂದಿದನೆಂದು ತಿಳಿದುಬರುವುದು. ಆದರೆ ಬೀರಬಲ್ಲನ ಮೃತದೇಹ ಸಿಗದೆ ಅದಕ್ಕೆ ಸಂಸ್ಕಾರವನ್ನು ಮಾಡಲಾಗದಿದ್ದಕ್ಕಾಗಿ ಅಕ್ಬರ್ ಪರಿತಪಿಸಿದನೆಂದೂ ಹೇಳುವರು. ತನ್ನ ಜೀವಿತ ಕಾಲದಲ್ಲಿ ಬೀರಬಲ್ ಉದಾರಬುದ್ಧಿಗೆ ಹೆಸರಾಗಿದ್ದ. ಈತ ಹಾಸ್ಯ ವಿಡಂಬನೆಗಳ ಅನೇಕ ಕವಿತೆಗಳ ಕರ್ತೃವಾಗಿದ್ದನೆಂದೂ ಈತನ ಕಾವ್ಯ ನಾಮ ಬ್ರಹ್ಮದಾಸ್ ಎಂದೂ ಹೇಳುವರು. ಬೀರಬಲ್ಲನ ಮರಣದ ಅನಂತರ ಅವನ ಹಿರಿಯ ಮಗ ಲಾಲನನ್ನು ಅಕ್ಬರ್ ತನ್ನ ಆಸ್ಥಾನದಲ್ಲಿ ಮನ್ಸಬ್ದಾರನನ್ನಾಗಿ ನೇಮಿಸಿಕೊಂಡನೆಂದು ತಿಳಿದುಬರುವುದು. (ಜಿ.ಆರ್.ಆರ್.)

**ಬೂದಿದಿಬ್ಬ:** ನವಶಿಲಾಯುಗದ ಪಶುಪಾಲಕ ವಸತಿ ನೆಲೆಗಳಲ್ಲಿ ಕಂಡುಬರುವ ಸೆಗಣಿಯನ್ನು ಸುಟ್ಟ ಬೂದಿಯಿಂದ ಆದ ದಿಬ್ಬಗಳು (ಆಶ್ ಮೌಂಡ್ಸ್). ಕರ್ನಾಟಕದ ಕೃಷ್ಣ ಮೇಲ್ದಂಡೆ ಪ್ರದೇಶದಲ್ಲಿ, ಭೀಮ–ಕೃಷ್ಣ–ತುಂಗಭದ್ರ ಸಂಗಮ ಪ್ರದೇಶ (ನೆರೆಯ ಆಂಧ್ರಪ್ರದೇಶ) ಭಾಗಗಳು ಸೇರಿದಂತೆ, ನವ ಶಿಲಾತಾಮ್ರ–ಯುಗ ನೆಲೆಗಳಲ್ಲಿ ಅಥವಾ ಅವುಗಳ ಸಮೀಪ ಅತಿಯಾಗಿ ಸುಟ್ಟ ಬೃಹದಾಕಾರದ ಬೂದಿಕಿಟ್ಟ ದಿಬ್ಬಗಳಿವೆ. ಇವುಗಳಲ್ಲಿ ಬಹಳಷ್ಟು ಹಾಳಾಗಿವೆ. ಕೆಲವನ್ನು ಸ್ವಲ್ಪಮಟ್ಟಿಗೆ ಮೊದಲಿನಲ್ಲಿ ಅವು ಎಷ್ಟು ದೊಡ್ಡದಾಗಿದ್ದವು ಎಂದು ತಿಳಿಯಲು ಸಾಧ್ಯ. ಕುಡತಿನಿ (ಬಳ್ಳಾರಿ ಜಿಲ್ಲೆ) ಸಮೀಪ ಮತ್ತು ಹಟ್ಟಿಯಲ್ಲಿ ಬೂದಿದಿಬ್ಬಗಳು ಈಚಿನವರೆಗೂ ದೊಡ್ಡದಾಗಿಯೇ ಇದ್ದುವು. ಸು.1840ರ ದಶಕದಿಂದ 1993ರ ತನಕ ಸು.70–75ನೆಲೆಗಳಲ್ಲಿ ಇಂಥ ಬೂದಿದಿಬ್ಬಗಳು ಇಲ್ಲವೆ ಇವುಗಳ ಅವಶೇಷಗಳು ಶೋಧವಾಗಿವೆ. ರಾಬರ್ಟ್ ಬ್ರೂಸ್‌ಫುಟ್ ಕೆಲವು ಬೂದಿದಿಬ್ಬಗಳನ್ನು ಮತ್ತು ಸುತ್ತಮುತ್ತಲಿನ ನವ ಶಿಲಾಯುಗ ಸಂಸ್ಕೃತಿಗಳ ಅವಶೇಷಗಳನ್ನು ಪರಿಶೀಲಿಸಿ ಇವು ನವ ಶಿಲಾಯುಗ ಕಾಲದವೆಂದು ಅಭಿಪ್ರಾಯಪಟ್ಟ, ಒಬ್ಬ ರಸಾಯನ ವಿಜ್ಞಾನಿಯ ಸಹಾಯದಿಂದ ಸೆಗಣಿ ಅತಿ ಹೆಚ್ಚಿನ ಶಾಖದಲ್ಲಿ ಅಂದರೆ ಸು.1200⁰ ಸೆಂಟಿಗ್ರೇಡ್‌ನಲ್ಲಿ ಸುಟ್ಟು ಹೋಗಿದ್ದರಿಂದ ಇವು ಇಂಥ ಬೂದಿಕಿಟ್ಟದಿಬ್ಬಗಳಾಗಿವೆ ಎಂದು ಸಿದ್ಧಮಾಡಿದ. ಅಲ್ಚಿನ್ 1996ರಲ್ಲಿ ಪದ್ದಯ್ಯನವರು ಕೊಡೆಕಲ್ಲಿನಲ್ಲಿಯ ಒಂದು ಬೂದಿದಿಬ್ಬವನ್ನು ಉತ್ಖನನ ಮಾಡಿ ವರದಿಯನ್ನು ಪ್ರಕಟಿಸಿದ್ದಾರೆ. ಇದುವರೆಗೂ ತಿಳಿದುಬಂದ ಇಂಥ ಬೂದಿದಿಬ್ಬಗಳ ಹುಟ್ಟು ಮತ್ತು ಸೆಗಣಿಯನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಸುಡುವ ಉದ್ದೇಶ ಮತ್ತು ಇವುಗಳ ಕಾರಣಕರ್ತರ ಬಗ್ಗೆ ಅಲ್ಚಿನ್ ವೈಜ್ಞಾನಿಕವಾಗಿ ಅಧ್ಯಯನ ಮಾಡಿದರು. ಉತ್ನೂರಿನಲ್ಲಿಯ ಒಂದು ಬೂದಿದಿಬ್ಬವನ್ನು ಉತ್ಖನನ ಮಾಡಿದರು. ಮಜುಂದಾರ್ ಮತ್ತು ರಾಜಗುರು ಇವರು ಸಂಗನಕಲ್ಲಿನ ಪಕ್ಕದಲ್ಲಿಯ ಕುಪ್ಪಗಲ್ಲಿನಲ್ಲಿ ಇಂಥ ಇನ್ನೊಂದು ಗುಡ್ಡೆಯನ್ನೂ ರಾಮರೆಡ್ಡಿ ಪಾಳ್ಯಾಯದಲ್ಲಿಯ ಒಂದು ಬೂದಿದಿಬ್ಬವನ್ನೂ 1992–95ರಲ್ಲಿ ಪದ್ದಯ್ಯನವರು ಬೂದಿಹಾಳದಲ್ಲಿಯ ಬೂದಿದಿಬ್ಬವನ್ನು ಉತ್ಖನನ ಮಾಡಿದರು. ಹೀಗೆ ಪುರಾತತ್ತ್ವಜ್ಞರು ತಮ್ಮ ತಮ್ಮ ಅಧ್ಯಯನ ಆಧಾರಿತ ಅಭಿಪ್ರಾಯಗಳನ್ನೂ ಮಂಡಿಸಿದ್ದಾರೆ. ಇವರ ಅಧ್ಯಯನದ ಫಲಿತಾಂಶವನ್ನು ಹೀಗೆ ಸಂಕ್ಷಿಪ್ತವಾಗಿ ಸಂಗ್ರಹಿಸಬಹುದು. ಇದು ದಖನ್ನಿನ ಪೂರ್ವಭಾವಿ ಇತಿಹಾಸ ಸಂಸ್ಕೃತಿಗಳ ಒಂದು ವಿಶಿಷ್ಟ ಚಟುವಟಿಕೆ.

1. ಅಲ್ಚಿನ್‌ರವರ ಪ್ರಕಾರ ಈ ಬೂದಿದಿಬ್ಬ ನೆಲೆಗಳು ಮೂಲತಃ ದನಕರುಗಳ ಕೊಂಡವಾಡೆಗಳು(ಕೊಟ್ಟಿಗೆ). ಇಲ್ಲಿ ಕ್ರಮೇಣ ದೊಡ್ಡ ಪ್ರಮಾಣದಲ್ಲಿ ಸೆಗಣಿ ಸಂಗ್ರಹವಾಗುತ್ತಿತ್ತು. ಒಂದು ಹಂತದಲ್ಲಿ ಈ ದೊಡ್ಡ ಸೆಗಣಿರಾಶಿಯನ್ನು ತಮ್ಮ ಸಮಾಜದ ವಿಧಿ ವಿಧಾನದಂತೆ ಸುಡಲಾಗುತ್ತಿತ್ತು. ಮತ್ತೆ ಅದೇ ಸ್ಥಳದಲ್ಲಿ ಕೊಂಡವಾಡೆಯನ್ನು(ಕೊಟ್ಟಿಗೆ) ಕಟ್ಟಿ ಸೆಗಣಿ ಸಂಗ್ರಹಕ್ಕೆ ಎಡೆ ಮಾಡುತ್ತಿದ್ದರು. ಅದನ್ನು ಮತ್ತೆ ಸುಡಲಾಗುತ್ತಿತ್ತು. ಈ ದಹನಕ್ರಿಯೆ ಅತಿ ನಿಧಾನವಾಗಿ ಒಳಗೊಳಗೆ ನಡೆಯುತ್ತಿದ್ದರಿಂದ ಕ್ರಮೇಣ ಅಲ್ಲಿ ಬೂದಿಕಿಟ್ಟದ ಎರಡು ಮೂರು ಪದರುಗಳು ರಚನೆಯಾಗುತ್ತಿದ್ದವು. ಈ ಧಾರ್ಮಿಕ ಕಟ್ಟಳೆ ಇಂದಿಗೂ ಉಳಿದು ಬಂದಿದ್ದು, ಅದನ್ನು ಹೋಳಿ, ದಿವಾಳಿ ಹಬ್ಬಗಳಲ್ಲಿ ಕಾಣಬಹುದು.

2. ರಾಮಿರೆಡ್ಡಿಯವರ ಪ್ರಕಾರ ಈ ಬೂದಿದಿಬ್ಬಗಳು ಕಬ್ಬಿಣ ಲೋಹ ತಯಾರಿಕೆ ತಂತ್ರದಲ್ಲಿ ಉಂಟಾದವು.

3. ಮಜುಮ್‌ದಾರ್ ಮತ್ತು ರಾಜಗುರು ಅವರ ಪ್ರಕಾರ, ಇವು ಮೂಲತಃ ಕೊಂಡವಾಡೆಗಳಲ್ಲ. ಕೊಂಡವಾಡೆಗಳಿಂದ ಸಗಣಿಯನ್ನು ಸಂಗ್ರಹಿಸಿ ಬೇರೆಡೆಯಲ್ಲಿ ಒಟ್ಟುತ್ತಿದ್ದರು. ಅಂತಹ ಒಟ್ಟಿನ ನೆಲೆಗಳು ಇವು

4. ಪದ್ದಯ್ಯನವರ ಪ್ರಕಾರ ಕೊಂಡವಾಡೆ ಮತ್ತು ಸೆಗಣಿ ಒಟ್ಟಿದ ನೆಲೆಗಳು ಬೇರೆ ಬೇರೆಯಾಗಿದ್ದರೂ ಒಂದಕ್ಕೊಂದು ಹತ್ತಿರದಲ್ಲಿಯೇ ಇದ್ದವು. ಆಗಿನ ಕಾಲದಲ್ಲಿ ಕೃಷಿ ನೆಲಕ್ಕೆ ಸೆಗಣಿ ಗೊಬ್ಬರವನ್ನು ಉಪಯೋಗಿಸುತ್ತಿದ್ದುದಕ್ಕೆ ಪುರಾವೆಗಳಿಲ್ಲ. ಒಂದು ವೇಳೆ ಉಪಯೋಗಿಸಿದ್ದರೂ ಅದರ ಪ್ರಮಾಣ ಕಡಿಮೆ. ಆ ಜನರು ತಕ್ಕಮಟ್ಟಿಗೆ ದೊಡ್ಡ ಪ್ರಮಾಣದಲ್ಲಿ ದನಕರುಗಳನ್ನು ಸಾಕುತ್ತಿದ್ದುದರಿಂದ ಸೆಗಣಿಯ ಪ್ರಮಾಣ ಹೆಚ್ಚಾಗಿರುತ್ತಿತ್ತು. ಆದ್ದರಿಂದ ಉಪಯೋಗವಾಗದ ಸೆಗಣಿಯನ್ನು ಈ ರೀತಿ ಆಗಾಗ್ಗೆ ಸುಡಲಾಗುತ್ತಿತ್ತು. ಇದರ ಬೆಂಕಿ ದಿನಗಟ್ಟಲೆ ಇದ್ದುದರಿಂದ ಸಾಕಿದ ಪ್ರಾಣಿಗಳನ್ನು ಹಾಗೂ ಮನುಷ್ಯರನ್ನು ಹಿಡಿಯಲು ಬರುತ್ತಿದ್ದ ಕಾಡುಪ್ರಾಣಿಗಳನ್ನು ದೂರವಿಡಲು ಇದೊಂದು ಕ್ರಮವಾಗಿತ್ತೆಂದು ಅವರ ಅಭಿಪ್ರಾಯ.

5. ಅ.ಸುಂದರ ಅವರ ಪ್ರಕಾರ ಬಹಳ ಹಿಂದಿನ ಕಾಲದಲ್ಲಿ ದಹನ ವಿಧಾನದಿಂದ ಶವಸಂಸ್ಕಾರ ಮಾಡುತ್ತಿದ್ದ ಜನವರ್ಗಗಳಲ್ಲಿ ಪ್ರಸಿದ್ಧ ಶೂರರ ನೆನಪಿನಲ್ಲಿ ಆಗಾಗ್ಗೆ ಇಂಥ ದೊಡ್ಡ ಪ್ರಮಾಣದ ಸೆಗಣಿಯನ್ನು ಸುಡುವ ಆಚರಣೆ ಇದ್ದಿರಬೇಕು. ಕುಡತಿನಿ ಸಮೀಪದ ಬೂದಿದಿಬ್ಬವು ಮಹಾಭಾರತದ ಹಿಡಿಂಬಾಸುರನನ್ನು ಅಲ್ಲಿ ಸುಟ್ಟಿದ್ದರಿಂದಾಗಿ ಉಂಟಾಯಿತೆಂಬ ಪ್ರತೀತಿಯಿದೆ. ಹಿಂದಿನಿಂದ ಬಂದ ಸ್ಥಳೀಯರ ಹೇಳಿಕೆಯಂತೆ ವೆಂಕಟಾಪುರದಲ್ಲಿಯ ಬೂದಿದಿಬ್ಬವನ್ನು ವಾಲಿದಿಬ್ಬವೆಂದು ಕರೆಯಲಾಗಿದೆ. ನಾಗಲಾಪುರ(ತುಮಕೂರು ಜಿಲ್ಲೆ) ದಲ್ಲಿಯ ಇಂಥ ಬೂದಿದಿಬ್ಬವನ್ನು ವಾಲಿದಿಬ್ಬವೆಂದು ಹೇಳಲಾಗುತ್ತಿದೆ. ಆದ್ದರಿಂದ ಈ ದಿಬ್ಬಗಳು ದೊಡ್ಡ ಪ್ರಮಾಣದ ಸ್ಮಾರಕ ದಹನಗಳಿಂದ ಉಂಟಾದವು ಹಾಗೂ ಇವು ಸಾವಳ್ದ ಇಲ್ಲವೆ ಬೃಹತ್ ಶಿಲಾ ಸಂಸ್ಕೃತಿ ಜನರ ಲೋಹ ತಂತ್ರಗಾರಿಕೆ ಸಂಬಂಧಿಸಿರಬಹುದೆಂಬ ಅಭಿಪ್ರಾಯ ಪಟ್ಟಿದಾರೆ.

2005ರಲ್ಲಿ ಕುಡಚಿಯಲ್ಲಿಯ ಒಂದು ದೊಡ್ಡ ದಿಬ್ಬದ ಅಳಿದುಳಿದ ಭಾಗದ ಉತ್ಖನನದಲ್ಲಿ ಅಲ್ಲಿದ್ದ ದಿಬ್ಬ ಹಾಳುಬಿದ್ದ ತಾಮ್ರ–ಶಿಲಾಯುಗ ಸಂಸ್ಕೃತಿ ನೆಲೆಯಲ್ಲಿ ಒಟ್ಟು ಹಾಕಿದ ಬೂದಿಕಿಟ್ಟದ ದಿಬ್ಬಗಳ ರಾಶಿ ಎಂದು ಕಂಡುಬಂತು ಮತ್ತು ಬಹಳಷ್ಟು ದಿಬ್ಬಗಳಲ್ಲಿ ಸಣ್ಣಸಣ್ಣ ತಗ್ಗುಗಳಿದ್ದು ಅದರಲ್ಲಿ ಬಿರುಕುಗಳುಳ್ಳ ತಾಮ್ರದ ತೆಳ್ಳನೆ ಪದರ ಇದ್ದುದರಿಂದ ಬೂದಿದಿಬ್ಬ ಪ್ರಾಯಶಃ ತಾಮ್ರ ಲೋಹ ತಯಾರಿಕೆಗೆ ಸಂಬಂಧಿಸಿರ ಬಹುದೆಂದು ಅ.ಸುಂದರ ಮತ್ತು ಪಾಡಿಗಾರರ ಅಭಿಪ್ರಾಯ.

ಹೀಗೆ ಬೂದಿದಿಬ್ಬಗಳ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಒಂದಂತೂ ಸತ್ಯ: ಇವು ನಿಜವಾಗಿಯೂ ಪೂರ್ವಭಾವಿ ಇತಿಹಾಸ ಕಾಲದವು ಮತ್ತು ಇವುಗಳ ಕಾಲಮಾನ ಪ್ರ.ಶ.ಪೂ.ಸು.2000–600ರ ವರೆಗೆ ಎಂದು ತೋರುತ್ತದೆ.

ಪಾವಗಡ ತಾಲ್ಲೂಕಿನ ಯಲ್ಲಪ್ಪನಾಯಕನ ಹೊಸಕೋಟೆಯಲ್ಲಿ ಬೂದಿದಿಬ್ಬದ ಕುರುಹುಗಳನ್ನು ಗುರುತಿಸಲಾಗಿದೆ. ಗ್ರಾಮದ ಉತ್ತರಕ್ಕಿರುವ ಬೆಟ್ಟದ ಉತ್ತರ ಭಾಗದಲ್ಲಿ ದಿಬ್ಬದ ಅವಶೇಷಗಳಿದ್ದು ಕೃಷಿ ಸಮಯದಲ್ಲಿ ಇವು ಬೆಳಕಿಗೆ ಬಂದಿವೆ. ಈ ನೆಲೆ ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ, ನವ ಶಿಲಾಯುಗ, ತಾಮ್ರ–ಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭ ಕಾಲದಲ್ಲಿ ಒಂದು ಮುಖ್ಯ ವಸತಿ ನೆಲೆಯಾಗಿತ್ತೆಂಬುದನ್ನು ಈ ಅವಶೇಷಗಳು ಸ್ಪಷ್ಟಪಡಿಸಿವೆ.

ಯಲ್ಲಪ್ಪನಾಯಕನ ಹೊಸಕೋಟೆಯ 2ಕಿಮೀ ಪಶ್ಚಿಮಕ್ಕೆ ಈ ಹಳ್ಳಿಯ ಗುಡ್ಡದ ಬುಡದಲ್ಲಿ ಬೂದಿದಿಬ್ಬದ ಅವಶೇಷಗಳಿವೆ. ಆದರೆ ಬೂದಿದಿಬ್ಬದ ಹೆಂಟೆಗಳನ್ನು ಹೊಲದ ಬದಿಯಲ್ಲಿ ರಾಶಿ ಹಾಕಿರುವುದನ್ನು ಕಾಣಬಹುದು. ಈ ನೆಲೆಯೂ ನವಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭಕಾಲಕ್ಕೆ ಸೇರಿದ್ದಾಗಿದೆ. (ಎ.ಎಸ್.)

**ಬೂದಿಹಾಳ:** ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿರುವ ನವಶಿಲಾಯುಗದ ಬೂದಿದಿಬ್ಬ ಸಹಿತವಾದ ವಸತಿನೆಲೆ. ಈ ನೆಲೆಯನ್ನು ಅ.ಸುಂದರ ಅವರು 1965ರಲ್ಲಿ ಶೋಧಿಸಿದರು. ಬೂದಿಹಾಳ ಮತ್ತು ಇದರ ಸುತ್ತಮುತ್ತಲಿನ ಪ್ರದೇಶ ಮರಳುಗಲ್ಲಿನ ಪ್ರಸ್ಥಭೂಮಿಯಾಗಿದೆ. ಪ್ರಸ್ಥಭೂಮಿಯ ಉತ್ತರ ಮತ್ತು ಪೂರ್ವದಲ್ಲಿ ನೀರಿನ ಅನೇಕ ಒರತೆಗಳಿವೆ. ಈ ಪ್ರದೇಶದಲ್ಲಿ ಬೂದಿದಿಬ್ಬ ಸಹಿತ ನಾಲ್ಕು ವಸತಿನೆಲೆಗಳಿವೆ (ನಿವೇಶನ I-IV). ಇವುಗಳ ಒಟ್ಟು ವಿಸ್ತೀರ್ಣ ಉತ್ತರದಿಂದ ದಕ್ಷಿಣಕ್ಕೆ 400ಮೀ ಮತ್ತು ಪೂರ್ವದಿಂದ ಪಶ್ಚಿಮಕ್ಕೆ 300ಮೀ. ಪ್ರತಿ ನಿವೇಶನದಲ್ಲಿ ಬೂದಿಯ ಪದರಗಳು ಹಾಗೂ ವಸತಿ ಅವಶೇಷಗಳು ಇವೆ. ಇವುಗಳಲ್ಲಿ ನಿವೇಶನ–I ಅತ್ಯಂತ ದೊಡ್ಡದಾಗಿದ್ದು ಉತ್ತಮ ಸ್ಥಿತಿಯಲ್ಲಿತ್ತು. ಇಲ್ಲಿ 1989–96ರ ನಡುವೆ ಕೆ. ಪದ್ದಯ್ಯನವರು ಉತ್ಖನನ ನಡೆಸಿದರು.

ಈ ನಿವೇಶನ ಬೂದಿಹಾಳ ಗ್ರಾಮದ ಉತ್ತರಕ್ಕಿದೆ. ಇದರ ಮಧ್ಯದಲ್ಲಿ ಬೂದಿ ದಿಬ್ಬವಿದ್ದು ಸುತ್ತಲೂ ವಸತಿ ನೆಲೆಯಿದೆ. ಈ ಎಲ್ಲ ಅವಶೇಷಗಳು ಒಟ್ಟು 1.84 ಹೆಕ್ಟೇರ್ ಜಾಗದಲ್ಲಿ ಹರಡಿವೆ. ಬೂದಿದಿಬ್ಬದಲ್ಲಿ ನಡೆಸಿದ ಉತ್ಖನನದ ವಿವರ ಹೀಗಿದೆ: ಬೂದಿದಿಬ್ಬವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ– ಮೇಲ್ಭಾಗ ಮತ್ತು ಕೆಳಭಾಗ. ಮೇಲಿನ ಭಾಗ ಸು.3ಮೀ ಎತ್ತರವಿದ್ದು 2000ಚ.ಮೀ ವಿಸ್ತೀರ್ಣ ಹೊಂದಿದೆ. ಇದು ಕೊಳೆತ ಸೆಗಣಿಯ ಹಲವಾರು ಪದರಗಳಿಂದಲೂ ಮೃದು ಹಾಗೂ ಗಟ್ಟಿಯ ಬೂದಿ ಪದರಗಳಿಂದಲೂ ನಿರ್ಮಿತವಾಗಿದೆ. ಈ ಜಾಗದಲ್ಲಿ ಸೆಗಣಿಯನ್ನು ರಾಶಿ ಹಾಕಿ ಕಾಲಕಾಲಕ್ಕೆ ಸುಡುತ್ತಿದ್ದುದು ಈ ಎಲ್ಲ ಅವಶೇಷಗಳಿಂದ ದೃಢಪಡುತ್ತದೆ. ಬೂದಿದಿಬ್ಬದ ಕೆಳಭಾಗದಲ್ಲಿ (ಒಟ್ಟು ವಿಸ್ತೀರ್ಣ 3000ಚ.ಮೀ) ಅಗೆದ ಗುಂಡಿಯಲ್ಲಿ ಸು. 900ಚ.ಮೀ ಜಾಗದಲ್ಲಿದ್ದ ಜಾನುವಾರುಗಳ ಕೊಟ್ಟಿಗೆಯ ಆವರಣ ಕಂಡುಬಂದಿದೆ. ಅಂದರೆ ಇದು ತೆರೆದ ಜಾಗದಲ್ಲಿ ಜಾನುವಾರುಗಳನ್ನು ಕೂಡಿಡುತ್ತಿದ್ದ ಸ್ಥಳ. ರಕ್ಷಣೆಗೆಂದು ಈ ಸ್ಥಳದ ಸುತ್ತಲೂ ಮರಳುಗಲ್ಲಿನ ತುಂಡುಗಳಿಂದ ಕಟ್ಟೆ ಕಟ್ಟಿ ಅದನ್ನು ದಪ್ಪ ಮುಳ್ಳಿನಗಿಡಗಳಿಂದ ಮುಚ್ಚಿದ್ದುದು ಅವಶೇಷಗಳಿಂದ ತಿಳಿದುಬಂದಿದೆ. ಕಲ್ಲು–ಮುಳ್ಳಿನಪೊದೆಗಳಿಂದ ಆವೃತವಾದ ಸುರಕ್ಷಿತ ಆವರಣದಲ್ಲಿ ಜಾನುವಾರುಗಳನ್ನು ಕೂಡಿಡುವ ಪದ್ಧತಿಯನ್ನು ಇಂದಿಗೂ ಈ ಪ್ರದೇಶದಲ್ಲಿ ಕಾಣಬಹುದಾಗಿದೆ.

ಬೂದಿದಿಬ್ಬದ ಸುತ್ತಲೂ 1.54 ಹೆಕ್ಟೇರ್ ಜಾಗದಲ್ಲಿ ವಸತಿನೆಲೆಯಿದೆ. ಪ್ರತ್ಯೇಕವಾಗಿ ಐದು ಗುಂಡಿಗಳನ್ನು ಇಲ್ಲಿ ಅಗೆಯಲಾಗಿ ಇವುಗಳಲ್ಲಿ ವಿವಿಧ ಚಟುವಟಿಕೆಗಳ ಅವಶೇಷಗಳು ಕಂಡುಬಂದವು. ಈ ಗುಂಡಿಗಳಲ್ಲಿ ವಸತಿ ಪದರ 50–60 ಸೆಂಮೀ ದಪ್ಪವಿದೆ. 4ನೆಯ ಗುಂಡಿಯಲ್ಲಿ (307ಚ.ಮೀ ವಿಸ್ತೀರ್ಣ) ಎಂಟು ಕಟ್ಟಡ ರಚನೆಗಳು ಕಂಡುಬಂದವು. ಇವುಗಳಲ್ಲಿ ಆರು ಕಲ್ಲುಹೆಂಟೆಗಳ ತಳಪಾಯದ ಮೇಲೆ ಕಟ್ಟಿದ ವೃತ್ತ ಅಥವಾ ಅಂಡಾಕಾರದ ವಾಸದ ಗುಡಿಸಲುಗಳು. ಐದನೆಯ ಗುಂಡಿಯಲ್ಲಿ ಕಂಡುಬಂದ ಅಪರೂಪದ ಅವಶೇಷ ಕಸಾಯಿಗಾಗಿ ಬಳಕೆಯಾಗಿದ್ದ ನೆಲ. ನೈಸರ್ಗಿಕ ಸುಣ್ಣದುಂಡೆಯಂತಹ ವಸ್ತುವನ್ನು ನುಣುಪಾದ ಬೂದಿಯೊಂದಿಗೆ ಬೆರೆಸಿ, ಹಾಸಿ, ಕುಟ್ಟಿ ಗಟ್ಟಿಮಾಡಿದ ನೆಲವಿದು. ಜಾನುವಾರು, ಎಮ್ಮೆ ಮೊದಲಾದ ಪ್ರಾಣಿಗಳ ತಲೆಬುರುಡೆ, ದವಡೆ, ಪಕ್ಕೆಲುಬು ಮತ್ತು ಉದ್ದ ಮೂಳೆಗಳು ಈ ನೆಲದ ಮೇಲೆ ಚದುರಿಬಿದ್ದಿದ್ದು ಕಂಡುಬಂದಿತು.

ವಸತಿಯ ಸ್ಥಳದಲ್ಲಿಯೇ ಹದಿಮೂರು ಮಾನವ ಸಮಾಧಿಗಳನ್ನು ಹೊರತೆಗೆಯಲಾಯಿತು. ಇವುಗಳಲ್ಲಿ ಕೆಲವು ಎಳೆಮಕ್ಕಳ ಅಸ್ಥಿಮಡಕೆಗಳು. ಪ್ರಾಣಿಮೂಳೆಗಳೂ ಸಮಾಧಿಯ ರೂಪದಲ್ಲಿ ಇಲ್ಲಿ ದೊರೆತಿವೆ. ವಸತಿ ಪದರದಿಂದ ಬೂದು ಹಾಗೂ ಕಂದುಬಣ್ಣದ

ಮಣ್ಣಿನ ಪಾತ್ರೆಗಳು, ಉಜ್ಜಿ ನಯಗೊಳಿಸಿದ ಕಲ್ಲಿನ ಉಪಕರಣಗಳು, ಚರ್ಟ್ ಕಲ್ಲಿನ ಅಲಗುಗಳು ಮತ್ತು ಅರೆಪ್ರಶಸ್ತ ಕಲ್ಲಿನ ಮಣಿಗಳನ್ನು ಸಂಗ್ರಹಿಸಲಾಗಿದೆ. ವಸತಿನೆಲೆಯಿಂದ ಸ್ವಲ್ಪ ದೂರದಲ್ಲಿ ಈ ವಸತಿಗೆ ಸೇರಿದ ಚರ್ಟ್ ಕಲ್ಲಿನ ಉಪಕರಣಗಳ ವಿಸ್ತಾರವಾದ ಸಮುಚ್ಚಯವಿದೆ. ಉಪಕರಣ ತಯಾರಿಕೆಯ ಒಂದು ಕಾರ್ಯಾಗಾರವೇ ಇಲ್ಲಿತ್ತು ಎಂಬುದು ಇಲ್ಲಿ ಕಾಣುವ ತಯಾರಿಕೆಯ ವಿವಿಧ ಹಂತಗಳಲ್ಲಿರುವ ಚರ್ಟ್ ಅವಶೇಷಗಳಿಂದ ಸ್ಪಷ್ಟವಾಗುತ್ತದೆ. ವಸತಿನೆಲೆಯ ಪೂರ್ವದಲ್ಲಿರುವ ಮರಳುಗಲ್ಲಿನ ಬಂಡೆಗಳ ಮೇಲೆ ಅರೆಯುವ ಗುಳಿಗಳ ಸಮೂಹವನ್ನು ಪತ್ತೆಹಚ್ಚಲಾಗಿದೆ.

ಕಂದುಮಣ್ಣಿನ ತೆಳು ಪದರದಿಂದ ಮುಚ್ಚಿರುವ ಸಮತಟ್ಟಾದ ಮರಳುಗಲ್ಲಿನ ಪ್ರದೇಶದಲ್ಲಿ ನವಶಿಲಾಯುಗದ ಜನ ವಾಸಿಸುತ್ತಿದ್ದರೆಂಬುದು ಭೂ ಪುರಾತತ್ತ್ವ ಅಧ್ಯಯನಗಳಿಂದ ತಿಳಿದು ಬಂದಿದೆ. ಇವರು ಜಾನುವಾರು, ಎಮ್ಮೆ, ಕುರಿ-ಮೇಕೆ, ಕೋಳಿ ಮೊದಲಾದ ಪ್ರಾಣಿ-ಪಕ್ಷಿಗಳನ್ನು ಸಾಕುತ್ತಿದ್ದರು. ಜೊತೆಗೆ ಅನೇಕ ಜಾತಿಯ ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಹುರುಳಿ, ಜವೆ, ಅವರೆ ಮುಂತಾದ ತರಕಾರಿ-ಧಾನ್ಯಗಳನ್ನು ಇವರು ಬೆಳೆಯುತ್ತಿದ್ದರು. ನಿಸರ್ಗದಲ್ಲಿ ಸಹಜವಾಗಿ ಬೆಳೆವ, ತಿನ್ನಲು ಯೋಗ್ಯವಾದ ವಿವಿಧ ಬಗೆಯ ಹಣ್ಣು-ಕಾಯಿ ಹಾಗೂ ಸಸ್ಯಮೂಲಗಳನ್ನು ಇವರು ಸಂಗ್ರಹಿಸುತ್ತಿದ್ದರು. ಬೂದಿಹಾಳ ನೆಲೆಯಿಂದ 20 ಇಂಗಾಲ-14ರ ಕಾಲಮಾನಗಳು ದೊರೆತಿವೆ. ವಸತಿನೆಲೆ ಮತ್ತು ಜಾನುವಾರುಗಳ ಕೊಟ್ಟಿಗೆ ಆವರಣ ಪ್ರ.ಶ.ಪೂ.1900-1400ರ ನಡುವೆ ಅಸ್ತಿತ್ವದಲ್ಲಿತ್ತೆಂದು ಇವು ಸ್ಪಷ್ಟವಾಗಿ ತಿಳಿಸುತ್ತವೆ. ಬೂದಿಹಾಳನ ಬೂದಿದಿಬ್ಬ-ವಸತಿನೆಲೆ ನವಶಿಲಾಯುಗದ ಪಶುಪಾಲಕ ಸಂಸ್ಕೃತಿಯ ಪೂರ್ಣಪ್ರಮಾಣದ ವಸತಿನೆಲೆಯಾಗಿತ್ತು ಎಂಬುದು ಉತ್ಖನನದಲ್ಲಿ ದೊರೆತ ವಿವಿಧ ಅವಶೇಷಗಳಿಂದ ಸಾಬೀತಾಗಿದೆ. (ಪಿ.ಕೆ.)

**ಬೂರ್ಜ್‌ಹೋಮ್:** ಕಾಶ್ಮೀರ ರಾಜ್ಯದ ಶ್ರೀನಗರ ಜಿಲ್ಲೆಯಲ್ಲಿರುವ ನವಶಿಲಾಯುಗ ನೆಲೆ. ಡಿಟೆರ್ರ-ಪ್ಯಾಟರ್‌ಸನ್ 1935ರಲ್ಲಿ ನಡೆಸಿದ ಸರ್ವೇಕ್ಷಣೆಯಲ್ಲಿ ಇದು ಬೆಳಕಿಗೆ ಬಂದಿತು. ನಿಲಸುಗಲ್ಲೊಂದರ ಬಳಿ ಇವರು ಅಗೆದ ಗುಳಿಯಲ್ಲಿ ಮೂಳೆಯ ಮತ್ತು ಶಿಲೆಯ ಉಪಕರಣಗಳು ಹಾಗೂ ಮೆರುಗುಳ್ಳ ಕಪ್ಪುಮಣ್ಣಿನ ಪಾತ್ರೆಗಳು ಕಂಡುಬಂದವು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಇಲ್ಲಿ 1960-71ರ ನಡುವೆ ಟಿ.ಎನ್. ಖಜಾಂಚಿಯವರ ನಿರ್ದೇಶನದಲ್ಲಿ ಉತ್ಖನನ ನಡೆಸಿತು. ಇಲ್ಲಿ ಸು.4 ಮೀ ವಸತಿಪದರದಲ್ಲಿ 3 ಸಾಂಸ್ಕೃತಿಕ ಹಂತಗಳಿವೆ. ಇವು-ನವಶಿಲಾಯುಗ (6-11ನೆಯ ಸ್ತರ), ಬೃಹತ್‌ಶಿಲಾಯುಗ (2-5ನೆಯ ಸ್ತರ) ಮತ್ತು ಆದಿಚಾರಿತ್ರಿಕ ಕಾಲ (1ನೆಯ ಸ್ತರ).

ನವಶಿಲಾಯುಗದಲ್ಲಿ 2 ಉಪಹಂತಗಳಿವೆ. 1ನೆಯ ಉಪಹಂತದ ಜನರು ಗುಂಡಿಗಳಲ್ಲಿ ವಾಸಿಸುತ್ತಿದ್ದರು. ಗೋಲ ಅಥವಾ ಅಂಡಾಕಾರದಲ್ಲಿರುವ ಈ ವಸತಿಗುಂಡಿಗಳು ಕಾಶ್ಮೀರದ ನವಶಿಲಾಯುಗ ಸಂಸ್ಕೃತಿಯ ವೈಶಿಷ್ಟ್ಯಗಳಲ್ಲೊಂದು. ಭೂಮಿಯನ್ನು ಅಗೆದು ಮಾಡಲಾದ ಈ ಗುಂಡಿಗಳು ಮೇಲ್ಭಾಗದಲ್ಲಿ ಕಿರಿದಾಗಿಯೂ ತಳದಲ್ಲಿ ವಿಶಾಲವಾಗಿಯೂ ಇರುತ್ತವೆ. ಅತಿದೊಡ್ಡ ಗುಂಡಿಯ ಮೇಲ್ಮೈ 2.5ಮೀ ಮತ್ತು ತಳ 4.56ಮೀ ಅಗಲವಿದೆ. ಈ ಗುಂಡಿಯ ಆಳ 3.96ಮೀ. ಆಳವಾದ ಗುಂಡಿಗಳೊಳಗೆ ಇಳಿಯಲು ಮೆಟ್ಟಿಲುಗಳಿವೆ. ಗುಂಡಿಗಳ ಗೋಡೆಗಳ ಮೇಲೆ ಲೇಪವಿದೆ. ಕೆಲವೊಂದು ಗೋಡೆಗಳಲ್ಲಿ ಸಣ್ಣ ಗೂಡುಗಳನ್ನು ಮಾಡಲಾಗಿದೆ. ಬೂದಿ, ಇದ್ದಿಲು, ಮಣ್ಪಾತ್ರೆ, ಪ್ರಾಣಿಮೂಳೆಗಳು ಮತ್ತು ಮೂಳೆಯ ಉಪಕರಣಗಳು ಗುಂಡಿಗಳೊಳಗೆ ಕಂಡುಬಂದಿವೆ. ಗುಂಡಿಗಳ ಸುತ್ತ ಭೂಮಟ್ಟದಲ್ಲಿರುವ ಆಧಾರಕಂಬಗಳ ಗುಳಿಗಳು ಮತ್ತು ಕೆಲವು ಗುಂಡಿಯೊಳಗೆ ದೊರೆತ ಬೂರ್ಜಮರದ ಭಾಗಗಳು ಗುಂಡಿಗಳ ಮೇಲೆ ಮರ-ಎಲೆಯ ಮುಚ್ಚಣಿಕೆ ಇದ್ದುದ್ದನ್ನು ಸೂಚಿಸುತ್ತವೆ. ಕಲ್ಲಿನ ಒಲೆಗಳು ಮತ್ತು ಹೆಚ್ಚು ಆಳವಿಲ್ಲದ ಧಾನ್ಯ ಶೇಖರಣೆ ಗುಳಿಗಳು (60-90ಸೆಂಮೀ ವ್ಯಾಸ) ಭೂಮಟ್ಟದಲ್ಲಿ ವಸತಿಗುಂಡಿಗಳ ಸುತ್ತಮುತ್ತಲಿರುವ ಇತರ ಅವಶೇಷಗಳು. ಚಳಿಗಾಲದಲ್ಲಿ ಗುಂಡಿಗಳೊಳಗೆ ಮತ್ತು ಬೇಸಗೆಯಲ್ಲಿ ಗುಂಡಿಯ ಹೊರಗೆ ಜನ ವಾಸಿಸುತ್ತಿದ್ದಿರಬೇಕು. ಒಂದು ಮೀನೊಳಗೆ ಆಳವಿರುವ ಚೌಕಾಕಾರದ ಅಥವಾ ಆಯತಾಕಾರದ ಗುಳಿ ಕೋಣೆಗಳೂ ಈ ಹಂತದಲ್ಲಿವೆ. ಇವುಗಳಲ್ಲಿ ಅತಿದೊಡ್ಡ ಕೋಣೆಯ ಉದ್ದ 6.4ಮೀ ಮತ್ತು ಅಗಲ 7ಮೀ. ಕೋಣೆಗಳ 4ಮೂಲೆಯಲ್ಲಿ ಆಧಾರಕಂಬಗಳ ಗುಳಿಗಳು ಮತ್ತು ಮಧ್ಯದಲ್ಲಿ ಕಲ್ಲು ಅಥವಾ ಮಣ್ಣಿನ ಒಲೆಗಳು ಹಾಗೂ ಶೇಖರಣೆ ಗುಳಿಗಳು ಇವೆ. ಆದ್ದರಿಂದ ಈ ಗುಳಿ ಕೋಣೆಗಳೂ ವಾಸದ ಜಾಗಗಳಾಗಿದ್ದಿರಬೇಕು.ಈ ಉಪಹಂತದ ಮಣ್ಪಾತ್ರೆಗಳು ತಿಗುರಿಯ ಸಹಾಯವಿಲ್ಲದೆ ತಯಾರಾಗಿವೆ. ದೊರಕು ತಿಗರಿಯ ಮಣ್ಣಿನಿಂದ ಮಾಡಿದ ಈ ಪಾತ್ರೆಗಳ ಮೇಲ್ಮೈ ಬೂದು, ಪೇಲಗೆಂಪು, ಕಂದು ಅಥವಾ ಮಾಸಲು ಕಂದುಬಣ್ಣ ಹೊಂದಿದೆ. ಬಟ್ಟಲು, ದಾನಿ ಮತ್ತು ಮಡಕೆಗಳು ಸಾಮಾನ್ಯವಾಗಿ ಕಂಡುಬರುವ ಆಕಾರಗಳು. ಹೆಚ್ಚಿನ ಪಾತ್ರೆಗಳ ತಳಭಾಗದಲ್ಲಿ, ಮುಖ್ಯವಾಗಿ ಮಟ್ಟ ತಳವುಳ್ಳ ಪಾತ್ರೆಗಳಲ್ಲಿ ಚಾಪೆಯ ಗುರುತು ಮೂಡಿದೆ. ಶಿಲೆ ಮತ್ತು ಮೂಳೆಯ ಉಪಕರಣಗಳು ಇತರ ಮುಖ್ಯ ಅವಶೇಷಗಳು. ಮೂಳೆಯ ಉಪಕರಣಗಳಲ್ಲಿ ಈಟಿಗಾಳ, ಕಣ್ಣಿರುವ ಅಥವಾ ಇಲ್ಲದಿರುವ ಸೂಜಿ, ದಬ್ಬಣ, ಮೊನೆ, ಬಾಣ ಮತ್ತು ಭರ್ಜಿಯ ಮೊನೆ, ಕತ್ತಿ ಮತ್ತು ಹೆರೆಚಕ್ಕೆಗಳು ಮುಖ್ಯವಾದುವು. ಹೆಚ್ಚಿನ ಉಪಕರಣಗಳನ್ನು ಜಿಂಕೆಯ ಕೊಂಬಿನಿಂದ ಮಾಡಲಾಗಿದೆ. ಕಲ್ಲಿನ ಉಪಕರಣಗಳಲ್ಲಿ ಕೊಡಲಿ, ಉಳಿ, ಪಿಕಾಸಿ, ಮೊನೆ, ತೂತಿರುವ ಗೋಲಾಕಾರದ ಕಲ್ಲು, ಕುಟ್ಟಾಣಿ ಮೊದಲಾದ ಬಗೆಗಳಿವೆ. ಪಶುಪಾಲನೆ ಹಾಗೂ ಕೃಷಿಯ ಕುರುಹುಗಳು ಈ ಹಂತದಲ್ಲಿ ಕಂಡುಬಂದಿಲ್ಲ. ಹಾಗಾಗಿ ಜನರು ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಅವಲಂಬಿಸಿದ್ದಿರಬೇಕು. ಈ ಹಂತ ಆಹಾರ ಸಂಗ್ರಹಣೆ ಮತ್ತು ಆಹಾರ ಉತ್ಪಾದನೆಯ ನಡುವಿನ ಸ್ಥಿತ್ಯಂತರವಿದ್ದರೂ ಇರಬಹುದು.

2ನೆಯ ಉಪಹಂತದಲ್ಲಿ ಮಣ್ಣಿನ ಮತ್ತು ಹಸಿಇಟ್ಟಿಗೆಯ ಮನೆಗಳು ಮೊದಲ ಬಾರಿಗೆ ಕಂಡುಬರುತ್ತವೆ. ಕಾಲಾಂತರದಲ್ಲಿ ಮಣ್ಣಿನಿಂದ ಮುಚ್ಚಿಹೋದ ವಸತಿಗುಂಡಿಗಳ ಮೇಲೆ ವಸತಿಗೋಸ್ಕರ ಕರೇವ ಮಣ್ಣನ್ನು ಹರಡಿ ನೆಲವನ್ನು ಮಾಡಿಕೊಳ್ಳಲಾಯಿತು. ಇಂತಹ ನೆಲಗಳು ಅನೇಕ ಸಂಖ್ಯೆಯಲ್ಲಿ ಕಂಡುಬಂದಿವೆ. ನೆಲಗಳ ಮೇಲೆ ಕೆಂಪುಬಣ್ಣದ ತೆಳುವಾದ ಲೇಪವಿದೆ. ಒಂದು ನೆಲದ (3.96ಮೀx1.21ಮೀ) ಮೇಲೆ 45 ಆಧಾರಕಂಬಗಳ ಗುಳಿಗಳಿವೆ. ಮತ್ತೊಂದು ನೆಲದ ಮೇಲೆ ಒಲೆ ಮತ್ತು ಅಂಡಾಕಾರದ ಸಣ್ಣ ಗುಳಿಯಿವೆ. ಮಣ್ಣಿನದಂಡೆಗಳು, ಶೇಖರಣೆ ಗುಳಿಗಳು ಇತರ ಗೃಹ-ಸಂಬಂಧಿತ ಅವಶೇಷಗಳು. ಇವಲ್ಲದೆ, ಈ ಉಪಹಂತದಲ್ಲಿ ಆಯತಾಕಾರದ 2ಕಟ್ಟಡಗಳ ಅವಶೇಷಗಳಿವೆ. ಒಂದರಲ್ಲಿ ಕಲ್ಲುಚಪ್ಪಡಿಗಳನ್ನು ಉದ್ದಕ್ಕೆ ನೆಡಲಾಗಿದೆ. 2ಚಪ್ಪಡಿಗಳ ಮೇಲೆ ಗೀರು ರೇಖಾಚಿತ್ರಗಳಿರುವುದು ವಿಶೇಷ. ಮತ್ತೊಂದು ಕಟ್ಟಡದ ಸುತ್ತಲೂ ಮಳೆನೀರು ಹರಿದುಹೋಗುವಂತೆ ನಾಲೆಯನ್ನು ಮಾಡಲಾಗಿದೆ.

ಈ ಹಂತದಲ್ಲಿ ವಸತಿ ಅವಶೇಷಗಳ ನಡುವೆಯೇ ಮನುಷ್ಯರ ಮತ್ತು ಪ್ರಾಣಿಗಳ ಸಮಾಧಿಗಳಿವೆ. ಹೊರತೆಗೆಯಲಾದ 10ಸಮಾಧಿಗಳಲ್ಲಿ 7ಮನುಷ್ಯರವು ಮತ್ತು 3 ಪ್ರಾಣಿಗಳವು. 5 ಸಮಾಧಿಗಳಲ್ಲಿ ಮನುಷ್ಯರ ಸಂಪೂರ್ಣ ಅಸ್ಥಿಪಂಜರಗಳಿವೆ; ಎರಡರಲ್ಲಿ ಹಲವೊಂದು ಆಯ್ದ ಮೂಳೆಗಳನ್ನು ಮಾತ್ರ ಸಮಾಧಿಗೊಳಿಸಲಾಗಿದೆ. ಸಂಪೂರ್ಣ ಸಮಾಧಿಗಳು ನೇರಭಂಗಿಯಲ್ಲಿ ಅಥವಾ ಕೈಕಾಲು ಮಡಿಸಿದ ಭಂಗಿಯಲ್ಲಿವೆ ಮತ್ತು ತಲೆ ದಕ್ಷಿಣಕ್ಕಿದೆ. ಮೂಳೆಗಳ ಮೇಲೆ ಕೆಂಪುಬಣ್ಣವನ್ನು ಬಳಿದಿರುವುದು ಈ ಸಂಸ್ಕೃತಿಯ ಒಂದು ವಿಶಿಷ್ಟ ಅಂಶ. ಶವವನ್ನು ಮನೆಯೊಳಗೇ 1-2ಮೀ ಉದ್ದದ ಕುಣಿ ಅಗೆದು ಹೂಳಲಾಗಿದೆ. ಕುಣಿಗಳ ಒಳಭಾಗದಲ್ಲಿ ಸುಣ್ಣದ ಲೇಪನ ಮಾಡಲಾಗಿದೆ. ಸಮಾಧಿಗಳೊಳಗೆ ಮಡಕೆ, ಕಾರ್ನೇಲಿಯನ್ ಮಣಿ ಮತ್ತು ಪೇಸ್ಟ್ ಹಾಗೂ ಕಲ್ಲಿನ ವಸ್ತುಗಳು ವಿರಳವಾಗಿ ಕಾಣಬರುತ್ತವೆ.

ನವಶಿಲಾಯುಗ ಮಣ್ಪಾತ್ರೆಗಳು

ನಾಯಿ, ತೋಳ ಮತ್ತು ಕಾಡುಹೋತದ ಮೂಳೆಗಳನ್ನು ಶವದೊಟ್ಟಿಗೆ ಹೂಳಲಾಗಿರುವುದು ಗಮನಾರ್ಹ. ಪ್ರಾಣಿಗಳಿಗಾಗಿಯೇ ಪ್ರತ್ಯೇಕ ಸಮಾಧಿಗಳನ್ನೂ ಮಾಡಲಾಗಿದ್ದು, ಇಂತಹ ಸಮಾಧಿಗಳು ನವಶಿಲಾಯುಗ ಸಂಸ್ಕೃತಿಯಲ್ಲಿ ಅಪರೂಪ. ಪ್ರಾಣಿಗಳನ್ನೂ (ಮುಖ್ಯವಾಗಿ ನಾಯಿ) ಸಹ ಅಂಡಾಕಾರದ ಕುಣಿಗಳಲ್ಲಿ ಹೂಳಲಾಗಿದೆ. ಒಂದು ದೊಡ್ಡ ಕುಣಿಯಲ್ಲಿ 5 ಕಾಡುನಾಯಿಗಳ ಅಸ್ಥಿಅವಶೇಷಗಳು ಮತ್ತು 2 ಜಿಂಕೆಯ ಕೊಂಬುಗಳು ಕಂಡುಬಂದವು. ಇವೆಲ್ಲವೂ ಬಲಿಯಾದ ಅಥವಾ ನೆಚ್ಚಿನ ಪ್ರಾಣಿಗಳಾಗಿರಬಹುದು. ಪ್ರಾಣಿಗಳ ಮೂಳೆಗಳಿಗೂ ಕೆಂಪುಬಣ್ಣ ಬಳಿಯಲಾಗಿದೆ.

ಈ ಉಪಹಂತದ ಮಣ್ಪಾತ್ರೆಗಳಲ್ಲೂ ತಿಗುರಿಯನ್ನು ಬಳಸಿಲ್ಲ. ಮೆರುಗುಳ್ಳ ಕಪ್ಪುಮಣ್ಣಿನ ಪಾತ್ರೆ ಮೊದಲ ಬಾರಿಗೆ ಕಂಡುಬರುತ್ತದೆ. ತಟ್ಟೆ, ಕಾಲಿರುವ ತಟ್ಟೆ, ಬಟ್ಟಲು, ಉದ್ದ ಕತ್ತಿನ ಜಾಡಿ, ಮಡಕೆ, ದಾನಿ ಹೆಚ್ಚಾಗಿ ಸಿಗುವ ಆಕಾರಗಳು. ಇವುಗಳ ತಳದಲ್ಲೂ ಚಾಪೆಯ ಗುರುತಿದೆ. ಕುತ್ತಿಗೆಯ ಮೇಲೆ ಗೀರಿನ ಗೆರೆಗಳ ವಿನ್ಯಾಸವಿದೆ. ಮೊದಲ ಉಪಹಂತದ ಪಾತ್ರೆ ಬಗೆಗಳ ಬಳಕೆ ಈ ಹಂತದಲ್ಲಿ ಮುಂದುವರೆಯುತ್ತದೆ. ಶಿಲೆಯ ಮತ್ತು ಮೂಳೆಯ ಉಪಕರಣಗಳು ಮೊದಲನೇ ಉಪಹಂತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿವೆ ಮತ್ತು ಉನ್ನತ ಮಟ್ಟದ್ದಾಗಿವೆ. ಈ ಉಪಹಂತದಲ್ಲಿರುವ ಹೊಸ ಬಗೆಗಳೆಂದರೆ ಒಂದು ಬದಿ ಅರ್ಧಚಂದ್ರಾಕಾರವಾಗಿ ಹರಿತವಾಗಿರುವ ಆಯತಾಕಾರದ ತೂತುಳ್ಳ ಕೊಯ್ಲಿನ ಉಪಕರಣ, ಎರಡೂ ಬದಿ ಹರಿತವಾಗಿರುವ ಪಿಕಾಸಿ (ಕಲ್ಲಿನಲ್ಲಿ), ಕಣ್ಣಿರುವ ಅಥವಾ ಇಲ್ಲದಿರುವ ಉದ್ದ ಸೂಜಿಗಳು ಮತ್ತು ಚಮ್ಮಾರರು ಉಪಯೋಗಿಸುವಂತಹ ಕೊರೆಯುಳಿ (ಮೂಳೆಯಲ್ಲಿ). ಈ ಹಂತಕ್ಕೆ

ಸೇರುವ ಸ್ತರಗಳಿಂದ ಜವೆ, ಗೋದಿ, ಕೆಂಪು ತೊಗರಿಬೇಳೆ ಮುಂತಾದ ಆಹಾರಧಾನ್ಯಗಳು ದೊರೆತಿವೆ. ಕಲ್ಲುಚಪ್ಪಡಿಗಳ ಮೇಲಿರುವ ಗೀರು ರೇಖಾಚಿತ್ರಗಳು ಈ ಜನ ಸಮುದಾಯದ ಕಲಾಪ್ರಜ್ಞೆಯನ್ನು ಸೂಚಿಸುತ್ತವೆ. ಒಂದು ಚಪ್ಪಡಿಯ ಮೇಲೆ ಬೇಟೆಯ ದೃಶ್ಯವನ್ನು ಕೆತ್ತಲಾಗಿದೆ. 2ಬೇಟೆಗಾರರು ಜಿಂಕೆಯೊಂದನ್ನು ಸುತ್ತುವರೆದು ಭರ್ಜಿ ಮತ್ತು ಬಾಣಗಳಿಂದ ಕೊಲ್ಲುತ್ತಿರುವುದು ಚಿತ್ರಿತವಾಗಿದೆ. ಮೇಲ್ಭಾಗದಲ್ಲಿ 2ಸೂರ್ಯ ಮತ್ತು ಬೇಟೆನಾಯಿಯನ್ನು ತೋರಿಸಲಾಗಿದೆ. ಮತ್ತೊಂದು ಚಪ್ಪಡಿಯ ಮೇಲೆ ಗುಡಿಸಲಿನಂತೆ ತೋರುವ ಅಮೂರ್ತ ಚಿತ್ರವಿದೆ.


ಎಲುಬಿನ ಉಪಕರಣಗಳು

ನವಶಿಲಾಯುಗದ ಇಂಗಾಲ-14ರ ಕಾಲಮಾನಗಳು ಪ್ರ.ಶ.ಪೂ. 2375±120-1542±108ರ ನಡುವೆ ಇದೆ. ಒಟ್ಟಿನಲ್ಲಿ, ವಸತಿಗುಂಡಿಗಳು, ಈಟಿಗಾಳ, ಕೊಬ್ಬಿನ ಉಪಕರಣ, ಕೆಂಪುಬಣ್ಣಹೊಂದಿದ ಅಸ್ಥಿಭಾಗಗಳು, ಪ್ರಾಣಿ ಸಮಾಧಿಗಳು-ಇವೆಲ್ಲವೂ ಕಾಶ್ಮೀರ ಕಣಿವೆಯ ನವಶಿಲಾಯುಗ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು.

2ನೆಯ ಹಂತ ಬೃಹತ್‌ಶಿಲಾಯುಗ ಸಂಸ್ಕೃತಿಯದ್ದಾಗಿದೆ. ಈ ಸಂಸ್ಕೃತಿಯ 6 ನಿಲಸುಗಲ್ಲುಗಳು ಇಲ್ಲಿವೆ. ಇವು ಸ್ಮಾರಕಶಿಲೆಗಳು. ಈ ಹಂತದಲ್ಲಿ ಮಣ್ಣು ಮತ್ತು ಕಲ್ಲಿನ ಗೋಡೆಗಳ ಹಾಗೂ ಮಣ್ಣಿನ ನೆಲಗಳ ಅವಶೇಷಗಳು, 3 ಮನುಷ್ಯರ ಹಾಗೂ 9 ಪ್ರಾಣಿ ಸಮಾಧಿಗಳು ಸಿಕ್ಕಿವೆ. ಸಮಾಧಿ ಪದ್ಧತಿಯಲ್ಲಿ ವ್ಯತ್ಯಾಸವಿಲ್ಲ. ಆದರೆ ನವ ಶಿಲಾಯುಗದಲ್ಲಿರುವಂತೆ ಇಲ್ಲಿಯ ಮೂಳೆಗಳ ಮೇಲೆ ಕೆಂಪುಬಣ್ಣವಿಲ್ಲ. ಸಮಾಧಿಗೊಂಡ ಪ್ರಾಣಿಗಳಲ್ಲಿ ನಾಯಿ, ತೋಳ, ಕಾಡುಹೋತ, ಕುರಿ ಮತ್ತು ಆಡುಗಳಿವೆ. ಇವು ಸಾಕಿದ ಪ್ರಾಣಿಗಳಾಗಿದ್ದಿರ ಬೇಕು. ತಿಗುರಿಯ ಸಹಾಯದಿಂದ ತಯಾರಾದ ಕೆಂಪು ಮಣ್ಪಾತ್ರೆ ಈ ಹಂತದ ಮತ್ತೊಂದು ಲಕ್ಷಣ. ಕಾಲಿರುವ ತಟ್ಟೆ, ಬಟ್ಟಲು, ಬೋಗುಣಿ, ಗೋಲ ಜಾಡಿ ಮುಖ್ಯವಾದ ಆಕಾರಗಳು. ಮೆರುಗುಳ್ಳ ಕಪ್ಪುಬಣ್ಣದ ಪಾತ್ರೆಗಳು ಮುಂದುವರೆಯುತ್ತವೆ. ಕಲ್ಲು ಮತ್ತು ಮೂಳೆಯ ಉಪಕರಣಗಳು ವಿರಳವಾಗುತ್ತವೆ. ತಾಮ್ರದ ಮತ್ತು ಕಬ್ಬಿಣದ ವಸ್ತುಗಳು ಹಲವೊಂದಿವೆ.

3ನೆಯ ಹಂತ ಆದಿಚಾರಿತ್ರಿಕ ಕಾಲಕ್ಕೆ ಸೇರುತ್ತದೆ. ಸ್ಥಿರವಾದ ನೆಲಗಳು ಮತ್ತು ಮಣ್ಣಿನ, ಇಟ್ಟಿಗೆಯ ಕಟ್ಟಡಗಳು ಇಲ್ಲಿ ಕಂಡುಬರುತ್ತವೆ. ತಿಗುರಿಯ ಸಹಾಯದಿಂದ ತಯಾರಾದ ಕೆಂಪುಬಣ್ಣದ ಮಣ್ಪಾತ್ರೆಗಳು ಅತಿಹೆಚ್ಚಿನ ಪ್ರಮಾಣದಲ್ಲಿವೆ. (ಆರ್.ಎಂ.ಎಸ್.;ಪಿ.ಎಸ್.)

**ಬೃಹತ್ ಫಲಾಯನ:** ಆಂಧ್ರಪ್ರದೇಶ ರಾಜ್ಯದ ಕೃಷ್ಣಾ ಜಿಲ್ಲೆಯ ಭಾಗದಲ್ಲಿ ಸು.4-5ನೆಯ ಶತಮಾನದಲ್ಲಿ ಆಳುತ್ತಿದ್ದ ವಂಶ. ಇವರ ಏಕೈಕ ಶಾಸನವಾದ ಕೊಂಡಮುಂಡಿ ತಾಮ್ರಪಟದಿಂದ ಜಯವರ್ಮ ಎಂಬ ಅರಸನ ಬಗೆಗೆ ತಿಳಿದುಬಂದಿದೆ. ತನ್ನ ಆಳಿಕೆಯ 10ನೆಯ ವರ್ಷದಲ್ಲಿ ಇವನು ಕುಡೂರನ್ನು ಗೆದ್ದ ನೆನಪಿಗಾಗಿ ಕೆಲವು ಬ್ರಾಹ್ಮಣರಿಗೆ ಭೂದಾನ ನೀಡಿದ. ತಾಮ್ರಪಟದ ಮುದ್ರೆಯಲ್ಲಿ ದಾನಿಗೆ ಮಹಾರಾಜ ಜಯವರ್ಮ ಎಂದಿದೆ. ಈ ರಾಜ ಸಮಕಾಲೀನ ಇರಬಹುದು. ಶಾಸನೋಕ್ತ ಕುಡೂರು ಇಂದಿನ ಕೃಷ್ಣಾ ಜಿಲ್ಲೆಯ ಗುಡೂರು ಎಂದು ಗುರುತಿಸಲಾಗಿದೆ. ಹರ ಪ್ರಾಂತ ಇವರ ರಾಜಧಾನಿ ಪ್ರಾಂತವಿರಬಹುದೆಂದು ತರ್ಕಿಸಲಾಗಿದೆ. (ಸಿ.ಎಸ್.ವಿ.)

**ಬೃಹತ್ ಶಿಲಾಯುಗ ಸಂಸ್ಕೃತಿ:** ಬೃಹತ್ ಶಿಲಾ ಸಮಾಧಿಗಳೇ ಪ್ರಧಾನವಾಗಿ ಕಂಡುಬರುವ ಕಾಲಾವಧಿ. ಯುರೋಪ್ ಮತ್ತು ಏಷ್ಯ ಖಂಡಗಳಲ್ಲಿ, ಮುಖ್ಯವಾಗಿ ಪಶ್ಚಿಮ-ಮಧ್ಯ ಯುರೋಪ್, ಇರಾನ್, ಪಾಕಿಸ್ತಾನ, ಭಾರತ, ಆಗ್ನೇಯ ಏಷ್ಯ ಮತ್ತು ಜಪಾನಿನಲ್ಲಿ ಈ ಸಂಸ್ಕೃತಿಯ ಸಮಾಧಿಗಳು ಕಂಡುಬರುತ್ತವೆ. ಆದರೆ ಇವೆಲ್ಲವೂ ಸಮಕಾಲೀನವಾದುವಲ್ಲ. ಇವುಗಳಲ್ಲಿ ಪಶ್ಚಿಮ ಯುರೋಪಿನ ಸಮಾಧಿಗಳು ಅತ್ಯಂತ ಪ್ರಾಚೀನವಾದುವು. ಪ್ರ.ಶ.ಪೂ. 4ನೆಯ ಸಹಸ್ರಮಾನಕ್ಕೆ ಸೇರುವ ಈ ಸಮಾಧಿಗಳು ನವಶಿಲಾಯುಗ- ಕಂಚಿನಯುಗದ ಅವಶೇಷಗಳಾಗಿವೆ. ಭಾರತದಲ್ಲಿ ಇವು ಪ್ರ.ಶ.ಪೂ.1300ರ ಹೊತ್ತಿಗೆ, ಅಂದರೆ ಆದಿ ಕಬ್ಬಿಣಯುಗ ಸಂಸ್ಕೃತಿಯೊಂದಿಗೆ ಮೊದಲ ಬಾರಿಗೆ ಕಾಣಬರುತ್ತವೆ. ಪಂಜಾಬ್, ಗಂಗಾನದಿ ಬಯಲು, ರಾಜಸ್ಥಾನದ ಮರುಭೂಮಿ ಪ್ರದೇಶ ಮತ್ತು ಉತ್ತರ ಗುಜರಾತನ್ನು ಹೊರತುಪಡಿಸಿ ಭಾರತದ ಉಳಿದೆಲ್ಲ ಭಾಗಗಳಲ್ಲಿ ಬೃಹತ್ ಶಿಲಾಯುಗ ಗೋರಿಗಳು ಹರಡಿವೆ. ಪರ್ಯಾಯ ಭಾರತದಲ್ಲಿ, ಮುಖ್ಯವಾಗಿ ಆಂಧ್ರ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಇವು ಅತ್ಯಧಿಕ ಸಂಖ್ಯೆಯಲ್ಲಿವೆ. ಬಿ.ಕೆ. ಥಾಪರ್ ಅವರು ಸಮಾಧಿಗಳನ್ನು ನಾಲ್ಕು ಪ್ರಾದೇಶಿಕ ವಲಯ ಅಥವಾ ಸಂಕೀರ್ಣಗಳಾಗಿ ವಿಂಗಡಿಸಿದ್ದಾರೆ. ಇವು-ಪರ್ಯಾಯ ಭಾರತ, ಪರ್ಯಾಯ ಭಾರತದಾಚೆಯ ವಲಯ, ವಿಂಧ್ಯ ಪ್ರದೇಶ ಮತ್ತು ಈಶಾನ್ಯ ಭಾರತ.

ಪರ್ಯಾಯ ಭಾರತ: ಈ ವಲಯದಲ್ಲಿ ಮೂರು ಸಂಪ್ರದಾಯಗಳನ್ನು ಗುರುತಿಸಲಾಗಿದೆ. ಇವು ವಿದರ್ಭ ಬೃಹತ್ ಶಿಲಾಯುಗ ಸಂಸ್ಕೃತಿ, ತುಂಗಭದ್ರ ಬಯಲಿನ ಬಿಳಿಚಿತ್ರಿತ ಮಣ್ಪಾತ್ರೆಗಳ ಸಂಸ್ಕೃತಿ ಮತ್ತು ದಕ್ಷಿಣ ಭಾರತದ ಬೃಹತ್ ಶಿಲಾಯುಗ ಸಂಸ್ಕೃತಿ. ಬೃಹತ್ ಶಿಲಾಯುಗ ದೃಷ್ಟಿಯಿಂದ ಹೆಚ್ಚಿನ ಸಂಶೋಧನೆಗೆ ಒಳಪಟ್ಟ ಪ್ರದೇಶವೆಂದರೆ ದಕ್ಷಿಣ ಭಾರತ. ಇಲ್ಲಿ ಇದುವರೆಗೆ ವರದಿಯಾಗಿರುವ ಗೋರಿಗಳ ಸಂಖ್ಯೆ ಸು. 2000.

ಪರ್ಯಾಯ ಭಾರತದಾಚೆಯ ವಲಯ: ಈ ವಲಯ ಕಾಶ್ಮೀರ ಕಣಿವೆಯನ್ನೊಳಗೊಳ್ಳುತ್ತದೆ. ಇಲ್ಲಿ ಸು.10 ನೆಲೆಗಳಲ್ಲಿ ನಿಲಸುಗಲ್ಲುಗಳು ಕಂಡುಬಂದಿವೆ. ಈ ಪೈಕಿ ಬುರ್ಜಹೋಮ್ ಮತ್ತು ಗುಫ್‌ಕ್ರಾಲ್ ಉತ್ಖನನಕ್ಕೆ ಒಳಪಟ್ಟಿವೆ. ಗುಫ್‌ಕ್ರಾಲ್‌ನಲ್ಲಿ ಈ ಸಂಸ್ಕೃತಿಯ ವಸತಿ ಅವಶೇಷಗಳು ಬೆಳಕಿಗೆ ಬಂದಿವೆ. ಕರೇವ ಮಣ್ಣು ಮತ್ತು ಸುಣ್ಣದ ನೆಲಗಟ್ಟುಗಳನ್ನು ಹೊಂದಿದ್ದ ತಡಿಕೆ ಮನೆಗಳಲ್ಲಿ ಇವರು ವಾಸಿಸುತ್ತಿದ್ದರು. ಅಕ್ಕಿ, ತೃಣಕಾಳುಗಳು, ಜವೆ, ಕೆಂಪು ತೊಗರಿಬೇಳೆ, ಬಟಾಣಿ, ಸಕ್ಕರೆ ಬಾದಾಮಿ ಮೊದಲಾದ ದವಸ-ಧಾನ್ಯ-ಹಣ್ಣುಗಳನ್ನು ಇವರು ಬೆಳೆಯುತ್ತಿದ್ದರಲ್ಲದೆ ಕುರಿ-ಮೇಕೆ, ಜಾನುವಾರು, ಐಬೆಕ್ಸ್ ಮುಂತಾದ ಪ್ರಾಣಿಗಳನ್ನು ಸಾಕಿಕೊಂಡಿದ್ದರು. ನವಶಿಲಾಯುಗ ಮಾದರಿಯ ಬೂದುಬಣ್ಣದ ಪಾತ್ರೆಗಳ ಜೊತೆಗೆ ಚಕ್ರದ ಮೇಲೆ ಮಾಡಿದ ಕೆಂಪುಬಣ್ಣದ ಪಾತ್ರೆಗಳು ಈ ಅವಧಿಯಲ್ಲಿ ಬಳಕೆಯಲ್ಲಿದ್ದವು. ಕಬ್ಬಿಣದ ಬಳಕೆ ಪ್ರಾರಂಭವಾದದ್ದೂ ಈ ಯುಗದಲ್ಲಿಯೇ. ಗುಫ್‌ಕ್ರಾಲ್‌ನಲ್ಲಿ ಶಿಲೆ ಹಾಗೂ ಮೂಳೆಯ ಉಪಕರಣಗಳೊಂದಿಗೆ ಕಬ್ಬಿಣದ 3 ಸೂಜಿಗಳು ದೊರೆತಿವೆ.

ವಿಂಧ್ಯ ಪ್ರದೇಶ: ಉತ್ತರ ವಿಂಧ್ಯಪರ್ವತ ಶ್ರೇಣಿಗೆ ಸೇರುವ ಅಲಹಾಬಾದ್, ವಾರಾಣಸಿ, ಮಿರ್ಜಾಪುರ ಮತ್ತು ಬಾಂದಾ ಜಿಲ್ಲೆಗಳಲ್ಲಿ ಬೃಹತ್ ಶಿಲಾಯುಗ ಗೋರಿಗಳೂ ವಸತಿ ನೆಲೆಗಳೂ ಇವೆ. ಕಲ್ಲುಪ್ಪೆ ವೃತ್ತದಿಂದ ಆವೃತವಾದ ನೆಲಕೋಣೆಗಳು ಈ ಪ್ರದೇಶದ ಪ್ರಧಾನ ನಮೂನೆಯಾಗಿವೆ. ಅಲಹಾಬಾದಿನಲ್ಲಿ ಉತ್ಖನನಕ್ಕೊಳಗಾಗಿರುವ ಗೋರಿಗಳಲ್ಲಿ ಕಬ್ಬಿಣದ ಉಪಕರಣಗಳಿದ್ದವು. ಆದರೆ ಮಿರ್ಜಾಪುರ ಮತ್ತು ವಾರಾಣಸಿಗಳಲ್ಲಿನ ಗೋರಿಗಳಲ್ಲಿ ತಾಮ್ರ-ಶಿಲಾಯುಗ ಸಂಸ್ಕೃತಿಯ ಸೂಕ್ಷ್ಮಶಿಲೋಪಕರಣ ಹಾಗೂ ಮಣ್ಪಾತ್ರೆಗಳು ಮಾತ್ರ ಕಂಡುಬಂದಿವೆ. ಕೋಟಿಯ (ಅಲಹಾಬಾದ್ ಜಿಲ್ಲೆ) ಮತ್ತು ಕಕೋರಿಯ (ವಾರಾಣಸಿ ಜಿಲ್ಲೆ) ಹೆಸರಿಸಬಹುದಾದ ವಸತಿ ನೆಲೆಗಳು (**ನೋಡಿ-ಉತ್ತರಭಾರತದ ಬೃಹತ್ ಶಿಲಾಯುಗ ಸಂಸ್ಕೃತಿ**).

ಈಶಾನ್ಯ ಭಾರತ: ಇಲ್ಲಿನ ನಾಗ, ಖಾಸಿ ಮೊದಲಾದ ಆದಿವಾಸಿ ಪಂಗಡಗಳಲ್ಲಿ ಬೃಹತ್ ಶಿಲಾಸ್ಮಾರಕಗಳನ್ನು ನಿರ್ಮಿಸುವ ಸಂಪ್ರದಾಯ ಇಂದಿಗೂ ಚಾಲ್ತಿಯಲ್ಲಿದೆ. ಇವು ಸ್ಮಾರಕಗಳೇ ಹೊರತು ಅವಶೇಷಗಳುಳ್ಳ ಗೋರಿಗಳಲ್ಲ. ಸಾಮಾನ್ಯ ನಮೂನೆಗಳೆಂದರೆ ನಿಲಸುಗಲ್ಲುಗಳು, ಕಲ್ಲುವೃತಗಳು ಮತ್ತು ಕಲ್ಮನೆಗಳು.

ನಿಲಸಕಲ್ಲು ಸಾಲುಗಳು, ವಿಭೂತಿಹಳ್ಳಿ

ಸಮಾಧಿ ನಮೂನೆಗಳು: ಈ ಕೆಳಕಂಡ ನಮೂನೆಗಳನ್ನು ವಿ.ಡಿ. ಕೃಷ್ಣಸ್ವಾಮಿಯವರು ಗುರುತಿಸಿದ್ದಾರೆ.

1. ನಿಲಸುಗಲ್ಲುಗಳು (ಮೆನ್ಹಿರ್): ನೇರವಾಗಿ ನಿಲ್ಲಿಸಿರುವ ಉದ್ದದ ಚಪ್ಪಡಿಗಲ್ಲು ಅಥವಾ ಬಂಡೆಗಳು ಈ ವರ್ಗಕ್ಕೆ ಸೇರುತ್ತವೆ. ಇವುಗಳ ಸುತ್ತ ಕೆಲವೊಮ್ಮೆ ಕಲ್ಲು ವೃತ್ತಗಳಿರುತ್ತವೆ. ಎರಡು ವಿಶಿಷ್ಟ ನಮೂನೆಗಳೆಂದರೆ ಸಮನಾಂತರ ಪಂಕ್ತಿಯಲ್ಲಿ ನಿಲ್ಲಿಸಿದ ಕಲ್ಲುಗಳು ಮತ್ತು ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ನೆಟ್ಟಿರುವ ಕಲ್ಲುಗಳು (ಅಲೈನ್‌ಮೆಂಟ್).

2. ಕಲ್ಮನೆ (ಡಾಲ್ಮೆನ್): ಭೂಮಟ್ಟದಲ್ಲಿ 4-5 ಚಪ್ಪಡಿಕಲ್ಲುಗಳಿಂದ ರಚಿಸಿದ ಪುಟ್ಟ ಕೋಣೆಯನ್ನು ಕಲ್ಮನೆ ಎನ್ನುವರು. ಕೋಣೆಯ ಮೇಲ್ಭಾಗವನ್ನು ಚಪ್ಪಡಿಕಲ್ಲಿನಿಂದ ಮುಚ್ಚಲಾಗಿರುತ್ತದೆ. ಕೆಲವೊಮ್ಮೆ ಯಾವುದಾದರೊಂದು ಬದಿಯ ಗೋಡೆಯಂತಿರುವ ಚಪ್ಪಡಿಕಲ್ಲಿನಲ್ಲಿ ವೃತ್ತಾಕಾರದ ಕಂಡಿಯಿರುತ್ತದೆ.

3. ಕಲ್ಲುಪ್ಪೆಗಳು (ಕೇಯಿರ್ನ್): ಸಮಾಧಿಯ ಮೇಲೆ ಗುರುತಿಗಾಗಿ ಒತ್ತಾಗಿ ಗುಪ್ಪೆ ಹಾಕಿದ ಸಣ್ಣ ಕಲ್ಲುಗಳೇ ಕಲ್ಲುಪ್ಪೆಗಳು.

4. ಕಲ್ಲುವೃತ್ತಗಳು (ಸರ್ಕಲ್): ಸಮಾಧಿಯ ಸುತ್ತಲೂ ಸಣ್ಣಬಂಡೆಗಳನ್ನು ನೆಲಮಟ್ಟದಲ್ಲಿ ವೃತ್ತಾಕಾರದಲ್ಲಿ ಜೋಡಿಸಿರುತ್ತಾರೆ. ಸಾಮಾನ್ಯವಾಗಿ ಒಂದು ಸಮಾಧಿಗೆ ಒಂದೇ ಕಲ್ಲು ವೃತ್ತವಿರುತ್ತದೆ. ಏಕ ಕೇಂದ್ರದ ಎರಡು ಅಥವಾ ಹೆಚ್ಚಿನ ವೃತ್ತಗಳು ವಿರಳವಾಗಿ ಕಂಡುಬಂದಿವೆ.

5. ಅಸ್ಥಿ ಮಡಕೆಗಳು (ಅರ್ನ್): ಅಸ್ಥಿ ಅವಶೇಷಗಳನ್ನು ಮಡಕೆಗಳೊಳಗೆ ಇಟ್ಟು ಅವುಗಳನ್ನು ಹೂಳಲಾಗುತ್ತಿತ್ತು. ಇಂತಹ ಮಡಕೆಗಳು ಗುಡಾಣದ ಆಕಾರ-ಗಾತ್ರಗಳಲ್ಲಿರುತ್ತವೆ. ಇವುಗಳ ತಳ ಮಟ್ಟದ್ದಾಗಿರುತ್ತದೆ. ಅಲೆಯಾಗಿ ಹೊಟ್ಟೆಯುಬ್ಬಿರುತ್ತವೆ. ಮಡಕೆಗಳನ್ನು ಗುಳಿಗಳೊಳಗೆ ಹೂಳಿರುತ್ತಾರೆ. ಭೂ ಮಟ್ಟದಲ್ಲಿ ಇವುಗಳ ಸುತ್ತ ಗುರುತಿಗಾಗಿ ಕಲ್ಲು ವೃತ್ತವಿರಬಹುದು ಅಥವಾ ಮಡಕೆಯ ಮೇಲೆ ಒಂದು ದೊಡ್ಡ ಚಪ್ಪಡಿಕಲ್ಲನ್ನು ಹಾಸಿರಬಹುದು.

6. ಶವಪೆಟ್ಟಿಗೆ (ಸಾರ್ಕೊಫೇಗಸ್): ಈ ಪ್ರಕಾರದಲ್ಲಿ ಸುಡಾವೆಮಣ್ಣಿನಿಂದ ತಯಾರಿಸಿದ ಕಾಲಿರುವ ಪೆಟ್ಟಿಗೆಯೊಳಗೆ ಅಸ್ಥಿಯನ್ನು ಇಟ್ಟಿರುತ್ತಾರೆ.

7. ಸಮಾಧಿದಿಬ್ಬ (ಬರೊ): ಗೋಲ ಅಥವಾ ಅಂಡಾಕಾರದಲ್ಲಿ ನಿರ್ಮಿಸಿರುವ ಮಣ್ಣಿನ ದಿಬ್ಬ. ಈ ಪ್ರಕಾರದಲ್ಲಿ ಕಲ್ಲನ್ನು ಬಳಸಿರುವುದಿಲ್ಲ.

**ಅಪರೂಪ ಮಾದರಿಯ ಬೃಹತ್ ಶಿಲಾಗೋರಿ, ಕಲಾದಗಿ**

8. ನೆಲಕೋಣೆ (ಸಿಸ್ಟ್): ನೆಲದಡಿಯಲ್ಲಿ ರಚಿಸಿರುವ ಆಯತಾಕಾರದ ಕಲ್ಲುಚಪ್ಪಡಿಯ ಕೋಣೆ ಅಥವಾ ಪೆಟ್ಟಿಗೆ. ನಾಲ್ಕು ಚಪ್ಪಡಿಕಲ್ಲುಗಳನ್ನು ಒಂದಕ್ಕೊಂದು ಆನಿಕೆಯಾಗಿರುವಂತೆ ನಿಲ್ಲಿಸಿ ಮೇಲ್ಭಾಗವನ್ನು ಮತ್ತೊಂದು ಚಪ್ಪಡಿಕಲ್ಲಿನಿಂದ ಮುಚ್ಚಿರುತ್ತಾರೆ. ಈ ಪ್ರಕಾರದಲ್ಲಿ ಪ್ರಾದೇಶಿಕ ವೈವಿಧ್ಯ ಕಂಡುಬರುತ್ತದೆ.

9. ಟೋಪಿಕಲ್ಲು: ಒಂದು ಬದಿ ಸಮತಲವಾಗಿದ್ದು ಇನ್ನೊಂದು ಬದಿಯಲ್ಲಿ ಅರೆ ವೃತ್ತಾಕಾರವಾಗಿರುವಂತೆ ಮತ್ತು ತುದಿಯ ಕಡೆ ಸಪೂರವಾಗುತ್ತ ಹೋಗುವಂತೆ ಕೆತ್ತಿದ 4 ಚಪ್ಪಡಿಕಲ್ಲುಗಳನ್ನು ತ್ರಿಪದಿಯ ರೀತಿಯಲ್ಲಿ ತುದಿ ಒಂದನ್ನೊಂದು ಸೇರುವಂತೆ ಓರೆಯಾಗಿ ನಿಲ್ಲಿಸಿ ಅದರ ಮೇಲೆ ಗುಮ್ಮಟಾಕರದ ಕಲ್ಲನ್ನು ಇಡಲಾಗುತ್ತದೆ.

10. ಹೆಡೆಕಲ್ಲು (ಹುಡ್‌ಸ್ಟೋನ್): ಹೆಡೆಯ ರೀತಿಯಲ್ಲಿರುವ ಜಂಬುಕಲ್ಲಿನ ಶಿಲೆ.

11. ಮಾನವಾಕೃತಿಯ ಚಪ್ಪಡಿಕಲ್ಲು (ಆಂಥ್ರೊಪೊಮಾರ್ಫ್): ಸು.20ಸೆಂಮೀ ದಪ್ಪದ ಚಪ್ಪಡಿಕಲ್ಲಿನಲ್ಲಿ ಕೆತ್ತಿದ ಮಾನವ ಆಕೃತಿಯನ್ನು ಹೋಲುವ ಕಲ್ಲುಗಳು. ಬೃಹತ್ತಾದ ಚಪ್ಪಡಿಕಲ್ಲಿನ ಮನುಷ್ಯಾಕಾರದ ಗೊಂಬೆಗಳು ಬೃಹತ್ ಶಿಲಾಸಂಸ್ಕೃತಿಯ ಮತ್ತೊಂದು ಅಪರೂಪದ ಅವಶೇಷಗಳು. ಇಂತಹ ಅವಶೇಷಗಳು ಕಳೆದ ಶತಮಾನದ ಕೊನೆಯ ದಶಕಗಳಿಂದ ಹೆಚ್ಚು ಬೆಳಕಿಗೆ ಬಂದಿವೆ. ದಕ್ಷಿಣಭಾರತದ ಕರ್ನಾಟಕ (4), ತಮಿಳುನಾಡು (2), ಆಂಧ್ರಪ್ರದೇಶ (11) – ಈ ನೆಲೆಗಳಲ್ಲಿ ಇಂಥ ಪ್ರಕಾರದ ಗೊಂಬೆಗಳು ಲಭಿಸಿವೆ. ಬೃಹದಾಕಾರದ ಚಪ್ಪಡಿಕಲ್ಲುಗಳಲ್ಲಿ ಮಾನವನಂತೆ ಕಾಣುವ ಸಾಮಾನ್ಯವಾಗಿ ಪುರುಷನ, ಅಪರೂಪವಾಗಿ ಸ್ತ್ರೀಯ ಬಾಹ್ಯಾಕಾರವನ್ನಷ್ಟೇ ಗುರ್ತಿಸಿ ಅದರಲ್ಲಿ ಕಣ್ಣು, ಮೂಗು, ಬಾಯಿ, ಮೊದಲಾದ ಮುಖಲಕ್ಷಣಗಳನ್ನು ತೋರಿಸದೆ ಅರ್ಧಗೋಲಾಕೃತಿಯ ತಲೆ, ಅಡ್ಡಚಾಚಿದ ಕೈಗಳು, ಕಾಲುಗಳನ್ನು ಅಗಲಿಸಿ ನಿಂತಿರುವಂತೆ ತೋರಿಸಲಾಗಿದೆ. ಕಾಲುಗಳನ್ನು ಬಿಡಿ ಬಿಡಿಯಾಗಿ ತೋರಿಸಿರುವುದಿಲ್ಲ. ಮೆಟ್ಟೂರು (ತಮಿಳುನಾಡು), ಐಹೊಳೆ, ಹಿರೇಬೆನಕಲ್ಲು ಮೊದಲಾದೆಡೆಗಳಲ್ಲಿ ಇಂಥ ಗೊಂಬೆಗಳು ಕಲ್ಗೋರಿಯ ಒಂದು ಭಾಗವಾಗಿ ತೋರಿಬಂದಿವೆ. ಆದ್ದರಿಂದ ಬೃಹತ್ ಶಿಲಾಸಂಸ್ಕೃತಿಯ ಶಿಲ್ಪಗಳೆಂದೂ ಪರಿಗಣಿತವಾಗಿವೆ.

ಐಹೊಳೆ, ಹಿರೇಬೆನಕಲ್ಲು (ಗಂಗಾವತಿ ತಾಲ್ಲೂಕು, ರಾಯಚೂರು ಜಿಲ್ಲೆ) ಹುಲಿಕುಂಟೆ (ಹರಪನಹಳ್ಳಿ ತಾಲ್ಲೂಕು) ಮತ್ತು ಕುಮತಿ (ಕೂಡ್ಲಿಗಿ ತಾಲ್ಲೂಕು) ಬಳ್ಳಾರಿ ಜಿಲ್ಲೆ ಈ ನಾಲ್ಕು ಪ್ರದೇಶಗಳಲ್ಲಿ ವಿವಿಧ ಪ್ರಕಾರದ ಈ ಬಗೆಯ ಕಲ್ಲುಗೊಂಬೆಗಳು ಪತ್ತೆಯಾಗಿವೆ. ಈ ಎಲ್ಲ ಪ್ರದೇಶದ ಗೊಂಬೆಗಳನ್ನು ಗಮನಿಸಿದಾಗ ಇವುಗಳ ರಚನೆಯಲ್ಲಿ ಅಂಥ ಬಹುಮುಖ್ಯ ವ್ಯತ್ಯಾಸಗಳು ಕಂಡುಬರದಿದ್ದರೂ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬಂದಿವೆ. ಐಹೊಳೆಯ ಗೊಂಬೆಗಳಲ್ಲಿ ಅತಿ ನೀಳವಾದ ಮುಂಡ, ನೆಲದಲ್ಲಿ ಹುದುಗಿಸಲು ಅನುಕೂಲವಾಗುವಂತೆ ಚೂಪಾದ ಬುಡದ ಭಾಗವಿದೆ. ಹಿರೇಬೆನಕಲ್ಲಿನ ಇಂಥ ಗೊಂಬೆಗಳು ಗಾತ್ರದಲ್ಲಿ ಅತೀ ದೊಡ್ಡವಾಗಿದ್ದು ಮುಕ್ಕಾಲು ಭಾಗ ಭೂಮಿಯಲ್ಲಿ ಹುದುಗಿಕೊಂಡಿದೆ. ಕುಮತಿಯ ಗೊಂಬೆಗಳು 2 ½ ಮೀ ಎತ್ತರ 1 ½ ಮೀ ಅಗಲವಾದ ಎದೆಯ ಭಾಗ, ಸು.15–20 ಸೆಂ.ಮೀಗಳಷ್ಟು ದಪ್ಪವಾಗಿದೆ. ಸ್ಥಳೀಯವಾಗಿ ಇಲ್ಲಿ ಈ ಕಲ್ಲುಗೊಂಬೆಗಳನ್ನು ಪಾಂಡವ ಕಲ್ಲುಗಳೆಂದು ಕರೆದು ವರ್ಷಕ್ಕೊಮ್ಮೆ ಇವುಗಳಿಗೆ ಎಡೆ ಇಡುವ ಪದ್ಧತಿ ಇದೆ. ಒಟ್ಟಿನಲ್ಲಿ ಈ ಬಗೆಯ ಗೊಂಬೆಗಳು ಬೃಹತ್ ಶಿಲಾಸಂಸ್ಕೃತಿಯ ಧಾರ್ಮಿಕನಂಬಿಕೆ, ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಆಕರಗಳಾಗಿರುವುದರೊಂದಿಗೆ ಕರ್ನಾಟಕ ಮೂರ್ತಿಶಿಲ್ಪದ ಪೂರ್ವಭಾವಿ ಹಂತದ ಮೇಲೂ ಬೆಳಕು ಚೆಲ್ಲುತ್ತವೆ. ಬೃಹತ್ ಶಿಲಾಸಂಸ್ಕೃತಿಯ ಜನರ ನಿರ್ಮಾಣಕೌಶಲ್ಯ ಹಾಗೂ ಅನುಸರಿಸುತ್ತಿದ್ದ ಸರಳ ಮತ್ತು ಚತುರ ತಾಂತ್ರಿಕ ಕುಶಲತೆಗಳು ತರುವಾಯ ಕಾಲದ ಶಿಲಾನಿರ್ಮಿತಿಗಳಿಗೆ ನಾಂದಿಯಾದವು. ಉಜ್ವಲ ಪ್ರತಿಭೆ ಅನ್ನಲು ಸಾಧ್ಯವಿಲ್ಲದಿದ್ದರೂ ಅಂದಿನ ಕಾಲಕ್ಕೆ ಎಷ್ಟು ಸಾಧ್ಯವಿತ್ತೋ ಅಷ್ಟು ಪರಿಣತಿ, ಪ್ರತಿಭೆಗಳು ಈ ಬಗೆಯ ಕಲಾನಿರ್ಮಿತಿಗಳಲ್ಲಿತ್ತು ಎಂಬುದು ಗಮನಾರ್ಹ.

12. ನೆಲದಡಿಯ ಕಲ್ಲುಗುಹೆಗಳು (ರಾಕ್ ಕಟ್ ಕೇವ್ಸ್): ಇವು ಭೂಮಿಯಡಿಯಲ್ಲಿರುವ ಜಂಬುಕಲ್ಲು ಬಂಡೆಯಲ್ಲಿ ಕೊರೆದು ಮಾಡಿದ ಶಿಲಾಲಯಗಳು. ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗ ಕಾಲದ ಸಮಾಧಿ ನೆಲೆ ಉಮ್ಮಿಚಿಪೊಯಿಲ್. ಪಶ್ಚಿಮ ಘಟ್ಟ ಶ್ರೇಣಿಗೆ ಸೇರಿದ ಒಂದು ಜಂಬಿಟ್ಟಿಗೆ ಗುಡ್ಡದ ಸಮತಟ್ಟಾದ ನೆತ್ತಿಯಲ್ಲಿ ನೆಲದಡಿಯ ಕಲ್ಗುಹೆ ಪ್ರಕಾರದ 9 ಸಮಾಧಿಗಳಿವೆ. ಇವುಗಳಲ್ಲಿ ಎರಡನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಉತ್ಖನನಕ್ಕೆ ಒಳಪಡಿಸಿತು. ಜಂಬಿಟ್ಟಿಗೆಯೊಳಗೆ ಕೊರೆದ ಒಂದು ಗುಹೆಯ ವಾಸ್ತು ಗಮನಾರ್ಹ. ಇದರೊಳಗೆ ಇಳಿಯಲು 4 ಮೆಟ್ಟಿಲಿದ್ದು ಇದರ ಮೇಲ್ಭಾಗದಲ್ಲಿ ಸಜ್ಜದಂತಹ ಮುಂಚಾಚು ಇದೆ. ಪ್ರವೇಶ ದ್ವಾರ ಆಯತಾಕಾರವಾಗಿದ್ದು ದೇವಾಲಯದ ದ್ವಾರಬಂಧವನ್ನು ಹೋಲುತ್ತದೆ. ಅರ್ಧಚಂದ್ರಾಕೃತಿಯ ವಿನ್ಯಾಸದಲ್ಲಿರುವ ಈ ಗುಹಾ ಸಮಾಧಿಯಲ್ಲಿ 75ಕ್ಕೂ ಹೆಚ್ಚು ಮಣ್ಪಾತ್ರೆಗಳನ್ನಿಡಲಾಗಿತ್ತು. ಜೊತೆಯಲ್ಲಿ ಚಿನ್ನದ ಉಂಗುರ, ಕಬ್ಬಿಣದ ಉಪಕರಣಗಳು ಹಾಗೂ ಸುಡಾವೆ ಮಣ್ಣಿನ ಮಣಿಯಿದ್ದವು. ಮಣ್ಪಾತ್ರೆಗಳಲ್ಲಿ ಒಂದು ನವಶಿಲಾಸಂಸ್ಕೃತಿಯ ನಸುಗೆಂಪು ಲೇಪನವುಳ್ಳ ಅರ್ಧ ಗೋಲಾಕೃತಿಯ ಸಾದಾ ಬಟ್ಟಲು. ಇದನ್ನು ಗಮನಿಸಿದರೆ ಇಲ್ಲಿಯ ಗುಹಾ ಸಮಾಧಿಗಳಲ್ಲಿ ಪ್ರಾಚೀನವಾದುವು ನವ ಶಿಲಾಬೃಹತ್ ಶಿಲಾ ಸಂಸ್ಕೃತಿಗಳ ಪರಸ್ಪರ ವ್ಯಾಪಕ ಹಂತಕ್ಕೆ ಸೇರಿದವೆಂದು ಹೇಳಬಹುದು. ಈ ಪ್ರಕಾರದ ಬೃಹತ್ ಶಿಲಾ ಸಮಾಧಿಯ ವ್ಯವಸ್ಥಿತ ಉತ್ಖನನವಾದುದು ಮೊದಲು ಈ ನೆಲೆಯಲ್ಲಿಯೆ.

ಸಮಾಧಿ ನಮೂನೆ ಆಯಾ ಪ್ರದೇಶದಲ್ಲಿರುವ ನೈಸರ್ಗಿಕ ಶಿಲಾರಚನೆಗನುಸಾರವಾಗಿರುತ್ತದೆ. ಉದಾಹರಣೆಗೆ ನೆಲದಡಿಯ ಕಲ್ಗುಹೆ ಕೇರಳ, ದಕ್ಷಿಣ ಕನ್ನಡ ಜಿಲ್ಲೆಗಳ ವಿಶಿಷ್ಟ ಪ್ರಕಾರವಾಗಿದೆ. ಹೆಡೆಕಲ್ಲು ಮತ್ತು ಟೋಪಿಕಲ್ಲುಗಳೂ ಹೆಚ್ಚಾಗಿ ಕೇರಳದಲ್ಲಿವೆ. ವಿರಳವಾದ ಮಾನವಾಕೃತಿಯ ಕಲ್ಲುಗಳು ಆಂಧ್ರ– ಕರ್ನಾಟಕ–ತಮಿಳುನಾಡುಗಳಿಗೆ ಸೀಮಿತವಾಗಿವೆ. ಕಲ್ಲುವೃತ್ತಗಳಲ್ಲಿ ಸಮಾಧಿ ವೃತ್ತದ ಕೇಂದ್ರಭಾಗದಲ್ಲಿ ಮಾತ್ರ ಇರುತ್ತದೆಂದು ಈವರೆಗೆ ತಿಳಿಯಲಾಗಿತ್ತು. ಆದರೆ ಕಲ್ಲುವೃತ್ತದ ಹೊರಸುತ್ತಿನಲ್ಲಿಯೂ ಶವಕುಣಿ ಇರಬಹುದಾದ ಸಾಧ್ಯತೆಯನ್ನು ಧಾಮ್ನ ಮತ್ತು ಮಹುರ್ಜರಿ (ವಿದರ್ಭ ಪ್ರಾಂತ, ಮಹಾರಾಷ್ಟ್ರ) ಗಳಲ್ಲಿ ನಡೆದ ಉತ್ಖನನಗಳು ತೋರಿಸಿಕೊಟ್ಟಿವೆ. ಇಂತಹ ಶವಕುಣಿಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಿದೆ.



**ಕಲ್ಮನೆ**

ಹೆಚ್ಚಿನ ಬೃಹತ್ ಶಿಲಾಸಮಾಧಿಗಳು ಆಯ್ದ ಅಸ್ಥಿ ಭಾಗಗಳನ್ನು ಮಾತ್ರ ಹೂಳಿರುವಂಥ ಆಂಶಿಕ ಸಮಾಧಿಗಳು. ವಿದರ್ಭ ಪ್ರಾಂತದ (ಮಹಾರಾಷ್ಟ್ರ) ಖೈರ್‌ವಾಡ ಮತ್ತು ರಾಯ್‌ಪುರದ ಸಮಾಧಿಗಳಲ್ಲಿ ಸುಟ್ಟ ಚಿಹ್ನೆಯಿರುವ ಮಾನವ ಮೂಳೆಗಳಿದ್ದು ಇವನ್ನು ದಹನದ ಅನಂತರ ಹೂಳಿರಬೇಕೆಂಬುದು ಎಸ್.ಆರ್. ವಾಳಿಂಬೆಯವರ ಅಭಿಪ್ರಾಯ. ಪೂರ್ಣ ಸಮಾಧಿಗಳು ವಿರಳ. ಮಹುರ್ಜರಿ ಮತ್ತು ರಾಯ್‌ಪುರದಲ್ಲಿ ಅಪರೂಪವಾಗಿ ಒಂದೇ ಸಮಾಧಿಯಲ್ಲಿ ಒಂದಕ್ಕಿಂತ ಹೆಚ್ಚು ಅಸ್ಥಿಪಂಜರಗಳು ಕಾಣಸಿಕ್ಕಿವೆ. ಹೆಚ್ಚಿನ ಸಮಾಧಿಗಳು 18–35ರ ವಯೋಮಾನದ ಮಧ್ಯ ವಯಸ್ಕರದ್ದಾಗಿವೆ. ಅಸ್ಥಿ ಅವಶೇಷಗಳ ಜೊತೆಯಲ್ಲಿ ಸಾಮಾನ್ಯವಾಗಿ ಮಣ್ಪಾತ್ರೆಗಳು, ತಾಮ್ರ ಮತ್ತು ಕಬ್ಬಿಣದ ವಸ್ತುಗಳು, ಅಪರೂಪಕ್ಕೆ ಚಿನ್ನದ ಆಭರಣಗಳು ಇರುತ್ತವೆ. ವಿದರ್ಭ ಪ್ರಾಂತದ ಕೆಲವೊಂದು ಸಮಾಧಿಗಳಲ್ಲಿ ಅವಶೇಷಗಳೊಂದಿಗೆ ಕುದುರೆಯ ಅಸ್ಥಿ ಪಂಜರಗಳೂ ತಾಮ್ರದ ಅಶ್ವಾಭರಣಗಳೂ ಇರುವುದು ವಿಶೇಷವಾಗಿದೆ.

ಮಣ್ಪಾತ್ರೆಗಳು: ಬೃಹತ್ ಶಿಲಾಯುಗ ಸಮಾಧಿಗಳಲ್ಲಿ ಸರ್ವೆಸಾಮಾನ್ಯವಾಗಿರುವ ಪ್ರಕಾರವೆಂದರೆ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು. ಬೋಳು ಅಂಚಿನ ಬಟ್ಟಲು, ಶಂಕು ವಿನಾಕಾರದ ಬಟ್ಟಲು, ಗಿಂಡಿ- ಇವು ಮುಖ್ಯ ನಮೂನೆಗಳು. ದಕ್ಷಿಣ ಭಾರತದ ಸಮಾಧಿಗಳಿಗೆ ಮೀಸಲಾಗಿರುವ ನಮೂನೆಯೆಂದರೆ 3-4 ಕಾಲಿನ ಮಡಕೆಗಳು. ಹೊಳಪಿನ ಕಪ್ಪುಪಾತ್ರೆಗಳು ಮತ್ತೊಂದು ಮುಖ್ಯ ಪ್ರಕಾರ. ಲಾಳಿಕೆಯಾಕಾರದ ಮುಚ್ಚಳಗಳು, ನಳಿಕೆಯುಳ್ಳ ಪಾತ್ರೆ, ಸಿಂಬಿ, ಹಿಡಿಕೆಯುಳ್ಳ ಮುಚ್ಚಳಗಳು ಈ ಪ್ರಕಾರದ ಸಾಮಾನ್ಯ ಆಕಾರಗಳು. ವಿದರ್ಭದ ಕೆಲವೊಂದು ಸಮಾಧಿಗಳಲ್ಲಿ, ಆಂಧ್ರದ ಯೇಲೇಶ್ವರಂನಲ್ಲಿ ಹಾಗೂ ತಮಿಳುನಾಡಿನ ಆದಿಚನ್ನಲೂರಿನಲ್ಲಿ ಹಕ್ಕಿ ಮತ್ತು ಪ್ರಾಣಿಯಾಕಾರದ ಹಿಡಿಕೆಗಳಿರುವ ಮುಚ್ಚಳಗಳು ಸಿಕ್ಕಿವೆ. ಸಮಾಧಿಗಳಲ್ಲಿ ಅಪರೂಪವಾಗಿ ಕಂಡು ಬರುವ ಮತ್ತೊಂದು ಪ್ರಕಾರವೆಂದರೆ ಮಸುಕು ಕೆಂಪುಬಣ್ಣದ ಪಾತ್ರೆಗಳು. ಅಭ್ರಕಯುಕ್ತ ಮಣ್ಪಾತ್ರೆಗಳು ವಿದರ್ಭದ ಸಮಾಧಿಗಳಿಗೆ ಸೀಮಿತ ವಾಗಿವೆ. ಸಮಕಾಲೀನ ವಸತಿ ನೆಲೆಗಳಲ್ಲೂ ಪ್ರಧಾನವಾಗಿ ಕಂಡುಬರುವ ಈ ಪ್ರಕಾರದಲ್ಲಿ ಲಾಳಿಕೆಯಂತಹ ಬಾಯಿಯ ಗೋಲ ಮೈಯ ಮಡಕೆಗಳೇ ಹೆಚ್ಚಾಗಿವೆ. ಇವುಗಳ ಹೊರಮೈ ಮೇಲೆ ಕಪ್ಪು ಬಣ್ಣದಲ್ಲಿ ಸಮಾನಾಂತರ ಗೆರೆಗಳನ್ನು ಚಿತ್ರಿಸಲಾಗಿರುತ್ತದೆ. ತಮಿಳುನಾಡು ಮತ್ತು ಕರ್ನಾಟಕದ ಕೆಲವು ಸಮಾಧಿಗಳಲ್ಲಿ ಕೆಂಪು ಲೇಪನದಡಿ ಬಿಳಿ ಚಿತ್ರವುಳ್ಳ ಪಾತ್ರೆಗಳು ದೊರಕಿವೆ. ಎಲ್ಲಾ ಪ್ರಕಾರಗಳಲ್ಲಿ, ವಿಶೇಷವಾಗಿ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳಲ್ಲಿ, ಗೀರುಚಿತ್ರಗಳನ್ನು ಸಾಮಾನ್ಯವಾಗಿ ಕಾಣಬಹುದು.

**ನೆಲಕೋಣೆ**

ವಸತಿ ನೆಲೆಗಳು: ಈ ಸಂಸ್ಕೃತಿಯ ವಸತಿ ನೆಲೆಗಳು ಬೆರಳೆಣಿಕೆಯಲ್ಲಿ ಕಂಡುಬಂದಿರು ವುದು ಸೋಜಿಗವೇ ಆಗಿದೆ. ವಿದರ್ಭ ಪ್ರಾಂತದಲ್ಲಿ ನೂರಕ್ಕೂ ಹೆಚ್ಚು ಸಮಾಧಿಗಳಿದ್ದರೆ ವಸತಿ ನೆಲೆಗಳ ಸಂಖ್ಯೆ ಕೇವಲ ಏಳು. ಹಾಗಾಗಿ ಈ ಕಾಲದ ಜನಜೀವನದ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಬ್ರಹ್ಮಗಿರಿ, ಚಂದ್ರವಳ್ಳಿ, ಹಳ್ಳೂರು, ತಿರುಮಕೂಡಲ ನರಸೀಪುರ, ಬನಹಳ್ಳಿ (ಕರ್ನಾಟಕ), ಕೇಸರಪಲ್ಲಿ, ಧರಣಿಕೋಟ (ಆಂಧ್ರಪ್ರದೇಶ), ಪೈಯಂಪಳ್ಳಿ, ಆದಿ ಚನ್ನಲೂರು (ತಮಿಳುನಾಡು), ನಾಯ್‍ಕುಂಡ್, ಬಾಗಿಮೊಹರಿ, ಮಹುರ್ಜರಿ(ಮಹಾರಾಷ್ಟ್ರ) ಮೊದಲಾದ ವಸತಿ ನೆಲೆಗಳಲ್ಲಿ ಸಣ್ಣ ಪ್ರಮಾಣದಲ್ಲಿ ಉತ್ಖನನ ನಡೆಸಲಾಗಿದೆ. ಸುಣ್ಣ ಲೇಪಿತ ನೆಲಗಟ್ಟುಗಳಿದ್ದ ಮಣ್ಣಿನ ಮನೆಗಳ (ವೃತ್ತ, ಚೌಕ, ಆಯತಾಕಾರ) ಅವಶೇಷ, ಒಲೆ, ಕಣಜ (ಧಾನ್ಯ ಶೇಖರಣಾ ಗುಂಡಿಗಳು), ಕಬ್ಬಿಣ ಮತ್ತು ತಾಮ್ರದ ಉಪಕರಣಗಳು, ಜಾನುವಾರು, ಎಮ್ಮೆ, ಕುರಿ, ಹಂದಿ, ಕತ್ತೆ, ನಾಯಿ, ಕುದುರೆ, ಮುಂತಾದ ಸಾಕುಪ್ರಾಣಿ ಹಾಗೂ ವನ್ಯಮೃಗಗಳ ಮೂಳೆಗಳು, ಸುಟ್ಟ ಧಾನ್ಯ-ಕಾಳುಗಳು ಉತ್ಖನನದಲ್ಲಿ ಕಂಡುಬಂದಿವೆ.

ನೀರಿನ ಸೆಲೆಗಳ ಸಮೀಪದಲ್ಲಿ ಫಲವತ್ತಾದ ಅಥವಾ ಖನಿಜ ಸಂಪತ್ತು (ಕಬ್ಬಿಣ, ತಾಮ್ರ, ಚಿನ್ನ, ಬೆಳ್ಳಿ, ಸತು-ತವರ) ಹೇರಳವಾಗಿರುವ ಪ್ರದೇಶದಲ್ಲಿ ವಸತಿ ನೆಲೆಗಳಿದ್ದರೆ ಸಮಾಧಿಗಳು ಕೃಷಿಗೆ ಯೋಗ್ಯವಲ್ಲದ ಸ್ಥಳ ಅಥವಾ ಬಂಜರು ಭೂಮಿಯಲ್ಲಿ ಇಲ್ಲವೇ ಬಂಡೆಗಳು ಸುಲಭವಾಗಿ ಸಿಗುವಂತಹ ಸ್ಥಳಗಳಲ್ಲಿ ಇರುತ್ತವೆ. ವಸತಿ ನೆಲೆಯ ಆಯ್ಕೆಯಲ್ಲಿ ವಾಣಿಜ್ಯ ಚಟುವಟಿಕೆಗಳು ಮುಖ್ಯ ಪಾತ್ರ ವಹಿಸಿದ್ದಂತೆ ತೋರುತ್ತದೆ.

ತಂತ್ರಜ್ಞಾನ: ಕಬ್ಬಿಣ ತಂತ್ರಜ್ಞಾನ ಬೃಹತ್ ಶಿಲಾಯುಗದ ಒಂದು ವಿಶೇಷ ಅಂಶವಾಗಿದೆ. ಈ ಯುಗದಲ್ಲಿ ಕಬ್ಬಿಣ ತಂತ್ರಜ್ಞಾನ ಭಾರತದಾದ್ಯಂತ ಪಸರಿಸಿತು. ಒಂದು ಕೆಜಿಯಷ್ಟು ಅದಿರಿನಿಂದ ಸು. 350ಗ್ರಾಂ ಪರಿಶುದ್ಧ ಕಬ್ಬಿಣವನ್ನು ಪಡೆಯುವ ಪರಿಣತಿಯನ್ನು ಈ ಜನ ಸಾಧಿಸಿದ್ದರು ಎಂಬುದು ವಿಶ್ವಾಸ್ ಗೋಗ್ಟೆಯವರ ನಾಯ್‍ಕುಂಡ್ ಅಧ್ಯಯನದಿಂದ ತಿಳಿದುಬಂದಿದೆ.

ಕಠಾರಿ, ಭಲ್ಲೆ, ತ್ರಿಶೂಲ, ಬಾಣದಮೊನೆ, ಕೊಕ್ಕೆ, ಕೊಂಡಿ, ಹಣತೆ, ಸೌಟು, ಬಾಚಿ, ಮಚ್ಚು, ನೇಗಿಲಿನ ಗುಳ, ಉಳಿ, ಚಾಣ, ಚಪ್ಪಟೆ ಕೊಡಲಿ-ಹೀಗೆ ನಾನಾ ವಿಧದ ಉಪಕರಣ ಗಳನ್ನು ತಯಾರಿಸುವ ಕೌಶಲ್ಯ ಇವರಲ್ಲಿತ್ತು. ಕುದುರೆಯ ಕಡಿವಾಣದ ಭಾಗಗಳನ್ನೂ ಇವರು ಕಬ್ಬಿಣದಿಂದಲೇ ಮಾಡುತ್ತಿದ್ದರು. ಇವರು ತಯಾರಿಸುತ್ತಿದ್ದ ತಾಮ್ರ-ಕಂಚು ಮತ್ತು ಚಿನ್ನದ ವಸ್ತುಗಳಲ್ಲೂ ಕಲಾವಂತಿಕೆಯನ್ನು ಕಾಣಬಹುದು. ಪ್ರಾಣಿ, ಪಕ್ಷಿ, ಮೊಗ್ಗುಗಳ ಹಿಡಿಕೆಯಿರುವ ಮುಚ್ಚಳಗಳಂತೂ ಸುಂದರವಾಗಿವೆ. ತಾಮ್ರದ ತಗಡುಗಳಿಂದ ಮಾಡಿದ ಕುದುರೆಯ ಮುಖದ ಆಭರಣಗಳು ಇವರ ಕಲಾಪ್ರಜ್ಞೆಗೆ ಉತ್ತಮ ಉದಾಹರಣೆಗಳಾಗಿವೆ. ಇವನ್ನು ಪ್ರಾಯಶಃ ಚರ್ಮಕ್ಕೆ ಹೊಂದಿಸಿ ಕುದುರೆಯ ಮುಖಕ್ಕೆ ಕಟ್ಟುತ್ತಿದ್ದರು. ಮಹುರ್ಜರಿ ಯಲ್ಲಿ ಸಿಕ್ಕಿರುವ ತಾಮ್ರದ ಅಡ್ಡಣಿ ಉಲ್ಲೇಖಾರ್ಹ. ಬಳೆ, ಉಂಗುರ, ಬಟ್ಟಲು, ಗಂಟೆ, ತಟ್ಟೆ, ಹಿಡಿಕೆ ಮೊದಲಾದ ದಿನಬಳಕೆಯ ವಸ್ತುಗಳಿಗೆ ತಾಮ್ರ ಮತ್ತು ಕಂಚುಗಳೆರಡನ್ನೂ ಬಳಸಿದ್ದಾರೆ. ಮಹುರ್ಜರಿ, ಆದಿಚನ್ನಲೂರು, ಅರಿಪ್ಪ ಮೊದಲಾದ ಕಡೆಗಳಲ್ಲಿ ಕಿವಿಯ ಓಲೆ, ತಂತಿ ಮೊದಲಾದ ಚಿನ್ನದ ಆಭರಣಗಳು ಸಿಕ್ಕಿವೆ. ಮಣಿಗಾರಿಕೆಯಲ್ಲಿಯೂ ಇವರು ಪ್ರಗತಿ ಹೊಂದಿದ್ದರು ಎಂಬುದಕ್ಕೆ ಸ್ಟಿಯಟೈಟಿನ ಮತ್ತು ಎಚ್ಚಿದ ಮಂದಗೆಂಪಿನ ಮಣಿಗಳೇ ಸಾಕ್ಷಿ.

**ಸಾಮಾಜಿಕ ರಚನೆ ಮತ್ತು ಆರ್ಥಿಕ ಸಂಪನ್ಮೂಲಗಳು:** ಈ ಸಂಸ್ಕೃತಿಯ ಆರ್ಥಿಕ-ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಭಿನ್ನಾಭಿಪ್ರಾಯಗಳಿವೆ. ಕೃಷಿಯನ್ನಾಧರಿಸಿದ ಸ್ಥಾಯಿ ಸಮುದಾಯ ಇದಾಗಿತ್ತೆಂಬುದು ಒಂದು ಅಭಿಪ್ರಾಯ. ಇನ್ನು ಕೆಲವರ ಪ್ರಕಾರ ಇವರು ಅಲೆಮಾರಿ ಪಶುಪಾಲಕರಾಗಿದ್ದರು. ಇದು ಅರೆವಲಸೆ ಕೃಷಿಕ ಸಂಸ್ಕೃತಿ ಅಥವಾ ಕೃಷಿಕ-ಪಶುಪಾಲಕ ಸಂಸ್ಕೃತಿಯಾಗಿತ್ತೆಂಬ ಅಭಿಪ್ರಾಯವೂ ಇದೆ. ಒಟ್ಟಿನಲ್ಲಿ ಪುರಾವೆಗಳು ಸೂಚಿಸು ವಂತೆ ಕೃಷಿಗಿಂತಲೂ ಹೆಚ್ಚಾಗಿ ಪಶುಪಾಲನೆಯನ್ನು ಈ ಜನರು ಅವಲಂಬಿಸಿದ್ದರು. ಜೊತೆಗೆ ಆದಿ ಕಬ್ಬಿಣಯುಗದ ಸಮಾಜದಲ್ಲಿ ಚಮ್ಮಾರ, ಕಮ್ಮಾರ, ಬಡಗಿ, ಅಕ್ಕಸಾಲಿಗ ಮೊದಲಾದ ವೃತ್ತಿ ಪಂಗಡಗಳೂ ಇದ್ದವು. ಈ ಯುಗದ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಅಂಶವೆಂದರೆ ಸಾಗಾಣಿಕೆಯಲ್ಲಿ ಕುದುರೆಗಳ ಉಪಯೋಗ. ಕ್ಷೇತ್ರರಕ್ಷಣೆಯಲ್ಲಿ, ಸಾಮಾನು-ಸರಂಜಾಮುಗಳ ವಿನಿಮಯ-ಸಾಗಾಣಿಕೆಯಲ್ಲಿ ಇವು ಸಹಾಯಕಾರಿಯಾಗಿದ್ದವು. ಇತರ ವಸತಿಗಳೊಂದಿಗೆ ಸಂಪರ್ಕ ಸುಲಭವೂ ತ್ವರಿತವೂ ಆದುದಲ್ಲದೆ ವಾಣಿಜ್ಯ ವ್ಯವಹಾರ ಗಳು ಚುರುಕುಗೊಂಡವು.

ಮೂಲ: ಬೃಹತ್ ಶಿಲಾ ಸಂಸ್ಕೃತಿಯ ಜನರು ಸ್ಥಳೀಯರಲ್ಲ; ಇವರು ಹೊರಗಿನಿಂದ ಬಂದು ಇಲ್ಲಿ ನೆಲೆಸಿದವರು ಎಂಬ ಅಭಿಪ್ರಾಯ ಬಹುಕಾಲ ಬಲವಾಗಿ ಬೇರೂರಿತ್ತು. ಇವರ ಮೂಲ ಪಶ್ಚಿಮ ಏಷ್ಯ ಅಥವಾ ಇರಾನ್ ಎಂಬ ತರ್ಕವೂ ಇದೆ. ಇತ್ತೀಚೆಗೆ ಕೆನಡಿ ಮತ್ತು ಲೆವಿಸ್ಕಿಯವರು ಕೈಗೊಂಡ ಅಸ್ಥಿ ಪಂಜರ ಅಧ್ಯಯನ ವಿದೇಶಿ ಸಿದ್ಧಾಂತಕ್ಕೆ ತೆರೆ ಎಳೆದಿದೆ. ಬೃಹತ್ ಶಿಲಾ ಸಂಸ್ಕೃತಿ ತಾಮ್ರ- ಶಿಲಾಯುಗದ ಮುಂದುವರಿಕೆಯಾಗಿದೆ ಎಂಬುದು ಇದರಿಂದ ಸಾಬೀತಾಗಿದೆ.

ಕಾಲಮಾನ: 1940ರ ದಶಕದವರೆಗೂ ಬೃಹತ್ ಶಿಲಾ ಸಂಸ್ಕೃತಿಯ ಕಾಲಮಾನ ಗೋಜಲಾಗಿಯೇ ಉಳಿದಿತ್ತು. 4000-400ವರ್ಷ ಹಿಂದಿನ ದೀರ್ಘ ಅವಧಿಯೊಳಗೆ ಈ ಸಂಸ್ಕೃತಿಯನ್ನು ಎಲ್ಲೆಂದರಲ್ಲಿ ಸೇರಿಸುವ ಪ್ರವೃತ್ತಿ ಇದ್ದಿತು. 1946-47ರ ಬ್ರಹ್ಮಗಿರಿ ಉತ್ಖನನ ಮೊದಲಬಾರಿಗೆ ಒಂದು ಸಾಪೇಕ್ಷ ಚೌಕಟ್ಟನ್ನು ಇದಕ್ಕೆ ಒದಗಿಸಿತು. ಇಲ್ಲಿಯವರೆಗೆ 50ಕ್ಕೂ ಹೆಚ್ಚು ಇಂಗಾಲ-14ರ ಕಾಲಮಾನಗಳು ದೊರೆತಿದ್ದು ಈ ಸಂಸ್ಕೃತಿಯ ಕಾಲಮಾನದಲ್ಲಿ ಪ್ರಾದೇಶಿಕ ವ್ಯತ್ಯಾಸವಿರುವುದನ್ನು ಸ್ಪಷ್ಟಪಡಿಸಿವೆ. ದಕ್ಷಿಣ ಭಾರತದಲ್ಲಿ ಬೃಹತ್ ಶಿಲಾ ಸಂಸ್ಕೃತಿ ಪ್ರಶ.ಪೂ.1200-ಪ್ರಶ.200ರವರೆಗೆ ಅಸ್ತಿತ್ವದಲ್ಲಿತ್ತು. ವಿದರ್ಭ ಪ್ರಾಂತದಲ್ಲಿ ಪ್ರಶ.ಪೂ.1500 ಹೊತ್ತಿಗೆ ಪ್ರಾರಂಭಗೊಂಡು ಪ್ರಶ.ಪೂ.300 ರ ಸುಮಾರಿಗೆ ಅಂತ್ಯ ಕಂಡಿತು. ಕಾಶ್ಮೀರದಲ್ಲಿ ಇದರ ಕಾಲಮಾನ ಪ್ರಶ.ಪೂ.1800-1600. (ಪಿ.ಎಸ್.ಜಿ.)

**ಬೆಂಗಳೂರು:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ಬೃಹತ್ ನಗರ ಮತ್ತು ರಾಜ್ಯದ ರಾಜಧಾನಿ. ಬಹು ಪ್ರಾಚೀನ ಸ್ಥಲ. ಇಲ್ಲಿ ಗವಿಗಂಗಾಧರೇಶ್ವರ ಗುಡಿಯ ಪರಿಸರ, ಜಾಲಹಳ್ಳಿ ಪ್ರದೇಶ ಮತ್ತು ಆನೇಕಲ್ಲು ರಸ್ತೆಯಲ್ಲಿ ಸು.12ಕಿಮೀ ದೂರದಲ್ಲಿರುವ ಸೂಡಸಂದ್ರ, ಸಿದ್ಧಾಪುರಗಳ ಬಳಿ ಸೂಕ್ಷ್ಮಶಿಲಾಯುಧಗಳು ದೊರಕಿವೆ. ಕಬ್ಬಿಣ ಯುಗಕ್ಕೆ ಸೇರಿದ ಸಮಾಧಿಗಳ ಅವಶೇಷಗಳು ನಗರದ ಸುತ್ತಮುತ್ತಲ ಕೆಲವು ಸ್ಥಳಗಳಲ್ಲಿದ್ದವು. ಇತಿಹಾಸ ಪ್ರಾರಂಭ ಕಾಲಕ್ಕೆ ಸಂಬಂಧಿಸಿದಂತೆ ಮೆಡಿಟರೇನಿಯನ್ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಕೆಲವು ವಿಧದ ಮಣ್ಣಿನ ಮಡಕೆಗಳು ಮತ್ತು ಆಗಿನ ರೋಮ್ ದೊರೆಗಳಾದ ಅಗಸ್ಟಸ್, ಟೈಬೀರಿಯಸ್, ಕ್ಲಾಡಿಯಸ್ ಮೊದಲಾದವರ ನಾಣ್ಯಗಳು ಯಶವಂತಪುರದಲ್ಲಿ ಮತ್ತು ಹಿಂದುಸ್ತಾನ್ ವಿಮಾನ ಕಾರ್ಖಾನೆಯ ಪ್ರದೇಶದಲ್ಲಿ ದೊರಕಿವೆ. ಇವು ಬೆಂಗಳೂರು ನಗರ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದಿಂದ, ಅಂದರೆ ಕನಿಷ್ಠ ಪ್ರಶ.ಪೂ.ಸು.5000 ವರ್ಷಗಳಿಂದ, ಜನವಸತಿಯಿದ್ದ ಬಗ್ಗೆ ಹಾಗೂ ಈ ಪ್ರದೇಶ ದಕ್ಷಿಣ ಭಾರತದ ಇತರ ಪ್ರದೇಶಗಳಂತೆ ಹೊರನಾಡುಗಳೊಡನೆ ಹೊಂದಿದ್ದ ಸಂಪರ್ಕಗಳ ಬಗ್ಗೆ ಸ್ಪಷ್ಟ ಮಾಹಿತಿಗಳಾಗಿವೆ.

ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರಬಲ್ಲಾಳ (1173-1220) ಬೇಟೆಗೆ ಹೋಗಿದ್ದಾಗ ಹಸಿವು ಬಾಯಾರಿಕೆಗಳನ್ನು ತೀರಿಸಿಕೊಳ್ಳಲು ಒಂದು ಒಂಟಿ ಗುಡಿಸಲನ್ನು ತಲುಪಿದ. ಅಲ್ಲಿ ವಾಸವಾಗಿದ್ದ ಮುದುಕಿಯೊಬ್ಬಳು ಬೆಂದ ಕಾಳನ್ನೂ ನೀರನ್ನೂ ಚಕ್ರವರ್ತಿಗೆ ಕೊಟ್ಟು ಅವನ ಬಳಲಿಕೆ ಪರಿಹರಿಸಿದಳು. ಈ ಆತಿಥ್ಯದಿಂದ ಸಂಪ್ರೀತನಾದ ಚಕ್ರವರ್ತಿ ಅವಳ ಗೌರವಾರ್ಥವಾಗಿ ಆ ಸ್ಥಳದಲ್ಲಿ ಊರೊಂದನ್ನು ಸ್ಥಾಪಿಸಿ ಅದಕ್ಕೆ ಬೆಂದಕಾಳೂರೆಂದು ಹೆಸರಿಟ್ಟ. ಅದೇ ಬೆಂಗಾಳೂರು, ಬೆಂಗಳೂರು ಆಗಿದೆ ಎಂಬುದು ಸ್ಥಳೀಯ ಐತಿಹ್ಯ. ಆದರೆ ಬೆಂಗಳೂರಿನ ಬಳಿಯ ಬೇಗೂರಿನಲ್ಲಿ ದೊರೆತ 9ನೆಯ ಶತಮಾನದ ಶಾಸನದಲ್ಲಿ ಬೆಂಗಳೂರು ಎಂಬ ಹೆಸರೇ ಕಂಡುಬಂದಿದೆ.

1537ರಲ್ಲಿ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಯಲಹಂಕ ನಾಡಿನ ಪ್ರಭುವಾಗಿದ್ದ ಒಂದನೆಯ ಕೆಂಪೇಗೌಡ ಬೇಟೆಗೆ ಹೋಗಿದ್ದಾಗ ಒಂದು ಮೊಲ ಬೇಟೆನಾಯಿಯ ಮೇಲೆ ತಿರುಗಿ ಬಿದ್ದುದನ್ನು ಕಂಡು ಆ ಸ್ಥಳ ಗಂಡು ಭೂಮಿಯೆಂದು ಭಾವಿಸಿ, ತನ್ನ ಚಕ್ರವರ್ತಿಯ ಅನುಮತಿ ಪಡೆದು ಆ ಸ್ಥಳದಲ್ಲಿ ಒಂದು ಗ್ರಾಮವನ್ನು ಸ್ಥಾಪಿಸಿ ಅದರ ಸುತ್ತ ಮಣ್ಣಿನ ಕೋಟೆಯನ್ನು ಕಟ್ಟಿಸಿದನೆಂಬುದು ಇನ್ನೊಂದು ಐತಿಹ್ಯ (ಇದೊಂದು ಸಂಚಾರಿ ಆಶಯ). ಮುಂದೆ ಕೆಂಪೇಗೌಡ ತನ್ನ ರಾಜಧಾನಿಯನ್ನು ಯಲಹಂಕದಿಂದ ಇಲ್ಲಿಗೆ ವರ್ಗಾಯಿಸಿದ. ಕೆಂಪೇಗೌಡನ ಕೋಟೆ ವಿಶಾಲವಾಗಿತ್ತು. ಅದರ ಎಂಟು ಮಹಾದ್ವಾರಗಳಲ್ಲಿ ಉತ್ತರದ ಯಲಹಂಕ ದ್ವಾರ, ಪೂರ್ವದ ಅಲಸೂರು ಬಾಗಿಲು, ದಕ್ಷಿಣದ ಆನೇಕಲ್ಲು ಬಾಗಿಲು ಮತ್ತು ಪಶ್ಚಿಮದ ಕೆಂಗೇರಿ ಬಾಗಿಲುಗಳ ಸ್ಥಳಗಳನ್ನು ಈಗಲೂ ಗುರುತಿಸಬಹುದು. ಆದರೆ ಕಳೆದ ಶತಮಾನದಲ್ಲಿ ಈ ನಗರ ಅಪರಿಮಿತವಾಗಿ ಬೆಳೆದ ಕಾರಣ ಕೋಟೆಯ ಅಳಿದುಳಿದ ಭಾಗಗಳು ಪೂರ್ಣವಾಗಿ ಅಳಿದುಹೋಗಿವೆ. ಕೆಂಪೇಗೌಡನು ಈ ನಗರ

ಗವಿಗಂಗಾಧರೇಶ್ವರ ದೇವಾಲಯ

ಬೆಳೆಯಬಹುದಾದ ಪರಿಮಿತಿಯನ್ನು ಸೂಚಿಸಲು ನಾಲ್ಕು ದಿಕ್ಕುಗಳಲ್ಲೂ ಗೋಪುರಗಳನ್ನು ಕಟ್ಟಿಸಿದ. ಅವು ಉತ್ತರದಲ್ಲಿ ವೈಯ್ಯಾಳಿಕಾವಲ್ ದಿಬ್ಬದ ಮೇಲೆ, ಪೂರ್ವದಲ್ಲಿ ಅಲಸೂರು ಬಳಿ, ದಕ್ಷಿಣದಲ್ಲಿ ಲಾಲ್‌ಬಾಗ್ ಬಳಿ, ಪಶ್ಚಿಮದಲ್ಲಿ ಗವಿಪುರದ (ಕೆಂಪೇಗೌಡ ನಗರ) ಬಳಿ ಇವೆ. ಕ್ರಮೇಣ ಬೆಂಗಳೂರು ಈ ಎಲ್ಲೆಗಳನ್ನು ಮೀರಿ ಬೆಳೆದು ಬೃಹನ್ನಗರವಾಗಿದೆ.

ಬೆಂಗಳೂರು ಸುತ್ತ ಕೋಟೆಯನ್ನು ಕಟ್ಟಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಅನಂತರ ಸುತ್ತಮುತ್ತಲ ಪ್ರದೇಶಗಳಿಂದ ನೇಯ್ಗೆಯವರು ಮುಂತಾದವರನ್ನು ಬೆಂಗಳೂರಿನಲ್ಲಿ ನೆಲೆಗೊಳಿಸಿದ. ಅನೇಕ ಪೇಟೆಗಳನ್ನು ಕಟ್ಟಿ ನಗರದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿದ ಕೆಂಪೇಗೌಡ, ಸುತ್ತಮುತ್ತಲ ಹಲವು ಪ್ರದೇಶಗಳನ್ನೂ ಗೆದ್ದುಕೊಂಡು ತನ್ನ ರಾಜ್ಯ ವಿಸ್ತಾರ ಮಾಡಿದ. ಈ ಉನ್ನತಿಯನ್ನು ಸಹಿಸದ ಚನ್ನಪಟ್ಟಣದ ಪ್ರಭು ಜಗದೇವರಾಯ ವಿಜಯನಗರದ ಅಳಿಯ ರಾಮರಾಯನೊಂದಿಗೆ ಸಂಚುಗೈದು ಕೆಂಪೇಗೌಡನನ್ನು ಆನೆಗೊಂದಿಯಲ್ಲಿ ಸೆರೆಹಿಡಿಸಿ, ಬೆಂಗಳೂರನ್ನು ವಶಪಡಿಸಿಕೊಂಡ. ಐದು ವರ್ಷಗಳ ಕಾಲ ಸೆರೆಯಲ್ಲಿದ್ದು ಅನಂತರ ಬಿಡುಗಡೆ ಹೊಂದಿ ಬೆಂಗಳೂರಿನಲ್ಲಿ ಮತ್ತೆ ಅಧಿಕಾರಾ ರೂಢನಾದ ಕೆಂಪೇಗೌಡ ಈ ಘಟನೆಯ ಸ್ಮಾರಕವಾಗಿ ಗವಿಪುರದಲ್ಲಿರುವ ಗಂಗಾಧರೇಶ್ವರ ಗುಡಿಯನ್ನು ನಿರ್ಮಿಸಿದ. ಬಸವನಗುಡಿಯ ಬಸವ ದೇವಾಲಯ, ಕೆಂಪಾಂಬುಧಿ, ಧರ್ಮಾಂಬುಧಿ ಕೆರೆಗಳು ಮತ್ತು ಅಲಸೂರಿನ ಸೋಮೇಶ್ವರನ ಗುಡಿಯ ಪ್ರಾಕಾರ ಸಹ ಇವನ ನಿರ್ಮಾಣಗಳು. ಮುಂದಿನ ಪ್ರಸಿದ್ಧ ದೊರೆ ಇಮ್ಮಡಿ ಕೆಂಪೇಗೌಡ ಬೆಂಗಳೂರಿನ ಸಂಪತ್ತು ವೈಭವಗಳನ್ನು ಹೆಚ್ಚಿಸಿದನೆಂದು ತಿಳಿದುಬರುತ್ತದೆ. ಅಲಸೂರಿನ ಸೋಮೇಶ್ವರ ಗುಡಿಯ ಜೀರ್ಣೋದ್ಧಾರ ಮಾಡಿಸಿದುದಲ್ಲದೆ, ರಂಗನಾಥ ದೇವಾಲಯ, ಸಂಪಂಗಿ ಕೆರೆ, ಕೆಂಪಾಪುರ ಅಗ್ರಹಾರದ ಕೆರೆ ಮತ್ತು ಕಾರಂಜಿ ಕೆರೆಗಳನ್ನು ಕಟ್ಟಿಸಿದ. ಆದರೆ 1638ರಲ್ಲಿ ಬಿಜಾಪುರದ ದಂಡನಾಯಕ ರಣದುಲ್ಲಾಖಾನ್ ಕೆಂಪೇಗೌಡನನ್ನು ಸೋಲಿಸಿ ಬೆಂಗಳೂರನ್ನು ಆಕ್ರಮಿಸಿದ. 1648ರಲ್ಲಿ ಬಿಜಾಪುರದ ಸುಲ್ತಾನ ಬೆಂಗಳೂರು ಮತ್ತು ಅದರ ನೆರೆಯ ಪ್ರದೇಶಗಳನ್ನು ಷಹಜಿಗೆ ಜಹಗೀರಾಗಿ ಕೊಟ್ಟ. ಕೆಲವು ಕಾಲಾನಂತರ ಬೆಂಗಳೂರು ಪ್ರಾಂತಕ್ಕೆ ಶಹಾಜಿಯನ್ನು ಸುಬೇದಾರನನ್ನಾಗಿಯೂ ನೇಮಿಸಲಾಯಿತು. 1664ರಲ್ಲಿ ಬೆಂಗಳೂರು ಶಹಾಜಿಯ ಮಗ ವೆಂಕಾಜಿಯ ಪಾಲಿಗೆ ಬಂತು. 1675ರಲ್ಲಿ ತಂಜಾವೂರು ರಾಜ ವೆಂಕಾಜಿಗೆ ಸಿಕ್ಕಿದುದರಿಂದ ಅಲ್ಲಿ ವಾಸ ಮಾಡಲಾರಂಭಿಸಿದ. ವೆಂಕಾಜಿ ಬೆಂಗಳೂರನ್ನು ಮೈಸೂರು ರಾಜ್ಯದ ಅರಸ ಚಿಕ್ಕದೇವರಾಜರಿಗೆ ಮಾರುವ ಯೋಜನೆಯಲ್ಲಿದ್ದ. ಆದರೆ ಮಾತುಕತೆಗಳು ಸಮಾಧಾನಕರವಾಗಿ ಮುಕ್ತಾಯಗೊಳ್ಳಲಿಲ್ಲ. ಪಿತ್ರಾರ್ಜಿತವಾದ ಬೆಂಗಳೂರು ತಮ್ಮ ಮನೆತನದ ಕೈಬಿಡುವುದು ಶಿವಾಜಿಗೆ ಇಷ್ಟವಿರಲಿಲ್ಲ. 1680ರಲ್ಲಿ ಶಿವಾಜಿ ಮರಣ ಹೊಂದಿದಾಗ ಅವನ ಮಗ ಸಂಭಾಜಿ ಮರಾಠಾ ಸಿಂಹಾಸನಕ್ಕೆ ಬಂದ. ತಂದೆಯ ಆಸೆಯನ್ನು ಈಡೇರಿಸುವ ಸಲುವಾಗಿ ಸಂಭಾಜಿಯ ಸೈನ್ಯ ಬೆಂಗಳೂರಿನ ಮೇಲೆ ಆಕ್ರಮಣ ಮಾಡಿತು. ಆ ಪ್ರಯತ್ನವನ್ನು ವಿಫಲಗೊಳಿಸುವ ಸಲುವಾಗಿ ದಕ್ಷಿಣದಲ್ಲಿ ಬೀಡುಬಿಟ್ಟಿದ್ದ ಮೊಗಲ್ ಚಕ್ರವರ್ತಿ ಔರಂಗಜೇಬ್ ತನ್ನ ಸೈನ್ಯವನ್ನು ದಳಪತಿ ಖಾಸಿಂ ಖಾನನ ನೇತೃತ್ವದಲ್ಲಿ 1687ರಲ್ಲಿ ಕಳಿಸಿದಾಗ ಬೆಂಗಳೂರು ಮೊಗಲರ ವಶವಾಯಿತು. ಮೈಸೂರಿನ ಚಿಕ್ಕದೇವರಾಜ 1690ರಲ್ಲಿ ಶಿರಾದಲ್ಲಿ ಮೊಗಲ್ ಸುಬೇದಾರನಾಗಿದ್ದ ಖಾಸಿಂ ಖಾನನಿಂದ ಬೆಂಗಳೂರನ್ನು ಮೂರು ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡ. ಬೆಂಗಳೂರಿನ ಸುತ್ತ ಹೊಸದಾಗಿ ಮಣ್ಣಿನ ಕೋಟೆ ಕಟ್ಟಿಸಿ ಅಲ್ಲಿ ತನ್ನ ಸೈನ್ಯವನ್ನು ನೆಲೆಗೊಳಿಸಿ, ಕೋಟೆಯಲ್ಲಿ ವೆಂಕಟರಮಣಸ್ವಾಮಿ ದೇವಾಲಯವನ್ನು ಕಟ್ಟಿಸಿದ. 1759ರಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶ ಹೈದರನಿಗೆ ಜಹಗೀರಾಗಿ ದೊರಕಿತು. ಅದೇ ಸಮಯದಲ್ಲಿ ಮರಾಠರ ಸೈನ್ಯ ಬೆಂಗಳೂರು ಮತ್ತು ಶ್ರೀರಂಗಪಟ್ಟಣದ ಮೇಲೆ ಧಾಳಿಮಾಡಿದಾಗ ಹೈದರ್ ಅವರನ್ನು ಹೊಡೆದಟ್ಟಿ ರಾಜ್ಯಕ್ಕೆ ಬಂದ ಅಪಾಯವನ್ನು ನಿವಾರಿಸಿದ. 1761ರ ಹೊತ್ತಿಗೆ ಹೈದರ್ ರಾಜ್ಯದ ರಕ್ಷಣೆಗೆ ಬೆಂಗಳೂರಿನ ಮಹತ್ವವನ್ನು ಗುರುತಿಸಿ ಅದರ ಸುತ್ತ ಹೊಸದಾಗಿ ಕಲ್ಲಿನ ಕೋಟೆಯನ್ನು ಕಟ್ಟಿಸಿದ. ಬೆಂಗಳೂರಿನ ಖಿಲ್ಲೇದಾರನಾಗಿದ್ದ ಇಬ್ರಾಹಿಂ ಖಾನ್ ಈ ಕೋಟೆಯ ನಿರ್ಮಾಣವನ್ನು ಸ್ವತಃ ಮಾಡಿಸಿದನೆಂದು ಹೇಳಲಾಗಿದೆ. ಅನಂತರದ ವರ್ಷಗಳಲ್ಲಿ ಬ್ರಿಟಿಷರು ಮತ್ತು ಮೈಸೂರು ಸುಲ್ತಾನರ ಹೋರಾಟಗಳಲ್ಲಿ ಬೆಂಗಳೂರು ಬ್ರಿಟಿಷರ ಪ್ರಮುಖ ಗುರಿಯಾಯಿತು. 1791ರ ಮಾರ್ಚ್‌ನಲ್ಲಿ ಲಾರ್ಡ್ ಕಾರ್ನ್‌ವಾಲಿಸನ ನೇತೃತ್ವದ ಬ್ರಿಟಿಷ್ ಸೈನ್ಯ ಬೆಂಗಳೂರನ್ನು ವಶಪಡಿಸಿಕೊಂಡಿತು. ಯುದ್ಧ ಮುಗಿದು ಸಂಧಿ ಏರ್ಪಟ್ಟಾಗ ಶ್ರೀರಂಗಪಟ್ಟಣದ ಒಡಂಬಡಿಕೆಗನುಗುಣವಾಗಿ ಮತ್ತೆ ಬೆಂಗಳೂರು ಟಿಪ್ಪುಸುಲ್ತಾನನ ವಶವಾಯಿತು. 1799ರಲ್ಲಿ ಟಿಪ್ಪುಸುಲ್ತಾನ ಮರಣ ಹೊಂದಿದ ಅನಂತರ ಬ್ರಿಟಿಷರು ಬೆಂಗಳೂರನ್ನೂ ಮೈಸೂರು ರಾಜಮನೆತನದ ವಶಕ್ಕೆ ವಹಿಸಿಕೊಟ್ಟರು.

19ನೆಯ ಶತಮಾನದ ಪ್ರಾರಂಭದಲ್ಲಿ ಬೆಂಗಳೂರು ನಗರದ ಕೋಟೆಯ ಸುತ್ತ ಆಳವಾದ ಕೊತ್ತಲ, ಮುಳ್ಳುಪೊದೆಗಳು ಇದ್ದು ಕೋಟೆಗೆ 8 ಬಾಗಿಲುಗಳಿದ್ದುವು. ಅವುಗಳಲ್ಲಿ ಪ್ರಧಾನವಾದವು ಉತ್ತರದ ಯಲಹಂಕ ಬಾಗಿಲು, ಪೂರ್ವದಿಕ್ಕಿನ ಹಲಸೂರು ಬಾಗಿಲು, ದಕ್ಷಿಣದ ಕೋಟೆ ಮತ್ತು ಮೈಸೂರು ಬಾಗಿಲು, ಪಶ್ಚಿಮದ ಅಗ್ರಹಾರ ಮತ್ತು ಸೊಂಡೆಕೊಪ್ಪ ಬಾಗಿಲು, ವಾಯವ್ಯದಲ್ಲಿ ಬಳೆ ಬಾಗಿಲು. ಆಗಿನ ಬೆಂಗಳೂರಿನಲ್ಲಿ ಅನೇಕ ಪೇಟೆಗಳಿದ್ದು ಈಗಲೂ ಅವುಗಳ ಹೆಸರುಗಳು ರೂಢಿಯಲ್ಲಿವೆ. ಉತ್ತರದ ಯಲಹಂಕ ಬಾಗಿಲಿನಿಂದ ದಕ್ಷಿಣದ ಕೋಟೆ ಬಾಗಿಲವರೆಗೆ ದೊಡ್ಡಪೇಟೆ, ದೊಡ್ಡಪೇಟೆಯ ಪೂರ್ವಕ್ಕೆ ನಗರ್ತರ ಪೇಟೆ, ಪಶ್ಚಿಮಕ್ಕೆ ಚಿಕ್ಕಪೇಟೆ, ಅಕ್ಕಿಪೇಟೆ, ಬಳೇಪೇಟೆ, ಅರಳೇಪೇಟೆ ಮೊದಲಾದವು ಇವೆ.

1807ರ ವೇಳೆಗೆ ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣದಿಂದ ತನ್ನ ಶಿಬಿರವನ್ನು ತೆಗೆದು ಬೆಂಗಳೂರಿನ ಟಿಪ್ಪು ಅರಮನೆ ಮತ್ತು ಕೋಟೆಯ ಪ್ರದೇಶದಲ್ಲಿ ಬೀಡುಬಿಟ್ಟಿತ್ತು. ಅಲಸೂರಿನ ಸೋಮೇಶ್ವರ ದೇವಾಲಯದ ಬಳಿ ದಂಡು ಪ್ರದೇಶ ಸ್ಥಾಪಿಸುವ ಯೋಜನೆ ಮಾಡುತ್ತಿತ್ತು. 1809ರಿಂದ ಈ ಪ್ರದೇಶದಲ್ಲಿ ಸೈನ್ಯದ ಕಚೇರಿಗಳು, ವಾಸಗೃಹಗಳು ನಿರ್ಮಾಣ ವಾಗಿ ಕ್ರಮೇಣ ಬೆಳೆಯುತ್ತ ಈಗಿನ ಬೆಂಗಳೂರು ದಂಡು ಪ್ರದೇಶ (ಕಂಟೋನ್ಮೆಂಟ್) ಅಸ್ತಿತ್ವಕ್ಕೆ ಬಂತು. ಈ ಪ್ರದೇಶ ದೇಶೀಯ ಆಡಳಿತಕ್ಕೆ ಸೇರದೆ ಬ್ರಿಟಿಷರ ನೇರ ಆಡಳಿತಕ್ಕೆ ಸೇರಿತ್ತು. 1831ರಲ್ಲಿ ಮೈಸೂರು ಸಂಸ್ಥಾನದ ಆಡಳಿತವನ್ನು ಬ್ರಿಟಿಷರೇ ನೇರವಾಗಿ ನಿರ್ವಹಿಸ ತೊಡಗಿದಾಗ ಸೈನ್ಯಪಡೆಗಳು ಸಂಪೂರ್ಣವಾಗಿ ದಂಡು ಪ್ರದೇಶದಲ್ಲಿ ನೆಲೆಗೊಂಡು, ಕೋಟೆ ನಾಗರಿಕ ಆಡಳಿತದ ವಶವಾಯಿತು. ಟಿಪ್ಪುವಿನ ಅರಮನೆ ಬ್ರಿಟಿಷ್ ಕಮಿಷನರುಗಳ ಆಡಳಿತ ಕೇಂದ್ರವಾಯಿತು. ತನ್ನ ಉತ್ತಮ ಹವಾಗುಣದಿಂದ ಬ್ರಿಟಿಷರನ್ನು ಆಕರ್ಷಿಸಿದ್ದ ಬೆಂಗಳೂರು ವೇಗವಾಗಿ ಬೆಳೆಯಲಾರಂಭಿಸಿತು. ದಂಡು ಪ್ರದೇಶ 22ಚ.ಕಿಮೀ ಪ್ರದೇಶವ ನ್ನೊಳಗೊಂಡಿತ್ತು. ಅದರ ಪಶ್ಚಿಮ ಭಾಗದಲ್ಲಿ ಕಮೀಷನರ ಬಂಗಲೆ (ಅನಂತರ ಕಾಲದ ರೆಸಿಡೆನ್ಸಿ) ನಿರ್ಮಾಣವಾಯಿತು. ಈಗಿನ ಇನ್‌ಫೆಂಟ್ರಿ ರಸ್ತೆಯ ಪ್ರದೇಶದಲ್ಲಿ ಸೈನಿಕರ ವಸತಿಗಳು ನಿರ್ಮಾಣವಾದವು. ಮಾರ್ಕ್ ಕಬ್ಬನ್ ಮೈಸೂರು ಸಂಸ್ಥಾನದ ಕಮಿಷನರ್ (1834–61) ಆಗಿದ್ದ ಕಾಲದಲ್ಲಿ ಬೆಂಗಳೂರು ಗಮನಾರ್ಹವಾಗಿ ಅಭಿವೃದ್ಧಿ ಹೊಂದಿತು. ತಂತಿ ಸಮಾಚಾರ ಸೌಲಭ್ಯ ಮತ್ತು ಬೆಂಗಳೂರು–ಜೋಲಾರಪೇಟೆ ರೈಲುಮಾರ್ಗ ನಿರ್ಮಾಣ ಕಾರ್ಯಗಳು ನಡೆದು ನಗರದ ಮಹತ್ವ ಹೆಚ್ಚಿತು. ಅನಂತರದ ಕಮಿಷನರ್ ಎಲ್.ಬಿ. ಬೌರಿಂಗ್‌ನ (1862–70) ಕಾಲದಲ್ಲಿ ಆಡಳಿತ ಕಚೇರಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ಕಬ್ಬನ್ ಪಾರ್ಕಿನಲ್ಲಿ ಅಠಾರ ಕಚೇರಿಯನ್ನು ಕಟ್ಟಿಸಲಾಯಿತು (1868).

1881ರ ಮಾರ್ಚ್‌ನಲ್ಲಿ ಸಂಸ್ಥಾನದ ಆಡಳಿತ ಮತ್ತೆ ಮೈಸೂರು ರಾಜವಂಶದ ವಶಕ್ಕೆ ಬಂದಾಗ ಬೆಂಗಳೂರಿನಲ್ಲಿ ಬ್ರಿಟಿಷರ ನೇರ ಆಡಳಿತ ಕೊನೆಗೊಂಡರೂ ದಂಡು ಪ್ರದೇಶ ಮಾತ್ರ ಅವರ ಆಡಳಿತದಲ್ಲೇ ಮುಂದುವರಿಯಿತು (ಈ ರೀತಿ ಇಬ್ಭಾಗವಾದ ಬೆಂಗಳೂರಿನ ಆಗಿನ ಜನಸಂಖ್ಯೆ 1,00,081ಇತ್ತು). ಅಲ್ಲದೆ ಬೆಂಗಳೂರಿನ ಈ ವಿಭಜನೆಯಿಂದ ಮೈಸೂರು ರಾಜಮನೆತನ ಮತ್ತು ಜನತೆಗೆ ಅತೃಪ್ತಿಯಿತ್ತು. ದಂಡು ಪ್ರದೇಶ ಬ್ರಿಟಿಷರ ಮತ್ತು ಆಂಗ್ಲೋ–ಇಂಡಿಯನ್ನರ ಪ್ರತ್ಯೇಕ ರಾಜ್ಯವೆಂಬಂತೆ ಇತ್ತು. ಲಾರ್ಡ್ ವೆಲ್ಲಿಂಗ್‌ಟನ್ 1933ರ ಡಿಸೆಂಬರಿನಲ್ಲಿ ಮೈಸೂರಿಗೆ ಭೇಟಿಯಿತ್ತಾಗ ನಾಲ್ಮಡಿ ಕೃಷ್ಣರಾಜ ಒಡೆಯರ್ ದಂಡು ಪ್ರದೇಶದ ನಾಗರಿಕ ಆಡಳಿತವನ್ನು ರಾಜ್ಯ ಸರ್ಕಾರಕ್ಕೆ ವಹಿಸಿಕೊಡಬೇಕೆಂದು ಒತ್ತಾಯಿಸಿದರು. ಆದರೂ ಈ ಪ್ರಶ್ನೆ ಬಗೆಹರಿಯದೆ ಉಳಿದಿದ್ದು ಅಂತಿಮವಾಗಿ ಸ್ವಾತಂತ್ರ್ಯಕ್ಕೆ ಕೆಲವು ದಿನಗಳ ಮುನ್ನ

1947ರ ಜುಲೈ 26ರಂದು ದಂಡು ಪ್ರದೇಶದ ಪೂರ್ಣ ಆಡಳಿತವನ್ನು ರಾಜ್ಯ ಸರ್ಕಾರಕ್ಕೆ ವಹಿಸಿಕೊಡಲಾಯಿತು. ಮೈಸೂರು ರಾಜಮನೆತನದ ಆಡಳಿತ ಮತ್ತೆ ಅಸ್ತಿತ್ವಕ್ಕೆ ಬಂದ ಕಾರಣ ಸಹಜವಾಗಿ ಮೈಸೂರು ರಾಜಧಾನಿಯ ಗೌರವ ಸ್ಥಾನವನ್ನು ಪಡೆದರೂ ಬೆಂಗಳೂರು ಆಡಳಿತ ಕೇಂದ್ರವಾಗಿ ಮುಂದುವರಿಯಿತು. ಹೊಸದಾಗಿ ಅಸ್ತಿತ್ವಕ್ಕೆ ಬಂದ ಪ್ರಜಾಪ್ರತಿನಿಧಿ ಸಭೆ (1881) ಬೆಂಗಳೂರಿನಲ್ಲಿ ಸೇರುತ್ತಿತ್ತು. ಇದೇ ಅವಧಿಯಲ್ಲಿ ಬೆಂಗಳೂರು ನಗರ ಹೊಸ ಹೊಸ ಬಡಾವಣೆಗಳಾಗಿ ಬೆಳವಣಿಗೆ ಕಂಡಿತು. ಶೇಷಾದ್ರಿ ಪುರ, ಮಲ್ಲೇಶ್ವರ, ಚಾಮರಾಜಪೇಟೆ, ಶಂಕರಪುರ, ಗವಿಪುರ, ಬಸವನ ಗುಡಿ, ಮಾವಳ್ಳಿ, ಮುಸ್ಲಿಮ್ ಬ್ಲಾಕ್ ಮೊದಲಾದುವು ಕೋಟೆಯ ಹೊರ ಭಾಗಗಳಲ್ಲಿ ನಿರ್ಮಿತವಾದವು. ಕೋಟೆಯ ಬಳಿ ಕೃಷ್ಣರಾಜೇಂದ್ರ ಮಾರ್ಕೆಟ್, ವಿಕ್ಟೋರಿಯ ಆಸ್ಪತ್ರೆಗಳು ಸ್ಥಾಪಿತವಾದವು. 1889ರಲ್ಲಿ ಚಾಮರಾಜಪೇಟೆ ಬಡಾವಣೆಗೆ ಸೇರಿದ ಹಾಗೆ ಹೊಸ ತರಗುಪೇಟೆ ಸ್ಥಾಪಿತವಾಯಿತು. ದ್ವಿತೀಯ ಯುದ್ಧಾನಂತರ ನಗರ ಬೃಹದಾಕಾರವಾಗಿ ಬೆಳೆದು ಬೆಂಗಳೂರು ನಗರಾಭಿವೃದ್ಧಿ ಸಂಸ್ಥೆಯಿಂದ ಹೊಸ ಬಡಾವಣೆಗಳು ನಿರ್ಮಿತವಾಗಿವೆ. ರಾಜಾಜಿನಗರ, ಹೊಸಹಳ್ಳಿ, ವಸಂತನಗರ, ವೈಯ್ಯಾಳಿಕಾವಲ್, ಜಯನಗರ, ಸುಬ್ರಹ್ಮಣ್ಯಪುರ, ಹನುಮಂತನಗರ, ಇಂದಿರಾನಗರ, ಆರ್.ಟಿ.ನಗರ, ಜೆ.ಪಿ.ನಗರ ಮೊದಲಾದ ಅನೇಕ ಬಡಾವಣೆಗಳು ಸ್ಥಾಪಿತವಾಗಿವೆ. 1950ರ ದಶಕದಿಂದ ನಗರದ ಔದ್ಯಮೀಕರಣ ತ್ವರಿತಗತಿಯಿಂದ ಸಾಗುತ್ತಿದ್ದು ನಗರದ ಸುತ್ತ ಬೆಳೆದಿರುವ ಅನೇಕ ಪ್ರದೇಶಗಳು ಈಗ ಬೆಂಗಳೂರು ಬೃಹನ್ನಗರಕ್ಕೆ ಸೇರಿವೆ. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಸಾರ್ವಭೌಮಾಧಿಕಾರ ಜನತಾ ಪ್ರತಿನಿಧಿಗಳಿಗೆ ದೊರೆತು ಚುನಾಯಿತ ಜನತಾ ಮಂತ್ರಿಮಂಡಲ ಅಧಿಕಾರ ವಹಿಸಿಕೊಂಡಾಗ ಬೆಂಗಳೂರು ಪೂರ್ಣ ರಾಜಧಾನಿಯ ಗೌರವವನ್ನು ಮತ್ತೆ ಪಡೆಯಿತು. ಅಂದಿನಿಂದ ಹಿಂದಿನ ಮೈಸೂರು ಅಥವಾ 1971ರಿಂದ ಕರ್ನಾಟಕದ ರಾಜಧಾನಿಯಾಗಿ, ರಾಜ್ಯದ ಅತ್ಯಂತ ದೊಡ್ಡ ನಗರವಾಗಿ, ಪ್ರಮುಖ ಕೈಗಾರಿಕಾ ಮತ್ತು ವ್ಯಾಪಾರ ಕೇಂದ್ರವಾಗಿ ಪ್ರವರ್ಧಿಸುತ್ತಿದೆ.

ಬೆಂಗಳೂರು ನಗರದ ಐತಿಹಾಸಿಕ ಸ್ಮಾರಕಗಳಲ್ಲಿ ಅಲಸೂರಿನ ಸೋಮೇಶ್ವರ ದೇವಾಲಯದ ಗರ್ಭಗುಡಿಯ ಭಾಗ (ಬಹುಶಃ 11–12ನೆಯ ಶತಮಾನ) ನಗರ ಪ್ರದೇಶದಲ್ಲಿ ಈಗ ಉಳಿದಿರುವ ಅತ್ಯಂತ ಪ್ರಾಚೀನ ಕಟ್ಟಡ ಎಂದು ತೋರುತ್ತದೆ. ಕೆಂಪೇಗೌಡ ನಿರ್ಮಿಸಿದನೆಂದು ತಿಳಿದುಬರುವ ಗವೀಪುರದಲ್ಲಿರುವ ಗಂಗಾಧರೇಶ್ವರ ಗುಡಿ ನೈಸರ್ಗಿಕ ಗುಹೆಯಲ್ಲಿ ನಿರ್ಮಿತವಾಗಿದೆ. ಅದರ ಮುಂಭಾಗದಲ್ಲಿ ಮಂಟಪ, ಕಂಬಗಳಿಂದೊಡಗೂಡಿದ ಮೊಗಸಾಲೆ ಮತ್ತು ಶಿಖರಗಳನ್ನು ಕಟ್ಟಲಾಗಿದೆ. ಬಸವನ ಗುಡಿಯ ಬಸವದೇವಾಲಯ, ಅದರಲ್ಲಿರುವ ದೊಡ್ಡ ನಂದಿ ವಿಗ್ರಹ, ಕೆಂಪಾಂಬುಧಿ ಮತ್ತು ಧರ್ಮಾಂಬುಧಿ ಕೆರೆಗಳು ಸಹ ಕೆಂಪೇಗೌಡನ ನಿರ್ಮಾಣಗಳು. ಬಸವ ದೇವಾಲಯದ ಮುಂಭಾಗದಲ್ಲಿ ಒಂದು ಸುಂದರ ಧ್ವಜಸ್ತಂಭವಿದೆ. ದೇವಾಲಯದಲ್ಲಿ ಪ್ರಮಾಣಬದ್ಧವಾದ ಬಸವನ ವಿಗ್ರಹವನ್ನು ಕಡೆಯಲಾಗಿದೆ. ಬಸವ ದೇವಾಲಯದ ಬಳಿಯಿರುವ ಏಕಶಿಲೆಯಲ್ಲಿ ಮಾಡಿದ ಬೃಹತ್ತಾದ ಗಣೇಶಮೂರ್ತಿ, ಇದರ ಬಳಿಯಿರುವ ಕಾಡು ಹನುಮಾನ್ ದೇವಾಲಯದ ಆಂಜನೇಯನ ಏಕಶಿಲಾಮೂರ್ತಿ ಗಮನಾರ್ಹವಾದುವು. ತರುವಾಯ ಆಳಿದ ಕೆಂಪೇಗೌಡನ ವಂಶಜರು ಮತ್ತೆ ಕೆಲವು ಕೆರೆಗಳನ್ನೂ ಅಲಸೂರಿನ ಸೋಮೇಶ್ವರ ದೇವಾಲಯದ ಗೋಪುರ ಮತ್ತು ಪ್ರಾಕಾರ, ನಗರದ ಮಧ್ಯದಲ್ಲಿ ಬಳ್ಳಾಪುರ ಪೇಟೆಯಲ್ಲಿರುವ ರಂಗನಾಥ ದೇವಾಲಯ–ಇವನ್ನು ಕಟ್ಟಿಸಿದರು. ಈ ದೇವಾಲಯಗಳು ದ್ರಾವಿಡ ಮಾದರಿಯ ವಾಸ್ತುಪದ್ಧತಿಗೆ ಸೇರಿದವು. ಇವುಗಳಲ್ಲಿ ವಿಜಯ ನಗರದ ವಾಸ್ತು ಲಕ್ಷಣಗಳನ್ನು ಸ್ವಲ್ಪಮಟ್ಟಿಗೆ ಕಾಣಬಹುದು. ಕೆಂಪೇಗೌಡ ನಗರದ ನಾಲ್ಕು ಮೂಲೆಗಳಲ್ಲಿ ಕಟ್ಟಿಸಿದ ಗೋಪುರಗಳು ಸರಳ ವಾಸ್ತು ರಚನೆಗಳು.

ಈಗ ಮಲ್ಲೇಶ್ವರ ಬಡಾವಣೆಯಲ್ಲಿರುವ ಕಾಡುಮಲ್ಲೇಶ್ವರ ಗುಡಿ ಬಹುಶಃ ಕೆಂಪೇಗೌಡನ ಕಾಲದಲ್ಲಿ ನಿರ್ಮಿತವಾದುದಿರಬೇಕು. ಈ ದೇವಾಲಯದ ಸಮೀಪದಲ್ಲಿರುವ 1669ರ ಶಾಸನ ಈ ಮಲ್ಲಿಕಾರ್ಜುನದೇವರಿಗೆ ಮರಾಠ ರಾಜ ವೆಂಕೋಜಿ ಒಂದು ಗ್ರಾಮವನ್ನು ಮಾನ್ಯವಾಗಿ ಕೊಟ್ಟ ಸಂಗತಿಯನ್ನು ತಿಳಿಸುತ್ತದೆ.

ಬೆಂಗಳೂರಿನಲ್ಲಿರುವ ಹೆಚ್ಚು ಪ್ರಸಿದ್ಧವಾದ, ವಾಸ್ತುಶಿಲ್ಪ ದೃಷ್ಟಿಯಿಂದ ಮುಖ್ಯವಾದ ಐತಿಹಾಸಿಕ ಕಟ್ಟಡ ಕೋಟೆವೆಂಕಟರಮಣ ದೇವಸ್ಥಾನ. ಚಿಕ್ಕದೇವರಾಜ ಬೆಂಗಳೂರನ್ನು ಮೊಗಲರಿಂದ 1690ರಲ್ಲಿ ಕೊಂಡ ಅನಂತರ ಕೆಂಪೇಗೌಡನ ಕೋಟೆಯಲ್ಲದೆ ಮತ್ತೊಂದು ಮಣ್ಣಿನ ಕೋಟೆಯನ್ನೂ ಅದರೊಳಗೆ ವೆಂಕಟರಮಣ ದೇವಾಲಯವನ್ನೂ ಕಟ್ಟಿಸಿದನೆಂದು ಅವನ ಮಗ ಇಮ್ಮಡಿ ಕಂಠೀರವ ನರಸರಾಜನ 1705ರ ಕೆಂಗೇರಿ ಹೋಬಳಿಯ ಕೊತ್ತನೂರು ಶಾಸನ ತಿಳಿಸುತ್ತದೆ. ದೇವಾಲಯದ ನಿರ್ಮಾಣದ ಕಾಲವನ್ನು 1695 ಎಂದು ನಿರ್ಧರಿಸ ಬಹುದು. ದ್ರಾವಿಡ ಮಾದರಿಯಲ್ಲಿ ವಿಜಯನಗರ–ನಾಯಕ ಕಾಲದ ವಾಸ್ತುಶೈಲಿಯ ಲಕ್ಷಣಗಳನ್ನು ಹೊಂದಿರುವ ಈ ಕಟ್ಟಡದ ಮುಂಭಾಗದಲ್ಲಿ ಏಕಶಿಲೆಯ ಅಷ್ಟಕೋನಗಳುಳ್ಳ ಗರುಡಗಂಬವಿದೆ. ಕಂಬದ ಅಡಿಭಾಗದಲ್ಲಿ ಪೂರ್ವದಲ್ಲಿ ಶಂಖ, ದಕ್ಷಿಣದಲ್ಲಿ ಅಂಜಲಿ ಬದ್ಧನಾದ ಗರುಡ, ಪಶ್ಚಿಮದಲ್ಲಿ ತ್ರಿಪುಂಡ್ರ ಮತ್ತು ಉತ್ತರದಲ್ಲಿ ಅಂಜಲಿಬದ್ಧ ಹನುಮಂತನ ಕೆತ್ತನೆಗಳಿವೆ. ಈ ದೇವಾಲಯದಲ್ಲಿ ಎತ್ತರವಾದ ಜಗಲಿಯ ಮೇಲೆ ನಿಂತ ಸುಂದರ ಕೆತ್ತನೆಗಳುಳ್ಳ ಕಂಬಗಳಿಂದ ಕೂಡಿದ ಒಂಬತ್ತು ಅಂಕಣಗಳ ಮುಖಮಂಟಪ, ನವರಂಗ ಸುಕನಾಸಿ ಮತ್ತು ಗರ್ಭಗುಡಿಗಳಿವೆ. ಕಂಬಗಳಿಂದ ಮುಂದಕ್ಕೆ ಚಾಚಿದಂತಿರುವ ಆನೆಗಳ ಮೇಲೆ ¤AvÀvÉಹಾಗೂ ಸಿಂಹಗಳ ಮೇಲೆ ಕುಳಿತಂತೆ ಕೆತ್ತಲಾಗಿರುವ ವೀರರ ಪ್ರತಿಮೆಗಳು ಸುಂದರ ಶಿಲ್ಪಗಳು. ಗರ್ಭಗುಡಿಯಲ್ಲಿ ವೆಂಕಟರಮಣ ಸ್ವಾಮಿಯ ಸುಂದರ ಮೂರ್ತಿಯನ್ನು ಪ್ರತಿಷ್ಠಾಪಿಸಿದೆ. ದೇವಾಲಯದ ಹೊರಗೋಡೆಗಳ ಮೇಲೆ ವಾಹನಾರೂಢರಾದ ವಿಷ್ಣು, ಬ್ರಹ್ಮ, ಶಿವನ ಮೂರ್ತಿಗಳಲ್ಲದೆ ಗಿರಿಜಾಕಲ್ಯಾಣದ ದೃಶ್ಯ, ಸಪ್ತರ್ಷಿಗಳ ಮತ್ತು ಸಪ್ತಮಾತೃಕೆಯರ ಉಬ್ಬುಶಿಲ್ಪಗಳಿವೆ.

ಬೆಂಗಳೂರಿನ ಮತ್ತೊಂದು ಪ್ರಮುಖ ಐತಿಹಾಸಿಕ ಕಟ್ಟಡವೆಂದರೆ ಟಿಪ್ಪುಸುಲ್ತಾನನ ಕೋಟೆ ಮತ್ತು ಅರಮನೆ. ಇದು ಹೈದರ್ 1761ರಲ್ಲಿ ಕಟ್ಟಿದ ಕಲ್ಲಿನ ಕೋಟೆಯ ಭಾಗ. ಕೋಟೆಯ ಎತ್ತರದ ಗೋಡೆಗಳು, ಎತ್ತರದ ದ್ವಾರಗಳು ಮತ್ತು ಒಳಗಿನ ಕೆಲವು ಭಾಗಗಳು ಮಾತ್ರ ಈಗ ಉಳಿದಿವೆ. 1791ರಲ್ಲಿ ಬ್ರಿಟಿಷರು ಈ ಕೋಟೆಯನ್ನು ಆಕ್ರಮಿಸಲು ಮಾಡಿದ ಒಂದು ಬಿರುಕಿನ ಸಮೀಪ ಆ ವಿಷಯವನ್ನು ತಿಳಿಸುವ ಫಲಕವೊಂದನ್ನು ಇಡಲಾಗಿದೆ. ಈಗ ಉಳಿದಿರುವ ಕೋಟೆಯ ಹೊರಭಾಗದಲ್ಲಿರುವ ಟಿಪ್ಪುಸುಲ್ತಾನನ ಅರಮನೆ ಹಿಂದೆ ಮುಖ್ಯಕೋಟೆಯ ಒಳಗೇ ಇತ್ತು. ಕೋಟೆಯ ಒಳಗೆ ಒಂದು ಅರಮನೆಯನ್ನು ಕಟ್ಟುವ ಕಾರ್ಯವನ್ನು ಹೈದರನೇ ಪ್ರಾರಂಭಿಸಿದ್ದನಂತೆ. ಆದರೆ ಅದರ ನಿರ್ಮಾಣಕಾರ್ಯ ಮುಗಿದಿದ್ದು 1791ರಲ್ಲಿ. ಕಟ್ಟಡ ಮಣ್ಣಿನ ಗೋಡೆಗಳಿಂದ ನಿರ್ಮಿಸಿದ್ದಾದರೂ ತೇಗದ ಮರದ ಕಂಬಗಳು ಮತ್ತು ಚಾವಣಿಯಿದ್ದುದರಿಂದ ಮನೋಹರವಾಗಿತ್ತು. ಎರಡಂತಸ್ತಿನ ಕಟ್ಟಡದ ಮುಂಭಾಗದಲ್ಲಿ

ಬೆಂಗಳೂರು ಅರಮನೆ

ವಿಶಾಲವಾದ ಆಸ್ಥಾನದ ಹಜಾರ, ಅದರ ಸುತ್ತಲೂ ಮೊಗಸಾಲೆ ಮತ್ತು ಅದರ ಮಧ್ಯದಲ್ಲಿ ವಾದ್ಯಗೋಷ್ಠಿಯವರ ಜಗಲಿಯಿತ್ತು. ಕಟ್ಟಡದ ಮೇಲಂತಸ್ತಿನಲ್ಲಿ ಸುಲ್ತಾನನ ವಾಸಗೃಹ, ಜನಾನಾದ ಕೋಣೆಗಳು, ಕೆಲವು ಮುಖ್ಯ ಕಚೇರಿಗಳೂ ಇದ್ದವು. ಮೇಲಂತಸ್ತಿನ ಎರಡು ಪಾರ್ಶ್ವಗಳಲ್ಲೂ ಇದ್ದ ವಿಸ್ತಾರವಾದ ಹಜಾರಗಳನ್ನು ರಾಜದರ್ಬಾರಿಗೂ ಅಧಿಕಾರವರ್ಗದ ಸಂದರ್ಶನಗಳಿಗೂ ಬಳಸಲಾಗುತ್ತಿತ್ತು. ಹಜಾರಗಳ ಇಬ್ಬದಿಯಲ್ಲಿದ್ದ ಉಪ್ಪರಿಗೆಯ ಮೊಗಸಾಲೆಗಳಲ್ಲಿ ಹಿರಿಯ ಮತ್ತು ಆಪ್ತ ಅಧಿಕಾರಿಗಳಿಗೂ ಕೆಳಗಿನ ಮೊಗಸಾಲೆಯಲ್ಲಿ ಕೆಳವರ್ಗದ ಅಧಿಕಾರಿಗಳಿಗೂ ಸ್ಥಾನವಿರುತ್ತಿತ್ತು. ಕೆಳಗಿನ ಹಜಾರದ ಇಬ್ಬದಿಗಳಲ್ಲಿದ್ದ ಕೋಣೆ ಗಳು ರಾಜಮನೆತನದ ಸ್ತ್ರೀಯರ ಮತ್ತು ದಾಸೀವರ್ಗದವರ ಉಪಯೋಗಕ್ಕೆ ಮೀಸಲಾಗಿತ್ತು. 1799ರಲ್ಲಿ ಬ್ರಿಟಿಷರು ಮೈಸೂರು ರಾಜ್ಯವನ್ನು ವಶಪಡಿಸಿಕೊಂಡ ತರುವಾಯ 32ವರ್ಷ ತನ್ನ ಪ್ರಾಧಾನ್ಯವನ್ನು ಕಳೆದುಕೊಂಡ ಮಹಲ್ 1831ರಲ್ಲಿ ಬ್ರಿಟಿಷರು ರಾಜ್ಯಾಡಳಿತ ವನ್ನು ಮುಮ್ಮಡಿ ಕೃಷ್ಣರಾಜರಿಂದ ತಮ್ಮ ಕೈಗೆ ತೆಗೆದುಕೊಂಡಾಗ ಮತ್ತೆ ರಾಜ್ಯದ ಆಡಳಿತ ಕೇಂದ್ರವಾಯಿತು. ಕಮಿಷನರುಗಳ ಆಳಿಕೆ ಕಾಲದಲ್ಲಿ ಆಡಳಿತ ಕಛೇರಿಗಳನ್ನು ಟಿಪ್ಪು ಸುಲ್ತಾನನ ಅರಮನೆಯಲ್ಲಿ ಸ್ಥಾಪಿಸಲಾಯಿತು. 1868ರಲ್ಲಿ ಸಂಸ್ಥಾನದ ಆಡಳಿತ ಕಛೇರಿಗಳು ಅಠಾರಾ ಕಛೇರಿಗೆ ವರ್ಗವಾದಾಗ ಈ ಅರಮನೆಯನ್ನು ನಗರಸಭೆಗೆ ಬಿಟ್ಟುಕೊಡಲಾಯಿತು. ಅನಂತರದ ಕಾಲದಲ್ಲೂ ಇಲ್ಲಿ ಕೆಲವು ಸಾರ್ವಜನಿಕ ಕಛೇರಿಗಳಿದ್ದವು. ಅವುಗಳಲ್ಲಿ ಸರ್ಕಾರಿ ಮುದ್ರಣಾಲಯವೂ ಒಂದು. ಅನಂತರ ಕಟ್ಟಡದ ಬಹುಭಾಗವನ್ನು ಕೆಡವಲಾಯಿತು. ಈಗ ಉಳಿದುಬಂದಿರುವ ಭಾಗಗಳನ್ನು ರಾಷ್ಟ್ರೀಯ ಸ್ಮಾರಕವೆಂದು ಭಾರತ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ವಿಭಾಗ ರಕ್ಷಿಸುತ್ತಿದೆ.

ಬೆಂಗಳೂರಿನಲ್ಲಿ ನಗರ್ತಪೇಟೆಯಲ್ಲಿರುವ ಧರ್ಮರಾಯನ ಗುಡಿ ಪ್ರಸಿದ್ಧ ದೇವಾಲಯ. ಇದು 19ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿಸಲಾದ ದ್ರಾವಿಡ ಮಾದರಿಯ ಸಾಮಾನ್ಯ ಕಟ್ಟಡ. ಯುರೋಪಿಯನ್ನರ ನಿರ್ಮಾಣಗಳಲ್ಲಿ ಬಹಳ ಹಳೆಯದೆಂದರೆ ಪೋರ್ಚುಗಲ್ಲಿನ

ಪಾದ್ರಿ ಟರ್ನರ್ 1830ರಲ್ಲಿ ಪ್ರತಿಷ್ಠಾಪಿಸಿದ ಕೋಟೆಯಲ್ಲಿರುವ ಪುಟ್ಟ ಚರ್ಚು. ತರಗುಪೇಟೆಯಲ್ಲಿರುವ ಸೇಂಟ್ ಜೋಸೆಫ್ ಚರ್ಚು ವಿಶಾಲವಾದ ಶಿಲುಬೆಯ ಆಕಾರದ ತಳಪಾಯವಿರುವ ಕಟ್ಟಡ. ಇವೆಲ್ಲವೂ ಗಾಥಿಕ್ ಶೈಲಿಯ ಕಟ್ಟಡಗಳು. ಗಾಥಿಕ್ ಶೈಲಿಯ ಇತರ ಪ್ರಮುಖ ಕಟ್ಟಡಗಳೆಂದರೆ ಅಠಾರಾ ಕಛೇರಿ, ವಸ್ತು ಸಂಗ್ರಹಾಲಯ, ಡ್ಯಾಲಿ ಮೆಮೋರಿಯಲ್ ಹಾಲ್ ಮತ್ತು ಸೆಂಟ್ರಲ್ ಕಾಲೇಜು–ಇವೆಲ್ಲ ಕಟ್ಟಡಗಳೂ 19ನೆಯ ಶತಮಾನದಲ್ಲಿ ಬ್ರಿಟಿಷರ ಆಳಿಕೆಯಲ್ಲಿ ನಿರ್ಮಾಣವಾದವು. ದಂಡು ರೈಲುನಿಲ್ದಾಣದ ಬಳಿಯಿರುವ ಮಹಾರಾಜರ ಅರಮನೆ ಮತ್ತೊಂದು ಗಮನಾರ್ಹ ಕಟ್ಟಡ. ಭಾರತಾಂಗ್ಲ ವಾಸ್ತುಶೈಲಿಯ ಈ ಕಟ್ಟಡ ಇಂಗ್ಲೆಂಡ್ ಮತ್ತು ನಾರ್ಮಂಡಿಗಳ ಮಧ್ಯಯುಗದ ದುರ್ಗಗಳನ್ನು ಹೋಲುತ್ತದೆ. ವಿಂಡ್ಸರ್ ಅರಮನೆಯ ಮಾದರಿಯಲ್ಲಿ ಇದನ್ನು ಕಟ್ಟಲಾಗಿದೆ. ಇತ್ತೀಚೆಗೆ ಅಂದರೆ ಸ್ವಾತಂತ್ರ್ಯಾನಂತರ ಕಟ್ಟಿದ ಮುಖ್ಯ ಕಟ್ಟಡವೆಂದರೆ ವಿಧಾನಸೌಧ. ರಾಜ್ಯದ ಆಡಳಿತ ಕಛೇರಿಗಳಿಗೆ, ವಿಧಾನ ಸಭೆ ಸಮಿತಿಗಳಿಗೆ, ಸಚಿವಾಲಯಕ್ಕೆ ಸ್ಥಳವನ್ನೊದಗಿಸಲು ರಾಜ್ಯದ ಆಗಿನ ಮುಖ್ಯಮಂತ್ರಿ ಕೆ. ಹನುಮಂತಯ್ಯನವರ ಕಾಲದಲ್ಲಿ ಕಟ್ಟಿಸಿದ ಆಧುನಿಕ ರೀತಿಯ ಈ ಕಟ್ಟಡದಲ್ಲಿ ದ್ರಾವಿಡ ಮಾದರಿಯ ಶಿಖರಗಳು, ಭಾರತಾಂಗ್ಲ ಶೈಲಿಯ ವಾಸ್ತುಲಕ್ಷಣಗಳು ಮತ್ತು ಆಧುನಿಕ ವಾಸ್ತುಪ್ರಗತಿಯ ಕುರುಹುಗಳನ್ನು ಅಳವಡಿಸಲಾಗಿದೆ. ಗಾಂಭೀರ್ಯ ಮತ್ತು ಭವ್ಯತೆಗಳ ಕೇಂದ್ರದಂತಿರುವ ಈ ಕಟ್ಟಡ ಬೆಂಗಳೂರಿನ ಪ್ರಮುಖ ಆಕರ್ಷಣೆಗಳಲ್ಲಿ ಒಂದು. ಇತ್ತೀಚೆಗೆ ನಿರ್ಮಾಣವಾಗಿರುವ ಯುಟಿಲಿಟಿ ಬಿಲ್ಡಿಂಗ್ ಬೆಂಗಳೂರಿನ ಅತ್ಯಂತ ಎತ್ತರದ ಕಟ್ಟಡಗಳಲ್ಲೊಂದು.

ಬೆಂಗಳೂರಿನ ಇತರ ಪ್ರೇಕ್ಷಣೀಯ ತಾಣಗಳಲ್ಲಿ ಕೆಂಪೇಗೌಡ ರಸ್ತೆ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಕೃಷ್ಣರಾಜೇಂದ್ರ ಮಾರುಕಟ್ಟೆ, ರಸೆಲ್ ಮಾರುಕಟ್ಟೆ, ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರೋಡ್, ಕಮರ್ಷಿಯಲ್ ಸ್ಟ್ರೀಟ್ ಮೊದಲಾದ ವ್ಯಾಪಾರ ಪ್ರದೇಶಗಳನ್ನು ಹೆಸರಿಸಬಹುದು. ಹಿಂದೊಮ್ಮೆ ಬೆಂಗಳೂರು ಉದ್ಯಾನ ನಗರ ಎಂದು ಪ್ರಸಿದ್ಧವಾಗಿತ್ತು. ಆದರೆ ಈಚೆಗೆ ನಗರ ವಿಸ್ತಾರವಾಗಿ ಬೆಳೆದಿದ್ದು ಅನೇಕ ಪ್ರದೇಶಗಳಲ್ಲಿ ಅಸಂಖ್ಯಾತ ಕಟ್ಟಡಗಳು ಹೆಚ್ಚಿದ್ದು ಇಂದಿನ ನಗರದ ಸ್ವರೂಪ ಬಹುಮಟ್ಟಿಗೆ ಬದಲಾಗಿದೆ. ಆದರೆ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳು ಸುಂದರವಾಗಿ ರೂಪ ಗೊಂಡಿದ್ದು ಬೆಂಗಳೂರಿನ ಪ್ರಮುಖ ಆಕರ್ಷಣೆಗಳಾಗಿವೆ. (ಬಿ.ಕೆ.ಜಿ.)

**ಬೆತ್ಲೆಹೆಮ್:** ಜೋರ್ಡಾನ್ ದೇಶದ ಒಂದು ಮುಖ್ಯ ಪಟ್ಟಣ. ಕ್ರಿಸ್ತನ ಜನ್ಮಸ್ಥಳವೆಂದು ಪ್ರಸಿದ್ಧ. ಪ್ರಾಚೀನ ಕಾಲದಲ್ಲಿ ಜೂಡ ಜನಾಂಗದ ಸ್ಥಳ. ಜೆರುಸಲೇಮ್ ನಗರದ ನೈರುತ್ಯದಲ್ಲಿ ಸು. 8ಕಿಮೀ ದೂರದಲ್ಲಿದೆ. ಬೆತ್ಲೆಹೆಮ್ ಕ್ರಿಶ್ಚಿಯನ್ ಧರ್ಮದ ಒಂದು ಕೇಂದ್ರವಾಗಿದೆ.

ಐತಿಹಾಸಿಕ ನಗರ, ಬೆತ್ಲೆಹೆಮ್

ಬೆತ್ಲೆಹೆಮ್ ಪಟ್ಟಣಕ್ಕೆ ಇಸ್ರೇಲಿನ ಜೂಡ ಜನಾಂಗದ ಡೇವಿಡ್ ದೊರೆಯ (ಪ್ರ.ಶ.ಪೂ. 1030–965) ಕಾಲದಲ್ಲಿ ಕೋಟೆ ಕಟ್ಟಲಾಯಿತು. ಮುಂದೆ ಈ ಪಟ್ಟಣ ಗ್ರೀಕ್, ರೋಮನ್ ಮತ್ತು ಅರಬ್ ಮುಸ್ಲಿಮರ ಆಳಿಕೆಗೆ ಒಳಗಾಯಿತು. 1000 ದರಲ್ಲಿ ಕ್ರಿಶ್ಚಿಯನ್ನರು ಧರ್ಮಯುದ್ಧ ಮಾಡಿ (ಕ್ರುಸೇಡ್) ಬೆತ್ಲೆಹೆಮ್ ಅನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮುಂದೆ ತುರ್ಕಿ ಮುಸಲ್ಮಾನರ ಆಡಳಿತಕ್ಕೆ ಒಳಪಟ್ಟಿತು. 1500ರಲ್ಲಿ ಆಟೋಮನ್ ಟರ್ಕರು ಈ ಪ್ರದೇಶದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದರು. ಒಂದನೆಯ ಮಹಾಯುದ್ಧದ ಕಾಲದಲ್ಲಿ (1914–18) ಬ್ರಿಟಿಷರು ಬೆತ್ಲೆಹೆಮ್ ಅನ್ನು ತಮ್ಮ ವಶಕ್ಕೆ ತೆಗೆದುಕೊಂಡರು. 1923–48ರ ತನಕ ಪ್ಯಾಲಸ್ಟೀನಿನ ನಿಯಂತ್ರಣಕ್ಕೆ ಸೇರಿತ್ತು. 1948ರಿಂದ ಜೋರ್ಡಾನ್ ದೇಶದ ಒಂದು ಪಟ್ಟಣವಾಯಿತು.

ಇಲ್ಲಿ ಯೇಸುಕ್ರಿಸ್ತನ ಜನ್ಮಸ್ಥಳದ ಮೇಲೆ ಚರ್ಚ್ ಆಫ್ ನೇಟಿವಿಟಿ (ಆಲ್ ಮಹ್‌ಡಿ ಚರ್ಚ್) ಎಂದು (ಪ್ರ.ಶ.ಪೂ.326) ಕಟ್ಟಿರುವ ಪ್ರಸಿದ್ಧ ಚರ್ಚು ಇದೆ. ಇದು ಬೆತ್ಲೆಹೆಮ್ ಪಟ್ಟಣದ ಪ್ರಮುಖ ಆಕರ್ಷಣೆ. ಇದರ ದಕ್ಷಿಣ ಭಾಗದಲ್ಲಿ ಯೇಸುಕ್ರಿಸ್ತನನ್ನು ಶಿಲುಬೆಗೆ ಏರಿಸುತ್ತಿರುವ ಅಮೃತ ಶಿಲೆಯ ಕೆತ್ತನೆ ಸುಂದರವಾಗಿದೆ. ಈ ಮಹಾ ಚರ್ಚಿನ ಅಕ್ಕಪಕ್ಕದಲ್ಲಿ ರೋಮನ್ನರ ಗ್ರೀಕರ ಹಾಗೂ ಆರ್ಮೇನಿಯನ್ನರ ಚರ್ಚುಗಳೂ ಇವೆ. ಈ ಐತಿಹಾಸಿಕ ಮಹತ್ತ್ವದ ಚರ್ಚನ್ನು ವಿಶ್ವಪರಂಪರೆಯ ಸ್ಮಾರಕಗಳ ಜೊತೆ ಸೇರಿಸುವ ಪ್ರಯತ್ನ ನಡೆದಿದೆ. (ಪಿ.ಬಿ.)

**ಬೆನಗುತ್ತಿ:** ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಭೀಮಾನದಿಯ ಎಡದಂಡೆ ಮೇಲಿರುವ ಸಾತವಾಹನ ಕಾಲದ ನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1997–98ರಲ್ಲಿ ನಡೆಸಿದ ಉತ್ಖನನದಲ್ಲಿ ಇಟ್ಟಿಗೆ ಗೋಡೆಯಿಂದ ಸುತ್ತುವರಿಯಲ್ಪಟ್ಟ 18.8x15.25ಮೀ ಎತ್ತರದ ಸಾತವಾಹನ ಕಾಲದ ಬೌದ್ಧ ವಿಹಾರ ಸಂಕೀರ್ಣ ಕಂಡುಬಂದಿದೆ. ಗೋಡೆಯುದ್ದಕ್ಕೂ ಸಮಾನಾಂತರದಲ್ಲಿ ಮರದ ಕಂಬಗಳ ಗುಳಿಗಳಿವೆ. ಇದರ ದಕ್ಷಿಣಕ್ಕೆ 16.4x8ಮೀ ವಿಸ್ತಾರದ ಅಂಡಾಕಾರ ವಿನ್ಯಾಸದ ಕಟ್ಟಡವಿದೆ. ಇದನ್ನು ಸುಣ್ಣಕಲ್ಲು ತುಂಡುಗಳ ಅಡಿಪಾಯದ ಮೇಲೆ ನಿರ್ಮಿಸಲಾಗಿದೆ.

ವಿಹಾರ ಸಂಕೀರ್ಣದಲ್ಲಿ 7x3.4ಮೀ, 5.7x13.1ಮೀ ಮತ್ತು 4.6x2.6ಮೀ ವಿಸ್ತಾರದ ಎಂಟು ಕೊಠಡಿಗಳಿವೆ. ಇವುಗಳಿಗೆ ಹೊಂದಿದಂತೆ 10x8.6ಮೀ ವಿಸ್ತಾರದ ಉತ್ತರ–ದಕ್ಷಿಣಾಭಿಮುಖವಾಗಿರುವ ಸಭಾಂಗಣವಿದೆ. ಕೊಠಡಿಗಳ ಮುಂದೆ ಉದ್ದಕ್ಕೂ ಕೈಸಾಲೆ ಇದೆ. ಕೊಠಡಿಗಳ ನೆಲವನ್ನು ಸುಣ್ಣಕಲ್ಲಿನ ಚೂರುಗಳನ್ನು ಹಾಕಿ ದಮ್ಮಸ್ಸು ಮಾಡಲಾಗಿದೆ. ಇದರ ಮೇಲೆ ಸುಣ್ಣಗಾರೆಯ ಲೇಪನವಿದೆ. ಕೈಸಾಲೆ ಮತ್ತು ಸಭಾಂಗಣದ ನೆಲವೂ ಇದೇ ರೀತಿಯಿದೆ. ಇದರಲ್ಲಿ 2.7x1.4ಮೀ ವಿಸ್ತಾರದ ಒಂದು ಕೊಠಡಿ ಇದ್ದು, ಇದಕ್ಕೆ ಬಾಗಿಲಿದ್ದ ಗುರುತುಗಳಿವೆ. ದಕ್ಷಿಣದ ಪ್ರಾಕಾರ ಗೋಡೆ 20ಸೆಂಮೀ ಎತ್ತರ ಮತ್ತು 21x1.40ಮೀ ಉದ್ದಗಲದಷ್ಟು ಮಾತ್ರ ಉಳಿದಿದೆ. ಗೋಡೆಗಳ ಇಟ್ಟಿಗೆ 46x24x7ಸೆಂಮೀ ಪ್ರಮಾಣದಲ್ಲಿದೆ. ಇಂತಹ ಇಟ್ಟಿಗೆಗಳನ್ನು ನೆಲಕ್ಕೂ ಹಾಸಲಾಗಿದೆ.

16.4x8ಮೀ ಉದ್ದಗಲದ ಗಜಪೃಷ್ಠ ವಿನ್ಯಾಸದ ಚೈತ್ಯಗೃಹದ ಪೂರ್ವಬದಿಯಲ್ಲಿ 4ಮೀ ಅಗಲದ ಪ್ರವೇಶದ್ವಾರವಿದೆ. ಸುಣ್ಣಕಲ್ಲಿನ ಚೂರುಗಳ ಹಾಸಿನ ಮೇಲೇರಿಸಿದ ಇಟ್ಟಿಗೆ ಗೋಡೆಯ 16 ರಿಂದ 24 ವರಸೆಗಳು ಉಳಿದಿವೆ. ಸುಣ್ಣಕಲ್ಲಿನ ತುಂಡುಗಳಿಂದ ನೆಲಮಟ್ಟವನ್ನು ಏರಿಸಲಾಗಿದೆ. ಚೈತ್ಯದ ಪಶ್ಚಿಮಕ್ಕೆ 1.3ಮೀ ದೂರದಲ್ಲಿ ಸು. 1ಮೀ ತಗ್ಗಿನಲ್ಲಿ 3.35x2.65ಮೀ ವಿಸ್ತಾರದ ಒಂದು ದೊಡ್ಡ ಇಟ್ಟಿಗೆ ವೇದಿಕೆಯಿದೆ. ಈ ಕಟ್ಟಡಗಳಲ್ಲಿ ಉಪಯೋಗಿಸಿದ ಇಟ್ಟಿಗೆ ಸಾಮಾನ್ಯವಾಗಿ 47x36x7ಸೆಂಮೀ ಪ್ರಮಾಣದಲ್ಲಿದೆ.

ಸಂಕೀರ್ಣದ ಸುತ್ತಮುತ್ತ ಭಗ್ನ ಶಿಲಾಮೂರ್ತಿಗಳು ಸಾಕಷ್ಟು ಸಿಕ್ಕಿವೆ. ಕೆಲವುದರ ಮೇಲೆ ಪ್ರ.ಶ.ಪೂ.3ನೆಯ ಶತಮಾನದ ಬ್ರಾಹ್ಮಿ ಲಿಪಿಯ ಶಾಸನಗಳಿವೆ. ಅಚ್ಚಿನಿಂದ ಮಾಡಿದ ಬಿಳಿಮಣ್ಣಿನ ಸುಡಾವೆ ಗೊಂಬೆಗಳು, ಕ್ಯಾಲ್ಸೆಡನಿ, ಅಗೇಟ್, ಕಾರ್ನೀಲಿಯನ್, ಸ್ಫಟಿಕ, ಫಯಾನ್ಸ್ ಮುಂತಾದ ಕಲ್ಲಿನ ಮಣಿಗಳು, ಲೇಖನಿ, ಸೂಜಿ, ದಾಳ ಮುಂತಾದ ದಂತದ ಮತ್ತು ಮೂಳೆಯ ವಸ್ತುಗಳು, ಗಾಜಿನ ಬಳೆಗಳು, ಸುಡಾವೆಮಣ್ಣಿನ ಫಲಕಗಳು, ತಲೆಕೂದಲಿನ ಪಿನ್‌ಗಳು, ಕಾಡಿಗೆಯ ಕಡ್ಡಿ, ಸರ (ಕುತ್ತಿಗೆಯ) ಹಾಗೂ ಅಂತ್ಯ ಸಾತವಾಹನ ಕಾಲದ ತಾಮ್ರ ಮತ್ತು ಸತುವಿನ ನಾಣ್ಯಗಳು ದೊರೆತಿವೆ. ಜೊತೆಗೆ ಮಸುಕು ಬೂದುಬಣ್ಣದ, ಹೊಳಪಿನ ಕೆಂಪುಬಣ್ಣದ ಪಾತ್ರೆಗಳೂ ರೌಲೆಟ್ ತಟ್ಟೆಗಳೂ ಸಿಕ್ಕಿವೆ. ಚಪ್ಪಟೆ ತಳದ ಬಟ್ಟಲು ಹೇರಳವಾಗಿದ್ದು ವಿಹಾರದಲ್ಲಿ ವಾಸಿಸುತ್ತಿದ್ದ ಭಿಕ್ಷುಗಳು ಇವನ್ನು ಉಪಯೋಗಿಸುತ್ತಿದ್ದರೆಂದು ಕಾಣುತ್ತದೆ. ಔತ್ತರೇಯ ಮೆರುಗಿನ ಕಪ್ಪುಪಾತ್ರೆಯ ಚೂರು, ಕಲ್ಲಿನ ಬಾಯಿಯ ಮೇಲಿರುವ ಒಂದು ಭಗ್ನ ಬ್ರಾಹ್ಮಿ ಶಾಸನ ಈ ನೆಲೆಯಲ್ಲಿ ಚಟುವಟಿಕೆಗಳು ಪ್ರ.ಶ.ಪೂ.3ನೆಯ ಶತಮಾನದಿಂದ ಆರಂಭವಾದುದನ್ನು ಸೂಚಿಸುತ್ತವೆ. ಇಕ್ಷ್ವಾಕು ಅರಸುಮನೆತನದ ಬ್ರಾಹ್ಮಿಲಿಪಿಯ ಶಾಸನಗಳು ಈ ವಸತಿ ಪ್ರ.ಶ.3ನೆಯ ಶತಮಾನದ ತನಕ ಮುಂದುವರೆದುದನ್ನು ಸೂಚಿಸುತ್ತವೆ. (ಕೆ.ವಿ.ಆರ್.)

**ಬೆಸ್ನಗರ್:** ಮಧ್ಯಪ್ರದೇಶ ರಾಜ್ಯದ ವಿದಿಶಾ ಜಿಲ್ಲೆಯ ಒಂದು ಪ್ರಾಚೀನ ಸ್ಥಳ. ವಿದಿಶಾ ನಗರಕ್ಕೆ ಸು.3ಕಿಮೀ ದೂರದಲ್ಲಿ ಬೇತ್ವಾ ಮತ್ತು ಬೆಸ್ ನದಿಗಳ ನಡುವೆ ಇದೆ. ಪ್ರಾಚೀನ ಪಾಳಿ ಗ್ರಂಥಗಳಲ್ಲಿ ವೆಸ್ಸನಗರ ಎಂದು ಹೇಳಿದೆ. ರುಕ್ಮಾಂಗದ ರಾಜ ಇದನ್ನು ಸ್ಥಾಪಿಸಿದನೆಂಬುದು ಐತಿಹ್ಯ. ಕಾಬೂಲ್ ಕಣಿವೆಯಲ್ಲಿ ಆಳುತ್ತಿದ್ದ ಇಂಡೊ–ಗ್ರೀಕ್ ದೊರೆ ಆಂಟಿಯಾಲ್ಕಿಡಸನ ರಾಯಭಾರಿ ಹೇಲಿಯೊಡೋರಸ್ ಇಲ್ಲಿ ಶುಂಗವಂಶದ ದೊರೆಯಾದ ಭಾಗಭದ್ರನ (ಭಾಗವತ) ಆಳಿಕೆಯ 14ನೆಯ (ಪ್ರ.ಶ.ಪೂ.ಸು.113)ವರ್ಷದಲ್ಲಿ ವಾಸುದೇವನ (ವಿಷ್ಣುವಿನ) ಗೌರವಾರ್ಥ ಗರುಡಗಂಬವೊಂದನ್ನು ನಿಲ್ಲಿಸಿದನೆಂದು ಈ ಸ್ತಂಭದ ಮೇಲಿನ ಬ್ರಾಹ್ಮಿಲಿಪಿಯಲ್ಲಿರುವ ಪ್ರಾಕೃತಭಾಷೆಯ ಶಾಸನ ತಿಳಿಸುತ್ತದೆ. ಇವನು ತನ್ನನ್ನು ಭಾಗವತನೆಂದು ಕರೆದುಕೊಂಡಿರುವುದು ಸ್ವಾರಸ್ಯಕರ ವಿಷಯ.

ಪ್ರಾಚೀನ ಶಿಲಾಯುಗದಿಂದ ಹಿಡಿದು ಗುಪ್ತರ ಕಾಲದ ವರೆಗೂ ಇದು ಪ್ರಮುಖ ಸ್ಥಳವಾಗಿತ್ತೆಂದೂ ವೈಷ್ಣವ, ಶೈವ, ಬೌದ್ಧ ಮತ್ತು ಜೈನಧರ್ಮಗಳ ನೆಲೆಯಾಗಿತ್ತೆಂದೂ–ಇಲ್ಲಿಯ ಉತ್ಖನನಗಳಿಂದ ತಿಳಿದುಬಂದಿದೆ. ಇಲ್ಲಿ ಮೌರ್ಯರ ಕಾಲಕ್ಕೆ ಸೇರಿರಬಹುದಾದ ಒಂದು ಅಂಡಾಕಾರದ ಇಟ್ಟಿಗೆ ದೇವಾಲಯವಿದ್ದುದರ ಗುರುತುಗಳೂ ದೊರಕಿವೆ. ಬೆಸ್ನಗರದ

ಬೌದ್ಧಕಾಲೀನ ಸ್ತೂಪದಿಂದ ತೆಗೆಯಲಾಗಿರುವ ಕೆತ್ತನೆಯ ಕಲ್ಲುಗಳು ಕೋಲ್ಕತ್ತದ ವಸ್ತು ಸಂಗ್ರಹಾಲಯದಲ್ಲಿವೆ. ಪ್ರಾಚೀನ ಕಾಲದಲ್ಲಿ ಈ ನಗರ ಉತ್ತರ ಭಾರತದ ಅನೇಕ ಪ್ರಮುಖ ನಗರಗಳೊಂದಿಗೆ ಸಂಬಂಧ ಹೊಂದಿತ್ತು. ಪಾಟಲೀಪುತ್ರ ಮತ್ತು ತಕ್ಷಶಿಲೆಯಿಂದ ದಕ್ಷಿಣ ಭಾರತಕ್ಕೆ ಹೋಗುವ ಅನೇಕ ರಾಜ ಮಾರ್ಗಗಳ ಕೂಡುಸ್ಥಳವಾಗಿತ್ತೆಂದು ತಿಳಿದು ಬರುವುದು.

ಯಕ್ಷಿ

ಇಲ್ಲಿಯ ಗರುಡ ಗಂಬವನ್ನು 1877ರಲ್ಲಿ ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್. ಇದು ಬಹುಶಃ ಗುಪ್ತರ ಕಾಲದ್ದೆಂದು ವರದಿಮಾಡಿದ್ದ. 1901ರಲ್ಲಿ ಲೇಕ್ ಅವರು ಸ್ತಂಭದ ಕೆಳಭಾಗದಲ್ಲಿ ಅಕ್ಷರಗಳಿದ್ದುದನ್ನು ಗುರುತಿಸಿದರು. ಇದರ ಮೇಲ್ಭಾಗದಲ್ಲಿ ಭಕ್ತಾದಿಗಳು ಲೇಪಿಸಿದ ಚಂದನವನ್ನು ತೆಗೆಯಿಸಿದಾಗ ಇದರ ಮೇಲಿದ್ದ ಪೂರ್ಣ ಶಾಸನ ಬೆಳಕಿಗೆ ಬಂದು ಈ ಸ್ತಂಭ ಗುಪ್ತರ ಕಾಲಕ್ಕಿಂತಲೂ ಕೆಲವು ಶತಮಾನಗಳ ಹಿಂದಿನದೆಂದು ಸ್ಪಷ್ಟವಾಯಿತು. ಈ ಶಾಸನದ ಪೂರ್ಣ ಪಾಠ 1909ರಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲ್‌ನಲ್ಲಿ ಪ್ರಥಮ ಬಾರಿಗೆ ಪ್ರಕಟವಾಯಿತು.

(ಸಿ.ಕೆ.;ಬಿ.ಆರ್.ಜಿ.;ಎ.ಎಸ್.)

**ಬೆಹಿಸ್ತಾನ್ ಬಂಡೆ ಶಾಸನ:** ಇರಾನಿನ ಜಂಜರ್ಸ್ ಪರ್ವತ ಶ್ರೇಣಿಯ ತಪ್ಪಲಲ್ಲಿ, ಸಮಸ್ ಆಬ್ ನದಿಯ ಬಲದಂಡೆಯಲ್ಲಿರುವ ಒಂದು ಗ್ರಾಮದ ಬಳಿ ಬಂಡೆಯ ಮೇಲೆ ಪರ್ಷಿಯದ ದೊರೆ ಒಂದನೆಯ ಡೇರಿಯಸ್ ಪ್ರ.ಶ.ಪೂ.ಸು.516ರಲ್ಲಿ ಬರೆಸಿದ ಶಾಸನ; ಶಿಲ್ಪವೂ ಇದೆ. ಈ ಸ್ಥಳ ಪ್ರಾಚೀನ ಕಾಲದಲ್ಲಿ ನೀರಿನ ಚಿಲುಮೆಯಿಂದಾಗಿ ಎಕ್ಬತಾನ ಮತ್ತು ಬ್ಯಾಬಿಲಾನಿನ ನಡುವಣ ಮಾರ್ಗಮಧ್ಯದ ಒಂದು ತಂಗುದಾಣವಾಗಿತ್ತು. ಈ ಶಾಸನ ಐದು ಅಂಕಣಗಳಲ್ಲಿ 515 ಸಾಲುಗಳಲ್ಲಿದೆ. ಶಾಸನದ ಮೇಲಿನ ಶಿಲ್ಪದಲ್ಲಿ ಒಟ್ಟು ನಾಲ್ಕು


ಒಂದನೆಯ ಡೇರಿಯಸ್ಸನ ಶಾಸನ

ಭಾಗಗಳುಂಟು: (1) ಡೇರಿಯಸ್ ಚಕ್ರವರ್ತಿ ಮತ್ತು ಅವನ ಇಬ್ಬರು ಅಂಗರಕ್ಷಕರು (2) ಇವನ ಮುಂದೆ ಇವನು ಸೋಲಿಸಿದ 9 ರಾಜರ ಒಂದು ಸಾಲು; ಇವರೆಲ್ಲರ ಕುತ್ತಿಗೆಗಳನ್ನು ಒಂದೇ ಹಗ್ಗದಿಂದ ಬಿಗಿಯಲಾಗಿದೆ (3) ಇನ್ನೊಬ್ಬ ಇವನ ಪಾದದಡಿಯಲ್ಲಿ ಬಿದ್ದಿದ್ದಾನೆ (4) ಇವರೆಲ್ಲರ ಮೇಲೆ ಪರ್ಷಿಯನ್ ದೇವತೆ ಅಹುರ್‌ಮಜ್ದನ ಚಿತ್ರವಿದೆ. ಈ ಚಿತ್ರಗಳ ಕೆಳಗೆ 5 ಊರ್ಧ್ವ ಅಂಕಣಗಳಲ್ಲಿ ಡೇರಿಯಸ್‌ನ ವಂಶಾವಳಿ ಮತ್ತು ದಂಡಯಾತ್ರೆಗಳ ವಿವರಗಳನ್ನು ಕೊಡಲಾಗಿದೆ.

ಈ ಶಾಸನ ಪರ್ಷಿಯನ್, ಸುಸಿಯನ್, ಬ್ಯಾಬಿಲೋನಿಯನ್ನಿನ ಪರ್ಷಿಯ ಎಲಮೈಟ್ ಮತ್ತು ಅಕ್ಕಾಡಿಯನ್ ಭಾಷೆಗಳಲ್ಲಿದೆ. ಎಚ್. ಡಬ್ಲ್ಯೂ. ರಾಲಿನ್‌ಸನ್ ಹಳೇ ಪರ್ಷಿಯನ್ ಭಾಷೆಯ ಭಾಗವನ್ನು ಓದಿ, ಅದರ ಸಹಾಯದಿಂದ ಪ್ರಥಮ ಬಾರಿಗೆ ಬೆಣೆಲಿಪಿಯನ್ನು ಬಿಡಿಸಿ ಶಾಸನವನ್ನು ಓದಲು ಸಾಧ್ಯವಾಯಿತು. ಶಾಸನದಲ್ಲಿ ಬೆಣೆ ಲಿಪಿಯನ್ನು ಸುದೀರ್ಘವಾಗಿ ಮತ್ತು ವಿವರವಾಗಿ ಒಂದೊಂದರಂತೆ ಇವನ 19 ವಿಜಯಯಾತ್ರೆಗಳು, ಗೆದ್ದ 9 ರಾಜರ ಹೆಸರುಗಳು ಮತ್ತು ಸೋತ ರಾಜರುಗಳಿಗೆ ಕೊಟ್ಟ ಶಿಕ್ಷೆಗಳ ವಿವರಗಳಿವೆ. ಯುದ್ಧದಲ್ಲಿ ಭಾಗವಹಿಸಿದ ಸಾಮಂತರ ಮತ್ತು ಅಧಿಕಾರಿಗಳ ಹೆಸರುಗಳೂ ಇವೆ.

ಪ್ರತಿಯೊಂದು ಯುದ್ಧದ ನಿರೂಪಣೆಯ ಕೊನೆಯಲ್ಲಿ ತನ್ನ ದೇವರು ಅಹುರ್‌ಮಜ್ದ ಸಹಾಯಮಾಡಿದನೆಂದು ಅವನ ದಯೆ ತನ್ನ ಮೇಲೆ ಇದ್ದಿತ್ತೆಂದು ನೆನೆಸಿಕೊಂಡಿರುವುದು ಗಮನಾರ್ಹ. ತನ್ನ ವಂಶಸ್ಥನಾದ ಇಮ್ಮಡಿ ಕ್ಯಾಂಬಿಸೆಸ್ ಮೃತನಾದ ಮೇಲೆ ಸಿಂಹಾಸನವನ್ನು ಅತಿಕ್ರಮಿಸಿದ ಗೌಮತ ಮೊದಲಾದ ದಂಗೆಕೋರರು, ತಾವೇ ನಿಜವಾದ ರಾಜ್ಯದ ವಾರಸುದಾರರೆಂದು ಸುಳ್ಳು ಹೇಳಿ ಪ್ರಜೆಗಳಿಗೆ ಮೋಸ ಮಾಡಿದರಂತೆ; ಅವರನ್ನು ಶಿಕ್ಷಿಸಿ ರಾಜ್ಯವನ್ನು ನ್ಯಾಯ ಪರಿಪಾಲನೆಯಿಂದ ಆಳಬೇಕೆಂದು ತನ್ನ ದೇವರು ಅಹುರ್‌ಮಜ್ದ ಸೂಚನೆಯಂತೆ ತಾನು ಮಾಡಿದೆನೆಂದು ಆತ ಹೇಳಿಕೊಳ್ಳುತ್ತಾನೆ. ಮುಂದಿನ ರಾಜರು ಕೂಡ ಸುಳ್ಳು ಹೇಳಿ ಮೋಸಮಾಡಿ ರಾಜ್ಯವನ್ನು ಲಪಟಾಯಿಸುವವರನ್ನು ಶಿಕ್ಷಿಸಬೇಕೆಂದು ಈ ಶಾಸನದಲ್ಲಿ ಹೇಳಿದೆ. ಇದರಲ್ಲಿ ಹೇಳಿರುವುದು ಸತ್ಯ, ಇದನ್ನು ಮುಚ್ಚಿಹಾಕಬಾರದು, ಹಾಳುಮಾಡಬಾರದೆಂದು ಮತ್ತು ಇದನ್ನು ರಕ್ಷಿಸಬೇಕೆಂದು ಕೂಡ ಹೇಳಿದೆ; ಹೀಗೆ ರಕ್ಷಿಸಿದಲ್ಲಿ ಅಹುರ್‌ಮಜ್ದ ಒಳ್ಳೆಯದು ಮಾಡುವನೆಂದು ಘೋಷಿಸಿದೆ.

ಇದರಲ್ಲಿ ಡೇರಿಯಸ್ ತನ್ನ ಮನೆತನದಲ್ಲಿ ತಾನು 9ನೆಯ ರಾಜನೆಂದು, ಅಹುರ್‌ಮಜ್ದನ ದಯೆಯಿಂದ ತಾನು ರಾಜನಾಗಿರುವೆನೆಂದು, ದೇವರೆ ತನಗೆ ರಾಜ್ಯವನ್ನು ಕೊಟ್ಟಿರುವನೆಂದು ಹೇಳಿಕೊಂಡಿದ್ದಾನೆ. ಪರ್ಷಿಯ ಅಲ್ಲದೆ ಸುಸಿಯನ್, ಬ್ಯಾಬಿಲೋನಿಯ, ಅರೇಬಿಯ, ಈಜಿಪ್ಟ್, ಸ್ವರ್ದ, ಅಯೋನಿಯ, ಅರ್ಮೇನಿಯ ಮೊದಲಾದ 23 ಪ್ರಾಂತಗಳು ಇವನ ರಾಜ್ಯದಲ್ಲಿ ಸೇರಿಕೊಂಡಿದ್ದುವೆಂದು ಹೇಳಲಾಗಿದೆ. ಈ ಪ್ರದೇಶದಲ್ಲಿ ಬಳಕೆಯಲ್ಲಿದ್ದ ತೊರವಹರ, ಅನಮಕ, ಅದುಕನಿಷ ಮುಂತಾದ ತಿಂಗಳ ಹೆಸರುಗಳನ್ನು ಕೊಟ್ಟಿರುವುದು ಸ್ವಾರಸ್ಯಕರವಾಗಿದೆ.

(ಎ.ಎಸ್.;ಎನ್.ಎಲ್.)

**ಬೆಳಗುತ್ತಿ ಹಾಗೂ ಇತರ ಪ್ರದೇಶಗಳ ಸಿಂಧರು:** **ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಬೆಳವಡಿಸಂಸ್ಥಾನ:** **ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು**

**ಬೇಲೂರು:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ ಪಟ್ಟಣ. ಹೊಯ್ಸಳ ವಾಸ್ತುಶಿಲ್ಪಕ್ಕೆ ಪ್ರಪಂಚ ಪ್ರಸಿದ್ಧವಾದ ಸ್ಥಳ; ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲೊಂದು. ಹಾಸನಕ್ಕೆ ವಾಯವ್ಯದಲ್ಲಿ 38ಕಿಮೀ, ಮೈಸೂರಿಗೆ 158ಕಿಮೀ, ಬೆಂಗಳೂರಿಗೆ 222ಕಿಮೀ ಮತ್ತು ಸಕಲೇಶಪುರಕ್ಕೆ 37ಕಿಮೀ ದೂರದಲ್ಲಿ ಯುಗಚಿ ನದಿಯ ದಂಡೆಯ ಮೇಲಿದೆ.

ಸ್ಥಳಪುರಾಣ ಮತ್ತು ಐತಿಹ್ಯಗಳ ಮೇರೆಗೆ ಇದಕ್ಕೆ ಮೊದಲಿಗೆ ವೇಲಾಪುರ, ವೇಲೂರು ಎಂಬ ಹೆಸರುಗಳಿದ್ದವು. ಕೆಲವು ಹೊಯ್ಸಳ ಮತ್ತು ಅನಂತರ ಕಾಲದ ಶಾಸನಗಳಲ್ಲಿ ವೇಲಾಪುರ, ಬೇಲುಹೂರು ಎಂದೂ ಕರೆಯಲಾಗಿದೆ. ಇಲ್ಲಿರುವ ಚೆನ್ನ ಕೇಶವ ಮತ್ತಿತರ ದೇವಾಲಯಗಳ ಖ್ಯಾತಿ ಮತ್ತು ಪಾವಿತ್ರ್ಯಗಳಿಂದ ಅನಂತರ ಕಾಲದ ಶಾಸನಗಳಲ್ಲಿ ಅಭಿನವ ಕ್ಷೋಣಿವೈಕುಂಠ, ದಕ್ಷಿಣವಾರಣಾಸಿ ಎಂದೂ ಇದನ್ನು ವರ್ಣಿಸಲಾಗಿದೆ. ಆದರೆ ಹೊಯ್ಸಳ ಪೂರ್ವ ಕಾಲದ ಬೇಲೂರಿನ ಬಗ್ಗೆ ವಿಶ್ವಸನೀಯವಾದ ಮಾಹಿತಿಗಳಾವುವೂ ದೊರಕಿಲ್ಲ. ಈಗಲೂ ಬೇಲೂರಿನ ಸುತ್ತ ಇರುವ ಕೋಟೆ–ಕಂದಕ, ಇಲ್ಲಿನ ವಿಷ್ಣುಸಮುದ್ರ ಹಾಗೂ ಸುತ್ತಲ ಕೆರೆಗಳು ಮತ್ತು ದೇವಾಲಯಗಳು ಇದರ ಪ್ರಾಚೀನತೆಗೆ ಸಾಕ್ಷಿಗಳಾಗಿ ಉಳಿದಿವೆ.

ಹೊಯ್ಸಳ ಎರಡನೆಯ ವಿನಯಾದಿತ್ಯ ತನ್ನ ರಾಜಧಾನಿಯನ್ನು ಸೊಸೆವೂರಿನಿಂದ ಇಲ್ಲಿಗೆ ವರ್ಗಾಯಿಸಿದ. ಮುಂದೆ ಅವನ ಕಾಲದಲ್ಲೇ ದೋರಸಮುದ್ರ ಅಥವಾ ಹಳೇಬೀಡಿಗೆ ರಾಜಧಾನಿ ವರ್ಗಾವಣೆಯಾಯಿತು. ಆದರೆ ವಿಷ್ಣುವರ್ಧನನ ಕಾಲದವರೆಗೂ ಇವೆರಡೂ ಅವಳಿ ರಾಜಧಾನಿಗಳಾಗಿದ್ದವು. 1116ರಲ್ಲಿ ವಿಷ್ಣುವರ್ಧನ ತಲಕಾಡಿನ ಚೋಳರ ಮೇಲಿನ ವಿಜಯದ ಸ್ಮಾರಕವಾಗಿ ರಾಜಧಾನಿ ಬೇಲೂರಿನಲ್ಲಿ ವಿಜಯ ನಾರಾಯಣ (ಚೆನ್ನಕೇಶವ) ದೇವಾಲಯವನ್ನು 1117ರಲ್ಲಿ ಪ್ರತಿಷ್ಠಾಪಿಸಿದ. 1136ರ ಹೊತ್ತಿಗೆ ಬೇಲೂರು, ದೋರಸಮುದ್ರ ಮತ್ತು ವಿಷ್ಣುಸಮುದ್ರ (ಈಗಿನ ಕೆರೆಸಂತೆ) ಈ ಮೂರೂ ರಾಜಧಾನಿಗಳಾಗಿದ್ದವೆಂದು ತಿಳಿಯುತ್ತದೆ. ವಿಷ್ಣುವರ್ಧನನ ಆಳಿಕೆಯ ಅಂತ್ಯದ ವೇಳೆಗೆ ದೋರಸಮುದ್ರಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕಲಾರಂಭಿಸಿತು. ಕ್ರಮೇಣ ಬೇಲೂರು ರಾಜಧಾನಿಯ ಪ್ರತಿಷ್ಠೆಯನ್ನು ಕಳೆದುಕೊಂಡರೂ ಸೈನ್ಯಶಿಬಿರವಾಗಿಯೂ ಪವಿತ್ರ ವಿಷ್ಣುಕ್ಷೇತ್ರವಾಗಿಯೂ ಹೊಯ್ಸಳ ಯುಗದುದ್ದಕ್ಕೂ ತನ್ನ ಪ್ರಾಧಾನ್ಯವನ್ನು ಉಳಿಸಿಕೊಂಡಿತ್ತು. 1311ರಲ್ಲಿ ಮಲಿಕ್ ಕಾಫರ್ ಹೊಯ್ಸಳ ರಾಜ್ಯದ ಮೇಲೆ ಧಾಳಿ ಮಾಡಿ ರಾಜಧಾನಿ ದೋರಸಮುದ್ರವನ್ನು ಪಾಳುಗೆಡವಿದಾಗ ಬೇಲೂರು ಮತ್ತೆ ರಾಜಧಾನಿಯ ಸ್ಥಾನ ಪಡೆಯಿತು. ಆದರೆ ಆಗಿನ ದೊರೆ ಮುಮ್ಮಡಿ ಬಲ್ಲಾಳ ತಿರುವಣ್ಣಾಮಲೆ ಸೇರಿದಂತೆ ಬೇರೆ ಬೇರೆ ಕಡೆಗಳಲ್ಲಿ ನೆಲೆವೀಡುಗಳನ್ನು ಮಾಡಿಕೊಂಡು ಆಳಿದ.

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಬೇಲೂರು ಪ್ರಾಂತೀಯ ಕೇಂದ್ರವಾಗಿದ್ದಂತೆ ತಿಳಿದುಬರುತ್ತದೆ. ಇದು ಮೊದಲು ಬಲಂ (ಈಗಿನ ಮಂಜರಾಬಾದ್) ಪ್ರಾಂತದಲ್ಲಿದ್ದು, ಅನಂತರ 1397ರಲ್ಲಿ ಬೇಲೂರು ನಾಯಕರ ವಶದಲ್ಲಿತ್ತು. ಕೃಷ್ಣದೇವರಾಯ ಎರ್ರ (ಯರ) ಕೃಷ್ಣಪ್ಪನಾಯಕನಿಗೆ ಬೇಲೂರು ರಾಜ್ಯವನ್ನು ಬಳುವಳಿಯಾಗಿ 1542ರಲ್ಲಿ ಕೊಟ್ಟದ್ದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಇವನ ವಂಶದವರು 1799ರವರೆಗೆ ಇಲ್ಲಿ ಆಳುತ್ತಿದ್ದರು. ಆದರೆ ಶಿವಪ್ಪನಾಯಕ ಬೇಲೂರು ರಾಜ್ಯವನ್ನು 1645ರಲ್ಲಿ ವಶಪಡಿಸಿಕೊಂಡು ವಿಜಯನಗರದ ದೇಶಭ್ರಷ್ಟದೊರೆ ಶ್ರೀರಂಗರಾಯನಿಗೆ ಕೊಟ್ಟ. 1694ರಲ್ಲಿ ಮೈಸೂರು ದೊರೆ ಚಿಕ್ಕದೇವರಾಜ ಮತ್ತು ಇಕ್ಕೇರಿಯ ನಾಯಕರಲ್ಲಿ ನಡೆದ ಒಡಂಬಡಿಕೆಯ ಪ್ರಕಾರ ಬೇಲೂರು ಪಾಳೆಯಗಾರರ



ಚೆನ್ನಕೇಶವ ದೇವಾಲಯ

ವಂಶದವರಿಗೆ ಅದನ್ನು ಹಿಂತಿರುಗಿಸಲಾಯಿತು. ಇವರು ಮುಂದೆ ಸಕಲೇಶಪುರ ತಾಲ್ಲೂಕಿನ ಐಗೂರಿನಿಂದ ಆಳತೊಡಗಿದರು. ಹೈದರ್-ಟಿಪ್ಪು ಆಳಿಕೆಯಲ್ಲಿ ಇದು ಮತ್ತೆ ಮೈಸೂರು ರಾಜ್ಯಕ್ಕೆ ಸೇರಿತು. 1799ರಲ್ಲಿ ಟಿಪ್ಪುವಿನ ಮರಣಾನಂತರ ಪಾಳೆಯಗಾರ ವಂಶದ ವೆಂಕಟಾದ್ರಿ ಸ್ವತಂತ್ರನಾಗಿರಲೆತ್ನಿಸಿ ಬ್ರಿಟಿಷರ ವಿರುದ್ಧ ಹೋರಾಡಲು 1801ರಲ್ಲಿ ಅವನನ್ನು ಸೆರೆಹಿಡಿದು ಗಲ್ಲಿಗೇರಿಸಲಾಯಿತು.

ಇಲ್ಲಿರುವ ಚೆನ್ನಕೇಶವ ದೇವಾಲಯ ಹೊಯ್ಸಳ ಶೈಲಿಯ ಕಟ್ಟಡಗಳಲ್ಲಿ ಅತ್ಯಂತ ಸುಂದರವಾದುದು (**ನೋಡಿ-ಹೊಯ್ಸಳ ವಂಶ**).

*

**ಬೈಜ಼ಾಂಟೀಯನ್ ಸಾಮ್ರಾಜ್ಯ:** 306-1453. ಮೆಡಿಟರೇನಿಯನ್ ಸಮುದ್ರ ಮತ್ತು ಕಪ್ಪು ಸಮುದ್ರ ತೀರಗಳಲ್ಲಿ ಹಾಗೂ ಯುರೋಪಿನ ದಕ್ಷಿಣ ಮತ್ತು ಆಗ್ನೇಯ ಪ್ರದೇಶ ಮತ್ತು ಪಶ್ಚಿಮ ಏಷ್ಯ ಪ್ರದೇಶದಲ್ಲಿ ಹರಡಿಕೊಂಡಿದ್ದ ಒಂದು ಚಕ್ರಾಧಿಪತ್ಯ. ಇದನ್ನು ಪೂರ್ವ ರೋಮನ್ ಸಾಮ್ರಾಜ್ಯವೆಂದೂ ಕರೆಯುವುದುಂಟು. ಈ ಸಾಮ್ರಾಜ್ಯದ ರಾಜಧಾನಿ ಬಾಸ್ಪೊರಸ್ ಜಲಸಂಧಿಯ ಐರೋಪ್ಯ ದಂಡೆಯ ಮೇಲಿದ್ದ ಬೈಜ಼ಾಂಟೀಯನ್. ಒಂದನೆಯ ಕಾನ್‌ಸ್ಟಂಟೈನ್ ಮಹಾಶಯ ಈ ನಗರವನ್ನು ರೋಮ್ ಚಕ್ರಾಧಿಪತ್ಯದ ರಾಜಧಾನಿಯಾಗಿ ಮಾಡಿಕೊಂಡು(330) ಕಾನ್‌ಸ್ಟಾಂಟಿನೋಪಲ್ ಎಂದು ಕರೆದ. ಮುಂದೆ ಟರ್ಕರ ಆಡಳಿತಕ್ಕೆ ಒಳಪಟ್ಟು ಈ ನಗರ ಇಸ್ತಾನ್‌ಬುಲ್ ಎಂದು ಪ್ರಸಿದ್ಧವಾಯಿತು.

ಸು.1200 ವರ್ಷಗಳ ಕಾಲ ಬೈಜ಼ಾಂಟೀಯನ್ ಸಾಮ್ರಾಜ್ಯ ಉತ್ತರ ಯುರೋಪ್ ಮತ್ತು ಏಷ್ಯದ ಕೆಲವು ಭಾಗಗಳಿಂದ ಬರುತ್ತಿದ್ದ ಅನಾಗರಿಕ ಜನಾಂಗದವರ ಧಾಳಿಯಿಂದ ಪಶ್ಚಿಮ ಯುರೋಪ್ ಪ್ರದೇಶವನ್ನು ರಕ್ಷಿಸುವುದರ ಜೊತೆಗೆ ಪ್ರಾಚೀನ ಗ್ರೀಸಿನ ಮಹಾಕಾವ್ಯ ಮತ್ತು ಗ್ರಂಥಗಳನ್ನೂ ಸಂರಕ್ಷಿಸಿತೆನ್ನಬಹುದು. ಇದೇ ಮುಂದೆ ಪುನರುಜ್ಜೀವನ ಮತ್ತು ಆಧುನಿಕ ನಾಗರಿಕತೆಯ ಉಗಮಕ್ಕೆ ಕಾರಣವಾಯಿತು. ಬೈಜ಼ಾಂಟೀಯನ್ ನಗರ ಕಪ್ಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ ಮಾರ್ಗವನ್ನು ನಿಯಂತ್ರಿಸುವ ಕೇಂದ್ರ ಸ್ಥಳವಾಗಿತ್ತು. ಯುರೋಪ್ ಮತ್ತು ಏಷ್ಯ ಖಂಡಗಳ ಹೆದ್ದಾರಿಗಳು ಅಲ್ಲಿ ಸಂಧಿಸುತ್ತಿದ್ದವು. ಮಧ್ಯಕಾಲೀನ ಪ್ರಪಂಚದ ಸಮಸ್ತ ಶ್ರೀಮಂತ ವ್ಯಾಪಾರವೆಲ್ಲ ಈ ನಗರದ ಮೂಲಕ ನಡೆಯುತ್ತಿತ್ತು. ಈ ನೈಸರ್ಗಿಕ ಅನುಕೂಲತೆಗಳ ಜೊತೆಗೆ ಬೈಜ಼ಾಂಟೀಯನ್ ಸಾಮ್ರಾಜ್ಯದ ಬಲಿಷ್ಠ ಮಿಲಿಟರಿ ಮತ್ತು ನೌಕಾಶಕ್ತಿಗಳು ಅದರ ಪ್ರತಿಷ್ಠೆಯನ್ನು ಹೆಚ್ಚಿಸಿದುವು. ಚಕ್ರವರ್ತಿಗೆ ಸಾಮಂತರು ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಆಳಿದ ಚಕ್ರವರ್ತಿಗಳು ರಾಜತಾಂತ್ರಿಕ ನಿಪುಣರಾಗಿದ್ದು, ಮಿತ್ರರನ್ನು ಗಳಿಸಿಕೊಳ್ಳುವುದರಲ್ಲಿ ಪ್ರವೀಣರಾಗಿದ್ದರು. ಅದೇ ರೀತಿ ಶತ್ರುಗಳನ್ನು ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟುವ ಚತುರತೆಯೂ ಅವರಲ್ಲಿದ್ದಿತು. ಈ ವಿದೇಶಾಂಗ ನೀತಿಯೇ ಅಂದಿನ ಆವಶ್ಯಕತೆ ರೋಮನ್ ರಾಜಕೀಯ ಸಿದ್ಧಾಂತ ಮತ್ತು ಗ್ರೀಕ್ ಸಂಪ್ರದಾಯ ಚರ್ಚ್‌ಗಳ ನಡುವಣ ಮಿಶ್ರ ಪ್ರತಿಕ್ರಿಯೆ ಈ ಸಾಮ್ರಾಜ್ಯಕ್ಕೆ ಒಂದು ಬಗೆಯ ಸ್ವರೂಪ ಕೊಟ್ಟಿತು. ಈ ಸಾಮ್ರಾಜ್ಯಕ್ಕೆ, ಅನೂಚಾನವಾದ ಸಂಸ್ಕೃತಿಯ ಹಿನ್ನೆಲೆಯಿದ್ದಿತು.

ಕಾನ್‌ಸ್ಟಂಟೈನ್‌ನ ಅಧಿಕಾರ (306-337) ಕೇಂದ್ರೀಕೃತ ಮತ್ತು ನಿರಂಕುಶ ಆಡಳಿತ ವಾಗಿತ್ತು. 313ರಲ್ಲಿ ಈತ ಕ್ರೈಸ್ತಧರ್ಮ ರಾಜ್ಯದ ಅಧಿಕೃತ ಧರ್ಮವೆಂದು ಘೋಷಿಸಿದ. ರಾಜಧಾನಿಯನ್ನು ರೋಮ್ ನಗರದಿಂದ ಬೈಜ಼ಾಂಟೀಯನ್ ನಗರಕ್ಕೆ ವರ್ಗಾಯಿಸಿದ. 312 ರಲ್ಲಿ ನಡೆದ ಮಿಲ್ ವಿಯನ್ ಬ್ರಿಜ್ಡ್ ಕದನದಲ್ಲಿ, ಮಾಕ್ಸೆನ್‌ಟಿಯಸ್‌ನ ಮೇಲೆ ಅದ್ಭುತ ಜಯಗಳಿಸಿದ. ಇದಕ್ಕೆ ಕಾರಣ ಕ್ರಿಸ್ತನ ಶಿಲುಬೆ ಸಂಕೇತವನ್ನು ಬಳಸಿದ್ದು ಎಂಬ ನಂಬಿಕೆಯಿದೆ. ಅವನು ಸ್ಥಾಪಿಸಿದ ಕ್ರಿಶ್ಚಿಯನ್ ಸಾಮ್ರಾಜ್ಯ 1453ರ ತನಕವೂ ಉಳಿದುಕೊಂಡು ಬಂದಿತು. ಚಕ್ರವರ್ತಿ ದೇವರಿಂದ ನೇಮಕನಾದವನು ಮತ್ತು ಅವನು ದೇವರ ಪ್ರತಿನಿಧಿ ಎಂಬ ಭಾವನೆ ಯಿದ್ದಿತು. ಅವನು ರಾಜ್ಯದ ಆಧಾರ, ಸಾಮ್ರಾಜ್ಯದ ರಕ್ಷಣಾ ಜವಾಬ್ದಾರಿ ಹೊಂದಿರುವ ವ್ಯಕ್ತಿ, ಪ್ರಜೆಗಳ ಯೋಗಕ್ಷೇಮ, ಅಭಿವೃದ್ಧಿ ಮತ್ತು ಚರ್ಚಿನಲ್ಲಿ ಮತ ಐಕ್ಯಮತ ಅವನ ಕಾರ್ಯವೆಂಬ ಭಾವನೆಯಿತ್ತು. ಕ್ರೈಸ್ತಧರ್ಮದ ತತ್ತ್ವಗಳನ್ನು ಪರಿಶುದ್ಧವಾಗಿ ಕಾಪಾಡಿಕೊಂಡು ಬರುವುದು ಚಕ್ರವರ್ತಿಯ ಹೊಣೆ ಎಂಬ ಅಭಿಪ್ರಾಯವೂ ಇತ್ತು. ಕಾನ್‌ಸ್ಟಂಟೈನ್ ಸು.325ರಲ್ಲಿ ನೈಸೀಯ ಎಂಬ ಪಟ್ಟಣದಲ್ಲಿ ಧಾರ್ಮಿಕ ಮಹಾಸಭೆ ಸೇರಿಸಿದ್ದು ಅಲ್ಲಿ ಅವನ ಇಚ್ಛೆಗನುಗುಣ ವಾಗಿ ಅರಿಯನ್ನರ ಧರ್ಮವನ್ನು ಹೀಯಾಳಿಸಿ, ಕ್ರಿಸ್ತ ದೇವರು ಎಂಬ ಭಾವನೆಯನ್ನು ಪ್ರತಿಪಾದಿಸಲಾಯಿತು.

ಕಾನ್‌ಸ್ಟಂಟೈನ್ ಚಕ್ರವರ್ತಿಯ ಮಕ್ಕಳೂ ಉತ್ತರಾಧಿಕಾರಿಗಳೂ (337-361) ಕ್ರೈಸ್ತ ಧರ್ಮಾವಲಂಬಿಗಳಾದಾಗ್ಯೂ ಅವನ ತಮ್ಮನ ಮಗ ಜ್ಯೂಲಿಯನ್‌ಗೆ (361-363) ಕ್ರೈಸ್ತ ಧರ್ಮದಲ್ಲಿ ನಂಬಿಕೆ ಇರಲಿಲ್ಲ. ಈತ ಮುಂದೆ ಸಾಮ್ರಾಜ್ಯಕ್ಕೆ ಅಪಾರ ನಷ್ಟ ಉಂಟು ಮಾಡಿದ. ಗಾತ್ ಮತ್ತು ಹೂಣರು ಏಡ್ರಿಯಾ ನೋಪಲ್ ಬಳಿ ಯುದ್ಧಮಾಡಿ ಚಕ್ರವರ್ತಿ ವಾಲೆನ್ಸ್‌ನನ್ನು (364-378) ಕೊಂದುಹಾಕಿದರು. ಮುಂದಿನ ಚಕ್ರವರ್ತಿ ಥಿಯೋಡೋಸಿಯಸ್ (379-395) ಗಾತರನ್ನು ಸಮಾಧಾನ ಮಾಡಿ ಅವರು ಡ್ಯಾನ್ಯೂಬ್ ನದಿಯ ದಕ್ಷಿಣ ಭಾಗದಲ್ಲಿ ನಿಲ್ಲುವಂತೆ ಮಾಡಿದ. ಆದರೂ ಗಾತರ ನೆಲೆಗಳು ಚಕ್ರಾಧಿಪತ್ಯದ ಗಡಿಯೊಳಗೇ ಇದ್ದುವು. ಕ್ರೈಸ್ತಧರ್ಮವನ್ನಲ್ಲದೆ ಇತರ ಯಾವುದೇ ಧರ್ಮವನ್ನು ಅನುಸರಿಸಬಾರದೆಂದು ಆಜ್ಞೆ ಹೊರಡಿಸಿದವರಲ್ಲಿ ಥಿಯೋಡೋಸಿಯಸ್ ಮೊದಲಿಗ. ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ 2ನೆಯ ಧಾರ್ಮಿಕ ಮಹಾಸಭೆಯನ್ನು 381ರಲ್ಲಿ ಸೇರಿಸಿ ಎರಿಯಸ್ ವಾದವನ್ನು ಇತ್ಯರ್ಥ ಮಾಡಿಸಿದ. ಇವನ ಮೊಮ್ಮಗ 2ನೆಯ ಥಿಯೋಡೋಸಿಯಸ್ (408-450) 3ನೆಯ ಧಾರ್ಮಿಕ ಮಹಾಸಭೆಯನ್ನು ಇಫೇಸಸ್ ನಗರದಲ್ಲಿ 431ರಲ್ಲಿ ಸೇರಿಸಿದ. ಇವನು ಕಾನ್‌ಸ್ಟಾಂಟಿನೋಪಲ್ ವಿಶ್ವವಿದ್ಯಾಲಯವನ್ನು 425ರಲ್ಲಿ ಸ್ಥಾಪಿಸಿದ. ಥಿಯೋಡೋಸಿಯಸ್ ಕೋಡ್ ಎಂಬ ಕಾನೂನು ಸಂಹಿತೆಯನ್ನು 438ರಲ್ಲಿ ಪ್ರಕಟಿಸಿದ. ಕೋಟೆಕೊತ್ತಲಗಳನ್ನು ನಿರ್ಮಿಸಿ ರಾಜಧಾನಿಯನ್ನು ಭದ್ರಗೊಳಿಸಿದ. 450ರಲ್ಲಿ 2ಡನೆಯ ಥಿಯೋಡೋಸಿಯಸ್‌ನ ತಂಗಿ ಪುಲ್‌ಚೆರಿಯಳು ಮಾರ್ಸಿಯಾನ್‌ನನ್ನು ಮದುವೆಯಾದಳು. ಮಾರ್ಸಿಯಾನ್(450-457) ಆಳಿದ ಕಾಲದಲ್ಲಿ 4ನೆಯ ಧಾರ್ಮಿಕ ಮಹಾಸಭೆ 451ರಲ್ಲಿ ಷಾಲ್ ಸಿಡಾನ್ ನಗರ ದಲ್ಲಿ ನಡೆಯಿತು. ಕ್ರಿಸ್ತ ದೇವಾಂಶಸಂಭೂತ ಎಂಬುದನ್ನು ಮತ್ತೆ ಇಲ್ಲಿ ಪ್ರತಿಪಾದಿಸಲಾಯಿತು. ಈ ತೀರ್ಮಾನದಿಂದ ಮನಾಫಿಸೈಟ್ಸ್ ಪಂಥದವರಿಗೆ ಕೋಪ ಉಂಟಾಯಿತು. ಅವರು ಬೈಜ಼ಾಂಟೀಯನ್ ರಾಜ್ಯದ ವಿರೋಧಿಗಳಾದರು. ಆದ್ದರಿಂದ ಅವರು 7ನೆಯ ಶತಮಾನದಲ್ಲಿ ಸಾಮ್ರಾಜ್ಯದ ಭಾಗವಾಗಿದ್ದ ಸಿರಿಯ ಮತ್ತು ಈಜಿಪ್ಟ್‌ಗಳ ಮೇಲೆ ಅರಬ್ಬರು ಮತ್ತು ಪರ್ಷಿಯನ್ನ ರು ದಂಡೆತ್ತಿ ಬಂದಾಗ ಅವರನ್ನು ತಡೆಯದೆ ತಟಸ್ಥ ಧೋರಣೆ ಅನುಸರಿಸಿದರು. ಷಾಲ್‌ಸಿಡಾನ್‌ನ 28ನೆಯ ಅಧಿನಿಯಮದ ಪ್ರಕಾರ, ಕಾನ್‌ಸ್ಟಾಂಟಿನೋಪಲ್ ಚರ್ಚು ಸೌಲಭ್ಯಗಳ ವಿಷಯದಲ್ಲಿ ರೋಮಿನ ಚರ್ಚಿಗೆ ಸರಿಸಮಾನವಾಗಿದ್ದರೂ ಅಂತಸ್ತಿನಲ್ಲಿ 2ನೆಯದೆಂದು ತೀರ್ಮಾನವಾಯಿತು. 1ನೆಯ ಪೋಪ್ ಲಿಯೋ (440-461) ಇದನ್ನು ತೀವ್ರವಾಗಿ ವಿರೋಧಿಸಿದ. ಆದರೆ ಬೈಜ಼ಾಂಟೀಯನ್ ಈ ತತ್ತ್ವವನ್ನು ಬಿಟ್ಟುಕೊಡಲಿಲ್ಲ.

ಮನಾಫಿಸೈಟ್ಸ್ ಪಂಥದ ಅನುಯಾಯಿಯಾಗಿದ್ದ ಮೊದಲನೆಯ ಅನಸ್ತಾಸಿಯಸ್ ಚಕ್ರವರ್ತಿ (491-518) ಸಾಮ್ರಾಜ್ಯದ ಬೊಕ್ಕಸದಲ್ಲಿ 32,000 ಪೌಂಡ್ ಚಿನ್ನದ ಹೆಚ್ಚಿನ ನಿಧಿಯಿದ್ದಿತಂತೆ. ಈ ನಿಧಿಯನ್ನು ಮೊದಲನೆಯ ಜಸ್ಟಿನಿಯಸ್ ಚಕ್ರವರ್ತಿ ಸಂಪೂರ್ಣವಾಗಿ ಕರಗಿಸಿದ. ಈತ (527-565) ಹಿಂದೆ ವೈಭವದ ಕಾಲದಲ್ಲಿ ಬೈಜ಼ಾಂಟೀಯನ್ ಸಾಮ್ರಾಜ್ಯದ ಗಡಿಯವರೆಗೂ ಮತ್ತೆ ರಾಜ್ಯ ವಿಸ್ತರಿಸಲು ದೈವಾಜ್ಞೆಯಾಗಿದೆ ಎಂದು ನಂಬಿದ್ದ. ಬೆಲಿಸಾರಿಯಸ್ ಮುಂತಾದ ಪ್ರಬಲ ಸೇನಾನಿಗಳ ನೆರವಿನಿಂದ ಆಫ್ರಿಕವನ್ನು ಗೆದ್ದ (533-48). ವಂಡಾಲ್ ಜನಾಂಗದವರಿಂದ ಬಾಲರಿಕ್ ದ್ವೀಪಗಳನ್ನೂ (533) ಅಸ್ಟ್ರಾಗೋತ್ ಎಂಬ ಅನಾಗರಿಕ ಜನಾಂಗದವರಿಂದ ಇಟಲಿಯನ್ನೂ (535-54) ವಿಸಿಗಾತ್ ಜನಾಂಗದವರಿಂದ ದಕ್ಷಿಣ ಸ್ಪೇನಿನ ಒಂದು ಭಾಗವನ್ನೂ (554) ಆಕ್ರಮಿಸಿಕೊಂಡ. ಪರ್ಷಿಯನ್ನರಿಗೆ ಕಪ್ಪ ಕಾಣಿಕೆ ಸಲ್ಲಿಸುವುದರ ಮೂಲಕ ಸಾಮ್ರಾಜ್ಯದ ಪೂರ್ವಭಾಗವನ್ನು ಉಳಿಸಿಕೊಂಡು ಬರಲು ಯತ್ನಿಸಿ ವಿಫಲನಾದ. ಆದರೆ ಸ್ಲಾವಿಕ್ ಬುಡಕಟ್ಟು ಜನರ ಆಕ್ರಮಣ ತಡೆಯಲು ಶಕ್ತನಾಗಲಿಲ್ಲ. ಅವರು ಕಾನ್‌ಸ್ಟಾಂಟಿನೋಪಲ್ ನಗರದ ಸುತ್ತ ಮುತ್ತಲಿನ ಪ್ರದೇಶದವರೆಗೂ ನುಗ್ಗಿ ಬಂದರು. ಬಾಲ್ಕನ್ ಪರ್ಯಾಯದ್ವೀಪ ಪ್ರದೇಶದಲ್ಲಿ ಸ್ಲಾವಿಕ್ ಜನಾಂಗದವರು ಅನೇಕ ಖಾಯಂ ಠಾಣಗಳನ್ನೂ ವಸತಿಗಳನ್ನೂ ಸ್ಥಾಪಿಸಿಕೊಂಡರು. ಆದಾಗ್ಯೂ ಇವನ ಆಳಿಕೆಯ ಕಾಲದಲ್ಲಿ ಬೈಜ಼ಾಂಟೀಯನ್ ಸಾಮ್ರಾಜ್ಯದ ಎಲ್ಲೆ ಅದರ ಗರಿಷ್ಠ ಮಿತಿಯನ್ನು ಮುಟ್ಟಿತು. ಸಾಮ್ರಾಜ್ಯ ಜಿಬ್ರಾಲ್ಟರ್ ಜಲಸಂಧಿಯಿಂದ ಯೂಫ್ರಟಿಸ್ ಮತ್ತು ಟೈಗ್ರಿಸ್ ನದಿಯವರೆಗೂ ಹಬ್ಬಿತು. ರೋಮನ್ ಕಾನೂನುಗಳನ್ನು ಕ್ರೋಡೀಕರಿಸಿದುದು ಈ ಚಕ್ರವರ್ತಿಯ ಮಹತ್ತರ ಸಾಧನೆ. ಇದನ್ನು ಕಾರ್ಪಸ್ ಜ್ಯೂರಿಸ್ ಸಿವಿಲಿಸ್ ಎಂದು ಕರೆಯುತ್ತಾರೆ. ಅದು ಇಂದಿಗೂ ಯುರೋಪ್ ಖಂಡ, ಲ್ಯಾಟಿನ್ ಅಮೆರಿಕ ಮತ್ತು ಲೂಸಿಯಾನ ಪ್ರಾಂತದ ಕಾನೂನು

ವ್ಯವಸ್ಥೆಗೆ ಅಡಿಪಾಯವಾಗಿದೆ. ಇವನು ಸಾಹಿತ್ಯ ಮತ್ತು ಕಲೆಗೆ ಪ್ರೋತ್ಸಾಹ ನೀಡಿದ. ಅನೇಕ ಕೋಟೆ ಕೊತ್ತಲಗಳನ್ನು ಕಟ್ಟಿಸಿದ. ಸುಂದರ ಸ್ಮಾರಕಗಳು ಜಸ್ಟಿನಿಯನ್ನನ ಕಾಲದಲ್ಲಿ ನಿರ್ಮಿತವಾದುವು. ಅವುಗಳ ಪೈಕಿ ಹೋಲಿ ವಿಸ್ಡಮ್ ಚರ್ಚ್ ಮುಖ್ಯವಾದದ್ದು. ಇದು ಪ್ರಪಂಚದ 4ನೆಯ ದೊಡ್ಡ ಚರ್ಚಾಗಿದ್ದು ಮಧ್ಯಕಾಲೀನ ಯುಗದ ವೈಭವ ಪೂರ್ಣವಾದ ಸ್ಮಾರಕಗಳಲ್ಲಿ ಒಂದೆನಿಸಿದೆ. ಜಸ್ಟೀನಿಯನ್ ಬುದ್ಧಿವಂತ ಧಾರ್ಮಿಕ ಪಂಡಿತ. 553ರಲ್ಲಿ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ನಡೆದ ಐದನೆಯ ಧಾರ್ಮಿಕ ಮಹಾಸಭೆಯಲ್ಲಿ ಚರ್ಚಿನ ಮತ್ತು ರಾಜ್ಯದ ಮುಖ್ಯಸ್ಥನಾಗಿ, ಚರ್ಚಿನ ಪುರೋಹಿತ ವರ್ಗ ಇವನ ಅಭಿಪ್ರಾಯಕ್ಕೆ ಮಣಿಯುವಂತೆ ಮಾಡಿದ.

ಜಸ್ಟೀನಿಯನ್ನನ ರಾಜ್ಯ ವಿಸ್ತರಣೆ ಬಲುಕಾಲ ಉಳಿಯಲಿಲ್ಲ. 580ರ ವೇಳೆಗೆ ಲೋಂಬಾಡಿಯನ್ನರು ಇಟಲಿ ಪರ್ಯಾಯ ದ್ವೀಪದ ಅರ್ಧದಷ್ಟು ಭಾಗವನ್ನು ಆಕ್ರಮಿಸಿ ಕೊಂಡಿದ್ದರು. ಆದರೆ ಚಕ್ರವರ್ತಿ ಮಾರಿಷಸ್(582–602) ಆರ್ಮೀನಿಯದ ಹೆಚ್ಚಿನ ಭಾಗವನ್ನು ಪರ್ಷಿಯದಿಂದ ರಾಜತಂತ್ರದ ಮೂಲಕ 591ರಲ್ಲಿ ಗೆದ್ದುಕೊಂಡ. ಕಾರ್ಥೇಜ್, ಆಫ್ರಿಕ, ರವೆನ್ನ, ಇಟಲಿಗಳಲ್ಲಿ ಬೈಜ಼ಾಂಟೀಯನ್ ಸರ್ಕಾರದ ಕೇಂದ್ರಗಳನ್ನು ಸ್ಥಾಪಿಸಿದ. ಅಲ್ಲಿಯ ಗೌರ್ನರುಗಳಿಗೆ ಮಿಲಿಟರಿ ಮತ್ತು ನಾಗರಿಕ ಆಡಳಿತಗಳ ಸಂಪೂರ್ಣ ಅಧಿಕಾರ ನೀಡಿದ. ಈ ರೀತಿಯಾಗಿ ಮೊದಲನೆಯ ಕಾನ್‌ಸ್ಟಂಟೈನ್ ಕಾಲದ ಅಧಿಕಾರ ವಿಭಜನೆಯನ್ನು ರದ್ದುಗೊಳಿಸಿದ. ಫೋಕಾಸ್‌ನ (602–610) ಆಳಿಕೆಯ ಕಾಲ ಗೊಂದಲಮಯವಾಗಿತ್ತು. ಆ ಪರಿಸ್ಥಿತಿಯನ್ನು ಹೆರಾಕ್ಲಿಯಸ್ (610–641) ಸುಧಾರಿಸಿ ಸಾಮ್ರಾಜ್ಯವನ್ನು ಕಾಪಾಡಿದ ಅನೇಕ ಯುದ್ಧಗಳಲ್ಲಿ ಜಯಗಳಿಸಿದ. 626ರಲ್ಲಿ ಅವರ್ ಜನಾಂಗದವರ ಧಾಳಿಯನ್ನು ತಪ್ಪಿಸಿದ್ದಲ್ಲದೆ ಪೂರ್ವಗಡಿಯಲ್ಲಿ ಸೈನಿಕ ಠಾಣ್ಯಗಳನ್ನು ಸ್ಥಾಪಿಸಿ ಸಾಮ್ರಾಜ್ಯದ ಪೂರ್ವಗಡಿ ಜಸ್ಟೀನಿಯನ್ನನ ಕಾಲದಲ್ಲಿದ್ದಂತೆ ಪುನಃ ವ್ಯವಸ್ಥೆ ಮಾಡಿದ.

ಈತ ಪ್ರಾಂತಗಳ ಆಡಳಿತ ಸುಧಾರಿಸಿದ. ಸೈನಿಕ ಸೇವೆ ಸಲ್ಲಿಸುವವರಿಗೆ ಜಹಗೀರುಗಳನ್ನು ನೀಡಿದ. ಪೂರ್ವ ಭಾಗದಲ್ಲಿ ಸ್ಥಾಪಿಸಲ್ಪಟ್ಟ ಹೊಸ ಆಡಳಿತ ವಿಭಾಗಗಳ ಅಧಿಕಾರಿಗಳಿಗೆ ಸೈನಿಕ ಮತ್ತು ನಾಗರಿಕ ಆಡಳಿತದ ಹೊಣೆ ಹೊರಿಸಿದ. ಈ ಭಾಗಗಳನ್ನು ಥೀಮ್ಸ್ ಎಂದು ಕರೆಯುತ್ತಿದ್ದರು. 678ರಲ್ಲಿ ಹೆರಾಕ್ಲಿಯಸ್‌ನ ಮರಿಮಗ ನಾಲ್ಕನೆಯ ಕಾನ್‌ಸ್ಟಂಟೈನ್ (668–685) ಅರಬ್ಬರನ್ನು ಬಡಿದಟ್ಟಿದ. 6ನೆಯ ಧಾರ್ಮಿಕ ಮಹಾಸಭೆ 680–81ರಲ್ಲಿ ನಡೆಯಿತು. ಮಾನೋತಿಯಿಸಮ್ ಪಂಥವನ್ನು ಈ ಸಭೆ ಬಹಿಷ್ಕರಿಸಿತು. ಮುಂದೆ ಸಿಂಹಾಸನಕ್ಕಾಗಿ ಎರಡನೆಯ ಜಸ್ಟೀನಿಯನ್ ಕಾಲದಲ್ಲಿ (685–695; 705–711) ನಡೆದ ಹೋರಾಟದಲ್ಲಿ ಹೆರಾಕ್ಲಿಯಸ್ ವಂಶ ಅವನತಿಹೊಂದಿತ್ತು.

3ನೆಯ ಲಿಯೋ ಚಕ್ರವರ್ತಿ ಶಾಂತಿ ಸ್ಥಾಪನೆ (717–741) ಮಾಡಿ ಸಿರಿಯನ್ ರಾಜ ವಂಶದ ಆಳಿಕೆಯನ್ನು ಆರಂಭಿಸಿದ. 717–718ರಲ್ಲಿ ಅರಬ್ಬರ ವಿರುದ್ಧ ನಡೆದ ಸಂಗ್ರಾಮದಲ್ಲಿ ಜಯಗಳಿಸಲು ಈತನೇ ಮುಖ್ಯ ಕಾರಣನಾಗಿ ಹೆಸರುಗಳಿಸಿದ. ಇದರಿಂದ ಕಾನ್‌ಸ್ಟಾಂಟಿನೋಪಲ್ ನಗರ ಅರಬ್ಬರ ದಾಳಿಯಿಂದ ಮುಕ್ತವಾಯಿತು. ಈ ಮಹಾಜಯಕ್ಕೆ ಬಲ್ಗಾರ್ ಜನಾಂಗದವರ ನೆರವು ಪ್ರಮುಖವಾಗಿತ್ತು. 751ರಲ್ಲಿ ಲೋಂಬಾರ್ಡ್‌ರಿಗೆ ರವೆನ್ನಾ ಪಟ್ಟಣವನ್ನು ಬಿಟ್ಟುಕೊಡಬೇಕಾಯಿತು. ಮುಂದೆ ರವೆನ್ನಾ ರಾಜ ಪಿಪಿನ್‌ನ ಕೈಸೇರಿ ಮತ್ತೆ ರೋಮಿಗೆ ಸೇರಿತು. ಈ ನಷ್ಟ ಓಮಯದ್‌ರ ಪತನದಿಂದ ತುಂಬಿ ಬಂದಿತು. ಅನಂತರ ಅಬ್ಬಾಸಿದರು ಅರಬ್ಬರ ರಾಜಧಾನಿಯನ್ನು ಬಾಗ್ದಾದ್‌ಗೆ ವರ್ಗಾಯಿಸಿದರು. 787ರಲ್ಲಿ 7ನೆಯ ಮಹಾಧರ್ಮ ಸಭೆ ನಿಕಾಯ ಪಟ್ಟಣದಲ್ಲಿ ನಡೆಯಿತು. ರಾಣಿ ಇರೀನ್ ಇದರ ಪ್ರೇರಕ ಶಕ್ತಿಯಾಗಿದ್ದಳು. ಮೂರ್ತಿಪೂಜೆ ಮಾಡುವವರನ್ನು ತಿರಸ್ಕರಿಸಲಾಯಿತು. ಮೂರ್ತಿಗಳಿರುವುದು ಧಾರ್ಮಿಕ ಉದ್ದೇಶಕ್ಕೆ ಮಾತ್ರ, ಪೂಜೆಗೆ ಅಲ್ಲ ಎಂಬ ಆಜ್ಞೆಯನ್ನು ಈ ಮಹಾಸಭೆ ಹೊರಡಿಸಿತು. ಚಕ್ರವರ್ತಿನಿಯಾಗಿದ್ದ ಇರೀನಳು ತನ್ನ ಮಗ 6ನೆಯ ಕಾನ್‌ಸ್ಟಂಟೈನ್‌ನ (780–797) ಕಣ್ಣು ಕೀಳಿಸಿದಳು. ಅನಂತರ ಅವಳೇ(797–802) ಸ್ವಲ್ಪ ಕಾಲ ಆಳಿಕೆ ನಡೆಸಿದಳು. ಆದರೆ ಅವಳು ಸಮರ್ಪಕವಾಗಿರಲಿಲ್ಲ. ಮೊದಲನೆಯ ನೈಸ್ ಫೋರಸ್ ಅವಳನ್ನು ಸಿಂಹಾಸನದಿಂದ ತಳ್ಳಿ ಹಾಕಿದ. 811ರಲ್ಲಿ ಇವನು ಬಲ್ಗೇರಿಯನ್ನರ ವಿರುದ್ಧ ಕಾದಾಡುತ್ತಿದ್ದಾಗ ಮರಣ ಹೊಂದಿದ. ಬಲ್ಗೇರಿಯದ ರಾಜನಾಗಿದ್ದ ಕ್ರೂಮ್ ಈ ಸಾಮ್ರಾಜ್ಯದ ಪರಮ ಶತ್ರುವಾಗಿದ್ದ. ಈ ಮಧ್ಯೆ 813–42ರ ಅವಧಿಯಲ್ಲಿ ಮತ್ತೆ ಮೂರ್ತಿಪೂಜೆ ಆಚರಣೆಗೆ ಬಂದಿತು. ಆದರೆ 843ರಲ್ಲಿ ಅಂತಿಮವಾಗಿ ನಿರ್ಮೂಲನವಾಯಿತು. ಅಮೋರಿಯನ್ ರಾಜಮನೆತನದ ಆಳಿಕೆಯಲ್ಲಿ (820–827), ಅರಬ್ಬರು ಕ್ರೀಟ್ ದ್ವೀಪವನ್ನೂ ಸಿಸಲಿಯ ಹೆಚ್ಚಿನ ಭಾಗವನ್ನೂ ಗೆದ್ದುಕೊಂಡರು. ಆದರೆ 864ರಲ್ಲಿ ಬಲ್ಗೇರಿಯದ ಬೋರಿಸ್ ಜನಾಂಗದವರನ್ನು ಬೈಜ಼ಾಂಟೀಯನ್ ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸಿದ್ದು ಅದಕ್ಕೆ ದೊರೆತ ಒಂದು ಧಾರ್ಮಿಕ ಸಾಧನೆ ಎನ್ನಬಹುದು. ಇದು ಮುಂದೆ ಸ್ಲಾವಿಕ್ ಜನಾಂಗದವರ ಪ್ರಪಂಚಕ್ಕೂ ಬೈಜ಼ಾಂಟೀಯನ್ ಧಾರ್ಮಿಕ ಸಂಪ್ರದಾಯದ ಹರಡುವಿಕೆಗೂ ಬೆಳವಣಿಗೆಗೂ ಮಾದರಿಯಾಯಿತು.

ಈ ವೇಳೆಗೆ ಮ್ಯಾಸಡೋನಿಯಲ್ ವಂಶ (867–1056) ಅಧಿಕಾರಕ್ಕೆ ಬಂತು. ಈ ವಂಶದ ರಾಜರು ಕಲೆ, ಸಾಹಿತ್ಯ ಮತ್ತು ಸಾಮ್ರಾಜ್ಯದ ಉನ್ನತಿಗೆ ಮಹತ್ತರ ಸೇವೆ ಸಲ್ಲಿಸಿದರು. ಇವರು ಸಾಮ್ರಾಜ್ಯದ ಸೈನ್ಯವನ್ನು ಮತ್ತೆ ರಚಿಸಿದರು. ಎಲ್ಲ ರಂಗಗಳಿಂದಲೂ ಬೈಜ಼ಾಂಟೀಯನ್‌ನ ಶತ್ರುಗಳನ್ನು ಹಿಮ್ಮೆಟ್ಟಿಸಿದರು. ಪೂರ್ವಭಾಗದಲ್ಲಿದ್ದ ಮುಸ್ಲಿಮರ ಮೇಲೆ ಜಯಗಳಿಸಿದರು. ಜನರಲ್ ನೈಸ್ ಫೋರಸ್ ಫೆಕಾಸ್ (ಚಕ್ರವರ್ತಿ: 963–69), 961ರಲ್ಲಿ ಕ್ರೀಟ್ ದ್ವೀಪವನ್ನೂ 965ರಲ್ಲಿ ಆಂಟಿಯೋಕನ್ನು ಗೆದ್ದುಕೊಂಡು, ಮೆಡಿಟರೇನಿಯನ್ ಪ್ರದೇಶದಿಂದ ಅರಬ್ಬರನ್ನು ಓಡಿಸಿದ. ಎರಡನೆಯ ಬಾಸಿಲ್ (976–1025) ಮ್ಯಾಸಿಡೋನಿಯನ್ ಮನೆತನದ ಬಲು ಪ್ರಖ್ಯಾತನಾದ ದೊರೆ. ಸದಾ ತೊಂದರೆಕೊಡುತ್ತಿದ್ದ ಬಲ್ಗೇರಿಯನ್ ಸಾಮ್ರಾಜ್ಯವನ್ನು (680–1018)ಸಂಪೂರ್ಣವಾಗಿ ನಾಶಮಾಡಿದ. ಇದರಿಂದ ಸಮಗ್ರ ಬಾಲ್ಕನ್ ಪ್ರದೇಶದ ಮೇಲೆ ಬೈಜ಼ಾಂಟೀಯನ್ ಸಾಮ್ರಾಜ್ಯಕ್ಕೆ ಮೊತ್ತಮೊದಲ ಬಾರಿಗೆ ಹತೋಟಿ ಬಂತು. 1025ರ ವೇಳೆಗೆ ಮ್ಯಾಸಿಡೋನಿಯನ್ನರು ಬಾರಿಯನ್ನು ಪುನಃ ಆಕ್ರಮಿಸಿಕೊಂಡು ದಕ್ಷಿಣ ಇಟಲಿಯ ಮೇಲೆ ಹತೋಟಿ ಸ್ಥಾಪಿಸಿದರು. ಇವರು ಸಾಮ್ರಾಜ್ಯದ ಗಡಿಯನ್ನು ಸಿರಿಯಾದವರೆಗೂ ವಿಸ್ತರಿಸಿದರು. 989ರಲ್ಲಿ ಕೀವ್‌ನ ವ್ಲಾಡಿಮಿರ್ ಬೈಜ಼ಾಂಟೀಯನ್ ಪ್ರಭಾವಕ್ಕೆ ಒಳಗಾಗುವಂತಾಯಿತು. ಎರಡನೆಯ ಬಾಸಿಲ್ ತನ್ನ ಹಿರಿಯವರಾಗಿದ್ದ ಏಳನೆಯ ಕಾನ್‌ಸ್ಟಂಟೈನ್ ಮತ್ತು ರೋಮನಸ್ ಲೆಕೆಫೇನಸ್ ಅವರಂತೆ ಚಿಕ್ಕ ಭೂಹಿಡುವಳಿದಾರರ ಮತ್ತು ಸೈನಿಕ ಜಹಗೀರುದಾರರ ಹಕ್ಕುಗಳ ರಕ್ಷಣೆಗೋಸ್ಕರ ಯುಕ್ತವಾದ ಶಾಸನಗಳನ್ನು ಮಾಡಿದ. ಬಾಸಿಲ್‌ನ ಉತ್ತರಾಧಿಕಾರಿಗಳು (1025–1081) ಆಡಳಿತದ ಬಗ್ಗೆ ಉದಾಸೀನರಾದ್ದರಿಂದ ಇಂಥ ಕಾನೂನುಗಳು ಉಪಯೋಗವಿಲ್ಲದೆ ಹೋದವು. ಇದರಿಂದ ದೊಡ್ಡ ದೊಡ್ಡ ಜಮೀನುದಾರರು ತಮ್ಮ ಹಿಡುವಳಿಗಳನ್ನು ಹೆಚ್ಚಿಸಿಕೊಂಡಿದ್ದಲ್ಲದೆ, ಸಂಪೂರ್ಣವಾಗಿ ತೆರಿಗೆಗಳ ಮಾನ್ಯವೂ ಸೇರಿದಂತೆ ಅನೇಕ ಸೌಲಭ್ಯಗಳನ್ನು ಪಡೆದುಕೊಂಡರು. ಇದರ ಪರಿಣಾಮವಾಗಿ ಸರ್ಕಾರದ ಆದಾಯ ತುಂಬ ಇಳಿಮುಖವಾಗಿ, ಸೈನ್ಯದಲ್ಲಿ ಅಸ್ತವ್ಯಸ್ತ ಉಂಟಾಯಿತು. ಸೈನ್ಯದ ಆಧಾರಸ್ತಂಭದಂತಿದ್ದ ಮಿಲಿಟರಿ ಜಹಗೀರುಗಳು ನಶಿಸಿಹೋಗಿದ್ದು ಬಹಳ ನಷ್ಟವಾಯಿತು. ತರುವಾಯದ ಕಾಲದಲ್ಲಿ ಬೈಜ಼ಾಂಟೀಯನ್ ಚಕ್ರವರ್ತಿಗಳು ಹೆಚ್ಚಾಗಿ ಬಾಡಿಗೆ ಬಂಟರನ್ನು ಅವಲಂಬಿಸಬೇಕಾಯಿತು. ಅನೇಕ ವೇಳೆ ಇಂಥವರ ಶಕ್ತಿಗೆ ತಲೆಬಾಗುವ ಪರಿಸ್ಥಿತಿಯೂ ಬಂದೊದಗಿತ್ತು. ಬಾಡಿಗೆಬಂಟರ ಆಸ್ತಿ ಹೆಚ್ಚಿ ಕೇಂದ್ರ ಸರ್ಕಾರಕ್ಕೆ ಸವಾಲಾಗುವ ಸ್ಥಿತಿ ಬಂತು.

ಅನೇಕ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದ ಗ್ರೀಕ್ ಮತ್ತು ರೋಮನ್ ಸಾಂಪ್ರದಾಯಿಕ ಚರ್ಚುಗಳು ಪರಸ್ಪರ ಸಂಬಂಧಗಳನ್ನು ಕಡಿದು ಹಾಕಿಕೊಂಡು (1054) ಅಧಿಕೃತವಾಗಿ ಪರಸ್ಪರ ಟೀಕಿಸತೊಡಗಿದುವು. 1071ರಲ್ಲಿ ನಾಲ್ಕನೆಯ ಡಯೋಜಿನಸ್ ರೋಮನಸ್ ಚಕ್ರವರ್ತಿಯನ್ನು ಆರ್ಮೀನಿಯದ ಮನ್‌ಜಿಕರ್ತ್ ರಣರಂಗದಲ್ಲಿ ಸೆಲ್‌ಜುಕ್ ಟರ್ಕರು ಸೆರೆಹಿಡಿದರು. ಈ ಘಟನೆ ಏಷ್ಯ ಮೈನರ್ ಪ್ರದೇಶದ ಮೇಲೆ ಬೈಜ಼ಾಂಟೀಯನ್ ಆಡಳಿತ ಕೊನೆಗೊಂಡುದನ್ನು ಸೂಚಿಸುತ್ತದೆ. ಅದೇ ವರ್ಷ ಬೈಜ಼ಾಂಟೀಯನ್ ಬಾರಿಯಿಂದ ಕಾಲ್ತೆಗೆಯಬೇಕಾಯಿತು. ಇದು ದಕ್ಷಿಣ ಇಟಲಿಯಲ್ಲಿಯ ಸಾಮ್ರಾಜ್ಯದ ಮುಖ್ಯವಾದ ಆಯಕಟ್ಟಿನ ಸ್ಥಾನವಾಗಿತ್ತು. ನಾರ್ಮನ್, ರಾಬರ್ಟ್ ಗೀಸ್‌ಕಾರ್ಡ್ ಇವನ್ನು ಗೆದ್ದುಕೊಂಡರು. ಮತ್ತೆ ಬೈಜ಼ಾಂಟೀಯನ್ ಇಟಲಿಯ ಮೇಲೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ಸಾಧ್ಯವಾಗಲೇ ಇಲ್ಲ.

ಇಟಲಿ, ಗ್ರೀಸ್ ಮತ್ತು ಏಷ್ಯಮೈನರ್‌ಗಳಲ್ಲಿ ಪರಾಭವವುಂಟಾದ ಮೇಲೆ ಕೋಮ್‌ನಿಯನ್ ಮನೆತನದ (1801–85) ಮೊದಲನೆಯ ಅಲೆಕ್ಸಿಯಸ್ ಕೋಮನೇನಸ್‌ನ ಆಳಿಕೆಯಿಂದ ಒಂದು ಹೊಸ ಯುಗ ಬೈಜ಼ಾಂಟೀಯನ್ ಚಕ್ರಾಧಿಪತ್ಯದ ಇತಿಹಾಸದಲ್ಲಿ ಆರಂಭವಾಯಿತು. ಇವನು ಮಿಲಟರಿ ಪಕ್ಷ ಮತ್ತು ಪ್ರಾಂತ್ಯಗಳಲ್ಲಿದ್ದ ದೊಡ್ಡ ದೊಡ್ಡ ಜಮೀನುದಾರರ ಪರವಾದ ಧೋರಣೆ ಅನುಸರಿಸಿದ. ಇವರಿಗೆ ನಾನಾ ರೀತಿಯ ಸವಲತ್ತುಗಳನ್ನು ಕೊಟ್ಟು ಮನವೊಲಿಸಿಕೊಂಡ. ಸಾಮ್ರಾಜ್ಯದ ಶತ್ರುಗಳನ್ನು ಹತೋಟಿಯಲ್ಲಿಟ್ಟ, ಬಾಲ್ಕನ್ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದ ನಾರ್ಮನ್ನರನ್ನು ಅಲ್ಲಿಂದ ಕಾಲ್ತೆಗೆಯುವಂತೆ ಮಾಡಿದ. ಕ್ರುಸೇಡ್‌ಗಳಿಂದ ಅಥವಾ ಧರ್ಮಯುದ್ಧಗಳಿಂದ ಅನೇಕ ಲಾಭಗಳನ್ನು ಗಳಿಸಿದ. ಇಷ್ಟೆಲ್ಲ ಕೀರ್ತಿಯನ್ನು ಸಂಪಾದಿಸಿದರೂ ತನ್ನ ಕೆಲವು ಪೂರ್ವಿಕ ಚಕ್ರವರ್ತಿಗಳಂತೆ ಒತ್ತಡದ ಫಲವಾಗಿ ನಾಣ್ಯದ ಬೆಲೆಯನ್ನು ಇಳಿಸಬೇಕಾಯಿತು. ಸು.800ವರ್ಷಗಳ ಕಾಲ ಪ್ರಪಂಚದಲ್ಲೇ ಹೆಚ್ಚು ಸಮತೋಲನವುಳ್ಳ ನಾಣ್ಯವೆಂದು ಪರಿಗಣಿಸಲ್ಪಟ್ಟಿದ್ದ ನಾಣ್ಯದ ಬೆಲೆ ಇಳಿಸಿದ್ದು ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮ ಬೀರಿತು. ನಾರ್ಮನ್ನರ ವಿರುದ್ಧ ಹೋರಾಟದಲ್ಲಿ ಬೆಂಬಲಗಳಿಸಿಕೊಳ್ಳಲು, ಸಾಮ್ರಾಜ್ಯದ ಮುಖ್ಯ ಆದಾಯದ ಭಾಗವಾಗಿದ್ದ ವೆನಿಸ್ ನಗರಕ್ಕೆ ಹೆಚ್ಚಿನ ರಿಯಾಯಿತಿಗಳನ್ನು ಕೊಡಬೇಕಾಯಿತು. ಇದರಿಂದ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಕುಸಿಯಿತು. ಇವನ ಮಗ ಎರಡನೆಯ ಜಾನ್ ಕೊಮ್‌ನೆನಸ್ (1118–43) ವೆನಿಸ್‌ನೊಡನೆ ಮಾಡಿಕೊಂಡಿದ್ದ ಒಪ್ಪಂದವನ್ನು ಮುರಿಯಲು ಪ್ರಯತ್ನಿಸಿ ವಿಫಲನಾದ. ಇಂತಹುದೇ ಒಂದು ಒಪ್ಪಂದವನ್ನು ಜಿನೀವ ಮತ್ತು ಪೀಸಾನಗರಗಳೊಡನೆಯೂ ಮಾಡಿಕೊಂಡ. ವೆನಿಸ್‌ನಂತೆ ಈ ನಗರಗಳಿಗೂ ಅನೇಕ ಸವಲತ್ತುಗಳು ದೊರೆತುವು. 1137ರಲ್ಲಿ ಕೆಳಗಿನ ಆರ್ಮೇನಿಯವನ್ನು ವಶಪಡಿಸಿಕೊಂಡ. ಪೂರ್ವದ ಗಡಿಯನ್ನು ಭದ್ರಪಡಿಸಿದ, ಜಾನನ ಮಗ ಮ್ಯಾನ್ಯುಯಲ್‌ನನ್ನು (1143–80) ಸೆಲಜುಕ್ ಟರ್ಕರು 1176ರಲ್ಲಿ ಯುದ್ಧದಲ್ಲಿ ಸೋಲಿಸಿದರು.

ಕೋವಲ್‌ನೇಸಿಯನ್ ಮನೆತನದ ಚಕ್ರವರ್ತಿಗಳಲ್ಲಿ ಕೊನೆಯವನಾಗಿದ್ದ ಆಂಡ್ರೋನಿಕಸ್ (1183–85) ಸುಧಾರಣೆಗಳನ್ನು ತರುವುದರಲ್ಲಿ ವಿಫಲನಾದ. ಅಧಿಕಾರ ಅಂಜೆಲಿ ಮನೆತನಕ್ಕೆ (1185–1204) ಹೋಯಿತು. ಇವರು ನಾಲ್ಕನೆಯ ಕ್ರೂಸೇಡ್ ಯುದ್ಧದ (1204) ಲ್ಯಾಟಿನ್ ಜನಾಂಗದವರಿಂದ ಕಾನ್‌ಸ್ಟಾಂಟಿನೋಪಲ್ ನಗರದ ಮೇಲೆ ನಡೆದ ಮುತ್ತಿಗೆ ಮತ್ತು

ಲೂಟಿ ತಡೆಗಟ್ಟುವುದರಲ್ಲಿ ವಿಫಲರಾದರು. ಧರ್ಮ ಯುದ್ಧದಲ್ಲಿ ಭಾಗವಹಿಸಿದವರು ಕ್ರಮಬದ್ಧವಾಗಿ ಈ ನಗರವನ್ನು ಕೊಳ್ಳೆಹೊಡೆದು ಪಶ್ಚಿಮ ಯುರೋಪಿನ ತಮ್ಮ ಚರ್ಚು, ಅರಮನೆ, ಬಂಗಲೆಗಳನ್ನು ಶ್ರೀಮಂತಗೊಳಿಸಿದರು. ಸಾಮ್ರಾಜ್ಯ ಅನೇಕ ಭಾಗಗಳಾಗಿ ಒಡೆದು ಹೋಯಿತು. ಅದರಲ್ಲಿ ದೊಡ್ಡಭಾಗ ವೆನಿಸಿಗೆ ಸೇರಿತು. ಮುಂದೆ ಗ್ರೀಕರು, ಲ್ಯಾಟಿನ್ನರು, ಬಲ್ಗೇರಿಯನ್ನರು, ಟರ್ಕರು ಮತ್ತು ಮಂಗೋಲಿಯನ್ನರು ಪರಸ್ಪರ ಕಾದಾಡುತ್ತಿದ್ದರು. ಇವರೆಲ್ಲರ ಧಾಳಿಯನ್ನು ಬೈಜಾಂಟೀಯನ್ ಸಾಮ್ರಾಜ್ಯ ಸಹಿಸಿಕೊಳ್ಳಬೇಕಾಯಿತು. ಜಿನೀವ ಮತ್ತು ವೆನಿಸುಗಳ ಲಾಭದಾಯಕ ವ್ಯಾಪಾರ ಸಾಮ್ರಾಜ್ಯದ ಕೈಬಿಟ್ಟು ಹೋದದ್ದರಿಂದ ಅನೇಕ ತೊಂದರೆಗಳುಂಟಾದವು. ಇವಲ್ಲದೆ ಚಕ್ರಾಧಿಪತ್ಯ ವಿಸ್ತಾರದಲ್ಲಿ ಕುಗ್ಗಿತು. ಕಾನ್‌ಸ್ಟಾಂಟಿನೋಪಲ್ ನಗರ ಮತ್ತು ಸುತ್ತ ಮುತ್ತಲಿನ ಪ್ರದೇಶ ಮಾತ್ರ ಅವರ ವಶದಲ್ಲಿದ್ದಿತು. ಮೂರು ಕೋಟೆಗಳಾದ ಮೋಸೆಂಬಾಸಿಯಾ, ಮೈವಾ ಮತ್ತು ವಿಸ್ಟ್ರಗಳೂ ಇದರ ವಶದಲ್ಲಿದ್ದವು. ಪ್ಯಾಲಿಯೋಲೋಗಸ್ ಮನೆತನದ (1259–82) ಸ್ಥಾಪಕ ಎಂಟನೆಯ ಮೈಕೆಲನು ಲ್ಯಾಟಿನ್ನರನ್ನು ಕಾನ್‌ಸ್ಟಾಂಟಿನೋಪಲ್‌ನಿಂದ ಹಿಮ್ಮೆಟ್ಟಿಸಿದ. ಎಂಟನೆಯ ಮೈಕೇಲ್ ಪ್ರಬಲನಾದ ಬುದ್ಧಿವಂತ ಅರಸನಾಗಿದ್ದ. ರೋಮನ್ ಚರ್ಚಿನೊಡನೆ ಸೇರಲು ಮೈಕೇಲ್ ಮಾಡಿದ ವ್ಯವಸ್ಥೆ ನಿರೀಕ್ಷಿತ ಪ್ರತಿಫಲ ನೀಡಲಿಲ್ಲ. ತನ್ನ ವಿರುದ್ಧ ಆಂಜೋವಿನ ಚಾರ್ಲ್ಸ್ ಹೂಡಿದ್ದ ಪಶ್ಚಿಮ ರಾಷ್ಟ್ರಗಳ ಮತ್ತು ಬಾಲ್ಕನ್ ರಾಷ್ಟ್ರಗಳ ಒಕ್ಕೂಟವನ್ನು ಮೈಕೇಲ್ ಎದುರಿಸಿದ. ಪೂರ್ವದ ಗಡಿಯಲ್ಲಿ ಶಾಂತಿ ಒಪ್ಪಂದ ಮಾಡಿಕೊಂಡ.

ಎರಡನೆಯ ಆಂಡ್ರೋನಿಕಸ್ ಮೈಕೇಲನ ಮಗ (1282–1328). ಇವನ ಕಾಲದಲ್ಲಿ ಅಂತರ್ಯುದ್ಧಗಳು ನಡೆದು ಬೈಜಾಂಟೀಯನ್ ಸಾಮ್ರಾಜ್ಯದ ಶಕ್ತಿಗುಂದಿತು. 5ನೆಯ ಜಾನನ (1341–91) ಕಾಲದಲ್ಲಿ ಜಿನೀವ, ವೆನಿಸ್ ಮತ್ತು ಸರ್ಬಿಯನ್ನರು ತೊಂದರೆಕೊಟ್ಟರು. ಟರ್ಕರು ದಾಳಿ ಮಾಡಿದರು. ಜಾರ್ ಸ್ಟೀಫನ್ ದೂಷನ್ನನು ಗ್ರೀಕೊ–ಸರ್ಬಿಯನ್ ಸಾಮ್ರಾಜ್ಯ ಕಟ್ಟುವ ಕನಸು ಕಂಡ. ಸರ್ಬಿಯನ್ ಮನೆತನದ ಆಳಿಕೆಯನ್ನು ಸ್ಥಾಪಿಸುವ ಪ್ರಯತ್ನ ಮಾಡಿದ. ಆದರೆ ಇವನು ಅಕಾಲದಲ್ಲಿ ಮರಣಹೊಂದಿದ್ದರಿಂದ ಈ ಆಸೆ ಕೈಗೂಡಲಿಲ್ಲ. 13ನೆಯ ಶತಮಾನದ ಕಡೆಯಲ್ಲಿ ಆಟೋಮನ್ ಟರ್ಕರು ಬೈಜಾಂಟೀಯನ್ ಸಾಮ್ರಾಜ್ಯವನ್ನು ಕೆಣಕಲು ಆರಂಭಿಸಿದರು. 1341ರ ವೇಳೆಗೆ ಅವರು ಏಷ್ಯ ಮೈನರ್ ಪ್ರದೇಶವನ್ನು ಸಂಪೂರ್ಣವಾಗಿ ತಮ್ಮ ವಶಮಾಡಿಕೊಂಡರು. 1354 ರ ವೇಳೆಗೆ ಯುರೋಪಿನ ಕ್ಯಾಲಿಪ್ಪೋಲಿಯದಲ್ಲಿ ನೆಲೆಸಿದರು. ಮೊದಲನೆಯ ಮುರಾದನು (1359–89) ಆಟೋಮನ್ ಸಾಮ್ರಾಜ್ಯದ ರಾಜಧಾನಿಯನ್ನು ಏಡ್ರಿಯನೋಪಲ್ ಪಟ್ಟಣಕ್ಕೆ 1365ರಲ್ಲಿ ವರ್ಗಾಯಿಸಿದ. ಇದು ಸರ್ಬಿಯನ್ನರ ಮತ್ತು ಬಲ್ಗೇರಿಯನ್ನರ ಮೇಲಿನ ಯುದ್ಧಗಳಿಗೆ ಟರ್ಕರ ನೆಲೆಯಾಯಿತು. ಎರಡನೆಯ ಮ್ಯಾನ್ಯುಯಲ್ (1391–1425) ಯುರೋಪಿನ ನೆರವನ್ನು ಪಡೆದುಕೊಳ್ಳುವುದರಲ್ಲಿ ವಿಫಲನಾದ. ಮಂಗೋಲರ ನಾಯಕತೈಮೂರ್ ಟರ್ಕರನ್ನು ಅಡಗಿಸಿದ್ದರಿಂದ ಬೈಜಾಂಟೀ ಯನ್ ಸಾಮ್ರಾಜ್ಯ 50 ವರ್ಷ ಹೆಚ್ಚಾಗಿ ಬಾಳಿತು. ಕೊನೆಗೆ ಎರಡನೆಯ ಮಹಮದ್ 1453 ಮೇ 29ರಂದು ಕಾನ್‌ಸ್ಟಾಂಟಿನೋಪಲ್ ನಗರವನ್ನು ಮುತ್ತಿ ಬೈಜಾಂಟೀಯನ್ ಸಾಮ್ರಾಜ್ಯದ ಕೊನೆಯ ಚಕ್ರವರ್ತಿ 11ನೆಯ ಕಾನ್‌ಸ್ಟಂಟೈನ್‌ನನ್ನು ರಣರಂಗದಲ್ಲಿ ಕೊಂದು ಹಾಕಿದ.

ಬೈಜಾಂಟೀಯನ್ ಸರ್ಕಾರ ತನ್ನದೇ ಆದ ಕೆಲವು ವಿಶಿಷ್ಟತೆಯನ್ನು ಪಡೆದಿತ್ತು. ಚಕ್ರವರ್ತಿ ಸರ್ವಾಧಿಕಾರಿಯಂತೆ ಆಳುತ್ತಿದ್ದ. ರಾಜಾಧಿಕಾರದ ಮುಖ್ಯಾಂಶಗಳು ಈ ಸಾಮ್ರಾಜ್ಯದ ಇತಿಹಾಸದಲ್ಲಿ ಎಲ್ಲ ಕಾಲದಲ್ಲೂ ಇದ್ದವು. ಚಕ್ರವರ್ತಿಯ ಅಧಿಕಾರವನ್ನು ಮೊಟಕುಗೊಳಿಸುವಂಥ ಹೆಚ್ಚು ಘಟನೆಗಳು ಸಂಭವಿಸಲಿಲ್ಲ. ಗಣರಾಜ್ಯ ಪ್ರಭುತ್ವದತ್ತ ವಿಕಾಸ ನಡೆಯಲಿಲ್ಲ. ನಡೆದ ದಂಗೆಗಳು, ಚಿತಾವಣೆಗಳು ಕೇವಲ ಚಕ್ರವರ್ತಿಗಳತ್ತ ನಡೆದ ವೈಯಕ್ತಿಕ ಘಟನೆಗಳಾಗಿದ್ದವು. ಚಕ್ರವರ್ತಿಗಳು ಕೋಮಿನ ಸಂಪ್ರದಾಯವನ್ನು ಅನುಸರಿಸಿ ಸಾಮಾನ್ಯವಾಗಿ ಒಳ್ಳೆಯ ಆಡಳಿತವನ್ನು ನೀಡಲು ಪ್ರಯತ್ನಿಸಿದರು. ಸೆನೆಟ್‌ನಿಂದ ನೇಮಕ ಮಾಡಲ್ಪಟ್ಟ ಚಕ್ರವರ್ತಿ, ಜನರ ಮತ್ತು ಸೇನೆಯ ಒಪ್ಪಿಗೆಯನ್ನು ಪಡೆಯಬೇಕಾಗಿದ್ದಿತು. ಇದೊಂದು ಸಂಪ್ರದಾಯವಾಗಿತ್ತು. ಉತ್ತರಾಧಿಕಾರ ಸಹಜವಾಗಿರಲಿಲ್ಲ. ರಾಜನ ಆಯ್ಕೆಯಲ್ಲಿ ಧರ್ಮದ ಮುಖಂಡರ ಪಾತ್ರ ಹಿರಿದಾಗಿತ್ತು. ಕ್ರೈಸ್ತಧರ್ಮವನ್ನು ರಕ್ಷಿಸುತ್ತೇನೆಂದು ಚಕ್ರವರ್ತಿ ಸಿಂಹಾಸನಾರೋಹಣ ಕಾಲದಲ್ಲಿ ಪ್ರಮಾಣವಚನ ಸ್ವೀಕಾರ ಮಾಡಬೇಕಾಗಿದ್ದಿತು. ಚಕ್ರವರ್ತಿಯಾದವನು ಮತ್ತೊಂದು ರಾಜ್ಯಕ್ಕೆ ತಮ್ಮ ಪ್ರದೇಶವನ್ನು ಬಿಟ್ಟುಕೊಡಲು ಅಧಿಕಾರವಿರಲಿಲ್ಲ. ಸರ್ಕಾರದಲ್ಲಿ ಸೆನೆಟ್‌ಗೆ ಶಾಸನ ಮಾಡುವ ಮತ್ತು ನ್ಯಾಯಾಡಳಿತ ಹಕ್ಕು ಇರಲಿಲ್ಲ. ಅದಕ್ಕೆ ರಾಜಕೀಯ ಅಪರಾಧಗಳ ಬಗ್ಗೆ ವಿಚಾರಣೆ ಮಾಡಿ ಶಿಕ್ಷೆ ನೀಡುವ ಅಧಿಕಾರ ಇತ್ತು. ಶ್ರೀಮಂತರು ಉನ್ನತ ಅಧಿಕಾರಿಗಳು ಸೆನೆಟ್‌ನ ಸದಸ್ಯರಾಗಿದ್ದರು. 10ನೆಯ ಶತಮಾನದಲ್ಲಿ ಸೆನೆಟ್‌ನ ಅಧಿಕಾರ ಕುಂದಿತು. ಪ್ರಜೆಗಳು ವಿಶೇಷವಾದ ಸಮಾರಂಭ ಗಳಲ್ಲಿ ಭಾಗವಹಿಸುವ ಸಂಪ್ರದಾಯ ಬೆಳೆದುಬಂದಿತು. ಧಾರ್ಮಿಕ ಮೆರವಣಿಗೆಗಳು, ಆಸ್ಥಾನದಲ್ಲಿ ನಡೆಯುವ ಮುಖ್ಯ ಸಮಾರಂಭಗಳು, ಸಂಪ್ರದಾಯಗಳು ಚಕ್ರವರ್ತಿ ಇತರರಿಗೆ ತನ್ನ ದರ್ಪ ಪ್ರತಿಷ್ಠೆಗಳನ್ನು ತೋರಿಸಿಕೊಳ್ಳುವ ಸಾಧನಗಳಾಗಿದ್ದುವು. ಬೈಜಾನ್‌ಟೀಯನ್ ಸರ್ಕಾರದಲ್ಲಿ ಒಬ್ಬನಿಗಿಂತ ಹೆಚ್ಚು ಮಂದಿ ಚಕ್ರವರ್ತಿಗಳು ಇರಬಹುದಾಗಿತ್ತು. ಚಕ್ರವರ್ತಿ ಬಾಲಕನಾಗಿದ್ದರೆ, ಮಹಾದಂಡನಾಯಕ ಆಳುವ ಸಂಪ್ರದಾಯವಿತ್ತು. ಆದರೆ ನಿಜವಾದ ಚಕ್ರವರ್ತಿಗೆ ಸಂಪೂರ್ಣ ಅಧಿಕಾರವಿತ್ತು. 3ನೆಯ ಲಿಯೋ, 1ನೆಯ ಜಸ್ಟೀನಿಯನ್ ಮತ್ತು 1ನೆಯ ಬಾಸಿಲ್ ಮತ್ತು 6ನೆಯ ಲಿಯೋ ಚಕ್ರವರ್ತಿಗಳು ಶಾಸನ ಮತ್ತು ಕಾನೂನಿನ ಇತಿಹಾಸದಲ್ಲಿ ಪ್ರಖ್ಯಾತರಾಗಿದ್ದಾರೆ. ಇವರು ಕಾನೂನುಗಳನ್ನು ಕ್ರೋಡೀಕರಿಸಿದರು. ಕುಟುಂಬ ವ್ಯವಸ್ಥೆ, ವಿವಾಹ, ಆಸ್ತಿ, ಅಪರಾಧ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲಾಯಿತು. ಯಾವ ಅಪರಾಧಕ್ಕೆ ಯಾವ ಶಿಕ್ಷೆ ನೀಡಬೇಕೆಂದು ಈ ದಂಡಸಂಹಿತೆಗಳಲ್ಲಿ ಉಲ್ಲೇಖಿಸಲಾಯಿತು. ಈ ಚಕ್ರವರ್ತಿಗಳು ಮಾಡಿದ ಕಾನೂನುಗಳಲ್ಲಿ ಅನೇಕ ವೇಳೆ ಪರಸ್ಪರ ಭಿನ್ನಾಭಿಪ್ರಾಯವಿದ್ದುದನ್ನು ನೋಡಬಹುದು. ಉದಾಹರಣೆಗೆ ಜಸ್ಟೀನಿಯನ್ ವಿವಾಹವನ್ನು ಒಂದು ಒಪ್ಪಂದವೆಂದು ಪರಿಗಣಿಸಿ ಅದನ್ನು ಎರಡೂ ಪಕ್ಷದ ಒಪ್ಪಿಗೆಯ ಮೇರೆಗೆ ಮುರಿಯಬಹುದೆಂದು ಹೇಳಿದರೆ, ಮೂರನೆಯ ಲಿಯೋ ವಿವಾಹ ಮುರಿಯಲಾಗದ ದೈವಿಕ ಸಂಬಂಧ ಎಂದು ಚರ್ಚಿನ ಅಭಿಪ್ರಾಯಕ್ಕೆ ಕಾನೂನು ಬೆಂಬಲ ನೀಡಿದ. ವೇಶ್ಯಾವೃತ್ತಿಯನ್ನು ರದ್ದುಗೊಳಿಸಲಾಯಿತು. ಮರಣದಂಡನೆಯನ್ನು ಉಳಿಸಿಕೊಳ್ಳಲಾಯಿತು. ಕೆಲವು ಅಪರಾಧ ಮಾಡಿದವರಿಗೆ ಮೂಗು ಮತ್ತು ಕೈಯನ್ನು ಕತ್ತರಿಸಲಾಗುತಿತ್ತು. ಅಪರಾಧ ಕಾನೂನಿನ ಮೇಲೆ ಚರ್ಚಿನ ಪ್ರಭಾವವಿದ್ದಿತು.

ಬೈಜಾಂಟೀಯನ್ ಸಾಮ್ರಾಜ್ಯದ ಆಡಳಿತ ಕ್ರಮ ರೋಮನ್ ಸಂಪ್ರದಾಯಕ್ಕೆ ಸೇರಿದ್ದರೂ ಕಾಲಾನುಕ್ರಮದಲ್ಲಿ ಅನೇಕ ಬದಲಾವಣೆಗಳುಂಟಾದವು. ಅಧಿಕಾರಿಗಳ ಸಂಖ್ಯೆ ಹೆಚ್ಚಿನದು. ಹೊಸ ಹೊಸ ವಿಭಾಗಗಳ ಸ್ಥಾಪನೆ, ಅವರ ಅಧಿಕಾರಗಳ ವ್ಯಾಪ್ತಿ, ಹೆಸರಿನಲ್ಲಿ ಬದಲಾವಣೆ ಇವೆಲ್ಲ ಕೆಲವು ಬೆಳವಣಿಗೆಗಳಾಗಿದ್ದವು. ನಗರ ಆಡಳಿತ ಸುವ್ಯವಸ್ಥಿತವಾಗಿತ್ತು. ಪೊಲೀಸ್ ವ್ಯವಸ್ಥೆಯಿತ್ತು. ಸಾಮ್ರಾಜ್ಯದ ಕೆಲವು ಭಾಗಗಳಲ್ಲಿ ಥೀಮ್ಸ್‌ಗಳೆಂಬ ಮಿಲಿಟರಿ ಪ್ರಾಂತ್ಯಗಳಿದ್ದವು. ರಕ್ಷಣೆಯ ದೃಷ್ಟಿಯಿಂದ ಇವು ಆವಶ್ಯಕವಾಗಿದ್ದವು. ಈ ಪ್ರಾಂತ್ಯಗಳ ಗವರ್ನರುಗಳು ಮಿಲಿಟರಿ ಹಾಗೂ ನಾಗರಿಕ ಆಡಳಿತಗಳನ್ನು ನೋಡಿಕೊಳ್ಳುತ್ತಿದ್ದರು. ಸಾಮ್ರಾಜ್ಯದಲ್ಲಿ ವಿವಿಧ ದರ್ಜೆಯ ನ್ಯಾಯಾಲಯಗಳಿದ್ದವು. ಅಂತಿಮವಾದ ಅಪೀಲು ಚಕ್ರವರ್ತಿಗೆ ಹೋಗುತ್ತಿತ್ತು. ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ 12ನೆಯ ಶತಮಾನದಲ್ಲಿ 4 ಇಂಪೀರಿಯಲ್ ನ್ಯಾಯಾಲಯಗಳಿದ್ದವು. ನ್ಯಾಯಾಡಳಿತದಲ್ಲಿ ಚರ್ಚಿನ ಪ್ರಭಾವ ಹೆಚ್ಚಾಗಿದ್ದಿತು. ಧಾರ್ಮಿಕ ನ್ಯಾಯಾಲಯಗಳಿದ್ದುವು. ಸರ್ಕಾರ–ಚರ್ಚುಗಳ ನಡುವೆ ನಿಕಟ ಬಾಂಧವ್ಯ ಕೊನೆಯವರೆಗಿತ್ತು.

ಭೂಕಂದಾಯ ಸಾಮ್ರಾಜ್ಯದ ಮುಖ್ಯ ಆದಾಯವಾಗಿದ್ದಿತು. ಕಂದಾಯವನ್ನು ನಿಗದಿ ಮಾಡುವಾಗ, ಭೂಮಿಯ ಸಾರ, ಉತ್ಪನ್ನ, ಹೂಡಿದ ಬಂಡವಾಳ ಮೊದಲಾದವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ನಗರದ ಜನರ ಮೇಲೆ ನೇರವಾದ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಆಮದು–ರಫ್ತು ಸುಂಕದಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತಿತ್ತು. ಭೂಮಿಯ ಒಡೆತನಕ್ಕೆ ಮಾನ್ಯತೆಯಿತ್ತು. ಮಿಲಿಟರಿ ಸೇವೆಗಾಗಿ ಸರ್ಕಾರ ಜಹಗೀರುಗಳನ್ನು ನೀಡುತ್ತಿತ್ತು. ಕ್ರೈಸ್ತ ಮಠಗಳಿಗೂ ದಾನದತ್ತಿಗಳನ್ನು ನೀಡಲಾಗುತ್ತಿತ್ತು.

ಬೈಜಾಂಟೀಯನ್ ಸೈನ್ಯ ಶಿಸ್ತಿಗೆ ಹೆಸರಾಗಿತ್ತು. ಸಮರ ವಿಜ್ಞಾನದ ಅಧ್ಯಯನಕ್ಕೆ ಹೆಚ್ಚಿನ ಗಮನ ನೀಡಲಾಗುತ್ತಿತ್ತು. ದೇಹಬಲದ ಜೊತೆಗೆ ಬುದ್ಧಿಯ ಉಪಯೋಗ ಮುಖ್ಯ ಎಂಬುದು ಅಂದಿನ ಅಭಿಪ್ರಾಯ. ನೌಕಾದಳದ ಆಡಳಿತಕ್ಕೂ ಗಮನ ಕೊಡಲಾಯಿತು. ವಿದೇಶ ವ್ಯವಹಾರ ಬೈಜಾಂಟೀಯನ್ ಸರ್ಕಾರದ ಒಂದು ಪ್ರಮುಖ ಸಾಧನ. ಅನಾಗರಿಕ ಜನಾಂಗದವರೊಡನೆ ಮದುವೆ ಮಾಡಿಕೊಳ್ಳುವುದರ ಮೂಲಕ ಅವರ ಮೇಲೆ ಪ್ರಭಾವ ಬೀರುವ ತಂತ್ರವನ್ನು ಬಳಸಲಾಯಿತು. ರಾಜತಂತ್ರದ ಸೂತ್ರಗಳನ್ನು ರಚಿಸಲಾಯಿತು.

ಸಾಮ್ರಾಜ್ಯದಲ್ಲಿ ಚರ್ಚು ಬಹುಮುಖ್ಯ ಸಂಸ್ಥೆಯಾಗಿತ್ತು. ಚಕ್ರವರ್ತಿಗಳು ಅದಕ್ಕೆ ತಲೆಬಾಗಬೇಕಾಗಿತ್ತು. ಸಾಮಾನ್ಯವಾಗಿ ಚಕ್ರವರ್ತಿ ಚರ್ಚಿನ ರಕ್ಷಕನಾಗಿದ್ದು ಅದರ ಸಂಪ್ರದಾಯವನ್ನು ಎತ್ತಿ ಹಿಡಿಯುತ್ತಿದ್ದ. ಚರ್ಚು ಮತ್ತು ಸರ್ಕಾರದ ನಡುವೆ ಸ್ಪರ್ಧೆಯಿರದೆ ಸಾಮರಸ್ಯ ವಿದ್ದಿತು. ಚರ್ಚಿನ ಆಡಳಿತದಲ್ಲಿ ಡಯೋನೀಸ್‌ಗಳೆಂಬ ವಿಭಾಗಗಳೂ ಪೇಟ್ರಿಯಾರ್ಕ್‌ಗಳೆಂಬ ಅಧಿಕಾರ ವರ್ಗಗಳೂ ಇದ್ದವು. ರೋಮನ್ ಮತ್ತು ಗ್ರೀಕ್ ಸಂಪ್ರದಾಯದ ಚರ್ಚುಗಳನ್ನು ಒಂದು ಗೂಡಿಸುವ ಪ್ರಯತ್ನಗಳು ವಿಫಲವಾದವು. ಲ್ಯಾಟಿನ್‌ಗಿಂತ ಗ್ರೀಕ್ ಭಾಷೆಯನ್ನು ಚರ್ಚಿನ ವ್ಯವಹಾರಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಕಾನ್‌ಸ್ಟಾಂಟಿನೋಪಲ್ ನಗರದ ಪೇಟ್ರಿಯಾರ್ಕ್ ಬೈಜಾಂಟೀಯನ್ ಚರ್ಚಿನ ಮುಖಂಡನಾಗಿದ್ದ. ಚರ್ಚಿನ ಮುಖ್ಯಸ್ಥನಾಗಿ ಚಕ್ರವರ್ತಿಗೆ ಕಿರೀಟಧಾರಣೆ ಮಾಡುವ ಅಧಿಕಾರ ಅವನಿಗಿತ್ತು. ಆತನ ಪ್ರಭಾವ ಅಧಿಕವಾಗಿದ್ದು ಬೇಕಾದರೆ ಚಕ್ರವರ್ತಿಗೇ ಬಹಿಷ್ಕಾರ ಹಾಕಬಹುದಾಗಿತ್ತು. 4ನೆಯ ಮದುವೆ ಮಾಡಿಕೊಂಡಿದ್ದರಿಂದ 6ನೆಯ ಲಿಯೋ ಚಕ್ರವರ್ತಿಯನ್ನು ಬಹಿಷ್ಕರಿಸಲಾಯಿತು. ಸಂಪ್ರದಾಯ ಶಿಸ್ತುಗಳನ್ನು ಕಾಪಾಡಿಕೊಂಡು ಬರುವುದು ಪೇಟ್ರಿಯಾರ್ಕ್‌ನ ಕರ್ತವ್ಯವಾಗಿದ್ದಿತು. ದಾನ ದತ್ತಿಗಳ ಮೂಲಕ ಚರ್ಚಿಗೆ ಹೆಚ್ಚಿನ ಜಮೀನು ಸೇರಿದ್ದಿತು. ಚರ್ಚಿನ ಕೆಲಸಕ್ಕೆ ಅನೇಕ ದರ್ಜೆಯ ಪುರೋಹಿತ ವರ್ಗದವರನ್ನು ನೇಮಿಸಲಾಗಿತ್ತು.

ಬೈಜಾಂಟೀಯನ್ ಸಮಾಜ ವೈವಿಧ್ಯಮಯವಾದದ್ದು. ಕ್ರಿಶ್ಚಿಯನ್ ಸಾಮ್ರಾಜ್ಯದ ಚೌಕಟ್ಟು ಎಲ್ಲ ಜನಾಂಗದವರನ್ನು ಬಂಧಿಸಿರುವ ಶಕ್ತಿಯಾಗಿದ್ದಿತು. ಗ್ರೀಕೊ–ರೋಮನ್ ಪರಂಪರೆಯ ಮೇಲೆ ಸಮಾಜದ ರಚನೆ ರೂಪಗೊಂಡಿದ್ದಿತು. ಏಷ್ಯದ ಸಂಸ್ಕೃತಿಗಳ ಪ್ರಭಾವವನ್ನು ಈ ಸಮಾಜದ ಮೇಲೆ ಗುರುತಿಸಬಹುದು. ಕಾನ್‌ಸ್ಟಾಂಟಿನೋಪಲ್ ನಗರ ಆಯಕಟ್ಟಿನ ಸ್ಥಳದಲ್ಲಿ ಇದ್ದುದರಿಂದ ಅದು ಪ್ರಪಂಚದ ವ್ಯಾಪಾರದ ಕೇಂದ್ರವಾಗಿತ್ತು. ಬೈಜಾಂಟೀಯನ್ ನಾಣ್ಯ ಅಂತಾರಾಷ್ಟ್ರೀಯ ನಾಣ್ಯವಾಗಿತ್ತು. ಸಾಮ್ರಾಜ್ಯದ ಐಶ್ವರ್ಯ, ಪ್ರಭಾವ ಹೆಚ್ಚಿತ್ತು. ಕಲೆ, ಸಾಹಿತ್ಯ, ವಿದ್ಯಾಭ್ಯಾಸಗಳು ಶ್ರೀಮಂತ ವರ್ಗದವರಿಂದ ಪೋಷಿಸಲ್ಪಟ್ಟಿತ್ತು. ಬೈಜಾಂಟೀಯನ್

ಪಂಡಿತರು ಗ್ರೀಕ್ ಸಾಹಿತ್ಯವನ್ನು ಕಾಪಾಡಿಕೊಂಡು ಬಂದರು. ಮುಂದೆ ಇವರೇ ಯುರೋಪಿನ ಪುನರುಜ್ಜೀವನಕ್ಕೆ (15ನೆಯ ಶತಮಾನ) ತಳಹದಿ ಹಾಕಿದರು. ಬೈಜಾಂಟೀಯಸ್ ಆಡಳಿತದ ಸಂಪ್ರದಾಯಗಳು ಮುಂದೆ ಯುರೋಪಿನ ಅನೇಕ ಜನಾಂಗದವರಿಗೆ ಮಾದರಿಯಾದವು. ಎಲ್ಲಕ್ಕಿಂತ ಮಿಗಿಲಾಗಿ ಈ ಚಕ್ರಾಧಿಪತ್ಯ ಮಧ್ಯಕಾಲೀನ ಯುಗದಲ್ಲಿ ಮುಸ್ಲಿಮರ ಧಾಳಿಯಿಂದ ಗ್ರೀಕೋ–ರೋಮನ್ ಸಂಸ್ಕೃತಿಯನ್ನು ಸಂರಕ್ಷಿಸಿತು. (ಎಸ್.ಕೆ.ಎಸ್.)

**ಬೈಬಲ್:** ಕ್ರೈಸ್ತರ ಪವಿತ್ರ ಗ್ರಂಥ. ವಾಸ್ತವವಾಗಿ 72 ಗ್ರಂಥಗಳ ಸಂಪುಟ. ಕೆಥೊಲಿಕರಲ್ಲದ ಕ್ರೈಸ್ತ ಪಂಥಗಳು ಕೇವಲ 66 ಗ್ರಂಥಗಳಷ್ಟನ್ನೇ ಬೈಬಲಿನ ಪ್ರಮಾಣ ಗ್ರಂಥಗಳೆಂದು ಸ್ವೀಕರಿಸುತ್ತವೆ; ಉಳಿದ ಗ್ರಂಥಗಳನ್ನು ಅಪಾಕ್ರಿಫ ಎಂದು ಕರೆಯುತ್ತಾರೆ. ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಬೈಬಲಿನ ಎರಡು ಭಾಗಗಳು. ಇವು ಕ್ರಮವಾಗಿ ಪ್ರ.ಶ.ಪೂ. ಹಾಗೂ ಕ್ರಿಸ್ತನ ಮತ್ತು ತರುವಾಯದ ಅವಧಿಗೆ ಸಂಬಂಧಿಸುತ್ತವೆ.

ಮೂಲತಃ ಹಳೆಯ ಒಡಂಬಡಿಕೆಯ ಹೆಚ್ಚಿನ ಭಾಗವನ್ನು ಹೀಬ್ರು ಭಾಷೆಯಲ್ಲೂ ಉಳಿದ ಸ್ವಲ್ಪಭಾಗ ಮತ್ತು ಹೊಸ ಒಡಂಬಡಿಕೆಯನ್ನು ಗ್ರೀಕ್ ಭಾಷೆಯಲ್ಲೂ ಬರೆಯಲಾಯಿತು. ಬೈಬಲಿನ ವಿವಿಧ ಗ್ರಂಥಗಳ ಕರ್ತೃ ಮತ್ತು ಕಾಲಗಳ ಬಗೆಗೆ ಸ್ಪಷ್ಟ ತಿಳಿವಳಿಕೆ ಇಲ್ಲ. ಕೆಲವು ಕರ್ತೃಗಳ ಹೆಸರು ಮತ್ತು ಕಾಲ ಸಾಕಷ್ಟು ಸ್ಪಷ್ಟವೇ ಇವೆ. ಉದಾಹರಣೆಗೆ, ಹೊಸ ಒಡಂಬಡಿಕೆಯ ಪತ್ರಗಳ ಕರ್ತೃ ಪೌಲ್. ಆದರೆ ಹಲವು ಸಂದರ್ಭಗಳಲ್ಲಿ ಒಂದು ಗ್ರಂಥವನ್ನು ಬರೆದವ ಅದರ ಕರ್ತೃವೆಂದು ಭಾವಿಸಲಾಗಿದ್ದವನ ಶಿಷ್ಯನೋ ಶಿಷ್ಯ ಪರಂಪರೆಯವನೋ ಆಗಿರಬಹುದು. ಉದಾಹರಣೆಗೆ ಜಾನ್ ಬರೆದುದು ಎಂದು ಭಾವಿಸಲಾದ ಪ್ರಕಟಣೆ ಗ್ರಂಥ ಮೂಲಭೂತವಾಗಿ ಜಾನನ ಪರಂಪರೆಯದೇ ಆಗಿದ್ದರೂ ಇದರ ಕರ್ತೃವೂ ಜಾನನ ಸುವಾರ್ತೆಯ ಮತ್ತು ಪತ್ರಗಳ ಕರ್ತೃವೂ ಒಂದೇ ವ್ಯಕ್ತಿ ಎನ್ನಲು ಆಗುವುದಿಲ್ಲ. ಐಸಾಯ ದೀರ್ಘದರ್ಶಿಯ (ಪ್ರಾಫೆಟ್) ಗ್ರಂಥದ ಹಲವು ಭಾಗಗಳನ್ನು ಅವನ ಶಿಷ್ಯರು ಸೇರಿಸಿದುದು ಎಂದು ತಿಳಿದಿದೆ ಇತ್ಯಾದಿ. ಇನ್ನು ಕೆಲವು ಗ್ರಂಥಗಳು, ಆಗಲೇ ರೂಪುಗೊಂಡು ಪ್ರಚಲಿತವಿದ್ದ ಹಲವು ಮೌಖಿಕ ಅಥವಾ ಲಿಖಿತ ಸಂಪ್ರದಾಯಗಳ ಜೋಡಣೆಯಾಗಿವೆ. ಹೀಗೆ ಪ್ರ.ಶ.ಪೂ.10ರಿಂದ 6ನೆಯ ಶತಮಾನದತನಕ ಬೇರೆ ಬೇರೆ ಅವಧಿಗಳಲ್ಲಿ ಬೇರೆ ಸ್ಥಳಗಳಲ್ಲಿ ರೂಪುಗೊಂಡ ನಾಲ್ಕು ಸಂಪ್ರದಾಯಗಳು ಹಲವು ಬಗೆಗಳಲ್ಲಿ ಮಿಳಿತಗೊಂಡು ಹಳೆಯ ಒಡಂಬಡಿಕೆಯ ಮೊದಲ ಐದು ಗ್ರಂಥಗಳು ಮೈದಳೆದುವು. ಹೊಸ ಒಡಂಬಡಿಕೆಯ ಗ್ರಂಥಗಳ ಲೇಖಕರು ಅಥವಾ ಸಂಪಾದಕರು ಯೇಸುವಿನ ಶಿಷ್ಯರು ಅಥವಾ ಕ್ರೈಸ್ತಧರ್ಮದ ಮೊದಲ ಅನುವರ್ತಿಗಳು. ಹಳೆಯ ಒಡಂಬಡಿಕೆಯ ಗ್ರಂಥಗಳ ಲೇಖಕರು ಅಥವಾ ಸಂಪಾದಕರು ಇಸ್ರೇಲ್ ಜನಾಂಗದ ಧಾರ್ಮಿಕ ನಾಯಕರು ಅಥವಾ ಶ್ರದ್ಧಾಳುಗಳು. ಪ್ರ.ಶ. ಮೊದಲನೆಯ ಶತಮಾನದೊಳಗೆ ಹೊಸ ಒಡಂಬಡಿಕೆಯ ಗ್ರಂಥಗಳು ಈಗಿರುವ ರೂಪಕ್ಕೆ ಬಂದಿದ್ದುವು. ಹಳೆಯ ಒಡಂ ಬಡಿಕೆಯ ಘಟನೆಗಳು (ಲೋಕಸೃಷ್ಟಿಯ ವಿಚಾರವನ್ನುಳಿದು) ಪ್ರ.ಶ.ಪೂ.ಸು. 19ನೆಯ ಶತಮಾನದಿಂದ ಆರಂಭವಾಗುತ್ತವೆ. ಆದರೆ ಅವು ಲಿಖಿತರೂಪಕ್ಕೆ ಬಂದಿರುವುದು ಪ್ರ.ಶ.ಪೂ.10ನೆಯ ಶತಮಾನದಿಂದೀಚೆಗೆ.



ಬೈಬಲ್‌ನ ಮುಖಪುಟ

ಹಳೆಯ ಒಡಂಬಡಿಕೆಯ ಗ್ರಂಥಗಳಲ್ಲಿ ಮೊದಲು ಲೋಕಸೃಷ್ಟಿಯ ಪ್ರಸ್ತಾಪವಿದೆ. ಅನಂತರದ ಗ್ರಂಥಗಳಲ್ಲಿ, ಇಸ್ರೇಲ್ ಜನತೆ ರೂಪುಗೊಂಡು, ಅವರನ್ನು ಪ್ರತ್ಯೇಕವಾಗಿ ತನ್ನ ಜನತೆ ಎಂದು ದೇವರು ಆಯ್ಕೆ ಮಾಡಿದುದು, ಅವರು ತನಗೆ ನಿಷ್ಠೆ ತೋರಿಸಬೇಕು, ಅದಕ್ಕೆ ತಾನು ನೀಡುವ ಪ್ರತಿಫಲ ಏನು ಇವನ್ನು ಕುರಿತ ವಿಚಾರವುಂಟು. ಅನೇಕ ವೇಳೆ ಇಸ್ರೇಲ್ ಜನ ದೇವರನ್ನು ಮರೆತು ಅನ್ಯ ದೈವಗಳ ಮೊರೆಹೊಕ್ಕಾಗ ಮತ್ತು ಅನಾಚಾರದಲ್ಲಿ ತೊಡಗಿದಾಗ ನ್ಯಾಯಾಧೀಶರು ಮತ್ತು ದೀರ್ಘದರ್ಶಿಗಳು ಅವರ ತಪ್ಪುಗಳನ್ನು ಖಂಡಿಸಿ ಅವರು ಸರಿದಾರಿಗೆ ಬರುವಂತೆ ಮಾಡಿದರು. ಇದಲ್ಲದೆ ಜ್ಞಾನಸಾಹಿತ್ಯವೆಂಬ (ವಿಸ್ಡಮ್ ಲಿಟರೇಚರ್) ವರ್ಗದ ಗ್ರಂಥಗಳು ಸಹ ಹಳೆಯ ಒಡಂಬಡಿಕೆಯಲ್ಲಿವೆ. ಪುರಾತನ ಪ್ರಾಚ್ಯದಲ್ಲಿ ಬಳಕೆಯಲ್ಲಿದ್ದ ಈ ಸಾಹಿತ್ಯ ಪ್ರಕಾರದ ವೈಶಿಷ್ಟ್ಯವನ್ನು ಬೈಬಲಿನ ಜ್ಞಾನಸಾಹಿತ್ಯ ಗ್ರಂಥಗಳಲ್ಲಿಯೂ ಕಾಣಬಹುದು. ಬದುಕಿನ ಜಂಜಾಟಗಳಿಗೆ ಮಾನವನ ಅನುಭವವೇ ಪರಿಹಾರ ಕೊಡುತ್ತದೆ. ಅಲ್ಲದೆ ತತ್ತ್ವಧರ್ಮಗಳಲ್ಲಿ ಕೀರ್ತನೆಗಳು (ಸಾಲ್ಮ್ಸ್), ಪರಮಗೀತೆ (ಸಾಂಗ್ ಆಫ್ ಸಾಂಗ್ಸ್) ಎಂಬ ಸುಂದರ ಕಾವ್ಯವೂ ಹಳೆಯ ಒಡಂಬಡಿಕೆಯಲ್ಲಿ ಉಂಟು. ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳು ಯೇಸುವಿನ ಜೀವನ ಮತ್ತು ಬೋಧನೆಗಳನ್ನು ನಿರೂಪಿಸುತ್ತವೆ. ಇವುಗಳಲ್ಲಿ ಮೊದಲ ಮೂರು ಸುವಾರ್ತೆಗಳು ಪರಸ್ಪರ ಸಂಬಂಧ ವಿಶೇಷಗಳ ದೆಸೆಯಿಂದ ಅವು ಸಿನಾಪ್ಟಿಕ್ ಸುವಾರ್ತೆಗಳು ಎನಿಸಿವೆ. ಅಪೋಸ್ತಲರ ಕೃತಿಗಳಲ್ಲಿ ನವಜಾತ ಕ್ರೈಸ್ತ ಸಭೆಯ (ಕ್ರಿಶ್ಚಿಯನ್ ಚರ್ಚ್) ಚಿತ್ರಣವುಂಟು. 1 ಸೇಂಟ್ ಪೌಲ್ ಮತ್ತು ಇನ್ನು ಕೆಲವರು ಹೊಸತಾಗಿ ಸ್ಥಾಪಿತವಾದ ಕ್ರೈಸ್ತ ಸಮುದಾಯಗಳಿಗೆ ಒಂದು ನಿರ್ದಿಷ್ಟ ಸಮಸ್ಯೆಯನ್ನು ಕುರಿತೋ ಒಟ್ಟು ಬೋಧನಾತ್ಮಕವಾಗಿಯೋ ಬರೆದ ಪತ್ರಗಳೇ ಹೊಸ ಒಡಂಬಡಿಕೆಯ ಪತ್ರಗಳು. ವಿರೋಧಗಳನ್ನು ಎದುರಿಸುತ್ತಿದ್ದ ಕ್ರೈಸ್ತ ಸಭೆಯಲ್ಲಿ ಹುರುಪು ತುಂಬಲು ಬರೆದ ವಿಶಿಷ್ಟ ಸಾಹಿತ್ಯ ಪ್ರಕಾರದ ಗ್ರಂಥವೇ ಪ್ರಕಟಣೆ. ದೇವರ ಕಡೆಯವರು ಸದ್ಯದಲ್ಲಿ ಹಿಂಸೆಗೊಳಗಾದರೂ ಅಂತಿಮವಾಗಿ ವಿಜಯವನ್ನೂ ಮಹಿಮೆಯನ್ನೂ ಪಡೆಯುತ್ತಾರೆ ಎಂದು ಇದರಲ್ಲಿ ಹೇಳಿದೆ.

ಇಸ್ರೇಲಿನ ವೃತ್ತಾಂತವೂ ಯೇಸುವಿನ ಹಾಗೂ ಕ್ರೈಸ್ತಸಭೆಯ ವೃತ್ತಾಂತವೂ ಚಾರಿತ್ರಿಕವೇ. ಆದರೆ ಅವು ನಾವು ತಿಳಿದಿರುವಂಥ ಚರಿತ್ರೆ ಅಂದರೆ ವಾಸ್ತವ ಘಟನೆಗಳ ಕಾಲಕ್ರಮಾನುಗತ ದಾಖಲೆ ಅಲ್ಲ. ಬೈಬಲಿನ ಲೇಖಕರು ತಮ್ಮ ಜನತೆಯ ಚರಿತ್ರೆಯೆಂದರೆ ದೇವರು ಮತ್ತು ತಮ್ಮ ನಡುವೆ ಸ್ಥಾಪಿಸಲ್ಪಟ್ಟ ಒಪ್ಪಂದದ ದೇವರ ಆಹ್ವಾನ ಮತ್ತು ಅದಕ್ಕೆ ತಮ್ಮ ಉತ್ತರ, ದೇವರ ವಾಗ್ದಾನ ಮತ್ತು ಯೇಸುಕ್ರಿಸ್ತನಲ್ಲಿ ಅದರ ನೆರವೇರುವಿಕೆ ಎಂದೇ ಅರ್ಥಮಾಡಿಕೊಂಡು, ಈ ದೃಷ್ಟಿಯಿಂದ ತಮ್ಮ ಜನತೆಯ ಮತ್ತು ಕ್ರೈಸ್ತಸಭೆಯ ವೃತ್ತಾಂತವನ್ನು ಪ್ರತಿಪಾದಿಸಿದರು. ಈ ಪ್ರತಿಪಾದನೆಯೇ ಅವರಿಗೆ ಮುಖ್ಯವಾಯಿತಲ್ಲದೆ ನಿರ್ದಿಷ್ಟ ದೇಶ ಕಾಲ ಘಟನೆಗಳ ಖಚಿತತೆಗಳಲ್ಲ. ಹಳೆಯ ಹಾಗೂ ಹೊಸ ಒಡಂಬಡಿಕೆಯ ವೃತ್ತಾಂತಗಳ ಚಾರಿತ್ರಿಕತೆಗೆ ಲೌಕಿಕ ಸಾಹಿತ್ಯದ ಬಾಹ್ಯ ಆಧಾರಗಳು ಖಂಡಿತ ಇವೆ. ಆದರೆ ಲೌಕಿಕ ಚರಿತ್ರೆಗೂ ಬೈಬಲಿನ ಧಾರ್ಮಿಕ ಚರಿತ್ರೆಗೂ ಕಂಡುಬರುವ ವಿರೋಧಾಭಾಸಗಳು. ಪುನರಾವರ್ತನೆಗಳು ಇತ್ಯಾದಿಗಳನ್ನು ಅರ್ಥವಿಸುವುದು ಮೇಲೆ ಹೇಳಿದ ದೃಷ್ಟಿಯಿಂದ ಅವನ್ನು ನೋಡಿದರೆ ಮಾತ್ರ ಸಾಧ್ಯವಾಗುತ್ತದೆ.

ಬೈಬಲ್ ಅನುವಾದ: ಬೈಬಲ್ ಭಾಗಗಳು ಒಂದು ಸಾವಿರಕ್ಕೂ ಹೆಚ್ಚು ಭಾಷೆಗಳಿಗೂ ಸಮಗ್ರ ಬೈಬಲ್ ಇನ್ನೂರಕ್ಕೂ ಹೆಚ್ಚಿನ ಭಾಷೆಗಳಿಗೂ ಅನುವಾದಗೊಂಡಿವೆ. ಬೈಬಲಿನ ಮೊತ್ತಮೊದಲ ಕನ್ನಡಾನುವಾದ 1809ರಲ್ಲಿ ಆಯಿತು. ಆ ವರ್ಷ ಬಂಗಾಲದ ಶ್ರೀರಾಮಪುರದಲ್ಲಿ ವಿಲಿಯಮ್ ಕೇರಿ ಸಿದ್ಧಪಡಿಸಿದ 4 ಸುವಾರ್ತೆಗಳ ಅನುವಾದ 1812ರ ಬೆಂಕಿ ಆಕಸ್ಮಿಕದಲ್ಲಿ ನಷ್ಟವಾಯಿತು. 1823ರಲ್ಲಿ ಅವೇ ಸುವಾರ್ತೆಗಳ ಅನುವಾದವನ್ನು ಸಿದ್ಧಪಡಿಸಿ ಕೇರಿ ಪ್ರಾರಂಭಿಸಿದ ಈ ಆವೃತ್ತಿ ಲಭ್ಯವಿದೆ.

ಬೈಬಲಿನ ಸಂದೇಶ: ದೇವರು ಪ್ರೀತಿಯೇ ಆಗಿರುತ್ತಾನೆ. ಇದೇ ಬೈಬಲಿನ ಮುಖ್ಯ ಆಶಯ. ಈ ಪ್ರೀತಿ ಶ್ರೀಮಂತ, ಸಮೃದ್ಧ, ಶಾಶ್ವತ ಹಾಗೂ ಭಾವಾರ್ದ್ರವಾದುದು. ಚಾರಿತ್ರಿಕ ವ್ಯಕ್ತಿಯಾದ ಯೇಸುಕ್ರಿಸ್ತನಲ್ಲಿ ಇದು ಪರಿಪೂರ್ಣವಾದ ಮೂರ್ತ ಸ್ವರೂಪದಲ್ಲಿ ಕಾಣಿಸಿಕೊಂಡಿತು. ಮಾನವನ ಮೇಲೆ ದೇವರು ಇಟ್ಟಿರುವ ಪ್ರೀತಿಯನ್ನು ದಿವ್ಯದರ್ಶಿಗಳ ವಚನಗಳು ವರ್ಣಿಸುತ್ತವೆ. ಪಶ್ಚಾತ್ತಾಪವಿಲ್ಲದ ತೊಂಬತ್ತೊಂಬತ್ತು ನೀತಿವಂತರಿಗಿಂತ ಪಶ್ಚಾತ್ತಾಪ ಪಡುವ ಒಬ್ಬ ಪಾಪಿಷ್ಠನನ್ನು ಕಂಡರೆ ಸ್ವರ್ಗದಲ್ಲಿ ಹೆಚ್ಚು ಸಂಭ್ರಮವಿರುತ್ತದೆ ಎಂದು ಯೇಸು ಹೇಳಿದ, ಈ ಪ್ರೀತಿಯಿಂದ ಆತ ಮನುಷ್ಯರ ಅಗತ್ಯಗಳನ್ನು ಪೂರೈಸುತ್ತಾನೆ. ಅತ್ಯಂತ ಆತ್ಮೀಯತೆ, ಕಳಕಳಿ, ಮಮತೆಗಳಿಂದ ಅವರನ್ನು ನಡೆಸಿಕೊಳ್ಳುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ ತನಗೆ ನಿಷ್ಠೆಯನ್ನು ತೋರಿಸುವುದೆಂದರೆ ತಾನು ವಿಧಿಸಿದ ಈ ಹತ್ತು ಆಜ್ಞೆಗಳನ್ನು ಪಾಲಿಸುವುದು ಎಂದು ದೇವರು ಹೇಳಿದ್ದ. ಏಕೈಕ ನಿಜ ದೇವರನ್ನು ಆರಾಧಿಸಬೇಕು, ಅವನ ಹೆಸರನ್ನು ವ್ಯರ್ಥವಾಗಿ ಬಳಸಬಾರದು, ಅವನಿಗೆ ಪೂಜ್ಯವಾಗಿದ್ದ ದಿನವನ್ನು ಯೋಗ್ಯವಾಗಿ ಆಚರಿಸಬೇಕು; ತಂದೆತಾಯಿಗಳನ್ನು ಗೌರವಿಸಬೇಕು, ಕೊಲಬೇಡ, ವ್ಯಭಿಚಾರ ಮಾಡಬೇಡ, ಕಳಬೇಡ, ಸುಳ್ಳು ಸಾಕ್ಷಿ ಹೇಳಬೇಡ, ಪರರ ಸ್ವತ್ತನ್ನು ಬಯಸಬೇಡ, ಪರರ ಪತ್ನಿಯನ್ನು ಬಯಸಬೇಡ. ಇವೆಲ್ಲ ಎರಡು ಮುಖ್ಯ ಆಜ್ಞೆಗಳಲ್ಲಿ ಅಡಕವಾಗುತ್ತವೆ. ದೇವರನ್ನು ಪ್ರೀತಿಸಬೇಕು ಮತ್ತು ತನ್ನಂತೆ ಪರರನ್ನು ಪ್ರೀತಿಸಬೇಕು.

ಹಳೆಯ ಒಡಂಬಡಿಕೆಯಲ್ಲಿ ಹೇಳಿರುವುದನ್ನೇ ಪೂರ್ಣಗೊಳಿಸಲು ಬಂದವನು ತಾನು ಎಂದು ಹೇಳಿಕೊಂಡಿದ್ದ ಯೇಸುಕ್ರಿಸ್ತ, ತನ್ನನ್ನು ಪ್ರೀತಿಸುವುದೆಂದರೆ ತಾನು ವಿಧಿಸಿದ ಆಜ್ಞೆಗಳನ್ನು ಪಾಲಿಸುವುದು ಎಂದು ಸ್ಪಷ್ಟವಾಗಿ ಹೇಳಿದ್ದ. ನೀವು ನನ್ನನ್ನು ಪ್ರೀತಿಸುವುದಾದರೆ ನಾನು ವಿಧಿಸಿದ ಆಜ್ಞೆಗಳನ್ನು ಪಾಲಿಸುವಿರಿ ಎಂದು ಹೇಳುವ ಹಳೆಯ ಒಡಂಬಡಿಕೆಯ ಹತ್ತು ಆಜ್ಞೆಗಳೂ ಸೇರಿದ್ದವು ಎನ್ನುವುದರಲ್ಲಿ ಸಂದೇಹವಿಲ್ಲ. ಅವಲ್ಲದೆ ಹೊಸದಾದ ಒಂದು ಆಜ್ಞೆಯನ್ನು ಯೇಸು ವಿಧಿಸಿದ್ದ. ಹೊಸದೊಂದು ಆಜ್ಞೆಯನ್ನು ನಾನು ನಿಮಗೆ ಕೊಡುತ್ತೇನೆ, ಒಬ್ಬರನ್ನೊಬ್ಬರು ಪ್ರೀತಿಸಿ; ನಾನು ನಿಮ್ಮನ್ನು ಪ್ರೀತಿಸಿದಂತೆಯೇ ನೀವು ಒಬ್ಬರನ್ನೊಬ್ಬರು ಪ್ರೀತಿಸಿರಿ. ಹಳೆಯ ಒಡಂಬಡಿಕೆಯ ಹತ್ತು ಆಜ್ಞೆಗಳಿಗಿಂತ ಹೆಚ್ಚಿನದನ್ನು ಪ್ರೀತಿಗೆ ಸಂಬಂಧಿಸಿದ ಈ ಆಜ್ಞೆ ಅಪೇಕ್ಷಿಸುತ್ತದೆ ಮತ್ತು ಅವನ್ನು ಪರಿಪೂರ್ಣಗೊಳಿಸುತ್ತದೆ. ಪ್ರೀತಿಯನ್ನು ಅನುಷ್ಠಾನಕ್ಕೆ ತರುವುದರಿಂದ ಮಾನವನ ಆಂತರ್ಯ ಎಲ್ಲ ಬಂಧನಗಳಿಂದ ಮುಕ್ತಗೊಳ್ಳುತ್ತದೆ, ಅವನು

ಪವಿತ್ರಾತ್ಮನಲ್ಲಿ ನೆಲೆಗೊಳ್ಳುತ್ತಾನೆ, ದೈಹಿಕ ವ್ಯಾಮೋಹದ ಕೆಟ್ಟ ಪರಿಣಾಮಗಳನ್ನು ವರ್ಜಿಸುತ್ತಾನೆ. ಪ್ರೀತಿ, ಆನಂದ, ನೆಮ್ಮದಿ, ಸಹನೆ, ದಯೆ, ಒಳ್ಳೆಯತನ, ನಿಷ್ಠೆ, ಸೌಜನ್ಯ, ಸಂವಾದಿ ಸದ್ಗುಣ ಸಂಪನ್ನನಾಗುತ್ತಾನೆ. ಈ ಬಗೆಯ ಆತ್ಮಶುದ್ಧಿ ಭಕ್ತನನ್ನು ಆಧ್ಯಾತ್ಮಿಕ ಪರಿಪೂರ್ಣತೆಯತ್ತ ನಡೆಸುತ್ತದೆ. ಲೌಕಿಕದಲ್ಲಿ ನೀತಿವಂತನಾಗಿದ್ದು ಪುರಾತತ್ತ್ವದ ಅತಿ ಸನಿಹದಲ್ಲಿಯೇ ಅವನು ಬಾಳುತ್ತಾನೆ. ಪ್ರೀತಿಯೇ ಇದಕ್ಕೆಲ್ಲ ಮೂಲ. ನನ್ನ ಪ್ರೀತಿಯಲ್ಲಿ ನೆಲೆಗೊಂಡು ಇರಿ ಎಂದು ಯೇಸುಕ್ರಿಸ್ತ ಆಹ್ವಾನಿಸಿದುದೇ ಬೈಬಲಿನ ಸಂದೇಶ. (ಇ.ಎನ್.ಎಸ್.ಜಿ.)

**ಬೋರಬದೂರ್:** ಇಂಡೊನೇಷ್ಯದ ಮಧ್ಯ ಜಾವದ್ವೀಪದಲ್ಲಿರುವ ಒಂದು ಪ್ರಸಿದ್ಧ ಬೌದ್ಧ ಸ್ಮಾರಕ ಕ್ಷೇತ್ರ, ಮಾಗಲಾಂಗಿನ ದಕ್ಷಿಣಕ್ಕೆ ಸು.16 ಕಿಮೀ ದೂರದಲ್ಲೂ ಜಾಕ್‍ಯಕಾರ್ತದ ವಾಯವ್ಯಕ್ಕೆ ಸು.28ಕಿಮೀ ದೂರದಲ್ಲೂ ಇದೆ. ಈ ಬೌದ್ಧಸ್ತೂಪ ಸು.800–850ರ ಮಧ್ಯದಲ್ಲಿ ಸುಮಾತ್ರದ ಶೈಲೇಂದ್ರ ರಾಜಮನೆತನದವರು ನಿರ್ಮಿಸಿದ್ದೆಂದು ಹೇಳುವರು. ಹಾಗೆಯೇ ಈ ಸ್ತೂಪವನ್ನು ಸು. 825ರಲ್ಲಿ ಪ್ರಾರಂಭಿಸಿ ಮೂವತ್ತು ವರ್ಷಗಳಲ್ಲಿ ಕಟ್ಟಿ ಮುಗಿಸಿದರೆನ್ನುವರು. ಭಾರತದ ಸಾಂಚಿ, ಸಾರನಾಥ, ಭಟ್ಟಿಪ್ರೋಲು ಮತ್ತು ನಾಗಾರ್ಜುನ ಕೊಂಡ ಹಾಗೂ ಸನ್ನತಿಗಳ ಸ್ತೂಪಕ್ಕೂ ಬೋರಬದೂರಿನ ಈ ಬೃಹತ್‌ಸ್ತೂಪಕ್ಕೂ ಅನೇಕ ಬಗೆಯಲ್ಲಿ ವ್ಯತ್ಯಾಸ ಇರುವುದನ್ನು ತಜ್ಞರು ಗುರುತಿಸಿದ್ದಾರೆ. ಬೋರಬದೂರಿನ ಸ್ತೂಪ ಮೂಲತಃ ಬುದ್ಧನ ಅವಶೇಷಗಳ ರಕ್ಷಣೆಗೆಂದು ಕಟ್ಟಲ್ಪಟ್ಟ ವೃತ್ತಾಕಾರದ ಮತ್ತು ಎತ್ತರದಲ್ಲಿ

ಬೃಹತ್ ಬೌದ್ಧ ಸ್ತೂಪ

ಅಂಡಾಕಾರದ ಸಮಾಧಿ, ಗುಹಾಂತರ ದೇವಾಲಯ ಹಾಗೂ ವಾಸ್ತು ಪುರುಷ ಮಂಡಲ ಎಂಬ ಮೂರು ವಿಧಾನಗಳನ್ನೂ ಸಮೀಕರಿಸಿ ಕಟ್ಟಿದ ಕಟ್ಟಡ. ಗುಪ್ತರ ಕಾಲದ ಹಾಗೂ ಅನಂತರದ ಭಾರತೀಯ ವಾಸ್ತುಶಿಲ್ಪದ ಪ್ರಭಾವ ಇದರಲ್ಲಿ ಕಂಡುಬರುತ್ತದೆ. ಸುಮಾರು ಸಾವಿರ ವರ್ಷಕ್ಕೂ ಹೆಚ್ಚಾಗಿ ಇವುಗಳ ಮೇಲೆ ಬೆಳೆದುಕೊಂಡಿದ್ದ ಗಿಡಗಂಟೆ ಕಿತ್ತು 1907–11ರಲ್ಲಿ ಡಚ್ ಪುರಾತತ್ತ್ವಶಾಸ್ತ್ರಜ್ಞರು ಹಾಳಾಗಿದ್ದ ಈ ಸ್ತೂಪವನ್ನು ದುರಸ್ತಿ ಮಾಡಿಸಿ ಮತ್ತೆ ಬೆಳಕಿಗೆ ತಂದರು.

ಬೋರಬದೂರಿನ ಸ್ತೂಪದ ಕಟ್ಟಡ ಬೆಟ್ಟದ ತಪ್ಪಲಲ್ಲಿ ನಿರ್ಮಿಸಿರುವುದರಿಂದ ಇದಕ್ಕೆ ನೈಸರ್ಗಿಕ ಸೌಂದರ್ಯ ತಂತಾನೆ ಒಡಗೂಡಿದೆ. ಸ್ತೂಪದ ಅಕ್ಕಪಕ್ಕದಲ್ಲಿ ಹಸುರು ಗದ್ದೆಗಳೂ ಜೀವಂತ ಜ್ವಾಲಾಮುಖಿಗಳೂ ಇವೆ. ಜ್ವಾಲಾಮುಖಿಗಳು ಉಗುಳಿದ ಲಾವಾರಸ ಶಿಲೆಗಳನ್ನೇ ಈ ಸ್ತೂಪವನ್ನು ಕಟ್ಟಲು ಉಪಯೋಗಿಸಿದ್ದಾರೆ. ಒಂದರ ಮೇಲೆ ಒಂದರಂತೆ ಕಿರಿದಾಗುತ್ತ ಹೋಗುವ ಒಂಬತ್ತು ಹಂತಗಳ ಅಧಿಷ್ಠಾನದಲ್ಲಿ ಇದರ ಮೊದಲ ಆರು ಹಂತಗಳು ಚೌಕಾಕಾರವಾಗಿಯೂ ಮೇಲಿನ ಮೂರು ಹಂತಗಳಲ್ಲಿ ವೃತ್ತಾಕಾರವಾಗಿಯೂ ಇವೆ. ಮೇಲ್ಗಡೆ ಮಧ್ಯದಲ್ಲಿ ಘಂಟಾಕೃತಿಯ ಸ್ತೂಪವಿದೆ. ಮೇಲಕ್ಕೆ ಏರಲು ನಾಲ್ಕು ಪಕ್ಕಗಳಲ್ಲೂ ಮೆಟ್ಟಲುಗಳನ್ನು ಮಧ್ಯದಲ್ಲಿ ಕಟ್ಟಿದ್ದಾರೆ. ಪ್ರತಿಯೊಂದು ಚೌಕಾಕಾರದ ಮಾಳಿಗೆಯ ಗೋಡೆಗಳಲ್ಲಿಯ ಗೂಡುಗಳಲ್ಲಿ ಬುದ್ಧನ ಪಂಚರೀತಿಯ ಆರಾಧನಾ ಮೂರ್ತಿಗಳನ್ನು ನಿಲ್ಲಿಸಿದ್ದಾರೆ. ವೃತ್ತಾಕಾರದ ಮಾಳಿಗೆಗಳಲ್ಲಿ ಎಪ್ಪತ್ತೆರಡು ಘಂಟಾಕಾರದ ಕಿರುಸ್ತೂಪಗಳಿವೆ. ಗೋಡೆಗಳ ಮೇಲಿರುವ ಚಿತ್ರಗಳಲ್ಲಿ ನಿರ್ವಾಣ ಸ್ಥಿತಿಗೇರುವ ಹಂತಗಳು, ಜೀವನದಲ್ಲಿಯ ಸುಕೃತ ದುಷ್ಕೃತಿಗಳು, ಬುದ್ಧನ ಜೀವನದ ಚಿತ್ರಗಳು ಮತ್ತು ಜಾತಕಕಥೆಗಳು–ಇವನ್ನು ಬಿಡಿಸಲಾಗಿದೆ. ಇವು ವಿಶೇಷತಃ ಮಹಾಯಾನ ಬೌದ್ಧಪಂಥದ ಧಾರ್ಮಿಕ ಕೃತಿಗಳಿಗೆ ಸಂಬಂಧಿಸಿವೆ. ಸು.500 ಬುದ್ಧಶಿಲ್ಪಗಳೂ 1,300ಕ್ಕೂ ಹೆಚ್ಚಿನ ಶಿಲ್ಪಫಲಕಗಳೂ ಇರುವ ಬೋರಬದೂರಿನ ಸ್ತೂಪ ಭವ್ಯತೆಯ ಅನುಭವವನ್ನು ನೀಡುತ್ತದೆ. ಇದನ್ನು ಯುನೆಸ್ಕೊ ವಿಶ್ವಪರಂಪರೆ ಪಟ್ಟಿಯಲ್ಲಿ ಸೇರಿಸಲಾಗಿದೆ. ಭಾರತದ ಬಿಹಾರ್ ರಾಜ್ಯದಲ್ಲಿಯ ಕೇಸರಿಯ ಎಂಬಲ್ಲಿ ಬೋರಬದೂರ್ ಸ್ತೂಪದಷ್ಟೆ ದೊಡ್ಡದಾಗಿರುವ ಆದರೆ ಜೀರ್ಣವಾದ ಸ್ತೂಪವೊಂದನ್ನು ಸಂರಕ್ಷಿಸಲಾಗಿದೆ. (ಎಸ್.ಜಿ.ವಿ.)

**ಬೋಸ್, ಜಗದೀಶಚಂದ್ರ:** 1858–1937. ಭೌತ ಮತ್ತು ಸಸ್ಯವಿಜ್ಞಾನ ಎರಡ ರಲ್ಲಿಯೂ ಮೂಲಭೂತ ಸಂಶೋಧನೆ ಮಾಡಿ ಅಂತಾರಾಷ್ಟ್ರೀಯ ಮನ್ನಣೆಗಳಿಸಿದ ಮಹಾ ವಿಜ್ಞಾನಿ.

ಇವರು ಬಂಗಾಲದ ಮೈಮೆನ್‌ಸಿಂಗ್ (ಈಗಿನ ಬಾಂಗ್ಲಾ ದೇಶ) ಎಂಬಲ್ಲಿ 1858 ನವೆಂಬರ್ 30ರಂದು ಜನಿಸಿದರು. ತಂದೆ ಭಗವಾನಚಂದ್ರರು ಫರೀದಪುರದಲ್ಲಿ ಉಪವಿಭಾಗಾಧಿಕಾರಿಗಳಾಗಿದ್ದರು. ತಾಯಿ ಗೃಹಿಣಿಯಾಗಿದ್ದು, ವಿಶಾಲಮನೋಭಾವದ ಮಹಿಳೆ. ಜಗದೀಶಚಂದ್ರರೇ ಮುಂದೆ ಬರೆದಂತೆ ತಾವು ಶಾಲಾ ಬಾಲಕರಾಗಿದ್ದಾಗ ಅಸ್ಪೃಶ್ಯಕುಲದ ತಮ್ಮ ಗೆಳೆಯರನ್ನು ಮನೆಗೆ ಕರೆದುಕೊಂಡು ಹೋದಾಗ ಅವರ ತಾಯಿ ಯಾವ ಭೇದವನ್ನು ಮಾಡದೆ ಮಾತೆಯ ಮಮತೆ ತೋರುತ್ತಿದ್ದರಂತೆ. ಆಗ ಇವರ ಮೇಲೆ ವಿಶೇಷ ಪ್ರಭಾವ ಬೀರಿದ ವ್ಯಕ್ತಿ ಇವರ ತಂದೆ. ಮಗು ಜಗದೀಶನನ್ನು ನೋಡಿಕೊಳ್ಳಲು ಸೆರೆಮನೆಯಿಂದ ಬಿಡುಗಡೆಯಾಗಿ ಬಂದಿದ್ದ ಒಬ್ಬ ಡಕಾಯಿತನನ್ನು ನಿಯಮಿಸಿ ಆ ಡಕಾಯಿತನನ್ನು ಸುಧಾರಿಸಿದ ಅಸಾಧಾರಣ ವ್ಯಕ್ತಿ ಭಗವಾನಚಂದ್ರರು.

ಜಗದೀಶಚಂದ್ರ ಬೋಸರು ಕಲ್ಕತ್ತದ ಸೇಂಟ್ ಜೇವಿಯರ್ಸ್ ಕಾಲೇಜಿನಲ್ಲಿ ಓದಿ ಪದವೀಧರರಾದರು. ಆಗಿನ ಇತರ ಪ್ರತಿಭಾಶಾಲಿ ತರುಣರಂತೆ ಇವರು ಕೂಡ ಇಂಗ್ಲೆಂಡಿಗೆ ಹೋಗಿ ಐ.ಸಿ.ಎಸ್ ಪರೀಕ್ಷೆ ಕಟ್ಟಬೇಕೆಂದು ಯೋಚಿಸಿದರು. ಇವರ ತಂದೆಗೆ ಮಗ ತಮ್ಮಂತೆ ಸರಕಾರದ ಗುಲಾಮನಾಗುವುದು ಇಷ್ಟವಾಗಲಿಲ್ಲ. ಮಗನಿಗೆ ವೈದ್ಯಕೀಯ ಅಥವಾ ವಿಜ್ಞಾನ ವೃತ್ತಿ ಸೇರಲು ಸೂಚಿಸಿದರು. ಅದರಂತೆ ಬೋಸರು 1880ರಲ್ಲಿ ಲಂಡನ್ನಿನ ಮೆಡಿಕಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಯಾಗಿ ಸೇರಿದರು. ಮೊದಲನೆಯ ವರ್ಷ ವಿದ್ಯಾಭ್ಯಾಸ ಸುಗಮವಾಗಿ ಕಳೆಯಿತು. ಆದರೆ ಇವರಿಗೆ ಬಾಲಕರಾಗಿದ್ದಾಗ ಅಂಟಿಕೊಂಡಿದ್ದ ಕಾಲಾ ಅಜಾರ್ ಎಂಬ ಜ್ವರ ಇಂಗ್ಲೆಂಡಿನಲ್ಲಿ ಮತ್ತೆ ಮರುಕಳಿಸಿ ಬಾಧಿಸತೊಡಗಿದಾಗ ವೈದ್ಯಕೀಯ ಶಿಕ್ಷಣವನ್ನು ಬಿಟ್ಟು ಅನಿವಾರ್ಯವಾಗಿ ಕೇಂಬ್ರಿಜ್‌ಗೆ ಹೋಗಿ ವಿಜ್ಞಾನದ ವಿದ್ಯಾರ್ಥಿಯಾದರು. 1884ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಲಂಡನ್ ವಿಶ್ವವಿದ್ಯಾಲಯದಿಂದ ಬಿ.ಎಸ್.ಸಿ. ಪದವಿ ಪಡೆದರು (1885).

ತಾಯಿನಾಡಿಗೆ ಮರಳಿದ ಬೋಸ್ ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೌತವಿಜ್ಞಾನದ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. ಅಲ್ಲಿ ಬ್ರಿಟಿಷರ ವರ್ಣಭೇದದ ನೀತಿ ಇವರನ್ನು ಬಹಳವಾಗಿ ಕಾಡಿತು. ಸರಿಸಮಾನ ಸ್ಥಾನಗಳಲ್ಲಿದ್ದ ಬಿಳಿಯ ಪ್ರಾಧ್ಯಾಪಕರ ಮೂರನೆಯ ಎರಡರಷ್ಟು (2/3) ವೇತನ ಮಾತ್ರ ಭಾರತೀಯ ಪ್ರಾಧ್ಯಾಪಕರಿಗೆ ಕೊಡಬೇಕೆಂಬ ನಿಯಮ ಜಾರಿಗೆ ಬಂದಿತ್ತು. ಇವರು ಇದನ್ನು ಪ್ರತಿಭಟಿಸಿ ಸಂಬಳರಹಿತವಾಗಿ ಮೂರು ವರ್ಷಗಳ ಕಾಲ ದುಡಿದರು. ಇದೇ ಅವಧಿಯಲ್ಲಿ ವಿಕ್ರಮಪುರದ ದುರ್ಗಾಮೋಹನದಾಸರ ಮಗಳಾದ ಅಬಲಾರವರೊಡನೆ ಬೋಸರ ವಿವಾಹವಾಯಿತು (1887). ಅಂದಿನ ಕಾಲದಲ್ಲೇ ಅಬಲಾದೇವಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದರೆಂಬ ಸಂಗತಿ ಇಂದು ಅಚ್ಚರಿ ಮೂಡಿಸುವಂತಿದೆ. ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲ್ ಮತ್ತು ವಿದ್ಯಾ ಇಲಾಖೆಯ ನಿರ್ದೇಶಕ ಆಗಿದ್ದ ಬ್ರಿಟಿಷ್ ಅಧಿಕಾರಿ ಬೋಸರ ಪ್ರತಿಭೆ ಮತ್ತು ವ್ಯಕ್ತಿತ್ವ ಗಮನಿಸಿ ಇವರ ಆತ್ಮೀಯ ಮಿತ್ರನಾದ. ಬ್ರಿಟಿಷರಿಂದ ಭಾರತೀಯರಿಗೆ ಆಗುತ್ತಿದ್ದ ಅವಮಾನದ ವಿರುದ್ಧ ಗಳಿಸಿದ ನೈತಿಕ ಜಯದ ಕುರುಹಾಗಿ ಬೋಸರಿಗೆ ಹಿಂದಿನ ಮೂರು ವರ್ಷಗಳ ವೇತನ ಪಾವತಿಯಾಯಿತು.

ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಮೊದಲಿಗೆ ಪ್ರಯೋಗಾಲಯದ ಸೌಕರ್ಯವಿರಲಿಲ್ಲ. ಹಲವು ವರ್ಷಗಳ ಪ್ರಯತ್ನಾನಂತರ ಒಂದು ಸಣ್ಣ ಪ್ರಯೋಗಾಲಯ ಮಂಜೂರಾಯಿತು. ಅಲ್ಲಿಯೇ ಇವರು ಭೌತವಿಜ್ಞಾನದಲ್ಲಿ ಸಂಶೋಧನೆಗಳನ್ನು ಪ್ರಾರಂಭಿಸಿದರು. ಇವರ ಮೆಚ್ಚಿನ ಕ್ಷೇತ್ರ ವಿದ್ಯುತ್ ತರಂಗಗಳದ್ದಾಗಿತ್ತು. ಮ್ಯಾಕ್ಸ್‌ವೆಲ್ಲನ ವಿದ್ಯುತ್‌ಕಾಂತ ಕ್ಷೇತ್ರದ ತತ್ತ್ವಪ್ರಕಟವಾಗಿ ಎರಡು ದಶಕಗಳಾಗಿತ್ತು. ಹರ್ಟ್ಸ್ ಮೊದಲಾಗಿ ಅನೇಕ ಪ್ರಥಮ ದರ್ಜೆಯ ಭೌತವಿಜ್ಞಾನಿಗಳು ವಿದ್ಯುತ್‌ಕಾಂತೀಯ ಅಲೆಗಳ ಮೇಲೆ ಸಂಶೋಧನೆ ನಡೆಸಿದ ಕಾಲವದು. ಸ್ಫಟಿಕಗಳಿಂದ ವಿದ್ಯುತ್ ತರಂಗಗಳ ಧ್ರುವೀಕರಣ ಎಂಬ ಇವರ ಪ್ರಥಮ ಸಂಶೋಧನಪ್ರಬಂಧ 1895ರಲ್ಲಿ ಜರ್ನಲ್ ಆಫ್ ದಿ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಪ್ರತಿಕೆಯಲ್ಲಿ ಪ್ರಕಟವಾಯಿತು. ಅದೇ ವರ್ಷ ವಿದ್ಯುತ್ ವಕ್ರೀಭವನ ಸೂಚ್ಯಾಂಕಗಳ ನಿರ್ಣಯ ಎಂಬ ಎರಡನೆಯ ಸಂಶೋಧನ ಪ್ರಬಂಧ ಎಲೆಕ್ಟ್ರೀಷಿಯನ್ ಎಂಬ ಪ್ರತಿಕೆಯಲ್ಲಿ ಪ್ರಕಟವಾದಾಗ ಬೋಸರ ಸಂಶೋಧನೆಗೆ ಮಹತ್ತ್ವದ ತಿರುವು ದೊರೆಯಿತು. ಲಂಡನ್ನಿನ ರಾಯಲ್ ಸೊಸೈಟಿ ಇವರ ಸಂಶೋಧನೆಗೆ ಮನ್ನಣೆಕೊಟ್ಟು ಆ ಲೇಖನವನ್ನು ಪ್ರಕಟಿಸಿತಲ್ಲದೇ ಬೋಸರಿಗೆ ಸಂಶೋಧನೆ ಮುಂದುವರಿಸಲು ಸಹಾಯಧನವನ್ನು ಮಂಜೂರು ಮಾಡಿತು. ಎರಡು ವರ್ಷಗಳ ತರುವಾಯ ಆಗಿನ ಬಂಗಾಲ ಸರಕಾರ ಸಹ ಬೋಸರಿಗೆ ಸಂಶೋಧನೆಗೆಂದು ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟಿತು.

ಇಟಲಿಯ ಮಾರ್ಕೊನಿಯೂ ಸೇರಿದಂತೆ ಆ ಕಾಲಕ್ಕೆ ಹಲವು ವಿಜ್ಞಾನಿಗಳು ಟೆಲಿಗ್ರಾಫ್ ಸಂದೇಶಗಳನ್ನು ತಂತಿಯ ಸಹಾಯವಿಲ್ಲದೆಯೇ ಕಳುಹಿಸುವ ವಿಧಾನಗಳ ಕುರಿತು ಸಂಶೋಧನೆ ನಡೆಸಿದ್ದರು. ಇದನ್ನು ಪ್ರಪ್ರಥಮವಾಗಿ ಮಾಡಿದ ಕೀರ್ತಿ ಭಾರತೀಯ ವಿಜ್ಞಾನಿ ಬೋಸರಿಗೆ ಸಲ್ಲಬೇಕು. ಈ ಶೋಧನೆಯ ವಿವರವನ್ನು 1896ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಗೆ ತಿಳಿಸಿದಾಗ ಅದು ಮುಂದೆ ಇವರನ್ನು ಮೂರು ಬಾರಿ ಆಹ್ವಾನಿಸಿ ಗೌರವಿಸಿತು. ಅದೇ ವರ್ಷ ಲಂಡನ್ ವಿಶ್ವವಿದ್ಯಾಲಯ ಇವರಿಗೆ ಡಾಕ್ಟರ್ ಆಫ್ ಸೈನ್ಸ್ ಪದವಿಯಿಂದ ಪುರಸ್ಕರಿಸಿತು.

ಭೌತವಿಜ್ಞಾನದಲ್ಲಿಯ ಪ್ರಾರಂಭಿಕ ಪ್ರಯೋಗಗಳಿಗೆ ಅವರಿಗೆ ಬೇಕಾಗಿದ್ದ ವಿದ್ಯುತ್ ತರಂಗಗಳನ್ನು ಉತ್ಪಾದಿಸಲು ಎಲೆಕ್ಟ್ರಿಕ್ ರೇಡಿಯೇಟಿವ್ ಎಂಬ ಉಪಕರಣವನ್ನು ಇವರು ನಿರ್ಮಿಸಿದರು. ಅದು 25ರಿಂದ 5 ಮಿಲಿ ಮೀಟರುಗಳಷ್ಟು ಹ್ರಸ್ವತರಂಗಗಳನ್ನು ವಿಕಿರಣ

ಗೊಳಿಸುತ್ತಿತ್ತು. ಈ ತರಂಗಗಳ ಪ್ರಕಾಶಸದೃಶ ಭೌತಗುಣಧರ್ಮಗಳನ್ನೆಲ್ಲ ಇವರು ಸಂಪೂರ್ಣವಾಗಿ ಅಭ್ಯಸಿಸಿದರು. ಲಂಡನ್ನಿನ ರಾಯಲ್ ಸೊಸೈಟಿ ಉಪನ್ಯಾಸನೀಡಲು ಮೊದಲನೆಯ ಸಲ ಆಹ್ವಾನಿಸಿದಾಗ (1897) ಇವರು ಈಗಿನ ಕಲ್ಕತ್ತದಲ್ಲಿ ನಿರ್ಮಿಸಿದ್ದ ಪ್ರೇಷಕ ಅಭಿಗ್ರಾಹಕಗಳೆರಡೂ ಇದ್ದ ಉಪಕರಣವನ್ನು ಅಲ್ಲಿ ಪ್ರದರ್ಶಿಸಿದರು. ಇವರ ವಿದ್ಯುತ್ ತರಂಗಗಳ ಉಪಕರಣಗಳು ಹ್ರಸ್ವತರಂಗಗಳ ರೋಹಿತ ಮಾಪಕಗಳನ್ನು ಒಳಗೊಂಡಿದ್ದುವು. ಅದೇ ಕಾಲಕ್ಕೆ ಇವರು ಯಾಂತ್ರಿಕ ಅಥವಾ ಸೂಕ್ಷ್ಮ ಪ್ರಚೋದನೆಗಳು ವಿದ್ಯುತ್ ಪ್ರತಿಕ್ರಿಯೆಗಳನ್ನು ಪ್ರದರ್ಶಿಸಬಲ್ಲ ತಂತ್ರವನ್ನು ಶೋಧಿಸಿದರು. ಬಹುಶಃ ಅವುಗಳ ಸೂಕ್ಷ್ಮ ಸಂವೇದಿತ್ವವೇ ಬೋಸರನ್ನು ಜೀವಜಗತ್ತಿನಲ್ಲಿಯ ಸೂಕ್ಷ್ಮ ಪ್ರತಿಕ್ರಿಯೆಗಳನ್ನು ನಿಖರವಾಗಿ ಅಳೆಯುವಂತೆ ಪ್ರೇರೇಪಿಸಿರಬೇಕು. ಕ್ರೆಸ್ಕೊಗ್ರಾಫ್ ಎಂಬ ಉಪಕರಣ ಹಾಗೂ ಸಸ್ಯಗಳಲ್ಲಿ ನಡೆಯುವ ಸಂಕೋಚನ ವಿಕಸನಗಳನ್ನು ಅಳೆಯುವ ಸ್ಫೈಗ್ಮೊಗ್ರಾಫ್ ಯಂತ್ರಗಳು ಇವರ ಪ್ರಮುಖ ಆವಿಷ್ಕಾರಗಳು.



ಹತ್ತೊಂಬತ್ತನೆಯ ಶತಮಾನದ ಕೊನೆಯ ವರ್ಷ ಬೋಸರ ಸಂಶೋಧನ ಕ್ಷೇತ್ರ ಭೌತವಿಜ್ಞಾನದಿಂದ ಜೀವವಿಜ್ಞಾನಕ್ಕೆ ಬದಲಾವಣೆಗೊಂಡಿತು. ಇವರು ವಿಶೇಷವಾಗಿ ಸಸ್ಯವಿಜ್ಞಾನದಲ್ಲಿ ಭೌತವೈಜ್ಞಾನಿಕಮಾಪನ ಪದ್ಧತಿಗಳನ್ನು ಪ್ರಯೋಗಿಸಲು ತೊಡಗಿದರು. ಭೌತ ವಿಜ್ಞಾನಿ ಯೊಬ್ಬ ಹೀಗೆ ಜೀವವಿಜ್ಞಾನ ಕ್ಷೇತ್ರದಲ್ಲಿ ಕಾಲಿಟ್ಟಾಗ ಅಲ್ಲಿಯ ವಿಜ್ಞಾನಿಗಳು ಇವರನ್ನು ಮುಕ್ತ ಹೃದಯದಿಂದ ಸ್ವಾಗತಿಸಲಿಲ್ಲ. ಇದನ್ನು ಪರಿಗಣಿಸದೆ ಇವರು ಸಸ್ಯ ಕ್ಷೇತ್ರದಲ್ಲಿಯೇ ದೃಢವಾಗಿ ಬೇರೂರಿ ತಮ್ಮ ಅಪ್ರತಿಮ ಸಂಶೋಧನ ಸಾಮರ್ಥ್ಯವನ್ನು ಪ್ರದರ್ಶಿದರು. ನಿರ್ಜೀವ ವಸ್ತುಗಳೂ ಜೀವಿಗಳೂ ವಿದ್ಯುತ್ ಪ್ರೇರಣೆಗೆ ಒಳಗಾದಾಗ ಒಂದೇ ರೀತಿಯ ಪ್ರತಿಕ್ರಿಯೆಗಳನ್ನು ಪ್ರದರ್ಶಿಸುತ್ತವೆ. ಚಿಂತೆ, ಬಳಲಿಕೆ, ನೆನಪು ಮೊದಲಾದ ವಿಷಯಗಳಲ್ಲಿ ಸತುವು ಕೂಡ ಜೀವವಿದ್ದಂತೆಯೇ ವರ್ತಿಸಿದ್ದನ್ನು ತೋರಿಸಿ ಅವರು ವಿಜ್ಞಾನಿಗಳನ್ನು ಬೆರಗುಗೊಳಿಸಿದರು.

ಮುಟ್ಟಿದರೆ ಮುನಿ ಅಥವಾ ನಾಚಿಕೆ ಮುಳ್ಳು ಸಸ್ಯದ ಒಂದು ತುದಿ ಮುಟ್ಟಿದರೆ ಅದರ ಎಲ್ಲ ಎಲೆಗಳೂ ಮುದುಡಿಕೊಳ್ಳುವ ಪ್ರತಿಕ್ರಿಯೆ ಸಹಜ. ಈ ಪ್ರತಿಕ್ರಿಯೆ ಈ ಸಸ್ಯದಲ್ಲಿ ತೀವ್ರವಾಗಿರುವುದರಿಂದ ಯಾವುದೇ ಉಪಕರಣದ ಸಹಾಯವಿಲ್ಲದೇ ಇಂಥ ಪ್ರತಿಕ್ರಿಯೆಯನ್ನು ಗುರುತಿಸಬಲ್ಲವು. ಉಳಿದ ಸಸ್ಯಗಳಲ್ಲಿ ಕೂಡ ಸಂಭವಿಸುವ ಈ ತೆರನಾದ ಪ್ರತಿಕ್ರಿಯೆಗಳನ್ನು ಗುರುತಿಸಲು ಬೋಸರು ನಿರ್ಮಿಸಿರುವ ವಿವಿಧ ಉಪಕರಣಗಳ ಸಹಾಯ ಬೇಕು. ಸಸ್ಯಗಳಲ್ಲಿಯೂ ಪ್ರತಿಕ್ರಿಯೆಗಳನ್ನು ಸಾಗಿಸಲು ವಿಶಿಷ್ಟ ನರಗಳಿವೆ. ಅವು ಕೂಡ ನೋವು ನಲಿವುಗಳನ್ನು ಪ್ರಾಣಿಗಳಂತೆಯೆ ಅನುಭವಿಸುತ್ತವೆ. ಹೀಗೆ ಸಸ್ಯಜಗತ್ತಿಗೂ ಪ್ರಾಣಿ ಜಗತ್ತಿಗೂ ಹೋಲಿಕೆ ಮತ್ತು ಏಕತೆ ಇರುವುದನ್ನು ಬೋಸರು ಸಿದ್ಧಪಡಿಸಿ ಜೀವ ಭೌತವಿಜ್ಞಾನದಲ್ಲಿ ಹೊಸ ಕ್ರಾಂತಿ ಉಂಟುಮಾಡಿದರು.

1897ರಲ್ಲಿ ಇವರು ರಾಯಲ್ ಸೊಸೈಟಿಯಲ್ಲಿ ನೀಡಿದ ಉಪನ್ಯಾಸ ಎಲ್ಲರಿಂದಲೂ ಮೆಚ್ಚುಗೆ ಪಡೆಯಿತು. ಆದರೆ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯೆಗಳ ಏಕರೂಪಕ್ಕೆ ಸಿದ್ಧಪಡಿಸಿದ ಇವರ ಎರಡನೆಯ ಉಪನ್ಯಾಸ (1901) ಮಿಶ್ರ ಪ್ರತಿಕ್ರಿಯೆಗೆ ಒಳಗಾಯಿತು. ಆಗ ವೈದ್ಯಶರೀರ ಕ್ರಿಯಾವಿಜ್ಞಾನದ ಅಧ್ಯಯನದಲ್ಲಿ ಜಾನ್‌ಸ್ಯಾಂಡರ್‌ಸನ್ ಎಂಬ ವಿಜ್ಞಾನಿಯ ನಿರ್ಣಯವೇ ವೇದವಾಕ್ಯವೆನಿಸಿತ್ತು. ಬೋಸರ ಉಪನ್ಯಾಸ ಕೇಳಲೆಂದೇ ಈತ ಆಕ್ಸ್‌ಫರ್ಡಿನಿಂದ ಲಂಡನ್ನಿಗೆ ಬಂದಿದ್ದ. ಇವನೂ ಇವನ ಬೆಂಬಲಿಗರೂ ಪೂರ್ವಾಗ್ರಹಪೀಡಿತರಾಗಿ ಬೋಸರ ನಿರ್ಣಯಗಳ ಋಜುತ್ವವನ್ನು ಪ್ರಶ್ನಿಸಿದರು. ಇದರಿಂದಾಗಿ ರಾಯಲ್ ಸೊಸೈಟಿ ಕೂಡ ಬೋಸರ ನಿರ್ಣಯಗಳನ್ನೂ ಪ್ರಬಂಧ ಪ್ರಕಟಣೆಯನ್ನೂ ನಿರಾಕರಿಸಿತು. ಬೋಸರಿಗೇನೂ ನಿರಾಶೆಯಾಗಲಿಲ್ಲ. ಅದೊಂದು ವಿಜ್ಞಾನ ವರ್ಣಾಶ್ರಮದ ಹೇಯ ಪ್ರದರ್ಶನವೆಂಬುದು ಇವರಿಗೆ ಗೊತ್ತಿತ್ತು. ರಾಯಲ್ ಸೊಸೈಟಿಯಲ್ಲಿ ಈ ವಿವಾದಾತ್ಮಕ ಉಪನ್ಯಾಸ ಕೇಳಿದ್ದ ಕೆಲವು ಪ್ರಮುಖ ಜೀವವಿಜ್ಞಾನಿಗಳು ಆಗ ಬೋಸರಿಗೆ ಬೆಂಬಲವಾಗಿ ನಿಂತರು. ಆಕ್ಸ್‌ಫರ್ಡಿನ ಪ್ರಾಧ್ಯಾಪಕ ವೈನ್ಸ್ ಎಂಬ ಸಸ್ಯವಿಜ್ಞಾನಿ ವಿಶೇಷ ಆಸ್ಥೆ ತೋರಿಸಿ ಈ ಪ್ರಬಂಧವನ್ನು ಪ್ರಕಟಿಸಲು ಮುಂದೆ ಬಂದ. ಇದೇ ಸುಮಾರಿಗೆ ಬೋಸರ ಸಂಶೋಧನೆಯ ಚೌರ್ಯ ಮಾಡಿ ಪ್ರಕಟಿಸುವ ಪ್ರಯತ್ನಗಳೂ ನಡೆದವು. ತಮ್ಮ ಸಂಶೋಧನ ನಿರ್ಣಯಗಳು ಬೇರಾರದೂ ಅಲ್ಲವೆಂದು ಸಿದ್ಧಪಡಿಸಲು ಅವರು ಒಂದು ವಿಚಾರಣಸಮಿತಿಯ ಮುಂದೆ ಬರಬೇಕಾಯಿತು. ಇವರ ಮನಸ್ಸಿಗೆ ಈ ಎಲ್ಲಾ ಘಟನೆಗಳು ನೋವು ಉಂಟುಮಾಡಿದವು. ಕೊನೆಗೆ ವಿಚಾರಣ ಸಮಿತಿಯು ಈ ಸಂಶೋಧನೆಗಳ ಮೂಲ ಕರ್ತೃ ಬೋಸರೇ ಎಂದು ನಿರ್ಣಯಿಸಿತು. ಅಂದಿನಿಂದ ಇವರಿಗೆ ಏಕಪ್ರಕಾರವಾಗಿ ವಿವಾದಾತೀತ ಮನ್ನಣೆ ದೊರಕಿ ಇವರ ವೈಜ್ಞಾನಿಕ ಪ್ರತಿಷ್ಠೆ ಜೀವವಿಜ್ಞಾನ ಕ್ಷೇತ್ರದಲ್ಲೂ ಭದ್ರವಾಯಿತು.

ತಮ್ಮ ಸಂಶೋಧನೆಗಳನ್ನು ಸಾದರಪಡಿಸಿ ಉಪನ್ಯಾಸಗಳನ್ನು ನೀಡಲು ಬೋಸರಿಗೆ ಮೂರು ಬಾರಿ ರಾಯಲ್ ಸೊಸೈಟಿ ಆಹ್ವಾನಿಸಿದ್ದನ್ನು ಗಮನಿಸಿದರೆ ಇವರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರೇಷ್ಠ ವಿಜ್ಞಾನಿಗಿರಬೇಕಾದ ಗೌರವ ಸ್ಥಾನವಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಪ್ರಪಂಚದ ವಿವಿಧ ವಿಶ್ವವಿದ್ಯಾಲಯಗಳೂ ವಿಜ್ಞಾನ ಸಂಸ್ಥೆಗಳೂ ಅವರನ್ನೂ ಆಮಂತ್ರಿಸಿ ಗೌರವಿಸಿದವು. ಇವರು 1900ರಲ್ಲಿ ಪ್ಯಾರಿಸ್‌ಗೆ ಮತ್ತು 1915ರಲ್ಲಿ ಇಂಗ್ಲೆಂಡಿನ ಪ್ರವಾಸದೊಂದಿಗೆ ಅಮೆರಿಕ ಒಳಗೊಂಡಂತೆ ಪ್ರಪಂಚದ ಬೇರೆ ಬೇರೆ ವಿಜ್ಞಾನ ಸಂಸ್ಥೆಗಳಿಗೆ, ವಿಶ್ವವಿದ್ಯಾಲಯಗಳಿಗೆ ಭೇಟಿಕೊಟ್ಟು ಉಪನ್ಯಾಸಗಳನ್ನು ನೀಡಿದರು. ಬ್ರಿಟಿಷರ ಆಡಳಿತದಲ್ಲಿದ್ದ ಆಗಿನ ಭಾರತದ ಪ್ರತಿನಿಧಿಯಾಗಿ ಅಸಂಖ್ಯ ಅಂತಾರಾಷ್ಟ್ರೀಯ ವಿಜ್ಞಾನಸಭೆ ಸಮ್ಮೇಳನಗಳಲ್ಲಿ ಭಾಗವಹಿಸಿದ್ದು ಇವರ ಹಿರಿಮೆ. ಅಂದಿನ ಲೀಗ್ ಆಫ್ ನೇಷನ್ಸ್ ಸಂಸ್ಥೆಯ ಬೌದ್ಧಿಕ ಸಹಕಾರ ಸಮಿತಿಯ ಸದಸ್ಯರಾಗಿದ್ದರು. ಇವರು ಜೀವಿ ಅಜೀವಿಗಳಲ್ಲಿಯೂ ಸಸ್ಯ ಪ್ರಾಣಿಗಳಲ್ಲಿಯೂ ಒಂದು ತೆರನಾದ ಭೌತಿಕ ಏಕತೆ ಇರುವುದನ್ನು ಗುರುತಿಸಿ ಮಾಡಿದ ಮೂಲಭೂತ ಸಂಶೋಧನೆಗಳು ಪ್ರಪಂಚದ ಗಮನವನ್ನು ಭಾರತದತ್ತ ಸೆಳೆದವು. ತಮ್ಮ ಸಿದ್ಧಾಂತ ನಿರ್ಣಯಾದಿಗಳಿಗೆ ಪೋಷಕವಾಗಿ ಪ್ರದರ್ಶಿಸಲು ನೂತನ ಉಪಕರಣಗಳನ್ನು ಆವಿಷ್ಕರಿಸಿದರು. ಕಳೆದ ಶತಮಾನದ ಕೊನೆಗೆ ಜೀವಭೌತವಿಜ್ಞಾನದಲ್ಲಿ ಸಂಗ್ರಹಿತವಾಗಿದ್ದ ಜ್ಞಾನವನ್ನೇ ಪ್ರಶ್ನಿಸಿ ಆ ಕ್ಷೇತ್ರಕ್ಕೆ ಹೊಸ ತಿರುವುಕೊಟ್ಟರು. ಬೋಸ್ ಭಾರತದಲ್ಲಿ ಉನ್ನತ ಸಂಶೋಧನೆಗಾಗಿ ಸಂಶೋಧನ ಸಂಸ್ಥೆ ಸ್ಥಾಪಿಸಿದರು. ಶುದ್ಧ ವಿಜ್ಞಾನ ಮನೋವೃತ್ತಿಯವರಾದ ಇವರು ವಿಜ್ಞಾನದ ವ್ಯಾವಹಾರಿಕ ಅನ್ವಯಗಳತ್ತ ದಿವ್ಯ ನಿರ್ಲಕ್ಷ್ಯ ! ಜಗದೀಶ್‌ಚಂದ್ರರು ಸದ್ಗೃಹಸ್ಥರು, ಸ್ಫೂರ್ತಿದಾಯಕ ಪ್ರಾಧ್ಯಾಪಕರು, ಸಮರ್ಥ ಸಂಶೋಧನ ನಿರ್ದೇಶಕರು, ಉತ್ತಮ ಉಪಕರಣಗಳ ಉಪಜ್ಞಕಾರರು, ಸಾಹಿತ್ಯ ಪ್ರೇಮಿ, ಸರಸವಾಗ್ಮಿ, ಪ್ರೌಢ ಪ್ರಬಂಧ ಪುಸ್ತಕಾದಿಗಳ ಲೇಖಕರು, ಭಾರತೀಯ ಸನಾತನ ಸಂಸ್ಕೃತಿಯ ಅಭಿಮಾನಿಗಳು. ಎಲ್ಲಕ್ಕೂ ಮಿಗಿಲಾಗಿ ಉಜ್ವಲ ರಾಷ್ಟ್ರಪ್ರೇಮಿಯಾಗಿದ್ದರು.

ಇವರಿಗೆ ಆಗಿನ ಭಾರತ ಸರ್ಕಾರ 1903ರಲ್ಲಿ ಸಿ.ಐ.ಇ. ಬಿರುದನ್ನೂ 1911ರಲ್ಲಿ ಸಿ.ಎಸ್.ಐ. ಬಿರುದನ್ನೂ ಪ್ರದಾನಿಸಿತು. 1916ರಲ್ಲಿ ಬ್ರಿಟಿಷ್ ಸರ್ಕಾರ ನೈಟ್ ಬಿರುದನ್ನು (ಸರ್) ನೀಡಿ ಗೌರವಿಸಿತು. 1920ರಲ್ಲಿ ಇವರು ರಾಯಲ್ ಸೊಸೈಟಿಯ ಸದಸ್ಯರಾಗಿ (ಎಫ್.ಆರ್.ಎಸ್.) ಚುನಾಯಿತರಾದರು. 1917 ನವೆಂಬರ್ 30ರಂದು ವಿಜ್ಞಾನ ಸಂಶೋಧನೆಗೆ ಮೀಸಲಾದ ಸಂಸ್ಥೆಯೊಂದನ್ನು ಸ್ಥಾಪಿಸಿ ಅದನ್ನು ದೇಶಕ್ಕೆ ಅರ್ಪಿಸಿ ಜಾತಿ, ಭಾಷೆ, ಲಿಂಗ ಭೇದವಿಲ್ಲದೆ ಎಲ್ಲರೂ ಇದರಲ್ಲಿ ಸಂಶೋಧನಕಾರ್ಯ ನಡೆಸಲೆಂದು ಹಾರೈಸಿದರು. ಇವರು ಆಗಾಗ ತಮ್ಮ ಸಂಸ್ಥೆಯಲ್ಲಿ ಪ್ರಬುದ್ಧ ಉಪನ್ಯಾಸಗಳನ್ನು ನೀಡುತ್ತಿದ್ದರು.

ಸಾರ್ವಜನಿಕವಾಗಿ ಮಾಡುತ್ತಿದ್ದ ಉಪನ್ಯಾಸಗಳಲ್ಲಿ ಇವರ ರಾಷ್ಟ್ರ ಪ್ರೇಮ, ಸಾಹಿತ್ಯಾಸಕ್ತಿ ಮತ್ತು ಸಾಂಸ್ಕೃತಿಕ ಅಭಿರುಚಿ ಗೋಚರವಾಗುತ್ತವೆ. ಇವರ 70ನೆಯ ವರ್ಧಂತ್ಯುತ್ಸವದಲ್ಲಿ ಪ್ರಪಂಚದ ಮೂಲೆ ಮೂಲೆಗಳಿಂದ ಅಭಿನಂದನ ಸಂದೇಶಗಳು ಬಂದುವು. ವಿಜ್ಞಾನಿಗಳಷ್ಟೇ ಅಲ್ಲದೆ ರವೀಂದ್ರನಾಥ ಠಾಕೂರರೂ ಜಾರ್ಜ್ ಬರ್ನಾರ್ಡ್ ಷಾ ಮೊದಲಾದ ಪ್ರಪಂಚಪ್ರಸಿದ್ಧ ಸಾಹಿತಿಗಳೂ ಅನೇಕ ರಾಜಕಾರಣಿಗಳೂ ಸಂದೇಶಗಳನ್ನು ಕಳುಹಿಸಿದರು. ಬೋಸರು ಪ್ರಥಮ ದರ್ಜೆಯ ಸಾಹಿತಿಯೂ ಆಗಿದ್ದರು. ಬಂಗಾಲಿ ಭಾಷೆಯಲ್ಲಿ ಲೇಖನಗಳನ್ನೂ ಪತ್ರಗಳನ್ನೂ ಬರೆಯುತ್ತಿದ್ದರು. 1911ರಲ್ಲಿ ನಡೆದ ವಂಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಧ್ಯಕ್ಷ ಭಾಷಣಕ್ಕೆ ವಿಜ್ಞಾನದಲ್ಲಿ ಸಾಹಿತ್ಯ ಎಂಬ ವಿಷಯವನ್ನು ಆಯ್ದುಕೊಂಡು ಎರಡೂ ಕ್ಷೇತ್ರಗಳ ನಡುವಿನ ಪರಸ್ಪರ ಸಂಬಂಧದತ್ತ ಎಲ್ಲರ ಗಮನ ಸೆಳೆದರು.

ಕೊನೆಯ ದಿನಗಳಲ್ಲಿ ಆರೋಗ್ಯ ಸುಧಾರಣೆಗಾಗಿ ಡಾರ್ಜಿಲಿಂಗಿಗೆ ಹೋಗಿದ್ದ ಇವರು 1937 ನವೆಂಬರ್ 30ರಂದು ತಮ್ಮ 80ನೆಯ ವಯಸ್ಸಿನಲ್ಲಿ ನಿಧನರಾದರು. (ಆರ್.ಎಸ್.ಬಿ.)

**ಬೋಸ್, ಸುಭಾಷ್‌ಚಂದ್ರ:** 1897–1945. ನೇತಾಜಿ ಎಂದು ಪ್ರಸಿದ್ಧರಾದ ಭಾರತ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖರು. ಆಧುನಿಕ ಭಾರತದ ಇತಿಹಾಸದ ಮೇಲಷ್ಟೇ ಅಲ್ಲದೆ ಏಷ್ಯದ ಜನಮನದ ಮೇಲೂ ಅಚ್ಚಳಿಯದ ಪ್ರಭಾವ ಬೀರಿದವರು. 1897 ಜನವರಿ 23ರಂದು ಒರಿಸ್ಸದ ಕಟಕ್‌ನಲ್ಲಿ ಜನನ. ತಂದೆ ಜಾನಕೀನಾಥ್ ಬೋಸ್ ವಕೀಲರು. ತಾಯಿ ಪ್ರಭಾವತಿದೇವಿ. ಹದಿನಾಲ್ಕು ಮಕ್ಕಳಲ್ಲಿ ಇವರು ಒಂಬತ್ತನೆಯವರು.

ಬೋಸರು ತಮ್ಮ ಬಾಲ್ಯದಲ್ಲಿ ಧಾರ್ಮಿಕ ಮನೋಭಾವದ ತಾಯಿತಂದೆಯರಿಂದ ಪ್ರಭಾವಿತರಾದುದಲ್ಲದೆ ಕಟಕ್‌ನ ರ‍್ಯಾವೆನ್‌ಷಾ ಕಾಲೇಜಿಯೆಟ್ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ವೇಣಿಮಾಧವದಾಸರ ಪ್ರಭಾವಕ್ಕೂ ಒಳಗಾಗಿದ್ದರು. ಸುಭಾಷರು ರ‍್ಯಾವೆನ್‌ಷಾ ಕಾಲೇಜಿಯೆಟ್ ಶಾಲೆಯಿಂದ ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ಎರಡನೆಯವರಾಗಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದರು. ಪ್ರಾಧ್ಯಾಪಕ ಓಟನ್ ತಮ್ಮ ಉಪನ್ಯಾಸವೊಂದರಲ್ಲಿ ಭಾರತ ಹಾಗೂ ಭಾರತೀಯರ ವಿರುದ್ಧ ಅವಹೇಳನಕರವಾಗಿ ಮಾತನಾಡಿದ್ದರಿಂದ ಕೆರಳಿದ ಕಾಲೇಜಿನ ಕೆಲವು ವಿದ್ಯಾರ್ಥಿಗಳು ಅವರನ್ನು ಥಳಿಸಿದರು. ಉತ್ಸಾಹಿ ಸುಭಾಷರನ್ನು ಈ ಘಟನೆಗೆ ಮುಖ್ಯ ಪ್ರೇರಕನೆಂದು 1916ರಲ್ಲಿ ವಿಶ್ವವಿದ್ಯಾಲಯದಿಂದ ತಾತ್ಕಾಲಿಕವಾಗಿ ಹೊರದೂಡಲಾಯಿತು. ಆದಾಗ್ಯೂ ಸರ್ ಆಶುತೋಷ್ ಮುಖರ್ಜಿಯವರ ನೆರವಿನಿಂದ, ಅನಾಕ್ಷೇಪ ಪತ್ರದೊಡನೆ ಸುಭಾಷರು ಸ್ಕಾಟಿಷ್ ಚರ್ಚಸ್ ಕಾಲೇಜು ಸೇರಿದರು (1917). ತತ್ತ್ವಶಾಸ್ತ್ರವನ್ನು ಮುಖ್ಯ ವಿಷಯವಾಗಿ ತೆಗೆದುಕೊಂಡಿದ್ದ ಸುಭಾಷರು ಪ್ರಥಮ ದರ್ಜೆಯಲ್ಲಿ ಬಿ.ಎ. ಪಾಸುಮಾಡಿದರು (1919).

ಈ ವೇಳಾಗಾಗಲೇ ಯುವಕ ಸುಭಾಷರ ಅಂತಶ್ಚೇತನ ಸ್ವಾಮಿ ವಿವೇಕಾನಂದರ ಪ್ರಭಾವಕ್ಕೊಳಗಾಗಿತ್ತು. ಇವರ ಹೃದಯ ಆಧ್ಯಾತ್ಮಿಕ ಮತ್ತು ದೇಶಭಕ್ತಿಯ ನೆಲೆಯಾಗಿತ್ತು. ತಾಯಿತಂದೆ ತಮ್ಮ ಮನೋಭಿಲಾಷೆಯನ್ನು ಸುಭಾಷರಿಗೆ ತಿಳಿಸಿದಾಗ ಅವರ ಮಾತನ್ನು ಮೀರದೆ ಇಂಡಿಯನ್ ಸಿವಿಲ್ ಸರ್ವಿಸ್ (ಐ.ಸಿ.ಎಸ್.) ಪರೀಕ್ಷೆಗಾಗಿ ಇಂಗ್ಲೆಂಡಿಗೆ ಹೋದರು. ಸ್ಪರ್ಧಾ ಪರೀಕ್ಷೆಯಲ್ಲಿ ನಾಲ್ಕನೆಯವರಾಗಿ ಐ.ಸಿ.ಎಸ್. ಪಾಸುಮಾಡಿದರು (1920).

ಸ್ಪರ್ಧಾಪರೀಕ್ಷೆಯಲ್ಲಿ ಉತ್ತೀರ್ಣನಾದ ಪ್ರತಿಯೊಬ್ಬ ಅಭ್ಯರ್ಥಿಯೂ ಒಂದು ವರ್ಷ ಖಾಯಂ ಪೂರ್ವ ಅವಧಿಯನ್ನು ಪೂರೈಸಬೇಕಾಗಿತ್ತು. ಆದರೆ ಸುಭಾಷರು ಅದನ್ನು ಪೂರೈಸದೆ 1921 ಏಪ್ರಿಲ್‌ನಲ್ಲಿ ರಾಜೀನಾಮೆ ನೀಡಿ 1921 ಜುಲೈ 16ರಂದು ಭಾರತಕ್ಕೆ ಬಂದರು. ಕಾರಣ ಆಗ ಭಾರತದಲ್ಲಿ ಆಗಿದ್ದ ತೀವ್ರ ಘಟನೆಗಳಿಂದ ಅವರ ಮನಸ್ಸು ಪ್ರಕ್ಷುಬ್ಧವಾಗಿತ್ತು. 1919ರಲ್ಲಿ ಜನರಲ್ ಡೈಯರ್‌ನಿಂದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ನಡೆದಿತ್ತು. ಇದಾದ ಅನಂತರ 1920 ಆಗಸ್ಟ್‌ನಲ್ಲಿ ಮಹಾತ್ಮ ಗಾಂಧಿಯವರು ತ್ಯಾಗ, ಬಲಿದಾನಗಳಿಗಾಗಿ ಕರೆ ಇತ್ತಿದ್ದರು. ಭಾರತಕ್ಕೆ ಬಂದ ಸುಭಾಷರು ನೇರವಾಗಿ ಮಹಾತ್ಮ ಗಾಂಧಿಯವರಲ್ಲಿಗೆ ಮಾರ್ಗದರ್ಶನಕ್ಕಾಗಿ ತೆರಳಿದರು. ಭಾರತದ ಸ್ವಾತಂತ್ರ್ಯದ ಬಗ್ಗೆ ಸುಭಾಷರಿಗಿದ್ದ ತೀವ್ರ ಆಸಕ್ತಿಯನ್ನು ಗಮನಿಸಿದ ಗಾಂಧಿಯವರು ಅವರನ್ನು ದೇಶಬಂಧು ಚಿತ್ತರಂಜನ್ ದಾಸರಲ್ಲಿಗೆ ಕಳುಹಿಸಿದರು. ಅಲ್ಲಿಂದ ಸಿ.ಆರ್. ದಾಸ್ ಅವರು ತಮ್ಮ ಅಂತ್ಯದ ತನಕ (1925) ಸುಭಾಷರ ರಾಜಕೀಯ ಗುರುವಾಗಿದ್ದರು. ಸುಭಾಷರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿದ (1921) ಮೇಲೆ 1921 ಡಿಸೆಂಬರ್‌ನಲ್ಲಿ 6 ತಿಂಗಳ ಜೈಲು ಶಿಕ್ಷೆ ಅನುಭವಿಸಬೇಕಾಯಿತು. ಅನಂತರ ಹನ್ನೊಂದು ಬಾರಿ ಬಂಧನಕ್ಕೊಳಗಾದರು.

1921 ಡಿಸೆಂಬರ್ 25ರಂದು ಪ್ರಿನ್ಸ್ ಆಫ್ ವೇಲ್ಸ್ ಕಲ್ಕತ್ತೆಗೆ ಭೇಟಿನೀಡಿದರು. ಅವರ ಭೇಟಿಯ ಸಂಪೂರ್ಣ ಬಹಿಷ್ಕಾರಕ್ಕೆ ಸುಭಾಷ್ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಬಂಧನ ಕ್ಕೊಳಗಾದರು. ಸಿ.ಆರ್.ದಾಸ್‌ರವರು ಕಲ್ಕತ್ತ ಕಾರ್ಪೊರೇಷನ್ನಿನ ಮೇಯರ್ ಆಗಿದ್ದಾಗ ಸುಭಾಷರು ಪ್ರಧಾನ ಕಾರ್ಯನಿರ್ವಹಣಾಧಿಕಾರಿಯಾಗಿ (1924) ತಮ್ಮ ಸಂಘಟನಾ ವಿಚಕ್ಷಣತೆಯನ್ನು ತೋರಿದರು. ಆದರೆ ಸುಭಾಷರು ಬಂಗಾಲದ ಭಯೋತ್ಪಾದಕರೊಡನೆ ಸಕ್ರಿಯ ಸಂಬಂಧ ಪಡೆದಿರುವರೆಂಬ ಆಪಾದನೆಯ ಮೇಲೆ ಅವರನ್ನು 1924 ಅಕ್ಟೋಬರ್ 25ರಿಂದ 1927 ಮೇ 16ರ ತನಕ ನ್ಯೂ ಬೆಂಗಾಲ್ ಆರ್ಡಿನನ್ಸ್ ಮೇಲೆ ಯಾವ ವಿಚಾರಣೆಯೂ ಇಲ್ಲದೆ ಬರ್ಮದ ಮಂಡಾಲೆಯ ಸೆರೆಮನೆಯಲ್ಲಿಡಲಾಗಿತ್ತು. ಮೂರು ವರ್ಷಗಳ ಸೆರೆವಾಸದ ತರುವಾಯ ವೈದ್ಯಕೀಯ ಕಾರಣಗಳ ಮೇಲೆ ಬಿಡುಗಡೆಮಾಡಲಾಯಿತು. ಸುಭಾಷರು ಆರೋಗ್ಯ ಸರಿಯಿಲ್ಲದಿದ್ದರೂ ರಾಜಕೀಯ ಜೀವನದಲ್ಲಿ ಮತ್ತೆ ಸಕ್ರಿಯವಾಗಿ ಪಾಲ್ಗೊಳ್ಳಲಾರಂಭಿಸಿದರು. ಬಂಗಾಲ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಆಯ್ಕೆಗೊಂಡರು. ಯುವ ಸಂಘಟನೆ ಹಾಗೂ ಟ್ರೇಡ್ ಯೂನಿಯನ್ ಚಳವಳಿಯ ಸಂಘಟನೆಗಾಗಿ ದುಡಿಯಲಾರಂಭಿಸಿದರು.

ಕಾಂಗ್ರೆಸ್ ನೇಮಕಮಾಡಿದ್ದ ಮೋತಿಲಾಲ್ ನೆಹರು ಸಮಿತಿಯ (1928) ಭಾರತ ಅಧಿರಾಜ್ಯ ಸ್ಥಾನದ (ಡೊಮಿನಿಯನ್ ಸ್ಟೇಟಸ್) ಪರವಾದವನ್ನು ಜವಾಹರ್‌ಲಾಲ್ ನೆಹರು ಅವರೊಡನೆ ಬೇಡವೆಂದು ಘೋಷಿಸಿದರು. ಸುಭಾಷ್ ಸಂಪೂರ್ಣ ಸ್ವಾತಂತ್ರ್ಯವಲ್ಲದೆ ಬೇರೇನೂ ಬೇಡವೆಂದು ಘೋಷಿಸಿದರು; ಇಂಡಿಪೆಂಡೆನ್ಸ್ ಲೀಗಿನ ಪ್ರಾರಂಭವನ್ನೂ ಪ್ರಕಟಿಸಿದರು. ಕಲ್ಕತ್ತ ಕಾಂಗ್ರೆಸ್ ಅಧಿವೇಶನದಲ್ಲಿ (1928) ಮೋತಿಲಾಲ್ ನೆಹರು ಅಧ್ಯಕ್ಷ ರಾಗಿದ್ದರು. ಸುಭಾಷ್‌ಚಂದ್ರ ಬೋಸರು ಕಾಂಗ್ರೆಸ್ ಸ್ವಯಂಸೇವಕ ತಂಡದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಜವಹರ್‌ಲಾಲರ ಅಧ್ಯಕ್ಷತೆಯ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ (1929) ಕಾಂಗ್ರೆಸ್‌ನ ಗುರಿ ಪೂರ್ಣ ಸ್ವರಾಜ್ಯ ಎಂಬ ನಿರ್ಣಯವನ್ನು ಅಂಗೀಕರಿಸಿತು.

ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಚಳವಳಿಯಿಂದಾಗಿ (1930) ಸುಭಾಷರು ಮತ್ತೊಮ್ಮೆ ತೀವ್ರ ಹೋರಾಟಕ್ಕಿಳಿದರು. ಸರ್ಕಾರ ಅವರನ್ನು ಬಂಧಿಸಿ, ಸೆರೆಮನೆಯಲ್ಲಿಟ್ಟಿತು. ಗಾಂಧಿ ಇರ್ವಿನ್ ಒಪ್ಪಂದವಾದ ಅನಂತರ ಇವರಿಗೆ ಸೆರೆಯಿಂದ ಬಿಡುಗಡೆಯಾಯಿತು. ಆದರೆ ಭಗತ್‌ಸಿಂಗ್ ಹಾಗೂ ಅವರ ಒಡನಾಡಿ ದೇಶಪ್ರೇಮಿಗಳನ್ನು ಗಲ್ಲು ಶಿಕ್ಷೆಯಿಂದ ರಕ್ಷಿಸದಿದ್ದುದರಿಂದ ಸುಭಾಷರು ಒಪ್ಪಂದದ ವಿರುದ್ಧ ಹಾಗೂ ಸತ್ಯಾಗ್ರಹವನ್ನು ನಿಲ್ಲಿಸಿದುದರ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು. ಮತ್ತೊಮ್ಮೆ ಸುಭಾಷರನ್ನು ನವಬಂಗಾಲ ನಿಬಂಧನೆಯನ್ವಯ ಬಂಧಿಸಲಾಯಿತು. ಒಂದು ವರ್ಷದ ಅವಧಿಯಲ್ಲಿಯೇ ಅವರ ದೈಹಿಕಸ್ಥಿತಿ ತುಂಬ ಆತಂಕಕಾರಿಯಾಗಿ ಪರಿಣಮಿಸಿದುದರಿಂದ ಅವರನ್ನು ಬಿಡುಗಡೆ ಮಾಡಿ ಯುರೋಪಿಗೆ ಗಡಿಪಾರು ಮಾಡಲಾಯಿತು. ಯುರೋಪ್‌ನಲ್ಲಿ ಪ್ರವಾಸವನ್ನು ಕೈಗೊಂಡು ಇಂಡಿಯನ್ ಸ್ಟ್ರಗಲ್ (1920–34) ಎಂಬ ಕೃತಿಯನ್ನು ರಚಿಸಿದರು. ಅಲ್ಲಿ ಸುಭಾಷರು ತಮ್ಮ ಆರೋಗ್ಯವನ್ನು ಚೇತರಿಸಿಕೊಂಡುದಷ್ಟೇ ಅಲ್ಲದೆ ಭಾರತ ಯುರೋಪುಗಳ ನಡುವೆ ರಾಜಕೀಯ–ಸಾಂಸ್ಕೃತಿಕ ಸಂಬಂಧಗಳನ್ನು ವೃದ್ಧಿ ಪಡಿಸುವ ಸಲುವಾಗಿ ಯುರೋಪಿನ ಬೇರೆ ಬೇರೆ ರಾಜಧಾನಿಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡರು.

ಸುಭಾಷರು ಭಾರತವನ್ನು ಪ್ರವೇಶಿಸಲು ನಿಷೇಧವಿದ್ದರೂ 1936 ಏಪ್ರಿಲ್ 11ರಂದು ಮುಂಬಯಿಗೆ ಬಂದಿಳಿದರು. ತತ್‌ಕ್ಷಣ ಅವರನ್ನು ಬಂಧಿಸಿ ಒಂದು ವರ್ಷ ಸೆರೆಮನೆಗೆ ಕಳುಹಿಸಲಾಯಿತು. 1937 ಮಾರ್ಚ್‌ನಲ್ಲಿ ಸುಭಾಷರು ಸೆರೆಮನೆಯಿಂದ ಹೊರಬಂದರು. 1937ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಏಳು ಪ್ರಾಂತ್ಯಗಳಲ್ಲಿ ಅಧಿಕಾರಕ್ಕೆ ಬಂದು, ಅವರು (ಗುಜರಾತ್) ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡರು (1938). ಏಳು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳ ಕ್ರಾಂತ್ರಿಕಾರಿ ಸಾಧ್ಯತೆಗಳ ಬಗ್ಗೆ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಒತ್ತಿ ಹೇಳಿದರು. ಕಾಂಗ್ರೆಸ್ ಅಧ್ಯಕ್ಷರಾಗಿ ಸುಭಾಷರು 1938ರಲ್ಲಿ ಯೋಜನೆಯ ಬಗ್ಗೆ ಚರ್ಚಿಸಿ ಆ ವರ್ಷದ ಅಕ್ಟೋಬರ್‌ನಲ್ಲಿ ರಾಷ್ಟ್ರೀಯ ಯೋಜನಾಸಮಿತಿಯೊಂದನ್ನು ರಚಿಸಿದರು.

ತ್ರಿಪುರ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷೀಯ ಚುನಾವಣೆ 1939ರ ಪ್ರಾರಂಭದಲ್ಲಿ ನಡೆಯಿತು. ಮಹಾತ್ಮಗಾಂಧಿ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಬೆಂಬಲಿತ ರಾಗಿದ್ದ ಪಟ್ಟಾಭಿಸೀತಾರಾಮಯ್ಯನವರನ್ನು ಪರಾಭವಗೊಳಿಸಿ ಸುಭಾಷ್‌ರವರು ಪುನರಾಯ್ಕೆಗೊಂಡರು. ಚುನಾವಣೆಯಾದ ತತ್‌ಕ್ಷಣ ಕಾರ್ಯಕಾರಿ ಸಮಿತಿ ಸದಸ್ಯರು ರಾಜೀನಾಮೆ ನೀಡಿದರು. ತ್ರಿಪುರಿಯಲ್ಲಿದ್ದ ಸುಭಾಷರಿಗೆ ಆರೋಗ್ಯ ಸರಿಯಿರಲಿಲ್ಲ, ಇನ್ನು ಆರು ತಿಂಗಳ ಒಳಗಾಗಿ ಯುದ್ಧ ಆರಂಭವಾಗುವುದೆಂದು ಎಚ್ಚರಿಸಿ, ಬ್ರಿಟನ್ನಿಗೆ ಕಾಂಗ್ರೆಸ್ ಆರು ತಿಂಗಳ ಕಾಲಾವಕಾಶ ನೀಡಬೇಕು. ಒಂದು ಪಕ್ಷ ಅದು ಒಪ್ಪದಿದ್ದರೆ ಪೂರ್ಣಸ್ವರಾಜ್ಯಕ್ಕಾಗಿ ದೇಶದಾದ್ಯಂತ ಹೋರಾಟ ಆರಂಭಿಸಬೇಕೆಂದು ಒತ್ತಾಯಿಸಿದರು. ಸುಭಾಷರ ಈ ಮಾತುಗಳ ಕಡೆ ಯಾರೂ ಗಮನಹರಿಸಲಿಲ್ಲ. ಜೊತೆಗೆ ಕಾಂಗ್ರೆಸ್ ಅಧ್ಯಕ್ಷರಾಗಿ ಅವರಿಗಿದ್ದ ಅಧಿಕಾರಗಳನ್ನು ಕಡಿಮೆಮಾಡಲಾಯಿತು. ಆಗ ಸುಭಾಷರು ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್‌ನಲ್ಲಿಯೇ ಫಾರ್ವರ್ಡ್ ಬ್ಲಾಕ್ ಅನ್ನು ಸ್ಥಾಪಿಸಿದರು (1939). ಅದೇ ಆಗಸ್ಟ್‌ನಲ್ಲಿ ಸುಭಾಷರನ್ನು ಬಂಗಾಲ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷಸ್ಥಾನದಿಂದ ತೆಗೆದುಹಾಕಲಾಯಿತು.

1939 ಸೆಪ್ಟೆಂಬರ್‌ನಲ್ಲಿ ಯುರೋಪಿನಲ್ಲಿ ಯುದ್ಧ ಆರಂಭವಾಯಿತು. ತ್ರಿಪುರದಲ್ಲಿ ಸುಭಾಷರು ಹೇಳಿದ್ದ ಮಾತುಗಳು ಬಲುಮಟ್ಟಿಗೆ ನಿಜವಾಗಿ ಪರಿಣಮಿಸಿದವು. ಭಾರತ ಯುದ್ಧ ಹೂಡಿರುವ ದೇಶ ಎಂದು ಘೋಷಿಸಿ ಗವರ್ನರ್ ಜನರಲ್ ಹೊರಡಿಸಿದ ಆದೇಶದಿಂದ ಭಾರತವನ್ನು ಬ್ರಿಟಿಷ್ ಪರವಾಗಿ ಸಮರಕ್ಕೆ ಸೆಳೆಯಲಾಯಿತು. ಏಳು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು 1939 ಅಕ್ಟೋಬರ್‌ನಲ್ಲಿ ರಾಜೀನಾಮೆ ನೀಡಿದವು. ಆದರೆ ಯುದ್ಧ ಸಮಯದಲ್ಲಿ ಬ್ರಿಟಿಷ್ ಸರ್ಕಾರವನ್ನು ಪೇಚಿಗೆ ಸಿಲುಕಿಸಲು ತಾವು ಇಚ್ಛಿಸುವುದಿಲ್ಲ ಎಂಬುದಾಗಿ ಗಾಂಧೀಜಿ ಘೋಷಿಸಿದರು.

1940 ಮಾರ್ಚ್‌ನಲ್ಲಿ ಬಿಹಾರದ ರಾಮಗಢದಲ್ಲಿ ಫಾರ್ವರ್ಡ್‌ಬ್ಲಾಕ್ ಮತ್ತು ಕಿಸಾನ್ ಸಭಾ–ಇವುಗಳ ಸಂಯುಕ್ತ ಆಶ್ರಯದಲ್ಲಿ ರಾಜಿವಿರೋಧಿ ಸಮ್ಮೇಳನವನ್ನು ಸುಭಾಷರು ಏರ್ಪಡಿಸಿದರು. ಸೇನೆ, ದ್ರವ್ಯ ಅಥವಾ ಸಾಮಗ್ರಿಗಳಿಂದ ಸಾಮ್ರಾಜ್ಯಶಾಹಿ ಸಮರಕ್ಕೆ ನೆರವು ನೀಡಬಾರದೆಂದು ಮತ್ತು ಬ್ರಿಟಿಷ್ ಸಾಮ್ರಾಜ್ಯದ ಸಂರಕ್ಷಣೆಗಾಗಿ ಭಾರತೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದನ್ನು ಎಲ್ಲ ರೀತಿಗಳಿಂದಲೂ ಪ್ರತಿಭಟಿಸಬೇಕೆಂದೂ ಜನತೆಗೆ ಕರೆನೀಡಿದ ಸಮ್ಮೇಳನ ಏಪ್ರಿಲ್ 6ರಿಂದ ಪ್ರತಿಭಟಿಸಬೇಕೆಂದೂ ಪ್ರಪಂಚದಾದ್ಯಂತ ಹೋರಾಟ ಆರಂಭಿಸಬೇಕೆಂದು ತೀರ್ಮಾನಿಸಿತು. ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದ ಭಾರತೀಯ ಜನತೆ ಏಪ್ರಿಲ್ 6ರಿಂದ ಫಾರ್ವರ್ಡ್‌ಬ್ಲಾಕ್ ದೇಶದಾದ್ಯಂತ ಆರಂಭಿಸಿದ ಚಳವಳಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದರು. ನಾಗಪುರದಲ್ಲಿ ನಡೆದ ಅಖಿಲ ಭಾರತ ಫಾರ್ವರ್ಡ್‌ಬ್ಲಾಕ್‌ನ ಅಧಿವೇಶನದಲ್ಲಿ (1940) ರಾಮಗಢ ನಿಲುವನ್ನು ಮತ್ತೆ ಒತ್ತಿಹೇಳಲಾಯಿತು. ಭಾರತದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು ತಕ್ಷಣ ಸ್ಥಾಪಿಸುವಂತೆ ಫಾರ್ವರ್ಡ್‌ಬ್ಲಾಕ್ ಒತ್ತಾಯಿಸಿತು.

ನಾಗಪುರ ಅಧಿವೇಶನ ಮುಗಿಯುತ್ತಿದ್ದಂತೆಯೇ ಕಲ್ಕತ್ತದಲ್ಲಿ ಹಾಲ್ ಸ್ಮಾರಕ ವಿರೋಧ ಸತ್ಯಾಗ್ರಹದ ಮೊದಲು ಸುಭಾಷರನ್ನು ಬಂಗಾಲ ಸರ್ಕಾರ 1940 ಜುಲೈ 2ರಂದು ಬಂಧಿಸಿ ಸೆರೆಮನೆಗೆ ದೂಡಿತು. ಸರ್ಕಾರ ತಮ್ಮ ಬಗ್ಗೆ ಸರಿಯಾಗಿಯೂ ನ್ಯಾಯಬದ್ಧವಾಗಿಯೂ ನಡೆದುಕೊಳ್ಳುತ್ತಿಲ್ಲವೆಂದು ಸೆರೆಮನೆಯಲ್ಲಿದ್ದಾಗಲೇ 1940 ನವೆಂಬರ್ 29ರಂದು ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. 1940 ಡಿಸೆಂಬರ್‌ನಲ್ಲಿ ಸರ್ಕಾರ ಅವರನ್ನು ಬಿಡುಗಡೆ ಮಾಡಿತು. 1941 ಜನವರಿ 26ರಂದು ಭಾರತ ತನ್ನ ಐತಿಹಾಸಿಕ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿತ್ತು. ಕಲ್ಕತ್ತದ ಎಲ್ಗಿನ್ ರಸ್ತೆಯಲ್ಲಿಯ ಅವರ ಗೃಹಬಂಧನದಿಂದ ಸುಭಾಷರು ತಪ್ಪಿಸಿಕೊಂಡು ಹೋಗಿರುವರು ಎಂಬ ಸುದ್ದಿ ಭಾರತದ ಜನತೆಗೆ ತಿಳಿಯಿತು. ಸುಭಾಷರು ಭಾರತವನ್ನು ಬಿಟ್ಟು ಹೋಗಿರುವರು ಎಂಬ ಸುದ್ದಿ 1941 ನವೆಂಬರ್‌ನಲ್ಲಿ ಬರ್ಲಿನ್ನಿನಿಂದ ಬರಲಾರಂಭಿಸಿತು. ಅವರ ಮಾತಿನಲ್ಲಿಯೇ ಹೇಳುವುದಾದರೆ ತಾಯ್ನಾಡಿನಲ್ಲಿ

ನಡೆಯುತ್ತಿರುವ ಹೋರಾಟಕ್ಕೆ ಹೊರಗಡೆಯಿಂದ ನೆರವು ಪಡೆಯಲು ಹೋಗಿದ್ದರು. ಸುಭಾಷರು ಮೊದಲಿಗೆ ಜರ್ಮನಿಯೊಡನೆ ಮಾತುಕತೆ ಆರಂಭಿಸಿದರು. ಅನಂತರ ಪೂರ್ವದಲ್ಲಿ ಬ್ರಿಟನ್ನಿನ ಶತ್ರುವಾಗಿದ್ದ ಜಪಾನಿನೊಡನೆ ಪರಸ್ಪರ ಸಹಾಯಕ ಮೈತ್ರಿಯನ್ನು ಮಾಡಿಕೊಂಡರು. ಜನವರಿ 1942ರಿಂದ ಬರ್ಲಿನ್ನಿನಿಂದ ನಿಯತವಾಗಿ ರೇಡಿಯೋ ಪ್ರಸಾರ ಆರಂಭಿಸಿದರು. ಇದು ಭಾರತದಲ್ಲಿ ಅತ್ಯಪೂರ್ವ ಉತ್ಸಾಹ ಉಂಟುಮಾಡಿತು. 1942ರ ಅಂತ್ಯದ ವೇಳೆಗೆ ಪೂರ್ವ ಏಷ್ಯದಲ್ಲಿ ಡಚ್, ಫ್ರೆಂಚ್, ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಸಾಹತುಗಳು ಜಪಾನೀಯರ ಧಾಳಿಗೆ ತುತ್ತಾದವು. ಸುಭಾಷರು ಜರ್ಮನ್ ಮತ್ತು ಜಪಾನ್ ಸರ್ಕಾರಗಳ ಸಂಪೂರ್ಣ ಸಹಕಾರದೊಡನೆ 1943ರ ಪ್ರಾರಂಭದಲ್ಲಿ ಜರ್ಮನಿಯಿಂದ ಹೊರಟರು. ಜಲಾಂತರ್ಗಾಮಿ ನೌಕೆಯಲ್ಲಿ ಅಪಾಯಕಾರಿಯಾದ ಮೂರು ತಿಂಗಳ ಯಾನದ ಅನಂತರ 1943ರ ಜುಲೈ 2ರಂದು ಸಿಂಗಪುರ ತಲುಪಿದರು.

ಸಿಂಗಪುರದಲ್ಲಿದ್ದ ಭಾರತೀಯ ಯುದ್ಧ ಕೈದಿಗಳು ಹಾಗೂ ಪೂರ್ವ ಏಷ್ಯದ ಇತರೆಡೆಗಳಲ್ಲಿಯ ಜನರಿಗೂ ಕ್ರಿಯಾಶೀಲನಾಯಕ ಇದ್ದಕ್ಕಿದ್ದಂತೆ ಗೋಚರಿಸಿದ್ದು ಅಮಿತೋತ್ಸಾಹ ಉಂಟುಮಾಡಿತು. ಎರಡು ದಿನಗಳ ತರುವಾಯ ಎಂದರೆ ಜುಲೈ 4ರಂದು ಅವರು ರಾಸ್ ಬಿಹಾರಿ ಬೋಸರಿಂದ ಪೂರ್ವ ಏಷ್ಯದಲ್ಲಿ ಭಾರತೀಯ ಸ್ವಾತಂತ್ರ್ಯ ಚಳವಳಿಯ ಮುಖಂಡತ್ವ ವಹಿಸಿಕೊಂಡರು. ಆಜಾದ್ ಹಿಂದ್ ಫೌಜನ್ನು ಸಂಘಟಿಸಿ (ಇಂಡಿಯನ್ ನ್ಯಾಷನಲ್ ಆರ್ಮಿ) ಆಗಸ್ಟ್ 25ರಂದು ಅದರ ಪ್ರಧಾನ ದಂಡಾಧಿಕಾರಿಯಾದರು. ಅಕ್ಟೋಬರ್ 21ರಂದು ಆಜಾದ್ ಹಿಂದ್‌ನ ತಾತ್ಕಾಲಿಕ ಸರ್ಕಾರ ಘೋಷಿಸಿದರು. ಅದೇ ನವೆಂಬರಿನಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ವಿಮೋಚನೆಯಾಯಿತು. ಅವುಗಳಿಗೆ ಕ್ರಮವಾಗಿ ಷಾಹಿದ್ ಮತ್ತು ಸ್ವರಾಜ್ ದ್ವೀಪಗಳೆಂದು ಪುನರ್ ನಾಮಕರಣಮಾಡಲಾಯಿತು. 1944 ಜನವರಿಯಲ್ಲಿ ಐ.ಎನ್.ಎ.ಯ ಕೇಂದ್ರ ಕಾರ್ಯಸ್ಥಾನವನ್ನು ರಂಗೂನಿಗೆ ವರ್ಗಾಯಿಸಲಾಯಿತು. ದಿಲ್ಲಿ ಚಲೋ ಎಂಬ ಸಮರ ಘೋಷಣೆಯೊಡನೆ ತಾಯ್ನಾಡಿನತ್ತ ಹೊರಟ ಆಜಾದ್ ಹಿಂದ್ ಪಡೆ ಬರ್ಮಾದ ಗಡಿಯನ್ನು ದಾಟಿ, 1944 ಮಾರ್ಚ್ 18ರಂದು ಭಾರತದ ಪ್ರದೇಶವನ್ನು ತಲುಪಿತು. ಅನಂತರ ಕೊಹಿಮಾ ಹಾಗೂ ಇಂಫಾಲವರೆಗೆ ಮುನ್ನುಗ್ಗಿ ಬಂದು ಜೈಹಿಂದ್ ಮತ್ತು ನೇತಾಜಿ ಜಿಂದಾಬಾದ್ ಎಂಬ ಘೋಷಣೆಗಳೊಡನೆ ಅಲ್ಲಿ ಸ್ವತಂತ್ರ ಭಾರತದ ಧ್ವಜ ಹಾರಿಸಲಾಯಿತು. ಈ ಹೊತ್ತಿಗೆ ಹಿರೋಷಿಮಾ ಹಾಗೂ ನಾಗಸಾಕಿಗಳ ಮೇಲಣ ಬಾಂಬ್ ದಾಳಿಯಿಂದಾಗಿ ಜಪಾನ್ ಶರಣಾಯಿತು. ಅನಂತರ ಐ.ಎನ್.ಎ. ಹಿಮ್ಮೆಟ್ಟಬೇಕಾಗಿ ಬಂದು, ಬೋಸರು ಮುಂದಿನ ಕಾರ್ಯಯೋಜನೆಗಾಗಿ ಭಾರತವನ್ನು ಬಿಡಬೇಕಾಗಿ ಬಂತು. ಸಿಂಗಪುರದಿಂದ ಜಪಾನಿಗೆ ಹೋಗುವ ಮಾರ್ಗದಲ್ಲಿ 1945 ಆಗಸ್ಟ್ 18ರಂದು ತೈವಾನಿನ ತೈಪೆ ವಿಮಾನಾಪಘಾತದಲ್ಲಿ ಮಡಿದರೆಂದು ವರದಿಯಾಯಿತು. ವೀರಯೋಧ, ಸಮರ್ಥ ರಾಜತಂತ್ರಜ್ಞ ಸುಭಾಷರಿಗೆ ಆಗ ಇನ್ನೂ ಐವತ್ತು ವರ್ಷಗಳಾಗಿರಲಿಲ್ಲ. ಅವರ ಸಾವಿನ ಬಗ್ಗೆ ಖಚಿತವಾದ ಸಾಕ್ಷ್ಯಾಧಾರಗಳು ಇಲ್ಲ ಎಂಬುದನ್ನು ಭಾರತ ಸರ್ಕಾರ ಒಪ್ಪಿಕೊಂಡಿದ್ದು ಅದರ ಖಚಿತತೆಗಾಗಿ 1956 ಏಪ್ರಿಲ್‌ನಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಸರ್ಕಾರ ಮೇಜರ್ ಜನರಲ್ ಷಾಹನವಾಜ್ ಖಾನ್, ನೇತಾಜಿಯವರ ಹಿರಿಯಣ್ಣ ಎಸ್.ಸಿ.ಬೋಸ್, ಅಂಡಮಾನ್ ನಿಕೋಬಾರ್ ದ್ವೀಪಗಳ ಮುಖ್ಯ ಕಮಿಷನರ್ ಎಸ್.ಎನ್.ಮೈತ್ರಿ ಇವರ ಅಧಿಕೃತ ಸಮಿತಿಯನ್ನು ರಚಿಸಿತು. ಸಮಿತಿ ದೆಹಲಿ, ಕಲ್ಕತ್ತ, ಬ್ಯಾಂಕಾಕ್, ಸೈಗಾನ್ ಮತ್ತು ಟೋಕಿಯೊಗಳಲ್ಲಿ 67 ಸಾಕ್ಷಿಗಳನ್ನು ಪರೀಕ್ಷಿಸಿತು. ನೇತಾಜಿಯವರು ವಿಮಾನ ಅಪಘಾತದಲ್ಲಿ ಮೃತರಾದರು. ಟೋಕಿಯೊದಲ್ಲಿ ರಂಕೋಜಿ ದೇವಾಲಯದಲ್ಲಿರುವ ಚಿತಾಭಸ್ಮ ನೇತಾಜಿಯವರ ಚಿತಾಭಸ್ಮ ಎಂದು ಜನರಲ್ ಷಾಹನವಾಜ್ ಮತ್ತು ಮೈತ್ರಿ ನಿರ್ಧಾರಕ್ಕೆ ಬಂದರು. ಆದರೆ ಭಾರತ ಸರ್ಕಾರ ಈ ಸಮಿತಿಯ ಶಿಫಾರಸುಗಳನ್ನು ಕಾರ್ಯಗತಗೊಳಿಸಲಿಲ್ಲ. ಅವರು ಇದ್ದಕ್ಕಿದಂತೆ ಕಣ್ಮರೆಯಾದ ಪರಿಸ್ಥಿತಿಗಳ ಬಗ್ಗೆ ವಿಚಾರಣೆ ನಡೆಸುವಂತೆ 400ಕ್ಕೂ ಹೆಚ್ಚು ಸದಸ್ಯರು ಭಾರತದ ರಾಷ್ಟ್ರಪತಿಯವರನ್ನು 1970ರಲ್ಲಿ ಒತ್ತಾಯಿಸಿದರು. 1970 ಜುಲೈ 11ರಂದು ಪಂಜಾಬ್ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶ ಜಿ.ಡಿ. ಖೋಸ್ಲ ಅವರ ಏಕ ಸದಸ್ಯ ವಿಚಾರಣಾ ಆಯೋಗ ನೇಮಕಮಾಡಿದ ತನ್ನ ತೀರ್ಮಾನವನ್ನು ಭಾರತ ಸರ್ಕಾರ ಪ್ರಕಟಿಸಿತು. ಈ ಆಯೋಗ ದೆಹಲಿ, ಕಲ್ಕತ್ತ, ಮುಂಬೈಗಳಲ್ಲಿ ಮತ್ತು ಜಪಾನಿನಲ್ಲಿಯೂ ಸಾಕ್ಷ್ಯ ಸಂಗ್ರಹಿಸಿತು.

1942ರಲ್ಲಿ ನೇತಾಜಿಯವರು ಜರ್ಮನಿಯಲ್ಲಿದ್ದಾಗ ಅನೇಕ ವರ್ಷಗಳಿಂದ ಯುರೋಪಿನಲ್ಲಿ ತಮ್ಮ ಸಹಕಾರ್ಯಕರ್ತೆಯಾಗಿದ್ದ ಎಮಿಲ್ ಷೆಂಕಲ್ ಎಂಬಾಕೆಯನ್ನು ವಿವಾಹವಾಗಿದ್ದರು. ಅವರು ಜರ್ಮನಿಯನ್ನು ಬಿಟ್ಟಾಗ ಅವರಿಗೆ ಎರಡು ತಿಂಗಳ ಮಗುವೊಂದಿತ್ತು. ನೇತಾಜಿಯವರ ಪತ್ನಿ ವಿಯನ್ನದಲ್ಲಿ ತಂಗಿದ್ದರು. ನೇತಾಜಿಯವರ ಮಗಳು ಅನಿತಾಬೋಸ್ 1961ರಲ್ಲಿ ಭಾರತ ಯಾತ್ರೆ ಕೈಗೊಂಡಿದ್ದರು. ಈಕೆ ಈಗ ವಿವಾಹವಾಗಿ ಅಮೆರಿಕದಲ್ಲಿ ನೆಲೆಸಿದ್ದಾರೆ. (ಎನ್.ಎಸ್.ಎಸ್.ಪಿ.)

**ಬೌದ್ಧಧರ್ಮ:** ಪ್ರಾಚೀನ ಭಾರತೀಯ ಧರ್ಮಗಳಲ್ಲೊಂದು. ಬುದ್ಧ ಬೋಧಿಸಿದ ಧರ್ಮ. ಭಾರತೀಯ ದರ್ಶನಗಳು ಜಿಜ್ಞಾಸೆಯ ಬಲದಿಂದಲೇ ಬಂದ ವಿಚಾರಗಳಲ್ಲ; ಜೀವನದ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸಿಕೊಳ್ಳಲು ಚಿತ್ತಸ್ಥೈರ್ಯ ಹಾಗೂ ಚಿತ್ತಶುದ್ಧಿಯ ಮಾರ್ಗ ಹುಡುಕುವ ಕಾತರದಿಂದ ಹುಟ್ಟಿಬಂದವು. ಈ ಮಾತಿಗೆ ಉತ್ತಮ ನಿದರ್ಶನ ಬೌದ್ಧಧರ್ಮ. ಜೀವನದಲ್ಲಿ ಅನಿವಾರ್ಯವಾಗಿ ಒದಗುವ ದುಃಖಕ್ಕೆ ಕಾರಣ ಹುಡುಕಿ, ಅದನ್ನು ಕಿತ್ತು ಪರಿಣಾಮ ಇಲ್ಲದಂತೆ ಮಾಡುವುದೇ ಬೌದ್ಧಧರ್ಮದ ಗೊತ್ತುಗುರಿ. ಈ ಧರ್ಮದ ಪ್ರವರ್ತಕ ಶಾಕ್ಯ ಮುನಿ ಬುದ್ಧನಿಗೇ ಬಾಳಿನ ಸಮಸ್ಯೆಗಳ ಒತ್ತಡ ಅತಿಯಾಗಿ, ತನಗೆ ಮಾತ್ರವಲ್ಲದೆ ಲೋಕದ ಎಲ್ಲ ಜನರಿಗೂ ಪರಿಹಾರ ಮಾರ್ಗ ಹುಡುಕಿಕೊಡಲೆಂದೇ ಅವನ ತಪಶ್ಚರ್ಯೆ ಆರಂಭವಾಯಿತೆಂದು ಸಂಪ್ರದಾಯ ಹೇಳುತ್ತದೆ. ದುಃಖದರ್ಶನದಿಂದಲೆ ಬೌದ್ಧದರ್ಶನದ ಪ್ರಥಮ ಪರಿಚ್ಛೇದ ಅಂಕುರವಾಯಿತು; ಪ್ರವರ್ತಕ ತೀರಿಕೊಂಡು ಅನುಯಾಯಿಗಳು ತತ್ತ್ವನಿಶ್ಚಯ ಮಾಡಲು ಹೊರಟಾಗ ಮೂರನೆಯ ಪರಿಚ್ಛೇದ ಉಗಮವಾಯಿತು.

ಬೌದ್ಧಧರ್ಮಕ್ಕೆ ಹಿನ್ನೆಲೆಯಾಗಿ ವೈದಿಕಸಂಸ್ಕೃತಿಯಿದೆ. ಬುದ್ಧನ ಉದಯವಾಗುವಷ್ಟರಲ್ಲೇ ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳು ಸಿದ್ಧವಾಗಿದ್ದುವು. ಸಾಂಖ್ಯದರ್ಶನವೂ ಯೋಗಪದ್ಧತಿಯೂ ಪ್ರಚಲಿತವಾಗಿದ್ದುವು. ವಿವಿಧಮತಗಳನ್ನು ಅನುಸರಿಸುತ್ತಿದ್ದ ತೀರ್ಥಂಕರರೂ ಪರಿವ್ರಾಜಕರು ನಾಡಿನ ತುಂಬ ಇದ್ದರು. ಮಕ್ಕಲಿಗೋಸಾಲನೆಂಬ ಆಜೀವಿಕನೂ ಸಂಜಯಬೆಲಟ್ಠಿ ಪುತ್ತ ಕಕುದಕಚ್ಚಾನ ಮುಂತಾದ ಗಣಾಚಾರ್ಯರೂ ದೊಡ್ಡ ದೊಡ್ಡ ಸಂಘಗಳನ್ನು ವ್ಯವಸ್ಥೆಮಾಡಿಕೊಂಡು ತಮ್ಮತಮ್ಮ ವಿಚಾರಗಳನ್ನು ಪ್ರಚಾರ

ಗೌತಮ ಬುದ್ಧ

ಮಾಡುತ್ತಿದ್ದರು. ಅಂಕಿಚನಜಾಯತನ ಬೋಧಿಸುತ್ತಿದ್ದ ಆರಾಡ ಕಾಲಾಮ, ನೇವಸುಜಾನಾ ಸಂಜಾಯತನವನ್ನು ಬೋಧಿಸುತ್ತಿದ್ದ ಉದ್ದಕರಾಮಪುತ್ತ ಇವರು ಹೆಸರಾಂತ ಯೋಗಿಗಳಾಗಿದ್ದರು. ಕಪಿಲವಸ್ತುವಿನಲ್ಲಿ ಶಾಕ್ಯಪುತ್ರನಾಗಿ ಹುಟ್ಟಿದ ಗೌತಮ ದುಃಖದರ್ಶನದಿಂದ ಮನೆತೊರೆದು ಹೊರಟು ಪರಿವ್ರಾಜಕನಾದಾಗ ಮೊದಲು ಈ ಇಬ್ಬರು ಯೋಗಿಗಳ ಬಳಿ ಹೋಗಿ, ಕೆಲಕಾಲ ಅವರಲ್ಲಿ ನಿಂತು, ಇವರ ಸಮಾಪತ್ತಿಗಳನ್ನೆಲ್ಲ ತಾನೂ ಪಡೆದ. ಆದರೂ ತಾನು ಬಯಸುತ್ತಿದ್ದ ಪರಮಾಭಿಸಂಬೋಧಿ ಅಥವಾ ನಿರ್ವಾಣ ಕೈಗೂಡಲಿಲ್ಲವಾಗಿ ಅವರನ್ನು ಬಿಟ್ಟು ಉರುವಿಲವದ ಕಾಡಿನಲ್ಲಿ ತಾನೇ ಕಠೋರವಾದ ತಪಶ್ಚರ್ಯೆಗೆ ಆರಂಭಿಸಿದ. ಏಳು ವರ್ಷಗಳ ನಿಷ್ಠೆಯ ತಪಸ್ಸಿನ ಫಲವಾಗಿ ಅವನಿಗೆ ಸಂಬೋಧಿ ಒದಗಿತು. ಅಲ್ಲಿಂದ ಮುಂದೆ ಬುದ್ಧನೆನಿಸಿಕೊಂಡ. ತನ್ನ ಸಂಬೋಧಿಯ ತಾತ್ಪರ್ಯ ಜಗತ್ತಿಗೆ ತಿಳಿಸಿ 80ನೆಯ ವಯಸ್ಸಿನಲ್ಲಿ, ಪ್ರ.ಶ.ಪೂ.493ರಲ್ಲಿ ನಿಧನನಾದ.

ಬುದ್ಧ ಜೀವಿತ ಅವಧಿಯಲ್ಲಿ ಮಾಡಿದ ಪ್ರವಚನಗಳಿಂದ ಸಾವಿರಾರು ಮಂದಿ ಪ್ರತಿಭಾವಂತರು ಆತನ ಬಳಿ ಭಿಕ್ಷುಗಳಾಗಿ ಸೇರಿದರು. ಈ ಕೂಟಕ್ಕೆ ದೇಶ, ಕುಲದ ನಿರ್ದೇಶವಿರಲಿಲ್ಲ. ಪ್ರವ್ರಜಿತರಾದ ಶ್ರವಣರು ಶಾಕ್ಯನಾದ ಬುದ್ಧನನ್ನು ಗುರುವೆಂದು ಒಪ್ಪಿದುದರಿಂದ ಅವರಿಗೆ ಶಾಕ್ಯಪುತ್ರ ಶ್ರವಣರೆಂದೂ ಗೋತಮಸಂಘದವರೆಂದೂ ಹೆಸರಾಯಿತು.

ಅವರ ನಡತೆಗಳನ್ನು ನೋಡಿಕೊಳ್ಳುವುದಕ್ಕೆ ನಿಯಮಾವಳಿಯಾಗಲೀ ನಾಯಕನಾಗಲೀ ಇರಲಿಲ್ಲ. ಪ್ರವ್ರಜ್ಯದ ಕಾಲದಲ್ಲಿ ಸಿದ್ಧವಾದ ಪ್ರಾತಿಮೋಕ್ಷವೊಂದೇ ಅವರ ಸಂವರವಾಗಿತ್ತು. ಬುದ್ಧನ ಅದ್ಭುತ ವ್ಯಕ್ತಿತ್ವ ಈ ಚಾತುದ್ದಿಸಭಿಕ್ಖುಸಂಘವನ್ನು ಹಿಡಿದು ನಿಲ್ಲಿಸಿತ್ತು. ಆದರೆ ಬುದ್ಧ ನಿಧನಗೊಂಡೊಡನೇ ಸಂಘ ಒಡೆಯದಂತೆ ತಡೆಗಟ್ಟಲು ವಿಧಿ ನಿಷೇಧಗಳನ್ನು ಕಟ್ಟಳೆಗಳನ್ನು ನಿರ್ದೇಶನಮಾಡುವ ಅಗತ್ಯ ಒದಗಿತು. ಆತನ ಶಿಷ್ಯರಿಗೆ ಸತ್ಥಾ (ಗುರು), ಧಮ್ಮ, ಸಂಘ ಮತ್ತು ಸಿಕ್ಖಾ (ಶಿಕ್ಷೆ, ಪಾಠ)–ಹೀಗೆ ನಾಲ್ಕು ಆದರಣೀಯ ವಿವರಗಳು ಉಂಟಾದುವು. ಬುದ್ಧ ನಿಧನಗೊಂಡ ವರ್ಷವೇ ರಾಜಗೃಹದಲ್ಲಿ ಆತನ ಶಿಷ್ಯರೆಲ್ಲ ಸೇರಿ ಮೊದಲ ಸಂಗೀತಿ ವ್ಯವಸ್ಥೆ ಮಾಡಿದರು. ಇದರಲ್ಲಿ ಸಂಘಜೀವಿಗಳ ನಿಯಮಾವಳಿ ಬುದ್ಧನ ಆದೇಶದಂತೆಯೇ ಸಿದ್ಧವಾಯಿತು (ವಿನಯಪಿಟಕ); ಧರ್ಮದ ವಿವರಗಳು ಬುದ್ಧನಮಾತಿನಲ್ಲೇ ಸಂಗೃಹೀತವಾದುವು (ಸುತ್ತಪಿಟಕ); ಧರ್ಮದ ಆಧಾರವಾಗಿ ಉಳಿದ ತತ್ತ್ವದ ಗಹನ ವಿಚಾರಗಳನ್ನು ಮೂರನೆಯ ಪಿಟಕದಲ್ಲಿ ಕೂಡಿಸಿದರು (ಅಭಿಧಮ್ಮ ಪಿಟಕ). ಹೀಗೆ ರಾಜಗೃಹದ ಪ್ರಥಮ ಭಿಕ್ಷುಸಂಗೀತಿಯಲ್ಲಿ ರೂಪತಳೆದ ತ್ರಿಪಿಟಕವಾಙ್ಮಯವೇ ಬೌದ್ಧಧರ್ಮದ ದೇಹವಾಯಿತು. ಪ್ರವರ್ತಕನಾಗಿ ಶಾಕ್ಯಪುತ್ರ ಬುದ್ಧನೇ ಸ್ಮರಣೆಯಲ್ಲಿ ಉಳಿದ (ಸತ್ಥಾ, ಶಾಸ್ತೃ). ಅವನ ಅನುಯಾಯಿಗಳೆಲ್ಲ ಸೇರಿದ ಒಕ್ಕೂಟ (ಸಂಘ), ಈ ಒಕ್ಕೂಟಕ್ಕೆ ಆಸರೆ, ಆಧಾರವಾಗಿ ನಿರ್ಮಿತವಾದದ್ದು ಧರ್ಮ. ಇದಕ್ಕೆ ಊರುಗೋಲಾಗಿ ಗುರುವಿನ ಉಪದೇಶ (ಸಿಕ್ಖಾ, ಶಿಕ್ಷೆ), ಈ ನಾಲ್ಕರಿಂದ ಬೌದ್ಧಧರ್ಮ ನಿರ್ದಿಷ್ಟವಾಯಿತು. ಬುದ್ಧನನ್ನೇ ಗುರುವೆಂದು ಒಪ್ಪಿ, ದೇಶವನ್ನೇ ನಂಬಿ ಬಾಳಿದ ಭಿಕ್ಷುಗಳು ಉಳಿದ ಭಿಕ್ಷುಗಳಿಂದ ಪ್ರತ್ಯೇಕವಾದ ಒಂದು ಗಣವಾದರು. ಇವರ ನಡತೆಯನ್ನು ಮೆಚ್ಚಿಕೊಂಡು, ಇವರಿಂದ ಬುದ್ಧನ ಉಪದೇಶಗ್ರಹಿಸಿ ಅವನ್ನು ತಮ್ಮ ಬಾಳುವೆಗಳಲ್ಲಿ ಅಳವಡಿಸಿಕೊಳ್ಳಲು ಸಿದ್ಧರಾದ ಮಂದಿ ಮನೆಯಿಲ್ಲದ ಈ ಭಿಕ್ಷುಗಳನ್ನು ಸತ್ಕರಿಸಿ ಇವರಿಂದ ದೀಕ್ಷೆ ಪಡೆದು ಬೌದ್ಧಗೃಹಸ್ಥರಾದರು. ಮೊದಲಿಗೆ ಬೌದ್ಧಧರ್ಮ ಭಿಕ್ಷುಗಳಿಗೆ ಮಾತ್ರ ಸೀಮಿತವಾಗಿತ್ತು. ಕಾಲಕ್ರಮದಲ್ಲಿ ಇದು ನಿಷ್ಠೆಯ ನೆಪದಿಂದ ವ್ಯವಹಾರದಲ್ಲಿ ಪ್ರಸಕ್ತರಾದ ಜನರಿಗೂ ಹರಡಿತು. ಆದರೆ ಭಿಕ್ಷುಗಳಲ್ಲದವರಿಗೆ ಸಂಘದ ವಿಧಿ ನಿಷೇಧಗಳು ಅನ್ವಯವಾಗುವುದಿಲ್ಲ. ಅವರಿಗಾಗಿ ಬೇರೆ ಸಾಮಾನ್ಯಶೀಲಗಳು ಸಿದ್ಧವಾದುವು. ಅವರ ಪಾಲಿಗೆ ಬುದ್ಧ, ಧರ್ಮ, ಸಂಘ (ಶ್ರಾವಕಸಂಘ, ಭಿಕ್ಷುಸಮೂಹ)–ಈ ಮೂರೂ ಮಾನ್ಯವಾದವು (ಅಗ್ಗದಕ್ಖಿಣೇಯ್ಯ). ತಮ್ಮ ಜೀವನವನ್ನು ಚೊಕ್ಕ ಮಾಡಿಕೊಳ್ಳಲು ಈ ಮೂರರಲ್ಲಿ ಶರಣು ಹೋಗಬೇಕೆಂಬ ಪದ್ಧತಿ ಬೆಳೆದುಬಂದಿತು. ಇದು ಇಂದು ಸರಣಗಮನವೆನಿಸಿ ಕೊಳ್ಳುತ್ತದೆ. ಬೌದ್ಧಮತದ ದೀಕ್ಷೆಯುಳ್ಳವರು ಬುದ್ಧಂ ಸರಣಂ ಗಚ್ಛಾಮಿ, ಧಮ್ಮಂ ಸರಣಂ ಗಚ್ಛಾಮಿ, ಸಂಘಂ ಸರಣಂ ಗಚ್ಛಾಮಿ ಎಂದು ಮೂರಾವರ್ತಿ ದಿನವೂ ಜ್ಞಾಪಿಸಿಕೊಳ್ಳುತ್ತಾರೆ. ಈ ಮೂರರಲ್ಲಿಯೂ ಆತ್ಮಸಮರ್ಪಣೆ (ಅತ್ತಸನ್ನಿಯ್ಯಾತನ) ಮಾಡಿಕೊಳ್ಳುವುದು, ಅವುಗಳಲ್ಲೇ ಮನಸ್ಸನ್ನು ನಿಲ್ಲಿಸುವುದು (ತಪ್ಪರಾಯನ), ಶಿಷ್ಯಭಾವದಿಂದ ಅವನ್ನು ಕಾಣುವುದು (ಸಿಸ್ಸಭಾವೂಪಗಮನ) ಮತ್ತು ಅವುಗಳಿಗೆ ಸನ್ಮಾನ ಮಾಡುವುದು (ಪಣಿಪಾತ) ಸರಣಗಮನದ ತಾತ್ಪರ್ಯ. ಇವನ್ನು ರತ್ನತ್ರಯವೆಂದು ವ್ಯವಹರಿಸುತ್ತಾರೆ.

ಬೌದ್ಧಧರ್ಮದ ಜಿಜ್ಞಾಸೆಯ ಸಲುವಾಗಿ ಬೌದ್ಧಿಕವಾದ ಒಂದು ದೃಷ್ಟಿ (ದಿಟ್ಠಿ)ಯೂ ಉಂಟು; ಚಿತ್ತಶುದ್ಧಿಗಾಗಿ ಮಾರ್ಗವೂ (ಪಟಿಪದ) ಉಂಟು. ಈ ಎರಡೂ ಧರ್ಮದ ಇಕ್ಕೆಲಗಳೆಂದು ಮಹಾನಿದ್ದೇಸ ಬಣ್ಣಿಸುತ್ತದೆ. ಎರಡಕ್ಕೂ ಸಮನ್ವಯ ಮಾಡುವ ಸಲುವಾಗಿ ಎರಡನ್ನೂ ಒಳಗೊಂಡ ಶಾಸನ ಸಿದ್ಧವಾಯಿತು (ಇಮಸ್ಮಿಂ ಸಾಸನೇ, ಇಮಸ್ಮಿಂ ಧಮ್ಮ ವಿನಯೇ). ಈ ಶಾಸನದಲ್ಲಿ ಮೂರು ಬಗೆಗಳು. ಮೊದಲನೆಯದು ಬುದ್ಧನ ಮಾತುಗಳನ್ನು ಕೇಳಿ ಮನನಮಾಡಿ. ಅರ್ಥಮಾಡಿಕೊಳ್ಳುವುದು (ಪರಿಯತ್ತಿಸಾಸನ); ಎರಡನೆಯದು ಬುದ್ಧ ತೋರಿಸಿದ ದಾರಿಯಲ್ಲಿ ನಡೆದು ಆತ ಪಡೆದ ಸಿದ್ಧಿಗಳನ್ನು ಪಡೆಯುವುದು (ಪಟಿಪತ್ತಿಸಾಸನ); ಮೂರನೆಯದು ಬುದ್ಧವಚನ ಮಾರ್ಗಗಳೆರಡಕ್ಕೂ ಮೂಲಭೂತವಾದ ತತ್ತ್ವವನ್ನು ಒಳಹೊಕ್ಕು ಸಾಕ್ಷಾತ್ಕರಿಸಿಕೊಳ್ಳುವುದು (ಪಟವೇಧಿ–ಸಾಸನ) ಶಾಸನವೆಂಬ ಪದವನ್ನು ಬುದ್ಧವಚನವೆಲ್ಲಕ್ಕೂ ಕೆಲವುವೇಳೆ ಅನ್ವಯಿಸುತ್ತಾರೆ. ನಿದರ್ಶನಕ್ಕೆ ಸುತ್ತ, ಗೆಯ್ಯ, ವೆಯ್ಯಾಕರಣ, ಗಾಥಾ, ಉದಾನ, ಇತಿವುತ್ತಕ, ಜಾತಕ, ಅಬ್ಭುತ–ಧಮ್ಮ ಮತ್ತು ವೇದಲ್ಲ–ಈ ಒಂಬತ್ತು ಬಗೆಯ ತ್ರಿಪಿಟಕ ವಾಙ್ಮಯಕ್ಕೆ ನವಂಗಬುದ್ಧಸಾಸನವೆಂದು ಹೆಸರು. ಮೇಲೆ ಹೇಳಿದ ಅರ್ಥದಲ್ಲಿ ಶಾಸನವನ್ನು ಶಿಕ್ಷೆ (ಸಿಕ್ಖ) ಎಂದು ವ್ಯವಹರಿಸುತ್ತಾರೆ. ಈ ಶಿಕ್ಷಣ ಮೂರುಬಗೆ ಎಂದು ಸಂಪ್ರದಾಯ ಹೇಳುತ್ತದೆ. ದಿನದಿನದ ನಡತೆಯನ್ನು ಚೊಕ್ಕಮಾಡಿಕೊಳ್ಳುವುದು ಅಧಿಸೀಲ ಸಿಕ್ಖಾ; ಹರಿಯುವ ಮನಸ್ಸನ್ನು ಬಿಗಿಹಿಡಿದು ಅದರ ಕ್ಲೇಶಗಳನ್ನು ಕಳಚಿ ಒಗೆದು ತೊಳೆಯುವುದು ಅಧಿಚಿತ್ತಸಿಕ್ಖಾ; ಪ್ರಜ್ಞೆಯನ್ನು ಉದ್ಬೋಧನೆ ಮಾಡಿ ಅದರಿಂದ ಯಥಾರ್ಥಜ್ಞಾನ ಪಡೆದು ಮುಕ್ತರಾಗುವುದು ಅಧಿಪಾಜ್ಞಾ ಸಿಕ್ಖಾ. ಶೀಲ ಆಧಾರ; ಚಿತ್ತ ಸಾಧನ; ಪ್ರಜ್ಞೆ ತಾರಕ–ಈ ಮೂರೂ ಸೇರಿದರೆ ಅದು ವಿಶುದ್ಧಿಮಾರ್ಗ ಎನಿಸಿಕೊಳ್ಳುತ್ತದೆ (ಏಸ ಮಗ್ಗೋ ವಿಸುದ್ಧಿಯಾ). ಬೌದ್ಧಧರ್ಮಕ್ಕೆ ಪರ್ಯಾಯಪದ ವಿಶುದ್ಧಿಮಾರ್ಗ.

ಬೌದ್ಧಧರ್ಮದಲ್ಲಿ ದೃಷ್ಟಿ ಶಾಸನಕ್ಕೆ ಅಥವಾ ಮಾರ್ಗಕ್ಕೆ ಅಧೀನವಾಗಿರುವುದೊಂದು ವಿಶೇಷ. ಪ್ರಮುಖವಾಗಿ ಬೌದ್ಧಧರ್ಮವೆಂದರೆ ಉದ್ಯಮ, ಸಾಧನೆ; ಮನಸ್ಸಿನಿಂದ ತತ್ತ್ವವನ್ನು ಗ್ರಹಿಸುವುದಕ್ಕಿಂತ ಮನಸ್ಸನ್ನೇ ಬಿಗಿಹಿಡಿದು ಅದರ ನಿರೋಧದಿಂದ ಒದಗುವ ಶಾಂತಿಯ ಸುಖವನ್ನು ಅನುಭವಿಸುವುದು ಹೆಚ್ಚಿನದು. ಬೌದ್ದರು ಬುದ್ಧ ಹೇಳಿದ ಧರ್ಮ ವರ್ಣಿಸುವಾಗ ಸನ್ದಿಟ್ಠಿಕೋ (ಈ ಜನ್ಮದಲ್ಲೇ ಫಲಿಸುವಂಥದು), ಅಕಾಲಿಕೋ (ಬೇಗನೇ ಫಲಿಸುವಂಥದು), ಏಹಿಪಸ್ಸಿಕೋ (ಬಂದುನೋಡಿ ಅನುಭವಿಸತಕ್ಕದ್ದು) ಓಪನಯಿಕೋ (ಗುರಿಮುಟ್ಟಿಸತಕ್ಕದ್ದು) ಮತ್ತು ಪಚ್ಚತ್ತಂ ವೇದಿತಬ್ಬೋ ವಿಞ್ಞೂಹಿ (ಒಬ್ಬೊಬ್ಬರೂ ತಮ್ಮತಮ್ಮ ಅನುಭವದಿಂದಲೇ ತಿಳಿಯತಕ್ಕದ್ದು) ಎಂಬ ಮಾತುಗಳನ್ನು ಉಪಯೋಗಿಸುತ್ತಾರೆ. ತತ್ತ್ವವನ್ನು ಅನುಭವದಿಂದ ಅಥವಾ ಗುರುಮುಖೇನ ಅಥವಾ ಶಾಸ್ತ್ರವ್ಯವಸಾಯದಿಂದ ತಿಳಿಯುವುದು ಮೊದಲ ಹೆಜ್ಜೆ; ಕರ್ತವ್ಯವೇನೆಂಬುದನ್ನು ಅರಿಯುವುದು ಎರಡನೆಯ ಹೆಜ್ಜೆ, ಅದನ್ನು ಮಾಡಿ ಕೃತಾರ್ಥರಾಗುವುದು ಮೂರನೆಯ ಹೆಜ್ಜೆ. ಮೊದಲನೆಯದು ಉಳಿದ ಎರಡಕ್ಕೆ ಸಹಕಾರಿಯಾಗಿ ನಿಲ್ಲಬೇಕಷ್ಟೆ. ಪಾಳಿ ಪರಿಭಾಷೆಯಲ್ಲಿ ಈ ಮೂರನ್ನು ಸಚ್ಚ (ಸತ್ಯ), ಕಿಚ್ಚ (ಮಾಡುವಕೆಲಸ) ಮತ್ತು ಕತ (ಮಾಡಿದ ಕೆಲಸ) ಎಂದು ನಿರ್ದೇಶಿಸುತ್ತಾರೆ.

ಈ ವಿಭಾಗ ಬುದ್ಧ ಮೊತ್ತಮೊದಲು ಉಪದೇಶಿಸಿದ ಧರ್ಮಚಕ್ರ ಪ್ರವರ್ತನ ಸೂತ್ರದಲ್ಲಿ ಬಂದಿದೆ. ಈ ಸೂತ್ರವೇ ಬೌದ್ಧಧರ್ಮದ ರೂಪುರೇಷೆಗಳನ್ನು ನಿರೂಪಣೆಮಾಡಿದೆ. ಇದರಲ್ಲಿ ನಾಲ್ಕು ಸತ್ಯಗಳ, ಮೂರು ಸ್ಥಿತಿಗಳ ಮಧ್ಯ ಮಾರ್ಗದ ಪ್ರಸ್ತಾಪವಿದೆ. ದುಃಖ, ದುಃಖಸಮುದಯ, ದುಃಖನಿರೋಧ, ದುಃಖನಿರೋಧಗಾಮಿನೀ ಪಟಿಪದಾ–ಈ ನಾಲ್ಕು ಆರ್ಯಸತ್ಯಗಳನ್ನು ಮೂರು ಸ್ಥಿತಿಗಳಲ್ಲಿ ಅರಿತು ಸಾಧಿಸಿದರೆ ಹನ್ನೆರಡು ಪ್ರಕಾರಗಳು ಸಿದ್ಧವಾಗುತ್ತವೆ; ಇದನ್ನು ತ್ರಿಪರಿವರ್ತದ ದ್ವಾದಶಾಕಾರದ ಧರ್ಮಚಕ್ರವೆಂದು ಬಣ್ಣಿಸುತ್ತಾರೆ. ಮೊದಲನೆಯದು ಪರಿವರ್ತ ಸಚ್ಚ, ಎರಡನೆಯದು ಕಿಚ್ಚ, ಮೂರನೆಯದು ಕತ–ಸತ್ಯ.

| **ಮೊದಲ ಪರಿವರ್ತ** | **ಎರಡನೆಯ ಪರಿವರ್ತ** | **ಮೂರನೆಯ ಪರಿವರ್ತ** |
|---|---|---|
| 1 ದುಖಃ | ಪರಿಜಯ್ಯ (ತಿಳಿಯಬೇಕಾದುದು) | ಪರಿಜಾತ(ತಿಳಿದುದು) |
| 2 ದುಖಃಸಮುದಯ | ಪಹಾತಬ್ಬ (ನೀಗಿಸಬೇಕಾದುದು) | ಪಹಾತಬ್ಬ(ನೀಗಿಸಿದುದು) |
| 3 ದುಖಃನಿರೋಧ | ಸಚ್ಚಿಕಾತಬ್ಬ (ಸಾಕ್ಷತ್ಕರಿಸಿಕೊಳ್ಳಬೇಕಾದುದು) | ಸಚ್ಚಿಕತ (ಸಾಕ್ಷಾತ್ಕರಿಸಿಕೊಂಡುದು) |
| 4 ಪಟಿಪದಾ | ಭಾವೇತಬ್ಬ (ಮಾಡಬೇಕಾದುದು) | ಭಾವಿತ(ಮಾಡಿದುದು) |

ಈ ನಾಲ್ಕು ಸತ್ಯಗಳನ್ನು ಆರ್ಯಸತ್ಯಗಳೆಂದು ವ್ಯವಹರಿಸುವುದರಲ್ಲಿ ಔಚಿತ್ಯವಿದೆ. ಆರ್ಯ ಎಂದರೆ ನಿರ್ವಿವಾದವಾದುದು ಎಂದರ್ಥವೆಂದು (ಅವಿಸಂವಾದಕಾನಿ) ಪಾಳಿ ಟೀಕಾಕಾರರು ಹೇಳುತ್ತಾರೆ. ಇವಕ್ಕೆ ಬುದ್ಧಸತ್ಯಗಳೆಂದು (ಅರಿಯಸ್ಸ ಸಚ್ಚಾನಿ) ಇನ್ನೊಂದರ್ಥ. ವಾಚಾಸತ್ಯ, ವಿರತಿಸತ್ಯ, ಸೃಷ್ಟಿಸತ್ಯಗಳಿಂದ ಪೃಥಕ್ಕರಿಸಲು ಇವನ್ನು ಆರ್ಯಸತ್ಯಗಳೆಂದರು. ಈ ನಾಲ್ಕು ಸತ್ಯಗಳನ್ನು ಪದ–ಅರ್ಥದಿಂದ (ವಚನತ್ಥತೋ), ಲಕ್ಷಣಗಳಿಂದ (ಲಕ್ಖಣತೋ), ಕ್ರಮನಿರೂಪಣೆಯಿಂದ (ಕಮತೋ), ಅವುಗಳ ವೈವಿಧ್ಯದಿಂದ (ನಾನತ್ತತೋ), ವಿಭಾಗಗಳಿಂದ (ಕಮವಿತ್ಥಾರತೋ), ಸಂಕ್ಷೇಪದಿಂದ (ಸಂಖೇಪತೋ), ಭೇದಗಳಿಂದ (ಪರಿಚ್ಛೇದತೋ), ಗಣನೆಯಿಂದ (ಗಣನತೋ). ಏಕತ್ವದಿಂದ (ಏಕತ್ತತೋ), ಸಂಗ್ರಹದಿಂದ (ಸಂಗಹತೋ) ತಿಳಿಯಬೇಕೆಂದು ವ್ಯಾಖ್ಯಾನಕಾರ ಬುದ್ಧಘೋಷಾಚಾರ್ಯ ಹೇಳುತ್ತಾನೆ.

ಮೊದಲ ಮೂರು ಸತ್ಯಗಳು ಜ್ಞಾನಕ್ಕೆ ಸಂಬಂಧಿಸಿದವು. ಸಂಸಾರದ ಪರಾಮರ್ಶೆಯಿಂದ ಪ್ರವೃತ್ತಿಗಳನ್ನು ಶುದ್ಧಗೊಳಿಸಿ ಸಂಕಲ್ಪ ಸ್ಥಿರಪಡಿಸಿಕೊಳ್ಳಲು ಈ ಜ್ಞಾನದ ಅಗತ್ಯವಿದೆ. ಅಭಿದಮ್ಮ ಇದಕ್ಕೆ ಸಹಕಾರಿಯಾಗುತ್ತದೆ. ದುಃಖದ ವಿಶ್ಲೇಷಣೆಯಲ್ಲಿ ಬುದ್ಧ ಕಂಡುಕೊಂಡ ತತ್ತ್ವವೆಂದರೆ ಯಾವುದು ಉತ್ಪನ್ನವಾಗಿದೆಯೋ ಅದು ನಿರೋಧವೂ ಆಗುತ್ತದೆ (ಯಂ ಕಿಂಚಿ ಸೂದಯ ಧಮ್ಮಂ ಸಬ್ಬಂ ತಂ ನಿರೋಧಧಮ್ಮಂ) ಎಂಬುದು. ದುಃಖ ಪ್ರವೃತ್ತವಾಗಿದ್ದರೆ ಅದಕ್ಕೆ ಕಾರಣವಿದ್ದೇ ಇರಬೇಕು; ಕಾರಣದಿಂದ ದುಃಖ ಉಂಟಾಗಿದ್ದರೆ ಕಾರಣವನ್ನು ಕಳೆದರೆ ಕಾರ್ಯವಾದ ದುಃಖವೂ ಕಳೆಯಬೇಕು. ದುಃಖ ನಿಜವಾದರೆ ದುಃಖದ ಸಮುದಾಯವೂ ನಿಜವೇ, ದುಃಖ ನಿರೋಧ ಸಾಧ್ಯವೆಂಬುದೂ ನಿಜವೇ. ಈ ತತ್ತ್ವದರ್ಶನದಿಂದ ಬೌದ್ಧದರ್ಶನಕ್ಕೆ ವಿಶಿಷ್ಟವಾದ ಕ್ಷಣಿಕವಾದ (ಅನಿತ್ಯತಾವಾದ) ಮತ್ತು ಅನಾತ್ಮವಾದ (ನೈರಾತ್ಮವಾದ) ಇವು ಪ್ರಸ್ತುತವಾಗುತ್ತವೆ. ದುಃಖ, ಅನಿತ್ಯ, ಅನಾತ್ಮ –ಇವು ಬೌದ್ಧದರ್ಶನದ ತತ್ತ್ವತ್ರಯಗಳು. ಮನುಷ್ಯನೂ ವಿಶ್ವದಂತೆ ಸಂಘಾತ ತತ್ತ್ವವೇ; ರೂಪ, ವೇದನಾ, ಸಂಜ್ಞಾನ, ಸಂಸ್ಕಾರ, ವಿಜ್ಞಾನಗಳೆಂಬ ಪಂಚ ಸ್ಕಂಧಗಳ ಸಮುದಯವೇ ಮನುಷ್ಯ. ಈ ಐದನ್ನು ಬಿಟ್ಟು ಆರನೆಯದಾದ ಆತ್ಮ ಅಥವಾ ಚೈತನ್ಯ ಇದೆಯೆಂಬುದಕ್ಕೆ ಯಾವ ಗಮಕವೂ ಇಲ್ಲ.

ಈ ಐದು ಸ್ಕಂಧಗಳು ವ್ಯಕ್ತಿಗತವಾದ ಆರು ಆಯತನಗಳ (ಚಕ್ಷು, ಶ್ರವಣ, ಘ್ರಾಣ, ಜಿಹ್ವೆ, ಕಾಯ, ಮನಸ್ ಇವಕ್ಕೆ ಪಾಳಿಯಲ್ಲಿ ಅಜ್ಝತ್ತಿಯಂತಿಕಾಯನ ಎಂದು ಹೆಸರು) ಮತ್ತು ಹೊರಸಂಸಾರದ ಆರು ಆಯತನಗಳ (ರೂಪ, ಶಬ್ದ, ಗಂಧ, ರಸ, ಸ್ಪರ್ಶ, ಚಿತ್ತ ಇವಕ್ಕೆ ಬಹಿರಾಯತನ ಎಂದು ಹೆಸರು) ಸಂಬಂಧ ರೂಢಿಸಿದಾಗ ಉಪಾದಾನಸ್ಕಂಧಗಳೆನಿಸಿ ಕೊಳ್ಳುತ್ತವೆ. ಸ್ಕಂಧಗಳು ಉಪಾದಾನಗಳಾಗಿ ಪರಿಣಮಿಸುವುದೇ ಸಂಸಾರದ ಉಗಮ. ಉಪಾದಾನಸ್ಕಂಧಗಳಿಂದ ಉಪಾದಾನದ ಗುಣ ಹೋದರೆ ಅದು ನಿರ್ವಾಣ. ಹೀಗೆ ಶುಷ್ಕವಾದ ಸ್ಕಂದಗಳು ಅಳಿದರೆ ಅದು ಪರಿನಿರ್ವಾಣ. ಶಾಕ್ಯಮುನಿ ಗಯೆಯ ಬೋಧಿವೃಕ್ಷದ

ಅಡಿಯಲ್ಲಿ ಕುಳಿತು ಸಂಬೋಧಿ ಪಡೆದಾಗ ನಿರ್ವಾಣ; ಬುದ್ಧನಾಗಿ ಕುಶಿನಾರದಲ್ಲಿ ನಿಧನನಾದಾಗ ಪರಿನಿರ್ವಾಣ. ಜೀವನ್ಮುಕ್ತಿ, ವಿದೇಹಮುಕ್ತಿಗಳಿದ್ದಂತೆ, ನಿತ್ಯದ ವ್ಯವಹಾರದಲ್ಲಿ ಪಂಚಕಾಮಗುಣಿಕರಾಗದಿಂದ ಉಪಾದಾನಗಳು ವ್ಯವಸ್ಥೆಗೊಳ್ಳುತ್ತವೆ. ಹೊರ ಆಯತನದ ವಿವರಗಳನ್ನು ಬಯಸುವಾಗ (ವತ್ಥುಕಾಮ ಮತ್ತು ಅವನು ಅನುಭವಿಸಿ ಆನಂದವನ್ನು ಪಡೆಯಲು ಬಯಸುವಾಗ (ಕಿಲೇಸ ಕಾಮ ನಮಗೆ ಬಯಕೆಗಳ ಆಗು (ಉಸ್ಸಾದ), ಹೋಗು (ನಿಸ್ಸರಣ), ಗತಿ (ಆದೀನವ)ಗಳ ಜ್ಞಾನವಿರುವುದಿಲ್ಲ. ಆತ್ಮವೆಂಬ ವಿಷಯಿಯ ಕಲ್ಪನೆ, ಆತ್ಮದ್ದೆಂಬ (ಹತ್ತನೆಯ) ವಿಷಯಗಳ ಕಲ್ಪನೆ ಎದ್ದು ದುಃಖವನ್ನು ಒದಗಿಸುತ್ತವೆ. ಈ ಸಕ್ರಮವಾದ ದುಃಖಸಮಯವನ್ನು ಬುದ್ಧ ತಾನು ಸಂಬೋಧಿ ಪಡೆದ ರಾತ್ರಿ ಆಶೇಷವಾಗಿ ಅರಿತ. ಇದಕ್ಕೆ ಪತ್ರೀತ್ಯಸಮುತ್ಪಾದ (ಪಟಿಚ್ಚಸಮುಪ್ಪಾದ) ಎಂದು ಹೆಸರು. ಇದನ್ನು ದ್ವಾದಶಪದಿಕವೆಂದು ಪ್ರತ್ಯಯಾಕಾರವೆಂದು ಬಣ್ಣಿಸುತ್ತಾರೆ. ಹನ್ನೆರಡು ಹೆಜ್ಜೆಗಳಲ್ಲಿ ಒಂದರಿಂದ ಇನ್ನೊಂದು ಬಂದಂತೆ ಪತ್ರೀತ್ಯಸಮುತ್ಪಾದದ ತತ್ತ್ವ. ಅವಿದ್ಯೆ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನಾ, ತೃಷ್ಣಾ, ಉಪಾದಾನ, ಭವ, ಜಾತಿ, ಜರಾ ಮರಣ–ಇದು ದುಃಖಸ್ಕಂಧದ ಸಮುದಾಯ. ಅವಿದ್ಯೆ ಅಥವಾ ಅಜ್ಞಾನ ಈ ದುಃಖಸಮಯಕ್ಕೆ ಮೂಲಕಾರಣ ವಾದುದರಿಂದ ಇದನ್ನು ನಿವಾರಿಸಿದರೆ ದುಃಖನಿರೋಧವಾದಂತೆಯೇ ದುಃಖಸಮುದಾಯವನ್ನು ಸ್ಥೂಲವಾಗಿ ಮರುಕಳಿಸುವ ಬಯಕೆ (ಪೋನೋಬ್ಬವಿಕ–ತಣ್ಹಾ)ಯಿಂದ ವಿವರಿಸಿ ದುಃಖ ನಿರೋಧವನ್ನು ಮುಕ್ತಿಯೆಂದೂ ಅನಾಲಯವೆಂದೂ ಬಣ್ಣಿಸುತ್ತಾರೆ. ಸಂಬೋಧಿಯ ಸಮಯದಲ್ಲಿ ಶಾಕ್ಯಮುನಿಗೆ ಈ ಜ್ಞಾನದರ್ಶನ (ಞಾಣದಸ್ಸನ) ಒದಗಿದಾಗ ತನ್ನ ಚಿತ್ತ ವಿಮುಕ್ತವಾಯಿತೆಂದು (ಮೇ ಚೇತೋ ವಿಮುಕ್ತಿ) ಆತನೇ ಉದಾನ ಒಂದರಲ್ಲಿ ನಿರೂಪಿಸಿದ್ದಾನೆ. ಇದೇ ಅಮೃತಾಧಿಗಮವೆಂದೂ ಬ್ರಹ್ಮಚರ್ಯಪರ್ಯವಸಾನವೆಂದೂ ಹೇಳಿದ್ದಾನೆ. ಆತ್ಮದ ಕಲ್ಪನೆ ಇಲ್ಲಿ ಅಳಿಯುತ್ತದೆ (ಸಕ್ಕಾಯ ನಿರೋಧ). ಲೋಭ, ದ್ವೇಷ, ಮೋಹಗಳ ಗೊಂದಲ ಹರಿದು ತೃಷ್ಣೆಯ ಬಂಧನ ಕಡಿದು ಬೀಳುತ್ತದೆ, ಎಲ್ಲ ಭ್ರಮೆಗಳ (ಮಜ್ಞತ್ತ) ಅಹಂಕಾರ–ಮಮಕಾರಗಳ, ಮಾನಾಭಿನಿವೇಶದ (ಮಾನಾನುಸಯ) ವಿ–ರಾಗದಿಂದ, ನಿರೋಧದಿಂದ, ತ್ಯಾಗದಿಂದ ವಿಮುಕ್ತನಾದರೆ ಈ ಸಮುದಾಯದ ಅಸ್ತಂಗಮವಾಗುತ್ತದೆ. ಭಾರ, ಭಾರ ಹೊತ್ತವ ಭಾರಹೊತ್ತ ಬಗೆ, ಭಾರ ಇಳಿಸುವ ಬಗೆ ಹೇಳುತ್ತೇನೆಂದು ಸಂಯುಕ್ತನಿಕಾಯದ ಖಂದವಗ್ಗದಲ್ಲಿ ಬುದ್ಧವಚನವಿದೆ.

ಕಂಚಿನ ಬುದ್ಧ (5ನೆಯ ಶತಮಾನ), ಸುಲ್ತಾನ್‌ಗಂಜ್

ಭಾರ ಇಳಿಸುವ ಬಗೆಯೇ ಬೌದ್ಧಧರ್ಮದ ಮುಖ್ಯರಸ. ಇದನ್ನೇ ಮಾರ್ಗವೆಂದೂ ಪ್ರತಿಪದವೆಂದೂ ವ್ಯವಹರಿಸುತ್ತಾರೆ. ಮಧ್ಯಮಾರ್ಗ (ಮಜ್ಝಿಮಾ ಪಟಿಪದಾ)ವನ್ನೇ ತಥಾಗತ ಹೇಳಿದುದೆಂದು ಸಂಪ್ರದಾಯ ಹೇಳುತ್ತದೆ. ಅಶೋಕನ ಶಿಲಾಶಾಸನವೊಂದರಲ್ಲಿ ಮಧ್ಯವನ್ನೇ ಅನುಸರಿಸೋಣ (ಮಧಂ ಪಟಿಪದಯೆಮ) ಎಂಬ ಮಾತಿದೆ. ಮಧ್ಯವೆಂದರೆ ಎರಡು ಕೊನೆಗಳನ್ನೂ ಬಿಟ್ಟು ನಿಂತುದೆಂದರ್ಥ (ಉಭೋ ಅಂತೇ ಅನುಪಗಮ್ಮ). ಕಾಮಸುಖಾನುಯೋಗ ಚಿತ್ತವೃತ್ತಿ ಒಂದು ಕೊನೆ, ಪೃಥಗ್ಜನರು ಎಂದರೆ ಸಾಮಾನ್ಯಜನರು ಇದನ್ನು ಅನುಸರಿಸುತ್ತಾರೆ. ಇನ್ನೊಂದು ಕೊನೆ ದೇಹವನ್ನು ದಂಡಿಸಿ ದುಃಖಪಡುವುದು. ಲೋಕವ್ಯಾಪಾರದಲ್ಲಿ ಪ್ರಸಕ್ತರಾಗಿ ವಿಷಯ ಸುಖಗಳನ್ನೆ ಅರಸುತ್ತ ಹೋಗುವ ದಾರಿಯೂ ಅನರ್ಥಕಾರಿ, ಲೋಕವಿಮುಖರಾಗಿ ಕಠೋರವಾದ ಕಾಯಕ್ಲೇಶ ತಂದುಕೊಳ್ಳುವ ದಾರಿ ಅನರ್ಥಕಾರಿ. ಎರಡನ್ನೂ ಬಿಟ್ಟು ಮಧ್ಯಮಾರ್ಗ ಹಿಡಿಯಬೇಕೆಂದು ಬುದ್ಧನ ಆದೇಶ. ಈ ಮಧ್ಯಮಾರ್ಗ ಅಷ್ಟಾಂಗಮಾರ್ಗ (ಅಟ್ಠಂಗಿಕೊ ಮಗ್ಗೋ) ಎನ್ನುತ್ತಾರೆ. ಈ ಎಂಟು ಅಂಗಗಳು ಯಾವುವೆಂದರೆ ಸರಿಯಾದ ದೃಷ್ಟಿ (ಸಮ್ಮಾದಿಟ್ಠಿ), ಸರಿಯಾದ ಸಂಕಲ್ಪ (ಸಮ್ಮಾಸಂಕಪ್ಪ), ಸರಿಯಾದ ಮಾತು (ಸಮ್ಮಾವಾಚಾ), ಸರಿಯಾದ ಕೆಲಸ (ಸಮ್ಮಾಕಮ್ಮಂತ), ಸರಿಯಾದ ಜೀವನೋಪಾಯ (ಸಮ್ಮಾ ಅಜೀವೋ), ಸರಿಯಾದ ವ್ಯಾಯಾಮ (ಸಮ್ಮಾವಾಯಾಮೋ), ಸರಿಯಾದಸ್ಮೃತಿ (ಸಮ್ಮಾಸತಿ), ಸರಿಯಾದ ಸಮಾಧಿ (ಸಮ್ಮಾ ಸಮಾಧಿ), ದುಃಖ, ದುಃಖ ಸಮುದಯ, ದುಃಖನಿರೋಧ ಮಾರ್ಗ ಈ ನಾಲ್ಕು ಸತ್ಯಗಳನ್ನು ತಿಳಿಯುವುದೇ ದೃಷ್ಟಿ. ಕಾಮಗಳಿಂದ ವಿಮುಖರಾಗುವುದು, ದ್ವೇಷಮಾಡದಿರುವುದು ಅಥವಾ ಮೈತ್ರಿ, ಹಿಂಸೆ ಮಾಡದಿರುವುದು ಇವು ತ್ರಿವಿಧಸಂಕಲ್ಪ. ಸುಳ್ಳು ಪೈಶುನ್ಯ, ಮನಸ್ಸು ನೋಯಿಸುವ ಮಾತು, ವ್ಯರ್ಥಾಲಾಪ ಇವುಗಳಿಂದ ದೂರಾಗಿರುವುದು ಸರಿಯಾದ ಮಾತು. ಕೊಲ್ಲದಿರುವುದು, ಕಳುವು ಮಾಡದಿರುವುದು, ಕಾಮಿಯಾಗದಿರುವುದು ಇವು ಸರಿಯಾದ ಕೆಲಸ. ಕೆಟ್ಟಕೆಲಸದಿಂದ ಕಷ್ಟಪಡದೆ, ಮೋಸದಿಂದ ಧನಾರ್ಜನೆ ಮಾಡದೆ ಇರುವುದು ಜೀವನೋಪಾಯ. ಏಳದಿರುವ ಪಾಪಪ್ರವೃತ್ತಿಗಳನ್ನು ಏಳದಂತೆಮಾಡುವುದು (ಸಂವರ), ಎದ್ದ ಪಾಪಪ್ರವೃತ್ತಿಗಳನ್ನು ಹೋಗಲಾಡಿಸುವುದು (ಪಹಾನ), ಏಳದಿರುವ ಕುಶಲ ಪ್ರವೃತ್ತಿಗಳು ಏಳುವಂತೆ ಮಾಡುವುದು (ಭಾವನಾ), ಎದ್ದ ಕುಶಲಪ್ರವೃತ್ತಿಗಳು ಉಳಿಯುವಂತೆ ಮಾಡುವುದು (ಅನುರಕ್ಖನ) ಈ ನಾಲ್ಕು ವ್ಯಾಯಾಮಗಳು ಸರಿಯಾದ ಸ್ಮೃತಿಯೆಂದರೆ ದೇಹ, ವೇದನಾ, ಚಿತ್ತ, ಚೈತಸಿಕ ಪ್ರಸಂಗಗಳನ್ನು ಎಚ್ಚರದಿಂದ ಗ್ರಹಿಸುವ ಧ್ಯಾನವಿಧಾನಗಳು. ಈ ಧ್ಯಾನದ ಫಲವಾಗಿ ನಾಲ್ಕು ಸ್ಥಿತಿಯ ಸಮಾಧಿಗಳು ಒದಗುತ್ತವೆ. ಇವು ಸಮ್ಯಕ್‌ಸಮಾಧಿಯೆನಿಸುತ್ತವೆ. ಇವುಗಳಲ್ಲಿ ದೃಷ್ಟಿಸಂಕಲ್ಪಗಳು ಪ್ರಜ್ಞಾಸ್ಕಂಧಕ್ಕೆ ಸೇರಿದವೆಂದೂ ವಾಚಾ ಕಮ್ಮಂತ ಆ ಜೀವಗಳು ಶೀಲಸ್ಕಂದಕ್ಕೆ ಸೇರಿದವೆಂದೂ ವ್ಯಾಯಾಮ–ಸ್ಮೃತಿ–ಸಮಾಧಿಗಳು ಸಮಾಧಿಸ್ಕಂಧಕ್ಕೆ ಸೇರಿದವೆಂದೂ ವ್ಯವಹಾರವಿದೆ.

ಬೌದ್ಧಧರ್ಮದಲ್ಲಿ ಮುಕ್ತಿ ಪಡೆಯುವುದು ಪುಣ್ಯದ ಪರಿವರ್ತದಿಂದಾಗಲೀ ದೇವರ ಅನುಗ್ರಹದಿಂದಾಗಲೀ ಸಾಧ್ಯವಿಲ್ಲ; ಅಥವಾ ವೈಯಕ್ತಿಕ ಪರಿಣಾಮದ ಫಲವಾಗಿ ಮುಕ್ತಿಸಿದ್ಧವಾಗುವುದಿಲ್ಲ ಎಂಬ ಕಲ್ಪನೆ ಬುದ್ಧನ ಕಾಲಕ್ಕೆ ಪ್ರಚಲಿತವಾಗಿದ್ದಿತು. ಪ್ರತಿ ವ್ಯಕ್ತಿ ತನ್ನ ಬಾಳಿನಲ್ಲಿ ಶೀಲ–ಪ್ರಜ್ಞೆ–ಸಮಾಧಿಗಳನ್ನು ನಿರ್ವಹಿಸಿಕೊಂಡು ಮುಕ್ತಿ ಗಳಿಸಿಕೊಳ್ಳಬೇಕು; ಬುದ್ಧನದು ಗುರುವಿನ ಪಾತ್ರವಷ್ಟೇ ವಿನಾ ಅವನ ಅನುಗ್ರಹ, ಕರುಣೆ ಮುಕ್ತಿಗೆ ನೆರವಾಗದೆಂಬ ಕಲ್ಪನೆ ಹೀನಯಾನದವರದು. ಮಹಾಯಾನದವರು ಪುಣ್ಯಪರಿವರ್ತನೆಯ (ಎಂದರೆ ಒಬ್ಬನ ಪುಣ್ಯವನ್ನು ಬೇರೊಬ್ಬರಿಗೆ ಧಾರೆಯೆರೆಯುವುದು) ಸಾಧ್ಯತೆಯನ್ನು ಒಪ್ಪುತ್ತಾರೆ. ಬುದ್ಧ ದೇವತೆಯಲ್ಲ, ಆತ ಅಪ್ಪಟ ಮನುಷ್ಯ. ಅವನ ಮಾತಿನಲ್ಲೇ ಹೇಳುವುದಾದರೆ ವ್ಯಕ್ತಿ ಕಷ್ಟಪಟ್ಟು ಕೆಲಸಮಾಡಬೇಕು. ತಥಾಗತ ಕೇವಲ, ದಾರಿತೋರಿಸುತ್ತಾನಷ್ಟೆ. ಹಳೆಯ ಬೌದ್ಧಧರ್ಮದಲ್ಲಿ ವ್ಯಕ್ತಿಯ ಪ್ರಯತ್ನಕ್ಕೆ, ಸ್ವಾವಲಂಬನೆಗೆ ಹೆಚ್ಚಿನ ಪ್ರಾಶಸ್ತ್ಯ. ಅದರಲ್ಲಿ ಭಗವಂತನ ಅನುಗ್ರಹ, ಗುರುವಿನ ಪ್ರಸಾದ, ಪುಣ್ಯವಂತರ ನೆರವಿನ ಮಾತಿಲ್ಲ. ಈ ವಿಚಾರಗಳು ಮಹಾಯಾನದ ಬೌದ್ಧರಲ್ಲಿ ಮೂಡಿಬಂದಿತಾದರೂ ಪ್ರಯತ್ನದ ಪ್ರಾಶಸ್ತ್ಯ ಕಡಿಮೆಯಾಗಲಿಲ್ಲ.

ಮುಮುಕ್ಷುವಾದ ಮನುಷ್ಯ ವ್ಯವಹಾರದ ಆಕರ್ಷಣೆಯನ್ನು ತಗ್ಗಿಸಿ ಐಹಿಕ ಸುಖದ ಆಲಂಬನವನ್ನು ಇಂಗಿಸಿ ನಿಷ್ಠೆಯಿಂದ ಉದ್ಯಮ ಮಾಡಬೇಕು. ಲೌಕಿಕ ಪ್ರಸಕ್ತಿಯಲ್ಲಿ ಮುಳುಗಿದ ಮನುಷ್ಯ ಸಾಧಕನಾಗುವುದು ಸಾಧ್ಯವಿಲ್ಲ. ವ್ಯವಹಾರದ ಅಗತ್ಯವನ್ನು ಬಹುಮಟ್ಟಿಗೆ ಇಳಿಸಿಕೊಳ್ಳಬೇಕೆಂದು ಬುದ್ಧನ ಆಗ್ರಹ. ಅಪ್ಪಕಿಚ್ಚ (ಕಮ್ಮಿ ಕೆಲಸವಿರುವವನಾದರೆ ಧ್ಯಾನಾದಿಗಳನ್ನು ಮಾಡಲು ಸಾಧ್ಯವಾಗುವುದು. ಈ ದೃಷ್ಟಿಯಿಂದ ಬುದ್ಧ ಆತುರದಲ್ಲಿ ಓಡುತ್ತಿರುವ ಮಂದಿಯ ಮಧ್ಯೆ ಆತುರವಿಲ್ಲದೆ ಇರೋಣ, ಸುಖವಾಗಿ ಬಾಳೋಣ (ಸುಸುಖಂಬತ ಜೀವಾಮ, ಆತುರೇಸು ಅನಾತುರಾ) ಎಂದು ಹೇಳಿದ್ದು. ಬೌದ್ಧಧರ್ಮದ ಪ್ರಾಚೀನ ನಿಲವಿನಲ್ಲಿ ಮನುಷ್ಯ ಮನೆಯಲ್ಲಿ ಸಂಸಾರಿಯಾಗಿದ್ದುಕೊಂಡು ಮುಕ್ತಿಗೆ ಶ್ರಮಿಸುವುದು ಸಾಧ್ಯವಿಲ್ಲ; ಮನೆಬಿಟ್ಟು ಮನೆಯಿಲ್ಲದ ಪರಿವ್ರಾಜಕನಾದ (ಅನಗಾರಿಯ–ಪಬ್ಬಜಿಕ) ಭಿಕ್ಷುವಾದರೆ ಇದು ಸಾಧ್ಯ. ಭಿಕ್ಷು ಹಂಸವಾದರೆ, ಗೃಹಸ್ಥ ಕಾಗೆ. ಮನೆಯವಾಸ ಧ್ಯಾನಕ್ಕೆ ಅಡ್ಡಿ. ಅದು ಕೊಳೆಯ ಗೂಡು. ಹೀಗಾಗಿ ಬೌದ್ಧಸಮಾಜದಲ್ಲಿ ಭಿಕ್ಷುಗಳಿಗೆ ಹೆಚ್ಚಿನ ಸ್ಥಾನಮಾನ ದೊರಕಿತು. ಮೊದಲಿಗೆ ಬೌದ್ಧರೆಂದರೆ ಭಿಕ್ಷುಗಳೇ ಆಗಿದ್ದರು. ಸಾಮಾನ್ಯ ಗೃಹಸ್ಥರಿಗೆ ಕೇವಲ ಈ ಒಲವಿನಿಂದ ವಿಶೇಷವಾದ ಪ್ರಯೋಜನವಿರಲಿಲ್ಲ. ಗೃಹಸ್ಥ ಕೇವಲ ಉಪಾಸಕ, ಭಿಕ್ಷು ಶ್ರಮಣ. ಬುದ್ಧನ ಕಾಲದಲ್ಲಿ ಮುಕ್ತಿಯನ್ನರಸಿ, ದುಃಖದ ಅಂತ್ಯವನ್ನು ಬಯಸಿ ಬಂದವರನ್ನೆಲ್ಲ ಬಾ ಭಿಕ್ಷು, ಧರ್ಮ ಸ್ವಾಖ್ಯಾತವಾಗಿದೆ, ಎಲ್ಲ ದುಃಖವನ್ನು ಕೊನೆಗಾಣಿಸಲು ಬ್ರಹ್ಮಚರ್ಯೆ ನಡೆಸು (ಏಹಿ ಭಿಕ್ಖು ಸ್ವಾಕ್ಖಾತೋ ಧಮ್ಮೋ ಚರಥ ಬ್ರಹ್ಮ ಚರಿಯಂ ಸಮ್ಮಾ ದುಕ್ಖಸ ಅಂತಕಿರಿಯಾಯ) ಎಂಬ ಮಾತಿನಿಂದ ಸಂಘಕ್ಕೆ ಸೇರಿಸಿಕೊಳ್ಳುತ್ತಿದ್ದರು. ಈ ಕರೆಯಿಂದಲೇ ಗೃಹಸ್ಥ ಭಿಕ್ಷುವಾಗಿ ಮನೆಯಿಂದ ಹೊರಟು ಸಂಘದಲ್ಲಿ ನಿಲ್ಲುತ್ತಿದ್ದ. ಇದಕ್ಕೆ ಪಬ್ಬಜ್ಜಾ (ಪ್ರವ್ರಜ್ಯ) ಎಂದರೆ ಸನ್ಯಾಸ ದೀಕ್ಷೆ ಎಂದು ಹೆಸರು. ಕಾಲಕ್ರಮದಲ್ಲಿ ಸಂಘಪ್ರವೇಶ ಇಷ್ಟು ಸರಳವಾಗಿರದೆ, ಪ್ರವೇಶದ ಅನಂತರ ಸಂಘದಲ್ಲಿ ಸ್ವೀಕಾರದ ವಿಧಿ ಒದಗಿಬಂದಿತು. ಈ ವಿಧಿಗೆ ಉಪಸಂಪದಾ ಅಥವಾ ಸೇರುವುದು ಎನ್ನುತ್ತಾರೆ. ಪ್ರವೇಶವಾದೊಡನೆ ಅವನು ಶ್ರಾಮಣೇರ; ಸ್ವೀಕಾರವಾದ ಅನಂತರ ಶ್ರಮಣನೆಂದರೆ ಉದ್ಯಮಶೀಲ, ಕಷ್ಟಪಡುವವ, ಕೆಲಸಗಾರ. ಕೆಲಸವೆಂದರೆ ಮುಕ್ತಿಯ ಕೆಲಸ.

ಗೃಹಸ್ಥರಿಗೆ ಬೌದ್ಧಧರ್ಮದಲ್ಲಿ ಪಂಚಶೀಲಗಳಾದರೆ ಶ್ರಮಣರಿಗೆ ದಶಶೀಲ. ಪಂಚಶೀಲ (ಕೊಲ್ಲದಿರುವುದು, ಕಳವು ಮಾಡದಿರುವುದು, ಸುಳ್ಳಾಡದಿರುವುದು, ಕಾಮಿಯಾಗದಿರುವುದು, ಮದ್ಯ ಕುಡಿಯದಿರುವುದು) ಸಾಮಾನ್ಯ ಧರ್ಮ. ಇದರಲ್ಲಿ ಬೌದ್ಧ ಸಂಪ್ರದಾಯದ ವಿವರಗಳು ಏನೂ ಇಲ್ಲ. ಈ ನೀತಿ ನಿಯಮಗಳು ಎಲ್ಲ ಧರ್ಮದಲ್ಲಿಯೂ ಮಾನ್ಯವಾದವೇ, ಯಾವ ಸದ್ಗೃಹಸ್ಥನಾಗಲೀ ಅನುಸರಿಸಬೇಕಾದವೇ. ಇವನ್ನು ಅನುಸರಿಸಿದ ಮಾತ್ರಕ್ಕೆ ಆತ

ಬೌದ್ಧನಾಗಲಾರ. ಭಿಕ್ಷುಗಳಿಗೆ ಸಂನ್ಯಾಸ ಸ್ಥಿತಿಗೆ ಸಂಬಂಧಿಸಿದ ಶೀಲಗಳನ್ನು ವಿಧಿಸಿದ್ದಾರೆ. ಸಂಗೀತ, ನೃತ್ಯ, ವಾದ್ಯಗಳಿಗೆ ಮನಸ್ಸುಗೊಡದಿರುವುದು, ಬೆಳ್ಳಿಬಂಗಾರವನ್ನು ಮುಟ್ಟದಿರುವುದು, ಗಂಧಮಾಲ್ಯಾದಿಗಳನ್ನು ಸ್ವೀಕರಿಸದಿರುವುದು ಇತ್ಯಾದಿ. ಬೌದ್ಧ ಸಂನ್ಯಾಸವಿಧಿ ಆ ಕಾಲಕ್ಕೆ ಪ್ರಚಲಿತವಾಗಿದ್ದ ಸಂನ್ಯಾಸದೀಕ್ಷೆಯ ಕ್ರಮವನ್ನೇ ಅನುಸರಿಸಿತು. ಇದರಲ್ಲಿ ಬೌದ್ಧಧರ್ಮದ ವಿವರಗಳ ಪ್ರವೇಶವಿಲ್ಲ. ಆದರೆ ಬೌದ್ಧರ ಸಂಘವಿನಯದಲ್ಲಿ ಧ್ಯಾನಕ್ಕೆ ಪ್ರಾಶಸ್ತ್ಯ ಹೆಚ್ಚು. ಇದೇ ಬೌದ್ಧಧರ್ಮದ ಪ್ರಾಯೋಗಿಕ ನಿಲವು. ಹೀಗೆಂದೇ ಬರ್ಮಾದೇಶದಲ್ಲಿ ಗೃಹಸ್ಥರೂ ವರ್ಷಕ್ಕೊಮ್ಮೆ ವಿಹಾರಗಳಿಗೆ ಹೋಗಿ ಅಲ್ಲಿ ಭಿಕ್ಷುಗಳಂತೆ ಕೆಲಕಾಲ ಇದ್ದು ಧ್ಯಾನಗಳನ್ನು ನಡೆಸಿ ಮರಳಿ ಮನೆಗೆ ಬರುವ ಪದ್ಧತಿಯಿದೆ. ಹಿಂದುಧರ್ಮದಲ್ಲಿ ಹುಡುಗರಿಗೆ ಉಪನಯನ ಮಾಡುವಂತೆ ಬೌದ್ಧಧರ್ಮದಲ್ಲಿ ಪ್ರವ್ರಜ್ಯದ ನಾಟಕ ನಡೆಸಿ ಹುಡುಗನನ್ನು ಒಂದೆರಡು ದಿನ ವಿಹಾರದಲ್ಲೇ ಬಿಟ್ಟು ಮನೆಗೆ ಮತ್ತೆ ಕರೆತರುತ್ತಾರೆ. ಭಿಕ್ಷುವಾಗುವುದಾದರೇ ಬೌದ್ಧಧರ್ಮವನ್ನು ಸರಿಯಾಗಿ ನಡೆಸಲು ಸಾಧ್ಯ ಎಂಬ ಕಲ್ಪನೆ ಈ ಪದ್ಧತಿಗಳಿಗೆ ಮೂಲ.

ಅಷ್ಟಾಂಗಿಕ ಮಾರ್ಗದಲ್ಲಿ ಕಡೆಯ ಮೂರಾದ ವ್ಯಾಯಾಮ, ಸ್ಮೃತಿ, ಸಮಾಧಿಗಳು ಬೌದ್ಧಧರ್ಮದ ವೈಶಿಷ್ಟ್ಯ ಎನ್ನಬಹುದು. ನಿರ್ವಾಣದ ಶಾಂತಿ ಪಡೆಯಲು ಬುದ್ಧ ಹುಡುಕಿ ಹೇಳಿದ ಮಾರ್ಗದಲ್ಲಿ ಇದೇ ಪ್ರಮುಖ ಅಂಗ. ಉಳಿದ ವಿಚಾರಧಾರೆ ಇದಕ್ಕೆ ಪೋಷಕ ಅಷ್ಟೇ. ಬುದ್ಧನ ಕಾಲಕ್ಕೆ ಪ್ರಚಲಿತವಾಗಿದ್ದ 44 ದೃಷ್ಟಿಗಳಲ್ಲಿ ಈ ಅಂಗವಿರಲಿಲ್ಲ. ಬುದ್ಧನ ಗುರುಗಳಾಗಿದ್ದ ಆರಾಢ ಕಾಲಾಮ ಮತ್ತು ರುದ್ರಕ ರಾಮಪುತ್ರ ಇವರ ಧರ್ಮವಿನಯಗಳಲ್ಲೂ ಈ ಅಂಗವಿರಲಿಲ್ಲ. ಈ ಕಾರಕವಾದ ಅಂಗವಿಲ್ಲದೆ ಅವೆಲ್ಲ ದೃಷ್ಟಿಕಾಂತಾರ. ದೃಷ್ಟಿ ಸಂಯೋಜನ ವೆಂದು ಕಂಡುಕೊಂಡ ಬುದ್ಧ ತನ್ನ ಅನುಭವದ ಆಳದಿಂದ ಈ ಮಾರ್ಗ ಸಾಧಿಸಿ ಸಿದ್ಧಿಸಿಕೊಂಡು ಲೋಕಕ್ಕೆ ಪ್ರಕಟಪಡಿಸಿದ. ಈ ಮಾರ್ಗಕ್ಕೆ ಸಮಷ್ಟಿಯಲ್ಲಿ ಭಾವನಾ (ಭೂ ಧಾತುವಿನಿಂದ ಮಾಡುವುದು ಎಂಬರ್ಥದಲ್ಲಿ) ಎನ್ನುತ್ತಾರೆ. ಪ್ರತೀತ್ಯಸಮುತ್ಪಾದದಿಂದ ದುಃಖ ಒದಗಿದಂತೆ ಈ ಮಾರ್ಗದ ಅನುಸರಣೆಯಿಂದ ದುಃಖ ಮರೆಯಾಗಿ ನಿರ್ವಾಣ ಪ್ರಾಪ್ತವಾಗುತ್ತದೆ. ಪ್ರತೀತ್ಯಸಮುತ್ಪಾದ ಒಂದು ದಾರಿಯಾದರೆ ವಿರುದ್ಧವಾದುದು ಉಪನಿಸ್ಸಯಪಚ್ಚಯ ಎನಿಸಿಕೊಳ್ಳುತ್ತದೆ. ಸಂಯುಕ್ತನಿಕಾಯದ ನಿದಾನವಗ್ಗದಲ್ಲಿ ಬುದ್ಧ ಈ ಕ್ರಮವನ್ನು ವಿವರಿಸಿದ್ದಾನೆ. ತ್ರಿಲಕ್ಷಣಗಳನ್ನು (ದುಃಖ. ಅನಿತ್ಯ, ಅನಾತ್ಮ) ಕಂಡು ಮಾರ್ಗದಲ್ಲಿ ಶ್ರದ್ಧೆಯಿಟ್ಟರೆ (ದುಃಖೂಪನಿಸಾ ಸದ್ಧಾ) ಅದರಿಂದ, ಎಂದರೆ ಧ್ಯಾನಗಳನ್ನು ನಡೆಸುವುದರಿಂದ ಮೋದ (ಪಾಮೋಜ್ಜ) ಒದಗುತ್ತದೆ. ಮೋದ ಅವಲಂಬಿಸಿ ಪ್ರೀತಿ (ಪೀತಿ), ಪ್ರೀತಿ ಅವಲಂಬಿಸಿ ಪ್ರಸ್ರಬ್ಧಿ (ಪಸ್ಸದ್ಧಿ). ಪ್ರಸ್ರಬ್ಧಿಯಿಂದ ಸುಖ. ಸುಖವನ್ನು ಅವಲಂಬಿಸಿ ಸಮಾಧಿ, ಸಮಾಧಿಯಿಂದ ಯಥಾಭೂತಜ್ಞಾನ ದರ್ಶನ (ಇದನ್ನೇ ವಿಪಸ್ಸನಾಭಾವನೆ ಎನ್ನುತ್ತಾರೆ). ಯಥಾಭೂತಜ್ಞಾನದರ್ಶನದಿಂದ ನಿರ್ವೇದ (ನಿಬ್ಬಿದಾ), ನಿರ್ವೇದದಿಂದ ವಿರಾಗ, ವಿರಾಗದಿಂದ ವಿಮುಕ್ತಿ. ವಿಮುಕ್ತಿಯಿಂದ ಕ್ಷಯಜ್ಞಾನ ಒದಗಿ ಕಾಮಾಸ್ರವ, ಭವಾಸ್ರವ, ದೃಷ್ಟ್ಯಾಶ್ರವ. ಅವಿದ್ಯಾಶ್ರವಗಳು ಕ್ಷಯವಾಗುತ್ತವೆ. ಇದೇ ನಿರ್ವಾಣ.

ಬೌದ್ಧರು ನಿರ್ವಾಣವನ್ನು ವರ್ಣಿಸುವಾಗ ಉಪನಿಷತ್ತಿನಲ್ಲಿ ಬ್ರಹ್ಮನ ವಿಚಾರವಾಗಿ ಹೇಳಿರುವ ವಿವರಗಳನ್ನೇ ಬಳಸಿಕೊಂಡಿದ್ದಾರೆ. ನಿರ್ವಾಣವೆಂದರೆ ಏನೂ ಇಲ್ಲದುದು, ಇದ್ದುದು ಹೋಗಿ ಇಲ್ಲದಾಗುವುದು ಎಂಬರ್ಥ ರೂಢವಾಗಿದ್ದರೂ ಪಾಳೀ ವಾಙ್ಮಯದಲ್ಲಿ ಈ ಅರ್ಥ ಅಷ್ಟು ಪ್ರಚಲಿತವಾಗಿಲ್ಲ ನಿರ್ವಾಣ ಬ್ರಾಹ್ಮೀಸ್ಥಿತಿಯೆಂಬ ತಾತ್ಪರ್ಯ ಇಲ್ಲಿದೆ. ಶೂನ್ಯವಾದಿಗಳು ನಿರ್ವಾಣದ ವಿಚಾರವಾಗಿ ಸ್ವಲ್ಪ ಗೊಂದಲ ಎಬ್ಬಿಸಿದರು, ನಿಜ. ಆದರೆ ಉದಾನದಲ್ಲಿ ಬುದ್ಧನೇ ಹೇಳಿದ ಮಾತು–ಅಜಾತವಾದದ್ದು, ಅಭೂತವಾದದ್ದು, ಅಕೃತವಾದದ್ದು, ಅಸಂಸ್ಕೃತವಾದದ್ದು ಇದೆ. ಅದಿಲ್ಲದಿದ್ದರೆ ಜಾತವಾದ, ಭೂತವಾದ, ಕೃತವಾದ ಸಂಸ್ಕೃತವಾದ ಈ ಪ್ರಪಂಚ ದಾಟುವುದು (ನಿಸ್ಸರಣ) ಹೇಗೆ? ಪಂಚಭೂತಗಳೂ ಇಲ್ಲದೆ, ಲೋಕ–ಪರಲೋಕಗಳೂ ಇಲ್ಲದೆ, ಚಂದ್ರಸೂರ್ಯರೂ ಇಲ್ಲದೆ, ಇರುವ ನೆಲೆಯೊಂದು (ಆಯತನ) ಇದೆ. ಅದಕ್ಕೆ ಬರುವುದು, ಹೋಗುವುದು, ಸ್ಥಿತಿ, ಉತ್ಪತ್ತಿಗಳನ್ನು ಹೇಳಲಾಗದು. ಅಪ್ರತಿಷ್ಠವಾದ, ಅಪ್ರವರ್ತವಾದ, ನಿರಾಲಂಬವಾದ ಇದೇ ದುಃಖದ ಅಂತ. ಬುದ್ಧ ಆತ್ಮನನ್ನು ಒಪ್ಪದಿದ್ದರೂ ಈಶ್ವರನನ್ನು ಒಪ್ಪದಿದ್ದರೂ ಈ ಬ್ರಹ್ಮನಿರ್ವಾಣ ಒಪ್ಪಿದ್ದಾನೆ. ಈ ದೃಷ್ಟಿಯಿಂದಲೇ ತನ್ನ ಮಾರ್ಗ ಬ್ರಹ್ಮಚರ್ಯವೆಂದು ವರ್ಣಿಸಿ ತನ್ನ ಶಿಷ್ಯರಿಗೆ ಚರಥ ಬ್ರಹ್ಮಚರಿಯಂ ಎಂಬ ಆದೇಶವನ್ನಿತ್ತ. ಸಂಸಾರಕ್ಕೂ ನಿರ್ವಾಣಕ್ಕೂ ಭೇದ ಹೇಳುತ್ತ ಸಂಸಾರ ಪರ್ಯಾಪ್ತವಾದುದು, ನಿರ್ವಾಣ ಅಪರ್ಯಾಪ್ತವಾದುದು; ಸಂಸಾರ ಮೀರಿಹೋಗಬಹುದು, ಆದರೆ ನಿರ್ವಾಣಕ್ಕೆ ಮೀರಿದುದು ಇಲ್ಲ (ಅನುತ್ತರ); ಸಂಸಾರ ಲೌಕಿಕವಾದದ್ದು, ನಿರ್ವಾಣ ಲೋಕೋತ್ತರವಾದದ್ದು; ಸಂಸಾರಕ್ಕೆ ರೂಪವಿದೆ, ನಿರ್ವಾಣ ಅರೂಪ; ಸಂಸಾರ ಸಪ್ರತ್ಯಯ, ನಿರ್ವಾಣ ಅಪ್ರತ್ಯಯ, ಸಂಸಾರ ಭೂತ ಭವಿಷ್ಯದ್ವರ್ತಮಾನಗಳುಳ್ಳದ್ದು, ನಿರ್ವಾಣ ಈ ರೀತಿ ನಿರ್ದೇಶ್ಯವಲ್ಲ (ನಾತೀತಂ ನಾನಾಗತಂ ನ ಪಚ್ಚುಪ್ಪನ್ನಂ). ನಿರ್ವಾಣ ಪಡೆದವ ಉಪಶಾಂತನಾಗುತ್ತಾನೆ, ಸ್ಥಿತಪ್ರಜ್ಞನಾಗಿರುತ್ತಾನೆ. ಶುದ್ಧನಾಗಿರುತ್ತಾನೆ ಎಂಬ ವರ್ಣನೆಯಿದೆ. ಸುತ್ತನಿಪಾತದ ಗುಹಟ್ಠಕಸುತ್ತದಲ್ಲಿ ಸೊಗಸಾದ ಉಪಮೆಯಿದೆ. ಸಮುದ್ರದ ಮಧ್ಯದಲ್ಲಿ ಅಲೆಗಳು ಏಳುವುದಿಲ್ಲ (ಮಜ್ಝೇಯಥಾ ಸಮುದ್ದಸ್ಸ ಊಮಿ ನೋಜಾಯತೇ); ಹೀಗೆಯೇ ಅನೇಜನಾದ ಭಿಕ್ಷು ಸ್ಥಿತಪ್ರಜ್ಞನಾಗಿರುತ್ತಾನೆ. ಸಂಸಾರ ನದಿ (ಸ್ರೋತ), ನಿರ್ವಾಣ ಸಮುದ್ರ. ನಿರ್ವಾಣಕ್ಕೆ ಚಿತ್ತಶುದ್ಧಿಯೇ ದಾರಿ. ಚಿತ್ತ ಶುದ್ಧವಾಗುವುದು ಸಮಾಧಿಯಿಂದ ಮಾತ್ರ. ಸಮಾಧಿ ಪಡೆಯಲು ನಲವತ್ತು ಅಭ್ಯಾಸಗಳನ್ನು ಬುದ್ಧ ವಚನದಿಂದ ಸಂಗ್ರಹಿಸಿ ಬುದ್ಧಘೋಷಾಚಾರ್ಯ ವಿಶುದ್ಧಿಮಾರ್ಗವೆಂಬ ಪಾಳಿ ಗ್ರಂಥ ರಚಿಸಿದ್ದಾನೆ. ಇವು ಧ್ಯಾನಕ್ಕೆ ಎಡೆಮಾಡಿಕೊಡುವ ಅಭ್ಯಾಸಗಳು. ಭೂಮಿ, ನೀರು, ಬೆಂಕಿ, ಗಾಳಿ, ಬಣ್ಣಗಳನ್ನು ಕಸಿಣಗಳಂತೆ (ಕೃತ್ಸ್ನ) ಗ್ರಹಿಸಿ ಮಾಡುವ ಹತ್ತು ಅಭ್ಯಾಸಗಳು (ಅಸುಭ); ಮೃತದೇಹದ ನಾನಾ ಸ್ಥಿತಿಗಳಲ್ಲಿ ಅನಿತ್ಯತೆ ಕಂಡುಕೊಳ್ಳಲು ಮಾಡುವ ಹತ್ತು ಅಭ್ಯಾಸಗಳು; ಬುದ್ಧ, ಧರ್ಮ, ಸಂಘ, ಶೀಲ, ಮೃತ್ಯು ಮುಂತಾದ ವಿಚಾರ ಕುರಿತು ಮಾಡುವ ಹತ್ತು ಅನುಸ್ಮೃತಿಗಳು (ಅನುಸ್ಸತಿ); ಮೈತ್ರೀ, ಕರುಣೆ, ಮುದಿತ, ಉಪೇಕ್ಷೆ ಈ ನಾಲ್ಕು ಬ್ರಹ್ಮ ವಿಹಾರ ಕುರಿತು ಮಾಡುವ ಭಾವನೆಗಳು; ಆಕಾಶ, ವಿಜ್ಞಾನ ಮುಂತಾದ ನಾಲ್ಕು ಅರೂಪ ಕುರಿತು ಮಾಡುವ ಭಾವನೆಗಳು (ಆರುಪ್ಪ); ಆಹಾರದಲ್ಲಿ ಪ್ರತಿಕೂಲ ಸಂಜ್ಞೆ, ಎಲ್ಲ ವಸ್ತುಗಳನ್ನೂ ನಾಲ್ಕು ಧಾತುಗಳಾಗಿ ವಿಶ್ಲೇಷಣೆ ಮಾಡುವುದು (ಚತುಧಾತುವವಟ್ಠಾನ)–ಈ ನಲವತ್ತು ಅಭ್ಯಾಸಗಳಿಗೆ ಒಟ್ಟಾರೆ ಭಾವನೆ ಎನ್ನುತ್ತಾರೆ. ಇದು ಸಮಾಧಿ ಕರ್ಮವೆಂದು ವ್ಯವಹಾರವಿದೆ. ಈ ಕರ್ಮಗಳನ್ನು ಮಾಡಲು ನೆರವಾಗುವ ವಿವರಗಳಿಗೆ ಕರ್ಮಸ್ಥಾನವೆಂದು (ಕಮ್ಮಟ್ಠಾನ) ಹೆಸರು. ಮನಸ್ಸು ಸಾಮಾನ್ಯವಾಗಿ ಬೂದಿಯಂತೆ ಹಾರಾಡುತ್ತದೆ; ಬೂದಿಯ ಮೇಲೆ ನೀರನ್ನು ಸುರಿದರೆ ಬೂದಿ ಹೇಗೆ ಹಾರದೆ ನಿಲ್ಲುತ್ತದೋ ಆ ರೀತಿ ಮನಸ್ಸನ್ನು ಕರ್ಮಸ್ಥಾನದಲ್ಲಿ ಮೂಡಿಸಿದರೆ ಏಕಾಗ್ರತೆ ಬರುತ್ತದೆ. ಚಿತ್ತದ ಏಕಾಗ್ರತೆಗೆ ಸಮಾಧಿ ಎಂದು ಹೆಸರು (ಸಮ್ಮಾ ಅಧೀಯತಿ). ಏಕಾಗ್ರತೆಯಿಂದ ಉಪಶಮನ ಒದಗುವುದರಿಂದ ಸಮಾಧಿಗೆ ಶಮಥಭಾವನೆಯೆಂದೂ ಪ್ರಜ್ಞೆಗೆ ವಿಪಶ್ಯನಾಭಾವನೆಯೆಂದೂ ಪರ್ಯಾಯಪದಗಳು ಪ್ರವೃತ್ತವಾಗಿವೆ. ವ್ಯವಹಾರದಲ್ಲಿ ಸ್ಮೃತಿಪ್ರಸ್ಥಾನ (ಸತಿಪಟ್ಠಾನ) ಎಂದು ಭಾವನೆಗಳನ್ನು ನಿರ್ದೇಶಿಸುತ್ತಾರೆ.

ಬೌದ್ಧಧರ್ಮದಲ್ಲಿ ದೇವತಾ ಪ್ರಾರ್ಥನೆ. ಹವನ ಹೋಮಗಳಿಲ್ಲದಿರುವುದರಿಂದ ಈ ಭಾವನೆಯೇ ಮುಖ್ಯ ಕ್ರಿಯಾಂಗವಾಗಿದೆ. ಬೌದ್ಧ ವಿಹಾರಗಳಲ್ಲಿ ಭಾವನೆಗೇ ಹೆಚ್ಚು ಪ್ರಾಶಸ್ತ್ಯ. ಚಂಕಮಭಾವನಾ. ಕಸಿಣಭಾವನಾ, ಮೆತ್ತಾಭಾವನಾ. ಆನಾಪಾನಸತಿಭಾವನಾ–ಇವು ಪ್ರಚಲಿತವಾಗಿರುವ ಧ್ಯಾನವಿಧಾನಗಳು. ಬರ್ಮಾ ದೇಶದಲ್ಲೂ ಸಿಂಹಳದ್ವೀಪದಲ್ಲೂ ಈ ಧ್ಯಾನಗಳು ಬೆಳೆದು ವ್ಯವಸ್ಥಿತವಾಗಿವೆ.

ಮೊದಲಿಗೆ ಬೌದ್ಧರು ಸ್ತೂಪಗಳ ಸಂದರ್ಶನ ಮಾಡಿಬರುವುದು ಪುಣ್ಯ ಕೆಲಸವೆಂದು ಬಗೆದಿದ್ದರು. ಸ್ತೂಪವೆಂದರೆ ಬುದ್ಧನ ಅಥವಾ ಅವನ ಶಿಷ್ಯರ ಅವಶೇಷಗಳನ್ನು (ಧಾತು) ಒಳಗಿಟ್ಟ ಮೇಲೆ ಕಟ್ಟಿಸಿದ ಕಟ್ಟಡ. ಸ್ತೂಪಕ್ಕೆ ಧಾತುಗರ್ಭವೆಂದೂ ಹೆಸರಿದೆ. ಸ್ತೂಪ ಎಂದಾಗ ಅವಶೇಷ ಇರಲೇಬೇಕೆಂಬ ನಿಯಮ ಇಲ್ಲ. ಕೆಲವೊಮ್ಮೆ ಪವಿತ್ರ ಸ್ಥಳ ನಿರ್ದೇಶನಕ್ಕಾಗಿ ಸ್ತೂಪ ನಿರ್ಮಿಸುತ್ತಾರೆ. ನಿದರ್ಶನಕ್ಕೆ ವಾರಾಣಸಿಯಲ್ಲಿ ಬುದ್ಧ ಧರ್ಮಚಕ್ರ ಪ್ರವರ್ತನಮಾಡಿದ ಸ್ಥಳದಲ್ಲಿ ಧಾಮೇಕ್ ಸ್ತೂಪವಿದೆ: ಅದರಲ್ಲಿ ಅವಶೇಷವೇನೂ ಇಲ್ಲ. ಆದರೆ ಬೌದ್ಧರಿಗೆ ಸ್ತೂಪ ಸಂದರ್ಶನ ವ್ಯವಹಾರದಲ್ಲಿ ಪ್ರಿಯವಾದುದು. ಅಶೋಕ ಬುದ್ಧನ ಜೀವಿತಕ್ಕೆ ಸಂಬಂಧಿಸಿದ ಸ್ಥಳಗಳನ್ನೆಲ್ಲ ಸಂದರ್ಶಿಸಿ, ಅಲ್ಲಲ್ಲಿ ಸ್ತೂಪ ಕಟ್ಟಿಸಿ ಶಾಸನ ಬರೆಸಿಟ್ಟ. ಈ ಸ್ತೂಪಗಳನ್ನು ನೋಡಲೆಂದೇ ಚೀನೀ ಯಾತ್ರಿಕರೂ ಟಿಬೆಟನ್ ಯಾತ್ರಿಕರೂ ಭಾರತದೇಶಕ್ಕೆ ಬರುತ್ತಿದ್ದರು. ನಿತ್ಯಜೀವನದಲ್ಲಿ ಬೌದ್ಧರು ಬುದ್ಧವಂದನ ಮಾಡಿ ಶಿಕ್ಷಾಪದಗಳನ್ನು ಪಠಿಸಿ, ಅವಕಾಶವಿದ್ದರೆ ಪ್ರವೃತ್ತಿಯಿದ್ದರೆ ಧ್ಯಾನ ಮಾಡುತ್ತಾರೆ. ನೈಮಿತ್ತಿಕವಾಗಿ ಬುದ್ಧ ಹುಟ್ಟಿದ, ಸಂಬೋಧಿ ಕಂಡ, ಪರಿನಿರ್ವಾಣ ಪಡೆದ ದಿನವಾದ ವೈಶಾಖಪೂರ್ಣಿಮೆಯನ್ನು ಉತ್ಸವವಾಗಿ ಆಚರಿಸುತ್ತಾರೆ. ವಿಹಾರಗಳಿಗೆ ಹೋಗಿ ಭಿಕ್ಷುಗಳನ್ನು ಸಂದರ್ಶಿಸುವುದು, ಸ್ತೂಪಗಳಿಗೆ ಹೋಗಿಬರುವುದು. ಅವರಲ್ಲಿ ಪದ್ಧತಿಯಿದೆ. ಇಷ್ಟನ್ನು ಬಿಟ್ಟರೆ ಬೌದ್ಧರ ಆಚಾರ ವ್ಯವಹಾರಗಳು ಆಯಾ ದೇಶಾಚಾರ, ಕುಲಾಚಾರದ ಸಂಪ್ರದಾಯದಂತೆಯೇ ಇರುತ್ತವೆ.

ಮೇಲೆ ಹೇಳಿದ ಧರ್ಮವಿವರಗಳು ಬೌದ್ಧಧರ್ಮದ ಎಲ್ಲ ಶಾಖೆಗಳಿಗೂ ಸಾಮಾನ್ಯವಾದುವು. ಕಾಲಕ್ರಮದಲ್ಲಿ ಹಲವಾರು ಮತಪ್ರಭೇದಗಳು ಕಾಣಿಸಿಕೊಂಡುವು. ಬುದ್ಧ ತೀರಿಕೊಂಡ ಇನ್ನೂರು ವರ್ಷಗಳ ಅನಂತರ ಥೇರವಾದ (ಸ್ಥವಿರವಾದ) ಎಂಬ ಪ್ರಾಚೀನ ಶಾಖೆಯೊಂದಿಗೆ ಮಥುರಾ, ಗಾಂಧಾರ, ಕಾಶ್ಮೀರಗಳಲ್ಲಿ ಸರ್ವಾಸ್ತಿವಾದ ಮತ್ತು ಮಗಧದಲ್ಲಿ ಮಹಾಸಾಂಘಿಕ ಮತ ಕವಲೊಡೆದುವು. ಮಹಾಸಾಂಘಿಕ ಮತದಿಂದ ಮಹಾಯಾನ ಪಂಥ ಪ್ರವರ್ತಿತವಾಗಿ ಹಳೆಯ ಹೀನಯಾನಕ್ಕಿಂತ ವಿಭಿನ್ನವಾದ ವಿವರಗಳು ಮೂಡಿಬಂದುವು. 150ರ ಸುಮಾರಿಗೆ ನಾಗಾರ್ಜುನನಿಂದ ಮಾಧ್ಯಮಿಕ ಪಂಥವೂ 400ರಲ್ಲಿ ಅಸಂಗನಿಂದ ಯೋಗಾಚಾರ ಪಂಥವೂ ಪ್ರವರ್ತಿತವಾದುವು. 500ರ ಸುಮಾರಿಗೆ ತಂತ್ರದ ಪ್ರಭಾವದಿಂದ ತಾಂತ್ರಿಕ ಬೌದ್ಧ ಪಂಥ ಬೆಳೆಯಿತು. ಈ ವೇಳೆಗೆ ಬೌದ್ಧಧರ್ಮ ಭಾರತದಾಚೆ ಹರಡಲು ಮೊದಲಾಗಿ ಸಿಂಹಳ, ಬರ್ಮ, ಸಯಾಮ್, ಸುಮಾತ್ರ, ಜಾವ, ಜಪಾನ್, ಕೊರಿಯ, ಚೀನ, ಇಂಡೋಚೀನ, ಟಿಬೆಟ್, ನೇಪಾಲಗಳಲ್ಲಿ ಬೇರೂರಿತು. ಹೀಗೆ ಪ್ರಗತಿಯ ಪಥದಲ್ಲಿ ಹಲವಾರು ಹೊಸ ಹೊಸ ವಿವರಗಳು ಸೇರಿಕೊಂಡು ಬಂದು ಬೌದ್ಧರ ಆಚಾರವ್ಯವಹಾರಗಳೂ ಬದಲಾದವು. ಮಹಾಯಾನದ ಪ್ರಭಾವದಿಂದ ಬುದ್ಧ ಗುರುವೆಂಬ ಕಲ್ಪನೆ ಜಾರಿ ದೇವಾದಿದೇವ ನೆಂಬ ಕಲ್ಪನೆ ಮೂಡಿತು. ಧ್ಯಾನಕ್ಕಿಂತ ಬುದ್ಧ ಭಕ್ತಿಯೇ ಹೆಚ್ಚು ಫಲಪ್ರದವೆಂದು ಜನ ನಂಬತೊಡಗಿದರು. ಸ್ತೂಪಗಳ ಜೊತೆಗೆ ದೇವಾಲಯಗಳು ಬೆಳೆದವು. ಬುದ್ಧನೊಂದಿಗೆ ಬೋಧಿಸತ್ತ್ವರು ಬಂದರು. ಸಂಬೋಧಿಯ ಅರ್ಥಕ್ಕಿಂತ ಬುದ್ಧನ ಕರುಣೆ ಪ್ರಮುಖವಾಯಿತು. ಬೌದ್ಧಧರ್ಮ ಆರಂಭದಲ್ಲಿ ಅನೀಶ್ವರವಾದವಾದರೂ ಕಾಲಕ್ರಮದಲ್ಲಿ ಅದರ ವ್ಯಾಪ್ತಿಯೊಳಗೆ

ನೂರಾರು ದೇವತೆಗಳು ಸೇರಿದರು–ಅಮಿತಾಭ, ಅಕ್ಷೋಭ್ಯ, ಮಂಜುಶ್ರೀ, ತಾರಾಭಗವತೀ, ಸಮಂತಭದ್ರ ಮುಂತಾದ ದೇವತೆಗಳು ಹಿಂದುಧರ್ಮದ ಗರ್ಭದಿಂದ ಹೊರಹೊರಟವರೇ. ನಿರ್ವಾಣದ ಅನಿರ್ವಾಚ್ಯಲಕ್ಷಣ ಸಾಮಾನ್ಯ ಜನರಿಗೆ ಹಿಡಿಸಿದೆ. ಅವರ ಮನಸ್ಸಮಾಧಾನಕ್ಕೆಂದು ಸುಖಾವತೀವ್ಯೂಹವೆಂಬ ಸ್ವರ್ಗ ಸೃಷ್ಟಿಯಾಯಿತು. ಧ್ಯಾನದಿಂದ ಚಿತ್ತವಿಶುದ್ಧಿ ಮಾಡಿಕೊಳ್ಳುವ ಕಷ್ಟಕ್ಕಿಂತ ಸುಖವಾಗಿ ಈಶ್ವರ ಕರುಣೆಯನ್ನು ಭಕ್ತಿಯ ಮೂಲಕ ಸಂಪಾದಿಸುವ ಪ್ರಯತ್ನ ಮೊದಲಿಟ್ಟಿತು. ಮುಂದಿನ ಯುಗದ ಬೌದ್ಧರು ನಮೋಮಿತಾ ಭಾಯ ಜಿನಾಯ ತೇ ಮುನೇ; ಸುಖಾವತೀಂ ಯಾಮಿ ಚ ತೇ ನು ಕಂಪಯಾ ಎಂದು ಪ್ರಾರ್ಥಿಸತೊಡಗಿದರು. ಮಂಡಲಗಳ ಪೂಜೆ, ಪ್ರಣಿಧಿ, ತಾಂತ್ರಿಕ ಕ್ರಿಯೆಗಳು, ಪಂಚಮಕಾರಗಳು, ಬುದ್ಧನಿಗೆ ಷೋಡಶೋಪಚಾರ ಪೂಜೆ ಇವೆಲ್ಲ ಬೌದ್ಧಧರ್ಮದ ವಲಯದೊಳಗೆ ಸೇರಿಬಂದುವು. (ಎಸ್.ಕೆ.ಆರ್.)

**ಬ್ಯಾಕ್ಟ್ರಿಯ:** ಏಷ್ಯದ ನೈರುತ್ಯದಲ್ಲಿದ್ದ ಒಂದು ಪ್ರಾಚೀನ ರಾಜ್ಯ. ಹಿಂದೂಕುಷ್ ಮತ್ತು ಆಕ್ಸಸ್ (ಆಮೂದರ್ಯ) ನದಿ ನಡುವಣ ಈ ಪ್ರದೇಶ ಸು. 402 ಕಿಮೀ ಉದ್ದ ಮತ್ತು 193 ಕಿಮೀ ಅಗಲ ಪ್ರದೇಶವನ್ನೊಳಗೊಂಡಿತ್ತು. ಬ್ಯಾಕ್ಟ್ರ ಇದರ ರಾಜಧಾನಿಯಾಗಿತ್ತು. ಹೆಚ್ಚು ಮರುಭೂಮಿಯಿಂದ ಕೂಡಿದ್ದು ಪಶುಪಾಲನೆಯೇ ಮುಖ್ಯ ಕಸಬಾಗುಳ್ಳ ಅಲೆಮಾರಿ ಬ್ಯಾಕ್ಟ್ರಿಯನ್ನರು ಇಲ್ಲಿ ಮೊದಲು ವಾಸಿಸುತ್ತಿದ್ದ ಜನ. ಸೈರಸ್ ದೊರೆಯ (ಪ್ರ.ಶ.ಪೂ. 550–529) ಕಾಲದಲ್ಲಿ ಈ ಪ್ರದೇಶ ಪರ್ಷಿಯ ಸಾಮ್ರಾಜ್ಯದ ಒಂದು ಭಾಗವಾಯಿತು. ಮುಂದೆ ಅಲೆಕ್ಸಾಂಡರನ ಚಕ್ರಾಧಿಪತ್ಯಕ್ಕೆ ಸೇರಿದ್ದ ಈ ರಾಜ್ಯ ಸೆಲ್ಯೂಸಿಡ್ ದೊರೆಗಳ ಕಾಲದಲ್ಲಿ ಸ್ವಾತಂತ್ರ್ಯ ಪಡೆಯಲೆತ್ನಿಸಿ, ಪ್ರ.ಶ.ಪೂ. ಎರಡನೆಯ ಶತಮಾನದ ಪ್ರಾರಂಭದಲ್ಲಿ (ಪ್ರ.ಶ.ಪೂ.ಸು.206) ಸ್ವತಂತ್ರವಾಯಿತು. ಆಗ ಬ್ಯಾಕ್ಟ್ರಿಯದ ದೊರೆಯಾಗಿದ್ದವನು ಯೂತಿಡೀಮಸ್. ಅವನ ಮಗ ಡೆಮಿಟ್ರಿಯಸ್ ಮೊದಲ ಬಾರಿ ಭಾರತಕ್ಕೆ ಬಂದು ಮೌರ್ಯ ಸಾಮ್ರಾಜ್ಯ ಅಳಿದಮೇಲೆ ಸ್ವತಂತ್ರವಾಗಿದ್ದ ಕೆಲವು ವಾಯವ್ಯ ಪ್ರಾಂತಗಳನ್ನು ಸ್ವಾಧೀನಪಡಿಸಿಕೊಂಡ. ಗಾರ್ಗೀ ಸಂಹಿತೆಯ ಯುಗಪುರಾಣದಲ್ಲಿ ಇವನು ಸಾಕೇತ, ಪಾಂಚಾಲಿ (ರೋಹಿಲ್ ಖಂಡ), ಮಥುರ, ಪುಷ್ಪಪುರಗಳನ್ನು (ಪಾಟಲೀಪುತ್ರ) ಗೆದ್ದನೆಂದು ತಿಳಿಸಿದೆ. ಪತಂಜಲಿಯ ಮಹಾಭಾಷ್ಯದಲ್ಲೂ ಇದರ ಉಲ್ಲೇಖವಿದೆ. ಮಹಾಭಾರತದಲ್ಲಿ ಬಂದಿರುವ ದತ್ತಮಿತ್ರನೆಂಬ ದೊರೆ ಈತನೇ ಇರಬೇಕೆಂಬುದು ಕೆಲವರ ಅಭಿಪ್ರಾಯ. ಡೆಮಿಟ್ರಿಯಸ್ ಬಹುಕಾಲ ಭಾರತದಲ್ಲಿ ಉಳಿದ ಪರಿಣಾಮವಾಗಿ ಬ್ಯಾಕ್ಟ್ರಿಯವನ್ನು ಯೂಕ್ರಟೈಡಿಸ್ ಎಂಬ ಸಾಮಂತ ಸ್ವಾಧೀನಪಡಿಸಿಕೊಂಡು ಭಾರತದ ವಾಯವ್ಯಗಡಿಯ ವರೆಗೂ ತನ್ನ ಆಧಿಪತ್ಯ ವಿಸ್ತರಿಸಿದ. ಸಿಂಧ್ ಪ್ರಾಂತಕ್ಕೂ ಇವನ ಅಧಿಕಾರ ವ್ಯಾಪಿಸಿತ್ತೆಂದು ತೋರುತ್ತದೆ. ಮುಂದೆ ಡೆಮಿಟ್ರಿಯಸ್‌ನ ವಂಶಜನೆಂದು ಹೇಳುವ ಮಿನಾಂಡರ್ ಎಂಬ ದೊರೆ ಶಾಕಲವನ್ನು (ಇಂದಿನ ಸಿಯಾಲ್ಕೋಟ್) ರಾಜಧಾನಿಯಾಗಿ ಮಾಡಿಕೊಂಡು ಯಶಸ್ವಿಯಾಗಿ ಆಳಿದನೆಂದು ತಿಳಿದುಬಂದಿದೆ. ಆಂಟಿಯಾಲ್ಕಿಡಾಸ್ ದೊರೆ ತಕ್ಷಶಿಲೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದನೆಂಬುದಕ್ಕೆ ಆಧಾರಗಳಿವೆ. ಇವನು ವಿದಿಶಾ ರಾಜ್ಯದ ದೊರೆ ಭಾಗಭದ್ರನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದ್ದ. ಕಾಲಕ್ರಮೇಣ ಭಾರತದಲ್ಲಿ ನೆಲಸಿದ್ದ ಈ ಗ್ರೀಕರು ಭಾರತೀಯ ಸಂಸ್ಕೃತಿ ಪ್ರಭಾವಕ್ಕೊಳಗಾಗಿ ಬೌದ್ಧ ಅಥವಾ ವೈಷ್ಣವ ಮತಾವಲಂಬಿಗಳಾಗಿ ಭಾರತೀಯರಾದರು. ಮೊದಲನೆಯ ಶತಮಾನದ ಕಾಲಕ್ಕೆ ಭಾರತದಲ್ಲಿ ಗ್ರೀಕರ ಸುಳಿವೂ ಇಲ್ಲದಂತಾಯಿತು. ಆದರೂ ಈ ಗ್ರೀಕರ ಸಂಪರ್ಕದಿಂದ ಮುಂದೆ ಭಾರತದ ವಾಯವ್ಯ ಪ್ರಾಂತದಲ್ಲಿ ಗಾಂಧಾರ ಕಲೆ ಅರಳಿತೆನ್ನಬಹುದು. (ಎ.ಎಂ.)

**ಬ್ಯಾಷಾಂ, ಎ.ಎಲ್.:** 1914–86. ಪ್ರಾಚೀನ ಭಾರತದ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳಲ್ಲಿ ವಿಶೇಷ ಆಸಕ್ತಿಯಿದ್ದ ಪಾಶ್ಚಾತ್ಯ ಇತಿಹಾಸಕಾರ. ಆರ್ಥರ್ ಲೆವೆಲ್ಲಿನ್ ಬ್ಯಾಷಾಂ 1914 ಮೇ 24ರಂದು ಎಸೆಕ್ಸ್‌ನ ಲಾಟನ್‌ನಲ್ಲಿ ಜನಿಸಿದ. ಒಂದನೆಯ ಮಹಾಯುದ್ಧದಲ್ಲಿ ಭಾರತೀಯ ಸೇನೆಯಲ್ಲಿದ್ದ ಇವನ ಪತ್ರಕರ್ತ ತಂದೆ ಆರ್ಥರ್ ಎಡ್ವರ್ಡ್ ಬ್ಯಾಷಾಂರಿಂದ ಕೇಳಿದ ಕಥೆಗಳು ಇವನನ್ನು ಭಾರತೀಯ ಸಂಸ್ಕೃತಿಗೆ ಪರಿಚಯಿಸಿದುವು. ತಾಯಿಯೂ ಪತ್ರಕರ್ತೆಯಾಗಿದ್ದುದು ಇವನಲ್ಲಿ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಒಲವು ಮೂಡಲು ಕಾರಣವಾಯಿತು. ಎಳೆ ವಯಸ್ಸಿನಲ್ಲಿಯೇ ಸಂಗೀತದಲ್ಲಿ, ವಿಶೇಷವಾಗಿ ಪಿಯಾನೋ ವಾದನದಲ್ಲಿ ಪರಿಣತಿ ಪಡೆಯುವುದರ ಜೊತೆಗೆ ಹಿಂದು, ಬೌದ್ಧ, ಇಸ್ಲಾಂ ಧರ್ಮಗಳಲ್ಲಿ ಆಸಕ್ತಿ ಬೆಳೆಸಿಕೊಂಡ. ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್ ಸಂಸ್ಥೆಯಿಂದ ಸಂಸ್ಕೃತ ಸಾಹಿತ್ಯದಲ್ಲಿ ಬಿ.ಎ. ಪದವಿ ಪಡೆದು 1950ರಲ್ಲಿ ಎಲ್.ಡಿ.ಬಾರ್ನೆಟ್‌ರ ಮಾರ್ಗದರ್ಶನದಲ್ಲಿ ಹಿಸ್ಟರಿ ಅಂಡ್ ಡಾಕ್ಟರಿನ್ಸ್ ಆಫ್ ದಿ ಆಜೀವಕಾಸ್ ಎಂಬ ವಿಷಯದ ಬಗೆಗಿನ ಸಂಶೋಧನೆಗೆ ಡಾಕ್ಟೊರೇಟ್ ಪದವಿ ಗಳಿಸಿದ. ಇದೇ ಸಂಸ್ಥೆಯಲ್ಲಿ 1948–65ರವರೆಗೆ ಪ್ರಾಧ್ಯಾಪಕನಾಗಿ ಸೇವೆಸಲ್ಲಿಸಿದ ಇವನು 1965ರಲ್ಲಿ ಕ್ಯಾನ್‌ಬೆರ್ರದಲ್ಲಿರುವ ಆಸ್ಟ್ರೇಲಿಯನ್ ನ್ಯಾಷನಲ್ ಯೂನಿವರ್ಸಿಟಿಯ ಇತಿಹಾಸ ವಿಭಾಗದ ಅಧ್ಯಕ್ಷನಾಗಿಯೂ ಓರಿಯೆಂಟಲ್ ಸಿವಿಲೈಜೇಷನ್ಸ್‌ನ ಪ್ರಾಧ್ಯಾಪಕನಾಗಿಯೂ ನೇಮಕಗೊಂಡ. 1979ರಲ್ಲಿ ನಿವೃತ್ತನಾದ ಮೇಲೆ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕನಾಗಿದ್ದ.

ವಿವೇಕಾನಂದರ ಪ್ರಭಾವವನ್ನು ಜಾಗತಿಕ ಮಟ್ಟದಲ್ಲಿ ಅವಲೋಕಿಸಿದ ಪ್ರಪ್ರಥಮ ಪಾಶ್ಚಾತ್ಯ ಇತಿಹಾಸಕಾರನಾದ ಇವನು 1985ರಲ್ಲಿ ಕಲ್ಕತ್ತದ ಏಷ್ಯಾಟಿಕ್ ಸೊಸೈಟಿಯಲ್ಲಿಯ ಸ್ವಾಮಿ ವಿವೇಕಾನಂದ ಪ್ರೊಫೆಸರ್ ಇನ್ ಓರಿಯೆಂಟಲ್ ಸ್ಟಡೀಸ್ ಪೀಠಕ್ಕೆ ಆಯ್ಕೆಗೊಂಡ. ದಿ ವಂಡರ್ ದಟ್ ವಾಸ್ ಇಂಡಿಯ (1954) ಇವನ ಅತ್ಯಂತ ಜನಪ್ರಿಯ ಕೃತಿ. ಈ ಕೃತಿ ಇದುವರೆಗೆ 37 ಆವೃತ್ತಿಯನ್ನು ಕಂಡಿದೆ(2001). ದಿ ಆರಿಜಿನ್ಸ್ ಅಂಡ್ ಡೆವಲಪ್‌ಮೆಂಟ್ ಆಫ್ ಕ್ಲಾಸಿಕಲ್ ಹಿಂದುಯಿಸಂ ಎಂಬುದು ಕೆನೆತ್ ಜಿ.ಜ಼ಿಸ್ಕ್‌ರೊಂದಿಗೆ ಸೇರಿ ಬರೆದ ಕೃತಿ. ಸಚೀಂದ್ರ ಕುಮಾರ್ ಮೈಟಿ ಅವರು ಎ.ಎಲ್.ಬ್ಯಾಷಾಂ, ಮೈ ಗುರೂಜಿ ಅಂಡ್ ಪ್ರಾಬ್ಲಮ್ ಅಂಡ್ ಪರ್ಸ್ಪೆಕ್ಟಿವ್ಸ್ ಆಫ್ ಏನ್ಷಿಯಂಟ್ ಇಂಡಿಯನ್ ಹಿಸ್ಟರಿ ಅಂಡ್ ಕಲ್ಚರ್ ಎಂಬ ಕೃತಿಯನ್ನು 1997ರಲ್ಲಿ ಸಂಪಾದಿಸಿದ್ದಾನೆ. ಇದರಲ್ಲಿ ಮೈಟಿಯವರಿಗೆ ಬ್ಯಾಷಾಂ ಬರೆದ 80 ಪತ್ರಗಳೂ ಪ್ರಕಟಗೊಂಡಿವೆ. ಇವನು 1986 ಜನವರಿ 27ರಂದು ನಿಧನನಾದ. (ವಿ.ಎಸ್.)

**ಬ್ಯಾಬಿಲಾನ್:** ಪ್ರಾಚೀನ ಬ್ಯಾಬಿಲೋನಿಯದ ರಾಜಧಾನಿಯಾಗಿದ್ದು, ಈಗ ಪಾಳು ಬಿದ್ದಿರುವ ನಗರ. ಇರಾಕಿನಲ್ಲಿ ಬಾಗ್ದಾದ್ ನಗರದ ದಕ್ಷಿಣಕ್ಕೆ ಸು. 88ಕಿಮೀ ದೂರದಲ್ಲಿ ಯೂಫ್ರೆಟೀಸ್ ನದಿಯ ಪೂರ್ವದಂಡೆಯಲ್ಲಿ ಇದರ ನೆಲೆ. ಸೆಮಿಟಿಕ್ ಸಂತತಿಯ ಎರಡನೆಯ ರಾಜ ಮನೆತನದ ಹಮುರಬಿಯ ಕಾಲದಲ್ಲಿ ಪ್ರ.ಶ.ಪೂ.1792ರ ಸುಮಾರಿನಲ್ಲಿ ಈ ನಗರ ಪ್ರಾಮುಖ್ಯಗಳಿಸಿತು. ಹಿಟ್ಟೈಟರ ಧಾಳಿಗಳಲ್ಲಿ ಪ್ರ.ಶ.ಪೂ.1595ರಲ್ಲಿ ಇದು ಹಾಳಾಯಿತಾದರೂ ಮತ್ತೆ ಕ್ಯಾಸೈಟ್ ದೊರೆಗಳ ಕಾಲದಲ್ಲಿ ಪುನರುಜ್ಜೀವನಗೊಂಡು ಪ್ರ.ಶ.ಪೂ.1157ರ ತನಕವೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈಳಮ್ ಮತ್ತು ಅಸ್ಸೀರಿಯ ದೇಶಗಳ ಆಕ್ರಮಣಗಳಿಂದ ಕ್ಷೀಣವಾಗುತ್ತಿದ್ದರೂ ಪುನಃ ಕಾಲ್ಡಿಯನ್ ದೊರೆಗಳ ಆಶ್ರಯದಲ್ಲಿ ಪ್ರ.ಶ.ಪೂ.626–539ರ ಕಾಲದಲ್ಲಿ ಬಹಳ ಪ್ರಗತಿ ಪಡೆಯಿತು. ಕಾಲ್ಡಿಯನ್ ದೊರೆ 2ನೆಯ ನೆಬುಕಡ್ನೆಸರನ ಕಾಲದಲ್ಲಿ ಅಸ್ಸೀರಿಯನ್ನರ ಸತ್ತ್ವಭಂಗವಾಯಿತು. ಅನಂತರ ಪ್ರ.ಶ.ಪೂ. 539ರಲ್ಲಿ ಇದು ಪರ್ಷಿಯನ್ ಚಕ್ರವರ್ತಿ ಸೈರಸನ ವಶವಾಯಿತು. ಅನಂತರ ಗ್ರೀಕರ ಮತ್ತು ರೋಮನರ ಅಧೀನಕ್ಕೆ ಬಂದು ಪ್ರಚಲಿತ ಶಕಾರಂಭದ ತನಕವೂ ಅಸ್ತಿತ್ವ ಉಳಿಸಿಕೊಂಡಿತ್ತು. ಇತಿಹಾಸ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬನಾದ ಅಲೆಕ್ಸಾಂಡರ್ ಭಾರತದ ಮೇಲೆ ಆಕ್ರಮಣ ನಡೆಸಿ ಹಿಂದಿರುಗುತ್ತಿದ್ದಾಗ ಪ್ರ.ಶ.ಪೂ. 323ರಲ್ಲಿ ಇಲ್ಲಿ ತೀರಿಕೊಂಡ.



ಜಿಗ್ಗುರಾಟ್ ಕಟ್ಟಡ ಅವಶೇಷ

ಇತಿಹಾಸ, ಐತಿಹ್ಯ ಮತ್ತು ಸಾಹಿತ್ಯಗಳ ದೃಷ್ಟಿಯಿಂದ ಪುರಾತನ ನಾಗರಿಕತೆಗಳಲ್ಲಿ ಬೇರೆ ಯಾವ ನಗರಕ್ಕೂ ಇಲ್ಲದ ಪ್ರಸಿದ್ಧಿ ಪಡೆದಿದ್ದ ಈ ನಗರ ಈಗ ಮಾತ್ರ ಪಾಳುಬಿದ್ದಿದೆ. ಕಟ್ಟಡ ಶಿಲೆಗಳು ದೊರಕದ, ಮೆಕ್ಕಲುಮಣ್ಣಿನ ಈ ಪ್ರದೇಶದಲ್ಲಿ ಈ ನಗರದ ನಿರ್ಮಾಣಕ್ಕೆ ಹೇರಳವಾಗಿ ಬಳಸಿದ್ದ ಸುಟ್ಟ ಇಟ್ಟಿಗೆಗಳನ್ನು ಈಚಿನ ನಿವಾಸಿಗಳು ದೋಚಿ ಹೊಸ ಗೃಹಗಳನ್ನು ನಿರ್ಮಿಸಿರುವುದರಿಂದ ಈ ನಗರದ ನಿವೇಶನ ಹಾಳಾಗಿದೆ. ಇದರ ಬಳಿ ಇರುವ ಆಧುನಿಕ ಹಿಲ್ಲ ಪಟ್ಟಣದ ಮನೆಗಳ ನಿರ್ಮಾಣಕ್ಕೆ ಬ್ಯಾಬಿಲಾನಿನ ಇಟ್ಟಿಗೆಗಳನ್ನು ಬಳಸಿರುವುದನ್ನು ಕಾಣಬಹುದು. ಇಲ್ಲಿನ ಪಾಳುನಿವೇಶನದಲ್ಲಿ ಬ್ಯಾಬಿಲ್ ಎಂಬ ಐದಾರು ದಿಬ್ಬಗಳಲ್ಲಿ ಪ್ರಾಚೀನ ಕಟ್ಟಡಗಳ ಅವಶೇಷಗಳನ್ನು ಈಗಲೂ ಕಾಣಬಹುದು. ಈ ನಗರದ ಹೆಸರು ಸುಮೇರಿಯನ್ ಭಾಷೆಯಲ್ಲಿ ಕೆಡಿಂಗಿರಾ ಎಂದೂ ಸೆಮಿಟಿಕ್ ಭಾಷೆಯಲ್ಲಿ ಬ್ಯಾಬಿಲಿ ಎಂದೂ ಇತ್ತು. ಈ ಪದಗಳಿಗೆ ದೇವರ ಹೆಬ್ಬಾಗಿಲು ಎಂಬ ಅರ್ಥವಿದೆ.

ಇಲ್ಲಿ ಪ್ರ.ಶ. 1899–1917ರ ನಡುವೆ ಜರ್ಮನರು ಕೋಲ್ಡುವೈ ಎಂಬ ವಿದ್ವಾಂಸನ ನೇತೃತ್ವದಲ್ಲಿ ಉತ್ಖನನ ನಡೆಸಿದಾಗ ನಗರದ ವಿನ್ಯಾಸವನ್ನೂ ಪ್ರಮುಖ ಕಟ್ಟಡವಾದ ಜಿಗ್ಗುರಾಟ್, ನಗರದ ಆರಾಧ್ಯ ದೇವತೆ ಮಾರ್ಡುಕನ್ ಮಂದಿರ, ಅರಮನೆಗಳು ಮತ್ತು ಕೋಟೆ ಇವುಗಳ ಅವಶೇಷಗಳನ್ನೂ ಗುರುತಿಸಲಾಯಿತು. ಉತ್ಖನನಗಳಲ್ಲಿ ಅನೇಕ ಲಿಖಿತ ಜೇಡಿಮಣ್ಣಿನ ಫಲಕಗಳು ದೊರಕಿವೆ. ಕ್ಯೂನಿಫಾರಮ್ ಲಿಪಿಯಲ್ಲಿ ಸೆಮಿಟಿಕ್ ಭಾಷೆಯಲ್ಲಿ ಬರೆದ ಈ ಸಾಹಿತ್ಯಕ ದಾಖಲೆಗಳಿಂದ ಈ ನಗರದ ಪ್ರಾಚೀನ ಇತಿಹಾಸವನ್ನು ಕುರಿತ ಅನೇಕ ಮಾಹಿತಿಗಳು ದೊರಕುತ್ತವೆ. ಗ್ರೀಕ್ ಇತಿಹಾಸಕಾರ ಹಿರೋಡಾಟಸ್ ಈ ನಗರದ ಮತ್ತು ಇದರ ಸುತ್ತಲಿನ ಬೃಹತ್ತಾದ ಕೋಟೆಗೋಡೆಗಳ ವರ್ಣನೆ ನೀಡಿದ್ದಾನೆ. ನದಿ ದಾಟಿ ಕೋಟೆ ಪ್ರವೇಶಿಸಲು ಮರದ ಸೇತುವೆ ನಿರ್ಮಿಸಲಾಗಿತ್ತೆಂದೂ ಶತ್ರುಗಳ ಆಕ್ರಮಣದ ಭೀತಿಯಿದ್ದಾಗ ಅದನ್ನು ಕೋಟೆಯೊಳಕ್ಕೆ ಮಡಿಸಿಕೊಳ್ಳುವ ವ್ಯವಸ್ಥೆಯಿತ್ತೆಂದೂ ಹಿರೋಡಾಟಸ್ ತಿಳಿಸಿದ್ದಾನೆ. ವಿಶಾಲವಾದ ಕೋಟೆಗೋಡೆಯ ಮೇಲೆ ನಾಲ್ಕು ಕುದುರೆಗಳ ರಥ ಸಾಗಲು ಸಾಕಾಗುವಷ್ಟು ಅಗಲವಾದ ರಸ್ತೆಯಿತ್ತೆಂದೂ ಹೇಳಿದ್ದಾನೆ. ರಸ್ತೆಯ ಎರಡು ಬದಿಗಳಲ್ಲೂ ತಿರುಗುಗೋಪುರಗಳಿದ್ದುವು. ಈ ಕೋಟೆಯೊಳಗೆ ಹೋಗಲು ವಿವಿಧ ದೇವತೆಗಳ ಹೆಸರಿನ ಅನೇಕ ಮಹಾದ್ವಾರಗಳಿದ್ದುವು. ಇವುಗಳ ಪೈಕಿ ಅತ್ಯಂತ ಸುಂದರವಾಗಿದ್ದು ಹೆಚ್ಚು ಸುಸ್ಥಿತಿಯಲ್ಲಿ

ಉಳಿದು ಬಂದಿರುವುದು ಇಷ್ಟಾರ್ ಮಹಾದ್ವಾರ. ನಗರದ ಮುಖ್ಯ ರಸ್ತೆಯಾದ ಮೆರವಣಿಗೆ ಮಾರ್ಗಕ್ಕೆ ಇದೇ ಹೆಬ್ಬಾಗಿಲು. ಈ ದ್ವಾರಕ್ಕೆ ಎತ್ತರ ಕಮಾನಿತ್ತು. ದ್ವಾರದ ಒಳಪಾರ್ಶ್ವ ಮತ್ತು ಮುಂದಿನ ಗೋಡೆಗಳ ಮೇಲೆ ಬಣ್ಣದ ಫಲಕಗಳಲ್ಲಿ ಮಾಡಿದ ವೃಷಭಗಳ, ಸಿಂಹಗಳ ಮತ್ತು ಪುರಾಣದ ಭಯಂಕರ ಪ್ರಾಣಿಗಳ ಶಿಲ್ಪಗಳಿದ್ದುವು.

ವಸ್ತುಸಂಗ್ರಹಾಲಯದಲ್ಲಿರುವ ಇಷ್ಟಾರ್ ದ್ವಾರ

ಈ ಮಹಾನಗರದ ಅತ್ಯಂತ ಪ್ರಸಿದ್ಧವೂ ಪುರಾತನವೂ ಆದ ಕಟ್ಟಡವೆಂದರೆ ಬ್ಯಾಬಿಲ್ ಗೋಪುರ. ಸ್ವರ್ಗ ಮತ್ತು ಭೂಮಿಗಳ ಪ್ರತಿಷ್ಠಾಪನ ಮಂದಿರವೆಂದೂ ಹೆಸರಿದ್ದ ಈ ಗೋಪುರವನ್ನು ಯೂಫ್ರೆಟೀಸ್ ಸೇತುವೆಗೆ ಹೋಗುವ ರಸ್ತೆಯ ಉತ್ತರಭಾಗದಲ್ಲಿ ವಿಶಾಲ ಪ್ರಾಂಗಣದ ಮಧ್ಯೆ ನಿರ್ಮಿಸಲಾಗಿತ್ತು. ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ, ಕ್ರಮೇಣ ಕಿರಿದಾಗುವ, ಹಂತ ಹಂತವಾಗಿ ಮೇಲಕ್ಕೇರುವ, ಆಯಾಕಾರದ ಜಗಲಿಗಳ ರೂಪದ ಕೃತಕ ದಿಬ್ಬದ ಮೇಲೆ ಹೊಳೆಯುವ ನೀಲಿ ಬಣ್ಣದ ಗಾಜು ಲೇಪದ ಇಟ್ಟಿಗೆಗಳಿಂದ ಕಟ್ಟಿದ ಮಂದಿರವಿತ್ತು. ಮಂದಿರದಲ್ಲಿ ಮಂಚವೂ ಚಿನ್ನದ ಕಾಲುಮಣೆಯೂ ಇದ್ದವು. ಮಂಚದ ಮೇಲೆ ನಗರದೇವ ಮಾರ್ಡುಕನ ಆರಾಧಕಳಾದ ಪುರೋಹಿತಗಿತ್ತಿ ಮಲಗುತ್ತಿದ್ದಳೆಂದೂ ಆಕೆಯೊಡನೆ

ದ್ವಾರದಲ್ಲಿ ಕೆತ್ತಲಾಗಿರುವ ಸಿಂಹ

ದಿವ್ಯವಿವಾಹದ ಮೂಲಕ ಮಾರ್ಡುಕ್ ರಮಿಸುತ್ತಿದ್ದನೆಂದೂ ನಂಬಲಾಗಿತ್ತು. ಇಂಥ ಕೃತಕ ದಿಬ್ಬದ ಮೇಲಿನ ಮಂದಿರಗಳನ್ನು ಜಿಗ್ಗುರಾಟ್ ಎಂದು ಕರೆಯಲಾಗುತ್ತಿತ್ತು. ರಸ್ತೆಯ ಇನ್ನೊಂದು ಬದಿಯಲ್ಲಿ ಅನೇಕ ಗುಡಿಗಳ ಪ್ರಾಂಗಣಗಳಿಂದ ಕೂಡಿದ ಮಾರ್ಡುಕನ ಎಸಾಗಿಲಾ ಮಂದಿರವಿತ್ತು. ಆ ಮಂದಿರದ ಮುಖ್ಯದೇವತೆ ಆಸೀನ ಜ್ಯೂಸ್. ಅಲ್ಲಿ 48,000 ಪೌಂಡ್ ತೂಕದ ಚಿನ್ನದ ಸಿಂಹಾಸನ ಮತ್ತು ಕಾಲುಮಣೆಗಳಿದ್ದವು ಎಂದು ಹಿರೋಡಾಟಸ್ ತಿಳಿಸಿದ್ದಾನೆ. ಮಂದಿರದ ಹೊರಭಾಗದಲ್ಲಿದ್ದ ವಿಶಾಲವಾದ ಬಲಿಪೀಠಗಳ ಬಳಿ ಸು.6 ಮೀ ಎತ್ತರದ ಘನವಾದ ಪ್ರತಿಮೆಯಿತ್ತು. ಪ್ರಪಂಚದ ಏಳು ಅದ್ಭುತಗಳಲ್ಲೊಂದಾದ ತೂಗು ಉದ್ಯಾನ ಬ್ಯಾಬಿಲಾನಿನ ಮಹತ್ತರ ನಿರ್ಮಾಣ. ಪರ್ವತ ಪ್ರದೇಶದಲ್ಲಿ ಹುಟ್ಟಿ ಬೆಳೆದ ತನ್ನ ಪತ್ನಿಗೆ ಅಲ್ಲಿಯಂತೆಯೇ ಪ್ರಕೃತಿ ಸೌಂದರ್ಯವನ್ನು ಒದಗಿಸಲು ಚಕ್ರವರ್ತಿ ನೆಬುಕಡ್ನೆಸರ್ ಜಿಗ್ಗುರಾಟ್ ದಿಬ್ಬದ ಹಂತಹಂತವಾದ ಮೇಲ್ಮೈಯಲ್ಲಿ ಬಗೆಬಗೆಯ ಫಲಪುಷ್ಪಗಳ ಗಿಡಮರಗಳನ್ನು ಬೆಳೆಸಿದ್ದನೆಂದೂ ಅವನ್ನು ತೂಗುವ ಉದ್ಯಾನಗಳೆಂದು ಹಿರೋಡಾಟಸ್ ವರ್ಣಿಸಿದ್ದನೆಂದೂ ನಂಬಲಾಗಿದೆ. (ಬಿ.ಕೆ.ಜಿ.;ಪಿ.ಎಸ್.)

**ಬ್ರಹ್ಮಗಿರಿ:** ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಿದ್ದಾಪುರ ಗ್ರಾಮದ ಬಳಿ ಇರುವ ಒಂದು ಬೆಟ್ಟ. ಇದರ ಸುತ್ತಲೂ ಹರಡಿರುವ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಅವಶೇಷಗಳಿಂದ ಇದು ಪ್ರಸಿದ್ಧವಾಗಿದೆ. ಇಲ್ಲಿ ಅಶೋಕನ ಕಿರುಬಂಡೆ ಶಾಸನ I ಮತ್ತು II ಇವೆ. ಇದರ ಸಮೀಪದಲ್ಲೆ ಇರುವ ಪ್ರಾಚೀನ ನೆಲೆಯನ್ನು ಶಾಸನದಲ್ಲಿ ಉಕ್ತವಾಗಿರುವ ಇಸಿಲ ಪಟ್ಟಣವೆಂದು ಗುರುತಿಸಲಾಗಿದೆ.

ಬ್ರಹ್ಮಗಿರಿ ಬೆಟ್ಟದ ಪಶ್ಚಿಮಕ್ಕೆ ಸಿದ್ದಾಪುರ ಗ್ರಾಮ ಮತ್ತು ಗುಡ್ಡ, ಉತ್ತರಕ್ಕೆ ಸು.2 ಕಿಮೀ ದೂರದಲ್ಲಿ ಜಟಿಂಗರಾಮೇಶ್ವರ ಬೆಟ್ಟ ಇವೆ (ಇವೆರಡು ಸ್ಥಳಗಳಲ್ಲೂ ಬ್ರಹ್ಮಗಿರಿ ತರಹದ ಅಶೋಕನ ಶಾಸನಗಳಿವೆ). ಜಟಿಂಗರಾಮೇಶ್ವರ ಮತ್ತು ಬ್ರಹ್ಮಗಿರಿ ಬೆಟ್ಟಗಳ ನಡುವೆ ಮಟ್ಟಸ ಪ್ರದೇಶವಿದ್ದು ಅಲ್ಲಿ ಚಿನ್ನಹಗರಿ ನದಿ ಹರಿಯುತ್ತದೆ. ಬೆಟ್ಟದಲ್ಲೂ ಅನೇಕ ಸ್ವಾಭಾವಿಕ ಗವಿಗಳೂ ಇರುವುದಲ್ಲದೆ ವರ್ಷಪೂರ್ತಿ ನೀರೊದಗಿಸುವ ಅನೇಕ ದೋಣೆಗಳಿವೆ. ಈ ಸೌಲಭ್ಯದಿಂದಾಗಿ ಇದು ಬಹು ಪ್ರಾಚೀನ ಕಾಲದಿಂದಲೂ ಮಾನವನಿಗೆ ಒಳ್ಳೆಯ ನೆಲೆಯಾಗಿ ಮುಂದುವರಿದುಕೊಂಡು ಬಂದಿದೆ.

ಅಶೋಕನ ಶಾಸನ ಬೆಟ್ಟದ ಉತ್ತರದಂಚಿನಲ್ಲಿ ಎತ್ತರದ ಬಂಡೆಯ ಮೇಲೆ ಇದೆ. ಇದರ ಪೂರ್ವಕ್ಕೆ ಸ್ವಲ್ಪಮುಂದೆ ಚೌಡೇಶ್ವರೀ ಕುಂಟೆಯನ್ನು ನಿರ್ಮಿಸಲಾಗಿದೆ. ಇದರ ಬಳಿಯಲ್ಲಿ ಚಾಳುಕ್ಯರ ಕಾಲದ ಒಂದು ದುರ್ಗ ವಿಗ್ರಹವಿದೆ. ಈ ಸುತ್ತಲ ವಿಶಾಲ ಪ್ರದೇಶದಲ್ಲಿ ಅನೇಕ ಬೃಹತ್ ಶಿಲಾಸಮಾಧಿಗಳು ಹರಡಿವೆ. ಅಲ್ಲದೆ ಅಶೋಕನ ಶಾಸನದ ಬುಡದಲ್ಲಿ ಹಾಗೂ ಬೆಟ್ಟದ ಪೂರ್ವದ ಪಾದದಲ್ಲಿ ಉದ್ದಕ್ಕೂ ಬೃಹತ್ ಶಿಲಾಸಮಾಧಿ ಮತ್ತು ಆದಿ ಚಾರಿತ್ರಿಕ ಕಾಲದ ನೆಲೆಗಳಿವೆ. ಪೂರ್ವ ಇಳಿಜಾರಿನಲ್ಲಿ ಸ್ವಲ್ಪ ದಕ್ಷಿಣಕ್ಕೆ ರೊಪ್ಪ ಗ್ರಾಮವಿದೆ. ಅದರಿಂದ ಮತ್ತಷ್ಟು ದಕ್ಷಿಣಕ್ಕೆ ಪಲ್ಲಕ್ಕಿ ಚಿಲುಮೆಯೂ ಅಲ್ಲಿಂದ ಸ್ವಲ್ಪ ದಕ್ಷಿಣಕ್ಕೆ ನವಶಿಲಾಯುಗದ ನೆಲೆಯೂ ಇವೆ. ಬೆಟ್ಟದ ಪಶ್ಚಿಮ ಪಾರ್ಶ್ವದಲ್ಲಿ ಅಶೋಕನ ಶಾಸನವಿರುವ ಉತ್ತರಾಗ್ರದ ಬಳಿಯಲ್ಲಿ ಮತ್ತಷ್ಟು ಬೃಹತ್ ಶಿಲಾಸಮಾಧಿಗಳಿವೆ. ಅಲ್ಲಿಂದ ಮುಂದಕ್ಕೆ ದಕ್ಷಿಣದಲ್ಲಿ ಹೊಯ್ಸಳರ ಕಾಲದಲ್ಲಿ ಪ್ರಸಿದ್ಧ ಪಟ್ಟಣವಾಗಿದ್ದ ಹಾನೆಯದ ಅವಶೇಷಗಳಿವೆ. ಪಶ್ಚಿಮ ಪಾರ್ಶ್ವದ ಬುಡದಲ್ಲಿರುವ ಅಕ್ಕತಂಗಿಯರ ಗುಡಿ, ಪಗಡೆ ಸಾಲು ಗುಡ್ಡದ ಗುಡಿ, ಜೈನ ದೇವಾಲಯ ಈ ಕಾಲದವು. ಇದೇ ಕಾಲಕ್ಕೆ ಸೇರಿದ ವಿಸ್ತಾರವಾಗಿ ಹಬ್ಬಿರುವ ಕೋಟೆಯ ಗೋಡೆಗಳು ಸಹ ಇವೆ. ಕೋಟೆಯ ಗೋಡೆಯ ಬಳಿಯಲ್ಲಿ ಇಮ್ಮಡಿ ವೀರಬಲ್ಲಾಳನ 1190ರ ಒಂದು ಶಾಸನವಿದ್ದು ಅದರಲ್ಲಿ ಬಲ್ಲಾಳ ಹಾನೆಯ ಕೋಟೆಯನ್ನು ಹಿಡಿದು ವಿಜಯನಗರಿ ಪಟ್ಟಣವನ್ನು ಸ್ಥಾಪಿಸಿದ ವಿಷಯವಿದೆ. ಬೆಟ್ಟದ ಮೇಲಕ್ಕೆ ಸಾಗುವ ಕಲ್ಲುಹಾದಿ, ಶ್ರೀಕಂಠೇಶ್ವರ ದೇವಾಲಯ, ಕೆಲವು ದೊಡ್ಡ ವಾಸಗೃಹಗಳ (ಅರಮನೆ) ಅಡಿಪಾಯಗಳು, ಭಾಗ್ಯಲಕ್ಷ್ಮಿ ದೇವಾಲಯ, ಬೆಟ್ಟದ ಮೇಲಿನ ಹುಲಿಕುಂಟೆ–ಇವು ಈ ಕಾಲದ ಪಟ್ಟಣಕ್ಕೆ ಸೇರಿದ್ದವು. ಮುಂದೆ ವಿಜಯನಗರದ ಅರಸರ ಕಾಲದಲ್ಲಿ ಹಾನೆಯ ಮತ್ತೆ ಸ್ವಲ್ಪಕಾಲ ಪ್ರವರ್ಧಮಾನ ಸ್ಥಿತಿಯಲ್ಲಿದ್ದಂತೆ ತೋರುತ್ತದೆ. ಇಂದು ಇಲ್ಲಿಯ ಅವಶೇಷಗಳೆಲ್ಲಾ ಬಹುಮಟ್ಟಿಗೆ ಹಾಳಾಗಿವೆ.

ಅಶೋಕನ ಶಾಸನ 1874ರಲ್ಲಿ ಬೆಳಕಿಗೆ ಬಂತು. ಇಡೀ ಶಾಸನ ಬ್ರಾಹ್ಮಿಲಿಪಿಯಲ್ಲಿದೆ. ಕೊನೆಯ ಸಾಲಿನ ಕೊನೆಯ ಪದ ಲಿಪಿಕರೇಣ ಮಾತ್ರ ಖರೋಷ್ಠಿ ಲಿಪಿಯಲ್ಲಿದೆ. ಇದನ್ನು ಕೊರೆದವನ ಹೆಸರು ಚಪಡನೆಂದು ಶಾಸನದ ಕೊನೆಯಲ್ಲಿದೆ. ಶಾಸನ ಎರಡು ಭಾಗವುಳ್ಳದ್ದಾಗಿದೆ. ಮೊದಲನೆಯ ಭಾಗದಲ್ಲಿ ಅಶೋಕ ತಾನು 2½ ವರ್ಷಗಳಿಂದೀಚೆಗೆ ಧರ್ಮಾಚರಣೆಲ್ಲಿದ್ದರೂ ಒಂದು ವರ್ಷದಿಂದೀಚೆಗೆ ಸಂಘವನ್ನು ಸೇರಿ ಈ ದಿಶೆಯಲ್ಲಿ ಹೆಚ್ಚು ಪ್ರಯತ್ನಿಸುತ್ತಿರುವುದಾಗಿಯೂ ಈ ಪ್ರಯತ್ನದ ಫಲದಿಂದ ಜಂಬೂದ್ವೀಪದಲ್ಲಿರುವ ಜನರು ಹೆಚ್ಚುಹೆಚ್ಚು ನೀತಿವಂತರಾಗುತ್ತಿದ್ದಾರೆಂದೂ ಕೇವಲ ಉತ್ತಮನು ಮಾತ್ರವಲ್ಲದೆ ತೀರ ಸಾಮಾನ್ಯನೂ ಕೂಡ ಪ್ರಯತ್ನಪೂರ್ವಕವಾಗಿ ಒಳ್ಳೆಯವನಾದರೆ ಅವನೂ ಕೂಡ ಸದ್ಗತಿಯನ್ನು ಪಡೆಯಬಹುದು ಎಂದೂ ತಿಳಿಸಿದ್ದಾನೆ. ಅಲ್ಲದೆ, ತನ್ನ ಸಾಮ್ರಾಜ್ಯದ ನೆರೆಹೊರೆಯವರೂ ಕೂಡ ಈ ವಿಷಯವನ್ನು ತಿಳಿಸಬೇಕೆಂದು ಇಚ್ಛೆಸಿದ್ದಾನೆ. ಧರ್ಮಪ್ರಚಾರಕ್ಕೆ ತಾನು ಕೈಕೊಂಡ 256 ದಿವಸಗಳ ಪ್ರವಾಸದ ಅನಂತರ ಈ ರೀತಿ ಅಪ್ಪಣೆ ಮಾಡಿದ್ದಾನೆ. ಎರಡನೆಯ ಭಾಗದಲ್ಲಿ ಮಕ್ಕಳಿಂದ ತಂದೆತಾಯಿಗಳ ಸೇವೆ, ಗುರುಗಳಲ್ಲಿ ವಿಧೇಯತೆ, ಹಿರಿಯರಿಗೆ ಗೌರವ, ಪ್ರಾಣಿದಯೆ, ಸತ್ಯಸಂಧತೆ ಮುಂತಾದ ನೀತಿಗಳು ಬಹಳ ಪ್ರಾಚೀನ ಕಾಲದಿಂದಲೂ ದೀರ್ಘ ಸುಖಜೀವನಕ್ಕೆ ಅನುಕೂಲವಾಗಿದ್ದು, ಅವುಗಳನ್ನು ಎಲ್ಲರೂ ಅನುಸರಿಸಬೇಕೆಂದು ಉಪದೇಶಿಸಿದ್ದಾನೆ. ಶಾಸನದಲ್ಲಿ ಈ ವಿಷಯಗಳನ್ನು ಸುವರ್ಣಗಿರಿಯ ಮಹಾಮಾತ್ರರ ಮೂಲಕ ಇಸಿಲದ ಮಹಾಮಾತ್ರರಿಗೆ ತಿಳಿಸಿದಂತೆ ಹೇಳಲಾಗಿದೆ. ಇಸಿಲ–ಬಹುಶಃ ಎಯಿಲ್‌ನಿಂದ ವ್ಯುತ್ಪತ್ತಿ ಹೊಂದಿದ, ಅತ್ಯಂತ ಪ್ರಾಚೀನ ಶಾಸನೋಲ್ಲೇಖಿತ ದ್ರಾವಿಡ ಪದ ಎಂಬ ಅಭಿಪ್ರಾಯವಿದೆ.

ಕರ್ನಾಟಕದ ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿದ್ದ ಎಂ.ಎಚ್. ಕೃಷ್ಣ ಅವರು 1920ರಲ್ಲಿ ಈ ಇಸಿಲ ಪಟ್ಟಣದ ಅವಶೇಷಗಳನ್ನು ಶೋಧಿಸಲು ಬ್ರಹ್ಮಗಿರಿಯ ಸುತ್ತಮುತ್ತಲೂ ಕೂಲಂಕಷವಾಗಿ ಪರೀಕ್ಷಿಸಿದರು. ಇದರಿಂದ ಇತಿಹಾಸ ಪ್ರಾರಂಭ ಕಾಲದ ಜನವಸತಿಯ ಅವಶೇಷಗಳು ದೊರಕಿದುದಲ್ಲದೆ ಇದಕ್ಕೂ ಪೂರ್ವ ಕಾಲದಲ್ಲಿಯ ಕಬ್ಬಿಣಯುಗದ ಮತ್ತು ಇದರ ಹಿಂದಿನ ನವಶಿಲಾಯುಗದ ಜನವರ್ಗಗಳ ವಸತಿಯ ಅವಶೇಷಗಳು ದೊರೆತು ಕರ್ನಾಟಕದ ಪ್ರಾಗಿತಿಹಾಸದ ಬಗ್ಗೆ ಕೆಲವೊಂದು ಹೆಚ್ಚಿನ ವಿಷಯಗಳು ತಿಳಿದುಬಂದವು. ಕೃಷ್ಣ ಅವರು ಇತಿಹಾಸ ಪ್ರಾರಂಭಕಾಲದ ಜನವಸತಿಯ ಗುರುತುಗಳೇ ಇಸಿಲ ಊರಿನದು ಎಂದು ಅಭಿಪ್ರಾಯಪಟ್ಟರು. 1942ರಲ್ಲಿ ಈ ನೆಲೆಯಲ್ಲಿ ಮತ್ತು ಸಮೀಪದ ಕೊಪ್ಪದ ನೆಲೆಯಲ್ಲಿ ಹಾಗೂ ಕೆಲವು ಕಲ್ಗೋರಿಗಳನ್ನು ಪದರುಶಾಸ್ತ್ರ ವಿಧಾನದಿಂದ ಉತ್ಖನನ ಮಾಡಿದರು. ಒಟ್ಟಾರೆ ಅನುಕ್ರಮವಾಗಿ ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು. ಅವು ಹೀಗಿವೆ: ಮೈಕ್ರೊಲಿಥಿಕ್(ರೊಪ್ಪ) ಸಂಸ್ಕೃತಿ; 2. ನವಶಿಲಾಯುಗ; 3. ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ; 4. ಇಸಿಲ ಸಂಸ್ಕೃತಿ; 5. ಸಾತವಾಹನ ಕಾಲದ

ಸಂಸ್ಕೃತಿ ಮತ್ತು 6. ಆದಿ ಕದಂಬ. ಇವರ ಅತಿ ಮುಖ್ಯ ಶೋಧನೆ ನವಶಿಲಾಯುಗ ಕೊನೆಯ ಹಂತದಲ್ಲಿ ಬೃಹತ್‌ಶಿಲಾ ಸಂಸ್ಕೃತಿ ಕುರುಹುಗಳು. ಹಾಗೆಯೆ ಎರಡನೆಯ ಸಂಸ್ಕೃತಿಯ ಕೊನೆಯ ಹಂತದಲ್ಲಿ ಆದಿಇತಿಹಾಸ ಕಾಲದ (ಇಸಿಲ) ಸಂಸ್ಕೃತಿಯ ಅವಶೇಷಗಳಿರುವುದನ್ನು ಗುರುತಿಸುವಿಕೆ. ಇದರಿಂದ ಇಸಿಲ ಸಂಸ್ಕೃತಿ ನಿಗದಿತ ಕಾಲಮಾನದಿಂದ (ಪ್ರಶ.ಪೂ. 3ನೆಯ ಶತಮಾನ) ಅದುವರೆಗೂ ತಿಳಿಯಲಾಗದ ಮೊದಲ ಎರಡು ಸಂಸ್ಕೃತಿಗಳ ಕಾಲಮಾನಗಳನ್ನು ಸಮಂಜಸವಾಗಿ ತಿಳಿಯಲು ಮತ್ತು ಕಲ್ಗೋರಿಗಳಲ್ಲಿ ಮತ್ತು ಆದಿ ವಾಸ್ತವ್ಯ ನೆಲೆಯ ಆದಿಕಬ್ಬಿಣಯುಗ ಹಂತದ ವಸ್ತು ಅವಶೇಷಗಳು ಒಂದೇ ಪ್ರಕಾರದವುಗಳಾಗಿದ್ದುದರಿಂದ ಪ್ರಥಮ ಬಾರಿಗೆ ಬೃಹತ್ ಶಿಲಾ ಸಂಸ್ಕೃತಿ ಜನರ ವಾಸ್ತವ್ಯ ನೆಲೆಯನ್ನು ಗುರುತಿಸಲು ಸಾಧ್ಯವಾಯಿತು. ಆದ್ದರಿಂದ ವಾಸ್ತವ್ಯ ನೆಲೆಯಲ್ಲಿ ಈ ಹಂತವನ್ನು ಆದಿ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯೆಂದು ಕರೆಯಲಾಯಿತು. ಈ ಸಂಕ್ಷಿಪ್ತ ವರದಿ ಇಲಾಖೆಯ ವಾರ್ಷಿಕ ವರದಿಯಲ್ಲಿದೆ. ಕೃಷ್ಣರವರ ಅಕಾಲ ಮರಣದಿಂದ ಪೂರ್ಣ ವಿವರಗಳು ಪ್ರಕಟವಾಗಲಿಲ್ಲ ಮತ್ತು ಇವರ ಈ ಮಹತ್ತ್ವದ ಶೋಧನೆಗಳನ್ನೂ ಗಮನಿಸಿದಂತೆ ಕಾಣುವುದಿಲ್ಲ. (ಎ.ಎಸ್.)

ಅಸ್ಥಿಮಡಕೆಗಳು

ಅನಂತರ 1947ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಮಾರ್ಟಿಮರ್ ವೀಲರ್ ಅವರ ನೇತೃತ್ವದಲ್ಲಿ ಇಲ್ಲಿ ಮತ್ತೆ ಉತ್ಖನನ ನಡೆಯಿತು. ಅಚ್ಚುಕಟ್ಟಾಗಿ ಅತ್ಯಂತ ವ್ಯವಸ್ಥಿತವಾಗಿ ಏಳು ಗುಂಡಿಗಳನ್ನು ಮತ್ತು ಹತ್ತು ಬೃಹತ್‌ಶಿಲಾ ಸಂಸ್ಕೃತಿಯ ಗೋರಿಗಳನ್ನು ಅಗೆಯಲಾಯಿತು. ಇಲ್ಲಿ ಅನುಕ್ರಮವಾಗಿ ಮೂರು ಸಂಸ್ಕೃತಿಗಳನ್ನು ಗುರುತಿಸಲಾಗಿದೆ. ಮೇಲಿನ ಒಂದರಿಂದ ಆರರವರೆಗಿನ ಸ್ತರಗಳಲ್ಲಿ ಗೋಡೆಯ ಅವಶೇಷಗಳು, ಇಟ್ಟಿಗೆ ಚೂರುಗಳು, ಕಬ್ಬಿಣದ ಮತ್ತು ಇತರ ಲೋಹದ ವಸ್ತುಗಳು, ದಂತದ ಮತ್ತು ಲೋಹದ ಬಳೆಗಳು ಮಣ್ಣಿನ ಮಡಕೆ ಇದ್ದವು. ಈ ಮಡಕೆಗಳಲ್ಲಿ ಬಿಳಿ ಬಣ್ಣದ ರೇಖಾಚಿತ್ರಗಳನ್ನುಳ್ಳ ಕಪ್ಪು, ಕೆಂಪು ಮಡಕೆಗಳು ವಿಶೇಷವಾಗಿದ್ದವು. ಈ ರೀತಿಯ ಮಡಕೆಗಳು ಸಾತವಾಹನರ ಕಾಲಕ್ಕೆ ಸೇರಬಹುದಾದ ಸಾಂಸ್ಕೃತಿಕ ಸ್ತರಗಳಲ್ಲಿ ಇತರ ಕಡೆಗಳಲ್ಲಿ ದೊರಕಿದ್ದುದರಿಂದ, ಈ ರೀತಿಯ ಮಡಕೆಗಳುಳ್ಳ ಸಂಸ್ಕೃತಿಯನ್ನು ವೀಲರ್‌ರವರು ಆಂಧ್ರ ಸಂಸ್ಕೃತಿ ಎಂದು ಕರೆದರು. ಇತ್ತೀಚೆಗೆ ಈ ಸಂಸ್ಕೃತಿಯನ್ನೇ ಆದಿ ಚಾರಿತ್ರಿಕ ಕಾಲದ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಸಂಸ್ಕೃತಿಯು ಸ್ತರಗಳ ಕೆಳಭಾಗದಲ್ಲಿಯ ಏಳು ಮತ್ತು ಎಂಟನೆಯ ಪದರಗಳಲ್ಲಿ ವಿಶೇಷ ಹೊಳಪುಳ್ಳ ಕಪ್ಪು–ಕೆಂಪು ಮತ್ತು ಕೆಂಪಿನ ವಿವಿಧರೂಪದ ಮಡಕೆಗಳು ಹಾಗೂ ಕಬ್ಬಿಣದ ವಸ್ತುಗಳು ದೊರೆತವು. ಇದನ್ನು ಕಬ್ಬಿಣಯುಗದ ಬೃಹತ್ ಶಿಲಾಯುಗದ ಸಂಸ್ಕೃತಿಯೆಂದು ನಿರ್ಧರಿಸಲಾಯಿತು. ಈ ಸಂಸ್ಕೃತಿಯ ಕೆಳಭಾಗದಲ್ಲಿಯ 9ರಿಂದ 18 ರವರೆಗಿನ ಪದರಗಳಲ್ಲಿ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿಗಳು, ಕಲ್ಲಿನ ಚಕ್ಕೆಗಳು, ತಾಮ್ರ ಮತ್ತು ಕಂಚಿನ ಕೆಲವೇ ವಸ್ತುಗಳು ಮತ್ತು ಶವಕುಣಿಗಳು ಇದ್ದವು. ಇವುಗಳ ಜೊತೆಯಲ್ಲಿ ಕೈಯಿಂದ ಮಾಡಿದ ಬೂದುಬಣ್ಣದ ಮಡಕೆಯ ಚೂರುಗಳು ವಿಶೇಷವಾಗಿ ದೊರಕಿದವು. ಇಲ್ಲಿ ದೊರಕಿದ ಉಜ್ಜಿದ ಕರಿಕಲ್ಲಿನ ಕೊಡಲಿಗಳ ಆಧಾರದ ಮೇಲೆ ಈ ಸಂಸ್ಕೃತಿಯನ್ನು ಉಜ್ಜಿದ ಕೊಡಲಿ ಸಂಸ್ಕೃತಿ ಎಂದು ಕರೆಯಲಾಯಿತು. ಈಗ ಇದನ್ನು ನವಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತಿದೆ. ಉತ್ಖನನ ಮಾಡಿದ 10 ಕಲ್ಗೋರಿಗಳಲ್ಲಿಯೂ ಇದೇ ಪ್ರಕಾರದ ಅವಶೇಷಗಳಿದ್ದುದರಿಂದ ವಾಸ್ತವದ ಕಬ್ಬಿಣಯುಗದ ಹಂತವನ್ನು ಬೃಹತ್ ಶಿಲಾ ಸಂಸ್ಕೃತಿಹಂತವೆಂದು ಗುರುತಿಸಲಾಯಿತು. ಮತ್ತು ಇವರೂ ಸಹ ಬೃಹತ್ ಶಿಲಾ ಸಂಸ್ಕೃತಿ ಮತ್ತು ಆಂಧ್ರ ಸಂಸ್ಕೃತಿ ಕ್ರಮವಾಗಿ ನವಶಿಲಾಸಂಸ್ಕೃತಿ ಮತ್ತು ಬೃಹತ್ ಶಿಲಾಸಂಸ್ಕೃತಿಯ ಕೊನೆಯ ಭಾಗದಲ್ಲಿ ವ್ಯಾಪಿಸಿರುವುದನ್ನು ಗುರುತಿಸಿದರು. ಅಂದರೆ ಕೃಷ್ಣರವರ ಮಹತ್ತ್ವದ ಶೋಧಗಳನ್ನು ದೃಢೀಕರಿಸಿದಂತಾಯಿತು. ಆದರೆ ವೀಲರವರು ತಮ್ಮ ವರದಿಯಲ್ಲಿ ಎಲ್ಲಿಯೂ ಇದನ್ನು ಸೂಚಿಸಿಲ್ಲ. ಇವೆಲ್ಲವೂ ವೀಲರವರ ಶೋಧನೆಗಳೆಂದೇ ಇತ್ತೀಚಿನವರೆಗೂ ತಿಳಿಯಲಾಗಿತ್ತು.

1978ರಲ್ಲಿ ವೀಲರ್‌ವರ ಕಾಯ್ದಿಟ್ಟ ಒಂದು ಗುಂಡಿಯನ್ನು ಅ.ಸುಂದರ ಪರೀಕ್ಷಿಸಿದರು. ಆಗ ಎರಡು ಕುತೂಹಲಕಾರಿ ವಿಷಯಗಳು ಸ್ಪಷ್ಟವಾದವು. ನವಶಿಲಾಯುಗ–ಬೃಹತ್ ಶಿಲಾ ಸಂಸ್ಕೃತಿ ವ್ಯಾಪಕ ಹಂತದಲ್ಲಿ ಕಪ್ಪು ನೇರಳೆ ಬಣ್ಣದ ರೇಖಾಚಿತ್ರವುಳ್ಳ ಕೆಂಪುವರ್ಣದ ಮಡಕೆ ಚೂರುಗಳಿರುವುದು ಮತ್ತು ಈ ಹಂತದಲ್ಲಿ ಹಾಗೂ ಸ್ವಲ್ಪ ಮುಂಚಿನ ಹಂತದಲ್ಲಿ ಕಿಟ್ಟದಂಥ ಅತಿ ಹೆಚ್ಚಿನ ಉಷ್ಣತೆಯಲ್ಲಿ ಸುಟ್ಟ ಸಗಣಿಯ ಬೂದಿಗಟ್ಟಿಗಳಿರುವುದು. ಮೊದಲನೆಯದು ವೀಲರ್‌ವರ ವರದಿಯಲ್ಲಿ ಉಲ್ಲೇಖವಿಲ್ಲ. ಎರಡನೆಯದು ಅಸ್ಪಷ್ಟವಾಗಿದೆ. ಜೋರ್ವೆ ಸಂಸ್ಕೃತಿಯ ಕೊನೆಯ ಹಂತದಲ್ಲಿ ಪ್ರ.ಶ.ಪೂ.ಸು.1000–800ರಲ್ಲಿ ಕೃಷ್ಣಾ–ತುಂಗಭದ್ರಾ ಪ್ರದೇಶದ ಕಡೆಗೆ ಪ್ರಸರಿಸಿರುವುದನ್ನು ಬ್ರಹ್ಮಗಿರಿಯಲ್ಲಿ ದೊರೆತ ಈ ವಿಶಿಷ್ಟ ಮಣ್ಪಾತ್ರೆ ಅವಶೇಷಗಳು ಸೂಚಿಸುತ್ತವೆ ಮತ್ತು ಇವುಗಳಿಂದ ನವಶಿಲಾಯುಗ–ಬೃಹತ್ ಶಿಲಾಸಂಸ್ಕೃತಿಗಳೆರಡರ ವ್ಯಾಪಕ ಹಂತದ ಕಾಲಮಾನವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ತರುವಾಯ ಈ ಮಣ್ಪಾತ್ರೆಯ ಸಾಂಸ್ಕೃತಿಕ ಸಂದರ್ಭವನ್ನು ಗಮನಿಸಿ, ಬೃಹತ್ ಶಿಲಾ ಸಂಸ್ಕೃತಿಯ ಆರಂಭದ ಕಾಲ ವೀಲರ್‌ವರು ಆಗ ತರ್ಕಿಸಿದಂತೆ ಪ್ರ.ಶ.ಪೂ.2ನೆಯ ಶತಮಾನದ ಮಧ್ಯವಾಗಿರದೆ, ಪ್ರ.ಶ.ಪೂ.1000–800 ಎಂದು ತರ್ಕಿಸಲಾಗಿದೆ. ದೊಡ್ಡ ಬೂದಿದಿಬ್ಬಗಳು 1843ರಿಂದಲೇ ಕೃಷ್ಣಾ–ತುಂಗಭದ್ರಾ ಸಂಗಮ ಪ್ರದೇಶದ ಕೆಲವು ನೆಲೆಗಳಲ್ಲಿದ್ದುದು ಕಂಡುಬಂದಿವೆ. ಇವು ಹೇಗೆ, ಯಾವ ಜನ ಸಮುದಾಯದಿಂದ ಯಾವಾಗ ಸೃಷ್ಟಿಯಾದವು ಎಂಬಿವೇ ಮೊದಲಾದ ಪ್ರಶ್ನೆಗಳಿವೆ. ಬ್ರಹ್ಮಗಿರಿಯ ಈ ಕಿಟ್ಟದ ಎರಡು ಪದರಗಳನ್ನು ಸರಿಯಾಗಿ ಅಧ್ಯಯನ ಮಾಡಿದಲ್ಲಿ ಇವುಗಳ ಕಾಲಮಾನ ಮತ್ತು ಸಾಂಸ್ಕೃತಿಕ ಸಂದರ್ಭ ತಿಳಿಯಲು ಸಾಧ್ಯವಾಗುತ್ತಿತ್ತು. ಆದ್ದರಿಂದ ಇವೆಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಈ ನೆಲೆಯಲ್ಲಿ ಉತ್ಖನನವನ್ನು ಮುಂದುವರಿಸಬೇಕಾಗಿದೆ.

ಬ್ರಹ್ಮಗಿರಿಯಲ್ಲಿ ಒಂದು ಬಂಡೆಯ ಮೇಲೆ ಪೂರ್ವಭಾವಿ ಇತಿಹಾಸ ಕಾಲದ ಆನೆಯ ಒಂದು ಗೀರು ಚಿತ್ರವಿರುವುದನ್ನು ಶೋಧಿಸಲಾಗಿದೆ. ಬ್ರಹ್ಮಗಿರಿಯಲ್ಲಿ ಕಂಡುಬಂದ ಬೃಹತ್‌ಶಿಲಾಗೋರಿಗಳನ್ನು ಕಟ್ಟಿದ ಜನಗಳ ಶವಸಂಸ್ಕಾರ ಪದ್ಧತಿ ಗಮನಾರ್ಹವಾದುದು. ಗೋರಿಗಳ ನಿರ್ಮಾಣದಲ್ಲಿ ಎರಡು ವಿಧವಾದ ಪದ್ಧತಿಗಳಿದ್ದವು; ಅವು ಕಂಡಿಕೋಣೆ ಗೋರಿಗಳು ಮತ್ತು ಶಿಲಾವೃತ್ತವಿರುವ ಶವಕುಣಿಗಳು. ಬೇಕಾದ ಅಳತೆಗೆ ಗುಂಡಿಯನ್ನು ಅಗೆದು, ಅದರ ನಾಲ್ಕು ಬದಿಗಳಲ್ಲಿ ಕಲ್ಲಿನ ಹಲಗೆಗಳನ್ನು ನಿಲ್ಲಿಸಿ, ಪೂರ್ವದ ಕಲ್ಲಿನಲ್ಲಿ ಒಂದು ದುಂಡಾದ ಕಂಡಿಯನ್ನು ಮಾಡಿ, ಮೇಲ್ಭಾಗವನ್ನು ಅಡ್ಡನಾಗಿ ದಪ್ಪಕಲ್ಲುಗಳಿಂದ ಮುಚ್ಚಿರುವುದು ಕಲ್ಗೋರಿ. ಇನ್ನೊಂದು ಶವಕುಣಿ. ಇದರಲ್ಲಿ ನೆಲದ ಮೇಲೆ ಕಾಣುವಂತೆ 5.40 ಮೀ–16.50 ಮೀ ವರೆಗಿನ ವ್ಯಾಸದ ಒಂದು ಅಥವಾ ಎರಡು ಕಲ್ಲಿನ ವೃತ್ತಗಳನ್ನು ರಚಿಸಿ ಇದರ ಮಧ್ಯದಲ್ಲಿ ದುಂಡಾದ ಅಥವಾ ಕೋಳಿಮೊಟ್ಟೆ ಆಕಾರದ ಗುಣಿಯನ್ನು ತೋಡಿ, ಕಂಡಿಕೋಣೆಗೋರಿಯಲ್ಲಿ ಮತ್ತು ಎರಡನೆಯ ಬಾರಿಗೆ ಇದರಲ್ಲಿ ಶವಸಂಸ್ಕಾರ ಮಾಡಿರಲಾಗುತ್ತದೆ.

ನವಶಿಲಾಯುಗದ ಸಂಸ್ಕೃತಿ ಇದ್ದ ಕಾಲದಲ್ಲಿ ಜನ ಬೇಸಾಯ ನಿರತರಾಗಿದ್ದರಲ್ಲದೆ ಉಜ್ಜಿದ ಕಲ್ಲಿನ ಕೊಡಲಿಗಳು, ಚಿಕ್ಕ ಆಯುಧಗಳು ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದರು. ಜೋಪಡಿಗಳಲ್ಲಿ ವಾಸಿಸುತ್ತಿದ್ದರು. ಈ ಘಟ್ಟದ ಅಂತ್ಯದಲ್ಲಿ ತಾಮ್ರದ ಉಪಯೋಗವೂ ಇತ್ತು. ದಕ್ಷಿಣ ಭಾರತದ ಪ್ರಾಗ್ಐತಿಹಾಸಿಕ ಸಂಸ್ಕೃತಿಗಳ ಕಾಲ ಮತ್ತು ಅನುಕ್ರಮದ ಬಗ್ಗೆ ಸ್ಪಷ್ಟ ಚಿತ್ರ ಮೊದಲು ದೊರೆತದ್ದು ಈ ಬ್ರಹ್ಮಗಿರಿಯ ಉತ್ಖನನದಿಂದಲೇ. ಆದ್ದರಿಂದ ಈ ಉತ್ಖನನ ಭಾರತೀಯ ಪುರಾತತ್ತ್ವ ಇತಿಹಾಸದಲ್ಲಿ ಪ್ರಾಮುಖ್ಯ ಗಳಿಸಿದೆ. (ಎ.ವಿ.ಎನ್)

**ಬ್ರಹ್ಮಗುಪ್ತ:** ಸು.598. ಪ್ರಾಚೀನ ಭಾರತೀಯ ಗಣಿತಜ್ಞ, ಪ್ರಾಯಶಃ ಸಿಂಧೂ ದೇಶದವ. 628 ರಲ್ಲಿ ಬ್ರಹ್ಮಸ್ಫುಟ ಸಿದ್ಧಾಂತವೆಂಬ ಗ್ರಂಥ ಬರೆದ. ಪ್ರಾಚೀನ ಬ್ರಹ್ಮ ಸಿದ್ಧಾಂತವನ್ನು (ಖಗೋಳ ವಿಜ್ಞಾನ) ಶುದ್ಧೀಕರಿಸಿ ಬರೆಯುವುದೇ ಇವನ ಉದ್ದೇಶವಾಗಿತ್ತು. ಇದಕ್ಕೆ ಬೇಕಾದ ಶುದ್ಧಗಣಿತ ವಿಚಾರಗಳೂ ಗ್ರಂಥದಲ್ಲಿ ಅಡಕವಾಗಿವೆ. ಶುದ್ಧಗಣಿತದಲ್ಲಿ ಬ್ರಹ್ಮಗುಪ್ತ ಮಾಡಿರುವ ಸಂಶೋಧನೆಗಳು ಅಮೂಲ್ಯವಾದುವು. ಈತನಿಗೆ ಭಾಸ್ಕರಾಚಾರ್ಯ ಗಣಕ ಚಕ್ರ ಚೂಡಾಮಣಿ ಎಂಬ ಬಿರುದು ಕೊಟ್ಟಿದ್ದಾರೆ. ಬ್ರಹ್ಮಸ್ಫುಟ ಸಿದ್ಧಾಂತದ ಅರಬ್ಬೀ ಅನುವಾದ ಸಿಂದ್‌ಹಿಂದ್ ಎಂದು ಕರೆಯಲ್ಪಟ್ಟಿದೆ. ಭಾರತೀಯ ಖಗೋಳವಿಜ್ಞಾನ ಅರಬ್ಬರಿಗೆ ತಲುಪಿದ್ದು ಬ್ರಹ್ಮಗುಪ್ತನ ಗ್ರಂಥದಿಂದ ಎಂಬ ವಿಚಾರ ಆಲ್ಬೆರೂನಿಯ ಇಂಡಿಯ ಗ್ರಂಥದಿಂದ ಎಂದು ತಿಳಿದುಬರುತ್ತದೆ. (ಜಿ.ಡಿ.)

**ಬ್ರಹ್ಮಪುರಿ:** ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ನಗರದ ಪಶ್ಚಿಮಕ್ಕೆ ಪಂಚಗಂಗಾ ನದಿಯ ಬಲದಂಡೆಯ ಮೇಲಿರುವ ಐತಿಹಾಸಿಕ ಸ್ಥಳ. ಟಾಲಮಿ ತನ್ನ ಕೃತಿಯಲ್ಲಿ ಹೆಸರಿಸಿರುವ ಹಿಪ್ಪೊಕೌರ ಬ್ರಹ್ಮಪುರಿ ಇರಬಹುದೆಂಬ ಅನುಮಾನವಿದೆ. ಹರಿವಂಶದಲ್ಲಿ ಇದನ್ನು ಕರವೀರಪುರವೆಂದು ಕರೆಯಲಾಗಿದೆ. ಸ್ಥಳಪುರಾಣದಲ್ಲಿ ಇದನ್ನು ಕೊಲ್ಲಿಕ್ಷೇತ್ರವೆಂದು ಹೆಸರಿಸಲಾಗಿದೆ. ಕೊಲ್ಲಾಪುರ ಎಂಬ ಹೆಸರು 9ನೆಯ ಶತಮಾನದ ಅನಂತರದ ಹಲವಾರು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಇಲ್ಲಿಯ ಮಹಾಲಕ್ಷ್ಮಿ ದೇವಾಲಯ ಬಹುಶಃ 12ನೆಯ ಶತಮಾನದ ವಾಸ್ತುಕೃತಿ. ಮಹಾಲಕ್ಷ್ಮಿ ದೇವಿಯ ಬಗ್ಗೆ ಶಾಸನ ಉಲ್ಲೇಖಗಳಲ್ಲಿ ಅತ್ಯಂತ ಪ್ರಾಚೀನವಾದುದು ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಸಂಜಾನ್ ತಾಮ್ರಪಟ. ಕಲ್ಯಾಣ ಚಾಳುಕ್ಯ, ಹೊಯ್ಸಳ, ಶಿಲಾಹಾರ ಮೊದಲಾದ ರಾಜಮನೆತನಗಳ ಶಾಸನಗಳಲ್ಲಿ ದೇವಿಯ ಉಲ್ಲೇಖಗಳಿವೆ.

1873ರಲ್ಲಿ ಬ್ರಹ್ಮಪುರಿಯಲ್ಲಿ ಹಲವಾರು ವಸತಿದಿಣ್ಣೆಗಳನ್ನು ಗುರುತಿಸಿ ಕೆಲವು ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಲಾಯಿತು. 1945ರಲ್ಲಿ ಕೆ. ಜಿ. ಕುಂದಣಗಾರರು ನಡೆಸಿದ ಉತ್ಖನನದಲ್ಲಿ ಹಲವಾರು ಕಂಚಿನ ವಸ್ತುಗಳು ದೊರೆತವು. ಇದರಲ್ಲಿ ರೋಮನ್ನರ ಸಮುದ್ರ ದೇವತೆಯಾದ ಪೊಸಾಯಿಡನ್ ವಿಗ್ರಹವೂ ಇದ್ದುದು ವಿಶೇಷ. ಕಂಚಿನ ವಸ್ತುಗಳಲ್ಲಿ ಗ್ರೀಕೊ-ರೋಮನ್ ಶೈಲಿಯ ಬಟ್ಟಲುಗಳು, ಹೂಜಿಯಾಕಾರದ ಪಾತ್ರೆಗಳು ಹಾಗೂ ಸಾತವಾಹನ ಕಾಲದ ವಸ್ತುಗಳು ಇವೆ. 1945ರಲ್ಲಿ ಸಾಂಕಳಿಯ ಮತ್ತು ದೀಕ್ಷಿತ್ ಅವರ ಉತ್ಖನನದಲ್ಲಿ ಪ್ರಾಚೀನ ನಗರದ ಕಟ್ಟಡ ಅವಶೇಷಗಳು, ಪಾತ್ರೆಗಳು, ದಂತದ ಕೆತ್ತನೆಗಳು ಹಾಗೂ ಇನ್ನಿತರ ವಿಶಿಷ್ಟ ವಸ್ತುಗಳು ಬೆಳಕಿಗೆ ಬಂದವು. ಈ ಉತ್ಖನನ ಸಾತವಾಹನರ ಕಾಲದ ವಸತಿಯನ್ನು ಅನಾವರಣಗೊಳಿಸಿತು. ಈ ಕಾಲದ ವಸತಿಗೃಹಗಳು ಇಟ್ಟಿಗೆ ಮತ್ತು ಕಲ್ಲಿನಿಂದ ನಿರ್ಮಿಸಿದವು. ಮನೆಗಳ ಅಡಿಪಾಯದ ಅವಶೇಷಗಳು ಮಾತ್ರ ಕಂಡುಬಂದವು. ಇವುಗಳಲ್ಲಿ ಒಂದು ಮನೆ 3 ಸಣ್ಣ ಕೊಠಡಿಗಳನ್ನೂ ಒಂದು ತೆರೆದ ಹಜಾರವನ್ನೂ ಹೊಂದಿತ್ತು. ಒಂದು ಮನೆಯಿಂದ ಇನ್ನೊಂದು ಮನೆಗೆ ಕೇವಲ 60 ಸೆಂಮೀ ಅಂತರ ಇದ್ದುದು ವಿಶೇಷ. ಈ ಉತ್ಖನನದಲ್ಲಿ ದೊರೆತ ಮಣ್ಣಾಪಾತ್ರೆಗಳ ಸಂಖ್ಯೆಯನ್ನು ಗಮನಿಸಿದರೆ ಇಲ್ಲಿ ಇದರ ಉದ್ಯಮವಿದ್ದಿರಬೇಕು. ಇವುಗಳಲ್ಲಿ ಅತ್ಯುತ್ತಮ ಗುಣಮಟ್ಟದ ಕೆಂಪು ಹೊಳಪಿನ ಪಾತ್ರೆಗಳೇ ಹೆಚ್ಚು. ಇವುಗಳಲ್ಲಿ ಕೊಳವೆಯಾಕಾರದ ನೀರಿನ ದಾನಿಯಂತಿರುವ ಪಾತ್ರೆಗಳು ಅಧಿಕವಾಗಿವೆ. 4 ಕಾಲಿನ ಪಾತ್ರೆಗಳು ವಿಶಿಷ್ಟವಾಗಿವೆ. ಸುಡಾವೆಮಣ್ಣಿನ ಹಲವಾರು ಮನುಷ್ಯಾಕೃತಿಗಳು, ಪ್ರಾಣಿ-ಪಕ್ಷಿಗಳ ಆಕೃತಿಗಳು, ಹಲವಾರು ವಿಧದ ಮಣಿಗಳು (ಗಾಜು ಮತ್ತು ಕಲ್ಲು) ದೊರೆತಿವೆ. ಗಾಜಿನ ಮಣಿಗಳಲ್ಲಿ ನೀಲಿ, ಕೆಂಪುವರ್ಣಗಳ ಪಾರದರ್ಶಕ ಮಣಿಗಳಿವೆ. ಇವುಗಳ ತಯಾರಿಕೆಯಲ್ಲಿ ಸಾಕಷ್ಟು ಪರಿಶ್ರಮ ಮತ್ತು ಕುಶಲತೆಯನ್ನು ಕಾಣಬಹುದು. ಇವುಗಳಿಗೆ ಚಿನ್ನದ ಲೇಪನವನ್ನು ಮಾಡಲಾಗಿದೆ. ಇಲ್ಲಿ 100ಕ್ಕೂ ಹೆಚ್ಚು ಸಾತವಾಹನರ ಕಾಲದ ನಾಣ್ಯಗಳು ದೊರೆತಿವೆ. ಈ ಎಲ್ಲ ಆಧಾರಗಳಿಂದ ಬ್ರಹ್ಮಪುರಿ ಸಾತವಾಹನರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿತ್ತೆಂದು ಹೇಳಬಹುದು. ಇಲ್ಲಿಯ ಜನವಸತಿ ಸು. 2ನೆಯ ಶತಮಾನದಲ್ಲಿ ಯಜ್ಞಶ್ರೀ ಸಾತಕರ್ಣಿಯ ಆಳಿಕೆಯಲ್ಲಿ ಬೆಂಕಿ ದುರಂತಕ್ಕೆ ಆಹುತಿಯಾಗಿ ನಾಶವಾಯಿತು ಎಂದು ತಿಳಿಯಲಾಗಿದೆ.

ಕೊಲ್ಲಾಪುರ ತನ್ನ ಪ್ರಾಮುಖ್ಯವನ್ನು ಮಧ್ಯಕಾಲೀನ ಯುಗದ ಪ್ರಾರಂಭದಲ್ಲಿ ಮತ್ತೆ ಪಡೆಯಿತು. ಈ ಸಮಯದಲ್ಲಿ ಇದು ಶಿಲಾಹಾರ ಮತ್ತು ಬಹಮನಿ ಸುಲ್ತಾನರ ಅಧೀನಕ್ಕೆ ಬಂದಿತು (1435-1518). ಈ ಅವಧಿಯ ಕಟ್ಟಡಗಳು ಈಗಲೂ ಇಲ್ಲಿ ಕಂಡುಬರುತ್ತವೆ. ಬಹಮನಿ ಸುಲ್ತಾನರ ಕಾಲದಲ್ಲಿ ಇಲ್ಲಿ ಗಾಜಿನ ಬಳೆಗಳ ತಯಾರಿಕಾ ಘಟಕ ಪ್ರಾರಂಭವಾಯಿತು. 16ನೆಯ ಶತಮಾನದಲ್ಲಿ ಪಂಚಗಂಗಾನದಿಯ ಮಹಾಪೂರದಿಂದ ನಗರದ ಪಶ್ಚಿಮ ಭಾಗ ಸಾಕಷ್ಟು ನಷ್ಟ ಅನುಭವಿಸಿತು. 1701ರಲ್ಲಿ ಔರಂಗಜೇಬ ಇದನ್ನು ಆಕ್ರಮಿಸಿ ನದಿಯ ಪಾತ್ರವನ್ನು ದುರಸ್ತಿ ಪಡಿಸಿದ. ಮುಂದಿನ ವರ್ಷಗಳಲ್ಲಿ ಪುನಃ ಕೊಲ್ಲಾಪುರ ವೈರಿಗಳ ಆಕ್ರಮಣದಿಂದ ಹಾನಿಗೊಳಗಾಯಿತು. (ಕೆ.ಎಂ.ವಿ.)

**ಬ್ರಹ್ಮಸಮಾಜ:** ಒಂದು ಧಾರ್ಮಿಕ ಪಂಥ. ಪಾಶ್ಚಾತ್ಯ ಶಿಕ್ಷಣ ಕ್ರೈಸ್ತ ಮಿಶನರಿಗಳ ಪ್ರಚಾರ ಇವುಗಳಿಂದಾಗಿ ಹಿಂದುಧರ್ಮ ಮತ್ತು ಅದರ ನಂಬಿಕೆಗಳ ಬಗ್ಗೆ ಅನೇಕ ಸುಶಿಕ್ಷಿತ ತರುಣರಲ್ಲಿ ತಿರಸ್ಕಾರ ಮೂಡುತ್ತಿದ್ದ ಸಂದಿಗ್ಧಕಾಲದಲ್ಲಿ ಹಿಂದು ಧರ್ಮಗ್ರಂಥಗಳಾದ ವೇದ, ಉಪನಿಷತ್ತುಗಳನ್ನು ಅಧ್ಯಯನಮಾಡಿ, ಅವುಗಳಲ್ಲಿ ಹೇಳಿರುವ ವಿಚಾರ ಹಾಗೂ ವಾಸ್ತವಿಕ ಆಚರಣೆಗಳಲ್ಲಿ ಇರುವ ವಿಸಂಗತಿಗಳನ್ನು ಗಮನಿಸಿ, ಅವುಗಳ ನಿವಾರಣೆಗಾಗಿ ರಾಜಾರಾಮಮೋಹನರಾಯ್ (1772-1833) ಈ ಪಂಥವನ್ನು 1828 ಆಗಸ್ಟ್ 20ರಂದು ಕಲ್ಕತ್ತದಲ್ಲಿ ಸ್ಥಾಪಿಸಿದರು. ವೇದೋಪನಿಷತ್ತುಗಳ ಕೇಳಿಕೆಗಳನ್ನು ಒಪ್ಪಿಕೊಂಡು, ವೇದಪ್ರಮಾಣವನ್ನು ಸ್ವೀಕರಿಸಿದ ಈ ಬ್ರಹ್ಮಸಮಾಜ ಅನೇಕ ದೇವರುಗಳ ಮೂರ್ತಿಪೂಜೆ ಹಾಗೂ ಸಾಂಪ್ರದಾಯಿಕ ಕರ್ಮಕಾಂಡಗಳನ್ನು ತಿರಸ್ಕರಿಸಿ ಏಕೇಶ್ವರ ಬ್ರಹ್ಮನನ್ನು ಆರಾಧಿಸುವ ಹಾಗೂ ಸಮಾಜ ಸುಧಾರಣಾವಾದಿ ಮತ್ತು ಬುದ್ಧಿವಾದಿ ಪಂಥ ಎನಿಸಿತು. ಸ್ತ್ರೀಯರು ಪುರುಷರಿಗೆ ಸಮಾನ. ಎಲ್ಲ ಧಾರ್ಮಿಕ, ಸಾಮಾಜಿಕ ನಂಬಿಕೆಗಳಿಗೆ ತರ್ಕಬದ್ಧತೆ ಆಧಾರವಾಗಿರಬೇಕು ಎಂಬುದು ಈ ಸಮಾಜದ ಪ್ರತಿಪಾದನೆ. ಬಾಲ್ಯವಿವಾಹ, ಕನ್ಯಾವಿಕ್ರಯ (ತೆರೆ) ಮತ್ತು ಸತೀಪದ್ಧತಿಗಳನ್ನು ಇದು ಖಂಡಿಸುತ್ತದೆ. ಹಾಗೆಯೇ ಸ್ತ್ರೀಶಿಕ್ಷಣ, ವಿಧವಾ ವಿವಾಹ ಹಾಗೂ ಸ್ತ್ರೀಯರ ಆಸ್ತಿ ಹಕ್ಕನ್ನು ಪುರಸ್ಕರಿಸುತ್ತದೆ. ನಿರ್ಗುಣ, ನಿರಾಕಾರ ಏಕಮೇವ ಈಶ್ವರನಲ್ಲಿ (ದೇವ) ನಂಬಿಕೆ. ಈಶ್ವರ ಪೂಜೆ ಎಂದರೆ ಈಶ್ವರನ (ಬ್ರಹ್ಮ) ಗುಣಗಳ ಬಗ್ಗೆ ಚಿಂತನೆ, ಅವನ ಪೂಜೆಯನ್ನು ಎಲ್ಲಿ ಬೇಕಾದರೂ ಮನಸ್ಸು ಶಾಂತವಾಗಿರುವಾಗ ಮಾಡಬಹುದು ಇತ್ಯಾದಿ ಈ ಸಮಾಜ ಒಪ್ಪಿರುವ ಆದರ್ಶಗಳು.

ಸಮಾಜವನ್ನು ಸ್ಥಾಪಿಸಿದಾಗ ರಾಮಚಂದ್ರ ವಿದ್ಯಾವಾಗೀಶ್, ಉತ್ಸವಾನಂದ, ವಿದ್ಯಾವಾಗೀಶ, ತಾರಾಚಂದ್ರ ಚಕ್ರವರ್ತಿ-ಇವರೆಲ್ಲ ರಾಮಮೋಹನರ ಜೊತೆಗಾರರಾಗಿದ್ದರು. ಪ್ರತಿ ಶನಿವಾರ ಸಂಜೆ ಸಮಾಜದ ಸಭೆ ನಡೆಯುತ್ತಿತ್ತು. ಆ ವೇಳೆ ತೆರೆಯ ಮರೆಯಲ್ಲಿ ಇಬ್ಬರು ಬ್ರಾಹ್ಮಣರು ಕುಳಿತು ವೇದಪಠಣ ಮಾಡುತ್ತಿದ್ದರು. ಅನಂತರ ಸಭೆಯಲ್ಲಿ ಉಪನಿಷತ್ತಿನ ವಾಚನ, ರಾಮಮೋಹನರಿಂದ ಪ್ರವಚನ, ಕೊನೆಗೆ ಪ್ರಾರ್ಥನೆ, ರಾಮಮೋಹನರ ಈ ಸಭೆಯ ನಂಬಿಕೆಗಳ ಬಗ್ಗೆ ಸಂಪ್ರದಾಯವಾದಿಗಳು ಅಸಮಾಧಾನಗೊಂಡು ಧರ್ಮಸಭಾ ಎಂಬ ಸಂಸ್ಥೆ ಸ್ಥಾಪಿಸಿದರು. ಉಭಯ ಪಕ್ಷಗಳ ಟೀಕೆ ಪ್ರತಿಟೀಕೆಗಳ ಪ್ರಕಟಣೆಗಳು ಹೊರಬಂದವು. ಇದರಿಂದ ಬ್ರಹ್ಮಸಮಾಜದ ಬಗ್ಗೆ ಇಡೀ ಬಂಗಾಲದಲ್ಲಿ ಹೆಚ್ಚು ತಿಳಿವಳಿಕೆ ಮೂಡಿತು. 1830ರಲ್ಲಿ ಬ್ರಹ್ಮಸಮಾಜದ ಭವನವೊಂದನ್ನು ರಾಮಮೋಹನರು ಕಲ್ಕತ್ತಾದಲ್ಲಿ ಸ್ಥಾಪಿಸಿದರು. ಇಲ್ಲಿ ಯಾವುದೇ ಮೂರ್ತಿ, ಪ್ರತೀಕ ಅಥವಾ ಚಿತ್ರವನ್ನು ಇಡಲಾಗುವುದಿಲ್ಲ. ಪ್ರಾಣಿ ಬಲಿ, ಊಟೋಪಚಾರಾದಿಗಳು ನಡೆಯುವುದಿಲ್ಲ. ನೀತಿ, ಭೂತದಯೆ, ಪಾವಿತ್ರ್ಯ, ಪರೋಪಕಾರ ಇತ್ಯಾದಿಗಳಿಗೆ ಸಂಬಂಧಿಸಿದ ವಿಚಾರಗಳ ಪ್ರಚಾರ ಹಾಗೂ ವಿಕಾಸಕ್ಕೆ ಬೇಕಾದ ಉಪದೇಶಗಳು, ಚರ್ಚೆಗಳು ಇಲ್ಲಿ ನಡೆಯುತ್ತವೆಂದು ಆ ಭವನದಬಗ್ಗೆ ರಾಮಮೋಹನರು ವಿವರಣೆ ನೀಡಿದರು. ಸಮಾಜದ ಸಂವಾದ ಕೌಮುದಿ ಹಾಗೂ ಧರ್ಮಸಭಾದ ಸಮಾಚಾರ ಚಂದ್ರಿಕೆಗಳಲ್ಲಿ ನಡೆಯುತ್ತಿದ್ದ ಚರ್ಚೆಯ ಫಲವಾಗಿ ಹಿಂದೂ ಸಮಾಜದಲ್ಲಿ ಆಗ ಉಂಟಾದ ಜಾಗೃತಿ ಹಿಂದೆಂದೂ ಅಷ್ಟು ಆದದ್ದು ಕಾಣಿಸದು ಎಂಬುದು ಆರ್.ಸಿ.ಮಜುಂದಾರ್ ಅವರ ಅಭಿಪ್ರಾಯ.

ರಾಮಮೋಹನರು ತೀರಿಕೊಂಡಾಗ (1833) ಸಮಾಜದಲ್ಲಿ ಶೈಥಿಲ್ಯ ಕಾಣಿಸಿದರೂ ದ್ವಾರಕನಾಥ ಠಾಕೂರ ಮತ್ತು ರಾಮಚಂದ್ರ ವಿದ್ಯಾವಾಗೀಶರು ಅದರ ಚಟುವಟಿಕೆಗಳನ್ನು ಮುಂದುವರಿಸಿದರು. ಆದರೆ, ಸಮಾಜಕ್ಕೆ ಯಾವುದೇ ಒಂದು ಸಂವಿಧಾನವಿರಲಿಲ್ಲ. ಬ್ರಹ್ಮ ಸಮಾಜದ ಚಟುವಟಿಕೆಗಳಲ್ಲಿ ಪಾಲುಗೊಳ್ಳುವ ಜನ ಮನೆಯಲ್ಲಿ ಮೂರ್ತಿ ಪೂಜೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದರು. ದ್ವಾರಕಾನಾಥ ಠಾಕೂರರು ಇವರ ಮಗ ದೇವೇಂದ್ರನಾಥರು (ಕವಿ ರವೀಂದ್ರರ ತಂದೆ) ಈ ಸಮಾಜಕ್ಕೆ ತತ್ತ್ವಬೋಧಿನಿ ಸಭಾ ಎಂಬ ಪ್ರಚಾರಣಾಂಗವನ್ನು ಜೋಡಿಸಿದರು. ಇದರ ಪ್ರಭಾವದಿಂದ ಅನೇಕ ಶ್ರೀಮಂತರೂ ಪ್ರತಿಷ್ಠಿತರೂ ಅದರಲ್ಲಿ ಸಮಾವೇಶಗೊಂಡು ಸಂಸ್ಥೆಯ ಸದಸ್ಯ ಬಲ 500ಕ್ಕೆ ಏರಿತು. ಸಮಾಜದಲ್ಲಿ ಪ್ರವೇಶ ಬಯಸುವ ಸದಸ್ಯ ಪ್ರತಿಜ್ಞೆಯೊಂದಕ್ಕೆ ಅಂಕಿತ ಹಾಕಬೇಕು ಎಂದು ದೇವೇಂದ್ರನಾಥರು ರೂಢಿಮಾಡಿದರು. ನಾನು ನಿತ್ಯಭೋಜನ ಪೂರ್ವದಲ್ಲಿ ಗಾಯತ್ರಿ ಮಂತ್ರ ಪಠಿಸಿ ದೇವರ ಉಪಾಸನೆ ಮಾಡುತ್ತೇನೆ. ಮೂರ್ತಿ ಪೂಜೆ ಮಾಡುವುದಿಲ್ಲ. ಸಮಾಜಕ್ಕೆ ನೀಡುವ ವಂತಿಗೆ ತಪ್ಪದೆಕೊಡುತ್ತೇನೆ ಮತ್ತು ರಾಜಾರಾಮ ಮೋಹನರಾಯ್ ಅವರು ಉಪದೇಶಿಸಿದ ವೇದಾಂತ ತತ್ತ್ವಗಳಿಗೆ ಅನುಸಾರವಾಗಿ ಧರ್ಮಾಚರಣೆ ಮಾಡುತ್ತೇನೆ ಎಂಬುದು ಈ ಪ್ರತಿಜ್ಞೆಯ ಪಾಠದ ಸಾರಾಂಶ. ಗಾಯತ್ರಿ ಉಚ್ಚಾರಣೆ ಅನೇಕರಿಗೆ ಕಷ್ಟವೆನಿಸಿದಾಗ ಉಪನಿಷತ್ತಿನಿಂದ ಒಂದು ಪ್ರಾರ್ಥನಾ ಮಂತ್ರವನ್ನು ದೇವೇಂದ್ರನಾಥರು ಆಯ್ಕೆ ಮಾಡಿದರು. ಸಮಾಜದ ಅನುಯಾಯಿಗಳ ಆಚಾರ, ವಿಚಾರಗಳು ಸಮಾಜದ ತತ್ತ್ವಗಳಿಗೆ ಅನುಗುಣವಾಗಿರಬೇಕೆಂಬ ಕಾರಣದಿಂದ ಜಾತ ಕರ್ಮ, ನಾಮಕರಣ, ಉಪನಯನ, ವಿವಾಹ, ಅಂತ್ಯೇಷ್ಟಿ ಮತ್ತು ಶ್ರಾದ್ಧ ಇವುಗಳಿಗೆ ಸಂಬಂಧಿಸಿದ ವಿಧಿಗಳನ್ನು ದೇವೇಂದ್ರನಾಥರು ರೂಪಿಸಿದರು.

1850ರ ಅನಂತರ ಬುದ್ಧಿಶಾಲಿ ತರುಣರು ಬ್ರಹ್ಮಸಮಾಜಕ್ಕೆ ಸೇರಿದರು. ಅಂಥವರಲ್ಲಿ ಕೇಶವಚಂದ್ರ ಸೇನ್ ಒಬ್ಬರು. 1851ರಲ್ಲಿ ಸಮಾಜ ಸೇರಿ 1861ರಿಂದ ಸಮಾಜದ ಪ್ರಚಾರಕಾರ್ಯದ ಜವಾಬ್ದಾರಿ ವಹಿಸಿಕೊಂಡರು. ಅನಂತರ ಸಮಾಜದ ಪ್ರಮುಖ ಆಚಾರ್ಯರಾದರು (1862). ಅವರು ಸಮಾಜ ಸುಧಾರಣೆಗಳ ಬಗ್ಗೆ ತೀರ ಗಮನವಿತ್ತರಲ್ಲದೆ ಹೆಚ್ಚು ಪ್ರಚಾರ ನಡೆಸಿ ಸಮಾಜದ ವ್ಯಾಪ್ತಿಯನ್ನು ಹೆಚ್ಚಿಸಿದರೂ ಕೂಡ ಮಹಿಳೆಯರಿಗಾಗಿಯೇ ಭಾಮಾಬೋಧಿನೀ (1863) ಎಂಬ ಪತ್ರಿಕೆ ಪ್ರಕಟಿಸಿದರು. ಮದ್ರಾಸಿನಲ್ಲಿ ವೇದ ಸಮಾಜವೆಂಬ ಹೆಸರಿನಲ್ಲಿ ಸಮಾಜದ ಶಾಖೆ ಪ್ರಾರಂಭಿಸಿದರು (1864). ಅದೇ ರೀತಿ ಮುಂಬಯಿಯಲ್ಲೂ ಪ್ರಾರ್ಥನಾ ಸಮಾಜ ಎಂಬ ಹೆಸರಿನಿಂದ ಅದರ ಶಾಖೆ 1867ರಲ್ಲಿ ಪ್ರಾರಂಭವಾಯಿತು. ನ್ಯಾಯಮೂರ್ತಿ ರಾನಡೆ, ಭಂಡಾರ್ಕರ್, ಕರ್ವೆಯವರಂಥ ಗಣ್ಯರು ಇದರಲ್ಲಿದ್ದರು. 1866ರಲ್ಲಿ ಸಮಾಜದ 54 ಶಾಖೆಗಳಿದ್ದು ಆ ಪೈಕಿ ಎರಡು ಉತ್ತರ ಪ್ರದೇಶ ಹಾಗೂ ಒಂದು ಪಂಜಾಬಿನಲ್ಲೂ ಇದ್ದುವು. ಸೇನ್ ಅವರ ಪ್ರಯತ್ನದಿಂದ ಮಹಿಳಾ ವಿವಾಹ ಕಾನೂನು 1872ರಲ್ಲಿ ಜಾರಿಗೆ ಬಂತು. ಇದರಿಂದ ಬಾಲಿಕೆಯರ ವಿವಾಹದ ಕನಿಷ್ಠ ವಯೋಮಿತಿ 14ಕ್ಕೆ ನಿಗದಿಪಡಿಸಲಾಯಿತು. ಸೇನ್ ಅವರ ತೀವ್ರತರ ವಿಚಾರಗಳ ಬಗ್ಗೆ ಸಹಮತರಾಗಿದ್ದ ಹಲವರು ಅವರ ಕೆಲವೊಂದು ವಿಚಾರಗಳನ್ನು ವಿರೋಧಿಸಲು 1866ರಲ್ಲಿ ಸೇನ್ ಅವರ ಅನುಯಾಯಿಗಳು ಭಾರತವರ್ಷೀಯ ಬ್ರಹ್ಮ ಸಮಾಜ ಎಂಬ ಪ್ರತ್ಯೇಕ ಸಂಸ್ಥೆ ಮಾಡಿಕೊಂಡರು. ಹಿಂದಿನ ಸಂಸ್ಥೆ ಆದಿ ಬ್ರಹ್ಮಸಮಾಜ ಎಂಬ ಹೆಸರಿನಿಂದ ಮುಂದುವರಿಯಿತು. ರಾಜ ನಾರಾಯಣ ಬೋಸ್ ಇದರ ಅಧ್ಯಕ್ಷರಾದರು.

ಬ್ರಹ್ಮಸಮಾಜ ಹಿಂದುಧರ್ಮದ ಒಂದು ಅಂಗವೆಂದೂ ಜನ ತಮ್ಮ ತಮ್ಮ ಜಾತಿಗಳನ್ನು ತೊರೆಯಬೇಕಾಗಿಲ್ಲವೆಂದೂ ಆದಿ ಬ್ರಹ್ಮಸಮಾಜ ತಳೆದ ನಿಲವು. ಸೇನ್ ಅವರ ಬ್ರಹ್ಮ ಸಮಾಜ ಹಿಂದುಗಳಲ್ಲದವರಿಗೂ ಸೇರಿದ್ದೆಂದು ಘೋಷಿಸಿ ಮೂರ್ತಿಪೂಜೆ ಮತ್ತು ಜಾತೀಯತೆಯ ನಿರ್ಮೂಲನೆಯನ್ನು ಪ್ರತಿಪಾದಿಸಿತು. ಪಾಶ್ಚಾತ್ಯ ಸಂಸ್ಕೃತಿಯ ಅಭಿಮಾನ ಅವರಿಗೆ ಅಧಿಕವಾಗಿತ್ತು. ಆದರೆ, ಈಶ್ವರಚಂದ್ರ ಸೇನ್ ತಮ್ಮ ಮಗಳನ್ನು 14 ವರ್ಷ ತುಂಬುವ ಮೊದಲೇ ಹಾಗೂ ಸಮಾಜದ ವಿಧಿಗಳಿಗೆ ವ್ಯತಿರಿಕ್ತವಾಗಿ ಸಾಂಪ್ರದಾಯಿಕ ವೈದಿಕವಿಧಿಗಳ ಪ್ರಕಾರ ಕೂಚ್‌ಬಿಹಾರಿನ ರಾಜಪುತ್ರನಿಗೆ ಮದುವೆಮಾಡಿಕೊಟ್ಟು ಭಾರೀ ಗೊಂದಲಕ್ಕೆ ಕಾರಣರಾದರು. ಇದರಿಂದ ಅವರ ನಾಯಕತ್ವದ ಸಮಾಜದಲ್ಲಿ ಒಡಕುಂಟಾಗಿ

ಪಂಡಿತ ಶಿವನಾಥಶಾಸ್ತ್ರಿ ನೇತೃತ್ವದಲ್ಲಿ ಸಾಧಾರಣ ಬ್ರಹ್ಮ ಸಮಾಜ ಎಂಬ ಹೊಸ ಗುಂಪೊಂದು ಹುಟ್ಟಿಕೊಂಡಿತು (1878). ಆನಂದ ಮೋಹನ ಬೋಸ್, ಶಿವಚಂದ್ರ ಸೇನ್, ಉಪೇಂದ್ರ ದತ್ತ ಇವರೆಲ್ಲ ಈ ಹೊಸ ಸಂಸ್ಥೆಯಲ್ಲಿ ಇದ್ದರು.

ಕರ್ನಾಟಕದ ಮಂಗಳೂರಲ್ಲಿ 1870ರಲ್ಲಿ ಬ್ರಹ್ಮಸಮಾಜದ ಶಾಖೆ ಆರಂಭವಾಯಿತು. ಖ್ಯಾತ ಸಮಾಜ ಸುಧಾರಕ ಕುದ್ಮುಲ್ ರಂಗರಾವ್ ಅದರಿಂದ ಪ್ರಭಾವಿತರಾಗಿದ್ದರು. ಬೆಂಗಳೂರಿನಲ್ಲಿ 1870ರ ದಶಕದಲ್ಲಿ ಸಮಾಜದ ಐದು ಶಾಖೆಗಳು ಸ್ಥಾಪಿತವಾದವು. ಸಮಾಜದ ಚಟುವಟಿಕೆಯಿಂದ ಪ್ರಭಾವಿತರಾದ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರರು ತಾವು ಸ್ಥಾಪಿಸಿದ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಿಪಿನ್ ಚಂದ್ರ ಪಾಲರನ್ನು ಆಮಂತ್ರಿಸಿದ್ದರು (1880).

ಬ್ರಹ್ಮಸಮಾಜದ ಮೂರು ಸಂಸ್ಥೆಗಳೂ ಇಂದು ಅಸ್ತಿತ್ವದಲ್ಲಿವೆ. ಆರಂಭದ ದಶಕಗಳಂತೆ ಈಗ ಅವು ಬೆಳೆಯುತ್ತಿಲ್ಲ. ಆದರೆ ರಾಮಮೋಹನರು ಪ್ರತಿಪಾದಿಸಿದ ಸ್ತ್ರೀಸಮಾನತೆ, ಸ್ತ್ರೀಯರ ಆಸ್ತಿಹಕ್ಕು ನೀಡುವಿಕೆ, ಬಾಲ್ಯವಿವಾಹ ವಿರೋಧ ಮುಂತಾದ ಅನೇಕ ಸಾಮಾಜಿಕ ನಿರ್ಧಾರಗಳು ಗಾಂಧೀಜಿಯವರಂಥ ಗಣ್ಯರಿಂದ ಆರಂಭಿಸಿ ಇಡೀ ಭಾರತದ ವಿದ್ಯಾವಂತ ಸಮಾಜದಿಂದ ಸ್ವೀಕೃತವಾಗಿ ಸ್ವತಂತ್ರ ಭಾರತದ ಸಂವಿಧಾನ, ಹಿಂದೂ ಕಾನೂನು ಸಂಹಿತೆಗಳಲ್ಲಿ ಸಮಾವೇಶವಾದುದನ್ನು ಗಮನಿಸಬಹುದು. (ಎಸ್.ಎನ್.ಕೆ.)

**ಬ್ರಿಟಿಷರ ಆಳಿಕೆ:** ಕೇವಲ ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದ ಬ್ರಿಟಿಷರು, ಸು.18ನೆಯ ಶತಮಾನದ ಹೊತ್ತಿಗೆ ಇಲ್ಲಿನ ರಾಜಕೀಯ ಅವಾಂತರ ಪರಿಸ್ಥಿತಿಯ ಲಾಭ ಪಡೆದು, ನೆಲದಾಹವನ್ನೂ ಬೆಳೆಸಿಕೊಂಡರು. ಸೈನಿಕ ಹಾಗೂ ರಾಜತಾಂತ್ರಿಕ ಚಟುವಟಿಕೆಗಳಿಂದ ವಿವಿಧ ಪ್ರದೇಶಗಳ ಮೇಲೆ ಸ್ವಲ್ಪ ಸ್ವಲ್ಪವಾಗಿ ತಮ್ಮ ಅಧಿಕಾರವನ್ನು ವಿಸ್ತರಿಸತೊಡಗಿದರು. ದಿನೇದಿನೇ ಬೆಳೆಯುತ್ತಿದ್ದ ಈ ರಾಜ್ಯವಿಸ್ತರಣಾಕಾರ್ಯಕ್ಕೆ ಪ್ರಬಲವಾದ ವಿರೋಧಿಗಳಾಗಿ ಸೆಟೆದುನಿಂತ ದಕ್ಷಿಣಭಾರತದ ಎರಡು ಪ್ರಮುಖ ಶಕ್ತಿಗಳೆಂದರೆ ಮೊದಲು ಮೈಸೂರು ಸುಲ್ತಾನರು, ಅನಂತರ ಮರಾಠರು. 1799ರಲ್ಲಿ ಟಿಪ್ಪುವಿನ ಮರಣದೊಡನೆ ಮೈಸೂರಿನ ಪ್ರತಿರೋಧ ಕೊನೆಗೊಂಡುದಲ್ಲದೆ, 1818ರ ಹೊತ್ತಿಗೆ ಮರಾಠರ ಸೋಲಿನಿಂದ ಅವರ ಶಕ್ತಿ ನಿರ್ನಾಮವಾಯಿತಾಗಿ, ಅನಂತರ ಕರ್ನಾಟಕ ಸೇರಿದಂತೆ ಇಡೀ ದಕ್ಷಿಣಭಾರತ ಬ್ರಿಟಿಷರ ನೇರ ಆಡಳಿತಕ್ಕೋ ಅಥವಾ ಅವರ ಭದ್ರಮುಷ್ಟಿಯ ಹಿಡಿತಕ್ಕೋ ಸಿಕ್ಕಿತು. ಈ ರಾಜಕೀಯ ಬೆಳವಣಿಗೆಯಿಂದ ಅವರ ಆಡಳಿತ ಕಾಲದಲ್ಲಿ ಸ್ಥಳೀಯ ರೀತಿನೀತಿಗಳು ಹಿಂದೆ ಸರಿದು ಪಾಶ್ಚಿಮಾತ್ಯ ಸಂಪ್ರದಾಯಗಳು, ಭಾವನೆಗಳು, ತಾಂತ್ರಿಕ ಸಾಧನೆಗಳು ಇತ್ಯಾದಿಗಳೆಲ್ಲ ಕ್ರಮಕ್ರಮೇಣ ನೆಲೆಯೂರಿದವು. ಈ ನಾಡು ಪ್ರಸಕ್ತ ರಾಜಕೀಯ ಆರ್ಥಿಕ, ಸಾಂಸ್ಕೃತಿಕ ಸ್ಥಿತಿಯೆಡೆಗೆ ಪರಿವರ್ತನೆಗೊಳ್ಳಲಾರಂಭಿಸಿತು. 1947ರಲ್ಲಿ ಭಾರತ ಸ್ವಾತಂತ್ರ್ಯವನ್ನು ಗಳಿಸುವ ವರೆಗೂ ಅವರ ಆಳ್ವಿಕೆಯ ಪ್ರಭಾವ ಇಲ್ಲಿ ಗಟ್ಟಿಯಾಗಿ ಬೇರೂರಿತ್ತು.

ಬ್ರಿಟಿಷರ ಆಳಿಕೆಯ ಕಾಲದಲ್ಲಿ ಕರ್ನಾಟಕ ದೇಶ ಆಡಳಿತ ದೃಷ್ಟಿಯಿಂದ ಹಲವು ವಿಭಾಗಗಳಾಗಿ ಒಡೆದಿತ್ತು. ಬಹುಕಾಲ ಬೆಳಗಾಂವಿ, ಧಾರವಾಡ, ಉತ್ತರಕನ್ನಡ ಜಿಲ್ಲೆಯ ಪ್ರದೇಶಗಳು ಮುಂಬಯಿ ಪ್ರಾಂತ್ಯದಲ್ಲೂ ದಕ್ಷಿಣಕನ್ನಡ, ಬಳ್ಳಾರಿ ಮತ್ತು ಕೊಳ್ಳೇಗಾಲ ತಾಲ್ಲೂಕಿನ ಪ್ರದೇಶಗಳು ಮದರಾಸು ಪ್ರಾಂತ್ಯದಲ್ಲೂ ಕೊಡಗು ಪ್ರತ್ಯೇಕ ಘಟಕವಾಗಿಯೂ ಇದ್ದು, ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟಿದ್ದುವು. ಇಡೀ ಮೈಸೂರು ಸಂಸ್ಥಾನ, ಹೈದರಾಬಾದು ಸಂಸ್ಥಾನಕ್ಕೆ ಸೇರಿದ್ದ ರಾಯಚೂರು, ಬೀದರ್, ಗುಲ್ಬರ್ಗ ಜಿಲ್ಲೆಗಳ ಪ್ರದೇಶಗಳು ಮತ್ತು ಕೆಲವು ಚಿಕ್ಕಪುಟ್ಟ ಸಂಸ್ಥಾನಗಳು ಸಂಸ್ಥಾನಿಕರ ವಶದಲ್ಲಿದ್ದರೂ ಈ ಸಂಸ್ಥಾನಗಳು ಬ್ರಿಟಿಷರ ಕೃಪಾಛತ್ರದಡಿಯಲ್ಲಿ ಆಡಳಿತ ನಿರ್ವಹಿಸಬೇಕಾಗಿತ್ತು. ಈ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ ಈ ಕಾಲದ ಆಗುಹೋಗುಗಳನ್ನು ಇಲ್ಲಿ ಸ್ಥೂಲವಾಗಿ ಚಿತ್ರಿಸಲಾಗಿದೆ. ಇತಿಹಾಸ, ಆಡಳಿತ ವ್ಯವಸ್ಥೆ, ಶಿಕ್ಷಣ, ಸಾಹಿತ್ಯ, ವಾಸ್ತುಕಲೆ, ಶಿಲ್ಪಕಲೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿರುವ ಇತರ ಅನೇಕ ಲೇಖನಗಳಲ್ಲಿ ಮತ್ತಷ್ಟು ಸಾಂದರ್ಭಿಕ ವಿವರಗಳನ್ನು ಒದಗಿಸಲಾಗಿದೆ.

ಮೈಸೂರು ಸಂಸ್ಥಾನ: ಮೈಸೂರು ಸಂಸ್ಥಾನದೊಡನೆ ಬ್ರಿಟಿಷರ ಸಂಪರ್ಕ, ಹೈದರ್ ಅಲಿ ಮತ್ತು ಬ್ರಿಟಿಷರ ನಡುವೆ ಒಂದನೆಯ ಮೈಸೂರು ಯುದ್ಧದಿಂದ ಪ್ರಾರಂಭವಾಯಿತೆಂದು ಹೇಳಬಹುದು.

ಒಂದನೆಯ ಮೈಸೂರು ಯುದ್ಧ (1767–69): ಬ್ರಿಟಿಷರು ಹೈದರಾಬಾದಿನ ನಿಜಾಮ ಹಾಗೂ ಪೇಶ್ವೆ ಮಾಧವರಾಯ ಇವರೊಡಗೂಡಿ ಪ್ರಾಬಲ್ಯಕ್ಕೆ ಬರುತ್ತಿದ್ದ ಹೈದರನ ವಿರುದ್ಧ ಒಂದು ತ್ರಿಪಕ್ಷ ಒಪ್ಪಂದವನ್ನು ಮಾಡಿಕೊಂಡರು. ಆದರೆ ಹೈದರ್ ಈ ಕುಟಿಲ ತಂತ್ರವನ್ನು ಚಾಕಚಕ್ಯತೆಯಿಂದ ಮುರಿದಿಕ್ಕಿದ. ಆಗ ಬ್ರಿಟಿಷರು ನಿಜಾಮ ಹಾಗೂ ಹೈದರನೊಡನೆ ಒಮ್ಮೆಲೇ ಕಾದಬೇಕಾಯಿತು. ಕರ್ನಲ್ ಸ್ಮಿತ್‌ನ ನೇತೃತ್ವದಲ್ಲಿ ಜಂಗಮ ಮತ್ತು ತಿರುವಣ್ಣಾಮಲೈಗಳ ಸಮೀಪದಲ್ಲಿ ನಡೆದ ಯುದ್ಧದಲ್ಲಿ ಇಂಗ್ಲಿಷರು ಮೊದಲು ಜಯ ಗಳಿಸಿದರೂ ಕೊನೆಗೆ ಹೈದರ್ ಇಡೀ ಕರ್ನಾಟಿಕ್ ಪ್ರದೇಶವನ್ನು ಸೂರೆ ಮಾಡಿದ (1769). ಮದರಾಸಿನ ಹೆಬ್ಬಾಗಿಲಿನ ಬಳಿ ಬಂದು ಬೀಡುಬಿಟ್ಟ. ಇದರಿಂದ ಹೆದರಿದ ಬ್ರಿಟಿಷರು 1769ರ ಏಪ್ರಿಲ್ 3ರಂದು ಹೈದರನೊಡನೆ ಶಾಂತಿ ಒಪ್ಪಂದಕ್ಕೆ ಬರಬೇಕಾಯಿತು. ಈ ಮದರಾಸು ಒಪ್ಪಂದದ ಪ್ರಕಾರ ಇಂಗ್ಲಿಷರಿಗೆ ಅಪಾಯ ಸಂಭವಿಸಿದ ಸಂದರ್ಭದಲ್ಲಿ ಹೈದರ್ ಸಹಾಯ ನೀಡುವುದು, ಹೈದರನಿಗೆ ತೊಂದರೆಯಾದ ಪಕ್ಷದಲ್ಲಿ ಇಂಗ್ಲಿಷರು ಹೈದರನಿಗೆ ನೆರವು ನೀಡುವುದು ಎಂದು ತೀರ್ಮಾನವಾಯಿತು. ಆದರೆ 1770ರಲ್ಲಿ ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದಾಗ ಬ್ರಿಟಿಷರು ತಮ್ಮ ವಾಗ್ದಾನವನ್ನು ಗಾಳಿಗೆ ತೂರಿ ಹೈದರನನ್ನು ವಂಚಿಸಿದರು. ಹೈದರ್ ಮರಾಠರಿಗೆ ಅಪಾರ ಐಶ್ವರ್ಯವನ್ನು ಕೊಟ್ಟು ಅವರನ್ನು ಹಿಂದಕ್ಕೆ ಕಳಿಸಬೇಕಾಯಿತು. ಈ ಘಟನೆಯಿಂದ ನೊಂದ ಹೈದರ್ ತನ್ನ ಆಜೀವಪರ್ಯಂತ ಬ್ರಿಟಿಷರಿಗೆ ವಿರೋಧಿಯಾಗಲು ಕಾರಣವಾಯಿತಲ್ಲದೆ, ಇವನ ಮಗ ಟಿಪ್ಪುವೂ ಬ್ರಿಟಿಷರ ವಿರುದ್ಧ ವೈರತ್ವ ಮುಂದುವರಿಸಬೇಕಾಯಿತು.

ಎರಡನೆಯ ಮೈಸೂರು ಯುದ್ಧ (1780–84): 1780ರ ಹೊತ್ತಿಗೆ ಬ್ರಿಟಿಷರು ಫ್ರೆಂಚರಿಗೆ ಸೇರಿದ ವಸಾಹತುಗಳನ್ನೆಲ್ಲ ಒಂದಾದಮೇಲೊಂದರಂತೆ ಆಕ್ರಮಿಸುತ್ತಾ ಬಂದರು. ಮಾಹೆ ಪಟ್ಟಣದ ಬಗ್ಗೆ ಯಾವುದೇ ಹಸ್ತಕ್ಷೇಪವನ್ನೂ ಸಹಿಸುವುದಿಲ್ಲವೆಂದು ಹೈದರನು ಬ್ರಿಟಿಷರಿಗೆ ಎಚ್ಚರಿಕೆಯಿತ್ತಿದ್ದನಾದರೂ ಅವರು ಇದನ್ನು ಗಣಿಸಲಿಲ್ಲ. ಭಾರತದ ರಾಜಕೀಯದಲ್ಲಿ ಕುಟಿಲ ನೀತಿಯಿಂದ ದಾಂದಲೆ ನಡೆಸುತ್ತಿದ್ದ ಬ್ರಿಟಿಷರ ಕಪಿಮುಷ್ಟಿಯಿಂದ ಭಾರತವನ್ನು ವಿಮುಕ್ತಿಗೊಳಿಸುವ ಛಲ ಇವನಲ್ಲಿ ಅಂಕುರಿಸಿತು. ಬ್ರಿಟಿಷರನ್ನು ಭಾರತದಿಂದ ಓಡಿಸಲು ನಿಜಾಮ, ನಾನಾ ಫಡ್ನವೀಸ್, ಸಿಂಧ್ಯ, ಮಾಧೋಜಿ, ಭೋನ್ಸ್ಲೆ ಮತ್ತು ಹೈದರ್ ಇವರು ಒಟ್ಟುಗೂಡಿ 1780ರಲ್ಲಿ ಒಂದು ಕೂಟವನ್ನು ರಚಿಸಿಕೊಂಡರು. ಮರಾಠರು ಮುಂಬಯಿ ಮತ್ತು ಅದಕ್ಕೆ ಸೇರಿದ ಪ್ರದೇಶಗಳಿಗೆ ಮುತ್ತಿಗೆ ಹಾಕುವುದೆಂದೂ ಹೈದರ್ ಸಿಂಧ್ಯ ಮತ್ತು ಭೋನ್ಸ್ಲೆ ಬಂಗಾಲವನ್ನು ಮುತ್ತುವುದೆಂದೂ ನಿಜಾಮ ಉತ್ತರ ಸರ್ಕಾರ್ ಜಿಲ್ಲೆಗಳನ್ನು ಹಿಡಿದುಕೊಳ್ಳುವುದೆಂದೂ ಹಾಗೂ ಹೈದರ್ ದಕ್ಷಿಣ ಪ್ರದೇಶಗಳನ್ನು ಆಕ್ರಮಿಸತಕ್ಕದ್ದೆಂದೂ ತೀರ್ಮಾನವಾಯಿತು. ಇದೇ 2ನೆಯ ಮೈಸೂರು ಯುದ್ಧಕ್ಕೆ ನಾಂದಿ. ಈ ಕೂಟದಲ್ಲಿದ್ದ ಇನ್ನಿತರರು ಯೋಜನೆಯಂತೆ ನಡೆಯಲಿಲ್ಲವಾದರೂ ಹೈದರ್ ಹಾಗೂ ಟಿಪ್ಪು ಕರ್ನಾಟಿಕ್ ಪ್ರದೇಶಗಳ ಮೇಲೆ ನುಗ್ಗಿದರು. ಹೈದರ್ ಪೊಲಿಯೂರ್ ಬಳಿ ನಡೆದ ಕದನದಲ್ಲಿ ಕರ್ನಲ್ ಬೇಲಿಯ ಕೈಕೆಳಗಿದ್ದ ನಾಲ್ಕು ಸಾವಿರ ಸೈನಿಕರನ್ನು ತರಿದಟ್ಟಿದ. 1780ರ ಅಕ್ಟೋಬರ್ ತಿಂಗಳಲ್ಲಿ ಕರ್ನಾಟಿಕ್‌ನ ರಾಜಧಾನಿ ಆರ್ಕಾಟ್ ಹೈದರನ ವಶವಾಯಿತು. 1781ರ ಜುಲೈ 1ರಂದು ಪೋರ್ಟೋನೋವೋ ಬಳಿ ಜನರಲ್ ಐರಕೂಟನು ಹೈದರನನ್ನು ಸೋಲಿಸಿದರೂ ಮುಂದೆ ಟಿಪ್ಪು ವೀರಾವೇಶದಿಂದ ಹೋರಾಡಿ ಬ್ರೈತವೇಟನನ್ನು ಪರಾಜಯಗೊಳಿಸಿದ. ಫ್ರೆಂಚರೊಂದಿಗೆ ಸೇರಿ ಹೈದರ್ ಬ್ರಿಟಿಷರ ವಿರುದ್ಧ ಕಾದಾಡಿ ಕಡಲೂರನ್ನು ಗೆದ್ದ. ಆದರೆ 1782ರ ಡಿಸಂಬರ್‌ನಲ್ಲಿ ಹೈದರ್ ಮೃತನಾದ. ಈ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಹದಗೆಡಲು ಬಿಡದೆ ಟಿಪ್ಪು ಯುದ್ಧವನ್ನು ಮುಂದುವರಿಸಿದ. ಕೊನೆಗೆ ಇಂಗ್ಲಿಷರು ಮಂಗಳೂರು ಒಪ್ಪಂದಕ್ಕೆ ಒಡಂಬಡಬೇಕಾಯಿತು. ಆಕ್ರಮಿತ ಪ್ರದೇಶಗಳನ್ನು ಅವರವರಿಗೇ ಬಿಟ್ಟು ಕೊಡುವುದು ಮತ್ತು ಸೆರೆಹಿಡಿದಿದ್ದ ಸೈನಿಕರನ್ನು ಎರಡು ಕಡೆಯವರೂ ವಿಮೋಚನೆಗೊಳಿಸುವುದು, ಅಂದರೆ ಯುದ್ಧಪೂರ್ವದಲ್ಲಿದ್ದ ಸ್ಥಿತಿಗೆ ಬರುವುದೇ ಈ ಕರಾರಿನ ಮೂಲ ವಿಷಯವಾಗಿತ್ತು.

3ನೆಯ ಮೈಸೂರು ಯುದ್ಧ (1790–92): ಬ್ರಿಟಿಷರೊಂದಿಗಿನ ವೈರತ್ವದ ಕಿಡಿ ಟಿಪ್ಪುವಿನ ಕಾಲದಲ್ಲಿ ಭುಗಿಲ್ಲನೆ ಹೊತ್ತಿಕೊಂಡಿತು. ಯುದ್ಧಕ್ಕೆ ಕಾಲು ಕೆರೆಯುತ್ತಿದ್ದ ಬ್ರಿಟಿಷರಿಗೆ ಟಿಪ್ಪು ತಿರುವಾಂಕೂರು ರಾಜ ವಿವಾದಗ್ರಸ್ತ ದುರ್ಗಗಳನ್ನು ಡಚ್ಚರಿಂದ ಕೊಂಡುಕೊಂಡೊಡನೆ ಕ್ರೋಧೋದ್ದೀಪಿತನಾಗಿ 1789ರಲ್ಲಿ ಯುದ್ಧ ಸಾರಿದ. ಆಗ ಬ್ರಿಟಿಷರು ಟಿಪ್ಪುವಿನ ಮೇಲೆ ಎರಗಲು ಸನ್ನದ್ಧರಾದರು. ಭಾರತದ ಗವರ್ನರ್ ಜನರಲ್ ಆಗಿದ್ದ ಕಾರ್ನ್‌ವಾಲಿಸ್‌ನು ನಿಜಾಮ ಮತ್ತು ಮರಾಠರು ಸೇರಿದಂತೆ ಒಂದು ಕೂಟವನ್ನು ರಚಿಸಿದ. ಕಾರ್ನ್‌ವಾಲಿಸ್ ಘಟ್ಟಗಳ ಮೂಲಕ ಮೈಸೂರು ಪ್ರದೇಶವನ್ನು ಪ್ರವೇಶಿಸಿ 1791ರಲ್ಲಿ ಬೆಂಗಳೂರು ನಗರವನ್ನು ಹಿಡಿದ. ಆದರೆ ಈ ವೇಳೆಗೆ ಬ್ರಿಟಿಷರ ಬಳಿಯಿದ್ದ ಆಹಾರ ಸಾಮಗ್ರಿಗಳು ಮುಗಿದುಹೋಗಿದ್ದರಿಂದ ಶ್ರೀರಂಗಪಟ್ಟಣವನ್ನು ಮುತ್ತುವ ಯೋಜನೆಯನ್ನು ಮುಂದಕ್ಕೆ ಹಾಕಿದನಾದರೂ ಮರುವರ್ಷವೇ ಮತ್ತೆ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ, ಇದರ ಪರಿಣಾಮವಾಗಿ 1792ರ ಮಾರ್ಚ್ 19ರಂದು ಟಿಪ್ಪು ಅಪಮಾನಕರವಾದ ಶಾಂತಿ ಒಪ್ಪಂದಕ್ಕೆ ಸಹಿ ಹಾಕಬೇಕಾಯಿತು. ಈ ಒಪ್ಪಂದದಂತೆ ಬ್ರಿಟಿಷರಿಗೆ ಮೂರು ಕೋಟಿ ರೂಪಾಯಿ ತೆರಬೇಕಾಯಿತು. ನಿಗದಿ ಮಾಡಿದಷ್ಟು ಹಣ ಟಿಪ್ಪುವಿನ ಬಳಿ ಇರಲಿಲ್ಲವಾಗಿ, ಆ ಹಣ ಪಾವತಿಯಾಗುವವರಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಡಬೇಕಾದ ದುಃಸ್ಥಿತಿ ಒದಗಿತು. ಅಲ್ಲದೆ ತನ್ನ ರಾಜ್ಯದಲ್ಲಿ ಅರ್ಧದಷ್ಟು ಟಿಪ್ಪು ಬ್ರಿಟಿಷರಿಗೆ ಬಿಟ್ಟುಕೊಡಬೇಕಾಯಿತು. ಇದರ ಪರಿಣಾಮವಾಗಿ ಹೈದರ್ ಮತ್ತು ಟಿಪ್ಪು ತಮ್ಮ ಸ್ವಸಹಾಯದಿಂದ ಗಳಿಸಿದ ಹೆಚ್ಚಿನ ಪ್ರದೇಶವೆಲ್ಲ ಮೈಸೂರಿನ ಕೈತಪ್ಪಿತು. ಕರ್ನಾಟಕಕ್ಕೆ ಸಂಬಂಧಿಸಿದಂತೆ ತುಂಗಭದ್ರಾ ನದಿಯ ಉತ್ತರಭಾಗ ಮರಾಠರಿಗೆ ಸೇರಿತು. ಕೊಡಗು ಅಲ್ಲಿನ ರಾಜನಿಗೆ ಹಿಂದಿರುಗಿತು.

4ನೆಯ ಮೈಸೂರು ಯುದ್ಧ (1799): 1792ರಲ್ಲಿ ತನಗಾದ ಅವಮಾನವನ್ನು ಟಿಪ್ಪು ಮರೆಯಲಿಲ್ಲ. ಬ್ರಿಟಿಷರ ವಿರುದ್ಧ ಫ್ರಾನ್ಸ್ ಮೊದಲಾದ ವಿದೇಶಿಗಳ ನೆರವನ್ನು ಪಡೆಯಲು ಪ್ರಯತ್ನಿಸಿದ. ಆದರೆ ಆ ವೇಳೆಗೆ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವೆಲ್ಲೆಸ್ಲಿ ಫ್ರೆಂಚರ ಸಹಾಯವನ್ನು ಹಾಗೂ ಸ್ನೇಹವನ್ನು ತ್ಯಜಿಸಬೇಕೆಂದು ಟಿಪ್ಪುವಿಗೆ ಹೇಳಿದ. ಇದು ವಿರಸಕ್ಕೆ ನಾಂದಿಯಾಯಿತು. ಬ್ರಿಟಿಷರ ಸೈನ್ಯದ ಮುಖ್ಯಭಾಗ ಜನರಲ್ ಹ್ಯಾರಿಸ್ಸನ ಕೈಕೆಳಗೆ

ಮದರಾಸಿನಿಂದ ಘಟ್ಟಗಳನ್ನು ದಾಟಿ ಮೈಸೂರು ಕಡೆಗೆ ಹರಿಯಿತು. ಸಿದ್ದೇಶ್ವರ ಮತ್ತು ಮಳವಳ್ಳಿಗಳ ಬಳಿ ನಡೆದ ಕದನದಲ್ಲಿ ಟಿಪ್ಪುವಿಗೆ ಅಪಜಯವಾಯಿತು. ಕಡೆಗೆ ಟಿಪ್ಪು ಶ್ರೀರಂಗಪಟ್ಟಣದ ಕೋಟೆಗೆ ಬಂದು ಸೇರಿದ. ಬ್ರಿಟಿಷರು ಕೋಟೆಯನ್ನು ಭೇದಿಸಿ ಒಳನುಗ್ಗಿದರು. ಈ ಸಂದರ್ಭದ ಹೋರಾಟದಲ್ಲಿ ಟಿಪ್ಪು ಮೃತನಾದ (1789 ಮೇ 4). ಬ್ರಿಟಿಷರಿಗೆ ತಮ್ಮ ಅಧಿಕಾರವನ್ನು ವಿಸ್ತರಿಸಲು ಅಡ್ಡಿಯಾಗಿದ್ದ ಏಕೈಕ ಬೃಹತ್ ಶಕ್ತಿಯೂ ಕಣ್ಮರೆಯಾಯಿತು. ಕರ್ನಾಟಕದಲ್ಲಿ ಬ್ರಿಟಿಷರ ಧ್ವಜ ಹಾರಾಡಲಾರಂಭಿಸಿತು. (ಎ.ವಿ.ಎನ್.)

1799ರ ಯುದ್ಧದ ತರುವಾಯ ಬ್ರಿಟಿಷರು ಟಿಪ್ಪುವಿನ ಆಳಿಕೆಯ ಪ್ರದೇಶವನ್ನು ವಿಭಜಿಸಿ, ಕರಾವಳಿ ಜಿಲ್ಲೆಗಳನ್ನು ತಮ್ಮ ನೇರ ಆಡಳಿತಕ್ಕೆ ವಹಿಸಿಕೊಂಡರು. ಉತ್ತರ ಕರ್ನಾಟಕದ ಭಾಗಗಳನ್ನು ನಿಜಾಮ ಮತ್ತು ಮರಾಠರಿಗೆ ಹಂಚಲು ಉದ್ದೇಶಿಸಲಾಯಿತು. ಮುಂದೆ ಮೈಸೂರು ಸಂಸ್ಥಾನವೆಂದು ಪ್ರಸಿದ್ಧವಾದ ಭಾಗ ಹಿಂದಿನ ಮೈಸೂರು ರಾಜವಂಶದವರಿಗೆ ಹಿಂದಿರುಗಿಸುವ ತೀರ್ಮಾನವಾಗಿ, ಆಗ ಐದು ವರ್ಷದ ಬಾಲಕರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟ ಕಟ್ಟಲಾಯಿತು. ಅದೇ ಸಂದರ್ಭದಲ್ಲಿ. ಜಾರಿಗೆ ತಂದ ಒಪ್ಪಂದದಂತೆ ಮೈಸೂರು ಬ್ರಿಟಿಷರ ಸಾರ್ವಭೌಮತ್ವವನ್ನು ಅಂಗೀಕರಿಸಿ, ಒಂದು ದೇಶಿಯ ರಾಜ್ಯವಾಗಿ ಉಳಿಯಿತು. ಮೈಸೂರು ಅರಸರು ಆಂತರಿಕ ಆಡಳಿತಕ್ಕೆ ಮಾತ್ರ ಪೂರ್ಣವಾಗಿ ಜವಾಬ್ದಾರರಾಗಿದ್ದರು. ದೇಶದ ಆಗುಹೋಗುಗಳು ಅಸ್ತವ್ಯಸ್ತವಾದಲ್ಲಿ ರಾಜ್ಯವನ್ನು ಪುನಃ ವಹಿಸಿಕೊಳ್ಳುವ ಅಧಿಕಾರವನ್ನು ಬ್ರಿಟಿಷರು ಉಳಿಸಿಕೊಂಡರು. ದೇಶದಲ್ಲಿ ಶಾಂತಿಯನ್ನು ಕಾಪಾಡಲು ಬ್ರಿಟಿಷರು ಸೂಕ್ತವಾದ ಸ್ಥಳಗಳಲ್ಲಿ ತಮ್ಮ ಸೈನ್ಯವನ್ನು ಕಾದಿಡುವ ಹಕ್ಕನ್ನು ಉಳಿಸಿಕೊಂಡರು. ಆದರೆ ಅದರ ಖರ್ಚಿನ ಬಾಬತ್ತನ್ನು ಇಲ್ಲಿಯ ಅರಸರು ಕೊಡಬೇಕಾಗಿತ್ತು. ರಾಜ್ಯದ ಎಲ್ಲ ವ್ಯವಹಾರಗಳ ಮೇಲ್ವಿಚಾರಣೆಗೆ ರೆಸಿಡೆಂಟ್ ಒಬ್ಬನನ್ನು ನೇಮಿಸಲಾಯಿತು.

1799ರಲ್ಲಿ ಪೂರ್ಣಯ್ಯ ದಿವಾನನಾಗಿ, ಬ್ಯಾರಿಕ್ಲೋಸ್ ರೆಸಿಡೆಂಟ್ ಆಗಿ ನೇಮಿತರಾದರು. ಬೆಂಗಳೂರು, ಚಿತ್ರದುರ್ಗ, ನಂದಿದುರ್ಗ, ಹರಿಹರ, ನಗರ, ಮುಂತಾದೆಡೆಗಳಲ್ಲಿ ಬ್ರಿಟಿಷ್ ಠಾಣ್ಯಗಳು ಇದ್ದವು. ಶ್ರೀರಂಗಪಟ್ಟಣ ಮತ್ತು ಪಶ್ಚಿಮ ವಾಹಿನಿ ಪ್ರದೇಶ ಬ್ರಿಟಿಷ್ ದಂಡಿನ ಕೇಂದ್ರವಾಯಿತು. ಅದಕ್ಕೆ ಉಪಯುಕ್ತವಾದ ಸೌಕರ್ಯಗಳನ್ನು ಒದಗಿಸುವುದು ಮೈಸೂರು ಆಡಳಿತದ ಜವಾಬ್ದಾರಿಯಾಗಿತ್ತು.ಮೈಸೂರು ಸಂಸ್ಥಾನದಲ್ಲಿದ್ದ ಬ್ರಿಟಿಷ್ ದಂಡಿನ ನೇತೃತ್ವವನ್ನು ಕರ್ನಲ್ ಆರ್ಥರ್ ವೆಲ್ಲೆಸ್ಲಿಯೇ ವಹಿಸಿದ್ದು, ಈತ ಶ್ರೀರಂಗಪಟ್ಟಣದ ಗವರ್ನರ್ ಸಹ ಆಗಿದ್ದ(1799–1805). ಈ ಸಂದರ್ಭದಲ್ಲಿ ಇವನು ಸಂಸ್ಥಾನದ ಉತ್ತರಭಾಗವನ್ನು ಕೊಳ್ಳೆಹೊಡೆಯುತ್ತಿದ್ದ ಧೊಂಡಿಯಾವಾಘನನ್ನು ಹತ್ತಿಕ್ಕಿದನಲ್ಲದೆ ಉತ್ತರದಲ್ಲಿ ಬಳ್ಳಾರಿ ಜಿಲ್ಲೆಯ ಭಾಗಗಳನ್ನು ತಹಬಂದಿಗೆ ತಂದ. 1803ರಲ್ಲಿ ಮರಾಠ ಪ್ರಾಂತ್ಯಗಳಿಗೆ ನಡೆದು ಪುಣೆಯನ್ನು ವಶಪಡಿಸಿಕೊಂಡ. ಮರಾಠರಿಂದ ಅಹಮದ್‌ನಗರ ಮತ್ತು ಸುತ್ತಲ ಪ್ರದೇಶಗಳೆನ್ನೆಲ್ಲ ಗೆದ್ದು ಈಸ್ಟ್ ಇಂಡಿಯಾ ಕಂಪನಿಗೆ ಒಪ್ಪಿಸಿ ಪುನಃ ಶ್ರೀರಂಗಪಟ್ಟಣಕ್ಕೆ ವಾಪಸಾದ (1804). ವೆಲ್ಲೆಸ್ಲಿಯ ಯುದ್ಧಗಳಲ್ಲೆಲ್ಲ ಮೈಸೂರು ಸಂಸ್ಥಾನದ ಸೇನೆಯೂ ಭಾಗವಹಿಸಿತ್ತು. ಅಲ್ಲದೆ ಬ್ರಿಟಿಷರೊಡನೆ ಆಗಿದ್ದ ಒಪ್ಪಂದಗಳ ಪ್ರಕಾರ ಮೈಸೂರು ಸಂಸ್ಥಾನದ ಸೈನ್ಯ ವೆಲ್ಲೂರಿನ ದಂಗೆ ಮತ್ತು ಶ್ರೀರಂಗಪಟ್ಟಣದಲ್ಲಿ ನಡೆದ ಬ್ರಿಟಿಷ ದಂಡಿನ ಅಧಿಕಾರಿಗಳ ದಂಗೆ–ಇವುಗಳನ್ನು ಅಡಗಿಸುವಲ್ಲೂ ಬ್ರಿಟಿಷ್ ಸಾರ್ವಭೌಮರಿಗೆ ನೆರವು ನೀಡಬೇಕಾಯಿತು; ಮೈಸೂರು ಸಂಸ್ಥಾನದ ಆಳಿಕೆಯ ಮೊದಲ ದಿನಗಳಲ್ಲಿ ಸಂಸ್ಥಾನದ ಬೇರೆ ಬೇರೆಡೆಗಳಲ್ಲಿ ಕೆಲವು ಪಾಳೆಯಗಾರರು ದಂಗೆಯೆದ್ದಿದ್ದರು. ಇವನ್ನು ಹತ್ತಿಕ್ಕಲು ಪೂರ್ಣಯ್ಯ, ಆರ್ಥರ್ ವೆಲ್ಲೆಸ್ಲಿ ಮತ್ತು ಬ್ಯಾರಿಕ್ಲೋಸ್ ಬಹುವಾಗಿ ಶ್ರಮಿಸಿದರು. ಸು.1811ರ ವರೆಗೆ, ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಾಪ್ತವಯಸ್ಕರಾಗುವವರೆಗೆ ಮೈಸೂರು ಸಂಸ್ಥಾನದ ಆಡಳಿತ ಬ್ರಿಟಿಷ್ ರೆಸಿಡೆಂಟರ ನೇತೃತ್ವದಲ್ಲೇ ನಡೆಯುತ್ತಿತೆಂದೂ ಹೇಳಬಹುದು.

ಬ್ಯಾರಿಕ್ಲೋಸ್‌ನ ಅನಂತರ ಜೋಸಯ ವೆಬ್ (1801–03), ಜಾನ್ ಮಾಲ್ಕಂ (1803–04), ಮಾರ್ಕ್ ವಿಲ್ಕ್ಸ್ (1804–09), ಎ.ಎಚ್.ಕೋಲ್ (1809–27), ಎ.ಜೆ.ಕ್ಯಾಸಾಮೇಜರ್ (1827–34) ಇವರು ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದರು. ಈ ಕಾಲದಲ್ಲಿ ಬೆಂಗಳೂರು ಬ್ರಿಟಿಷರ ದಂಡಿನ ಪ್ರಧಾನ ಠಾಣ್ಯವಾಯಿತು (1809). ಅಲ್ಲದೆ ಶ್ರೀರಂಗಪಟ್ಟಣದಲ್ಲಿದ್ದ ದಂಡನ್ನು ಕ್ರಮಕ್ರಮವಾಗಿ ಕಡಿಮೆಮಾಡಿ, 1803ರಲ್ಲಿ ಅದನ್ನು ತೆರವು ಮಾಡಲಾಯಿತು. ಬ್ರಿಟಿಷರೊಡನೆ ಆಗಿದ್ದ ಒಪ್ಪಂದದ ಪ್ರಕಾರ ಮೈಸೂರು ಸಂಸ್ಥಾನದ ಅಶ್ವದಳ ಬ್ರಿಟಿಷ್ ಕಂಪನಿಗೆ ಸರ್ಕಾರವು ಕೈಗೊಂಡಿದ್ದ ಪಿಂಡಾರಿಗಳನ್ನು ಅಡಗಿಸುವ ಕಾರ್ಯಾಚರಣೆ (1812–17), ಮರಾಠರ ವಿರುದ್ಧ ಮಾಳವ, ರಜಪುಟಾಣ ಮುಂತಾದೆಡೆಗಳಲ್ಲಿ ನಡೆದ ಯದ್ಧಗಳು (1817–18)–ಇವುಗಳಲ್ಲಿ ಭಾಗವಹಿಸಿ ವಿಜಯಿಯಾಗಿ 1820ರಲ್ಲಿ ಸಂಸ್ಥಾನಕ್ಕೆ ಹಿಂದಿರುಗಿತು.

ಈ ಮಧ್ಯೆ ರೆಸಿಡೆಂಟ್ ಆಗಿದ್ದ ಕೋಲ್‌ನಿಗೆ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ ವಿಷಯದಲ್ಲಿ ತೀವ್ರವಾದ ಭಿನ್ನಾಭಿಪ್ರಾಯ ಉಂಟಾಗಿ ರಾಜ್ಯದ ಆಡಳಿತ ವ್ಯವಸ್ಥೆಯ ಬದಲಾವಣೆಗೆ ಸನ್ನಾಹ ನಡೆಸಲಾಯಿತು. ಆಗ ಮದರಾಸಿನ ಗವರ್ನರ್ ಆಗಿದ್ದ ಮನ್ರೋ ಸತತ ಪ್ರಯತ್ನ ನಡೆಸಿದರೂ ಭಿನ್ನಾಭಿಪ್ರಾಯಗಳನ್ನು ನೇರ್ಪಡಿಸಲಾಗಲಿಲ್ಲ.

ಪಿಂಡಾರಿಗಳು ಮತ್ತು ಮರಾಠರ ವಿರುದ್ಧ ಯುದ್ಧಗಳಲ್ಲಿ ಮೈಸೂರು ಸೈನ್ಯ ಭಾಗವಹಿಸಿದ್ದು, 1816 ಮತ್ತು 1823–24ರಲ್ಲಿ ಸಂಸ್ಥಾನದಲ್ಲಿ ಕ್ಷಾಮ ಎರಗಿದ್ದು – ಈ ಕಾರಣಗಳಿಂದ ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿ ಕೆಟ್ಟಿತು. ಮೈಸೂರಿನ ರೆಸಿಡೆಂಟನು ಗವರ್ನರ್ ಜನರಲ್ ಬೆಂಟಿಂಕನಿಗೆ ಕಳುಹಿಸಿದ ವರದಿಯಲ್ಲಿ ರಾಜರ ದುಂದುವೆಚ್ಚ ಮತ್ತು ಹಣದ ಪೋಲು ಆರ್ಥಿಕ ಪರಿಸ್ಥಿತಿ ಹದಗೆಡಲು ಕಾರಣಗಳೆಂದು ತಿಳಿಸಿದ. ಅಲ್ಲದೆ 1830ರ ಆಗಸ್ಟ್‌ನಲ್ಲಿ ನಗರ(ಬಿದನೂರು), ಚಿತ್ರದುರ್ಗ ಮತ್ತು ಬೆಂಗಳೂರು ಫೌಜುದಾರಿಗಳಲ್ಲಿ ಪಾಳೆಯಗಾರರ ದಂಗೆಗಳು ತಲೆದೋರಿದವು. ಮೈಸೂರು ಫೌಜುದಾರಿಗೆ ಸೇರಿದ ಕೃಷ್ಣರಾಜಪೇಟೆ ಮತ್ತು ಅರಕಲಗೂಡು ಸ್ಥಳಗಳಲ್ಲಿ ದಂಗೆಗಳುಂಟಾದವು. ಹಲವೆಡೆ ಜಿಲ್ಲಾ ಖಜಾನೆಗಳ ದರೋಡೆಯಾಯಿತು. ಮಹಾರಾಜರ ಕೋರಿಕೆಯ ಮೇರೆಗೆ ಕಂಪನಿಯ ಸೈನ್ಯ ಶಿವಮೊಗ್ಗ, ಹೊನ್ನಾಳಿ, ನಗರ, ಚಂದ್ರಗುತ್ತಿ ಮುಂತಾದ ಸ್ಥಳಗಳನ್ನು ಆಕ್ರಮಿಸಿಕೊಂಡಿತು. ಈ ಪರಿಸ್ಥಿತಿಯಲ್ಲಿ ಮದರಾಸು ಗವರ್ನರ್ ಮನ್ರೋ, ಮೈಸೂರು ರಾಜರು ಆಳಲು ಅಸಮರ್ಥರೆಂದು ಗವರ್ನರ್ ಜನರಲ್ ಬೆಂಟಿಂಕನಿಗೆ ತಿಳಿಸಿದ. ಮೈಸೂರು ರಾಜ್ಯದ ಆಡಳಿತವನ್ನು ಬ್ರಿಟಿಷರು ವಶಪಡಿಸಿಕೊಳ್ಳಬೇಕೆಂಬ ಬೆಂಟಿಂಕನ ಸಲಹೆಯನ್ನು ಕಂಪನಿ ಅಂಗೀಕರಿಸಿತು. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ವರ್ಷಕ್ಕೆ ಒಂದು ಲಕ್ಷ ವರಹಗಳ ವಿಶ್ರಾಂತಿ ವೇತನವನ್ನು ಕೊಡುವ ನಿರ್ಧಾರವಾಯಿತು. 1831ರಲ್ಲಿ ಗವರ್ನರ್ ಜನರಲ್ ಬೆಂಟಿಂಕ್ 1799ರಲ್ಲಿ ಆದ ಒಪ್ಪಂದದ ಹಲವು ಕಲಮುಗಳನ್ನು ಜಾರಿ ಮಾಡಿ, ರಾಜ್ಯದ ಆಡಳಿತವನ್ನು ಕಂಪನಿಯೇ ವಹಿಸಿಕೊಳ್ಳುವುದಾಗಿ ಘೋಷಿಸಿದ. ಈ ಆಜ್ಞೆ ಮೈಸೂರಿನಲ್ಲಿ ದಸರ ಉತ್ಸವಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಕೃಷ್ಣರಾಜ ಒಡೆಯರಿಗೆ ತಲುಪಿತು. ರಾಜರು ತಕ್ಷಣವೇ ಆಡಳಿತವನ್ನು ಬಿಟ್ಟು ಕೊಟ್ಟರು. ಮೈಸೂರು ಸಂಸ್ಥಾನದ ಆಡಳಿತ ಪೂರ್ಣವಾಗಿ ಬ್ರಿಟಿಷರ ಕೈಸೇರಿತು.

ಕಮಿಷನ್ ಆಡಳಿತ: 1831–50 ವರ್ಷಗಳ ಕಾಲ ಬ್ರಿಟಿಷರು ಕಮಿಷನರ್‌ಗಳನ್ನು ನೇಮಿಸಿ ಮೈಸೂರು ಸಂಸ್ಥಾನದ ಆಡಳಿತವನ್ನು ನಡೆಸಿದರು. ಈ ಅವಧಿಯಲ್ಲಿ ಕಮಿಷನರ್ ಹುದ್ದೆಯನ್ನು ನಿರ್ವಹಿಸಿದರು: (1) ಕರ್ನಲ್ ಬ್ರಿಗ್ಸ್(1831–32), (2) ಲೆಫ್ಟಿನೆಂಟ್ ಕರ್ನಲ್ ಮಾರಿಸನ್ (1832–34), (3) ಕರ್ನಲ್ ಮಾರ್ಕ್ ಕಬ್ಬನ್ (1834–61), (4) ಲೂಯಿ ಬೆನ್ತಾಮ್ ಬೌರಿಂಗ್ (1862–70), (5) ಕರ್ನಲ್ ರಿಚರ್ಡ್ ಮೀಡ್ (1870–75, ಮೀಡ್‌ನ ಗೈರುಹಾಜರಿಯಲ್ಲಿ ಆರ್. ಡ್ಯಾಲ್ಯೆಲ್), (6) ಸಿ. ಬಿ. ಸ್ಯಾಂಡರ್ಸ್ (1875–78), (7) ಜೆ. ಬಿ. ಗೋರ್ಡನ್ (1878–81).

1831–34ರ ವರೆಗೆ ಕಮಿಷನರುಗಳ ಆಡಳಿತ ಮೊದಲ 3 ವರ್ಷಗಳ ಕಾಲ ಹಿರಿಯ ಮತ್ತು ಕಿರಿಯ ಕಮಿಷನರ್‌ಗಳೆಂಬ ಇಬ್ಬರು ಜಂಟಿ ಆಡಳಿತ ನಡೆಸುತ್ತಿದ್ದರು. ಮೊದಲು ಕರ್ನಲ್ ಬ್ರಿಗ್ಸ್‌ನನ್ನು ಹಿರಿಯ ಕಮಿಷನರನ್ನಾಗಿಯೂ ಮತ್ತು ಸಿ.ಎಂ. ಲುಷಿಂಗ್‌ಟನ್‌ನನ್ನು ಕಿರಿಯ ಕಮಿಷನರನ್ನಾಗಿಯೂ ನೇಮಿಸಲಾಯಿತು. ಆದರೆ ಲುಷಿಂಗ್‌ಟನ್ ಮತ್ತು ಬ್ರಿಗ್ಸ್ ಅಧಿಕಾರ ವಹಿಸಿಕೊಂಡಮೇಲೆ ಬೆಂಗಳೂರಿನಲ್ಲಿ ಕೇವಲ 15 ದಿನಗಳ ಕಾಲ ಕಮಿಷನರಾಗಿದ್ದು ಮದರಾಸಿಗೆ ಹಿಂದಿರುಗಿದರು. ಅನಂತರ ಅವರ ಸ್ಥಾನದಲ್ಲಿ ಜಿ.ಡಿ.ಡ್ರೂರಿ, ಜೆ.ಎಂ.ಮೆಕ್ಲಿಯಡ್ ಕಿರಿಯ ಕಮಿಷನರಾಗಿದ್ದರು. ಬ್ರಿಗ್ಸ್‌ನ ಆಡಳಿತದಲ್ಲಿ ಅನೇಕ ಬದಲಾವಣೆಗಳು ಆಚರಣೆಗೆ ಬಂದವು. ನ್ಯಾಯಾಸ್ಥಾನದ ಪುನರ್‌ವ್ಯವಸ್ಥೆಯಾಯಿತು. 1832ರ ಜೂನ್ ಒಂದರಿಂದ ಸರ್ಕಾರದ ಲೆಕ್ಕಾಚಾರಗಳನ್ನು ಇಂಗ್ಲಿಷ್ ಕ್ಯಾಲೆಂಡರಿನ ತಿಂಗಳುಗಳಿಗೆ ಅನುಸಾರವಾಗಿ ಇಡುವ ಪದ್ಧತಿ ಜಾರಿಗೆ ಬಂದಿತು. ಮೊದಲ ಮೂರು ವರ್ಷಗಳ ಕಾಲ ಹಣಕಾಸಿನ ಇಲಾಖೆ ಕಮಿಷನರ ಹತೋಟಿಯಲ್ಲಿದ್ದ ದಿವಾನರ ಕೈಯಲ್ಲಿದ್ದಿತು. ಕಮಿಷನರ ಕೇಂದ್ರ ಆಡಳಿತ ಕಾರ್ಯಾಲಯ ಸ್ಥಾಪನೆಯಾಗಿ ದಿವಾನರ ಕಾರ್ಯಾಲಯ ಕೊನೆಗೊಂಡಿತು. ಅನೇಕ ಅನವಶ್ಯ ಹುದ್ದೆಗಳನ್ನು ರದ್ದು ಮಾಡಿ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡಲಾಯಿತು. ಪಾಳೆಯಗಾರರ ಅತೃಪ್ತತೆಯನ್ನು ಕಡಿಮೆ ಮಾಡಲು ಉದಾರನೀತಿಯ ಧೋರಣೆಯನ್ನು ಅನುಸರಿಸಲಾಯಿತು. ಪ್ರಜಾಹಿಂಸೆ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ–ಇವುಗಳಲ್ಲಿ ತೊಡಗುವ ಅಧಿಕಾರಿಗಳು ಶಿಕ್ಷೆಗೊಳಗಾಗುತ್ತಿದ್ದರು. ಇಬ್ಬರು ಕಮಿಷನರುಗಳ ಜಂಟಿ ಆಡಳಿತದಲ್ಲಿ ನ್ಯೂನತೆಗಳು ವಿಶೇಷವಾಗಿದ್ದುದರಿಂದ, ಫೆಬ್ರುವರಿ 1834ರಲ್ಲಿ ಸರ್ ಮಾರ್ಕ್ ಕಬ್ಬನ್ ಒಬ್ಬನೆ, ಕಮಿಷನರ್ ಆಗಿ ನೇಮಿಸಲ್ಪಟ್ಟ. 1834ರಲ್ಲಿ ರೆಸಿಡೆಂಟರ ಹುದ್ದೆಯೂ ರದ್ದಾಯಿತು.

ಸರ್ ಮಾರ್ಕ್ ಕಬ್ಬನ್ 1861ರ ವರೆಗೆ 27 ವರ್ಷಗಳ ಕಾಲ ಕಮಿಷನರಾಗಿದ್ದನಲ್ಲದೆ ಸ್ಥಿತಿಯನ್ನು ಉತ್ತಮಪಡಿಸಿದ. ರಾಜ್ಯವನ್ನು ಆರು ಫೌಜುದಾರಿಗಳ ಬದಲು ನಾಲ್ಕು ವಿಭಾಗಗಳನ್ನಾಗಿ ಮಾಡಿ, ತಾಲ್ಲೂಕುಗಳ ಸಂಖ್ಯೆಯನ್ನು ಕಡಿಮೆ ಮಾಡಿದ. ಪ್ರತಿ ತಾಲ್ಲೂಕು ಕಛೇರಿಯಲ್ಲೂ ಅಧಿಕೃತ ಪತ್ರ ವ್ಯವಹಾರ ಮರಾಠಿ ಮತ್ತು ಕನ್ನಡ ಈ ಎರಡೂ ಭಾಷೆಗಳಲ್ಲೂ ನಡೆಯುತ್ತಿದ್ದು, ಮುಂದೆ ಮರಾಠಿ ಅಥವಾ ಕನ್ನಡದಲ್ಲಿ ನಡೆಯಬೇಕೆಂದು ಆಜ್ಞೆ ಮಾಡಲಾಯಿತು. 1835ರಲ್ಲಿ ಬೆಂಗಳೂರಿನಲ್ಲಿ ಮೊದಲನೆಯ ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯಲಾಯಿತು. 1840ರಲ್ಲಿ ರಾಜ್ಯದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಪ್ರಾರಂಭವಾಗಿ ಮೈಸೂರು ನಗರದಲ್ಲಿ ಮೊದಲನೆಯ ಇಂಗ್ಲಿಷ್ ಶಾಲೆ ಸ್ಥಾಪಿತವಾಯಿತು. 1853ರ ವರೆಗೆ ಕಂಠೀರಾಯ ಪಗೋಡ ಎಂಬ ನಾಣ್ಯ ಜಾರಿಯಲ್ಲಿದ್ದಿತು. ಅನಂತರ ರೂಪಾಯಿ ಚಲಾವಣೆಗೆ ಬಂದಿತು.

1853ರಲ್ಲಿ ಟೆಲಿಗ್ರಾಫ್ ಪ್ರಾರಂಭವಾಯಿತು. 1856ರಲ್ಲಿ ಲೋಕೋಪಯೋಗಿ ಇಲಾಖೆ ಸ್ಥಾಪಿತವಾಯಿತು. 1859ರಲ್ಲಿ ಮೈಸೂರು ರಾಜ್ಯದ ಮೊದಲನೆಯ ರೈಲುಮಾರ್ಗ ಬೆಂಗಳೂರಿನಿಂದ ಜೋಲಾರಪೇಟೆಗೆ ನಿರ್ಮಾಣವಾಯಿತು. ಭೂಕಂದಾಯ ವ್ಯವಸ್ಥೆ, ವಿದ್ಯಾಭ್ಯಾಸ, ಲೋಕೋಪಯೋಗಿ ಇಲಾಖೆ, ನೀರಾವರಿ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಕೆಲಸಗಳನ್ನು ಪ್ರಾರಂಭಿಸಲಾಯಿತು. ಆರ್ಥಿಕ ವಿಷಯಗಳಲ್ಲಿ ವೆಂಕಟರಾವ್ ಎಂಬ ಸಮರ್ಥ ಅಧಿಕಾರಿ ಕಬ್ಬನ್‌ಗೆ ನೆರವಾದ. ದುಂದುವೆಚ್ಚ, ಹಣದ ದುರುಪಯೋಗ ಕಡಿಮೆಯಾಗಿ ಮಿತವ್ಯಯ ಜಾರಿಗೆ ಬಂದಿತು. 85ಲಕ್ಷ ರೂಪಾಯಿಗಳಷ್ಟು ಸರ್ಕಾರದ ಸಾಲವನ್ನು ತೀರಿಸಿ 45 ಲಕ್ಷ ರೂಪಾಯಿ ಆಪದ್ಧನವನ್ನು ಕೂಡಿಡಲಾಯಿತು. ಕಂದಾಯ ಪದ್ಧತಿಯಲ್ಲಿ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದುದು ರೈತರಿಗೆ ಅನುಕೂಲವಾಯಿತು. ಒಟ್ಟಿನಲ್ಲಿ ಕಬ್ಬನ್ ಮೈಸೂರು ಸಂಸ್ಥಾನದ ಕ್ಷೇಮಾಭ್ಯುದಯಕ್ಕೆ ಶ್ರಮಿಸಿದ.

ಎಲ್.ಬಿ.ಬೌರಿಂಗ್ 1862–70ರ ವರೆಗೆ ಕಮಿಷನರಾಗಿ ಕೆಲಸ ಮಾಡಿದ. ಈ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಬ್ರಿಟಿಷ್ ಪ್ರಾಂತ್ಯಗಳ ಆಡಳಿತ ಪದ್ಧತಿಯನ್ನು ಪೂರ್ಣವಾಗಿ ಜಾರಿಗೆ ತರಲಾಯಿತು. ಆರ್ಥಿಕ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಮಾಡಲಾಯಿತು. ಅರಣ್ಯ ಸಂಪತ್ತನ್ನು ಕಾಪಾಡಲು ಏರ್ಪಾಡು ಮಾಡಲಾಯಿತು. ನ್ಯಾಯಾಸ್ಥಾನಗಳ ಹೆಚ್ಚಳ, ಸೆರೆಮನೆಗಳ ಸುಧಾರಣೆ. ವಿದ್ಯಾಭ್ಯಾಸ, ಪುರಸಭೆಗಳ ವ್ಯವಸ್ಥೆ, ರಸ್ತೆ ಮತ್ತು ಸೇತುವೆಗಳ ನಿರ್ಮಾಣ ಪ್ರಾರಂಭವಾದುವು. ಕಬ್ಬನ್ ಮತ್ತು ಬೌರಿಂಗ್ ಇಬ್ಬರೂ ಕಾಫಿ ಬೆಳೆಗೆ ಪ್ರೋತ್ಸಾಹ ಕೊಟ್ಟರು.

ಮುಮ್ಮಡಿ ಕೃಷ್ಣರಾಜ ಒಡೆಯರ್ 1868ರಲ್ಲಿ ಮೃತರಾದರು. ಅವರು 1865ರ ಜೂನ್‌ನಲ್ಲಿ ಚಾಮರಾಜ ಒಡೆಯರ್ ಅವರನ್ನು ದತ್ತು ತೆಗೆದುಕೊಂಡಿದ್ದು, ಬ್ರಿಟಿಷ್ ಸರ್ಕಾರ ಅವರನ್ನು ಉತ್ತರಾಧಿಕಾರಿಯಾಗಲು ಒಪ್ಪಿತು. ಆದರೆ ಚಾಮರಾಜ ಒಡೆಯರ್ ಪ್ರಾಪ್ತವಯಸ್ಕರಾಗುವ ವರೆಗೂ ಅವರ ಪರವಾಗಿ ಬ್ರಿಟಿಷ್ ಪ್ರಭುತ್ವವೇ ನ್ಯಾಸಾಧಿಕಾರಿಯಾಗಿ 1881ರ ಮಾರ್ಚ್ 25ರ ವರೆಗೂ ಆಡಳಿತ ನಡೆಸಿತು. ಬೌರಿಂಗ್ 1870ರಲ್ಲಿ ರಾಜೀನಾಮೆ ನೀಡಿದ ಅನಂತರ ಮೈಸೂರನ್ನು 1881ರಲ್ಲಿ ಚಾಮರಾಜ ಒಡೆಯರಿಗೆ ಒಪ್ಪಿಸುವವರೆಗಿನ ಮಧ್ಯಾವಧಿಯಲ್ಲಿ ಕರ್ನಲ್ ರಿಚರ್ಡ್ ಮೀಡ್, ಸಿ.ಬಿ.ಸ್ಯಾಂಡರ್ಸ್ ಮತ್ತು ಜೆ.ಬಿ.ಗೋರ್ಡನ್ ಚೀಫ್ ಕಮಿಷನರಾಗಿದ್ದರು. ಮೀಡ್ ಸ್ವದೇಶಿ ಆಡಳಿತ ಯಂತ್ರ ನಿರ್ಮಾಣ ಮಾಡುವುದಕ್ಕೆ ಮಾರ್ಚ್ 1873ರಲ್ಲಿ ಮೇಲ್ಮಟ್ಟದ ಹುದ್ದೆಗಳಿಗೆ ತರಬೇತಿ ಕೊಡುವ ಯೋಜನೆಯ ಕ್ರಮಗಳನ್ನು ಕೈಗೊಂಡ. ಪೂರ್ತಿ ಸಿವಿಲ್ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಮುನ್ಸಿಫ್ ಕೋರ್ಟುಗಳನ್ನು ಸ್ಥಾಪಿಸಿದ. ಸಾಂಡರ್ಸ್‌ನ ಅಧಿಕಾರವಧಿಯಲ್ಲಿ ದಕ್ಷಿಣ ಭಾರತದಲ್ಲಿ ಭಾರೀ ಕ್ಷಾಮದಿಂದಾಗಿ ವರಮಾನಗಳು ನಶಿಸಿದ್ದವು. ಹತ್ತು ಲಕ್ಷ ಜನಸಂಖ್ಯೆ ಕಡಿಮೆಯಾಗಿತ್ತು. ಮುಂದೆ ಗೋರ್ಡನ್ ಕಾಲದಲ್ಲಿ ಉನ್ನತ ನ್ಯಾಯಾಂಗಕ್ಕೆ ಸಂಬಂಧಿಸಿದ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಎಲ್ಲಾ ಕಾರ್ಯಕ್ರಮಗಳೂ ಪ್ರತ್ಯೇಕವಾಗಿ ಬೇರ್ಪಟ್ಟವು. ಆತ ಮಹಾರಾಜರ ಅಧೀನಕ್ಕೆ ದಕ್ಷ ಆಡಳಿತವನ್ನು ಬಿಟ್ಟುಹೋದ.

ಸ್ಟೇಟ್ ಸೆಕ್ರೆಟರಿಯು 1880ರ ಆಗಸ್ಟ್ 12ರಂದು ಗವರ್ನರ್ ಜನರಲ್ ಮಾರ್ಕ್ವಿಸ್ ರಿಪನ್‌ಗೆ ಬರೆದ ಪತ್ರದಲ್ಲಿ ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್‌ಗೆ ಅಂಗೀಕಾರವನ್ನು ತಿಳಿಸಿದ್ದ. ಶ್ರೀರಂಗಪಟ್ಟಣ ದ್ವೀಪವನ್ನು ಮೈಸೂರಿಗೆ ಸೇರಿಸುವಂತೆಯೂ ಆ ಪತ್ರ ತಿಳಿಸಿದ್ದಿತು. ಬ್ರಿಟಿಷ್ ಸರ್ಕಾರದ ಮುಖಾಂತರವಲ್ಲದೆ, ಮಹಾರಾಜರು ಬೇರಾವ ರಾಜರೊಡನೆಯೂ ರಾಜಕೀಯ ಸಂಬಂಧಗಳನ್ನು ಹೊಂದಿರಬಾರದೆಂದು ಸೂಚನೆಯನ್ನು ಕೊಡಲಾಗಿತ್ತು. ಮೈಸೂರಿನ ಅರಮನೆಯಲ್ಲಿ ರಾಜ್ಯದ ವರ್ಗಾವಣೆಗಾಗಿ ದರ್ಬಾರನ್ನು ನಡೆಸಲಾಯಿತು. ಮದರಾಸಿನ ಗವರ್ನರಾಗಿದ್ದ ಡಬ್ಲ್ಯು.ಪಿ.ಆಡಮ್ಸ್ 1881ರ ಮಾರ್ಚ್ 25ರ ಬೆಳಗ್ಗೆ ಮೈಸೂರಿನ ಆಡಳಿತವನ್ನು ಚಾಮರಾಜ ಒಡೆಯರಿಗೆ ವಹಿಸಿಕೊಟ್ಟ. ಜೆ.ಬಿ.ಗೋರ್ಡನ್ ಪ್ರಪ್ರಥಮ ರೆಸಿಡೆಂಟಾಗಿ ನೇಮಕವಾದ. ಬೆಂಗಳೂರಿನ ಕಂಟೋನ್‌ಮೆಂಟ್ (ದಂಡು) ಪ್ರದೇಶವನ್ನು ಆಡಳಿತ ಕಾರ್ಯಗಳಿಗಾಗಿ ಬ್ರಿಟಿಷ್ ಸರ್ಕಾರಕ್ಕೆ ವರ್ಗಾಯಿಸಲಾಯಿತು. ಮಹಾರಾಜರಿಗೆ ಪ್ರಜಾಭ್ಯುದಯ ಆಡಳಿತಕ್ಕಾಗಿ ವರ್ಷಕ್ಕೆ 13 ಲಕ್ಷ ರೂಪಾಯಿಗಳನ್ನು ಕೊಡುವಂತೆ ನಿಗದಿ ಮಾಡಲಾಯಿತು. ಚಾಮರಾಜ ಒಡೆಯರು ಪ್ರಜಾಕಲ್ಯಾಣದ ದೃಷ್ಟಿಯಿಂದ ರಾಜ್ಯದ ಆಡಳಿತ ನಡೆಸುವುದಾಗಿ ಭರವಸೆ ನೀಡಿದ. ಅಲ್ಲಿಂದ ಮುಂದೆ ಮೈಸೂರು ಸಂಸ್ಥಾನದ ಆಡಳಿತ ವಿದೇಶ ವ್ಯವಹಾರ ಮತ್ತು ಮಿಲಿಟರಿ ವ್ಯವಹಾರಗಳ ಹೊರತು ಮಿಕ್ಕ ವಿಷಯಗಳಲ್ಲಿ ಹೆಚ್ಚು ಕಡಿಮೆ ಸ್ವತಂತ್ರವಾಗಿಯೇ ವರ್ತಿಸುವ ಅಧಿಕಾರ ಹೊಂದಿತ್ತು. ಸಂಸ್ಥಾನದ ವ್ಯವಹಾರಗಳನ್ನು ಪರಿಶೀಲಿಸುವ ಅಧಿಕಾರವನ್ನು ಇಲ್ಲಿದ್ದ ಬ್ರಿಟಿಷ್ ರೆಸಿಡೆಂಟ್ ಹೊಂದಿದ್ದರೂ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಜಯಚಾಮರಾಜ ಒಡೆಯರ್ ಅವರ ಕಾಲದಲ್ಲಿ ಸಮರ್ಥ ದಿವಾನರ ಸಹಕಾರದೊಡನೆ ಇಲ್ಲಿನ ಸರ್ಕಾರ ಉತ್ತಮವಾಗಿ ಆಡಳಿತವನ್ನು ನಿರ್ವಹಿಸಿ ಮೈಸೂರು ಮಾದರಿ ಸಂಸ್ಥಾನವೆಂದು ಹೆಸರು ಗಳಿಸಿದ್ದರಿಂದ ರೆಸಿಡೆಂಟ್ ಇಲ್ಲಿನ ವ್ಯವಹಾರದಲ್ಲಿ ಹೆಚ್ಚಿನ ಕೈವಾಡ ನಡೆಸುವ ಅವಕಾಶ ಒದಗಿ ಬರಲಿಲ್ಲ. 1947ರಲ್ಲಿ ಭಾರತ ಸ್ವಾತಂತ್ರ್ಯವನ್ನು ಗಳಿಸಿದಾಗ ಬ್ರಿಟಿಷರು ಸಂಸ್ಥಾನದ ಮೇಲಿನ ತಮ್ಮ ಹಕ್ಕನ್ನು ಬಿಟ್ಟುಕೊಟ್ಟರು.

**ದಕ್ಷಿಣ ಕನ್ನಡ ಜಿಲ್ಲೆ:** 1768ಕ್ಕಿಂತ ಮೊದಲು ಬ್ರಿಟಿಷರು ದಕ್ಷಿಣ ಕನ್ನಡ ಜಿಲ್ಲೆಯ ಆಡಳಿತದಲ್ಲಿ ಹೆಚ್ಚು ಪ್ರವೇಶಿಸಿರುವುದು ಕಂಡುಬರುವುದಿಲ್ಲ. ಆದರೆ 1737ರಲ್ಲಿ ಮಂಗಳೂರಿನಲ್ಲಿದ್ದ ಬಿದನೂರು ಪ್ರಾಂತಾಧಿಕಾರಿಯೊಡನೆ ಸಂಬಂಧಿಸಿದ ಒಪ್ಪಂದವೊಂದರಲ್ಲಿ ಬ್ರಿಟಿಷರು ಜಿಲ್ಲೆಯ ಆಡಳಿತದಲ್ಲಿ ಒಮ್ಮೆ ಕೈಹಾಕಿದ್ದರು. ಬಿದನೂರಿನ ಎರಡನೆಯ ಸೋಮಶೇಖರ ನಾಯಕ ನೀಲೇಶ್ವರ ಹಾಗೂ ಕಾವ್ಯೆ ನದಿ ಸುತ್ತಣ ಪ್ರದೇಶಗಳನ್ನು ಆಕ್ರಮಿಸಿದಾಗ ಅದು ತಲಚೇರಿಯಲ್ಲಿನ ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಜಗಳಕ್ಕೆ ಕಾರಣವಾಯಿತು. 1736ರಲ್ಲಿ ಮಲೆಯಾಳರು ಬ್ರಿಟಿಷರ ಸಹಾಯದಿಂದ ಕಾವ್ಯೆ ನದಿ ಮುಖದ ಅಲೆಕಣ್ಣು ಕೋಟೆ ಮತ್ತು ನದಿಯ ದಕ್ಷಿಣಕ್ಕಿರುವ ಉಳಿದಮೂರು ಕೋಟೆಗಳನ್ನು ಮತ್ತೆ ವಶಪಡಿಸಿಕೊಂಡರು. ಆ ಬಳಿಕ ಬ್ರಿಟಿಷ್ ಪ್ರತಿನಿಧಿ ಲಿಂಚ್ ಮಂಗಳೂರಿಗೆ ಬಂದು, 1737ರಲ್ಲಿ ಬಿದನೂರು ಪ್ರಾಂತಾಧಿಕಾರಿಯಾದ ಸುರಪ್ಪಯ್ಯನೊಡನೆ ಒಪ್ಪಂದ ಮಾಡಿಕೊಂಡ. ಒಪ್ಪಂದದ ಪ್ರಕಾರ ಬ್ರಿಟಿಷರು ಕೊಲ್ಲತಿರಿ ಪ್ರದೇಶದಲ್ಲಿ ಏಲಕ್ಕಿ ಹಾಗೂ ಕಾಳುಮೆಣಸಿನ ವ್ಯಾಪಾರದ ಏಕಸ್ವಾಮ್ಯತೆಯನ್ನು ಹಾಗೂ ಕೆಲವು ವ್ಯಾಪಾರೀ ಸೌಲಭ್ಯಗಳನ್ನು ಹೊಂದಿದರು. ಬ್ರಿಟಿಷರು ಅಲೆಕಣ್ಣು ಕೋಟೆಯನ್ನು ಬಿಟ್ಟುಕೊಟ್ಟರು. ಬಳಿಕ ಅದನ್ನು ಬಿದನೂರಿನ ಅಧಿಕಾರಿಗಳು ವಶಪಡಿಸಿಕೊಂಡರು.

1766ರಲ್ಲಿ ಬ್ರಿಟಿಷರು ಅಡ್ಮಿರಲ್ ವಾಟ್ಸನ್‌ನ ನೇತೃತ್ವದಲ್ಲಿ ಮುಂಬಯಿಯಿಂದ ಸೈನ್ಯವೊಂದನ್ನು ಕಳುಹಿಸಿದರು. 1768ರ ಫೆಬ್ರವರಿಯಲ್ಲಿ ಮಂಗಳೂರಿನಲ್ಲಿ ಬಂದಿಳಿದ ಬ್ರಿಟಿಷ್ ಸೇನೆ ಆಗ ಅಲ್ಲಿ ಹೈದರನ ಪ್ರತಿನಿಧಿಯಾಗಿ ಇದ್ದ ಲತೀಫ್ ಅಲಿಬೇಗನನ್ನು ಸೋಲಿಸಿ ಮಂಗಳೂರನ್ನು ವಶಪಡಿಸಿಕೊಂಡಿತು. ಆದರೆ ಕೆಲವೇ ದಿನಗಳಲ್ಲಿ ಟಿಪ್ಪು ಮಂಗಳೂರು ಕೋಟೆಯನ್ನು ವಶಪಡಿಸಿಕೊಂಡ. ಬ್ರಿಟಿಷರು ತಮ್ಮ ಕಡೆಯ 80 ಜನ ಐರೋಪ್ಯರನ್ನೂ 180 ಇತರ ಸಿಪಾಯಿಗಳನ್ನೂ ಮತ್ತು ಎಲ್ಲಾ ಯುದ್ಧ ಸಾಮಗ್ರಿಗಳನ್ನು ಅಲ್ಲಿಯೇ ಬಿಟ್ಟು ಮಂಗಳೂರನ್ನು ತ್ಯಜಿಸಿದರು. 1770ರ ಸೆಪ್ಟೆಂಬರ್‌ನಲ್ಲಿ ಬ್ರಿಟಿಷರಿಗೂ ಹೈದರ್‌ಅಲಿಗೂ ಒಂದು ಒಪ್ಪಂದವೇರ್ಪಟ್ಟಿತು. ಮಂಗಳೂರು ಹಾಗೂ ಇತರ ಬಂದರುಗಳಿಂದ ಮುಂಬಯಿಗೆ ಅಕ್ಕಿಯನ್ನು ಸಾಗಿಸಲು ಈ ಒಪ್ಪಂದ ಅನುವು ಮಾಡಿಕೊಟ್ಟಿತು.

ಎರಡನೆಯ ಮೈಸೂರು ಕದನ ಸಮಯದಲ್ಲಿ ಹೈದರನ ಮರಣದ ಸುದ್ದಿ ತಿಳಿದು (1782) ಜನರಲ್ ಮ್ಯಾಥ್ಯೂಸ್ 1783ರ ಜನವರಿಯಲ್ಲಿ ಮುಂಬಯಿಯಿಂದ ಸೇನೆ ಸಹಿತ ಕುಂದಾಪುರದಲ್ಲಿ ಬಂದಿಳಿದ. ಬಳಿಕ 3 ದಿನಗಳಲ್ಲಿ ಹೊಸಂಗಡಿ ಕಣಿವೆಯ ಹತ್ತಿರದ ಕೋಟೆಯೊಂದನ್ನು ಸುಲಭದಲ್ಲಿ ವಶಪಡಿಸಿಕೊಂಡ. ಕರ್ನಲ್ ಮಾಕ್ಲಿಯೊಡ್ ಹೈದರ್‌ಗಡ್ ಕೋಟೆಯನ್ನು ಸ್ವಾಧೀನ ಪಡಿಸಿಕೊಂಡ. ಜನರಲ್ ಮ್ಯಾಥ್ಯೂಸ್ ಬಿದನೂರನ್ನು ಹಿಡಿದ. ಆದರೆ ಮಾರ್ಚ್ 1783ರಲ್ಲಿ ಟಿಪ್ಪು ಪ್ರಬಲ ಸೈನ್ಯದೊಡನೆ ಆಗಮಿಸಿದಾಗ ಬ್ರಿಟಿಷರು ಒಪ್ಪಂದ ಮಾಡಿಕೊಳ್ಳಬೇಕಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶ ಟಿಪ್ಪುವಿನ ವಶದಲ್ಲೇ ಉಳಿಯಿತು.

1799ರ ಶ್ರೀರಂಗಪಟ್ಟಣದ ಪತನದ ಬಳಿಕ ಪಶ್ಚಿಮ ಕರಾವಳಿ ಬ್ರಿಟಿಷರ ವಶವಾಯಿತು. 1799ರ ಜೂನ್‌ನಲ್ಲಿ ಕ್ಯಾಪ್ಟನ್ ಸರ್ ಥಾಮಸ್ ಮನ್ರೋ ಜಿಲ್ಲೆಯ ಕಲೆಕ್ಟರ್ ಆಗಿ ನೇಮಕಗೊಂಡ. ಫೆಬ್ರವರಿ 1800ರ ಆಜ್ಞೆಯ ಪ್ರಕಾರ ಈ ಜಿಲ್ಲೆಯ ಕಲೆಕ್ಟರ್ ಮದರಾಸ್ ಬೋರ್ಡ್ ಆಫ್ ರೆವಿನ್ಯೂವಿನ ಅಧೀನಕ್ಕೊಳಗಾದ. ಆದರೆ ರಾಜಕೀಯ ವಿಷಯಕ್ಕೆ ಮೈಸೂರಿನ ರೆಸಿಡೆಂಟ್ ಕ್ಲೋಸ್‌ನೊಡನೆ ವ್ಯವಹರಿಸಬೇಕಾಗಿತ್ತು.

ಈ ಜಿಲ್ಲೆಯಲ್ಲಿ ಬ್ರಿಟಿಷರ ಆಡಳಿತದ ಮೊದಲ ದಿನಗಳಲ್ಲಿ ಅಲ್ಲಲ್ಲಿ ಸ್ವಲ್ಪ ಪ್ರತಿರೋಧವಿತ್ತು. ಕುಂದಾಪುರ ತಾಲ್ಲೂಕಿನ ಕೆಲವು ಭಾಗಗಳನ್ನು ಬಿದನೂರಿನ ಧೋಂಡಿಯಾ ವಾಘನ ಕಡೆಯವರು ಆಕ್ರಮಿಸಿದರು. ಇದೊಂದನ್ನು ಬಿಟ್ಟರೆ ಜಿಲ್ಲೆಯ ಉತ್ತರ ಭಾಗ ಶಾಂತವಾಗಿತ್ತು. ಆದರೆ ದಕ್ಷಿಣ ಭಾಗದಲ್ಲಿ ಕುಂಬಳೆಯ ಹಾಗೂ ನೀಲೇಶ್ವರ ಪ್ರದೇಶಗಳ ರಾಜರುಗಳು ವಿರೋಧಿಗಳಾಗಿದ್ದರು. 1799ರ ಅಕ್ಟೋಬರ್‌ನಲ್ಲಿ ಜಮಾಲಾಬಾದಿನ ಕೋಟೆ ಬ್ರಿಟಿಷರ ವಶವಾಗಿದ್ದರೂ ಮತ್ತೊಮ್ಮೆ ಅದು ಟಿಪ್ಪುವಿನ ಅನುಯಾಯಿಗಳ ಕೈಸೇರಿತು. ಇವೆಲ್ಲವನ್ನೂ ಮನ್ರೋ ಹತ್ತಿಕ್ಕಿದ. ವಿಟ್ಲದ ಹೆಗ್ಗಡೆ ಕೊನೆಯ ಮೈಸೂರಿನ ಕದನದಲ್ಲಿ ಭಾಗವಹಿಸಿದಾಗ ತಾನು ಕಳೆದುಕೊಂಡ ಪ್ರದೇಶವನ್ನು ಪುನಃ ಗಳಿಸಲು ಡಿಸೆಂಬರ್ 1799ರಲ್ಲಿ ತನ್ನ ಅಳಿಯನೊಡಗೂಡಿ ತನ್ನ ಸೈನ್ಯವನ್ನು ಬಲಪಡಿಸಿಕೊಳ್ಳತೊಡಗಿದ. ಮನ್ರೋ ಕೂಡಲೇ ಪ್ರಾಂತ್ಯಾಧಿಕಾರಿಯಾಗಿ ಹರ್ಟ್‌ನನ್ನು ಕರೆಸಿ ಹೆಗ್ಗಡೆ ವಿರುದ್ಧ ಕಳುಹಿಸಿದ. ಹೆಗ್ಗಡೆಯ ಜೊತೆ ಸೇರಿದ ಕೊಯಮತ್ತೂರಿನ ಮಾಜಿ ಶಿರಸ್ತೆದಾರನಾದ ಸುಬ್ಬರಾವ್ 1800ರ ಮೇ 7ರಂದು ಕಡಬದ ತಹಶೀಲದಾರನ ಕಚೇರಿಗೆ ದಾಳಿ ಮಾಡಿದ. ಅಲ್ಲಿನ ತಹಶೀಲದಾರ ಹಾಗೂ ಉಳಿದ ಅಧಿಕಾರಿಗಳು ಸುರಕ್ಷಿತವಾಗಿ ತಪ್ಪಿಸಿಕೊಂಡರೂ ಸುಬ್ಬರಾವ್ ಬಳಿಕ ಬಂಟ್ವಾಳಕ್ಕೆ ಸಾಗಿ ಅಲ್ಲಿ ಸೂರೆ ಮಾಡತೊಡಗಿದ. ಕೊನೆಗೆ ಆತ ಪುತ್ತೂರಿಗೆ ಸಾಗಿ ಅಲ್ಲಿನ ಸಂಪತ್ತನ್ನೂ ಸಂಗ್ರಹಿಸಿದ. ಕ್ಯಾಪ್ಟನ್ ಮನ್ರೋ ಹಿಂದೆ ಜಮಾಲಾಬಾದಿನ ಕೋಟೆಯನ್ನು ವಶಪಡಿಸಿಕೊಳ್ಳುವಾಗ ಸಹಕರಿಸಿದ ಧರ್ಮಸ್ಥಳದ ಕುಮಾರ ಹೆಗ್ಗಡೆಯನ್ನು ಆತನ ವಿರುದ್ಧ 200 ಜನ ಸೈನಿಕರೊಂದಿಗೆ ಕಳುಹಿಸಿದ; ಆತ 1800ರ ಮೇ 11ರಂದು ಸುಬ್ಬರಾವ್‌ನನ್ನು ಸೋಲಿಸಿದ. ಆದರೆ ತಾನೂ ಗುಂಡೇಟಿಗೆ ಬಲಿಯಾದ. ಬಳಿಕ ಕಡಬದ ತಹಶೀಲದಾರ ಸೈನ್ಯವನ್ನು ಮುನ್ನಡೆಸಿ ಸಿಸಿಲ ಘಾಟಿನ ದಂಗೆಯ ಹುಟ್ಟಡಗಿಸಿದ. ಜುಲೈ ಪ್ರಾರಂಭದಲ್ಲಿ ವಿಟ್ಲದ ಹೆಗ್ಗಡೆಯನ್ನು ಸೋಲಿಸಿ ಆತನ ಅಳಿಯನೊಡಗೂಡಿ 9 ಜನರನ್ನು ಬಂಧಿಸಿದ. ಜಮಾಲಾಬಾದಿನ ಕೋಟೆ 3 ತಿಂಗಳ ಬಳಿಕ ಪುನಃ ಬ್ರಿಟಿಷರ ವಶವಾಯಿತು. ಕುಂಬಳೆಯ ಹಾಗೂ ನೀಲೇಶ್ವರ ರಾಜರುಗಳು ಸೋಲೊಪ್ಪಿ ಮಾಸಾಶನವನ್ನು ಒಪ್ಪಿಕೊಂಡರು. 1860ರ

ವರೆಗೆ ಕರಾವಳಿಯ ಕನ್ನಡ ಪ್ರದೇಶಗಳು ಒಂದೇ ಆಡಳಿತಕ್ಕೊಳಪಟ್ಟಿದ್ದವು. 1860ರಲ್ಲಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳೆಂದು ವಿಭಾಗಿಸಲಾಯಿತು. 1862ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮದರಾಸು ಪ್ರೆಸಿಡೆನ್ಸಿಯ ಅಧಿಕಾರಕ್ಕೊಳಗಾಯಿತು.

ದಕ್ಷಿಣ ಕನ್ನಡ ಜಿಲ್ಲೆ ಬ್ರಿಟಿಷರ ಆಳಿಕೆಗೆ ಒಳಪಟ್ಟು ಆರಂಭದ ವರುಷಗಳಲ್ಲಿ ಜಿಲ್ಲೆಯ ಪರಿಸ್ಥಿತಿ ಹದಗೆಟ್ಟಿತ್ತು. ಮನ್ರೋವಿನ ಬಳಿಕದ ಅಧಿಕಾರಿಗಳು ಹೆಚ್ಚಿನ ಕಂದಾಯ ವಸೂಲು ಮಾಡತೊಡಗಿದರು. ವ್ಯಾಪಾರ, ವ್ಯವಸಾಯಗಳು ಆರ್ಥಿಕ ಮುಗ್ಗಟ್ಟನ್ನೆದುರಿಸಿದವು. 1831ರ ಸುಮಾರಿಗೆ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ಬಳಿಕ ಇದನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಜಿಲ್ಲೆಯ ಅಭಿವೃದ್ಧಿಗಾಗಿ ಅನೇಕ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿತು. ಈ ಕಾಲದಲ್ಲಿ ಅನೇಕ ಕೈಗಾರಿಕೆಗಳು ಪ್ರಾರಂಭಗೊಂಡವು. 1865ರಲ್ಲಿ ಬಾಸೆಲ್ ಮಿಷನ್ನಿನ ಕಾರ್ಯದಿಂದಾಗಿ ಮಂಗಳೂರಿನ ಹೆಂಚಿನ ಕೈಗಾರಿಕೆ ಆರಂಭವಾಯಿತು. 1889ರಲ್ಲಿ ದಿ ಸೇಂಟ್ ಜೋಸೆಫ್ಸ್ ಅಸಿಲಮ್ ಇಂಡಸ್ಟ್ರಿಯಲ್ ವರ್ಕ್‌ಶಾಪ್ ಎಂಬ ಸಂಸ್ಥೆ ಸ್ಥಾಪಿತಗೊಂಡಿತು. ನೇಯ್ಗೆ ಕಾರ್ಖಾನೆಗಳೂ ಪ್ರಾರಂಭಗೊಂಡವು, ಬ್ಯಾಂಕ್ ಉದ್ಯಮ ಈ ಕಾಲದಲ್ಲಿ ಅತ್ಯಂತ ಹೆಚ್ಚು ಪ್ರಗತಿಪಥದಲ್ಲಿ ಸಾಗಿತು. 1868ರಲ್ಲಿ ಮಂಗಳೂರಿನಲ್ಲಿ ಮದರಾಸ್ ಪ್ರೆಸಿಡೆನ್ಸಿ ಬ್ಯಾಂಕ್ ಮೊತ್ತ ಮೊದಲು ಆರಂಭವಾಯಿತು. ಬಳಿಕ ಉಡುಪಿಯಲ್ಲಿ ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಮೇ, 1906), ಮಂಗಳೂರಿನಲ್ಲಿ ಕೆನರಾ ಬ್ಯಾಂಕ್(ಜುಲೈ, 1920), ಉಡುಪಿಯಲ್ಲಿ ಪಾಂಗಾಳ ನಾಯಕ್ ಬ್ಯಾಂಕ್(ಏಪ್ರಿಲ್, 1920), ಮಂಗಳೂರಿನಲ್ಲಿ ಜಯಲಕ್ಷ್ಮಿ ಬ್ಯಾಂಕ್ ಲಿ. (1923, ಅಕ್ಟೋಬರ್), ಕರ್ಣಾಟಕ ಬ್ಯಾಂಕ್ (ಫೆಬ್ರವರಿ, 1924), ಉಡುಪಿಯಲ್ಲಿ ಉಡುಪಿ ಬ್ಯಾಂಕ್ (1925, ಮೇ), 1925ರಲ್ಲಿ ಮಂಗಳೂರಿನಲ್ಲಿ ಕೆಥೊಲಿಕ್ ಬ್ಯಾಂಕ್, ಉಡುಪಿಯಲ್ಲಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ (ಇದೇ ಈಗಿನ ಸಿಂಡಿಕೇಟ್ ಬ್ಯಾಂಕ್), ಹೀಗೆ ಜಿಲ್ಲೆಯಲ್ಲಿ ಅನೇಕ ಬ್ಯಾಂಕುಗಳು ಪ್ರಾರಂಭವಾದುವು.

1904ರ ಸಹಕಾರಿ ಪತ್ತಿನ ಸಂಘಗಳ ಅಧಿನಿಯಮದ ಪ್ರಕಾರ ಪುತ್ತೂರಿನ ಸಹಕಾರಿ ಸಂಸ್ಥೆಯೊಂದು ತನ್ನ ನೋಂದಾವಣಿ ಮಾಡಿಸಿಕೊಂಡಿತು. 1926–27ರ ಸುಮಾರಿಗೆ ಜಿಲ್ಲೆಯಲ್ಲಿ 1806 ಸದಸ್ಯರುಳ್ಳ 80 ಸಹಕಾರಿ ಸಂಸ್ಥೆಗಳು ಇದ್ದವು.

ಸಾರಿಗೆ ಸಂಪರ್ಕದ ವ್ಯವಸ್ಥೆ ಅಭಿವೃದ್ಧಿ ಹೊಂದಿತು. 1837–43ರವರೆಗೆ ಹೊಸ ರಸ್ತೆಗಳ ನಿರ್ಮಾಣ ಹಾಗೂ ರಿಪೇರಿ ಬರದಿಂದ ಸಾಗಿತು. 1936ರ ಸುಮಾರಿಗೆ ಜಿಲ್ಲೆಯಲ್ಲಿ ಸಾಧಾರಣ 2,360 ಕಿಮೀ ಉದ್ದದಷ್ಟು ರಸ್ತೆ ಇತ್ತು. ಮಂಗಳೂರು, ಮಲ್ಪೆ ಮೊದಲಾದ ಬಂದರುಗಳೂ ಉತ್ತಮ ಪಾತ್ರವಹಿಸಿದವು.

ಅನೇಕ ಸ್ಥಳೀಯ ಸಂಸ್ಥೆಗಳೂ ಸ್ಥಾಪಿತವಾದವು. ಮದರಾಸು ಪ್ರೆಸಿಡೆನ್ಸಿಯ 1865ರ ಟೌನ್ಸ್ ಮತ್ತು ಇಂಪ್ರೂವ್‌ಮೆಂಟ್ ಆಕ್ಟ್ ಮತ್ತು 1871ರ ಲೋಕಲ್ ಫಂಡ್ಸ್ ಆಕ್ಟ್ –ಇವು ಸ್ಥಳೀಯ ಸರ್ಕಾರದ ಆಡಳಿತದ ಪ್ರಮುಖ ಕಾಯಿದೆಗಳಾದವು. ಮೊದಲ ಕಾಯಿದೆ ಪೌರಸಂಸ್ಥೆಗಳನ್ನು ನಿರ್ಮಿಸಿತು. ಲೋಕಲ್ ಫಂಡ್ಸ್ ಆಕ್ಟ್ ಜಿಲ್ಲೆಯಲ್ಲಿ ಅನೇಕ ವೃತ್ತಗಳನ್ನಾಗಿ ವಿಂಗಡಿಸಿ ಅದಕ್ಕೆ ಸ್ಥಳೀಯ ನಿಧಿ ಬೋರ್ಡನ್ನು ನೇಮಿಸಿ, ಅದಕ್ಕೆ ಕಂದಾಯ ಸಂಗ್ರಹಣೆ ಹಾಗೂ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳುವಂತೆ ಏರ್ಪಡಿಸಲಾಯಿತು. 1884ರಲ್ಲಿ ದಿ ಲೋಕಲ್ ಬೋರ್ಡ್ ಆಕ್ಟ್ ಪಾಸಾಗಿ ದಿ ಲೋಕಲ್ ಫಂಡ್ಸ್ ಆಕ್ಟನ್ನು ವಜಾ ಮಾಡಲಾಯಿತು. ಹೊಸ ಸ್ಥಳೀಯ ಸಂಸ್ಥೆಯೊಂದು ರೂಪುಗೊಂಡು ಕಂದಾಯದ ವಿಷಯದಲ್ಲಿ ಹೆಚ್ಚಿನ ಅಧಿಕಾರ ನೀಡಲಾಯಿತು. ಜಿಲ್ಲಾ, ತಾಲ್ಲೂಕು, ಪಂಚಾಯತ್ ಬೋರ್ಡುಗಳು ಅಧಿಕಾರಕ್ಕೆ ಬಂದವು. 1920ರಲ್ಲಿ ದಿ ಲೋಕಲ್ ಬೋರ್ಡ್ಸ್ ಆಕ್ಟ್ ಜಾರಿಗೆ ಬಂದು ಸ್ಥಳೀಯ ಸಂಸ್ಥೆಗಳ ಅಧಿಕಾರ ಇನ್ನಷ್ಟು ಹೆಚ್ಚಿತು. 8ನೆಯ ಮದರಾಸ್ ಎಲಿಮೆಂಟರಿ ಎಜುಕೇಶನ್ ಆಕ್ಟ್ ಸಹ ಜಾರಿಗೆ ಬಂದು ತಾಲ್ಲೂಕು ಮತ್ತು ಪೌರಸಂಸ್ಥೆಗಳಿಗೆ ವಿದ್ಯಾಭ್ಯಾಸದ ಕುರಿತು ಹೆಚ್ಚಿನ ಅಧಿಕಾರ ಒದಗಿಸಿತು. ಅದೇ ವರ್ಷ ದಿ ವಿಲೇಜ್ ಪಂಚಾಯತ್ಸ್ ಆಕ್ಟ್ ಗ್ರಾಮ ಪಂಚಾಯತಿಗಳ ದೋಷಗಳನ್ನು ಪರಿಹರಿಸಿತು. ಇನ್ನೂ ಅನೇಕ ಕಾಯಿದೆಗಳು ಸ್ಥಳೀಯ ಸರ್ಕಾರದ ಪ್ರಾಬಲ್ಯವನ್ನು ಹೆಚ್ಚಿಸಿದವು.

ವಿದ್ಯಾಕ್ಷೇತ್ರದಲ್ಲಿ ಜಿಲ್ಲೆ ಹೆಚ್ಚು ಲಾಭ ಪಡೆಯಿತು. ಈ ಜಿಲ್ಲೆ ಬ್ರಿಟಿಷರ ವಶವಾದ ಬಳಿಕ ಸರ್ ಥಾಮಸ್ ಮನ್ರೋ ಜಿಲ್ಲೆಯ ವಿದ್ಯಾಭ್ಯಾಸದ ಸಮೀಕ್ಷೆ ನಡೆಸಲು ಆಜ್ಞಾಪಿಸಿ ವಿದ್ಯಾಭ್ಯಾಸದ ಯೋಜನಾಕ್ರಮ ತಯಾರಿಸಿದ. ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ 1836ರಲ್ಲಿ ಮದರಾಸಿನಲ್ಲಿ ಬೋರ್ಡ್ ಆಫ್ ಎಜುಕೇಶನ್ ಸ್ಥಾಪಿತವಾಯಿತು. ಅಸ್ತಿತ್ವದಲ್ಲಿದ್ದ ಶಾಲೆಗಳು ಕ್ರಮಬದ್ಧವಾಗಿ ಮುಂದುವರಿದುವಲ್ಲದೆ ಸರ್ಕಾರಿ ಶಾಲೆಗಳೂ ಆರಂಭವಾದವು. ಕ್ರಿಶ್ಚಿಯನ್ ಮಿಷನರಿ ಸಂಸ್ಥೆಗಳು ಈ ನಿಟ್ಟಿನಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿದುವಲ್ಲದೆ 1838ರಲ್ಲಿ ಮಂಗಳೂರು ಮತ್ತು ಉಡುಪಿಯಲ್ಲಿ ಶಾಲೆಗಳನ್ನು ಸ್ಥಾಪಿಸಿದವು. 1844ರಲ್ಲಿ ಮಂಗಳೂರು ಜೆಸ್ವಿಟ್ ಮಿಷನ್ ಶಾಲೆಯೊಂದನ್ನು ಆರಂಭಿಸಿತು. 1867ರಲ್ಲಿ ಸರ್ಕಾರಿ ಶಾಲೆಯೊಂದನ್ನು ಮಂಗಳೂರಲ್ಲಿ ತೆರೆಯಲಾಯಿತು. ಕ್ರಮಬದ್ಧ ವಿದ್ಯಾಭ್ಯಾಸವನ್ನು ಎಲ್ಲಾ ಶಾಲೆಗಳಲ್ಲೂ ಅಳವಡಿಸಲಾಯಿತು. 1857ರಲ್ಲಿ ಮದರಾಸು ವಿಶ್ವವಿದ್ಯಾಲಯ ಸ್ಥಾಪಿತವಾಗಿ ಮೆಟ್ರಿಕ್ಯುಲೇಶನ್ ಮತ್ತು ಪದವಿ ಪರೀಕ್ಷೆಗಳನ್ನು ನಡೆಸತೊಡಗಿತು. ಮಂಗಳೂರಿನ ಸರ್ಕಾರಿ ಶಾಲೆಯನ್ನು 1869ರಲ್ಲಿ ಸೆಕೆಂಡ್ ಗ್ರೇಡ್ ಕಾಲೇಜಿಗೆ ಏರಿಸಲಾಯಿತು. ಬಳಿಕ ಜೆಸ್ವಿಟ್ ಮಿಷನ್ ಮಂಗಳೂರಲ್ಲಿ ಕಾಲೇಜೊಂದನ್ನು ಕೂಡ ತೆರೆಯಿತು. ಸರ್ಕಾರ ಶಾಲೆಗಳಿಗೆ ಸಹಾಯಧನ ನೀಡತೊಡಗಿತು. 1863ರ ಮದರಾಸು ಎಲಿಮೆಂಟರಿ ಎಜ್ಯುಕೇಶನ್ ಆಕ್ಟ್ ಮತ್ತು 1871ರ ದಿ ಲೋಕಲ್ ಫಂಡ್ಸ್ ಆಕ್ಟ್ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸ್ಥಿರವಾಗಿ ಸ್ಥಾಪಿಸಲು ಸಹಕಾರಿಯಾಯಿತು. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯದೆಡೆಗೂ ಸರ್ಕಾರ ಗಮನ ಹರಿಸಿತು. ಮೆಡಿಕಲ್ ಮತ್ತು ಸ್ಯಾನಿಟರಿ ಅಧಿಕಾರಿಗಳಾಗಿ ಜಿಲ್ಲಾ ಸರ್ಜನರನ್ನು 1883ರಲ್ಲಿ ನೇಮಿಸಿತು. 1899ರಲ್ಲಿ ಪ್ರತ್ಯೇಕ ವಿಭಾಗ ಸ್ಥಾಪಿತವಾಯಿತು.

ಪತ್ರಿಕೋದ್ಯಮವೂ ಬೆಳವಣಿಗೆ ಸಾಧಿಸಿತು. 1843ರಲ್ಲಿ ಕಂನಡ ಸಮಾಚಾರ, 1869ರಲ್ಲಿ ಕ್ರಿಸ್ತಸಭಾ ಪತ್ರ, 1887ರಲ್ಲಿ ಸುದರ್ಶನ, 1869ರಲ್ಲಿ ಸತ್ಯದೀಪಿಕಾ, 1900ರಲ್ಲಿ ಸುವಾಸಿನಿ, 1910ರಲ್ಲಿ ವೈದಿಕಮಿತ್ರ– ಹೀಗೆ ಅನೇಕ ಪತ್ರಿಕೆಗಳು ಪ್ರಕಟಣೆಗೊಳ್ಳತೊಡಗಿದ್ದವು.

ಅನೇಕ ಧಾರ್ಮಿಕ, ಸಾಮಾಜಿಕ ಸುಧಾರಣಾ ಸಂಸ್ಥೆಗಳೂ ಸ್ಥಾಪಿತಗೊಂಡವು. 1870ರಲ್ಲಿ ಮಂಗಳೂರಿನಲ್ಲಿ ಉಪಾಸನಾ ಸಮಾಜ ಅಸ್ತಿತ್ವಕ್ಕೆ ಬಂದು, 1903ರಲ್ಲಿ ಅದನ್ನು ಬ್ರಹ್ಮಸಮಾಜವೆಂದು ಕರೆಯಲಾಯಿತು.

20ನೆಯ ಶತಮಾನದ ಆದಿಭಾಗದಲ್ಲಿ ಇಲ್ಲಿ ಸ್ವಾತಂತ್ರ್ಯ ಸಂಗ್ರಾಮವೂ ಸಾಕಷ್ಟು ಮಟ್ಟಿಗೆ ನೆಲೆಗೊಂಡಿತ್ತು. ಸ್ವಾತಂತ್ರ್ಯ ಬರುತ್ತಿದ್ದಂತೆ ಬ್ರಿಟಿಷರ ಆಳಿಕೆ ಕೊನೆಗೊಂಡು, ಜಿಲ್ಲೆ ಮದರಾಸು ರಾಜ್ಯದಲ್ಲಿ ಉಳಿಯಿತು.

**ಬಳ್ಳಾರಿ:** 1799ರ ಶ್ರೀರಂಗಪಟ್ಟಣದ ಯುದ್ಧದ ಅನಂತರದ ಒಪ್ಪಂದದಂತೆ ಬಳ್ಳಾರಿ ಜಿಲ್ಲೆ ಹೈದರಾಬಾದು ನಿಜಾಮರ ವಶಕ್ಕೆ ಹೋದರೂ 1800ರಲ್ಲಿ ಮತ್ತೊಂದು ಒಪ್ಪಂದವಾಗಿ ಜಿಲ್ಲೆ ಈಸ್ಟ್ ಇಂಡಿಯ ಕಂಪನಿಯ ವಶಕ್ಕೆ ಬಂತು. ಕಂಪನಿ ಸರ್ ಥಾಮಸ್ ಮನ್ರೋನನ್ನು ಕಲೆಕ್ಟರ್ ಆಗಿಯೂ ಬಳ್ಳಾರಿಯಲ್ಲಿ ಇಟ್ಟಿದ್ದ ಬ್ರಿಟಿಷ್ ಸೈನ್ಯಕ್ಕೆ ಕ್ಯಾಂಪ್‌ಬೆಲ್ಲನನ್ನು ಸೈನ್ಯಾಧಿಕಾರಿಯನ್ನಾಗಿಯೂ ನೇಮಿಸಿತು. ಮನ್ರೋವಿನ ಅಧೀನದಲ್ಲಿ ನಾಲ್ಕು ಅಧೀನ ಕಲೆಕ್ಟರುಗಳು ಇದ್ದರು. ಹಡಗಲಿ, ಹರಪನಹಳ್ಳಿ ಮತ್ತು ಕೂಡ್ಲಿಗಿ ತಾಲ್ಲೂಕುಗಳಿಗೆ ಜೇಮ್ಸ್ ಕೋಕ್ರೇನ್ ಕಲೆಕ್ಟರ್ ಆಗಿದ್ದ. 1800ರಲ್ಲಿ ಮನ್ರೋ ಅಧಿಕಾರ ವಹಿಸಿಕೊಂಡ ಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಕಡೆ ಪಾಳೆಯಗಾರರ ದಂಗೆ ತಲೆದೋರಿತು. ಇವರಲ್ಲಿ ಅನೇಕರು ಸೈನಿಕ ಸೇವೆಯ ಷರತ್ತಿಗೆ ಒಳಪಟ್ಟು ಅವರ ಅಧಿಪತಿಗಳಿಂದ ಭೂಮಿಯನ್ನು ಹೊಂದಿದ್ದರು. ಈ ಪಾಳೆಯಗಾರರು ನಿಜಾಮ ಅಥವಾ ಹೈದರ್ ಅಲಿಗೆ ಕೊಡುತ್ತಿದ್ದ ಅತ್ಯಂತ ಹೆಚ್ಚಿನ ಕಪ್ಪವನ್ನು ಬ್ರಿಟಿಷರಿಗೂ ಕೊಡಬೇಕೆಂದು ಮನ್ರೋ ತೀರ್ಮಾನಿಸಿದ. ಅವರು ಒಪ್ಪದಿದ್ದರೆ ಅಥವಾ ಉದಾಸೀನರಾಗಿದ್ದರೆ ಕ್ಯಾಂಪ್‌ಬೆಲ್ ಅಥವಾ ತನ್ನ ಸೈನಿಕರನ್ನು ಕಳುಹಿಸಿ ವಸೂಲು ಮಾಡುತ್ತಿದ್ದ. ಹೀಗೆ ಒಂದು ವರ್ಷದಲ್ಲಿ ಅವರನ್ನೆಲ್ಲಾ ಹತೋಟಿಗೆ ತಂದ. 1818ರಲ್ಲಿ 500 ಮಂದಿ ಪಿಂಡಾರಿಗಳು ತುಂಗಭದ್ರಾ ನದಿಯನ್ನು ದಾಟಿ ಹರಪನಹಳ್ಳಿಗೆ ಬಂದು ಖಜಾನೆಯನ್ನು ಲೂಟಿ ಮಾಡಿ ಪಟ್ಟಣವನ್ನು ಕೊಳ್ಳೆ ಹೊಡೆದರು. ಹರಪನಹಳ್ಳಿಯಿಂದ ಕೊಟ್ಟೂರು ಮತ್ತು ಕೂಡ್ಲಿಗಿ ತಾಲ್ಲೂಕಿಗೆ ಹೋದರು. ಕೂಡ್ಲಿಗಿಯ ತಹಶೀಲ್ದಾರ ಅವರನ್ನು ಸೋಲಿಸಿದುದಕ್ಕೆ ಬ್ರಿಟಿಷ್ ಸರ್ಕಾರ ಅವನನ್ನು ಸನ್ಮಾನಿಸಿತು.

1858ರಲ್ಲಿ ಹರಪನಹಳ್ಳಿ ಮತ್ತು ಬಳ್ಳಾರಿಯ ಮಾಮಲೆದಾರನಾಗಿದ್ದ ಮುಂಡರಗಿ ಭೀಮರಾಯ ಬ್ರಿಟಿಷರ ವಿರುದ್ಧ ದಂಗೆಯೆದ್ದ. ಆತನನ್ನು ಬ್ರಿಟಿಷರು ಸೇವೆಯಿಂದ ವಜಾ ಮಾಡಿದುದೇ ಅವನ ದಂಗೆಗೆ ಕಾರಣವಾಯಿತು. ಆಗ ಭೀಮರಾಯ ಬ್ರಿಟಿಷರ ವಿರುದ್ಧ ಸಮರಕ್ಕೆ ನಿಂತನಾದರೂ ಯುದ್ಧದಲ್ಲಿ ಬ್ರಿಟಿಷರ ಕೈ ಮೇಲಾಯಿತು. ಭೀಮರಾಯ ಯುದ್ಧದಲ್ಲಿ ಮಡಿದ 1858 ಜೂನ್ 1. ಬ್ರಿಟಿಷರು ಅವನ ಕಡೆಯ ಸು.150 ಜನರನ್ನು ಸೆರೆಹಿಡಿದು 77 ಜನರನ್ನು ಮರಣ ದಂಡನೆಗೆ ಈಡುಮಾಡಿದರು. ಅವನ ಮತ್ತು ಅವನ ಸಂಗಡಿಗರ ಸ್ವತ್ತನ್ನು ವಶಪಡಿಸಿಕೊಂಡರು. ಹೀಗೆ ಬ್ರಿಟಿಷರು 1858ರಲ್ಲಿ ಬಳ್ಳಾರಿಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ಅದುಮಿ ಹಾಕಿದರು. 1885ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗುವವರೆಗೂ ಅದರ ಪ್ರಭಾವ ಬಳ್ಳಾರಿ ಜಿಲ್ಲೆಯಲ್ಲೂ ತಲೆದೋರಿತು.

ಬಳ್ಳಾರಿ ಜಿಲ್ಲೆ ಬ್ರಿಟಿಷರ ಆಡಳಿತದಲ್ಲಿ ಮದರಾಸು ಪ್ರಾಂತ್ಯಕ್ಕೆ ಸೇರಿತು. 1810ರಲ್ಲಿ ಬಳ್ಳಾರಿಯಲ್ಲಿ ಲಂಡನ್ ಮಿಷನರಿ ಸೊಸೈಟಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿತು. 1822ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಲವು ಸರ್ಕಾರಿ ಶಾಲೆಗಳನ್ನು ಸ್ಥಾಪಿಸಲಾಯಿತು.

**ಉತ್ತರ ಕರ್ನಾಟಕ:** ಪೇಶ್ವೆ ಬಾಜಿರಾವ್‌ನ (1813–18) ಆಡಳಿತದ ಅಂತ್ಯದಲ್ಲಿ ದಕ್ಷಿಣ ಮರಾಠ ಮುಖ್ಯಸ್ಥರು ಅರ್ಧ ಸ್ವಾತಂತ್ರ್ಯ ಪಡೆದ ಮನೋಭಾವ ಹೊಂದಿದ್ದರು. 1814ರಲ್ಲಿ ದೇಶದ ಪರಿಸ್ಥಿತಿ ಹೇಗಿತ್ತೆಂದರೆ ಧಾರವಾಡದಿಂದ ಕಮಾಂಡೆಂಟ್‌ನ್ನು, ಪೇಶ್ವೆಯು ಕಳುಹಿಸಿದ ತ್ರಿಯಂಬಕಜೀಗೆ ಕೋಟೆಯನ್ನು ಬಿಟ್ಟುಕೊಡಲು ನಿರಾಕರಿಸಿದ. 1818ರ ಜೂನ್ 13ರಲ್ಲಿ ನಡೆದ ಪುಣೆ ಒಪ್ಪಂದದ ಪ್ರಕಾರ ಪೇಶ್ವೆ ಧಾರವಾಡ ಮತ್ತು ಅಲ್ಲಿಂದ 15 ಮೈಲಿ ಪೂರ್ವಕ್ಕಿರುವ ಕುಸುಗಲ್ ಪ್ರದೇಶ ದಕ್ಷಿಣದ ವರದಾ ಪ್ರದೇಶ ಇವುಗಳನ್ನು ಬಿಟ್ಟುಕೊಡಲು ಒಪ್ಪಿದ. ಕರ್ನಲ್ ಥಾಮಸ್ ಮನ್ರೋ ಮಿಲಿಟರಿ ಮತ್ತು ನಾಗರಿಕ ವಿಭಾಗಗಳಿಗೆ ಅಧಿಕಾರಿಯಾಗಿ ಈ ಹೊಸ ಪ್ರದೇಶಕ್ಕೆ ನೇಮಿತನಾದ. ಆಗ ಈ ಭಾಗ ಮದರಾಸು ಪ್ರಾಂತ್ಯಕ್ಕೆ ಸೇರಿತ್ತು. 1826ರಲ್ಲಿ ಧಾರವಾಡ ಪ್ರದೇಶವನ್ನು ಮುಂಬಯಿ ಅಥವಾ ಮದರಾಸು ಪ್ರಾಂತ್ಯಗಳಲ್ಲಿ ಯಾವುದಕ್ಕೆ ಸೇರಿಸಬೇಕು ಎಂಬ ಬಗ್ಗೆ ಎರಡು ಸರ್ಕಾರಗಳ ಮಧ್ಯೆ ಬೃಹತ್ ವ್ಯವಹಾರ ನಡೆಯಿತು. ಈ ಸಮಸ್ಯೆಯನ್ನು ಕುರಿತು ಈಸ್ಟ್ ಇಂಡಿಯ ಕಂಪನಿಯ

ಡೈರೆಕ್ಟರುಗಳ ಒಂದು ತೀರ್ಮಾನವನ್ನು 1830ರಲ್ಲಿ ಹೊರಡಿಸಿದರು. ಇದರ ಪ್ರಕಾರ ಕರ್ನಾಟಕ ಜಿಲ್ಲೆಯನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಬೇಕೆಂದು ತೀರ್ಮಾನವಾಯಿತು. ಮುಂಬಯಿ ಸರ್ಕಾರ 1830 ಮಾರ್ಚ್ 17ರಂದು ಆ ಪ್ರದೇಶವನ್ನು ತನ್ನ ಹತೋಟಿಗೆ ತೆಗೆದುಕೊಂಡಿತು. ಧಾರವಾಡ ಜಿಲ್ಲೆ ಒಂದು ಆಡಳಿತ ವಿಭಾಗವಾಯಿತು. ಆ ವಿಭಾಗಕ್ಕೆ ಬೆಳಗಾಂವಿ, ಸೊಲ್ಲಾಪುರ ಮತ್ತು ಬಿಜಾಪುರಗಳನ್ನು ಸೇರಿಸಲಾಯಿತು. 1836ರಲ್ಲಿ ಬೆಳಗಾಂವಿ ಪ್ರದೇಶವನ್ನು ಪ್ರತ್ಯೇಕ ಕಲೆಕ್ಟರೇಟನ್ನಾಗಿ ವಿಭಾಗಿಸಲಾಯಿತು. ಧಾರವಾಡದ ಜಿಲ್ಲಾಧಿಕಾರಿಯನ್ನೇ ಅದರ ಅಧಿಕಾರದಲ್ಲಿ ಮುಂದುವರಿಸಿದರು. 1839ರಲ್ಲಿ ಅಣ್ಣಿಗೇರಿ ಪ್ರದೇಶದ 13 ಗ್ರಾಮಗಳನ್ನು ಧಾರವಾಡಕ್ಕೆ ಸೇರಿಸಲಾಯಿತು. ಭಾರತದ ಸ್ವಾತಂತ್ರ್ಯಾನಂತರ ಉತ್ತರ ಕರ್ನಾಟಕದ ಭಾಗ ಮುಂಬಯಿ ಪ್ರಾಂತ್ಯದಲ್ಲೇ ಉಳಿದಿತ್ತು. ಸು. 1836ರಿಂದ ಮುಂಬಯಿ ಪ್ರಾಂತ್ಯದಲ್ಲಾದ ಸಾಮಾನ್ಯ ಆಡಳಿತ ವ್ಯವಸ್ಥೆಯ ಬದಲಾವಣೆಗಳೆಲ್ಲ ಮುಂಬಯಿ ಕರ್ನಾಟಕದ ಭಾಗದಲ್ಲೂ ಜಾರಿಗೆ ಬಂದುವು. (ಎ.ಪಿ.ಪಿ.)

**ಕೊಡಗು:** ಕೊಡಗಿನೊಡನೆ ಬ್ರಿಟಿಷರ ಸಂಪರ್ಕ ಸು.1790ರ ಹೊತ್ತಿಗೆ ಒದಗಿತು. ಟಿಪ್ಪುಸುಲ್ತಾನನ ಧಾಳಿಗಳಿಂದ ನೊಂದಿದ್ದ ಆಗಿನ ರಾಜ ವೀರರಾಜೇಂದ್ರನಿಗೆ ತಲಚೇರಿಯಲ್ಲಿದ್ದ ಬ್ರಿಟಿಷ್ ಪ್ರತಿನಿಧಿ ರಾಬರ್ಟ್ ಟೇಲರ್‌ನಿಂದ ಪರಸ್ಪರ ಸಹಾಯದ ಒಪ್ಪಂದಕ್ಕೆ ಬರಲು ಆಹ್ವಾನ ಬಂತು. ಟಿಪ್ಪುವಿನ ವಿರುದ್ಧ ಬ್ರಿಟಿಷ್ ಸೇನೆ ಕೊಡಗಿನ ಮೂಲಕ ಹಾದು ಹೋಗಲು ಹಾಗೂ ಅದಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಲು ವೀರರಾಜೇಂದ್ರ ಒಪ್ಪಿದ. 1791ರಲ್ಲಿ ಮುಂಬಯಿಯ ಗವರ್ನರ್ ಅಬೆರ್‌ಕ್ರಾಂಬಿ ತನ್ನ ಸೈನ್ಯವನ್ನು ಕೊಡಗಿನ ಮೂಲಕ ಶ್ರೀರಂಗಪಟ್ಟಣದತ್ತ ಒಯ್ಯುವಾಗ ಹಾಗೂ 1799ರಲ್ಲಿ ಬ್ರಿಟಿಷರು ಸಿದ್ದೇಶ್ವರದಲ್ಲಿ ಟಿಪ್ಪುವನ್ನು ಸೋಲಿಸಿದಾಗ ಸಹಾಯ ನೀಡಿದ. ಇದರಿಂದ ಸಂತುಷ್ಟರಾದ ಬ್ರಿಟಿಷರು ವೀರರಾಜೇಂದ್ರನನ್ನು ಕೊಡಗಿನ ಪ್ರಭುವೆಂದು ಒಪ್ಪಿದ್ದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿದ್ದ ಪಂಜೆ, ಬೆಳ್ಳಾರೆ, ಪುತ್ತೂರುಗಳನ್ನು ಕೊಡಗಿನ ರಾಜನಿಗೆ ಬಿಟ್ಟುಕೊಟ್ಟರು. ಆದರೆ ಪಿರಿಯಾಪಟ್ಟಣದ ಭಾಗ ಇವನ ಕೈಬಿಟ್ಟಿತು.

ವೀರರಾಜೇಂದ್ರ ಟಿಪ್ಪುವಿಗೆ ಕೊಡಬೇಕಾಗಿದ್ದ ಕಪ್ಪದ ಬದಲಾಗಿ ಅದನ್ನು ಬ್ರಿಟಿಷರಿಗೆ ಒಪ್ಪಿಸುವಂತೆಯೂ ಬ್ರಿಟಿಷರು ವೀರರಾಜೇಂದ್ರನಿಗೆ ವಿಶೇಷ ರಕ್ಷಣೆ ಒದಗಿಸುವುದಾಗಿಯೂ 1791ರಲ್ಲಿ ಒಂದು ಒಪ್ಪಂದ ಆಯಿತು. ಇದರಿಂದ ಬ್ರಿಟಿಷರ ಕಷ್ಟದ ಸಮಯದಲ್ಲಿ ಕೊಡಗಿನ ದೊರೆ ಉದಾರವಾಗಿ ಸಹಾಯ ಹಸ್ತ ನೀಡಿದ್ದರೂ ಕೊಡಗು ಬ್ರಿಟಿಷರ ಅಧೀನ ಸಂಸ್ಥಾನ ಎಂಬುದು ಮಾತ್ರ ಸ್ಥಿರವಾಯಿತು. ಕೊಡಗಿನ ಆಗುಹೋಗುಗಳ ಮೇಲ್ವಿಚಾರಣೆಗೆ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟನೇ ಜವಾಬ್ದರಾನಾಗಿದ್ದ.

19ನೆಯ ಶತಮಾನದ ಪ್ರಥಮಾರ್ಧದಲ್ಲಿ ತಾವು ಅನುಸರಿಸುತ್ತಿದ್ದ ಆಕ್ರಮಣ ನೀತಿಗೆ ಅನುಗುಣವಾಗಿ ಸ್ವತಂತ್ರ ಸಂಸ್ಥಾನವಾಗಿದ್ದ ಕೊಡಗನ್ನೂ ಕಬಳಿಸಲು ಬ್ರಿಟಿಷರು ಸನ್ನಾಹ ನಡೆಸಿದರು. ಆಗಿನ ಕೊಡಗಿನ ದೊರೆ ಚಿಕ್ಕ ವೀರರಾಜೇಂದ್ರ ದುಷ್ಟ, ಕೊಡಗಿನ ಜನರನ್ನು ವಿನಾಕಾರಣ ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದಾನೆ, ತನ್ನ ವಿರೋಧಿ ಸಂಬಂಧಿಕರನ್ನು ಗುಟ್ಟಾಗಿ ಕೊಲ್ಲಿಸುತ್ತಿದ್ದಾನೆ ಎಂದು ಮುಂತಾಗಿ ಬ್ರಿಟಿಷರು ಪುಕಾರು ಎಬ್ಬಿಸಿ ಅದಕ್ಕೆ ಸರಿಯಾಗಿ ದಾಖಲೆಗಳನ್ನೂ ಸೃಷ್ಟಿ ಮಾಡಿದರು. ಈ ಕಾರ್ಯದಲ್ಲಿ ಕೊಡಗಿನ ಕೆಲವು ದುಷ್ಟ ಜನರೂ ಬ್ರಿಟಿಷರಿಗೆ ನೆರವಿತ್ತರು. 1832ರ ಹೊತ್ತಿಗೆ ಚಿಕ್ಕವೀರರಾಜೇಂದ್ರ ಮತ್ತು ಬ್ರಿಟಿಷರ ನಡುವೆ ಬಿರುಕು ಏರ್ಪಟ್ಟಿತು. ಬ್ರಿಟಿಷರ ದಂಡು ಕೊಡಗಿನ ಮೇಲೆ ನಡೆಯಿತು. 1834ರ ಏಪ್ರಿಲ್ 6ರಂದು ಚಿಕ್ಕವೀರರಾಜೇಂದ್ರ ರಾಜ್ಯತ್ಯಾಗ ಮಾಡಿದ. ಕೊಡಗು ಬ್ರಿಟಿಷರ ನೇರ ಆಳಿಕೆಗೆ ಒಳಪಟ್ಟಿತು. ಅದೇ ವರ್ಷ ದೇಶನಿಷ್ಠರಾಗಿದ್ದ ಕಲ್ಯಾಣಸ್ವಾಮಿ ಮತ್ತು ಇತರರು ಬ್ರಿಟಿಷರ ವಿರುದ್ಧ ದಂಗೆ ಎದ್ದರೂ ಅದು ಸಫಲವಾಗಲಿಲ್ಲ.

1834ರಿಂದ ಕೊಡಗು ಬ್ರಿಟಿಷ್ ಭಾರತ ಸರ್ಕಾರದ ವಿದೇಶ ಮತ್ತು ರಾಜತಾಂತ್ರಿಕ ಇಲಾಖೆಯ ಕಕ್ಷೆಗೆ ಬಂತು. ಮೈಸೂರಿನ ಕಮಿಷನರನ್ನು ಕೊಡಗಿನ ಕಮಿಷನರಾಗಿಯೂ ನೇಮಿಸಲಾಯಿತು. ಕೊಡಗಿನಲ್ಲಿ ರಾಜಕೀಯ ಪ್ರತಿನಿಧಿ ಇರುತ್ತಿದ್ದ. ಮಿಲಿಟರಿ ಭದ್ರತೆಗಾಗಿ ಮಡಿಕೇರಿಯಲ್ಲಿ ಮದರಾಸು ಕಾಲ್ದಳದ ಒಂದು ತುಕಡಿಯನ್ನು 1837ರಲ್ಲಿ ನೆಲೆಗೊಳಿಸಲಾಯಿತು (1885ರಲ್ಲಿ ಇದನ್ನು ಹಿಂತೆಗೆದುಕೊಳ್ಳಲಾಯಿತು). 1834ರಲ್ಲಿ ನೇಮಿತನಾದ ರಾಜಕೀಯ ಪ್ರತಿನಿಧಿ ಕರ್ನಲ್ ಫ್ರೇಸರ್ ಕಾಲದಲ್ಲಿ ಕೊಡಗಿನ ಆಡಳಿತದಲ್ಲಿ ಹೊಸ ವ್ಯವಸ್ಥೆಯನ್ನು ತರಲಾಯಿತು. ಗುಲಾಮಗಿರಿ ರದ್ದಾಯಿತು. ಶಾಲೆ ಮತ್ತು ವೈದ್ಯಕೀಯ ಸೌಲಭ್ಯಗಳು ಒದಗಿದವು. ರಸ್ತೆಗಳು ನಿರ್ಮಾಣವಾದುವು. ಭೂಕಂದಾಯ ಪರಿಷ್ಕೃತವಾಯಿತು. 19ನೆಯ ಶತಮಾನದ ಉತ್ತರಾರ್ಧದಿಂದ ಅಲ್ಲಿನ ಸ್ಥಿತಿ ಬಹುಮಟ್ಟಿಗೆ ಬದಲಾಯಿಸಿತು. ಕಾಫಿ ಪ್ಲಾಂಟೇಷನ್‌ಗಳು ತಲೆಯೆತ್ತಿದುವು. ಕೊಡಗಿನಲ್ಲಿ ಮೊದಲ ಸೂಪರಿಂಟೆಂಡೆಂಟಾಗಿ ನೇಮಿತನಾಗಿದ್ದ ಕ್ಯಾಪ್ಟನ್ ಲೆಹಾರ್ಡಿ ಇದಕ್ಕೆ ಉತ್ತೇಜನ ನೀಡಿದ. 1854ರಲ್ಲಿ ಮೊದಲ ಯುರೋಪಿಯನ್ ಕಾಫಿ ತೋಟ ಶುರುವಾಯಿತು. 1870ರ ಹೊತ್ತಿಗೆ ಅನೇಕ ಕಾಫಿ ತೋಟಗಳು ಕೊಡಗಿನಲ್ಲೆಲ್ಲ ಹರಡಿದ್ದುವು. 1857ರಲ್ಲಿ ಈಸ್ಟ್ ಇಂಡಿಯ ಕಂಪನಿಯಿಂದ ಬ್ರಿಟಿಷ್ ಸಾರ್ವಭೌಮರು ಭಾರತ ಸರ್ಕಾರವನ್ನು ವಹಿಸಿಕೊಂಡ ಅನಂತರ 1861–62ರಲ್ಲಿ ಇಂಡಿಯನ್ ಪೀನಲ್ ಕೋಡ್ ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್, 1865ರಲ್ಲಿ ಅರಣ್ಯ ಕಾನೂನುಗಳು–ಹೀಗೆ ಭಾರತ ಸರ್ಕಾರ ಹೊರಡಿಸಿದ ಅನೇಕ ಕಾನೂನುಗಳು ಕೊಡಗಿನಲ್ಲೂ ಜಾರಿಗೆ ಬಂದುವು.

1869ರಲ್ಲಿ ಕೊಡಗಿನ ಕಮಿಷನರನನ್ನು ಚೀಫ್ ಕಮಿಷನರ್ ಎಂದೂ ಸೂಪರಿಂಟೆಂಡೆಂಟನನ್ನು ಕಮಿಷನರ್ ಎಂದೂ ಕರೆಯಲಾಯಿತು. 1890ರವರೆಗೆ ವಿದ್ಯೆ, ಅರಣ್ಯ, ಲೋಕೋಪಯೋಗಿ, ಜೈಲು, ನೋಂದಣಿ ಇವುಗಳಿಗೆ ಸಂಬಂಧಿಸಿದ ಇಲಾಖೆಗಳನ್ನು ಮೈಸೂರು ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರೇ ನೋಡಿಕೊಳ್ಳುತ್ತಿದ್ದರು. 1870ರ ಹೊತ್ತಿಗೆ ಮಡಿಕೇರಿ ಮತ್ತು ವೀರಾಜಪೇಟೆ ಪುರಸಭೆಗಳು ಅಸ್ತಿತ್ವಕ್ಕೆ ಬಂದವು. 1901ರಲ್ಲಿ ಜಿಲ್ಲಾ ಬೋರ್ಡ್ ರಚಿತವಾಯಿತು. 1919ರ ಭಾರತ ಸರ್ಕಾರದ ಕಾನೂನಿನಂತೆ ಕೊಡಗು ಚೀಫ್ ಕಮಿಷನರನ ಪ್ರಾಂತ್ಯವಾಗಿ, 15 ಜನ ಚುನಾಯಿತ ಮತ್ತು 5 ಜನ ನೇಮಿತ ಸದಸ್ಯರುಳ್ಳ ವಿಧಾನಸಭೆ ರಚಿತವಾಯಿತು. ಇದು 1924ರಲ್ಲಿ ತನ್ನ ಕಾರ್ಯಾರಂಭ ಮಾಡಿತು. 1940ರಲ್ಲಿ ಮೈಸೂರು ರೆಸಿಡೆಂಟ್ ಕೊಡಗಿನ ಚೀಫ್ ಕಮಿಷನರಾಗಿಯೂ ನಿರ್ವಹಿಸುತ್ತಿದ್ದುದನ್ನು ರದ್ದುಗೊಳಿಸಿ, ಪ್ರತ್ಯೇಕ ಚೀಫ್ ಕಮಿಷನರನ್ನು ನೇಮಕ ಮಾಡಿ ಅವನ ಕಛೇರಿಯನ್ನು ಮಡಿಕೇರಿಗೆ ವರ್ಗಾಯಿಸಲಾಯಿತು. 1947ರಲ್ಲಿ ಬ್ರಿಟಿಷ್ ಆಳಿಕೆ ಕೊನೆಗೊಂಡು ಕೊಡಗು ಸ್ವತಂತ್ರ ಭಾರತ ಸರ್ಕಾರದ ಗೃಹಾಡಳಿತ ವಿಭಾಗದ ಆಡಳಿತಕ್ಕೆ ಬಂತು. (ಎಸ್‌ಎನ್.ಕೆ.)

**ಬ್ರೆಟನ್‌ವುಡ್ಸ್ ಸಮ್ಮೇಳನ:** ಎರಡನೆಯ ಮಹಾಯುದ್ಧದ ಅನಂತರ ಅಂತಾರಾಷ್ಟ್ರೀಯ ಹಣಕಾಸು ವ್ಯವಸ್ಥೆ ಕುರಿತು ಚರ್ಚೆಮಾಡಲು ಅಮೆರಿಕ ಸಂಯುಕ್ತ ಸಂಸ್ಥಾನದ ನ್ಯೂ ಹ್ಯಾಂಪ್‌ಷೈರಿನ ಬ್ರೆಟನ್‌ವುಡ್ಸ್‌ನಲ್ಲಿ 1944ರಲ್ಲಿ ನಡೆದ ಒಂದು ಅಂತಾರಾಷ್ಟ್ರೀಯ ಸಮ್ಮೇಳನ. ಈ ಸಮ್ಮೇಳನದ ಫಲವಾಗಿ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಮ್.ಎಫ್) ಮತ್ತು ವಿಶ್ವ ಬ್ಯಾಂಕಿನ ಉಗಮವಾಯಿತು.

ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ನಿರ್ಬಂಧ ಉಂಟುಮಾಡುವ ಅನೇಕ ಬಗೆಯ ವಿನಿಮಯ ದರದ ವ್ಯವಸ್ಥೆ (ಮಲ್ಟಿಪಲ್ ಎಕ್ಸ್‌ಚೇಂಜ್ ರೇಟ್ಸ್), ರಾಷ್ಟ್ರ–ರಾಷ್ಟ್ರಗಳ ನಡುವಣ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ವ್ಯವಸ್ಥೆ ಮತ್ತು ವಿನಿಮಯ ದರಗಳ ನಿರ್ಬಂಧ ಕ್ರಮಗಳನ್ನು ಕುರಿತು ಈ ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವ್ಯವಸ್ಥೆ ಸುಗಮವಾಗಬೇಕೆಂಬುದೇ ಚರ್ಚೆಯ ಮುಖ್ಯ ತೀರ್ಮಾನವಾಗಿತ್ತು. ಸುಗಮ ವ್ಯವಸ್ಥೆ ಜಾರಿಗೆ ಬರಬೇಕಾದರೆ, ದೃಢನಿಯಮ ದರಗಳು ಅಸ್ತಿತ್ವಕ್ಕೆ ಬರಬೇಕು ಮತ್ತು ರಾಷ್ಟ್ರ ರಾಷ್ಟ್ರಗಳ ಹಣ ಪರಸ್ಪರ ಪರಿವರ್ತನೀಯವಾಗಿರಬೇಕು ಎಂಬ ಅಂಶಗಳನ್ನು ಮನಗಾಣಲಾಯಿತು. ಜೊತೆಯಲ್ಲಿಯೇ ಸುವರ್ಣ ವಿನಿಯಮ ಪ್ರಮಿತಿಯ ನಿರ್ಬಂಧಗಳಿಲ್ಲದೇ ವಿನಿಮಯ ಲಾಭಗಳನ್ನು ಪಡೆದುಕೊಳ್ಳುವ ಮಾರ್ಗವನ್ನು ಅನ್ವೇಷಿಸಬೇಕೆಂಬ ತೀರ್ಮಾನಕ್ಕೂ ಬರಲಾಯಿತು.

ಈ ಸಮ್ಮೇಳನಕ್ಕೆ ಮೊದಲೇ ಕೇನ್ಸನ ನೇತೃತ್ವದಲ್ಲಿ ಬ್ರಿಟನ್ ಮತ್ತು ವೈಟ್‌ನ ನೇತೃತ್ವದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಒಂದೊಂದು ಯೋಜನೆಯನ್ನು ತಯಾರಿಸಿದ್ದವು. ಇವೆರಡೂ ಯೋಜನೆಗಳಲ್ಲಿ ಕೆಲವು ಮುಖ್ಯವಾದ ವ್ಯತ್ಯಾಸಗಳೂ ಹಾಗೇ ಅನೇಕ ವಿಷಯಗಳಲ್ಲಿ ಸಾಮ್ಯಗಳೂ ಇದ್ದವು. ಇವೆರಡೂ ರಾಷ್ಟ್ರಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಒಂದು ಒಪ್ಪಂದಕ್ಕೆ ಬಂದರು. ಅದರಂತೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವಬ್ಯಾಂಕ್ ಅಸ್ತಿತ್ವಕ್ಕೆ ಬಂದವು. ಇದು ಅಂತಾರಾಷ್ಟ್ರೀಯ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಲು ಒಂದು ಯುಕ್ತ ಪರಿಹಾರವೆನ್ನಬಹುದು. ಅದರಲ್ಲೂ ಅಭಿವೃದ್ಧಿ ಶೀಲ ರಾಷ್ಟ್ರಗಳು ತಮ್ಮ ಲೇಣಿ ದೇಣಿ ತಖ್ತೆಯ ಅಸಮತೋಲನವನ್ನು ಹೋಗಲಾಡಿಸಿಕೊಳ್ಳಲು ಹಾಗೂ ಅನಿರ್ಬಂಧಿತ ವ್ಯಾಪಾರಕ್ಕೆ ತಾತ್ಕಾಲಿಕವಾಗಿ ಅಂತಾರಾಷ್ಟ್ರೀಯ ಹಣಕಾಸು ನಿಧಿ ದೊರಕಿಸಿ ಕೊಡುತ್ತಿರುವ ಸಹಾಯ ಬಲು ಉಪಯುಕ್ತವಾಗಿದೆ. ಹಾಗೆಯೇ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನಾನಾ ರೀತಿಯ ಹಣಕಾಸು ಸಹಾಯವನ್ನು ದೊರಕಿಸಿಕೊಡುವುದರಲ್ಲಿ ಮತ್ತು ಆ ರಾಷ್ಟ್ರಗಳಲ್ಲಿ ಹಣ ಹೂಡಿಕೆಯ ಪ್ರಮಾಣ ಹೆಚ್ಚಾಗಿ ಆರ್ಥಿಕ ಬೆಳವಣಿಗೆಯಾಗುವುದಕ್ಕೆ ವಿಶ್ವಬ್ಯಾಂಕ್ ಶ್ರಮಿಸುತ್ತಿದೆ. (ಸಿ.ಕೆ.ಆರ್.)

**ಭಕ್ತಿಪಂಥ:** ಭಗವಂತನಲ್ಲಿ ಅನನ್ಯ ಭಕ್ತಿಯಿಟ್ಟು ತನ್ಮೂಲಕ ಮುಕ್ತಿ ಸಾಧಿಸುತ್ತೇವೆ ಎಂದು ಭಾವಿಸಿ ಅಸ್ತಿತ್ವಕ್ಕೆ ಬಂದಿರುವ ಪಂಥಗಳು. ಶಾಂಡಿಲ್ಯಭಕ್ತಿ ಸೂತ್ರದಲ್ಲಿ ಈಶ್ವರನಲ್ಲಿ ಇಟ್ಟ ಪರಮ ಅನುರಾಗವೇ ಭಕ್ತಿ ಎಂದು ವಿವರಿಸಿದೆ. ಭಕ್ತಿಗೆ ವಿಷಯವಾದದ್ದು ಒಂದು ದೇವತೆ ಇರಬಹುದು, ಒಬ್ಬ ಗುರು ಆಗಿರಬಹುದು ಅಥವಾ ಒಬ್ಬ ಸಿದ್ಧಪುರುಷನಾಗಿರಬಹುದು. ಭಕ್ತಿಗೆ ವಿಷ್ಣುದೇವತೆ ವಿಷಯವಾದಾಗ ವೈಷ್ಣವ ಪಂಥಗಳೂ ಶಿವ ಆರಾಧ್ಯ ದೇವತೆಯಾದಾಗ ಶೈವ ಪಂಥಗಳೂ ಹುಟ್ಟಿದವು. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಭಕ್ತನ ಹೃದಯದಲ್ಲಿ ಹುಟ್ಟಿದ ಪ್ರೇಮ ಅಥವಾ ಅನುರಾಗ.

ಭಕ್ತಿಗೆ ಆಕರವಾದ ಈಶ್ವರ ಅನಂತ ಕಲ್ಯಾಣಗುಣ ಪರಿಪೂರ್ಣನೆಂದು ತಿಳಿಯುವುದನ್ನು ಸಗುಣಭಕ್ತಿಯೆಂದೂ ನಿರ್ಗುಣ ಬ್ರಹ್ಮನಲ್ಲಿ ನೆಟ್ಟ ಅನುರಾಗವನ್ನು ನಿರ್ಗುಣ ಭಕ್ತಿಯೆಂದೂ ಕರೆಯುವುದು ವಾಡಿಕೆ. ಆದರೆ ಸಾಧಾರಣವಾಗಿ ಭಕ್ತಿಪಂಥವೆಂದರೆ ಸಗುಣೇಶ್ವರನಲ್ಲಿ ನೆಟ್ಟ ಭಕ್ತಿಯೆಂದು ಅಂಗೀಕರಿಸಲ್ಪಟ್ಟಿದೆ.

ಭಕ್ತಿಪಂಥದ ಚರಿತ್ರೆಯಲ್ಲಿ ಇತಿಹಾಸಜ್ಞರು ಎರಡು ಘಟ್ಟಗಳನ್ನು ಗುರುತಿಸುತ್ತಾರೆ: ಒಂದು ವೇದಗಳ ಕಾಲದಿಂದ 13ನೆಯ ಶತಮಾನದ ತನಕ, ಮತ್ತೊಂದು 13ನೆಯ ಶತಮಾನದಿಂದ 16ನೆಯ ಶತಮಾನದ ತನಕ.

ಭಾರತದಲ್ಲಿಯ ಭಕ್ತಿ ಪಂಥಗಳು ಬಹು ಪ್ರಾಚೀನವಾದವು, ಭಕ್ತಿ ಭಾವನೆಗಳು ಎಂದೂ ಇದ್ದಂಥವು. ವೇದಗಳಲ್ಲಿಯೇ ಈ ಭಾವನೆ ಮೂಡಿರುವುದನ್ನು ಕಾಣಬಹುದು.

ಮೊಹೆಂಜೋದಾರೊ ಮತ್ತು ಹರಪ್ಪ ಸಂಸ್ಕೃತಿಯಲ್ಲೂ ಈ ಭಕ್ತಿ ಭಾವವನ್ನು ಕಾಣಬಹುದು. ಭಕ್ತಿಭಾವ ಈಶನಿಗೂ ಶರಣನಿಗೂ ಇರುವ ಅಂತರಂಗ ಪ್ರೀತಿಯ ಸಂಬಂಧವನ್ನು ಋಗ್ವೇದದ ಮಂತ್ರಗಳಲ್ಲಿ ಕಾಣುತ್ತೇವೆ. ಉಪನಿಷತ್ತುಗಳಲ್ಲಿಯೂ ಈ ಭಾವನೆ ಬಂದಿದೆ. ಭಗವದ್ಭಕ್ತಿಯಲ್ಲಿ ಅಡಗಿರುವ ಈಶ್ವರಾನುಗ್ರಹ ನಿರ್ಹೇತುಕ ಕೃಪೆ ಎಂದು ಕಠೋಪನಿಷತ್ತು ಸಾರುತ್ತದೆ. ಶ್ವೇತಾಶ್ವತರ ಉಪನಿಷತ್ತು ಶಿವನನ್ನು ಭಕ್ತಿಯಿಂದಲೇ ಕಾಣುವುದು ಶಕ್ಯವೆಂದು ಹೇಳಿದೆ. ಬೌದ್ಧಮತ ಹುಟ್ಟುವ ಮೊದಲೇ ಭಾಗವತಧರ್ಮ ಪಂಥ ಏಕೇಶ್ವರವಾದವನ್ನು ಪ್ರತಿಪಾದಿಸಿ ಭಕ್ತಿಯಿಂದಲೇ ಮೋಕ್ಷಸಾಧ್ಯವೆಂದು ಸಾರಿತು. ಪ್ರ.ಶ.ಪೂ.ಸು. 5ನೆಯ ಶತಮಾನದ್ದೆಂದು ಹೇಳಲಾದ ಭಗವದ್ಗೀತೆ, ಭಕ್ತಿಮಾರ್ಗವನ್ನು ಕುರಿತು ವಿಸ್ತಾರವಾಗಿ ಬರೆದ ವಾಖ್ಯೆ. ವ್ಯಾಕರಣ ಶಾಸ್ತ್ರಜ್ಞನಾದ ಪಾಣಿನಿ ತನ್ನ ಒಂದು ಸೂತ್ರದಲ್ಲಿ ಭಕ್ತಿಪದದ ವ್ಯುತ್ಪತ್ತಿ ಸೂಚಿಸಿದ್ದಾನೆ. ಇವನ ಕಾಲ ಪ್ರ.ಶ.ಪೂ. 350 ಎಂದು ಊಹಿಸಲಾಗಿದೆ. ಅಂದರೆ ಇವನ ಕಾಲಕ್ಕೆ ಭಕ್ತಿ ಎಂಬ ಮಾತಿಗೆ ನಿಷ್ಕೃಷ್ಟವಾದ ಅರ್ಥ ಮೂಡಿತ್ತು ಎಂದು ತಿಳಿಯಬಹುದು.

ಎಂಟನೆಯ ಶತಮಾನದಲ್ಲಿ ಬೌದ್ಧ ಮತ್ತು ಜೈನಧರ್ಮಗಳು ದಕ್ಷಿಣ ಭಾರತದಲ್ಲಿ ಹರಡಿದುವು. ಭಕ್ತಿಯ ವಿಷಯದಲ್ಲಿ ಈ ಧರ್ಮಗಳಿಗೂ ಹಿಂದುಧರ್ಮಕ್ಕೂ ಅನೇಕ ಲಕ್ಷಣಗಳಲ್ಲಿ ವಿನಿಮಯ ಆಗಿದ್ದಿರಬೇಕು. ವಿಗ್ರಹಾರಾಧನೆ, ದೇವಾಲಯ ನಿರ್ಮಾಣ, ತೀರ್ಥಯಾತ್ರೆ, ಉಪವಾಸ, ಧ್ಯಾನ, ಪ್ರಾರ್ಥನೆ, ಸರ್ವಸಮಭಾವ. ಸರ್ವಭೂತಹಿತ ಈ ಅಭಿಪ್ರಾಯಗಳು ಈ ಮೂರು ಪಂಥಗಳಲ್ಲಿಯೂ ರೂಢಮೂಲವಾದವು. ಶೈವ ಪಂಥದಲ್ಲಿ ನಾಯನಾರರೆಂದು ಹೆಸರಾದ ಭಕ್ತರು ಹಾಡಿದ ಭಕ್ತಿಗೀತೆಗಳು ಎಲ್ಲರ ಹೃದಯಗಳನ್ನೂ ಸೂರೆಗೊಂಡವು. ಇವರಲ್ಲಿ ಮುಖ್ಯರಾದವರು ತಿರುಜ್ಞಾನ ಸಂಬಂಧರ್, ಅಪ್ಪರ್, ಸುಂದರರ್, ಮಾಣಿಕ್ಯ ವಾಚಕರ್ ಮೊದಲಾದವರು. ಈ ತಮಿಳುನಾಡಿನ ಅಡಿಯಾರರುಗಳು ಅಂದರೆ ದಾಸರು ಭಕ್ತಿ ಮತ್ತು ಶರಣಾಗತಿಗಳಿಗೆ ಪ್ರಧಾನ ಸ್ಥಾನವನ್ನು ಕೊಟ್ಟರು.

ವೈಷ್ಣವಭಕ್ತಿ ಪಂಥದಲ್ಲಿ ಹುಟ್ಟಿದ ಭಕ್ತರಿಗೆ ಆಳ್ವಾರುಗಳೆಂದು ಹೆಸರು. ಆಳ್ವಾರ್ ಅಂದರೆ ಭಗವದ್ಭಕ್ತಿಯಲ್ಲಿ ಮುಳುಗಿದವರು ಎಂದು ಅರ್ಥ. ಇವರು ಹನ್ನೆರಡು ಮಂದಿ. ಆಳ್ವಾರರುಗಳಲ್ಲಿ ಹೆಣ್ಣು ಆಳ್ವಾರ್ ಆಂಡಾಳ್. ತಿರುಪ್ಪಾಣ ಎಂಬ ಹರಿಜನ ಆಳ್ವಾರರು ಒಬ್ಬರು. ಈ ಪಂಥದಲ್ಲಿ ಮೇಲು ಕೀಳು ಎಂಬ ಭಾವಕ್ಕೆ ಅವಕಾಶವಿಲ್ಲ. ವಿಷ್ಣುಭಕ್ತರಾದವರೆಲ್ಲರೂ ಸಮಾನರು; ಅವರ ಹುಟ್ಟನ್ನು ಯಾರೂ ಕೇಳಬಾರದು; ಅವರನ್ನು ಎಲ್ಲ ಜಾತಿಯವರೂ ಆರಾಧಿಸಬೇಕು. ಅವರಲ್ಲಿ ಜಾತಿಭಾವನೆ ಇಡುವುದು ಘೋರಪಾಪ. ಶೈವಭಕ್ತರಂತೆ ಆಳ್ವಾರರು ಪರಮಾತ್ಮನಲ್ಲಿ ನೆಟ್ಟ ಪ್ರೇಮದಿಂದ ಮಾತ್ರ ಮೋಕ್ಷಸಾಧ್ಯವೆಂದು ಭಾವಿಸಿದರು. ಇವರ ಹಾಡುಗಳಲ್ಲಿ ಭಕ್ತಿ ಭಾವದ ಹೊಳೆಯೇ ಹರಿದಿದೆ.

13 ಮತ್ತು 14ನೆಯ ಶತಮಾನಗಳ ನಡುವೆ ಭಕ್ತಿಪಂಥ ಇಡೀ ಭಾರತದಲ್ಲಿ ವ್ಯಾಪಿಸಿತು. ಇಸ್ಲಾಮ್ ಭಾರತವನ್ನು ಪ್ರವೇಶಿಸಿ ಹಿಂದೂ ಮತದ ಮೇಲೆ ತನ್ನ ಪ್ರಭಾವ ಬೀರಿತು, ಹಾಗೆಯೇ ಹಿಂದೂ ಮತ ತನ್ನ ಪ್ರಭಾವವನ್ನು ಅದರ ಮೇಲೆಯೂ ಬೀರಿತು. ಇದರ ಪರಿಣಾಮವಾಗಿ ಹುಟ್ಟಿದ ಭಕ್ತಿ ಪಂಥಗಳು ಕಬೀರನ ರೀತಿಯಾಗಿ ರೂಪಗೊಂಡವು. ಈ ಪರ್ವಕಾಲದ ಭಕ್ತರೆಂದರೆ ರಾಮಾನಂದ, ತುಲಸೀದಾಸ, ವಲ್ಲಭ, ಸೂರದಾಸ, ಚೈತನ್ಯ, ಮೀರಾಬಾಯಿ, ನಾಮದೇವ ಮೊದಲಾದವರು.

ಇವರೆಲ್ಲರ ಉಪದೇಶದ ಪರಿಣಾಮವಾಗಿ ಭಾರತದ ಜನರ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿ ರೂಪುಗೊಂಡಿತು. ದೇವರಲ್ಲಿ ನಿಶ್ಚಲವಾದ ಭಕ್ತಿ, ಏಕದೇವೋಪಾಸನೆ, ಕಾಯಾ ವಾಚಾ ಮನಸಾ ಶುದ್ಧಜೀವನ,ಹೃದಯಮಂಥನ,ಹೃದಯಾನುಕಂಪ, ನಾಮಸ್ಮರಣೆಯ ಮಹತ್ತ್ವ, ಸರ್ವಸಮಭಾವ-ಇವೆಲ್ಲವೂ ಹೊಸ ಚೈತನ್ಯ ಪಡೆದು ಜನರ ಜೀವನದಲ್ಲಿ ಹೊಕ್ಕವು, ಕರುಣೆ ಸರ್ವಭೂತ ಹಿತ ಸಮದರ್ಶನ-ಇವು ಭಕ್ತಿಪಂಥದ ಸ್ವರಗಳಾದುವು.

ಕಬೀರ್ ಹಿಂದು ಭಕ್ತಿ ಪಂಥಕ್ಕೂ ಇಸ್ಲಾಮ್ ಧರ್ಮಕ್ಕೂ ಸೇತುವೆ ಕಟ್ಟಿದ. ರಾಮ-ರಹೀಮ್; ಕೃಷ್ಣ-ಕರೀಮ್ ಒಂದೆ ಎಂದು ಬೋಧಿಸಿದ. ಇವೆಲ್ಲದರ ಪರಿಣಾಮ ಈಚಿನ ಯುಗದವರಾದ ಗಾಂಧೀಜಿಯ ಭಕ್ತಿ ಭಾವನೆಯಲ್ಲಿ ಕಾಣುತ್ತೇವೆ. ರಘುಪತಿ ರಾಘವ ರಾಜಾರಾಮ್ ಪತಿತಪಾವನ ಸೀತಾರಾಮ್, ಈಶ್ವರ ಅಲ್ಲಾ ತೇರೆನಾಮ್ ಸಬ್‌ಕೋ ಸನ್ಮತಿ ದೇ ಭಗವಾನ್ ಅನ್ನುವ ಗಾಂಧೀಜಿಯ ಪ್ರಾರ್ಥನೆಯಲ್ಲಿ ಭಕ್ತಿ ಪಂಥದ ಪೂರ್ಣ ಆಶಯವಿದೆ ಎಂದು ಹೇಳಬಹುದು. (ಎಂ.ವೈ.)

**ಭಗತ್‌ಸಿಂಗ್: 1909-31.** ಭಾರತದ ಅಗ್ರಗಣ್ಯ ಸ್ವಾತಂತ್ರ್ಯ ಯೋಧ. ಪಾಕಿಸ್ತಾನದಲ್ಲಿರುವ ಲೈಲ್‌ಪುರ್ ಜಿಲ್ಲೆಯ ಬಾಂಗಾ ಎಂಬಲ್ಲಿ 1909 ಸೆಪ್ಟೆಂಬರ್ 28ರಂದು ಜನಿಸಿದ. ತಂದೆ ಕಿಸನ್‌ಸಿಂಗ್, ತಾಯಿ ವಿದ್ಯಾವತೀದೇವಿ. ದೇಶಭಕ್ತ ಸೂಫಿ ಅಂಬಾಪ್ರಸಾದ್ ಈ ಮನೆತನದ ಸ್ನೇಹಿತ. ಭಗತ್‌ಸಿಂಗ್ ಬಾಲ್ಯದಲ್ಲಿ ಆರ್ಯಸಮಾಜದ ಪ್ರಭಾವಕ್ಕೆ ಒಳಗಾದ. ಲಾಹೋರಿನ ಡಿ.ಎ.ವಿ. ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಹದಿನಾರನೆಯ ವರ್ಷದಲ್ಲೇ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಪಾಲ್ಗೊಂಡ. ಲಾಲಾಲಜಪತರಾಯರಂಥ ನಾಯಕರ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳಿಂದ ಪ್ರಭಾವಿತನಾಗಿ ರಷ್ಯನ್ ಕ್ರಾಂತಿ ಮತ್ತು ಮಾರ್ಕ್ಸ್‌ವಾದಗಳಿಗೆ ಮಾರುಹೋದ. ಮುಂದೆ ಲಾಲಾಲಜಪತರಾಯ್ ಆರಂಭಿಸಿದ್ದ ರಾಷ್ಟ್ರೀಯ ಕಾಲೇಜನ್ನು ಸೇರಿದ. ಸುಖದೇವ್ ಮತ್ತು ಭಗವತೀಚರಣ್ ಜೊತೆಗೂಡಿ ಜನತಾ ಸೇವಾ ಸಮಾಜ ಎಂಬ ಸಂಸ್ಥೆ ಆರಂಭಿಸಿ ವಿದ್ಯಾರ್ಥಿಗಳ ಸಂಘಟನೆ ಹಾಗೂ ದೇಶಭಕ್ತಿ ಅಧ್ಯಯನ ಆರಂಭಿಸಿದ. ಕಾನ್‌ಪುರದಲ್ಲಿ ನಡೆದ ಕ್ರಾಂತಿಕಾರಿಗಳ ಗುಪ್ತಸಭೆಯಲ್ಲಿ (1926) ಇವನನ್ನು ವಿಜಯಕುಮಾರ ಸಿಂಗ್‌ನೊಂದಿಗೆ ಸಂಘಟಕನಾಗಿ ನೇಮಿಸಲಾಯಿತು.

ದೆಹಲಿಯಲ್ಲಿ ದಸರ ಪ್ರಯುಕ್ತ ನಡೆಯುವ ರಾಮಲೀಲಾ ಉತ್ಸವ ಸಮಾರಂಭವೊಂದರಲ್ಲಿ ಯಾರೋ ಎಸೆದ ಬಾಂಬ್ ಪ್ರಕರಣದಲ್ಲಿ ನಿರಪರಾಧಿಯಾದ ಇವನನ್ನು ಅಪರಾಧಿ ಎಂದು ತಪ್ಪಾಗಿ ಗುರ್ತಿಸಿ ಬಾಲಾಪರಾಧಿಗಳ ಜೈಲಿನಲ್ಲಿ ಬಂಧಿಸಿ (1926) ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಇವನಿಗೆ ಅನೇಕ ಕ್ರಾಂತಿಕಾರಿ ಕೈದಿಗಳ ಪರಿಚಯವಾಯಿತು. ಈ ಮುಚ್ಚಳಿಕೆಯ ಸ್ಥಿತಿಯಲ್ಲಿದ್ದಾಗಲೇ ನೌಜವಾನ್ ಭಾರತ್‌ಸಭಾ ಎಂಬ ಸಂಘಟನೆಯನ್ನು ಗುಪ್ತವಾಗಿ ಹುಟ್ಟುಹಾಕಿದ. ಸೋಹನಸಿಂಗ್ ಜೋಶ್‌ನ ಕೀರ್ತಿ ಎಂಬ ಪತ್ರಿಕೆಯ ಸಂಪಾದಕ ಮಂಡಲಿಯಲ್ಲೂ ಕೆಲಸಮಾಡಿದ. ದೇಶದ ಖ್ಯಾತ ಕ್ರಾಂತಿಕಾರೀ ಗುಪ್ತ ಸಂಘಟನೆಯಾದ ಹಿಂದುಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ನಿನ ಸಭೆ ದೆಹಲಿಯಲ್ಲಿ ನಡೆದಾಗ (1928) ಸಂಸ್ಥೆಯ ಹೆಸರನ್ನು ಹಿಂದುಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ ಎಂದು ಬದಲಾಯಿಸಬೇಕೆಂದು ವಾದಿಸಿ ಜಯಗಳಿಸಿದ. ಆ ಸಂದರ್ಭದಲ್ಲಿ ಚಂದ್ರಶೇಖರ ಆಜಾದರ ನೇತೃತ್ವದಲ್ಲಿ ರೂಪಿತವಾದ ಸಂಸ್ಥೆಯ ಸೇನಾವಿಭಾಗಕ್ಕೆ ಪ್ರಮುಖ ನಾಯಕನೆನಿಸಿದ. ಅರ್ಥಶಾಸ್ತ್ರ ಹಾಗೂ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿ, ಮಾರ್ಕ್ಸ್‌ನ ತತ್ತ್ವಗಳನ್ನು ಕರಗತಮಾಡಿಕೊಂಡಿದ್ದರಿಂದ ಸಂಘಟನೆಯ ಮಾರ್ಗದರ್ಶಕರಲ್ಲಿಯೂ ಒಬ್ಬನಾದ.

ಸೈಮನ್ ಕಮಿಷನ್ ಬಂದಾಗ ಲಾಹೋರಿನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಪೊಲೀಸರ ಲಾಠಿ ಏಟಿಗೆ ತುತ್ತಾಗಿ ಲಾಲಾಲಜಪತ್‌ರಾಯ್ ಮರಣ ಹೊಂದಿದರು. ಅವರನ್ನು ಥಳಿಸಿದ ಸ್ಕಾಟ್ ಎಂಬ ಅಧಿಕಾರಿಯನ್ನು ಕೊಂದು ಸೇಡು ತೀರಿಸಿಕೊಳ್ಳಬೇಕೆಂದು ನಿರ್ಣಯಿಸಿ, ಭಗತ್‌ಸಿಂಗ್ ಮತ್ತು ರಾಜಗುರು ಇಬ್ಬರೂ ಸೇರಿ ಜೆ.ಪಿ. ಸಾಂಡರ್ಸ್ ಎಂಬ ಅಧಿಕಾರಿಯನ್ನು ಕೊಂದರು. ಹತ್ಯೆಯ ಅನಂತರ ತಲೆತಪ್ಪಿಸಿಕೊಂಡಿದ್ದ ಭಗತ್‌ಸಿಂಗ್ ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಯ ಆಡಳಿತದ ಬಗ್ಗೆ ಪ್ರಪಂಚದ ಕಣ್ತೆರೆಸಬೇಕೆಂಬ ಉದ್ದೇಶದಿಂದ, ದೆಹಲಿಯ ಕೇಂದ್ರ ಶಾಸನ ಸಭೆಯಲ್ಲಿ ಬಟುಕೇಶ್ವರದತ್ತನೊಂದಿಗೆ ಸೇರಿ ಬಾಂಬನ್ನೆಸೆದು ಬಂಧಿತನಾದ (1929). ಅಲ್ಲಿಂದ ತಪ್ಪಿಸಿಕೊಳ್ಳುವ ಅವಕಾಶ ಇದ್ದರೂ ತಪ್ಪಿಸಿಕೊಳ್ಳದೆ ಜೈಲಿನಲ್ಲಿ ರಾಜಕೀಯ ಕೈದಿಗಳ ಸ್ಥಾನಮಾನಗಳ ಸುಧಾರಣೆ ಆಗಬೇಕೆಂಬುದಾಗಿ 80 ದಿನಗಳ ದೀರ್ಘಕಾಲದ ಉಪವಾಸ ಕೈಗೊಂಡ. ವಿವಿಧ ಕ್ರಾಂತಿಕಾರಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆದು, ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಈ ಮೂರು ಮಂದಿಗೂ ಮರಣದಂಡನೆ ವಿಧಿಸಲಾಯಿತು. 1931 ಮಾರ್ಚ್ 23ರಂದು ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಭಗತ್‌ಸಿಂಗ್‌ನನ್ನು ಗಲ್ಲಿಗೇರಿಸಲಾಯಿತು. ಬಾಂಬ್ ಎಸೆದಾಗ, ಜೈಲಿನಲ್ಲಿ ಇದ್ದಾಗ ಹಾಗೂ ವಿಚಾರಣೆ ನಡೆದಾಗ ನಾನಾ ರೀತಿಯಲ್ಲಿ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆ ನಡೆಸಿದ ಭಗತ್‌ಸಿಂಗ್ ಮತ್ತು ಇವನ ಸಹಚರರು ಹಲವಾರು ಜನರ ಜಾಗೃತಿಗೆ ಕಾರಣರಾದರು. ಭಗತ್‌ಸಿಂಗ್‌ಗೆ ಶಿಕ್ಷೆ ವಿಧಿಸಿದಾಗ ಮತ್ತು ಗಲ್ಲಿಗೇರಿಸಿದ ಸಂದರ್ಭಗಳಲ್ಲಿ ದೇಶದ ನಾನಾಕಡೆ ಪ್ರತಿಭಟನೆ ಹರತಾಳಗಳು ನಡೆದವು. ಭಾರತದ ಯುವಕರಿಗೆ ಸ್ಫೂರ್ತಿದಾಯಕನಾಗಿದ್ದ ಭಗತ್‌ಸಿಂಗ್ ಹುತಾತ್ಮನಾದ. (ಎಸ್‌ಎನ್.ಕೆ.)

**ಭಟ್ಟಿಪ್ರೋಲು:** ಆಂಧ್ರಪ್ರದೇಶ ರಾಜ್ಯದ ಗುಂಟೂರು ಜಿಲ್ಲೆಯ ರೇಪಲ್ಲಿ ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ಬೌದ್ಧಕ್ಷೇತ್ರ, ಇದಕ್ಕೆ ಪ್ರತಿಪಾಲಪುರವೆಂಬ ಹೆಸರೂ ಇದೆ. ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಎಂಬ ಪುರಾತತ್ತ್ವಶಾಸ್ತ್ರಜ್ಞ 1892ರಲ್ಲಿ ಉತ್ಖನನ ನಡೆಸಿದಾಗ ಇಲ್ಲಿ ಮೂರು ಶಿಲಾಪೆಟ್ಟಿಗೆಗಳೂ ಕೆಲವು ಆಭರಣಗಳೂ ದೊರೆತವು. ಗ್ರಾಮದಲ್ಲಿ ಮೂರು ಮಣ್ಣಿನ ದಿಬ್ಬಗಳನ್ನು ಪರಿಶೋಧಿಸಿದಾಗ ಬೌದ್ಧಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಅವಶೇಷಗಳು ದೊರೆತವು. ಇದಕ್ಕೂ ಮೊದಲೇ 1870ರಲ್ಲಿ ಜಾಸ್ವೆಲ್, ಅನಂತರ ವಾಲ್ಟರ್ ಎಲಿಯಟ್ ಮತ್ತು 1878ರಲ್ಲಿ ರಾಬರ್ಟ್ ಸಿವೆಲ್ ಅವರು ಇಲ್ಲಿ ಸಂಶೋಧನೆ ನಡೆಸಿದ್ದರು.

ಒಂದನೆಯ ಮಣ್ಣಿನ ದಿಬ್ಬದಲ್ಲಿ ಕಂಡುಬಂದ ಬೌದ್ಧಮಹಾಸ್ತೂಪ ಪ್ರಾಚೀನ ಬೌದ್ಧ ಸಂಸ್ಕೃತಿಯ ಕುರುಹಾಗಿದೆ. ಇದರ ಸುತ್ತಲೂ ಎತ್ತರದ ಪ್ರಾಕಾರವನ್ನು ರಚಿಸಿ ಪ್ರದಕ್ಷಿಣಾಪಥ ನಿರ್ಮಿಸಿದ್ದಾರೆ. ಪ್ರಾಕಾರದಲ್ಲಿ ಚಿತ್ರ ವಿಚಿತ್ರ ಶಿಲ್ಪಕಲೆಗಳೂ ಸುಂದರ ಸ್ಫಟಿಕ ಫಲಕಗಳೂ

ಇವೆ. ಮಹಾಸ್ತೂಪದ ಮಧ್ಯದಲ್ಲಿದ್ದ ರಂಧ್ರ ಸ್ಥಳದಲ್ಲಿ ಮೂರು ಕಲ್ಲಿನ ಪೆಟ್ಟಿಗೆಗಳು ದೊರೆತಿವೆ. ಇವುಗಳಲ್ಲಿ ಮೂಳೆ, ನೀಲಿಕಲ್ಲು, ಹಸುರು ಪಚ್ಚೆ ಸ್ಫಟಿಕದ ಕಲ್ಲು, ಷಡ್ಭುಜಾಕಾರದ ಚಿಕ್ಕ ಹಸುರು ಪಚ್ಚೆಯ ಸ್ಫಟಿಕ, ಒಳ್ಳೆಯ ಮುತ್ತು, ಬಂಗಾರದ ಹೂ, ಆಯುಧಪಾಣಿ ಬೊಂಬೆ ಮತ್ತು ತಾಮ್ರದ ಚೂರು ಇದ್ದು ಇವು ಬುದ್ಧನ ಕುರುಹುಗಳುಳ್ಳ ಪೆಟ್ಟಿಗೆ ಎನ್ನುತ್ತಾರೆ. ಇಲ್ಲಿ ಅಪೂರ್ವ ಶಿಲ್ಪ ಸೌಂದರ್ಯವುಳ್ಳ ಶಿಲ್ಪಗಳೂ ಶಿಲ್ಪಗಳನ್ನು ಕೆತ್ತಲು ಉಪಯೋಗಿಸುವ ಸಾಧನಗಳೂ ದೊರಕಿವೆ.

ಸ್ತೂಪವನ್ನು ಕೇವಲ ಇಟ್ಟಿಗೆ ಹಾಗೂ ಮಣ್ಣಿನಿಂದ ನಿರ್ಮಿಸಲಾಗಿದೆ. ಇದು ಮೌರ್ಯರ ಕಾಲಕ್ಕೆ ಸೇರಿದ ಪ್ರಾಚೀನ ಶಿಲ್ಪವೆಂದು ಪುರಾತತ್ತ್ವಜ್ಞರ ಊಹೆ. ಆದರೆ ಇದು ಪ್ರ.ಶ.ಪೂ. 3ನೆಯ ಶತಮಾನಕ್ಕೆ ಸೇರಿದ ಅವಶೇಷಗಳೆಂಬುದೇ ಹೆಚ್ಚಿನ ವಿದ್ವಾಂಸರ ಅಭಿಪ್ರಾಯ. ಇದರ ನಿರ್ಮಾಣವಿಧಾನ ಜಗ್ಗಯಪೇಟೆ ಮತ್ತು ಅಮರಾವತಿಯಲ್ಲಿರುವ ಸ್ತೂಪದ ನಿರ್ಮಾಣವನ್ನು ಹೋಲುತ್ತಿದ್ದು ಇದನ್ನು ಇಕ್ಷ್ವಾಕು ವಂಶದ ರಾಜರು ನಿರ್ಮಿಸಿರಬಹುದು. ಮುಖ್ಯವಾಗಿ ಬುದ್ಧನ ಮರಣಾನಂತರ ಅವನ ಅಸ್ಥಿಯ ಅವಶೇಷಗಳಿಗಾಗಿ ನಿರ್ಮಿಸಿರಬಹುದು ಎಂಬ ಹೇಳಿಕೆಗಳು ಪ್ರಚಲಿತವಾಗಿವೆ.

ಎರಡನೆಯ ಮಣ್ಣಿನ ದಿಬ್ಬದಲ್ಲಿ ಎರಡನೆಯ ಸ್ತೂಪಕ್ಕೆ ಸಂಬಂಧಿಸಿದ ಕೆಲವು ಶಿಥಿಲಾವಶೇಷಗಳು, ಭರಣಿಗಳು, ಗುಂಡುಗಳು ದೊರೆತರೆ ವಿಕ್ರಮಾರ್ಕಕೋಟ ದಿಬ್ಬವೆಂದು ಜನಗಳು ಕರೆಯುವ ಮೂರನೆಯ ದಿಬ್ಬದಲ್ಲಿ ಬೌದ್ಧಸ್ತೂಪಕ್ಕೆ ಸೇರಿದ ದೊಡ್ಡ ಇಟ್ಟಿಗೆಗಳೂ ಅನೇಕ ಅವಶೇಷಗಳೂ ರಾಶಿ ರಾಶಿಯಾಗಿ ದೊರೆತಿವೆ. ಈ ಎಲ್ಲ ಕುರುಹುಗಳಿಂದ ಈ ಬೌದ್ಧಕ್ಷೇತ್ರ ಒಂದು ಕಾಲದಲ್ಲಿ ಬೌದ್ಧ ಸಾಹಿತ್ಯ-ಸಂಸ್ಕೃತಿಗಳ ಕೇಂದ್ರವಾಗಿತ್ತೆನ್ನಬಹುದು.

(ಕೆವಿ.)

**ಭಯೋತ್ಪಾದನೆ:** ಒಂದು ದೇಶದ ಶಾಂತಿಯನ್ನು ಕದಡಿ ಭಯವನ್ನುಂಟು ಮಾಡುವ ಕುಕೃತ್ಯ (ಟೆರರಿಸಮ್). ತಮ್ಮ ಉದ್ದೇಶ ಸಾಧನೆಗಾಗಿ ಪ್ರಚೋದಿತ ಮಂದಿ ಹಿಡಿಯುವ ವಾಮಮಾರ್ಗ. ವಿಜ್ಞಾನದ ದುರ್ಬಳಕೆಗೆ ಇಂದು ನಡೆಯುತ್ತಿರುವ ಭಯೋತ್ಪಾದನೆಯ ವಿವಿಧ ಬಗೆಗಳು ಸಾಕ್ಷಿಯಾಗಿವೆ. ಬಾಂಬು ಸಿಡಿಸಿ ನೂರಾರು ಮಂದಿ ಅಮಾಯಕರನ್ನು ಕೊಲ್ಲುವುದರೊಂದಿಗೆ ಆಸ್ತಿಪಾಸ್ತಿಗಳಿಗೆ ನಷ್ಟವುಂಟುಮಾಡಿ ಸುತ್ತಣ ಜನರಲ್ಲಿ ಭಯಬಿತ್ತಿ ಅರಾಜಕತೆಯನ್ನುಂಟು ಮಾಡುವ ಭಯೋತ್ಪಾದಕರು ನಾನಾ ಬಗೆಯ ಪ್ರಚೋದನೆಗಳಿಗೆ ಆಸೆ ಆಮಿಷಗಳಿಗೆ ಬಲಿಯಾದ ದುರ್ಬಲ ಮನಸ್ಸಿನ ವ್ಯಕ್ತಿಗಳಾಗಿರುತ್ತಾರೆ. ದೇಶ ದೇಶಗಳಮಧ್ಯೆ ರಾಜಕೀಯವಾದ ಭೂವಿವಾದ, ಗಡಿ, ಜಲ ಇವುಗಳು ಕಾರಣವಾದರೂ ಧರ್ಮದ ಹೆಸರಿನಲ್ಲಿ ಆಗಿರುವಷ್ಟು ರಕ್ತಪಾತ, ಪ್ರಾಣಹಾನಿ ಬೇರೆ ಯಾವುದರಿಂದಲೂ ಆಗಿಲ್ಲ. ದುರ್ಬಲಮತಿಯುಳ್ಳ ವ್ಯಕ್ತಿ ಜಾತಿ, ಧರ್ಮದ ಗುಂಪಿನ ಪ್ರಭಾವಕ್ಕೆ ಬೇಗನೆ ಶರಣಾಗುತ್ತಾನೆ. ಮೂಢನಂಬಿಕೆಗಳನ್ನು ಬೋಧಿಸಿ, ಬುದ್ಧಿ ಕೆಡಿಸಿ ತಮ್ಮ ಉದ್ದೇಶ ಸಾಧನೆಗಳ ಸಾಧನ ಮಾಡಿಕೊಳ್ಳುವ ಸಂಘಟನೆಗಳು ಅನೇಕ ಇವೆ; ಇವು ವ್ಯಕ್ತಿಗಳನ್ನು ಮಾನವ ಬಾಂಬುಗಳಾಗಿ ಉಪಯೋಗಿಸಿಕೊಳ್ಳುತ್ತಿವೆ. ವ್ಯಕ್ತಿಗಳನ್ನು, ರಾಜಕಾರಣಿಗಳನ್ನು ಅಪಹರಿಸುವುದು, ಕಟ್ಟಡಗಳಿಗೆ ಬೆಂಕಿಹಚ್ಚುವುದು, ಹೆಚ್ಚು ಜನರು ಸೇರುವ ಸ್ಥಳಗಳಲ್ಲಿ ಬಾಂಬು ಸಿಡಿಸುವುದು, ಕೊಲೆಸುಲಿಗೆ ನಡೆಸುವುದು, ರೈಲು ಉರುಳಿಸುವುದು, ಸೇತುವೆಗಳನ್ನು ಹಾಳುಮಾಡುವುದು, ವಿಮಾನಗಳನ್ನು ಅಪಹರಿಸಿ ಪ್ರಯಾಣಿಕರನ್ನು ಒತ್ತೆಯಾಳುಗಳಾಗಿ ಉಪಯೋಗಿಸುವುದು, ವಿಮಾನಗಳನ್ನು ಸ್ಫೋಟಿಸುವುದು, ಬೃಹತ್ ಕಟ್ಟಡಗಳಿಗೆ ಬಾಂಬು ಇಡುವುದೇ ಮುಂತಾದ ಭಯೋತ್ಪಾದಕರ ಕೃತ್ಯಗಳು ನಿರಂತರವಾಗಿ ನಡೆದಿವೆ.

ಟೆರರ್, ಟೆರರಿಸಂ ಎಂಬ ಈ ಇಂಗ್ಲಿಷ್ ಶಬ್ದ ಪ್ರಥಮವಾಗಿ ಫ್ರೆಂಚ್ ಕ್ರಾಂತಿಯ ಕಾಲದಲ್ಲಿ (1789-99) ಬಳಕೆಗೆ ಬಂದು ಆ ಕಾಲದಲ್ಲಿ ನಡೆದ ಹಿಂಸೆ, ರಕ್ತಪಾತಗಳಿಂದ ಭಯೋತ್ಪಾದಕರ ಆಡಳಿತ ಕಾಲವೆಂದೇ ಹೆಸರಾಯಿತು. ಪ್ರಜೆಗಳನ್ನೂ ಸುತ್ತಣ ರಾಜ್ಯಗಳನ್ನೂ ತಮ್ಮ ಹಿಡಿತದಲ್ಲಿ ಇಟ್ಟುಕೊಂಡು ತಮ್ಮ ಗುರಿಸಾಧಿಸಬೇಕೆಂದು ಭಯೋತ್ಪಾದನೆಯ ಮೂಲಕ ರಾಜ್ಯವಾಳಿದವರಲ್ಲಿ ಜರ್ಮನಿಯ ಹಿಟ್ಲರ್, ಇಟಲಿಯ ಬೆನಿಟೊ ಮುಸ್ಸೋಲಿನಿ ಮತ್ತು ರಷ್ಯದ ಸ್ಟಾಲಿನ್ ಹೆಸರನ್ನು ಹೇಳಲಾಗುತ್ತದೆ. ಭಯೋತ್ಪಾದನೆಯನ್ನು ಇಟಲಿಯ ಕೆಂಪು ಸೈನ್ಯ 1960-80ರ ವರೆಗೆ ಮತ್ತು 1990ರ ವರೆಗೆ ಜರ್ಮನಿಯ ಕೆಂಪು ಸೈನ್ಯ ಚಾಲನೆಯಲ್ಲಿಟ್ಟಿದ್ದವು ಕರಿಯಜನರ ವಿರುದ್ಧ ಅಮೆರಿಕದಲ್ಲಿ 1800 ರ ವೇಳೆಗೆ ಕುಕ್ಲಕ್ಸ್ ಕ್ಲಾನ್ ಭಯೋತ್ಪಾದಕರಾಗಿ ವಿವಿಧ ಹಿಂಸಾಚಾರಗಳನ್ನು ನಡೆಸಿದ ವಿಚಾರ ಎಲ್ಲರಿಗೂ ತಿಳಿದಿದೆ. 1948ರಲ್ಲಿ ಇಸ್ರೇಲಿನ ಸ್ವಾತಂತ್ರ್ಯಕ್ಕಾಗಿ, 1960 ರಿಂದ ಪ್ಯಾಲಸ್ತೀನಿಯರಲ್ಲಿ ಹಮಾಸ್ ಮತ್ತು ಹಿಜ್ಬುಲ್ಲಾ ಭಯೋತ್ಪಾದಕರ ಗುಂಪು ಕಾರ್ಯಾಚರಣೆ ನಡೆಸಿದ್ದುಂಟು. ಉತ್ತರ ಐರ್ಲೆಂಡಿನಲ್ಲೂ ಭಯೋತ್ಪಾದಕರ ಗುಂಪು ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡಿದ್ದುಂಟು. ಇಡಿ ಪ್ರಪಂಚವನ್ನೆ ಬೆಚ್ಚಿಬೀಳಿಸಿದ್ದು 2001 ಸೆಪ್ಟೆಂಬರ್ 11 ರಂದು ಅಮೆರಿಕದ ವರ್ಲ್ಡ್‌ಟ್ರೇಡ್ ಸೆಂಟರ್‌ನ ಬೃಹತ್ ಜೋಡಿ ಕಟ್ಟಡಗಳಿಗೆ ವಿಮಾನದ ಮೂಲಕ ಧಾಳಿ ಮಾಡಿ ಅವನ್ನು ನಾಶಮಾಡಿದ ಭಯೋತ್ಪಾದಕ ಕೃತ್ಯ. ಸ್ಪೇನ್‌ದೇಶದ ಮ್ಯಾಡ್ರಿಡ್ ನಗರದಲ್ಲಿ ಮಾರ್ಚ್ 2002ರಲ್ಲಿ ನಡೆದ ರೈಲು ಸ್ಫೋಟ, 1995ರಲ್ಲಿ ಒಕ್ಲಹಾಮ ನಗರದಲ್ಲಿ ನಡೆದ ಬಾಂಬ್ ಸ್ಫೋಟ ಈ ಚಟುವಟಿಕೆಗಳು ವಿವಿಧ ಭಯೋತ್ಪಾದಕ ಗುಂಪಿನ ಕೃತ್ಯಗಳು. ಶಾಂತಿಪ್ರಿಯ ದೇಶವಾದ ಭಾರತದಲ್ಲೂ ರಾಜಕೀಯ ಮತ್ತು ಮತಾಂಧರರ ಕುಮ್ಮಕ್ಕಿನಿಂದ ಭಯೋತ್ಪಾದಕರು ನೆರೆಹೊರೆಯ ದೇಶಗಳಿಂದ ನುಸುಳಿ ಬಂದು ಕುಕೃತ್ಯ ನಡೆಸಿದ್ದಾರೆ; ಅಮಾಯಕರನ್ನು ಕೊಂದಿದ್ದಾರೆ. ಕಾಶ್ಮೀರ ಸಮಸ್ಯೆ ಒಂದು ನೆಪಮಾತ್ರವಾಗಿದ್ದು ಇಲ್ಲಿ ಭೀಕರ ಭಯೋತ್ಪಾದನೆಯ ಕೃತ್ಯಗಳು ಜರುಗಿವೆ. ಕೆಲವು ರಾಷ್ಟ್ರಗಳು ದುಷ್ಕೃತ್ಯಕ್ಕೆ ಕುಮ್ಮಕ್ಕು ನೀಡಲು, ಬಂದೂಕು, ಚಾಕು ಚೂರಿ, ಬಾಂಬುಗಳ ತಯಾರಿಕೆ ಮತ್ತು ಅವುಗಳನ್ನು ಉಪಯೋಗಿಸಿ ಭಯೋತ್ಪಾದನೆ ಮಾಡುವ ತರಬೇತಿ ನೀಡುತ್ತಿವೆ.

ಇಂದು ಭಯೋತ್ಪಾದಕ ಗುಂಪುಗಳಾದ ಜಮಾಯತ್-ಎ-ಇಸ್ಲಾಮಿ ಹಿಂದ್‌ನ ಅವಿಭಾಜ್ಯ ಅಂಗವಾದ ಸಿಮಿಯನ್ನು (ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂಮೆಂಟ್ ಆಫ್ ಇಂಡಿಯ) ಟೆರರಿಸ್ಟ್ ಕಾಯ್ದೆ ಪ್ರಕಾರ 2001ರಲ್ಲಿ ಉಗ್ರಗಾಮಿ ಸಂಘಟನೆಯೆಂದು ಘೋಷಿಸಲಾಗಿದೆ. ಭಾರತ ಕೇಂದ್ರ ಗೃಹ ಮಂತ್ರಾಲಯ 2006 ಫೆಬ್ರವರಿ 8 ರಂದು ಮತ್ತೆ ಸಿಮಿಯನ್ನು ನಿಷೇಧಿತ ಸಂಘಟನೆಯೆಂದು ಘೋಷಿಸಿದೆ. ಜೈಷೆ-ಇ-ಮಹಮದ್, ಲಷ್ಕರ್-ಎ-ತೊಯ್ಬಾ, ಹರ್‌ಕತ್-ಉಲ್-ಮುಜಾಯಿದ್ದೀನ್, ಹಿಜಬುಲ್ ಮುಜಾಯಿದ್ದೀನ್, ಜೈಷೆ ಮಹಮದ್ ಮುಂತಾದವು ಉಗ್ರಗಾಮಿ ಸಂಘಟನೆಗಳಾಗಿವೆ. 2006 ಮೇ 5 ರಂದು ಅಮೆರಿಕ ಜೆಯುಡಿ(ಜಮಾತ್-ಉಲ್-ದಾವಾ) ಮತ್ತು ಕಿದ್‌ಮತ್-ಇ-ಕಲ್ ಇವನ್ನು ಉಗ್ರಗಾಮಿ ಸಂಘಟನೆಗಳೆಂದು ಘೋಷಿಸಿದೆ. ಇವುಗಳ ಜೊತೆಗೆ ಶ್ರೀಲಂಕೆಯ ಎಲ್.ಟಿ.ಟಿ.ಇ. ಸಹ ಉಗ್ರಗಾಮಿ ಸಂಘಟನೆಯಾಗಿ ಸಾಕಷ್ಟು ಪ್ರಾಣಹಾನಿಮಾಡಿದೆ. ಇದು ಭಾರತದ ಪ್ರಧಾನಮಂತ್ರಿಯಾಗಿದ್ದ ರಾಜೀವ್‌ಗಾಂಧಿಯವರನ್ನು 1991 ರಲ್ಲಿ, ಶ್ರೀಲಂಕೆಯ ಅಧ್ಯಕ್ಷ ರಣಸಿಂಘೆ ಪ್ರೇಮದಾಸ್ ಅವರನ್ನು 1993ರಲ್ಲಿ ಆತ್ಮಹತ್ಯಾ ದಳದ ವ್ಯಕ್ತಿಗಳ (ಮಾನವಬಾಂಬ್) ಮೂಲಕ ಹತ್ಯೆ ಮಾಡಿಸಿತು. ಭಾರತದ ವಿಮಾನವನ್ನು ಡಿಸೆಂಬರ್ 2000ದಲ್ಲಿ ಹರ್ಕತ್ ಉಗ್ರರು ಅಪಹರಿಸಿ ಕಂದಹಾರ್‌ಗೆ ಒಯ್ದು ಭಾರತದ ಸೆರೆಮನೆಯಲ್ಲಿದ್ದ ಉಗ್ರನೊಬ್ಬನನ್ನು ಬಿಡುಗಡೆಮಾಡುವಂತೆ ಮಾಡಿತು. ಇವುಗಳ ಜೊತೆಗೆ ಒಸಾಮಾ ಬಿನ್ ಲಾಡೆನ್‌ನ ಆಲ್ ಖೈದಾ ಸಂಘಟನೆ, ಪ್ಯಾಲಸ್ತೀನ್‌ನ ಹಮಾಸ್ ಮತ್ತು ತಾಲಿಬಾನ್ ಉಗ್ರಗಾಮಿ ಸಂಘಟನೆಗಳು ಆತ್ಮಹತ್ಯಾ ದಳಗಳನ್ನು ತಯಾರಿಸಿ ಅವರ ಮೂಲಕ ದೇಶಗಳಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿವೆ. ಆತ್ಮಹತ್ಯಾದಳಕ್ಕೆ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುವುದೂ ಹೆಚ್ಚಾಗಿದೆ. ಮುಂಬಯಿಯಲ್ಲಿ 2006 ಜುಲೈ 11 ರಂದು ನಡೆದ ರೈಲುಗಳ ಸರಣಿ ಸ್ಫೋಟ, ಅಕ್ಷರಧಾಮ, ವಾರಾಣಸಿ, ಬೆಂಗಳೂರು, ಹೈದರಾಬಾದ್ ಇವುಗಳಲ್ಲಿ ನಡೆದ ಉಗ್ರರ ಧಾಳಿಗಳು ಮತ್ತು ದೆಹಲಿಯ ಸಂಸತ್ತು ಭವನದ ಮೇಲೆ ಮತಾಂಧ, ಉಗ್ರರು ನಡೆಸಿದ ಧಾಳಿಯಿಂದ ಅಪಾರ ಪ್ರಾಣಹಾನಿಯಾಗಿದೆ. ಕೊಲ್ಲುವುದು, ಹಿಂಸಿಸುವುದು ಮತ್ತು ಆಕ್ರಮಣ ಮಾಡುವುದನ್ನು ಪ್ರಪಂಚದ ಎಲ್ಲೆಡೆ ಎಲ್ಲ ಬಗೆಯ ಧರ್ಮಗಳು ಖಂಡಿಸಿ, ವಿರೋಧಿಸಿ, ಸರ್ಕಾರಗಳ ಸಹಾಯದಿಂದ ದಮನ ಮಾಡಿದಾಗ ಮಾತ್ರ ಈ ಭಯೋತ್ಪಾದನೆ ಕೊನೆಗಾಣಬಹುದು.

**ಅಲ್ ಖೈದಾ:** ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ಷೋಭೆಯುಂಟುಮಾಡುತ್ತಿರುವ ಪ್ರಮುಖ ಭಯೋತ್ಪಾದಕ ಸಂಘಟನೆ. ಅಮೆರಿಕ, ಬ್ರಿಟನ್‌ನಂಥ ಪಾಶ್ಚಾತ್ಯ ರಾಷ್ಟ್ರಗಳು ಅಲ್‌ಖೈದಾ ಸಂಘಟನೆ ಮತ್ತು ಅದರ ಸದಸ್ಯಬಲವನ್ನು ಬಗ್ಗು ಬಡಿಯಲು ಸಮರ ತಂತ್ರಗಳನ್ನು ಹೂಡುತ್ತಿದ್ದರೂ ಆ ಸಂಘಟನೆ ಮತ್ತಷ್ಟು ಶಕ್ತಿಶಾಲಿ ಆಗುತ್ತಿದೆ ಎನ್ನುವುದಕ್ಕೆ ಅಲ್‌ಖೈದಾ ಮುಖ್ಯಸ್ಥ ಬಿನ್‌ಲಾಡನ್ ತಲೆಯ ಮೌಲ್ಯ ದುಪ್ಪಟ್ಟಾಗಿರುವುದೇ ಸಾಕ್ಷಿ.

ಪ್ರಪಂಚವನ್ನೇ ನೆಲೆಯನ್ನಾಗಿ ಮಾಡಿಕೊಂಡಿರುವ ಈ ಭಯೋತ್ಪಾದಕ ಸಂಘಟನೆ ತನ್ನ ಹಿಂಸಾಕೃತ್ಯಗಳಿಂದ ಪ್ರಪಂಚವನ್ನೆ ನಡುಗಿಸುತ್ತಿದೆ. ಅಲ್‌ಖೈದಾ ಎಂದರೆ ಅರೆಬಿಕ್ ಭಾಷೆಯಲ್ಲಿ ನೆಲೆ ಎಂದರ್ಥ. ಸುನ್ನಿ ಪಂಗಡಕ್ಕೆ ಸೇರಿದ ಮೂಲಭೂತವಾದಿಗಳ ಜಿಹಾದಿ ಸಂಘಟನೆ ಇದು. 1989ರ ಆಸುಪಾಸಿನಲ್ಲಿ ಆಫ್ಘಾನಿಸ್ತಾನದಲ್ಲಿ ಸೋವಿಯತ್ ಒಕ್ಕೂಟದ ಅಸ್ತಿತ್ವವನ್ನು ಕೊನೆಗಾಣಿಸಲು ಒಸಾಮ ಬಿನ್ ಲಾಡೆನ್ ಮತ್ತು ಇತರರು ಸೇರಿ ಇದನ್ನು ಕಟ್ಟಿದರು. ಆದರೆ ಮತ್ತಷ್ಟು ಅದರ ಮೂಲ ಹುಡುಕುತ್ತ ಹೋದರೆ ಇದರ ಬೇರು ಇರುವುದು 1978ರಲ್ಲಿ ಸೋವಿಯತ್ ಒಕ್ಕೂಟದ ಪ್ರಾಬಲ್ಯ ಮುರಿಯಲು ಅಮೆರಿಕ ಮತ್ತು ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆಗಳು ಆಫ್ಘಾನಿಸ್ತಾನದ ಮುಜಾಹಿದ್ದೀನ್‌ಗಳಿಗೆ ನೆರವು ನೀಡಿದವು. ಇದಕ್ಕೆ ಇಟ್ಟಹೆಸರು ಆಪರೇಷನ್ ಸೈಕ್ಲೋನ್ ಶೀತಲ ಸಮರದ ಆ ಸಂದರ್ಭದಲ್ಲಿ ಅಮೆರಿಕ ಸಿಐಎ ಸ್ವತಃ ಲಾಡೆನ್‌ಗೆ ಹಣಕಾಸಿನ ನೆರವು ನೀಡಿತ್ತು. ಸೋವಿಯತ್ ಒಕ್ಕೂಟ ತನ್ನ ಪಡೆಗಳನ್ನು ಹಿಂತೆಗೆದುಕೊಂಡಾಗ ಅಲ್‌ಖೈದಾದ ಗೆರಿಲ್ಲಾ ಪಡೆಗಳನ್ನು ಕಾಡಿದ್ದು ನಿರುದ್ಯೋಗ. ಆಗ ಜಿಹಾದ್‌ನತ್ತ ಅಲ್‌ಖೈದಾ ಗಮನ ಹರಿಸಿತು. ಮುಸ್ಲಿಂ ರಾಷ್ಟ್ರಗಳಲ್ಲಿ ವಿದೇಶಿ ರಾಷ್ಟ್ರಗಳ ಪ್ರಭಾವವನ್ನು ಕೊನೆಗಾಣಿಸುವುದು, ಅಮೆರಿಕ, ಇಸ್ರೇಲ್ ನಂಥ ರಾಷ್ಟ್ರಗಳನ್ನು ನಾಶ ಮಾಡಿ ಜಾಗತಿಕವಾಗಿ ಹೊಸ ಇಸ್ಲಾಂ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವುದು ಅದರ ಈಗಿನ ಗುರಿ. ಅಮೆರಿಕದ ಕೈಗೂಸಾದ ಅಲ್‌ಖೈದಾ ಅದರ ವಿರುದ್ಧವೇ ತಿರುಗಿ ಬಿದ್ದಿದ್ದು ಪರಿಸ್ಥಿತಿಯ ವಿಪರ್ಯಾಸ. ಉಗ್ರಗಾಮಿಗಳಿಗೆ ಪ್ರಚೋದನೆ ನೀಡಿದ ರಾಷ್ಟ್ರಗಳು ಮತ್ತು ವ್ಯಕ್ತಿಗಳಿಗೆ ಅದೇ ವ್ಯವಸ್ಥೆ ತಿರುಗೇಟು ನೀಡುತ್ತಿರುವುದು ಐತಿಹಾಸಿಕ ಮತ್ತು ಪ್ರಚಲಿತ ಸತ್ಯ. ಪಾಕಿಸ್ತಾನ ಇದಕ್ಕೊಂದು ಹಾಲಿ ನಿದರ್ಶನ.

ತಾಲಿಬಾನ್‌ಗಳ ಮೂಲಕ ಆಫ್ಘಾನಿಸ್ತಾನವನ್ನು ತನ್ನ ಭದ್ರನೆಲೆ ಮಾಡಿಕೊಂಡಿದ್ದ ಅಲ್‌ಖೈದಾ ಈಗ ಎಲ್ಲ ಮುಸ್ಲಿಂ ರಾಷ್ಟ್ರಗಳಲ್ಲಿ ಸಕ್ರಿಯವಾಗಿದೆ. ಮಧ್ಯಪ್ರಾಚ್ಯ ರಾಷ್ಟ್ರಗಳು, ಉತ್ತರ ಆಫ್ರಿಕಾದ ರಾಷ್ಟ್ರಗಳಲ್ಲಿ ವಿವಿಧ ಸಂಘಟನೆಗಳ ಹೆಸರಿನಲ್ಲಿ ಅಲ್‌ಖೈದಾ ಈಗಾಗಲೇ

ಅಸ್ತಿತ್ವವನ್ನು ಹೊಂದಿದೆ. ಧರ್ಮಕ್ಕಾಗಿ ಪ್ರಾಣ ಕೊಡುವ ವ್ಯಕ್ತಿಗಳು ಅಲ್‌ಖೈದಾ ಹೋರಾಟಕ್ಕೆ ಜೀವತುಂಬುತ್ತಲೇ ಇದ್ದಾರೆ. ಮೊದಲು ಸಾಮಾನ್ಯ ಜನರು, ನಿರುದ್ಯೋಗಿಗಳು ಹಣಕ್ಕಾಗಿ ಈ ಸಂಘಟನೆ ಸೇರಿಕೊಂಡು ಬಂದೂಕು ಹಿಡಿದರೆ ಈಗ ಸುಶಿಕ್ಷಿತರೂ ಅಲ್‌ಖೈದಾ ಜಾಡಿನಲ್ಲಿ ಸಾಗುತ್ತಿರುವುದು ಘೋರ ದುರಂತ 2000 ದ ಸೆಪ್ಟೆಂಬರ್ 11 ದಾಳಿಯ ಬಳಿಕ. ಅಮೆರಿಕ, ಆಫ್ಘಾನಿಸ್ತಾನದ ಮೇಲೆ ನಡೆಸಿದ ಆಕ್ರಮಣದಿಂದಾಗಿ ಛಿದ್ರವಾಗಿದ್ದ ಅಲ್‌ಖೈದಾ ಸಂಘಟನೆ ಈಗ ಮತ್ತೆ ಚಿಗುರಿಕೊಂಡಿದೆ. ಬ್ರಿಟನ್ನಿನಲ್ಲಿ ನಡೆದ ವಿಧ್ವಂಸಕ ಕೃತ್ಯಗಳು ಮತ್ತೊಮ್ಮೆ ಅಲ್‌ಖೈದಾದ ಪ್ರಬಲ ಅಸ್ತಿತ್ವವನ್ನು ಸಾಬೀತು ಪಡಿಸಿವೆ. ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನ ಗಡಿಯಲ್ಲಿರುವ ರಕ್ಷಣೆಯನ್ನು ದುರುಪಯೋಗ ಪಡಿಸಿಕೊಂಡಿರುವ ಅಲ್‌ಖೈದಾ ಶಕ್ತಿಯೊಂದಿಗೆ ಇನ್ನಷ್ಟು ದಾಳಿಗಳಿಗೆ ಸಜ್ಜಾಗುತ್ತಿದೆ ಎಂದು ಅಮೆರಿಕದ ಭಯೋತ್ಪಾದನಾ ನಿಗ್ರಹ ದಳದ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ವಿದ್ಯಮಾನಗಳು ಈ ಅವ್ಯಕ್ತ ಭಯವನ್ನು ಸಮರ್ಥಿಸಿವೆ.

ವಿಶ್ವ ವಾಣಿಜ್ಯ ಕೇಂದ್ರದ ಎರಡು ಗೋಪುರಗಳ ಮೇಲೆ ನಡೆಸಿದ ಧಾಳಿಯಿಂದ ಅಲ್‌ಖೈದಾ ತನ್ನದೇ ಚರಮಗೀತೆ ಹಾಡಿತು ಎಂದು ಭಾವಿಸಲಾಗಿದೆ. ಈ ಧಾಳಿಯಿಂದ ಕಂಗೆಟ್ಟ ಅಮೆರಿಕ ಅಲ್‌ಖೈದಾದ ಕೇಂದ್ರ ಸ್ಥಳವೆಂದು ಭಾವಿಸಲಾದ ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನಡೆಸಿತು. ತಾಲಿಬಾನ್‌ಗಳನ್ನು ಹಿಮ್ಮೆಟ್ಟಿಸುವಲ್ಲಿ ಅಮೆರಿಕ ಯಶಸ್ವಿಯಾದರೂ ಅವರನ್ನು ಪೂರ್ತಿ ಚಿವುಟಿಹಾಕಲು ಸಾಧ್ಯವಾಗಲಿಲ್ಲ. ಅದಕ್ಕಿಂತ ದೊಡ್ಡ ವೈಫಲ್ಯವೆಂದರೆ ಅಲ್‌ಖೈದಾದ ಪರಮೋಚ್ಚ ನಾಯಕ ಒಸಾಮ ಬಿನ್ ಲಾಡೆನ್‌ನನ್ನು ಹಿಡಿಯಲು ಅಥವಾ ಕೊಲ್ಲಲು ಅಮೆರಿಕ ಮಾಡಿದ ಎಲ್ಲ ಸಮರ ತಂತ್ರವೂ ವಿಫಲವಾಯಿತು. ಲಾಡೆನ್ ಸತ್ತ ವದಂತಿಗಳಿಂದಷ್ಟೇ ಅಮೆರಿಕ ತೃಪ್ತಿ ಪಡಬೇಕಾಯಿತು. ಸತತ ಆರು ವರ್ಷಗಳ ಕಾಲ ಆಫ್ಘಾನಿಸ್ತಾನದ ಮೇಲೆ ಬಾಂಬ್‌ಗಳ ಸುರಿಮಳೆ ಸುರಿಸಿದರೂ ಅಲ್‌ಖೈದಾ ಬಗ್ಗಿದಂತೆ ಕಾಣುತ್ತಿಲ್ಲ. ಬದಲಾಗಿ ಹೊಸ ತಂತ್ರಗಳು, ಊಹಿಸಲೂ ಅಸಾಧ್ಯವಾದ ವ್ಯಕ್ತಿಗಳ ನೆರವಿನೊಂದಿಗೆ ಅಲ್‌ಖೈದಾ ದಾಳಿಗಳಿಗೆ ಮುಂದಾಗಿದೆ. ಅತೃಪ್ತ ಜನಸಾಮಾನ್ಯರಿಗಿಂತ ಮೇಧಾವಿಗಳ ದೊಡ್ಡ ಪಡೆ ಅಲ್‌ಖೈದಾದ ಬತ್ತಳಿಕೆಯಲ್ಲಿರುವುದೇ ದೊಡ್ಡ ಆತಂಕದ ವಿಷಯ.

ಇರಾಕ್ ಮೇಲೆ ನಡೆದ ಅಮೆರಿಕದ ಧಾಳಿ ಅಲ್‌ಖೈದಾಕ್ಕೆ ಪರೋಕ್ಷ ಪರವಾನಗಿ ಬಂದಂತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳ ಬಗ್ಗೆ ಇಸ್ಲಾಂ ಧರ್ಮದ ಒಂದು ವರ್ಗದಲ್ಲಿರುವ ದ್ವೇಷವನ್ನು ಮೂಲಭೂತವಾದಿ ಧಾರ್ಮಿಕ ಗುರುಗಳು ಚೆನ್ನಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಅಲ್‌ಖೈದಾ ದಿನದಿಂದ ದಿನಕ್ಕೆ ಪ್ರಬಲವಾಗುತ್ತಿರುವುದು ಪಾಶ್ಚಿಮಾತ್ಯ ರಾಷ್ಟ್ರಗಳ ತಪ್ಪುಗಳಿಂದಲೇ ಎನ್ನಬಹುದು.

ಹಿಂದಿನ ವರ್ಷಗಳಿಗಿಂತ ಅಲ್‌ಖೈದಾ ಬಲಗೊಳ್ಳುತ್ತಲೇ ಸಾಗುತ್ತಿದೆ. 2001 ರಿಂದೀಚೆಗೆ ಆ ಸಂಘಟನೆಯ ಉಗ್ರರು ಹೆಚ್ಚು ಸಂಘಟಿತರಾಗಿದ್ದಾರೆ. ಅಮೆರಿಕ ಮತ್ತು ಅದರ ಮಿತ್ರ ಪಕ್ಷಗಳು ತಮ್ಮ ರಕ್ಷಣೆಯನ್ನು ಹೇಗೆ ಬಲಗೊಳಿಸುತ್ತಿವೆಯೋ ಹಾಗೆಯೇ ಅಲ್‌ಖೈದಾ ಸಂಘಟನೆಯೂ ರಕ್ಷಣೆಯನ್ನು ಬಿಗಿಗೊಳಿಸುವುದರೊಂದಿಗೆ ತನ್ನ ಬಲವನ್ನೂ ಹೆಚ್ಚಿಸಿಕೊಳ್ಳುತ್ತಿದೆ ಎಂದು ಅಮೆರಿಕದ ಭಯೋತ್ಪಾದನಾ ನಿಗ್ರಹ ತಜ್ಞರ ವರದಿಯಲ್ಲಿ ಹೇಳಲಾಗಿದೆ.

ಇತ್ತೀಚೆಗೆ ಅಲ್‌ಖೈದಾ ಪರಮೋಚ್ಚ ನಾಯಕ ಒಸಾಮ ಬಿನ್ ಲಾಡೆನ್ ಸಾರ್ವಜನಿಕವಾಗಿ ಯಾವುದೇ ಹೇಳಿಕೆ ನೀಡಿಲ್ಲದಿದ್ದರೂ ಅಲ್‌ಖೈದಾದ ಯೋಜನೆಯಲ್ಲಿ ಈತ ಪಾತ್ರವಹಿಸುತ್ತಿದ್ದಾನೆ ಎಂದು ಬೇಹುಗಾರಿಕೆ ಸಂಸ್ಥೆಗಳು ಹೇಳಿವೆ. ಇದಕ್ಕಾಗಿ ಅಮೆರಿಕ ಈತನ ತಲೆಯ ಮೌಲ್ಯವನ್ನು ದ್ವಿಗುಣಗೊಳಿಸಿ ಐದು ಕೋಟಿ ಡಾಲರ್‌ಗೆ ಹೆಚ್ಚಿಸಿದೆ.

ಆದರೆ ಅಲ್‌ಖೈದಾ ತನ್ನ ಆರ್ಥಿಕ ಜೀವನಾಡಿಗಳನ್ನು ಚುರುಕುಗೊಳಿಸಿ, ಜಾಗತಿಕ ಕಾರ್ಯಾಚರಣೆಗೆ ಸಜ್ಜಾಗಿದೆ. ಆಫ್ಘಾನಿಸ್ತಾನ ಮತ್ತು ಇರಾಕ್‌ಗಳಲ್ಲಿ ದಿನಂಪ್ರತಿ ತನ್ನ ಅಸ್ತಿತ್ವವನ್ನು ಸಾಬೀತು ಪಡಿಸುತ್ತಲೇ ಅಲ್‌ಖೈದಾ, ಯುರೋಪ್ ಮತ್ತು ಮುಸ್ಲಿಂ ವಿರೋಧಿ ರಾಷ್ಟ್ರಗಳ ಮೇಲೆರಗಲು ಯೋಜನೆ ರೂಪಿಸುತ್ತಲೇ ಇದೆ. ಗೆರಿಲ್ಲಾ ಸಮರ ತಂತ್ರ ಅಲ್‌ಖೈದಾದ ದೊಡ್ಡ ಶಕ್ತಿ. ಉಗ್ರರನ್ನು ಎದುರಿಸಲು ಎಷ್ಟೇ ಸಿದ್ಧತೆ ನಡೆಸಿದರೂ ಊಹಿಸಿದ ವಿಧಾನದಲ್ಲಿ ಮೇಲೆರಗುವುದು ಅದರ ತಂತ್ರ. ಹೀಗಾಗಿ ಅಮೆರಿಕದಂಥ ಶಿಸ್ತುಬದ್ಧ ರಾಷ್ಟ್ರವೂ ಅಲ್‌ಖೈದಾ ದಾಳಿಯನ್ನು ಎದುರಿಸಲು ವಿಫಲವಾಗುತ್ತಿದೆ. ಏಷ್ಯನ್ ಟೈಮ್ಸ್ ಆನ್‌ಲೈನ್ ಪತ್ರಿಕೆಯ ವರದಿಯ ಪ್ರಕಾರ ಅಲ್‌ಖೈದಾ ಕ್ಷಿಪಣಿ ಮತ್ತು ರಾಕೆಟ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಒಸಾಮ ಬಿನ್ ಲಾಡೆನ್ ಬಳಿ ಪರಮಾಣು ತಂತ್ರಜ್ಞಾನ ಇರುವುದು ಈಗ ರಹಸ್ಯವಾಗಿ ಉಳಿದಿಲ್ಲ. ಪರಮಾಣುಬಾಂಬ್‌ಗಳನ್ನು ಕೊಂಡೊಯ್ಯಬಲ್ಲ ಕ್ಷಿಪಣಿಗಳನ್ನೂ ಅಲ್‌ಖೈದಾ ಹೊಂದಿದೆ ಎಂದರೆ ಅದರ ಶಕ್ತಿಯ ಕಲ್ಪನೆ ಮಾಡಬಹುದು. (ಎನ್‌ಆರ್.)

**ಭರತ್‌ಪುರ:** ಪಶ್ಚಿಮ ಬಂಗಾಲ ರಾಜ್ಯದ ಬುರ್ದ್‌ವಾನ್ ಜಿಲ್ಲೆಯಲ್ಲಿ ದಾಮೋದರ ನದಿಯ ಎಡದಂಡೆಯ ಮೇಲಿರುವ ಪುರಾತತ್ತ್ವ ನೆಲೆ. 1972–74 ರ ಅವಧಿಯಲ್ಲಿ ನಡೆದ ಉತ್ಖನನದಲ್ಲಿ ತಾಮ್ರಶಿಲಾಯುಗದಿಂದ ಐತಿಹಾಸಿಕ ಕಾಲದವರೆಗಿನ 4 ಹಂತಗಳು ಬೆಳಕಿಗೆ ಬಂದಿವೆ.

ಮೊಟ್ಟಮೊದಲು ಇಲ್ಲಿ ನೆಲೆಸಿದ ತಾಮ್ರ–ಶಿಲಾಯುಗದ ಜನರು ಬೇಟೆ ಹಾಗೂ ಮೀನುಗಾರಿಕೆಗಳಿಂದ ಜೀವನ ನಡೆಸುತ್ತಿದ್ದರು. ಇವರ ಕೃಷಿ ಆರಂಭಿಕ ಹಂತದ್ದು. ಬೊಂಬಿನ ಗುರುತುಳ್ಳ ಹಾಗೂ ಜೇಡಿಯಿಂದ ಗಿಲಾವು ಮಾಡಿರುವ ಮಣ್ಣಿನ ಗೋಡೆಯ ಭಾಗಗಳಿಂದ ಇವರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದರೆಂದು ತಿಳಿಯುವುದು. ದೊಡ್ಡ ದೊಡ್ಡ ತೆರೆದ ಒಲೆಗೂಡುಗಳು ಇಲ್ಲಿ ಕಂಡುಬಂದಿವೆ. ಇವರು ಸೂಕ್ಷ್ಮ ಶಿಲೋಪಕರಣಗಳನ್ನೂ ನವಶಿಲಾಯುಗದ ಚಪ್ಪಟೆ ಕೊಡಲಿಗಳನ್ನೂ ಬಳಸುತ್ತಿದ್ದರು. ಇವರು ಉಪಯೋಗಿಸುತ್ತಿದ್ದ ಇತರ ವಸ್ತುಗಳೆಂದರೆ ಮೂಳೆಯ ಉಪಕರಣಗಳು, ಬಳಪದ ಕಲ್ಲಿನ ಮಣಿಗಳು ಹಾಗೂ ಕೆಲವು ತಾಮ್ರದ ವಸ್ತುಗಳು. ಇವರು ಅಲಂಕಾರರಹಿತವಾದ ಮತ್ತು ಕಪ್ಪು ಮತ್ತು ಬಿಳಿಯ ಬಣ್ಣಗಳಿಂದ ಚಿತ್ರಿತವಾದ ಕೆಂಪುಪಾತ್ರೆಗಳು ಉಪಯೋಗಿಸುತ್ತಿದ್ದರು. ಕೆಲವೊಂದು ಮಡಕೆಗಳು ಕೈಯಲ್ಲೇ ಮಾಡಿದಂಥವು. ಇಂಗಾಲ 14 ವಿಧಾನದ ಆಧಾರದ ಮೇಲೆ ಈ ಹಂತದ ಕಾಲವನ್ನು ಪ್ರ.ಶ.ಪೂ.ಸು. 15 ನೆಯ ಶತಮಾನ ಎಂದು ನಿಗದಿಪಡಿಸಲಾಗಿದೆ.

2ನೆಯ ಹಂತ; ಈ ಹಂತದಲ್ಲಿ ಪ್ರಥಮ ಬಾರಿಗೆ ಕಬ್ಬಿಣದ ಉಪಕರಣಗಳು ಬಳಕೆಗೆ ಬಂದದ್ದು ಗಮನಾರ್ಹ. ಆದರೆ ಜನಜೀವನದಲ್ಲಾಗಲೀ ದಿನನಿತ್ಯದ ಬಳಕೆಯ ವಸ್ತುಗಳಲ್ಲಾಗಲೀ ಅಂತಹ ಬದಲಾವಣೆಗಳೇನೂ ಕಾಣುವುದಿಲ್ಲ. ಹಿಂದಿನ ಹಂತದ ಮಣ್ಪಾತ್ರೆ ಸಂಪ್ರದಾಯಗಳೇ ಮುಂದುವರೆದಿದ್ದರೂ ಗುಣಮಟ್ಟದಲ್ಲಿ ಅವನತಿ ಕಾಣುತ್ತದೆ. ಈ ಕಾಲಕ್ಕೆ ಸೇರಿದ ಮೇಲಿನ ಸ್ತರಗಳಲ್ಲಿ ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆಗಳೂ ಕಪ್ಪು ಲೇಪನವುಳ್ಳ ಪಾತ್ರೆಗಳೂ ಸಿಕ್ಕಿವೆ. ಈ ಹಂತದ ಅನಂತರ ಬಹುಕಾಲದವರೆಗೂ ಈ ನೆಲೆಯಲ್ಲಿ ಜನವಸತಿಯಿರಲಿಲ್ಲ.

3ನೆಯ ಹಂತ: ಈ ಹಂತದಲ್ಲಿ ಸುಟ್ಟಇಟ್ಟಿಗೆಯ ಕಟ್ಟಡಗಳು ಕಾಣಿಸಿಕೊಳ್ಳುತ್ತವೆ. ಈ ಹಂತದ ಕಾಲಮಾನ ತಿಳಿದಿಲ್ಲ.

4ನೆಯ ಹಂತ: ಈ ಕಾಲದಲ್ಲಿ ಬೌದ್ಧ ಸ್ತೂಪವೊಂದನ್ನು ಕಟ್ಟಲಾಯಿತು. ಉತ್ತಮವಾದ ಈ ಇಟ್ಟಿಗೆಯ ಕಟ್ಟಡವನ್ನು ಸುಣ್ಣ–ಸುರ್ಕಿಗಾರೆಯಲ್ಲಿ ನಿರ್ಮಿಸಲಾಗಿದೆ. ಈಗ ಉಳಿದಿರುವ 13ಮೀ ಚದರದ ಹಿಂಚಾಚು ಹಾಗೂ ಮುಂಚಾಚುಗಳುಳ್ಳ ವೇದಿಕೆಯ ಮುಂಭಾಗದಲ್ಲಿ ಅಡ್ಡ ಮಡಿಕೆಗಳು ಮತ್ತು ಚೈತ್ಯಗೂಡಿನ ಶಿಲ್ಪಗಳಿವೆ. ವೇದಿಕೆಯಲ್ಲಿಯ ಬೋದಿಗೆಯ ಮೇಲೆ ಮುಂಚಾಚಿದ ಭಾಗಗಳಲ್ಲಿ ಬುದ್ಧನ ಪ್ರತಿಮೆಗಳನ್ನಿಡಲು ಗೂಡುಗಳಿವೆ. ಕಾಲಾನಂತರ ಈ ಸ್ತೂಪವನ್ನು ದುರಸ್ತಿ ಮಾಡಿ ಚಿಪ್ಪು–ಸುಣ್ಣದಿಂದ ಗಿಲಾವು ಮಾಡಲಾಯಿತು. ಅಧಿಷ್ಠಾನದಲ್ಲಿ ಕೆಳಗಿನ 5 ಸಾಲುಗಳನ್ನು ಮಾತ್ರ ಹಾಗೇ ಬಿಡಲಾಗಿದೆ. ಬಹುಶಃ ಆ ಕಾಲಕ್ಕಾಗಲೇ ಭಗ್ನಾವಶೇಷಗಳಿಂದ ಇವು ಮುಚ್ಚಿಹೋಗಿದ್ದಿರಬೇಕು. ಇಲ್ಲಿನ ಅವಶೇಷಗಳ ಪೈಕಿ ಗೂಡುಗಳಲ್ಲಿ ಸ್ಥಾಪಿತವಾಗಿದ್ದ ಭೂಮಿಸ್ಪರ್ಶ ಮುದ್ರೆಯಲ್ಲಿರುವ ಬುದ್ಧನ 5 ಕಲ್ಲಿನ ಪ್ರತಿಮೆಗಳು ಗಮನಾರ್ಹ. ಶೈಲಿಯ ಆಧಾರದ ಮೇಲೆ ಪ್ರ.ಶ.9–10 ನೆಯ ಶತಮಾನಕ್ಕೆ ಇವು ಸೇರುತ್ತವೆ. (ಜಿ.ಎಸ್.)

**ಭರೂಚ್:** ಗುಜರಾತ್ ರಾಜ್ಯದ ಒಂದು ಜಿಲ್ಲಾ ಕೇಂದ್ರ; ಐತಿಹಾಸಿಕ ಸ್ಥಳ. ಪೌರಾಣಿಕ ಕಥಾನಕದಂತೆ ಈ ನಗರವನ್ನು ಭೃಗು ಋಷಿ ನರ್ಮದ ನದಿಯ ಮುಖಜಭೂಮಿಯಲ್ಲಿ ಸ್ಥಾಪಿಸಿದನೆಂದೂ ಅಂದಿನಿಂದ ಈ ನಗರಕ್ಕೆ ಭೃಗುಪುರ, ಭೃಗುಕುಚ್ಛ ಅಥವಾ ಭರುಕಚ್ಛವೆಂಬ ಹೆಸರು ಬಂದಿತೆಂದೂ ಪ್ರತೀತಿ. ಬೌದ್ಧರ ದಿವ್ಯಾವದಾನ ಗ್ರಂಥದ ಪ್ರಕಾರ ಈ ನಗರವನ್ನು ಭೀರು ಎಂಬಾತ ಸೌವೀರದಿಂದ ಬಂದು ಸ್ಥಾಪಿಸಿದ. ಜೈನ ಪರಂಪರೆಯಂತೆ ಈ ನಗರ ಉಜ್ಜಯನಿಯ ಪ್ರದ್ಯೋತನ (ಪ್ರ.ಶ.ಪೂ.550) ಆಳಿಕೆಯಲ್ಲಿತ್ತು. ಐತಿಹಾಸಿಕ ಪುರಾವೆಗಳ ಪ್ರಕಾರ ಈ ನಗರ ಒಂದು ಪವಿತ್ರಸ್ಥಳವಾಗಿತ್ತು. ನಾಸಿಕದ ರಾಜ್ಯಪಾಲ ಕ್ಷಹರಾತ ನಹಾಪಾನನ ಅಳಿಯ ಉಕ್ಷವದಾತ ಇಲ್ಲಿನ ಬ್ರಾಹ್ಮಣರಿಗೆ ದಾನ ಮಾಡಿದನೆಂದು ಈತನ ಶಾಸನಗಳು ತಿಳಿಸುತ್ತವೆ. ಕಳಚ ಸಂಗಮಸಿಂಹ 520ರಲ್ಲಿ ಭರುಕಚ್ಛದ ಬ್ರಾಹ್ಮಣರಿಗೆ ಸೋಣವ್ವ ಗ್ರಾಮವನ್ನು ಉಂಬಳಿಯಾಗಿ ಕೊಟ್ಟ. ಗೂರ್ಜರ ವಂಶದ ಎರಡನೆಯ ದದ್ದನ ಕಾಲದಲ್ಲಿ ಚೀನದ ಪ್ರಸಿದ್ಧ ಯಾತ್ರಿ ಯುವಾನ್‌ಚಾಂಗ್ ಭರುಕಚ್ಛಕ್ಕೆ ಭೇಟಿಕೊಟ್ಟ. ಇದೊಂದು ಪ್ರತ್ಯೇಕ ರಾಜ್ಯವೆಂದೂ ಇಲ್ಲಿಯ ಭೂಮಿ ಕ್ಷಾರಯುತವಾಗಿದ್ದ ಕಾರಣ ಗಿಡಗಂಟೆಗಳು ಅಲ್ಪಪ್ರಮಾಣದಲ್ಲಿ ಕಾಣಸಿಗುತ್ತವೆಂದೂ ಹೇಳಿದ್ದಾನೆ. ಪ್ರ.ಶಕದ ಆರಂಭಕಾಲದಿಂದಲೇ ಬ್ರೋಚನಗರ ಪಶ್ಚಿಮ ಭಾರತದ ಒಂದು ಪ್ರಮುಖ ಬಂದರಾಗಿದ್ದು ಶ್ರೀಮಂತವಾಗಿತ್ತು ಎಂದು ಇವನು ತಿಳಿಸುತ್ತಾನೆ. ಈ ಶ್ರೀಮಂತಿಕೆಯಿಂದ ಆಕರ್ಷಿತರಾಗಿ 7ನೆಯ ಶತಮಾನದಲ್ಲಿ ಅರಬ ದೇಶದ ಮುಸಲ್ಮಾನರು ಈ ನಗರದ ಮೇಲೆ ನೌಕಾಧಾಳಿ ಮಾಡಿದರು. ಅರಬ ದೇಶದ ಪ್ರಮುಖ ಪ್ರವಾಸಿಗರಾದ ಅಲ್ಬೆರೂನಿ, ಅಲ್‌ಮಸೂದಿ ಹಾಗೂ ಅಲ್‌ಇದ್ರಿಸಿ ಈ ನಗರ ಹಾಗೂ ಇಲ್ಲಿಯ ಜನರ ಬಗೆಗೆ ವಿಶೇಷ ವಿವರಣೆಗಳನ್ನು ನೀಡಿದ್ದಾರೆ. ಅಲ್ಲದೆ ಬ್ರೋಚ ಬಂದರಿನಲ್ಲಿ ಚೀನ ಹಾಗೂ ಸಿಂಹಳದಿಂದ ಬಂದ ಹಡಗುಗಳ ಬಗೆಗೆ ಉಲ್ಲೇಖಿಸಲಾಗಿದೆ. ಸು. 415 ವರ್ಷಗಳವರೆಗೆ (1297–1772) ಬ್ರೋಚನಗರ ಮುಸಲ್ಮಾನರ ಆಳಿಕೆಯಲ್ಲಿತ್ತು. ಮುಂದೆ ಬ್ರಿಟಿಷರು (1616) ಮತ್ತು ಡಚ್ಚರು (1617) ಇಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿದರು. 1772ರಲ್ಲಿ ಈ ನಗರ ಬ್ರಿಟಿಷರ ವಶವಾಗಿ 1947ರಲ್ಲಿ ಸ್ವತಂತ್ರ ಭಾರತದ ಅವಿಭಾಜ್ಯ ಅಂಗವಾಯಿತು.

ಬ್ರೋಚನಗರ ಈಗ ನರ್ಮದ ನದಿಯ ಬಲದಂಡೆಯಲ್ಲಿರುವ ಎತ್ತರವಾದ ಸಾಂಸ್ಕೃತಿಕ ದಿಬ್ಬದ ಮೇಲಿದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಕೆ.ವಿ.ಸೌಂದರರಾಜನ್ ಇಲ್ಲಿ ಉತ್ಖನನ ನಡೆಸಿ ನಾಲ್ಕು ಸಾಂಸ್ಕೃತಿಕ ಹಂತಗಳ ಅವಶೇಷಗಳನ್ನು ಗುರುತಿಸಿದರು.

1ನೆಯ ಹಂತ– ತಾಮ್ರ–ಶಿಲಾಯುಗ: ಈ ಅವಶೇಷಗಳು ಉತ್ಖನನದಿಂದ ದೊರೆತವಲ್ಲ. ಕಾನೂನು ಮಹಾವಿದ್ಯಾಲಯದ ಕಟ್ಟಡ ನಿರ್ಮಾಣಕ್ಕೆ ಅಡಿಪಾಯ ತೋಡುವಾಗ ಆಕಸ್ಮಿಕವಾಗಿ ಇವು ಬೆಳಕಿಗೆ ಬಂದವು. ಇಲ್ಲಿ ದೊರೆತ ಕೆಂಪು ಹಾಗೂ ನಸುಹಳದಿ ಬಣ್ಣದ ಮಣ್ಪಾತ್ರೆ ಚೂರುಗಳು ಪಶ್ಚಿಮ ಭಾರತದ ತಾಮ್ರ–ಶಿಲಾಯುಗದಲ್ಲಿ ದೊರೆಯುವ ಮಣ್ಪಾತ್ರೆಗಳನ್ನು ಹೋಲುತ್ತವೆ.

2ನೆಯ ಹಂತ– ಆದಿ ಚಾರಿತ್ರಿಕ ಕಾಲ (ಪ್ರ.ಶ.ಪೂ. 3ನೆಯ ಶತಮಾನ): ಉತ್ಖನನದಲ್ಲಿ ಕೆಳಗಿನ ಸ್ತರಗಳಲ್ಲಿ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆ ಹಾಗೂ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಗಳು ದೊರೆತವು. ಈ ಹಂತದಲ್ಲಿ ಬಳೆಯಿಳಿಸಿದ ಐದು ಬಾವಿಗಳನ್ನು ಬೆಳಕಿಗೆ ತರಲಾಯಿತು. ವಸತಿಯ ಸುತ್ತ ನಿರ್ಮಿಸಿದ್ದ ಮಣ್ಣಿನ ರಕ್ಷಣಾಗೋಡೆಯ ಭಾಗಗಳನ್ನೂ ಉತ್ಖನನದಲ್ಲಿ ಪತ್ತೆಮಾಡಲಾಯಿತು. ಇತರ ಅವಶೇಷಗಳಿವು: ಎಲುಬಿನ ಬಾಣದ ಮೊನೆ, ಮುದ್ರಿತ ಹಾಗೂ ಅಚ್ಚೊತ್ತಿ ಮಾಡಲಾದ ಮಣ್ಪಾತ್ರೆಗಳು, ಸುಟ್ಟಮಣ್ಣಿನ ಚಕ್ರ/ಬಿಲ್ಲೆಗಳು, ಕರ್ಣಾಭರಣಗಳು, ಚದುರಂಗದಾಟದ ಕಾಯಿಗಳು, ಅರೆಪ್ರಶಸ್ತ ಕಲ್ಲಿನ ಮಣಿಗಳು ಮತ್ತು ಸುಟ್ಟಮಣ್ಣಿನ ಹಾಗೂ ಚಿಪ್ಪಿನ ಬಳೆಗಳು.

3ನೆಯ ಹಂತ–ಪ್ರಸಕ್ತಶಕದ ಆರಂಭದಿಂದ 5ನೆಯ ಶತಮಾನ: ಹೊಳಪಿನ ಕೆಂಪು ಬಣ್ಣದ ಮಣ್ಪಾತ್ರೆಯಲ್ಲದೆ ಸಾದಾಕೆಂಪು ಹಾಗೂ ಬೂದುಬಣ್ಣದ ಮಣ್ಪಾತ್ರೆಗಳು ದೊರಕಿವೆ. ಮಣ್ಣಿನ ರಕ್ಷಣಾ ಗೋಡೆಗೆ ಈ ಕಾಲದಲ್ಲಿ ಇಟ್ಟಿಗೆಯ ಆಸರೆ ಗೋಡೆಯನ್ನು ಕಟ್ಟಿ ದೃಢಗೊಳಿಸಲಾಯಿತು. ಈ ಕಾಲದ ಇನ್ನುಳಿದ ಅವಶೇಷಗಳಿವು: ಸುಟ್ಟಮಣ್ಣಿನ ಮೈಉಜ್ಜುವ ಬಿಲ್ಲೆ, ಮಣಿಗಳು, ಅಲಂಕರಿಸಿದ ಲೋಹದ ವಸ್ತುಗಳು, ಚಿಪ್ಪಿನ ಬಳೆಗಳು, ಹಸುರು ಜಾಸ್ಪರ್‌ನಲ್ಲಿ ಕೆತ್ತಲಾದ ಚತುರ್ಮುಖಲಿಂಗ ಹಾಗೂ ಇನ್ನಿತರ ಕಲ್ಲಿನ ಮೂರ್ತಿಗಳು. 3ನೆಯ ಶತಮಾನದ ಕ್ಷತ್ರಪರ ಕಾಲದ ಸತು ಹಾಗೂ ತಾಮ್ರದ ನಾಣ್ಯಗಳೂ ಪ್ರಾಪ್ತವಾಗಿವೆ. ಈ ಹಂತದ ಅನಂತರ ಕೆಲಕಾಲ ಇಲ್ಲಿ ಜನವಸತಿ ಇರಲಿಲ್ಲ.

4ನೆಯ ಹಂತ–ಉತ್ತರಕಾಲೀನ ಇತಿಹಾಸ ಮತ್ತು ಮಧ್ಯಯುಗೀನ ಕಾಲ: ಹೊಳಪುಳ್ಳ ಪಾತ್ರೆಗಳು, ಚೀನದೇಶದ ಮಿಂಗ್ (1368–1644) ರಾಜವಂಶ ಕಾಲದ ಮಣ್ಪಾತ್ರೆಗಳು, ಬೂದು–ಹಸುರು ಮೆರುಗಿನ ಮಣ್ಪಾತ್ರೆ ಹಾಗೂ ನಾಣ್ಯಗಳು ಮುಖ್ಯವಾದವು. ಇಲ್ಲಿ ದೊರೆತ ಮೂರ್ತಿಗಳು ಹಾಗೂ ವಾಸ್ತುಶಿಲ್ಪ ಅವಶೇಷಗಳು ಶೈಲಿಯಲ್ಲಿ 6–13ನೆಯ ಶತಮಾನದ ಕಾಲಾವಧಿಯದಾಗಿದೆ. ಅನಂತರ ಕಾಲದಲ್ಲಿ ನಗರದ ಸುತ್ತ ಕೋಟೆಗೋಡೆಯನ್ನು ಕಟ್ಟಲಾಯಿತು. ಈ ನಗರದಲ್ಲಿ ದೆಹಲಿಯ ಸುಲ್ತಾನರ ಮತ್ತು ಅಹಮದಾಬಾದಿನ ಸುಲ್ತಾನರ ಕಾಲದ ಐತಿಹಾಸಿಕ ಸ್ಮಾರಕಗಳೂ ಇವೆ. (ಎಲ್.ಎಸ್.ಆರ್.)

**ಭಾರತ ಸರ್ಕಾರದ ಕಾಯಿದೆ (1935):** ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತದ ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ 1935ರಲ್ಲಿ ಜಾರಿಗೆ ಬಂದ ಪ್ರಮುಖ ಕಾಯಿದೆ. ಈ ಕಾಯಿದೆ ಸಂವಿಧಾನ ಬೆಳೆವಣಿಗೆಯ ಇತಿಹಾಸದಲ್ಲಿ ಮಹತ್ತ್ವ ಪಡೆದುಕೊಂಡಿದೆ.

ಸ್ಥಳೀಯ ಸರ್ಕಾರಗಳ ಸ್ಥಾಪನೆಗೆ ಕಾಂಗ್ರೆಸ್ ನಾಯಕರು ಒಲವು ಹೊಂದಿದ್ದರಿಂದ ಪ್ರಾರಂಭದಲ್ಲಿ ಬ್ರಿಟಿಷರು ಜಾರಿಗೆ ತಂದ ಕಾಯಿದೆಗಳು ಇವರಿಗೆ ತೃಪ್ತಿನೀಡಲಿಲ್ಲ. ಸೈಮನ್ ಆಯೋಗವನ್ನು ಬಹಿಷ್ಕರಿಸಿ ಸ್ಥಳೀಯ ಸರ್ಕಾರಗಳನ್ನು ಸ್ಥಾಪಿಸುವಂತೆ ಸತತ 8 ವರ್ಷಗಳ ಕಾಲ ಒತ್ತಾಯಿಸಿ ಕೊನೆಗೆ 1935ರ ಕಾಯಿದೆಯಲ್ಲಿ ಯಶಸ್ವಿಯಾದರು. 1932 ರಿಂದ ಈ ಕಾಯಿದೆಯನ್ನು ಜಾರಿಗೊಳಿಸಲು ಭಾರತೀಯರಿಂದ ಉತ್ತಮ ಪ್ರತಿಕ್ರಿಯೆ ದೊರಕಲಿಲ್ಲ. ಕೊನೆಯ ದುಂಡುಮೇಜಿನ ಸಮ್ಮೇಳನದಲ್ಲಿ 46 ಜನ ಪ್ರತಿನಿಧಿಗಳು ಮಾತ್ರ ಭಾಗವಹಿಸಿದ್ದರಿಂದ ಅದು ಕೂಡ ಯಶಸ್ವಿಯಾಗಲಿಲ್ಲ. ಈ ಸಮ್ಮೇಳನದ ಅನಂತರ ಭಾರತಕ್ಕೆ ಸಂಬಂಧಿಸಿದಂತೆ ಒಂದು ಶ್ವೇತ ಪತ್ರವನ್ನು ಹೊರಡಿಸಲಾಯಿತು. ಭಾರತದ ಪಾರ್ಲಿಮೆಂಟಿಗೆ (ಸಂಸತ್ತು) ಸಂಬಂಧಿಸಿದಂತೆ ಒಂದು ಸಂಯುಕ್ತ ಆಯ್ಕೆ ಸಮಿತಿಯನ್ನು ನೇಮಿಸಿದ್ದರೂ ಅದು ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ 1935ರಲ್ಲಿ ಅನುಮೋದಿಸಲಾಯಿತು.

ಈ ಕಾಯಿದೆಯ ಮುಖ್ಯಾಂಶಗಳು: ಸಂಯುಕ್ತ ವ್ಯವಸ್ಥೆಯ ಸರ್ಕಾರವನ್ನು ಕೇಂದ್ರ ಮತ್ತು ಸ್ಥಳೀಯ ಪ್ರಾಂತ್ಯಗಳಲ್ಲಿ ಒಳಗೊಂಡಂತೆ ಜಾರಿಗೊಳಿಸುವುದು; 1919 ರ ಕಾಯಿದೆಯ ದ್ವಿಮುಖ ಸರ್ಕಾರ ಪದ್ಧತಿಯನ್ನು ರದ್ದುಗೊಳಿಸಿ ಕೇಂದ್ರಕ್ಕೆ ಹೆಚ್ಚಿನ ಅಧಿಕಾರ ನೀಡುವುದು; ಸ್ವಯಂ ಆಡಳಿತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಕೇಂದ್ರಪಟ್ಟಿ ಪ್ರಾಂತೀಯ ಪಟ್ಟಿ ಹಾಗೂ ಸಮವರ್ತಿಪಟ್ಟಿ ಎಂಬ ಮೂರು ಭಾಗಗಳಾಗಿ ಅಧಿಕಾರವನ್ನು ವಿಂಗಡಿಸುವುದು; ಭಾರತದಲ್ಲಿ ಫೆಡರಲ್ ನ್ಯಾಯಾಲಯ ಹಾಗೂ ಒಂದು ರಿಸರ್ವ್ ಬ್ಯಾಂಕ್ ಸ್ಥಾಪಿಸುವುದು; ಒರ್ಮ ಮತ್ತು ಆ್ಯಡನನ್ನು ಪ್ರತ್ಯೇಕಿಸಿ ಸಿಂಧ್ ಮತ್ತು ಒರಿಸ್ಸ ಎಂಬ ಹೊಸ ಪ್ರಾಂತ್ಯಗಳನ್ನು ರಚಿಸುವುದು. ಪ್ರಾಂತ್ಯಗಳಲ್ಲಿ ಜವಬ್ದಾರಿಯುತ ಸರ್ಕಾರದ ಸ್ವಾಯತ್ತತೆಯನ್ನು ಹೆಚ್ಚಿಸುವುದು.

ಪ್ರಾಯೋಗಿಕವಾಗಿ ಎಲ್ಲ ವಿಭಾಗದ ಮತದಾರರ ಸಂಖ್ಯೆಯನ್ನು 65 ಲಕ್ಷದಿಂದ 3 ಕೋಟಿಗೆ ಹೆಚ್ಚಿಸಲಾಯಿತು. ಶಾಸನ ಸಭೆಯಲ್ಲಿ ಕಾಯಿದೆಯನ್ನು ರೂಪಿಸುವಲ್ಲಿ ಸಹಾಯ ಮಾಡುವ ಅಧಿಕಾರವನ್ನು ಶಾಸನ ಸಭೆಗೆ ನೀಡಿತು ಮತ್ತು ಸರ್ಕಾರವೇ ಅಂತಿಮ ನಿರ್ಧಾರದ ಹಕ್ಕು ಹಿಡಿದಿಟ್ಟುಕೊಂಡಿತ್ತು.

ಬ್ರಿಟಿಷ್‌ರ ವ್ಯವಹಾರಗಳಲ್ಲಿ ಭಾರತೀಯರು ಮಧ್ಯ ಪ್ರವೇಶಿಸುವಂತಿರಲಿಲ್ಲ. ಆಡಳಿತವನ್ನು ಎರಡು ಭಾಗಗಳಾಗಿ ವಿಂಗಡಿಸಿ ಗೃಹ ಇಲಾಖೆಯನ್ನು ಅದಕ್ಕೆ ಸ್ಟೇಟ್ ಸೆಕ್ರೇಟರಿಯನ್ನು ನೇಮಿಸುವುದು.

ದ್ವಿಸರ್ಕಾರ ಪದ್ಧತಿಯಲ್ಲಿ ಗವರ್ನರ್ ಜನರಲ್‌ನನ್ನೂ ಕೇಂದ್ರದ ಮುಖ್ಯಸ್ಥನಾಗಿ ನೇಮಿಸುವುದು. ಅವರಿಗೆ ಆಡಳಿತಾತ್ಮಕ (ಶಾಸನ ನಿರ್ಮಾಣ ಸಭೆ, ನಿಯಮ ನಿರ್ಮಾಣ ಸಭೆ, ಶಾಸನ ಸಭೆ) ಮತ್ತು ಹಣಕಾಸಿನ ಅಧಿಕಾರಗಳನ್ನು ನೀಡುವುದು. ಪ್ರಾಂತೀಯ ಸರ್ಕಾರದ ಮುಖ್ಯಸ್ಥನಾಗಿ ಗವರ್ನರನನ್ನು ನೇಮಿಸುವುದು.

ಸಂಯುಕ್ತ ವ್ಯವಸ್ಥೆಯು ಶೇ. 50 ರಾಜರ ಅನುಮೋದನೆಯ ಅನಂತರ ಜಾರಿಗೆ ಬಂದಿತು. ಈ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಬಲಿಷ್ಠವಾಯಿತು. ಜನರಿಂದ ಚುನಾಯಿತರಾದ ಸದಸ್ಯರನ್ನು ಮಂತ್ರಿಗಳನ್ನಾಗಿ ಆರಿಸಿ ಪ್ರಾಂತ್ಯಗಳ ಅಧಿಕಾರವನ್ನು ಅವರಿಗೆ ಒಪ್ಪಿಸುವುದು. ಆದರೆ ವಿದೇಶಿ ರಾಯಭಾರ, ರಕ್ಷಣೆ, ಹಣಕಾಸು ಇತರೆ ಅಧಿಕಾರಿಗಳನ್ನು ವೈಸರಾಯಿಗೆ ವಹಿಸಲಾಯಿತು. ಹೊಸದಾಗಿ ನಿರ್ಮಿಸಲಾದ ರಿಸರ್ವ್ ಬ್ಯಾಂಕ್ ಮತ್ತು ರೈಲ್ವೆ ಇಲಾಖೆಗಳು ಪಾರ್ಲಿಮೆಂಟಿನಿಂದ ಹೊರಗುಳಿದ್ದಿದ್ದು ಅವುಗಳ ಅಧಿಕಾರವನ್ನು ಲಂಡನ್ನಿನಿಂದ ನವದೆಹಲಿಗೆ ವರ್ಗಾಯಿಸಲಾಯಿತು.

ಕೇಂದ್ರ ದ್ವಿಸದನ ಶಾಸನಸಭೆಯ ಸದಸ್ಯರುಗಳು ರಾಜರುಗಳಿಂದ ನೇಮಿಸಲ್ಪಡುತ್ತಿದ್ದರು ಅವರು ಶೇ. 30–40 ಸದಸ್ಯರು. (276ಕ್ಕೆ 104 ಸದಸ್ಯರು ರಾಜ್ಯ ಸಭೆಗೆ 375 ಕ್ಕೆ 125 ಸದಸ್ಯರು ಫೆಡರಲ್ ಅಸೆಂಬ್ಲಿಗೆ ನೇಮಕಗೊಳ್ಳುತ್ತಿದ್ದರು. ಜೊತೆಗೆ ಮುಸ್ಲಿಂ ಇತರೆ ಕೋಮಿನವರಿಗೆ ಕೇಂದ್ರ ಮತ್ತು ಪ್ರಾಂತ್ಯಗಳೆರಡರಲ್ಲೂ ವಿಶೇಷ ಪ್ರಾತಿನಿಧ್ಯ ನೀಡಲಾಯಿತು. ರಾಜರು ಮತ್ತು ಭಾರತದ ರಾಜ್ಯಗಳ ನಡುವಿನ ಸಂಬಂಧದಲ್ಲಿ ರಾಜನ ಪ್ರತಿನಿಧಿಯಾಗಿ ವೈಸರಾಯ ಯನ್ನು ನೇಮಿಸಿ ಅಧಿಕಾರಗಳನ್ನು ಹಸ್ತಾಂತರಿಸಲಾಯಿತು. ಯಾವುದೇ ಇಲಾಖೆಯ (ವಿಭಾಗದ) ಆಡಳಿತ ಆ ಇಲಾಖೆಗೆ ಸಂಬಂಧ ಪಟ್ಟ ಮಂತ್ರಿಗಳ ಮುಖಾಂತರ ನಡೆಸುವುದು. ಆದರೆ ಇದು ಸಂಪೂರ್ಣವಾಗಿ ರಾಜಕೀಯ ವಿಭಾಗಗಳು, ಸ್ಥಳೀಯ ನಿವಾಸಿಗಳು ಮತ್ತು ಸ್ಥಳೀಯ ಏಜೆಂಟರ ಮುಖಾಂತರ ನಡೆಸುವುದು.

1935ರ ಕಾಯಿದೆ ಸ್ಥಳೀಯ ಸರ್ಕಾರಕ್ಕೆ ಸ್ವಾಯತ್ತತೆಯ ವಿಷಯಗಳಿಗೆ ಪ್ರಾಮುಖ್ಯತೆ ನೀಡಿದ್ದರೂ ಅನೇಕ ಮಿತಿಗಳಿಂದ ಹೊರತಾಗಿಲ್ಲ.

ಭಾರತದಲ್ಲಿ ಒಕ್ಕೂಟ ಸ್ಥಾಪನೆಯಾದರೂ ಶಾಸನ ಸಭೆಯ ಅಧಿಕಾರಗಳನ್ನು ಬಹಳ ಸೀಮಿತಗೊಳಿಸಿತು ಹಾಗೂ ರಾಜ್ಯ ಕಾರ್ಯದರ್ಶಿಯ ಅಧಿಕಾರಗಳನ್ನು ಕೂಡ ದುರ್ಬಲ ಗೊಳಿಸಿತು. ಎಲ್ಲ ಅಧಿಕಾರ ವರ್ಗಗಳ ಮೇಲೂ ಗವರ್ನರ್ ಜನರಲ್ ಮತ್ತು ಗವರ್ನರ್‌ಗಳ ಹಿಡಿತವಿತ್ತು. 1935ರ ಕಾಯಿದೆ ಕೋಮುವಾರು ಆಧಾರದ ಮೇಲೆ ರೂಪಗೊಂಡು ಭಾರತವನ್ನು ಜಾತಿವಾರು ರಾಜಕೀಯದ ವಿಷಯವನ್ನಾಗಿ ಮಾಡಿತ್ತು. ಭಾರತದ ಏಕತೆಯನ್ನು ಛಿದ್ರ ಛಿದ್ರಗೊಳಿಸಿತು.

ಪ್ರಾಂತೀಯ ಸರ್ಕಾರಗಳು ತೋರಿಕೆಗೆ ಮಾತ್ರವಾಗಿದ್ದು ಅದರಲ್ಲಿ ಭಾರತೀಯರ ಹಕ್ಕುಗಳನ್ನು ಸೀಮಿತಗೊಳಿಸಿತ್ತು. ಸಮವರ್ತಿ ಪಟ್ಟಿಯಲ್ಲಿನ ಅಧಿಕಾರಗಳಿಗೆ ಸಂಬಂಧಿಸಿದ ಹಾಗೆ ಯಾವುದಾದರೂ ವ್ಯಾಜ್ಯ ಬಂದರೆ ಕೇಂದ್ರ ಮತ್ತು ಪ್ರಾಂತ್ಯಗಳ ಸಮಸ್ಯೆಗಳನ್ನು ಚರ್ಚಿಸುವ ಬದಲು ಪ್ರಾಂತ್ಯಾಡಳಿತವನ್ನು ರದ್ದುಗೊಳಿಸುವಂತೆ ಮಾಡಿತ್ತು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಕೇಂದ್ರಕ್ಕೆ ಹೆಚ್ಚಿನ ಅಧಿಕಾರ ನೀಡಲಾಯಿತು ಹಾಗೂ ಪ್ರಾಂತ್ಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಕೂಡಾ ಕೇಂದ್ರವೇ ಮಾಡುತ್ತಿತ್ತು.

ಕೇಂದ್ರದ ಕಾರ್ಯನಿರ್ವಾಹಕ ಸಮಿತಿಯ ಅಧಿಕಾರಿಗಳಿಗೆ ಯಾವುದೇ ನಿರ್ಬಂಧ ವಿರಲಿಲ್ಲ. ಗವರ್ನರ್ ಜನರಲ್ ಮತ್ತು ಪ್ರಾಂತೀಯ ಗವರ್ನರ್‌ಗಳಿಗೆ ವಿಶೇಷ ಅಧಿಕಾರ ಹಾಗೂ ಸವಲತ್ತುಗಳಿದ್ದವು. ಅದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿತ್ತು.

ಈ ಕಾಯಿದೆ ಸಂಪೂರ್ಣವಾಗಿ ಪೂರ್ಣಾಧಿಕಾರದ ಸ್ಥಾನಮಾನ ಹೊಂದಿತ್ತು. ಜಂಟಿ ಪಾರ್ಲಿಮೆಂಟಿನ ಸಮಿತಿಯು ಅಧ್ಯಕ್ಷ ಮತ್ತು 1936ರಿಂದ ವೈಸ್‌ರಾಯ್ ಆಗಿದ್ದ ಲಿನಲಿತ್‌ಗೋ ಈ ಕಾಯಿದೆಯ ಬಗ್ಗೆ 1935ರ ಕಾಯಿದೆಯ ಉದ್ದೇಶವು ಭಾರತದಲ್ಲಿ ಬ್ರಿಟಿಷರ ಪ್ರಭಾವವನ್ನು ಉಂಟುಮಾಡುವುದಾಗಿದೆ ಎಂದು ತಿಳಿಸಿದ್ದಾರೆ. (ಎಂ.ಎಸ್.)

**ಭಾರತದ ಪೌರಾಣಿಕ ಇತಿಹಾಸ:** ಮಹಾಭಾರತಯುದ್ಧದ ಅಂತ್ಯದಲ್ಲಿ ಉಚ್ಛ್ರಾಯದಲ್ಲಿದ್ದು, ಪ್ರ.ಶ.ಪೂ. 4ನೆಯ ಶತಮಾನದಲ್ಲಿ ನಂದರ ಮಗಧ ಸಾಮ್ರಾಜ್ಯದಲ್ಲಿ ವಿಲೀನಗೊಳ್ಳುವವರೆಗೂ ಉಳಿದುಕೊಂಡು ಬಂದಿದ್ದ ರಾಜ್ಯಗಳ ಒಂದು ಪಟ್ಟಿ ಪುರಾಣಗಳಲ್ಲಿದೆ. ಮೊದಲು ಬಾರ್ಹದ್ರಥರೂ ಆಮೇಲೆ ಇತರ ರಾಜವಂಶಗಳೂ ಆಳಿದ ಮಗಧ ಸಾಮ್ರಾಜ್ಯವನ್ನು ಮಾತ್ರವಲ್ಲದೆ ಪೌರವರು, ಇಕ್ಷ್ವಾಕುಗಳು, ಪಾಂಚಾಲರು, ಕಾಶಿಗಳು, ಹೈಹಯರು, ಕಳಿಂಗರು, ಅಶ್ಮಕರು, ಮೈಥಿಲರು, ಶೂರಸೇನರು ಮತ್ತು ವೀತಿಹೋತ್ರರ ರಾಜ್ಯಗಳ ವಿಷಯಗಳೂ ಇವೆ. ಈ ರಾಜ್ಯಗಳನ್ನು ಒಳಗೊಂಡ ಪ್ರದೇಶ ಉತ್ತರ ಭಾರತದ ಪೂರ್ವಭಾಗದಲ್ಲಿ, ಮಧ್ಯದೇಶದಲ್ಲಿ ಹಾಗೂ ಅದರ ಪಶ್ಚಿಮಕ್ಕೆ ಸ್ವಲ್ಪ ಭಾಗದಲ್ಲಿತ್ತು. ಆದರೆ ಇನ್ನೂ ಪಶ್ಚಿಮಕ್ಕೆ ಮತ್ತು ವಾಯವ್ಯಕ್ಕೆ ಇದ್ದ ರಾಜ್ಯಗಳ ಉಲ್ಲೇಖ ಪುರಾಣಗಳಲ್ಲಿಲ್ಲ. ಇಕ್ಷ್ವಾಕು ವಂಶಗಳ ಹಾಗೂ ಮಗಧ ರಾಜ್ಯವಂಶಗಳ ಬಗೆಗೆ ವಿಸ್ತಾರವಾಗಿ ಹೇಳುತ್ತವೆ, ಇತರ ಸಮಕಾಲೀನ ರಾಜವಂಶಗಳ ರಾಜರ ಸಂಖ್ಯೆಯನ್ನು ಮಾತ್ರ ಕೊಟ್ಟಿವೆ. ಹೀಗಾಗಿ ಈ ಕಾಲಾವಧಿಯ ವಿಸ್ತಾರವಾದ ಇತಿಹಾಸ ಈಗ ಉತ್ತರ ಪ್ರದೇಶ ಮತ್ತು ದಕ್ಷಿಣ ಬಿಹಾರಗಳ ಪ್ರದೇಶಕ್ಕೆ ಸೀಮಿತವಾಗಿವೆ.

1. ಪೌರವರು: ಭಾರತಯುದ್ಧದ ಅನಂತರ ಆಳಿದ ಮೊದಲನೆಯ ಪೌರವ ಅರಸನೆಂದರೆ ಅಭಿಮನ್ಯುವಿನ ಮಗ ಮತ್ತು ಅರ್ಜುನನ ಮೊಮ್ಮಗನಾದ ಪರೀಕ್ಷಿತ. ಇವನು ರಾಜರ ಕರ್ತವ್ಯಗಳನ್ನು ಕುರಿತ ಶಾಸ್ತ್ರದಲ್ಲಿ ಪರಿಣತನಾಗಿದ್ದ. ಬಹು ಉದಾತ್ತವಾದ ಗುಣಗಳಿಂದ ಕೂಡಿದ್ದ, ಪುರಾಣಗಳಲ್ಲಿ ಅಥವಾ ವೇದದಲ್ಲೂ ದಾಖಲಾಗಿರುವಂತೆ ಪರೀಕ್ಷಿತನ ಜೈತ್ರಯಾತ್ರೆಗಳ ವರ್ಣನೆ ಹಾಗೂ ಇವನ ಆಡಳಿತಾವಧಿಯಲ್ಲಿ ಕುರು ಸಾಮ್ರಾಜ್ಯ ಕಂಡ ಪ್ರಗತಿ–ಇವು ಅದೇ ಹೆಸರಿನ ಇನ್ನೊಬ್ಬ ರಾಜ ಮೊದಲು ಇದ್ದನೆಂದು ಸೂಚಿಸುವಂತೆ ತೋರುತ್ತದೆ.

ಪರೀಕ್ಷಿತ ಆಳಿದ ಕುರು ಸಾಮ್ರಾಜ್ಯ ಸರಸ್ವತಿ ನದಿಯಿಂದ ಗಂಗಾನದಿಯವರೆಗೆ ವ್ಯಾಪಿಸಿತ್ತು. ಅದು ಇಂದಿನ ಥಾನೇಶ್ವರ, ದೆಹಲಿ ಮತ್ತು ಮಧ್ಯಪ್ರದೇಶದ ಮೇಲುದಂಡೆಯ ವರೆಗಿನ ಪ್ರದೇಶಕ್ಕೆ ಹೊಂದಿಕೊಂಡಿತ್ತು. ಕಲಿಯುಗ ಶಕೆ ಕೃಷ್ಣನ ಮರಣದಂದಿನಿಂದ ಪರೀಕ್ಷಿತನ ಆಳ್ವಿಕೆಯಲ್ಲಿ ಪ್ರಾರಂಭವಾಯಿತೆಂದು ಹೇಳಲಾಗಿದೆ. ಇವನು ಅತ್ಯಂತ ಶ್ರೇಷ್ಠನಾದ ಧರ್ಮಯುತವಾದ ಆಡಳಿತವನ್ನು ನಡೆಸಿದನೆಂಬ ಸೂಚನೆಯಿದೆ. ಒಂದು ದಿನ ಬೇಟೆಗೆ ಹೋಗಿದ್ದ ಪರೀಕ್ಷಿತ ರಾಜ ದಾರಿತಪ್ಪಿ ಅಲೆಯುತ್ತಾ ಒಬ್ಬ ಋಷಿಯನ್ನು ನೋಡಿ ದಾರಿಯನ್ನು ಕೇಳಿದ. ಮೌನವ್ರತವನ್ನು ಹಿಡಿದಿದ್ದ ಮುನಿ ಮಾತಾಡಲಿಲ್ಲ. ಇದರಿಂದ ಬಹಳ ಕೋಪಬಂದು ಪರೀಕ್ಷಿತ ಅಲ್ಲೇ ಸತ್ತು ಬಿದ್ದಿದ್ದ ಹಾವನ್ನು ಅವನ ಕೊರಳಿಗೆ ಸುತ್ತಿ ಹೊರಟುಹೋದ. ಸ್ವಲ್ಪಕಾಲದ ಅನಂತರ ಅಲ್ಲಿಗೆ ಬಂದ ಋಷಿಪುತ್ರ ಇದನ್ನು ನೋಡಿ ಕೋಪದಿಂದ ಏಳು ದಿನಗಳೊಳಗಾಗಿ ಹಾವುಗಳ ರಾಜ ತಕ್ಷಕನು ಕಚ್ಚಿ ಸಾಯಲಿ ಎಂದು ಪರೀಕ್ಷಿತನಿಗೆ ಶಾಪಕೊಟ್ಟ. ಮಹಾರಾಜ ಎಷ್ಟೇ ಎಚ್ಚರಿಕೆಯ ಕ್ರಮಗಳನ್ನು ಕೈಗೊಂಡರೂ ಪ್ರಯೋಜನವಾಗದೆ ಶಾಪ ಫಲಿಸಿ ನಿಶ್ಚಿತ ದಿನದಂದು ಹಾವುಕಡಿದು ಮರಣ ಹೊಂದಿದ. ಈ ಪೌರಾಣಿಕ ಕಥೆ ಒಂದು ಐತಿಹಾಸಿಕ ಅಂಶವನ್ನು ಸೂಚಿಸುತ್ತಿರುವಂತೆ ತೋರುತ್ತದೆ. ಗಾಂಧಾರದಲ್ಲಿ ನಾಗರು ಭಾರತಯುದ್ಧದಿಂದ ಪೌರವರು ದುರ್ಬಲ ಸ್ಥಿತಿಗೆ ಇಳಿದುದರ ಪ್ರಯೋಜನವನ್ನು ಪಡೆದು ನಾಗರ ಅರಸ ತಕ್ಷಕ ಹಸ್ತಿನಾಪುರದ ಮೇಲೆ ದಂಡಯಾತ್ರೆ ಮಾಡಿದ. ಅವರ ಆಕ್ರಮಣಗಳನ್ನು ತಡೆಯಲು ಪ್ರಯತ್ನಿಸಿದ ಪರೀಕ್ಷಿತರಾಜ ಮರಣ ಹೊಂದಿದ.

ಪರೀಕ್ಷಿತನ ಮಗ ಜನಮೇಜಯನಿಗೆ ಪಟ್ಟಾಭಿಷೇಕವಾದಾಗ ಇನ್ನೂ ಚಿಕ್ಕವಯಸ್ಸು. ತಂದೆಯ ಮರಣದ ಸೇಡುತೀರಿಸಿಕೊಳ್ಳಲು ಅವನು ತಕ್ಷಶಿಲೆಗೆ ಮುತ್ತಿಗೆ ಹಾಕಿ ಅಸಂಖ್ಯ ನಾಗರನ್ನು ಕಗ್ಗೊಲೆ ಮಾಡಿದ. ಆಸ್ತಿಕನ ಮಧ್ಯಪ್ರವೇಶದಿಂದಾಗಿ ಜನಮೇಜಯ ಕೊಲೆಯನ್ನು ಅಷ್ಟಕ್ಕೆ ನಿಲ್ಲಿಸಿದ. ತಕ್ಷಕ ಕ್ಷೇಮವಾಗಿ ತಪ್ಪಿಸಿಕೊಂಡಂತೆ ತೋರುತ್ತದೆ. ದೂರ ವಾಯವ್ಯದ ತಕ್ಷಶಿಲೆಯ ವಿಜಯ ನಡುವೆ ಇದ್ದ ಮದ್ರ ಅಥವಾ ಮಧ್ಯ ಪಂಜಾಬ್ ಕೂಡ ಜನಮೇಜಯನ ವಶದಲ್ಲಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಲೆಕ್ಕವಿಲ್ಲದಷ್ಟು ನಾಗರನ್ನು ಕೊಲೆ ಮಾಡಿದ್ದನ್ನು ಜನಮೇಜಯನು ನಡೆಸಿದ ಸರ್ಪವ್ರತ (ಸರ್ಪಯಾಗ) ವೆಂದು ಪುರಾಣೀಕರಿಸಲಾಗಿದೆ. ಜನಮೇಜಯ ಒಬ್ಬ ಸಮರ್ಥನೂ ಬಲಾಢ್ಯನೂ ಆದ ಚಕ್ರವರ್ತಿ; ಕುರು ಸಾಮ್ರಾಜ್ಯವನ್ನು ಆತನು ಪುನರ್‌ಸ್ಥಾಪಿಸಿದ. ತಕ್ಷಶಿಲೆಯನ್ನು ಗೆದ್ದು ನಾಗರನ್ನು ನಾಶಮಾಡಿದ ಜನಮೇಜಯ ಕೆಲಕಾಲದ ಅನಂತರ ತಕ್ಷಶಿಲೆಯನ್ನೆ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದ. ಮಹಾಭಾರತದ ಕಥೆಯನ್ನು ಜನಮೇಜಯನಿಗೆ ತಕ್ಷಶಿಲೆಯಲ್ಲಿ ವೈಶಂಪಾಯನ ಪ್ರವಚನ ಮಾಡಿದ. ಕೇಕಯರ ಅಶ್ವಪತಿಯು ಪರೀಕ್ಷಿತ ಮತ್ತು ಜನಮೇಜಯರ ಸಮಕಾಲೀನ. ಜನಮೇಜಯ ಗಾಂಧಾರವನ್ನು ಸ್ವಾಧೀನಪಡಿಸಿಕೊಂಡಾಗ ಗಾಂಧಾರದ ಪೂರ್ವಕ್ಕೆ ತನ್ನ ರಾಜ್ಯವಿದ್ದ ಅಶ್ವಪತಿ ಕೇಕಯನು ಜನಮೇಜಯನ ಪ್ರಭುತ್ವವನ್ನು ಒಪ್ಪಿಕೊಂಡಿರಬಹುದು. ಉತ್ತಮ ಆಡಳಿತ ಹಾಗೂ ದಾರ್ಶನಿಕ ಜ್ಞಾನಗಳನ್ನು ಹೊಂದಿ ಅಶ್ವಪತಿ ಪ್ರಸಿದ್ಧನಾಗಿದ್ದ. ಅಶ್ವಪತಿಯೆನ್ನುವುದು ಅವನ ವೈಯಕ್ತಿಕವಾದ ಹೆಸರೋ ಅಥವಾ ಒಂದು ಬಿರುದೋ ಎಂಬುದು ತಿಳಿಯುವುದಿಲ್ಲ. ಆದರೆ ಕೇಕಯ ರಾಜ್ಯದ ಅರಸರ ಒಂದು ಬಿರುದಾಗಿರುವ ಸಾಧ್ಯತೆ ಹೆಚ್ಚು.

ಜನಮೇಜಯನ ಒಬ್ಬ ಸಹೋದರ ಕಕ್ಷಸೇನನು ಬೇರೆಯೇ ರಾಜ್ಯವೊಂದನ್ನು ಸ್ಥಾಪಿಸಿದಂತೆ ತೋರುತ್ತದೆ. ಪಂಚವಿಂಶ ಬ್ರಾಹ್ಮಣದಲ್ಲಿಯ ಉಲ್ಲೇಖಗಳ ಪ್ರಕಾರ, ಕಕ್ಷಸೇನನ ಪುತ್ರನಾದ ಅಭಿಪ್ರತಾರಿನನಿಗೆ ಪುರೋಹಿತನಾಗಿದ್ದ ದೃತಿಯು ಖಾಂಡವದಲ್ಲಿ ಒಂದು ಯಾಗವನ್ನು ಆಚರಿಸಿದ. ಇಂದ್ರಪ್ರಸ್ಥ ಆ ಪ್ರದೇಶದಲ್ಲೇ ಇದ್ದಿತು. ಈ ವಂಶದ ಕಿರಿಯ ಶಾಖೆಯೊಂದು ಇಂದ್ರಪ್ರಸ್ಥದಲ್ಲಿದ್ದಂತೆ ತೋರುತ್ತದೆ. ಅದೇ ಕೃತಿಯಲ್ಲಿ ಬರುವ ಅಭಿಪ್ರತಾರಿಣರನ್ನು (ಅಭಿಪ್ರತಾರಿನ್ ವಂಶಜರು) ಕುರಿತ ಉಲ್ಲೇಖವೆಂದರೆ, ಬಂಧು ಬಾಂಧವರೆಲ್ಲೆಲ್ಲಾ ಇವರು ಅತ್ಯಂತ ಬಲಶಾಲಿಗಳಾಗಿದ್ದರು ಎನ್ನುವುದು. ಇದರಿಂದ ಕುರುಗಳ ಕಿರಿಯ ಶಾಖೆಯು ಮಿಕ್ಕೆಲ್ಲ ಶಾಖೆಗಳಿಂತ ಬಲಿಷ್ಠವಾಗಿದ್ದಿತು ಎಂಬುದು ಸೂಚಿತವಾಗುತ್ತದೆ. ಹಸ್ತಿನಾಪುರ ನಾಶವಾಗಿ ಕುರುಗಳ ಹಿರಿ ಶಾಖೆಯು ಕೌಶಾಂಬಿಯೊಂದಿಗೆ ವಿಲೀನಗೊಂಡ ಅನಂತರವೂ ಇಂದ್ರಪ್ರಸ್ಥದಲ್ಲಿ ಕುರುರಾಜರು ಆಳುತ್ತಿದ್ದರು.

ಜನಮೇಜಯನ ಅನಂತರ ಅವನ ಮಗ ಶತಾನೀಕ ಪಟ್ಟಕ್ಕೆ ಬಂದ. ಇವನು ವಿದೇಹದ ರಾಜಕುಮಾರಿಯನ್ನು ಮದುವೆಯಾದ. ಶತಾನೀಕನ ಮಗ ಅಶ್ವಮೇಧದತ್ತ; ಇವನ ಅನಂತರ ಇವನ ಮಗ ಅಧಿಸೀಮಕೃಷ್ಣ ಅರಸನಾದ. ವೈದಿಕ ಕೃತಿಗಳಲ್ಲಿ ಈ ವಂಶಜರ ಯಾರೊಬ್ಬರ ಹೆಸರೂ ಖಚಿತವಾಗಿ ಉಲ್ಲೇಖಗೊಳ್ಳುವುದಿಲ್ಲ. ಇವುಗಳಲ್ಲಿ ಬಂದಿರುವ ಕೆಲವು ಕುರು ಅರಸರ ಸಂಬಂಧಗಳು ಸ್ಪಷ್ಟವಾಗುವುದಿಲ್ಲ. ಶತಾನೀಕನು ವಿದೇಹದ ಉಗ್ರಸೇನಜನಕನ ಸಮಕಾಲೀನ. ಇವನೂ ಪಾಂಚಾಲರ ಪ್ರವಾಹಣಾ ಮತ್ತು ಜೈವಾಲಿಯ ಅಶ್ವಮೇಧದತ್ತನೂ ದಾರ್ಶನಿಕ ರಾಜರಾಗಿದ್ದರು. ಅಧೀಸೀಮಕೃಷ್ಣನ ಆಳಿಕೆಯಲ್ಲಿ, ದಿವಾಕರನು ಅಯೋಧ್ಯೆಯಲ್ಲೂ ಸೇನಾಜಿತನು ಮಗಧದಲ್ಲೂ ಆಳುತ್ತಿದ್ದಾಗ ಅಯೋಧ್ಯೆಯಲ್ಲಿ ಗೋಮತಿ ತೀರದ ನೈಮಿಷಾರಣ್ಯದಲ್ಲಿ ನಡೆದ ದ್ವಾದಶವರ್ಷ ಮಹಾಯಾಗದಲ್ಲಿ ಮೊದಲಬಾರಿಗೆ ಪುರಾಣಗಳನ್ನು ಪಠಿಸಲಾಯಿತೆಂದು ಹೇಳಲಾಗಿದೆ. ಈ ಮಹಾಯಾಗದಲ್ಲಿ ಶೌನಕ ಪ್ರಧಾನ ಋತ್ವಿಜನಾಗಿದ್ದ. ಸೂತರು ಉಳಿಸಿಕೊಟ್ಟಂತೆ ಮಹಾಭಾರತವನ್ನು ಹೇಳಲಾಯಿತು. ಹೀಗೆ ನೈಮಿಷಯಾಗದ ಸಂದರ್ಭದಲ್ಲಿ, ಮೊದಲಬಾರಿಗೆ, ಸಾಂಪ್ರದಾಯಿಕ ನಿರೂಪಣೆಗಳನ್ನು ಸಂಕಲಿಸುವ, ಸಂಪಾದಿಸುವ ಕಾರ್ಯ ನಡೆದಂತೆ ತೋರುತ್ತದೆ. ಆಮೇಲೆ ಆಳಿದ ರಾಜ್ಯ ವಂಶಗಳ ಅರಸರ ಪಟ್ಟಿಗಳನ್ನು ಭವಿಷ್ಯವಾಣಿಯೆಂಬಂತೆ ಭವಿಷ್ಯತ್ಕಾಲದಲ್ಲಿ ದಾಖಲು ಮಾಡಲಾಯಿತು. ಮತ್ಸ್ಯ ಮತ್ತು ವಾಯು ಪುರಾಣಗಳು ತಮ್ಮ ಭವಿಷ್ಯತ್ ಚಕ್ರವರ್ತಿಗಳ ಪಟ್ಟಿಯನ್ನು ಅಧೀಸೀಮಕೃಷ್ಣನ ಕಾಲದ ಅನಂತರದಿಂದ ಪ್ರಾರಂಭಿಸುತ್ತವೆ.

ಅಧಿಸೀಮಕೃಷ್ಣನ ಮಗನೂ ಅವನ ಅನಂತರ ಪಟ್ಟಕ್ಕೆ ಬಂದವನೂ ಆದ ನಿಚಕ್ಷುವಿನ ಆಳಿಕೆಯಲ್ಲಿ ಕುರುಸಾಮ್ರಾಜ್ಯ ಅನೇಕ ಗಂಡಾಂತರಗಳನ್ನು ಎದುರಿಸಬೇಕಾಯಿತು. ರಾಜಧಾನಿ ಹಸ್ತಿನಾಪುರ ಗಂಗಾನದಿಯ ಪ್ರವಾಹದಲ್ಲಿ ಕೊಚ್ಚಿಹೋಯಿತು. ಛಾಂದೋಗ್ಯ ಉಪನಿಷತ್ತಿನಲ್ಲಿ ಉಲ್ಲೇಖವಾಗಿರುವಂತೆ ಮಿಡತೆಗಳು ಕುರುನಾಡಿಗೆ ಮುತ್ತಿಗೆ ಹಾಕಿ (ಅಥವಾ ಹಿಮಗಾಳಿ ಬೀಸಿ) ಬೆಳೆದು ನಿಂತಿದ್ದ ಬೆಳೆಯೆಲ್ಲವನ್ನು ನಾಶ ಮಾಡಿಬಿಟ್ಟ ಘಟನೆ ಬಹುಶಃ ಇದೇ ಕಾಲಕ್ಕೆ ಸೇರಿದ್ದು ಎಂದು ಹೇಳಬಹುದು. ಮಿಡತೆಗಳಿಂದುಂಟಾದ ಭೀಕರ ಕ್ಷಾಮದ ಹಿಂದೆಯೇ ಅತಿವೃಷ್ಟಿಯುಂಟಾಗಿ ಪ್ರವಾಹಗಳು ಉಕ್ಕಿ ಹರಿದು ಇನ್ನಷ್ಟು ಹಾನಿಯನ್ನುಂಟು ಮಾಡಿದವು. ಇದರ ಪರಿಣಾಮವಾಗಿ ಹಸ್ತಿನಾಪುರ ಮಾತ್ರವಲ್ಲದೆ ಉತ್ತರ ಬಯಲು ಪ್ರದೇಶವೆಲ್ಲಾ ಹಾನಿಗೊಳಗಾಯಿತು. ಕುರುಜನತೆ ಒಟ್ಟಿಗೆ ನದಿತೀರದಲ್ಲಿ 500 ಕಿಮೀ ವಲಸೆ ಹೋಗಿ ವತ್ಸ ಭೂಮಿಯಲ್ಲಿ ನೆಲೆಸಿದರು. ಕೌಶಾಂಬಿಯನ್ನು (ಅಲಹಾಬಾದ್ ಬಳಿಯ ಯಮುನಾ ನದಿಯ ಮೇಲೆ ಇರುವ ಆಧುನಿಕ ಕೋಸಂ) ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಹೀಗೆ ಸಾರಾಸಗಟಾಗಿ ವಲಸೆ ಹೋಗಿದ್ದಕ್ಕೆ ಕಾರಣ, ಪಾರ್ಗಿಟರ್ ಅವರ ಪ್ರಕಾರ, ಪಂಜಾಬ್ ಕಡೆಯಿಂದ ಉಂಟಾದ ಒತ್ತಡ. ಆದರೆ ಸಾಂಪ್ರದಾಯಿಕ ನಿರೂಪಣೆಗಳಲ್ಲಿ ಕೊಟ್ಟಿರುವ ಮಿಡತೆಗಳ ಹಾವಳಿ ಮಿಕ್ಕ ಅಂಶಗಳ ಜೊತೆಗೆ ಹೆಚ್ಚು ತೃಪ್ತಿಕರವಾದ ಕಾರಣವೆಂದು ತೋರುತ್ತದೆ. ವತ್ಸರು ಕಾಶಿಯ ಪೌರವ ರಾಜನ ಅಧೀನದಲ್ಲಿದ್ದರು. ಭಾರತಯುದ್ಧದಲ್ಲಿ ಪಾಂಡವರ ಪಕ್ಷಕ್ಕೆ ಸೇರಿದರು.

ಕೌಶಾಂಬಿಯ ಪೌರವರಾಜರ ಇತಿಹಾಸ ಅಸ್ಪಷ್ಟವಾಗಿದೆ. ನಿಚಕ್ಷುವಿನ ಅನಂತರ ಸರಣಿಯಲ್ಲಿ ಕೊನೆಯವರೆಗೆ ಎಂದರೆ ಕ್ಷೇಮಕನವರೆಗೆ 23 ರಾಜರ ಪಟ್ಟಿಯನ್ನು ಮಾತ್ರ ಪುರಾಣಗಳು ಕೊಡುತ್ತವೆ. ಇವರಲ್ಲಿ ಶತಾನೀಕ ಮತ್ತು ಇವನ ಮಗ ಉದಯನ ಸ್ವಾರಸ್ಯಕರ ಮತ್ತು ಮುಖ್ಯ ವ್ಯಕ್ತಿಗಳು. ಶತಾನೀಕನಿಗೆ ಪರಂತಪ ಎಂದೂ ಹೆಸರು. ದಧಿವಾಹನನ ಆಡಳಿತದಲ್ಲಿ ಅಂಗರಾಜಧಾನಿಯಾದ ಚಂಪಾನಗರವನ್ನು ಇವನು ಆಕ್ರಮಿಸಿದ. ಉದಯನನು ತನ್ನ ತಂದೆಯ ಅನಂತರ ವತ್ಸ ಸಿಂಹಾಸನವನ್ನು ಏರಿದ. ಬೌದ್ಧ ಗ್ರಂಥಗಳ ನಿರೂಪಣೆ ಪ್ರಕಾರ ಉದಯನ ಬುದ್ಧನ ಜನನವಾದ ದಿನವೇ ಜನಿಸಿದ. ಉದಯನನು ಬುದ್ಧ, ಅವಂತಿಯ ಪ್ರದ್ಯೋತ ಮಹಾಸೇನ ಮತ್ತು ಮಗಧಧ ಅಜಾತಶತ್ರು ಇವರ ಸಮಕಾಲೀನನಾಗಿದ್ದ ಎಂದು ನಂಬಲು ಆಧಾರಗಳಿವೆ.

**ಕೋಸಲರು:** ಪುರಾಣಗಳು ಬೃಹದ್ಬಲನಿಂದ ತೊಡಗಿ 31 ಜನ ಇಕ್ಷ್ವಾಕುರಾಜರ ಪಟ್ಟಿಯನ್ನು ಕೊಡುತ್ತವೆ. ಬೃಹದ್ಬಲನು ಭಾರತಯುದ್ಧದಲ್ಲಿ ಹತನಾದ. ಅವನಿಂದ 6ನೆಯವನಾದ ದಿವಾಕರನು ಪೌರವ ದೊರೆ ಅಧಿಸೀಮಕೃಷ್ಣನ ಸಮಕಾಲೀನನಾಗಿದ್ದ. ಆದರೆ ಈ ಹಂತದಲ್ಲಿ ಪೌರಾಣಿಕ ಪಟ್ಟಿಯಲ್ಲಿ ಗಣನೀಯ ಗೊಂದಲವಿದೆ. ಕೋಸಲದ ಇಕ್ಷ್ವಾಕುರಾಜರ ಈ ವಂಶಾವಳಿಗೆ ಶಾಕ್ಯ, ಶುದ್ಧೋದನ, ಅವನ ಮಗ ಸಿದ್ಧಾರ್ಥ ಮತ್ತು ಅವನ ಮಗ ರಾಹುಲರ ಹೆಸರುಗಳನ್ನು ಪ್ರಸೇನಜಿತನ ಹೆಸರಿನ ಮೊದಲು ಸೇರಿಸಲಾಗುತ್ತದೆ. ಆದರೆ ಬೌದ್ಧ ಮೂಲಗಳಿಂದ ಪ್ರಸೇನಜಿತ ಮಹಾಕೋಸಲನ ಮಗನೆಂದೂ ಬುದ್ಧನ ಸಮಕಾಲೀನನೆಂದೂ ತಿಳಿದುಬರುತ್ತದೆ. ಆದ್ದರಿಂದ ಖಚಿತವಲ್ಲದ, ಅಸಮಗ್ರವಾದ ಪೌರಾಣಿಕ ಪಟ್ಟಿಯನ್ನು ಅಷ್ಟಾಗಿ ಅವಲಂಬಿಸದೆ ಕೋಸಲರ ಬಗೆಗೆ ಕೆಲವು ಸ್ವಾರಸ್ಯಕರವಾದ ಸಂಗತಿಗಳನ್ನು ಬೌದ್ಧಸಾಹಿತ್ಯದಿಂದ ಹೀಗೆ ಹೆಕ್ಕಿ ತೆಗೆಯಬಹುದು.

ಕೋಸಲ ರಾಜರು ಅಯೋಧ್ಯೆಯ ಜೊತೆಗೆ ಸಾಕೇತ ಮತ್ತು ಶ್ರಾವಸ್ತಿಗಳನ್ನು ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದರು. ಬಹುಶಃ ಅಯೋಧ್ಯೆ ಅವರು ಮೊತ್ತಮೊದಲು ಮಾಡಿಕೊಂಡ ರಾಜಧಾನಿಯಾಗಿರಬಹುದು; ಆಮೇಲೆ ಸಾಕೇತವೂ ಕೊನೆಗೆ ಶ್ರಾವಸ್ತಿಯೂ ರಾಜಧಾನಿಯಾದವು. ಅಯೋಧ್ಯೆ ಸರಯೂ ನದಿಯ ಮೇಲಿದ್ದ ಒಂದು ಪಟ್ಟಣ. ಸಾಕೇತ ಮತ್ತು ಅಯೋಧ್ಯೆ ಒಂದೇ ಎಂದು ಅನೇಕ ವೇಳೆ ಭಾವಿಸಲಾಗುತ್ತದೆ. ಆದರೆ ಬುದ್ಧನ ಕಾಲದಲ್ಲಿ ಅವೆರಡೂ ಬೇರೆ ಬೇರೆ ಇದ್ದವೆಂದು ಉಲ್ಲೇಖಿಸುವುದರಿಂದ ಅಕ್ಕ ಪಕ್ಕದಲ್ಲಿದ್ದ ನಗರಗಳಾಗಿದ್ದಿರಬಹುದು. ಶ್ರಾವಸ್ತಿಯನ್ನು (ಪಾಲಿಯಲ್ಲಿ ಸಾವತ್ಥಿ) ಸಂಯುಕ್ತ ಪ್ರಾಂತ್ಯ, ಗೊಂಡಾ ಮತ್ತು ಬಹ್ರೈಚ್ ಜಿಲ್ಲೆಗಳ ಗಡಿಯಲ್ಲಿ ಹರಿಯುವ ರಾಪ್ತಿ ನದಿಯ ದಕ್ಷಿಣ ದಂಡೆಯ ಮೇಲಿರುವಂತಹ ಸಾಹೆತ್–ಮಾಹೆತ್ ನಗರವೆಂದೂ ಗುರುತಿಸಲಾಗುತ್ತದೆ. ಬುದ್ಧನ ಕಾಲದಲ್ಲಿ ಅಯೋಧ್ಯೆಯ ಪ್ರಾಮುಖ್ಯತೆವನ್ನು ಕಳೆದುಕೊಂಡಿದ್ದರೂ ಮಿಕ್ಕೆರಡೂ ಭಾರತದ ಮಹಾನಗರಗಳಲ್ಲಿ ಸೇರಿದ್ದವು. ಸಾಂಪ್ರದಾಯಿಕ ವಂಶಾವಳಿಗಳಲ್ಲಿ ಕಂಡುಬಾರದ ಕೆಲವು ಕೋಸಲ ರಾಜರ ಹೆಸರುಗಳನ್ನು ಬೌದ್ಧ ಕೃತಿಗಳು ಉಲ್ಲೇಖಿಸುತ್ತವೆ. ನೆರೆಹೊರೆ ರಾಜ್ಯಗಳಾಗಿದ್ದ ಕೋಸಲ ಮತ್ತು ಕಾಶಿಗಳ ನಡುವೆ ಪದೇ ಪದೇ ಯುದ್ಧಗಳು ನಡೆಯುತ್ತಿದ್ದ ವೆಂದು ಬೌದ್ಧ ನಿರೂಪಣೆಗಳಲ್ಲಿವೆ. ಅವೆರಡರ ನಡುವೆ ಪ್ರಭುತ್ವಕ್ಕಾಗಿ ವೈರವು ಮುಂದುವರಿದೇ

ಇತ್ತು. ಆದರೂ ಕೆಲವೊಮ್ಮೆ ಕಾಶಿ ಮತ್ತು ಕೋಸಲಗಳ ನಡುವೆ ಮೈತ್ರಿ ಸಂಬಂಧಗಳು ಕಾಣಿಸಿಕೊಳ್ಳುತ್ತಿದ್ದವು, ವೈವಾಹಿಕ ಸಂಬಂಧಗಳಿದ್ದವು. ಕೆಲವೊಮ್ಮೆ ಎರಡೂ ರಾಜ್ಯಗಳನ್ನು ಮೂರನೆಯ ಅರಸನೊಬ್ಬ ಗೆದ್ದೋ ಅಥವಾ ಆನುವಂಶಿಕವಾಗಿ ಪಡೆದೋ ಆಳುತ್ತಿದ್ದ. ಕಾಶಿ–ಕೋಸಲ ಎಂಬ ಉಕ್ತಿಯನ್ನು ಬಳಸಿ ವೇದಗಳು ಈ ಎರಡೂ ರಾಜ್ಯಗಳ ನಡುವೆ ಇದ್ದ ನಿಕಟ ಸಂಬಂಧವನ್ನು ಸೂಚಿಸುತ್ತವೆ. ಮೇಲ್ಮೆಗಾಗಿ ನಡೆಯುತ್ತಿದ್ದ ಹೋರಾಟದಲ್ಲಿ ಕೆಲವೊಮ್ಮೆ ಕಾಶಿಯೂ ಕೆಲವೊಮ್ಮೆ ಕೋಸಲವೂ ವಿಜಯಶಾಲಿಯಾಗುತ್ತಿದ್ದವು. ಮೊದಮೊದಲಲ್ಲಿ ಕಾಶಿ ಜಯಗಳಿಸಿದಂತೆ ದಾಖಲಾಗಿರುವ ಸ್ಪರ್ಧೆಗಳ ಫಲಿತಾಂಶವನ್ನು ಲಾ ಅವರು ಸೂಚಿಸಿರುವಂತೆ ನಾಲ್ಕು ಹಂತಗಳನ್ನಾಗಿ ವರ್ಗೀಕರಿಸಬಹುದು.

ಬೌದ್ಧ ಕಥೆಗಳಲ್ಲಿ ಬರುವ ಬ್ರಹ್ಮದತ್ತ ಕಾಶಿಯ ಬಲಾಢ್ಯ ದೊರೆ. ಅವನು ತನ್ನ ವಿಜಯ ಯಾತ್ರೆಗಳಲ್ಲಿ ದುರ್ಬಲನಾಗಿದ್ದ ಕೋಸಲದರಸ ದಿಘಿತಿಯನ್ನು ಸೋಲಿಸಿದುದರಲ್ಲಿ ಕಾಶಿ–ಕೋಸಲ ಹೋರಾಟದ ಮೊದಲನೆಯ ಹಂತವನ್ನು ಗುರುತಿಸಬಹುದು. ಬ್ರಹ್ಮದತ್ತ ಕಾಶಿಯ ಸುತ್ತಮುತ್ತಲಲ್ಲಿ ತಲೆ ಮರೆಸಿಕೊಂಡಿದ್ದ ದಿಘಿತಿ ಹಾಗೂ ಅವನ ಧರ್ಮಪತ್ನಿಯ ತಲೆ ಕಡಿಯಲು ಆಜ್ಞೆ ಮಾಡಿದ. ಕೆಲಕಾಲದ ಅನಂತರ ಕೋಸಲ ರಾಜಕುಮಾರ ದಿಘಾಯುವು ಬ್ರಹ್ಮದತ್ತನ ವಿಶ್ವಾಸವನ್ನು ಸಂಪಾದಿಸಿದ. ಅವನ ಸೇವೆಯಲ್ಲೇ ನಿಂತು ದಿಘಿತಿ ಉನ್ನತ ಸ್ಥಾನಕ್ಕೆ ಏರಿದ. ಅವಕಾಶ ದೊರೆತಾಗಲೂ ಬ್ರಹ್ಮದತ್ತನ ತಲೆಕಡಿದು ಸೇಡು ತೀರಿಸಿಕೊಳ್ಳದೆ ಹೋದ ದಿಘಾಯುವಿನ ಉದಾರತೆಯನ್ನು ನೋಡಿ ಮೆಚ್ಚಿ ಬ್ರಹ್ಮದತ್ತ ಅವನನ್ನು ಮತ್ತೆ ಕೋಸಲ ಸಿಂಹಾಸನದ ಮೇಲೆ ಕೂರಿಸಿದ. ರಾಜೊವಾದ ಜಾತಕದಲ್ಲಿ ಚಿತ್ರಿತವಾಗಿರುವಂತೆ, ಎರಡನೆಯ ಹಂತದಲ್ಲಿ ಕಾಶಿ–ಕೋಸಲಗಳೆರಡೂ ಸಮಾನ ಬಲಿಷ್ಠರಾಜ್ಯಗಳಾಗಿ ಜೊತೆ ಜೊತೆಯಲ್ಲೇ ಪ್ರಗತಿ ಹೊಂದಿದುದನ್ನು ಕಾಣಬಹುದು. ಕ್ರಮವಾಗಿ ಅವುಗಳಿಗೆ ಬ್ರಹ್ಮದತ್ತನೂ ಮಲ್ಲಿಕನೂ ಅರಸರಾಗಿದ್ದರು. ಕಾಶಿಯ ರಾಜನು ದ್ವೇಷವನ್ನು ಪ್ರೇಮದಿಂದ ಗೆಲ್ಲಬೇಕು ಎಂಬ ಧಾರ್ಮಿಕ ತತ್ತ್ವವನ್ನು ಅನುಸರಿಸಿದ್ದರೆ ಕೋಸಲದರಸನಾದರೋ ಕಠಿಣತೆಯನ್ನು ಕಾಠಿಣ್ಯದಿಂದಲೂ ಮೃದುತ್ವವನ್ನು ಮಾರ್ದವತೆಯಿಂದಲೂ ವ್ಯವಹರಿಸಬೇಕೆಂಬ ಆಡಳಿತ ನೀತಿಯನ್ನು ಬಲವಾಗಿ ಹಿಡಿದಿದ್ದ. ಮಹಾಸೀಲವ ಜಾತಕ ಮೂರನೆಯ ಹಂತವನ್ನು ನಿರೂಪಿಸುತ್ತದೆ. ಕಾಶೀರಾಜನ ಒಳ್ಳೆಯ ಸ್ವಭಾವವನ್ನು ಧಾರ್ಮಿಕತೆಯನ್ನೂ ಕೋಸಲರಾಜ ದುರುಪಯೋಗಪಡಿಸಿಕೊಂಡು ನೆರೆಯ ರಾಜ್ಯದ ಮೇಲೆ ಆಕ್ರಮಣ ಮಾಡಿದ.

ಕೋಸಲರಾಜ ಮಹಾಕೋಸಲನು ಕಾಶಿ ರಾಜ್ಯವನ್ನು ಸಂಪೂರ್ಣವಾಗಿ ಸ್ವಾಧೀನ ಪಡಿಸಿಕೊಂಡಿದ್ದನ್ನು ಕೊನೆಯ ಹಂತ ಸೂಚಿಸುತ್ತದೆ. ಮಹಾ ಕೋಸಲನನ್ನು ಕಾಶಿ–ಕೋಸಲಗಳೆರಡಕ್ಕೂ ಚಕ್ರವರ್ತಿ ಎಂದು ಉಲ್ಲೇಖಿಸಲಾಗಿದೆ. ಬೌದ್ಧದಾಖಲೆಗಳು ಕೋಸಲಕ್ಕೂ ಬೇರೆ ಯಾವುದೇ ರಾಜ್ಯ ಅಥವಾ ಯಾವುದೇ ಬುಡಕಟ್ಟಿಗೂ ನಡೆದ ಸ್ಪರ್ಧೆಗಳನ್ನು ದಾಖಲಿಸುವುದಿಲ್ಲವಾದ್ದರಿಂದ, ಕೋಸಲದ ಉತ್ತರ ಭಾಗದಲ್ಲಿ ಸಣ್ಣಪುಟ್ಟ ವಂಶಗಳ ಬುಡಕಟ್ಟುಗಳ ವಿಲೀನ ಕಾರ್ಯ ಮಹತ್ತ್ವದ ಯುದ್ಧವೋ ದಂಡಯಾತ್ರೆಯೋ ಯಾವುದೂ ಇಲ್ಲದೆ ಸದ್ದಿಲ್ಲದೆ ನಡೆದುಹೋಯಿತು ಎಂದಿಟ್ಟುಕೊಳ್ಳಬಹುದು. ಹೀಗೆ ಕಾಶಿ–ಕೋಸಲ ಸಂಪರ್ಕ ಅನೇಕ ಪೀಳಿಗೆಗಳವರೆಗೆ ನಡೆದ ಕಾದಾಟದಲ್ಲಿ ಫಲಿತವಾಗಿ, ಅದೃಷ್ಟ ಅತ್ತಿತ್ತ ಒಲೆದಾಡಿ ಕೊನೆಗೆ ಕಾಶಿಯನ್ನು ಕೋಸಲ ರಾಜ ಕಂಸನೋ (ಇವನು ಮಹಾಕೋಸಲನ ಹಿಂದಿನವನಿರಬೇಕು) ಮಹಾಕೋಸಲನೋ ಸಂಪೂರ್ಣವಾಗಿ ಕೋಸಲದಲ್ಲಿ ವಿಲೀನಗೊಳಿಸಿ ಕೊಳ್ಳುವುದರಲ್ಲಿ ಪರ್ಯವಸಾನವಾಯಿತು. ಮಹಾಕೋಸಲನ ಮಗ ಪ್ರಸೇನಜಿತ್, ಅವನ ಅನಂತರ ಪಟ್ಟಕ್ಕೆ ಬಂದ (ಪಾಲಿಯಲ್ಲಿ ಪಸೇನದಿ). ಮುಂದಿನ ವೈದಿಕ ಸಾಹಿತ್ಯಗಳಲ್ಲಿ ಉಲ್ಲೇಖಗೊಂಡ ಹಿರಣ್ಯನಾಭನೇ ಮಹಾಕೋಸಲ ಎಂಬುದು ರಾಯ್ ಚೌಧುರಿಯವರ ಅಭಿಪ್ರಾಯ. ಅವನು ತನ್ನ ಮಗಳು ಕೋಸಲದೇವಿಯನ್ನು ಮಗಧರಾಜ ಬಿಂದುಸಾರನಿಗೆ ಮದುವೆ ಮಾಡಿಕೊಟ್ಟ.

**ಮಗಧ:** ಭಾರತಯುದ್ಧದ ಸಮಯದಲ್ಲಿ ಬಾರ್ಹದ್ರಥವಂಶ ಮಗಧವನ್ನು ಆಳುತ್ತಿದ್ದಿತು. ಯುದ್ಧಕ್ಕೆ ಮುಂಚೆ ಜರಾಸಂಧ ಬಲಿಷ್ಠನಾದ ಚಕ್ರವರ್ತಿಯಾಗಿದ್ದ. ಅನಂತರ ಅವನ ಮಗ ಸಹದೇವ ರಾಜನಾದ. ಪಾಂಡವರ ಮಿತ್ರನಾಗಿದ್ದ ಅವನು ಯುದ್ಧದಲ್ಲಿ ಮೃತನಾದ. ಸಹದೇವನ ಅನಂತರ ಅವನ ಮಗ ಸೋಮಾಧಿ ಗಿರಿವ್ರಜದ ರಾಜನಾದ. ಅದರ ತಪ್ಪಲಲ್ಲೇ ಮಗಧದ ಪ್ರಾಚೀನ ರಾಜಧಾನಿ ರಾಜಗೃಹ ಬೆಳೆಯಿತು. ರಾಜಗೃಹದ ಹಳೆಯ ನಿವೇಶನ ಪಟಣ ಜಿಲ್ಲೆಯ ಆಧುನಿಕ ರಾಜ್‌ಗೀರ್ ಆಗಿದೆ. ಸೋಮಾಧಿಯ ಅನಂತರ 6 ನೆಯವನಾದ ಸೇನಾಜಿತ ಪೌರವ ಅಧಿಸೀಮಕೃಷ್ಣ ಮತ್ತು ಕೋಸಲ ದಿವಾಕರ ಇವರ ಸಮಕಾಲೀನನಾಗಿದ್ದ. ಅನುಕ್ರಮದಲ್ಲಿ ಸೋಮಾಧಿಯಿಂದ 21 ನೆಯವನಾದ ರಿಪುಂಜಯ ಬಾರ್ಹದ್ರಥವಂಶದ ಕೊನೆಯ ಅರಸನೆಂದು ಹೇಳಲಾಗಿದೆ. ರಿಪುಂಜಯನನ್ನು ಅವನ ಮಂತ್ರಿಯಾಗಿದ್ದ ಪುಲಿಕ (ಪುನಿಕ, ಪುಲಕ) ಕೊಂದು ತನ್ನ ಮಗ ಪ್ರದ್ಯೋತನನ್ನು ಸಿಂಹಾಸನಕ್ಕೇರಿಸಿದ. ಪುರಾಣಗಳ ಪ್ರಕಾರ ಪ್ರದ್ಯೋತ್ಯ ವಂಶ 5 ಪೀಳಿಗೆಗಳವರೆಗೆ 138 ವರ್ಷಗಳ ಕಾಲ ಆಳಿತು. ಶಿಶುನಾಗ ತನ್ನ ಮಗನಿಗೆ ಕಾಶಿಯ ರಾಜ್ಯಭಾರವನ್ನು ವಹಿಸಿಕೊಟ್ಟು ತಾನು ಗಿರಿವ್ರಜದಲ್ಲಿ (ಅಥವಾ ರಾಜಗೃಹದಲ್ಲಿ) ತನ್ನ ರಾಜಧಾನಿಯನ್ನು ಸ್ಥಾಪಿಸಿಕೊಂಡ. ಬಿಂದುಸಾರ ಮತ್ತು ಅಜಾತಶತ್ರು ಇವರು ಪುರಾಣಗಳ ಪಟ್ಟಿಯಲ್ಲಿ ಶಿಶುನಾಗರ ಅನಂತರ 5 ಮತ್ತು 6ನೆಯ ಅರಸರಾಗಿ ಕಂಡುಬರುತ್ತಾರೆ. ಶಿಶುನಾಗ ಒಂದು ಹೊಸರಾಜವಂಶವನ್ನು ಶೈಶುನಾಗವೆಂಬ ಹೆಸರಿನಲ್ಲಿ ಸ್ಥಾಪಿಸಿದ.

ಆದರೆ ಪುರಾಣಗಳಲ್ಲಿ ಈ ಇತಿಹಾಸ ತಪ್ಪು–ತಡೆಗಳಿಂದ ಕೂಡಿದೆ. ಪ್ರದ್ಯೋತ, ಶಿಶುನಾಗ ಮತ್ತು ಬಿಂದುಸಾರರ ವಂಶಗಳ ಪ್ರತ್ಯೇಕ ಪಟ್ಟಿಗಳು ದೋಷ ಪೂರಿತ ಅನುಕ್ರಮದಲ್ಲಿದೆ.

ಪ್ರದ್ಯೋತರು ಅವಂತಿಯಲ್ಲಿ ಆಳುತ್ತಿದ್ದರು ಎನ್ನುವುದು ಮತ್ಸ್ಯಪುರಾಣದ ಹೇಳಿಕೆ ಯಿಂದಲೇ ಸ್ಪಷ್ಟವಾಗುತ್ತದೆ. ಮಗಧದ ಯಾವುದೇ ಪ್ರದ್ಯೋತ ವಂಶವೊಂದಿದ್ದಿತೆನ್ನುವುದಕ್ಕೆ ವಿಶ್ವಾಸಪೂರ್ಣ ಆಧಾರ ಯಾವುದೂ ದೊರಕುವುದಿಲ್ಲ. ಪಾಲಿ ನಿರೂಪಣೆಗಳ ಪ್ರಕಾರ ಮೊದಲನೆಯ ಪ್ರದ್ಯೋತನು ಮಗಧದ ಬಿಂಬಿಸಾರನ ಸಮಕಾಲೀನನಾಗಿದ್ದ. ಪುರಾಣಗಳು ಮತ್ತು ಇತರ ಸಂಸ್ಕೃತ ಸಾಹಿತ್ಯವನ್ನು ಸಂಯೋಜಿಸಿ ನೋಡಿದಾಗ ತಿಳಿಯುವುದೂ ಈ ನಿರ್ಣಯವನ್ನೇ ಬೆಂಬಲಿಸುತ್ತದೆ. ಆದರೆ ಪುರಾಣಗಳು ಪ್ರದ್ಯೋತನಿಗೂ ಬಿಂದುಸಾರನಿಗೂ ಸು.10 ತಲೆಮಾರುಗಳ ಅಂತರವನ್ನು ಹೇಳುತ್ತವೆ. ಶಿಶುನಾಗನು ಪ್ರದ್ಯೋತರ ಕೀರ್ತಿಯನ್ನು ನಾಶಮಾಡಿದ್ದರೆ, ಅವನು ಪ್ರದ್ಯೋತವಂಶದ ಮೊದಲನೆಯ ರಾಜ ಚಂಡಪ್ರದ್ಯೋತನಿಂದ ನಾಲ್ಕು ಅಥವಾ ಐದು ತಲೆಮಾರುಗಳ ಅನಂತರ ಬಂದಿರಬೇಕು. ಪುರಾಣಗಳು ಶಿಶುನಾಗನನ್ನು ಬಿಂಬಿಸಾರ ವಂಶದ ಮೂಲಪುರುಷನೆಂಬಂತೆ ನಿರೂಪಿಸಿವೆ; ಆದರೆ ಪಾಲಿ ವರದಿಗಳಲ್ಲಿ ಇವನನ್ನು ನಾಲ್ಕು ಅಥವಾ ಐದು ತಲೆಮಾರಿಗೆ ಇರಿಸಲಾಗಿದೆ; ಇದು ವಿಹಿತವಾಗಿದೆ ಕೂಡ. ಆದ್ದರಿಂದ ಶಿಶುನಾಗನು ಬಿಂದುಸಾರನ ಸಮಕಾಲೀನನೇ ಆಗಿರಬೇಕು. ಇವನನ್ನು ಬಿಂದುಸಾರನ ವಂಶವಾದ ಮೇಲೆ ಕಾಣಿಸಿಕೊಂಡ ಇನ್ನೊಂದು ವಂಶದ ಸ್ಥಾಪಕನನ್ನಾಗಿ ನಿರೂಪಿಸಲಾಗಿದೆ.

ಶಿಶುನಾಗನನ್ನು ಬಿಂದುಸಾರನ ಉತ್ತರಕಾಲೀನನೆಂದು ಪುರಾಣಗಳೇ ಒಂದು ರೀತಿಯಲ್ಲಿ ಉಲ್ಲೇಖಿಸಿದೆ. ಅವು ವಾರಾಣಸಿಯನ್ನು ಶಿಶುನಾಗನ ಸಾಮ್ರಾಜ್ಯದಲ್ಲಿ ಸೇರಿಸುತ್ತವೆ. ಏಕೆಂದರೆ, ಕಾಶಿಯಲ್ಲಿ ಮಗಧ ಚಕ್ರಾಧಿಪತ್ಯವನ್ನು ಸ್ಥಾಪಿಸಿದ ಮೊದಲಿಗರು ಬಿಂದುಸಾರ ಮತ್ತು ಅಜಾತಶತ್ರು. ಅವಂತಿ ಮತ್ತು ಮಗಧಗಳ ನಡುವೆ ವೈರತ್ವವು ಮೊದಲು ಅಜಾತಶತ್ರುವಿನ ಆಳಿಕೆಯಲ್ಲಿ ಕಾಣುತ್ತದೆ. ಬಿಂದುಸಾರನ ಕಾಲದಲ್ಲಿ ಅದರ ಒಂದು ಸಣ್ಣ ಕುರುಹೂ ಇಲ್ಲ. ಆದ್ದರಿಂದ ಪ್ರದ್ಯೋತರನ್ನು ನಿರ್ಮೂಲ ಮಾಡಿದ ಶಿಶುನಾಗ ಬಿಂದುಸಾರ ಮತ್ತು ಅಜಾತಶತ್ರುಗಳ ಅನಂತರವೇ ಬರಬೇಕು. ಶಿಶುನಾಗನನ್ನು ಬಿಂದುಸಾರ–ಅಜಾತಶತ್ರು ಗುಂಪಿಗಿಂತ ಮುಂದೆ ಇಡಲು ಕಾರಣವು ಹೀಗಿರಬಹುದು; ಶಿಶುನಾಗ ರಾಜಗೃಹವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಉದಯನನು ರಾಜಧಾನಿಯನ್ನು ಪಾಟಲಿಪುತ್ರಕ್ಕೆ ವರ್ಗಾಯಿಸಿದ ಎಂದು ಹೇಳಿರುವುದರಿಂದ ಮುಂದಿನ ಪುರಾಣಕರ್ತರಿಗೆ ಸರಿಯಾಗಿ ಮಾಹಿತಿ ದೊರಕದೆ, ಶಿಶುನಾಗನು ಉದಯನನಿಗಿಂತ ಮುಂಚೆ ಇದ್ದನೆಂದು ಬರೆದರು. ಆದರೆ ಶಿಶುನಾಗನ ಅನಂತರ ರಾಜಗೃಹ ರಾಜಧಾನಿಯ ಗೌರವವನ್ನು ಕಳೆದುಕೊಂಡಿತು ಎಂಬ ಮೂಲಾಲಂಕಾರವತ್ಥು ಕೃತಿಯ ಹೇಳಿಕೆ, ಶಿಶುನಾಗ ರಾಜಗೃಹದ ಉತ್ಕರ್ಷ ಕಾಲದ ಅನಂತರ, ಅಂದರೆ ಬಿಂದುಸಾರ ಮತ್ತು ಅಜಾತಶತ್ರುಗಳ ಅನಂತರ ಪ್ರವರ್ಧಮಾನನಾಗಿದ್ದ ಎಂಬುದನ್ನು ಸೂಚಿಸುತ್ತದೆ. ಬಹುಶಃ ಅವಂತಿಯ ಮೇಲೆ ಮಗಧದ ಆ ಕಡೆಯ ಭಾಗದ ಆಕ್ರಮಣಗಳನ್ನು ಎದುರಿಸುವ ಸಲುವಾಗಿ ಹಳೆಯ ರಾಜಗೃಹವನ್ನು ತನ್ನ ಕೇಂದ್ರವನ್ನಾಗಿ ಆಯ್ಕೆಮಾಡಿಕೊಂಡಿರಬಹುದು.

ಹೀಗೆ ಮಗಧದಲ್ಲಿ ಬಾರ್ಹದ್ರಥವಂಶ ಪುರಂಜಯನಿಂದ ಕೊನೆಗೊಂಡಿತೆಂದೂ ಅವನ ಅನಂತರ ಬಿಂದುಸಾರ ರಾಜನಾದನೆಂದೂ ಇಟ್ಟುಕೊಳ್ಳಬಹುದು.

**ಇತರ ರಾಜ್ಯಗಳು :** ವತ್ಸ, ಕೋಸಲ ಮತ್ತು ಮಗಧ ಈ ಮೂರು ರಾಜ್ಯಗಳಲ್ಲದೆ, ಬೇರೆ ಕೆಲವು ರಾಜ್ಯಗಳೂ ಉತ್ಕರ್ಷ ಹೊಂದಿದ್ದವು ಆದರೆ ಇವುಗಳ ಇತಿಹಾಸ ತಿಳಿದಿರುವುದು ಬಹು ಅಲ್ಪ; ಬೇರೆ ಬೇರೆ ಮೂಲಗಳಿಂದ ಹೆಕ್ಕಿ ಹೊರತೆಗೆದ ಕೆಲವು ಸಾಂದರ್ಭಿಕ ಉಲ್ಲೇಖಗಳಿಂದ ಪಶ್ಚಿಮದಿಂದ ಪ್ರಾರಂಭಿಸಿದರೆ, ಮೊದಲು ಪಂಚಾಲ ರಾಜ್ಯ ಭಾರತಯುದ್ಧ ದಿಂದ ಮಹಾಪದ್ಮನಂದನ ವರೆಗೆ ಅದರ ರಾಜರನ್ನು 27 ಜನ ಎಂದು ಪುರಾಣಗಳು ಹೇಳುತ್ತವೆಯೇ ಹೊರತು ಯಾವ ಹೆಸರನ್ನೂ ಹೇಳುವುದಿಲ್ಲ.

ಪರಿಚಕ್ರ, ಕಾಂಪಿಲ್ಯ (ಅಥವಾ ಕಾಂಪಿಲ) ಮತ್ತು ಅಹಿಚ್ಛತ್ರ ಪಂಚಾಲ ದೇಶದ ಮುಖ್ಯನಗರಗಳಾಗಿದ್ದವೆಂದು ವೇದ ಮತ್ತು ಪುರಾಣಕೃತಿಗಳಿಂದ ತಿಳಿದುಬರುತ್ತದೆ. ಅಹಿಚ್ಛತ್ರ ಇಂದಿನ ಬರೇಲಿ ಜಿಲ್ಲೆಯ ರಾಮನಗರ ಸಮೀಪದ ಅದೇ ಹೆಸರಿನ ಪ್ರದೇಶವೆಂದು ಗುರುತಿಸಲಾಗಿದೆ. ಕೊನೆಯ ಶತಮಾನದಲ್ಲಿ ಚೀನಿ ಪ್ರವಾಸಿ ಯುವಾನ್ ಚಾಂಗ್ ಬಂದಿದ್ದಾಗ ಈ ನಗರ ತನ್ನ ವಿಸ್ತಾರದಲ್ಲಿ ಇನ್ನೂ ಗಮನಾರ್ಹವಾಗಿಯೇ ಇದ್ದಿತು. ದ್ರುಪದನ ಆಳ್ವಿಕೆಯಲ್ಲಿ ಪಂಚಾಲ ದೇಶ ಉತ್ತರ ಮತ್ತು ದಕ್ಷಿಣ ಎಂದು ಎರಡು ಭಾಗಗಳಿತ್ತು. ಚೇದಿ ರಾಜಕುಮಾರ ನೊಬ್ಬ ಉತ್ತರಕ್ಕೆ ಹೋಗಿ ಪಂಚಾಲ ಹಾಗೂ ಚೇದಿ ನಾಡುಗಳಿಂದ ಬಂದ ವಲಸಿಗರನ್ನು ಕೂಡಿಸಿ ಉತ್ತರ ಪಂಚಾಲ ರಾಜ್ಯವನ್ನು ಕಟ್ಟಿದ ಎಂದು ಸೂಚಿಸುವ ಜಾತಕ ಕಥೆಯೊಂದಿದೆ. ಐತರೇಯ ಬ್ರಾಹ್ಮಣ ದುರ್ಮುಖನನ್ನು ವಿಶ್ವಪ್ರಭು ಎಂದು ಕೊಂಡಾಡುತ್ತದೆ; ಅವನು ಎಲ್ಲ ದಿಕ್ಕುಗಳಲ್ಲೂ ದಿಗ್ವಿಜಯ ಮಾಡಿದ ಎಂದು ಬೃಹದುಕ್ಥ ಅವನಿಗೆ ತೈಲಾಭ್ಯಂಜನ ಮಾಡಿಸಿದನೆಂದೂ ಹೇಳುತ್ತದೆ. ಬ್ರಾಹ್ಮಣ ಮತ್ತು ಬೌದ್ಧ ಸಾಹಿತ್ಯಗಳಲ್ಲಿ ಬರುವ ಪಂಚಾಲ ದ್ವಿಮುಖನೇ ದುರ್ಮುಖ (ದುಮ್ಮುಖ) ಆಗಿರಬಹುದು. ಜೈನ ಪರಂಪರೆಯಂತೆ ಇವನು ಒಬ್ಬ ಪ್ರತ್ಯೇಕ–ಬುದ್ಧ. ಕೆಲವು ವರದಿಗಳು ಪೌರಾಣಿಕ ರಾಜ ಬ್ರಹ್ಮದತ್ತನನ್ನು ಪಂಚಾಲ ದೊಂದಿಗೆ ಸಂಬಂಧಗೊಳಿಸುತ್ತವೆ.

ಮುಂದೆ ಶೂರಸೇನ ರಾಜ್ಯವಿತ್ತು. ಇದರ ರಾಜಧಾನಿ ಯಮುನಾನದಿಯ ಮೇಲಿದ್ದ ಮಥುರ ನಗರ. ಭಾರತ ಯುದ್ಧಕ್ಕಿಂತ ಮೊದಲು ಶೂರಸೇನ ರಾಜ್ಯ (ಆಧುನಿಕ ಮುತ್ರಾಜಿಲ್ಲೆ, ಇನ್ನೂ ದಕ್ಷಿಣಕ್ಕೆ ಕೆಲವು ಪ್ರದೇಶಗಳು ಸೇರಿ) ಯದುವಂಶದ ನಾಯಕರ ಆಳಿಕೆಗೆ ಒಳಪಟ್ಟಿದ್ದಿತು. ಪುರಾಣಗಳು ಭಾರತ ಯುದ್ಧಾನಂತರ ನಂದನವರೆಗೆ ಒಟ್ಟು 23 ಶೂರಸೇನರನ್ನು ಹೇಳುತ್ತವೆ; ಆದರೆ ವಂಶಾವಳಿಯನ್ನು ಕೊಡುವುದಿಲ್ಲ.

ಶೂರಸೇನದ ದಕ್ಷಿಣಕ್ಕೆ ಅವಂತಿ. ಇದು ಸುಮಾರಾಗಿ ಮಧ್ಯಮಾಳವ, ನಿಮೂರ್ ಹಾಗೂ ಉತ್ತರ ಪ್ರಾಂತದ ಆಚೀಚಿನ ಭಾಗಗಳನ್ನು ಒಳಗೊಂಡಿದೆ. ರಾಜ್ಯದ ರಾಜಧಾನಿಗೂ ಅವಂತಿ ಅಥವಾ ಉಜ್ಜಯನಿ ಎಂದು ಹೆಸರು. ಇದು ಚಂಬಲ್ ನದಿಯ ಉಪನದಿ ಶಿಪ್ರಾದ ಮೇಲಿರುವ ಇಂದಿನ ಉಜ್ಜಯಿನಿ ಎಂದು ಗುರುತಿಸಲಾಗಿದೆ. ಪ್ರಾಚೀನ ಭಾರತದಲ್ಲಿ ಉಜ್ಜಯನಿ ರಾಜಕೀಯವಾಗಿಯೂ ವಾಣಿಜ್ಯ ದೃಷ್ಟಿಯಿಂದಲೂ ಬಹು ಮುಖ್ಯವಾದ ನಗರವಾಗಿತ್ತು. ಅಷ್ಟು ಮಹತ್ತ್ವಪೂರ್ಣನಗರದಲ್ಲಿ ಆಳುತಿದ್ದ ಯಾವ ರಾಜರ ಹೆಸರುಗಳೂ ಪುರಾಣಗಳಲಿಲ್ಲ. ಬಹುಶಃ ಹೀಗಿರಬಹುದು: 28 ಜನ (ಕೆಲವು ಪುರಾಣಗಳ ಪ್ರಕಾರ ಇಪ್ಪತ್ತನಾಲ್ಕು) ಹೈಹಯರು (ಯದುಯ ವಂಶಜರು) ಭಾರತ ಯುದ್ಧಾನಂತರ ಆಳುತ್ತಿದ್ದರು. ಇವರೇ ಅವಂತಿಯನ್ನು ನೇರವಾಗಿ ಆಳುತ್ತಿದ್ದಿರಬಹುದು. ಅವಂತಿಗಳೂ ಹೈಹಯರ ಐದು ಶಾಖೆಗಳಲ್ಲಿ ಒಬ್ಬರಾಗಿದ್ದರು ಎಂಬುದನ್ನು ನೆನಪಿಗೆ ತಂದುಕೊಳ್ಳಬಹುದು. ಕೆಲವು ವಿದ್ವಾಂಸರ ಪ್ರಕಾರ, ಭಾರತಯುದ್ಧಾನಂತರ ಆಳುತ್ತಿದ್ದರೆಂದು ಪುರಾಣಗಳು ಹೇಳುವ ಇಪ್ಪತ್ತು ಜನ ವೀತಿಹೋತ್ರರು ಅವಂತಿಯ ಅರಸರಾಗಿದ್ದರು. ಆದರೆ ಭಾರತಯುದ್ಧ ಸಮಯದಲ್ಲಿ ಉತ್ಕರ್ಷ ಸ್ಥಿತಿಯಲ್ಲಿದ್ದ ವಿಂದ ಮತ್ತು ಅನುವಿಂದರ ಅನಂತರದ ಅವಂತಿಯ ಇತಿಹಾಸವನ್ನು ಕುರಿತು ಖಚಿತವಾದ ಮಾಹಿತಿ ಯಾವುದೂ ದೊರಕುವುದಿಲ್ಲ. ಮತ್ತೆ ಅವಂತಿಯ ವಿಷಯವಾಗಿ ಕೇಳುವುದು ಐದು ಶತಮಾನಗಳಿಗೂ ಹೆಚ್ಚು ಸಮಯದ ಅನಂತರ ಆಗ ಅದು ಪ್ರದ್ಯೋತರ ಆಳಿಕೆಯಲ್ಲಿತ್ತು.

ವಿದೇಹ ರಾಜ್ಯಕ್ಕೆ, ಅದು ಸಂಸ್ಕೃತಿ ಮತ್ತು ಶಿಕ್ಷಣಗಳಿಗೆ ಬಹುದೊಡ್ಡ ಕೇಂದ್ರವಾಗಿದ್ದರಿಂದ ಹೆಚ್ಚಿನ ಪ್ರಾಧಾನ್ಯ ಸಲ್ಲುತ್ತದೆ. ವಿದೇಹವಂಶ ಅಥವಾ ಪುರಾಣ ನಿರೂಪಣೆಗಳ ಪ್ರಕಾರ ಜನಕರವಂಶ ಕೃತಿಯೊಂದಿಗೆ ಮುಕ್ತಾಯವಾಯಿತು. ಇವನೇ ಭಾರತಯುದ್ಧದ ಸಮಯದಲ್ಲಿ ಆಳುತ್ತಿದ್ದ ಬಹುಲಾಶ್ವನ ಮಗ ಕೃತಕ್ಷಣನೆಂದು ಹೇಳಲಾಗಿದೆ. ಆದರೆ ಯುಧಿಷ್ಠಿರನ ಅನಂತರವೂ ವಿದೇಹದ ಜನಕರ ಉಲ್ಲೇಖವನ್ನು ನೋಡುವುದರಿಂದ ಜನಕರಲ್ಲಿ ಕೊನೆಯವನೆಂದು ಅವನನ್ನು ಗುರುತಿಸುವುದು ಸರಿಯಾಗಿ ಕಾಣುವುದಿಲ್ಲ. ಒಬ್ಬ ಬ್ರಾಹ್ಮಣ ಕನ್ಯೆಯನ್ನು ಕೆಡಿಸಿದುದುರ ಪರಿಣಾಮವಾಗಿ ಬಂಧು ಮಿತ್ರರನ್ನೂ ರಾಜ್ಯವನ್ನೂ ಕಳೆದುಕೊಂಡು ನಾಶವಾದನೆಂದು ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಿರುವ ಕರಾಲ (ಜನಕ) ವೈದೇಹನೇ ಕೃತಿ ಎಂದು ಗುರುತಿಸಲಾಗಿದೆ. ಬೌದ್ಧ ಸಾಹಿತ್ಯದಲ್ಲೂ ಈ ಕಥೆಯನ್ನು ಸ್ವೀಕರಿಸಿದ್ದು, ಅದರಿಂದಾಗಿ ಕರಾಲನು ಜನಕರಲ್ಲಿ ಕೊನೆಯವನಾಗುತ್ತಾನೆ.

ವಿದೇಹದ ಜನಕನೂ ಅವನಿಗೆ ಬ್ರಹ್ಮವಿದ್ಯೆಯನ್ನು ಬೋಧಿಸಿದ ಋಷಿ ಯಾಜ್ಞವಲ್ಕ್ಯನೂ ಭಾರತ ಇತಿಹಾಸದಲ್ಲಿ ಬಹು ಪ್ರಸಿದ್ಧವಾದ ಹೆಸರುಗಳು. ಆದರೆ ಅವರ ವಂಶಾವಳಿ ಅನಿಶ್ಚಿತವಾಗಿದೆ; ಇದೇ ಹೆಸರಿನಿಂದ ಇನ್ನೊಂದು ಜೋಡಿಯೂ ಇದ್ದಂತೆ ತೋರುತ್ತದೆ. ಮಹಾಭಾರತದಿಂದ ತಿಳಿದುಬರುವಂತೆ, ಜನಮೇಜಯನ ಕಾಲದಲ್ಲಿ ಒಬ್ಬ ಜನಕ ವಿದೇಹವನ್ನಾಳುತ್ತಿದ್ದ. ಜನಮೇಜಯ ಪರೀಕ್ಷಿತನ ಮಗ. ಉದ್ದಾಲಕನ ಮಗ ಶ್ವೇತಕೇತುವು ಜನಕನ ಆಸ್ಥಾನದಲ್ಲಿ ಗಣ್ಯಸ್ಥಾನದಲಿದ್ದ. ಜನಮೇಜಯ ಮಾಡಿದ ಸರ್ಪಯಾಗಕ್ಕೆ ಹೋಗಿದ್ದ. ಉಪನಿಷತ್ತುಗಳಲ್ಲಿ ಕಾಣಿಸಿಕೊಳ್ಳುವ ದಾರ್ಶನಿಕ ರಾಜ ಜನಕನು ಯಾಜ್ಞವಲ್ಕ್ಯ ಮತ್ತು ಕೇಕಯ ರಾಜ ಅಶ್ವಪತಿ ಇವರ ಸಮಕಾಲೀನನು. ಅದರೆ ದುರದೃಷ್ಟವಶಾತ್ ಯಾಜ್ಞವಲ್ಕ್ಯ ಮತ್ತು ಅಶ್ವಪತಿ ಎರಡು ಕುಟುಂಬ ನಾಮಗಳು, ಜನಕನ ಹಾಗೆಯೇ. ಆದ್ದರಿಂದ ಈ ಹೊಂದಾಣಿಕೆಯಿಂದ ಯಾವುದೇ ಕಾಲಾನುಕ್ರಮಣಿಕೆಯ ನಿಗಮನ ಸಾಧ್ಯವಿಲ್ಲ. ಸೀತೆಯ ತಂದೆ ಎಂದು ಭಾವಿಸುವ ವೇದಕಾಲೀನ ಜನಕನ ಕಾಲವನ್ನು ಪಾಂಡವ ವಂಶದ ಜನಮೇಜಯ ಪರೀಕ್ಷಿತನಿಗಿಂತ ಮೊದಲಿಗೆ ರಾಯ್ ಚೌಧುರಿಯವರು ನಿಗದಿಪಡಿಸುತ್ತಾರೆ. ಈ ಸಮೀಕರಣ ಸಂಪ್ರದಾಯಿಕ ಇತಿಹಾಸದ ಅನೇಕ ಸುಸ್ಥಾಪಿತ ಹೊಂದಾಣಿಕೆಗಳಿಗೆ ವಿರುದ್ಧವಾಗುತ್ತದೆ, ಇತಿಹಾಸ ಯೋಜನೆಯಲ್ಲಿ ರಾಮ ಹಾಗೂ ಅನಂತರದ ಇಕ್ಷ್ವಾಕುಗಳ ಕಾಲವನ್ನು ವಿವರಿಸಲು ಅಸಮರ್ಥವಾಗುತ್ತದೆ.

ಏನೇ ಇರಲಿ, ತತ್ತ್ವಜ್ಞಾನಿ ರಾಜ ಜನಕ ಮತ್ತು ಯಾಜ್ಞವಲ್ಕ್ಯರ ಒಂದು ಜೋಡಿ ಭಾರತಯುದ್ಧವಾದ ಮೇಲೆ ಉಚ್ಛ್ರಾಯವನ್ನು ಹೊಂದಿದ್ದಿತು ಎಂಬುದರಲ್ಲಿ ಸಂದೇಹವಿಲ್ಲ. ಜನಮೇಜಯನ ಮಗ ಶತಾನೀಕನು ವೈಶಂಪಾಯನನ ಶಿಷ್ಯನಾಗಿದ್ದ ಯಾಜ್ಞವಲ್ಕ್ಯನ ಶಿಷ್ಯನಾಗಿದ್ದ. ಉಗ್ರಸೇನ ಎನ್ನುವುದು ಬಹುಶಃ ಈ ಜನಕನ ಮುಖ್ಯನಾಮವಾಗಿರಬೇಕು. ಆದರೆ ಈ ಹೆಸರು ವಂಶಾವಳಿಗಳಲ್ಲಿ ಕಂಡುಬರುವುದಿಲ್ಲ. ಭಾರತಯುದ್ಧದ ಮೊದಲೂ ಆಮೇಲೂ ವಿದೇಹದ ಜನಕರ ಪ್ರಸಿದ್ಧಿ ನಿಂತಿರುವುದು ಅವರ ಪರಾಕ್ರಮಗಳಿಂದಲೋ ಇವರು ನಡೆಸಿದ ಯಾಗಗಳಿಂದಲೋ ಅಲ್ಲ. ಅವರು ಶಿಕ್ಷಣ, ಸಂಸ್ಕೃತಿ, ತತ್ತ್ವಜ್ಞಾನ, ಆಧ್ಯಾತ್ಮಿಕಸಿದ್ಧಿ–ಇವುಗಳಿಗೆ ನೀಡಿದ ಪ್ರೋತ್ಸಾಹದಿಂದ ಎಂಬುದನ್ನು ಗಮನದಲ್ಲಿಡಬೇಕು. ವಿದೇಹದ ರಾಜರು ಸಾಮಾನ್ಯವಾಗಿ ನೆರೆಹೊರೆಗಳೊಂದಿಗೆ ಸ್ನೇಹವನ್ನು ಹೊಂದಿದ್ದರು; ಅನೇಕ ಸಮಕಾಲೀನ ರಾಜರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದರು.

ಆಗಲೇ ಹೇಳಿದಂತೆ ಕೊನೆಯ ಚಕ್ರವರ್ತಿಯ ದುರ್ನಡತೆ ವಿದೇಹ ವಂಶದ ಅವನತಿಗೆ ಕಾರಣವಾಯಿತು. ಅರಸುತನ ಕುಸಿದು ಗಣರಾಜ್ಯ ಉದಿಸಿತು. ವಿದೇಹದಲ್ಲಿ ನಡೆದ ಈ ರಾಜಕೀಯ ಕ್ರಾಂತಿ ಆ ಕಾಲದ ಅತಿ ಮಹತ್ತ್ವದ ಘಟನೆಗಳಲ್ಲಿ ಒಂದು. ಬುದ್ಧನ ಕಾಲದಲ್ಲಿ ವಿದೇಹರು, ವೈಶಾಲಿಯ ಲಿಚ್ಛವಿಗಳು ಮತ್ತು ಇತರ ಪಂಗಡಗಳೊಂದಿಗೆ ವಜ್ಜಿಗಳೆಂಬ ಪ್ರಬಲವಾದ ಒಕ್ಕೂಟವನ್ನು ರಚಿಸಿಕೊಂಡಿದ್ದರು. ವಿದೇಹದ ಚಕ್ರಾಧಿಪತ್ಯವನ್ನು ಉರುಳಿಸುವುದ ವರಲ್ಲಿ ಕಾಶಿಯ ಜನರ ಕೈವಾಡವಿದ್ದಿತು. ಕಾಶಿಗೂ ವಿದೇಹಕ್ಕೂ ಪದೇ ಪದೇ ಹೋರಾಟಗಳಾಗುತ್ತಿದ್ದುವು. ಬಹುಶಃ ಕಾಶಿಯ ರಾಜವಂಶದ ಕಿರಿಯ ಶಾಖೆಯೊಂದು ವಿದೇಹದಲ್ಲಿ ನೆಲೆಯೂರಿದ್ದಿರಬಹುದು. ಭಾರತಯುದ್ಧದ ಅನಂತರ ಇಪ್ಪತ್ತೆಂಟು ಜನ ಮೈಥಿಲರು ರಾಜ್ಯವಾಳಿದರೆಂದು ಪುರಾಣಗಳು ಹೇಳುತ್ತವೆ. ಇವರು ಬಹುಶಃ ವಿದೇಹದ ಅರಸರಿದ್ದಿರಬೇಕು.

ಭಾರತಯುದ್ಧವಾದ ಮೇಲಿನ ಕಾಶಿ ರಾಜ್ಯವನ್ನು ಕುರಿತು, ನಂದರವರೆಗೆ 24 ಜನ ಕಾಶೀರಾಜರು ಆಳಿದರು ಎಂಬ ಉಲ್ಲೇಖವೊಂದರ ಹೊರತು ಪೌರಾಣಿಕ ನಿರೂಪಣೆಗಳಲ್ಲಿ ಬೇರೆ ಯಾವ ಮಾಹಿತಿಯೂ ದೊರಕುವುದಿಲ್ಲ. ಕೋಸಲರ ಮತ್ತು ವಿದೇಹರ ಸಮೀಪದಲ್ಲಿದ್ದುದರಿಂದ ಕಾಶಿಗಳು ಈ ರಾಜ್ಯಗಳೊಂದಿಗೆ ಒಂದಿಲ್ಲೊಂದು ಸಂಬಂಧವನ್ನು ಇಟ್ಟುಕೊಂಡೇ ಇದ್ದರು; ಇದು ಸಹಜ. ಮುಂದಿನ ವೈದಿಕ ಕೃತಿಗಳು ಕಾಶಿ–ಕೋಸಲರನ್ನು, ಕಾಶಿ–ವಿದೇಹರನ್ನು ಜೊತೆಜೊತೆಯಾಗಿಯೇ ಉಲ್ಲೇಖಿಸುತ್ತವೆ. ಕೆಲವೊಮ್ಮೆ ಇವರಿಗೆ ಸಮನಾದ ರಾಜನೂ ಸಮನಾದ ಪುರೋಹಿತನೂ ಇರುತ್ತಿದ್ದರು ಎಂದು ಹೇಳುತ್ತವೆ. ಇದು ಕಾಶಿ, ಕೋಸಲ ಮತ್ತು ವಿದೇಹರ ನಡುವೆ ಇದ್ದ ನಿಕಟ ಸಂಬಂಧವನ್ನು ಸೂಚಿಸುತ್ತದೆ.

ಬೌದ್ಧ ಕೃತಿಗಳಲ್ಲಿ ಸೂಚಿತವಾಗಿರುವಂತೆ ಕಾಶಿ ಮತ್ತು ಕೋಸಲರ ನಡುವೆ ಅಸಮಾಧಾನ ಮತ್ತು ವೈರವನ್ನು ಕುರಿತು ಕೋಸಲರ ಬಗೆಗೆ ಹೇಳುವಾಗ ನಿರೂಪಿಸಿದ್ದಾಗಿದೆ ಅಸ್ಸಕ ಜಾತಕ ದಕ್ಷಿಣ ಭಾರತದ ಅಸ್ಸಕ ರಾಜ್ಯದಲ್ಲಿಯ ಪೋಟಲಿಯವರೆಗೆ ಕಾಶಿಯ ಪ್ರಭುತ್ವ ವಿಸ್ತರಿಸಿತ್ತು ಎಂದು ಪ್ರಮಾಣಿಸುತ್ತದೆ. ರಾಜ್ಯದ ರಾಜಧಾನಿಯಾದ ಕಾಶಿಯು ಸಮಗ್ರ ಭಾರತದಲ್ಲಿ ಅಗ್ರಗಣ್ಯವಾದ ಮಹಾನಗರವಾಗಿತ್ತು. ಮಿಥಿಲೆ ಮತ್ತ ಇಂದ್ರಪ್ರಸ್ಥಗಳು ಏಳು ಹರಿದಾರಿಯಷ್ಟು ವಿಸ್ತಾರವಾಗಿದ್ದರೆ, ಕಾಶಿ ಹನ್ನೆರಡು ಹರಿದಾರಿಗಳಿಗಿಂತಲೂ ಹೆಚ್ಚು ವಿಸ್ತಾರವಾಗಿ ಹರಡಿತ್ತು. ಕಾಶಿ ನಗರ ಅಥವಾ ವಾರಾಣಸಿ ತನ್ನ ಮಹತ್ತ್ವದಿಂದ ನೆರೆಹೊರೆಯ ರಾಜ್ಯಗಳೆಲ್ಲೆಲ್ಲ ಹೊಟ್ಟೆಕಿಚ್ಚು ತರಿಸುವ ಅಮೂಲ್ಯ ರತ್ನದಂತಿತ್ತು. ಪುರಾಣಗಳ ವರ್ಣನೆಯ ಪ್ರಕಾರ ತನ್ನ ಇತಿಹಾಸದ ಬೇರೆ ಬೇರೆ ಕಾಲಾವಧಿಗಳಲ್ಲಿ ಕಾಶಿ ಉತ್ತರ ಭಾರತದ ಮೂರು ರಾಜವಂಶಗಳ ಆಳಿಕೆಗೆ ಸಿಕ್ಕಿತ್ತು. ಅವರೆಂದರೆ ವತ್ಸದ ಪೌರವರು, ಕೋಸಲದ ಇಕ್ಷ್ವಾಕುಗಳು ಹಾಗೂ ಮಗಧದ ರಾಜರು. ವತ್ಸರ ಅವನತಿಗೂ ಕೋಸಲರ ಉದಯಕ್ಕೂ ನಡುವಣ ಅವಧಿಯಲ್ಲಿ ಕಾಶಿ ಪ್ರಸಿದ್ಧ ಅರಸ ಬ್ರಹ್ಮದತ್ತನ ಆಳ್ವಿಕೆಯಲ್ಲಿ ಸ್ವಾತಂತ್ರ್ಯವನ್ನು ಅನುಭವಿಸಿತು. ಇವನು ಬುದ್ಧನ ಕಾಲಕ್ಕಿಂತ ಸುಮಾರು ಒಂದುವರೆ ಶತಮಾನಗಳ ಮೊದಲು ಕೋಸಲವನ್ನು ಜಯಿಸಿದ.

ಮಗಧದ ಪೂರ್ವಕ್ಕೆ ಅಂಗರಾಜ್ಯವಿದ್ದಿತು. ಅಂಗರಾಜ ದಧಿವಾಹನದ (ಪುರಾಣಗಳ ಪ್ರಕಾರ ಅಂಗನಪುತ್ರ) ರಾಜಧಾನಿ ಚಂಪಾನಗರಕ್ಕೆ ಕೌಶಾಂಬಿಯ ಉದಯನ ತಂದೆ ಶತಾನೀಕನು ಮುತ್ತಿಗೆ ಹಾಕಿದ. ಜೈನ ಸಂಪ್ರದಾಯದ, ಮಹಾವೀರನ ಮರಣಾನಂತರ ಅನತಿ ಕಾಲದಲ್ಲೇ ದಧಿವಾಹನನ ಮಗಳು ಚಂದನಾ ಅಥವಾ ಚಂದ್ರಬಾಲಾ ಮೊತ್ತಮೊದಲು ಜೈನಧರ್ಮವನ್ನು ಅವಲಂಬಿಸಿದ ಸ್ತ್ರೀಯಾದಳು ಎಂದು ಹೇಳುತ್ತದೆ. ಶತಾನೀಕ ಚಂಪಾನಗರವನ್ನು ಮುತ್ತಿದಾಗ ಸಂಭವಿಸಿದ ಗೊಂದಲದಲ್ಲಿ ಚಂದನಾ ಒಬ್ಬ ದರೋಡೆಗಾರನ ಕೈಗೆ ಸಿಕ್ಕಿಬಿದ್ದಳು; ಆದರೆ ಆಗಲೂ ತಾನು ಹಿಡಿದ ಧರ್ಮದ ನೇಮವನ್ನು ಬಿಡದೆ ಅನುಸರಿಸಿದಳು ಎಂದು ಹೇಳಿದೆ. ಅಂಗ ರಾಜ್ಯ ಉದ್ದಕ್ಕೂ ನೆರೆಯ ಮಗಧ ರಾಜ್ಯದೊಂದಿಗೆ ವೈರವನ್ನೇ ಸಾಧಿಸಿಕೊಂಡು ಬಂದಿತ್ತು. ಒಂದು ಸಮಯದಲ್ಲಿ ಮಗಧದ ಕೆಲಭಾಗಗಳು ಅಂಗಕ್ಕೆ ಸೇರಿದುದೂ ಉಂಟು. ರಾಜಗೃಹವನ್ನು ಅಂಗರಾಜ್ಯದ ಒಂದು ನಗರ ಎಂದು ಉಲ್ಲೇಖಿಸಿರುವುದರಿಂದ ಇದು ತಿಳಿದುಬರುತ್ತದೆ. ಮಗಧರಾಜ ಭಟ್ಟೀಯನನ್ನು ಅಂಗರಾಜ ಬ್ರಹ್ಮದತ್ತ ಸೋಲಿಸಿದ ಎಂಬುದರಿಂದಲೂ ಅಂಗದ ಪ್ರಭುತ್ವ ಸ್ಪಷ್ಟವಾಗುತ್ತದೆ. ಆದರೆ ಭಟ್ಟೀಯನ ಮಗ ಬಿಂದುಸಾರ ತಂದೆಯ ಸೋಲಿಗೆ ಮುಯ್ಯಿತೀರಿಸಿಕೊಂಡು ಅಂಗರಾಜ ಬ್ರಹ್ಮದತ್ತನನ್ನು ಕೊಂದು ಚಂಪಾನಗರವನ್ನು ಸ್ವಾಧೀನಪಡಿಸಿಕೊಂಡಾಗ ಅಂಗದ ಸ್ವಾತಂತ್ರ್ಯ ಮುಗಿದು ಹೋಯಿತು. ಬಿಂಬಿಸಾರ ರಾಜಪ್ರತಿನಿಧಿಯಾಗಿ ಚಂಪಾನಗರದಲ್ಲೆ ವಾಸವಾಗಿದ್ದ; ಆಮೇಲೆ ತನ್ನ ತಂದೆ ಮೃತನಾದುದನ್ನು ಕೇಳಿ ರಾಜಗೃಹಕ್ಕೆ ತೆರಳಿದ. ಮುಂದೆ ಬಿಂದುಸಾರ ಅಂಗ ನಾಡನ್ನು ಒಂದು ಪ್ರತ್ಯೇಕ ಪ್ರಾಂತವನ್ನಾಗಿ ರೂಪಿಸಿ ತನ್ನ ಮಗ ಅಜಾತಶತ್ರುವನ್ನು (ಕುನಿಕ) ಅಲ್ಲಿ ರಾಜ್ಯಪಾಲನನ್ನಾಗಿ ನೇಮಿಸಿದ; ಚಂಪಾನಗರ ಅವನ ಆಡಳಿತ ಕೇಂದ್ರವಾಯಿತು.

ಈ ಕಾಲಾವಧಿಯಲ್ಲಿ ಇನ್ನೂ ಹಲವು ರಾಜ್ಯಗಳು ಇದ್ದುವು. ಆದರೆ ಅವುಗಳ ಬಗೆಗೆ ಏನೂ ತಿಳಿದಿಲ್ಲ. ಪುರಾಣಗಳು ಕಳಿಂಗದ 32 ಅರಸರನ್ನೂ ಆಶ್ಮಕ ರಾಜ್ಯದ 25 ರಾಜರನ್ನೂ ಉಲ್ಲೇಖಿಸುತ್ತವಾದರೂ ಬೇರೆ ಯಾವ ವಿವರಗಳನ್ನೂ ಕೊಡುವುದಿಲ್ಲ. ಜೊತೆಗೆ ಪಶ್ಚಿಮದಲ್ಲಿ ಗಾಂಧಾರ ಮತ್ತು ಕಾಂಭೋಜ ರಾಜ್ಯಗಳಿದ್ದವು. ಭಾರತಯುದ್ಧವಾದ ಮೇಲೆ 400 ಅಥವಾ 800 ವರ್ಷಗಳ ಕಾಲಾವಧಿಯಲ್ಲಿ, ಆ ಘಟನೆಯನ್ನು 1000

ಅಥವಾ 1400 ರಲ್ಲಿ ನಡೆಯಿತೆಂದಿಟ್ಟುಕೊಂಡರೆ, ಭಾರತದ ಇತಿಹಾಸದ ಬಗೆಗೆ ಅಸ್ಪಷ್ಟ ರೇಖೆಗಳು ಮಾತ್ರವೆ ತಿಳಿಯುತ್ತದೆ. ಖಚಿತವಾಗಿ ಹೇಳಬಹುದಾದ ಸಂಗತಿಯೆಂದರೆ, ಉತ್ತರ ಭಾರತ ಅನೇಕ ಸಂಖ್ಯೆಯ ರಾಜ್ಯಗಳಾಗಿ ಒಡೆದಿದ್ದಿತು ಎಂಬುದು. ಈ ಸುದೀರ್ಘ ಕಾಲಾವಧಿಯಲ್ಲಿ ಒಂದು ಬಲಿಷ್ಠ ಶಕ್ತಿ ಉದಿಸಲಿಲ್ಲ, ಆ ಎಲ್ಲ ರಾಜ್ಯಗಳ ಮೇಲೆ ಅಥವಾ ಹೆಚ್ಚಿನವುಗಳ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳಲಿಲ್ಲ ಎನ್ನುವುದು. ಪ್ರಭುತ್ವಕ್ಕಾಗಿ ಮೇಲಾಟಗಳು ನಡೆದುವೆಂದು ಮಸುಕಾಗಿ ತಿಳಿಯುತ್ತದೆ. ಮಹಾಭಾರತದಲ್ಲಿ ಒತ್ತಿ ಹೇಳಿರುವ ಚಕ್ರಾಧಿಪತ್ಯದ ಆದರ್ಶ ಕೂಡ ಎಲ್ಲೂ ಕಂಡುಬರುತ್ತಿರಲಿಲ್ಲ. ಭಾರತದ 5ರಾಜಕೀಯ ಏಕೀಕರಣದ ಕಡೆಗೆ ಪ್ರಗತಿಯಾದುದೇನೂ ಕಾಣಿಸುವುದಿಲ್ಲ. (ಎ.ಡಿ.ಪಿ.)

**ಭಾರತದ ಬೃಹತ್ ಸುಂಕದ ಬೇಲಿ:** ಬ್ರಿಟಿಷರು ಉಪ್ಪಿನ ಕಳ್ಳಸಾಗಣೆ ತಡೆಗಟ್ಟಿ ಉಪ್ಪಿನ ಆದಾಯವನ್ನು ಹೆಚ್ಚಿಸಿಕೊಳ್ಳಲು ನಿರ್ಮಿಸಿದ ಬೇಲಿ. 1757ರ ಪ್ಲಾಸಿ ಕದನದ ಅನಂತರ ಬ್ರಿಟಿಷರು ಬಂಗಾಲದ ಮೇಲೆ ಹತೋಟಿ ಹೊಂದಿದರು. ಬಂಗಾಲದಲ್ಲಿ ಭೂಕಂದಾಯದ ಜೊತೆಗೆ ಉಪ್ಪಿನ ಮೇಲಿನ ಸುಂಕವನ್ನು ಹೆಚ್ಚಿಸುವ ಮೂಲಕ ಅಪಾರ ಆದಾಯಗಳಿಸಿದರು. ಉಪ್ಪಿನಿಂದ ಬರುತ್ತಿದ್ದ ಆದಾಯ 1772–73 ರಲ್ಲಿ 4 1/2 ಲಕ್ಷ ಇದ್ದದ್ದು 1784–85 ರಲ್ಲಿ 62 1/2 ಲಕ್ಷಗಳಿಗೇರಿತು. ಬಂಗಾಳದ ಆಡಳಿತದಲ್ಲಿ ಹೆಚ್ಚುತ್ತಿದ್ದ ವೆಚ್ಚವನ್ನು ಸರಿದೂಗಿಸಲು ಇದ್ದ ಒಂದೇ ಮಾರ್ಗವೆಂದರೆ ಉಪ್ಪಿನ ಮೇಲಿನ ಸುಂಕವನ್ನು ಏರಿಸುವುದು. ಆದರೆ ಬೊಂಬಾಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳಲ್ಲಿ ಉಪ್ಪಿನ ಬೆಲೆ ಬಂಗಾಲಕ್ಕಿಂತ ತುಂಬ ಕಡಿಮೆ ಇತ್ತು. ಹೀಗಾಗಿ ಮದರಾಸು ಹಾಗೂ ಬೊಂಬಾಯಿ ಪ್ರದೇಶಗಳಿಂದ ಬಂಗಾಲಕ್ಕೆ ಉಪ್ಪಿನ ಕಳ್ಳಸಾಗಾಣಿ ಆರಂಭವಾಯಿತು.

ಆಗ್ರದ ಕಸ್ಟಮ್ಸ್ ಕಮಿಷನರ್ ಆಗಿ ಬಂದ ಜಾರ್ಜ್ ಪೂಂಡರ್ಸ್ 1823ರಲ್ಲಿ ಯಮುನಾ ನದಿಯುದ್ದಕ್ಕೂ ವ್ಯಾಪಾರಿ ಮಾರ್ಗಗಳಲ್ಲಿ ಅಬ್ಕಾರಿ ಇಲಾಖೆಯ ಠಾಣೆಗಳನ್ನು ಸ್ಥಾಪಿಸುವ ಸಲಹೆ ಮಾಡಿದ. ಅದರಂತೆ ದಕ್ಷಿಣ ಹಾಗೂ ಪಶ್ಚಿಮದಿಂದ ಉಪ್ಪಿನ ಸಾಗಣೆಯನ್ನು ತಡೆಯಲು ಸುಂಕದ ಕಟ್ಟೆಳೆಗಳ ನಡುವೆ ಮರಗಿಡಗಳನ್ನು ನೆಟ್ಟು ಬೇಲಿ ನಿರ್ಮಿಸಲಾಯಿತು, ಕೆಲವೆಡೆ ನದಿ ದಂಡೆಗಳನ್ನು ಬೇಲಿಯಾಗಿ ಉಪಯೋಗಿಸಲಾಯಿತು. ಮರುಭೂಮಿಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಕಲ್ಲಿನ ಗೋಡೆಗಳನ್ನು ಕಟ್ಟಲಾಯಿತು. 9 ರಿಂದ 12 ಮೀ ಅಗಲದ ಗಿಡಮರ–ಕಲ್ಲುಗಳ ಈ ಬೇಲಿ ಉತ್ತರದ ಹಿಮಾಲಯದಿಂದ ಆರಂಭಗೊಂಡು, ಆಗ್ರ ಮಾರ್ಗವಾಗಿ ಅಲಹಾಬಾದ್, ಝಾನ್ಸಿ ಮಾರ್ಗದಲ್ಲಿ ಮುಂದುವರಿದು ಕ್ರಮೇಣ ಒರಿಸ್ಸವನ್ನು ಸುತ್ತುವರಿದು ಪೂರ್ವ ಕರಾವಳಿವರೆಗೆ ಸಾಗಿತ್ತು. 1834 ರಲ್ಲಿ ಕಸ್ಟಮ್ಸ್ ಕಮಿಷನರ್ ಆಗಿ ಬಂದ ಜಿ.ಎಚ್.ಸ್ಮಿತ್ ತನ್ನ 20 ವರ್ಷಗಳ ಆಡಳಿತಾವಧಿಯಲ್ಲಿ ಸುಂಕದ ಬೇಲಿಯನ್ನು ಬಲಗೊಳಿಸಿದ. ಬೇಲಿಯುದ್ದಕ್ಕೂ 6,600 ಸಿಬ್ಬಂದಿಗಳ ಕಾವಲಿತ್ತು. ಮೈಲಿಗೆ ಒಂದರಂತೆ ಚೌಕಿಗಳಿದ್ದವು. ಬೇಲಿಯನ್ನು ಎತ್ತರವಾದ ಭೂಮಿಯಲ್ಲಿ ನಿರ್ಮಿಸಿ ಅಲ್ಲಿ ಗಿಡಮರ, ಮುಳ್ಳು ಗಂಟಿಗಳನ್ನು ಬೆಳೆಸಲಾಯಿತು. ಅದಕ್ಕಾಗಿ ಟನ್ನುಗಟ್ಟಲೆ ಸಸ್ಯಗಳ ಬೀಜಗಳನ್ನು ಬಳಸಲಾಯಿತು. ಪ್ರತಿ ಕಾಲು ಮೈಲಿಗೆ ಒಬ್ಬ ಕಾವಲು ಸಿಬ್ಬಂದಿ ಇರುತ್ತಿದ್ದ. ರಾತ್ರಿ ಗಸ್ತು ಪಡೆಯೂ ಇತ್ತು. ಗಡಿ ದಾಟಿ ಬಂದವರ ಶೋಧ ಹಾಗೂ ಬಂಧನಕ್ಕೆ ರಕ್ಷಣಾ ಪಡೆಗಳಿದ್ದವು.

1857 ರ ವೇಳೆಗೆ 4,175 ಕಿಮೀ ಉದ್ದದ ಸುಂಕದ ಬೇಲಿ ನಿರ್ಮಾಣಗೊಂಡಿತು. 1869–79 ರ ಅವಧಿಯಲ್ಲಿ ಇದು ದುರ್ಭೇದ್ಯ ಕೋಟೆಯಾಗಿ ಬೆಳೆಯಿತು. ಒಟ್ಟಾರೆ 1869–70 ರಲ್ಲಿ ಈ ಬೇಲಿಯ ಮೂಲಕ ಸಂಗ್ರಹಿಸಲಾದ ಉಪ್ಪಿನ ಸುಂಕ 1 1/4 ಕೋಟಿ. ಉಪ್ಪು ತಯಾರಿಕೆಯ ಲೈಸೆನ್ಸ್ ಸುಂಕವೂ ಸೇರಿದಂತೆ ಉಪ್ಪಿನಿಂದ ಆ ವರ್ಷ ಸರ್ಕಾರ 3 ಕೋಟಿ ಆದಾಯವಾಗಿ ಪಡೆಯಿತು. ಸಕ್ಕರೆ ಮೇಲಿನ ಸುಂಕದ ಸಂಗ್ರಹವು 1 ಕೋಟಿಗೂ ಹೆಚ್ಚಿತು. ಒಟ್ಟಾರೆ ಬೇಲಿಯಿಂದ ಬಂದ ಆದಾಯ 4 ಕೋಟಿ 35 ಲಕ್ಷಗಳಷ್ಟಾಯಿತು. ಈ ಬೃಹತ್ ಸುಂಕದ ಬೇಲಿಯ ರಕ್ಷಣೆಗಾಗಿ 1,727 ಸುಂಕದ ಠಾಣೆಗಳು, ಕಾವಲಿಗೆ ನೇಮಕಗೊಂಡ 12,000 ಸಿಬ್ಬಂದಿಗಳ ಒಟ್ಟು ನಿರ್ವಹಣಾ ವೆಚ್ಚ ಕೇವಲ 16 ಲಕ್ಷ 20 ಸಾವಿರ ರೂ. ಮಾತ್ರ.

ಬ್ರಿಟಿಷರು 1803ರ ವೇಳೆಗೆ ರೋಹಿಲಖಂಡ, ದೆಹಲಿ ಹಾಗೂ ಆಗ್ರಗಳ ಮೇಲೆ ಹತೋಟಿ ಪಡೆದರು. ಅನಂತರ ಬಂಗಾಲ ಮತ್ತು ಮದರಾಸು ಪ್ರೆಸಿಡೆನ್ಸಿಗಳನ್ನು ಒಂದುಗೂಡಿಸಿದರು. ಇದರಿಂದಾಗಿ ಪೂರ್ವ ಕರಾವಳಿಯ ಉಪ್ಪು ನಿರ್ಮಾಣ ಘಟಕಗಳು ಬ್ರಿಟಿಷರ ನಿಯಂತ್ರಣಕ್ಕೆ ಬಂದವು. ಮರಾಠರ ಸೋಲಿನೊಂದಿಗೆ ದಖನ್‍ನ ಬಹುಭಾಗ ಬ್ರಿಟಿಷರ ನೇರ ನಿಯಂತ್ರಣಕ್ಕೊಳಪಟ್ಟವು. 1878ರಲ್ಲಿ ಕಸ್ಟಮ್ಸ್ ಕಮಿಷನರ್ ಆಗಿ ಬಂದ ಎ. ಓ. ಹ್ಯೂಂ ಭಾರತದ ದೇಶೀಯ ರಾಜ್ಯಗಳಾದ ಜೈಪುರ, ಜೋಧ್‍ಪುರ, ದೋಲಪುರ, ಲಾವಾ, ಶಿರೋಹಿ ಹಾಗೂ ಭರತಪುರಗಳೊಂದಿಗೆ ಉಪ್ಪಿನ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಯಿತು. ಈ ಒಪ್ಪಂದದಲ್ಲಿ ಮೇಲ್ಕಂಡ ದೇಶೀಯ ರಾಜರು ತಮ್ಮ ರಾಜ್ಯಗಳಲ್ಲಿನ ಉಪ್ಪು ನಿರ್ಮಾಣ ಪ್ರದೇಶಗಳ ಪೂರ್ಣ ಹಕ್ಕನ್ನು ಬ್ರಿಟಿಷರಿಗೊಪ್ಪಿಸಿದರು. ಹೀಗೆ ಹಂತಹಂತವಾಗಿ ಭಾರತದ ಪ್ರದೇಶಗಳು ಮೇಲೆ ರಾಜಕೀಯ ಅಧಿಕಾರವನ್ನು ಮತ್ತು ಉಪ್ಪು ನಿರ್ಮಾಣದ ಏಕಸ್ವಾಮ್ಯವನ್ನು ಗಳಿಸಿದ ಬ್ರಿಟಿಷರಿಗೆ ಭಾರತವನ್ನು ತುಂಡರಿಸುವ ಈ 200 ಮೈಲಿ ಉದ್ದದ ಸುಂಕದ ಬೇಲಿ ಅನಾವಶ್ಯಕವೆನಿಸಿತು. ಹಾಗಾಗಿ 1879ರಲ್ಲಿ ಈ ಬೃಹತ್ ಬೇಲಿಯನ್ನು ವಿಸರ್ಜಿಸಲಾಯಿತು.

ಹೀಗೆ ಉಪ್ಪಿನ ಉತ್ಪಾದನೆ ಮತ್ತು ಮಾರಾಟದ ಮೇಲೆ ಹತೋಟಿ ಪಡೆದ ಬ್ರಿಟಿಷರು ಉತ್ಪಾದನಾ ಘಟಕಗಳ ಮೇಲೆ ಹಾಗೂ ಸಾಗಾಣಿಕಾ ಸುಂಕವನ್ನು ಹೆಚ್ಚಿಸುವ ಮೂಲಕ ಅಪಾರ ಲಾಭ ಗಳಿಸಿದರು. ಆರಂಭದಲ್ಲಿ ಮಣಕ್ಕೆ 20 ಪೈಸೆ ಇದ್ದ ಸಾಗಾಣಿಕ ಸುಂಕ 1788ರ ವೇಳೆಗೆ ಒಂದು ಮಣಕ್ಕೆ 3.25ರೂ.ಗಳಿಗೇರಿತು. ಹಾಗಾಗಿ ಸಗಟು ಉಪ್ಪಿನ ಬೆಲೆ 1.25 ರೂಪಾಯಿಗಳಿಂದ 4ರೂ.ಗಳಷ್ಟಾಯಿತು. ಚಿಲ್ಲರೆ ಮಾರಾಟಗಾರ ತನ್ನ ಲಾಭ ಸೇರಿಸಿ ಮಾರುವಾಗ ಅದು ಕೆಲವಮ್ಮೆ 12 ರೂ. ಗಳಿಗೇರಿತು. ಆ ಕಾಲದಲ್ಲಿ ಭಾರತೀಯ ಕೃಷಿ ಕಾರ್ಮಿಕರ ವೇತನ ಸು. 2 ರೂಪಾಯಿ ಇದ್ದು ಕುಟುಂಬವೊಂದು ವರ್ಷಕ್ಕೆ ಅರ್ಧ ಮಣದಷ್ಟು ಉಪ್ಪನ್ನು ಬಳಸುತ್ತಿತ್ತು. ಅಂದರೆ ವರ್ಷದ ಕೆಲವು ತಿಂಗಳ ಆದಾಯವನ್ನು ಉಪ್ಪಿನ ಖರೀದಿಗೆ ಮೀಸಲಿಡಬೇಕಿತ್ತು. ಬಡ ಭಾರತೀಯರು ಉಪ್ಪು ಖರೀದಿಸಲಾಗದೆ, ದೇಹದಲ್ಲಿ ಲವಣಾಂಶದ ಕೊರತೆಯಿಂದ ಸಾವಿರಾರು ಜನ ಮೃತರಾದರು. ಮಾನವ ಇತಿಹಾಸದಲ್ಲೇ ಸರ್ವಜನರ ಅತ್ಯಾವಶ್ಯಕ ವಸ್ತುವಾದ ಉಪ್ಪನ್ನು ವಂಚಿಸಲು ನಿರ್ಮಿಸಿದ ಬೃಹತ್ ಬೇಲಿಯ ಬಗ್ಗೆ ದೊರೆತ ಅಲ್ಪ ಮಾಹಿತಿಗಳನ್ನು ಅರಸುತ್ತಾ, ಭಾರತಕ್ಕೆ ಭೇಟಿ ನೀಡಿ ಸರ್ವೇಕ್ಷಣೆ ಮಾಡಿದ ರಾಯ್ ಮ್ಯಾಕ್ಸ್ ಹಾಮ್‍ರವರು ದಿ ಗ್ರೇಟ್ ಹೆಜ್ ಆಫ್ ಇಂಡಿಯ ಎಂಬ ಕೃತಿ ರಚಿಸಿದ. ಅಧಿಕ ಉಪ್ಪಿನ ತೆರಿಗೆಯನ್ನು ವಿರೋಧಿಸಿದ ಮಹಾತ್ಮ ಗಾಂಧಿಯವರು ಮನುಷ್ಯನ ಬುದ್ಧಿಶಕ್ತಿ ಸಂಚು ಮಾಡುವ ತಲೆ ತೆರಿಗೆಗಳಲ್ಲೆಲ್ಲ ಇದು ಅತ್ಯಂತ ಅಮಾನುಷವಾದುದು ಎಂದು ಅಭಿಪ್ರಾಯಪಟ್ಟು 1930ರಲ್ಲಿ ದಂಡಿಯಾತ್ರೆ ಕೈಗೊಳ್ಳುವ ಮೂಲಕ ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿದರು. (ಕೆ.ಎಸ್‍ಡಿ.)

**ಭಾರತದ ರಾಷ್ಟ್ರಗೀತೆ:** 'ಜನಗಣಮನ ಅಧಿನಾಯಕ ಜಯಹೇ' ಭಾರತದ ರಾಷ್ಟ್ರಗೀತೆ. ರವೀಂದ್ರನಾಥ ಠಾಕೂರ್ ಅವರು 1911ರಲ್ಲಿ ಬಂಗಾಲಿ ಭಾಷೆಯಲ್ಲಿ ರಚಿಸಿದ ದೀರ್ಘಗೀತೆಯ ಐದುಪದ್ಯಗಳಲ್ಲಿ ಮೊದಲ ಪದ್ಯದ ಸಾಲುಗಳನ್ನು ಮಾತ್ರ ಆಯ್ದುಕೊಂಡು ಈ ರಾಷ್ಟ್ರಗೀತೆಯನ್ನು ರೂಪಿಸಲಾಯಿತು. ಸ್ವತಂತ್ರ ಭಾರತದ ಸಂವಿಧಾನ ರಚನಾಸಭೆ 1950 ಜನವರಿ 24ರಂದು ಇದನ್ನು ರಾಷ್ಟ್ರಗೀತೆ ಎಂದು ಅಂಗೀಕರಿಸಿತು. ಠಾಕೂರ್ ಸಂಪಾದಕರಾಗಿದ್ದ ತತ್ತ್ವಬೋಧಿನಿ ಪತ್ರಿಕಾ ಎಂಬ ಪತ್ರಿಕೆಯಲ್ಲಿ ಇದು 1912ರಲ್ಲಿ ಮೊದಲಿಗೆ ಪ್ರಕಟವಾಗಿತ್ತು. ಪ್ರಕಟಣೆಗೆ ಮೊದಲು ಈ ಗೀತೆಯನ್ನು 27 ಡಿಸೆಂಬರ್ 1911ರಂದು ಕಲ್ಕತ್ತದಲ್ಲಿ ನೆರೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಲಾಗಿತ್ತು. ಠಾಕೂರ್ ಅವರು ಇದನ್ನು ಮಾರ್ನಿಂಗ್ ಸಾಂಗ್ ಆಫ್ ಇಂಡಿಯ ಎಂಬ ಹೆಸರಿನಲ್ಲಿ 1919ರಲ್ಲಿ ಇಂಗ್ಲಿಷಿಗೆ ಅನುವಾದಿಸಿದ್ದರು. ಇದು ಭಾರತ ಇಬ್ಭಾಗವಾಗುವುದಕ್ಕೆ ಮೊದಲು ಬರೆದ ಗೀತೆಯಾದರೂ ಇದರಲ್ಲಿ ಬರುವ ರಾಷ್ಟ್ರದ ವಿವಿಧ ಪ್ರದೇಶಗಳ ಹೆಸರುಗಳನ್ನು ಬದಲಾಯಿಸಿಲ್ಲ; ಈ ಹೆಸರುಗಳು ವಿವಿಧ ಭಾರತೀಯ ಜನಾಂಗಗಳನ್ನು ಸೂಚಿಸುತ್ತವೆ. ಹಾಗಾಗಿ ಈ ಗೀತೆಯನ್ನು ರಾಷ್ಟ್ರಗೀತೆಯಾಗಿ ಅಂಗೀಕರಿಸಿದಾಗ ಮೂಲಗೀತೆಯಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದೆ ಯಥಾವತ್ತಾಗಿ ಉಳಿಸಿಕೊಳ್ಳಲಾಯಿತು. ರಾಷ್ಟ್ರಗೀತೆಗೆ ಗೌರವಸಲ್ಲಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಅಗೌರವ ಸೂಚಿಸುವುದು, ಅದರ ಹಾಡುವಿಕೆಗೆ ಅಡ್ಡಿಪಡಿಸುವುದು ಶಾಸನದ ಪ್ರಕಾರ ಶಿಕ್ಷಾರ್ಹ ಅಪರಾಧ. ವೈವಿಧ್ಯದಲ್ಲಿ ಏಕತೆ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ ಎಂಬುದಕ್ಕೆ ಈ ಗೀತೆ ಸಂಕೇತವಾಗಿದೆ. ಗೀತೆಯನ್ನು ಹಾಡಲು ಬೇಕಾಗುವ ಕಾಲಾವಧಿ ಸು. 52 ಸೆಕೆಂಡುಗಳು. ರಾಷ್ಟ್ರಗೀತೆಯ ಪೂರ್ಣಪಾಠ ಹೀಗಿದೆ:

ಜನಗಣಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವ ಶುಭ ನಾಮೇ ಜಾಗೇ
ತವ ಶುಭ ಆಶಿಸ ಮಾಗೇ
ಗಾಹೇ ತವ ಜಯಗಾಥಾ
ಜನಗಣ ಮಂಗಲದಾಯಕ ಜಯ ಹೇ
ಭಾರತ ಭಾಗ್ಯವಿಧಾತಾ
ಜಯ ಹೇ ಜಯ ಹೇ ಜಯ ಹೇ
ಜಯ ಜಯ ಜಯ ಜಯ ಹೇ

ಸಂವಿಧಾನದಲ್ಲಿ ರಾಷ್ಟ್ರಗೀತೆಯ ಸಮಾನ ಸ್ಥಾನಮಾನ ಪಡೆದಿರುವ, ಬಂಕಿಮಚಂದ್ರ ಚಟ್ಟೋಪಾಧ್ಯಾಯರು ರಚಿಸಿದ ವಂದೇಮಾತರಂ ರಾಷ್ಟ್ರಸ್ತವ ಎನಿಸಿದೆ. ರಾಷ್ಟ್ರೀಯ ಸಭೆ ಸಮಾರಂಭಗಳಲ್ಲಿ ವಂದೇಮಾತರಂ ಪ್ರಾರ್ಥನಾ ಗೀತೆಯಾಗಿಯೂ ಜನಗಣಮನ ಮಂಗಳಗೀತೆಯಾಗಿಯೂ ಹಾಡಲಾಗುತ್ತದೆ. *

**ಭಾರತದ ರಾಷ್ಟ್ರಧ್ವಜ:** ಕೇಸರಿ, ಬಿಳಿ, ಹಸುರು–ಈ ತ್ರಿವರ್ಣ ರಂಜಿತ ಧ್ವಜವನ್ನು ಭಾರತದ ರಾಜ್ಯಾಂಗ ರಚನಾ ಸಭೆ 1947 ಜುಲೈ 22ರಂದು ರಾಷ್ಟ್ರಧ್ವಜವಾಗಿ ಅಂಗೀಕರಿಸಿತು. ಧ್ವಜದ ಉದ್ದ ಹಾಗೂ ಅಗಲಗಳ ಪ್ರಮಾಣ 2:3 ಧ್ವಜದ ನಡುವೆ, ಬಿಳಿವರ್ಣದ ಪಟ್ಟಿಯ ಮೇಲೆ 24 ಅರೆಗಳಿರುವ ನೀಲಿ ಬಣ್ಣದ ಚಕ್ರವಿದ್ದು, ಇದು ಚರಕವನ್ನು ಸಂಕೇತಿಸುತ್ತದೆ. ಈ ಚಕ್ರದ ರೂಪರೇಷೆ ಸಾರನಾಥದಲ್ಲಿರುವ ಅಶೋಕ ಸ್ತಂಭದಲ್ಲಿಯ ಧರ್ಮ ಚಕ್ರದಂತಿದೆ. ಧ್ವಜದಲ್ಲಿಯ ಮೂರೂ ಬಣ್ಣಗಳು ಸಪ್ರಮಾಣದಲ್ಲಿದ್ದು ಕೇಸರಿ ಸ್ಥೈರ್ಯತ್ಯಾಗಗಳನ್ನೂ ಬಿಳಿ ಸತ್ಯ ಶಾಂತಿಗಳನ್ನೂ ಹಸಿರು ಭರವಸೆ ಶೌರ್ಯಗಳನ್ನೂ ಸಂಕೇತಿಸುತ್ತವೆ. ಧ್ವಜಕ್ಕೆ ಸಾಮಾನ್ಯವಾಗಿ ಹತ್ತಿ, ಉಣ್ಣೆ ಅಥವಾ ರೇಷ್ಮೆಯ ಖಾದಿ ಬಟ್ಟೆಯನ್ನು ಉಪಯೋಗಿಸಲಾಗುತ್ತದೆ. ಧ್ವಜವನ್ನು ಹಾರಿಸುವಾಗ ಕೇಸರಿಯ ಬಣ್ಣ ಯಾವಾಗಲೂ ಮೇಲಿರಬೇಕು. ರಾಷ್ಟ್ರಧ್ವಜವನ್ನು ಏರಿಸುವ, ಇಳಿಸುವ ಹಾಗೂ ಬಳಸುವ ಕ್ರಮ ಕುರಿತು ಭಾರತ ಸರ್ಕಾರ ನೀತಿ ಸಂಹಿತೆಯೊಂದನ್ನು ಪ್ರಕಟಿಸಿದೆ.

ತ್ರಿವರ್ಣ ಧ್ವಜ

ಹಿನ್ನೆಲೆ: ಸ್ವಾತಂತ್ರಪೂರ್ವ ಭಾರತದ ಮೊತ್ತಮೊದಲ ರಾಷ್ಟ್ರಧ್ವಜವನ್ನು 1906 ಆಗಸ್ಟ್ 7ರಂದು ಕಲ್ಕತ್ತೆಯ ಗ್ರೀನ್‌ಪಾರ್ಕ್‌ನಲ್ಲಿ (ಪಾರ್ಸಿಬಗನ್ ಚೌಕ) ಹಾರಿಸಲಾಯಿತು. ಆ ಧ್ವಜದಲ್ಲಿ ಅನುಕ್ರಮವಾಗಿ ಕೆಂಪು, ಹಳದಿ, ಹಸುರು ಬಣ್ಣದ ಪಟ್ಟಿಗಳಿದ್ದು, ಕೆಂಪಿನಮೇಲೆ ಬಿಳಿಯ ಕಮಲದ ಹೂಗಳು ಹಳದಿಯ ಮೇಲೆ ದೇವನಾಗರಿ ಲಿಪಿಯಲ್ಲಿ ವಂದೇಮಾತರಂ ಎಂಬ ಗಾಢ ನೀಲಿ ಅಕ್ಷರಗಳು, ಹಸುರಿನ ಮೇಲೆ ಒಂದು ಕಡೆ ಸೂರ್ಯ, ಮತ್ತೊಂದು ಕಡೆಗೆ ಬಾಲಚಂದ್ರ ಹಾಗೂ ನಕ್ಷತ್ರ–ಈ ವಿನ್ಯಾಸವಿತ್ತು. ಹೆಚ್ಚುಕಡಿಮೆ ಇದೇ ರೂಪರೇಷೆಯನ್ನು ಪಡೆದಿದ್ದ ಎರಡನೆಯ ರಾಷ್ಟ್ರಧ್ವಜವನ್ನು ಅದೇ ವರ್ಷ ಕೆಲವರು ಪ್ಯಾರಿಸ್ಸಿನಲ್ಲಿ ಹಾರಿಸಿದರು. ಆ್ಯನಿಬೆಸೆಂಟ್ ಮತ್ತು ಬಾಲಗಂಗಾಧರ ತಿಲಕರು ಹೋಮ್ ರೂಲ್ ಚಳವಳಿಯ ಸಮಯದಲ್ಲಿ (1917ರ ಸುಮಾರಿಗೆ) ಕೆಂಪು ಹಸುರು ಪಟ್ಟಿಗಳಿರುವ, ಸಪ್ತರ್ಷಿ ಮಂಡಲದ ನಕ್ಷತ್ರವಿನ್ಯಾಸವೂ ಬ್ರಿಟಿಷರ ಧ್ವಜ ಚಿಹ್ನೆಯೂ ಚಂದ್ರ ನಕ್ಷತ್ರಗಳೂ ಇರುವ ಧ್ವಜವೊಂದನ್ನು ಹಾರಿಸಿದರು. 1921–31ರ ಸುಮಾರಿಗೆ ಗಾಂಧೀಜಿ ಅನುಮೋದಿಸಿದ ಬಿಳಿ, ಹಸುರು, ಕೆಂಪು ಪಟ್ಟಿಗಳನ್ನು ಪಡೆದ, ಚರಕದ ಚಿಹ್ನೆ ಹೊತ್ತ ಧ್ವಜವನ್ನು ಕಾಂಗ್ರೆಸ್ ಅಧಿವೇಶನ ಮುಂತಾದ ಸಂದರ್ಭಗಳಲ್ಲಿ ಹಾರಿಸಲಾಗುತ್ತಿತ್ತು. ಕೇಸರಿ, ಬಿಳಿ, ಹಸರು ಬಣ್ಣಗಳು, ನಡುವೆ ಚರಕ ಚಿಹ್ನೆಯಿರುವ ಧ್ವಜವನ್ನು 1931ರ ಕರಾಚಿ ಅಧಿವೇಶನದಲ್ಲಿ ಅಧಿಕೃತವಾಗಿ ಅಂಗೀಕರಿಸಲಾಯಿತು. ಭಾರತ ಸ್ವಾತಂತ್ರ್ಯ ಹೊಂದಿದ ಮೇಲೆ ಚರಕಕ್ಕೆ ಬದಲಾಗಿ, ಈಗಿರುವಂತೆ ಅಶೋಕ ಚಕ್ರವನ್ನು ಅಳವಡಿಸಲಾಯಿತು.

ಧ್ವಜವನ್ನು ತುಳಿಯುವುದು, ಹರಿಯುವುದು, ಸುಡುವುದು ಶಿಕ್ಷಾರ್ಹ ಅಪರಾಧ. ರಾಷ್ಟ್ರೀಯ ಶುಭ ಸಂದರ್ಭಗಳಲ್ಲಿ ಧ್ವಜವನ್ನು ಪೂರ್ಣ ಪ್ರಮಾಣದಲ್ಲಿ ಏರಿಸಿ ಹಾರಿಸಿದರೆ, ರಾಷ್ಟ್ರೀಯ ಅಶುಭ ಸಂದರ್ಭಗಳಲ್ಲಿ ಧ್ವಜವನ್ನು ಧ್ವಜಸ್ತಂಭದ ಅರ್ಧಕ್ಕೆ ಇಳಿಸಿ ಹಾರಿಸಲಾಗುತ್ತದೆ.

*

**ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ:** **ನೋಡಿ– ಸ್ವಾತಂತ್ರ್ಯ ಹೋರಾಟ, ಭಾರತದಲ್ಲಿ**

**ಭಾರತೀಯ ಚಿತ್ರಕಲೆ:** ಭಾರತೀಯ ಚಿತ್ರಕಲಾ ಇತಿಹಾಸ ಶಿಲ್ಪಕಲೆಯ ಇತಿಹಾಸಕ್ಕಿಂತ ಪುರಾತನವಾದದ್ದು. ಭಾರತದಲ್ಲಿ ಬೆಳೆದು ಬಂದ ಚಿತ್ರಕಲೆಯಲ್ಲಿ ಹಲವಾರು ವಿಶಿಷ್ಟ ಘಟ್ಟಗಳಿವೆ. ಇಲ್ಲಿ ಕಂಡುಬರುವ ಚಿತ್ರಗಳು, ಅವುಗಳಲ್ಲಿಯ ವಿಷಯ ನಿರೂಪಣೆ, ತಂತ್ರ, ರಚನಾಕ್ರಮ ಹಾಗೂ ಶೈಲಿಗಳು ವೈವಿಧ್ಯತೆಯೊಡನೆ ಬೆಳೆದುಬಂದಿವೆ. ಚಿತ್ರಕಲೆಯ ಬೆಳವಣಿಗೆಯ ಹಂತಗಳು ಭೌಗೋಳಿಕ ವ್ಯಾಪ್ತಿಗಳಿಗೆ ಅನುಗುಣವಾಗಿ ಹಾಗೂ ಆಯಾ ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ತಾಂತ್ರಿಕ ಹಿನ್ನೆಲೆಯೊಡನೆ ಮತ್ತು ಅದಕ್ಕೆ ದೊರೆಯುತ್ತಿದ್ದ ಪೋಷಣೆಗೆ ಅನುಗುಣವಾಗಿವೆ.

ಭಾರತದ ಚಿತ್ರಕಲೆ ಪ್ರಾಗೈತಿಹಾಸಿಕ ಕಾಲದಿಂದ ಪ್ರಾರಂಭಿಸಿ, ಇತಿಹಾಸ ಆರಂಭ ಕಾಲದಲ್ಲಿ ತನ್ನ ವೈಶಿಷ್ಟ್ಯ ಪೂರ್ಣ ಕಲಾ ಸಂವೇದನೆಯನ್ನು ಮೈಗೂಡಿಸಿಕೊಂಡು ಬೆಳವಣಿಗೆ ಹೊಂದಿತ್ತು. ಚಿತ್ರಕಲೆಯಲ್ಲಿ, ಸ್ಥೂಲವಾಗಿ ಎರಡು ಘಟ್ಟಗಳನ್ನು ಗುರುತಿಸಬಹುದು. ಮೊದಲನೆಯದು ಭಿತ್ತಿಚಿತ್ರ ಪರಂಪರೆಯಾದರೆ ಎರಡನೆಯದು ಚಿಕಣಿ ಚಿತ್ರ ಪರಂಪರೆ. ಚಾರಿತ್ರಿಕವಾಗಿ ಭಿತ್ತಿಚಿತ್ರ ಪರಂಪರೆಯೇ ಭಾರತದ ಮಟ್ಟಿಗೆ ಅತ್ಯಂತ ಪ್ರಾಚೀನವಾದುದು. ಚಿಕಣಿ ಚಿತ್ರ ಪರಂಪರೆ ಪ್ರಾರಂಭವಾದದ್ದು 15, 16ನೆಯ ಶತಮಾನದ ಕಾಲದಲ್ಲಿ. ಚಿತ್ರಕಲೆ, ವಾಸ್ತು ಮತ್ತು ಶಿಲ್ಪ ಕಲೆಯ ಜೊತೆ ಜೊತೆಯಲ್ಲಿಯೇ ಬೆಳವಣಿಗೆ ಹೊಂದಿದೆ. ಈ ಎರಡೂ ಮಾಧ್ಯಮಗಳಲ್ಲಿ ಹಲವಾರು ಸಾಮ್ಯಗಳನ್ನು ಕಾಣಬಹುದು. ಕಾಲಾನುಕ್ರಮಣಿಕೆಯಲ್ಲಿ ಭಾರತೀಯ ಚಿತ್ರಕಲಾ ಇತಿಹಾಸದ ಬೆಳವಣಿಗೆಯನ್ನು ಒಂದೊಂದಾಗಿ ಹೀಗೆ ನೋಡಬಹುದು:

**ಪ್ರಾಗಿತಿಹಾಸ ಕಾಲದ ಚಿತ್ರಕಲೆ:** ಭಾರತದ ಪ್ರಾಗೈತಿಹಾಸಿಕ ಸಾಂಸ್ಕೃತಿಕ ಬೆಳವಣಿಗೆ ಪ್ರಪಂಚದ ಇನ್ನಿತರ ದೇಶಗಳ ಆಯಾಯ ಸಂಸ್ಕೃತಿಗಳಿಗೆ ಸಮಕಾಲೀನವಾಗಿದೆ. ಭಾರತದಲ್ಲಿ ಚಿತ್ರಕಲೆಯ ಉಗಮವಾಗುವುದು ಪ್ರಾಗೈತಿಹಾಸ ಕಾಲದಿಂದಲೇ. ನೈಸರ್ಗಿಕ ಗುಹೆಗಳಲ್ಲಿ, ಕಲ್ಪೊಟರೆಗಳಲ್ಲಿ, ಹೊರ ಚಾಚಿರುವ ವಿಶಾಲ ಬಂಡೆಗಳ ಕೆಳಭಾಗಗಳಲ್ಲಿ ಅತ್ಯಂತ ಪ್ರಾಚೀನ ಚಿತ್ರಗಳು ಕಂಡುಬಂದಿವೆ. ಇವುಗಳ ಕಾಲವು ಅಂತ್ಯ ಹಳೆ ಶಿಲಾಯುಗದಿಂದ ಶಿಲಾಯುಗದ ನಾಗರಿಕತೆಗಳ ಕಾಲಕ್ಕೆ ಸಮಾನವಾದುದಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಪ್ರಾಗೈತಿಹಾಸ ಕಾಲದ ಚಿತ್ರಗಳ ಒಂದು ದೊಡ್ಡ ಸಮೂಹ ಮಧ್ಯಪ್ರದೇಶದ ಭೂಪಾಲ್ ಹತ್ತಿರ ಇರುವ ಭೀಂಬೇಟ್ಕ ಎಂಬಲ್ಲಿದೆ. ಇದೇ ರಾಜ್ಯದ ರಾಯಸೇನ್ ಮತ್ತು ಖರ್ವಾಯಿ ಎಂಬಲ್ಲಿಯೂ ಬಂಡೆಚಿತ್ರಗಳು ಇವೆ. ಕರ್ನಾಟಕದ ಮಸ್ಕಿ, ಹಂಪಿಯ ಪರಿಸರ, ಸಂಗನಕಲ್ಲು, ಹಿರೇಬೆನಕಲ್ಲು, ಬಾದಾಮಿ ಮೊದಲಾದ ಸ್ಥಳಗಳಲ್ಲಿ ಪ್ರಾಗೈತಿಹಾಸ ಕಾಲದ ಚಿತ್ರಗಳಿವೆ.

ಈ ಚಿತ್ರಗಳು ಸಾಮಾನ್ಯವಾಗಿ ರೇಖಾಪ್ರಧಾನವಾಗಿವೆ. ಇವುಗಳಲ್ಲಿ ಪ್ರಾಣಿಗಳು, ಬೇಟೆ, ನರ್ತನದ ದೃಶ್ಯಗಳು ಹಾಗೂ ಅಂದಿನ ಸಾಮಾಜಿಕ ಸಂವೇದನೆಗಳನ್ನು ನಿರೂಪಿಸುವ ಹಲವಾರು ಚಿತ್ರಗಳಿವೆ. ಈ ಚಿತ್ರಗಳನ್ನು ಕಂದು, ಗಟ್ಟಿ ಹಳದಿ, ಕೆಂಪು, ಗಾಢ ಕೆಂಪು ಮತ್ತು ಬಿಳಿ ವರ್ಣಗಳನ್ನು ಉಪಯೋಗಿಸಿ ರಚಿಸಲಾಗಿದೆ. ಇವುಗಳ ಶೈಲಿ ಸರಳವಾದದ್ದು. ಈ ಚಿತ್ರಗಳಲ್ಲಿ ಸಹಜವಾಗಿಯೆ ನೈಜತೆ ಕಡಿಮೆ. ಬದಲಾಗಿ ಭಾವನಾತ್ಮಕ ಗ್ರಹಿಕೆ ಹಾಗೂ ನೇರ ಚಿತ್ರ ರಚನೆ ಕಂಡು ಬರುತ್ತವೆ. ಈ ಚಿತ್ರಗಳು ಒಂದು ರೀತಿಯಲ್ಲಿ ಮಕ್ಕಳು ರಚನೆ ಮಾಡುವ ಕಡ್ಡಿ, ಗೀರುಚಿತ್ರಗಳಂತೆ ಕಂಡರೂ ಆಶ್ಚರ್ಯಪಡಬೇಕಾಗಿಲ್ಲ. ಆದರೂ ಕಲಾವಿದನ ಕ್ರಿಯಾಶೀಲತೆ ಮತ್ತು ಪ್ರೌಢಿಮೆಯನ್ನು ಸೂಚಿಸುತ್ತವೆ. ಒಟ್ಟಾರೆ ನೋಡಿದಾಗ ಪ್ರಾಗಿತಿಹಾಸ ಕಾಲದ ಚಿತ್ರಕಲೆ ಮನೋಲ್ಲಾಸಕ್ಕಾಗಿ ರಚಿಸಿದ ಸಮಕಾಲೀನ ಅನುಭವ, ಅನಿಸಿಕೆಗಳ ಆಗರವಾಗಿದೆ ಎನ್ನಬಹುದು.

ಪ್ರಾಗಿತಿಹಾಸ ಕಾಲದಿಂದ ಇತಿಹಾಸರಂಭ ಕಾಲದವರೆಗಿನ ಚಿತ್ರಕಲೆಯ ಬೆಳವಣಿಗೆಯ ಕುರಿತಂತೆ ಸ್ಪಷ್ಟ ಚಿತ್ರಣ ದೊರೆಯುವುದಿಲ್ಲ. ಗುಣಾತ್ಮಕ ಚಿತ್ರಗಳಿಲ್ಲದೇ ಹೋದರೂ ವಿಭಿನ್ನ ನೆಲೆಗಟ್ಟಿನಲ್ಲಿ ಚಿತ್ರಕಲೆಯ ಚಟುವಟಿಕೆಗಳು ನಡೆದೇ ಇದ್ದವು. ಉದಾಹರಣೆಗೆ: ಸಿಂಧೂ ಬಯಲಿನ ಮೊಹೆಂಜೋದಾರೊವಿನ ಹಾಗೂ ಇವರ ಇಂಥ ಇತರ ನೆಲೆಗಳ ಉತ್ಖನನಗಳಲ್ಲಿ ದೊರೆತ ಸುಡಾವೆ ಮಣ್ಣಿನ ಪಾತ್ರೆಗಳ ಮೇಲೆ ಹೂಬಳ್ಳಿಗಳ, ಎಲೆಗಳ ಹಲವಾರು ಪ್ರಾಣಿಗಳ ವಿವಿಧ ರೇಖಾಚಿತ್ರಗಳ ಉದಾಹರಣೆಗಳು ದೊರೆತಿವೆ. ಈ ಚಿತ್ರಗಳು ಚಿತ್ರಕಲೆಯ ಪ್ರಸ್ತುತತೆಯನ್ನು ಬಿಂಬಿಸುತ್ತವೆ.

ಅನಂತರದ ಕಬ್ಬಿಣಯುಗ ಹಾಗೂ ಆದಿಚಾರಿತ್ರಿಕ ಕಾಲದ ಸಂಸ್ಕೃತಿಯಲ್ಲೂ ಇದೇ ರೀತಿಯ ಚಿತ್ರಕಲೆಯ ಮುಂದುವರಿಕೆ ಕಾಣಬರುತ್ತದೆ. ಮಹಾರಾಷ್ಟ್ರದ ಇನಾಂಗಾಂವ್, ಉತ್ತರಭಾರತದಲ್ಲಿ ಅಹಾರ್, ಆಂಧ್ರದ ಪೆದ್ದಬಂಕೂರು, ಕರ್ನಾಟಕದ ಬ್ರಹ್ಮಗಿರಿ, ಹಳ್ಳೂರು, ಹಾಗೂ ಹೆಗ್ಗಡೆಹಳ್ಳಿ ಮೊದಲಾದ ಹಲವಾರು ನೆಲೆಗಳಲ್ಲಿ ದೊರೆತ ಈ ಸಂಸ್ಕೃತಿಗಳ ಮಡಕೆಗಳ ಮೇಲೆ ವಿವಿಧ ಪ್ರಕಾರಗಳ ಚಿತ್ರಗಳಿವೆ. ಇದರಿಂದ ಚಿತ್ರಕಲೆ ಭಿತ್ತಿಯಲ್ಲಿ ಅಲ್ಲದಿದ್ದರೂ ಮಡಕೆಗಳ ಮೇಲೆ ತನ್ನ ಅಸ್ತಿತ್ವವನ್ನು ಪ್ರದರ್ಶಿಸಿದೆ.

ಪ್ರ.ಶ.ಪೂ. 6,5ನೆಯ ಶತಮಾನಗಳು ಉತ್ತರ ಭಾರತದ ರಾಜಕೀಯ ಮತ್ತು ಧಾರ್ಮಿಕ ಇತಿಹಾಸದಲ್ಲಿ ಬಿರುಸಿನ ಚಟುವಟಿಕೆಗಳಿಂದ ಕೂಡಿದ ಕಾಲವಾಗಿತ್ತು. ದುರದೃಷ್ಟವಶಾತ್ ಈ ಕಾಲಕ್ಕೆ ಸಂಬಂಧಿಸಿದ ಚಿತ್ರಕಲೆಗೆ ದೊರಕುವ ಸಾಕ್ಷ್ಯ ಅತಿ ವಿರಳ. ಆದರೆ ಅನಂತರದ ಕಾಲದ ಅಜಂತ ವಸ್ತುವಿನಲ್ಲಿ ಬುದ್ಧನ ಕಾಲದ ಅರಮನೆಗಳ ಒಳಾಂಗಣ ಚಿತ್ರಗಳು ಅನೇಕ ಸಂಖ್ಯೆಯಲ್ಲಿ ದೊರೆಯುತ್ತವೆ. ಈ ಅರಮನೆಗಳ ಒಳಗೋಡೆಗಳನ್ನು ಸುಂದರ ವರ್ಣಚಿತ್ರಗಳಿಂದ ಅಲಂಕರಿಸಿರುವ ವಿವರಗಳೂ ಉಂಟು. ಈ ಅನೇಕ ಸಾಕ್ಷ್ಯಗಳಿಂದಾಗಿ ಬುದ್ಧ, ಮೌರ್ಯರ ಕಾಲದಲ್ಲಿ ಭಿತ್ತಿ ಚಿತ್ರಕಲೆ ಪ್ರಬುದ್ಧವಾದ ಒಂದು ಕಲೆಯಾಗಿ ಬೆಳೆದಿತ್ತೆಂಬ ವಿಷಯ ರುಜುವಾತಾಗುತ್ತದೆ.

**ಇತಿಹಾಸ ಕಾಲದಲ್ಲಿ ಭಿತ್ತಿ ಚಿತ್ರಗಳ ಬೆಳವಣಿಗೆ:** ಭಾರತದ ಭಿತ್ತಿಚಿತ್ರ ಕಲಾ ಚಟುವಟಿಕೆಗೆ ಅತ್ಯಂತ ಪ್ರಾಚೀನ ಉದಾಹರಣೆಗಳೆಂದರೆ ಅಜಂತದ ಗುಹಾಲಯಗಳು. ಇಲ್ಲಿಯ 9 ಮತ್ತು 10ನೆಯ ಸಂಖ್ಯೆಯ ಚೈತ್ಯಾಲಯಗಳ ಎರಡೂ ಪಾರ್ಶ್ವದ ಗೋಡೆಗಳ ಮೇಲೆ

ವರ್ಣ ಚಿತ್ರಗಳಿವೆ. ಈ ಚಿತ್ರಗಳು ಬಹಳಷ್ಟು ಪ್ರಮಾಣದಲ್ಲಿ ಹಾಳಾಗಿಹೋಗಿದ್ದು ಪ್ರಸ್ತುತದಲ್ಲಿ ಕೇವಲ ಅಸ್ಪಷ್ಟ ಕುರುಹುಗಳು ಮಾತ್ರ ಉಳಿದುಕೊಂಡಿವೆ. 9ನೆಯ ಸಂಖ್ಯೆಯ ಚೈತ್ಯಾಲಯದ ಗೋಡೆಯ ಭಿತ್ತಿಯಲ್ಲಿ ಸ್ತೂಪ ಮತ್ತು ವಿಹಾರವೊಂದರ ಚಿತ್ರಣವಿದೆ. ಸ್ತೂಪಕ್ಕೆ ನಾಗರಾಜ ದಂಪತಿಗಳು ಪೂಜೆ ಮಾಡಲು ಬರುತ್ತಿರುವಂತೆ ಚಿತ್ರಸಂಯೋಜನೆಯನ್ನು ಮಾಡಲಾಗಿದೆ. ಸ್ತೂಪದ ಪಕ್ಕದಲ್ಲಿಯೇ ಮೇಲ್ಮಹಡಿಯುಳ್ಳ ವಿಹಾರದ ಚಿತ್ರಣವಿದ್ದು ಆ ಕಾಲದ ವಾಸ್ತುಶಿಲ್ಪವನ್ನು ಇದು ನೆನಪಿಸುತ್ತದೆ. ಗುಹಾಲಯದ ಭಿತ್ತಿಚಿತ್ರಗಳನ್ನು ವೀಕ್ಷಿಸಿದಾಗ ಇವುಗಳ ರೇಖಾವಿನ್ಯಾಸ, ವರ್ಣ ಸಂಯೋಜನೆ ಮತ್ತು ಭಿತ್ತಿ ರಚನೆಯ ತಾಂತ್ರಿಕ ಬೆಳವಣಿಗೆಯ ಹಂತಗಳು ಸ್ಪಷ್ಟವಾಗುತ್ತವೆ. ಬಹುಶಃ ಶಿಲ್ಪಗಳನ್ನು ಕೆತ್ತುವ ಮೊದಲು ಚಿತ್ರಗಳಲ್ಲಿ ಆ ಕಾಲದ ಕಲಾವಿದರುಗಳೂ ತಮ್ಮ ಪರಿಕಲ್ಪನೆಗಳನ್ನು ಮೂಡಿಸಲು ಪ್ರಯತ್ನಿಸಿದ್ದರು ಎಂದು ತೋರುತ್ತದೆ.

**ಅಜಂತದಲ್ಲಿ ಭಿತ್ತಿ ಚಿತ್ರಕಲೆ (4–6ನೆಯ ಶತಮಾನ) :** ಮೇಲೆ ಚರ್ಚಿಸಿದ ಅಜಂತದ 9ಮತ್ತು 10 ನೆಯ ಗುಹಾಲಯಗಳು ಪ್ರ.ಶ.ಪೂ.1ನೆಯ ಶತಮಾನಕ್ಕೆ ಸೇರಿದವುಗಳಾಗಿವೆ. ಇವುಗಳ ಅನಂತರದಲ್ಲಿ ಪುನಃ ಚಿತ್ರಕಲಾ ಚಟುವಟಿಕೆಗಳ ಬಗ್ಗೆ ತಿಳಿದುಬಂದಿಲ್ಲ.

4ನೆಯ ಶತಮಾನ ಭಾರತದಲ್ಲಿ ವೈದಿಕ, ಪೌರಾಣಿಕ ಮೊದಲಾದ ಹಿಂದುಧರ್ಮಗಳ, ಆಚರಣೆಗಳ ಮತ್ತು ಕಲಾ ಚಟುವಟಿಕೆಗಳ ಪುನರುಜ್ಜೀವನ ಕಾಲ. ಗುಪ್ತ, ವಾಕಾಟಕ, ಕದಂಬ, ಗಂಗ, ವಿಷ್ಣುಕುಂಡಿ, ಕೊಂಕಣ ಮೌರ್ಯ ಮೊದಲಾದ ರಾಜ ಮನೆತನಗಳು ಬಹುತೇಕ ಏಕಕಾಲದಲ್ಲಿಯೇ ತಮ್ಮ ರಾಜ್ಯಗಳನ್ನು ಸ್ಥಾಪಿಸಿದವು. ಈ ಕಾಲದ ವಾಸ್ತುಶಿಲ್ಪ, ಸಾಹಿತ್ಯ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳು ಬಹು ಮುಖ್ಯವಾಗಿವೆ. ಈ ಕಾಲದಲ್ಲಿಯೇ ಅಜಂತಾದ ಲಯಣಗಳು ಬೌದ್ಧ ಮಹಾಯಾನದ ತತ್ವದ ಹಿನ್ನೆಲೆಯಲ್ಲಿ ರಚನೆಗೊಂಡವು. ವಾಕಾಟಕ ರಾಜಮನೆತನದ ಹರಿಷೇಣ ಎಂಬ ದೊರೆಯ ಆಡಳಿತದಲ್ಲಿ ಇಲ್ಲಿಯ ಬಹುತೇಕ ಗುಹಾಲಯಗಳು ನಿರ್ಮಾಣವಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಗುಹಾಲಯಗಳ ಕಾಲನಿರ್ಣಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಮಹಾಯಾನ ಕಾಲದ ಬೌದ್ಧಗುಹಾಲಯಗಳು 4 ನೆಯ ಶತಮಾನದಿಂದ 6 ನೆಯ ಶತಮಾನಗಳ ಮಧ್ಯದಲ್ಲಿ ನಿರ್ಮಾಣವಾಗಿರಬಹುದೆಂದು ಊಹಿಸಲಾಗಿದೆ.

ಅಜಂತದ ಗುಹಾಲಯಗಳಲ್ಲಿ 1–4, 6–8, 8, 16, 17, 19, 20, 21 ಗುಹಾಲಯಗಳಲ್ಲಿ ಮಹಾಯಾನ ಪಂಥಕ್ಕೆ ಸೇರಿದ ಭಿತ್ತಿಚಿತ್ರಗಳಿವೆ. ಇಲ್ಲಿಯ ಭಿತ್ತಿಚಿತ್ರಗಳು ವಿಶಿಷ್ಟವಾದ ಹಿನ್ನೆಲೆಯ ಮೇಲೆ ರಚನೆಗೊಂಡಿವೆ. ಅಸಮವಾಗಿರುವ ಗೋಡೆಗಳ ಮೇಲೆ ಮಿಶ್ರಮಾಧ್ಯಮದ ಗಾರೆ ಲೇಪನವನ್ನು ಮಾಡಿ, ಸಮತಟ್ಟಾದ ಹಿನ್ನೆಲೆಯನ್ನು ತಯಾರಿಸಿಕೊಂಡು ಚಿತ್ರಗಳ ರಚನೆ ಮಾಡಲಾಗಿದೆ. ಗುಹಾಲಯಗಳ ಗೋಡೆ, ಕಂಬ, ಒಳಮಾಳಿಗೆ. ಮತ್ತು ಕೆಲವದರಲ್ಲಿ ಮೊಗಸಾಲೆಗಳು ಸೇರಿದಂತೆ ಚಿತ್ರಗಳಿವೆ. ಬಳಸಲಾಗಿರುವ ವರ್ಣಗಳು ನೈಸರ್ಗಿಕ ಮೂಲದವು. ಕೆಂಪು, ಹಳದಿ, ನೀಲಿ, ಕಂದು, ಹಸುರು, ಗಿಳಿಹಸುರು, ಬಿಳಿ ಮೊದಲಾದ ವರ್ಣಗಳು ಮತ್ತು ಅವುಗಳ ಮಿಶ್ರಣಗಳಿಂದ ಬರುವ ದ್ವಿತೀಯ ಮತ್ತು ತೃತೀಯ ಹಂತದ ವರ್ಣಗಳು ಜಲ ಮಾಧ್ಯಮದಲ್ಲಿಯೇ ಉಪಯೋಗವಾಗಿವೆ. ಅಜಂತದ ಚಿತ್ರಗಳು ರೇಖಾಪ್ರಧಾನ ಚಿತ್ರಗಳು. ಉದ್ದೇಶಿತ ಆಕೃತಿಯ ಅಂಗಾಂಗಗಳ ಬಾಹ್ಯ ರೇಖೆಗಳು ಸರಳವಾಗಿ, ಸುಲಲಿತವಾಗಿ, ಹಾಗೂ ಸೊಗಸಾಗಿ ಮತ್ತು ಭಾವನಾತ್ಮಕವಾಗಿ ಮೂಡಿಬಂದಿವೆ. ಉದ್ದೇಶಿತ ಭಾಗಗಳನ್ನು ಅತ್ಯಂತ ನೈಜವಾಗಿ ಕಲಾವಿದರೂ ತೋರಿಸಿದ್ದಾರೆ. ಚಿತ್ರಗಳಲ್ಲಿ ರೂಪಿಸಿರುವ ವಿಷಯಗಳು ಬುದ್ಧನ ಜಾತಕ ಕಥೆಗಳಿಗೆ ಸಂಬಂಧಿಸಿವೆ. ಜಾತಕಗಳನ್ನು ಅತ್ಯಂತ ವಿವರಣಾತ್ಮಕವಾಗಿ ದೃಶ್ಯ ಸಂಯೋಜನೆಗೊಳಿಸಲಾಗಿದೆ. ಉದಾಹರಣೆಗೆ ಮೊದಲನೆಯ ಗುಹೆಯ ಶಿಬಿಜಾತಕ, ಶಂಖಪಾಲ ಜಾತಕ, ಮಹಾಜನಕ ಜಾತಕ, ಚಂಪೇಯ ಜಾತಕಗಳ ಚಿತ್ರಗಳಲ್ಲಿ ನಾಟಕೀಯ ಹಾಗೂ ಚಲನಾತ್ಮಕ ಆಕೃತಿಗಳ ನಿರೂಪಣಾತಂತ್ರವನ್ನು ನೋಡಬಹುದು. ಮುಖ್ಯ ಆಕೃತಿಯೂ ದೊಡ್ಡದಾಗಿದ್ದು ಸಂಬಂಧಿತ ಆಕೃತಿಗಳನ್ನು ಅವುಗಳಿಗೆ ಪೂರಕವಾದಂತೆ ತೋರಿಸಲಾಗಿರುತ್ತದೆ. ಅದೇ ರೀತಿ ಎರಡನೆಯ ಗುಹಾಲಯದ ವಿದುರ ಪಂಡಿತ ಜಾತಕ ಹಾಗೂ ಬುದ್ಧನ ಜೀವನಕ್ಕೆ ಸಂಬಂಧಿಸಿದ ಘಟನೆಗಳು ರಚನೆಯಾಗಿವೆ. 6ನೆಯ ಗುಹಾಲಯದಲ್ಲಿಯ ಮಾರ ವಿಜಯದ ಚಿತ್ರಣ ಇಲ್ಲಿನ ಇಪ್ಪತ್ತಾರನೆಯ ಗುಹಾಲಯದ ಮಾರ ವಿಜಯ ಶಿಲ್ಪದ ರಚನೆಗೆ ಸ್ಫೂರ್ತಿ ಒದಗಿಸಿದೆ ಎಂದು ಹೇಳಬಹುದು. 16ನೆಯ ಗುಹಾಲಯದಲ್ಲಿ ಬುದ್ಧನ ಜನನ ಮತ್ತು ಜೀವನಕ್ಕೆ ಸಂಬಂಧಿಸಿದ ಭಿತ್ತಿಚಿತ್ರಗಳಿವೆ. 17ನೆಯ ಗುಹಾಲಯದಲ್ಲಿ ಮುಖ್ಯವಾಗಿ ವೆಸ್ಸಂತರ, ನಲಗಿರಿ, ಮದಹರಣ, ಷದ್ದಂತ, ಸುತಸೋಮ, ಮಾತೃಪೋಷಕ ಜಾತಕ ಸಿಂಹಳ ಅವಧಾನ, ನಿಗ್ರೋಧಮಿಗ. ಜಾತಕ ಕಥೆಗಳೇ ಗಣನೀಯವಾಗಿವೆ.

ಮೇಲೆ ಹೆಸರಿಸಿದ ಜಾತಕಗಳಲ್ಲದೆ, ಬುದ್ಧನ ಮಾನುಷ ರೂಪದ ಹಲವಾರು ಆಕೃತಿಗಳು ಇಲ್ಲಿ ರಚನೆಯಾಗಿವೆ. ಇವುಗಳಲ್ಲದೆ ಒಳಮಾಳಿಗೆಯಲ್ಲಿ ವರ್ಣನಾತೀತವಾದ ಜ್ಯಾಮಿತಿಯ ವಿನ್ಯಾಸಗಳು, ಕಾಲ್ಪನಿಕ ಪ್ರಾಣಿ, ಪಕ್ಷಿಗಳ, ಬಳ್ಳಿ, ಸುರುಳಿಗಳ, ಸಂಯೋಜಿತ ಚಿತ್ರ ನಿರೂಪಣೆಗಳು ಅದ್ಭುತವಾದ ಕಲ್ಪನೆಯನ್ನು ಕೊಡುತ್ತವೆ. ಅಜಂತದ ಕಲಾವಿದರು ತಮ್ಮ ಚಿತ್ರಕಲಾರಚನೆಯಲ್ಲಿ ಅತ್ಯಂತ ಸಿದ್ಧಹಸ್ತರಾಗಿದ್ದರು ಎನ್ನುವುದಕ್ಕೆ ಅವರ ಈ ಚಿತ್ರಗಳು ಸಾಕ್ಷಿಯಾಗಿವೆ. ಈ ಕಾಲವನ್ನು ಭಾರತೀಯ ಭಿತ್ತಿಚಿತ್ರಕಲಾ ಪರಂಪರೆಯ ಉತ್ತುಂಗದ ಕಾಲ ಎಂದು ಕರೆಯಬಹುದು. ಏಕೆಂದರೆ ಅಜಂತದಲ್ಲಿ ಕಂಡುಬರುವಂತಹ ಭಿತ್ತಿಚಿತ್ರ ಪುರಾವೆಗಳು ಅನಂತರದ ಕಾಲಗಳಲ್ಲಿ ಅಪರೂಪ. ಅಜಂತಕ್ಕೆ ಸಮಕಾಲೀನವಾದ ಮಧ್ಯಪ್ರದೇಶದ ಉಜ್ಜಯನಿ ಹತ್ತಿರವಿರುವ ಬಾಗ್ ಎಂಬಲ್ಲಿಯ ಬೌದ್ಧ ಗುಹಾಲಯಗಳಲ್ಲಿಯೂ ಭಿತ್ತಿಚಿತ್ರಗಳಿವೆ. ಬಾಗ್‌ನಲ್ಲಿಯ ಭಿತ್ತಿಚಿತ್ರಗಳು ಅಜಂತ ಚಿತ್ರದ ಮಾದರಿಗಳಲ್ಲಿಯೇ ರಚನೆಯಾಗಿವೆ. ಇಲ್ಲಿಯೂ ಮಹಾಯಾನಕಾಲದ ಬೌದ್ಧ ಕಲಾ ಚಟುವಟಿಕೆಗಳು ಕೇಂದ್ರೀಕೃತವಾಗಿದ್ದು ಬಾಗ್‌ನ ಗುಹಾಲಯಗಳ ಕಾಲವನ್ನು 5 ಮತ್ತು 6ನೆಯ ಶತಮಾನವೆಂದೇ ನಿರ್ಧರಿಸಲಾಗಿದೆ. ಇಲ್ಲಿಯ ಭಿತ್ತಿಚಿತ್ರಗಳಲ್ಲಿ ಜಾತಕ ಕಥೆಗಳು ಹಾಗೂ ಬುದ್ಧನ ಜೀವನದ ಘಟನೆಗಳಿವೆ. ಈ ಭಿತ್ತಿಚಿತ್ರಗಳು ಬಹಳ ಹಾಳಾಗಿವೆ.

ಅಜಂತ ಮತ್ತು ಬಾಗ್ ಚಿತ್ರಗಳ ರಚನಾಕ್ರಮ ಮತ್ತು ರಚನಾ ಹಿನ್ನಲೆ ಒಂದೇ ತೆರನಾಗಿವೆ. ಆಕೃತಿಗಳ ರಚನೆಯಲ್ಲಿ ನೈಜತೆ ಹಾಗೂ ಪ್ರಮಾಣಬದ್ಧತೆ ಕಾಣಬಹುದು. ವರ್ಣಸಂಯೋಜನೆಯಲ್ಲಿ ಅಂಗಸೌಷ್ಠವದ ಹಾವಭಾವಗಳನ್ನು ಉಬ್ಬು ತಗ್ಗುಗಳನ್ನು ನೋಡಬಹುದು. ಪುರುಷ ಮತ್ತು ಸ್ತ್ರೀ ಆಕೃತಿಗಳ, ಕಿನ್ನರ ಕಿಂಪುರುಷರ, ಬೋಧಿಸತ್ವ ಪದ್ಮಪಾಣಿದೇವನ ರಚನೆಗಳಲ್ಲಿ ಭವ್ಯತೆ ಮತ್ತು ವಾಸ್ತವಿಕತೆಯಿದೆ.

ಅಜಂತಶೈಲಿಯ ವರ್ಣಚಿತ್ರ, ನೇಪಾಲ

ಅಜಂತದ ಚಿತ್ರಗಳನ್ನು ಸಮಕಾಲೀನ ಗುಪ್ತ ವಾಕಾಟಕ ಶಿಲ್ಪಗಳಿಗೆ ಹೋಲಿಸಬಹುದು. ವಿಶೇಷವಾಗಿ ಶಿಲ್ಪಗಳ ಅಲಂಕರಣದಲ್ಲಿರುವ ಮುತ್ತಿನ ಏಕಾವಳಿ, ಸರಳ ದೇಹಾಲಂಕಾರ ಮೊದಲಾದವುಗಳು ಅಜಂತದ ಭಿತ್ತಿ ಚಿತ್ರಗಳಲ್ಲಿವೆ. ಹೀಗಾಗಿ ಸಮಕಾಲೀನ ಶಿಲ್ಪ ಮತ್ತು ಚಿತ್ರ ಎರಡರಲ್ಲಿಯೂ ಸಾಮ್ಯತೆಯಿದೆ. ಅಜಂತದಲ್ಲಿಯೇ ಇರುವ ಮತ್ತೊಂದು ಹೆಚ್ಚು ಚರ್ಚಿತ ಚಿತ್ರ ಎರಡನೆಯ ಗುಹಾಲಯದಲ್ಲಿರುವ ಪುಲಕೇಶಿಯ ಆಸ್ಥಾನವೆಂದು ಗುರುತಿಸಲಾಗುವ ಭಿತ್ತಿಚಿತ್ರ. ಮೂಲತಃ ಈ ಗುಹಾಲಯಗಳ ಮಹಾ ಪೋಷಕ ಹರಿಷೇಣನಾಗಿರಬೇಕು. ಏಕೆಂದರೆ ಅವನ ಕಾಲದಲ್ಲಿಯೇ ಅವನ ಮಂತ್ರಿ ವರಾಹದೇವ ಗುಹಾಲಯಗಳನ್ನು ನಿರ್ಮಿಸಿದನೆಂದು 16 ನೆಯ ಗುಹಾಲಯದ ಶಾಸನ ಹಾಗೂ ಅಜಂತದ ಸಮೀಪದಲ್ಲಿಯೇ ಇರುವ ಘಟೋತ್ಕಚ ಎಂಬ ಗುಹಾಲಯದಲ್ಲಿ ದೊರೆತ ಮತ್ತೊಂದು ಶಾಸನದ ಆಧಾರದಿಂದ ಹೇಳಬಹುದಾಗಿದೆ. ಒಟ್ಟಾರೆಯಾಗಿ ಅಜಂತದ ಚಿತ್ರಗಳು, ಭಾರತದ ಸುವರ್ಣ ಯುಗವೆಂದೇ ಕರೆಯಲಾಗುವ ಗುಪ್ತ ವಾಕಾಟಕ ಇವರುಗಳ ಕಾಲದಲ್ಲಿ ರಚನೆಯಾಗಿ ಶಿಲ್ಪಕಲೆಗೆ ಸರಿಸಮವಾದ ಕಲಾಪರಂಪರೆಯನ್ನು ಸೂಚಿಸುತ್ತವೆ.

6 ರಿಂದ 15ನೆಯ ಶತಮಾನದವರೆಗಿನ ಭಿತ್ತಿ ಚಿತ್ರಕಲೆಯಲ್ಲಿ ಅಜಂತದ ಚಿತ್ರಗಳ ಪ್ರಭಾವವನ್ನು ಕಾಣಬಹುದು. ಅಜಂತದ ನಂತರದಲ್ಲಿ ಉತ್ತರ ಭಾರತದಲ್ಲಿ ಭಿತ್ತಿ ಚಿತ್ರಕಲೆ ಅಷ್ಟಾಗಿ ಕಂಡುಬಂದಿಲ್ಲ.

**ಬಾದಾಮಿ ಚಳುಕ್ಯರ ಕಾಲ:** ಅಜಂತೋತ್ತರ ಕಾಲದಲ್ಲಿ ಭಿತ್ತಿಚಿತ್ರಗಳು ಕಂಡುಬರುವುದು ಕರ್ನಾಟಕದ ಬಾದಾಮಿಯ ಹಿಂದು ಗುಹಾಲಯಗಳಲ್ಲಿ. ಬಾದಾಮಿಯಲ್ಲಿ ಒಟ್ಟು ನಾಲ್ಕು ಗುಹಾಲಯಗಳಿವೆ. ಇವುಗಳ ಕಾಲ 6ನೆಯ ಶತಮಾನ. ಮೂರನೆಯ ಗುಹಾಲಯದಲ್ಲಿ ಹಲವಾರು ಭಿತ್ತಿಚಿತ್ರಗಳಿವೆ. ಈ ಗುಹಾಲಯ ವಿಶಾಲವಾಗಿದ್ದು, ಇದರ ಮೊಗಸಾಲೆಯ ಹೊರಚಾಚಿರುವ ಕಪೋತದ (ಸಜ್ಜ) ಒಳಭಾಗದಲ್ಲಿ ಚಿತ್ರಗಳಿವೆ. ವಿಶೇಷವೆಂದರೆ ಅಜಂತದಲ್ಲಿ ಭಿತ್ತಿಚಿತ್ರಗಳು ಗೋಡೆಯ ಮೇಲೆ ಹಾಗೂ ಒಳಮಾಳಿಗೆಗಳ ಮೇಲಿವೆ. ಬಾದಾಮಿಯ ಮೂರನೆಯ ಗುಹಾಲಯದಲ್ಲಿ ಚಿತ್ರಗಳ ಅವಶೇಷಗಳು ಕಂಡುಬರುತ್ತವೆ. ಈ ಗುಹಾಲಯ 578 ರಲ್ಲಿ ಚಳುಕ್ಯ ಮಂಗಳೇಶನಿಂದ ನಿರ್ಮಿಸಲ್ಪಟ್ಟಿತು ಎಂದು ಇಲ್ಲಿನ ಶಾಸನ ತಿಳಿಸುತ್ತದೆ. ಇದರಿಂದ ಇಲ್ಲಿನ ಕಲಾ ಚಟುವಟಿಕೆಗಳು ಅಜಂತೋತ್ತರ ಕಾಲದಲ್ಲಿ ನಡೆದಿರುವುದು ಸ್ಪಷ್ಟವಾಗುತ್ತವೆ. ಇಲ್ಲಿಯ ಚಿತ್ರಗಳನ್ನು ಅಧ್ಯಯನ ಮಾಡುತ್ತ, ಸಿ.ಶಿವರಾಮಮೂರ್ತಿಯವರು ಚಿತ್ರದಲ್ಲಿ ರಚಿಸಿರುವ ಆಕೃತಿಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಚೌರಿಧಾರಿ ಸ್ತ್ರೀಯರುಗಳು, ಕೀರ್ತಿವರ್ಮನ ಭಾವಚಿತ್ರ, ಗಂಧರ್ವಕನ್ನಿಕೆಯರು, ವಿದ್ಯಾಧರ ಇತ್ಯಾದಿ– ಈ ಚಿತ್ರಗಳು

ಶಿಷ್ಟ ಸಂಪ್ರದಾಯದ ಹಿಂದು ಚಿತ್ರಕಲೆಯ ಅತ್ಯಂತ ಪ್ರಾಚೀನ ಉದಾಹರಣೆಗಳಾಗಿವೆ. ಚಿತ್ರಗಳಲ್ಲಿ ಕಂಡುಬರುವ ಆಕೃತಿಗಳು ವಾಕಾಟಕ ಚಿತ್ರಕಲೆಯ ಮುಂದುವರಿದ ಬೆಳವಣಿಗೆಯಾಗಿವೆ. ಆಕೃತಿಗಳು ನೈಜವಾಗಿ ಹಾಗೂ ಸ್ವಾಭಾವಿಕವಾಗಿ ರಚನೆಯಾಗಿವೆ. ಆಕೃತಿಗಳಲ್ಲಿ ಕಂಡುಬರುವ ಅಲಂಕಾರ ಇದೇ ಗುಹಾಲಯದ ಮೊಗಸಾಲೆಯ ಶಿಲ್ಪಗಳನ್ನು ಹೋಲುತ್ತವೆ. ಈ ಚಿತ್ರಗಳಲ್ಲಿ ವರ್ಣಸಂಯೋಜನೆಯು ತೆಳು ವರ್ಣಗಳಿಂದ ಕೂಡಿದೆ. ಈ ಚಿತ್ರಗಳ ರಚನೆಯ ಹಿನ್ನೆಲೆಯು ಅಜಂತದಂತೆ ಗಟ್ಟಿಯಾದ ಹಿನ್ನೆಲೆಯಾಗಿಲ್ಲ. ತೆಳುವಾದ ಲೇಪನದ ಮೇಲೆ ಚಿತ್ರಗಳನ್ನು ರಚಿಸಲಾಗಿದೆ.

ಬಾದಾಮಿಯ ಚಿತ್ರಗಳ ರಚನೆಯ ಕಾಲಕ್ಕಾಗಲೇ ಚಿತ್ರರಚನಾಶಾಸ್ತ್ರ ಕೃತಿಗಳು ರಚನೆಯಾಗಿದ್ದವು. ವಿಷ್ಣು ಧರ್ಮೋತ್ತರ ಪುರಾಣದ ಚಿತ್ರಸೂತ್ರ ಈ ಕಾಲಕ್ಕೆ ಸೇರಿಸಬಹುದಾದ ಲಾಕ್ಷಣಿಕ ಗ್ರಂಥವಾಗಿದೆ. ಅಲ್ಲದೆ ಕಾಮಸೂತ್ರದ–ಚಿತ್ರ ಷಡಂಗ ಕೂಡ ಚಿತ್ರಕಲೆಯ ಆರು ಪ್ರಮುಖ ಲಕ್ಷಣಗಳಾದ ರೂಪ, ಭೇದ, ಪ್ರಮಾಣ, ಲಾವಣ್ಯ ಭಾವ, ಸಾದೃಶ್ಯ ಮತ್ತು ವರ್ಣಗಳನ್ನು ಕುರಿತಂತೆ ಹೇಳುತ್ತದೆ. ಅಂದಿನ ಕಲಾವಿದರಿಗೆ ಈ ಕೃತಿಗಳ ಪರಿಚಯವಿದ್ದು ತಮ್ಮ ಚಿತ್ರರಚನೆಯಲ್ಲಿ ಇವುಗಳ ತತ್ವಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರು ಎಂದು ತೋರುತ್ತದೆ. ಚಳುಕ್ಯರ ಅನಂತರದ ದೇವಾಲಯಗಳಲ್ಲಿ ಚಿತ್ರಗಳಿಲ್ಲವೆಂದೇ ಹೇಳಬಹುದು. ಇಲ್ಲಿಯ ಗುಹಾಲಯ ಶಿಲ್ಪಗಳಿಗೆ ಮತ್ತು ಒಳ ಚಾವಣಿಗಳಿಗೆ, ಅರೆ ಉಬ್ಬು ಶಿಲ್ಪಗಳಿಗೆ ತೆಳು ವರ್ಣಲೇಪನ ಮಾಡಿದಂತೆ ತೋರುತ್ತದೆ. ಅಂತಹ ಹಲವಾರು ಅವಶೇಷಗಳು ಮೂರೂ ಗುಹಾಲಯಗಳ ಒಳ ಚಾವಣಿಗಳಲ್ಲಿ ಅಲ್ಲಲ್ಲಿ ಇವೆ. ಚಳುಕ್ಯರ ಕಾಲದ ಐಹೊಳೆಯ ರಾವಣಪಡಿ ಶೈವ ಗುಹಾಲಯದಲ್ಲಿ ಕೆಲವು ಚಿತ್ರಗಳಿವೆ. ಈ ಗುಹಾಲಯದ ಶಿವ ಮತ್ತು ಸಪ್ತಮಾತೃಕೆಯರ ಶಿಲ್ಪಗಳಿರುವ ಉಪವರ್ಣಕದಲ್ಲಿಯ ಕಿರಿದಾದ ಒಳಚಾವಣಿಯಲ್ಲಿ ಮಹಿಷಮರ್ದಿನಿಯ ಚಿತ್ರವೊಂದು ಅಸ್ಪಷ್ಟವಾಗಿ ಕಂಡುಬರುತ್ತದೆ. ಚಿತ್ರದಲ್ಲಿ ಮಹಿಷಮರ್ದಿನಿಯು ಮಾನುಷ ರೂಪಿ ಮಹಿಷನನ್ನು ಸಂಹಾರ ಮಾಡುತ್ತಿರುವಂತೆ ನಿರೂಪಿಸಲಾಗಿದೆ.

**ಪಲ್ಲವರ ಕಾಲ:** ಕಾಂಚಿಪುರದ ಪಲ್ಲವರು ಚಳುಕ್ಯರ ಸಮಕಾಲೀನರು. ಪಲ್ಲವ ದೊರೆಗಳು ಕಲೆ, ಚಿತ್ರಕಲೆಗೆ ಸಾಕಷ್ಟು ಪೋಷಣೆಯನ್ನು ನೀಡಿದರು. ದೊರೆ ಮಹೇಂದ್ರ ವರ್ಮನಿಗೆ ವಿಚಿತ್ರಚಿತ್ತ, ಚಿತ್ರಕಾರಪುಲಿ ಎಂಬ ಬಿರುದುಗಳು ಇದ್ದವು. ವಿಚಿತ್ರಚಿತ್ತ ಎಂಬುದು ಕಲಾ ಸಂವೇದನೆಯುಳ್ಳವನೆಂಬುದಾಗಿಯೂ ಚಿತ್ರಕಾರಪುಲಿ ಎಂದರೆ ಚಿತ್ರಕಾರರಲ್ಲಿ ಹುಲಿ ಎಂದೂ ಅರ್ಥೈಸಬಹುದು. ಪಲ್ಲವರ ಕಾಲದಲ್ಲಿಯ ಚಿತ್ರಗಳು ಕೂಡ ಪೂರ್ಣವಾಗಿ ಉಳಿದಿಲ್ಲ. ಅವರ ಕಾಲದ ಕಾಂಚಿಪುರದ ಕೈಲಾಸನಾಥ ದೇವಾಲಯ, ಪನಾಮಲೈನ ದೇವಾಲಯಗಳಲ್ಲಿ ಹಲವಾರು ಚಿತ್ರಾವಶೇಷಗಳು ಇವೆ. ಈ ಕಾಲದ ಚಿತ್ರಗಳಲ್ಲಿ ಅಜಂತದ ಪ್ರಭಾವ ಪರೋಕ್ಷವಾಗಿ ಮುಂದುವರೆದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿಯ ಚಿತ್ರಗಳನ್ನು ಗಾರೆ ಲೇಪನದ ಹಿನ್ನೆಲೆಯ ಮೇಲೆ ರಚಿಸಲಾಗಿದೆ. ಪನಾಮಲೈನ ದೇವಾಲಯದಲ್ಲಿ ಕಂಡುಬರುವ ನಟರಾಜ ಶಿವನ ಅಸ್ಪಷ್ಟ ಚಿತ್ರದಲ್ಲಿ ಆಲಂಕಾರಿಕ ಛತ್ರಿಯ ಕೆಳಗೆ ಆಕರ್ಷಕ ಭಂಗಿಯಲ್ಲಿ ನಿಂತಿರುವ ಪಾರ್ವತಿಯ ಚಿತ್ರ ಗಮನ ಸೆಳೆಯುತ್ತದೆ. ಅತ್ಯಂತ ಸೊಗಸಾದ ಚಿತ್ರಣ ಇರುವ ಪಾರ್ವತಿಯ ನಿಂತ ಭಂಗಿಯ ಲಾಸ್ಯ ಗಮನ ಸೆಳೆಯುತ್ತದೆ. ಆ ಕಾಲದ ಶಿಲ್ಪಗಳಲ್ಲಿ ಕಂಡುಬರುವ ಉದ್ದನೆಯ ಕಿರೀಟ ಪ್ರಸ್ತುತ ಚಿತ್ರದಲ್ಲಿಯೂ ಕಂಡುಬರುತ್ತದೆ.

ಕಾಂಚಿಪುರದ ಕೈಲಾಸನಾಥ ದೇವಾಲಯದ ಭಿತ್ತಿಯಲ್ಲಿಯ ಸೋಮಸ್ಕಂದ ಚಿತ್ರ ಅಸ್ಪಷ್ಟವಾಗಿದೆ. ಈ ಚಿತ್ರದಲ್ಲಿ ಶಿವಪಾರ್ವತಿ ಮತ್ತು ಮಧ್ಯದಲ್ಲಿ ಸ್ಕಂದ (ಕುಮಾರ) ಇವರ ಆಕೃತಿಗಳು ಅಲ್ಪ ಸ್ವಲ್ಪ ಗೋಚರಿಸುತ್ತವೆ. ಬಾಹ್ಯ ರೇಖೆಗಳೇ ಪ್ರಧಾನವಾಗಿ ಕಾಣುವ ಈ ಆಕೃತಿಗಳ ರಚನೆಯಲ್ಲಿ ಗಾಂಭೀರ್ಯವಿದೆ. ಅಲಂಕಾರದಲ್ಲಿ ಕಂಡುಬರುವ ಯಜ್ಞೋಪವೀತ, ಮೇಖಲ, ಕೇಯೂರ, ಅಂಗದ, ಕಂಠಹಾರ, ರತ್ನಾವಳಿ ಮೊದಲಾದ ಆಭರಣಗಳು ಬಾಹ್ಯರೇಖೆಗಳಿಂದಲೇ ನಿರೂಪಿಸಲ್ಪಟ್ಟು ಸೊಗಸಾದ ರಚನೆಗಳೆನಿಸಿವೆ. ಶಿವನ ಪರಿವಾರದಲ್ಲಿ ಗಂಧರ್ವ, ಕಿನ್ನರರ ಆಕೃತಿಗಳು ಇವೆ. ಇದೇ ಚಿತ್ರದಲ್ಲಿಯ ಕಿನ್ನರ ಮತ್ತು ಕಿನ್ನರಿಯರ ಆಕೃತಿಗಳು ಮಾನುಷ ದೇಹ–ಪಕ್ಷಿಗಳ ಕಾಲುಗಳಿಂದ ಕೂಡಿದ್ದು, ಅಜಂತದ ಎರಡನೆಯ ಗುಹಾಲಯದ ಈ ಬಗೆಯ ಚಿತ್ರಗಳನ್ನು ನೆನಪಿಗೆ ತರುತ್ತವೆ. ದುರದೃಷ್ಟವಶಾತ್ ಇಲ್ಲಿಯ ಚಿತ್ರಗಳು ಕೂಡ ಬಹಳಷ್ಟು ಹಾಳಾಗಿರುವುದರಿಂದ, ಈ ಚಿತ್ರಗಳ ಸಂಪೂರ್ಣ ವಿವರಣೆ ಕಷ್ಟಸಾಧ್ಯ. ಆದರೆ ಈ ಚಿತ್ರಗಳು ತೊಂಡೈಮಂಡಲ ಪ್ರದೇಶದ ಚಿತ್ರಕಲೆಗೆ ಬಹುಮುಖ್ಯವಾದ ಉದಾಹರಣೆಗಳಾಗಿವೆ.

**ಪಾಂಡ್ಯರ ಕಾಲ:** ಪಲ್ಲವರ ಕಾಲದಿಂದ ಮುಂದುವರೆದು ಪಾಂಡ್ಯರ ಕಾಲದಲ್ಲಿಯೂ ಚಿತ್ರಕಲೆ ಮುಂದುವರೆಯಿತು. ಪಾಂಡ್ಯರ ದೊರೆಗಳು ಜೈನಧರ್ಮಕ್ಕೆ ಹೆಚ್ಚಿನ ಪ್ರಾಧ್ಯಾನತೆಯನ್ನು ನೀಡಿದರು. ಈ ಮನೆತನದ ಅರಿಕೇಸರಿ ಪರಾಂಕುಶ ಎಂಬ ರಾಜನು 7ನೆಯ ಶತಮಾನದಲಿಯೇ ತಿರುಜ್ಞನ ಸಂಬಂಧಿ ಎಂಬ ಬಾಲ ಜೈನ ಸನ್ಯಾಸಿಯ ಪ್ರಭಾವಕ್ಕೊಳಗಾಗಿ ಜೈನಧರ್ಮವನ್ನು ಅನುಸರಿಸಿದ. ಅನಂತರದ ದೊರೆಗಳು ಕೂಡ ಜೈನಧರ್ಮಕ್ಕೆ ಸಾಕಷ್ಟು ಪ್ರಾಧ್ಯಾನತೆ ನೀಡಿದರು. ಪಲ್ಲವರಂತೆಯೇ ಪಾಂಡ್ಯರು ಕೂಡ ಹಲವಾರು ಗುಹಾಲಯಗಳನ್ನು ಮಾಮಂಡೂರು, ಮಂಡಗಪಟ್ಟು, ದಳವಾನೂರು, ಸಿತ್ತನ್ನವಾಸಲ್ ಮೊದಲಾದ ಸ್ಥಳಗಳಲ್ಲಿ ನಿರ್ಮಿಸಿದ್ದರು. ಸಿತ್ತನ್ನವಾಸಲ್‌ನ ಗುಹಾಲಯದಲ್ಲಿ ಹಲವಾರು ಚಿತ್ರಗಳ ಅವಶೇಷಗಳಿವೆ. ಇಲ್ಲಿನ ಚಿತ್ರಗಳಲ್ಲಿ ರಾಜನ ಭಾವಚಿತ್ರದ ಅಸ್ಪಷ್ಟ ಚಿತ್ರಣ, ನೃತ್ಯಗಾರ್ತಿಯರು, ಮಾತ್ರವಲ್ಲದೆ ಹಲವಾರು ಅಲಂಕೃತ ರಚನೆಗಳ ಕುರುಹುಗಳು ಕಂಡುಬರುತ್ತವೆ. ಇಲ್ಲಿಯ ತಮಿಳು ಶಾಸನವೊಂದರಲ್ಲಿ ಮಧುರೈನ ಜೈನ ಆಚಾರ್ಯನಾದ ಇಳನ್‌ಗೌತಮನ್ ಎಂಬುವವನು ಅರ್ಧಮಂಟಪ ಹಾಗೂ ಮುಖಮಂಟಪಗಳನ್ನು ಅಲಂಕಾರಗೊಳಿಸಿದನು ಎಂದು ಸೂಚಿಸುತ್ತದೆ. ಈ ಚಿತ್ರಗಳು ಪಲ್ಲವ ಚಿತ್ರ ಶೈಲಿಯ ಮುಂದುವರಿಕೆಯಾಗಿವೆ. ಅಗಲವಾದ ಮುಖ, ದಪ್ಪ ಕಣ್ಣುಗಳು, ದಪ್ಪನೆಯ ತುಟಿಗಳು, ಆರೋಗ್ಯಭರಿತವಾದ ಶರೀರ ರಚನೆ ಗಮನ ಸೆಳೆಯುತ್ತವೆ. ಆಕೃತಿಗಳ ಅಲಂಕೃತ ರಚನೆಯಲ್ಲಿ ಕಲಾವಿದರ ಕರಕುಶಲತೆ ಕಂಡುಬರುತ್ತದೆ. ಕಮಲದ ಹೂಗಳನ್ನು ಸಂಗ್ರಹಿಸುವ ಆಕೃತಿಗಳು ಸರೋವರದಲ್ಲಿ ತಮಗಿಷ್ಟವಾದ ಹೂಗಳನ್ನು ಕಿತ್ತು ಹೊರತರುತ್ತಿದ್ದಾರೆ. ಈ ಆಕೃತಿಗಳ ರಚನೆ ಬಹು ಸೊಗಸಾಗಿ ಮೂಡಿಬಂದಿದೆ. ಸಿತ್ತನ್ನವಾಸಲಿನ ಚಿತ್ರಗಳಲ್ಲಿ ಪ್ರೌಢತೆ ಮತ್ತು ನೈಜತೆ ಎರಡೂ ಅಂಶಗಳೂ ಸ್ಪಷ್ಟವಾಗಿ ಕಂಡುಬರುತ್ತವೆ. ಇವು ವರ್ಣ ಸಂಯೋಜನೆಯೂ ಪಲ್ಲವ ಚಿತ್ರಗಳ ಮುಂದುವರೆದ ಶೈಲಿಯಾಗಿದೆ.

**ರಾಷ್ಟ್ರಕೂಟರ ಕಾಲ:** ರಾಷ್ಟ್ರಕೂಟರು 8ನೆಯ ಶತಮಾನದ ಮಧ್ಯಭಾಗದಲ್ಲಿ ಪ್ರವರ್ಧಮಾನಕ್ಕೆ ಬಂದರು. ಇವರ ಕಾಲದಲ್ಲಿ ದೇವಾಲಯಗಳು ಗಣನೀಯ ಪ್ರಮಾಣದಲ್ಲಿ ನಿರ್ಮಿಸಲ್ಪಟ್ಟವು. ಅವುಗಳಲ್ಲಿ ಎಲ್ಲೋರದ ಏಕಶಿಲೆಯ ಕೈಲಾಸನಾಥ ದೇವಾಲಯ 9ನೆಯ ಶತಮಾನದ ರಚನೆ. ಚಿತ್ರಕಲೆಯ ದೃಷ್ಟಿಯಿಂದ ಈ ದೇವಾಲಯದಲ್ಲಿ ಉಳಿದುಕೊಂಡು ಬಂದಿರುವ ನಟರಾಜ, ಲಿಂಗೋದ್ಭವ ಶಿವ, ಆನೆಗಳು, ವಿದ್ಯಾಧರ ದಂಪತಿಗಳು ಆ ಕಾಲದ ಚಿತ್ರಕಲಾ ಪರಂಪರೆಗೆ ಅತ್ಯುತ್ತಮ ನಿದರ್ಶನಗಳು. ಕೈಲಾಸನಾಥ ದೇವಾಲಯದಲ್ಲಿಯ ಚಿತ್ರಗಳು ಪಾರಂಪರಿಕ ಭಿತ್ತಿಚಿತ್ರರಚನಾ ತಾಂತ್ರಿಕ ಹಿನ್ನೆಲೆಯಿಂದಲೇ ರಚನೆಯಾಗಿವೆ. ಎಲ್ಲ ಚಿತ್ರಗಳೂ ಗೋಡೆಯ ಮೇಲಿವೆ. ಹಾಗೂ ಒಳ ಚಾವಣಿಗಳು ಕೂಡ ಅಲಂಕರಣಗೊಂಡಿವೆ. ಇಲ್ಲಿಯ ನಟರಾಜನ ಚಿತ್ರ ಚಾಳುಕ್ಯ ಶೈಲಿಯನ್ನು ನೆನಪಿಗೆ ತರುವ ಅತ್ಯುತ್ತಮ ಚಿತ್ರ ನಿರೂಪಣೆಯಾಗಿದೆ. ಚಿತ್ರದಲ್ಲಿ ಜಟಾಮುಕುಟಧಾರಿಯಾದ ಶಿವನಿಗೆ ಅಷ್ಟಭುಜಗಳಿವೆ. ಮುಂದಿನ ಎರಡು ಕೈಗಳು ನೃತ್ಯ ಭಂಗಿಯಲ್ಲಿದ್ದು ಉಳಿದ ಕೈಗಳು ಹಿನ್ನೆಲೆಯಲ್ಲಿ ವೃತ್ತಾಕಾರವಾಗಿ ಹರಡಿಕೊಂಡಿವೆ. ನರ್ತನದ ಭಂಗಿಯೂ ಕೂಡ ವಿಶಿಷ್ಟವಾಗಿದೆ. ಶಿವನ ಕಟಿವಸ್ತ್ರ ನರ್ತನದ ವೇಗಕ್ಕೆ ಪೂರಕವಾಗಿ ಆಕರ್ಷಕವಾದ ರೀತಿಯಲ್ಲಿ ಹಾರುತ್ತಿದೆ.

ಇದೇ ದೇವಾಲಯದ ಲಿಂಗೋದ್ಭವ ಶಿವನ ಆಕೃತಿ ಸಮಕಾಲೀನ ಶಿಲ್ಪರಚನೆಯ ಪ್ರಭಾವದಿಂದಲೇ ಆಗಿದೆ. ಬಹಳಷ್ಟು ನಶಿಸಿ ಹೋಗಿರುವ ಈ ಚಿತ್ರದಲ್ಲಿ ಶಿವ ಅಸ್ಪಷ್ಟವಾಗಿ ಲಿಂಗದ ಮಧ್ಯದಲ್ಲಿ ಸ್ಥಾನಕ ಭಂಗಿಯಲ್ಲಿದ್ದಾನೆ. ಶಿವನ ಎರಡು ಪಾರ್ಶ್ವಗಳಲ್ಲಿ ಬಲಭಾಗಕ್ಕೆ ಚತುರ್ಮುಖ ಬ್ರಹ್ಮ, ಎಡಭಾಗಕ್ಕೆ ವಿಷ್ಣುವಿನ ಆಕೃತಿಗಳು ಹಾಗೂ ಚಿತ್ರದ ಮೇಲ್ಭಾಗದಲ್ಲಿ ಗಂಧರ್ವರ ಆಕೃತಿಗಳು ಇವೆ. ಪ್ರತಿಮಾ ಲಕ್ಷಣಗಳಿಗೆ ಹಾಗೂ ಪ್ರತಿಮಾ ಶಾಸ್ತ್ರಕ್ಕೆ ಪೂರಕವಾದಂತಹ ಮುದ್ರಾನಿರೂಪಣೆಗಳಿವೆ. ಇದೇ ಸಾಲಿನಲ್ಲಿ ಬರುವ ಮೋಡಗಳ ಮಧ್ಯೆ ಮಂದಸ್ಮಿತರಾಗಿ ತೇಲುತ್ತಿರುವ ವಿದ್ಯಾಧರ ದಂಪತಿಗಳ ಚಿತ್ರ ಗಮನ ಸೆಳೆಯುತ್ತದೆ. ಈ ಚಿತ್ರ ಇದೇ ಕಾಲದ ಜೈನ ಗುಹೆಯಲ್ಲಿದೆ. ಚಿತ್ರದಲ್ಲಿ ವಿದ್ಯಾಧರ ದಂಪತಿಗಳು ಕುಳಿತಿದ್ದು, ಮತ್ತಿಬ್ಬರು ದಂಪತಿಗಳು ಇವರನ್ನು ಪೂಜಿಸುತ್ತಿರುವಂತಿದೆ. ಪ್ರಸ್ತುತ ಚಿತ್ರದಲ್ಲಿ ಕಲಾವಿದ, ಆಕೃತಿಗಳ ಅಂಗರಚನೆ ಅವುಗಳ ಹಾವ–ಭಾವ ಮತ್ತು ಶೃಂಗಾರಾತ್ಮಕ ಅಂಶಗಳ ರಚನೆಗೆ ಒತ್ತು ನೀಡಿದ್ದಾನೆ. ಎಲ್ಲೋರದಲ್ಲಿಯೂ ಬಹುತೇಕ ಚಿತ್ರಗಳು ನಾಶವಾಗಿರುವುದರಿಂದ ಇಲ್ಲಿಯ ಭಿತ್ತಿ ಚಿತ್ರಕಲೆಯ ವಿವರ ಅಸ್ಪಷ್ಟವಾಗಿಯೇ ಉಳಿಯುತ್ತದೆ. ಆದರೆ ಶಿಲ್ಪ ಮತ್ತು ವಾಸ್ತುಕಲೆಯ ಭಾಗವಾಗಿ ಚಿತ್ರಕಲೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

**ಚೋಳರ ಕಾಲ:** ಭಿತ್ತಿ ಚಿತ್ರಕಲೆಯ ಇತಿಹಾಸದಲ್ಲಿ ಚೋಳರ ಕಾಲ ಬಹುಮುಖ್ಯ ಘಟ್ಟವಾಗಿದೆ. ಈ ಕಾಲದಲ್ಲಿ ನಿರ್ಮಿಸಲಾದ ಭವ್ಯ ದೇವಾಲಯಗಳ ಭಾಗವಾಗಿ ಚಿತ್ರಕಲೆ ಬೆಳೆದುಬಂದಿದೆ. ವಿಜಯಾಲಯ ಚೋಳನಿಂದ ಪ್ರಾರಂಭವಾದ ಈ ಪರಂಪರೆ ನಿರಂತರವಾಗಿ ಮುಂದುವರೆದುಕೊಂಡು ಹೋಯಿತು. ಆರಂಭಿಕ ದೇವಾಲಯಗಳಾದ ನಾರ್ತಾಮಲೈ, ಮಲಯಾದಿಪಟ್ಟಿ ಮೊದಲಾದ ಸ್ಥಳಗಳಲ್ಲಿ ಚಿತ್ರಾವಶೇಷಗಳಿವೆ. ಆದರೆ ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ ಉಳಿದುಕೊಂಡು ಬಂದಿರುವ ಚಿತ್ರಗಳು ಆ ಕಾಲದ ದೃಶ್ಯ ಪುರಾವೆಗಳಾಗಿವೆ. ಸಮಕಾಲೀನ ಕೃತಿಗಳಲ್ಲಿ ಚಿತ್ರಮಂಟಪ, ಚಿತ್ರಶಾಲಾ ಮತ್ತು ಓವಿಯ ನಿಲಯಂ ಎಂಬ ಹೆಸರುಗಳಿಂದ ಉಲ್ಲೇಖಗೊಂಡಿವೆ. ಇದರಿಂದ ಚಿತ್ರಗಳು ರಚನೆಯಾಗುತ್ತಿದ್ದ ದಾಖಲೆಗಳು ದೊರೆತಂತಾಗುತ್ತವೆ.

ನಾರ್ತಾಮಲೈನ ವಿಜಯಾಳ ಚೋಳೇಶ್ವರ ದೇವಸ್ಥಾನದಲ್ಲಿ ನರ್ತನ ಭಂಗಿಯಲ್ಲಿರುವ ಕಾಳಿ ಮತ್ತು ಗಂಧರ್ವರ ಚಿತ್ರಗಳು ಅಲ್ಪಸ್ವಲ್ಪ ಉಳಿದಿವೆ. 1930ರಲ್ಲಿ ಎಸ್.ಕೆ.ಗೋವಿಂದಸ್ವಾಮಿ ಎನ್ನುವವರು ತಂಜಾವೂರಿನ ಬೃಹದೀಶ್ವರ ದೇವಾಲಯದ ಗರ್ಭಗೃಹದ ಹೊರಗೋಡೆಯ ಮೇಲೆ ಚೋಳರ ಕಾಲಕ್ಕೆ ಸೇರಿರುವ ಚಿತ್ರಗಳನ್ನು ಪತ್ತೆ ಹಚ್ಚಿದರು. ಈ ಚಿತ್ರಗಳ ಮೇಲೆ 17, 18ನೆಯ ಶತಮಾನದ ನಾಯಕ ರಾಜಮನೆತನದವರು ರಚಿಸಿರುವ ಚಿತ್ರಗಳಿದ್ದು ಅವುಗಳು ಎಲ್ಲೆಲ್ಲಿ ಹಾಳಾಗಿವೆಯೋ ಅಲ್ಲಲ್ಲಿ ಚೋಳರ ಚಿತ್ರಗಳು ಕಾಣತೊಡಗಿದವು. ಮೊದಲು ನಾಯಕ ಕಾಲದ ಚಿತ್ರಗಳನ್ನು ಅನಂತರದಲ್ಲಿ ಚೋಳರ ಕಾಲದ ಚಿತ್ರಗಳನ್ನು ಸಂರಕ್ಷಿಸಲಾಯಿತು.

ಚೋಳರ ಕಾಲದ ಚಿತ್ರಗಳಲ್ಲಿ ಶಿವನು ಯೋಗ–ದಕ್ಷಿಣಾಮೂರ್ತಿಯಾಗಿ ಕುಳಿತಿರುವಂತಹ ಚಿತ್ರವೊಂದಿದೆ. ಯೋಗ ಪಟ್ಟವನ್ನು ಮೊಳಕಾಲುಗಳಿಗೆ ಹಾಕಿಕೊಂಡಿದ್ದು ವ್ಯಾಘ್ರ ಚರ್ಮದ ಮೇಲೆ ದಕ್ಷಿಣಾಮೂರ್ತಿ ಕುಳಿತಿದ್ದಾನೆ. ಶಿವನು ಕರಂಡ ಮುಕುಟ ಧರಿಸಿದ್ದು, ಯಜ್ಞೋಪವೀತ, ಉದರ ಬಂಧ, ಕೇಯೂರ ಮೊದಲಾದ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಈ ಚಿತ್ರದ ಕೆಳಭಾಗದಲ್ಲಿಯೇ ಸುಂದರ ನೃತ್ಯಗಾರ್ತಿಯರ ಆಕರ್ಷಕ ರಚನೆಗಳಿವೆ. ಎಲ್ಲ ನೃತ್ಯಗಾರ್ತಿಯರು ಎಡಗೈಯಲ್ಲಿ ಕಮಲಪುಷ್ಪವನ್ನು ಹಿಡಿದಿದ್ದು, ಬಲಗೈಯನ್ನು ಮೇಲೆತ್ತಿ ನರ್ತನ ಭಂಗಿಯಲ್ಲಿ ತೊಡಗಿದ್ದಾರೆ. ಈ ಆಕೃತಿಗಳಲ್ಲಿಯ ಅಂಗಾಂಗಗಳ ಹಾವ–ಭಾವ ನೃತ್ಯ ಭಂಗಿಯಲ್ಲಿ ಸೆರೆ ಹಿಡಿದ ದೇಹದ ಚಿತ್ರಣದಲ್ಲಿ ಅವಶ್ಯಕತೆಗನುಗುಣವಾದ ಹಿತ ಮಿತವಾದ ಅಲಂಕಾರಗಳು ಗಮನ ಸೆಳೆಯುತ್ತವೆ. ಇಲ್ಲಿಯ ಚಿತ್ರಗಳಲ್ಲಿ ಯೋಧರು, ಭಕ್ತರು, ಸಂಗೀತಗಾರರು ಮೊದಲಾದ ಆಕೃತಿಗಳನ್ನು ನೋಡಬಹುದು. ನಟರಾಜನ ನರ್ತನ ಭಂಗಿಯ ಚಿತ್ರವೂ ಇದೆ. ಇದೇ ಗುಂಪಿನಲ್ಲಿ ರಾಜರಾಜ ಚೋಳ ಮತ್ತು ಅವನ ಮೂವರು ಪತ್ನಿಯರು ನಟರಾಜನ ಚಿತ್ರದ ಬಳಿಯಿದ್ದಾರೆ. ಇದೇ ಸಾಲಿನಲ್ಲಿ ರಾಜರಾಜ ಮತ್ತು ಅವನ ಗುರುಗಳಾದ ಕರುವುರ್‌ಾರ ಎನ್ನುವವರು ಸಂಭಾಷಣೆಯಲ್ಲಿ ತೊಡಗಿರುವಂತೆ ಚಿತ್ರಿಸಲಾಗಿದೆ.

ಗಾಜಿನ ಮೇಲಿನ ವರ್ಣಚಿತ್ರ

ತಂಜಾವೂರಿನ ಚೋಳ ಕಾಲದ ಚಿತ್ರಾಕೃತಿಗಳ ನಿರೂಪಣೆಗಳಲ್ಲಿ ಸ್ವಲ್ಪ ಮಟ್ಟಿನ ಜಡತ್ವ ಕಂಡುಬರುತ್ತದೆ. ಅಜಂತ, ಬಾದಾಮಿ ಅಥವಾ ಪಲ್ಲವರ ಆಕೃತಿಗಳಲ್ಲಿ ಕಂಡುಬರುವ ಭಾವ ಗೀತಾತ್ಮಕ ರೇಖೆಗಳು ಅಥವಾ ಸಂಯೋಜನಾ ತಂತ್ರಗಾರಿಕೆ ಇಲ್ಲಿ ಅಷ್ಟು ಪ್ರಮಾಣದಲ್ಲಿ ಕಂಡುಬರುವುದಿಲ್ಲ.ವರ್ಣಸಂಯೋಜನೆಯಲ್ಲಿಯೂ ಇಲ್ಲಿಯ ಚಿತ್ರಗಳು ವೈವಿಧ್ಯಮಯವಾಗಿವೆ. ನೈಸರ್ಗಿಕ ವರ್ಣಗಳನ್ನೇ ಉಪಯೋಗಿಸಿದರೂ ಅವುಗಳಲ್ಲಿ ಹೊಸತನ ಹಾಗೂ ಕಲಾವಿದರ ಕರಕುಶಲತೆ ಎದ್ದು ಕಾಣುತ್ತದೆ. ಚೋಳ ಶಿಲ್ಪಗಳಲ್ಲಿ ಕಂಡುಬರುವ ವಿನ್ಯಾಸಗಳು ಇಲ್ಲಿಯೂ ಕಂಡುಬರುವುದಲ್ಲದೆ, ಇವು ಸಮಕಾಲೀನ ಸಂಸ್ಕೃತಿಗಳ ಪ್ರತಿಬಿಂಬವೂ ಆಗಿವೆ.

**ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳ ಕಾಲ:** ಕಲ್ಯಾಣ ಚಾಳುಕ್ಯ ಮನೆತನದ ದೊರೆ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಅಗಾಧ ಸಂಖ್ಯೆಯಲ್ಲಿ ಕಲಾ ಚಟುವಟಿಕೆಗಳ ಬೆಳವಣಿಗೆಯಾಯಿತು. ಇದೇ ಕಾಲದಲ್ಲಿ ರಚನೆಯಾದ ಅಭಿಲಷಿತಾರ್ಥ ಚಿಂತಾಮಣಿ ಅಥವಾ ಮಾನಸೋಲ್ಲಾಸ ಕೃತಿಯ ರಚನೆಯೂ ಆಯಿತು. ಈ ಕೃತಿಯಲ್ಲಿ ಚಿತ್ರಕಲೆ ಕುರಿತಂತೆ ವಿಶೇಷವಾಗಿ ವರ್ಣವಿನ್ಯಾಸದ ತಾಂತ್ರಿಕತೆ, ಚಿತ್ರರಚನಾವಿಧಿ ವಿಧಾನಗಳು ಮುಂತಾದವುಗಳ ಮಾಹಿತಿಯಿದೆ. ಕಲ್ಯಾಣ ಚಾಳುಕ್ಯರ ಮಾಂಡಳಿಕರಾಗಿದ್ದ ಹೊಯ್ಸಳರು ಕೂಡ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಚಟುವಟಿಕೆಗಳಿಗೆ ಹೆಸರಾಗಿದ್ದಾರೆ. ಶಿಲ್ಪವೈಭವದಿಂದ ತುಂಬಿರುವ ಈ ದೇವಾಲಯಗಳಲ್ಲಿ ಚಿತ್ರ ರಚನೆಗೆ ಸ್ಥಳಾವಕಾಶ ದೊರೆಯಲೇ ಇಲ್ಲ. ಆದರೆ ಹೊಯ್ಸಳರ ಕಾಲದಲ್ಲಿಯೇ ಬೇರೆ ಮಾಧ್ಯಮದಲ್ಲಿ ಚಿತ್ರಕಲೆಯ ಚಟುವಟಿಕೆಗಳು ಸ್ವಲ್ಪ ಮಂದಗತಿಯಲ್ಲಿಯೇ ನಡೆದಿದ್ದವು. 1120ರ ಕಾಲಕ್ಕೆ ಸೇರಿಸಬಹುದಾದ ತಾಳೆ ಪತ್ರಗಳ ಚಿತ್ರಿತ ಕೃತಿಗಳಿವೆ. ಮಹಾಪುರಾಣ ಮೊದಲಾದ ಜೈನ ಪುರಾಣಗಳನ್ನು ದೃಶ್ಯ ನಿರೂಪಣೆಯ ಮೂಲಕ ರಚಿಸಲಾಗಿದೆ. ಈ ಚಿತ್ರಗಳು ತಾಳೆಗರಿಯ ಭಾಗವಾಗಿವೆ. ಭಿತ್ತಿ ಚಿತ್ರ ಪರಂಪರೆಯಿಂದ ಭಿನ್ನವಾದ, ಕಿರುಚಿತ್ರ ರಚನಾ ಅವಕಾಶಕ್ಕೆ ಕಲಾವಿದರುಗಳೂ ಹೊಂದಿಕೊಂಡಿರುವುದನ್ನು ಈ ಚಿತ್ರಗಳ ಮೂಲಕ ಕಾಣಬಹುದು.

ಮೂಡಬಿದರೆಯ ಜೈನಮಠದಲ್ಲಿರುವ ಧವಳತ್ರಯ ತಾಳೆಗರಿಗಳ ಮೇಲೆ ಹಲವಾರು ಚಿತ್ರಗಳಿವೆ. ಈ ಕಾಲದಿಂದ ಜೈನ ಧಾರ್ಮಿಕ ಚಿತ್ರಕಲೆ ಕ್ರಮೇಣವಾಗಿ ಬೆಳವಣಿಗೆಯಾಗಿರುವುದನ್ನು ಕಾಣಬಹುದು. ಧವಳ ಕೃತಿಗಳಲ್ಲಿ ಕಂಡುಬರುವ ಆಕೃತಿಗಳು ತಾಳೆಗರಿಗಳಿಗೆ ಪೂರಕವಾದಂತೆ ಇವೆ. ಸಿಂಹಾಸನದಲ್ಲಿ ಕುಳಿತ ಮಹಾವೀರ, ಕಾಯೋತ್ಸರ್ಗ ಭಂಗಿಯಲ್ಲಿ ನಿಂತ ಮಹಾವೀರ, ಪಾರ್ಶ್ವನಾಥ, ಎರಡು ಪಾರ್ಶ್ವಗಳಲ್ಲಿರುವ ಧರಣೇಂದ್ರ ಯಕ್ಷ ಮತ್ತು ಪದ್ಮಾವತಿ ಯಕ್ಷಿಯರು, ಶ್ರುತದೇವಿ, ಬಾಹುಬಲಿ, ಸುಪಾರ್ಶ್ವನಾಥ, ಅಂಬಿಕಾ ಯಕ್ಷಿ, ಪಾರ್ಶ್ವನಾಥ, ಮಾತಂಗ ಯಕ್ಷ ಮೊದಲಾದ ಚಿತ್ರಾಕೃತಿಗಳು ಈ ತಾಳೆಗರಿಗಳಲ್ಲಿ ರಚನೆಗೊಂಡಿವೆ. ಇವುಗಳಲ್ಲದೆ ಜೈನ ಆಚಾರ್ಯರ ಆಕೃತಿಗಳೂ ಇವೆ. ಇಲ್ಲಿ ಗಮನಿಸಬೇಕಾದ ವಿಶಿಷ್ಟ ಅಂಶವೆಂದರೆ ಇದುವರೆಗೂ ಚಿತ್ರ ಕಲಾವಿದ ಭಿತ್ತಿಯ ವಿಶಾಲ ಸ್ಥಳಾವಕಾಶದ ಮೇಲೆ ಚಿತ್ರರಚನೆ ಮಾಡುತ್ತಿದ್ದು, ಈ ಚಿತ್ರಗಳಲ್ಲಿ ತಾಂತ್ರಿಕವಾಗಿ ತನ್ನ ರಚನಾ ಶೈಲಿಯನ್ನು ಸ್ಥಳಾವಕಾಶಕ್ಕೆ ತಕ್ಕಂತೆ ಸರಿಹೊಂದಿಸಿಕೊಂಡಿರುವುದು ಕಾಣುತ್ತದೆ. ರಚಿಸಿದ ಆಕೃತಿಗಳಲ್ಲಿ ನೈಜತೆ ಹಾಗೂ ಕಲಾಭಿಜ್ಞತೆ ಇದೆ. ವರ್ಣಸಂಯೋಜನೆಯೂ ಕೂಡ ಆಯಾ ಪ್ರತಿಮೆಗಳಿಗೆ ವಿಶಿಷ್ಟವಾದ ವರ್ಣಗಳಿಂದ ಕೂಡಿದೆ. ಸಮಕಾಲೀನ ಶಿಲ್ಪಕಲಾ ಪರಂಪರೆಯನ್ನು ಗಮನಿಸಿದಾಗ ಆ ಕಾಲದ ಶಿಲ್ಪ ಶೈಲಿಗಳು ಈ ಚಿತ್ರಗಳ ಮೇಲೆ ಬೀರಿದ ಪ್ರಭಾವಗಳ ಅಂಶ ಕಡಿಮೆ ಎಂದು ಹೇಳಬೇಕು. ಆದರೆ ತಾಳೆ ಗರಿಗಳ ಮೇಲಿನ ಚಿತ್ರ ರಚನಾ ಪರಂಪರೆ ಅನಂತರದ ಚಿಕಣಿ ಚಿತ್ರಕಲೆಗೆ ಪ್ರೇರಕವಾಯಿತೆಂದು ಹೇಳಬಹುದು. ಇದೇ ಕಾಲದ ತಾಳೆಗರಿ ಚಿತ್ರಗಳು ಗುಜರಾತ್ ರಾಜ್ಯದ ಬರೋಡದ ಜೈನಮಠದಲ್ಲಿ ಸಂಗ್ರಹಿತವಾಗಿವೆ. ಪಶ್ಚಿಮ ಭಾರತದಲ್ಲಿ ಜೈನ ಭಂಡಾರಗಳು ಬಹು ಸಂಖ್ಯೆಯಲ್ಲಿ ಜೈನ ಪುರಾಣ ಗ್ರಂಥಗಳ ಸಂಗ್ರಹಣೆಗಳನ್ನು ಹೊಂದಿವೆ. ಈ ಚಿತ್ರಗಳ ಹಿನ್ನೆಲೆಯೇ ಅನಂತರದ ಚಿಕಣಿ ಚಿತ್ರ ಪರಂಪರೆಗೆ ಪ್ರೇರಕವಾಯಿತು.

**ವಿಜಯನಗರ ಕಾಲ:** ವಿಜಯನಗರ ಕಾಲ ಭಿತ್ತಿಚಿತ್ರ ಪರಂಪರೆಯ ಪುನರುಜ್ಜೀವನ ಕಾಲವೆಂದು ಹೇಳಬಹುದು. ಏಕೆಂದರೆ ಕರ್ನಾಟಕದ ಮಟ್ಟಿಗೆ ರಾಷ್ಟ್ರಕೂಟರ ಅನಂತರದಲ್ಲಿ ಭಿತ್ತಿಚಿತ್ರ ಪರಂಪರೆ ಬಹುತೇಕ ಹಿಂದೆ ಬಿತ್ತು. ವಿಜಯನಗರದ ಅರಸರು ಭಿತ್ತಿಚಿತ್ರ ಪರಂಪರೆಗೆ ಪ್ರೋತ್ಸಾಹ ನೀಡುತ್ತಿದ್ದರು. ದೇವಾಲಯಗಳ, ಅರಮನೆಗಳ, ಹಾಗೂ ಅಂತಃಪುರ ಗೋಡೆಗಳು ಭಿತ್ತಿ ಚಿತ್ರಗಳಿಂದ ಅಲಂಕೃತವಾಗಿದ್ದವು. ಈ ಕಾಲದ ಕೆಲವೇ ಕೆಲವು ಉದಾಹರಣೆಗಳು ಇಂದು ಉಳಿದುಕೊಂಡು ಬಂದಿವೆ. ಹಂಪೆಯ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳಮಾಳಿಗೆ ಸು.1510 ರಿಂದ 1520 ರ ಮಧ್ಯದಲ್ಲಿ ರಚನೆಯಾಗಿರುವ ಸಾಧ್ಯತೆ ಇದೆ. ಸು.1540 ರ ಸುಮಾರಿಗೆ ಆಂಧ್ರಪ್ರದೇಶದ ಹಿಂದೂಪುರದ ಹತ್ತಿರವಿರುವ ಲೇಪಾಕ್ಷಿಯ ವೀರಭದ್ರೇಶ್ವರ ದೇವಾಲಯದಲ್ಲಿ ಭಿತ್ತಿಚಿತ್ರಗಳು ರಚನೆಗೊಂಡಿವೆ. ಇದೇ ಕಾಲದ ಆಂಧ್ರಪ್ರದೇಶದ ತಾಡಪತ್ರಿ, ಕರ್ನಾಟಕದ ಹೊಳಲಗುಂಡಿ ಮೊದಲಾದ ಕಡೆಗಳಲ್ಲಿ ಭಿತ್ತಿಚಿತ್ರಗಳಿದ್ದರೂ ಅವುಗಳ ಕಾಲದ ಬಗ್ಗೆ ಒಮ್ಮತವಿಲ್ಲ. ಆದರೆ ವಿಜಯನಗರ ಕಾಲದವೆನ್ನಲಾಗುವ ಕಾಂಚಿಪುರಂನ ವರದರಾಜ ದೇವಾಲಯ, ಕಾಳಹಸ್ತಿ, ತಿರುಪತಿ, ತಿರುವಣ್ಣಾಮಲೈ, ಚಿದಂಬರಂ ಹಾಗೂ ಶ್ರೀರಂಗಂ ಮುಂತಾದ ಸ್ಥಳಗಳಲ್ಲಿಯ ಭಿತ್ತಿ ಚಿತ್ರಗಳು ವಿಜಯನಗರ ಮತ್ತು ವಿಜಯನಗರ ಅನಂತರದ ಕಾಲಕ್ಕೆ ಸೇರುತ್ತವೆ. ಆದರೆ ಈಗ ಇವುಗಳ ಅವಶೇಷಗಳು ಮಾತ್ರ ಉಳಿದುಕೊಂಡು ಬಂದಿವೆ.

ಹಂಪಿಯಲ್ಲಿನ ಮಹಾರಂಗ ಮಂಟಪದ ಒಳ ಚಾವಣಿಯ ಭಿತ್ತಿಚಿತ್ರಗಳಲ್ಲಿ ಹಲವಾರು ವಿಷಯ ನಿರೂಪಣೆಗಳನ್ನು ಕಾಣಬಹುದು. ಒಳ ಚಾವಣಿಯನ್ನು ಕೆಲವು ಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಭಾಗವನ್ನು ಚೌಕಾಕಾರ ಅಥವಾ ಆಯತಾಕಾರಕ್ಕೆ ಅಳವಡಿಸಲಾಗಿದೆ. ಈ ಭಿತ್ತಿಚಿತ್ರದಲ್ಲಿ ಪತ್ನಿಯರ ಸಮೇತರಾಗಿರುವ ಬ್ರಹ್ಮವಿಷ್ಣು, ಮಹೇಶ್ವರ, ಅಷ್ಟದಿಕ್ಪಾಲಕರು, ಮನ್ಮಥ ವಿಜಯ, ತ್ರಿಪುರಸಂಹಾರ ಶಿವ, ದಶಾವತಾರದ ಚಿತ್ರಗಳು, ರತಿ ಮನ್ಮಥರು, ಅರ್ಜುನ ಮತ್ಸ್ಯ ಯಂತ್ರವನ್ನು ಭೇದಿಸುವ ದೃಶ್ಯ, ಕುರುಕ್ಷೇತ್ರ ಯುದ್ಧದ ದೃಶ್ಯಗಳೂ ಅಲ್ಲದೆ ತೀರ ಕೆಳಭಾಗದಲ್ಲಿ ತೆರೆದ ಪಲ್ಲಕ್ಕಿಯಲ್ಲಿ ಕುಳಿತ ಯತಿಗಳ ಮೆರವಣಿಗೆಯ ಚಿತ್ರಗಳು ಮುಖ್ಯವಾಗಿ ಕಂಡುಬರುತ್ತವೆ. ಎಲ್ಲ ಚಿತ್ರಗಳೂ ರೇಖಾಪ್ರಧಾನವಾದ ಆಕೃತಿಗಳೇ ಆಗಿದ್ದು, ಇವುಗಳ ರಚನೆಯು ಸ್ಪಷ್ಟವಾಗಿದೆ. ವಿಶೇಷವೆಂದರೆ ಆಕೃತಿಗಳನ್ನು ಸಮಾನವಾಗಿ ಒಂದೇ ತಲರೇಖೆಯ ಮೇಲೆ ಬರುವ ಹಾಗೆ ಚಿತ್ರಿಸಲಾಗಿದೆ. ಲೇಪಾಕ್ಷಿಯ ವೀರಭದ್ರೇಶ್ವರ ದೇವಾಲಯದ ಭಿತ್ತಿಚಿತ್ರಗಳು ಸಮಕಾಲೀನ ಶೈಲಿಗೆ ಪೂರಕವಾಗಿವೆ. ವೃಷಭವಾಹನ ಶಿವ, ದಕ್ಷಿಣಾಮೂರ್ತಿ, ವೀರಣ್ಣ, ವಿರೂಪಣ್ಣ, ಕೈಲಾಸದಲ್ಲಿರುವ ಶಿವ, ರಾಮಾಯಣದ ದೃಶ್ಯಗಳು, ಸುಂದರ ಸ್ತ್ರೀಯರು ಅಲ್ಲದೆ ಕಿರಾತಾರ್ಜುನೀಯದಂತಹ ಚಿತ್ರ ರಚನೆಗಳು ಲೇಪಾಕ್ಷಿಯಲ್ಲಿವೆ. ಇಲ್ಲಿಯ ಆಕೃತಿಗಳಲ್ಲಿ ಸಹ ಕಲಾವಂತಿಕೆ ಕಂಡುಬರುತ್ತದೆ. ಜೊತೆಯಲ್ಲಿ ಆಕೃತಿಗಳ ಹಿನ್ನೆಲೆ ಮತ್ತು ಮುನ್ನೆಲೆಗಳಲ್ಲಿದೆ. ಕಣ್ಣೆಲೆಯ ತತ್ವದ ಪರಿಕಲ್ಪನೆಯೂ ಇಲ್ಲಿದೆ. ಕಿರಾತಾರ್ಜುನೀಯ ಚಿತ್ರದಲ್ಲಿ ಅತ್ಯಂತ ಸೊಗಸಾಗಿ ಚಿತ್ರರಚನೆಯನ್ನು ಮಾಡಲಾಗಿದೆ. ವರ್ಣಸಂಯೋಜನೆಯಲ್ಲಿಯೂ ಕೂಡ ಪಕ್ವತೆಯಿದೆ.

ವಿಜಯನಗರ ಕಾಲದ ಭಿತ್ತಿಚಿತ್ರ ಕಲೆ ಕರ್ನಾಟಕದ ಮತ್ತು ದಕ್ಷಿಣದ ಮಟ್ಟಿಗೆ ಒಂದು ವಿಶಿಷ್ಟ ಸಂಪ್ರದಾಯವನ್ನು ಬೆಳೆಸಿತು ಎಂದು ಹೇಳಬಹುದು. ಇದೇ ಚಿತ್ರಶೈಲಿ ವಿಜಯನಗರೋತ್ತರ ಕಾಲದಲ್ಲಿ ಮೈಸೂರು ಅರಸರಿಂದ ಮತ್ತು ಸುರಪುರ ಸಂಸ್ಥಾನದಲ್ಲಿ ಹಾಗೂ ತಮಿಳುನಾಡಿನ ನಾಯಕ ರಾಜಮನೆತನಗಳ ಕಾಲದಲ್ಲಿ ಹಳೆಯ ಸಂವೇದನೆಗಳನ್ನು ಉಳಿಸಿಕೊಂಡು ಬೆಳವಣಿಗೆ ಹೊಂದಿತು.

**ಚಿಕಣಿ ಚಿತ್ರಕಲೆ:** ಈ ಚಿತ್ರಕಲೆ ಉತ್ತರ ಭಾರತ, ಪಶ್ಚಿಮ ಭಾರತ ಹಾಗೂ ದಖನ್ನಿನ ಚಿತ್ರಕಲೆಯ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಬೆಳೆಯಿತು. ಈ ಚಿತ್ರಕಲೆಯ ಉಗಮದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ 10,11 ನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ತಾಳೆಗರಿಯ ಮೇಲಿನ ಚಿತ್ರಗಳಿಂದ ಪ್ರಾರಂಭಗೊಂಡಿರಬಹುದು. ಧವಳ ಮಾನಸ ಪ್ರತಿಗಳ ಮೇಲಿನ ಚಿತ್ರಗಳನ್ನು ಈಗಾಗಲೇ ಗಮನಿಸಲಾಗಿದೆ. ಈ ಪರಂಪರೆ ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರಗಳಲ್ಲಿಯೂ ಜೈನಧರ್ಮಕ್ಕೆ ಪೂರಕವಾದಂತೆ ತೋರುತ್ತದೆ. ವಜ್ರಯಾನ ಬೌದ್ಧಧರ್ಮದ ಹಿನ್ನೆಲೆಯಲ್ಲಿ ರಚನೆಯಾಗಿರುವ ಪಾಲ ಮತ್ತು ಸೇನರ ಕಾಲದ ಬೌದ್ಧ ಧರ್ಮದ ಚಿತ್ರಗಳು ಬೆಳಕಿಗೆ ಬಂದಿವೆ. ತಾಳೆಗರಿ ಕೃತಿಗಳ ಮೇಲಿನ ಬೋಧಿಸತ್ವ ಪ್ರಜ್ಞಾಪಾರಮಿತ, ಅಷ್ಟ ಸಹಸ್ರಿಕ ಮೊದಲಾದ ಬೌದ್ಧ ದೇವತೆಗಳ ಚಿತ್ರಗಳು ಬಹು ಸೊಗಸಾಗಿವೆ.

ಸು.1400 ರ ಕಾಲಕ್ಕೆ ಸೇರುವ ಜೈನಕತೆಗಳಾದ ಕಲ್ಪಸೂತ್ರ ಮತ್ತು ಕಾಳಕಾಚಾರ್ಯ ಕಥಾ ಚಿತ್ರಗಳಲ್ಲಿ ಮೊಟ್ಟ ಮೊದಲ ಬಾರಿಗೆ ಚಿಕಣಿ ಚಿತ್ರಕಲೆಯ ಲಕ್ಷಣಗಳು ಸ್ಪಷ್ಟವಾಗಿವೆ. ಈ ಕಾಲಕ್ಕೆ ಆಗಲೇ ಉತ್ತರ ಭಾರತದಲ್ಲಿ ಮುಸ್ಲಿಂ ರಾಜಮನೆತನಗಳು ಪರ್ಷಿಯನ್ ಮತ್ತು ಆಫ್ಘನ್ ಮೂಲದಿಂದ ಬಂದು ರಾಜ್ಯ ಸ್ಥಾಪನೆ ಮಾಡಿದವು. ದೆಹಲಿ, ಮಾಂಡು, ಅಹಮದಾಬಾದ್ ಮೊದಲಾದ ಕಡೆಗಳಲ್ಲಿ ಈ ಮನೆತನಗಳು ಅಧಿಕಾರ ನಡೆಸುತ್ತಿದ್ದವು. ಈ ಕಾಲದಲ್ಲಿ ಪರ್ಷಿಯದ ತೈಮೂರ್ ಚಿತ್ರಕಲೆಯ ಪ್ರಭಾವ ಮುಸ್ಲಿಂ ಅರಸರುಗಳ ಕಲೆಯಲ್ಲಿ ಗಣನೀಯ ಪ್ರಮಾಣದಲ್ಲಿ ಕಾಣಬಹುದು. ಖಿಲ್ಜಿ ಸುಲ್ತಾನರ ಮಾಳ್ವದ ರಾಜಧಾನಿಯಾಗಿದ್ದ ಮಾಂಡು ಚಿತ್ರಕಲಾ ಚಟುವಟಿಕೆಗಳಲ್ಲಿ ಅಗ್ರಸ್ಥಾನದಲ್ಲಿತ್ತು. ಸಾಮಾನ್ಯವಾಗಿ ರಾಜಸ್ತಾನ, ಗುಜರಾತ್ ಮತ್ತು ಮಾಂಡು ಪ್ರದೇಶಗಳ ಚಿತ್ರಕಲೆಯನ್ನು ಪಶ್ಚಿಮ ಭಾರತದ ಚಿತ್ರಕಲೆಯೆಂದೇ ವಿಂಗಡಿಸಲಾಗುತ್ತದೆ.

ಮಾಂಡುವಿನಲ್ಲಿ 1439ರಲ್ಲಿ ರಚಿಸಿದ ಕಲ್ಪಸೂತ್ರದ ಕೃತಿಯಲ್ಲಿ ಮಹಾವೀರನ ಜನನಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಕಡುಕಂದು ಹಿನ್ನೆಲೆಯ ಮೇಲೆ ಆಕೃತಿಗಳನ್ನು ರಚಿಸಲಾಗಿದೆ. ಒಂದೊಂದು ಘಟನೆಗೂ ಒಂದೊಂದು ಭಾಗವನ್ನು ಮಾಡಿ ನಿಗದಿತ ಸ್ಥಳದಲ್ಲಿ ಚಿತ್ರರಚನೆಗಳನ್ನು ಮಾಡಲಾಗಿದೆ. ಈ ಆಕೃತಿಗಳಲ್ಲಿ ಚೂಪಾದ ಮೂಗು, ಗಲ್ಲ, ಅಗಲವಾದ ಕಣ್ಣು, ಚಿತ್ತಾರಗಳಿಂದ ಕೂಡಿದ ಉಡುಗೆ ತೊಡುಗೆಗಳು, ಕುಳಿತ, ಮಲಗಿದ, ನಿಂತ ವಿಶಿಷ್ಟ ಭಂಗಿಗಳು, ಆಭರಣಗಳು ಗಮನ ಸೆಳೆಯುತ್ತವೆ. ಇದೇ ವಿಧವಾದ ಲಕ್ಷಣಗಳು ಸು.1500 ರಲ್ಲಿ ರಚಿಸಲಾಗಿರುವ ಮೇವಾರದ ಚೋರ ಪಂಚಾಸಿಕ ಮತ್ತು ಭಾಗವತ ಪುರಾಣದ ಚಿತ್ರಗಳಲ್ಲಿವೆ. ಈ ಕೃತಿಯಲ್ಲಿ ಚಂಪಾವತಿ ಮತ್ತು ಬಿಲ್ಹಣರ ಪ್ರೇಮಪ್ರಸಂಗಗಳನ್ನು ಶೃಂಗಾರ, ವಿರಹ ಮೊದಲಾದ ರಸಪ್ರಧಾನವಾದ ದೃಶ್ಯ ನಿರೂಪಣೆಗಳಿಂದ ತೋರಿಸಲಾಗಿದೆ. ಭಾಗವತ ಪುರಾಣದಲ್ಲಿ ಕೃಷ್ಣನ ಬಾಲಲೀಲೆಗಳು ವಿಶೇಷವಾಗಿವೆ. ಈ ಎರಡೂ ಚಿತ್ರಗಳಲ್ಲಿ ಕಲ್ಪಸೂತ್ರದ ಚಿತ್ರಶೈಲಿಯೂ ಪ್ರಭಾವ ಬೀರಿರುವುದನ್ನು ನೋಡಬಹುದು.

ಸು.16ನೆಯ ಶತಮಾನದ ಆರಂಭದಲ್ಲಿ ಮಾಂಡುವಿನ ದೊರೆ ನಾದಿರ್ ಷಾ ಎಂಬುವವನು ರಚಿಸಿದ ನಿಮಿತ್‌ನಾಮಾ ಕೃತಿಯಲ್ಲಿ ಪರ್ಷಿಯನ್ ಚಿತ್ರಶೈಲಿಯ ಪ್ರಭಾವ ಕಂಡುಬರುತ್ತದೆ. ಇಲ್ಲಿ ಆಕೃತಿಗಳ ರಚನೆಯಲ್ಲಿ ವಿಶೇಷವಾಗಿ ದೇಹಗಳ ಮತ್ತು ಮುಖದ ರಚನೆಗಳಲ್ಲಿ ಸಣ್ಣ ಕಣ್ಣುಗಳು, ಕಿರಿದಾದ ಮೂಗು, ತೆಳು ಗುಲಾಬಿ ಮೈ ಬಣ್ಣಗಳು ಕಂಡುಬಂದರೆ, ಗಾಢ ವರ್ಣದ ಹಿನ್ನೆಲೆಯ ನೀಲಿಯಲ್ಲಿ ಚಿತ್ತಾರದಂತೆ ಕಾಣುವ ಮೋಡಗಳ ರಚನೆ, ಈ ಚಿತ್ರಗಳ ವೈಶಿಷ್ಟ್ಯವಾಗಿದೆ. ಚಿತ್ರದಲ್ಲಿ ಪುರುಷ ಆಕೃತಿಗಳು ಹಾಕಿರುವ ಟೊಪ್ಪಿಗೆ ಅಥವಾ ಗುಲಾಬಿಯಂತಹ ಪೇಟ ಆ ಕಾಲದ ಚಿತ್ರಗಳಲ್ಲಿ ಪುನಃ ಪುನಃ ಬಳಕೆಯಾಗಿರುವುದನ್ನು ನೋಡಬಹುದು. ಇದನ್ನು ಗಮನಿಸಿಯೇ ಈ ಮಾದರಿಯ ಚಿತ್ರಗಳನ್ನು ಕುಲಾಧಾರ ಚಿತ್ರಗಳು ಎಂದು ಕರೆಯಲಾಗುತ್ತದೆ.

16 ನೆಯ ಶತಮಾನದ ಆರಂಭ ರಾಜಸ್ತಾನದ ಮಾಳ್ವ, ಮೇವಾರ, ಮತ್ತು ಮಧ್ಯಪ್ರದೇಶದ ಮಾಂಡು ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಕಲಾ ಚಟುವಟಿಕೆಗಳು ಬೆಳವಣಿಗೆಯಾದವು. ಈ ಚಿತ್ರಗಳ ಸಾಲಿನಲ್ಲಿಯೇ ಬರುವ ಜಯದೇವ ಕವಿಯ ಗೀತ ಗೋವಿಂದ ಇತ್ಯಾದಿ ಭಕ್ತಿ ಪ್ರಧಾನ ಕೃತಿಗಳು ಆ ಕಾಲದಲ್ಲಿ ದೃಶ್ಯ ನಿರೂಪಣೆಯೊಂದಿಗೆ ಬೆಳವಣಿಗೆ ಹೊಂದಿದ್ದವು. ಕೃಷ್ಣ–ರಾಧೆಯರ ಪ್ರೇಮ, ಶೃಂಗಾರ, ವಿರಹ ಮೊದಲಾದ ಭಾವನಾತ್ಮಕ ದೃಶ್ಯಾವಳಿಗಳನ್ನು ಭಾವಪರವಶವಾಗಿ ಮತ್ತು ಅತ್ಯಂತ ಕಾಲ್ಪನಿಕವಾಗಿ ರಚಿಸಲಾಗಿದೆ. ಇದೇ ಕಾಲದಲ್ಲಿ ರಚನೆಯಾದ ಚಂದಾಯಾನ ಅಥವಾ ಲಾವೂರ್–ಚಂದ ಎಂಬ ಕೃತಿಯ ಚಿತ್ರಗಳು ಬಹು ಜನಪ್ರಿಯವಾದವು. ಚಂದಾಯಾನ/ ಲಾವೂರ್–ಚಂದ ಕೃತಿಯು ಸು.12 ನೆಯ ಶತಮಾನದಲ್ಲಿ ಮಲ್ಲಿನಾಥ ಎಂಬುವವನಿಂದ ಅವಧಿಭಾಷೆಯಲ್ಲಿ ರಚನೆಯಾಯಿತು. ಇದನ್ನು 1380 ರಲ್ಲಿ ಮುಲ್ಲಾ ದಾವುದ್ ಎಂಬ ಕವಿ ಪರ್ಷಿಯನ್ ಭಾಷೆಗೆ ತುರ್ಜುಮೆ ಮಾಡಿದ. ಲಾವೂರ್–ಚಂದ ಚಿತ್ರಗಳು ಉದ್ದನೆಯ ಆಯತಾಕಾರದ ಚಿತ್ರಾವಕಾಶದಲ್ಲಿ ರಚನೆಯಾಗಿವೆ. ಈ ಚಿತ್ರಗಳಲ್ಲಿ ಲಾವುರಿಕ ಮತ್ತು ಚಂದಾಳ ಪ್ರೇಮ–ಪ್ರಣಯ ಮುಂತಾದ ದೃಶ್ಯಗಳ ಚಿತ್ರಣಗಳಿವೆ. ಕಣ್ಣಿಗೆ ಹಿತವೆನಿಸುವ ತೆಳು ವರ್ಣಗಳ ಸಂಯೋಜನೆ, ಸುಂದರ ವಾಸ್ತುವಿನ ಹಿನ್ನೆಲೆ ಚಿತ್ರಗಳ ವೈಶಿಷ್ಟ್ಯವಾಗಿದೆ. 1550ರ ಕಾಲಕ್ಕೆ ರಚಿಸಿರಬಹುದಾದ ಮೇವಾರದ ಗೀತಗೋವಿಂದ ಚಿತ್ರಗಳಲ್ಲಿ ಗಟ್ಟಿ ಬಣ್ಣಗಳು, ಹಳದಿ, ನೀಲಿ, ಹಸುರು, ಕೆಂಪು, ವರ್ಣಗಳ ಪ್ರಧಾನತೆಯಿರುವ ಸಂಯೋಜನಾ ಚಿತ್ರಗಳು ಜಾನಪದೀಯ ಅಂಶಗಳ ಹಿನ್ನೆಲೆಯಲ್ಲಿ ರಚನೆಯಾಗಿವೆ.

ಚಿಕಣಿ ಚಿತ್ರಕಲೆಯನ್ನು ಇದುವರೆಗಿನ ವಿವರಣೆಗಳ ಹಿನ್ನೆಲೆಯಲ್ಲಿ ವಿಭಾಗಿಸಿದಾಗ ರಾಜಸ್ತಾನ ಪಹಾಡಿ, ಮೊಗಲ್ ಮತ್ತು ದಖನಿ ಎಂಬ ಪ್ರಮುಖ ಗುಂಪುಗಳಾಗಿ ವಿಂಗಡಣೆ ಮಾಡಬಹುದು. ರಾಜಸ್ತಾನ ಶೈಲಿಯಲ್ಲಿ ಮಾಳ್ವ, ಮೇವಾರ್, ಬುಂದಿ, ಕೋಟ, ಉದಯಪುರ, ಜೋನಪುರ, ಜೈಪುರಗಳು ಮುಖ್ಯ ಕೇಂದ್ರಗಳಾದರೆ ಇದೇ ಶೈಲಿಯ ಕೊನೆಯ ಘಟ್ಟವಾಗಿ ಕಿಷನ್‌ಗಡ್ ಚಿತ್ರಶೈಲಿಯೂ ಕೂಡ ಪ್ರಮುಖ ದಾಖಲೆಯಾಗಿದೆ. ರಾಜಸ್ತಾನೀ ಶೈಲಿಯಲ್ಲಿ ಮೇಲೆ ಚರ್ಚಿಸಿದ ಅಂಶಗಳ ಹಿನ್ನೆಲೆಯಲ್ಲಿಯೇ ಚಿತ್ರರಚನಾ ತಾಂತ್ರಿಕತೆ ಮತ್ತು ಬೆಳವಣಿಗೆ ಕಂಡುಬರುತ್ತದೆ. ಮೊಗಲ್ ಚಿತ್ರ ಸಂಪ್ರದಾಯವೂ ಈ ಚಿತ್ರಪರಂಪರೆಗೆ ಸಮಕಾಲೀನವಾಗಿ ಬೆಳೆಯಿತು.

**ಮೊಗಲ್ ಚಿತ್ರಕಲೆ:** ಮೊಗಲರ ಆರಂಭ ಕಾಲದ ಚಿತ್ರಕಲೆಯನ್ನು ಕುರಿತಂತೆ ಸ್ಪಷ್ಟ ಚಿತ್ರಣಗಳು ಇಲ್ಲ. ಆದರೆ ತುರ್ಕಿ, ಮಂಗೋಲ್ ಮೂಲದವರಾದ ಮೊಗಲರು ಪರ್ಷಿಯನ್ ಸಂಸ್ಕೃತಿಯ ಹಿನ್ನೆಲೆಯಿಂದ ಬಂದವರು. ಹೀಗಾಗಿ ಪರ್ಷಿಯದ ಕಲೆ ಮತ್ತು ಸಂಸ್ಕೃತಿಗಳು ಈ ಚಿತ್ರಕಲೆಯ ಮೇಲೆ ಪ್ರಭಾವ ಬೀರಿವೆ. ಮೊಗಲರ ಕಲಾ ಚಟುವಟಿಕೆಗಳು ಪ್ರಭಾವಕಾರಿಯಾಗಿ ಬೆಳವಣಿಗೆಯಾಗಲು ಪ್ರಾರಂಭಿಸಿದ್ದು ಹುಮಾಯೂನನ ಕಾಲದಲ್ಲಿ. ಹುಮಾಯೂನನು ಪರ್ಷಿಯಾದ ಸಫಾವಿ ರಾಜಮನೆತನದ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಮೀರ್ ಸೈಯ್ಯದ್–ಅಲಿ ಮತ್ತು ಇದೇ ಪ್ರದೇಶದಲ್ಲಿನ ಮತ್ತೊಬ್ಬ ಕಲಾವಿದ ಶಿರಾಜಿ ಶೈಲಿಯ ಅಬ್ದುಲ್ ಸಮದ್ ಎಂಬ ಕಲಾವಿದರುಗಳನ್ನು ಭಾರತಕ್ಕೆ ಕರೆತಂದ. ಇದರಿಂದ ಹುಮಾಯೂನನ ರಾಜಾಶ್ರಯದಲ್ಲಿ ಚಿತ್ರಕಲಾ ಚಟುವಟಿಕೆಗಳು ಪ್ರಾರಂಭವಾದುವು.

ಮೊಗಲ್ ಚಿತ್ರಕಲೆಗೆ ಅಕ್ಬರನ ಕಾಲ ಬಹುಮುಖ್ಯ ಘಟ್ಟವಾಗಿದೆ. ಈ ಕಾಲದಲ್ಲಿ ಅಬ್ದುಲ್ ಸಮದ್ ಮತ್ತು ಮೀರ್ ಸೈಯದ್ ಅಲಿಗಳು ಅಕ್ಬರನ ಚಿತ್ರಶಾಲೆಯ ಮುಖ್ಯಸ್ಥರಾಗಿದ್ದರು. ಅಲ್ಲದೆ ಸ್ಥಳೀಯ ಕಲಾವಿದರಿಗೆ ತರಬೇತಿಯನ್ನು ನೀಡಿದರು. ಇದರಿಂದ ಸ್ಥಳೀಯ ಕಲಾ ಸಂವೇದನೆಗಳ ಜೊತೆಯಲ್ಲಿ ಪರ್ಷಿಯನ್ ಕಲಾ ಅಂಶಗಳು ಗಣನೀಯ ಪ್ರಮಾಣದಲ್ಲಿ ಸಮ್ಮಿಳನವಾದವು.



ಭಿತ್ತಿವರ್ಣಚಿತ್ರ, ದರಿಯಾದೌಲತ್

ಅಕ್ಬರನ ಕಾಲದಲ್ಲಿ ಹಮ್ಜಾನಾಮಾ, ಅಕ್ಬರ್‌ನಾಮಾ, ಷಹನಾಮಾ, ರಜಂನಾಮಾ, ದರಬ್ ನಾಮಾ, ಬಹರಿಸ್ಥಾನ ಅನ್ವರಿ–ಇ–ಸುಹೇಲಿ ಮೊದಲಾದ ಚಿತ್ರಕೃತಿಗಳು ರಚನೆಯಾದವು. ಅಕ್ಬರ್ ಆಗ್ರದ ಹೊರವಲಯದಲ್ಲಿರುವ ಫತೇಪುರ ಸಿಕ್ರಿಯಲ್ಲಿ ಚಿತ್ರಕಲಾಶಾಲೆಯನ್ನೇ ಪ್ರಾರಂಭಿಸಿ ಚಿತ್ರಗಳ ರಚನೆಗೆ ಮತ್ತು ಚಿತ್ರಕಲೆಯ ಬೆಳವಣಿಗೆಗೆ ಕಾರಣನಾದ. ಈ ಕಾಲದಲ್ಲಿ ರಚನೆಯಾದ, ಉಲ್ಲೇಖಿಸಿದ ಚಿತ್ರಗಳು ವಿಶಿಷ್ಟ ವರ್ಣ ಸಂಯೋಜನೆ ಹಾಗೂ ತಾಂತ್ರಿಕ ಹಿನ್ನೆಲೆಯೊಂದಿಗೆ ಬೆಳವಣಿಗೆಯಾಗಿವೆ. ಉದಾಹರಣೆಗೆ ಹಮ್ಜಾನಾಮಾದ ಚಿತ್ರಗಳು ಇಸ್ಲಾಂ ಕಥೆಗಳ ವೀರ ನಾಯಕ ಹಮ್ಜಾನನ್ನು ಕುರಿತಂತೆ ರಚನೆಯಾಗಿವೆ. ರಜಂನಾಮಾದ ಚಿತ್ರಗಳು ಮಹಾಭಾರತ ಹಾಗೂ ಹರಿವಂಶದಿಂದ ಆಯ್ದ ಘಟನೆಗಳನ್ನು ಚಿತ್ರ ಸಂಯೋಜನೆಯಲ್ಲಿ ತೋರಿಸುತ್ತವೆ. ಅಕ್ಬರ ನಾಮಾದ ಚಿತ್ರಗಳು ರಾಜಕೀಯ ಹಾಗೂ ವೈಯಕ್ತಿಕ ಘಟನಾವಳಿಗಳ ದೃಶ್ಯ ನಿರೂಪಣೆಗಳು ಅಕ್ಬರ್‌ನಾಮಾ ಚಿತ್ರದಲ್ಲಿ ಕಂಡುಬರುತ್ತವೆ. ಅನ್ವರಿ–ಇ–ಸುಹೇಲಿ ಕೃತಿ ಪಂಚತಂತ್ರದ ಕಥೆಗಳ ತರ್ಜುಮೆಯ ರೂಪ ಮತ್ತು ದೃಶ್ಯಾವಳಿಗಳನ್ನು ಪ್ರೌಢಕಾಲವೆಂದು ಹೇಳಬಹುದು. ಈ ಕಾಲದ ಬಸವಾನ್, ಕೇಶು, ಲಾಲ್, ಭೀಮ್ ಗುಜರಾತಿ, ಧರಮ್‌ದಾಸ, ಮಧು, ದೌಲತ್, ಮನೋಹರ್, ಮಿಸ್ಕಿನ್, ನರಸಿಂಗ್ ಮೊದಲಾದ ಕಲಾವಿದರುಗಳು ಅಕ್ಬರನ ಕಲಾಶಾಲೆಯ ಕಲಾವಿದರಾಗಿದ್ದರು.

ಅಕ್ಬರನ ಕಾಲಾನಂತರದಲ್ಲಿ ಅವನ ಮಗ ಜಹಾಂಗೀರ್‌ನಿಂದ ಚಿತ್ರಕಲೆ ಪೋಷಣೆ ಪಡೆಯಿತು. ಜಹಾಂಗೀರ್‌ನ ಕಾಲದಲ್ಲಿಯೂ ಚಿತ್ರಕಲೆಯ ಚಟುವಟಿಕೆಗಳು ಗಣನೀಯ ಪ್ರಮಾಣದಲ್ಲಿ ಮುಂದುವರೆದುಕೊಂಡು ಬಂದವು. ಇವನ ಕಾಲದಲ್ಲಿ ಭಾವಚಿತ್ರಗಳು, ಅರಮನೆಯ ಚಿತ್ರಗಳು ಬೇಟೆ ಚಿತ್ರಗಳು ಬಹುವಾಗಿ ಕಂಡುಬರುತ್ತವೆ. ಜಹಾಂಗೀರನ ಕಾಲದಲ್ಲಿ ರಚನೆಯಾದ ಜಹಾಂಗೀರ್ ನಾಮಾದ ಚಿತ್ರಗಳು, ಹೆಚ್ಚು ಜನಪ್ರಿಯವಾಗಿವೆ. ಈ ಕಾಲದಲ್ಲಿ ಅಬುಲ್ ಹಸನ್, ಮಿಸ್ಕಿನ್, ಬಸವಾನ್, ದಾಸವಂತ್ ಮೊದಲಾದವರು ಚಿತ್ರರಚನೆ ಮಾಡುತ್ತಿದ್ದರು. ಜಹಾಂಗೀರನ ಕಾಲದಲ್ಲಿಯೇ ಮೊಗಲ್ ಚಿತ್ರಕಲೆಯ ಪ್ರೌಢಿಮೆಯನ್ನು ಗಮನಿಸಬಹುದು. ಅನಂತರದ ಕಾಲಘಟ್ಟದಲ್ಲಿ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಲಿಲ್ಲ. ಆದರೂ ಷಹಜಹಾನನ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಕಲೆಯ ಚಟುವಟಿಕೆಗಳು ಕಂಡುಬರುತ್ತವೆ.

ಮೊಗಲರ ಕಾಲದ ಚಿತ್ರಗಳಲ್ಲಿ ಚಿತ್ರ ರಚನಾ ವಿಷಯ ಪ್ರಧಾನವಾಗಿತ್ತು. ಆಕೃತಿಗಳ ರಚನೆ ನೈಜವಾಗಿವೆ. ಇವುಗಳಲ್ಲಿ ವರ್ಣ ವಿನ್ಯಾಸ ಮತ್ತು ನಾಟಕೀಯ ಅಂಶಗಳು ಸ್ಪಷ್ಟವಾಗಿ ಉನ್ನತವಾಗಿವೆ. ಚಿತ್ರಗಳ ನೈಜತೆಯ ಜೊತೆಗೆ ವಿವರಗಳು ಹಾಗೂ ಸೂಕ್ಷ್ಮ ಕುಸುರಿನ ಕೆಲಸವನ್ನು ನೋಡಬಹುದು. ಪ್ರಕೃತಿ ಚಿತ್ರಣವೂ ಕೂಡ ಸೊಗಸಾಗಿ ಮೂಡಿಬಂದಿವೆ.

**ರಾಜಸ್ತಾನಿ ಚಿತ್ರ ಶೈಲಿ:** ಮೊಗಲರ ಸಮಕಾಲೀನದಲ್ಲಿ ಬೆಳೆದುಕೊಂಡು ಬಂದ, ಮೇಲೆ ಹೆಸರಿಸಿದ ಮಾಳ್ವ, ಮೇವಾರ್, ಬುಂದಿ, ಕೋಟ, ಜೋನ್‌ಪುರ, ಬಿಕನೀರ್, ಜೈಪುರ ಮೊದಲಾದ ಸ್ಥಳಗಳಲ್ಲಿ ಚಿತ್ರರಚನೆ ಜನಪ್ರಿಯ ಕಲೆಯಾಗಿತ್ತು. ಮಾಳ್ವ ಮತ್ತು ಮೇವಾರ್ ಶೈಲಿಯಲ್ಲಿ ಹಿಂದುಧರ್ಮಕ್ಕೆ ಸೇರಿದ ಪ್ರಧಾನ ಕೃತಿಗಳೇ ಚಿತ್ರಗಳಾಗಿ ನಿರೂಪಿಸಲ್ಪಟ್ಟಿವೆ. ಈ ಚಿತ್ರಗಳಲ್ಲಿ ಮೊಗಲ್ ಶೈಲಿಯ ಆಡಂಬರಗಳು ಕಂಡುಬರುವುದಿಲ್ಲ. ಬದಲಾಗಿ ಚೌರಪಂಚಾಸಿಕ ಹಾಗೂ ಲಾವೂರ್ ಚಂದದ ಚಿತ್ರ ಪ್ರಭಾವಗಳನ್ನು ನೋಡಬಹುದು. ರಜಪೂತ ಹಿನ್ನೆಲೆಯಿರುವ ರಾಜಸ್ತಾನದ ಎಲ್ಲ ರಾಜ ಮನೆತನದವರು ಕಲೆಯನ್ನು ಪೋಷಿಸಿದರು. ರಾಜಸ್ತಾನದ ಚಿತ್ರಗಳಲ್ಲಿ ರಾಗಮಾಲಾ, ಬಾರಾಮಾಸ, ರಾಮಾಯಣ, ಭಾಗವತ ಪುರಾಣ, ರಾಸಮಂಜರಿ, ಅಲ್ಲದೆ ರಾಜ–ರಾಣಿಯರ ಪ್ರೇಮ ಕಥೆಗಳು, ಬೇಟೆ ದೃಶ್ಯಗಳು ರಚನೆಯಾಗಿವೆ. ರಾಗಮಾಲಾ ಚಿತ್ರಗಳಲ್ಲಿ ಉದಯಪುರದ–ಲಲಿತರಾಗಿಣಿ, ಬುಂದಿಯ–ಬಂಗಾಲ ರಾಗಿಣಿ, ಭೈರವ ರಾಗಿಣಿ, ವಸಂತ ರಾಗಿಣಿ ಚಿತ್ರಗಳು ಉಲ್ಲೇಖಾರ್ಹ. ಬಹುತೇಕ ಎಲ್ಲ ಚಿತ್ರಗಳಲ್ಲಿ ನಾಯಕ ಮತ್ತು ನಾಯಕಿಯರ ಘಟನಾವಳಿಗಳೇ ಪ್ರಮುಖ ದೃಶ್ಯ ರೂಪ ನಿರೂಪಣೆಗಳಾಗಿವೆ. ಚಿತ್ರಗಳಲ್ಲಿ ವರ್ಣವೈವಿಧ್ಯ ವಾಸ್ತುಕೃತಿಗಳ ಬಳಕೆ, ನಿಸರ್ಗದ ಚಿತ್ರಣಗಳು ಸೊಗಸಾಗಿ ಮೂಡಿ ಬಂದಿವೆ. ವಿಶೇಷವಾಗಿ ಆಕೃತಿಗಳ ರಚನೆಯಲ್ಲಿಯೂ ನೈಜತೆ ಮತ್ತು ಸ್ಪಷ್ಟತೆಯಿದೆ. ಎಲ್ಲ ಚಿತ್ರಗಳು ನಾಯಕ ಅಥವಾ ನಾಯಕಿ ಪ್ರಧಾನ ಚಿತ್ರಗಳೇ ಆಗಿವೆ. ರಾಜಸ್ತಾನದಲ್ಲಿ ಕಿಷನ್‌ಗಡ ಶೈಲಿಯ ಬಹುಸೊಗಸಾದ ಚಿತ್ರಾಕೃತಿಗಳಿವೆ. ನೀಳವಾದ ದೇಹ, ಉದ್ದನೆಯ ಮೂಗು, ಅಗಲವಾದ ಭಾವಪೂರಿತ ಕಣ್ಣುಗಳು ಹಾಗೂ ಸೊಗಸಾದ ವರ್ಣಸಂಯೋಜನೆ ಈ ಚಿತ್ರಗಳಲ್ಲಿವೆ. ವಿಶೇಷವೆಂದರೆ ಮೊಗಲ್ ಸಾಮ್ರಾಜ್ಯದ ಹಲವಾರು ಕಲಾವಿದರುಗಳು ರಾಜಸ್ತಾನಿ ಅರಸರುಗಳ ಪೋಷಣೆಯಲ್ಲಿ ಚಿತ್ರಕಲೆಯನ್ನು ಬೆಳೆಸಿದರು. ಈ ಹಿನ್ನೆಲೆಯ ಶೈಲಿಯು ಆಂತರಿಕ ಪ್ರಭಾವಕ್ಕೆ ಪ್ರೇರಕವಾಯಿತು.

**ಪಹಾಡಿ ಚಿತ್ರಕಲೆ:** ಪಂಜಾಬಿನ ಮತ್ತು ಹಿಮಾಲಯದ ಗುಡ್ಡಗಾಡು ಪ್ರದೇಶದ ರಾಜಮನೆತನಗಳ ರಾಜಾಶ್ರಯದಲ್ಲಿ 17,18 ಮತ್ತು 19 ನೆಯ ಶತಮಾನಗಳಲ್ಲಿ ಪ್ರಚಲಿತವಿದ್ದ ಚಿತ್ರಕಲೆ ಇದಾಗಿದೆ. ಮೊಗಲರ ಕೊನೆಯ ಕಾಲಘಟ್ಟಗಳಲ್ಲಿ ರಾಜಾಶ್ರಯ ಹುಡುಕಿಕೊಂಡು ಬಂದ ಹಲವಾರು ಕಲಾವಿದರುಗಳಿಗೆ ಪಂಜಾಬಿನ ಸಾಮಂತ ರಾಜರುಗಳು ಆಶ್ರಯ ನೀಡಿದರು. ಪಹಾಡಿ ಚಿತ್ರಕಲೆಯಲ್ಲಿ ಬಸೋಲಿ, ಕಾಂಗ್ರ, ಗ್ವಾಲಿಯರ್, ಚಂಬಾ, ಮನ್‌ಕೋಟ, ಮಂಡಿ, ನರಪುರ ಮುಂತಾದ ಸ್ಥಳಗಳಲ್ಲಿ ಚಿತ್ರಕಲೆಯ ಚಟುವಟಿಕೆಗಳು ನಡೆದವು. ಇಲ್ಲಿಯ ಆರಂಭಿಕ ಚಿತ್ರಕಲೆಯಲ್ಲಿ ಮಾಳ್ವ ಮತ್ತು ಮೇವಾರ್ ಚಿತ್ರಕಲೆಯ ಪ್ರಭಾವವನ್ನು ನೋಡಬಹುದು. ಬಸೋಲಿ ಚಿತ್ರಶೈಲಿಯಲ್ಲಿ ಗಾಢವಾದ ಹಿನ್ನೆಲೆ ಹಾಗೂ ವಿವರಣಾತ್ಮಕ ಆಕೃತಿಗಳ ರಚನೆಗಳಿವೆ. ಭಾನುದತ್ತನ ರಾಜಮಂಜರಿ ಕೃತಿಯಿಂದ ಆಯ್ದ ಘಟನೆಗಳನ್ನು ಚಿತ್ರನಿರೂಪಣೆಯಲ್ಲಿ ನೋಡಬಹುದು. ಇಲ್ಲಿನ ರಾಜರುಗಳು ತಮ್ಮ ಭಾವಚಿತ್ರಗಳನ್ನು ಕೂಡ ಮಾಡಿಸಿಕೊಳ್ಳುತ್ತಿದ್ದರು. ಅಂತಹ ಹಲವಾರು ಉದಾಹರಣೆಗಳಿವೆ. ಸುಂದರ ರತ್ನಗಂಬಳಿಯ ಮೇಲೆ ಸಂಗೀತವನ್ನು ಆಲಿಸುತ್ತ, ಪ್ರಿಯತಮೆಯೊಂದಿಗೆ ಅಥವಾ ಅಂತಃಪುರದ ಸ್ತ್ರೀಯರೊಂದಿಗೆ ವಿಲಾಸಿ ಜೀವನವನ್ನು ಕಳೆಯುವ ರಾಜರ ಚಿತ್ರಗಳು ಹಲವಾರು. ಈ ಚಿತ್ರಗಳ ಹಿನ್ನೆಲೆ ವರ್ಣವಿನ್ಯಾಸ ಏಕವರ್ಣವಾಗಿದ್ದು ಇವುಗಳ ಮೇಲ್ಭಾಗದಲ್ಲಿ ಚಿತ್ರಗಳ ರಚನೆ ಕಂಡುಬರುತ್ತದೆ.

ಗ್ವಾಲಿಯರ್ ಮತ್ತು ಕಾಂಗ್ರ ಶೈಲಿಯಲ್ಲಿ ಪ್ರಕೃತಿ ಹಿನ್ನಲೆಯುಳ್ಳ ಚಿತ್ರಗಳು ಕಂಡುಬರುತ್ತವೆ. ಸು.1750ರ ಹೊತ್ತಿಗೆ ಭಾರತಕ್ಕೆ ಬಂದ ಬ್ರಿಟಿಷ್ ಕಲಾವಿದರು ನೈಜತೆಯ ಹಿನ್ನೆಲೆಯುಳ್ಳ ಹಾಗೂ ವರ್ಣ ಸಂಯೋಜನೆಯಲ್ಲಿ ವಾಸ್ತವಿಕ ಅಂಶಗಳನ್ನು ಬಿಂಬಿಸುವ ಅಲ್ಲದೆ, ಕ್ಷಣ್ಣೆಲೆಯ ತತ್ವಗಳ ಹಿನ್ನೆಲೆಯಲ್ಲಿ ಚಿತ್ರರಚನೆ ಮಾಡುತ್ತಿದ್ದರು. ಈ ಚಿತ್ರಗಳ ಪ್ರಭಾವ ಗ್ವಾಲಿಯರ್ ಮತ್ತು ಕಾಂಗ್ರಾ ಚಿತ್ರಗಳಲ್ಲಿ ಸ್ಪಷ್ಟವಾಗಿದೆ. ಆಕೃತಿಗಳು ಸರಳವಾಗಿ ಮತ್ತು ನೈಜವಾಗಿ ಪ್ರಕೃತಿಯ ಹಿನ್ನೆಲೆಗೆ ಪೂರಕವಾಗಿರುವುದು ಗಮನಾರ್ಹ. ಕಾಲಕ್ರಮೇಣ ಈ ಚಿತ್ರ ಕಲಾವಿದರೂ ಕೂಡ ಕಂಪನಿ ಶೈಲಿಯ ಪ್ರಭಾವಕ್ಕೊಳಗಾಗಿ ಚಿತ್ರಕಲೆಯನ್ನು ಮುಂದುವರೆಸಿದರು.

**ದಖನಿ ಚಿತ್ರಕಲೆ:** ಮೊಗಲರಿಗೆ ಸಮಕಾಲೀನವಾಗಿ ಮತ್ತು ವಿಜಯನಗರೋತ್ತರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ದಖನಿ ಚಿತ್ರಕಲೆ ಅಹಮದ್‌ನಗರ, ಬಿಜಾಪುರ, ಗೋಲ್ಕೊಂಡಗಳಲ್ಲಿ ಬೆಳೆಯಿತು. ದುರದೃಷ್ಟವಶಾತ್ ದಖನಿ ಸಂಪ್ರದಾಯಕ್ಕೆ ಸೇರಿದ ಬಹಳ ಚಿತ್ರಗಳು ಬೆಳಕಿಗೆ ಬಂದಿಲ್ಲ. ಕಾಲಘಟ್ಟದ ದೃಷ್ಟಿಯಿಂದ ಅಹಮದ್ ನಗರದ ಚಿತ್ರಗಳು ಆರಂಭಿಕ ಹಂತದಲ್ಲಿ ಬರುತ್ತವೆ. ತಾರಿಫ್–ಎ–ಹುಸೇನ್‌ಷಾಹಿ ಕೃತಿಯೂ ಅಹಮದ್ ನಗರದ ಸುಲ್ತಾನನಾಗಿದ್ದ ಹುಸೇನ ಷಾನ ದೃಶ್ಯ ನಿರೂಪಣೆಗಳನ್ನು ನೀಡುತ್ತದೆ. ರಂಗುರಂಗಿನ ವರ್ಣಸಂಯೋಜನೆಯ ಹಿನ್ನೆಲೆಯಲ್ಲಿ ವಾಸ್ತು ವಿನ್ಯಾಸದ ರಚನೆಯ ಮಧ್ಯೆ ಶ್ವೇತವಸ್ತ್ರಧಾರಿಯಾಗಿ, ಆಸನದ ಮೇಲೆ ಕುಳಿತಿರುವ ಸುಲ್ತಾನನ ದೃಶ್ಯವಿದೆ. ಆಕೃತಿಯ ಎರಡೂ ಭಾಗಗಳಲ್ಲಿ ಸ್ತ್ರೀಯರು ವಸ್ತ್ರದ ಚಾಮರವನ್ನು ಬೀಸುತ್ತಿರುವ ದೃಶ್ಯವಿದೆ. ಈ ಸ್ತ್ರೀ ಆಕೃತಿಗಳು ನಿಂತ ಭಂಗಿಯಲ್ಲಿ ಮತ್ತು ನಿಲುವಿನಲ್ಲಿ, ಕೇಶವಿನ್ಯಾಸದಲ್ಲಿ ಲೇಪಾಕ್ಷಿಯ ವೀರಭದ್ರೇಶ್ವರ ದೇವಾಲಯದ ಭಿತ್ತಿಯಲ್ಲಿ ಕಂಡುಬರುವ ಸ್ತ್ರೀಯರ ಆಕೃತಿಗಳನ್ನು ನೆನಪಿಗೆ ತರುತ್ತವೆ. ಅಹಮದ್‌ನಗರದಲ್ಲಿ ರಾಗಮಾಲಾ ಚಿತ್ರಗಳು ಕೂಡ ರಚನೆಯಾಗಿದ್ದಕ್ಕೆ ಇಲ್ಲಿ ದೊರೆತ ಹಿಂದೋಳ ರಾಗದ ಚಿತ್ರವೇ ಸಾಕ್ಷಿ. ತೋಟವೊಂದರಲ್ಲಿ ತೂಗುಮಂಚದ ಮೇಲೆ ಕುಳಿತ ನಾಯಕ ನಾಯಕಿಯರಿಗೆ, ಪಿಚಕಾರಿಯಿಂದ ಬಣ್ಣವನ್ನು ಸಿಡಿಸುತ್ತಿರುವ ಸ್ತ್ರೀಯರು, ತಂಬೂರಿಯನ್ನು ಮೀಟುತ್ತ ರಾಗಾಲಾಪನೆ ಮಾಡುತ್ತಿರುವಂತೆ ನಿಂತಿರುವ ಸ್ತ್ರೀ ಆಕೃತಿಗಳು ಸೊಗಸಾಗಿವೆ.

ಬಿಜಾಪುರದ ಸುಲ್ತಾನರ ಕಾಲದಲ್ಲಿಯೂ ಚಿತ್ರಕಲೆ ಗಣನೀಯವಾಗಿ ಬೆಳೆಯಿತು. ಎರಡನೆಯ ಆದಿಲ್ ಷಾನ ಕಾಲದಲ್ಲಿ ಚಿತ್ರಕಲೆಗೆ ವಿಶೇಷ ಪ್ರೋತ್ಸಾಹ ದೊರೆಯಿತು. ಈ ಕಾಲದಲ್ಲಿ ರಾಗಮಾಲಾ ಚಿತ್ರಗಳು ಹಾಗೂ ಸುಲ್ತಾನರ ವಿಭಿನ್ನ ಭಾವಚಿತ್ರಗಳು ರಚನೆಯಾದವು. ಇಬ್ರಾಹಿಂ ಆದಿಲ್‌ಷಾ ಸಂಗೀತಪ್ರೇಮಿಯೂ ಸಂಗೀತಕಾರನೂ ಆಗಿದ್ದು, ಕಿತಾಬ್–ಎ–ನವರಸ್ ಎಂಬ ಸಂಗೀತ ಕಲೆ ಕುರಿತಾದ ಕೃತಿಯನ್ನು ರಚನೆ ಮಾಡಿದ್ದಾನೆ. ಪ್ರಾಯಶಃ ಈ ಕೃತಿಯ ಆಧಾರದಿಂದಲೇ ಬಿಜಾಪುರ ರಾಗಮಾಲಾ ಚಿತ್ರಗಳು ರಚನೆಯಾಗಿವೆ. ರಾಜಸ್ತಾನದ ಬಿಕನೀರ್ ವಸ್ತು ಸಂಗ್ರಹಾಲಯ ಮತ್ತು ದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯಗಳಲ್ಲಿ ಈ ಚಿತ್ರಗಳನ್ನು ಸಂಗ್ರಹಿಸಲಾಗಿದೆ. ಬಿಜಾಪುರದ ಶ್ರೀ ರಾಗಚಿತ್ರ ಸೊಗಸಾಗಿದೆ. ಸುಂದರವಾದ ವಾಸ್ತು ಹಿನ್ನೆಲೆ, ಜ್ಯಾಮಿತೀಯ ಮತ್ತು ಸುರುಳಿ, ಬಳ್ಳಿಗಳ ರಚನೆ, ಪರ್ಷಿಯನ್ ನೀಲಿ ವರ್ಣದ ಹಾಗೂ ಚಿನ್ನದ ಮೆರುಗು ಇರುವ ಪಟ್ಟಿಕೆಗಳು ಗಮನ ಸೆಳೆಯುತ್ತವೆ. ಚಿತ್ರಗಳಲ್ಲಿ ಹೊಳಪಿದೆ. ಬಿಜಾಪುರದ್ದೇ ಆದ ನೂಜುಂ–ಅಲ್ ಉಲ್‌ಂ ಚಿತ್ರ ಹಾಗೂ ಇಬ್ರಾಹಿಂ ಆದಿಲ್‌ಷಾನ ಭಾವಚಿತ್ರಗಳು ಪ್ರಮುಖ ಉದಾಹರಣೆಗಳಾಗಿವೆ. ಇಬ್ರಾಹಿಂ ಆದಿಲ್ ಷಾನ ಭಾವಚಿತ್ರ ಸುಂದರ ಹಿನ್ನಲೆಯಲ್ಲಿ ರಚನೆಯಾಗಿದ್ದು, ಆಕೃತಿ ಬಹಳ ನೈಜವಾಗಿದೆ. ದಖ್ಖನಿ ಕಲಾವಿದರು ಆಕೃತಿಗಳ ಮತ್ತು ಹಿನ್ನೆಲೆಯ ಚಿತ್ರಗಳನ್ನು ರಚಿಸುವುದರಲ್ಲಿ ವಿಶೇಷ ಪರಿಣಿತಿಯನ್ನು ಪಡೆದಿದ್ದರು. ಗೋಲ್ಕೊಂಡದ ಮಹಮದ್ ಖುಲಿ ಕುತುಬ್‌ಷಾನ ಕಾಲದ ಚಿತ್ರಗಳಲ್ಲಿ ಪರ್ಷಿಯನ್ ಪ್ರಭಾವ ಗಣನೀಯವಾಗಿದೆ. ಒಟ್ಟಾರೆಯಾಗಿ ದಖನಿ ಶೈಲಿ, ಮೊಗಲ್ ಚಿತ್ರಕಲೆಗೆ ಸಮಕಾಲೀನವಾಗಿ ತನ್ನ ವಿಶಿಷ್ಟ ಚಿತ್ರಗಳಿಂದ ಹಾಗೂ ಶೈಲಿಯಿಂದ ತನ್ನದೇ ಆದಂತಹ ಸ್ಥಾನವನ್ನು ಪಡೆದಿದೆ.

ಚಿಕಣಿ ಚಿತ್ರಗಳ ಜೊತೆಯಲ್ಲಿಯೇ 17, 18ನೆಯ ಶತಮಾನದಲ್ಲಿ ಭಿತ್ತಿಚಿತ್ರಗಳು, ಪಟಚಿತ್ರಗಳು ರಚನೆಯಾಗುತ್ತಿದ್ದುದಕ್ಕೆ ಪುರಾವೆಗಳಿವೆ. ಗುಜರಾತಿನ ಬರೋಡ ನಗರದ ತಾಂಬೇಕರ್‌ವಾಡ, ರಾಜಸ್ತಾನದ ನಾಥದ್ವಾರ ಮತ್ತು ಒರಿಸ್ಸದ ಪಟ ಚಿತ್ರಗಳು ಚಿತ್ರಕಲೆಯ ಬೆಳವಣಿಗೆಯನ್ನು ಸೂಚಿಸುತ್ತವೆ. ಇಲ್ಲಿ ಪ್ರೌಢ ಶೈಲಿಗಳಿಗೆ ಬದಲಾಗಿ ಸ್ಥಳೀಯ ಜಾನಪದೀಯ ಚಿತ್ರಶೈಲಿಗಳು ಬೆಳವಣಿಗೆ ಹೊಂದಿದ್ದವು. ಇತ್ತ ದಕ್ಷಿಣದಲ್ಲಿ ವಿಜಯನಗರೋತ್ತರ ಮತ್ತು ದಖ್ಖನಿ ಸುಲ್ತಾನೋತ್ತರ ಕಾಲದಲ್ಲಿ, ಅಂದರೆ 18, 19ನೆಯ ಶತಮಾನಗಳ ಕಾಲದಲ್ಲಿ ಚಿತ್ರಕಲೆ ದೇವಾಲಯಗಳಲ್ಲಿ, ರಾಜವಾಡೆಗಳಲ್ಲಿ ಹಾಗೂ ಮಠಗಳಲ್ಲಿ ಮುಂದುವರೆಯಿತು. ತಮಿಳುನಾಡಿನ ನಾಯಕ ಮನೆತನದ ಕಾಲದ ಚಿತ್ರಗಳು ತಿರುಪರುಟ್ಟಿಕುನ್ರಂ, ತಂಜಾವೂರು, ತಿರುವಳ್ಳೂರು, ಚಿದಂಬರಂ. ತಿರುವಳಂಜುಳಿ, ಸರಸ್ವತಿ ಮಹಲ್, ಕಡಪ ಮೊದಲಾದ ಸ್ಥಳಗಳಲ್ಲಿ ಇವೆ. ವಿಜಯನಗರ ಶೈಲಿಯಿಂದಲೇ ಬೆಳೆದುಬಂದ, ಸ್ಥಳೀಯ ಕಲಾವಿದರುಗಳಿಂದಲೇ ರಚಿಸಲಾಗಿರುವ ಭಾಗವತ ಪುರಾಣ, ರಾಮಾಯಣ, ಶಿವಲೀಲೆ ಮೊದಲಾದ ವಿಷಯಗಳ ಚಿತ್ರನಿರೂಪಣೆಗಳಿವೆ. ಇದೇ ಕಾಲಕ್ಕೆ ಸೇರಿಸಬಹುದಾದ ಕೇರಳದ ಕೊಚ್ಚಿನ್‌ನಲ್ಲಿರುವ ಮಟ್ಟಂಚೇರಿ ಅರಮನೆ, ತ್ರಿಶೂರು ದೇವಾಲಯ, ಪದ್ಮನಾಭಪುರಂ ಅರಮನೆ, ತಿರುವಂಚಿಕುಳಂ, ತ್ರಿಪ್ರಯಾರ್ ಮೊದಲಾದ ಸ್ಥಳಗಳಲ್ಲಿಯೂ ಚಿತ್ರಗಳಿವೆ. ಕೇರಳದ ಚಿತ್ರಗಳಲ್ಲಿ ಸ್ಥಳೀಯ ಕಥಕಳಿ ವೇಷ–ವಿನ್ಯಾಸಗಳ ಪ್ರಭಾವವಿದೆ. ಈ ಎಲ್ಲಾ ಚಿತ್ರಗಳಲ್ಲಿ ಬಹುತೇಕವಾಗಿ ಪೌರಾಣಿಕ ಕಥನಗಳ ನಿರೂಪಣೆ ಪ್ರಧಾನವಾಗಿದೆ.

ವಿಜಯನಗರೋತ್ತರ ಕರ್ನಾಟಕದಲ್ಲಿ ಮೈಸೂರು ಒಡೆಯರು ಹಾಗೂ ಸುರಪುರದ ಅರಸರುಗಳು ಚಿತ್ರಕಲೆಗೆ ಪೋಷಣೆಯನ್ನು ನೀಡಿದರು. ಸುರಪುರದಲ್ಲಿ ಗುರುಡಾದ್ರಿ ಶೈಲಿ ಎಂಬ ಹೆಸರಿನಿಂದ ರಚನೆಯಾದ ಚಿತ್ರಗಳು ವಿಜಯನಗರ ಶೈಲಿಯ ಸೊಗಡನ್ನೇ ಹೊಂದಿವೆ. ಏತನ್ಮಧ್ಯೆ ಹಳೇ ಮೈಸೂರು ಭಾಗದ ಸಿಬಿ, ಶಿರಾ, ಮಧುಗಿರಿ, ಕೊಳ್ಳೇಗಾಲ, ಮುಡುಕುತೊರೆ, ಚಿಕ್ಕಹರದನಹಳ್ಳಿ ಮತ್ತು ಶ್ರವಣಬೆಳಗೊಳ ಮೈಸೂರು ನಗರ ಹಾಗೂ ಶ್ರೀರಂಗಪಟ್ಟಣದ ದರಿಯಾ ದೌಲತ್ ಅರಮನೆ ಇವುಗಳಲ್ಲಿ ಚಿತ್ರಗಳಿವೆ. ಉತ್ತರ ಕರ್ನಾಟಕದಲ್ಲಿ ಅಮಿನ್ ಭಾವಿ, ನಿಪ್ಪಾಣಿ, ನರಗುಂದ, ಬಿ.ಕೆ.ಹಳ್ಳಿ ಮೊದಲಾದ ಸ್ಥಳಗಳಲ್ಲಿ ಚಿತ್ರಗಳು ಈಗಲೂ ಉಳಿದಿವೆ. ಭಿತ್ತಿ ಚಿತ್ರಕಲೆಗೆ ಕರ್ನಾಟಕದ ಭಾಗದಲ್ಲಿ ಮೈಸೂರು ಅರಸರ ಕೊಡುಗೆ ವಿಶೇಷವಾದದ್ದು, ಇವರಿಂದಾಗಿ ಚಿತ್ರ ಕಲೆಯ ಪರಂಪರೆ ಅನೂಚಾನವಾಗಿ ಮುಂದುವರೆದುಕೊಂಡು ಬಂದಿದೆ. ಬ್ರಿಟಿಷ್ ಕಂಪನಿ ಆಡಳಿತದಲ್ಲಿ ಬಂದಿದ್ದ ಬ್ರಿಟಿಷ್ ಕಲಾವಿದರ ಅಕಾಡಮಿಕ್ ಶೈಲಿಯ ಪ್ರಭಾವದಿಂದ ಚಿತ್ರಕಲಾ ಚಟುವಟಿಕೆಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದು. ಕಂಪನಿ ಸರ್ಕಾರ ಸ್ಥಾಪಿಸಿದ ಕಲಾಶಾಲೆಗಳು ಪಾರಂಪರಿಕ ಚಿತ್ರಶೈಲಿಗಳನ್ನು ಕಡೆಗಣಿಸಿ ಯುರೋಪಿನ ಸಾಂಪ್ರದಾಯಿಕ ಸಾಂಸ್ಥಿಕ ಶಿಕ್ಷಣವನ್ನು ನೀಡಲು ಪ್ರಾರಂಭಿಸಿ

ಚಿತ್ರಕಲೆಯ ಬೆಳವಣಿಗೆಗೆ ವಿಶಿಷ್ಟ ಕೊಡುಗೆ ನೀಡಿದವು. ಒಟ್ಟಾರೆಯಾಗಿ ಭಾರತದ ಚಿತ್ರಕಲೆಯನ್ನು ಪ್ರಾಗಿತಿಹಾಸ ಕಾಲದಿಂದ ಕಂಪನಿ ಕಾಲದವರೆಗೆ ನೋಡಿದಾಗ ವಿಭಿನ್ನ ಚಿತ್ರಶೈಲಿಗಳು ನಿರಂತರವಾಗಿ ಬೆಳೆದು ಬಂದಿರುವುದು ಸ್ಪಷ್ಟವಾಗಿ ಕಾಣುತ್ತದೆ. (ಆರ್.ಎಚ್.ಕೆ.)

**ಮೈಸೂರು ಸಾಂಪ್ರದಾಯಿಕ ಚಿತ್ರಕಲೆ:** ವಿಜಯನಗರ ಸಾಮ್ರಾಜ್ಯ 1565ರಲ್ಲಿ ಪತನವಾದಾಗ ಅಲ್ಲಿದ್ದ ಕಲಾವಿದರೆಲ್ಲಾ ಬೇರೆ ಬೇರೆ ಊರುಗಳಿಗೆ ಜೀವನೋಪಾಯಕ್ಕಾಗಿ ವಲಸೆ ಹೋದರು. ಹಾಗೆ ವಲಸೆ ಹೋದ ಕೆಲವರು ಶ್ರೀರಂಗಪಟ್ಟಣವನ್ನು ಬಂದು ಸೇರಿದರು. ಆ ಸಮಯದಲ್ಲಿ ಮೈಸೂರು ರಾಜ್ಯವನ್ನು (1578–1617) ಒಡೆಯರ್ ವಂಶದವರಾದ ರಾಜ ಒಡೆಯರ್ ಆಳುತ್ತಿದ್ದರು. ಒಡೆಯರ್‌ರವರು ಲಲಿತಕಲೆಗಳ ಪ್ರಿಯರಾಗಿದ್ದರು. ಹಾಗಾಗಿ ಅವರು ವಲಸೆ ಬಂದ ಕಲಾವಿದರನ್ನು ತಮ್ಮಲ್ಲೇ ಉಳಿಸಿಕೊಂಡು ಪೋಷಿಸಿ ಚಿತ್ರಕಲೆಗೆ ಉತ್ತೇಜನ ಕೊಟ್ಟರು. ಮೈಸೂರು ಸಾಂಪ್ರದಾಯಿಕ ಚಿತ್ರಕಲೆ ವಿಜಯನಗರ ಶೈಲಿ ಎಂಬ ಮರದಿಂದ ಹುಟ್ಟಿಕೊಂಡ ಒಂದು ಸಸಿ. ನಂತರ ಬಂದ ಚಿಕ್ಕದೇವರಾಜ ಒಡೆಯರ್, ಕಂಠೀರವರಾಜ ಒಡೆಯರ್, ದೊಡ್ಡ ಕೃಷ್ಣರಾಜ ಒಡೆಯರ್ ಎಲ್ಲರೂ ಚಿತ್ರಕಲೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಗುಡಿಗಳನ್ನು ಕಟ್ಟಿಸಿ ಅದರಲ್ಲಿ ಚಿತ್ರಿಸಿದ ದೇವರುಗಳನ್ನು ಪೂಜೆಗೆ ಗುಡಿಯಲ್ಲಿ ಇಟ್ಟು ಪೂಜಿಸುತ್ತಿದ್ದರು. ಟಿಪ್ಪು ನಿಧನ ಹೊಂದಿದ ಮೇಲೆ ಪಟ್ಟಕ್ಕೆ ಬಂದ ಮುಮ್ಮಡಿ ಕೃಷ್ಣರಾಜ ಒಡೆಯರವರು ಕಲಾ ಪ್ರೇಮಿಯಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರವರು ತಾವು ಬರೆದ ಗ್ರಂಥಗಳಿಗೆಲ್ಲಾ ಚಿತ್ರಗಳನ್ನು ಬರೆಸಿ ಮೈಸೂರು ಸಾಂಪ್ರದಾಯಿಕ ಚಿತ್ರಗಳನ್ನು ಉನ್ನತ ಸ್ಥಿತಿಗೆ ತಂದರು.

ವಿಜಯನಗರ ಕಾಲದ ಪುರಂದರದಾಸರು, ಕಾಗಿನೆಲೆ ಕನಕದಾಸರ ಕೃತಿಗಳು, ಗದುಗಿ ನಾರಣಪ್ಪ ಮತ್ತು ತಿಮ್ಮಣ್ಣನ ಭಾರತ, ನರಹರಿಯ ತೊರವೆ ರಾಮಯಣ, ಲಕ್ಷ್ಮೀಶನ ಜೈಮಿನಿಭಾರತ ಗ್ರಂಥ ಮೊದಲಾದವು ಮೈಸೂರು ಶೈಲಿಗೆ ವಸ್ತುವನ್ನು ಒದಗಿಸಿದುವು. ಧ್ಯಾನ ಶ್ಲೋಕಗಳು, ಆಗಮ ಶಿಲ್ಪ ಪ್ರಮಾಣಗಳು ಈ ಚಿತ್ರ ಶಿಲ್ಪಕ್ಕೆ ಮೂಲ ಸ್ಫೂರ್ತಿ. ಈಗ ಉಳಿದಿರುವ ಭಿತ್ತಿ ಚಿತ್ರಗಳು, ಸಾಹಿತ್ಯ ಕೃತಿಗಳು ಮತ್ತು ಹಸ್ತಪ್ರತಿಗಳು ಮೈಸೂರು ಸಾಂಪ್ರದಾಯಿಕ ಚಿತ್ರಗಳನ್ನು ರಚಿಸಲು ದಾರಿದೀಪವಾದವು. ಮೈಸೂರು ಸಾಂಪ್ರದಾಯಿಕ ಚಿತ್ರಗಳನ್ನು ರಚಿಸುವ ಬಗ್ಗೆ ವಿವರಣೆಯನ್ನು ಮುಖ್ಯ ಆಧಾರ ಕೊಡುವ ಗ್ರಂಥವೆಂದರೆ ವಿಷ್ಣುಧರ್ಮೋತ್ತರ ಪುರಾಣ, ಅಭಿಲಷಿತಾರ್ಥ ಚಿಂತಾಮಣಿ, ಮಾನಸೋಲ್ಲಾಸ, ಶಿವತತ್ವ ರತ್ನಾಕರ ಇತ್ಯಾದಿ. ಈ ಗ್ರಂಥಗಳಲ್ಲಿ ಚಿತ್ರ ರಚನೆ, ವರ್ಣಗಳು, ಬಣ್ಣಗಳ ತಯಾರಿಕೆ, ಕಲಾವಿದನಿಗಿರಬೇಕಾದ ಅರ್ಹತೆ ಮತ್ತು ಚಿತ್ರ ರಚಿಸುವ ತಂತ್ರಜ್ಞಾನದ ಬಗ್ಗೆ ಎಲ್ಲ ವಿವರಗಳಿವೆ.

ಮೈಸೂರು ಶೈಲಿಯ ಚಿತ್ರಕಲೆ ಅತ್ಯಂತ ವೈಶಿಷ್ಟ್ಯಪೂರ್ಣ ವಿನ್ಯಾಸ ವಿಧಾನ, ವರ್ಣಾಲಂಕಾರ, ವಿಷಯ ವೈವಿಧ್ಯಗಳಿಂದ ಸ್ವಂತಿಕೆ ಬೆಳೆಸಿಕೊಂಡಿದೆ. ಇದರ ಕಲಾವಿದರು ರಾಜರ ಮತ್ತು ಗಣ್ಯವ್ಯಕ್ತಿಗಳ ಭಾವ ಚಿತ್ರಗಳನ್ನೂ ರಚಿಸಿದ್ದಾರೆ. ಮೈಸೂರು ಸಾಂಪ್ರದಾಯಿಕ ಚಿತ್ರಗಳಲ್ಲಿ ಸಾಮಾನ್ಯವಾಗಿ ಚಿತ್ರಿಸುವ ಚಿತ್ರಗಳೆಂದರೆ ಶ್ರೀರಾಮ ಪಟ್ಟಾಭಿಷೇಕ, ಚಾಮುಂಡೇಶ್ವರಿ, ಕೋದಂಡರಾಮ, ದಶಾವತಾರ, ಅಂಬೆಗಾಲು ಕೃಷ್ಣ, ಸಂಧ್ಯಾ ತಾಂಡವಮೂರ್ತಿ, ಯಶೋದ ಕೃಷ್ಣ, ಸಮುದ್ರಮಂಥನ, ವಿಶ್ವರೂಪ ದರ್ಶನ, ಸರಸ್ವತಿ, ಲಕ್ಷ್ಮಿ, ತಾಂಡವೇಶ್ವರ, ರಾಜರಾಜೇಶ್ವರಿ, ಯುದ್ಧ ದೃಶ್ಯಗಳು ಮತ್ತು ಅರಮನೆಯ ದರ್ಬಾರು.

ಮೈಸೂರು ಶೈಲಿಯ ಚಿತ್ರಗಳು ರೇಖಾ ಪ್ರಧಾನವಾದವು. ಇಲ್ಲಿ ಮೂಲಬಣ್ಣಗಳ ಜೊತೆಗೆ ಪೂರಕವಾಗಿ ಕೆಲವು ಕಡೆ ಬೇರೆ ಬಣ್ಣಗಳನ್ನೂ ಉಪಯೋಗಿಸಲಾಗಿದೆ. ಈ ಬಣ್ಣಗಳು ಪ್ರಕಾಶಮಾನವಾಗಿದ್ದರೂ ಸಹ ಕಣ್ಣಿಗೆ ಹಿತವಾಗಿವೆ. ವಾಸ್ತು ಶಿಲ್ಪದ ವಿನ್ಯಾಸಗಳು ಬಹಳ ಕ್ಲಿಷ್ಟವಾದರೂ ತುಂಬಾ ಸೊಗಸಾಗಿವೆ. ಆಕೃತಿಗಳು ಮೃದುವಾಗಿಯೂ ಕೋಮಲವಾಗಿಯೂ ಇವೆ. ಸಂಯೋಜನೆಗಳಂತೂ ನಯನ ಮನೋಹರವಾಗಿವೆ. ಒಂದು ಸಂಯೋಜನೆಯಲ್ಲಿ ಒಂದಕ್ಕಿಂತ ಹೆಚ್ಚು ಆಕೃತಿಗಳಿದ್ದರೂ ಒಂದಕ್ಕೊಂದು ಪೂರಕವಾಗಿವೆ. ಚಿತ್ರಗಳಲ್ಲಿರುವ ಸಣ್ಣ ಪುಟ್ಟ ವಸ್ತುಗಳನ್ನೂ ಬಹಳ ಶ್ರದ್ಧೆಯಿಂದ ಮತ್ತು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ದೈವೀಕಳೆ ಈ ಚಿತ್ರಗಳ ಮುಖದಲ್ಲಿ ಮೂಡಿಬಂದಿರುತ್ತವೆ. ಪ್ರತಿಯೊಂದು ಚಿತ್ರದಲ್ಲೂ ಕಲಾವಿದರು ತನ್ನದೇ ಆದ ಛಾಪನ್ನು ಮೂಡಿಸಿರುತ್ತಾರೆ. ಇದೇ ಈ ಚಿತ್ರಗಳ ಮತ್ತೊಂದು ವೈಶಿಷ್ಟ್ಯ.

ಮೈಸೂರು ಸಾಂಪ್ರದಾಯಿಕ ಶೈಲಿ ಚಿತ್ರಗಳನ್ನು ಹಸ್ತಪ್ರತಿಗಳಲ್ಲಿ ಮತ್ತು ಚಿಕಣಿ ಚಿತ್ರ ರೂಪದಲ್ಲೂ ಚಿತ್ರಿಸಿದ್ದಾರೆ. ಇದಕ್ಕೆ ಉದಾಹರಣೆ ಮುಮ್ಮಡಿ ಕೃಷ್ಣರಾಜ ಒಡೆಯರವರು ತಾವು ಬರೆದ ಸಚಿತ್ರ ರಾಮಾಯಣ, ಶ್ರೀ ತತ್ವನಿಧಿ, ಸೌಗಂಧಿಕ ಪರಿಣಯ. ಗಂಜೀಪ ಎಲೆಗಳು, ಶ್ರೀ ತತ್ವನಿಧಿ ಮತ್ತು ಸ್ವರಚೂಡಾಮಣಿಯ ಸ್ವರ, ರಾಗ ಮತ್ತು ತಾಳ ಚಿತ್ರಗಳು. ಈ ಗ್ರಂಥಗಳಿಗೆ ಅದರಲ್ಲಿರುವ ವಿಷಯಕ್ಕೆ ಅನುಗುಣವಾಗಿ ಚಿತ್ರಗಳನ್ನು ರಚಿಸಿದ್ದಾರೆ. ಕೆಲವು ಪುಸ್ತಕಗಳಲ್ಲಿ ಬರೀ ಚಿತ್ರಗಳನ್ನೇ ಚಿತ್ರಿಸಲಾಗಿದೆ. ಬರೆವಣಿಗೆ ಇಲ್ಲವೇ ಇಲ್ಲ.

ಚಿತ್ರಗಳನ್ನು ಮರ, ಬಟ್ಟೆ, ಕಾಗದ, ಗಾಜು, ಚರ್ಮ ಮತ್ತು ಗೋಡೆಯ ಮೇಲೂ ರಚಿಸಲಾಗಿದೆ. ಈ ಮಾಧ್ಯಮಗಳ ಮೇಲೆ ಚಿತ್ರ ರಚಿಸಲು ಇವುಗಳನ್ನು ಚಿತ್ರ ಬಿಡಿಸುವ ಹದಕ್ಕೆ ತರುತ್ತಿದ್ದರು. ಕಾಗದದ ಮೇಲೆ ಚಿತ್ರ ರಚಿಸಬೇಕಾದರೆ ಆ ಚಿತ್ರದ ರೇಖಾ ಚಿತ್ರವನ್ನು ಚಿತ್ರಿಸಿ ಸಿದ್ಧ ಮಾಡಿಟ್ಟುಕೊಳ್ಳಲಾಗುತ್ತಿತ್ತು. ಕಾಗದದ ರಟ್ಟನ್ನು ರದ್ದಿ ಕಾಗದ ಮತ್ತು ಮೈದಹಿಟ್ಟಿನ ಅಂಟಿನಿಂದ ತಯಾರಿಸಿಕೊಂಡು ಅದರ ಮೇಲೆ ಚಿತ್ರವನ್ನು ಚಿತ್ರಿಸುವ ಕಾಗದದ ಹಾಳೆಯನ್ನು ಅಂಟಿಸಲಾಗುತ್ತಿತ್ತು. ಅದು ಚೆನ್ನಾಗಿ ಒಣಗಿದ ಮೇಲೆ ಕಾಗದದ ಮೇಲ್ಮೆಯು ನುಣುಪಾಗಿ ಚಿತ್ರ ರಚಿಸಲು ಸಿದ್ಧವಾಗುತ್ತಿತ್ತು. ಮೊದಲು ರೇಖಾ ಚಿತ್ರವನ್ನು ಚಿತ್ರಿಸಲು ಹುಣಿಸೆ ಮರದ ಕಡ್ಡಿಗಳನ್ನು ಕಬ್ಬಿಣದ ಕೊಳವೆಗಳ ಒಳಗಿಟ್ಟು ಸುಟ್ಟು ಇದ್ದಲಿನ ಕಡ್ಡಿಗಳಲ್ಲಿ ತಯಾರಿಸಿಕೊಳ್ಳಲಾಗುತ್ತಿತ್ತು. ಈ ಇದ್ದಲಿನ ಕಡ್ಡಿಗಳಿಂದ ರೇಖಾ ಚಿತ್ರವನ್ನು ರಚಿಸಲಾಗುತ್ತಿತ್ತು. ಮೊದಲು ಹಿನ್ನಲೆಯಲ್ಲಿರುವ ಬೆಟ್ಟ, ಆಕಾಶ, ನದಿಗಳಿಗೆ ಬಣ್ಣ ಹಾಕುತ್ತಿದ್ದರು. ಆದಾದ ಮೇಲೆ ಪ್ರಾಣಿಗಳು, ಪಕ್ಷಿಗಳು ಮತ್ತು ಮನುಷ್ಯರಿಗೆ ಬಣ್ಣ ಹಾಕಲಾಗುತ್ತಿತ್ತು. ಕಡೆಯಲ್ಲಿ ಅತಿ ಸೂಕ್ಷ್ಮವಾದ ವಿವರಗಳನ್ನು ಬಿಡಿಸುವುದು. ಅನಂತರ ಮುಖ, ಆಭರಣಗಳು ಮತ್ತು ಉಡಿಗೆ ತೊಡಿಗೆಗಳನ್ನು ಪೂರ್ಣಗೊಳಿಸಿ. ಕಡೆಯಲ್ಲಿ ಆಭರಣಗಳಿಗೆ, ವಾಸ್ತುಶಿಲ್ಪಗಳಿಗೆ ಮತ್ತು ಬಟ್ಟೆಯ ಅಮಚುಗಳಿಗೆ ಉಬ್ಬೆತ್ತುವ ಕೆಲಸ ಮಾಡಿ ಚಿನ್ನದ ರೇಖನ್ನು ಅದರ ಮೇಲೆ ಅಂಟಿಸುತ್ತಿದ್ದರು. ಇದು ಚೆನ್ನಾಗಿ ಒಣಗಿದ ಮೇಲೆ ಇದರ ಮೇಲೆ ಕೆಂಪು, ಹಸುರು ಮತ್ತು ಬಿಳಿ ಬಣ್ಣ ಹಾಕಿ ನಿಜವಾದ ಹರಳುಗಳು ಮತ್ತು ಮುತ್ತುಗಳು ಹಾಕಿರುವ ಹಾಗೆ ತೋರುವಂತೆ ಬಣ್ಣದಿಂದಲೇ ಮಾಡುತ್ತಿದ್ದರು. ಕಡೆಯಲ್ಲಿ ಚಿತ್ರದ ಮೇಲೆ ತೆಳುವಾದ ಕಾಗದವನ್ನು ಇಟ್ಟು ಇದರ ಮೇಲೆ ಚುಳುಪೆ ಕಲ್ಲಿನಿಂದ ಈ ಕಾಗದದ ಮೇಲೆ ಮತ್ತಗೆ ಉಜ್ಜುವುದರಿಂದ ಚಿತ್ರಕ್ಕೆ ಹೊಳಪು ಬರುತ್ತಿತ್ತು.

ಹಿಂದೋಳರಾಗ ಲಕ್ಷಣದ ವರ್ಣಚಿತ್ರ

ಸಸ್ಯದಿಂದ, ಖನಿಜದಿಂದ ಮತ್ತು ರಾಸಾಯನಿಕ ಪದಾರ್ಥಗಳಿಂದ ಬಣ್ಣಗಳನ್ನು ಕಲಾವಿದರೇ ತಯಾರಿಸಿಕೊಳ್ಳುತ್ತಿದ್ದರು. ಕುಂಚಗಳನ್ನು ಅಳಿಲಿನ ಕೂದಲಿನಿಂದ ಮಾಡಲಾಗುತ್ತಿತ್ತು. ಬಹಳ ತೆಳುವಾದ ಸೂಕ್ಷ್ಮ ರೇಖೆಗಳನ್ನು ಚಿತ್ರಿಸಲು ಅಪರೂಪವಾದ ಗರಿಕೆ ಹುಲ್ಲುಗಳಿಂದ ಕುಂಚಗರಿಗಳನ್ನು ತಯಾರಿಸುತ್ತಿದ್ದರು.

ಸಾಂಪ್ರದಾಯಿಕ ಚಿತ್ರ ಮೈಸೂರಿನ ಸುತ್ತಮುತ್ತ ನಗರಗಳಲ್ಲಿ, ಮೈಸೂರಿನಲ್ಲಿ, ಬೆಂಗಳೂರಿನಲ್ಲಿ ಚಿತ್ರಿಸಲಾಗುತ್ತದೆ. ಈ ಚಿತ್ರಗಳು ಮೈಸೂರಿನ ಅರಮನೆಯಲ್ಲಿ, ಶ್ರೀಮಂತರ ಮನೆಗಳಲ್ಲಿ, ಮಠಗಳಲ್ಲಿ, ದೇವಸ್ತಾನಗಳಲ್ಲಿ, ಭಜನೆ ಮಂದಿರಗಳಲ್ಲಿ, ಆರ್ಟ್‌ಗ್ಯಾಲರಿಗಳಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಮೈಸೂರಿನಲ್ಲಿರುವ ಅಮೃತವಲ್ಲಿ ದೇವಸ್ಥಾನದಲ್ಲಿರುವ ಕನ್ನಡಿಗಿರುವ ಮರದ ಬಾಗಿಲುಗಳ ಮೇಲೆ ಮೈಸೂರು ಶೈಲಿಯಲ್ಲಿ ಕೃಷ್ಣಲೀಲೆ ಚಿತ್ರಗಳು ಬಹಳ ಸುಂದರವಾಗಿವೆ. ಮೈಸೂರು ಶೈಲಿಯಲ್ಲಿ ಚಿತ್ರಗಳಲ್ಲಿ ಕಾಗದದದ ಮೇಲೆ ಚಿನ್ನದ ರೇಖನ್ನು ಉಪಯೋಗಿಸಿ ಮಾಡುವ ಚಿತ್ರಗಳೇ ಬಹಳ ಪ್ರಸಿದ್ಧಿಯಾಗಿ ಇಂದಿಗೂ ಬಹಳ ಹೆಸರುವಾಸಿಯಾಗಿವೆ. ಹಿಂದಿನ ಮೈಸೂರು ಸಂಸ್ಥಾನದಲ್ಲಿ ರಾಜೂ ಮನೆತನದವರು ಚಿತ್ರಕಲೆಗೆ ಪ್ರಸಿದ್ಧ. ಇವರು ಸೋಮವಂಶದ ಆರ್ಯಕ್ಷತ್ರಿಯರು ಹೆಚ್ಚಾಗಿ ಸಾಂಪ್ರದಾಯ ಚಿತ್ರಕಲೆ ರಚಿಸಿದ ಕಲಾವಿದರು ಅನಾಮಧೇಯರಾಗಿ ಉಳಿದಿದ್ದರು. ವಿಜಯನಗರದಿಂದ

ಬಂದ ಕಲಾವಿದರ ಕುಟುಂಬದವರಾದ ವೀರಣ್ಣ, ಎಲ್ಲಯ್ಯ, ಕೇಶವಯ್ಯ, ಸುಂದರಯ್ಯ, ದುರ್ಗದ ಕೃಷ್ಣಪ್ಪ, ಲಿಂಗಪ್ಪ, ನೆಲಮಂಗಲದ ರಂಗಪ್ಪ, ಕೊಂಡಯ್ಯ, ಜಾವಗಲ್ ನರಸಿಂಹಯ್ಯ, ತಿಪ್ಪಣ್ಣ, ವೆಂಕಟಸುಬ್ಬಯ್ಯ, ತಿಪ್ಪಾಜಿ ಚಿತ್ರಕಾರ, ಶಿಕಾರಿಪುರದ ಪಾತಾಳ ನಂಜುಡಪ್ಪ, ಅನಂತಮೂರ್ತಿ, ನಗುವನಹಳ್ಳಿ ನಾರಣಪ್ಪ, ರಾಮಣ್ಣಾಜಿ ಮೊದಲಾದವರ ಕೃತಿಗಳನ್ನು ಗುರುತಿಸಿಬಹುದು. ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದ ಹಿರಿಯ ತಲೆಮಾರಿನವರಲ್ಲಿ ವೈ.ನಾಗರಾಜು, ವೈ.ಸುಬ್ರಮಣ್ಯರಾಜು, ಎಂ.ಎಲ್.ನಾಗರಾಜು (ಮಧುಗಿರಿ), ಎನ್.ನರಸಿಂಹಯ್ಯ, ಗೋಪಾಲಯ್ಯ, ವೆಂಕಟಪತಯ್ಯ, ಎಸ್.ಶಂಕರರಾಜು, ವೆಂಕಟರಾಮ (ತಿರುಮಕೂಡಲು ನರಸೀಪುರ) ಮೊದಲಾದವರು ಪ್ರಮುಖರು.

ಈ ಕಲೆಗಳನ್ನು ಪುನರ್ ಜೀವಿತಗೊಳಿಸುವ ಸಲುವಾಗಿ ಅಂದಿನ ಚಿತ್ರಕಲಾ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಎಮ್.ಎಸ್.ನಂಜುಂಡರಾವ್, ಅಧ್ಯಕ್ಷರಾಗಿದ್ದ ಆರ್ಯಮೂರ್ತಿಯವರು ಮತ್ತು ಎಮ್.ಜೆ. ಕಮಲಾಕ್ಷಿಯವರು ಮೈಸೂರು ಶೈಲಿ ಚಿತ್ರಗಳನ್ನು ಸಂಗ್ರಹಿಸಿದರು. ಈ ಮೈಸೂರು ಶೈಲಿಯ ಚಿತ್ರಗಳನ್ನು ಶಾಶ್ವತವಾಗಿ ಪ್ರದರ್ಶಿಸಲು ನಂಜುಂಡರಾವ್‌ರವರು ಚಿತ್ರಕಲಾ ಪರಿಷತ್ತಿನಲ್ಲಿ ಒಂದು ಪ್ರತ್ಯೇಕ ಆರ್ಟ್ ಗ್ಯಾಲರಿಯನ್ನು ರೂಪಿಸಿದರು. ಅದಲ್ಲದೆ ಈ ಶೈಲಿಯನ್ನು ಉಳಿಸಿ ಬೆಳೆಸುವ ಸಲುವಾಗಿ ಅರಮನೆಯ ಕಲಾವಿದರೂ ಮೈಸೂರು ಸಾಂಪ್ರದಾಯಿಕ ಕಲೆಗಾರರೂ ಆದ ವೈ.ಸುಬ್ರಮಣ್ಯರಾಜುರವರನ್ನು ಪ್ರಾಧ್ಯಾಪಕರಾಗಿ ನೇಮಿಸಿ ಯುವ ಪೀಳಿಗೆಗೆ ಈ ಕಲೆಯನ್ನು ಕಲಿಸಲು ತರಗತಿಯನ್ನು ಪ್ರಾರಂಭಿಸಿದರು. ಈ ಕಲೆಯ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸಲು ಅನೇಕ ಕಮ್ಮಟಗಳನ್ನೂ ಕಲಾಶಿಬಿರಗಳನ್ನೂ ದೇಶದಾದ್ಯಂತ ಮಾಡಲಾಯಿತು. ಇದರ ಜೊತೆಗೆ ಭಾರತದೆಲ್ಲೆಡೆ ಮತ್ತು ವಿದೇಶಗಳಲ್ಲೂ ಈ ಕಲಾ ಪ್ರದರ್ಶನವನ್ನು ಚಿತ್ರಕಲಾ ಪರಿಷತ್ತು ಏರ್ಪಡಿಸಿತ್ತು. (ಎಸ್.ಎಚ್.ಒ.ಟಿ.)

**ಕಾಂಗ್ರ ಚಿತ್ರಕಲೆ:** ಹಿಮಾಚಲ ಪ್ರದೇಶದ ಬೆಟ್ಟಗುಡ್ಡಗಾಡಿನಲ್ಲಿ, ಮುಖ್ಯವಾಗಿ ಕಾಂಗ್ರ ಕಣಿವೆಯಲ್ಲಿ ಪ್ರಚಲಿತವಾಗಿದ್ದ ಚಿತ್ರಕಲೆ. ಇದು ರಜಪೂತ ಚಿತ್ರಕಲೆಯ ಒಂದು ಪ್ರಭೇದವೆಂದೇ ಹಿಂದಿನ ವಿದ್ವಾಂಸರು ಭಾವಿಸಿದ್ದರು. ಆದರೆ ಇತ್ತೀಚೆಗೆ ಆರ್ಚರ್, ರಾಂಧವ ಮೊದಲಾದವರು ಈ ಕಲೆಯನ್ನು ಕುರಿತು ವಿಶೇಷ ಅಧ್ಯಯನ ನಡೆಸಿ, ಇದು ರಜಪೂತ ಚಿತ್ರಕಲೆಗಿಂತ ಭಿನ್ನವಾದುದೆಂದೂ ಕಾಂಗ್ರ ಕಣಿವೆಯಲ್ಲಿ ವಿಶೇಷವಾಗಿ ಪ್ರಚಲಿತವಾಗಿರುವುದರಿಂದ ಇದನ್ನು ಕಾಂಗ್ರ ಚಿತ್ರಕಲೆಯೆಂದು ಕರೆಯಬೇಕೆಂದೂ ವಾದಿಸಿದ್ದಾರೆ. ಇದರ ಮೂರು ಮುಖ್ಯ ಕೇಂದ್ರಗಳೆಂದರೆ ಗುಲೇರ್, ತಿರಸುಜನ್‌ಪುರ ಮತ್ತು ನೂರ್‌ಪುರ. ಇಲ್ಲಿಯ ರಾಜರ ಆಶ್ರಯದಲ್ಲಿ ಕಾಂಗ್ರ ಚಿತ್ರಕಲೆ ಬೆಳೆಯಿತು.

ಕಾಂಗ್ರ ಚಿತ್ರಕಲೆಯಲ್ಲಿ ರಜಪೂತ, ಮೊಗಲ್ ಮತ್ತು ಪಂಜಾಬಿನ ಜನಪದ ಶೈಲಿಗಳ ಮಿಳಿತವನ್ನು ಕಾಣುತ್ತೇವೆ. ಔರಂಗಜೇಬ್ ತನ್ನ ಆಸ್ಥಾನದ ಹಿಂದು ಕಲಾಕಾರರನ್ನು ರಾಜ್ಯದಿಂದ ಓಡಿಸಿದುದರಿಂದ, ಅವರು ನೆರೆ ರಾಜ್ಯಗಳಲ್ಲಿ ಆಶ್ರಯ ಪಡೆದರು. ಅವರಿಂದ ಬೆಳೆದ ಈ ಕಲೆಯಲ್ಲಿ ಅನೇಕ ಶೈಲಿಗಳುಂಟು. ಈ ಕಲೆ 18ನೆಯ ಶತಮಾನದಲ್ಲಿ ಜನ್ಮ ತಾಳಿದರೂ ಇದು ಹಠಾತ್ತನೆ ಉದ್ಭವಿಸಿದ ಸಾಂಸ್ಕೃತಿಕ ಕ್ರಿಯೆಯಲ್ಲ. ಉತ್ತರಭಾರತದಲ್ಲಿ ಭಕ್ತಿಪಂಥ, ಅದರಲ್ಲೂ ರಾಧಾಕೃಷ್ಣಪಂಥ ಬೆಳೆದಂತೆಲ್ಲ ಇಲ್ಲಿಯ ಗುಡ್ಡಗಾಡಿನ ಜನರಲ್ಲಿ ಉಂಟಾದ ಸಾಂಸ್ಕೃತಿಕ ಬದಲಾವಣೆಗಳೇ ಕಾಂಗ್ರ ಚಿತ್ರಕಲೆಯ ಉಗಮಕ್ಕೆ ಕಾರಣವೆಂಬುದು ವಿದ್ವಾಂಸರ ಮತ.

ಕಾಂಗ್ರ ಚಿತ್ರಕಲೆ ಅದು ಹುಟ್ಟಿ ಬೆಳೆದ ಪ್ರದೇಶಕ್ಕೆ ವಿಶಿಷ್ಟವಾದದ್ದು. ಆ ಚಿತ್ರಗಳಿಗೆ ಅಲ್ಲಿಯ ಬೆಟ್ಟಗುಡ್ಡಗಳೇ ಸ್ಫೂರ್ತಿ ನೀಡಿವೆ. ಉಡುಗೆ ತೊಡುಗೆಗಳಲ್ಲಿ ಆ ಪ್ರದೇಶದ ಛಾಯೆ ಎದ್ದುಕಾಣುತ್ತದೆ. ಚಿತ್ರಿತ ಕಥಾವಸ್ತುವಿಗೂ ಜನಪದ ಕಥೆಗಳ ಸ್ಪರ್ಶವಿದೆ. ಈ ವರ್ಣಮಯ ಹಿನ್ನೆಲೆಯಿಂದಾಗಿ ಕಾಂಗ್ರ ಅರ್ಥಪೂರ್ಣವಾಗಿರುವುದು.

ಕಾಂಗ್ರ ಚಿತ್ರಕಲೆಯಲ್ಲಿ ಪ್ರಯೋಗತಂತ್ರ ಕಡಿಮೆ. ಇದನ್ನು ಸರಿದೂಗಿಸುವುದಕ್ಕಾಗಿ ಚಿತ್ರಕಾರ ತನ್ನ ಕಲೆಯನ್ನೇ ಬಳಸುತ್ತಾನೆ. ಸ್ತ್ರೀ-ಪುರುಷರ ಅಂಗಾಂಗಗಳು, ಬೆಟ್ಟಗುಡ್ಡಗಳು ಇವನ್ನು ಪದೇ ಪದೇ ಬಳಸಿದರೂ ಬೇಸರ ತರಿಸದ ಜೀವಂತ ಕೃತಿಗಳನ್ನಾಗಿ ಮಾಡಲು ಆಶ್ಚರ್ಯಕರ ರೀತಿಯಲ್ಲಿ ಯಥಾವತ್ತಾಗಿ ಭಾವಪೂರ್ಣವಾಗಿ ಚಿತ್ರಿಸುತ್ತಾನೆ. ನಾಯಿಕೆಯ ಕಣ್ಣುಗಳು ಚಲಿಸುತ್ತಿವೆಯೋ ಎನ್ನುವಂತೆ ಭಾಸವಾಗುತ್ತದೆ. ಸಂಕೇತಗಳು ಬಹು ವಿರಳ. ಚಿತ್ರಕಾರನಿಗೆ ಪೂರ್ಣ ಸ್ವಾತಂತ್ರ್ಯ ನೀಡಿ ತನ್ನ ಸ್ಫೂರ್ತಿಗೆ ತಕ್ಕಂತೆ ಚಿತ್ರರಚನೆ ಮಾಡಲು ಅವಕಾಶ ಕಲ್ಪಿಸಿರುವುದೇ ಚಿತ್ರಗಳ ವೈವಿಧ್ಯಕ್ಕೆ ಕಾರಣವಾಗಿದೆ.

ಕಾಂಗ್ರ ಚಿತ್ರಕಲೆಯ ಮುಖ್ಯ ಅಂಶಗಳೆಂದರೆ ರೇಖಾಚಿತ್ರದ ವಿನ್ಯಾಸ, ಪ್ರಕಾಶಮಾನವಾದ ಬಣ್ಣ ಮತ್ತು ಅತಿಸೂಕ್ಷ್ಮ ಅಲಂಕಾರಗಳು. ಇದಕ್ಕಾಗಿ ಚಿತ್ರಕಾರ ಬಹು ಸೂಕ್ಷ್ಮವೂ ಮೃದುವೂ ಆದ ಕುಂಚಗಳನ್ನು ಬಳಸುತ್ತಿದ್ದರು. ಇವು ಅಳಿಲಿನ ಕೂದಲುಗಳಿಂದ ತಯಾರಿಸಿದುವು. ಚಿತ್ರಗಳನ್ನು ಬರೆಯುವುದಕ್ಕೆ ಮುಂಚೆ ಕೈಯಿಂದ ಮಾಡಿದ ಕಂದುಬಣ್ಣದ ಸಿಯಾಲ್‌ಕೋಟ್ ಕಾಗದದ ಮೇಲೆ ತಿಳಿಕೆಂಪು ಬಣ್ಣದಲ್ಲಿ ಕರಡನ್ನು ತಯಾರಿಸುತ್ತಿದ್ದರು. ಇದರ ಮೇಲೆ ಬಿಳಿಯ ಬಣ್ಣ ಬಳಿದು ಕಾಗದವನ್ನು ಮೃದುಮಾಡಿ, ರೇಖಾಚಿತ್ರವನ್ನು ಕಪ್ಪು ಅಥವಾ ಕಂದುಬಣ್ಣದಲ್ಲಿ ಬರೆದು ಅನಂತರ ಅವುಗಳಿಗೆ ಬಣ್ಣ ತುಂಬುತ್ತಿದ್ದರು. ಇವರು ವಿಶೇಷವಾಗಿ ಬಳಸುತ್ತಿದ್ದದ್ದು ಸ್ವಚ್ಛ ಕೆಂಪು, ಹಳದಿ, ನೀಲಿ ಮತ್ತು ಹಸುರುಬಣ್ಣ. 200 ವರ್ಷಗಳ ಅನಂತರವೂ ಈ ಚಿತ್ರಗಳ ಬಣ್ಣಗಳು ಹಾಗೆಯೇ ಇರುವುದು ಗಮನಾರ್ಹ.

ಕಾಂಗ್ರ ಚಿತ್ರಕಲೆಯಲ್ಲಿ ಯಥಾವತ್ ರೂಪಣವಿಲ್ಲ. ಸ್ತ್ರೀಯರು, ಬೆಟ್ಟಗುಡ್ಡ ಮುಂತಾದವನ್ನು ಚಿತ್ರಕಾರ ತನ್ನ ನೆನಪಿನ ಶಕ್ತಿಯಿಂದ ರಚಿಸಿದ್ದಾನೆ. ಸಾಮಾನ್ಯವಾಗಿ ತೆಳ್ಳಗೆ ಬಳುಕುವ ಹರಿಣಾಕ್ಷಿಯರಾಗಿ, ತುಂಬುಗಲ್ಲ ಮತ್ತು ನೇರ ಮೂಗುಗಳುಳ್ಳವರಂತೆ ಸ್ತ್ರೀಯರನ್ನು ಚಿತ್ರಿಸಲಾಗಿದೆ. ಆದರೂ ಪ್ರತಿಯೊಬ್ಬ ಚಿತ್ರಕಾರನೂ ಮುಖವನ್ನು ತನ್ನ ಅಭಿರುಚಿಗೆ ತಕ್ಕಂತೆ ಚಿತ್ರಿಸಿದ್ದಾನೆ. ಸಾಮಾನ್ಯವಾಗಿ ಸ್ತ್ರೀಯರ ಎಲ್ಲ ಚಿತ್ರಗಳು ಪಾರ್ಶ್ವ ದೃಶ್ಯದಲ್ಲಿ ಚಿತ್ರಿತವಾಗಿದೆ.

ಶೃಂಗಾರವೇ ಕಾಂಗ್ರ ಚಿತ್ರಕಲೆಯ ಜೀವಾಳ. ಶೃಂಗಾರದ ವಿವಿಧ ಮುಖಗಳು ಉತ್ತಮ ರೀತಿಯಲ್ಲಿ ವ್ಯಕ್ತವಾಗಿವೆ. ರಾಧಾ-ಕೃಷ್ಣ ಇಲ್ಲವೇ ಶಿವಪಾರ್ವತಿಯರೇ ಪ್ರತಿಯೊಂದು ಚಿತ್ರದ ಪ್ರಧಾನ ವ್ಯಕ್ತಿಗಳು. ಸ್ತ್ರೀ-ಪುರುಷರ ಪರಸ್ಪರ ಆಕರ್ಷಣೆಯೇ ಕಾಂಗ್ರ ಚಿತ್ರಕಾರನಿಗೆ ಅತಿ ಮುಖ್ಯ ವಸ್ತು. ಹೆಣ್ಣಿನ ಅಂಗಾಂಗಗಳ ಸೌಂದರ್ಯಕ್ಕೆ ಈ ಚಿತ್ರಕಾರ ಆದ್ಯತೆ ನೀಡಿದ್ದಾನೆ. ಮಿಕ್ಕೆಲ್ಲವೂ ಅವನಿಗೆ ಗೌಣ. ಪ್ರಕೃತಿ ಚಿತ್ರಣವೂ ಹೆಣ್ಣಿನ ಸೌಂದರ್ಯವನ್ನು ಪ್ರತಿಬಿಂಬಿಸುವ ಇಲ್ಲವೇ ಹೆಚ್ಚಿಸುವ ಸಾಧನವೆಂದೇ ಅವನ ಭಾವನೆ. ಈ ದೃಷ್ಟಿಯಿಂದ ಕಾಂಗ್ರ ಚಿತ್ರಕಲೆಗೆ ಸಮವಾದ ಕಲೆ ಭಾರತದಲ್ಲಿ ಮತ್ತೊಂದಿಲ್ಲ. ಇಷ್ಟಾದರೂ ಈ ಚಿತ್ರಕಲೆಯಲ್ಲಿ ಘನತೆ ಗಾಂಭೀರ್ಯಗಳನ್ನು ಮೀರಿದ ಅಶ್ಲೀಲತೆಗೆ ಆಸ್ಪದವಿಲ್ಲ. ಲೈಂಗಿಕ ಆಕರ್ಷಣೆಯ ಸಂಕೇತಗಳನ್ನು ಮಾತ್ರ ಕೆಲವೆಡೆ ಬಳಸಿದ್ದಾರೆಂದು ಆರ್ಚರ್ ಅಭಿಪ್ರಾಯಪಡುತ್ತಾನೆ.

ಕಾಂಗ್ರ ಚಿತ್ರಕಲೆಯ ಇನ್ನೊಂದು ವಿಶಿಷ್ಟ ಗುಣವೆಂದರೆ ಕಲಾವಿದನ ಚಿತ್ತವೃತ್ತಿ. ಹಿಮಾಲಯದ ಬೆಟ್ಟಗುಡ್ಡಗಳ ಜೀವನ ಕಷ್ಟಕರವಾದದ್ದು. ಈ ಕಷ್ಟಜೀವನದ ಚಿತ್ರಣವನ್ನು ಎಲ್ಲ ಕಾಂಗ್ರ ಚಿತ್ರಗಳಲ್ಲೂ ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಕಾಂಗ್ರ ಚಿತ್ರಕಾರನಿಗೆ ಪ್ರಕೃತಿಯಲ್ಲೂ ವಿಶೇಷ ಆಸಕ್ತಿ. ತನಗೆ ವಿಶೇಷವಾಗಿ ಪರಿಚಿತವಾಗಿರುವ ಬೀಯಾಸ್ ನದೀ ಕಣಿವೆ, ಬೆಟ್ಟಗುಡ್ಡ, ಅವುಗಳ ಮೇಲೆ ಛತ್ರಿಯಂತಿರುವ ಮರಗಳು, ಮಾವಿನ ತೋಪು, ಗುಡಿಸಲು, ಮಂಜುಮಿಶ್ರಿತ ಹೊಳೆ ತೊರೆ, ಮೃಗಪಕ್ಷಿ-ಇವೆಲ್ಲವನ್ನೂ ನೈಜವಾಗಿ ಚಿತ್ರಿಸಿದ್ದಾನೆ.

ಭಾಗವತ ಪುರಾಣ, ಗೀತಗೋವಿಂದ, ಬಾರಾಮಾಸಾ ಮುಂತಾದ ಕೃತಿಗಳ ಪರಿಚಯ ಚಿತ್ರಕಾರನಿಗೆ ಸ್ಪಷ್ಟವಾಗಿದೆ. ಅಲ್ಲಿಯ ನಾಯಿಕೆಯರ ಚಿತ್ರಣದಲ್ಲಿ ಅವನು ವಿಶೇಷ ಆಸಕ್ತಿ ತೋರಿದ್ದಾನೆ. ಹಿಂದಿ ಕವಿ ಕೇಶವದಾಸನ ರಸಿಕಪ್ರಿಯ ಗ್ರಂಥದಲ್ಲಿ ಕಾಣಬರುವ ಎಂಟು ರೀತಿಯ ನಾಯಿಕೆಯರನ್ನು ಚಿತ್ರಿಸಿ, ಆ ಗ್ರಂಥದಿಂದ ಆಯ್ದ ಶ್ಲೋಕಗಳನ್ನು ಆ ಚಿತ್ರಗಳ ಕೆಳಗೆ ಕೊಡಲಾಗಿದೆ. ಸ್ವಾಧೀನಪತಿಕಾ, ಉತ್ಕಾ, ವಾಸಕಶಯ್ಯಾ, ಅಭಿಸಂಧಿತಾ, ಖಂಡಿತಾ, ಪ್ರೋಷಿತಪತಿಕಾ, ವಿಪ್ರಲಬ್ಧಾ, ಅಭಿಸಾರಿಕಾ ಮೊದಲಾದ ಅಷ್ಟ ನಾಯಿಕೆಯರ ವಿರಹ, ಮಾನ ಮತ್ತು ಸಂಯೋಗಗಳು ಬಹು ವಿಶದವಾಗಿ ಚಿತ್ರಿತವಾಗಿವೆ. ರಾಧಾಕೃಷ್ಣರು ಸೂಚ್ಯವಾಗಿ ಆಯಾ ಋತುಗಳಿಗೆ ತಕ್ಕ ಉಡುಗೆ-ತೊಡುಗೆಗಳಲ್ಲಿ ಚಿತ್ರಿತರಾಗಿದ್ದಾರೆ. ಸಂಗೀತದ ರಾಗಗಳಿಗನುಗುಣವಾದ ರಾಗಾಮಾಲಿಕಾ ಚಿತ್ರಗಳೂ ಈ ಶೈಲಿಯಲ್ಲಿ ಹೇರಳವಾಗಿವೆ.

ಕಾಂಗ್ರ ಚಿತ್ರಕಾರನಿಗೆ ಪ್ರಿಯವಾದ ಇನ್ನೊಂದು ವಸ್ತುವೆಂದರೆ ಕೃಷ್ಣಲೀಲೆ. ಕೃಷ್ಣನ ಕೊಳಲಿಗೆ ಮಾರುಹೋದ ಗೋಪ ಗೋಪೀ ಗೋವುಗಳನ್ನು ಚಿತ್ರಿಸುವುದಕ್ಕೂ ಅವನಿಗೆ ವಿಶೇಷ ಆಸಕ್ತಿ. ಕಾಳಿಮರ್ದನ, ಗೋವರ್ಧನಗಿರಿಧಾರಿ, ಗೋಪಿಕಾ ವಸ್ತ್ರಾಪಹರಣ ಈ ಚಿತ್ರಗಳು ಹಲವಾರಿವೆ.

ಕಾಲಕ್ರಮದಲ್ಲಿ ಈ ಶೈಲಿಯಲ್ಲಿ ಭಾವಕ್ಕಿಂತ ಅಲಂಕಾರಕ್ಕೆ ಹೆಚ್ಚು ಪ್ರಾಧಾನ್ಯ ಸಲ್ಲಲಾರಂಭವಾಗಿ ಚಿತ್ರದ ಸತ್ವ ಕಡಿಮೆಯಾಯಿತು. ಆ ವೇಳೆಗೆ ಅದರ ಪೋಷಕರಾಗಿದ್ದ ರಾಜರೂ ಕ್ಷೀಣದೆಸೆಗೆ ಬರಲಾರಂಭಿಸಿದರು. ಹೀಗಾಗಿ ಕಾಂಗ್ರ ಚಿತ್ರಕಲೆ ಅವನತಿ ಹೊಂದಿ ಸಂಗ್ರಹಾಲಯಗಳಲ್ಲೂ ಅರಮನೆಗಳಲ್ಲೂ ಇರುವ ಕಲಾಕೃತಿಗಳಲ್ಲಿ ಮಾತ್ರ ಈಗ ಉಳಿದುಕೊಂಡಿದೆ.

ಕಾಂಗ್ರ ಚಿತ್ರಕಲೆ ಹೆಚ್ಚಾಗಿ ಅನಾಮಧೇಯವಾಗಿಯೇ ಉಳಿದಿದೆ. ಕೆಲವು ಚಿತ್ರಗಳಲ್ಲಿ ಮಾತ್ರ ಗುರುಸಹಾಯ, ಕುಶನ್‌ಲಾಲ್, ಹಸ್ತೂ, ಪುರ್ಖೂ ಮತ್ತು ರಾಮ ದಯಾಲ್ ಮುಂತಾದ ಚಿತ್ರಕಾರರ ಸಹಿಗಳು ಕಂಡುಬರುತ್ತವೆ. (ಎ.ವಿ.ಎನ್.)

**ಕಾವಿಕಲೆ:** ಕಂದುಗೆಂಪು ಬಣ್ಣದಲ್ಲಿ ನಿರ್ಮಿತವಾದ ಚಿತ್ರಗಳನ್ನು ಕಾವಿಕಲೆ ಎನ್ನುವರು. ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯ 100-200 ವರ್ಷಗಳ ಹಿಂದಿನ ದೇವಾಲಯಗಳಲ್ಲಿ ಈ ಚಿತ್ರಗಳು ವಿಶೇಷವಾಗಿವೆ. ಈ ಚಿತ್ರ ಕಲೆ ಕೆಂಪು ಹುರಿಮಂಜಿನ ಬಣ್ಣದಿಂದ ರಚನೆಯಾದ ಭಿತ್ತಿ ಚಿತ್ರಕಲೆಯಾಗಿದೆ. ಭಿತ್ತಿಚಿತ್ರಕಲೆಯಲ್ಲಿ ಶಿಷ್ಟಪದ ಮತ್ತು ಜನಪದ ಭಿತ್ತಿ ಚಿತ್ರಕಲೆ ಸಮ್ಮಿಶ್ರಗೊಂಡಿವೆ. ಕಂದುಬಣ್ಣದ ಚಿತ್ರವೆಂದರೆ ಈ ಬಣ್ಣದಲ್ಲಿ ರೂಪಗೊಂಡಿರುವ ದೇಶಿ ಪರಂಪರೆ, ಪುರಾಣ, ಮಹಾಕಾವ್ಯ, ಇತಿಹಾಸ-ಐತಿಹಾಸಿಕ ಮತ್ತು ಸಾಮಾಜಿಕ ಪುಣ್ಯಪುರುಷರ ಸಾಮಾನ್ಯರ ಚಿತ್ರಣಗಳ ನೈಜಪ್ರತೀಕವೇ ಆಗಿವೆ. ಈ ಕಾವಿ ಚಿತ್ರಕಲೆ ಕರಾವಳಿ ಪ್ರದೇಶದಲ್ಲಿ ಅದರಲ್ಲೂ ಹೆಚ್ಚಾಗಿ ಉತ್ತರಕನ್ನಡ ಜಿಲ್ಲೆಯ ಧಾರ್ಮಿಕ ಪ್ರೇರಣೆಯಿಂದ ದೇವಾಲಯಗಳಲ್ಲಿ, ಮಠ-ಮನೆಗಳಲ್ಲಿ ವಿವಿಧ ರೀತಿಯ ವಿನ್ಯಾಸಗಳಿಂದ ಅಲಂಕರಣಗೊಂಡಿದೆ. ಕಾವಿ ಚಿತ್ರಕಲೆ ದೇವತಾಚಿತ್ರಗಳಂತೆ, ಪ್ರಾಣಿ-ಪಕ್ಷಿಗಳ ಚಿತ್ರಗಳಂತೆ, ಸೃಜನಶೀಲ ರೂಪದಲ್ಲಿ ಕಾಣಿಸಿಕೊಂಡಿವೆ. ಇಂತಹ ಚಿತ್ರಕಲೆಯ ನೆಲೆಗಳನ್ನು ಆಧರಿಸಿ ಪಂಥಾನುಸಾರವಾಗಿ ಈ ರೀತಿ ವಿಂಗಡಿಸಬಹುದು: 1. ದೇವಾಲಯಗಳಲ್ಲಿ ಕಾವಿ ಭಿತ್ತಿ ಚಿತ್ರಕಲೆ. 2. ಮನೆಗಳಲ್ಲಿಯ ಭಿತ್ತಿ ಚಿತ್ರಕಲೆ. ದೇವಾಲಯಗಳಲ್ಲಿ ಕಾವಿ ಭಿತ್ತಿ ಚಿತ್ರಕಲೆಯನ್ನು ವೈಷ್ಣವ ದೇವಾಲಯಗಳಾದ ಹೊನ್ನಾವರದ ಶ್ರೀರಾಮ ಮಂದಿರದಲ್ಲಿ ಒಳಗಿನ ಛಾವಣಿ, ಗರ್ಭಗೃಹಗಳ ಮೇಲಿನ ಶಿಖರ-ಗೋಡೆಗಳಲ್ಲಿ ಕಾವಿಚಿತ್ರಗಳಿ

ರುವುದರನ್ನು ಕಾಣಬಹುದು. ಹೊರಬಿತ್ತಿಯಲ್ಲಿ ದಶಾವತಾರಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಬುದ್ಧ, ಕಲ್ಕಿ ಅವತಾರಗಳ ಚಿತ್ರಣದ ಮಧ್ಯೆ ಹನುಮಂತ, ಗರುಡರು, ಸರಸ್ವತಿ, ಜಯವಿಜಯರು, ಗಣಪತಿ, ದೇವಿ, ಅನಂತಶಯನ ವಿಷ್ಣು, ಕೃಷ್ಣ ರಾಕ್ಷಸರನ್ನು ಸಂಹರಿಸುತ್ತಿರುವುದು, ನಂದಿ, ಗಜೇಂದ್ರಮೋಕ್ಷ, ಲಕ್ಷ್ಮೀದೇವಿ, ಭಸ್ಮಾಸುರ, ಕಾಳಿಂಗಮರ್ದನ ಕೃಷ್ಣ, ಭೃಂಗಿ, ಮತ್ಸ್ಯಕನ್ಯೆ ಚಿತ್ರಗಳಿವೆ. ಗರ್ಭಗ್ರಹದ ಹೊರ ಚಿತ್ರಣ ಕಾವಿ ಬಣ್ಣದ ಹಿನ್ನಲೆಯ ಮೇಲೆ, ಬಿಳಿ ರೇಖೆಗಳಿಂದ ರಚನೆಯಾಗಿದೆ. ಈ

ವಾಮನ ಮತ್ತು ಬಲಿ ಚಕ್ರವರ್ತಿ, ಕಾವಿವರ್ಣ ಚಿತ್ರ

ಶೈಲಿಯ ಚಿತ್ರಣಗಳು ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿಯೂ ಇದೆ. ಈ ಚಿತ್ರಣದ ಜೊತೆ ಆನೆ, ಟಗರು, ಕುದುರೆ, ಮನುಷ್ಯ ಮತ್ತು ನಂದಿಯ ಮೇಲೆ ಕುಳಿತ, ದೇವತಾ ಪುರುಷರ ವೈವಿಧ್ಯಮಯ ಚಿತ್ರಗಳಿವೆ. ಹೊನ್ನಾವರದ ಗೋಪಾಲಕೃಷ್ಣ ದೇವಾಲಯ, ನವೀಕರಣಗೊಂಡಿರುವುದರಿಂದ, ಕಾವಿ ಭಿತ್ತಿ ಚಿತ್ರಕಲೆಯ ಸಂಪತ್ತನ್ನು ಕಳೆದುಕೊಂಡಿದ್ದರೂ ರಾಮಾಯಣ, ಮಹಾಭಾರತ, ದಶಾವತಾರ, ಚಿತ್ರಗಳನ್ನು ಮಾತ್ರ ಇನ್ನೂ ಕಾಣಬಹುದು ಇದರಂತೆಯೆ ಇಲ್ಲಿಯ ವೆಂಕಟರಮಣ ದೇವಾಲಯವನ್ನು ನವೀಕರಿಸಿದ್ದರೂ ಇಲ್ಲಿ ನಕ್ಷಾಚಿತ್ರಗಳು ಉಳಿದಿವೆ. ಭಿತ್ತಿಯ ಅಂಚು, ಸ್ತಂಬಗಳ ಮೇಲೆ ನಕ್ಷಾ ಚಿತ್ರಗಳನ್ನು ಬಿಡಿಸಲಾಗಿದೆ ಗರ್ಭಗೃಹದ ಎಡಬಲದಲ್ಲಿ ದ್ವಾರಪಾಲಕರಾದ ಜಯವಿಜಯರು ಪ್ರತಿಬಿಂಬಿತರಾಗಿದ್ದಾರೆ. ಹಳೀಪುರದ ಗೋಪಿವೆಂಕಟರಮಣ ದೇವಾಲಯದ ಹೊರ ಭಿತ್ತಿಯಲ್ಲಿ ದಶಾವತಾರಗಳನ್ನು ಒಂದೊಂದು ಅಂಕಣದಲ್ಲಿ ತೋರಿಸಲಾಗಿದೆ. ಸಿದ್ಧಾಪುರ ತಾಲೂಕಿನ ಬಿಳಗಿಯ ರಾಮಚಂದ್ರ ದೇವಾಲಯದಲ್ಲಿ, ಹೊರಭಿತ್ತಿಯ ಉದ್ದಕ್ಕೂ ಮಂಟಪಗಳಂತೆ ಸ್ಥಳವಿನ್ಯಾಸಗಳಿಸಿಕೊಂಡು ಚಿತ್ರಿಸಲಾಗಿದೆ. ದಶಾವತಾರ, ಸೇವಕರ ಮತ್ತು ಆನೆ ಚಿತ್ರಣಗಳು ಇಲ್ಲಿವೆ. ಗರ್ಭಗೃಹದ ಮೇಲೆ, ಶಿಖರದ ಸುತ್ತಲೂ ಋಷಿಮುನಿಗಳ, ಮಂಗಗಳ ನಕ್ಷಾಚಿತ್ರಗಳು ಇವೆ. ಸಿದ್ಧಾಪುರ ತಾಲೂಕಿನ ಬೇಡಕಣಿಯಲ್ಲಿ ಸೀತಾರಾಮಚಂದ್ರದೇವಾಲಯದ ಭಿತ್ತಿಯಲ್ಲಿ ದಶಾವತಾರ, ನಾರದ, ತುಂಬುರ, ಗರುಡ, ವಾಲ್ಮೀಕಿ, ಪರಿಚಾರಕಿಯರನ್ನು ಕಾವಿ ಚಿತ್ರದ ಮೂಲಕ ಅಲಂಕರಣಗೊಳಿಸಲಾಗಿದೆ.

ಕುಮಟ ತಾಲ್ಲೂಕಿನ ಅಘನಾಶಿನಿ ವೆಂಕಟರಮಣ ದೇವಾಲಯದಲ್ಲಿ, ಭಿತ್ತಿಯ ಸುತ್ತ ವೃತ್ತಾಕಾರದ ನಕ್ಷೆ, ಹೂಬಳ್ಳಿಯ ಚಿತ್ರಣಗಳಿವೆ. ಅಂಕೋಲ ತಾಲೂಕಿನಲ್ಲಿ, ಅವರ್ಸಾದ ಲಕ್ಷ್ಮೀನಾರಾಯಣ ದೇವಾಲಯದಲ್ಲಿ, ನಸುಕಪ್ಪು ವರ್ಣದ ಒಳ ಭಿತ್ತಿಯಲ್ಲಿ, ವೃತ್ತಾಕಾರದ ನಕ್ಷೆಗಳು, ವಿವಿಧ ರೇಖಾ ವಿನ್ಯಾಸದ ಸುಳಿವುಗಳು ರಚಿತವಾಗುವುದರೊಂದಿಗೆ ಹೊರ ಭಿತ್ತಿಯಲ್ಲಿ ವೃತ್ತಾಕಾರದ ನಕ್ಷೆಗಳು, ವಿವಿಧ ವಿನ್ಯಾಸದ ಸುಳಿವುಗಳು, ರಚಿತವಾಗುವುದ ರೊಂದಿಗೆ ಹೊರ ಭಿತ್ತಿಯಲ್ಲಿ ದಶಾವತಾರವನ್ನು ರೂಪಿಸಲಾಗಿದೆ. ಮತ್ಸ್ಯ ಅವತಾರದ ಚಿತ್ರದ ಮೇಲೆ ತೂಗುದೀಪ ಚಿತ್ರಿಸಿರುವುದು ಒಂದು ರೀತಿಯ ಅಲಂಕರಣವಾಗಿದೆ. ಶಿರಸಿಯ ಗೋಪಾಲಕೃಷ್ಣ ದೇವಾಲಯದಲ್ಲಿ, ನಕ್ಷಾರೂಪದ ವಿನ್ಯಾಸಗಳಿವೆ. ಹಗ್ಗ, ಎಲೆ ಮತ್ತು ಕಿಟಕಿ ಅಂಚುಗಳನ್ನು ಹೂವಿನ ನಕ್ಷೆಗಳಿಂದ ಅಲಂಕರಿಸಲಾಗಿದೆ. ಹೊನ್ನಾವರ ತಾಲೂಕಿನ ಗೇರುಸೊಪ್ಪೆಯ ಲಕ್ಷ್ಮೀವೆಂಕಟೇಶ ದೇವಾಲಯದಲ್ಲಿ ಗರ್ಭಗೃಹದ ಬಾಗಿಲಲ್ಲಿ ಜಯವಿಜಯರ ಚಿತ್ರಣವನ್ನು ಭಿತ್ತಿಯ ಸುತ್ತ ಕೃಷ್ಣಾರ್ಜುನರ ಯುದ್ಧ, ದೃಶ್ಯ, ಕಮಲ, ರಾಜರಾಣಿಯರು, ನರಸಿಂಹ, ಅರ್ಜುನ, ಸುಧನ್ವರ ಯುದ್ಧ, ಅರ್ಜುನ ತಾಮ್ರಧ್ವಜರ ಯುದ್ಧದ ಚಿತ್ರಣವಿದೆ. ಹೆಚ್ಚಿನದಾಗಿ ಮಹಾಭಾರತದಲ್ಲಿ ಬರುವ ಬೃಹನ್ನಳೆ, ಭೀಮ, ದ್ರೌಪದಿಯರ ಚಿತ್ರವನ್ನು ಚಿತ್ರಿಸಿರುವುದು, ಬಲಿಚಕ್ರವರ್ತಿ, ಸರಸ್ವತಿ, ಹೊರಭಿತ್ತಿಯಲ್ಲಿ ಸಾಲಾಗಿ ವಿಷ್ಣುವಿನ ದಶಾವತಾರಗಳ ದೃಶ್ಯವಿದೆ. ಒಳಭಿತ್ತಿಯಲ್ಲಿ ಕಾಳಿಂಗಮರ್ದನ ಕೃಷ್ಣ, ಸರಸ್ವತಿ, ಲಕ್ಷ್ಮೀ, ಗಣಪತಿ, ಆಂಜನೇಯ, ಗರುಡ, ಜಯವಿಜಯರ ಚಿತ್ರಣವಿದೆ. ಮಂಟಪದ ಮೇಲೆ ಕಳಶ, ಮಂಟಪದ ಸುತ್ತಲೂ ಹೂಬಳ್ಳಿಯ ಚಿತ್ರಣಗಳಿಂದ ಅಲಂಕರಣಗೊಂಡಿವೆ.

ಚಂದಾವರದ ಮಾರುತಿ ದೇವಾಲಯ ಹೊನ್ನಾವರದ ಮಾರುತಿ ದೇವಾಲಯಗಳಲ್ಲಿ ಒಳ ಮತ್ತು ಹೊರಭಿತ್ತಿಯಲ್ಲಿ ದಶಾವತಾರ ಕೃಷ್ಣಕಥಾನಕ, ಆಂಜನೇಯನ ಶೌರ್ಯ ತೋರಿಸುವ ಚಿತ್ರಗಳಿವೆ. ಈ ಚಿತ್ರಗಳ ಮಧ್ಯ ವ್ಯಕ್ತಿಚಿತ್ರಣಗಳೂ ಇವೆ.

ವೈಷ್ಣವ ಪಂಥಗಳ ದೇವಾಲಯಕ್ಕೆ ಹೋಲಿಸಿದರೆ ಶೈವ ಪಂಥದ ದೇವಾಲಯಗಳಲ್ಲಿ ಕಾವಿಕಲೆ ಕಡಿಮೆಯಿದ್ದರೂ ಮೂಲ ಸ್ವರೂಪವನ್ನು ಉಳಿಸಿಕೊಂಡು ಬಂದಿರುವುದು ಒಂದು ವಿಶೇಷ: ಹೊನ್ನಾವರ ತಾಲೂಕಿನ ಗುಣವಂತೆ ಶಂಭುಲಿಂಗೇಶ್ವರ ದೇವಾಲಯದಲ್ಲಿ, ಭಿತ್ತಿ ಕಾವಿ ಚಿತ್ರವನ್ನೊಳಗೊಂಡಿದೆ. ಇಲ್ಲಿಯ ವೃತ್ತಾಕಾರದ ನಕ್ಷೆಗಳು ಶಿಷ್ಟಸಂಪ್ರದಾಯಗಳನ್ನು ಉಳಿಸಿಕೊಂಡರೆ, ಮಾನವಾಕೃತಿಗಳು ಜನಪದ ಶೈಲಿಯಲ್ಲಿದೆ. ಇಲ್ಲಿ ವ್ಯಕ್ತಿಗಳು ನಿಂತಿರುವ ಭಂಗಿಯಲಿದ್ದೂ, ಪಾದದವರೆಗೂ ಇಳಿದುಕೊಂಡಿರುವ ಪಂಚೆ, ಉದ್ದವಾದ ನಿಲುವಂಗಿ, ಕೊರಳ ಆಭರಣಗಳನ್ನು ರೇಖಪ್ರಧಾನವಾಗಿ ತೋರಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಗಳ ವಿಷ್ಣುದೇವಾಲಯಗಳಲ್ಲಿ ಇದ್ದಂತೆ, ಹೆಚ್ಚುಕಡಿಮೆ ಸರಿಸಮಾನ ವಾಗಿ ಶಕ್ತಿ ದೇವಾಲಯಗಳಲ್ಲಿ ಕಾವಿ ಚಿತ್ರಕಲೆ ನಿರ್ಮಿತವಾಗಿದೆ. ಶಿರಸಿಯ ಶ್ರೀ ಮಾರಿಕಾಂಬ ಗುಡಿಯ ಹೊರಭಿತ್ತಿಯಲ್ಲಿ ದೇವಿ ಚಿತ್ರಗಳು, ಹನುಮಂತ, ಗರುಡರು ರಾಜರ ಚಿತ್ರಗಳು ಮತ್ತು ನಕ್ಷಾ ಚಿತ್ರಗಳಿವೆ. ಮಹಿಷನನ್ನು ಕೊಲ್ಲುವ ದೇವಿಯ ವಿವಿಧ ರೂಪಗಳು ಇಲ್ಲಿವೆ. ದೇವಾಲಯದ ಪ್ರವೇಶದ್ವಾರದ ಬಲಭಾಗದಲ್ಲಿ ಆಂಜನೇಯನನ್ನು ಚಿತ್ರಿಸಲಾಗಿದೆ. ಎಡಭಾಗದಲ್ಲಿ ಗರುಡನನ್ನು ಚಿತ್ರಿಸಲಾಗಿದೆ. ಹೆಚ್ಚಿನ ಕಡೆ ಆಂಜನೇಯನನ್ನು ಕಚ್ಚೆ ಧರಿಸಿದಂತೆ ಚಿತ್ರಿಸಿದರೆ, ಇಲ್ಲಿ ಪಾದದವರೆಗೂ ಇಳಿಬಿಟ್ಟಿರುವ ಧೋತರವನ್ನು ಚಿತ್ರಿಸಿರುವುದು ವಿಶೇಶ. ಒಳಭಿತ್ತಿಯಲ್ಲಿ ಸಾಲಾಗಿ ವೃತ್ತಾಕಾರದ ನಕ್ಷೆಗಳನ್ನು ಚಿತ್ರಿಸಲಾಗಿದೆ. ಪೂರ್ವಮಂಟಪಲ್ಲಿ ರಾಮಾಯಣ ದೃಶ್ಯ, ಶಿಶು ಕೃಷ್ಣ ಅರಳಿ ಎಲೆಯ ಮೇಲೆ ಮಲಗಿರುವ ದೃಶ್ಯ, ದಶಾವತಾರ ಕಾಣಬಹುದು. ಮಂಟಪದಲ್ಲಿ ರಾಮ, ಸೀತೆ, ಗರುಡ, ದೇವತಾಪುರುಷರು, ರಾಜರು, ನಂದಿಯಮೇಲೆ ಕುಳಿತ ಶಿವ, ಕೃಷ್ಣರ ಚಿತ್ರಗಳಿವೆ. ದಕ್ಷಿಣಮಂಟಪದ ಭಿತ್ತಿಯಲ್ಲಿ ವೃತ್ತಾಕಾರದ ನಕ್ಷೆಗಳಲ್ಲದೆ, ಹೂಬಳ್ಳಿಗಳ ಚಿತ್ರಣವಿದೆ. ಹೊನ್ನಾವರದ ಶಾರದಾಂಬ ದೇವಾಲಯದಲ್ಲಿ, ಗರ್ಭಗೃಹದಲ್ಲಿ ಸುತ್ತಲಿನ ಭಿತ್ತಿ ಎಲೆಗಳಿಂದ ಅಲಂಕರಣಗೊಳಿಸಲಾಗಿದೆ. ಎಲೆ, ಕಾಂಡ, ಹಣ್ಣುಕಾಯಿಗಳನ್ನು ಚಿತ್ರಿಸಿ ಗಿಡದ ರೂಪ ಚಿತ್ರಗೊಳಿಸಲಾಗಿದೆ. ಮಾವಿನಕುರ್ವೆಯ ಅಮ್ಮನವರ ದೇವಾಲಯದಲ್ಲಿ ಹೊರಭಿತ್ತಿಯಲ್ಲಿ ದೇವಿ ಚಿತ್ರಗಳು, ಶೇಷಶಯನ ವಿಷ್ಣುವಿನ ಚಿತ್ರಣಗಳಿವೆ. ಕುಮಟ ತಾಲೂಕಿನ ಸಾಂತಗಲ್ಲಿನಲ್ಲಿ ಶಾಂತಿಪರಮೇಶ್ವರಿ ದೇವಾಲಯದಲ್ಲಿ, ಹೊರಭಿತ್ತಿಯಲ್ಲಿ ಹೂಬಳ್ಳಿ, ಹಗ್ಗದ ನಕ್ಷೆ, ಕಟ್ಟಡದ ವಿನ್ಯಾಸಗಳಿವೆ. ಕುಮಟದ ಮಾಲಸ ನಾರಾಯಣ ದೇವಾಲಯದ ಒಳಭಿತ್ತಿಯಲ್ಲಿ ಚಂದ್ರಮಂಡಲ, ಸೂರ್ಯಮಂಡಲ, ಹೊರಭಿತ್ತಿಯಲ್ಲಿ ದಶಾವತಾರದ ಚಿತ್ರಗಳ ಮಧ್ಯ ಶಿವ, ಬ್ರಹ್ಮ, ಕಾಳಿಂಗಮರ್ಧನ ಕೃಷ್ಣ, ರಾಧೆಯರ ಚಿತ್ರಣವಿದೆ. ಬಳಲೆಯ ದೇವಿ ಮಂದಿರದಲ್ಲಿ ಒಳಭಾಗದ ಭಿತ್ತಿಯಲ್ಲಿ ಜ್ಯಾಮಿತಿ ಉಪಕರಣ ಬಳಸಿ ವಿವಿಧ ಬಗೆಯ ಎಲೆ ಹೂಗಳ ರಚನೆಯಿಂದ ವಿನ್ಯಾಸಗೊಳಿಸಲಾಗಿದೆ. ಹೊರಭಿತ್ತಿಯಲ್ಲಿ ಎರಡು ವೃತ್ತಾಕಾರದ ನಕ್ಷೆ, ಕೆಳಗೆ ಟೊಂಗೆಗಳನ್ನು ರಚಿಸಿ, ಗಿಡದ ರೂಪ ಕೊಡಲಾಗಿದೆ. ಅಂಕೋಲ ತಾಲೂಕಿನ ಶಟಗೇರಿಯಲ್ಲಿ ಒಳಭಿತ್ತಿಯಲ್ಲಿ ವಿವಿಧ ವಿನ್ಯಾಸದಲ್ಲಿನ ಸುಳಿವುಗಳು, ಹೊರಭಿತ್ತಿಯಲ್ಲಿ ದ್ವಾರಪಾಲಕರ ಮತ್ತು ವೃತ್ತದ ನಕ್ಷೆಗಳಿವೆ ಸದಾಶಿವಘಡದ ದುರ್ಗಾದೇವಾಲಯದಲ್ಲಿ ಭಿತ್ತಿಯನ್ನು ವೈವಿಧ್ಯಮಯ ನಕ್ಷೆಗಳಿಂದ ಅಲಂಕರಿಸಲಾಗಿದೆ.

ಗಾಣಪತ್ಯ ದೇವಾಲಯಗಳ ಕಾವಿ ಚಿತ್ರಕಲೆಗಳಲ್ಲಿ ಬನವಾಸಿ ಮಧುಕೇಶ್ವರ ದೇವಾಲಯದ ಆವರಣದಲ್ಲಿ ಗಣಪತಿ ಮಂಟಪದ ಗರ್ಭಗೃಹದಲ್ಲಿ ಕಾವಿಬಣ್ಣ ಲೇಪಿಸಿ ರೇಖೆಗಳನ್ನು ಬಿಡಿಸಲಾಗಿದೆ. ಕಂಬದ ಮೇಲೆ, ದ್ವಾರಪಾಲಕರ ಚಿತ್ರಗಳು ಮತ್ತು ನಕ್ಷಾ ವಿನ್ಯಾಸಗಳಿವೆ. ಹೊನ್ನಾವರದ ಗಣಪತಿ ದೇವಾಲಯದಲ್ಲಿ ಹೊರಭಿತ್ತಿಯಲ್ಲಿ ವೃತ್ತಾಕಾರದ ವಿನ್ಯಾಸದ ನಾಲ್ಕು ಎಸಳಿನ ಹೂವನ್ನು ರಚಿಸಲಾಗಿದೆ. ಅಘನಾಶಿನಿಯ ಅಗಸೆ ವಿನಾಯಕ ದೇವಾಲಯ ದಲ್ಲಿ, ದ್ವಾರದ ಬಾಗಿಲಿನಲ್ಲಿ ದ್ವಾರಪಾಲಕರ ಚಿತ್ರಣ ಇಂದಿಗೂ ಉಳಿದುಬಂದಿವೆ.

ಉತ್ತರ ಕನ್ನಡ ಜಿಲ್ಲೆಯ ದೇವಾಲಯಗಳಲ್ಲಷ್ಟೇ ಅಲ್ಲದೆ ಇಲ್ಲಿನ ಮನೆಗಳಲ್ಲೂ ಕಾವಿ ಭಿತ್ತಿ ಚಿತ್ರಗಳಿಂದ ಅಲಂಕರಿಸಲಾಗಿದೆ. ಉದಾ: ಬಿಳಗಿಯ ತಿಮ್ಮಣ್ಣ ಪೈ, ಗೋಕರ್ಣದ ವಿ.ಎಸ್. ಕಾಮತ್, ಎನ್.ಎಂ. ಜೋಷಿ, ಅವರ್ಸಾದ ನಾಗೇಶ್ ಶೆಣೈ ಇವರ ಮನೆಗಳಲ್ಲಿ ಈ ಕಾವಿಚಿತ್ರಕಲೆಗಳನ್ನು ಕಾಣಬಹುದು. ಮನೆಯಲ್ಲಿ ವಂಶಸ್ಥರ ಚಿತ್ರಗಳು, ವೃತ್ತಾಕಾರದ ಚಿತ್ರಗಳು ವೈವಿಧ್ಯಮಯ ವಿನ್ಯಾಸದಲ್ಲಿ ರಚಿತಗೊಂಡಿವೆ. ಹೀಗೆ ರಚಿತವಾದ ಈ ಕಾವಿಕಲೆ ಇಲ್ಲಿಯ ಕಲಾವಿದರ ಪ್ರತಿಭೆ, ಪರಿಶ್ರಮ, ಆಲೋಚನಾ ಪರಿಣತೆಯನ್ನು ತೋರಿಸುವುದ ರೊಂದಿಗೆ ಜಾನಪದ ಕಲಾ ಪರಂಪರೆಯಲ್ಲಿ ಮಹತ್ವದ ಸ್ಥಾನವನ್ನು ಗಳಿಸಿದೆ. (ಕೆ.ಜಿ.ಬಿ.)

**ಭಿತ್ತಿ ಚಿತ್ರಗಳ ದಾಖಲಾತಿ:** ಕಾಲಕಾಲಕ್ಕೆ ಮೂಲ ಆಕರಗಳು ಅವು ಇರುವ ಸ್ವರೂಪ ದಲ್ಲಿಯೇ ಭಾಷೆ, ನಕ್ಷೆ, ರೇಖಾವಿನ್ಯಾಸ, ಛಾಯಾಚಿತ್ರ, ಸಾಂಖ್ಯಿಕ ಅಥವಾ ಗಣಕೀಕರಣ ಇತ್ಯಾದಿಗಳಲ್ಲಿ ಛಾಯಾಗ್ರಹಣದ ಮೂಲಕ ಮಾಡುವ ವೈಜ್ಞಾನಿಕ ಸಂರಕ್ಷಣೆಯೇ ದಾಖಲಾತಿ. ಮೂಲ ಆಕರ ತೀರ ಶಿಥಿಲವಾಗಿರುವ ಸಂದರ್ಭದಲ್ಲಿ ಈ ದಾಖಲೆಯೇ ಮೂಲದಂತೆ ಉಪಯುಕ್ತವಾಗಬಲ್ಲದು. ದಾಖಲಾತಿಗೆ ತನ್ನದೇ ಆದ ವಿಶಿಷ್ಟ ಮೌಲ್ಯ ಹಾಗೂ ಸೌಲಭ್ಯಗಳಿವೆ. ಸೂಕ್ಷ್ಮ ಉಪಕರಣವಾದ ಕ್ಯಾಮರಿದ ಮೂಲಕ ಒಂದೇ ಆಕರವನ್ನು ಕಾಲಕಾಲಕ್ಕೆ ಮರು ದಾಖಲಿಸುವುದರಿಂದ ಮೂಲ ಆಕರದಲ್ಲಿಯ ಅತಿಸೂಕ್ಷ್ಮ ವ್ಯತ್ಯಾಸ, ಬದಲಾವಣೆಗಳನ್ನೂ ಸುಲಭವಾಗಿ ಗುರುತಿಸಬಹುದು. ಅಲ್ಲದೆ ಕಲೆಯ-ವಿಶೇಷವಾಗಿ ಭಾರತದ ಕಲೆಯ, ಇತಿಹಾಸದ ಅಭ್ಯಾಸಿಗಳಿಗೆ ಕಲಾಕೃತಿಗಳ ಛಾಯಾಗ್ರಹಣ ಮೂಲಭೂತ ಆವಶ್ಯಕತೆಗಳಲ್ಲಿ ಒಂದು. ಇದರಿಂದಾಗಿ ಪ್ರಪಂಚದ ಮೂಲೆ ಮೂಲೆಯ ಕಲಾವಸ್ತುವಿನ ಚಿತ್ರಗಳು ನೇರವಾಗಿ ಸಂಶೋಧಕರಿಗೆ ಲಭ್ಯವಾಗಿವೆ. ಭಾರತದಂತಹ ವಿಶಾಲ, ವೈವಿಧ್ಯ ಶ್ರೀಮಂತ ಕಲಾಪರಂಪರೆ ಯಿರುವ ದೇಶದಲ್ಲಿ ಎಲ್ಲ ಸಂಶೋಧಕರಿಗೂ ಮೂಲಕೃತಿಯಿರುವಲ್ಲಿಗೇ ಹೋಗಿ ಅವುಗಳ ಅಧ್ಯಯನ ಕೈಗೊಳ್ಳುವುದು ಅನಿವಾರ್ಯ ಕಾರಣಗಳಿಂದ ಸಾಧ್ಯವಾಗುವುದಿಲ್ಲ.

ಛಾಯಾಗ್ರಹಣ ತಂತ್ರದ ಆವಿಷ್ಕಾರ ವೈಜ್ಞಾನಿಕ ದಾಖಲಾತಿಗೆ ಹೊಸ ಆಯಾಮವನ್ನೇ ಒದಗಿಸಿದೆ. ಈ ತಂತ್ರವನ್ನು ಬಳಸಿ ಕಲಾಕೃತಿ, ಸ್ಮಾರಕಗಳ ಸವಿವರ ಛಾಯಾಚಿತ್ರಗಳನ್ನು ಬಹುಬೇಗ, ಸುಲಭವಾಗಿ ಹಾಗೂ ಹೆಚ್ಚು ಸಂಖ್ಯೆಯಲ್ಲಿ ತಯಾರಿಸುವಂತಾಯಿತು. ವರ್ಣ ಛಾಯಾಚಿತ್ರಣ ಕಲೆ ಮತ್ತು ಮುದ್ರಣ ತಂತ್ರಜ್ಞಾನಗಳಲ್ಲಿ ಆಗಿರುವ ಪ್ರಗತಿಯ ಪರಿಣಾಮವಾಗಿ ಕಲೆಗಳನ್ನು ಕುರಿತ ಪ್ರಕಟಣೆಗಳು ಸಂಶೋಧಕರಿಗೆ ವಿದ್ವಾಂಸರಿಗೆ ವರವಾಗಿ ಪರಿಣಮಿಸಿತಲ್ಲದೆ; ಜನಸಾಮಾನ್ಯರು ಹಾಗೂ ಕಲಾರಸಿಕರಿಗೆ ಭಾರತೀಯ ಕಲೆಯ ಸೊಬಗನ್ನು ಸವಿಯಲು ಅಪರಿಮಿತ ಅವಕಾಶ ಒದಗಿಸಿತು. ಅದರಲ್ಲಿಯೂ ಇತ್ತೀಚಿನ ದಶಕಗಳ ಬೆಳವಣಿಗೆಯಾದ ಗಣಕೀಕೃತ ಅಥವಾ ಸಾಂಖ್ಯಿಕ ಛಾಯಾಗ್ರಹಣ (ಡಿಜಿಟಲ್ ಫೋಟೋಗ್ರಫಿ) ಇನ್ನಷ್ಟು ಅದ್ಭುತಗಳನ್ನು ಸೃಷ್ಟಿಸಿ ಸಂಶೋಧಕರಿಗೆ ಸಹಕರಿಸುತ್ತಿರುವ ತಂತ್ರಜ್ಞಾನವಾಗಿದೆ. ಇದರ ಸೂಕ್ತ ಬಳಕೆಯಿಂದ ನಮ್ಮ ಕಲಾಕೃತಿಗಳನ್ನು ಇನ್ನಷ್ಟು ನಿಖರವಾಗಿ, ಉತ್ತಮವಾಗಿ ದಾಖಲಿಸಲು ಮತ್ತು ಪ್ರಪಂಚದಾದ್ಯಂತ ಅಧಿಕ ಸಂಖ್ಯೆಯಲ್ಲಿ ಜನರ ಬಳಿಗೆ ಒಯ್ಯುವ ಪ್ರಯತ್ನ ಮಾಡಲು ಸಾಧ್ಯವಾಗಿದೆ. ಇಂತಹ ಪ್ರಯತ್ನಗಳಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ತೀರ ಇತ್ತೀಚಿಗೆ ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿಯ ಭಿತ್ತಿಚಿತ್ರಗಳನ್ನು ದಾಖಲಿಸಿ ಸಂಶೋಧಕರಿಗೂ ಜನಸಾಮಾನ್ಯರಿಗೂ ಪ್ರಸ್ತುತಪಡಿಸಿರುವುದು ಪ್ರಮುಖವಾದ್ದು.

ಅಜಂತದ ಭಿತ್ತಿಚಿತ್ರಗಳು ಇಂದು ಪ್ರಪಂಚದಾದ್ಯಂತ ಜನಪ್ರಿಯವಾಗಿದ್ದು ಕಲಾಭಿಜ್ಞರನ್ನು, ರಸಿಕರನ್ನು ಆಕರ್ಷಿಸುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ ಸುಮಾರು ಒಂದು ಶತಮಾನದಿಂದ ಕಾಲಕಾಲಕ್ಕೆ ಅವುಗಳ ಪ್ರತಿಗಳನ್ನು ತೆಗೆದು ಪ್ರಕಟಿಸಿರುವ ವರ್ಣಚಿತ್ರಗಳೇ. ಇಂತಹ ದಾಖಲಾತಿಗಳಿಂದ ಆ ಭಿತ್ತಿಚಿತ್ರಗಳಿಗೆ ಭಾರತದ ಕಲೆಯ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನ ಲಭಿಸಿರುವುದಷ್ಟೇ ಅಲ್ಲದೆ ಪ್ರಪಂಚದ ಕಲಾ ಇತಿಹಾಸ ಪರಂಪರೆಯ ತಾಣವಾಗಿಯೂ ಮಾನ್ಯತೆ ಗಳಿಸಿದೆ. ಆದರೆ ಭಿತ್ತಿಚಿತ್ರಗಳ ಅಭಿಜಾತ ಕಲಾಪರಂಪರೆ ಅಜಂತದಲ್ಲಿ ಉಗಮಿಸಿ ಅಲ್ಲಿಗೇ ನಿಲ್ಲದೆ ಮಧ್ಯಯುಗ ಹಾಗೂ ತದುತ್ತರ ಕಾಲಗಳ, ನಿಂತ ನೀರಾಗಿ ಏಕತಾನತೆ ಮೆರೆವ ಚಿತ್ರಗಳ ಹೊರತಾಗಿಯೂ ನಿರಂತರವಾಗಿ ಹರಿದಿದೆ. ದಕ್ಷಿಣ ಭಾರತದಲ್ಲಿಯೂ ಈ ಕಲೆಯ ಅಳಿದುಳಿದ ಕುರುಹುಗಳು ಚೆದುರಿದಂತೆ ಅಲ್ಲಲ್ಲಿ ಕಂಡುಬರುತ್ತವೆ. ಉದಾ: ಬಾದಾಮಿಯ ಮೂರನೆಯ ಗುಹೆಯಲ್ಲಿ ಅಜಂತ ಪರಂಪರೆಯ ಮುಂದುವರಿಕೆಯ ಚಿತ್ರಗಳನ್ನು ಹೆಸರಿಸಬಹುದು. ಕೆಲವೇ ದಶಕಗಳ ಹಿಂದೆ ಸಾಕಷ್ಟು ವಿಸ್ತಾರವಾದ ಪ್ರದೇಶದಲ್ಲಿ ಉಳಿದಿದ್ದ ಈ ಚಿತ್ರಗಳು ಇಂದು ಕೆಲವೇ ಚದರಡಿಗಳಿಗೆ ಸೀಮಿತವಾಗಿವೆ. ಮೂಲಚಿತ್ರಗಳ ಸೊಬಗು ತಿಳಿಯಬೇಕಾದರೆ ಈಗ ಸಹಾಯಕವಾಗುವುದು ಕಾಲಕಾಲಕ್ಕೆ ತಯಾರಿಸಿದ ಪ್ರತಿಕೃತಿ, ವಿವರಣೆ, ಛಾಯಾಚಿತ್ರ, ರೇಖಾಚಿತ್ರಗಳೇ.

ದಕ್ಷಿಣಭಾರತದಲ್ಲಿ ಈಗ ಇದ್ದುದರಲ್ಲಿ ಉತ್ತಮವಾಗಿ ಉಳಿದಿರುವ ಚೋಳರ ಕಾಲದ ಭಿತ್ತಿಚಿತ್ರಗಳು ವೆಪ್ಪತ್ತೂರು, ತಿರುಪುಲಿವನಂ ಮತ್ತು ತಂಜಾವೂರಿನ ಬೃಹದೀಶ್ವರ ದೇವಾಲಯಗಳಲ್ಲಿವೆ. ಚೋಳರ ಕಾಲದಲ್ಲಿ ಬಹುಶಃ ಭಿತ್ತಿಚಿತ್ರಗಳಿಂದ ಅಲಂಕರಿಸುವುದು ದೇವಾಲಯ ನಿರ್ಮಾಣದ ಒಂದು ಅವಿಭಾಜ್ಯ ಅಂಗವಾಗಿತ್ತೆನಿಸುತ್ತದೆ. ಅದರಲ್ಲಿಯೂ ಶೈಲೀಯ ವಿವರ, ನಿರ್ವಹಣೆ, ವಸ್ತು ಹಾಗೂ ವರ್ಣಸಂಯೋಜನೆಯ ದೃಷ್ಟಿಯಿಂದ ತಂಜಾವೂರಿನ ಚಿತ್ರಗಳು ಅಜಂತಾದಲ್ಲಿಯ ಚಿತ್ರಗಳಿಗೆ ಸರಿಸಮವೆನ್ನಲಾಗದಿದ್ದರೂ ಅದರ ಅನಂತರ ಸ್ಥಾನಪಡೆಯುವಷ್ಟು ಶ್ರೇಷ್ಠಮಟ್ಟದವಾಗಿವೆ.

ಬೃಹದೀಶ್ವರ ದೇವಾಲಯ ಚೋಳ ಅರಸ ಒಂದನೆಯ ರಾಜರಾಜ ತನ್ನ ಇಷ್ಟದೈವ ಶಿವನಿಗಾಗಿ ಕಟ್ಟಿಸಿದ್ದು. ದಕ್ಷಿಣಭಾರತದ ದ್ರಾವಿಡ ಶೈಲಿಯ ಪರಾಕಾಷ್ಠತೆಯ ಹಂತವಾಗಿ ಮೆರೆಯುತ್ತಿರುವ ಈ ದೇವಾಲಯ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಸಂರಕ್ಷಿತ ಸ್ಮಾರಕ, ವಿಶ್ವ ಪರಂಪರೆಯ ತಾಣ. ಈ ದೇವಾಲಯದ ಗರ್ಭಗೃಹದ ಸುತ್ತಲೂ ಇರುವ ಪ್ರದಕ್ಷಿಣಾಪಥದ ಗೋಡೆಗಳ ಮೇಲೆ ಸು.2160ಚ.ಮೀ ವ್ಯಾಪಕ ಪ್ರದೇಶದ ಪ್ರತಿಯೊಂದು ಅಂಗುಲವೂ ವರ್ಣಚಿತ್ರಗಳಿಂದ ತುಂಬಿದೆ. 1008-12ರ ಅವಧಿಯಲ್ಲಿ ರಚಿತವಾದ ಈ ಚಿತ್ರಗಳು ಪ್ರದಕ್ಷಿಣಾಪಥದ ಎರಡೂ ಒಳಬದಿಗಳಲ್ಲಿವೆ. ಇವುಗಳಲ್ಲಿ ಮುಖ್ಯವಾದ ನಾಲ್ಕರಲ್ಲಿ ದಕ್ಷಿಣಾಮೂರ್ತಿ, ತಮಿಳು ಶೈವಸಂತ ಸುಂದರರ್ ಅವರ ಕಥೆ, ತ್ರಿಪುರಾಂತಕಶಿವ ಮತ್ತು ರಾಜರಾಜಚೋಳ ತನ್ನ ಕುಟುಂಬವರ್ಗದವರೊಡನೆ ಚಿದಂಬರದ ನಟರಾಜನನ್ನು ಪೂಜಿಸುತ್ತಿರುವ ದೃಶ್ಯಗಳಿವೆ. ಅದ್ಭುತ ಕಲ್ಪನೆ, ವರ್ಣ ಸಂಯೋಜನೆ, ಐತಿಹಾಸಿಕ ವಿವರಗಳಿಂದ ಶ್ರೀಮಂತವಾಗಿರುವ ಈ ಮೂಲ ಚಿತ್ರಗಳು 16ನೆಯ ಶತಮಾನದ ವೇಳೆಗಾಗಲೇ ಸಾಕಷ್ಟು ಹಾಳಾಗಿದ್ದವು. ತಂಜಾವೂರಿನ ನಾಯಕರ ಕಾಲದಲ್ಲಿ ಈ ಮೂಲ ಚಿತ್ರಗಳ ಮೇಲೆಯೆ ತಮ್ಮ ವರ್ಣಚಿತ್ರಗಳನ್ನು ಬಿಡಿಸಿದ್ದರು. 1930ರ ದಶಕದಲ್ಲಿ ಚೋಳರ ಕಾಲದ ಮೂಲಚಿತ್ರಗಳು ಮೊದಲಬಾರಿಗೆ ಬೆಳಕು ಕಂಡವು. ಅಂದಿನಿಂದ ಇವು ಭಾರತದ ಕಲೆಯ ಇತಿಹಾಸದಲ್ಲಿ ಆ ಕಾಲದ ಅನನ್ಯ ಸೌಂದರ್ಯದ ಲೋಹಶಿಲ್ಪಗಳಂತೆಯೇ ತಮ್ಮದೇ ಆದ ವಿಶಿಷ್ಟಸ್ಥಾನ ಗಳಿಸಿಕೊಂಡಿವೆ.



ವಿಷ್ಣು ವರ್ಣಚಿತ್ರ, ಮತ್ತಂಚೇರಿ ಅರಮನೆ

ರಾಜರಾಜ ಈ ದೇವಾಲಯವನ್ನು ಒಂದು ವಿಶಿಷ್ಟ ವಾಸ್ತು ಮಾದರಿಯಾಗಷ್ಟೇ ಅಲ್ಲದೆ ಮಹಾನ್ ಸಂಸ್ಥೆಯಾಗಿ ರೂಪಿಸುವಲ್ಲಿ ಪ್ರತಿಯೊಂದು ಸಣ್ಣ ವಿವರವನ್ನೂ ನಿಖರವಾಗಿ, ನಿರ್ದಿಷ್ಟವಾಗಿ ಕಲ್ಪಿಸಿಕೊಂಡಿದ್ದನೆಂಬುದು ಸರ್ವವಿದಿತ. ಗರ್ಭಗೃಹದ ಪ್ರದಕ್ಷಿಣಾಪಥದಂತಹ ಯಾವುದೇ ಗಾಳಿ ಬೆಳಕಿನ ವ್ಯವಸ್ಥೆಯಿಲ್ಲದ, ಕಗ್ಗತ್ತಲಿನ, ಇಕ್ಕಟ್ಟು ಸ್ಥಳದಲ್ಲಿ ಇಷ್ಟೊಂದು ಅಪೂರ್ವ ಸೌಂದರ್ಯದ ಚಿತ್ರಗಳನ್ನು ಬರೆಯಿಸಿದುದರ ಉದ್ದೇಶದ ಹಿನ್ನೆಲೆಯಲ್ಲಿ ತನ್ನ ಇಷ್ಟದೈವ ಶಿವನ ವಿವಿಧ ಲೀಲಾರೂಪಗಳನ್ನು, ವಿಶಿಷ್ಟಪರಿವಾರ, ವಿವರಗಳೊಡನೆ ನಿರೂಪಿಸುವುದಿರಬಹುದು ಅವು ಹಾಳಾಗುವುದನ್ನು ತಪ್ಪಿಸುವುದಿರಬಹುದು. ದೇವಾಲಯದ ಜನಸಂದಣಿಯಿಂದ ಇನ್ನಾವುದೇ ಭಾಗದಲ್ಲಿ ಇವುಗಳನ್ನು ಬಿಡಿಸಿದ್ದರೆ ಬಹುಶಃ ಬೆಳಕಿನ ಕಿರಣಗಳು ಹಾಗೂ ಶಾಖದ ಪರಿಣಾಮವಾಗಿ ಮೂಲಬಣ್ಣಗಳ ಸೊಬಗು, ಸೊಗಡು ಕಳೆದುಕೊಂಡು ಬಹುಹಿಂದೆಯೇ ಇವು ಅಂದಗೆಡುತ್ತಿದ್ದವು. ಆದರೆ ಇದೇ ಸ್ಥಳ ಗೋಡೆಯ ಮೇಲಿನ ಇಡೀ ಚಿತ್ರದ ವೀಕ್ಷಣೆಗೆ ಆಸ್ಪದ ಮಾಡಿಕೊಡುವುದಿಲ್ಲ. ಛಾಯಾಚಿತ್ರ ತೆಗೆಯಲು ಅತ್ಯವಶ್ಯಕವಾದ ಸಹಜಬೆಳಕು ಮತ್ತು ಕಾರ್ಯನಿರ್ವಹಣೆಗೆ ಅತ್ಯಗತ್ಯವಾದ ಸ್ಥಳಾನುಕೂಲ ಇಲ್ಲಿಲ್ಲ. ಪ್ರತಿಚಿತ್ರ 4.50ಮೀ ಎತ್ತರ, 3ಮೀ ಅಗಲವಿದ್ದರೆ ಪ್ರದಕ್ಷಿಣಾಪಥದ ಅಗಲ ಕೇವಲ 2.10ಮೀ. ಇಂತಹ ಪ್ರತಿಕೂಲ ಸನ್ನಿವೇಶದಲ್ಲಿ ಸಹಜವಾಗಿ ಈ ಹಿಂದಿನ ಛಾಯಾಚಿತ್ರಗ್ರಾಹಕರು ಸಾಕಷ್ಟು ಚೆನ್ನಾಗಿ ಉಳಿದಿರುವ, ಪ್ರಸಿದ್ಧವಾದ, ಸುಲಭವಾಗಿ ಅರ್ಥೈಸಬಹುದಾದ ನಿರ್ದಿಷ್ಟಭಾಗಗಳನ್ನಷ್ಟೇ ಮತ್ತೆ ಮತ್ತೆ ಚಿತ್ರ ತೆಗೆದು ಪ್ರಕಟಿಸಿದ್ದಾರೆಯೇ ವಿನಾ ಉಳಿದ ಭಾಗಗಳತ್ತ ತಮ್ಮ ಗಮನ ಹರಿಸಲಿಲ್ಲ. ಹೀಗಾಗಿ ಒಟ್ಟುಚಿತ್ರ ಒಂದೇ ಚೌಕಟ್ಟಿನಲ್ಲಿ ವಿದ್ವಾಂಸರ ಗಮನಕ್ಕೂ ಬರಲಿಲ್ಲ. ಜೊತೆಗೆ ದೇವಾಲಯದ ಸಂರಕ್ಷಣೆಯ ಹೊಣೆ ಹೊತ್ತ ಅಧಿಕಾರಿಗಳು ಭಿತ್ತಿಚಿತ್ರಗಳನ್ನು ಸಂರಕ್ಷಿಸುವ ನೆಪದಲ್ಲಿ ಎಂತಹ ಕುತೂಹಲಿ ಜಿಜ್ಞಾಸುಗಳನ್ನೂ ಹೆಚ್ಚು ಕಾಲ ಪ್ರದಕ್ಷಿಣಾಪಥದಲ್ಲಿರಲು, ವಿಶೇಷ ಬೆಳಕಿನ ವ್ಯವಸ್ಥೆಯೊಡನೆ ಚಿತ್ರೀಕರಿಸಲು ಬಿಡುತ್ತಿರಲಿಲ್ಲ. ಇದರಿಂದ ಎಷ್ಟೋ ಜನಕ್ಕೆ ಇಷ್ಟೊಂದು ಅಪೂರ್ವ ಭಿತ್ತಿಚಿತ್ರಗಳು ಅಲ್ಲಿರುವ ಕಲ್ಪನೆಯೇ ಇರಲಿಲ್ಲ.

ಈ ನಿಟ್ಟಿನಲ್ಲಿ ಪ್ರತಿಚಿತ್ರವನ್ನು ಒಂದೇ ಚೌಕಟ್ಟಿನಲ್ಲಿ ಪೂರ್ತಿ ನೋಡಲು ಸಾಧ್ಯವಾಗುವಂತೆ ಆಧುನಿಕ ತಂತ್ರಜ್ಞಾನವನ್ನು ಬಳಸಿ ಛಾಯಾಚಿತ್ರ ತೆಗೆಯಲು ಪುರಾತತ್ತ್ವ ಇಲಾಖೆ ನಿರ್ಧರಿಸಿತು. ಈ ಪ್ರಯತ್ನದ ಹಿಂದಿನ ಉದ್ದೇಶ ದೊಡ್ಡಗಾತ್ರದ ವರ್ಣಛಾಯಾಚಿತ್ರಗಳನ್ನು ಮುದ್ರಿಸಿ ದೇವಾಲಯದಲ್ಲಿಯ ಇನ್ನೊಂದು ಸೂಕ್ತ ಸ್ಥಳದಲ್ಲಿ ಪ್ರದರ್ಶಿಸುವುದು ಮತ್ತು ಇದುವರೆಗೆ ಅಲ್ಪ ಸ್ವಲ್ಪ ಭಾಗವನ್ನೇ ನೋಡಿ ಅರ್ಥೈಸುತ್ತಿದ್ದ ವಿದ್ವಾಂಸರಿಗೆ ಇಡೀ ಚಿತ್ರವನ್ನು

ಎಲ್ಲ ವಿವರದೊಂದಿಗೆ ವೀಕ್ಷಿಸಬಹುದಾದ ಅವಕಾಶ ಒದಗಿಸುವುದು. ಪ್ರಪಂಚಪ್ರಸಿದ್ಧ ವರ್ಣಚಿತ್ರದ ದಾಖಲಾತಿಗಾಗಿ ಚಿತ್ರಗಳಿಗೆ ಯಾವುದೇ ಹಂತದಲ್ಲಿ ಯಾವುದೇ ರೀತಿಯ ಅತ್ಯಲ್ಪ ಹಾನಿಯೂ ಉಂಟಾಗದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ವಿವಿಧ ಸಾಮರ್ಥ್ಯದ ಕ್ಯಾಮೆರ, ಬೇರೆ ಬೇರೆ ತೀವ್ರತೆಯ ಬೆಳಕು, ಛಾಯಾಗ್ರಹಣ ಮಾಧ್ಯಮ ಮತ್ತು ಪ್ರಸ್ತುತ ಲಭ್ಯವಿರುವ ತಂತ್ರಜ್ಞಾನಗಳಲ್ಲಿ ತೀರ ಸಮರ್ಪಕ, ಸೂಕ್ತವೆನಿಸಿದ್ದನ್ನು ಸ್ಪಷ್ಟಪಡಿಸಿಕೊಳ್ಳಲು ಹಲವು ಪ್ರಯೋಗಾತ್ಮಕ ಚಿತ್ರಗಳನ್ನು ತೆಗೆದು, ಪರೀಕ್ಷಿಸಿ, ಕಾರ್ಯಸೂಚಿ ಹಾಗೂ ನಿರ್ವಹಣಾ ಕ್ರಮವನ್ನು ಪರಿಷ್ಕರಿಸಿಕೊಂಡು ಕೆಲಸ ಮಾಡಲಾಯಿತು.

ಕಾರ್ಯಸೂಚಿಯನ್ನು ಅನುಸರಿಸಿ ನಡೆದ ದಾಖಲಾತಿ ಅತ್ಯುತ್ತಮ ಫಲಿತಾಂಶ ಒದಗಿಸಿದೆ. ಒಂದೇ ಚೌಕಟ್ಟಿನಲ್ಲಿ ಸಂಯೋಜಿಸಿದ ಪೂರ್ಣಚಿತ್ರವನ್ನು ಆಸಕ್ತ ಜನತೆಯ ಗಮನಕ್ಕೆ ತರಲು 2.70xl.80ಮೀ ದೊಡ್ಡ ವರ್ಣಛಾಯಾಚಿತ್ರಗಳನ್ನು ಮುದ್ರಿಸಿ ಬೃಹದೀಶ್ವರ ದೇವಾಲಯದ ಮಂಟಪ ಒಂದರಲ್ಲಿ ಪ್ರದರ್ಶಿಸಿದೆ. ಆದರೆ ಪ್ರಸ್ತುತ ಲಭ್ಯವಿರುವ ಛಾಯಾಚಿತ್ರ ಮುದ್ರಣ ತಂತ್ರಜ್ಞಾನದ ಪರಿಮಿತಿಯಲ್ಲಿ ಬೃಹದ್ಗಾತ್ರದ ವರ್ಣಚಿತ್ರದಲ್ಲಿ ನಿರ್ದಿಷ್ಟ ಕಾಲಾವಧಿಯ ಅನಂತರ ಮೂಲಬಣ್ಣಗಳು ಮಾಸುತ್ತಾ ಹೋಗುತ್ತವೆ. ಆದುದರಿಂದ ಕಾಲಕಾಲಕ್ಕೆ ಹೊಸಹೊಸ ಚಿತ್ರಗಳನ್ನು ಮುದ್ರಿಸಿ ಪ್ರದರ್ಶಿಸಲಾಗುತ್ತಿದೆ. ಈ ವಿಶಿಷ್ಟ ದಾಖಲಾತಿಗೆ ಸಂಬಂಧಿಸಿದ ಎಲ್ಲ ವಿವರವನ್ನು ಒಳಗೊಂಡ ವಿಶೇಷ ವರದಿ ಪ್ರಕಟಣೆಯ ಹಂತದಲ್ಲಿದೆ. ತಂಜಾವೂರಿನಲ್ಲಿನ ದೇವಾಲಯದ ಇಕ್ಕಟ್ಟಾದ, ಕಗ್ಗತ್ತಲಿನಲ್ಲಿರುವ, ಒಮ್ಮೆಲೇ ಇಡೀ ಚಿತ್ರವನ್ನು ಎಂದಿಗೂ ನೋಡಲು ಸಾಧ್ಯವಿಲ್ಲದ ಮೂಲಚಿತ್ರವನ್ನು ಪ್ರತಿ ಚದರಂಗುಲದಷ್ಟು ಸ್ಥಳದಲ್ಲಿರುವ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಯಾರು, ಎಲ್ಲಿ ಬೇಕಾದರೂ ಎಷ್ಟು ಗಾತ್ರಕ್ಕಾದರೂ ಹಿಗ್ಗಿಸಿ ತಮ್ಮ ಮೇಜಿನ ಮೇಲಿನ ಗಣಕಯಂತ್ರದಲ್ಲಿಯೇ ಎಷ್ಟು ಬಾರಿಯಾದರೂ ನೋಡಲು ಸಾಧ್ಯವಾಗಿಸಿರುವುದು–ಈ ದಾಖಲಾತಿಯ ಮಹತ್ತ್ವದ ಹಾಗೂ ತತ್ಕ್ಷಣದ ಪ್ರಯೋಜನ. ಈ ರೀತಿಯ ಪರಿಶೀಲನೆ, ಅಧ್ಯಯನ ಈಗಾಗಲೇ ಪ್ರಾರಂಭವಾಗಿದೆ. ಕುತೂಹಲಕರ ಮಾಹಿತಿ ಲಭ್ಯವಾಗುತ್ತಿದೆ, ಸಂಶೋಧನೆ ಬೆಳೆಯುತ್ತಿದೆ. ಇದರ ಒಂದು ಉದಾಹರಣೆ ಹೀಗಿದೆ. ಚೋಳರ ಕಾಲದ ಮೂಲ ಚಿತ್ರಗಳ ಮೇಲಿದ್ದ ನಾಯಕರ ಕಾಲದ ಚಿತ್ರಪದರವನ್ನು ದಶಕಗಳ ಹಿಂದೆಯೇ ತೆಗೆಯಲಾಗಿತ್ತು. ಇದರಿಂದ ಹಾನಿಗೊಂಡ ಮೂಲಚಿತ್ರ ಅಲ್ಲಲ್ಲಿ ಮಾತ್ರ ಸ್ಪಷ್ಟವಾಗಿ ಕಾಣುತ್ತಿತ್ತು. ಇಂತಹ ಕೆಲವು ಭಾಗವನ್ನಷ್ಟೇ ಗಮನಿಸಿದ್ದ ವಿದ್ವಾಂಸರು ಆ ನಿರ್ದಿಷ್ಟ ಭಾಗದಲ್ಲಿ ದೊರೆ ರಾಜರಾಜ ಬೃಹದೀಶ್ವರ ದೇವಾಲಯದ ನಿರ್ಮಾಣಕ್ಕೆ ಮೊದಲು ಗರ್ಭಗೃಹದಲ್ಲಿಟ್ಟಿದ್ದ ಶಿವಲಿಂಗವನ್ನು ಪೂಜಿಸುವ ಐತಿಹಾಸಿಕ ಘಟನೆಯ ಚಿತ್ರಣವಿದೆಯೆಂದು ಅರ್ಥೈಸಿದ್ದರು. ಈ ಭಾಗದ ಪರಿಧಿಯಲ್ಲಿರುವ ಚಿತ್ರಗಳು ಸ್ವಲ್ಪ ಮಸುಕಾಗಿದ್ದವಲ್ಲದೆ ಒಂದೇ ಬಾರಿಗೆ ಗಮನಿಸಲು ಸಾಧ್ಯವಾಗಿರಲಿಲ್ಲ. ಈಗ ಗಣಕ ಸಂಯೋಜಿತ ಪೂರ್ಣ ಚಿತ್ರವನ್ನು ಪುನಃ ಪುನಃ ನೋಡಿದಾಗ ಅದರಲ್ಲಿ ಬಹುಶಃ ರಾಜರಾಜನ ಕಾಲದಲ್ಲಿ ನಡೆದ ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ತ್ವದ ಬೇರೊಂದು ಘಟನೆಯ ವಿವರಗಳಿರುವುದು ತಿಳಿದುಬಂದಿದೆ.

ಸಂಪೂರ್ಣ ನಶಿಸಿಹೋಗಿ, ಬಳಕೆಯಲ್ಲಿಲ್ಲದಿದ್ದ ತೇವಾರಂ (ಶೈವಸಂತರು ನಾಯನ್ಮಾರರಿಂದ ರಚಿತವಾದ ಶಿವಸ್ತುತಿ)ಗಳನ್ನು ಬಹುಕಷ್ಟಪಟ್ಟು ಹುಡುಕಿ, ಪಡೆದುಕೊಂಡು ಅವನ್ನೆಲ್ಲ ಸಂಕಲಿಸಿ, ವಿಂಗಡಿಸಿ, ರಾಗಸಂಯೋಜಿಸಿ ನಂಬಿಯಾಂಡಾರ್ ನಂಬಿ ಪ್ರಪ್ರಥಮ ಬಾರಿಗೆ ವಿದ್ವತ್ ಸಭೆಯಲ್ಲಿ ಹಾಡಿದರು. ಈ ಮಹತ್ತ್ವದ ಗಾನಗೋಷ್ಠಿಯಲ್ಲಿ ಉಪಸ್ಥಿತರಿದ್ದ ಸಭಿಕರಲ್ಲಿ ಒಂದು ಬದಿಗೆ ರಾಜಗುರು ಈಶಾನ ಶಿವಪಂಡಿತ, ಸ್ವತಃ ರಾಜರಾಜ ಚೋಳ, ಆತನ ಮಗ ರಾಜೇಂದ್ರ ಚೋಳ, ಇವರಿಬ್ಬರ ಪಟ್ಟದ ರಾಣಿಯರು, ರಾಜಕುಮಾರ, ಕುಮಾರಿಯರು, ಇನ್ನುಳಿದ ರಾಜಮನೆತನದ ಮಹಿಳೆಯರು ಅದೇ ಕ್ರಮದಲ್ಲಿ ಕುಳಿತಿದ್ದಾರೆ. ಇವರ ಮುಖಭಾವ, ಹಸ್ತಮುದ್ರೆಗಳಲ್ಲಿ ಭಕ್ತಿ, ಕುತೂಹಲ, ಆಶ್ಚರ್ಯ ತುಂಬಿವೆ. ಇನ್ನೊಂದು ಬದಿಗೆ ದೇವಾಲಯದ ನಿರ್ಮಾಣಕ್ಕೆ ಅಪರಿಮಿತ ಧನಸಹಾಯ ಮಾಡಿದ್ದ 'ಪೆರುಂಥನಂ'ರು (ಸೇನಾಪತಿ, ಮಂತ್ರಿ ಹಾಗೂ ರಾಯಸ, ರಾಜಾಜ್ಞೆ, ರಾಜಸಭೆಯಲ್ಲಿನ ಕಲಾಪಾದಿಗಳನ್ನು ಬರೆದುಕೊಳ್ಳುವ ಅಧಿಕಾರಿಗಳು) ಕುಳಿತಿದ್ದಾರೆ. ಅವರ ಕೈಗಳಲ್ಲಿ ಖಡ್ಗ, ತಾಳ, ತಾಳೆಯೋಲೆಗಳಿವೆ. ಸಾಂದರ್ಭಿಕ ಆಧಾರಗಳಿಂದ ಈ ಗೋಷ್ಠಿ ರಾಜರಾಜನ ಕಾಲದಲ್ಲಿ ಆಯಿತೆಂದೂ ಅದರ ಸವಿವರ ಚಿತ್ರಣ ಈ ಚಿತ್ರದಲ್ಲಿದೆಯೆಂದೂ ಹೇಳಬಹುದು. (ಪಿ.ಎಸ್.ಎಸ್.)

**ವೈಜ್ಞಾನಿಕ ಸಂರಕ್ಷಣೆ:** ಭಿತ್ತಿಚಿತ್ರಗಳು ಶಿಥಿಲಗೊಳ್ಳುವ ಬಗೆಗಳು ಮತ್ತು ಕಾರಣಗಳು: ಭಿತ್ತಿಚಿತ್ರಗಳು ಹವಾಮಾನ ಮುಂತಾದ ನೈಸರ್ಗಿಕ ಹಾಗೂ ಇತರ ಮಾನವ ಕೃತ ಕಾರಣಗಳಿಂದಾಗಿ ಕ್ರಮೇಣ ಶಿಥಿಲಗೊಳ್ಳುತ್ತವೆ. ತೇವಾಂಶ ಇದಕ್ಕೆ ಮುಖ್ಯ ಕಾರಣಗಳಲ್ಲೊಂದು. ಕಟ್ಟಡಗಳ ಮೇಲ್ಛಾವಣಿಯಿಂದ ಸೋರುವ ಮಳೆನೀರಿನಿಂದಾಗಿ ಚಿತ್ರಗಳ ವರ್ಣಗಳು ನಾಶವಾಗುತ್ತವೆ. ಕೆಲವು ಸಮಯಗಳಲ್ಲಿ ಚಿತ್ರದ ಗಾರೆಯ ಕೆಲವು ಭಾಗಗಳೇ ಕಳಚಿಬೀಳುತ್ತವೆ. ಕೆಲವೆಡೆ ತೇವದಿಂದಾಗಿ ಗಾರೆ ಗೋಡೆಯಿಂದ ಸ್ವಲ್ಪಮಟ್ಟಿಗೆ ಬೇರ್ಪಟ್ಟು ಉಬ್ಬಿಕೊಳ್ಳುತ್ತದೆ. ಗೋಡೆಯಲ್ಲಿ ಉಪ್ಪಿನ ಅಂಶ ಇದ್ದರೆ, ಅದು ನೀರಿನಲ್ಲಿ ಕರಗಿ ಗಾರೆಯ ಮೂಲಕ ಹೊರಬಂದು ನೀರು ಆವಿಯಾದ ಬಳಿಕ ಉಪ್ಪಿನ ಬಿಳಿ ಪದರ ಚಿತ್ರದ ಮೇಲೆ ಉಳಿಯುತ್ತದೆ. ಇದರಿಂದ ವರ್ಣಗಳ ಮೇಲೆ ರಾಸಾಯನಿಕ ಪ್ರಕ್ರಿಯೆ ಉಂಟಾಗುತ್ತದೆ. ಪರಿಸರದ ತೇವಾಂಶ ಶೇ.75ಕ್ಕಿಂತ ಮೇಲಾಗಿದ್ದಲ್ಲಿ ಬೂಷ್ಟ್ ಮುಂತಾದ ಸೂಕ್ಷ್ಮಜೀವಿಗಳು ಚಿತ್ರಗಳ ಮೇಲೆ ಬೆಳೆಯುವ ಸಂಭವವಿರುತ್ತದೆ.

ಬಹುಮಟ್ಟಿಗೆ ಭಿತ್ತಿಚಿತ್ರಗಳು ದೇವಾಲಯಗಳಲ್ಲಿರುವುದರಿಂದ ಎಣ್ಣೆ ದೀಪಗಳು ಮತ್ತು ಕರ್ಪೂರಾರತಿಗಳಿಂದ ಬರುವ ಹೊಗೆ ಚಿತ್ರಗಳ ಮೇಲೆ ಮಸಿಯ ಪದರವನ್ನುಂಟು ಮಾಡುತ್ತದೆ. ಎಣ್ಣೆಯ ಕಲೆಗಳೂ ಚಿತ್ರಗಳ ಮೇಲೆ ಉಳಿಯುವ ಸಂಭವವಿರುತ್ತದೆ. ಇದಲ್ಲದೆ ಗಾಳಿಯಲ್ಲಿರುವ ಧೂಳೂ ಚಿತ್ರಗಳ ಮೇಲೆ ಉಳಿಯುತ್ತದೆ. ಕತ್ತಲು ಸ್ಥಳಗಳಲ್ಲಿ ಗೋಡೆಯ ಮೇಲ್ಭಾಗದಲ್ಲಿ ಬಾವಲಿಗಳು ಕೂರುವುದರಿಂದ ಅವುಗಳ ಮಲಮೂತ್ರಗಳಿಂದಲೂ ಚಿತ್ರಗಳು ಹಾಳಾಗುತ್ತವೆ. ಕೆಲವೆಡೆ ಪಕ್ಷಿಗಳಿಂದಲೂ ಈ ರೀತಿಯ ಬಾಧೆ ಏರ್ಪಡುವುದುಂಟು.

ಭಿತ್ತಿಚಿತ್ರಗಳ ಸಂರಕ್ಷಣ ವಿಧಾನಗಳು: ಭಿತ್ತಿಚಿತ್ರಗಳ ಸಂರಕ್ಷಣೆಗೆ ಮೊದಲು ಕಟ್ಟಡದ ಮೇಲ್ಛಾವಣಿಯ ಮರಾಮತ್ತನ್ನು ಪೂರ್ಣಗೊಳಿಸಿ, ಮಳೆನೀರು ಕಟ್ಟಡದೊಳಕ್ಕೆ ಇಳಿಯುವುದನ್ನು ಪೂರ್ತಿ ನಿಲ್ಲಿಸುವುದು ಅತ್ಯವಶ್ಯ. ಸಂರಕ್ಷಣ ಕಾರ್ಯದಲ್ಲಿ ಮೊಟ್ಟಮೊದಲಿಗೆ ಚಿತ್ರದ ಆಧಾರವಾದ ಗಾರೆ ಗೋಡೆಯಿಂದ ಸಡಿಲವಾಗಿರುವ ಸ್ಥಳಗಳಲ್ಲಿ ಅದನ್ನು ಪುನಃ ಗೋಡೆಯೊಂದಿಗೆ ಸೇರಿಸಿ ಭದ್ರಪಡಿಸುವ ಕಾರ್ಯವನ್ನು ಮಾಡಲಾಗುತ್ತದೆ. ಚಿತ್ರಿತ ಗಾರೆ ನಷ್ಟವಾಗಿರುವ ಸ್ಥಳಗಳಲ್ಲಿ ಉಳಿದಿರುವ ಗಾರೆಯ ಅಂಚುಗಳನ್ನು ಸುಣ್ಣದ ಗಾರೆಯ ಸಹಾಯದಿಂದ ಭದ್ರಪಡಿಸಿ ಚಿತ್ರದ ಬಣ್ಣಗಳೊಂದಿಗೆ ಹೊಂದಿಕೊಳ್ಳುವಂತೆ ಈ ಅಂಚುಗಳಿಗೆ ಸೂಕ್ತ ಬಣ್ಣಗಳನ್ನು ಹಚ್ಚಲಾಗುತ್ತದೆ. ಗಾರೆ (ತೇವದಿಂದಾಗಿ) ಉಬ್ಬಿಕೊಂಡಿರುವ ಸ್ಥಳಗಳಲ್ಲಿ, ಒಂದು ಸಣ್ಣ ರಂಧ್ರದ ಮೂಲಕ ಸುಣ್ಣ ಮತ್ತು ಕೇಸೀನ್ ಮಿಶ್ರಣವನ್ನು ದ್ರವರೂಪದಲ್ಲಿ ಗಾರೆಯ ಹಿಂಭಾಗಕ್ಕೆ ಇಂಜೆಕ್ಷನ್ ವಿಧಾನದಿಂದ ಸೇರಿಸಿ, ಈ ಭಾಗ ಕೆಲವು ಗಂಟೆಗಳ ಕಾಲ ಗೋಡೆಯೊಂದಿಗೆ ಸೇರಿರುವಂತೆ ಭದ್ರವಾಗಿ ಒತ್ತಿಹಿಡಿಯುವ ವಿಶೇಷ ಏರ್ಪಾಡನ್ನು ಮಾಡಲಾಗುತ್ತದೆ. ಈ ಪ್ರಕ್ರಿಯೆಯಿಂದ ಉಬ್ಬಿಕೊಂಡಿರುವ ಭಾಗಗಳು ಪುನಃ ಗೋಡೆಗೆ ಭದ್ರವಾಗಿ ಅಂಟಿಕೊಳ್ಳುತ್ತವೆ. ಇದು ಭದ್ರೀಕರಣಕಾರ್ಯ. ಅನಂತರದ ಕಾರ್ಯವೆಂದರೆ ಶುದ್ಧೀಕರಣ. ಇದಕ್ಕೆ ಎರಡು ಮುಖ್ಯ ಉದ್ದೇಶಗಳು: ಕಲಾತ್ಮಕ ದೃಷ್ಟಿಯಿಂದ ಚಿತ್ರವನ್ನು ಸಾಧ್ಯವಾದ ಮಟ್ಟಿಗೆ ಅದರ ಪೂರ್ವದ ಸ್ಥಿತಿಗೆ ತರುವುದು; ಚಿತ್ರದ ಮೇಲೆ ಕವಿದಿರುವ ಧೂಳು, ಕೊಳೆ, ಮಸಿ, ಎಣ್ಣೆಯ ಕಲೆ ಮೊದಲಾದವುಗಳಿಂದ ರಾಸಾಯನಿಕ ಪ್ರಕ್ರಿಯೆಯುಂಟಾಗಿ ವರ್ಣಗಳು ನಶಿಸುತ್ತಿರುವುದರಿಂದ ಇವುಗಳ ನಿವಾರಣೆ ಸಂರಕ್ಷಣೆಯ ದೃಷ್ಟಿಯಿಂದ ಅನಿವಾರ್ಯ.

ನಮ್ಮ ದೇಶದ ಭಿತ್ತಿಚಿತ್ರಗಳು ಬಹುಮಟ್ಟಿಗೆ ಟೆಂಪರ ವಿಧಾನದಲ್ಲಿದ್ದು ರಂಗುಗಳ ಮಿಶ್ರಣದ ಅಂಟುಪದಾರ್ಥ ಗೋಂದು ಅಥವಾ ಮರವಜ್ರ ಮೊದಲಾದ ನೀರಿನಲ್ಲಿ ಕರಗುವ ವಸ್ತುಗಳಾದ್ದರಿಂದ, ಚಿತ್ರದ ಶುದ್ಧೀಕರಣಕ್ಕೆ ನೀರಿನ ಹಾಗೂ ನೀರಿನಲ್ಲಿ ಕರಗಿಸಲ್ಪಟ್ಟ ರಾಸಾಯನ ದ್ರವ್ಯಗಳ ಉಪಯೋಗ ನಿಷಿದ್ಧ. ಈ ಕಾರ್ಯಕ್ಕೆ ಜೈವಿಕ ರಾಸಾಯನಿಕ ದ್ರವಗಳನ್ನೇ ಉಪಯೋಗಿಸಬೇಕಾಗುತ್ತದೆ. ಕಲ್ಮಶ ಪದಾರ್ಥಗಳನ್ನು ನಿವಾರಿಸುವ ಶಕ್ತಿ ಇವಕ್ಕೆ ಇದೆಯೇ ಮತ್ತು ವರ್ಣಗಳ ಮೇಲೆ ಇವುಗಳ ಉಪಯೋಗ ಸುರಕ್ಷಿತವೇ ಎಂಬುದನ್ನು ನಿಶ್ಚಯಿಸಿಕೊಂಡ ಅನಂತರವೇ ಇವುಗಳನ್ನು ತಕ್ಕ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತದೆ. ಅಸಿಟೋನ್, ಕೆಲವು ಆಲ್ಕೋಹಾಲ್‌ಗಳು ಮತ್ತು ಅಮೀನ್‌ಗಳು ಈ ಕೆಲಸದಲ್ಲಿ ಉಪಯುಕ್ತವಾಗಿ ಕಂಡುಬಂದಿವೆ. ಚಿತ್ರಗಳು ನಷ್ಟವಾಗಿರುವ ಜಾಗಗಳಲ್ಲಿ ಅವುಗಳ ಪುನಾರಚನೆ ನಮ್ಮ ದೇಶದ ಸಂರಕ್ಷಣ ನಿಯಮಗಳ ಅನುಸಾರ ಸರ್ವಥಾ ನಿಷಿದ್ಧ. ಸಣ್ಣ ರಂಧ್ರಗಳು, ಬಿರುಕುಗಳು ಮತ್ತು ನ್ಯೂನತೆಗಳನ್ನು ಸುಣ್ಣದ ಗಾರೆಯಿಂದಲೇ ಮುಚ್ಚಿ, ಗಾರೆಯ ಬಿಳಿಬಣ್ಣ ಚಿತ್ರದ ವರ್ಣಗಳಿಂದ ಬಹುವಾಗಿ ಬೇರ್ಪಟ್ಟು ದೃಷ್ಟಿಗೆ ಅಹಿತವಾಗಿರುವುದರಿಂದ ಚಿತ್ರದೊಂದಿಗೆ ಹೊಂದಿಕೊಳ್ಳುವಂತೆ ತಕ್ಕ ಬಣ್ಣವನ್ನು ಗಾರೆಗೆ ಹಾಕಲಾಗುತ್ತದೆ. ಚಿತ್ರ ದೊಡ್ಡ ಪ್ರಮಾಣದಲ್ಲಿ ನಷ್ಟ ಹೊಂದಿದ್ದಲ್ಲಿ, ಗಾರೆಯ ಅಂಚುಗಳನ್ನು ಮಾತ್ರ ದೃಢಪಡಿಸಿ ಶೂನ್ಯ ಪ್ರದೇಶವನ್ನು ಹಾಗೆಯೇ ಬಿಡಲಾಗುತ್ತದೆ. ಕೊನೆಯದಾಗಿ ಚಿತ್ರದ ಮೇಲೆ ಪಾಲಿವಿನೈಲ್ ಅಸಿಟೇಟ್ ಎಂಬ ಸಂರಕ್ಷಕ ಪದಾರ್ಥವನ್ನು ಶೇಕಡ 1ರ ಪ್ರಮಾಣದಲ್ಲಿ ಹಚ್ಚಲಾಗುತ್ತದೆ. ಇದರಿಂದ ಚಿತ್ರದ ಮೇಲೆ ಏರ್ಪಡುವ ವರ್ಣರಹಿತ ಮತ್ತು ಪಾರದರ್ಶಕ ಲೇಪ ಚಿತ್ರವನ್ನು ಪರಿಸರದಿಂದ ಉಂಟಾಗಬಹುದಾದ ಹಾನಿಯಿಂದ ರಕ್ಷಿಸುತ್ತದೆ. ವರ್ಣಗಳೂ ಮತ್ತಷ್ಟು ಪ್ರಕಾಶವಾಗಿ ಕಾಣುತ್ತವೆ. ಲೇಪ ಸು.15–20 ವರ್ಷಗಳ ಕಾಲ ಕೆಡದೇ ಇರುತ್ತದೆ. ಅನಂತರ ಅವಶ್ಯವಾದಲ್ಲಿ ಟಾಲ್ಯುಈನ್ ಎಂಬ ದ್ರಾವಕದಿಂದ ಅದನ್ನು ಸುಲಭವಾಗಿ ತೆಗೆದು ಹೊಸ ಲೇಪವನ್ನು ಹಚ್ಚಬಹುದು. ಈ ಕ್ರಮದಲ್ಲಿ ಸಂರಕ್ಷಿಸಲಾದ ಕೆಲವು ಉದಾಹರಣೆಗಳನ್ನು ನೋಡಬಹುದು:

ಅಜಂತ: ಇಲ್ಲಿ ಒಟ್ಟು 30 ಗುಹೆಗಳಿವೆ. 6ನೆಯ ಶತಮಾನದ ಅಂತ್ಯದಲ್ಲಿ ಬಹುಶಃ 20ಕ್ಕೂ ಮೇಲ್ಪಟ್ಟ ಗುಹೆಗಳು ಭಿತ್ತಿಚಿತ್ರಗಳಿಂದ ಅಲಂಕೃತವಾಗಿದ್ದುವಾದರೂ ಸು.1000 ವರ್ಷಗಳ ಉಪೇಕ್ಷೆ ಮತ್ತು ವಾತಾವರಣದ ಧಾಳಿಯಿಂದಾಗಿ, ಆರೇಳು ಗುಹೆಗಳ ಹೊರತು ಬಾಕಿ ಗುಹೆಗಳಲ್ಲಿ ಚಿತ್ರಗಳು ನಶಿಸಿವೆ. 1, 2, 16 ಮತ್ತು 17–ಈ ಗುಹೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಚಿತ್ರಗಳು ಉಳಿದಿವೆ. ಒಂದನೆಯ ಗುಹೆಯಲ್ಲಿ ಪ್ರಪಂಚ ಪ್ರಸಿದ್ಧವಾದ ಬೋಧಿಸತ್ತ್ವ ಪದ್ಮಪಾಣಿ ಮತ್ತು ವಜ್ರಪಾಣಿ ಚಿತ್ರಗಳಿವೆ. 9 ಮತ್ತು 10ನೆಯ ಗುಹೆಗಳಲ್ಲಿನ ಚಿತ್ರಗಳು ಸಾತವಾಹನರ ಕಾಲದವಾಗಿದ್ದು ಅಜಂತ ಚಿತ್ರಗಳಲ್ಲಿ ಅತ್ಯಂತ ಪ್ರಾಚೀನವಾಗಿವೆ. ಈ ಎಲ್ಲ ಗುಹೆಗಳಲ್ಲಿ ಬಹುಕಾಲ ಮಳೆನೀರು ನಿಂತಿದ್ದ ಕಾರಣ ಗೋಡೆಯ ಕೆಳಭಾಗದ ಚಿತ್ರಗಳು ಪೂರ್ಣವಾಗಿ ಮಾಯವಾಗಿವೆ. ನೆಲಮಟ್ಟದಿಂದ ಸು.4 ಅಡಿ ಮೇಲಿನ ಗೋಡೆಯ ಚಿತ್ರಗಳೂ ಮೇಲ್ಛಾವಣಿಯ ಚಿತ್ರಗಳೂ ಉಳಿದಿವೆ.

ಈ ದೇಶದ ಪ್ರಾಚೀನ ಭಿತ್ತಿಚಿತ್ರಗಳ ಸಂರಕ್ಷಣೆಯ ನಿಟ್ಟಿನಲ್ಲಿ ಪ್ರಪ್ರಥಮ ಪ್ರಯತ್ನವೆಂದರೆ ಹೈದರಾಬಾದ್ ನಿಜಾಮರ ಆಳಿಕೆಯ ಕಾಲದಲ್ಲಿ ಚೆಕ್ಕೋನಿ ಮತ್ತು ಆರ್ಸಿನಿ ಎಂಬ ಇಬ್ಬರು ಇಟಲಿ ದೇಶದ ತಜ್ಞರನ್ನು ಆಹ್ವಾನಿಸಿ ಇವರಿಂದ ಅಜಂತ ಚಿತ್ರಗಳ ಸಂರಕ್ಷಣ ಕಾರ್ಯವನ್ನು 1920-21ರಲ್ಲಿ ನಡೆಸಿದುದು. ಇವರು ಚಿತ್ರಗಳ ಶುದ್ಧೀಕರಣವನ್ನು ಸಾಕಷ್ಟು ತೃಪ್ತಿಕರವಾಗಿ ಮಾಡಿದರು. ಆದರೆ ಕೊನೆಯಲ್ಲಿ ಚಿತ್ರಗಳ ಸಂರಕ್ಷಣೆಗಾಗಿ ಆಗಿನ ಕಾಲದಲ್ಲಿ ಜಾರಿಯಲ್ಲಿದ್ದ ಅರಗಿನ ದ್ರಾವಕವನ್ನು ಚಿತ್ರಗಳ ಮೇಲೆ ಲೇಪಿಸಲಾಯಿತು. ಈ ಲೇಪ ತಕ್ಷಣದಲ್ಲಿ ತೃಪ್ತಿಕರವಾಗಿ ಕಂಡರೂ ಕಾಲಕ್ರಮೇಣ ವಾತಾವರಣದ ಆಮ್ಲಜನಕದ ಪ್ರಕ್ರಿಯೆಯಿಂದ ಹಳದಿ ಮತ್ತು ಕಂದು ಬಣ್ಣಕ್ಕೆ ತಿರುಗಿ, ಚಿತ್ರದ ಬಣ್ಣಗಳು ತಮ್ಮ ನೈಜರೂಪವನ್ನು ಕಳೆದುಕೊಂಡು ಮಾಸಲಾದವು. ಈಗ ಈ ಚಿತ್ರಗಳ ಸಂರಕ್ಷಣೆ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಜವಾಬ್ದಾರಿಯಾಗಿದ್ದು ವಿವರ್ಣಗೊಂಡ ಅರಗಿನ ಲೇಪವನ್ನು ರಾಸಾಯನಿಕ ರೀತಿಯಿಂದ ನಿವಾರಿಸಿ, ಪ್ರಸ್ತುತ ಸುರಕ್ಷಿತ ಲೇಪವನ್ನು ಹಾಕುವುದೇ ಈ ಸಂರಕ್ಷಣ ಕಾರ್ಯದ ಮುಖ್ಯ ಅಂಗವಾಗಿದೆ.

ಬಾಗ್ ಗುಹೆಗಳು: ಅಜಂತದ 1 ಮತ್ತು 2ನೆಯ ಗುಹೆಗಳ ಸುಪ್ರಸಿದ್ಧ ಚಿತ್ರಗಳ ಸಮಕಾಲೀನವಾಗಿ, 4-5ನೆಯ ಶತಮಾನಗಳಲ್ಲಿ ಮಧ್ಯಪ್ರದೇಶದ ಧಾರ್ ಸಮೀಪದ ಬಾಗ್ ಗುಹೆಗಳಲ್ಲಿ ಅಜಂತ ಚಿತ್ರಗಳಿಗೆ ಸರಿದೂಗುವಂತಹ ಅದ್ಭುತ ಭಿತ್ತಿಚಿತ್ರಗಳು ರಚಿಸಲ್ಪಟ್ಟಿದ್ದವು. ದುರದೃಷ್ಟವಶಾತ್ ಮಳೆನೀರು ಗುಹೆಗಳ ಒಳಗೆ ಪ್ರವೇಶಿಸುವುದನ್ನು ತಡೆಯಲಾಗದ ದುಸ್ಥಿತಿ ಏರ್ಪಟ್ಟು, ಚಿತ್ರಗಳು ಮಣ್ಣಿನ ಗಾರೆಯ ಮೇಲಿರುವುದರಿಂದಾಗಿ, ಮಳೆಯ ನೀರಿನಿಂದ ತೇವಗೊಂಡು ನಶಿಸಿಹೋಗುವ ಅಪಾಯ ಒದಗಿತು. ಚಿತ್ರಗಳನ್ನು ಕಾಪಾಡುವ ಏಕಮಾತ್ರ ಮಾರ್ಗವೆಂದರೆ ಅವುಗಳನ್ನು ಗೋಡೆಗಳಿಂದ ಸ್ಥಳಾಂತರಿಸಿ ಬೇರೆ ಆಧಾರವನ್ನು ಒದಗಿಸಿ ಸುರಕ್ಷಿತ ಸ್ಥಳದಲ್ಲಿ ಇಡುವುದು. ಈ ಕಾರ್ಯವನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ರಾಸಾಯನಿಕ ವಿಭಾಗದವರು ಯಶಸ್ವಿಯಾಗಿ ನಡೆಸಿದರು.

11ನೆಯ ಶತಮಾನದ ಆದಿಭಾಗದಲ್ಲಿ ಚೋಳವಂಶದ ಪ್ರಸಿದ್ಧ ಚಕ್ರವರ್ತಿ ರಾಜರಾಜಚೋಳನಿಂದ ನಿರ್ಮಿಸಲ್ಪಟ್ಟ ಬೃಹದೀಶ್ವರ ಮಂದಿರ ಭಾರತದ ವಾಸ್ತುಕಲೆಯ ಅನರ್ಘ್ಯ ರತ್ನಗಳಲ್ಲೊಂದು. ಇಲ್ಲಿ ಅಪೂರ್ವ ಭಿತ್ತಿಚಿತ್ರಗಳಿವೆ. ಇವುಗಳ ಸಂರಕ್ಷಣೆಯ ಕ್ಷೇತ್ರದಲ್ಲಿ ಒಂದು ಅಭೂತಪೂರ್ವ ಪ್ರಶ್ನೆ ಒದಗಿಬಂತು. ಗರ್ಭಗುಡಿಯ ಸುತ್ತಲೂ ಇರುವ ಪ್ರದಕ್ಷಿಣಾಪಥದ ಗೋಡೆಗಳ ಮೇಲೆ ಚೋಳರ ಕಾಲದ್ದೇ ಆದ ಅತ್ಯಂತ ಸುಂದರ ಭಿತ್ತಿಚಿತ್ರಗಳಿವೆ. ಅನಂತರ 16ನೆಯ ಶತಮಾನದಲ್ಲಿ ನಾಯಕ ರಾಜರುಗಳ ಕಾಲದಲ್ಲಿ, ಆ ಸಮಯಕ್ಕೆ ಚೋಳ ಚಿತ್ರಗಳು ಸು.500 ವರ್ಷಗಳಷ್ಟು ಹಳೆಯವಾಗಿದ್ದವು. ಬಹುಶಃ ಕೆಲವು ಸ್ಥಳಗಳಲ್ಲಿ ನಷ್ಟವಾಗಿರಬಹುದಾಗಿ (ಆ ಕಾಲದಲ್ಲಿ ಈಗಿನಂತೆ ಹಳೆಯದನ್ನು ಸಂರಕ್ಷಿಸುವ ಪದ್ಧತಿ ಬಹುಶಃ ಇರಲಿಲ್ಲವಾದ್ದರಿಂದ) ಹಳೆಯ ಚಿತ್ರಗಳ ಮೇಲೆಯೇ ಸುಣ್ಣದ ಗಾರೆ ಲೇಪಿಸಲ್ಪಟ್ಟು, ಅದರ ಮೇಲೆ ಆಗಿನ ನಾಯಕ ಶೈಲಿಯಲ್ಲಿ ಚಿತ್ರಗಳು ಬರೆಯಲ್ಪಟ್ಟವು. ಹೀಗಾಗಿ ಒಂದರ ಮೇಲೆ ಇನ್ನೊಂದರಂತೆ ಎರಡು ಹಳೆಯ ಚಿತ್ರಗಳು ಈ ಮಂದಿರದಲ್ಲಿದ್ದು, ಪೂರ್ವದ ಚೋಳ ಚಿತ್ರಗಳು ಪೂರ್ತಿಯಾಗಿ ಮರೆಯಾಗಿದ್ದವು. 1935ರಲ್ಲಿ ನಾಯಕ ಚಿತ್ರಗಳ ಹಿಂದೆ ಮತ್ತೊಂದು ಅದಕ್ಕಿಂತ ಹಳೆಯ ಚಿತ್ರ ಅಡಗಿರುವುದು ಅಕಸ್ಮಾತಾಗಿ ಪತ್ತೆಮಾಡಲಾಯಿತು. ಆದರೆ ಒಳಗೆ ಅಡಗಿರುವ ಅಪೂರ್ವ ಚೋಳ ಚಿತ್ರಗಳನ್ನು ಹೊರತರುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸಿತು. ಮೂಲ ಚಿತ್ರಗಳ ಮೇಲಿರುವ ನಾಯಕ ಚಿತ್ರಗಳನ್ನು ಸ್ವಲ್ಪ ಸ್ವಲ್ಪವಾಗಿ ಎಡೆದುಹಾಕಿ ಚೋಳ ಚಿತ್ರಗಳನ್ನು ಹೊರತರುವುದು ಒಂದು ಮಾರ್ಗ. ಇದು ಅಧಿಕ ಕಷ್ಟವಲ್ಲದ ವಿಧಾನವಾದರೂ ನಾಯಕ ಚಿತ್ರಗಳೂ 400 ವರ್ಷಗಳಷ್ಟು ಹಳೆಯವಾಗಿದ್ದು ಅವಕ್ಕೂ ಚಾರಿತ್ರಿಕ ಮೌಲ್ಯವಿರುವುದರಿಂದ ಅವುಗಳನ್ನು ನಷ್ಟಪಡಿಸುವುದು ಸರ್ವಥಾ ಅನುಚಿತ. ಹೀಗಾಗಿ ಎರಡು ಹಳೆಯ ಚಿತ್ರಗಳನ್ನು ಬೇರ್ಪಡಿಸಿ, ಎರಡನ್ನೂ ಸಂರಕ್ಷಿಸಬೇಕಾದ ಸಂದಿಗ್ಧ ಪರಿಸ್ಥಿತಿ ಒದಗಿಬಂತು. ಬಾಗ್ ಗುಹೆಯ ಚಿತ್ರಗಳ ಬಗೆಗೆ ಹೇಳಿದಂತೆ, ಭಿತ್ತಿಚಿತ್ರಗಳನ್ನು ಕಾರಣಾಂತರಗಳಿಂದ ಗೋಡೆಯ ಮೇಲೆ ಉಳಿಸಲು ಸಾಧ್ಯವಿಲ್ಲದಾಗ ಅವುಗಳನ್ನು ಗೋಡೆಯ ಮೇಲಿನಿಂದ ಬೇರ್ಪಡಿಸಬೇಕಾಗುತ್ತದೆ. ಇದು ಸೂಕ್ಷ್ಮವಾದ ಕಾರ್ಯವೇ ಆದರೂ ಚಿತ್ರದ ಹಿಂದೆ ಗೋಡೆ ಮಾತ್ರ ಇರುವುದರಿಂದ ಅಸಾಧ್ಯವೇನೂ ಅಲ್ಲ. ಆದರೆ ತಂಜಾವೂರಿನ ಪ್ರಶ್ನೆಯೆಂದರೆ ಒಂದು ಚಿತ್ರವನ್ನು ಮತ್ತೊಂದು ಚಿತ್ರದ ಮೇಲಿನಿಂದ ಬೇರ್ಪಡಿಸುವುದು. ಇದು ಕಷ್ಟಕರ ಕೆಲಸ. ಇದಕ್ಕೆ ಸೂಕ್ಷ್ಮ ಕೌಶಲ ಮತ್ತು ತಾಳ್ಮೆ ಬೇಕು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ರಾಸಾಯನಿಕ ವಿಭಾಗದ ದಕ್ಷಿಣ ಪ್ರಾಂತದ ನಿರ್ದೇಶಕರಾಗಿದ್ದ ಎಸ್.ಸುಬ್ಬರಾಮನ್ ಅವರು (1976-80) ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದರು. ಬೇರ್ಪಡಿಸಲ್ಪಟ್ಟ ನಾಯಕ ಚಿತ್ರಗಳಿಗೆ ಫೈಬರ್‌ಗ್ಲಾಸ್‌ನ ಆಧಾರ ಒದಗಿಸಿ ಅವುಗಳನ್ನು ದೇವಾಲಯದೊಳಗೇ ಒಂದು ಚಿತ್ರಶಾಲೆಯಲ್ಲಿ ಪ್ರದರ್ಶಿಸಲಾಗಿದೆ. ಶತಮಾನಗಳ ಅನಂತರ ಹೊರಗೆ ಬಂದ ಚೋಳ ಚಿತ್ರಗಳನ್ನು ಗೋಡೆಯ ಮೇಲೆಯೇ ಅವುಗಳ ಯಥಾಸ್ಥಾನದಲ್ಲಿ ಸಂರಕ್ಷಿಸಲಾಗಿದೆ.

ಈ ರೀತಿಯಾಗಿ ಎರಡು ಪುರಾತನ ಚಿತ್ರಗಳನ್ನು ಈ ಪ್ರಮಾಣದಲ್ಲಿ ಯಶಸ್ವಿಯಾಗಿ ಬೇರ್ಪಡಿಸಿ ಎರಡನ್ನೂ ಸಂರಕ್ಷಿಸಿರುವುದು ಪ್ರಪಂಚದಲ್ಲಿ ಇದೇ ಮೊದಲು. ಈ ಸಾಧನೆ ಅಂತಾರಾಷ್ಟ್ರೀಯ ಗಮನವನ್ನು ಸೆಳೆಯಿತು. (ಎಸ್.ಎಸ್.ಆರ್.)

**ಭಾರತೀಯ ಶಕೆಗಳು:** ಭಾರತದ ಭಿನ್ನಭಿನ್ನ ಪ್ರದೇಶಗಳಲ್ಲಿಯ ಭಿನ್ನಭಿನ್ನ ಸಂವತ್-ಸಂವತ್ಸರ, ಅರ್ಥಾತ್ ವರ್ಷ-ಗಣನೆಗಳನ್ನು ವಿದ್ವಾಂಸರಾದ ಗೌರೀಶಂಕರ ಓಝಾ ಅವರು ಭಾರತೀಯ ಪ್ರಾಚೀನ ಲಿಪಿ ಮಾಲಾ ಗ್ರಂಥದಲ್ಲಿ ವಿವರಿಸಿದ್ದಾರೆ: (1) ಸಪ್ತರ್ಷಿ ಸಂವತ್ (2) ಕಲಿಯುಗ ಸಂವತ್ (3) ವೀರನಿರ್ವಾಣ ಸಂವತ್ (4) ಬುದ್ಧನಿರ್ವಾಣ ಸಂವತ್ (5) ಮೌರ್ಯ ಸಂವತ್ (6) ಸೆಲ್ಯುಕಿಡಿ ಸಂವತ್ (ಸೆಲ್ಯೂಕಸ್ ದೊರೆಯಿಂದ ರಾಜ್ಯ ಸ್ಥಾಪನೆಯಾದಂದಿನಿಂದ ಆರಂಭ) (7) ವಿಕ್ರಮ ಸಂವತ್ ಅಥವಾ ಮಾಲವ ಸಂವತ್ (8) ಶಕ ಸಂವತ್ (9) ಕಳಚುರಿ ಸಂವತ್ (10) ಗುಪ್ತ ಸಂವತ್ (11) ಗಾಂಗೇಯ ಸಂವತ್ (12) ಹರ್ಷ ಸಂವತ್ (13)ಭಾಟಿಕ (ಭಟ್ಟಿಕ) ಸಂವತ್ (14) ಕೊಲ್ಲಮ್ (ಕೋಲಂಬ) ಸಂವತ್ (ಆಂಡು) (15) ನೇವಾರ (ನೇಪಾಲ ಸಂವತ್) (16) ಚಾಲುಕ್ಯ ವಿಕ್ರಮ ಸಂವತ್ (17) ಸಿಂಹ ಸಂವತ್ (18) ಲಕ್ಷ್ಮಣಸೇನ ಸಂವತ್ (19) ಪುದುವೈಪ್ಪು ಸಂವತ್ (20) ರಾಜ್ಯಾಭಿಷೇಕ ಸಂವತ್ (21) ಬಾರ್ಹಸ್ಪತ್ಯ ಸಂವತ್ I (12 ವರ್ಷ ಚಕ್ರವುಳ್ಳದ್ದು) (22) ಬಾರ್ಹಸ್ಪತ್ಯ ಸಂವತ್ II (60 ವರ್ಷ ಚಕ್ರವುಳ್ಳದ್ದು) (23) ಗ್ರಹಪರಿವೃತ್ತಿ ಸಂವತ್ಸರ (24) ಸೌರವರ್ಷ (25) ಚಾಂದ್ರವರ್ಷ (26) ಹಿಜರೀಸನ್ (27) ಶಾಹೂರ್ (ಸೂರ್‌ಸನ್) (28) ಫಸಲೀಸನ್ (29) ವಿಲಾಯತೆಸನ್ (30) ಅಮಲೀಸನ್ (31) ಬಂಗಾಲೀಸನ್ (32) ಮಗೀ (ಮಗಿ) ಸನ್ (33) ಇಲಾಹಿ ಸನ್ (34) ಇಸವೀಸನ್.

ಈ ಶಕಗಣನಾ ಸಂವತ್ಸರಗಳನ್ನು ಡಿ.ಸಿ.ಸರ್ಕಾರ್ ಅವರು ತೇದಿ ಹಾಗೂ ಶಕಗಳ ದಾಖಲೀಕರಣ ಎಂಬ ಮುಖ್ಯ ಶೀರ್ಷಿಕೆಯಡಿಯಲ್ಲಿ ಕೆಲ ಪ್ರಚಲಿತ ಶಕಗಣನೆಗಳು, ಚಾಲನೆಯಲ್ಲಿಲ್ಲದ ಶಕಗಣನೆಗಳು, ಹಿಜರೀ ಗಣನೆ ಹಾಗೂ ಅದರ ಮಾರ್ಪಾಡು ಹಾಗೂ ಬದಲಾವಣೆ ಮತ್ತು ಕಲಸುಮೇಲೋಗರ ಗಣನೆಗಳು ಹಾಗೂ ಸಂದೇಹಾಸ್ಪದ ಶಕೆಗಳು ಎಂದು ಮುಂತಾಗಿ ನಾಲ್ಕು ಉಪಶೀರ್ಷಿಕೆಗಳಲ್ಲಿ ವಿವರಿಸಿದ್ದಾರೆ.

**ಸಪ್ತರ್ಷಿ ಸಂವತ್:** ಸಪ್ತ ಋಷಿ ನಾಮಕ ಏಳು ನಕ್ಷತ್ರಗಳೊಂದಿಗೆ ಸಂಬಂಧಿಸಿದ ಒಂದು ಕಲ್ಪಿತಗತಿ. ಇದನ್ನು ಲೌಕಿಕ ಕಾಲ, ಲೌಕಿಕ ಸಂವತ್, ಶಾಸ್ತ್ರ ಸಂವತ್, ಪಹಡಿ ಸಂವತ್ ಮತ್ತು ಕಚ್ಚಾ ಸಂವತ್ ಎಂದು ಮುಂತಾಗಿ ಹೆಸರಿಸಲಾಗಿದೆ. ಇದೊಂದು 27 ನಕ್ಷತ್ರಗಳಲ್ಲಿ ಸಪ್ತರ್ಷಿ ಮಂಡಲವು ಒಂದೊಂದು ನೂರು ವರ್ಷಗಳ ಅವಧಿ ನಿಲ್ಲುತ್ತದೆ ಎಂಬುದೊಂದು ನಂಬಿಕೆ. ಪ್ರತಿ ನೂರು ವರ್ಷ ಆದಕೂಡಲೆ ನೂರನ್ನು ಬಿಟ್ಟುಕೊಟ್ಟು ಆಯಾ ನಕ್ಷತ್ರದೊಂದಿಗೆ ಒಂದು (1) ಎರಡು (2) ಎಂದು ಆಗಾಗ ಗಣಿಸುವುದರಿಂದ ಇದಕ್ಕೆ ಕಚ್ಚಾ ಎಂದು ಹೆಸರು ಬಂದಿದೆ; ಮತ್ತೆ ಕಾಶ್ಮೀರ ಹಾಗೂ ಪಂಜಾಬ್ ಪ್ರಾಂತ್ಯಗಳ ಗುಡ್ಡಗಾಡು ಅಥವಾ ಪರ್ವತಶ್ರೇಣಿ ತಪ್ಪಲು (ಪಾದಡ) ಗಳಲ್ಲಿ ಚಾಲ್ತಿಯಲ್ಲಿ ಇರುವುದರಿಂದ ಪಾದಡಿ ಎಂದು ಇನ್ನೊಂದು ಹೆಸರು. ಸಪ್ತರ್ಷಿ ಮಂಡಲವನ್ನು ಉತ್ತರ ಕರ್ನಾಟಕದ ಜನಪದರಲ್ಲಿ ಹೊರಸು ಹಾಗೂ ಅದರ ಕಾಲುಗಳೆಂದು ಗುರುತಿಸಲಾಗಿದೆ. ಈ ಮಂಡಲದಲ್ಲೇ ವಸಿಷ್ಠ ಹಾಗೂ ಅರುಂಧತಿ ನಕ್ಷತ್ರಗಳು ಇವೆ. ಮದುವೆಯಲ್ಲಿ ಮದುಮಕ್ಕಳಿಗೆ ರಾತ್ರಿ ಆಗುವವರೆಗೆ ಕಾದು ಪುಣ್ಯಾಹವಾಚನ ಮಾಡಿಸಿಕೊಂಡ ದಂಪತಿಗಳು ವಶಿಷ್ಠ ಅರುಂಧತಿ ನಕ್ಷತ್ರಗಳನ್ನು ತೋರಿಸಿ ಜೀವನದಲ್ಲಿ ಹಾಗಿರಬೇಕೆಂದು ನವದಂಪತಿಗಳಿಗೆ ತಿಳಿಸಿ ಎಲ್ಲರೂ ಊಟ ಮಾಡುತ್ತಿದ್ದರು. ಸಪ್ತರ್ಷಿಗಳ ವಿವರಣೆ ಮನ್ವಂತರಗಳಿಗೆ ಅನುಸರಿಸಿ ಎರಡು ವಿಧವಾಗಿದೆ: ವೈವಸ್ವತ ಮತ್ತು ಸ್ವಯಂಭುವ. ವೈವಸ್ವತ ಮನ್ವಂತರದ ಸಪ್ತರ್ಷಿ ಮಂಡಲ: ವಿಶ್ವಾಮಿತ್ರ, ಜಮದಗ್ನಿ, ಭರದ್ವಾಜ, ಗೌತಮ, ಅತ್ರಿ, ವಸಿಷ್ಠ ಮತ್ತು ಕಶ್ಯಪ. ಸ್ವಯಂಭುವ ಮನ್ವಂತರದ ಸಪ್ತರ್ಷಿ ಮಂಡಲ: ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು ಮತ್ತು ವಸಿಷ್ಠ.

ಸಪ್ತರ್ಷಿ ಶಕಗಣನೆ ಕಲಿಯುಗದ 25 ವರ್ಷಗಳು ಗತಿಸಿದ ಮೇಲೆ ಆರಂಭವಾಯಿತೆಂದು ತಿಳಿದುಬರುತ್ತದೆ. ಪುರಾಣಗಳಲ್ಲಿ ಹಾಗೂ ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಕಲಿಯುಗಕ್ಕಿಂತ ಪೂರ್ವದಲ್ಲೇ ಪ್ರಚಲಿತವಾಗಿತ್ತೆಂದು ತಿಳಿದುಬರುತ್ತದೆ. ಡೆಕ್ಕನ್ ಕಾಲೇಜ್ (ಪುಣೆ) ಗ್ರಂಥಾಲಯದಲ್ಲಿ ಕಾಶಿಕಾವೃತ್ತಿ ಎಂಬ ಒಂದು ಹಸ್ತಪ್ರತಿ ಇದ್ದು ಅದರಲ್ಲಿ ಗತವಿಕ್ರಮ ಸಂವತ್ 1717 ಸಪ್ತರ್ಷಿ ಸಂವತ್ 36 ಎಂದು (ಸಪ್ತರ್ಷಿ ಸಂವತ್ 36, ಪೌಷ ವತಿ(ದಿ) 3 ರವಿವಾರ) ಇದ್ದು ಇದರಿಂದ ವ್ಯಕ್ತವಾಗುವುದೇನೆಂದರೆ 24 ಸಂಖ್ಯೆಯನ್ನು ಜೋಡಿಸುವುದರಿಂದ ಇಸ್ವಿಸನ್ ಬರುತ್ತದೆ.

ವಿಕ್ರಮ ಸಂವತ್ 1717-57 = ಇಸ್ವಿಸನ್ 1660

ಶಾ.ಶ. ವರ್ಷ 1582+78 = ಇಸ್ವಿಸನ್ 1660

ಸಪ್ತರ್ಷಿ ಸಂವತ್ 36+24 = 60 1660

ಗತ ಶತಸಂಖ್ಯೆಯನ್ನು ಬಿಟ್ಟು ಬರೆಯುವ ಪದ್ಧತಿಯನ್ನು ಗಣನೆಗೆ ತೆಗೆದುಕೊಂಡರೆ 1660 ಆಗುತ್ತದೆ (1600+60=1660). ಸಪ್ತರ್ಷಿ ಸಂವತ್ ಗಣನೆ ಸುಮಾರು ಇಸ್ವಿಸನ್ ಜೊತೆಜೊತೆಗೆ ಹೋಗುತ್ತದೆ. ಈ ಶಕೆ ಕಾಶ್ಮೀರ-ಪಂಜಾಬ್ ಪ್ರದೇಶದ ಖಗೋಳ ಶಾಸ್ತ್ರಜ್ಞರ ಒಂದು ಕಾಲ್ಪನಿಕ ಎಂದು ಡಿ.ಸಿ.ಸರ್ಕಾರ್ ಅವರ ಅಭಿಪ್ರಾಯ. ಈ ಶಕೆ ಕಾಶ್ಮೀರದ ಗುಡ್ಡಗಾಡು ಪ್ರದೇಶಗಳಲ್ಲಿ ಈಗಲೂ ಪ್ರಚಲಿತವಾಗಿದೆ.

**ಕಲಿಯುಗ ಸಂವತ್:** ಇದನ್ನು ಭಾರತ ಯುದ್ಧ ಸಂವತ್ ಹಾಗೂ ಯುಧಿಷ್ಠಿರ ಸಂವತ್ ಎಂದೂ ಕರೆಯಲಾಗಿದೆ. ಬ್ರಹ್ಮನ ಒಂದು ಕಲ್ಪದ ಒಂದು ದಿನ 14 ಮನ್ವಂತರಗಳನ್ನು ಇಲ್ಲವೇ 1000 ಮಹಾಯುಗವನ್ನು ಅಥವಾ 432,00,00,000 ವರ್ಷಗಳ ವ್ಯಾಪ್ತಿಯುಳ್ಳದ್ದೆಂದು ಮತ್ತು ಕಲಿಯುಗ ಅದರ 1/10 ಅಂಶವನ್ನು ಎಂದರೆ; 4,32,00,000 ವರ್ಷಗಳುಳ್ಳದ್ದೆಂದು ಹೇಳಲಾಗುತ್ತದೆ. ಇದರಲ್ಲಿ ಈಗ ಗತಕಲಿ ವರ್ಷ 5108 (5108–3101=ಪ್ರ.ಶ.2007) ಎಂದು ಪಂಚಾಂಗಗಳಲ್ಲಿ ಬರೆಯಲಾಗುತ್ತದೆ. ಒಂದು ವರ್ಷದ ಗಣನೆ ಆಚೆ–ಈಚೆ ಗೌಣ; ಗಣಿಸುವಲ್ಲಿಯ ಏರುಪೇರು.

ಚಳುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿ ಕಾಲದಲ್ಲಿ ಆತನ ಆಪ್ತ ಅಧಿಕಾರಿ ರವಿಕೀರ್ತಿ ಐಹೊಳೆಯಲ್ಲಿ ಜಿನೇಂದ್ರ ಭವನವನ್ನು ಕಟ್ಟಿಸಿದ. ಇದರಲ್ಲಿ ಕಲಿಯುಗದ 3735ನೆಯ ವರ್ಷ, ಶಾ.ಶ. 556ನೆಯ ವರ್ಷವನ್ನೂ ತಿಳಿಸಿರುವುದು ಬಹಳ ಮಹತ್ತ್ವದ ಸಂಗತಿ. ಇಸ್ವಿಸನ್ ಶಕಗಣನೆಗೆ ಲೆಕ್ಕ ಹಾಕಲು ಇದರಿಂದ ಹೆಚ್ಚು ಸಹಾಯ ದೊರೆತು ಉಪಯುಕ್ತ ವಾಯಿತು. ಇಸ್ವಿಸನ್ ವರ್ಷವನ್ನು ಪಡೆಯಲು 78 ವರ್ಷವನ್ನು ಶಾ.ಶ.ಗೆ ಸೇರಿಸಿದರೆ ಸರಿಹೋಗುತ್ತದೆ:

ಶಾ.ಶ. 556+78 = ಪ್ರ.ಶ.634

ಕಲಿಕಾಲ 3735ರಲ್ಲಿ 3101ನ್ನು ಕಳೆದರೆ ಪ್ರ.ಶ.634 ಬರುತ್ತದೆ.

ಕಲಿಕಾಲ: 3735–3101 = ಪ್ರ.ಶ.634

ಕಲಿಕಾಲ ಗಣನೆ ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದು ಮತ್ತೆ ಘಟ್ಟ ಪ್ರದೇಶಗಳಲ್ಲೂ ಚಾಲ್ತಿಯಲ್ಲಿದ್ದುದು ಕಂಡುಬರುತ್ತದೆ.

**ನಿರ್ವಾಣ ಸಂವತ್:** ಬೌದ್ಧರು ಬುದ್ಧನ ಮಹಾಪರಿನಿರ್ವಾಣದಿಂದ ಮತ್ತು ಜೈನರು ವೀರವರ್ಧಮಾನ ಎಂದರೆ ಮಹಾವೀರನ ನಿರ್ವಾಣದಿಂದ ಕಾಲಗಣನೆಯನ್ನು ಮಾಡಿ ಅಂತೂ ವರ್ಷಗಳನ್ನು ತಮ್ಮ ತಮ್ಮ ಕೃತಿಗಳಲ್ಲಿ ನಿರ್ದೇಶಿಸಿದ್ದಾರೆ. ಕೆಲವೊಮ್ಮೆ ಇವು ಶಿಲಾಲೇಖಗಳಲ್ಲೂ ಬಂದಿರುವುದುಂಟು.

ಉದಾ:1. ಭಗವತಿಪರಿನಿರ್ವೃತೇ ಸಂವತ್ 1813 ಕಾರ್ತಿಕ್‌ವಧಿ 1
ಬುಧೇ (ಗಯಾದ ಶಾಸನ – ಇ.ಎಂ.ಸಂ.10, ಪು.343)

2. ಯುವಾನ್‌ಚಾಂಗನು ಬುದ್ಧನ ನಿರ್ವಾಣದ ಅನಂತರ 100
ವರ್ಷದಲ್ಲಿ ಅಶೋಕ ಇದ್ದನೆಂದು ತಿಳಿಸಿದ್ದಾನೆ.

ಬುದ್ಧನ ನಿರ್ವಾಣವನ್ನು ಪ್ರಶ.ಪೂ. ಸು. 481–82ರ ಮಧ್ಯದಲ್ಲಿ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ.

ಜೈನ ಕೃತಿಗಳಲ್ಲಿ ವೀರನಿರ್ವಾಣದ ಉಲ್ಲೇಖಗಳಿವೆ. ಈ ಗಣನೆ ಶಿಲಾಶಾಸನಗಳಲ್ಲೂ ಇವೆ.

ಉದಾ: ಚರಮ ಜಿನಾಬ್ದಂ ನಯನವ
ಗಿರಿ ಶಶಧರ ಸಂಖ್ಯೆ ಸಲುತಿರಲ್ ಕ್ರೋಧನವ
ತ್ಸರಫಾಲ್ಗುಣ ಮಾಸಾಸಿತ
ವರಪಕ್ಷದ ಬಿದಿಗೆ ಭಾನುವಾರದೊಳಗಭಯಂ

ಈ ಶಾಸನದಲ್ಲಿ ಶಾ.ಶ. 1188ರಲ್ಲಿ ಅಕ್ಷಯ ಸಂವತ್ಸರ ಬಂದಿತ್ತೆಂದೂ ಬರೆದಿರುವುದ ರಿಂದ 1188+78 =ಪ್ರ.ಶ. 1266 ಆಗುತ್ತದೆ. ಇದನ್ನು ಇಲ್ಲಿ ಬಂದಿರುವ ನಯನವಗಿರಿ ಶಶಧರ ಎಂಬ ಕಾಲಲೇಖ (1792)ದಲ್ಲಿ ಕಳೆದರೆ ವೀರನಿರ್ವಾಣ ಶಕೆ 527 ವರ್ಷದ ಅಂತರವನ್ನು ಹೊಂದಿತ್ತೆಂದು ತಿಳಿಸುತ್ತದೆ. ಅರ್ಥಾತ್ ಪ್ರ.ಶ.ಪೂ. 527ರಲ್ಲಿ ಮಹಾವೀರ ತೀರ್ಥಂಕರ ನಿರ್ವಾಣ ಹೊಂದಿದ ಎಂಬುದು ಸ್ಪಷ್ಟವಾಗುತ್ತದೆ. ಶ್ವೇತಾಂಬರ ಸಂಪ್ರದಾಯ ದವರು ಈ ಶಕೆಯನ್ನು ಪ್ರ.ಶ.ಪೂ. 605 ಮತ್ತು 5 ತಿಂಗಳ ಅವಧಿ ಎಂದು ತಿಳಿದಿದ್ದಾರೆ. ಈ ಎರಡು ಪಂಥಗಳಲ್ಲಿ ನಿರ್ವಾಣ ತೇದಿಯ ಬಗ್ಗೆ ಹೊಂದಾಣಿಕೆ ಇಲ್ಲ. ಇದು ಗಮನಾರ್ಹ.

ಚಾಲ್ತಿಯಲ್ಲಿರುವ ಬಹಳ ಮುಖ್ಯವಾದ ಶಕವರ್ಷಗಳೆಂದರೆ: (1) ವಿಕ್ರಮ ಶಕೆ (2) ಶಾ.ಶ. ವರ್ಷ (3) ಬಾರ್ಹಸ್ಪತ್ಯ ಗಣನೆ (60 ವರ್ಷದ ಆವರ್ತನೆಯ ಪದ್ಧತಿ). ಬಾರ್ಹಸ್ಪತ್ಯ ಪದ್ಧತಿಯಲ್ಲಿ ಎರಡು ವಿಧಗಳಿವೆ. ಒಂದು 12 ವರ್ಷದ ಚಕ್ರ ಮತ್ತು ಇನ್ನೊಂದು 60 ವರ್ಷದ ಚಕ್ರ. ಪ್ರಭವ ಸಂವತ್ಸರದಿಂದ ಅಕ್ಷಯ/ಕ್ಷಯ ಸಂವತ್ಸರದವರೆಗೆ 60 ಸಂವತ್ಸರಗಳು. ಇವು ಈಗ ವಿಕ್ರಮ ಶಕೆಯಲ್ಲೂ ಮತ್ತು ಶಾ.ಶ. ಗಣನೆಯಲ್ಲೂ ಬಳಕೆಯಲ್ಲಿವೆ. ವಿಕ್ರಮಶಕೆ ವಿಶೇಷವಾಗಿ ನರ್ಮದಾ ನದಿಯಿಂದ ಉತ್ತರದಲ್ಲಿ ಪ್ರಚಲಿತ ಮತ್ತು ಶಾ.ಶ. ಗಣನೆ ನರ್ಮದೆಯಿಂದ ದಕ್ಷಿಣದಲ್ಲಿ ಪ್ರಚಲಿತವಾಗಿದೆ.

ಯಾವುದೇ ಒಂದು ಪಂಚಾಂಗವನ್ನು ತೆರೆದರೆ ಅದರ ಮುಖಪುಟದಲ್ಲಿ ಪ್ರಭವಾದಿ 60 ವರ್ಷಗಳಲ್ಲಿ ಒಂದರ ಹೆಸರು ಉದಾ: ಈಗ ನಡೆಯುತ್ತಿರುವುದು ಸರ್ವಜಿತ್ ಸಂವತ್ಸರ ಇರುತ್ತದೆ. ಯಾವುದೇ ಒಂದು ದಾಖಲೆಯಲ್ಲಿ ಕೇವಲ ಶಕಗಣನೆಯ ವರ್ಷವನ್ನು ಕೊಟ್ಟಿದ್ದರೆ ಅಥವಾ ಉಕ್ತ ಸಂವತ್ಸರದ ಹೆಸರು ಸರಿಯಾಗಿ ಬಂದಿದೆಯೆ ಎಂದು ಪರೀಕ್ಷಿಸಬೇಕಾದರೆ ಶಕವರ್ಷಕ್ಕೆ 12 ಎಂಬ ಸಂಖ್ಯೆಯನ್ನು ಜೋಡಿಸಿ 60ರಿಂದ ಭಾಗಿಸಿದರೆ ಉಳಿಯುವ ಶೇಷಸಂಖ್ಯೆ ಪ್ರಭವಾದಿ ಸಂವತ್ಸರಗಳಲ್ಲಿ ಒಂದಾಗಿರುತ್ತದೆ.

ಉದಾ: 1929+12 = 1941 (1929 ಎಂಬುದು ವರ್ತಮಾನ ಶಕವರ್ಷ)

1941 60 = 21 ಶೇಷ

21ನೆಯ ಸಂಖ್ಯೆಯ ಸಂವತ್ಸರವೆಂದರೆ ಸರ್ವಜಿತ್ ಮೇಲೆ ವರಾಹಮಿಹಿರ ಹೀಗೆಯೆ ವಿಕ್ರಮ ಸಂವತ್ ಬಗೆಗೆ ಪತ್ತೆ ಹಚ್ಚುವ ಪದ್ಧತಿಯನ್ನು ಕೊಟ್ಟಿದ್ದಾನೆ.

**ಶಕವರ್ಷಗಳು:** ವಿಕ್ರಮ ಮತ್ತು ಶಾಲಿವಾಹನ ಶಕೆಗಳೆರಡೂ ಬಗೆಯ ಗಣಿತಗಳಲ್ಲಿ ಪಂಚಾಂಗದ ಅಂಗಗಳು (ವಾರ, ತಿಥಿ, ನಕ್ಷತ್ರ, ಯೋಗ ಹಾಗೂ ಕರಣ) ಅಲ್ಪ ಗಳಿಗೆ ಹಾಗೂ ಪಳಗಳಲ್ಲಿ ವ್ಯತ್ಯಾಸವನ್ನು ಬಿಟ್ಟರೆ (ಈ ವ್ಯತ್ಯಾಸ ಆಯಾ ಸ್ಥಳದಲ್ಲಿ ಆಗುವ ಸೂರ್ಯೋದಯ ಹಾಗೂ ಚಂದ್ರೋದಯಗಳನ್ನು ಅವಲಂಬಿಸಿದೆ. ಅರ್ಥಾತ್ ಅಕ್ಷಾಂಶ ಹಾಗೂ ರೇಖಾಂಶ (ಗೆರೆಗಳ ಅಂತರವನ್ನು ಅವಲಂಬಿಸಿದೆ) ಒಂದೇ ಆಗಿವೆ. ಉದಾ: ಇಂದು ಬುಧವಾರ ತ್ರಯೋದಶಿ ತಿಥಿ, ಹಸ್ತ ಹಾಗೂ ಚಿತ್ತಾ ನಕ್ಷತ್ರಗಳು ಒಂದಾದ ಮೇಲೆ ಇನ್ನೊಂದು ಬರುವುದು ಇಡೀ ಭಾರತಕ್ಕೆ ಒಂದೇ ಆಗಿವೆ. ಅರ್ಥಾತ್ ದಕ್ಷಿಣ ಭಾರತಕ್ಕೆ ಮತ್ತು ಉತ್ತರ ಭಾರತಕ್ಕೆ ಭಿನ್ನ ಭಿನ್ನ ಆಗಿಲ್ಲ. ಭಿನ್ನತೆ ಇರುವುದು ಮಾಸ ಹಾಗೂ ಶಕವರ್ಷ ಗಣನೆಯಲ್ಲಿ. ಈಗ –

ಉತ್ತರದಲ್ಲಿ: ವಿಕ್ರಮೀಸಂವತ್ : 2064 (2064–57 = ಪ್ರ.ಶ. 2007)

ದಕ್ಷಿಣದಲ್ಲಿ: ಶಾಲಿವಾಹನಶಕ : 1969 (1969+78 = ಪ್ರ.ಶ.2007)

135 ವರ್ಷಗಳ ಅಂತರದಲ್ಲೆ ಈ ಎರಡು ಶಕಗಳು ಹುಟ್ಟಿಕೊಂಡಿವೆ. ವಿಕ್ರಮೀ ಸಂವತ್ ಮೊದಲು ಶಾಲಿವಾಹನ ಶಕೆ ಅನಂತರದಲ್ಲಿ ಚಾಲ್ತಿಯಲ್ಲಿ ಬಂದಿವೆ. ಒಂದೇ ಶಾಖೆಯ ಇಬ್ಬರು ಅರಸರ ಜಯದ ಸಂಕೇತಗಳಾಗಿವೆ. ಈ ಎರಡೂ ಚಾಂದ್ರಮಾನ ಪದ್ಧತಿಯಲ್ಲೇ ವ್ಯವಹರಿಸುತ್ತವೆ; ಭೇದವಿಷ್ಟೇ ಒಂದು ಅಮಾಂತ (ಅಮವಾಸ್ಯೆಯಿಂದ–ಅಮವಾಸ್ಯೆಗೆ) ಇನ್ನೊಂದು ಪೂರ್ಣಿಮಾಂತ (ಹುಣ್ಣಿಮೆಯಿಂದ–ಹುಣ್ಣಿಮೆಗೆ) ಆಗಿ ಮುಗಿಯುತ್ತವೆ. ಆದರೆ ಈ ಶಕಗಳನ್ನು ಸ್ಥಾಪಿಸಿದವರು ಯಾರು ಎಂಬುದರ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ.

ವಿಕ್ರಮ ಶಕೆಯ ಗಣನೆಯ ವಿಕ್ರಮ ಶಬ್ದ ಇತ್ತೀಚಿನದು. ಸದ್ಯ ಇದು ಮೊದಲ ಬಾರಿಗೆ ಕಾತೇವಾಡದ ಧಿನಿಕ ಎಂಬ 737ರ 736 ಶಾಸನ (794–57) ವಿಕ್ರಮ ಸಂವತ್ಸರ ಶತೇಷು ಸಪ್ತದು ಚತುರನವತ್ಯಧಿಕೇಷ್ವಂಕತಃ =794 (794–57). ತತ್ಪೂರ್ವದಲ್ಲಿ ಇದನ್ನು ಕೃತ ಮಾಲವ ಎಂದು ಮುಂತಾಗಿ ಕರೆಯಲ್ಪಟ್ಟಿದೆ. ಈ ಗಣನೆ ಮೊದಲು ರಾಜಸ್ಥಾನ ಹಾಗೂ ಮಾಲವ ಪ್ರಾಂತಗಳಲ್ಲಿ ಪ್ರಚಲಿತವಾಗಿತ್ತು. ತತ್ಕಾರಣ ಮಾಲವ ಪ್ರಾಂತ ಇಲ್ಲವೇ ಮಾಲವ ಸಮುದಾಯದೊಂದಿಗೆ ಈ ಶಕಗಣನೆಯನ್ನು ಗುರುತಿಸಲಾಗುತ್ತಿತ್ತು. ಮಾಲವಶಕವು ವಿಕ್ರಮಶಕ ಆದದ್ದು ಹೇಗೆ? ಮಧ್ಯದಲ್ಲಿ ಬಂದ ಹೆಸರು ಮತ್ತೆ ಇಡೀ ಭಾರತದಲ್ಲಿ ಪ್ರಚಲಿತವಿಲ್ಲದ ಕೇವಲ ಪ್ರಾದೇಶಿಕವಾಗಿ ಕಾಣಿಸಿಕೊಂಡಿರುವ ಈ ಅಭಿಧಾನ ಮಧ್ಯದಲ್ಲೇ ನಡುವಿನ ಕಾಲದಲ್ಲೇ ಒಂದಷ್ಟು ಕಾಲ ಲುಪ್ತವಾಗಿ ಮತ್ತೆ ಪೂರ್ವದ ಶಕಸಂವತ್ ಹೆಸರಿನ ರೂಪದಲ್ಲೇ ಇಂದಿಗೂ ಅಸ್ತಿತ್ವದಲ್ಲಿದೆ. ಇನ್ನೂ ಒಂದು ಅಚ್ಚರಿಯೆಂದರೆ ವಿಕ್ರಮಶಕ ಹಾಗೂ ಶಾಲಿವಾಹನ (ಸಾತವಾಹನ) ಶಕ ವರ್ಷಗಳಲ್ಲಿ ಒಂದು ಸಮಾನ ಅಂಶವಿದೆ. ಅದೆಂದರೆ ಪಂಚಾಂಗದ ಪಂಚಾಂಗ –

ತಿಥೇಶ್ಚ ಶ್ರೀಕರಂ ಪ್ರೋಕ್ತಂ ವಾರಾದಾಯುಷ್ಯವರ್ಧನಂ
ನಕ್ಷತ್ರಾತ್‌ಹರತೇ ಪಾಪಂ ಯೋಗಾದ್ರೋಗ ನಿವಾರಣಂ
ಕರಣಾತ್ ಕಾರ್ಯಸಿದ್ಧಿಃ ಸ್ಯಾತ್ ಪಂಚಾಂಗಫಲಮುತ್ತಮಂ
ಇತೀದಂ ವತ್ಸರಫಲಂ ವತ್ಸರಾದಿ ತಿಥೌಶುಭಂ

ತಿಥಿ, ವಾರ, ನಕ್ಷತ್ರ, ಯೋಗ, ಕರಣ–ಇವು ಎರಡೂ ಶಕ ವರ್ಷಗಳ ಗಣನೆಯಲ್ಲಿ ಸಮಾನ (ಸ್ಥಳಗಳ ಅಂತರ, ದೂರ, ಕಾರಣಗಳಿಂದ ಗಳಿಗೆ ಪಳಗಳಲ್ಲಿ ವ್ಯತ್ಯಾಸ ಇರುವುದು ಗೌಣ). ಕಣ್ಣಿಗೆ ಎದ್ದುತೋರುವ ವ್ಯತ್ಯಾಸ ಎಂದರೆ ಈಗ ವಿಕ್ರಮಶಕೆಯ ಗಣಿತದಲ್ಲಿ ಗಣನೆಯನ್ನು ಮಾಘ ಕೃಷ್ಣಪಕ್ಷ ಆದರೆ ಶಾಲಿವಾಹನ ಶಕೆಯಲ್ಲಿ ಪೌಷ್ಯ ಕೃಷ್ಣಪಕ್ಷ. ಹೀಗೆಯೇ 12 ತಿಂಗಳೂ ಮೊದಲು ಕೃಷ್ಣಪಕ್ಷ ಮತ್ತು ಅನಂತರ ಶುಕ್ಲಪಕ್ಷ ಇರುತ್ತವೆ.

60 ವರ್ಷಗಳ ಆವರ್ತನ ಹೇಗಾಯಿತೆಂಬುದು ದೊಡ್ಡ ಸಮಸ್ಯೆಯೆ. ಇವುಗಳ ಪ್ರಸ್ತಾಪ ಬಾರ್ಹಸ್ಪತ್ಯ ಸಂವತ್ಸರ ಎಂಬ ಗಣನೆಯಲ್ಲಿ ಬರುತ್ತದೆ. ಮತ್ತೆ ಮೇಷಾದಿ ಮಾಸಗಳು ಮತ್ತು ಮಹಾಮೇಷಾದಿ ಸಂವತ್ಸರಗಳೂ ಬಾರ್ಹಸ್ಪತ್ಯ ಸಂವತ್ಸರ ಗಣನೆಯಲ್ಲಿ ಬರುತ್ತವೆ. ಇವು ಸೌರಮಾನ ಲೆಕ್ಕದವು. ಇಲ್ಲಿ ತಿಂಗಳುಗಳು ಮೇಷಾದಿ ದ್ವಾದಶ ರಾಶಿಗಳ ಹೆಸರಿನಲ್ಲೇ ಇರುತ್ತವೆ. ಈ ಗಣನೆ ಬೃಹಸ್ಪತಿ ಹಾಗೂ ಸೂರ್ಯಗ್ರಹಗಳ ಚಲನೆಯ ಮೇಲೆ ನಿಂತಿದೆ.

60 ವರ್ಷಗಳು ಎಂದರೆ ಪ್ರಭವಾದಿ ಸಂವತ್ಸರಗಳು ಮತ್ತು ಅವುಗಳಲ್ಲಿ ಕಾಯಂ ಆಗಿ ಬರುವ ಚೈತ್ರ ಆದಿ ದ್ವಾದಶ ಮಾಸಗಳು ಚಂದ್ರನ ಚಲನೆಯ ಮೇಲೆ ನಿಂತಿವೆ. ಚಂದ್ರಬಿಂಬ ಯಾವ ನಕ್ಷತ್ರದಂದು ತನ್ನ ಪೂರ್ಣವೃತ್ತಾಕಾಶದ ಸ್ವರೂಪದಲ್ಲಿ ಇರುತ್ತದೋ ಆ ದಿನ – ಆ ನಕ್ಷತ್ರದ ಪೂರ್ಣಿಮೆಯಾಗಿರುತ್ತದೆ. ಉದಾ: ಚಿತ್ತಾ ನಕ್ಷತ್ರದಲ್ಲಿ ಇದ್ದಂದು ಚೈತ್ರಪೂರ್ಣಿ ಆಗಿರುತ್ತದೆ. ಆ ನಕ್ಷತ್ರದ ಹೆಸರಿನಲ್ಲೇ ಮಾಸವನ್ನು ಗುರುತಿಸಲಾಗುತ್ತದೆ. ಅಂತೆಯೇ ವಿಶಾಖಾ ನಕ್ಷತ್ರದ ಮಾಸವೇ ವೈಶಾಖ. ಹೀಗೆಯೆ 12 ನಕ್ಷತ್ರಗಳ ಹೆಸರಿನಲ್ಲಿ ಚಾಂದ್ರಮಾನದ ಮಾಸಗಳು ಆಗುತ್ತವೆ. ಆ ಖಗೋಳ ವಿಜ್ಞಾನಿ ನಿಗದಿಪಡಿಸಿದ ಲೆಕ್ಕ 12

ಮಾಸಗಳು ಮತ್ತು 60 ವರ್ಷಗಳು ಬಾರ್ಹಸ್ಪತ್ಯ ಸಂವತ್ಸರ ಎಂದು ಆ ವಿಜ್ಞಾನಿಯ ಹೆಸರಿನಲ್ಲಿ ಕರೆದರೆ ಚಂದ್ರನ ಗತಿಯ ಮೇಲೆ ಗಣಿತ ನಿಂತಿರುವುದರಿಂದ ಚಾಂದ್ರಮಾನ ಎಂದೂ ಕರೆಯಲ್ಪಡುತ್ತದೆ.

ಸೂರ್ಯನ ಹಾಗೂ ಬೃಹಸ್ಪತಿ ಗ್ರಹಗಳ ಚಲನಗತಿಯ ಮೇಲೆ ಅಧ್ಯಯನ ಮಾಡಿದರೆ ಅದು ಇನ್ನೊಂದು ಬಗೆಯ ಬಾರ್ಹಸ್ಪತಿ ಸಂವತ್ಸರ ವಿಧಾನ ಆಗುತ್ತದೆ. ಇಲ್ಲಿರುವ ಬೃಹಸ್ಪತಿ ಗ್ರಹದ ಚಲನೆ–ಉದಯ–ಅಗಾಗ (ಸೂರ್ಯನು ಹತ್ತಿರವಿದ್ದಾಗ ಅಸ್ತ, ದೂರಸರಿದ ಕೂಡಲೆ ಉದಯ) ಆಗುತ್ತಲೇ ಇರುತ್ತದೆ. 12 ವರ್ಷಗಳಲ್ಲಿ ಗುರು 11 ವರ್ಷ ಮಾತ್ರ ಗೋಚರಿಸುತ್ತಾನೆ ಮತ್ತು 1 ವರ್ಷದ ಅವಧಿ ಅಸ್ತವಾಗಿರುತ್ತಾನೆ. ಅರ್ಥಾತ್ 12 ವರ್ಷಗಳಲ್ಲಿ ಒಂದು ವರ್ಷ ಕ್ಷಯವಾಗಿ ಹೋಗುತ್ತದೆ. ತನ್ನಿಮಿತ್ತ ಒಂದು ವರ್ಷವನ್ನು ಕೈಬಿಡಬೇಕಾಗುತ್ತದೆ. ಇಲ್ಲಿ ಮಾಸಗಳನ್ನು ನಕ್ಷತ್ರಗಳಿಂದಲೇ ಚೈತ್ರ ಇತ್ಯಾದಿ ಗುರುತಿಸಲ್ಪಟ್ಟರೂ ವರ್ಷವನ್ನು ಮಹಾಚೈತ್ರ, ಮಹಾವೈಶಾಖ ಇತ್ಯಾದಿಯಾಗಿ ಗುರುತಿಸುವುದರಿಂದ ಇಲ್ಲಿ ಗೊಂದಲಕ್ಕೆ ವಿಶೇಷವಾಗಿ ಆಸ್ಪದ ಇರುವುದರಿಂದ ಇದು ಹೆಚ್ಚು ಬಳಕೆಗೆ ಬರಲಿಲ್ಲ.

ಸೌರಮಾನ ಸೂರ್ಯನ ಚಲನೆಯ ಮೇಲೆ ನಿಂತಿದೆ. ಸೂರ್ಯನು ಯಾವ ಯಾವ ರಾಶಿಯಲ್ಲಿ ಚಲಿಸುತ್ತಿರುತ್ತಾನೋ ಆಯಾಯ ರಾಶಿಯ ತಿಂಗಳುಗಳು ಪ್ರಯೋಗದಲ್ಲಿ ಬಂದವು. ಮೇಷ, ವೃಷಭ, ಮಿಥುನ, ಕರ್ಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ ಮತ್ತು ಮೀನ. ಇಲ್ಲಿ ಸಂಕ್ರಮಣಗಳು ಸಂಘಟಿಸುತ್ತವೆ. ಈ ಲೆಕ್ಕದಲ್ಲಿ ಕೆಲವೊಂದು ಕಡೆ ಚಾಂದ್ರಮಾನದ ತಿಂಗಳುಗಳ ಹೆಸರುಗಳನ್ನೇ ಬಳಸಲಾಗುತ್ತದೆ – ಅವು ಹೀಗಿವೆ:

| ಸೌರಮಾನದ ಮಾಸಗಳು | | ಚಾಂದ್ರಮಾನದ ಮಾಸಗಳು |
|---|---|---|
| 1. ಮೇಷ | 1. ಚಿತ್ತಿರೈ | 1. ಚೈತ್ರ (< ಚಿತ್ರಾ) |
| 2. ವೃಷಭ | 2. ವೈಶಾಕಿ | 2. ವೈಶಾಖ (< ವಿಶಾಖಾ) |
| 3. ಮಿಥುನ | 3. ಆಣಿ (ನಿ) | 3. ಜ್ಯೇಷ್ಠ (< ಜ್ಯೇಷ್ಠಾ) |
| 4. ಕರ್ಕಾಟಕ | 4. ಆಡಿ | 4. ಆಷಾಢ(< ಪೂರ್ವಾಷಾಡ ಅಥವಾ ಉತ್ತರಾಷಾಡ) |
| 5. ಸಿಂಹ | 5. ಆವಣಿ | 5. ಶ್ರಾವಣ (< ಶ್ರವಣಾ) |
| 6. ಕನ್ಯಾ | 6. ಪುರತ್ತಾಸಿ | 6. ಭಾದ್ರಪದ (< ಪೂ.ಭಾದ್ರಾ ಅಥವಾ ಉ.ಭಾದ್ರಾ) |
| 7. ತುಲಾ | 7. ಐಪ್ಪಸಿ | 7. ಆಶ್ವಿನ/ಆಶ್ವೀಜ (< ಅಶ್ವಿನಿ) |
| 8. ವೃಶ್ಚಿಕ | 8. ಕಾರ್ತಿಗೈ | 8. ಕಾರ್ತೀಕ (< ಕೃತ್ತಿಕಾ) |
| 9. ಧನು | 9. ಮಾರ್ಗಲಿ (ಳಿ) | 9. ಮಾರ್ಗಶಿರ (< ಮೃಗಶಿರಾ) |
| 10. ಮಕರ | 10. ತೈ | 10. ಪೌಷ್ಯ (< ಪುಷ್ಯ |
| 11. ಕುಂಭ | 11. ಮಾಶಿ | 11. ಮಾಘ (< ಮಘಾ) |
| 12. ಮೀನ | 12. ಪಂಗುನಿ | 12. ಫಾಲ್ಗುಣ(< ಪೂ.ಫಲ್ಗುಣಿ ಅಥವಾ ಉ.ಫಲ್ಗುಣಿ) |

ಚಿತ್ತಿರೈ, ವೈಕಾಶಿ, ಆವಣಿ, ಕಾರ್ತಿಗೈ, ಮಾರ್ಗಳಿ ಮತ್ತು ಪಂಗುಣಿ ಖಂಡಿತವಾಗಿಯೂ ವಿಕೃತ ಶಬ್ದರೂಪಗಳೆನ್ನುವುದರಲ್ಲಿ ಸಂದೇಹ ಇರದು. ಘಟಿ, ಪಳ, ವಿಪಳಗಳನ್ನು ಬಿಟ್ಟರೆ ದಿನಮಾನ – ಪಂಚಾಂಗ – ಇದರ ಗಣಿತದಲ್ಲಿ ವ್ಯತ್ಯಾಸವಿಲ್ಲ ! ವಿವಿಧತೆಯಲ್ಲಿ ಐಕ್ಯತೆಯನ್ನು ಕಾಣಬಹುದು. ಇದು ಸ್ಪಷ್ಟ ದೃಗ್ಗೋಚರ. ತಮಿಳುನಾಡಿನಲ್ಲಿ ಆಂಡು (ಸಂವತ್ಸರ = ವರ್ಷ) ಎಂಬುದೇ ವಿಶೇಷ ಪ್ರಚಲಿತವಾಗಿದೆ.

**ಹಿಜರೀಸನ್:** ಇಸ್ಲಾಂ ಧರ್ಮದ ಅನುಯಾಯಿಗಳು ಭಾರತಕ್ಕೆ ದಂಡೆತ್ತಿ ಬಂದು ಇಲ್ಲಿ ನೆಲೆಸಿದ ಮೇಲೆ ಆ ಜನಾಂಗದವರು ಆಚರಿಸುವ ಅವರ ಸಂಸ್ಕೃತಿಗಳು, ಸಂಗತಿಗಳು ಇಲ್ಲಿಯೂ ಚಾಲ್ತಿಗೆ ಬಂದುವು. ತನ್ನಿಮಿತ್ತ ಅವರ ಧರ್ಮದ ಹಬ್ಬಗಳು – ಈದಗಳು – ಹುತಾತ್ಮರ ಸ್ಮರಣೆಯ ದಿನಗಳು – ಆಚರಣೆಗಳು ಅವುಗಳ ಲೆಕ್ಕಾಚಾರಗಳು, ಪ್ರಯೋಗದಲ್ಲಿ ಬಂದುವು. ಹೀಗೆ ಆಚರಣೆಯಲ್ಲಿ ಬಂದದ್ದು ಹಿಜರೀಸನ್ ಪಂಚಾಂಗ ಗಣನಾ ಪದ್ಧತಿ. ಹಿಜರ್ ಎಂಬ ಅರಬ್ಬೀ ಭಾಷೆಯ ಶಬ್ದದಿಂದ ಈ ಹೆಸರು ಬಂದಿದೆ. ಹಿಜರ್ ಎಂದರೆ ಇರುವುದಕ್ಕೆ ಬೇರೆಯಾಗು ಎಂದು ಅರ್ಥ. ಈ ಶಕೆಯ ಪ್ರಾರಂಭ ಮುಸಲ್ಮಾನ ಧರ್ಮದ ಪ್ರವರ್ತಕ ಮಹಮ್ಮದ್ ಪೈಗಂಬರ್ ಮೆಕ್ಕದಿಂದ ಓಡಿ ಮದೀನ ನಗರಕ್ಕೆ ಬರಲು ಪ್ರಸ್ಥಾನ ಹೊರಡುವ ದಿನದಿಂದ. ಈ ಪ್ರಸ್ಥಾನ ಕಾಲದಿಂದ ಎಂದರೆ 622ರ ಜುಲೈ 15ರಂದು ಸಂಜೆಯಿಂದ ಈ ಶಕೆ ಆರಂಭವಾಗುತ್ತದೆ. ಖಲೀಫ್ ಉಮರ್ (634–44) ಈ ಶಕೆಯನ್ನು ಆರಂಭಿಸಿದ. ಕೆಲವರು ಇದು ಹಿಜರ್ 17ನೆಯ ವರ್ಷದಲ್ಲಿ ನಡೆಯಿತೆಂದು ಹೇಳುತ್ತಾರೆ. ಈ ಹಿಜರ್ ವರ್ಷಗಳು ಚಾಂದ್ರಮಾನ ಗಣಿತದಲ್ಲಿ ಇವೆ. ಅಮಾವಾಸ್ಯೆ ಆದಕೂಡಲೆ ಚಂದ್ರನು ಕಾಣುವ ದಿನದಿಂದ ಲೆಕ್ಕ ಆರಂಭವಾಗುತ್ತದೆ. ಅಮಾಂತದಿಂದ ಅಮಾಂತದವರೆಗೆ ಒಂದು ತಿಂಗಳು ಆಗುತ್ತದೆ. ಈ ಅರಬ್ಬೀ ತಿಂಗಳು ಮತ್ತು ಅವುಗಳಲ್ಲಿ ಇರುವ ದಿವಸಗಳ ವಿವರ ಹೀಗಿದೆ:

| | |
|---|---|
| 1. ಮೊ (ಮು) ರ್ರಂ | = 30 ದಿನಗಳು |
| 2. ಸಫರ್ | = 29 ದಿನಗಳು |
| 3. ರಬ್ಬಿ–ಉಲ್–ಅವ್ವಲ್ | = 30 ದಿನಗಳು |
| 4. ರಬ್ಬಿ–ಉಲ್–ಆಖಿರ್(ಷಾನಿ) | = 29 ದಿನಗಳು |
| 5. ಜಮಾದಿ–ಉಲ್–ಅವ್ವಲ್ | = 30 ದಿನಗಳು |
| 6. ಜಮಾದಿ–ಉಲ್–ಆಖಿರ್(ಷಾನಿ) | = 29 ದಿನಗಳು |
| 7. ರಜಬ್ | = 30 ದಿನಗಳು |
| 8. ಷಾಬಾನ್ | = 29 ದಿನಗಳು |
| 9. ರಮ್ಜಾನ್ | = 30 ದಿನಗಳು |
| 10. ಷವ್ವಲ್ | = 29 ದಿನಗಳು |
| 11. ಜಿಲ್ಕದಾ | = 30 ದಿನಗಳು |
| 12. ಜಿಲ್‌ಹಿಜ್ಜ್ | = 29 ದಿನಗಳು |
| | 354 ದಿನಗಳು |

354 ದಿವಸಗಳೆಂಬುದು ಸ್ಥೂಲ ಲೆಖ್ಖ. ಈ ಚಾಂದ್ರವರ್ಷ ಸೌರವರ್ಷದಿಂದ ಚಿಕ್ಕದು. ಇಸ್ವಿಸನ್ ವರ್ಷದ ಗಣಿತಕ್ಕೆ ಹೋಲಿಸಿದರೆ ಅದರಲ್ಲಿ 365 ದಿನಗಳಿರುತ್ತವೆ. ಹೀಗಾಗಿ ಪ್ರತಿ ವರ್ಷವೂ ಸು. 11 ದಿವಸಗಳ ಏರುಪೇರು ಉಂಟಾಗುತ್ತದೆ. ಹಿಜರ್ ವರ್ಷದಲ್ಲಿ 11 ದಿವಸಗಳು ಕಡಿಮೆ ಬೀಳುತ್ತವೆ. ಹೀಗಾಗಿ 100 ಸೌರ ವರ್ಷಗಳ ಘಟಕ ಚಾಂದ್ರಮಾನದ 103 ಹಿಜರ್ ವರ್ಷಗಳು 24 ದಿವಸಗಳು ಮತ್ತು 9 ಘಳಿಗೆಗಳಾಗುತ್ತದೆ. ಭಾರತದಲ್ಲಿ ಈ ಶಕಗಣನೆ ಮೊದಲ ಬಾರಿಗೆ ಸುಲ್ತಾನ್ ಮೊಹಮ್ಮದ್ ಘಜನಿ ದೊರೆಯ ಮೊಹಮ್ಮದಪುರದಲ್ಲಿ (ಲಾಹೋರ) ಟಂಕಿಸಲಾದ ನಾಣ್ಯಗಳ ಮೇಲೆ ದೊರೆತಿದೆ. ಇವನ್ನು ಹಿ.418 ಹಾಗೂ ಹಿ.419ರಲ್ಲಿ [ಕ್ರಿ.ಶ.1027 (418+609) ಹಾಗೂ 1028 (419+610)] ಟಂಕಿಸಲಾಗಿದೆ. ಈ ನಾಣ್ಯಗಳ ಮೇಲಿರುವ ಸಂಸ್ಕೃತ ಬರೆವಣಿಗೆಯಲ್ಲಿ ತಾಜಿಕಿಯಾ ಸಂವತ್ ಎಂದೂ ಬರೆಯಲಾಗಿದೆ. ಅರ್ಥಾತ್ ಇವು ದ್ವಿಭಾಷೀಯ ನಾಣ್ಯಗಳು. ಈ ಶಕಗಣನೆಯನ್ನು ಕೆಲವೊಮ್ಮೆ ಇತರ ಭಾರತೀಯ ಭಾಷೆಗಳಲ್ಲೂ ಬರೆಯಲಾಗಿದೆ.

ಹಿಜರ್ ಶಕಗಣನೆಯಲ್ಲಿ ಬೆಳೆಗೆ ಸಂಬಂಧಿಸಿದ ಋತುಮಾನವನ್ನು ತಿಳಿಸುವ ಅಂಶಗಳಿಲ್ಲದ ಕಾರಣ ಕಂದಾಯ ಸಂಚಯನಕ್ಕೆ ಕಷ್ಟವಾಯಿತು. ಇದನ್ನು ಗಮನಿಸಿದ ಮೊಗಲ್ ಚಕ್ರವರ್ತಿ ಅಕ್ಬರ್ ಬಾದಷಹ ಫಸಲ್ಗೆ ಸಂಬಂಧಿಸಿದ ರೀತಿಯಲ್ಲಿ ಫಸಲಿಸನ್ ಶಕವನ್ನು ಬಳಕೆಗೆ ತಂದ. ಈ ಗಣನಾಪದ್ಧತಿ ಮಧ್ಯಭಾರತದಲ್ಲಿ, ಮಹಾರಾಷ್ಟ್ರದಲ್ಲಿ ಹಾಗೂ ನಿಜಾಮ್ ದೊರೆಯ ರಾಜ್ಯದಲ್ಲಿ 1947ರವರೆಗೆ ಅರ್ಥಾತ್ ಸ್ವಾತಂತ್ರ್ಯ ಬರುವವರೆಗೆ ಪ್ರಚಲಿತವಾಗಿತ್ತು. ಪ್ರಾಂತೀಯ ಭೇದಗಳಿರುವುದು ಇಲ್ಲಿ ಕಂಡುಬಂದಿದೆ. ಈತ ದೀನ್–ಇ–ಲಾಹೀ ಎಂಬ ಒಂದು ಹೊಸ ಶಕವನ್ನು ಧರ್ಮ ಸಂಬಂಧದಲ್ಲಿ ಹೊಸದಾಗಿ ಆರಂಭಿಸಿದ. ಹಿಜರ್ ಗಣನೆಯನ್ನು ಆಧರಿಸಿಕೊಂಡು ವಿಲಾಯತಿ ಸನ್, ಅಮಲಿಸನ್, ಬಂಗಾಲಿಸನ್, ಮಸನ್, ಇಲಾಹಿಸನ್, ಶುಹೂರ್, ಶಹಾಹೂರ್ ಅಥವಾ ಸುರ್ ಶಕ, ಭಾಟಿಕ ಶಕ ಹಾಗೂ ಮೌಲೂದಿಶಕ ಇತ್ಯಾದಿ ಕೆಲ ಹೊಸ ಹೊಸ ಶಕಗಳು ಚಲನೆಯಲ್ಲಿ ಬಂದು ಒಂದಷ್ಟು ಕಾಲ ಗತಿಸುವುದರಲ್ಲೇ ಮಾಯವಾಗಿ ಹೋದವು.

ಮೇಲ್ಕಾಣಿಸಿದ ಹಿಜರ್ ಆಧಾರಿತ ಶಕೆಗಳಲ್ಲಿ ಮೈಸೂರು ಸಂಸ್ಥಾನದ ದೊರೆ ಟಿಪ್ಪು ಸುಲ್ತಾನನು ಆರಂಭಿಸಿದ ಶಕೆ ಕೀರ್ಮಾನಿಯ ಪ್ರಕಾರ ಮಹಮ್ಮದೀ ಶಕೆ ಮೌಲೂದಿಶಕೆ ಕರ್ನಾಟಕಕ್ಕೆ ಸಂಬಂಧಿಸಿದಂತೆ ಮಹತ್ತ್ವದ್ದು. ಮೌಲೂದಿ ಮೌಲ್ದ ಎಂದರೆ ಜನನ – ಜನ್ಮಸ್ಥಾನ – ಹಾಗೂ ಮೌಲಾಗೆ (= ಹಜರತ್ ಮೊಹಮ್ಮದ್ ಪೈಗಂಬರಿಗೆ)ಸಂಬಂಧಿಸಿದಂತೆ ಸೃಷ್ಟಿಗೊಂಡ ಶಕೆ. ಇದನ್ನು ಆತ ಮೊದಲು 1784ರಲ್ಲಿ ಚಾಲ್ತಿಗೆ ತಂದ. ಹಿಂದು ಪಂಚಾಂಗ ಗಣನೆಗೆ ಹೊಂದುವ ರೀತಿಯಲ್ಲಿ ಹಿಜರ್ ಪದ್ಧತಿಯನ್ನು ಮಾರ್ಪಡಿಸಿದ. ಹಿಂದು ಪಂಚಾಂಗಗಳಲ್ಲಿ ಅಧಿಕಮಾಸ ಎಂಬ ಹೆಚ್ಚಿನ ತಿಂಗಳವು ಮೌಲೂ ಶಕೆಯಲ್ಲಿ ಆರಂಭದಲ್ಲೇ ಬರುತ್ತದೆ. 1784ರಲ್ಲಿ ದ್ವಾದಶ ಮಾಸಗಳನ್ನು ಒಂದು ರೀತಿಯಲ್ಲಿ ಹೆಸರಿಸಿದರೆ 1787ರಲ್ಲಿ ಸಂಪೂರ್ಣ ಹೊಸ ರೀತಿಯಲ್ಲಿ ಆ ಶಕೆಯನ್ನು ಮಾರ್ಪಡಿಸಿದ. ಅವು ಹೀಗಿವೆ:

| ಪ್ರ.ಶ. 1784 | ಪ್ರ.ಶ. 1787 |
|---|---|
| 1. ಅಹಮ್ಮದೀ | 1. ಅಹಮ್ಮದೀ |
| 2. ಬಹರೀ | 2. ಬಹರೀ |
| 3. ಜಾಫ್ಹರೀ | 3. ತಕೀ |
| 4. ದರಾಯೀ | 4. ಸಮಾರಿ |
| 5. ಹಾಷಿಮೀ | 5. ಜಾಫ್ಹರೀ |
| 6. ವಾಸಿಯೀ | 6. ಹೈದರೀ |
| 7. ಜಬರ್‌ಜದೀ | 7. ಖುಸ್ರವೀ |

| | | |
|---|---|---|
| 8. | ಹೈದರೀ | 8. ದೀನೀ |
| 9. | ತುಲಯೀ | 9. ಜಕ್ರೀ |
| 10. | ಯುಸೂಫ಼ಿ | 10. ರಹಮಾನೀ |
| 11. | ಐಜದೀ | 11. ರಾಜೀ |
| 12. | ಬಯಾಜೀ | 12. ರಬ್ಬಾನೀ |

ಮೂರೇ ವರ್ಷಗಳಲ್ಲಿ ಇದು ಗೊಂದಲಕ್ಕೆ ಈಡಾದುದನ್ನು ಕಂಡು ಇದನ್ನು ಬಿಟ್ಟು ಹಿಜರ್ ಶಕೆಯನ್ನೇ ಮುಂದೆ ಜನತೆ ಬಳಸಲಾರಂಭಿಸಿದರು.

ಭಾರತಭೂಮಿ ತನ್ನ ವಿಸ್ತಾರದಿಂದ ಅನೇಕ ಬಗೆಯ ಫಸಲುಗಳಿಗೆ ಕಾರಣವಾದಂತೆ ಅನೇಕ ಬಗೆಯ ಶಕೆಗಳ ಸೃಷ್ಟಿಗೂ ಕಾರಣವಾಗಿದೆ. ಅವು ಅನೇಕ ರೀತಿಯ ವೈವಿಧ್ಯಗಳಿಂದ ಕೂಡಿದ್ದು; ಭಾರತೀಯ ಹಬ್ಬ ಹರಿದಿನಗಳನ್ನು ತಿಳಿಸಿಕೊಡುವುದಕ್ಕೆ ಕಾರಣ ಹಾಗೂ ಆಕರವಾಗಿವೆ. (ಎಸ್.ಜಿ.ಎ.)

**ಕಾಲನಿರ್ದೇಶನ:** ಪ್ರಾಚೀನ ಭಾರತದಲ್ಲಿ ಸಂಖ್ಯಾಶಾಸ್ತ್ರ ಸುಪರಿಚಿತವಾಗಿತ್ತು. ಸಂಖ್ಯಾಶಾಸ್ತ್ರ ಮತ್ತು ಜ್ಯೋತಿಷಗಳಿಂದ ಕಾಲಗಣನೆಯ ಪದ್ಧತಿ ಜಾರಿಯಲ್ಲಿತ್ತು. ವೈದಿಕ ಗ್ರಂಥಗಳಲ್ಲಿ ಅನೇಕ ಜ್ಯೋತಿಷ ವಿಷಯಗಳಿದ್ದು ಅವುಗಳು ಪ್ರಚಲಿತ ಶಕವರ್ಷ ಪೂರ್ವದಲ್ಲಿಯೂ ಪ್ರಚಾರದಲ್ಲಿತ್ತು. ವರಹಾಮಿಹಿರನು ಜ್ಯೋತಿಷವನ್ನು ಪರಿಷ್ಕರಿಸಿ, ಈ ಶಾಸ್ತ್ರಕ್ಕೆ ಹೊಸ ಚೈತನ್ಯವನ್ನು ನೀಡಿದ. ಜ್ಯೋತಿಷಶಾಸ್ತ್ರವು ಸೂರ್ಯ–ಚಂದ್ರರ ಚಲನೆಗೆ ಅನುಗುಣವಾಗಿ ರಚಿಸಲಾಗಿದ್ದು, ಪಂಚಾಂಗದ ತಳಹದಿಯ ಮೇಲಿದೆ. ಪಂಚಾಂಗ ಎಂದರೆ (1) ತಿಥಿ (2) ವಾರ (3) ನಕ್ಷತ್ರ (4) ಯೋಗ ಮತ್ತು (5) ಕರಣ ಎಂಬ ಐದು ಕಾಲ ವಿಭಾಗಗಳಾಗಿವೆ.

ಸೂರ್ಯ ಮತ್ತು ಚಂದ್ರರ ನಡುವಿರುವ ಅಂತರವನ್ನು ತಿಥಿ ಎಂದು ಕರೆಯಲಾಗುತ್ತದೆ. ಸೂರ್ಯ ಚಂದ್ರರು ಒಟ್ಟಿಗೆ ಇರುವಾಗ ಅಮಾವಾಸ್ಯೆಯಾಗಿದ್ದು, ಅದು ಶೂನ್ಯ ತಿಥಿ. ಚಂದ್ರನು $12^0$ ಪೂರ್ವಕ್ಕೆ ಚಲಿಸಿದಾಗ ಮೊದಲ ತಿಥಿ ಪಾಡ್ಯಮಿಯಾಗುತ್ತದೆ. ಇದೇ ರೀತಿಯಲ್ಲಿ ಚಂದ್ರನು ಒಂದು ಪೂರ್ಣ ಸುತ್ತುಸುತ್ತಿ ಬರಲು $360^0$ಗೆ 30 ತಿಥಿಗಳಾಗುತ್ತವೆ. ಆದರೆ ಸೂರ್ಯ ಮತ್ತು ಚಂದ್ರರ ಚಲನಾ ವೇಗದಲ್ಲಿ ವ್ಯತ್ಯಾಸ ಇರುವುದರಿಂದ 15 ತಿಥಿಗಳಾಗುತ್ತವೆ. ಸೂರ್ಯನಿಂದ $180^0$ ಬಂದಾಗ ಪೂರ್ಣಿಮೆ ಅಥವಾ ಹುಣ್ಣಿಮೆ ತಿಥಿ ಶುಕ್ಲಪಕ್ಷದಲ್ಲಿ 15 ಮತ್ತು ಕೃಷ್ಣ ಪಕ್ಷದಲ್ಲಿ 15 ತಿಥಿಗಳಿವೆ.

ವಾರಗಳಿಗೆ ಗ್ರಹಗಳ ಹೆಸರಿದ್ದು, ಇದು ಭಾರತದಲ್ಲಿಯೇ ಪ್ರಾರಂಭಿಸಿರಬಹುದೆಂದು ಅಭಿಪ್ರಾಯಪಡಲಾಗಿದೆ. ಸೂರ್ಯೋದಯ ಕಾಲದಲ್ಲಿ ಯಾವ ಗ್ರಹ ಆಧಿಪತ್ಯ ಪಡೆದಿದೆಯೋ ಆ ಗ್ರಹದ ಹೆಸರನ್ನು ವಾರಕ್ಕೆ ಇಡಲಾಗಿದೆ.

ನಕ್ಷತ್ರವು ಕ್ರಾಂತಿವೃತ್ತದ 27ನೆಯ ಒಂದು ಭಾಗ. ಒಂದು ನಕ್ಷತ್ರಕ್ಕೆ $13^0 20$ ನಿಮಿಷಗಳಾಗಿದ್ದು, ಚಂದ್ರನು ದಿನಕ್ಕೆ ಸು. ಒಂದು ನಕ್ಷತ್ರ ಅಂತರವನ್ನು ಕ್ರಮಿಸುವುದು. ಇದು ಸರಾಸರಿಯಾಗಿ 24 ಗಂಟೆ 17 ನಿಮಿಷ 9.36 ಸೆಕೆಂಡುಗಳು. ನಕ್ಷತ್ರಗಳ ಗುಂಪಿನಲ್ಲಿ ಸೂರ್ಯ ಚಂದ್ರರು ಕೂಡುವ ತಾರೆಗೆ ಯೋಗ ತಾರೆ ಎಂದು ಕರೆಯಲಾಗುತ್ತದೆ. ಯಾವ ನಕ್ಷತ್ರದಲ್ಲಿ ಹುಣ್ಣಿಮೆಯಾಗುವುದೋ ಆ ನಕ್ಷತ್ರದ ಹೆಸರನ್ನು ತಿಂಗಳಿಗೆ ಕೊಡಲಾಗಿದೆ (ಚೈತ್ರ, ವೈಶಾಖ ಇತ್ಯಾದಿ).

ಯೋಗಗಳು ಸಹ ಸೂರ್ಯಚಂದ್ರರ ಚಲನೆಗೆ ಅನುಗುಣವಾಗಿ ಗಣಿಸಲಾಗುತ್ತದೆ. ಸೂರ್ಯನು ಕ್ರಮಿಸುವ ದಿಕ್ಕಿಗೆ ವಿರುದ್ಧ ದಿಕ್ಕಿನಲ್ಲಿ ಚಂದ್ರ ಕ್ರಮಿಸುವನೆಂದು ಪರಿಗಣಿಸಿ 27 ಯೋಗಗಳನ್ನು ಗುರುತಿಸಲಾಗಿದೆ. ಕರಣವು ತಿಥಿಯ ಅರ್ಧಭಾಗವಾಗಿದೆ. ಇವು ಪಂಚ ಅಂಗಗಳು (ಪಂಚಾಂಗ). ಇವುಗಳೊಂದಿಗೆ ಪಕ್ಷ, ಮಾಸ, ಋತು, ಆಯನ, ಸಂವತ್ಸರಗಳು ಬಳಕೆಯಲ್ಲಿದ್ದು, ಅವುಗಳನ್ನು ಪ್ರಾಚೀನ ಸಾಹಿತ್ಯ ಮತ್ತು ಶಾಸನಗಳಲ್ಲಿ ಬಳಸಿರುವುದನ್ನು ಕಾಣಬಹುದು. ಪಂಚಾಂಗದ ಎಲ್ಲಾ ಅಂಗಗಳನ್ನು ಶಾಸನಗಳಲ್ಲಿ ಬಳಸಿರುವುದನ್ನು ಕಾಣಬಹುದು.

ಒಂದು ಮಾಸ ಅಥವಾ ತಿಂಗಳಲ್ಲಿ ಶುಕ್ಲ ಅಥವಾ ಶುದ್ಧ ಮತ್ತು ಕೃಷ್ಣ (ಬಹುಳ – ಅಪರ) ಎಂಬ ಎರಡು ಪಕ್ಷಗಳಿರುತ್ತವೆ. ಚಂದ್ರನ ಚಲನೆಯನ್ನು ಆಧರಿಸಿ ಅಮಾವಾಸ್ಯೆಯಿಂದ ಮುಂದಿನ ಅಮಾವಾಸ್ಯೆ ವರೆಗೆ ಗಣಿಸುವುದು ಅಮಾಂತ ಮಾಸ. ಇದನ್ನು ಚಂದ್ರಮಾಸವೆಂದು ಕರೆಯಲಾಗುತ್ತದೆ. ಹುಣ್ಣಿಮೆಯಿಂದ ಮುಂದಿನ ಹುಣ್ಣಿಮೆಗೆ ಪೌರ್ಣಿಮಾಂತ, ಉತ್ತರ ಭಾರತದಲ್ಲಿ ಪೌರ್ಣಿಮಾಂತವನ್ನುಹಾಗೂ ದಕ್ಷಿಣದಲ್ಲಿ ಅಮಾಂತ ತಿಂಗಳುಗಳಿವೆ. ಸೂರ್ಯನು ಒಂದು ರಾಶಿ ಅಥವಾ $30^0$ ದಾಟುವುದರಿಂದ ಸೌರಮಾಸಗಳು ಉಂಟಾಗುತ್ತವೆ. ಈ ಸೌರಮಾಸಗಳಿಗೆ ಮೇಷ, ವೃಷಭ ಇತ್ಯಾದಿಯಾಗಿ ರಾಶಿಗಳ ಹೆಸರುಗಳನ್ನು ಕೊಡಲಾಗಿದೆ. ಇದರೊಂದಿಗೆ ಚಂದ್ರಮಾಸದ ಹೆಸರುಗಳು ಸಹ ಸೇರಿವೆ. ಹನ್ನೆರಡು ಚಾಂದ್ರಮಾಸಗಳು ಒಂದು ಸೌರ ಸಂವತ್ಸರಕ್ಕೆ ಹನ್ನೊಂದು ದಿನ ಕಡಿಮೆಯಾಗುತ್ತವೆ. ಇದರಿಂದ ಸುಮಾರು ಎರಡೂವರೆ ವರ್ಷಗಳಿಗೆ ಒಂದು ತಿಂಗಳನ್ನು ಸೇರಿಸುವರು. ಇದಕ್ಕೆ ಅಧಿಕ ಮಾಸ ಅಥವಾ ಮಲಮಾಸವೆಂದು ಹೆಸರು.

ಸೂರ್ಯ ಒಂದು ರಾಶಿಯನ್ನು ಪ್ರವೇಶ ಪಡೆಯುವುದನ್ನು ಸಂಕ್ರಾಂತಿಯೆಂದು ಕರೆಯಲಾಗುತ್ತದೆ. ಪ್ರಾಚೀನ ಭಾರತದಲ್ಲಿ ನಾಲ್ಕರಿಂದ ಆರು ಋತುಗಳು ಪ್ರಚಲಿತದಲ್ಲಿದ್ದವು. ಇಂದು ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ್ ಹಾಗೂ ಶಿಶಿರ ಋತುಗಳು ಬಳಕೆಯಲ್ಲಿವೆ. ಸೂರ್ಯ ಸಿದ್ಧಾಂತದ ಪ್ರಕಾರ ಕಲಿಯುಗವು ಪ್ರ.ಶ.ಪೂ.3102ರ ಫೆಬ್ರವರಿ 17ರ ಮಧ್ಯರಾತ್ರಿ ಆರಂಭವಾಯಿತು. ಋತುವಿನ ಅನಂತರ ಮಾಸಗಳು ಚೈತ್ರದಿಂದ ಅಥವಾ ಕಾರ್ತಿಕದಿಂದ ಪ್ರಾರಂಭಗೊಳ್ಳುತ್ತವೆ. ಋತುವಿನೊಂದಿಗೆ ಆಯನಗಳನ್ನು ಬಳಸಲಾಗುತ್ತದೆ. ಎರಡು ಆಯನಗಳು – ಉತ್ತರಾಯಣ ಮತ್ತು ದಕ್ಷಿಣಾಯಣಗಳು ಇಂದೂ ಬಳಕೆಯಲ್ಲಿದೆ. ಆಯನಗಳು, ಋತುಗಳು, ತಿಥಿ, ನಕ್ಷತ್ರ ಮುಂತಾದವುಗಳ ಮೂಲಕ ಕಾಲಗಣನೆಯನ್ನು ಮಾಡಲಾಗುತ್ತದೆ. ಇದರಂತೆ ಗ್ರಹಣಗಳು ಕಾಲನಿರ್ಣಯಕ್ಕೆ ಸಹಕಾರಿಯಾಗಿವೆ. ಸೂರ್ಯ ಮತ್ತು ಚಂದ್ರಗ್ರಹಣಗಳ ಕಾಲದಲ್ಲಿ ದಾನ ದತ್ತಿಗಳನ್ನು ನೀಡುವುದರಿಂದ ಅಧಿಕ ಪುಣ್ಯ ಪ್ರಾಪ್ತವಾಗುತ್ತದೆ ಎಂಬ ನಂಬಿಕೆಯಿದೆ. ಗ್ರಹಣಗಳ ಉಲ್ಲೇಖಗಳಿಂದ ಹಲವಾರು ಶಾಸನಗಳ ಕಾಲವನ್ನು ಗಣಿಸಲು ಸಾಧ್ಯವಾಗಿದೆ. ಪ್ರಾಚೀನ ಭಾರತದಲ್ಲಿ ಅರವತ್ತು ಸಂವತ್ಸರಗಳ ಬಳಕೆಯನ್ನು ಕಾಣಬಹುದು.

ಪ್ರಾಚೀನ ಭಾರತದಲ್ಲಿ ಶಕೆಗಳು ಪ್ರಮುಖ ಕಾಲನಿರ್ಣಯದ ಕ್ರಮವಾಗಿ ಬಳಕೆಯಲ್ಲಿದ್ದವು. ಇಂದಿಗೂ ಕೆಲವು ಬಳಕೆಯಲ್ಲಿವೆ. ಜ್ಯೋತಿಷಶಾಸ್ತ್ರದಲ್ಲಿ ಮತ್ತು ಶಾಸನಗಳಲ್ಲಿ ಪ್ರಮುಖವಾಗಿ ಶಕೆಗಳ ಉಲ್ಲೇಖ ಕಂಡುಬರುತ್ತವೆ. ಇದರ ಮೂಲಕವೇ ಈ ಕಾಲವನ್ನು ಸೂಚಿಸಲಾಗುತ್ತದೆ. ಕೆಲವು ಪ್ರಮುಖ ಶಕೆಗಳು ಇಂತಿವೆ.

**1. ಸಪ್ತರ್ಷಿಶಕೆ:** ಸಪ್ತರ್ಷಿ ಮಂಡಲದ ನಕ್ಷತ್ರಗಳು ಗುರುತಿಸುವ 27 ನಕ್ಷತ್ರಗಳಲ್ಲಿ ಪ್ರತಿಯೊಂದು ನಕ್ಷತ್ರದಲ್ಲಿ ಒಂದು ನೂರು ವರ್ಷ ಇರುವುದೆಂದು ಭಾವಿಸಿ ಕಾಲ್ಪನಿಕ ಸಂಖ್ಯೆ 2700 ವರ್ಷಕ್ಕೆ ವೃತ್ತ ಪೂರ್ಣಗೊಳ್ಳುತ್ತದೆ ಎಂದು ವಿವೇಚಿಸಲಾಗಿದೆ. ಸಪ್ತರ್ಷಿಗಳು ಮಘಾ ನಕ್ಷತ್ರದಲ್ಲಿದ್ದಾಗ ಯುಧಿಷ್ಠರ ಆಳಿದನೆಂದು ವರಾಹಮಿಹಿರ ಉಲ್ಲೇಖಿಸುತ್ತಾನೆ. ಈ ಶಕೆಯು ಕಾಶ್ಮೀರ ಪ್ರದೇಶಗಳಲ್ಲಿ ಬಳಸಲಾಗುತ್ತದೆ.

**2. ಕಲಿಯುಗ ಶಕೆ:** ಕಲಿಯುಗ ಪ್ರ.ಶ.ಪೂ.2007 ಫೆಬ್ರವರಿ 17ರ ಮಧ್ಯರಾತ್ರಿ ಆರಂಭವಾಯಿತು ಎನ್ನಲಾಗುತ್ತದೆ. ಇಮ್ಮಡಿ ಪುಲಿಕೇಶಿಯ ಐಹೊಳೆ ಪ್ರಶಸ್ತಿ ಶಾಸನ ಹಾಗೂ ಗೋವ ಕದಂಬರ ಕೆಲವು ಶಾಸನಗಳು ಈ ಶಕೆಯನ್ನು ಉಲ್ಲೇಖಿಸಿವೆ. ಕೆಲವು ತಮಿಳು ಶಾಸನಗಳು ಹಾಗೂ ಕೊಡಗಿನ ಅರಸರ ಶಾಸನಗಳಲ್ಲಿ ಕಲಿ ದಿನಗಳ ಸಂಖ್ಯೆಯನ್ನು ಹೇಳಿದೆ.

**3. ಜೈನ ನಿರ್ವಾಣ ಶಕೆ:** ಜೈನ ತೀರ್ಥಂಕರ ಮಹಾವೀರ ನಿರ್ವಾಣ ಹೊಂದಿದ ದಿನದಿಂದ ಲೆಕ್ಕ ಪ್ರಾರಂಭಿಸಿ ಈ ಶಕೆಯನ್ನು ಜೈನ ಶಾಸನ ಮತ್ತು ಗ್ರಂಥಗಳು ಉಲ್ಲೇಖಿಸುತ್ತವೆ. ಶ್ವೇತಾಂಬರ ನೇಮಿಚಂದ್ರನ ಮಹಾವೀರಚರಿತದಲ್ಲಿ ಮತ್ತು ದಿಗಂಬರ ನೇಮಿಚಂದ್ರನ ತ್ರಿಲೋಕಸಾರದಲ್ಲಿ ವೀರನಿರ್ವಾಣದ ಅನಂತರ 605 ವರ್ಷ 5 ತಿಂಗಳ ಮೇಲೆ ಶಕರಾಜ ಇದ್ದನು ಎಂದಿದೆ. ಇಲ್ಲಿ ವಿಕ್ರಮ ಶಕರಾಜನೆಂದು ಪರಿಗಣಿಸಿದರೆ 605+58= ಪ್ರ.ಶ.ಪೂ.663 ಹಾಗೂ ಶಾಲಿವಾಹನ ಶಕೆಯಾದರೆ 605–78=ಪ್ರ.ಶ.ಪೂ.572 ಆಗುತ್ತದೆ.

**4. ಬುದ್ಧ ನಿರ್ವಾಣ ಶಕೆ:** ಬುದ್ಧ ನಿರ್ವಾಣದ ಶಕೆಯನ್ನು ಕುರಿತು ಕೆಲವು ಭಿನ್ನ ಅಭಿಪ್ರಾಯಗಳಿವೆ. ಬುದ್ಧನು ಮಹಾವೀರನಿಗಿಂತ ಕಿರಿಯನೆನ್ನಲಾಗಿದೆ. ಸಿಂಹಳದ (ಶ್ರೀಲಂಕದ) ಬೌದ್ಧಗ್ರಂಥಗಳು ಬುದ್ಧ ನಿರ್ವಾಣ ಪ್ರ.ಶ.ಪೂ.544. ಚೀನಿ ಗ್ರಂಥಗಳಲ್ಲಿ ಎಂದು ಉಲ್ಲೇಖಿಸುತ್ತವೆ. ಪ್ರ.ಶ.ಪೂ.638 ಫಾಹಿಯಾನ್ ಕೆಲವು ತೇದಿಗಳನ್ನು ವಿದ್ವಾಂಸರು ಸೂಚಿಸಿರುವರು. ಆದರೆ ಬುದ್ಧನ ಪರಿನಿರ್ವಾಣ 2500 ವರ್ಷಗಳ ಹಿಂದೆ ಅಂದರೆ ಪ್ರ.ಶ.ಪೂ.547ರಲ್ಲಿ ಆಯಿತೆಂದು ಪರಿಭಾವಿಸಲಾಗಿದೆ.

**5. ಗ್ರಹ ಪರಿವೃತ್ತಿ ಚಕ್ರ:** ಇದು 90 ವರ್ಷಗಳಿರುವ ಚಕ್ರವಾಗಿದ್ದು, ಕಲಿ 3076 ರಿಂದ (ಪ್ರ.ಶ.ಪೂ.24) ಆರಂಭವಾಗಿದೆಯೆಂದು ಭಾವಿಸಲಾಗಿದೆ. ಇದು ತಮಿಳುನಾಡಿನ ಮಧುರೈ ಭಾಗದಲ್ಲಿ ಚಾಲ್ತಿಯಲ್ಲಿದೆ. ಇದು ಜ್ಯೋತಿಷರಿಂದ ಕಾಲ್ಪನಿಕವಾಗಿ ಹೆಣೆಯಲಾಗಿದೆ.

**6. ಪ್ರ.ಶ.ಪೂ.457ರ ಶ್ರೀಹರ್ಷ ಶಕೆ:** ಈ ಶಕೆ ಪ್ರ.ಶ.ಪೂ.457ರಲ್ಲಿ ಆರಂಭವಾಗಿದೆ ಎಂದೂ ಮಥುರ ಮತ್ತು ಕನೌಜ್‌ನಲ್ಲಿ 11ನೆಯ ಶತಮಾನದಲ್ಲಿ ಚಾಲ್ತಿಯಲ್ಲಿತ್ತೆಂದೂ ಅಲ್ಬೆರೂನಿ ತಿಳಿಸುತ್ತಾನೆ. ಈ ಭಾಗದ ಜನರು ನೀಡಿದ ಮಾಹಿತಿಯನ್ನು ಆಧರಿಸಿ ಪ್ರಸ್ತುತ ವಿಷಯವನ್ನು ದಾಖಲಿಸಿದ್ದಾನೆ. ಅವನ ಹೇಳಿಕೆಗೆ ಯಾವುದೇ ಆಧಾರಗಳಿಲ್ಲ. ಆದರೆ ಹರ್ಷ ಶಕೆ 606ರಲ್ಲಿ ಆರಂಭವಾಯಿತು.

**7. ಮೌರ್ಯ ಶಕೆ:** ಖಾರವೇಲನ ಹಾಥಿಗುಂಫ ಶಾಸನದಲ್ಲಿ ಉಲ್ಲೇಖಿಸಲಾಗಿರುವ ಮುರಿಯ ಕಾಲವನ್ನು (ಮೌರ್ಯ ಕಾಲ) ಆಧರಿಸಿ ಚಂದ್ರಗುಪ್ತ ಪ್ರ.ಶ.ಪೂ.ಸು.324–300ರಲ್ಲಿ ಆರಂಭಿಸಿದನೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಇದಕ್ಕೆ ಯಾವುದೇ ಆಧಾರಗಳಿಲ್ಲ. ಶಾಸನದಲ್ಲಿ ಉಲ್ಲೇಖಿತ ಪದಗಳು ಮುಖಿಯ ಕಲಾ ಎಂದಿರಬೇಕು (ಮುಖ್ಯ ಕಾಲ). ಇದು ಕಾಲ್ಪನಿಕ ಶಕೆ.

**8. ನಂದ ಶಕೆ:** ನಂದರು ಈ ಶಕೆಯನ್ನು ಆರಂಭಿಸಿದರು ಎಂದು ಆರ್.ಸಿ. ಮಜುಮ್‌ದಾರ್‌ರವರು ಅಭಿಪ್ರಾಯಪಟ್ಟಿದ್ದಾರೆ.

**9. ಸಂಪ್ರತಿ ಶಕೆ:** ಸಂಪ್ರತಿ ಈ ಶಕೆಯನ್ನು ಆರಂಭಿಸಿದ ಎಂದು ಕೆಲವು ಜೈನ ಮೂಲಗಳು ತಿಳಿಸುತ್ತವೆ.

**10. ಆಗುಪ್ತಾಯಿಕ ಶಕೆ:** ರಾಷ್ಟ್ರಕೂಟರ ಅರಸ ದೆಜ್ಜ ಮಹಾರಾಜನ ಗೋಕಾಕ ತಾಮ್ರಪಟ ಶಾಸನ ಈ ಶಕೆಯನ್ನು ಉಲ್ಲೇಖಿಸುತ್ತದೆ. ಆಗುಪ್ತಾಯಿಕ ವರ್ಷಗಳು 845 ಗತಿಸಿದ ಅನಂತರ ಎಂದು ಶಾಸನ ಉಲ್ಲೇಖಿಸುತ್ತದೆ. ಲಿಪಿಶಾಸ್ತ್ರದ ಅನ್ವಯ ಈ ಶಾಸನದ

ಲಿಪಿಯನ್ನು 7ನೆಯ ಶತಮಾನವೆಂದು ಪರಿಗಣಿಸಲಾಗಿದೆ. ದೊರಕಿರುವ ಆಧಾರಗಳಂತೆ ಗಣಿಸಿದರೆ, ಈ ಅರಸ 645ರಲ್ಲಿ ಆಳಿರಬೇಕು. ಆದರೆ ಇದು ಸಾಧ್ಯವಿಲ್ಲ. ಇಮ್ಮಡಿ ಪುಲಕೇಶಿ 642 ಮತ್ತು ಒಂದನೇ ವಿಕ್ರಮಾದಿತ್ಯನ ಕಾಲದ (655) ನಡುವೆ ಬೆಳಗಾಂವಿ ಪ್ರದೇಶವನ್ನು ಈತ ಆಕ್ರಮಿಸಿರಬೇಕು. ಆದರೆ ಅದು ಸಾಧ್ಯವಿಲ್ಲ. ಅಂದರೆ, ಈ ಶಕೆ ಪ್ರ.ಶ.ಪೂ.200ನಿಂದ ಆರಂಭಗೊಂಡಿರಬೇಕು. ಆದರೆ ಆಗುಪ್ತಾಯಿಕ ಎಂಬ ಅರಸ ಅಥವಾ ವಂಶದ ಉಲ್ಲೇಖಗಳು ನಮಗೆ ದೊರಕಿಲ್ಲ. ಆದ್ದರಿಂದ ಶಾಸನದ ತೇದಿ ನಿಗೂಢವಾಗಿದೆ.

**11. ಸೆಲ್ಯೂಕಿಡ್ ಮತ್ತು ಪಾರ್ಥಿಯನ್ನರ ಶಕೆಗಳು:** (ಅಥವಾ ಅರ್‌ಸಾಸಿಡ್ ಶಕೆ) ಭಾರತಕ್ಕೆ ವಿದೇಶಿಯರ ಆಗಮನದ ಅನಂತರ ಕೆಲವು ಶಕೆಗಳು ಬಳಕೆಗೆ ಬಂದವು. ಅಲೆಕ್ಸಾಂಡರನ ಅನಂತರ ಸೆಲ್ಯೂಕಸ್ ಪ್ರ.ಶ.ಪೂ.312 ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾಯಿತು. ಗ್ರೀಕ್ ರಾಜ್ಯದಲ್ಲಿ ಇದನ್ನು ಬಳಸಲಾಗುತ್ತಿತ್ತು ಮತ್ತು ಪಾರ್ಥಿಯನ್ನರ ಶಕೆ ಪ್ರ.ಶ.ಪೂ. 248 ರಿಂದ ಆರಂಭವಾಗುತ್ತದೆ. ಸೆಲ್ಯೂಕಸ್‌ನ ಶಕೆಯನ್ನು ದಮನ ಮಾಡಲು ಇದನ್ನು ಪ್ರಾರಂಭಿಸಲಾಯಿತು ಎನ್ನಲಾಗಿದೆ.

**12. ವಿಕ್ರಮ ಸಂವತ್:** ವಿಕ್ರಮಾದಿತ್ಯನೆಂಬ ರಾಜ ಸಾತವಾಹನ ರಾಜನಾದ ಹಾಲನಿಗಿಂತ (78) ಪೂರ್ವದಲ್ಲಿ ಇದ್ದನೆಂದು ಗಾಥಾಸಪ್ತಸತಿ ಉಲ್ಲೇಖಿಸುತ್ತದೆ. ಮಾಳವ ದೇಶದ ರಾಜಧಾನಿಯಾದ ಉಜ್ಜಯಿನಿಯನ್ನು ಆಳುತ್ತಿದ್ದು, ಶಕರನ್ನು ಗೆದ್ದನೆಂದು ಇವನನ್ನು ಶಾಲಿವಾಹನನು ಸೋಲಿಸಿದ್ದರಿಂದ ಶಾಲಿವಾಹನ ಶಕೆಯನ್ನು ಸ್ಥಾಪಿಸಿದನೆಂಬ ನಂಬಿಕೆ ಇದೆ. ಈ ಶಕೆಗೆ ಮಾಳವ ಶಕೆ, ಕೃತ ಶಕೆ, ಮಾಳವ ಗಣಸ್ಥಿತಿ ಶಕೆ ಎಂಬುದಾಗಿ ಗುಪ್ತರ ಶಾಸನಗಳು ದಾಖಲಿಸಿವೆ. ಮಾಳವ ರಾಜ್ಯದ ಅರಸ ವಿಕ್ರಮಾದಿತ್ಯನು ಶಕರನ್ನು ಸೋಲಿಸಿ ಕೃತಯುಗವನ್ನು ಪ್ರಾರಂಭಿಸಿರುವುದರಿಂದ ಈ ಹೆಸರುಗಳು ಬಂದಿವೆ. ಗತಿಸಿದ ಸಂವತ್ಸರ 57ರಂತೆ ಈ ಶಕೆಯನ್ನು ಗಣಿಸಲಾಗುತ್ತದೆ. ಪ್ರಸ್ತುತ ಉತ್ತರ ಭಾರತದ ಬಂಗಾಳವನ್ನು ಹೊರತುಪಡಿಸಿ ಇದು ಪ್ರಚಲಿತದಲ್ಲಿದೆ. ಸಂವತ್ ಎಂಬ ಪದವನ್ನು ವಿಕ್ರಮ ಶಕೆಗೆ ಅನ್ವಯಿಸಿದರೂ ವಲಭಿ, ಸಿಂಹ, ಶಾಲಿವಾಹನ ಶಕೆಗಳಿಗೂ ಅನ್ವಯಿಸಲಾಗುತ್ತದೆ. ಸಿಥೋಪಾರ್ಥಿಯನ್ನರ ಯುಗ ಅಥವಾ ಕೃತಯುಗವೆಂದು ಇದನ್ನು ಉಲ್ಲೇಖಿಸಲಾಗಿದೆ.

**13. ಶಕ ಅಥವಾ ಶಾಲಿವಾಹನ ಶಕೆ:** ಭಾರತದಲ್ಲಿ ಅತ್ಯಂತ ಹೆಚ್ಚು ಪ್ರಚಲಿತವಿರುವ ಈ ಶಕೆಯು ಯಾವಾಗ ಮತ್ತು ಯಾರಿಂದ ಪ್ರಾರಂಭವಾಯಿತೆಂದು ಖಚಿತವಾಗಿ ಹೇಳುವುದು ಕಷ್ಟ ದಕ್ಷಿಣ ಭಾರತದ ಕೇರಳವನ್ನು ಹೊರತುಪಡಿಸಿ, ಅತ್ಯಂತ ಜನಪ್ರಿಯವಾಗಿದ್ದ ಈ ಶಕೆಯು ಮಾರ್ಚ್ 3, 78ರಲ್ಲಿ ಆರಂಭಗೊಂಡಿತು ಎನ್ನಲಾಗಿದೆ. ವಿಕ್ರಮನ ಅನಂತರ 135 ವರ್ಷದಲ್ಲಿ ಶಕಕಾಲ ಆರಂಭವಾಯಿತೆಂದು ಶಕರಾಜನು ಕರೋರಿನ ಹತ್ತಿರ ವಿಕ್ರಮಾದಿತ್ಯನನ್ನು ಸೋಲಿಸಿದನೆಂದು ಹೇಳಲಾಗುತ್ತದೆ ಎಂದು ಆಲ್ಬೆರೂನಿ ದಾಖಲಿಸಿದ್ದಾನೆ. ಶಾಲಿವಾಹನನು ವಿಕ್ರಮಾದಿತ್ಯನನ್ನು ಸೋಲಿಸಿ ಉಜ್ಜಯಿನಿಯಲ್ಲಿ ಪಟ್ಟಾಭಿಷೇಕನಾದ ಕಾಲದಿಂದ ಆರಂಭವಾಯಿತೆಂದು ಕೆಲವರು ನಂಬುವುದುಂಟು. ಶಕನ ಮರಣದ ಅನಂತರ (ಶಕಾಂತ ಎಂಬ ಶಬ್ದದಿಂದ) ಗಣಿಸಲಾಗುತ್ತದೆ. ಶಕ ಕ್ಷತ್ರಪರ ಶಾಸನಗಳಲ್ಲಿ ಶಕಕಾಲವೆಂದು ಉಲ್ಲೇಖಿಸದಿದ್ದರೂ ಅದನ್ನೇ ಶಾಲಿವಾಹನ ಶಕೆಯೆಂದು ಭಾವಿಸಲಾಗಿದೆ. ಪ್ರಾಯಶಃ 78 ರಲ್ಲಿದ್ದ ಸಾತವಾಹನ ರಾಜ ಹಾಲ (ಶಾಲ, ಸಾಲಾಹಣ) ಈ ಶಕೆಯ ಪ್ರಾರಂಭಕರ್ತ. ಆದರೆ ಸಾತವಾಹನ ಶಾಸನಗಳಲ್ಲಿ ಈ ಶಕೆಯನ್ನು ಬಳಸಿಲ್ಲವಾದರೂ ಶಕ ಕ್ಷತ್ರಪರ ಶಾಸನಗಳಲ್ಲಿ ಮೊದಲು ಕಂಡುಬರುತ್ತದೆ. ಗತಸಂವತ್ಸರ + ಪ್ರ.ಶ.ವ. 78 ಎಂದು ಇದನ್ನು ಗಣಿಸಲಾಗುತ್ತದೆ.

**14. ಕಳಚುರಿ ಅಥವಾ ಹೈಹಯ ಶಕೆ:** ಈ ಶಕೆಯನ್ನು ಚೇದಿ ಅಥವಾ ತ್ರೈಕೂಟಕ ಸಂವತ್ಸರವೆಂದು ಸಹ ಕರೆಯಲಾಗುತ್ತದೆ. ಇದನ್ನು 248, ಸೆಪ್ಟಂಬರ್ 5 ರಿಂದ ಪ್ರಾರಂಭಿಸಲಾಯಿತೆಂದು ಹೇಳಲಾಗಿದೆ. ಈ ಶಕೆಯನ್ನು ಕರ್ನಾಟಕ ಪ್ರದೇಶದ ಪಶ್ಚಿಮ ಭಾಗವನ್ನು ಆಳುತ್ತಿದ್ದ ಆಭೀರ – ತ್ರೈಕೂಟರು ಸ್ಥಾಪಿಸಿರಬಹುದು.

**15. ಕಳಿಂಗ – ಗಂಗರ ಶಕೆ:** ಈ ಶಕೆಯನ್ನು 496 ರಿಂದ 498ರ ಮಧ್ಯದಲ್ಲಿ ಆರಂಭಿಸಲಾಗಿರುವ ಸಾಧ್ಯತೆಗಳಿವೆ. ಇದು ಒರಿಸ್ಸದ ಭಾಗದಲ್ಲಿ ಪ್ರಚಲಿತದಲ್ಲಿತ್ತು.

**16. ಗುಪ್ತಶಕೆ ಅಥವಾ ವಲ್ಲಭಿ ಶಕೆ:** ಈ ಶಕೆಯನ್ನು ಗುಪ್ತರ ಅರಸ ಒಂದನೆಯ ಚಂದ್ರಗುಪ್ತ 319ರಲ್ಲಿ ಪ್ರಾರಂಭಿಸಿದನೆಂದು ಭಾವಿಸಲಾಗಿದೆ. ಉತ್ತರ ಭಾರತ ಮತ್ತು ನೇಪಾಲಗಳಲ್ಲಿ ಪ್ರಚಾರದಲ್ಲಿತ್ತು.

**17. ಹರ್ಷ ಶಕೆ:** ಪುಷ್ಯಭೂತಿ ಅರಸ ಹರ್ಷನ ಹೆಸರಿನಿಂದ ಕರೆಯಲಾಗುವ ಶಕೆಯು ಮಥುರ, ಕನೌಜ್ ಮತ್ತು ನೇಪಾಲದಲ್ಲಿ ಜನಪ್ರಿಯವಾಗಿತ್ತು. ಇದನ್ನು 606 ರಲ್ಲಿ ಪ್ರಾರಂಭಿಸಲಾಯಿತು.

**18. ಕೊಲ್ಲಂ ಶಕೆ (ಕೊಲಂಬ ಶಕೆ):** ದಕ್ಷಿಣ ಭಾರತದ ಕೇರಳ, ತಿರುವನಂತಪುರ ತಿರುನೆಲ್ವೇಲಿ ಭಾಗಗಳಲ್ಲಿ ಪ್ರಚಲಿತವಾಗಿದೆ. ಇದಕ್ಕೆ ಕೊಲ್ಲಂ ಆಂಡು ಎಂಬ ಹೆಸರಿದೆ. ಶಂಕರಾಚಾರ್ಯರ ಪ್ರಾದುರ್ಭಾವ ಕಾಲದಿಂದ ಕೊಲ್ಲಂ ಆಂಡು ಪ್ರಾರಂಭವಾಯಿತು ಎಂದು ಪ್ರತೀತಿ. 824ರಿಂದ ಪ್ರಾರಂಭವಾಗಿರುವ ಈ ಶಕೆಯನ್ನು ಪರಶುರಾಮನ ಶಕೆಯೊಂದು ಗುರುತಿಸಲಾಗುತ್ತದೆ. ಕೊಲ್ಲಂ ಪಟ್ಟಣದ ಸ್ಥಾಪನಾ ದಿನದ ನೆನಪಿಗಾಗಿ ಈ ಶಕೆಯನ್ನು ಪ್ರಾರಂಭಿಸಲಾಯಿತೆಂಬ ಅಭಿಪ್ರಾಯವಿದೆ.

**19. ಬಂಗಾಲಿ ಸಂವತ್ ಶಕೆ:** ಬಂಗಾಲ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಪ್ರಚಲಿತವಿರುವ ಈ ಶಕೆ 593–94ರಲ್ಲಿ ಪ್ರಾರಂಭವಾಗಿರಬೇಕೆಂದು ಭಾವಿಸಲಾಗಿದೆ. ಆದರೆ ಇದು ಅಸಂಭವನೀಯ. ಇದನ್ನು ವಿಷ್ಣುಪುರದಮಲ್ಲ ಅರಸರು ಆರಂಭಿಸಿದರು.

**20. ಮಲ್ಲ ಶಕೆ:** ಈ ಶಕೆ ಬಂಗಾಲಿಶಕೆಗಿಂತ 101 ವರ್ಷದ ಪೂರ್ವದಿಂದ ಪ್ರಾರಂಭಗೊಳ್ಳುತ್ತದೆ. ಇದನ್ನು ವಿಷ್ಣುಪುರದ ಮಲ್ಲ ಅರಸರು ಆರಂಭಿಸಿದ್ದರು.

**21. ತ್ರಿಪುರ ಸಂವತ್ಸರ:** ಇದು ಬಂಗಾಲಿ ಶಕೆಗಿಂತ ಮೂರು ವರ್ಷದ ತರುವಾಯ ಪ್ರಾರಂಭಗೊಳ್ಳುತ್ತದೆ.

**22. ಮೌಲಾದಿ ಸಂವತ್ಸರ:** ಇದನ್ನು ಟಿಪ್ಪುಸುಲ್ತಾನನು ಹಿಜಿರ ಶಕೆಯನ್ನು ತನ್ನ ಆವಶ್ಯಕತೆಗೆ ಅನುಗುಣವಾಗಿ ಬದಲಿಸಿ ಈ ಶಕೆಯನ್ನು ಪ್ರಾರಂಭಿಸಿದ. ಇದನ್ನು ಹಿಜರಿ 1200 ಅಂದರೆ 1786 ಅಕ್ಟೋಬರ್ 23 ರಂದು ಪ್ರಾರಂಭಿಸಿದ. ಹಿಜಿರ ಶಕೆ ಆರಂಭ ಮಹಮ್ಮದ್ ಪೈಗಂಬರ್ ಹುಟ್ಟಿದ ವರ್ಷದಿಂದ.

**23. ಮಾಗಿ ಸಂವತ್ಸರ:** ಇದನ್ನು 592ರಲ್ಲಿ ಪ್ರಾರಂಭಿಸಲಾಗಿದೆ. ಬಂಗಾಳಿ ಮತ್ತು ಒರಿಸ್ಸಾದ ಕೆಲ ಭಾಗಗಳಲ್ಲಿ ಇದು ಪ್ರಚಲಿತವಾಗಿದೆ.

**24. ಭೌಮ–ಕರ ಶಕೆ:** ಒರಿಸ್ಸ ಪ್ರಾಂತದಲ್ಲಿ ಸುಮಾರು ಎರಡು ಶತಮಾನಗಳ ಕಾಲ ರಾಜ್ಯವಾಳಿದ ಭೌಮಕರ ವಂಶದ ಅರಸರು ಇದನ್ನು ಪ್ರಾರಂಭಿಸಿದರು. ಈ ಶಕೆಯ ಆರಂಭದ ವಿಷಯದಲ್ಲಿ ಗೊಂದಲವಿದೆ. ಈ ಶಕೆ 820ರ ಪೂರ್ವದಲ್ಲಿ ಪ್ರಾರಂಭವಾಯಿತೆಂದು ಹೇಳಲಾಗಿದೆ.

**25. ಆಮ್ಲಿ ಸಂವತ್ಸರ:** ಇದು ವಿಲಾಯತಿ ಸಂವತ್ಸರದಂತೆ ಇದ್ದು, ಒರಿಸ್ಸದಲ್ಲಿ ಪ್ರಚಲಿತವಿದೆ. ಇದು 592 ರಲ್ಲಿ ಆರಂಭವಾಯಿತು.

**26. ಭಟಿಕ್ ಸಂವತ್:** ಇದು 623ರಿಂದ ಆರಂಭಗೊಂಡಿದ್ದು ರಾಜಸ್ತಾನದ ಕೆಲವು ಭಾಗಗಳಲ್ಲಿ ಪ್ರಚಲಿತವಾಗಿದೆ.

**27. ನೇವಾರ್ ಅಥವಾ ನೇಪಾಳ ಶಕೆ:** ನೇಪಾಳದಲ್ಲಿ 879ರಲ್ಲಿ ಪ್ರಾರಂಭಗೊಂಡು ಪ್ರಚಲಿತವಾಯಿತು. ಇಂದು ಸಹ ಇದು ಪ್ರಚಲಿತವಾಗಿದೆ.

**28. ಫಸಲಿ ಸಂವತ್ಸರ:** ಬಂಗಾಲ ಪ್ರಾಂತದ ಕೆಲವು ಭಾಗಗಳಲ್ಲಿ ಚಾಲ್ತಿಯಲ್ಲಿದ್ದ ಹಿಜಿರ 971ರಿಂದ ಗಣಿಸಲಾಗುತ್ತದೆ. 1556ರಿಂದ ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಮೃಗಶಿರ ನಕ್ಷತ್ರ ಪ್ರಾರಂಭದ ದಿನದಿಂದ ಇದನ್ನು ಪರಿಗಣಿಸಲಾಗುತ್ತದೆ. ಇದು ಮುಸ್ಲಿಂ ಪಂಚಾಂಗವನ್ನು ಅನುಸರಿಸುತ್ತದೆ. ಫಸಲಿಯನ್ನು ಅಕ್ಬರನು 1563ರಲ್ಲಿ ಆರಂಭಿಸಿದನೆಂದು ತಿಳಿಯಲಾಗಿದೆ.

**29. ಮಹಾರಾಷ್ಟ್ರದ (ಸೂರ್ ಸನ್ ಅಥವಾ ಷಹೂರ್ ಸನ್, ಅರಾಬಿಸನ್) ಶುಹುರ್, ಷಹೂರ್, ಸುರ್:** ಈ ಶಕೆ 1344ರಲ್ಲಿ ಆರಂಭವಾಗಿದ್ದು, ಇದು ಮರಾಠ ಪ್ರಾಂತದಲ್ಲಿ ಬಳಕೆಯಲ್ಲಿತ್ತು. ಬಿಜಾಪುರದ ಆದಿಲ್‌ಶಾಹಿ ಕಾಲದಲ್ಲಿ ಪ್ರಾರಂಭಿಸಲಾಗಿದ್ದು, ಇದು ಹಿಜಿರ ವರ್ಷದ ರೂಪಾಂತರವಾಗಿದೆ. ಅರಬ್‌ನಲ್ಲಿ ಷಹರ್ ಎಂದರೆ ತಿಂಗಳು. ಇದರಿಂದ ಆ ಹೆಸರು ಬಂದಿರಬೇಕು.

**30. ಚಾಳುಕ್ಯ ವಿಕ್ರಮ ಸಂವತ್ಸರ:** ಕಲ್ಯಾಣ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯ 1075–76 ಆರಂಭಿಸಿದ. ಇದು 1162ರವರೆಗೆ ಚಾಲ್ತಿಯಲ್ಲಿತ್ತು. ಅರಸನು ಪಟ್ಟಕ್ಕೆ ಬಂದ ದಿನದಿಂದ ಈ ಶಕೆಯನ್ನು ಆರಂಭಿಸಲಾಯಿತು. ಇವರ ಅಧೀನ ಅರಸರಾದ ಕಳಚುರಿ ಬಿಜ್ಜಳ ಮತ್ತು ಹೊಯ್ಸಳ ಅರಸ ಇಮ್ಮಡಿ ವೀರಬಲ್ಲಾಳ ತಮ್ಮ ಶಕೆಗಳನ್ನು ಪ್ರಾರಂಭಿಸಿದರು. ಅವುಗಳು ಅಧಿಕ ಸಮಯ ಚಾಲ್ತಿಯಲ್ಲಿರಲಿಲ್ಲ.

**31. ಸಿಂಹ, ಜಯ ಅಥವಾ ಶಿವಸಿಂಹ ಶಕೆ:** ಇದು 1113–14ರಲ್ಲಿ ಆರಂಭವಾಗಿದ್ದು, ಗುಜರಾತಿನ ಕೆಲವು ಭಾಗಗಳಲ್ಲಿ ಪ್ರಚಲಿತವಾಗಿದೆ.

**32. ಲಕ್ಷ್ಮಣ ಸೇನ ಸಂವತ್:** ಇದು 1108ರಲ್ಲಿ ಪ್ರಾರಂಭವಾಗಿದ್ದು ಮಿಥಿಲಾ (ಬಿಹಾರ) ಪ್ರದೇಶಗಳಲ್ಲಿ ಪ್ರಚಲಿತದಲ್ಲಿದೆ. ಗೌಡವಂಶದ ದೊರೆ ಲಕ್ಷಣಸೇನ ಆರಂಭಿಸಿದ ಶಕೆ.

**33. ಪದ್ದು ವೈಪು (ಪುದುವೈಪ್ಪು):** 1340–41ರಲ್ಲಿ ಆರಂಭವಾಗಿದ್ದು ಕೇರಳದ ಕೊಚ್ಚಿನ್ ಭಾಗಗಳಲ್ಲಿ ಚಾಲ್ತಿಯಲ್ಲಿದೆ. ಪುಡು (ಪುದು) ಅರಬ್ಬೀ ಸಮುದ್ರದಲ್ಲಿ ಕೊಚ್ಚಿನ್ ಸಮೀಪದ ಒಂದು ದ್ವೀಪ. 1341ರಲ್ಲಿ ಉದಯಿಸಿತು. ಇದರಿಂದಾಗಿ ಆ ದ್ವೀಪದ ನೆನಪಿಗೆ ಪ್ರಾರಂಭಿಸಿದ ಶಕೆ.

**34. ಕೊಚ್ಚಿಬಿಹಾರ್ (ಕೊಚ ವಿಹಾರ) ಶಕೆ:** 1510ರಲ್ಲಿ ಚಂದನ ರಾಜನು ಕೊಚ ರಾಜ್ಯವನ್ನು ಸ್ಥಾಪಿಸಿದ ವರ್ಷದಿಂದ ಆರಂಭಗೊಂಡಿದ್ದು. ಭೂತಾನ್, ಅಸ್ಸಾಂ, ಕಚರ್ ಮತ್ತು ಮಣಿಪುರಗಳಲ್ಲಿ ಈ ಶಕೆಯನ್ನು ಬಳಸಲಾಗುತ್ತಿತ್ತು.

**35. ತಾರಿಖ್ ಇಲ್ಲಾಹಿ:** ಇದು ಅಕ್ಬರನ ಪಟ್ಟಾಭಿಷೇಕದಿಂದ 1556 ಫೆಬ್ರವರಿ 13ರಂದು ಪ್ರಾರಂಭವಾಯಿತು. ಷಹಜಹಾನನ ಕಾಲದವರೆಗೆ ಚಾಲ್ತಿಯಲ್ಲಿದ್ದು, ಸೌರಮಾನಗಳನ್ನು ಪ್ರಾಚೀನ ಪರ್ಷಿಯನ್ ತಿಂಗಳುಗಳ ಹೆಸರಿನೊಡನೆ ಬಳಸಲಾಗಿದೆ.

**36. ರಾಜ್ಯಾಭಿಷೇಕ ಶಕೆ (ಶಿವಾಜಿಯ ಪಟ್ಟಾಭಿಷೇಕ ಶಕೆ):** 1674ರಲ್ಲಿ ಶಿವಾಜಿ ಮಹಾರಾಜನ ಪಟ್ಟಾಭಿಷೇಕವಾದಂದಿನಿಂದ ಈ ಶಕೆ ಪ್ರಾರಂಭವಾಯಿತು. ಇದನ್ನು 1820ರವರೆಗೆ ಮರಾಠಿ ಭಾಷೆಯ ಲೇಖನಗಳಲ್ಲಿ ನಮೂದಿಸುತ್ತಿದ್ದರು. ಇದನ್ನು ರಾಜ್ಯಾಭಿಷೇಕ ಶಕೆ ಅಥವಾ ರಾಜ ಶಕೆ ಎಂದು ಕರೆಯಲಾಗುತ್ತದೆ.

**37. ಹಿಜರಾ ಶಕೆ:** ವಿದೇಶಿಯರು ಪ್ರಾರಂಭಿಸಿದ ಇತರೆ ಶಕೆಗಳಲ್ಲಿ ಹಿಜ್ರ ಅಥವಾ ಹಿಜರಾ ಮಹಮ್ಮದ್ ಪೈಗಂಬರ್ ಮೆಕ್ಕದಿಂದ ಮದೀನಕ್ಕೆ ಹೋದ ದಿನ ಅಂದರೆ ಶುಕ್ರವಾರ, 622 ಜುಲೈ 15ರಂದು ಆರಂಭವಾಗಿದೆ. ಟಿಪ್ಪುಸುಲ್ತಾನನು ಹಿಜರಾಕ್ಕೆ ಬದಲಿಗೆ ಮಹಮ್ಮದ್‌ರ ಜನ್ಮ ವರ್ಷವನ್ನು ಪ್ರ.ಶ.ವ 52 ಎಂದು ಪರಿಭಾವಿಸಿ ಮೌಲೂದಿ ಶಕೆಯನ್ನು ತನ್ನ ನಾಣ್ಯಗಳಲ್ಲಿ ಬಳಸಿದ. ಹಿಜರಾ ಎಂದರೆ ಹೋಗು, ತ್ಯಜಿಸು ಎಂಬರ್ಥ ಹೊಂದಿದೆ.

**38. ಕ್ರಿಸ್ತ ಶಕೆ:** ಇದನ್ನು ಈಗ ಬಹಳ ಜನ ಬಳಸುತ್ತಿರುವರು. ಇದನ್ನು ಜನವರಿ ತಿಂಗಳಿನಿಂದ ಪ್ರಾರಂಭಿಸಿ 12 ತಿಂಗಳುಗಳ ಲೆಕ್ಕದಂತೆ ಒಂದು ವರ್ಷ ಎಂದು ಗಣಿಸಲಾಗುವುದು. ಬ್ರಿಟಿಷರು ಭಾರತದಲ್ಲಿ ಇದನ್ನು ಪ್ರಚಾರಪಡಿಸಿದರು.

ಭಾರತ ಸರ್ಕಾರ ಭಾರತ ರಾಷ್ಟ್ರೀಯ ಪಂಚಾಂಗ ಶಾಲಿವಾಹನ ಶಕೆಯನ್ನು ಆಧರಿಸಿ ಪಂಚಾಂಗದ ಉಳಿದ ವಿಷಯಗಳಾದ ಸಾವನ, ಸೌರ, ಮಾಸ, ಪಕ್ಷ, ತಿಥಿಗಳನ್ನು ಪರಿಗಣಿಸಿ ಬಳಸುತ್ತಿದೆ. ಇದರೊಂದಿಗೆ ಕ್ರಿಸ್ತ ಶಕೆಯನ್ನು ಸಹ ಬಳಸಲಾಗುತ್ತಿದೆ.

**39. ಗುರುವಿನ 60 ವರ್ಷಗಳ ಚಕ್ರ :** ಗುರುಗ್ರಹ ಪ್ರತಿ ಗ್ರಹದಲ್ಲಿ ಒಂದು ವರ್ಷ ಕಾಲ ಸಂಚರಿಸುತ್ತಾನೆ. ಈ ಚಕ್ರ ಪೂರೈಸಲು 60 ಸಂವತ್ಸರಗಳಾಗುತ್ತವೆ ಹಾಗೂ ಪ್ರತಿ ಸಂವತ್ಸರಕ್ಕೆ ಒಂದೊಂದು ಹೆಸರನ್ನು ಇಡಲಾಗಿದೆ. ಉದಾ: ಪ್ರಭವ, ವಿಭವ, ಶುಕ್ಲ ಇತ್ಯಾದಿ. ಶಾಸನಗಳಲ್ಲಿ ಇದನ್ನು ಹೆಚ್ಚಾಗಿ ಬಳಸಿದೆ. ಇಂದಿಗೂ ಈ ಸಂವತ್ಸರಗಳನ್ನು ಬಳಸಲಾಗುತ್ತಿದೆ.

(ಸಿ.ಎಸ್.ವಿ.)

**ಭಾರತೀಯ ಶಾಸನಗಳು:** ಸಾಮಾನ್ಯವಾಗಿ ಶಾಸನಗಳು ಎಂದರೆ ಆಜ್ಞೆ, ವಿಶೇಷವಾಗಿ ರಾಜಾಜ್ಞೆ ಎಂದು ತಿಳಿಯಲಾಗುತ್ತದೆ. ಈಗಲೂ ಶಾಸಕ ಎಂದರೆ ಶಾಸನಗಳ ರಚನೆಗೆ ಕಾರಣನಾದವನು ಎಂದೂ ಶಾಸನ ಸಭೆ ಎಂದರೆ ಆಜ್ಞೆಗಳನ್ನು ರೂಪಿಸುವ ಸಭೆ ಎಂದೂ ತಿಳಿಯಲಾಗಿದೆ. ಶಾಸನ ಶಬ್ದದ ಮೂಲವೇ ಶಾಸ್. ಎಂದರೆ ಆಜ್ಞೆ, ಆಜ್ಞೆ ಮಾಡು ಎಂದೇ ಅರ್ಥ. ಕೌಟಿಲ್ಯನೂ ರಾಜನ ಆಜ್ಞೆಗಳನ್ನು ತಿಳಿಸುವ ಬರೆಹವೇ ಶಾಸನ ಎಂದು ವ್ಯಾಖ್ಯಾನಿಸಿದ್ದಾನೆ. ಶಾಸನಗಳು ಕಳೆದ ಕಾಲದ, ವಿಶೇಷವಾಗಿ ಪ್ರಾಚೀನ ಭಾರತದ ಸಮಗ್ರ, ಎಂದರೆ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಇತ್ಯಾದಿ ಎಲ್ಲವನ್ನೂ ಒಳಗೊಂಡ ಇತಿಹಾಸದ ರಚನೆಯಲ್ಲಿ ಗಣನೀಯ ಪಾತ್ರ ವಹಿಸುತ್ತವೆ. ಇವು ಸಾಮಾನ್ಯವಾಗಿ ಕಲ್ಲಿನ ಮೇಲಾಗಲೀ ಯಾವುದೇ ಲೋಹದ ಮೇಲ್ಮೈನ ಮೇಲಾಗಲೀ ಕೊರೆದ ಬರೆಹಗಳಾಗಿವೆ. ಶಾಸನಗಳು ರಾಜಾಜ್ಞೆಗಳಷ್ಟೆ ಅಲ್ಲ; ವೀರನ ಅಥವಾ ವೀರರ ಸಾವು, ಮಹಾಸತಿಯಾದ ಹೆಣ್ಣು ಅಥವಾ ಅವಳ ಅನುಪಮ ತ್ಯಾಗ ಮತ್ತು ನಿಷ್ಠೆ, ದೇವಾಲಯಗಳ ನಿರ್ಮಾಣ, ದಾನ–ದತ್ತಿಗಳ ಕೊಡುಗೆ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಅನೇಕ ವಿವರಗಳನ್ನು ದಾಖಲಿಸುತ್ತವೆ. ಈ ಹಿನ್ನೆಲೆಯಲ್ಲಿ ಶಾಸನ ಎಂದರೆ, ಸುಲಭವಾಗಿ ನಶಿಸದ, ಗಟ್ಟಿಯಾದ ವಸ್ತುವಿನ ಮೇಲೆ ಕೊರೆದ ಆಯಾಯ ಕಾಲದ ಬರೆಹ ಎಂದು ವ್ಯಾಖ್ಯಾನಿಸಲಾಗಿದೆ.

ಶಾಸನಗಳನ್ನು ರಾಜರುಗಳ ಆಸ್ಥಾನಗಳಲ್ಲಿ ಮೂಲ ಪ್ರತಿಯಾಗಿ ಮತ್ತು ದಾನ ಪಡೆದವನಿಗೆ ಒಂದು ಪ್ರತಿಯಾಗಿ ತಾಳ ಪತ್ರ ಅಥವಾ ಮತ್ಯಾವುದೇ ವಸ್ತುವಿನ ಮೇಲೆ ಬರೆದು ನೀಡುತ್ತಿದ್ದ ಪದ್ಧತಿ ಇತ್ತು ಎಂದು ತಿಳಿಯಲಾಗಿದೆ. ರಾಜ ಶಾಸನಗಳನ್ನು ತಾಡ (ತಾಳ)ಪತ್ರ, ಭೂರ್ಜಪತ್ರ, ಬಟ್ಟೆ, ಚರ್ಮ ಹಾಗೂ ಕಾಗದದ ಮೇಲೆ ಬರೆಯಿಸಿ ಕೊಡಲಾಗುತ್ತಿತ್ತು ಎಂಬ ವಿಚಾರ ಅನಂತರಕಾಲದ ಕೆಲವು ಶಾಸನಗಳಿಂದಲೇ ತಿಳಿದು ಬರುತ್ತದೆ. ಸಾಮಾನ್ಯವಾಗಿ ಇವುಗಳನ್ನು ಮಸಿಯಿಂದ ಬರೆಯಿಸಿ ಅಥವಾ ಸೂಜಿಯಿಂದ ಕೊರೆಯಿಸಿ ಕೊಡಲಾಗುತ್ತಿತ್ತು. ದಾಖಲೆಯು ಒಂದು ಹಾಳೆಗಿಂತ ಹೆಚ್ಚಾಗಿದ್ದ ಸಂದರ್ಭದಲ್ಲಿ ಎಲ್ಲ ಹಾಳೆಗಳನ್ನೂ ಸೇರಿಸಿ, ಮಧ್ಯದಲ್ಲಿ ಅಥವಾ ಅಂಚಿನಲ್ಲಿ ಒಂದು ರಂಧ್ರವನ್ನು ಕೊರೆದು, ದಾರದಿಂದ ಪೋಣಿಸಿ ಕೊಡಲಾಗುತ್ತಿತ್ತು. ಅಲೆಕ್ಸಾಂಡರನ ದಂಡಯಾತ್ರೆಯ ಕಾಲದಲ್ಲಿ ಭೂರ್ಜಪತ್ರಗಳ ಬಳಕೆ ಇತ್ತೆಂದು ತಿಳಿದಿದೆ. ಹತ್ತಿ ಬಟ್ಟೆಯನ್ನು ನಿರ್ದಿಷ್ಟ ಅಳತೆಗೆ ಕತ್ತರಿಸಿ ಅದಕ್ಕೆ ಅಕ್ಕಿ, ಹುಣಿಸೆಬೀಜ ಅಥವಾ ಗೋದಿ ಹಿಟ್ಟಿನ ಗಂಜಿ ಸವರಿ, ನಯಗೊಳಿಸಿ ಬರೆಯಲೆಂದೇ ವಿಶಿಷ್ಟವಾಗಿ ತಯಾರಿಸುತ್ತಿದ್ದ ಕಡತಗಳ ಮೇಲೂ ಲೆಕ್ಕ–ಪತ್ರಗಳ ದಾಖಲೆಗಳನ್ನಿಡುತ್ತಿದ್ದ ಮತ್ತು ದಾನ, ದತ್ತಿಗಳನ್ನು ದಾಖಲಿಸಿ ನೀಡುತ್ತಿದ್ದ ಉದಾಹರಣೆಗಳಿವೆ. ಇಂತಹ ಹತ್ತಿಯ ಬಟ್ಟೆಯ ಮೇಲಿನ ಕಡತಗಳನ್ನು ಕಾರ್ಪಾಸಿಕಾ ಪಟಗಳು ಎಂದು ಕರೆಯಲಾಗಿದೆ. ಬಟ್ಟೆಗಳ ಮೇಲೆ ಬರೆದ ಕ್ರಯ ಪತ್ರಗಳು ಕ್ರಯ ಚೀರಿಕಾ ಎನಿಸಿಕೊಳ್ಳುತ್ತಿದ್ದವು. ಇಂತಹ ಕಡತಗಳನ್ನು 14ನೆಯ ಶತಮಾನದಿಂದ ಈಚೆಗೆ ಹೆಚ್ಚಾಗಿ ಕಾಣಬಹುದು. ಬೌದ್ಧ ಸಾಹಿತ್ಯ ಕೃತಿಗಳನ್ನು ಮೊದಮೊದಲು ಹೆಚ್ಚಾಗಿ ಚರ್ಮದ ಮೇಲೆ ಬರೆಯಲಾಗುತ್ತಿತ್ತು. ಕಾಲ ಕಳೆದಂತೆ, ಶಾಸನವನ್ನು ತಾಮ್ರಪತ್ರಗಳಲ್ಲಿ ಕೊರೆಯಿಸಿ ರಾಜರ ಆಸ್ಥಾನದ ಕಡತಗಳಿಗೆ ಸೇರಿಸಲಾಗುತ್ತಿತ್ತು, ದಾನ ಪಡೆದವನಿಗೆ ನೀಡಲಾಗುತ್ತಿತ್ತು ಮತ್ತು ವಿಷಯ ಸಾರ್ವಜನಿಕರ ಅವಗಾಹನೆಗೂ ಬರಲಿ ಎಂಬ ಉದ್ದೇಶದಿಂದ ಕಲ್ಲಿನ ಮೇಲೆ ಕೊರೆಸಲಾಗುತ್ತಿತ್ತು. ವಿಷಯವನ್ನು ಹೀಗೆ, ಕಲ್ಲು ಅಥವಾ ಯಾವುದೇ ಗಟ್ಟಿ ವಸ್ತುವಿನ ಮೇಲೆ ಕೊರೆಯಿಸಿ ಕೊಡುತ್ತಿದ್ದುದರಿಂದ, ಈ ಕೊರೆಯುವ ಕ್ರಿಯೆಯ ಇಂಗ್ಲಿಷ್ ಶಬ್ದವನ್ನು ಗ್ರಹಿಸಿ, ಕ್ರಿಯಾರೂಪವಾದ ಇನ್‌ಸ್ಕ್ರೈಬ್ ನಾಮರೂಪವಾದ ಇನ್‌ಸ್ಕ್ರಿಪ್‌ಷನ್ಸ್ ಅಂದರೆ ಶಾಸನಗಳು ಎಂದು ಸಂಬೋಧಿಸಲಾಗಿದೆ.

ಶಾಸನಗಳು ರಾಜನ ಆಜ್ಞೆಗಳಾದರಂತೂ ಅವುಗಳ ಮಹತ್ವ ಹೆಚ್ಚುತ್ತದೆ. ರಾಜನು ತನ್ನ ಆಜ್ಞೆಯನ್ನು ಬರೆಹದ ರೂಪದಲ್ಲೇ ಕಳುಹಿಸಬೇಕು ಎಂಬುದು ಕೌಟಿಲ್ಯನ ಸೂಚನೆ. ಬಾಯಿ ಮಾತಿನ ಮೂಲಕ ಹೇಳಿ ಕಳುಹಿಸಿದ ಯಾವುದೇ ಆಜ್ಞೆ ಅಥವಾ ವಿಚಾರ ಬಾಯಿಂದ ಬಾಯಿಗೆ ವರ್ಗಾವಣೆ ಆಗುವಾಗ ಎಂತಹ ಬದಲಾವಣೆಗೂ ಗುರಿಯಾಗಬೇಕಾಗುತ್ತದೆ. ಲೇಖನವಿಲ್ಲದೆ ಆಜ್ಞೆ ಮಾಡುವ ರಾಜ, ಆಜ್ಞಾಪತ್ರಗಳಿಲ್ಲದೆ ಅಧಿಕಾರವನ್ನು ಪ್ರಯೋಗಿಸುವ ಅಧಿಕಾರಿಯನ್ನು ಶುಕ್ರನೀತಿ ಸಾರವು ಚೋರರು ಎಂದೇ ಗುರುತಿಸುತ್ತದೆ. ಅದೇ ಶುಕ್ರನೀತಿ ಸಾರವು ಶಾಸನದಲ್ಲಿ ರಾಜನ ಸಹಿ ಮತ್ತು ಆಜ್ಞೆಯ ಪ್ರಕಟಣೆಯ ದಿನಾಂಕ ಇರಲೇಬೇಕು ಮತ್ತು ರಾಜಾಜ್ಞೆಯನ್ನು ಡಂಗುರ ಹೊಡೆಯಿಸಿ ಜನರಿಗೆಲ್ಲಾ ತಿಳಿಸಬೇಕಲ್ಲದೆ, ನಾಲ್ಕು ದಾರಿಗಳು ಕೂಡುವೆಡೆ ಬರೆಯಿಸಿ ತಿಳಿಸಬೇಕು ಎಂದು ಸ್ಪಷ್ಟವಾಗಿ ತಿಳಿಸಿದೆ. ಯಾವುದೇ ಆಜ್ಞೆ ಅಥವಾ ಶಾಶ್ವತ ಏರ್ಪಾಡು ನಿರಂತರವಾಗಿ ಮುಂದುವರಿಯಬೇಕಾದಲ್ಲಿ ಅದು ಮುಂದಿನ ಜನತೆಗೆ ತಿಳಿಯಬೇಕು. ಆ ಕಾರಣದಿಂದಲೂ ದಾಖಲೆಗಳು ಸುಲಭವಾಗಿ ನಾಶವಾಗದ, ಗಟ್ಟಿ ವಸ್ತುಗಳ ಮೇಲೆ ಕೊರೆಯಲ್ಪಟ್ಟಿರಬೇಕು ಎಂದು ಯಾಜ್ಞವಲ್ಕ್ಯ ಸ್ಮೃತಿಯು ಸೂಚಿಸಿದೆ.

ಯಾವುದೇ ಒಂದು ಘಟನೆ, ಒಂದು ದಾನ, ಒಂದು ಕೆಲಸ ಮುಂದಿನ ಜನಾಂಗಕ್ಕೆ ದಾಖಲೆಯಾಗಿ ಉಳಿಯಬೇಕೆಂಬ ಕಾರಣದಿಂದ ದೀರ್ಘಕಾಲ ಇರಬಲ್ಲ ವಸ್ತುವಿನ ಮೇಲೆ ಕಂಡರಿಸಿದ ಬರೆಹವನ್ನು ಶಾಸನ ಎಂದು ಪರಿಗಣಿಸಿಲಾಗಿದೆ.

ಭಾರತದ ಇತಿಹಾಸವನ್ನು ತಿಳಿಯಲು ಇರುವ ಅನೇಕ ಆಕರಗಳ ಪೈಕಿ, ಶಾಸನಗಳು ಪ್ರಮುಖವಾದುವು. ನಿವೇಶನಾನ್ವೇಷಣೆಯ ಅನಂತರ ಉತ್ಖನನದ ಮೂಲಕ ಭೂಶೋಧನೆ ಮಾಡಿ, ಶಾಸನಗಳ ಮೂಲಕ ಸಮಕಾಲೀನ ದಾಖಲೆಗಳನ್ನು ಪರಾಮರ್ಶಿಸಿ, ನಾಣ್ಯ ಶಾಸ್ತ್ರದ ನೆರವಿನಿಂದ, ಆಯಾ ಕಾಲದ ವಾಣಿಜ್ಯ ವ್ಯವಸ್ಥೆಯ ಪರಿಚಯ ಮಾಡಿಕೊಂಡು, ಸ್ಮಾರಕಗಳ ಮೂಲಕ ಆಯಾ ಕಾಲದ ವಾಸ್ತು ಮತ್ತು ಶಿಲ್ಪ ಹಾಗೂ ಇತರ ಕಲೆಗಳ ಬಗೆಗೆ ತಿಳಿದು, ಇತಿಹಾಸದ ರಚನೆ ಅಥವಾ ಪುನಾರಚನೆ ಮಾಡಬೇಕಾಗುತ್ತದೆ.

ಅಪರೂಪಕ್ಕೆ ಶಾಸನಗಳಲ್ಲೂ ನಂಬಲು ಅನರ್ಹವಾದಂತಹವು ಇವೆ ಮತ್ತು ಇರುತ್ತವೆ. ಅವನ್ನು ಕೂಟ ಶಾಸನಗಳು ಎಂದು ಗುರುತಿಸಿ, ಪ್ರತ್ಯೇಕಿಸಲು ಅವಕಾಶಗಳಿವೆ. ಕೆಲವು ಸಂದರ್ಭಗಳಲ್ಲಿ ಶಾಸನಗಳಲ್ಲೂ ಜಯಿಸದ ರಾಜ್ಯಗಳನ್ನು ಜಯಿಸಿದಂತೆ, ಮಾಡದ ಒಳ್ಳೆಯ ಕೆಲಸಗಳನ್ನು ಮಾಡಿದಂತೆ ಎತ್ತಿತೋರುವ ಉತ್ಪ್ರೇಕ್ಷಿತ ವಿಚಾರಗಳೂ ಸೇರಿರುತ್ತವೆ. ಶಾಸನ ರಚನೆಯ ಕಾಲಕ್ಕೆ ಇದ್ದ ಸಾಂಪ್ರದಾಯಿಕ ಹೇಳಿಕೆಗಳು ಮತ್ತು ಐತಿಹ್ಯಗಳು ಶಾಸನ ಪಾಠದಲ್ಲಿ ಅವಕಾಶ ಪಡೆದಿರುತ್ತವೆ. ಅಂತಹ ಉತ್ಪ್ರೇಕ್ಷೆ ಮತ್ತು ಐತಿಹ್ಯಗಳನ್ನು ಹೊರತುಪಡಿಸಿ, ಶಾಸನ ಪಾಠವನ್ನು ಸಂಪಾದಿಸುವುದು ಶಾಸನ ತಜ್ಞನ ಕರ್ತವ್ಯವಾಗಿರುತ್ತದೆ. ಈಗಾಗಲೇ ಚರಿತ್ರೆಯ ಸ್ಥೂಲ ವಿಷಯಗಳು ಖಚಿತವಾಗಿ ತಿಳಿದಿರುವುದರಿಂದ, ಶಾಸನ ಪಾಠದ ಖಚಿತತೆಯನ್ನು ಪತ್ತೆ ಮಾಡುವುದು ಕಷ್ಟವಾಗುವುದಿಲ್ಲ.

ಅಲೆಕ್ಸಾಂಡರ್‌ನ ಧಾಳಿಯ ಅನಂತರ ಭಾರತದ ಇತಿಹಾಸ ಸ್ಪಷ್ಟವಾಗಿ ತಿಳಿಯುತ್ತದೆ ಎಂಬ ಸವಕಲು ಹೇಳಿಕೆಯೊಂದಿದೆ. ಆದರೆ ಅದಕ್ಕೂ ಮೊದಲಿನ ಇತಿಹಾಸ ಈಗ ತಿಳಿದಿದೆ ಮತ್ತು ತಿಳಿಯುತ್ತಿದೆ. ಭಾರತಕ್ಕೆ ಮುಸಲ್ಮಾನರ ಪ್ರವೇಶವಾದ ಅನಂತರ ದಾಖಲೆಗಳನ್ನು ರಕ್ಷಿಸಿಡುವ ಕೆಲಸ ವ್ಯವಸ್ಥಿತವಾಗಿ ಆಗಿದೆ ಎಂದು ತಿಳಿಯಲಾಗಿದೆ.

ಭಾರತದಲ್ಲಿ ಒಂದು ಹಂತದಲ್ಲಿ ಶಾಸನಗಳನ್ನು ಓದಬಲ್ಲ ಜನರೇ ಇರಲಿಲ್ಲ ಎಂದು ತಿಳಿಯಲಾಗಿದೆ. ಭಾರತದ ಪುರಾತತ್ತ್ವ ಶಾಸ್ತ್ರದ ಅಧ್ಯಯನ ವ್ಯವಸ್ಥಿತವಾಗಿ ನಡೆಯಲಾರಂಭಿಸಿದ ಅನಂತರ, ಪ್ರಾಚೀನ ಇತಿಹಾಸದ ಅಧ್ಯಯನಕ್ಕೆ ಬಹು ಮುಖ್ಯ ಪ್ರಾಥಮಿಕ ಆಕರಗಳಾದ ಶಾಸನಗಳ ಬಗ್ಗೆ ಹೆಚ್ಚಿನ ಆಸಕ್ತಿ ಹುಟ್ಟಿತು. ಇದಕ್ಕೆ ಮೊದಲು ಶಾಸನಗಳ ಬಗ್ಗೆ ಕೆಲವರಲ್ಲಿ ಕುತೂಹಲ ಇದ್ದರೂ ಓದಲಾಗದಿದ್ದುದರಿಂದ ಕೇವಲ ಕುತೂಹಲದ ಬರೆವಣಿಗೆಗಳಾಗಿಯೇ ಉಳಿದವು. 1356ರ ವೇಳೆಗೆ ಸುಲ್ತಾನ್ ಫಿರೋಜ್ ಷಾ ತುಗಲಕನು ಹರಿಯಾಣದ ಅಂಬಾಲ ಜಿಲ್ಲೆಯ ಟೋಪ್ರಾದಿಂದ ಒಂದು ಮತ್ತು ಉತ್ತರ ಪ್ರದೇಶದ ಮೀರತ್‌ನಿಂದ ಒಂದು ಶಾಸನವನ್ನು ಓದಲೆಂದು ದೆಹಲಿಗೆ ತರಿಸಿಕೊಂಡಿದ್ದ. ಇವನ ಆಸ್ಥಾನದಲ್ಲಿದ್ದ ಯಾವ ವಿದ್ವಾಂಸನಿಗೂ ಆ ಶಾಸನಗಳನ್ನು ಓದಲು ಸಾಧ್ಯವಾಗಲಿಲ್ಲ. ಅಂದರೆ 14ನೆಯ ಶತಮಾನದ ವೇಳೆಗಾಗಲೇ ಭಾರತದಲ್ಲಿ ಪ್ರಾಚೀನ ಶಾಸನಗಳನ್ನು ಓದಬಲ್ಲ ಜನ ಬಹುಮಟ್ಟಿಗೆ ಇರಲಿಲ್ಲ. ವಿಲ್‌ಫೋರ್ಡ್ ಎಂಬ ವಿದ್ವಾಂಸನ ವರದಿಯ ಪ್ರಕಾರ ಎಲ್ಲೋರದಲ್ಲಿ ಪ್ರಾಚೀನ ಲಿಪಿಗಳನ್ನು ಓದಬಲ್ಲ ಒಬ್ಬ ಸನ್ಯಾಸಿಯನ್ನು ಅವನು ಕಂಡಿದ್ದ. ಆದರೆ ಅದು ಎಷ್ಟರಮಟ್ಟಿಗೆ ಒಪ್ಪುವಂತಹ ಮಾತು ಎಂದು ತಿಳಿದಿಲ್ಲ. ಶಾಸನಗಳನ್ನು ಓದಲಾಗದಿದ್ದರೂ ಅವುಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಡುವ ಕೆಲಸ ಆಗುತ್ತಿತ್ತು ಎಂದು ತಿಳಿಯಲಾಗಿದೆ. 1672 ರಿಂದ 1704 ರವರೆಗೆ ಮೈಸೂರು ಸಂಸ್ಥಾನವನ್ನು ಆಳಿದ ಚಿಕ್ಕದೇವರಾಜ ಒಡೆಯರು ತಮ್ಮ ಆಳಿಕೆಗೆ ಸೇರಿದ್ದ ಪ್ರದೇಶದಲ್ಲಿನ ಎಲ್ಲಾ ಶಾಸನಗಳ ಪಟ್ಟಿ ಇದ್ದ ಒಂದು ಪುಸ್ತಕವನ್ನು ವ್ಯವಸ್ಥಿತವಾಗಿ ಇಡುವ ಕ್ರಮ ತೆಗೆದುಕೊಂಡಿದ್ದರಂತೆ.

1785ರಲ್ಲಿ ಪಂಡಿತ ರಾಧಾಕಾಂತ ಶರ್ಮರು ಚಾಹಮಾನ ವಂಶದ ದೊರೆ ವಿಗ್ರಹರಾಜನಿಗೆ ಸಂಬಂಧಿಸಿದ 1164ರ ಶಾಸನವನ್ನು ಓದಿದರೆಂದು ತಿಳಿದಿದೆ. ಭಾರತದ ಪುರಾತತ್ತ್ವ ಅಧ್ಯಯನ 18ನೆಯ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಮಹತ್ತ್ವ ಪಡೆಯಿತು. ಭಾರತಕ್ಕೆ 1785ರಲ್ಲಿ ಬಂದ ಸರ್ ವಿಲಿಯಂ ಜೋನ್ಸ್‌ಗೆ ಭಾರತದ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ ಅತ್ಯಂತ ಆಸಕ್ತಿಯ ವಿಷಯವಾಗಿತ್ತು. ಅದಕ್ಕೆಂದೇ ಅವನು ಹುಟ್ಟು ಹಾಕಿದ ಸಂಸ್ಥೆ ಬಂಗಾಲದ ಏಷ್ಯಾಟಿಕ್ ಸೊಸೈಟಿ. ಈ ಸಂಸ್ಥೆ ಪ್ರಕಟಿಸುತ್ತಿದ್ದ ಜರ್ನಲ್ ಆಫ್ ದಿ ಏಷ್ಯಾಟಿಕ್ ಸೊಸೈಟಿ ಮತ್ತು ಏಷ್ಯಾಟಿಕ್ ರಿಸರ್ಚಸ್ ನಿಯತಕಾಲಿಕೆಗಳು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಆಸಕ್ತಿ ಇದ್ದ ಎಲ್ಲರಿಗೂ ಪ್ರಿಯವಾದವು.

ಭಾರತದ ಶಾಸನಶಾಸ್ತ್ರದ ಅಧ್ಯಯನದ ಇತಿಹಾಸದಲ್ಲಿ 1857 ಬಹು ಮುಖ್ಯವಾದ ವರ್ಷ ಹಾಗೂ ಪ್ರಮುಖ ಘಟ್ಟ. ಆವರೆಗೆ ಯಾರಿಗೂ ಓದಲು ಸಾಧ್ಯವಿಲ್ಲ ಎಂದು ತಿಳಿದಿದ್ದ ಒಂದು ಶಾಸನವನ್ನು ಮೊಟ್ಟಮೊದಲ ಬಾರಿಗೆ ಓದಿದ ಜೇಮ್ಸ್ ಪ್ರಿನ್ಸೆಪ್ ಅದು ಅಶೋಕನ ಶಾಸನ ಎಂದು ಪ್ರಕಟಿಸಿದ. ಆವರೆಗೆ ಅಸಾಧ್ಯ ಎಂದು ತಿಳಿದಿದ್ದ ಶಾಸನಗಳ ಓದಿಗೆ ಇದು ನಾಂದಿ ಹಾಡಿತು. ಅಂದಿನಿಂದ ಈವರೆಗೆ ಭಾರತದಲ್ಲಿ ಶಾಸನಾಧ್ಯಯನ ನಿರಂತರವಾಗಿ ಮುಂದುವರಿದಿದೆ.

ಭಾರತದಲ್ಲಿ 1862ರಲ್ಲಿ ಭಾರತೀಯ ಪುರಾತತ್ತ್ವ ಶೋಧನ ಇಲಾಖೆ ಆರಂಭ ವಾಯಿತು. ಶಾಸನಾಧ್ಯಯನವೂ ಆ ಇಲಾಖೆಯ ಒಂದು ಭಾಗವಾಯಿತು. ಅದರ ಮೊದಲ ನಿರ್ದೇಶಕ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್. ಉತ್ತರ ಭಾರತದಲ್ಲಿ ಇ.ಹುಲ್ಷ್, ಸರ್ ಜಾನ್ ಮಾರ್ಷಲ್, ಸರ್ ಮಾರ್ಟಿನ್ ವೀಲರ್, ಬ್ಯೂಲರ್, ಬರ್ನೆಲ್, ಬರ್ಗೆಸ್ ಮುಂತಾದವರು, ದಕ್ಷಿಣ ಭಾರತದಲ್ಲಿ ಮೆಡೋಸ್ ಟೇಲರ್, ಕರ್ನಲ್ ಮೆಕೆಂಜಿ, ಬುಕನನ್, ಸರ್ ವಾಲ್ಟರ್ ಎಲಿಯಟ್, ಜೆ.ಎಫ್.ಫ್ಲೀಟ್, ಬಿ.ಎಲ್.ರೈಸ್, ಆರ್.ನರಸಿಂಹಾಚಾರ್, ಆರ್.ಶಾಮಾಶಾಸ್ತ್ರೀ, ಎಂ.ಎಚ್.ಕೃಷ್ಣ ಮುಂತಾದ ವಿದ್ವಾಂಸರು ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಶಾಸನಾಧ್ಯಯ ನವನ್ನು ಸಮರ್ಥವಾಗಿ ಮುನ್ನಡೆಸಿದರು. ಈ ಎಲ್ಲ ವಿದ್ವಾಂಸರ ಅಧ್ಯಯನದ ಫಲವನ್ನು ಜರ್ನಲ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಲಂಡನ್, ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ, ಜರ್ನಲ್ ಆಫ್ ದಿ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಏಷ್ಯಾಟಿಕ್ ರಿಸರ್ಚಸ್, ಇಂಡಿಯನ್ ಆಂಟಿಕ್ವೆರಿ, ಎಪಿಗ್ರಾಫಿಯ ಇಂಡಿಕ, ಕಾರ್ಪಸ್ ಇನ್‌ಸ್ಕ್ರಿಪ್ಷನಮ್ ಇಂಡಿಕೇರಮ್, ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್, ಎಪಿಗ್ರಾಫಿಯ ಕರ್ನಾಟಿಕ ಇತ್ಯಾದಿ ಸಂಪುಟಗಳಲ್ಲಿ ಕಾಣಬಹುದು. ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯ ಹಾಗೂ ಕರ್ನಾಟಕ ಇತಿಹಾಸ ಅಕಾಡೆಮಿ ಹೊರತರುತ್ತಿರುವ ಪ್ರಕಟಣೆಗಳಲ್ಲಿ ಇತ್ತೀಚಿನ ಅನ್ವೇಷಣೆಗಳನ್ನು ಗಮನಿಸಬಹುದು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಶಾಸನ ಅಧ್ಯಯನ ಎಂಬ ಅರ್ಧವಾರ್ಷಿಕ ಸಂಚಿಕೆಯನ್ನು ಪ್ರಕಟಿಸುತ್ತಿದೆ.

ಉತ್ತರ ಭಾರತದಲ್ಲಿ ಹೆಚ್ಚಾಗಿ ತಾಮ್ರ ಅಥವಾ ಬೇರೆ ಯಾವುದೇ ಲೋಹದ ಶಾಸನಗಳು ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಶಿಲಾ ಶಾಸನಗಳೂ ದೊರೆತಿವೆ. ಸಂಖ್ಯೆಯ ದೃಷ್ಟಿಯಿಂದಲೂ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಹೆಚ್ಚು ಶಾಸನಗಳಿವೆ. ಲೋಹ ಶಾಸನಗಳಲ್ಲಿ ಹೆಚ್ಚಿನ ಸಂಖ್ಯೆಯ ಶಾಸನಗಳು ಇರುವುದು ತಾಮ್ರದ ಫಲಕಗಳ ಮೇಲೆ. ತಾಳೆಯೋಲೆಗಳಂತೆ ಇವುಗಳನ್ನೂ ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಿ, ಹದಗೊಳಿಸಿ, ಅದರ ಮೇಲ್ಮೈನಲ್ಲಿ ಶಾಸನವನ್ನು ಕೊರೆಸಲಾಗುತ್ತಿತ್ತು. ಕಾಲದಿಂದ ಕಾಲಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ತಾಮ್ರ ಶಾಸನಗಳ ಉದ್ದ, ಅಗಲ ಮತ್ತು ದಪ್ಪಗಳು ಬದಲಾಗಿವೆ. ಒಂದು ಶಾಸನಕ್ಕೆ ಒಂದಕ್ಕಿಂತ ಅಧಿಕ ಫಲಕಗಳನ್ನು ಬಳಸಿರುವ ಸಂದರ್ಭಗಳೇ ಹೆಚ್ಚು. ಅಪರೂಪಕ್ಕೆ ಒಂದೇ ತಾಮ್ರ ಪಟ್ಟಿಕೆಯಲ್ಲಿ ಒಂದು ಶಾಸನವನ್ನು ದಾಖಲಿಸಿರುವ ಸಂದರ್ಭಗಳಿವೆ. ಶಾಸನಗಳೇ ಅಲ್ಲದೆ ಕೆಲವು ಧಾರ್ಮಿಕ ಗ್ರಂಥಗಳನ್ನೂ ತಾಮ್ರ ಪಟ್ಟಿಕೆಗಳ ಮೇಲೆ ಕೊರೆದಿರುವ ಉದಾಹರಣೆಗಳಿವೆ. ಯುವಾನ್‌ಚಾಂಗ್‌ನ ಹೇಳಿಕೆಯ ಪ್ರಕಾರ ಕನಿಷ್ಕ ಬೌದ್ಧ ಗ್ರಂಥಗಳನ್ನು ತಾಮ್ರ ಪಟ್ಟಿಕೆಗಳ ಮೇಲೆ ಕೊರೆಸಿದ್ದ. ಸಾಯಣರ ವೇದ ಭಾಷ್ಯಗಳು ತಾಮ್ರಪಟ್ಟಿಕೆಗಳ ಮೇಲೆ ನಕಲುಗೊಂಡಿವೆ. ಅನೇಕ ತೆಲುಗು ಕೃತಿಗಳು ತಿರುಪತಿಯಲ್ಲಿ ತಾಮ್ರ ಪಟ್ಟಿಕೆಗಳ ಮೇಲೇ ಇರುವುದನ್ನು ಕಾಣಬಹುದು. ತಾಮ್ರಶಾಸನಗಳನ್ನು ಕಲ್ಲಿನ ಪೆಟ್ಟಿಗೆಗಳಲ್ಲಿಟ್ಟು ರಕ್ಷಿಸಲಾಗುತ್ತಿತ್ತು. ಕೊಲ್ಲಾಪುರದಲ್ಲಿ ದೊರೆತ ಶಿಲಾಹಾರ ಗಂಡರಾದಿತ್ಯನ ತಾಮ್ರಪಟಗಳನ್ನು ಮುಚ್ಚಳವಿದ್ದ ಒಂದು ಕಲ್ಲಿನ ಪೆಟ್ಟಿಗೆಯಲ್ಲಿಡಲಾಗಿತ್ತು. ಪೈಠಣದಲ್ಲಿ ದೊರೆತ ಯಾದವ ರಾಮಚಂದ್ರನ 1272ರ ಮೂರು ಫಲಕ (ತ್ರಿಫಳೀ)ದ ತಾಮ್ರ ಶಾಸನಗಳಲ್ಲಿ ಪ್ರತಿಯೊಂದು ಫಲಕವೂ 51ಸೆಂಮೀ ಉದ್ದ, 38ಸೆಂಮೀ ಅಗಲ ಇದ್ದು, ಇವುಗಳ ಮೇಲೆ ಎರಡು ರಂಧ್ರಗಳನ್ನು ಕೊರೆಸಿ, ಅವುಗಳಿಗೆ ತಾಮ್ರದ ಬಳೆಗಳ ಮೂಲಕ ಎರಡು ಮುದ್ರೆಗಳನ್ನು ಹಾಕಿ ರಕ್ಷಿಸಿಡಲಾಗಿತ್ತು. ಒಟ್ಟು 118 ಸಾಲುಗಳ ಈ ಶಾಸನದ ಒಟ್ಟು ತೂಕ ಸು.35 ಕಿಲೊ. ತಾಮ್ರಶಾಸನಗಳ ಪೈಕಿ ಅತಿ ವಿಸ್ತಾರವಾದ ಮತ್ತು ಹೆಚ್ಚಿನ ಸಂಖ್ಯೆಯ ಫಲಕಗಳಿರುವ ದೊಡ್ಡ ಶಾಸನವೆಂದರೆ ಒಂದನೆಯ ರಾಜೇಂದ್ರ ಚೋಳನ ಕರಂದೈ ತಾಮ್ರಪಟಗಳು. ಒಟ್ಟು 55 ಫಲಕಗಳಿರುವ ಈ ಶಾಸನದಲ್ಲಿ ಪ್ರತಿ ಫಲಕದ ಅಳತೆ 41ಸೆಂಮೀ ಉದ್ದ ಮತ್ತು 25ಸೆಂಮೀ ಅಗಲ. 2500ಕ್ಕೂ ಹೆಚ್ಚು ಸಾಲುಗಳಿರುವ ಈ ಶಾಸನದ ಕಾಲ 1019ರಿಂದ 1021 (ಶಾಸನದ ಆರಂಭ 1019 ಮತ್ತು ಮುಕ್ತಾಯ 1021). 55 ಫಲಕಗಳನ್ನೂ ಸೇರಿಸಿ, ಮೇಲೆ ಎರಡು ರಂಧ್ರಗಳನ್ನು ಮಾಡಿ, ಎರಡು ರಂಧ್ರಗಳಿಗೂ ಮುದ್ರೆಗಳನ್ನು ಹಾಕಿಸಿ ರಕ್ಷಿಸಿಡಲಾಗಿತ್ತು ಎಂದು ತಿಳಿಯಲಾಗಿದೆ. ಈಗ ಶಾಸನದಲ್ಲಿ ಒಂದು ಮುದ್ರೆ ಮಾತ್ರ ಇದ್ದು, ಇನ್ನೊಂದು ಮುದ್ರೆ ಕಳೆದಿದೆ. ಶಾಸನದ ಒಟ್ಟು ತೂಕ 10ಕಿಲೊ. ಮೇಲಿನ ಅಂಕಿ–ಅಂಶಗಳ ಹಿನ್ನೆಲೆಯಲ್ಲಿ ಸಧ್ಯಕ್ಕೆ ಭಾರತದಲ್ಲಿ ದೊರೆತಿರುವ ಹೆಚ್ಚು ತೂಕದ ತಾಮ್ರ ಶಾಸನ ಯಾದವ ರಾಮಚಂದ್ರನ ಪೈಠಣದ ತಾಮ್ರಪಟಗಳಾದರೆ, ಹೆಚ್ಚು ವಿಸ್ತಾರವಾದ ತಾಮ್ರಪಟಗಳ ಸ್ಥಾನವನ್ನು ಕರಂದೈ ತಾಮ್ರಪಟಗಳು ತುಂಬುತ್ತವೆ. ತಾಮ್ರಪತ್ರಗಳು ವೈಯುಕ್ತಿಕ ಹಕ್ಕಿನ ಪತ್ರಗಳಾದ್ದರಿಂದ ಅದನ್ನು ಹೊಂದಿರುವವನ ವಾಸಸ್ಥಾನ ಬದಲಾದಂತೆಲ್ಲ, ಅದರ ಸ್ಥಾನವೂ ಬದಲಾಗುತ್ತಿರುತ್ತದೆ. ಅಂತಹುದೇ ಕಾರಣಗಳಿಂದಾಗಿ ಚಾಳುಕ್ಯ ಇಮ್ಮಡಿ ಕೀರ್ತಿವರ್ಮ ಧಾರವಾಡದ ಸುಳ್ಳಿಯೂರಿನಲ್ಲಿ ನೀಡಿದ ದಾನ ಶಾಸನ ಕೋಲಾರ ಜಿಲ್ಲೆಯ ವಕ್ಕಲೇರಿಯಲ್ಲಿ ದೊರೆತಿದೆ.

ತಾಮ್ರವನ್ನು ಹೊರತುಪಡಿಸಿದರೆ ಶಾಸನಗಳಿಗೆ ಹೆಚ್ಚಾಗಿ ಬಳಸಿರುವ ಲೋಹವೆಂದರೆ ಕಬ್ಬಿಣ. ಇಮ್ಮಡಿ ಚಂದ್ರಗುಪ್ತನ 415ರ ಮೆಹರೋಲಿಯ ತಾಮ್ರಪಟಗಳು ಈಗ ದೆಹಲಿಯ ಕುತುಬ್‌ಮಿನಾರ್‌ನ ಆವರಣದಲ್ಲಿವೆ. ಅಕ್ಬರನ ಒಂದು ಪರ್ಷಿಯನ್ ಶಾಸನ ಕಬ್ಬಿಣದ ಕಂಬವೊಂದರ ಮೇಲೆ ಮಧ್ಯ ಪ್ರದೇಶದ ಧಾರ್‌ನಲ್ಲಿದೆ. ಅಬು ಪರ್ವತದ ಮೇಲಿರುವ ಕಬ್ಬಿಣದ ಬೃಹತ್ ತ್ರಿಶೂಲದ ಮೇಲಿರುವ ಶಾಸನದ ಕಾಲ 1526.

ಬೌದ್ಧಧರ್ಮಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳು ತಕ್ಷಶಿಲೆಯಲ್ಲಿ ಚಿನ್ನದ ವಸ್ತುಗಳ ಮೇಲೆ ಕೊರೆಯಲ್ಪಟ್ಟಿವೆ. ಅಂತೆಯೇ ತಕ್ಷಶಿಲೆ ಮತ್ತು ಭಟ್ಟಿಪ್ರೋಲುಗಳಲ್ಲಿ ಬೆಳ್ಳಿಯ ವಸ್ತುಗಳ ಮೇಲೆ ಬರೆಹಗಳಿವೆ. ಜೈನ ಬಸದಿಗಳಲ್ಲಿನ ಯಂತ್ರಗಳೂ ಚಿನ್ನ ಅಥವಾ ಬೆಳ್ಳಿಯಲ್ಲಿರುತ್ತವೆ ಮತ್ತು ಅವುಗಳ ಮೇಲೂ ಬರೆಹ ಇರುತ್ತದೆ. ಆದ್ದರಿಂದ ಅವುಗಳನ್ನೂ ಶಾಸನಗಳೆಂದೇ ಪರಿಗಣಿಸಬೇಕಾಗುತ್ತದೆ.

ಕಂಚಿನ ಮತ್ತು ಹಿತ್ತಾಳೆಯ ವಿಗ್ರಹಗಳು ಮತ್ತು ಪೂಜಾ ಸಾಮಗ್ರಿಗಳ ಮೇಲೂ ಬರೆವಣಿಗೆ ಇರುತ್ತದೆ. ಮಣ್ಪಾತ್ರೆಗಳು, ಅವುಗಳ ಮೇಲಿನ ಮುಚ್ಚಳಗಳು, ಇಟ್ಟಿಗೆಗಳು ಇತ್ಯಾದಿಗಳ ಮೇಲೂ ಬರೆವಣಿಗೆಯನ್ನು ಕಾಣಬಹುದು. ಜೇಡಿಮಣ್ಣಿನಿಂದ ಮಾಡಿದ ಹರಕೆಯ ಮುದ್ರೆ ಅಥವಾ ಪಟ್ಟಿಕೆಗಳ ಮೇಲೆ ಇರುವ ಬರೆಹವೂ ಸಾಂಸ್ಕೃತಿಕ ಇತಿಹಾಸಕ್ಕೆ ಪ್ರಮುಖ ದಾಖಲೆಯಾಗುತ್ತದೆ. ವಿಶೇಷವಾಗಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ಹರಕೆಯ ಮುದ್ರೆಗಳು ಮಣ್ಣಿನಿಂದ ತಯಾರಾಗಿರುತ್ತವೆ. ಇಂತಹ ಹಲವು ಮುದ್ರೆಗಳ ಭಂಡಾರ ಭಾರತದ ಅನೇಕ ಭಾಗಗಳಲ್ಲಿ ದೊರೆತಿವೆ. 5ನೆಯ ಶತಮಾನಕ್ಕೆ ಸೇರಬಹುದಾದ ಬುದ್ಧನ ಮಣ್ಣಿನ ಪ್ರತಿಮೆಯೊಂದು ಶಾಸನ ಸಹಿತ ಗೋರಕ್‌ಪುರ ಜಿಲ್ಲೆಯ ಕಾಸಿಯದಲ್ಲಿ ದೊರೆತಿದೆ. ಅಲ್ಲೇ ಬೌದ್ಧ ಸೂತ್ರಗಳನ್ನು ಬರೆಯಲಾಗಿರುವ ಇಟ್ಟಿಗೆಯ ಪಟ್ಟಿಕೆಯೂ ಸಿಕ್ಕಿದೆ. ಮರದ ಹಲಗೆಯ ಮೇಲೆ ಶಾಸನ ಕೊರೆದ ಅಪರೂಪದ ಉದಾಹರಣೆಗಳೂ ಉಂಟು. ಯಜ್ಞ ಯಾಗಗಳಲ್ಲಿನ ಯೂಪಸ್ತಂಭಗಳ ಮೇಲಿನ ಶಾಸನಗಳೂ ದೊರೆತಿವೆ. ಅಂತಹ ಯೂಪಸ್ತಂಭ ವೊಂದು ಬೆಳಗಾಂವಿಯ ವಡಗಾಂವ–ಮಾಧವಪುರದಲ್ಲಿ ದೊರೆತಿದೆ. ಆಂಧ್ರಪ್ರದೇಶದ ಸಾಲಿಗುಂಡಮ್‌ನಲ್ಲಿ ಶಂಖದ ಮೇಲೆ ಬರೆಯಲಾಗಿರುವ ಶಾಸನಗಳು ದೊರೆತಿವೆ.

ಶಾಸನಗಳ ದಾಖಲೆಗೆ ಕಲ್ಲನ್ನು ಹೆಚ್ಚಾಗಿ ಆಧರಿಸಲಾಗಿದೆ. ಮೊದಲಿಗೆ ಒರಟು ಬಂಡೆಯ ಮೇಲೆ ಶಾಸನಗಳನ್ನು ಬರೆಸಲಾಗುತ್ತಿತ್ತು. ಅನಂತರ ಕಲ್ಲನ್ನು ಸ್ತಂಭಾಕೃತಿಯಲ್ಲಿ ಸಿದ್ಧಪಡಿಸಿ, ಅದರ ಎಲ್ಲ ಮುಖಗಳಲ್ಲೂ ಶಾಸನವನ್ನು ಕೊರೆಯಿಸಲಾಗುತ್ತಿತ್ತು. ಮುಂದುವರಿದ ಕಾಲದಲ್ಲಿ ಕಲ್ಲನ್ನು ಬೇಕಾದ ಆಕಾರಕ್ಕೆ ಸಿದ್ಧಪಡಿಸಿಕೊಂಡು, ಮೇಲ್ಮೈಯನ್ನು ಹದಗೊಳಿಸಿ ಶಾಸನವನ್ನು ಕೊರೆಯಿಸುವ ಕೆಲಸ ನಡೆದಿದೆ. ದೇವಾಲಯದ, ಚೈತ್ಯದ, ಬಸದಿಗಳ ಗೋಡೆಗಳ ಮೇಲೆ ಮತ್ತು ಅಧಿಷ್ಠಾನದಲ್ಲಿ ಶಾಸನಗಳನ್ನು ಬರೆಸಲಾಗಿದೆ. ಭಾರತದಲ್ಲಿ ಪ್ರಾಚೀನ ಶಾಸನಸ್ಥ ದಾಖಲೆ ಎಂದರೆ ಅಶೋಕನ ಶಾಸನಗಳು. ಭಾರತದ ವಾಯವ್ಯದ ಅಂಚಿನಿಂದ ಆರಂಭಿಸಿ, ದಕ್ಷಿಣದಲ್ಲಿ ಕರ್ನಾಟಕದ ಮಧ್ಯ ಭಾಗದವರೆಗೂ ಅಶೋಕನ ಶಾಸನಗಳು ಈವರೆಗೂ ಲಭಿಸಿವೆ. ಕಳೆದ ಕೆಲವು ವರ್ಷದ ಹಿಂದೆ ಕರ್ನಾಟಕದ ಸನ್ನತಿಯಲ್ಲಿ ಅಶೋಕನ ಶಾಸನಗಳು ದೊರೆತಿವೆ. ಅಶೋಕನ ಶಾಸನಗಳು ಇನ್ನೂ ದೊರಕುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಬಂಡೆಗಳ ಮೇಲೆ ನಯಗೊಳಿಸಿದ ಕಲ್ಲು ಕಂಬಗಳ ಮೇಲೆ, ಅಣಿಗೊಳಿಸಿದ ಚಪ್ಪಡಿಗಳ ಮೇಲೆ, ಗುಹೆಗಳ ಒಳಗೆ ಅಶೋಕನ ಶಾಸನಗಳಿವೆ. ಈವರೆಗೆ ಸು.45ಕ್ಕೂ ಹೆಚ್ಚು ಜಾಗಗಳಲ್ಲಿ ಅಶೋಕನ ಶಾಸನಗಳು ದೊರೆತಿವೆ. ಬ್ರಾಹ್ಮಿ, ಅರೇಮಿಕ್ ಅಥವಾ ಖರೋಷ್ಟಿ ಲಿಪಿಯಲ್ಲಿ ಪ್ರಾಕೃತ ಅಥವಾ ಗ್ರೀಕ್ ಭಾಷೆಯಲ್ಲಿರುವ ಅಶೋಕನ ಶಾಸನಗಳು ಆ ಕಾಲದ ಇತಿಹಾಸವನ್ನು ತಿಳಿಯಲು ಹೆಚ್ಚು ಸಹಕಾರಿಯಾಗಿವೆ. ಗಿರ್ನಾರ್‌ನಲ್ಲಿ ಅಶೋಕನ ಶಾಸನದ ಜೊತೆಗೆ 150ರ ಮಹಾಕ್ಷತ್ರಪ ರುದ್ರದಾಮನ ಮತ್ತು ಸು.456ರ ಗುಪ್ತ ರಾಜ ಸ್ಕಂದಗುಪ್ತನ ಶಾಸನಗಳೂ ಇವೆ. ಅಂತೆಯೇ ಅಲಹಾಬಾದಿನ ಅಶೋಕ ಸ್ತಂಭದಲ್ಲಿ ಸಮುದ್ರಗುಪ್ತನ ಪ್ರಶಸ್ತಿ ಶಾಸನವೂ ಸೇರ್ಪಡೆಯಾಗಿದೆ. ಅಶೋಕನ ರುಮ್ಮಿಂದೈ ಶಾಸನ ಬುದ್ಧನ ಜನ್ಮಸ್ಥಳವಾದ ಲುಂಬಿಣಿ ವನವನ್ನು ಗುರುತಿಸಲು ದಾರಿಮಾಡಿತು.

ಬೌದ್ಧ ಸ್ತೂಪಗಳೊಳಗಿನ ಅವಶೇಷಗಳಲ್ಲೂ ಶಾಸನಗಳು ಇರುವ ಸಂಭವವನ್ನು ಅಲ್ಲಗಳೆಯುವಂತಿಲ್ಲ. ಸಾಂಚಿಯಲ್ಲಿನ ಒಂದು ಸ್ತೂಪದಲ್ಲಿ ದೊರೆತಿರುವ ಎರಡು ಕರಂಡಕಗಳ ಮುಚ್ಚಳಗಳ ಮೇಲೆ ಮಸಿಯಲ್ಲಿ ಬರೆದ ಮ ಮತ್ತು ಸ ಎಂಬ ಅಕ್ಷರಗಳಿವೆ. ಈ ಅಕ್ಷರಗಳು ಕ್ರಮವಾಗಿ ಬುದ್ಧನ ಇಬ್ಬರು ಶಿಷ್ಯರಾದ ಸಾರಿಪುತ ಮತ್ತು ಮೊಗಲಾನರನ್ನು ಸೂಚಿಸುತ್ತವೆ.

ಗುಹೆಗಳೂ ಬಹುಮುಖ್ಯ ಶಾಸನಸ್ಥ ದಾಖಲೆಗಳಿಗೆ ಅವಕಾಶ ಕಲ್ಪಿಸಿವೆ. ಒರಿಸ್ಸದ ಹಾಥಿಗುಂಫ ಗುಹೆಯಲ್ಲಿರುವ ಕಳಿಂಗದ ದೊರೆ ಖಾರವೇಲನ ಶಾಸನದ ಕಾಲ ಪ್ರ.ಶ.ಪೂ.156–55 ಎಂದು ತಿಳಿಯಲಾಗಿದೆ. ಮಹಾರಾಷ್ಟ್ರದ ನಾನಾಘಾಟ್ ಕಣಿವೆಯಲ್ಲಿ ಸಾತವಾಹನ–ಸಾತಕರ್ಣಿ ದೊರೆಗಳಲ್ಲೊಬ್ಬನ ಪತ್ನಿಯ ಶಾಸನ ದೊರೆತಿದೆ. ನಾಸಿಕ್, ಜುನ್ನರ್ ಮತ್ತು ಕಾರ್ಲೆಯ ಗುಹೆಗಳಲ್ಲಿ ಕ್ಷಹರಾತ ದೊರೆ ನಹಪಾನ, ಗೌತಮೀಪುತ್ರ ಸಾತಕರ್ಣಿ, ವಾಸಿಷ್ಠೀಪುತ್ರ ಪುಳುಮಾವಿಯ ಶಾಸನಗಳು ದೊರೆತಿವೆ.

ಹಿಂದಿನ ರಾಜರು ತಾವು ಕೈಗೊಂಡ ವಿಜಯಯಾತ್ರೆಯಲ್ಲಿ ಸಫಲರಾಗಿ ಹಿಂದಿರುಗಿದ ಸಂದರ್ಭದಲ್ಲಿ ನೆನಪಿಗೆಂದು ವಿಜಯ ಸ್ತಂಭ ಅಥವಾ ಕೀರ್ತಿಸ್ತಂಭಗಳನ್ನು ನೆಡಿಸುತ್ತಿದ್ದರು. ಹಾಗೆ ನೆಡಿಸಿದ ಸ್ಥಂಭಗಳಲ್ಲಿ ತಮ್ಮ ಗೆಲುವನ್ನು ದಾಖಲಿಸುತ್ತಿದ್ದರು. ಚಳುಕ್ಯ ಮಂಗಲೇಶನ ಅಂತಹ ಸ್ಥಂಭಶಾಸನವೊಂದು ಕರ್ನಾಟಕದ ಮಹಾಕೂಟದಲ್ಲಿ ದೊರೆತಿದ್ದು, ಈಗ ಅದು ಬಿಜಾಪುರದ ವಸ್ತು ಸಂಗ್ರಹಾಲಯದಲ್ಲಿದೆ. ಕದಂಬರ ಕಾಲದ ತಾಳಗುಂದ ಮತ್ತು ಗುಡ್ನಾಪುರಗಳ ಸ್ಥಂಭ ಶಾಸನಗಳು ಕೀರ್ತಿಸ್ತಂಭಗಳಲ್ಲವಾದರೂ ಆ ವಂಶಕ್ಕೆ ಸಂಬಂಧಿಸಿದ ಬಹು ಮುಖ್ಯ ಐತಿಹಾಸಿಕ ವಿಚಾರಗಳನ್ನು ಪ್ರಸ್ತಾಪಿಸಿವೆ. ರವಿಕೀರ್ತಿ ರಚಿಸಿರುವ ಐಹೊಳೆಯ



**ಖರೋಷ್ಠಿ ಲಿಪಿಶಾಸನ**

ಮೇಗುಡಿಯ ಗೋಡೆ ಮೇಲಿನ ಶಾಸನ ಇಮ್ಮಡಿ ಪುಲಕೇಶಿಯ ವಿಜಯಯಾತ್ರೆಯ ವಿವರಗಳಿರುವ ಶಾಸನ. ಇದರ ಕಾಲ 634. ದಕ್ಷಿಣ ಭಾರತದ ಶ್ರವಣಬೆಳಗೊಳದಲ್ಲಿ ಪ್ರಸಿದ್ಧ ಗೊಮ್ಮಟೇಶ್ವರ ಮೂರ್ತಿಯ ಕೆಳಭಾಗದಲ್ಲಿರುವ ಶಾಸನ ಪ್ರತಿಮೆಯ ನಿರ್ಮಾಣ ಆದದ್ದನ್ನು ದಾಖಲಿಸಿದೆ. ಭಾಜಾದ ಗುಹೆಗಳಲ್ಲಿ ಛತ್ತಿನಲ್ಲಿ ಕಮಾನಿನಾಕಾರದ ಮರದ ಪಟ್ಟಿಕೆಗಳ ಮೇಲೆ ಈ ಶಾಸನಗಳು ಕೆತ್ತಲ್ಪಟ್ಟಿವೆ.

ಶಾಸನಗಳು ಕೇವಲ ರಾಜ, ಮಹಾರಾಜರ ಮತ್ತು ಅವರ ಅಧಿಕಾರಿ ವರ್ಗದವರ ಹೊಗಳಿಕೆ ಅಥವಾ ಹೆಗ್ಗಳಿಕೆಯ ದಾಖಲೆಗೆ ಮಾತ್ರ ಮೀಸಲಾಗಿಲ್ಲ. ಅದೆಷ್ಟೋ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಸಾಮಾನ್ಯ ಜನತೆ ಸಾಮಾಜಿಕವಾಗಿ ಹೊಂದಿದ್ದ ಸಂಬಂಧ ಮತ್ತು ಸಾಧಿಸಿದ ಮಹತ್ವದ ವಿಚಾರಗಳನ್ನು ಪ್ರಕಟಪಡಿಸುತ್ತವೆ. ಆತಕೂರಿನ ವೀರಗಲ್ಲು ಶಾಸನ ರಾಷ್ಟ್ರಕೂಟ ಮತ್ತು ಚೋಳರ ನಡುವೆ ನಡೆದ ಯುದ್ಧಗಳು, ಅದರಲ್ಲಿ ಗಂಗ ದೊರೆಗಳ ಪಾತ್ರ ಮತ್ತು ಚೋಳರ ಸೋಲು ಮಾತ್ರವಲ್ಲದೆ, ರಾಜಾದಿತ್ಯನ ಸಾವಿನ ವಿಷಯವನ್ನು ದಾಖಲಿಸಿದೆ. ದೇಕಬ್ಬೆಯ ಶಾಸನ ಗಂಗ–ಚೋಳ ಸಂಘರ್ಷದ ಕಾಲದಲ್ಲಿ ಸತಿ ಪದ್ಧತಿಗೆ ಇದ್ದ ಮಹತ್ತ್ವ ಮತ್ತು ಸಂಬಂಧಿಸಿದ ಆಚಾರ ವಿಚಾರಗಳ ವಿವರಣೆ ನೀಡಿದೆ. ಒಟ್ಟಾರೆ ಯಾವುದೇ ಪ್ರಾಚೀನ ಸ್ಮಾರಕ ಅಥವಾ ನಿರ್ದಿಷ್ಟವಾದ ವಸ್ತುವಿನ ಮೇಲೆ ಶಾಸನಗಳನ್ನು ಕೆತ್ತುವ ಕೆಲಸ ಬಹಳ ಹಿಂದಿನಿಂದ ನಡೆದುಕೊಂಡು ಬಂದಿದೆ. ಪ್ರಾಚೀನರ ಬದುಕನ್ನು, ನಂಬಿಕೆಗಳನ್ನು ಖಚಿತವಾಗಿ ದಾಖಲಿಸಲು ಶಾಸನಗಳು ಸಹಾಯ ಮಾಡಿವೆ. ಶಾಸನಗಳು ರಾಜಾಜ್ಞೆಗಳು, ದಾನ–ದತ್ತಿಗಳು, ಆಳುವವರ ಸೋಲು–ಗೆಲುವು, ವೀರರ ಹೋರಾಟ, ವೀರ ಮರಣ, ಮಹಾಸತಿಯರ ಆತ್ಮಬಲಿ, ದೇವಾಲಯ, ಚೈತ್ಯ, ಬಸದಿಗಳ ನಿರ್ಮಾಣ, ಅವುಗಳಿಗೆ ದಾನ ಇತ್ಯಾದಿಗಳನ್ನು ಮಾತ್ರವಲ್ಲದೆ, ಬದುಕಿನ ನಶ್ವರತೆ, ಬದುಕಬೇಕಾದ ರೀತಿ ಇತ್ಯಾದಿಗಳ ಬಗೆಗೂ ತಿಳಿಸಿವೆ. ಅಶೋಕನ ಶಾಸನಗಳು ಮನುಷ್ಯ ಧರ್ಮದ ಬಗ್ಗೆ ತಿಳಿಸಿದರೆ, ಜೈನಧರ್ಮದ ಶಾಸನಗಳು ಬದುಕಿನ ನಶ್ವರತೆಯನ್ನು ದಾಖಲಿಸಿವೆ. ಆಲೇಖಗಳೆಂದು ಪರಿಗಣಿಸಲಾಗಿರುವ ಕೆಲವು ಹೆಸರುಗಳು ಶಿಲ್ಪವನ್ನು ಕೆತ್ತಿದ, ಮರಣವನ್ನು ಆಹ್ವಾನಿಸಿದ ಜೈನ ಮುನಿಗಳು ಮತ್ತು ಶ್ರಮಣರು, ಆಯಾ ತೀರ್ಥಕ್ಷೇತ್ರಗಳಿಗೆ ಬಂದಿದ್ದ ಪ್ರವಾಸಿಗಳ ಹೆಸರು ಇತ್ಯಾದಿ, ರಾಜಕೀಯ ಇತಿಹಾಸಕ್ಕೆ ಅತಿಮುಖ್ಯವಾದ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೂ ಅಸ್ಪಷ್ಟ ದಾಖಲೆಗಳಾಗಿದ್ದರೂ ಯಾವುದಾದರೂ ಸಂದರ್ಭದಲ್ಲಿ ಬಿಟ್ಟ ಜಾಗವನ್ನು ತುಂಬಿ, ಮಹತ್ತ್ವದ ವಿಷಯವೊಂದು ಬಹಿರಂಗಗೊಳ್ಳಲು ಕಾರಣವಾಗುತ್ತವೆ. ನಾಣ್ಯಗಳು ಮತ್ತು ಮುದ್ರೆಗಳ ಮೇಲಿನ ಆಲೇಖಗಳೂ ಇತಿಹಾಸ ರಚನೆಗೆ ನೆರವಾಗುತ್ತವೆ. ಶಿಲ್ಪ ಸೂಚಕ ಫಲಕಶಾಸನಗಳನ್ನು ಕೂಡ ಗಮನಿಸಬೇಕಾದವು. ಸೋಮನಾಥಪುರದ ತ್ರಿಕೂಟ ದೇವಾಲಯದಲ್ಲಿ ಮೂರು ವಿಗ್ರಹಗಳ ಕಿರುಮಾದರಿಗಳನ್ನು ಅಲ್ಲಿನ ಶಾಸನದಲ್ಲಿಯೇ ಬಿಡಿಸಿದೆ.

ಕೆಲವು ಶಾಸನಗಳಲ್ಲಿ ಕಾವ್ಯಗಳನ್ನೇ ಕೆತ್ತಲಾಗಿದೆ. ಆಂಧ್ರದ ಕವಿ ರಣಚೋಡನ 24 ಸರ್ಗಗಳ ರಾಜಪ್ರಶಸ್ತಿ ಕಾವ್ಯವನ್ನು 24 ಫಲಕಗಳ ಮೇಲೆ ಕೆತ್ತಲಾಗಿದೆ. ಪರಮಾರ ಭೋಜನ ಪ್ರಾಕೃತ ಭಾಷೆಯ ಕೂರ್ಮಶತಕ ಮತ್ತು ಮದನನ ಪಾರಿಜಾತ ಮಂಜರಿ, ಚಾಹಮಾನ ದೊರೆ 4ನೆಯ ವಿಗ್ರಹರಾಜನ ಹರಕೇಲಿ ನಾಟಕ, 4ನೆಯ ವಿಗ್ರಹರಾಜನ ಆಸ್ಥಾನ ಕವಿ ಸೋಮೇಶ್ವರನ ಲಲಿತ ವಿಗ್ರಹರಾಜ ನಾಟಕಗಳನ್ನು ಶಿಲಾಫಲಕಗಳ ಮೇಲೆ ಕಡೆಯಲಾಗಿರುವುದು ಒಂದು ವಿಶೇಷ. ಶ್ರವಣಬೆಳಗೊಳದ ಇಂದ್ರಗಿರಿಯ ಮೇಲಿನ ಶಿಲಾ ಶಾಸನವೊಂದು ಬೊಪ್ಪಣ ಪಂಡಿತನು ಬರೆದ ಗೊಮ್ಮಟ ಸ್ತುತಿ ಕಾವ್ಯವನ್ನು ಪ್ರಕಟಪಡಿಸಿದೆ.

ಶಾಸನಗಳು ಇತಿಹಾಸ ರಚನೆ ಮತ್ತು ಪುನಾರಚನೆಗೆ ಮಹತ್ವದ ಮತ್ತು ಪ್ರಾಥಮಿಕ ಆಕರಗಳು. ಇವು ತಾಳಪತ್ರದಿಂದ ಕಾಗದದವರೆಗೆ ಯಾವುದೇ ವಸ್ತುವಿನ ಮೇಲೆ ಬರೆದ ವಿಷಯಗಳಿಗಿಂತಲೂ ಹೆಚ್ಚು ವಿಶ್ವಸನೀಯ ಎಂದು ತಿಳಿಯಲಾಗಿದೆ. ಸಾಹಿತ್ಯಕ ಮೂಲಗಳು ಅಥವಾ ಮತ್ತಾವುದೇ ಹೇಳಿಕೆಯ ಮೂಲಗಳಲ್ಲಿಯ ದೋಷಗಳನ್ನು ಗುರುತಿಸಿ, ಸತ್ಯವನ್ನು ಪತ್ತೆ ಮಾಡುವಲ್ಲಿ ಶಾಸನಗಳು ನೆರವಾಗುತ್ತವೆ. ವಿಷಯಗಳನ್ನು ಖಚಿತಪಡಿಸಿಕೊಳ್ಳಲು ನೆರವಾಗುವ ಶಾಸನಗಳು ಸಮಕಾಲೀನ ದಾಖಲೆಗಳಾಗಿರುವುದರಿಂದ ಮಹತ್ತ್ವ ಪಡೆಯುತ್ತವೆ. 150ರ ಜುನಾಗಡ್ ಶಾಸನ ಚಂದ್ರಗುಪ್ತ ಮೌರ್ಯನ ಕಾಲದಲ್ಲಿ (ಪ್ರ.ಶ.ಪೂ.322–298) ನಿರ್ಮಿಸಿದ್ದ ಸುದರ್ಶನ ಸರೋವರವನ್ನು ಅಶೋಕನ ಕಾಲದಲ್ಲಿ ಅವನ ಅಧಿಕಾರಿ ತುಷಾಸ್ಪನು ದುರಸ್ತಿಗೊಳಿಸಿ, ಕಾಲುವೆಗಳನ್ನು ತೋಡಿಸಿದ ವಿಷಯವನ್ನು ತಿಳಿಸುತ್ತದೆ. ಐಹೊಳೆಯ ಪುಲಕೇಶಿಯ ಶಾಸನ ಅವನ ವಿಜಯಯಾತ್ರೆ, ಆಗಿನ ಆಂತರಿಕ ಆತಂಕಗಳ ಜೊತೆಗೆ ಭಾರವಿಯರ ಕಾಳಿದಾಸನ ಹೆಸರುಗಳನ್ನು ಉಲ್ಲೇಖಿಸುವುದರಿಂದ ಕಾಳಿದಾಸನ ಕಾಲದ ಈಚಿನ ಮಿತಿಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಯಿತು. 436ರ ವೇಳೆಗಾಗಲೇ ಸೂರ್ಯ ದೇವಾಲಯ ನಿರ್ಮಾಣವಾಗಿದ್ದ ವಿಷಯವನ್ನು ಮಂಡಸೋರ್ ಒಂದು ಶಾಸನ ದಾಖಲಿಸಿದೆ. ಸಮುದ್ರಗುಪ್ತನ ಅಲಹಾಬಾದ್, ಯಶೋವರ್ಮನ ಮಂಡಸೋರ್ ಮತ್ತು ಐಹೊಳೆಯ ಪುಲಕೇಶಿಯ ಶಾಸನಗಳು ವಿಜಯಯಾತ್ರೆಗಳ ನಿರೂಪಣೆ ಮಾಡಿವೆ. ಖಾರವೇಲನ ಹಾಥಿಗುಂಫ ಶಾಸನ ಅವನ ಜೀವನ ಸಾಧನೆಗಳನ್ನು ದಾಖಲಿಸಿದೆ. ಶಾಸನಗಳಲ್ಲಿನ ಬಿರುದುಗಳು ಮತ್ತು ಪ್ರಶಸ್ತಿಗಳು ಶಾಸನದ ಸತ್ಯಾಸತ್ಯತೆಗಳನ್ನು ಪ್ರಶ್ನಿಸಲು ಕಾರಣವಾಗುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಅವು ಉತ್ಪ್ರೇಕ್ಷೆಗಳು ಎನಿಸುತ್ತವೆ. ಇಂತಹ ಸಮಸ್ಯೆಗಳು ಕಾಡುವುದು ಲೋಹ, ವಿಶೇಷವಾಗಿ ತಾಮ್ರಶಾಸನಗಳ ವಿಷಯದಲ್ಲಿ. ಸಾಮಾನ್ಯವಾಗಿ ತಾಮ್ರ ಶಾಸನಗಳು ಖಾಸಗಿ ದಾಖಲೆಗಳಾಗಿರುವುದರಿಂದ, ಯಾವುದೇ ಕಾರಣದಿಂದ ಅವುಗಳ ಪ್ರತಿಗಳಾಗುವ ಸಂದರ್ಭಗಳಿರುತ್ತವೆ. ಹಾಗೆ ಪ್ರತಿಯಾಗುವಾಗ ಅಥವಾ ದುರಾಸೆಯ ಕಾರಣದಿಂದ ಅವು ನಕಲುಗಳಾಗುವ ಸಾಧ್ಯತೆಯನ್ನೂ ತಳ್ಳಿಹಾಕು ವಂತಿಲ್ಲ. ಲಿಪಿ ಸ್ವರೂಪ, ಭಾಷೆ, ಈಗಾಗಲೇ ತಿಳಿದಿರುವ ರಾಜಕೀಯ ವಿಚಾರಗಳು ಮತ್ತು ಕಾಲದ ಉಲ್ಲೇಖಗಳು ಕೂಟ ಶಾಸನಗಳ ಪತ್ತೆಗೆ ನೆರವಾಗುತ್ತವೆ. 1169ರ ಒಂದು ಬಂಡೆಗಲ್ಲು ಶಾಸನದ ಮೂಲಕ ಬ್ರಾಹ್ಮಣನೊಬ್ಬನು ಕನೌಜ್‌ನ ಗಾಹದ್ವಾಲದ ರಾಜ ವಿಜಯಚಂದ್ರನ ಒಬ್ಬ ಅಧಿಕಾರಿಗೆ ಲಂಚ ಕೊಟ್ಟು ಕೃತಕ ಶಾಸನದ ಮೂಲಕ ಎರಡು ಹಳ್ಳಿಗಳ ದಾನ ಪಡೆದಿದ್ದುದು ಬೆಳಕಿಗೆ ಬಂದಿದೆ.

ಭಾರತದಲ್ಲಿ ಸಾವಿರಾರು ಶಾಸನಗಳಿವೆ. ಇವುಗಳಲ್ಲಿ ಎಲ್ಲವೂ ಪ್ರಕಟವಾಗಿವೆ ಎಂದು ಹೇಳಲು ಸಾಧ್ಯವಿಲ್ಲ. ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಶಾಸನಗಳ ಸಂಖ್ಯೆ ಅಧಿಕವಾಗಿದೆ. ಭಾರತವನ್ನು ಅನೇಕ ರಾಜವಂಶಗಳು ಆಳಿವೆ. ಇಡಿಯಾಗಿ ಭಾರತವನ್ನು ಯಾವ ರಾಜ ವಂಶವೂ ಆಳಿಲ್ಲ. ಆದ್ದರಿಂದ ಯಾವುದೇ ಭಾಗದಲ್ಲಿ ಒಂದೇ ಭಾಷೆಯ ಮತ್ತು ಒಂದೇ ಲಿಪಿಯ ಶಾಸನಗಳನ್ನು ಕಾಣಲು ಸಾಧ್ಯವಿಲ್ಲ. ಭಾರತದ ಶಾಸನಗಳಲ್ಲಿ ಹಲವು ಭಾಷೆಯ ಮತ್ತು ಹಲವು ಲಿಪಿಯ ಶಾಸನಗಳಿವೆ. ಅತಿ ಹೆಚ್ಚಿನ ಪ್ರಾಚೀನ ಶಾಸನಗಳು ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳಲ್ಲಿವೆ. ಅನಂತರದ ಕಾಲದಲ್ಲಿ ದೇವನಾಗರೀ, ನಾಗರೀ, ಬಂಗಾಲಿ, ಅರೇಬಿಕ್, ಪರ್ಷಿಯನ್, ತಮಿಳು, ಕನ್ನಡ, ತೆಲುಗು ಮತ್ತು ಮಲಯಾಳಂ ಲಿಪಿಗಳನ್ನು ಬಳಸಲಾಗಿದೆ. ಸಿಂಧೂ ನದಿಯ ಬಯಲಿನ ಸಂಸ್ಕೃತಿಗೆ ಸೇರಿದ ಮುದ್ರೆಗಳ ಮೇಲಿನ ಬರೆಹಗಳನ್ನು ಇನ್ನೂ ಸರ್ವಸಮ್ಮತವಾಗಿ ಓದಲಾಗಿಲ್ಲ. ಖರೋಷ್ಠಿ ಲಿಪಿಯ ಶಾಸನಗಳು ಭಾರತದ ವಾಯವ್ಯ ಭಾಗದಲ್ಲಿ ಮಾತ್ರ ಹೆಚ್ಚಾಗಿ ದೊರೆತಿವೆ. ಖರೋಷ್ಠಿ ಲಿಪಿಯು ಅರೇಮಿಕ್ ಲಿಪಿಯಿಂದ ರೂಪುಗೊಂಡಿದೆ ಎಂದು ತಿಳಿಯಲಾಗಿದೆ. ಭಾರತದಲ್ಲಿ ಪ್ರಚಲಿತವಿದ್ದ ಮತ್ತು ಪ್ರಚಲಿತವಿರುವ ಅನೇಕ ಲಿಪಿಗಳಿಗೆ ಬ್ರಾಹ್ಮಿಲಿಪಿಯೇ ಮೂಲ ಎಂದು ತಿಳಿದಿದೆ. ಉತ್ತರ ಭಾರತದಲ್ಲಿ ಸಾಮಾನ್ಯವಾಗಿ ಮತ್ತು ಇತರ ಪ್ರದೇಶಗಳಲ್ಲಿಯೂ ಹೆಚ್ಚಿನ ಶಾಸನಗಳು, ಅದರಲ್ಲೂ ವಿಶೇಷವಾಗಿ ತಾಮ್ರ ಶಾಸನಗಳು ಸಂಸ್ಕೃತ ಭಾಷೆಯಲ್ಲಿವೆ. ಉಳಿದಂತೆ ಪ್ರಾಕೃತ, ಒರಿಯ, ಮರಾಠಿ, ಬಂಗಾಲಿ, ತಮಿಳು, ಕನ್ನಡ, ತೆಲುಗು, ಮಲಯಾಳಂ ಇತ್ಯಾದಿ ಆಯಾ ಪ್ರದೇಶದ ಪ್ರಧಾನ ಭಾಷೆಯಲ್ಲಿರುತ್ತವೆ. ಸಾಮಾನ್ಯವಾಗಿ ಶಾಸನದ ಮಂಗಳ ಶ್ಲೋಕಗಳು ಮತ್ತು ಶಾಪಾಶಯದ ಭಾಗಗಳು ಮಾತ್ರ ಸಂಸ್ಕೃತ ಭಾಷೆಯಲ್ಲೇ ಇರುತ್ತವೆ. ವಿಶೇಷವಾಗಿ ದಾನದ ವಿವರಗಳು ಆಯಾ ಪ್ರಾದೇಶಿಕ ಭಾಷೆಯಲ್ಲೇ ಇರುತ್ತವೆ. ಅಪರೂಪಕ್ಕೆ ದ್ವಿಭಾಷಾ ಶಾಸನಗಳು ದೊರೆತಿವೆ. ಅವುಗಳಲ್ಲಿ ಒಂದನ್ನಾಗಿ ಜಿನವಲ್ಲಭನ ಕುರ್ಕ್ಯಾಲಂ ಶಾಸನವನ್ನು ಉದಾಹರಿಸಬಹುದು. ಕನ್ನಡ ಲಿಪಿಯ ಈ ಶಾಸನದಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳೆರಡೂ ಬಳಕೆಯಾಗಿವೆ.

ಶಾಸನಗಳು ಅಧಿಕೃತ ದಾಖಲೆಗಳಾದ್ದರಿಂದ, ಅದರ ಪಾಠವನ್ನು ರಾಜನ ಅಥವಾ ಅಧಿಕಾರಿಯ ಆದೇಶದಂತೆ ಶಾಸನ ಕವಿ ಸಿದ್ಧಪಡಿಸುತ್ತಿದ್ದ. ಹಾಗೆ ಸಿದ್ಧಪಡಿಸಿದ ಶಾಸನ ಪಾಠವನ್ನು ಶಾಸನ ಕೊರೆಯಲೆಂದೇ ಅಣಿಗೊಳಿಸಿದ ಶಿಲೆ, ಯಾವುದೇ ಲೋಹದ ಫಲಕ ಅಥವಾ ಮತ್ತಾವುದೇ ವಸ್ತುವಿನ ಮೇಲೆ ಶಾಸನ ಕವಿ ಅಥವಾ ಸುಂದರವಾಗಿ ಮತ್ತು ದೋಷಮುಕ್ತವಾಗಿ ಬರೆಯುವ ಅಕ್ಷರ ಬಲ್ಲ ಲಿಪಿಕಾರ ಯಾವುದೇ ಬಣ್ಣ ಅಥವಾ ಮಸಿಯಂಥ ವಸ್ತುವಿನಿಂದ ಬರೆದು ಕೊಡುತ್ತಿದ್ದ. ಹಾಗೆ ಬರೆದುಕೊಟ್ಟ ಪಾಠವನ್ನು ಕಲ್ಲು ಕುಟಿಗ ಅಥವಾ ಓಜನು ಕಂಡರಿಸುತ್ತಿದ್ದ. ಅಶೋಕನ ಒಂದು ಶಾಸನವನ್ನು ಬರೆದ ಚಪಡನ ಹೆಸರು ತಿಳಿದಿದೆ. ಅಂತಹುದೇ ಇನ್ನೂ ನೂರಾರು ಹೆಸರುಗಳು ದಾಖಲಾಗಿವೆ.

ಶಾಸನ ಪಾಠಗಳನ್ನು ಗಮನಿಸಿದಾಗ ಅಲ್ಲೂ ಒಂದು ನಿರ್ದಿಷ್ಟಕ್ರಮವನ್ನು ಅನುಸರಿಸಿರುವುದು ಕಂಡುಬರುತ್ತದೆ. ಶಾಸನದ ಮೊದಲ ಭಾಗವನ್ನು ಪೀಠಿಕಾ ಭಾಗ ಎಂದು ಒಪ್ಪಿಕೊಳ್ಳುವುದಾದರೆ, ಅದರಲ್ಲಿ ದಾನ ನೀಡುತ್ತಿರುವವನಿಗೆ ಸಂಬಂಧಿಸಿದ ಧರ್ಮ ದೇವತೆಯ ಸ್ತುತಿ ಇರುತ್ತದೆ. ಶಾಸನದ ಆರಂಭದಲ್ಲಿ ಶುಭ ಸೂಚಕವಾಗಿ ಸ್ವಸ್ತಿ, ಸಿದ್ಧಮ್, ಶುಭಮಸ್ತು ಇತ್ಯಾದಿ ಪದಗಳು ಇರುತ್ತಿದ್ದು ಕ್ರಮೇಣ ಈ ಪದಗಳನ್ನು ಸಂಕೇತ/ಚಿಹ್ನೆಗಳ ಮೂಲಕ ಸೂಚಿಸುವ ಪರಿಪಾಠ ಮುಂದುವರಿದಿದೆ. ಈ ಮಂಗಳ ವಾಚನದ ಅನಂತರ ಪ್ರಾರ್ಥನೆ, ಶಾಸನವನ್ನು ಪ್ರಕಟಿಸಿದ ಸ್ಥಳ, ದಾನಿಯ ವಂಶಾವಳಿ ಮತ್ತು ದಾನಕ್ಕೆ ಸಂಬಂಧಿಸಿದ ಆದೇಶಗಳು ಇರುತ್ತವೆ.

ಶಾಸನದ ಎರಡನೆಯ ಭಾಗವೇ ಪ್ರಕಟಣೆ. ಈ ಭಾಗದಲ್ಲಿ ದಾನದ ಸ್ಪಷ್ಟೀಕರಣ, ದಾನ ಪಡೆದವನ ವಂಶಾವಳಿ, ದಾನ ಕೊಟ್ಟ ಸಂದರ್ಭ, ಅದಕ್ಕೆ ಪ್ರೇರಣೆಗಳು, ದಾನದ ಉದ್ದೇಶ ಮತ್ತು ದಾನದ ವಿವರಗಳು ಇರುತ್ತವೆ. ಶಾಸನದ ಕೊನೆಯ ಭಾಗವೇ ದಾನಚ್ಛೇದೋಪವರ್ಣನ. ಇದರಲ್ಲಿ ದಾನವನ್ನು ನೀಡಿದರೆ ಲಭಿಸುವ ಪುಣ್ಯ ಫಲಗಳು ಮತ್ತು ದಾನವನ್ನು ಕೆಡಿಸಿದರೆ ಅಥವಾ ಅಪಹರಿಸಿದರೆ ಲಭಿಸುವ ಪಾಪ ಫಲಗಳು ಉತ್ಪ್ರೇಕ್ಷೆ ಎನ್ನಿಸುವಷ್ಟರ ಮಟ್ಟಿಗೆ ವರ್ಣಿತವಾಗಿರುತ್ತವೆ. ಶಾಸನದ ಕೊನೆಗೆ ಶಾಸನದ ಕವಿ, ಲಿಪಿಕಾರ ಮತ್ತು ಓಜ (ಕಲ್ಲಿನ ಮೇಲೆ ಶಾಸನವನ್ನು ಕೊರೆದವನು) ಹೆಸರುಗಳನ್ನು ಕೆತ್ತಲಾಗಿರುತ್ತದೆ. ಎಲ್ಲ ಶಾಸನಗಳೂ ಹೀಗೆಯೇ ಇರುತ್ತವೆ ಅಥವಾ ಇರಬೇಕು ಎಂಬ ನಿಯಮವೇನೂ ಇಲ್ಲ. ಸಾಮಾನ್ಯವಾಗಿ ಶಾಸನಗಳು ಹೀಗಿರುತ್ತವೆ ಮತ್ತು ಇರಬೇಕು ಎಂದು ನಿರೀಕ್ಷಿಸಲಾಗು ವುದು. ಕೆಲವು ಬಾರಿ ಈ ನಿಯಮಗಳನ್ನು ಎಲ್ಲಾ ಶಾಸನಗಳಲ್ಲೂ ಅನುಸರಿಸಿರುವುದಿಲ್ಲ. ಅದಕ್ಕೂ ವಿನಾಯಿತಿ ಇದ್ದೇ ಇರುತ್ತದೆ. ಶಾಸನದ ಕೊನೆಗೆ ದಾನ ನೀಡಿದವನ ಸಹಿ ಇರಬೇಕಾಗುವುದು. ಅದು ಅಧಿಕೃತತ್ವದ ಸಂಕೇತ. ಆದರೆ ಕೆಲವೇ ಶಾಸನಗಳಲ್ಲಿ ಸಹಿ ಇರುವುದು ಕಂಡುಬಂದಿದೆ. ಶ್ರೀಹರ್ಷನ, ವಿಜಯನಗರದ ಅರಸರ, ಮೈಸೂರು ಒಡೆಯರ ಸಹಿಗಳಿರುವ ಹಲವು ಶಾಸನಗಳು ದೊರೆತಿವೆ. ಕೆಲವು ಶಾಸನಗಳಲ್ಲಿ ಬಿರುದು (ಮಲಪರುಳ್ಗಂಡ) ಅಥವಾ ಒಪ್ಪ (ಶ್ರೀವಿರೂಪಾಕ್ಷ) ಇರುವುದುಂಟು.

ಮಂಗಳ ಶ್ಲೋಕ ಅಥವಾ ದೇವತಾ ಸ್ತುತಿ ಸಾಮಾನ್ಯವಾಗಿ ದಾನ ನೀಡಿದವನ ಮತಧರ್ಮವನ್ನು ಅವಲಂಬಿಸುತ್ತಿದ್ದವು. ಶೈವ ಶಾಸನಗಳಾದರೆ ಹೆಚ್ಚಾಗಿ ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭಮೂಲಸ್ಥಂಭಾಯ ಶಂಭವೇ ಎಂಬ ಶ್ಲೋಕ ಇರುತ್ತದೆ. ಇದು ಬಾಣ ಕವಿಯು ಹರ್ಷಚರಿತದಲ್ಲಿ ಶಿವನನ್ನು ಸ್ತುತಿಸಿರುವ ಶ್ಲೋಕ. ಬಹುತೇಕ ಶೈವ ಶಾಸನಗಳಲ್ಲಿ ಈ ಶ್ಲೋಕವೇ ಇರುತ್ತದೆ. ವಿಷ್ಣುಪರ ಸ್ತುತಿಯಾದರೆ ಜಯತ್ಯಾವಿಷ್ಕೃತಂವಿಷ್ಣೋರ್ವಾರಾಹಂಕ್ಷೋಭಿತಾರ್ಣವಂದಕ್ಷಿಣೋನ್ನತ ದಂಷ್ಟ್ರಾಗ್ರವಿಶ್ರಾಂತ ಭುವನಂ ವಪುಃ ಎಂಬ ಶ್ಲೋಕ ಇರುತ್ತದೆ. ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾತ್ ತ್ರೈಲೋಕನಾಥಸ್ಯಶಾಸನಂ ಜಿನ ಶಾಸನಂ ಎಂಬ ಶ್ಲೋಕ ಜೈನಪರ ಶಾಸನಗಳಲ್ಲಿರುತ್ತದೆ. ಇದು 10ನೆಯ ಶತಮಾನದ ಅನಂತರ ಕಾಣಿಸಿಕೊಳ್ಳುವ ಜಿನ ಸ್ತುತಿ. ಹೊಯ್ಸಳರ ಕೆಲವು ಶಾಸನಗಳಲ್ಲಿ ಶ್ರೀಮತ್ರೈಲೋಕ್ಯಪೂಜ್ಯಾಯ ಸರ್ವಕರ್ಮ ಸುಸಾಕ್ಷಿಣೇ ಫಲದಾಯ ನಮೋ ನಿತ್ಯಂ ಕೇಶವಾಯ ಶಿವಾಯಚ ಎಂಬ ಹರಿಹರ ಪರ ಶ್ಲೋಕಗಳೂ ಕಂಡುಬರುತ್ತವೆ. ಗಂಗರ ತಾಮ್ರ ಶಾಸನಗಳ ಆರಂಭದಲ್ಲಿ ಜಿತಂಭಗವತಾಗತ ಘನಗಗನಾಭೇನ ಪದ್ಮನಾಭೇನ ಶ್ರೀಮಜ್ಜಾಹ್ನವೇಯ ಕುಲಾಮಲ ವ್ಯೋಮಾವಭಾಸನ ಭಾಸ್ಕರಸ್ಯ ಎಂಬ ಜಿನಸ್ತುತಿ ಇರುತ್ತದೆ.

ಭಾರತೀಯ ಶಾಸನಗಳು ಆಯಾ ಕಾಲದ ಸಾಹಿತ್ಯಕ ಪ್ರಭಾವಕ್ಕೂ ಒಳಗಾಗಿವೆ. ಆರಂಭ ಕಾಲದ ಸಂಸ್ಕೃತ ಶಾಸನಗಳು ಸುಲಭ ಗ್ರಾಹ್ಯವೇನಲ್ಲ. ಅವುಗಳ ಅರ್ಥೈಕೆಗೆ ಸಂಸ್ಕೃತ ವ್ಯಾಕರಣ ವಿಶೇಷಗಳು, ಕಾವ್ಯ ಪರಿಭಾಷೆ, ಛಂದಸ್ಸು ಇತ್ಯಾದಿಗಳ ಪರಿಚಯ ಅಗತ್ಯ. ಹಾಗೆಯೇ ಪ್ರಾದೇಶಿಕ ಭಾಷೆಯ ಶಾಸನಗಳಲ್ಲೂ ಭಾಷಾ ಪ್ರೌಢಿಮೆ ಇದ್ದೇ ಇರುತ್ತದೆ. ಆಯಾ ಕಾಲದ ಭಾಷೆಯ ಸ್ವರೂಪ ಶಾಸನ ಪಾಠಗಳ ಮೇಲೂ ಪ್ರಭಾವ ಬೀರಿರುವುದು ಸಹಜ. ಶಾಸನ ಪಾಠವನ್ನು ಸಿದ್ಧಪಡಿಸುತ್ತಿದ್ದವರಲ್ಲಿ ಬಹುತೇಕ ವ್ಯಕ್ತಿಗಳು ವಿದ್ವಾಂಸರೇ ಆಗಿರುತ್ತಿದ್ದ ಕಾರಣದಿಂದ ಶಾಸನ ಪಾಠ ಕಾವ್ಯಾತ್ಮಕವಾಗಿಯೇ ಇರುತ್ತಿದ್ದವು. ಕೆಲವು ಹೆಸರಾಂತ ಕವಿಗಳೂ ಶಾಸನಗಳನ್ನು ರಚಿಸಿರುವ ಉದಾಹರಣೆಗಳುಂಟು. ಸಾಮಾನ್ಯ ಜನತೆಗೆ ಸಂಬಂಧಿಸಿದ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳ ಮೇಲಿನ ಶಾಸನಗಳು ಮಾತ್ರ ಗದ್ಯಾತ್ಮಕವಾಗಿರುವ ಸಂಭವ ಹೆಚ್ಚು. ಹಳೇಬೀಡಿನ ಕುವರಲಕ್ಷ್ಮನ ವೀರಗಲ್ಲು ಶಾಸನ, ಬೆಳತೂರಿನ ದೇಕಬ್ಬೆಯ ಮಾಸ್ತಿಗಲ್ಲು ಶಾಸನಗಳು ಗದ್ಯ ಪದ್ಯ ಮಿಶ್ರವಾಗಿಯೇ ಇವೆ. ರಾಜರ, ಅಧಿಕಾರಿಗಳ ಮತ್ತು ಶ್ರೀಮಂತರ ಶಾಸನಗಳು ಕಾವ್ಯಮಯವಾಗಿಯೇ ಇರುತ್ತವೆ. ಅರೇಬಿಕ್ ಭಾಷೆಯ ಶಾಸನಗಳು ಸಾಮಾನ್ಯವಾಗಿ ಗದ್ಯಾತ್ಮಕವಾಗಿಯೇ ಇರುತ್ತವೆ. 16ನೆಯ ಶತಮಾನದ ಎರಡನೆಯ ದಶಕ ಮತ್ತು ಅನಂತರದ ಕೆಲವು ಅರೇಬಿಕ್ ಶಾಸನಗಳು ಮಾತ್ರ ಪದ್ಯಾತ್ಮಕವಾಗಿವೆ. ಅರೇಬಿಕ್ ಶಾಸನಗಳ ಲಿಪಿ ಕಲಾತ್ಮಕವಾಗಿರುತ್ತವೆ. ಇವನ್ನು ಕೂಫಿಕ್, ನಸ್ತಾಲಿಕ್, ನಷ್ಕ್, ತುಲ್ತ್ ಇತ್ಯಾದಿಯಾಗಿ **(ನೋಡಿ-ಲಿಪಿಗಳು)** ವಿಂಗಡಿಸಲಾಗಿದೆ. ಈ ಲಿಪಿಗಳನ್ನು ಬಾಣ, ಪಕ್ಷಿ, ಪ್ರಾಣಿ, ಗಿಡ, ಬಳ್ಳಿ ಇತ್ಯಾದಿಗಳನ್ನು ಬಳಸಿ ಅಲಂಕಾರಯುತವಾಗಿ ಬರೆಯಲಾಗಿರುತ್ತದೆ. ಈ ಲಿಪಿಗಳಲ್ಲಿ ಕೆಲವು ನಿರ್ದಿಷ್ಟ ಸಂಕೇತಗಳು ಇರುತ್ತವೆ.

ಆರಂಭದ ಶಾಸನಗಳಲ್ಲಿ ಶಾಸನವನ್ನು ದಾಖಲಿಸಿದ ಅಥವಾ ದಾನ ನೀಡಲಾದ ಕಾಲವನ್ನು ಉಲ್ಲೇಖಿಸುವ ಪದ್ಧತಿ ಇರಲಿಲ್ಲ. ದಾನ ನೀಡಿದವನು ರಾಜನಾಗಿದ್ದರೆ, ಅವನ ಆಳಿಕೆಯ ವರ್ಷವನ್ನು ಸೂಚಿಸಿ, ಕಾಲದ ಉಲ್ಲೇಖ ಮಾಡಲಾಗುತ್ತಿತ್ತು. ಕ್ರಮೇಣ ಸಂವತ್ಸರ, ಋತು, ಮಾಸ, ಪಕ್ಷ, ತಿಥಿ, ವಾರ ಇತ್ಯಾದಿ ಎಲ್ಲ ವಿವರಗಳನ್ನೂ ಶಾಸನಗಳು ಉಲ್ಲೇಖಿಸ ತೊಡಗಿದವು. 10ನೆಯ ಶತಮಾನದ ಅನಂತರದ ಶಾಸನಗಳಲ್ಲಿ ಕಾಲದ ವಿವರಗಳು ಸ್ಪಷ್ಟವಾಗಿವೆ. ತಮಿಳುನಾಡಿನ ಶಾಸನಗಳಲ್ಲಿ ಅರಸನ ಆಳಿಕೆಯ ವರ್ಷ/ದಿನವನ್ನೂ ತಿಳಿಸುವ ಪ್ರಯತ್ನ ನಡೆದಿದೆ. ಕಾಲದ ನಿರ್ದೇಶನದಲ್ಲಿ ಹಲವು ಶಕ ವರ್ಷಗಳನ್ನು ಬಳಸಲಾಗಿದೆ. ಬಳಕೆಯಲ್ಲಿರುವ ಅತ್ಯಂತ ಪ್ರಾಚೀನ ಶಕವರ್ಷ ಎಂದರೆ ವಿಕ್ರಮ ಶಕೆ. ಇದರ ಆರಂಭ ಪ್ರ.ಶ.ಪೂ. 58. ಶಕ ವರ್ಷದ ಕಾಲಗಣನೆಯು 78 ರಿಂದ ಆರಂಭವಾಗುತ್ತದೆ. 13ನೆಯ ಶತಮಾನದ ಅನಂತರ ಈ ಶಕ ವರ್ಷವೇ ಶಾಲೀವಾಹನ ಶಕೆ ಎನಿಸಿಕೊಂಡಿತು. ಇವುಗಳಲ್ಲದೆ ಸೃಷ್ಟಿ ಆರಂಭಗೊಂಡಿತು ಎಂದು ತಿಳಿಯಲಾದ ಸೃಷ್ಟಿ ಗತಾಬ್ದ ವರ್ಷ 19,55,58,83,101, ಪ್ರ.ಶ.ಪೂ.3102 ರಿಂದ ಆರಂಭಗೊಂಡಿದೆ ಎಂದು ತಿಳಿಯಲಾದ ಮಹಾಭಾರತ ಯುದ್ಧ ವರ್ಷ/ಕಲಿಯುಗ ವರ್ಷ, 248ರಿಂದ ಆರಂಭಗೊಂಡಿದೆ ಎಂದು ತಿಳಿಯಲಾದ ಕಳಚೂರಿ ಸಂವತ್ಸರ, 319 ರಿಂದ ಆರಂಭಗೊಂಡಿದೆ ಎಂದು ಭಾವಿಸಲಾದ ಗುಪ್ತ ಸಂವತ್ಸರ, 1075ರಲ್ಲಿ ಕಲ್ಯಾಣ ಚಾಳುಕ್ಯ ವಂಶದ ತ್ರಿಭುವನಮಲ್ಲ ವಿಕ್ರಮಾದಿತ್ಯನ ಪಟ್ಟಾಭಿಷೇಕದ ಸಂದರ್ಭದಲ್ಲಿ ಆರಂಭಗೊಂಡ ಚಾಳುಕ್ಯ ವಿಕ್ರಮ ವರ್ಷ ಇತ್ಯಾದಿಗಳು ಕಾಲಗಣನೆಗೆ ಬಳಸುವ ಸಂವತ್ಸರಗಳು ಎಂದು ತಿಳಿಯಲಾಗಿದೆ. ಹೀಗೆ ಒಬ್ಬ ರಾಜನ ಹೆಸರಿನಲ್ಲಿ ಬಳಕೆಗೆ ಬಂದ ಕಾಲ ಗಣನೆ ಅವರ ಆಳಿಕೆ ಮುಗಿದೊಡನೆಯೇ ಮರೆಯಾಗಿವೆ. ಆದರೆ ಶಕವರ್ಷದ ಬಳಕೆ ಮಾತ್ರ ಬಹು ದೀರ್ಘ ಕಾಲದಿಂದ ಉಳಿದಿದೆ. ಬಾದಾಮಿಯ ಬಂಡೆಗಲ್ಲು ಶಾಸನದಲ್ಲೇ ಶಕ ವರ್ಷದ ಉಲ್ಲೇಖ ಇದೆ. ಕಲಿಯುಗ ವರ್ಷದ ಉಲ್ಲೇಖ ಐಹೊಳೆಯ ಪುಲಕೇಶಿಯ ಶಾಸನದಲ್ಲಿದೆ. ಈ ಕಲಿಯುಗ ವರ್ಷದ ಬಳಕೆಯನ್ನು ಅಪರೂಪವಾಗಿ ಬಳಸಲಾಗಿದೆ. ಕೊಡಗಿನ ಅರಸರ ಶಾಸನಗಳಲ್ಲಿ ಕಲಿದಿನಗಳನ್ನೂ ನಮೂದಿಸಿರುವುದುಂಟು. ಮಹಮದೀಯ ಶಾಸನಗಳಲ್ಲಿ ಹಿಜರಿ ಶಕೆಯ ಗಣನೆ ಇದೆ. ಅಕ್ಬರ್ ತನ್ನ ಕಾಲದಲ್ಲಿ ಇಲಾಹಿ ಹಾಗೂ ಫಸ್ಲಿ ಶಕೆಯನ್ನು ಆರಂಭಿಸಿದ. ಬಿಜಾಪುರದ ಆದಿಲ್‌ಶಾಹಿಗಳು ಶುಹುಲ್ ಶಕೆಯನ್ನೂ ಟಿಪ್ಪುಸುಲ್ತಾನನು ಮೌಲೂದಿ ಶಕೆಯನ್ನೂ ಬಳಕೆಗೆ ತಂದಿದ್ದರು. ವರ್ಷಗಳ ಸೂಚನೆಗೆ ಸಂಖ್ಯೆಯ ಬದಲು ಸಂಕೇತಗಳನ್ನು ಬಳಸುತ್ತಿದ್ದ ಸಂದರ್ಭಗಳೂ ಇದ್ದವು. ಶೂನ್ಯ, ಗಗನ, ಅಂಬರ ಇತ್ಯಾದಿಗಳು ಶೂನ್ಯ, ಅಂದರೆ ಸೊನ್ನೆಯ ಸೂಚನೆ. ಆದಿ, ಇಂದು, ಶಶಿ, ಚಂದ್ರ, ಭೂಮಿ ಇತ್ಯಾದಿಗಳು ಒಂದರ ಸಂಕೇತ. ಹೀಗೆ ಸೊನ್ನೆಯಿಂದ ಒಂಬತ್ತರವರೆಗೆ ಸಂಖ್ಯೆಗಳ ಸೂಚನೆಗೆ ನಿರ್ದಿಷ್ಟ ಸಂಕೇತಗಳನ್ನು ಬಳಸಲಾಗಿದೆ. ಸಂಖ್ಯೆಗಳ ಸೂಚನೆಗೆ ಕಟಪಯಾದಿ ಸೂತ್ರವನ್ನೂ ಕೆಲವು ಸಂದರ್ಭಗಳಲ್ಲಿ ಬಳಸಲಾಗಿದೆ. ಕ, ಚ, ಟ ವರ್ಗಗಳಲ್ಲಿ ತಲಾ ಐದು ಅಕ್ಷರಗಳಿರುತ್ತವೆ. ಇವು ಕ್ರಮವಾಗಿ ಒಂದರಿಂದ ಐದರ ವರೆಗಿನ ಸಂಖ್ಯೆಗಳನ್ನು ಸೂಚಿಸುತ್ತವೆ. ಯ ದಿಂದ ಆರಂಭವಾಗಿ ಳ ವರೆಗಿನ ಹತ್ತು ಅಕ್ಷರಗಳು ಒಂದರಿಂದ ಹತ್ತನ್ನು ಸೂಚಿಸುತ್ತವೆ, ಹೀಗೆ ಸೂಚಿತವಾದ ಸಂಖ್ಯೆಗಳನ್ನು ಅಂಕಾನಾಂ ವಾಮತೋ ಗತಿಃ ಎಂಬ ಸೂತ್ರದ ಪ್ರಕಾರ ಎಡದಿಂದ ಗಣನೆಗೆ ತೆಗೆದುಕೊಳ್ಳಬೇಕು. ಉದಾಹರಣೆಗೆ ಕಾಲವನ್ನು ಕಟಪಯಾದಿ ಪದ್ಧತಿಯಲ್ಲಿ ಸೇತುವಂದ್ಯ ಎಂದು ಸೂಚಿಸಿದಾಗ ಅದು 7841 ಆಗುತ್ತದೆ. ಅದನ್ನು ಎಡದಿಂದ ಗಣನೆಗೆ ತೆಗೆದುಕೊಂಡು, ಅಂದರೆ 1487 ಎಂದು ಗಣನೆಗೆ ತೆಗೆದುಕೊಳ್ಳಬೇಕು. ಅಂತೆಯೇ ಶಕೇ ಚಂದ್ರರಸಾಮರೇಂದ್ರ ಗಣಿತೇ ಎಂದರೆ, 1641 (ಚಂದ್ರ=1, ರಸ=6, ಅಮರ=4, ಇಂದ್ರ =1). ಇದನ್ನು ಹಿಂದು ಮುಂದಾಗಿ (ಅಂಕಾನಾಂ ವಾಮತೋಗತಿಃ) ಓದಿದಾಗ 1461. ಶಾಸನ ಸೂಚಿಸುತ್ತಿರುವ ಶಕವರ್ಷ 1461. ಇದು 1539ಕ್ಕೆ ಸರಿಹೊಂದುತ್ತದೆ. (ಜಿ.ಎಚ್.ಎಸ್.)

**ಪ್ರಾಕೃತ ಶಾಸನಗಳು:** ಭಾರತದಲ್ಲಿ ಸಧ್ಯ ಉಪಲಬ್ಧವಿರುವ ಶಾಸನಗಳಲ್ಲಿ ಅತ್ಯಂತ ಪ್ರಾಚೀನ ಶಾಸನಗಳೆಂದರೆ ಪ್ರಾಕೃತ ಭಾಷೆಯವು. ಅನಂತರದಲ್ಲಿ ಬರೆಯಲ್ಪಟ್ಟಂತಹವು ಸಂಸ್ಕೃತದವು. ಪಿಪ್ರಹ್ವ ಹಾಗೂ ಬಡ್ಲಿ(ಬಡಲಿ) ಶಾಸನಗಳು ಅಶೋಕನ (ಪ್ರ.ಶ.ಪೂ.272–232) ಶಾಸನಗಳಿಗಿಂತ ಪ್ರಾಚೀನ ದಾಖಲೆಗಳೆಂಬ ಅಭಿಪ್ರಾಯವಿದೆ. ಪಿಪ್ರಹ್ವ ಶಾಸನದಲ್ಲಿ ಭಗವಾನ್ ಬುದ್ಧನ ಅಸ್ಥಿಗಳನ್ನು ಇಟ್ಟ ಬಗ್ಗೆ ಬರೆದಿದ್ದು ಇದರ ಕಾಲ ಪ್ರ.ಶ.ಪೂ.483 ಎನ್ನಲಾಗುತ್ತದೆ. ಬಡ್ಲಿ ಶಾಸನವನ್ನು ಭಗವಾನ್ ಮಹಾವೀರ ನಿರ್ವಾಣ ಹೊಂದಿ 84 ವರ್ಷಗಳು ಕಳೆದ ಮೇಲೆ ಪ್ರ.ಶ.ಪೂ.443ರಲ್ಲಿ ಬರೆಯಲಾಗಿದೆ. ಹಲವು ರಾಜಮನೆತನಗಳ ನಾಣ್ಯಗಳ ಮೇಲೆ ರಾಜನ ಹೆಸರು ಇತ್ಯಾದಿಗಳು ಪ್ರಾಕೃತದಲ್ಲಿವೆ. ಮಧ್ಯಪ್ರದೇಶದ ಸಾಗರ ಜಿಲ್ಲೆಯ ಏರಣ್ ಎಂಬಲ್ಲಿ ದೊರೆತಿರುವ ಪ್ರ.ಶ.ಪೂ.ಸು.5ನೆಯ ಶತಮಾನದ ನಾಣ್ಯದ ಮೇಲೆ ರಾಞೋಧಮಪಾಲಸ ಎಂದಿದೆ. ಅಶೋಕಚಕ್ರವರ್ತಿ ಭಾರತದ ತುಂಬ-ಒಳನಾಡಿನಲ್ಲಿ ಬರೆಯಿಸಿರುವ ಎಲ್ಲ ಶಾಸನಗಳೂ ಸಾಮಾನ್ಯ ಜನರಲ್ಲಿ ಬಳಕೆಯಲ್ಲಿದ್ದ ಪ್ರಾಕೃತ ಭಾಷೆಯವಾಗಿವೆ. ಆದರೆ ಭಾರತದ ವಾಯವ್ಯಗಡಿಯಲ್ಲಿ ಆ ಧರ್ಮಶಾಸನಗಳನ್ನು ಅರಾಮೇಯಿಕ್ ಹಾಗೂ ಗ್ರೀಕ್ ಭಾಷೆಗಳಲ್ಲಿಯೂ ಬರೆಯಿಸಿದ್ದಾನೆ. ಭಾರತದ ಒಳಪ್ರಾಂತಗಳಲ್ಲಿರುವ ಅಶೋಕನ ಪ್ರಾಕೃತ ಶಾಸನಗಳೆಲ್ಲವೂ ಅಲ್ಪಸ್ವಲ್ಪ ಪ್ರಾದೇಶಿಕ ಭೇದಗಳನ್ನು ಅಲ್ಲಿ ಇಲ್ಲಿ ಹೊಂದಿದ್ದರೂ ಅವುಗಳ ಮುಖ್ಯ ಉದ್ದೇಶ, ಒಕ್ಕಣೆ ಎಲ್ಲವೂ ಒಂದೇ.

ಹಿರಿಯರಲ್ಲಿ ಪೂಜ್ಯಭಾವ, ಪ್ರಾಣಿದಯೆ, ಮನುಷ್ಯರಲ್ಲಿ ಸತ್ಯನಿಷ್ಠೆ ಮತ್ತು ಸಹಾನುಭೂತಿ ಅಂತೆಯೆ ಅಸತ್ಯ, ಅಸಹನೆ, ಹಿಂಸೆ ಇತ್ಯಾದಿಗಳಲ್ಲಿ ಮನುಷ್ಯನ ಮನಸ್ಸು ಬುದ್ಧಿಗಳು ವಿವೇಕದಿಂದ ವರ್ತಿಸುವಂತೆ, ವ್ಯವಹರಿಸುವಂತೆ ಮಾಡಲು ಈ ಶಾಸನಗಳು ಮಾರ್ಗದರ್ಶಿಗಳಾಗಿವೆ. ಈ ಶಾಸನಗಳಲ್ಲಿ 13ನೆಯ ಪ್ರಸ್ತರಶಾಸನ ಇತಿಹಾಸದಲ್ಲೇ ಒಂದು ಶ್ರೇಷ್ಠ ಬರೆಹ. ಇದರಲ್ಲಿ ಕಳಿಂಗ ಯುದ್ಧದ ಅನಂತರದ ಪರಿಣಾಮ ಮತ್ತು ವಸ್ತುಸ್ಥಿತಿಗಳು ನೇರ ಮತ್ತು ಸ್ಪಷ್ಟ ಮಾತುಗಳಲ್ಲಿವೆ.

ದೇವನಾಂಪ್ರಿಯ ಅಶೋಕ ದೇಶವಿದೇಶಗಳಲ್ಲಿ ದೂತರನ್ನು ಕಳುಹಿಸಿ ಬೌದ್ಧ ಧರ್ಮವನ್ನು ಪ್ರಚಾರಮಾಡಿದ್ದಾನೆ–ದೂತರು ದೇವನಾಂಪ್ರಿಯನ ಧರ್ಮವೃತ್ತ–ವಿಧಾನ–ಅನುಶಾಸ್ತಿಗಳನ್ನು ಹೋದ ಹೋದ ಕಡೆಗಳಲ್ಲಿ ಪ್ರಚಾರಮಾಡಿದ್ದಾರೆ. ಅಶೋಕನ ಶಾಸನಗಳ ಕಾಲಕ್ಕಾಗಲೇ ಪ್ರಾಕೃತ ಭಾಷೆ ಸಾಕಷ್ಟು ಬೆಳೆದಿತ್ತು.

ಆಧುನಿಕ ಕಾಲದ ವಿದ್ವಾಂಸರು ಅಧ್ಯಯನದ ಸೌಲಭ್ಯಕ್ಕಾಗಿ ಅವನ್ನು ವಿವಿಧ ಶೀರ್ಷಿಕೆಗಳಲ್ಲಿ ಹೀಗೆ ಗುರುತಿಸಿದ್ದಾರೆ: ಪ್ರಸ್ತರ ಶಾಸನಗಳು; ಶಿಲಾಶಾಸನಗಳು; ಶಿಲಾಲಿಪಿಗಳು; ಲಘು ಪ್ರಸ್ತರ ಶಾಸನಗಳು; ಲಘು ಶಿಲಾಲಿಪಿಗಳು; ಬಿಡಿಶಾಸನಗಳು; ಸ್ತಂಭಶಾಸನಗಳು; ಗುಹಾ ಅಥವಾ ಗವಿಶಾಸನಗಳು; ಅರೇಮಿಕ್ ಹಾಗೂ ಗ್ರೀಕ್ ಶಾಸನಗಳು.

1. ಪ್ರಸ್ತರಶಾಸನಗಳು: ಇವು 14 ಶಾಸನಗಳ ಒಂದು ಗುಚ್ಛ ಅಥವಾ ಮಾಲಿಕೆ. ಅಲ್ಪಸ್ವಲ್ಪ ಪಾಠಾಂತರಗಳೊಂದಿಗೆ ದೇಶದ 9 ಸ್ಥಳಗಳಲ್ಲಿ ದೊರೆತಿವೆ.

2. ಲಘು ಪ್ರಸ್ತರ ಶಾಸನಗಳು: ಇವುಗಳಲ್ಲಿ ಒಂದು ಇಲ್ಲವೇ ಎರಡು ಶಾಸನಗಳಿವೆ. ದೇಶದ ವಿವಿಧ 16 ಪ್ರದೇಶಗಳಲ್ಲಿ (ಚಿತ್ರದುರ್ಗದಿಂದ ದಕ್ಷಿಣ ಭಾರತ ಬಿಟ್ಟು) ಇವುಗಳನ್ನು ಶೋಧಿಸಲಾಗಿದೆ. ಇತ್ತೀಚೆಗೆ ವಾರಾಣಸಿಯ ಆಗ್ನೇಯದ ಘುರಹುಪುರದಲ್ಲಿ ಲಘುಪ್ರಸ್ತರ ಶಾಸನವೊಂದನ್ನು ಶೋಧಿಸಲಾಗಿದೆ. ಇದರಲ್ಲಿ ಬ್ರಹ್ಮಗಿರಿ ಶಾಸನದಲ್ಲಿರುವಂತೆ ಅಶೋಕನ 256 ದಿನಗಳ ಧರ್ಮಯಾತ್ರೆಯನ್ನು ಉಲ್ಲೇಖಿಸಿರುವುದು ಗಮನಾರ್ಹ. ಮೌರ್ಯಚಕ್ರವರ್ತಿ ಅಶೋಕನ (**ನೋಡಿ**) ಒಂದು ಕಿರುಬಂಡೆಶಾಸನ ಇಲ್ಲಿಯ ಕೈಮೂರ್ ಪರ್ವತ ಶ್ರೇಣಿಯಲ್ಲಿ ಅಕ್ಟೋಬರ್ 2008ರಲ್ಲಿ ಪತ್ತೆಯಾಗಿದೆ. ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿಯ 9 ಸಾಲಿನ ಈ ಶಾಸನ (2.85x2.35ಮೀ) ಅಶೋಕನನ್ನು ದೇವಾನಂಪಿಯನೆಂದು ಸಂಬೋಧಿಸಿ ಇವನ 256 ದಿನಗಳ ಧರ್ಮಯಾತ್ರೆಯ ಬಗ್ಗೆ ಉಲ್ಲೇಖಿಸಿದೆ.

ಮಸ್ಕಿ, ಗುಜರ್ರಾ, ಉದೇಗೊಳಂ ಹಾಗೂ ನಿಟ್ಟೂರು ಶಾಸನಗಳಲ್ಲಿ ದೇವಾನಂಪ್ರಿಯ ಬಿರುದಿನ ಜೊತೆಗೆ ಅಶೋಕ ಎಂಬ ಅಂಕಿತ ನಾಮವೂ ಇರುವುದರಿಂದ ಇವಕ್ಕೆ ವಿಶೇಷ ಮಹತ್ತ್ವ.

3. ಸ್ತಂಭ ಶಾಸನಗಳು: ಅಲಹಾಬಾದ್ ಕಂಬದ ಮೇಲೆ ಎರಡು ಬಿಡಿಸ್ತಂಭ ಶಾಸನಗಳಿದ್ದು ಅದರಲ್ಲಿ ಎರಡನೆಯದನ್ನು ರಾಣಿಯ ಶಾಸನವೆಂದು ಹೇಳಲಾಗುತ್ತದೆ. ಅಷ್ಟಾಗಿ ಪ್ರಚಾರದಲ್ಲಿಲ್ಲದೆ ಇಲ್ಲಿಯ ವಿಷಯ ಹೀಗಿದೆ:

ದೇವಾನಂಪಿಯಷಾ(ಸ?) ವಚನೇನಾ ಸವತ ಮಹಾಮಾತಾ
ವತವಿಯಾ ಏ ಹೇತಾ ದುತಿಯಾಯೇದೇವಿಯೇ ದಾನೇ
ಅಂಬಾವಡಿಕಾ ವ ಆಲಭೇವ ದಾನಗೇಹ ವ ಏವಾಪಿ ಅಂನೇ
ಕೇಛಿಗನೀಯತಿ ತಾಯೇ ದೇವಿಯೇಷೇನಾನಿ ಹೇವಂ ಗನತವಿಯೇ
ದುತಿಯಾಯೇ ದೇವಿಯೇತಿ ತೀವಲ ಮಾತು ಕಾಲುವಾಕಿಯೇ

(ದೇವಾನಾಂಪ್ರಿಯನ ವಚನದಂತೆ ಎಲ್ಲೆಡೆಯ ಮಹಾಮಾತ್ರರಿಗೆ ಹೀಗೆ ಹೇಳತಕ್ಕದು: ಎರಡನೆಯ ದೇವಿಯಿಂದ ದಾನಮಾಡಲ್ಪಟ್ಟ ಮಾವಿನ ತೋಪುಗಳು (ಅಂಬಾವಡಿಕಾ<ಆಂಬ್ರ<ಆಮ್ರ+ವಾಟಿಕಾ), ಆರಾಮಗಳು, ದಾನಗೃಹಗಳು ಮತ್ತು ಇಂತಹ ಇತರ ದಾನಗಳು ಎಲ್ಲವನ್ನೂ ಆ ದೇವಿಯ ಹೆಸರಿನಲ್ಲಿ ಗಣಿಸತಕ್ಕದ್ದು. ತೀವಲನ ತಾಯಿಯಾದ ಆ ಕಾರು(ಕಾಲು)ವಾಕಿ ಎಂಬ ಹೆಸರಿನ ದ್ವಿತೀಯದೇವಿಯ ಕೋರಿಕೆಯಿದು).

ಮಹಾರಾಜ ಅಶೋಕನ ಅನಂತರ ಅಷ್ಟೇ ಪ್ರಸಿದ್ಧಿಯನ್ನು ಪಡೆದ ವ್ಯಕ್ತಿ ಎಂದರೆ ಸಾಮ್ರಾಟ ಖಾರವೇಲ (ಪ್ರಶ.ಪೂ.1ನೆಯ ಶತಮಾನ). ಇವನು ಜೈನಧರ್ಮದ ಅನುಯಾಯಿ. ಇವನ ಹಾತಿಗುಂಫ ಶಾಸನದ ಸಾರಾಂಶ ಹೀಗಿದೆ: ಅತ್ತ ಉತ್ತರಾಪಥದಲ್ಲಿ ಮಗಧರನ್ನು ಸೋಲಿಸಿದನು, ಇತ್ತ ದಕ್ಷಿಣಾಪಥದಲ್ಲಿ ತಮಿಳುನಾಡನ್ನು ಗೆದ್ದನು. ಪಾಂಡ್ಯರಾಜನು ಅನೇಕ ಮುತ್ತು, ರತ್ನ ಮಣಿಕನಕಾದಿ ಸಂಪತ್ತನ್ನು ಸಹಸ್ರಾರು ಸಂಖ್ಯೆಯಲ್ಲಿ ಕಾಣಿಕೆಯಾಗಿ ತಂದು ಆತನಿಗೆ ಅರ್ಪಿಸಿದನಂತೆ. ಪೂರ್ವಸಮುದ್ರದ ಬಳಿಯಲ್ಲಿದ್ದ ಆತ ಪಶ್ಚಿಮದಲ್ಲಿ ಕನ್ಹಬೆಣ್ಣಾ (<ಕಣ್ಣಬೆಣ್ಣಾ=ಕೃಷ್ಣವೇಣ್ಣಾ) ನದಿಯ ತಟದಲ್ಲಿದ್ದ ಸಾತಕರ್ಣಿಗಳನ್ನು ಲೆಕ್ಕಿಸಲಿಲ್ಲ. ಪ್ರಜೆಗಳ ಹಿತಾಹಿತವನ್ನು ತಿಳಿದು ವರ್ತಿಸಿದ. ಕಲೆಗಳಿಗೆ ತಾನೂ ಕಲಿಯುವುದರೊಂದಿಗೆ ಉತ್ತೇಜನ ನೀಡಿದ. ರಾಷ್ಟ್ರಾಭಿವೃದ್ಧಿಯನ್ನು ಸಾಧಿಸಿದ. ಸಕಲ ಧರ್ಮೀಯರನ್ನು ಸಮಾನ ದೃಷ್ಟಿಯಿಂದ ಕಂಡು ನಡೆಯಿಸಿಕೊಂಡು ರಾಜಸೂಯಯಜ್ಞವನ್ನು ಮಾಡಿದ; ಬ್ರಾಹ್ಮಣರಿಗೆ ದಾನಧರ್ಮಗಳನ್ನು ನೀಡಿದ; ಮತ್ತೆ ಜಿನಾಲಯವನ್ನು (ಅರ್ಹಂತ ಪ್ರಸಾದ) ನಭಕ್ಕೆ ಮುಟ್ಟುವಂತೆ ವೈಭವೋಪೇತವಾಗಿ ಕಟ್ಟಿಸಿದ. ಅಂತೆಯೆ ರಾಜನಿವಾಸ (ಅರಮನೆ) ಕೂಡ ಕಟ್ಟಿಸಿದ. ನಗರಕ್ಕೆ ನೀರು ಸರಬರಾಜು ಆಗುವಂತೆ ಪೂರ್ವದಲ್ಲಿ ನಂದರಾಜನು ಮಾಡಿಸಿದ ತನಸುಲಿಯಿಂದ ಕಾಲುವೆಯನ್ನು ತೋಡಿಸಿದ. ಈ ಎಲ್ಲ ಸಂಗತಿಗಳು ಪ್ರಾಕೃತಶಾಸನದಲ್ಲಿದೆ.

1–4ನೆಯ ಶತಮಾನದವರೆಗೆ ವಿಶೇಷವಾಗಿ ಜನರ ಭಾಷೆ, ಆಡಳಿತಭಾಷೆ, ಪ್ರಾಕೃತವೇ ಆಗಿತ್ತು. ಕ್ಷತ್ರಪರು, ಸಾತವಾಹನರು, ಪಲ್ಲವರು, ಇಕ್ಷ್ವಾಕುಗಳ(?) ಕಾಲದ ಶಾಸನಗಳು ಪ್ರಾಕೃತದಲ್ಲೇ ಇವೆ. ಈ ಕಾಲದಲ್ಲಿ ಶ್ರೀ ಸಾಮಾನ್ಯರು, ಶ್ರೀಮಂತರು, ವ್ಯಾಪಾರಿಗಳು–ಶಾಸನಹಾಕಿಸಲು ಬಯಸಿದ ಜನ ಪ್ರಾಕೃತದಲ್ಲೇ ಶಾಸನಗಳನ್ನು ಬರೆಯಿಸಿದರು. ಕೃಷ್ಣಾ ಹಾಗೂ ಭೀಮಾ ತೀರಗಳಲ್ಲಿ ಉಪಲಬ್ಧವಾದ ಅನೇಕ ಶಾಸನಗಳು ವಿಶೇಷವಾಗಿ ಬೌದ್ಧ ಧರ್ಮಕ್ಕೆ –ಬುದ್ಧನ ಚರಿತ್ರೆಗೆ ಸಂಬಂಧಿಸಿವೆ. ಕರ್ನಾಟಕದ ಬನವಾಸಿ ಹಾಗೂ ಸನ್ನತಿ ಬೌದ್ಧ ಅವಶೇಷಗಳನ್ನು ಹೊಂದಿವೆ. ಇಲ್ಲಿ ಸ್ತೂಪಗಳು, ಶಾಸನಗಳು ದೊರೆಕಿದ್ದು ಇತಿಹಾಸದ ಮೇಲೆ ಹೊಸ ಬೆಳಕನ್ನು ಬೀರಿವೆ. ಇಂದಿನ ಮಹಾರಾಷ್ಟ್ರದ ಪಶ್ಚಿಮ ಭಾಗವನ್ನು ಕುರಿತಂತೆ ಎಂ.ಜಿ.ದೀಕ್ಷಿತರ ಅಪ್ರಕಟಿತ ಮಹಾಪ್ರಬಂಧದಲ್ಲಿ (ಬುದ್ಧಿಸ್ಟ್ ಸೆಟ್ಲ್‌ಮೆಂಟ್ಸ್ ಇನ್ ವೆಸ್ಟರ್ನ್ ಇಂಡಿಯ) ಈ ಪ್ರದೇಶಗಳ ಬಹಳಷ್ಟು ಪ್ರಾಕೃತ ಶಾಸನಗಳನ್ನು ಪರಿಶೀಲಿಸಲಾಗಿದೆ. ಕರ್ನಾಟಕದ ಸನ್ನತಿಯಲ್ಲಿ ಹಾಗೂ ಆ ಕ್ಷೇತ್ರದ ಆಸುಪಾಸಿನ ಭೂಪ್ರದೇಶದಲ್ಲಿ ಸು.350ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಸನ್ನತಿಯನ್ನು ಕುರಿತಂತೆ ಅರ್ಲಿ ಬ್ರಾಹ್ಮಿ ಇನ್ಸ್‌ಕ್ರಿಪ್ಷನ್ಸ್ ಫ್ರಂ ಸನ್ನತಿ ಎಂಬ ಇವರ ಕೃತಿಯಲ್ಲಿ ಐ.ಕೆ. ಶರ್ಮ ಹಾಗೂ ಜೆ. ವರಪ್ರಸಾದರಾವ್ 200ಕ್ಕೂ ಹೆಚ್ಚು ಸನ್ನತಿ ಪ್ರದೇಶದ ಶಾಸನಗಳನ್ನು ಅಧ್ಯಯನ ಮಾಡಿದ್ದಾರೆ.

ಹೊಯ್ಸಳರ ತಾಮ್ರಶಾಸನ

ರೇವಾ(ನರ್ಮದಾ)ತಟದಿಂದ ರಾಮೇಶ್ವರದವರೆಗೆ ದಕ್ಷಿಣಾಪಥದ ವ್ಯಾಪ್ತಿ. ಸಾತವಾಹನರ ಸಾಮಂತರು, ಅನಂತರ ಸ್ವತಂತ್ರರಾದ ಪಲ್ಲವರ ಆರಂಭದ ಶಾಸನಗಳು ಪ್ರಾಕೃತದಲ್ಲಿವೆ. ಪ್ರತಿಷ್ಠಾನ (ಪೈಠಣ) ಮುಖ್ಯ ರಾಜಧಾನಿಯಾಗಿದ್ದು ಬನವಾಸಿ ಹಾಗೂ ಕಂಚಿ ಇತ್ಯಾದಿಗಳು ಉಪರಾಜಧಾನಿಗಳಾಗಿದ್ದವು. ಸಾತವಾಹನರ ಸಾಮ್ರಾಜ್ಯ ಹಾಳಾಗಿ ಸಾಮಂತರು ಸ್ವತಂತ್ರರಾದಾಗ ಅವರಿದ್ದ ಊರುಗಳೂ (ಉಪರಾಜಧಾನಿಗಳು) ರಾಜಧಾನಿಗಳೆಂದೇ ಪರಿಗಣಿಸಲ್ಪಟ್ಟವು. ಸಾತವಾಹನರ ಕಾಲದಲ್ಲಿ ಬನವಾಸಿ, ಉಪರಾಜಧಾನಿಯಾಗಿದ್ದು ಪಲ್ಲವರು ಸ್ವತಂತ್ರರಾದಾಗ ಅವರ ರಾಜಧಾನಿಯಾಯಿತು. ಅದನ್ನು ವೈಜಯಂತಿ, ಸಂಜಯಂತ, ಜಯಂತೀಪುರ ಇತ್ಯಾದಿಗಳ ಹಾಗೆ ವೈಜಕೇಯಿ ಎಂದು ಹಿರೆಹಡಗಲಿಯ ತಾಮ್ರದ ಪ್ರಾಕೃತ ಶಾಸನದಲ್ಲಿ ಕರೆದುದೂ ಸ್ಪಷ್ಟವಿದೆ. ಪಲ್ಲವರಿಗಿಂತ ಮುಂಚೆ ಸಾತವಾಹನ ದೊರೆ ಶಿವಶ್ರೀ(ಸಿವಸಿರಿ) ಪುಳುಮಾವಿಗೆ ಅದು ಉಪರಾಜಧಾನಿಯಾಗಿತ್ತು. ಅಲ್ಲಿ ಆತನ ರಾಣಿ ಮಹಾದೇವಿ ಇದ್ದಳು. ಆಕೆ ನಿಧನ ಹೊಂದಿದ ಅನಂತರ ಅವಳ ಸ್ಮರಣಾರ್ಥವಾಗಿ ಅಲ್ಲಿ ಒಂದು ಶಾಸನವನ್ನು ಬರೆಯಿಸಲಾಗಿತ್ತು. ಇದರ ಪಾಠ ಹೀಗಿದೆ: ಸಿಧಂ ರಾಞೋವಾಸಿಠೀಪುತಸ ಸಿವಸಿರಿ ಪುಳುಮಾವಿಸ ಮಹಾದೇವಿಯ ಛಳ ಪಥರೋ. ಈ ಸಿವಸಿರಿಪುಳುಮಾವಿಯ ಒಂದು ಪ್ರಾಕೃತ ಶಾಸನ (ಎ.3) ಸನ್ನತಿಯಲ್ಲಿ ಇದೆ. ಸನ್ನತಿಯ ಶಾಸನಗಳು ಸಾತವಾಹನ (ಕಣ್ಣಿ) ಅರಸರು ವಾಸಿಠೀಪುತಸಿರಿಸಾತಕಣ್ಣಿಯ ಕಾಲದಲ್ಲಿ ಅವರು ಬೆಂಣಾತಟ, ವಿದರ್ಭ, ಅದರ ಮೇಲ್‌ಗಿರಿಭಾಗ, ಅಪರಾಂತ, ಅಸಕ, ಮೂಡಕಸ (ಮೂಲಕನಾಡು) ಗೆದ್ದುದಾಗಿ, ಅನೇಕ ಸಂಗ್ರಾಮಗಳನ್ನು ಮಾಡಿದುದಾಗಿ ವಿಜಯ ಸಂಪಾದಿಸಿದುದಾಗಿ, ಖರತಕುಲ(ಕ್ಷಹರಾತಕುಲ) ಘಾತಿಸಿದುದಾಗಿ ತಿಳಿಸಿದೆ (ಎ.1). ಬನವಾಸಿಯಲ್ಲಿ ಮಹಾದೇವಿಯ ಸ್ಮರಣ ಛಥರಫಲಕದಲ್ಲಿ ಕನ್ನಡ ಭಾಷೆಗೆ ಸಂಬಂಧಪಟ್ಟ ಎರಡು ಸಂಗತಿಗಳು ಬಹಳ ಮಹತ್ತ್ವದ್ದಾಗಿವೆ. (i) ಳು (ಳ+ಉ) ಚಾಕ್ಷುಷರೂಪದಲ್ಲಿ ಇದೆ. ವ್ಯಾಕರಣ ಕೃತಿಗಳಲ್ಲಿ (ಇಮ್ಮಡಿನಾಗವರ್ಮ –ಶಬ್ದಸ್ಮೃತಿ) ಮತ್ತು ಸಾಹಿತ್ಯ ಕೃತಿಗಳಲ್ಲಿ ಇಲ್ಲದಿದ್ದರೂ ಇದರ ಅಸ್ತಿತ್ವ ಗಮನಾರ್ಹ. (ii) ಮಹಾದೇವಿ ಅ ಎಂದು ಪ್ರಾಕೃತದಲ್ಲಿ ಇರಬೇಕಾದದ್ದು ಮಹಾದೇವಿಯ ಎಂದಿದ್ದು, ಯ ಎಂಬುದು ಯಕಾರಾಗಮ ಸಂಧಿಯನ್ನು ಸೂಚಿಸುತ್ತದೆ. ಈ ಶಾಸನ ಪ್ರಾಕೃತ ಹಾಗೂ ಕನ್ನಡ ಭಾಷೆಗಳ ಸಮ್ಮಿಶ್ರ ಪದ್ಧತಿಯನ್ನು ಹೊಂದಿರುವುದಕ್ಕೆ ಒಳ್ಳೆಯ ಉದಾಹರಣೆಯಾಗಿದೆ.

ಬನವಾಸಿಯಲ್ಲೇ ದೊರೆತಿರುವ ಇನ್ನೊಂದು ನಾಗರಕಲ್ಲು ಶಾಸನ ಈಗಾಗಲೆ ವಿದ್ವಾಂಸರಿಗೆ ಚಿರಪರಿಚಿತ. ರಾಜಹಾರೀತಿಪುತ್ರ ವಿಣ್ಹುಕಡ(ವಿಷ್ಣುಕಂದ) ಚುಟುಕುಲಾನಂದ ಸಾತಕರ್ಣಿಯ ಹನ್ನೆರಡನೆಯ ವರ್ಷದಲ್ಲಿ ಹೇಮಂತ ಋತುವಿನಲ್ಲಿ ಏಳನೆಯ ಪಕ್ಷದಲ್ಲಿ ಮೊದಲನೆಯ ದಿವಸದಂದು ಮಹಾಬಲಿವಂಶದ ಮಹಾರಾಜನ ವಂಶಸ್ಥಳಾದ, ಯುವರಾಜನ

ಮಾತೆಯಾದ ರಾಣಿ ಶಿವಸ್ಕಂದನಾಗಶ್ರೀಯು ನಾಗರ ಪ್ರತಿಮೆಯನ್ನೂ ತಟಾಕವನ್ನೂ ವಿಹಾರವನ್ನೂ ಮಾಡಿಸಿ ದಾನಮಾಡಿದಳು. ಈ ನಾಗ ಪ್ರತಿಮೆಯನ್ನು ದಾಮೋರಗ (ಕ>ಗ. ದಾಮ+ಉರಗ>ದಾಮೋರಗ=ಗಣಪತಿ; ಕಂಪಣ್ಣ<ಗಂಪಂಣ/ಗಂಪಣ್ಣ<ಗಣಪಣ್ಣ. ದ್ರಾವಿಡ ಭಾಷೆಗಳಲ್ಲಿ ಮೂಲದಲ್ಲಿ ಕ,ಚ,ಟ,ತ ಹಾಗೂ ಪ ವ್ಯಂಜನಾಕ್ಷರಗಳು– ಅಷ್ಟೇ ಇದ್ದವು) ಆಚಾರ್ಯನ ಶಿಷ್ಯ ನಟಕನಿಂದ ಮಾಡಲ್ಪಟ್ಟಿತು.

ಸಾತವಾಹನರ ರಾಜ್ಯ–ಆಡಳಿತ–ಅಳಿದ ಮೇಲೆ ಪಲ್ಲವರು ಹಾಗೂ ಅವರ ಅಧಿಕಾರಿಗಳು, ಅಮಾತ್ಯರು, ಸಾಮಂತರು ಸ್ವತಂತ್ರರಾದರು; ರಾಜ್ಯಗಳನ್ನು ಕಟ್ಟಿಕೊಂಡರು. ಬನವಾಸಿ ಅವರ ಮೊದಲ ರಾಜಧಾನಿ ಎಂಬುದು ಪಲ್ಲವ ಶಿವಸ್ಕಂದವರ್ಮನ ಹಿರೇಹಡಗಲಿ ಶಾಸನದಿಂದ ಸ್ಪಷ್ಟವಿದೆ. ಶಿವಸ್ಕಂಧವರ್ಮನ ತಂದೆ ಬಪ್ಪಸಾಮಿ ಭಟ್ಟಾರಕ ಅಲ್ಲಿಂದ ಆಳುತ್ತಿದ್ದ.

ಆಂಧ್ರಪ್ರದೇಶದ ಅಮರಾವತಿ, ಧಾನ್ಯಕಟಕ, ನಾಗಾರ್ಜುನಕೊಂಡ, ಜಗ್ಗಯ್ಯಪೇಟ, ಕೇಸನಪಲ್ಲಿ, ಘಂಟಸಾಲ(ಕಂಟಕಶೈಲ) ಮುಂತಾಗಿ ಅನೇಕ ಕಡೆಗಳಲ್ಲಿ ಪ್ರಾಕೃತ ಶಾಸನಗಳಿದ್ದು ಭಾರತದ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳ ರಚನೆಯಲ್ಲಿ ಮಹತ್ತ್ವದ ದಾಖಲೆಗಳಾಗಿವೆ.

(ಎಸ್.ಜಿ.ಎ.)

**ಬೌದ್ಧ ಗುಹಾಲಯ ಶಾಸನಗಳು:** ಕನ್ಹೇರಿಯ ಗುಹಾಲಯಗಳಲ್ಲಿಯ ಶಾಸನಗಳಲ್ಲಿ ಕೆಲವೊಂದು ವಿಶಿಷ್ಟ ಸಂಗತಿಗಳು ಗಮನಾರ್ಹ. ಗುಹಾ ಶಾಸನಗಳಲ್ಲಿ ಮಹಾರಾಜ, ಮಹಾವಿಹಾರ ಎಂಬ ಉಲ್ಲೇಖಗಳಿವೆ. ಮಹಾವಗ್ಗ ಮತ್ತು ಚುಲ್ಲವಗ್ಗಗಳಲ್ಲಿ ನಮಗೆ ಬೌದ್ಧ ಭಿಕ್ಷುಗಳ ಜೀವನ ಕ್ರಮದ ಬಗೆಗೆ ಮಾಹಿತಿ ದೊರೆಯುತ್ತದೆ. ಗುಹಾಲಯದ ವಾಸ್ತು ರಚನೆಯನ್ನು ಚುಲ್ಲವಗ್ಗ ಪ್ರಸ್ತಾಪಿಸುತ್ತದೆ. ಶಾಸನಗಳ ಅಧ್ಯಯನದಿಂದ ಆ ಕಾಲದ ವಾಣಿಜ್ಯ, ವ್ಯಾಪಾರದ ಪ್ರಗತಿಯನ್ನು ತಿಳಿಯಲು ಸಾಧ್ಯ. ಸೋಪಾರ, ಕಲ್ಯಾಣ, ಚೌಲ್ ಮುಂತಾದವು ವ್ಯಾಪಾರಿ ಕೇಂದ್ರಗಳಾಗಿದ್ದು ಬೌದ್ಧಧರ್ಮದ ಉನ್ನತಿಗೆ ಸಾಕ್ಷಿಯಾಗಿವೆ. ರಾಜ ಕಪರ್ದಿನನ ಶಿಲಾಹಾರ ಶಾಸನದಲ್ಲಿ ಕನ್ಹೇರಿಯ ವಿಹಾರವನ್ನು ಮಹಾರಾಜ ವಿಹಾರ ಎಂದು ಉಲ್ಲೇಖಿಸಿದೆ.

ಅನಾಥ ಪಿಂಡಕನೆಂಬ ವ್ಯಾಪಾರಿ ಶ್ರಾವಸ್ತಿಯಲ್ಲಿ ಸನ್ಯಾಸಿಗಳಿಗೆ ವಿಹಾರಗಳನ್ನು ಕಟ್ಟಿಸಿಕೊಟ್ಟ. ಈ ವಿಹಾರಗಳು ಎಲ್ಲ ಸೌಕರ್ಯಗಳನ್ನು ಹೊಂದಿದ್ದವು. ಕನ್ಹೇರಿ ಈ ವಿಹಾರಕ್ಕೆ ಮಾದರಿಯಾಗಿತ್ತು. ಮಹಾವಗ್ಗ ಮತ್ತು ಚುಲ್ಲವಗ್ಗ ಶಾಸನಗಳಲ್ಲಿ ಭಿಕ್ಷುಗಳ ಬಗ್ಗೆ ಮಾಹಿತಿಗಳಿವೆ. ಕನ್ಹೇರಿ ಗುಹೆ ಮತ್ತು ವಾಸ್ತುಶಿಲ್ಪಗಳ ಬಗ್ಗೆ ವಿನಯ ಪಿಟಕ ಉಲ್ಲೇಖಿಸುತ್ತದೆ. ಭಿಕ್ಷುಗಳ ವಿಹಾರವನ್ನು ಕಟ್ಟಿಸುವ ಸ್ಥಳಕ್ಕೆ ಕಪ್ಪಿಯಾ ಭೂಮಿ ಎನ್ನುತ್ತಾರೆ. ಭಿಕ್ಷುಗಳು ವಾಸಿಸುತ್ತಿದ್ದ ಐದು ಸ್ಥಳಗಳು ಅಧ್ಯಾಯೋಗ ಪಾಸಾದ, ಹಮ್ಮಿಯಾ, ಗುಹೆ, ಪಂಕಲೆನಾನಿ.

ಭಿಕ್ಷುಗಳು ಚಾಪೆಯ ಮೇಲೆ ಮಲಗುತ್ತಿದ್ದರು. ಚಾಪೆಯನ್ನು ಗೆದ್ದಲು ತಿನ್ನಬಹುದು ಮತ್ತು ಇಲಿಗಳು ಕಡಿಯುತ್ತವೆ. ಆದ್ದರಿಂದ ಭಿಕ್ಷುಗಳು ಕಡ್ಡಾಯವಾಗಿ ಸಿಂಹಾಸ್ಯದಲ್ಲಿ ಮಲಗಬೇಕೆಂದು ಹೇಳಲಾಗಿದೆ. ಒಳಗಿನ ಕೊಠಡಿಗಳಲ್ಲಿ ನಾಲ್ಕು ಪ್ರಕಾರಗಳಿರುತ್ತಿದ್ದವು. ಸಿವಿಕಗಭಾ, ನಲಿಕಾಗಭಾ, ಹಮ್ಮಿಯಾಗಭಾ, ಚತುರಸ್ಸಾಗಭಾ ಎಂದು ಅವುಗಳಿಗೆ ಹೆಸರು. ಕಿಟಕಿಗಳಲ್ಲಿ ಮೂರು ವಿಧಗಳು. ವೇದಿಕಾ ವತಪನಮ್, ಜಾಲವತಪನಮ್, ಸಲಾಕ ವತಪನೆಮ್ ಎಂದು ಕರೆಯಲಾಗುತ್ತದೆ. ಕಿಟಕಿ, ಬಾಗಿಲು, ಕಟ್ಟೆಗೆಯ ಕೈಪಿಡಿ ಬಗ್ಗೆಯೂ ಧರ್ಮಗುರುಗಳು ಭಿಕ್ಷುಗಳಿಗೆ ಸೂಚನೆಗಳನ್ನು ಕೊಡುತ್ತಿದ್ದರು.

ಪಶ್ಚಿಮ ಭಾರತದ ಬೌದ್ಧಗುಹೆಗಳ ನಿರ್ಮಾಣದಲ್ಲಿ ಬೌದ್ಧ ಸಾಹಿತ್ಯದಲ್ಲಿಯ ಸೂಚನೆಗಳನ್ನು ಅನುಸರಿಸಿರುವುದನ್ನು ಕಾಣಬಹುದು. ಕೃಷ್ಣಗಿರಿಯ ಮಹಾರಾಜ ಮಹಾವಿಹಾರ ಪಶ್ಚಿಮ ಭಾರತದಲ್ಲಿಯೇ ಅತ್ಯಂತ ದೊಡ್ಡದು. ಗಣ್ಯರಿಗೆ ಪ್ರತ್ಯೇಕ ಮಂಟಪಗಳು, ಸಾರೋಟು, ಆಸನಗಳನ್ನು ಸಂಘ ಕಾಯ್ದಿರಿಸುತ್ತಿತ್ತು.

ತವಿಜ್ಞಾ, ಸಕಡಗಾಮಿ, ಅನಾಗಮ ಮತ್ತು ಸದಭಿಜ್ಞಾನಿ ಇವರು ಉಪನ್ಯಾಸ ನೀಡುತ್ತಿದ್ದ ಭಿಕ್ಷುಗಳು. ಒಂದನೆಯ ಮಹಡಿ ಗುಹೆ ಅಧ್ಯಾಯೋಗದ ಮಾದರಿಯದು. ನಾಸಿಕದ ನಕನಕಾ ಎಂಬುವನು ದಾನ ಕೊಟ್ಟಿದ್ದನ್ನು ಇಲ್ಲಿಯ ಎರಡನೆಯ ಗುಹೆಯ ಶಾಸನ ಉಲ್ಲೇಖಿಸುತ್ತದೆ.

ಸಾತವಾಹನ ದೊರೆ ಗೌತಮೀಪುತ್ರ ಸಾತಕರ್ಣಿಯ ರಾಜ್ಯಭಾರ ಕಾಲದಲ್ಲಿ ಈ ಚೈತ್ಯ ಗುಹೆಯನ್ನು ನಿರ್ಮಿಸಲಾಗಿದೆ. ಗಜಸೇನ ಮತ್ತು ಗಜಮಿತ ಎಂಬ ವ್ಯಾಪಾರಿಗಳು ಇದನ್ನು ಕಟ್ಟಿಸಿದರೆಂದು ಹೇಳಲಾಗಿದೆ. ಕಟ್ಟಡಗಳ ವಿವರಗಳನ್ನು ಬ್ರಾಹ್ಮಿಲಿಪಿಯಲ್ಲಿ ಚೈತ್ಯ ಗುಹೆಯ ಹೆಬ್ಬಾಗಿಲಿನಲ್ಲಿ ಕೆತ್ತಲಾಗಿದೆ. ಈ ಶಾಸನಗಳು ವಾಸ್ತುಶಿಲ್ಪದ ಬಗೆಗೆ ಕುತೂಹಲವನ್ನು ಹುಟ್ಟಿಸುತ್ತವೆ. ಉಪರಖಿತ (ಮೇಲ್ವಿಚಾರಕ), ಸೆಲವಡಕಿ (ಕಲ್ಲುಕುಟಿಕ), ಮಿಠಿಕ (ಮೆರುಗನ್ನುಂಟು ಮಾಡುವವನು), ಮಹಾಕಟಕ (ಉನ್ನತ ಶಿಲ್ಪಿ), ಕಡಿಚಕ (ಕುಶಲಕರ್ಮಿ), ನವಕರ್ಮಿಕ ಮುಂತಾದ ಶಬ್ದಗಳು ಶಾಸನಗಳಲ್ಲಿ ಬಳಕೆಯಾಗಿವೆ.

ವಿನಯಪಿಟಕದಲ್ಲಿ ತಿಳಿಸಿದ ವಾಸ್ತು ನಿಯಮಗಳಂತೆ ನವಕರ್ಮಿಕ ಎಂಬಾತ ಕಟ್ಟಡ ಕೆಲಸದ ಕಾರ್ಯವನ್ನು ನೋಡಿಕೊಳ್ಳುವವನೆಂದು ಹೇಳಿದೆ. ನಿರ್ಮಾಣದ ನಿಯಮಗಳನ್ನು ತಾಂತ್ರಿಕ ಶಬ್ದಗಳಲ್ಲಿ ಹೇಳಿದೆ. ಪಟಿತಪಿತ ಮತ್ತು ಸಮಾಪತಿ ಎಂಬ ಪದಗಳು ಪ್ರಾರಂಭ ಹಾಗೂ ಮುಕ್ತಾಯದ ಅರ್ಥ ಸೂಚಿಸುತ್ತವೆ. ಕಟ್ಟಡಗಳ ಕೆಲಸವನ್ನು ಶ್ರದ್ಧೆಯಿಂದ ಪೂರ್ಣಗೊಳಿಸಬೇಕೆಂಬ ನಿಯಮವಿದ್ದಿತು; ಇಲ್ಲಿಯ ನಿರ್ಮಿತಿ ಕಾರ್ಯನಿರ್ವಹಣೆಯನ್ನು ಅಚಲ, ಗಹಲ, ವಿಜಯಮಿತ, ಬದಂತಬೋಧಿಕ ಮತ್ತು ಧಮಪಾಲನಿಗೆ ಒಪ್ಪಿಸಲಾಗಿತ್ತು. ಕರ್ತವ್ಯದಲ್ಲಿ ಚ್ಯುತಿ ಕಂಡುಬಂದರೆ ಅವರಿಗೆ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ.

(ಎಸ್.)

**ಭಾರತದ ಸಂಸ್ಕೃತ ಶಾಸನಗಳು:** ಭಾರತದಲ್ಲಿ ಶಾಸನಗಳ ಉಪಲಬ್ಧಿಯು ಪ್ರ.ಶ.ಪೂ.ಸು. 4ನೆಯ ಶತಮಾನದಷ್ಟು ಪ್ರಾಚೀನವೆನಿಸಿದೆ. ಅತ್ಯಂತ ಹಳೆಯ ಶಾಸನಗಳು ಈ ದೇಶದ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿರದೆ ಪ್ರಾಕೃತ ಭಾಷೆಯಲ್ಲಿವೆ. ಇದಕ್ಕೆ ಈ ದೇಶದ ಧಾರ್ಮಿಕ ಹಿನ್ನೆಲೆಯನ್ನು ನೋಡಬೇಕಾಗುತ್ತದೆ. ತಮ್ಮ ತಮ್ಮ ತತ್ತ್ವಗಳನ್ನು ಸಾಮಾನ್ಯ ಜನರಿಗೆ ತಿಳಿಸುವ ಉದ್ದೇಶದಿಂದ ಜೈನ ಮತ್ತು ಬೌದ್ಧಧರ್ಮಗಳ ಅನುಯಾಯಿಗಳು ಪ್ರಾಕೃತ ಭಾಷೆಯನ್ನು ಬಳಸಿದರು. ಉತ್ತರ ಭಾರತದಲ್ಲಿ ಇತಿಹಾಸ ಕಾಲದ ಪ್ರಾರಂಭದಿಂದ ಗುಪ್ತ ಸಾಮ್ರಾಟರ ಆಳಿಕೆಯ ಪ್ರಾರಂಭದವರೆಗೂ ಬೌದ್ಧ ಮತ್ತು ಜೈನಧರ್ಮಗಳು ರಾಜಾಶ್ರಯವನ್ನು ಪಡೆದಿದ್ದವು. ಹೀಗಾಗಿ ಈ ದೇಶದ ಅತ್ಯಂತ ಪ್ರಾಚೀನ ಶಾಸನಗಳು ಪ್ರಾಕೃತ ಭಾಷೆಯಲ್ಲಿವೆ. ಹೀಗಾಗಿ ಈ ಎರಡು ಶತಮಾನಗಳ ಕಾಲಾವಧಿಯನ್ನು ಭಾರತೀಯ ಶಾಸನಗಳಿಗೆ ಸಂಬಂಧಿಸಿದಂತೆ ಪ್ರಾಕೃತ ಯುಗವೆಂದು ಕರೆಯಬಹುದಾಗಿದೆ.

ಪ್ರ.ಶ.ಪೂ.1ನೆಯ ಶತಮಾನದ ಆರಂಭದಿಂದ ಅಥವಾ ಸ್ವಲ್ಪ ಅನಂತರದಿಂದ ಶಾಸನಗಳಲ್ಲಿ ಆರ್ಷೇಯ ಭಾಷೆಯಾದ ಸಂಸ್ಕೃತದ ಪ್ರಭಾವ ಗಣನೀಯವಾಗಿ ಹೆಚ್ಚುತ್ತಿರುವುದು ಕಂಡುಬರುತ್ತದೆ. ಇಲ್ಲಿಂದ ಆರಂಭಿಸಿ ಸು.4 ಶತಮಾನಗಳಷ್ಟು ಕಾಲಾವಧಿಯಲ್ಲಿ ಬರೆಸಲಾದ ಶಾಸನಗಳಲ್ಲಿ ಪ್ರಾಕೃತ ಮತ್ತು ಸಂಸ್ಕೃತ ಪದಗಳಿಂದ ಕೂಡಿದ ಒಂದು ಬಗೆಯ ಮಿಶ್ರಭಾಷೆಯ ಪ್ರಯೋಗ ಕಂಡುಬರುತ್ತದೆ. ಕ್ರಮೇಣ ಸಂಸ್ಕೃತವೇ ಪ್ರಾಮುಖ್ಯವನ್ನು ಹೊಂದತೊಡಗಿ ಶಾಸನಗಳ ಭಾಷಾ ಮಾಧ್ಯಮ ಪ್ರಾಕೃತದಿಂದ ಸಂಸ್ಕೃತಕ್ಕೆ ಬದಲಾಗುತ್ತಿರುವ ಈ ಕಾಲದ ಶಾಸನಗಳನ್ನು ಭಾಷೆಯ ದೃಷ್ಟಿಯಿಂದ ಸಂಸ್ಕೃತದ ಪ್ರಭಾವವುಳ್ಳ ಪ್ರಾಕೃತ ಶಾಸನ ಅಥವಾ ಪ್ರಾಕೃತದ ಪ್ರಭಾವವುಳ್ಳ ಸಂಸ್ಕೃತ ಶಾಸನ ಎಂದು ಹೆಸರಿಸಬಹುದಾಗಿದೆ. ಯಾವ ಭಾಷೆಯ ಪದಗಳ ಬಳಕೆ ಹೆಚ್ಚಾಗಿದೆಯೆಂಬುದನ್ನವಲಂಬಿಸಿದೆ. ನಿರ್ದಿಷ್ಟ ಶಾಸನವೊಂದಕ್ಕೆ ಮೇಲಿನ ಯಾವುದಾದರೊಂದು ಹೆಸರನ್ನು ಕೊಡಬಹುದಾಗಿದೆ. ಸಂಸ್ಕೃತಭಾಷೆಯ ಏರಿಕೆಯನ್ನು ಸೂಚಿಸುವ, ಈ ಬದಲಾವಣೆಯ ಕಾಲಾವಧಿಗೆ ಸೇರಿದ ಕೆಲ ಶಾಸನಗಳು ಸಂಪೂರ್ಣವಾಗಿ ಸಂಸ್ಕೃತ ಭಾಷೆಯಲ್ಲಿಯೇ ರಚಿತವಾಗಿವೆ. ಉದಾಹರಣೆಗೆ: ರಾಜಸ್ತಾನದ ಘೋಸೂಂಡಿ ಮತ್ತು ಹಾಥಿ–ಬಾಡಾ ಎಂಬಲ್ಲಿ ದೊರೆತ ಪ್ರ.ಶ.ಪೂ.1ನೆಯ ಶತಮಾನಕ್ಕೆ ಸೇರಿದ, ಪಾರಾಶರೀಪುತ್ರ ಗಾಜಾಯನ ಸರ್ವತಾತನೆಂಬ ಅರಸನ ಶಾಸನ, ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ದೊರೆತ, ಪ್ರ.ಶ.ಪೂ.1ನೆಯ ಶತಮಾನಕ್ಕೆ ಸೇರಿದ ಧನದೇವನ ಶಾಸನ ಮತ್ತು ಗುಜರಾತಿನ ಜಲವಾಗಡದಲ್ಲಿ ದೊರೆತ 150ರಲ್ಲಿ ಬರೆಸಲಾದ ಕಾರ್ದಮಕ ಒಂದನೆಯ ರುದ್ರದಾಮನ ಶಾಸನಗಳನ್ನು ಹೆಸರಿಸಬಹುದು. ಭಾರತದ ಉಪಖಂಡದ ವಿವಿಧ ಪ್ರದೇಶಗಳಲ್ಲಿ ಸಂಸ್ಕೃತ ಭಾಷೆಯ ಶಾಸನರಚನೆಯ ಮುಖ್ಯ ಮಾಧ್ಯಮವಾಗಿ ತಲೆಎತ್ತತೊಡಗಿದ್ದು ಬೇರೆಬೇರೆ ಕಾಲಗಳಲ್ಲಿ ಎಂಬುದು ಗಮನಾರ್ಹ. ಉತ್ತರ ಭಾರತದಲ್ಲಿ ಶಕ ಅರಸ ಶೋಡಾಶನ ಆಳಿಕೆಯಲ್ಲಿ ಪ್ರ.ಶ. 1ನೆಯ ಶತಮಾನದ ಪ್ರಾರಂಭದ ಹಂತದಲ್ಲಿ ಸಂಸ್ಕೃತ ಶಾಸನಗಳು ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿದವು. ಅವನ ಕೆಲವು ಪ್ರಾಕೃತ ಶಾಸನಗಳೂ ದೊರೆತಿವೆ. ಪೂರ್ವ ಭಾರತದಲ್ಲಿ 3ನೆಯ ಶತಮಾನದಿಂದ ಸಂಸ್ಕೃತ ಶಾಸನಗಳು ಕಾಣಿಸಿಕೊಳ್ಳತೊಡಗಿದವು. ಉತ್ತರ ಪ್ರದೇಶದ ಡೆಹರಾಡೂನ್ ಜಿಲ್ಲೆಯ ಜಗತ್ಪುರ್ ಎಂಬಲ್ಲಿ ದೊರೆತ ಇಟ್ಟಿಗೆಯ ಶಾಸನಗಳು ಇದೇ ಕಾಲಕ್ಕೆ ಸೇರಿವೆ. ದಖನ್ ಪ್ರದೇಶದಲ್ಲಿ ನಾಗಾರ್ಜುನಕೊಂಡದಲ್ಲಿ ದೊರೆತ 3ನೆಯ ಶತಮಾನದ ಕೊನೆಯಭಾಗಕ್ಕೆ ಸೇರಿದ, ಇಕ್ಷ್ವಾಕು ಅರಸ ಎಹುವಲ ಚಾಂತಮೂಲನ ಎರಡು ಶಾಸನಗಳೇ ಸಂಸ್ಕೃತ ಭಾಷೆಯ ಮೊದಲ ಶಾಸನಗಳಾಗಿವೆ. ದಕ್ಷಿಣದಲ್ಲಿ ತಮಿಳುನಾಡಿನಲ್ಲಿ 7ನೆಯ ಶತಮಾನದಲ್ಲಿ ಕಾಂಚಿಯ ಪಲ್ಲವ ಅರಸರ ಮತ್ತು ಅವರ ಸಮಕಾಲೀನರಾದ ಪಾಂಡ್ಯ ಅರಸರ ಕಾಲದಿಂದ ಸಂಸ್ಕೃತಕ್ಕೆ ಆಶ್ರಯ ದೊರೆಯಿತು.

ಹೀಗೆ ಈ ವಿಶಾಲವಾದ ದೇಶದ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಸಂಸ್ಕೃತ ಶಾಸನಗಳ ಭಾಷೆಯಾಗಿ ಬೆಳಕಿಗೆ ಬಂದಿದ್ದರೂ ಪ್ರಾಕೃತದಿಂದ ಸಂಸ್ಕೃತಕ್ಕೆ ಬದಲಾವಣೆ (ಶಾಸನಗಳ ಮಾಧ್ಯಮವಾಗಿ) ಪಾಟಲೀಪುತ್ರದ ಗುಪ್ತರ ಉಚ್ಛ್ರಾಯಕಾಲಕ್ಕೆ ಮೇಳೈಸುತ್ತದೆ. ಇದು ಪ್ರ.ಶ.4ನೆಯ ಶತಮಾನದ ಎರಡನೆಯ ದಶಕದ ಕೊನೆಯ ಕಾಲ. ಗುಪ್ತ ಅರಸರು ಶಾಸ್ತ್ರೀಯ ಸಂಸ್ಕೃತ ಭಾಷೆಗೆ ಕೊಟ್ಟ ಪ್ರೋತ್ಸಾಹದಿಂದಾಗಿ ಅವರ ವಿಶಾಲ ಸಾಮ್ರಾಜ್ಯದ ಎಲ್ಲೆಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಕೃತ ಶಾಸನಗಳು ಕಂಡುಬರತೊಡಗಿದವು. ಇಷ್ಟೇ ಅಲ್ಲದೆ ಅನಂತರದ ಕೆಲವೇ ಕಾಲದಲ್ಲಿ ನೆರೆಯ ರಾಜ್ಯಗಳಲ್ಲಿಯೂ ದೂರದ ಪ್ರದೇಶಗಳಲ್ಲಿಯೂ ಸಂಸ್ಕೃತವೇ ಶಾಸನಗಳ ಮುಖ್ಯ ಭಾಷೆಯಾಗಿ ಕಂಗೊಳಿಸತೊಡಗಿತು. ಆ ಕಾಲದಿಂದಾರಂಭಿಸಿ ಶಾಸನಗಳಯುಗದ ಕೊನೆಯವರೆಗೂ ಅಂದರೆ, ಸು.17ನೆಯ ಶತಮಾನದ ಕೊನೆಯವರೆಗೂ ಸಂಸ್ಕೃತ ಅಖಿಲ ಭಾರತೀಯ ಶಾಸನಗಳ ಏಕಮಾತ್ರ ಭಾಷೆಯಾಯಿತು. ಹೀಗಿದ್ದರೂ ಕಾಲಗತಿಯಲ್ಲಿ ಅದು ಆಗಾಗ್ಗೆ ನವ ಇಂಡೋ–ಆರ್ಯನ್ ಮತ್ತು ದ್ರಾವಿಡ ಭಾಷೆಗಳೊಡನೆ ಬೆಳೆದು ಬಂತು. ಕೆಲಸಲ ಇದು ಹೊಸದಾಗಿ ಬಳಕೆಗೆಬಂದ ಈ ಭಾಷೆಗಳಿಂದ ಉಚ್ಚಾಟನೆಯನ್ನೂ ಹೊಂದಿದೆ. ಒಟ್ಟಾರೆ ಯಾವುದೊಂದು ಪ್ರಾದೇಶಿಕ ಭಾಷೆಯಲ್ಲಿ ಬರೆಸಲಾದ ಶಾಸನಗಳ ಸಂಖ್ಯೆಗಿಂತ ಸಂಸ್ಕೃತದಲ್ಲಿ ಬರೆಸಲಾದ ಒಟ್ಟು ಶಾಸನಗಳ ಸಂಖ್ಯೆ ಹೆಚ್ಚಾಗಿದೆ.

ಗುಪ್ತರ ಕಾಲದಿಂದಾರಂಭಿಸಿ ಉತ್ತರ ಭಾರತದ ಪ್ರಾಚೀನಾವಧಿಯ ಇತಿಹಾಸವನ್ನು ತಿಳಿಯುವುದಕ್ಕೆ ಸಂಸ್ಕೃತ ಶಾಸನಗಳು ಏಕಮೇವ ಸಾಧನವೆನಿಸಿವೆ. ಸಹಸ್ರಾರು ಸಂಖ್ಯೆಯಲ್ಲಿ ದೊರೆತಿರುವ ಈ ಸಂಸ್ಕೃತ ಶಾಸನಗಳು ಆಳರಸರಿಂದ, ಧಾರ್ಮಿಕ ಸಂಸ್ಥೆಗಳಿಂದ,

ವ್ಯಾಪಾರೀಸಂಘಗಳಿಂದ ಅಥವಾ ಸಾಮಾನ್ಯ ವ್ಯಕ್ತಿಗಳಿಂದ ಬರೆಸಲ್ಪಟ್ಟಿವೆ. ಈ ಶಾಸನಗಳ ಪಾಠಗಳಲ್ಲಿ ಒಂದು ನಿಶ್ಚಿತ ಕ್ರಮವನ್ನು ಅನುಸರಿಸಲಾಗಿದೆ. ಅರಸರಿಂದ ಅಥವಾ ಸಂಘ-ಸಂಸ್ಥೆಗಳಿಂದ ಬರೆಸಲಾದ ಶಾಸನಗಳಲ್ಲಿ ಎರಡು ಭಾಗಗಳಿರುತ್ತವೆ. ಮೊದಲನೆಯ ಭಾಗದಲ್ಲಿ ಆಳರಸರ ವಂಶಾವಳಿ, ವಿವಿಧ ಅರಸರ ಶೌರ್ಯ-ಸಾಹಸದ ವರ್ಣನೆ ಅಥವಾ ಧರ್ಮಾಚಾರ್ಯರ ಪಟ್ಟಾವಳಿ ಅಥವಾ ಸಂಘ-ಸಂಸ್ಥೆಗಳ ಸಾಧನೆಗಳು ಮುಂತಾದ ವಿವರಗಳಿರುತ್ತವೆ. ಇದೊಂದು ಔಪಚಾರಿಕ ಅಥವಾ ಸಾಂಪ್ರದಾಯಿಕ ಭಾಗವಾಗಿದ್ದು ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಹೊರತುಪಡಿಸಿ ಎಲ್ಲ ಶಾಸನಗಳಲ್ಲಿ (ಒಂದು ರಾಜವಂಶ ಅಥವಾ ಸಂಘ-ಸಂಸ್ಥೆಗೆ ಸೇರಿದ ಶಾಸನಗಳು) ಒಂದೇ ರೀತಿಯಲ್ಲಿರುತ್ತವೆ. ಎರಡನೆಯ ಭಾಗವನ್ನು ವ್ಯಾವಹಾರಿಕ ಭಾಗವೆಂದು ಕರೆಯಬಹುದಾಗಿದ್ದು, ಇದರಲ್ಲಿ ಶಾಸನದ ಮುಖ್ಯ ಉದ್ದೇಶ (ದಾನ, ರಾಜಾಜ್ಞೆ, ವೀರಸ್ಮರಣೆ ಇತ್ಯಾದಿ) ವನ್ನು ವಿವರಿಸಲಾಗಿರುತ್ತದೆ. ವ್ಯಕ್ತಿಗತ ಶಾಸನಗಳ ಸ್ವರೂಪ ಬೇರೆಯದಾಗಿದ್ದು, ಇದರಲ್ಲಿ ಮೇಲೆ ಹೇಳಿದ ಔಪಚಾರಿಕ ಅಥವಾ ಸಾಂಪ್ರದಾಯಿಕ ಭಾಗವಿರಬೇಕೆಂಬ ನಿಯಮವಿಲ್ಲ. ದಾನ ಶಾಸನಗಳು ದೇವತಾವರ್ಣನಪರ ಮಂಗಳ ಶ್ಲೋಕಗಳಿಂದಾರಂಭಗೊಂಡು ಶಾಸನೋಕ್ತ ದತ್ತಿ-ದಾನಗಳನ್ನು ಸಂರಕ್ಷಿಸುವುದರಿಂದುಂಟಾಗುವ ಶ್ರೇಯ ಮತ್ತು ಅವುಗಳಿಗೆ ಬಾಧೆಯನ್ನುಂಟುಮಾಡುವುದರಿಂದ ಬರುವ ಪಾಪವನ್ನೂ ವರ್ಣಿಸುವ ಶ್ಲೋಕಗಳಿಂದ ಮುಕ್ತಾಯಗೊಳ್ಳುತ್ತವೆ.

ತ್ರಿಪುರಾಂತಕರ್ಮ್‌ನ ಒಂದು ವೀರಗಲ್ಲು ಶಾಸನ

ಈ ಸಂಸ್ಕೃತ ಶಾಸನಗಳಿಂದ ತಿಳಿದುಬರುವ ವಿಷಯಗಳು ಇಂತಿಷ್ಟು ಎಂದು ನಿಗದಿಪಡಿಸುವುದು ಸಾಧ್ಯವಿಲ್ಲ. ತಮ್ಮ ಸಮಸಾಮಯಿತ ಮಾನವೀಯ ಚಟುವಟಿಕೆಗಳ ಸಕಲಮುಖಗಳನ್ನು ಈ ಶಾಸನಗಳು ಒಂದಿಲ್ಲೊಂದು ಬಗೆಯಲ್ಲಿ, ನೇರವಾಗಿ ಅಥವಾ ಪರೋಕ್ಷವಾಗಿ ತಿಳಿಸುತ್ತವೆ.

ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನದಲ್ಲಿ ಅವನು ಸೋಲಿಸಿದ ಅರಸರ ದೀರ್ಘ ಪಟ್ಟಿಯೇ ಇದೆ. ಇಲ್ಲಿ ನಮೂದಿಸಲಾದ ಆತನ ಸಾಮ್ರಾಜ್ಯದ ಸರಹದ್ದಿನಲ್ಲಿದ್ದ ಅರಸರ ಹೆಸರುಗಳಿಂದಲೂ ಆತನಿಗೆ ವಿಧೇಯರಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದ ಬುಡಕಟ್ಟು-ರಾಜ್ಯಗಳ ಹೆಸರುಗಳಿಂದಲೂ ಅವನ ಸಾಮ್ರಾಜ್ಯದಲ್ಲಿ ಉತ್ತರ ಪ್ರದೇಶದ ಪೂರ್ಣಭಾಗ, ಮಧ್ಯ ಭಾರತದ ಒಂದು ಭಾಗ ಮತ್ತು ಬಂಗಾಲದ ನೈಋತ್ಯ ಪ್ರದೇಶಗಳು ಮಾತ್ರ ಇದ್ದವೆಂದು ತಿಳಿಯುತ್ತದೆ. ಅವನ ಮಗನಾದ ಚಂದ್ರಗುಪ್ತ ವಿಕ್ರಮಾದಿತ್ಯನ ಉದಯಗಿರಿ ಗುಹಾ ಶಾಸನದಿಂದ ತಿಳಿದುಬರುವಂತೆ ಈತ ಶಕರನ್ನು (ವಿಕ್ರಮಾದಿತ್ಯ) ಸೋಲಿಸಿ ಮಾಳವ, ಗುಜರಾತ್ ಮತ್ತು ಸೌರಾಷ್ಟ್ರ ಪ್ರದೇಶಗಳನ್ನು ಗುಪ್ತಸಾಮ್ರಾಜ್ಯಕ್ಕೆ ಸೇರಿಸಿದ. ಇಂಥದೊಂದು ವಿಸ್ತೃತ ಭೂಭಾಗವನ್ನಾ ಳುವುದಕ್ಕೆ ಸಮರ್ಥ ಆಡಳಿತ ವ್ಯವಸ್ಥೆಯನ್ನು ಮಾಡಲಾಗಿತ್ತೆಂಬುದು ಗುಪ್ತರ ಶಾಸನಗಳಿಂದ ತಿಳಿದುಬರುತ್ತದೆ. ಗುಪ್ತಕಾಲೀನ ಶಾಸನಗಳಲ್ಲಿ ರಾಜ್ಯಾಡಳಿತಕ್ಕೆ ಸಂಬಂಧಿಸಿದಂತೆ ಕುಮಾರಾಮಾತ್ಯ, ಉಪರಿಕ, ವಿಷಯಪತಿ, ದಂಡನಾಯಕ, ಸಂಧಿವಿಗ್ರಹಿಕ, ಚೌರೋದ್ಧರಣಿಕ, ದಾಂಡಿಕ, ದಾಂಡಪಾಶಿಕ, ಮಹಾಪ್ರತೀಹಾರ, ವಿನಯಸ್ಥಿತಿ-ಸ್ಥಾಪಕ, ಆಯುಕ್ತಕ ಮುಂತಾದ ಅಧಿಕಾರಿಗಳ ಉಲ್ಲೇಖಗಳಿವೆ. ಭುಕ್ತಿ, ವಿಷಯ, ವೀಥಿ ಮತ್ತು ಮಂಡಲ-ಇವು ಸಾಮ್ರಾಜ್ಯದ ಆಡಳಿತಾತ್ಮಕ ವಿಭಾಗಗಳಾಗಿದ್ದವು. ಭುಕ್ತಿ (ಪ್ರಾಂತ್ಯ) ಎಂಬ ವಿಸ್ತಾರ ಪ್ರದೇಶಕ್ಕೆ ಉಪರಿಕನೆಂಬ ಹಿರಿಯ ಅಧಿಕಾರಿಯನ್ನು ನೇಮಿಸಲಾಗುತ್ತಿತ್ತು. ಪುಂಡ್ರವರ್ಧನಭುಕ್ತಿ ಮತ್ತು ತೀರಭುಕ್ತಿ ಎಂಬೆರಡು ಭುಕ್ತಿಗಳನ್ನು ಶಾಸನಗಳಲ್ಲಿ ಹೆಸರಿಸಲಾಗಿದೆ. ವಿಷಯವೆಂಬುದು ಭುಕ್ತಿಯ ಉಪವಿಭಾಗವಾಗಿದ್ದು ಅದನ್ನು ವಿಷಯಪತಿಯೆಂಬ ಅಧಿಕಾರಿ ಆಳುತ್ತಿದ್ದ. ಕೋಟಿವರ್ಷ ವಿಷಯ, ಅಂತರ್ವೇದಿವಿಷಯ ಮತ್ತು ಖಾದಾಟಪಾರವಿಷಯಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ನಂದವೀಥಿ, ದಕ್ಷಿಣಾಂಶವೀಥಿ ಮತ್ತು ನಾಗಿರಟ್ಟ ಮಂಡಲಗಳೆಂಬ ಸಣ್ಣ ವಿಭಾಗಗಳ ಹೆಸರುಗಳೂ ಕಂಡುಬರುತ್ತವೆ. ಇದಲ್ಲದೆ ಜಿಲ್ಲಾಡಳಿತಕ್ಕಾಗಿ ಐವರು ಸದಸ್ಯರ ಅಧಿಷ್ಠಾನಾಧಿಕರಣ ಎಂಬ ಮತ್ತು ಗ್ರಾಮದ ಆಡಳಿತಕ್ಕಾಗಿ ಎಂಟು ಸದಸ್ಯರಿಂದ ಕೂಡಿದ ಅಷ್ಟಕುಲಾಧಿಕರಣ ಎಂಬ ಮಂಡಳಿಗಳಿದ್ದವು. ಗುಪ್ತರ ಅನಂತರ ಪ್ರಾಬಲ್ಯಕ್ಕೆ ಬಂದ ವಲಭಿಯ ಮೈತ್ರಕರು 475-775ರ ವರೆಗೆ ರಾಜ್ಯವನ್ನಾಳಿದರು. ಈ ಕಾಲಾವಧಿಗೆ ಸೇರಿದ ಹೆಚ್ಚಿನಸಂಖ್ಯೆಯ ತಾಮ್ರಶಾಸನಗಳು ದೊರೆತಿವೆ. ಅವುಗಳಲ್ಲಿ ಆಯುಕ್ತಕ, ವಿನಿಯುಕ್ತಕ, ದ್ರಾಂಗಿಕ, ಮಹತ್ತರ, ಚಾಟ, ಭಟ, ಧ್ರುವಾಧಿಕರಣಿಕ, ಶೌಲ್ಕಿಕ, ವರ್ತ್ಮಪಾಲ, ಪ್ರತಿಸಾರಕ, ರಾಜಸ್ಥಾನೀಯ, ಕುಮಾರಾಮಾತ್ಯ ಮುಂತಾದ ಅಧಿಕಾರಿಗಳ ಹೆಸರುಗಳು ಕಂಡುಬಂದಿವೆ. ಈ ಕಾಲದಲ್ಲಿ ಗ್ರಾಮ, ಪದ್ರಕ ಮತ್ತು ಪಲ್ಲಿ-ಇವು ಆಡಳಿತದ ಮೂಲಘಟಕಗಳಾಗಿದ್ದು ಉಳಿದಂತೆ ಆಹಾರ, ಸ್ಥಲೀ, ಪಥಕ, ಪೇಠ, ವಿಷಯ, ಪಟ್ಟ, ಭೂಮಿ, ಭುಕ್ತಿ ಮತ್ತು ದ್ರಂಗಗಳೆಂಬ ವಿವಿಧ ವ್ಯಾಪ್ತಿಯ ವಿಭಾಗ ಮತ್ತು ಉಪವಿಭಾಗಗಳಿದ್ದವು. ಪುಷ್ಯಭೂತಿವಂಶದ ಹರ್ಷವರ್ಧನನಿಗೆ ಸೇರಿದ ಮೂರು ತಾಮ್ರಪತ್ರಗಳು ಲಭ್ಯವಾಗಿವೆ. ಇವುಗಳಲ್ಲಿ ಮಹಾಸಾಮಂತ, ಮಹಾರಾಜ, ದೌಸ್ಸಾಧಸಾಧನಿಕ, ಪ್ರಮಾತಾರ, ರಾಜಸ್ಥಾನೀಯ, ಕುಮಾರಾಮಾತ್ಯ, ಉಪರಿಕ, ವಿಷಯಪತಿ, ಭಟ, ಚೌಟ, ಸೇವಕ, ದೂತಕ, ಮಹಾಪ್ರಮಾತಾರ ಮತ್ತು ಮಹಾಕ್ಷಪಟಲಾಧಿ ಕರಣಾಧಿಕೃತ ಎಂಬ ಆಡಳಿತಾಧಿಕಾರಿಗಳ ಹೆಸರುಗಳಿವೆ. ಹರ್ಷವರ್ಧನನ ಆಳ್ವಿಕೆಯಲ್ಲಿ ಭುಕ್ತಿ, ವಿಷಯ ಮತ್ತು ಪಥಕಗಳೆಂಬ ಆಡಳಿತ ವಿಭಾಗ-ಉಪವಿಭಾಗಗಳಿದ್ದವು. ಅನಂತರದ ಕಾಲದಲ್ಲಿಯೂ ಇವೇ ಅಥವಾ ಇಂಥವೇ ಅಧಿಕಾರಿಗಳ ಹೆಸರುಗಳೂ ವಿಭಾಗ - ಉಪವಿಭಾಗಗಳೂ ಶಾಸನಗಳಲ್ಲಿ ಕಂಡುಬರುತ್ತವೆ.

ಗುಪ್ತಪೂರ್ವ ಸಂಸ್ಕೃತ ಶಾಸನಗಳಲ್ಲಿ ದಂಡನಾಯಕ, ಬಲಾಧಿಕೃತ ಮತ್ತು ಸೇನಾಪತಿ ಎಂಬ ಸೈನ್ಯಾಧಿಕಾರಿಗಳ ಉಲ್ಲೇಖಗಳಿವೆ. 150 ಕ್ಕೆ ಸೇರಿದ ಮಹಾಕ್ಷತ್ರಪ ರುದ್ರದಾಮನ್‌ನ ಜುನಾಗಢ ಶಾಸನದಲ್ಲಿ ಕುದುರೆ, ಆನೆ, ಖಡ್ಗ ಮತ್ತು ವಿಶೇಷವಾಗಿ ಪ್ರಾಣಿಗಳ ಚರ್ಮದಿಂದ ತಯಾರಿಸಿದ ರಕ್ಷಾಕವಚದ ಉಲ್ಲೇಖವಿದೆ. ಗುಪ್ತರ ಶಾಸನಗಳಲ್ಲಿ ಮಹಾದಂಡನಾಯಕ, ಸಾಂಧಿವಿಗ್ರಹಿಕ, ಮಹಾಬಲಾಧಿಕೃತ, ಮಹಾಪೇಲೂಪತಿ, ಮಹಾಶ್ವಪತಿ ಮತ್ತು ಭಟಾಶ್ವಪತಿ ಎಂಬ ಹಿರಿಯ ಸೇನಾಧಿಕಾರಿಗಳನ್ನು ಹೆಸರಿಸಲಾಗಿದೆ. ಇಲ್ಲಿ ಬರುವ ನಾಲ್ಕು ಅಧಿಕಾರಿಗಳ ಹೆಸರುಗಳ ಪ್ರಾರಂಭದಲ್ಲಿ ಮಹಾ ಎಂಬ ಉಪಸರ್ಗವಿರುವುದರಿಂದ ಈ ಅಧಿಕಾರಿಗಳ ಕೈಕೆಳಗೆ ಅಂಥದೇ ಕೆಲಸವನ್ನು ನಿರ್ವಹಿಸುವ ಒಬ್ಬ ಅಥವಾ ಇಬ್ಬರು ಕೆಳದರ್ಜೆಯ ಅಧಿಕಾರಿಗಳಿದ್ದರೆಂದು ಊಹಿಸಬಹುದಾಗಿದೆ. ಇವಲ್ಲದೆ ಬಲಾಧಿಕರಣ ಮತ್ತು ರಣಭಾಂಡಾಗಾರಾಧಿಕರಣ ಎಂಬ ಯುದ್ಧಕಾರ್ಯಚರಣೆಗೆ ಸಂಬಂಧಿಸಿದ ಎರಡು ಕಛೇರಿಗಳ ಉಲ್ಲೇಖವೂ ಕಂಡುಬಂದಿದೆ. ಸಮುದ್ರಗುಪ್ತನ ಅಲಹಾಬಾದ್ ಪ್ರಶಸ್ತಿಯಲ್ಲಿ ಪರಶು, ಶರ, ಶಂಕು, ಶಕ್ತಿ, ಪ್ರಾಸ, ಅಸ್ತಿ ತೋಮರ, ಭಿಂದಿಪಾಲ, ನಾರಾಚ ಮತ್ತು ವೈತಸ್ತಿತ ಎಂಬ ವಿವಿಧ ಆಯುಧಗಳ ಪ್ರಸ್ತಾಪವಿದೆ. ವಲಭಿಯ ಮೈತ್ರಕ ಅರಸರ ತಾಮ್ರಪತ್ರಗಳಲ್ಲಿ ಮೌಲ, ಭೃತ, ಮಿತ್ರ ಮತ್ತು ಶ್ರೇಣಿ ಎಂಬ ನಾಲ್ಕು ವಿಧದ ಸೇನೆಗಳನ್ನು ಹೆಸರಿಸಲಾಗಿದೆ. ಈ ರಾಜವಂಶದ ಮೂಲ ಪುರುಷನಾದ ಭಟಾರ್ಕನು ಲಾಟ ಮತ್ತು ಸಾರಾಷ್ಟ್ರಪ್ರದೇಶಗಳಲ್ಲಿ ಕಾರ್ಯನಿರತವಾಗಿದ್ದ ಅರೆಸೇನಾಪಡೆಗಳ ಸಹಾಯದಿಂದ ತನ್ನ ರಾಜ್ಯವನ್ನು ಕಟ್ಟಿಕೊಂಡಿರಬಹುದಾದ ವಿಷಯ ಈ ಶಾಸನಗಳಿಂದ ವ್ಯಕ್ತಗೊಳ್ಳುತ್ತದೆ. ಮೈತ್ರಕರ ಸೇನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆನೆಗಳಿದ್ದಿರಬಹುದೆಂಬ ಸುಳಿವು ದೊರೆಯುತ್ತದೆ. ಇದರಂತೆ ಮೌಖರಿ ಅರಸರ ಸೇನೆಯಲ್ಲಿಯೂ ಆನೆಗಳು ಹೆಚ್ಚಾಗಿದ್ದವು. ಆಯುಧಗಳಲ್ಲಿ ಬಿಲ್ಲು-ಬಾಣಗಳು ಮುಖ್ಯವಾಗಿದ್ದವು.

ರುದ್ರದಾಮನ್‌ನ ಜುನಾಗಡ ಶಾಸನದಲ್ಲಿ ವ್ಯವಹಾರ, ಪೌರ ಮತ್ತು ಜಾನಪದಗಳೆಂಬ ಪದಗಳು ಬಂದಿವೆ. ಸಂದರ್ಭಾನುಸಾರ ಇಲ್ಲಿ ವ್ಯವಹಾರವೆಂದರೆ ನ್ಯಾಯದಾನ ವ್ಯವಸ್ಥೆಯೆಂದು ಅರ್ಥೈಸಲಾಗಿದೆ. ಕೆಲವು ಗುಪ್ತಪೂರ್ವ ಶಾಸನಗಳಿಂದ ಶ್ರೇಣಿ ಎಂದು ಕರೆಯಲಾದ ವ್ಯಾಪಾರೀಸಂಘಗಳು, ಕುಶಲಕರ್ಮಿಗಳ ಸಂಘಗಳು ನ್ಯಾಯದಾನದ ಕೆಲಸವನ್ನು ನಿರ್ವಹಿಸುತ್ತಿದ್ದವೆಂದು ತಿಳಿದುಬಂದಿದೆ. ಈ ಶ್ರೇಣೀ ನ್ಯಾಯಾಲಯಗಳು ತಮ್ಮ ಸಂಘದ ಸದಸ್ಯರಿಗೆ ಮಾತ್ರವಲ್ಲದೇ ಜನಸಾಮಾನ್ಯರಿಗೂ ನ್ಯಾಯದಾನಮಾಡುತ್ತಿದ್ದವೆಂಬುದಕ್ಕೆ ಯಾಜ್ಞವಲ್ಕ್ಯ ಸ್ಮೃತಿಯ ಆಧಾರವಿದೆ. ಗುಪ್ತರಕಾಲಕ್ಕೆ ಸೇರಿದ ಶಾಸನಗಳಲ್ಲಿ ಉಲ್ಲೇಖಿತವಾದ, ಅಧಿಷ್ಠಾನಾಧಿಕರಣ ಮತ್ತು ಅಷ್ಟಕುಲಾಧಿಕರಣ ಎಂಬ ಮಂಡಳಿಗಳು ನ್ಯಾಯದಾನದ ಕಾರ್ಯವನ್ನೂ ನಿರ್ವಹಿಸುತ್ತಿದ್ದಿರಬಹುದು. ಧರ್ಮಾಸನಾಧಿಕರಣವೆಂಬ ನ್ಯಾಯಾಲಯದ ಉಲ್ಲೇಖವೂ ಈ ಕಾಲದ ಶಾಸನಗಳಲ್ಲಿ ಬಂದಿದೆ. ದಂಡನಾಯಕ, ದಾಂಡಿಕ, ದಾಂಡಪಾಶಿಕ, ದಂಡೋಪಿ ಮತ್ತು ಚೌರೋದ್ಧರಣಿಕ ಎಂಬ ಅಧಿಕಾರಿಗಳು, ಅವರ ಹೆಸರುಗಳೇ ಸೂಚಿಸುವಂತೆ, ಕಳ್ಳರು ಮತ್ತು ಸಮಾಜಘಾತಕ ಶಕ್ತಿಗಳನ್ನು ನಿಗ್ರಹಿಸುವ ಕರ್ತವ್ಯದಲ್ಲಿ ನಿರತರಾಗಿದ್ದರು. ಇವರಲ್ಲದೆ ದಾಂಡಭೋಗಿಕ, ದಶಾಪರಾಧಿಕ ಮತ್ತು ಅವಲೋಕ್ಕಿ ಎಂಬ ಅಧಿಕಾರಿಗಳು ಮೈತ್ರಕರ ಶಾಸನಗಳಲ್ಲಿ ಉಕ್ತರಾಗಿದ್ದಾರೆ. ಮೈತ್ರಕರ ಸಂಬಂಧಿಯಾಗಿರಬಹುದಾದ ವಿಷ್ಣುಷೇಣನೆಂಬ ಅರಸನ 592 ಮತ್ತು 602ನೆಯ ವರ್ಷದ ತಾಮ್ರಪತ್ರದಲ್ಲಿ ವ್ಯಾಪಾರೀ ಸಂಘವೊಂದಕ್ಕೆ ವಿಧಿಸಲಾದ 72 ನಿಯಮಗಳಿವೆ. ಇವುಗಳಲ್ಲಿ ಅಪರಾಧ, ಶಿಕ್ಷೆ ಮತ್ತು ನ್ಯಾಯದಾನಕ್ಕೆ ಸಂಬಂಧಿಸಿದ ಅನೇಕ ಸ್ವಾರಸ್ಯಕರ ವಿಷಯಗಳಿವೆ.

ಕ್ಷತ್ರಪ ಅರಸ ರುದ್ರದಾಮನ್‌ನ ಜುನಾಗಡದ ಶಾಸನದಲ್ಲಿ ಅವನ ಆಳಿಕೆಯಲ್ಲಿ ವರ್ಣಾಶ್ರಮವ್ಯವಸ್ಥೆ ಅಸ್ತಿತ್ವದಲ್ಲಿತ್ತೆಂದು ತಿಳಿಸುವ ಕೆಲ ಸೂಚನೆಗಳಿವೆ. ಅಲ್ಲಿ ಎಲ್ಲ ವರ್ಣದ ಜನರು ಸೇರಿಕೊಂಡು ಅವನನ್ನು ತಮ್ಮ ರಾಜನನ್ನಾಗಿ ಆಯ್ಕೆಮಾಡಿದ್ದರೆಂದು ಮತ್ತು ಯೌಧೇಯರು ಎಲ್ಲ ಕ್ಷತ್ರಿಯರಲ್ಲೂ ಶೂರರಾಗಿದ್ದರೆಂದು ಹೇಳಲಾಗಿದೆ. ಗುಪ್ತರ ಆಳ್ವಿಕೆಯಕಾಲದಿಂದಾರಂಭಿಸಿ ಬ್ರಾಹ್ಮಣಧರ್ಮದ ಪುನರುತ್ಥಾನಕ್ಕೆ ಮೊದಲಾಯಿತು ಎಂದು ಸಮಕಾಲೀನ ಶಾಸನಗಳಿಂದ ತಿಳಿದುಬರುತ್ತದೆ. ಸಮುದ್ರಗುಪ್ತನ ನಾಲಂದ ತಾಮ್ರಶಾಸನದಲ್ಲಿ ತ್ರೈವಿದ್ಯ ಬ್ರಾಹ್ಮಣನೊಬ್ಬನಿಗೆ ಎರಡು ಗ್ರಾಮಗಳನ್ನು ದಾನಕೊಟ್ಟ ವಿಷಯವಿದೆ. ಸ್ಕಂದಗುಪ್ತನ

ಶಾಸನವೊಂದರಲ್ಲಿ ಚತುರ್ವೇದಿ ಬ್ರಾಹ್ಮಣರ ಉಲ್ಲೇಖವಿದೆ. ಒಂದನೆಯ ಕುಮಾರಗುಪ್ತ ಮತ್ತು ಬಂಧುವರ್ಮರ ಮಂಡಸೋರ್ ಶಾಸನದಲ್ಲಿ ದಶಪುರದ ಬ್ರಾಹ್ಮಣರನ್ನು ಸತ್ಯ, ಕ್ಷಮೆ, ದಮ, ಶಮ, ವ್ರತ, ಶೌಚ, ಧೈರ್ಯ, ಸ್ವಾಧ್ಯಾಯವೃತಿ, ಸನ್ನಡತೆಗಳಿಂದ ಕೂಡಿದ ವಿದ್ಯಾ-ತಪೋನಿಧಿಗಳೆಂದು ಬಣ್ಣಿಸಲಾಗಿದೆ. ಅಗ್ನಿಹೋತ್ರ ಮೊದಲಾದ ಪಂಚಮಹಾಯಜ್ಞಗಳ ಉಲ್ಲೇಖವೂ ಈ ಕಾಲದ ಶಾಸನಗಳಲ್ಲಿ ಕಂಡುಬಂದಿದೆ. ಸಂಕ್ಷೋಭ ಮಹಾರಾಜನ ಬೇತುಲದ ತಾಮ್ರಶಾಸನದಲ್ಲಿ ಅವನನ್ನು ವರ್ಣಾಶ್ರಮಧರ್ಮಸ್ಥಾಪನಾವಿರತನೆಂದು ಹೇಳಲಾಗಿದೆ. 6ನೆಯ ಶತಮಾನದಲ್ಲಿದ್ದ ಮೌಖರಿ ಅರಸರು ವರ್ಣಾಶ್ರಮವ್ಯವಸ್ಥೆಯನ್ನು ಪುರಸ್ಕರಿಸಿದರೆಂದು ತಿಳಿದುಬಂದಿದೆ. ಅನಂತರದ ಕಾಲದಲ್ಲಿ ಉತ್ತರಭಾರತದ ಬೇರೆಬೇರೆ ಪ್ರದೇಶಗಳನ್ನಾಳಿದ ಮೈತ್ರಕರು, ಅವರ ನೆರೆಯವರಾದ ಗುರ್ಜರರು, ಹರ್ಷವರ್ಧನ, ಗೌಡಅರಸ ಶಶಾಂಕ–ಇವರೆಲ್ಲರೂ ವರ್ಣಾಶ್ರಮವ್ಯವಸ್ಥೆಯನ್ನು ಬೆಂಬಲಿಸಿದ್ದರೆಂದು ಅವರ ಶಾಸನಗಳಿಂದ ಗೊತ್ತಾಗುತ್ತದೆ. ಮೈತ್ರಕ ಮತ್ತು ಮೌಖರಿಗಳನ್ನು ಹೊರತುಪಡಿಸಿ ಈ ಕಾಲಾವಧಿಯಲ್ಲಾಳಿದ ಅರಸರಾರೂ ಕ್ಷತ್ರಿಯರಾಗಿರಲಿಲ್ಲ.

ಭೂಮಿ, ಕೃಷಿ ಮತ್ತು ನೀರಾವರಿಗೆ ಸಂಬಂಧಿಸಿದ ಅನೇಕ ವಿಷಯಗಳು ಸಂಸ್ಕೃತ ಶಾಸನಗಳಲ್ಲಿ ಕಂಡುಬರುತ್ತವೆ. ಗುಪ್ತರಕಾಲದಲ್ಲಿ ಅಗ್ರಹಾರ ಮತ್ತು ಬ್ರಹ್ಮದೇಯಗಳ ರೂಪದಲ್ಲಿ ಕೊಡಲಾದ ಭೂಮಿದಾನ ಶಾಸನಗಳಲ್ಲಿ ವಿಧಿಸಲಾದ ನಿಬಂಧನೆಗಳ ಹಿನ್ನೆಲೆಯಲ್ಲಿ ಭೂಮಿ ಯೆಲ್ಲವೂ ರಾಜನಿಗೇ ಸೇರಿತ್ತೆಂದು ತಿಳಿಯುತ್ತದೆ. ಭೂಮಿದಾನ ಮಾಡಲೆಳಸುವ ಸಾಮಾನ್ಯ ಜನರು ಸರಕಾರಕ್ಕೆ ಸೂಕ್ತ ಮೊತ್ತವನ್ನು ಸಲ್ಲಿಸಿ ಭೂಮಿಯನ್ನು ಪಡೆದು ದಾನಮಾಡ ಬೇಕಾಗುತ್ತಿತ್ತು. ಈ ರೀತಿ ಬ್ರಾಹ್ಮಣರಿಗೆ ಕೊಟ್ಟ ಭೂಮಿ ಅವರ ಜೀವನೋಪಾಯಕ್ಕಾಗಿ ಒಂದು ಸಾಧನವಾಗುತ್ತಿತ್ತೆ ವಿನಾ ಅವರ ಸ್ವತ್ತಾಗುತ್ತಿರಲಿಲ್ಲ. ಆದರೆ ಮೈತ್ರಕರ ಕಾಲದ ದಾನಶಾಸನಗಳಿಂದ ರಾಜನಂತೆಯೇ ಬ್ರಾಹ್ಮಣರು ಮತ್ತು ಇತರರು ಭೂಮಿಯ ಸ್ವಾಮ್ಯವನ್ನು ಹೊಂದಬಹುದಾಗಿತ್ತೆಂದೂ ತಮ್ಮ ಭೂಮಿಯನ್ನು ಸ್ವೇಚ್ಛೆಯಂತೆ ಬೇರೆಯವರಿಗೆ ಹಸ್ತಾಂತರಿಸ ಬಹುದಾಗಿತ್ತೆಂದೂ ತಿಳಿದುಬರುತ್ತದೆ. ಭೂದಾನ ಶಾಸನಗಳಲ್ಲಿ ಕೆಲವೊಮ್ಮೆ ದಾನನೀಡಿದ ಭೂಮಿಯ ನಾಲ್ಕುದಿಕ್ಕುಗಳಲ್ಲಿ ಅದರ ಎಲ್ಲೆಗಳನ್ನು ಗುರುತಿಸಿ ನಿರ್ದೇಶಿಸಲಾಗಿರುತ್ತದೆ. ಶಾಸನಗಳ ಬಹುಭಾಗದಲ್ಲಿ ಈ ಸೀಮೆಗಳ ವರ್ಣನೆ ಇರುವುದುಂಟು.

ನೀರಾವರಿ ವ್ಯವಸ್ಥೆಯು ಕೃಷಿ ಉದ್ಯೋಗಕ್ಕೆ ಅತ್ಯಾವಶ್ಯಕವಾಗಿದ್ದು ಪ್ರಾಚೀನ ಭಾರತದಲ್ಲಿ ಆಳರಸರು, ಅಧಿಕಾರಿಗಳು ಮತ್ತು ಜನಸಾಮಾನ್ಯರು ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿವಹಿಸು ತ್ತಿದ್ದರೆಂಬುದು ಶಾಸನಗಳಿಂದ ತಿಳಿದುಬಂದಿದೆ. ರುದ್ರದಾಮನ್‌ನ ಜುನಾಗಡದ ಶಾಸನ ಮತ್ತು ಅದೇ ಸ್ಥಳದಲ್ಲಿರುವ ಸ್ಕಂದಗುಪ್ತನ ಶಾಸನಗಳಲ್ಲಿ ಸುದರ್ಶನತಟಾಕವೆಂಬ ವಿಶಾಲವಾದ ಕೆರೆಯೊಂದರ ವೃತ್ತಾಂತವಿದ್ದು ಮೌರ್ಯ ಸಾಮ್ರಾಟ ಚಂದ್ರಗುಪ್ತನ ಕಾಲದಿಂದಲೂ ನೀರಾವರಿಗೆ ಹೆಚ್ಚಿನ ಮಹತ್ತ್ವವಿತ್ತೆಂಬುದು ತಿಳಿದುಬರುತ್ತದೆ. ಚಂದ್ರಗುಪ್ತನ ಒಬ್ಬ ಪ್ರಾಂತಾಧಿ ಕಾರಿಯಾದ ವೈಶ್ಯ ಪುಷ್ಯಗುಪ್ತನೆಂಬುವನಿಂದ ಈ ಜಲಾಶಯ ನಿರ್ಮಿತವಾಯಿತು. ಅನಂತರ ಅಶೋಕನ ಸಲಹೆಯ ಮೇರೆಗೆ ಇದಕ್ಕೆ ಕಾಲುವೆಗಳನ್ನು ಒದಗಿಸಲಾಯಿತು. ಮುಂದೆ 150ರಲ್ಲಿ ಭಾರೀಮಳೆಯಿಂದಾಗಿ ಈ ಜಲಾಶಯದ ಗೋಡೆಗಳಲ್ಲಿ ದೊಡ್ಡಪ್ರಮಾಣದ ಬಿರುಕುಗುಳುಂಟಾಗಿ ನೀರು ಸೋರಿಹೋಗಿ ಹೆಚ್ಚಿನ ಹಾನಿಯುಂಟಾಯಿತು. ಇದನ್ನು ಕಂಡ ಜನರೆಲ್ಲ ದುಃಖದಿಂದ ಗೋಳಿಟ್ಟರು. ಆಗ ಅರಸನಾದ ರುದ್ರದಾಮನ್‌ನು ಸ್ವಂತ ಕೋಶದಿಂದ ಅಪಾರ ದಾನವನ್ನು ವ್ಯಯಿಸಿ ಜಲಾಶಯದ ದುರಸ್ತಿಕಾರ್ಯವನ್ನು ಪೂರ್ಣಗೊಳಿಸಿ ಜನಹಿತವನ್ನು ಸಾಧಿಸಿದ. ಕಾಲಾನುಕ್ರಮದಲ್ಲಿ 455–56 ರಲ್ಲಿ ಹೆಚ್ಚಿನ ಮಳೆಯಿಂದಾಗಿ ಮತ್ತೊಮ್ಮೆ ಈ ಜಲಾಶಯದ ಒಡ್ಡುಗಳೊಡೆದು ಅದಕ್ಕೆ ಹಾನಿಯುಂಟಾಯಿತು. ಆಗ ಸ್ಕಂದಗುಪ್ತನ ಅಧಿಕಾರಿಯಾದ ಚಕ್ರಪಾಲಿತನೆಂಬುವವನು ಬಿರುಕುಗಳನ್ನು ಮುಚ್ಚಿಸಿ ಒಡ್ಡುಗಳನ್ನು ಸರಿಪಡಿಸಿದ. ಎರಡು ತಿಂಗಳುಗಳ ಅವಧಿಯಲ್ಲಿ ಕೆರೆಯ ದುರಸ್ತಿಕಾರ್ಯವನ್ನು ಪೂರೈಸಿ ಜನರ ಆತಂಕವನ್ನು ನಿವಾರಿಸಿದ. ಮೈತ್ರಕರ ಶಾಸನಗಳಲ್ಲಿ ನೀರಾವರಿಗಾಗಿ ಬಾವಿಗಳ ನಿರ್ಮಾಣದ ಹೆಚ್ಚಿನ ಉಲ್ಲೇಖಗಳಿವೆ. ಇವರ ದಾನಶಾಸನಗಳಲ್ಲಿ ನೀರಾವರಿಬಾವಿ (ವಾಪೀ)ಗಳ ಉಲ್ಲೇಖ ತಪ್ಪದೇ ಬರುತ್ತದೆ. ಪಾದಾವರ್ತವೆಂಬ ಅಳತೆಯಲ್ಲಿ ಬಾವಿಗಳ ವಿಸ್ತಾರಗಳನ್ನೂ ಸೂಚಿಸಲಾಗಿದೆ. ಖಜ್ಜೂರಿ–ವಾಪೀ, ಸೆರಿದ್ರಹ–ವಾಪೀ, ರಾಜಕೀಯ–ವಾಪೀ ಎಂಬ ಬಾವಿಗಳ ಹೆಸರುಗಳಲ್ಲದೆ ಮಲ್ಲ–ತಡಾಗವೆಂಬ ಕೆರೆಯ ಹೆಸರನ್ನು ನಮೂದಿಸಲಾಗಿದೆ.

ವಾಣಿಜ್ಯೋದ್ಯಮವನ್ನು ಕುರಿತಾದ ಕೆಲ ಉಲ್ಲೇಖಗಳೂ ಸಂಸ್ಕೃತ ಶಾಸನಗಳಲ್ಲಿ ಕಂಡುಬಂದಿವೆ. ಶ್ರೇಷ್ಠಿ, ಸಾರ್ಥವಾಹ, ವಣಿಜ, ಸಾಧು ಮುಂತಾದ ವ್ಯಾಪಾರಿಯ ಪರ್ಯಾಯ ಪದಗಳು ಲಭ್ಯವಿದೆ. ಇದೇ ವರ್ಗಕ್ಕೆ ಸೇರಿದ ಪೋಟ್ಟಲಿಕಾಪುತ್ರ ಎಂಬ ಪದವನ್ನು ಚಿಲ್ಲರೆ ವ್ಯಾಪಾರಿ ಎಂದು ಅರ್ಥೈಸಲಾಗಿದೆ. ವಿಷ್ಣುಷೇಣನ ಶಾಸನದಲ್ಲಿ ವ್ಯಾಪಾರಿಗಳ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಅನೇಕ ನಿಯಮಗಳನ್ನು ವಿಧಿಸಲಾಗಿದೆ. ಶಾಸನಗಳಲ್ಲಿ ಕಂಡುಬರುವ ಪ್ರಸ್ತರಿತ–ಶ್ರೇಣಿ, ಪಾಷಾಣ–ಸ್ಥಲಿಕಾ, ಆಗಾರ ಮುಂತಾದವು ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಕಲ್ಲನ್ನು ಪಡೆಯುವುದನ್ನು, ಅದರ ವ್ಯಾಪಾರ ಮಾಡುವುದನ್ನು ಸೂಚಿಸುವ ಶಬ್ದಗಳು. ಮದ್ಯಪಾನ ಅತ್ಯಂತ ಜನಪ್ರಿಯವಾಗಿದ್ದು ಮದ್ಯತಯಾರಿಕೆ ಇನ್ನೊಂದು ಮುಖ್ಯ ಉದ್ಯಮವಾಗಿತ್ತು. ಮದ್ಯ, ಸುರಾ, ಶೀಧು ಮುಂತಾದ ಹೆಸರುಗಳು ಶಾಸನಗಳಲ್ಲಿ ಕಂಡುಬಂದಿದೆ. ಮರಗೆಲಸ, ಕಮ್ಮಾರಿಕೆ, ಕುಂಬಾರಿಕೆ, ಬಿದಿರಿನ ಕೆಲಸ, ಕುದುರೆಯ ಜೀನು ತಯಾರಿಕೆ, ಪಾದರಕ್ಷೆ ತಯಾರಿಕೆ, ಬಟ್ಟೆಗಳಿಗೆ ಬಣ್ಣಹಾಕುವುದು, ಆಭರಣಗಳ ತಯಾರಿಕೆ, ಸುಗಂಧದ್ರವ್ಯಗಳ ತಯಾರಿಕೆ ಮುಂತಾದ ಅನೇಕ ಉದ್ಯೋಗಗಳ ಉಲ್ಲೇಖ ಶಾಸನಗಳಲ್ಲಿ ದೊರೆತಿದೆ. ವರ್ತಕರು ಮತ್ತು ಕುಶಲಕರ್ಮಿಗಳು ತಮ್ಮ ಕಾರ್ಯಚಟುವಟಿಕೆಗಳಿಗಾಗಿ ವ್ಯಾಪಾರಿ ಸಂಘ ಅಥವಾ ವೃತ್ತಿ ಸಂಘಗಳನ್ನು ಕಟ್ಟಿಕೊಳ್ಳುತ್ತಿದ್ದರು. ಇವುಗಳಿಗೆ ಶ್ರೇಣಿ ಎಂಬ ಹೆಸರಿತ್ತು. ಪ್ರಸ್ತರಿಕ–ಶ್ರೇಣಿ, ತೈಲಿಕ –ಶ್ರೇಣಿ, ಪಟ್ಟನಾಯಕ–ಶ್ರೇಣಿ ಮುಂತಾದ ಸಂಘಗಳ ಉಲ್ಲೇಖ ಶಾಸನಗಳಲ್ಲಿದೆ. ಈ ಸಂಘಗಳು ತಮ್ಮ ಕಾರ್ಯವನ್ನು ಕೇವಲ ವ್ಯಾಪಾರೋದ್ಯಮಗಳಿಗೆ ಸೀಮಿತಗೊಳಿಸದೆ ಸಮಾಜ ಸೇವೆ ಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದವು.

ಗುಪ್ತರ ಆಳ್ವಿಕೆಯಿಂದಾರಂಭಿಸಿ ಪೌರಾಣಿಕ ಧರ್ಮಗಳ ಪುನರುತ್ಥಾನ ಪ್ರಾರಂಭವಾದರೂ ಬೌದ್ಧ ಮತ್ತು ಜೈನಧರ್ಮಗಳಿಗೆ ಹಿನ್ನಡೆಯುಂಟಾಗಲಿಲ್ಲ. ಈ ಕಾಲಾವಧಿಗೆ ಸೇರಿದ ಅನೇಕ ಶಾಸನಗಳಲ್ಲಿ ಈ ಧರ್ಮಗಳ ಅನುಯಾಯಿಗಳಿಗಾಗಿ ವಿಹಾರಗಳನ್ನು, ಸ್ತೂಪಗಳನ್ನು ಮತ್ತು ವಿಗ್ರಹಗಳನ್ನು ನಿರ್ಮಿಸಲಾದ ಮತ್ತು ಭೂದಾನವನ್ನು ಕೊಟ್ಟ ಉಲ್ಲೇಖಗಳಿವೆ. ಬೌದ್ಧ ಮತ್ತು ಜೈನಧರ್ಮಗಳು ಅನೇಕ ಶಾಖೋಪಶಾಖೆಗಳಲ್ಲಿ ಹಂಚಿ–ಹೋಗಿದ್ದವೆಂದು ತಿಳಿದುಬರುತ್ತದೆ.

1ನೆಯ ಶತಮಾನದಿಂದಾರಂಭಿಸಿ, ಉತ್ತರ ಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ದೊರೆತ ಕೆಲಶಾಸನಗಳು ವೈದಿಕಧರ್ಮದ ಮುಖ್ಯ ಲಕ್ಷಣವಾದ ಯಜ್ಞಗಳ ಆಚರಣೆಯನ್ನು ಕುರಿತು ತಿಳಿಸುತ್ತವೆ. ಅಶ್ವಮೇಧ, ಸಪ್ತಸೋಮ, ಏಕಷಷ್ಠಿರಾತ್ರ, ತ್ರಿರಾತ್ರ, ಆಪ್ತೋರ್ಯಾಮ, ಗರ್ಗತ್ರಿರಾತ್ರ ಮುಂತಾದ ಯಜ್ಞಗಳ ಆಚರಣೆಯ ಮತ್ತು ತನ್ನಿಮಿತ್ತವಾಗಿ ಯೂಪಸ್ಥಾಪನೆಯ ವಿಷಯ 1, 2 ಮತ್ತು 3ನೆಯ ಶತಮಾನದ ಶಾಸನಗಳಲ್ಲಿ ಬಂದಿದೆ. ಇಂಥ ಕೆಲ ಶಾಸನಗಳಲ್ಲಿ ಶಿವ ಮತ್ತು ವಿಷ್ಣು ದೇವತೆಗಳ ಆರಾಧನೆಯೂ ಇರುವುದರಿಂದ ಈ ಕಾಲದಲ್ಲಿ ವೈದಿಕ ಮತ್ತು ಪೌರಾಣಿಕ ಧರ್ಮಗಳು ಪರಸ್ಪರ ಪೂರಕವಾಗಿ ಬೆಳೆಯುತ್ತಿದ್ದವೆಂದು ತಿಳಿದುಬರುತ್ತದೆ. ಪ್ರ.ಶ.ಪೂ. 1ನೆಯ ಶತಮಾನದಿಂದಾರಂಭಿಸಿ ಗುಪ್ತರಕಾಲದವರೆಗಿನ ಕಾಲಾವಧಿಗೆ ಸೇರಿದ ಕೆಲಶಾಸನಗಳಿಂದ, ನಾರಾಯಣ–ವಾಟಿಕಾ ಎಂಬ ಆವರಣದ ನಿರ್ಮಾಣ, ಭಾಗವತ ನಟಕನಿಂದ ಇಟ್ಟಿಗೆಯ ಮಂದಿರದ ನಿರ್ಮಾಣ, ವೃಷ್ಣಿಕುಲದ ಪಂಚವೀರರ ವಿಗ್ರಹಗಳ ಸ್ಥಾಪನೆ ಮತ್ತು ಭಗವಾನ್ ವಾಸುದೇವನ ದೇವಾಲಯದ ತೋರಣ (ಪ್ರವೇಶದ್ವಾರ) ನಿರ್ಮಾಣದ ವಿಷಯಗಳು ತಿಳಿಯುತ್ತವೆ. ಈ ಕಾಲದಲ್ಲಿ ಅನೇಕ ವೈಷ್ಣವದೇವಾಲಯಗಳು ನಿರ್ಮಾಣಗೊಂಡವು. ಎರಡನೆಯ ಚಂದ್ರಗುಪ್ತನಿಂದ ನಿರ್ಮಿತ ಮೆಹರೋಲಿಯ ಉಕ್ಕಿನ ಕಂಬವನ್ನು ವಿಷ್ಣುಧ್ವಜವೆಂದು ಕರೆಯಲಾಗಿದೆ. ವಿಷ್ಣುವಿನ ದಶಾವತಾರಗಳಲ್ಲಿ ವರಾಹ, ನಾರಸಿಂಹ, ವಾಮನ ಮತ್ತು ರಾಮಾವತಾರಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ನಾರಾಯಣ, ಮಧುಸೂದನ, ಗೋವಿಂದ ಮುಂತಾದ ವಿಷ್ಣುವಿನ ವಿಭಿನ್ನ ನಾಮಗಳು ಕಂಡುಬಂದಿವೆ. ಅದರಂತೆ ಶೈವಧರ್ಮಕ್ಕೂ ಈ ಕಾಲದಲ್ಲಿ ಸಾಕಷ್ಟು ಪ್ರೋತ್ಸಾಹವಿತ್ತು. ಎರಡನೆಯ ಚಂದ್ರಗುಪ್ತನ ಕಾಲದಲ್ಲಿಯೇ ಉಪಮಿತೇಶ್ವರ ಮತ್ತು ಕಪಿಲೇಶ್ವರ ಎಂಬೆರಡು ಸ್ಮಾರಕಲಿಂಗಗಳನ್ನು ಮಥುರದಲ್ಲಿ ಸ್ಥಾಪಿಸಲಾಯಿತು. ಉಪಮಿತ ಮತ್ತು ಕಪಿಲ ಎಂಬುವವರು ಪಾಶುಪತಾಚಾರ್ಯರಾಗಿದ್ದರು. ಹೀಗೆ ಧರ್ಮಾಚಾರ್ಯರ, ರಾಜ–ಮಹಾರಾಜರ ಅಥವಾ ಖ್ಯಾತವ್ಯಕ್ತಿಗಳ ಹೆಸರಿನಲ್ಲಿ ಲಿಂಗಗಳನ್ನು ಸ್ಥಾಪಿಸುವ ಪದ್ಧತಿ ಶೈವಧರ್ಮದಲ್ಲಿದ್ದಿತು. ವಲಭಿಯ ಮೈತ್ರಕರು, ಮಹಾಶಿವಗುಪ್ತ ಬಾಲಾರ್ಜುನ ಮತ್ತು ಪಾಂಡುವಂಶೀ ಅರಸರು ಶೈವಧರ್ಮವನ್ನು ಬೆಂಬಲಿಸುತ್ತಿದ್ದರು.

ಮಾತೃದೇವತೆಯ ಪೂಜೆ ಜನಪ್ರಿಯವಾಗಿತ್ತು. ಪಾರ್ವತಿಯನ್ನು ಭದ್ರಾರ್ಯಾ, ಕ್ಷೇಮಾರ್ಯಾ, ಕಾತ್ಯಾಯನೀ, ಭವಾನೀ ಮುಂತಾದ ಹೆಸರುಗಳಿಂದ ಆರಾಧಿಸುತ್ತಿದ್ದರು. ಪಿಷ್ಟಪುರಿತಾ ಮತ್ತು ಕೋಟ್ಟಮ್ಮಿಕಾ ಎಂಬ ಸ್ಥಾನಿಕ ದೇವತೆಗಳ ಉಲ್ಲೇಖವೂ ಶಾಸನಗಳಲ್ಲಿ ದೊರೆತಿದೆ. ಇದಲ್ಲದೆ ಸೂರ್ಯೋಪಾಸನೆ, ಕಾರ್ತಿಕೇಯನ ಪೂಜೆ ಮತ್ತು ನಾಗಾರಾಧನೆ ಗಳೂ ಪ್ರಚಾರದಲ್ಲಿದ್ದವು. ದೇವಾಲಯಗಳಲ್ಲಿನ ಪೂಜೆ ಉತ್ಸವಾದಿ ಸೇವೆಗಳು ಉಲ್ಲೇಖಗಳು ಕಂಡುಬರುತ್ತವೆ.

ಸಂಸ್ಕೃತ ಸಾಹಿತ್ಯದ ಬೆಳವಣಿಗೆಯ ವಿವಿಧ ಹಂತಗಳನ್ನು ಗುರುತಿಸುವಲ್ಲಿಯೂ ಶಾಸನಗಳು ಉಪಯುಕ್ತವೆನಿಸಿವೆ. 1ನೆಯ ಶತಮಾನದ ವೇಳೆಗಾಗಲೇ ಶಾಸನಗಳಲ್ಲಿ ಸಂಸ್ಕೃತಕಾವ್ಯದ ಆವಿರ್ಭಾವವಾದದ್ದು ಕಂಡುಬರುತ್ತದೆ. ಕ್ಷೇತ್ರ ಪರಕಾಲದ ಶಾಸನವೊಂದರಲ್ಲಿ ಉತ್ಪ್ರೇಕ್ಷಾಲಂಕಾರ ಮತ್ತು ಭುಜಂಗವಿಜೃಂಭಿತವೆಂಬ ಛಂದಸ್ಸಿನ ಪ್ರಯೋಗಗಳು ಕಂಡುಬಂದಿವೆ. ಜುನಾಗಡದ ರುದ್ರದಾಮನ್‌ನ ಶಾಸನದ ಪಾಠವನ್ನೋದಿದರೆ ಗದ್ಯಕಾವ್ಯ ಪ್ರಕಾರವು ಆಗಲೇ ರೂಪುಗೊಂಡಿತ್ತೆಂದು ತಿಳಿಯುತ್ತದೆ. ಇಲ್ಲಿ ಅನುಪ್ರಾಸ, ಉಪಮೆ, ಉತ್ಪ್ರೇಕ್ಷೆ ಮೊದಲಾದ ಅಲಂಕಾರಗಳಿವೆ. ಅನಂತರ 2 ಮತ್ತು 3ನೆಯ ಶತಮಾನದ ಕೆಲ ಶಾಸನಗಳಲ್ಲೂ ಕಾವ್ಯಾಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. 4ನೆಯ ಶತಮಾನಕ್ಕೆ ಸೇರಿದ ಸಮುದ್ರಗುಪ್ತನ ಅಲಹಾಬಾದ್ ಪ್ರಶಸ್ತಿಯಂತೂ ತನ್ನ ದೀರ್ಘಸಮಾಸಗಳಿಂದ ಕೂಡಿದ ಗದ್ಯಭಾಗದಿಂದಲೂ ಅಲಂಕೃತ ಪದ್ಯಗಳಿಂದಲೂ ಉತ್ತಮ ಕಾವ್ಯವೆನಿಸಿದೆ. ಈ ಪ್ರಶಸ್ತಿ ಬಿರುದು ಎಂಬ ವಿಶಿಷ್ಟವಾದ ಕಾವ್ಯ ಪ್ರಕಾರಕ್ಕೆ ಸೇರಿದೆ. ಕಾವ್ಯ ಶೈಲಿಯ ವಿಕಸನಕ್ಕೆ ಈ ರಚನೆಯೊಂದು ಉದಾಹರಣೆಯೆನಿಸಿದೆ. ಮುಂದಿನ ಶತಮಾನದಲ್ಲಿ ವತ್ಸಭಟ್ಟಿ, ರವಿಲ,

ವಾಸುಲ, ರವಿಶಾಂತಿ, ದಾಮೋದರ ಮತ್ತು ಭದ್ರ ಎಂಬ ಕವಿಗಳು ಅಲಂಕಾರ, ರೀತಿ, ಧ್ವನಿ ಮುಂತಾದ ಕಾವ್ಯಗುಣಾಲಂಕೃತ ಶಾಸನ–ಸಾಹಿತ್ಯವನ್ನು ರಚಿಸಿದ್ದಾರೆ. 7ನೆಯ ಶತಮಾನಕ್ಕೆ ಸೇರಿದ ಗುರ್ಜರ ಮತ್ತು ಮೈತ್ರಕರ ಶಾಸನಗಳು ಅಲಂಕಾರ, ಕವಿಸಮಯದಂಥ ಕಾವ್ಯಲಕ್ಷಣಗಳೊಡನೆ ದೀರ್ಘಸಮಾಸ ಮತ್ತು ಕಠಿಣ ವರ್ಣಗಳ ಬಳಕೆಯಿಂದಾಗಿ ಗೌಡೀಶೈಲಿಯ ಶ್ರೇಷ್ಠಮಟ್ಟದ ಗದ್ಯರಚನೆಗಳಾಗಿವೆ. ಹೀಗೆ ಉತ್ತರಭಾರತದ ವಿವಿಧ ಪ್ರದೇಶಗಳಲ್ಲಿ ದೊರೆತ ಈ ಶಾಸನಗಳುನ 1ನೆಯ ಶತಮಾನದಿಂದಾರಂಭಿಸಿ 7ನೆಯ ಶತಮಾನದ ಕಾಲಾವಧಿಯಲ್ಲಿ ಸಂಸ್ಕೃತ ಶಾಸನ–ಸಾಹಿತ್ಯ ಬೆಳೆದುಬಂದ ಬಗೆಯನ್ನು ಗುರುತಿಸುತ್ತವೆ. ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ದೊರೆಯುವ, ಬೇರೆಬೇರೆ ಕಾಲಾವಧಿಗೆ ಸೇರಿದ ಸಂಸ್ಕೃತ ಶಾಸನಗಳಲ್ಲೂ ಉತ್ತಮ ಗುಣದ ಕಾವ್ಯ ರಚನೆಗಳು ಕಂಡುಬಂದಿವೆ. ರಾಜಸ್ಥಾನದಲ್ಲಿ ಸಂಸ್ಕೃತ ನಾಟಕವೊಂದು (ಹರಕೇಳಿ ನಾಟಕ) ಶಾಸನದ ವಸ್ತುವಾಗಿರುವುದು ಗಮನಾರ್ಹ.

ಕರ್ನಾಟಕದಲ್ಲಿ ಸಂಸ್ಕೃತ ಭಾಷೆಯ ಪ್ರಾರಂಭವನ್ನು ಗುರುತಿಸುವುದು ಸುಲಭವಲ್ಲ. ಪ್ರಥಮ ಕನ್ನಡ ಶಾಸನವೆನ್ನಿಸಿಕೊಳ್ಳುವ ಹಲ್ಮಿಡಿ ಶಿಲಾಶಾಸನದಲ್ಲಿ ಕೆಲವು ಸಂಸ್ಕೃತ ಶಬ್ದಗಳಿವೆ. ಅದರ ಮಂಗಳ ಶ್ಲೋಕ ಸಂಸ್ಕೃತಭಾಷೆಯಲ್ಲಿದೆ. 5ನೆಯ ಶತಮಾನಕ್ಕೆ ಸೇರಿದ ಕದಂಬ ಅರಸ ಕಾಕುಸ್ಥವರ್ಮನ ತಾಳಗುಂದದ ಶಾಸನವೇ ಕರ್ನಾಟಕದ ಮೊದಲ ಸಂಸ್ಕೃತಶಾಸನವೆನಿಸಿದೆ. ಇದರ ಕಾವ್ಯಾತ್ಮಕ ಪಾಠವು ಕುಬ್ಜನೆಂಬ ಕವಿಯಿಂದ ರಚಿತವಾಯಿತು. 6ನೆಯ ಶತಮಾನಕ್ಕೆ ಸೇರಿದ ಗುಡ್ನಾಪುರದ ಶಾಸನ ಮತ್ತು ಮಹಾಕೂಟದ ಸ್ತಂಭಶಾಸನಗಳೂ ಕಾವ್ಯಾಂಶಗಳಿಂದ ಕೂಡಿವೆ. ಕೊನೆಗೆ ಹೆಸರಿಸಿದ ಶಾಸನ ಸಂಸ್ಕೃತ ಗದ್ಯದ ಉತ್ತಮ ಮಾದರಿಯೆನಿಸಿದೆ. ಮುಂದಿನ ಶತಮಾನದ ಅತ್ಯುತ್ತಮ ಸಂಸ್ಕೃತಕಾವ್ಯದ ಉದಾಹರಣೆ ಎರಡನೆಯ ಪುಲಕೇಶಿಯ ಪ್ರಖ್ಯಾತವಾದ ಐಹೊಳೆ ಶಾಸನದಲ್ಲಿದೆ. ರವಿಕೀರ್ತಿಯೆಂಬ ಕವಿ ಇದನ್ನು ರಚಿಸಿದ. ಪುಲಕೇಶಿಯ ದಿಗ್ವಿಜಯವೇ ಈ ಕಾವ್ಯದ ವಸ್ತು. ಇಲ್ಲಿ ರವಿಕೀರ್ತಿ ತನ್ನನ್ನು ಕಾಳಿದಾಸ ಮತ್ತು ಭಾರವಿಗಳೊಂದಿಗೆ ಹೋಲಿಸಿಕೊಂಡಿದ್ದಾನೆ. 5ನೆಯ ಶತಮಾನದಿಂದ 7ನೆಯ ಶತಮಾನದವರೆಗಿನ ಸು.3 ಶತಕಗಳ ಶಾಸನಗಳು ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿಯೇ ಇವೆ. ಅನಂತರದ ಶಾಸನಗಳು ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿದ್ದುದು ಕಂಡುಬಂದಿದೆ. ಈ ದ್ವಿಭಾಷಾ ಶಾಸನಗಳು ಹೆಚ್ಚಾಗಿ ಕದಂಬ, ಹೊಯ್ಸಳ, ಗಂಗ ಮತ್ತು ಚಾಳುಕ್ಯರ ಕಾಲಗಳಿಗೆ ಸಂಬಂಧಿಸಿವೆ. ಸಂಸ್ಕೃತ ಶಾಸನಗಳಲ್ಲಿಯೂ ದಾನವಾಗಿ ಕೊಟ್ಟ ಭೂಮಿಯ ಸೀಮಾರೇಖೆಗಳನ್ನು ಹಾಗೂ ದಾನದ ಹಲವಾರು ವಿಷಯಗಳನ್ನು ಕನ್ನಡ ಭಾಷೆಯಲ್ಲಿಯೇ ಬರೆದಿರುವುದು ಕಾಣುತ್ತದೆ. ರಾಷ್ಟ್ರಕೂಟ ಅರಸ ನೃಪತುಂಗನ ಕಾಲದಿಂದ ಮುಂದೆ ಕನ್ನಡ ಶಾಸನಗಳ ಸಂಖ್ಯೆ ಹೆಚ್ಚುತ್ತಾ ಹೋಗಿದೆ. ಆದರೂ ವಿಜಯನಗರದ ಕಾಲದಲ್ಲಿ ಮತ್ತೆ ಸಂಸ್ಕೃತ ಶಾಸನಗಳು ಕಂಡುಬಂದಿವೆ.

**ಭಾರತೇತರ ಸಂಸ್ಕೃತ ಶಾಸನಗಳು:** ಭಾರತದ ಸಾಂಸ್ಕೃತಿಕ ಪ್ರಭಾವಕ್ಕೊಳಗಾದ ದೇಶಗಳಿಗೆ ಒಟ್ಟಾಗಿ ಭಾರತದ ನೆರೆ ಹೊರೆಯೆಂದು ಕರೆದಿದೆ. ಭಾರತದಂತೆ ಕಂಬುಜ, ಚಂಪ, ಬರ್ಮ, ಜಾವ, ಬಲಿ, ನೇಪಾಲ, ಟಿಬೆಟ್ ಮುಂತಾದ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಕೃತ ಶಾಸನಗಳು ದೊರೆತಿವೆ. ಕಂಬುಜದಲ್ಲಿ ದೊರೆತ ಪ್ರಾಚೀನ ಚರಿತ್ರೆಗೆ ಸಂಬಂಧಿಸಿದ ಸು.300 ಶಾಸನಗಳಲ್ಲಿ ಸಂಸ್ಕೃತ ಭಾಷೆಯ ಶಾಸನಗಳೇ ವಿಶೇಷವಾಗಿವೆ. ಆಫ್ಘಾನಿಸ್ತಾನದ ಗರ್ದೆಜ್ ಎಂಬಲ್ಲಿ ದೊರೆತ ವಿನಾಯಕ–ವಿಗ್ರಹದ ಮೇಲಿನ ಸಂಸ್ಕೃತ ಭಾಷೆಯ ಶಾಸನವನ್ನು 6ನೆಯ ಶತಮಾನದ ಬ್ರಾಹ್ಮಿ ಅಕ್ಷರಗಳಲ್ಲಿ ಬರೆಯಲಾಗಿದೆ. ಶಾಹೀ ಅರಸ ಖಿಂಗಾಲನ ಆಳಿಕೆಯ ಎಂಟನೆಯ ವರ್ಷದಲ್ಲಿ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದುದು ಶಾಸನದ ವಸ್ತು. ನೇಪಾಲದಲ್ಲಿ ಲಿಚ್ಛವಿ ಅರಸರ ಅನೇಕ ಶಾಸನಗಳು ದೊರೆತಿದ್ದು, ಅವುಗಳಲ್ಲಿ ಮಾನದೇವನ ಚಂಗುನಾರಾಯಣ ಸ್ತಂಭಶಾಸನ (ಸಂವತ್ 386), ಇವನ ಪತ್ನಿ ಕ್ಷೇಮಸುಂದರಿಯ ಶಾಸನ (ಸಂವತ್ 390), ಸಂವತ್ 427ರ ಚಂಗು ಫಲಕ ಶಾಸನ, ವಸಂತದೇವನ ಸಂವತ್ 428ರ ಮಾನಗೃಹದ ಶಾಸನ ಮುಂತಾದವು ಮಾನದೇವನ ಚರಿತ್ರೆಯನ್ನು ತಿಳಿಸುತ್ತವೆ. ಈ ವಂಶದ ಮೊದಲ ಅರಸರ ಶಾಸನಗಳನ್ನು ಪೂರ್ವ ಭಾರತದ ಉತ್ತರ ಬ್ರಾಹ್ಮಿಲಿಪಿಯಲ್ಲಿ ಕಂಡರಿಸಿದ್ದು, ಅನಂತರದ ಅರಸರ ಸಂಸ್ಕೃತ ಶಾಸನಗಳು ಸಿದ್ಧಮಾತೃಕಾ ಲಿಪಿಯಲ್ಲಿವೆ.

ಸಿಂಹಳ ದ್ವೀಪದಲ್ಲಿ ಸಂಸ್ಕೃತ ಶಾಸನಗಳು ಅಪರೂಪವಾಗಿವೆ. 5ನೆಯ ಶತಮಾನದ ಬ್ರಾಹ್ಮೀ ಲಿಪಿಯಲ್ಲಿ ಬರೆದಿರುವ ರುವನವಲಿಸಯದ ಸ್ತಂಭಶಾಸನ ಮತ್ತು 7ನೆಯ ಶತಮಾನದ ಲಿಪಿಯಲ್ಲಿ ಬರೆದ ಕುಚ್ಚವೆಲಿಯ ಬಂಡೆ ಶಾಸನಗಳನ್ನು ಸಿಂಹಳ ದ್ವೀಪದ ಕೆಲವು ಪ್ರಾಚೀನ ಸಂಸ್ಕೃತ ಶಾಸನಗಳ ಉದಾಹರಣೆಗಳು. ಇಲ್ಲಿಯ ಜೇತವನಾರಾಮದ ಶಾಸನವನ್ನು ಸು.9ನೆಯ ಶತಮಾನದ ಸಿದ್ಧಮಾತೃಕಾ ಲಿಪಿಯಲ್ಲಿ ಬರೆಯಲಾಗಿದೆ. ಬರ್ಮ ದೇಶದಲ್ಲಿ ಅರಕನ್‌ದ ಚಂದ್ರ ಅರಸರಿಗೆ ಸೇರಿದ ಸರಳ ಸಂಸ್ಕೃತ ಪದ್ಯರೂಪದ ಶಾಸನಗಳು ದೊರೆತಿವೆ. ಇವು ಸು.6ನೆಯ ಶತಮಾನಕ್ಕೆ ಸೇರಿದ್ದು, ಶೈಲಿಯಲ್ಲಿ ಬೋರ್ನಿಯದ ಮೂಲವರ್ಮನ ಶಾಸನಗಳನ್ನು ಹೋಲುತ್ತವೆ. ಇದೇ ಪ್ರದೇಶದಲ್ಲಿ ದೊರೆತ ಆನಂದಚಂದ್ರನ ಶಾಸನ (8ನೆಯ ಶತಮಾನ) ಈ ದೇಶದಲ್ಲಿ ದೊರೆತ ಅಪರೂಪದ ಸಂಸ್ಕೃತ ಪ್ರಶಸ್ತಿಯಾಗಿದೆ. ಇದನ್ನು ಪೂರ್ವಭಾರತದ ಸಿದ್ಧಮಾತೃಕಾ ಲಿಪಿಯಲ್ಲಿ ಬರೆಯಲಾಗಿದೆ. 13ನೆಯ ಶತಮಾನದ ಪಾಗನ್ ಶಾಸನವೊಂದನ್ನು ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಬರೆಯಲಾಗಿದ್ದು, ಇದು ಮಲಬಾರಿನ ಕ್ರಂಗನೋರಿನ ವೈಷ್ಣವ ಭಕ್ತನು ಪಾಗನ್‌ದಲ್ಲಿರುವ ವಿಷ್ಣುಮಂದಿರಕ್ಕೆ ಕೆಲ ಕಾಣಿಕೆಗಳನ್ನು ಸಲ್ಲಿಸಿದನೆಂದು ಹೇಳುತ್ತದೆ. ಕಂಬುಜದ ಅರಸ ಇಂದ್ರವರ್ಮನ 886ರ ಶಾಸನವೊಂದು ಬರ್ನ್‌ಬುನ್‌ಗ್ನೆ ಎಂಬಲ್ಲಿ ದೊರೆತಿದ್ದು, ಇದು ಸಯಾಮ್ ದೇಶದಲ್ಲಿ ದೊರೆತ ಪ್ರಾಚೀನ ಸಂಸ್ಕೃತ ಶಾಸನವಾಗಿದೆ. ಮಲಯ ದ್ವೀಪಕಲ್ಪದಲ್ಲಿ ದೊರೆತ ಅತ್ಯಂತ ಹಳೆಯ ಶಾಸನಗಳು ಬೌದ್ಧಧರ್ಮಕ್ಕೆ ಸಂಬಂಧಿಸಿವೆ. ಇವುಗಳಲ್ಲೊಂದರಲ್ಲಿ ರಕ್ತಮೃತ್ತಿಕಾದ (ಬಂಗಾಲದ ಮುರ್ಶಿದಾಬಾದದ ಹತ್ತಿರದ ಒಂದೂರು) ಮಹಾನಾವಿಕ ಬುದ್ಧಗುಪ್ತನನ್ನು ಹೆಸರಿಸುತ್ತದೆ. ಇವುಗಳನ್ನು 5 ಅಥವಾ 6ನೆಯ ಶತಮಾನದ ಬ್ರಾಹ್ಮಿಲಿಪಿಯಲ್ಲಿ ಬರೆಯಲಾಗಿದೆ. ಇಂಡೋನೇಷ್ಯದ ಅತ್ಯಂತ ಹಳೆಯ ಶಾಸನಗಳು ಸಂಸ್ಕೃತ ಪದ್ಯದಲ್ಲಿವೆ. ಮಧ್ಯಯುಗದ ಶಾಸನಗಳು ಹೆಚ್ಚಾಗಿ ಅಲಂಕೃತ ಕಾವ್ಯ ಶೈಲಿಯಲ್ಲಿವೆ. ಆದರೆ ಗಾತ್ರದಲ್ಲಿ ಇವು ಕಂಬುಜದ ಶಾಸನಗಳಷ್ಟು ದೀರ್ಘವಾಗಿಲ್ಲ. ಬೋರ್ನಿಯದ ಕುಟೈ ಎಂಬಲ್ಲಿ ಅಶ್ವವರ್ಮನ ಮಗ ಮೂಲವರ್ಮನ ಶಾಸನಗಳು ದೊರೆತಿವೆ. ಇವುಗಳಲ್ಲಿ ಈ ಅರಸನು ಬಹುಸುವರ್ಣವೆಂಬ ಯಜ್ಞವನ್ನು ಮಾಡಿದ ವಿಷಯವಿದೆ. ಇವು 4ನೆಯ ಶತಮಾನಕ್ಕೆ ಸೇರಿದ್ದು ಅನುಷ್ಟುಪ್ ಛಂದಸ್ಸಿನಲ್ಲಿ ರಚಿತವಾಗಿವೆ. ಜಾವದಲ್ಲಿ ದೊರೆತ ಪೂರ್ಣವರ್ಮನ ಶಾಸನಗಳು 6ನೆಯ ಶತಮಾನಕ್ಕೆ ಸೇರಿದ್ದು ಇವುಗಳಲ್ಲೊಂದು ಪದ್ಯವನ್ನು ಸ್ರಗ್ಧರಾವೃತ್ತದಲ್ಲಿ ರಚಿಸಲಾಗಿದೆ. ಶ್ರೀವಿಜಯದ ಶೈಲೇಂದ್ರ ಅರಸರು ತಮ್ಮ ಶಾಸನಗಳಲ್ಲಿ ಪೂರ್ವ ಭಾರತದ ಸಿದ್ಧಮಾತೃಕಾ ಲಿಪಿಯನ್ನೂ ಸಂಸ್ಕೃತ ಭಾಷೆಯನ್ನೂ ಬಳಸಿದ್ದಾರೆ. ಶಕ 876ಕ್ಕೆ ಸೇರಿದ ಮಿಂಟೋ ಶಿಲಾ ಶಾಸನದ ಪ್ರಾರಂಭದಲ್ಲಿ ಎರಡು ಸಂಸ್ಕೃತ ಶ್ಲೋಕಗಳಿವೆ. ಅಂತೆಯೇ 785ಕ್ಕೆ ಸೇರಿದ ಪೆರೆಂಗ್ ಶಿಲಾಶಾಸನ ಕವಿ ಭಾಷೆಯಲ್ಲಿದ್ದು ಅದರಲ್ಲಿ ಆರ್ಯಾ ವೃತ್ತದಲ್ಲಿ ರಚಿಸಿದ ಐದು ಸಂಸ್ಕೃತ ಶ್ಲೋಕಗಳಿವೆ. ಇದರಂತೆ ದಕ್ಷನೆಂಬ ಅರಸನ ಶಾಸನವನ್ನು ಸಂಸ್ಕೃತ ಮತ್ತು ಕಾವ್ಯಭಾಷೆಯಲ್ಲಿ ಬರೆಯಲಾಗಿದೆ.


ನಾಗರೀಲಿಪಿಯಲ್ಲಿರುವ ವಿಜಯನಗರಕಾಲದ ತಾಮ್ರಶಾಸನ

ಕಂಬುಜದ ಸಂಸ್ಕೃತ ಶಾಸನಗಳು 5–14ನೆಯ ಶತಮಾನದ ಕಾಲಾವಧಿಗೆ ಸೇರಿದ್ದು ಈ ದೇಶದ ಉದ್ದಗಲಗಳಲ್ಲಿ ಹರಡಿಕೊಂಡಿವೆ. ಈ ಶಾಸನಗಳಿಂದ ಸಂಸ್ಕೃತ ಭಾಷೆಯ ಅಧ್ಯಯನ ಈ ದೇಶದಲ್ಲಿ ಅತ್ಯಂತ ಉನ್ನತ ಸ್ಥಿತಿಯಲ್ಲಿದ್ದರಬೇಕು. ಅಲಂಕೃತ ಕಾವ್ಯ–ಶೈಲಿಯಲ್ಲಿ ರಚಿಸಲಾದ ಶಾಸನಗಳು ಈ ದೇಗುಲದಲ್ಲಿರುವಷ್ಟು ಸಂಖ್ಯೆಯಲ್ಲಿ ಆಗ್ನೇಯ ಏಷ್ಯದ ಯಾವುದೇ ಪ್ರದೇಶದಲ್ಲಿಯೂ ಕಂಡುಬಂದಿಲ್ಲ. ಇವುಗಳಲ್ಲಿ ಬಹಳಷ್ಟು ಶಾಸನಗಳು ದೀರ್ಘವಾಗಿವೆ. ಕಂಬುಜದೇಶದ ಶಾಸನಗಳಲ್ಲಿ ಪ್ರಥಮಭಾರಿಗೆ 6ನೆಯ ಶತಮಾನದಲ್ಲಿ ಶಕವರ್ಷವೂ 7ನೆಯ ಶತಮಾನದಲ್ಲಿ ಸಂಖ್ಯೆಗಳ ದಶಮಾಂಶ ಪದ್ಧತಿಯೂ ಕಂಡುಬಂದಿದೆ. ಈ ಶಾಸನಗಳ ಭಾಷೆ ಬಹುಮಟ್ಟಿಗೆ ಶುದ್ಧ ಸಂಸ್ಕೃತವಾಗಿದೆ. ಅಲ್ಲಲ್ಲಿ ಕಂಡುಬರುವ ಕೆಲವು ದೋಷಗಳು ಕವಿಗಳಿಂದಾಗಿರದೆ ಲಿಪಿಕಾರ ಅಥವಾ ಕಂಡರಣೆಕಾರರಿಂದಾಗಿರಬಹುದು. ಸಾಮಾನ್ಯವಾಗಿ ಈ ಶಿಲಾ ಶಾಸನಗಳನ್ನು ಅತ್ಯಂತ ಜಾಗರೂಕತೆಯಿಂದ ಕಂಡರಿಸಲಾಗಿದೆ. ಬಹುಪಾಲು ಶಾಸನಗಳು ಸುಂದರವಾದ ಭಾಷೆಯಲ್ಲಿ ಮತ್ತು ಕಾವ್ಯ–ಶೈಲಿಯಲ್ಲಿ ರಚಿತವಾಗಿದ್ದು ಇವುಗಳ ಕರ್ತೃಗಳು ಅಲಂಕಾರ, ವೃತ್ತ ಮೊದಲಾದ ಸಂಸ್ಕೃತ ಕಾವ್ಯ ಸಂಪ್ರದಾಯವನ್ನು ಚೆನ್ನಾಗಿ ತಿಳಿದಿದ್ದರು. ಎರಡನೆಯ ಈಶ್ವರವರ್ಮನ ವತ್‌ಫಿಪೆದಿ ಶಾಸನವನ್ನು ನಿರ್ದಿಷ್ಟವಾದ ಗೌಡೀಶೈಲಿಯಲ್ಲಿ ರಚಿಸಲಾಗಿದ್ದು ಇದರ ಕರ್ತೃ ಪೂರ್ವಭಾರತದಲ್ಲಿ ಗೌಡದೇಶಕ್ಕೆ ಸೇರಿದವನಿರಬೇಕೆಂದು ಸೂಚಿಸಲಾಗಿದೆ. ಬಹಳಷ್ಟು ಶಾಸನಗಳು ಹೆಚ್ಚು ಶ್ಲೋಕಗಳಿಂದ ಕೂಡಿದ್ದು ಕೆಲವು ಶಾಸನಗಳು 100ಕ್ಕೂ ಹೆಚ್ಚು ಶ್ಲೋಕಗಳನ್ನು ಹೊಂದಿವೆ. ಈ ಶಾಸನಗಳು ಸಾಮಾನ್ಯವಾಗಿ ಪ್ರಶಸ್ತಿಗಳಾಗಿದ್ದು ಆಳರಸರ ಸ್ತುತಿ ಮತ್ತು ಅವರು ಧರ್ಮಸಂಸ್ಥೆಗಳಿಗೆ ಕೊಡಮಾಡಿದ ದತ್ತಿಗಳ ವಿವರಗಳನ್ನೊಳಗೊಂಡಿವೆ. ಇವುಗಳಲ್ಲಿ ಅರಸರ ವಂಶಾವಳಿಗಳು ಮಾತ್ರವಲ್ಲದೇ ಪ್ರತಿಯೊಬ್ಬ ಅರಸನು ಯಾವ ವರ್ಷದಲ್ಲಿ ಪಟ್ಟಕ್ಕೆ ಬಂದನೆಂಬ ವಿವರಗಳಿವೆ. ದತ್ತಿ–ದಾನಗಳೇ ಮುಖ್ಯ ವಿಷಯವಾಗಿರುವ ಈ ಶಾಸನಗಳಲ್ಲಿ, ದೇಶದಲ್ಲಿ ಪೂಜಿಸಲ್ಪಡುತ್ತಿದ್ದ ದೇವತೆಗಳ ಹೆಸರುಗಳು, ನಿತ್ಯ–ನೈಮಿತ್ತಿಕ ಪೂಜೆಗಳಿಗೆ ಬೇಕಾಗುವ ಸಲಕರಣೆಗಳ ಪಾತ್ರೆಯಾದಿ (ಪಟ್ಟಿ) ಮತ್ತು ಇತರ ಪದಾರ್ಥಗಳು, ದೇವಾಲಯದ ಸೇವಕರು, ದೇವಾಲಯಗಳ ಸ್ಥಿರ ಮತ್ತು ಚರ ಸ್ವತ್ತುಗಳು ಮತ್ತು ಅವುಗಳ ನಿರ್ವಹಣಾ ವಿಧಾನ ಮುಂತಾದ ದೇವಾಲಯಕ್ಕೆ ಸಂಬಂಧಿಸಿದ ಅನೇಕ ವಿವರಗಳಿವೆ. ಇವು ಜನರ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ–ಗತಿಗಳ ಮೇಲೆ ಬೆಳಕು

ಚೆಲ್ಲುತ್ತವೆ. ಕಂಬುಜದ ಶಾಸನಗಳಲ್ಲಿ ಹೆಚ್ಚಿನವು ಶೈವಧರ್ಮಕ್ಕೆ ಸೇರಿದ್ದು, ಕೆಲವು ವೈಷ್ಣವ ಮತ್ತು ಬೌದ್ಧ ಶಾಸನಗಳೂ ದೊರೆತಿವೆ. ಈ ಶಾಸನಗಳಿಂದ ಕಂಬುಜದ ಜನರ ಮೇಲೆ ಭಾರತೀಯ ಸಂಸ್ಕೃತಿಯ ಪ್ರಭಾವ ಎಷ್ಟಿತ್ತೆಂಬುದು ತಿಳಿಯುತ್ತದೆ. ಪರಸ್ಪರ ವಿರೋಧವಿಲ್ಲದೆ ಶಿವ, ವಿಷ್ಣು ಮತ್ತು ಬುದ್ಧರ ಆರಾಧನೆ; ಭಾಗವತ, ಪಾಂಚರಾತ್ರ ಮತ್ತು ಪಾಶುಪತಗಳಂಥ ವಿಭಿನ್ನ ಪಂಥಗಳ ಅಸ್ತಿತ್ವ; ವೇದ ವೇದಾಂಗ ಪಾರಂಗ ಬ್ರಾಹ್ಮಣರೇ ಮುಖ್ಯರೆನಿಸಿದಂಥ ವರ್ಣಪದ್ಧತಿಯ ಅಳವಡಿಕೆ; ಅರಸರು, ಸಾಮಂತರು ಮತ್ತು ಜನಸಾಮಾನ್ಯರೂ ಸಂಸ್ಕೃತ ಹೆಸರುಗಳನ್ನು ಹೊಂದಿರುವುದು; ತಾಂತ್ರಿಕ ಧರ್ಮದ ಜನಪ್ರಿಯತೆ; ದೇವಾಲಯಗಳಲ್ಲಿ ದೇವದಾಸಿ ಪದ್ಧತಿ ಇವೇ ಮೊದಲಾದ ಅನೇಕ ಸ್ವಾರಸ್ಯಕರ ಸಂಗತಿಗಳು ಇಲ್ಲಿಯ ಸಂಸ್ಕೃತ ಶಾಸನಗಳಿಂದ ತಿಳಿದುಬರುತ್ತವೆ. ಪಾಣಿನಿ, ಪತಂಜಲಿ, ಮನು, ವಾತ್ಸ್ಯಾಯನ, ಮಯೂರ, ಗುಣಾಢ್ಯ ಮೊದಲಾದ ಪಂಡಿತ ಮತ್ತು ಕವಿ ಪ್ರಭೃತಿಗಳು ಈ ದೇಶದಲ್ಲಿ ಜನಪ್ರಿಯರಾಗಿದ್ದರು. ಯಶೋವರ್ಮನೆಂಬ ಅರಸನು 100 ಆಶ್ರಮಗಳನ್ನು ಸ್ಥಾಪಿಸಿದ್ದ. ಶೈವ, ವೈಷ್ಣವ ಮತ್ತು ಬೌದ್ಧರಿಗೆ ಪ್ರತ್ಯೇಕವಾದ ಆಶ್ರಮಗಳಿದ್ದವು. 9ನೆಯ ಶತಮಾನದ ಕೊನೆಯ ಭಾಗದಲ್ಲಿ ಆಗಿಹೋದ ಇಂದ್ರವರ್ಮನೆಂಬ ಅರಸನ ಗುರುವಾದ ಶಿವಸೋಮನೆಂಬುವವನು ಭಗವತ್ ಶಂಕರರಲ್ಲಿ ಧರ್ಮಶಾಸ್ತ್ರವನ್ನು ಅಭ್ಯಸಿಸಿದನೆಂದು ಶಾಸನವೊಂದರಿಂದ ತಿಳಿದುಬಂದಿದೆ. ಈ ಶಂಕರರೆಂಬುವವರು ಭಾರತದ ಮಹಾನ್ ದರ್ಶಕರಲ್ಲೊಬ್ಬರಾದ ಶಂಕರಾಚಾರ್ಯರೇ ಇರಬಹುದೆಂಬ ಅಭಿಪ್ರಾಯವೂ ಇದೆ.

ಚಂಪದೇಶದಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ಸಂಸ್ಕೃತ ಶಾಸನಗಳು ದೊರೆತಿವೆ. ಆದರೆ ಇವುಗಳಲ್ಲಿ ಹೆಚ್ಚಿನವು ದೀರ್ಘ ಶಾಸನಗಳಲ್ಲ. ಬಹುಪಾಲು ಶಾಸನಗಳನ್ನು ಪದ್ಯರೂಪದಲ್ಲಿ ಬರೆಯಲಾಗಿದ್ದರೂ ಕೆಲವು ಶಾಸನಗಳು ಗದ್ಯ ಅಥವಾ ಗದ್ಯ ಮತ್ತು ಪದ್ಯಗಳ ಮಿಶ್ರಣದ ರೂಪಗಳಲ್ಲಿವೆ. ಸಾಮಾನ್ಯವಾಗಿ ಇವುಗಳನ್ನು ಕಲ್ಲಿನ ಹಲಗೆಗಳ ಮೇಲೆ ಬರೆಯಲಾಗಿದೆ. ಬಂಡೆಗಳು, ಕಲ್ಲಿನ ವಿಗ್ರಹಗಳು ಮತ್ತು ಲೋಹ ಪಟ್ಟಿಕೆಗಳ ಮೇಲೆ ಬರೆದ ಶಾಸನಗಳೂ ದೊರೆತಿವೆ. ಎರಡನೆಯ ಇಂದ್ರವರ್ಮನ ಡಾಂಗ್‌ಡುವಾಂಗ್ ಶಾಸನ ಸಾಕಷ್ಟು ದೀರ್ಘವಾಗಿದ್ದು ಒಟ್ಟು 102 ಸಾಲುಗಳಿವೆ. ಸಂಸ್ಕೃತ ಶಾಸನಗಳಿಂದ ತಿಳಿದುಬರುವಂತೆ ಚಂಪಾರಾಜ್ಯದಲ್ಲಿಯೂ ಶೈವಧರ್ಮವೇ ಪ್ರಧಾನವಾಗಿತ್ತು. ಶಿವ ಸಂಬಂಧವಾದ ಪೌರಾಣಿಕ ಕಥೆಗಳು ಜನಪ್ರಿಯವಾಗಿದ್ದವು. ಅಲ್ಲಿ ವೈಷ್ಣವ ಧರ್ಮ ಕೂಡ ಪ್ರಚಲಿತವಾಗಿತ್ತು. ಹರಿ, ನಾರಾಯಣ, ಗೋವಿಂದ ಮುಂತಾದ ವಿಷ್ಣುವಿನ ಹೆಸರುಗಳು ವಿವಿಧ ಅವತಾರಗಳೂ ವಿಶೇಷವಾಗಿ ರಾಮ ಮತ್ತು ಕೃಷ್ಣರ ಅವತಾರಗಳ ಉಲ್ಲೇಖಗಳು ಶಾಸನಗಳಲ್ಲಿವೆ. ತ್ರಿಮೂರ್ತಿಗಳಲ್ಲದೇ ಅಗ್ನಿ, ವರುಣ, ಸೂರ್ಯ, ಚಂದ್ರ ಮುಂತಾದ ಅನೇಕ ದೇವತೆಗಳನ್ನೂ ಶಾಸನಗಳಲ್ಲಿ ಹೆಸರಿಸಲಾಗಿದೆ. (ಬಿ.ಕೆ.ಎಂ.)

**ಕರ್ನಾಟಕ:** ಭಾರತದಲ್ಲಿ ತಮಿಳುನಾಡನ್ನು ಬಿಟ್ಟರೆ ಕರ್ನಾಟಕವೇ ಅತಿ ಹೆಚ್ಚಿನ ಶಾಸನ ಸಂಪತ್ತನ್ನು ಹೊಂದಿರುವ ರಾಜ್ಯ. ಇಲ್ಲಿ ಇದುವರೆಗೆ 30,000ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಇವುಗಳಲ್ಲಿ 20,000ಕ್ಕೂ ಹೆಚ್ಚು ಶಾಸನಗಳು ಈಗಾಗಲೇ ಪ್ರಕಟವಾಗಿವೆ. ಅಲ್ಲದೆ ಇನ್ನೂ ಹೊಸ ಹೊಸ ಶಾಸನಗಳು ದೊರೆಯುತ್ತಲೇ ಇವೆ.

ಶಾಸನಗಳ ಸಂಗ್ರಹ: ಶಾಸನಗಳನ್ನು ಸಂಗ್ರಹಿಸುವ ಕಾರ್ಯ ಕರ್ನಾಟಕದಲ್ಲಿ ಬಹು ಹಿಂದೆಯೇ ಆರಂಭವಾಯಿತು. ಮೈಸೂರಿನ ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ಅನೇಕ ಶಾಸನಗಳನ್ನು ಪ್ರತಿಮಾಡಿಸಿ ಇಟ್ಟಿದ್ದರೆಂಬ ಪ್ರತೀತಿ ಇದೆ. ಆದರೆ ಅವರು ಆಗ ಸಂಗ್ರಹಿಸಿದ ಉದ್ದೇಶ ದಾನದತ್ತಿಗಳ ಬಗೆಗೆ ಖಚಿತವಾದ ದಾಖಲೆಗಳನ್ನು ಹೊಂದಿರುವುದು. ಅರಮನೆಯ ಇತರ ದಾಖಲೆಗಳೊಂದಿಗೆ ಇವು ಮುಂದೆ ನಾಶವಾದುವು. ಶಾಸನಗಳನ್ನು ಅಭ್ಯಾಸಮಾಡಿ ಅವುಗಳಲ್ಲಿಯ ವಿಷಯಗಳನ್ನು ಸಂಗ್ರಹಿಸಲೆಂದೇ ಕ್ರಮಬದ್ಧವಾಗಿ ಅವುಗಳ ಅನ್ವೇಷಣೆಯ ಕೆಲಸವನ್ನು ಆರಂಭಿಸಿದವರು ಪಾಶ್ಚಾತ್ಯ ವಿದ್ವಾಂಸರು. ಕರ್ನಲ್ ಮೆಕೆಂಜಿ 1783–1821ರ ಅವಧಿಯಲ್ಲಿ ಕರ್ನಾಟಕವೂ ಸೇರಿದಂತೆ ದಕ್ಷಿಣಭಾರತದ ನಾನಾ ಭಾಗಗಳಲ್ಲಿ ಪ್ರಾಚೀನ ಹಸ್ತಪ್ರತಿಗಳು, ದಾಖಲೆಗಳ ಜೊತೆಗೆ ಶಾಸನಗಳ ಪ್ರತಿಗಳನ್ನೂ ಸಂಗ್ರಹಿಸಿದರು. ಏಷ್ಯಾಟಿಕ್ ರಿಸರ್ಚಸ್ ಪತ್ರಿಕೆಯ 9ನೆಯ ಸಂಪುಟದಲ್ಲಿ ತಾನು ಸಂಗ್ರಹಿಸಿದ ಕೆಲವು ಶಾಸನಗಳ ಬಗೆಗೆ ಬರೆದಿದ್ದಾನೆ. ಕವೆಲ್ಲಿ ಬೋರಯ್ಯನು ಶ್ರವಣಬೆಳಗೊಳದ ಬುಕ್ಕರಾಯನ ಶಾಸನವನ್ನು ಭಾಷಾಂತರಿಸಿದ ಸಂಗತಿ ಅದೇ ಪತ್ರಿಕೆಯಿಂದ ತಿಳಿದುಬರುತ್ತದೆ. 1821ರಲ್ಲಿ ಸ್ಟುವರ್ಟ್ ಎಲ್ಫಿನ್‌ಸ್ಟನ್ ಎಂಬುವನು ಜಿಲ್ಲಾಧಿಕಾರಿಗಳ ಮೂಲಕ ಹಲವಾರು ಶಾಸನಗಳ ಪಡಿಯಚ್ಚುಗಳನ್ನು ತರಿಸಿದ. ಕರ್ನಾಟಕದಿಂದಲೂ ಹದಿನಾಲ್ಕು ಇಂಥ ಪ್ರತಿಗಳು ಅವನಿಗೆ ತಲುಪಿದ್ದವು. ಅವುಗಳ ಪೈಕಿ ಕೆಲವನ್ನು ಹೆನ್ರಿ ವಥೆನ್ ಓದಿ ಸಾರಾಂಶವನ್ನು 1835ರಲ್ಲಿ ಪ್ರಕಟಿಸಿದ. ಕರ್ನಾಟಕದ ಶಾಸನಗಳ ಬಗೆಗೆ ಸುವ್ಯವಸ್ಥಿತವಾದ ಅಧ್ಯಯನ ಆರಂಭವಾದುದು ವಾಲ್ಟರ್ ಎಲಿಯಟ್‌ನಿಂದ. ಇವನು ಅನೇಕ ಶಾಸನಗಳ ಪ್ರತಿಗಳನ್ನು ಸಂಗ್ರಹಿಸಿ 1837ರಲ್ಲಿ ಲಂಡನ್ನಿನ ರಾಯಲ್ ಏಷ್ಯಾಟಿಕ್ ರಿಸರ್ಚಸ್ ಎಂಬ ಪತ್ರಿಕೆಯಲ್ಲಿ ಹಿಂದೂ ಇನ್‌ಸ್ಕ್ರಿಪ್‌ಷನ್ಸ್ ಎಂಬ ಲೇಖನವನ್ನು ಪ್ರಕಟಿಸಿದ. ಈತ ಸಂಗ್ರಹಿಸಿದ ಶಾಸನಗಳ ಕೈಬರೆಹದ ಪ್ರತಿಗಳನ್ನೊಳಗೊಂಡ, ಕರ್ನಾಟಕ ದೇಶ ಇನ್‌ಸ್ಕ್ರಿಪ್‌ಷನ್ಸ್ ಎಂಬ ಎರಡು ಸಂಪುಟಗಳು ಎಡಿನ್‌ಬರೊ ವಿಶ್ವವಿದ್ಯಾಲಯ ಮತ್ತು ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿಗಳಲ್ಲಿವೆ. ಮೇಜರ್ ಡಿಕ್‌ಸನ್ ಮೊದಲಾದವರು ನೂರಾರು ಶಾಸನಗಳ ಛಾಯಾಚಿತ್ರ ತೆಗೆದು ಅವುಗಳ ಒಂದು ಸಂಗ್ರಹ ಮಾಡಿದರು. ಈ ಛಾಯಾಚಿತ್ರಗಳ ಸಹಾಯದಿಂದ ಬಿ.ಎಲ್.ರೈಸ್ ಶಾಸನಗಳನ್ನೋದಿ ಮೈಸೂರ್ ಇನ್‌ಸ್ಕ್ರಿಪ್‌ಷನ್ಸ್ ಎಂಬ ಸಂಪುಟವನ್ನು 1879ರಲ್ಲಿ ಪ್ರಕಟಿಸಿದರು. ಮುಂದೆ ಥಿಯೊಡರ್ ಹೋಪ್ ಎಂಬಾತ ಛಾಯಾಚಿತ್ರ ಪ್ರತಿಗಳಿಂದ ಇದೇ ರೀತಿ ಅರವತ್ತುನಾಲ್ಕು ಶಾಸನಗಳನ್ನು ಇನ್‌ಸ್ಕ್ರಿಪ್‌ಷನ್ಸ್ ಇನ್ ಧಾರವಾರ್ ಅಂಡ್ ಮೈಸೂರ್ ಎಂಬ ಸಂಪುಟಗಳಲ್ಲಿ ಪ್ರಕಟಿಸಿದರು. ಇದೇ ವಿದ್ವಾಂಸರ ಆರ್ಕಿಟೆಕ್ಚರ್ ಇನ್ ಧಾರವಾರ್ ಅಂಡ್ ಮೈಸೂರ್ ಎಂಬ ಗ್ರಂಥದಲ್ಲಿಯೂ ಇನ್ನಷ್ಟು ಶಾಸನಗಳು ಸೇರಿದವು. 1870ರ ಹೊತ್ತಿಗೆ ಜೆ.ಎಫ್. ಫ್ಲೀಟ್ ಕರ್ನಾಟಕದ ಶಾಸನಗಳನ್ನು ಪ್ರಕಟಿಸುವ ಕೆಲಸ ಆರಂಭಿಸಿದರು. ಶಾಸನಗಳನ್ನು ಅತ್ಯಂತ ಸಮರ್ಪಕವಾಗಿ ಓದಿ ಅವನ್ನು ವಿವರವಾದ ಟಿಪ್ಪಣಿಗಳೊಡನೆ ಪ್ರಕಟಿಸಿದವರಲ್ಲಿ ಫ್ಲೀಟ್ ಮೊದಲಿಗರು. 1872ರಲ್ಲಿ ಇಂಡಿಯನ್ ಆಂಟಿಕ್ವರಿ ಎಂಬ ಪತ್ರಿಕೆಯನ್ನು ಬರ್ಗೆಸ್ ಆರಂಭಿಸಿದ ಮೇಲೆ ಫ್ಲೀಟ್ ಕ್ರಮವಾಗಿ ಶಾಸನಗಳನ್ನು ಅದರಲ್ಲಿ ಪ್ರಕಟಿಸಲು ಆರಂಭಿಸಿದರು. 1878ರಲ್ಲಿ ಇವರು ಸಂಪಾದಿಸಿದ ಪಾಳಿ, ಸ್ಯಾನ್ಸ್‌ಕ್ರಿಟ್ ಅಂಡ್ ಓಲ್ಡ್ ಕೆನರೀಸ್ ಇನ್‌ಸ್ಕ್ರಿಪ್‌ಷನ್ಸ್ ಫ್ರಂ ದಿ ಬಾಂಬೆ ಪ್ರೆಸಿಡೆನ್ಸಿ ಅಂಡ್ ಪಾರ್ಟ್ಸ್ ಆಫ್ ದಿ ಮದ್ರಾಸ್ ಪ್ರೆಸಿಡೆನ್ಸಿ ಅಂಡ್ ಮೈಸೂರ್ ಎಂಬ ಸಂಪುಟವನ್ನು ಇಂಡಿಯ ಆಫೀಸ್ ಪ್ರಕಟಿಸಿತು. ಫ್ಲೀಟರನ್ನು ಬಿಟ್ಟರೆ ಕರ್ನಾಟಕದಲ್ಲಿ ಶಾಸನಗಳ ಸಂಗ್ರಹಣೆ ಮತ್ತು ಪ್ರಕಟಣೆಯ ಕಾರ್ಯವನ್ನು ಅದ್ಭುತವಾಗಿ ನಡೆಸಿದವರು ಬೆಂಜಮಿನ್ ಲೂಯಿ ರೈಸ್. ಹಳೆಯ ಮೈಸೂರು ಸಂಸ್ಥಾನದಲ್ಲಿ ಮತ್ತು ಕೊಡಗಿನಲ್ಲಿ ಕ್ರಮಬದ್ಧವಾಗಿ ಶಾಸನಗಳನ್ನು ಸಂಗ್ರಹಿಸಿ 1886 ರಿಂದ 1906ರ ನಡುವೆ ಹನ್ನೆರಡು ಸಂಪುಟಗಳಷ್ಟು ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಿಕ ಮಾಲೆಯಲ್ಲಿ ಇವರು ಪ್ರಕಟಿಸಿದರು. ಭಾರತ ಸರ್ಕಾರದ ಶಾಸನ ಇಲಾಖೆಯು ಮುಖ್ಯವಾಗಿ ಬಾಂಬೆ ಕರ್ನಾಟಕ ಮತ್ತು ಮದರಾಸಿಗೆ ಸೇರಿದ್ದ ಕರ್ನಾಟಕದ ಭಾಗಗಳಲ್ಲಿ ದೊರೆತ ಹಲವು ಶಾಸನಗಳನ್ನು ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ ಸಂಪುಟಗಳಲ್ಲಿ ಪ್ರಕಟಿಸಿತು. ಭಾರತೀಯ ವಿದ್ವಾಂಸರಲ್ಲಿ ಶಾಸನ ಸಂಗ್ರಹಣೆಯ ಬಗೆಗೆ ಹೆಚ್ಚಿನ ಕೆಲಸಮಾಡಿರುವವರೆಂದರೆ ಆರ್. ನರಸಿಂಹಾಚಾರ್ಯರು. ಇವರು ಶ್ರವಣಬೆಳಗೊಳ ಸಂಪುಟವನ್ನು ಪರಿಷ್ಕರಿಸಿದ್ದೇ ಅಲ್ಲದೆ ಸು.5,000 ಶಾಸನಗಳನ್ನು ಸಂಗ್ರಹಿಸಿದರು. ಶಾಸನ ಸಂಗ್ರಹಣೆಯ ಕಾರ್ಯದಲ್ಲಿ ಮಗ್ನರಾದ ಇತರ ವಿದ್ವಾಂಸರೆಂದರೆ ಎನ್.ಲಕ್ಷ್ಮೀನಾರಾಯಣ ರಾವ್, ಆರ್.ರಾಮರಾವ್, ಪಿ.ಬಿ.ದೇಸಾಯಿ ಮೊದಲಾದವರು. ನಿಯತಕಾಲಿಕಗಳಲ್ಲಿ ಹಲವು ಶಾಸನಗಳು ಪ್ರಕಟವಾಗಿವೆ. ಮೈಸೂರಿನಲ್ಲಿರುವ ಪ್ರಾಚ್ಯ ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ 1923ರ ರಿಂದೀಚೆಗೆ ಸಂಗ್ರಹಿಸಿದ ಶಾಸನಗಳನ್ನು ತನ್ನ ವಾರ್ಷಿಕ ವರದಿಗಳಲ್ಲಿ ಸೇರಿಸಿದೆ. ಈಚೆಗೆ ವಿಶ್ವವಿದ್ಯಾಲಯಗಳು ಶಾಸನ ಸಂಗ್ರಹಣಾ ಕಾರ್ಯವನ್ನು ಆರಂಭಿಸಿವೆ. ಮೊದಲು ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಆರ್.ಎಸ್.ಪಂಚಮುಖಿಯವರ ನೇತೃತ್ವದಲ್ಲಿ ಶಾಸನ ಸಂಗ್ರಹಣ ಕಾರ್ಯವನ್ನು ಆರಂಭಿಸಿ ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್ ಎಂಬ ಹೆಸರಿನಲ್ಲಿ ಸಂಪುಟಗಳನ್ನು ಹೊರತರುವ ಕಾರ್ಯ ಕೈಗೊಂಡಿತು. ಮುಂದೆ ಇದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಮೇಲೆ ಆರು ಸಂಪುಟಗಳನ್ನು ಹೊರತಂದಿತು. ಹೈದರಾಬಾದಿನ ಪ್ರಾಚ್ಯವಸ್ತು ಸಂಶೋಧನ ಇಲಾಖೆ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಸಂಗ್ರಹಿಸಿದ್ದ ಕೆಲವು ಶಾಸನಗಳನ್ನು ಪ್ರಕಟಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಪರಿಷ್ಕರಣ ಹಾಗೂ ಪುನರ್ ಮುದ್ರಣ ಯೋಜನೆಯನ್ನು ಕೈಗೊಂಡಿದ್ದು, ಈಗಾಗಲೇ ಹದಿಮೂರು ಸಂಪುಟಗಳನ್ನು ಹೊರತಂದಿದೆ (2006). ಹಂಪಿಯ ಕನ್ನಡ ವಿಶ್ವವಿದ್ಯಾಲಯ ಹಲವು ಶಾಸನ ಸಂಪುಟಗಳನ್ನು ಪ್ರಕಟಿಸಿದೆ. ಪ್ರತಿ ಸಂಪುಟದಲ್ಲಿಯೂ ಹೊಸ ಹೊಸ ಶಾಸನಗಳು ಸೇರುತ್ತಿವೆ. ಹಂಪೆಯ ಕನ್ನಡ ವಿಶ್ವವಿದ್ಯಾಲಯ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಒಂಬತ್ತು ಸಂಪುಟಗಳನ್ನು ಹೊರತಂದಿದೆ. ಇನ್ನೂ ಕೆಲವು ಸಂಪುಟಗಳು ಸಿದ್ಧವಾಗುತ್ತಿವೆ. ಇತ್ತೀಚೆಗೆ ಸನ್ನತಿಯ ಬೌದ್ಧ ಶಾಸನಗಳು, ಬಳ್ಳಾರಿ ಜಿಲ್ಲೆಯಲ್ಲಿನ ನಾಲ್ಕು ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿನ ಎರಡು ಅಶೋಕನ ಶಾಸನಗಳು, ಬನವಾಸಿಯ ಸಾತವಾಹನ ಕಾಲದ ಶಾಸನ ಮತ್ತು ಗುಡ್ನಾಪುರದ ಕದಂಬರ ಸ್ತಂಭಶಾಸನಗಳು ಹೊಸದಾಗಿ ದೊರಕಿವೆ.

ಶಾಸನಗಳ ಉಗಮ, ಬೆಳೆವಣಿಗೆ, ಸ್ವರೂಪ, ಪ್ರಕಾರಗಳು: ಬೃಹತ್ ಶಿಲಾಸಮಾಧಿ ಯುಗಕ್ಕೆ ಸೇರಿದ ಕೆಲವು ಮಡಕೆಗಳ ಮೇಲೆ ಹಲವಾರು ರೀತಿಯ ಸಂಕೇತಗಳಿವೆ. ಇವು ಲಿಪಿ ಇರಬಹುದೆಂದು, ಬಹುಶಃ ಹರಪ್ಪ ಮುದ್ರೆಗಳಲ್ಲಿ ಕಂಡುಬಂದಿರುವ ಲಿಪಿಯ ಮುಂದಣ ಹಂತಗಳಿರಬಹುದೆಂದೂ ಒಂದು ಅಭಿಪ್ರಾಯವಿದೆ. ಆದರೆ ಇದನ್ನು ಸಿದ್ಧಪಡಿಸಲು ತಕ್ಕಷ್ಟು ಆಧಾರಗಳು ಇನ್ನೂ ದೊರೆತಿಲ್ಲವಾದ್ದರಿಂದ ಇದನ್ನು ಲಿಪಿ ಎಂದು ಒಪ್ಪಲಾಗಿಲ್ಲ. 1990–2005 ಅವಧಿಯಲ್ಲಿ ಕೊಯಮತ್ತೂರು ಜಿಲ್ಲೆಯ ಕೊಡುಮನಲ್‌ನಲ್ಲಿ ಪುರಾತತ್ತ್ವ ಉತ್ಖನನಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಮಣ್ಪಾತ್ರೆಗಳ ಮೇಲಿನ ಇಂಥ ಸಂಕೇತಗಳೊಡನೆ ಬ್ರಾಹ್ಮಿಲಿಪಿಯ ಅಕ್ಷರಗಳಿವೆ. ಇವು ವ್ಯಕ್ತಿ ನಾಮಪದಗಳು. ಆದ್ದರಿಂದ ಇಂಥ ಸಂಕೇತಗಳು ಬ್ರಾಹ್ಮಿಲಿಪಿಯ ಉಗಮಕ್ಕೆ ಕಾರಣವಾಗಿರಬಹುದೆಂಬ ಅನುಮಾನ ಉಂಟಾಗಿದೆ. ಇವನ್ನು ಬಿಟ್ಟರೆ ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಕಂಡುಬರುವ ಶಾಸನ ಗಳೆಂದರೆ ಮೌರ್ಯ ಚಕ್ರವರ್ತಿ ಅಶೋಕನ ಧರ್ಮಲಿಪಿಗಳು. ಇತ್ತೀಚೆಗೆ ಬಳ್ಳಾರಿ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ದೊರೆತ ಎಂಟು ಶಾಸನಗಳೂ ಸೇರಿದಂತೆ ಈತನ ಒಟ್ಟು ಹದಿನಾಲ್ಕು ಶಾಸನಗಳು

ಕರ್ನಾಟಕದಲ್ಲಿ ದೊರೆತಿದ್ದು ಈ ಪೈಕಿ ನಾಲ್ಕರಲ್ಲಿ ಅಶೋಕ ಎಂಬ ಹೆಸರಿರುವುದು ಒಂದು ವಿಶೇಷ. ಧರ್ಮಪ್ರಚಾರ ಇವುಗಳ ಮುಖ್ಯ ವಿಷಯ. ಪ್ರ.ಶ.ಪೂ.3ನೆಯ ಶತಮಾನಕ್ಕೆ ಸೇರಿದ ಈ ಶಾಸನಗಳ ಅನಂತರ 7ನೆಯ ಶತಮಾನದ ಆರಂಭದವರೆಗೂ ತೀರ ವಿರಳವಾಗಿ ಶಾಸನಗಳು ದೊರೆತಿವೆ. ಬನವಾಸಿ, ಮಳವಳ್ಳಿಗಳಲ್ಲಿ ದೊರೆತ ಸಾತವಾಹನರ ಮತ್ತು ಅವರ ಸಾಮಂತರಾದ ಚುಟುವಂಶದ ಅರಸರ ಶಾಸನಗಳು, ಚಂದ್ರವಳ್ಳಿ, ಮಳವಳ್ಳಿ, ತಾಳಗುಂದ, ಗುಡ್ನಾಪುರ, ಅಣಜಿ, ಹಲ್ಮಿಡಿ ಮೊದಲಾದ ಕಡೆ ದೊರೆತ ಕದಂಬರ ಶಾಸನಗಳು; ಒಂದನೆಯ ಪುಲಕೇಶಿಯ ಬಾದಾಮಿಯ ಶಾಸನ, ಶ್ರವಣ ಬೆಳಗೊಳದ ಭದ್ರಬಾಹು ಶಾಸನ ಇತ್ಯಾದಿ ಶಿಲಾಶಾಸನಗಳಲ್ಲದೆ, ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ತಾಮ್ರಶಾಸನ ಮತ್ತು ಕದಂಬರ, ಗಂಗರ ಈ ಕಾಲದ ಹಲವಾರು ತಾಮ್ರಶಾಸನಗಳು, ಇವುಗಳೊಂದಿಗೆ ಸನ್ನತಿಯಲ್ಲಿ ಈಚೆಗೆ ದೊರೆತ ಸುಮಾರು ಒಂದನೆಯ ಶತಮಾನದಿಂದ ಮೂರನೆಯ ಶತಮಾನದವರೆಗಿನ 450ಕ್ಕೂ ಹೆಚ್ಚು 1 ರಿಂದ 7 ಸಾಲಿನ ಕಿರುಶಾಸನಗಳು, ಅಶೋಕ ಮೌರ್ಯನ ಪ್ರಧಾನ ಶಾಸನಗಳು ಕಣಗಿನ ಹಳ್ಳಿಯ ಶಿಲ್ಪಶಾಸನಗಳು ಇಲ್ಲಿ ಉಲ್ಲೇಖಾರ್ಹ. ಸಾಮಾನ್ಯವಾಗಿ ಇವು ಸಣ್ಣ ಶಾಸನಗಳಾದರೂ ಕರ್ನಾಟಕದ ಪ್ರಾಚೀನ ಇತಿಹಾಸದ ಬಗೆಗೆ ಅತ್ಯಮೂಲ್ಯವಾದ ಬೆಳಕು ಚೆಲ್ಲುತ್ತವೆ. ಮುಂದೆ 10ನೆಯ ಶತಮಾನದ ಆರಂಭದವರೆಗೆ ಶಾಸನಗಳ ಸಂಖ್ಯೆ ಬೆಳೆಯುತ್ತ ಹೋಯಿತು. ಬಾದಾಮಿ ಚಳುಕ್ಯರ, ಕಲ್ಯಾಣದ ಚಾಳುಕ್ಯರ, ಕದಂಬರ, ಗಂಗರ, ರಾಷ್ಟ್ರಕೂಟರ ನೂರಾರು ಶಾಸನಗಳು ಈ ಶತಮಾನಗಳಿಗೆ ಸೇರುತ್ತವೆ. ಇದೇ ರೀತಿ ಶ್ರವಣಬೆಳಗೊಳದಲ್ಲಿ ದೊರೆತಿರುವ ಈ ಕಾಲದ ಅನೇಕ ಶಾಸನಗಳನ್ನೂ ಗಮನಿಸಬಹುದು. ತಾಮ್ರಶಾಸನಗಳ ಸಂಖ್ಯೆಯೂ ಹೆಚ್ಚಾಗಿಯೇ ಇದೆ. ತಾಮ್ರ ಶಾಸನಗಳಲ್ಲಿ ರಾಜವಂಶಗಳ ವಿವರಗಳಿದ್ದು ಒಂದು ನಿರ್ದಿಷ್ಟ ಅನುಕ್ರಮ ಕಂಡುಬಂದರೆ, ಶಿಲಾಶಾಸನಗಳಲ್ಲಿ ಅಂಥ ಒಂದು ಪದ್ಧತಿಯೇನೂ ಇಲ್ಲ. ಮಹಾಕೂಟದ ಮಂಗಲೀಶನ ಶಾಸನ, ರವಿಕೀರ್ತಿಯ ಮೇಗುಡಿ ಶಾಸನ ಮೊದಲಾದ ಸಂಸ್ಕೃತ ಶಾಸನಗಳು ಸ್ವಲ್ಪಮಟ್ಟಿಗೆ ದೊಡ್ಡವಾಗಿದ್ದು ಪದ್ಯಾತ್ಮಕವಾಗಿ ಪ್ರೌಢವಾಗಿರುವುದುಂಟು. ಕನ್ನಡ ಶಾಸನಗಳಲ್ಲಿ ಕಿರುಶಾಸನಗಳೇ ಹೆಚ್ಚು. ಆಳುವ ಅರಸರ ಹೆಸರು ಹೇಳಿರಬಹುದು, ಹೇಳದೆಯೂ ಇರಬಹುದು. ಗದ್ಯದಲ್ಲಿ ನೇರವಾಗಿ ಸರಳವಾಗಿ ಶಾಸನ ಹಾಕಲು ಕಾರಣವಾದ ವಿಷಯ ತಿಳಿಸುವುದೇ ಹೆಚ್ಚು. ಇದ್ದರೆ ಒಂದೆರಡು ಪದ್ಯಗಳಿರಬಹುದು. ಇವಲ್ಲದೆ ಪದ್ಯಗಳಲ್ಲಿ ಚರಮಗೀತೆಗಳನ್ನು ಒಳಗೊಂಡಿರುವ ಹಲವು ಶಾಸನಗಳುಂಟು.

10ನೆಯ ಶತಮಾನ ಶಾಸನಗಳನ್ನು ರಚಿಸುವಲ್ಲಿ ಹಲವು ಬಗೆಯ ಪ್ರಯೋಗಗಳು ನಡೆದ ಕಾಲ. ಶಾಸನಗಳ ಗಾತ್ರ, ಸಂಖ್ಯೆ ಹೆಚ್ಚುಹೆಚ್ಚಾಗಿ ಬೆಳೆದ ಕಾಲ. ಸಂಸ್ಕೃತಭಾಷೆಗೆ ಮಾತ್ರ ಸೀಮಿತವಾಗಿದ್ದ ತಾಮ್ರಶಾಸನಗಳ ಒಕ್ಕಣೆಯ ರೀತಿಯನ್ನು ಈ ಶತಮಾನದಲ್ಲಿ ಕನ್ನಡದಲ್ಲಿ ರಚಿಸಿದ ಶಿಲಾಶಾಸನಗಳಲ್ಲಿಯೂ ಅನುಸರಿಸಲಾರಂಭವಾಯಿತು. ಜೈನ, ಶೈವ ಮುಂತಾದ ಮತಗಳ ಆಚಾರ್ಯರಿಗೂ ವಿದ್ಯಾಕೇಂದ್ರಗಳಿಗೂ ದೇವಾಲಯಗಳಿಗೂ ದಾನದತ್ತಿಗಳನ್ನು ಬಿಟ್ಟಾಗ ಅವನ್ನು ತಿಳಿಸುವ ಶಾಸನಗಳಲ್ಲಿ ದೀರ್ಘವಾದ ಒಕ್ಕಣೆಗಳು ಕಾಣಿಸಿಕೊಳ್ಳಲಾರಂಭಿಸಿದುದು ಈಗಲೇ. ಯಾವುದೇ ಒಂದು ಕಟ್ಟುಪಾಡಿಗೆ ಒಳಗಾಗದೆ ತನ್ನದೇ ಆದ ರೀತಿಯಲ್ಲಿ ರಚಿತವಾಗಿರುವ ಆತಕೂರು ಶಾಸನ, ಶ್ರವಣಬೆಳಗೊಳದ ಮಾರಸಿಂಹನ ಪ್ರಶಸ್ತಿ ಶಾಸನ, ರಾಷ್ಟ್ರಕೂಟ ಇಂದ್ರನ ಮರಣವನ್ನು ತಿಳಿಸುವ ಶಾಸನ ಮೊದಲಾದವು ಒಂದೊಂದೂ ಸತ್ತ್ವಯುತವಾಗಿ ಸ್ವತಂತ್ರವಾಗಿ ಪ್ರಯೋಗ ಶೀಲವಾಗಿ ಕಂಡುಬರುತ್ತವೆ. ಮುಂದೆ ಶಾಸನಗಳು ರಚನೆಯಲ್ಲಿ ಒಂದು ಕಟ್ಟುಪಾಡಿಗೆ ಒಳಗಾಗಲು ಈ ಶತಮಾನದ ಇಂಥ ಕೆಲವು ಶಾಸನಗಳು ಮೇಲ್ಪಂಕ್ತಿಯಾಗಿವೆ. ಕವಿರಾಜ ರಾಜಕೃತವಾದ ಕಾಡಿಯೂರಗ್ರಹಾರದ ಶಾಸನಗಳನ್ನು ದೀರ್ಘವಾದ ಶಾಸನಗಳಿಗೆ ಮೊತ್ತಮೊದಲ ಮಾದರಿಯನ್ನಾಗಿ ಪರಿಗಣಿಸಬಹುದು. ಪದ್ಯಗಳೇ ಹೆಚ್ಚಾಗಿದ್ದು ಮಧ್ಯೆ ಕ್ವಚಿತ್ತಾಗಿ ಗದ್ಯವಿದ್ದು ಕನ್ನಡದಲ್ಲಿ ಚಂಪೂಶೈಲಿಯ ಸೂಚನೆಯನ್ನು ಇದು ಕೊಡುತ್ತದೆ.

ಮುಂದೆ ಮೂರು ಶತಮಾನಗಳ ಕಾಲ ಈ ಶಾಸನಗಳು ಸಂಖ್ಯೆಯಲ್ಲಿ ಮಾತ್ರವಲ್ಲ ಗಾತ್ರದಲ್ಲಿಯೂ ವಿಷಯವೈವಿಧ್ಯದಲ್ಲಿಯೂ ವಿಶಿಷ್ಟವಾದ ರೀತಿಯಲ್ಲಿ ಬೆಳೆದವು. ಈ ಹೊತ್ತಿಗಾಗಲೇ ಶಾಸನಗಳನ್ನು ರಚಿಸುವಲ್ಲಿ ಒಂದು ಗೊತ್ತಾದ ರೀತಿಗೆ ಭದ್ರವಾದ ಬುನಾದಿ ಬಿದ್ದಿತ್ತು. ಕಲ್ಯಾಣ ಚಾಳುಕ್ಯರ ಅದರಲ್ಲಿಯೂ ವಿಕ್ರಮಾದಿತ್ಯನ ಕಾಲದಲ್ಲಿ ಮತ್ತು ಅವನನ್ನನುಸರಿಸಿ ನಿಡುಗಲ್ಲು ಚೋಳರು, ಉಚ್ಚಂಗಿ ಪಾಂಡ್ಯರು, ಸಾಂತರರು, ಸಿಂದರು, ಹಾನಗಲ್ಲು ಕದಂಬರು ಮುಂತಾದ ಅನೇಕ ಸಾಮಂತರು, ಅಧಿಕಾರಿಗಳು, ದಂಡನಾಯಕರು ಈ ಪದ್ಧತಿಯನ್ನು ಮುಂದೆ ವಿಸ್ತಾರವಾಗಿ ಬೆಳೆಸಿದರು. ಹೊಯ್ಸಳರಲ್ಲಿ ವಿಷ್ಣುವರ್ಧನನಿಂದ ಮುಂದೆ ಶಾಸನಗಳ ಸಂಖ್ಯೆ ಹಲವು ಪಟ್ಟು ಹೆಚ್ಚಾಯಿತು. ಶಾಸನಗಳ ರಚನೆ ಕಲಾತ್ಮಕವಾಗಿ ಕಾವ್ಯಾತ್ಮಕವಾಗಿ ಬೆಳೆಯಿತು. ಶಾಸನಗಳು ವಸ್ತುವನ್ನು ಹಿಗ್ಗಿಸಿಕೊಂಡು ವಿಸ್ತಾರವಾದವು. ವರ್ಣನೆ ಬಗೆಬಗೆಯಾಯಿತು. ಈಗ ಶಾಸನಗಳು ತಮ್ಮ ಮೂಲ ಉದ್ದೇಶವಾದ ಬರಿಯ ವಿಷಯನಿರೂಪಣೆಯ ವಸ್ತುನಿಷ್ಠ ಮಾಧ್ಯಮವಾಗಿ ಉಳಿಯಲಿಲ್ಲ. ಚಂಪೂಶೈಲಿಯ ಈ ದೀರ್ಘ ಶಾಸನಗಳಲ್ಲಿ ಒಕ್ಕಣೆ ಸಾಮಾನ್ಯವಾಗಿ ಹೀಗಿರುತ್ತದೆ: ಮೊದಲು ದಾತೃವಿನ ಇಷ್ಟದೈವದ ಸ್ತುತಿ, ಅನಂತರ ಅವನಿಗೆ ಶುಭಕಾಮನೆ, ಮುಂದೆ ಅಧಿರಾಜನ ವಂಶಾವಳಿಯನ್ನು ತಿಳಿಸಲು ಪೀಠಿಕೆಯಾಗಿ ಸಪ್ತಲೋಕಗಳು, ಅವುಗಳಲ್ಲಿ ಮಧ್ಯಲೋಕ, ಅದನ್ನು ಬಳಸಿದ ಸಮುದ್ರ, ನಡುವಿನ ಮೇರು, ಮೇರುವಿನ ದಕ್ಷಿಣಕ್ಕೆ ಭರತಖಂಡ, ಭರತಖಂಡದಲ್ಲಿ ಕುಂತಳ, ಆ ಕುಂತಳವನ್ನಾಳುತ್ತಿದ್ದ ರಾಜವಂಶಾವಳಿ, ಅದರ ಪೌರಾಣಿಕ ಹಿನ್ನೆಲೆ, ಅನಂತರ ಒಬ್ಬೊಬ್ಬರಾಗಿ ಆಳಿದ ರಾಜರ ಗುಣಗಾನ, ಶಾಸನದ ಕಾಲದಲ್ಲಿ ಆಳುತ್ತಿದ್ದ ಚಕ್ರವರ್ತಿಯ ದೀರ್ಘಪ್ರಶಸ್ತಿ, ಗದ್ಯದಲ್ಲಿ ಅವನ ಬಿರುದಾವಳಿಗಳು, ಮತ್ತೆ ಅವನ ಪಾದಪದ್ಮೋಪಜೀವಿ ಯಾಗಿದ್ದ ಸಾಮಂತ ರಾಜ, ಅವನ ವಂಶಾವಳಿ, ಅವನ ಪರಾಕ್ರಮ, ಗುಣಾವಳಿ, ಅವನು ನಡೆಸಿದ ಧರ್ಮಕಾರ್ಯ, ಕಟ್ಟಿಸಿದ ದೇವಾಲಯ, ಕೊಟ್ಟ ದಾನ, ಆ ದಾನ ಪಡೆದವರ ವಂಶಾವಳಿ ಅವರ ವಿದ್ವತ್ತು ಮಹಿಮೆಗಳ ವರ್ಣನೆ, ಗ್ರಾಮಗಳನ್ನು ದಾನಬಿಟ್ಟಿದ್ದಲ್ಲಿ ಆ ಗ್ರಾಮಗಳ ವರ್ಣನೆ; ಇವೆಲ್ಲ ಮುಗಿದ ಮೇಲೆ ಅಂಥ ದಾನವನ್ನು ಕಾಪಾಡಿಕೊಂಡು ಬರುವುದರಿಂದಾಗುವ ಪುಣ್ಯಫಲ, ಅವನ್ನು ಕೆಡಿಸುವುದ ರಿಂದಾಗುವ ಪಾಪಫಲ–ಈ ಒಂದೊಂದನ್ನೂ ಹಂತಹಂತವಾಗಿ ಚಿತ್ರಿಸುತ್ತ ಹೋಗುವಲ್ಲಿ ಅವೇ ಒಂದೊಂದು ಪುಟ್ಟ ಕಾವ್ಯವಾಗಿ ಪರಿಣಮಿಸಿದುವು. ಐತಿಹಾಸಿಕ ಸತ್ಯನಿರೂಪಣೆಯ ಮೂಲೋದ್ದೇಶವನ್ನು ಹಿಂದಿಟ್ಟು ಇವನ್ನು ರಚಿಸಿದ ಕವಿಗಳು ತಮ್ಮ ಪ್ರೌಢಿಮೆಯನ್ನು ತೋರಿದರು. ಶಾಸನಗಳು ಚೌಕ ಕಂಬಗಳ ಮೇಲೋ ದೊಡ್ಡ ಕಲ್ಲಿನ ಹಲಗೆಗಳ ಮೇಲೋ ನೂರಾರು ಪಂಕ್ತಿಗಳಷ್ಟು ಬೆಳೆದವು. ನಾಗಾವಿ, ಐವೂರು, ಇಟ್ಟಗಿ, ಕಲ್ಕುಂಡಿ, ಸೇಡಂ, ಲಕ್ಕ್ಮೇಶ್ವರ, ಬಳ್ಳಿಗಾವೆ, ಹರಿಹರ, ಶ್ರವಣಬೆಳಗೊಳ, ಬಸ್ತಿಹಳ್ಳಿ ಮೊದಲಾದ ಅನೇಕ ಕಡೆ ದೇವಾಲಯಗಳು, ಬಸದಿಗಳು ಅವಕ್ಕೆ ಹೊಂದಿಕೊಂಡಂತೆ ಮಠಗಳು, ವಿದ್ಯಾಕೇಂದ್ರಗಳು ಇದ್ದು ಅಲ್ಲಿಗೆ ದಾನದತ್ತಿಗಳನ್ನು ಕೊಟ್ಟ ವಿಷಯವನ್ನು ತಿಳಿಸುವಲ್ಲಿ ಈ ಶಾಸನಗಳಲ್ಲಿನ ಪ್ರೌಢಿಮೆ ಇನ್ನೂ ಹಿರಿದಾಗಿ ಹೊಮ್ಮಿದೆ.



ಗಂಗರ ಕಾಲದ ಶಾಸನ

ಹದಿನಾಲ್ಕನೆಯ ಶತಮಾನದ ಮಧ್ಯಭಾಗದವರೆಗೆ ಹೀಗೆ ಹೇರಳವಾಗಿ ದೀರ್ಘವಾಗಿ ಸುಂದರವಾಗಿ ಬೆಳೆದ ಶಾಸನಗಳು ಮುಂದೆ ವಿಜಯನಗರ ಕಾಲಕ್ಕೆ ಕಡಿಮೆಯಾದವು. ಶಾಸನಗಳ ಸಂಖ್ಯೆಯೇನೂ ಹೇರಳವಾಗಿದ್ದರೂ ಅವುಗಳು ಮತ್ತೆ ವಸ್ತುನಿಷ್ಠ ಶಾಸನಗಳಾದವು. ಅಪೂರ್ವವಾಗಿ ಅಲ್ಲೊಂದು ಇಲ್ಲೊಂದು ದೀರ್ಘಶಾಸನಗಳನ್ನು ಕಾಣುವಂತಾಯಿತು. ಆದರೂ ಮಲೆನಾಡಿನಲ್ಲಿ, ಘಟ್ಟದ ಕೆಳಗೆ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಗದ್ಯಪದ್ಯಾತ್ಮಕವಾದ ದೀರ್ಘಶಾಸನಗಳು ಸಾಮಾನ್ಯವಾಗಿ ಜೈನಬಸದಿಗಳಲ್ಲಿ ಕಂಡುಬರುತ್ತವೆ. ಕರ್ನಾಟಕದ ಉತ್ತರಭಾಗದಲ್ಲಿ ಮುಸ್ಲಿಮರ ಆಳಿಕೆ ಆರಂಭವಾದುದರಿಂದ ಆ ಭಾಗದಲ್ಲಿ ಮುಸ್ಲಿಂ ಶಾಸನಗಳನ್ನು ಮಾತ್ರ ಕಾಣಬಹುದು. ಮುಂದೆ ಶಾಸನಗಳ ಪ್ರಾಮುಖ್ಯ ಕಡಿಮೆಯಾಯಿತು. ಹತ್ತೊಂಬತ್ತನೆಯ ಶತಮಾನದವರೆಗೂ ಅಲ್ಲಲ್ಲಿ ಶಾಸನಗಳು ದೊರೆತರೂ ಅವುಗಳಲ್ಲಿ ವಿಷಯವೈವಿಧ್ಯವಿಲ್ಲ; ಭಾಷೆಯಲ್ಲಿ ಸೊಗಸಿಲ್ಲ.

ಶಾಸನಗಳನ್ನು ಸ್ಥೂಲವಾಗಿ ಅವನ್ನು ಕಂಡರಿಸಿರುವ ಮೂಲವಸ್ತುಗಳ ದೃಷ್ಟಿಯಿಂದ ಶಿಲಾಶಾಸನಗಳು ಮತ್ತು ತಾಮ್ರಶಾಸನಗಳೆಂದು ಎರಡು ವಿಧವಾಗಿ ವಿಂಗಡಿಸಿರುವುದುಂಟು. ಆದರೆ ಅವುಗಳಲ್ಲಿ ತಿಳಿಸುವ ವಿಷಯಗಳ ದೃಷ್ಟಿಯಿಂದ ಮುಖ್ಯವಾಗಿ ದಾನಶಾಸನಗಳು, ವೀರಶಾಸನಗಳು ಮತ್ತು ಇತರ ಶಾಸನಗಳು ಎಂದು ವಿಂಗಡಿಸಬಹುದು. ಇವುಗಳಲ್ಲಿ ಬಹುಪಾಲಿನ ಶಾಸನಗಳು ದಾನಶಾಸನಗಳೇ. ಅನೇಕ ಕಾರಣಗಳಿಗಾಗಿ ಚಕ್ರವರ್ತಿಗಳಿಂದಾ ರಂಭಿಸಿ ಜನಸಾಮಾನ್ಯರವರೆಗೆ ಎಲ್ಲರೂ ಒಂದಿಲ್ಲೊಂದು ಉದ್ದೇಶಕ್ಕಾಗಿ ದಾನಧರ್ಮಗಳನ್ನು ಮಾಡುತ್ತಿದ್ದ ಪದ್ಧತಿ ಕನ್ನಡ ನಾಡಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ವಿದ್ಯೆಗೆ ಪ್ರೋತ್ಸಾಹ ಕೊಡುವುದಕ್ಕಾಗಿ, ವಿದ್ಯಾಪೀಠಗಳಿಗೆ ಮಠಗಳಿಗೆ ಪಂಡಿತರಿಗೆ ರಾಜರು ಅಧಿಕಾರಿಗಳು ಹೇರಳವಾಗಿ ದತ್ತಿಬಿಟ್ಟಿದ್ದಾರೆ; ಕಲೆಯ ಪ್ರೋತ್ಸಾಹಕ್ಕಾಗಿ, ಧರ್ಮಕಾರ್ಯಗಳನ್ನು ನಡೆಸುವುದಕ್ಕಾಗಿ ದೇವಾಲಯ ಬಸದಿಗಳನ್ನು ಕಟ್ಟಿಸಿದ್ದಾರೆ. ಸಾಮಾಜಿಕ ಮುನ್ನಡೆಗಾಗಿ,

ಉದ್ಧಾರಕ್ಕಾಗಿ ಕೆರೆಕಾಲುವೆಗಳನ್ನು ಊರುಕೇರಿಗಳನ್ನು ನಿರ್ಮಿಸಿದ್ದಾರೆ. ಹೀಗೆ ತಾವು ಮಾಡಿದ ಕೆಲಸ ಶಾಶ್ವತವಾಗಿ ಉಳಿಯಲೆಂದು ಕೊಟ್ಟ ದಾನ ನಿರಂತರವಾಗಿ ಮುಂದುವರಿಯಲೆಂದು ತಮ್ಮ ಹೆಸರು ಚಿರವಾಗಿ ಉಳಿಯಲೆಂದು ತಾಮ್ರಶಾಸನಗಳನ್ನು ನೀಡಿದ್ದಾರೆ ಹಾಗೂ ಶಿಲಾಶಾಸನಗಳನ್ನು ಹಾಕಿಸಿದ್ದಾರೆ. ತಾಮ್ರಶಾಸನಗಳು ಸಾಮಾನ್ಯವಾಗಿ ವಿದ್ವಾಂಸರಾದ ಬ್ರಾಹ್ಮಣರಿಗೆ ತಮ್ಮ ವೇದಾಧ್ಯಯನ ಮೊದಲಾದ ಕರ್ಮಗಳನ್ನು ನಿರಾತಂಕವಾಗಿ ನಡೆಸಿಕೊಂಡು ಹೋಗಲು ರಾಜರು ಅಗ್ರಹಾರಗಳನ್ನು ಇತರ ದತ್ತಿಗಳನ್ನು ಬಿಟ್ಟ ವಿಷಯಗಳನ್ನು ನಿರೂಪಿಸುತ್ತವೆ. ಸಾಮಾನ್ಯವಾಗಿ ಈ ತಾಮ್ರಶಾಸನಗಳು ರಾಜಾಸ್ಥಾನದಲ್ಲಿ ರಚಿತವಾಗುತ್ತಿದ್ದವು. ಇವು ಸಂಸ್ಕೃತದಲ್ಲಿ ಪ್ರೌಢವಾದ ಶೈಲಿಯಲ್ಲಿ ದತ್ತಿಬಿಟ್ಟ ರಾಜರ ವಂಶಾವಳಿಗಳನ್ನು ತಿಳಿಸುತ್ತವೆ. ಕರ್ನಾಟಕ ದಲ್ಲಿ ದೊರೆತಿರುವ ಮೊದಲ ತಾಮ್ರಶಾಸನವೆಂದರೆ ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ಶಾಸನ. ಮೊದಲಿನ ತಾಮ್ರಶಾಸನಗಳಲ್ಲಿ ಒಕ್ಕಣೆ ಹೆಚ್ಚಿರುವುದಿಲ್ಲ. ಕಾಲಕ್ರಮದಲ್ಲಿ ರಾಜರ ಪೀಳಿಗೆ ಬೆಳೆದಂತೆ ಒಬ್ಬೊಬ್ಬ ರಾಜನನ್ನೂ ವರ್ಣಿಸುವ, ಅವರ ಪ್ರಶಸ್ತಿಗಳನ್ನು ತಿಳಿಸುವ ವಿವರಗಳು ಬೆಳೆಯುತ್ತ ಹೋದುವು. ತಾಮ್ರದ ಹಲಗೆಗಳನ್ನು ಶಾಸನವನ್ನು ಕಂಡರಿಸುವುದಕ್ಕಾಗಿಯೇ ಸಿದ್ಧಪಡಿಸಲಾಗಿರುತ್ತದೆ. ಮೊದಲು ಇವುಗಳ ಪ್ರಮಾಣ ತೀರ ಕಿರಿದಾಗಿದ್ದು ಓಲೆಗರಿಯನ್ನು ಅನುಕರಿಸುವಂತಿತ್ತು. ಕೆಲವು ವೇಳೆ ಅವುಗಳ ಮೂಲೆಗಳನ್ನೂ ಗುಂಡಾಗಿ ಮಾಡಿರುವುದುಂಟು. ಹಲಗೆಗಳು ಹೆಚ್ಚು ದಪ್ಪವಾಗಿರುವುದಿಲ್ಲ. ಸಾಮಾನ್ಯವಾಗಿ ಮೂರು ಹಲಗೆಗಳಿದ್ದು ಅವನ್ನು ಎಡಭಾಗದ ರಂಧ್ರಗಳ ಮೂಲಕ ಹಾದು ಹೋಗಿರುವ ಬಳೆಗಳಿಂದ ಬಂಧಿಸಿ ಬಳೆಯ ತುದಿಗಳನ್ನು ಜೋಡಿಸಿರುವ ಮುದ್ರೆಯಲ್ಲಿ ರಾಜನ ಚಿಹ್ನೆಯನ್ನು ಅಂಕಿಸಲಾಗಿರುತ್ತದೆ. ಕದಂಬರ ಶಾಸನಗಳಲ್ಲಿ ಸಿಂಹಲಾಂಛನ, ಗಂಗರ ಶಾಸನಗಳಲ್ಲಿ ಆನೆ, ಚಾಳುಕ್ಯರ ಶಾಸನಗಳಲ್ಲಿ ವರಾಹ, ರಾಷ್ಟ್ರಕೂಟರ ಶಾಸನಗಳಲ್ಲಿ ಗರುಡ, ಹೊಯ್ಸಳರ ಶಾಸನಗಳಲ್ಲಿ ಹುಲಿ, ವಿಜಯನಗರ ಮತ್ತು ಮೈಸೂರು ಒಡೆಯರ ಶಾಸನಗಳಲ್ಲಿ ವರಾಹ ಲಾಂಛನಗಳನ್ನು ನೋಡಬಹುದು. ಅಪರೂಪವಾಗಿ ಈ ಲಾಂಛನಗಳ ಜೊತೆಗೆ ಗಂಗಮಾರಸಿಂಹನ ಶಾಸನದ ಮುದ್ರೆಯ ಮೇಲಿರುವ ಶ್ರೀ ಮಾರಸಿಂಹದೇವ ಎಂದಿರುವಂತೆ ರಾಜನ ಹೆಸರಿನ ಅಂಕನ ಇರಬಹುದು. ತಾಮ್ರದ ಹಲಗೆಗಳ ಸಂಖ್ಯೆಯ ವಿಷಯ ಹೆಚ್ಚಾಗುತ್ತ ಹೋದಂತೆ ಮೂರರಿಂದ ಏಳರವರೆಗೂ ಇರುವುದಲ್ಲದೆ ಅವುಗಳ ಗಾತ್ರವೂ ದೊಡ್ಡದಾಗುತ್ತ ಹೋಗುತ್ತದೆ. ಗಂಗರ ತಾಮ್ರಶಾಸನ ಗಳಲ್ಲಿಯೇ ಈ ಬೆಳವಣಿಗೆಯನ್ನು ನೋಡಬಹುದು. ಅವಿನೀತ, ದುರ್ವಿನೀತರ ತಾಮ್ರ ಶಾಸನಗಳು ಕೇವಲ ಎರಡೂವರೆ ಅಥವಾ ಮೂರು ಅಂಗುಲ ಅಗಲ, ಆರು ಅಥವಾ ಎಂಟು ಅಂಗುಲ ಉದ್ದ ಇದ್ದರೆ, ಮಾರಸಿಂಹನ ಕಾಲದ ತಾಮ್ರಶಾಸನಗಳು ಸುಮಾರು ಏಳು ಅಂಗುಲ ಅಗಲ, ಹನ್ನೆರಡು ಅಂಗುಲ ಉದ್ದವಾಗಿವೆ; ಜೊತೆಗೆ ಏಳು ಹಲಗೆಗಳನ್ನೊಳಗೊಂಡಿವೆ. ಇದರೊಂದಿಗೆ ಮೊದಲಿನ ತಾಮ್ರಶಾಸನಗಳಲ್ಲಿ ಪ್ರತಿ ಹಲಗೆಯ ಮೇಲೂ ಮೂರರಿಂದ ಐದು ಸಾಲು ಬರವಣಿಗೆ ಇದ್ದುದು. ಮಾರಸಿಂಹನ ಶಾಸನಗಳಲ್ಲಿ ಹದಿನಾರರಿಂದ ಹತ್ತೊಂಬತ್ತು ಸಾಲುಗಳಿವೆ. ಹೊಯ್ಸಳರ ಕಾಲದವರೆಗೂ ಹಲಗೆಗಳ ಮೇಲೆ ಶಾಸನಗಳನ್ನು ಅಡ್ಡಡ್ಡವಾಗಿ ಕಂಡರಿಸಲಾಗುತ್ತಿತ್ತು. ಎಡಪಕ್ಕದಲ್ಲಿ ರಂಧ್ರವಿದ್ದು ಆ ರಂಧ್ರದ ಮೂಲಕ ಬಳೆಯಿಂದ ಹಲಗೆಗಳನ್ನು ಬಂಧಿಸಲಾಗುತ್ತಿತ್ತು. ಆದರೆ ಹೊಯ್ಸಳರು ಚೋಳರನ್ನು ಅನುಕರಿಸಿ ದಪ್ಪನಾದ ಮತ್ತು ಹೆಚ್ಚು ಉದ್ದ ಅಗಲಗಳುಳ್ಳ ಹಲಗೆಗಳನ್ನು ಬಳಸಿದರು. ಅವುಗಳ ಮೇಲ್ಭಾಗದಲ್ಲಿ ಬಳೆ ತೂರಿಸಲು ರಂಧ್ರವಿರುತ್ತದೆ. ರಂಧ್ರದಿಂದ ಕೆಳಗೆ ಶಾಸನದ ಕಂಡರಣೆ. ಇವು ಮೂರರಿಂದ ಏಳು ಹಲಗೆಗಳವರೆಗೆ ಇರುವುದುಂಟು. ಕರ್ನಾಟಕದ ತಾಮ್ರಶಾಸನಗಳಲ್ಲಿ ಹೊಯ್ಸಳರವೇ ಹೆಚ್ಚು ದೊಡ್ಡವೂ ತೂಕವುಳ್ಳವೂ ಆಗಿವೆ. ವಿಜಯನಗರ ಕಾಲದ ವಿಪುಲ ತಾಮ್ರಶಾಸನಗಳು ಮೂರು ಹಲಗೆಗಳಿಂದ ಕೂಡಿರುತ್ತವೆ. ಹಲಗೆಗಳ ಮೇಲ್ಭಾಗ ಕಮಾನಿನಾಕೃತಿಯಲ್ಲಿ ಮಾಡಿದ್ದು ಅದರ ನಡುವೆ ರಂಧ್ರವಿರುತ್ತದೆ. ಅವುಗಳ ದಪ್ಪ ಗಾತ್ರ ಕಿರಿದು. ಮೈಸೂರರಸರ ತಾಮ್ರಶಾಸನಗಳು ಗಾತ್ರದಲ್ಲಿ ದೊಡ್ಡದಾಗಿದ್ದರೂ ಅವು ಹೆಚ್ಚು ತೆಳುವಾಗಿರುತ್ತವೆ. 16 ಹಲಗೆಗಳುಳ್ಳ ತಿರುಮಕೂಡಲು ನರಸೀಪುರದ ಶಾಸನವೇ ಮೈಸೂರರಸರ ತಾಮ್ರಶಾಸನಗಳಲ್ಲೆಲ್ಲ ಅತಿ ದೀರ್ಘವಾದುದು. ಕೆಳದಿ ನಾಯಕರ ಮತ್ತೆ ಕೆಲವು ಪಾಳೆಯಗಾರರ ಶಾಸನಗಳು ಒಂದೇ ಹಲಗೆಯವು. ಆಕಾರ ಗಾತ್ರಗಳಲ್ಲಿ ವಿಜಯನಗರದ ತಾಮ್ರ ಶಾಸನಗಳಷ್ಟೇ ಅಥವಾ ಅದಕ್ಕಿಂತ ದೊಡ್ಡವು. ಇವಕ್ಕೆ ರಂಧ್ರವಾಗಲಿ ಬಳೆ ಅಥವಾ ಮುದ್ರೆಗಳಾಗಲಿ ಇರುವುದಿಲ್ಲ. ಅಪರೂಪವಾಗಿ ಮುದ್ರೆಯನ್ನು ಹಲಗೆಗೆ ಕೆತ್ತಿಸಿರುವುದುಂಟು. ಹೆಚ್ಚು ಹಲಗೆಗಳಿರುವ ತಾಮ್ರಶಾಸನಗಳಲ್ಲಿ ಮೊದಲ ಮತ್ತು ಕಡೆಯ ಹಲಗೆಗಳ ಹೊರಮುಖಗಳಲ್ಲಿ ಬರೆವಣಿಗೆ ಇರುವುದಿಲ್ಲ. ಮೊದಮೊದಲ ತಾಮ್ರಶಾಸನಗಳನ್ನು ಬಿಟ್ಟರೆ ಸಾಮಾನ್ಯವಾಗಿ ಹಲಗೆಗಳ ಏಣುಗಳು ಉಬ್ಬಿದ್ದು ಹಲಗೆಗಳು ಒಂದಕ್ಕೊಂದು ಉಜ್ಜಿ ಲಿಪಿ ಸವೆದು ಹೋಗದಂತೆ ರಕ್ಷಣೆ ಒದಗಿಸುತ್ತವೆ.

ಶಿಲಾಶಾಸನಗಳಿಗಿಂತ ತಾಮ್ರಶಾಸನಗಳಲ್ಲಿ ಕೂಟಶಾಸನಗಳು ಹೆಚ್ಚು. ಶಿಲಾಶಾಸನಗಳು ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿತವಾಗಿರುವುದರಿಂದ ಕೂಟಶಾಸನ ರಚಿಸಿ ನಿಲ್ಲಿಸುವುದು ಅಷ್ಟು ಸುಲಭವಲ್ಲ. ಅಲ್ಲದೆ ಸಾಮಾನ್ಯ ವಾಗಿ ಶಿಲಾಶಾಸನಗಳು ಸಾರ್ವಜನಿಕ ಪ್ರಯೋಜನಕ್ಕೆ ಸಂಬಂಧಿಸಿದಂತೆ ಇದ್ದುದರಿಂದ ಕೂಟಶಾಸನಗಳ ರಚನೆ ಅಲ್ಲಿ ಕಡಿಮೆಯೇ. ತಾಮ್ರಶಾಸನಗಳಾದರೆ ಸಾಮಾನ್ಯವಾಗಿ ವ್ಯಕ್ತಿಗಳಿಗೆ ಕೊಟ್ಟ ದಾನಕ್ಕೆ ಸಂಬಂಧಪಟ್ಟವು. ರಾಜಮನೆತನಗಳು ಬದಲಾದಾಗ ಹಿಂದಿನ ದಾನದತ್ತಿಗಳನ್ನು ಅವರು ಮುಂದುವರಿಸುವ ಪದ್ಧತಿ ಇತ್ತು. ಹಾಗೆ ಮುಂದುವರಿಸುವಾಗ ಹಿಂದೆ ಇದ್ದ ಶಾಸನಗಳನ್ನು ಅವರು ಪರಿಶೀಲಿಸುತ್ತಿದ್ದರು. ಹೊಯ್ಸಳ ವಿಷ್ಣುವರ್ಧನ ಹಿಂದಿನ ತಾಮ್ರಶಾಸನಗಳನ್ನು ನೋಡಿ ದತ್ತಿಯನ್ನು ಮುಂದುವರಿಸಿದ ವಿಷಯ ಕೆಲವು ಶಾಸನಗಳಲ್ಲಿ ಇದೆ. ಅಂಥ ಸಂದರ್ಭಗಳಲ್ಲಿ ತಾವು ಬಹು ಹಿಂದಿನಿಂದ ದಾನದತ್ತಿಗಳನ್ನು ಅನುಭವಿಸುತ್ತಿದ್ದುದಾಗಿ ತೋರಿಸಲು ಮತ್ತು ತನಗಿಂತ ಬಹು ಹಿಂದಿನ ಕಾಲದಲ್ಲಿಯೇ ಹಾಕಿಸಿದ್ದ ತಾಮ್ರಶಾಸನಗಳು ತಮ್ಮ ಬಳಿ ಇವೆ ಎಂದು ಸಾಧಿಸಲು ಇಂಥ ಕೂಟಶಾಸನಗಳನ್ನು ರಚಿಸುತ್ತಿದ್ದರು. ಜನಮೇಜಯನು ಸರ್ಪಯಾಗ ಮಾಡಿದಾಗ ದತ್ತಿಬಿಟ್ಟಿದ್ದನೆಂದು ತಿಳಿಸುವ ಗೌಜ ಅಗ್ರಹಾರದ ತಾಮ್ರಶಾಸನವಾಗಲಿ, ಮಡಕೇರಿ, ತಗಡೂರು, ಕೂಡಲೂರುಗಳ ಗಂಗ ಶಾಸನಗಳಾಗಲಿ ಇಂಥ ಕೂಟಶಾಸನಗಳ ಗುಂಪಿಗೆ ಸೇರಬಹುದಾದವು. ಭಾಷೆ, ಲಿಪಿ, ಕಾಲಗಣನೆ ಮತ್ತು ಅವುಗಳಲ್ಲಿ ಬರುವ ಕೆಲವು ವಿವರಗಳಿಂದ ಅವು ನೈಜವಲ್ಲವೆಂಬುದು ತಿಳಿಯುತ್ತದೆ.

ತಾಮ್ರಶಾಸನಗಳನ್ನು ಬಿಟ್ಟರೆ ಲೋಹದ ಮೇಲಿನ ಶಾಸನಗಳಿರುವುದು ಲೋಹಮೂರ್ತಿಗಳ ಪೀಠಗಳ ಮೇಲೆ. ಇವುಗಳಲ್ಲಿ ಪ್ರಾಚೀನವಾದುವೆಂದರೆ ಗಂಗಮಾರಸಿಂಹನ ಅಕ್ಕ ಕುಂದಣಸೋಮಿದೇವಿ ಮಾಡಿಸಿದ ಜಿನಬಿಂಬದ ಶಾಸನ, ಮಂಗಳೂರಿನ ಕದ್ರಿಯಲ್ಲಿರುವ ಅವಲೋಕಿತೇಶ್ವರನ ಪೀಠಶಾಸನ ಮುಂತಾದವು. ಮೈಸೂರರಸರ ಕಾಲದ, ಅದರಲ್ಲಿಯೂ ಮುಮ್ಮಡಿ ಕೃಷ್ಣರಾಜಒಡೆಯರ ಮತ್ತು ದಳವಾಯಿಗಳ ಕಾಲದ ನೂರಾರು ಮೂರ್ತಿಗಳ ಪೀಠಗಳ ಮೇಲೆ ಅವನ್ನು ಮಾಡಿಸಿದವರ ಹೆಸರು ಅಥವಾ ಆ ಮೂರ್ತಿಗಳ ಹೆಸರನ್ನು ತಿಳಿಸುವ ಇತರ ಲೋಹವಸ್ತುಗಳಲ್ಲಿ ಗಂಗರ ಕಾಲದ ಕಂಚಿನ ಮುಕ್ಕಾಲಿನ ಮೇಲಿರುವ ನಾಗಮಾರ ಎಂಬುದು ಅತಿ ಪುರಾತನವಾದುದಾದರೆ, ಬೇಲೂರಿನಲ್ಲಿರುವ ಕುವರಲಕ್ಷ್ಮನು ಶಾಸನ ಹಾಕಿಸಿ ದೇವರಿಗೆ ಮಾಡಿಸಿಕೊಟ್ಟಿದ್ದ ಮುಕ್ಕಾಲುಪೀಠ ಅತಿ ಸುಂದರವಾದುದು. ಇವಲ್ಲದೆ ನೂರಾರು ಗಂಟೆಗಳೂ ಜಾಗಟೆಗಳೂ ಹಿತ್ತಾಳೆ ಬಾಗಿಲುವಾಡಗಳೂ ಪಾತ್ರೆಗಳೂ ಇವುಗಳ ಮೇಲೆಲ್ಲ ಕಿರುಶಾಸನಗಳುಂಟು. ಬೆಲೆಬಾಳುವ ಬೆಳ್ಳಿಬಂಗಾರಗಳ ಮೇಲೂ ಹಲವು ಶಾಸನಗಳುಂಟು. ಕೊಡಗಿನ ಅರಸರು ಇಗ್ಗುತಪ್ಪ ದೇವಾಲಯಕ್ಕೆ ಮಾಡಿಸಿಕೊಟ್ಟ ಬೆಳ್ಳಿಯ ಆನೆಯ ಮೈಮೇಲೆ ಕಂಡರಿಸಿರುವ ಶಾಸನ ಉಲ್ಲೇಖನೀಯ. ಹಾಗೆಯೇ ಪರಕಾಲಮಠದ ಬೆಳ್ಳಿತೊಟ್ಟಿಲು, ಬೆಳ್ಳಿಬಂಗಾರದ ಬಟ್ಟಲುಗಳೂ ಶೃಂಗೇರಿ ಮಠದ ಪೂಜಾಪಾತ್ರೆಗಳೂ ಮೇಲುಕೋಟೆಯ ರತ್ನಖಚಿತವಾದ ವೈರಮುಡಿ, ನಂಜನಗೂಡಿನ ಶ್ರೀಕಂಠಮುಡಿ, ಮೈಸೂರು ಸಿಂಹಾಸನದ ಛತ್ರಿಯ ಮೇಲಿರುವ ಶಾಸನಗಳು ಈ ಗುಂಪಿಗೆ ಸೇರುತ್ತವೆ.

ಶಿಲಾಶಾಸನಗಳು ಸಂಖ್ಯೆಯಲ್ಲಿ ವಿಪುಲವಾಗಿರುವುದಲ್ಲದೆ ವಿಷಯ ವೈವಿಧ್ಯದಿಂದ ಕೂಡಿವೆ. ಕಲ್ಲು ಧಾರಾಳವಾಗಿ ಸಿಗುವುದರಿಂದಲೂ ಶಾಶ್ವತವಾಗಿ ಉಳಿದುಬರುವುದರಿಂದಲೂ ಶಾಸನಗಳ ಕಂಡರಣೆಗೆ ಇದನ್ನು ಸಮರ್ಥ ಮಾಧ್ಯಮವಾಗಿ ಬಳಸಲಾಯಿತು. ಇಂಥ ಶಾಸನಗಳನ್ನು ಬಂಡೆಯ ಮೇಲೆ ಕಂಡರಿಸಿರಬಹುದು. ಸನ್ನತಿಯ ಶಾಸನಗಳನ್ನು ಹೊರತುಪಡಿಸಿ ಕರ್ನಾಟಕದಲ್ಲಿ ದೊರಕಿರುವ ಅಶೋಕನ ಶಾಸನಗಳೆಲ್ಲ ಹೀಗೆ ಬಂಡೆಯ ಮೇಲೆಯೇ ಇವೆ. ಇದರೊಂದಿಗೆ ಶ್ರವಣಬೆಳಗೊಳದ ಚಿಕ್ಕಬೆಟ್ಟದ ಬಂಡೆಯ ಮೇಲಿನ ನೂರಾರು ಶಾಸನಗಳನ್ನು ಇಲ್ಲಿ ಗಮನಿಸಬಹುದು. ಶಾಸನಗಳನ್ನು ಕಂಡರಿಸುವುದಕ್ಕಾಗಿಯೇ ಕಲ್ಲಿನ ಕಂಬಗಳನ್ನು ತಯಾರಿಸಿರುವುದುಂಟು. ಮಳವಳ್ಳಿಯ ಹಾರೀತಿಪುತ್ರ ವಿಣ್ಹುಕಡ ಚುಟುಕುಲಾನಂದ ಸಾತಕಣ್ಣಿಯ ಮತ್ತು ಕದಂಬ ಅರಸನೊಬ್ಬನ ಶಾಸನಗಳುಳ್ಳ ಸ್ತಂಭ, ತಾಳಗುಂದದ ಕದಂಬ ಶಾಂತಿವರ್ಮನ ಶಾಸನ ಸ್ತಂಭ, ಗುಡ್ನಾಪುರದ ಕದಂಬರ ರವಿವರ್ಮನ ಶಾಸನವುಳ್ಳ ಕಂಬ, ಕೂಗೆ ಬ್ರಹ್ಮದೇವರ ಕಂಬ, ತ್ಯಾಗದ ಬ್ರಹ್ಮದೇವರ ಕಂಬ, ಮಂಗಲೀಶನ ಮಹಾಕೂಟ ಸ್ತಂಭಶಾಸನ ಮೊದಲಾದುವು ಈ ಗುಂಪಿಗೆ ಸೇರುತ್ತವೆ. ಇದೇ ರೀತಿ ಹೊಯ್ಸಳರ ಕಾಲದಲ್ಲಿ ಗರುಡರ ಆತ್ಮಾರ್ಪಣೆಯನ್ನು ತಿಳಿಸುವ ಹಳೇಬೀಡಿನ ಪ್ರೌಢದೇವರಾಯ ಕಂಬ, ಕುವರಲಕ್ಷ್ಮನ ಸ್ತಂಭ, ಅಗ್ರಹಾರ ಬಾಚಹಳ್ಳಿಯಲ್ಲಿ ರುವ ಗರುಡಸ್ತಂಭಗಳು ಈ ಗುಂಪಿಗೆ ಸೇರುತ್ತವೆ. ಶಾಸನವನ್ನು ಇಂಥ ಕಂಬಗಳ ಅಷ್ಟಮುಖದ ಕಾಂಡಗಳ ಮೇಲೆ ಉದ್ದುದ್ದವಾಗಿ ಕಂಡರಿಸಿರಬಹುದು ಅಥವಾ ಚೌಕಬುಡದ ಮುಖಗಳ ಮೇಲೆ ಸಾಲುಗಳು ನಾಲ್ಕೂ ಮುಖಗಳ ಮೇಲೂ ಸುತ್ತಿ ಬರುವಂತೆ ಅಥವಾ ಒಂದೊಂದು ಮುಖದ ಮೇಲೆ ಪ್ರತ್ಯೇಕವಾಗಿ ಕಂಡರಿಸಿರ ಬಹುದು. ಶಾಸನಗಳಿಗಾಗಿಯೇ ಪ್ರತ್ಯೇಕವಾದ ಕಂಬಗಳು ಇಲ್ಲದಿದ್ದರೂ ದೇವಾಲಯಗಳ, ಬಸದಿಗಳ ಕಂಬಗಳ ಮೇಲೂ ಕೆಲವು ವೇಳೆ ಶಾಸನಗಳನ್ನು ಕಂಡರಿಸಲಾಗಿದೆ. ದೇವಾಲಯ, ಬಸದಿ ಮೊದಲಾದುವುಗಳ ತಳಪಾದಿ ಕಲ್ಲುಗಳ ಗೋಡೆಗಳ ಒಳಗಿನ ಅಡ್ಡತೊಲೆಗಳ ಬಾಗಿಲುವಾಡಗಳ ಮೂರ್ತಿಗಳ ಪೀಠಗಳ ಮುಂತಾದ ಕಡೆಗಳಲ್ಲಿ ಶಾಸನಗಳನ್ನು ಕಂಡರಿಸಿರುವುದುಂಟು. ಸಾಮಾನ್ಯವಾಗಿ ತಮಿಳು ಶಾಸನಗಳು ಕೋಲಾರದ ಕೋಲಾರಮ್ಮನ ದೇವಾಲಯದಲ್ಲಿರುವಂತೆ ಗೋಡೆಗಳ ಮೇಲಿರುವುದೇ ಹೆಚ್ಚು. ಇವಲ್ಲದೆ ಶಾಸನಗಳನ್ನು ಕಂಡರಿಸುವುದಕ್ಕಾಗಿ ಕಲ್ಲಿನ ಹಲಗೆಗಳನ್ನು ಉಪಯೋಗಿಸುವ ಪದ್ಧತಿಯು ವ್ಯಾಪಕವಾಗಿ ಬಳಕೆಗೆ ಬಂತು. ಗಂಗರ ಕಾಲದ ಕೆಲವು ಶಾಸನಗಳನ್ನು ಯಾವ ರೀತಿಯಲ್ಲಿಯೂ ಸಿದ್ಧಪಡಿಸದ ಕಲ್ಲಿನ ಹಲಗೆಗಳ ಮೇಲೆ ಕಂಡರಿಸಿದ್ದರೆ, ರಾಷ್ಟ್ರಕೂಟರ ಕಾಲದಿಂದೀಚೆಗೆ ಚಾಳುಕ್ಯ, ಹೊಯ್ಸಳರ ಕಾಲಗಳಲ್ಲಿ ಕಲ್ಲಿನ ಹಲಗೆಗಳನ್ನು ನಾಜೂಕಾಗಿ ಅತ್ಯಂತ ನುಣುಪಾಗಿ ಮಟ್ಟಸವಾಗಿ ಸಿದ್ಧಪಡಿಸಿ ಶಾಸನಗಳನ್ನು ಹಾಕಿಸುವುದು ಸಾಮಾನ್ಯ ಪದ್ಧತಿಯಾಯಿತು. ಆದರೆ ವಿಜಯನಗರ ಕಾಲಕ್ಕೆ ಬರುವ ಹೊತ್ತಿಗೆ ಮತ್ತೆ

ಒರಟು ಕಲ್ಲಿನ ಶಾಸನಗಳೇ ಹೆಚ್ಚು. ಆರಂಭದಲ್ಲಿ ಕದಂಬರೂ ಗಂಗರೂ ಚೋಳರೂ ಗ್ರಾನೈಟ್ ಶಿಲೆಯನ್ನು ಶಾಸನಗಳಿಗಾಗಿ ಹೆಚ್ಚು ಬಳಸಿದ್ದರೆ, ಬಾದಾಮಿ ಚಳುಕ್ಯರು ಕೆಂಪು ಮರಳುಶಿಲೆಯನ್ನೂ ಕಲ್ಯಾಣ ಚಾಳುಕ್ಯರು ಅವರ ಸಾಮಂತರೂ ಹೊಯ್ಸಳರೂ ಧಾರವಾಡ ಶಿಲಾಪದರದ ಶಿಸ್ಟ್ ಅಥವಾ ಬಳಪದ ಕಲ್ಲನ್ನು ಬಳಸಿದರು. ಇದು ಮೃದುವಾಗಿದ್ದು ಅಂದವಾದ ಶಾಸನಗಳನ್ನು ಕೆತ್ತಿಸಲು ಅನುಕೂಲವಾಯಿತು. ಆದರೆ ವಿಜಯನಗರದ ಅರಸರು ಮತ್ತೆ ಗ್ರಾನೈಟ್ ಶಿಲೆಯನ್ನೇ ಉಪಯೋಗಿಸಿದರು.

ಶಿಲಾಶಾಸನಗಳಲ್ಲಿ ನೂರಕ್ಕೆ ಎಂಬತ್ತರಷ್ಟು ದಾನಶಾಸನಗಳೇ. ಈ ಶಾಸನಗಳು ಎರಡು ಪದಗಳ ಒಂದು ವಾಕ್ಯದಷ್ಟು ಕಿರಿದಾಗಿರಬಹುದು ಅಥವಾ ನೂರಾರು ಸಾಲುಗಳಷ್ಟು ದೀರ್ಘವಾಗಿದ್ದು ಶಾಸನದಲ್ಲಿ ಬರಬಹುದಾದ ಎಲ್ಲ ವರ್ಣನೆ ವಿವರಗಳನ್ನೂ ಒಳಗೊಂಡಿರಬಹುದು. ದಾನಶಾಸನಗಳನ್ನು ಬಿಟ್ಟರೆ ರಾಜರು, ಅವರ ದಂಡನಾಯಕರು ಯುದ್ಧದಲ್ಲಿ ಗೆದ್ದಾಗ ಗೆಲುವಿನ ಕುರುಹಾಗಿ ಜಯಸ್ತಂಭಗಳನ್ನು ನಿಲ್ಲಿಸಿ ತಮ್ಮ ಪ್ರತಾಪದ ವೀರವರ್ಣನೆಯನ್ನು ಕೆತ್ತಿಸುತ್ತಿದ್ದ ಪದ್ಧತಿ ವ್ಯಾಪಕವಾಗಿತ್ತು. ಇಂಥ ಜಯಸ್ತಂಭಗಳನ್ನು ನಿಲ್ಲಿಸಿದುದನ್ನು ಅನೇಕ ರಾಜರು ಹೇಳಿಕೊಂಡಿದ್ದರೂ ಅವು ಹೆಚ್ಚು ಉಳಿದುಬಂದಿಲ್ಲ. ಬೇರೆ ರಾಜರು ಅವನ್ನು ಬಹುಶಃ ಒಡೆಸಿಹಾಕುತ್ತಿದ್ದುದೇ ಇದಕ್ಕೆ ಕಾರಣವಿರಬಹುದು. ಈ ಜಯಸ್ತಂಭಗಳಿಗೆ ಕಲಿಯೂರಿನ ಅಪ್ರಮೇಯ ತನ್ನ ಜಯದ ನೆನಪಿಗಾಗಿ ನಿಲ್ಲಿಸಿದ್ದ ಶಾಸನ ಒಂದು ಉತ್ತಮ ಉದಾಹರಣೆ. ಇಂಥ ಶಾಸನಗಳು ಗೆದ್ದ ರಾಜರ, ವೀರರ ವೀರಾಲಾಪಗಳಿಗೆ ಸೀಮಿತವಾಗಿರುತ್ತಿದ್ದವು. ರಾಜರು ತೀರಿಕೊಂಡಾಗ, ಅವರ ನೆನಪಿಗಾಗಿ ಹಾಕಿಸಿದ್ದ ಶಾಸನಗಳಲ್ಲಿ ಅವನ ಹೆಗ್ಗಳಿಕೆ ಹೊಗಳಿಕೆಯಷ್ಟೇ ಇರುತ್ತದೆ. ಇಮ್ಮಡಿ ಮಾರಸಿಂಹನ ಕೂಗೆಬ್ರಹ್ಮದೇವರ ಕಂಬ, ರಾಷ್ಟ್ರಕೂಟ ನಾಲ್ವಡಿ ಇಂದ್ರನ ಪ್ರಶಸ್ತಿ ಶಾಸನಗಳು ಈ ಗುಂಪಿಗೆ ಸೇರುತ್ತವೆ. ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಇತರ ಆತ್ಮಾರ್ಪಣೆಯ ಕಲ್ಲುಗಳು ಕರ್ನಾಟಕದಲ್ಲಿ ಹೇರಳವಾಗಿ ದೊರೆತಿವೆ. ಇವುಗಳಲ್ಲಿನ ಶಾಸನಗಳೇ ಬೇರೆ ರೀತಿಯವು. ಕೆಚ್ಚು, ಧೈರ್ಯ, ಸಾಹಸ, ನಿಷ್ಠೆ ನಂಬಿಕೆಗಳ ಕುರುಹಾಗಿ ಆತ್ಮಾರ್ಪಣೆ ಮಾಡುತ್ತಿದ್ದ ಪದ್ಧತಿ ಕರ್ನಾಟಕದಲ್ಲಿ ಪ್ರಚಲಿತ ವಿತ್ತು. ಆತ್ಮಹತ್ಯೆ ಪಾಪವಾದರೂ ಕೆಲವು ಉದ್ದೇಶಗಳಿಗಾಗಿ ಪ್ರಾಣಾರ್ಪಣೆ ಮಾಡುವುದು ಕರ್ತವ್ಯ ಮತ್ತು ಸದ್ಗತಿಪ್ರದವೆಂದು ಪರಿಗಣಿಸಲಾಗಿತ್ತು. ಸೂರ್ಯಗ್ರಹಣ, ಸಂಕ್ರಾಂತಿಯಂಥ ದಿನಗಳಲ್ಲಿ ಅಗ್ನಿಪ್ರವೇಶ ಮಾಡುವುದು ಒಂದು ಬಗೆಯಾದರೆ, ಜೈನಸಂನ್ಯಾಸಿಗಳು, ಶ್ರಾವಕರು ತೀರ್ಥಕ್ಷೇತ್ರಗಳಲ್ಲಿ ಸಲ್ಲೇಖನವನ್ನು ಕೈಕೊಂಡು ಮುಡಿಪುವುದು ಇನ್ನೊಂದು ಬಗೆ. ಹೀಗೆ ಸಲ್ಲೇಖನದಿಂದ ಪ್ರಾಣ ತೆತ್ತವರ ನೆನಪಿಗೆ ಹಾಕಿರುವ ಶಾಸನಗಳಿಗೆ ನಿಷಿಧಿಕಲ್ಲುಗಳೆಂದು ಹೆಸರು. ಶ್ರವಣಬೆಳಗೊಳದ ಬಂಡೆಗಳ ಮೇಲಿರುವ ಅನೇಕ ಶಾಸನಗಳು ಇಂಥ ನಿಷಿಧಿಶಾಸನಗಳೇ. ಯುದ್ಧದಲ್ಲಿ ಹೋರಾಡುತ್ತ ವೀರಮರಣ ಹೊಂದಿದರೆ ವೀರಸ್ವರ್ಗ ಸಿಗುವುದೆಂಬ ನಂಬಿಕೆಯಿದ್ದುದರಿಂದ ಸೋಲು ಸಿದ್ಧವೆಂದು ತಿಳಿದಾಗಲೂ ಹಿಮ್ಮೆಟ್ಟದೆ ಸತ್ತ ವೀರರು ಕರ್ನಾಟಕದಲ್ಲಿ ಸಾವಿರಾರು ಜನ ಆಗಿಹೋಗಿದ್ದಾರೆ. ಕ್ಷಣದಲ್ಲಿ ನಾಶವಾಗುವ ಈ ದೇಹಕ್ಕೆ ರಣರಂಗದಲ್ಲಿ ಸಾಯಲು ಚಿಂತೆಯೇಕೆ? ಸೂರ್ಯಮಂಡಲವನ್ನೂ ಭೇದಿಸಿ ಮೇಲೇರಬಲ್ಲ ಶಕ್ತಿ ವಿರಾಟ್‍ಯೋಗಿ ಯೊಬ್ಬನಿಗೆ, ರಣಮುಖದಲ್ಲಿ ಸತ್ತ ವೀರನೊಬ್ಬನಿಗೆ ಮಾತ್ರ ಸಾಧ್ಯ; ಪ್ರಾಣ ಅನಿತ್ಯ; ಮಾನ ಶಾಶ್ವತ. ಆದ್ದರಿಂದ ಪ್ರಾಣ ಬಿಟ್ಟಾದರೂ ಮಾನವನ್ನು ಕಾಪಾಡಬೇಕು–ಇಂಥ ಧ್ಯೇಯಗಳನ್ನು ಹೊಂದಿದ್ದ ವೀರರು ಪ್ರಾಣವನ್ನು ತೃಣವಾಗೆಣಿಸಿ ಹೋರಾಡಿ ಸತ್ತ ವೀರವರ್ಣನೆಗಳನ್ನು ನೂರಾರು ವೀರಗಲ್ಲುಗಳು ಸಾರುತ್ತವೆ. ಪುಂಡರು ಊರಿಗೆ ನುಗ್ಗಿ ಹಸುಗಳನ್ನು ಕದ್ದು ಹೊಡೆದುಕೊಂಡು ಹೋಗುತ್ತಿದ್ದಾಗ, ಪೆಂಡಿರುಡೆಯುರ್ಚಿ ಮಾನ ಕಳೆಯುತ್ತಿದ್ದಾಗ, ಏಕಾಕಿಯಾಗಿಯೇ ಅಡ್ಡನುಗ್ಗಿ ಕಾಪಾಡಿ ಶತ್ರುಗಳನ್ನು ಹಿಮ್ಮೆಟ್ಟಿಸಿಯೊ ಕಳ್ಳರು ಮೇಲೆ ಬಿದ್ದಾಗಲೋ ಹುಲಿಹಂದಿಗಳನ್ನೆದುರಿಸಿಯೋ ವೀರಾವೇಶದಿಂದ ಹೊಡೆದಾಡಿ ಸತ್ತ ವೀರರಿಗಾಗಿ ಹಳ್ಳಿಹಳ್ಳಿಗಳಲ್ಲಿಯೂ ವೀರಗಲ್ಲುಗಳನ್ನು ನಿಲ್ಲಿಸಿರುವುದು ಕಂಡುಬರುತ್ತದೆ. ಇದರೊಂದಿಗೆ ಒಡೆಯನಿಗಾಗಿ ತನ್ನ ಪ್ರಾಣವನ್ನು ಮುಡುಪಾಗಿಟ್ಟು ಅವನೊಂದಿಗೆ ಸತ್ತ ಲೆಂಕರು, ವೇಳೆವಾಳಿಗಳು, ಗರುಡರದು ಮತ್ತೊಂದು ರೀತಿ. ಹೀಗೆಯೇ ತನ್ನ ಗಂಡನ ಸಾವಿನೊಂದಿಗೆ ತಾನೂ ಚಿತೆಯೇರಿ ಮಹಾಸತಿಯಾಗಿ ಸತ್ತ ವೀರಮಹಿಳೆಯರಿಗಾಗಿ ನಿಲ್ಲಿಸಿದ ಮಾಸ್ತಿಕಲ್ಲುಗಳೂ ಅನೇಕವುಂಟು. ವೀರಗಲ್ಲು ಶಾಸನಗಳಲ್ಲಿ ಒಕ್ಕಣೆ ಸ್ವಲ್ಪವೇ ಇರುತ್ತದೆ. ಅವುಗಳಲ್ಲಿ ಶಿಲ್ಪಕ್ಕೇ ಪ್ರಾಧಾನ್ಯ. ಗಂಗರ ಕಾಲದಲ್ಲಿ ಆರಂಭವಾದ ಈ ವೀರಗಲ್ಲುಗಳಲ್ಲಿಯೂ ಕೆಲವು ಪ್ರಕಾರಗಳುಂಟು. ಗಂಗ ನೊಳಂಬರ ವೀರಗಲ್ಲುಗಳಲ್ಲಿ ವೀರನು ಶತ್ರುಗಳೊಂದಿಗೆ ಹೋರಾಡುತ್ತಿರುವ ದೊಡ್ಡ ಪ್ರಮಾಣದ ಶಿಲ್ಪವಿದ್ದು ಅದರ ಮೇಲೋ ಪಕ್ಕದಲ್ಲೋ ಆ ವೀರನ ಬಗೆಗೆ ವಿವರಗಳಿರಬಹುದು. ತಮಟಕಲ್ಲಿನ ಶಾಸನ ವೀರನೊಬ್ಬನ ಪ್ರಶಂಸೆಯಾಗಿದ್ದು ಅದೂ ವೀರಗಲ್ಲಾಗಿರಬಹುದು. ಆದರೆ ಅದರಲ್ಲಿ ಯಾವ ಶಿಲ್ಪವೂ ಇಲ್ಲದಿರುವುದು ಗಮನಾರ್ಹ. ಬೇಗೂರಿನ ವೀರಗಲ್ಲು ತನ್ನ ವಿಸ್ತಾರವಾದ ಯುದ್ಧದ ವಿವರಗಳನ್ನು ತೋರಿಸುವ ಶಿಲ್ಪಕ್ಕೆ ಪ್ರಸಿದ್ಧವಾಗಿದೆ. ಮುಂದೆ ಮೂರು ಹಂತಗಳಲ್ಲಿ ಶಿಲ್ಪವಿದ್ದು ಕ್ರಮವಾಗಿ ಯುದ್ಧ, ವೀರನ ಸ್ವರ್ಗಾರೋಹಣ ಮತ್ತು ದೇವಲೋಕದಲ್ಲಿ ವೀರನಿರುವಂತೆ ಕಂಡರಿಸಿರುತ್ತಾರೆ. ಕೆಲವು ವೇಳೆ ಆರೇಳು ಹಂತಗಳಿರುವುದೂ ಉಂಟು. ಹೊಯ್ಸಳ ಕಾಲದ ವೀರಗಲ್ಲುಗಳು ಸುಂದರವಾಗಿರುತ್ತವೆ. ಶಿಲ್ಪಗಳ ನಡುವಣ ಪಟ್ಟಿಯಲ್ಲಿ ಶಾಸನವಿರುತ್ತವೆ. ಮಾಸ್ತಿಕಲ್ಲಿನ ಶಾಸನಗಳಲ್ಲಿ ಪ್ರಸಿದ್ಧವಾದುದು ದೇಕಬ್ಬೆಯ ಶಾಸನ. ಇದರಲ್ಲಿ ಯಾವ ಶಿಲ್ಪವೂ ಇಲ್ಲ. ಸಾಮಾನ್ಯವಾಗಿ ಮಾಸ್ತಿಕಲ್ಲುಗಳಲ್ಲಿ ವೀರನೊಡನೆ ಬಲಗೈಯನ್ನು ಎತ್ತಿ ಹಿಡಿದು ನಿಂತ ಹೆಣ್ಣಿನ ಶಿಲ್ಪ ಇರುತ್ತದೆ. ಮುಂದೆ ಕೇವಲ ಒಂದು ಕಂಬವನ್ನು ತೋರಿಸಿ ಅದರಿಂದ ಮೇಲೆತ್ತಿಕೊಂಡಂತಿರುವ ತೋಳು ಮಾತ್ರ ಇರುವ ಶಿಲ್ಪ ಹೆಚ್ಚಾಗಿ ಕಂಡುಬರುತ್ತದೆ. ಶಾಸನವೇ ಇಲ್ಲದೆ ಕೇವಲ ಶಿಲ್ಪವುಳ್ಳ ವೀರಗಲ್ಲುಗಳೂ. ಮಾಸ್ತಿಕಲ್ಲುಗಳೂ ಹೇರಳವಾಗಿವೆ.

ಶಿಲ್ಪಗಳ ಪೀಠಗಳ ಮೇಲೆ ಶಿಲ್ಪದ ಹೆಸರನ್ನೋ ರೂವಾರಿಗಳ ಹೆಸರನ್ನೋ ತಿಳಿಸುವ ಶಾಸನಗಳುಂಟು. ಹಾಗೆಯೇ ಪುಣ್ಯಕ್ಷೇತ್ರಗಳಿಗೆ ಬಂದ ಯಾತ್ರಿಕರು ತಮ್ಮ ಹೆಸರನ್ನು ಅಲ್ಲಿ ಹಾಸುಗಲ್ಲಿನ ಮೇಲೆ ಹಾಕಿಸಿರ ಬಹುದು. ಪಾತ್ರೆಪಡಗಗಳ ಮೇಲೆ ಅವುಗಳ ಒಡೆಯರ ಹೆಸರಿರಬಹುದು. ಇವು ಬಹುಮಟ್ಟಿಗೆ ಒಂದೇ ಪದವುಳ್ಳ ಶಾಸನಗಳು. ಶ್ರೀಚಮ್ಮ, ಮಾಬ, ಮಲ್ಲಿತಂಮ ಇತ್ಯಾದಿ ರೂವಾರಿಗಳ ಹೆಸರುಗಳೂ ಶ್ರೀಲಕುಮಿದೇವಿ ದುಸ್ಸಪ್ನ ವಧೆ ಇತ್ಯಾದಿ ಶಿಲ್ಪಗಳ ಹೆಸರುಗಳೂ ಶ್ರೀಕವಿರತ್ನ ಮುಂತಾದ ಯಾತ್ರಿಕರ ಹೆಸರುಗಳೂ ಈ ಗುಂಪಿಗೆ ಸೇರುತ್ತವೆ. ವರ್ತಕ ಸಂಘಗಳಿಗೆ ಸೇರಿದ ಶಾಸನಗಳಿಂದ ನಾಡಿನ ವರ್ತಕರಿಗೆ ದೇಶವಿದೇಶಗಳೊಡನೆ ಸಂಪರ್ಕ ಸಂಬಂಧಗಳಿದ್ದ ಅಂಶ ವಿದಿತವಾಗುತ್ತದೆ. ಅಯ್ಯಾವೊಳೆ ಐನೂರ್ವರು ದಕ್ಷಿಣ ಭಾರತದ ಖ್ಯಾತ ವರ್ತಕ ಸಂಘವಾಗಿತ್ತು.

**ಶಾಸನಗಳ ಭಾಷೆ, ಸಾಹಿತ್ಯ:** ಅಶೋಕನ ಶಾಸನಗಳಿಂದಾರಂಭಿಸಿ ಸುಮಾರು 4ನೆಯ ಶತಮಾನದ ಮಧ್ಯಭಾಗದವರೆಗೂ ಕರ್ನಾಟಕದಲ್ಲಿ ದೊರೆತಿರುವ ಸಾತವಾಹನ, ಚುಟು, ಕದಂಬ ವಂಶಗಳ ಶಾಸನಗಳು, ಸನ್ನತಿಯ ಶಾಸನಗಳು, ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ತಾಮ್ರಶಾಸನ ಮೊದಲಾದುವು ಪ್ರಾಕೃತ ಭಾಷೆಯಲ್ಲಿವೆ. ಆದರೆ ಚಂದ್ರವಳ್ಳಿಯ ಮಯೂರವರ್ಮನ ಶಾಸನ ಮತ್ತು ತಾಮ್ರಶಾಸನಗಳಲ್ಲಿ ಕಂಡುಬರುವುದು ಗ್ರಂಥಸ್ಥ ಪ್ರಾಕೃತ. ಚಂದ್ರವಳ್ಳಿಯ ಶಾಸನ ಸಂಸ್ಕೃತ ಭಾಷೆಯದೆಂದು ಈಚಿನ ಕೆಲವು ವಿದ್ವಾಂಸರು ಪ್ರತಿಪಾದಿಸುತ್ತಾರೆ. ಅಲ್ಲದೆ ಪಲ್ಲವ ತಾಮ್ರಶಾಸನದ ಮುದ್ರೆಯ ಮೇಲಿರುವ ಅಂಕನ ಮತ್ತು ಶಾಸನದ ಕೊನೆಯ ಮಂಗಳವಾಕ್ಯ ಸಂಸ್ಕೃತದಲ್ಲಿರುವುದನ್ನು ಗಮನಿಸಬೇಕು.

ಗೊಮ್ಮಟೇಶ್ವರ ವಿಗ್ರಹದ ಪಾದದ ಬಳಿಯಿರುವ ಶಾಸನ

ಅಲ್ಲಿಂದ ಮುಂದೆ ಶಾಸನಗಳಲ್ಲಿ ಪ್ರಾಕೃತದ ಬದಲು ಸಂಸ್ಕೃತದ ಬಳಕೆ ವ್ಯಾಪಕವಾಗಿ ಪಸರಿಸಿತು. ರಾಜಾಸ್ಥಾನಗಳಲ್ಲಿ ಭದ್ರವಾಗಿ ಬೇರೂರಿದ ಸಂಸ್ಕೃತ ಮುಂದೆ ಬಂದ ಕದಂಬರ, ಗಂಗ, ಬಾದಾಮಿ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರದ ತಾಮ್ರಶಾಸನಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. 5ನೆಯ ಶತಮಾನದಲ್ಲಿ ಹಲ್ಮಿಡಿಯ ಶಾಸನದ ಮೂಲಕ ಶಾಸನಗಳಲ್ಲಿ ಕನ್ನಡ ಭಾಷೆಯನ್ನು ಬಳಸುವುದು ಆರಂಭವಾದರೂ ಮೊದಲಿಗೆ ಮುಖ್ಯವಾದ ದೊಡ್ಡಶಾಸನಗಳು ಸಂಸ್ಕೃತದಲ್ಲಿಯೇ ಮುಂದುವರಿದವು. ತಾಳಗುಂದ, ಗುಡ್ನಾಪುರ, ಬನವಾಸಿಯ ಸ್ತಂಭಶಾಸನಗಳು ಪ್ರೌಢಶೈಲಿಯ ಸಂಸ್ಕೃತದಲ್ಲಿರುವುದನ್ನು ನೋಡಬಹುದು. ಇಮ್ಮಡಿ ಪುಲಕೇಶಿಯ ಕಾಲದ ರವಿಕೀರ್ತಿಯ ಶಾಸನ ತನ್ನ ಶೈಲಿಗೆ ಪ್ರಸಿದ್ಧವಾಗಿದೆ. 6ನೆಯ ಶತಮಾನದ ಅನಂತರ ಕನ್ನಡ ಶಾಸನಗಳ ಸಂಖ್ಯೆ ಬೆಳೆಯುತ್ತ ಹೋದರೂ ಜೊತೆಜೊತೆ ಯಲ್ಲಿಯೇ ಸಂಸ್ಕೃತ ಶಾಸನಗಳೂ ಸಮವಾಗಿ ಕೆಲವು ಕಾಲ ಮುಂದುವರಿಯುತ್ತ ಬಂದವು. ಮುಂದೆ ಕನ್ನಡ ಶಾಸನಗಳ ಸಂಖ್ಯೆ ಹೇರಳವಾಗಿ ಬೆಳೆದರೂ ಅವುಗಳಲ್ಲಿ ಆರಂಭದ ಮಂಗಳಶ್ಲೋಕಗಳು, ಕಡೆಯಲ್ಲಿ ಬರುವ ಆಶಂಸನ ಪದ್ಯಗಳು ಸಂಸ್ಕೃತದಲ್ಲಿಯೇ ಇರುತ್ತವೆ. ಹಲವು ಶಾಸನಗಳಲ್ಲಿ ರಾಜರ ವಂಶಾವಳಿಯು ಸಂಸ್ಕೃತದಲ್ಲಿದ್ದು ಉಳಿದಂತೆ ಕನ್ನಡದಲ್ಲಿರುವುದೂ ಉಂಟು. ಕಲ್ಯಾಣ ಚಾಳುಕ್ಯ, ಹೊಯ್ಸಳರ ಕಾಲಗಳಲ್ಲಿ ಸಾವಿರಾರು ದೀರ್ಘ ಶಾಸನಗಳಾಗಲಿ, ಕಿರುಶಾಸನಗಳಾಗಲಿ ಕನ್ನಡದಲ್ಲಿ ಇರುವುದೇ ಸಾಮಾನ್ಯ ನಿಯಮವಾಗಿತ್ತು. ತಾಮ್ರಶಾಸನಗಳಲ್ಲಿ ಮಾತ್ರ ಸಂಸ್ಕೃತವೇ ಪ್ರಧಾನವಾಗಿದ್ದು, ಅಪೂರ್ವವಾಗಿ (ಬ್ರಿಟಿಷ್ ಮ್ಯೂಸಿಯಂನಲ್ಲಿರುವ) ರಾಷ್ಟ್ರಕೂಟ ನಾಲ್ವಡಿ ಗೋವಿಂದನ ತಾಮ್ರಶಾಸನದಂತೆ ಒಂದೊಂದು ಕನ್ನಡದಲ್ಲಿರುವುದುಂಟು. ಆಳುಪರ ಏಕೈಕ ತಾಮ್ರಶಾಸನ ಕನ್ನಡದಲ್ಲಿದೆ. ಗಂಗ ದುರ್ವಿನೀತನ ತಾಮ್ರಶಾಸನವೊಂದರಲ್ಲಿ

ಅದನ್ನು ಕಂಡರಿಸಿದ ತ್ವಷ್ಟಕಾರನಿಗೆ ಕೊಟ್ಟ ದತ್ತಿಯನ್ನು ತಿಳಿಸುವ ಭಾಗ ಮಾತ್ರ ಕನ್ನಡದಲ್ಲಿದೆ. ಮತ್ತೆ ಕೆಲವು ಗಂಗರ ಶಾಸನಗಳು (ಮಡಿಕೇರಿಯ ತಾಮ್ರಶಾಸನದಂಥವು) ಕನ್ನಡ ಬೆರೆತ ಸಂಸ್ಕೃತದಲ್ಲಿರುವುದುಂಟು. ಆದರೆ ಅಂಥವನ್ನು ನೈಜಶಾಸನಗಳೆಂದು ಒಪ್ಪುವುದು ಕಷ್ಟ. ಅನೇಕ ತಾಮ್ರಶಾಸನಗಳಲ್ಲಿ ವಿಷಯವರ್ಣನೆ ಪೂರ್ತಿಯಾಗಿ ಸಂಸ್ಕೃತದಲ್ಲಿಯೇ ಇದ್ದು ದತ್ತಿಬಿಟ್ಟ ಗ್ರಾಮ ಅಥವಾ ಭೂಮಿಯ ಎಲ್ಲೆಯ ವಿವರಗಳು ಕನ್ನಡದಲ್ಲಿರುತ್ತವೆ. ಹೊಯ್ಸಳರ ತಾಮ್ರ ಶಾಸನಗಳಲ್ಲಿ ವಿಷಯನಿರೂಪಣೆಯಲ್ಲಿ ಸಂಸ್ಕೃತ–ಕನ್ನಡಗಳೆರಡರಲ್ಲಿಯೂ ವಿವರಿಸಿರುವುದುಂಟು; ಇಲ್ಲವೆ ಮೊದಲು ಸಂಸ್ಕೃತದಲ್ಲಿ ಶಾಸನದ ವಸ್ತುವನ್ನು ವಿವರಿಸಿ ಅಯಮೇವಾರ್ಥಃ ಕರ್ಣ್ಣಾಟ ಭಾಷಯಾ ಸಪ್ರಪಂಚಃ ಪ್ರಕಟೀ ಕ್ರಿಯತೇ ಎಂದು ತಿಳಿಸಿ ಮತ್ತೆ ಅದೇ ವಿಷಯವನ್ನೆ ಕನ್ನಡದಲ್ಲಿ ಕೊಟ್ಟಿರುವುದುಂಟು. ವಿಜಯನಗರದ ತಾಮ್ರಶಾಸನಗಳು ಸಂಸ್ಕೃತದಲ್ಲಿರುವುದೇ ಹೆಚ್ಚು. ಒಂದೊಂದು ಸಲ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಇರುವುದುಂಟು; ತೀರ ವಿರಳವಾಗಿ ಕನ್ನಡದಲ್ಲಿ ಇರುತ್ತವೆ. ಮೈಸೂರರಸರ ತಾಮ್ರಶಾಸನಗಳಲ್ಲಿ ಸಂಸ್ಕೃತವೇ ಮುಖ್ಯವಾಗಿ ಕಂಡುಬಂದರೂ ಕನ್ನಡವನ್ನೂ ಧಾರಾಳವಾಗಿ ಬಳಸಲಾಗಿದೆ. ಕೆಳದಿ ನಾಯಕರು ಮತ್ತು ಇತರ ಪಾಳೆಯಗಾರರ ತಾಮ್ರಶಾಸನಗಳು ಕನ್ನಡದಲ್ಲಿವೆ. ಇವು ಗದ್ಯಶಾಸನಗಳು, ಹೊಯ್ಸಳರ ಕಾಲದಲ್ಲಿ ಶಾಸನ ಭಾಷೆ ಕನ್ನಡವೇ ಪ್ರಬಲವಾಗಿದ್ದು ವಿಜಯನಗರದ ಕಾಲದಲ್ಲಿ ಮತ್ತೆ ಸಂಸ್ಕೃತ ತನ್ನ ಪ್ರಾಬಲ್ಯವನ್ನು ಗಳಿಸಿಕೊಂಡಿತು. ತಾಮ್ರಶಾಸನಗಳಲ್ಲೆಂತೋ ಅಂತೆಯೇ ಶಿಲಾಶಾಸನಗಳಲ್ಲಿಯೂ ರಾಜವಂಶಾವಳಿ ಮೊದಲಾದುವನ್ನು ಸಂಸ್ಕೃತ ಪದ್ಯಗಳಲ್ಲಿಯೇ ಕೊಡುವ ಪರಿಪಾಠ ಬೆಳೆದು ಬಂತು. ಸಂಖ್ಯೆಯಲ್ಲೇನೋ ಕನ್ನಡ ಶಾಸನಗಳೇ ಹೆಚ್ಚು. ಆದರೆ ಅವು ಸಾಮಾನ್ಯವಾಗಿ ವಸ್ತುನಿಷ್ಠ ಕಿರುಗದ್ಯ ಶಾಸನಗಳು. ದೊಡ್ಡಶಾಸನಗಳಲ್ಲಿ ಪ್ರಶಸ್ತಿ ವರ್ಣನೆ ಸಂಸ್ಕೃತದಲ್ಲಿ, ವಿಷಯನಿರೂಪಣೆ ಕನ್ನಡ ಗದ್ಯದಲ್ಲಿ. 14ನೆಯ ಶತಮಾನದಲ್ಲಿ ಅಲ್ಲಲ್ಲಿ ತಲೆಹಾಕಿದ ಈ ಪದ್ಧತಿ 15, 16ನೆಯ ಶತಮಾನಗಳಲ್ಲಿ ಸಾಮಾನ್ಯ ನಿಯಮವಾಯಿತು. ಈ ಕಾಲಕ್ಕೆ ಸೇರಿದ ಶ್ರವಣಬೆಳಗೊಳದ ಸಿದ್ಧರ ಬಸದಿಯಲ್ಲಿನ ಸ್ತಂಭಶಾಸನಗಳೂ ಹರಿಹರದಲ್ಲಿರುವ ಕೆಲವು ಶಾಸನಗಳೂ ಹೀಗೆ ಸಂಸ್ಕೃತದಲ್ಲಿ ಪ್ರೌಢವಾಗಿ ಕಾವ್ಯಮಯವಾಗಿರುವುದನ್ನು ನೋಡಬಹುದು. ಅದೇ ರೀತಿ ಹುಂಚದಲ್ಲಿ ಪದ್ಮಾವತೀ ಬಸದಿಯ ಪ್ರಾಕಾರದಲ್ಲಿರುವ ವಾದಿವಿದ್ಯಾನಂದನ ಗುರುಪರಂಪರೆಯ ವಿಸ್ತಾರವಾದ ವಿವರಗಳುಳ್ಳ ಶಾಸನವೂ ಸಂಸ್ಕೃತದಲ್ಲಿಯೇ ಇದ್ದರೂ ಆರಂಭದಲ್ಲಿ ವಿದ್ಯಾನಂದನನ್ನು ವರ್ಣಿಸಿರುವ ಭಾಗ ಮಾತ್ರ ಕನ್ನಡದಲ್ಲಿದೆ. ಹೀಗೆ ನಾಲ್ಕನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಆರಂಭವಾದ ಸಂಸ್ಕೃತ ಶಾಸನಗಳು ಕಾಲಕ್ರಮದಲ್ಲಿ ಕನ್ನಡ ಶಾಸನಗಳಿಗೆ ಎಡೆಮಾಡಿಕೊಟ್ಟರೂ ಮತ್ತೆ ಪ್ರಬಲವಾಗಿ 18ನೆಯ ಶತಮಾನದವರೆಗೂ ಉಳಿದುಕೊಂಡೇ ಬಂದವು.

ಕರ್ನಾಟಕದಲ್ಲಿರುವ ಶಾಸನಗಳಲ್ಲಿ ಬಹು ಹೆಚ್ಚಿನ ಸಂಖ್ಯೆಯ ಶಾಸನಗಳು ಕನ್ನಡದಲ್ಲಿವೆ. ಇವುಗಳಲ್ಲಿ ಹಲ್ಮಿಡಿಯ ಶಾಸನವೇ ಮೊದಲನೆಯದೆಂದು ಪರಿಗಣಿತವಾಗಿದೆ. ಅದಕ್ಕಿಂತ ಮೊದಲು ಕನ್ನಡ ಭಾಷೆಯನ್ನು ಶಾಸನದಲ್ಲಿ ಬಳಸಿರುವುದು ಕಂಡುಬರದಿದ್ದರೂ ಹಿಂದಿನ ಶಾಸನಗಳಲ್ಲಿ ಕಂಡುಬರುವ ಹಲವು ಸ್ಥಳನಾಮಗಳು ವ್ಯಕ್ತಿನಾಮಗಳು ಕನ್ನಡದವೆಂದು ಹೇಳಬಹುದು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಬರುವ ಇಸಿಲ ಎಂಬ ಊರ ಹೆಸರನ್ನು ಕನ್ನಡ ಹೆಸರೆಂದು ಭಾವಿಸಲಾಗಿದೆ. ಮಳವಳ್ಳಿಯ ಕದಂಬರ ಶಾಸನದಲ್ಲಿ ಬರುವ ಮಳ್ಳಪಳ್ಳಿ, ಸೋಮಪಳ್ಳಿ, ವೆಳ್ಳಕ್ಕಿ, ವೇಗೂರುಗಳು ಕನ್ನಡವೆಂಬುದು ಸ್ಪಷ್ಟ. 6ನೆಯ ಶತಮಾನದವರೆಗೆ ಅಷ್ಟಾಗಿ ಕನ್ನಡ ಶಾಸನಗಳಿಲ್ಲ. ಅಲ್ಲಿಂದ ಮುಂದೆ ಚಾಳುಕ್ಯರ ಶಾಸನಗಳಲ್ಲಿ ಕನ್ನಡ ಬಳಕೆಯಾಗತೊಡಗಿತು. ತಮಟಕಲ್ಲಿನ ಶಾಸನವನ್ನು ರೈಸ್ ಅವರು ಸು. 500ಕ್ಕೆ ಸೇರಿದ್ದೆಂದು ಹೇಳಿದ್ದರೂ ಅದನ್ನು ಲಿಪಿಯ ಆಧಾರದಿಂದ 7ನೆಯ ಶತಮಾನದ್ದೆಂದು ಹೇಳಬಹುದು. 10ನೆಯ ಶತಮಾನದವರೆಗೂ ಅಲ್ಲಲ್ಲಿ ಕನ್ನಡ ಶಾಸನಗಳು ಹುಟ್ಟಿಕೊಂಡುವು. ಗಂಗರು, ಬಾದಾಮಿ ಚಳುಕ್ಯರು, ರಾಷ್ಟ್ರಕೂಟರು ಈ ಕಾಲದಲ್ಲಿ ಶಿಲಾಶಾಸನಗಳಲ್ಲಿ ಕನ್ನಡವನ್ನೇ ಹೆಚ್ಚಾಗಿ ಬಳಸಿದರು. ಇವು ಕಿರುಶಾಸನಗಳು. ವಸ್ತುನಿಷ್ಠವಾದ ಈ ಶಾಸನಗಳು ಹೆಚ್ಚು ವಿಷಯಗಳನ್ನೊಳಗೊಂಡಿರುವುದಿಲ್ಲ. 9ನೆಯ ಶತಮಾನದ ಕವಿರಾಜಮಾರ್ಗವನ್ನು ಬಿಟ್ಟರೆ ಅದಕ್ಕೆ ಮುಂಚಿನ ಕನ್ನಡದ ಗ್ರಂಥಗಳು ದೊರೆತಿಲ್ಲವಾದ್ದರಿಂದ ಅದಕ್ಕೂ ಹಿಂದಿನ ಕನ್ನಡ ಭಾಷೆಯ ಸ್ವರೂಪ, ಸಾಹಿತ್ಯದ ರೀತಿಯನ್ನರಿಯಲು ಈ ಶಾಸನಗಳೇ ಆಧಾರ. 10ನೆಯ ಶತಮಾನದಿಂದೀಚಿನ ಹಳಗನ್ನಡಕ್ಕಿಂತ ಕೆಲಮಟ್ಟಿಗೆ ಭಿನ್ನವಾಗಿರುವ ಭಾಷೆಯನ್ನು ಈ ಶಾಸನಗಳಲ್ಲಿ ಕಾಣುತ್ತೇವೆ. ಕಿತ್ತೂರಾ, ವೆಳ್ಮಾಡದಾ ಧರ್ಮ್ಮಸೇನಗುರುವಡಿಗಳಾ ಶಿಷ್ಯರ್ ಬಾಲದೇವಗುರುವಡಿಗಳ್ ಸನ್ಯಾಸನಂನೋನ್ತು ಮುಡಿಪ್ಪಿದಾರ್, ಪೆರ್ಗ್ಗೊರವಂ ಸಮಾಧಿ ನೆರೆದೊನ್ ನೋನ್ತ್ಯಿದ್ದೋರ್ ಸಿದ್ಧಿಯಾನ್, ಕಟ್ಟಿಪ್ಪ ಬೆಟ್ಟಮ್ಮೇಲ್ಕಾಲಂ ಕೆಯ್ದಾರ್, ಬಿಣಮಣಿ ಅನ್ತು ಭೋಗಿ ಬಿಣದುಳ್ಮಣಿವಿಲ್‌ಮನದೋನ್ ಇತ್ಯಾದಿ. ಇದನ್ನು ಪೂರ್ವದ ಹಳಗನ್ನಡ ಎಂದು ಕರೆಯಲಾಗಿದೆ. ಕಪ್ಪೆ ಅರಭಟ್ಟನ ಬಾದಾಮಿಯ ಶಾಸನ, ತಮಟಕಲ್ಲಿನ ಗುಣಮಧುರನ ಶಾಸನ, ಶ್ರವಣಬೆಳಗೊಳದಲ್ಲಿರುವ ಹಲವಾರು ಈ ಕಾಲದ ನಿಷಿಧಿ ಶಾಸನಗಳು ಪದ್ಯಗಳಿಂದ ಕೂಡಿದ್ದು ಸಾಹಿತ್ಯಕ ಲಕ್ಷಣಗಳನ್ನು ಹೊಂದಿವೆ. ಹತ್ತನೆಯ ಶತಮಾನದಿಂದೀಚೆಗೆ ಕನ್ನಡ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತ ಹೋದರೂ ಆಡುವ ಭಾಷೆಗೆ ಹತ್ತಿರವಾಗಿದ್ದ ಶಾಸನಗಳು ಭಾಷೆಯ ಸ್ವರೂಪವನ್ನು ಖಚಿತವಾಗಿ ತಿಳಿಯಲು ಸಹಾಯ ಮಾಡುತ್ತವೆ. ಈ ಶತಮಾನದ ಅನಂತರ ಕನ್ನಡ ಶಾಸನಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹುಟ್ಟಿಕೊಂಡುವು. ದೀರ್ಘಶಾಸನಗಳೂ ಬರಲಾರಂಭಿಸಿದುವು. ಆಗ ಸಾಹಿತ್ಯದಲ್ಲಿ ಪ್ರಚಲಿತವಿದ್ದ ಚಂಪೂಶೈಲಿಯನ್ನೇ ಶಾಸನಕರ್ತೃಗಳೂ ಸಮರ್ಥವಾಗಿ ಬಳಸಿಕೊಂಡರು. ಶಾಸನಗಳನ್ನು ರಚಿಸಿದವರಲ್ಲಿ ಓದು ಬರೆಹ ಬಲ್ಲ ಸಾಮಾನ್ಯರಿಂದ ಹಿಡಿದು ಪೂರ್ಣಪಾಂಡಿತ್ಯವನ್ನು ಹೊಂದಿದ್ದು ರಾಜಾಸ್ಥಾನಗಳಲ್ಲಿ ಪ್ರತಿಷ್ಠಿತರಾಗಿದ್ದ ಕವಿಗಳವರೆಗೂ ಉಂಟು. ಗ್ರಾಮಗಳಲ್ಲಿ ಜನಸಾಮಾನ್ಯರು ಕಟ್ಟಿಸಿದ ಕೆರೆಕಾಲುವೆಗಳ ವಿಷಯವನ್ನು ತಿಳಿಸುವಲ್ಲಿ, ಊರಿಗೆ ಬಂದ ಕುತ್ತನ್ನು ಪರಿಹರಿಸಲು ಏಕಾಂಗಿಯಾಗಿ ಹೋರಾಡಿದ ಊರಿನ ವೀರರ ವೀರಮರಣವನ್ನು ತಿಳಿಸುವಲ್ಲಿ, ದೇವಾಲಯಗಳಿಗೆ ಬಸದಿಗಳಿಗೆ ಭಕ್ತರು ಪೂಜಾದಿ ಕೈಂಕರ್ಯಗಳಿಗಾಗಿ ಕೊಟ್ಟ ದಾನಾದಿಗಳನ್ನು ಸೂಚಿಸುವಲ್ಲಿ ಆ ಹೊತ್ತಿಗೆ ಒದಗಿದವರೇ ಶಾಸನಗಳನ್ನು ರಚಿಸಿರುತ್ತಾರೆ. ರಾಜರೋ ಅವರ ಸಾಮಂತರೋ ಅಧಿಕಾರಿಗಳೋ ದೇವಾಲಯಗಳನ್ನು ಕಟ್ಟಿಸಿ ದಾನದತ್ತಿಗಳನ್ನು ಬಿಟ್ಟಾಗ ಅಥವಾ ಇತರ ಉದ್ದೇಶಗಳಿಗಾಗಿ ಶಾಸನಗಳನ್ನು ಹಾಕಿಸಿದಾಗ ಉದ್ದೇಶಪೂರ್ವಕವಾದ ವಿದ್ವತ್ಪೂರ್ಣವಾದ ಶಾಸನಗಳ ರಚನೆಯನ್ನು ನೋಡುತ್ತೇವೆ. ಶಾಸನಗಳ ಮೂಲಕ ಪರಿಚಿತರಾದವರೂ ಇದ್ದಾರೆ. ಇವರು ತಮ್ಮ ಕವಿತಾಸಾಮರ್ಥ್ಯವನ್ನು ಹೊಗಳಿಕೊಂಡಿರುವುದುಂಟು. ಕಾಡಿಯೂರು ಮತ್ತು ಅಲ್ಲಿನ ವಿಪ್ರೋತ್ತಮರನ್ನು ನವೀನ ವರ್ಣನೆಯಿಂದ ಅಭಿವರ್ಣಿಸಿರುವ ಕವಿರಾಜ ರಾಜ, ದಂಡಾಪುರ ಶಾಸನದ ಕಬ್ಬಗಳನ್ನೊರೆದ ಪರಿಣತ ರವಿನಾಗಭಟ್ಟ, ಮಾಧುರ್ಯಸುಕರ ಚಾತುರ್ಯ ಗುಣಗಳಿಂದ ಚೆಲ್ವಾಗುವಂತೆ ನಾಗಾವಿಯ ಶಾಸನವನ್ನು ರಚಿಸಿದ ಸಾವಿಯಣ್ಣ, ಸೋಗಲದಲ್ಲಿ ದೊಡ್ಡ ಶಾಸನವನ್ನು ರಚಿಸಿದ ಕಮಳಾದಿತ್ಯ, ಕವಿರತ್ನಭೂಷಣ ನೆಂದೂ ಕರ್ಣಾಟಸಂಸ್ಕೃತಾಂಧ್ರಕವಿಯೆಂದೂ ಹೊಗಳಿಸಿಕೊಂಡಿರುವ ವಿಷ್ಣುಭಟ್ಟ, ದೇಕಬ್ಬೆ ಮಹಾಸತಿಯಾದುದನ್ನು ಮನಮುಟ್ಟುವಂತೆ ವರ್ಣಿಸಿರುವ ಕವಿರಾಜಬಾಂಧವಮಲ್ಲ, ಉದ್ದಂಡಕವಿಭಾಳನೇತ್ರ, ಸುಕವಿಜನಮಿತ್ರನಾದ ಜನ್ನಯ್ಯ, ಚಿದಾನಂದಬುಧ, ಸಜ್ಜನತಿಳಕ ವಾಮನಯ್ಯ ಮೊದಲಾದ ಅನೇಕ ಕವಿಗಳ ಶಾಸನರಚನೆ ರಸಾರ್ದ್ರವೂ ಪಾಂಡಿತ್ಯಪೂರ್ಣವೂ ಆಗಿದೆ. ಅವರು ತಮ್ಮ ಪ್ರತಿಭೆಪಾಂಡಿತ್ಯಗಳಿಂದ ಶಾಸನಗಳ ಕಾವ್ಯಮೌಲ್ಯವನ್ನು ಉಚ್ಚಮಟ್ಟಕ್ಕೇರಿಸಿದ್ದಾರೆ. ದಾತೃವಿನ, ರಾಜನ, ವೀರನ ಪರಾಕ್ರಮವನ್ನು ವರ್ಣಿಸುವಲ್ಲಿ, ಅವರ ಗುಣಗಳನ್ನು ನಿರೂಪಿಸುವಲ್ಲಿ ದೇಶ, ಊರು, ಅಲ್ಲಿನ ಜನ, ವಿದ್ಯಾಪೀಠಗಳು ದೇವಾಲಯಗಳನ್ನು ಚಿತ್ರಿಸುವಲ್ಲಿ ಕವಿಕಲ್ಪನೆ ಗರಿಗೆದರುತ್ತದೆ; ಸುಂದರವಾದ, ಸೊಗಸಾದ ಕಾವ್ಯ ಹೊಮ್ಮುತ್ತದೆ. ಇವುಗಳಲ್ಲಿ ಕೆಲವಂತೂ ಭಾವಗೀತೆಗಳಾಗಿ ಪರಿಣಮಿಸಿವೆ. ಕೇವಲ ಗೊಮ್ಮಟಸ್ತುತಿಯನ್ನೇ ವಸ್ತುವಾಗುಳ್ಳ ಶ್ರವಣಬೆಳಗೊಳದಲ್ಲಿರುವ ಬೊಪ್ಪಣಪಂಡಿತನ ಶಾಸನ ಸುಂದರವಾದ ಒಂದು ಪುಟ್ಟಕಾವ್ಯ.

ದೀರ್ಘಶಾಸನಗಳಲ್ಲಿ ರಾಜರೇ ಶಾಸನಗಳನ್ನು ಕೆತ್ತಿಸಿದಾಗ ಮಾತ್ರವಲ್ಲದೆ ಯಾರೇ ಶಾಸನ ಕೆತ್ತಿಸಿದಾಗಲೂ ರಾಜವಂಶಾವಳಿಯನ್ನು ವರ್ಣಿಸುವ ರೂಢಿಯಿದ್ದುದರಿಂದ ನೂರಾರು ಶಾಸನಗಳು ಒಂದೇ ಬಗೆಯ ವಂಶಾವಳಿ ಯನ್ನು ಕೊಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಪ್ರತಿಯೊಬ್ಬ ಶಾಸನಕವಿಯೂ ಆ ವಂಶಾವಳಿಯನ್ನು ಹೊಸದಾಗಿ ವರ್ಣಿಸುವುದರ ಬದಲು ಆಗಲೇ ರಚಿತವಾಗಿದ್ದ ಶಾಸನಗಳಲ್ಲಿ ಪ್ರಸಿದ್ಧವಾದ ಪದ್ಯಗಳ ನ್ನಾಯ್ದುಕೊಂಡು ತಮ್ಮ ಶಾಸನಗಳಲ್ಲಿ ಜೋಡಿಸುವುದು 12, 13ನೆಯ ಶತಮಾನಗಳಲ್ಲಿ ಸಾಮಾನ್ಯ ರೂಢಿಯಾಗಿತ್ತು. ಇವುಗಳೊಂದಿಗೆ ಶಕ್ತನಾದ ಕವಿ ಹತ್ತಾರು ಪದ್ಯಗಳನ್ನು ಹೊಸದಾಗಿ ರಚಿಸಿ ಸೇರಿಸಿರುವುದುಂಟು. ನವೀನ ಕಲ್ಪನೆಗಳು, ನವಿರಾದ ಭಾವನೆಗಳು, ಚಮತ್ಕಾರೋಕ್ತಿ, ಅಲಂಕಾರ, ಪದಾಡಂಬರಗಳಿಗೆ ಇಂಥ ಶಾಸನಗಳು ಹೆಸರಾಗಿವೆ. ಸಾಹಿತ್ಯದೃಷ್ಟಿಯಿಂದ ಶಾಸನಗಳ ರಚನೆ ಆರಂಭವಾಗಿದ್ದರೂ ಕಾವ್ಯಮಯವಾಗಿ ಬೆಳೆಯುತ್ತಹೋಗಿ ಇವುಗಳಲ್ಲಿ ವರ್ಣನೆಗಳು ಕವಿಕಲ್ಪನೆಗಳು ತುಂಬಿದ್ದು ತಮ್ಮ ಪ್ರೌಢವಾದ, ಸರಳವಾದ ಶೈಲಿಗಳಿಂದ, ವಿಶಿಷ್ಟವಾದ ಗದ್ಯಶೈಲಿಯಿಂದ, ವರ್ಣನಾವೈಖರಿಯಿಂದ, ಶಬ್ದಾಲಂಕಾರಗಳು, ಅರ್ಥಾಲಂಕಾರಗಳಿಂದ ವೀರರಸಪ್ರತಿಪಾದನೆಯಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ನೆರವಾಗಿವೆ.

14ನೆಯ ಶತಮಾನದಿಂದ ಮುಂದೆ ಕನ್ನಡ ಸಾಹಿತ್ಯದಲ್ಲಿ ಚಂಪೂಶೈಲಿ ಕಡಿಮೆಯಾಗಿ ಷಟ್ಪದಿ, ಸಾಂಗತ್ಯ, ತ್ರಿಪದಿಗಳ ಕಡೆ ಹೊರಳಿದಾಗಲೂ ಅಲ್ಲಲ್ಲಿ ಕೆಲಮಟ್ಟಿಗೆ ಕಂಡುಬರುವ ದೀರ್ಘವಾದ ಕನ್ನಡ ಶಾಸನಗಳು ಚಂಪೂ ಶೈಲಿಯನ್ನೇ ಮುಂದುವರಿಸಿವೆ. ಆದರೆ ಹಿಂದಿನ ಚಂಪೂ ಶಾಸನಗಳಲ್ಲಿ ಕಂಡುಬರುವ ಪ್ರೌಢರಚನೆ ಇವುಗಳಲ್ಲಿಲ್ಲ. ಇವು ಹೆಚ್ಚಾಗಿ ದೇಶಿಶೈಲಿಯನ್ನನುಸರಿಸಿವೆ. ಈ ಕಾಲದಲ್ಲಿ ಕಂಡುಬರುವ ಶಾಸನಗಳು ಕೇವಲ ಗದ್ಯದಲ್ಲಿದ್ದು ವಸ್ತುನಿಷ್ಠವಾಗಿರುವುದರಿಂದ ಸಾಹಿತ್ಯಾಂಶ ಕಡಿಮೆ. ವೀರಗಲ್ಲು, ಮಾಸ್ತಿಕಲ್ಲು, ನಿಸಿದಿಕಲ್ಲುಗಳ ಶಾಸನಗಳಲ್ಲಿ ಅಲ್ಲಲ್ಲಿ ಕಾವ್ಯದ ಮಿಂಚು ಹೊಳೆದಿದೆ.

**ಇತರ ಭಾಷೆಯ ಶಾಸನಗಳು:** ಕರ್ನಾಟಕದಲ್ಲಿ ತಮಿಳು, ತೆಲುಗು, ಪರ್ಷಿಯನ್, ಅರೇಬಿಕ್, ಮಲೆಯಾಳಂ, ಮಾರ್ವಾಡಿ, ಮರಾಠಿ, ತುಳು ಈ ಮುಂತಾದ ಭಾಷೆಯ ಶಾಸನಗಳು ದೊರೆತಿವೆ. 11ನೆಯ ಶತಮಾನದ ಆರಂಭದಲ್ಲಿ ಚೋಳರು ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡ ಮೇಲೆ ಕರ್ನಾಟಕದ ಈ ಭಾಗಗಳಲ್ಲಿ ತಮಿಳು ಶಾಸನಗಳನ್ನು ಹಾಕಿಸಲಾರಂಭವಾಯಿತು. ಚೋಳರು ತಾವು ಆಕ್ರಮಿಸಿದ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಆರಂಭದಲ್ಲಿ ಅಲ್ಲಿನ ಆಡುನುಡಿಯಾದ ಕನ್ನಡದಲ್ಲೇ ಶಾಸನಗಳನ್ನು ಹಾಕಿಸಿದ್ದುಂಟು. ರಾಜರಾಜನ ಬನ್ನೂರು ಶಾಸನ, ಅಪ್ರಮೇಯನ ಕಲಿಯೂರು ಶಾಸನ, ರಾಜೇಂದ್ರ ಚೋಳನ ಬಲಮುರಿ ಶಾಸನ ಮೊದಲಾದುವು

ಕನ್ನಡದಲ್ಲಿಯೇ ಇವೆ. ಆದರೆ ಬಹುಬೇಗನೆ ಅವರು ಈ ಪ್ರಾಂತದಲ್ಲಿ ತಮ್ಮ ಪ್ರಾಂತಾಧಿಕಾರಿಗಳನ್ನು ನೇಮಿಸಿ ತಮಿಳನ್ನು ಆಡಳಿತ ಭಾಷೆಯನ್ನಾಗಿ ಮಾಡಿ ಶಾಸನಗಳನ್ನು ತಮಿಳಿನಲ್ಲಿಯೇ ಹಾಕಿಸಲಾರಂಭಿಸಿದರು. ಕೋಲಾರ, ತಡಿಮಾಲಿಂಗಿ, ಅಗರ, ಕುಣಿಗಲು ಮೊದಲಾದ ಊರುಗಳಲ್ಲಿ ಚೋಳರ ಹಲವಾರು ತಮಿಳು ಶಾಸನಗಳು ದೊರೆತಿವೆ. ಈ ಭಾಗದ ಜನಕ್ಕೆ ತಮಿಳು ಸಂಪರ್ಕಭಾಷೆಯಾಗಿ ಮುಂದುವರಿಯಿತು. ಚೋಳರು ಆಳಿದ ನೂರು ವರ್ಷಗಳಲ್ಲಿ ಹೀಗೆ ಜನ ಆಡುವ ಭಾಷೆಗಿಂತ ಆಡಳಿತ ಭಾಷೆಯಾದ ತಮಿಳೇ ಹೆಚ್ಚು ಸ್ಥಿರವಾಗಿ ಬೇರೂರಿತು. ಇದರ ಫಲವಾಗಿ ಮುಂದೆ ಹೊಯ್ಸಳರು ಚೋಳರನ್ನೋಡಿಸಿ ಈ ಪ್ರಾಂತ್ಯವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡಮೇಲೂ ಈ ಭಾಗದಲ್ಲಿ ಅವರು ತಮಿಳಿನಲ್ಲಿಯೇ ಶಾಸನ ಹಾಕಿಸಬೇಕಾಯಿತು. ಹೊಯ್ಸಳರ ಕಾಲದ ನೂರಾರು ತಮಿಳು ಶಾಸನಗಳು ಇಲ್ಲೆಲ್ಲ ಹರಡಿವೆ. ಆದರೂ ಕರ್ನಾಟಕದಲ್ಲಿ ದೊರೆತ ಅತಿಪ್ರಾಚೀನ ತಮಿಳು ಶಾಸನ ಬಹುಶಃ ಶ್ರವಣಬೆಳಗೊಳದ ಗೊಮ್ಮಟೇಶ್ವರಮೂರ್ತಿಯ ಪಾದದ ಬಳಿ ಇರುವ ಶ್ರೀಚಾವುಣ್ಣರಾಜನ್ ಶೈವಿತ್ತಾನ್ ಎಂಬುದು. ಇಲ್ಲಿಗೆ ತಮಿಳುನಾಡಿನಿಂದ ಆಗಲೂ ಯಾತ್ರಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದುದನ್ನು ಅದು ಸೂಚಿಸುತ್ತದೆ. ಕುಂಭಕೋಣ, ತಂಜಾವೂರು, ಮನ್ನಾರ್‌ಕೋಯಿಲ್, ಸೆಣ್ಣೆಯಂಬಾಕ್ಕಂ ಮೊದಲಾದ ಕಡೆಗಳಿಂದ ಬಂದ ಯಾತ್ರಿಕರು ಶ್ರವಣಬೆಳಗೊಳದಲ್ಲಿ ಕೆಲವು ಮೂರ್ತಿಗಳನ್ನು ಮಾಡಿಸಿಕೊಟ್ಟದನ್ನು ತಿಳಿಸುವ ಶಾಸನಗಳು ತಮಿಳಿನಲ್ಲಿವೆ. ಕೊಡಗಿನ ಪಾಲೂರು ಮತ್ತು ಭಾಗಮಂಡಲಗಳಲ್ಲಿನ ಎರಡು ಶಾಸನಗಳು ಭಾಷೆ ಮತ್ತು ಲಿಪಿಯ ದೃಷ್ಟಿಯಿಂದ ವಿಶಿಷ್ಟವಾಗಿವೆ. ಅವುಗಳಲ್ಲಿ ತಮಿಳು, ಮಲೆಯಾಳಂ ಮತ್ತು ತುಳು ಭಾಷೆಗಳು ಬೆರೆತಂತೆ ತೋರುತ್ತದೆ. ಚೋಳರು ಕರ್ನಾಟಕದಲ್ಲಿ ಹಾಕಿಸಿರುವ ಶಾಸನಗಳಲ್ಲಿ ಶಕವರ್ಷವನ್ನು ತಿಳಿಸಿರುವುದರಿಂದ ಚೋಳಚಕ್ರವರ್ತಿಗಳ ಕಾಲನಿರ್ಧಾರಕ್ಕೆ ಹೆಚ್ಚಿನ ಅನುಕೂಲವಾಗಿದೆ.

14ನೆಯ ಶತಮಾನದಲ್ಲಿ ಕರ್ನಾಟಕದ ಉತ್ತರ ಭಾಗ ಬಹಮನೀ ಸುಲ್ತಾನರ ಆಳಿಕೆಗೆ ಒಳಪಟ್ಟುದರಿಂದ ಆ ಭಾಗಗಳಲ್ಲಿ ಪರ್ಷಿಯನ್ ಮತ್ತು ಅರೇಬಿಕ್ ಶಾಸನಗಳು ಹೇರಳವಾಗಿ ಕಂಡುಬರುತ್ತವೆ. ಮಸೀದಿಗಳ ಗೋಡೆಗಳ ಮೇಲೆ, ಬಾಗಿಲುವಾಡಗಳ ಮೇಲೆ, ಗುಮ್ಮಟಗಳಲ್ಲಿ, ಗೋರಿಗಳ ಮೇಲೆಲ್ಲ ಈ ಶಾಸನಗಳುಂಟು. ಗುಲ್ಬರ್ಗ, ಬೀದರ್, ಬಿಜಾಪುರ, ಗೋಲ್ಕೊಂಡ, ಬಸವಕಲ್ಯಾಣ ಮೊದಲಾದ ಊರುಗಳಲ್ಲಿ ಈ ಶಾಸನಗಳು ಹೆಚ್ಚು. ಮೊಗಲರ ಆಳಿಕೆಯಲ್ಲಿ ಕರ್ನಾಟಕದ ದಕ್ಷಿಣ ಭಾಗದ ಶಿರಾದಲ್ಲಿಯೂ ಮುಂದೆ ಹೈದರ್ ಅಲಿ, ಟಿಪ್ಪುಸುಲ್ತಾನರ ಆಳಿಕೆಯಲ್ಲಿ ಶ್ರೀರಂಗಪಟ್ಟಣದಲ್ಲಿಯೂ ಇಂಥ ಶಾಸನಗಳು ಹೆಚ್ಚು. ಕೊಡಗಿನ ಅರಸರು ತಮ್ಮ ಕೆಲವು ಶಾಸನಗಳಲ್ಲಿ ಮತ್ತು ಮುದ್ರೆಗಳಲ್ಲಿ ಕನ್ನಡದ ಜೊತೆಗೆ ಪರ್ಷಿಯನ್ ಭಾಷೆಯನ್ನೂ ಬಳಸಿದ್ದಾರೆ. ಮಸೀದಿಗಳ ಮೇಲಿನ ಅನೇಕ ಶಾಸನಗಳು ಕುರಾನಿನಿಂದ ಉದ್ಧೃತಗೊಂಡ ಭಾಗಗಳು. ಪರ್ಷಿಯನ್ ಭಾಷೆಯ ಶಾಸನಗಳು ಸಾಮಾನ್ಯವಾಗಿ ಕಿರಿಯವು. ಚರಿತ್ರೆಯ ದೃಷ್ಟಿಯಿಂದ ಇವು ಅಷ್ಟೇನೂ ಪ್ರಮುಖವಾದುವಲ್ಲದಿದ್ದರೂ ವಾಸ್ತುಶಿಲ್ಪಗಳ ಹುಟ್ಟು, ಬೆಳವಣಿಗೆಯನ್ನರಿಯಲು ಇವು ತುಂಬ ಸಹಾಯಕವಾಗಿವೆ. ಟಿಪ್ಪುಸುಲ್ತಾನನು ಆನಂದೂರಿ ನಲ್ಲಿ ಕೆತ್ತಿಸಿದ್ದ ಶಾಸನ ಕಾವೇರಿಗೆ ಅಣೆಕಟ್ಟೆ ಕಟ್ಟಲು ಹಾಕಿದ ಅಸ್ತಿಭಾರ ಶಿಲೆ. ಅದರಲ್ಲಿ ಮಾನವ ಆರಂಭಿಸುತ್ತಾನೆ, ದೇವರು ಮುಗಿಸುತ್ತಾನೆ ಎಂಬರ್ಥ ಕೊಡುವ ಒಂದು ವಾಕ್ಯವಿದೆ. ಬಿಜಾಪುರದ ಮಲ್ಲಿಕ್–ಎ–ಮೈದಾನ್, ಲಾಮ್‌ಚಡಿ ಮೊದಲಾದ ಹೆಸರುಗಳುಳ್ಳ ಅನೇಕ ಬೃಹತ್ ಫಿರಂಗಿಗಳು, ಕತ್ತಿಗಳು ಇತರ ಆಯುಧಗಳ ಮೇಲೆ ಪರ್ಷಿಯನ್ ಶಾಸನಗಳು ಇವೆ.

ಕೆಲವು ಶಾಸನ ಕವಿಗಳು ತಾವು ಕರ್ಣಾಟಕ ಸಂಸ್ಕೃತ ಆಂಧ್ರ ಕವಿಗಳೆಂದೂ ಚತುರ್ಭಾಷಾ ಕವಿಚಕ್ರವರ್ತಿಗಳೆಂದೂ ಹೇಳಿಕೊಂಡಿರುವುದುಂಟು. ಅಪರೂಪವಾಗಿ ತಮ್ಮ ಶಾಸನಗಳಲ್ಲಿ ಒಂದೊಂದು ತೆಲುಗು ಪದ್ಯವನ್ನೂ ತೂರಿಸಿರುವುದು ಕಂಡುಬರುತ್ತದೆ. ಮಾಗಡಿ, ಯಲಹಂಕ ಪ್ರಭುಗಳು ಕೆಲವು ತೆಲುಗು ಶಾಸನಗಳನ್ನು ಹಾಕಿಸಿದ್ದಾರೆ. ಮುಖ್ಯವಾಗಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇಂಥ ತೆಲುಗು ಶಾಸನಗಳಿವೆ. ಶ್ರವಣಬೆಳಗೊಳದ ಗೊಮ್ಮಟಮೂರ್ತಿಯ ಪಾದದ ಬಳಿ ಇರುವ ಎರಡು ಶಾಸನಗಳು ಮರಾಠಿಯಲ್ಲಿದ್ದು ಆ ಪೈಕಿ ಚಾವುಣ್ಣರಾಯೇ ಕರವಿಯಲೇ ಎಂಬ ಶಾಸನವೇ ಮರಾಠಿಯಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನವೆಂಬ ಅಭಿಪ್ರಾಯವಿದೆ. ಮರಾಠಿಯನ್ನು ಸನ್ನದು, ನಿರೂಪಗಳಲ್ಲಿ ಹೆಚ್ಚಾಗಿ ಬಳಸಿದ್ದರೂ ಶಾಸನಗಳಲ್ಲಿ ಬಳಸಿರುವುದು ಕಡಿಮೆ. ಶ್ರವಣಬೆಳಗೊಳದಲ್ಲಿ ಬೇರೆ ಬೇರೆ ಭಾಗಗಳಿಂದ ಬಂದ ಯಾತ್ರಿಕರು ಹಾಕಿಸಿರುವ ಶಾಸನಗಳಲ್ಲಿ 50ಕ್ಕೂ ಹೆಚ್ಚು ಮರಾಠಿ ಮತ್ತು ಹಿಂದಿ ಮಿಶ್ರಿತಭಾಷೆಯಲ್ಲಿವೆ. ಮಲೆಯಾಳಂ ಭಾಷೆಯ ಕೆಲವು ಶಾಸನಗಳು ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಅಪರೂಪವಾಗಿ ಕಂಡು ಬಂದರೆ, ತುಳು ಶಾಸನಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹೆಚ್ಚು.

**ಶಾಸನಗಳ ಲಿಪಿ:** ಕರ್ನಾಟಕದಲ್ಲಿ ದೊರೆತ ಅಶೋಕನ ಶಾಸನಗಳು ಬ್ರಾಹ್ಮಿಲಿಪಿಯಲ್ಲಿವೆ. ಈ ಶಾಸನಗಳಲ್ಲಿ ಕೆಲಮಟ್ಟಿಗೆ ದಕ್ಷಿಣದ ಪ್ರಭೇದವನ್ನು ಗುರುತಿಸಬಹುದೆಂಬುದು ವಿದ್ವಾಂಸರ ಮತ. ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರಗಳಲ್ಲಿರುವ ಅಶೋಕನ ಶಾಸನಗಳ ಕೊನೆಯಲ್ಲಿ ಬರುವ ಲಿಪಿಕರೇಣ ಎಂಬ ಪದ ಖರೋಷ್ಠಿ ಲಿಪಿಯಲ್ಲಿರುವುದೊಂದು ವಿಶೇಷ. ಈ ಬ್ರಾಹ್ಮಿಲಿಪಿ ಕಾಲಕ್ರಮದಲ್ಲಿ ಬದಲಾವಣೆ ಹೊಂದುತ್ತ ಭಾರತದಲ್ಲಿ ಬಳಕೆಯಲ್ಲಿರುವ ಎಲ್ಲ ಲಿಪಿಗಳಿಗೂ ಮೂಲವಾಯಿತು. ಬ್ರಾಹ್ಮಿ ಲಿಪಿಯನ್ನು ಸಾತವಾಹನರು ಮುಖ್ಯ ಗವಿಗಳಲ್ಲಿ ತಾವು ಕೊರೆಸಿದ ಶಾಸನಗಳಲ್ಲಿ ಕೆಲವು ಬದಲಾವಣೆಗಳೊಡನೆ ಬಳಸಿದ್ದರಿಂದ ಇವರ ಕಾಲದ ಲಿಪಿಯನ್ನು ಗುಹಾಲಿಪಿ ಎಂದು ಕರೆಯಲಾಗಿದೆ. ಈ ಲಿಪಿ ಕರ್ನಾಟಕದಲ್ಲಿ 4ನೆಯ ಶತಮಾನದವರೆಗಿನ ಶಾಸನಗಳಲ್ಲಿ ಬಳಕೆಯಾಗಿದೆ. ಇವಕ್ಕೆ ತಲೆಕಟ್ಟುಗಳು ಸ್ಪಷ್ಟವಾಗಿರುವುದಿಲ್ಲ. ಮಳವಳ್ಳಿ ಸ್ತಂಭಶಾಸನ, ಚಂದ್ರವಳ್ಳಿಯ ಮಯೂರವರ್ಮನ ಶಾಸನ, ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ತಾಮ್ರಶಾಸನ ಮೊದಲಾದುವುಗಳಲ್ಲಿ ಇಂಥ ಲಿಪಿಯನ್ನು ನೋಡಬಹುದು. ಮುಂದಿನ ಕದಂಬರ ಕೆಲವು ಶಾಸನಗಳಲ್ಲಿ ದಪ್ಪನಾದ ಚೌಕನಾದ ತಲೆಕಟ್ಟುಗಳನ್ನುಳ್ಳ ಲಿಪಿಯನ್ನು ಬಳಸಿದ್ದು ಅದಕ್ಕೆ ಪೆಟ್ಟಿಗೆಶಿರಲಿಪಿ ಎಂಬ ಹೆಸರಿದೆ. ತಾಳಗುಂದ, ಬನವಾಸಿ, ಗುಡ್ನಾಪುರ ಸ್ತಂಭಶಾಸನಗಳು ಮತ್ತು ಕದಂಬರ ಕೆಲವು ತಾಮ್ರಶಾಸನಗಳಲ್ಲಿರುವುದು ಇದೇ ಲಿಪಿ. ಅಲ್ಲಿಂದ ಮುಂದೆ ಬೆಳೆದದ್ದು ಕನ್ನಡಲಿಪಿ. ಕಾಲಕ್ರಮದಲ್ಲಿ ರೂಪ ಬದಲಾಯಿಸುತ್ತ ಗುಂಡುರೂಪ ತಳೆದ ಈ ಲಿಪಿಯನ್ನೇ ಸಂಸ್ಕೃತ ಶಾಸನಗಳಲ್ಲೂ ಕನ್ನಡ ಶಾಸನಗಳಲ್ಲೂ ಬಳಸಿರುವುದು. ರಾಷ್ಟ್ರಕೂಟರ ಕಾಲದವರೆಗೂ ಕದಂಬರು, ಗಂಗರು, ಬಾದಾಮಿ ಚಳುಕ್ಯರು ತಮ್ಮ ಶಿಲಾಶಾಸನಗಳಲ್ಲಿ ಬಳಸಿರುವ ಈ ಲಿಪಿ ದೊಡ್ಡದಾಗಿಯೂ ಸ್ಫುಟವಾಗಿಯೂ ಇರುತ್ತದೆ. ಮುಂದೆ ಕಲ್ಯಾಣ ಚಾಳುಕ್ಯರು, ಹೊಯ್ಸಳರು ಈ ಲಿಪಿಯನ್ನು ಅತಿಗುಂಡಾಗಿ ಮುದ್ದಾಗಿ ಸಣ್ಣದಾಗಿ ತಮ್ಮ ಶಾಸನಗಳಲ್ಲಿ ಉಪಯೋಗಿಸಿದ್ದಾರೆ. ಇವರ ಕಾಲದಲ್ಲಿ ಕಲ್ಲಿನ ಹಲಗೆಯ ಮೇಲೆ ಶಾಸನಗಳನ್ನು ಗುಂಡಾಗಿ ಬರೆಯಲೆಂದೇ ಕೆಲವರು ಲಿಪಿಕಾರರು ನಿಯೋಜಿತರಾಗಿ ದ್ದರು. ಬರೆವರಾಚಾರ್ಯ ಸೂರ್ಯಣ ಮೊದಲಾದವರು ತಮ್ಮ ಈ ವಿದ್ಯೆಯ ಬಗೆಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಒಂದೇ ಅಳತೆಯ ಗುಂಡಾದ ಅಕ್ಷರಗಳನ್ನು ಒಂದಕ್ಕೊಂದು ಅಂತರ ಬಿಡದಂತೆ ಕಣ್ಣಿಗೆ ಹಬ್ಬವಾಗು ವಂತೆ ಬರೆದಿರುವುದಲ್ಲದೆ ಮೊದಲ, ಕಡೆಯ ಸಾಲುಗಳ ಅಕ್ಷರಗಳ ತಲೆಕಟ್ಟನ್ನೋ ಒತ್ತನ್ನೋ ಬೆಳೆಸಿ ಹಂಸ ದಂತೆ, ಆನೆಯಂತೆ, ಸಿಂಹದಂತೆ, ಬಳ್ಳಿಸುರುಳಿಯಂತೆ ವಿಧವಿಧವಾದ ಅಲಂಕಾರಗಳನ್ನು ಮಾಡಿರುವುದುಂಟು. ಹೊಯ್ಸಳರ ಕೆಲವು ಶಾಸನಗಳ ಅಕ್ಷರಗಳು ಅವರ ತಾಮ್ರಶಾಸನಗಳಲ್ಲಿಯೂ ಭಾಷೆ ಸಂಸ್ಕೃತವಾಗಿದ್ದರೂ ಲಿಪಿ ಕನ್ನಡವೇ ಇರುತ್ತದೆ. ಆದರೆ ಇಮ್ಮಡಿ ನರಸಿಂಹನ ಕಾಲದಿಂದೀಚಿನ ತಾಮ್ರಶಾಸನಗಳಲ್ಲಿ ನಾಗರೀ ಲಿಪಿಯನ್ನು ಉಪಯೋಗಿಸಲಾರಂಭಿಸಿರುವುದು ಕಂಡುಬರುತ್ತದೆ. ವರಾಹನಾಥ ಕಲ್ಲಹಳ್ಳಿಯಲ್ಲಿರುವಂತೆ ಇವರ ಕೆಲವು ಶಿಲಾಶಾಸನಗಳೂ ನಾಗರೀ ಲಿಪಿಯಲ್ಲಿರುವುದೂ ಉಂಟು. ವಿಜಯನಗರದ ತಾಮ್ರಶಾಸನಗಳೆಲ್ಲ ಸಂಸ್ಕೃತದಲ್ಲಿರುವುವು. ಕನ್ನಡದಲ್ಲಿರುವುವು ಇದೇ ರೀತಿ ನಾಗರೀ ಲಿಪಿಯಲ್ಲಿಯೇ ಇವೆ. ಇವುಗಳಲ್ಲಿ ಹೆಚ್ಚಾಗಿ ಉಪಯೋಗಿಸಿರುವುದು ನಂದಿನಾಗರೀಲಿಪಿ. ಅಪರೂಪವಾಗಿ ದೇವನಾಗರಿಯೂ ಉಂಟು. ಈ ತಾಮ್ರಶಾಸನಗಳ ಕಡೆಯಲ್ಲಿ ಬರುವ ರಾಜನ ಅಂಕಿತ ಮಾತ್ರ ಕನ್ನಡ ಅಕ್ಷರದಲ್ಲಿರುತ್ತದೆ. ಮೈಸೂರು ಒಡೆಯರ ಕಾಲಕ್ಕೆ ತಾಮ್ರಶಾಸನಗಳಲ್ಲಿ ಮತ್ತೆ ಕನ್ನಡ ಲಿಪಿಯ ಬಳಕೆ ಆರಂಭವಾಯಿತು. ಕೆಳದಿ ನಾಯಕರ ಶಾಸನಗಳೆಲ್ಲ ಕನ್ನಡ ಲಿಪಿಯಲ್ಲಿಯೇ ಇವೆ. ತಮಿಳು ಶಾಸನಗಳು ಬಹುಮಟ್ಟಿಗೆ ತಮಿಳು ಗ್ರಂಥಾಕ್ಷರಗಳಲ್ಲಿವೆ. ಬಾದಾಮಿಯಲ್ಲಿರುವ ಪಲ್ಲವ ನರಸಿಂಹವರ್ಮನ ಶಿಲಾಶಾಸನ ಸಂಸ್ಕೃತ ಭಾಷೆಯಲ್ಲಿದ್ದು ಪಲ್ಲವ ಗ್ರಂಥಲಿಪಿಯಲ್ಲಿದೆ. ಇದು ಕರ್ನಾಟಕದಲ್ಲಿ ದೊರೆತಿರುವ ಮೊತ್ತಮೊದಲ ಗ್ರಂಥಲಿಪಿ ಶಾಸನ. ಅಪರೂಪವಾಗಿ ಕೆಲವು ಕನ್ನಡ ಶಾಸನಗಳು ತಮಿಳು ಗ್ರಂಥಲಿಪಿಯಲ್ಲಿಯೂ ಕೆಲವು ತಮಿಳು ಶಾಸನಗಳು ಕನ್ನಡ ಲಿಪಿಯಲ್ಲಿಯೂ ಇರುವುದುಂಟು. ಕೊಡಗು ಜಿಲ್ಲೆಯಲ್ಲಿರುವ ಬೋಧರೂಪ ಭಗವನ ಎರಡು ಶಾಸನಗಳಲ್ಲಿ ತಮಿಳು ಗ್ರಂಥಲಿಪಿಗಳ ಜೊತೆಗೆ ವಟ್ಟೆಳುತ್ತು ಲಿಪಿಯೂ ಸೇರಿದೆ. ಶ್ರವಣಬೆಳಗೊಳದಲ್ಲಿ ಉತ್ತರ ಭಾರತದಿಂದ ಬಂದಿದ್ದ ಯಾತ್ರಿಕರು ಹಾಕಿಸಿರುವ ಮಾರ್ವಾಡಿ ಮತ್ತು ಹಿಂದಿ ಮಿಶ್ರಭಾಷೆಯ ಶಾಸನಗಳು ಕೆಲವು ನಾಗರಿ ಲಿಪಿಯಲ್ಲಿಯೂ ಮತ್ತೆ ಕೆಲವು ಮಹಾಜನಿ ಲಿಪಿಯಲ್ಲಿಯೂ ಇವೆ. ಈ ಪೈಕಿ ಗುಡ್ಡಗಾಡು ಪ್ರದೇಶದಲ್ಲಿ ಪ್ರಚಲಿತವಿರುವ ಟಾಕರಿಲಿಪಿಯೂ ಉಂಟು. ಪರ್ಷಿಯನ್ ಶಾಸನಗಳಲ್ಲಿ ಹೆಚ್ಚಾಗಿ ನಾಸ್ತಾಲಿಖ್ ಲಿಪಿಯನ್ನು ಬಳಸಲಾಗಿದೆ. ಅದರಲ್ಲಿಯೂ ಕೊರಾನಿನ ಭಾಗಗಳನ್ನುದ್ಧರಿಸುವಲ್ಲಿ ಅಲಂಕಾರ ಲಿಪಿಯನ್ನು ಉಪಯೋಗಿಸಿರುವುದು ಹೆಚ್ಚು.

**ಶಾಸನಗಳ ಕಾಲಗಣನೆ:** ಶಾಸನಗಳ ಐತಿಹಾಸಿಕ ಪ್ರಾಮುಖ್ಯ ಹೆಚ್ಚಿರುವುದು ಅವುಗಳಲ್ಲಿ ಕೊಟ್ಟಿರುವ ಕಾಲದಿಂದ. ಕರ್ನಾಟಕದ ಶಾಸನಗಳಲ್ಲಿ ಹಲವು ಬಗೆಯ ಕಾಲಗಣನೆಯಿದೆ. ಅನೇಕ ಶಾಸನಗಳಲ್ಲಿ ಮುಖ್ಯವಾಗಿ 6ನೆಯ ಶತಮಾನಕ್ಕಿಂತ ಹಿಂದಿನ ಶಾಸನಗಳಲ್ಲಿ ಕೇವಲ ರಾಜನ ಆಳಿಕೆಯ ವರ್ಷಗಳನ್ನು ಮಾತ್ರ ಕೊಟ್ಟಿರುತ್ತದೆ. ಕೆಲವು ವೇಳೆ ಋತು, ಪಕ್ಷ, ತಿಥಿಗಳನ್ನು ತಿಳಿಸಿರುವುದುಂಟು. ಬನವಾಸಿಯ ಸಾತಕರ್ಣಿಯ ಶಾಸನದಲ್ಲಿ ರಾಜನ 12ನೆಯ ಆಳಿಕೆಯ ವರ್ಷದಲ್ಲಿ ಹೇಮಂತಋತು, ಏಳನೆಯ ಪಕ್ಷ, ಪ್ರಥಮ ದಿವಸದ ಉಲ್ಲೇಖವಿದೆ. ಮುಂದೆ ಇದರ ಬದಲು ಚೈತ್ರಾದಿ ಮಾಸಗಳನ್ನು ಶುಕ್ಲ–ಕೃಷ್ಣಪಕ್ಷಗಳನ್ನು ತಿಳಿಸುವುದೇ ಸಾಮಾನ್ಯ. ಪ್ರಾಚೀನ ಶಾಸನಗಳು ರಾಜರ ಆಳಿಕೆ ವರ್ಷವನ್ನು ಮಾತ್ರ ತಿಳಿಸುವುದರಿಂದ ಬೇರೆ ಆಧಾರಗಳಿಲ್ಲದೆ ಅವರ ಕಾಲವನ್ನು ನಿಗದಿಪಡಿಸುವುದು ಅಸಾಧ್ಯ. ಹಾಗೆಯೇ ಶಾಸನಗಳಲ್ಲಿ ಎಷ್ಟೋ ವೇಳೆ ಯಾವ ಶಕೆಯನ್ನೂ ತಿಳಿಸದೆ ಕೇವಲ ಚಾಂದ್ರಮಾನದ 60 ವರ್ಷಗಳ ಆವರ್ತ ಸಂವತ್ಸರದ ಹೆಸರು ಮಾತ್ರ ಕೊಟ್ಟಿದ್ದಾಗಲೂ ಕಾಲ ನಿರ್ಧಾರಕ್ಕೆ

ಬೇರೆ ಆಧಾರಗಳು ಬೇಕು. ಕರ್ನಾಟಕದ ಶಾಸನಗಳಲ್ಲಿ ಬಾದಾಮಿ ಚಳುಕ್ಯರ ಕಾಲದಿಂದೀಚೆಗೆ ಸಾಮಾನ್ಯವಾಗಿ ಕಂಡುಬರುವುದು ಶಕಕಾಲ, ಎಂದರೆ ಈಚಿನ ಶಾಸನಗಳಲ್ಲಿ ತಿಳಿಸಿರುವ ಶಾಲಿವಾಹನ ಶಕವರ್ಷಗಳು. ಈ ಶಕಕಾಲ ಆರಂಭವಾಗುವುದು 78ರಲ್ಲಿ. ಇದನ್ನು ಆರಂಭಿಸಿದವನು ಕುಷಾಣ ಅರಸು ಕನಿಷ್ಕನೆಂದು ಭಾವಿಸಲಾಗಿದೆ. ಆದರೆ 6ನೆಯ ಶತಮಾನದವರೆಗೂ ಇದರ ಉಲ್ಲೇಖ ಕಂಡುಬರುವುದಿಲ್ಲ. ಕರ್ನಾಟಕದಲ್ಲಿ ಮೊತ್ತಮೊದಲಿಗೆ ಬಾದಾಮಿ ಚಳುಕ್ಯವಂಶದ ಒಂದನೆಯ ಪುಲಕೇಶಿ ಬಾದಾಮಿಯಲ್ಲಿ ಕೋಟೆಯನ್ನು ಕಟ್ಟಿಸಿದುದನ್ನು ತಿಳಿಸುವ ಶಾಸನಗಳಲ್ಲಿ ಶಕವರ್ಷೇಷು ಚತುಶ್ಶತೇಷು ಪಂಚಷಷ್ಟಿಯುತೇಷು ಎಂದು ಶಕಸಂವತ್ಸರವನ್ನು ತಿಳಿಸಿದೆ. ಇದು 543ಕ್ಕೆ ಸರಿಹೋಗುತ್ತದೆ. ಈ ಶಕಕಾಲದ ಜೊತೆಗೆ ಬೇರೆ ಶಕೆಗಳನ್ನು ತಿಳಿಸುವ ರೂಢಿಯೂ ಕೆಲವು ಶಾಸನಗಳಲ್ಲುಂಟು. ರವಿಕೀರ್ತಿಯು ರಚಿಸಿರುವ ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದಲ್ಲಿ ಶಕವರ್ಷದ ಜೊತೆಯಲ್ಲಿ ಮಹಾಭಾರತ ಯುದ್ಧಾನಂತರ 3,235ನೆಯ ವರ್ಷ ಎಂಬ ಅಪೂರ್ವ ಉಲ್ಲೇಖ ಇರುವುದೊಂದು ವಿಶೇಷ. ಈ ಶಕವರ್ಷದ ಜೊತೆಗೆ ಕಲಿಯುಗ ಸಂವತ್ಸರ ಆರಂಭವಾದುದು ಪ್ರ.ಶ.ಪೂ.3102ರಲ್ಲಿ. ಗೋವೆಯ ಕದಂಬರ ಶಾಸನಗಳಲ್ಲಿ ಇದರ ಬಳಕೆ ಹೆಚ್ಚು. ಕೊಡಗಿನ ರಾಜರ ಕೆಲವು ಶಾಸನಗಳಲ್ಲಿ ಕಲಿವರ್ಷದ ಬದಲು ಕಲಿದಿನಗಳನ್ನು ಕೊಡುವ ಅಪೂರ್ವ ದಾಖಲೆ ಉಂಟು. ಅಪರೂಪವಾಗಿಯಾದರೂ ಕರ್ನಾಟಕದ ಕೆಲವು ಶಾಸನಗಳಲ್ಲಿ ಉತ್ತರ ಭಾರತದಲ್ಲಿ ಪ್ರಚಲಿತವಿರುವ ವಿಕ್ರಮ ಶಕೆಯ ಕಾಲ ಕೊಟ್ಟಿದೆ. ಈ ವಿಕ್ರಮ ಸಂವತ್ ಕಲಿಕಾಲ 3044ರ ಅನಂತರ ಆರಂಭವಾಯಿತೆಂದು ಹೇಳಲಾಗಿದೆ. ಪ್ರ.ಶ.ಪೂ. 57 ಅಥವಾ 56ರಿಂದ ಈ ಕಾಲಗಣನೆಯನ್ನಾರಂಭಿಸಲಾಗುತ್ತದೆ. ಈ ವಿಕ್ರಮವರ್ಷ ಕರ್ನಾಟಕದಲ್ಲಿ ಆರಂಭವಾಗುವುದು ಕಾರ್ತೀಕ ಶುದ್ಧ 1ರಂದು. ಕಲ್ಯಾಣ ಚಾಳುಕ್ಯರ ಕಾಲದಲ್ಲಿ 6ನೆಯ ವಿಕ್ರಮಾದಿತ್ಯ ತಾನು ಪಟ್ಟಕ್ಕೆ ಬಂದ ವರ್ಷದಿಂದ ಎಂದರೆ 1076ರಿಂದ ಶಕೆಯೊಂದನ್ನಾರಂಭಿಸಿದ. ಚಾಳುಕ್ಯ ವಿಕ್ರಮಶಕೆ ಎಂದು ಕರೆಯಲಾದ ಈ ಕಾಲಗಣನೆಯು ಅಲ್ಲಿಂದ ಮುಂದೆ ಕಲ್ಯಾಣ ಚಾಳುಕ್ಯರ ಬಹುತೇಕ ಶಾಸನಗಳಲ್ಲಿಯೂ ಅವರ ಸಾಮಂತರ ಹಲವು ಶಾಸನಗಳಲ್ಲಿಯೂ ಕಂಡುಬರುತ್ತದೆ. ಇದನ್ನನುಕರಿಸಿ ಹೊಯ್ಸಳ ಇಮ್ಮಡಿಬಲ್ಲಾಳನೂ ಸ್ವತಂತ್ರವಾಗಿ ಆಳಲಾರಂಭಿಸಿದ. 1191–92ರಿಂದ ವೀರಬಲ್ಲಾಳ ಶಕೆಯನ್ನಾರಂಭಿಸಿದರೂ ಅದು ಹೆಚ್ಚುಕಾಲ ಬಳಕೆಯಲ್ಲುಳಿಯಲಿಲ್ಲ. ಶ್ರವಣಬೆಳಗೊಳದ ಕೆಲವು ಇತ್ತೀಚಿನ ತಮಿಳು ಶಾಸನಗಳಲ್ಲಿ ಶಾಲಿವಾಹನ ಶಕೆಯೊಂದಿಗೆ ಮಹಾವೀರ ಶಕೆಯನ್ನೂ ತಿಳಿಸಿದೆ. ಶಾಲಿವಾಹನ ಶಕೆ 1778ಕ್ಕೆ ಸಮನಾದ ಮಹಾವೀರ ಶಕೆ 2519 ಎಂದು ಹೇಳಿದೆ. ಮೊದಲಿನ ಶಾಸನಗಳಲ್ಲಿ ತೇದಿಯ ವಿವರಗಳು ಹೆಚ್ಚಾಗಿಲ್ಲದಿದ್ದರೂ ಅನಂತರದ ಶಾಸನಗಳಲ್ಲಿ ಶಕವರ್ಷ, ಆವರ್ತ ಸಂವತ್ಸರ, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ವ್ಯತೀಪಾತ, ಗ್ರಹಣ ಮುಂತಾದ ಎಲ್ಲ ವಿವರಗಳನ್ನೂ ಕೊಟ್ಟಿರುವುದುಂಟು. ಪರ್ಷಿಯನ್ ಶಾಸನಗಳಲ್ಲಿ ಸಾಮಾನ್ಯವಾಗಿ ಹಿಜಿರೆಯನ್ನು ಕೊಟ್ಟಿರುತ್ತದೆ. ಆದರೆ ಟಿಪ್ಪುಸುಲ್ತಾನನು 1786ರಿಂದ ಮೌಲೂದಿ ಶಕೆಯೊಂದನ್ನಾರಂಭಿಸಿದ. ಇದರಲ್ಲಿ 60 ವರ್ಷಗಳ ಆವರ್ತ ಸಂವತ್ಸರಗಳನ್ನು ಉಪಯೋಗಿಸಿದರೂ ಆ ಸಂವತ್ಸರಗಳಿಗೆ ತನ್ನದೇ ಆದ ಜಕಿ, ಅಜಲ್, ಜಲವ್, ದಲವ್ ಮೊದಲಾದ ತಾನೇ ಸೃಷ್ಟಿಸಿದ ಹೆಸರುಗಳನ್ನು ಕೊಟ್ಟ. ಈ ಶಕೆ ಮಹಮ್ಮದ್ ಪೈಗಂಬರ್ ಹುಟ್ಟಿದ 572ರಿಂದ ಎಣಿಸಲಾಗುವ ಸೌರ–ಚಾಂದ್ರಮಾನ.

**ಇತಿಹಾಸ ಅಧ್ಯಯನಕ್ಕೆ ಶಾಸನಗಳ ಕೊಡುಗೆ:** ಸತ್ಯಾಂಶಕ್ಕೆ ಸಾಧ್ಯವಾದಷ್ಟು ಧಕ್ಕೆಬಾರದಂತೆ ಭದ್ರ ಬುನಾದಿಯ ಮೇಲೆ ಇತಿಹಾಸವನ್ನು ರಚಿಸುವ ವೈಚಾರಿಕ ಬರೆವಣಿಗೆ ಅಥವಾ ಇತಿಹಾಸಪ್ರಜ್ಞೆ ಭಾರತದ ಇತರೆಡೆಗಳಂತೆ ಕರ್ನಾಟಕದಲ್ಲಿಯೂ ಇತ್ತೀಚಿನವರೆಗೂ ಇರಲಿಲ್ಲವೆಂದೇ ಹೇಳಬೇಕು. ಬಿಲ್ಹಣನ ವಿಕ್ರಮಾಂಕದೇವಚರಿತ, ಗಂಗಾಂಬಿಕೆಯ ಅಚ್ಯುತ ರಾಯಾಭ್ಯುದಯ, ತಿರುಮಲಾರ್ಯನ ಅಪ್ರತಿಮವೀರಚರಿತೆಗಳಂಥ ತಮ್ಮ ರಾಜರ ಬಗೆಗೆ ಮೆಚ್ಚಿಕೊಂಡು ಬರೆದ ಕೆಲವು ಗ್ರಂಥಗಳುಂಟು. ತಮ್ಮ ಆಶ್ರಯದಾತರ ಬಗೆಗೆ ಕೆಲವು ವಿವರಗಳನ್ನು ಕವಿಗಳು ತಮ್ಮ ಕಾವ್ಯಗಳ ಆರಂಭದಲ್ಲಿ ತಿಳಿಸಿರುವುದುಂಟು. ಪಂಪ, ರನ್ನರಂಥವರು ತಮ್ಮ ರಾಜರ ವಿಷಯವನ್ನು ಮೂಲಕಥೆಯಲ್ಲಿಯೇ ಹಾಸುಹೊಕ್ಕಾಗಿ ತೂರಿಸಿರುವುದುಂಟು. ಆದರೆ ಅವುಗಳಲ್ಲೆಲ್ಲ ಅಗ್ಗಳಿಕೆಯ ಮಾತುಗಳು ಯಾವುವು, ಇತಿಹಾಸದ ವಿವರಗಳು ಯಾವುವು ಎಂದು ವಿಂಗಡಿಸಲು ಬೇರೆ ಆಧಾರಗಳೇ ಬೇಕು. ಇಂಥ ಬರೆವಣಿಗೆಯೂ ಈಗ ಉಳಿದು ಬಂದಿರುವುದು ಅತ್ಯಲ್ಪ. ಮುಸ್ಲಿಂ ಆಳಿಕೆಯಲ್ಲಿ ಚಾರಿತ್ರಿಕ ವಿವರಗಳನ್ನು ಬರೆದಿಡುವ ಪದ್ಧತಿ ತಕ್ಕಮಟ್ಟಿಗೆ ಪ್ರಚಾರಕ್ಕೆ ಬಂತು. ಅದರಿಂದಲೇ ಮೊದಮೊದಲು ಪಾಶ್ಚಾತ್ಯ ವಿದ್ವಾಂಸರು ಈ ದೇಶದಲ್ಲಿ ಐದಾರು ಶತಮಾನಗಳಿಗಿಂತ ಹಿಂದೆ ಹೋದರೆ ಚರಿತ್ರೆಗೆ ಬೇಕಾದ ವಿವರಗಳು ದೊರೆಯದೆಂಬ ಭಾವನೆ ತಳೆದಿದ್ದರು. ಈ ದೃಷ್ಟಿಯಿಂದ ನೋಡಿದಾಗ ನಾಡಿನ ಎಲ್ಲ ಭಾಗಗಳಲ್ಲಿಯೂ ಹರಡಿರುವ ಸಹಸ್ರಾರು ಶಾಸನಗಳು ಇತಿಹಾಸದ ಅಧ್ಯಯನಕ್ಕೆ ಎಷ್ಟು ಅಮೂಲ್ಯವೆಂಬುದನ್ನು ಮನಗಾಣ ಬಹುದು.

ಶಾಸನಗಳಲ್ಲಿರುವ ವಿಷಯವೈವಿಧ್ಯ ವಿಪುಲವಾದುದು. ಸಾಮಾನ್ಯ ವಾಗಿ ರಾಜರೋ ಅವರ ಅಧಿಕಾರಿಗಳೋ ಶಾಸನಗಳನ್ನು ಹಾಕಿಸುತ್ತಿದ್ದುದ ರಿಂದ ಅವುಗಳಲ್ಲಿ ಆಯಾ ರಾಜರ ಬಗೆಗೆ ಅವರ ಪೀಳಿಗೆಯ ಬಗೆಗೆ ವಿವರಗಳಿರುತ್ತವೆ. ಇತರರು ಶಾಸನಗಳನ್ನು ಹಾಕಿಸಿದಾಗಲೂ ಆಗ ಆಳುತ್ತಿದ್ದ ತಮ್ಮ ರಾಜರ ಹೆಸರು ಇತರ ವಿವರಗಳಿರುವುದುಂಟು. ಆದ್ದರಿಂದ ರಾಜಮನೆತನಗಳ ರಾಜರ, ಅವರ ಸಾಮಂತರ, ಅಧಿಕಾರಿಗಳ ಇತಿಹಾಸವನ್ನ ರಿಯಲು ಈ ಶಾಸನಗಳು ಮೂಲಾಧಾರವಾಗುತ್ತವೆ. ಹಾಗೆಯೇ ಆಡಳಿತಪದ್ಧತಿ ಆಡಳಿತ ಸೂತ್ರಗಳನ್ನು ಹಿಡಿದ ಅಧಿಕಾರಿಗಳ, ಅಧಿಕಾರಸ್ಥಾನಗಳ ಹೆಸರುಗಳು, ಅವರ ಅಧಿಕಾರವ್ಯಾಪ್ತಿ, ಒಬ್ಬೊಬ್ಬ ಅಧಿಕಾರಿಗೂ ಗೊತ್ತುಪಡಿಸಿದ್ದ ಕೆಲಸ, ಇದರಂತೆಯೇ ವ್ಯಾಪಾರ, ವ್ಯವಹಾರ, ವ್ಯಾಪಾರಿ ಸಂಘಗಳು ಅವುಗಳ ಪ್ರಾಬಲ್ಯ, ಸುಂಕಸಾರಿಗೆಗಳು, ಭೂಸ್ವಾಮ್ಯ, ವೃತ್ತಿಪದ್ಧತಿಗಳು, ಆರ್ಥಿಕ ಸ್ಥಿತಿಗತಿ, ಮತ, ಬೇರೆ ಬೇರೆ ಮತಗಳ ನಡುವೆ ಇದ್ದ ಸೌಹಾರ್ದ ವೈಷಮ್ಯಗಳು, ದೇವಾಲಯ, ಬಸದಿ, ಮಠಗಳು ಅವಕ್ಕೆ ನಡೆಯುತ್ತಿದ್ದ ದಾನಧರ್ಮದತ್ತಿಗಳು, ಅವುಗಳ ಪೂಜೆಪುನ ಸ್ಕಾರಗಳು, ಮೇಲ್ವಿಚಾರಣೆ, ಸತ್ರಗಳು, ವಿದ್ಯಾಕೇಂದ್ರಗಳು, ಸಾಮಾಜಿಕ ರೀತಿನೀತಿ, ನಾಡಿನ ಜನಜೀವನ, ಊರುಗ್ರಾಮಗಳ ವಿವರ, ಕುಲಕಸಬು, ಧಾರ್ಮಿಕ ವಿಧಿಗಳು, ಸಂಸ್ಕೃತಿ–ಹೀಗೆ ನಾಡಿನ ಯಾವ ಬಗೆಯ ಇತಿಹಾಸವೇ ಆಗಲಿ ಅವಕ್ಕೆ ಶಾಸನಗಳಲ್ಲಿ ವಿವರಗಳು ದೊರೆಯುತ್ತವೆ.

ಕೇವಲ ಇತಿಹಾಸವನ್ನೇ ತಿಳಿಸಹೊರಟಿರುವ ಶಾಸನಗಳು ಬಹುಕಡಿಮೆ. ಕರ್ನಾಟಕ ದಲ್ಲಂತೂ ಇಲ್ಲವೆಂದೇ ಹೇಳಬಹುದು. ಆದರೆ ಯಾವುದೇ ಉದ್ದೇಶದಿಂದ ಶಾಸನಗಳನ್ನು ಹಾಕಿಸಿದ್ದರೂ ಅವುಗಳಲ್ಲಿ ಒಂದಲ್ಲ ಒಂದು ರೀತಿಯ ಐತಿಹಾಸಿಕ ವಿಷಯಗಳು ಸೇರಿಕೊಂಡಿರುತ್ತವೆ. ಆ ಶಾಸನಗಳ ಮೂಲಉದ್ದೇಶಕ್ಕಿಂತ ಅವುಗಳಲ್ಲಿ ಪ್ರಾಸಂಗಿಕವಾಗಿ ಬರುವ ವಿವರಗಳು ಇತಿಹಾಸದ ಬಗೆಗೆ ನಮಗೆ ಅಮೂಲ್ಯವಾದ ವಿವರಗಳ ನ್ನೊದಗಿಸುತ್ತವೆ. ಇಮ್ಮಡಿ ಪುಲಕೇಶಿಯ ಐಹೊಳೆಯ ಶಾಸನದ ಉದ್ದೇಶ ರವಿಕೀರ್ತಿಯು ಐಹೊಳೆಯಲ್ಲಿ ಜಿನಾಲಯವೊಂದನ್ನು ಕಟ್ಟಿಸುವುದಾದರೂ ಅದರ ಆರಂಭದಲ್ಲಿ ಪುಲಕೇಶಿಯು ನಡೆಸಿದ ದಿಗ್ವಿಜಯಗಳನ್ನು ಕ್ರಮವಾಗಿ ವಿವರವಾಗಿ ಕೊಟ್ಟಿದೆ. ಪ್ರಾಸಂಗಿಕವಾಗಿ ಈ ಶಾಸನದ ಕವಿ ರವಿಕೀರ್ತಿ ತನ್ನನ್ನು ಕಾಳಿದಾಸ ಭಾರವಿಗಳೊಂದಿಗೆ ಹೋಲಿಸಿಕೊಂಡಿರುವುದರಿಂದ ಕಾಳಿದಾಸನ ಇತ್ತೀಚಿನ ಕಾಲಮಿತಿ ನಿರ್ಧಾರವಾದಂ ತಾಗುತ್ತದೆ.

ಶಾಸನಗಳ ಸಂಗ್ರಹಣೆಗೆ ಮೊದಲು ಸು.14ನೆಯ ಶತಮಾನದಿಂದೀಚಿನ ಚರಿತ್ರೆ ಮಾತ್ರ ತಕ್ಕಮಟ್ಟಿಗೆ ಗೊತ್ತಿದ್ದು ರೈಸ್ ತಿಳಿಸಿರುವಂತೆ ಶಾಸನಗಳನ್ನು ಸಂಗ್ರಹಿಸಿ ಅಭ್ಯಾಸ ನಡೆಸಿದುದರಿಂದ ಕರ್ನಾಟಕದ ಇತಿಹಾಸ ಪ್ರ.ಶ.ಪೂ.3ನೆಯ ಶತಮಾನಕ್ಕಿಂತಲೂ ಹಿಂದಿ ನಿಂದಲೇ ಗುರುತಿಸಲು ಸಾಧ್ಯವಾಯಿತು. ಇಲ್ಲಿ ದೊರೆತ ಅಶೋಕನ ಶಾಸನಗಳಿಂದ ಕರ್ನಾಟಕದ ಅರ್ಧ ಭಾಗಕ್ಕೂ ಹೆಚ್ಚು ಮೌರ್ಯ ಚಕ್ರಾಧಿಪತ್ಯಕ್ಕೆ ಸೇರಿದ್ದುದು ನಿಶ್ಚಿತವಾಯಿತು. ಅನಂತರ ಇಲ್ಲಿ ಆಳಿದ ಸಾತವಾಹನರು ಅವರ ಸಾಮಂತರಾದ ಚುಟು ಅರಸರು, ಕದಂಬರ ಹುಟ್ಟು ಬೆಳೆವಣಿಗೆ, ಗಂಗರ ದೀರ್ಘಕಾಲದ ಆಳಿಕೆ, ಬಾದಾಮಿ ಚಳುಕ್ಯರ, ರಾಷ್ಟ್ರಕೂಟರ ವೈವಿಧ್ಯಮಯ ಆಡಳಿತ, ಕಲ್ಯಾಣದ ಚಾಳುಕ್ಯ, ಸೇವುಣ, ಹೊಯ್ಸಳ ವಂಶಗಳ ಅರಸರಿಗೆ ಸಂಬಂಧಿಸಿದಂತೆ, ಇತರ ಸಣ್ಣಪುಟ್ಟ ರಾಜವಂಶಗಳನ್ನು ಕುರಿತಂತೆ ಅನೇಕ ವಿವರಗಳು ಶಾಸನಗಳ ಅಧ್ಯಯನದಿಂದ ಬೆಳಕಿಗೆ ಬಂದುವು. ಹೀಗೆ ಬೇರೆ ರೀತಿಯಲ್ಲಿ ದೊರೆಯದ ಚಾರಿತ್ರಿಕ ವಿವರಗಳನ್ನು ತುಂಡುತುಂಡಾಗಿ ಸ್ವಲ್ಪಸ್ವಲ್ಪವಾಗಿ ಬೇರೆ ಬೇರೆ ಶಾಸನಗಳಿಂದ ಆಯ್ದುಕೊಂಡು ಕ್ರಮವರಿತು ಜೋಡಿಸಿ ತುಲನೆ ಮಾಡಿ ಇತಿಹಾಸ ರಚನೆ ಮಾಡಬೇಕಾಗುತ್ತದೆ. ಈ ವಂಶಾವಳಿಗಳು ದೀರ್ಘವಾಗಿರುವ ಸಂದರ್ಭದಲ್ಲಿ ಶಾಸನ ರಚಿಸಿದವನಿಗೆ ಪಟ್ಟಾವಳಿಗಳೋ ರಾಜಾವಳಿಗಳೋ ದೊರಕುತ್ತಿದ್ದಿರಬೇಕು. ಶಿವಮೊಗ್ಗ ಜಿಲ್ಲೆಯ 11ನೆಯ ಶತಮಾನದ ಕೆಲವು ಶಾಸನಗಳು ಗಂಗವಂಶದ ದೀರ್ಘ ಇತಿಹಾಸವನ್ನು ಗುರುತಿಸಿವೆ. ಆರಂಭದ ಕೆಲವು ವಿವರಗಳನ್ನು ಬಿಟ್ಟರೆ ಅವು ಗಂಗರ ಬೇರೆ ಬೇರೆ ತಾಮ್ರಶಾಸನಗಳಲ್ಲಿ ಬರುವ ಪೀಳಿಗೆಯನ್ನು ಬಹುಮಟ್ಟಿಗೆ ಹೋಲುತ್ತವೆ. ತಮಗೆ ದೊರೆತ ರಾಜಾವಳಿಗಳನ್ನು ನೋಡಿಯೇ ಶಾಸನ ಕರ್ತೃಗಳು ಇಂಥ ವಿವರಗಳನ್ನು ರಚಿಸಿರಬೇಕು. ಇದೇ ರೀತಿ ಶ್ರವಣಬೆಳಗೊಳದಲ್ಲಿ, ಹುಂಚದಲ್ಲಿ ಕೆಲವು ಶಾಸನಗಳು ಕೊಡುವ ದೀರ್ಘವಾದ ಗುರುಪರಂಪರೆಗಳನ್ನೂ ನೋಡಬಹುದು. ಹತ್ತು ಹನ್ನೊಂದನೆಯ ಶತಮಾನಗಳ ಹೊತ್ತಿಗೆ ಎಲ್ಲ ರಾಜಮನೆತನಗಳೂ ತಮ್ಮ ವಂಶಗಳನ್ನು ಪೌರಾಣಿಕ ರಾಜವಂಶಗಳೊಡನೆ ಸೇರಿಸಿಕೊಳ್ಳುವ ಹವ್ಯಾಸ ಬೆಳೆಸಿಕೊಂಡರು. ಅಂಥವರ ಶಾಸನಗಳಲ್ಲಿ ವಂಶಾವಳಿ ಬ್ರಹ್ಮ ನಿಂದಲೋ ಚಂದ್ರನಿಂದಲೋ ಬುಧನಿಂದಲೋ ಬೆಳೆದುಬಂದಿರುತ್ತದೆ. ವಂಶದ ಹೆಸರಿನ ಬಗೆಗೆ ಅನುಕೂಲವಾದ ದಂತಕಥೆಗಳನ್ನು ಸೃಷ್ಟಿಸುವುದೂ ಉಂಟು. ಹೊಯ್ಸಳ ಎಂಬುದಕ್ಕೆ ಮುನಿಯೊಬ್ಬನು ಹುಲಿಯು ಮೇಲೆರಗಿದಾಗ ಸಳನನ್ನು ಕುರಿತು ಹೊಯ್‌ಸಳ ಎಂದು ಹೇಳಿದ್ದರಿಂದ ಅದೇ ವಂಶದ ಹೆಸರಾಯಿತು ಎಂದು ವಿಷ್ಣುವರ್ಧನನ ಅನಂತರದ ಶಾಸನಗಳು ವಿವರಣೆ ಕೊಡುವುದನ್ನು ನೋಡಬಹುದು. ರಾಜರ ಆಸ್ಥಾನದಲ್ಲಿದ್ದ ಕವಿಗಳು ಶಾಸನಗಳನ್ನು ರಚಿಸುತ್ತಿದ್ದುದರಿಂದ ತಮ್ಮ ರಾಜರ ಬಗೆಗೆ ಅವರು ನಡೆಸದೇ ಇದ್ದ ಸಾಹಸಕಾರ್ಯಗಳನ್ನು ವರ್ಣಿಸಿರುವುದೂ ಉಂಟು. ಮಹಾಕೂಟದ ಸ್ತಂಭಶಾಸನದಲ್ಲಿ ಒಂದನೆಯ ಕೀರ್ತಿವರ್ಮನ ವಂಗ, ಅಂಗ, ಕಳಿಂಗ, ವಟ್ಟೂರ, ಮಗಧ, ಮದ್ರಕ, ಕೇರಳ, ಗಂಗ, ಮೂಷಕ, ಪಾಂಡ್ಯ, ದ್ರಮಿಳ, ಚೋಳಿಯ, ಆಲುಕ, ವೈಜಯಂತಿಗಳನ್ನು ಗೆದ್ದಂತೆ ತಿಳಿಸಿರುವುದು ಕೇವಲ ಉತ್ಪ್ರೇಕ್ಷೆ ಎನ್ನುವುದು ಸ್ಪಷ್ಟ. ಚಿಕ್ಕಪುಟ್ಟ ತುಂಡರಸರೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗಿನ ಭೂಭಾಗಕ್ಕೆ ಒಡೆಯರಾಗಿದ್ದಂತೆ ವರ್ಣಿಸಿರುವ ಶಾಸನಗಳೂ ಅಪರೂಪವೇನಲ್ಲ. ಪ್ರಾಚೀನ ಶಾಸನಗಳಲ್ಲಿ ಕಾಲವನ್ನೇ ಕೊಡುವುದಿಲ್ಲ. ಕೊಟ್ಟರೂ ರಾಜರ

ಆಳಿಕೆಯ ವರ್ಷವನ್ನು ಮಾತ್ರ ತಿಳಿಸುವುದರಿಂದ ಬೇರೆ ಆಧಾರಗಳಿಲ್ಲದೆ ಅವರ ಕಾಲವನ್ನು ಖಚಿತವಾಗಿ ನಿರ್ಧರಿಸಲಾಗುವುದಿಲ್ಲ. ಗಂಗರಲ್ಲಿ ಒಂದನೆಯ ಶಿವಮಾರನಿಗಿಂತ ಹಿಂದಿನ ತಾಮ್ರಶಾಸನಗಳಲ್ಲಿ ಯಾವ ಒಂದು ಶಕೆಯನ್ನೂ ತಿಳಿಸದೆ ಕೇವಲ ಆಳಿಕೆಯ ವರ್ಷ ಮಾತ್ರ ಉಂಟು. ಇವರ ಕೆಲವು ತಾಮ್ರಶಾಸನಗಳಲ್ಲಿ ಶಕಕಾಲವನ್ನು ಕೊಟ್ಟಿದ್ದರೂ ಅವು ಕೂಟಶಾಸನಗಳೆಂದು ಸ್ಪಷ್ಟಪಟ್ಟಿದೆ. ಮುಂದೆ ಶಾಸನಗಳಲ್ಲಿ ಗೊತ್ತಾದ ಶಕೆಯನ್ನು ತಿಳಿಸುವ ಪದ್ಧತಿ ಬಂದ ಮೇಲೂ ಎಷ್ಟೋ ವೇಳೆ ಅವನ್ನು ತಾಳೆನೋಡಲು ಸಾಧ್ಯವಾಗುವುದಿಲ್ಲ. ಹೀಗೆ ಶಾಸನಾಧಾರಗಳಿಂದ ರಾಜಕೀಯ ಇತಿಹಾಸವನ್ನು ಅಧ್ಯಯನ ಮಾಡುವಲ್ಲಿ ಕೆಲವು ತೊಡಕುಗಳು ಬರಬಹುದಾದರೂ ಅವನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಗಟ್ಟಿಯಾದ ವಿಷಯಗಳನ್ನಾಯ್ದು ಒಂದಕ್ಕೊಂದು ತಾಳೆ ನೋಡಿ ಹೊಂದಿಕೆಯಾಗುವಂತೆ ಜೋಡಿಸುತ್ತ ಹೋದಲ್ಲಿ ಸುಸಂಬದ್ಧವಾದ ಇತಿಹಾಸ ರಚನೆ ಸಾಧ್ಯವಾಗುವಷ್ಟು ವಿಪುಲವಾದ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. (ಎಂ.ಎಚ್.)

**ಶಾಸನಗಳಲ್ಲಿ ದೇವಾಲಯಗಳು (ಕರ್ನಾಟಕ):** ಸಾತವಾಹನರ ಕಾಲಕ್ಕೆ ದೇವಾಲಯಗಳು ಮತ್ತು ವಿಹಾರಗಳ ನಿರ್ಮಾಣ ಹೆಚ್ಚಾಗಿತ್ತು. ಸನ್ನತಿಯ ಸಮೀಪದ ಕನಗನಹಳ್ಳಿಯಲ್ಲಿಯ ಉತ್ಖನನದಿಂದಲೂ ಈ ಕಾಲದ ಮಹಾಸ್ತೂಪಾವಶೇಷಗಳು, ಬುದ್ಧನ ಮೂರ್ತಿಗಳು, ಬುದ್ಧಪಾದ, ಧರ್ಮಚಕ್ರ, ಮೌರ್ಯ ಚಕ್ರವರ್ತಿ, ಅಶೋಕ ತನ್ನ ರಾಣಿಯರೊಡನೆ ಇರುವ ಶಿಲ್ಪ, ತತ್ಸಂಬಂಧದ ಶಿಲಾಶಾಸನಗಳು ಮೊದಲಾದವು ಹೇರಳವಾಗಿ ದೊರೆತಿವೆ. 3ನೆಯ ಶತಮಾನದ ಬನವಾಸಿಯ ಒಂದು ಶಾಸನ ಶಿವಸ್ಕಂದ ನಾಗಸಿರಿಯು ವಿಹಾರ, ತಟಾಕ ಮತ್ತು ನಾಗಶಿಲ್ಪವೊಂದನ್ನು ನಿರ್ಮಿಸಿದ ವಿಚಾರವನ್ನು ದಾಖಲಿಸಿದೆ. ತಾಳಗುಂದದ ಪ್ರಣವೇಶ್ವರ ದೇವಾಲಯವು ಸಾತಕರ್ಣಿಗಳ ಕಾಲಕ್ಕಾಗಲೇ ಇದ್ದ ವಿಷಯವನ್ನು ಅಲ್ಲಿಯದೇ ಆದಿ ಕದಂಬ ಶಾಂತಿವರ್ಮನ ಸ್ತಂಭಶಾಸನ ದಾಖಲಿಸಿದೆ. ವಾಸನದ (ಗದಗ ಜಿಲ್ಲೆ) ಸಾತವಾಹನ ಅರಸು ದೇವಾಲಯವನ್ನು ಕಟ್ಟಿಸಿದುದನ್ನು ತಿಳಿಸುತ್ತದೆ.

ಚಂದ್ರವಳ್ಳಿಯ ಶಾಸನದ ಪ್ರಕಾರ ಆದಿ ಕದಂಬ ಮಯೂರವರ್ಮ ಅಲ್ಲಿಯ ಕೆರೆಯನ್ನು ದೃಢಗೊಳಿಸಿದ. ಚಂದ್ರವಳ್ಳಿಯಲ್ಲಿ ದೊರೆತಿರುವ ಒಂದು ಶಿವಲಿಂಗವನ್ನು ಅ.ಸುಂದರ ಅವರು 3 ಅಥವಾ 4ನೆಯ ಶತಮಾನದ್ದೆಂದು ಗುರುತಿಸಿದ್ದಾರೆ. ಈ ಶಿವಲಿಂಗ ಇದ್ದ ದೇವಾಲಯ ಇಟ್ಟಿಗೆಯದಾಗಿದ್ದು, ಕ್ರಮೇಣ ನಾಶವಾಗಿರುವ ಸಾಧ್ಯತೆಗಳಿವೆ. ಕದಂಬ ದೊರೆ ಮೃಗೇಶವರ್ಮ ಶ್ರೀವಿಜಯ ಪಲಾಶಿಕಾ (ಹಲಸಿ)ದಲ್ಲಿ ಒಂದು ಜಿನಾಲಯ ನಿರ್ಮಿಸಿದ್ದು ತಿಳಿದಿದೆ. ರವಿವರ್ಮನ ಹಲಸಿ ತಾಮ್ರಪಟಗಳ ಪ್ರಕಾರ ರವಿವರ್ಮನ ವೈದ್ಯ ನೀಲಕಂಠ ದೇಶಾಮಾತ್ಯ ಬನವಾಸಿಯಲ್ಲಿ ಮಹಾದೇವಾಯತನವನ್ನು ಕಟ್ಟಿಸಿದ್ದ. ರವಿವರ್ಮನ ಕಾಲಕ್ಕೆ ಗುಡ್ನಾಪುರದಲ್ಲಿ ಮನ್ಮಥ ಆಲಯವೊಂದರ ನಿರ್ಮಾಣವಾಗಿತ್ತು ಎಂಬ ವಿಷಯ ಅಲ್ಲಿಯದೇ ಒಂದು ಸ್ತಂಭ ಶಾಸನದಿಂದ ತಿಳಿದಿದೆ. ಕದಂಬ ದೊರೆಗಳ ಕಾಲಕ್ಕೆ ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ ಸಾಕಷ್ಟು ಮಹತ್ತ್ವ ಪಡೆದಿತ್ತು. ಇವುಗಳ ಪೈಕಿ ತಾಳಗುಂದದ ಪ್ರಣವೇಶ್ವರ ದೇವಾಲಯದ ಗರ್ಭಗೃಹ ಮತ್ತು ಅಂತರಾಳ ಮಾತ್ರ ಉಳಿದಿದೆ ಮತ್ತು ಹಲಸಿಯ ಆದಿ ಕದಂಬ ಕಾಲದ ಜೈನ ಬಸದಿ ಅನಂತರ ಶಿಲಾಮಯ ಮಾಡಿದಂತೆ ಕಾಣುತ್ತದೆ.

ಗಂಗರಸರ ಪ್ರದೇಶದಲ್ಲೂ ದೇವಾಲಯಗಳ ನಿರ್ಮಾಣ ವಿಶೇಷ ಪ್ರಾಮುಖ್ಯ ಪಡೆದಿರುವುದನ್ನು ಹಲವು ಶಾಸನಗಳು ತಿಳಿಸಿವೆ. ಗಂಗ ದೊರೆ ಎರಡನೆಯ ಮಾಧವನ ಕಾಲದ ಸು.400ರ ವೇಳೆಗೆ ಶಾಕ್ಯವಿಹಾರವೊಂದು ನಿರ್ಮಿತವಾಗಿದ್ದ ವಿಷಯವನ್ನು ಮೆಳೇಕೋಟೆಯ ತಾಮ್ರಶಾಸನ ತಿಳಿಸಿತ್ತು. ಈ ಶಾಕ್ಯವಿಹಾರ ಶ್ರೀನಿವಾಸಪುರ ತಾಲ್ಲೂಕಿನ ಹರಳಕುಂಟೆಯಲ್ಲಿತ್ತು ಎಂದು ಎಂ.ಜಿ.ಮಂಜುನಾಥ್ ಇತ್ತೀಚೆಗೆ ಪತ್ತೆಮಾಡಿದ್ದಾರೆ. ಅವಿನೀತನ ಮಡಿಕೇರಿ ಶಾಸನದ ಪ್ರಕಾರ 466ರ ವೇಳೆಗೆ ತಳವನನಗರದ ಜಿನಾಲಯಕ್ಕೆ ಗ್ರಾಮದಾನ ಮಾಡಲಾಗಿದೆ. ಇದೇ ಅವಿನೀತ ಬಸದಿಗಳನ್ನು ಕಟ್ಟಿಸಿದ ಉಲ್ಲೇಖ ನೊಣಮಂಗಲ ಶಾಸನದಲ್ಲಿದೆ. 729ರ ವೇಳೆಗೆ ಶ್ರೀಪುರುಷ ಪೇರೂರಿನಲ್ಲಿ ಕೊಜ್ಜೇಶ್ವರ ಎಂಬ ಹೆಸರಿನಲ್ಲಿ ಚೈತ್ಯಾಲಯ ನಿರ್ಮಿಸಿದ್ದಾನೆ. ಶ್ರೀಪುರುಷನ ಹೊನ್ನುಡಿಕೆಯ ಶಾಸನದಲ್ಲಿ ಪೊನ್ನಡಿಕೆಯ ಭಟ್ಟಾರಕರಿಗೆ ದಾನ ನೀಡಿದ ವಿಷಯ ದಾಖಲಾಗಿದೆ. ಈಗ ಈ ದೇವಾಲಯದ ಇಟ್ಟಿಗೆಯ ತಳಪಾಯವಿದ್ದ ಗುರುತುಗಳಿವೆ. ಹೊಂಬುಜ, ಶಿವಾರಪಟ್ಟಣ, ಕದಂಬೂರು, ಮಣ್ಣೆ ಇತ್ಯಾದಿ ಸ್ಥಳಗಳಲ್ಲಿ ಗಂಗರ ಕಾಲದ ಪ್ರಾಚೀನ ದೇವಾಲಯಗಳಿವೆ. 797ರಲ್ಲಿ ಶ್ರೀವಿಜಯ ಎಂಬ ಗಂಗ ಅಧಿಕಾರಿ ಒಂದು ಬಸದಿಯನ್ನು ಕಟ್ಟಿಸಿದರೆ, 802ರ ಸುಮಾರಿಗೆ ಮಣ್ಣೆಯ ಶ್ರೇಷ್ಠಿಗಣ ಸೂರ್ಯದೇವಾಲಯವೊಂದನ್ನು ನಿರ್ಮಿಸಿತು. ಸತ್ಯವಾಕ್ಯನ ಪಟ್ಟವಾದ ಆರನೆಯ ವರ್ಷದಲ್ಲಿ ಎಚಿಯಮ್ಮ ಎಂಬ ವ್ಯಕ್ತಿ ಭೂಮಿಯನ್ನು ಕೊಂಡು ಎಚಿಯಮ್ಮೇಶ್ವರ ದೇವಾಲಯಕ್ಕೆ ದಾನ ನೀಡಿದ ವಿಷಯವನ್ನು ತಿರುಮಕೂಡಲು ನರಸೀಪುರ ತಾಲ್ಲೂಕು ಬಸವನಹಳ್ಳಿಯ ಶಾಸನ ತಿಳಿಸಿದೆ. ಯಳಂದೂರು ತಾಲ್ಲೂಕಿನ ಗಣಿಗನೂರು ಶಾಸನದ ಪ್ರಕಾರ ಸತ್ಯವಾಕ್ಯನ ಆಳಿಕೆಯ ಕಾಲದಲ್ಲಿ ಅರಕುಟ್ಟಿ ಎಂಬುವವನು ಅರಕುಟ್ಟೇಶ್ವರ ದೇವಾಲಯವನ್ನು ನಿರ್ಮಿಸಿದ್ದಾನೆ. ಇದೇ ರೀತಿಯಲ್ಲಿ ಸತ್ಯವಾಕ್ಯ ಜಿನಾಲಯ ಮತ್ತು ಕೆಲ್ಲ ಬಸದಿಗಳ ಉಲ್ಲೇಖವೂ ಶಾಸನಗಳಲ್ಲಿ ಲಭ್ಯವಿದೆ. ನಾಗತ್ತರನ ಹೆಸರಿನಲ್ಲಿ 890ರ ಸುಮಾರಿಗೆ ನಾಗೇಶ್ವರ ದೇವಾಲಯ ನಿರ್ಮಾಣವಾಗಿದೆ.

ನಂದಿಯ ಶಿವಾಲಯವನ್ನು ಬಾಣ ವಿದ್ಯಾಧರನ ರಾಣಿ ರತ್ನಾವಳಿ ಕಟ್ಟಿಸಿದಳು. 870ರ ಒಂದು ಶಾಸನದ ಪ್ರಕಾರ ನೊಳಂಬ ಮಹೇಂದ್ರನ ಆಳಿಕೆಯ ಕಾಲದಲ್ಲಿ ನಿಡುಗಲ್ಲು ಬೆಟ್ಟದ ಮೇಲೆ ಬಿದಿಚೋರರಸನ ಹೆಸರಿನ ದೇವಾಲಯ ನಿರ್ಮಾಣವಾಯಿತು. ಸಿರಾ ತಾಲ್ಲೂಕಿನ ಬರಗೂರು ಗ್ರಾಮದಲ್ಲಿ ಮಹೇಂದ್ರ ತನ್ನ ಹೆಸರಿನಲ್ಲೇ ಮಹೇಂದ್ರೇಶ್ವರ ದೇವಾಲಯವನ್ನು ಕಟ್ಟಿಸಿದ್ದಾನೆ. ಇದೇ ಕಾಲಕ್ಕೆ ಬುಕ್ಕಾಂಬುಧಿ, ಗಂಜಿಗೆರೆ, ಮೂಗೂರು, ನರಸಾಪುರ, ಮೋಗೇನಹಳ್ಳಿ, ಬಾಗಳಿ, ಗುಬ್ಬಿ, ಆವನಿ ಮತ್ತು ಇನ್ನೂ ಅನೇಕ ಸ್ಥಳಗಳಲ್ಲಿ ದೇವಾಲಯ ಹಾಗೂ ಬಸದಿಗಳ ನಿರ್ಮಾಣದ ಬಗ್ಗೆ ಶಾಸನೋಲ್ಲೇಖಗಳಿವೆ.

ಬಾದಾಮಿ ಚಳುಕ್ಯರ ಕಾಲಕ್ಕೆ ದೇವಾಲಯ ನಿರ್ಮಾಣ ಒಂದು ನಿರ್ದಿಷ್ಟ ಘಟ್ಟವನ್ನು ತಲುಪಿತ್ತು. ರಾಚನಿಕ ದೇವಾಲಯಗಳ ಜೊತೆಗೇ ಗುಹಾ ದೇವಾಲಯಗಳ ನಿರ್ಮಾಣವೂ ಆಗುತ್ತಿದ್ದುದು ಈ ಕಾಲದ ವಿಶೇಷ. ಬಾದಾಮಿಯ ಮೂರನೆಯ ಗುಹೆಯ ನಿರ್ಮಾಣದ ಕಾಲ 578. ಆದ್ದರಿಂದ ತಾರ್ಕಿಕವಾಗಿ ಒಂದು ಮತ್ತು ಎರಡನೆಯ ಗುಹೆಗಳು ಇನ್ನೂ ಮೊದಲೇ ನಿರ್ಮಾಣವಾಗಿರಬೇಕು. ಇಲ್ಲಿನ ದೇವಾಲಯಗಳು 6–7ನೆಯ ಶತಮಾನದ ವರೆಗಿನ ನಿರ್ಮಿತಿಗಳು. ಇದೇ ಕಾಲಕ್ಕೆ ಆಲಂಪುರದಲ್ಲಿಯೂ ದೇವಾಲಯಗಳ ನಿರ್ಮಾಣ ಕಾರ್ಯ ನಡೆದಿತ್ತು. ಪಟ್ಟದಕಲ್ಲು ಮತ್ತು ಆಲಂಪುರಗಳನ್ನು ದೇವಾಲಯದ ನಿರ್ಮಾಣದ ಪ್ರಯೋಗಶಾಲೆಗಳು ಎಂದು ಉದ್ಗರಿಸಲಾಗಿದೆ.

ರಾಷ್ಟ್ರಕೂಟರ ಕಾಲಕ್ಕೆ ದೇವಾಲಯ ನಿರ್ಮಾಣ ಒಂದು ಖಚಿತ ರೂಪವನ್ನು ಪಡೆಯಿತು. ಜೊತೆಜೊತೆಗೆ ಪ್ರಯೋಗಗಳೂ ನಡೆದಿದ್ದವು. ಇವರ ಕಾಲದಲ್ಲಿಯೂ ಗುಹಾಲಯಗಳ ನಿರ್ಮಾಣ ಪ್ರಕ್ರಿಯೆ ಮುಂದುವರೆದಿತ್ತು. ಎಲ್ಲೋರದ ದಶಾವತಾರ ಗುಹಾಲಯ ರಾಷ್ಟ್ರಕೂಟರ ಕಾಲದ ಉತ್ತಮ ಕೊಡುಗೆ. ಕಲ್ಲನ್ನು ಕೊರೆಯದೆ ಕಡೆದು ನಿರ್ಮಿಸಿದ ದೇವಾಲಯವೇ ಕೈಲಾಸ. ರಾಷ್ಟ್ರಕೂಟರ ಒಂದನೆಯ ಕೃಷ್ಣನ ಕಾಲದಲ್ಲಿ ನಿರ್ಮಾಣ ಪ್ರಾರಂಭವಾಗಿ ಮೂರನೆಯ ಕೃಷ್ಣನ ಕಾಲಕ್ಕೆ ಪೂರ್ಣಗೊಂಡ ಈ ಬೃಹತ್ ದೇವಾಲಯ ವಾಸ್ತುಶಿಲ್ಪ ಇತಿಹಾಸದ ಒಂದು ಅಚ್ಚರಿ. ಮುಂಬಯಿಯ ಸಮೀಪದ ಎಲಿಫೆಂಟ ದ್ವೀಪದಲ್ಲಿಯೂ ರಾಷ್ಟ್ರಕೂಟರ ಕಾಲದ ಗುಹಾಲಯವಿದೆ. ಇಲ್ಲಿಯ ಮಹೇಶ ಮೂರ್ತಿ ಸುಪ್ರಸಿದ್ಧ. ಇವಲ್ಲದೆ ಪಟ್ಟದಕಲ್ಲು, ಐಹೊಳೆ, ಸಿರಿವಾಳ, ಶ್ರವಣಬೆಳಗೊಳ, ಹಳ್ಳೂರು, ಲಕ್ಷ್ಮೇಶ್ವರ, ಕುಡುತಿನಿ ಇತ್ಯಾದಿ ಸ್ಥಳಗಳಲ್ಲಿಯೂ ರಾಷ್ಟ್ರಕೂಟರ ಕಾಲದ ದೇವಾಲಯಗಳಿವೆ.

ಕಲ್ಯಾಣ ಚಾಳುಕ್ಯರ ಕಾಲಕ್ಕೆ ದೇವಾಲಯ ನಿರ್ಮಾಣ ಕ್ರಿಯೆ ಉಚ್ಛ್ರಾಯ ಹಂತವನ್ನು ತಲುಪಿತ್ತು. ಕುರುವತ್ತಿಯ ಸೋಮೇಶ್ವರ, ಅಣ್ಣಿಗೆರೆಯ ಮಹಾದೇವ, ಕುಕ್ಕನೂರಿನ ಕಲ್ಲೇಶ್ವರ, ಅಬ್ಬಲೂರಿನ ಬ್ರಹ್ಮೇಶ್ವರ, ಲಕ್ಕುಂಡಿಯ ಬ್ರಹ್ಮಜಿನಾಲಯ ಮತ್ತು ಇತರ ದೇವಾಲಯಗಳು, ಗದುಗಿನ ತ್ರಿಕೂಟೇಶ್ವರ, ಚೌಡದಾನಪುರದ ಮುಕ್ತೇಶ್ವರ, ಹಾವೇರಿಯ ಸಿದ್ಧೇಶ್ವರ, ಹಾನಗಲ್ಲಿನ ತಾರಕೇಶ್ವರ, ನೀಲಗುಂದದ ಭೀಮೇಶ್ವರ, ಇಟಗಿಯ ಮಹಾದೇವ, ಬಾಗಳಿಯ ಕಲ್ಲೇಶ್ವರ, ಗಳಗನಾಥದ ಗಳಗೇಶ್ವರ, ಬಳ್ಳಿಗಾವೆಯ ಕೇದಾರೇಶ್ವರ, ಡಂಬಳದ ದೊಡ್ಡಬಸಪ್ಪ ಇತ್ಯಾದಿ ದೇವಾಲಯಗಳು ಇವರ ಕಾಲದಲ್ಲಿ ಕರ್ನಾಟಕದಲ್ಲಿ ನಿರ್ಮಿತವಾದ ಕೆಲವು ದೇವಾಲಯಗಳು.

ಹೊಯ್ಸಳರು ದೇವಾಲಯ ನಿರ್ಮಾಣದಲ್ಲಿ ಒಂದು ವಿಕ್ರಮವನ್ನೇ ಸಾಧಿಸಿದ್ದಾರೆ. ವಿಷ್ಣುವರ್ಧನನ ಕಾಲದಲ್ಲಂತೂ ಹೊಯ್ಸಳ ನಾಡಿನಲ್ಲಿ ಅನೇಕ ದೇವಾಲಯಗಳ ನಿರ್ಮಾಣವಾಗಿವೆ. ಬೇಲೂರಿನಲ್ಲಿ ವಿಜಯನಾರಾಯಣ, ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯಗಳು ಮಾತ್ರವಲ್ಲದೆ ಹಳೇಬೀಡು, ದೊಡ್ಡಗದ್ದವಳ್ಳಿ, ಮೇಲುಕೋಟೆ, ಬೆಳವಾಡಿ, ಜಾವಗಲ್ಲು, ಅರಸೀಕೆರೆ ಇತ್ಯಾದಿ ಸ್ಥಳಗಳಲ್ಲಿ ಹೊಯ್ಸಳರ ಕಾಲದ ಉತ್ತಮ ನಿರ್ಮಿತಿಗಳನ್ನು ಕಾಣಬಹುದು.

ಸೊನ್ನಲಿಗೆಯಲ್ಲಿ ಮೂರನೆಯ ಸೋಮೇಶ್ವರನ ಕಾಲಕ್ಕೆ ಮೊದಲೇ ಕನ್ನಪಯ್ಯನಾಯಕನ ಕಾಲದಲ್ಲಿ ಕನ್ನೇಶ್ವರ, ಚಟ್ಟೇಶ್ವರ ಮತ್ತು ಮಲ್ಲಿಕಾರ್ಜುನ ತ್ರಿಕೂಟ ದೇವಾಲಯದ ನಿರ್ಮಾಣವಾಗಿತ್ತು. ಅದಕ್ಕೆ ಮಹಾಮಂಡಲೇಶ್ವರ ಬಿಜ್ಜಳದೇವರಸ ದಾನ ನೀಡಿದ್ದಾನೆ. ಹೀಗೆ ನಿರಂತರವಾಗಿ ರಾಜರು ಮತ್ತು ರಾಜಕುಟುಂಬದಿಂದ ಆರಂಭಿಸಿ ಸಾಮಾನ್ಯ ಜನತೆಯವರೆಗೆ ಕಲ್ಯಾಣ ಚಾಳುಕ್ಯರ ಆಳಿಕೆಯ 1076 ರಿಂದ 1087ರವರೆಗಿನ ಕೇವಲ 11 ವರ್ಷಗಳ ಅವಧಿಯಲ್ಲಿ 250ಕ್ಕೂ ಹೆಚ್ಚು ದೇವಾಲಯಗಳು ನಿರ್ಮಾಣವಾಗಿವೆ.

ದೇವಾಲಯ ನಿರ್ಮಾಣ ಕಾರ್ಯ ಕಲ್ಯಾಣ ಚಾಳುಕ್ಯರ ಸಮಕಾಲೀನ ಸಾಮಂತ ವಂಶಗಳ ಆಳಿಕೆಯ ಪ್ರದೇಶಗಳಲ್ಲೂ ಮುಂದುವರಿದಿರುವುದನ್ನು ಹಲವಾರು ಶಾಸನಗಳ ಮೂಲಕ ತಿಳಿಯಬಹುದು. ಹೊಯ್ಸಳರು ಮತ್ತು ಸೇವುಣರ ಅನಂತರ ಕರ್ನಾಟಕವನ್ನಾಳಿದ ವಿಜಯನಗರದ ಅರಸರ ಕಾಲದಲ್ಲೂ ದೇವಾಲಯ ನಿರ್ಮಾಣ ಕ್ರಿಯೆ ಕಡಿಮೆಯಾಗಲಿಲ್ಲ. ಬಹುತೇಕ ಇಡೀ ದಕ್ಷಿಣ ಭಾರತವನ್ನು ಒಳಗೊಂಡಿದ್ದ ವಿಜಯನಗರ ಸಾಮ್ರಾಜ್ಯದ ಎಲ್ಲೆಡೆ ವಿಶೇಷವಾಗಿ ರಾಜಧಾನಿ ವಿಜಯನಗರಕ್ಕೆ ಹೊಂದಿಕೊಂಡ ಪ್ರದೇಶಗಳಲ್ಲಿ ದೇವಾಲಯಗಳು ಹೆಚ್ಚು ಸಂಖ್ಯೆಯಲ್ಲಿಯೇ ನಿರ್ಮಾಣಗೊಂಡಿವೆ.

ವಿಜಯನಗರೋತ್ತರ ಪಾಳೆಯಗಾರರು, ನಾಯಕರು, ನಾಡಗೌಡರ ಕಾಲದಲ್ಲೂ ದೇವಾಲಯ ನಿರ್ಮಾಣಕಾರ್ಯ ಮುಂದುವರೆಯಿತು. ಆದರೆ, ಈ ಕಾರ್ಯವು ಆಯಾ ಆಳಿಕೆಯ ರಾಜಧಾನಿಗಳಿಗೆ ಹೆಚ್ಚು ಸೀಮಿತವಾಗಿತ್ತು. ರಾಜಧಾನಿಯನ್ನು ಹೊರತುಪಡಿಸಿ ನಿರ್ಮಾಣವಾದ ದೇವಾಲಯಗಳ ಸಂಖ್ಯೆಯು ಅಧಿಕವಾಗಿದ್ದಂತೆ ತೋರುವುದಿಲ್ಲ. ಕೆಳದಿ,

ಇಕ್ಕೇರಿ, ಬಿದನೂರು, ಚಿತ್ರದುರ್ಗ, ಮಧುಗಿರಿ, ನಿಡುಗಲ್ಲು, ಮಾಗಡಿ ಇತ್ಯಾದಿ ಸ್ಥಳಗಳಲ್ಲಿ ವಿಜಯನಗರೋತ್ತರ ಕಾಲದ ದೇವಾಲಯಗಳಿವೆ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಮೈಸೂರು ಸಂಸ್ಥಾನವನ್ನು ಆಳಿದ ಮೈಸೂರು ಒಡೆಯರು ಹಿಂದಿನಿಂದಲೂ ನಡೆದು ಬಂದಿದ್ದ ದೇವಾಲಯ ನಿರ್ಮಾಣಕಾರ್ಯವನ್ನು ಮುಂದುವರೆಸಿದರು. ಮೈಸೂರು, ಚಾಮರಾಜನಗರ, ನಂಜನಗೂಡು ಶ್ರೀರಂಗಪಟ್ಟಣ, ಯಳಂದೂರು, ಬೆಂಗಳೂರು ಮತ್ತು ಇನ್ನೂ ಹಲವು ಸ್ಥಳಗಳಲ್ಲಿ ಮೈಸೂರು ಒಡೆಯರ ಕಾಲದಲ್ಲಿ ದೇವಾಲಯಗಳು ನಿರ್ಮಾಣವಾಗಿವೆ. ವಿಜಯನಗರದ ಅರಸರ ಕಾಲದಲ್ಲಿ ಆರಂಭವಾಗಿದ್ದ ದೇವಾಲಯಗಳ ರಕ್ಷಣೆ ಮತ್ತು ವಿಸ್ತರಣಾ ಕಾರ್ಯಗಳು ಮೈಸೂರು ಒಡೆಯರ ಕಾಲದಲ್ಲೂ ಮುಂದುವರೆದಿವೆ.

ಈಗಾಗಲೇ ತಿಳಿಸಿರುವಂತೆ ದೇವಾಲಯಗಳ ಜೊತೆಗೆ ಮಠಗಳು, ಸತ್ರಗಳು ಮತ್ತು ಶಾಲೆಗಳು ಇರುತ್ತಿದ್ದವು. ಕೆಲವೆಡೆ ದೇವಾಲಯಗಳಿಗೆ ಹೊಂದಿಕೊಂಡಂತೆ ಖಾಸಗಿ ಸತ್ರಗಳೂ ಇರುತ್ತಿದ್ದವು ಎಂಬ ಅಭಿಪ್ರಾಯಕ್ಕೆ ಅಗ್ರಹಾರ ಬೇಗೂರು, ಕುಕ್ಕನೂರು ಇತ್ಯಾದಿ ಸ್ಥಳಗಳಲ್ಲಿನ ಶಾಸನಗಳು ಪುಷ್ಟಿ ನೀಡುತ್ತವೆ.

ದೇವಾಲಯಗಳು ವಿದ್ಯಾಕೇಂದ್ರಗಳೂ ಆಗಿರುತ್ತಿದ್ದವು. ಕನ್ನಡಕ್ಷರ ಕಲಿಕೆಯಿಂದ ಆರಂಭಿಸಿ ಘಟಿಕಾಸ್ಥಾನದ ಶಾಸ್ತ್ರವಿದ್ಯೆಯವರೆಗೆ ಎಲ್ಲ ರೀತಿಯ ವಿದ್ಯಾಭ್ಯಾಸಕ್ಕೂ ದೇವಾಲಯಗಳು ಮತ್ತು ಅವಕ್ಕೆ ಹೊಂದಿಕೊಂಡಿದ್ದ ಮಠಗಳು ಅವಕಾಶ ಕಲ್ಪಿಸಿದ್ದವು. ಅರಸೀಕೆರೆ ತಾಲ್ಲೂಕಿನ ಮುರುಹಿಂಡಿ ಗ್ರಾಮದಲ್ಲಿ ಕನ್ನಡಕ್ಷರ ಕಲಿಕೆಗಾಗಿ ಶಾಲೆಯೊಂದು ನಡೆಯುತ್ತಿತ್ತು. ಈ ಶಾಲೆ 1222ರಲ್ಲೂ ಇತ್ತು. ದೇವಾಲಯಗಳು ಕೇವಲ ದೇವರ ಪೂಜಾ ಸ್ಥಳಗಳಾಗಿ ಮಾತ್ರವಲ್ಲದೆ, ಧರ್ಮಗುರುಗಳ ಮಠಗಳಾಗಿ, ವಿದ್ಯಾಕೇಂದ್ರಗಳಾಗಿ, ನ್ಯಾಯಾಲಯಗಳಾಗಿ, ಅನ್ನಸತ್ರಗಳಾಗಿ, ಭೈಷಜ್ಯ ಕೇಂದ್ರಗಳಾಗಿ, ಅನಾಥರ ಮತ್ತು ಅಂಗವಿಕಲರ ಆಶ್ರಯಸ್ಥಾನಗಳಾಗಿ, ಸಮಯಕ್ಕೆ ತಕ್ಕಂತೆ ಹಣಕಾಸಿನ ನೆರವು ನೀಡುವ ಸಂಸ್ಥೆಗಳಾಗಿ ಮಾತ್ರವಲ್ಲದೆ, ವಾಸ್ತು ಮತ್ತು ಮೂರ್ತಿಶಿಲ್ಪಗಳ ಪ್ರಯೋಗ ಮತ್ತು ಆನ್ವಯಿಕ ಕೇಂದ್ರಗಳಾಗಿ ಮತ್ತು ರಂಗಭೋಗ ಸೇವೆಯ ಮೂಲಕ ಸಂಗೀತ ಮತ್ತು ನೃತ್ಯಕಲೆಗಳ ಪ್ರೋತ್ಸಾಹ ಕೇಂದ್ರಗಳಾಗಿಯೂ ಸಾರ್ಥಕ ಸೇವೆ ಸಲ್ಲಿಸಿವೆ. ದೇವಾಲಯಗಳು ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಕೇಂದ್ರಗಳಾಗಿ ಅಪಾರ ಸೇವೆ ಸಲ್ಲಿಸಿವೆ. ಪ್ರಾಥಮಿಕ ಹಂತದಲ್ಲಿ ಕನ್ನಡಕ್ಷರ ಶಿಕ್ಷಣ, ಅನಂತರ ವೇದಖಂಡಿಕೆಗಳ ಬೋಧನೆಯ ಬಾಲಶಿಕ್ಷಣವಾದ ಅನಂತರ ಕಲಿಕೆಯು ಘಟಿಕಾಸ್ಥಾನಗಳಲ್ಲಿ ಮುಂದುವರಿಯುತ್ತಿತ್ತು. ಘಟಿಕಾಸ್ಥಾನಗಳಲ್ಲಿ ದೊರೆಯುತ್ತಿದ್ದುದು ಉಚ್ಚ ಶಿಕ್ಷಣ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಕರ್ನಾಟಕದಲ್ಲಿ ಘಟಿಕಾಸ್ಥಾನಗಳಿದ್ದವು.

ದೇವಾಲಯಗಳಲ್ಲಿ ನಿತ್ಯಪೂಜೆಯ ಸಂದರ್ಭದಲ್ಲಿ ದೇವರ ಪ್ರತಿನಿಧಿಯಾದ ವಿಗ್ರಹಕ್ಕೆ ಅಂಗಭೋಗ ಸೇವೆಯಲ್ಲದೆ ರಂಗಭೋಗ ಸೇವೆಯೂ ಆಗುತ್ತಿತ್ತು. ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಮಾತ್ರವಲ್ಲದೆ ಜೈನ ಬಸದಿಗಳಲ್ಲೂ ರಂಗಭೋಗಕ್ಕೆ ಅವಕಾಶ ಇದ್ದುದು ವಿಶೇಷ. ದೇವಾಲಯಗಳಲ್ಲಿ ಪ್ರತಿನಿತ್ಯ ನಿತ್ಯಪೂಜೆಗಳಲ್ಲದೆ ಕೆಲವು ದಿನ ವಿಶೇಷ ಪೂಜೆಗಳೂ ನಡೆಯುತ್ತಿದ್ದವು. ಬಾದುಬ್ಬೆಯ ಪರ್ವ, ದೀವಳಿಗೆ ಪರ್ವ, ಸಂಕ್ರಾತಿ ಪರ್ವ, ನೂಲಪರ್ವ, ಗುರುಪರ್ವಗಳನ್ನು ಪಂಚಪರ್ವಗಳು ಎಂದು ಗುರುತಿಸಲಾಗಿತ್ತು. ಧರ್ಮಪ್ರಸಂಗಗಳ ಪ್ರಭಾವದಿಂದ ದೇವಾಲಯ ನಿರ್ಮಾಣಕ್ಕೆ ಮತ್ತು ದೇವಾಲಯಗಳಿಗೆ ದಾನ ನೀಡುವುದರಿಂದ ದೊರಕುವ ಪುಣ್ಯದ ಫಲವನ್ನು ತಿಳಿದು ದೇವಾಲಯಗಳನ್ನು ನಿರ್ಮಿಸಿರುವ ಹಲವು ಉಲ್ಲೇಖಗಳು ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಲ್ಲಿವೆ. ಕೆಲವು ಸಾಮಾನ್ಯರು ಮತ್ತು ಗುರುಗಳು ಭಿಕ್ಷೆ ನೀಡಿ ದೇವಾಲಯಗಳನ್ನು ಕಟ್ಟಿಸಿದ ಉಲ್ಲೇಖಗಳೂ ಇವೆ. ಕುಂಬಾರ ಬಮ್ಮಣ ಎಂಬಾತ ತಲೆಯನ್ನು ಪೂಸದ, ಅನ್ನವನ್ನು ಉಣ್ಣದ ವೀರವ್ರತವನ್ನು ಕೈಗೊಂಡು ಕುಂಭೇಶ್ವರ ದೇವರ ಪ್ರತಿಷ್ಠೆ ಮಾಡಿಸಿದ್ದಾನೆ. ಈ ದೇವಾಲಯಗಳು ಒಂದು ಪ್ರದೇಶದ ಧರ್ಮ, ಸಮಾಜ ಮತ್ತು ಸಂಸ್ಕೃತಿಗಳ ಪ್ರಾತಿನಿಧಿಕ ಸಂಸ್ಥೆಗಳಾಗಿ ಬೆಳೆದಿವೆ, ಉಳಿದಿವೆ.

(ಜಿ.ಎಚ್.ಎಸ್.)

**ಶಾಸನಗಳು–ತೆಲುಗು:** ತೆಲುಗು ಲಿಪಿ ಇತರ ಲಿಪಿಗಳಂತೆ ಬ್ರಾಹ್ಮಿಲಿಪಿಯಿಂದ ಉಗಮ ಹೊಂದಿ ವಿಕಾಸವಾಯಿತು. ತೆಲುಗು ಭಾಷೆಯ ಮತ್ತು ತೆಲುಗು ನಾಗರೀ ಲಿಪಿಗಳಲ್ಲಿ ಶಾಸನಗಳು ಲಭ್ಯವಾಗಿವೆ. ತೆಲುಗು ಶಾಸನಗಳು ವಿಶೇಷವಾಗಿ ಹಾಗೂ ಅಪರೂಪವಾಗಿ ಇತರ ರಾಜ್ಯಗಳಲ್ಲಿ ಉಪಲಬ್ಧವಾಗಿವೆ. 6ನೆಯ ಶತಮಾನದ ತರುವಾಯ ಇವು ಕಾಣಿಸಿಕೊಳ್ಳುತ್ತವೆ. ಹಾಗಿದ್ದರೂ ಪ್ರಾಚೀನ ಶಾಸನಗಳಲ್ಲಿನ ಕೆಲವು ಹೆಸರುಗಳು ತೆಲುಗು ಸಂಸ್ಕೃತಿಗೆ ವಿಶಿಷ್ಟವಾದಂಥವು ಎನ್ನಲಾಗಿದೆ. ಪ್ರ.ಶ.ಪೂ.2ನೆಯ ಶತಮಾನದ ಕೊಟ್ಟೂರು ಶಾಸನೋಕ್ತ ನಾಗಬುದಿ ಅನುಬುದಿ ತಂಬೆಯಾ– ಇವು ತೆಲುಗು ಹೆಸರುಗಳೆಂದು ಭಾವಿಸಿರುವುದುಂಟು. 6ನೆಯ ಶತಮಾನದ ಧನಂಜಯನ ಕಲ್ಮಲ್ಲು ಶಾಸನ ತೆಲುಗು ಮತ್ತು ಕನ್ನಡದಲ್ಲಿದ್ದು ಲಿಪಿಯ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ. ಎರಡೂ ಲಿಪಿಗಳ ಸಾದೃಶ್ಯವನ್ನು ಗಮನಿಸಿ ತೆಲುಗು–ಕನ್ನಡ ಲಿಪಿ ಎಂಬ ಪದಪ್ರಯೋಗವನ್ನು ವಿದ್ವಾಂಸರು ಬಳಸಿದ್ದಾರೆ.

ತೆಲುಗು ಭಾಷೆಯ ಪ್ರಾಚೀನ ಶಿಲಾ ಶಾಸನ ರೇನಾಟಿ ಚೋಳವಂಶದ (ಅರಿ) ಕಲ್‌ಮುತುರಾ(ಜ)ನೆಂದು ವರ್ಣಿಸಲ್ಪಟ್ಟ ಅಹದನಕರ ಧನಂಜಯನಿಗೆ ಸಂಬಂಧಿಸಿದೆ. ಇದು ಆಂಧ್ರಪ್ರದೇಶದ ಕಡಪ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಕಲ್ಮಲ್ಲುವಿನಲ್ಲಿದೆ. ಇದು ಅಪೂರ್ಣ ಶಾಸನ. ಅಂಕಾಲಮ್ಮಗೂಡೂರಿನ 7ನೆಯ ಶತಮಾನದ ತೆಲುಗು ಭಾಷೆ ಮತ್ತು ತೆಲುಗು–ಕನ್ನಡ ಅಕ್ಷರಗಳಲ್ಲಿರುವ ಶಾಸನ ಇಮ್ಮಡಿ ಪುಲಕೇಶಿಯನ್ನು ಇವನ ಪಟ್ಟಾಭಿಷೇಕ ಪೂರ್ವದೆರಿಯಪ್ವೋರು ಎಂಬ ಹೆಸರಿನಿಂದ ಪೃಥ್ವಿವಲ್ಲಭ ಮಹಾರಾಜಾಧಿರಾಜ ರಾಜ ಪರಮೇಶ್ವರ ಭಟಾರಕ ಎಂಬ ಬಿರುದುಗಳೊಡನೆ ವರ್ಣಿಸಿದೆ. ಆಗ ಇವನು ಪೆರ್ಮಾನಡಿಯನ್ನು ಆಳುತ್ತಿದ್ದ. ಇವನ ಸಹಚರ ತಿಮ್ಮ ತಕ್ಕೋಳಾಲಮ ಆಳುತ್ತಿದ್ದ. ಇವನ ಕೈಕೆಳಗಿನ ಕುಚ್ಚೇರಿಣಿಯ ತಂದಿರಾಮಲು ಕಾಶ್ಯಪ ಗೋತ್ರದ ಚಬೆಶರ್ಮ್ಮನಿಗೆ ಒಂದು ಗ್ರಾಮವನ್ನು ದಾನ ಮಾಡಿದ. 8ನೆಯ ಶತಮಾನಕ್ಕೆ ಸೇರಿದ ಇಲ್ಲವೆ. ಐದನೆಯ ತಾಮ್ರ ಶಾಸನ ತೆಲುಗು–ಕನ್ನಡ ಲಿಪಿಯಲ್ಲಿದ್ದು, ನಾಲ್ಕನೆಯ ವಿಷ್ಣುವರ್ಧನ ಈ ಶಾಸನವನ್ನು ಬರೆಯಿಸಿದನು ಎಂದು ತಿಳಿದುಬರುತ್ತದೆ. ಇದರಲ್ಲಿ ಪೃಥ್ವಿ ಪಲ್ಲವ ಪಟ್ಟಣದ ಕಡಗಲ್ಲ ವದುವರು ಇವರಿಗೆ ಊರಿಸ್ವಾಮಲ್ ಅರಿ, ತೆರೆ, ಸಿದ್ದಾಯಮು, ದಂಡು, ದಸಪರಾಧಮು ಮೊದಲಾದ ತೆರಿಗೆಗಳಿಂದ ಈ ಗ್ರಾಮಕ್ಕೆ ವಿನಾಯಿತಿ ನೀಡಿದನೆಂದು ಹೇಳಿದೆ.

ತೆಲುಗು ಭಾಷೆಯ ಇನ್ನೊಂದು ಗಮನಾರ್ಹ ಶಾಸನ 10ನೆಯ ಶತಮಾನಕ್ಕೆ ಸೇರಿದ ಕುರ್ಕ್ಯಾಲ ಶಾಸನ. ಇದರ ಪಾಠ ಸಂಸ್ಕೃತ, ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ರಚಿತವಾಗಿರುವುದು ಗಮನಾರ್ಹ. ಪ್ರಸಿದ್ಧ ಕವಿ ಪಂಪನ ಸೋದರ ಜಿನವಲ್ಲಭ ಈ ಶಾಸನವನ್ನು ಬರೆಯಿಸಿದ್ದಾನೆ. ಕನ್ನಡ ಭಾಷೆಯ ಸನಿಗರಮ್ ಶಾಸನ ತೆಲುಗು–ಕನ್ನಡ ಲಿಪಿಯಲ್ಲಿದೆ. ತ್ರೈಲೋಕ್ಯಮಲ್ಲನ (ಆಹವಮಲ್ಲ 1ನೆಯ ಸೋಮೇಶ್ವರ) ಸನಿಗರಮ ಗ್ರಾಮದ ಸು.10–11ನೆಯ ಶತಮಾನದ ಕನ್ನಡ ಭಾಷೆ ತೆಲುಗು–ಕನ್ನಡ ಅಕ್ಷರದ ಶಾಸನ ಮಹಾಸಾಮಂತ ಕಾಕತೀಯ ಅರಸು ಮನೆತನದ 1ನೆಯ ಕಾಕತೀಯ ಬೇತಲಸ ಮತ್ತು ಅವನ ಮಂತ್ರಿ ನಾರಾಯಣನು ಸಂಗರ ಗ್ರಾಮದಲ್ಲಿಯ ಯುದ್ಧಮಲ್ಲ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿದುದನ್ನು ಹೇಳಿದೆ.

(ಪಿ.ಸಿ.ಎ.)

**ಶಾಸನಗಳು – ಕೇರಳ:** ಕೇರಳದ ಶಾಸನಗಳ ಸಂಶೋಧನೆ ಮತ್ತು ಅಧ್ಯಯನದಲ್ಲಿ ಟಿ.ವಿ.ಗೋಪಿನಾಥರಾವ್, ಕೆ.ವಿ.ಸುಬ್ರಮಣ್ಯ ಅಯ್ಯರ್ ಮತ್ತು ಇತರರ ಕಾಣಿಕೆ ಸ್ಮರಣೀಯ. ಚರಿತ್ರೆ, ಭಾಷಾಶಾಸ್ತ್ರ ಮತ್ತು ಐತಿಹಾಸಿಕ ವ್ಯಾಕರಣವನ್ನು ಪುನಾರಚಿಸಲು ಶಾಸ್ತ್ರಬದ್ಧವಾದ ಶಾಸನಗಳ ಅಧ್ಯಯನವನ್ನು ಆರಂಭಿಸಿದವರು ಏಳಂಕುಳಂ ಪಿ.ಎನ್.ಕುಂಜನ್ ಪಿಳ್ಳೈ. ಎಂ.ಜಿ.ಎಸ್.ನಾರಾಯಣನ್ ಅವರು ಚೇರ ವಂಶದ ಶಾಸನಗಳ ಕ್ರಮಬದ್ಧವಾದ ಸೂಚಿಯನ್ನು (ಇಂಡೆಕ್ಸ್) ಸಿದ್ಧಪಡಿಸಿದರು. ಆದರೆ ತಮಿಳುನಾಡಿನ ಶಾಸನಗಳಿಗೆ ಮಾಡಿದಂತೆ ಈ ರಾಜ್ಯದ ಶಾಸನಗಳ ಸಂಖ್ಯಾವಾರು ವಿಂಗಡನೆ ಇನ್ನೂ ಆಗಿಲ್ಲ. ಇಲ್ಲಿಯ ಅತ್ಯಂತ ಪ್ರಾಚೀನ ಶಾಸನಗಳು ತಮಿಳು – ಬ್ರಾಹ್ಮಿ ಲಿಪಿಯಲ್ಲಿದೆ. ಉದಾ: ಎಡಕಲ್ಲು ಗವಿಯೊಳಗಿರುವ ಆದಿ ಕದಂಬವಂಶ ಕಾಲದ ಮತ್ತು ನೀಲಂಬೂರಿನ ಎಳುಟ್ಟುಕಲ್ಲಿನ ಶಾಸನಗಳು. 2005ರಲ್ಲಿ ಪಟ್ಟಣಂನಲ್ಲಿಯ ಪುರಾತತ್ತ್ವ ಉತ್ಖನನದಲ್ಲಿ ದೊರೆತ ಮಡಕೆ ಚೂರುಗಳಲ್ಲಿ ಒಂದರ ಮೇಲೆ ಗೀಚಿದ ಇದೇ ಕಾಲದ ಎರಡು ಅಕ್ಷರಗಳಿವೆಯೆಂದು ವರದಿಯಾಗಿದೆ. ಇವುಗಳ ಕಾಲಮಾನವನ್ನು ಖಚಿತವಾಗಿ ನಿರ್ಧರಿಸಲಾಗದಿದ್ದರೂ ಪ್ರಾಯಶಃ ಇವು ಪ್ರಸಕ್ತ ಶಕವರ್ಷದ ಆರಂಭದ ಶತಕಗಳಿಗೆ ಸೇರಿರಬಹುದೆಂದು ಹೇಳಬಹುದು. ಇವೆಲ್ಲವು ಪದನಾಮಗಳಾದುದರಿಂದ ಇಲ್ಲಿ ಕಾಣಬಹುದಾದ ಭಾಷಿಕ ಸಾಮಾನ್ಯ ಲಕ್ಷಣಗಳನ್ನು ಸರಿಯಾಗಿ ತಿಳಿಯಲು ಆಗುವುದಿಲ್ಲ. ಒಟ್ಟಾರೆ ತಮಿಳುನಾಡಿನಲ್ಲಿ ಕಂಡುಬಂದಂತೆ ಇಲ್ಲಿಯೂ ಭಾಷೆ ಮತ್ತು ಲಿಪಿಯ ಲಕ್ಷಣಗಳು ಇದ್ದಿರಬೇಕೆಂದು ಊಹಿಸಬಹುದು. ಇವನ್ನೆಲ್ಲ ನೋಡಿದರೆ ಸಾಹಿತ್ಯಕ ಮತ್ತು ಪುರಾತತ್ತ್ವ ಪ್ರಮಾಣಗಳಲ್ಲಿ ಕಂಡುಬಂದಂತೆ ಕೇರಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಾಚೀನ ತಮಿಳಗಂನ ಒಂದು ಭಾಗವಾಗಿತ್ತೆಂದು ಕಾಣುತ್ತದೆ.

ನಿಜಕ್ಕೂ ಅತ್ಯಂತ ಐತಿಹಾಸಿಕ ಮಹತ್ತ್ವದ ಪ್ರಾಚೀನ ಶಾಸನವೆಂದರೆ ದಕ್ಷಿಣ ಕೇರಳದ ತಿರುವಲ್ಲದಲ್ಲಿ ಒಬ್ಬ ನಂಬೂದ್ರಿಯ ಮನೆಯಲ್ಲಿ ದೊರೆತ 9ನೆಯ ಶತಮಾನದ ಆದಿಭಾಗದ ವಾಳಪಳ್ಳಿ ತಾಮ್ರಶಾಸನ. ಈ ಹಂತದಿಂದ ಚೇರ ಶಾಸನಗಳ ಸರಣಿ ಆರಂಭವಾಯಿತೆನ್ನ ಬಹುದು. ಇವುಗಳ ಭಾಷೆ ತೀರ ಆರಂಭ ಹಂತದ ಒಡ್ಡೊಡ್ಡಾದ ಮಲೆಯಾಳಂ ಮತ್ತು ವಟ್ಟೆಳುತ್ತು ಲಿಪಿ ಎಂದು ಹೇಳಬಹುದು. ಸಂಸ್ಕೃತದ ಪದ ಹಾಗೂ ಪದ ಸಮುಚ್ಚಯವನ್ನು ಅಪರೂಪವಾಗಿ ಗ್ರಂಥ ಲಿಪಿಯಲ್ಲಿ ಬರೆಯಲಾಗುತ್ತಿತ್ತು. ಆದರೆ ಉಚ್ಚಾರಣೆಯನ್ನು ವಟ್ಟೆಳುತ್ತು ಲಿಪಿಯಲ್ಲಿ ಸರಿಯಾಗಿ ತೋರಿಸಲು ಆಗುತ್ತಿರಲಿಲ್ಲ. ಈ ಸ್ಥಿತಿಗೆ ಅಪವಾದ ಎಂಬಂತೆ ಆಯ್ ವಂಶದ ವಿಕ್ರಮಾದಿತ್ಯ ವರಗುಣನ ಪಳಿಯಂ ತಾಮ್ರ ಪಟಗಳಲ್ಲಿ ಸಂಸ್ಕೃತ ವಿಷಯ ಭಾಗ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕರ್ಹಾಡ್ ತಾಮ್ರಪಟದಲ್ಲಿರುವಂತೆ ನಾಗರಿ ಲಿಪಿಯಲ್ಲಿಯೂ ಮತ್ತು ತಮಿಳು ಭಾಷೆಯ ಭಾಗ ಆರಂಭದ ಚೋಳ ಶಾಸನಗಳ ಲಿಪಿಯಲ್ಲಿ ಇದೆ.

ತಮಿಳು–ಬ್ರಾಹ್ಮಿಯಿಂದ ವಟ್ಟೆಳುತ್ತು ಲಿಪಿಯ ಕೇರಳದಲ್ಲಿ ಎಡಕಲ್ಲು ಮತ್ತು ಎಳುಟ್ಟುಕಲ್ ಪ್ರಾಚೀನ ಶಾಸನಗಳು ಇದ್ದರೂ ತಮಿಳು–ಬ್ರಾಹ್ಮಿಯಿಂದ ವಟ್ಟೆಳುತ್ತುವಿನ ಪರಿಪೂರ್ಣ ವಿಕಸನ ಕೇರಳದ ಹೊರಗಿನ ತಮಿಳಗಂನಲ್ಲಿ ಆಯಿತು. ಅನಂತರ ಕಾಲದಲ್ಲಿ ಬೇರೆಡೆಗಳಲ್ಲಿ ಇದರ ಬಳಕೆ ನಿಂತುಹೋಗಿದ್ದರೂ ಇದರ ಉತ್ತಮ ಬೆಳವಣಿಗೆ ಕೇರಳದಲ್ಲಿ ಆಯಿತು. ಮೊದಲಿನ ಶಾಸನಶಾಸ್ತ್ರಜ್ಞರು (ಹೆಚ್ಚಾಗಿ ತಮಿಳು ನಾಡಿನವರು) ಎಡಕಲ್ಲು ಮೊದಲಾದ ಸ್ಥಳಗಳಲ್ಲಿಯ ಶಾಸನಗಳ ಭಾಷೆ ಸ್ಥಳೀಯ ಪ್ರಭಾವದಿಂದ ವಿರೂಪ ಹೊಂದಿದ ತಮಿಳು ಎಂದು ಬಗೆದಿದ್ದರು. ಅನಂತರದ ವಿದ್ವಾಂಸರು ಈ ಶಾಸನಗಳ ಭಾಷೆಯಲ್ಲಿ ಕಾಣುವ

ವೈಪರೀತ್ಯಗಳೆ ಮುಂದೆ ಮಲೆಯಾಳಂ ಭಾಷೆಗೆ ಬುನಾದಿಯಾಯಿತೆಂದು ಅಭಿಪ್ರಾಯಪಟ್ಟರು. 9ನೆಯ ಶತಮಾನದಿಂದ ಸು.300 ವಷಗಳವರೆಗಿನ ಶಾಸನಗಳು ಹೆಚ್ಚಾಗಿ ಈಗಿನಷ್ಟು ವಿಸ್ತಾರವಾಗಿದ್ದ ಪ್ರಾಚೀನ ಕೇರಳವನ್ನು ಆಳುತ್ತಿದ್ದ ಚೇರ ಅರಸುಮನೆತನದ 800–1124 ರ ವರೆಗಿನ ಆಳಿಕೆಯಕಾಲಕ್ಕೆ ಸಂಬಂಧಿಸಿದುದು. ಕುತೂಹಲದ ವಿಷಯವೆಂದರೆ ದಕ್ಷಿಣ ಭಾರತದ ಇತರ ರಾಜ್ಯಗಳಲ್ಲಿ ಕಂಡುಬಂದಂತೆ ಇವುಗಳಲ್ಲಿ ಯಾವುದೇ ಪ್ರಶಸ್ತಿಗಳಿಲ್ಲದಿರುವುದು. ಇದಕ್ಕೆ ಒಂದು ಕಾರಣವೆಂದರೆ ಒಂದನ್ನು ಹೊರತುಪಡಿಸಿ ಇವು ರಾಜ ಶಾಸನಗಳಲ್ಲ. ಒಂದು ಮಾತ್ರ ಚೇರರಾಜ ಭಾಸ್ಕರ ರವಿಯು (962–1020) ತನ್ನ 38ನೆಯ ಆಳಿಕೆ ವರ್ಷದಲ್ಲಿ ಹೊರಡಿಸಿದ ಯಹೂದಿ ತಾಮ್ರಪತ್ರ. ಇದರಲ್ಲಿ ಜೊಸೆಫ್ ರಬ್ಬನ್ ಎಂಬ ಯಹೂದಿ ವರ್ತಕನಿಗೆ ವ್ಯಾಪಾರ ವ್ಯವಹಾರದಲ್ಲಿ ಹಲವಾರು ಅಧಿಕಾರ ಸವಲತ್ತುಗಳನ್ನು ಕೊಟ್ಟ ವಿಷಯವಿದೆ. ರಾಜನನ್ನು ಕೋ ಕೋಣ್ಮಯಿ ಕೊಂಡಾನ್ ಕೋ (ಬೇರೆಲ್ಲ ರಾಜರುಗಳ ಮೇಲೆ ರಾಜತ್ವವನ್ನು ಪಡೆದವ) ಎಂದಷ್ಟೆ ವರ್ಣಿಸಿದೆ. ಹೆಸರನ್ನು ಹೇಳಿಲ್ಲ. ಇದೇ ತರಹದ ಇನ್ನೊಂದು ಶಾಸನ ಚೇರರಾಜ ಸ್ಥಾಣುರವಿಯ (844–83) ಕಾಲದ್ದು. ಇದರಲ್ಲಿ ಸಿರಿಯನ್ ಕ್ರಿಶ್ಚಿಯನ್ನರ ಇಗರ್ಜಿಗೆ ಕೊಟ್ಟ ಕೆಲವು ಸವಲತ್ತುಗಳ ಮತ್ತು ಕುರಕೇಣಿ ಕೊಲ್ಲಂನಲ್ಲಿ (ಇಂದಿನ ಕೊಯ್ಲಾನ್) ವರ್ತಕರ ವಸತಿಗೆ ಅನುಕೂಲಗಳನ್ನು ಚೇರರಾಜನ ಕೈಕೆಳಗಿನ ಅಧಿಕಾರಿ ವೇನಾಟುವಿನ ಮುಖ್ಯಸ್ಥ, ಅಯ್ಯನಟಿಕಟಿರುವಟಿಕಲ್ ಮಾಡಿಕೊಟ್ಟ ವಿಷಯವಿದೆ. ಇದರಲ್ಲಿಯ ಕಾಲ ನಿರ್ದೇಶನ ಕ್ರಮ ಅಪರೂಪದ್ದಾಗಿದೆ. ಪಲ ನೂರಾಯಿರತ್ತಾಂಟುಂ ಮರುಕುಟಲ್ಲೈಚ್ಚಿರಂತಟಿಪ್ಪಟುತ್ತಾಳಾನಿನ್ರಯಾಂತು ಐಂತು (ಎಲ್ಲ ಶತ್ರುಗಳನ್ನು ಗೆದ್ದು ಹಲವು ನೂರಾರು ವರ್ಷಗಳ ಆಳಿಕೆ ನಡೆಸುವ ರಾಜನ ಅವಧಿಯ 5ನೆಯ ವರ್ಷದಲ್ಲಿ. ಇವು ಹೊರತಾಗಿ ಬೇರಾವ ವಿವರಗಳು ಈ ಶಾಸನಗಳಲ್ಲಿ ಇಲ್ಲ) ಎಂಬ ಉಲ್ಲೇಖ ಇದರಲ್ಲಿದೆ. ಇನ್ನೂ ಕೆಲವು ತಾಮ್ರ ಶಾಸನಗಳಲ್ಲಿ ದೇವಾಲಯಗಳಿಗೆ ದಾನ–ದತ್ತಿಗಳನ್ನು ಕೊಟ್ಟ ವಿಷಯವಿದೆ. ಶಿಲಾಶಾಸನಗಳಲ್ಲಿ ಕೂಡ ಇಂಥ ವಿಷಯಗಳೇ ಇವೆ. ವಾಳಪಳ್ಳಿ ಅಥವಾ ತಿರುನೆಲ್ಲಿ ಅಥವಾ ಮಾಂಪಳ್ಳಿ ತಾಮ್ರಶಾಸನಗಳಲ್ಲಿ ದೇವಾಲಯದ ಸಮಿತಿಯು ಅನುಮೋದಿಸಿದ ಗೊತ್ತುವಳಿಗಳಿವೆ. ಇದೇ ವಿಷಯ ಶಿಲಾಶಾಸನದಲ್ಲೂ ಇರುತ್ತದೆ. ಒಂದು ಅಪರೂಪದ ತಾಮ್ರ ಶಾಸನವೆಂದರೆ ತಿರುವಳ್ಳ ದೇವಾಲಯದ್ದು. ಇದು ತಿರುವಲ್ಲವಾಳ್ ದೇವಾಲಯ ಮತ್ತು ಅದರ ಅತಿ ದೊಡ್ಡ ಪ್ರಮಾಣದ ಭೂಮಿಯನ್ನು ನಿಯಂತ್ರಿಸುತ್ತಿದ್ದ ಬ್ರಾಹ್ಮಣ ಭೂ ಒಡೆಯರ ಹಲವಾರು ಗೊತ್ತುವಳಿಗಳುಳ್ಳ ಅಧಿಕೃತ ದಾಖಲೆಗಳ ಸಂಗ್ರಹ. ಸಾಮಾನ್ಯವಾಗಿ ದೇವಾಲಯಗಳ ಅಧಿಷ್ಠಾನ, ಕಂಬ ಅಥವಾ ಬಾಗಿಲು ಚೌಕಟ್ಟಿನ ಮೇಲೆ ಹಾಗೂ ದೇವಾಲಯದ ಆವರಣದಲ್ಲಿ ಇಲ್ಲವೆ ಕಲ್ಲು ಹಲಗೆಯ ಮೇಲೆ ಶಿಲಾಶಾಸನಗಳು ಇವೆ. ಈ ಶಾಸನಗಳ ಕಾಲಮಾನವನ್ನು ನಿರ್ಧರಿಸುವುದು ಕಷ್ಟಸಾಧ್ಯವಾದರೂ ವಿರಳವಾಗಿ ಜನಸಾಮಾನ್ಯರಿಗೂ ಗೊತ್ತಿರುವ ಶಕೆಯಲ್ಲಿ ದೇವಾಲಯದ ನಿರ್ಮಾಣದ ಕಾಲ ನಿರ್ದೇಶನವೂ ಸಮಕಾಲೀನ ರಾಜನ ಆಳಿಕೆಯ ವರ್ಷದಲ್ಲಿ ಇರುತ್ತದೆ. ಕೆಲವು ಶಾಸನಗಳಲ್ಲಿಯ ಕಾಲ ನಿರ್ದೇಶನದಲ್ಲಿ ಒಂದು ವೈಶಿಷ್ಟ್ಯವೆಂದರೆ ಶಾಸನವನ್ನು ಅಧಿಕೃತಗೊಳಿಸುವಾಗ ಖಗೋಳ ಗ್ರಹಗಳಾದ ಶನಿ ಮತ್ತು ಗುರು ಇವರ ರಾಶಿ ಸ್ಥಾನವನ್ನು ಸೂಚಿಸುವುದು. ಜೊತೆಗೆ ತಿಥಿ, ವಾರ, ಪಕ್ಷ, ಸೌರಮಾನದ ತಿಂಗಳು ಮೊದಲಾದ ಅಂಶಗಳೂ ಇವೆ. ಇವುಗಳಿಂದ ಶಾಸನದ ಸರಿಯಾದ ಕಾಲವನ್ನು ಗೊತ್ತು ಮಾಡಬಹುದು. ಮತ್ತೆ ಕೆಲವು ಶಾಸನಗಳ ಕಾಲಮಾನವನ್ನು ಕೇವಲ ಅದರಲ್ಲಿಯ ಅಕ್ಷರಗಳ ಲಕ್ಷಣ ಮತ್ತು ಶೈಲಿಯಿಂದ ನಿರ್ಧರಿಸಬೇಕಾಗುತ್ತದೆ.

ಸು.12ನೆಯ ಶತಮಾನದ ಆದಿಯಲ್ಲಿ ಚೇರರಾಜ್ಯ ಒಡೆದುಹೋದಮೇಲೆ ಕ್ರಮೇಣ ಶಿಲೆ ಮತ್ತು ತಾಮ್ರ ಶಾಸನಗಳನ್ನು ಬರೆಯಿಸುವುದು ಕಡಿಮೆಯಾಗುತ್ತ ಹೋಯಿತು. ಕೊಳತ್ತುನಾಟ್ಟಿನ ಮುಖ್ಯ ಅಧಿಕಾರಿಯನ್ನು ಮತ್ತು ಭೂ ಆಸ್ತಿಯನ್ನು ತಿಳಪರಂಬ ದೇವಾಲಯದ ಆಡಳಿತವು ಅಡವಾಗಿಟ್ಟುಕೊಂಡ ವಿಷಯವನ್ನು ತಿಳಿಸುವ ಸು.12ನೆಯ ಶತಮಾನದ ಮಧ್ಯ ಭಾಗದ ಒಂದು ತಾಮ್ರ ಶಾಸನ ಈಗ ಲಂಡನ್ನಿನ ಬ್ರಿಟಿಷ್ ಗ್ರಂಥಾಲಯದಲ್ಲಿದೆ. ಇದೇ ಸಮಯದಲ್ಲಿ ಕಲ್ಲಿಕೋಟೆಯ ಜ಼ಾಮೋರಿನ್ ರಾಜ ಒಂದು ಮಸೀದಿಗೆ ದಾನ ಕೊಟ್ಟ ವಿಷಯವುಳ್ಳ ಅರೇಬಿಕ್ ಮತ್ತು ವಟ್ಟೆಳುತ್ತು ಲಿಪಿಯಲ್ಲಿ ಪ್ರಾಚೀನ ಮಲೆಯಾಳಂ ಭಾಷೆಯಲ್ಲಿರುವ ಒಂದು ದ್ವಿಭಾಷಾ ಶಾಸನವಿದೆ. ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಉಬ್ಬು ಅಕ್ಷರಗಳು; ಈ ಮಾದರಿಯ ಶಾಸನ ಕೇರಳದಲ್ಲಿ ಇದೊಂದೆ. ಕೊಚ್ಚಿ ರಾಜನ ಪೂರ್ವಿಕರು ಕೊಟ್ಟಿರಬಹುದೆಂದು ತಿಳಿಯಲಾದ 1225ರ ಕೋಡುಂಗಲ್ಲೂರು ತಾಮ್ರ ಶಾಸನ ಇರವಿ ಕೋರ್ತ್ತಣನ್ ಎಂಬ ಒಬ್ಬ ವರ್ತಕನಿಗೆ ವ್ಯಾಪಾರದ ಕೆಲವು ಹಕ್ಕುಗಳನ್ನು ತಿಳಿಸುತ್ತದೆ. ವೇನಾಟು (ಇಂದಿನ ತಿರುವಾಂಕೂರು) ಮತ್ತು ಇದರ ದಕ್ಷಿಣ ಭಾಗದಲ್ಲಿ ಹಲವಾರು ಶಿಲಾ ಮತ್ತು ತಾಮ್ರಶಾಸನಗಳು ಸಿಕ್ಕಿವೆ. ಚೇರ ರಾಜ್ಯ ಪತನಾನಂತರ ಕಾಲದ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿರುವುದು ಈ ಪ್ರದೇಶದಲ್ಲಿಯೇ. ಬರಬರುತ್ತಾ ಈ ಪ್ರಕಾರದ ಶಾಸನಗಳು ಕಡಿಮೆಯಾಗುತ್ತ ಓಲೆಗರಿ ಮತ್ತು ಬಿದಿರಿನ ಮೇಲೆ ಬರೆದ ದಾಖಲೆಗಳು ಹೆಚ್ಚಾಗುತ್ತ ಹೋಗುತ್ತವೆ. ಈ ಕಾಲದ ಲಿಪಿ ಬೆಳೆವಣಿಗೆಯಲ್ಲಿ ವಟ್ಟೆಳುತ್ತು ವಿಕಾಸವಾಗುತ್ತ ಸು.15–16ನೆಯ ಶತಮಾನಗಳಲ್ಲಿ ಒಂದು ಭಿನ್ನ ಲಿಪಿಯೆ ಆಯಿತು. ಇದನ್ನು ಕೋಲೆಳುತ್ತು ಎಂದು ಕರೆಯಲಾಗಿದೆ. ಈ ಲಿಪಿಯನ್ನು 19ನೆಯ ಶತಮಾನದ ವರೆಗೂ ಸಾಮಾನ್ಯವಾಗಿ ಅಧಿಕೃತ ದಾಖಲೆಗಳನ್ನು ಬರೆಯಲು ಹೆಚ್ಚಾಗಿ ಮುಸಲ್ಮಾನರನ್ನು ಬಳಸಲಾಗುತ್ತಿತ್ತು. ಹೀಗಾಗಿ ಈ ಲಿಪಿಯನ್ನು ಮಾಪಿಳ್ಳರ ವಟ್ಟೆಳುತ್ತು ಎಂದೇ ಕರೆಯಲಾಗುತ್ತಿತ್ತು. ಇದರ ಜೊತೆಗೆ ಆರ್ಯ, ಮಲಯಾಣಮ್ ಎಂದು ಕರೆಯಲಾದ ಮಲೆಯಾಳ ಲಿಪಿಯನ್ನೂ ಮಹತ್ತ್ವದ ಕಾಗದ ಪತ್ರಗಳಿಗೆ ಉಪಯೋಗಿಸ ಲಾಗುತ್ತಿತ್ತು. ಗ್ರಂಥ ಲಿಪಿಯಿಂದ ವಿಕಾಸಗೊಂಡ ಈ ಲಿಪಿಯನ್ನು ಸು.14–15ನೆಯ ಶತಮಾನಗಳಿಂದ ಮೊದಮೊದಲು ಸಾಹಿತ್ಯ ಕೃತಿಯನ್ನು ರಚಿಸಲು ಇಷ್ಟಪಡಲಾಗುತ್ತಿತ್ತು. ಏಕೆಂದರೆ ಮಲೆಯಾಳ ಭಾಷೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಎರವಲು ಪಡೆದ ಸಂಸ್ಕೃತ ಪದಗಳಿವೆ ಮತ್ತು ಇಂಥ ಪದಗಳ ನಿಗದಿತ ಉಚ್ಚಾರಣೆಯುಳ್ಳ ಅಕ್ಷರ ಸಂಕೇತಗಳು ಈ ಲಿಪಿಯಲ್ಲಿ ಇವೆ. ಕಡಲ ತೀರದ ಕರ್ನಾಟಕದಲ್ಲೂ ತುಳು ಮತ್ತು ಸಂಸ್ಕೃತವನ್ನು ಬರೆಯಲು ಈ ಲಿಪಿಯನ್ನು ಬಳಸಲಾಗುತ್ತಿತ್ತು. ಕರ್ನಾಟಕದ ಮಲೆನಾಡಿನ ಪ್ರದೇಶದಲ್ಲಿ ಸಂಸ್ಕೃತವನ್ನು ಬರೆಯಲು ಬಳಕೆಯಲ್ಲಿದ್ದ ತಿಗಳಾರಿ ಲಿಪಿಯು ಮಲೆಯಾಳಮ್ ಲಿಪಿಗೆ ಅತಿ ಸಮೀಪವಾಗಿದೆ. (ಕೆ.ವಿ.ಟಿ.)

**ಶಾಸನಗಳು–ತುಳು:** ಪಂಚದ್ರಾವಿಡ ಭಾಷೆಗಳಲ್ಲೊಂದೆನಿಸಿರುವ ತುಳು ಕರಾವಳಿ ಕರ್ನಾಟಕದ ಉಡುಪಿ, ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳ ಉತ್ತರಭಾಗದ ಸು.25 ಲಕ್ಷ ಜನರ ಆಡುಭಾಷೆಯಾಗಿದೆ. ಆದಿ ದ್ರಾವಿಡ ಭಾಷೆಯ ಹಲವಾರು ಪದಗಳನ್ನು ಇಂದಿಗೂ ಉಳಿಸಿಕೊಂಡಿರುವ ಭಾಷೆಯ ಪ್ರಾಚೀನತೆಯನ್ನು ಭಾಷಾಶಾಸ್ತ್ರಜ್ಞರು ಸು. ಒಂದೂವರೆ ಸಾವಿರ ವರ್ಷಗಳಷ್ಟು ಹಿಂದಕ್ಕೊಯ್ಯುತ್ತಾರೆ. ಆದರೆ ಈ ಬಗೆಗಿನ ಖಚಿತ ಆಧಾರಗಳು ಪ್ರ.ಶ.15ನೆಯ ಶತಮಾನದ ಅನಂತರಕ್ಕಷ್ಟೇ ಅನ್ವಯಿಸುತ್ತವೆ.

ತುಳುಭಾಷೆಗೆ ತನ್ನದೇ ಆದ ಸ್ವಂತ ಲಿಪಿ ಇರಲಿಲ್ಲವೆಂದೂ ತುಳುಲಿಪಿ ಎಂದು ಗುರುತಿಸಲಾಗುವ ಲಿಪಿಯ ಮಲೆಯಾಳಂ ಲಿಪಿಯದೇ ಪರಿಷ್ಕೃತ ರೂಪವೆಂದೂ ಇತ್ತೀಚಿನವರೆಗೂ ಹೇಳಲಾಗುತ್ತಿತ್ತು. ಆದರೆ ಈಗ ತುಳುಭಾಷೆ ಸ್ವಂತಲಿಪಿಯನ್ನು ಹೊಂದಿದ್ದು ಈ ತುಳುಲಿಪಿಯೇ ಮಲೆಯಾಳಂ ಲಿಪಿಗೆ ಮೂಲ ಎಂದೂ ಭಾಷಾಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ತುಳುನಾಡಿನಲ್ಲಿ ಸಂಸ್ಕೃತ ಮಂತ್ರಗಳನ್ನು ಬರೆಯಲು ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿದ್ದ ತುಳುಲಿಪಿಯನ್ನು ಇಲ್ಲಿಯ ಪುರೋಹಿತ ವರ್ಗದವರು ಧಾರ್ಮಿಕ ಕಾರ್ಯಗಳಿಗಾಗಿ ಕೇರಳಕ್ಕೆ ಹೋಗುತ್ತಿದ್ದ ಸಂದರ್ಭ ಅಲ್ಲಿಗೆ ಪರಿಚಯಿಸಿದರು ಮತ್ತು ಆ ಮೂಲಕ ಮಲೆಯಾಳಂ ಲಿಪಿ ಹುಟ್ಟಿಕೊಂಡಿತು ಎನ್ನಲಾಗಿದೆ. ತುಳುನಾಡಿನಲ್ಲಿ ತುಳುಭಾಷೆ ಆಡುಭಾಷೆಯಾಗಷ್ಟೇ ಪ್ರಚಲಿತವಿದ್ದು, ಕನ್ನಡವೇ ಇಲ್ಲಿ ಆಡಳಿತ ಭಾಷೆಯಾಗಿ ಬಳಕೆಯಲ್ಲಿದ್ದುದರಿಂದ ತುಳು ಭಾಷೆ–ತುಳುಲಿಪಿಯಲ್ಲಿ ಸಾಹಿತ್ಯ ಕೃತಿಗಳಾಗಲೀ ಶಾಸನಗಳಾಗಲೀ ಹೆಚ್ಚಿನ ಸಂಖ್ಯೆಯಲ್ಲಿ ರಚನೆಗೊಂಡಿರಲಿಲ್ಲ.

ತುಳು ಭಾಷೆ, ತುಳುಲಿಪಿಯಲ್ಲಿರುವ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಾಗಿಲ್ಲ. ಈ ತನಕ ಹನ್ನೆರಡು ಶಾಸನಗಳು ಬೆಳಕಿಗೆ ಬಂದಿವೆ. ಈ ಪೈಕಿ ಹೆಚ್ಚಿನ ಶಾಸನಗಳೂ ಅಸ್ಪಷ್ಟವಾಗಿದ್ದು ಕೇವಲ ವರದಿಗಳ ರೂಪದಲ್ಲಷ್ಟೇ ಇವು ಉಲ್ಲೇಖಗೊಂಡಿವೆ. ಕಾಸರಗೋಡಿನ ಅನಂತಪುರ ಶಾಸನವನ್ನು ಹೊರತುಪಡಿಸಿ ಇನ್ಯಾವುದೇ ತುಳು ಶಾಸನದ ಪೂರ್ಣಪಾಠ ಈವರೆಗೆ ಪ್ರಕಟಗೊಂಡಿಲ್ಲ. 5 ಶಾಸನಗಳನ್ನು ಉಡುಪಿ ತಾಲೂಕಿನಲ್ಲಿ, 2 ಶಾಸನಗಳನ್ನು ಕುಂದಾಪುರ, 2 ಬಂಟ್ವಾಳ ಮತ್ತು ಒಂದು ಶಾಸನವನ್ನು ಕಾಸರಗೋಡು ತಾಲ್ಲೂಕಿನಲ್ಲಿ ಗುರುತಿಸಲಾಗಿದೆ. ಈ ಶಾಸನಗಳ ಕಾಲಮಾನವನ್ನು ಖಚಿತವಾಗಿ ಗುರುತಿಸುವುದು ಕಷ್ಟಸಾಧ್ಯ. ಲಭ್ಯವಿರುವ ಶಾಸನಗಳ ಪೈಕಿ ಮೂರು ಶಾಸನಗಳಲ್ಲಿ ಆಳುಪ ವಂಶದ ಅರಸ ಕುಲಶೇಖರ ಆಳುಪನ ಹೆಸರು ಕಂಡುಬಂದಿದ್ದು ಒಂದು ಶಾಸನದಲ್ಲಿ ಬಂಕಿಯಾಳುಪನ ಹೆಸರಿನ ಉಲ್ಲೇಖವಿದೆ. ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ಗುರುತಿಸಲಾದ ಎರಡು ಶಾಸನಗಳಲ್ಲಿ ಮತ್ತು ಬಂಟ್ವಾಳ ತಾಲ್ಲೂಕಿನ ವಿಟ್ಲದಲ್ಲಿ ಕಂಡುಬಂದ ಒಂದು ಶಾಸನದಲ್ಲಿ ಕುಲಶೇಖರ ಆಳುಪನ ಹೆಸರಿದ್ದರೆ ವಿಟ್ಲದ ಇನ್ನೊಂದು ಶಾಸನ ಬಂಕಿಯಾಳುಪನ ಹೆಸರನ್ನು ಉಲ್ಲೇಖಿಸುತ್ತದೆ. ಆಳುಪರಸರ ಪೈಕಿ ಕುಲಶೇಖರ ಆಳುಪ ಎಂಬ ಹೆಸರಿನ ಮೂವರು ಮತ್ತು ಬಂಕಿಯಾಳುಪ ಹೆಸರಿನ ಈರ್ವರು ಅರಸರು ವಿವಿಧ ಕಾಲಘಟ್ಟಗಳಲ್ಲಿ ಆಳಿಕೆ ನಡೆಸಿದ್ದು, ಈ ಪೈಕಿ ಪ್ರಸ್ತುತ ಶಾಸನಗಳು ಯಾರ ಆಳಿಕೆಗೆ ಅನ್ವಯಿಸುತ್ತವೆ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ. ಅದೇನೇ ಇದ್ದರೂ ಈ ನಾಲ್ಕು ಶಾಸನಗಳು 15ನೆಯ ಶತಮಾನಕ್ಕಿಂತ ಹಿಂದಿನವು ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಕಾಸರಗೋಡು ತಾಲ್ಲೂಕಿನ ಅನಂತಪುರ ಶಾಸನದ ಪೂರ್ಣ ಪಾಠ ಮತ್ತು ಇತರ ವಿವರಗಳು ಲಭ್ಯವಿವೆ. ತುಳು ಲಿಪಿ, ತುಳು ಭಾಷೆಯಲ್ಲಿ 14 ಸಾಲುಗಳಲ್ಲಿ ಇರುವ ಈ ಶಾಸನವನ್ನು ಲಿಪಿಶಾಸ್ತ್ರದ ಆಧಾರದ ಮೇಲೆ 15ನೆಯ ಶತಮಾನಕ್ಕೆ ಅನ್ವಯಿಸಲಾಗಿದೆ. ಕುಂಬಳ ಅರಸು ಮನೆತನದವನೆನ್ನಲಾದ ಜಯಸಿಂಹ ಅರಸನ ಈ ಶಾಸನ ನೀಡುವ ಐತಿಹಾಸಿಕ ವಿವರಗಳು ಅಷ್ಟೊಂದು ಮಹತ್ವದ್ದೆನಿಸುವುದಿಲ್ಲ. ಆದರೆ ತುಳು ಲಿಪಿ ಮತ್ತು ತುಳು ಭಾಷೆಯ ಅಧ್ಯಯನದ ದೃಷ್ಟಿಯಿಂದ ಈ ಶಾಸನ ವಿಶೇಷವಾದ ಮಹತ್ತ್ವವನ್ನು ಹೊಂದಿದೆ. (ಪಿ.ಜಿ.ಬಿ.)

**ಪ್ರಾಂತೀಯ ಲಿಪಿ ಶಾಸನಗಳು (ಪಂಜಾಬ್, ಹರಿಯಾಣ ಮತ್ತು ಹಿಮಾಲಯ ಪ್ರದೇಶ):** ಖರೋಷ್ಠಿಯ ಬಹುಮುಖ್ಯ ಹಾಗೂ ಪ್ರಾಚೀನ ಶಾಸನವೆಂದರೆ ಅಶೋಕ ಮೌರ್ಯನ ಪ್ರ.ಶ.ಪೂ.3ನೆಯ ಶತಮಾನಕ್ಕೆ ಸೇರಿದ ಮನ್‌ಸೆರಾ ಮತ್ತು ಶಾಬಾಜ್‌ಗಡಿ

ಬಂಡೆ ಶಾಸನಗಳು. ಇಂಡೊ-ಗ್ರೀಕರು ಹಾಗೂ ಅವರ ಉತ್ತರಾಧಿಕಾರಿಗಳಾದ ಸಿಥಿಯನ್ನರು, ಪಾರ್ಥಿಯನ್ನರು, ಕುಷಾಣರು ಈ ಲಿಪಿಯನ್ನು ಗ್ರೀಕ್ ಅಕ್ಷರಗಳೊಂದಿಗೆ ಬೆರೆಸಿ ಬಳಸಿದರು. ಅಲ್ಲದೆ ಇದರೊಂದಿಗೆ ಬ್ರಾಹ್ಮಿಯನ್ನು ಬೆರೆಸಿ ಭಾರತದ ಕುಣಿಂದರು, ಔದುಂಬರರು, ಕುಲೂವರು ಮುಂತಾದ ಬುಡಕಟ್ಟುಗಳು ಬಳಸಿರುವುದು ಕಂಡುಬರುತ್ತದೆ. ಸ್ಟೆನ್ ಕೆನೌ ತನ್ನ ಕಾರ್ಪಸ್ ಇನ್ಸ್ಕ್ರಿಪ್ಷನಮ್ ಇಂಡಿಕಾರಂ ಸಂಪುಟ 2 – ಭಾಗ 1ರಲ್ಲಿ ಅಲ್ಲಿಯವರೆಗೂ ಲಭ್ಯವಿದ್ದ ಈ ಲಿಪಿಯ ಅಶೋಕನ ಎಲ್ಲ ಶಾಸನಗಳನ್ನು ಸೇರಿಸಿ ಸು.96 ಶಾಸನಗಳನ್ನು 1929ರಲ್ಲಿ ಪ್ರಕಟಿಸಿದ. ಇದರಲ್ಲಿ ಗ್ರೀಕರು, ಕುಷಾಣರು ಮತ್ತಿತರರ ಶಾಸನಗಳೂ ಸೇರಿಸಲ್ಪಟ್ಟಿವೆ. ಅಲ್ಲಿಂದಾಚೆಗೆ ಖರೋಷ್ಠಿ ಶಾಸನಗಳ ಸಂಖ್ಯೆ ಹೆಚ್ಚಿತು. ಎ.ಹೆಚ್.ದಾನಿಯವರು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಚಿಲಾಸ್ ಹುನ್‌ಜ಼ಾ ಹಾಗೂ ಅಲಂಬ್ರಿಡ್ಜ್‌ಗಳಲ್ಲಿನ ಅನೇಕ ಗೀರುಬರೆಹದ ಖರೋಷ್ಠಿ ಲಿಪಿಯ ಶಾಸನಗಳನ್ನು ಪ್ರಕಟಿಸಿದ್ದಾರೆ. ಭಾರತದಲ್ಲಿ ಬಿ.ಎನ್.ಮುಖರ್ಜಿಯವರು ಖರೋಷ್ಠಿ ಲಿಪಿಯ ಶಾಸನಗಳನ್ನು ಪ್ರಕಟಿಸಿದ್ದಾರೆ. ದಿನಾಂಕವನ್ನು ಹೊಂದಿರುವ ಶಾಸನಗಳಲ್ಲಿ ಹಳೆಯ ಶಕೆಯನ್ನು ಮತ್ತು ಕನಿಷ್ಕನ ಶಕೆಯನ್ನು ಸಾಮಾನ್ಯವಾಗಿ ಬಳಸಲಾಗಿದೆ (ಇದನ್ನು ನಾವು ಶಕ 78 ಎಂದು ಪರಿಗಣಿಸಲಾಗಿದೆ). ನಾಣ್ಯಗಳ ಮೇಲಿನದನ್ನು ಹೊರತುಪಡಿಸಿದರೆ ಬಹುತೇಕ ಶಾಸನಗಳು ಅದರಲ್ಲೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ದಾನದ ವಿವರಣೆಗಳನ್ನು ಒಳಗೊಂಡಿವೆ. ಐತಿಹಾಸಿಕವಾಗಿ ಮಹತ್ತ್ವದ ಶಾಸನಗಳೆಂದರೆ, ಕಾಶ್ಮೀರದಲ್ಲಿ ಕುಷಾಣರ ಆಳಿಕೆಯನ್ನು ತೋರಿಸುವ ಲಡಾಕ್‌ನಲ್ಲಿ ದೊರಕಿರುವ ವಿಮಕಡ್‌ಫಿಸಿಸನ ಖಲಾಸ್ತೆ ಶಾಸನ, ಕನಿಷ್ಕನ ಮೊದಲ ವರ್ಷದ ಆಳ್ವಿಕೆಯ ಪೆಷಾವರ್‌ನ ಷಾಜಿ.ಕಿ.ಧೇರಿ ಸಂಪುಟ ಶಾಸನ (11ನೆಯ ವರ್ಷದ) ಸೂರ್ಯ ವಿಹಾರ ಮತ್ತು ಜೆಡಾ (11ನೆಯ ವರ್ಷ) ಶಾಸನಗಳು. ಕನಿಷ್ಕನ ಸೇನಾಪತಿ ಲಾಲನ ಮಣಿಕ್ಯಾಲ (18ನೆಯ ವರ್ಷ) ಶಾಸನ ಖರೋಷ್ಠಿಯ ಮತ್ತೊಂದು ಪ್ರಮುಖ ಶಾಸನ.

ಮೇಲೆ ಹೇಳಿದಂತೆ ಪ್ರ.ಶ.ಪೂ.8ನೆಯ ಶತಮಾನದ ವರೆವಿಗೂ ಖರೋಷ್ಠಿ ಮತ್ತು ಬ್ರಾಹ್ಮಿಗಳು ವಾಯವ್ಯ ಭಾರತದ ಪ್ರಧಾನ ಲಿಪಿಗಳಾಗಿದ್ದವು. ಇದರಲ್ಲಿ ಮೊದಲಿನದು ಈ ಕಾಲಘಟ್ಟದಲ್ಲಿ ಶಾಸನಗಳಿಂದ ಕಾಣೆಯಾದರೂ ಇದರ ಒಂದು ಪ್ರಭೇದವಾದ ಲಂಡೆ ಲಿಪಿ ಈ ಪ್ರದೇಶದ ವಣಿಕರು ಬಳಸುತ್ತಿದ್ದ ಲಿಪಿಯಾಗಿ ಮುಂದುವರೆಯಿತು. ತೀರ ಇತ್ತೀಚಿನವರೆವಿಗೂ ಖರೋಷ್ಠಿ ಭಾಷಾ ವರ್ಗಕ್ಕೆ ಸೇರಿದ ಅನೇಕ ಪ್ರಭೇದಗಳಿದ್ದವು. ಆದರೆ ಬ್ರಾಹ್ಮಿ ತನ್ನ ಉಪಬೇಧಗಳಾದ ಕುಟಿಲ ಅಥವಾ ಸಿದ್ಧಮಾತೃಕ (ಬ್ರಾಹ್ಮಿಯ ವಕ್ರರೂಪ), ಶಾರದಾ, ದೇವಸೇನ, ನಾಗರೀ, ಬಾಕರಿ, ಗುರುಮುಖಿ ಮುಂತಾದ ರೂಪಗಳಲ್ಲಿ ಶಾಸನ ಹಾಗೂ ಹಸ್ತಪ್ರತಿಗಳ ಲಿಪಿಯಾಗಿ ಇಂದಿಗೂ ಮುಂದುವರೆದಿವೆ. ಇವುಗಳಲ್ಲಿ ಕುಟಿಲ ಅಥವಾ ಸಿದ್ಧಮಾತ್ರಿಕ ಪ್ರಭೇಧ ಬ್ರಾಹ್ಮಿಯ ವಕ್ರರೂಪವೆಂದು ಬ್ಯೂಲರ್ ಗುರುತಿಸಿದ್ದಾನೆ. 7–8ನೆಯ ಶತಮಾನದ ಕೆಲವು ಶಾಸನಗಳು ಈ ಲಿಪಿಯಲ್ಲಿವೆ. ಇವುಗಳ ಪೈಕಿ ಚಂಬಾದ ಮೇರುವರ್ಮನು ಹರಿಯಾಣದ ಗುರವಾಡ (ಶಕ819) ಮತ್ತು ಮೋಹನ್‌ಬಾರಿಗಳನ್ನು ಉದಾಹರಣೆಯಾಗಿ ಹೆಸರಿಸಬಹುದು.

9ರಿಂದ 13ನೆಯ ಶತಮಾನಗಳವರೆವಿಗೂ ಇಡೀ ವಾಯವ್ಯ ಭಾರತದಲ್ಲಿ ಹರಿಯಾಣ ಹಾಗೂ ಪಂಜಾಬ್‌ನ ಕೆಲಭಾಗಗಳನ್ನು ಹೊರತುಪಡಿಸಿದಂತೆ ಶಾರದಾ ಲಿಪಿ ಬಳಕೆಯಲ್ಲಿತ್ತು. ಹರಿಯಾಣ ಹಾಗೂ ಪಂಜಾಬ್‌ನ ಕೆಲಭಾಗಗಳಲ್ಲಿ ಶಾರದಾ ಲಿಪಿ ತಿಳಿದಿದ್ದರೂ ನಾಗರೀ ಲಿಪಿ ಶಾಸನೋಕ್ತ ಭಾಷೆಯಾಗಿಯೇ ಪ್ರಧಾನವಾಗಿತ್ತು. ವಿಕ್ರಮ ಸಂವತ್ಸರದ 1337ರ ಪಾಲಂಬೌಲಿ ಶಾಸನದಲ್ಲಿ ಆರಂಭದ 20 ಸಾಲುಗಳು ನಾಗರಿಯಲ್ಲಿದ್ದರೆ, ಕೊನೆಯ 2 ಸಾಲುಗಳು ಶಾರದಾ ಲಿಪಿಯಲ್ಲಿವೆ. ಕಾಶ್ಮೀರದ ಹಿಮಾಲಯದ ಭಾಗಗಳಲ್ಲಿ ಮತ್ತು ಹಿಮಾಚಲ ಪ್ರದೇಶದಲ್ಲಿ ಶಾರದಾ ಲಿಪಿಯ ಬಳಕೆ ದೀರ್ಘಕಾಲದವರೆಗಿತ್ತು.

**ಶಾರದಾ ಲಿಪಿ ಶಾಸನಗಳು:** ಗಾಂಧಾರ ಕಾಲದ ಶಾರದಾ ಲಿಪಿ ಶಾಸನಗಳು ಅತಿ ಕಡಿಮೆ ಪ್ರಮಾಣದಲ್ಲಿ ಗಾಂಧಾರ (ಪಾಕಿಸ್ತಾನ) ದೆಹಲಿ ಪ್ರದೇಶದಲ್ಲಿ ಹರಡಿವೆ. ಈವರೆಗೂ ವಾಯವ್ಯ ಪಾಕಿಸ್ತಾನ ಅಂದರೆ ಪ್ರಾಚೀನ ಗಾಂಧಾರ ಪ್ರದೇಶದಿಂದ ಸು.12 ಶಾರದಾಲಿಪಿ ಶಾಸನಗಳು ಪತ್ತೆಯಾಗಿವೆ. ಇದರಲ್ಲಿ ಹೆಚ್ಚಿನ ಶಾಸನಗಳು ಲಾಹೋರ್ ಮತ್ತು ಪೆಷಾವರ್ ವಸ್ತುಸಂಗ್ರಹಾಲಯದಲ್ಲಿವೆ. ಇವುಗಳಲ್ಲಿ ಶಾಹಿರಾಜ ಭೀಮದೇವನ ಕಾಲದ ದೇವಾಯ್ ಶಾಸನ ಎಲ್ಲಕ್ಕಿಂತ ಪುರಾತನವಾದದ್ದು. ಶಾಹಿರಾಜ ಜಯಪಾಲನ ಕಾಲದ ಶಾಸನಗಳು 146ರಲ್ಲಿ ಬಾರಿಕೋಟ್‌ನ ಉಚ್ಚ ಸ್ವಾತ ಮತ್ತು ಹುಂಡ್ ಪುರಾತನ ಉದ್ಭಾಂಡಪುರದಲ್ಲಿ ದೊರೆತವು. 154–57ರ ರಾಣಿ ಕಾಮೇಶ್ವರಿದೇವಿಯ ಕಾಲದ ಶಾಸನಗಳು ಅತ್ಯಂತ ಪ್ರಮುಖವಾದವು. ಅತ್ಯಂತ ಕೊನೆಯಲ್ಲಿ ದೊರೆತ ಶಾಸನ ವನ್ದರ್ಡ ಪ್ರದೇಶದ್ದು. ಇದೇ ಪ್ರದೇಶದಲ್ಲಿ ದೊರೆತ ಲೌಕಿಕ 538 ಅಥವಾ 1461ನೆಯ ಕಾಲದ್ದೆನ್ನಲಾದ ಶಾಸನವೇ ಅತ್ಯಂತ ಈಚಿನದು.

ಗಾಂಧಾರದ ಶಾರದಾಲಿಪಿ ಶಾಸನಗಳು ಚಿಕ್ಕದಾಗಿದ್ದು ಕಾಬುಲ್ ಮತ್ತು ಗಾಂಧಾರದ ಶಾಹಿರಾಜರ ಬಗೆಗೆ ಮುಖ್ಯ ಮಾಹಿತಿ ನೀಡುವ ಹಾಗೂ ಈ ವಂಶಕ್ಕೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯವಾಗಿವೆ. ಈ ಪ್ರಕಾರದ ಮಾಹಿತಿ ಆಲ್‌ಬರೂನಿಯ ಕಿತಾಬ್–ಅಲ್–ಹಿಂದ್ ಪುಸ್ತಕದಲ್ಲಿಯೂ ದಾಖಲಾಗಿದೆ.

**ಕಾಶ್ಮೀರ:** ಶಾರದಾಲಿಪಿ ಕಾಶ್ಮೀರದಲ್ಲಿ 9ನೆಯ ಶತಮಾನದಿಂದ ಈಗಿನವರೆಗೂ ಉಪಯೋಗಿಸಲ್ಪಡುತ್ತಿದೆ. ಕಲ್ಹಣನ ವಿವರಗಳಲ್ಲಿ ಭೂ ದಾನಗಳೂ ಸೇರಿದಂತೆ ಶಾರದಾಲಿಪಿ ಶಾಸನಗಳನ್ನು ಅನುಕ್ರಮ ರೀತಿಯಲ್ಲಿ ಜೋಡಿಸಿದ ಮಾಹಿತಿಗಳು ಹೇಳಿಕೊಳ್ಳುವಷ್ಟು ದೊಡ್ಡ ಪ್ರಮಾಣದಲ್ಲಿಲ್ಲ. ತಾಮ್ರದ ಒಂದು ಶಾಸನವೂ ಈ ಪ್ರದೇಶದಲ್ಲಿ ದೊರೆಯದಿರುವುದು ಆಶ್ಚರ್ಯ. ಅತ್ಯಂತ ಪ್ರಾಚೀನ ಶಾಸನಗಳಲ್ಲಿ ಉತ್ಪಲ (ವರ್ಮನ್) ವಂಶದ ದಂತಕಥೆಗಳು ನಮೂದಿತವಾಗಿರುವ ನಾಣ್ಯಗಳು ಹಾಗೂ ಒಡೆದು ಹೋದ ಶಾಸನಗಳಲ್ಲಿ ಆವಂತಿವರ್ಮನ ಹೆಸರು ಇರುವುದು ಗಮನಾರ್ಹ. ಅನಂತರದ ಎರಡು ಶಾಸನಗಳಲ್ಲಿ ಒಂದು ಶ್ರೀನಗರದ ಮನೆಯೊಂದರಲ್ಲಿ ದೊರೆತ ಶಿಲಾಶಾಸನವಾಗಿದೆ (ಲೌಕಿಕ 68 ಅಥವ 992). ಇದು ರಾಣಿ ದಿಡ್ಡಾ ಕಾಲದ್ದಾಗಿದೆ (980–1003). ಮತ್ತೊಂದು ಪದ್ಮಪಾಣಿ ಬೋಧಿಸತ್ವನ ಮೂರ್ತಿಯ ಪೀಠದ ಮೇಲೆ ಅಂಕಿತವಾಗಿದೆ (ಲೌಕಿಕ 65 ಅಥವಾ 989). ಇದು ಶ್ರೀನಗರದ ಎಸ್.ಪಿ.ಎಸ್ ವಸ್ತುಸಂಗ್ರಹಾಲಯದಲ್ಲಿ ರಕ್ಷಿಸಲ್ಪಟ್ಟಿದೆ. ಉಳಿದ ಪ್ರಮುಖ ಶಾಸನಗಳೆಂದರೆ–ಪರಮಾನಂದದೇವನ ಕಾಲದ (ಲೌಕಿಕ 33 ಅಥವಾ 1157) ತಾಪರ್ ಬಾಗಿಲು ಚೌಕಟ್ಟಿನ ಮೇಲಿನ ಶಿಲಾಶಾಸನ, ಆರಿಗೋಮ್ ಶಿಲಾಫಲಕ ಶಾಸನ (ಲೌಕಿಕ 73 ಅಥವಾ 1197), ಶಾಹಾಬದೀನ (ಸಾಹಿಬ್–ಉ–ದಿನ್) ಕಾಲದ ಶಾಸನ, ಕೋಟಿಹರ್ (ಅನಂತ್‌ನಾಗ್ ಜಿಲ್ಲೆ) ಶಾಸನ (ಲೌಕಿಕ 45 ಅಥವಾ 1369), ಜಯನೋಲದೀನ ಶಾಹ (ಜೈನ್–ಉಲ್–ಅಬಿದಿನ್) ಕಾಲದ ಖೋನಾಮುಹ್ ಶಿಲಾಶಾಸನ (ಕಲಿ 4530 ಅಥವಾ 1428). ಕಾಶ್ಮೀರಕ್ಕೆ ಸೇರಿದ ಕೊನೆಯ ಶಾಸನ 18ನೆಯ ಶತಮಾನದ ಕೊನೆಯ ಕಾಲದ್ದಾಗಿದೆ. ಪುಲ್‌ವಾಮ ಜಿಲ್ಲೆಯ ಕಪಾಲಮೋಚನ ಅಥವಾ ಡಿಗೋಂನಲ್ಲಿ ಸಿಕ್ಕಿದ ಶಾಸನ ಇದಾಗಿದ್ದು ವಿಕ್ರಮಶಕೆ 1846 ಅಥವಾ 1789ನೆಯ ವರ್ಷದ್ದಾಗಿದೆ.

ಹೀಗೆ ವಿವಿಧ ಭಾಗಗಳಲ್ಲಿ ರಕ್ಷಿಸಲ್ಪಟ್ಟ ಕಾಶ್ಮೀರದ ಶಾಸನಗಳು ಕಾಶ್ಮೀರದ ಚರಿತ್ರೆ ಅಥವಾ ಸಂಸ್ಕೃತಿಯ ಬಗೆಗೆ ಹೆಚ್ಚಿನ ಮಾಹಿತಿ ನೀಡುವುದಿಲ್ಲ. ಆದರೆ ಕಲ್ಹಣ ಮತ್ತು ಅವನ ಮುಂದಿನ ಪೀಳಿಗೆಯವರಿಂದ ನಮೂದಿತವಾದ ಕಾಲಾನುಕ್ರಮಣಿಕೆಯ ಯಥಾರ್ಥತೆಯನ್ನು ದೃಢೀಕರಿಸಲು ಮಾಹಿತಿ ನೀಡುತ್ತವೆ. ಕೆಲವೊಂದರಲ್ಲಿ ಪುರಾತನ ಹಾಗೂ ಮಧ್ಯಕಾಲೀನ ಕಾಶ್ಮೀರ ಸಂಸ್ಕೃತಿಯ ಬಗೆಗೆ ಉಪಯುಕ್ತ ಮಾಹಿತಿಗಳಿವೆ.

**ಲಡಾಕ್:** ಶಾರದಾ ವರ್ಣಲಿಪಿಯಲ್ಲಿರುವ ಕೆಲವು ಶಾಸನಗಳನ್ನು ಲಡಾಕ್ ಪ್ರದೇಶದಲ್ಲಿ ವಿಗ್ನೆ, ಕನ್ನಿಂಗ್‌ಹ್ಯಾಮ್ ಮತ್ತು ಫ್ರಾಂಕಿಯವರು ಪತ್ತೆಹಚ್ಚಿದ್ದಾರೆ. ಇವುಗಳಲ್ಲಿ ದೊರೆತ ಎರಡು ಶಾಸನಗಳು ಬೋಧಿಸತ್ವ ಮೈತ್ರೇಯನ ಬಗೆಗೆ ತಿಳಿಸುತ್ತವೆ. ಇವುಗಳಲ್ಲಿ ಒಂದು ಲೌಕಿಕ ಶಕೆಯ 7ನೆಯದ್ದಾಗಿರಬಹುದು.

**ಜಮ್ಮು:** ಜಮ್ಮು ಸಂಸ್ಥಾನದಲ್ಲಿ ಶಾರದಾಲಿಪಿಯ ಶಾಸನಗಳಿವೆ. ಅವುಗಳಲ್ಲಿ ಎರಡು ಶಾಸನಗಳು ಡೋಡಾ ಜಿಲ್ಲೆಯ ದಾಚ್ಚನ್ ಮತ್ತು ಭಾಜಿ–ನೈಯಲ್ಲಿ ದೊರೆತಿವೆ. ದಾಚ್ಚನ್ ಶಾಸನ ಕಾಶ್ಮೀರದ ರಾಜ ಶ್ರೀನಂತನ (1028–63) ನಾಮಧೇಯ ಅನಂತದೇವನ ಆಳಿಕೆಯ ಕಾಲದ್ದಿರಬಹುದೆಂದು ಹೇಳಬಹುದು. ಇದರಲ್ಲಿ 12 ಎಂದಿದ್ದು ಪ್ರಾಯಶಃ ಲೌಕಿಕಶಕೆ 12 ಆಗಿ 1036 ಎಂದು ಗುರುತಿಸಬಹುದು. ಮತ್ತೊಂದು ಇದರ ಅನಂತರ ಕಾಲದ್ದಾಗಿದ್ದು ಲಿಪಿ ಶೈಲಿಯ ಆಧಾರದ ಮೇಲೆ 16ನೆಯ ಶತಮಾನದ್ದೆಂದು ಹೇಳಬಹುದು. ವೋಗೆಲ್‌ನ ಎರಡು ಶಾಸನಗಳಲ್ಲಿ ಒಂದು ಬಬೋರ್ ಜಮ್ಮುವಿನಿಂದ ಸು.27 ಕಿಮೀ ದೂರದ ಪ್ರಾಚೀನ ಬಾಬಪುರ್‌ದ ಶಿಥಿಲ ದೇವಾಲಯದಲ್ಲಿದ್ದು ಮತ್ತೊಂದು ಕಿಶ್ತ್‌ವಾರ್‌ನ ಶಿಲೆಯ ಮೇಲಿದೆ. ಎರಡೂ ಶಾಸನಗಳು ಅತ್ಯಂತ ಜೀರ್ಣಾವಸ್ಥೆಯಲ್ಲಿದ್ದು ಓದಲಾರದ ಸ್ಥಿತಿಯಲ್ಲಿವೆ.

**ಚಂಬ:** ಪಶ್ಚಿಮ ಹಿಮಾಲಯದ ಚಂಬ ಪ್ರದೇಶದಲ್ಲಿ ಮಾತ್ರ ಅತಿ ಹೆಚ್ಚಿನ ವಿವಿಧ ನಮೂನೆಯ ಶಾರದಾಲಿಪಿ ಶಾಸನಗಳು ದೊರೆತಿವೆ. ಅವುಗಳಲ್ಲಿ ಬಂಡೆ ಮತ್ತು ಕಲ್ಲಿನ ಶಾಸನಗಳು, ಮೂರ್ತಿ ಶಾಸನಗಳು, ತಾಮ್ರಫಲಕ ಶಾಸನಗಳು ಕಾರಂಜಿ ಕಲ್ಲಿನ ಶಾಸನಗಳು ಮುಖ್ಯವಾದವು. ಅತ್ಯಂತ ಸುಂದರವಾಗಿ ಕೆತ್ತಲಾದ ಅತಿ ಪ್ರಾಚೀನ ಶಾರದಾಶಾಸನವು ಸದಾಹರನ್‌ದಲ್ಲಿ ದೊರೆತಿದೆ. ಈ ಶಾಸನ ಮನೋಹರ ಆಲಂಕಾರಿಕ ಕಾವ್ಯಶೈಲಿಯಲ್ಲಿದ್ದು ಗುಡ್ಡಗಾಡಿನ ನಾಯಕ ಸಾತ್ಯಕಿಯ ಪತ್ನಿ ಸೋಮಪ್ರಭೆಯ ಸೌಂದರ್ಯದ ಗುಣಗಾನವನ್ನು ಒಳಗೊಂಡಿದೆ. ಅತ್ಯಂತ ಕಾಳಜಿಯಿಂದ ರಕ್ಷಿಸಲ್ಪಟ್ಟ ಶಾಸನಗಳೆಂದರೆ ಚಂಬದ ಆಳರಸರ ಯುಗದವರಾದ ವರ್ಮನ್, ವಿದಗ್ಧದೇವ, ಸೋಮವರ್ಮನ್ ಮತ್ತು ಅಸತ ನೀಡಿದ್ದ ತಾಮ್ರ ಪಟಗಳು. ಈ ಪಟಗಳು ಚಂಬದ ಪ್ರಾಚೀನ ಚರಿತ್ರೆ ಮಾತ್ರವಲ್ಲದೆ ಭೌಗೋಳಿಕ ಮಾಹಿತಿಗಳನ್ನು ನೀಡುವ ಬಹು ಮುಖ್ಯ ಆಕರಗಳಾಗಿವೆ. ಚಂಬದ ಪ್ರಾಚೀನ ಜಿಲ್ಲೆಗಳು ಮತ್ತು ಹಳ್ಳಿಗಳ ಬಗೆಗೆ ತಿಳಿಸುವುದಲ್ಲದೆ, ಜಿಲ್ಲೆಯ ಪುರಾತನ ಭೌಗೋಳಿಕ ಅಂಶಗಳನ್ನೂ ಒಳಗೊಂಡಿದೆ. ಅನೇಕ ಆಡಳಿತಾತ್ಮಕ ಬಿರುದುಗಳು ಮತ್ತು ಕಾರ್ಯಪಾಲಕ ಸ್ಥಾನಗಳನ್ನು ಹೆಸರಿಸುವುದರ ಮೂಲಕ ಪ್ರಾಚೀನ ಚಂಬದ ಆಡಳಿತದ ಬಗೆಗೆ ವಿಶೇಷ ಮಾಹಿತಿ ನೀಡುತ್ತವೆ. ಪ್ರತ್ಯೇಕವಾಗಿ ಸಂಪೂರ್ಣ ವಾಯವ್ಯ ಭಾರತದ ಬೆಟ್ಟದ ಪ್ರದೇಶಗಳಲ್ಲಿ ದೊರೆತ ಶಾಸನಗಳಲ್ಲಿ ಈ ರೀತಿಯ ಶಾಸನ ಲಿಪಿ ಕಂಡುಬಂದಿದೆ.

ಶಾರದಾ ಶಾಸನಗಳಲ್ಲಿ ಚಂಬದ ಬೇರೆ ಬೇರೆ ಪ್ರದೇಶಗಳಲ್ಲಿ ದೊರೆತಿರುವ, ಕಾರಂಜಿಯ ಕಲ್ಲು ಚಪ್ಪಡಿಗಳ ಮೇಲೆ ಮನೋಹರವಾಗಿ ಕೆತ್ತಲಾದ ಶಾಸನಗಳು ವಿಶಿಷ್ಟರೀತಿಯದಾಗಿವೆ. ಇವುಗಳನ್ನು ಚಂಬ ಊರಿನ ಭೂರಿಸಿಂಗ್ ವಸ್ತುಸಂಗ್ರಹಾಲಯದಲ್ಲಿ ರಕ್ಷಿಸಿಡಲಾಗಿದೆ.

ಈ ಚಪ್ಪಡಿ ಕಲ್ಲುಗಳು ಉನ್ನತ ಧಾರ್ಮಿಕ ದಾನಿಗಳ ಕೊಡುಗೆಯಾಗಿದ್ದು ನೀರಿನ ಚಿಲುಮೆಗಳಲ್ಲಿ ಸ್ಥಾಪಿತವಾಗಿದ್ದವು. ಕಲ್ಲು ಚಪ್ಪಡಿಯ ಈ ಶಾಸನಗಳಲ್ಲಿ ಚಾರಿತ್ರಿಕ ವಿಷಯಗಳಿವೆ. ತಾಮ್ರಫಲಕ ಶಾಸನಗಳು ಆಯಾ ರಾಜನ ಆಳಿಕೆಯ ಕಾಲದ್ದಾಗಿದ್ದು ರಾಜನ ಕಾಲಮಾಹಿತಿ ಹಾಗೂ ಶಾಸ್ತ್ರಶಕೆಯ ಲೌಕಿಕಶಕೆ ಅಥವಾ ಈಗಲೂ ಕಾಶ್ಮೀರ ಹಾಗೂ ಗುಡ್ಡಗಾಡಿನ ಪ್ರದೇಶದಲ್ಲಿ ಉಪಯೋಗಿಸಲ್ಪಡುತ್ತಿರುವ ಸಪ್ತರ್ಷಿ ಶಕೆಯಲ್ಲಿದೆ.

ಇದು ಸಮರ್ಪಕರೀತಿಯಲ್ಲಿ ಪ್ರಾಚೀನ ಚಂಬ ಆಡಳಿತಗಾರರ ಕಾಲವನ್ನು ಅನುಕ್ರಮವಾಗಿ ನಮೂದಿಸಲು ಸಹಕಾರಿಯಾಗಿದೆ. ಚಾರಿತ್ರಿಕವಾಗಿ ಈ ಮಾಹಿತಿಗಳು ರಾಜ್ಯವು ಪ್ರಮುಖ ಘಟಕಗಳಾಗಿ ವಿಭಜಿಸಲ್ಪಟ್ಟು ಇವುಗಳ ಆಡಳಿತವನ್ನು ರಜಾನಕರೆಂಬ ಹೆಸರಿನ ಆಡಳಿತಗಾರರು ನಡೆಸುತ್ತಿದ್ದರೆಂಬುದನ್ನೂ ಚಂಬ ಅಥವ ಸುತ್ತಮುತ್ತಲಿನ ಗುಡ್ಡಗಾಡು ಪ್ರಾಂತ ವಲ್ಲಾಪುರ (ಬಲೋರ್) ರಾಜರ ಆಳಿಕೆಯ ಕಾಲದ ಮಾಹಿತಿಯನ್ನು ಒಳಗೊಂಡಿವೆ.

**ಕಾಂಗ್ರ:** ಕಾಂಗ್ರದಲ್ಲಿ ಈವರೆಗೂ ಅತ್ಯಲ್ಪ ಪ್ರಮಾಣದ ಶಾರದಲಿಪಿ ಶಾಸನಗಳು ಬೆಳಕಿಗೆ ಬಂದಿವೆ. ವ್ಯವಸ್ಥಿತವಾಗಿ ರಕ್ಷಿಸಲ್ಪಟ್ಟ ಬೈಜನಾಥ ಪ್ರಶಸ್ತಿಗಳು ಕಲ್ಲಿನ ಮೇಲೆ ಕೆತ್ತಲಾದ ಎರಡು ದೊಡ್ಡ ಕಲ್ಲು ಚಪ್ಪಡಿ ಶಾಸನಗಳು ಬೈಜನಾಥದ ಬೈಜನಾಥದೇವಾಲಯ (ಪ್ರಾಚೀನ ಕೀರಗ್ರಾಮ)ದಲ್ಲಿದೆ. ಇವುಗಳಲ್ಲಿ ಮೊದಲನೆಯ ಪ್ರಶಸ್ತಿಯ ವಿಷಯ ಹಾಗೂ ಇಬ್ಬರು ವ್ಯಾಪಾರಿ ಸಹೋದರರಾದ ಮನ್ಯುಕ ಮತ್ತು ಆಹುಕ ಎಂಬ ಹೆಸರಿನ ಧಾರ್ಮಿಕ ಪ್ರವೃತ್ತಿಯ ದಾನಿಗಳ ಕೊಡುಗೆಯಿಂದ ವೈದ್ಯನಾಥ ದೇವರ (ಲೌಕಿಕ ಭಾಷೆಯಲ್ಲಿ ಬೈಜನಾಥ್) ಹೆಸರಿನಲ್ಲಿ ಕಟ್ಟಲ್ಪಟ್ಟ ದೇವಸ್ಥಾನದ ಬಗೆಗೆ ಮಾಹಿತಿ ಮತ್ತು ತ್ರಿಗರ್ತದ ರಾಜನಾಗಿದ್ದ ಜಯಚಂದ್ರನ 80ನೆಯ ವರ್ಷದ ಆಳಿಕೆಯ ಕಾಲದಲ್ಲಿ ಪಾಳೆಯಗಾರ ಲಕ್ಷ್ಮಣಚಂದ್ರ ಅವನ ಸಾಮಂತನಾಗಿ ಕೀರಗ್ರಾಮದ ಆಡಳಿತ ನಡೆಸುತ್ತಿದ್ದ ವಿಷಯಗಳು ಇವೆ. ಪ್ರಶಸ್ತಿ ಸಮಜ್ಯೇಷ್ಠ ಸುಖೇ 2 ಮೇ 1204ನೆಯ ದಿನಾಂಕಕ್ಕೆ ಹೊಂದಿಕೆ ಆಗುತ್ತದೆ. ಎರಡನೆಯ ಪ್ರಶಸ್ತಿ ಕೀರಗ್ರಾಮದ ಲಕ್ಷ್ಮಣಚಂದ್ರನ ಶ್ರೀಮಂತ ಜಹಗೀರುದಾರನ ಮನೆಯ ಬಗೆಗೆ ಸ್ವಲ್ಪ ಮಾಹಿತಿಯನ್ನು ನೀಡುತ್ತದೆ. ಇದರ ಕಾಲಮಾನ 1126 ಶಕವರ್ಷ (1204).

ಮತ್ತೊಂದು ಗಮನಾರ್ಹ ಅಂಶವೆಂದರೆ ಕಾಂಗ್ರ ಶಾಸನದಲ್ಲಿ ಲೌಕಿಕ ಸಂವತ್ಸರ 30 ಅಂದರೆ 1254ರ ಚಿಕ್ಕ ಶಾಸನ, ಜೈನ ತೀರ್ಥಂಕರ ಪಾರ್ಶ್ವನಾಥನ ಚಿಕ್ಕಮೂರ್ತಿಯ ಪೀಠದ ಮೇಲೆ ಕೆತ್ತಲಾಗಿದೆ.

**ದೆಹಲಿ:** ಶಾರದಾಲಿಪಿಯ ಒಂದು ಶಾಸನ ದೆಹಲಿಯ ನೈರುತ್ಯ ದಿಕ್ಕಿನಲ್ಲಿ 20 ಕಿಮೀ ದೂರದಲ್ಲಿರುವ ಪಾಲಂ ಊರಿನ ಒಂದು ಬಾವಿಯಲ್ಲಿ ದೊರೆತ ಕಲ್ಲು ಚಪ್ಪಡಿಯ ಮೇಲಿದೆ. ಇದರಲ್ಲಿ ನಾಗರೀ ಲಿಪಿಯ ಶಾಸನದ ಅಂತ್ಯಭಾಗ ಶಾರದಾಲಿಪಿಯಲ್ಲಿ ಇರುವುದು ಕಂಡುಬರುತ್ತದೆ.ಇದು ವಿಕ್ರಮ ಸಂವತ್ಸರ 1337 ಶ್ರಾವಣ ವ ತಿ13 ಬುಧವಾರ ಎಂದು ನಮೂದಿತವಾಗಿದ್ದು 1280 ಜೂನ್ 26 ಅಥವಾ 1281 ಆಗಸ್ಟ್ 13ನೆಯ ದಿನಾಂಕಕ್ಕೆ ಹೊಂದಾಣಿಕೆಯಾಗಿ, ಸುಲ್ತಾನ್ ಘಿಯಥುದ್–ದಿನ್ (ಘಿಯಾಸುದ್ದೀನ್) ಬಲ್ಬನ್ ಆಳಿಕೆಯ ಕಾಲವನ್ನು ಸೂಚಿಸುತ್ತದೆ. (ಬಿ.ಕೆ.ಕೆ.)

**ದೇವಾಶೇಷ:** ಶಾರದಾಲಿಪಿಯಿಂದಲೇ ರೂಪುಗೊಂಡ ಹಾಗೂ ಅದರೊಡನೆ ನಿಕಟ ಸಂಬಂಧ ಹೊಂದಿರುವ ಲಿಪಿ ದೇವಾಶೇಷ. ಈ ಲಿಪಿಯ ಶಾಸನಗಳು 1300ರಿಂದ 1700ರ ಅವಧಿಯಲ್ಲಿ ಹಿಮಾಚಲ ಪ್ರದೇಶದಲ್ಲಿ ದೊರಕುತ್ತವೆ. ಈ ಲಿಪಿಯನ್ನು ಬ್ಯೂಲರ್ ನಂಥ ವಿದ್ವಾಂಸ ಶಾರದಾ ಎಂದು ಗುರುತಿಸುತ್ತಿದ್ದನಾದರೂ ಜೆ.ಪಿ.ಎಚ್.ಫೋಗೆಲ್ ಅದನ್ನು ಅಲ್ಲಗಳೆದು, ಈ ಲಿಪಿಯ ಅನನ್ಯ ಲಕ್ಷಣಗಳನ್ನು ಸ್ಪಷ್ಟವಾಗಿ ನಿರೂಪಿಸಿರುವುದಲ್ಲದೆ ಚಂಬ ಪ್ರದೇಶದಲ್ಲಿಯೇ ಇದನ್ನು ಗುರುತಿಸಿದ್ದಾನೆ. ಇದನ್ನು ಬಿ.ಸಿ.ಎಚ್.ಛಾಬ್ರ ಹಾಗೂ ಜಗನ್ನಾಥ್ ಅಗರ್‌ವಾಲ್‌ರವರೂ ಅನುಸರಿಸಿದ್ದಾರೆ. ಫೋಗೆಲ್‌ನ ಮಾದರಿಯಲ್ಲಿ ಬಿ.ಸಿ.ಎಚ್.ಛಾಬ್ರ ರವರು ಚಂಬ ಪ್ರಾಂತಕ್ಕೆ ಸೇರಿದ ವಿಕ್ರಮ ಸಂವತ್ಸರ 1387ರಿಂದ 1917ರ ನಡುವಿನ ಶಾಸನಗಳನ್ನು ಸಂಪಾದಿಸಿ, ಭಾರತೀಯ ಪುರಾತತ್ತ್ವಶಾಸ್ತ್ರ ಸಂಸ್ಥೆಯ ಆಂಟಿಕ್ವಿಟಿಸ್ ಆಫ್ ಚಂಬ ಸ್ಟೇಟ್ – ಭಾಗ – IIರ ಕೇಂದ್ರೀಯ ಪುರಾತತ್ತ್ವ ಇಲಾಖೆ ಮೆಮೋಯರ್– ನಂ.72ರಲ್ಲಿ ಪ್ರಕಟಿಸಿದ್ದಾರೆ. ಈ ಸಂಪುಟದ ಎಲ್ಲ ಶಾಸನಗಳು ದೇವಾಶೇಷ ಇಲ್ಲವೆ ನಾಗರೀ ಲಿಪಿಯಲ್ಲಿವೆ. ಚಂಬದ ಶಾಸನಗಳಲ್ಲಿಯ ಭಾಷೆ ಸಂಸ್ಕೃತವಾಗಿದ್ದರೆ, ಉಳಿದವುಗಳಲ್ಲಿ ಸ್ಥಳೀಯವಾದ ಚಂಬ್ಯಾಲಿ ಭಾಷೆ ಬಳಸಲಾಗಿದೆ. ಇಲ್ಲಿ ಬಳಸಲಾಗಿರುವ ಸಂಸ್ಕೃತ ಸ್ಥಳೀಯ ಭಾಷೆಗಳ ಮಿಶ್ರಣದ ಅಪಭ್ರಂಶವಾಗಿದೆ. ಈ ಶಾಸನಗಳಲ್ಲಿ ಸಾಮಾನ್ಯವಾಗಿ ವಿಕ್ರಮ ಸಂವತ್ಸರವನ್ನು ಉಲ್ಲೇಖಿಸಲಾಗಿದೆಯಾದರೂ ಕೆಲವದರಲ್ಲಿ ಶಾಸ್ತ್ರ ಸಂವತ್ಸರವನ್ನು ಬಳಸಲಾಗಿದೆ. ಕೆಲವು ಎರಡೂ ಸಂವತ್ಸರಗಳನ್ನು ಒಳಗೊಂಡಿವೆ. ವಿಕ್ರಮ ಸಂವತ್ಸರದ 1387ರ (1330) ದಿನಾಂಕದ ವೈರಾಸಿವರ್ಮನ ಗುರೋಲಿ ತಾಮ್ರಪಟ ದೇವಾಶೇಷ ಭಾಷೆಯ ಲಭ್ಯವಿರುವ ಪ್ರಥಮ ಶಾಸನವಾಗಿದೆ. ಮಣಿಕಶರ್ಮ ಎಂಬ ಬ್ರಾಹ್ಮಣನಿಗೆ ಗುರೋಲಿ ಗ್ರಾಮವನ್ನು ವೈರಾಸಿವರ್ಮನ ಅರಸ ದಾನ ನೀಡಿದ್ದನ್ನು ಈ ಶಾಸನ ಉಲ್ಲೇಖಿಸುತ್ತದೆ. ಚಂಬಪ್ರಾಂತದ 77 ದೇವಾಶೇಷ ಲಿಪಿ ಶಾಸನಗಳು ಪ್ರಕಟಿತವಾಗಿದ್ದು, ಅವುಗಳಲ್ಲಿ ಕೊನೆಯದೆಂದರೆ ವಿಕ್ರಮ ಸಂವತ್ಸರ 1734ರ ದಿನಾಂಕದ ಶತ್ರುಸಿಂಹ ಅರಸರ ಲಕ್ಷ್ಮೀ ನಾರಾಯಣ ದೇವಾಲಯದ ತಾಮ್ರಪಟ. ಇಲ್ಲಿಯ ಶಾಸನಗಳಲ್ಲಿ ವಿಶೇಷವಾಗಿ ದಾನಕ್ಕೆ ಸಂಬಂಧಿಸಿದ ಮುದ್ರೆಗಳ ಮೇಲೆ ನಾಗರಿ ಲಿಪಿಯೂ ಕಂಡುಬರುತ್ತದೆ. ಚಂಬ ಪ್ರಾಂತದ ದೇವಾಶೇಷ ಲಿಪಿಯ ಕೆಲವು ಶಿಲಾಶಾಸನಗಳನ್ನು ಸಹ ಛಾಬ್ರರವರು ತಮ್ಮ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಬಹುತೇಕ ಚಂಬದ ವಜ್ರೇಶ್ವರಿ ದೇವಾಲಯದ ಗೀರು ಶಾಸನಗಳು: ಕಾಂಗ್ರದ ಬೈಜನಾಥ್‌ನಲ್ಲಿನ ವೈದ್ಯನಾಥ ದೇವಾಲಯದ ಮಂಟಪದ ಕಂಬಗಳ ಮೇಲಿನ ಕೆಲವು ಲಘು ಶಾಸನಗಳಲ್ಲಿ ದೇವಾಶೇಷ ಹಾಗೂ ಟಾಕರಿ ಲಿಪಿಗಳನ್ನು ಅಶ್ವಿನಿ ಅಗ್ರವಾಲ ಪತ್ತೆ ಹಚ್ಚಿದ್ದಾನೆ. ಇವೆಲ್ಲ ಬಹುತೇಕ ಈ ದೇವಾಲಯದ ದಾನಿಗಳ ಹೆಸರುಗಳಾಗಿವೆ.

**ಗುರುಮುಖಿ ಮತ್ತು ಟಾಕರಿ:** ಆರಂಭದಲ್ಲಿ ಶಾರದಾ ಲಿಪಿಯೊಂದಿಗೆ ವಾಯವ್ಯ ಭಾಗದಲ್ಲಿ ರೂಪುಗೊಂಡ ನಾಗರೀ ಲಿಪಿ ಅನಂತರದಲ್ಲಿ ಉತ್ತರ ಭಾರತದ ಪ್ರಧಾನ ಲಿಪಿಯಾಗಿ ಬೆಳೆಯಿತು. 19ನೆಯ ಶತಮಾನದ ವೇಳೆಗೆ ಪಂಜಾಬ್‌ನಲ್ಲಿ ಗುರುಮುಖಿ ಹಾಗೂ ಪರ್ವತ ಪ್ರದೇಶದಲ್ಲಿ ಟಾಕರಿ ಲಿಪಿಗಳು ಜನಪ್ರಿಯವಾದವು. ಇವುಗಳಲ್ಲಿ ಮೊದಲನೆಯದು ಶಾಸನಗಳಲ್ಲಿ ಜನಪ್ರಿಯವಾಗಿದ್ದು, ಈ ಕುರಿತು ನಿರ್ದಿಷ್ಟ ಅಧ್ಯಯನಗಳಾಗಲೀ, ಸಂಪಾದನೆ ಕಾರ್ಯವಾಗಲೀ ಆಗಿಲ್ಲ. ಗುರುಮುಖಿ ಲಿಪಿಯ ಕೆಲವು ಶಾಸನಗಳು ಪಂಜಾಬ್‌ನ ಧಾರ್ಮಿಕ ಕಟ್ಟಡಗಳು, ದೇವಾಲಯಗಳು, ಗುರುದ್ವಾರಗಳಲ್ಲಿ ಲಭ್ಯವಿದ್ದು, ಬಹುತೇಕ ದಾನದ ವಿವರಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಐತಿಹಾಸಿಕ ಅಂಶಗಳು ಕಡಿಮೆ.

ದೇವಾಶೇಷದಿಂದ ವಿಕಾಸನವಾದ ಟಾಕರಿ ಲಿಪಿ ವಣಿಕ ವರ್ಗದ ಜನಪ್ರಿಯ ಲಿಪಿಯಾಗಿದ್ದು, ಹಿಮಾಚಲ ಪ್ರದೇಶದ ಪರ್ವತ ಭಾಗಗಳಲ್ಲಿ ಹಲವು ರೂಪಗಳಲ್ಲಿ ಬಳಕೆಯಲ್ಲಿತ್ತು. ಇದರಿಂದಾಗಿ ಈ ಲಿಪಿಯ ಅಧ್ಯಯನ ಕಷ್ಟವಾಗಿದ್ದು, ಕೆಲವೆಡೆ ಅಸಾಧ್ಯವೂ ಆಗಿದೆ. ಇದಕ್ಕೆ ಈ ಲಿಪಿಯ ವಕ್ರತೆಯೂ ಕೊಡುಗೆ ನೀಡುತ್ತದೆ. ಈ ದಿಶೆಯಲ್ಲಿ ಪೂರ್ವದ ಟಾಕರಿ ಲಿಪಿಯ ಶಾಸನಗಳು, ಅನಂತರದ ಶಾಸನಗಳಿಗಿಂತ ಅರ್ಥೈಸಲು ಸುಲಭ ಎಂದು ಫೋಗೆಲ್ ಅಭಿಪ್ರಾಯ ಪಟ್ಟಿರುವುದು ಸಮಂಜಸವಾಗಿದೆ. ಶಿಲ್ಪಗಳ, ಮೆಟ್ಟಿಲುಗಳ ಮೇಲೆ ಈ ಲಿಪಿಯ ಕೆಲವು ಶಾಸನಗಳು ಅರಿವಾಗುವಂತಿವೆ. 1988ರಲ್ಲಿ ಹಿಮಾಚಲ ಪ್ರದೇಶದ ಭಾಷೆ ಹಾಗೂ ಸಂಸ್ಕೃತಿ ಇಲಾಖೆಯ ವತಿಯಿಂದ ರಿತಾಶರ್ಮ ಟಾಕರಿ ಲಿಪಿಯ ಹಲವು ಶಾಸನಗಳ ಕಿರು ಹೊತ್ತಿಗೆಯೊಂದನ್ನು ಪ್ರಕಟಿಸಿದ್ದರಾದರೂ ಅದು ಪ್ರಾಥಮಿಕ ಹಂತದ ಪ್ರಯತ್ನವಾಗಿದೆ. ಈ ಲಿಪಿಯ ಐತಿಹಾಸಿಕ ಮಹತ್ತ್ವದ ಯಾವುದೇ ಶಾಸನಗಳೂ ಈವರೆಗೂ ಪ್ರಕಟವಾಗಿಲ್ಲ.

**ಟಿಬೇಟಿಯನ್ನರ ಲಿಪಿ:** ಈ ಲಿಪಿ ಟಿಬೇಟ್‌ನ ಬೌದ್ಧರ ಮೂಲಕ ಹಿಮಾಚಲ ಪ್ರದೇಶ ಹಾಗೂ ಕಾಶ್ಮೀರದ ಪರ್ವತ ಪ್ರದೇಶಗಳನ್ನು ಪ್ರವೇಶಿಸಿರಬಹುದು. ಹಾಗಾಗಿ ಇವು ಬೌದ್ಧ ವಿಹಾರಗಳ ಬಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ. ಎ.ಎಚ್.ಫ್ರಾಂಕೆ ಮತ್ತು ಜಿ.ಟುಚ್ಚಿ ಬಹಳ ಹಿಂದೆಯೇ ಲಡಾಕ್ ಹಾಗೂ ಲಾಹುಲ್–ಸ್ಪಿಟಿ ಪ್ರದೇಶದ ಟಿಬೇಟಿಯನ್ ಶಾಸನಗಳನ್ನು ಪ್ರಕಟಿಸಿದ್ದಾರೆ. ಫ್ರಾಂಕೆಯವರು ಅರ್ಥೈಸಿರುವ ಟಿಬೇಟಿಯನ್ ಶಾಸನಗಳನ್ನು ಜೆ.ಪಿ.ಎಚ್. ಫೋಗೆಲ್ ತಮ್ಮ ಸಂಪುಟದಲ್ಲಿ ಸೇರಿಸಿ ಪ್ರಕಟಿಸಿದ್ದಾರೆ. ಇತ್ತೀಚೆಗೆ ಲಕ್ಷ್ಮಣ್ ಎಸ್.ಠಾಕೂರ್ ಅವರು ಹಿಮಾಚಲ ಪ್ರದೇಶದ ವಿಹಾರದ ಶಾಸನಗಳನ್ನು ಓದಿದ್ದಾರೆ. ಈ ಲಿಪಿ ಅನಂತರದ ಬ್ರಾಹ್ಮಿಯೊಂದಿಗೆ ಹೆಚ್ಚು ಹೋಲುತ್ತಿದ್ದು, ಇದನ್ನು ಟಿಬೆಟಿಯನ್ನರು ಅನಂತರದ ಗುಪ್ತರ ಕಾಲದಲ್ಲಿ ಬೌದ್ಧ ಪ್ರಚಾರಕರಿಂದ ಪಡೆದಿರಬಹುದು. ಬಹಳ ದೀರ್ಘಕಾಲದಿಂದಲೂ ಅದು ಹೆಚ್ಚು ಕಡಿಮೆ ಅದೇ ರೂಪದಲ್ಲಿ ಉಳಿದಿವೆಯಾದರೂ ಅದರ ಸ್ವರದಲ್ಲಿ ಸ್ವಲ್ಪ ಬದಲಾವಣೆಯಾಗಿದ್ದು ಭಾಷಾಶಾಸ್ತ್ರಕ್ಕೆ ಸಹಕಾರಿಯಾಗಿದೆ. (ಎ.ಎ.)

**ಶಾಸನಗಳು–ಮರಾಠಿ:** 11–12ನೆಯ ಶತಮಾನದಿಂದ ಮರಾಠಿ ಶಾಸನಗಳು ಆರಂಭಗೊಳ್ಳುತ್ತವೆ. ಇವು ಮಹಾರಾಷ್ಟ್ರ ಮತ್ತು ಗೋವ ಪ್ರದೇಶದಲ್ಲಿವೆ. ಯಾದವ ಹಾಗೂ ಶಿಲಾಹಾರ ಅರಸರ ಆಳಿಕೆಯ ಕಾಲದವು. ಶಿಲಾಹಾರರ ಮರಾಠಿ ಶಾಸನಗಳಲ್ಲಿ ದಾನ ಶಾಸನಗಳೇ ಅಧಿಕ. ಉದಾಹರಣೆಗೆ 1254–55ರ ನಂದಗಾವ ಶಾಸನ ಮತ್ತು ತಾಸಗಾಂವದ ತಾಮ್ರ ಪತ್ರಗಳು. ಇವು ಸಂಸ್ಕೃತ ಮತ್ತು ಮರಾಠಿ ಭಾಷೆಗಳಲ್ಲಿವೆ. ಆದಿಲ್‌ಶಾಹಿ ಸುಲ್ತಾನರ ಶಾಸನಗಳೂ ಮರಾಠಿ ಭಾಷೆಯಲ್ಲಿವೆ. ಮರಾಠಿ ಮತ್ತು ಕನ್ನಡ ಭಾಷೆಗಳ ಶಾಸನಗಳಲ್ಲಿ ಯಾದವ ಜೈತುಗಿಯ 1210ರ ಒಂದು ಶಾಸನವನ್ನು ಇಲ್ಲಿ ಉದಾಹರಿಸಬಹುದು. ಅಲಾವುದ್ದಿನ್ ಖಿಲ್ಜಿಯ ಮಗ ಕುತುಬುದ್ದೀನ್ ಇವನ ಕಾಲದ (1310–18) ಮರಾಠಿ ಶಾಸನ ಬಿಜಾಪುರ ದಲ್ಲಿಯ ಕರಿಮುದ್ದೀನ್ ಮಸಿದಿಯಲ್ಲಿದೆ. 16ನೆಯ ಶತಮಾನಕ್ಕೆ ಸೇರಿದ ಲೇಪಾಕ್ಷಿ ದೇವಾಲಯದ ಶಾಸನವೊಂದು ಕನ್ನಡ ಹಾಗೂ ಮರಾಠಿ ಭಾಷೆಯದು. 1689ರ ಕಡಪದ ತೆಲುಗು, ಮರಾಠಿ ಶಾಸನ ಗಮನಾರ್ಹ. ಕೆಲವು ಪರ್ಷಿಯನ್ ಮತ್ತು ಮರಾಠಿ ಶಾಸನಗಳು ಇವೆ.

ಚಾಳುಕ್ಯ ವೀರ ಸತ್ಯಾಶ್ರಯನ ಮರ್ಮುರಿ ತಾಮ್ರಶಾಸನ ಸಂಸ್ಕೃತ, ಮರಾಠಿ ಮತ್ತು ಕನ್ನಡ ಹೀಗೆ ಮೂರು ಭಾಷೆಗಳಲ್ಲಿ ಇರುವುದು ಸ್ವಾರಸ್ಯಕರ. ತಂಜಾವೂರಿಗೆ ಸೇರಿದ ಮರಾಠ ದೊರೆಗಳ ಶಾಸನಗಳು ತಾಮ್ರಪತ್ರಗಳು ನಾಗರಿ ಲಿಪಿಯಲ್ಲಿ ಮರಾಠಿ ಭಾಷೆಯಲ್ಲಿವೆ. 1012ನೆಯ ಮರಾಠಿ ಭಾಷೆಯ ಅತ್ಯಂತ ಪ್ರಾಚೀನ ಶಾಸನ ಠಾಣಾ ಜಿಲ್ಲೆಗೆ ಸೇರಿದ ಆಕ್ಷಿ ಎಂಬಲ್ಲಿ ದೊರೆತಿದೆ. ಇದು 11ನೆಯ ಶತಮಾನದ ನಾಗರಿ ದೇವಿ ಲಿಪಿಯಲ್ಲಿದೆ. ಶಿಲಾಹಾರ ಕೇಶಿದೇವನ ಮಂತ್ರಿಯು ಧಾನ್ಯಗಳನ್ನು ಇದು ನೈವೇದ್ಯಕ್ಕಾಗಿ ದಾನ ಕೊಟ್ಟದ್ದನ್ನು ತಿಳಿಸುತ್ತದೆ. ಕರ್ನಾಟಕದ ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿಯ ಬಳಿ ಇರುವ ಶಾಸನಗಳಲ್ಲಿ ಎರಡು ಮರಾಠಿ ಭಾಷೆಯವು. ಇವುಗಳಲ್ಲಿ ಚಾಮುಂಡರಾಯ(978) ಮತ್ತು ಗಂಗರಾಜರ (1116–17) ಪ್ರಸ್ತಾಪಗಳಿವೆ. 1154ರ ಚಾಳುಕ್ಯ ಜನಮೇಜಯನ್ ಚಿಕುರ್ದೆ ತಾಮ್ರಶಾಸನ

ಬಿಜಾಪುರದ ಕುತುಬುದ್ದೀನ್ ಖಿಲ್ಜಿಯ 1320–21ರ ಶಾಸನ 2ನೆಯ ಹರಿಹರನ 1402ರ ವೆಲುಸ ಶಾಸನ, 1ನೆಯ ದೇವರಾಯನ 1413ರ ಬಂದೊಡೆ ಶಾಸನ ಇತರ ಕೆಲವು ಗಮನಾರ್ಹ ಮರಾಠಿ ಶಾಸನಗಳು. ಚಾವುಂಡರಾಯನು ಮೂರ್ತಿಯನ್ನು ಮಾಡಿಸಿದುದು ಅನಂತರ ಗಂಗರಾಜ ಅದರ ಸುತ್ತಲು ಪೌಳಿ ಗೋಡೆಯನ್ನು ಮಾಡಿಸಿದುದು ಸರ್ವ ವಿದಿತ.

ಮರಾಠಿ ಭಾಷೆಯಲ್ಲಿರುವ ಶಾಸನಗಳು ಪ್ರಧಾನವಾಗಿ ಮಹಾರಾಷ್ಟ್ರದ ಹಾಗೂ ನೆರೆಹೊರೆಯ ಸಂಸ್ಕೃತಿಯನ್ನು ತಿಳಿದುಕೊಳ್ಳುವಲ್ಲಿ ನೆರವಾಗುತ್ತವೆ. ನಾಗಾಂವ್ ಶಾಸನಗಳು ಹಿಜರಿ ಶಕೆಯನ್ನೊಳಗೊಂಡಿವೆ. ಮರಾಠಿ ಶಾಸನಗಳಲ್ಲಿ ಹಲವು ರಾಜವಂಶಗಳ ಪೀಳಿಗೆಗಳನ್ನು ಸೂಚಿಸಿದೆ. ಅನಂತರ ಕಾಲದ ಮರಾಠಿ ಶಾಸನಗಳಲ್ಲಿ ಪರ್ಷಿಯನ್ ಶಬ್ದಗಳು ಬೆರೆತಿವೆ.

ಪಂಢರಪುರದ ದಿವೆ–ಅಗರ (ರತ್ನಗಿರಿ ಜಿಲ್ಲೆ) ಅತ್ಯಂತ ಪ್ರಾಚೀನ ತಾಮ್ರ ಶಾಸನದಲ್ಲಿ ಮಹಾಜನ ದೇವ ಪರಿವಾರದವರು ದೇವಾಲಯದ ಉಸ್ತುವಾರಿಯನ್ನು ಮಾಡಬೇಕೆಂದು ಸೂಚಿಸಿದೆ. ದೇವದಾಸಿ ಪನ್ನಾಸಿಗೆ ಸೇರಿದ ಭೂಮಿಯನ್ನು ಈ ಶಾಸನ ಉಲ್ಲೇಖಿಸುತ್ತದೆ. ಆಳಂದಿಯ ಶಾಸನದಲ್ಲಿ ಸತಿಯ ಉಲ್ಲೇಖ ಕಾಣಸಿಗುತ್ತದೆ. ಪಂಢರಪುರದ ದೇವಾಲಯದಲ್ಲಿ ಎರಡು ಮಹತ್ವದ ಶಾಸನಗಳಿವೆ. 1277ರ ಮರಾಠಿ ಶಾಸನ ವಿಠೋಬ ದೇವಾಲಯದ ಜೀರ್ಣೋದ್ಧಾರ ಕಾರ್ಯದಲ್ಲಿ ಸಮಾಜದ ಎಲ್ಲ ವರ್ಗಗಳ 65 ಗ್ರಾಮಗಳ ಒಟ್ಟು 232 ದಾನಗಳು 22 ಬೇರೆ ಬೇರೆ ವರ್ಷಗಳಲ್ಲಿ ನಡೆದದ್ದನ್ನು ದಾಖಲಿಸಿದೆ. ಯಾದವ ಮಹಾರಾಜ ರಾಮಚಂದ್ರ ದೇವನನ್ನು ಪಂಢರಾಪುರದ ಮುಖ್ಯನೆಂದು ಪ್ರೌಢಪ್ರತಾಪ ಚಕ್ರವರ್ತಿ ಎಂಬ ಬಿರುದಿನಿಂದ ಕರೆದಿದೆ. ದೇವಾಲಯದ ಅಂಗಭೋಗ, ರಂಗಭೋಗ ಸೇವೆಯಲ್ಲಿ ಭಕ್ತಾದಿಗಳೆಲ್ಲರೂ ಭಾಗವಹಿಸುತ್ತಿದ್ದರು. ಪಂಢರಪುರದ ಶಾಸನಗಳಲ್ಲಿ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶದ ಜನರು ಕಾಣಿಕೆ ಕೊಟ್ಟ ವ್ಯಕ್ತಿಗಳ ಹೆಸರನ್ನು ಉಲ್ಲೇಖಿಸಲಾಗಿದೆ. ತುಳಸೀಮಾಲೆ, ಹೂಮಾಲೆ, ಬೆಣ್ಣೆಯಿಂದ ವಿಠ್ಠಲನನ್ನು ಅರ್ಚಿಸುತ್ತಿದ್ದರು.

1233ರ ಶಾಸನ ಪಂಢರಪುರವನ್ನು ದಕ್ಷಿಣ ದ್ವಾರಾವತಿ ಎಂದು ವಿಠ್ಠಲನನ್ನು ದೇವ ಚಕ್ರವರ್ತಿ ಎಂದು ವರ್ಣಿಸುತ್ತದೆ. ಪರ್ಷಿಯನ್ ಹಾಗೂ ನಾಗರಿ ಲಿಪಿಯನ್ನು ಈ ಶಾಸನಗಳಲ್ಲಿ ಕಾಣಬಹುದು.

**ಪರ್ಷಿಯನ್ ಮತ್ತು ಅರೇಬಿಕ್ ಶಾಸನಗಳು (ಕರ್ನಾಟಕ):** ಕರ್ನಾಟಕದಲ್ಲಿ ಪರ್ಷಿಯನ್, ಅರೇಬಿಕ್ ಮತ್ತು ಉರ್ದು ಭಾಷೆಗಳ ಶಾಸನಗಳೂ ಇವೆ. ಇವು ಮಧ್ಯಕಾಲೀನ ಮತ್ತು ಮಧ್ಯಕಾಲೀನೋತ್ತರ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಅಮೂಲ್ಯ ಆಕರಗಳು. ಖಿಲ್ಜಿಗಳ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ ಕರ್ನಾಟಕದಲ್ಲಿ ಆದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆಡಳಿತಾತ್ಮಕ ಬದಲಾವಣೆ, ವಿವಿಧ ವ್ಯಕ್ತಿಗಳು, ಅಧಿಕಾರಿಗಳು, ಆಡಳಿತಾಧಿಕಾರಿಗಳು ಕಟ್ಟಿಸಿದ ಸ್ಮಾರಕ ಕುರಿತ ಅಧ್ಯಯನಕ್ಕೆ ಇವು ಉಪಯುಕ್ತವಾಗಿವೆ. ಮಹಮ್ಮದೀಯ ಶಾಸನಗಳಲ್ಲಿ ಪರ್ಷಿಯನ್ ಭಾಷೆಯ ಶಾಸನಗಳೇ ಹೆಚ್ಚು, ಕೆಲವು ಶಾಸನಗಳು ಅರೇಬಿಕ್ ಭಾಷೆಯಲ್ಲೂ ಇನ್ನೂ ಕೆಲವು ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳಲ್ಲೂ ಇವೆ (ಮಡಿಕೇರಿ, ಬಿಜಾಪುರ ಇತರೆ). ಕೊಡಗಿನ ಅರಸರು ತಮ್ಮ ಶಾಸನಗಳಲ್ಲಿ ಕನ್ನಡದ ಜೊತೆಯಲ್ಲಿ ಅಪರೂಪವಾಗಿ ಪರ್ಷಿಯನ್ ಭಾಷೆಯನ್ನು ಬಳಸಿದ್ದಾರೆ. ಕೆಲವು ತ್ರಿಭಾಷಾ ಶಾಸನಗಳೂ ಇವೆ (ಶಿವಮೊಗ್ಗ ಜಿಲ್ಲೆ ಸಿರಿಗುಪ್ಪ). ಇವು ಅಂದು ಬಳಕೆಯಲ್ಲಿದ್ದ ಸ್ಥಳೀಯ ಆಡುಮಾತಿನ ಮಾದರಿಯನ್ನೊದಗಿಸುವುದರ ಜೊತೆಗೆ ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟರಮಟ್ಟಿಗೆ ಇವುಗಳ ಬಳಕೆ ಹಾಗೂ ಪ್ರಭಾವ ಇದ್ದಿತೆಂಬುದನ್ನು ತೋರಿಸುತ್ತವೆ. ದ್ವಿಭಾಷಾ ಶಾಸನಗಳಲ್ಲಿ ಹೆಚ್ಚಿನವು ಪರ್ಷಿಯನ್ ಮತ್ತು ಕನ್ನಡ ಭಾಷೆಯವು. ಮಹಮ್ಮದೀಯ ಅರಸರು ಸ್ಥಳೀಯರಿಗೆ ತಮ್ಮ ಆಜ್ಞೆಗಳ ಅರಿವಾಗಲೆಂದು ಹೀಗೆ ಇತರ ಭಾಷೆಗಳಲ್ಲಿ ಇವನ್ನು ಬರೆಸಿ ಹಾಕಿಸಿರಬಹುದು.

ಚಿಕ್ಕಮಗಳೂರು ಜಿಲ್ಲೆ ಬಾಬಾಬುಡನ್‌ಗಿರಿಯಲ್ಲಿಯ ಪ್ರಾಚೀನ ಶಾಸನ 1005ಕ್ಕೆ (ಹಿಜರಿ ವರ್ಷ 396) ಸೇರಿದೆ. ಇದು ದಾದಾ ಹಯಾಡ್ ಮೀರ್ ಖಲಂದರ್ (ಶೇಖ್ ಅಬ್ದುಲ್ ಅಜೀಜ್) ಈ ಬೆಟ್ಟಕ್ಕೆ ಬಂದು ಇಲ್ಲಿ ಧ್ಯಾನಮಗ್ನನಾಗಿದ್ದ ವರ್ಷ. ಈ ಕಾಲದಲ್ಲಿ ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಮಹಮ್ಮದೀಯರ ಆಳ್ವಿಕೆ ಆರಂಭವಾಗಿರಲಿಲ್ಲ ಎಂಬ ಸಂಗತಿ ಇಲ್ಲಿ ಗಮನಿಸಬೇಕಾದುದು. ಕರ್ನಾಟಕದಲ್ಲಿ ಮಹಮ್ಮದೀಯ ಅರಸರ ಶಾಸನಗಳನ್ನು 14ನೆಯ ಶತಮಾನದ ಈಚೆಗೆ ಕಾಣುತ್ತೇವೆ. ಇಲ್ಲಿಯವರೆಗೆ ಸಿಕ್ಕಿರುವ ಈ ಅರಸರ ಶಾಸನಗಳ ಸಂಖ್ಯೆ ಸು.800. ಈ ಶಾಸನಗಳ ಪೈಕಿ 7 ಶಾಸನಗಳು ಖಿಲ್ಜಿ ಮತ್ತು ತುಗಲಕ್ ಅರಸರ ಕಾಲಕ್ಕೂ ಸು.20 ಶಾಸನಗಳು 14 ಶತಮಾನಕ್ಕೂ 30 ಶಾಸನಗಳು 15 ಶತಮಾನಕ್ಕೂ 150 ಶಾಸನಗಳು 16 ಶತಮಾನಕ್ಕೂ 75 ಶಾಸನಗಳು 17ನೆಯ ಶತಮಾನಕ್ಕೂ 60 ಶಾಸನಗಳು 18ನೆಯ ಶತಮಾನಕ್ಕೂ ಮತ್ತು 75 ಶಾಸನಗಳು 19ನೆಯ ಶತಮಾನಕ್ಕೂ ಸೇರಿವೆ. ಉಳಿದವು ಕಾಲ ಮತ್ತು ಚಾರಿತ್ರಿಕ ಅಂಶಗಳಿಲ್ಲದವು. ಇವುಗಳಲ್ಲಿ ಹೆಚ್ಚಿನವು ಬಿಜಾಪುರ, ಧಾರವಾಡ, ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲೂ ಉಳಿದವು ಬೆಂಗಳೂರು, ಬೆಳಗಾಂವಿ, ಮಂಡ್ಯ, ಮೈಸೂರು, ಹಾಸನ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ಚಿಕ್ಕಮಗಳೂರು, ಕೊಡಗು ಮತ್ತು ಕೋಲಾರ ಜಿಲ್ಲೆಗಳಲ್ಲೂ ಇವೆ. ಈ ಶಾಸನಗಳ ಪೈಕಿ ಅನೇಕ ಶಾಸನಗಳು ಖಿಲ್ಜಿ, ತುಗಲಕ್, ಬಹಮನಿ, ಆದಿಲ್‌ಶಾಹಿ, ಬರೀದ್ ಶಾಹಿ, ನಿಜಾಮ್ ಶಾಹಿ ಮತ್ತು ಕುತುಬ್‌ಶಾಹಿ ಮುಂತಾದ ಅರಸರಿಗೆ ಸೇರಿದವು. ಇವುಗಳಲ್ಲದೆ ಮೊಗಲರಿಗೂ

ಕೆಲವು ಸ್ಥಳಗಳಲ್ಲಿ ಕೆಲವೇ ಕೋಮಿನ ಜನರಿಗೂ ಅನ್ವಯಿಸುತ್ತಿತ್ತು. ಆದಿಲ್‌ಶಾಹಿ ಸುಲ್ತಾನರು ಈ ಪದ್ಧತಿಯನ್ನು ರದ್ದುಪಡಿಸಲು ಹೊರಡಿಸಿರುವ ಅನೇಕ ಆಜ್ಞೆಗಳು ದೊರಕಿವೆ. ಇದಲ್ಲದೆ ಕೆಲವು ಕೋಮಿನ ಜನರು ಕೆಲವು ಕೆಲಸಗಳನ್ನು ಕಡ್ಡಾಯವಾಗಿ ಮಾಡಲೇಬೇಕಿತ್ತು. ಕೆಲವು ಕೋಮಿನವರಿಗೆ (ನಾಯಿಂದರಿಗೆ) ಕೆಲವೊಮ್ಮೆ ವಿನಾಯಿತಿ ಇತ್ತು.

ಕೆಲವು ಶಾಸನಗಳಲ್ಲಿ ಸ್ಥಳನಾಮಗಳ ವಿವರಣೆ, ಯಾವುದಾದರೊಂದು ಊರಿನ ಹಳೆಯ ಹೆಸರಿಗೆ ಬದಲಾಗಿ ಇಟ್ಟ ಹೊಸ ಹೆಸರು ಇತ್ಯಾದಿ ವಿವರಗಳಿವೆ. ರಾಯಬಾಗ್ ಅನ್ನು ಮುಸ್ತಫಾಬಾದ್ ಎಂದೂ ಬಿಜಾಪುರವನ್ನು ಮಹಮದ್‌ಪುರ ಎಂದೂ ಕರೆಯುತ್ತಿದ್ದು, ಕೆಲವು ಶಾಸನಗಳಲ್ಲಿ ಇದೆ.

ಅಳತೆಗೆ ಸಂಬಂಧಿಸಿದಂತೆ ನೀತನ್, ಚಾವಾರ್, ಬೀಘಾ, ಗಜ್ ಮುಂತಾದ ಶಬ್ದಗಳ ಬಳಕೆ, ನಾಣ್ಯಗಳಿಗೆ ಸಂಬಂಧಿಸಿದಂತೆ ಹೊನ್, ಪ್ರತಾಪ್, ಟಂಕ, ಜೀಕಾಣಿ, ಜೀತಾಲ್ ಮುಂತಾದ ಶಬ್ದಗಳ ಬಳಕೆ ಈ ಶಾಸನಗಳಲ್ಲಿವೆ. ಕೆಲವೊಮ್ಮೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕಿರುವ ದೂರ, ಅರಸರಿಗೆ ಸೇರಿದ ರಾಜ್ಯದ ಎಲ್ಲೆ, ಮಸೀದಿ, ಈದ್‌ಗಾ, ಸ್ಮಶಾನ ಭೂಮಿ ಮೊದಲಾದ ಧಾರ್ಮಿಕ ಸ್ಥಳಗಳಿಗೆ ದತ್ತಿಯಾಗಿ ನೀಡಿದ ಭೂಮಿಗಳ ಚಕ್ಕುಬಂದಿಗಳ ವಿವರಗಳನ್ನು ತಿಳಿಸುವ ಶಾಸನಗಳೂ ಇವೆ.

ಕರ್ನಾಟಕದಲ್ಲಿ ದೊರೆತ ತೋಪುಗಳ ಮೇಲಿರುವ ಅನೇಕ ಶಾಸನಗಳು ಅವುಗಳನ್ನು ತಯಾರುಮಾಡಲು ಅಪ್ಪಣೆಕೊಟ್ಟ ಅರಸ, ಅವನ್ನು ರವಾನಿಸಿದ ಸ್ಥಳ, ಯಾವ ಅರಸರ ಕಾಲದಲ್ಲಿ ಅವುಗಳನ್ನು ಹೆಚ್ಚಾಗಿ ತಯಾರಿಸುತ್ತಿದ್ದರು ಎಂಬಂತಹ ಹಲವು ವಿಚಾರಗಳಿವೆ.

ಲೇಖನ – ಕಲೆಯ ದೃಷ್ಟಿಯಿಂದಲೂ ಈ ಶಾಸನಗಳ ಮೌಲ್ಯ ಹೆಚ್ಚಿನದು. ಪರ್ಷಿಯನ್ ಶಾಸನಗಳಲ್ಲಿ ಹೆಚ್ಚಾಗಿ ನಸ್ತಾಲಿಖ್ ಲಿಪಿಯನ್ನು ಬಳಸಿದೆ. ಅದರಲ್ಲಿಯೂ ಕುರಾನಿನ ಭಾಗಗಳನ್ನು ಉದ್ಧರಿಸುವಲ್ಲಿ ಕಲಾತ್ಮಕ ಲಿಪಿಯನ್ನು ಉಪಯೋಗಿಸಿರುವುದು ಹೆಚ್ಚು. ಅನೇಕ ಕವಿಗಳು (ಫರೀದ್, ನದೀಮ್, ಮುಹಮ್ಮದ್, ಅಮೀನ್, ಅಬ್ದುಲ್, ಖಾಸಿಮ್, ಆಬಿದ್, ಮೊಹಿಯುದ್ದೀನ್, ಮೀರ್ ಹುಸೇನ್ ಅಲ್ಲಿ ಗುಲಾಮ್ ಹುಸೇನ್, ಷಹೀರ್ ಮೊದಲಾದವರು) ಮತ್ತು ಸುಂದರ ಲಿಪಿಕಾರರು (ಮಹಮದ್ ಬಿನ್ ದಿಯಾ, ಮಿರಾಕ್ ಹಿರೆವೀ, ಖಾಜಿ ನಿಜಾಮ್ ದವ್ವಾನೀ, ಹಾಫೀಜ್ ನಿಜಾಮುದ್ದೀನ್, ಹಿದಾಯತುಲ್ಲಾಹ್, ಕರೀಮುದ್ದೀನ್ ಅಲಿ, ಅಬ್ದುಲ್ ಅಜೀಜ್ ಮೊದಲಾದವರು) ತಿಳಿದಿರುವುದು ಈ ಶಾಸನಗಳಿಂದಲೇ.

ಬೀದರ್, ಬಿಜಾಪುರ, ರಾಯಚೂರು, ಗುಲ್ಬರ್ಗ ಮತ್ತು ಇತರ ಸ್ಥಳಗಳಲ್ಲಿ ಬಳಕೆಯಲ್ಲಿದ್ದ ಷುಹುರ್ ಮತ್ತು ಹಿಜರಿ ಶಕೆಗಳ ವಿಚಾರ ಈ ಶಾಸನಗಳಿಂದ ತಿಳಿದಿದೆ. ಟಿಪ್ಪುಸುಲ್ತಾನ್ ಬಳಕೆಗೆ ತಂದ ಮೌಲೂದಿ ಶಕೆ ಅವನ ಕೆಲವು ಶಾಸನಗಳಲ್ಲಿದೆ. ಕೋಟೆಗಳನ್ನೂ ಮಂದಿರಗಳನ್ನೂ ಮತ್ತು ಇತರ ಶುಭಕಾರ್ಯಗಳನ್ನು ಮಾಡಬೇಕಾದರೆ ಜನತೆ ಜ್ಯೋತಿಷ್ಯ ಶಾಸ್ತ್ರಕ್ಕೆ ಕೊಡುತ್ತಿದ್ದ ಮಹತ್ತ್ವವನ್ನು ಇನ್ನೂ ಕೆಲವು ಶಾಸನಗಳಲ್ಲಿ ಕಾಣುತ್ತೇವೆ.

ಅನೇಕ ಮಹಮ್ಮದೀಯ ಕಟ್ಟಡಗಳ ಅವಶೇಷಗಳನ್ನು ಗುರುತಿಸುವ ಕೆಲಸ, ಇಲ್ಲವೆ ಅವುಗಳನ್ನು ಜೀರ್ಣೋದ್ಧಾರ ಮಾಡಿದವರ ಬಗೆಗೆ, ಅವುಗಳ ಕಾಲ ಮುಂತಾದ ವಿಷಯಗಳು ಈ ಶಾಸನಗಳಿಂದ ತಿಳಿದಿದೆ. ಮಹಮ್ಮದೀಯ ವಾಸ್ತುಶಿಲ್ಪದ ಅಧ್ಯಯನದ ದೃಷ್ಟಿಯಿಂದ ಈ ಶಾಸನಗಳ ಮೌಲ್ಯ ಹೆಚ್ಚಿನದು. ಇದು ಬೆಳೆದು ಬಂದ ರೀತಿ, ಬೆಳೆಯಲು ಪ್ರೋತ್ಸಾಹಿಸಿದ ಅರಸರ ವಿಚಾರ, ಕಾಲಕಾಲಕ್ಕೆ ಬಂದ ವಿವಿಧ ಶೈಲಿಗಳ ಅಧ್ಯಯನ ಇತ್ಯಾದಿ ವಿಷಯಗಳ ದೃಷ್ಟಿಯಿಂದ ಈ ಶಾಸನಗಳು ತುಂಬಾ ಉಪಯುಕ್ತವಾಗಿವೆ. ಬೆಂಗಳೂರಿನ ಕೋಟೆಯಲ್ಲಿರುವ ಟಿಪ್ಪುಸುಲ್ತಾನನ ಅರಮನೆಗೆ ಪರೂಕ್ ಮಹಲ್ ಎಂಬ ಹೆಸರಿದ್ದಿತೆಂದು ತಿಳಿಯುವುದೇ ಅವನ ಶಾಸನದಿಂದ.

ಮಸೀದಿ, ದರ್ಗಾ, ಗೋರಿ, ಈದ್‌ಗಾ ಮುಂತಾದ ಧಾರ್ಮಿಕ ಕಟ್ಟಡಗಳ ಮೇಲೆ ಕಂಡುಬರುವ ಶಾಸನಗಳಲ್ಲಿ ಕುರಾನಿನ ಪದ್ಯಗಳೇ ಹೆಚ್ಚು. ಇಂತಹ ಅನೇಕ ಶಾಸನಗಳಲ್ಲಿ ಅಲ್ಲಾಹ್‌ನ (ದೇವರ) ಮತ್ತು ಇಸ್ಲಾಂಧರ್ಮ ಸ್ಥಾಪಕ ಮಹಮ್ಮದ್ ಪೈಗಂಬರ್‌ನ ವಿವಿಧ ಹೆಸರುಗಳು ಇವೆ. ಇವು ಧಾರ್ಮಿಕ ಇತಿಹಾಸ ರಚನೆಯಲ್ಲಿ ತುಂಬಾ ಉಪಯುಕ್ತವಾಗಿವೆ.

(ಕೆ.ಎಂ.ಎಸ್.)

**ಭಾರತೀಯ ಸಂಖ್ಯೆಗಳು:** ಸಂಖ್ಯೆಗಳನ್ನು ಅಕ್ಷರಗಳಲ್ಲಿ ನಮೂದಿಸುವ ಕಲ್ಪನೆ ನಾಗರಿಕತೆಯ ಉಗಮದಷ್ಟೇ ಪುರಾತನ. ಎಣಿಕೆ ಅಥವಾ ಲೆಕ್ಕದ ಕಲೆ ತಿಳಿದ ಮೇಲೆ ಅದನ್ನು ಸಂಖ್ಯಾರೂಪದಲ್ಲಿ ನಿರೂಪಿಸುವ ಪ್ರಯತ್ನ ಪ್ರಾರಂಭವಾಯಿತು. ಪ್ರ.ಶ.ಪೂ. 3400 ಈಜಿಪ್ಟಿನ ಮೊದಲ ಸಾಮ್ರಾಜ್ಯದ ಕಾಲದಲ್ಲಿ ಪ್ರ.ಶ.ಪೂ.3000ದಲ್ಲಿ ಮೆಸಪೊಟೇಮಿಯದಲ್ಲಿ ಕೈ, ಬೆರಳುಗಳು ಸಹಜ ಸುಲಭ ಲೆಕ್ಕ ಮಾಧ್ಯಮವಾಗಿದ್ದರಿಂದ ಸಂಖ್ಯೆಗಳನ್ನು ನೇರ ಗೆರೆಗಳಿಂದ ನಿರೂಪಿಸಲಾಗುತ್ತಿತ್ತು. ಭಾರತೀಯ ಸಂಖ್ಯಾವಾಚಕಗಳು ಋಗ್ವೇದದಷ್ಟೇ ಪ್ರಾಚೀನ.

ತಿಸ್ರೋ ದ್ಯಾವಃ : ಸವಿತುರ್ದ್ವಾ ಉಪಸ್ಥಂ
ಏಕಾ ಯಮಸ್ಯ ಭುವನೇ ವಿರಷತ್

(ಋ 1.3, 5.6)

ಮೂರು ಲೋಕ/ವಲಯಗಳಲ್ಲಿ ಎರಡು ಸವಿತೃವಿನ ಸಮೀಪದಲ್ಲಿದ್ದರೆ ಮತ್ತೊಂದು ಮನುಷ್ಯನನ್ನು ಯಮಲೋಕಕ್ಕೆ ತಲುಪಿಸುತ್ತದೆ.

ಅಷ್ಟೌ ವ್ಯಾಖ್ಯಾತ್ ಕಕುಭಃ ಪೃಥಿವ್ಯಾಸ್ತ್ರಿ
ಧನ್ವಾ ಯೋಜನಾ ಸಪ್ತ ಸಿಂಧು

(ಋ 1.3, 5.8)

ಎಂಟು ಶಿಖರಗಳನ್ನೂ ಮೂರು ಲೋಕಗಳನ್ನೂ ಏಳು ಸಮುದ್ರಗಳನ್ನೂ ಅವನು ಪರೀಕ್ಷಿಸಿರುವನು.

ಸಹಸ್ರಶೀರ್ಷ ಪುರುಷಃ : ಸಹಸ್ರಾಕ್ಷಃ
ಸಹಸ್ರ ಪಾತ್ ಸ ಭೂಮಿಮ್ ವಿಶ್ವತೋ
ವೃತ್ವಾತ್ಯಾತಿಷ್ಠ ದಶಾಂಗುಲಂ (ಋ x.9)

ಸಹಸ್ರ ಶಿರ, ಸಹಸ್ರ ಚಕ್ಷು, ಸಹಸ್ರ ಪಾದಗಳಿರುವ ಪುರುಷನು ಭೂಮಿಯನ್ನೂ ಅದರಾಚೆಯ ಹತ್ತು ಅಂಗುಲಗಳಷ್ಟು ಜಾಗವನ್ನೂ ಆವರಿಸಿರುವನು. ಯಜುರ್ವೇದ ಸಂಹಿತೆಯಲ್ಲಿ ಈ ಕೆಳಗಿನ ಸಂಖ್ಯೆಗಳ ಪಟ್ಟಿಯಿದೆ: ಏಕ, ದಶ, ಶತ, ಸಹಸ್ರ, ಅಯುತ, ನಿಯುತ, ಪ್ರಯುತ, ಅರ್ಬುದ, ನ್ಯರ್ಬುದ, ಸಮುದ್ರ, ಮಧ್ಯ, ಅಂತ, ಪರಾರ್ಧ. ಇದೇ ಪಟ್ಟಿ ತೈತ್ತರೀಯ ಸಂಹಿತೆ ಮತ್ತು ಕಾಠಕ ಸಂಹಿತೆಯಲ್ಲೂ ಇದೆ. ಲಲಿತವಿಸ್ತರದಲ್ಲಿ ಅರ್ಜುನ ಮತ್ತು ರಾಜಕುಮಾರ ಗೌತಮನ ಸಂಭಾಷಣೆಯಲ್ಲಿ ಕೋಟಿ ಎಂಬ ಪದ ಪ್ರಯೋಗವಾಗಿದೆ. ಸಂಖ್ಯಾವಾಚಕ ಪದಗಳಿಗೆ ಋಗ್ವೇದದಲ್ಲಿಯೇ ಆಧಾರವಿದ್ದರೂ ಅವು ಲಿಖಿತರೂಪದಲ್ಲಿ ಮೊದಲಬಾರಿಗೆ ಕಂಡುಬರುವುದು ಅಶೋಕನ ಶಾಸನಗಳಲ್ಲಿ. ಭಾರತದಲ್ಲಿ ಲಿಪಿ ಹಾಗೂ ಸಂಖ್ಯಾ ಪದ್ಧತಿ ಏಕಕಾಲಕ್ಕೆ ಪ್ರ.ಶ.ಪೂ.320ರ ಹೊತ್ತಿಗೆ ಕಂಡುಬರುತ್ತದೆ.

ಥಾಮಸ್, ಭಾವುದಿಜಿ, ಬ್ಯೂಲರ್, ಭಗವಾನ್‌ಲಾಲ್ ಇಂದ್ರಜಿ ಮೊದಲಾದ ವಿದ್ವಾಂಸರು ಸಂಖ್ಯೆಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ವಿವಿಧ ರಾಜವಂಶಗಳ ಶಾಸನಗಳಲ್ಲಿ ಬಳಸಲಾಗಿರುವ ಸಂಖ್ಯಾ ಸಂಕೇತ ಮತ್ತು ವಾಚಕ ಪದಗಳಲ್ಲಿ ಸಮರೂಪತೆ ಇಲ್ಲ. ಎಂಬುದು ಭಗವಾನ್‌ಲಾಲ್ ಇಂದ್ರಜಿಯವರ ಅಭಿಪ್ರಾಯವಾಗಿದೆ 1, 2, 3ರನ್ನು ಹೊರತುಪಡಿಸಿ ಉಳಿದ ಸಂಖ್ಯೆಗಳನ್ನು ಒಂದು ಅಥವಾ ಹಲವಾರು ಸಂಕೇತಗಳ ಮೂಲಕ ಸೂಚಿಸುವ ಪದ್ಧತಿ ಹಿಂದೆ ಇತ್ತು. ಬ್ರಾಹ್ಮಿಯಲ್ಲಿಯೂ ಸಂಖ್ಯಾ ಸಂಕೇತಗಳು ಲಿಪಿಯಿಂದಲೇ ವ್ಯುತ್ಪತ್ತಿಯಾದುವು. ಈ ಪದ್ಧತಿಗೆ ಸಮಕಾಲೀನ ಉದಾಹರಣೆಯಿಲ್ಲ ಎಂದು ಇವರು ತಿಳಿಸುತ್ತಾರೆ ತಮ್ಮ ಕೃತಿ ಇಂಡಿಯನ್ ಪೇಲಿಯೋಗ್ರಫಿಯಲ್ಲಿ ಇವರು ಸಂಖ್ಯಾ ಸಂಕೇತಗಳ ಪಟ್ಟಿಯನ್ನು ಕೊಟ್ಟು ಈ ಸಂಕೇತಗಳನ್ನು ಉಚ್ಚರಿಸುವ ರೀತಿಯನ್ನು ವಿವರಿಸಿದ್ದಾರೆ. 1, 2, 3 ಸಂಖ್ಯೆಗಳು ಸರಳ ಅಡ್ಡಗೆರೆಗಳಿಂದ ಸೂಚಿಸಲ್ಪಡುತ್ತವೆ. 1:–; 2 : =, 3☰ ; ಇವನ್ನು ಅನುಕ್ರಮವಾಗಿಯು (ಹ್ರಸ್ವ), ಯೂ(ದೀರ್ಘ), (ಪ್ಲುತ) ಎಂದು ಉಚ್ಚರಿಸಲಾಗುತ್ತಿತ್ತು. ಶತಕ ಹಾಗೂ ಸಹಸ್ರ ಮೊತ್ತದ ಸಂಖ್ಯೆಗಳಿಗೆ ಅಡ್ಡಗೆರೆಗಳನ್ನು ಜೋಡಿಸಿ ಹೀಗೆ ಬರೆಯಲಾಗುತ್ತಿತ್ತು. ಉದಾ: 100=n, 200=n- , 300= n=, 1000= P, 2000= q-, 3000= q=. ಕೆಳಗಿನ ಬ್ರಾಹ್ಮಿ ಅಕ್ಷರಗಳಿಗೆ ಸಂಖ್ಯಾರ್ಥಗಳು ಇಂತಿವೆ: ಕ=4, ತ್ರ=5, ಗ್ರ=7, ಹ್ರ=8, ಓ=9, ತು=10, ಥ=20, ಲ=30, ಪ್ಟ=40, ಅನುನಾಸಿಕ=50, ಪು=60, ಪೂ=70, ಉಪಧ್ಮಾನೀಯ=80, ಜಿಹ್ವಾಮೂಲೀಯ=90, ಸು=100.

ಉತ್ತರ ಸೆಮಿಟಿಕ್ ಲಿಪಿಯಿಂದ ಜನ್ಯವಾದ ಬ್ರಾಹ್ಮಿ ವರ್ಣಮಾಲೆಯನ್ನು ಸಂಸ್ಕೃತ ಭಾಷೆಗೆ ಅನುಗುಣವಾಗುಂತೆ ವಿದ್ವಾಂಸರು ಮಾರ್ಪಡಿಸಿಕೊಂಡರು ಎಂಬುದು ಬ್ಯೂಲರ್ ಅಭಿಪ್ರಾಯ. ಬ್ರಾಹ್ಮಿ ಸಂಖ್ಯೆಗಳೂ ವಿದೇಶಿ ಮೂಲದವು ಎಂಬ ಅಭಿಪ್ರಾಯ ಕೆಲವು ವಿದ್ವಾಂಸರದಾಗಿದೆ.

ತನ್ನ ಕೃತಿ ದಶಗೀತಿದಲ್ಲಿ (5ನೆಯ ಶತಮಾನ) ಆರ್ಯಭಟ ಖಗೋಳಶಾಸ್ತ್ರ ವಿವರಣೆಯಲ್ಲಿ ಇದೇ ಸಂಖ್ಯಾ ಪದ್ಧತಿಯನ್ನು ಬಳಸಿರುವನು. ಇದನ್ನು ಕಟಪಯಾದಿ, ದಾಕ್ಷಿಣಾತ್ಯ ಸಂಖ್ಯಾ ಸಂಕೇತಗಳು ಪಶ್ಚಿಮ ಭಾರತದ ನಾಣೆಘಾಟ್ ಶಾಸನದಲ್ಲಿ ಪ್ರಥಮ ಬಾರಿಗೆ ಕಂಡುಬರುತ್ತವೆ. ನಾಣ್ಯದ (ಕಾರ್ಷಪಣ) ರೂಪದಲ್ಲಿ ಸಾತವಾಹನ ರಾಜ ಸಿರಿ ಸಾತಕರ್ಣಿ ಹಾಗೂ ಅವನ ರಾಣಿ ನಾಗಣಿಕಾ ಕೊಟ್ಟ ದಾನವನ್ನು ಈ ಶಾಸನದಲ್ಲಿ ದಾಖಲಿಸಿದೆ. ಪದಗಳಲ್ಲಿ ಹಾಗೂ ಸಂಕೇತಗಳ ಮೂಲಕ ಸಂಖ್ಯೆಗಳನ್ನು ಇಲ್ಲಿ ನಮೂದಿಸಲಾಗಿದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ಸಂಖ್ಯೆಗಳು 100, 289, 400, 10,000 ಇತ್ಯಾದಿ. ಅಶೋಕನ ರೂಪನಾಥ್ ಮತ್ತು ಬ್ರಹ್ಮಗಿರಿ (ಕರ್ನಾಟಕ) ಶಿಲಾಶಾಸನಗಳಲ್ಲಿ 256 ರಾತ್ರಿಗಳ ಉಲ್ಲೇಖವಿದೆ.

**ದಶಮಾಂಶ:** ಈ ಪದ್ಧತಿಯನ್ನು ಅನ್ವೇಷಿಸಿದವರು ಭಾರತೀಯ ಗಣಿತಶಾಸ್ತ್ರಜ್ಞರು ಎಂಬುದನ್ನು ಬ್ಯೂಲರ್ ಶೂನ್ಯಬಿಂದು ಎಂಬ ಪದದ ಆಧಾರದ ಮೇಲೆ ಹೇಳುತ್ತಾನೆ. ಪ್ರಸಕ್ತ ಶಕೆಯ ಆರಂಭಕಾಲದ ಭಕ್ಷಾಲಿ ಶಾಸನದಲ್ಲಿ ದಶಮಾಂಶ ಸಂಕೇತಗಳನ್ನು ಶಾಸನದುದ್ದಕ್ಕೂ ಬಳಸಲಾಗಿದೆ. ಈ ಪದ್ಧತಿ ವರಾಹಮಿಹಿರನಿಗೂ ತಿಳಿದಿತ್ತೆಂಬುದು ಅವನು ಬಳಸುವ ಅಂಶ ಎಂಬ ಪದದಿಂದ ಖಚಿತವಾಗುತ್ತದೆ. ಶೂನ್ಯದ ಉಲ್ಲೇಖ 6ನೆಯ ಶತಮಾನದ ವಾಸವದತ್ತ ನಾಟಕದಲ್ಲಿದೆ. ನಕ್ಷತ್ರಗಳನ್ನು ಶೂನ್ಯದೊಂದಿಗೆ ನಾಟಕಕಾರ ಹೋಲಿಸುತ್ತಾನೆ. ತಾಮ್ರಪಟಗಳ ಪೈಕಿ ದಶಮಾಂಶದ ಮೊದಲ ಉದಾಹರಣೆ ಗೂರ್ಜರ ರಾಜ 3ನೆಯ ದಡ್ಡನ ಶಾಸನದಲ್ಲಿ ಕಂಡುಬರುತ್ತದೆ. n= +6=346= 595 - ಛೇದಿ ಶಕೆ.

ಸೊನ್ನೆಯ ಆವಿಷ್ಕಾರ ಮಾಡಿದವರು ಭಾರತೀಯರೆಂಬುದು ಸಾಮಾನ್ಯ ನಂಬುಗೆಯಾಗಿದೆ. 9ನೆಯ ಶತಮಾನದ ಅರಬ್ ಗಣಿತಶಾಸ್ತ್ರಜ್ಞ ಹಾಗೂ ಖಗೋಳಶಾಸ್ತ್ರಜ್ಞ ಅಲ್–ಖವಾರಿಜ್ಮಿಯ ಕೃತಿಗಳನ್ನು ಅನುವಾದಿಸಿರುವ ಕೆಲವು ಯುರೋಪಿಯನ್ನರಿಗೆ ಈ ವಿಷಯ ತಿಳಿದಿತ್ತು. ಶೂನ್ಯದ ಸಂಕೇತ 10ನೆಯ ಶತಮಾನದವರೆಗೂ ಶಾಸನಗಳಲ್ಲಿ ಕಾಣಿಸುವುದಿಲ್ಲ. ಪರಮಾರರ ರಾಜ ಸೀಯಕನ ಕಾಲದ ತಾಮ್ರಪಟ ಸೊನ್ನೆಯ ಬಳಕೆಯಿರುವ ಅತ್ಯಂತ ಪ್ರಾಚೀನ ನಿದರ್ಶನ. ದಿನಾಂಕ ಮಾಘವದಿ (ಮಾಘಮಾಸ) 30ನೆಯ ತಾರೀಖು ಬುಧವಾರ ವಿಕ್ರಮ ಸಂವತ್ಸರ 1005 (ಅಂದರೆ 31ನೆಯ ತಾರೀಖು ಜನವರಿ ಬುಧವಾರ 949) ಎಂಬ ಉಲ್ಲೇಖ ಇದರಲ್ಲಿದೆ.

ಹಸ್ತಪ್ರತಿಗಳಲ್ಲಿ ಅಕ್ಷರಗಳಲ್ಲಿ ಸಂಖ್ಯಾ ಸಂಕೇತಗಳನ್ನು ಅಕ್ಷರ ಇಲ್ಲವೇ –ನಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ. ಚಿನ್ಹೆಗಳನ್ನು ನಿರೂಪಿಸುವ ಅಕ್ಷರಗಳನ್ನು ಅಕ್ಷರಪಲ್ಲಿ ಎಂದು ಮತ್ತು ದಶಮಾಂಶ ಸಂಕೇತಗಳನ್ನು ಅಂಕಪಲ್ಲಿ ಎನ್ನುತ್ತಾರೆ. ಜೈನ ವ್ಯಾಖ್ಯಾಕಾರ ಮಲಯಗಿರಿ (12ನೆಯ ಶತಮಾನ) 4 ಎಂಬ ಚಿನ್ಹೆಯನ್ನು ಅಂಕಶಬ್ದ ಎನ್ನುತ್ತಾನೆ. ಇದು 4 – ಚತ್ವಾರಿ ಸಂಖ್ಯೆಯ ಚಿನ್ಹೆಯಾಗಿದೆ.

**ಪದ ಸಂಖ್ಯಾವಾಚಕಗಳು:** ಸಂಖ್ಯೆಗಳನ್ನು ಶಬ್ದಗಳಲ್ಲಿ ಸೂಚಿಸುವ ಪದ್ಧತಿ ಭಾರತದಲ್ಲಿದೆ. ಕಾತ್ಯಾಯನ ಮತ್ತು ಲಬ್ಯಾಯನನ ಶ್ರೌತಸೂತ್ರದಲ್ಲಿ ಇದಕ್ಕೆ ಉದಾಹರಣೆಗಳಿವೆ. ವರಾಹಮಿಹಿರನ ಪಂಚಸಿದ್ಧಾಂತಿಕದಲ್ಲೂ ಇದನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಮುಂದೆ ಸಂಖ್ಯೆಗಳನ್ನು ಸೂಚಿಸಲು ಸಮಾನಾರ್ಥಕ ಶಬ್ದಗಳನ್ನು ಉಪಯೋಗಿಸಲಾಯಿತು ಉದಾಹರಣೆಗೆ,

0=ಶೂನ್ಯ = ಆಕಾಶ; 1=ಇಂದು = ಚಂದ್ರ; 2=ಅಶ್ವಿನ್ = ಅಶ್ವಿನಿ ದೇವತೆ, ಪಕ್ಷ = ಎರಡುರೆಕ್ಕೆಗಳು, ಕರ = ಎರಡು ಕೈಗಳು; 3=ತ್ರಿಗುಣ = ವಸ್ತುವಿನ ಭೌತಿಕ ಗುಣಗಳು, ತ್ರಿನೇತ್ರ; 4=ವೇದ, ಯುಗ; 5=ಇಂದ್ರಿಯ, ಪಾಂಡವ; 6=ರಸ, ಋತು; 7=ಸ್ವರ, ಧಾತು; 8=ವಸು (ದೇವತೆ); 9=ಗ್ರಹ, ನಿಧಿ (ಕುಬೇರನ ನವವಿಧಿಗಳು); 10=ರಾವಣರ್ಷ, ಅವತಾರ (ವಿಷ್ಣುವಿನ ದಶಾವತಾರಗಳು). ನಾಣೆಘಾಟ್ (ಜುನ್ನರ್‌ನ ಪಶ್ಚಿಮಕ್ಕೆ 34 ಕಿಮೀ ದೂರದಲ್ಲಿದೆ) ಶಾಸನದಲ್ಲಿರುವ ದಾನಗಳ ಪಟ್ಟಿ ಹೀಗಿದೆ:

| **ಯಾಗ** | **ದಕ್ಷಿಣೆ** | **ಸಂಖ್ಯಾವಾಚಕ** |
|---|---|---|
| 1. ಅಗ್ನ್ಯಧೇಯ | 12 ಹಸುಗಳು | α= |
| 2. ಅನ್ವರಂಭಸೀಯ | 2 ಹಸುಗಳು | = |
| 3. ವಾಜಪೇಯ | 1700 ಹಸುಗಳು | 7 |
| | 17 ಆನೆಗಳು | α 7 |
| | 17 ರಜತ ಪಾತ್ರೆಗಳು | |
| | 289 ವಾಸೋಭಾರ | n– Φp |
| 4. ಅಂಗರಿಕ | 11,000 ಹಸುಗಳು | 7– α – |
| | 1,000 ಕುದುರೆಗಳು | |
| 5. ರಾಜಸೂಯ | 24,400 ಕಾಷ್ಮಾಪಣ | |
| 6. ಅಶ್ವಮೇಧ | 14,000 ಕಾಷ್ಮಾಪಣ | |
| 7. ಸಪ್ತದಶತಿರಾತ್ರ | 10,000 ಕಾಷ್ಮಾಪಣ | |
| 8. ಭಗಲ್ದ ಶರಾತ್ರ | 10,001 ಕಾಷ್ಮಾಪಣ | |
| 9. ಗವಾಮಯನ | 1,101 ಹಸುಗಳು | |
| | 101 ಕಾಷ್ಮಾಪಣ | |
| 10. ಅಂಗೀರಸಮಯನ | 1,101 ಹಸುಗಳು | |
| 11. ಶತತಿರಾತ್ರ | 1,100 ಹಸುಗಳು | |
| 12. ಅಚಿತೀರಸಾತಿರಾತ್ರ | 1,002 ಹಸುಗಳು | |
| 13. ಛಂದೋಪವಮಾನ ತ್ರಿರಾತ | 1,001 ಹಸುಗಳು | |
| 14. ಅಂಗೀರಸಾಮಯನ | 1,000 ಹಸುಗಳು | (6 ವರ್ಷಗಳಿಗೆ) |
| 15. ದಾಶರಾತ್ರ | 1,001 ಹಸುಗಳು | |

ನಾಣೆಘಾಟ್ ಎಂದರೆ ಹಣ ವಿನಿಮಯದ ಗುಡ್ಡಗಾಡಿನ ದಾರಿ ಎಂದರ್ಥ. ಮಾರ್ಗ ತೆರಿಗೆ ವಸೂಲಿಗೆ ಬಳಸಲಾಗುತ್ತಿದ್ದ ಒಂದು ದೊಡ್ಡ ಕಲ್ಲಿನ ಮಡಕೆಯನ್ನು ಇಲ್ಲಿ ಈಗಲೂ ಸಂರಕ್ಷಿಸಿಡಲಾಗಿದೆ. ಆಮದು ಮತ್ತು ರಫ್ತಾಗುತ್ತಿದ್ದ ಪದಾರ್ಥಗಳ ಒಂದು ಪಟ್ಟಿಯನ್ನು ಪೆರಿಪ್ಲಸ್ ನೀಡಿದ್ದಾನೆ. ಬೆಳ್ಳಿಯನ್ನು ಆಮದು ಮಾಡಿಕೊಳ್ಳುತ್ತಿದ್ದ ಬಗೆಗೂ ಆತ ಮಾಹಿತಿ ನೀಡಿದ್ದಾನೆ. ಜುನ್ನರ್ ಶಾಸನದಲ್ಲಿ ನಾಣ್ಯಗಳನ್ನು ಕರಗಿಸುತ್ತಿದ್ದ ವರ್ತಕ/ಕಾರ್ಮಿಕರ ಶ್ರೇಣಿಯ ಉಲ್ಲೇಖವಿದೆ. ಅದೇ ಶಾಸನದಲ್ಲಿ ಸಂಖ್ಯೆ 3ನ್ನು ಪವುಣ ಎಂಬ ಸಮಾನ ಪದದಲ್ಲಿ ಸೂಚಿಸಲಾಗಿದೆ. (ಎಸ್.)

**ಭಾಸ:** ಪ್ರಸಿದ್ಧ ಸಂಸ್ಕೃತ ನಾಟಕಕಾರ. ಸಂಸ್ಕೃತ ಸಾಹಿತ್ಯವನ್ನು ತನ್ನ ನಾಟಕಗಳಿಂದ ಶ್ರೀಮಂತಗೊಳಿಸಿ ಕಾಳಿದಾಸ, ಬಾಣ ಮುಂತಾದ ಮಹಾಕವಿಗಳಿಂದಲೇ ಗೌರವ ಗಳಿಸಿದವನು.

ಭಾಸನ ಕಾಲದೇಶ ಕೃತಿಗಳ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಕಾಲದ ಚರ್ಚೆಯಂತೂ ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರ.ಶ.4ನೆಯ ಶತಮಾನದವರೆಗೆ ಚಾಚಿಕೊಂಡಿದೆ. ಈತ ವ್ಯಾಸ ವಾಲ್ಮೀಕಿಗಳಿಗಿಂತ ಈಚಿನವನೆಂಬುದರಲ್ಲೂ ಕಾಳಿದಾಸ ಬಾಣರಿಗಿಂತ ಹಿಂದಿನವನೆಂಬುದರಲ್ಲೂ ಸಂದೇಹವಿಲ್ಲ. ಬಾಣನ ಕಾಲ 6ನೆಯ ಶತಮಾನವೆಂಬುದರಲ್ಲಿ ವಿವಾದವಿಲ್ಲವಾದ್ದರಿಂದ ಭಾಸ ಅದಕ್ಕೆ ಹಿಂದಿನವನೆಂಬುದು ಸ್ಪಷ್ಟ. ಕಾಳಿದಾಸ ಪ್ರ.ಶ.ಪೂ. 1ನೆಯ ಶತಮಾನದವನೆಂದು ಒಪ್ಪುವುದಾದರೆ ಭಾಸ ಪ್ರ.ಶ.ಪೂ. 3–4ನೆಯ ಶತಮಾನ ದವನಾಗಿರಬೇಕು. ಕೀತ್‌ರವರ ಅಭಿಪ್ರಾಯದಲ್ಲಿ ಕಾಳಿದಾಸ 4ನೆಯ ಶತಮಾನದವ; ಭಾಸ 3ನೆಯ ಶತಮಾನದವ. ಭಾಸ ಉತ್ತರ ಭಾರತದವನೇ, ದಕ್ಷಿಣ ಭಾರತದವನೇ ಎಂಬುದರಲ್ಲೂ ಸಂದೇಹವಿದೆ. ಇವನು ತನ್ನ ನಾಟಕಗಳಲ್ಲಿ ಪ್ರಯೋಗಿಸಿರುವ ಸಂಬಂಧ ಮುಂತಾದ ಪದಗಳ ಮತ್ತು ವ್ಯವಹಾರಗಳ ಕಾರಣದಿಂದಲೂ ಇವನ ನಾಟಕಗಳು ಮೊದಮೊದಲು ಕೇರಳದಲ್ಲಿ ದೊರೆತುದರಿಂದಲೂ ಇವನು ಕೇರಳ ದೇಶದವನೆಂದೇ ವಾದಿಸುವವರಿದ್ದಾರೆ. ಇವನ ನಾಟಕಗಳಲ್ಲಿ ಬರುವ ನದಿಗಳೂ ಪಟ್ಟಣಗಳೂ ಉತ್ತರ ಭಾರತದವೇ ಆದುದರಿಂದಲೂ ಇವನು ದಕ್ಷಿಣ ಭಾರತದವನಲ್ಲವೇ ಅಲ್ಲ ಎಂದು ನಂಬಿರುವವರೂ ಇದ್ದಾರೆ.

ತಿರುವಾಂಕೂರಿನ ಪಂಡಿತ ಗಣಪತಿಶಾಸ್ತ್ರಿಗಳು ಪ್ರಾಚೀನ ಗ್ರಂಥಗಳ ಅನ್ವೇಷಣೆಯಲ್ಲಿದ್ದಾಗ ಅವರಿಗೆ 1909ರಲ್ಲಿ ಪ್ರತಿಜ್ಞಾ, ಸ್ವಪ್ನ, ಅವಿಮಾರಕ, ಮಧ್ಯಮ ವ್ಯಾಯೋಗ, ಪಂಚರಾತ್ರ, ದೂತಘಟೋತ್ಕಚ, ಕರ್ಣಭಾರ, ಊರುಭಂಗ, ಬಾಲಚರಿತ, ಚಾರುದತ್ತ ಎಂಬ ಹತ್ತು ಸಂಸ್ಕೃತ ರೂಪಕಗಳ ಗ್ರಂಥಾಕ್ಷರದ ಒಂದು ತಾಳಪತ್ರ ಪ್ರತಿಯೂ 1910ರಲ್ಲಿ ಪ್ರತಿಮಾ, ಅಭಿಷೇಕ ಮತ್ತು ದೂತವಾಕ್ಯ ಎಂಬ ಮೂರು ರೂಪಕಗಳ ಮತ್ತೊಂದು ಪ್ರತಿಯೂ ದೊರೆತವು. ಈ ಹದಿಮೂರು ರೂಪಕಗಳಲ್ಲೂ ಆರಂಭದಲ್ಲೇ ನಾಂದ್ಯಂತೇತತಃ ಪ್ರವಿಶತಿ ಸೂತ್ರಧರಃ ಎಂಬ ರಂಗ ಸೂಚನೆ; ಆಮೇಲೆ ಸೂತ್ರಧಾರನಿಂದ ಕಾವ್ಯವಸ್ತು ಸೂಚಕವಾದ (ಮುದ್ರಾಲಂಕಾರವುಳ್ಳ) ಮಂಗಳ ಶ್ಲೋಕ ಪಠಣ; ನಾಟಕದ ಅಥವಾ ನಾಟಕಕರ್ತೃವಿನ ಹೆಸರಿನ ಉಲ್ಲೇಖವೇ ಇಲ್ಲದ ಪುಟ್ಟ ಸ್ಥಾಪನೆ; ಒಂದು ನಾಟಕದಲ್ಲಿ ಪ್ರಯೋಗಿಸಿದ ವಾಕ್ಯ, ಪದಸಮೂಹ, ಶ್ಲೋಕ, ಶ್ಲೋಕಾರ್ಥಗಳು ಉಳಿದ ನಾಟಕಗಳಲ್ಲೂ ಕಂಡುಬರುವುದು; ಎಲ್ಲದರಲ್ಲಿಯೂ ಒಂದೇ ರೀತಿಯ ಭರತವಾಕ್ಯ ಇತ್ಯಾದಿ–ಈ ವಿವಿಧ ಸಾಮ್ಯಗಳ ಆಧಾರದ ಮೇಲೆ ಶಾಸ್ತ್ರಿಗಳು ಅಜ್ಞಾತಕರ್ತೃಕಗಳಾಗಿದ್ದ ಈ ಎಲ್ಲ ನಾಟಕಗಳೂ ಏಕಕರ್ತೃಕವೆಂದು ಸಹಜವಾಗಿಯೇ ನಿರ್ಧರಿಸಿದರು. ಈ ಹದಿಮೂರು ನಾಟಕಗಳಲ್ಲೂ ಬಾಣ ಹೇಳಿರುವ ಭಾಸನಾಟಕ ಸ್ವರೂಪಗಳ ಸ್ಪಷ್ಟವಾದ ಹೊಂದಾಣಿಕೆಯಿತ್ತು. ನಾಟಕ ಚಕ್ರವೆಂದೇ ಕರೆಯ ಬಹುದಾದ ಈ 13 ನಾಟಕಗಳಲ್ಲಿ ಒಂದಾಗಿದ್ದ ಸ್ವಪ್ನನಾಟಕ ವಾಸವದತ್ತೆಯ ವಿಷಯವಾಗಿದ್ದು ದಲ್ಲದೆ ಸರ್ವೋತ್ಕೃಷ್ಟವಾಗಿಯೂ ಇದ್ದು ರಾಜಶೇಖರ ಕವಿಯ ಮಾತುಗಳನ್ನು ಅದಕ್ಕೆ ಅನ್ವಯಿಸಬಹುದಾಗಿತ್ತು. ಆದ್ದರಿಂದ ಶಾಸ್ತ್ರಿಗಳು ಈ ಸ್ವಪ್ನನಾಟಕವನ್ನು ಭಾಸರಚಿತ ಸ್ವಪ್ನವಾಸವ ದತ್ತ ನಾಟಕವೆಂದೇ ನಿರ್ಣಯಿಸಿ, ಏಕಕರ್ತೃಕಗಳೆಂದು ಸಿದ್ಧವಾದ ಈ 13 ಅಜ್ಞಾತಕರ್ತೃ ನಾಟಕಗಳಲ್ಲಿ ಒಂದನ್ನು ರಚಿಸಿದವ ಭಾಸ ಎಂದು ಖಚಿತವಾದ ಮೇಲೆ ಅವೆಲ್ಲವೂ ಭಾಸರಚಿತವೇ ಎಂದು ಪ್ರತಿಪಾದಿಸಿದರು. ಆದರೆ ಈ ನಾಟಕಗಳ ಯಾವ ಹಸ್ತಪ್ರತಿಯಲ್ಲಾಗಲಿ ಗ್ರಂಥಕಾರನ ಹೆಸರಿರಲಿಲ್ಲ. (ಕೆ.ಕೆ.;ಎಸ್.ಆರ್.ಎಎನ್.)

**ಭಾಸ್ಕರಾಚಾರ್ಯ: 1114–50.** 12ನೆಯ ಶತಮಾನದಲ್ಲಿದ್ದ ಪ್ರಸಿದ್ಧ ಗಣಿತಶಾಸ್ತ್ರಜ್ಞ, ಖಗೋಳವಿಜ್ಞಾನಿ. ಸಹ್ಯಾದ್ರಿ ಪರ್ವತಶ್ರೇಣಿಯ ಸನಿಹದ ಬಿಜ್ಜಡಬಿಡದಲ್ಲಿ (ಈಗಿನ ಬಿಜಾಪುರ) 1114ರಲ್ಲಿ ಜನಿಸಿದ. ಕೌಂಡಿಣ್ಯ ಗೋತ್ರದ ಮಹೇಶ್ವರೋಪಾಧ್ಯಾಯ ಇವನ ಪಿತ ಹಾಗೂ ವಿದ್ಯಾಗುರು. ಇವರು ತಮ್ಮ 36 ನೆಯ ವಯಸ್ಸಿನಲ್ಲಿ ಪ್ರಸಿದ್ಧ ಗ್ರಂಥವಾದ ಸಿದ್ಧಾಂತಶಿರೋಮಣಿಯನ್ನು ರಚಿಸಿದ. ಕರ್ಣಾಟಕ ಕುತೂಹಲ ಎಂಬ ಗ್ರಂಥವೂ ಇವರ ರಚನೆಯೇ.

ಸಿದ್ಧಾಂತಶಿರೋಮಣಿ ಸಂಸ್ಕೃತದಲ್ಲಿದೆ. ಇದು ಲೀಲಾವತಿ, ಬೀಜಗಣಿತ, ಗ್ರಹಗಣಿತ ಮತ್ತು ಗೋಳಾಧ್ಯಾಯ ಎಂಬ ನಾಲ್ಕು ಭಾಗಗಳನ್ನು ಹೊಂದಿದೆ. ಇದರಲ್ಲಿ ಪ್ರಸಿದ್ಧವಾದ ಭಾಗ ಲೀಲಾವತಿ. ಲೀಲಾವತಿ ಭಾಸ್ಕರಾಚಾರ್ಯನ ಮುದ್ದುಮಗಳು. ಮದುವೆಯಾದ ವರ್ಷದಲ್ಲಿ ವಿಧವೆಯಾದ್ದರಿಂದ ಅವಳ ಕೋಮಲ ಮನಸ್ಸನ್ನು ಮುದಗೊಳಿಸಲು, ಆಗಿನ ಪಾಠಕ್ರಮಗಳನ್ನನುಸರಿಸಿ, ಮನೋರಂಜಕ ರೀತಿಯಲ್ಲಿ ಪ್ರತಿಸೂತ್ರ ಹಾಗೂ ಪ್ರಶ್ನೆಯ ಮೂಲಕ ಕಿವಿಗೆ ಇಂಪಾಗುವಂತೆ ರಮಣೀಯ ವೃತ್ತಗಳಲ್ಲಿ ಮಗಳಿಗೆ ಬೋಧಿಸಲು ಇದನ್ನು ರಚಿಸಿ, ಆ ಗ್ರಂಥಕ್ಕೆ ಮಗಳ ಹೆಸರನ್ನು (ಲೀಲಾವತಿ) ಇಟ್ಟರೆಂದು ಪ್ರತೀತಿ. ಲೀಲಾವತಿ ಅಂಕಗಣಿತದ ವಿಷಯವನ್ನು ಕುರಿತಿದ್ದು ಬ್ರಹ್ಮಗುಪ್ತ ಮತ್ತು ಶ್ರೀಧರ–ಇವರ ಕೃತಿಗಳ ಆಧಾರದ ಮೇಲೆ ರಚಿತವಾಗಿದೆ. ಇಲ್ಲಿನ ಕೆಲವು ಲೆಕ್ಕಗಳು ಬೀಜಗಣಿತ ಮತ್ತು ರೇಖಾಗಣಿತಗಳ ಸೂತ್ರಗಳಲ್ಲಿ ಉಲ್ಲೇಖಿತವಾಗಿವೆ. ಬೀಜಗಣಿತದ ಭಾಗ, ಬೀಜಗಣಿತದಲ್ಲಿ ಒಂದು ಸಮಗ್ರವಾದ ಮತ್ತು ಕ್ರಮಬದ್ಧವಾದ ಕೃತಿಯಾಗಿದೆ. ಸಿದ್ಧಾಂತ ಶಿರೋಮಣಿಯ ಉಳಿದೆರಡು ಭಾಗಗಳು ಖಗೋಳವಿಜ್ಞಾನದ ಅಮೂಲ್ಯ ಬರೆಹಗಳಾಗಿವೆ. ಆಗಿನ ಕಾಲದ

ಪದ್ಧತಿಯಂತೆ ಕ್ಷೇತ್ರಗಣಿತವನ್ನು (ಮೆನ್ಸುರೇಶನ್), ಪೈಥಾಗೊರಸ್‌ನ ಪ್ರಮೇಯವಾದ ಮೇಲೆ ನಿಲ್ಲುವ ರೇಖಾಗಣಿತವನ್ನು, ಕುಟ್ಟಕವೆಂಬ ಬೀಜಗಣಿತವನ್ನು ಈ ಗ್ರಂಥದಲ್ಲಿ ಸೇರಿಸಿದ್ದಾರೆ.

ಭಾರತದ ಗಣಿತವಿಜ್ಞಾನ ಮತ್ತು ಖಗೋಳ ವಿಜ್ಞಾನಗಳ ಚರಿತ್ರೆಯಲ್ಲಿ ಭಾಸ್ಕರಾಚಾರ್ಯ ಮಹತ್ತರವಾದ ಸ್ಥಾನ ಹೊಂದಿದ್ದಾರೆ. ಕನ್ನಡ ನಾಡಿನವರೂ ಪ್ರಪಂಚ ವಿಖ್ಯಾತರೂ ಆದ ಇವರ ಕೃತಿ ಪ್ರಕೃತ ಭಾರತೀಯ ಖಗೋಳವಿಜ್ಞಾನ ಸಂಪ್ರದಾಯಕ್ಕೆ ಮುಖ್ಯ ಆಧಾರವಾಗಿದೆ. ನಮ್ಮ ಪಂಚಾಂಗಗಳೂ ಸೂರ್ಯ ಚಂದ್ರಗ್ರಹಣಗಳೂ ಅವರು ಅಂದು ವಿಧಿಸಿದ ಆಧಾರದ ಮೇಲೆ ನಿರ್ಣಯಿಸಲ್ಪಡುತ್ತಿವೆ. ಮೂಲ ಗ್ರಂಥದ ವ್ಯಾಖ್ಯಾನವಾದ ವಾಸನಾಭಾಷ್ಯವೆಂಬ ಗ್ರಂಥ ರಚಿಸಿದ್ದಾರೆ. ಭಾರತೀಯ ಗಣಿತಶಾಸ್ತ್ರ ಹಾಗೂ ಖಗೋಳವಿಜ್ಞಾನಗಳಿಗೆ ಭಾಸ್ಕರಾಚಾರ್ಯರ ಅನಂತರ ವಿದ್ವಾಂಸರ ಕೊಡುಗೆ ಅತ್ಯಲ್ಪ.

ಯಾದವರಾಜ ಸಿಂಘಣನ ಕಾಲದಲ್ಲಿ ಒಬ್ಬ ಜ್ಯೋತಿರ್ವಿಜ್ಞಾನಿ ಭಾಸ್ಕರಾಚಾರ್ಯ ಗಣಿತದ ಅಧ್ಯಯನಕ್ಕೆ 1207ರಲ್ಲಿ ಒಂದು ಮಠವನ್ನು ಸ್ಥಾಪಿಸಿದ. (ಜಿ.ಡಿ.)

**ಭಿರಡಾಣ:** ಹರಿಯಾಣ ರಾಜ್ಯದ ಫತೇಹಬಾದ್ ಜಿಲ್ಲೆಯಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಈ ಊರಿನ ಉತ್ತರ ಮೇರೆಯಲ್ಲಿ ಬತ್ತಿಹೋದ ಸರಸ್ವತಿ ನದಿಯ ಎಡದಂಡೆಯ ಮೇಲೆ ಈ ಸಂಸ್ಕೃತಿಯ ದಿಬ್ಬವಿದೆ. ಇದು ಸು. 5.5 ಮೀ ಎತ್ತರವಿದೆ. ಈ ನೆಲೆ 1982ರಲ್ಲಿ ಪತ್ತೆಯಾಯಿತು. ಅದೇ ವರ್ಷ ಹರಿಯಾಣ ಸರ್ಕಾರದ ಪುರಾತತ್ತ್ವ ಹಾಗೂ ವಸ್ತುಸಂಗ್ರಹಾಲಯ ಇದನ್ನು ಸಂರಕ್ಷಿತ ನೆಲೆಯೆಂದು ಘೋಷಿಸಿತು.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎಲ್.ಎಸ್. ರಾವ್ ಇಲ್ಲಿ ಮೂರು ವರ್ಷ (2003–06) ಉತ್ಖನನ ನಡೆಸಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಥಮ ಬಾರಿಗೆ ಹರಪ್ಪ ಸಂಸ್ಕೃತಿಯ ನಾಲ್ಕು ಹಂತಗಳನ್ನು ಬೆಳಕಿಗೆ ತಂದಿದ್ದಾರೆ. ಹಂತ 1ಎ–ಹಾಕ್ರ ಸಂಸ್ಕೃತಿ; 1ಬಿ–ಆದಿ ಹರಪ್ಪ ಸಂಸ್ಕೃತಿ; 1ಸಿ–ಆದಿ ಪ್ರೌಢ ಹರಪ್ಪ ಸಂಸ್ಕೃತಿ; 1ಡಿ–ಪ್ರೌಢ ಹರಪ್ಪ ಸಂಸ್ಕೃತಿ. ಇಲ್ಲಿ ವಸತಿ ಪದರ 4.2 ಮೀ ದಪ್ಪವಿತ್ತು.

ಹಂತ 1ಎ: ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ಅನ್ವೇಷಣೆ ಹಾಗೂ ಉತ್ಖನನಗಳಲ್ಲಿ ಹಾಕ್ರ ಸಂಸ್ಕೃತಿಯ ಅವಶೇಷಗಳು ಆದಿಹರಪ್ಪ ಕಾಲಕ್ಕಿಂತ ಮುಂಚಿನ ಸ್ವತಂತ್ರ ಸಾಂಸ್ಕೃತಿಕ ಸಂಚಯ ರೂಪದಲ್ಲಿ ಕಂಡುಬಂದಿರಲಿಲ್ಲ. ಆದರೆ ಹಾಕ್ರ ಮಣ್ಪಾತ್ರೆಗಳನ್ನು ಹೋಲುವ ತುಣುಕುಗಳನ್ನು ಕಾಲಿಬಂಗನ್, ಬನಾವಳಿ ಹಾಗೂ ಕುಣಾಲ್ ಉತ್ಖನನದಲ್ಲಿ ಆದಿಹರಪ್ಪ ಕಾಲದ ಅವಶೇಷಗಳ ಭಾಗವೆಂದು ವರದಿ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಭಿರಡಾಣ ನೆಲೆಯಲ್ಲಿ ಪ್ರಥಮ ಬಾರಿಗೆ ಅತ್ಯಂತ ಕೆಳಸ್ತರಗಳಿಂದ ಪ್ರಾಪ್ತವಾಗಿರುವ ಹಾಕ್ರ ಸಂಸ್ಕೃತಿಯ ಅವಶೇಷಗಳು ಮಹತ್ತ್ವದ್ದಾಗಿವೆ. ಈ ಅವಧಿಯ ಜನಜೀವನ ಶೈಲಿಯನ್ನು ತಿಳಿಯಲು ತಕ್ಕ ಮಟ್ಟಿಗೆ ಸಾಧ್ಯವಾಗಿದೆ. ಹಾಕ್ರ ಮಣ್ಪಾತ್ರೆಗಳ ಕರ್ತೃಗಳೇ ಆದಿಹರಪ್ಪ ಜನರ ಪೂರ್ವಜರಾಗಿದ್ದರೆಂದು ಈ ಉತ್ಖನನದಿಂದ ಸಾಬೀತಾಗಿದೆ.

ಹಾಕ್ರ ಸಂಸ್ಕೃತಿಯ ನಿವಾಸಿಗಳು ಸ್ವಲ್ಪವೇ ಆಳವಿರುವ (0.34 ರಿಂದ 0.58 ಮೀ) ಗುಂಡಿಗಳನ್ನು ನೆಲದಲ್ಲಿ ತೋಡಿ ಅವುಗಳ ಮೇಲೆ ಹುಲ್ಲಿನ ಗುಡಿಸಲು ಕಟ್ಟುತ್ತಿದ್ದರು. ಇವುಗಳ ವ್ಯಾಸ 2.3 ರಿಂದ 3.4ಮೀ. ವಿಶೇಷವೆಂದರೆ ಇಂತಹ ಗುಡಿಸಲನ್ನು ಕಟ್ಟುವಾಗ ನೆಡುವ ಮರದ ಕಂಬಗಳ ಗುಳಿಗಳು ಇಲ್ಲಿಲ್ಲ. ಇಂತಹ ಗುಂಡಿ–ಗುಡಿಸಲುಗಳ ಸಮೂಹಗಳು ನೆಲೆಯ ಉತ್ತರ, ಮಧ್ಯ ಹಾಗೂ ಪಶ್ಚಿಮ ಭಾಗದಲ್ಲಿದ್ದುವು. ಗುಂಡಿಗಳ ನೆಲಗಟ್ಟು ಹಾಗೂ ಗೋಡೆಗೆ ಮಣ್ಣಿನ ಗಿಲಾವು ಮಾಡಲಾಗಿದೆ. ವಾಸದ ಗುಂಡಿ–ಗುಡಿಸಲುಗಳಲ್ಲದೆ ಇವುಗಳ ಸಮೀಪದಲ್ಲಿ ಅಡುಗೆ, ಪಶುಬಲಿ ಅಥವಾ ಕೈಗೆಲಸಕ್ಕಾಗಿ 0.80 ರಿಂದ 1.08ಮೀ ಆಳದ ಮತ್ತು 2 ರಿಂದ 2.30ಮೀ ವ್ಯಾಸದ ಗುಂಡಿಗಳೂ ಇವೆ. ಅನಂತರ ಕಾಲದಲ್ಲಿ ಗುಂಡಿ–ಗುಡಿಸಲನ್ನು ತೊರೆದು ಭೂಮಿಯ ಮೇಲ್ಭಾಗದಲ್ಲಿಯೇ ಗುಡಿಸಲನ್ನು ಕಟ್ಟಲು ಪ್ರಾರಂಭಿಸಲಾಯಿತು. ಈ ಹಂತದಲ್ಲಿಯೂ ಗುಡಿಸಲಿಗಾಗಿ ನೆಡುತ್ತಿದ್ದ ಕಂಬಗಳ ಗುಳಿಗಳು ಕಂಡುಬರದಿರುವುದು ಕುತೂಹಲಕಾರಿಯಾಗಿದೆ.

ಈ ಕಾಲದ ಮಣ್ಪಾತ್ರೆಗಳನ್ನು ಈ ರೀತಿ ವರ್ಗೀಕರಿಸಲಾಗಿದೆ; ದಪ್ಪ ಮಣ್ಣಿನ ಲೇಪವುಳ್ಳ ಮಣ್ಪಾತ್ರೆ, ಆಳ ಹಾಗೂ ತೆಳು ಗೀರುಗಳುಳ್ಳ ಪಾತ್ರೆಗಳು (ಡೀಪ್ ಇನ್‌ಸೈಸ್ಡ್ ಅಂಡ್ ಲೈಟ್ ಇನ್‌ಸೈಸ್ಡ್ ವೇರ್ಸ್), ಕಡುಗಂದು ಬಣ್ಣದ ಲೇಪನದ ಪಾತ್ರೆಗಳು (ಟ್ಯಾನ್ ವೇರ್), ಹೊಳಪಿನ ಕಪ್ಪು ಪಾತ್ರೆಗಳು (ಬ್ಲ್ಯಾಕ್ ಬರ್ನಿಷ್ಡ್ ವೇರ್), ನಸು ಹಳದಿಯ ಮೇಲೆ ಕಂದುಬಣ್ಣದ ಪಾತ್ರೆಗಳು, ದ್ವಿವರ್ಣ ಪಾತ್ರೆಗಳು (ಬೈಕ್ರೋಮ್ ವೇರ್ಸ್), ಕೆಂಪು ಬಣ್ಣದ ಮೇಲೆ ಕಪ್ಪುಬಣ್ಣದ ಪಾತ್ರೆಗಳು (ಬ್ರೌನ್ ಆನ್ ಬಫ್ ವೇರ್), ಕೆಂಪುಬಣ್ಣದ ಪಾತ್ರೆಗಳು. ಕೆಲವೊಂದು ಮಡಕೆಚೂರುಗಳ ಮೇಲೆ ಉದ್ದೇಶಪೂರ್ವಕವಾಗಿ ಗೀಚಿದ ಚಿಹ್ನೆಗಳಿವೆ. ಇವು ಬಹುಶಃ ಕುಂಬಾರರ ಗುರುತುಗಳು ಅಥವಾ ಆದಿ ಪ್ರೌಢ ಹರಪ್ಪಕಾಲದ ಲಿಪಿಚಿಹ್ನೆಗಳ ಪ್ರಾರಂಭ ರೂಪಗಳಾಗಿರಬಹುದು. ಕೆಲವು ಮಣ್ಪಾತ್ರೆಗಳನ್ನು ತೀವ್ರ ಹಾಗೂ ಮಂದಗತಿಯಲ್ಲಿ ತಿರುಗುವ ತಿಗುರಿಯಿಂದಲೂ ದೊಡ್ಡ ಜಾಡಿಗಳನ್ನು ಕೈಯಿಂದಲೂ ತಯಾರಿಸಲಾಗಿದೆ. ಈ ಪಾತ್ರೆಗಳಿಗೂ ಚೋಲಿಸ್ತಾನದಿಂದ ವರದಿಯಾದ ಪಾತ್ರೆಗಳಿಗೂ ಹೋಲಿಕೆಯಿದೆ.

ಹಾಕ್ರ ಸಂಸ್ಕೃತಿಯ ಜನರು ಅಲಂಕಾರಪ್ರಿಯರಾಗಿದ್ದರು. ಇವರ ಗುಡಿಸಲುಗಳಲ್ಲಿ ಕಾರ್ನೀಲಿಯನ್ ಪದಕ, ಅಗೇಟ್, ವೈಡೂರ್ಯ ಹಾಗೂ ಸ್ಟಿಯಟೈಟ್‌ನ ಮಣಿಗಳು, ತಾಮ್ರದ ಬಳೆ, ಕೆಂಪು ಹಾಗೂ ಬೂದುಬಣ್ಣದ ಸುಟ್ಟಮಣ್ಣಿನ ಬಳೆಗಳು ದೊರೆತಿವೆ. ಇವರು ಮಿಶ್ರಾಹಾರಿಗಳಾಗಿದ್ದರೆಂಬುದನ್ನು ಅಡುಗೆ ಗುಂಡಿಗಳಿಂದ ದೊರೆತ ಪ್ರಾಣಿಗಳ ಸುಟ್ಟ ಎಲುಬಿನ ತುಂಡುಗಳು ಹಾಗೂ ಧಾನ್ಯ ಅವಶೇಷಗಳು ಸೂಚಿಸುತ್ತವೆ. ಬೇರೆ ಸ್ಥಳಗಳಿಂದ ಆಮದು ಮಾಡಿಕೊಂಡ ತಾಮ್ರದ ಗಟ್ಟಿಗಳನ್ನು (ಕಾಪರ್ ಇನ್‌ಗಾಟ್ಸ್) ಕರಗಿಸಿ ತಮಗೆ ಬೇಕಾದ ಆಭರಣ ಮತ್ತು ಉಪಕರಣಗಳನ್ನು ತಯಾರಿಸುತ್ತಿದ್ದರೆಂಬುದನ್ನು ಉದ್ಯಮ ಗುಂಡಿಗಳಿಂದ ದೊರೆತ ಮೂಸೆಯ ಅವಶೇಷಗಳು ದೃಢೀಕರಿಸುತ್ತವೆ. ದಿನನಿತ್ಯದಲ್ಲಿ ಉಪಯೋಗಿಸುವ ಅನ್ಯ ವಸ್ತುಗಳು ಹೀಗಿವೆ: ಸುಟ್ಟಮಣ್ಣಿನ ಹಾಗೂ ಕಲ್ಲಿನ ಕವಣೆ ಕಲ್ಲುಗಳು, ಉಬ್ಬಿದ ಬಿಲ್ಲೆಯಾಕಾರದ ಸುಟ್ಟಮಣ್ಣಿನ ವಸ್ತುಗಳು, ಹಸಿಮಣ್ಣಿನ ಬಿಲ್ಲೆಗಳು, ಅರೆಯುವ ಹಾಗೂ ರುಬ್ಬುವ ಗುಂಡುಗಳು, ಚಕಮಕಿ ಕಲ್ಲಿನ ತೆಳು ನೀಳ ಚಕ್ಕೆಗಳು, ಅಲಗು, ಎಲುಬಿನ ಮೊನೆಗಳು ಇತ್ಯಾದಿ.

ಮಣ್ಪಾತ್ರೆ ಮೇಲಿನ ರೇಖಾ ಚಿತ್ರ

ಪಶುಬಲಿ ಈ ಸಮಾಜದಲ್ಲಿ ಪ್ರಚಲಿತವಿತ್ತೆಂಬುದನ್ನು ಧಾರ್ಮಿಕ ಕುಂಡಗಳಿಂದ ದೊರೆತ ಸುಟ್ಟ ದನಗಳ ತಲೆಬುರುಡೆಗಳ ಆಧಾರದ ಮೇಲೆ ಹೇಳಬಹುದು. ಒಂದು ಗುಂಡಿಯ ನೆಲಗಟ್ಟಿನ ಮೇಲೆ ದೊರೆತ ತಲೆಬುರುಡೆಯಿಂದ ಕೋಡುಗಳನ್ನು ಉದ್ದೇಶಪೂರ್ವಕವಾಗಿ ಬೇರ್ಪಡಿಸಲಾಗಿತ್ತು. ಹಾಕ್ರ ಸಂಸ್ಕೃತಿಯ ಉಗಮ ಬಹುಶಃ ಪ್ರ.ಶ.ಪೂ. 4ನೆಯ ಸಹಸ್ರಮಾನದ ಪೂರ್ವಾರ್ಧದಲ್ಲಾಗಿರಬಹುದೆಂಬುದು ಕೆಲವು ವಿದ್ವಾಂಸರ ಮತ.

ಹಂತ 1ಬಿ: ಆದಿ ಹರಪ್ಪ ಸಂಸ್ಕೃತಿ: ಈ ಹಂತದಲ್ಲಿ ಜನ ಜೀವನಶೈಲಿಯಲ್ಲಿ ಕೆಲವು ಬದಲಾವಣೆಗಳನ್ನು ಕಾಣಬಹುದು. 3:2:1 ಅನುಪಾತದಲ್ಲಿ ತಯಾರಿಸಿದ ಹಸಿ ಇಟ್ಟಿಗೆಗಳ ಮನೆಗಳಲ್ಲಿ ಜನರು ವಾಸಿಸತೊಡಗಿದರು. ಮನೆಗಳಲ್ಲಿ ಒಂದಕ್ಕಿಂತ ಹೆಚ್ಚಿನ ಕೋಣೆಗಳಿದ್ದವು. ಧಾನ್ಯ ಶೇಖರಣೆಗಾಗಿ ನೆಲದಲ್ಲಿ ವರ್ತುಲಾಕಾರದ ಗುಂಡಿಯನ್ನು ತೋಡಿ ಅದರ ಸುತ್ತಲೂ ಹಸಿಇಟ್ಟಿಗೆಯ ಗೋಡೆಯನ್ನು ಕಟ್ಟುತ್ತಿದ್ದರು. ಸೀಮಿತ ಉತ್ಖನನದಿಂದಾಗಿ ಊರಿನ ವಿನ್ಯಾಸವನ್ನು ಸ್ಪಷ್ಟವಾಗಿ ತಿಳಿಯಲಾಗಿಲ್ಲ. ಊರಿಗೆ ಸುರಕ್ಷಾ ಗೋಡೆಯನ್ನು ನಿರ್ಮಿಸಿದಂತೆ ಕಾಣುವುದಿಲ್ಲ. ಈ ಕಾಲದ ಮಣ್ಪಾತ್ರೆಗಳು ಕಾಲಿಬಂಗನ್‌ನ ಆದಿ ಹಂತದ ಆರು ಪ್ರಕಾರಗಳ ಪಾತ್ರೆಗಳನ್ನು ಹೋಲುತ್ತವೆ. ಜೊತೆಗೆ ಹಾಕ್ರ ಪಾತ್ರೆಗಳನ್ನೂ ಬಳಸಲಾಗುತ್ತಿತ್ತು. ತೀವ್ರಗತಿಯ ತಿಗುರಿಯ ಮೇಲೆ ತಯಾರಿಸಲಾದ ಈ ಪಾತ್ರೆಗಳ ಮೇಲೆ ಗೀರುಗೀಟು ಗುರುತುಗಳು (ಗ್ರಾಫಿಟಿ) ಹಿಂದಿನ ಹಂತದ್ದಕ್ಕಿಂತ ಹೆಚ್ಚು ವೃದ್ಧಿಯಾದದ್ದು ಸ್ಪಷ್ಟವಾಗಿ ಕಂಡುಬರುತ್ತದೆ.

ಮುದ್ರೆಗಳು ಪ್ರಥಮ ಬಾರಿಗೆ ಬಳಕೆಗೆ ಬಂದವು. ಇಲ್ಲಿ ದೊರೆತ ಶಂಖದಿಂದ ತಯಾರಿಸಿದ ಗುಂಡಿಯಂಥ ಮುದ್ರೆ (ಬಟನ್ ಸೀಲ್) ಚೂರಿನ ಒಂದು ಮುಖದ ಮೇಲೆ ಏಕಕೇಂದ್ರಿತ ಐದು ಚಿಕ್ಕ ವರ್ತುಲಗಳ ಸಂಕೇತವಿದೆ. ಸ್ಟಿಯಟೈಟ್‌ನ ಮುದ್ರೆ ನಾಲ್ಕು ದಳವುಳ್ಳ ಹೂವಿನಾಕಾರದಲ್ಲಿದ್ದು ಪ್ರತಿ ದಳದಲ್ಲಿ ವರ್ತುಲಗಳ ಸಂಕೇತವಿದೆ. ಮುದ್ರೆಯ ಹಿಂಭಾಗದಲ್ಲಿ ಮುರಿದುಹೋದ ರಂಧ್ರವುಳ್ಳ ಚಿಕ್ಕ ಹಿಡಿಕೆಯನ್ನು ಕಾಣಬಹುದು. ಈ ಕಾಲದ ಮುದ್ರೆಗಳಲ್ಲಿ ಲಿಪಿ ಹಾಗೂ ಪ್ರಾಣಿಗಳ ಚಿತ್ರಗಳಿಲ್ಲ. ದಿನನಿತ್ಯದ ಬಳಕೆಯ

ವಸ್ತುಗಳೆಂದರೆ ತಾಮ್ರದ ಬಾಣದ ಮೊನೆ, ಉಂಗುರ, ಬಳೆ, ಕಾರ್ನೇಲಿಯನ್, ಜಾಸ್ಪರ್, ಸ್ಟಿಯಟೈಟ್, ಫಯಾನ್ಸ್, ವೈಡೂರ್ಯ, ಶಂಖ ಹಾಗೂ ಸುಟ್ಟಮಣ್ಣಿನ ಮಣಿಗಳು, ಕವಣೆಕಲ್ಲುಗಳು, ಎಲುಬಿನ ಮೊನೆಗಳು, ಕಲ್ಲಿನ ಗೋಲಿಗಳು, ಮರಳುಗಲ್ಲಿನ ಕುಟ್ಟುವ ಕಲ್ಲುಗಳು, ಚಕಮಕಿ ಕಲ್ಲಿನ ಅಲಗುಗಳು.

ಧಾರ್ಮಿಕ ಮಹತ್ತ್ವವಿರುವಂತೆ ತೋರುವ ಸುಟ್ಟಮಣ್ಣಿನ ಹಾಗೂ ಹಸಿಮಣ್ಣಿನ ಮಾತೃದೇವತೆ ಗೊಂಬೆಗಳ ಅಂಗಾಂಗಗಳನ್ನು ಸಂಗ್ರಹಿಸಲಾಗಿದೆ. ಜೊತೆಗೆ ಪಶುಬಲಿ ಸಂಪ್ರದಾಯ ಮುಂದುವರೆದ ಕುರುಹುಗಳು ಸಿಕ್ಕಿವೆ.

ಹಂತ 2ಎ: ಆದಿ ಪ್ರೌಢ ಹರಪ್ಪ ಸಂಸ್ಕೃತಿ: ಇದನ್ನು ಸಂಕ್ರಮಣ ಹಂತವೆಂದು ಹೇಳಬಹುದು. ಆದಿ ಹರಪ್ಪ ಜನರು ತಮ್ಮ ಪ್ರಗತಿಪರ ವಿಚಾರ ಹಾಗೂ ತಾಂತ್ರಿಕ ಕುಶಲತೆಯಿಂದಾಗಿ ಸಾಮಾಜಿಕ ಹಾಗೂ ನಾಗರಿಕ ಜೀವನಶೈಲಿಯಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿದ್ದು ಈ ಕಾಲದಲ್ಲಿ. ಪ್ರಥಮವಾಗಿ ವಸತಿ ನೆಲೆಯ ಸುತ್ತ ಸುರಕ್ಷಾಗೋಡೆಯನ್ನು ಕಟ್ಟಲಾಯಿತು. ನಗರದ ಒಳಭಾಗವನ್ನು ಮೇಲ್‌ನಗರ ಹಾಗೂ ಕೆಳನಗರವೆಂದು ಎರಡು ಭಾಗಗಳಲ್ಲಿ ವಿಂಗಡಿಸಲಾಯಿತು. ನಗರ ವಿನ್ಯಾಸ ಆಗ್ನೇಯ–ವಾಯವ್ಯ ಹಾಗೂ ನೈರುತ್ಯ–ಈಶಾನ್ಯ ದಿಶಾಭಿಮುಖವಾಗಿದೆ. ಇದೇ ದಿಶೆಯಲ್ಲಿ ಮುಖ್ಯಬೀದಿಗಳು, ಓಣಿಗಳು ಮತ್ತು ಒಳ ಓಣಿಗಳು ಚಾಚಿವೆ. ಮುಖ್ಯಬೀದಿ ಹಾಗೂ ಓಣಿಗಳ ನಡುವಿನ ಚೌಕಾಕಾರದ ಸ್ಥಳದಲ್ಲಿ ಭವ್ಯ ಮನೆಗಳು ಅಥವಾ ಮನೆಗಳ ಸಂಕೀರ್ಣಗಳನ್ನು ಕಟ್ಟಲಾಗಿದೆ. ಈ ಊರಿನ ರಚನೆಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲಾಗಲಿಲ್ಲ. ಇದೇ ಅವಧಿಯಲ್ಲಿ ಆದಿ ಹರಪ್ಪಕಾಲದ ಹಸಿಇಟ್ಟಿಗೆಗಳ ಜೊತೆಗೆ ಪ್ರೌಢ ಹರಪ್ಪ ಕಾಲದ 4:2:1ರ ಅನುಪಾತದ ಇಟ್ಟಿಗೆಗಳೂ ಬಳಕೆಗೆ ಬಂದವು. ಪಶ್ಚಿಮ ಹಾಗೂ ಉತ್ತರ ದಿಶೆಯ ಕೋಟೆಗೋಡೆಗಳ ಮಧ್ಯಭಾಗಗಳಲ್ಲಿ ಪ್ರವೇಶದ್ವಾರಗಳು ಇದ್ದವು.

ಮಣ್ಪಾತ್ರೆಗಳಲ್ಲಿ ಆದಿ ಹರಪ್ಪಕಾಲದ ಪಾತ್ರೆಗಳಲ್ಲದೆ ಪ್ರೌಢ ಹರಪ್ಪ ಸಮಯದ ಹೊಸ ನಮೂನೆಯ ಚಿತ್ರಗಳುಳ್ಳ ಗಟ್ಟಿಮುಟ್ಟಾದ ಕೆಂಪುವರ್ಣದ ಪಾತ್ರೆಗಳು ಬಳಕೆಗೆ ಬಂದವು. ಈ ಅವಧಿಯಲ್ಲಿ ಮಣ್ಪಾತ್ರೆಗಳ ಮೇಲೆ ಗೀರಿದ ರೇಖಾ ಹಾಗೂ ರಂಗೋಲಿಯನ್ನು ಹೋಲುವ ಸಂಕೇತಗಳು ಹೆಚ್ಚಾಗಿದ್ದವು. ಹಾಕ್ರ ಪಾತ್ರೆ ಈ ಕಾಲದಲ್ಲಿಯೂ ಬಳಕೆಯಲ್ಲಿತ್ತು. ಶಿಲೆಯ ಮಣಿಗಳ ಉದ್ಯಮ ಹೆಚ್ಚಿನ ಪ್ರಗತಿ ಸಾಧಿಸಿತು. ಕಾರ್ನೇಲಿಯನ್ ಮಣಿಗಳಿಂದ ತುಂಬಿದ ಮಣ್ಪಾತ್ರೆಗಳು ದೊರೆತದ್ದು ಈ ಹಂತದ ಒಂದು ವಿಶೇಷ. ಇದೇ ರೀತಿ ತಾಮ್ರ ಕೈಗಾರಿಕೆಯೂ ಬೆಳೆಯಿತು. ಬಾಣದ ಮೊನೆ, ಮೀನಿನ ಗಾಳ, ಉಳಿ, ಬಳೆಗಳು, ಶೃಂಗಾರ ಸಾಧನದ ವಸ್ತುಗಳು ಹಾಗೂ ಉಪಕರಣಗಳು ಇದಕ್ಕೆ ಸಾಕ್ಷಿಯಾಗಿವೆ. ಇನ್ನುಳಿದ ಅವಶೇಷಗಳೆಂದರೆ ಫಯಾನ್ಸ್ ಹಾಗೂ ಸುಡಾವೆಮಣ್ಣಿನ ಬಳೆಗಳು, ಚಕಮಕಿ ಅಲಗುಗಳು; ಸುಡಾವೆ ಗೂಳಿಗಳು, ಸುಡಾವೆಮಣ್ಣಿನ ಉದ್ದನೆ ಮಣಿ (ನೆಟ್ ಸಿಂಕರ್ಸ್), ಮಂಚ, ಆಟಿಗೆ ಗಾಡಿ, ಬಣ್ಣದ ಗೆರೆಗಳಿಂದ ಗುರುತಿಸಿದ ಅರೆಗಳುಳ್ಳ ಉಬ್ಬು ಗಾಲಿಗಳು, ತ್ರಿಕೋಣಾಕಾರದ, ಉಬ್ಬಿದ ಬಿಲ್ಲೆಯಾಕಾರದ ಹಾಗೂ ಅಂಡಾಕಾರದ ಸುಡಾವೆ ಬಿಲ್ಲೆಗಳು.

ಹಂತ 2ಬಿ: ಪ್ರೌಢ ಹರಪ್ಪ ಸಂಸ್ಕೃತಿ: ಮೇಲ್‌ನಗರ ಹಾಗೂ ಕೆಳನಗರದ ವಿಭಜನೆಯಲ್ಲಿ ಕೆಲವು ಮಾರ್ಪಾಡುಗಳು ಕಾಣುತ್ತವೆ. ಚೌಕಾಕಾರದ ಬುರುಜುಳ್ಳ ಕೋಟೆಗೋಡೆಯನ್ನು ಅವಶ್ಯವಿದ್ದೆಡೆ ವಿಸ್ತರಿಸಿ ಭದ್ರಗೊಳಿಸಲಾಯಿತು. ಕೋಟೆಗೋಡೆಗಳ ಮಧ್ಯಭಾಗದಲ್ಲಿದ್ದ ಪ್ರವೇಶದ್ವಾರಗಳನ್ನು ಮುಚ್ಚಿ ಹೊಸದ್ವಾರಗಳನ್ನು ಕೋಟೆಯ ಎರಡು ಗೋಡೆಗಳು ಸಂಧಿಸುವ ಭಾಗದಲ್ಲಿ ನಿರ್ಮಿಸಲಾಯಿತು. ಊರಿನ ಒಳಭಾಗದಿಂದ ಹರಿದು ಬರುವ ಮಳೆನೀರನ್ನು ಹೊರಗೆ ಹರಿಸಲು ಉತ್ತರ ದಿಶೆಯ ಕೋಟೆಗೋಡೆಯ ಮಧ್ಯಭಾಗದಲ್ಲಿದ್ದ ಹಳೆಯ ಪ್ರವೇಶದ್ವಾರದ ಮೇಲ್ಭಾಗದಲ್ಲಿ ಸುಟ್ಟಇಟ್ಟಿಗೆಗಳಿಂದ ಚರಂಡಿಯನ್ನು ಕಟ್ಟಲಾಯಿತು. ಊರೊಳಗಿನ ದೊಡ್ಡ ಬೀದಿಗಳನ್ನು ಇನ್ನೂ ವಿಸ್ತರಿಸಲಾಯಿತು. ನಗರದ ಪಶ್ಚಿಮ ಭಾಗದಲ್ಲಿ ಇರುವ ಭವ್ಯ ಭವನಗಳು ಪ್ರಾಯಶಃ ಶ್ರೀಮಂತ ವರ್ಗದವರದಾಗಿರಬಹುದು. ಪ್ರತಿಯೊಂದು ಮನೆಯಲ್ಲಿ ಹಲವಾರು ಕೋಣೆಗಳಿದ್ದುವು. ಅಡುಗೆ ಕೋಣೆಯಲ್ಲಿ ಒಲೆಗಳು ಹಾಗೂ ತಂದೂರುಗಳಿದ್ದುವು. ನೆಲದಲ್ಲಿ ಅಗೆದ ವಿಶೇಷ ಗುಂಡಿಗಳಲ್ಲಿ ಧಾನ್ಯಗಳನ್ನು ಶೇಖರಿಸುತ್ತಿದ್ದರು. ಇವುಗಳಲ್ಲದೆ ಹಸಿಇಟ್ಟಿಗೆಗಳಿಂದ ಕಟ್ಟಿದ ಸಾರ್ವಜನಿಕ ಕಣಜಗಳಂತೆ ತೋರುವ ಎರಡು ದೊಡ್ಡ ಕಟ್ಟಡಗಳು ಕಂಡುಬಂದಿವೆ.

ಸುಟ್ಟ ಹಾಗೂ ಹಸಿ ಇಟ್ಟಿಗೆಗಳನ್ನು 4:2:1ರ ಅನುಪಾತದಲ್ಲಿ ತಯಾರಿಸಲಾಗಿದೆ. ಕೋಟೆ ಹಾಗೂ ಮನೆಗಳ ಗೋಡೆಗಳ ಒಳ ಹಾಗೂ ಹೊರಮೈಯನ್ನು ಮಣ್ಣಿನ ಗಾರೆಯಿಂದ ಗಿಲಾವು ಮಾಡಲಾಗಿದೆ. ಕಾಲಿಬಂಗನ್ ಹಾಗೂ ಬನಾವಲಿ ನಗರ ರಚನೆಯಂತೆ ಇಲ್ಲಿಯೂ ಸಾರ್ವಜನಿಕ ಚರಂಡಿಯ ವ್ಯವಸ್ಥೆಯಿರಲಿಲ್ಲ. ಸ್ನಾನಗೃಹದಿಂದ ಹೊರಬರುವ ಕೊಳಚೆಯನ್ನು ಚರಂಡಿಗಳ ಮುಖಾಂತರ ಬೀದಿಯಲ್ಲಿ ಹುಗಿದ ಮಣ್ಣಿನಜಾಡಿಯಲ್ಲಿ ಶೇಖರಿಸಲಾಗುತ್ತಿತ್ತು. ಈ ಕಾಲದ ಚಿತ್ರಿತ ಕೆಂಪುಬಣ್ಣದ, ಕೆಂಪು ಹಾಗೂ ಕಡುಗಂದು ಬಣ್ಣದ ಮಣ್ಪಾತ್ರೆಗಳನ್ನು ವಿಶೇಷ ರೀತಿಯಲ್ಲಿ ತಯಾರಿಸಲಾಗಿದೆ. ಗಡಿಗೆಗಳು, ಹೊರಚಾಚಿದ ಅಂಚುಳ್ಳ ಗಡಿಗೆಗಳು, ಎಸ್ ಆಕಾರದ ಜಾಡಿಗಳು, ಬಿರಡೆಯಂತಹ ತಳವಿರುವ ಪಾನೀಯ ಪಾತ್ರೆಗಳು, ಕಾಲಿರುವ ತಟ್ಟೆಗಳು, ಬಟ್ಟಲುಗಳು, ಹಿಡಿಕೆಯುಳ್ಳ ಮುಚ್ಚಳಗಳು, ರಂಧ್ರಗಳುಳ್ಳ ಜಾಡಿಗಳು ಇವೇ ಮುಂತಾದ ಪ್ರಕಾರಗಳಿವೆ. ಇವುಗಳ ಹೊರಮೈ ಮೇಲೆ ರೇಖಾಕೃತಿ, ಎಲೆಬಳ್ಳಿಗಳು, ವೃಕ್ಷಗಳು ಹಾಗೂ ಪ್ರಾಣಿಪಕ್ಷಿಗಳ ಚಿತ್ರಗಳನ್ನು ಕಪ್ಪುವರ್ಣದಿಂದ ಬಿಡಿಸಿ ಅಲಂಕರಿಸಲಾಗಿದೆ. ಹಾಕ್ರ ಹಾಗೂ ಆದಿಹರಪ್ಪಕಾಲದ ಮಣ್ಪಾತ್ರೆಗಳೂ ಬಳಕೆಯಲ್ಲಿದ್ದುದನ್ನು ಕಾಣಬಹುದು.

ವ್ಯಾಪಾರೋನ್ನತಿಯ ಕುರುಹುಗಳಾಗಿ ಕೊರೆದು ಮಾಡಿದ ಪ್ರಾಣಿಗಳ ಚಿತ್ರ ಹಾಗೂ ಲಿಪಿಯನ್ನೊಳಗೊಂಡ ಸ್ಟಿಯಟೈಟಿನ ಮುದ್ರೆಗಳು ದೊರಕಿವೆ. ಅನೇಕ ಮಡಕೆ ಚೂರುಗಳ ಮೇಲೆ ಒಂದೆರಡು ಸಂಕೇತಗಳನ್ನು ಬಿಡಿಯಾಗಿ ಇಲ್ಲವೆ ಒಟ್ಟಾಗಿ ಗೀರುಗಳಿಂದ ಸೂಚಿಸಲಾಗಿವೆ. ಈ ಕಾಲದ ಎರಡು ತಾಮ್ರದ ಕೊಡಲಿಗಳ ಮೇಲೂ ಅಕ್ಷರಗಳ ಅಂಕಿತವಿದೆ. ತಾಮ್ರದ ಉಪಕರಣ ಹಾಗೂ ಅರೆಪ್ರಶಸ್ತ ಕಲ್ಲಿನ ಮಣಿಗಳ ಸಂಖ್ಯೆಯಿಂದ ಈ ಉದ್ಯಮಗಳು ಮಹತ್ತರ ಪ್ರಗತಿ ಸಾಧಿಸಿದ್ದಂತೆ ಕಂಡುಬರುತ್ತದೆ. ತಾಮ್ರದ ಕೊಡಲಿಗಳು, ಬಾಣದ ಹಾಗೂ ಈಟಿಯ ಮೊನೆ, ಉಳಿ, ಮೀನಿನ ಗಾಳ, ಬಳೆಗಳು, ಉಂಗುರ, ಎಲುಬಿನ ಮೊನೆಗಳು, ಸೂಜಿಗಳು, ರುಬ್ಬುವ ಹಾಗೂ ಕುಟ್ಟುವಕಲ್ಲಿನ ಉಪಕರಣಗಳು ಹೇರಳವಾಗಿ ದೊರೆತಿವೆ. ಜನರು ಅಲಂಕಾರಪ್ರಿಯರೆಂಬುದಕ್ಕೆ ಇಲ್ಲಿ ದೊರೆತ ಕಾರ್ನೇಲಿಯನ್, ವೈಡೂರ್ಯ, ಅಗೇಟ್, ಸ್ಟಿಯಟೈಟ್, ಶಂಖ, ಮಣ್ಣು, ಬಂಗಾರ, ತಾಮ್ರದ ಸಾವಿರಾರು ಮಣಿಗಳು ಸಾಕ್ಷಿಯಾಗಿವೆ. ಮಕ್ಕಳ ಮನೋರಂಜನೆಗಾಗಿ ಸುಡಾವೆಮಣ್ಣಿನ ಅನೇಕ ಪ್ರಕಾರದ ಆಟಿಗೆ ಸಾಮಾನುಗಳು ದೊರೆತಿವೆ. ಇವುಗಳಲ್ಲಿ ಚಕ್ಕಡಿಗಳು (ಗಾಡಿ), ಘನ ಹಾಗೂ ಅರೆಗಾಲಿಗಳು, ನೇಗಿಲು ಗುಳಗಳು, ಟಗರು, ನರಿ, ನಾಯಿ, ಸಿಳ್ಳೆಹೊಡೆಯುವ ಪಕ್ಷಿಯಾಕಾರದ ಪೀಪಿ, ಗರುಡ ಮುಂತಾದುವು ಸಮಕಾಲೀನ ಸಮಾಜದಲ್ಲಿ ಬಳಕೆಯಲ್ಲಿದ್ದ ವಸ್ತು–ಪ್ರಾಣಿಗಳ ಮಾದರಿಯಾಗಿವೆ. ಇಲ್ಲಿ ದೊರೆತ ಸುಡಾವೆಮಣ್ಣಿನ ಗಾಲಿಗಳ ವಿಶೇಷತೆಯೆಂದರೆ ಕಪ್ಪು ಅಥವಾ ಕಡುಗಂದು ಬಣ್ಣದಿಂದ ಅವುಗಳ ಮೇಲೆ ಅರೆಗಳನ್ನು ಬಿಡಿಸಿರುವುದು. ಬೆರಳಿನಿಂದ ಅಚ್ಚೊತ್ತಿ ಬಿಡಿಸಿದ ಅರೆಗಳುಳ್ಳ ಚಕ್ರಗಳೂ ಹೇರಳವಾಗಿ ದೊರೆತಿವೆ. ಹರಪ್ಪ ಸಂಸ್ಕೃತಿಯ ಕಾಲದಲ್ಲಿ ಅರೆಗಳುಳ್ಳ ಗಾಲಿಗಳು ಪ್ರಚಲಿತದಲ್ಲಿರಲಿಲ್ಲವೆಂಬ ಹೇಳಿಕೆಗಳನ್ನು ಈ ಅವಶೇಷಗಳು ಹುಸಿಯಾಗಿಸಿವೆ.

ಇಲ್ಲಿ ದೊರೆತ ಒಂದು ಮುದ್ರೆ ಮಹತ್ತ್ವಪೂರ್ಣವಾಗಿದೆ. ಭಗ್ನಗೊಂಡಿರುವ ಈ ಮುದ್ರೆ ಅಂಡಾಕಾರದಲ್ಲಿದ್ದು ಮಧ್ಯದಲ್ಲಿ ಸಂಕುಚಿತವಾಗಿದೆ. ಇದರ ಒಂದು ಮುಖ ಹಾಳಾಗಿದೆ. ಇನ್ನೊಂದು ಮುಖದ ಮೇಲೆ ಪ್ರೌಢ ಹರಪ್ಪ ಕಾಲದ ಐದು ಲಿಪಿಸಂಕೇತಗಳನ್ನು ಆವಿಗೆಯಲ್ಲಿ ಸುಡುವ ಮುಂಚೆಯೇ ಕೊರೆದು ಬಿಡಿಸಲಾಗಿದೆ. ಎರಡು ಅಂಕಣಗಳುಳ್ಳ ದೀರ್ಘಚತುರಸ್ರಾಕಾರದ ಒಳಗೆ ಎಡದಿಂದ ಬಲಕ್ಕೆ ಬರೆಯಲಾಗಿದೆ; ಹಾಗೂ ಬರವಣಿಗೆಯ ಸಾಲುಗಳನ್ನು ಕೆಳಗಿನಿಂದ ಮೇಲಕ್ಕೆ ಲಂಬವಾಗಿ ಬರೆಯಲಾಗಿದೆ. ಮೊದಲ ಸಾಲಿನ ಪ್ರಥಮ ಲಿಪಿಸಂಕೇತ ಆರು ಚಿಕ್ಕಗೀಟುಳ್ಳ ಸಮೂಹವಾಗಿದ್ದರೆ, ಎರಡನೆಯದು ಬಾಣವುಳ್ಳ ಧನಸ್ಸನ್ನು ಹೋಲುವ ಸಂಕೇತದಂತಿದೆ; ಇವುಗಳ ಮೇಲಿನ ಸಾಲಿನಲ್ಲಿ ಮಧ್ಯದಲ್ಲಿ ಅಧಿಕ ಚಿಹ್ನೆಯುಳ್ಳ ವಜ್ರದಾಕಾರವನ್ನು ಹೋಲುವ ಲಿಪಿ ಸಂಕೇತವಿದೆ. ಮೇಲಿನ ಅಂಕಣದಲ್ಲಿ ಎರಡು ಲಿಪಿಸಂಕೇತಗಳ ಒಂದೇ ಸಾಲು ಇದೆ; ಮೊದಲನೆಯ ಸಂಕೇತ ಪೆಟ್ಟಿಗೆಯಾಕಾರದಂತಿದ್ದರೆ, ಎರಡನೆಯದು ಕನ್ನಡ ಸಂಖ್ಯೆ ೧ ನ್ನು ಹೋಲುತ್ತದೆ. ಈ ಹೊಸ ಬರೆಹ ಶೈಲಿಯನ್ನು ಒಂದರ ಮೇಲೊಂದು ವ್ಯಾಪಿಸುವ (ಓವರ್ ಲ್ಯಾಪಿಂಗ್) ತತ್ತ್ವವನ್ನಾಧರಿಸಿ ಗುರುತಿಸಲಾಗಿದೆ. ಉತ್ಖನನಕ್ಕೊಳಗಾದ ಇತರ ಹರಪ್ಪ ನೆಲೆಗಳಾದ ಕಾಲಿಬಂಗನ್, ಲೋಥಲ್, ಬನಾವಲಿ ಇತ್ಯಾದಿಗಳಿಂದ ದೊರೆತ ಕೆಲವು ಸುಡಾವೆಮಣ್ಣಿನ ಬಿಲ್ಲೆಗಳ ಮೇಲೆ ಕೋಡುಗಳುಳ್ಳ ದೇವತೆ ಹಾಗೂ ಪಶುಬಲಿಯನ್ನು ಹೋಲುವ ಚಿತ್ರ, ಮನುಷ್ಯ, ಕತ್ತೆ, ರಂಗೋಲಿಯಾಕಾರದ ಜ್ಯಾಮಿತೀಯ ಚಿತ್ರ ಇತ್ಯಾದಿಗಳನ್ನು ಕೊರೆದು ಬಿಡಿಸಲಾಗಿದೆ. ಇಂಥ ಉದಾಹರಣೆಗಳು ಸಮಕಾಲೀನ ಹರಪ್ಪ ಸಮಾಜದಲ್ಲಿ ಪ್ರಚಲಿತವಿದ್ದ ಧಾರ್ಮಿಕ ಸಂಸ್ಕಾರಗಳನ್ನು ಪ್ರಾಯಶಃ ಪ್ರತಿಬಿಂಬಿಸುತ್ತವೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಭಿರಡಾಣದ ಲಿಪಿಯುಕ್ತ ಜೇಡಿಮಣ್ಣಿನ ಬಿಲ್ಲೆಯೂ ಬಹುಶಃ ಧಾರ್ಮಿಕ ಸಂಸ್ಕಾರಗಳ ಅಂಗವಾಗಿದ್ದು ಧಾರ್ಮಿಕ ಮತತತ್ತ್ವಕ್ಕೆ ಸಂಬಂಧಿಸಿದ ಹರಕೆಯ ಬರೆಹವಾಗಿರಬಹುದೆಂಬ ಅನುಮಾನ.

ಸುಡಾವೆಮಣ್ಣಿನ ಶಿಶ್ನದಂತಹ ವಸ್ತು ಹಾಗೂ ಮುರಿದ ಒಂದು ಮಾತೃದೇವತೆಯ ಬೊಂಬೆ ಸಮಾಜದಲ್ಲಿ ಪ್ರಚಲಿತವಿದ್ದ ಧಾರ್ಮಿಕ ನಂಬಿಕೆಗಳ ಪ್ರತೀಕಗಳಾಗಿವೆ. ಸಾಂಕೇತಿಕ ರೂಪದಲ್ಲಿ ತಯಾರಿಸಿದ, ಕೋಡುಗಳುಳ್ಳ ಎಮ್ಮೆಯ ಮುಖವೆಂದು ಗುರುತಿಸಲಾದ ಸುಡಾವೆಮಣ್ಣಿನ ಆಕೃತಿ ಧಾರ್ಮಿಕ ಸಂಸ್ಕಾರಗಳಲ್ಲಿ ಬಾಸಿಂಗದಂತೆ ಉಪಯೋಗಿಸುವ ವಸ್ತುವಾಗಿತ್ತೆಂದು ಕಾಣಿಸುತ್ತದೆ. ಮುದ್ರೆಗಳ ಮೇಲೆ ಎಮ್ಮೆಕೋಡುಗಳನ್ನು ತಲೆಯ ಮೇಲೆ ಧರಿಸಿದ ಪಶುಪತಿ ಶಿವನೆಂದು ತಾತ್ಕಾಲಿಕವಾಗಿ ಗುರುತಿಸಲಾದ ಹಾಗೂ ಇನ್ನಿತರ ಮಾನವಾಕೃತಿ ಚಿತ್ರಗಳನ್ನು ಇಲ್ಲಿ ಸ್ಮರಿಸಬಹುದು.

ಜನರ ಆಹಾರ ಪದ್ಧತಿಯಲ್ಲಿ ಮಾಂಸ ಹಾಗೂ ಸಸ್ಯಾಹಾರದ ಸೇವನೆಯಿತ್ತೆಂದು ಸುಟ್ಟ ಎಲುಬು ತುಂಡುಗಳು ಹಾಗೂ ಸುಟ್ಟ ಧಾನ್ಯಗಳಾದ ಗೋದಿ, ಜವೆ ಮತ್ತು ಬೇಳೆಕಾಳುಗಳಿಂದ ಸ್ಪಷ್ಟವಾಗುತ್ತದೆ.

ಪ್ರೌಢ ಹರಪ್ಪ ಸಂಸ್ಕೃತಿಯ ಅವನತಿಗೆ ಖಚಿತ ಕಾರಣಗಳು ತಿಳಿಯದಾಗಿವೆ. ಬಹುಶಃ ಸರಸ್ವತಿ ನದಿಯ ಬತ್ತುವಿಕೆ ಒಂದು ಪ್ರಮುಖ ಕಾರಣವಾಗಿರಬಹುದು. ಅನಂತರದಲ್ಲಿ ಈ ನೆಲೆಯಲ್ಲಿ ಜನವಸತಿ ಇರಲಿಲ್ಲ. (ಎಲ್.ಎಸ್.ಆರ್.)

**ಭೀಂಬೇಟ್ಕ:** ಮಧ್ಯಪ್ರದೇಶದ ರಾಯಸೇನ್ ಜಿಲ್ಲೆಯಲ್ಲಿ ಭೀಯಾಪುರ ಗ್ರಾಮದಿಂದ ಸು.2 ಕಿಮೀ ದಕ್ಷಿಣದಲ್ಲಿ ವಿಂಧ್ಯ ಪರ್ವತಶ್ರೇಣಿಯಲ್ಲಿರುವ ಪುರಾತತ್ತ್ವ ಸಂಕೀರ್ಣ. ಮೆದು ಮರಳುಗಲ್ಲಿನ ಈ ಬೆಟ್ಟಗಳಲ್ಲಿ 1000ಕ್ಕೂ ಹೆಚ್ಚು ಗುಹೆ ಹಾಗೂ ಕಲ್ಲಾಸರೆಗಳಿವೆ. ಸು.500 ಗುಹೆ–ಕಲ್ಲಾಸರೆಗಳಲ್ಲಿ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು ಮತ್ತು ಅವಶೇಷಗಳಿವೆ.

ಈ ಪ್ರದೇಶದ ಪ್ರಾಗೈತಿಹಾಸಿಕ ಮಹತ್ತ್ವವನ್ನು ಗುರುತಿಸಿದವರು ಉಜ್ಜಯನಿಯ ವಿಕ್ರಮ ವಿಶ್ವವಿದ್ಯಾಲಯದ ವಿ.ಎಸ್.ವಾಕಣಕರ್ (1957). ಸಾಗರ ವಿಶ್ವವಿದ್ಯಾಲಯದ ಕೆ.ಡಿ.ಬಾಜಪಾಯಿ ಹಾಗೂ ಎಸ್.ಕೆ.ಪಾಂಡೆಯವರು ನಡೆಸಿದ ಸೀಮಿತ ಉತ್ಖನನದಿಂದ ಸೂಕ್ಷ್ಮಶಿಲಾಯುಗದ ಅವಶೇಷಗಳು ಬೆಳಕಿಗೆ ಬಂದವು (1971). ವಿ.ಎಸ್.ವಾಕಣಕರ್ ಹಾಗೂ ಡೆಕ್ಕನ್ ಕಾಲೇಜಿನ ವಿ.ಎನ್.ಮಿಶ್ರ ಇಲ್ಲಿಯ ಕೆಲವು ಕಲ್ಲಾಸರೆಗಳಲ್ಲಿ ಉತ್ಖನನ ನಡೆಸಿದರು (1972). ಬರ್ಕ್ಲಿಯ ವೊಲ್ಕೆರಕುಂದೆ ವಸ್ತುಸಂಗ್ರಹಾಲಯದ ಸುಸಾನೆ ಹಾಸ್ ಇಲ್ಲಿಯ ಮೂರು ಕಲ್ಲಾಸರೆಗಳಲ್ಲಿ ಉತ್ಖನನ ಮಾಡಿದಳು (1974–75). ಆದಿ ಹಳೆಶಿಲಾಯುಗ ದಿಂದ ಸೂಕ್ಷ್ಮಶಿಲಾಯುಗದವರೆಗಿನ ಅವಶೇಷಗಳು ಈ ಉತ್ಖನನಗಳಲ್ಲಿ ಕಂಡುಬಂದಿವೆ.

ಕೆಲವೊಂದು ಕಲ್ಲಾಸರೆಯಲ್ಲಿ ಉರುಟುಕಲ್ಲುಗಳಿಂದ ತಯಾರಿಸಲ್ಪಟ್ಟ ಮಚ್ಚುಗತ್ತಿ ವರ್ಗಕ್ಕೆ (ಚಾಪರ್) ಸೇರಿದ ಉಪಕರಣಗಳು ಕೆಳಸ್ತರಗಳಲ್ಲಿ ಪ್ರಾಪ್ತವಾಗಿವೆ. ಈ ಸ್ತರದ ಮೇಲೆ ಅವಶೇಷರಹಿತ ಸ್ತರವಿದೆ. ಇದರ ಮೇಲೆ ಅಶೂಲಿಯನ್ ಕಾಲದ ಅವಶೇಷಗಳಿವೆ. ಅಶೂಲಿಯನ್ ಜನರು ತಾವು ವಾಸಿಸುತ್ತಿದ್ದ ಗವಿಗಳೊಳಗೆ ಕಲ್ಲುಚಪ್ಪಡಿಗಳಿಂದ ನೆಲಗಟ್ಟನ್ನು ನಿರ್ಮಿಸಿಕೊಂಡಿದ್ದರು. ನೆಲಗಟ್ಟಿನ ಮೇಲೆ ಅಶೂಲಿಯನ್ ಮಾದರಿಯ ಕ್ವಾರ್ಟ್ಜೈಟ್ ಉಪಕರಣಗಳು ಹೇರಳವಾಗಿ ದೊರೆತಿದ್ದು ತಯಾರಿಕೆಯ ಮತ್ತು ಉಪಯೋಗದ ವಿವಿಧ ಹಂತಗಳನ್ನು ಕಾಣಬಹುದು. ಗವಿ–ಕಲ್ಲಾಸರೆಗಳು ಕೇವಲ ಆಶ್ರಯತಾಣಗಳಾಗಿರದೆ ಉಪಕರಣ ತಯಾರಿಕೆಯ ಸ್ಥಳಗಳೂ ಆಗಿದ್ದವು. ಕಲ್ಲುಚಕ್ಕೆ ಉಪಕರಣಗಳಲ್ಲಿ ಹೆರೆಯುವ ಉಪಕರಣಗಳು, ಚೂರಿಗಳು, ಲೆವಾಲ್ವ ಮಾದರಿಯ ಚಕ್ಕೆಗಳು ಹಾಗೂ ಅಲಗುಗಳು ಹೇರಳವಾಗಿವೆ. ಕೈಗೊಡಲಿ ಹಾಗೂ ಕಡಿಕತ್ತಿಗಿಂತ ಚಕ್ಕೆಗಳಿಂದ ತಯಾರಿಸಿದ ಉಪಕರಣಗಳು ಅತ್ಯಧಿಕವಾಗಿದೆ. ಕೈಗೊಡಲಿಗಳು ಅಂಡಾಕಾರ, ಹೃದಯಾಕಾರ ಹಾಗೂ ಚೂಪು ತುದಿಯ ತ್ರಿಕೋನಾಕಾರದವಾಗಿವೆ. ಇವು ತೆಳುವಾಗಿದ್ದು ಸಮರೂಪದಲ್ಲಿವೆ. ಈ ಉಪಕರಣಗಳನ್ನು ತಯಾರಿಸಿದವರು ನುರಿತ ಕುಶಲಕರ್ಮಿಗಳು. ಇವುಗಳ ತಯಾರಿಕೆಯಲ್ಲಿ ಲೆವಾಲ್ವ ತಂತ್ರದ ಪ್ರಭಾವವಿದೆ. ಆಮೆಯಾಕಾರದ, ಚಕ್ರಾಕಾರದ ತಿರುಳುಗಳಲ್ಲದೆ ದುಂಡಾದ ಹಾಗೂ ಅನಿರ್ದಿಷ್ಟ ಆಕಾರದ ತಿರುಳುಗಳು ವಿಪುಲವಾಗಿವೆ. ಏಕಮುಖ ಉಪಕರಣಗಳು ಸಂಖ್ಯೆಯಲ್ಲಿ ಅಧಿಕ; ದ್ವಿಮುಖ ಉಪಕರಣಗಳು ಕಡಿಮೆ. ಕೈಗೊಡಲಿಗಿಂತ ಕಡಿಕತ್ತಿ ಅಧಿಕವಾಗಿವೆ. ಈ ಲಕ್ಷಣಗಳ ಆಧಾರದ ಮೇಲೆ ಇದು ಅಂತ್ಯ ಅಶೂಲಿಯನ್ ಹಂತವೆಂದು ಹೇಳಬಹುದು.

ಅಂತ್ಯ ಅಶೂಲಿಯನ್ ತಂತ್ರದಿಂದಲೇ ಮಧ್ಯ ಹಳೆಶಿಲಾಯುಗ ತಂತ್ರ ಬೆಳೆಯಿತು. ಈ ಹಂತದಲ್ಲಿ ಕೈಗೊಡಲಿ ಹಾಗೂ ಕಡಿಕತ್ತಿಗಳಿಲ್ಲ. ಇನ್ನುಳಿದ ಕ್ವಾರ್ಟ್ಜೈಟ್ ಉಪಕರಣಗಳ ಬಳಕೆ ಮುಂದುವರೆದಿದ್ದು, ಇವು ಆಕಾರದಲ್ಲಿ ಚಿಕ್ಕದಾಗಿವೆ. ಹೆರೆಯುವ ಉಪಕರಣಗಳನ್ನು ಚಕ್ಕೆಗಳಿಂದಲ್ಲದೆ ದೊಡ್ಡ ಚಪ್ಪಡಿಕಲ್ಲುಗಳಿಂದಲೂ ತಯಾರಿಸಲಾಗಿದೆ.

ಮಧ್ಯ ಹಳೆಶಿಲಾಯುಗದಿಂದ ಯಾವುದೇ ಮಧ್ಯಂತರವಿಲ್ಲದೆ ಅಂತ್ಯ ಹಳೆಶಿಲಾಯುಗ ಆರಂಭಗೊಂಡಿತು. ಹಿಂದಿನ ಅನೇಕ ಉಪಕರಣಗಳು ಮುಂದುವರೆದವು. ಬದಿ ಮೊಂಡಾಗಿಸಿದ ಉಪಕರಣಗಳು, ಕೊರೆಯುಳಿ ಹಾಗೂ ತೆಳುವಾದ ಚಿಕ್ಕ ಅಲಗುಗಳು ಬಳಕೆಗೆ ಬಂದವು.

ಸೂಕ್ಷ್ಮಶಿಲಾಯುಗದಲ್ಲಿ ಈ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚಿತು. ಅನೇಕ ಕಲ್ಲಾಸರೆ ಮತ್ತು ಗವಿಗಳು ವಾಸಸ್ಥಾನಗಳಾಗಿ ಮಾರ್ಪಾಟಾದವು. ಮಾನವರ ಸಮಾಧಿಗಳಲ್ಲದೆ ಕಲ್ಲಾಸರೆಗಳ ಮೇಲೆ ಬಿಡಿಸಿದ ವರ್ಣಚಿತ್ರಗಳು ಈ ಹಂತದ ವೈಶಿಷ್ಟ್ಯವಾಗಿವೆ. ವರ್ಣಚಿತ್ರಗಳಲ್ಲಿ ಕಂಡುಬರುವ ದೃಶ್ಯಗಳಿಂದ ಸಮಕಾಲೀನ ಸಾಮಾಜಿಕ ಹಾಗೂ ಧಾರ್ಮಿಕ ಜೀವನಶೈಲಿಯ ಬಗೆಗೆ ಹೆಚ್ಚಿನ ಮಾಹಿತಿಗಳು ದೊರೆತಿವೆ. ಅಲ್ಲದೆ ಕಲ್ಲಾಸರೆಯ ಶಿಲಾಯುಗದ ಜನರ ಹಾಗೂ ಬಯಲು ಪ್ರದೇಶದ ರೈತಾಪಿ ಜನರ ನಡುವಣ ಸಂಬಂಧದ ಬೆಳವಣಿಗೆಯ ಬಗ್ಗೆಯೂ ಈ ಚಿತ್ರಗಳಿಂದ ಹೊಸ ಮಾಹಿತಿ ದೊರೆತಿದೆ. ಈ ಕಾಲದ ಸ್ತರಗಳಿಂದ ಸಮಕಾಲೀನ ವಾತಾವರಣದ ಮೇಲೆ ಬೆಳಕು ಚೆಲ್ಲುವ ಕುರುಹುಗಳನ್ನು ಸಂಗ್ರಹಿಸಲಾಗಿದೆ. ಈ ಕಾಲದಲ್ಲಿ ಚಕಮಕಿ ಮತ್ತು ಬೆಣಚುಕಲ್ಲುಗಳನ್ನು ಉಪಕರಣ ತಯಾರಿಕೆಯಲ್ಲಿ ಮೊದಲ ಬಾರಿಗೆ ಬಳಸಲಾಯಿತು. ವಿವಿಧ ಪ್ರಕಾರದ ಅಲಗು, ಮೊನೆಗಳು, ಅರ್ಧಚಂದ್ರಾಕೃತಿ, ತ್ರಿಕೋನ, ಅಸಮ ಚತುರ್ಭುಜ, ಬಾಣದ ತುದಿಗಳು ಇಲ್ಲಿವೆ. ಇವುಗಳಲ್ಲದೆ ಹೆರೆಚಕ್ಕೆಗಳು, ರಂಧ್ರಕ, ಉಳಿಯಾಕಾರದ ಉಪಕರಣ, ಮುಕ್ಕಾದ ಚಕ್ಕೆಗಳು ಹಾಗೂ ತಿರುಳುಗಲ್ಲಿನಿಂದ ತಯಾರಿಸಿದ ಉಪಕರಣಗಳು ಬಳಕೆಯಲ್ಲಿದ್ದವು. ಈ ಕಾಲದ ಆರಂಭದ ಹಂತದಲ್ಲಿ ಅಲಗುಗಳು ಉದ್ದವಾಗಿ, ಅಗಲವಾಗಿ, ದಪ್ಪವಾಗಿವೆ. ನಿರ್ದಿಷ್ಟ ರೇಖಾಕೃತಿಯಾಕಾರದ ಉಪಕರಣಗಳು ಕಡಿಮೆ ಸಂಖ್ಯೆಯಲ್ಲಿವೆ. ಕಾಲಾಂತರದಲ್ಲಿ ಅಲಗುಗಳು ಚಿಕ್ಕದಾಗಿ ಹಾಗೂ ಸಮಬಾಹ್ಯವುಳ್ಳವಾದುವು. ಇಲ್ಲಿ ದೊರೆತ ತಿರುಳುಗಳಿಂದ ತಂತ್ರಜ್ಞಾನದಲ್ಲಿ ಪಡೆದ ನಿಪುಣತೆಯ ಅರಿವಾಗುತ್ತದೆ. ವಿಶೇಷ ಸಂಗತಿಯೆಂದರೆ, ಎಲುಬು ಹಾಗೂ ಜಿಂಕೆಕೊಂಬಿನಿಂದ ತಯಾರಿಸಿದ ಮೊನೆಗಳನ್ನೂ ಇವರು ಬಳಸುತ್ತಿದ್ದರು. ಚಕಮಕಿ ಹಾಗೂ ಬೆಣಚುಕಲ್ಲುಗಳು ಭೀಂಬೇಟ್ಕದ ಆಗ್ನೇಯಕ್ಕೆ ಸು.2ಕಿಮೀ ದೂರದಲ್ಲಿರುವ ಬಡಬೇಡಾ ಗ್ರಾಮದಲ್ಲಿ ದೊರೆಯುತ್ತವೆ. ಇಲ್ಲಿಂದಲೇ ಈ ಕಲ್ಲುಗಳನ್ನು ತಂದಿದ್ದಿರಬೇಕು. ಸೂಕ್ಷ್ಮಶಿಲಾಯುಗದ ಜನರು ಆಹಾರ ತಯಾರಿಕೆಯ ಸಾಧನಗಳಾಗಿ ಕುಟ್ಟುವ ಒನಕೆ ಹಾಗೂ ಅರೆಯುವ ಕಲ್ಲುಗಳನ್ನು ಉಪಯೋಗಿಸುತ್ತಿದ್ದರು. ಸೂಕ್ಷ್ಮಶಿಲಾಯುಗದ ಸ್ತರಗಳಲ್ಲಿ ಕೆಮ್ಮಣ್ಣು ಹಾಗೂ ಹೆಮಟೈಟ್ ಖನಿಜಗಳ ತುಂಡುಗಳು ದೊರಕಿವೆ. ಈ ಖನಿಜಗಳಿಂದ ತಯಾರಿಸಿದ ಬಣ್ಣಗಳಿಂದ ಇವರು ತಾವು ವಾಸಿಸುವ ಗವಿ ಮತ್ತು ಕಲ್ಲಾಸರೆಗಳನ್ನು ವಿವಿಧ ಚಿತ್ರಗಳಿಂದ ಅಲಂಕರಿಸಿದರು. ಈ ಕಾಲದಲ್ಲಿ ಶವವನ್ನು ವಾಸಸ್ಥಳದ ನೆಲಗಟ್ಟಿನಲ್ಲಿ ಹೂಳುವ ಕಟ್ಟಳೆ ಇದ್ದಿತ್ತು. ಕಳೇಬರವನ್ನು ನೇರ ಇಲ್ಲವೆ ಕೈಕಾಲು ಮಡಿಸಿದ ಭಂಗಿಯಲ್ಲಿಡಲಾಗುತ್ತಿತ್ತು. ಸಾಮಾನ್ಯವಾಗಿ ತಲೆಭಾಗ ಪೂರ್ವದಿಕ್ಕಿನಲ್ಲಿರುತ್ತಿತ್ತು. ಶವದ ಜೊತೆಗೆ ಅರೆಯುವ ಕಲ್ಲು, ಜಿಂಕೆಕೊಂಬುಗಳು, ಎಲುಬಿನ ಉಪಕರಣಗಳು, ಹೆಮಟೈಟ್ ಖನಿಜದ ತುಂಡುಗಳನ್ನು ಇಡಲಾಗುತ್ತಿತ್ತು. ಅಸ್ಥಿಪಂಜರಗಳು ಬಹಳಷ್ಟು ಲುಪ್ತವಾಗಿವೆ. ಸೂಕ್ಷ್ಮಶಿಲಾಯುಗದ ಜನರು ನಿರಂತರವಾಗಿ ಬೆಂಕಿಯನ್ನು ಉಪಯೋಗಿಸುತ್ತಿದ್ದರು ಎಂಬುದಕ್ಕೆ ಬೂದಿ, ಇದ್ದಿಲು, ಪ್ರಾಣಿಗಳ ಸುಟ್ಟಎಲುಬುಗಳು, ಜಿಂಕೆಯ ಸುಟ್ಟ ಕೊಂಬುಗಳು ಆಧಾರವಾಗಿವೆ.

ಕೆಲವೊಂದು ಗವಿಗಳಲ್ಲಿರುವ ಕಟ್ಟಡದ ಅವಶೇಷಗಳು ಸೂಕ್ಷ್ಮಶಿಲಾಯುಗದ ನಿರ್ಮಾಣ ಜ್ಞಾನವನ್ನು ಪ್ರತಿಬಿಂಬಿಸುತ್ತವೆ. ನೆಲಗಟ್ಟನ್ನು ಚಪ್ಪಟೆಕಲ್ಲಿನ ಬಂಡೆಗಳಿಂದ ತಯಾರಿಸುತ್ತಿದ್ದರು. 3–ಎಫ್–23 ಸಂಖ್ಯೆಯ ಗವಿಯಲ್ಲಿ 1 ಮೀ ಅಗಲ ಹಾಗೂ 6 ಮೀ ಉದ್ದದ ಒಂದು ಅಡ್ಡಗೋಡೆಯನ್ನು ದುಂಡುಕಲ್ಲುಗಳಿಂದ ಕಟ್ಟಲಾಗಿದೆ. ಈ ಗೋಡೆ ಗವಿಯ ಒಳಭಾಗವನ್ನು ಎರಡು ಭಾಗಗಳಾಗಿ ವಿಂಗಡಿಸುತ್ತದೆ.

ಸೂಕ್ಷ್ಮಶಿಲಾಯುಗ ಹಂತದ ಮಧ್ಯಭಾಗದಿಂದಲೇ ತಾಮ್ರದ ಉಪಕರಣಗಳು ಹಾಗೂ ತಾಮ್ರ–ಶಿಲಾಯುಗದ ವರ್ಣಚಿತ್ರಿತ ಹಾಗೂ ಚಿತ್ರರಹಿತ ಮಣ್ಪಾತ್ರೆಗಳು ದೊರಕಿವೆ. ಬಯಲು ಪ್ರದೇಶದಲ್ಲಿ ಬೇಸಾಯ ಮಾಡಿಕೊಂಡು ದನಕರುಗಳನ್ನು ಸಾಕಿ ಜೀವನ ನಡೆಸುತ್ತಿದ್ದ ತಾಮ್ರ–ಶಿಲಾಯುಗದ ಜನರ ಹಾಗೂ ಬೇಟೆಯಾಡಿ ಹೊಟ್ಟೆಹೊರೆಯುವ ಅರೆಅಲೆಮಾರಿ ಗಳಾದ ಗವಿಯ ಜನರ ನಡುವೆ ಇದ್ದ ಸಂಬಂಧವನ್ನು ಇಲ್ಲಿಯ ಕಲ್ಲಾಸರೆಗಳ ಮೇಲೆ ಬಿಡಿಸಿದ ಚಿತ್ರಶೈಲಿ ಹಾಗೂ ತಾಮ್ರ–ಶಿಲಾಯುಗದ ಮಣ್ಪಾತ್ರೆಗಳ ಹೊರಮೈಯಲ್ಲಿ ಬಿಡಿಸಿದ ಚಿತ್ರಶೈಲಿಯಲ್ಲಿರುವ ಸಾಮ್ಯದಿಂದ ತಿಳಿಯಬಹುದಾಗಿದೆ.

ಮೇಲಿನ ಸ್ತರಗಳಲ್ಲಿ ಇತಿಹಾಸ ಕಾಲಕ್ಕೆ ಸಂಬಂಧಪಟ್ಟ ಚಿತ್ರರಹಿತ ಹಾಗೂ ಸಾದಾ ಮಣ್ಪಾತ್ರೆಗಳು, ಕಬ್ಬಿಣದ ಉಪಕರಣಗಳು ಹಾಗೂ ಆಹತಮುದ್ರೆಯ ನಾಣ್ಯಗಳು ದೊರಕಿವೆ.

ಇಲ್ಲಿರುವ ಕಲ್ಲುಚಪ್ಪಡಿಗಳಿಂದ ಕಟ್ಟಲ್ಪಟ್ಟ ಅನೇಕ ವೃತ್ತಾಕಾರದ ಕಟ್ಟಡಗಳು ಬೌದ್ಧ ಸ್ತೂಪಗಳ ಅವಶೇಷಗಳೆಂದು ಕಾಣುತ್ತವೆ. ಭೀಂಬೇಟ್ಕದ ಸುತ್ತಮುತ್ತಲ ಸ್ಥಾನಗಳು ಬೌದ್ಧಕೇಂದ್ರ ಗಳಾಗಿದ್ದವು. ಇಲ್ಲಿಂದ ಸು.20 ಕಿಮೀ ದೂರದಲ್ಲಿರುವ ಪಂಗೊರರಿಯದಲ್ಲಿ ದೊಡ್ಡ ಸ್ತೂಪಗಳ ನಡುವೆ ಅಶೋಕನ ಶಿಲಾಶಾಸನವಿದೆ. ಭೀಂಬೇಟ್ಕ ಬೆಟ್ಟಗಳಲ್ಲಿ ಗುಪ್ತರಕಾಲದ ಶಾಸನಗಳಲ್ಲದೆ ಶಂಖಲಿಪಿಯ ಆಲೇಖಗಳೂ ದೊರಕಿವೆ. ತಪ್ಪಲಿನ ಪ್ರದೇಶದಲ್ಲಿ ಪರಮಾರರ ಕಾಲಕ್ಕೆ ಸಂಬಂಧಪಟ್ಟ ದೇವಾಲಯಗಳ ಭಗ್ನಾವಶೇಷಗಳೂ ಇವೆ.

ಈ ಬೆಟ್ಟಗಳಿಂದ ಹುಟ್ಟುವ ಸಣ್ಣ ನದಿಕೊಳ್ಳಗಳಲ್ಲಿ ಹಾಗೂ ಸುತ್ತಮುತ್ತಲಿನ ಅರಣ್ಯಗಳಲ್ಲಿ ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ ಹಾಗೂ ಸೂಕ್ಷ್ಮಶಿಲಾಯುಗದ ಅನೇಕ ಬಯಲು ಬಿಡಾರದ ನೆಲೆಗಳನ್ನು ಕಂಡುಹಿಡಿಯಲಾಗಿದೆ.

ಗವಿಚಿತ್ರಗಳು: ಈ ಪ್ರದೇಶ ಗವಿ ವರ್ಣಚಿತ್ರಗಳಿಗೆ ಹೆಚ್ಚು ಪ್ರಸಿದ್ಧಿಯಾಗಿದೆ. ಕೆಲವು ಕಲ್ಲಾಸರೆಗಳಲ್ಲಿ ಕೇವಲ ಒಂದೆರಡು ಚಿತ್ರಗಳಿದ್ದರೆ ಇನ್ನು ಕೆಲವೆಡೆ ಸು.10 ಮೀ ಉದ್ದಕ್ಕೂ ಹೆಚ್ಚಿನ ಭಿತ್ತಿಭಾಗವನ್ನು ಚಿತ್ರಗಳಿಂದ ಒತ್ತಾಗಿ ಅಲಂಕರಿಸಲಾಗಿದೆ. ಚಿತ್ರಗಳು ಹೆಚ್ಚಾಗಿ ಕೆಂಪು ಅಥವಾ ಬಿಳಿಬಣ್ಣಗಳಲ್ಲಿವೆ. ಅಪರೂಪವಾಗಿ ಹಸುರು ಅಥವಾ ಹಳದಿ ಬಣ್ಣಗಳಿಂದಲೂ ಬಿಡಿಸಿದ್ದು ಕಾಣುತ್ತದೆ. ಚಿತ್ರಗಳನ್ನು ಪ್ರಾಗೈತಿಹಾಸಿಕ ಕಾಲ, ಪೂರ್ವಭಾವಿ ಇತಿಹಾಸಕಾಲ ಹಾಗೂ ಇತಿಹಾಸ ಕಾಲದವೆಂದು ವರ್ಗೀಕರಿಸಲಾಗಿದೆ.

ಪ್ರಾಗೈತಿಹಾಸಿಕ ಕಾಲದಲ್ಲಿ ವನ್ಯಮೃಗಗಳ ಚಿತ್ರಗಳು ವಿಪುಲವಾಗಿವೆ. ವಿವಿಧ ಪ್ರಕಾರದ ಜಿಂಕೆಗಳು, ಹುಲಿ, ಕಾಡೆಮ್ಮೆ, ಆನೆ, ಖಡ್ಗಮೃಗ, ಕಾಡುಹಂದಿ, ಸಾರಂಗ, ನೀಲಗಾಯ್ ಮುಂತಾದ ಪ್ರಾಣಿಗಳನ್ನು ಸುಂದರ ದೃಶ್ಯಗಳಲ್ಲಿ ಸೆರೆಹಿಡಿಯಲಾಗಿದೆ. ಇವನ್ನು ಏಕಾಂಗಿಯಾಗಿ ಇಲ್ಲವೆ ಗುಂಪಿನಲ್ಲಿ ತೋರಿಸಲಾಗಿದೆ. ಈ ಪ್ರಾಣಿಗಳನ್ನು ಚಿತ್ರಕಾರ ವಿವಿಧ ಭಂಗಿಗಳಲ್ಲಿ ಚಿತ್ರಿಸಿದ್ದಾನೆ. ಕೆಲಪ್ರಾಣಿಗಳು ಹುಲ್ಲು ಮೇಯುತ್ತಿರುವವು; ಕೆಲವನ್ನು ನಿಂತ, ಚಲಿಸುವ ಅಥವಾ ಓಡುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ಪ್ರಾಣಿಗಳ ದೇಹವನ್ನು ಹೆಚ್ಚಾಗಿ ರೇಖೆಯಿಂದ ಬಿಡಿಸಲಾಗಿದ್ದು, ಒಳಮೈಭಾಗವನ್ನು ಪೂರ್ತಿಯಾಗಿ ಇಲ್ಲವೆ ಅರ್ಧಭಾಗವನ್ನಷ್ಟೆ ಬಣ್ಣದಿಂದ ತುಂಬಲಾಗಿದೆ. ಕೆಲವೊಮ್ಮೆ ಒಳಮೈಭಾಗವನ್ನು ಉದ್ದನೆಯ ಮತ್ತು ಲಂಬರೇಖೆಗಳಿಂದ ಅಥವಾ ತರಂಗಗಳಂತಹ ರೇಖೆಗಳಿಂದ, ವಜ್ರದಾಕಾರವನ್ನು ಹೋಲುವ ವಿನ್ಯಾಸಗಳಿಂದ ತುಂಬಲಾಗಿದೆ. ಇಂತಹ ಚಿತ್ರಗಳು ಕೆಲವೊಂದೆಡೆ ಪುಟ್ಟದಾಗಿದ್ದರೆ ಇನ್ನೊಂದೆಡೆ ಪ್ರಾಣಿಗಳ ಸಜೀವ ಆಕಾರದಷ್ಟು ದೊಡ್ಡದಾಗಿವೆ. ಪ್ರಾಣಿಗಳು ನೋಡಲು ದಷ್ಟಪುಷ್ಟವಾಗಿದ್ದು ಜೀವಂತ ಚಿತ್ರಗಳಂತೆ ತೋರುತ್ತವೆ. ಪ್ರಾಗೈತಿಹಾಸಿಕ ಮಾನವರು ಬೇಟೆಯಾಡುತ್ತಿರುವ ದೃಶ್ಯಗಳನ್ನೂ

ಇಲ್ಲಿ ಕಾಣಬಹುದು. ಬೇಟೆಗಾರರು ಕೈಯಲ್ಲಿ ಈಟಿ, ಬಿಲ್ಲು ಮತ್ತು ಬಾಣಗಳನ್ನು ಹಿಡಿದಿರುವರು. ಕೆಲವು ಪ್ರಾಣಿಗಳು ಕಾಲ್ಪನಿಕ ಪ್ರಾಣಿಗಳೆಂದು ತೋರುತ್ತವೆ. ಉದಾ: ಒಂದು ಪ್ರಾಣಿಯನ್ನು ಅನೇಕ ಪ್ರಾಣಿಗಳ ಅಂಗಾಂಗಗಳನ್ನು ಜೋಡಿಸಿ ಬಿಡಿಸಲಾಗಿದೆ.

ಮಾನವರ ಚಿತ್ರಗಳು ಮಾತ್ರ ನೈಜವಾಗಿರದೆ ಕೋಲುಗಳಂತೆ ಕಾಣುತ್ತವೆ. ದೇಹದ ಒಳಭಾಗವನ್ನು ಬಣ್ಣದಿಂದ ತುಂಬಲಾಗಿದೆ. ಏಕಾಂಗಿಯಾಗಿ ಇಲ್ಲವೆ ಗುಂಪಿನಲ್ಲಿ ಬೇಟೆಯಾಡುತ್ತಿರುವುದು, ಆಹಾರಕ್ಕಾಗಿ ಹಣ್ಣುಹಂಪಲಗಳನ್ನು ಶೇಖರಿಸುತ್ತಿರುವುದು, ಚಲಿಸುವ, ಓಡುವ ಹಾಗೂ ಇನ್ನಿತರ ಕಾರ್ಯಗಳಲ್ಲಿ ಮಾನವರು ತೊಡಗಿರುವ ದೃಶ್ಯಗಳನ್ನು ಕಾಣಬಹುದು. ಕೆಲವು ಚಿತ್ರಗಳು ವಿಶೇಷ ಸನ್ನಿವೇಶವನ್ನು ಎತ್ತಿ ತೋರಿಸುವವು; ರೋಗಿಯ ಶುಶ್ರೂಷೆಯನ್ನು ಮಾಡುವುದು ಅಥವಾ ತೀರಿಹೋದ ಮಗುವಿನ ಶವದ ಮುಂದೆ ರೋಧಿಸುವುದು ಇತ್ಯಾದಿ. ಸ್ತ್ರೀಯರ ಚಿತ್ರಗಳು ಹೆಚ್ಚಾಗಿ ಹೊಟ್ಟೆ ಊದಿಕೊಂಡಿದ್ದು ಗರ್ಭಿಣಿಯರಂತೆ ಕಾಣುತ್ತವೆ.

ಪೂರ್ವಭಾವಿ ಇತಿಹಾಸ ಕಾಲದ (ತಾಮ್ರ–ಶಿಲಾಯುಗ) ಜನರು ರಚಿಸಿದ ಚಿತ್ರಗಳಲ್ಲಿ ಸಮಕಾಲೀನ ಸಾಮಾಜಿಕ ಜೀವನದೃಶ್ಯಗಳನ್ನು ಕಾಣಬಹುದು. ಸಾಕುಪ್ರಾಣಿಗಳನ್ನು ಮೇಯಿಸುವ, ದನಗಳ ಸವಾರಿ ಮಾಡುತ್ತಿರುವ ಸನ್ನಿವೇಶಗಳನ್ನು ಇಲ್ಲಿ ಹೆಸರಿಸಬಹುದು. ಪ್ರಾಣಿಗಳ ಒಳಮೈಭಾಗವನ್ನು ಅಲಂಕರಿಸಿರುವ ರೇಖಾಚಿತ್ರಗಳು ಸಮಕಾಲೀನ ಮಣ್ಪಾತ್ರೆಗಳ ಮೇಲೆ ಬಿಡಿಸಿದ ವರ್ಣಚಿತ್ರಗಳನ್ನು ಹೋಲುತ್ತವೆ. ಈ ಕಾಲದ ಪ್ರಾಣಿಚಿತ್ರಗಳು ನೈಜತೆಯನ್ನು ಕಳೆದುಕೊಂಡು ಸಾಂಕೇತಿಕವಾಗಿವೆ.

ಐತಿಹಾಸಿಕ ಕಾಲದ ಚಿತ್ರಗಳಲ್ಲಿ ವನ್ಯಮೃಗಗಳಿಗೆ ಸ್ಥಾನವಿಲ್ಲ. ಇಲ್ಲಿ ಯುದ್ಧ ಸನ್ನಿವೇಶಗಳನ್ನು ಬಿಡಿಸಲಾಗಿದೆ. ಆನೆ ಮತ್ತು ಕುದುರೆಗಳ ಮೇಲೆ ಅಂಬಾರಿಕಟ್ಟಿ ಸವಾರರು ಮೆರವಣಿಗೆ ಮಾಡುತ್ತಿರುವುದು, ಯುದ್ಧಕ್ಕೆ ಸನ್ನದ್ಧರಾದ ಯೋಧರು ಕೈಯಲ್ಲಿ ಈಟಿ, ಬಿಲ್ಲು–ಬಾಣ, ಕತ್ತಿಗಳನ್ನು ಹಿಡಿದು ಕಾದಾಡುತ್ತಿರುವುದು ಮತ್ತು ಬೇಟೆಯಾಡುವ ಚಿತ್ರಗಳಲ್ಲದೆ ಸಮೂಹನೃತ್ಯ, ರೇಖಾಚಿತ್ರಗಳು, ಸೂರ್ಯ ಹಾಗೂ ಇನ್ನಿತರ ಚಿತ್ರಗಳನ್ನು ಬಿಡಿಸಲಾಗಿವೆ. ಈ ಕಾಲದಲ್ಲಿಯೂ ಚಿತ್ರಕಲೆ ಪ್ರಾರಂಭದ ಸಹಜ ರೂಪವನ್ನು ಕಳೆದುಕೊಂಡು ಸಾಂಕೇತಿಕವಾಗಿ ಕಾಣುತ್ತದೆ. ಜೊತೆಯಲ್ಲಿ ಗುಪ್ತವಂಶದ ಶಾಸನಗಳು ಹಾಗೂ ಶಂಖ ಲಿಪಿಯ ಬರೆಹಗಳು ಕಾಣಸಿಗುವುದರಿಂದ ಈ ಚಿತ್ರಗಳನ್ನು ಗುಪ್ತರ ಕಾಲಕ್ಕೆ ಸೇರಿಸಬಹುದು.

(ಎಲ್.ಎಸ್.ಆರ್.)

ಈ ಚಿತ್ರಗಳನ್ನು ಏಳು ಹಂತಗಳಾಗಿಯೂ ವಿಂಗಡಿಸಬಹುದು. ಮೊದಲ ಹಂತದ ಚಿತ್ರಗಳು ಹಸುರು ಮತ್ತು ಕಡುಗೆಂಪು ಬಣ್ಣಗಳಲ್ಲಿದ್ದು ಕಾಡೆಮ್ಮೆ, ಹುಲಿ, ಖಡ್ಗಮೃಗಗಳು ಮೊದಲಾದ ದೊಡ್ಡ ಪ್ರಾಣಿಗಳನ್ನು ಬಿಡಿಸಲಾಗಿದೆ. ಶೈಲಿ ಮತ್ತು ವಿಷಯಗಳ ಆಧಾರದ ಮೇಲೆ ಇವು ಅಂತ್ಯ ಹಳೆಶಿಲಾಯುಗ ಕಾಲದವಾಗಿವೆ. ಇವು ಸು. 12000 ವರ್ಷ ಹಿಂದಿನವು. ಸೂಕ್ಷ್ಮಶಿಲಾಯುಗದ ಚಿತ್ರಗಳಲ್ಲಿ ಪ್ರಾಣಿಗಳಲ್ಲದೆ ಮಾನವಾಕೃತಿಗಳು, ಬೇಟೆ ದೃಶ್ಯ, ಮುಳ್ಳಿನ ಭರ್ಜಿ, ಚೂಪಾದ ಉದ್ದನೆ ಕೋಲುಗಳು, ಬಿಲ್ಲು ಮತ್ತು ಬಾಣಗಳನ್ನು ಹಿಡಿದಿರುವ ಬೇಟೆಗಾರರು, ಸಮೂಹ ನೃತ್ಯ, ಪಕ್ಷಿಗಳು, ಸಂಗೀತ ವಾದ್ಯಗಳು, ತಾಯಿ–ಮಗು, ಗರ್ಭಿಣಿ ಸ್ತ್ರೀ, ಸತ್ತಪ್ರಾಣಿಯನ್ನು ಹೊತ್ತಿರುವ ಮನುಷ್ಯರು, ಪಾನದೃಶ್ಯ ಮತ್ತು ಶವಸಂಸ್ಕಾರದ ಚಿತ್ರಗಳಿವೆ. 3ನೆಯ ಹಂತದ ಚಿತ್ರಗಳು ತಾಮ್ರ–ಶಿಲಾಯುಗ ಸಂಸ್ಕೃತಿಯವು. 4–5ನೆಯ ಹಂತಗಳ ಚಿತ್ರಗಳಲ್ಲಿ ಅಲಂಕರಣಗಳು ಹೆಚ್ಚಾಗಿ ಇರುತ್ತವೆ. ಇವು ಕಾವಿ ಮತ್ತು ಹಳದಿ ಬಣ್ಣಗಳಲ್ಲಿವೆ. ಕುದುರೆ ಸವಾರರು, ಧಾರ್ಮಿಕ ಚಿಹ್ನೆಗಳು, ಒಳ ಅಂಗಿ ಧರಿಸಿದ ವ್ಯಕ್ತಿಗಳು ಮತ್ತು ಬರೆಹಗಳು ಇರುತ್ತವೆ. ಧಾರ್ಮಿಕ ಚಿತ್ರಗಳಲ್ಲಿ ಯಕ್ಷರು, ವೃಕ್ಷದೇವತೆಗಳು ಮತ್ತು ಆಕಾಶಯಾನ ರಥಗಳು ಮುಂತಾದವು ಇರುತ್ತವೆ. ಇವು ಆದಿ ಇತಿಹಾಸ ಕಾಲದವು. 6–7ನೆಯ ಹಂತಗಳ ಚಿತ್ರಗಳು ವಿಶೇಷವಾಗಿ ರೇಖಾಚಿತ್ರಗಳು. ಆದರೆ ಈ ಚಿತ್ರಕಲೆಯಲ್ಲಿ ಅವನತಿ ಮತ್ತು ಒರಟುತನ ಕಾಣುತ್ತದೆ. ಇವು ಪ್ರಾಯಶಃ ಮಧ್ಯಯುಗೀನ ಕಾಲದವು.

ಈ ಚಿತ್ರಗಳ ಬಣ್ಣವನ್ನು ಮ್ಯಾಂಗನೀಸ್, ಹೆಮಟೈಟ್, ಮೃದುಕೆಂಪುಕಲ್ಲು ಅಥವಾ ಇದ್ದಲುಗಳನ್ನು ಪ್ರಾಣಿಗಳ ಕೊಬ್ಬು ಅಥವಾ ಹಸುರು ಎಲೆಗಳ ರಸದ ಜೊತೆಗೆ ಮಿಶ್ರ ಮಾಡಿ ತಯಾರಿಸಿಕೊಳ್ಳಲಾಗಿದೆ. ನಾರಿನ ಗಿಡಗಳಿಂದ ತಯಾರಿಸಿದ ಕುಂಚಗಳನ್ನು ಬಳಸಲಾಗಿದೆ. ಈ ಬಣ್ಣಗಳು ಈವರೆಗೆ ಉಳಿದಿರುವುದಕ್ಕೆ ಕಾರಣ ಕಲ್ಲಿನ ಮೇಲ್ಮೈಯಲ್ಲಿನ ಆಕ್ಸೈಡ್‌ನ ರಾಸಾಯನಿಕ ಕ್ರಿಯೆ ಎಂದು ತಿಳಿದುಬಂದಿದೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಕೆಲವು ಆಯ್ದ ಗವಿ ಮತ್ತು ಕಲ್ಲಾಸರೆ ಸಂಕೀರ್ಣಗಳನ್ನು ರಕ್ಷಿತ ಸ್ಮಾರಕಗಳೆಂದು ಘೋಷಿಸಿದೆ. ಇತ್ತೀಚೆಗೆ ವಿಶ್ವಸಂಸ್ಥೆ ಇದನ್ನು ವಿಶ್ವಪರಂಪರೆ ನೆಲೆಯೆಂದು ಗುರುತಿಸಿದೆ. (ಎ.ಎಸ್.;ಎನ್.ಎಲ್.)

**ಭುವನೇಶ್ವರ:** ಒರಿಸ್ಸ ರಾಜ್ಯದ ರಾಜಧಾನಿ. ಯೋಜನಾಬದ್ಧವಾಗಿ ನಿರ್ಮಿಸಿದ ಹೊಸನಗರ. ಆದರೆ ವರ್ತಮಾನದಲ್ಲಿ ಆಡಳಿತ ದೃಷ್ಟಿಯಲ್ಲಿ ದೇವಾಲಯ ಮತ್ತು ಕೆರೆ–ಕೊಳಗಳ ನಗರವೆಂದೇ ಪ್ರಸಿದ್ಧವಾದ ಹಳೆಯ ಭುವನೇಶ್ವರವು ಖುರ್ದಾ ಜಿಲ್ಲೆಯ ಭಾಗವಾಗಿದೆ. ಭುವನೇಶ್ವರ ಕೇವಲ ಯಾತ್ರಾಸ್ಥಳವಾಗಿರದೆ ಪ್ರಾಚೀನ ಕಳಿಂಗ ನಾಡಿನ ವಾಸ್ತುಶಿಲ್ಪದ ಹುಟ್ಟು ಮತ್ತು ಅದರ ಪರಿಪೂರ್ಣ ಬೆಳವಣಿಗೆಯ ಒಂದು ಪ್ರಯೋಗಶಾಲೆ. ಅಲ್ಲದೆ ಒರಿಸ್ಸದ ಅನೇಕ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ಭುವನೇಶ್ವರವೂ ಒಂದು. ಇಲ್ಲಿರುವ ದೇವಾಲಯಗಳು ಅವುಗಳ ವಾಸ್ತುಶಿಲ್ಪ ಕಲೆಗಳು ಅವುಗಳ ನಿರ್ಮಾಣ ಕೌಶಲ್ಯದಿಂದ ಪ್ರಸಿದ್ಧವಾಗಿದೆ. ಕಲೆಯ ಆರಾಧಕರಿಗೆ ಹಾಗೂ ಪಂಡಿತರಿಗೆ ಭುವನೇಶ್ವರ ಒಂದು ಮಹತ್ವದ ತಾಣ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಹಾಗೂ ರಾಜ್ಯಸರ್ಕಾರದ ಪುರಾತತ್ವ ಇಲಾಖೆ ಇಲ್ಲಿಯ ಹಲವಾರು ಪ್ರಮುಖ ದೇವಾಲಯಗಳನ್ನು ಸಂರಕ್ಷಿತ ಸ್ಮಾರಕಗಳೆಂದು ಘೋಷಿಸಿವೆ. ಹಲವಾರು ದೇವಾಲಯಗಳು ಪಾಳುಬಿದ್ದಾಗ್ಯೂ ತಮ್ಮ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಪ್ರತಿಬಿಂಬಿಸುತ್ತಿವೆ. ಇಲ್ಲಿಗೆ ಸು.8ಕಿಮೀ ದೂರದಲ್ಲಿರುವ ಧವಲಿಯೆಂಬ ಸ್ಥಳದಲ್ಲಿ ಮೌರ್ಯ ವಂಶದ ಸಾಮ್ರಾಟ ಅಶೋಕನಿಂದ (ಪ್ರ.ಶ.ಪೂ.ಸು. 279–36) ಬರೆಸಲ್ಪಟ್ಟ ಭಾರತದ ಪ್ರಾಚೀನ ಶಿಲಾಲೇಖಗಳನ್ನು ಕಾಣಬಹುದು. ಅಶೋಕನ ಹದಿನಾಲ್ಕು ಶಿಲಾಶಾಸನಗಳ ಪೈಕಿ ಹನ್ನೊಂದನ್ನು ಮಾತ್ರ ಇಲ್ಲಿಯ ಬಂಡೆಯ ಮೇಲೆ ಕಾಣಬಹುದು. ಈ ಶಾಸನಗಳ ಸ್ಥಾನದಿಂದ ಸ್ವಲ್ಪ ಎತ್ತರದಲ್ಲಿರುವ ಒಂದು ಬಂಡೆಯಲ್ಲಿ ಆನೆಯ ಮುಂಭಾಗವನ್ನು ಕೆತ್ತಲಾಗಿದೆ. ಆದರೆ ಕಳಿಂಗ ಯುದ್ಧದ ವರ್ಣನೆ ಮತ್ತು ಅದರ ದುಷ್ಪರಿಣಾಮಗಳನ್ನು ಕುರಿತು ವರ್ಣಿಸುವ ಹದಿಮೂರನೆಯ ಶಾಸನವನ್ನು ಕೇವಲ ಇಲ್ಲಿ ಮಾತ್ರವಲ್ಲ, ಒರಿಸ್ಸದ ಗಂಜಾಂ ಜಿಲ್ಲೆಯ ಜೌಗಢದಲ್ಲಿಯೂ ಉದ್ದೇಶಪೂರ್ವಕವಾಗಿ ಕೆತ್ತಲಾಗಿಲ್ಲವೆಂದು ತಿಳಿದುಬರುತ್ತದೆ.

ಪರಶುರಾಮೇಶ್ವರ ದೇವಾಲಯ

ಕಳಿಂಗ ಯುದ್ಧದಲ್ಲಿ ಇಲ್ಲಿಯ ಜನ ಕಷ್ಟನಷ್ಟ ಮತ್ತು ಪ್ರಾಣಹಾನಿ ಅನುಭವಿಸಿದ್ದು ಒಂದು ಕಾರಣವಾಗಿ ಈ ಪ್ರಾಂತ್ಯದಲ್ಲಿ ತನ್ನ ದಿಗ್ವಿಜಯವನ್ನು ಸಾರುವ ಶಾಸನವನ್ನು ಕೆತ್ತಿಸಲು ಅಶೋಕ ಇಷ್ಟಪಡಲಿಲ್ಲವೆಂದು ಕಾಣುತ್ತದೆ. ಯುದ್ಧದ ದುಷ್ಪರಿಣಾಮಗಳ ಪ್ರಭಾವದಿಂದ ಅಶೋಕ ಸಂಪೂರ್ಣ ಬದಲಾಗಿ ತನ್ನ ಮಹತ್ವಾಕಾಂಕ್ಷೆಯ ದಿಗ್ವಿಜಯವನ್ನು ಧರ್ಮವಿಜಯವನ್ನಾಗಿ ಪರಿವರ್ತಿಸಿದ. ಇಲ್ಲಿ ಹನ್ನೊಂದು, ಹನ್ನೆರಡು ಮತ್ತು ಹದಿಮೂರನೆಯ ಶಿಲಾಶಾಸನಗಳಿಗೆ ಬದಲಾಗಿ ಹೊಸದಾಗಿ ಗೆದ್ದ ರಾಜ್ಯದ ಪ್ರಜೆಗಳನ್ನು ಸಂತೈಸುವ ಸಂದೇಶವನ್ನು ಪ್ರಚಾರಮಾಡುವ ಎರಡು ವಿಶೇಷ ಶಿಲಾಶಾಸನಗಳಿವೆ. ಈ ಶಾಸನಗಳಲ್ಲಿ ಎಲ್ಲಾ ಪ್ರಜೆಗಳು ನನ್ನ ಮಕ್ಕಳೇ ಎಂಬ ಹೇಳಿಕೆಯಿದೆ. ಬುದ್ಧನ ಅಸ್ತಿತ್ವದ ಸಂಕೇತವಾಗಿ ಆನೆಯ ಮುಂಭಾಗ ತನ್ನ ಸಹಜ ಸ್ವರೂಪಕ್ಕೆ, ಕಲೆಯ ನಿರೂಪಣೆಗೆ ಮತ್ತು ಆಕಾರಕ್ಕೆ ಹೆಸರಾಗಿದ್ದ ಒರಿಸ್ಸದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಥಮ ಶಿಲಾಶಿಲ್ಪವಾಗಿದೆ. ಈ ಪ್ರತ್ಯೇಕ ಶಾಸನಗಳಲ್ಲಿ ಉಲ್ಲೇಖಿಸಿದ ತೋಶಾಲಿ ನಗರ ಅಶೋಕ ಸಾಮ್ರಾಟನ ಸಾಮಂತ ರಾಜನ ಸ್ಥಾನವಾಗಿದ್ದಿರಬೇಕು. ಆದರೆ ಇಲ್ಲಿ ನಡೆಸಿದ ಪುರಾತತ್ತ್ವ ಉತ್ಖನನದಲ್ಲಿ ನಗರದ ಖಚಿತ ಪ್ರಮಾಣಗಳು ದೊರೆತಿಲ್ಲ.

ಆದರೆ ಧವಲಿಯಿಂದ ಈಶಾನ್ಯಕ್ಕೆ 5 ಕಿಮೀ ದೂರ ಹಾಗೂ ಭುವನೇಶ್ವರದಿಂದ ಆಗ್ನೇಯ ದಿಕ್ಕಿಗೆ 2.5 ಕಿಮೀ ದೂರದಲ್ಲಿರುವ ಶಿಶುಪಾಲಗಡದಲ್ಲಿ ನಡೆಸಿದ ಉತ್ಖನನದಿಂದ ದೊರೆತ ಪ್ರಮಾಣದಂತೆ ಈ ಸ್ಥಾನದ ಇತಿಹಾಸ ಪ್ರ.ಪೂ. 3ನೆಯ ಶತಮಾನದಲ್ಲಿ ಆರಂಭವಾಗಿ ಪ್ರ.ಶ. 4ನೆಯ ಶತಮಾನದಲ್ಲಿ ಮುಕ್ತಾಯವಾಗುತ್ತದೆ. ಇಲ್ಲಿಯ ಕೋಟೆಯನ್ನು ಸು. ಪ್ರ.ಶ.ಪೂ. 2ನೆಯ ಶತಮಾನದ ಪ್ರಾರಂಭದಲ್ಲಿ ಕಟ್ಟಲಾಗಿದೆ. ಊರಿನ ನಾಲ್ಕು ದಿಕ್ಕುಗಳಲ್ಲಿ ಕಟ್ಟಿದ್ದ ಗೋಡೆಗಳಲ್ಲಿ ಕೇವಲ ಎರಡರಲ್ಲಿ ಪ್ರವೇಶದ್ವಾರಗಳಿವೆ. ಸುಸಜ್ಜಿತ ನಗರ ರಚನೆ ಹಾಗೂ ರಕ್ಷಾಕವಚದ ವಾಸ್ತು ವಿಶೇಷಗಳು ಗಮನಾರ್ಹ. ಇಲ್ಲಿ ಹರಿಯುವ ಗಂಗುವ (ಗಂಧವತಿ) ನದಿ ಈ ಕೋಟೆಯ ಸುತ್ತಲೂ ಆವರಿಸಿ ನಿಸರ್ಗನಿರ್ಮಿತ ಕಂದಕದಂತಿದೆ. ಈ ಸ್ಥಾನವನ್ನು ಮೌರ್ಯ ಕಾಲದ ತೋಶಾಲಿಯೆಂದು ಗುರುತಿಸಲು ಲಿಖಿತ ಪ್ರಮಾಣಗಳ ಅಭಾವವಿದ್ದಾಗ್ಯೂ, ಇಲ್ಲಿಂದ ದೊರೆತ ಮೌರ್ಯಕಾಲದ ಅವಶೇಷಗಳ ಮಹತ್ವವನ್ನು ಅಲ್ಲಗಳೆಯಲೂ ಬರುವುದಿಲ್ಲ. ಮೌರ್ಯಕಾಲದ ಅನಂತರದ ಪುರಾತಾತ್ತ್ವಿಕ ಹಾಗೂ ಶಿಲಾಲೇಖನ ಪುರಾವೆಗಳನ್ನಾಧರಿಸಿ ಶಿಶುಪಾಲಗಡ ಪ್ರಶ.ಪೂ.1ನೆಯ ಶತಮಾನದಲ್ಲಿ ರಾಜ್ಯವಾಳಿದ ಮಹಾಮೇಘವಾಹನ ವಂಶದ ಚೇದಿ ರಾಜರ ರಾಜಧಾನಿ, ಕಳಿಂಗ ನಗರ ಎಂದು ದೃಢಪಡಿಸಲಾಗಿದೆ. ಈ ವಂಶದ ಪ್ರಮುಖ ರಾಜನಾದ ಖಾರವೇಲನ ಉದಯಗಿರಿಯಲ್ಲಿರುವ ಹಾಥಿಗುಂಫ ಶಿಲಾಶಾಸನ ಆತನ ವ್ಯಕ್ತಿತ್ವವನ್ನು ಕುರಿತು ವಿಸ್ತಾರವಾದ

ಮಾಹಿತಿಯನ್ನು ಕೊಡುತ್ತದೆ. ಆತನೊಬ್ಬ ಕೇವಲ ಸ್ವತಂತ್ರ ರಾಜನಾಗಿರದೆ, ತನ್ನ ರಾಜ್ಯದ ವಿಸ್ತರಣೆಯ ಮಹತ್ವಾಕಾಂಕ್ಷಿಯೂ ಆಗಿದ್ದ. ಚೇದಿರಾಜರ ಕಾಲದಲ್ಲಿ ಈ ಪ್ರದೇಶ ಜೈನ ಧರ್ಮದ ನೆಲವೀಡಾಗಿತ್ತು. ಅದಕ್ಕೆ ಪ್ರಮಾಣ ಸ್ವರೂಪವಾಗಿ ಶಿಶುಪಾಲಗಢದಿಂದ 10 ಕಿಮೀ ವಾಯವ್ಯ ದಿಕ್ಕಿನಲ್ಲಿರುವ ಉದಯಗಿರಿ–ಖಂಡಗಿರಿ ಜೈನಗವಿಗಳೇ ಸಾಕ್ಷಿಯಾಗಿವೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1999–2002 ರ ನಡುವೆ ಉದಯಗಿರಿಯಲ್ಲಿ ನಡೆಸಿದ ಉತ್ಖನನದಲ್ಲಿ ಸು.1–13ನೆಯ ಶತಮಾನದವರೆಗಿನ ಸು.150 ಬೌದ್ಧ ನಿರ್ಮಿತಿಗಳ ಒಂದು ಬೃಹತ್ ಸಂಕೀರ್ಣ ಅನಿರೀಕ್ಷಿತವಾಗಿ ಅನಾವರಣಗೊಂಡಿತು. ಕಲ್ಲಿನ ವಿಶಾಲ ಕಟ್ಟೆಯ ಮೇಲೆ ಕಟ್ಟಿದ್ದ ಕಲ್ಲಿನ ಸ್ತೂಪದ ತಳಾವಶೇಷ, ಇಟ್ಟಿಗೆಯಿಂದ ಕಟ್ಟಿದ ಚೈತ್ಯಗೃಹ, ಹಲವಾರು ಹರಕೆ ಸ್ತೂಪಗಳ ಅವಶೇಷ, ಇಟ್ಟಿಗೆ ಕಟ್ಟೆಯ ಮೇಲೆ ನಿರ್ಮಿಸಿದ ಸ್ತೂಪಗಳ ಸಮೂಹ, ಇವನ್ನೆಲ್ಲ ಕೂಡಿಸುವ ಕಿರು ಪಥಗಳು, ಚರಂಡಿ ಹಾಗೂ ಇವೆಲ್ಲವನ್ನೂ ಸುತ್ತುವರೆದ ಕಲ್ಲಿನ ಪ್ರಾಕಾರ ಗೋಡೆಯನ್ನು ಹೊರತೆಗೆಯಲಾಯಿತು. ಅನೇಕ ಶಿಲ್ಪಗಳು, ಶಾಸನಗಳು, 500 ಕ್ಕೂ ಹೆಚ್ಚು ಮುದ್ರಾಂಕನಗಳು, ಲೋಹ ಹಾಗೂ ಸುಡಾವೆ ಮಣ್ಣಿನ ವಸ್ತುಗಳು ಮತ್ತು ಕರಡಿಕೆಗಳು ಈ ನಿರ್ಮಿತಿಗಳಿಂದ ದೊರೆತಂತಹ ಅವಶೇಷಗಳಾಗಿವೆ. ಚೈತ್ಯಗೃಹದಲ್ಲಿ ನಾಲ್ಕು ನಿರ್ಮಾಣ ಹಂತಗಳನ್ನು ಗುರುತಿಸಲಾಗಿದೆ. ಮೂಲತಃ ಗಜಪೃಷ್ಠಾಕಾರದಲ್ಲಿದ್ದ ಚೈತ್ಯವನ್ನು ಅನಂತರ ಕಾಲದಲ್ಲಿ ಆಯತಾಕಾರದಲ್ಲಿ ಪುನರ್ನಿರ್ಮಿಸಲಾಯಿತು. ಇದರೊಳಗೆ ಕಲ್ಲಿನಿಂದ ಕಟ್ಟಿದ್ದ ಒಂದು ಸುಂದರ ಸ್ತೂಪವಿತ್ತು. ಚೈತ್ಯದ ಕೆಲವು ವಾಸ್ತು ಅಂಶಗಳು ಒರಿಸ್ಸದ ಸಮಕಾಲೀನ ದೇವಾಲಯ ವಾಸ್ತುವನ್ನು ಹೋಲುತ್ತವೆ. ಚೈತ್ಯಗೃಹದ ಸುತ್ತ ನಿರ್ಮಿಸಲಾಗಿದ್ದ ಹರಕೆ ಸ್ತೂಪಗಳಲ್ಲಿ ಕೆಲವು ಖೊಂಡಲೈಟ್ ಶಿಲೆಯಿಂದ ಕಟ್ಟಿದವಾದರೆ



ಅನಂತವಾಸುದೇವ ದೇವಾಲಯ

ಇನ್ನು ಕೆಲವು ಇಟ್ಟಿಗೆಯ ನಿರ್ಮಿತಿ. ಇಟ್ಟಿಗೆಯ ಗಾತ್ರದಲ್ಲಿ ವೈವಿಧ್ಯವಿದೆ (46×33×6 – 30×24×7 ಸೆಂಮೀ). ಇಟ್ಟಿಗೆಯನ್ನು ಮಣ್ಣಿನ ಗಾರೆಯಿಂದ ಜೋಡಿಸಲಾಗಿದೆ. ಕೆಲವೊಂದು ಸ್ತೂಪಗಳಲ್ಲಿ ಸುಣ್ಣ ಲೇಪನದ ತುಣುಕುಗಳಿವೆ. ಸ್ತೂಪಗಳ ಬಳಿ ದೊರೆತ 2 ಕರಡಿಗೆಗಳಲ್ಲಿ ಒಂದು ಬಳಪದ ಕಲ್ಲಿನದೂ ಮತ್ತೊಂದು ಖೊಂಡಲೈಟ್ ಶಿಲೆಯದೂ ಆಗಿದೆ. ಎರಡನೆಯದರ ಮೇಲೆ ಸು.1ನೆಯ ಶತಮಾನದ ಬ್ರಾಹ್ಮಿ ಶಾಸನವಿದೆ. ಹೆಚ್ಚಾಗಿ ಖೊಂಡಲೈಟ್ ಶಿಲೆಯಿಂದ ರಚಿಸಿದ ಶಿಲ್ಪಗಳಲ್ಲಿ ಶಾಸನ ಸಹಿತವಾದ ಭೃಕುಟಿ–ತಾರ (ಸು. 9ನೆಯ ಶತಮಾನ), ಅಷ್ಟ ಬೋಧಿಸತ್ತ್ವರಿಂದ ಸುತ್ತುವರೆದ ಲೋಕೇಶ್ವರ ಹಾಗೂ ತಥಾಗತ ಶಿಲ್ಪಗಳು ಗಮನ ಸೆಳೆಯುತ್ತವೆ. ಮುದ್ರಾಂಕನಗಳ ಮೇಲೆ ಬೌದ್ಧ ತಾರಿಣಿ ಮಂತ್ರವಿದ್ದು ಲಿಪಿಯ ಆಧಾರದ ಮೇಲೆ ಇವು ಸು.7–13ನೆಯ ಶತಮಾನದವು ಎಂದು ನಿರ್ಧರಿಸಲಾಗಿದೆ. ಇಲ್ಲಿ ಸಿಕ್ಕ ಸು.40 ಖೊಂಡಲೈಟ್ ಶಿಲೆಯ ಶಾಸನಗಳಲ್ಲಿ ವಜ್ರಯಾನ ಪಂಥದ ತಾರಿಣಿ ಮಂತ್ರವನ್ನು ಕಂಡರಿಸಲಾಗಿದೆ. ಶಾಸನಗಳು ಶಂಖ ಅಥವಾ ದೇವನಾಗರಿ ಲಿಪಿಯಲ್ಲಿವೆ. ಕೆಂಪುಪಾತ್ರೆ, ಹೊಳಪಿನ ಕೆಂಪುಪಾತ್ರೆ (ಸು.1–5ನೆಯ ಶತಮಾನ), ಅಭ್ರಕಯುಕ್ತ ಕೆಂಪುಪಾತ್ರೆ (ಸು.5–7ನೆಯ ಶತಮಾನ), ಕಪ್ಪು ಹಾಗೂ ಬೂದುಬಣ್ಣದ ಪಾತ್ರೆಗಳು (ಸು.7–13ನೆಯ ಶತಮಾನ) ಇಲ್ಲಿ ದೊರೆತ ಪಾತ್ರೆ ಪ್ರಕಾರಗಳು.

ಬೆಳೆಯುತ್ತಿದ್ದ ಶೈವ ಪಾಶುಪತ ಮತದ ಪ್ರಭಾವದಿಂದ ಬೌದ್ಧಧರ್ಮದ ಅವನತಿ ಪ್ರಾರಂಭವಾಯಿತು. ಆದರೆ ಜೈನಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದು ಅನೇಕ ಪ್ರಮಾಣಗಳ ರೂಪದಲ್ಲಿ ಉಳಿದುಬಂದಿದೆ.

ಭುವನೇಶ್ವರದಲ್ಲಿ ಗುಪ್ತರಕಾಲದ ದೇವಾಲಯಗಳಿಲ್ಲದಿದ್ದರೂ ಇಲ್ಲಿಯ ಕೆಲ ವಿಗ್ರಹಗಳಲ್ಲಿ ಗುಪ್ತರ ಕಾಲಕ್ಕೆ ಸೇರಿದವುಗಳ ಹೋಲಿಕೆಯಿದೆಯೆಂದು ವಿದ್ವಾಂಸರ ಅಭಿಪ್ರಾಯ. ಗುಪ್ತರ ಕಾಲದಲ್ಲಿ ಉಗಮವಾದ ನಾಗರ ಶೈಲಿ ದೇವಾಲಯದಲ್ಲಿ ಕೆಲ ಮಾರ್ಪಾಟುಗಳನ್ನು ಮಾಡಿ, ಸ್ಥಾನೀಯ ಲಕ್ಷಣಗಳನ್ನೊಡಗೂಡಿಸಿ ಕಳಿಂಗ ನಾಗರ ಶೈಲಿಯೆಂಬ ಪ್ರತ್ಯೇಕ ಹೆಸರನ್ನು ಕೊಡಲಾಯಿತು. 7ನೆಯ ಶತಮಾನದಿಂದ ಆರಂಭವಾಗಿ 12ನೆಯ ಶತಮಾನದ ತನಕ ಇಲ್ಲಿಯ ವಾಸ್ತುಶಿಲ್ಪದ ಬೆಳೆವಣಿಗೆ ಶೈವ ಮತ್ತು ಶಾಕ್ತಧರ್ಮಗಳನ್ನು ಅನುಸರಿಸಿಯೇ ಮುಂದುವರಿದು ಹದಿಮೂರನೆಯ ಶತಮಾನದಲ್ಲಿ ವೈಷ್ಣವ ಧರ್ಮಕ್ಕೆಡೆಮಾಡಿಕೊಟ್ಟಿತು. ಏಕಾಮ್ರ ತೀರ್ಥ ಪುರಾಣದಲ್ಲಿ ಹಾಗೂ ಕೆಲವು ಶಿಲಾಲೇಖನಗಳಲ್ಲಿ ಬರುವ ಉಲ್ಲೇಖದಂತೆ, ಶಿವಧರ್ಮ ಪರಾಯಣನಾದ ಗೌಡ ದೇಶದ ಶಶಾಂಕ ಕೊಂಗೋಡು ಸಮೇತ ಒರಿಸ್ಸದ ಕೆಲಭಾಗಗಳನ್ನು 7ನೆಯ ಶತಮಾನದಲ್ಲಿ ಗೆದ್ದು ತ್ರಿಭುವನೇಶ್ವರದಲ್ಲಿ ಮೊಟ್ಟ ಮೊದಲನೆಯ ಶಿವದೇವಾಲಯ ನಿರ್ಮಿಸಿದನೆಂಬುದರಲ್ಲಿ ಸ್ವಲ್ಪಮಟ್ಟಿನ ನಿಜಾಂಶವಿದ್ದರೂ ಶಿವ ಪ್ರಚಾರಕನಾದ ಲಕುಲೀಶನಿಂದ ಸ್ಥಾಪಿತವಾದ ಪಾಶುಪತ ಧರ್ಮ, ಧರ್ಮದ ಬದಲಾವಣೆಗೂ ದೇವಾಲಯಗಳ ನಿರ್ಮಾಣಕ್ಕೂ ಒಂದು ಹುರುಪನ್ನು ಕೊಟ್ಟಿತು. ಶೈವ ಧರ್ಮಕ್ಕೂ ಮೊದಲೇ ಈ ಪ್ರದೇಶದಲ್ಲಿ ಬೌದ್ಧಧರ್ಮವು ಪ್ರಚಲಿತ ವಾಗಿತ್ತೆಂಬುದಕ್ಕೆ ಅನೇಕ ಶೈವ ಮಂದಿರಗಳಲ್ಲಿರುವ ಬೌದ್ಧಶಿಲ್ಪ ಲಕ್ಷಣಗಳ ಪ್ರಭಾವವನ್ನಳವಡಿಸಿ ತಯಾರಿಸಿದ ಶಿಲ್ಪಗಳೇ ಪ್ರಮಾಣಗಳು. ಎರಡೂ ಮತಗಳ ವೈಷಮ್ಯದ ಪ್ರತೀಕವಾಗಿ ಭುವನೇಶ್ವರದ ವೈತಾಳ ದೇವಾಲಯದಲ್ಲಿರುವ ಯೂಪ ಸ್ತಂಭದ ಮೇಲೆ ಕೆತ್ತಿರುವ ಬುದ್ಧನ ವಿಗ್ರಹವನ್ನು ಕಾಣಬಹುದು.

ಏಳನೆಯ ಶತಮಾನದ ಆದಿಭಾಗದಲ್ಲಿ ಗೌಡದೊರೆ ಶಶಾಂಕನ ಸಾಮಂತ ರಾಜರಾದ ಶೈಲೋದ್ಭವರು ಇಲ್ಲಿ ಮೊದಲಬಾರಿಗೆ ದೇವಾಲಯಗಳ ನಿರ್ಮಾಣ ಮಾಡಿದರು. ಪರಶುರಾಮೇಶ್ವರ ದೇವಾಲಯ ಇಂದಿಗೂ ಉತ್ತಮ ಸ್ಥಿತಿಯಲ್ಲಿದೆ.

ಭೌಮಕರರ ಕಾಲದ ದೇವಾಲಯಗಳ ನಿರ್ಮಾಣ ವಿಷಯವನ್ನು ತಿಳಿಸುವ ಶಾಸನಗಳು ಇಲ್ಲ. ಆದರೆ ಅವರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಯಾವ ಅಡೆತಡೆಗಳೂ ಇಲ್ಲದೆ ಮುಂದುವರಿದಿದ್ದುವು. ಭೌಮಕರರಾದ ಮೇಲೆ ಸೋಮವಂಶೀಯರು ರಾಜ್ಯಭಾರಕ್ಕೆ ಬಂದರು. ಬ್ರಹ್ಮೇಶ್ವರ ದೇವಾಲಯವನ್ನು ಉದ್ಯೋತ ಕೇಸರಿ (11ನೆಯ ಶತಮಾನ) ರಾಜನಾದ ಬಳಿಕ ತನ್ನ 18ನೆಯ ವರ್ಷದಲ್ಲಿ ಕಟ್ಟಿಸಿದನೆಂದು ಒಂದು ಶಾಸನ ತಿಳಿಸುತ್ತದೆ.

12ನೆಯ ಶತಮಾನದಲ್ಲಿ ಸೋಮವಂಶವನ್ನು ಕಬಳಿಸಿ ಹೊಸರಾಜ್ಯ ಸ್ಥಾಪಿಸಿದ ಕಳಿಂಗದ ಪೂರ್ವಗಂಗ ಮನೆತನದ ಅರಸರ ಕಾಲದಲ್ಲಿಯೂ ದೇವಾಲಯಗಳ ನಿರ್ಮಾಣ ಕಾರ್ಯ ಮುಂದುವರೆಯಿತು. ಲಿಂಗರಾಜ ದೇವಾಲಯದ ಜಗಮೋಹನದ ಗೋಡೆಯ ಮೇಲಿರುವ ಅನಂತವರ್ಮ ಚೋಡಗಂಗನ (1078–1150) ಒಂದು ಶಾಸನದ ಪ್ರಕಾರ ಕೃತ್ತಿವಾಸ (ಲಿಂಗರಾಜ) ದೇವಾಲಯದಲ್ಲಿ ನಂದಾದೀಪ ಹಚ್ಚಲು ಒಂದು ಹಳ್ಳಿಯನ್ನು 1114–15ರಲ್ಲಿ ದಾನವಾಗಿ ಕೊಟ್ಟನೆಂದು ತಿಳಿಸುತ್ತದೆ. ಇದರಿಂದ ಅನಂತವರ್ಮ ಚೋಡಗಂಗ 1114–15ಕ್ಕೆ ಮುಂಚೆ ಈ ರಾಜ್ಯವನ್ನು ಗೆದ್ದಿದ್ದನೆಂದೂ ಲಿಂಗರಾಜ ದೇವಾಲಯ ಈ ಸಮಯದಲ್ಲಾಗಲೇ ಅಸ್ತಿತ್ವದಲ್ಲಿತ್ತೆಂದೂ ತಿಳಿದುಬರುತ್ತದೆ. ಹಲವು ದೇವಾಲಯಗಳಲ್ಲಿ ಗಂಗರಸರ ಹಾಗೂ ಅವರ ಅಧಿಕಾರಿಗಳು ಕೊಟ್ಟ ದತ್ತಿ ಶಾಸನಗಳಿದ್ದು ಅವು ದೇವಾಲಯಗಳ ನಿರ್ಮಾಣ ಕಾಲವನ್ನು ಸೂಚಿಸುತ್ತವೆ. 12ನೆಯ ಶತಮಾನದ ಕೊನೆಯಲ್ಲಿ ಮೇಘೇಶ್ವರ ದೇವಾಲಯವನ್ನು ಎರಡನೆಯ ಅನಂಗಭೀಮನ ಕಾಲದಲ್ಲಿ ಸ್ವಪ್ನೇಶ್ವರವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಭಾನುದೇವನ ಆಡಳಿತ ಕಾಲದಲ್ಲಿ ಅನಂತವಾಸುದೇವ ದೇವಾಲಯವನ್ನು 1278ರಲ್ಲಿ ಮೂರನೆಯ ಅನಂಗಭೀಮನ ಮಗಳಾದ ಚಂದ್ರಾದೇವಿ ನಿರ್ಮಿಸಿದಳೆಂದು ತಿಳಿದುಬರುತ್ತದೆ. ಈ ಕಾಲದಲ್ಲಿ ವೈಷ್ಣವಧರ್ಮ ಪ್ರವರ್ಧಮಾನಕ್ಕೆ ಬಂದು ಲಿಂಗರಾಜ ದೇವಾಲಯದ ಮೂರ್ತಿಯನ್ನು ಹರಿಹರ ಎಂದು ಗುರುತಿಸಬೇಕೆಂದು ಮಾಡಿದುದೇ ಅಲ್ಲದೆ ಭೋಗಮಂಟಪದ ಎದುರು ನಂದಿಯ ಜೊತೆಯಲ್ಲಿ ಗರುಡನನ್ನು ಪ್ರತಿಷ್ಠಾಪಿಸಿ ವೈಷ್ಣವಧರ್ಮದ ಪೂಜಾವಿಧಾನಗಳನ್ನು ಜಾರಿಗೆ ತಂದರು.

ಭುವನೇಶ್ವರದಲ್ಲಿಯ ದೇವಾಲಯಗಳನ್ನು ಕಳಿಂಗ ವಾಸ್ತುಶಿಲ್ಪದ ಪ್ರಕಾರ ಮೂರು ಗುಂಪುಗಳಲ್ಲಿ ವಿಂಗಡಿಸಬಹುದು: ರೇಖ, ಪಿಢಾ ಮತ್ತು ಖಾಖರಾ. ಲಾಕ್ಷಣಿಕವಾದ ಒರಿಸ್ಸ ದೇವಾಲಯದಲ್ಲಿ ಮೊದಲೆರಡು ರೀತಿಯ ವಿನ್ಯಾಸಗಳು ಒಂದರ ಜೊತೆಗೂಡಿ ಒಂದಿದ್ದು, ಒಂದೇ ವಾಸ್ತುಶಿಲ್ಪದ ರಚನೆಯ ಎರಡು ಘಟಕಗಳಾಗಿರುತ್ತವೆ. ರೇಖ ದೇವಾಲಯ ರಚನಾಕ್ರಮದಲ್ಲಿ ಗರ್ಭಗೃಹದ ಮೇಲೆ ಲಂಬ ವಕ್ರರೇಖೆಗಳಿಂದ ಕೂಡಿದ ಉನ್ನತ ಶಿಖರ, ನೋಡಲು ಅವಿಚ್ಛಿನ್ನ ಬಾಹ್ಯರೇಖೆಗಳನ್ನು ಹೊಂದಿದಂತೆ ತೋರುತ್ತದೆ. ಪಿಢಾ ದೇವಾಲಯ ರೇಖ ದೇವಾಲಯದ ಮೊಗಸಾಲೆಯಾಗಿರುತ್ತದೆ. ಇದನ್ನು ಜಗಮೋಹನ, ಮುಖಶಾಲಾ ಅಥವಾ ಭದ್ರದೇವುಲ ಎಂದು ಕರೆಯುತ್ತಾರೆ. ಈ ಮೊಗ ಸಾಲೆಯ ಮೇಲ್ಛಾವಣಿ ಪಿರಮಿಡ್ ಮಾದರಿಯಂತೆ, ಅನೇಕ ಸಮತಲದ ಜಗಲಿಗಳನ್ನು, ಮೇಲಕ್ಕೆ ಹೋದಂತೆ ಕಿರಿದಾಗುವ ಹಾಗೆ, ಒಂದರ ಮೇಲೊಂದನ್ನೇರಿಸಿ ಕಟ್ಟಲಾಗಿದೆ. ಖಾಖರ ದೇವಾಲಯಗಳ ವಿನ್ಯಾಸ ಅಗಲಕ್ಕಿಂತ ಉದ್ದ ಹೆಚ್ಚಾಗಿರುವ ದೀರ್ಘ ಚತುರಸ್ರಾಕಾರವನ್ನು ಹೊಂದಿರುತ್ತದೆ. ಇದರ ಮಸ್ತಕದ ಮೇಲೆ ಪೀಪಾಯಿಯಾಕಾರದ ಕಮಾನು ಚಾವಣಿಯಿರುತ್ತದೆ.

ಸಾಮಾನ್ಯವಾಗಿ ಒರಿಸ್ಸ ದೇವಾಲಯಗಳನ್ನು ಮರಳುಕಲ್ಲಿನಿಂದ ಕಟ್ಟಲಾಗಿದೆ. ಉದಯಗಿರಿ ಮತ್ತು ಖಂಡಗಿರಿಗಳಲ್ಲಿ ಈ ಕಲ್ಲು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಇಲ್ಲಿ ಗಾರೆಯನ್ನು ಉಪಯೋಗಿಸದೆ ಬೇಕಾದ ಆಕಾರದ ಬಂಡೆಗಳನ್ನು ಒಂದರ ಮೇಲೊಂದನ್ನೇರಿಸಿ ಅವು ಅತ್ತಿತ್ತ ಹೋಗದಂತೆ ಕಬ್ಬಿಣದ ಮೊಳೆಗಳಿಂದ ಹಾಗೂ ಹಿಡಿಕಟ್ಟು ಗಳಿಂದ ಕಟ್ಟಡವನ್ನು ಭದ್ರಪಡಿಸಲಾಗಿರುತ್ತದೆ. ದೇವಾಲಯದ ಒಳಭಾಗ ಅಲಂಕಾರ ರಹಿತವಾಗಿದ್ದರೆ, ಹೊರ ಭಾಗಗಳು ಶಿಲ್ಪಗಳನ್ನೂ ಚಿತ್ರಗಳನ್ನೂ ಒಳಗೊಂಡಿವೆ. ಭಿತ್ತಿ ಪಟ್ಟಿಕೆಗಳಲ್ಲಿ ಹೋಲುವ

ರೀತಿಯ ಶಿಲ್ಪಗಳನ್ನು ಬಿಡಿಸಲಾಗಿದೆ. ಧರ್ಮಶಾಸ್ತ್ರಗಳಲ್ಲಿ ನಮೂದಿ ಸಿರುವ ದಿಕ್ಪಾಲಕರೇ ಮೊದಲಾದ ದೇವ ದೇವತೆಗಳು ಅವರ ಧರ್ಮಪತ್ನಿಯರೊಡಗೂಡಿ ಅವರವರ ವಾಹನಗಳ ಮೇಲೆ ಕುಳಿತಿರುವ ಶಿಲ್ಪಗಳು; ಮಾನವರ ವಿಗ್ರಹಗಳು, ಇದರಲ್ಲಿ ಸಾಮಾನ್ಯವಾಗಿ ಮನೆಯ ಚಿತ್ರಗಳು, ಅವರ ಆಟಪಾಟಗಳು, ಪೂಜಾವಿಧಾನಗಳು, ಸಂಗೀತ ಮತ್ತು ನೃತ್ಯ ಪ್ರದರ್ಶನದ ಚಿತ್ರಗಳು, ವ್ಯಾಖ್ಯಾನ, ತೀರ್ಥಯಾತ್ರೆ, ಯುದ್ಧ ಸನ್ನಿವೇಶ, ಹಿರಿಯರಿಗೆ ಸೇವೆ ಮಾಡುತ್ತಿರುವುದು, ಮೆರವಣಿಗೆಗಳು, ಆಲಸ ಕನ್ಯೆಯರು, ಅಭಿಸಾರಿಕೆಯರು ಇವೇ ಮೊದಲಾದ ಶಿಲ್ಪಗಳು; ಪಕ್ಷಿಗಳು, ಕಾಡುಪ್ರಾಣಿಗಳು, ಪುರಾಣಗಳಲ್ಲಿ ನಮೂದಿಸಿ ರುವಂಥ ಕೆಲವು ಪ್ರಾಣಿಗಳು, ನಾಗನಾಗಿಣಿಯರು; ಅಂತವಿಲ್ಲದೆ ಹರಡಿರುವ ಬಳ್ಳಿಗಳು, ಮರಗಳು, ಭೌಗೋಳಿಕ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳಿವೆ.

ಆರಂಭಕಾಲದ (7ನೆಯ ಶತಮಾನ) ದೇವಾಲಯಗಳಾದ ಪರಶುರಾಮೇಶ್ವರ, ಸ್ವರ್ಣಜಾಲೇಶ್ವರ ಮತ್ತು ಶತ್ರುಘ್ನೇಶ್ವರ ದೇವಾಲಯಗಳಲ್ಲಿ ಕಡೆಯಲ್ಪಟ್ಟಿರುವ ಶಿಲ್ಪಗಳು ಬಹಳ ಸರಳವಾದ ಶೈಲಿಯಿಂದ ಕೂಡಿ ತಮ್ಮ ಪ್ರಾಕೃತಿಕ ಲಕ್ಷಣಗಳನ್ನು ತೋರುವಂಥವಾಗಿದ್ದು ಕಥಾನಕ ಕಲೆಗಳಿಂದ ಕೂಡಿವೆ. ಮದುವೆಯ ಮೆರವಣಿಗೆ (ಮುಖ್ಯವಾಗಿ ಶಿವನ ಮದುವೆಯ ಮೆರವಣಿಗೆ), ಬಂಗಾರದ ಜಿಂಕೆಯನ್ನು ಸಂಹರಿಸುತ್ತಿರುವ ರಾಮ, ಕಿರಾತಾರ್ಜುನೀಯ, ಅನ್ನಪೂರ್ಣೆಯಿಂದ ಭಿಕ್ಷೆ ಪಡೆಯುತ್ತಿರುವ ಶಿವ, ಕೈಲಾಸ ಎತ್ತುತ್ತಿರುವ ರಾವಣ ಇವೇ ಮೊದಲಾದ ಕಥಾನಕ ಶಿಲ್ಪಗಳು ಆಲಯಗಳ ಸೌಂದರ್ಯವೃದ್ಧಿಗೆ ನೆರವಾಗಿವೆ. ಉಬ್ಬು ಚಿತ್ರಗಳು ಅಷ್ಟಾಗಿ ಉಬ್ಬಿನಿಂದ ಕೂಡಿರದೆ ಹೋದರೂ ಅಲ್ಲಿ ಬಿಡಿಸಿರುವ ಸರಳರೇಖೆಗಳಿಂದಲೂ ಅಂಗಾಂಗಗಳ ಬೆಳವಣಿಗೆಯನ್ನು ಹಿತವಾಗಿ ತೋರಿಸುವುದ ರಿಂದಲೂ ಪೂರ್ಣರೂಪದಲ್ಲಿ ಚಿತ್ರಿತವಾದ ಶಿಲ್ಪಗಳಂತೆ ಕಂಡುಬರುತ್ತವೆ. ಇವು ಸಾಮಾನ್ಯ ವಾದ ಭಿತ್ತಿಶಿಲ್ಪದಷ್ಟು ಉಬ್ಬು ಕೆತ್ತನೆಗಳಲ್ಲ. ಅಲ್ಲಿರುವ ಅಲಂಕಾರಗಳು ಇವುಗಳಲ್ಲಿ ಇಲ್ಲ. ದೃಶ್ಯ ಸಂಯೋಜನ ಮತ್ತು ಸರಳತೆಗಾಗಿ ಇವು ಭಿತ್ತಿಚಿತ್ರಗಳಿಗಿಂತ ಎಷ್ಟೋ ಉತ್ತಮವೆನಿಸುತ್ತದೆ.

ಈ ರೀತಿಯ ಉಬ್ಬು ಚಿತ್ರಗಳ ವಿಕಾಸ ಸರಣಿಯನ್ನು ಮುಂದೆ ವೈತಾಳ, ಶಿಶಿರೇಶ್ವರ ಮತ್ತು ಮಾರ್ಕಂಡೇಶ್ವರ ದೇವಾಲಯಗಳಲ್ಲಿ ಉಬ್ಬನ್ನು ತೋರಿಸುವ ಆಳ, ಕಲೆಯಲ್ಲಿ ಅನುಭವದಿಂದ ಬಂದಂಥ ನಿಪುಣತೆ, ಹೆಚ್ಚು ಕುಶಲತೆಯಿಂದ ರೂಪಿಸಿರುವುದು ಕಾಣುತ್ತದೆ. ವಿಗ್ರಹಗಳ ಮುಖ ಭಾಗದಲ್ಲಿ ಶಾಂತ ಸ್ವರೂಪವನ್ನು ಬಹಳ ನಾಜೂಕಾಗಿ ತೋರಿಸಲಾಗಿದೆ. ನಾಜೂಕಾದ ಇತರ ಕಲಾ ವಿನ್ಯಾಸಗಳು ಹೆಚ್ಚು ನೈಪುಣ್ಯವಾಗಿವೆ.

ರಾಜರಾಣಿ, ಬ್ರಹ್ಮೇಶ್ವರ ಮತ್ತು ಲಿಂಗರಾಜ ದೇವಾಲಯಗಳಲ್ಲಿ ಈ ಕಲಾ ನೈಪುಣ್ಯ ಶಿಖರಮುಟ್ಟಿದೆ. ಬಹಳ ನಾಜೂಕಾಗಿ ಕೆತ್ತಲ್ಪಟ್ಟಿರುವ ಪ್ರಣಯ ಪ್ರಧಾನವಾದ, ಉನ್ಮತ್ತರಾಗಿರುವಂಥ ಮದನಿಕೆ ವಿಗ್ರಹಗಳನ್ನು ಕಾಣಬಹುದು. ಎಲೆ ಬಳ್ಳಿಗಳಿಂದಲಂಕೃತವಾದ ತೆಳುವಾದ ತುಂಬು ಉಬ್ಬು ಚಿತ್ರಗಳ ಪ್ರಾಕೃತಿಕ ಸೌಂದರ್ಯದಿಂದ ಕೂಡಿರುವ ವಿಗ್ರಹಗಳು, ಮಗುವನ್ನು ಲಾಲಿಸುತ್ತಿರುವ ತಾಯಿ, ಪ್ರೀತಿಯಿಂದ ಪಾಲಿಸಿರುವ ಪ್ರಾಣಿಗಳ ಜೊತೆಯಲ್ಲಿ ಆಡುತ್ತಿರುವ ಸುಂದರಿ, ನಡೆಯುವಾಗ ಶಬ್ದವಾಗದಿರಲೆಂಬ ಉದ್ದೇಶದಿಂದ ಕಾಲಿನ ಗೆಜ್ಜೆಯನ್ನು ತೆಗೆಯುತ್ತಿರುವ ನಾರಿ, ನೃತ್ಯಗಾರ್ತಿಯರು, ಹಲವಾರು ರೀತಿಯ ಸಂಗೀತ ವಾದ್ಯಗಳನ್ನು ನುಡಿಸುತ್ತಿರುವ ವಿದ್ವಾಂಸರು, ಬಾಗಿಲಿನ ಬದಿಯಲ್ಲಿ ನಿಂತಿರುವ ಅಭಿಸಾರಿಕೆ, ರತಿಕ್ರೀಡೆಯಲ್ಲಿ ನಿರತರಾಗಿರುವ ಪ್ರಣಯ ಜೋಡಿಗಳು ಮೊದಲಾದ ಶಿಲ್ಪಗಳಿಂದ ಅಲಂಕೃತವಾದ ಭಿತ್ತಿಗಳನ್ನು ಕಾಣಬಹುದು.

ಅನಂತರ ಬೆಳಕಿಗೆ ಬಂದ ಅನಂತ ವಾಸುದೇವ, ಸಾರೀದೇವುಲ್ ಮತ್ತು ಯಮೇಶ್ವರ ದೇವಾಲಯಗಳಲ್ಲಿ ಆಲಂಕಾರಿಕ ಕಲೆ ಬಹಳ ಮುಂದುವರಿದಿದ್ದು ಹೆಚ್ಚು ಆಭರಣಗಳಿಂದ ಕೂಡಿದ್ದ ಕಲೆಯ ಅವನತಿಯನ್ನು ಸೂಚಿಸುತ್ತದೆ. ಪಾಪನಾಶಿನಿ ಕೆರೆಯ ದಂಡೆಯ ಮೇಲೆ ದೇವಾಲಯಗಳನ್ನು ಕಟ್ಟಿದಾಗ ಕಲೆಯ ಬೆಳವಣಿಗೆಯಲ್ಲಿದ್ದ ಕ್ರಿಯಾಶಕ್ತಿ ಪೂರ್ಣವಾಗಿ ಕುಂದಿರುವಂತೆ ಕಾಣುತ್ತದೆ.

ಸಾಮಾನ್ಯವಾಗಿ ಎಲ್ಲ ದೇವಾಲಯಗಳಂತೆ ಭುವನೇಶ್ವರ ದೇವಾಲಯಗಳಲ್ಲಿ ಬರುವ ವಿಗ್ರಹಗಳೂ ವೇದ, ಪುರಾಣ, ರಾಮಾಯಣ, ಮಹಾಭಾರತಗಳನ್ನೇ ಅನುಸರಿಸಿವೆ. ಹಲವು ದಂತಕಥೆಗಳೂ ಈ ವಿಗ್ರಹಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟಿವೆ. ಹೀಗಾಗಿ ಪಾರ್ಶ್ವದೇವತೆಯಾಗಿ ಸ್ಥಾನ ಪಡೆದಿರುವ ಕಾರ್ತಿಕೇಯನ ಬೇರೆ ಬೇರೆ ರೀತಿಯ ಎಂಟು ವಿಗ್ರಹಗಳನ್ನು ಇಲ್ಲಿ ಕಾಣಬಹುದು. ಹಲವು ಹಳೆಯ ದೇವಾಲಯಗಳಲ್ಲಿ ನವಗ್ರಹಗಳ ಪೈಕಿ ಕೇತುವನ್ನು ತೋರಿಸಿಲ್ಲ. ಮೊದಲಿಗೆ ಅಷ್ಟಗ್ರಹಗಳನ್ನು ಮಾತ್ರ ಕಾಣಬಹುದು. ಅನಂತರದಲ್ಲಿ ಕೇತುವನ್ನು ಒಂಬತ್ತನೆಯ ಗ್ರಹವಾಗಿ ಅಳವಡಿಸಿಕೊಳ್ಳಲಾಗಿದೆ. ಇದನ್ನು ಮುಕ್ತೇಶ್ವರ ದೇವಾಲಯದಲ್ಲಿ ಕಾಣಬಹುದು. ಮೊದಮೊದಲಿನ ದೇವಾಲಯಗಳಲ್ಲಿ ಅಷ್ಟದಿಕ್ಪಾಲಕರು ಸ್ಥಳವನ್ನು ಪಡೆದಿಲ್ಲ. ಆದರೆ ಅನಂತರ ಕಟ್ಟಿದ ರಾಜರಾಣಿ, ಲಿಂಗರಾಜ, ಬ್ರಹ್ಮೇಶ್ವರ ದೇವಾಲಯಗಳಲ್ಲಿ ಈ ವಿಗ್ರಹಗಳನ್ನು ಕಾಣಬಹುದು. ಅನಂತರ ನಿರ್ಮಿಸಲಾದ ಅನಂತವಾಸುದೇವ, ಗೌರಿದೇವುಲ್, ಯಮೇಶ್ವರ ಮೊದಲಾದ ದೇವಾಲಯಗಳಲ್ಲಿ ಅಷ್ಟದಿಕ್ಪಾಲಕರನ್ನು ಅವರವರ ಪತ್ನೀಸಮೇತರಾಗಿ ಚಿತ್ರಿಸಲಾಗಿದೆ. ಮೊದಲು ಕಟ್ಟಿದ ದೇವಾಲಯಗಳಲ್ಲಿ ಪರಶುರಾಮೇಶ್ವರ ದೇವಾಲಯ ಚಿಕ್ಕದಾದರೂ ಸುಂದರವಾಗಿದೆ. ಇದನ್ನು 7ನೆಯ ಶತಮಾನದಲ್ಲಿ ಕಟ್ಟಲಾಗಿದೆಯೆಂದು ವಿದ್ವಾಂಸರ ಅಭಿಮತ. ಇಲ್ಲಿ ಅಷ್ಟಗ್ರಹಗಳನ್ನು ಮಾತ್ರ ಕಾಣಬಹುದು. ಇದು ಒಂದು ಚತುರಸ್ರಾಕಾರದ ಗರ್ಭಗೃಹ ಮತ್ತು ಆಯತಾಕಾರದ ಜಗಮೋಹನದಿಂದ ಕೂಡಿದೆ.

ಮುಕ್ತೇಶ್ವರ ದೇವಾಲಯ ಮೇಲೆ ಹೇಳಿರುವ ದೇವಾಲಯಗಳ ಕೊನೆಯ ಕಾಲದಲ್ಲಿ ಕಟ್ಟಿದ್ದು. ಇದು ಪಶ್ಚಿಮಾಭಿಮುಖವಾಗಿದ್ದು ಭುವನೇಶ್ವರ ದೇವಾಲಯಗಳ ಎರಡನೆ ಹಂತದ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲಾಗಿ ನಿಂತಿದೆ. ತಳವಿನ್ಯಾಸದಿಂದ ಚಿಕ್ಕದಾಗಿದ್ದರೂ ಇದು ಒರಿಸ್ಸ ವಾಸ್ತುಶಿಲ್ಪದ ಮಾಣಿಕ್ಯದಂತಿದೆ ಇದು ಒಂದು ದೋಷರಹಿತ, ಹಾಗೂ ಅಂದವಾದ ಹೊರಮೈ ರಚನೆಯ ನಿರೂಪಣೆಯನ್ನು ಲಾಲಿತ್ಯಮಯ ಅನುಪಾತಗಳಿಗುಣವಾಗಿ ರೂಪುಗೊಂಡ ದೇವಾಲಯ. ನಯ ನಾಜೂಕಿನಿಂದ ಕೂಡಿದ ಕೆತ್ತನೆಯ ಚಿತ್ರಗಳಿಂದ ಎಲ್ಲ ಹೊರಮೈಯನ್ನು ಅಲಂಕರಿಸಲಾಗಿದೆ. ಈ ದೇವಾಲಯದ ಇನ್ನೊಂದು ವಿಶೇಷ ಹಾಗೂ ದುರ್ಲಭ ಲಕ್ಷಣವೆಂದರೆ ಜಗಮೋಹನದ ಒಳಭಾಗದಲ್ಲಿ ಕಂಡುಬರುವ ಸಪ್ತಮಾತೃಕೆಯರ ಹಾಗೂ ವೀರಭದ್ರನ ದೇವತಾ ಚಿತ್ರಗಳು. ಬಾಹ್ಯ ಭಿತ್ತಿಯಲ್ಲಿರುವ ಮಾಡಗಳಲ್ಲಿ ಗಣೇಶ, ಕಾರ್ತಿಕೇಯ, ಚಾಮುಂಡಿ, ಪಾರ್ವತಿ, ಲಕುಲೀಶ, ಸೂರ್ಯ ಹಾಗೂ ಇನ್ನಿತರ ಆಶ್ಚರ್ಯಕರವಾದ ಚಿತ್ರಗಳಿದ್ದರೆ ಜಾಲಂದ್ರಗಳಲ್ಲಿ ಜಾತಕ ಕಥೆಗಳ ಅಲಂಕಾರ ಪಟ್ಟಿಗಳನ್ನು ನೋಡಬಹುದು. ಈ ದೇವಾಲಯದ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರಾಕಾರದ ಗೋಡೆಯಲ್ಲಿ ರಚಿಸಿರುವ, ಅಲಂಕಾರದಿಂದ ಮನಸೂರೆಗೈಯುವ ತೋರಣ – ಪ್ರವೇಶದ್ವಾರ ಶೈಲಿಯಲ್ಲಿ ಮುಕ್ತೇಶ್ವರ ದೇವಾಲಯವನ್ನು ಹೋಲುವ ಗೌರಿದೇವಾಲಯವೂ ಸಹ, ಅಲಂಕಾರಾತಿಶಯದಿಂದ ಕೂಡಿದೆ.



ಲಿಂಗರಾಜ ದೇವಾಲಯ

ಭುವನೇಶ್ವರ ದೇವಾಲಯಗಳ ವಿಕಾಸದ ಅಂತಿಮಘಟ್ಟದಲ್ಲಿ ಕಳಿಂಗನಾಗರ ಅಥವಾ ವಿಶಿಷ್ಟ ಪ್ರಾಂತೀಯ ಲಕ್ಷಣಗಳನ್ನು ಹೊಂದಿದ ಒರಿಸ್ಸ ಶೈಲಿಯ ದೇವಾಲಯವನ್ನು ಸಿದ್ಧೇಶ್ವರ, ಕೇದಾರೇಶ್ವರ, ರಾಜರಾಣಿ, ಬ್ರಹ್ಮೇಶ್ವರ, ಲಿಂಗರಾಜ ದೇವಾಲಯ ಸಂಕೀರ್ಣ, ಮೇಘೇಶ್ವರ, ಚಿತ್ರಕಾರಿಣಿ, ಸಾರೀದೇವುಲ್, ಯಮೇಶ್ವರ, ಭಾಸ್ಕರೇಶ್ವರ ಇತ್ಯಾದಿ ಮಂದಿರಗಳಲ್ಲಿ ಕಾಣಬಹುದು. ಈ ಘಟ್ಟದ ಸಂಪೂರ್ಣ ವಿಕಸಿತ ದೇವಾಲಯದ ಮಾದರಿಯೆಂದರೆ ಲಿಂಗರಾಜ ದೇವಾಲಯ. ಇದು ಗರ್ಭಗೃಹ, ಜಗಮೋಹನ, ನಟ ಮಂದಿರ ಮತ್ತು ಭೋಗಮಂಟಪವೆಂಬ ನಾಲ್ಕು ಸ್ವತಂತ್ರ ಘಟಕಗಳನ್ನೊಳಗೊಂಡಿದೆ. ಇದರ ಎತ್ತರ ಅಗಾಧವಾಗಿದ್ದು ಈ ಪ್ರದೇಶದ ದೇವಾಲಯಗಳಲ್ಲಿ ಅತಿ ಉನ್ನತವಾದುದಾಗಿದೆ. ಒರಿಸ್ಸದ ವಾಸ್ತುಶಿಲ್ಪ ಮತ್ತು ಕಲೆಯಲ್ಲಿ ಹೆಸರಿಸಿರುವ ಎಲ್ಲ ರೀತಿಯ ಕಲಾಕೃತಿಗಳೂ ಈ ದೇವಾಲಯದಲ್ಲಿ ಕಾಣಸಿಗುತ್ತವೆ. ಸಾಮಾನ್ಯವಾಗಿ ದೇವಾಲಯಗಳು ಪಂಚರಥ ತಳವಿನ್ಯಾಸವನ್ನು ಹೊಂದಿರುತ್ತವೆ. ಬಾಡ ಅರ್ಥಾತ್ ಭಿತ್ತಿಯೂ ಕೂಡ ಪಂಚಾಂಗವುಳ್ಳದ್ದಾಗಿ, ಇದನ್ನು ಮೂರು ಅಡ್ಡಪಟ್ಟಿಗಳನ್ನೊಳಗೊಂಡ ಬಂಧನಾದಿಂದ ತಳ ಮತ್ತು ಉಪರ ಎಂದು ಎರಡು ಭಾಗಗಳಲ್ಲಿ ವಿಭಜಿಸಲಾಗಿದ್ದು, ಈ ಎರಡೂ ಭಾಗಗಳು ಚಿಕ್ಕ ಆಕೃತಿಯ

ಖಾಬರ ಮುಂಡಿ ಹಾಗೂ ಪಿಥಾಮುಂಡಿಗಳಿಂದ ಅಲಂಕೃತಗೊಂಡಿರುತ್ತವೆ. ಗೋಡೆಯ ಮೇಲ್ಭಾಗದಲ್ಲಿರುವ ಏಳು ಅಡ್ಡ ಪಟ್ಟಿಗಳುಳ್ಳ ವರಂಡ / ಬರಂಡದ ಮೇಲ್ಭಾಗದಲ್ಲಿ ಗಂಡಿ ಅರ್ಥಾತ್ ಶಿಖರವು ಅಂಗಶಿಖರಗಳಿಂದ ಆವೃತ್ತವಾಗಿರುತ್ತದೆ. ಗಂಡಿಯ ಮಧ್ಯಭಾಗವಾದ. ರಾಹಾ ಪಗ ಅರ್ಥಾತ್ ಶಿಖರದ ಮಧ್ಯಭಾಗದ ಉಬ್ಬುಪಟ್ಟಿಯನ್ನು ಐದು ಅಂಗಶಿಖರಗಳಿಂದ ಹಾಗೂ ಪ್ರತ್ಯೇಕ ಎರಡು ಪಿಥಾಮುಂಡಿ ಗಳಿಂದೊಡಗೂಡಿದ್ದು ಅನುರಾಹ–ಪಾಗ ಅರ್ಥಾತ್ ಎಡ–ಬಲಭಾಗದ ಉಬ್ಬುಪಟ್ಟಿಗಳಿಂದ ಭಿನ್ನವಾಗಿ ಕಾಣುವಂತೆ ತೋರಿಸಲಾಗಿರುತ್ತದೆ. ರಾಹಾಪಗದ ಅಂಗಶಿಖರದ ಮೇಲ್ಭಾಗದಲ್ಲಿ ಮುಂಗಾಲಿನ ಪಂಜುಗಳನ್ನೆತ್ತಿಕೊಂಡು ಹಿಂಗಾಲುಗಳ ಮೇಲೆ ನಿಂತಿರುವ (ಆಕ್ರಮಣ ಮಾಡುವ) ಸಿಂಹವನ್ನು ಕಾಣಬಹುದು. ಶಿಖರದ ಪಾರ್ಶ್ವಭಾಗಗಳಾದ ಕನಿಕ–ಪಗ ಗಳಲ್ಲಿ ಐದು ಭೂಮಿ ಅರ್ಥಾತ್ ಅಂತಸ್ತುಗಳ ಇರುವಿಕೆಯನ್ನು ಭೂಮಿ ಆಮ್ಲಗಳಿಂದ (ನೆಲ್ಲಿಕಾಯಿಯಾಕಾರದ ಭಾಗ) ಪ್ರತ್ಯೇಕಿಸಿ ತೋರಿಸಲಾಗಿರುತ್ತದೆ. ಗರ್ಭಗುಡಿಯ ಹೊರಮೈಯಲ್ಲಿರುವ ಗೂಡುಗಳಲ್ಲಿ ಮನಮೋಹಕ ನಾಯಕ-ನಾಯಕಿಯರ, ಪಾರ್ಶ್ವದೇವತೆಗಳಾದ ದಿಕ್ಪಾಲಕರು, ಗಣಪತಿ, ಕಾರ್ತಿಕೇಯ ರಲ್ಲದೆ ಬ್ರಹ್ಮ, ಅರ್ಧ–ನಾರೀಶ್ವರ, ಪಾರ್ವತಿ, ನಟರಾಜ ಇತ್ಯಾದಿ ಮೂರ್ತಿಗಳಿರುತ್ತವೆ. ಶಿಖರದ ಮೇಲಿರುವ ಮಸ್ತಕ ಅಥವಾ ಶಿರೋಭಾಗದಲ್ಲಿ ಕ್ರಮಬದ್ಧವಾಗಿ ಒಂದರಮೇಲೊಂದರಂತೆ ಖಪೂರಿ ಅಥವಾ ಕಪಾಲ, ಕಲಶ ಹಾಗೂ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದ ದೇವರ ಸಂಕೇತವಾಗಿ ಆಯುಧವನ್ನೂ ಕಾಣಬಹುದು. ಇದೇ ಕ್ರಮವನ್ನು ಪಿಥಾದೇವುಲ್ ಮೇಲ್ಭಾಗದಲ್ಲಿಯೂ ನೋಡಬಹುದು.



ಶಿಲ್ಪಫಲಕಗಳು

ಗರ್ಭಗೃಹದ ಮುಂಭಾಗದಲ್ಲಿರುವ ಜಗಮೋಹನವು ಸಾಮಾನ್ಯವಾಗಿ ಪಂಚರಥ ತಳವಿನ್ಯಾಸ ಹೊಂದಿದ್ದು, ಅದರ ಬಾಡ ಅಥವಾ ಗೋಡೆಯ ಹೊರಮೈಯನ್ನು ಕಿಟಕಿಗಳು, ಗೋಡೆಗಂಬಗಳ ನಡುವೆ ಇರುವ ಪಿಥಾಮುಂಡಿಗಳಲ್ಲದೆ ಚಿತ್ರಗಳುಳ್ಳ ಪಟ್ಟಿಗಳಿಂದಲಂಕೃತ ವಾಗಿರುತ್ತವೆ. ಆದರೆ, ರಾಜರಾಣಿ ದೇವಾಲಯದ ಜಗಮೋಹನದ ಹೊರಮೈ ಅಲಂಕಾರ ರಹಿತವಾಗಿದೆ. ಲಿಂಗರಾಜ ದೇವಾಲಯದಲ್ಲಿ ನಾಟ್ಯಮಂದಿರ ಮತ್ತು ದೇವರ ನೈವೇದ್ಯಕ್ಕಾಗಿಯೇ ಇರುವ ಭೋಗ ಮಂಟಪಗಳಿವೆ. ಇವುಗಳ ಬಾಹ್ಯ ಗೋಡೆಗಳ ಮೇಲ್ಭಾಗದಲ್ಲಿ ರೇಖ ಶಿಖರಗಳ ಪ್ರತಿಕೃತಿಗಳ ನಡುವೆ ಹೆಣ್ಣು–ಗಂಡುಗಳ ಶಿಲ್ಪಗಳಿವೆ.

ಶೈವ ಹಾಗೂ ಶಾಕ್ತ ಮತಗಳ ಕೇಂದ್ರವಾದ ಭುವನೇಶ್ವರದಲ್ಲಿ ಬಿಂದು ಸರೋವರದ ಪೂರ್ವದಲ್ಲಿರುವ ಅನಂತ ವಾಸುದೇವಾಲಯವೊಂದೇ ವೈಷ್ಣವಧರ್ಮದ ಪ್ರತೀಕ. ಇದರ ಹೊರಭಿತ್ತಿಗಳು ಶಿಲ್ಪಾಕೃತಿ ಮತ್ತು ಹಲವಾರು ಅಲಂಕೃತ ಕೃತಿಗಳಿಂದ ರಮ್ಯವಾಗಿವೆ. ಇವುಗಳಲ್ಲಿ ಕೃಷ್ಣ, ಬಲರಾಮ ಮತ್ತು ಸುಭದ್ರೆಯರ ವಿಗ್ರಹಗಳಿವೆ. ಈ ದೇವಾಲಯವನ್ನು ಅನಂಗಭೀಮನ ಮಗಳಾದ ಚಂದ್ರಾದೇವಿಯು 1278ರಲ್ಲಿ, ಬಲದೇವ (ಅನಂತ), ಸುಭದ್ರ ಮತ್ತು ಕೃಷ್ಣ (ವಾಸುದೇವ) ದೇವರುಗಳಿಗಾಗಿ ಕಟ್ಟಿಸಿದಳೆಂದು ಒಂದು ಶಿಲಾಶಾಸನದಿಂದ ತಿಳಿದುಬರುತ್ತದೆ.

(ಎಲ್.ಎಸ್.ಆರ್)

**ಭೂದಾನ ಚಳವಳಿ**: ಭಾರತದ ಭೂಹೀನರ ಸಮಸ್ಯೆಯನ್ನು ಗಾಂಧಿ ಮಾರ್ಗದಲ್ಲಿ ಸತ್ಯ ಮತ್ತು ಅಹಿಂಸಾ ತತ್ತ್ವಗಳ ಮೂಲಕ ಪರಿಹರಿಸುವ ಒಂದು ಪ್ರಯತ್ನ. ಗಾಂಧೀಜಿಯವರ ಹಿರಿಯ ಅನುಯಾಯಿ ಆಚಾರ್ಯ ವಿನೋಬಾ ಭಾವೆಯವರು ಹೈದರಾಬಾದಿನ ಶಿವರಾಮಪಲ್ಲಿಯಲ್ಲಿ 1951 ಮಾರ್ಚ್ 8 ರಂದು ಈ ಚಳವಳಿ ಪ್ರಾರಂಭಿಸಿದರು (**ನೋಡಿ– ವಿನೋಬಾ ಭಾವೆ**). ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ನಿರತರಾಗಿದ್ದ ಸ್ವಾತಂತ್ರ್ಯೋತ್ತರ ಭಾರತದ ಕ್ಲಿಷ್ಟ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಅಹಿಂಸಾತ್ಮಕ ಪರಿಹಾರದ ಶೋಧನೆಯಲ್ಲಿದ್ದರು. ಈ ಶೋಧನೆಯ ಮಧ್ಯದಲ್ಲಿ ಭೂದಾನದ ಆವಿರ್ಭಾವವಾಯಿತು. ಇದನ್ನು ಭೂದಾನ ಯಜ್ಞವೆಂದು ಕರೆದರು.

ಹಿಂದಿನ ಹೈದರಾಬಾದು ರಾಜ್ಯದ ತೆಲಂಗಾಣ ಭಾರತದ ಅತಿ ಹಿಂದುಳಿದ ಪ್ರದೇಶಗಳಲ್ಲಿ ಒಂದಾಗಿತ್ತು. ಅಲ್ಲಿ ಜಮೀನ್ದಾರಿ ಪದ್ಧತಿ ವ್ಯಾಪಕವಾಗಿದ್ದು, ಹಲವು ಮಂದಿ ಜಮೀನ್ದಾರರು ಅಲ್ಲಿಯ ಇಡೀ ಕೃಷಿ ಭೂಮಿಯಮೇಲೆ ಸರ್ವಸ್ವಾಮ್ಯ ಪಡೆದಿದ್ದರು. ಲಕ್ಷಾಂತರ ಭೂಹೀನ ಕಾರ್ಮಿಕರೂ ಗೇಣಿದಾರರೂ ಬಡತನ, ಶೋಷಣೆಗಳಿಂದ ಕಷ್ಟ ಪರಿಸ್ಥಿತಿಯಲ್ಲಿದ್ದರು. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಕೆಲವು ನಾಯಕ ರೈತರನ್ನು ಹಿಂಸಾಮಾರ್ಗಕ್ಕೆ ಪ್ರಚೋದಿಸಿದರು. ಅನೇಕ ಕಡೆ ಜಮೀನ್ದಾರರ ಕೊಲೆ, ಆಸ್ತಿಪಾಸ್ತಿಗಳ ಲೂಟಿ ಆದುವು. ಪರಿಸ್ಥಿತಿಯನ್ನು ಹತೋಟಿಗೆ ತರಲು ಸರ್ಕಾರ ವಿಶೇಷ ಪೊಲೀಸ್ ಮತ್ತು ಮಿಲಿಟರಿ ಕಾರ್ಯಾಚರಣೆಯನ್ನು ಕೈಗೊಳ್ಳಬೇಕಾಯಿತು. ಹೀಗಾಗಿ ತೆಲಂಗಾಣಪ್ರದೇಶ ಹಿಂಸಾಕಾಂಡ ವಾಗಿ ಅಲ್ಲಿನ ಜನ ಬಹಳ ಭಯಗ್ರಸ್ತರಾಗಿದ್ದರು. ಈ ಸನ್ನಿವೇಶದಲ್ಲಿ ಅಹಿಂಸೆಯ ಸಂದೇಶವನ್ನು ಬೀರಲು ಮತ್ತು ಪರಿಸ್ಥಿತಿಯ ಅಧ್ಯಯನ ಮಾಡಲು ಆಚಾರ್ಯ ವಿನೋಬಾಭಾವೆಯವರು ನಾಲ್ಕೈದು ಮಂದಿ ಶಿಷ್ಯರೊಡಗೂಡಿ ಕಾಲ್ನಡಿಗೆಯಲ್ಲಿ ತೆಲಂಗಾಣದ ಪ್ರವಾಸ ಕೈಗೊಂಡರು. ಹೋದೆಡೆಯಲೆಲ್ಲ ಹಿಂಸಾಮಾರ್ಗ ಯಾವ ಸಮಸ್ಯೆಯನ್ನೂ ಬಗೆಹರಿಸುವುದಿಲ್ಲ ಎಂದು ಹೇಳಿ ಅಹಿಂಸಾ ತತ್ತ್ವದ ಅನುಸರಣೆಯ ಅಗತ್ಯತೆಯನ್ನು ಬೋಧಿಸಿದರು. ಪೋಚಂಪಳ್ಳಿ ಎಂಬ ಊರಿಗೆ ಹೋದಾಗ ಅಲ್ಲಿಯ ಭೂಹೀನ ಹರಿಜನರ ಬಡತನದ ಭೀಕರತೆ ಕಂಡು ಆ ಸಂಜೆ ಗ್ರಾಮಸ್ಥರ ಸಭೆಯಲ್ಲಿ ಸಮಸ್ಯೆಯನ್ನು ಪ್ರಸ್ತಾವಿಸಿ ಎಂಬತ್ತು ಎಕರೆ ಜಮೀನನ್ನು ಯಾಚಿಸಿದರು. ಆಗ ಸಭೆಯಲ್ಲಿದ್ದ ಜಮೀನ್ದಾರ್ ರಾಮಚಂದ್ರರೆಡ್ಡಿ ಒಂದು ನೂರು ಎಕರೆ (40.47 ಹೆಕ್ಟೇರ್‌ಗಳು) ಭೂಮಿಯನ್ನು ದಾನ ಮಾಡಿದರು. ಆ ಭೂಮಿಯ ಹಂಚಿಕೆಯೂ ಆಯಿತು. ಅದೊಂದು ರೋಮಾಂಚನ ಕಾರಿ ಘಟನೆ. ಅದೇ ಭೂಸಮಸ್ಯೆಯ ನಿವಾರಣೆಗೆ ಒಂದು ನೂತನ ವಿಧಾನವಾಗಿ ಪರಿಣಮಿಸಿತು. ವಿನೋಬಾಭಾವೆಯವರು ಮಾರನೆಯದಿನ ಮತ್ತೊಂದು ಹಳ್ಳಿಗೆ ಹೋದರು. ಹಿಂದಿನ ದಿನದ ತಮ್ಮ ಅನುಭವವನ್ನು ತಿಳಿಸಿದರು. ಅಲ್ಲಿಯೂ ಭೂದಾನ ದೊರಕಿತು. ಈ ರೀತಿ ಎರಡು ತಿಂಗಳ ಕಾಲ ತೆಲಂಗಾಣದಲ್ಲಿ ಅವರು ಕಾಲ್ನಡಿಗೆಯಲ್ಲಿ ಪ್ರವಾಸಮಾಡಿ, ಭೂದಾನದ ಸಂದೇಶವನ್ನು ಸಾರಿದರು. ಗಾಳಿ, ನೀರು, ಆಕಾಶ ಹೇಗೆ ಭಗವಂತನ ಸ್ವಾಮ್ಯಕ್ಕೆ ಒಳಪಟ್ಟವೋ ಭೂಮಿಯೂ ಹಾಗೆಯೇ ದೇವರ ಸ್ವತ್ತು. ಭಗವಂತನ ಕೊಡುಗೆಯಾದ ಭೂಮಿಯ ಮೇಲೆ ಸರ್ವರಿಗೂ ಹಕ್ಕಿದೆ. ಭೂಮಿಯುಳ್ಳವರು ಭೂಹೀನರಿಗೆ ಒಂದು ಭಾಗವನ್ನು ಹಂಚಿಕೊಡಬೇಕು. ನಿಮ್ಮ ಕುಟುಂಬದಲ್ಲಿ ಐದು ಮಕ್ಕಳಿದ್ದರೆ ಭೂಹೀನ ರೈತನನ್ನು ಆರನೆಯ ಮಗನೆಂದು ತಿಳಿಯಿರಿ. ನಿಮ್ಮ ಭೂಮಿಯ ಆಸ್ತಿಯಲ್ಲಿ ಆರನೆಯ ಭಾಗವನ್ನು ಅವನಿಗೂ ಕೊಡಿ ಎಂಬ ಸಂದೇಶವನ್ನು ಪ್ರಸಾರಮಾಡುತ್ತ ನಡೆದರು ವಿನೋಬಾ. ಹೋದೆಡೆಯೆಲ್ಲ ದಾನಗಂಗೆ ಹರಿಯಿತು. ತೆಲಂಗಾಣದಲ್ಲಿ ಪ್ರವಾಸಮಾಡಿದ ಎರಡು ತಿಂಗಳ ಅವಧಿಯಲ್ಲಿ ಒಟ್ಟು ಹನ್ನೆರಡು ಸಾವಿರ ಎಕರೆಯಷ್ಟು (4856.4 ಹೆಕ್ಟೇರ್) ಭೂಮಿಯನ್ನು ದಾನವಾಗಿ ಪಡೆದರು. ಭೂಹೀನರ ಮತ್ತು ಜಮೀನ್ದಾರರ ನಡುವೆ ಸೌಹಾರ್ದ ಮೂಡಿಸಿ ತೆಲಂಗಾಣದಲ್ಲಿ ಶಾಂತಿ ಮತ್ತು ನೆಮ್ಮದಿ ಬಹುಮಟ್ಟಿಗೆ ನೆಲೆಗೊಳ್ಳುವಂತೆ ಮಾಡಿದರು. ವಿನೋಬಾ ಭಾವೆಯವರ ಈ ಸಾಧನೆಯ ಫಲಶ್ರುತಿ ದೇಶದಾದ್ಯಂತ ಪ್ರಸಿದ್ಧವಾಯಿತು. ದೇಶದ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಅಹಿಂಸಾಮಾರ್ಗದ ಶೋಧವಿದೆಂದು ಅನೇಕರು ಹೇಳಿದರೆ, ಕೆಲವರು ಉಪಟಳದಿಂದ ಬೇಸತ್ತಿದ್ದ ಜನ ಅನುಸರಿಸಿದ ಪಲಾಯನ ನೀತಿಯೆಂದರು. ಬೇರೆ ರಾಜ್ಯಗಳಲ್ಲಿ ಈ ವಿಧಾನ ಯಶಸ್ವಿಯಾಗದು ಎಂದು ಸಂದೇಹಪಟ್ಟರು. ದೆಹಲಿಯಲ್ಲಿ ಎರಡು ತಿಂಗಳ ಅವಧಿಯಲ್ಲಿ ಭೂದಾನಕ್ಕೆ ತೆಲಂಗಾಣದಲ್ಲಿ ದೊರೆತದ್ದಕ್ಕಿಂತ ಹೆಚ್ಚು ಭೂಮಿ ದೊರಕಿತು. ಈ ಸಾಧನೆ ಬೇರೆ ರಾಜ್ಯಗಳ ಕಾರ್ಯಕರ್ತರನ್ನು ಹುರಿದುಂಬಿಸಿತು. ಸರ್ವಸೇವಾ ಸಂಘದ ನೇತೃತ್ವದಲ್ಲಿ ಸರ್ವೋದಯ ಕಾರ್ಯಕರ್ತರು ಭೂದಾನ ಪಡೆಯಲು ಕಾಲ್ನಡಿಗೆಯ ಪ್ರವಾಸವನ್ನು ಎಲ್ಲ ರಾಜ್ಯಗಳಲ್ಲೂ ಕೈಗೊಂಡರು. ಕೆಲವು ತಿಂಗಳುಗಳಲ್ಲೇ ಭೂದಾನ ಸಾರ್ವತ್ರಿಕ ಚಳವಳಿಯೇ ಆಯಿತು. ವಿನೋಬಾ ಭಾವೆಯವರು ಉತ್ತರ ಪ್ರದೇಶ ರಾಜ್ಯದಲ್ಲಿ ಪ್ರವಾಸಮಾಡಿ ಐದು ಲಕ್ಷ ಎಕರೆಗಳಷ್ಟು ಭೂಮಿ ಸಂಗ್ರಹಿಸಿದರು. ಬಿಹಾರದಲ್ಲಿ ಭೂಸಮಸ್ಯೆಯ ನಿವಾರಣೆಗಾಗಿ ಭೂದಾನ ಯಜ್ಞಕಾರ್ಯವನ್ನು ಇತರ ಕಾರ್ಯಕರ್ತರೊಂದಿಗೆ ವ್ಯಾಪಕವಾಗಿ ಹಾಗು ಸತತವಾಗಿ ಇಪ್ಪತ್ತೆಂಟು ತಿಂಗಳ ಕಾಲ ಕೈಗೊಂಡರು. ಈ ಅವಧಿಯಲ್ಲಿ ಒಟ್ಟು ಇಪ್ಪತ್ತಮೂರು ಲಕ್ಷ ಎಕರೆಗಳನ್ನು ಸಂಗ್ರಹಿಸಿದ್ದು ಒಂದು ಅದ್ಭುತ ದಾಖಲೆಯೇ ಆಯಿತು. ಅಲ್ಲದೆ ವಿನೋಬಾ ಅವರು ಪಶ್ಚಿಮ ಬಂಗಾಲ, ಒರಿಸ್ಸ, ಆಂಧ್ರ, ತಮಿಳುನಾಡು, ಕೇರಳ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಪಂಜಾಬ್, ಕಾಶ್ಮೀರ ಮತ್ತು ಅಸ್ಸಾಂಗಳಲ್ಲಿ ಪಾದಯಾತ್ರೆ ನಡೆಸಿ ಭೂದಾನ ಹಾಗೂ ಸರ್ವೋದಯ ಸಂದೇಶವನ್ನು ಹಳ್ಳಿಹಳ್ಳಿಗೂ ಸಾರಿದರು.

ಭೂದಾನ ಚಳವಳಿ ಆರಂಭವಾದ ಮೇಲೆ ಮೊದಲ ಹತ್ತು ವರ್ಷಗಳಲ್ಲಿ ಸುಮಾರು ಐವತ್ತು ಲಕ್ಷ ಎಕರೆಗಳಷ್ಟು ಜಮೀನು ಸಂಗ್ರಹವಾಯಿತು. ಅನಂತರ ಭೂದಾನ ದೊರಕಿದ ಗ್ರಾಮದಲ್ಲಿ ಗ್ರಾಮಸ್ಥರ ಸಭೆಯನ್ನು ಕರೆದು ಆ ಗ್ರಾಮದ ಭೂಹೀನ ಬಡ ಕೃಷಿ ಕಾರ್ಮಿಕರ ಮಾಹಿತಿ ಸಂಗ್ರಹಿಸಿ ಗ್ರಾಮಸ್ಥರ ಅಭಿಪ್ರಾಯದಂತೆ ಅರ್ಹರಾದ ಭೂಹೀನ ಕಾರ್ಮಿಕರಿಗೆ ಭೂಮಿ ಹಂಚುವ ಕೆಲಸ ವ್ಯವಸ್ಥಿತವಾಗಿ ನಡೆಯಿತು. ಈ ಕಾರ್ಯಕ್ಕೆ ಸರ್ಕಾರದ ಸಹಕಾರ ಹಾಗೂ ಕಾನೂನು ಅಂಗೀಕಾರ ದೊರೆಯಿತು. ಹಲವಾರು ರಾಜ್ಯಸರ್ಕಾರಗಳು ಭೂದಾನ ಕಾನೂನುಗಳನ್ನು ಮಾಡಿವೆ. ಭೂದಾನ ಆರಂಭವಾದ ಒಂದು ದಶಕದಲ್ಲಿ ಸುಮಾರು ಮೂರುಲಕ್ಷ ಭೂಹೀನ ಕೃಷಿ ಕಾರ್ಮಿಕ ಕುಟುಂಬಗಳಿಗೆ ಜಮೀನನ್ನು ಹಂಚಲಾಯಿತು.

ಭೂದಾನ ಚಳವಳಿ ಗುರಿಯಂತೆ ಭೂಹೀನ ಕೃಷಿ ಕಾರ್ಮಿಕರಿಗೆಲ್ಲ ಭೂಮಿಯನ್ನು ಒದಗಿಸುವ ಕಾರ್ಯದಲ್ಲಿ ಪೂರ್ಣಯಶಸ್ಸನ್ನು ಪಡೆಯದಿದ್ದರೂ ಈ ಚಳವಳಿ ದೇಶದಲ್ಲಿ ಭೂಸುಧಾರಣೆಗೆ ತಕ್ಕ ವಾತಾವರಣ ಉಂಟುಮಾಡಿತು. ಮೇಲಾಗಿ ಭೂದಾನದ ತಾತ್ತ್ವಿಕ ಧ್ಯೇಯಗಳ ಪ್ರಚಾರದಿಂದಾಗಿ ಭೂಮಾಲೀಕತ್ವದ ಕಲ್ಪನೆಬಗ್ಗೆ ಮೌಲಿಕ ಬದಲಾವಣೆಯಾಗಲು

ಬಹುಮಟ್ಟಿಗೆ ಕಾರಣವಾಯಿತು. ಭೂದಾನ ಕೇವಲ ಭೂಪ್ರಾಪ್ತಿಯ ಹಾಗೂ ಹಂಚಿಕೆಯ ಕಾರ್ಯಕ್ರಮವಷ್ಟೇ ಅಲ್ಲ; ಶ್ರೇಷ್ಠ ಸಾಮಾಜಿಕ ಹಾಗೂ ಆರ್ಥಿಕ ಮೌಲ್ಯಗಳ ಪ್ರಸಾರ ಹಾಗೂ ಅನ್ವಯದ ಮೂಲಕ ಸಮಾಜದ ಸರ್ವಾಂಗೀಣ ಪ್ರಗತಿಯ ಸಾಧನೆಯೇ ಅದರ ಅಂತಿಮಗುರಿ. ಭೂದಾನದ ವಿಸ್ತೃತ ಪ್ರಕಾರಗಳಾಗಿ ಸಂಪತ್ತಿನ ದಾನ, ಶ್ರಮದಾನ, ಬುದ್ಧಿದಾನ ಮತ್ತು ಗ್ರಾಮದಾನ–ಇವು ಬೆಳೆದುಬಂದಿವೆ. ಇವುಗಳೆಲ್ಲದರ ಮೂಲ ಉದ್ದೇಶ ವ್ಯಕ್ತಿಯಲ್ಲಿ ಧರ್ಮದರ್ಶಿತ್ವ ಭಾವನೆಯ ಪ್ರತಿಷ್ಠಾಪನೆ. ವ್ಯಕ್ತಿ ತನ್ನಲ್ಲಿರುವ ಭೂಮಿ, ಸಂಪತ್ತು, ವಿದ್ಯೆ, ಶಕ್ತಿ ಮುಂತಾದವೆಲ್ಲಕ್ಕೂ ತಾನು ಧರ್ಮದರ್ಶಿಯೆಂದು ಭಾವಿಸಿ ಅವನ್ನು ಸಮಾಜದ ಹಿತಕ್ಕಾಗಿ ಬಳಸಬೇಕು. ಇದರಿಂದಲೇ ವ್ಯಕ್ತಿಯ ವಿಕಾಸ ಮತ್ತು ಸಮಾಜದ ಉನ್ನತಿ. ವಿನೋಬಾರ ಈ ಚಳವಳಿಯನ್ನು 1952ರಲ್ಲಿ ಜಯಪ್ರಕಾಶ ನಾರಾಯಣ ಮೊದಲಾದವರು ಸೇರಿ ಮುಂದೆ ಸರ್ವೋದಯ ಸಾಧನೆಗಾಗಿ ದುಡಿದರು. (ಬಿ.ಆರ್.ಪಿ.)

**ಭೋಕರ್ಧನ:** ಮಹಾರಾಷ್ಟ್ರ ರಾಜ್ಯದ ಜಲ್ನ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಕೈಲ ನದಿಯ ಬಲದಂಡೆಯ ಮೇಲಿದೆ. ಅಜಂತದಿಂದ ಸು.55 ಕಿಮೀ ಆಗ್ನೇಯಕ್ಕೆ ಇದೆ. ವ್ಯಾಪಾರ ಕೇಂದ್ರವಾಗಿದ್ದ ಇದು ಪ್ರಾಚೀನ ವ್ಯಾಪಾರ ಮಾರ್ಗವಾದ ಉಜ್ಜಯಿನಿ–ಪ್ರತಿಷ್ಠಾನ (ಪೈಠಣ) ಮಧ್ಯದಲ್ಲಿದೆ. ಸಾಂಚಿ ಮತ್ತು ಬಾರ್ಹುತ್‌ನ ಪಾಳಿ ಶಾಸನಗಳ ಪ್ರಕಾರ ಇದರ ಮೂಲ ಹೆಸರು ಭೋಗವರ್ಧನವಾಗಿದ್ದು ಇಲ್ಲಿಯ ಅಜಿತಗುಪ್ತ, ಧರ್ಮರಕ್ಷಿತ, ಋಷಿರಕ್ಷಿತ, ಧನ್ಯಕ, ಮಹೇಂದ್ರ, ಬುಧಿಲಾ, ಕ್ಷುದ್ರ ಮೊದಲಾದವರು ಸಾಂಚಿ ಮತ್ತು ಬಾರ್ಹುತ್‌ನ ಬೌದ್ಧ ಸ್ತೂಪಗಳಿಗೆ ದಾನಗಳನ್ನು ನೀಡಿದ್ದರು. ಸ್ಥಳೀಯ ದಂತಕಥೆಯ ಪ್ರಕಾರ ಬಲಾತ್ಕಾರದಿಂದ 17,000 ಸ್ತ್ರೀಯರನ್ನು ತಂದ ಭೂಮಾಸುರ ಎಂಬ ರಾಜನ ಮೇಲೆ ಕೃಷ್ಣ ಯುದ್ಧಸಾರಿದನಲ್ಲದೆ ಅವನನ್ನು ಕೊಂದು ಸ್ತ್ರೀಯರನ್ನೆಲ್ಲ ಬಿಡುಗಡೆಗೊಳಿಸಿ, ತನ್ನ ಮಗ ಭಗದನಾಥನನ್ನು ಸಿಂಹಾಸನದ ಮೇಲೆ ಕೂಡಿಸಿದ. ಆತನ ರಾಜಧಾನಿ ಪ್ರದೇಶವೇ ಮುಂದೆ ಭೋಕರ್ಧನ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

ಈ ನೆಲೆಯಲ್ಲಿ 4 ದಿಬ್ಬಗಳಿವೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣೆಯ ಎಮ್.ಎನ್. ದೇಶಪಾಂಡೆ ಇಲ್ಲಿ ಸಣ್ಣ ಪ್ರಮಾಣದ ಉತ್ಖನನ ನಡೆಸಿದರು (1958–59). 1972–73ರಲ್ಲಿ ನಾಗಪುರ ವಿಶ್ವವಿದ್ಯಾಲಯ ಹಾಗೂ ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾಲಯ ಎಸ್.ಬಿ. ದೇವ್ ಅವರ ನಿರ್ದೇಶನದಲ್ಲಿ ಇಲ್ಲಿ ಉತ್ಖನನ ನಡೆಸಿದವು. ಎರಡು ಮುಖ್ಯ ಹಂತಗಳನ್ನು ಉತ್ಖನನದಲ್ಲಿ ಗುರುತಿಸಲಾಗಿದೆ. 1ನೆಯ ಹಂತದಲ್ಲಿ ಎರಡು ಉಪಹಂತಗಳನ್ನು ಗುರುತಿಸಲಾಗಿದೆ: ಸಾತವಾಹನ ಪೂರ್ವಕಾಲ ಮತ್ತು ಸಾತವಾಹನ–ಕ್ಷತ್ರಪ ಕಾಲ. 2ನೆಯ ಹಂತ ಸಾತವಾಹನೋತ್ತರ ಕಾಲ.

ಕಟ್ಟಡ ರಚನೆ: 1ಎ ಉಪಹಂತದಲ್ಲಿ ಕಪ್ಪುಮಣ್ಣಿನ ನೆಲದಲ್ಲಿ ತೋಡಿದ ವಾಸದ ಗುಂಡಿಗಳಿದ್ದವು. ಗುಂಡಿಗಳ ನೆಲವನ್ನು ಸುಣ್ಣ, ಮಣ್ಣು ಮತ್ತು ಕಲ್ಲಿನಿಂದ ಗಟ್ಟಿ ಮಾಡಲಾಗಿತ್ತು. ನೆಲದ ಮೂಲೆಯಲ್ಲಿ ಬೂದಿಸಹಿತವಾದ ಒಲೆಗಳಿದ್ದುವು. ಸಾತವಾಹನ–ಕ್ಷತ್ರಪ ಮತ್ತು ಸಾತವಾಹನೋತ್ತರ ಕಾಲದ ಕಟ್ಟಡ ಅವಶೇಷಗಳು ವಿಪುಲವಾಗಿದ್ದುವು. ಈ ಕಾಲದ ಕಟ್ಟಡಗಳು ಕಪ್ಪುಮಣ್ಣು ಮತ್ತು ಕಲ್ಲಿನ ಪಾಯದ ಮೇಲೆ ಇಟ್ಟಿಗೆ ಹಾಗೂ ಮಣ್ಣಿನ ಗೋಡೆಗಳಿಂದ ಕಟ್ಟಲ್ಪಟ್ಟಿದ್ದು ಕಟ್ಟಿಗೆಯ ತೊಲೆಗಳ ಮೇಲೆ ಹೆಂಚುಗಳನ್ನು ಹೊದಿಸಿದುದನ್ನು ಸೂಚಿಸುವ ಅವಶೇಷಗಳು ಸಿಕ್ಕಿವೆ. ಮನೆಯ ನೆಲವನ್ನು ಮಣ್ಣು ಮತ್ತು ಹೆಂಚಿನ ತುಣುಕುಗಳಿಂದ ಗಟ್ಟಿ ಮಾಡಲಾಗಿದೆ. ಸಾಮಾನ್ಯವಾಗಿ ಈ ಕಾಲದ ಮನೆಗಳಲ್ಲಿ ಮೊಗಸಾಲೆ (2.50 x 1.5 ಮೀ) ಹಜಾರ ಕೋಣೆ (3.0 x 3 ಮೀ), ಅಡಿಗೆ ಮನೆ (3.5 x 3 ಮೀ) ಹಾಗೂ ಬಾವಿಗಳಿವೆ. ಅಡುಗೆ ಮನೆಯಲ್ಲಿ ಮಣ್ಪಾತ್ರೆಗಳು, ಸಂಗ್ರಹಣ ಜಾಡಿ ಮತ್ತಿತರ ಪಾತ್ರೆಗಳಿದ್ದುವು.

ನಾಣ್ಯಗಳು: ಉತ್ಖನನದಲ್ಲಿ ದೊರೆತ 400 ಕ್ಕೂ ಹೆಚ್ಚು ತಾಮ್ರ, ಸೀಸ ಮತ್ತು ಬೆಳ್ಳಿ ನಾಣ್ಯಗಳು ಪ್ರ.ಶ.ಪೂ.1–ಪ್ರ.ಶ.5ನೆಯ ಶತಮಾನದವರೆಗಿನ ಇತಿಹಾಸವನ್ನು ತಿಳಿಸುತ್ತವೆ. ನಾಣ್ಯಗಳನ್ನು ಮುದ್ರಾಂಕಿತ ನಾಣ್ಯಗಳು, ಸಾತವಾಹನ–ಕ್ಷತ್ರಪ ನಾಣ್ಯಗಳು, ಮೊದಲನೆಯ ಕುಮಾರಗುಪ್ತನ ಚಿನ್ನದ ನಾಣ್ಯಗಳು, ಸ್ಥಳೀಯ ತಾಮ್ರ ನಾಣ್ಯಗಳು ಮತ್ತು ಇತರ ನಾಣ್ಯಗಳು ಎಂದು ವಿಭಾಗಿಸಬಹುದು. ಸಾತವಾಹನರ ತಾಮ್ರದ ನಾಣ್ಯಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಶಿವಸ್ವಾತಿ, ಗೌತಮಿಪುತ್ರ ಸಾತಕರ್ಣಿ, ಶಿವಶ್ರೀ ಸಾತಕರ್ಣಿ, ಪುಳುಮಾವಿ ಮತ್ತು ವಾಸಿಷ್ಠಿಪುತ್ರ ಪುಳುಮಾವಿ ಕಾಲದವುಗಳಾಗಿವೆ. ನಾಣ್ಯಗಳನ್ನು ಮುದ್ರಿಸುವ ಮಣ್ಣಿನ ಎರಡು ಅಚ್ಚುಗಳು ಉತ್ಖನನದಲ್ಲಿ ದೊರೆತಿದ್ದು, ನಾಣ್ಯ ತಯಾರಿಕಾ ತಂತ್ರಕ್ಕೆ ನಿದರ್ಶನಗಳಾಗಿವೆ. ರೋಮನ್ನರ ನಾಣ್ಯಗಳನ್ನು ಹೋಲುವ ಮಣ್ಣಿನ ಪದಕವೊಂದನ್ನು ಆಭರಣದಂತೆ ಉಪಯೋಗಿಸಿದ್ದಿರಬಹುದು. ಒಟ್ಟು 6 ಗಟ್ಟಿಗಳು (ಬುಲಿಯನ್) ಇಲ್ಲಿ ದೊರೆತಿದ್ದು ರೋಮ್‌ದೇಶದ ಜೊತೆಗಿನ ವ್ಯಾಪಾರ ಸಂಬಂಧವನ್ನು ಸ್ಪಷ್ಟಪಡಿಸುತ್ತವೆ. ವ್ಯಾಪಾರ–ವಾಣಿಜ್ಯಗಳಲ್ಲಿ ಉಪಯೋಗಿಸುವ ಮಣ್ಣಿನ ಮುದ್ರೆ–ಮುದ್ರಿಕೆಗಳೂ ಇಲ್ಲಿ ದೊರೆತಿವೆ.

ಇಲ್ಲಿ ದೊರೆತ ಮಣ್ಪಾತ್ರೆಗಳನ್ನು ಕೆಂಪುವರ್ಣದ ದೊರಗು, ಕೆಂಪು ಲೇಪನದ ಹಾಗೂ ಮೆರುಗಿನ ಕೆಂಪುಬಣ್ಣದ ಪಾತ್ರೆಗಳು, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕಪ್ಪುವರ್ಣದ ಅಭ್ರಕ ಮಿಶ್ರಿತ ಪಾತ್ರೆ, ಮೆರುಗಿನ ಕಂದುಬಣ್ಣದ ಪಾತ್ರೆ, ಗಾಜಿನ ಮೆರುಗಿನ ಪಾತ್ರೆಗಳಾಗಿ ವಿಂಗಡಿಸಲಾಗಿದೆ. ಗುಡಾಣಗಳನ್ನು ಕೈಯಿಂದ ಮಾಡಲಾಗಿದ್ದರೆ ಮಧ್ಯಮ ಮತ್ತು ಸಣ್ಣ ಪಾತ್ರೆಗಳನ್ನು ತಿಗುರಿಯ ಮೇಲೆ ಮಾಡಲಾಗಿದೆ. ಜಾಡಿ, ಗುಡಾಣ, ಮಡಕೆ, ಗಡಿಗೆ, ಚಪ್ಪಟೆ ತಳದ ಪಾತ್ರೆ, ತಟ್ಟೆ, ಮುಚ್ಚಳ, ನೀರಿನ ಹೂಜಿ ಮುಂತಾದ ಪಾತ್ರೆಗಳು ಬಳಕೆಯಲ್ಲಿದ್ದವು. ರೇಖಾಚಿತ್ರಗಳು, ಎಲೆ, ಅಪರೂಪವಾಗಿ ಧರ್ಮಚಕ್ರ ಮುಂತಾದ ಚಿತ್ರಗಳನ್ನು ಕೆಲವು ಪಾತ್ರೆಗಳ ಮೇಲೆ ಬಿಡಿಸಲಾಗಿದೆ. ಸುಡಾವೆಮಣ್ಣಿನ ಮಾನವ ಮತ್ತು ಪ್ರಾಣಿ–ಪಕ್ಷಿಗೊಂಬೆಗಳೂ ಇಲ್ಲಿ ದೊರೆತಿವೆ. ಸ್ತ್ರೀ ಆಕೃತಿಗಳು, ವಿಶೇಷವಾಗಿ ಮಾತೃದೇವತೆಯ ಆಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಪ್ರಾಣಿ ಆಕೃತಿಗಳಲ್ಲಿ ಎತ್ತು, ಆನೆ, ಕುದುರೆ, ಟಗರು, ಹಂದಿ, ಮಂಗ ಮತ್ತು ಆಮೆ ಪ್ರಮುಖವಾಗಿವೆ. ಉತ್ಖನನದಲ್ಲಿ ದೊರೆತ ಇತರ ಪ್ರಮುಖ ಅವಶೇಷಗಳೆಂದರೆ ಅಗೇಟ್, ಕಾರ್ನೇಲಿಯನ್, ಸ್ಫಟಿಕ, ನೀಲ, ಜೇಡ್, ಜಾಸ್ಪರ್, ಫಯಾನ್ಸ್, ಗಾಜು ಮತ್ತು ಸುಡಾವೆಮಣ್ಣಿನ ಮಣಿಗಳು ಮತ್ತು ತಾಯಿತಗಳು, ಹರಕೆ ತಟ್ಟೆ, ಬೀಸುವ ಕಲ್ಲು, ಅರೆಯುವ ಕಲ್ಲು, ದಂತದ ಮತ್ತು ಶಂಖದ ಬಳೆಗಳು ಇತ್ಯಾದಿ. ಅರೆಯುವ ಕಲ್ಲಿನ ಮೇಲೆ ಬೌದ್ಧಧರ್ಮದ ಸಂಕೇತವಿದೆ. ಗೋಧಿ, ಜೋಳ, ಅಕ್ಕಿ ಮತ್ತು ಹೆಸರಿನ ಕಾಳುಗಳು ದೊರೆತಿವೆ. ರೋಮನ್ನರ ಜೊತೆಗಿನ ವ್ಯಾಪಾರ ಸಂಬಂಧವನ್ನು ಸೂಚಿಸುವ ಅವಶೇಷಗಳೆಂದರೆ– ಮೆರುಗಿನ ಕೆಂಪುಬಣ್ಣದ ಪಾತ್ರೆಗಳು, ಮಗರಾನ್ ಪಾತ್ರೆ, ಮದ್ಯ ಜಾಡಿ (ಆಂಫೋರ), ಮುದ್ರಿಕೆ, ಬೀಸುವ ಕಲ್ಲು ಇತ್ಯಾದಿ. ಸಾತವಾಹನ–ಕ್ಷತ್ರಪ ಕಾಲದ ಅವಶೇಷಗಳಲ್ಲಿ ಅತ್ಯಂತ ಸುಂದರವಾದ ದಂತದ ಕನ್ನಡಿ ಗಮನಾರ್ಹ. ಇದರ ಮೇಲಿರುವ ನಗ್ನಸ್ತ್ರೀ ಮತ್ತು ಅವಳ ಇಬ್ಬರು ಸೇವಕಿಯರ ಕೆತ್ತನೆ ಎಂತಹವರನ್ನೂ ಬೆರಗುಗೊಳಿಸುವಂತಿದೆ. ಸಾತವಾಹನರ ಪತನಾನಂತರವೂ ಇದು ವ್ಯಾಪಾರ ನಗರವಾಗಿ ಮುಂದುವರೆಯಿತು ಎಂಬುದು ಗುಪ್ತ ದೊರೆ 1ನೆಯ ಕುಮಾರಗುಪ್ತನ ನಾಣ್ಯ ಮತ್ತು ಬಹುವರ್ಣದ ಗಾಜಿನ ಬಳೆಗಳಿಂದ ದೃಢಪಡುತ್ತದೆ. ಗುಪ್ತರ ಅನಂತರ ಪೂರ್ವ ಕಳಚುರಿಗಳು, ರಾಷ್ಟ್ರಕೂಟರು ಮತ್ತು ಯಾದವರ (ಸೇವುಣರು) ಕಾಲದಲ್ಲಿಯೂ ಇದು ಪ್ರಮುಖ ನಗರವಾಗಿದ್ದಿತ್ತು. 15–16ನೆಯ ಶತಮಾನದ ಮಣ್ಣಿನ ಕೋಟೆಗೋಡೆ ಈ ನಗರದ ಮಧ್ಯಕಾಲೀನ ಇತಿಹಾಸಕ್ಕೆ ಸಾಕ್ಷಿಯಾಗಿದೆ.

1935ರಲ್ಲಿ ಇಲ್ಲಿಯ ನದಿದಂಡೆಯ ಮೇಲೆ ಹಿಂದು ಗುಹಾದೇವಾಲಯಗಳು ಬೆಳಕಿಗೆ ಬಂದುವು. ಇವು ಗುಪ್ತರ ಕಾಲದವೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟರೆ ಕಲೆ ಮತ್ತು ವಾಸ್ತುಶಿಲ್ಪ ದೃಷ್ಟಿಯಿಂದ ಇವು ರಾಷ್ಟ್ರಕೂಟರ ಕಾಲದವೆಂಬುದು ಇನ್ನಿತರ ಕೆಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ಇಲ್ಲಿಯ ಕಂಬವೊಂದರ ಮೇಲಿರುವ ರಾಷ್ಟ್ರಕೂಟರ ಶಾಸನ ಎರಡನೆಯ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. (ವಿ.ಎಸ್.ಬಿ.)

**ಭೋಜರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಭೋನ್ಸ್ಲೆ :** ಮಹಾರಾಷ್ಟ್ರ, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ರಾಜ್ಯವಾಳಿದ ಒಂದು ರಾಜವಂಶ. ಮರಾಠ ಸಾಮ್ರಾಜ್ಯ ಸ್ಥಾಪಕ ಶಿವಾಜಿ ಈ ವಂಶಕ್ಕೆ ಸೇರಿದವ. ಮೂಲತಃ ರಾಜಸ್ಥಾನದ ಸಿಸೋದಿಯಾ ಮನೆತನಕ್ಕೆ ಈ ವಂಶ ಸೇರಿದುದೆಂದು ಹೇಳುವರು. 1303ರ ಚಿತ್ತೋಡಗಡದ ಮುತ್ತಿಗೆಯಲ್ಲಿ ರಾಣಾ ಲಕ್ಷ್ಮಣಸಿಂಹ ಮರಣಹೊಂದಿದ. ಇವನ ಮೊಮ್ಮಗ ಸಜ್ಜನಸಿಂಹ ದಕ್ಷಿಣಕ್ಕೆ ಹೋಗಿ ಬಹಮನಿ ಅರಸರಲ್ಲಿ ಕೆಲಸಕ್ಕೆ ನಿಂತು ದೇವಗಿರಿ ಪ್ರಾಂತದಲ್ಲಿ ಒಂದು ಜಹಗೀರನ್ನು ಸಂಪಾದಿಸಿದ. ಈತನ ಮೊಮ್ಮಗ ಬೈರೋಜಿ ಮುಧೋಳದ ಸುತ್ತಮುತ್ತಲಿನ ಪ್ರದೇಶ ಗೆದ್ದುಕೊಂಡ. ಈತನನ್ನು ಭೋಸಾಜೀ ಎಂದು ಕರೆಯುತ್ತಿದ್ದರು. ಈತನ ಹೆಸರಿನಿಂದಲೇ ಭೋನ್ಸ್ಲೆ ಕುಲನಾಮವಾಯಿತು. ಭೋನ್ಸ್ಲೆ ವಂಶದ ಶಿವಾಜಿಯ ಮುತ್ತಜ್ಜ ಬಾಬಾಜಿ. ಭೀಮಾ ನದಿತೀರದ ಪಾಂಡೇಪೇಡಗಾಂವ್ ಎಂಬ ಗ್ರಾಮದ ಜಹಗೀರದಾರನಾಗಿದ್ದ. ಈತನಿಗೆ ಮಾಲೋಜಿ ಹಾಗೂ ವಿಠೋಜಿ ಎಂಬ ಮಕ್ಕಳಿದ್ದರು. ಇವರು ಅಹಮದ್‌ನಗರದ ನಿಜಾಮ್‌ಶಾಹಿ ಆಡಳಿತದಲ್ಲಿ ಕೆಲಸಕ್ಕೆ ಸೇರಿದ್ದು ಪ್ರತಿಷ್ಠಿತ ವ್ಯಕ್ತಿಗಳಾಗಿದ್ದರು. ಮಾಲೋಜೀಗೆ ಸು.1594ರಲ್ಲಿ ಶಹಾಜಿ ಜನಿಸಿದ. ಶಹಾಜಿಯನ್ನು ಕುರಿತ ಮೊದಲ ಉಲ್ಲೇಖ 1628ರ ದಾಖಲೆಯೊಂದರಲ್ಲಿ ಸದ್ಯ ದೊರೆತಿದೆ. ಆ ಸಮಯಕ್ಕಾಗಲೇ ಶಹಾಜಿ ನಿಜಾಮ್‌ಷಾಹನ ಆಡಳಿತದಲ್ಲಿ ಒಬ್ಬ ಅಧಿಕಾರಿಯಾಗಿದ್ದ. ಶರಪೋಜಿ ಶಹಾಜಿಯ ಸೋದರ, ತಾಯಿ ಉಮಾಬಾಯಿ. ಶಹಾಜಿ ಸುಮಾರು ಹದಿಮೂರು ವರ್ಷದವನಿದ್ದಾಗಲೆ ಆತನ ತಂದೆ ನಿಜಾಮ್‌ಶಾಹಿ ಹಾಗೂ ಆದಿಲ್‌ಶಾಹಿಗಳ ಯುದ್ಧದಲ್ಲಿ ಮರಣಹೊಂದಿದ ಕಾರಣ ತಾಯಿ ಉಮಾಬಾಯಿಯೇ ಮಕ್ಕಳ ಪಾಲನೆ ಪೋಷಣೆ ಮಾಡಿದಳು. ನಿಜಾಮ್‌ಷಾನ ಇನ್ನೊಬ್ಬ ಅಧಿಕಾರಿ ಲಖುಜಿ ಜಾಧವನ ಮಗಳು ಜೀಜಾಬಾಯಿಯೊಂದಿಗೆ ಶಹಾಜಿಯ ಲಗ್ನವಾಯಿತು. 1630ರಲ್ಲಿ ಲಖುಜಿಯ ಕೊಲೆಯಾದಾಗ ಶಹಾಜಿ ಬಿಜಾಪುರ ಆದಿಲ್‌ಶಾಹಿ ಅರಸರಲ್ಲಿ ಕೆಲಸ ಕೇಳಿಕೊಂಡು ಹೋದ. ಆದಿಲ್ ಷಾ ಇವನನ್ನು ಸ್ವಾಗತಿಸಿ ಸೈನ್ಯಾಧಿಕಾರಿಯಾಗಿ ನೇಮಿಸಿದ. ಮುಂದೆ ಷಾ ಈತನಿಗೆ ಮಹಾರಾಷ್ಟ್ರದ ಜಹಗೀರಿಯನ್ನು ಬಿಟ್ಟುದಲ್ಲದೆ ಶಹಾಜಿಯನ್ನು ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆಗೆ ನೇಮಿಸಿದ ಕೂಡ. ಆಗ ಶಹಾಜಿ ವಿಶ್ವಾಸಿ ಸೇವಕ ದಾದಾಜಿಕೊಂಡದೇವನಿಗೆ ತನ್ನ ಜಹಗೀರಿಯ ಆಡಳಿತವನ್ನು ವಹಿಸಿಕೊಟ್ಟಿದ್ದ. ಶಹಾಜಿಗೆ ಜೀಜಾಬಾಯಿ ಹಾಗೂ ತುಕಾಬಾಯಿ ಹೆಂಡತಿಯರು. ಜೀಜಾಬಾಯಿಗೆ ಶಂಭೂಜಿ (ಸಂಭಾಜಿ) ಹಾಗೂ ಶಿವಾಜಿ ಎಂಬ ಇಬ್ಬರು ಮಕ್ಕಳು. ತುಕಾಬಾಯಿಗೆ ಶಾಂತಜಿ ಹಾಗೂ ವೆಂಕೋಜಿ (ಏಕೋಜಿ) ಎಂಬ ಮಕ್ಕಳೂ ಇದ್ದರು. ಶಹಾಜಿ ಕರ್ನಾಟಕದ ಅನೇಕ ಪಾಳೆಯಗಾರರನ್ನು ಗೆದ್ದು ಬೆಂಗಳೂರಿನಲ್ಲಿ ನೆಲಸಿದ.

ಶಹಾಜಿಯ ಬೆಳೆವಣಿಗೆ ಆದಿಲ್‌ಶಾಹಿ ದೊರೆಗೆ ಚಿಂತೆಯುಂಟುಮಾಡಿತು. ಅತ್ತ ಶಿವಾಜಿ ಕೂಡ ದಿನೇ ದಿನೇ ಪ್ರವರ್ಧಮಾನನಾಗಿ ಅಲ್ಲಲ್ಲಿ ಯುದ್ಧಗಳನ್ನು ಮಾಡುತ್ತಿದ್ದುದನ್ನು ಕಂಡು ಆದಿಲ್‌ಶಾಹಿ ದೊರೆ ಮೋಸದಿಂದ ಶಹಾಜಿಯನ್ನು ಹಿಡಿಸಿ ಬಿಜಾಪುರದಲ್ಲಿ ಸೆರೆಯಲ್ಲಿಟ್ಟ. ಮೊಗಲ್ ಚಕ್ರವರ್ತಿ ಷಹಜಹಾನ್ ಮತ್ತು ಶಹಾಜಿಯ ಮಕ್ಕಳು ಸಂಭಾಜಿ ಮತ್ತು ಶಿವಾಜಿ ಇವರ ಪ್ರಯತ್ನದ ಫಲವಾಗಿ ನಾಲ್ಕು ವರ್ಷ ಸೆರೆವಾಸದಿಂದ ಶಹಾಜಿಯ ಬಿಡುಗಡೆಯಾಯಿತು. ಮುಂದೆ 1664ರಲ್ಲಿ ಹೊದಿಗೆರೆಯಲ್ಲಿ ಶಹಾಜಿ ಮರಣಹೊಂದಿದುದಾಗಿ ತಿಳಿದುಬಂದಿದೆ. ಶಹಾಜಿಯ ಪುತ್ರ ಸಂಭಾಜಿ ಕರ್ನಾಟಕದಲ್ಲಿ ತಂದೆಯೊಂದಿಗೆ ಬೆಂಗಳೂರು ಹಾಗೂ ಕೋಲಾರ ಪ್ರದೇಶದಲ್ಲಿ ನೆಲಸಿದ. ಸಂಭಾಜಿಯ ಇಬ್ಬರು ಮಕ್ಕಳು ಮಲಕೋಜಿ ಹಾಗೂ ಕನ್ನರಾಯ. ಇವರು ಕರ್ನಾಟಕದಲ್ಲಿ ಶಿವಾಜಿಯ ಸಾಮಂತರಾಗಿ ರಾಜ್ಯ ಆಳಿದರು. ಮಹಾರಾಷ್ಟ್ರ, ಕರ್ನಾಟಕ ಹಾಗೂ ತಮಿಳುನಾಡುಗಳಲ್ಲಿ ಎಂದರೆ ಸುಮಾರು ನರ್ಮದಾ ನದಿಯಿಂದ ಗ್ವಾಲಿಯರ್ ಕಾವೇರಿ (ತಂಜಾವೂರು) ಪ್ರದೇಶದವರೆಗೆ ಶಿವಾಜಿ ತನ್ನ ರಾಜ್ಯವನ್ನು ವಿಸ್ತರಿಸಿದ. ಶಿವಾಜಿ ತನ್ನ ತಂದೆ ಶಹಾಜಿಯ ರಾಜಧಾನಿಯಾಗಿದ್ದ ಬೆಂಗಳೂರಿನಲ್ಲಿ ಸಾಯಿಬಾಯ ನಿಂಬಾಳ್ಕರ್ ಎಂಬಾಕೆಯನ್ನು ಮದುವೆಯಾದ. ಈಕೆಯ ಪುತ್ರನೇ ಸಂಭಾಜಿ II. ಶಿವಾಜಿಯ ಇನ್ನೊಬ್ಬ ಪತ್ನಿ ಸೊಯ್ರಾಬಾಯಿಯಲ್ಲಿ ರಾಜರಾಮ ಹುಟ್ಟಿದ. ಶಿವಾಜಿ ತನ್ನ ಅಂತ್ಯಕಾಲದಲ್ಲಿ ಮೂಲರಾಜ್ಯವನ್ನು (ಮಹಾರಾಷ್ಟ್ರ ಪ್ರದೇಶ) ರಾಜರಾಮನಿಗೂ ತುಂಗಭದ್ರೆಯ ಈಚೆಗಿನ ಪ್ರದೇಶವನ್ನು ಸಂಭಾಜಿಗೂ ಹಂಚಿಕೊಟ್ಟ. ಇದರಿಂದ ಅಂತಃಕಲಹ, ಅತೃಪ್ತಿಗಳುಂಟಾದವು. ಕರ್ನಾಟಕ ಪ್ರದೇಶದ ಒಡೆಯನಾದ ಸಂಭಾಜಿ 1666ಕ್ಕೂ ಮುಂಚೆಯೆ ಜಯಿತಾಬಾಯಿಯನ್ನು ಮದುವೆಯಾಗಿದ್ದ. ಈಕೆ 1693ರಲ್ಲಿ ತೀರಿಹೋದಳೆಂದು ತಿಳಿದುಬರುತ್ತದೆ. ಸಂಭಾಜಿ, ರಾಜರಾಮ, ಶಾಹು ಇವರ ವಂಶಸ್ಥರು ಮಹಾರಾಷ್ಟ್ರದಲ್ಲಿ ನಿಂತು ರಾಜ್ಯವಾಳಿದರು. ರಾಜರಾಮನಿಗೆ ಸಾತಾರ ರಾಜಧಾನಿಯಾಗಿತ್ತು. ಅವನ ಮರಣಾನಂತರ ಅಂತಃಕಲಹಗಳಲ್ಲಿ ಈ ಮನೆತನ ನಿಃಸತ್ವವಾಯಿತು. ಹಲವರಲ್ಲಿ ಹರಿದು ಹಂಚಿ ಹೋಯಿತು. ರಾಜರಾಮನ ಹೆಂಡತಿ ತಾರಾಬಾಯಿ ಕೊಲ್ಲಾಪುರದಲ್ಲಿ ನಿಂತುದರಿಂದ ಅದಕ್ಕೆ ಪ್ರಾಮುಖ್ಯ ಬಂತು. 1714ರಿಂದ 1760ರ ಮಧ್ಯೆ ರಾಜ್ಯವಾಳಿದ ಸಂಭಾಜಿ ಕಾಲದಿಂದ ಇದು ಭೋನ್ಸ್ಲೆ ಮನೆತನಕ್ಕೆ ರಾಜಧಾನಿಯಾಯಿತು. ರಾಜ್ಯಸೂತ್ರಗಳು ವಾಸ್ತವದಲ್ಲಿ ಪೇಶ್ವೆಗಳ ಕೈಯಲ್ಲಿತ್ತು. ಅಂತೆಯೆ ಕೊಲ್ಲಾಪುರದ ಭೋನ್ಸ್ಲೆಗಳು ಮತ್ತು ಸಾತಾರದ ಭೋನ್ಸ್ಲೆಗಳು ಒಂದಾಗಿ ಪೇಶ್ವೆಗಳ ವಿರುದ್ಧ ಬಂಡೆದ್ದರು. ಆದರೆ ಪೇಶ್ವೆ ಸೇನಾಪತಿ ಪಟವರ್ಧನ ಆ ಬಂಡನ್ನು ಮುರಿದ. ಇಂಗ್ಲಿಷರ ಮತ್ತು ಪೇಶ್ವೆಯವರ ನೇತೃತ್ವದಲ್ಲಿ ನಡೆದ ಮರಾಠ ಯುದ್ಧದಲ್ಲಿ ಕೊಲ್ಲಾಪುರದ ಭೋನ್ಸ್ಲೆ ಮನೆತನದ ರಾಜರು ತಟಸ್ಥನೀತಿ ಅನುಸರಿಸಿದರು. 1812ರಲ್ಲಿ ಅವರು ಇಂಗ್ಲಿಷರಿಗೆ ಸಾಮಂತರಾಗಿರಲು ಒಪ್ಪಿಕೊಂಡರು. 1821ರಲ್ಲಿ ಇಂಗ್ಲಿಷರು ಭೋನ್ಸ್ಲೆಯವರಿಗೆ ಸೇರಿದ್ದ ಸಮುದ್ರದಂಡೆಯ ಪ್ರದೇಶಗಳನ್ನೆಲ್ಲ ಕಿತ್ತುಕೊಂಡು ಕೇವಲ ಕೊಲ್ಲಾಪುರ ಸಂಸ್ಥಾನ ಮಾತ್ರ ಉಳಿಸಿದರು. ಅಂತೆಯೆ ಇದಕ್ಕೆ ಕೊಲ್ಲಾಪುರ ಮನೆತನವೆಂದೂ ಹೆಸರು.

**ತಂಜಾವೂರ ಭೋನ್ಸ್ಲೆ:** ಛತ್ರಪತಿ ಶಿವಾಜಿಯ ಬಲತಮ್ಮ ವೆಂಕೋಜಿ (ಏಕೋಜಿ) ತಂಜಾವೂರನ್ನು ಆಳುತ್ತಿದ್ದು ಅದಕ್ಕೆ ತಂಜಾವೂರು ಭೋನ್ಸ್ಲೆ ಮನೆತನವೆಂದು ಹೆಸರಾಯಿತು. ಈತ ಆದಿಲ್ ಶಾಹಿಯ ಆಡಳಿತ ಒಪ್ಪಿಕೊಂಡು ಜಿಂಜಿಯ ಜಹಗೀರನ್ನು ಶಹಾಜಿಯ ಅನಂತರ ತಾನೇ ವಹಿಸಿಕೊಂಡಿದ್ದ. ಮಧುರೆಯ ನಾಯಕರು ಅಂತಃಕಲಹದಲ್ಲಿ ತೊಡಗಿ ವಿಜಯರಾಘವನಾಯಕನ ತಲೆ ಕತ್ತರಿಸಲು (1674 ಏಪ್ರಿಲ್) ಅವನ ಪುತ್ರ ಬಿಜಾಪುರದ ಆದಿಲ್‌ಷಾನನ್ನು ಸಹಾಯ ಬೇಡಿದ. ಆದಿಲ್‌ಷಾ ವೆಂಕೋಜಿಗೆ ತಂಜಾವೂರನ್ನು ಹಿಡಿಯಲು ಹೇಳಿ, ವೆಂಕೋಜಿ 1676 ಜನವರಿ 12ರಂದು ತಂಜಾವೂರನ್ನು ಗೆದ್ದು ಅದರ ಸಿಂಹಾಸನವನ್ನೇ ಆಕ್ರಮಿಸಿಕೊಂಡ. 1678ರಲ್ಲಿ ಶಿವಾಜಿ ಕರ್ನಾಟಕವನ್ನು ಗೆದ್ದುಕೊಂಡು ಜಿಂಜಿ ತಂಜಾವೂರುಗಳಿಗೆ ಬಂದು ವೆಂಕೋಜಿಯ ಜೊತೆಗೆ ತಂದೆಯ ಆಸ್ತಿಯಲ್ಲಿ ಹಂಚಿಕೆ ಸರಿಯಾಗಿ ಆಗಿಲ್ಲವೆಂದು ಜಗಳ ಮಾಡಿದ. ಅಣ್ಣ ತಮ್ಮಂದಿರಲ್ಲಿ ಯುದ್ಧಗಳಾಗಿ ಜಿಂಜಿಗೆ ಒಡೆಯನಾಗಿ ಶಾಂತಜೀ ಭೋಸ್ಲೆ ಎಂಬ ಇನ್ನೊಬ್ಬ ತಮ್ಮನನ್ನು ಶಿವಾಜಿ ನೇಮಿಸಿದ. ವೆಂಕೋಜಿ ಒಳ್ಳೆಯ ಆಡಳಿತಗಾರನಾಗಿದ್ದ. ತಮಿಳು ಕೃತಿ ಭೋಸಲ್ ವಂಶಮ್, ಹಾಗೂ ಜೇಸುಯಿಟ್‌ಮಿಶನ್ನಿನ ಆಂಡ್ರೆಫೇರ್ ಟಿಪ್ಪಣಿಗಳಿಂದ ಈ ಬಗೆಗೆ ಗಮನಾರ್ಹ ಅಂಶಗಳು ತಿಳಿದುಬರುತ್ತವೆ. ವೆಂಕೋಜಿಯ ಅನಂತರ ಆತನ ಪುತ್ರ ಶಹಾಜೀ ಪಟ್ಟಕ್ಕೆ ಬಂದ. ಇವನು ಸುತ್ತಮುತ್ತಣ ಕೆಲವು ಪಾಳೆಯಗಾರರನ್ನು ಗೆದ್ದು ರಾಜ್ಯವನ್ನು ಇನ್ನಷ್ಟು ವಿಸ್ತರಿಸಿದ. ಇವನು ಮಕ್ಕಳಿಲ್ಲದೆ ಸಾಯಲು ಇವನ ತಮ್ಮಂದಿರು ಸರ್‌ಫೋಜಿ ಹಾಗೂ ತುಕೋಜಿ ರಾಜ್ಯವಾಳಿದರು. ತುಕೋಜಿ ಬಹಳ ಒಳ್ಳೆಯ ರಾಜಕಾರಣಿಯೂ ವಿದ್ಯಾಭಿಲಾಷಿಯೂ ಆಗಿದ್ದ. ಅನೇಕ ಭಾಷೆಗಳಲ್ಲಿ ಪಾರಂಗತನಾಗಿದ್ದ. ಆತನ ಪುತ್ರ ಏಕೋಜಿ ಒಂದೇ ವರ್ಷ ರಾಜ್ಯವಾಳಿ ಅಕಾಲ ಮರಣಕ್ಕೆ ತುತ್ತಾದ. ರಾಜಾ ಸಯ್ಯಾಜಿಯ ಕಾಲದಲ್ಲಿ ತುಕೋಜಿಯ ದಾಸೀಪುತ್ರ ಪ್ರತಾಪಸಿಂಹ ಸಯ್ಯಾಜಿಯನ್ನು ತಳ್ಳಿ ಪಟ್ಟಕ್ಕೆ ಬಂದ. ಅವನು ಛತ್ರಪತಿ ಶಾಹುವಿನೊಂದಿಗೆ ಸ್ನೇಹ ಹೊಂದಿದ್ದ. ಆತನ ಸಹಾಯದಿಂದ ರಾಜ್ಯಭಾರ ನಡೆಸಿದ. ಆರ್ಕಾಟದ ನವಾಬರೊಂದಿಗೆ ಯುದ್ಧಗಳಾದುವು. ಇನ್ನೊಂದೆಡೆ ಇಂಗ್ಲಿಷರು ದೇವಿಕೋಟಾರೇವನ್ನೂ ಅದರ ಆಸುಪಾಸಿನ ಪ್ರದೇಶವನ್ನೂ ತಮ್ಮ ವಶಕ್ಕೆ ತೆಗೆದುಕೊಂಡರು. ಇಂಗ್ಲಿಷರು, ಫ್ರೆಂಚರು ಮತ್ತು ಆರ್ಕಾಟಿನ ನವಾಬರು ಈ ರಾಜ್ಯವನ್ನು ನಾಶಮಾಡಲು ಬಹಳ ಪ್ರಯತ್ನಪಟ್ಟರು. ಆದರೆ ಸೇನಾಪತಿ ಮಾನಾಜೀಜಗತಾಪ ಪರಾಕ್ರಮದಿಂದ ಹೋರಾಡಿ ರಾಜ್ಯವನ್ನು ರಕ್ಷಿಸಿದ. ಪ್ರತಾಪಸಿಂಹನ ಮರಣಾನಂತರ ಅವನ ಮಗ ತುಳರಾಜ ಇಂಗ್ಲಿಷರ ಮಾಂಡಲಿಕನಾದ. ಇವನು ಮಕ್ಕಳಿಲ್ಲದೆ ಸತ್ತ. ಮುಂಗೀಕರ್ ಭೋನ್ಸ್ಲೆ ಪೈಕಿ ಮಗುವೊಂದನ್ನು ದತ್ತು ತಂದು ಅವನಿಗೆ ಸರ್‌ಫೋಜಿ ಎಂದು ಹೆಸರಿಟ್ಟು ಸಿಂಹಾಸನದ ಮೇಲೆ ಕೂಡಿಸಿದರು. ಡಾಲ್‌ಹೌಸಿ ಸಂಸ್ಥಾನವನ್ನು ಆಳಲು ಔರಸರಿಲ್ಲವೆಂಬ ಕಾರಣದಿಂದ ಅದನ್ನು ಆಕ್ರಮಿಸಿಕೊಂಡನಾದ ಕಾರಣ 1855ರಲ್ಲಿ ತಂಜಾವೂರು ಮನೆತನದ ಇತಿಹಾಸ ಕೊನೆಗೊಂಡಿತು.

**ನಾಗಪೂರ್ ಭೋನ್ಸ್ಲೆ** : ಪರಸೋಜಿ ಭೋನ್ಸ್ಲೆಯಿಂದ ಈ ಮನೆತನದ ಆರಂಭ. ಔರಂಗಜೇಬನ ಸೆರೆಯಿಂದ ಛತ್ರಪತಿ ಸಾಹು ಬಿಡಿಸಿಕೊಂಡುಬರುವಲ್ಲಿ ಈತ ಸಹಾಯ ಮಾಡಿದ. ಪರಸೋಜಿ ಶಿವಾಜಿಯ ಕಾಲದಿಂದಲೂ ಸೈನ್ಯದಲ್ಲಿ ಅಧಿಕಾರಿಯಾಗಿದ್ದ. ರಾಜರಾಮ ಇವರಿಗೆ ಸೇನಾಸಾಹೇಬ್‌ಸುಭಾ ಎಂಬ ಬಿರುದನ್ನಿತ್ತಿದ್ದ. ಪರಸೋಜಿ ವರ್‌ಹಾಡದ ಭಾಮಾ ಎಂಬ ಸ್ಥಳದಲ್ಲಿ ಸೇನೆಸಹಿತ ನೆಲೆನಿಂತ, ಪರಸೋಜಿಯ ಮರಣಾನಂತರ ಅವನ ಪುತ್ರ ಕಾನೋಜಿ ಸೇನಾ ಸಾಹೇಬ್‌ಸುಭಾಧಾರಿಯಾದ. ಈತ ಒರಿಸ್ಸದವರೆಗೂ ರಾಜ್ಯ ವಿಸ್ತರಿಸಿದ. ಆದರೆ ಇವನಿಗೂ ಪೇಶ್ವೆ ಬಾಜೀರಾಯನಿಗೂ ಹೊಂದಾಣಿಕೆ ಇರಲಿಲ್ಲ. ಪೇಶ್ವೆಯ ಕಿರುಕುಳದಿಂದ ಬೇಸತ್ತ ಕಾನೋಜಿ ಮರಾಠರ ಪಕ್ಷಬಿಟ್ಟು ನಿಜಾಮನ ಕಡೆ ಹೋದ. ಆಗ ಕಾನೋಜಿಯನ್ನು ಶಾಹುಮಹಾರಾಜ ಸೆರೆ ಹಿಡಿಸಿ ರಾಜ್ಯವನ್ನು ಅವನ ಚಿಕ್ಕಪ್ಪನ ಮಗ ರಘೂಜಿಗೆ ಸೇನಾಸಾಹೇಬ್‌ಸುಭಾ ಬಿರುದು ಸಹಿತ ಕೊಟ್ಟ. ರಘೂಜಿ ಬಹಳ ಶೂರ ಹಾಗೂ ಧೈರ್ಯವಂತ. ಗೋಂಡಾವಾನವನ್ನು ಗೆದ್ದು 1743ರಲ್ಲಿ ನಾಗಪುರದಲ್ಲಿ ರಾಜಧಾನಿ ಸ್ಥಾಪಿಸಿದ. ಬಂಗಾಲದ ನವಾಬರನ್ನು ಸೋಲಿಸಿ ಅವರಿಂದ ವಿಶೇಷ ಕಪ್ಪ ಪಡೆದ ರಘೂಜೀಯ ಅನಂತರ ಅವನ ಪುತ್ರ ಜಾನೋಜಿ ಪಟ್ಟಕ್ಕೆ ಬಂದ. ಇವನಿಗೂ ಪೇಶ್ವೆಯವರಿಗೂ ಹೊಂದಾಣಿಕೆ ಇರಲಿಲ್ಲ. ಛತ್ರಪತಿ ಶಾಹುಮಹಾರಾಜ ಸತ್ತಕೂಡಲೆ ಪೇಶ್ವೆಯವರು ಜಾನೋಜಿಯ ಬಲತಮ್ಮನ ಪಕ್ಷವಹಿಸಿ ಭೋನ್ಸ್ಲೆ ರಾಜ್ಯವನ್ನು ಇಬ್ಭಾಗ ಮಾಡಿದರು ಮತ್ತು ನಾಗಪುರವನ್ನು ಕೊಳ್ಳೆ ಹೊಡೆದರು. 1772ರಲ್ಲಿ ಜಾನೋಜಿ ಮರಣ ಹೊಂದಿದ. ಈತ ಮುಂಧೋಜಿಯ ಪುತ್ರ ರಘೂಜಿಯನ್ನು ದತ್ತು ತೆಗೆದುಕೊಂಡ. ಇವನ ಕಾಲದಲ್ಲಿ ಇಂಗ್ಲಿಷರು ನಾಗಪುರವನ್ನು ಪ್ರವೇಶಿಸಿದರು. ಇವನು ಪೇಶ್ವೆಯವರಿಗೆ ಸಹಾಯ ಮಾಡಿದುದಲ್ಲದೆ ದೌಲತ್‌ರಾವ್ ಸಿಂಧೆ ಜೊತೆಗೆ ಸೇರಿ ಇಂಗ್ಲಿಷರೊಂದಿಗೆ ಯುದ್ಧ ಮಾಡಿದ. ಯುದ್ಧದಲ್ಲಿ ಸೋತ ಕಾರಣದಿಂದ ವರ್‌ಹಾಡದ ಬಹುಭಾಗ ಮತ್ತು ಒರಿಸ್ಸಾ ಪ್ರಾಂತವನ್ನು ಇಂಗ್ಲಿಷರಿಗೆ ಬಿಟ್ಟುಕೊಟ್ಟ. 1816ರಲ್ಲಿ ರಘೂಜಿ ಮರಣಹೊಂದಿದ. ಅವನ ಸೋದರನ ಮಗ ಮುಧೋಜಿ (ಅಪ್ಪಾಸಾಹೇಬ್) ಪಟ್ಟಕ್ಕೆ ಬಂದ. ಈತ ಇಂಗ್ಲಿಷರ ಸಹಾಯಕ ಸೈನ್ಯಪದ್ಧತಿಗೆ ಒಪ್ಪಿ ಅವರ ಸೈನ್ಯ ನಾಗಪುರದಲ್ಲಿರಲು ಅನುಮತಿ ನೀಡಿದ. ಮುಂದೆ ನಾಗಪುರ ರಾಜ್ಯ ಅವನತಿ ಹೊಂದಿತು. (ಎಸ್.ಜಿವಿ.)

# ಮ

**ಮಂಗೋಲಿಯ:** ಮಧ್ಯ ಏಷ್ಯದ ಒಂದು ಗಣರಾಜ್ಯ. ಮಂಗೋಲ್ ಜನರ ಜನ್ಮಭೂಮಿ. ಒಳ ಮಂಗೋಲಿಯ ಚೀನ ದೇಶದಲ್ಲಿ ಸೇರಿಹೋಗಿದೆ. ಹೊರ ಮಂಗೋಲಿಯ ಗಣರಾಜ್ಯವಾಗಿದ್ದು ರಷ್ಯದೊಡನೆ ನಿಕಟ ಸಂಬಂಧ ಹೊಂದಿದೆ. ಇದರ ಉತ್ತರದಲ್ಲಿ ರಷ್ಯದೇಶವೂ ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಚೀನ ದೇಶವೂ ಸುತ್ತುವರೆದಿವೆ. ಊಲಾನ್ ಬಟಾರ್ ಇದರ ರಾಜಧಾನಿ.

ಪ್ರಾಕೃತಿಕವಾಗಿ ಮಂಗೋಲಿಯವನ್ನು ಮೂರು ಭಾಗಗಳಾಗಿ ವಿಭಾಗಿಸಬಹುದು: 1. ಮಧ್ಯ ಅಥವಾ ಗೋಬಿ ಪ್ರದೇಶ 2. ವಾಯವ್ಯದ ಪರ್ವತಗಳು 3. ಆಗ್ನೇಯ ಮಂಗೋಲಿಯ.

ಮಧ್ಯ ಅಥವಾ ಗೋಬಿ ಪ್ರದೇಶ: ಒಟ್ಟು ಪ್ರಸ್ಥಭೂಮಿಯ ಅತೀವ ತಗ್ಗು ಪ್ರದೇಶ, ನೆಲಮಟ್ಟಸವಾಗಿದೆ. ಇಲ್ಲಿ ಹೆಚ್ಚು ಎತ್ತರವಿಲ್ಲದ ಬೆಟ್ಟಗಳಿವೆ. ಉತ್ತರದ ತುದಿಯಲ್ಲಿ ಕೆರೊಲಿನ್ ನದಿ ಹರಿಯುತ್ತದೆ. ಮಂಗೋಲಿಯನ್ ಭಾಷೆಯಲ್ಲಿ ಗೋಬಿ ಎಂದರೆ ಮರಳುಕಾಡು ಎಂದರ್ಥ. ವಾಯವ್ಯದ ಪರ್ವತ ಪ್ರದೇಶದಲ್ಲಿ ಅಲ್ಟಾಯ್, ಖಾಂಗಾಯ್, ಸಯಾನ್ ಪರ್ವತಶ್ರೇಣಿಗಳಿವೆ. ಇಲ್ಲಿಯ ಕಣಿವೆಗಳು ಸಮುದ್ರಮಟ್ಟದಿಂದ 915–1370 ಮೀ ಎತ್ತರದಲ್ಲಿವೆ. ಇಲ್ಲಿ ಅನೇಕ ನದಿಗಳಿವೆ. ಆಗ್ನೇಯ ಮಂಗೋಲಿಯದಲ್ಲಿ ಹೊರ ಹಾಗೂ ಒಳಪರ್ವತ ಶ್ರೇಣಿಗಳ ಸರಪಣಿ ಇದೆ. ಈ ಎರಡು ಶ್ರೇಣಿಗಳ ನಡುವೆ ಇರುವ ಭಾಗ ತಗ್ಗಾಗಿದೆ. ಇದು ಗೋಬಿಯ ಚೀನಭಾಗದಲ್ಲಿದ್ದು ಮಧ್ಯೆ ಗೋಬಿ ಪ್ರದೇಶಕ್ಕಿಂತ ವೈವಿಧ್ಯಮಯವಾಗಿದೆ.

**ಚರಿತ್ರೆ:** 1200ರ ಪ್ರಾರಂಭದಲ್ಲಿ ಚೆಂಗೇಷ್‌ಖಾನ್ ಮಂಗೋಲಿಯನ್ನರ ವಿವಿಧ ಪಂಗಡಗಳನ್ನು ಒಂದುಗೂಡಿಸಿ ಕೊರಿಯ ಮತ್ತು ಚೀನದಿಂದ ಪಶ್ಚಿಮದತ್ತ ಯುರೋಪಿನ ವರೆಗೂ ಮಂಗೋಲ್ ಸಾಮ್ರಾಜ್ಯ ವಿಸ್ತರಿಸಿದ. ಇವನ ಮಗ ಕುಬ್ಲೈಖಾನ್ ಇದೇ ನೀತಿಯನ್ನು ಮುಂದುವರಿಸಿದ. ಈ ಸಾಮ್ರಾಜ್ಯ 1300ರಲ್ಲಿ ಕುಸಿದು ಬಿತ್ತು. ಪುನಃ ಈ ದೇಶವನ್ನು ಮಂಗೋಲಿಯನ್ ರಾಜಕುಮಾರರು 1500ರ ಕೊನೆಯಲ್ಲಿ ಒಂದುಗೂಡಿಸಿದರು. ಆಗ ಅವರೇ ಇಲ್ಲಿಯ ಜನರನ್ನು ಲಾಮಾ ಪಂಥಕ್ಕೆ ಪರಿವರ್ತಿಸಿದರು. 1600ರ ಪ್ರಾರಂಭದಲ್ಲಿ ಮಂಚೂರಿಯದ ಮಂಚೂ ದೊರೆಗಳು ಒಳ ಮಂಗೋಲಿಯದ ಮೇಲೆ ಪ್ರಭುತ್ವ ಸ್ಥಾಪಿಸಿಕೊಂಡರು. ಮಂಚುಗಳು ಚೀನವನ್ನು 1644ರಲ್ಲಿ ಗೆದ್ದುಕೊಂಡರಲ್ಲದೆ 1680ರಲ್ಲಿ ಹೊರ ಮಂಗೋಲಿಯವನ್ನು ಆಕ್ರಮಿಸಿದರು. 1700–1800ರ ಅವಧಿಯಲ್ಲಿ ಮಂಗೋಲಿಯಕ್ಕೆ ಬಾಹ್ಯ ಪ್ರಪಂಚದ ಜೊತೆ ಇದ್ದ ಸಂಪರ್ಕ ಅತ್ಯಲ್ಪ.

ಮಂಗೋಲಿಯನ್ನರು ಚೀನ ಪಡೆಯನ್ನು ಹೊರ ಮಂಗೋಲಿಯದಿಂದ ಹೊರದಬ್ಬಿ (1911) ಜೀವಂತ ಬುದ್ಧನೆಂಬ ಪುರೋಹಿತನನ್ನು ರಾಜನನ್ನಾಗಿ ನೇಮಿಸಿದರು. ಅದೇ ವೇಳೆ ರಷ್ಯದ ಸಹಾಯ ಯಾಚಿಸಿದರು. ಚೀನ ಮತ್ತು ರಷ್ಯಗಳು ಹೊರಮಂಗೋಲಿಯಕ್ಕೆ ಸ್ವಂತ ವ್ಯವಹಾರಗಳಲ್ಲಿ ಸ್ವಾತಂತ್ರ್ಯ ನೀಡುವ ಒಪ್ಪಂದ ಮಾಡಿಕೊಂಡವು (1913). ಹೊರಮಂಗೋಲಿಯ ಮಾತ್ರ ಕಾನೂನು ರೀತ್ಯ ಚೀನದ ಭಾಗವಾಗಿ ಉಳಿದಿದ್ದರೂ ವಾಸ್ತವವಾಗಿ ರಷ್ಯದ ನಿಯಂತ್ರಣಕ್ಕೆ ಒಳಪಟ್ಟಿತ್ತು.

ರಷ್ಯದ ಆಂತರಿಕ ಯುದ್ಧದ ವೇಳೆ (1920) ಕಮ್ಯುನಿಸ್ಟ್ ವಿರೋಧಿ ರಷ್ಯದ ಸೈನ್ಯ ಹೊರ ಮಂಗೋಲಿಯವನ್ನು ಆಕ್ರಮಿಸಿ ಜೀವಂತ ಬುದ್ಧನ ಮೂಲಕ ಅಲ್ಲಿಯ ಆಡಳಿತ ನಡೆಸತೊಡಗಿತು. ಮಂಗೋಲಿಯ ಮತ್ತು ರಷ್ಯದ ಕಮ್ಯುನಿಸ್ಟರು 1921ರಲ್ಲಿ ಹೊರ ಮಂಗೋಲಿಯದ ಮೇಲೆ ಪ್ರಭುತ್ವ ಪಡೆದದ್ದು ಜೀವಂತ ಬುದ್ಧನ ಮರಣಾನಂತರ ಅವರು ಮಂಗೋಲಿಯನ್ ಜನತಾ ಪ್ರಜಾರಾಜ್ಯ ಸ್ಥಾಪಿಸಿದರು (1924).

1946ರ ತನಕ ಚೀನ ಮಂಗೋಲಿಯದ ಸ್ವಾತಂತ್ರ್ಯವನ್ನು ಮಾನ್ಯ ಮಾಡಲಿಲ್ಲ. 1960ರ ನಾಲ್ಕನೆಯ ರಾಜ್ಯಾಂಗದ ಪ್ರಕಾರ ವಯಸ್ಕ ಮತದಾನವಿದ್ದು 5 ವರ್ಷಕ್ಕೊಮ್ಮೆ ಚುನಾವಣೆ ನಡೆಯುವುದು. ಇಲ್ಲಿರುವುದು ಕಮ್ಯುನಿಸ್ಟ್ ರಾಜಕೀಯ ಪಕ್ಷ. 1961 ಅಕ್ಟೋಬರ್ 28ರಂದು ಮಂಗೋಲಿಯ ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಿತು. ಕಮ್ಯುನಿಸ್ಟ್ ಪ್ರಪಂಚದ ನಾಯಕತ್ವಕ್ಕಾಗಿ ಚೀನ, ರಷ್ಯಗಳ ನಡುವಿನ ಪೈಪೋಟಿಯಲ್ಲಿ ಮಂಗೋಲಿಯ ದೇಶ ರಷ್ಯವನ್ನು ಬೆಂಬಲಿಸುತ್ತಿದೆ. ಮಂಗೋಲಿಯ ಮತ್ತು ರಷ್ಯ ದೇಶಗಳು ಪರಸ್ಪರ ಸಹಾಯಕ್ಕಾಗಿ ಒಂದು ಒಪ್ಪಂದ ಮಾಡಿಕೊಂಡಿವೆ (1966). 1990ರ ತನಕ ಈ ದೇಶವನ್ನು ಮಂಗೋಲಿಯ ಪೀಪಲ್ಸ್ ರೆವಲ್ಯುಶನರಿ ಪಾರ್ಟಿ ದೇಶದ ರಾಜಕೀಯದಲ್ಲಿ ಏಕಸ್ವಾಮ್ಯ ಹೊಂದಿತ್ತು. 1990ರ ಅನಂತರದಲ್ಲಿ ಅನೇಕ ರಾಜಕೀಯ ಪಕ್ಷಗಳು ಹುಟ್ಟಿಕೊಂಡಿವೆ. 2000ದಲ್ಲಿ ಅಲ್ಲಿ ಚುನಾವಣೆ ನಡೆದಿದೆ.

ಮಂಗೋಲಿಯನ್ನರ ಮೂಲ ವಾಸಸ್ಥಾನ ಮಧ್ಯ ಏಷ್ಯದ ಪೂರ್ವಭಾಗ; ಬೈಕಲ್ ಸರೋವರ ಮತ್ತು ಅಮೂರ್ ನದಿ ಹುಟ್ಟುವ ಸುತ್ತಲ ಪ್ರದೇಶ. ಮಂಗೋಲ್ ಎಂಬ ಪದ ಧೀರ ಎಂಬರ್ಥದ ಮಾಂಗ್ ಶಬ್ದದಿಂದ ಬಂದಿದೆ ಎಂದು ಹೇಳುತ್ತಾರೆ. ಇವರದು ಅಲೆಮಾರಿ ಜೀವನ. ಪಶುಪಾಲನೆ ಮುಖ್ಯ ವೃತ್ತಿ. 619–900ರ ತನಕ ಚೀನದೇಶ ಆಳಿದ ಟಾಂಗ್ ರಾಜಸಂತತಿಯ ಇತಿಹಾಸ ಗ್ರಂಥಗಳಲ್ಲಿ ಇವರ ಉಲ್ಲೇಖವಿದೆ. ತಮ್ಮ ದನಕರುಗಳಿಗೆ ಬೇಕಾದ ಹುಲ್ಲುಗಾವಲುಗಳನ್ನರಸುತ್ತ ನಾನಾಕಡೆ ತಿರುಗುವ ಇವರ ವಾಸ ಡೇರೆಗಳಲ್ಲಿ. ಆಹಾರಕ್ಕಾಗಿ ಬೇಟೆ. ಚಳಿಗಾಲದಲ್ಲಿ ಸಾಕಾಗುವಷ್ಟು ಆಹಾರ ಸಿಕ್ಕುತ್ತಿರಲಿಲ್ಲವಾಗಿ ಸಿಕ್ಕುವ ಆಹಾರವನ್ನು ಬಲುಕಷ್ಟದಿಂದ ದೊರಕಿಸಿಕೊಳ್ಳಬೇಕಾದ ಪರಿಸ್ಥಿತಿ ಇದ್ದುದರಿಂದ ಇವರು ಅತ್ಯಂತ ದೃಢಕಾಯರೂ ಕಷ್ಟಸಹಿಷ್ಣುಗಳೂ ಧೈರ್ಯಶಾಲಿಗಳೂ ಆದರು. ಗುಂಪು ಕಟ್ಟಿಕೊಂಡು ನಾನಾಕಡೆ ಅಲೆಯುತ್ತಿದ್ದ ಇವರಲ್ಲಿ ಪರಸ್ಪರ ಕದನಗಳೂ ಆಗುತ್ತಿದ್ದುವು. ಶತ್ರುಗಳಲ್ಲಾಗಲಿ ತಮ್ಮ ಗುಂಪಿನವರಲ್ಲೇ ಆಗಲಿ ಯಾವ ರೀತಿಯ ದೌರ್ಬಲ್ಯವನ್ನೂ ಇವರು ಸಹಿಸರು. ಹೀಗೆ ಸುತ್ತಮುತ್ತಲಿನ ಪಂಗಡಗಳನ್ನು ಸೋಲಿಸಿ ದೊಡ್ಡ ತಂಡವೊಂದನ್ನು ಕಟ್ಟಿ ದರ್ಪದಿಂದ ಬಾಳಿದ ಬುಡನ್‌ಟ್ಸಾರ್ ಎಂಬುವವನೇ ಮಂಗೋಲರ ಮೂಲಪುರುಷ ಎನ್ನಲಾಗಿದೆ. ತನ್ನ ಸಾಮರ್ಥ್ಯದಿಂದ ಅಧಿಕಾರವ್ಯಾಪ್ತಿ ಹೆಚ್ಚಿಸಿಕೊಂಡು ಈತ ಪ್ರಬಲ ನಾಯಕತ್ವವನ್ನು ತನ್ನ ಮಗನಿಗೆ ಬಿಟ್ಟುಹೋದ. ಇವನ ಸಂತತಿಯವನೇ ಪ್ರಸಿದ್ಧನಾದ ಚೆಂಗೇಷ್‌ಖಾನ್.

ಹನ್ನೆರಡನೆಯ ಶತಮಾನ ಕಳೆಯುವುದಕ್ಕೆ ಮುಂಚಿತವಾಗಿಯೇ ಮಂಗೋಲರ ಸಮಾಜ ವ್ಯವಸ್ಥೆ ಕ್ರಮಗೊಳಿಸಲ್ಪಟ್ಟು ಯಸ್ಸಾ ಎಂಬ ಕಾನೂನು ಕೂಡ ನಿರ್ಮಿತವಾಗಿತ್ತು. ಇದನ್ನು ಉಕ್ಕಿನ ತಗಡುಗಳ ಮೇಲೆ ಬರೆಸಿಟ್ಟರು. ಕುದುರೆ ಕದಿಯುವುದು, ಪರಸ್ತ್ರೀ ಭೋಗಿಸುವುದು ಮತ್ತು ಶಾರೀರಿಕ ಸ್ವಚ್ಛತೆ–ಇವು ಮುಖ್ಯ ಅಪರಾಧಗಳು. ಮಗು ಹುಟ್ಟಿದಾಗ ಮೈತೊಳೆಯುವುದೊಂದನ್ನು ಹೊರತುಪಡಿಸಿದರೆ ಅವರು ಬೇರೆ ಸ್ನಾನವನ್ನು ಕಂಡವರೇ ಅಲ್ಲ. ಹೆಚ್ಚುಕಡಿಮೆ ಊಳಿಗಮಾನ್ಯ ಪದ್ಧತಿಯ ರೀತಿಯಲ್ಲಿ ಪ್ರತಿಯೊಬ್ಬ ಮಂಗೋಲಿಯನ್ ಪುರುಷ ಯೋಧನಾಗಲೇಬೇಕೆಂಬ ನಿಯಮವಿತ್ತು. ಒಂದೆಡೆ ನಿಲ್ಲದೆ ಅಲೆಯುತ್ತಿರುವುದು, ಪಶುಪಾಲನೆ–ಇವು ಇವರ ಜೀವನದ ಪ್ರಧಾನ ಲಕ್ಷಣಗಳು. ಮಂಚೂ ದೊರೆಗಳ ಕಾಲದಿಂದ ಇವರ ಅಲೆತ ಕಡಿಮೆಯಾಯಿತು. ಕೆಲವು ಸೀಮಿತ ಪ್ರಾಂತಗಳಲ್ಲಿ ಮಾತ್ರ ಜನರು ನೆಲೆಸಿರಬೇಕೆಂದು ಈ ದೊರೆಗಳು ಕಟ್ಟುಪಾಡು ಮಾಡಿದ್ದರು. 1924ರ ಅನಂತರ ರಷ್ಯದ ಪ್ರಭಾವ ಹೆಚ್ಚತೊಡಗಿದಾಗ ಅದರ ಸಮತಾವಾದ ತತ್ತ್ವಕ್ಕನುಗುಣವಾಗಿ ಜಾನುವಾರುಗಳ ಸಮಷ್ಟಿಸ್ವಾಮ್ಯವನ್ನು ಆಚರಣೆಗೆ ತರಬೇಕಾಯಿತು; ಇದರಿಂದ ಇವರ ಅಲೆಮಾರಿ ಜೀವನ ಕೊನೆಗೊಂಡಿತು. 1924–41ರ ತನಕದ ಅವಧಿಯಲ್ಲಿ ಇವರ ಪಶು ಸಂಪತ್ತು ಪ್ರತಿಸಂಸಾರದಲ್ಲಿ 60–130ಕ್ಕೆ ಹೆಚ್ಚಿದೆ. ಇಷ್ಟು ಪಶು ಸಂಪತ್ತು ಪ್ರಪಂಚದ ಬೇರಾವ ದೇಶದಲ್ಲೂ ಇಲ್ಲ.

ಮಂಗೋಲರ ಮೂಲಮತ ಶಾಮಿಯಾ ನಿಸಮ್ ಆದರೂ ಬಲುಹಿಂದಿನಿಂದಲೂ ಬೌದ್ಧಧರ್ಮಕ್ಕೆ ಮಾರುಹೋಗಿದ್ದವರು. ಇವರದು ಲಾಮಾ ಪ್ರಧಾನ ಧರ್ಮ. ಲಾಮಾ ಮತವಿಷಯಗಳಲ್ಲಿ ಮಾತ್ರವೇ ಅಲ್ಲ, ಐಹಿಕ ವ್ಯವಹಾರಗಳ ಹಿತಾರ್ಥಗಳಲ್ಲೂ ಸರ್ವಾಧಿಕಾರಿ ಯಾಗಿದ್ದ. ಜನವಸತಿ ಲಾಮಾಮಠಗಳ ಸುತ್ತಲೇ ಹೆಚ್ಚಾಗಿತ್ತು. ಬೌದ್ಧಪುರೋಹಿತನಾಗುವುದಕ್ಕೆ ಪ್ರತಿಯೊಂದು ಸಂಸಾರದಿಂದಲೂ ಒಬ್ಬ ಮಗನನ್ನು ಕಳುಹಿಸಬೇಕಾಗಿತ್ತು. ದೊಡ್ಡಭವನಗಳು, ಹೆಚ್ಚು ಸಂಖ್ಯೆಯಲ್ಲಿ ದನಕರುಗಳು, ವಿಪುಲಧನ ಎಲ್ಲವನ್ನೂ ಈ ಮಠಗಳು ಹೊಂದಿದ್ದುವು. 1924ರಲ್ಲಿ ಈ ವ್ಯವಸ್ಥೆ ಕುಸಿಯಿತು. ಮುಂದೆ ರಷ್ಯನ್ನರ ನಾಸ್ತಿಕತೆಯ ಪ್ರಭಾವ ಹೆಚ್ಚಿ ಜನರಲ್ಲಿ ಮತಧರ್ಮಗಳಲ್ಲಿಯ ಆಸಕ್ತಿ ಕಡಿಮೆಯಾಯಿತು. ಇಂದು ಮಂಗೋಲಿಯದಲ್ಲಿ ವಲಸೆಬಂದು ನಿಂತ ಚೀನಿಯರೂ ಕ್ರೈಸ್ತಿಯನರೂ ಇದ್ದಾರೆ.

1921ರಲ್ಲಿ ಸ್ಥಾಪಿತವಾದ ಹಂಗಾಮಿ ಕ್ರಾಂತಿಕಾರಿಪಕ್ಷ ಸರ್ಕಾರ ಸ್ವತಂತ್ರವಾಗಿರಲು ರಷ್ಯನರು ಅವಕಾಶವನ್ನೇ ಕೊಡಲಿಲ್ಲ. ರಷ್ಯದ ಕಮ್ಯುನಿಸ್ಟ್ ಪಕ್ಷ ಅದರ ಮೇಲೆ ಸಂಪೂರ್ಣ ಹತೋಟಿ ಇಟ್ಟುಕೊಂಡಿತು. ಸರ್ಕಾರದ ಕೆಲವು ಮುಖ್ಯ ಹುದ್ದೆಗಳನ್ನು ರಷ್ಯನರು ಪಡೆದುಕೊಂಡಿದ್ದರು. ರಾಜಕೀಯದಲ್ಲಿ ನೀತಿ ನಿರ್ಣಯ ರಷ್ಯನರದು. ರಷ್ಯದ ಗುಪ್ತ ಪೊಲೀಸ್ ಅಧಿಕಾರಿಗಳು ದೇಶದಲ್ಲೆಲ್ಲ ಹರಡಿದ್ದರು. ಅಲ್ಲದೆ ರಷ್ಯದ ಸೈನ್ಯತುಕಡಿಗಳೂ ಅಲ್ಲಲ್ಲೆ ಇದ್ದುವು. 1946ರಲ್ಲಿ ಮಂಗೋಲರು ಪಡೆದ ರಾಜಕೀಯಸ್ವಾತಂತ್ರ್ಯದಿಂದಲೂ ಈ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ. ತಾತ್ತ್ವಿಕವಾಗಿ, 1960ರ ರಾಜ್ಯಾಂಗ ವ್ಯವಸ್ಥೆಗೆ ಅನುಸಾರವಾಗಿ ದೇಶದ ಆಡಳಿತ ನಡೆದಿದೆ. 18 ವಯಸ್ಸು ಮೀರಿದ ಎಲ್ಲರಿಗೂ ಮತದಾನ ನೀಡುವ ಹಕ್ಕು ಕೊಡಲಾಗಿದೆ. ಮಂಗೋಲಿಯ 1924ರಲ್ಲಿ ಸಾರ್ವಭೌಮ ರಾಷ್ಟ್ರವಾಯಿತು. 1946ರಲ್ಲಿ ಚೀನ ಈ ರಾಷ್ಟ್ರವನ್ನು ಸಾರ್ವಭೌಮ ರಾಷ್ಟ್ರವೆಂದು ದೃಢೀಕರಿಸಿತು. 1992ರಲ್ಲಿ ಸಂವಿಧಾನವನ್ನು ಅಂಗೀಕರಿಸಲಾಗಿದೆ ಹಾಗೆಯೇ ಈ ರಾಷ್ಟ್ರದ ಹೆಸರನ್ನು ಮಂಗೋಲಿಯ ಎಂದು ಪುನರ್‌ನಾಮಕರಣವಾಯಿತು. ರಷ್ಯದ ಪ್ರಭಾವ ಹಾಗೂ ಕಮ್ಯುನಿಸ್ಟ್ ಸಿದ್ಧಾಂತಗಳು ಇಲ್ಲಿ ಪ್ರಭಾವಶಾಲಿಯಾದ ಪರಿಣಾಮ ನಾಸ್ತಿಕತೆ ಇಲ್ಲಿನ ಸಮಾಜದಲ್ಲಿ ಬೇರೂರಿದ್ದರು ಸಹ ಟಿಬೆಟ್‌ನ ಬೌದ್ಧಧರ್ಮಾಚರಣೆ ಇಲ್ಲಿ ಪ್ರಭಾವ ಬೀರಿದ್ದು, ಧಾರ್ಮಿಕ ಆಚರಣೆಯಲ್ಲಿ ಪ್ರಮುಖ ಸ್ಥಾನ ಪಡೆದಿದೆ. (ಎ.ಎಂ.)

**ಮಂಚೂ:** 1644–1912ರ ವರೆಗೆ ಚೀನವನ್ನಾಳಿದ ಒಂದು ರಾಜ ಮನೆತನ. 17ನೆಯ ಶತಮಾನದ ಆದಿಭಾಗದಲ್ಲಿ ಮಂಚೂರಿಯದಿಂದ ಬಂದ ಇವರು ಚೀನದಲ್ಲಿ ಮಿಂಗ್ ಆಡಳಿತವನ್ನು ಕೊನೆಗೊಳಿಸಿ ಅಧಿಕಾರಕ್ಕೆ ಬಂದರು. ಸುಂಗಾರಿ ಕಣಿವೆಯ ಅರಣ್ಯಭೂಮಿಯಲ್ಲಿ ಕೃಷಿಕರಾಗಿದ್ದ ಮಂಚೂಗಳನ್ನು ನುರ್ಹತ್ಸೆ (1559–1626) ಎಂಬಾತ ಒಂದುಗೂಡಿಸಿ ಅವರಿಗೆ ಸೈನಿಕ ತರಬೇತಿ ನೀಡಿ ಒಂದು ಪ್ರಬಲ ಶಕ್ತಿಯಾಗಿ ರೂಪಿಸಿದ. 1616ರಲ್ಲಿ ಮಂಚೂ ಜನರು ಲಿಯಾವೊತುಂಗ್ ಪ್ರಾಂತದ ಮೇಲೆ ಆಕ್ರಮಣ ನಡೆಸಿ 1621ರಲ್ಲಿ ಮುಡೆಕ್‌ನ್ ಎಂಬ ಊರನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡರು. ಆಗ ಚೀನದ ಬೃಹತ್ ಗೋಡೆಯನ್ನು ದಾಟುವ ಇವರ ಪ್ರಯತ್ನ ಸಫಲವಾಗಲಿಲ್ಲ. ಕೊನೆಯ ಮಿಂಗ್ ಸಾಮ್ರಾಟ ಚುಂಗ್ ಚೆಂಗನ (1627–44) ಕಾಲದಲ್ಲಿ ಲಿಟ್ಸು ಎಂಬ ಬಂಡಾಯಗಾರ ಪೀಕಿಂಗ್ ನಗರದ ಮೇಲೆ ಧಾಳಿ ಮಾಡಿದ. 1644ರಲ್ಲಿ ಹತಾಶನಾದ ಮಿಂಗ್ ದೊರೆ ತನ್ನ ಮಗಳನ್ನು ಕೊಂದು ತಾನು ನೇಣು ಹಾಕಿಕೊಂಡ. ಸೇನಾನಿ ವುಯೆನ್ ಸೆನ್ ಕ್ವೈಯ್ ಲಿಟ್ಸುವನ್ನು ಓಡಿಸಲು ಮಂಚೂಗಳೊಡನೆ ಒಪ್ಪಂದ ಮಾಡಿಕೊಂಡು ಅವರ ಸಹಾಯ ಕೋರಿದ. ಲಿಟ್ಸು ಪೀಕಿಂಗ್‌ಗೆ ಬೆಂಕಿಹಚ್ಚಿ ಓಡಿಹೋದ. ಮಿಂಗ್ ಸಾಮ್ರಾಜ್ಯದ ಪತನವನ್ನು ಘೋಷಿಸಿದ ಮಂಚೂಗಳು ಘುನ್‌ಚಿ ಎಂಬ ಬಾಲಕನನ್ನು ಪಟ್ಟಕ್ಕೆ ತಂದರು. ಇದೇ ಸುಮಾರಿಗೆ ಉತ್ತರ ಚೀನ ಮಂಚೂ ಪಾಲನೆಗೊಳಪಟ್ಟಿತು. ದಕ್ಷಿಣಚೀನ ಇನ್ನೂ ವಶವಾಗಬೇಕಿತ್ತು. ಈ ಸಮಯದಲ್ಲೇ ಮಿಂಗ್ ಸಾಮ್ರಾಟನೆಂದು ಘೋಷಿತನಾದ ರಾಜಪುತ್ರನೊಬ್ಬ ನಾನ್ಕಿಂಗ್ ಎಂಬಲ್ಲಿ ಸೋತು ಹತನಾದ. 1651ರಲ್ಲಿ ಕ್ಯಾಂಟನ್ ಮಂಚೂಗಳ ವಶವಾದಾಗ ಚೀನದ ಪ್ರತಿರೋಧ ಕೊನೆಗೊಂಡಂತಾಯಿತು. ಆದರೂ 1657ರಲ್ಲಿ ಮಿಂಗ್ ಸಾಮ್ರಾಜ್ಯಕ್ಕೆ ನಿಷ್ಠನಾಗಿದ್ದ ಕೊಕ್ಸಿಂಗ್ ನಾನ್ ಕಿಂಗಿಗೆ ಮುತ್ತಿಗೆ ಹಾಕಲು ಯತ್ನಿಸಿ ವಿಫಲನಾಗಿ ಫಾರ್ಮೋಸಾಕ್ಕೆ ಓಡಿಹೋದ.

ಘುನ್‌ಚಿ ಬಾಲಕನಾಗಿದ್ದಾಗಲೇ ಪಟ್ಟಕ್ಕೆ ಬಂದುದರಿಂದ ರಾಜಪ್ರತಿನಿಧಿಗಳು ಆಡಳಿತ ನಡೆಸುತ್ತಿದ್ದರು. ಈತ ತನ್ನ 15ನೆಯ ವಯಸ್ಸಿನಲ್ಲಿ 1651ರಲ್ಲಿ ಸ್ವತಃ ರಾಜ್ಯವಾಳಲು ನಿರ್ಧರಿಸಿದ. ಈತನ ಪತ್ನಿಯ ಅಕಾಲಮರಣದಿಂದಾಗಿ ಈತ ಕೊರಗಿ 1661ರಲ್ಲಿ ಮೃತನಾದ. 1667ರ ಅನಂತರ ಕಾಂಗ್ ಷಿ ಎಂಬುವನು ಅಧಿಕಾರಕ್ಕೆ ಬಂದ. 1644ರಲ್ಲಿ ಸುಟ್ಟುಹೋಗಿದ್ದ ಪೀಕಿಂಗ್ ನಗರದ ಪುನರ್ ನಿರ್ಮಾಣ ಈತನ ಕಾಲದ ಸಾಧನೆಗಳಲ್ಲೊಂದು. ಸೋತ

ಚೀನಿಯರನ್ನು ಸ್ನೇಹ ಸೌಹಾರ್ದದಿಂದ ನಡೆಸಿಕೊಂಡ. ಮಿಷನರಿಗಳ ಸಂಪರ್ಕದಿಂದಾಗಿ ಕಾಂಗ್‌ಷಿಗೆ ಪಾಶ್ಚಾತ್ಯ ಸಾಹಿತ್ಯ ಮತ್ತು ವಿಜ್ಞಾನಗಳಲ್ಲಿ ಆಸಕ್ತಿ ಬೆಳೆಯಿತು. ಲೇಖಕರಿಗೆ ರಾಜಾಶ್ರಯ ಲಭಿಸಿತು. ಸ್ವತಃ ಲೇಖಕನಾದ ದೊರೆ ಕನ್‌ಫ್ಯೂಷಿಯಸ್‌ನ ತತ್ತ್ವ ಗ್ರಂಥಗಳನ್ನು ಮಂಚೂ ಭಾಷೆಗೆ ತರ್ಜುಮೆ ಮಾಡಿಸಿದ. ಕುಂಭ ಮತ್ತು ಪಿಂಗಾಣಿ ಕಲೆಗಳು ಈ ಕಾಲದಲ್ಲಿ ಉತ್ಕೃಷ್ಟತೆ ಸಾಧಿಸಿದುವು. ಫಾರ್ಮೋಸ 1683ರಲ್ಲಿ ಕಾಂಗ್‌ಷಿಯ ವಶವಾಯಿತು. ಮಂಚೂರಿಯದ ಉತ್ತರದಲ್ಲಿ ರಷ್ಯನ್ನರ ವಿಸ್ತರಣೆ ಪ್ರಯತ್ನವನ್ನೂ ಈತ ಸಮರ್ಥವಾಗಿ ತಡೆಗಟ್ಟಿದ. 1722ರಲ್ಲಿ ಈತ ಮೃತನಾಗುವ ತನಕವೂ ಮಂಚೂ ಸಾಮ್ರಾಜ್ಯದ ಘನತೆ ಗೌರವಗಳನ್ನು ರಕ್ಷಿಸಿಕೊಂಡ.

ರಾಜಪುತ್ರ ಯಂಗ್ ಚೆಂಗ್ ಅಧಿಕಾರಕ್ಕೆ ಬಂದ ಮೇಲೆ 1724ರಲ್ಲಿ ಮಿಷನರಿಗಳ ಉಚ್ಚಾಟನೆಗೆ ಆಜ್ಞೆ ಮಾಡಿದ. ಶಾಸ್ತ್ರ ವಿಜ್ಞಾನಗಳಲ್ಲಿ ಪರಿಣತರಾದ ಕೆಲವೇ ಮಿಷನರಿಗಳಿಗೆ ಈತನ ಆಸ್ಥಾನದಲ್ಲಿರುವ ಅವಕಾಶ ದೊರೆಯಿತು. 1735ರಲ್ಲಿ ಈತನ ಮರಣಾನಂತರ ಕ್ರಿಯೆನ್ ಲುಂಗ್ ದೊರೆಯಾದ. ಸೈನಿಕ ಜೀವನದಲ್ಲಿ ಆಸಕ್ತಿ ಇರದ ಈತ ಸುಸಂಸ್ಕೃತ ವ್ಯಕ್ತಿ ಮತ್ತು ಒಳ್ಳೆಯ ಆಡಳಿತಗಾರ. ಮಿಷನರಿಗಳ ಮೇಲೆ ಹಗೆ ಸಾಧಿಸದಿದ್ದರೂ ಮತಾಂತರವನ್ನು ನಿಷೇಧಿಸಿದ. 1767ರಲ್ಲಿ ಬರ್ಮಾ ಈತನ ಸಾರ್ವಭೌಮತ್ವವನ್ನು ಮಾನ್ಯಮಾಡಿತು. 1796ರಲ್ಲಿ ಈತ ಮೃತನಾದ. 1800ರ ಮೊದಲ ಭಾಗದಲ್ಲಿ ತಂಬಾಕು ವಸ್ತುಗಳ ವ್ಯಾಪಾರ ಹಾಗೂ ರಫ್ತಿನ ವಿಷಯ ಚೀನ ಹಾಗೂ ವಿದೇಶಿ ವರ್ತಕ ಸಮುದಾಯಗಳ ನಡುವೆ ವಿರಸಕ್ಕೆ ಕಾರಣವಾಯಿತು. ಇದರಿಂದಾಗಿ ಬ್ರಿಟನ್–ಚೀನದ ನಡುವೆ ಅಫೀಮು ಯುದ್ಧಕ್ಕೆ ಕಾರಣವಾಯಿತು (1839–42, 1856–60). ಈ ಯುದ್ಧಗಳಲ್ಲಿ ಬ್ರಿಟನ್ ಜಯಗಳಿಸಿ 1842ರಲ್ಲಿ ನಾನ್‌ಜಿಂಗ್ ಒಪ್ಪಂದವಾಯಿತು. ಇದರಿಂದಾಗಿ ಚೀನದ ಪ್ರಮುಖ ಬಂದರು ನಗರ, ವ್ಯಾಪಾರ ಕೇಂದ್ರಗಳು ಬ್ರಿಟಿಷರ ವ್ಯಾಪಾರಕ್ಕೆ ಮುಕ್ತಗೊಂಡವು. 1858–60ರಲ್ಲಿ ಮತ್ತೆ ಬ್ರಿಟನ್ ಜೊತೆ ಯುದ್ಧದಲ್ಲಿ ಚೀನ ಸೋತಿತು. ಇದರಿಂದಾಗಿ ಚೀನದ ವ್ಯಾಪಾರ ವ್ಯವಹಾರಗಳಲ್ಲಿ ವಿದೇಶಿಯರು ಪ್ರಾಬಲ್ಯ ಸಾಧಿಸುವಂತಾಯಿತು.

ಟವೋಕುವಾಂಗ್ (1820–50) ಮತ್ತು ಸಿಯನ್ ಫೆಂಗ್ (1850–61) ಅಸಮರ್ಥ ಹಾಗೂ ಲಂಪಟ ದೊರೆಗಳು. ಇವರ ಕಾಲದಲ್ಲಿ ಸಾಮ್ರಾಜ್ಯ ಭ್ರಷ್ಟಾಚಾರ ಹಾಗೂ ದುರಾಡಳಿತಗಳ ಆಗರವಾಯಿತು. 1850ರಲ್ಲಿ ಆರಂಭವಾದ ತೈಪಿಂಗ್ ದಂಗೆ ಕ್ರಮೇಣ ಎಲ್ಲೆಡೆ ವ್ಯಾಪಿಸಿ ಕೊನೆಗೆ ಮಂಚೂ ಸಂತತಿಯ ಬೇರನ್ನೇ ಅಲುಗಾಡಿಸಿತು. ವೈಟ್ ಲೋಟಸ್ ಸೊಸೈಟಿ, ಸೊಸೈಟಿ ಆಫ್ ಹೆವನ್ ಅಂಡ್ ಅರ್ಥ್ ಮುಂತಾದ ಹಲವು ಭೂಗತ ಸಂಸ್ಥೆಗಳು ಜನರನ್ನು ಬಂಡಾಯವೇಳಲು ಪ್ರಚೋದಿಸುತ್ತಿದ್ದುವು. 1850ರಲ್ಲಿ ದೈವಾರಾಧಕ ಸಂಘದ ಮೇಲೆ ಮಂಚೂ ಸರ್ಕಾರ ನಿಷೇಧ ಹೇರಿದಾಗ ಸಂಘ ಸೈನ್ಯವನ್ನು ಸಂಘಟಿಸಿ ಸರ್ಕಾರದ ವಿರುದ್ಧ ಹೋರಾಟಕ್ಕಿಳಿಯಿತು. ಕ್ವಾಂಗ್‌ಸಿ ಪ್ರಾಂತದಲ್ಲಿ ಮಂಚೂ ಸೈನ್ಯಕ್ಕೆ ಸೋಲುಂಟಾಯಿತು. ಆದರೆ ಕ್ರಮೇಣ ಸಂಘದ ಸದಸ್ಯರಲ್ಲಿ ಒಗ್ಗಟ್ಟು ಸಡಿಲವಾಗಿ 1863ರಲ್ಲಿ ಮಂಚೂ ಸೈನ್ಯ ನಾನ್‌ಕಿಂಗ್ ನಗರವನ್ನು ಭೀಕರ ಹೋರಾಟದ ತರುವಾಯ ವಶಪಡಿಸಿಕೊಂಡಿತು.

ತೈಪಿಂಗ್ ದಂಗೆ ಮಂಚೂ ಆಡಳಿತದ ಅಂತ್ಯವನ್ನು ತ್ವರಿತಗೊಳಿಸಿತು. ದಂಗೆಕೋರರು ಪೀಕಿಂಗ್ ಕಡೆ ನುಗ್ಗಿದಾಗ ಸಿಯನ್‌ಫೆಂಗ್ ಅಲ್ಲಿಂದ ಚೆಹೋಲ್ ನಗರಕ್ಕೆ ಪಲಾಯನಮಾಡಿದ ಹಾಗೂ ಅಲ್ಲಿ 1861ರಲ್ಲಿ ಆತ ಮೃತನಾದಾಗ ಆತನ ಮಗ ತುಂಗ್‌ಚಿ ಕೇವಲ ಒಂಬತ್ತು ವರ್ಷದವನಾಗಿದ್ದ. 1873ರ ತನಕ ಇವನ ತಾಯಿ ಮತ್ತು ಚಿಕ್ಕತಾಯಿ ಇಬ್ಬರೂ ರಾಜಪ್ರತಿನಿಧಿಗಳಾಗಿ ರಾಜ್ಯಾಡಳಿತ ನಡೆಸಿದರು. ತುಂಗ್‌ಚಿ ಅರಸನಾದ; ಆದರೆ 1874ರಲ್ಲಿ ಸಿಡುಬಿಗೆ ತುತ್ತಾಗಿ 1875ರಲ್ಲಿ ಮೃತನಾದ. ಅರಸನ ಸೋದರ ಕುವಾಂಗ್‌ಸು ಎಂಬ ಬಾಲಕನನ್ನು ಪಟ್ಟಕ್ಕೇರಿಸಿ ಅವನ ಪರವಾಗಿ ಆಡಳಿತ ನಡೆಯಿತು. ಈತ 1908 ರಲ್ಲಿ ಮೃತನಾದ ಬಳಿಕ ಪುಯಿ ಎಂಬ ಎರಡು ವರ್ಷದ ಮಗುವನ್ನು ಪಟ್ಟಕ್ಕೆ ತರಲಾಯಿತು. ಮಗುವಿಗೆ ತಂದೆ ಮತ್ತು ಕುವಾಂಗ್ ಸೋದರ ಸೈಫೆಂಗ್ ರಾಜಪ್ರತಿನಿಧಿಯಾದ. ಈತ ಚೀನಿಯರನ್ನು ದ್ವೇಷಿಸಿ ಅವರನ್ನು ಉನ್ನತ ಹುದ್ದೆಗಳಿಂದ ತೆಗೆದುಹಾಕಿದ. 1911 ಅಕ್ಟೋಬರ್‌ನಲ್ಲಿ ಹಾಂಕೊವ್ ಮತ್ತು ವುಚಾಂಗ್ ನಗರಗಳಲ್ಲಿ ನಡೆದ ಹೋರಾಟಗಳು ಮಂಚೂ ಆಳಿಕೆಯ ಅಂತ್ಯಕ್ಕೆ ನಿಮಿತ್ತವಾದವು. 1912 ಫೆಬ್ರವರಿ 12ರಂದು 6 ವರ್ಷದ ಪುಯಿ ಪದಚ್ಯುತನಾಗಿ ಚೀನ ಗಣರಾಜ್ಯದ ಉದಯವಾಯಿತು. (ಎಚ್.ಎಂ.ಎನ್.ಆರ್.)

**ಮಂಡಿ:** ಉತ್ತರಪ್ರದೇಶ ರಾಜ್ಯದ ಮುಜಫರ್‌ನಗರ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಯಮುನ–ಗಂಗಾ ನದಿಯ ದೋಆಬ್‌ನಲ್ಲಿರುವ ಈ ನೆಲೆ ಹರಪ್ಪ ಸಂಸ್ಕೃತಿಯ ಪೂರ್ವ ಮೇರೆಯಾಗಿದೆ. ಇಲ್ಲಿ 2000ದಲ್ಲಿ ಹರಪ್ಪ ಸಂಸ್ಕೃತಿಯ ಅಮೂಲ್ಯ ನಿಕ್ಷೇಪ ಬೆಳಕಿಗೆ ಬಂತು. ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಹಾಗೂ ಅರೆಪ್ರಶಸ್ತ ಕಲ್ಲಿನ ಮಣಿಗಳಿದ್ದ ಇಂತಹ ನಿಕ್ಷೇಪ ಭಾರತದಲ್ಲಿ ಕಂಡುಬಂದಿರುವುದು ಇದೇ ಮೊದಲು. ಈ ನಿಕ್ಷೇಪದ ಶೇ.90ರಷ್ಟು ವಸ್ತುಗಳು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯಲ್ಲಿಯೂ ಶೇ.10ರಷ್ಟು ಲಖನೌ ರಾಜ್ಯ ಸಂಗ್ರಹಾಲಯದಲ್ಲಿಯೂ ಇವೆ. ನಿಕ್ಷೇಪ ಸಿಕ್ಕಿದ ಸ್ಥಳ ಹರಪ್ಪ ಸಂಸ್ಕೃತಿಯ ಅವಶೇಷಗಳಿರುವ 2ಮೀ ಎತ್ತರದ ದಿಬ್ಬವಾಗಿದೆ. ಇಲ್ಲಿ ಆಗಸ್ಟ್ 2000 ದಲ್ಲಿ ಉತ್ಖನನ ನಡೆಸಲಾಯಿತು.

ಉತ್ಖನನದಲ್ಲಿ ಚಿತ್ರಿತ ಮತ್ತು ಸಾದಾ ಕೆಂಪು ಹಾಗೂ ಬೂದುಬಣ್ಣದ ಪಾತ್ರೆಗಳು ಕಂಡುಬಂದವು. ಈ ಪಾತ್ರೆಗಳನ್ನು ಆವಿಗೆಯಲ್ಲಿ ಚೆನ್ನಾಗಿ ಸುಡಲಾಗಿತ್ತು. ಕೆಂಪುಪಾತ್ರೆಗಳ ಹೊರಮೈ ಲೇಪನ ಪುಡಿಯಾಗಿ ಉದುರುತ್ತಿದ್ದುದರಿಂದ ಇವು ಕಾವಿಬಣ್ಣದ ಪಾತ್ರೆಗಳೆಂದು ಗುರುತಿಸಲಾಗಿದೆ. ಇದರಲ್ಲಿ ಕಾಲಿರುವ ತಟ್ಟೆ, ಬೋಗುಣಿ, ಬಟ್ಟಲು, ವಿವಿಧ ಗಾತ್ರದ ಮಡಕೆಗಳು ಮುಂತಾದ ಆಕಾರಗಳಿವೆ. ಈ ಪಾತ್ರೆಗಳ ಮೇಲೆ ಕಪ್ಪುಬಣ್ಣದಲ್ಲಿ ಅರಳಿ ಎಲೆ ಮತ್ತು ಸಮಾನಾಂತರ ಪಟ್ಟಿಗಳು ಚಿತ್ರಿತವಾಗಿವೆ. ಉತ್ಖನನದಲ್ಲಿ 127x84x80 ಸೆಂಮೀ ಉದ್ದಗಲದ ಹಾಗೂ ಎತ್ತರದ ಆವಿಗೆ ಬೆಳಕಿಗೆ ಬಂತು. ಇದರೊಳಗೆ ಮಡಕೆ ಚೂರುಗಳು, ಬೂದಿ ಮತ್ತು ಸುಟ್ಟಇಟ್ಟಿಗೆ (38x28x10 ಸೆಂಮೀ) ಇದ್ದುವು. ಉತ್ಖನನದಲ್ಲಿ ಸುಟ್ಟ ಇಟ್ಟಿಗೆಯಿಂದ ಕಟ್ಟಿದ ಒಂದು ಕಟ್ಟಡದ ಭಾಗ ಕಂಡುಬಂದಿತು. ಇದರಲ್ಲಿ ಬಳಸಿದ್ದ ಇಟ್ಟಿಗೆಯ ಅಳತೆ 36x22x10 ಸೆಂಮೀ. ಇಲ್ಲಿ ಸಿಕ್ಕ ಇತರ ಸುಟ್ಟಇಟ್ಟಿಗೆಗಳ ಅಳತೆ: 8–8.5x19.5–22x31, 9x23x33, 9x20x30 ಮತ್ತು 8.5x20–22x33.5 ಸೆಂಮೀ. ಹರಪ್ಪ ಕಾಲದ ಇಟ್ಟಿಗೆಗಳ 1:2:3 ಮತ್ತು 1:2:4 ಪ್ರಮಾಣಕ್ಕೆ ಈ ಅಳತೆಗಳು ಹೊಂದುವುದಿಲ್ಲ ಎಂಬುದು ಗಮನಾರ್ಹ. ಅಲ್ಲದೆ ಪ್ರೌಢ ಹರಪ್ಪ ಕಾಲದ ವಿಶಿಷ್ಟ ಲಕ್ಷಣಗಳಾವುವೂ ಇಲ್ಲಿ ಕಂಡುಬಂದಿಲ್ಲ. ಪ್ರ.ಶ.ಪೂ.2ನೆಯ ಸಹಸ್ರಮಾನದ ಈ ಅವಶೇಷಗಳು ಅಂತ್ಯ ಹರಪ್ಪ ಸಂಸ್ಕೃತಿಗೆ ಸೇರುತ್ತವೆ. ಕುಷಾಣರ ಕಾಲದ ಮುದ್ರೆಯೊತ್ತಿದ ಕೆಂಪುಪಾತ್ರೆಗಳ ಭಾಗಗಳೂ ಇಲ್ಲಿ ದೊರಕಿವೆ.



ಚಿನ್ನದ ಆಭರಣಗಳು

**ನಿಕ್ಷೇಪದಲ್ಲಿ ದೊರೆತ ಆಭರಣಗಳು:** ತಾಮ್ರದ ಎರಡು ಪಾತ್ರೆಗಳಲ್ಲಿ ಆಭರಣಗಳನ್ನು ಇಡಲಾಗಿತ್ತು. ಚಿನ್ನದ ಮಣಿಗಳಲ್ಲಿ ನಾಲ್ಕು ಪ್ರಕಾರಗಳಿದ್ದುವು. ಇವು: ಸಮಾನಾಂತರ ರಂಧ್ರಗಳಿರುವ ಮಣಿ (ಸ್ಪೇಸರ್ ಬೀಡ್), ತ್ರಿಕೋನಾಕಾರದ ಕೊನೆ ಮಣಿಗಳು (ಟರ್ಮಿನಲ್ ಬೀಡ್), ಗಂಟೆ ಆಕಾರದ ಮಣಿಗಳು (ಬೆಲ್ ಶೇಪ್ಡ್) ಮತ್ತು ತೆಳುವಾಗಿ ಚಪ್ಪಟೆಯಾಗಿರುವ ವೃತ್ತಾಕಾರದ ಮಣಿಗಳು (ವೇಫರ್ ಬೀಡ್). ಎರಡು, ಮೂರು, ನಾಲ್ಕು ಮತ್ತು ಆರು ಸಮಾನಾಂತರ ರಂಧ್ರಗಳಿರುವ ಮಣಿಗಳಲ್ಲಿ ನೇರ ಹಾಗೂ ವಕ್ರ ಅಂಚಿನ ಮಣಿಗಳಿವೆ. ಇವುಗಳ ಅಳತೆ 3x1x3x0.5, 2.5x0.5 ಮತ್ತು 1.8x0.4 ಸೆಂಮೀ. ಇವುಗಳಲ್ಲಿ ಎರಡು ರಂಧ್ರವಿರುವ 17 ಮಣಿಗಳು, ಮೂರು ರಂಧ್ರವಿರುವ 4 ಮಣಿಗಳು, ನಾಲ್ಕು ರಂಧ್ರ ಇರುವ 15 ಮಣಿಗಳು ಮತ್ತು 6 ರಂಧ್ರ ಇರುವ ಒಂದು ಮಣಿ ಇವೆ. ಚಪ್ಪಟೆಯಾದ ಈ ಉದ್ದ ಮಣಿಗಳ ಒಂದೊಂದು ರಂಧ್ರದಲ್ಲೂ ಸರದ ಒಂದೊಂದು ಎಳೆಗಳನ್ನು ಪೋಣಿಸಿ ಎಲ್ಲ ಎಳೆಗಳನ್ನು ತ್ರಿಕೋನಾಕಾರದ ಕೊನೆ ಮಣಿಯಲ್ಲಿ ಸೇರಿಸಲಾಗುತ್ತಿತ್ತು. 18 ಕೊನೆ ಮಣಿಗಳು ಸಿಕ್ಕಿದ್ದು ಪ್ರತಿ ಸರದಲ್ಲಿ ಎರಡರಂತೆ 9 ಸರಗಳಲ್ಲಿ ಇವನ್ನು ಬಳಸಿರಬಹುದು. ಗಂಟೆ ಆಕಾರದ 42 ಮಣಿಗಳಲ್ಲಿ 39 ಒಂಟಿ ಗಂಟೆ; 3 ಜೋಡಿ ಗಂಟೆಗಳು. ಚಪ್ಪಟೆಯಾದ ವೃತ್ತಾಕಾರದ ಪುಟ್ಟಮಣಿಗಳು ನೂರಾರು ಸಂಖ್ಯೆಯಲ್ಲಿದ್ದುವು. ಹಲವಾರು ಮಣಿಗಳು ಒಂದಕ್ಕೊಂದು ಅಂಟಿಕೊಂಡಿದ್ದವು. ಇವು ಬಹುಶಃ ಸರದ ಗೊಂಚಲಿಗೆ ಸೇರಿದ್ದಿರಬೇಕು. ಅಮೂಲ್ಯ ಕಲ್ಲಿನ ಮಣಿಗಳಲ್ಲಿ 8 ಗೋಮೇಧಿಕ, 200 ಅಗೇಟ್ ಮತ್ತು 6 ತಾಮ್ರದ ಮಣಿಗಳು. ಈ ಮಣಿಗಳು ಮೊಹೆಂಜೋದಾರೊ, ಹರಪ್ಪ, ಲೋಥಲ್, ಕಾಲಿಬಂಗನ್, ಸುರಕೋಟಡ, ಕುಣಾಲ್, ಚನ್ಹುದಾರೊ, ಅಲ್ಲಾಹದೀನೊ ಮುಂತಾದ ಉತ್ಖನನಗಳಲ್ಲಿ ಸಿಕ್ಕಿರುವ ಮಣಿಗಳನ್ನು ಹೋಲುತ್ತವೆ. ಸುಟ್ಟ ಜೇಡಿಮಣ್ಣು,

ಶಂಖ, ಫಯಾನ್ಸ್, ತಾಮ್ರದ ಬಳೆಗಳು ಇಲ್ಲಿ ದೊರೆತಿವೆ. ಚಿನ್ನ ಮತ್ತು ಬೆಳ್ಳಿಯ ಬಳೆಗಳು ಅಪರೂಪ. ಮೊಹೆಂಜೋದಾರೊ ಮತ್ತು ಹರಪ್ಪ ಉತ್ಖನನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಬಳೆಗಳು ಸಿಕ್ಕಿವೆ. ಕುಣಾಲ್ ಉತ್ಖನನದಲ್ಲಿ ಬೆಳ್ಳಿಯ ಆಭರಣಗಳ ನಿಕ್ಷೇಪ ಬೆಳಕಿಗೆ ಬಂದಿದೆ. ಅಲ್ಲಾಹದೀನೊದಲ್ಲಿಯೂ ಇಂಥ ನಿಧಿಯೊಂದು ಕಂಡುಬಂದಿದೆ. ಕಲ್ಲು ಅಥವಾ ಲೋಹ ನಿಕ್ಷೇಪ ಇಲ್ಲದಿರುವ ಸಿಂಧೂ, ಸರಸ್ವತಿ ಮತ್ತು ಗಂಗಾ–ಯಮುನ ನದಿ ಸಂಗಮ ಪ್ರದೇಶದಲ್ಲಿ ಇಂತಹ ಆಭರಣಗಳು ವಾಣಿಜ್ಯ–ವ್ಯಾಪಾರದ ಮೂಲಕ ಬಂದಿರಬೇಕು. ಬಲೂಚಿಸ್ತಾನ, ದಖನ್ ಪ್ರಸ್ಥಭೂಮಿ, ಅರಾವಳಿ ಮುಂತಾದ ದೂರ ಪ್ರದೇಶಗಳಿಂದ ಈ ವಸ್ತುಗಳನ್ನು ಆಮದು ಮಾಡಿಕೊಂಡಿರುವುದು ಹರಪ್ಪ ಸಂಸ್ಕೃತಿಯ ವ್ಯಾಪಾರಿಗಳ ದಕ್ಷತೆಯನ್ನು ತೋರಿಸುತ್ತದೆ. (ಯು.ಎಸ್.)

**ಮಂಡೇಲ, ನೆಲ್ಸನ್:** 1918–. ದಕ್ಷಿಣ ಆಫ್ರಿಕದ ರಾಷ್ಟ್ರೀಯ ನಾಯಕ ಮತ್ತು ಮೊದಲ ಅಧ್ಯಕ್ಷ. ಇವರು ಕ್ಸೊಸ ಎಂಬ ಬುಡಕಟ್ಟು ಸಮುದಾಯಕ್ಕೆ ಸೇರಿದವರು. 1994–99ರ ಅವಧಿಯಲ್ಲಿ ಅಧ್ಯಕ್ಷರಾಗಿ 1991ರಿಂದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಅಧ್ಯಕ್ಷ ಗಾದಿಗೆ ಆಯ್ಕೆಯಾದರು. ಮಂಡೇಲರವರು ಜನಾಂಗೀಯ ವರ್ಣಭೇದ ನೀತಿಯ ವಿರುದ್ಧ ತಮ್ಮ ಹೋರಾಟ ಪ್ರಾರಂಭಿಸಿ ಅದರಲ್ಲಿ ಯಶಸ್ವಿಯಾದರು.

ನೆಲ್ಸನ್ ರೊಲಿಹಲ್ಹಾಲ ಮಂಡೇಲ ಟ್ರಾನ್ಸ್‌ಕೇ ಪ್ರಾಂತದ ಉಮತಟಾ ಎಂಬಲ್ಲಿ 1918 ಜುಲೈ 18ರಂದು ಜನಿಸಿದರು. ಮೊದಲಿಗೆ ಪೋರ್ಟ್ ಹರೆ ವಿಶ್ವವಿದ್ಯಾಲಯಕ್ಕೂ ಅನಂತರ ವಿಟ್‌ವಾಟರ್ ಸ್ರಾಂಡ್ ವಿಶ್ವವಿದ್ಯಾಲಯದಿಂದ ಅಂಚೆ ಶಿಕ್ಷಣದ ಮೂಲಕ ಕಾನೂನು ಶಾಸ್ತ್ರವನ್ನು ಅಭ್ಯಸಿಸಿ, 1942ರಲ್ಲಿ ದಕ್ಷಿಣ ಆಫ್ರಿಕ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಗಳಿಸಿದರು. ಇದೇ ವರ್ಷ ಸೊವೆತೋ ಎಂಬಲ್ಲಿ ತನ್ನ ಸ್ನೇಹಿತರ ಜೊತೆ ಸೇರಿ ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಕಪ್ಪುಜನತೆಯ ವಕೀಲ ಸಂಘ ಸ್ಥಾಪಿಸಿದರು.



1944ರಲ್ಲಿ ಎ.ಎನ್.ಸಿ.ಯ ಸಕ್ರಿಯ ಸದಸ್ಯರಾದರು. 1960ರಲ್ಲಿ ಸಂಭವಿಸಿದ ಸರ್ಪವಿಲ್ಲಾ ಹತ್ಯಾಕಂಡದ ವಿರುದ್ಧ ಹಿಂಸಾತ್ಮಕ ಚಳವಳಿಯತ್ತ ಗಮನಹರಿಸಿ ಸ್ಪಿಯರ್ ಆಫ್ ನೇಷನ್ ಎಂಬ ಸಂಘಟನೆಯತ್ತ ಗಮನ ನೀಡಿದರು. ಇದು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎ.ಎನ್.ಸಿ.)ನ ಅಂಗಸಂಸ್ಥೆಯಾಗಿತ್ತು. 1961ರಲ್ಲಿ ಸರ್ಕಾರದ ವಿರುದ್ಧ ಹಿಂಸಾತ್ಮಕ ಚಳವಳಿ ನಡೆಸಿದ್ದರಿಂದಾಗಿ ಇವರನ್ನು 1962ರಲ್ಲಿ ಬಂಧಿಸಿ ಜೀವಾವಧಿ ಶಿಕ್ಷೆಗೆ ಒಳಪಡಿಸಿದುದರಿಂದ ಇವರಿಗೆ ಕಪ್ಪು ಸಮುದಾಯದ ಬೆಂಬಲ ದೊರಕಿತು.

1962ರಿಂದ ಸತತವಾಗಿ 29ವರ್ಷಗಳ ಕಾಲ ಸೆರೆಯಲ್ಲಿದ್ದರೂ ತಮ್ಮ ಸಂದೇಶಗಳಿಂದ ವಿಶ್ವದ ನೊಂದ ಜನರ ಸಹಾನೂಭೂತಿ ಗಳಿಸಿದರು. ಮಂಡೇಲರ ಪತ್ನಿ ವಿನ್ನಿ ಮಂಡೇಲಾ ಪತಿಯ ಪರವಾಗಿ ಕಾನೂನು ಹೋರಾಟ ನಡೆಸಿ 1990ರಲ್ಲಿ ಜೈಲಿನಿಂದ ಹೊರತರುವಲ್ಲಿ ಯಶಸ್ವಿಯಾದರು. ಸೆರೆಯಲ್ಲಿದ್ದಾಗ ಇವರು ತಮ್ಮ ಪತ್ನಿಯನ್ನು ಸಹ ನೇರವಾಗಿ ನೋಡಲೂ, ಮಾತನಾಡಲೂ ಅವಕಾಶ ನೀಡಲಿಲ್ಲ. ಗಾಜಿನ ಮೂಲಕವೇ ಇವರನ್ನು ಸಂಪರ್ಕಿಸಬೇಕಾಗಿತ್ತು. ಇವರು ಬಿಡುಗಡೆಯ ವೇಳೆಯಲ್ಲಿ 28 ವಯಸ್ಸಿನ ಮಗಳು ಮೊದಲಬಾರಿಗೆ ತನ್ನ ತಂದೆಯನ್ನು ನೋಡುವಂತಾಯಿತು.

1990ರಲ್ಲಿ ದಕ್ಷಿಣ ಆಫ್ರಿಕದ ಅಧ್ಯಕ್ಷರಾಗಿದ್ದ ಎಫ್.ಡಿ. ಕ್ಲಾರ್ಕ್ ದಕ್ಷಿಣ ಆಫ್ರಿಕದ ರಾಜಕೀಯ ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತು ಇವರನ್ನು ಬಂಧನದಿಂದ ಬಿಡುಗಡೆ ಗೊಳಿಸುವಲ್ಲಿ ಸಹಕರಿಸಿದರು. ಬಿಡುಗಡೆಗೊಂಡ ಮಂಡೇಲರವರು ಎ.ಎನ್.ಸಿ.ಯ ವಿನಂತಿಯ ಮೇರೆಗೆ ಹಿಂಸೆ ಮತ್ತು ಶಸ್ತ್ರ ತ್ಯಜಿಸಿ ಸರ್ಕಾರದ ಆಡಳಿತದಲ್ಲಿ ಭಾಗಿಯಾಗಲು ಒಪ್ಪಿದರು. 1991ರಲ್ಲಿ ಆಲಿವರ್ ಟಾಂಬೊರವರ ಅನಂತರ ಎ.ಎನ್.ಸಿ.ಯ ಅಧ್ಯಕ್ಷರಾಗಿ, ವರ್ಣಭೇದ ನೀತಿಯನ್ನು ವಿರೋಧಿಸಿ, ಪ್ರಜಾಪ್ರಭುತ್ವ ಮತ್ತು ಮಾನವೀಯ ಮೌಲ್ಯಗಳಿಗೆ ಒತ್ತು ನೀಡುವಂತೆ ವಿಶ್ವಸಮುದಾಯದ ಮೇಲೆ ಒತ್ತಡ ತಂದರು. ಇವರು ಶಾಂತಿಯುತವಾಗಿ ದ. ಆಫ್ರಿಕದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಲು ನಡೆಸಿದ ಸಾಧನೆಯನ್ನು ಗುರುತಿಸಿ ಅಧ್ಯಕ್ಷರಾಗಿದ್ದ ಎಫ್.ಡಿ.ಕ್ಲಾರ್ಕ್ ಹಾಗೂ ನೆಲ್ಸನ್ ಮಂಡೇಲರವರಿಗೆ 1993ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿತು.

1994ರಲ್ಲಿ ಮೊದಲಬಾರಿಗೆ ಕಪ್ಪುಸಮುದಾಯದವರಿಗೆ ದೊರಕಿದ ಮತದಾನದ ಹಕ್ಕು ಹಾಗೂ ಸಾರ್ವತ್ರಿಕ ಚುನಾವಣೆಯಲ್ಲಿ ಜಯಗಳಿಸಿದ ಮಂಡೇಲರವರು ದ. ಆಫ್ರಿಕದ ಅಧ್ಯಕ್ಷರಾದರು. 1994–99ರ ತಮ್ಮ ಅಧಿಕಾರಾವಧಿಯಲ್ಲಿ ದ.ಆಫ್ರಿಕದಲ್ಲಿ ಶಾಂತಿ ನೆಲೆಸುವಂತೆ ನೋಡಿಕೊಂಡರಲ್ಲದೆ, ಸಾರ್ವಜನಿಕ ವಲಯದಲ್ಲಿ ಎಲ್ಲ ವರ್ಗದವರಿಗೂ ಅವಕಾಶವಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಶಿಕ್ಷಣ, ಸಂಪತ್ತು ಮತ್ತು ಅಧಿಕಾರ ದೇಶದ ಎಲ್ಲ ವರ್ಗದವರಲ್ಲೂ ಹಂಚಿಕೆಯಾಗುವಂತೆ ನೋಡಿಕೊಂಡರು. 1992ರಲ್ಲಿ ತಮ್ಮ ಪತ್ನಿ ವಿನ್ನಿ ಮಂಡೇಲರವರಿಂದ ವಿವಾಹ ವಿಚ್ಛೇದನ ಪಡೆದು 1996ರಲ್ಲಿ ಅಧಿಕೃತವಾಗಿ ಬೇರ್ಪಡೆಯಾದರು. ಆಡಳಿತ ಮುಕ್ತವಾಗಿರಬೇಕೆಂದು ಬಯಸಿ 1997ರಲ್ಲಿ ಎ.ಎನ್.ಸಿ. ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದರು. 1996ರಲ್ಲಿ ಭಾರತ ಸರ್ಕಾರ ಇವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. 1998ರಲ್ಲಿ ಮೊಜಾಂಬಿಕ್ ದೇಶದ ಅಧ್ಯಕ್ಷರಾಗಿದ್ದ ಸೂಮಾರ ಮಾಚೆಲ್‌ರವರ ವಿಧವೆ ಪತ್ನಿ ಗ್ರಾಕ ಮಾಚೆಲ್‌ರವರನ್ನು ತಮ್ಮ ಪತ್ನಿಯಾಗಿ ಸ್ವೀಕರಿಸಿದರು. 1999ರಂದು ದೇಶದ ಅಧ್ಯಕ್ಷ ಪದವಿಯಿಂದ ನಿವೃತ್ತಿಗೊಂಡ ಮಂಡೇಲ ಪ್ರಪಂಚದಾದ್ಯಂತ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿದ್ದಾರೆ. (ಸಿ.ಜಿ.ಎಸ್.)

**ಮಂತ್ರಿ ಪರಿಷತ್:** ವೇದಗಳ ಕಾಲದಿಂದಲೂ ರೂಢಿಯಲ್ಲಿದ್ದ ಮಂತ್ರಿಗಳ ಆಲೋಚನಾ ಸಭೆ ಇದು ರಾಜ್ಯದ ಮುಖ್ಯ ಆಡಳಿತ ಕಾರ್ಯನಿರ್ವಾಹಕ ಮಂಡಳಿಯಾಗಿತ್ತು. ಸಾಧಾರಣವಾಗಿ ಮಂತ್ರಿ ಪರಿಷತ್‌ನಲ್ಲಿ ಎಂಟು ಮಂದಿ ಮಂತ್ರಿಗಳಿರುತ್ತಿದ್ದರು. ಮನು ಮತ್ತು ಶುಕ್ರ ಇವರು ಮಂತ್ರಿಗಳ ಸಂಖ್ಯೆ 7 ಅಥವಾ 8ಕ್ಕೆ ಹೆಚ್ಚಾಗಿರಕೂಡದೆಂದು ಹೇಳಿದ್ದಾರೆ. ಮೆಗಾಸ್ತನೀಸ್ ತನ್ನ ಕಾಲದ ಮಂತ್ರಿ ಪರಿಷತ್ ಕುರಿತು ಅದು ಚಿಕ್ಕದಾಗಿತ್ತೆಂದೂ ಅದರ ಸದಸ್ಯರು ಜ್ಞಾನಿಗಳು ಮತ್ತು ನೀತಿವಂತರು ಆಗಿದ್ದರೆಂದೂ ವರ್ಣಿಸಿದ್ದಾನೆ. ಕೌಟಿಲ್ಯ ರಾಜ್ಯದ ಮುಖ್ಯವಿಚಾರಗಳನ್ನೆಲ್ಲ ಮಂತ್ರಿ ಪರಿಷತ್‌ನಲ್ಲಿ ಪರಿಶೀಲಿಸಬೇಕೆಂದೂ ಯಾವುದಾದರೂ ಭಿನ್ನಾಭಿಪ್ರಾಯವಿದ್ದರೆ ಬಹುಮತದಂತೆ ನಡೆಯಬೇಕೆಂದೂ ಹೇಳಿದ್ದಾನೆ. ಈ ಸಭೆ ರಾಜ ನಿರಂಕುಶನಾಗಲು ಅವಕಾಶಕೊಡದೆ ಆಡಳಿತವನ್ನು ವಿಚಕ್ಷಣೆಯಿಂದ ನಡೆಸುತ್ತಿತ್ತು. ಭಾರತವನ್ನಾಳಿದ ಅನೇಕ ರಾಜಮಹಾರಾಜರು ತಮ್ಮ ರಾಜ್ಯಗಳ ಆಡಳಿತವನ್ನು ವೇದಗಳ ಆಧಾರದ ಮಂತ್ರಿ ಪರಿಷತ್ ಮಾದರಿಯಲ್ಲಿ ಅಷ್ಟ ಪ್ರಧಾನರ ಸಭೆ ರಚಿಸಿದ್ದರು. ಆಧುನಿಕ ಪ್ರಜಾಪ್ರಭುತ್ವ ರಾಜ್ಯಗಳಲ್ಲೂ ಮಂತ್ರಿಗಳ ಆಡಳಿತವೇ ಇರುವುದು ಅದರ ಚಾರಿತ್ರಿಕ ಮಹತ್ತ್ವವನ್ನು ತೋರಿಸುತ್ತದೆ. ಆದರೆ ಇಂತಿಷ್ಟೇ ಮಂತ್ರಿಗಳೆಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ರಾಜ್ಯದ ವಿಸ್ತಾರ, ಆಡಳಿತ ಕ್ರಮ ಮತ್ತು ಅದರ ವಿವಿಧ ಅಂಗಗಳ ರಚನೆಯ ಮೇಲೆ ಮಂತ್ರಿಗಳ ಸಂಖ್ಯೆ ನಿರ್ಧಾರವಾಗುತ್ತದೆ. (ಬಿ.ಎಸ್.ಕೆ.)

**ಮಗೋಸಿಯನ್:** ಉತ್ತರ ಉಗಾಂಡದ ಪುಟ್ಟ ನೆಲೆಯೊಂದರ (ಮಗೋಸಿ) ಹೆಸರನ್ನಾಧರಿಸಿ ದಕ್ಷಿಣ ಆಫ್ರಿಕದಲ್ಲಿ ವ್ಯಾಪಕವಾಗಿ ಹರಡಿದ ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳಲ್ಲೊಂದು. ಕಲ್ಲಿನ ಮೇಲೆ ಚಕ್ಕೆ ಎಬ್ಬಿಸಲು ಅನುಕೂಲವಾಗುವಂಥ ಪ್ರಹಾರ ಘಟ್ಟವನ್ನು ಸಿದ್ಧಪಡಿಸಿ ತಯಾರಿಸುವ ಹಳೆ ನಿರ್ಮಾಣ ತಂತ್ರದಿಂದ ಅಂತ್ಯಶಿಲಾಯುಗದಿಂದ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಪದಾರ್ಪಣ ಮಾಡುವ ಸಂಕ್ರಮಣಕಾಲದ ಸಂಸ್ಕೃತಿಯಿದು. ಇದನ್ನು ಮೊದಲು ಮಾಡರ್‌ಪೋರ್ಟ್ ಸಂಸ್ಕೃತಿ ಎಂದು ಕರೆದು ಅನತಿ ಕಾಲದಲ್ಲೇ ಆ ಹೆಸರನ್ನು ಕೈಬಿಟ್ಟು ಮಗೋಸಿಯನ್ ಎಂದು ಕರೆಯಲಾಯಿತು. ಪೂರ್ವ ಆರೆಂಜ್ ಫ್ರೀಸ್ಟೇಟ್ ಹಾಗೂ ಬಸುಟೋಲ್ಯಾಂಡ್‌ಗಳ ಬೆಟ್ಟಗಾಡು ಪ್ರದೇಶದಲ್ಲಿ, ಉತ್ತರ ಟ್ರಾನ್ಸ್‌ವಾಲ್ ಹಾಗೂ ಸೌತ್–ವೆಸ್ಟ್ ಆಫ್ರಿಕದ ಉತ್ತರಭಾಗಗಳಲ್ಲಿ ಈ ಸಂಸ್ಕೃತಿಯ ನೆಲೆಗಳು ವಿಪುಲವಾಗಿ ಗೋಚರಿಸಿವೆ. ಉತ್ತರ ಕೇಪ್ ಹಾಗೂ ನೇಟಲ್ ಪ್ರದೇಶದಲ್ಲಿಯೂ ಈ ಸಂಸ್ಕೃತಿ ಹರಡಿತ್ತೆಂದು ತಿಳಿದುಬರುತ್ತದೆ. ಈ ಸಂಸ್ಕೃತಿಯಲ್ಲಿ ಸ್ಥಳೀಯ ವೈವಿಧ್ಯ ಕಂಡುಬಂದಿದ್ದು ಕೇಪ್ ಕರಾವಳಿ ತೀರದ ಒಂದು ಬಗೆಯನ್ನು ಹೌವೀಸನ್ಸ್ ಪೂರ್ಟ್ ವೇರಿಯಂಟ್ ಎಂದು ಕರೆಯಲಾಗಿದೆ. ಫಿಶ್‌ಹುಕ್ ಎಂಬಲ್ಲಿಯ ಅನೇಕ ಗವಿಗಳಲ್ಲಿ ಈ ವೈವಿಧ್ಯ ಗೋಚರಿಸಿದೆ. ಲೇಡಿಬ್ರಾಂಡ್ ಎಂಬಲ್ಲಿಯ ರೋಸ್‌ಕಾಟೇಜ್ ಗವಿಯಲ್ಲಿ ಮಗೋಸಿಯನ್ ಸಂಸ್ಕೃತಿಯ ಮೂರು ಮಜಲುಗಳನ್ನು ಗುರುತಿಸಲಾಗಿದೆ.

ಈ ಕಾಲದ ಶಿಲೋಪಕರಣಗಳು ಗಾತ್ರದಲ್ಲಿ ಚಿಕ್ಕವು. ಸೂಕ್ಷ್ಮಶಿಲಾ ಅಲಗುಗಳು, ಬದಿ ಮೊಂಡಾಗಿಸಿದ ಅಲಗುಗಳು, ವಿವಿಧ ಬಗೆಯ ಹೆರೆಯುವ ಸಾಧನಗಳು, ಅರ್ಧಚಂದ್ರಾಕೃತಿ ಮುಂತಾದವು ಈ ಕಾಲದ ಮುಖ್ಯ ಉಪಕರಣಗಳು. ಮಗೋಸಿಯಲ್ಲಿ ತ್ರಿಕೋಣಾಕೃತಿಯ, ಎಲೆಯಾಕಾರದ ಹಾಗೂ ವಜ್ರಾಕೃತಿಯ ಚಿಕ್ಕಮೊನೆಗಳು ಲಭ್ಯವಾಗಿವೆ. ಅಂತ್ಯ ಹಳೆಶಿಲಾಯುಗ ಹಾಗೂ ಮಗೋಸಿಯನ್ ನಡುವಣ ಕಾಲದ ಸಂಸ್ಕೃತಿಯ ಸ್ಥಿತ್ಯಂತರದ ಮಜಲುಗಳನ್ನು ಮಗೋಸಿ–ಡೋನಿಯನ್ ಎಂದು ಗುರುತಿಸಲಾಗಿದೆ. (ಎಚ್.ಎಂ.ಎನ್.ಆರ್.)

**ಮಥುರ:** ಉತ್ತರಪ್ರದೇಶ ರಾಜ್ಯದ ಜಿಲ್ಲಾಕೇಂದ್ರ; ಕೃಷ್ಣನ ಜನ್ಮಸ್ಥಾನವಾದ ಇದು ಪ್ರಸಿದ್ಧ ಯಾತ್ರಾಸ್ಥಳವೂ ಹೌದು. ಯಮುನ ನದಿದಂಡೆಯ ಮೇಲೆ ಆಗ್ರ ಮತ್ತು ನವದೆಹಲಿಯ ಮಧ್ಯದಲ್ಲಿದೆ. ಮಥುರ ಮತ್ತು ಇದರ ಸುತ್ತಮುತ್ತಲಿನ ಪ್ರದೇಶ ಭಾರತೀಯ ಶಿಲ್ಪಕಲಾ ಇತಿಹಾಸದ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. ಆರಂಭಿಕ ಹಂತದಲ್ಲಿ–ಬಹುಶಃ ಗಾಂಧಾರ ಪ್ರದೇಶವನ್ನು ಹೊರತುಪಡಿಸಿದರೆ–ಉತ್ತರ ಭಾರತದಲ್ಲಿ ಶಿಲ್ಪಗಳ ಕಲಾಕೇಂದ್ರವಾಗಿ ಮಥುರ ಬೆಳೆಯಿತು. ಇಲ್ಲಿಯ ಹೆಚ್ಚಿನ ಶಿಲ್ಪಗಳು ಉತ್ಖನನ ಅಥವಾ ಹೊಸ ಕಟ್ಟಡಗಳ ಇಲ್ಲವೆ ರಸ್ತೆಗಳ ನಿರ್ಮಾಣದ ಸಂದರ್ಭದಲ್ಲಿ ಬೆಳಕಿಗೆ ಬಂದಿವೆ. ಟಾಲಮಿ ಉಲ್ಲೇಖಿಸಿರುವ ಈ ನಗರ ಆದಿ ಶಕ–ಕ್ಷತ್ರಪರ ಅಧಿಕಾರದ ಕೇಂದ್ರವಾಗಿತ್ತಲ್ಲದೆ ಕುಷಾಣರ ದಕ್ಷಿಣ ರಾಜಧಾನಿಯಾಗಿತ್ತು. ಇಲ್ಲಿ ದೊರೆತಿರುವ ಮುಖ್ಯವಾಗಿ ಕುಷಾಣರ ಕಾಲದ ಅವಶೇಷಗಳು ಬೌದ್ಧ,

ಜೈನ ಮತ್ತು ಹಿಂದು ಚಟುವಟಿಕೆಗಳ ಸಾಕ್ಷಿಗಳಾಗಿವೆ. ಸಾಮಾನ್ಯವಾಗಿ ಬಿಳಿ ಚುಕ್ಕೆಗಳುಳ್ಳ ಕೆಂಪು ಮರಳುಗಲ್ಲನ್ನು ಮಥುರ ಶಿಲ್ಪಗಳಿಗೆ ಬಳಸಲಾಗಿದ್ದು, ಇಂದಿಗೂ ಈ ಪ್ರಕಾರದ ಮರಳುಗಲ್ಲನ್ನು ಕಟ್ಟಡ ಮುಂತಾದವುಗಳಿಗೆ ಬಳಸಲಾಗುತ್ತಿದೆ.

ಸಮೀಪದ ಸೋಂಕ್ ನೆಲೆಯ ಉತ್ಖನನ ಇಲ್ಲಿಯ ಪ್ರಾಚೀನ ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲಿದೆ. ಈ ನೆಲೆಯಲ್ಲಿ ಸು.17 ಮೀ ದಪ್ಪದ ವಸತಿ ಪದರವಿತ್ತು. ವರ್ಣಚಿತ್ರಿತ ಬೂದುಬಣ್ಣದ ಮಣ್ಪಾತ್ರೆ ಸಂಸ್ಕೃತಿಯಿಂದ ಕುಷಾಣರ ಅಂತ್ಯ ಕಾಲದವರೆಗಿನ ಅವಶೇಷಗಳನ್ನು ಇಲ್ಲಿ ಗುರುತಿಸಲಾಗಿದೆ. ಪ್ರ.ಶ.ಪೂ. 200–100 ರ ಅವಧಿಯ ಹಲವಾರು ಸುಡಾವೆಮಣ್ಣಿನ ವಿಗ್ರಹಗಳು ದೊರೆತಿವೆ. ಈ ವಿಗ್ರಹಗಳು ಬೂದುಬಣ್ಣದವಾಗಿದ್ದು ಸಾಮಾನ್ಯವಾಗಿ ಅಚ್ಚಿನಿಂದ ತಯಾರಿಸಿದ ಮುಖಗಳನ್ನು ಹೊಂದಿವೆ. ಈವರೆಗೆ ದೊರೆತಿರುವ ಮಾತೃಕೆಯರ ವಿಗ್ರಹಗಳಲ್ಲಿ ಗುಂಪಾಗಿ ತೊಟ್ಟಿಯ ಸುತ್ತ ಕುಳಿತಿರುವ ಸ್ತ್ರೀಯರ ವಿಗ್ರಹ ಬಹುಶಃ ಪ್ರಾಚೀನ ವಾದುದು. ನಾಗಗಳ ಚಿತ್ರವುಳ್ಳ ಸುಟ್ಟ ಮಣ್ಣಿನ ಪಟ್ಟಿಕೆ ತಯಾರಿಸಲು ಕಲ್ಲಿನ ನಾಗವಿಗ್ರಹದಿಂದ ಪಡೆದ ಅಚ್ಚು ಸಹ ಪ್ರಾಚೀನವಾದುದು. ಗಜಪೃಷ್ಠ ವಿನ್ಯಾಸ ವುಳ್ಳ ಕಟ್ಟಡದ ಚಿತ್ರಗಳು ಉಬ್ಬುಶಿಲ್ಪದ ಲ್ಲಿವೆ. ಇಂಥ ಕಟ್ಟಡದ ಅವಶೇಷವೂ ಇಲ್ಲಿ ದೊರೆತಿದೆ. ಈ ಕಟ್ಟಡಕ್ಕೆ ಸಂಬಂಧಿಸಿದ ತೋರಣದ ಶಿಲ್ಪಗಳು ಇದೊಂದು ನಾಗ ದೇವತೆಯ ಗುಡಿಯಾಗಿತ್ತೆಂದು ಸೂಚಿಸುತ್ತವೆ.

ಕಾರ್ತಿಕೇಯ, ಕುಷಾಣರ ಕಾಲ

ದೃಷ್ಟಿಕೋನ ಬೇರೆಯಾದರೂ ಮಥುರ ಮತ್ತು ಗಾಂಧಾರದ ಸಾಧನೆಗಳು ಆಶ್ಚರ್ಯಕರ ರೀತಿಯಲ್ಲಿ ಒಂದೇ ತೆರನಾಗಿವೆ. ಎರಡೂ ತಮ್ಮದೇ ಆದ ಶೈಲಿಯಲ್ಲಿ ಬುದ್ಧ ಮತ್ತು ಬೋಧಿಸತ್ತ್ವರ ವಿಗ್ರಹಗಳನ್ನು ಸೃಜಿಸಿದವು. ನಿಜ ಅರ್ಥದಲ್ಲಿ ಇವು ಭಾರತದ ಮೊದಲ ವಿಗ್ರಹಗಳು. ದೇವರನ್ನು ಮತ್ತು ಮಹಾಪುರುಷರನ್ನು ಪ್ರತಿಮಾಲಕ್ಷಣಕ್ಕೆ ಬದ್ಧವಾಗಿ, ಖಚಿತ ಭಂಗಿ, ಮುದ್ರೆ ಹಾಗೂ ಲಾಂಛನದೊಂದಿಗೆ ತೋರಿಸುವ ಪರಂಪರೆ ಇಲ್ಲಿಂದಲೇ ಮೂಡಿದಂತಿದೆ.

**ವಾಸ್ತು–ಶಿಲ್ಪಕಲೆ:** ಮಥುರದಲ್ಲಿ ಕಥಾನಿರೂಪಕ ಶಿಲ್ಪಗಳು, ವಾಸ್ತು ಘಟಕಗಳು ಗಾಂಧಾರ ಶಿಲ್ಪಶೈಲಿಗಿಂತ ಕಡಿಮೆ. ಇದು ಮಥುರದಲ್ಲಿದ್ದ ಕಟ್ಟಡಗಳಿಗೆ ಗಾಂಧಾರದಲ್ಲಿದ್ದಷ್ಟು ಶಿಲ್ಪ ಅಲಂಕಾರವಿರುತ್ತಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಆದರೆ ಶಿಲ್ಪಿತ ತೊಲೆಗಳು, ಅಲಂಕಾರಪೂರಿತ ದ್ವಾರಬಂಧಗಳು, ವೇದಿಕಾ ಭಾಗಗಳು ಇಲ್ಲಿರುವಷ್ಟು ಗಾಂಧಾರದಲ್ಲಿಲ್ಲ. ಸುಂದರ ಮೈಮಾಟದ ಆಕರ್ಷಕ ಸ್ತ್ರೀಯರ ಶಿಲ್ಪಗಳುಳ್ಳ ಕಂಬಗಳು ವೇದಿಕಾ (ಕಲ್ಲುಬೇಲಿಗಳ) ಭಾಗಗಳಾಗಿದ್ದವು. ಹೆಚ್ಚಿನ ಶಿಲ್ಪಗಳು ಒಂದೆ ತೆರನಾಗಿವೆಯಾದರೂ ತುಂಬು ಕುಚಗಳು, ತೆಳುವಾದ ಕಾಲುಗಳಿಂದಾಗಿ ಸ್ತ್ರೀಯ ಮೈಮಾಟದ ಮನಮೋಹಕತೆ ಚಿಮ್ಮುತ್ತದೆ. ಇವುಗಳಲ್ಲಿ ಕೆಲವು ಯಕ್ಷಿಯರ ಶಿಲ್ಪಗಳು, ಪಂಜರದಲ್ಲಿ ಹಕ್ಕಿಯನ್ನೊಯ್ಯುತ್ತಿರುವ ಯಕ್ಷಿ, ಸದ್ಯಸ್ನಾತಾ ಮತ್ತು ಮುಕ್ತಾಸಕ್ತ ಹಂಸ, ಚಂಡಿನೊಂದಿಗೆ ಚಮತ್ಕಾರ ತೋರುತ್ತಿರುವ ಸ್ತ್ರೀ, ತಾಯಿ–ಮಗು, ಅಶೋಕದೋಹದ ಮುಂತಾದ ಶಿಲ್ಪಗಳು ಕಲಾವಿದರ ಸೃಜನಶೀಲತೆ ಮತ್ತು ಕೈಚಳಕದ ಅದ್ಭುತ ಉದಾಹರಣೆಗಳೆನಿಸಿವೆ. ರೂಪಕರ್ಮದ ದೃಷ್ಟಿಯಿಂದ ಕೆಲವು ನಾಗರಾಜ ವಿಗ್ರಹಗಳು ಉತ್ತಮವಾಗಿವೆ. ಇಂಥವುಗಳಲ್ಲಿ ಸೋಂಕ್ ನೆಲೆಯಲ್ಲಿ ದೊರೆತ ಒಂದು ನಾಗರಾಜ ಶಿಲ್ಪ ಉಲ್ಲೇಖನೀಯ. ಬೌದ್ಧರಂತೆ ಜೈನರೂ ಮಥುರದಲ್ಲಿ ಸ್ತೂಪ ನಿರ್ಮಿಸಿದ್ದರು. ವಿಶಿಷ್ಟ ಸರ್ವತೋಭದ್ರಿಕಾ (ನಾಲ್ಕು ಜಿನರು ಬೆನ್ನಿಗೆ ಹಾಕಿ ನಿಂತಿರುವ) ಪ್ರತಿಮೆಗಳು ಹಾಗೂ ಆಯಗಪಟಗಳು (ಹರಕೆಯ ಶಿಲ್ಪ ಪಟ್ಟಿಕೆಗಳು) ಜೈನ ಕಲೆಯ ಉದಾಹರಣೆಯೊದಗಿಸುತ್ತವೆ. ಆಯಗಪಟಗಳಲ್ಲಿ ಕೆಲವು ಸ್ತೂಪಗಳ ಚಿತ್ರಗಳನ್ನು, ಕೆಲವು ಸ್ವಸ್ತಿಕ, ಮೀನಯುಗಲ, ಪದ್ಮ, ತ್ರಿರತ್ನ ಇತ್ಯಾದಿ ಶುಭ ಸಂಕೇತಗಳನ್ನು, ಇನ್ನು ಕೆಲವು ಜಿನವಿಗ್ರಹಗಳನ್ನು ಚಿತ್ರಿಸುತ್ತವೆ.

ಮಥುರದ ಈಶಪುರದಲ್ಲಿ ಶಕ–ಕ್ಷತ್ರಪರ ಕಾಲಕ್ಕೆ ಅನ್ವಯಿಸಬಹುದಾದ ಒಂದು ಬುದ್ಧಶಿಲ್ಪವನ್ನು ಪ್ರ.ಶ.ಪೂ.ಸು. 50 ರದೆಂದು ಭಾವಿಸಲಾಗಿದೆ. ಇದನ್ನು ಮಥುರ ಬುದ್ಧ ವಿಗ್ರಹಗಳ ಲಕ್ಷಣಕ್ಕೆ ಪೂರ್ವಭಾವಿಯೆಂದು ಪರಿಗಣಿಸಬಹುದು. ಇದರಲ್ಲಿ ಬುದ್ಧ ವಜ್ರಪರ್ಯಂಕಾಸನದಲ್ಲಿ ಕುಳಿತಿದ್ದು ಬಲಗೈ ಅಭಯಮುದ್ರೆಯಲ್ಲಿ ಹಾಗೂ ಎಡಗೈ ತೊಡೆಯ ಮೇಲೆ ಇರಿಸಲ್ಪಟ್ಟಿದೆ. ವಸ್ತ್ರದ ನೆರಿಗೆಗಳ ವಿವರಗಳಿಗಿಂತ ಬುದ್ಧನ ದೈಹಿಕ ವಿವರಗಳಿಗೆ ಪ್ರಾಧಾನ್ಯ ನೀಡಿದೆ. ಸ್ತೂಪದ ಹರ್ಮಿಕಾ ಭಾಗದ ಮೇಲ್ಗಡೆ ಬುದ್ಧ ಕುಳಿತಿದ್ದು ಇವನ ಇಕ್ಕೆಲಗಳಲ್ಲಿ ಪ್ರತಿಹಾರರು ನಿಂತಿದ್ದಾರೆ. ಸ್ತೂಪದ ಕೆಳಗೆ ಕುಳಿತ ಸಿಂಹಗಳಿವೆ. ಸುತ್ತಲೂ ವೇದಿಕಾ ಬೇಲಿಯಿದೆ. ಈ ವಿಶಿಷ್ಟ ವಿಗ್ರಹವನ್ನು ಮೇರುಪರ್ವತವನ್ನು ಸಂಕೇತಿಸುವ ಸ್ತೂಪದ ಮೇಲೆ ಕುಳಿತಿರುವ ಬುದ್ಧನೆಂದು ಗುರುತಿಸಲ್ಪಟ್ಟಿದೆ. ಬೌದ್ಧರ ಕಲ್ಪನೆಯಲ್ಲಿ ಇದು ಎಲ್ಲ ಬುದ್ಧರ ಮತ್ತು ಬೋಧಿಸತ್ತ್ವರ ನಿರಂತರತೆ ಮತ್ತು ವಿಶ್ವವ್ಯಾಪಿ ಗುಣದ ಸೂಚಕವಾಗಿದೆ.

ಮಥುರದ ಕಟ್ರ ದಿಬ್ಬದಲ್ಲಿ ದೊರೆತ ಕುಳಿತ ಬುದ್ಧನ ವಿಗ್ರಹ ಕಪರ್ದಿನ್ ಬುದ್ಧ ಪ್ರತಿಮೆಗೆ ಅತ್ಯುತ್ತಮ ಉದಾಹರಣೆಯಾಗಿದೆ. ಈ ಶಿಲ್ಪದ ಮುಂಭಾಗ ವಿವರಪೂರ್ಣವಾಗಿದ್ದು ಹಿಂಭಾಗ ಚಪ್ಪಟೆಯಾಗಿದೆ. ಆ ಮಟ್ಟಿಗೆ ಇದು ಉಬ್ಬುಶಿಲ್ಪ. ಇಂತಹ ಅನೇಕ ವಿಗ್ರಹಗಳು ದೊರೆತಿವೆ. ಅಹಿಚ್ಛತ್ರದಲ್ಲಿ 32ನೆಯ ವರ್ಷದಲ್ಲಿ (ಪ್ರ.ಶ.ಸು.110) ನಿರ್ಮಿಸಿದ ಈ ಪ್ರಕಾರದ ವಿಗ್ರಹವಿದೆ. ಪ್ರತಿಮಾ ವಿವರಗಳು ನಿಂತ ವಿಗ್ರಹಗಳಿಗಿಂತ ಹೆಚ್ಚಾಗಿರುವುದರಿಂದ ಕುಳಿತ ಬುದ್ಧನ ವಿಗ್ರಹಗಳು ಗಮನೀಯವಾಗಿವೆ. ಬುದ್ಧನು ಯೋಗಿಯಂತೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಅವನ ಪಾದದಲ್ಲಿ ತ್ರಿರತ್ನ ಮತ್ತು ಧರ್ಮಚಕ್ರದ ಚಿಹ್ನೆಗಳಿವೆ. ಸಿಂಹಾಸನದ ಇಕ್ಕೆಲಗಳಲ್ಲಿ ಹೊರಮುಖವಾಗಿ ಕುಳಿತ ಸಿಂಹಗಳಿವೆ. ಮಧ್ಯದಲ್ಲಿ ಮುಮ್ಮುಖವಾಗಿ ಕುಳಿತ ಸಿಂಹವಿದೆ. ಬುದ್ಧನ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈ ಎಡ ತೊಡೆಯ ಮೇಲೆ ವಿಶಿಷ್ಟ ರೀತಿಯಲ್ಲಿ ಇರಿಸಲ್ಪಟ್ಟಿದೆ. ಮುಖಭಾವ ಅನಂತರದ ಮಥುರ ಪ್ರತಿಮೆಗಳ ಹಾಗಿಲ್ಲ, ಶಿರದಲ್ಲಿ ಬಸವನ ಹುಳುವಿನಂತೆ ಸುರುಳಿಯಾಗಿರುವ ಉಷ್ಣೀಶವಿದೆ. ಇದರಿಂದ ಈ ಶಿಲ್ಪ ಮಾದರಿಗೆ ಕಪರ್ದಿನ್ ಬುದ್ಧ ಎಂಬ ಹೆಸರು ಬಂದಿದೆ. ಕೂದಲನ್ನು ತಲೆಗೆ ತಾಗಿರುವ ಟೋಪಿಯಂತೆ ತೋರಿಸಿದೆ. ಹಣೆಯಲ್ಲಿ, ಹುಬ್ಬುಗಳ ನಡುವೆ ಊರ್ಣವೆಂದು ಕರೆಯಲಾಗುವ (ಕುಂಕುಮದ ಬೊಟ್ಟಿನಂತೆ ಕಾಣುವ) ಉಬ್ಬು ಇದೆ. ಕಣ್ಣು ಹುಬ್ಬುಗಳು ಕಣ್ಣಿನ ಪ್ರಮಾಣಕ್ಕೆ ಅಗಲವಾಗಿಲ್ಲ. ಹುಬ್ಬುಗಳು ಬಿಲ್ಲಿನಂತೆ ಬಾಗಿವೆ. ತುಟಿಗಳು ತುಸು ಅಂಟಿಕೊಂಡಿದ್ದು ವಿಶಿಷ್ಟ ನಗುವನ್ನು ತೋರಿಸಿರುವ ಈ ಬುದ್ಧನ ರೂಪದಲ್ಲಿ ಅಗಾಧ ಭೌತಿಕ ಶಕ್ತಿ ಪ್ರಕಟವಾಗಿದೆ. ಬುದ್ಧನ ಇಕ್ಕೆಲಗಳಲ್ಲಿ ಕಿರೀಟಧಾರಿಗಳಾಗಿ ಚಾಮರ ಧರಿಸಿ ನಿಂತಿರುವ ಪ್ರತಿಹಾರರಿದ್ದಾರೆ. ಸರಳ ವೃತ್ತಾಕಾರದ ಭಾಮಂಡಲಕ್ಕೆ ಅಂಚಿನ ಗುಂಟ ಅರ್ಧವೃತ್ತಗಳ ಅಲಂಕಾರವಿದೆ. ಹಿನ್ನೆಲೆಯಲ್ಲಿ ಬೋಧಿವೃಕ್ಷದ (ಅಶ್ವತ್ಥ ವೃಕ್ಷದ) ಶಾಖೆಗಳು ಹರಡಿವೆ. ಇಂತಹ ವಿಗ್ರಹಗಳನ್ನು ಶಾಸನಗಳಲ್ಲಿ ಸಾಮಾನ್ಯವಾಗಿ ಬೋಧಿಸತ್ತ್ವ ವಿಗ್ರಹಗಳೆಂದು ವರ್ಣಿಸಲಾಗಿದೆ.

ಮಥುರದ ನಿಂತ ಬುದ್ಧನ ವಿಗ್ರಹಗಳು ಮನುಷ್ಯ ಗಾತ್ರಕ್ಕಿಂತ ಹಿರಿದಾಗಿವೆ. ಇವುಗಳಲ್ಲಿ ಭಿಕ್ಷು ಬಲ ಶ್ರಾವಸ್ತಿಯಲ್ಲಿ ಪ್ರತಿಷ್ಠಾಪಿಸಿದ ಬುದ್ಧ ವಿಗ್ರಹ ಅತಿ ದೊಡ್ಡದಾಗಿದ್ದು ಸು.2.5 ಮೀ ಎತ್ತರವಿದೆ. ಇದರ ಮೇಲೆ ಪಾಶ್ಚಾತ್ಯ ಶೈಲಿಯ ಪ್ರಭಾವದ ಸುಳಿವಿಲ್ಲ. ಮುಂಚಿನ ಬಿಡಿ ಯಕ್ಷ ವಿಗ್ರಹಗಳಂತೆ ಮುಮ್ಮುಖದ ವಿವರಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. ಉತ್ತರ ಭಾರತದ ಯಕ್ಷ ವಿಗ್ರಹಗಳು ಗಾತ್ರದಿಂದ ಹಾಗೂ ದುಂಡು ರಚನೆಯಿಂದ ಪರಿಣಾಮಕಾರಿಯಾಗಿವೆ; ಆದರೆ ಮಥುರ ಬುದ್ಧ ವಿಗ್ರಹಗಳಲ್ಲಿ ಆಳದ ನಿರೂಪಣೆ ಹೆಚ್ಚಾಗಿರದೆ ಹಿಂಭಾಗ ಸಮತಟ್ಟಾಗಿದೆ. ಆದರೆ ವಿಶಾಲ ಭುಜ, ಎದ್ದುಕಾಣುವ ಎದೆ, ಆಳವಾದ ನಾಭಿಯಿಂದಾಗಿ ಅವು ಬಲಿಷ್ಠತೆಯನ್ನು ಚಿಮ್ಮುತ್ತವೆ. ಈ ವಿಗ್ರಹಗಳಲ್ಲಿ ಬುದ್ಧ ಕಾಲುಗಳನ್ನು ಅಗಲಿಸಿ ಸಮಪಾದದಲ್ಲಿ ನಿಂತಿರುತ್ತಾನೆ. ಕಾಲುಗಳು ಸೆಟೆದಂತೆ ಮಂಡಿ ಹಿಂದಕ್ಕೆ ಬಾಗಿರುತ್ತದೆ. ಪಾದಗಳ ಮಧ್ಯಂತರದಲ್ಲಿ ಸಾಮಾನ್ಯವಾಗಿ ಮುಮ್ಮುಖವಾಗಿ ಕುಳಿತ ಸಿಂಹ (ಶಾಕ್ಯಸಿಕ ಬುದ್ಧನೆಂದು ಅರುಹಲು) ಇಲ್ಲವೆ ಪದ್ಮವಿರುತ್ತದೆ. ಶಿರದಲ್ಲಿ ಬಸವನ ಹುಳುವಿನಂತೆ ಕಪರ್ದ ಸುರುಳಿಯಾಗಿರುವ ಉಷ್ಣೀಶವಿದೆ. ಹಣೆಯಲ್ಲಿ, ಹುಬ್ಬುಗಳ ನಡುವೆ ಊರ್ಣವಿದೆ. ಬಲ ಭುಜ ತೆರೆದುಕೊಂಡಿದ್ದು, ಸಂಘಾಟಿಯ (ಸನ್ಯಾಸಿಯ ಬಟ್ಟೆ) ಹಲವು ಮಡಿಕೆಗಳೊಂದಿಗೆ ಎಡ ಭುಜದ ಮೇಲೆ ಸಾಗಿದೆ. ಎಡಗೈ ಮಂಡಿಯ ಮೇಲಿರುತ್ತದೆ. ಬಲಗೈ ಅಭಯ ಹಸ್ತದಲ್ಲಿ ಮೇಲೆತ್ತಿದೆ. ಇಂತಹುದೇ ಇನ್ನೊಂದು ವಿಗ್ರಹವನ್ನು ಸಾರನಾಥದಲ್ಲಿ ಭಿಕ್ಷುಬಲ ನಿಲ್ಲಿಸಿದ. ಈ ಬುದ್ಧ ವಿಗ್ರಹಕ್ಕೆ ಎತ್ತರವಾದ ಸುಂದರ ಶಿಲ್ಪಾಲಂಕಾರವುಳ್ಳ ಛತ್ರಿಯೂ ಇತ್ತು.

ಇತರ ಪ್ರಸಿದ್ಧ ಬೌದ್ಧ ನೆಲೆಗಳಲ್ಲಿಯೂ ನಿಂತ ಬುದ್ಧನ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಉದಾಹರಣೆಗೆ ಕೌಶಾಂಬಿಯಲ್ಲಿ ಭಿಕ್ಷು ಬಲನ ಶಿಷ್ಯೆ ಭಿಕ್ಷುಣಿಯೊಬ್ಬಳು ಬುದ್ಧವಿಗ್ರಹವನ್ನು ಪ್ರತಿಷ್ಠಾಪಿಸಿದಳು. ಕೆಲವು ವಿಗ್ರಹಗಳನ್ನು ಸಾಮಾನ್ಯ ಬೌದ್ಧ ಉಪಾಸಕರು (ಸಾಮಾನ್ಯ ಅನುಯಾಯಿಗಳು) ಹಾಗೂ ಕ್ಷತ್ರಪರು ನಿಲ್ಲಿಸಿದ್ದಿದೆ. ಸಾರನಾಥದಲ್ಲಿ ಸ್ಥಳೀಯ ಕಲ್ಲಿನಲ್ಲಿ ಮಥುರ ಶೈಲಿಯ ಅನುಕರಣೆ ಕಾಣುತ್ತದೆ. ಚಿಕ್ಕಗಾತ್ರದ ಕುಳಿತ ಬುದ್ಧನ ವಿಗ್ರಹಗಳು ಅಹಿಚ್ಛತ್ರ, ಸಾಂಚಿ, ಚಾರ್ಸದ್ದವಲ್ಲದೆ (ತಕ್ಷಶಿಲ, ಪಾಕಿಸ್ತಾನ) ಬಂಗಾಲದವರೆಗೂ ದೊರೆತಿವೆ. ಇದು ಮಥುರ ವಿಗ್ರಹಗಳಿಗಿದ್ದ ಬೇಡಿಕೆಗೆ ಸಾಕ್ಷಿಯಾಗಿದೆ.

ದೊಡ್ಡಗಾತ್ರದ ನಿಂತಭಂಗಿಯಲ್ಲಿರುವ ಬೋಧಿಸತ್ತ್ವ ದುಂಡುಶಿಲ್ಪ ವಿಗ್ರಹಗಳೂ ಮಥುರ ಬೌದ್ಧ ಶಿಲ್ಪಗಳಲ್ಲಿ ಸೇರಿವೆ. ಈ ಬೋಧಿಸತ್ತ್ವ ಮೂರ್ತಿಗಳು ಕರ್ಣಕುಂಡಲ, ಕಂಠಹಾರ, ಬಳೆ ಮುಂತಾದ ಆಭರಣಗಳನ್ನು ಧರಿಸಿರುತ್ತವೆ. ಉತ್ತರೀಯ ಪೂರ್ತಿ ಎದೆಯನ್ನು ಪ್ರದರ್ಶಿಸುವಂತೆ ಎಡಭುಜದಿಂದ ಹಾಯ್ದು ಹಿಂದಿನಿಂದ ಮರಳಿ ಕೆಳ ಬಲಪಾರ್ಶ್ವದಿಂದ ಮೇಲೆದ್ದು ಸೊಂಟಮಟ್ಟದಲ್ಲಿ ಎಡ ಮುಂಗೈಯ ಆಧಾರದ ಮೇಲೆ ಇಳಿಬಿದ್ದಿರುತ್ತದೆ. ಕಾಲಮಂಡಿಗಿಂತ ಕೆಳಗಿಳಿದಿರುವ ಧೋತಿ ಮೈಗಂಟಿಕೊಂಡಿರುವಂತೆ ಭಾಸವಾಗುತ್ತದೆ. ಹರವಾದ ಎದೆ, ಅಗಲವಾದ ಭುಜ, ಆಳವಾದ ನಾಭಿ, ಕಾಲನ್ನಗಲಿಸಿ ಸೆಟೆದು ನಿಂತಿರುವ ರೀತಿ, ಇವೆಲ್ಲ ಬುದ್ಧ ಶಿಲ್ಪಗಳಲ್ಲಿರುವಂತೆಯೇ ಇದ್ದು ಆಂತರಿಕ ಶಕ್ತಿಯನ್ನು ಹೊರಹೊಮ್ಮುತ್ತವೆ.

ಅಂಡಾಕಾರದ ಮುಖ ಮಂದಸ್ಮಿತವಾಗಿದ್ದು ತಲೆಯ ಮೇಲೆ ಗುಂಗುರು ಕೂದಲುಗಳಿವೆ. ಬಲಗೈಯನ್ನು ಬುದ್ಧ ವಿಗ್ರಹದಲ್ಲಿರುವಂತೆ ಅಭಯಮುದ್ರೆಯಲ್ಲಿ ಎತ್ತಿಹಿಡಿದಿದೆ. ಎಡಗೈ ಕಮಂಡಲವನ್ನು ಹಿಡಿದಿದೆ. ದೊಡ್ಡ ವೃತ್ತಾಕಾರದ ಪ್ರಭಾಮಂಡಲವು ಬುದ್ಧ ಶಿಲ್ಪಗಳಲ್ಲಿರುವಂತೆಯೆ ಅಂಚಿನಗುಂಟ ಅರ್ಧವೃತ್ತಗಳ ಅಲಂಕಾರ ಹೊಂದಿದೆ. ಅಹಿಚ್ಛತ್ರದಲ್ಲಿ ದೊರೆತಿರುವ 2ನೆಯ ಶತಮಾನದ ಬೋಧಿಸತ್ತ್ವ ಮೈತ್ರೇಯನ ಶಿಲ್ಪ ಗಮನಾರ್ಹವಾಗಿದ್ದು ಇದರ ರೂಪಕರ್ಮ ಅದ್ಭುತವಾಗಿದೆ ಇಂತಹುದೇ ರೂಪಕರ್ಮವನ್ನು ನಾಗವಿಗ್ರಹಗಳಲ್ಲಿಯೂ ಕಾಣಬಹುದು. ಹಾರೀತಿ ಶಿಲ್ಪಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಈ ದೇವತೆ ಸಾಮಾನ್ಯವಾಗಿ ಮಣೆಯಮೇಲೆ, ಕೆಲವು ಸಲ ತನ್ನ ಪತಿ ಪಂಚಿಕನೊಂದಿಗೆ ಕುಳಿತಿರುತ್ತಾಳೆ.

ಬಹುಶಃ ಭಾರತದ ಮೊದಲ ಹಿಂದು ಪ್ರತಿಮೆಗಳು ಕುಷಾಣರ ಕಾಲದಲ್ಲಿ ಮಥುರದಲ್ಲಿ ಸೃಜಿತವಾದುವು. ಶೈವ ಮತ್ತು ವೈಷ್ಣವ ಪಂಥಗಳ ಏಳ್ಗೆಯೊಂದಿಗೆ ಇವು ಕಾಣಲಾರಂಬಿಸುತ್ತವೆ. ಸಾಮಾನ್ಯವಾಗಿ ಇವು ಚಿಕ್ಕಗಾತ್ರದವು. ಬೌದ್ಧ ಮತ್ತು ಜೈನ ವಿಗ್ರಹಗಳಿಗಿಂತ ಕಡಿಮೆ ಸಂಖ್ಯೆಯಲ್ಲಿವೆ. ಇವುಗಳಲ್ಲಿ ಏಕಮುಖ ಮತ್ತು ಚತುರ್ಮುಖ ಲಿಂಗಗಳು ಉಲ್ಲೇಖನೀಯ. ಇದರಂತೆ ದುರ್ಗಾಮಹಿಷಮರ್ಧಿನಿಯ ಶಿಲ್ಪಗಳೂ ಕಂಡುಬಂದಿವೆ. ಇವಲ್ಲದೆ ವರಾಹ, ಅರ್ಧನಾರೀಶ್ವರ, ಷಷ್ಠಿ ಮತ್ತು ಕಾರ್ತಿಕೇಯ ಶಿಲ್ಪಗಳೂ ಭಾಗವತ-ಪಾಂಚರಾತ್ರ ಪಂಥದ ವ್ಯೂಹ ಪರಿಕಲ್ಪನೆಯನ್ನು ಪ್ರತಿನಿಧಿಸುವ ಚತುರ್ಮುಖ ವಿಷ್ಣು ವಿಗ್ರಹಗಳೂ ಇವೆ. ಇವೆಲ್ಲ ಪ್ರತಿಮಾಲಕ್ಷಣ ರೂಪಣದ ಆದಿಮ ಹಂತದ ಪ್ರತಿನಿಧಿಗಳಾಗಿವೆ.

ಚೌಮುಖಿ ತೀರ್ಥಂಕರ ಸ್ತಂಭ

ಪಾಶ್ಚಾತ್ಯ ಸಂಪರ್ಕದಿಂದ ಪ್ರಭಾವಿತವಾದಂತೆ ತೋರುವ ಕೆಲವು ಶಿಲ್ಪಗಳನ್ನು ಗುರುತಿಸಬಹುದು. ಇವುಗಳಲ್ಲಿ ಪಾನಮತ್ತೆಯ ದೃಶ್ಯಗಳು ಉಲ್ಲೇಖನೀಯ. ಇವುಗಳನ್ನು ಲೌಕಿಕವೆಂದು ಪರಿಗಣಿಸಬಹುದು. ಇಂಥ ಒಂದು ದೃಶ್ಯದಲ್ಲಿ ಸ್ತ್ರೀಯೊಬ್ಬಳು ಪಾನಮತ್ತಳಾಗಿ ಕುಸಿದಿದ್ದು, ಕುಳ್ಳವ್ಯಕ್ತಿಯೊಬ್ಬ ಅವಳಿಗೆ ಆಧಾರವೊದಗಿಸಿದ್ದಾನೆ. ಅಕ್ಕಪಕ್ಕದಲ್ಲಿ ಒಬ್ಬ ಈ ಸ್ತ್ರೀಗೆ ಏಳಲು ಸಹಕರಿಸುತ್ತಿದ್ದರೆ ಇನ್ನೊಬ್ಬ ಆಶ್ಚರ್ಯಚಕಿತನಾಗಿ ನಿಂತಿದ್ದಾನೆ. ಈ ದೃಶ್ಯ ತಾಲವೃಕ್ಷದ ಕೆಳಗೆ ನಡೆದಿರುವಂತೆ ತೋರುತ್ತಿದೆ. ಈ ರೀತಿಯ ದೃಶ್ಯವುಳ್ಳ ಎಲ್ಲ ಶಿಲ್ಪಗಳೂ ದೇವಾಲಯ ಅಥವಾ ಸಂಘಾರಾಮಗಳಲ್ಲಿ ಬಹುಶಃ ಧಾನ್ಯ ಹಾಕಲು ಇರಿಸಲಾಗಿರುತ್ತಿದ್ದ ಪಾತ್ರೆಯ ಅವಿಭಾಜ್ಯ ಅಂಗಗಳೆಂಬುದು ಕುತೂಹಲಕಾರಿಯಾಗಿದೆ. ಹರ್ಕ್ಯುಲಸ್ ಮತ್ತು ನೇಮಿಯನ್ ಸಿಂಹ ದೃಶ್ಯಗಳು ಬಹುಶಃ ಪಾಶ್ಚಾತ್ಯ ಸಂಪರ್ಕದಿಂದ ಪ್ರೇರಿತವಾದ ಇನ್ನೊಂದು ಶಿಲ್ಪ ಪ್ರಕಾರ. ಇಂತಹ ಒಂದು ಶಿಲ್ಪದಲ್ಲಿ ಬೆತ್ತಲೆಯಾದ, ಸಿಂಹದ ಪಾದಗಳು ಗಂಟಿಕ್ಕಿರುವಂತಹ ಕಂಠಹಾರ ಧರಿಸಿರುವ ತರುಣನೊಬ್ಬ ಸಿಂಹದ ಕುತ್ತಿಗೆಯನ್ನು ಬಿಗಿಯಾಗಿ ಹಿಡಿದು ಅಶೋಕವೃಕ್ಷದ ಕೆಳಗೆ ನಿಂತಿರುವ ದೃಶ್ಯವಿದೆ.

ಇವಲ್ಲದೆ ಮಥುರದಲ್ಲಿ ಕುಷಾಣ ಅರಸರ ಮತ್ತು ರಾಜಕುವರರ ಅನೇಕ ವ್ಯಕ್ತಿಶಿಲ್ಪಗಳು ದೊರೆತಿವೆ. ಇವೆಲ್ಲವುಗಳಲ್ಲಿ ಸಿಥಿಯನ್ ವೇಷಭೂಷಣ ಎದ್ದು ಕಾಣುತ್ತದೆ. ಮಾಟ್ ಎಂಬಲ್ಲಿ ದೊರೆತಿರುವ ಕನಿಷ್ಕನ ಪ್ರತಿಮೆ ಇದಕ್ಕೆ ಉತ್ತಮ ಉದಾಹರಣೆ. ವಿಶಿಷ್ಟ ಒಳವಸ್ತ್ರ ಮತ್ತು ಕೋಟನ್ನು, ಕಾಲಿಗೆ ಬೂಟುಗಳನ್ನು ಧರಿಸಿರುವ ಈತ ಎಡಗೈಯಿಂದ ಸೊಂಟದಲ್ಲಿ ಕಟ್ಟಿರುವ ಖಡ್ಗವನ್ನು ಹಿಡಿದಿದ್ದು, ಬಲಗೈಯನ್ನು ಗದೆಯ ಮೇಲೆ ಇರಿಸಿದ್ದಾನೆ. ದುರದೃಷ್ಟವಶಾತ್ ರುಂಡ ಖಂಡವಾಗಿಹೋಗಿದೆ. ವಸ್ತ್ರದ ಮೇಲೆ ಬರೆದಿರುವ ಶಾಸನದಿಂದ ಇದು ಕನಿಷ್ಕನ ವಿಗ್ರಹವೆಂದು ಅರಿವಾಗುತ್ತದೆ.

ಮಥುರ ಶಿಲ್ಪಕಲಾ ಶೈಲಿಯು ಪ್ರಚಲಿತ ಶಕದ ಮೊದಲ ಶತಮಾನಗಳಲ್ಲಿ ಸ್ಪಷ್ಟ ರೀತಿಯಲ್ಲಿ ವಿಕಾಸ ಹೊಂದಿರುವುದು ಗೋಚರಿಸುತ್ತದೆ. ಈ ಕಲಾಶೈಲಿ ಭಾರತೀಯ ಕಲಾಪ್ರವಾಹದ ಮುಖ್ಯವಾಹಿನಿಯಲ್ಲಿದ್ದುದರಿಂದ ಕೆಲವು ಶಿಲ್ಪಗಳನ್ನು ಶುಂಗ-ಸಾತವಾಹನರ ಕಾಲದ್ದೆಂದು ಗುರುತಿಸಬಹುದು. ಕುಷಾಣರ ಕಾಲದ ಅನೇಕ ಬುದ್ಧವಿಗ್ರಹಗಳು ಕನಿಷ್ಕ ಪ್ರಾರಂಭಿಸಿದ ಶಕೆಯ 3 ನೆಯ ವರ್ಷದಿಂದ ಹಿಡಿದು 100 ವರ್ಷಗಳವರೆಗಿನ ಕಾಲೋಲ್ಲೇಖ ಹೊಂದಿವೆ. ಈ ಪುರಾವೆಯ ಹಿನ್ನಲೆಯಲ್ಲಿ ಪರಿಶೀಲಿಸಿದಾಗ ಮಥುರ ಕಲಾಶೈಲಿ ಸಾತವಾಹನರ ಅಂತ್ಯಕಾಲದ ಶಿಲ್ಪಕಲಾ ಪರಂಪರೆಯ ಆಧಾರದ ಮೇಲೆ ಸಂಪೂರ್ಣ ನೈಜತೆಯೊಂದಿಗೆ ಆರಂಭಗೊಂಡಿತೆಂದು ಹೇಳಬಹುದು. ಇದಕ್ಕೆ ಉದಾಹರಣೆಗಳಾಗಿ ಎರಡನೆಯ ಶತಮಾನದ ಪ್ರಾರಂಭ ಹಂತದ ಮನುಷ್ಯನ ರುಂಡ ಶಿಲ್ಪ ಮತ್ತು ತರುಣ ಋಷ್ಯಶೃಂಗನದೆಂದು ಭಾವಿಸಲಾಗುವ ಶಿಲ್ಪಗಳನ್ನು ಉಲ್ಲೇಖಿಸಬಹುದು. ಕ್ರಮೇಣ ಶಿಲ್ಪಗಳು ಶೈಲೀಕರಣದ ಹಾದಿ ಹಿಡಿದವು. ಗುಪ್ತರ ಕಾಲಕ್ಕೆ ಹತ್ತಿರ ಬಂದಂತೆ ಶೈಲೀಕೃತ ಶಿಲ್ಪಗಳ ಸಂಖ್ಯೆ ಹೆಚ್ಚಾಗುತ್ತದೆ. ಗಾಂಧಾರ ಶೈಲಿಯ ಕೆಲವು ಅಂಶಗಳು ಮಥುರ ಶೈಲಿಯಲ್ಲಿ ಮೇಳೈಸುತ್ತಿರುವುದು ಗೋಚರಿಸುತ್ತವೆ. ಇವು ಗುಪ್ತರ ಕಾಲದ ಶೈಲಿಯ ತತ್ತ್ವಗಳಿಗೆ ಬದ್ಧವಾಗಿ ಅಭಿವೃದ್ಧಿ ಹೊಂದಿ ಭಾರತೀಯ ಅಭಿಜಾತ ಶಿಲ್ಪಕಲಾ ಶೈಲಿಯ ಸ್ವರೂಪ ಪಡೆದವು.(ಎಸ್.ವಿ.ಪಿ.)

**ಮದುರೈ:** ತಮಿಳುನಾಡು ರಾಜ್ಯದ ಒಂದು ಜಿಲ್ಲೆ, ಕೈಗಾರಿಕಾ ನಗರ. ವೈಗೈ ನದಿಯ ಬಲದಂಡೆಯ ಮೇಲಿದೆ. ಉತ್ತರದಲ್ಲಿ ಪಳನಿ ಮತ್ತು ಸಿರುಮಲೈ ಬೆಟ್ಟಗಳೂ ದಕ್ಷಿಣದಲ್ಲಿ ವರುಸನಾದ ಮತ್ತು ಅಂಡಿಪತ್ತಿ ಬೆಟ್ಟಗಳೂ ಇವೆ. ಪಶ್ಚಿಮದಲ್ಲಿ ಜಿಲ್ಲೆಯ ಎಲ್ಲೆಯಾಗಿ ಪಶ್ಚಿಮ ಘಟ್ಟ ಮತ್ತು ಕಂಬಮ್ ಕಣಿವೆ ಇವೆ.ಭಾರತದ ಒಂದು ಪುರಾತನ ಹಾಗೂ ಪವಿತ್ರ ಯಾತ್ರಾಸ್ಥಳವೆಂದೂ ಇದು ಪ್ರಸಿದ್ಧ. ಪ್ರಾಗಿತಿಹಾಸದ ದೃಷ್ಟಿಯಿಂದ ಮದುರೈ ನಗರದ ಸುತ್ತಮುತ್ತಲಿನ ಪ್ರಮುಖ ಸ್ಥಳಗಳಿವು: ಸಮರ ಬೆಟ್ಟ (ಸವಣರ ಬೆಟ್ಟ), ಆನೆಮಲೈ, ತಿರುಪ್ಪರನ್ ಕುನ್ರಮ್, ಕೊಂಗರ್ ಪುಲಿಯಾಂಗುಲಮ್, ಅಳಗರ್‌ಮಲೈ ಮುಂತಾದ ಬೆಟ್ಟಗಳಲ್ಲಿ ಪ್ರಾಚೀನ ತಮಿಳು ಶಾಸನಗಳುಳ್ಳ ಗುಹೆಗಳಿವೆ. ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರ.ಶ.1ನೆಯ ಶತಮಾನದ ಅವಧಿಯಲ್ಲಿ ಈ ಶಾಸನಗಳು ಬರೆಯಲ್ಪಟ್ಟಿವೆ. ಅಲ್ಲಿ ಜೈನ ಸನ್ಯಾಸಿಗಳು ವಾಸಿಸುತ್ತಿದ್ದುದನ್ನೂ ಅವರಿಗೆ ವಣಿಕರು ದಾನಗಳನ್ನು ಕೊಟ್ಟಿದ್ದನ್ನೂ ಈ ಶಾಸನಗಳು ತಿಳಿಸುತ್ತವೆ. ಕೆಲವು ಗುಹೆಗಳಲ್ಲಿ ಜೈನತೀರ್ಥಂಕರ ಮೂರ್ತಿಗಳಿವೆ. ಸು.8ನೆಯ ಶತಮಾನದ ವಟ್ಟೆಳುತ್ತು ಲಿಪಿಯಲ್ಲಿ ಬರೆದ ಶಾಸನಗಳೂ ಇಲ್ಲಿವೆ.

ಇತಿಹಾಸ ಪ್ರಸಿದ್ಧ ಮದುರೈ ನಗರದ ಪ್ರಾಚೀನತೆಯನ್ನು ಸಂಗಮ್ ಕಾಲದ ತಮಿಳು ಕೃತಿಗಳ ಮೂಲಕ ಪ್ರ.ಶ.ದ ಪ್ರಾರಂಭದವರೆಗೂ ಗುರುತಿಸಬಹುದಾಗಿದೆ. ಆಗ ಇದು ಪಾಂಡ್ಯವಂಶದ ರಾಜರ ರಾಜಧಾನಿಯಾಗಿತ್ತು. ನೆಡುಂಚಳಿಯನ್ (150) ಮುಂತಾದ ಅನೇಕ ಶ್ರೇಷ್ಠ ರಾಜರು ಈ ನಗರನೆಲೆಯಿಂದಲೇ ರಾಜ್ಯವಾಳಿದರು. ಈ ಕಾಲದ ತಮಿಳು ಸಾಹಿತ್ಯದಲ್ಲಿ ಮದುರೈ ನಗರದ ನಗರಯೋಜನೆ, ಕೋಟೆಕೊತ್ತಳಗಳ ನಿರ್ಮಾಣ, ಅರಮನೆ, ಮಾರುಕಟ್ಟೆ ಇತ್ಯಾದಿಗಳ ವರ್ಣನೆಗಳು ಬಂದಿವೆ. ಆಗ ಇದು ಶ್ರೀಮಂತ ವ್ಯಾಪಾರಿಗಳಿಂದ ಮತ್ತು ರಾಜಸೌಧಗಳಿಂದ ತುಂಬಿದ ಸಂಪದ್ಭರಿತ ನಗರವಾಗಿತ್ತು. ಮದುರೈ-ಕಾಂಚಿ, ಪುರನಾನೂರು ಮತ್ತು ಪರಿಪಾಡಲ್ ಮುಂತಾದ ತಮಿಳು ಕೃತಿಗಳು ಮದುರೈ ನಗರದ ರಾಜಕೀಯ ಹಾಗೂ ಸಾಂಸ್ಕೃತಿಕ ಮಹತ್ತ್ವವನ್ನು ಉಲ್ಲೇಖಿಸುತ್ತವೆ. ಆಗ ಮದುರೈ ತಮಿಳಿನ ಒಂದು ಮಹಾವಿದ್ಯಾಕೇಂದ್ರವಾಗಿತ್ತು. ಪ್ರಾಚೀನ ಸಂಪ್ರದಾಯದಂತೆ ರಾಜರಿಂದ ಪೋಷಣೆ ಪಡೆದ ತಮಿಳು ಕವಿಗಳ, ತಮಿಳು ವಿದ್ವಾಂಸರ ಅಕಾಡೆಮಿ ಅಥವಾ ಸಂಘವೊಂದು ಅಲ್ಲಿತ್ತು. ಆ ಸಂಸ್ಥೆ ತಮಿಳು ಸಾಹಿತ್ಯದ ಉತ್ತಮ ಕೃತಿಗಳ ನಿರ್ಮಾಣಕ್ಕೆ ಅವಕಾಶವೊದಗಿಸುತ್ತಿತ್ತು. ಶಿಲಪ್ಪದಿಗಾರಮ್ ಹಾಗೂ ಮಣಿಮೇಖಲೈ ತಮಿಳು ಪೌರಾಣಿಕ ಮಹಾಕಾವ್ಯಗಳು ಮದುರೈ ನಗರದ ಸುಂದರ ವರ್ಣನೆಯನ್ನು ಒಳಗೊಂಡಿವೆ. ಶಿಲಪ್ಪದಿಗಾರಮ್ ಮಹಾಕಾವ್ಯದ ನಾಯಕ ಕೋವಲನ್‌ನನ್ನು ಪಾಂಡ್ಯ ಅರಸಿಯ ಕಂಕಣ ಕದ್ದನೆಂಬ ಆಪಾದನೆಯ ಮೇರೆಗೆ ಹಿಡಿದು ರಾಜಾಜ್ಞೆಯ ಪ್ರಕಾರ ತಲೆ ಕಡಿಯುತ್ತಾರೆ. ಕೋವಲನ ಹೆಂಡತಿ ಕನ್ನಗಿ. ತನ್ನ ಪತಿ ನಿರ್ದೋಷಿಯೆಂದು ಸಿದ್ಧಮಾಡುತ್ತಾಳೆ. ಆಗ ಮಹಾರಾಜ ನೆಡುಂಚಳಿಯನ್ ನಡೆದುಹೋದ ಅನ್ಯಾಯವನ್ನು ಅರಿತು ಮರಣಹೊಂದುತ್ತಾನೆ. ಅನಂತರ ಕನ್ನಗಿ ಮದುರೈ ಸುಟ್ಟು ಹೋಗಲಿ ಎಂದು ಶಾಪವಿತ್ತಳೆಂದು ಹೇಳಲಾಗುತ್ತದೆ. ಈ ಚಿತ್ತವೇದಕ ಘಟನೆಯೆ ಶಿಲಪ್ಪದಿಗಾರಮ್ ಕಾವ್ಯದ ಕಥಾಪ್ರಸಂಗ.

ಮದುರೈ ನಗರ ಪಾಂಡ್ಯರ ರಾಜಧಾನಿಯಾಗಿ ಮುಂದುವರಿಯಿತು. ಕಡಂಗೋವನ್ ವಂಶಸ್ಥ ಪಾಂಡ್ಯರಾಜರು 6-9ನೆಯ ಶತಮಾನದ ತನಕ ರಾಜಧಾನಿ ಮದುರೈನಿಂದಲೇ ರಾಜ್ಯವಾಳಿದರು. ಈ ಕಾಲವನ್ನು ಪಾಂಡ್ಯರ ಮೊದಲ ಯುಗವೆನ್ನುವರು. ಚೋಳ ಪರಾಂತಕ 10ನೆಯ ಶತಮಾನದ ಆರಂಭದಲ್ಲಿ ಈ ನಗರವನ್ನು ಜಯಿಸಿದ. ಇದರಿಂದ ಸ್ವಲ್ಪಕಾಲ ಮದುರೈ ಚೋಳರ ಆಧಿಪತ್ಯಕ್ಕೊಳಪಟ್ಟಿತ್ತು. 12ನೆಯ ಶತಮಾನದಲ್ಲಿ ಪಾಂಡ್ಯರು ಇದನ್ನು ಪುನಃ ಗೆದ್ದುಕೊಂಡು 1310ರ ತನಕ ಆಳಿದರು. ಈ ಅವಧಿಯನ್ನು ಪಾಂಡ್ಯರ ಎರಡನೆಯ ಯುಗವೆಂದು ಹೇಳುವರು. ಈ ಕಾಲದಲ್ಲಿ ಪಾಂಡ್ಯ ಸಾಮ್ರಾಜ್ಯ ದಕ್ಷಿಣ ಭಾರತದಲ್ಲಿಯ ಒಂದು ದೊಡ್ಡ ಸಾಮ್ರಾಜ್ಯವಾಗಿದ್ದು ಕನ್ಯಾಕುಮಾರಿಯಿಂದ ಆಂಧ್ರಪ್ರದೇಶದ ನೆಲ್ಲೂರಿನವರೆಗೆ ಹಬ್ಬಿತ್ತು. 14ನೆಯ ಶತಮಾನದಲ್ಲಿ ಪಾಂಡ್ಯ ಸಾಮ್ರಾಜ್ಯ ಹಾಗೂ ಮದುರೈ ನಗರ ಮುಸ್ಲಿಮರ ಧಾಳಿಗೆ ತುತ್ತಾದವು. 1310ರಲ್ಲಿ ಇಲ್ಲಿಗೆ ಬಂದ ಮಲ್ಲಿಕ್‌ಕಾಫರ್‌ನಿಂದ ಮೊದಲನೆಯ ಬಾರಿ ಮತ್ತು ತುಗಲಕ್‌ನಿಂದ ಎರಡನೆಯ ಬಾರಿ ಮದುರೈ ನಗರ ಹಾಳಾಯಿತು. 1335-71ರ ಮಧ್ಯಕಾಲದಲ್ಲಿ ಮದುರೈ ಸುಲ್ತಾನರು ಈ ನಗರವನ್ನು ಆಳಿದರು. 1370-

71ರಲ್ಲಿ ವಿಜಯನಗರದ ಸೇನಾನಾಯಕ ಕಂಪಣರಾಯ ಮದುರೈ ಸುಲ್ತಾನರನ್ನು ಸೋಲಿಸಿ ವಿಜಯನಗರದ ಆಧಿಪತ್ಯ ಸ್ಥಾಪಿಸಿದ. ಅಲ್ಲಿಂದ ಮುಂದೆ ಮದುರೈ ವಿಜಯನಗರದ ಮಾಂಡಲಿಕರ ಆಡಳಿತಕ್ಕೊಳಪಟ್ಟಿತು. ಅವರನ್ನು ಮದುರೈ ನಾಯಕರೆಂದು ಕರೆಯುತ್ತಾರೆ. ಅವರಲ್ಲಿ ತಿರುಮಲೈನಾಯಕರ್ (17ನೆಯ ಶತಮಾನ) ಬಲು ಪ್ರಸಿದ್ಧನಾದವನು. ಮುಂದೆ ಸ್ವಲ್ಪಕಾಲ ಮರಾಠ ಆಡಳಿತಕ್ಕೂ ಸೇರಿದ್ದು ಅನಂತರ ಸು.1736ರಲ್ಲಿ ಕರ್ನಾಟಕದ ನವಾಬನಿಗೆ ಸೇರಿತು. ಮುಂದೆ 1801ರಿಂದ ಬ್ರಿಟಿಷರ ಆಡಳಿತಕ್ಕೆ ಸೇರಿತು.

ಮೀನಾಕ್ಷಿ-ಸುಂದರೇಶ್ವರ ದೇವಸ್ಥಾನ

ಮದುರೈ ನಗರದಲ್ಲಿ ಅನೇಕ ಪುರಾತನ ದೇವಾಲಯಗಳಿವೆ. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಊರಿನ ಮಧ್ಯದಲ್ಲಿರುವ ಮೀನಾಕ್ಷಿ-ಸುಂದರೇಶ್ವರ ದೇವಸ್ಥಾನ. ಪ್ರಾಚೀನ ನಗರ ಈ ದೇವಾಯಲದ ಸುತ್ತಲೂ ಹಬ್ಬಿಕೊಂಡಿತ್ತು. ಹಲವು ದೇವಾಲಯಗಳ ಪ್ರಾಕಾರಗಳ ಮೂಲಕ ಇದೊಂದು ವಿಶಾಲವಾದ ದೇವಾಲಯಗಳ ಸಂಕೀರ್ಣ ಎನಿಸಿಕೊಂಡಿದೆ. ಈ ಸಂಕೀರ್ಣತೆ, ಹಲವು ಶತಮಾನಗಳಲ್ಲಿಯ ಬೆಳೆವಣಿಗೆಯಿಂದ ಉಂಟಾದುದು. ಶೈವ ಪುರಾತನರಾದ ಸಂಬಂದರ್ (7ನೆಯ ಶತಮಾನ) ಮತ್ತು ಸುಂದರರ್ (8ನೆಯ ಶತಮಾನ) ಅವರುಗಳು ಈ ದೇವಾಲಯವನ್ನೂ-ದೇವರನ್ನೂ ಕುರಿತು ಹಾಡಿದ್ದಾರೆ. ದೇವಸ್ಥಾನದ ಬೆಳೆವಣಿಗೆಯಲ್ಲಿ ಪಾಂಡ್ಯರು ಮತ್ತು ಮದುರೈ ನಾಯಕರು ವಿಶೇಷ ಭಾಗಿಗಳಾಗಿದ್ದಾರೆ. ಇಲ್ಲಿಯ ನಾಲ್ಕು ಸುಂದರ ಗೋಪುರಗಳು ದಕ್ಷಿಣಭಾರತದ ಗೋಪುರ ಪದ್ಧತಿಗೆ ಉದಾಹರಣೆಗಳು. ಇವುಗಳಲ್ಲಿ ಒಂದು 46 ಮೀ ಎತ್ತರವಿದೆ. ಇವು ಗಾರೆಯಲ್ಲಿ ಮಾಡಿದ ಶಿವಲೀಲೆಯ ಅನೇಕ ಚಿತ್ರಗಳನ್ನು ಹೊತ್ತು ನಿಂತಿವೆ. ಇಲ್ಲಿ ಪೂರ್ವ ಹಾಗೂ ಪಶ್ಚಿಮ ಗೋಪುರಗಳನ್ನು ಪಾಂಡ್ಯರ ಕಾಲಕ್ಕೂ ಉತ್ತರ ಹಾಗೂ ದಕ್ಷಿಣ ಗೋಪುರಗಳನ್ನು ಮದುರೈ ನಾಯಕರ ಕಾಲಕ್ಕೂ ಕಟ್ಟಲಾಗಿದೆ. ದೇವಸ್ಥಾನದ ಮಧ್ಯದ ಸಹಸ್ರಸ್ತಂಭದ ಮಂಟಪದಲ್ಲಿ ಅನೇಕ ಸುಂದರ ಶಿಲ್ಪಗಳಿವೆ. ದೇವಾಲಯದ ಪೂರ್ವಭಾಗದಲ್ಲಿರುವ ಹೊಸಮಂಟಪ ನಾಯಕರ ಕಾಲಕ್ಕೆ ಕಟ್ಟಿದ್ದು. ಈ ಮಂಟಪದಲ್ಲಿ ನಾಯಕರ ಮೂರ್ತಿಗಳನ್ನು ಇರಿಸಿದ್ದಾರೆ.

ವಿಷ್ಣುವಿಗೆಂದೇ ಮೀಸಲಾದ ಕೂಡಲ್ ಅಳಗರ್ ದೇವಾಲಯ ಮದುರೈ ನಗರದ ಇನ್ನೊಂದು ಪುರಾತನ ದೇವಸ್ಥಾನ. ಶಿಲ್ಪಸೌಂದರ್ಯದ ಪ್ರತೀಕವಾಗಿ ಇಲ್ಲಿ ಒಂದು ಅಷ್ಟಾಂಗ ವಿಮಾನವಿದೆ.

ತಿರುಮಲನಾಯಕನ ಕಾಲದಲ್ಲಿ ಕಟ್ಟಿದ ಆತನ ಅರಮನೆ (1623) ಈಗಲೂ ಸುಸ್ಥಿತಿಯಲ್ಲಿದೆ. ಇದರಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಪದ್ಧತಿಗಳ ಸಮ್ಮಿಶ್ರಣ ಶೈಲಿಯನ್ನು ಕಾಣಬಹುದು. ಈ ಅರಮನೆಯ ಮಧ್ಯದಲ್ಲಿ ಸುತ್ತಲೂ ಚಾವಣಿಯಿಂದ ಕೂಡಿದ ಕಮಾನುಗಳುಳ್ಳ ದೊಡ್ಡ ಬಯಲು ಮಂದಿರವಿದೆ. ಇಲ್ಲಿ ಗಾರೆಯಲ್ಲಿ ಮಾಡಿರುವ ಆಲಂಕಾರಿಕ ವಾಸ್ತು ಕೆಲಸ ಗಣನೀಯವಾದದ್ದಾಗಿದೆ. ನಗರದ ಉತ್ತರದ ಅಂಚಿನಲ್ಲಿರುವ ರಾಣಿಮಂಗಮ್ಮಾಳ್ ಅರಮನೆ ಇನ್ನೊಂದು ಮುಖ್ಯ ಕಟ್ಟಡ. ಈಗ ಇಲ್ಲಿ ಗಾಂಧಿ ಸ್ಮಾರಕಗಳನ್ನು ಸಂಗ್ರಹಿಸಿಡಲಾಗಿದೆ. (ಕೆ.ವಿ.ಆರ್.ಎ.)

**ಮಧುಸೂದನ ನರಹರಿ ದೇಶಪಾಂಡೆ:** 1920-2008. ಶ್ರೇಷ್ಠ ಪುರಾತತ್ತ್ವಜ್ಞ. ಮಧುಸೂದನ ನರಹರಿ ದೇಶಪಾಂಡೆ 1920 ನವೆಂಬರ್ 11ರಂದು ಮಹಾರಾಷ್ಟ್ರದ ಸತಾರ ಜಿಲ್ಲೆಯ ರಹಿಮತ್‌ಪುರದಲ್ಲಿ ಜನಿಸಿದರು. 1942ರಲ್ಲಿ ಪುಣೆಯ ಫರ್ಗ್ಯೂಸನ್ ಕಾಲೇಜಿನಿಂದ ಅರ್ಧ ಮಾಗಧಿಯಲ್ಲಿ ಪ್ರಥಮ ದರ್ಜೆಯಲ್ಲಿ ಬಿ.ಎ. (ಆನರ್ಸ್) ಪದವಿಯನ್ನು ಪಡೆದರು. ಹೆಚ್.ಡಿ.ಸಾಂಕಳಿಯ ಅವರ ಮಾರ್ಗದರ್ಶನದಲ್ಲಿ ದಿ ಕಲ್ಚರಲ್ ಹಿಸ್ಟರಿ ಆಫ್ ಇಂಡಿಯ ಬೇಸ್ಡ್ ಆನ್ ಜೈನ ಕ್ಯನಾನಿಕಲ್ ಲಿಟರೇಚರ್ ಅಂಡ್ ಆರ್ಕಿಯಾಲಜಿ ಎಂಬ ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆಕೈಗೊಂಡರು. ಆಗ ಇವರಿಗೆ ತಕ್ಷಶಿಲೆಯಲ್ಲಿ ಆಗಿನ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರಾಗಿದ್ದ ಸರ್ ಮಾರ್ಟಿಮರ್ ವೀಲರ್ ಯುವ ಪುರಾತತ್ತ್ವ ವಿಭಾಗದಲ್ಲಿ ಇತಿಹಾಸದ ಪುರಾತತ್ತ್ವ ಶಾಸ್ತ್ರದಲ್ಲಿ ತರಬೇತಿಯನ್ನು ನೀಡಲು ಆರಂಭಿಸಿದ ಸ್ಕೂಲ್ ಆಫ್ ಆರ್ಕಿಯಾಲಜಿ ಸೇರಿಕೊಳ್ಳುವ ಸದವಕಾಶ ದೊರಕಿತು. ಅದರಲ್ಲಿ ಹಿರಿಯ ತರಬೇತಿ ಪಡೆಯುತ್ತಿದ್ದ ಹಿರಿಯ ವರ್ಗದವರಿಗೆ ಮುಖ್ಯಸ್ಥರಾಗಿದ್ದರು. 1946ರಲ್ಲಿ ಪುರಾತತ್ತ್ವ ಸರ್ವೇಕ್ಷಣ ಇಲಾಖೆಗೆ ಸಹಾಯಕ ಸರ್ವೇಕ್ಷಣ ಅಧಿಕಾರಿಯಾಗಿ ಸೇರಿಕೊಂಡು ಈ ಇಲಾಖೆಯ ಅತ್ಯಂತ ಉಚ್ಚ ಸ್ಥಾನವಾದ ಮಹಾನಿರ್ದೇಶಕರಾಗಿ 1978ರಲ್ಲಿ ನಿವೃತ್ತರಾದರು. ಈ ಅವಧಿಯಲ್ಲಿ ಪರದೇಶಗಳಿಗೆ ಮಹತ್ವದ ಪುರಾತತ್ತ್ವ ಅವಶೇಷಗಳ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟುವ ಕಾರ್ಯದಲ್ಲಿ ಇವರ ಪಾತ್ರ ಮಹತ್ವದ್ದು. ಇವರ ಪ್ರಯತ್ನಗಳಿಂದ ಆ್ಯಂಟಿಕ್ವಿಟಿಸ್ ಅಂಡ್ ಟ್ರೆಷರ್ ಟ್ರೋವ್ ಆಕ್ಟ್, 1972 ಇದರನ್ವಯ ಹಲವಾರು ಅಪರೂಪದ ಮೂರ್ತಿಗಳನ್ನು ವಾಪಸ್ಸು ಪಡೆಯಲು ಸಾಧ್ಯವಾಯಿತು.

ಇವರು ಪಶ್ಚಿಮ ಭಾರತದ ಗುಹಾಲಯಗಳ ವಿಷಯದಲ್ಲಿ ನಿಷ್ಣಾತರು. ಈ ವಿಷಯದಲ್ಲಿ ಹಲವಾರು ಸಂಶೋಧನ ಪತ್ರಿಕೆಗಳಲ್ಲದೆ ಪನ್ಹಾಳೆ ರಾಜ, ಪಿತಲ್ಖೋರಗಳಲ್ಲಿಯ ಗುಹಾಲಯಗಳ ಬಗ್ಗೆ ಪುಸ್ತಕ ಮತ್ತು ದೀರ್ಘ ಲೇಖನ ಪ್ರಕಟವಾಗಿವೆ. ನೆವಾಸ, ಬಹಾಳ್, ಟೇಕವಾಡ, ದೈಮಾಬಾದ್ ಮೊದಲಾದ ತಾಮ್ರ-ಶಿಲಾಯುಗ ನೆಲೆಗಳನ್ನು, ಪಶ್ಚಿಮ ಬಂಗಾಲದ ಮಹತ್ವದ ಆದಿ ಇತಿಹಾಸ ಕಾಲದ ತಾಮಲುಕ್ ನೆಲೆಯನ್ನು, ಪಂಜಾಬಿನಲ್ಲಿಯ ಅಂಬಕೇರಿಯಲ್ಲಿಯ ಹರಪ್ಪ ಪೂರ್ವ ಹಾಗು ಅಂತ್ಯ ಹರಪ್ಪ ಸಂಸ್ಕೃತಿಯ ನೆಲೆಯನ್ನು ಉತ್ಖನನ ಮಾಡಿದರು. ಇವರು ಲಹುಲ್-ಸ್ಪಿತಿ ಕಣಿವೆಯ ಸಂಶೋಧನ ತಂಡದ ನಾಯಕರಾಗಿ ತಬೊ ಬೌದ್ಧ ವಿಹಾರದಲ್ಲಿಯ ಮಧ್ಯಯುಗಿನ ಕಾಲದ ಭಿತ್ತಿ ವರ್ಣಚಿತ್ರಗಳನ್ನು ಶೋಧಿಸಿದರು. ಇವರೊಬ್ಬ ಅತ್ಯುತ್ತಮ ಸಂರಕ್ಷಣ ತಜ್ಞರಾಗಿದ್ದರು. ಇವರು ಕೈಗೊಂಡ ಕೋಣಾರ್ಕ್-ಪುರಿ ದೇವಾಲಯಗಳ ಹಾಗೂ ಬಾಮಿಯನ್‌ನ ಬೃಹತ್ ಬೌದ್ಧ ಶಿಲ್ಪಗಳ ಸಂರಕ್ಷಣೆಯ ಕಾರ್ಯವನ್ನು ವಿಶೇಷವಾಗಿ ಉಲ್ಲೇಖಿಸಲಾಗಿದೆ. (ಎ.ಎಸ್.)

**ಮಧ್ಯಹಳೆಶಿಲಾಯುಗ ಸಂಸ್ಕೃತಿ:** ಯುರೋಪ್, ಆಫ್ರಿಕ ಮತ್ತು ಏಷ್ಯ ಖಂಡಗಳಲ್ಲಿ ಹಳೆಶಿಲಾಯುಗದ ಎರಡನೆಯ ಹಂತ. ಆದಿ ಮತ್ತು ಅಂತ್ಯ ಹಳೆಶಿಲಾಯುಗದ ನಡುವೆ ಅಸ್ತಿತ್ವದಲ್ಲಿದ್ದ ಈ ಹಂತವನ್ನು ಇಂದಿನಿಂದ 3,00,000 ದಿಂದ 30,000ದ ವರ್ಷಗಳ ಹಿಂದಿನ ಕಾಲಾವಧಿಯಲ್ಲಿ ಗುರುತಿಸಲಾಗಿದೆ.

**ಪ್ರಪಂಚ:** ಮಧ್ಯಹಳೆಶಿಲಾಯುಗ ಸಂಸ್ಕೃತಿ ಹೋಮೋ ನಿಯಾಂಡರ್ಥಲ್ ಮಾನವ ವಂಶಕ್ಕೆ ಸೇರಿದ್ದು. ಈ ಮಾನವ ಪೂರ್ವಜರು ತಮ್ಮ ಸುತ್ತಮುತ್ತಲಿನ ನೈಸರ್ಗಿಕ ಪರಿಸರವನ್ನು ತಕ್ಕಮಟ್ಟಿಗೆ ತಿಳಿದವರಾಗಿದ್ದರು. ಇವರು ಹೆಚ್ಚಾಗಿ ಗುಹೆಗಳಲ್ಲಿ ವಾಸಿಸುತ್ತಿದ್ದರು. ಬೇಟೆ ಇವರ ಪ್ರಧಾನ ಆಹಾರ ಮಾರ್ಗವಾಗಿತ್ತು. ಜೊತೆಗೆ ಕಪ್ಪೆಚಿಪ್ಪುಗಳನ್ನು ಆಹಾರಕ್ಕಾಗಿ ಬಳಸುವುದನ್ನು ಇವರು ತಿಳಿದುಕೊಂಡರು. ಮಾಂಸವನ್ನು ಬೇಯಿಸಿ ಸಂರಕ್ಷಿಸುವ ವಿಧಾನವೂ ಇವರಿಗೆ ತಿಳಿದಿದ್ದಿರಬಹುದು. ಏಕೆಂದರೆ ಸುಮಾರು ಎಂಟುಲಕ್ಷ ವರ್ಷಗಳಷ್ಟು ಹಿಂದೆಯೇ ಬೆಂಕಿಯ ನಿಯಂತ್ರಣ ತಿಳಿದಿತ್ತು ಎಂಬುದಕ್ಕೆ ಕುರುಹುಗಳಿವೆ. ಮಧ್ಯಹಳೆಶಿಲಾಯುಗ ಸಂಸ್ಕೃತಿಯ ವಿಶಿಷ್ಟ ಲಕ್ಷಣ ಕಲ್ಲುಚಕ್ಕೆಯ ಉಪಕರಣಗಳು. ಹದವರಿತ ನಿಯಂತ್ರಣದಿಂದ ಮೂಲಶಿಲೆಯಿಂದ ಚಕ್ಕೆಗಳನ್ನು ತೆಗೆಯುವ ತಂತ್ರವೊಂದನ್ನು ಈ ಆದಿಮಾನವರು ಕಂಡುಕೊಂಡರು. ಕೆಲವು ಬಗೆಯ ಉಪಕರಣಗಳನ್ನು ಮರ ಅಥವಾ ಮೂಳೆಯ ಹಿಡಿಕೆಗೆ ಸಿಕ್ಕಿಸಿ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸುವ ತಂತ್ರವನ್ನು ಇವರು ಬೆಳೆಸಿಕೊಂಡರು. ಕಲೆಯ ಅಭಿವ್ಯಕ್ತಿ ಮೊಟ್ಟಮೊದಲ ಬಾರಿಗೆ ಈ ಹಂತದಲ್ಲಿ ಕಾಣಿಸಿಕೊಂಡಿತು. ಈ ಹಂತಕ್ಕೆ ಸೇರಬಹುದಾದ ಬಂಡೆಯ ಮೇಲಿನ ಕೆಲವು ವರ್ಣಚಿತ್ರಗಳು ಕಂಡುಬಂದಿವೆ. ಕಾವಿಕಲ್ಲನ್ನು ಅರೆದು ಅದರ ಬಣ್ಣವನ್ನು ಶರೀರಕ್ಕೆ ಲೇಪಿಸುವ ಸಂಪ್ರದಾಯ ಇವರಲ್ಲಿತ್ತು. ಹೆಣವನ್ನು ಹೂಳುವ ಆಚರಣೆಯನ್ನು ಇವರು ಮೊದಲ ಬಾರಿಗೆ ರೂಢಿಗೆ ತಂದರು. ಪ್ರಥಮಬಾರಿಗೆ ಈ ಗುಂಪುಗಳು ಹಿಮರಹಿತ ವಲಯಗಳನ್ನು ಪ್ರವೇಶಿಸಿ ಅಲ್ಲಿ ನೆಲೆಯೂರಿದವು.

ಈ ಆದಿಮಾನವರ ಪಳೆಯುಳಿಕೆಗಳು ಯುರೋಪಿನ ನಿಯಾಂಡರ್ಥಲ್ ಎಂಬ ನೆಲೆಯಲ್ಲಿ ಮೊದಲು ಕಂಡುಹಿಡಿಯಲ್ಪಟ್ಟವು. ಅನಂತರ ಆಫ್ರಿಕ, ಉಜ್ಬೆಕಿಸ್ತಾನ, ಜಾವ ಮೊದಲಾದ ಪ್ರದೇಶಗಳಲ್ಲಿ ಇವು ಬೆಳಕಿಗೆ ಬಂದವು. ಈ ಜಾತಿಯಲ್ಲಿ ಎರಡು ಪ್ರಭೇದಗಳಿವೆ. ಯುರೋಪಿನಲ್ಲಿ ಸಿಕ್ಕಿರುವ ಪಳೆಯುಳಿಕೆಗಳು ದೊಡ್ಡ ತಲೆ, ಇಳಿಜಾರಾದ ಹಣೆ, ಉಬ್ಬಿದ ಹುಬ್ಬು, ಹಿಂದೆ ಸರಿದ ಗಲ್ಲ, ಗಟ್ಟಿಮುಟ್ಟಾದ ಬಾಯಿ-ದವಡೆಯ ಮುಖರಚನೆ ಮುಂತಾದ ಲಕ್ಷಣಗಳುಳ್ಳ ಆದಿಮಾನವರದ್ದು. ಇವರು ಆಕಾರದಲ್ಲಿ ಕುಳ್ಳು ಆದರೆ ದಡೂತಿ ದೇಹದವರು. ಹಳೆ ವಿಶ್ವದ ಉಳಿದೆಲ್ಲ ಭಾಗಗಳಲ್ಲಿ ಸಿಕ್ಕಿರುವ ಸಾಮಾನ್ಯ ಪ್ರಭೇದಕ್ಕೆ ಸೇರುವ ಪಳೆಯುಳಿಕೆಗಳು ಉಬ್ಬಿದ ಹುಬ್ಬು - ಹಿಂದೆ ಸರಿದ ಗಲ್ಲವಿದ್ದರೂ ಆಧುನಿಕ ಮಾನವನ ಮುಖಚರ್ಯೆಯನ್ನು ಬಹುಮಟ್ಟಿಗೆ ಹೋಲುವ ಆದಿಮಾನವರದ್ದು.

ಫ್ರಾನ್ಸಿನ ಲ ಮೌಸ್ಟೀರಿಯನ್ ಎಂಬ ಶಿಲಾಶ್ರಯದಲ್ಲಿ ಈ ಸಂಸ್ಕೃತಿಯ ಉಪಕರಣಗಳು ಬೆಳಕಿಗೆ ಬಂದ ಕಾರಣ ಈ ಉಪಕರಣ ತಂತ್ರಜ್ಞಾನವನ್ನು ಮೌಸ್ಟೀರಿಯನ್ ಎಂದು ಹೆಸರಿಸಲಾಗಿದೆ. ಪ್ರಾದೇಶಿಕ ಗುಣಲಕ್ಷಣಗಳನ್ನು ತೋರುವ ಈ ತಂತ್ರಜ್ಞಾನ ಯುರೇಷಿಯ, ಉತ್ತರ ಆಫ್ರಿಕ ಮತ್ತು ಪ್ರಾಚ್ಯದೇಶಗಳಲ್ಲಿ ಕಂಡುಬಂದಿದೆ. ಅತಿ ಪ್ರಾಚೀನ ಮೌಸ್ಟೀರಿಯನ್ ಸಮುಚ್ಚಯವು ರಿಸ್ ಹಿಮಘಟ್ಟದ ಅವಧಿಗೆ (1,80,000 - 1,30,000 ವರ್ಷಹಿಂದೆ) ಸೇರುತ್ತದೆ. ಆದರೆ ಇಂತಹ ಸಮುಚ್ಚಯಗಳು ಅಧಿಕವಾಗಿ ಕಂಡುಬರುವುದು ಕೊನೆಯ ಹಿಮಘಟ್ಟ ವೂರ್ಮ್‌ನ (70,000-10,000 ವರ್ಷಹಿಂದೆ) ಆರಂಭಿಕ ಹಂತದಲ್ಲಿ.

ಮೌಸ್ಟೀರಿಯನ್ ತಂತ್ರದಲ್ಲಿ ಬಿಲ್ಲೆಯಾಕಾರದಲ್ಲಿ ಸಿದ್ಧಪಡಿಸಿಕೊಂಡ ಚಿಕ್ಕ ಶಿಲಾಗಟ್ಟಿಯಿಂದ ಚಕ್ಕೆಗಳನ್ನು ತೆಗೆಯಲಾಗುತ್ತದೆ. ವಿವಿಧ ಬಗೆಯ ಹೆರೆಚಕ್ಕೆ ಮತ್ತು ಮೊನೆಗಳು ಮೌಸ್ಟೀರಿಯನ್ ಸಮುಚ್ಚಯದ ವಿಶಿಷ್ಟ ಉಪಕರಣಗಳು. ಲೆವಾಲ್ವ ತಂತ್ರ ಈ ಸಂಸ್ಕೃತಿಯ ಮತ್ತೊಂದು ಪ್ರಮುಖ ಶಿಲೋಪಕರಣ ತಯಾರಿಕೆ ವಿಧಾನ. ಈ ತಂತ್ರ ಹಿಮಯುಗದ ಕೊನೆಯ ಹಂತದಲ್ಲಿ ಬಳಕೆಗೆ ಬಂದಿತು. ಇದು ದಕ್ಷಿಣ ಮತ್ತು ಪೂರ್ವ ಮೆಡಿಟರೇನಿಯನ್ ಪ್ರದೇಶ, ಉತ್ತರ ಆಫ್ರಿಕ, ಲೆವಂಟ್ (ಟರ್ಕಿ ಮತ್ತು ನೆರೆಹೊರೆಯ ದೇಶಗಳು), ಇರಾಕ್, ಇರಾನ್ ಮತ್ತು ಪಶ್ಚಿಮ ಏಷ್ಯದಲ್ಲಿ ಪ್ರಚಲಿತವಾಗಿತ್ತು. ಫ್ರಾನ್ಸಿನ ಲೆವಾಲ್ವ ಎಂಬ ನೆಲೆಯಲ್ಲಿ ಈ ತಂತ್ರದಿಂದ ಮಾಡಲಾದ ಚಕ್ಕೆಗಳು ಹಾಗೂ ಆಮೆಯಾಕಾರದ ತಿರುಳುಗಳು ಮೊದಲಬಾರಿಗೆ ಕಂಡುಬಂದವು.

**ಯುರೋಪ್:** ರಿಸ್ ಹಿಮಘಟ್ಟಕ್ಕೆ ಸೇರುವ ನೆಲೆಗಳು ಯುರೋಪಿನ ತಂಡ್ರಾವಲಯದಲ್ಲಿ ಕಂಡುಬಂದಿವೆ. ದಕ್ಷಿಣ ಇಂಗ್ಲೆಂಡಿನಲ್ಲಿರುವ ಎಬ್ಸ್‌ಫ್ಲೀಟ್ ಮತ್ತು ಬೇಕರ್ಸ್ ಹೋಲ್ ಹಾಗೂ ಪೂರ್ವ ಜರ್ಮನಿಯಲ್ಲಿರುವ ಮಾರ್ಕ್ಲೀಬರ್ಗ್ ಹೆಸರಿಸಬಹುದಾದ ನೆಲೆಗಳು. ಈ ನೆಲೆಗಳಲ್ಲಿನ ತಂತ್ರಜ್ಞಾನ ಲೆವಾಲ್ವ ವಿಧಾನವನ್ನು ಆಧರಿಸಿದ್ದು. ರಿಸ್ ಹಿಮಘಟ್ಟದ ಅವಧಿಯಲ್ಲಿ ಗುಹಾವಾಸ ಪ್ರಾರಂಭಗೊಂಡಿರುವುದು ಫ್ರಾನ್ಸಿನ ಲ ಬಾಮ್ ಬೋನ್ ಮತ್ತು ಲ ಚೇಸ್ ಗುಹೆಗಳಲ್ಲಿ ಮತ್ತು ಆಗ್ನೇಯ ಇಟಲಿಯ ಗ್ರೊಟ್ಟ ಪಗ್ಲಿಚ್ಚಿಯ ಕಲ್ಲಾಸರೆಗಳಲ್ಲಿ ದೊರೆತಿರುವ ಉಪಕರಣ ಸಮುಚ್ಚಯಗಳಿಂದ ಸ್ಪಷ್ಟವಾಗಿದೆ. ವೂರ್ಮ್ ಹಿಮಘಟ್ಟದ ವೇಳೆಗೆ ಗುಹೆಯಲ್ಲಿ ವಾಸಿಸುವುದು ಸಾಮಾನ್ಯವಾಯಿತು. ಬೆಂಕಿಯ ಉಪಯೋಗ ಪ್ರಾಯಶಃ ತಿಳಿದಿದ್ದರಿಂದ ಗುಹೆಗಳಲ್ಲಿ ದೀರ್ಘಕಾಲ ನೆಲೆಸುವುದು ಮತ್ತು ತಂಡ್ರಾದಂತಹ ವಲಯದಲ್ಲಿ ವಾಸಿಸುವುದು ಸಾಧ್ಯವಾಯಿತು. ಲ ಫ್ಲೆರೇಸಿ ಎಂಬ ಗುಹೆಯಲ್ಲಿ ಆದಿಮಾನವರ ಸರಳ ಗೋರಿಗಳು ಕಂಡುಬಂದಿವೆ.



ಶಿಲೋಪಕರಣಗಳು

ಯುರೋಪಿನ ಮೌಸ್ಟೀರಿಯನ್ ಸಮುಚ್ಚಯಗಳಲ್ಲಿ ಪ್ರಾದೇಶಿಕ ವೈವಿಧ್ಯತೆಯಿದೆ. ಉದಾ: ಪಶ್ಚಿಮ ಯುರೋಪಿನ ಸಮುಚ್ಚಯಗಳಲ್ಲಿ ಕುಶಲತೆಯಿಂದ ತಯಾರಿಸಿದ ತ್ರಿಕೋನ ಅಥವ ಅಂಡಾಕಾರದ ಸಣ್ಣ ಕೈಗೊಡಲಿಗಳು ಸಾಮಾನ್ಯವಾಗಿವೆ. ಆದರೆ ದಕ್ಷಿಣ ಫ್ರಾನ್ಸ್, ಇಟಲಿ ಮತ್ತು ಮಧ್ಯ ಯುರೋಪಿನಲ್ಲಿ ಸಣ್ಣಸಣ್ಣ ಚಕ್ಕೆಗಳಿಂದ ರೂಪುಗೊಂಡ ಹೆರೆಚಕ್ಕೆ, ಮೊನೆ ಮೊದಲಾದ ಉಪಕರಣಗಳು ಪ್ರಧಾನವಾಗಿವೆ; ಈ ಸಮುಚ್ಚಯಗಳಲ್ಲಿ ಕೈಗೊಡಲಿಗಳು ಅತಿವಿರಳ. ಮೌಸ್ಟೀರಿಯನ್ ತಂತ್ರಜ್ಞಾನಕ್ಕೆ ಸೇರುವ ಆದರೆ ಭಿನ್ನ ಸ್ವರೂಪಗಳುಳ್ಳ ಐದು ಪ್ರಕಾರದ ಸಮುಚ್ಚಯಗಳಿವೆ. ಇವನ್ನು ಪ್ರಾತಿನಿಧಿಕ ಮೌಸ್ಟೀರಿಯನ್, ಫ್ಲೆರೇಸಿ ಮೌಸ್ಟೀರಿಯನ್, ಕ್ವಿನ ಮೌಸ್ಟೀರಿಯನ್, ಅಶೂಲಿಯನ್ ಸಂಪ್ರದಾಯಸಹಿತವಾದ ಮೌಸ್ಟೀರಿಯನ್ ಮತ್ತು ಗರಗಸದಂತೆ ಸಣ್ಣಹಲ್ಲುಳ್ಳ ಉಪಕರಣ ಪ್ರಧಾನವಾದ ಮೌಸ್ಟೀರಿಯನ್ ಎಂದು ಹೆಸರಿಸಲಾಗಿದೆ. ಇವೆಲ್ಲ ಸಮುಚ್ಚಯಗಳಲ್ಲೂ ಮೌಸ್ಟೀರಿಯನ್ ಮಾದರಿಯ ಮೂಲಶಿಲಾಗಟ್ಟಿಗಳು, ಚಕ್ಕೆ ಉಪಕರಣಗಳು, ವಿಶೇಷವಾಗಿ ಹೆರೆಚಕ್ಕೆಗಳು ಸಾಮಾನ್ಯವಾಗಿವೆ. ಆದರೆ ಪ್ರತಿಯೊಂದು ಸಮುಚ್ಚಯದಲ್ಲಿ ಭಿನ್ನತೆಯಿದೆ. ಸಮುಚ್ಚಯದಲ್ಲಿ ಕೆಲವೊಂದು ಉಪಕರಣಗಳು ಇರುವುದು ಅಥವ ಇಲ್ಲದಿರುವುದು ಈ ಭಿನ್ನತೆಗೆ ಕಾರಣವಾಗಿದೆ. ಇದರಿಂದಾಗಿ ಮೌಸ್ಟೀರಿಯನ್ ಸಮುಚ್ಚಯದ ನಿಜ ಸ್ವರೂಪ–ಸಂಯೋಜನೆ ಏನು ಎಂಬುದರ ಬಗ್ಗೆ ಒಮ್ಮತವಿಲ್ಲ. ಬಿನ್‌ಫೋರ್ಡ್‌ನ ಪ್ರಕಾರ ಪ್ರತಿಯೊಂದು ಕಾರ್ಯಕ್ಕೆ (ಉದಾ: ಬೇಟೆ, ಆಹಾರ ಸಂಸ್ಕರಣೆ, ಚರ್ಮದ ಸಂಸ್ಕರಣೆ ಇತ್ಯಾದಿ) ಬೇರೆ ಬೇರೆ ಉಪಕರಣಗಳು ಬೇಕು. ಈ ದೃಷ್ಟಿಯಿಂದ ಮೌಸ್ಟೀರಿಯನ್ ಸಮುಚ್ಚಯದಲ್ಲಿರುವ ಭಿನ್ನತೆ ಮನುಷ್ಯನ ಕಾರ್ಯ ವೈವಿಧ್ಯತೆಯನ್ನು ತಿಳಿಸುತ್ತದೆ. ಬೋರ್ಡ್ಸ್ ಮತ್ತು ಇತರ ತಜ್ಞರದ್ದು ಇದಕ್ಕೆ ವಿರುದ್ಧವಾದ ಅಭಿಮತ. ಇವರ ಪ್ರಕಾರ ಈ ಐದು ಬಗೆಯ ಸಮುಚ್ಚಯಗಳು ಸಮಕಾಲೀನವಲ್ಲ. ಇವು ಮಧ್ಯಹಳೆ ಶಿಲಾಯುಗದೊಳಗಿನ ವಿವಿಧ ಕಾಲಘಟ್ಟಗಳಿಗೆ ಅಥವ ಸಂಸ್ಕೃತಿಗೆ ಸೇರಿದ್ದವು. ಲ ಮೌಸ್ಟೀರಿಯನ್ ಮತ್ತು ಲ ಕ್ವಿನ (ಫ್ರಾನ್ಸ್), ನಿಯಾಂಡರ್ತಲ್ (ಜರ್ಮನಿ), ಗೊಯೆತ್ ಮತ್ತು ಸ್ಪೈ (ಬೆಲ್ಜಿಯಮ್)–ಇವು ಮೌಸ್ಟೀರಿಯನ್ ಸಮುಚ್ಚಯವಿರುವ ಕೆಲವು ಸುಪ್ರಸಿದ್ಧ ಗುಹಾನೆಲೆಗಳು. ರೇನ್ಡಲೆನ್ (ಜರ್ಮನಿ), ಮಾಸ್ಟ್ರಿಕ್ಟ್–ಬೆಲ್ವಡೆರ್ (ನೆದರ್ಲೆಂಡ್) ಮತ್ತು ವೆಲ್ಡ್‌ವೆಜೆಲ್ಟ್–ಹೆಜೆರ್‌ವಾಟರ್ (ಬೆಲ್ಜಿಯಮ್) ಉಲ್ಲೇಖಾರ್ಹ ಬಯಲುಪ್ರದೇಶದ ನೆಲೆಗಳು.

ರಷ್ಯ: ರಷ್ಯದಲ್ಲಿ ಕಾಕಸ್ ಮತ್ತು ಕ್ರಿಮಿಯ ಪ್ರಾಂತ್ಯಗಳಲ್ಲಿ ಮೌಸ್ಟೀರಿಯನ್ ಸಮುಚ್ಚಯಗಳು ವಿಪುಲವಾಗಿವೆ. ಇಲ್ಲಿಂದ ಬಹುದೂರದಲ್ಲಿರುವ ಉತ್ತರದ ಸ್ಟೆಪಿಬಯಲಿನಲ್ಲೂ ಇವು ಅಪರೂಪವಾಗಿ ಕಂಡುಬರುತ್ತವೆ. ಆದರೆ 49ನೆಯ ರೇಖಾಂಶದ ಉತ್ತರಕ್ಕೆ ಇವು ವಿಸ್ತರಿಸಿಲ್ಲ. ರಷ್ಯದ ಹೆಚ್ಚಿನ ಮೌಸ್ಟೀರಿಯನ್ ಸಮುಚ್ಚಯಗಳು ಗುಹೆಗಳೊಳಗಿವೆ. ಆದರೆ ವೋಲ್ಗೊಗ್ರಾಡ್ ಬಳಿಯ ಸುಖಯ ಮೆಚೆಟ್ಕ ಮತ್ತು ಮೊಲೊಡೊವ ಬಳಿಯ ನೆಸ್ಟ್ರನಂತಹ ಅತಿಮುಖ್ಯ ಬಯಲುಪ್ರದೇಶದ ನೆಲೆಗಳು ಕೆಲವೊಂದಿವೆ. ನಿಯಾಂಡರ್ತಲ್ ಮಾನವರ ಪಳೆಯುಳಿಕೆಗಳು ಹಲವಾರು ನೆಲೆಗಳಲ್ಲಿ ದೊರೆತಿವೆ. ಕ್ರಿಮಿಯ ಪ್ರಾಂತದಲ್ಲಿರುವ ಕೀಕ್ ಕೊಬ ಗುಹೆಯಲ್ಲಿ ಮಧ್ಯವಯಸ್ಕನ ಮತ್ತು ಮಗುವಿನ ಅಸ್ಥಿಪಳೆಯುಳಿಕೆಗಳು ಗುಳಿ ಸಮಾಧಿಗಳಲ್ಲಿದ್ದವು. ಇದೇ ಪ್ರಾಂತ್ಯದಲ್ಲಿರುವ ಸ್ಟರೊಸಿಲ್ ಗುಹೆಯಲ್ಲಿ ಹಸುಳೆಯ ಸಮಾಧಿಯನ್ನು ಹೊರತೆಗೆಯಲಾಗಿದೆ. ಉಜ್ಬೆಕಿಸ್ತಾನದ ತೆಶಿಕ್ ತಾಶ್ ಗುಹೆಯಲ್ಲಿ ನಿಯಾಂಡರ್ತಲ್ ಹುಡುಗನ ಅಸ್ಥಿಪಳೆಯುಳಿಕೆಯ ಸುತ್ತ ಮೇಕೆಯ ಜೋಡು ಕೊಂಬುಗಳನ್ನು ಜೋಡಿಸಿರುವುದು ಕಂಡುಬಂದಿದೆ. ಇದು ಧಾರ್ಮಿಕ ಆಚರಣೆಯಾಗಿದ್ದಿರಬೇಕು.

ಆಫ್ರಿಕ: ಆಫ್ರಿಕ ಖಂಡದಲ್ಲಿ ಎರಡು ವಿಭಿನ್ನ ಮಧ್ಯಹಳೆಶಿಲಾಯುಗ ಸಂಸ್ಕೃತಿಗಳನ್ನು ಗುರುತಿಸಲಾಗಿದೆ. ಸಹಾರ ಮರುಭೂಮಿಯ ಉತ್ತರಕ್ಕಿರುವ ಪ್ರದೇಶದ ಮೌಸ್ಟೀರಿಯನ್ ಸಮುಚ್ಚಯಗಳು ಯುರೋಪಿನ ಸಮುಚ್ಚಯಗಳನ್ನು ಹೋಲುತ್ತವೆ. ಸಹಾರದ ದಕ್ಷಿಣಕ್ಕಿರುವ ಪ್ರದೇಶದ ಸಮುಚ್ಚಯಗಳಲ್ಲಿ ಮೌಸ್ಟೀರಿಯನ್ನಿನ ಮೂಲಸ್ವರೂಪಗಳು ಕಂಡುಬರುವುದಿಲ್ಲ; ಬದಲಿಗೆ ಕೆಲವೊಂದು ವಿಶಿಷ್ಟ ಲಕ್ಷಣಗಳು ಮಾತ್ರ ಇವೆ.

ಆಫ್ರಿಕದಲ್ಲಿ ಮಧ್ಯ ಹಳೆಶಿಲಾಯುಗದಲ್ಲಿ, ಮುಖ್ಯವಾಗಿ ಪ್ರ.ಶ.ಪೂ.50,000–30,000ದ ಅವಧಿಯಲ್ಲಿ, ಆದಿಮಾನವರ ಸಂತತಿ ಇಮ್ಮಡಿಸಿತು. ಇವರ ಸಮೂಹಗಳು ಖಂಡದ ಎಲ್ಲ ಭಾಗಗಳಲ್ಲಿ ಹರಡಿದವು. ಇದಕ್ಕೆ ಮುಖ್ಯ ಕಾರಣ ಅಬಸ್ಸಿಯ ಮತ್ತು ಮೌಸ್ಟೀರಿಯನ್ ವರ್ಷಕಾಲಗಳು (ಪ್ಲುವಿಯಲ್ಸ್) ಮತ್ತು ಸುಧಾರಿತ ಶಿಲೋಪಕರಣ ತಂತ್ರಜ್ಞಾನ. ಈ ಅವಧಿಯಲ್ಲಿ ಸಹಾರ ಮರುಭೂಮಿ ಹಸುರಾಯಿತು. ವನ್ಯಜೀವಿಗಳ ಸಂಖ್ಯೆ ವೃದ್ಧಿಸಿತು. ಈ ಹೊತ್ತಿಗೆ ಮಾನವ ವಸತಿಗಳು ಉತ್ತರ ಆಫ್ರಿಕಾದ್ಯಂತ ಹರಡಿದವು. ಹೌವತಿಯ (ಕಿರೆನೈಕ) ಮತ್ತು ಎಲ್ ಗ್ವೆಟ್ಟರ್ (ಟ್ಯುನಿಶಿಯ) ಉತ್ತರ ಆಫ್ರಿಕದ ಮುಖ್ಯ ನೆಲೆಗಳು. ಹೌವ ತಿಯ ಗುಹೆಯಲ್ಲಿನ ಮೌಸ್ಟೀರಿಯನ್ ಸಾಂಸ್ಕೃತಿಕ ಹಂತದ ಕಾಲಮಾನ ಪ್ರ.ಶ.ಪೂ.45,000–41,000.

ಸಹರ ಮರುಭೂಮಿಯ ದಕ್ಷಿಣಕ್ಕಿರುವ ಪ್ರದೇಶದಲ್ಲಿ ಆದಿ ಹಳೆಶಿಲಾಯುಗದ ಅಶೂಲಿಯನ್ ಸಂಸ್ಕೃತಿ ಮತ್ತು ಮಧ್ಯ ಹಳೆಶಿಲಾಯುಗದ ನಡುವೆ ಎರಡು ಸ್ಥಿತ್ಯಂತರ ಘಟ್ಟಗಳಿವೆ. ಒಂದನೆಯ ಸಾಂಸ್ಕೃತಿಕ ಘಟ್ಟ ದಕ್ಷಿಣ ಆಫ್ರಿಕದ ಫೋರ್‌ಸ್ಮಿತ್ ಉಪಕರಣ ಸಮುಚ್ಚಯಗಳಿಂದ ಹಾಗೂ ಎರಡನೆಯ ಘಟ್ಟ ಪೂರ್ವ ಮತ್ತು ಮಧ್ಯ ಆಫ್ರಿಕದ ಸಂಗೋಅನ್ ಸಮುಚ್ಚಯಗಳಿಂದ ಪ್ರತಿನಿಧಿತವಾಗಿವೆ. ಇವೆರಡೂ ಉಪಕರಣ ತಂತ್ರಗಳು ಅಶೂಲಿಯನ್ ತಂತ್ರಜ್ಞಾನದಿಂದ ಬೆಳೆದವು. ಫೋರ್‌ಸ್ಮಿತ್ ಬಯಲು ಪ್ರದೇಶದ ಸಂಸ್ಕೃತಿಯಾದರೆ ಸಂಗೋಅನ್ ಅರಣ್ಯ ಪ್ರದೇಶಕ್ಕೆ ಒಗ್ಗಿದ್ದ ಸಂಸ್ಕೃತಿ. ಇವೆರಡರ ಅನಂತರ ಬಂದ ಮಧ್ಯ ಹಳೆಶಿಲಾಯುಗ ಸಂಸ್ಕೃತಿ ಉತ್ತರ ಆಫ್ರಿಕ ಮತ್ತು ಯುರೋಪಿನ ಅಂತ್ಯ ಹಳೆಶಿಲಾಯುಗಕ್ಕೆ ಸಮಕಾಲೀನವಾಗಿತ್ತು.

ಸಮೀಪ ಪ್ರಾಚ್ಯದೇಶಗಳು: ಈ ದೇಶಗಳಲ್ಲಿ ಮೌಸ್ಟೀರಿಯನ್ ಸಮುಚ್ಚಯಗಳು ಹೆಚ್ಚಾಗಿ ಗುಹೆ ಮತ್ತು ಕಲ್ಲಾಸರೆಗಳಲ್ಲಿವೆ. ಜ್ಯಾಗ್ರೋಸ್ ಪರ್ವತ ಪ್ರದೇಶ ಮತ್ತು ಲೆವಂಟ್‌ನಲ್ಲಿ ಇವು ಹೇರಳವಾಗಿವೆ. ಜ್ಯಾಗ್ರೋಸ್ ಪರ್ವತದಲ್ಲಿ ಶನಿದಾರ್ ಮತ್ತು ಹಜರ್ ಮೆರ್ದ್ ಗುಹೆಗಳು (ಇರಾಕ್) ಹೆಸರುವಾಸಿ. ಪಶ್ಚಿಮ ಇರಾನಿನ ಖೊರಮಬಾದ್ ಕಣಿವೆಯಲ್ಲಿರುವ ಹಲವಾರು ಗುಹೆಗಳಲ್ಲಿ ಈ ಸಮುಚ್ಚಯಗಳಿವೆ. ಲೆವಂಟ್ ಪ್ರದೇಶದ ಮುಖ್ಯ ನೆಲೆಗಳು ಜಾಬ್ರುದ್ (ಸಿರಿಯ), ಸಾರ್ ಅಕಿಲ್ (ಲೆಬನಾನ್), ಮೌಂಟ್ ಕಾರ್ಮಲ್‌ನ ಗುಹೆಗಳು ಮತ್ತು ಟೈಬೀರಿಯಸ್ ಸರೋವರ ತೀರದ ನೆಲೆಗಳು (ಇಸ್ರೇಲ್) ಹಾಗೂ ಜೋರ್ಡಾನಿನ ಗುಹೆಗಳು. ಲೆವಂಟ್ ಪ್ರದೇಶದಲ್ಲಿ ಮೌಸ್ಟೀರಿಯನ್ ಮಾದರಿಯ ಮೊನೆ ಮತ್ತು ಹೆರೆಚಕ್ಕೆಗಳು ಅಂತ್ಯ ಹಳೆಶಿಲಾಯುಗದ ಆದಿ ಭಾಗದಲ್ಲಿಯೂ ಮುಂದುವರೆಯುತ್ತವೆ. ನಿಯಾಂಡರ್ತಲ್ ಪಳೆಯುಳಿಕೆಗಳು ಜ್ಯಾಗ್ರೋಸ್ ಮತ್ತು ಲೆವಂಟ್ ಪ್ರದೇಶಗಳಲ್ಲಿ ಕಂಡುಬಂದಿವೆ. ಶನಿದಾರ್ ಮತ್ತು ಮೌಂಟ್ ಕಾರ್ಮಲ್‌ನಲ್ಲಿರುವ ಎಸ್–ಸ್ಖುಲ್‌ಗಳಲ್ಲಿ ಸಮಾಧಿ ಸಮೂಹಗಳನ್ನು ಉತ್ಖನನದಲ್ಲಿ ಹೊರತೆಗೆಯಲಾಗಿದೆ.

ಆಗ್ನೇಯ ಏಷ್ಯ: ಚೀನದ ಒರ್ಡೊಸ್ ಪ್ರಾಂತ್ಯದಲ್ಲಿರುವ ಶುಯಿ–ತುನ್ಗ್–ಕೌ ನೆಲೆ ಮುಖ್ಯವಾದುದು. ಇಲ್ಲಿಯ ಮೌಸ್ಟೀರಿಯನ್ ಸಮುಚ್ಚಯದಲ್ಲಿ ಲೆವಾಲ್ವ ತಂತ್ರದ ಜೊತೆಗೆ ಯುರೇಷಿಯದ ಅಂತ್ಯ ಹಳೆಶಿಲಾಯುಗದ ಲಕ್ಷಣಗಳು ಕಾಣುತ್ತವೆ.

**ಭಾರತ:** ಭಾರತದಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳನ್ನು ಪ್ರಥಮವಾಗಿ ಗುರುತಿಸಿದವರು ಎಚ್.ಡಿ. ಸಾಂಕಳಿಯರವರು. ಮಹಾರಾಷ್ಟ್ರ ರಾಜ್ಯದ ಅಹಮದ್‍ನಗರ ಜಿಲ್ಲೆಯ ನೆವಾಸ ಗ್ರಾಮದ ಬಳಿ ಪ್ರವರಾ ನದಿಯ ಸ್ತರೀಕೃತ ನದಿನಿಕ್ಷೇಪದಲ್ಲಿ ಚಕ್ಕೆ ಉಪಕರಣ-ಪ್ರಧಾನ ಸಮುಚ್ಚಯವನ್ನು ಇವರು ಗುರುತಿಸಿದರು. ಈ ಸಮುಚ್ಚಯದಲ್ಲಿ ಚಕಮಕಿ ಕಲ್ಲು, ಜಾಸ್ಪರ್, ಅಗೇಟ್, ಕ್ಯಾಲ್ಸೆಡನಿಯ ಚಕ್ಕೆಗಳಿಂದ ಮಾಡಲಾದ ಹೆರೆಚಕ್ಕೆ, ಮೊನೆ ಮತ್ತು ಕೊರೆಯುಳಿಗಳಿದ್ದವು. ಈ ಸಂಸ್ಕೃತಿಯನ್ನು ಸಾಂಕಳಿಯರವರು ಹಳೆಶಿಲಾ ಯುಗದ ಎರಡನೆಯ ಶ್ರೇಣಿ ಎಂದು ಕರೆದರು. ಕಾಲಕ್ರಮೇಣ ಭಾರತದ ಇತರ ಭಾಗಗ ಳಿಂದಲೂ ಇಂತಹ ಸಮುಚ್ಚಯಗಳು ವರದಿಯಾದವು. ಇವನ್ನು ಮಧ್ಯ ಹಳೆಶಿಲಾಯುಗ, ನೆವಾಸಿಯನ್, ಎರಡನೆಯ ಶ್ರೇಣಿ, ಚಕ್ಕೆ ಸಂಸ್ಕೃತಿ-ಹೀಗೆ ಹಲವಾರು ಹೆಸರಿನಿಂದ ಗುರುತಿಸಲಾಗಿದೆ.

ಮಧ್ಯ ಹಳೆಶಿಲಾಯುಗದ ಅವಶೇಷಗಳು ನದಿಯ ಸ್ತರೀಕೃತ ನಿಕ್ಷೇಪದಲ್ಲಿ ಆದಿ ಮತ್ತು ಅಂತ್ಯ ಹಳೆಶಿಲಾಯುಗಗಳ ನಡುವೆ ಕಂಡುಬರುತ್ತವೆ. ಗಂಗಾ ನದಿಬಯಲು ಮತ್ತು ಕೇರಳವನ್ನು ಹೊರತುಪಡಿಸಿ ಭಾರತದ ಮಿಕ್ಕೆಲ್ಲ ಭಾಗಗಳಲ್ಲಿ ಈ ಯುಗದ ಉಪಕರಣ ಸಮುಚ್ಚಯಗಳಿವೆ. ವಿವಿಧ ಬಗೆಯ ಹೆರೆಚಕ್ಕೆ ಮತ್ತು ಮೊನೆಗಳು, ಅಲಗು, ಲೆವಾಲ್ವ ಮಾದರಿಯ ಚಕ್ಕೆಗಳು, ನಿರ್ದಿಷ್ಟ ಆಕಾರದಲ್ಲಿರುವ ಶಿಲಾಗಟ್ಟಿಗಳು-ಇವು ಈ ಸಂಸ್ಕೃತಿಯ ಸಮುಚ್ಚಯಗಳಲ್ಲಿ ಅತಿ ಸಾಮಾನ್ಯವಾಗಿರುವ ಉಪಕರಣಗಳು. ಇವುಗಳ ತಯಾರಿಕೆಯಲ್ಲಿ ಕ್ವಾರ್ಟ್ಜೈಟ್, ಚರ್ಟ್, ಜಾಸ್ಪರ್, ಅಗೇಟ್ ಮತ್ತು ಬೆಣಚುಕಲ್ಲುಗಳನ್ನು ಹೆಚ್ಚಾಗಿ ಬಳಸಲಾಗಿದೆ.

**ಉತ್ತರ ಭಾರತ** (ಭಾರತ ಮತ್ತು ಪಾಕಿಸ್ತಾನದಲ್ಲಿರುವ ಹಿಮಾಲಯ ಮತ್ತು ಹಿಮಾಲಯ ತಪ್ಪಲು ಪ್ರದೇಶ): ಪಾಕಿಸ್ತಾನದಲ್ಲಿ ಸಂಘಾವೊ ಗುಹೆ (ಪೆಷಾವರ), ಸೋಹನ್ ನದಿಪಾತ್ರ ಮತ್ತು ಪೋತ್ವಾರ್ ಪ್ರಸ್ಥಭೂಮಿಯಲ್ಲಿರುವ (ರಾವಲ್ಪಿಂಡಿ) ನೆಲೆಗಳು ಮುಖ್ಯವಾದುವು. ಸೋಹನ್ (ಸೋನ್) ನದಿದಂಡೆಯ 2ನೆಯ ಸಮತಟ್ಟಿನಲ್ಲಿ 1939ರಲ್ಲಿ ಡಿಟೆರ್ರ ಮತ್ತು ಪ್ಯಾಟರ್ಸನ್‍ರವರು ಅಂತ್ಯ ಸೋಹನ್ ಎಂದು ಗುರುತಿಸಿದ ಸಮುಚ್ಚಯಗಳನ್ನು ತಂತ್ರಜ್ಞಾನದ ದೃಷ್ಟಿಯಿಂದ ಈಗ ಮಧ್ಯ ಹಳೆಶಿಲಾಯುಗ ಸಂಸ್ಕೃತಿಗೆ ಸೇರಿಸಲಾಗಿದೆ. ನದಿ ತಾನು ಹರಿಯುವ ಮಾರ್ಗವನ್ನು ಕೆಳಮುಖವಾಗಿ ಕೊರೆಯುತ್ತಾ ಹೋದಾಗ ಅದರ ದಡದಲ್ಲಿ ಉಂಟಾಗುವ ಮೆಟ್ಟಿಲಿನಂತಹ ರಚನೆಯೇ ಸಮತಟ್ಟು. ಒಂದು ಸಮಯದಲ್ಲಿ ನದಿ ಈಗಿನ ಮಟ್ಟಕ್ಕಿಂತ ಮೇಲೆ ಹರಿಯುತ್ತಿದ್ದುದನ್ನು ಇದು ತಿಳಿಸುತ್ತದೆ. ಈ ಸಮುಚ್ಚಯಗಳಲ್ಲಿ (ಅಂತ್ಯ ಸೋಹನ್ ಎ) ಕ್ಲ್ಯಾಕ್ಟೋನಿಯನ್ ಮಾದರಿಯ ಚಕ್ಕೆಗಳು ಮತ್ತು ನದಿಯ ದುಂಡುಗಲ್ಲನ್ನು ಮಾರ್ಪಡಿಸಿ ಮಾಡಿದ ಉಪಕರಣಗಳ ಜೊತೆಗೆ ಜಾಗರೂಕತೆಯಿಂದ ಸಿದ್ಧಪಡಿಸಿದ ಮೂಲಶಿಲಾಗಟ್ಟಿಗಳು (ಪ್ರಿಪೇರ್ಡ್ ಕೋರ್), ಸಮಾನಾಂತರ ಚಕ್ಕೆ ಮತ್ತು ನೀಳ ಚಕ್ಕೆಗಳು ಕಂಡುಬಂದಿವೆ. ಈ ಚಕ್ಕೆಗಳು ಲೆವಾಲ್ವ ತಂತ್ರದಿಂದ ತಯಾರಾದುವು. 2ನೆಯ ಸಮತಟ್ಟಿನ ತಳಭಾಗದ ನಿಕ್ಷೇಪದಲ್ಲಿ ಈ ಸಮುಚ್ಚಯವಿದ್ದರೆ ಮೇಲ್ಭಾಗದಲ್ಲಿರುವ ಬೂದುಮಿಶ್ರಿತ ನಸುಹಳದಿ ಬಣ್ಣದ ನುಣುಪು ಮೆಕ್ಕಲುಮಣ್ಣಿನಲ್ಲಿ ಯುರೋಪಿನ ಅಂತ್ಯ ಲೆವಾಲ್ವ ಸಮುಚ್ಚಯಗಳನ್ನು ಹೋಲುವ ಚಕ್ಕೆಯ ಉಪಕರಣಗಳಿವೆ (ಅಂತ್ಯ ಸೋಹನ್ ಬಿ). ಢೋಕ್‍ಪಠಾಣ್ ಮತ್ತು ಪಿಂಡಿಘೇಬ್ ಬಳಿ ಇಂತಹ ಹಲವಾರು ಸಮುಚ್ಚಯಗಳಿವೆ.

1960ರ ದಶಕದಲ್ಲಿ ಲಾಲ್ ಅವರು ಕಂಗ್ರ ಜಿಲ್ಲೆಯಲ್ಲಿ (ಹಿಮಾಚಲ ಪ್ರದೇಶ) ಹರಿಯುವ ಬಿಯಾಸ್ ಮತ್ತು ಬನಗಂಗ ನದಿಗಳ ಪಾತ್ರಗಳಲ್ಲೂ ಮೊಹಪಾತ್ರರವರು ಸಿರ್ಸಾ ಪಾತ್ರದಲ್ಲೂ ಈ ಸಂಸ್ಕೃತಿಗೆ ಸೇರುವ ಚಕ್ಕೆಗಳು, ಹೆರೆಚಕ್ಕೆಗಳು ಮತ್ತು ಕೊರಗಗಳನ್ನು ಕಂಡುಹಿಡಿದರು. 1975ರಲ್ಲಿ ಬ್ರಿಜೆಟ್ ಅಲ್ಚಿನ್ ಸಿಂಧೂ ನದಿಯ ಕೆಳದಂಡೆಯಲ್ಲಿರುವ ರೋಹ್ರಿ ಪರ್ವತಗಳಲ್ಲಿ ಮಧ್ಯ ಹಳೆಶಿಲಾಯುಗ ಉಪಕರಣಗಳನ್ನು ಪತ್ತೆಹಚ್ಚಿದಳು.

ಶ್ರೀನಗರ-ಗಡವಾಲ್ ಪ್ರದೇಶದಲ್ಲಿ ಹರಿಯುವ ಅಲಕಾನಂದ ನದಿಯ ಪಾತ್ರದಲ್ಲಿ ಕ್ವಾರ್ಟ್ಜೈಟ್ ಮತ್ತು ಜಾಸ್ಪರ್ ಕಲ್ಲುಗಳಿಂದ ತಯಾರಿಸಿದ ವಿವಿಧ ಬಗೆಯ ಹೆರೆಚಕ್ಕೆಗಳು ಕಂಡುಬಂದಿವೆ. ನೇಪಾಲದ ಡಂಗ್-ದೇವ್‍ಖುರಿ ಡೂನ್ ಬಯಲುಗಳಲ್ಲಿ ಕೊರ್ವಿನಸ್ ಈ ಕಾಲದ ಸಮುಚ್ಚಯಗಳನ್ನು ಬೆಳಕಿಗೆ ತಂದಿದ್ದಾಳೆ. ಇಲ್ಲಿನ ಅರ್ಜುನ ನದಿಯಲ್ಲಿ 2ಮೀ ದಪ್ಪದ ನದಿ ನಿಕ್ಷೇಪದ ಮೇಲೆ 8ಮೀ ದಪ್ಪದ ಹೂಳುಮಣ್ಣಿನ ಪದರವಿದ್ದು ಇವೆರಡರ ಮಧ್ಯದಲ್ಲಿ ಚಕ್ಕೆ-ಅಲಗಿನ ಸಮುಚ್ಚಯವಿದೆ. ಲೆವಾಲ್ವ ಮಾದರಿಯ ಮೂಲ ಶಿಲಾಗಟ್ಟಿ, ಹೆರೆಚಕ್ಕೆ ಮತ್ತು ಮೊನೆಗಳು ಕೊಚ್ಚುಗತ್ತಿಗಳೊಂದಿಗೆ ಇಲ್ಲಿ ಸಿಕ್ಕಿವೆ.

**ಪಶ್ಚಿಮ ಭಾರತ (ರಾಜಸ್ಥಾನ ಮತ್ತು ಗುಜರಾತ್)**: ರಾಜಸ್ತಾನದಲ್ಲಿ ಮೊಟ್ಟಮೊದಲಿಗೆ ಲೂಣಿ ನದಿ ಮತ್ತು ಇದರ ಉಪನದಿಗಳ ಪಾತ್ರಗಳಲ್ಲಿ ವಿ.ಎನ್. ಮಿಶ್ರರವರು ಮಧ್ಯ ಹಳೆಶಿಲಾಯುಗದ ಕುರುಹುಗಳನ್ನು ಹುಡುಕಿದರು. ಚರ್ಟ್, ಸಿಲಿಕಯುಕ್ತ ಮರದ ತುಂಡು, ಗಟ್ಟಿಯಾದ ಸ್ಲೇಟ್ ಕಲ್ಲು, ಕ್ವಾರ್ಟ್ಜೈಟ್ ಮತ್ತು ರಯೋಲೈಟ್ ಕಲ್ಲುಗಳಿಂದ ಮಾಡಲ್ಪಟ್ಟ ಉಪಕರಣಗಳು ಈ ನದಿಗಳ ತಳದಲ್ಲಿಯೂ ನದಿನಿಕ್ಷೇಪದಲ್ಲಿಯೂ ದಂಡೆಯುದ್ದಕ್ಕೂ ಇದ್ದವು.

ರಾಜಸ್ತಾನದಲ್ಲಿ ಈ ಸಂಸ್ಕೃತಿಯ ಶಿಲೋಪಕರಣ ಸಮುಚ್ಚಯಗಳು ವಿವಿಧ ಭೂ-ಸಂದರ್ಭಗಳಲ್ಲಿ ಕಂಡುಬಂದಿವೆ. ಬಕ್ಲಿಯ, ಮಂಗಳ್‍ಪುರ, ಶ್ಯಾಮ್‍ಪುರ, ಜೆನಾನ ಮುಂತಾದ ಹಳ್ಳಿಗಳಲ್ಲಿ ಇವು ಅಮರ್‍ಪುರ ಎಂಬ ಹೆಸರಿನ ಕಳಿಮಣ್ಣಿನ ನಿಕ್ಷೇಪದಲ್ಲಿವೆ. ದಿದ್ವಾನದ ಬಳಿ ಅಗೆದ 16ಆರ್ ಎಂಬ ಹೆಸರಿನ ಗುಂಡಿಯಲ್ಲಿ ಇವು ಮರಳುದಿಣ್ಣೆಯ ಸವೆದ ಮೇಲ್ಮೈ ಮೇಲಿದ್ದವು. ಜಯಾಳ್‍ನ ಸುತ್ತಮುತ್ತ ಇವು ಜಯಾಳ್ ಎಂದೇ ಹೆಸರಾದ ದಿಣ್ಣೆಯಂತಿರುವ ಜಲ್ಲಿಕಲ್ಲಿನ ನಿಕ್ಷೇಪದಲ್ಲಿವೆ. ಲೂಣಿ ಮತ್ತು ಅದರ ಉಪನದಿಗಳಲ್ಲಿ ಮರಳು ಮತ್ತು ಜಲ್ಲಿಕಲ್ಲುಗಳು ಬೆರೆತು ಗಟ್ಟಿಗೊಂಡಿರುವ ನದಿನಿಕ್ಷೇಪದಲ್ಲಿವೆ. ಪಾಲಿ ಜಿಲ್ಲೆಯ ಸೋಜತ್‍ನ ಬಳಿ ಇವು ವಿಂಧ್ಯಶ್ರೇಣಿಯ ಸುಣ್ಣಕಲ್ಲಿನ ಬಂಡೆಗಳ ಮೇಲಿವೆ. ಜೈಸಲ್ಮೇರಿನ ಬಳಿ ನಿಷ್ಕ್ರಿಯ ನೀರಿನ ಹಳ್ಳಗಳ ಅಕ್ಕಪಕ್ಕದಲ್ಲಿರುವ ಗುಡ್ಡಗಳ ಇಳಿಜಾರಿನಲ್ಲಿ ಕಂಡುಬಂದಿವೆ. ಸಾಮಾನ್ಯ ನಮೂನೆಗಳೊಂದಿಗೆ ಗರಗಸದಂತೆ ಅಂಚಿರುವ ಚಕ್ಕೆಗಳು, ಬಿಲ್ಲೆಯಾಕಾರದ ಮೂಲಶಿಲೆ ಹಾಗೂ ಸಣ್ಣ ಕೈಗೊಡಲಿಗಳು ಈ ಎಲ್ಲ ಸಮುಚ್ಚಯಗಳಲ್ಲಿವೆ. ಬುಧಪುಷ್ಕರ್ ಸರೋವರದ ಬಳಿಯೂ ಕೊಚ್ಚುಗತ್ತಿ, ಕಡಿಕತ್ತಿ, ಹೆರೆಚಕ್ಕೆ, ಅಲಗು, ಕೊರೆಯುಳಿಗಳಿಂದ ಕೂಡಿದ ಸಮುಚ್ಚಯಗಳಿವೆ.

ರಾಜಸ್ತಾನದ ಮೇವಾಡ್ ಪ್ರಾಂತದ ವಾಗಾಂವ್ ಮತ್ತು ಕಡಮಲಿ ನದಿಬಯಲುಗಳಲ್ಲಿ, ಗುಜರಾತಿನ ಓರ್ಸಂಗ್-ಸೂಖಿ ನದಿಪಾತ್ರಗಳಲ್ಲಿ ಮಧ್ಯ ಹಳೆಶಿಲಾಯುಗದ ಚಕ್ಕೆ ಉಪಕರಣಗಳ ಸಮುಚ್ಚಯಗಳಿವೆ.



ಶಿಲೋಪಕರಣಗಳು

**ಮಧ್ಯ ಭಾರತ** (ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ದೆಹಲಿಯ ಸಮೀಪದ ಅರಾವಳಿ ಬೆಟ್ಟಶ್ರೇಣಿ): ಉತ್ತರಪ್ರದೇಶದಲ್ಲಿ ಬೇಲನ್ ನದಿಪಾತ್ರದಲ್ಲಿ ಮತ್ತು ಇದಕ್ಕೆ ಹೊಂದಿ ಕೊಂಡಂತೆ ಇರುವ ಕೈಮೂರ್ ಬೆಟ್ಟ ಶ್ರೇಣಿಯಲ್ಲಿ ಈ ಸಂಸ್ಕೃತಿಯ ಸಮುಚ್ಚಯಗಳು ಹೇರಳವಾಗಿವೆ. ಕೈಮೂರ್ ಬೆಟ್ಟಗಳ ಉತ್ತರ ಇಳಿಜಾರಿನಲ್ಲಿರುವ ಸಮುಚ್ಚಯಗಳು ಅವುಗಳ ಮೂಲಸ್ಥಾನದಲ್ಲಿಯೇ ಉಳಿದಿದ್ದು ಉಪಕರಣಗಳು ಇಲ್ಲಿಯೇ ತಯಾರಾಗುತ್ತಿದ್ದ ಲಕ್ಷಣಗಳನ್ನು ತೋರುತ್ತವೆ. ಕ್ವಾರ್ಟ್ಜೈಟ್ ಕಲ್ಲಿನಿಂದ ಮಾಡಿದ ಅನೇಕ ಬಗೆಯ ಹೆರೆಚಕ್ಕೆಗಳಲ್ಲದೆ ಮೊನೆ, ಬಿಲ್ಲೆಯಾಕಾರದ ಮತ್ತು ಅರೆ-ಗೋಲಾಕಾರದ ಉಪಕರಣಗಳು ಇವೆ. ಬೇಲನ್ ನದಿಯ ಸ್ತರೀಕೃತ ನಿಕ್ಷೇಪದಲ್ಲಿ ಉಪಕರಣಗಳ ನಮೂನೆ ಮತ್ತು ತಂತ್ರಜ್ಞಾನದಲ್ಲಿ ಕ್ರಮೇಣ ಬದಲಾವಣೆ ಯಾಗಿರುವುದು ಗೋಚರವಾಗುತ್ತದೆ. ನದಿಯ 2ನೆಯ ಸ್ತರದ ತಳಭಾಗದಲ್ಲಿ ಆದಿ ಹಳೆಶಿಲಾಯುಗ ಮತ್ತು ಮಧ್ಯ ಹಳೆಶಿಲಾಯುಗದ ನಡುವಿನ ಸ್ಥಿತ್ಯಂತರ ಹಂತದ ಉಪಕರಣ ಗಳಿವೆ. ಈ ಸ್ತರದ ಮಧ್ಯ ಮತ್ತು ಮೇಲಿನ ಭಾಗಗಳಲ್ಲಿ ಮಧ್ಯ ಹಳೆಶಿಲಾಯುಗದ ಚರ್ಟ್ ಉಪಕರಣಗಳಿವೆ. ಗಾತ್ರದಲ್ಲಿ ಮೇಲ್ಭಾಗದ ಉಪಕರಣಗಳು ಮಧ್ಯ ಭಾಗದ ಉಪಕರಣಗಳಿಗಿಂತ ಚಿಕ್ಕದು ಮತ್ತು ಮೇಲ್ಭಾಗದ ಸಮುಚ್ಚಯದಲ್ಲಿ ಚರ್ಟ್ ಕಲ್ಲಿನ ಬಳಕೆ ಅಧಿಕ (ಶೇ.80). ಈ ಸ್ತರದ ಮೇಲಿರುವ ಕೆಂಬಣ್ಣದ ಮರಳಿನ ಸ್ತರದಲ್ಲಿಯೂ ಮುಂಚಿನಂತೆಯೇ ಇರುವ ಚರ್ಟ್ ಉಪಕರಣಗಳಿವೆ; ಆದರೆ ಇವುಗಳ ಗಾತ್ರ ಮತ್ತಷ್ಟು ಚಿಕ್ಕದು. ಇದರ ಮೇಲಿರುವ ಹಳದಿಬಣ್ಣದ ಹೂಳುಮಣ್ಣಿನ ಸ್ತರದಲ್ಲಿ ಚರ್ಟ್ ಹಾಗೂ ಇತರ ಅರೆಪ್ರಶಸ್ತ ಕಲ್ಲುಗಳಿಂದ ತಯಾರಾದ ಅಲಗು-ಕೊರೆಯುಳಿ ಸಂಪ್ರದಾಯದ ಸಮುಚ್ಚಯವಿದೆ.

ನೈರುತ್ಯ ಉತ್ತರಪ್ರದೇಶದಲ್ಲಿನ ಬೇತ್ವ ಮತ್ತು ಧಾಸನ್ ನದಿಪಾತ್ರಗಳಲ್ಲಿ ಸಿದ್ಧಾಪುರ ಮತ್ತು ಲಹ್‍ಚೂರ ಉಪಕರಣ ತಯಾರಿಕೆಯ ಪ್ರಮುಖ ನೆಲೆಗಳು. ಮಧ್ಯಪ್ರದೇಶದ ಸೋನ್ ನದಿಯ ಮಧ್ಯಮ ಪಾತ್ರದಲ್ಲಿ ಪುರಾ-ವಾತಾವರಣಕ್ಕೆ ಸಂಬಂಧಪಟ್ಟ ಸಂಶೋಧನೆ ನಡೆಸಲಾಗಿದೆ. ಇಲ್ಲಿ 23 ಉಪಕರಣ ತಯಾರಿಕ ನೆಲೆಗಳು ಮತ್ತು 63 ಸ್ಥಾನಪಲ್ಲಟಗೊಂಡ ಸಮುಚ್ಚಯಗಳಿವೆ. ಉಪಕರಣ ತಯಾರಿಕ ನೆಲೆಗಳು ಕೈಮೂರ್ ಬೆಟ್ಟಗಳ ದಕ್ಷಿಣ ಇಳಿಜಾರಿ

ನಲ್ಲಿವೆ. ಇತರ ನಮೂನೆಗಳೊಂದಿಗೆ ಕೈಗೊಡಲಿಗಳು, ಮೂಲ ಶಿಲಾಗಟ್ಟಿ, ತ್ಯಾಜ್ಯ ಚಕ್ಕೆಚೂರುಗಳು ಇಲ್ಲಿನ ಸಮುಚ್ಚಯಗಳಲ್ಲಿವೆ. ಕೆಲವೊಂದು ನೆಲೆಗಳಲ್ಲಿ ಲೆವಾಲ್ವ ತಂತ್ರ ಪ್ರಧಾನವಾಗಿದೆ. ಉಳಿದ 63 ನೆಲೆಗಳು ಪತ್ವರ ಭೂರಚನೆಯಲ್ಲಿ ಹುದುಗಿವೆ. ಪತ್ವರ ಹಳ್ಳಿಯ ಆಸುಪಾಸಿನಲ್ಲಿ ತೀವ್ರ ಸವೆತದ ಪರಿಣಾಮವಾಗಿ ಪತ್ವರ ಭೂರಚನೆಯ ಸ್ತರಗಳು ಹೊರಕ್ಕೆದ್ದಿವೆ. ಇವುಗಳ ಮೇಲ್ಮೈ ಮೇಲೆ ಆದಿ ಮತ್ತು ಮಧ್ಯ ಹಳೆಶಿಲಾಯುಗದ ಉಪಕರಣಗಳು ಚದುರಿಕೊಂಡಿವೆ. ಹಳ್ಳಿಯ ಪೂರ್ವಕ್ಕಿರುವ ಇಂತಹ ಎರಡು ನೆಲೆಗಳಲ್ಲಿ ಉತ್ಖನನ ನಡೆಸಲಾಯಿತು. ಸಾಮಾನ್ಯ ನಮೂನೆಗಳಾದ ಹೆರೆಚಕ್ಕೆ, ಮೊನೆ, ಕೊರೆಯುಳಿಗಳೊಂದಿಗೆ ಕಡಿಕತ್ತಿ, ಕೈಗೊಡಲಿ, ಕೊಚ್ಚುಗತ್ತಿ, ಅರೆ–ಗೋಲಾಕಾರದ ಉಪಕರಣಗಳು ಉತ್ಖನನದಲ್ಲಿ ಸಿಕ್ಕವು. ಇವಲ್ಲದೆ ಪತ್ವರ ಹಳ್ಳಿಯ ಬಳಿ ಸೋನ್ ನದಿಯ ದಂಡೆಯ ಮೇಲೆ ನಡೆಸಿದ ಉತ್ಖನನದಲ್ಲಿ ಚಿಲುಮೆ–ಸೃಷ್ಟಿತ ನಿಕ್ಷೇಪದಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳು ಕಂಡುಬಂದವು.

ಮಧ್ಯಪ್ರದೇಶದ ಸತ್ನ ಜಿಲ್ಲೆಯಲ್ಲಿರುವ ಮೈಹರ್ ಬೆಟ್ಟದ ತಪ್ಪಲಿನಲ್ಲಿ ಅಗೆದ ಪರೀಕ್ಷೆ ಗುಂಡಿಯಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳು ಸವೆದ ಶೇಲ್ (ಜೇಡಿಪದರಗಲ್ಲು) ನಿಕ್ಷೇಪದ ಮೇಲೆ ಯಥಾಸ್ಥಿತಿಯಲ್ಲಿ ಇದ್ದುದು ಕಂಡುಬಂತು. ಈ ಉಪಕರಣ ಸಮುಚ್ಚಯ 20 ಸೆಂಮೀ ದಪ್ಪದ ಕೆಂಪುಬಣ್ಣದ ಕಳಿಮಣ್ಣಿನ ಪದರದಿಂದ ಮುಚ್ಚಲ್ಪಟ್ಟಿತ್ತು.

ವಿಂಧ್ಯ ಪರ್ವತಶ್ರೇಣಿಯಲ್ಲಿರುವ ಪ್ರಪಂಚಪ್ರಸಿದ್ಧ ಗುಹಾನೆಲೆ ಭೀಂಬೇಟ್ಕ (ಮಧ್ಯಪ್ರದೇಶ). ಇಲ್ಲಿನ ಒಂದು ಗುಹೆಯಲ್ಲಿ ಆದಿ ಹಳೆಶಿಲಾಯುಗದಿಂದ ತಾಮ್ರ–ಶಿಲಾಯುಗದವರೆಗಿನ ದೀರ್ಘ ಅನುಕ್ರಮಣಿಕೆ ದಾಖಲಾಗಿರುವುದು ಉತ್ಖನನದಲ್ಲಿ ತೋರಿಬಂತು. ಇಲ್ಲಿ ಮಧ್ಯ ಹಳೆಶಿಲಾಯುಗ ಸಂಸ್ಕೃತಿಯು ಆದಿ ಹಳೆಶಿಲಾಯುಗದ ಅಶೂಲಿಯನ್ ಸಂಸ್ಕೃತಿಯಿಂದ ವಿಕಸಿತವಾಗಿರುವುದನ್ನು ಸ್ತರಕ್ರಮದಿಂದ ಸ್ಪಷ್ಟವಾಗಿ ಗ್ರಹಿಸಬಹುದಾಗಿದೆ. ಅಶೂಲಿಯನ್ ಸಂಸ್ಕೃತಿಯ ಕೈಗೊಡಲಿ ಮತ್ತು ಕಡಿಕತ್ತಿಗಳು ಕ್ರಮೇಣ ಮರೆಯಾಗಿ ವಿವಿಧ ಬಗೆಯ ಹೆರೆಚಕ್ಕೆಗಳು, ಅಲಗು ಮತ್ತು ಲೆವಾಲ್ವ ಮಾದರಿಯ ಚಕ್ಕೆಗಳು ಬಳಕೆಗೆ ಬಂದದ್ದು ಇಲ್ಲಿ ನಿಚ್ಚಳವಾಗಿದೆ. ವಿಶೇಷವೆಂದರೆ ಇಲ್ಲಿನ ಮಧ್ಯ ಹಳೆಶಿಲಾಯುಗದ ಉಪಕರಣಗಳು ಚಕ್ಕೆಗಳ ಬದಲಿಗೆ ಚಪ್ಪಟೆಯಾದ ಕಲ್ಲಿನ ಹಲಗೆ ಅಥವಾ ಚಪ್ಪಡಿಗಳಿಂದ ತಯಾರಾದುವು. ಈ ಪ್ರದೇಶದ ಮತ್ತೊಂದು ಮುಖ್ಯ ಕಲ್ಲಾಸರೆ ನೆಲೆ ಆದಂಗಡ್. ಇಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳು ಮೂಲಸ್ಥಿತಿಯಲ್ಲಿದ್ದು, ಮರಳು ಮಿಶ್ರಿತ ಕೆಂಪುಬಣ್ಣದ ಅಂಟುಮಣ್ಣಿನಲ್ಲಿ ಬೆರೆತಿದ್ದವು. ಈ ಸಮುಚ್ಚಯದಲ್ಲಿ ಕ್ವಾರ್ಟ್ಜೈಟ್ ಕಲ್ಲಿನಲ್ಲಿ ಮಾಡಿದ ಕೈಗೊಡಲಿ, ಕೊಚ್ಚುವ ಉಪಕರಣಗಳು, ಕಡಿಕತ್ತಿ, ಹೆರೆಚಕ್ಕೆ, ಮೊನೆ ಮತ್ತು ಕೊರೆಯುಳಿಗಳಿದ್ದವು.

ಹಳೆ ಶಿಲಾಯುಗ ಅಧ್ಯಯನಕ್ಕೆ ಮಾದರಿಯಾದ ಮತ್ತೊಂದು ಪ್ರದೇಶ ನರ್ಮದ ನದಿಯ ಮಧ್ಯಮ ಪಾತ್ರ. ಈ ಪ್ರದೇಶದಲ್ಲಿರುವ ಮಧ್ಯ ಹಳೆಶಿಲಾಯುಗದ ಮುಖ್ಯ ನೆಲೆಗಳಲ್ಲೊಂದು ಸಾಮ್ನಾಪುರ್. ನರ್ಮದ ನದಿ ಮತ್ತು ರಿಚಾಯ್ ಹಳ್ಳ ಸೇರುವಲ್ಲಿ ನರ್ಮದ ಬಲದಂಡೆಯ ಮೇಲಿರುವ ಈ ನೆಲೆಯಲ್ಲಿ ಹೊಚ್ಚಹೊಸದರಂತಿರುವ ಉಪಕರಣಗಳು ಹೂಳುಮಣ್ಣಿನ ಪದರದಲ್ಲಿ ಬೆರೆತಿದ್ದುದು ಕಂಡುಬಂತು. ಇವು ಮೂಲಸ್ಥಾನದಲ್ಲಿಯೇ ಉಳಿದಿರುವುದನ್ನು ಇವುಗಳ ತಾಜಾತನದಿಂದ ತಿಳಿಯಬಹುದು. ಸು.44 ಚ.ಮೀ ಜಾಗದಲ್ಲಿ ನಡೆದ ಉತ್ಖನನದಲ್ಲಿ 3000ಕ್ಕೂ ಹೆಚ್ಚು ಉಪಕರಣಗಳನ್ನು ಹಾಗೂ ಒಂದೆರಡು ಪ್ರಾಣಿ ಪಳೆಯುಳಿಕೆಗಳನ್ನು ಸಂಗ್ರಹಿಸಲಾಯಿತು. ಸ್ಥಳೀಯವಾಗಿ ದೊರೆಯುವ ಚರ್ಟ್‌ಯುಕ್ತ ಕ್ವಾರ್ಟ್ಜೈಟ್ ಕಲ್ಲಿನಿಂದ ಉಪಕರಣಗಳನ್ನು ಮಾಡಲಾಗಿದೆ. ಕೆಲವೊಂದು ಉಪಕರಣಗಳನ್ನು ರಿಚಾಯ್ ಹಳ್ಳದಲ್ಲಿರುವ ಕ್ವಾರ್ಟ್ಜೈಟ್‌ನ ದುಂಡುಕಲ್ಲು ಗಳಿಂದಲೂ ಸಮೀಪದ ಜೀರಾಘಾಟಿ ಗುಡ್ಡದಲ್ಲಿರುವ ಡಾಲರೈಟ್ ಕಲ್ಲಿನಿಂದಲೂ ತಯಾರಿಸ ಲಾಗಿದೆ. ಚಕ್ಕೆ ಉಪಕರಣಗಳ ಈ ಸಮುಚ್ಚಯದಲ್ಲಿ ಮೂಲಶಿಲೆ, ತ್ಯಾಜ್ಯ ಚಕ್ಕೆಗಳೂ ಸೇರಿರುವುದರಿಂದ ಉಪಕರಣಗಳು ಇಲ್ಲಿಯೇ ತಯಾರಾಗುತ್ತಿದ್ದವೆಂಬುದು ಸ್ಪಷ್ಟ.

ಮಹಾನದಿಯ ಮೇಲ್ದಂಡೆಯಲ್ಲಿ (ಮಧ್ಯಪ್ರದೇಶ ರಾಜ್ಯದ ರಾಯ್‌ಪುರ್ ಮತ್ತು ಬಿಲಾಸ್‌ಪುರ್ ಜಿಲ್ಲೆ), ಚಂಬಲ್–ಶಿಪ್ರ–ಪಾರ್ವತಿ ನದಿಗಳು ಹರಿಯುವ ಮಾಳ್ವ ಪ್ರಸ್ಥಭೂಮಿಯಲ್ಲಿ ಮಧ್ಯ ಹಳೆಶಿಲಾಯುಗದ ಕುರುಹುಗಳಿವೆ.

**ಪೂರ್ವ ಭಾರತ**: ಮೇಘಾಲಯದ ಗಾರೋ ಪರ್ವತಗಳಲ್ಲಿ ಮಧ್ಯ ಹಳೆಶಿಲಾಯುಗ ಮಾದರಿಯ ಉಪಕರಣ ಸಮುಚ್ಚಯಗಳಿವೆ. ಬಿಹಾರ್ ರಾಜ್ಯದ ಮೊಂಗೀರ್ ಜಿಲ್ಲೆಯಲ್ಲಿರುವ ಜಮಾಲ್‌ಪುರದಲ್ಲಿ ಮಧ್ಯ ಹಳೆಶಿಲಾಯುಗಕ್ಕೆ ಸೇರುವ ಆದರೆ ಭಿನ್ನ ಸ್ವರೂಪದ ಉಪಕರಣಗಳಿವೆ. ಇಲ್ಲಿ ನಡೆದ ಸಣ್ಣ ಉತ್ಖನನದಲ್ಲಿ 50 ಸೆಂಮೀ ದಪ್ಪದ ಗರಸುಮಣ್ಣಿನ ಪದರದಲ್ಲಿ ಈ ಸಂಸ್ಕೃತಿಯ 32 ಕ್ವಾರ್ಟ್ಜೈಟ್ ಉಪಕರಣಗಳಿದ್ದವು. ಲೆವಾಲ್ವ ಮಾದರಿಯ ಚಕ್ಕೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ಕಡಿಕತ್ತಿ, ಕೊಚ್ಚುವ ಮತ್ತು ಚೂರಿಯಂತಹ ಉಪಕರಣಗಳು, ಕೊರೆಯುಳಿ, ಹೆರೆಚಕ್ಕೆ, ಮೊನೆ, ದಬ್ಬಣಗಳಲ್ಲದೆ ಅಂಚಿನಲ್ಲಿ ಸೂಕ್ಷ್ಮ ಚಕ್ಕೆಯೆಬ್ಬಿಸಿರುವಂತಹ ಚಕ್ಕೆ–ಅಲಗುಗಳು ಇತರ ಉಪಕರಣಗಳು. ಇಲ್ಲಿನ ಅನನ್ಯ ಕೊಡಲಿ ಮತ್ತು ಚೂರಿಗಳನ್ನು ಜಮಾಲ್‌ಪುರ್ ಕೊಡಲಿ ಮತ್ತು ಚೂರಿಗಳೆಂದೇ ಹೆಸರಿಸಲಾಗಿದೆ.

ಪಶ್ಚಿಮ ಬಂಗಾಲದ ಮಿಡ್ನಾಪುರ ಮತ್ತು ಬುರ್ದ್ವಾನ್ ಜಿಲ್ಲೆಗಳಲ್ಲೂ ಮಧ್ಯ ಹಳೆಶಿಲಾಯುಗದ ಹಲವಾರು ಉಪಕರಣ ಸಮುಚ್ಚಯಗಳಿವೆ. ಲೆವಾಲ್ವ ಮಾದರಿಯ ಮೊನೆ ಮತ್ತು ಚಕ್ಕೆಗಳು ಹಾಗೂ ಇನ್ನಿತರ ಸಾಮಾನ್ಯ ನಮೂನೆಗಳನ್ನು ಘನೀಕೃತ ಮರದ ತುಂಡುಗಳಿಂದ ತಯಾರಿಸಿರುವುದು ವಿಶೇಷ. ಒರಿಸ್ಸ ರಾಜ್ಯದ ಮಯೂರಭಂಜ್, ಢೆಂಕನಾಲ್, ಸುಂದರ್‌ಗಡ್ ಮತ್ತು ಕೆಯೊಂಜಾರ್ ಜಿಲ್ಲೆಗಳಲ್ಲಿ ಈ ಯುಗದ ಸಮುಚ್ಚಯಗಳು ಹಳೆಶಿಲಾಯುಗದ ಇತರ ಸಾಂಸ್ಕೃತಿಕ ಸಮುಚ್ಚಯಗಳ ಸಹಯೋಗದಲ್ಲಿ ಕಾಣಸಿಗುತ್ತವೆ. ಇದೇ ರಾಜ್ಯದ ಸಂಬಲ್‌ಪುರ್ ಜಿಲ್ಲೆಯ ಬಡಾಪಹಾಡ್, ದರಿದುಂಗಿ ಮತ್ತು ಹಿರಾಕುಡ್ ಹಳ್ಳಿಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳಿವೆ.

**ದಕ್ಷಿಣ ಭಾರತ**: ದಕ್ಷಿಣ ಪ್ರಸ್ಥಭೂಮಿಯಲ್ಲಿ ಮಧ್ಯ ಹಳೆಶಿಲಾಯುಗ ಸಮುಚ್ಚಯಗಳು ವಿರಳವೆಂದೇ ಹೇಳಬಹುದು. ಮಹಾರಾಷ್ಟ್ರ ರಾಜ್ಯದ ರಂಜನಿಹಳ್ಳಿಯ (ಪುಣೆ ಜಿಲ್ಲೆ) ಬಳಿ ಹರಿಯುವ ಮೀಣಾ ನದಿಯ ಬಲದಂಡೆಯಲ್ಲಿನ ನದಿನಿಕ್ಷೇಪದಲ್ಲಿ ಡಾಲರೈಟ್ ಕಲ್ಲಿನ 9 ಮೂಲಶಿಲೆಗಳೂ 15 ಚಕ್ಕೆಗಳೂ ಕಂಡುಬಂದಿವೆ. ಕೊಳವೆ ಮತ್ತು ಚಕ್ರಾಕಾರದಲ್ಲಿ ಸಿದ್ಧಪಡಿಸಿರುವ ಮೂಲಶಿಲೆಗಳು ಇಲ್ಲಿವೆ. ಕೃಷ್ಣ ನದಿಯ ಮಧ್ಯಮ ಪಾತ್ರದಲ್ಲಿರುವ ನದಿನಿಕ್ಷೇಪದಲ್ಲಿ ಸಮುಚ್ಚಯ ಸಮೂಹಗಳಿವೆ. ಈ ಉಪಕರಣಗಳು ಚರ್ಟ್ ಕಲ್ಲಿನಲ್ಲಿ ಮಾಡಿದವು. ಸುರಪುರ ಪ್ರದೇಶದಲ್ಲಿಯೂ ಹಲವಾರು ನೆಲೆಗಳಿವೆ. ಇಲ್ಲಿನ ಉಪಕರಣಗಳನ್ನು ಸ್ಥಳೀಯವಾಗಿ ದೊರೆಯುವ ಕ್ಯಾಲ್ಸೆಡನಿ, ಚರ್ಟ್, ಜಾಸ್ಪರ್, ಕ್ವಾರ್ಟ್ಜೈಟ್ ಮತ್ತು ಅಗೇಟ್ ಕಲ್ಲಿನ ಚಿಕ್ಕಪುಟ್ಟ ಉಂಡೆಗಳಿಂದ ಮಾಡಲಾಗಿದೆ.

**ಪೂರ್ವ ಕರಾವಳಿ ಪ್ರದೇಶ**: ಚೆನ್ನೈ ಬಳಿಯ ಕರಾವಳಿ ಮತ್ತು ವಿಶಾಖಪಟ್ಟಣದ ಸಮುದ್ರ ತೀರ ವಿಸ್ತೃತ ಶೋಧನೆಗೊಳಪಟ್ಟ ಕರಾವಳಿ ಪ್ರದೇಶಗಳು. ತಮಿಳುನಾಡಿನ ಕೊರ್ತಲಯಾರ್ ನದಿಪಾತ್ರದಲ್ಲಿ ಮಧ್ಯ ಹಳೆಶಿಲಾಯುಗದ ಅಂತ್ಯ ಹಂತದ ಉಪಕರಣಗಳು ಹಿಮಯುಗದ ಅಂತ್ಯದಲ್ಲಿ ಸೃಷ್ಟಿಯಾದ ನಿಕ್ಷೇಪದಲ್ಲಿವೆ. ವಿಶಾಖಪಟ್ಟಣದ 20 ಕಿಮೀ ಈಶಾನ್ಯದಲ್ಲಿರುವ ರಾಮಯೋಗಿ ಅಗ್ರಹಾರಂ ಮತ್ತೊಂದು ಪ್ರಮುಖ ನೆಲೆ. ಈ ಸ್ಥಳದಲ್ಲಿ ಕೆಂಪುಮಣ್ಣಿನ ನಿಕ್ಷೇಪ ದಿಬ್ಬದಂತೆ ಹರಡಿದ್ದು ಇದು ಮಳೆ–ಗಾಳಿಯ ತೀವ್ರ ಕೊರೆತದಿಂದಾದ ಅನೇಕ ಹಳ್ಳ–ಕೊರಕಲುಗಳಿಂದ ಕೂಡಿದೆ. ಕೆಂಪುಮಣ್ಣಿನ ನಿಕ್ಷೇಪದಲ್ಲಿ ಪರೀಕ್ಷೆ ಗುಂಡಿಯೊಂದನ್ನು 8ಮೀ ಆಳದವರೆಗೆ ಮೆಟ್ಟಿಲಿನ ರೂಪದಲ್ಲಿ ಅಗೆಯಲಾಯಿತು. ಗುಂಡಿಯಲ್ಲಿ 3.2ಮೀ ಅಡಿಯಲ್ಲಿ ಮಧ್ಯ ಹಳೆಶಿಲಾಯುಗದ ಸಾಂಸ್ಕೃತಿಕ ಪದರ ಕಂಡುಬಂತು. ಸಾಮಾನ್ಯ ನಮೂನೆಗಳೊಂದಿಗೆ ಬಡಿಗಲ್ಲು, ವಿವಿಧ ಆಕಾರದ ಕೈಗೊಡಲಿಗಳು ಇಲ್ಲಿವೆ. ಅಲಗಿನಂತಹ ಉಪಕರಣವನ್ನು ಮಾರ್ಪಡಿಸಿ ಮಾಡಲಾದ ಚೂರಿಗಳು ವಿಶಿಷ್ಟ. ಕ್ವಾರ್ಟ್ಜೈಟ್‌ನೊಂದಿಗೆ ಚರ್ಟ್ ಮತ್ತು ಕೊಂಡಲೈಟ್ ಕಲ್ಲುಗಳು ಅಪರೂಪಕ್ಕೆ ಬಳಕೆಯಾಗಿವೆ. ಕರ್ನೂಲಿನ ಗಿಡ್ಡಲೂರು ಪ್ರದೇಶದಲ್ಲಿ ಅಕವೀಡು, ಅರವೀಟಿಕೊಲ ಮುಂತಾದ ನೆಲೆಗಳಿವೆ. ಕಡಪ ಜಿಲ್ಲೆಯ ಸಾಗಿಲೇರು ನದಿಪಾತ್ರದಲ್ಲಿ ನಂದಿಪಲ್ಲೆಯಂತಹ ಕೆಲವೊಂದು ಮುಖ್ಯ ನೆಲೆಗಳಿವೆ. ನಾಗಾರ್ಜುನಕೊಂಡದಲ್ಲಿ ನಡೆದ ಉತ್ಖನನದಲ್ಲಿಯೂ ಮಧ್ಯ ಹಳೆಶಿಲಾಯುಗದ ಉಪಕರಣಗಳು ದೊರೆತಿವೆ. ಚಿತ್ತೂರು ಮತ್ತು ನಲ್ಗೊಂಡ ಜಿಲ್ಲೆಗಳಲ್ಲೂ ಈ ಸಂಸ್ಕೃತಿಯ ಸಮುಚ್ಚಯಗಳಿವೆ.

**ಮಧ್ಯ ಹಳೆಶಿಲಾಯುಗದ ವಾತಾವರಣ**: ರಾಜಸ್ಥಾನದ ಥಾರ್ ಮರುಭೂಮಿಯಲ್ಲಿರುವ ಭೂರಚನೆಗಳ ಅಧ್ಯಯನದಿಂದ ಮಧ್ಯ ಹಳೆಶಿಲಾಯುಗದ ಕಾಲಾವಧಿಯಲ್ಲಿ ಒಟ್ಟಾರೆ ಒಣಹವೆಯಿದ್ದು ಆಗಾಗ ಹೆಚ್ಚುವರಿ ಮಳೆಯಾದ ಸಂದರ್ಭಗಳೂ ಇತ್ತೆಂಬುದು ತಿಳಿದುಬಂದಿದೆ. ಸೋನ್ ನದಿಪಾತ್ರದಲ್ಲಿರುವ ಪತ್ವರ ಭೂರಚನೆಯಲ್ಲಿ ನದಿ ಪ್ರಕ್ರಿಯೆಗಳಿಂದ ಸೃಷ್ಟಿಯಾದ ಅಂಟು ಜೇಡಿಮಣ್ಣು ಮತ್ತು ಸೂಕ್ಷ್ಮ ಜಲ್ಲಿಕಲ್ಲಿನ ಸ್ತರಗಳಿವೆ. ಇವು ತೇವ ಮತ್ತು ಒಣಹವೆಯ ಆವರ್ತನದ ಸಂಕೇತವಾಗಿವೆ. ತೇವ ಹವಾಮಾನದಲ್ಲಿ ನದಿ ಕೆಲಸಮಯಕ್ಕಾದರೂ ತುಂಬಿ ಹರಿಯುತ್ತಿದ್ದುದನ್ನು ಜಲ್ಲಿಕಲ್ಲಿನ ಸ್ತರಗಳು ಸೂಚಿಸಿದರೆ ಶುಷ್ಕ ಹವಾಮಾನದಲ್ಲಿ ನೀರು ಬತ್ತಿ ನದಿಯ ತಳದಲ್ಲಿ ಅಲ್ಲಲ್ಲಿ ಪುಟ್ಟ ಕೊಳಗಳುಂಟಾಗುತ್ತಿದ್ದುದಕ್ಕೆ ಜೇಡಿಮಣ್ಣಿನ ಸ್ತರಗಳೇ ಪುರಾವೆ. ಪತ್ವರ ಭೂರಚನೆ ಮತ್ತು ಇದರ ಮೇಲಿರುವ ಅಂತ್ಯ ಹಿಮಯುಗಕ್ಕೆ ಸೇರುವ ಬಾಘೋರ್ ಭೂರಚನೆ ಸಂಧಿಸುವ ಭಾಗದಲ್ಲಿರುವ ಜಲ್ಲಿಕಲ್ಲು–ಜೇಡಿಮಣ್ಣು–ಮರಳುಗಳ ಮಿಶ್ರಸ್ತರದಲ್ಲಿ ಬಲಶಾಲಿಯಾದ ದೊಡ್ಡ ಪ್ರಾಣಿಗಳ ಪಳೆಯುಳಿಕೆಗಳು ಲಭಿಸಿವೆ. ಇವು ಕಾಡು ಮತ್ತು ಜೌಗು ಪ್ರದೇಶಗಳಿಂದ ಕೂಡಿದ ಸವನ್ನ ಹುಲ್ಲುಗಾವಲಿನಂತಹ ಪರಿಸರಕ್ಕೆ ಒಗ್ಗಿದ್ದ ಪ್ರಾಣಿಗಳು. ಪತ್ವರ ಭೂರಚನೆಯಲ್ಲಿ ಮತ್ತು ಗುಲ್ಬರ್ಗ ಜಿಲ್ಲೆಯ ಹುಣಸಗಿ ಬಯಲಿನಲ್ಲಿರುವ ವಜ್ಜಲ್‌ನಲ್ಲಿ ಚಿಲುಮೆ–ಸೃಷ್ಟಿತ ನಿಕ್ಷೇಪದಲ್ಲಿ ಮಧ್ಯ ಹಳೆಶಿಲಾಯುಗದ ಉಪಕರಣಗಳೊಂದಿಗೆ ದೊರೆತ ಸಸ್ಯ ಪಳೆಯುಳಿಕೆಗಳೂ ಮಧ್ಯ ಹಳೆಶಿಲಾಯುಗದಲ್ಲಿ ಇಂತಹ ಹುಲ್ಲುಗಾವಲು ಪರಿಸರವಿದ್ದುದನ್ನು ಸಮರ್ಥಿಸುತ್ತವೆ.

**ಕಾಲಮಾನ**: ರಾಜಸ್ಥಾನದ ದಿದ್ವಾನದ ಬಳಿ ಅಗೆದ 16ಆರ್ ಹೆಸರಿನ ಗುಂಡಿಯಲ್ಲಿ ಮಧ್ಯ ಹಳೆಶಿಲಾಯುಗ ಉಪಕರಣಗಳಿದ್ದ ಸ್ತರ ಥೋರಿಯಮ್/ಯುರೇನಿಯಮ್ ಮತ್ತು ಔಷ್ಣದೀಪ್ತಿ ಕಾಲನಿರ್ಣಯ ತಂತ್ರಗಳ ಪ್ರಕಾರ 1,50,000 ವರ್ಷ ಮುಂಚಿನದು. ಈ ಪ್ರದೇಶದಲ್ಲಿ ಹಿಮಯುಗದ ಕೊನೆಯ ಭಾಗದಲ್ಲಿ ಈ ಸಂಸ್ಕೃತಿ ಕೊನೆಗೊಂಡಿರಬೇಕು. ಮಧ್ಯ ಹಳೆಶಿಲಾಯುಗಕ್ಕೆ ಸಮಕಾಲೀನವಾಗಿರುವ ಪತ್ವರ ಭೂರಚನೆಯನ್ನು 1,00,000ಕ್ಕೂ ಪೂರ್ವದಿಂದ 30,000 ವರ್ಷ ಹಿಂದಿನ ಕಾಲಾವಧಿಯಲ್ಲಿ ತಾತ್ಕಾಲಿಕವಾಗಿ ಇಡಲಾಗಿದೆ. ಸೋನ್ ಮತ್ತು ಬೇಲನ್ ನದಿಪಾತ್ರಗಳಲ್ಲಿರುವ ಸಮಕಾಲೀನ ಭೂರಚನೆಗಳು ಐ.ಆರ್.ಎಸ್.ಎಲ್. ಕಾಲನಿರ್ಣಯದ ಪ್ರಕಾರ 75,000–45,000 ವರ್ಷಗಳಷ್ಟು ಹಿಂದಿನವು. ಸಾಗಿಲೇರು ನದಿಪಾತ್ರದಲ್ಲಿ ಮಧ್ಯ ಹಳೆಶಿಲಾಯುಗಕ್ಕೆ ಸಮಕಾಲೀನವಾದ ನಿಕ್ಷೇಪದಲ್ಲಿ

ದೊರೆತ ಮೂಳೆ ಮತ್ತು ಸಿಹಿನೀರಿನ ಶಂಖಗಳು 23,000 ವರ್ಷ (ಇಂಗಾಲ 14) ಹಳೆಯವು. ಆದರೆ ವೈಜ್ಞಾನಿಕ ಕಾರಣಗಳಿಂದಾಗಿ ಈ ಕಾಲಮಾನ ವಿಶ್ವಾಸಾರ್ಹವಲ್ಲ. ಒಟ್ಟಿನಲ್ಲಿ ಮಧ್ಯ ಹಳೆಶಿಲಾಯುಗ 1,25,000–40,000 ವರ್ಷಗಳ ಹಿಂದಿನ ಕಾಲಾವಧಿಯಲ್ಲಿ ಅಸ್ತಿತ್ವದಲ್ಲಿದ್ದುದರಲ್ಲಿ ಸಂದೇಹವಿಲ್ಲ.

ಕೊನೆಯದಾಗಿ ಮಧ್ಯ ಹಳೆಶಿಲಾಯುಗ ಸಂಸ್ಕೃತಿಯಲ್ಲಿ ಅಭಿವೃದ್ಧಿಯ ಮೂರು ಹಂತಗಳನ್ನು ಗುರುತಿಸಬಹುದು. 1ನೆಯ ಹಂತದ (ಆದಿ) ಸಮುಚ್ಚಯಗಳಲ್ಲಿ ಅಶೂಲಿಯನ್ ಸಂಸ್ಕೃತಿಯ ಉಪಕರಣಗಳ ಬಳಕೆ ಮುಂದುವರೆದಿದ್ದನ್ನು ಕಾಣಬಹುದು. 2ನೆಯ ಹಂತದ (ಮಧ್ಯಮ) ಸಮುಚ್ಚಯಗಳಲ್ಲಿ ಸಿದ್ಧಪಡಿಸಿದ ಶಿಲಾಗಟ್ಟಿಯಿಂದ ತೆಗೆದ ಚಕ್ಕೆಗಳು–ಚಕ್ಕೆಯ ಉಪಕರಣಗಳು ಇವೆ. 3ನೆಯ ಹಂತದ (ಅಂತ್ಯ) ಸಮುಚ್ಚಯಗಳಲ್ಲಿ ಅಲಗುಗಳು ಕಾಣಿಸಿಕೊಳ್ಳುತ್ತವೆ. (ಜಿ.ಎನ್.ಪಿ.)

**ಮಧ್ಯಕಾಲೀನ ಇಸ್ಲಾಮಿ ವಾಸ್ತುಶಿಲ್ಪ (1206–1707):** ಮುಸ್ಲಿಮರ ಆಗಮನಕ್ಕಿಂತ ಮುಂಚೆ ಭಾರತ ತನ್ನದೆ ಆದ ಬೌದ್ಧ, ಜೈನ ಮತ್ತು ಹಿಂದು ಶಿಲ್ಪ ಶೈಲಿಗಳನ್ನು ಬೆಳೆಸಿಕೊಂಡಿತ್ತು.

ಇಸ್ಲಾಂ ಧರ್ಮೀಯರಾದ ಅರಬ್ಬರು, ಪರ್ಷಿಯನ್ನರು ಮತ್ತು ಟರ್ಕರು ತಮ್ಮೊಂದಿಗೆ ಮಧ್ಯ ಏಷ್ಯ, ಉತ್ತರ ಆಫ್ರಿಕ ಹಾಗೂ ಮಧ್ಯಪ್ರಾಚ್ಯದ ದೇಶಗಳಲ್ಲಿಯ ತಮ್ಮದೇ ಆದ ಪ್ರಚಲಿತ ಕಲೆಯನ್ನು ಭಾರತಕ್ಕೆ ತಂದರು.

ಮಧ್ಯಯುಗೀನ ಕಾಲದಲ್ಲಿ ದೆಹಲಿಯ ಸುಲ್ತಾನ ಭಾರತದ ಮೇಲೆ ದಂಡೆತ್ತಿ ಬಂದಾಗ ಇವರೊಡನೆ ಭಿನ್ನ ರೀತಿಯ ನೂತನ ವಾಸ್ತುಶಿಲ್ಪ ಪರಂಪರೆಯೂ ಬಂದಿತು. ಹಿಂದು, ಬೌದ್ಧ ಮತ್ತು ಜೈನರ ಕಟ್ಟಡಗಳ ರಚನೆಯಲ್ಲಿ ಕಂಬ ಮತ್ತು ಅಡ್ಡತೊಲೆ ಜಂತಿಗಳನ್ನು ಉಪಯೋಗಿಸಿ ಕಟ್ಟುತ್ತಿದ್ದರು ಅಥವಾ ಕಲ್ಲುಗಳನ್ನು ಒಂದರ ಮೇಲೆ ಒಂದು ಮುಂಚಾಚುವಂತೆ ಜೋಡಿಸಿ ಚಾವಣಿಗಳನ್ನು ಕಟ್ಟುತ್ತಿದ್ದರು. ಕಮಾನುಗಳನ್ನು ರಚಿಸಿ ಕಟ್ಟುವ ನೂತನ ಶೈಲಿಯ ತಂತ್ರಗಾರಿಕೆ, ಗುಮ್ಮಟ ಮತ್ತು ಮೂಲೆ ಕಂಬ ಗೋಪುರ(ಮಿನಾರೆಟ್)ಗಳನ್ನು ಸುಲ್ತಾನರು ಭಾರತಕ್ಕೆ ಪರಿಚಯಿಸಿದರು. ತೂಗುವ ಪದಕಗಳ ಸೂರುಗಳ ಅಲಂಕರಣೆಗಳಿಂದ ಕಂಬ ಗೋಪುರಗಳು ಮನಮೋಹಕವಾಗಿವೆ. ಛತ್ರಿ ಮತ್ತು ಗುಮ್ಮಟದ ಒಳಮಾಳಿಗೆ ನಿರ್ಮಿತಿಗೆ ಅಂದವನ್ನು ಕೊಟ್ಟಿದೆ.

ಪ್ರಾಚೀನ ಭಾರತದಲ್ಲಿ ವಾಸ್ತು ಅಲಂಕರಣವು ಪ್ರಕೃತಿಯ ಬಗೆಗಿನ ಅದಮ್ಯ ಒಲವಿನಿಂದ ಪ್ರೇರಿತವಾಗಿ ಸಸ್ಯಸಿರಿ, ಮಾನವ ಮತ್ತು ಪ್ರಾಣಿ ಚಿತ್ರಣಗಳಿಂದ ತುಂಬಿತ್ತು. ಇಸ್ಲಾಂ ಧರ್ಮ ಜೀವಂತ ಪ್ರಾಣಿ ಮತ್ತು ವ್ಯಕ್ತಿಗಳ ಚಿತ್ರಣವನ್ನು ನಿಷೇಧಿಸುವುದರಿಂದ ಹೂಬಳ್ಳಿಗಳು, ರೇಖಾವಿನ್ಯಾಸ ಮತ್ತು ಅಂದವಾಗಿ ಬರೆಯಿಸಿದ ಅರೇಬಿಕ್ ಲಿಪಿಗಳ ಮಾದರಿಗಳಿಂದ ಸುಂದರವಾಗಿ ಅಲಂಕರಿಸಲಾಗುತ್ತಿತ್ತು. ಗಾರೆಯಿಂದ ಚಿನ್ನದ ಬಣ್ಣದ ಲೇಪನಕ್ಕೆ ಗಾಜು ಹೊಳಪು ಕೊಟ್ಟು, ಕುಂದಣ ಕೆಲಸದಿಂದ ಕೂಡಿದ ಎದ್ದು ಕಾಣುವ ಹೊಳಪಿನ ಹೆಂಚಿನಿಂದ ಅಲಂಕಾರ ಮಾಡುತ್ತಿದ್ದರು.

**ಗುಲಾಮಿ ಸಂತತಿಯ ಕಾಲ:** ಕುತುಬ್ ಮಿನಾರ್ ಮತ್ತು ಖುವ್ವತ್‌ಉಲ್–ಇಸ್ಲಾಂ ಮಸೀದಿ ಭಾರತದ ವಾಸ್ತುಶಿಲ್ಪದಲ್ಲಿ ಒಂದು ಹೊಸ ಶಕೆಯನ್ನು ಪ್ರಾರಂಭಿಸಿತು. ಕುತುಬುದ್ದೀನ್ ಐಬಕ್(1206–11) ಕುತುಬ್ ಮಿನಾರನ್ನು ಕಟ್ಟಲು ಪ್ರಾರಂಭಿಸಿದನಾದರೂ ಇಲ್ತಮಷ್ ಇದನ್ನು ಪೂರ್ಣಗೊಳಿಸಿದ. ದೆಹಲಿಯ ಕುತುಬ್ ಮಿನಾರ್ ಸ್ತಂಭ ಅತ್ಯಂತ ಪ್ರಸಿದ್ಧವಾದುದು. ಇದನ್ನು ಗುಲಾಮಿ ಸಂತತಿಯ ಮೊದಲ ದೊರೆಯ ಹೆಸರಿನಲ್ಲಿ ನಿರ್ಮಿಸದೆ ಇಲ್ತಮಷ್‌ನ ಗೌರವಾದರಗಳಿಗೆ ಪಾತ್ರನಾಗಿದ್ದ ಮುಸ್ಲಿಂ ಸಂತ ಖ್ವಾಜಾ ಕುತುಬ್ ಉದ್ದೀನ್ ಭಖ್ತಿಯಾರನ ಹೆಸರಿನಲ್ಲಿ ನಿರ್ಮಿಸಲಾಯಿತು.

ತರುವಾಯ ಫಿರೋಜ್ ತುಗಲಕ್(1351–88) ಮತ್ತು ಸಿಕಂದರ್ ಲೋದಿ(1489–1517) ಈ ಕಟ್ಟಡವನ್ನು ಜೀರ್ಣೋದ್ಧಾರ ಮಾಡಿಸಿದರು. ಇದನ್ನು ಕೆಂಪು ಮತ್ತು ಮಾಸಲು ಹಳದಿಬಣ್ಣದ ಕಲ್ಲಿನಿಂದ ನಿರ್ಮಿಸಿದೆ.

ಇದು ತಳದಿಂದ ಮೇಲಕ್ಕೆ ಕ್ರಮೇಣ ವ್ಯಾಸ ಕಡಿಮೆಯಾಗುತ್ತ ಹೋಗುವ ವೃತ್ತಾಕೃತಿ ಹಾಗೂ ಬಹುಕೋನಾಕೃತಿಗಳಿಂದ ರಚಿತವಾದ ಐದಂತಸ್ತಿನ ಕಟ್ಟಡ. ಮೀನಾರ್ 72.54 ಮೀ ಎತ್ತರ ಮತ್ತು ಕೆಳ ಅಂತಸ್ತಿನ ಅಡಿಪಾಯವು 14.78 ಮೀ ವ್ಯಾಸವಿದೆ. ಪ್ರತಿ ಅಂತಸ್ತಿನಲ್ಲಿ ಒಂದು ಕೈಸಾಲೆ(ಮೊಗಸಾಲೆ)ಯಿದ್ದು, ಅದರ ಸೂರಿನ ತಳದಲ್ಲಿ ತೂಗಾಡುವ ಪದಕಗಳಂತಹ ಬೋದಿಗೆ ಗಮನಾರ್ಹವಾದದ್ದು. ಕೆಳಗಿನ ಮಹಡಿಯ ಅಂತಸ್ತಿನ ಗೋಡೆ 24 ಬಾಹುಗಳಿಂದ ಮತ್ತು ವರ್ತುಲ ಸುರುಳಿಗಳಿಂದ ಅಲಂಕೃತವಾಗಿದೆ. ಎರಡನೆಯ ಅಂತಸ್ತು ಕೇವಲ ವರ್ತುಲ ಸುರುಳಿಗಳಿಂದ, ಮೂರನೆಯ ಮಹಡಿಯನ್ನು ಕೇವಲ ಮೂರು ಮೂಲೆಗಳಿಂದ ಮತ್ತು ನಾಲ್ಕನೆಯ ಮಹಡಿಯನ್ನು ಸರಳ ಕೆಂಪು ಕಲ್ಲುಗಳ ನಡುವೆ ಬಿಳಿಯ ಅಮೃತ ಶಿಲೆಯಿಂದ ಅಲಂಕರಿಸಿದೆ. ಮೂರು ಅಂತಸ್ತಿನಲ್ಲಿಯೂ ಕೊಳವೆಯಾಕಾರದ ರೇಖೆಗಳಿವೆ. ನೆರಳು ಬೆಳಕಿನ ಚೆಲ್ಲಾಟದ ಪರಿಣಾಮ ಅದ್ಭುತವಾಗಿದೆ. ಮೇಲಿನ ಎರಡು ಅಂತಸ್ತುಗಳನ್ನು ಫಿರೋಜ್ ತುಗಲಕ್ (1351–88) ನಿರ್ಮಿಸಿದ. ಖುವ್ವತ್–ಉಲ್ ಇಸ್ಲಾಂ ಮಸೀದಿಯಲ್ಲಿ 16.1 ಮೀ ಎತ್ತರ ಮತ್ತು 6.7 ಮೀ ಅಗಲದ ಕಮಾನು ಇದೆ. ಆದರೆ ಇದು ನೈಜ ಕಮಾನಲ್ಲ. ಗೋಡೆಯಿಂದ ಹೊರಚಾಚಿದ ಬೋದಿಗೆಯ ಮೇಲಣ ಎಸ್–ಆಕಾರದ್ದು. ಇಂತಹ ಕಮಾನು ಮೊದಲು ಸುಲ್ತಾನ್ ಘಿಯಾಸುದ್ದೀನ್ ಬಲ್ಬನ್(1266–87) ಸಮಾಧಿಯಲ್ಲಿದೆ ಎಂದು ಕಾಣುವುದಾದರೂ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ.

**ಖಿಲ್ಜಿಕಾಲ (1290–1320):** ಅಲಾಉದ್ದೀನ್ ಖಿಲ್ಜಿ (1296–1316) ನಿರ್ಮಿಸಿದ ಅಲಾಯ್–ದರ್‌ವಾಜಾ (1311) ಚತುರಸ್ರ ವಿನ್ಯಾಸದಲ್ಲಿದೆ. ಇದನ್ನು ಅಷ್ಟೇನೂ ಎತ್ತರವಿಲ್ಲದ ಗುಮ್ಮಟದಿಂದ ಮುಚ್ಚಿದ್ದು ತುದಿಯಲ್ಲಿ ಅಮೃತ ಶಿಲೆಯ ಆಮಲಕ ಕಳಶವಿದೆ. ಕುದುರೆಯ ಲಾಳಾಕಾರದ ಕಮಾನು ಈ ನಿರ್ಮಾಣದಲ್ಲಿ ಭಾರತದಲ್ಲಿ ಮೊದಲನೆಯದು. ಪ್ರತಿಯೊಂದು ಪಾರ್ಶ್ವದ ಮಧ್ಯದಲ್ಲಿ ಸುಂದರವಾದ ಕಮಾನು, ಆಕರ್ಷಕ ಮೂಲೆದಿಂಡು, ಸಮತಲ ಇಳಿಜಾರಿನಿಂದ ಮತ್ತು ಕಮಾನಿನ ಒಳಭಾಗಿನಲ್ಲಿ ಈಟಿಮೊನೆ ಮಾದರಿಯ ಜಾಲರಿಯಿದೆ. ಹೊರಭಾಗ ಮತ್ತು ಒಳಭಾಗದಲ್ಲಿಯ ಫಲಕದ ಮೇಲ್ಮೈಯಲ್ಲಿ ರೇಖಾ ನಕ್ಷೆಗಳ ಅಲಂಕರಣ ನಿರ್ಮಿತಿಯು

ಜುಮ್ಮಾಮಸೀದಿ, ದೆಹಲಿ

ಸುಂದರವಾಗಿ ಕಾಣುವಂತೆ ಮಾಡಿದೆ. ಇಡೀ ಎತ್ತರವನ್ನು ಕೃತಕ ಅಂತಸ್ತುಗಳಾಗಿ ವಿಭಜಿಸಿದ ಪರಿಣಾಮವಾಗಿ ಎರಡು ಸಮ ಭಾಗಗಳಾಗಿವೆ. ಇದರ ಹೊರಕಮಾನು ಮೂಲೆಗಳಲ್ಲಿ ವೃತ್ತ ಪದಕಗಳನ್ನು ಮೊದಲಬಾರಿಗೆ ನಿರ್ಮಿಸಲಾಗಿದೆ.

ಹಜರತ್ ನಿಜಾಮುದ್ದೀನ್ ಔಲಿಯ ಸಮಾಧಿಯ ಹತ್ತಿರದಲ್ಲಿರುವ ಜಮುತ್ ಖಾನಾ ಮಸೀದಿಯ ಮೇಲ್ ಕಟ್ಟಡದ ಭಾರವನ್ನು ಹೊರಲು ಮೂಲೆಗಳಲ್ಲಿ ತೂಗು ಪದಕಗಳ ಅಲಂಕರಣವಿರುವ ತ್ರಿಕೋನಾಕಾರದ ಕಮಾನುಗಳನ್ನು ಬಳಸಲಾಗಿದೆ. ಈ ರೀತಿಯ ನಿರ್ಮಿತಿ ಭಾರತದಲ್ಲಿ ಮೊದಲನೆಯದು.

**ತುಗಲಕ್ ಕಾಲ (1320–1412):** ಘಿಯಾಸುದ್ದೀನ್ ತುಗಲಕ್ ಷಾ (1320–25) ತುಗಲಕಾಬಾದ್ ಕೋಟೆಯನ್ನು ನಿರ್ಮಿಸಿದ. ಇದನ್ನು ಬೇರೆ ಬೇರೆ ಗಾತ್ರದ ಭಾರೀ ಕಲ್ಲುಗಳಿಂದ ನಿರ್ಮಿಸಿದೆಯಲ್ಲದೆ ಹೊರಬದಿಗೆ ಹೊಂದಿಕೊಂಡಂತೆ ಸಮಾನಾಂತರಗಳಲ್ಲಿ ಅರ್ಧವೃತ್ತಾಕಾರದ ಬೃಹತ್ ಬುರುಜುಗಳನ್ನು ಅದರ ಮೇಲೆ ತೆನೆಗಳನ್ನು ಜೋಡಿಸಿದೆ. ಕೋಟೆಯೊಳಗೆ ರಸ್ತೆ ಮತ್ತು ಅರಮನೆಗಳ ಭಗ್ನಾವಶೇಷಗಳಿವೆ.

ಸರೋವರದ ನಡುವಿದ್ದ ಘಿಯಾಸುದ್ದೀನ್ ತುಗಲಕ್‌ನ ಸಮಾಧಿಯು ಪಂಚಭುಜಾಕೃತಿಯ ವಿನ್ಯಾಸದಲ್ಲಿದೆ. ಮೂಲೆಗಳಲ್ಲಿ ಬುಗುರಿ ಆಕಾರದ ಬುರುಜುಗಳಿವೆ. ಈಗ ಸರೋವರ ಒಣಗಿದೆ. ಅಷ್ಟಕೋನಾಕೃತಿಯ ಕೋಣೆಯ ಮೇಲೆ ಅಮೃತ ಶಿಲೆಯ ಗುಮ್ಮಟವಿದ್ದು ಇದಕ್ಕೆ ಸುಂದರವಾದ ಆಮಲಕ ಮತ್ತು ಕಲಶವಿದೆ. ಪ್ರತಿಯೊಂದು ಬದಿಯ ಮಧ್ಯದಲ್ಲಿ ಈಟಿ ಮೊನೆ ಮಾದರಿ ಅಂಚಿನ ಕಮಾನಿದೆ. ಎರಡು ಬದಿಗಳಲ್ಲಿ ಅಲಂಕೃತ ಅಮೃತ ಶಿಲೆಯ ಗೂಡುಗಳು, ಇವುಗಳ ಮೇಲ್ಮೈಯ ಸಾಧಾರಣ ಏಕತಾನತೆಯನ್ನು ಹೋಗಲಾಡಿಸುತ್ತದೆ. ಅದಿಲಬಾದ್, ಕೋಟೆ, ಜಹಾನ್‌ಪನಾಹ್, ವಿಜಯ್ ಮಂಡಲ್, ಕಬಿರುದ್ದೀನ್ ಔಲಿಯ ಸಮಾಧಿ, ಫಿರೋಜ್ ಷಾ ಕೋಟ್ಲ ಮತ್ತು ಫಿರೋಜ್ ಷಾನ ಸಮಾಧಿ ಮುಂತಾದವು ಈ ಕಾಲದ ಇತರ ಮುಖ್ಯ ನಿರ್ಮಾಣಗಳು.

**ಈ ಕಾಲದ ಸಾಮಾನ್ಯವಾಸ್ತು ಶಿಲ್ಪದ ಲಕ್ಷಣಗಳು:** ಇಳಿಜಾರಾದ ಗೋಡೆಗಳು, ರಕ್ಷಣಾ ತೆನೆಗಳ ಸಾಲು, ಬಹು ಗುಮ್ಮಟಗಳ ಮೇಲ್ಛಾವಣಿ ಮತ್ತು ಮೀನಾರಿನಂತಿರುವ, ಚಿಕ್ಕದಾಗುತ್ತ ಹೋಗುವ ಒತ್ತು ಗೋಡೆಗಳು; ಸಹಜವಾಗಿ ದೊರೆಯುವ ಕಲ್ಲುಗುಂಡುಗಳೇ ಮುಖ್ಯ ನಿರ್ಮಾಣ ಸಾಮಗ್ರಿಯಾಗಿದೆ. ಕಮಾನಿನ ಜೊತೆಗೆ ತೊಲೆ ಮತ್ತು ಜಂತಿಗಳನ್ನು ಉಪಯೋಗಿಸಲಾಗಿದೆ.

**ಸಯ್ಯಿದ್‌ರ ಕಾಲ:** ಸಯ್ಯಿದ್ ಮತ್ತು ಲೋದಿ ಕಾಲದಲ್ಲಿ ಚತುರಸ್ರ ಮತ್ತು ಅಷ್ಟಕೋನಾಕೃತಿಯ ವಿನ್ಯಾಸದ ಸಮಾಧಿಗಳನ್ನು ನಿರ್ಮಿಸಲಾಗಿದೆ. ಫಿರೋಜ್ ಷಾನ ಪ್ರಧಾನ ಮಂತ್ರಿ ಖಾನ್–ಐ–ಜಹಾನ್ ತಿಲಂಗನಿಯ ಸಮಾಧಿಯನ್ನು ದೆಹಲಿಯಲ್ಲಿ ಮೊದಲು ಅಷ್ಟಕೋನಾಕೃತಿಯಲ್ಲಿ ನಿರ್ಮಿಸಿದರು. ಮುಬಾರಕ್ ಷಾನ ನಿಧನಾನಂತರ (1434) ನಿರ್ಮಿಸಲಾದ

ಅಷ್ಟಭುಜಾಕಾರದ ಸಮಾಧಿಯ ಮಧ್ಯದಲ್ಲಿ ದೊಡ್ಡ ಕೊಠಡಿ ಮತ್ತು ಸುತ್ತಲೂ ಮೊಗಸಾಲೆಗಳಿವೆ. ಪ್ರತಿಯೊಂದು ಬದಿಯಲ್ಲೂ ಮೂರು ಮೂರು ಪ್ರವೇಶಗಳಿರುವ ಷೋಡಶ ಭುಜಾಕೃತಿಯ ವೇದಿಕೆಯ ಆಧಾರದ ಮೇಲೆ ಗುಮ್ಮಟವಿದೆ. ಪ್ರತಿಯೊಂದು ಮೂಲೆಯಲ್ಲಿ ಗೋಪುರ ಹಾಗೂ ಗುಮ್ಮಟದ ಮೇಲೆ ಲಾಂಧ್ರದ ಮಾದರಿಯಿದೆ. ಹಾಗೆಯೇ ಎಲ್ಲಾ ಬದಿಯ ಮಧ್ಯದಲ್ಲಿ ಮೇಲುಗಡೆ ಕಂಬಗಳ ಅಷ್ಟಕೋನಾಕೃತಿಯ ಛತ್ರಿಗಳು ಗೋಡೆಯ ಹೊರ ಬದಿಯಲ್ಲಿ ತುಗಲಕ್ ಶೈಲಿಯ ಇಳಿಜಾರು ಒತ್ತು ಗೋಡೆಗಳಿವೆ.

ವಿಸ್ತಾರಕ್ಕೆ ಹೋಲಿಸಿದರೆ ಎತ್ತರ ಕಡಿಮೆಯಾದ ಗುಮ್ಮಟದಿಂದಾಗಿ ಈ ಕಟ್ಟಡ ಕುಬ್ಜವಾಗಿರುವಂತೆ ಕಾಣುತ್ತದೆ. ಆದರೆ ಲೋದಿ ಉದ್ಯಾನದಲ್ಲಿರುವ ಮುಹಮ್ಮದ್ ಷಾನ(1444) ಸಮಾಧಿಯಲ್ಲಿ ವೇದಿಕೆ ಮತ್ತು ಛತ್ರಿಗಳ ಎತ್ತರವನ್ನು ಹೆಚ್ಚಿಸಿ ಈ ನ್ಯೂನತೆಯನ್ನು ಸರಿಪಡಿಸಲಾಗಿದೆ.

ಸೈಯದ್ ಅರಸರ ಸಮಾಧಿಗಳು ಸಾಧಾರಣವಾಗಿ ಚೌಕಾಕಾರದ ತಲ ವಿನ್ಯಾಸ ಹೊಂದಿವೆ. ಇವುಗಳ ಹೊರ ಮೈಗೋಡೆಯನ್ನು ಒಂದರ ಮೇಲೆ ಒಂದರಂತೆ ಕೂಡಿಸಿದ ಏಕರೂಪದ ಗೂಡುಗಳ ಸಾಲುಗಳಿಂದ ವಿಭಜಿಸಿದೆ. ಇಂತಹ ವಿಭಜನೆಯಿಂದಾಗಿ ಸಪಾಟಾದ ಗೋಡೆಯು ಏಕತಾನತೆಯಿಲ್ಲದೆ ಇಡೀ ಕಟ್ಟಡ ಹಲವು ಅಂತಸ್ತುಗಳಲ್ಲಿರುವಂತೆ ಕಾಣುತ್ತದೆ. ಪ್ರತಿ ಗೋಡೆಯ ಮಧ್ಯೆ ಒಂದು ಆಯತಾಕಾರದ ವಿನ್ಯಾಸ, ಅದರ ನಡುವೆ ತೊಲೆ ಕಂಬಗಳಿಂದ ರೂಪಿಸಿದ ಕಮಾನಿರುವ ಬಾಗಿಲು ಮತ್ತು ಬದಿಗಳಲ್ಲಿ ಒಂದೊಂದು ಕಿಟಕಿಗಳಿವೆ. ಆಯತಾಕಾರದ ಮೇಲೆ ಹಾಗೂ ಕಟ್ಟಡದ ಮೂಲೆಗಳಲ್ಲಿ ಕಲಶದಂತಹ ಗುಲದಸ್ತಾಗಳಿವೆ.

**ಲೋದಿವಂಶ (1451–1526):** ಚಿರಾಘ್‌ದಿಲ್ಲಿಯಲ್ಲಿರುವ ಬಹ್ಲುಲ್ ಲೋದಿಯ ಸಮಾಧಿ, ಪ್ರತಿ ಬದಿಯಲ್ಲಿ ಮೂರು ಕಮಾನುಗಳು ಮತ್ತು ಐದು ಗುಮ್ಮಟಗಳಿಂದ ರೂಪಿಸಿದ ಚಾವಣಿ ಇರುವ ಚೌಕಾಕಾರದ ಕಟ್ಟಡ. ದೆಹಲಿಯ ಸಿಕಂದರ್ ಲೋದಿಯ (1489–1517) ಸಮಾಧಿ, ಛತ್ರಿಗಳ ಹೊರತಾಗಿ ಮುಹಮ್ಮದ್‌ಷಾನ ಗೋರಿಯ ಎಲ್ಲ ಲಕ್ಷಣಗಳನ್ನೂ ಹೊಂದಿದೆ. ಕಟ್ಟಡದ ಮೇಲಿನ ಮೂಲೆಗಳಲ್ಲಿ ಅಷ್ಟಭುಜಾಕಾರದ ಮೀನಾರುಗಳಿವೆ, ದಕ್ಷಿಣದಲ್ಲಿ ಅಲಂಕೃತ ಪ್ರವೇಶದ್ವಾರ ಮತ್ತು ಪಶ್ಚಿಮದಲ್ಲಿ ಸಣ್ಣದೊಂದು ಪ್ರತ್ಯೇಕ ಮಸೀದಿ ಇದೆ. ಇಂತಹ ಪ್ರತ್ಯೇಕ ಮಸೀದಿ ಮತ್ತು ಉದ್ಯಾನ ಮುಂದೆ ಮೊಗಲ್ ಕಾಲದ ಸಮಾಧಿ ಕಟ್ಟಡಗಳ ವಿಶೇಷ ಲಕ್ಷಣವಾಯಿತು. ಹೀಗೆ ಅಷ್ಟ ಭುಜಾಕಾರದ ಸಮಾಧಿ ಕಟ್ಟಡಗಳ ಬೆಳವಣಿಗೆಯ ಕೊನೆಯ ಹಂತವನ್ನು ನಿರ್ದೇಶಿಸುವ ಈ ಕಟ್ಟಡ ಮೊಗಲ್ ಶೈಲಿಯ ಲಕ್ಷಣಗಳನ್ನು ಒಳಗೊಂಡಿರುವುದರಿಂದ, ಸುಲ್ತಾನ್ ಷಾದಿಯ ಕೋಟೆಯಂತಹ ಪ್ರಾಕಾರ ದಿಂದ ಕೂಡಿದ ಸಮಾಧಿ ಹಾಗೂ ವಿಸ್ತಾರವಾದ ಉದ್ಯಾನ, ಪ್ರತ್ಯೇಕ ಮಸೀದಿ ಕಟ್ಟಡಗಳಿಂದ ಕೂಡಿದ ಮಹೋನ್ನತ ಮೊಗಲ್ ಶೈಲಿಯ ಸಮಾಧಿ ಕಟ್ಟಡ ಸಮುಚ್ಚಯಗಳ ನಡುವಣ ಸ್ಥಿತ್ಯಂತರವನ್ನು ಸೂಚಿಸುವ ಪ್ರಮುಖ ಉದಾಹರಣೆಯಾಗಿದೆ.

ಬಾರಾಗುಂಬಜ್ (1484) ಮತ್ತು ಮೋತಿ-ಕಿ-ಮಸೀದಿಗಳಲ್ಲಿ ಕಂಡುಬರುವ ಲೋದಿಕಾಲದ ಕೆಲವು ಲಕ್ಷಣಗಳು ಮುಗಲರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿದವು. ಬಾರಾಗುಂಬದ್ ಕಂಬ ಮತ್ತು ತೊಲೆಗಳಿಂದ 25 ಅಂಕಣಗಳಾಗಿ ವಿಭಜಿತ ವಾಗಿದ್ದು ಗುಮ್ಮಟಗಳಿಂದ ಕೂಡಿದೆ. ಮುಂಭಾಗವು ಸಮಾನ ಎತ್ತರದ 5 ಕಮಾನುಗಳು ಮತ್ತು ಹಿಂದಿನ ಗೋಡೆಯು ಚಾಚು ಕಿಟಕಿಗಳಿಂದ ಅಲಂಕೃತವಾಗಿವೆ. ಇಳಿಜಾರಾದ ಒತ್ತು ಗೋಡೆಗಳಿಂದ ಹಿಂಬದಿಯ ಗೋಡೆಯನ್ನು ಬಲಪಡಿಸಲಾಗಿದೆ. ಮಸೀದಿಯನ್ನು ಶಾಸನ ಮತ್ತು ಬಳ್ಳಿ ಜಾಲಿ ಮತ್ತು ಬಣ್ಣದ ಹೆಂಚುಗಳಿಂದ ಅಲಂಕರಿಸಲಾಗಿದೆ.

ಸಿಕಂದರ್ ಲೋದಿ ಕಾಲದಲ್ಲಿ ಮಿಯನ್ ಭೋಯ ಕಟ್ಟಿಸಿದ ಮೋತಿ-ಕಿ-ಮಸೀದಿಯು ಜಗತಿಯ ಮೇಲಿದೆ. ಪ್ರಾರ್ಥನೆಯ ಸಭಾಮಂದಿರದಲ್ಲಿ 5 ತೆರೆದ ಕಮಾನು ಗಳಿದ್ದು, ಕಮಾನು ಮೂಲೆಗಳಲ್ಲಿ ಬಣ್ಣದ ಹೆಂಚಿನ ವೃತ್ತ ಫಲಕಗಳಿವೆ. ಹಿಂಬದಿಯಲ್ಲಿ ಇಳಿಜಾರು ಒತ್ತುಗೋಡೆ ಮತ್ತು ಹಿಂಭಾಗದ ಮೇಲಿನ ಮೂಲೆಯಲ್ಲಿ ಎರಡು ಅಂತಸ್ತಿನ ಸಣ್ಣ ನಿರ್ಮಿತಿಗಳಿವೆ. ಪ್ರಾರ್ಥನೆಯ ಸಭಾ ಮಂದಿರ ಕೆಂಪು ಮರಳು ಕಲ್ಲಿನದು ಮತ್ತು ಗೋಡೆಯ ಅಂಚಿನಲ್ಲಿ ಶಾಸನಗಳಿವೆ. ಇದರ ಮೇಲ್ಚಾವಣಿಯಲ್ಲಿ ಗಾರೆಯ ಅಲಂಕಾರವಿದೆ.

**ಸೂರ್ ವಂಶ(1538–55):** ಸಯ್ಯಿದ್ ಮತ್ತು ಲೋದಿಗಳಿಂದ ಪ್ರಾರಂಭವಾದ ಅಷ್ಟಕೋನಾಕೃತಿಯ ಮಾದರಿಯು ಶೇರ್ ಷಾ ಸೂರ್‌ನ ಕಾಲದಲ್ಲಿ ಅಂತಿಮ ಹಂತವನ್ನು ಮುಟ್ಟಿತು. ಶೇರ್‌ಷಾನ ತಂದೆ ಹಸನ್ ಖಾನ್‌ನ ಸಮಾಧಿಯು ಅಷ್ಟಕೋನಾಕೃತಿಯ ವಿನ್ಯಾಸದಲ್ಲಿ ನಿರ್ಮಾಣವಾಗಿದೆ(1535). ಇದರ ಸುತ್ತಲೂ ಮೊಗಸಾಲೆ, ಪ್ರತಿಯೊಂದು ಬದಿಯಲ್ಲಿ ಮೂರು ಕಮಾನು ಮತ್ತು ಮೇಲ್ಭಾಗದಲ್ಲೂ ಅಗಲ ಮತ್ತು ದೊಡ್ಡದಾದ ಗುಮ್ಮಟವನ್ನು ಹೊಂದಿದೆ. ಮೇಲ್ಚಾವಣಿಯಲ್ಲಿ ಗೋಡೆಯ ಪ್ರತಿಯೊಂದು ಅಷ್ಟಕೋನದ ಭಾಗದ ಪಕ್ಕದಲ್ಲಿ ಮೂರು ಚಿಕ್ಕ ಗುಮ್ಮಟಗಳಿವೆ. ಹೀಗಿದ್ದರೂ ಹಿಂದಣ ಕಟ್ಟಡಗಳ ಗೋಡೆ ಇಳಿಜಾರಾಗಿಲ್ಲದೆ ನೇರವಾಗಿರುವುದು ಮತ್ತು ಚಾವಣಿಯ ಮೂಲೆಗಳಲ್ಲಿ ಛತ್ರಿಗಳಿಲ್ಲ ದಿರುವುದು ಗಮನಾರ್ಹ ಅಂಶಗಳು.

ಶೇರ್‌ಷಾನ ಸಮಾಧಿ (1540) ದೊಡ್ಡ ಜಲಾಶಯದ ನಡುವೆ ಕಟ್ಟಿದ 425 ಚ.ಮೀ ಚೌಕಾಕಾರದ ಮತ್ತು 46ಮೀ ಎತ್ತರವಾದ ಕಟ್ಟಡ. ಇದನ್ನು ತಲುಪಲು ದಂಡೆಯಿಂದ ಸಮಾಧಿ ಸ್ಥಳಕ್ಕೆ ಒಂದು ಎತ್ತರಿಸಿ ಮಾಡಿರುವ ಕಾಲುದಾರಿ ಇದೆ. ಮುಖ್ಯ ಕಟ್ಟಡವನ್ನು ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ನಾಲ್ಕು ಮೂಲೆಯಲ್ಲಿ ಕಂಬಗಳ ಮೇಲೆ ಛತ್ರಿಯಿದೆ. ಜಗತಿಯ ಮೇಲೆ ಎರಡು ಅಂತಸ್ತುಗಳಲ್ಲಿ ಚಿಕ್ಕ ಕಂಬಗಳ ಗುಮ್ಮಟಗಳಿವೆ. ಮುಖ್ಯ ಗುಮ್ಮಟ ಬಣ್ಣದ ಹೆಂಚುಗಳಿಂದ ಅಲಂಕೃತವಾಗಿದೆ.

**ಮೊಗಲರ ಕಾಲ (1526–1707):** ಮೊಗಲರು ಭಾರತದಲ್ಲಿ ಆಕಾಲದಲ್ಲಿ ನಡೆಯುತ್ತಿದ್ದ ವಾಸ್ತು ನಿರ್ಮಾಣ ಚಟುವಟಿಕೆಗಳಿಗೆ ತೀವ್ರ ಸಂಚಾಲನೆ ನೀಡಿದರು. ಅವರು ನದೀತೀರದಲ್ಲಿ ಇಲ್ಲವೇ ನೀರು ಸುಲಭವಾಗಿ ದೊರೆಯುವ ಸ್ಥಳಗಳಲ್ಲಿಯೇ ಕಟ್ಟಡಗಳನ್ನು ಕಟ್ಟಿದರು. ಇದರಿಂದ ಕಟ್ಟಡದ ಪರಿಸರದಲ್ಲಿ ಹಚ್ಚ ಹಸುರಿನ ಉದ್ಯಾನ, ಹೂಗಿಡಗಳಿಂದ ತುಂಬಿದ ಮೈದಾನ, ಕಾರಂಜಿ ಹಾಗೂ ಕೃತಕ ಜಲಪಾತಗಳನ್ನು ರೂಪಿಸಲು ಸಾಧ್ಯವಾಯಿತು. ಭೌಗೋಳಿಕ ಪರಿಸರದ ನಿಸರ್ಗದ ಚೆಲುವು ಮತ್ತು ಮಾನವ ನಿರ್ಮಿತ ಕಟ್ಟಡಗಳನ್ನು ಒಂದಕ್ಕೊಂದು ಪೂರಕವಾಗಿರುವಂತೆ ಸಂಯೋಜಿಸುವ ಕಲ್ಪನೆಯಿಂದ ಅನಂತರದ ಕಾಲದ ನಗರ ವಾಸ್ತು ಮತ್ತು ಪೌರ ನಿರ್ಮಾಣಗಳಿಗೆ ಹೊಸ ಆಯಾಮ, ಚೆಲುವು ದೊರೆತವು. ಮುಂದಣ ಕಟ್ಟಡಗಳು ಪರಿಸರದಲ್ಲಿ ತೀರ ಭಿನ್ನವಾಗಿ ಉಳಿಯದೆ, ಉದ್ಯಾನ, ಹರಿಯುವ ನೀರು, ಕಟ್ಟಡ ಇವೆಲ್ಲ ನಿಸರ್ಗ ಸೌಂದರ್ಯಕ್ಕೆ ಪೂರಕವಾಗಿ ನಾದ ಮಾಧುರ್ಯ ದಿಂದ ಶೋಭಿಸುವಂತಾದವು.

ಇದಷ್ಟೇ ಅಲ್ಲದೆ, ನಾಲ್ಕು ಕೇಂದ್ರಗಳುಳ್ಳ ಮೋಹಕ ಎತ್ತರದ ಕಮಾನು ಮತ್ತು ಅರೆಗುಮ್ಮಟದ ಮುಂಚಾಚಿದ ಛಾವಣಿಯ ಪ್ರವೇಶದ್ವಾರವಿರುವ ವಿಶಾಲ ಅಂಗಳ, ಛಜ್ಜಾಗಳಿಂದ ಮುಂಚಾಚಿದ ಚಾವಣಿ, ಪರಸ್ಪರ ಛೇದಿಸುವ ಕಮಾನುಗಳಿಂದ ರೂಪಿಸಿದ ಕಮಾನು ಚಾವಣಿ, ಕಿರುಕತ್ತಿನ ಮೇಲೇರುವ ಗಡ್ಡೆಯಾಕಾರದ ಗುಮ್ಮಟ, ಕೆಳಮುಖನಾದ ಕಮಲದ ಮೊಗ್ಗಿನ ಕಲಶ, ಅರೆಗಂಬಗಳು, ಕುಂದಣದ ಹಾಗೂ ಸ್ವರ್ಣ ಲೇಪನದ ಅಲಂಕರಣ ಇವು ಮೊಗಲ್ ಶೈಲಿಯ ವಿಶೇಷ ಲಕ್ಷಣಗಳು. ಜೊತೆಗೆ ಲೋದಿ ಅರಸರ ಕಾಲದಲ್ಲಿಯೇ ಮೊದಲಾಗಿದ್ದ ಜೋಡಿಗುಮ್ಮಟ (ಒಂದರೊಳಗೊಂದು ಗುಮ್ಮಟಗಳನ್ನು ರಚಿಸಿ ಕಟ್ಟಡದ ಭಾರವನ್ನು ಕಡಿಮೆ ಮಾಡುವ ವಿಧಾನ)ದ ಬಳಕೆ ಮೊಗಲರ ಕಾಲದಲ್ಲಿ ಸರ್ವವ್ಯಾಪಿಯಾಯಿತು.

ಬುಲಂದ ದರ್ವಾಜ, ಫತೇಪುರ್ ಸಿಕ್ರಿ

ಮೊಗಲರ ಮೊದಲ ಮುಖ್ಯ ಕಟ್ಟಡ ಹುಮಾಯೂನನ ಸಮಾಧಿ. ಚೌಕಾಕಾರದ ವಿಶಾಲ ಉದ್ಯಾನವನದ ಮಧ್ಯದಲ್ಲಿರುವ ಈ ಸಮಾಧಿಯಲ್ಲಿ ಪರ್ಷಿಯನ್ ವಾಸ್ತುವಿನ ಪ್ರಭಾವವಿದೆ. ಇದನ್ನು ಹುಮಾಯೂನನ ರಾಣಿ ಹಾಜಿ ಬೇಗಂ ಕಟ್ಟಿಸಿದಳು. 6.4 ಮೀ ಎತ್ತರದ ಕಿರುಕೊಠಡಿಗಳಿಂದ ಕೂಡಿದ ವೇದಿಕೆಯ ಮೇಲೆ ಎರಡಂತಸ್ತಿನ ಮುಖ್ಯ ಕಟ್ಟಡವಿದೆ. ಚೌಕಾಕೃತಿಯ ಮೂಲೆಗಳನ್ನು ಕತ್ತರಿಸಿ ರೂಪಿಸಿದ ಅಷ್ಟ ಭುಜದ ತಲವಿನ್ಯಾಸ ವಿರುವ ಈ ಕಟ್ಟಡದ ಮೇಲೆ ವೃತ್ತಾಕಾರದ ವೇದಿಕೆಯಿದ್ದು ಅದರ ಕಂಠದಿಂದ ಜೋಡಿ ಗುಮ್ಮಟ ಮೋಹಕವಾಗಿ ಮೇಲೇಳುತ್ತದೆ. ಒಳಕೊಠಡಿ ದೊಡ್ಡದಾಗಿ ನಾಲ್ಕು ಮೂಲೆಯಲ್ಲೂ ಅದೇ ರೀತಿಯ ಸಣ್ಣ ಅಂಕಣಗಳಿಂದ ಸುತ್ತುವರೆದು, ಮೊಗಸಾಲೆ ಮತ್ತು ಕೈಸಾಲೆಯಿಂದ ಕೂಡಿದೆ. ತೆಳುವಾದ ಕಂಬದ ಮೇಲೆ ಲೋಧಿ ಮಾದರಿಯ ಛತ್ರಿಗಳು ಹಾಗೂ ಅಂದವಾದ ಶಿಖರವಿದೆ. ಇದರಲ್ಲಿ ಸ್ಥಳೀಯ ಪ್ರಭಾವವನ್ನು ಕಾಣಬಹುದು.

ಅಕ್ಬರನ ಕಾಲದ ಬಹಳಷ್ಟು ಕಟ್ಟಡಗಳು ಕೆಂಪು ಮರಳುಕಲ್ಲಿನಲ್ಲಿ ಕಟ್ಟಲಾದವು. ಆಗ್ರಾದಲ್ಲಿಯ ಹೆಚ್ಚುಕಡಿಮೆ ವೃತ್ತಾಕಾರದ ವಿನ್ಯಾಸದ ಕೋಟೆಯ ನಿರ್ಮಿತಿ 1565ರಲ್ಲಿ ಪ್ರಾರಂಭವಾಗಿ 1574ರಲ್ಲಿ ಪೂರ್ಣವಾಯಿತು. ಇದರ ಗೋಡೆ 21.5 ಮೀ ಎತ್ತರವಾಗಿದೆ. ಉತ್ತರದ ದೆಹಲಿದ್ವಾರ, ದಕ್ಷಿಣದ ಅಮರ್‌ಸಿಂಗ್ ದ್ವಾರ, ಪೂರ್ವದಲ್ಲಿ ನೀರಿನ ದ್ವಾರ ಮತ್ತು ಪಶ್ಚಿಮದಲ್ಲಿ ಷಹಬುರ್ಜ್ ದ್ವಾರ ಎಂಬ ನಾಲ್ಕು ದ್ವಾರಗಳಿವೆ. ಎರಡು ಕಂದಕಗಳು ಕೋಟೆಯನ್ನು ಸುತ್ತುವರಿದಿವೆ. ಹೊರಗಿನ ಕಂದಕ 7.5 ಮೀ ಅಗಲ, ಒಳಗಿನದು 9 ಮೀ. ನೌಬತ್‌ಖಾನಾ,

ಅಕ್ಬರಿ ಮಹಲ್, ಜಹಾಂಗೀರ್ ಮಹಲ್, ಅಂಗೂರಿಬಾಗ್, ಖಾಸ್ ಮಹಲ್, ಶೀಷ್ ಮಹಲ್, ಮುಸಮ್ಮಮ್ ಬುರ್ಜ ಮಚಿಭವನ ದಿವಾನ್–ಇ–ಖಾಸ್, ನಗೀನಾ ಮಸೀದಿ, ಮೀನಾ ಬಜಾರ್, ಮೋತಿ ಮಸೀದಿ, ದಿವಾನ್–ಇ–ಆಮ್, ದರ್ಶಿನಿ ದರ್ವಾಜ ಮತ್ತು ಅನೇಕ ಕಟ್ಟಡಗಳಿವೆ. ಮುಸಮ್ಮಮ್ ಬುರ್ಜ್ ನೀಲಿ, ಕೆಂಪು, ಹಸಿರು, ಬಿಳಿ ಮುಂತಾದ ಆಕರ್ಷಕ ಬಣ್ಣಗಳ ಅರೆಪ್ರಶಸ್ತ ಶಿಲೆಗಳಿಂದ ಮಾಡಿದ ಕುಂದಣದ ಕುಸುರಿ ಅಲಂಕರಣಕ್ಕಾಗಿ ಪ್ರಖ್ಯಾತವಾಗಿದೆ. ಲಾಹೋರ್, ಅಲಹಾಬಾದ್, ರೋಹತಾಸ್‌ಗಡ್ ಮೊದಲಾದ ಸ್ಥಳಗಳಲ್ಲಿ ಅಕ್ಬರ್ ಕೋಟೆಗಳನ್ನು ಕಟ್ಟಿಸಿದ.

**ಫತೇಪುರ್‌ಸಿಕ್ರಿ:** 1574ರಲ್ಲಿ ಅಕ್ಬರ್ ತನ್ನ ರಾಜಧಾನಿಯನ್ನು ದೆಹಲಿಯಿಂದ ಹೊಸದಾಗಿ ಕಟ್ಟಿದ ಫತೇಪುರ್‌ಸಿಕ್ರಿಗೆ ಬದಲಾಯಿಸಿ, 1585ರವರೆಗೂ ಅಲ್ಲಿಂದ ಆಳಿದ. 9 ಕಿಮೀ ಚದರಕ್ಕೂ ಹೆಚ್ಚು ವಿಸ್ತಾರವಾದ ಇಲ್ಲಿನ ಕೋಟೆಯ ಆವರಣದಲ್ಲಿ ಅಕ್ಬರ್‌ನ ಕಾಲದ ವಿಶಿಷ್ಟ ಶೈಲಿಯ ಹಲವಾರು ಕಟ್ಟಡಗಳಿವೆ. ಅವುಗಳಲ್ಲಿ ನೌಬತ್‌ಖಾನಾ, ದಿವಾನ್–ಇ–ಆಮ್, ಖ್ವಾಜಾ ಘರ್ (ಸ್ವಪ್ನ ಸೌಧ), ಅರಮನೆಯ ಗ್ರಂಥಾಲಯ, ಹುಜ್ರಾ–ಇ–ಅನುಪ್ ತಾಲಾಬ್, ಪಾಂಚ್‌ಮಹಲ್, ದಫ್ತರ್‌ಖಾನಾ, ಶೆಬ್ಬಿಸ್ತಾನ್–ಇ–ಇಕ್ಬಾಲ್ (ಅಕ್ಬರನ ಪತ್ನಿ, ರಾಜಾ ಮಾನಸಿಂಗ್‌ನ ತಂಗಿ, ಜೋಧಾಬಾಯಿಯ ಅರಮನೆ), ಹವಾಮಹಲ್, ಹಾಥಿಪೋಲ್ (ಗಜಶಾಲೆ), ಅಶ್ವಶಾಲೆ, ಸಾಕಿದ ಜಿಂಕೆಗಳಿಗೆ ಆಹಾರ ನೀಡುತ್ತಿದ್ದ ಕಂಬ, ಹಿರನ್‌ಮೀನಾರ್, ಸರಾಯ್, ಜಾಮೀ ಮಸೀದಿ, ಷೇಖ್ ಸಲೀಂಚಿಸ್ತಿಯ ಅದ್ಭುತ ಅಲಂಕರಣದ ಸಮಾಧಿ, ಬುಲಂದ್ ದರ್ವಾಜಾ, ರಂಗಮಹಲ್ ಮುಂತಾದವು ಮುಖ್ಯವಾದವು.

ಇಲ್ಲಿನ ದಿವಾನ್–ಇ–ಆಮ್ (ಸಾರ್ವಜನಿಕ ಸಭಾಂಗಣ) ಆಯತಾಕಾರದ ದೊಡ್ಡ ಹಜಾರ. ಅದರ ಸುತ್ತಲೂ ಮೇಲ್ಚಾವಣಿಯಿರುವ ಹಾದಿ ಮತ್ತು ಪಶ್ಚಿಮದಲ್ಲಿ ಸಿಂಹಾಸನದ ಕೋಣೆಯಿದೆ. ದಿವಾನ್–ಇ–ಖಾಸ್ (ಆಪ್ತ ಸಮಾಲೋಚನಾ ಗೃಹ) ಚೌಕಾಕಾರದ ವಿಶಿಷ್ಟ ವಿನ್ಯಾಸದ ಕಟ್ಟಡ. ಇದರ ಪ್ರತಿ ಬದಿಯಲ್ಲಿ ತೆರೆದ ಕಿಂಡಿ ಮತ್ತು ಅಧಿಕ ಕೆತ್ತನೆಯಿರುವ ಕಂಬ ಮಧ್ಯದಲ್ಲಿ ತಲೆಕೆಳಕಾದ ಕಮಲದಾಕಾರದ ಬೋದಿಗೆಯನ್ನು ಆಧರಿಸಿರುವ ಕಟಾಂಜನಸಹಿತವಾದ ವೃತ್ತಾಕಾರದ ವೇದಿಕೆಯಿದೆ. ಈ ವೇದಿಕೆಯ ನಾಲ್ಕು ಮೂಲೆಗಳಲ್ಲಿರುವ ಸೇತುವೆದಾರಿಯು, ಕಟ್ಟಡದ ಎರಡನೆಯ ಅಂತಸ್ತಿನಲ್ಲಿರುವ ಪರಸ್ಪರ ಸಂಪರ್ಕವಿರುವ 9 ಕೊಠಡಿಗಳಲ್ಲಿ, ಮೂಲೆಗಳಲ್ಲಿರುವ ಮುಖ್ಯ ಕೊಠಡಿಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಈ ಕಟ್ಟಡದ ಮೇಲ್ಚಾವಣಿಯ ಮೇಲಿರುವ ಇಂತಹುದೇ ವೃತ್ತಾಕಾರದ ವೇದಿಕೆಯನ್ನು ಚಕ್ರವರ್ತಿಯು ಸೂರ್ಯೋಪಾಸನೆಗೆ ಉಪಯೋಗಿಸಿರಬಹುದು. ತುರ್ಕಿಯ ಸುಲ್ತಾನಳ ಅರಮನೆ ಸುಂದರ ಕುಸುರಿ ಕೆತ್ತನೆಯಿಂದ ಆಭರಣದ ಸಂಪುಟದಂತೆ ಕಾಣುವುದು. ಖ್ವಾಬ್‌ಘರ್ ಅಥವಾ ಅಕ್ಬರನ ಶಯನಗೃಹ ಚೌಕಾಕಾರದ ಕೋಣೆಯಾಗಿದ್ದು, ಕೈಸಾಲೆಯ ಚಾವಣಿಯ ಹೆಂಚುಗಳನ್ನೇ ಹೋಲುವಂತೆ ಕಲ್ಲಿನಿಂದ ಮಾಡಲಾಗಿದೆ. ಕೋಣೆಯನ್ನು ಮನೋಹರವಾಗಿ ಚಿತ್ರಿಸಲಾಗಿದೆ. ಪಾಂಚ್‌ಮಹಲ್ ಕ್ರಮೇಣ ಕಿರಿದಾಗುತ್ತಾ ಹೋಗುವ, ಕಂಬ, ತೊಲೆಗಳಿಂದಲೇ ರೂಪಿಸಿದ ಐದಂತಸ್ತಿನ ಆಕರ್ಷಕ ಕಟ್ಟಡ. ವಿವಿಧ ರೀತಿಯ ಕಂಬಗಳನ್ನು ಹೊಂದಿರುವ 5 ಹರ್‌ಮ್ಸರ್‌ರೊಂದಿಗೆ ಸಂಪರ್ಕ ಹೊಂದಿದೆ. ಇದನ್ನು ಮಹಿಳೆಯರು ಗಾಳಿ ಗೋಪುರ (ವಾಯುಸೇವನೆ)ದಂತೆ ಉಪಯೋಗಿಸುತ್ತಿದ್ದರು. ಮಾರ್‍ಯಮ್–ಕಿ–ಕೋಠಿಯ ಒಂದು ಕಂಬದಲ್ಲಿ ರಾಮ, ಹನುಮಾನ್ ಮತ್ತು ಕೀರ್ತಿಮುಖದ ಉಬ್ಬುಶಿಲ್ಪಗಳು ಹಾಗೂ ಅನೇಕ ವರ್ಣಚಿತ್ರಗಳಿವೆ. ಜೋಧ್‌ಬಿಯಸ್ ಅರಮನೆಯನ್ನು ಹೋಲುವ ನಾಲ್ಕು ಅಂಗಳದ ಸುತ್ತಲೂ ಒಟ್ಟು ನಾಲ್ಕು ಕೋಣೆಗಳಿವೆ. ಪಶ್ಚಿಮ ದಿಕ್ಕಿನದನ್ನು ಮಂದಿರದಂತೆ ಉಪಯೋಗಿಸಲಾಗಿದೆ. ಮೇಲಿನ ಅಂತಸ್ತಿಗೆ ಆಕಾಶ ನೀಲಿ ಬಣ್ಣದ ಹೆಂಚುಗಳಿರುವುದು ಗಮನಾರ್ಹ. ನಾಲ್ಕು ಕೋಣೆಗಳ ನೆಲಅಂತಸ್ತು ಮತ್ತು ಎರಡು ಕೋಣೆಗಳ ಮೊದಲನೆ ಅಂತಸ್ತು ಇರುವ ಬೀರಬಲ್ ಮನೆಯು ವಿಶಿಷ್ಟ ಕೆತ್ತನೆಯ ಕಟ್ಟಡ.

ಜಾಮಿ ಮಸೀದಿ ವಿಸ್ತಾರವಾದ ಆವರಣದಲ್ಲಿದೆ. ಪ್ರಾರ್ಥನಾ ಕೋಣೆ ಮತ್ತು ಮೇಲ್ಚಾವಣಿ ಹೊಂದಿದ ಹಾದಿಯಿದೆ. ಮೊದಲಿಗೆ ಈ ಕಟ್ಟಡದ ಪ್ರವೇಶದ್ವಾರ (ಬಾದ್‌ಶಾಹಿ ದರ್ವಾಜಾ) ಪೂರ್ವದಲ್ಲಿತ್ತು, ಆದರೆ ಗುಜರಾತನ್ನು ಜಯಿಸಿದ ಮೇಲೆ ಭಾರತದಲ್ಲಿಯೇ ಅತ್ಯಂತ ದೊಡ್ಡದಾದ ಬುಲಂದ್ ದರ್ವಾಜಾವನ್ನು ಇದಕ್ಕೆ ಸೇರಿಸಲಾಯಿತು. ಕಮಾನು ಕೊಠಡಿಗಳಿರುವ ವಿಶಾಲ ಪ್ರಾಕಾರದೊಳಗಿರುವ ಜಾಮೀ ಮಸೀದಿ ಪ್ರಾರ್ಥನಾ ಕೊಠಡಿ ಮತ್ತು ಹಜಾರಗಳಿಂದ ಕೂಡಿದೆ. ಷೇಕ್ ಸಲೀಂ ಚಿಷ್ತಿಯ ಸಮಾಧಿ ಅಮೃತಶಿಲೆಯಲ್ಲಿ ನಿರ್ಮಾಣವಾದ ಮೊಗಲರ ಮೊದಲ ಕಟ್ಟಡ.

ಹಂಪಿಯಂತೆ ರಾಷ್ಟ್ರೀಯ ಮಹತ್ತ್ವದ ಉತ್ಖನನ ಯೋಜನೆಯಲ್ಲಿ ಫತೇಪುರ್ ಸಿಕ್ರಿಯಲ್ಲಿಯೂ ಭೂ ಶೋಧನೆ ಕೈಗೊಳ್ಳಲಾಗಿದ್ದು, ಅನೇಕ ಮಹತ್ವದ ಮಾಹಿತಿ ಬೆಳಕಿಗೆ ಬಂದಿದೆ. ವಿವಿಧ ಪ್ರದೇಶ, ಧರ್ಮಗಳ ವಿದ್ವಾಂಸರನ್ನು ಆಹ್ವಾನಿಸಿ, ಅವರೊಂದಿಗೆ ಸರ್ವಧರ್ಮಸಮನ್ವಯದ ಬಗೆಗೆ ಅಕ್ಬರ್ ಚರ್ಚಿಸಲು ಬಳಕೆಯಾಗುತ್ತಿದ್ದ ಇಬಾದತ್‌ಖಾನಾ ಭವನ ಇಂತಹ ಕಟ್ಟಡಗಳಲ್ಲಿ ಒಂದು. ಉತ್ಖನನದಲ್ಲಿ ಶೋಧಿತವಾದ ಇತರ ಕಟ್ಟಡಗಳಲ್ಲಿ ಮುತ್ತುರತ್ನ, ರೇಷ್ಮೆವಸ್ತ್ರ ಮುಂತಾದವುಗಳ ಅಂಗಡಿಗಳಿದ್ದ ಅಂಗಡಿಬೀದಿ, ಅಶ್ವಶಾಲೆ, ಸ್ನಾನಗೃಹ, ಉತ್ತರ ಭಾರತದಲ್ಲಿನ ಮೊಟ್ಟಮೊದಲ ಕೆಥೊಲಿಕ್‌ರ ಆರಾಧನಾಮಂದಿರ ಮುಂತಾದವು ಮುಖ್ಯವಾದವು.

ಸಿಕಂದ್ರಾದಲ್ಲಿ ಬಹಿಸ್ತಾಬಾದ್ ಎಂದು ಕರೆಯುವ ಉದ್ಯಾನದಲ್ಲಿ ಅಕ್ಬರನ ಸಮಾಧಿ ಮಂದಿರವಿದೆ. ಇದರ ದಕ್ಷಿಣ ದ್ವಾರದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಿನಾರೆಟ್(ಗೋಪುರ ಕಂಬ)ಗಳಿವೆ. ಬಿಳಿ ಅಮೃತಶಿಲೆಯಿಂದ ಮಾಡಲಾದ ಇವುಗಳ ಚಾವಣಿ 25 ಮೀ ಎತ್ತರವಾಗಿವೆ. ಕಟ್ಟಡದ ಹೊರಭಾಗವನ್ನು ವಿಪುಲ ಕುಸುರಿ ಕೆಲಸದಿಂದ ಅಲಂಕರಿಸಿದೆ. 5 ಅಂತಸ್ತಿನ ಸಮಾಧಿ ಕಟ್ಟಡ ಎತ್ತರಕ್ಕೆ ಹೋಗುತ್ತಾ ಚಿಕ್ಕದಾಗಿದೆ. ಪ್ರತಿಯೊಂದು ಅಂತಸ್ತಿನ ಹೊರ ಪರಿಧಿಯಲ್ಲಿ ಮೇಲ್ಚಾವಣಿಯಿರುವ ಕಮಾನುವುಳ್ಳ ಶಾನ್ ಸುತ್ತುವರೆದಿದೆ.

ಜಹಾಂಗೀರನ ಕಾಲದಲ್ಲಿ ನಿರ್ಮಾಣವಾದ ಇತ್ಮದ್–ಉದ್–ದೌಲಾನ ಗೋರಿ ಭಾರತದಲ್ಲಿ ಪರ್ಷಿಯನ್ ಮಾದರಿಯ ಕುಂದಣ ಕೆಲಸದ ಒಂದು ವಿಶಿಷ್ಟ ವಾಸ್ತುಕಟ್ಟಡ. ಉದ್ಯಾನದ ಮಧ್ಯದಲ್ಲಿ ನಿರ್ಮಿಸಲಾಗಿರುವ ಈ ಸಮಾಧಿ ಸ್ಮಾರಕ ಎತ್ತರವಾದ ವೇದಿಕೆಯ ಮೇಲೆ ಕೆಂಪು ಮರಳುಕಲ್ಲು ಮತ್ತು ಶುದ್ಧವಾದ ಬಿಳಿ ಅಮೃತಶಿಲೆಯಲ್ಲಿ ನಿರ್ಮಾಣವಾಗಿದೆ. ಈ ಕಟ್ಟಡ ಎಲ್ಲಾ ಭಾಗಗಳಲ್ಲಿಯೂ ಅತ್ಯಾಕರ್ಷಕ ಕುಂದಣದ ಕೆತ್ತನೆಯಿಂದ ಅಲಂಕೃತವಾಗಿದೆ. ದ್ರಾಕ್ಷಾರಸದ ಬಟ್ಟಲು, ಗುಲಾಬಿ ನೀರಿನ ಪಾತ್ರೆ, ಸೈಪ್ರಸ್ ಮರ ಮುಂತಾದವುಗಳ ಚಿತ್ರದಿಂದ ಅಲಂಕರಿಸಲಾಗಿದೆ. ಬಣ್ಣದ ಕಲ್ಲುಗಳು ಮತ್ತು ಸುಂದರವಾದ ಹೊಳಪಿನ ಹೆಂಚುಗಳನ್ನು ಉಪಯೋಗಿಸಿ ಅಲಂಕರಿಸಿರುವುದರಿಂದ ಇದು ನಯನಮನೋಹರವಾಗಿದೆ. ಇದು ಅಕ್ಬರನ

**ಹಜರತ್ ಖಲಿಲುಲ್ಲನ ಚೌಕಂಡಿ**

ಕಾಲದ ವಾಸ್ತುಶಿಲ್ಪ ಮಾದರಿಯಿಂದ ಷಹಜಹಾನನ ಕಾಲದ ಶೈಲಿಯ ಪರಿವರ್ತನೆಯ ಹಂತವನ್ನು ತೋರಿಸುತ್ತದೆ. ಹಜಾರಗಳ ನೆಲವನ್ನು ಬಿಳಿ ಅಮೃತಶಿಲೆಯನ್ನು ಜೋಡಿಸಿ ಅಲಂಕರಿಸಲಾಗಿದೆ. ಹಜಾರದ ಮೇಲ್ಚಾವಣಿ ಚಿನ್ನ ಮತ್ತು ಬೆಳ್ಳಿಯ ವರ್ಣಗಳಿಂದ ಅಲಂಕೃತವಾಗಿದೆ.

ಷಹಜಹಾನನ ಕಾಲದಲ್ಲಿ ಅಜ್ಮೀರ್, ಲಾಹೋರ್, ಶ್ರೀನಗರ ಮತ್ತು ಇತರೆ ಕಡೆಗಳಲ್ಲಿ ಮಹತ್ತ್ವದ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಈತ ಆಗ್ರದಲ್ಲಿ 11 ವರ್ಷ ರಾಜ್ಯವಾಳಿದ ಅನಂತರ ದೆಹಲಿಗೆ ರಾಜಧಾನಿಯನ್ನು ಬದಲಾಯಿಸಿದ. 1639ರಲ್ಲಿ ಖಿಲಾ–ಇ–ಮುಬಾರಕ್ (ಕೆಂಪುಕೋಟೆ)ಅನ್ನು ಪ್ರಾರಂಭಿಸಿ 1648ರ ಅನಂತರ ಪೂರ್ಣಗೊಳಿಸ ಲಾಯಿತು. ಇದರ ವಾಸ್ತುಶಿಲ್ಪಿ ಮುಕರ್‌ರಾಮತ್ ಖಾನ್. ಇದಕ್ಕೆ 9 ಕೋಟಿ ರೂ. ಖರ್ಚಾಗಿದೆ. ಈ ಕೋಟೆ ಅಷ್ಟಕೋನಾಕೃತಿಯ ವಿನ್ಯಾಸದಲ್ಲಿದ್ದು, ಉತ್ತರ–ದಕ್ಷಿಣ 960 ಮೀ ಪೂರ್ವ–ಪಶ್ಚಿಮ 540 ಮೀ ವಿಸ್ತೀರ್ಣವಾಗಿದೆ. ನದಿಯ ಕಡೆ ಗೋಡೆಗಳು 27 ಮೀ ಎತ್ತರವಾಗಿವೆ. ಒಳಗಿನ ಪ್ರಮುಖ ಕಟ್ಟಡಗಳು ನಾಬತ್‌ಖಾನಾಛತ್ತಾ ಚೌಕ್, ದಿವಾನ್–ಇ–ಬರಿಷ್ಠ ಆಮ್, ಲಾಲ್ ಪರ್ದಹ್, ರಂಗ್ ಮಹಲ್, ದಿವಾನ್–ಇ–ಬಾರ್ ಮಹಲ್, ನಹರ್–ಇ–ಬರಿಷ್ತ, ನ್ಯಾಯದಂಡ, ಮುಥಮ್ಮಾನ್ ಬುರ್ಜ್, ಮೋತಿ ಮಸೀದಿ, ಹಯತ್ ಬಕ್ಷ್ ಉದ್ಯಾನ, ಸವನ್ ಭದೋಸ್, ಜಫರ್ ಮಹಲ್, ಷಾಹ್‌ಬುರ್ಜ್ ಮತ್ತು ಮಹಲ್–ಇ–ಮುಮ್ತಾಜ್ ಇವುಗಳಲ್ಲಿ ಆಯತಾಕಾರದ(27x20 ಮೀ.), ದಿವಾನ್–ಇ–ಖಾಸ್(27x20ಮೀ) ಮಹಲಿನ 32 ಕಂಬಗಳಲ್ಲಿ ಕುಸುರಿ ಕೆತ್ತನೆಯನ್ನು ಮಾಡಿ ಅಮೂಲ್ಯ ಹರಳುಗಳನ್ನು ಹುದುಗಿಸಲಾಗಿದೆ. ಈ ಕಂಬಗಳ ಮೇಲೆ ಬೆಳ್ಳಿಯ ಮೇಲ್ಚಾವಣಿ ಇದೆ. ಇದನ್ನು 1779ರಲ್ಲಿ ಜಾಟರು ನಾಶ ಮಾಡಿದರು. ಮಧ್ಯ ಕೋಣೆಯಲ್ಲಿರುವ ಬಿಳಿ ಅಮೃತಶಿಲೆಯ ವೇದಿಕೆ ಷಹಜಹಾನನ ಪ್ರಸಿದ್ಧ ತಖ್ತ–ಅ–ತಾವುಸ್‌ಗೆ ಆಧಾರವಾಗಿತ್ತು. ಈ ಮಹಲನ್ನು 9 ಕೋಟಿ ವೆಚ್ಚ ಹಾಗೂ 7 ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು. ಇಲ್ಲಿದ್ದ ಸುಪ್ರಸಿದ್ಧ ಮಯೂರ ಸಿಂಹಾಸನವು 1.5 ಚ.ಮೀ ಅಳತೆಯ, 1 ಲಕ್ಷ ತೊಲ ತೂಕದ ಬಂಗಾರದ್ದಾಗಿತ್ತು. ಇದರ ಮೇಲ್ಭಾಗದಲ್ಲಿ ಅಮೂಲ್ಯವಾದ ಹರಳುಗಳನ್ನು, ಕೆಳಭಾಗದಲ್ಲಿ ಬಂಗಾರದೊಡನೆ ಗೋಮೇಧಿಕವನ್ನು ಹುದುಗಿಸಲಾಗಿದೆ. ಸಿಂಹಾಸನದ ಚಾಚು ಭಾಗದಲ್ಲಿ 12 ಪಚ್ಚೆ ಬಣ್ಣದ ಕಲ್ಲುಗಳಿವೆ; ಏರಲು ಸುಂದರವಾದ ಬೆಳ್ಳಿಯ ಮೆಟ್ಟಿಲುಗಳಿವೆ.

ನಾದಿರ್ ಷಾ ಇದನ್ನು 1739ರಲ್ಲಿ ಲೂಟಿ ಮಾಡಿ ಪರ್ಷಿಯಕ್ಕೆ ಸಾಗಿಸಿದ. ಪ್ರಸ್ತುತ ಈ ಅಮೂಲ್ಯ ಸಿಂಹಾಸನ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ಪ್ರಪಂಚದಲ್ಲಿಯೇ ಅತ್ಯಂತ ಸುಂದರ ಕೃತಿಗಳಲ್ಲೊಂದು ಎಂದು ಪ್ರಸಿದ್ಧವಾಗಿರುವ ತಾಜ್‌ಮಹಲ್ ಆಗ್ರದಲ್ಲಿ ಯಮುನಾ ನದಿಯ ದಡದ ಮೇಲಿದೆ. ಇದನ್ನು ಷಹಜಹಾನ್ 1631–48 ರಲ್ಲಿ ತನ್ನ ಪ್ರೀತಿಯ ಮಡದಿ ಮಮ್ತಾಜಳ ಮಧುರ ನೆನಪಿಗಾಗಿ ಕಟ್ಟಿಸಿದ. ಈ ಭವ್ಯ ಕಟ್ಟಡವನ್ನು ರೂಪಿಸಿದ ಪ್ರಧಾನ ಶಿಲ್ಪಿ ಉಸ್ತಾದ್ ಈಸ್, ನಿರ್ಮಾಣ ಕಾರ್ಯದ ಮೇಲ್ವಿಚಾರಣೆಯನ್ನು ನಡೆಸಿದವರು ಮುಕ್ರಾಮೆತ್ ಖಾನ್ ಮತ್ತು ಮೀರ್ ಅಬ್ದುಲ್ ಕರೀಮ್. ಇದರ ಗೋಪುರಕ್ಕೆ ಭವ್ಯವಾದ ಆಕಾರವನ್ನು ಕೊಟ್ಟವನು ಇಸ್ಮೈಲ್ ಖಾನ್. ಅಲಂಕರಣ ಲಿಪಿಯ ವಿನ್ಯಾಸಕ ಅಮಾನತ್ ಖಾನ್, ಕುಂದಣದ ಕೆಲಸ ಮಾಡಿದವರು ಜಿರಂಜಿಲಾಲ್, ಮುನ್ನೂಲಾಲ್ ಮೊದಲಾದವರು. ದಕ್ಷಿಣದಲ್ಲಿರುವ ಮುಖ್ಯ ಪ್ರವೇಶದ್ವಾರದ ಮಧ್ಯದಲ್ಲಿ ಆಯತಾಕಾರದ ಚೌಕಟ್ಟಿನಲ್ಲಿ ಅಳವಡಿಸಿದ ಬೃಹತ್ತಾದ ಕಮಾನು ಚಾವಣಿಯಿದೆ. ಪಕ್ಕಗಳಲ್ಲಿ ಚಿಕ್ಕ ಕಮಾನು ಗೂಡುಗಳ ಸಾಲುಗಳು ಎರಡು ಹಂತಗಳಲ್ಲಿದ್ದು ಮೂಲೆಗಳಲ್ಲಿ ಗುಮ್ಮಟ ಸಹಿತವಾದ ಅಷ್ಟಕೋನಾಕಾರದ ಸಣ್ಣ ಗೋಪುರಗಳಿವೆ. ದೂರದಿಂದ ನೋಡಿದಾಗ ಇಡೀ ಕಟ್ಟಡ, ತೆಳು ಪಾರದರ್ಶಕ ಮುಸುಕು ಹೊದ್ದ ಅಪ್ಸರೆ ಮೋಡಗಳ ಮರೆಯಲ್ಲಿ ತೇಲುತ್ತಿರುವಂತೆ ಮೋಹಕ ಭ್ರಾಂತಿಯನ್ನುಂಟುಮಾಡುತ್ತದೆ.

ಉದ್ಯಾನದ ಮಧ್ಯದಲ್ಲಿ 72.9 ಮೀ ಎತ್ತರದ ತಾಜ್‌ಮಹಲ್ ಮುಖ್ಯ ಕಟ್ಟಡವಿದ್ದು, ಇದಕ್ಕೆ ಅರ್ಧಗೋಳಾಕಾರದ ಗುಮ್ಮಟವಿದೆ (24 ಮೀ ಎತ್ತರ, 17 ಮೀ ವ್ಯಾಸ) 93 ಮೀ ಚೌಕಾಕಾರದ ವೇದಿಕೆಯ ನಾಲ್ಕೂ ಮೂಲೆಗಳಲ್ಲಿ ಪ್ರತ್ಯೇಕ ಮಿನಾರುಗಳಿವೆ. ಇವು ಊರ್ಧ್ವ ರೇಖೆಯಿಂದ $7^{0}$ಗಳಷ್ಟು ವಾಲಿದ್ದು, ಅಕಸ್ಮಾತ್ತಾಗಿ ಮೀನಾರುಗಳು ಮುರಿದುಬಿದ್ದರೂ ಮುಖ್ಯ ಕಟ್ಟಡಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ರೂಪಿತವಾಗಿವೆ. ಹಾಲು ಬಿಳುಪಿನ ಅಮೃತಶಿಲೆಯಲ್ಲಿ ಅಮೂಲ್ಯ ಹರಳುಗಳನ್ನು, ಕೆಂಪು ಮರಳುಕಲ್ಲಿನ ಮೇಲ್ಮೈಯಲ್ಲಿ ಹುದುಗಿಸಲಾಗಿದೆ. ಅಮೃತಶಿಲೆಯ ಮೇಲೆ ಕಪ್ಪು ಶಿಲೆಯಲ್ಲಿ ಅಲಂಕೃತ ಶೈಲಿಯ ಬರೆಹವಿದೆ.

ಒಳಾಂಗಣವನ್ನು ಗೋಮೇಧಿಕ, ರತ್ನ, ಪಚ್ಚೆ, ಇಂದ್ರನೀಲ, ಕಡುಗೆಂಪು, ವೈಢೂರ್ಯ ಮುಂತಾದ ಅಮೂಲ್ಯ ಹರಳುಗಳಿಂದ ಅಲಂಕರಿಸಲಾಗಿದೆ. ಗೋಡೆಗಳು ಮತ್ತು ಕಮಾನುಗಳ ಮೇಲೆ ತುಘ್ರ ಲಿಪಿಯ ಬರಹವಿದೆ. ಷಹಜಹಾನನ ಕಾಲದಲ್ಲಿ ಈ ಗೋರಿಗೆ ಚಿನ್ನದ ಲೇಪನ ಹಾಗೂ ರತ್ನಖಚಿತವಾದ ರಕ್ಷಣಾ ಕಟಕಟೆಯನ್ನು 6 ಲಕ್ಷ ರೂ. ವೆಚ್ಚ ಮಾಡಿ ನಿರ್ಮಿಸಲಾಗಿತ್ತು. ಮುಂದೆ (1642) ಕಳ್ಳತನದ ಭಯದಿಂದ ಇದನ್ನು ತೆಗೆದು ಅಮೃತಶಿಲೆಯ ಕಟಕಟೆಯನ್ನು ಒದಗಿಸಲಾಯಿತು. ದೆಹಲಿಯಲ್ಲಿನ ಜಾಮಿ ಮಸೀದಿಯನ್ನು ಷಹಜಹಾನನು 1644ರಲ್ಲಿ ಪ್ರಾರಂಭಿಸಿ 1650ರಲ್ಲಿ ಪೂರ್ಣಗೊಳಿಸಿದ. ಇದಕ್ಕೆ ಮೂರು ದ್ವಾರಗಳಿದ್ದು, ಚತುರಸ್ರ ಪ್ರಾಂಗಣ, ಇದರ ಸುತ್ತಲೂ ಕಮಾನಿನ ಶಾನ್ ಇವೆ. ಪ್ರಾರ್ಥನಮಂದಿರಕ್ಕೆ 11 ಕಮಾನುಗಳು ಮತ್ತು ಎರಡು ಕಡೆಯೂ ಒಂದೊಂದು ನಾಲ್ಕು ಅಂತಸ್ತಿನ ಮಿನಾರ್‌ಗಳಿವೆ. ಇದರ ಮೂರು ಗುಮ್ಮಟಗಳನ್ನು ಕಪ್ಪು ಮತ್ತು ಬಿಳಿ ಅಮೃತಶಿಲೆಯ ಪಟ್ಟಿಕೆಗಳಿಂದ ಪರ್ಯಾಯವಾಗಿ ಅಲಂಕರಿಸಲಾಗಿದೆ.

ಔರಂಗಬಾದಿನಲ್ಲಿರುವ ರಬಿಯೌದ್–ದೌರನಿಯ ಸಮಾಧಿಮಂದಿರ ತಾಜಮಹಲಿನ ಅಲ್ಪ ಪ್ರತಿರೂಪದಂತಿದೆ. ಇದಲ್ಲದೆ ಔರಂಗಜೇಬನು ಆಗ್ರದಲ್ಲಿ ನಗೀನಮಸೀದಿ ಮತ್ತು ದೆಹಲಿಯಲ್ಲಿ ಮೋತಿಮಸೀದಿಗಳನ್ನೂ ಕಟ್ಟಿಸಿದ.

**ಮಾಳ್ವ:** ಮಾಳ್ವ ಶೈಲಿಯ ಕಟ್ಟಡಗಳಿಗೆ ಎತ್ತರದ ಪೀಠ, ಅದಕ್ಕೆ ಮೆಟ್ಟಿಲುಗಳು, ಅನೇಕ ಬಣ್ಣದ ಕಲ್ಲುಗಳು ಮತ್ತು ಹೊಳಪಿನ ಹೆಂಚುಗಳ ಉಪಯೋಗ ಇವು ವಿಶಿಷ್ಟ ಲಕ್ಷಣಗಳು. ಭೋಜಶಾಲೆ ಎಂದೂ ಕರೆಯಲಾಗುವ ಕಮಲ್ ಮೌಲ ಮಸೀದಿ (1400) ಮತ್ತು ಲಾಟ್ ಮಸೀದಿಗಳನ್ನು ಹಿಂದು ದೇವಾಲಯಗಳ ವಾಸ್ತುಭಾಗಗಳಿಂದ ಕಟ್ಟಲಾಗಿದೆ. ಭೋಜಶಾಲ ಸಭಾಂಗಣದ ಮೂರು ಬದಿಗಳಲ್ಲಿ ಕಂಬಗಳ ಮೊಗಸಾಲೆ ಮತ್ತು ಪಶ್ಚಿಮ ಗೋಡೆಗೆ ಸೇರಿಕೊಂಡಂತೆ ಪ್ರಾರ್ಥನಾ ಕೋಣೆಯಿದೆ. ಲಾಟ್ ಮಸೀದಿಯನ್ನು ಇದೇ ರೀತಿಯ ವಿನ್ಯಾಸದಲ್ಲಿ 1405ರಲ್ಲಿ ದಿಲ್ವಾರ್‌ಖಾನ ಕಟ್ಟಿಸಿದ. ಇದರಲ್ಲಿ ಕಬ್ಬಿಣ ಕಂಬದ ತುಂಡುಗಳಿವೆ.

ಮಾಂಡು ಹಾಗೂ ಪಟ್ಟಣ, ಕಟ್ಟಡಗಳ ಸಮೂಹ ಸಮುದ್ರಮಟ್ಟಕ್ಕಿಂತ 610 ಮೀ ಎತ್ತರದಲ್ಲಿ ನಿರ್ಮಾಣವಾಗಿದೆ. ಕೋಟೆಯು ಕಮರಿಯಿಂದ ಸುತ್ತುವರಿದು ರಕ್ಷಣೆಗೆ ಸೂಕ್ತವಾಗಿದೆ. ಕೋಟೆ ಗೋಡೆಯ ಸುತ್ತಳತೆ 40 ಕಿ ಮೀ ಮಸೀದಿ ಮತ್ತು ಸಮಾಧಿಗಳು ಭೂ ಪ್ರದೇಶದ ಏರಿಳಿತವನ್ನು ಅವಲಂಬಿಸಿ ನಿರ್ಮಾಣವಾಗಿದೆ. ದಿಲ್ವಾರ್‌ಖಾನ್‌ನ ಮಸೀದಿ(1405) ಮತ್ತು ಮಲ್ಲಿಕ್ ಮುಘಿತ್‌ನ ಮಸೀದಿ(1452) ಹಿಂದು ಕಟ್ಟಡಗಳ ಸಾಮಗ್ರಿ ಯಿಂದ ನಿರ್ಮಾಣವಾಗಿವೆ. ಕೋಟೆಯ ಮುಖ್ಯ ಪ್ರವೇಶದ್ವಾರಗಳಲ್ಲಿ ಉತ್ತರದ ದೆಹಲಿ ಗೇಟ್ ಮತ್ತು ಎಡದಲ್ಲಿರುವ ತಾರಾಪುರ್ ಗೇಟ್ ಸಾಕಷ್ಟು ಉತ್ತಮ ಸ್ಥಿತಿಯಲ್ಲಿ ಉಳಿದಿವೆ.

ಜಾಮಿ ಮಸೀದಿಯನ್ನು ಹುಷಂಗ್ ಷಾ ಪ್ರಾರಂಭಿಸಿದನಾದರೂ ಅದನ್ನು 1440ರಲ್ಲಿ ಮಹಮ್ಮದ್ ಖಿಲ್ಜಿ (1436–69) ಪೂರ್ಣಗೊಳಿಸಿದ. ಪೂರ್ವ ಮತ್ತು ಪಶ್ಚಿಮದಲ್ಲಿ ಚೌಕಾಕಾರದ ಸಭಾಂಗಣದ ಮುಂದೆ ಪ್ರತಿಯೊಂದು ಬದಿಯಲ್ಲಿ 11 ಕಮಾನುಗಳಿವೆ. ಉತ್ತರದಲ್ಲಿ ಮೂರು ಓಣಿ ಮತ್ತು ದಕ್ಷಿಣದಲ್ಲಿ ಎರಡು ಎತ್ತರವಾದ ಪೀಠದ ಮೇಲೆ ನಿರ್ಮಿಸಲಾಗಿರುವ ಇದಕ್ಕೆ ಪೂರ್ವದಲ್ಲಿ ಮೆಟ್ಟಿಲುಗಳಿವೆ. ಚತುರಸ್ರ ಗುಮ್ಮಟದ ಮತ್ತು ಅದೇ ರೀತಿಯ ಮೂರು ಗುಮ್ಮಟಗಳು ಪ್ರಾರ್ಥನಾ ಹಜಾರದ ಮೇಲಿದ್ದು ಚಿಕ್ಕ ಓಣಿಯ ಮೇಲಿದೆ. ಹುಷಂಗ್‌ಶಾಹನ ಗೋರಿ ಅಮೃತ ಶಿಲೆಯದು(1440). ಆಯತಾಕಾರದ ಪ್ರಾಂಗಣದ ಮಧ್ಯದಲ್ಲಿರುವ ಚೌಕಾಕಾರದ ಗೋರಿಗೆ ದೊಡ್ಡ ಗುಮ್ಮಟದ ಚಾವಣಿ ಹಾಗೂ ಮೂಲೆಯಲ್ಲಿ ಸಣ್ಣ ಸಣ್ಣ ಗುಮ್ಮಟಗಳಿವೆ.

ಒಂದನೆಯ ಮಹಮ್ಮದ್ ನಿರ್ಮಿಸಿದ ಅಶ್ರಫಿ ಮಹಲ್ ದೊಡ್ಡ ಚೌಕಾಕಾರದ ಸಭಾಂಗಣವಾಗಿದ್ದು, ಚಿಕ್ಕ ಚಿಕ್ಕ ಕೋಣೆಗಳಿಂದ ಸುತ್ತುವರಿಯಲ್ಪಟ್ಟಿದೆ. ಮುಂದಿನ ಬದಿಯಲ್ಲಿ ಎರಡು ಕಮಾನುಗಳ ಪ್ರವೇಶವಿದೆ. ಪಶ್ಚಿಮ ಬದಿಯ ಮಧ್ಯಭಾಗದಲ್ಲಿ ಮುಂದಕ್ಕೆ ಚಾಚಿದ ಗೂಡುಗಳಿವೆ. ಉಳಿದ ಮೂರು ಬದಿಗಳಲ್ಲಿ ಸಾಲುಸಾಲಿನ ಗೂಡುಗಳಿವೆ. ಮುಂದಿರುವ ಮುಖಮಂಟಪಕ್ಕೆ ಹತ್ತಿ ಹೋಗಲು ಮೆಟ್ಟಿಲುಗಳಿವೆ. ಅನಂತರ ಸಭಾಂಗಣದಲ್ಲಿ ಒಂದನೆಯ ಮಹಮ್ಮದ್‌ನ ಗೋರಿಯನ್ನು ನಿರ್ಮಿಸಲಾಯಿತು. ಕಟ್ಟಡದ ಮೂಲೆಗಳಲ್ಲಿ ಮೀನಾರುಗಳಿವೆ. ವಾಯವ್ಯ ಮೂಲೆಯ ಮಿನಾರ್ ದೊಡ್ಡದು ಮತ್ತು ಎತ್ತರವಾಗಿದ್ದು ಈಗ ಕೆಳಭಾಗ ಮಾತ್ರ ಉಳಿದಿದೆ. ಒಂದನೆಯ ಮಹಮ್ಮದ್ ಚಿತ್ತೋರ್‌ನ ರಾಣಾಕುಂಭನನ್ನು ಜಯಿಸಿದ ಸಂಕೇತವಾಗಿ ಹಸ್ತ್ ಮಂಜಿಲ್ ಅಥವಾ ವಿಜಯಸ್ತಂಭವನ್ನು ಈ ಸಮುಚ್ಚಯದಲ್ಲಿ ನಿರ್ಮಿಸಿದ.

ಜಹಾಜ್ ಮಹಲ್ ಮೂರು ಹಜಾರಗಳಾಗಿ ವಿಭಾಗಿಸಲಾದ ದೀರ್ಘ ಚತುರಸ್ರ ನಿರ್ಮಾಣ. ಒಂದನೆಯ ಮಹಮ್ಮದ್ ಕಟ್ಟಿದ ಅರಮನೆಯ ಪ್ರಾಂಗಣದ ಉತ್ತರದಲ್ಲಿ ಅಲಂಕೃತವಾದ ನೀರಿನ ತೊಟ್ಟಿ ಎರಡು ಕೊಳಗಳ ಮಧ್ಯದಲ್ಲಿದೆ.

ಘಿಯಾಸುದ್ದೀನ್(1469–1500) ಕಟ್ಟಿಸಿದ ಹಿಂದೋಲಮಹಲ್ ಇಳಿಜಾರಾದ ನೆಲದಲ್ಲಿ ಕಮಾನುಗಂಬಗಳನ್ನು ಆಧರಿಸಿದ ಹಾಗೂ ಎತ್ತರವಾದ ಕಮಾನುಗಳಿಂದ ಕೂಡಿದ T ಆಕಾರದ ದೊಡ್ಡ ಹಜಾರವಾಗಿದೆ.

ಕೊನೆಯ ಹಂತದಲ್ಲಿ ಅರಮನೆಗಳು, ಪ್ರಾಂಗಣಗಳು, ಸ್ನಾನಗೃಹಗಳನ್ನು ತಮ್ಮ ಮನರಂಜನೆಗಾಗಿ ನಿರ್ಮಿಸಲಾಗಿದೆ. ಬಜ್ ಬಹದೂರ್ ಅರಮನೆಯ ಸಭಾಂಗಣ, ಹಜಾರಗಳು, ಅಷ್ಟಕೋನಾಕೃತಿಯ ಪ್ರಾಂಗಣಗಳು, ಜಗತಿಯ ಮೇಲೆ ಬರಾದರಿಗಳು ಮತ್ತು ರಾಣಿ ರೂಪಮತಿಯ ಅರಮನೆಯ ಭಾಗದ ಇಳಿಜಾರು ಗೋಡೆಗಳಿಂದ ಕೂಡಿದ ಎರಡು ಅಂತಸ್ತಿನ ನಿರ್ಮಾಣ, ಉದ್ದನೆಯ ಹಜಾರದ ಕೊನೆಯಲ್ಲಿ ಕೋಣೆಗಳು, ಚಾವಣಿಯ ಮೇಲಿರುವ ವೇದಿಕೆಯ ಮೇಲಿನ ಗುಮ್ಮಟ ಅನಂತರದ ಸೇರ್ಪಡೆ.

**ದಖನ್(1325–1687):** ಬಹಮನಿ ವಂಶದ ಅಲಾಉದ್ದೀನ್ ಬಹಮನ್ ಷಾ (1347–58) ದೌಲತಬಾದ್‌ನಿಂದ 1347ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿ, ಅನಂತರಕ್ಕೆ ಗುಲ್ಬರ್ಗಕ್ಕೆ ರಾಜಧಾನಿಯನ್ನು ವರ್ಗಾಯಿಸಿದ. ಅಹ್ಮದ್ ಷಾ (1422–50) 1425ರಲ್ಲಿ ಬೀದರ್‌ಗೆ ವರ್ಗಾಯಿಸಿದ. ಮಹಮ್ಮದ್ ಷಾ (1482–1518) ಆಳಿಕೆ ಅನಂತರ ರಾಜ್ಯ ಛಿದ್ರವಾಗಿ ಐದು ಸ್ವತಂತ್ರ ರಾಜ್ಯಗಳಾದವು. ಇವುಗಳ ರಾಜಧಾನಿ ಬೀದರ್, ಬೆರಾರ್, ಅಹಮದ್‌ನಗರ್, ಬಿಜಾಪುರ ಮತ್ತು ಗೋಲ್ಕೊಂಡ. ಇವರು ಸ್ವಂತ ಪ್ರಾದೇಶಿಕ ವಾಸ್ತುಶಿಲ್ಪ ಶೈಲಿಯನ್ನು ಅಭಿವೃದ್ಧಿ ಪಡಿಸಿದರು. ಇದು ಔರಂಗಜೇಬನು ರಾಜ್ಯವನ್ನು ವಶಪಡಿಸಿ ಕೊಳ್ಳುವವರೆಗೆ ಬಳಕೆಯಲ್ಲಿತ್ತು.

ಮೊದಲ ಪ್ರಾಂತೀಯ ಮಸೀದಿಗಳೆಂದರೆ ದೌಲತಾಬಾದ್ ಮತ್ತು ಬೋಧಾನ್ ಮಸೀದಿ. ಇವು ಹಿಂದು ಮತ್ತು ಜೈನ ದೇವಾಲಯಗಳನ್ನು ಪರಿವರ್ತಿಸಿ ನಿರ್ಮಿಸಿದ ಮಸೀದಿಗಳು. ದಖನಿ ಮಾದರಿಗಳ ಎರಡು ಹಂತಗಳಲ್ಲಿವೆ. (i)1345–1425: ಗುಲ್ಬರ್ಗ ರಾಜಧಾನಿ ಕಾಲದವು (ii) 1518–1687: ಐದು ಸ್ವತಂತ್ರ ರಾಜ್ಯಗಳ ಕಾಲದವು.

ಬೃಹತ್ ಕಲ್ಲು ಬಂಡೆಗಳಿಂದ ಕಟ್ಟಲಾದ ಗುಲ್ಬರ್ಗ ಕೋಟೆಯನ್ನು ಎತ್ತರವಾದ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಇದರಲ್ಲಿ ಉದ್ದಕ್ಕೂ ಒಳ ಮತ್ತು ಹೊರ ಬದಿಗಳಲ್ಲಿ ಒಂದೊಂದು ಗೋಡೆ ಹಾಗೂ ಸುತ್ತಲೂ ಕಂದಕವಿದೆ. ಕೋಟೆಯ ಮೇಲ್ಭಾಗದಲ್ಲಿ ತೆನೆಗಳ ಸಾಲು ಇದೆ. ಜಾಮಿ ಮಸೀದಿಯ ಮೂರು ಬದಿಗಳಲ್ಲೂ ವಿಸ್ತಾರವಾದ ಕೈಸಾಲೆ ಇದ್ದು ಮೇಲೆ ಮಧ್ಯದಲ್ಲಿ ಎತ್ತರವಾದ ಗುಮ್ಮಟ ಇದೆ. ಇದರ ಒಳಾಂಗಣ ಕಂಬಗಳಿಂದ ಮತ್ತು ಮೇಲ್ಚಾವಣಿ ಯಿಂದ ಆವೃತ್ತವಾಗಿರುವುದು ಒಂದು ವೈಶಿಷ್ಟ್ಯ. ಇದರ ವಿಶಾಲವಾದ ಹರವು ಇದಕ್ಕೆ ಗಾಂಭೀರ್ಯವನ್ನು ತಂದುಕೊಟ್ಟಿದೆ.

ಅಲಾಉದ್ದೀನ್ ಬಹಮನ್ ಷಾ ಮತ್ತು ಎರಡನೆಯ ಮಹಮ್ಮದ್ ಷಾ ಸಮಾಧಿ ಚೌಕಾಕಾರದ ವಿನ್ಯಾಸದಲ್ಲಿದ್ದು ಇದರ ಓರೆಗೋಡೆಗಳು, ಮೂಲೆ ಕಮಾನುಗಳ ಸಮತಟ್ಟಾದ ದೊಡ್ಡ ಗುಮ್ಮಟ, ಕೈಪಿಡಿ ಗೋಡೆಗಳು, ಮೂಲೆ ಬುರುಜುಗಳು ಮೊದಲಾದವುಗಳಿಂದ ತುಗಲಕ್ ವಾಸ್ತು ಮಾದರಿ ಲಕ್ಷಣಗಳನ್ನು ಹೊಂದಿವೆ. ಇದು ಕಡು ನೀಲಿಬಣ್ಣದ ಹೆಂಚುಗಳಿಂದ ಅಲಂಕೃತವಾಗಿದೆ. ಎರಡನೆಯ ಮಹಮ್ಮದ್ ಸಮಾಧಿ ಜಾಮಿ ಮಸೀದಿಯಂತೆ ಎತ್ತರವಾದ ಕಟ್ಟೆಯ ಮೇಲಿದೆ.

ಹಫ್ತ್ ಗುಂಬಜ್ ಗುಂಪು ತುಗಲಕ್ ಶೈಲಿಯಲ್ಲಿದೆ. ಆದರೆ ತಾಜ್–ಉದ್ದೀನ್–ಫಿರೋಜ್‌ನ ಸಮಾಧಿ(1322–1422) ಎತ್ತರವಾದ ಮೇಧಿಯ ಮೇಲಿದ್ದು ಇದಕ್ಕೆ ಗೆಡ್ಡೆಯಾಕಾರದ ಗುಮ್ಮಟಗಳಿವೆ. ಚಾಳುಕ್ಯರ ಕಪ್ಪುಕಲ್ಲಿನ ಬಾಗಿಲುವಾಡ ಮತ್ತು ಚಾಚು ಪೀಠಗಳ ಉಪಯೋಗದಿಂದ ಸ್ಥಳೀಯ ಪ್ರಭಾವ ಗಮನಾರ್ಹ.

ಬೀದರ್ ಕೋಟೆಯ ಒಳಗೆ ಕೆಲವು ಅರಮನೆಯ ಕಟ್ಟಡಗಳಿವೆ. ತಖ್ತ್‌ಮಹಲ್, ರಂಗೀನ್ ಮಹಲ್, ದಿವಾನ್–ಇ–ಆಮ್, ಜನಾನ ಮಹಲ್ ಉದ್ಯಾನಗಳು, ನೀರಿನ ಕಾಲುವೆಗಳು ಮತ್ತು ಸ್ನಾನಗೃಹಗಳು. ಅರಮನೆಗಳು ಬಣ್ಣದ ಹೆಂಚುಗಳು ಮತ್ತು ಭಿತ್ತಿ ಚಿತ್ರಗಳಿಂದ ಅಲಂಕರಿಸಲಾಗಿದೆ.

ಮಹ್ಮೂದ್ ಗಾವಾನ್‌ನನು ಬೀದರಿನಲ್ಲಿ ಕಟ್ಟಿಸಿದ ಮದರಸದ (1472) ಅವಶೇಷ ಈಗಲೂ ಕಾಣಿಸುತ್ತದೆ. ಈ ವಿದ್ಯಾಪೀಠದಲ್ಲಿದ್ದ ಗ್ರಂಥಾಲಯದಲ್ಲಿ ಸುಪ್ರಸಿದ್ಧ ವಿಜ್ಞಾನಿಗಳು ಹಾಗೂ ತತ್ವಜ್ಞಾನಿಗಳು ಬರೆದ ಎರಡು ಸಾವಿರಕ್ಕೂ ಅಧಿಕ ಅತ್ಯುತ್ತಮ ಗ್ರಂಥಗಳನ್ನು ಸಂಗ್ರಹಿಸಿದ್ದರು. ಇದರಲ್ಲಿ ಪ್ರಾಧ್ಯಾಪಕರ, ವಿದ್ಯಾರ್ಥಿಗಳ ಕೋಣೆಗಳು, ವಸತಿಗಳು ಮತ್ತು ಅವುಗಳಿಗೆ ಹೊಂದಿಕೊಂಡಂತೆ ಮಸೀದಿ ಇವೆ. ನಾಲ್ಕು ಅಂತಸ್ತಿನ ಮಿನಾರುಗಳನ್ನು ಹೊಳಪಿನ ಹೆಂಚುಗಳಿಂದ ಅಲಂಕರಿಸಲಾಗಿದೆ. ಇದರ ಮೂರು ಬದಿಗಳ ಮಧ್ಯದಲ್ಲಿ

ಚಾರ್‌ಮಿನಾರ್, ಹೈದರಾಬಾದ್

ಅರೆಅಷ್ಟಾಕೃತಿಯ ಗೋಪುರಗಳಿವೆ ಮತ್ತು ಚಾವಣಿಯ ಮೇಲೆ ಗೆಡ್ಡೆಯಾಕಾರದ ಎತ್ತರವಾದ ಗುಮ್ಮಟಗಳಿವೆ. ಚಾವಣಿಯಲ್ಲಿ ತೇವ ತಡೆಯುವುದಕ್ಕೆ ಸೀಸದ ಹಾಳೆಗಳನ್ನು ಉಪಯೋಗಿಸಲಾಗಿದೆ. ಈ ಕಟ್ಟಡವು ಹೊಳಪಿನ ಹೆಂಚು, ಹೂಬಳ್ಳಿಗಳ ವಿನ್ಯಾಸ ಮತ್ತು ಅಲಂಕೃತ ಬರಹಗಳ ಅಲಂಕರಣಗಳಿಗಾಗಿ ಬಹು ಪ್ರಸಿದ್ಧವಾಗಿದೆ.

ಬೀದರ್‌ನಲ್ಲಿ ರಾಜ ಮನೆತನದ ಹನ್ನೆರಡು ಸಮಾಧಿಗಳು ಗುಲ್ಬರ್ಗದ ಹಫ್ತ್ ಗಂಬಜ್ ನಂತಿದೆ. ಆದರೆ ಇದರಲ್ಲಿ ಜೋಡಿ ಕೋಣೆಗಳಿಲ್ಲದೆ, ಟಾರ್ಟರ್ ಗುಮ್ಮಟದಂತಹ ಗುಮ್ಮಟವಿದೆ.

**ಕುತುಬ್ ಶಾಹಿ:** ಗೋಲ್ಕೊಂಡದ ಕುತುಬ್‌ಶಾಹಿ ಶೈಲಿಯ ಕಟ್ಟಡಗಳು ಬಿಜಾಪುರದ ವಾಸ್ತುಶಿಲ್ಪ ಮಾದರಿಯಂತೆ ತೆಳುವಾದ ಮಿನಾರೆಟ್‌ನಿಂದ ಕೂಡಿದ ಕೈಸಾಲೆ, ಬೋದಿಗೆಯ ಮೇಲಿನ ಕಿಟಕಿಗಳು ಎತ್ತರ ಹಾಗೂ ಮೊನಚಾದ ಕಮಾನುಗಳು ಮತ್ತು ದಳಗಳ ಒಳಗೆ ಮರೆಮಾಚಿದ ತಳಹದಿಯನ್ನುಳ್ಳ ಅಂದವಾದ ಕಂಠ ಹೊಂದಿರುವ ದುಂಡಾದ ಗುಮ್ಮಟ ಇವುಗಳಿಂದ ಕೂಡಿರುತ್ತವೆ. ಹಾಗೆಯೇ ಗಾರೆಯ ಅಲಂಕಾರ ಮತ್ತು ಹೆಂಚು ಮುಂತಾದವುಗಳ ಉಪಯೋಗದಿಂದ ಬಿಜಾಪುರದ ವಾಸ್ತುವಿಗಿಂತ ಭಿನ್ನವಾಗಿದೆ. ಹೀಗಿದ್ದರೂ ಹೆಚ್ಚಿನ ಸಂಖ್ಯೆಯ ಚಿಕ್ಕ ಬುರುಜು ಮತ್ತು ಚಿಕ್ಕ ಗುಮ್ಮಟಗಳು, ಹಿಂದು ಅಲಂಕರಣ ಪದ್ಧತಿಯ ಅನುಕರಣೆಯಿಂದ ಇದರ ಸೌಂದರ್ಯ ಹೆಚ್ಚಾಗಿದೆ. ಗೋಲ್ಕೊಂಡ ಕೋಟೆಗೂ ಗುಲ್ಬರ್ಗ ಮತ್ತು ಬೀದರ್ ಕೋಟೆಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ. ಮಹಮ್ಮದ್ ಕುಲಿ ಕುತುಬ್ ಷಾನ (1580–1612) ಸಮಾಧಿಯನ್ನು ಎರಡು ಅಂತಸ್ತಿನ ಜಗತಿಯ ಮೇಲೆ ನಿರ್ಮಿಸಲಾಗಿದೆ. ಮೇಲೆ ಚಾಚಿಕೊಂಡಿರುವ ಮೂರು ಕೈಸಾಲೆಗಳಿವೆ. ಅಬ್ದುಲ್ ಕುತುಬ್ ಷಾನ (1626–72) ದೊಡ್ಡದಾದ ಸಮಾಧಿ ಎರಡು ಅಂತಸ್ತುಗಳು ಮತ್ತು ಶಿಖರಾಲಂಕಾರಗಳಿಂದಲೂ ವೈಶಿಷ್ಟ್ಯಪೂರ್ಣವಾಗಿದೆ.

ಜಾಮಿ ಮಸೀದಿಯಲ್ಲಿ ಎರಡು ಪ್ರಾರ್ಥನಾ ಹಜಾರದ ಕಮಾನುಗಳ ಮಧ್ಯದ ದೃಢವಾದ ಆಸರೆಯ ಮೇಲೆ ಕಮಾನುಗಳನ್ನು ಹೊಂದಿದೆ. ಇದು 1577ರಲ್ಲಿ ನಿರ್ಮಾಣವಾಯಿತು. ತೋಲಿ ಮಸೀದಿ (1671) ಎರಡು ಪ್ರಾರ್ಥನಾ ಹಜಾರ ಸಪೂರವಾದ ಮೀನಾರುಗಳು ಮತ್ತು ಅನೇಕ ಚಿಕ್ಕ ಗುಮ್ಮಟಗಳ ಅಲಂಕಾರಗಳಿಂದ ನಿರ್ಮಾಣವಾಗಿದೆ.

ಚಾರ್‌ಮಿನಾರ್ ನಾಲ್ಕು ಮೂಲೆಯಲ್ಲಿ ಮೂರು ಅಂತಸ್ತಿನ ಮಿನಾರ್‌ಗಳ ಕಟ್ಟಡ. ಮೇಲ್ಭಾಗದಲ್ಲಿ ಎರಡು ಜಾಲಂಧ್ರಗಳುಳ್ಳ ಕಮಾನಿನ ತೆರವು ಇದೆ. ಹಳೆಯ ಹೈದರಾಬಾದ್‌ನಲ್ಲಿ ಕಂಡು ಬರುವ ಬೃಹತ್ ಕಮಾನಿನ ಬಾಗಿಲಿಗೆ ಚಾರ್‌ಮಿನಾರ್‌ನ್ನು ಮಹಮ್ಮದ್ ಕ್ವಾಲಿ ಕುತುಬ್‌ಷಾ 1591 ರಲ್ಲಿ ಪ್ಲೇಗ್‌ರೋಗದ ನಿವಾರಣೆಯ ಸಂಕೇತವಾಗಿ ಕಟ್ಟಿಸಿದ. ಇದು 50 ಮೀ ಎತ್ತರವಿದ್ದು ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಚಾರ್‌ಮಿನಾರ್ ಪಕ್ಕದಲ್ಲಿರುವ ಮೆಕ್ಕ ಮಸೀದಿ ಪ್ರಪಂಚದಲ್ಲಿಯೇ ದೊಡ್ಡದಾದ ಮಸೀದಿಗಳಲ್ಲೊಂದು. ಇದು ಮಹಮ್ಮದ್ ಕ್ವಾಲಿಕುತುಬ್‌ಷಾ ಆಳಿಕೆಯಲ್ಲಿ ಪ್ರಾರಂಭವಾಗಿ 1687ರಲ್ಲಿ ಪೂರ್ಣಗೊಂಡಿತು. 1400 ಎತ್ತುಗಳನ್ನು ಬಳಸಿ 10 ಕಿಮೀ ದೂರದಿಂದ ಗ್ರಾನೈಟ್ ಕಲ್ಲುಗಳನ್ನು ತಂದು ಕಟ್ಟಲಾಯಿತೆನ್ನುವರು.

**ಖಾನ್ ದೇಶ (1388–1601):** ಮಿರಾನ್ ಮುಬಾರಕ್‌ನ (1441–57) ಸಮಾಧಿ ಹುಷಂಗ್ ಷಾ ಸಮಾಧಿಯ ವಿನ್ಯಾಸದಲ್ಲಿಯೇ ನಿರ್ಮಾಣವಾಗಿದೆ. ಇದರಲ್ಲಿ ಮುಖ್ಯ ಬಾಗಿಲು ಮತ್ತು ಪಕ್ಕದ ಕಿಟಕಿಗಳ ನಡುವೆ ಹೆಚ್ಚಿನ ಅಂತರವಿದೆ. ಅಷ್ಟಕೋನದ ವೇದಿಕೆಯ ಮೇಲೆ ಗುಮ್ಮಟವಿದೆ. ಬುರ್ಹಾನ್‌ಪುರದಲ್ಲಿ ನಿರ್ಮಿತವಾದ ಜಾಮೀ ಮಸೀದಿ (1588) ಹದಿನೈದು ಕಮಾನುಗಳಿರುವ ಆಯತಾಕಾರದ ಕಟ್ಟಡ. ಇದರ ಎರಡೂ ಪಾರ್ಶ್ವಗಳಲ್ಲಿ ಗುಜರಾತ್ ಶೈಲಿಯಲ್ಲಿ ರೂಪಿಸಿದ ಎತ್ತರವಾದ ಮೀನಾರುಗಳಿವೆ. ಬೀಬೀ–ಕೀ–ಮಸೀದಿಯಲ್ಲಿ ಕಮಾನಿನ ದ್ವಾರವಿದ್ದು ಪಾರ್ಶ್ವಗಳಲ್ಲಿ ಚೌಕಾಕಾರದ ಮೇಲೆ ಕ್ರಮವಾಗಿ ಅಷ್ಟಕೋನ, ಹದಿನಾರು ಕೋನಗಳ ಮತ್ತು ವೃತ್ತಾಕಾರದ ಮೂರು ಅಂತಸ್ತುಗಳಲ್ಲಿ ಮೇಲೇರುವ ಮೀನಾರುಗಳಿವೆ. ಮೇಲಿನ ಅಂತಸ್ತಿನಲ್ಲಿ ತುಗಲಕ್ ಶೈಲಿಯ ಕಿರು ಶಿಖರಗಳು ಮತ್ತು ಲೋದಿ ಶೈಲಿಯ ಗುಮ್ಮಟಗಳ ಸಂಯೋಜನೆ ಆಕರ್ಷಕ.

**ಬಿಜಾಪುರ:** ಬಿಜಾಪುರ ಸ್ವತಂತ್ರವಾದ ಅನಂತರ ಈ ಪ್ರದೇಶವನ್ನು 1490ರಿಂದ ಒಂಬತ್ತು ರಾಜರು ಆಳಿದರು. ಇವರಲ್ಲಿ ಯೂಸುಫ್ ಆದಿಲ್ ಷಾ, ಒಂದನೆಯ ಆದಿಲ್ ಷಾ (1558–80) ಎರಡನೆಯ ಆದಿಲ್ ಷಾ (1580–1626) ಮತ್ತು ಮುಹಮ್ಮದ್ ಷಾ (1626–56) ಮುಂತಾದವರು ಪ್ರಮುಖವಾಗಿ ವಾಸ್ತುಶಿಲ್ಪ ಕ್ಷೇತ್ರದ ಕೊಡುಗೆಗೆ ಹೆಸರುವಾಸಿಯಾಗಿದ್ದಾರೆ.

ಈ ಪ್ರದೇಶದ ಕಟ್ಟಡಗಳ ಗುಮ್ಮಟಗಳು ವೃತ್ತಾಕಾರವಾಗಿದ್ದು ತಳದಲ್ಲಿರುವ ಅರಳಿದ ದಳಗಳ ವೃತ್ತದಿಂದ ಮೇಲೆ ಹೊರಟಂತೆ ಕಾಣುತ್ತವೆ. ಕಟ್ಟೆಯ ಮೇಲಿನ ಗೋಡೆಯ ಮಧ್ಯದಲ್ಲಿರುವ ಕಮಾನು ಚಿಕ್ಕ ಮೀನಾರುಗಳು, ಲತಾಸುರುಳಿಯ ಬೋದಿಗೆಗಳ ಮೇಲಿನ ಛಜ್ಜಗಳು, ಕಮಾನಿನ ಮೇಲಿನ ಮೂಲೆ ಕಟ್ಟಿನಲ್ಲಿ ಪದಕಗಳು, ಕಮಾನಿನ ಮಧ್ಯದ ತುದಿಯಲ್ಲಿಯ ಎಲೆಗಳುಳ್ಳ ಊರ್ಧ್ವ ಮುಖದ ಕುಚ್ಚಿನ ಅಲಂಕರಣ, ಕಲ್ಲಿನ ಗೋಡೆಯ ಮೇಲಿನ ಕಲ್ಲು ಮತ್ತು ಗಾರೆಯ ಅಲಂಕರಣ, ತೂಗುದೀಪ, ಲತಾವರ್ಣಚಿತ್ರ ಮತ್ತು ಪರಸ್ಪರ ಹೆಣೆದುಕೊಂಡ ಅಕ್ಷರಗಳ ಶಾಸನಗಳು ಇವೇ ಮೊದಲಾದವು ಬಿಜಾಪುರ ಶೈಲಿಯ ವಾಸ್ತು ಲಕ್ಷಣಗಳು.

ಬಿಜಾಪುರದಲ್ಲಿ ದುರ್ಗ ಮತ್ತು ರಾಜವಾಡೆಗಳು, ಮಸೀದಿಗಳಿವೆಯಾದರೂ ಸಮಾಧಿ ಮತ್ತು ಮಹಲ್‌ಗಳಿಗೆ ಹೆಚ್ಚು ಪ್ರಸಿದ್ಧವಾಗಿದೆ. ಬಿಜಾಪುರವು ಅಲಿ ಆದಿಲ್ ಷಾ (1558–80) ಕಟ್ಟಿಸಿದ ಜಾಮೀ ಮಸೀದಿ ಮತ್ತು ಔರಂಗಜೇಬ್ ಕಟ್ಟಿಸಿದ ದ್ವಾರಗಳು ಅತಿ ಮುಖ್ಯವಾದ ನಿರ್ಮಾಣಗಳು. ಗುಮ್ಮಟ ಅರ್ಧಗೋಳಾಕೃತಿಯ ತುದಿಯಲ್ಲಿ ಅರ್ಧ ಚಂದ್ರಶಿಖರವಿದೆ. ಚೌಕದ ಜಾಲಂಧ್ರದ ಕಟಕಟೆಯಿಂದ ಇದು ಸುತ್ತುವರೆಯಲ್ಪಟ್ಟಿದೆ. ಮೂಲೆಗಳಲ್ಲಿ ತಲೆಕುಚ್ಚು ಇದೆ. ಅನಂತರ ಇದರ ಮಿಹರಾಬ್‌ನನ್ನು ಅತ್ಯುತ್ತಮ ವಿನ್ಯಾಸದಲ್ಲಿ ಮೆರುಗಿನ ಬಣ್ಣಗಳಿಂದ ಸಿಂಗರಿಸಲಾಗಿದೆ.

ಗಗನಮಹಲ್ ಅರಮನೆ 1560ರಲ್ಲಿ ನಿರ್ಮಾಣವಾಯಿತು. ಇದು ಆಯತಾಕಾರದ ಎರಡು ಅಂತಸ್ತಿನ ಹಜಾರ. ಕೆಳಗಿನ ಹಜಾರ ಸಾರ್ವಜನಿಕರ ಸಮಾರಂಭಕ್ಕೂ ಮತ್ತು ಮೇಲಿನ ಅಂತಸ್ತು ರಾಜರ ಸ್ವಂತಕ್ಕೆ ಉಪಯೋಗವಾಗುತ್ತಿತ್ತು. ಮಧ್ಯದಲ್ಲಿರುವ ಕಮಾನೊಂದು 18 ಮೀ ವಿಸ್ತಾರವಿದೆ. ಇಬ್ರಾಹಿಂ ರೋಜವನ್ನು ಇಬ್ರಾಹಿಂ ಎರಡನೆಯ ಆದಿಲ್‌ಷಾ ನಿರ್ಮಿಸಿದನು (1580–1627). ಇದರಲ್ಲಿ ಇವನ ಸಮಾಧಿ ಪಕ್ಕದಲ್ಲಿ ಮಸೀದಿ, ಸುತ್ತಲೂ ಗೋಡೆಯಿರುವ ಚೌಕಾಕೃತಿಯ ಆವರಣದಲ್ಲಿದೆ. ವೇದಿಕೆಯ ಮೇಲೆ ಎರಡು ಕಟ್ಟಡಗಳು ಮುಖಾಮುಖಿಯಾಗಿದೆ. ಇವುಗಳ ನಡುವೆ ನೀರಿನ ಕೊಳ ಮತ್ತು ಚಿಲುಮೆಯಿದೆ. ಮಸೀದಿಯ ಪ್ರಾರ್ಥನಾ ಕೋಣೆ ಆಯತಾಕಾರವಾಗಿದೆ. ಮುಂಭಾಗದಲ್ಲಿ ಐದು ಕಮಾನುಗಳಿವೆ. ಪ್ರತಿಯೊಂದು ಮೂಲೆಯಲ್ಲಿ ಮಿನಾರೆಟ್‌ಗಳಿವೆ ಮತ್ತು ವೃತ್ತಾಕಾರದ ಗುಮ್ಮಟವಿದೆ.

**ಗೋಳಗುಂಬಜ್(ಗೋಳಗುಮ್ಮಟ):** ಪ್ರಪಂಚ ಪ್ರಸಿದ್ಧವಾಗಿರುವ ಗೋಳಗುಂಬಜ್ (1627–57) ಸಂಕೀರ್ಣವನ್ನು ಆದಿಲ್‌ಶಾಹಿ ವಂಶದ ಮಹಮ್ಮದ್ ತನಗಾಗಿ ಕಟ್ಟಿಸಿಕೊಂಡ ಸ್ಮಾರಕ. ನಖರಖಾನ ವಿಶ್ರಾಂತಿ ಗೃಹ ಮತ್ತು ಸಮಾಧಿ ಸ್ಮಾರಕ. ಇದೊಂದು ಸರಳ ವಿನ್ಯಾಸದ ದೈತ್ಯಾಕಾರದ ಕಟ್ಟಡ. ಇದರ ಹೊರ ಅಳತೆ 61.5 ಮೀ x 61.5 ಮೀ., ಎತ್ತರ 59.6 ಮೀ. ಕಟ್ಟಡಗಳಲ್ಲಿ ನಾಲ್ಕು ಗೋಡೆಗಳಿಂದ ಆವೃತವಾಗಿ, ಮೇಲು ಗುಮ್ಮಟದಿಂದ ಆಚ್ಛಾದಿತವಾಗಿರುವ ಒಂದು ದೊಡ್ಡ ಹಜಾರ ಮಾತ್ರ ಇದೆ. 40.6 ಮೀ ಚೌಕವಾಗಿದ್ದು 18,337,67 ಚ ಪ್ರದೇಶವನ್ನು ಆಕ್ರಮಿಸಿರುವ ಈ ಹಜಾರ ಕಂಬಗಳಿಲ್ಲದ ಆಚ್ಛಾದಿತವಾಗಿರುವ ಹಜಾರಗಳಲ್ಲಿ ಇದು ಪ್ರಪಂಚದಲ್ಲೇ ಅತ್ಯಂತ ದೊಡ್ಡದು. ಇದರಲ್ಲಿ ಬೃಹತ್ ಗುಮ್ಮಟವುಳ್ಳ ಒಂದು ಕೋಣೆಯಿದೆ. ಇದರ ಒಳ ವಿಸ್ತೀರ್ಣ 1600 ಚ.ಮೀ ಗುಮ್ಮಟದ ಒಳಭಾಗದ ಸುತ್ತಲೂ 3.4 ಮೀ ಅಗಲದ ಕೈಸಾಲೆಯಿದೆ. ಬೃಹತ್ ಗುಮ್ಮಟದ ಕೆಳಗೆ ಮಾತಾಡಿದರೆ ಪ್ರತಿಧ್ವನಿಸುತ್ತದೆ. ಇದು ಪಿಸುಗುಟ್ಟುವ ಕೈಸಾಲೆಯೆಂದು ಪ್ರಸಿದ್ಧವಾಗಿದೆ. (ಕೆ.ಕೆ.ಎಂ.)

**ಮಧ್ವಾಚಾರ್ಯ:** 1238–1317. ದ್ವೈತ ಸಿದ್ಧಾಂತದ ಪ್ರತಿಪಾದಕರು. ಮಾಧ್ವಮತ ಪ್ರವರ್ತಕರು. ಇವರ ಪೂರ್ವಾಶ್ರಮದ ಹೆಸರು ವಾಸುದೇವ. ಉಡುಪಿಯ ಬಳಿ ಕುಂಜಾರು ಬೆಟ್ಟದ ಬದಿಯಲ್ಲಿ ಪಾಜಕ (ಬೆಳ್ಳೆ) ಎಂಬಲ್ಲಿ ಹುಟ್ಟಿದರು.

ತಮಿಳುನಾಡು ಆ ಕಾಲಕ್ಕೆ ಹಲವಾರು ಧಾರ್ಮಿಕ ಪರಂಪರೆಗಳ ಸಂಗಮಕ್ಷೇತ್ರವೆಂದು ಪ್ರಸಿದ್ಧವಾಗಿದ್ದಿತು. ಭೂತಾರಾಧನೆ, ನಾಗಪೂಜೆ, ಶೈವ, ಜೈನ, ನಾಥ, ಭಾಗವತ ಸಂಪ್ರದಾಯಗಳು ಬೇರೂರಿದ್ದ ಇಲ್ಲಿ ಆಚಾರ್ಯರು ವೈದಿಕ ಧರ್ಮವನ್ನು ಎತ್ತಿಹಿಡಿದು ನಿಲ್ಲಿಸಿದರು. ಉಡುಪಿಯ ಅನಂತೇಶ್ವರ ದೇವಾಲಯ ಸುತ್ತಮುತ್ತಲ ಜನರಿಗೆಲ್ಲ ಪವಿತ್ರವೆನಿಸಿದ್ದಿತು. ಅನಂತೇಶ್ವರನ ಆರಾಧಕರಲ್ಲಿ ಒಬ್ಬರಾದ ಪುರಾಣಿಕ ಮಧ್ಯಗೇಹ ಭಟ್ಟ ಇವರ ತಂದೆ, ತಾಯಿ ವೇದಾವತಿ. ಆರಂಭದ ವಿದ್ಯಾಭ್ಯಾಸವನ್ನು ಹಳ್ಳಿಯಲ್ಲಿಯೇ ಮುಗಿಸಿದ ಆಚಾರ್ಯರು ಬ್ರಹ್ಮಜ್ಞಾನದ ಹಂಬಲ ಹೆಚ್ಚಿ ಸಂನ್ಯಾಸಿಯಾಗಿ, ಅನಂತೇಶ್ವರನ ಗುಡಿಯಲ್ಲಿ ತಂಗಿದ್ದ ಅಚ್ಯುತಪ್ರೇಕ್ಷ ಎಂಬುವವರಲ್ಲಿ ವೇದಾಂತ ವಿದ್ಯಾಭ್ಯಾಸ ಕೈಗೊಂಡರು. ಸಂನ್ಯಾಸಿಗಳಾದ ಮೇಲೆ ಇವರಿಗೆ ಮಧ್ವಾಚಾರ್ಯ, ಆನಂದತೀರ್ಥ, ಪೂರ್ಣಪ್ರಜ್ಞ ಮೊದಲಾದ ಹೆಸರುಗಳು ಬಂದವು.

ವಿದ್ಯಾಭ್ಯಾಸದ ಅವಧಿಯಲ್ಲಿಯೇ ಆಚಾರ್ಯರಿಗೆ ಅದ್ವೈತ ವಿಚಾರದಲ್ಲಿ ಸಂಶಯಗಳು ತಲೆದೋರಿದವು. ಈ ನಿಲುವು ವೇದಶಾಸ್ತ್ರ ಸಮ್ಮತವಲ್ಲವೆಂದು ತೋರಿದಾಗ ಅವರ ವಿದ್ಯಾಗುರುಗಳಿಗೂ ಅವರಿಗೂ ಭಿನ್ನಾಭಿಪ್ರಾಯ ಮೂಡಿತು. ಗುರುಗಳಿಂದಲೂ ಲಿಕುಚ (ಪೇಜತ್ತಾಯ) ವಂಶದ ಹಿರಿಯ ಯತಿಯೊಬ್ಬರಿಂದಲೂ ಪ್ರೇರಿತರಾಗಿ ಆಚಾರ್ಯರು ಭಗವದ್ಗೀತ ಪ್ರಸ್ಥಾನಕ್ಕೆ ತಮ್ಮ ಸಿದ್ಧಾಂತದ ಪ್ರಕಾರ ಭಾಷ್ಯವೊಂದನ್ನು ಬರೆದು ಗುರುಗಳಿಗೆ ಒಪ್ಪಿಸಿ ಉತ್ತರದೇಶದ ಯಾತ್ರೆ ಕೈಗೊಂಡರು. ಹಿಮಾಲಯ ಪ್ರಾಂತದ ಬದರಿಕಾಶ್ರಮದಲ್ಲಿ ಬ್ರಹ್ಮಸೂತ್ರಗಳಿಗೆ ದ್ವೈತ ಪರವಾದ ಭಾಷ್ಯಸಿದ್ಧಪಡಿಸಿ ಉಡುಪಿಗೆ ಹಿಂತಿರುಗಿದರು. ಆಗ ಅನಂತೇಶ್ವರನ ಗುಡಿಯ ಸಮೀಪದಲ್ಲಿ ಕೃಷ್ಣನ ಮಂದಿರ ಕಟ್ಟಲು ವ್ಯವಸ್ಥೆ ಮಾಡಿದರು. ಈಗ ಪ್ರಸಿದ್ಧವಾಗಿರುವ ಉಡುಪಿ ಕೃಷ್ಣನ ಗುಡಿಯೇ ಅದೆನ್ನುವರು. ಉತ್ತರದ ದ್ವಾರಕೆಯಿಂದ ಶ್ರೀಕೃಷ್ಣನ ವಿಗ್ರಹವನ್ನು ತಂದು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರೆಂದು ಪ್ರತೀತಿ.

ಮತ್ತೊಮ್ಮೆ ಆಚಾರ್ಯರು ಉತ್ತರ ದೇಶದ ಯಾತ್ರೆ ಕೈಗೊಂಡು ವಾದಿಗಳನ್ನು ಸೋಲಿಸಿ ಎಲ್ಲೆಡೆಯಲ್ಲಿಯೂ ದ್ವೈತ ಸಿದ್ಧಾಂತವನ್ನು ಸಮರ್ಥಿಸಿ, ಶಿಷ್ಯರನ್ನು ಸಂಪಾದಿಸಿದರು. ಗೋದಾವರೀ ತೀರದಲ್ಲಿ ಶೋಭನಭಟ್ಟ (ಪದ್ಮನಾಭ ತೀರ್ಥ) ಮತ್ತು ಕಳಿಂಗ ಪ್ರಾಂತದಲ್ಲಿ ಶ್ಯಾಮಶಾಸ್ತ್ರಿ (ನರಹರಿತೀರ್ಥ) ಶಿಷ್ಯರಾದರು. ಹೀಗೆ ದೇಶದಲ್ಲೆಲ್ಲ ಸುವಿಖ್ಯಾತರಾಗಿ ದ್ವೈತ ಸಿದ್ಧಾಂತ ಪ್ರವರ್ತಕರಾಗಿ ನೂರಾರು ಪ್ರತಿಭಾಶಾಲಿ ಶಿಷ್ಯರ ಗುರುಗಳಾಗಿ ಹಿಂತಿರುಗಿದ ಮಧ್ವಾಚಾರ್ಯರು ಉಡುಪಿಯ ಅನಂತೇಶ್ವರ ಗುಡಿಯಲ್ಲಿ ಶಿಷ್ಯರಿಗೆ ಪಾಠ ಹೇಳುತ್ತಿದ್ದಾಗ ಮರೆಯಾದರು. ಆಗ ಇವರಿಗೆ ಎಂಬತ್ತು ವರ್ಷ ವಯಸ್ಸು. ತಿರೋಧಾನದ ವರ್ಷ 1317. ಮಾಘ ಶುದ್ಧ ನವಮಿಯನ್ನು ಮಧ್ವನವಮಿಯೆಂದು ಇವರ ಅನುಯಾಯಿಗಳು ವಿಶೇಷ ಸಂಭ್ರಮದಿಂದ ಆಚರಿಸುವ ಪದ್ಧತಿಯಿದೆ. ನಾರಾಯಣ ಪಂಡಿತಾಚಾರ್ಯರ ಮಧ್ವವಿಜಯ ಮಧ್ವಾಚಾರ್ಯರ ಜೀವನ ಸಾಧನೆಗಳನ್ನು ವಿವರಿಸುವ ಮುಖ್ಯ ಆಧಾರಗ್ರಂಥ. ಇದು ಮಧ್ವಾಚಾರ್ಯರ ಮರಣಾನಂತರ ರಚಿತವಾಗಿದ್ದು ಇಲ್ಲಿಯ ವಿವರಗಳು ಬಲುಮಟ್ಟಿಗೆ ಸಾಧಾರಿತವಾದವು ಎಂಬ ನಂಬುಗೆಯಿದೆ.

ಆಚಾರ್ಯರು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವ 37 ಗ್ರಂಥಗಳನ್ನು ರಚಿಸಿದರು. ಇವಕ್ಕೆ ಒಟ್ಟಾಗಿ ಸರ್ವಮೂಲ ಎಂಬ ಹೆಸರಿದೆ. ಬ್ರಹ್ಮಸೂತ್ರ ಪ್ರಸ್ಥಾನದ ಮೇಲೆ ಭಾಷ್ಯ, ಅಣುವ್ಯಾಖ್ಯಾನ, ಅಣುಭಾಷ್ಯ, ನ್ಯಾಯವಿವರಣ– ಈ ನಾಲ್ಕು ಗ್ರಂಥಗಳು; ಉಪನಿಷತ್ ಪ್ರಸ್ಥಾನದ ಮೇಲೆ ದಶೋಪನಿಷದ್ಭಾಷ್ಯಗಳು; ಗೀತಾ ಪ್ರಸ್ಥಾನದ ಮೇಲೆ ಭಗವದ್ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯ ನಿರ್ಣಯ– ಈ ಎರಡು ಗ್ರಂಥಗಳು: ದಶಪ್ರಕರಣಗಳು (ಅಂದರೆ ಪ್ರಮಾಣ ಲಕ್ಷಣ, ಕಥಾಲಕ್ಷಣ, ಉಪಾದಿ ಖಂಡನ, ಮಾಯಾವಾದ ಖಂಡನ, ಪ್ರಪಂಚ ಮಿಥ್ಯಾತ್ವಾನುವಾದ ಖಂಡನ, ತತ್ತ್ವಸಂಖ್ಯಾನ, ತತ್ತ್ವೋದ್ಯೋತ, ಕರ್ಮನಿರ್ಣಯ, ವಿಷ್ಣುತತ್ತ್ವನಿರ್ಣಯ, ತತ್ತ್ವವಿವೇಕ); ಭಾರತ ಮತ್ತು ಭಾಗವತಗಳಿಗೆ ತಾತ್ಪರ್ಯ ನಿರ್ಣಯಗಳು; ಯಮಕಭಾರತ, ಋಗ್ಭಾಷ್ಯ, ಜಯಂತೀನಿರ್ಣಯ, ಯತಿಪ್ರಣವಕಲ್ಪ, ಕೃಷ್ಣಾಮೃತ ಮಹಾರ್ಣವ, ಸದಾಚಾರಸ್ಮೃತಿ, ತಂತ್ರಸಾರ (**ನೋಡಿ–ಮೂರ್ತಿಶಿಲ್ಪ**), ದ್ವಾದಶಸ್ತೋತ್ರ, ನಖಸ್ತುತಿ–ಇವು ಮಧ್ವಾಚಾರ್ಯರ ಕೃತಿಗಳು.

ಮಧ್ವಾಚಾರ್ಯರ ಸಿದ್ಧಾಂತ ದ್ವೈತವಾದ. ಸ್ವತಂತ್ರನಾದ ಬ್ರಹ್ಮ ಪರತಂತ್ರಗಳಾದ ಜೀವ, ಜಡ ಈ ಎರಡೂ ಬೇರೆಬೇರೆ ತತ್ತ್ವಗಳೆಂಬುದು ಸಿದ್ಧಾಂತದ ಮೂಲ ಅಂಶ. ಇವುಗಳಲ್ಲಿ ಭೇದವನ್ನು ಪ್ರತಿಪಾದಿಸುವುದರಿಂದ ಇವರ ಸಿದ್ಧಾಂತಕ್ಕೆ ಭೇದವಾದವೆಂಬ ಹೆಸರು ಇದೆ. ಜೀವ–ಈಶ್ವರ, ಜೀವ–ಜೀವ, ಜಡ–ಜೀವ, ಜಡ–ಈಶ್ವರ, ಜಡ–ಜಡ ಎಂಬ ಪಂಚಭೇದಗಳು ನಿತ್ಯಸತ್ಯಗಳೆಂಬ ಪ್ರತಿಪಾದನೆಯನ್ನು, ಅದರಲ್ಲೂ ಬಲುಮುಖ್ಯವಾದ ಜೀವ–ಈಶ್ವರ ಭೇದವನ್ನು ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಪ್ರಮಾಣಗಳಿಂದ ಪ್ರತಿಪಾದಿಸಿದ್ದಾರೆ. ಪ್ರಪಂಚ ಸತ್ಯ, ವಿಷ್ಣುಸರ್ವೋತ್ತಮ, ದೇವ, ಜೀವ, ಜಡ, ಎಲ್ಲದರಲ್ಲೂ ತರತಮತ್ವವಿದೆ ಎಂಬುದು ಈ ಸಿದ್ಧಾಂತದ ಇತರ ಮುಖ್ಯಾಂಶಗಳು. ಇವು ಅಜ್ಞಾನವನ್ನು ಹೋಗಲಾಡಿಸಿಕೊಂಡು ಜ್ಞಾನಸಂಪಾದಿಸಿ ಮೋಕ್ಷ ಪಡೆಯಬೇಕೆಂಬ ತತ್ತ್ವದ ಆಧಾರದ ಮೇಲೆ ನಿಂತಿದೆ.

ಉಡುಪಿಯಲ್ಲಿ ಕೃಷ್ಣ ಪ್ರತಿಷ್ಠೆಯಾದ ಅನಂತರ ಆಲಯದಲ್ಲಿ ಪೂಜೆ ಅವ್ಯಾಹತವಾಗಿ ನಡೆಯುವ ಉದ್ದೇಶದಿಂದ ಆಚಾರ್ಯರು ಪರ್ಯಾಯ ಪದ್ಧತಿಯನ್ನು ಏರ್ಪಡಿಸಿದರು. ಇದು ಈಗಲೂ ನಡೆದು ಬರುತ್ತಿದೆ. ಗುಡಿಯಲ್ಲಿ ಪೂಜೆಯನ್ನೂ ಕೃಷ್ಣಮಠದ ನಿರ್ವಹಣೆಯನ್ನೂ ಎರಡು ವರ್ಷಗಳಿಗೊಮ್ಮೆ ಪರ್ಯಾಯಕ್ರಮದಲ್ಲಿ ಎಂಟು ಮಠಗಳು ಕೈಗೊಳ್ಳುತ್ತವೆ. ಆಚಾರ್ಯರು ಏರ್ಪಡಿಸಿದ್ದ ಅಷ್ಟಮಠಗಳು ಫಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶೀರೂರು, ಕಾಣಿಯೂರು, ಪೇಜಾವರ, ಸೋದೆಮಠಗಳೆಂದು ಪ್ರಸಿದ್ಧವಾಗಿವೆ. ಈ ಎಂಟರಲ್ಲಿ ದ್ವಂದ್ವ ಮಠಗಳೆಂಬ ಕಲ್ಪನೆಯೂ ಉಂಟು. ಅಂತೂ ಕೃಷ್ಣನ ಗುಡಿಯೂ ಕೃಷ್ಣಮಠವೂ ಯಾವೊಂದು ಮಠ ಅಥವಾ ಮಠಾಧೀಶರ ಸ್ವಾಮ್ಯವೂ ಆಗಿರದೆ, ಒಂದೊಂದು ಮಠವೂ ಎರಡು ವರ್ಷಗಳು ಮಾತ್ರ ಅದರ ಅಧಿಕಾರವನ್ನೂ ಹೊಣೆಗಾರಿಕೆಯನ್ನೂ ವಹಿಸಿಕೊಳ್ಳುವುದು ಸ್ವಾರಸ್ಯವಾದ ಪದ್ಧತಿ. ಮೊದಲು ಎರಡು ತಿಂಗಳ ಅವಧಿಯಿದ್ದುದನ್ನು ಎರಡು ವರ್ಷಗಳಿಗೆ ಮಾರ್ಪಡಿಸಿ ಈಗಿನ ಪರ್ಯಾಯದ ವಿವರಗಳನ್ನು ನಿರ್ದೇಶಿಸಿದವರು ಸೋದೆ ಮಠದ ವಾದಿರಾಜರೆಂದು ಪ್ರತೀತಿ ಇದೆ.

ಉಡುಪಿಯ ಎಂಟು ಮಠಗಳಲ್ಲದೆ ಉತ್ತರಾದಿಮಠ, ವ್ಯಾಸರಾಯಮಠ, ರಾಘವೇಂದ್ರ ಸ್ವಾಮಿಮಠ, ಮುಳಬಾಗಿಲುಮಠ, ಬಾಳಗಾರುಮಠ ಮಾಧವತೀರ್ಥಮಠ ಮೊದಲಾದ ಇತರ ಮಠಗಳೂ ಮಧ್ವಾಚಾರ್ಯರ ಪರಂಪರೆಗೆ ಸೇರಿವೆ. ಕರ್ನಾಟಕವಲ್ಲದೆ ತಮಿಳುನಾಡು. ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲೂ ಮಧ್ವಾಚಾರ್ಯರ ಅನುಯಾಯಿಗಳು ಇದ್ದಾರೆ. ಬಂಗಾಲದ ಕಡೆ ಗೌಡೀಯ ಪಂಥದವರಿಗೂ ಮಧ್ವಾಚಾರ್ಯರು ಗುರುಗಳು. (ಎಸ್.ಕೆ.ಆರ್.)

**ಮನ್ಸರ್:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯ ರಾಮಟೇಕ್ ತಾಲ್ಲೂಕಿನಲ್ಲಿರುವ ಐತಿಹಾಸಿಕ ನೆಲೆ. ಇದರ ದಕ್ಷಿಣ ದಿಶೆಯಲ್ಲಿ ಸಾತ್‌ಪುರ ಬೆಟ್ಟಶ್ರೇಣಿಯಿದೆ. ಮಣಿಸರ ಎಂಬ ಸರೋವರದ ದಂಡೆಯಲ್ಲಿರುವ ಈ ಐತಿಹಾಸಿಕ ನೆಲೆಯನ್ನು 1906ರಲ್ಲಿ ಲೋಕೋಪಯೋಗಿ ಇಲಾಖೆಯ 112ನೆಯ ಟಪ್ಪಣಿಯಲ್ಲಿ ಪ್ರಥಮ ಬಾರಿಗೆ ಉಲ್ಲೇಖಿಸಲಾಗಿದೆ. 1933ರಲ್ಲಿ ಟಿ.ಎ. ವೆಲ್‌ಸ್ಟೆಡ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್‌ನ 29ನೆಯ ಸಂಪುಟದಲ್ಲಿ ಈ ಪ್ರಾಚೀನ ನಗರದ ಅವಶೇಷಗಳನ್ನು ಕುರಿತಾಗಿ ಒಂದು ವಿಸ್ತೃತ ಲೇಖನವನ್ನು ಪ್ರಕಟಿಸಿದ.

ನಾಗಪುರ ವಿಶ್ವವಿದ್ಯಾಲಯ ಹಾಗೂ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಇಲ್ಲಿ ಉತ್ಖನನ ನಡೆಸಿ ಹಲವಾರು ಐತಿಹಾಸಿಕ ಕಟ್ಟಡಗಳನ್ನು ಹಿಂದೆ ಬೆಳಕಿಗೆ ತಂದಿದ್ದವು. ಇತ್ತೀಚೆಗೆ ನಾಗಪುರದ ಬೋಧಿಸತ್ವ ನಾಗಾರ್ಜುನ ಸ್ಮಾರಕ ಸಂಸ್ಥೆ ಹಾಗೂ ಅನುಸಂಧಾನ ಕೇಂದ್ರದ ಆಶ್ರಯದಲ್ಲಿ ಜೆ.ಪಿ. ಜೋಷಿ ಹಾಗೂ ಎ.ಕೆ. ಶರ್ಮ ನಡೆಸಿದ ಉತ್ಖನನ (1998–2004) ಮಹತ್ತ್ವಪೂರ್ಣದ್ದಾಗಿದೆ. ಇಲ್ಲಿಯ ವಿಹಾರದಿಬ್ಬ ಮತ್ತು ಹಿಡಿಂಬ ದಿಬ್ಬಗಳ ಉತ್ಖನನದಿಂದಾಗಿ ಮೌರ್ಯ–ಶುಂಗರ ಕಾಲ, ಸಾತವಾಹನ, ವಾಕಾಟಕ ಹಾಗೂ ವಿಷ್ಣುಕುಂಡಿ ವಂಶಕ್ಕೆ ಸಂಬಂಧಿಸಿದ ಅನೇಕ ಧಾರ್ಮಿಕ ಹಾಗೂ ಲೌಕಿಕ ಕಟ್ಟಡಗಳನ್ನು ಬೆಳಕಿಗೆ ತರಲಾಗಿದೆ. ಇವುಗಳನ್ನು ನಾಲ್ಕು ಅನುಕ್ರಮ ಹಂತಗಳಲ್ಲಿ ವರ್ಗೀಕರಿಸಲಾಗಿದೆ. ಈ ಎರಡೂ ದಿಬ್ಬಗಳ ಪರಿಸರದಲ್ಲಿ ನಡೆಸಿದ ಅನ್ವೇಷಣೆಯಿಂದ ಪ್ರಾಗೈತಿಹಾಸಿಕ ಅವಶೇಷಗಳನ್ನೂ ವರದಿ ಮಾಡಲಾಗಿದೆ. ಆದಿ, ಮಧ್ಯ ಹಾಗೂ ಅಂತ್ಯ ಹಳೆಶಿಲಾಯುಗದ ಕಲ್ಲಿನ ಉಪಕರಣಗಳಾದ ಕೈಗೊಡಲಿ, ಕಡಿಕತ್ತಿ, ಹೆರೆಯುವ ಚಕ್ಕೆ, ಮೊನೆಗಳು, ಮಚ್ಚು, ಬಿಲ್ಲೆಯಾಕಾರದ ತಿರುಳುಗಳು, ಸೂಕ್ಷ್ಮ ಅಲಗುಗಳು ಆದಿಮಾನವ ಇಲ್ಲಿ ವಾಸಿಸುತ್ತಿದ್ದುದನ್ನು ದೃಢಪಡಿಸುತ್ತವೆ.

ಹಂತ I: ಮೌರ್ಯ–ಶುಂಗರ (ಪ್ರ.ಶ.ಪೂ.ಸು.300–ಪ್ರ.ಶ.200) ಕಾಲಕ್ಕೆ ಸಂಬಂಧಿಸಿದ, ಎರಡು ಹಂತಗಳಲ್ಲಿ ಕಟ್ಟಿದ ಒಂದು ಸ್ತೂಪ ಹಾಗೂ ಚೈತ್ಯದ ಅವಶೇಷಗಳು ಮುಖ್ಯವಾದುವು. ಅರೆಪ್ರಶಸ್ತ ಶಿಲೆಯ ಹಾಗೂ ಸುಟ್ಟಮಣ್ಣಿನ ಮಣಿಗಳು, ಬಳೆಗಳು, ಕಬ್ಬಿಣದ ವಸ್ತುಗಳು, ಬೀಸುವ ಹಾಗೂ ರುಬ್ಬುಕಲ್ಲುಗಳು, ಅಭ್ರಕಯುಕ್ತ ಕೆಂಪುಬಣ್ಣದ ಮಣ್ಪಾತ್ರೆಗಳು, ಲೇಪನವುಳ್ಳ ಮತ್ತು ಲೇಪನರಹಿತ ಪಾತ್ರೆಗಳು, ಹೊಳಪಿನ ಕೆಂಪುಬಣ್ಣದ ಪಾತ್ರೆ ಗಮನಾರ್ಹ. ಜೊತೆಗೆ ಮುಕ್ಕಣ್ಣುಳ್ಳ ಪಾರ್ವತಿ, ನಂದಿಸಹಿತ ಶಿವ–ಪಾರ್ವತಿ, ಮುಂಡಾಸನವುಳ್ಳ ಪುರುಷನ ತಲೆಭಾಗ ಮುಂತಾದ ಶಿಲಾಶಿಲ್ಪಗಳು ದೊರೆತಿವೆ.

ಹಂತ II: ಸಾತವಾಹನರ ಕಾಲ (ಪ್ರ.ಶ.ಪೂ.200–ಪ್ರ.ಶ.200): ಇಟ್ಟಿಗೆಯ ಒಂದು ಬೃಹತ್ ಅರಮನೆಯ ಅವಶೇಷಗಳು ಪ್ರಮುಖವಾದುವು. ಇದರ ಪ್ರವೇಶದ್ವಾರ ಪಶ್ಚಿಮ ದಿಶೆಯಲ್ಲಿದೆ. ಅರಮನೆಯ ಗೋಡೆಗಳ ಹೊರಮೈ ಗಿಲಾವು ಮಾಡಿದ ಗೋಡೆ ಗಂಬಗಳಿಂದ ಕೂಡಿದ್ದು, ಕ್ರಮವಾಗಿ ಕೆಂಪು ಹಾಗೂ ಬಿಳಿಬಣ್ಣದಿಂದ ಅಲಂಕೃತವಾಗಿದ್ದವು. ಅಧಿಷ್ಠಾನ ಕಪೋತದ ಮೇಲಿರುವ ಮಕರ ಚಿತ್ರಗಳನ್ನು ಇಟ್ಟಿಗೆಯಲ್ಲಿಯೇ ರಚಿಸಲಾಗಿದೆ. ಅರಮನೆಯ ವಾಯವ್ಯ ಮೂಲೆಯಲ್ಲಿರುವ ವಾಸ್ತುಪೂಜೆಗೆ ಸಂಬಂಧಿಸಿದ ಹೋಮಕುಂಡ ದಿಂದ ಸುಟ್ಟಮಣ್ಣಿನ ಮಾನವಾಕೃತಿಯ ಚಿಕ್ಕ ಗೊಂಬೆ, ಸುಟ್ಟಧಾನ್ಯಗಳ ಅವಶೇಷ, ಬೂದಿ ದೊರೆತಿವೆ. ಅರಮನೆಯಲ್ಲಿ ವಿಭಿನ್ನ ಆಕಾರದ ಹಲವು ಕೋಣೆಗಳಿದ್ದು, ಅವುಗಳ ಬಾಗಿಲು ಮೊಗಸಾಲೆಗೆ ಅಭಿಮುಖವಾಗಿದ್ದುವು. ಅರಮನೆ ಕೋಟೆಗೋಡೆಯಿಂದ ಆವೃತವಾಗಿತ್ತು. ಇದರ ಪಶ್ಚಿಮದಿಶೆಯಲ್ಲಿ ಪೌಳಿಯಿಂದಾವೃತವಾದ 42 ಕಂಬಗಳ ಒಂದು ವಿಶಾಲ ಮಂಟಪವಿತ್ತು. ಈ ಹಂತದ ಮಹತ್ತ್ವದ ಅವಶೇಷಗಳೆಂದರೆ ಗೌತಮಿಪುತ್ರ ಸಾತಕರ್ಣಿಯ ನಾಣ್ಯಗಳ ಸುಟ್ಟಮಣ್ಣಿನ ಅಚ್ಚುಗಳು. ಈ ಅಚ್ಚುಗಳ ಮುಂಭಾಗದಲ್ಲಿ ಉಜ್ಜಯನಿಯ ಸಂಕೇತ, ಮೂರು ಕಮಾನು ಅಥವಾ ಬೆಟ್ಟಗಳು, ಹರಿಯುವ ನೀರಿನ ಸಂಕೇತದೊಂದಿಗೆ 2ನೆಯ ಶತಮಾನದ ಬ್ರಾಹ್ಮಿಲಿಪಿ ಬರೆಹವಿದೆ. ಇನ್ನಿತರ ಅವಶೇಷಗಳೆಂದರೆ ಕಬ್ಬಿಣದ ಕಠಾರಿ, ಈಟಿ, ಬಾಣ, ಉಳಿ, ಮೊಳೆ ಇತ್ಯಾದಿ; ಸುಟ್ಟಮಣ್ಣಿನ ಹಾಗೂ ಶಂಖದ ಬಳೆಗಳು; ಸುಟ್ಟಮಣ್ಣಿನ ಹಾಗೂ ಅರೆಪ್ರಶಸ್ತಶಿಲೆಯ ಮಣಿಗಳು; ಬೀಸುವ ಹಾಗೂ ರುಬ್ಬುವ ಕಲ್ಲುಗಳು; ಹೊಳಪಿನ ಕೆಂಪುಬಣ್ಣದ ಮಣ್ಪಾತ್ರೆ, ಔತ್ತರೇಯ ಮೆರುಗಿನ ಕಪ್ಪುಪಾತ್ರೆಯನ್ನು ಹೋಲುವ ಮಣ್ಪಾತ್ರೆ ತುಣುಕುಗಳು, ದ್ರಾಕ್ಷಾರಸದ ದೊಡ್ಡ ಜಾಡಿಗಳು (ಆಂಫೊರ); ಏಕಮುಖ ಲಿಂಗ, ಗರುಡವಾಹನ, ನರಸಿಂಹ, ಮಯೂರವಾಹನ ಕಾರ್ತಿಕೇಯ, ಲಜ್ಜಾಗೌರಿ, ನಂದಿ, ಸುಟ್ಟಮಣ್ಣಿನಲ್ಲಿ ತಯಾರಿಸಿದ ಕಲಶಗಳ ಮಾದರಿಗಳು.

ಹಂತ III: ಹಿಡಿಂಬ ದಿಬ್ಬದ ಪೂರ್ವಭಾಗದಲ್ಲಿ ನಡೆಸಿದ ಉತ್ಖನನದಿಂದ ವಾಕಾಟಕರ (275–550) ಕಾಲದಲ್ಲಿ ಕೈಗೊಂಡ ವಾಜಪೇಯ ಯಜ್ಞದ ಅವಶೇಷಗಳನ್ನು ಬೆಳಕಿಗೆ ತರಲಾಗಿದೆ. ಈ ಸಂದರ್ಭದಲ್ಲಿ ವಾಕಾಟಕ ಒಂದನೆಯ ಪ್ರವರಸೇನ ಎರಡು ಬಾರಿ ಅಶ್ವಮೇಧಯಜ್ಞ ಮಾಡಿದ್ದನೆಂಬ ಐತಿಹಾಸಿಕ ಪ್ರತೀತಿಯನ್ನು ಸ್ಮರಿಸಬಹುದು. ವಾಜಪೇಯ ಯಜ್ಞದ ಚಿತಿಯನ್ನು ಬೌದ್ಧ ಸ್ತೂಪದ ಪೆಟ್ಟಿಗೆಯಾಕಾರದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ದಕ್ಷಿಣದಿಶೆಯಲ್ಲಿ ಸುಟ್ಟ ಇಟ್ಟಿಗೆಗಳಿಂದ ತಯಾರಿಸಿದ ಕೂರ್ಮ ಆಕಾರದ ಚಿತಿ (3.40X3.40 ಮೀ)ಹಾಗೂ ಉತ್ತರ ದಿಶೆಯಲ್ಲಿ ಶ್ಯೇನಚಿತಿಯನ್ನು (ಹಾರುವ ಗರುಡನ ಆಕಾರ) (2.50X1.80 ಮೀ) ಗುರುತಿಸಲಾಗಿದೆ. ಈ ಎರಡೂ ಚಿತಿಗಳು ಪೂರ್ವದಿಶಾಭಿಮುಖವಾಗಿದ್ದು, ಇವಕ್ಕೆ ಮೆಟ್ಟಿಲುಗಳಿವೆ. ಶ್ಯೇನಚಿತಿಯೊಳಗೆ ಸುಣ್ಣಗಾರೆಯಿಂದ ತಯಾರಿಸಿದ 3ಮೀ ಉದ್ದದ, ಕೌಪೀನ ಹಾಗೂ ಕಾಲಂದಿಗೆಗಳನ್ನು ಧರಿಸಿ, ಕಾಲುಗಳನ್ನು ಮಡಿಸಿಕೊಂಡು ಬಲಮಗ್ಗುಲಾಗಿ (ದಕ್ಷಿಣಾಭಿಮುಖವಾಗಿ) ಮಲಗಿದ ಮಾನವಾಕೃತಿಯ ಒಂದು ಮಾದರಿಯಿತ್ತು. ಈ ಆಕೃತಿಯ ವಕ್ಷಸ್ಥಲದ ಮೇಲ್ಭಾಗವನ್ನು ಉದ್ದೇಶಪೂರ್ವಕವಾಗಿ ಧ್ವಂಸಮಾಡಿ, ಈ ಜಾಗದಲ್ಲಿ ಸುಟ್ಟ ಇಟ್ಟಿಗೆಯ ಚೌಕಾಕಾರದ ವೇದಿಯನ್ನು ನಿರ್ಮಿಸಿರುವರು. ವೇದಿಯ ಮಧ್ಯಭಾಗದಲ್ಲಿ ನೆಟ್ಟ ಯೂಪಸ್ತಂಭದ ಗುಳಿಯೂ ಇದೆ. ಚಿತಿಯ ಒಳಮೈಯನ್ನು ಸುಣ್ಣಗಾರೆಯಿಂದ ಗಿಲಾವು ಮಾಡಲಾಗಿದೆ. ಈ ಮಾನವ ಗೊಂಬೆಯ ಅಕ್ಕಪಕ್ಕದಲ್ಲಿ ಮಣ್ಪಾತ್ರೆಗಳು, ಕಬ್ಬಿಣದ ಉಪಕರಣಗಳು ಹಾಗೂ ಕಬ್ಬಿಣದ ಒಂದು ಹೆಡೆಬಿಚ್ಚಿದ ಹಾವು ಇದ್ದವು. ಅಲ್ಲದೆ ಇದರ ವಾಯವ್ಯ ದಿಶೆಯಲ್ಲಿ ಒಂದು ಚಕ್ರದ ಮಾದರಿಯಿತ್ತು. ಈ ಚಿತಿಗಳಲ್ಲದೆ ಇನ್ನಿತರ ಹವನಕುಂಡಗಳಿದ್ದುವು. ಉತ್ಖನನಕಾರರ ಅನುಮಾನದಂತೆ ಅಶ್ವಮೇಧಯಜ್ಞವನ್ನು ಮಾಡಿದ ಒಂದನೆಯ ಪ್ರವರಸೇನನೇ ಈ ಯಜ್ಞಚಿತಿಗಳ ಕರ್ತೃ.

ಇಲ್ಲಿ ಕೆಲವು ಶೈವ ದೇವಾಲಯಗಳ ಭಗ್ನಾವಶೇಷಗಳನ್ನು ಬೆಳಕಿಗೆ ತರಲಾಗಿದೆ. ಎರಡು ದೇವಾಲಯಗಳ ತಳವಿನ್ಯಾಸ ನಕ್ಷತ್ರಾಕಾರವಾಗಿರುವುದು ಕುತೂಹಲಕಾರಿ. ಒಂದು ಶಿವದೇವಾಲಯದ ಪರಿಸರದಿಂದ ದೊರೆತ, 5ನೆಯ ಶತಮಾನದ ಪೇಟಿಕಾಶಿರವುಳ್ಳ ಬ್ರಾಹ್ಮಿಲಿಪಿಯಲ್ಲಿ ಬರೆದ ಪುವರೇಶ್ವರಸ್ಯ ಎಂಬ ಮುದ್ರಾಂಕನದ ಆಧಾರದ ಮೇಲೆ, ಈ ದೇವಾಲಯ ಎರಡನೆಯ ಪ್ರವರಸೇನನ ತಾಮ್ರಪಟ ಶಾಸನದಲ್ಲಿ ಉಲ್ಲೇಖಿಸಿದ ಪ್ರವರೇಶ್ವರ ದೇವಾಲಯ ಇರಬಹುದೆಂದು ಉತ್ಖನನಕಾರರ ಅಭಿಪ್ರಾಯ. ಈ ದೇವಾಲಯ ಪರಿಸರದಿಂದ ಸುಂದರ ಹಾಗೂ ಮನಮೋಹಕವಾದ ವಾಕಾಟಕ ಕಾಲದ ಶಿಲ್ಪಗಳು ದೊರೆತಿವೆ. ಲಕ್ಷ್ಮಿ, ಶಿವಪಾರ್ವತಿ ಆಲಿಂಗನ ಮೂರ್ತಿ, ಶಿವ, ಯಕ್ಷ, ಕುಬೇರ, ವಿದ್ಯಾಧರರು, ಕಿನ್ನರ, ನಾಗ, ಮಹಿಷಾಸುರ, ಕೀರ್ತಿಮುಖಗಳು, ಭಾರವಾಹಕ ಶಿಲ್ಪಗಳು ಮುಂತಾದುವನ್ನು ಹೆಸರಿಸ ಬಹುದು.

ಪ್ರವರೇಶ್ವರ ದೇವಾಲಯದ ಪೂರ್ವದಿಶೆಯಲ್ಲಿ ಮಹಾವಿಹಾರ ನೆಲೆಯೆಂದು ಗುರುತಿಸಲಾಗುವ ಸ್ಥಳದಲ್ಲಿ ವಾಕಾಟಕರ ಕಾಲದ, ಸುರಕ್ಷಾಗೋಡೆಯಿಂದ ಆವೃತವಾದ ಮೂರು ಅಂತಸ್ತಿನ ಅರಮನೆಯ ಅವಶೇಷಗಳನ್ನು ಬೆಳಕಿಗೆ ತರಲಾಗಿದೆ. ಈ ಹೊಸ ಅರಮನೆಯನ್ನು ಇಲ್ಲಿದ್ದ ಸಾತವಾಹನರ ಕಾಲದ ಅರಮನೆಯ ತಳವಿನ್ಯಾಸವನ್ನು ಅನುಸರಿಸಿ ಹಾಗೂ ವಿಸ್ತರಿಸಿ ಕಟ್ಟಲಾಗಿದೆ. ಪಶ್ಚಿಮಾಭಿಮುಖವಾದ್ದು ಸು. 15ಮೀ ಎತ್ತರದಷ್ಟು ಉಳಿದಿರುವ ಭಗ್ನ ಅರಮನೆಯನ್ನು ಎರಡು ವಿಶಾಲ ಸೋಪಾನಗಳ ಸಹಾಯದಿಂದ ಪ್ರವೇಶಿಸಬಹುದು. ಇದರ ಬಾಹ್ಯಗೋಡೆಗಳನ್ನು ಗೋಡೆಗಂಬಗಳುಳ್ಳ ಗೂಡುಗಳಿಂದ ಅಲಂಕರಿಸಲಾಗಿದ್ದು, ಸುಣ್ಣಗಾರೆಯಿಂದ ಗಿಲಾವು ಮಾಡಲಾಗಿದೆ. ಅಧಿಷ್ಠಾನದ ನಾಲ್ಕೂ ಮೂಲೆಗಳಲ್ಲಿ ಚೌಕಾಕಾರದ ನಾಲ್ಕು ಬುರುಜಿನಂಥ ಕಟ್ಟಡಗಳಿವೆ. ಅಧಿಷ್ಠಾನ ಹಾಗೂ ಪುಸ್ತಕ ಕಪೋತಗಳ ಮೇಲೆ ಮಕರ ಚಿತ್ರಗಳಿವೆ. ಮೇಲಂತಸ್ತಿಗೆ ಹೋಗಲು ಪಶ್ಚಿಮ ದಿಶೆಯ ಮೊಗಸಾಲೆಯಲ್ಲಿ ಸೋಪಾನವಿದೆ. ಎರಡನೆಯ ಅಂತಸ್ತಿನ ಮಧ್ಯಭಾಗದಲ್ಲಿ ಒಂದು ಚೌಕಾಕಾರದ ಕುಂಡವಿದ್ದು, ಅದರ ಕೇಂದ್ರದಲ್ಲಿರುವ ಚೌಕಾಕಾರದ ಸ್ತಂಭ ಕೆಳಅಂತಸ್ತಿನ ನೆಲಗಟ್ಟಿನವರೆಗೆ ಇದೆ. ಈ ಸಾಧನದಿಂದ ಅರಮನೆಯ ಒಳಭಾಗಕ್ಕೆ ಗಾಳಿ ಮತ್ತು ಬೆಳಕಿನ ಅನುಕೂಲತೆಯನ್ನು ಕಲ್ಪಿಸಲಾಗಿತ್ತೆಂದು ಉತ್ಖನನಕಾರರ ಅಂದಾಜು. ಈ ಅರಮನೆಯನ್ನು ಕಟ್ಟುವಾಗ ನಡೆಸಿದ ವಾಸ್ತುಪೂಜೆಯ ಅವಶೇಷಗಳನ್ನೊಳಗೊಂಡ ಹವನಕುಂಡಗಳನ್ನು ವರದಿ ಮಾಡಲಾಗಿದೆ. ಅರಮನೆಯ ಪೂರ್ವ, ಉತ್ತರ ಹಾಗೂ ದಕ್ಷಿಣ ದಿಶೆಯಲ್ಲಿ ಬೆಳಕಿಗೆ ತಂದ ಅನೇಕ ಕಟ್ಟಡಗಳು ರಾಜಮನೆತನಕ್ಕೆ ಸಂಬಂಧಿಸಿದ ಜನರಿಗೆ ಹಾಗೂ ಸುರಕ್ಷಾ ಸಿಬ್ಬಂದಿಗಾಗಿ ಇದ್ದಿರಬೇಕೆಂದು ಉತ್ಖನನಕಾರರು ಊಹಿಸಿದ್ದಾರೆ. ಎರಡನೆಯ ಪ್ರವರಸೇನನ ಕಾಲದಲ್ಲಿ ವಾಕಾಟಕರ ರಾಜಧಾನಿಯನ್ನು ನಂದಿವರ್ಧನದಿಂದ ಹೊಸತಾಗಿ ನಿರ್ಮಿಸಿದ ಪ್ರವರಪುರಕ್ಕೆ ವರ್ಗಾಯಿಸಲಾಗಿತ್ತೆಂಬ ಐತಿಹ್ಯವಿದೆ. ಆದ್ದರಿಂದ ಈ ಅರಮನೆಯ ಸ್ಥಳವೇ ಪ್ರವರಪುರದ ಕೇಂದ್ರವಾಗಿದ್ದಿರಬಹುದೆಂದು ಉತ್ಖನನಕಾರರ ಅಭಿಪ್ರಾಯ.

ಹಂತ IV: ಎರಡನೆಯ ಪೃಥ್ವಿಸೇನನ ಕಾಲದಲ್ಲಿ ಬಸ್ತರದ ನಳವಂಶ ರಾಜ ಭವದತ್ತವರ್ಮನ ಧಾಳಿಯಿಂದಾಗಿ ವಾಕಾಟಕರ ರಾಜಧಾನಿಯಾದ ಪ್ರವರಪುರ ನಾಶ ವಾಯಿತು. ಅರಮನೆಯ ಭಾಗದಲ್ಲಿ ಕಂಡುಬಂದ ಸುಟ್ಟ ಅವಶೇಷಗಳು, ಬೂದಿ ಇದಕ್ಕೆ ಸಾಕ್ಷಿ. ಕಾಲಾಂತರದಲ್ಲಿ ಅರಮನೆ ಸಂಕೀರ್ಣ ಸ್ಥಳವನ್ನು ಬೌದ್ಧರ ಮಹಾವಿಹಾರವಾಗಿ ಪರಿವರ್ತಿಸಲಾಯಿತು. ಅರಮನೆಯ ಎಲ್ಲ ಕೋಣೆಗಳನ್ನು ಕಲ್ಲುಮಣ್ಣಿನಿಂದ ತುಂಬಿ, ಅದರ ಮೇಲ್ಭಾಗದಲ್ಲಿ ವಿಹಾರವನ್ನು ನಿರ್ಮಿಸಲಾಯಿತು. ಇದರಿಂದ ಅರಮನೆ ಸಂಪೂರ್ಣವಾಗಿ ಮುಚ್ಚಿಹೋಯಿತು. ಈ ವಿಹಾರದಲ್ಲಿಯೂ ಎರಡು ನಿರ್ಮಾಣ ಹಂತಗಳನ್ನು ಗುರುತಿಸ ಲಾಗಿದೆ. ಇದರ ಮಧ್ಯಭಾಗದಲ್ಲಿ ಒಂದು ಸ್ತೂಪವಿದ್ದಿರಬಹುದೆಂದು ಅನುಮಾನಿಸಲಾಗಿದೆ. ವಿಹಾರದ ಒಟ್ಟು 33 ಕೋಣೆಗಳನ್ನು ಪತ್ತೆಹಚ್ಚಲಾಗಿದೆ. ಮಹಾವಿಹಾರದಿಂದ ದೊರೆತ ಮುಖ್ಯ ಅವಶೇಷಗಳು ಇಂತಿವೆ; ಬೌದ್ಧ ಭಿಕ್ಷುಗಳ ತಾಮ್ರದ ಭಿಕ್ಷಾಪಾತ್ರೆಗಳು, ಸ್ತೂಪ, ಅಲಂಕೃತ ಛತ್ರಿ ಹಾಗೂ ಆನೆಯ ಉಬ್ಬುಚಿತ್ರವುಳ್ಳ ಕಲ್ಲಿನ ಫಲಕ, ಕಬ್ಬಿಣದ ಅವಶೇಷಗಳು, ಸುಟ್ಟಮಣ್ಣಿನ ಹಾಗೂ ಶಂಖದ ಬಳೆಗಳು, ಕುಟ್ಟುವ, ಬೀಸುವ ಹಾಗೂ ರುಬ್ಬುವ ಕಲ್ಲು, ಗುಂಡುಗಳು, ಮಣ್ಪಾತ್ರೆಗಳು ಇತ್ಯಾದಿ. 9ನೆಯ ಶತಮಾನದಲ್ಲಿ ಪ್ರವರಪುರ ಬೌದ್ಧಧರ್ಮದ ಒಂದು ಕೇಂದ್ರವಾಗಿತ್ತು.

ಹಿಡಿಂಬ ದಿಬ್ಬದಲ್ಲಿದ್ದ ಪ್ರವರೇಶ್ವರ ದೇವಾಲಯ ನಾಶವಾದ ಮೇಲೆ ಇದರ ಮೇಲ್ಭಾಗ ದಲ್ಲಿಯೂ ಒಂದು ಸ್ತೂಪವನ್ನು ನಿರ್ಮಾಣ ಮಾಡಲಾಯಿತು ಎಂದು ಉತ್ಖನನಕಾರರು ಅನುಮಾನಿಸಿದ್ದಾರೆ. ಇಲ್ಲಿಯೂ ಒಂದು ಚಿಕ್ಕ ವಿಹಾರದ ಭಗ್ನಾವಶೇಷಗಳನ್ನು ಬೆಳಕಿಗೆ ತರಲಾಗಿದೆ. (ಎಲ್.ಎಸ್.ಆರ್)

**ಮಮ್ಮಿ:** ಈಜಿಪ್ಟ್ ಸಂಸ್ಕೃತಿಯಲ್ಲಿ ಸುಗಂಧ ದ್ರವ್ಯಗಳನ್ನು ಹಾಕಿ ಸಾವಿರಾರು ವರ್ಷಗಳ ಕಾಲ ಕೆಡದಂತೆ ಇಡಲಾಗುತ್ತಿದ್ದ ಶವ (ಮಮ್ಮಿ). ಈಜಿಪ್ಟಿನ ರಾಜ–ರಾಣಿಯರ ಶವಗಳನ್ನು ಬಹುವರ್ಷ ಕೆಡದಂತೆ ಪಿರಮಿಡ್ಡುಗಳಲ್ಲಿ ಸಮಾಧಿ ಮಾಡಲಾಗುತ್ತಿತ್ತು. ಅರೇಬಿಕ್ ಮೂಲದ ಈ ಶಬ್ದ ಬಿಟುಮನ್ ಎಂಬ ಖನಿಜವನ್ನು ಸೂಚಿಸುತ್ತದೆ. ಪ್ರಾಚೀನ ಈಜಿಪ್ಟಿನ ಶವಸಂರಕ್ಷಣಾ ವಿಧಾನದಲ್ಲಿ ಈ ಖನಿಜವನ್ನು ಸಂರಕ್ಷಕವಾಗಿ ಬಳಸಲಾಗುತ್ತಿತ್ತೆಂಬ ತಪ್ಪು ಕಲ್ಪನೆಯೇ ಈ ಹೆಸರು ಬರಲು ಕಾರಣವೆನ್ನಲಾಗಿದೆ.

ಲೋಕೋತ್ತರ ಜೀವನದಲ್ಲಿ ನಂಬಿಕೆ ತಳೆದ ಪ್ರಾಚೀನ ಈಜಿಪ್ಷಿಯನ್ನರು ಬದುಕಿದ್ದಾಗ ಇದ್ದಂತೆಯೇ ಮೃತದೇಹಗಳನ್ನು ಇಡಬೇಕೆಂದು ಭಾವಿಸಿ ಶವ ಸಂರಕ್ಷಣೆಯ ವಿಧಾನಗಳನ್ನು ಅನುಸರಿಸುತ್ತಿದ್ದರು. ಸಾವಿರಾರು ವರ್ಷಗಳ ತರುವಾಯ ಪುರಾತತ್ತ್ವ ಶಾಸ್ತ್ರಜ್ಞರಿಗೆ ಹೀಗೆ ಸಂರಕ್ಷಿತವಾದ ದೇಹಗಳು ಕಂಡುಬಂದವು. ಇಂದು ಹಲವಾರು ವಸ್ತುಸಂಗ್ರಹಾಲಯಗಳಲ್ಲಿ ಮಮ್ಮಿಗಳಿವೆ. ಈಜಿಪ್ಟಿನ ಫ್ಯಾರೋಗಳಾದ ಎರಡನೆಯ ರ್‍ಯಾಮ್ಸೆಸ್ ಹಾಗೂ ಟುಟಂಕಮನ್ನರ ಮಮ್ಮಿಗಳು ಪ್ರಸಿದ್ಧವಾದವು.

ಮೇಲಣ ಈಜಿಪ್ಟಿನಲ್ಲಿ ರಾಜವಂಶ ಪೂರ್ವಕಾಲದಲ್ಲಿ (ಪ್ರೀಡೈನಾಸ್ಟಿಕ್) ಮೃತರನ್ನು ಮರಳನ್ನು ತೋಡಿಮಾಡಿದ ಗುಂಡಿಯಲ್ಲಿ ಹೂಳುತ್ತಿದ್ದರು. ಅಲ್ಲಿಯ ಶುಷ್ಕ ಹಾಗೂ ಉಷ್ಣ ಹವೆಯಿಂದಾಗಿ ಹೂಳಿದ ದೇಹ ಸಹಜವಾಗಿ ಒಣಗಿ ರಕ್ಷಿತವಾಗುತ್ತಿತ್ತು. ಇದು ಈಜಿಪ್ಟಿನ ಜನರ ನಂಬಿಕೆಯಲ್ಲಿ ಪ್ರಧಾನ ಪಾತ್ರವಹಿಸಿದಂತೆ ತೋರುತ್ತದೆ.

ಈಜಿಪ್ಷಿಯನ್ನರು ಶವಸಂರಕ್ಷಣೆಗೆ ಬಳಸಿದ ಸಾಮಗ್ರಿ ಹಾಗೂ ಅನುಸರಿಸಿದ ವಿಧಾನ ಗಳನ್ನು ಈಗ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ತುಂಬ ಸರಳರೀತಿಯಲ್ಲಿ ಆರಂಭದ ಶವಸಂರಕ್ಷಣಾ ವಿಧಾನ ಬರಬರುತ್ತ ವಿಸ್ತೃತವಾಗಿ ದುಬಾರಿ ವೆಚ್ಚದ ಚಿಕಿತ್ಸೆಯಾಯಿತು. ಸಿರಿವಂತರ ದೇಹಗಳಿಗಷ್ಟೇ ಇದು ಸೀಮಿತಗೊಂಡಿತು. ಈ ಚಿಕಿತ್ಸೆ ಪೂರ್ಣಗೊಳ್ಳಲು ಎಪ್ಪತ್ತು ದಿನಗಳು ಹಿಡಿಯುತ್ತಿದ್ದವೆಂದು ಪ್ರಾಚೀನ ಗ್ರಂಥಗಳು ತಿಳಿಸುತ್ತವೆ.

ಶವಸಂರಕ್ಷಣೆಯ ಪ್ರಕ್ರಿಯೆ: ಲೋಹದ ಉಪಕರಣವೊಂದನ್ನು ಮೂಗಿನ ಹೊಳ್ಳೆಗಳ ಮೂಲಕ ತೂರಿಸಿ ಮಿದುಳಿನ ಭಾಗವನ್ನು ಹೊರತೆಗೆದು, ಖಾಲಿಯಾದ ಜಾಗಕ್ಕೆ ನೀರು ಹರಿಸಿ ಸ್ವಚ್ಛಗೊಳಿಸಲಾಗುತ್ತಿತ್ತು. ತರುವಾಯ ಹೃದಯ ಹಾಗೂ ಮೂತ್ರಕೋಶಗಳನ್ನು ಬಿಟ್ಟು ಉಳಿದೆಲ್ಲ ಒಳ ಭಾಗಗಳನ್ನು ಹೊರತೆಗೆಯಲಾಗುತ್ತಿತ್ತು. ಖಾಲಿ ಹೊಟ್ಟೆಯೊಳಗೆ ನಾರಿನ ಮೆತ್ತೆಗಳನ್ನು ಅಥವಾ ಮರದ ಪುಡಿಯನ್ನು ತುಂಬಲಾಗುತ್ತಿತ್ತು. ಅನಂತರ ದೇಹದಲ್ಲಿಯ ತೇವಾಂಶ ಹೋಗಿ ಜೀವಕೋಶಗಳು ಒಣಗುವ ತನಕ ದೇಹಕ್ಕೆ ರಾಳವನ್ನು ಬಳಿದು, ಮೊಗವಾಡವನ್ನು ಹಾಕಲಾಗುತ್ತಿತ್ತು. ಎಚ್ಚರಿಕೆಯಿಂದ ದೇಹವನ್ನು ನಾರಿನ ಪಟ್ಟಿಗಳಿಂದ ಹಲವು ಪದರಗಳಲ್ಲಿ ಸುತ್ತಿ ಶವಪೆಟ್ಟಿಗೆಯಲ್ಲಿ ಇರಿಸಲಾಗುತ್ತಿತ್ತು. ಒಂದರೊಳಗೊಂದರಂತೆ ಹಲವು ಶವಪೆಟ್ಟಿಗೆಗಳಿರುತ್ತಿದ್ದುದುಂಟು. ಇವು ಮರದ ಅಥವಾ ಕಲ್ಲಿನವಾಗಿರುತ್ತಿದ್ದು, ಆಯಾಕಾರದವು ಇಲ್ಲವೇ ಶವದಾಕಾರಕ್ಕೆ ತಕ್ಕಂತೆ ಸಿದ್ಧಪಡಿಸಿದವು ಆಗಿರುತ್ತಿದ್ದವು. ಈ ಪೆಟ್ಟಿಗೆಗಳನ್ನು ಅನೇಕ ದಿನಬಳಕೆಯ ವಸ್ತುಗಳೊಂದಿಗೆ ಸಮಾಧಿ ಮಾಡಲಾಗುತ್ತಿತ್ತು.

ಪ್ರಾಚೀನ ಈಜಿಪ್ಟಿನ ಜನ ಪ್ರಾಣಿದೇಹಗಳನ್ನು ಕೂಡ ಸಂಸ್ಕರಣೆ ಮಾಡಿ ರಕ್ಷಿಸಿದ ನಿದರ್ಶನಗಳುಂಟು. ಪವಿತ್ರವೆಂದು ಪರಿಗಣಿಸಲಾದ ಪ್ರಾಣಿಗಳ ದೊಡ್ಡ ಸಮಾಧಿ ಸ್ಥಳಗಳು (ಹೆಚ್ಚಿನವು ರೋಮನ್ ಕಾಲದವು) ಕಂಡುಬಂದಿವೆ. ಪೆರು, ಮೆಕ್ಸಿಕೋ ಮತ್ತು ಈಜಿಪ್ಟಿನಲ್ಲಿಯ ಹವೆಯಿಂದಾಗಿ ಸ್ವಾಭಾವಿಕವಾಗಿ ಸಂರಕ್ಷಿತವಾದ ದೇಹಗಳನ್ನೂ ಮಮ್ಮಿಗಳೆಂದೇ ಕರೆಯುವುದುಂಟು. (ಎಚ್.ಎಂ.ಎನ್.ಆರ್.)

**ಮಲೆನಾಡ ಹೆಚ್ಚೆಯ ಅರಸರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಮಸ್ಕಿ:** ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಒಂದು ಗ್ರಾಮ. ಪ್ರಾಗೈತಿಹಾಸಿಕ ಕಾಲದಿಂದ ವಿಜಯನಗರ ಕಾಲದವರೆಗಿನ ಒಂದು ಮುಖ್ಯಸ್ಥಳ. ಇಲ್ಲಿ ಪ್ರಾಗೈತಿಹಾಸಿಕ ಕಾಲದ ಒಂದು ಬೃಹತ್ ನೆಲೆಯಲ್ಲದೆ, ಚಾರಿತ್ರಿಕ ಕಾಲದ ಕೆಲವು ಕಟ್ಟಡಗಳು ಮತ್ತು ಶಾಸನಗಳು ಉಳಿದುಬಂದಿವೆ. ವಿಜಯನಗರದ ಸದಾಶಿವರಾಯ ಹಾಗೂ ಅಚ್ಯುತರಾಯರ ಕಾಲದ ಎರಡು ಶಾಸನಗಳಿಂದ ಮಸ್ಕಿಗೆ ಆಗ ಮೊಸಗೆ ಎಂಬ ಹೆಸರಿತ್ತೆಂದೂ ಇದು ಮೊಸಗೆ ನಾಡು ಎಂಬ ಪ್ರಾಂತ ವಿಭಾಗದ ಮುಖ್ಯಸ್ಥಳವಾಗಿತ್ತೆಂದೂ ತಿಳಿಯುತ್ತದೆ. ಸೇವುಣ ಸಿಂಘಣ ಮತ್ತು ಕಲ್ಯಾಣ ಚಾಳುಕ್ಯ ವಂಶದ ಜಗದೇಕಮಲ್ಲ ಇವರ ಕಾಲದ ಶಾಸನಗಳಲ್ಲಿ ಇದನ್ನು ರಾಜಧಾನಿ ಪಿರಿಯ ಮೊಸಂಗಿ ಎಂದು ಕರೆಯಲಾಗಿದೆ. ಜಗದೇಕಮಲ್ಲನ ಇನ್ನೊಂದು ಶಾಸನದಲ್ಲಿ ಇದನ್ನು ಬ್ರಹ್ಮಪುರಿ ಮೊಸಂಗಿ ಎಂದು ಕರೆಯಲಾಗಿದೆ. ಈ ಗ್ರಾಮದ ಬಳಿಯ ಗುಡ್ಡವೊಂದರ ಮೇಲೆ ಸು.13ನೆಯ ಶತಮಾನದ ಒಂದು ಶಿವಾಲಯವಿದೆ.

ಮಸ್ಕಿಗೆ ವಿಶೇಷ ಪ್ರಸಿದ್ಧಿ ದೊರೆತದ್ದು ಇಲ್ಲಿ ಇರುವ ಅಶೋಕನ ಶಿಲಾಶಾಸನದಿಂದ. ಈ ಶಾಸನ ದುರ್ಗದಗುಡ್ಡ ಎಂದು ಕರೆಯುವ ಒಂದು ಗುಡ್ಡದ ಪಶ್ಚಿಮ ಪಾರ್ಶ್ವದಲ್ಲಿ ದೊಡ್ಡ ಬಂಡೆಯೊಂದರ ಮೇಲಿದೆ. ಇದು 1915ರಲ್ಲಿ ಸಿ.ಬೀಡನ್ ಎಂಬ ಗಣಿ ಎಂಜಿನಿಯರ್ ಒಬ್ಬರಿಂದ ಬೆಳಕಿಗೆ ಬಂತು. ಈ ಶಾಸನವೂ ಅಶೋಕನ ಲಘುಪ್ರಸ್ತರ ಶಾಸನಗಳಲ್ಲೊಂದು. ಆದರೆ ಅದುವರೆಗೆ ದೊರಕಿದ್ದ ಅಶೋಕನ ಶಾಸನಗಳಲ್ಲೆಲ್ಲ ದೇವಾನಾಂಪ್ರಿಯ ಎಂಬ ಉಲ್ಲೇಖ ಮಾತ್ರ ಕಂಡುಬಂದಿದ್ದರೆ, ಈ ಶಾಸನದಲ್ಲಿ ದೇವನಾಂಪಿಯಸ ಅಸೋಕಸ ಎಂದು ಉಲ್ಲೇಖಿತವಾಗಿದ್ದು ಭಾರತದ ಅನೇಕ ಕಡೆಗಳಲ್ಲಿ ದೊರೆತ ಈ ಬಗೆಯ ಶಾಸನಗಳನ್ನು ಹಾಕಿಸಿದವನು ಮೌರ್ಯಕುಲದ ಅಶೋಕನೇ ಎಂಬ ಅಂಶ ಮೊಟ್ಟಮೊದಲಿಗೆ ಸ್ಪಷ್ಟವಾಯಿತು.

ಇಲ್ಲಿನ ಪ್ರಾಗೈತಿಹಾಸಿಕ ನೆಲೆ ಸಣ್ಣಗುಡ್ಡಗಳ ವರ್ತುಲದ ಮಧ್ಯೆ ಆಯಕಟ್ಟಿನ ಸ್ಥಳದಲ್ಲಿದೆ. 1888ರ ಸುಮಾರಿನಲ್ಲಿ ರಾಬರ್ಟ್ ಬ್ರೂಸ್‌ಫುಟ್ ಈ ನೆಲೆಯನ್ನು ಪರಿಶೀಲಿಸಿ ನವಶಿಲಾಯುಗದ ಮತ್ತು ಅನಂತರ ಕಾಲದ ಕೆಲವು ವಸ್ತುಗಳನ್ನು ಸಂಗ್ರಹಿಸಿದ್ದ. 1935–37ರಲ್ಲಿ ಆಗಿನ ಹೈದರಾಬಾದ್ ಸರ್ಕಾರದ ಪುರಾತತ್ತ್ವ ಇಲಾಖೆ ಇಲ್ಲಿ ಬೃಹತ್ ಪ್ರಮಾಣದಲ್ಲಿ ಅಗೆತವನ್ನು ಮಾಡಿತು. ಇದರ ಪೂರ್ಣ ವರದಿ ಪ್ರಕಟವಾಗಲಿಲ್ಲ.

1954ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ವತಿಯಿಂದ ಬಿ.ಕೆ. ಥಾಪರ್ ಅವರು ಇಲ್ಲಿ ಮತ್ತೆ ಉತ್ಖನನ ನಡೆಸಿದರು. ಈ ಉತ್ಖನನದಿಂದ ನಾಲ್ಕು ಸಾಂಸ್ಕೃತಿಕ ಘಟ್ಟಗಳನ್ನು ಇಲ್ಲಿ ಅನುಕ್ರಮವಾಗಿ ಗುರುತಿಸಲಾಯಿತು: ತಾಮ್ರ–ಶಿಲಾಯುಗ ಸಂಸ್ಕೃತಿ (ಪ್ರ.ಶ.ಪೂ.ಸು.1,000–400); ಬೃಹತ್ ಶಿಲಾ ಸಂಸ್ಕೃತಿ (ಪ್ರ.ಶ.ಪೂ.ಸು.200–ಪ್ರ.ಶ.50); ಆದಿಚಾರಿತ್ರಿಕ ಸಂಸ್ಕೃತಿ (ಸು. 50–300); ಮಧ್ಯಯುಗೀನ ಸಂಸ್ಕೃತಿ (ಸು.1.000–1600). (ಎಸ್.ಜಿ.ಎ.)

ತಾಮ್ರ–ಶಿಲಾ ಮತ್ತು ಬೃಹತ್ ಶಿಲಾ ಸಂಸ್ಕೃತಿ ಹಂತಗಳ ನಡುವೆ ಸ್ವಲ್ಪಕಾಲ ಜನವಾಸ್ತವ್ಯ ವಿರಲಿಲ್ಲ. ಆದರೆ ಬೃಹತ್ ಶಿಲಾ ಸಂಸ್ಕೃತಿಯ ಕೊನೆಯ ಹಂತದಲ್ಲಿ ಆದಿ ಇತಿಹಾಸ ಹಂತದ ಅವಶೇಷಗಳು ಕಾಣಿಸಿಕೊಳ್ಳುತ್ತವೆ. ಇಲ್ಲಿ ತಾಮ್ರ–ಶಿಲಾಯುಗ ಸಂಸ್ಕೃತಿಯ ಘಟ್ಟದಲ್ಲಿ ತಾಮ್ರದ ಬಳಕೆ ಅತ್ಯಲ್ಪವಾಗಿದ್ದಂತೆ ತೋರುತ್ತದೆ. ಹೆಚ್ಚಿನ ಆಯುಧೋಪಕರಣಗಳೆಲ್ಲ ಶಿಲೆಯವು. ಇವುಗಳಲ್ಲಿ ಚರ್ಟ್ ಶಿಲೆಯ ತೆಳು ನೀಳ ಚಕ್ಕೆಗಳು, ಅರ್ಧಚಂದ್ರಾಕೃತಿಗಳು, ಕೊರೆಗ ಮುಂತಾದ ಸೂಕ್ಷ್ಮಶಿಲೋಪಕರಣಗಳು, ಅವುಗಳನ್ನು ಮಾಡಲು ಉಪಯೋಗಿಸುತ್ತಿದ್ದ ದುಂಡುಕಲ್ಲುಗಳೂ ಇವೆ. ನಯಮಾಡಿದ ಕರಿಕಲ್ಲಿನ ಕೈಕೊಡಲಿಗಳ ಉಪಯೋಗ ಇದ್ದಂತೆ ತೋರುತ್ತವೆ. ದನ, ಕುರಿ ಮುಂತಾದ ಸಾಕುಪ್ರಾಣಿಗಳ ಮೂಳೆಗಳೂ ಇಲ್ಲಿ ದೊರಕಿದ್ದು, ಇದು ಪಶುಪಾಲನೆ ಮತ್ತು ಸ್ವಲ್ಪಮಟ್ಟಿನ ಬೇಸಾಯ ಅಂದಿನ ಜನರ ಜೀವನಾಧಾರಗಳಾಗಿದ್ದುವೆಂಬುದನ್ನು ಸೂಚಿಸುತ್ತವೆ. ಈ ಕಾಲದ ಮನೆ ಅಥವಾ ಇನ್ನಾವ ವಾಸ್ತು ಅವಶೇಷಗಳೂ ದೊರಕಿಲ್ಲ. ಕೆಲವು ಕಂಬದ ಗುಳಿಗಳಷ್ಟೇ ಕಂಡುಬಂದಿವೆ. ಆ ಕಾಲದ ಮಡಕೆಗಳು ಬೂದು, ಕಂದು ಮತ್ತು ನಸುಗೆಂಪು ಬಣ್ಣದವಾಗಿರುತ್ತಿದ್ದುವು. ಈ ಮಡಕೆಗಳೆಲ್ಲ ಹೆಚ್ಚುಮಟ್ಟಿಗೆ ತಿಗರಿಯಲ್ಲಿ ತಯಾರಾದವು. ಕೆಲವುದರ ಮೇಲೆ ಕಪ್ಪುನೇರಳೆ ಬಣ್ಣದ ರೇಖಾಚಿತ್ರಗಳಿವೆ. ಕೈಯಲ್ಲಿ ಮಾಡಿದ ಮಡಕೆಗಳೂ ಅತ್ಯಲ್ಪ ಸಂಖ್ಯೆಯಲ್ಲಿ ಕಂಡುಬಂದಿವೆ. ಆಭರಣಗಳು ಕಾರ್ನೇಲಿಯನ್, ಅಗೇಟ್, ಶಂಖ, ಗಾಜು ಮುಂತಾದ ಮಣ್ಣಿಂದ ಮಾಡಿದ ಮಣಿಗಳೂ ದೊರಕಿವೆ.

ಬೃಹತ್‌ಶಿಲಾ ಸಂಸ್ಕೃತಿಗೆ ಸಾಮಾನ್ಯವಾದ ಕಪ್ಪು–ಕೆಂಪು ದ್ವಿವರ್ಣದ, ತಿಗುರಿ ಮೇಲೆ ಮಾಡಿದ ಮಡಕೆಗಳು ಹೇರಳವಾಗಿ ಕಂಡುಬಂದುವು. ಗಾಜು, ಶಂಖ ಇವುಗಳಿಂದ ಮಾಡಿದ ಬಳೆ ಮತ್ತು ಮಣಿಗಳು, ಚಿಕ್ಕ ಆಟದ ಬಿಲ್ಲೆಗಳು, ಗೋಲಿಗಳು ಈ ಸಾಂಸ್ಕೃತಿಕ ಸ್ತರಗಳಲ್ಲಿ ದೊರೆತವು. ಕೆಲವು ಕಂಬದ ಗುಳಿಗಳನ್ನು ಬಿಟ್ಟರೆ ಈ ಕಾಲದ ಮನೆಗಳ ಬಗ್ಗೆ ಯಾವ ಮಾಹಿತಿಯೂ ದೊರೆಯಲಿಲ್ಲ. ಕೆಲವು ಕಲ್ಲಿನ ಆಯುಧಗಳು ಮತ್ತು ಪ್ರಾಣಿಗಳ ಅವಶೇಷಗಳಿಂದ ಈ ಕಾಲದ ಜನ ವ್ಯವಸಾಯದಲ್ಲಿ ನಿರತರಾಗಿದ್ದರು ಹಾಗೂ ಬೇಟೆಯಾಡುವುದು ಇವರ ಆರ್ಥಿಕ ವ್ಯವಸ್ಥೆಯ ಒಂದು ಅಂಶವಾಗಿತ್ತು ಎಂಬುದು ಸೂಚಿತವಾಗುತ್ತದೆ. ಈ ಕಾಲಕ್ಕೆ ಸಂಬಂಧಿಸಿದ 8 ಸಮಾಧಿಗಳನ್ನು ಇಲ್ಲಿ ಅಗೆಯಲಾಯಿತು. ಅವುಗಳಲ್ಲಿ ಐದು ಪ್ರಕಾರಗಳನ್ನು ಗುರುತಿಸಬಹುದು. ಇವೆಲ್ಲ ಗುಂಡಿ ಸಮಾಧಿ ರೀತಿಯವು. ಮೊದಲನೆಯ ರೀತಿಯಲ್ಲಿ ಶವವನ್ನು ಸಹಜ ಸ್ಥಿತಿಯಲ್ಲಿ ಉತ್ತರ–ದಕ್ಷಿಣಾಭಿಮುಖವಾಗಿ ಉದ್ದಕ್ಕೆ ಇಟ್ಟು ಸಮಾಧಿಯನ್ನು ಮಾಡಲಾಗಿದೆ. ವಾಸ್ತವ್ಯದ ನೆಲೆಯಲ್ಲಿಯೆ ಇದರೊಡನೆ ಯಾವುದೇ ಇತರ ಪರಿಕರಗಳಿಲ್ಲ. ಎರಡನೆಯ ರೀತಿಯಲ್ಲಿ ಮೃತನ ಸಂಗ್ರಹಿಸಿದ ಕೆಲವೇ ಅಸ್ಥಿಗಳನ್ನು ಮಾತ್ರ ಒಂದು ಪ್ರತ್ಯೇಕ ಗುಂಡಿಯಲ್ಲಿ ಪೂರ್ವ–ಪಶ್ಚಿಮಾಭಿಮುಖವಾಗಿ ಇಡಲಾಗುತ್ತದೆ. ಮೂರನೆಯ ರೀತಿಯಲ್ಲಿ ಅಸ್ಥಿ ಅವಶೇಷಗಳನ್ನು ಮಡಕೆಯ ಒಳಗೆ ಇಟ್ಟು ಇದನ್ನು ಗುಂಡಿಯೊಳಗೆ ಸಮಾಧಿ ಮಾಡಲಾಗಿರುತ್ತದೆ. ಇದರೊಳಗೆ ಕೆಲವು ಇತರ ಮಣ್ಪಾತ್ರೆಗಳಿರುತ್ತವೆ. ನಾಲ್ಕನೆಯದರಲ್ಲೂ ಒಂದು ವೃತ್ತ ವಿನ್ಯಾಸದ ಗುಂಡಿಯಲ್ಲಿ ಶವವನ್ನು ಉದ್ದಕ್ಕೆ ಇಟ್ಟು ಸ್ವಲ್ಪ ಮೇಲೆ ಕೆಲವು ಮಣ್ಪಾತ್ರೆಗಳನ್ನು ಇಡಲಾಗಿತ್ತು. ಮೇಲೆ ಗುಂಡಿಯಂಚಿನಲ್ಲಿ ಸುತ್ತಲೂ ಕಲ್ಲುಗಳನ್ನು ಇಡಲಾಗಿತ್ತು. ಇದೂ ಕೂಡ ವಾಸ್ತವ್ಯ ನೆಲೆಯಲ್ಲಿರುವುದು ಕುತೂಹಲಕಾರಿ. ಐದನೆಯದು ವಾಸ್ತವ್ಯದ ನೆಲೆಯಿಂದ ಸ್ವಲ್ಪ ದೂರದಲ್ಲಿ ಕಲ್ಲುಚೂರುಗಳಿಂದ ತುಂಬಿದ ಒಂದು ಕಲ್ಲುವೃತ್ತ. ಇದರೊಳಗೆ ಅಸ್ಥಿ ಅವಶೇಷಗಳನ್ನು ವ್ಯವಸ್ಥಿತವಾಗಿ ನೇರವಾಗಿಟ್ಟು ಜೊತೆಗೆ ಕಬ್ಬಿಣದ ಉಪಕರಣ ಮತ್ತು ಮಣ್ಪಾತ್ರೆಗಳನ್ನೂ ಇಡಲಾಗಿತ್ತು. ಇದು ಬ್ರಹ್ಮಗಿರಿ ಕಲ್ಲುವೃತ್ತದಂತಿದೆ. ಒಂದನೇ ಪ್ರಕಾರದ ಗುಳಿಯ ಬುಡದಲ್ಲಿ ಬೂದಿ ಹರಡಿರುವುದು ಹಾಗೂ ಶವಗುಳಿಗಳು ಸಾಮಾನ್ಯವಾಗಿ ಉತ್ತರ–ದಕ್ಷಿಣ ನೇರದಲ್ಲಿರುವುದು ಇದರ ವೈಶಿಷ್ಟ್ಯ. ಬೃಹತ್ ಶಿಲಾಸಮಾಧಿಗಳಿಗೆ ಸೇರಿದ ಕೆಲವು ನೆಡುಗಲ್ಲುಗಳನ್ನು ಇಲ್ಲಿಯ ಉತ್ಖನನದಲ್ಲಿ ಪರೀಕ್ಷಿಸಲಾಯಿತು. ಆದರೆ ಅವು ಶವಸಂಸ್ಕಾರ ವಿಧಿಗೆ ಸಂಬಂಧಿಸಿದ್ದೆಂಬುದಕ್ಕೆ ಯಾವ ಸೂಚನೆಯೂ ದೊರೆಯಲಿಲ್ಲ.

ಆದಿ ಚಾರಿತ್ರಿಕ ಘಟ್ಟಕ್ಕೆ ಸಂಬಂಧಿಸಿದಂತೆ ಸಾಮಾನ್ಯ ರೀತಿಯ ಕೆಂಪು ಹಾಗೂ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳ ಜೊತೆಗೆ, ಸುದ್ದೆಯ ಗೀಚುಗಳಿಂದ ಅಲಂಕೃತವಾದ ಮಡಕೆಗಳೂ ಕಂಡುಬಂದುವು. ಚರ್ಟ್ ಜಾತಿಯ ಕಲ್ಲುಗಳ ಮತ್ತು ಸುಟ್ಟಮಣ್ಣಿನ ಮಣಿಗಳು, ಗಾಜಿನ ಮಣಿಗಳು, ಗಾಜಿನ ಮತ್ತು ಶಂಖದ ಬಳೆಗಳು ಈ ಸ್ತರಗಳಲ್ಲಿ ದೊರೆತವು. ಕಬ್ಬಿಣದ ವಸ್ತುಗಳು ಸ್ವಲ್ಪ ಸಂಖ್ಯೆಯಲ್ಲಿದ್ದುವು. ಈ ಕಾಲದ ಹೊತ್ತಿಗೆ ನಾಣ್ಯಗಳ ಬಳಕೆ ರೂಪಿತವಾಗಿದ್ದು ಇಲ್ಲಿಯ ಉತ್ಖನನದಲ್ಲಿ ಒಂದು ಸೀಸದ ನಾಣ್ಯ ದೊರೆಯಿತು. ಮಧ್ಯಯುಗೀನ ಸ್ತರಗಳಲ್ಲಿ ಬೂದು ಬಣ್ಣದ ನಯ ಮಾಡಿದ ಮಡಕೆಗಳು ಹೆಚ್ಚಾಗಿ ದೊರೆತುವು. ಬಹು ವರ್ಣದ ಗಾಜಿನ ಬಳೆಗಳು, ಗಾಜಿನ ಮಣಿಗಳು, ಕುತುಬುದ್ದೀನ್ ಮುಬಾರಕ್ ಷಾ ಖಿಲ್ಜಿಯ ಒಂದು ನಾಣ್ಯ ಇತರ ಮುಖ್ಯ ವಸ್ತುಗಳು.

ಈ ನೆಲೆಯಲ್ಲಿ ದೊರಕಿರುವ ಮಣಿಗಳ ಸಂಖ್ಯೆ ವೈವಿಧ್ಯದಿಂದ ಬಹುಶಃ ಮಣಿಗಳ ತಯಾರಿಕಾ ಕೇಂದ್ರವಾಗಿರಬೇಕೆಂಬ ಊಹೆ ಇದೆ. ಪ್ರಾಚೀನ ಕಾಲದಲ್ಲಿ ಮಸ್ಕಿ ದೂರದ ಪ್ರದೇಶಗಳೊಡನೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದಿರಬಹುದು–ಬಳೆಗಾಗಿ ಉಪಯೋಗಿಸಿರುವ ಶಂಖ ಸಮುದ್ರದ್ದು. ಇಲ್ಲಿ ದೊರೆತಿರುವ ನೀಲೋಪಲ ಶಿಲೆಯ ಮಣಿಗಳಿಗೆ ಆ ಶಿಲೆ ಪರ್ಷಿಯ ಪ್ರದೇಶದಿಂದ ಬಂದಿರಬೇಕೆನಿಸುತ್ತದೆ; ಹಿಂದಿನ ಉತ್ಖನನದಲ್ಲಿ ದೊರಕಿರುವ ಒಂದು ಉರುಳು ಶಿಲಾಮುದ್ರೆ ಪಶ್ಚಿಮ ಏಷ್ಯದಲ್ಲಿ ಪ್ರಚಲಿತವಾಗಿದ್ದ ರೀತಿಯದು. ಆದರೆ ವಡಗಾಂವ್–ಮಾಧವಪುರದಲ್ಲಿ **(ನೋಡಿ)** ಇಂಥ ಮುದ್ರಿಕೆ ಪಡಿಯಚ್ಚು ಆದಿ ಇತಿಹಾಸ ಕಾಲದ ಒಂದು ಮಡಕೆ ಹಿಡಿಕೆಯ ಮೇಲೆ ಸ್ಪಷ್ಟವಾಗಿರುವುದರಿಂದ ಈ ಮುದ್ರಿಕೆ ಮೊದಲು ತಿಳಿದಷ್ಟು ಪ್ರಾಚೀನವಲ್ಲ. ಈ ಗ್ರಾಮದ ಸಮೀಪದಲ್ಲಿ ಚಿನ್ನದ ನಿಕ್ಷೇಪವಿದ್ದು ಇದನ್ನು ಪ್ರಾಚೀನ ಕಾಲದಲ್ಲಿ ಗಣಿಗಾರಿಕೆಯಿಂದ ಸಂಗ್ರಹಿಸಲಾಗುತ್ತಿತ್ತು. ಇದಕ್ಕೋಸ್ಕರ ತೋಡಿದ ಗುಂಡಿಗಳು ಅಲ್ಲಲ್ಲಿ ಇವೆ.

ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಕಾಲದಲ್ಲಿ ಇದು ಬೃಹನ್ನಗರವಾಗಿರಬೇಕು. ಅಶೋಕನ ಶಾಸನಗಳಲ್ಲಿ ಹೆಸರಿಸಿರುವ ಸುವರ್ಣಗಿರಿ ಮಸ್ಕಿಯೇ ಇರಬಹುದೆಂಬ ಊಹೆಯೂ ಇದೆ. (ಎ.ಎಸ್.;ಎನ್.ಎಲ್.)

**ಮಹಾಗರ:** ಉತ್ತರಪ್ರದೇಶ ರಾಜ್ಯದ ಅಲಹಾಬಾದ್ ಜಿಲ್ಲೆಯಲ್ಲಿರುವ ನವಶಿಲಾಯುಗದ ವಸತಿ ನೆಲೆ. ಬೇಲನ್ ನದಿಯ ಬಲದಂಡೆಯ ಮೇಲಿದೆ. ಈ ನೆಲೆಯ ಎದುರಿಗೆ ನದಿಯ ಎಡದಂಡೆಯಲ್ಲಿ ಕೋಲ್ದಿವ ನೆಲೆಯಿದೆ. ಚೋಪನಿ–ಮಾಂಡೊ ಇಲ್ಲಿಂದ 3 ಕಿಮೀ ದೂರದಲ್ಲಿದೆ. ಸು.8000 ಚ.ಮೀ ವಿಸ್ತೀರ್ಣವಿರುವ ಈ ನೆಲೆಯನ್ನು 1975–76ರಲ್ಲಿ ಶೋಧಿಸಲಾಯಿತು. 1976–78ರ ನಡುವೆ ಅಲಹಾಬಾದ್ ವಿಶ್ವವಿದ್ಯಾಲಯದ ಜಿ.ಆರ್. ಶರ್ಮರ ನಿರ್ದೇಶನದಲ್ಲಿ ಇಲ್ಲಿ ವಿಸ್ತೃತ ಉತ್ಖನನ ನಡೆಯಿತು.

ಈ ನೆಲೆಯಲ್ಲಿ 17 ಸ್ತರಗಳಿಂದಾದ 2.6 ಮೀ ದಪ್ಪದ ನವಶಿಲಾಯುಗದ ವಸತಿ ಪದರವಿದೆ. ಕಟ್ಟಡ ರಚನೆಯ ಆರು ಹಂತಗಳನ್ನು ಸ್ತರಕ್ರಮದಲ್ಲಿ ಗುರುತಿಸಲಾಗಿದೆ. 20 ಗುಡಿಸಲುಗಳ ಅವಶೇಷಗಳಲ್ಲಿ 18 ಕೊನೆಯ ಅಥವಾ 6ನೆಯ ಹಂತಕ್ಕೆ (ಮೇಲಿನ ಸ್ತರಗಳು) ಸೇರುತ್ತವೆ. ಒಂದು 5ನೆಯ ಹಂತಕ್ಕೂ ಮತ್ತೊಂದು 14ನೆಯ ಹಂತಕ್ಕೂ ಸೇರುತ್ತವೆ. ಮೊದಲ ಮೂರು ಹಂತಗಳಲ್ಲಿ (ಕೆಳಗಿನ ಸ್ತರಗಳು) ಕಟ್ಟಡ ಅವಶೇಷಗಳಿಲ್ಲ.

ಗುಡಿಸಲುಗಳ ನೆಲಗಳು ಗೋಲ ಅಥವಾ ಅಂಡಾಕಾರವಾಗಿವೆ. ಇವುಗಳ ವ್ಯಾಸ 6.4–4.3ಮೀ. ಇವುಗಳ ಅಂಚಿನಲ್ಲಿ 6–9 ಆಧಾರ ಕಂಬಗಳ ಗುಳಿಗಳಿವೆ. ನೆಲಗಳ ಮೇಲೆ ಲೇಪವಾಗಲಿ ಅಥವಾ ನೆಲವನ್ನು ಕುಟ್ಟಿ ಗಟ್ಟಿಗೊಳಿಸಿದ ಗುರುತುಗಳಾಗಲಿ ಕಂಡು ಬರುವುದಿಲ್ಲ. ಬೊಂಬಿನ ಗುರುತುಳ್ಳ ಸುಟ್ಟಮಣ್ಣಿನುಂಡೆಗಳು ನೆಲಗಳ ಮೇಲೆ ಅನೇಕ ಸಂಖ್ಯೆಯಲ್ಲಿ ಕಂಡುಬಂದಿರುವುದರಿಂದ ಗೋಡೆಗಳು ಮಣ್ಣು ಮೆತ್ತಿದ ಬೊಂಬಿನದಾಗಿದ್ದವು ಎಂಬುದು ತಿಳಿದುಬರುತ್ತದೆ. ಒಣಹುಲ್ಲು–ಎಲೆಗಳನ್ನು ಕೂಡ ಬೊಂಬಿನ ಜತೆ ಬಳಸಿರ ಬಹುದು. ಸೂಕ್ಷ್ಮಶಿಲೋಪಕರಣಗಳು, ಮಣ್ಪಾತ್ರೆ, ಅರೆಯುವ ಕಲ್ಲು, ಕುಟ್ಟಾಣಿ, ಕೊಡಲಿ, ಕವಣೆಕಲ್ಲು, ಮೂಳೆಯ ಬಾಣದ ಮೊನೆ, ಕಲ್ಲು ಮತ್ತು ಮಣ್ಣಿನ ಹಲ್ಲೆ, ಮಣ್ಣಿನ ಮಣಿ, ಪ್ರಾಣಿಮೂಳೆಗಳು ನೆಲಗಳ ಮೇಲೆ ಕಂಡುಬಂದ ವಸ್ತುಗಳು. ಸೂಕ್ಷ್ಮ ಶಿಲೋಪಕರಣಗಳೊಟ್ಟಿಗೆ ತ್ಯಾಜ್ಯ ಚಕ್ಕೆ ಚೂರುಗಳೂ ಇವೆ.

ಮಹಾಗರದ ಅಪರೂಪದ ಅನ್ವೇಷಣೆ ಕೊಟ್ಟಿಗೆಯ ಅವಶೇಷ. 12.5ಮೀX7.5ಮೀ ಉದ್ದಗಲದ ವಿಶಾಲ ಕೊಟ್ಟಿಗೆ ಇದಾಗಿತ್ತು. ಈ ಜಾಗವನ್ನು ಕೊಟ್ಟಿಗೆಯೆಂದು ಗುರುತಿಸಲು ಪ್ರಮುಖ ಆಧಾರವೆಂದರೆ ವಿವಿಧ ವಯೋಮಾನದ ಜಾನುವಾರುಗಳ ಪಾದದ ಗುರುತುಗಳು. ಸು.23 ಪಾದದ ಗುರುತುಗಳು ಎರಡು ಗುಂಪುಗಳಲ್ಲಿವೆ. 40–60 ಪ್ರಾಣಿಗಳು ಈ ಕೊಟ್ಟಿಗೆಯಲ್ಲಿದ್ದಿರಬಹುದೆಂದು ಊಹಿಸಲಾಗಿದೆ. ಕೊಟ್ಟಿಗೆಯ ಸುತ್ತಲೂ 28 ಆಧಾರಕಂಬಗಳ ಗುಳಿಗಳಿವೆ. ಗುಳಿಗಳ ನಕ್ಷೆಯನ್ನು ಗಮನಿಸಿದರೆ ಕೊಟ್ಟಿಗೆಗೆ ಕನಿಷ್ಠ ಮೂರು ಬಾಗಿಲುಗಳಿದ್ದಂತೆ ಕಾಣುತ್ತದೆ. ಇದಲ್ಲದೆ, ಕುರಿ ಮತ್ತು ಮೇಕೆಗಳ ಪಾದದ ಗುರುತುಗಳು ಗುಡಿಸಲೊಂದರ ಬಳಿ ಕಂಡುಬಂದಿವೆ. ಈ ಗುರುತುಗಳು ನೇರಗೆರೆಯಲ್ಲಿರುವುದರಿಂದ ಇವು ನಡಿಗೆಯ ಸಮಯದಲ್ಲಿ ಮೂಡಿದ್ದಿರಬೇಕು. ಪಶುಪಾಲನೆ ಒಂದು ಕಸಬಾಗಿದ್ದುದು ಈ ಅಂಶಗಳಿಂದ ಸ್ಪಷ್ಟವಾಗುತ್ತದೆ.

ಮಣ್ಪಾತ್ರೆಗಳಲ್ಲಿ ನಾಲ್ಕು ಬಗೆಗಳಿವೆ. ಇವು ಹಗ್ಗದ ಗುರುತಿನಿಂದ ಅಲಂಕೃತವಾದ ಪಾತ್ರೆ, ಮೈ ದೊರಗಾಗಿಸಿದ ಪಾತ್ರೆ, ಉಜ್ಜಿದ ಕೆಂಪುಪಾತ್ರೆ ಮತ್ತು ಉಜ್ಜಿದ ಕಪ್ಪುಪಾತ್ರೆ. ಇವುಗಳಲ್ಲಿ ಹಗ್ಗ ಅಥವಾ ಹುರಿಯಂತಹ ವಸ್ತುವನ್ನು ಒತ್ತಿ ಹೊರಮೈಯನ್ನು ಪೂರ್ತಿಯಾಗಿ ಅಲಂಕರಿಸಿದ ಪಾತ್ರೆಗಳು (ಶೇ.25.8) ವಿಶೇಷವಾದವು. ಇಂತಹ ಪಾತ್ರೆಗಳು ಪೂರ್ವ ಭಾರತದ ನವಶಿಲಾಯುಗ ಸಂಸ್ಕೃತಿಯ ವಿಶಿಷ್ಟ ಅವಶೇಷಗಳಲ್ಲೊಂದು. ಮೈ ದೊರಗಾಗಿಸಿದ ಪಾತ್ರೆಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿವೆ (ಶೇ.60). ಹೊಟ್ಟು, ಹುಲ್ಲುಕಡ್ಡಿ, ಕಪ್ಪೆಚಿಪ್ಪಿನ ಚೂರುಗಳನ್ನು ನಯವಾದ ಮಣ್ಣಿನ ಜತೆ ಬೆರಸಿ, ಪಾತ್ರೆಗಳ ಹೊರಮೈ ಮೇಲೆ ಸವರಿ ದೊರಗುಗೊಳಿಸಲಾಗಿದೆ. ಎಲ್ಲ ಪಾತ್ರೆ ಬಗೆಗಳೂ ತಿಗುರಿಯ ಸಹಾಯವಿಲ್ಲದೆ ತಯಾರಾದವು ಮತ್ತು ಕಡಿಮೆ ಅಥವಾ ಸರಿಸಮವಲ್ಲದ ತಾಪದಲ್ಲಿ ಸುಟ್ಟವು. ಮೊದಲೆರಡು ಬಗೆಗಳಲ್ಲಿ ಬತ್ತದ ಹೊಟ್ಟು ಮತ್ತು ಹುಲ್ಲುಕಡ್ಡಿಗಳನ್ನು ಮಣ್ಣಿನೊಂದಿಗೆ ಬೆರೆಸಲಾಗಿದೆ. ಈ ಪಾತ್ರೆಗಳ ಮೈ ಪೇಲಗೆಂಪು–ಬೂದುಬಣ್ಣದ್ದಾಗಿದೆ. ಕೊನೆಯೆರಡು ಬಗೆಗಳಲ್ಲಿ ಮಣ್ಣನ್ನು ತಕ್ಕಮಟ್ಟಿಗೆ ಹದಗೊಳಿಸಲಾಗಿದೆ. ಈ ಪಾತ್ರೆಗಳ ಮೈಮೇಲೆ ಕೆಂಪು ಅಥವಾ ಕಪ್ಪುಬಣ್ಣದ ದಪ್ಪ ಲೇಪನವಿದ್ದು ಅದರ ಮೇಲೆ ಅಡ್ಡವಾಗಿ ಉಜ್ಜಿದ ಗೆರೆಗಳಿವೆ. ಉಜ್ಜಿದ ಪರಿಣಾಮವಾಗಿ ಮೈ ಸ್ವಲ್ಪ ಮಟ್ಟಿಗೆ ಹೊಳಪನ್ನು ಪಡೆದಿದೆ. ಎಲ್ಲ ಬಗೆಗಳಲ್ಲಿ ಸರಳವಾದ ಬಟ್ಟಲು ಮತ್ತು ಗೋಲ ಜಾಡಿಗಳು ಹೆಚ್ಚಾಗಿ (ಶೇ.92) ಕಂಡುಬರುತ್ತವೆ. ತಟ್ಟೆ, ಬೋಗುಣಿ, ಮೂತಿಯಿರುವ ಬಟ್ಟಲು ಮುಂತಾದ ನಮೂನೆಗಳು ಇದ್ದರೂ ಅವುಗಳ ಸಂಖ್ಯೆ ಕಡಿಮೆ. ಒಂದೆರಡು ಚೂರುಗಳಲ್ಲಿ ಗೀರಿನ ಸರಳ ವಿನ್ಯಾಸಗಳಿವೆ.

ಸೂಕ್ಷ್ಮಶಿಲೋಪಕರಣಗಳಲ್ಲಿ ವಿವಿಧ ನಮೂನೆಯ ಅಲಗುಗಳು, ಮೊನೆ, ಕೊರೆಯುಳಿ ಅಥವಾ ದಬ್ಬಣ, ಹೆರೆಚಕ್ಕೆ, ತ್ರಿಕೋನ, ಅಸಮ ಚತುರ್ಭುಜ, ಅರ್ಧ ಚಂದ್ರಾಕೃತಿ ಮತ್ತು ಬಾಣದ ಮೊನೆಗಳಿವೆ. ಇವನ್ನು ಸ್ಥಳೀಯವಾಗಿ ಸಿಗುವ ಬೆಣಚುಕಲ್ಲು, ಚಕಮಕಿ ಕಲ್ಲು, ಅಗೇಟ್, ಮಂದಗೆಂಪಿನ ಕಲ್ಲು ಮತ್ತು ಸ್ಫಟಿಕ ಶಿಲೆಗಳಿಂದ ತಯಾರಿಸಲಾಗಿದೆ. ಸಮುಚ್ಚಯದಲ್ಲಿ ಉಪಕರಣಗಳ ಪ್ರಮಾಣ ಶೇ.13.3 ರಷ್ಟಿದ್ದರೆ ತ್ಯಾಜ್ಯ ಚಕ್ಕೆ ಚೂರುಗಳ ಸಂಖ್ಯೆ ಶೇ.83.86ರಷ್ಟಿದೆ. ಇವಲ್ಲದೆ, ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಗಳು, ಪಿಕಾಸಿ ಮತ್ತು ಉಳಿಗಳು ಸಿಕ್ಕಿವೆ. ಇವು ಗಾತ್ರದಲ್ಲಿ ಚಿಕ್ಕದಾಗಿದ್ದು ದುಂಡಾಗಿವೆ. ಅಗ್ನಿಶಿಲೆ, ಗ್ರಾನೈಟ್ ಮತ್ತು ಕ್ವಾರ್ಟ್ಜೈಟ್ ಇವುಗಳ ತಯಾರಿಕೆಯಲ್ಲಿ ಬಳಕೆಯಾದ ಶಿಲೆಗಳು. ಈ ಉಪಕರಣಗಳು ಈ ನೆಲೆಯಲ್ಲಿ ತಯಾರಾದ ಲಕ್ಷಣಗಳಿಲ್ಲ. ಇತರ ಕಲ್ಲಿನ ಉಪಕರಣಗಳೆಂದರೆ ಅರೆಯುವ ಕಲ್ಲು, ಕುಟ್ಟಾಣಿ, ಸುತ್ತಿಗೆ ಕಲ್ಲು, ಕವಣೆ ಕಲ್ಲು ಮತ್ತು ತೂತುಳ್ಳ ವರ್ತುಲಾಕಾರದ ಕಲ್ಲುಗಳು. ಇವುಗಳೆಲ್ಲವೂ ಮರಳುಗಲ್ಲಿನಿಂದ ಮಾಡಲ್ಪಟ್ಟಿವೆ. ಮೂಳೆಯ ನಾಲ್ಕು ಬಾಣದ ಮೊನೆಗಳು, ಮಣ್ಣಿನ ನಾಲ್ಕು ಮಣಿಗಳು ಮತ್ತು ಕಪ್ಪೆಚಿಪ್ಪಿನ ಪದಕ ಇತರ ವಸ್ತುಗಳು.

ಸಸ್ಯಾವಶೇಷಗಳಲ್ಲಿ ಕೃಷಿಯಿಂದ ಬೆಳೆದ ಅಕ್ಕಿಯ ಕಾಳುಗಳು, ಬೋರೆಹಣ್ಣಿನ ಬೀಜಗಳು ಮತ್ತು ಬೊಂಬಿನ ಸುಟ್ಟ ತುಣುಕುಗಳು ಇವೆ. ಜಾನುವಾರು, ಕುರಿ, ಮೇಕೆ, ಕುದುರೆ, ಜಿಂಕೆ, ಕಾಡುಹಂದಿ, ಆಮೆ, ಮೀನು ಮತ್ತು ಹಕ್ಕಿಗಳ ಮೂಳೆಗಳು ಕಂಡುಬಂದಿವೆ. ಕೃಷಿ–ಆಹಾರ ಸಂಗ್ರಹಣೆ, ಪಶುಪಾಲನೆ ಮತ್ತು ಬೇಟೆ ಈ ಜನರ ಆಹಾರ ಸಂಪಾದನೆಯ ಮಾರ್ಗಗಳಾಗಿದ್ದವು.

ಇಂಗಾಲ 14 ಮತ್ತು ಔಷ್ಣದೀಪ್ತಿಯ ಆರು ಕಾಲಮಾನಗಳನ್ನು ಈ ನೆಲೆಯಿಂದ ಪಡೆಯಲಾಗಿದೆ. ಇವು ಪ್ರ.ಶ.ಪೂ.2265, ಪ್ರ.ಶ.ಪೂ. 1616, ಪ್ರ.ಶ.ಪೂ.1400±150, ಪ್ರ.ಶ.ಪೂ.1330±120, ಪ್ರ.ಶ.ಪೂ.1440 ಮತ್ತು ಪ್ರ.ಶ.ಪೂ.1480. (ಎ.ಎಸ್.)

**ಮಹದಹ:** ಉತ್ತರಪ್ರದೇಶ ರಾಜ್ಯದ ಪ್ರತಾಪಗಡ ಜಿಲ್ಲೆಯಲ್ಲಿರುವ ಸೂಕ್ಷ್ಮಶಿಲಾಯುಗದ ವಸತಿ ನೆಲೆ. ಲಾಳಾಕೃತಿಯ ಪುರಾತನ ಕೆರೆಯೊಂದರ ಪಶ್ಚಿಮ ದಂಡೆಯಲ್ಲಿರುವ ಈ ನೆಲೆಯ ವಿಸ್ತೀರ್ಣ ಸು.8000 ಚ.ಮೀ. ಅಲಹಾಬಾದ್ ವಿಶ್ವವಿದ್ಯಾಲಯದ ಜಿ.ಆರ್.ಶರ್ಮರ ನಿರ್ದೇಶನದಲ್ಲಿ ಎರಡು ವರ್ಷಗಳ ಕಾಲ (1977–78 ಮತ್ತು 1978–79) ಇಲ್ಲಿ ಉತ್ಖನನ ನಡೆಯಿತು. ಗಂಗಾನದಿ ಬಯಲಿನ ಸೂಕ್ಷ್ಮಶಿಲಾಯುಗ ಜನಜೀವನದ ಅನೇಕ ಆಯಾಮಗಳನ್ನು ಈ ಉತ್ಖನನ ಬೆಳಕಿಗೆ ತಂದಿದೆ.

ಇಲ್ಲಿನ ವಸತಿ ಪ್ರದೇಶವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಇವು ಸ್ಮಶಾನ ಭೂಮಿ ಮತ್ತು ವಸತಿ ಪ್ರದೇಶ, ಕಸಾಯಿ ಜಾಗ ಮತ್ತು ಸರೋವರ ತಳದ ಅವಶೇಷಗಳು.

ಸ್ಮಶಾನ ಭೂಮಿ ಮತ್ತು ವಸತಿ ಪ್ರದೇಶ: ಇದು ನೆಲೆಯ ಮಧ್ಯಭಾಗದಲ್ಲಿದೆ. ಇಲ್ಲಿ ವಸತಿ ಪದರ 60 ಸೆಂಮೀ ಇದ್ದು ಇದರಲ್ಲಿ ನಾಲ್ಕು ಸ್ತರಗಳನ್ನು ಗುರುತಿಸಲಾಯಿತು. ಸುಟ್ಟು ಕರಕಲಾದ ಮೂಳೆಯ ಚೂರುಗಳು, ಸುಟ್ಟಮಣ್ಣಿನ ಉಂಡೆಗಳು ಹಾಗೂ ಸೂಕ್ಷ್ಮ ಶಿಲೋಪಕರಣಗಳು ಈ ಸ್ತರಗಳಿಂದ ಲಭ್ಯವಾಗಿವೆ. ವಸತಿ ಅವಶೇಷಗಳ ನಡುವೆಯೇ ಇಲ್ಲಿ ಮಾನವ ಶವಕುಣಿಗಳು ಕಂಡುಬಂದವು. 28 ಮಾನವ ಶವಕುಣಿಗಳು ಮತ್ತು 35 ಗುಳಿ ಒಲೆಗಳನ್ನು ಹೊರತೆಗೆಯಲಾಯಿತು. ಮಾನವ ಗೋರಿಗಳಲ್ಲಿ ಒಂದನ್ನು ಹೊರತುಪಡಿಸಿ ಉಳಿದೆಲ್ಲವುಗಳಲ್ಲಿ ಶವವನ್ನು ನೇರಭಂಗಿಯಲ್ಲಿ ಆಳವಿರದ ಕುಣಿಗಳಲ್ಲಿ ಪೂರ್ವ–ಪಶ್ಚಿಮಾಭಿಮುಖವಾಗಿ ಹೂಳಲಾಗಿತ್ತು. ತಲೆ ಎಡ ಅಥವಾ ಬಲಕ್ಕೆ ವಾಲಿತ್ತು. ಎರಡು ಗೋರಿಗಳಲ್ಲಿ ಮಾತ್ರ ಎರಡೆರಡು ಅಸ್ಥಿಪಂಜರಗಳಿದ್ದವು. ಉಳಿದವುಗಳಲ್ಲಿ ಒಂದೊಂದು ಅಸ್ಥಿಪಂಜರವಿತ್ತು. ಒಟ್ಟು 32 ಅಸ್ಥಿಪಂಜರಗಳಲ್ಲಿ 17 ಪುರುಷರವು, 7 ಮಹಿಳೆಯರವು, 3 ಮಕ್ಕಳವು. ಉಳಿದೊಂದರ ಲಿಂಗ ನಿರ್ಣಯ ಸಾಧ್ಯವಾಗಿಲ್ಲ. ಹೆಚ್ಚಿನವರಲ್ಲಿ ಸಾವು 18ರಿಂದ 34ನೆಯ ವಯಸ್ಸಿನೊಳಗೆ ಪರಿಣಮಿಸಿದೆ. ಈ ಜನರು ಎತ್ತರವಾಗಿದ್ದು ವಿಶಾಲವಾದ ದೃಢಕಾಯವನ್ನು ಹೊಂದಿದ್ದರೆಂದು ಅಸ್ಥಿಪಂಜರಗಳ ವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ಅಸ್ಥಿಅವಶೇಷಗಳ ಜೊತೆಗೆ ಮೂಳೆಯ ಆಭರಣಗಳು, ಮೂಳೆಯ ಬಾಣದ ಮೊನೆಗಳು, ಸೂಕ್ಷ್ಮಶಿಲೋಪಕರಣಗಳಿದ್ದುವು. ಆಭರಣಗಳಿರುವ ಅಸ್ಥಿಪಂಜರಗಳೆಲ್ಲವೂ ಪುರುಷರದ್ದಾಗಿರುವುದು ಸ್ವಾರಸ್ಯಕರ. ಒಟ್ಟಿನಲ್ಲಿ ಸಮಾಧಿಪದ್ಧತಿ ಗಂಗಾನದಿ ಬಯಲಿನ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅಂತರ್ಗತ ಭಾಗವಾಗಿತ್ತೆಂಬುದು ಗಮನಾರ್ಹ. ಗುಳಿ ಒಲೆಗಳು ಈ ಸಂಸ್ಕೃತಿಯ ಮತ್ತೊಂದು ವೈಶಿಷ್ಟ್ಯವಾಗಿವೆ. ಇವು ವೃತ್ತ (40–50 ಸೆಂಮೀ ವ್ಯಾಸ) ಅಥವಾ ಅಂಡಾಕಾರದಲ್ಲಿ (60–80 ಸೆಂಮೀ/40–70 ಸೆಂಮೀ) ಇದ್ದುವು. ಕೆಲವೊಂದು ಒಲೆಗಳ ಒಳಭಾಗದಲ್ಲಿ ಮಣ್ಣಿನ ಲೇಪವಿತ್ತು. ಒಲೆಯೊಳಗಿನ ಅವಶೇಷಗಳಲ್ಲಿ ಸುಟ್ಟಮಣ್ಣಿನ ಉಂಡೆಗಳು ಮತ್ತು ಪ್ರಾಣಿಗಳ ಸುಟ್ಟ ಮೂಳೆಗಳು ಪ್ರಮುಖವಾದವು. ಇದ್ದಿಲು ತುಣುಕುಗಳು ಕಂಡುಬಂದಿಲ್ಲ. ಇವುಗಳಲ್ಲಿ ಪ್ರಾಣಿಮಾಂಸ ಸುಡುತ್ತಿದ್ದರೆಂಬುದು ಮೂಳೆಗಳಿಂದ ಸ್ಪಷ್ಟವಾಗುತ್ತದೆ.

ಕಸಾಯಿ ಜಾಗ: ಇದು ಪ್ರಾಣಿಮೂಳೆಗಳಿಂದ ಆವೃತವಾಗಿದ್ದು ವಸತಿಯ ಪಶ್ಚಿಮದಲ್ಲಿದೆ. ಇಲ್ಲಿ ಮೂರು ಸ್ತರಗಳ 1.2 ಮೀ ವಸತಿ ಪದರವಿದೆ. ಅತ್ಯಂತ ಕೆಳಗಿನ (3ನೆಯ) ಸ್ತರ ಸೂಕ್ಷ್ಮಶಿಲಾಯುಗ ಕಾಲಕ್ಕೆ ಸೇರಿದ್ದು ಇದರಲ್ಲಿ ಪ್ರಾಣಿಮೂಳೆಗಳು ದೊಡ್ಡ ಪ್ರಮಾಣದಲ್ಲಿ ಸಿಕ್ಕಿವೆ. ಎಲ್ಲ ಮೂಳೆಗಳೂ ವನ್ಯಪ್ರಾಣಿಗಳದ್ದಾಗಿರುವುದು ಗಮನಾರ್ಹ. ಇವುಗಳಲ್ಲಿ ಕಾಡೆಮ್ಮೆ, ನೀಲಗಾಯ್, ಕೃಷ್ಣಮೃಗ, ವಿವಿಧ ಜಿಂಕೆಯ ಜಾತಿಗಳು, ಕಾಡುಹಂದಿ, ಆನೆ ಮತ್ತು ಖಡ್ಗಮೃಗ ಮುಖ್ಯವಾದುವು. ಹೆಚ್ಚಿನ ಮೂಳೆಗಳಲ್ಲಿ ಸುಟ್ಟ ಗುರುತಿಲ್ಲ. ಆದರೆ ಕಸಾಯಿ ಉಪಕರಣದಿಂದಾದ ಆಳವಾದ ಕಚ್ಚು ಗುರುತುಗಳಿವೆ. ಬೇಟೆಯಾಡಿ ತಂದ

ವನ್ಯಪ್ರಾಣಿಗಳನ್ನು ತರಿದು ತುಂಡು ಮಾಡುತ್ತಿದ್ದ ಜಾಗ ಇದಾಗಿರಬೇಕು. ವನ್ಯಮೃಗಗಳ ಬೇಟೆ ಜೀವನಾಧಾರದ ಒಂದು ಅಂಶವಾಗಿರುವುದರಲ್ಲಿ ಅನುಮಾನವಿಲ್ಲ. ಹೂಳಿನಿಂದ ತುಂಬಿದ ಸರೋವರದ ತಳದಲ್ಲಿ ತೆಗೆದ ಗುಂಡಿಗಳಲ್ಲಿಯೂ ಈ ಕಾಲದ ವಸತಿ ಪದರ ಕಂಡುಬಂದಿದೆ. ಶಿಲೋಪಕರಣಗಳು (ಅರೆಯುವ ಕಲ್ಲುಗಳ ಸಹಿತ), ಸಾವಿರಾರು ಪ್ರಾಣಿಮೂಳೆಗಳು (ಮೀನು, ಪಕ್ಷಿ ಹಾಗೂ ಆಮೆ ಮೂಳೆಗಳ ಸಹಿತ) ಮತ್ತು ಕಾವಿಕಲ್ಲುಗಳು ಇಲ್ಲಿ ಸಿಕ್ಕ ಮುಖ್ಯ ಅವಶೇಷಗಳು. ಉಳಿದುಹೋದ ಆಹಾರ ಮತ್ತು ತ್ಯಾಜ್ಯ ಪದಾರ್ಥಗಳನ್ನು ಸರೋವರದಲ್ಲಿ ಎಸೆಯುತ್ತಿದ್ದಿರಬಹುದು.

ಉತ್ಖನನದಲ್ಲಿ ದೊರೆತ ಉಪಕರಣಗಳನ್ನು ಶಿಲೆ ಮತ್ತು ಮೂಳೆಯ ಉಪಕರಣಗಳಾಗಿ ಪ್ರತ್ಯೇಕಿಸಬಹುದು. ಹೆರೆಚಕ್ಕೆ, ಮೊನೆ, ಅಲಗುಗಳು, ಕೊರೆಗ, ಅರ್ಧಚಂದ್ರಾಕೃತಿ, ತ್ರಿಕೋನ, ಅಸಮ ಚತುರ್ಭುಜ ಇಲ್ಲಿ ಪ್ರತಿನಿಧಿತವಾಗಿವೆ. ಉಪಕರಣಗಳ ಸಂಖ್ಯೆ ಶೇ. 6 ರಷ್ಟು ಮಾತ್ರ. ಸಣ್ಣ ಚಕ್ಕೆಚೂರುಗಳು ಮತ್ತು ತಿರುಳುಗಲ್ಲುಗಳು ಜೊತೆಯಲ್ಲೇ ಇರುವುದರಿಂದ ಉಪಕರಣಗಳು ಇಲ್ಲಿಯೇ ತಯಾರಾಗುತ್ತಿದ್ದವೆಂಬುದು ಸ್ಪಷ್ಟ. ಉಪಕರಣಗಳಲ್ಲಿ ಬಳಕೆಯಾದ ಶಿಲೆಗಳೆಂದರೆ ಚರ್ಟ್, ಬೆಣಚುಕಲ್ಲು, ಅಗೇಟ್, ಸ್ಫಟಿಕಶಿಲೆ ಮತ್ತು ಮಂದಗೆಂಪಿನ ಕಲ್ಲು. ಗಂಗಾನದಿ ಬಯಲು ಶಿಲಾರಹಿತವಾಗಿರುವುದರಿಂದ ಈ ಕಲ್ಲುಗಳನ್ನು ಸಮೀಪದ ವಿಂಧ್ಯ ಪರ್ವತಶ್ರೇಣಿಯಿಂದ ತರಲಾಗಿದೆ. ಮೂಲವಸ್ತುವಿನ ಅಭಾವದಿಂದಾಗಿ ಸೂಕ್ಷ್ಮಶಿಲೋಪಕರಣಗಳ ಸಂಖ್ಯೆ ಕಡಿಮೆ. ಜೊತೆಗೆ ಮೂಲವಸ್ತುವನ್ನು ಉಪಯುಕ್ತವಾಗಿ ಬಳಸಿಕೊಳ್ಳಲಾಗಿದೆ. ಶಿಲೋಪಕರಣಗಳ ಮತ್ತೊಂದು ವರ್ಗ ಮರಳುಗಲ್ಲು ಮತ್ತು ಕ್ವಾರ್ಟ್ಜೈಟ್‌ನಿಂದ ಮಾಡಲಾದ ಸಲಕರಣೆಗಳು. ಉದಾ: ಅರೆಯುವ ಕಲ್ಲು, ಸುತ್ತಿಗೆಕಲ್ಲು, ಬಡಿಗಲ್ಲು, ಕವಣೆಕಲ್ಲು ಇತ್ಯಾದಿ. ಈ ಸಾಧನಗಳು ವನ್ಯಸಸ್ಯ–ಆಹಾರಧಾನ್ಯಗಳ ಸಂಸ್ಕರಣೆಯನ್ನು ಸೂಚಿಸುತ್ತವೆ. ಈ ಚಟುವಟಿಕೆಯ ಪ್ರಾರಂಭಿಕ ಹಂತ ಇದಾಗಿದೆ. ಈ ಶಿಲೆಗಳನ್ನೂ ವಿಂಧ್ಯೆಯಿಂದ ತರಲಾಗಿದೆ.

ಮೂಳೆಯ ಉಪಕರಣಗಳು ಸ್ಥಳೀಯ ವಾತಾವರಣಕ್ಕೆ ಜನರು ತಮ್ಮನ್ನು ಒಗ್ಗಿಸಿಕೊಂಡಿದ್ದರ ಉದಾಹರಣೆಯಾಗಿವೆ. ಕಲ್ಲಿನ ಅಭಾವದಿಂದಾಗಿ ಇವರು ಮೂಳೆ ಮತ್ತು ಕೊಂಬುಗಳನ್ನು ಉಜ್ಜಿ ನಯಗೊಳಿಸಿ ಉಪಕರಣಗಳನ್ನಾಗಿ ಬಳಸಿಕೊಂಡರು. ಬಾಣದ ಮೊನೆ, ಚೂರಿ, ಉಳಿ, ಸಣ್ಣ ಗರಗಸ ಮತ್ತು ಹೆರಚಕ್ಕೆ ಸಾಮಾನ್ಯ ಉಪಕರಣಗಳು. ಮೂಳೆಯಿಂದ ಮಾಡಿದ ಕೊರಳ ಹಾಗೂ ಕಿವಿಯ ಸರಳ ಆಭರಣಗಳು ಇಲ್ಲಿಯ ಮತ್ತೊಂದು ವೈಶಿಷ್ಟ್ಯ. ಹೆಚ್ಚಿನ ಆಭರಣಗಳನ್ನು ಜಿಂಕೆಯ ಕೊಂಬಿನಿಂದ ಮಾಡಲಾಗಿದೆ. ತಯಾರಿಕೆಯ ಹಂತದಲ್ಲಿರುವ ಆಭರಣ ಭಾಗಗಳೂ ಕೆಲವೊಂದಿವೆ. ಇವು ಜನರ ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿರುವುದಲ್ಲದೆ, ದೇಶದಲ್ಲಿ ಇದುವರೆಗೆ ದೊರೆತಿರುವ ಆಭರಣಗಳಲ್ಲಿ ಅತ್ಯಂತ ಪ್ರಾಚೀನವಾದುದಾಗಿವೆ.

ಒಟ್ಟಿನಲ್ಲಿ ಬೇಟೆ ಮತ್ತು ಸಸ್ಯಾಹಾರ ಸಂಗ್ರಹಣೆ ಗಂಗಾನದಿ ಬಯಲಿನ ಸೂಕ್ಷ್ಮಶಿಲಾಯುಗದ ಜೀವನಶೈಲಿಯಾಗಿತ್ತೆಂಬುದು ಈ ಎಲ್ಲಾ ಸಾಕ್ಷ್ಯಾಧಾರಗಳಿಂದ ಸ್ಪಷ್ಟವಾಗುತ್ತದೆ. ವನ್ಯಪ್ರಾಣಿ, ಪಕ್ಷಿ, ಜಲಚರ ಹಾಗೂ ಆಹಾರ ಧಾನ್ಯ–ಕಂದಮೂಲಗಳಿಂದ ಸುತ್ತುವರೆದ ಸರೋವರದ ವಾತಾವರಣ ವಸತಿಗೆ ಅನುಕೂಲವಾಗಿದ್ದರಿಂದ ಜನರು ಇಲ್ಲಿ ಹೆಚ್ಚಿನ ಕಾಲ ನೆಲೆಯೂರಿದ್ದಿರಬೇಕು. ಮಣ್ಪಾತ್ರೆ ಬಳಕೆ ಇವರಿಗೆ ತಿಳಿದಿರಲಿಲ್ಲ. ಅಲ್ಲದೆ ಪಶುಪಾಲನೆಯ ಚಿಹ್ನೆಗಳೂ ಕಾಣುವುದಿಲ್ಲ.

ಇಂಗಾಲ 14ರ ಕಾಲನಿರ್ಣಯದ (ಪರಿಷ್ಕೃತ) ಪ್ರಕಾರ ಈ ನೆಲೆ 1385–885ರಿಂದ ಪ್ರ.ಶ.ಪೂ. 2675–2515ರ ಕಾಲಾವಧಿಗೆ ಸೇರುತ್ತದೆ. ಆದರೆ ಇಲ್ಲಿಯ ಹಾಗೂ ಸರಾಯ್ ನಹರ್ ರಾಯ್ ಮತ್ತು ದಮ್‌ದಮದ ವಸ್ತುಸಂಸ್ಕೃತಿಗಳ ನಡುವೆ ಸಾಮ್ಯವಿದೆ. ದಮ್‌ದಮ ಮತ್ತು ಸರಾಯ್ ನಹರ್ ರಾಯ್‌ನ ಸೂಕ್ಷ್ಮಶಿಲಾಯುಗ ಸಂಸ್ಕೃತಿ ಪ್ರ.ಶ.ಪೂ. 8000–5000ದ ನಡುವೆ ಅಸ್ತಿತ್ವದಲ್ಲಿತ್ತೆಂಬುದು ಸಾಬೀತಾದ ವಿಷಯ. ಅವಶೇಷಗಳ ಸಾಮ್ಯತೆಯ ಆಧಾರದ ಮೇಲೆ ಮಹದಹದ ಸಂಸ್ಕೃತಿಯನ್ನು ಇದೇ ಕಾಲಾವಧಿಗೆ ಸೇರಿಸಲಾಗಿದೆ. ಭಾರತದಲ್ಲಿ ಇವು ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅತ್ಯಂತ ಪ್ರಾಚೀನ ವಸತಿ ನೆಲೆಗಳು.

(ವಿ.ಎಸ್.)

**ಮಹಮ್ಮದ್ ಪೈಗಂಬರ್:** ಇಸ್ಲಾಂ ಧರ್ಮ ಸ್ಥಾಪಕ. ಪಶ್ಚಿಮ ಏಷ್ಯದ ಅರೇಬಿಯ ದೇಶದ ಬೆಡೋವಿಯನ್ ಸಮುದಾಯದ ಕುರೇಶಿ ಪಂಗಡಕ್ಕೆ ಸೇರಿದ ಹಸೀಮಾ ಮನೆತನದಲ್ಲಿ ಅಬ್ದುಲ್ ಹಾಗೂ ಅಮಿನಾ ಎಂಬ ದಂಪತಿಗಳಿಗೆ 571 ರಲ್ಲಿ ಜನಿಸಿದರು. ಮಹಮ್ಮದ್ ಎಂದರೆ ಪ್ರಶಂಸೆಗೆ ಪಾತ್ರನಾದವನು ಎಂದರ್ಥ. ಮಹಮ್ಮದ್, ತಾಯಿಯ ಗರ್ಭದಲ್ಲಿರುವಾಗಲೇ ತಂದೆಯನ್ನು ಕಳೆದುಕೊಂಡಿದ್ದರು. ಇವರು 6 ವರ್ಷ ಪ್ರಾಯದಲ್ಲಿರುವಾಗಲೇ ತಾಯಿ ಅಮಿನಾರನ್ನು ಕಳೆದುಕೊಂಡು ತಾತ ಅಬ್ದುಲ್ ಮುತ್ತಾಲೀಬ್‌ರವರ ಆಶ್ರಯದಲ್ಲಿ ತಮ್ಮ ಬಾಲ್ಯವನ್ನು ಕಳೆಯಬೇಕಾಯಿತು. ಮತ್ತೆ ತಾತ ದೈವಾಧೀನರಾದಾಗ ಅವರ ಚಿಕ್ಕಪ್ಪ ಅಬುತಾಲೀಬ್ ರವರ ಆಶ್ರಯ ದೊರೆಯಿತು.

ಮೆಕ್ಕ ನಗರದಲ್ಲಿ ವಾಸವಾಗಿದ್ದ ಇವರ ಕುಟುಂಬದವರು ಇತರೆ ಮನೆತನದವರಿಗೆ ಹೋಲಿಸಿದರೆ ಅಷ್ಟು ಶ್ರೀಮಂತರಲ್ಲ. ಹೀಗಾಗಿ ಇವರು ತಮ್ಮ ಚಿಕ್ಕಪ್ಪನ ಜೊತೆಯಲ್ಲಿ ವ್ಯಾಪಾರ ನಿಮಿತ್ತ ಸಿರಿಯಾಗೆ ಹೋಗುತ್ತಿದ್ದರು. ಬಿಡುವಿನ ವೇಳೆಯಲ್ಲಿ ಕುರಿಗಳನ್ನು ಮೇಯಿಸುತ್ತಿದ್ದರು. ಸಿರಿಯ ದೇಶಕ್ಕೆ ವ್ಯಾಪಾರ ನಿಮಿತ್ತ ಭೇಟಿ ನೀಡಿದಾಗ ಅಲ್ಲಿ ಇವರಿಗೆ ಬಹಿರಾ ಎಂಬ ಕ್ರೈಸ್ತ ಸನ್ಯಾಸಿಯ ಪರಿಚಯವಾಯಿತು. ಎಳೆಯ ಪ್ರಾಯದಲ್ಲೇ ತಂದೆ ತಾಯಿಯ ಪ್ರೀತಿಯಿಂದ ವಂಚಿತರಾಗಿ ಒಂದು ತೆರನಾದ ಅನಾಥ ಸ್ಥಿತಿಯಲ್ಲಿ ಬೆಳೆದಿದ್ದ ಇವರಿಗೆ ಕ್ರಿಸ್ತನ ಬೋಧನೆಗಳು ತುಂಬಾ ಆಕರ್ಷಣೀಯವಾದವು. ಧ್ಯಾನ, ಧಾರ್ಮಿಕ ಚಿಂತನೆಗಳು ಅನಂತರದ ದಿನಗಳಲ್ಲಿ ಪ್ರಾಮುಖ್ಯ ಪಡೆದವು. ಮಹಮ್ಮದ್‌ರವರ ಪ್ರೌಢ ದಿನಗಳ ಬಗ್ಗೆ ಪೂರ್ಣ ಮಾಹಿತಿ ಲಭ್ಯವಿಲ್ಲ. ಇವರ ಜೀವನಚರಿತ್ರೆಯ ಬಗ್ಗೆ ನಮಗೆ ಸಿಗುವ ಮೂಲ ಆಧಾರಗಳೆಂದರೆ ಬಾಗ್ದಾದ್‌ನಲ್ಲಿ 767 ರಲ್ಲಿ ದಿವಂಗತರಾದ ಇಬಾನ್ ಐಸಕ್ ಅವರ ಕೃತಿ. ಇದನ್ನು ಈಜಿಪ್ಟ್ ನಲ್ಲಿ 833 ರಲ್ಲಿ ಕಾಲವಾದ ಇಬಾನ್ ಹಿಸಾಮ್ ಎಂಬುವವರು ಪರಿಷ್ಕೃತಗೊಳಿಸಿದ್ದಾರೆ.

ತಮ್ಮ 7ನೆಯ ವಯಸ್ಸಿನಲ್ಲಿ ಸಿರಿಯದಲ್ಲಿ ವ್ಯಾಪಾರ ನಡೆಸುತ್ತಿದ್ದ ಧನಿಕ ಮಹಿಳೆ ಖದೀಜ ಎಂಬುವವರಲ್ಲಿ ವ್ಯಾಪಾರದ ಸಹಾಯಕರಾಗಿ ಕೆಲಸಕ್ಕೆ ಸೇರಿದರು. ಇವರ ಪ್ರೀತಿ ವಿಶ್ವಾಸಕ್ಕೆ ಮನಸೋತು ಖದೀಜರವರು ಮಹಮ್ಮದ್‌ರವರನ್ನು ವಿವಾಹವಾದರು. ಖದೀಜರವರು ಈಗಾಗಲೇ ಮದುವೆಯಾಗಿ ವಿಧವೆಯಾಗಿದ್ದು ಮಹಮ್ಮದ್‌ರವರಿಗಿಂತ ಸುಮಾರು 20 ವರ್ಷ ಹಿರಿಯವರಾಗಿದ್ದರು. ಇವರ ವಿವಾಹದ ಅನಂತರ ಮೆಕ್ಕ ನಗರದಲ್ಲಿ ನೆಲೆಸಿ ಉತ್ತಮ ಜೀವನ ಹಾಗೂ ಗೌರವ ಪಡೆಯುವಂತಾದರು. ಈ ದಂಪತಿಗಳಿಗೆ ಫಾತಿಮಾ ಎಂಬ ಹೆಣ್ಣು ಮಗು ಜನಿಸಿತು.

ಮಹಮ್ಮದ್‌ರು ತಮ್ಮ ಬಿಡುವಿನ ವೇಳೆಯಲ್ಲಿ ಮೆಕ್ಕ ನಗರದ ಸಮೀಪವೇ ಇದ್ದ ಬೆಟ್ಟ–ಗುಡ್ಡಗಳಲ್ಲಿದ್ದ ಹಿರಾ ಎಂಬ ಗುಹೆಯಲ್ಲಿ ಧ್ಯಾನಾಸಕ್ತರಾಗುತ್ತಿದ್ದರು. ಈ ವೇಳೆಯಲ್ಲಿ ಇವರಿಗೆ ಅಗೋಚರವಾದ ವಾಣಿಯೊಂದು ಕರೆದಂತಾಗುತ್ತಿತ್ತು. ಇದನ್ನು ತಮ್ಮ ಮಡದಿ ಖದೀಜಾ ರವರಲ್ಲಿ ಚರ್ಚಿಸುತ್ತಿದ್ದರು. 610 ರಲ್ಲಿ ರಂಜಾನ್ ಮಾಸದಲ್ಲಿ ಇವರಿಗೆ ಮತ್ತೆ ದೈವವಾಣಿ, ಸೃಷ್ಟಿಕರ್ತನಾದ ಅಲ್ಲಾನನ್ನು ಪ್ರಾರ್ಥಿಸು ಎಂದು ಕರೆ ನೀಡಿತು. ಗಾಬರಿಯಾದ ಮಹಮ್ಮದ್‌ರು ಚಿಂತಾಕ್ರಾಂತರಾಗಲು, ಇವರಿಗೆ ದೇವದೂತ ಗೇಬ್ರಿಯಲ್ ಪ್ರತ್ಯಕ್ಷರಾಗಿ, ಧರ್ಮಬೋಧನೆ ಹಾಗೂ ಜೀವನಕ್ರಮಗಳ ಬಗ್ಗೆ ಪ್ರವಚನ ನೀಡಿದರು. ದೇವರು ಒಬ್ಬನೇ, ಅವನೇ ಸಕಲ ಜೀವಿಗಳ ಸೃಷ್ಟಿಕರ್ತ. ಮನುಷ್ಯನು ಮಾಡುವ ಪಾಪ ಪುಣ್ಯಗಳಿಗೆ ತಕ್ಕಂತೆ ಫಲಪ್ರಾಪ್ತಿಯಾಗುತ್ತದೆ. ಎಂಬುದು ಈ ಬೋಧನೆಯ ತಿರುಳಾಗಿತ್ತು. ತಕ್ಷಣದಲ್ಲೆ ತಮ್ಮ ಮಡದಿಯ ಜೊತೆ ಸಕಲ ವಿಚಾರಗಳನ್ನು ಚರ್ಚಿಸಿದರು. ತಮ್ಮ ಹಿಂದಿನ ಧಾರ್ಮಿಕ ಪದ್ಧತಿಗಳನ್ನು ಬದಿಗಿರಿಸಿ, ತಾವು ಅನುಭವಿಸಿದ ಹೊಸ ಧಾರ್ಮಿಕ ಚಿಂತನೆಗಳತ್ತ ಗಮನಹರಿಸಿ ತಮ್ಮ ಮಡದಿ ಖದೀಜರವರನ್ನು ತಮ್ಮ ಹೊಸ ಧರ್ಮಕ್ಕೆ ಶರಣಾಗುವಂತೆ ಮನವೊಲಿಸಿದರು.

ಮಹಮ್ಮದ್‌ರು ಹೊಸದಾಗಿ ಬೋಧಿಸಿದ ಧರ್ಮಕ್ಕೆ ಶರಣಾದವರನ್ನು ಮಹಮ್ಮದೀಯರು ಅಥವಾ ಕುರಾನ್‌ನಲ್ಲಿ ನಮೂದಿಸಿರುವಂತೆ ಇಸ್ಲಾಮಿಯರೆಂದು ಹೆಸರು. ಅರೇಬಿಕ್ ಭಾಷೆಯ ಪದ ಇಸ್ಲಾಂ ಎಂದರೆ ಶರಣಾಗು ಎಂದರ್ಥ. ಅನಂತರ ತಮ್ಮ ಬಳಗದವರು ಸ್ನೇಹಿತರು, ನೆರೆ–ಹೊರೆಯವರಿಗೆ ತಮ್ಮ ಹೊಸ ಧರ್ಮದ ಬಗ್ಗೆ ಹೇಳಿದಾಗ ಇವರನ್ನು ಗೇಲಿ ಮಾಡಿದವರೇ ಹೆಚ್ಚು. ಆದರೂ ದೈವ ಕೃಪೆಯ ಬೆಂಬಲದೊಂದಿಗೆ ತಮ್ಮ ಆಧ್ಯಾತ್ಮಕ ಪ್ರವಚನಗಳ ಮೂಲಕ ಜನತೆಯಲ್ಲಿ ಭರವಸೆ ತುಂಬಿ ತಮ್ಮ ಸಂಬಂಧಿ, ಅಳಿಯ ಅಲಿಬಿನ್ ಮುತಾಲಿಬ್, ಸ್ನೇಹಿತ ಅಬೂಬಕರ್ ಇವರನ್ನು ತಮ್ಮ ಹೊಸ ಧರ್ಮ ಇಸ್ಲಾಂಗೆ ಮತಾಂತರಿಸಿದರು.

ಈ ವಿಷಯ ಅಂದಿನ ಮೆಕ್ಕ ನಗರದ ಪ್ರಮುಖ ಪ್ರತಿಷ್ಠಿತ ಮನೆತನ ಹಾಗೂ ಮೆಕ್ಕ ನಗರದ ಕಾಬ ಆಲಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಅಬುಸೂಫಿಯ ಮನೆಯವರಿಗೆ ತಿಳಿಯಿತು. ಉಸ್ಮಾನ್ ಮನೆತನದವರಾದ ಇವರು ಕಾಬದಲ್ಲಿ ಆಚರಣೆಯಲ್ಲಿದ್ದ ಬಹುದೇವತಾರಾಧನೆ, ವಿಗ್ರಹಾರಾಧನೆ ಹಾಗೂ ಇತರೆ ಲೌಕಿಕ ಕೆಲಸಗಳಿಂದಾಗಿ ಅಪಾರ ಸಂಪತ್ತನ್ನು ಯಾತ್ರಿಗಳಿಂದ ಗಳಿಸುತ್ತಿದ್ದರು. ಮಹಮ್ಮದ್‌ರ ಏಕದೇವತಾರಾಧನೆ ಹಾಗೂ ವಿಗ್ರಹ ಆರಾಧನೆಯನ್ನು ಖಂಡಿಸುವ ಧೋರಣೆ ಇವರ ಆದಾಯಕ್ಕೆ ಕುಂದು ತರುತ್ತಿತ್ತು. ಮಹಮ್ಮದ್‌ರ ಹೊಸ ಧರ್ಮ ಅಂದಿನ ಮೆಕ್ಕ ಸಮಾಜಕ್ಕೆ ತೀವ್ರ ವ್ಯತಿರಿಕ್ತವಾಗಿದ್ದ ಪ್ರಯುಕ್ತ ಅಬುಸೂಫಿಯ ಮತ್ತವನ ಬೆಂಬಲಿಗರು ಮಹಮ್ಮದ್‌ರವರ ಬೋಧನೆಗೆ ತಡೆಯೊಡ್ಡಿ ಇವರ ಮೇಲೆ ಹಲ್ಲೆಗೆ ಮುಂದಾಗುತ್ತಿದ್ದರು. ಆದರೂ ಮಹಮ್ಮದ್‌ರವರು ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಅಲಿ ಹಾಗೂ ಉಮರ್ ಇಬಾನ್ ಅಲ್– ಕತಾಬ್ ಎಂಬುವವರ ಮುಖಂಡತ್ವದಲ್ಲಿ ಒಂದು ಯುವಕರ ಪಡೆ ರೂಪುಗೊಂಡು ಅಲ್ಲಾನ ಸೇವಕರು ಎಂದು ಕರೆದುಕೊಂಡು ಇಸ್ಲಾಂ ಧರ್ಮದ ರಕ್ಷಣೆಗೆ ಬೆಂಬಲವಾಗಿ ನಿಂತರು.

619ರಲ್ಲಿ ಮಹಮ್ಮದ್‌ರವರ ಮಡದಿ ಖದೀಜ ಹಾಗೂ ಅವರ ಚಿಕ್ಕಪ್ಪ ಅಬು–ತಾಲೀಬ್ ದೈವಾಧೀನರಾದರು. ಖದೀಜರವರ ನೈತಿಕ ಬೆಂಬಲ ಹಾಗೂ ಸಮಾಜದಲ್ಲಿ ಅವರು ಹೊಂದಿದ್ದ ಆರ್ಥಿಕ ಸ್ಥಾನಮಾನಗಳಿಂದಾಗಿ ಮಹಮ್ಮದ್‌ರು ಅಬುಸೂಫಿಯ ಮನೆಯವರ ವಿರುದ್ಧ ನಿಲ್ಲಬಹುದಾಗಿತ್ತು. ಆದರೆ ಇವರ ಮರಣದಿಂದಾಗಿ ಮಹಮ್ಮದ್‌ರವರಿಗೆ ನೈತಿಕ ಬೆಂಬಲವಿಲ್ಲದಾಯಿತು.

ಇಸ್ಲಾಂ ಧರ್ಮದ ತತ್ತ್ವಗಳು ಮೆಕ್ಕ ನಗರದಲ್ಲಿ ಹೊಸ ಧಾರ್ಮಿಕ ಚಿಂತನೆಗೆ ಕಾರಣವಾದವು. ಉಸ್ಮಾನ್ ಮನೆಯವರು ಅಬುಸೂಫಿಯನ ನೇತೃತ್ವದಲ್ಲಿ ಪದೇ ಪದೇ ಮಹಮ್ಮದ್‌ರವರ ಮೇಲೆ ಧಾಳಿ ನಡೆಸುತ್ತಿದ್ದರು. ಮೆಕ್ಕ ನಗರ ತಮಗೆ ಸುರಕ್ಷಿತವಲ್ಲವೆಂದರಿತು ತಮ್ಮ ಇನ್ನೂರು ಇಸ್ಲಾಂ ಬೆಂಬಲಿಗರೊಂದಿಗೆ 622 ಜುಲೈ 16 ರ ಚಾಂದ್ರಮಾನದ ದಿನ ಮದೀನ ನಗರದ ಕಡೆ ವಲಸೆ ಹೋದರು. ಮದೀನ ಅಥವಾ ಅಲ್–ಯಾತ್ರೀಬ್

ಮಹಮ್ಮದ್‌ರವರು ಮೆಕ್ಕದಿಂದ ಮದೀನ ನಗರದ ಕಡೆ ವಲಸೆಹೋದ ದಿನದಿಂದ ಮುಸ್ಲಿಮರು ತಮ್ಮದೇ ಆದ ಪಂಚಾಂಗವನ್ನು ಮೂರನೇ ಸಂಪ್ರದಾಯ ಖಲೀಫ ಉಲ್ಮಾನ್ ರವರ ಆಡಳಿತದಲ್ಲಿ ಜಾರಿಗೆ ತಂದರು. ಇದನ್ನು ಹಿಜಿರಾ ಶಕೆ ಎಂದು ಕರೆಯಲಾಗುತ್ತಿದೆ. ಅರೇಬಿಕ್ ಭಾಷೆಯಲ್ಲಿ ಹಿಜಿರಾ ಎಂದರೆ ವಲಸೆ ಎಂದರ್ಥ.

ಮಹಮ್ಮದ್‌ರವರು ಮದೀನ ನಗರದಲ್ಲಿ ಪ್ರಾರಂಭಿಸಿದ ಜೀವನ ಇವರ ಎರಡನೆಯ ಪ್ರಮುಖ ಘಟ್ಟವಾಗಿದ್ದು, ಅಲ್ಲಿನ ಹಲವು ಕುಟುಂಬಗಳ ಅಂತಃಕಲಹವನ್ನು ಬಗೆಹರಿಸಿ ಅವರನ್ನು ತಮ್ಮ ಹೊಸ ಧರ್ಮಕ್ಕೆ ಮತಾಂತರಿಸಿದರು. ಬಹುತೇಕ ಯಹೂದಿ ಸಮುದಾಯ ದವರು ಮದೀನದಲ್ಲಿ ವಾಸವಾಗಿದ್ದು, ಅವರು ಒಬ್ಬ ಪ್ರವಾದಿಯ ನಿರೀಕ್ಷೆಯಲ್ಲಿದ್ದರು. ಮಹಮ್ಮದ್‌ರವರೇ ಆ ಪ್ರವಾದಿ ಎಂದು ತಿಳಿದು ಎಲ್ಲರೂ ಇವರನ್ನು ಗೌರವ ಆದರಗಳಿಂದ ಪ್ರವಾದಿ ಪೈಗಂಬರ್ ಎಂದು ಸಂಬೋಧಿಸಲು ಪ್ರಾರಂಭಿಸಿದರು. ಈ ರೀತಿಯಾಗಿ ಮಹಮ್ಮದ್ ಇಸ್ಲಾಂ ಧರ್ಮದಪ್ರವಾದಿಯಾಗಿ, ಪೈಗಂಬರ್ ಮಹಮ್ಮದ್‌ರೆನಿಸಿಕೊಂಡರು.

ಮದೀನದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಪ್ರವಾದಿ ಪೈಗಂಬರ್ ವಿರುದ್ಧ ಯುದ್ಧ ನಡೆಸಲು ಅಬುಸೂಫಿಯ ಒಂದು ಸೈನ್ಯವನ್ನು ಮೆಕ್ಕದಲ್ಲಿ ಸಂಘಟಿಸಿ 624 ರ ರಂಜಾನ್ ಮಾಸದಲ್ಲಿ ಧಾಳಿ ನಡೆಸಿದ. ಈ ಧಾಳಿಯಲ್ಲಿ ಮದೀನ 300 ಮಂದಿ ಅಲ್ಲಾನ ಸೈನ್ಯದ ಒಂದು ಸಾವಿರ ಮಂದಿ ಮೆಕ್ಕ ಸೈನ್ಯಕ್ಕೂ ಮದೀನದಿಂದ 85 ಮೈಲಿ ನೈರುತ್ಯ ಭಾಗದಲ್ಲಿರುವ ಬಾದ್ರಾ ಎಂಬಲ್ಲಿ ಯುದ್ಧ ನಡೆದು ಮಹಮ್ಮದ್ ಕಡೆಯವರಿಗೆ ಜಯ ಲಭಿಸಿತು. ಇದು ಮುಸ್ಲಿಂ ಸೈನ್ಯದ ಮೊದಲ ಜಯವಾಗಿದ್ದು ಇಸ್ಲಾಂ ಧರ್ಮದ ಸೈನ್ಯ ಧೈರ್ಯದಿಂದ ಜೀವನದ ಆಸೆಯನ್ನು ಬಿಟ್ಟು ಹೋರಾಡಿದರೆ ಜಯ ಖಂಡಿತವೆಂಬುದನ್ನು ಮನವರಿಕೆ ಮಾಡಿತು ಹಾಗೂ ಮುಂದಿನ ಹೋರಾಟಗಳಿಗೆ ಸ್ಫೂರ್ತಿ ನೀಡಿತು.

627ರಲ್ಲಿ ಮತ್ತೆ ಮೆಕ್ಕದವರು ಬೆಡೊವಿಯನ್ ಮತ್ತು ಅಬಿಸಿನಿಯನ್ನರ ಜೊತೆಗೂಡಿ ಮದೀನದವರ ಮೇಲೆ ಯುದ್ಧ ಸಾರಿದರು. ಪರ್ಷಿಯನ್ ಮೂಲದ ಸಲ್ಮಾನ್ ಎಂಬುವವನ ಮಾರ್ಗದರ್ಶನದಲ್ಲಿ ಪ್ರವಾದಿ ಮಹಮ್ಮದ್‌ರವರು ಮದೀನದ ಸುತ್ತಲೂ ಆಳವಾದ ಗುಂಡಿ ನಿರ್ಮಿಸಿ ಮೆಕ್ಕದ ಸೈನ್ಯವನ್ನು ಸೋಲಿಸಿದರು. ಈ ಯುದ್ಧದಲ್ಲಿ ಕೆಲವು ಯಹೂದಿ ಕುಟುಂಬ ಗಳು ಮೆಕ್ಕದವರ ಪರ ಹೋರಾಡಿದರು. ಇದು ಪ್ರವಾದಿ ಮಹಮ್ಮದ್‌ರವರನ್ನು ಕೆರಳಿಸಿತು. ಕೆಲವು ಯಹೂದಿ ಕುಟುಂಬದವರನ್ನು ಬಲವಂತವಾಗಿ ಮತಾಂತರಿಸಿದರೆ ಕೆಲವರನ್ನು ಕೊಲ್ಲಲಾಯಿತು. ಉಳಿದವರು ತಮ್ಮ ಜಮೀನು, ಮನೆ–ಮಠ ಬಿಟ್ಟು ಬೇರೆಡೆಗೆ ವಲಸೆ ಹೋದರು.

ಮೆಕ್ಕದವರ ಜೊತೆ ನಡೆಸಿದ ಹೋರಾಟಗಳು ಪ್ರವಾದಿ ಮಹಮ್ಮದ್‌ರಿಗೆ ಒಂದು ಸುಸಜ್ಜಿತ ಸೈನ್ಯದ ನಿರ್ಮಾಣಕ್ಕೆ ಸಹಾಯಕವಾಯಿತು. ಇಸ್ಲಾಂ ಧರ್ಮ ಒಂದು ರಾಜಕೀಯ ನೆಲೆಯಲ್ಲಿ ವಿಸ್ತರಣೆ ಹೊಂದಲು ಇದರಿಂದ ಸಹಾಯವಾಯಿತು. ಪ್ರವಾದಿ ಮಹಮ್ಮದ್‌ರು ಇಸ್ಲಾಂ ಧರ್ಮಕ್ಕೆ ಒಂದು ಪೂರ್ಣ ಆಯಾಮ ನೀಡಲು ನಿರ್ಧರಿಸಿ ತಾವು ಹೊಂದಿದ್ದ ಜೂಡಾಯಿಸಂ, ಕ್ರೈಸ್ತಧರ್ಮ ನಂಬಿಕೆಯನ್ನು ತೊರೆದರು. ರಾಷ್ಟ್ರೀಯ ಕಲ್ಪನೆ ಗರಿಗೆದರಿತು. ಸಮಾಜದಲ್ಲಿ ಇಸ್ಲಾಂ ಧರ್ಮ ಸ್ಥಾನಗಳಿಸಿತು. ಶುಕ್ರವಾರವನ್ನು ಇಸ್ಲಾಂ ಧರ್ಮದ ವಾರದ ದಿನವೆಂದು ಸಾರಲಾಯಿತು.

ರಂಜಾನ್ ತಿಂಗಳನ್ನು ಉಪವಾಸಕ್ಕೆ ಯೋಗ್ಯವಾದ ಮಾಸವೆಂದು ತೀರ್ಮಾನಿಸಲಾ ಯಿತು. ಹಿಂದೆ ಪ್ರಾರ್ಥನೆ ಸಲ್ಲಿಸುವಾಗ ಜೆರುಸಲೇಮ್ ಕಡೆ ಮುಖ ಮಾಡಿ ಪ್ರಾರ್ಥಿಸುತ್ತಿದ್ದರು. ಬದಲಾಗಿ ಮಹಮ್ಮದೀಯರು (ಕಾಬ) ಮೆಕ್ಕದ ಕಡೆ (ಪಶ್ಚಿಮಕ್ಕೆ) ಮುಖಮಾಡಿ ಪ್ರಾರ್ಥಿಸುವುದು ಜಾರಿಗೆ ಬಂದಿತು. ಕಾಬಗೆ ಹಜ್ ಯಾತ್ರೆ ಹೋಗಿ, ಅಗ್ನಿಶಿಲೆಗೆ ಮುತ್ತು ನೀಡುವ ಇಸ್ಲಾಂ–ಪೂರ್ವ ಪದ್ಧತಿಯನ್ನು ಮುಂದುವರಿಸಲು ಸಮ್ಮತಿಸಿದರು.

ಈ ವೇಳೆಯಲ್ಲಿ ಮಹಮ್ಮದ್‌ರವರಿಗೆ ವಿರೋಧಿಗಳಿರಲಿಲ್ಲ. ಇಸ್ಲಾಂ ಧರ್ಮ ಒಂದು ರಾಜಕೀಯ ಸ್ವರೂಪ ಪಡೆದುಕೊಂಡು ಅರೇಬಿಯದಲ್ಲಿ ನೆಲೆ ಪಡೆದುಕೊಂಡಿತ್ತು. ಹಲವಾರು ಬುಡಕಟ್ಟುಗಳು ಆಸಕ್ತಿಯಿಂದ ಇಸ್ಲಾಂಗೆ ಮತಾಂತರ ಹೊಂದುತ್ತಿದ್ದವು. ಧರ್ಮದ ಪ್ರಾಮುಖ್ಯದ ಕಾರಣಕ್ಕಾಗಿ ಕಾಬಗೆ ಯಾತ್ರೆ ತೆರಳಲು ನಿಶ್ಚಯಿಸಿದ ಪ್ರವಾದಿ ಮಹಮ್ಮದರು ತಮ್ಮ ಅನುಯಾಯಿಗಳೊಂದಿಗೆ 628 ರಲ್ಲಿ ಮೆಕ್ಕದ ಮೇಲೆ ಧಾಳಿನಡೆಸಿ 630 ರ ಫೆಬ್ರುವರಿಯಲ್ಲಿ ಮೆಕ್ಕದ ಮೇಲೆ ಹತೋಟಿ ಸಾಧಿಸಿದರು.

ಮೆಕ್ಕದ ಜನತೆ ಪ್ರವಾದಿಯವರಲ್ಲಿ ಗೌರವ ತೋರಿ ಶಾಂತಿ ಬಯಸಿದರು. ಇದಕ್ಕೆ ಸಮ್ಮತಿಸಿದ ಪ್ರವಾದಿ ಮಹಮ್ಮದ್ ಕಾಬದ ಶುದ್ಧೀಕರಣಕ್ಕೆ ಗಮನ ನೀಡಿ ತಮ್ಮ ತತ್ತ್ವಗಳಿಗನು ಗುಣವಾಗಿ ಕಾಬದ ಪವಿತ್ರ ಶಿಲೆಯನ್ನು ಹೊರತುಪಡಿಸಿ ಉಳಿದೆಲ್ಲ 360 ವಿಗ್ರಹಗಳನ್ನು ನಾಶಪಡಿಸಿದರು. ಕಾಬದ ಸುತ್ತಲಿದ್ದ ಪ್ರದೇಶವನ್ನು ಪವಿತ್ರವೆಂದು ಘೋಷಿಸಲಾಯಿತು. ಇಸ್ಲಾಮೇತರರಿಗೆ ಪ್ರವೇಶ ನಿರ್ಬಂಧಿಸಲಾಯಿತು. ಅಲ್ಲಿ ಇಸ್ಲಾಂ ಧರ್ಮಕ್ಕನುಗುಣವಾಗಿ ಪೂಜೆ ಪ್ರಾರ್ಥನೆ ಪ್ರಾರಂಭವಾದವು. ಬಹುತೇಕ ಅರಬ್ಬರು ಇಸ್ಲಾಂ ಧರ್ಮವನ್ನು ಒಪ್ಪಿಕೊಂಡು ಪ್ರವಾದಿ ಮಹಮ್ಮದರ ಆಳಿಕೆಗೆ ತಮ್ಮ ಒಪ್ಪಿಗೆ ನೀಡಿದರು.

ಉನ್ನತ ಸ್ಥಾನ–ಮಾನ ಹೊಂದಿದ್ದರೂ ಮಹಮ್ಮದ್‌ರ ದೈನಂದಿನ ಬದುಕು ತುಂಬಾ ಸರಳವಾಗಿತ್ತು. ಅವರು ಮಣ್ಣಿನ ಮನೆಯಲ್ಲಿ ವಾಸಿಸುತ್ತಿದ್ದರು. ತಮ್ಮನ್ನು ಕಾಣಲು ಬರುವ ಜನರಿಗೆ ದೊರಕುತ್ತಿದ್ದರು. ಮದೀನ ಇವರ ವಾಸದಿಂದಾಗಿ ಮೆಕ್ಕದ ಅನಂತರ ಪ್ರಮುಖ ಧಾರ್ಮಿಕ ನಗರವಾಗಿ ಮಾರ್ಪಟ್ಟಿತು.

ಪ್ರವಾದಿ ಮಹಮ್ಮದ್ ಅವರ ವೈಯಕ್ತಿಕ ಜೀವನ ಸಹ ಸಾಮಾನ್ಯ ಜನತೆಯಂತೆ ಹಲವು ಏಳು–ಬೀಳುಗಳೊಂದಿಗೆ ಕೂಡಿತ್ತು. ಕೆಲವೊಂದು ರಾಜಕೀಯ ಕಾರಣದಿಂದಾಗಿ ಸು. 12 ಜನ ಮಹಿಳೆಯರನ್ನು ಇವರು ವಿವಾಹವಾಗಿದ್ದರು. ಇವರಲ್ಲಿ ಕೆಲವರು ಯುದ್ಧದಲ್ಲಿ ಸೋತ ಪ್ರಮುಖರ ಪತ್ನಿಯರಾಗಿದ್ದು ಸುರಕ್ಷತೆಯ ದೃಷ್ಟಿಯಿಂದ ಇವರ ಪತ್ನಿಯರೆನಿಸಿದ್ದರು. ಇವರಿಗೆ ಹಲವಾರು ಮಕ್ಕಳಾದರೂ ಕೊನೆಗಾಲದಲ್ಲಿ ಮುದ್ದಿನ ಮಗಳು ಫಾತಿಮಾ ಮಾತ್ರ ಬದುಕಿದ್ದರು. ಅಬೂಬಕರ್‌ರವರ ಮುದ್ದಿನ ಮಗಳು ಆಹಿಷಾ ಇವರ ಕೊನೆಗಾಲದ ನೆಚ್ಚಿನ ಮಡದಿಯಾಗಿದ್ದರು. ಇವರಿಗೆ ಇಬ್ರಾಹಿಂ ಎಂಬ ಗಂಡು ಮಗು ಕ್ರೈಸ್ತ ಧರ್ಮದ ಮಡದಿ ಮೇರಿ ಎಂಬುವವರಿಂದ ಜನ್ಮ ತಳೆದಿದ್ದು, ಅಕಾಲ ಮರಣಕ್ಕೆ ತುತ್ತಾದಾಗ ಪ್ರವಾದಿ ಮಹಮ್ಮದ್‌ರು ತುಂಬಾ ದುಃಖಿತರಾದರು ಎಂದು ತಿಳಿದುಬರುತ್ತದೆ. ಉಳಿದ ಪತ್ನಿಯರು ಇವರ ಧರ್ಮ ಕಾರ್ಯಕ್ಕೆ ನೆರವಾಗಿದ್ದರು. ಆಲಿವ್ ಮರದ ಎಲೆಗಳನ್ನು ಹಾಸಿಗೆಯಾಗಿ ಬಳಸುತ್ತಿದ್ದರು. ಎರಡು ತುಂಡು ಬಿಳಿಯ ಹತ್ತಿ ವಸ್ತ್ರ ಇವರ ಉಡುಪಾಗಿತ್ತು. ಸರಳ ಆಹಾರ ಇವರದಾಗಿತ್ತು.

ಇಸ್ಲಾಂ ಧರ್ಮ ಒಂದು ಘಟ್ಟವನ್ನು ತಲುಪಿ ಭದ್ರವಾಗಿ ಅರೇಬಿಯದಲ್ಲಿ ತಳವೂರಿದಾಗ ಇವರ ವಯಸ್ಸು 62. ಇಸ್ಲಾಂಧರ್ಮದ 10ನೆಯ ವರ್ಷ 632ರ ಮುಸ್ಲಿಂ ವರ್ಷದ ಹತ್ತನೆಯ ತಿಂಗಳಂದು ತಮ್ಮ ಸ್ನೇಹಿತರು, ಬಂಧುಗಳ ಜೊತೆಗೂಡಿ ಇವರು ಮತ್ತೆ ಮೆಕ್ಕಗೆ ಪವಿತ್ರ ಹಜ್ ಯಾತ್ರೆಗೆ ತೆರಳಿದರು. ಅಲ್ಲಿ ಇವರಿಗೆ ಭವ್ಯ ಸ್ವಾಗತ ನೀಡಲಾಯಿತು. ಕಾಬ ದರ್ಶನ ಮುಗಿಸಿ, ಅನೇಕ ಧಾರ್ಮಿಕ ಪ್ರವಚನಗಳನ್ನು ನೀಡಿ ಮದೀನಗೆ ಮರಳಿದರು. ಈ ಯಾತ್ರೆಯು ಇಸ್ಲಾಂ ಇತಿಹಾಸದಲ್ಲಿ ವಿದಾಯಪೂರ್ವ ಯಾತ್ರೆಯೆಂದೇ ಪ್ರಸಿದ್ಧಿಯಾಗಿದೆ.

ಸಂತೃಪ್ತಿಯಿಂದ ಹಜ್ ಯಾತ್ರೆ ಮುಗಿಸಿ ಬಂದ ಪ್ರವಾದಿ ಮಹಮ್ಮದ್ ತಲೆನೋವಿನ ಬಾಧೆಯಿಂದ ಆರೋಗ್ಯ ಕ್ಷೀಣಿಸಿ ತಮ್ಮ 62ನೆಯ ವಯಸ್ಸಿನಲ್ಲಿ 632ರ ಜೂನ್ ತಿಂಗಳ 8ನೆಯ ತಾರೀಖಿನಂದು ದೈವಾಧೀನರಾದರು.

ಅರೇಬಿಯದ ಬುಡಕಟ್ಟು ಜನಾಂಗಕ್ಕೆ ತಮ್ಮದೇ ಆದ ಧರ್ಮ, ರಾಜಕೀಯ ವ್ಯವಸ್ಥೆ ಯನ್ನು ಹುಟ್ಟುಹಾಕಿ, ಪ್ರಪಂಚದ ಪ್ರಮುಖ ಧರ್ಮಗಳ ನಡುವೆ ಅತ್ಯಲ್ಪ ಕಾಲದಲ್ಲೇ ಒಂದು ಧರ್ಮವಿಶ್ವದಾದ್ಯಂತ ಹರಡಲು ಬೇಕಾದ ಅಡಿಪಾಯ ಹಾಕಿ, ಬೋಧಿಸಿದಂತೆ ಸ್ವತಃ ಜೀವನದಲ್ಲಿ ಅಳವಡಿಸಿಕೊಂಡು ನಡೆದು ತೋರಿಸಿದ ಧರ್ಮ ಪ್ರವರ್ತಕ, ಪ್ರವಾದಿ ಮಹಮ್ಮದ್ ಪ್ರಪಂಚದ ಧಾರ್ಮಿಕ ವ್ಯಕ್ತಿಗಳಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿದ್ದಾರೆ. (ಸಿ.ಜಿ.ಎಸ್.)

**ಮಹಾಜನಪದಗಳು:** ಪ್ರಾಚೀನ ಉತ್ತರ ಭಾರತದಲ್ಲಿ ಪ್ರ.ಶ.ಪೂ.ಸು.600 ರಿಂದ 320ರ ವರೆಗೆ ಇದ್ದ ಗಣರಾಜ್ಯಗಳು. ಪ್ರಾಚೀನ ಭಾರತದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಒಂದು ಪಂಗಡ ಬಹಳ ಕಾಲದವರೆಗೆ ನೆಲೆಸುವುದರಿಂದಾಗಿ ಆ ಪಂಗಡಕ್ಕೆ ಅಥವಾ ಪಂಗಡಗಳ ಗುಂಪಿಗೆ ಆ ಪ್ರದೇಶದೊಂದಿಗೆ ಭೌಗೋಳಿಕ ಅನನ್ಯತೆ ಒದಗಿತ್ತು. ಆ ಪ್ರದೇಶದ ಒಡೆತನದ ಮನೋಭಾವನೆಯ ಮೂರ್ತ ಸ್ವರೂಪವಾಗಿ ಆ ಪ್ರದೇಶಕ್ಕೆ ಆ ಪಂಗಡದ ಹೆಸರನ್ನೇ ಇಡಲಾಯಿತು. ಈ ಒಡೆತನವನ್ನು ಕಾಪಾಡಿಕೊಳ್ಳಲು ಮಹಾಜನಪದ ಅಥವಾ ಗಣರಾಜ್ಯಗಳೆಂಬ ರಾಜಕೀಯ ಸಂಘಟನೆಗಳನ್ನು ಏರ್ಪಡಿಸಿಕೊಳ್ಳಲಾಗಿತ್ತು. ಪ್ರ.ಶ.ಪೂ.ಸು. 600ರಲ್ಲಿದ್ದ ಮಹಾಜನಪದಗಳ ಬಗ್ಗೆ ಬೌದ್ಧ ಅಂಗುತ್ತರ ನಿಕಾಯ ಮತ್ತು ಜೈನ ಭಗವತಿ ಸೂತ್ರ ಈ ಎರಡೂ ಕೃತಿಗಳು ಮಾಹಿತಿ ನೀಡುತ್ತವೆ. ಈ 16 ಮಹಾಜನಪದ ಗಳೆಂದರೆ: ಕಾಶಿ, ಕೋಸಲ, ಅಂಗ, ಮಗಧ, ವೃಜ್ಜಿ ಅಥವಾ ವಜ್ಜಿ, ಮಲ್ಲ, ಚೇದಿ, ವತ್ಸ, ಕುರು, ಪಾಂಚಾಲ, ಮತ್ಸ್ಯ, ಸುರಸೇನ, ಅಶ್ಮಕ, ಅವಂತಿ, ಗಾಂಧಾರ ಮತ್ತು ಕಾಂಬೋಜ.

**1. ಕಾಶಿ:** 16 ಮಹಾಜನಪದಗಳಲ್ಲಿ ಮೊದಲು ಪ್ರವರ್ಧಮಾನಕ್ಕೆ ಬಂದುದು ಕಾಶಿ. ಇದರ ರಾಜಧಾನಿ ವಾರಾಣಸಿ (ಬನಾರಸ್). ಈ ಮಹಾಜನಪದ ಸಂಪದ್ಭರಿತವಾಗಿದ್ದು ಪೂರ್ಣ ಜಂಬೂದ್ವೀಪವನ್ನು ಗೆಲ್ಲಬೇಕೆಂಬ ಆಕಾಂಕ್ಷೆಯುಳ್ಳದ್ದಾಗಿತ್ತು. ಇದರ ಪ್ರಖ್ಯಾತಿ ಹಾಗೂ ಬಲವನ್ನು ಬೌದ್ಧ ಮತ್ತು ಜೈನ ಕೃತಿಗಳು ಉಲ್ಲೇಖಿಸಿವೆ. ಕಾಶಿಯ ರಾಜರು ಕೋಸಲ ರಾಜ್ಯದ ಮೇಲೆ ಅನೇಕ ಬಾರಿ ಧಾಳಿ ಮಾಡಿದ್ದರು. ಕಾಶಿ ರಾಜ್ಯದ ಏಳಿಗೆ ಹಾಗೂ ಅದರ ರಾಜಧಾನಿ ವಾರಾಣಸಿಯ ಪ್ರಖ್ಯಾತಿಯಿಂದಾಗಿ ಅಕ್ಕಪಕ್ಕದ ಏಳು ರಾಜ್ಯಗಳು ಅಸೂಯೆ ಗೊಂಡು ಒಗ್ಗೂಡಿ ಧಾಳಿಮಾಡಿದವು. ಬಹಳ ಕಾಲ ಹೋರಾಟ ನಡೆಸಿದ ಕಾಶಿ ರಾಜ್ಯ ಕೊನೆಗೆ ಕೋಸಲದಲ್ಲಿ ವಿಲೀನಗೊಂಡಿತು.

**2. ಕೋಸಲ:** ಕೋಸಲ ರಾಜ್ಯ ಕೇಶಪುತ್ರ ಮತ್ತು ಕಪಿಲವಸ್ತು ಪ್ರದೇಶಗಳನ್ನೊಳಗೊಂಡಂತೆ ನೇಪಾಳ ಬೆಟ್ಟಗಳವರೆಗೆ ಹರಡಿತ್ತು. ಇದರ ರಾಜಧಾನಿ ಮೊದಲು ಅಯೋಧ್ಯೆಯಾಗಿದ್ದು ಅನಂತರ ಶ್ರಾವಸ್ತಿಯಾಯಿತು. ಭಗವಾನ್ ಬುದ್ಧನ ಕಾಲದಲ್ಲಿ ಪ್ರಸೇನ್‌ಜಿತ್ ಎಂಬ ರಾಜನು ಆಳುತ್ತಿದ್ದನು. ಬುದ್ಧನ ರಾಜ್ಯವಾದ ಶಾಕ್ಯ ಕೋಸಲದ ಹತೋಟಿಯಲ್ಲಿದ್ದಿತು. ಕೋಸಲದ ರಾಜ ಬುದ್ಧನೊಂದಿಗೆ ಸ್ನೇಹಪರನಾಗಿದ್ದು ಪ್ರಮುಖ ವಿಷಯಗಳಲ್ಲಿ ಸಲಹೆಗಳನ್ನು ಪಡೆಯುತ್ತಿದ್ದನು. ಪ್ರಸೇನಜಿತ್ತನು ತನ್ನ ಮಗಳನ್ನು ಮಗಧದ ಅಜಾತಶತ್ರುವಿಗೆ ವಿವಾಹ ಮಾಡಿ ಸಂಬಂಧ ಬೆಳೆಸಿದ್ದ. ಪ್ರಸೇನಜಿತ್‌ನ ಮರಣಾನಂತರ ಅಜಾತಶತ್ರು ಕೋಸಲವನ್ನು ಮಗಧಕ್ಕೆ ಸೇರಿಸಿಕೊಂಡ.

**3. ಅಂಗ:** ಅಂಗರಾಜ್ಯ ಮಗಧದ ಪೂರ್ವಕ್ಕೆ ಮತ್ತು ಪಶ್ಚಿಮದಲ್ಲಿ ರಾಜಮಹಲ್ ಪರ್ವತ ಪ್ರದೇಶದಲ್ಲಿ ನೆಲೆಗೊಂಡಿತ್ತು. ಅಂಗದ ರಾಜಧಾನಿ ಚಂಪಾ. ಚಂಪಾ ಪ್ರಮುಖ ವಿದೇಶಿ ವ್ಯಾಪಾರದ ಕೇಂದ್ರವಾಗಿತ್ತು. ಇಲ್ಲಿಯ ವರ್ತಕರು ಸುವರ್ಣ ಭೂಮಿಯೊಡನೆ

ವ್ಯಾಪಾರ ಸಂಬಂಧ ಹೊಂದಿದ್ದರು. ಆಗ್ನೇಯ ಏಷ್ಯದ ಇಂಡೊ–ಚೀನ ಭಾಗದಲ್ಲಿ ಅಂಗದ ರಾಜಧಾನಿ ಚಂಪಾದ ಹೆಸರಿನಲ್ಲಿ ಒಂದು ರಾಜ್ಯ ಸ್ಥಾಪನೆಯಾಗಿತ್ತು. ಅಂಗ ರಾಜ್ಯ ಬಿಂಬಸಾರನ ಕಾಲದಲ್ಲಿ ಮಗಧಕ್ಕೆ ಸೇರ್ಪಡೆಗೊಂಡಿತು.

**4. ಮಗಧ:** ಮಗಧ ರಾಜ್ಯ ಇಂದಿನ ಬಿಹಾರದ ದಕ್ಷಿಣದ ಪಾಟ್ನ ಮತ್ತು ಗಯ ಜಿಲ್ಲೆಗಳನ್ನೊಳಗೊಂಡಿತ್ತು. ಕೆಲವು ವೃತ್ತಾಂತಗಳ ಪ್ರಕಾರ ಈ ರಾಜ್ಯದ ಸ್ಥಾಪಕರು ಜರಾಸಂಧ ಮತ್ತು ಬೃಹದ್ರಥ. ಪ್ರ.ಶ.ಪೂ. 5 ಮತ್ತು 6ನೆಯ ಶತಮಾನಗಳಲ್ಲಿ ಶೈಶುನಾಗರೆಂದು ಕರೆಯಲ್ಪಡುವ ಮನೆತನ ಇದನ್ನು ಆಳುತ್ತಿದ್ದರು. ಗೌತಮ ಬುದ್ಧನ ಕಾಲದಲ್ಲಿ ಈ ರಾಜ್ಯದ ರಾಜನಾಗಿ ಬಿಂಬಸಾರನು ಆಳುತ್ತಿದ್ದ. ಅನಂತರ ಬಂದ ಅಜಾತಶತ್ರುವಿನ ಕಾಲದಲ್ಲಿ ಮಗಧ ರಾಜ್ಯ ಪ್ರಬಲಗೊಂಡಿತು. ಈ ರಾಜ್ಯಕ್ಕೆ ಮೊದಲು ಗಿರಿವ್ರಜ (ರಾಜಗೃಹ) ರಾಜಧಾನಿಯಾಗಿದ್ದು ಅನಂತರ ಪಾಟಲಿಪುತ್ರಕ್ಕೆ ಬದಲಾಯಿತು.

**5. ವೃಜ್ಜಿ ಅಥವಾ ವಜ್ಜಿ:** ಈ ರಾಜ್ಯ ಲಿಚ್ಛವಿ, ವಿದೇಹ, ಜ್ಞಾತ್ರಿಕ ಮತ್ತು ವಜ್ಜಿ ಮುಂತಾದ ಎಂಟು ಬುಡಕಟ್ಟುಗಳು ಒಗ್ಗೂಡಿದ ರಾಜ್ಯವಾಗಿತ್ತು. ಇದರ ರಾಜಧಾನಿ ವೈಶಾಲಿ. ವೃಜ್ಜಿ ಜನರಿಗೆ ರಾಜನಿರಲಿಲ್ಲ. ರಾಜ್ಯದ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದ ಒಂದು ಜನಪ್ರಿಯ ಹಿರಿಯರ ಸಭೆ ಇದ್ದಿತು. ಈ ರಾಜ್ಯವೂ ಕೊನೆಗೆ ಮಗಧ ರಾಜ್ಯದಲ್ಲಿ ವಿಲೀನಗೊಂಡಿತು.

**6. ಮಲ್ಲ ಅಥವಾ ಮೊಳವ:** ಮಲ್ಲ ರಾಜ್ಯ ಎರಡು ವಿಭಾಗಗಳಾಗಿ ವಿಂಗಡಣೆಗೊಂಡಿದ್ದು ಒಂದೊಂದು ವಿಭಾಗ ಒಂದೊಂದು ರಾಜಧಾನಿಯನ್ನು ಹೊಂದಿತ್ತು. ಒಂದು ವಿಭಾಗದ ರಾಜಧಾನಿ ಪವ ಮತ್ತೊಂದು ವಿಭಾಗದ ರಾಜಧಾನಿ ಕುಶಿನಾರ (ಕುಶಿನಗರ). ಗೌತಮ ಬುದ್ಧ ಕುಶಿನಾರದಲ್ಲೇ ಮಹಾ ಪರಿನಿರ್ವಾಣವನ್ನು ಹೊಂದಿದ. ಕುಶಿನಾರದ ಪೂರ್ವಕ್ಕೆ 10 ಕಿಮೀ ದೂರದಲ್ಲಿ ರಾಜಧಾನಿ ಪವ ಇದ್ದಿತು. ಮಲ್ಲ ರಾಜ್ಯದಲ್ಲಿ ಮೊದಲು ರಾಜತ್ವದ ಆಳಿಕೆಯಿದ್ದುದು ಅನಂತರ ಗಣರಾಜ್ಯ ಮಾದರಿ ಆಡಳಿತ ರೂಪುಗೊಂಡಿತು. ಅಲೆಕ್ಸಾಂಡರನ ಭಾರತದ ಧಾಳಿಯ ಕಾಲದಲ್ಲಿ ಇದು ಗಣರಾಜ್ಯವಾಗಿತ್ತು.

**7. ಚೇದಿ:** ಚೇದಿ ರಾಜ್ಯ ಯಮುನಾ ನದಿ ಮತ್ತು ನರ್ಮದಾ ನದಿಗಳ ಮಧ್ಯಭಾಗದಲ್ಲಿತ್ತು. ಇದರ ರಾಜಧಾನಿ ಸುಕ್ತಿಮತಿ. ಋಗ್ವೇದದಲ್ಲಿ ಚೇದಿ ಎಂಬ ನಿವಾಸಿಗಳ ಹೆಸರಿದೆ.

8. ವತ್ಸ ಅಥವಾ ವಮ್ಸ: ಈ ರಾಜ್ಯ ಗಂಗಾನದಿಯ ದಕ್ಷಿಣಕ್ಕೆ ಇಂದಿನ ಅಲಹಾಬಾದ್ ಪ್ರಾಂತದಲ್ಲಿತ್ತು. ಇದರ ರಾಜಧಾನಿ ಕೊಸಾಂಬಿ (ಕೌಶಾಂಬಿ). ಬುದ್ಧನ ಕಾಲದಲ್ಲಿ ಉದಯನ ಎಂಬುವವನು ಇಲ್ಲಿ ಆಳುತ್ತಿದ್ದ. ಭಾಸನ ಸ್ವಪ್ನವಾಸವದತ್ತ ಮತ್ತು ಹರ್ಷನ ಪ್ರಿಯದರ್ಶಿಕ ನಾಟಕಗಳಲ್ಲಿ ಇವನನ್ನು ಪಾತ್ರಗಳಾಗಿ ಬಿಂಬಿಸುವಷ್ಟು ಇವನು ಖ್ಯಾತನಾಗಿದ್ದ. ಉದಯನ ಅನಂತರ ಬಂದ ಉತ್ತರಾಧಿಕಾರಿಗಳು ಸಮರ್ಥರಾಗಿಲ್ಲದೆ ಕೊನೆಗೆ ಈ ರಾಜ್ಯ ಮಗಧದೊಂದಿಗೆ ವಿಲೀನಗೊಂಡಿತು.

**9. ಕುರು:** ಈ ರಾಜ್ಯದ ವ್ಯಾಪ್ತಿ ಇಂದಿನ ಥಾನೇಶ್ವರ, ದೆಹಲಿ ಮತ್ತು ಮೀರತ್ ಜಿಲ್ಲೆಗಳನ್ನೊಳಗೊಂಡಿತ್ತು. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಧನಂಜಯ ಕೌರವ್ಯ, ಸುತ್ತ ಸೋಮ ಮುಂತಾದವರು ಈ ರಾಜ್ಯವನ್ನು ಆಳಿದರು.

**10. ಪಾಂಚಾಲ:** ಈ ರಾಜ್ಯ ಇಂದಿನ ಬರೇಲಿ, ಬುಡೌನ್ ಮತ್ತು ಫರೂಕಾಬಾದ್ ಜಿಲ್ಲೆಗಳನ್ನೊಳಗೊಂಡಿತ್ತು. ಇದರ ರಾಜಧಾನಿ ಕಾಂಪಿಲ್ಯ.

**11. ಮತ್ಸ್ಯ:** ಮತ್ಸ್ಯ ರಾಜ್ಯ ಚಂಬಲ್ ಮತ್ತು ಸರಸ್ವತಿ ನದಿಗಳ ಪ್ರದೇಶಗಳಲ್ಲಿ ವ್ಯಾಪಿಸಿತ್ತು. ಇದರ ರಾಜಧಾನಿ ವಿರಾಟನಗರ. ಇದನ್ನು ಚೇದಿ ದೊರೆಗಳು ಮೊದಲು ವಶಪಡಿಸಿಕೊಂಡರು. ಅನಂತರ ಇದು ಮಗಧ ಸಾಮ್ರಾಜ್ಯಕ್ಕೆ ಸೇರಿಹೋಯಿತು.

**12. ಶೂರ ಸೇನ:** ಇದು ಇಂದಿನ ಮಥುರ ಪ್ರದೇಶದ ಭಾಗಗಳನ್ನೊಳಗೊಂಡಿತ್ತು. ಇದರ ರಾಜಧಾನಿ ಮಥುರ. ಇದು ಗ್ರೀಕರ ಬರೆವಣಿಗೆಗಳಲ್ಲಿ ಸೌರಸೇನಾಯ್ ಎಂದು ಉಲ್ಲೇಖಿತಗೊಂಡಿದೆ.

**13. ಅಶ್ಮಕ:** ಇದು ಗೋದಾವರಿ ನದಿ ದಂಡೆಯ ಮೇಲೆ ವ್ಯಾಪಿಸಿತ್ತು. ಇದರ ರಾಜಧಾನಿ ಪೊತಾಲಿ, ಪೊತಾನ್ ಅಥವಾ ಪೊದನ್. ವಾಯುಪುರಾಣದಲ್ಲಿ ಅಶ್ಮಕದ ರಾಜರನ್ನು ಇಕ್ಷ್ವಾಕು ವಂಶದವರೆಂದು ಉಲ್ಲೇಖಿಸಿದೆ. ಬುದ್ಧನ ಕಾಲದಲ್ಲಿ ಸುಜಾತ ನೆಂಬುವವನು ಇಲ್ಲಿ ಆಳಿಕೆ ನಡೆಸುತ್ತಿದ್ದ. ಜಾತಕದ ಪ್ರಕಾರ ಅಶ್ಮಕವನ್ನು ಕಾಶಿ ರಾಜ್ಯ ವಶಪಡಿಸಿಕೊಂಡಿತು.

**14. ಅವಂತಿ:** ಇದು ಉಜ್ಜೈನಿ (ಉಜ್ಜಯಿನಿ) ಮತ್ತು ನರ್ಮದಾ ನದಿ ತೀರದಲ್ಲಿ ವ್ಯಾಪಿಸಿತ್ತು. ಬುದ್ಧನ ಕಾಲದಲ್ಲಿ ಪರದೋಯ ಎಂಬ ಪ್ರಬಲ ಅರಸನು ಅವಂತಿಯನ್ನಾಳುತ್ತಿದ್ದನು. ಇದು ಮಗಧ ಹಾಗೂ ವತ್ಸ ರಾಜ್ಯಗಳೊಂದಿಗೆ ಯುದ್ಧದಲ್ಲಿ ನಿರತವಾಗಿತ್ತು. ಅವಂತಿ ರಾಜ್ಯ ಎರಡು ವಿಭಾಗಗಳಾಗಿ ಉತ್ತರದ ಭಾಗಕ್ಕೆ ಉಜ್ಜಯಿನಿ ಹಾಗೂ ದಕ್ಷಿಣದ ಭಾಗಕ್ಕೆ ಮಾಹಿಷ್ಮತಿ ರಾಜಧಾನಿಗಳಾಗಿದ್ದವು. ಈ ರಾಜ್ಯದ ಕೊನೆಯ ದೊರೆ ನಂದಿವರ್ಧನ. ನಂದಿವರ್ಧನನು ಮಗಧದ ಶಿಶುನಾಗನಿಂದ ಸೋಲಿಸಲ್ಪಟ್ಟ. ಅವಂತಿ ಮಗಧದಲ್ಲಿ ಸೇರ್ಪಡೆಗೊಂಡಿತು.

**15. ಗಾಂಧಾರ:** ಇದು ಪೆಷಾವರ್ ಮತ್ತು ರಾವಲ್ಪಿಂಡಿ ಜಿಲ್ಲೆಗಳನ್ನೊಳಗೊಂಡಿತ್ತು. ಪ್ರ.ಶ.ಪೂ. 6ನೆಯ ಶತಮಾನ ಮಧ್ಯಭಾಗದಲ್ಲಿ ಪುಕ್ಕಸತಿ ಎಂಬುವವನು ಗಾಂಧಾರವನ್ನು ಆಳುತ್ತಿದ್ದ. ಇವನು ಅವಂತಿಯ ಪ್ರದ್ಯೋತ ಮಹಾಸೇನನನ್ನು ಸೋಲಿಸಿದ. ಪ್ರ.ಶ.ಪೂ.6ನೆಯ ಶತಮಾನದ ಕೊನೆಯ ವೇಳೆಗೆ ಗಾಂಧಾರವನ್ನು ಪರ್ಷಿಯದ ದೊರೆ ಮೊದಲನೆಯ ಡೇರಿಯಸ್ ವಶಪಡಿಸಿಕೊಂಡ. ಇದರ ರಾಜಧಾನಿ ತಕ್ಷಿಲ (ತಕ್ಷಶಿಲ) ಪ್ರಾಚೀನ ಕಾಲದ ಪ್ರಮುಖ ವಿದ್ಯಾಕೇಂದ್ರವಾಗಿತ್ತು.

**16. ಕಾಂಬೋಜ:** ಇದು ಗಾಂಧಾರದ ಪಕ್ಕದ ವಾಯವ್ಯ ಭಾರತದ ಭಾಗಗಳನ್ನೊಳಗೊಂಡಿತ್ತು. ಇದರ ರಾಜಧಾನಿ ರಾಜಪುರ. ಉತ್ತರ ವೈದಿಕ ಕಾಲದಲ್ಲಿ ಕಾಂಬೋಜ ವೈದಿಕ ಧರ್ಮ ಹಾಗೂ ಸಾಹಿತ್ಯದ ಪ್ರಮುಖ ಕೇಂದ್ರವಾಗಿ ಬೆಳೆದಿತ್ತು. ಭಾರತದ ಬೇರೆ ಭಾಗದ ಆರ್ಯರ ಆಚಾರವಿಚಾರಗಳಿಗೂ, ಸಂಪ್ರದಾಯಗಳಿಗೂ ಕಾಂಬೋಜದಲ್ಲಿರುವುದಕ್ಕೂ ಬಹಳ ವ್ಯತ್ಯಾಸಗಳಿದ್ದವು.

**ಮಹಾ ಜನಪದಗಳಲ್ಲಿನ ಆಡಳಿತ:** ಮಹಾಜನ ಪದಯುಗದ ಪ್ರಾರಂಭದಲ್ಲಿ ರಾಜನ ಪದವಿ ಕ್ಷತ್ರಿಯ ಮತ್ತು ಕ್ಷತ್ರಿಯೇತರರಿಗೂ ದೊರೆಯುತ್ತಿತ್ತು. ಅನಂತರ ಕಾಲದಲ್ಲಿ ಮಹಾಜನ ಪದಗಳ ರಾಜತ್ವ ಕ್ಷತ್ರಿಯರಿಗೆ ಸೀಮಿತವಾಯಿತು. ರಾಜತ್ವ ಹೊಂದಿದ ಮಹಾಜನಪದಗಳಲ್ಲಿ ರಾಜತ್ವ ವಂಶಪಾರಂಪರ್ಯವಾಯಿತು. ಆದರೆ ಕೆಲವೊಮ್ಮೆ ರಾಜನನ್ನು ಆಯ್ಕೆ ಮಾಡುವ ಪದ್ಧತಿಯೂ ಇದ್ದಿತು. ಪ್ರತಿಯೊಬ್ಬ ರಾಜ ತನ್ನ ಸಹಾಯಕ್ಕೆ ಹಾಗೂ ಸಲಹೆ ನೀಡುವುದಕ್ಕಾಗಿ ಮಂತ್ರಿ ಪರಿಷತ್ತನ್ನು ಹೊಂದಿರುತ್ತಿದ್ದ. ಪ್ರಮುಖ ಮಂತ್ರಿಗಳೆಂದರೆ ಪುರೋಹಿತ ಹಾಗೂ ಸೇನಾನಿಯಾಗಿದ್ದರು. ರಾಜ್ಯದ ಆಡಳಿತದಲ್ಲಿ ನೆರವಾಗಲು ಮಹಾಮಾತ್ರರೆಂಬ ಅಧಿಕಾರಿಗಳಿದ್ದರು. ಪ್ರತಿಯೊಂದು ರಾಜ್ಯ ಅನೇಕ ಪ್ರಾಂತಗಳಾಗಿ ವಿಂಗಡಣೆಗೊಂಡಿದ್ದು, ರಾಜಮನೆತನಕ್ಕೆ ಸೇರಿದವರನ್ನು ಪ್ರಾಂತಾಧಿಕಾರಿಗಳಾಗಿ ನೇಮಕಮಾಡಲಾಗುತ್ತಿತ್ತು. ಇದಕ್ಕೆ ನಿದರ್ಶನ ಅಜಾತಶತ್ರು ತನ್ನ ತಂದೆ ಬಿಂಬಸಾರನ ಕಾಲದಲ್ಲಿ ಅಂಗರಾಜ್ಯದ ರಾಜ್ಯಪಾಲನಾಗಿದ್ದ. ಕೇಂದ್ರ ಮತ್ತು ಪ್ರಾಂತ ಸರ್ಕಾರಗಳಲ್ಲಿ ಅಮಾತ್ಯರೆಂಬ ಅಧಿಕಾರಿಗಳು ಇರುತ್ತಿದ್ದರು. ಅಮಾತ್ಯರು ಪ್ರತಿಯೊಂದು ಇಲಾಖೆಗಳ ಮುಖ್ಯಸ್ಥರಾಗಿದ್ದು ಗೌರವಾನ್ವಿತ ಸ್ಥಾನ ಪಡೆದಿದ್ದರು. ನ್ಯಾಯದಾನದಲ್ಲಿ ರಾಜನದೇ ಅಂತಿಮ ತೀರ್ಮಾನವಾಗಿತ್ತು. ರಾಜನ ನ್ಯಾಯದಾನಕ್ಕೆ ಅನೇಕ ನ್ಯಾಯಪರಿಣಿತರು ಸಹಾಯ ಮಾಡುತ್ತಿದ್ದರು.

ಪ್ರಾಂತಾಡಳಿತದಲ್ಲಿ ಗ್ರಾಮ ಅತ್ಯಂತ ಕಿರಿದಾದ ಆಡಳಿತ ಘಟಕವಾಗಿತ್ತು. ಗ್ರಾಮಗಳನ್ನು ಗ್ರಾಮಭೋಜಕನೆಂಬುವವನು ನೋಡಿಕೊಳ್ಳುತ್ತಿದ್ದ. ಇವನು ಗ್ರಾಮಗಳ ನಾಗರಿಕ ಆಡಳಿತ ಹಾಗೂ ಕಾನೂನು ವ್ಯವಸ್ಥೆ ನೋಡಿಕೊಳ್ಳುತ್ತಿದ್ದ. ರಾಜನ ಕರ್ತವ್ಯ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡುವುದರ ಜೊತೆಗೆ ವಿದೇಶಿ ಆಕ್ರಮಣದಿಂದ ರಕ್ಷಿಸುವುದಾಗಿತ್ತು. ಅದಕ್ಕಾಗಿ ಸದಾ ಸಿದ್ಧವಿದ್ದ ವ್ಯವಸ್ಥಿತವಾದ ಸೈನ್ಯವನ್ನು ಹೊಂದಿರುತ್ತಿದ್ದ. ರಾಜ್ಯದ ಪ್ರಮುಖ ಆದಾಯ ಭೂಕಂದಾಯವಾಗಿತ್ತು. ರಾಜ್ಯಕ್ಕೆ ಭೂಕಂದಾಯದ ಜೊತೆಗೆ ಅಪರಾಧಿಗಳಿಂದ ಬಂದ ದಂಡ, ಯುದ್ಧದಿಂದ ಬಂದ ಸಂಪತ್ತು ಕಾಣಿಕೆಗಳ ಮೂಲಕ ಬರುತ್ತಿತ್ತು. (ಕೆ.ಎಸ್‌ಡಿ.)

**ಮಹಾಬಲಿಪುರಂ:** ತಮಿಳುನಾಡಿನ ಚೆಂಗಲ್‌ಪೇಟ್ ಜಿಲ್ಲೆಯಲ್ಲಿ, ಬಂಗಾಲ ಕೊಲ್ಲಿಯ ತೀರದಲ್ಲಿರುವ ಐತಿಹಾಸಿಕ ಸ್ಥಳ. ಚೆನ್ನೈನಿಂದ ದಕ್ಷಿಣಕ್ಕೆ 58 ಕಿಮೀ ದೂರದಲ್ಲಿದೆ. ಪಲ್ಲವ ಶೈಲಿಯ ವಾಸ್ತುಶಿಲ್ಪ ಸಂಪತ್ತು ಸೌಂದರ್ಯಗಳಿಗೆ ಈ ಸ್ಥಳ ಪ್ರಸಿದ್ಧವಾಗಿದೆ. ಇದಕ್ಕೆ ಮಲ್ಲಪುರಮ್, ಮಾಮಲ್ಲಪುರಮ್, ತಿರಕ್ಕಡಮಲ್ಯೆ ಇತ್ಯಾದಿ ಹೆಸರುಗಳಿವೆ. ಪ್ರಾಚೀನ ಕಾಲದಲ್ಲಿ ಇದನ್ನು ಬಾನಪುರವೆಂದು ಕರೆಯುತ್ತಿದ್ದರಂತೆ. ಆಗ್ನೇಯ ಏಷ್ಯ ಹಾಗೂ ಮೆಡಿಟರೇನಿಯನ್ ದೇಶಗಳೊಡನೆ ಕಡಲ ವ್ಯಾಪಾರ ಸಂಬಂಧ ಹೊಂದಿದ್ದ ಈ ಊರು ಪ್ರಾಚೀನದಲ್ಲಿ ಪ್ರಧಾನ ರೇವು ಪಟ್ಟಣಗಳಲ್ಲೊಂದೆನಿಸಿತ್ತು. ಸಂಗಮ್ ಕಾಲದ ತಮಿಳು ಸಾಹಿತ್ಯದಲ್ಲಿಯ ಉಲ್ಲೇಖಗಳಿಂದ ಮತ್ತು ಈ ಪ್ರದೇಶದಲ್ಲಿ ಅನ್ವೇಷಿತವಾದ ರೋಮನ್ ನಾಣ್ಯಗಳಿಂದ ಇದಕ್ಕೆ ಪುಷ್ಟಿ ದೊರೆತಿದೆ. ಬೃಹದ್ಭಾರತದ ಪ್ರದೇಶಗಳಲ್ಲಿ ಭಾರತೀಯ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಬಿತ್ತಿದ ದಕ್ಷಿಣ ಭಾರತದ ವಲಸೆಗಾರರು ಹೊರಟ ರೇವುಪಟ್ಟಣಗಳಲ್ಲಿ ಮಹಾಬಲಿಪುರವೂ ಸೇರಿದೆ. ಜಾವ ಹಾಗೂ ಕಾಂಬೋಡಿಯಗಳಲ್ಲಿಯ ವಾಸ್ತುರಚನೆಗಳಲ್ಲಿ ಇಲ್ಲಿಯ ವಾಸ್ತುಶೈಲಿಯ ಗಣನೀಯ ಪ್ರಭಾವ ಪ್ರೇರಣೆ ಕಂಡುಬರುತ್ತದೆ.

ದೇಗುಲ ನಿರ್ಮಾಣದ ಇತಿಹಾಸದಲ್ಲಿ ಮಹಾಬಲಿಪುರದ ಏಕಶಿಲಾದೇವಾಲಯಗಳಿಗೆ ಪ್ರಮುಖ ಸ್ಥಾನವಿದೆ. ಈ ರಚನೆಗಳನ್ನು ಪಗೋಡ ರಥಗಳೆಂದು ಕರೆಯಲಾಗಿದೆ. ಬಹುಶಃ ಈ ರಥಗಳ ನಿರ್ಮಾಣಕ್ಕೆ ಪಶ್ಚಿಮ ಭಾರತದ ಗುಹಾವಿಹಾರಗಳು ಪ್ರೇರಕ. ಇಲ್ಲಿ ದಕ್ಷಿಣದ ಸಮುದ್ರತೀರದಲ್ಲಿ, ಊರಿನ ಮಧ್ಯದ ಗುಡ್ಡದಲ್ಲಿ ಹಾಗೂ ಗುಡ್ಡದ ಪಶ್ಚಿಮ ಭಾಗದಲ್ಲಿ ಇಂಥ ಏಕಶಿಲಾ ರಚನೆಗಳಿವೆ.

ಸಮುದ್ರ ದಂಡೆಯಲ್ಲಿ ದಕ್ಷಿಣೋತ್ತರವಾಗಿರುವ ದೊಡ್ಡ ಬಂಡೆಯಲ್ಲಿ ದ್ರೌಪದಿ, ಅರ್ಜುನ, ಭೀಮ ಹಾಗೂ ಧರ್ಮರಾಜ ರಥಗಳನ್ನೂ ಇನ್ನೊಂದು ಸಣ್ಣ ಬಂಡೆಯಲ್ಲಿ ನಕುಲ ಸಹದೇವ ರಥವನ್ನೂ ಕಡೆಯಲಾಗಿದೆ. ಈ ದೇವಾಲಯಗಳಿಗೆ ಪಂಚಪಾಂಡವರ ಹೆಸರು ಬರಲು ಕಾರಣ ತಿಳಿಯದು. ನಾಲ್ಕು ರಥಗಳು ಒಂದೇ ಸಾಲಿನಲ್ಲಿದ್ದರೆ ಐದನೆಯ ಅರ್ಜುನನ ರಥ ಅವುಗಳ ಎದುರಿನಲ್ಲಿದೆ. ಪಶ್ಚಿಮಾಭಿಮುಖವಾಗಿರುವ ದ್ರೌಪದಿ ರಥ ಗುಡಿಸಿಲ ಮಾದರಿಯಲ್ಲಿರುವ ಸರಳ ಸುಂದರ ರಚನೆ. ಗುಡಿಯ ಎರಡೂ ಪಾರ್ಶ್ವಗಳಲ್ಲಿ ಧನುರ್ಧಾರಿ ಮತ್ತು ಖಡ್ಗಧಾರಿ ಸ್ತ್ರೀದ್ವಾರಪಾಲ ಮೂರ್ತಿಗಳಿವೆ. ಪೂರ್ವ ಗೋಡೆಯ ಮೇಲಿನ ಚತುರ್ಭುಜ ದುರ್ಗೆಯ ಉಬ್ಬುಗೆತ್ತನೆ ಗಮನಾರ್ಹ. ಗುಡಿಯ ಮುಂದೆ ದೇವಿಯ ವಾಹನವಾದ ಸಿಂಹಶಿಲ್ಪವಿದೆ.

ಪಶ್ಚಿಮಾಭಿಮುಖವಾಗಿರುವ, ಎರಡಂತಸ್ತಿನಿಂದ ಕೂಡಿದ ಅರ್ಜುನನ ರಥ ಮುಖ ಮಂಟಪ ಸಹಿತವಾಗಿದೆ. ಗುಡಿಯೊಳಗೆ ಶಿಲ್ಪಗಳಿಲ್ಲ, ಹೊರಗಣ ಗೋಡೆಗಳ ಮೇಲೆ ದೇವ ಮಾನವರ ಕಮನೀಯ ಶಿಲ್ಪಗಳಿವೆ. ದ್ವಾರಪಾಲಕರು, ಗರುಡ ಸಮೇತವಾದ ವಿಷ್ಣು, ಆನೆಯನ್ನೇರಿದ ಇಂದ್ರ, ನಂದಿಯನ್ನೊರಗಿ ನಿಂತ ಶಿವ ಮುಂತಾದ ಶಿಲ್ಪಗಳು ಗಮನ ಸೆಳೆಯುತ್ತವೆ. ಗುಡಿಯ ಎದುರಿನಲ್ಲಿ ದೊಡ್ಡನಂದಿ ಮೂರ್ತಿ ಇದೆ. ಅಪೂರ್ಣ ರಚನೆಯಾದರೂ ಇದೊಂದು ಉತ್ಕೃಷ್ಟ ಶಿಲ್ಪ. ಸಹದೇವ ರಥ ದಕ್ಷಿಣಾಭಿಮುಖವಾಗಿದೆ. ಮುಖಮಂಟಪದ ಕಂಬಗಳನ್ನು ಮಲಗಿರುವ ಆನೆಗಳ ಮೇಲಿರುವಂತೆ ಕಡೆಯಲಾಗಿದೆ. ಇಲ್ಲಿ ಆನೆಯೇ ದ್ವಾರಪಾಲ ಶಿಲ್ಪ. ಈ ಗುಡಿಯ ಪೂರ್ವಕ್ಕೆ ಒಂದೇ ಕಲ್ಲಿನಲ್ಲಿ ಕಡೆದ ಬೃಹತ್ ಗಜಶಿಲ್ಪವಿದೆ.

ಕಡಲತೀರದ ದೇವಾಲಯ

ರಥಸಾಲಿನಲ್ಲಿ ಮೂರನೆಯದಾದ ಭೀಮರಥ ಪಶ್ಚಿಮಾಭಿಮುಖವಾಗಿರುವ ಎರಡಂತಸ್ತಿನ ದೊಡ್ಡ ಕಟ್ಟಡ. ಇದರ ಉದ್ದ 12.8ಮೀ, ಅಗಲ 7.6ಮೀ, ಎತ್ತರ 7.6ಮೀ. ಸಿಂಹಪೀಠವಿರುವ ಸ್ತಂಭಗಳಿಂದ ಕೂಡಿದ ಈ ರಥಕ್ಕೆ ಗರ್ಭಗುಡಿಯಿಲ್ಲ; ಶಿಲ್ಪಗಳೂ ಇಲ್ಲ. ಪಲ್ಲವರ ಕೆಲವು ಅಪೂರ್ಣ ನಿರ್ಮಾಣಗಳಲ್ಲಿ ಇದೂ ಒಂದು. ಮೂರಂತಸ್ತಿನ ಧರ್ಮರಾಜ ರಥ ಅತಿ ದೊಡ್ಡದು ಹಾಗೂ ಅತ್ಯುತ್ತಮವಾದದು. ಶೈಲಿಯಲ್ಲಿ ಅರ್ಜುನರಥವನ್ನು ಹೋಲುತ್ತದೆ. ಇದೊಂದು ಕಲಾಪ್ರದರ್ಶನ ಮಂದಿರ. ತರುವಾಯದ ದಕ್ಷಿಣ ಭಾರತೀಯ ದೇವಾಲಯಗಳಿಗೆ ಇದು ಮಾದರಿಯಾಯಿತೆಂದು ವಾಸ್ತುಶಿಲ್ಪತಜ್ಞರು ಭಾವಿಸುತ್ತಾರೆ. ಈ ಗುಡಿಯಲ್ಲಿಯ ಶಾಸನಗಳಿಂದ ಇದು ಶಿವನಿಗೆ ಅರ್ಪಿತವಾದುದೆಂದು ತಿಳಿದುಬರುತ್ತದೆ. ಎತ್ತರದ ಅಧಿಷ್ಠಾನದ ಮೇಲೆ ನಿಂತಿರುವ ಹಾಗೂ ಚಾಚಿದ ಮುಖಮಂಟಪದಿಂದ ಕೂಡಿರುವ ಈ ರಥದ ಕೆಳಗಣ ಅಂತಸ್ತು ಪೂರ್ಣಗೊಂಡಿಲ್ಲ : ಇಲ್ಲಿಯ ಅಂಕಣಗಳಲ್ಲಿಯ ಶಿಲ್ಪಗಳು ವಿಶೇಷವಾಗಿ ಶಿವಪ್ರಧಾನವಾದವು. ಪೂರ್ವ ಗೋಡೆಯ ಮೇಲಿನ ಅರ್ಧನಾರೀಶ್ವರ ಪುರುಷತ್ವ ಮತ್ತು ಸ್ತ್ರೀತ್ವಗಳನ್ನು ಸ್ಫುಟವಾಗಿ ತೋರುವ ಮನೋಹರ ಶಿಲ್ಪ. ಮೊದಲ ಅಂತಸ್ತಿಗೆ ಮೆಟ್ಟಿಲುಗಳಿಲ್ಲ. ಇಲ್ಲಿಯ 22 ಶಿಲ್ಪಗಳಲ್ಲಿ ಶಿವರೂಪಗಳೇ ಪ್ರಧಾನ–ಹರಿಹರ, ಭಿಕ್ಷಾಟನಮೂರ್ತಿ ಇತ್ಯಾದಿ. ಇತರ ಶಿಲ್ಪಗಳಲ್ಲಿ ಕಾಳಿಂಗಮರ್ದನ ಕೃಷ್ಣ ಹಾಗೂ ಗಂಭೀರಭಾವದ ವಿಷ್ಣು ಶಿಲ್ಪಗಳು ಎದ್ದುಕಾಣುತ್ತವೆ. ಎರಡನೆಯ ಅಂತಸ್ತಿಗೆ ಮೆಟ್ಟಿಲುಗಳಿವೆ. ಇಲ್ಲಿ ದಕ್ಷಿಣಾಮೂರ್ತಿ, ಸೋಮಸ್ಕಂದ ಇತ್ಯಾದಿ ಶಿಲ್ಪಗಳಿವೆ.

ಊರಿನ ಮಧ್ಯೆ ಗುಡ್ಡದ ಮೇಲಿರುವ ಗಣೇಶ ದೇವಾಲಯ ಭೀಮರಥವನ್ನು ಹೋಲುವ, ಎರಡಂತಸ್ತಿನ, ದೀರ್ಘಚತುರಸ್ರಾಕಾರದ ರಚನೆ, ಪೂರ್ಣವಾಗಿ ನಿರ್ಮಿಸಲಾದ ರಥ ಇದೊಂದೇ, ಇದು ಶಿವನಿಗೆ ಅರ್ಪಿತವಾದ ಆಲಯವೆಂಬುದು ಇಲ್ಲಿಯ ಶಾಸನಗಳಿಂದ ವಿದಿತವಾಗುತ್ತದೆ. ಆದರೆ ಮೂಲತಃ ಪ್ರತಿಷ್ಠಾಪಿತವಾಗಿದ್ದ ಶಿವಲಿಂಗದ ಬದಲು ಈಗ ಗಣೇಶ ಮೂರ್ತಿ ಇರುವುದರಿಂದ ಗಣೇಶ ರಥವೆಂಬ ಹೆಸರು ಬಂದಿದೆ. ಮಹಾಬಲಿಪುರದ ಹೊರಗೆ ತಿರುಕ್ಕಲುಕುನ್‌ರಮ್‌ಗೆ ಹೋಗುವ ಮಾರ್ಗಮಧ್ಯೆ ಎರಡು ಪಿಡಾರಿ ರಥಗಳಿವೆ. ಇವುಗಳ ದಕ್ಷಿಣಕ್ಕೆ ವಳ್ಳೈಯನ್ ಕುಟ್ಟೈ ರಥ ಹಾಗೂ ಅದರ ಎದುರು ಮಹಿಷಾಸುರಮರ್ದಿನಿ ಮಂಟಪಗಳನ್ನು ನೋಡಬಹುದು.

ಕೃಷ್ಣಮಂಟಪದಲ್ಲಿ ಕೃಷ್ಣನ ಬಾಲ್ಯಜೀವನದ ಘಟನೆಗಳನ್ನು ಶಿಲ್ಪಿಸಲಾಗಿದೆ. ಗೋವರ್ಧನ ಗಿರಿಧಾರಿ ಒಂದು ಸೊಗಸಾದ ಶಿಲ್ಪ. ಗೋಪಾಲಕ ಹಾಲು ಕರೆಯುವಾಗ ತನ್ನ ಕರುವನ್ನು ಮಮತೆಯಿಂದ ನೆಕ್ಕುತ್ತಿರುವ ಹಸು, ಮಗುವನ್ನು ಹೆಗಲಮೇಲೆ ಕೂರಿಸಿಕೊಂಡು ಸಾಗುತ್ತಿರುವ ರೈತ, ಮೊಸರು ಗಡಿಗೆಯೊಡನೆ ನಡೆಯುತ್ತಿರುವ ಮಹಿಳೆ, ಗಂಭೀರವಾಗಿ ಮುನ್ನಡೆಯುತ್ತಿರುವ ಗೂಳಿ, ಗೋಪಾಲಕನೊಬ್ಬನ ವೇಣುಗಾನವನ್ನು ಮೈಮರೆತು ಕೇಳುತ್ತಿರುವ ಗೋಸಮುದಾಯ, ತಾಯಿ ಮತ್ತು ಮಗು ಮುಂತಾದ ಗ್ರಾಮೀಣ ಸೊಬಗಿನ ದೃಶ್ಯಗಳು ಮನಸೆಳೆಯುತ್ತವೆ.

ಅರ್ಜುನ ತಪಸ್ಸು ಎಂದು ಕರೆಯಲಾಗುವ ಶಿಲ್ಪವೈಭವ ನೋಡಲೇಬೇಕಾದ ತಾಣಗಳಲ್ಲೊಂದು. ಹೆಬ್ಬಂಡೆಯೊಂದು ಮೂಲೋಕದ ಚಿತ್ರಣಕ್ಕೆ ಯುಕ್ತ ವೇದಿಕೆಯಾಗಿದೆ. ಬಂಡೆಯಲ್ಲಿಯ ಒಂದು ಸೀಳು ಅದನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಎರಡೂ ಪಾರ್ಶ್ವಗಳಲ್ಲಿ ಕಡೆದ ಶಿಲ್ಪಗಳು ಘಟಿಸಿದ ಅಥವಾ ಘಟಿಸಲಿರುವ ಪವಾಡವೊಂದನ್ನು ಕಾಣಲೆಂಬಂತೆ ಆ ಸೀಳಿನ ಕಡೆ ಧಾವಿಸುತ್ತಿರುವಂತೆ ಚಿತ್ರಿತವಾಗಿವೆ. ಪ್ರತಿಯೊಂದು ಶಿಲ್ಪವೂ ತಕ್ಕ ಸ್ಥಾನದಲ್ಲಿದೆ. ಶಿಲ್ಪಗಳ ಮುಖಭಾವ ವೈವಿಧ್ಯಮಯವಾಗಿದೆ. ಸೂರ್ಯಚಂದ್ರರು, ಯಕ್ಷ ಗಂಧರ್ವರು, ಸಿದ್ಧಚಾರಣರು, ವಿದ್ಯಾಧರರು, ಕಿನ್ನರ ಕಿಂಪುರುಷರು, ದೇವತಾ ಪರಿವಾರದ ಕಲಾಕಾರರು, ಅರೆಮಾನವ, ಅರೆಪಕ್ಷಿಶರೀರದ ಶಿಲ್ಪಗಳು ಮುಂತಾದವನ್ನು ಇಲ್ಲಿ ಬಿಡಿಸಿದೆ. ದಕ್ಷಿಣ ಪಾರ್ಶ್ವದಲ್ಲಿ ಅರಣ್ಯಜೀವನದ ಚಿತ್ರಣವಿದೆ. ನಾನಾ ಬಗೆಯ ಮರಗಳು, ಕಾಡು ಮೃಗಗಳು, ಕಾಡುಜನರು ಇತ್ಯಾದಿಗಳ ಚಿತ್ರಣ ಜೀವಂತವೆನಿಸುವಷ್ಟು ಚೇತೋಹಾರಿಯಾಗಿದೆ. ಹಕ್ಕಿಯೊಂದು ಮರದ ಮೇಲೆ ಕುಳಿತಿದೆ; ಉಡವೊಂದು ಮರವೇರುತ್ತಿದೆ; ಕೋತಿಯೊಂದು ನೋಡುಗರತ್ತ ನೋಡುತ್ತಿದೆ; ಧನುರ್ಧಾರಿ ಬೇಡರು ಅಂದಿನ ಬೇಟೆಯೊಡನೆ ಸಾಗುತ್ತಿದ್ದಾರೆ. ಮೊಲ, ಜಿಂಕೆ, ಹುಲಿ, ಆನೆ ಮುಂತಾದ ಪ್ರಾಣಿಗಳಿವೆ. ಬಂಡೆಯಲ್ಲಿಯ ಸೀಳಿನ ಬಳಿ ಇರುವ, ಒಂಟಿಕಾಲಲ್ಲಿ ನಿಂತು ಕಣ್ಮುಚ್ಚಿ ತಲೆಯ ಮೇಲೆ ಕೈಜೋಡಿಸಿರುವ ತಪಸ್ವಿಯ ಶಿಲ್ಪ ಸುಂದರವಾಗಿದೆ. ಆತನ ಮುಖದಲ್ಲಿ ನಿಮಗ್ನತೆ ಹಾಗೂ ಪೂರ್ಣ ಶರಣಾಗತಿಯ ಭಾವ ಬಿಂಬಿತವಾಗಿದೆ. ಇದರ ಪಕ್ಕದಲ್ಲಿ ಶಿವಶಿಲ್ಪವಿದೆ. ಸ್ವಲ್ಪ ಕೆಳಭಾಗದಲ್ಲಿ ಬಿಡಿಸಿದ ಗೂಡಿನಲ್ಲಿ ವಿಷ್ಣುಶಿಲ್ಪವಿದೆ. ಇಲ್ಲಿ ನದೀ ತೀರದ ಜೀವನದ ಪರಿಚಿತ ದೃಶ್ಯಗಳನ್ನು ಚಿತ್ರಿಸಲಾಗಿದೆ. ಪೌರಾಣಿಕ ನಾಯಕನೊಬ್ಬನ ತಪಸ್ಸನ್ನು ಚಿತ್ರಿಸುವ ಈ ಬಂಡೆಯ ಮೇಲಿನ ಉಬ್ಬುಗೆತ್ತನೆ ಒಂದು ಪುಟ್ಟ ವಿಶ್ವವನ್ನೇ ನಮ್ಮೆದುರು ನಿಲ್ಲಿಸುತ್ತದೆ. ಸೃಷ್ಟಿಯ ಎಲ್ಲ ತೆರನ ಚರಾಚರ ಜೀವಿಗಳು ಇಲ್ಲಿ ಪ್ರತಿನಿಧಿತವಾಗಿವೆ. ಅಂತರಿಕ್ಷದ ಜೀವಿಗಳಿಗೆ ಮಾನವ ಆಕಾರವನ್ನೆ ಮಾದರಿಯನ್ನಾಗಿ ಇರಿಸಿಕೊಳ್ಳಲಾಗಿದೆ. ಆದರೆ ಅವು ಅಭೌತಿಕ ಸಾಮಗ್ರಿಯಿಂದ ನಿರ್ಮಿತವಾದವೇನೋ ಎಂಬ ಭಾವ ನೋಡುಗರಲ್ಲಿ ಉಂಟಾಗುವಂತೆ ಮಾಡುವಲ್ಲಿ ಪಲ್ಲವ ಶಿಲ್ಪಿಗಳು ಯಶಸ್ವಿಯಾಗಿದ್ದಾರೆ. ಮುಖ ಭಾವದಲ್ಲಿ ದೈವಿಕ ಆನಂದ, ದೇವರೇಖೆ ಮತ್ತು ಬಾಹುಗಳಲ್ಲಿ ಕಮನೀಯತೆ ಎದ್ದು ಕಾಣುತ್ತದೆ. ಪ್ರಾಣಿಪಕ್ಷಿಗಳ ಭಾವಭಂಗಿಗಳು ನೈಜವಾಗಿವೆ. ವಿಶೇಷವಾಗಿ ಚಿತ್ರಿತವಾಗಿರಬಹುದು ಮುನ್ನಡೆಯುತ್ತಿರುವ ಗಜಸಮೂಹ. ಮರಿಗಳನ್ನು ವಾತ್ಸಲ್ಯದಿಂದ ನೆಕ್ಕುತ್ತಿರುವ ಹುಲಿ, ನಾನಾಭಂಗಿಯ ಸಿಂಹಗಳು, ಕಾಲಿನಿಂದ ಮೂಗುಜ್ಜಿ ಕೊಳ್ಳುತ್ತಿರುವ ಜಿಂಕೆ ಮುಂತಾದವು ವಾಸ್ತವಿಕವಾಗಿ ಶಿಲ್ಪಿತವಾಗಿವೆ. ತಪಸ್ವಿಯನ್ನು ಅನುಕರಿಸುತ್ತಿರುವ ಮಾರ್ಜಾಲ ಶಿಲ್ಪ ಕುತೂಹಲಕಾರಿಯಾಗಿದೆ. ಒಟ್ಟಂದದಲ್ಲಿ ಭಾರತೀಯ ಕಲೆಯ ವೈಭವದ ದೃಶ್ಯಗಳಲ್ಲಿ ಇದೂ ಒಂದೆಂದು ಪರಿಗಣಿಸಲ್ಪಟ್ಟಿದೆ. ಆದರೆ ಈ ಮಹತ್ತ್ವದ ಘಟನೆಗೆ ಕಾರಣನಾದ ಪುರಾಣ ಪುರುಷ ಯಾರೆಂಬ ವಿಷಯದಲ್ಲಿ ವಿದ್ವಾಂಸರಲ್ಲಿ ಅಭಿಪ್ರಾಯಭೇದಗಳಿವೆ. ಈ ತಪಸ್ವಿ ಗಂಗಾವತರಣಕ್ಕೆ ಕಾರಣನಾದ ಭಗೀರಥನೆಂದು ಕೆಲವರೂ ಶಿವನಿಂದ ಪಾಶುಪತಾಸ್ತ್ರ ಪಡೆಯಲು ತಪಾಸ್ಸನ್ನಾಚರಿಸಿದ ಅರ್ಜುನನೆಂದು ಮತ್ತೆ ಕೆಲವರು ಆಭಿಪ್ರಾಯಪಟ್ಟಿದ್ದಾರೆ.

ವರಾಹ ಗವಿ, ಬಂಡೆಯಲ್ಲಿ ಕಡೆದ ಪುಟ್ಟ ಮಂಟಪ. ಪೂರ್ಣಗೊಂಡಿರುವ ಈ ರಚನೆ ಪಲ್ಲವರ ಅತ್ಯುತ್ತಮ ನಿರ್ಮಾಣಗಳಲ್ಲೊಂದೆನಿಸಿದೆ. ದ್ವಾರಪಾಲಕ ಉಬ್ಬುಶಿಲ್ಪಗಳಿಂದ ಕೂಡಿದ ಈ ಗವಿಯ ಮುಂದೆ ಸೋಪಾನಸಹಿತವಾದ ಕೊಳವಿದೆ ಉತ್ತರ ಗೋಡೆಯ ಮೇಲಿನ ವರಾಹ, ದಕ್ಷಿಣಗೋಡೆಯ ಬಲಿ ವಾಮನ ಪ್ರಸಂಗ, ಪೂರ್ವಗೋಡೆಯ ಕಮಲಾಸೀನ ಲಕ್ಷ್ಮಿ ಹಾಗೂ ದುರ್ಗಾ ಇಲ್ಲಿಯ ಮನೋಜ್ಞ ಶಿಲ್ಪಗಳು.

ಪಾಂಡವ ರಥಗಳು

ಮಹಿಷಾಸುರಮರ್ದಿನಿ ಗುಹೆ ಮೂರು ಪುಟ್ಟ ಗುಡಿಗಳಿಂದ ಕೂಡಿದ ಮಂಟಪ. ಮಧ್ಯದಗುಡಿಯ ಹಿಂದಣ ಗೋಡೆಯಲ್ಲಿ ಸೋಮಸ್ಕಂದ, ದಕ್ಷಿಣ ಗೋಡೆಯ ಮೇಲೆ ಯೋಗಭಂಗಿಯಲ್ಲಿರುವ ವಿಷ್ಣು, ಉತ್ತರಗೋಡೆಯ ಮೇಲೆ ದಾನವರೊಡನೆ ಹೋರಾಡುತ್ತಿರುವ ದುರ್ಗೆಯ ಉಬ್ಬುಶಿಲ್ಪಗಳಿವೆ. ದಕ್ಷಿಣ ಗೋಡೆಯ ಮೇಲಿನ ಮಧುಕೈಟಭ ಸಂಹಾರಿಣಿ ದೇವಿಯ ಶಿಲ್ಪ, ಅನಂತಶಾಯಿ ವಿಷ್ಣು, ಪಳಯನಮಾಡುತ್ತಿರುವ ಯೋಗಮಾಯೆ ಶಿಲ್ಪಗಳು ಸೊಗಸಾಗಿವೆ. ದಾನವದಮನಕ್ಕೆ ಮತ್ತು ಸ್ವಾಮಿ ಸೇವೆಗೆ ಸನ್ನದ್ಧವಾಗಿರುವಂತೆ ವಿಷ್ಣುವಿನ ಚಕ್ರ ಮಾನವರೂಪದಲ್ಲಿ ಪ್ರತಿನಿಧಿತವಾಗಿರುವುದು ಗಮನಾರ್ಹ. ದೈತ್ಯ ಉಪಟಳವನ್ನು ಕೊನೆಗಾಣಿಸಲು ಬರುತ್ತಿರುವ ದುರ್ಗೆಯ ಶಿಲ್ಪ ಉತ್ತರ ಗೋಡೆಯ ಮೇಲಿದೆ. ಇಲ್ಲಿಯ ರಣರಂಗ ದೃಶ್ಯ ಬೆರಗುಗೊಳಿಸುವಂಥದು, ಈ ಶಿಲ್ಪ ಕಲಾವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿದೆ.

ಪಲ್ಲವ ಶಿಲ್ಪಿಗಳು ಕಟ್ಟಡಗಳನ್ನೂ ಕಟ್ಟಿದರೆಂಬುದಕ್ಕೆ ಉತ್ತಮ ನಿದರ್ಶನವಾಗಿ ಇಲ್ಲಿಯ ಕಡಲತೀರದ ದೇವಾಲಯ ನಿಂತಿದೆ. ಕಾಲದ ಪರಿಣಾಮಕ್ಕೆ ಹಾಗೂ ಪ್ರಕೃತಿ ವಿಕೋಪಕ್ಕೆ ತುತ್ತಾಗಿಯೂ ಈ ದೇವಾಲಯ ಉಳಿದು ಬಂದಿರುವುದು ವಿಶೇಷ. ಈ ದೇವಾಲಯ

ಮೂರು ಗುಡಿಗಳ ಒಂದು ಸಮುಚ್ಚಯ. ಪೂರ್ವದಲ್ಲಿ ಸಮುದ್ರಾಭಿಮುಖವಾಗಿ ಕ್ಷತ್ರಿಯ ಸಿಂಹೇಶ್ವರ, ಪಶ್ಚಿಮದಲ್ಲಿ ರಾಜಸಿಂಹೇಶ್ವರ ಹಾಗೂ ಇವೆರಡರ ನಡುವೆ ಅನಂತಶಾಯಿ ವಿಷ್ಣು ಗುಡಿಗಳಿವೆ. ಶಿವಾಲಯಗಳೆರಡರ ಗೋಪುರಗಳು ಉಳಿದಿವೆ. ವಿಷ್ಣುಗುಡಿಯ ಗೋಪುರ ನಷ್ಟವಾಗಿದೆ. ಎದ್ದುಕಾಣುವ ಗೋಪುರ ಸಹಿತವಾದ ಕ್ಷತ್ರಿಯ ಸಿಂಹೇಶ್ವರ ಗುಡಿಯ ಪ್ರವೇಶದ್ವಾರದಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಗರ್ಭಗುಡಿಯ ಎಡಬಲಗಳಲ್ಲಿ ಪತ್ನಿಸಮೇತರಾದ ಬ್ರಹ್ಮವಿಷ್ಣು ಶಿಲ್ಪಗಳಿವೆ. ಗರ್ಭಗುಡಿಯ ಹಿಂದಣ ಗೋಡೆಯ ಮೇಲೆ ಸೋಮಸ್ಕಂದ, ಉತ್ತರದ ಕಡೆ ಶಿವ ದುರ್ಗಾ, ನರಸಿಂಹ ಶಿಲ್ಪಗಳಿವೆ. ಗರ್ಭಗುಡಿಯಲ್ಲಿಯ ಶಿವಲಿಂಗ ಭಿನ್ನವಾಗಿದೆ. ವಿಷ್ಣುಗುಡಿ ಆಯಾಕಾರದ್ದಾಗಿದ್ದು ಸುಂದರ ವಿಷ್ಣುಮೂರ್ತಿಯಿಂದ ಕೂಡಿದೆ. ಕೃಷ್ಣನ ಜೀವನಕ್ಕೆ ಸಂಬಂಧಿಸಿದ ಎರಡು ಪ್ರಸಂಗಳನ್ನು ಉತ್ತರದ ಗೋಡೆಯ ಮೇಲೆ ಶಿಲ್ಪಿಸಿದೆ. ರಾಜಸಿಂಹೇಶ್ವರ ಗುಡಿಯ ಮುಂದೆ ಗೋಪುರವಿರುವ ಮಂಟಪಗಳಿವೆ. ಇವೆಲ್ಲವನ್ನು ಬಳಸಿ ಪ್ರಾಕಾರವಿದೆ. ಹೀಗಿರುವುದರಿಂದ ಒಂದು ಕಾಲದಲ್ಲಿ ಈ ದೇವಾಲಯದ ಸೌಂದರ್ಯ ಇನ್ನಷ್ಟು ಹೆಚ್ಚಿತ್ತೆಂದು ತಿಳಿಯಬಹುದು. ಇಲ್ಲಿರುವ ಶಾಸನಗಳಿಂದ ಈ ದೇವಾಲಯವನ್ನು ಪಲ್ಲವರಸ ಎರಡನೆಯ ನರಸಿಂಹವರ್ಮ ರಾಜಸಿಂಹ (691–728) ಕಟ್ಟಿಸಿದನೆಂಬುದು ವೇದ್ಯವಾಗುತ್ತದೆ. ವಿಷ್ಣುಗುಡಿಯನ್ನು ಕಟ್ಟಿಸಿದವನ ಬಗ್ಗೆ ಭಿನ್ನಾಭಿಪ್ರಾಯವಿದೆ. ಅದರೆ ಇದು ಪ್ರಾಚೀನತಮಗುಡಿ ಎಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ.

ಈ ದೇವಾಲಯದ ದಕ್ಷಿಣಕ್ಕೆ ಬಂಡೆಯಲ್ಲಿ ಕಡೆದ ಗಂಭೀರ ಸಿಂಹ ಶಿಲ್ಪವಿದೆ; ಇದರಲ್ಲಿ ಕೊರೆದ ಪುಟ್ಟ ಗೂಡಿನಲ್ಲಿ ದುರ್ಗಾಶಿಲ್ಪವಿದೆ. ದೇವಾಲಯದ ಉತ್ತರಕ್ಕೆ, ಕಡಲ ಅಲೆಗಳು ಅಪ್ಪಳಿಸುವ ಹೆಬ್ಬಂಡೆಯೊಂದರ ಪೂರ್ವಭಾಗದಲ್ಲಿ ಕೊರೆದ ಗುಹೆಯಲ್ಲಿಯ ದುರ್ಗಾಶಿಲ್ಪ ಸುಂದರವಾಗಿದೆ; ಇದೇ ಬಂಡೆಯ ಉತ್ತರ ಭಾಗದಲ್ಲಿ ಓಡುತ್ತಿರುವ ಮಹಿಷಾಸುರನ ದೊಡ್ಡ ಕೆತ್ತನೆಯನ್ನು ಕಾಣಬಹುದಾಗಿದೆ.


ಅರ್ಜುನ ರಥ

ಮಹಾಬಲಿಪುರಕ್ಕೆ ಉತ್ತರದಲ್ಲಿರುವ ತ್ರಿಮೂರ್ತಿಗುಹೆ ಉತ್ಕೃಷ್ಟ ಶಿಲ್ಪಗಳಿಂದ ಕೂಡಿದ ಸರಳ ರಚನೆ. ಈ ಗುಹೆಯಿಂದ ಪೂರ್ವಾಭಿಮುಖವಾಗಿ ಸಾಗುವ ಮಾರ್ಗದಲ್ಲಿ ಬಂಡೆಯ ಮೇಲೆ ಶಿಲ್ಪಿಸಿದ ಪುಟ್ಟ ಮೃಗಾಲಯವನ್ನು ನೋಡಬಹುದು. ಕೊಡೈಕ್ಕಲ್‌ಮಂಟಪ ಇನ್ನೊಂದು ಗಮನಾರ್ಹ ರಚನೆಯಾಗಿದ್ದು ತ್ರಿಮೂರ್ತಿ ಗುಹೆಗೆ ಪಶ್ಚಿಮದಲ್ಲಿದೆ. ಇಲ್ಲಿಯ ಸ್ತ್ರೀದ್ವಾರಪಾಲ ಮೂರ್ತಿಗಳಿಂದ ಇದೊಂದು ದುರ್ಗಾಲಯವಾಗಿತ್ತೆಂದು ಸ್ಪಷ್ಟವಡುತ್ತದೆ. ಆದರೆ ಗರ್ಭಗೃಹದಲ್ಲಿ ಈಗ ಯಾವ ವಿಗ್ರಹವೂ ಇಲ್ಲ. ಬಂಡೆಯಲ್ಲಿ ಕಡೆದ ಅರ್ಜುನ ತಪಸ್ಸು ಶಿಲ್ಪವನ್ನು ಕೃಷ್ಣಮಂಟಪದ ದಕ್ಷಿಣದಲ್ಲಿ ಕಾಣಬಹುದು. ದುರದೃಷ್ಟವಶಾತ್ ಶಿಲ್ಪಕಾರ್ಯ ಪೂರ್ಣಗೊಂಡಿಲ್ಲ. ಇದರ ದಕ್ಷಿಣದಲ್ಲಿರುವ ಆಯಾಕಾರದ ಮೂರು ಕೋಣೆಯಿಂದ ಕೂಡಿದ ಧರ್ಮರಾಜ ಮಂಟಪ ಅನೇಕ ಶಾಸನಗಳಿಂದ ಕೂಡಿದೆ. ಮಹಿಷಮರ್ದಿನಿ ಮಂಟಪದಿಂದ ಲೈಟ್‌ಹೌಸಿಗೆ ಹೋಗುವ ಕಿರುದಾರಿಯಲ್ಲಿರುವ ಮೂರು ಕೋಣೆಯ ರಾಮಾನುಜಮಂಟಪ ಗಮನಾರ್ಹ. ಇಲ್ಲಿಯ ಶಿಲ್ಪಗಳನ್ನು ಕೆತ್ತಿ ಕಿತ್ತುಹಾಕಲಾಗಿದೆ. ಮೂಲತಃ ಇದೊಂದು ಶಿವಗುಡಿಯಾಗಿತ್ತು. ಮಹಿಷಮರ್ದಿನಿ ಮಂಟಪಕ್ಕೆ ನೈರುತ್ಯದಲ್ಲಿರುವ ಆದಿವರಾಹದೇವಾಲಯ ಐತಿಹಾಸಿಕವಾಗಿಯೂ ಕಲಾತ್ಮಕ ದೃಷ್ಟಿಯಿಂದಲೂ ಗಮನಾರ್ಹವಾದುದು. ವಿಷ್ಣುವಿನ ವರಾಹಾವತಾರ ಈ ಗುಡಿಯ ಪ್ರಧಾನ ಶಿಲ್ಪ. ಇದು ತುಂಬ ವಿಶಿಷ್ಟ ಲಕ್ಷಣಗಳಿಂದ ಕೂಡಿದೆ. ಮಹಾಬಲಿಪುರದ ದೇವಾಲಯಗಳಲ್ಲೆಲ್ಲ ಸಾಂಪ್ರದಾಯಿಕ ಪೂಜೆ ನಡೆಯುತ್ತಿರುವುದು ಇಲ್ಲಿ ಮಾತ್ರವೇ. ಇಲ್ಲಿಯ ಶಾಸನದಲ್ಲಿ ಬುದ್ಧನನ್ನು ವಿಷ್ಣುವಿನ 9ನೆಯ ಅವತಾರವಾಗಿ ಉಲ್ಲೇಖಿಸಿದೆ. ದೇವದೇವತೆಗಳು ಹಾಗೂ ಪಲ್ಲವರಸ ಅರಸಿಯರ ಶಿಲ್ಪಗಳು ಸೊಗಸಾಗಿವೆ. ಪಶ್ಚಿಮಾಭಿಮುಖವಾಗಿರುವ ಇನ್ನೊಂದು ಮಂಟಪ ಪಲ್ಲವರ ಇತರ ರಚನೆಗಳಿಂದ ಭಿನ್ನವೇನಲ್ಲ. ಜಟಾಧಾರಿ ಗಂಗಾಧರ, ಪತ್ನಿಸಹಿತನಾದ ಪಲ್ಲವ ದೊರೆ ಸಿಂಹ ವಿಷ್ಣು, ಮಹೇಂದ್ರವರ್ಮ ಮುಂತಾದ ಶಿಲ್ಪಗಳು ಗಮನಾರ್ಹ.

ಮಹಾಬಲಿಪುರ ಮಧ್ಯೆ ಸ್ಥಳಶಯನಪೆರುಮಾಳ್ ದೇವಾಲಯವಿದೆ. ಊರಿಗೆ ಪಶ್ಚಿಮಕ್ಕಿರುವ ಕೋನೇರಿ ಎಂಬ ಕೊಳವೆ ಎದುರಿನ ಪುಟ್ಟಗುಡ್ಡದಲ್ಲಿ ಬಂಡೆಯಲ್ಲಿ ಕಡೆದ ರಚನೆಗಳಿವೆ. ಅಪೂರ್ಣ ಮಂಟಪಗಳೂ ಇಲ್ಲಿವೆ. ಪಂಚಪಾಂಡವ ಮಂಟಪ ಇವುಗಳಲ್ಲಿ ದೊಡ್ಡದು. ಮಹಾಬಲಿಪುರಕ್ಕೆ ಸು.5 ಕಿಮೀ ದೂರದಲ್ಲಿರುವ ವ್ಯಾಘ್ರಗವಿ ಇನ್ನೊಂದು ಪ್ರೇಕ್ಷಣೀಯ ಸ್ಥಳ. ಮಹಾಬಲಿಪುರದ ಶಿಲ್ಪಜಗತ್ತು ಒಬ್ಬ ಅರಸನ ಸೃಷ್ಟಿಯೆ ಅಥವಾ ಹಲವು ಅರಸರದೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಇಲ್ಲಿಯ ವಾಸ್ತುರಚನೆಗಳ ಶೈಲಿಯ ಆಧಾರದ ಮೇಲೆ ಇಲ್ಲಿ ಮಹೇಂದ್ರವರ್ಮ (600–30), ಒಂದನೆಯ ನರಸಿಂಹವರ್ಮ (630–68),ಇಮ್ಮಡಿ ನಾರಸಿಂಹ ರಾಜಸಿಂಹ (700–28) ಇವರ ಆಳಿಕೆಯ ಕಾಲದಲ್ಲಿ ನಿರ್ಮಾಣ ಕಾರ್ಯ ನಡೆಯಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಲ್ಲಿಯ ರಚನೆಗಳನ್ನು ಮಹೇಂದ್ರಶೈಲಿಯವು, ಮಾಮಲ್ಲಶೈಲಿಯವು ಹಾಗೂ ರಾಜಸಿಂಹಶೈಲಿಯವೆಂದು ವರ್ಗೀಕರಿಸಿದ್ದಾರೆ. ಆದರೆ ತರುವಾಯ ಅನ್ವೇಷಿಸಿದ ಶಾಸನಗಳ ಅಧ್ಯಯನದಿಂದ ಇನ್ನೊಂದು ಅಭಿಪ್ರಾಯ ರೂಪುಗೊಂಡಿದೆ. ಯುದ್ಧ ಆಕ್ರಮಣಗಳ ಭೀತಿ ಇಲ್ಲದೆ ಕಾಲು ಶತಮಾನ ಸುಗಮವಾಗಿ ಸಾಮ್ರಾಜ್ಯವಾಳಿದ ಪಲ್ಲವರಸ ರಾಜಸಿಂಹನ ಕಾಲದಲ್ಲಿ ಇಲ್ಲಿಯ ಎಲ್ಲ ರಚನೆಗಳು ನಿರ್ಮಿತವಾದುವೆಂದೂ ಮಹಾಬಲಿಪುರದ ಹಾಗೂ ಕಾಂಚೀಪುರ ಶಾಸನಗಳಲ್ಲಿ ಉಕ್ತನಾದ ಅತ್ಯಂತಕಾಮನೇ ಪಲ್ಲವ ರಾಜಸಿಂಹ ಎಂದೂ ಈ ವಿದ್ವಾಂಸರೂ ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಆದಿವರಾಹ ಗವಿಯ ಉಬ್ಬುಗೆತ್ತನೆಯಲ್ಲಿ ಪ್ರತಿನಿಧಿತನಾಗಿರುವ ಅರಸರ ಮಹೇಂದ್ರವರ್ಮನೆಂದು ಕೆಲವರೂ ರಾಜಸಿಂಹನೆಂದು ಮತ್ತೆ ಕೆಲವರೂ ಅಭಿಪ್ರಾಯಪಟ್ಟಿದ್ದಾರೆ. ಮಹಾಬಲಿಪುರ ಗೋಡಂಬಿ ಮರಗಳ ಗುಂಪಿನಿಂದ ಆವೃತವಾಗಿ ಸುಂದರ ಕಡಲತೀರವನ್ನುಳ್ಳ ಆಕರ್ಷಕ ಪ್ರವಾಸಿ ಕೇಂದ್ರವಾಗಿದೆ. (ಎಚ್.ಎಂ.ಎನ್.ಆರ್.)

**ಮಹಾಯುದ್ಧಗಳು:** 20ನೆಯ ಶತಮಾನದಲ್ಲಿ ಮನುಕುಲವನ್ನು ತಲ್ಲಣಗೊಳಿಸಿದ ಎರಡು ಭೀಕರ ಪ್ರಪಂಚ ಯುದ್ಧಗಳು.

**ಒಂದನೆಯ ಮಹಾಯುದ್ಧ 1914–1918:** 1914 ಜುಲೈ 28–1918 ನವೆಂಬರ್ 11ರವರೆಗೆ ನಡೆದ ಮಹಾಯುದ್ಧ. ಈ ಯುದ್ಧದಲ್ಲಿ ಜರ್ಮನಿ ಮತ್ತು ಆಸ್ಟ್ರಿಯ – ಹಂಗರಿಗಳು ಒಂದು ಕಡೆಯೂ ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್‌ಗಳೂ (ಮಿತ್ರ ಪಕ್ಷ) ಇನ್ನೊಂದು ಕಡೆಯೂ ಪ್ರಧಾನವಾಗಿ ಕಾದಾಡಿದವು. 1917–18ರಲ್ಲಿ ಮಿತ್ರಪಕ್ಷದೊಂದಿಗೆ ಅಮೆರಿಕ ಸೇರಿಕೊಂಡಿತು.

**ಕಾರಣಗಳು:** ಆಸ್ಟ್ರಿಯ–ಹಂಗರಿಗೂ ಸರ್ಬಿಯಕ್ಕೂ ನಡುವಣ ವಿರಸದಿಂದಾಗಿ ಆರಂಭವಾದ ಈ ಯುದ್ಧಕ್ಕೆ ದೀರ್ಘಕಾಲೀನ ಕಾರಣಗಳಲ್ಲಿ ಬಹಳ ಮುಖ್ಯವಾದದ್ದೆಂದರೆ 1870ರ ಅನಂತರ ಯುರೋಪಿನಲ್ಲಿ ಬಲಿಷ್ಠ ರಾಷ್ಟ್ರಗಳ ಮದೋನ್ಮತ್ತತೆ ಮತ್ತು ಆಕ್ರಮಣ ಮನೋಭಾವ. ಜರ್ಮನ್ ಸಾಮ್ರಾಜ್ಯದ ನಿರ್ಮಾಣವಾದಾಗಲೇ ಒಂದನೆಯ ಮಹಾಯುದ್ಧಕ್ಕೆ ನಾಂದಿಯಾಯಿತೆನ್ನಬಹುದು (1871). ಉತ್ತರ ಮಧ್ಯ ಯುರೋಪಿನಲ್ಲಿ ಈ ಮಹಾಶಕ್ತಿಯ ನಿರ್ಮಾಣವಾದೊಡನೆಯೇ ಇದರ ನೆರೆಹೊರೆಯ ರಾಷ್ಟ್ರಗಳಾದ ಫ್ರಾನ್ಸ್, ರಷ್ಯ, ಆಸ್ಟ್ರಿಯ–ಹಂಗರಿಗಳ ಗಡಿರೇಖೆಗಳುದ್ದಕ್ಕೂ ಬಿಸಿ ತಟ್ಟಿತು.

ಜರ್ಮನಿಯ ಛಾನ್ಸಲರ್ ಆದ ರಾಜಕುಮಾರ ಆಟೋಫಾನ್ ಬಿಸ್ಮಾರ್ಕ್ ಮಹಾಪ್ರತಿಭಾವಂತ (**ನೋಡಿ–ಬಿಸ್ಮಾರ್ಕ್, ಆಟೋಫಾನ್**) (1871). ಆತನಿಗೆ ನೆರೆರಾಷ್ಟ್ರಗಳೊಂದಿಗೆ ಯುದ್ಧಮಾಡುವ ಇಚ್ಛೆಯಿರಲಿಲ್ಲ. ರಷ್ಯ, ಆಸ್ಟ್ರಿಯ, ಬ್ರಿಟನ್ ಮತ್ತು ಇಟಲಿಗಳು ಜರ್ಮನಿ ವಿರುದ್ಧ ಒಂದಾಗದಂತೆ ಮಾಡುವ ಉದ್ದೇಶದಿಂದ ಅವುಗಳ ಸ್ನೇಹ ಬಯಸಿದ. ಫ್ರಾನ್ಸಿಗೆ ಸೇರಿದ್ದ ಆಲ್ಸೇಸ್ ಮತ್ತು ಪೂರ್ವ ಲೊರೆನ್ ಪ್ರದೇಶಗಳನ್ನು ಜರ್ಮನಿ ವಶಪಡಿಸಿಕೊಂಡಿದ್ದರಿಂದ ಫ್ರಾನ್ಸಿಗೆ ಮುಖಭಂಗವಾಗಿತ್ತು (1871). ಈ ಪ್ರದೇಶಗಳಲ್ಲಿರುವ ಬಹುಮಂದಿ ಜರ್ಮನ್ ಜನಾಂಗದವರೆಂದೂ ಸ್ವರಕ್ಷಣೆ ದೃಷ್ಟಿಯಿಂದ ಇದು ಜರ್ಮನಿಗೆ ಸೇರಬೇಕೆಂದೂ ಹೇಳಲಾಯಿತು. ಫ್ರಾನ್ಸ್ ತನ್ನ ಭದ್ರತೆಗಾಗಿ ಇತರ ರಾಷ್ಟ್ರಗಳ ಸ್ನೇಹಕ್ಕಾಗಿ ಕೈಚಾಚಿತು. ಬಿಸ್ಮಾರ್ಕ್‌ನ ಅನಂತರ, ಫ್ರಾನ್ಸ್–ರಷ್ಯಗಳ ನಡುವೆ ಮೈತ್ರಿ ಏರ್ಪಟ್ಟಾಗ ಜರ್ಮನ್ ವಿರುದ್ಧ ಪಕ್ಷ ಬಲಗೊಂಡಿತೆನ್ನಬಹುದು (1894). ಬಲಿಷ್ಠ ಜರ್ಮನಿಯಿಂದ ನೆರೆಹೊರೆಯ ರಾಷ್ಟ್ರಗಳ ನೆಮ್ಮದಿ ಭಂಗವಾಗಿದ್ದೂ ನಿಜ. ಯುರೋಪಿನ ಪ್ರತಿಯೊಂದು ರಾಷ್ಟ್ರವೂ ಶಸ್ತ್ರಾಸ್ತ್ರ ಸಂಗ್ರಹಣೆಗೆ ತೊಡಗಿತು. ಇದರಿಂದ ರಾಷ್ಟ್ರಗಳ ನಡುವೆ ಭೀತಿ ಹೆಚ್ಚಲು ಕಾರಣವಾಯಿತೇ ಹೊರತು ವಿಶ್ವಾಸ ಬೆಳೆಯಲಿಲ್ಲ. ಪ್ರತಿಯೊಂದು ರಾಷ್ಟ್ರವೂ ತನ್ನ ತರುಣರನ್ನು ಜಮಾಯಿಸಿ ಅವರಿಗೆ ಖಾಕಿ ತೊಡಿಸಿ ಕವಾಯತು ಮಾಡಿಸುತ್ತಿತ್ತು. ಯುದ್ಧ ಈಗಲೋ ಆಗಲೋ ಎಂಬ ಭಾವನೆ 19ನೆಯ ಶತಮಾನದ ಅಂತ್ಯದ ವೇಳೆಗೆ ಉದ್ಭವವಾಗಿತ್ತು.

ಇದೇ ಕಾಲಕ್ಕೆ ಯುರೋಪಿನ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಅಗಾಧ ಬದಲಾವಣೆಗಳಾಗಿದ್ದವು. ಸಾರ್ವತ್ರಿಕ ವಿದ್ಯಾಭ್ಯಾಸ, ಪತ್ರಿಕಾ ಪ್ರಸಾರ ಮತ್ತು ಸಂಚಾರಸೌಲಭ್ಯ ವಿಸ್ತರಣೆಗಳಿಂದ ಜನರಲ್ಲಿ ರಾಷ್ಟ್ರಾಭಿಮಾನ ಬೆಳೆದಿತ್ತು. ಕೈಗಾರಿಕಾ ಕ್ರಾಂತಿಯ ಫಲವಾಗಿ ಸಂಪತ್ತಿನ ಹೆಚ್ಚಳವೂ ಕಾರ್ಮಿಕರ ಬಲವೂ ಹೆಚ್ಚಿದ್ದವು. ನೂತನವಾಗಿ ನಿರ್ಮಿತವಾದ ನಗರಗಳಿಂದ ಉದ್ಭವವಾದ ಸಮಸ್ಯೆಗಳೂ ಅನೇಕ. ಇವೆಲ್ಲ ಕಾರಣಗಳಿಂದಾಗಿ ಅಲ್ಲಿನ ಜನಜೀವನದಲ್ಲೂ ನೆಮ್ಮದಿ ಇರಲಿಲ್ಲ.

ಯುದ್ಧ ಪೂರ್ವದ ಐರೋಪ್ಯ ರಾಷ್ಟ್ರಗಳ ಆರ್ಥಿಕ ಸಾಮ್ರಾಜ್ಯವಾದವನ್ನು ಈ ದೃಷ್ಟಿಯಿಂದ ನೋಡುವುದು ಅವಶ್ಯ. ವಸಾಹತುಗಳಿಂದ ತಮಗೆ ಲಾಭವೆಂಬುದನ್ನರಿತ ಐರೋಪ್ಯ ರಾಷ್ಟ್ರಗಳು ಇವುಗಳ ಸಂಪಾದನೆಗಾಗಿ 1881ರಿಂದ ಮುಂದೆ ತಮ್ಮತಮ್ಮಲ್ಲೇ ಸ್ಪರ್ಧಿಸಿದುವೆಂಬುದು ನಿಜವಾದರೂ ಈ ಸ್ಪರ್ಧೆಯ ಹಿಂದೆ ಅವುಗಳ ಅಭಿಮಾನವೂ ಇತ್ತು. ಅವುಗಳಿಗೆ ಯುರೋಪಿನಲ್ಲಿ ತಮ್ಮ ಪ್ರತಿಷ್ಠೆ ಉಳಿಸಿಕೊಳ್ಳಲು ವಸಾಹತುಗಳು ಸಾಧನಗಳಾದುವು. ಯುರೋಪಿನ ರಾಷ್ಟ್ರಗಳಿಗೆ ತಮ್ಮತಮ್ಮ ವ್ಯಾಜ್ಯಗಳ ಪರಿಹಾರಕ್ಕೆ ಪಣವಾಗಿ ವಸಾಹತುಗಳು ಒದಗಿಬಂದವು. ಇವಿಲ್ಲದಿದ್ದರೆ ಐರೋಪ್ಯ ರಾಷ್ಟ್ರಗಳ ನಡುವೆಯೇ ಪರಸ್ಪರ

ಆಕ್ರಮಣ ಪ್ರಬಲವಾಗಿ 1914ಕ್ಕೂ ಮುಂಚೆಯೇ ಯುದ್ಧ ಸಂಭವಿಸಬಹುದಾಗಿತ್ತು. ಅಂತೂ ವಸಾಹತುಗಳ ಸ್ಪರ್ಧೆಯೂ ಐರೋಪ್ಯ ರಾಷ್ಟ್ರಗಳಲ್ಲಿ ಎರಡು ಬಣಗಳು ವೃದ್ಧಿಯಾಗಲು ಒಂದು ಮುಖ್ಯ ಕಾರಣ.

ಆರ್ಥಿಕ ದೃಷ್ಟಿಯಿಂದಲೂ ಪ್ರತಿಷ್ಠೆಯ ದೃಷ್ಟಿಯಿಂದಲೂ ಆಲ್ಸೇಸ್-ಲೊರೇನ್ ಪ್ರದೇಶಗಳನ್ನು ಮತ್ತೆ ಜರ್ಮನಿಯಿಂದ ಪಡೆದುಕೊಳ್ಳಲು ಫ್ರಾನ್ಸ್ ಹಾತೊರೆಯುತ್ತಿತ್ತು. ಈ ಪ್ರಾಂತಗಳಲ್ಲಿ ದೊರಕುತ್ತಿದ್ದ ಖನಿಜಗಳಿಂದ ಜರ್ಮನಿಯ ಕೈಗಾರಿಕೆಗಳ ಬೆಳವಣಿಗೆಯಾಗುವುದು ಫ್ರಾನ್ಸಿನ ಕೈಗಾರಿಕಾ ಪ್ರಭೃತಿಗಳಿಗೆ ಹಿತವಾಗಿ ಕಾಣಲಿಲ್ಲ.

ಏಡ್ರಿಯಾಟಿಕ್ ಸಮುದ್ರಕ್ಕೆ ಪೂರ್ವದಲ್ಲಿನ ಬಾಸ್ನಿಯ ಮತ್ತು ಹರ್ಸಗೋವಿನ ಪ್ರಾಂತಗಳು ಆಸ್ಟ್ರಿಯ-ಹಂಗರಿ ಮತ್ತು ಸರ್ಬಿಯಗಳ ನಡುವೆ ಪೈಪೋಟಿ ಮತ್ತು ವೈಮನಸ್ಯವನ್ನು ತಂದುವು. ಜರ್ಮನಿಯ ನೆರೆ ರಾಷ್ಟ್ರವಾಗಿದ್ದ ಆಸ್ಟ್ರಿಯ-ಹಂಗರಿ ಸಾಮ್ರಾಜ್ಯವೊಂದು ಕಲಸುಮೇಲೋಗರ. ನಾನಾ ಜಾತಿಗಳ ನಾನಾ ಪ್ರದೇಶಗಳ ಸಮೂಹ. ಅಲ್ಲಿಯ ರಾಜ ನಿರಂಕುಶನಾಗಿದ್ದ. ಆತನ ಪ್ರಜೆಗಳಲ್ಲಿ ಜರ್ಮನರಲ್ಲದೆ ಮಗ್ಯಾರರೂ ಸ್ಲಾವರೂ ಇದ್ದರು. ಸ್ಲಾವ್ ಜನಾಂಗದವರೆಲ್ಲ ಒಂದುಗೂಡಬೇಕೆಂಬ ಚಳವಳಿ ಆ ರಾಜನ ಪ್ರಭುತ್ವಕ್ಕೆ ತೊಂದರೆ ಕೊಡತಕ್ಕುದಾಗಿತ್ತು. ಈ ಚಳವಳಿಗೆ ಸರ್ಬಿಯ ರಾಜ್ಯವೇ ಕೇಂದ್ರ. ಈ ರಾಜ್ಯ ಸ್ವತಂತ್ರವಾಗಿದ್ದುದು ಆಸ್ಟ್ರಿಯದ ಪ್ರಭುವಿಗೆ ಸರಿಬೀಳಲಿಲ್ಲ. ಸರ್ಬಿಯ ರಾಜ್ಯಕ್ಕೆ ಸಮುದ್ರ ತೀರ ಬೇಕೆನಿಸಿತ್ತು; ಆದರೆ ಅದನ್ನು ಆಸ್ಟ್ರಿಯ ಬಿಟ್ಟುಕೊಟ್ಟ ಹೊರತು ಸಿಕ್ಕುವಂತಿರಲಿಲ್ಲ. ಹೀಗೆ ಆಸ್ಟ್ರಿಯ-ಸರ್ಬಿಯಗಳಿಗೆ ವೈಷಮ್ಯವಿದ್ದಾಗ ಆಸ್ಟ್ರಿಯದ ಪ್ರಭುವೇ ಮೊದಲು ಜಗಳಕ್ಕೆ ಸಿದ್ಧನಾಗಿ, ಅದಕ್ಕೆ ರಷ್ಯನರು ಸಹಾಯ ನೀಡುವುದಕ್ಕೆ ಮೊದಲೇ ಸರ್ಬಿಯನರನ್ನು ಅಡಗಿಸಲು ಮನಸ್ಸು ಮಾಡಿ ಹೊಂಚುಹಾಕುತ್ತಿದ್ದ. ಇದಲ್ಲದೆ ಬಾಸ್ನಿಯ ಮತ್ತು ಹರ್ಸಗೋವಿನ ಪ್ರಾಂತದ ಸ್ಲಾವ್ ಜನಾಂಗಕ್ಕೆ ಸೇರಿದ ಜನರೂ ಸಾಧ್ಯವಾದರೆ ಆಸ್ಟ್ರಿಯ-ಹಂಗರಿ ಸಾಮ್ರಾಜ್ಯದ ಹಿಡಿತದಿಂದ ಬಿಡಿಸಿಕೊಂಡು ಸರ್ಬಿಯದಲ್ಲಿ ನಡೆಯುತ್ತಿದ್ದ ಅಖಿಲ ಸ್ಲಾವ್ ಚಳವಳಿಗೆ ಸೇರಿಕೊಳ್ಳಬೇಕೆಂದು ಹವಣಿಸುತ್ತಿದ್ದರು. ಹೀಗೆ ಆಸ್ಟ್ರಿಯ-ಹಂಗರಿ ಸಾಮ್ರಾಜ್ಯದಲ್ಲಿದ್ದ ಉಗ್ರ ರಾಷ್ಟ್ರೀಯತಾ ಭಾವನೆಗಳು ಆ ಸಾಮ್ರಾಜ್ಯಕ್ಕೆ ಸೇರಿದ ವಿವಿಧ ಜನಾಂಗಗಳನ್ನು ಕೆಣಕಿದುವು.

ಇಟಲಿಯ ದೊರೆಯಾಗಿದ್ದ ಎರಡನೆಯ ವಿಕ್ಟರ್ ಎಮ್ಯಾನ್ಯುಯೆಲ್ ರೋಂ ನಗರ ಪ್ರವೇಶ ಮಾಡಿದಾಗ ಇಟಲಿಯ ಐಕ್ಯ ಸಂಪೂರ್ಣವಾಗಿ ಮುಗಿದಿರಲಿಲ್ಲ (1870). ಆಸ್ಟ್ರಿಯ-ಹಂಗರಿ ಸಾಮ್ರಾಜ್ಯಕ್ಕೆ ಸೇರಿದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಳ್ಳಬೇಕೆಂದು ಅದು ಹವಣಿಕೆ ನಡೆಸಿತ್ತು. ಆ ಪ್ರದೇಶಗಳಲ್ಲಿ ಇಟಾಲಿಯನರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇದಲ್ಲದೆ ಇಟಲಿ ಏಡ್ರಿಯಾಟಿಕ್ ಸಮುದ್ರದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಆಸ್ಟ್ರಿಯದೊಡನೆ ಪೈಪೋಟಿ ನಡೆಸಿತ್ತು.

ತುರ್ಕಿಯಲ್ಲಿ ಒಂದು ಪಲ್ಲಟ ನಡೆಯಿತು (1908). ಅಬ್ದುಲ್ ಹಮೀದ್ ಸುಲ್ತಾನನ ಆಳಿಕೆಯನ್ನು ತರುಣ ತುರ್ಕಿ ಪಕ್ಷದವರು ಕೊನೆಗಾಣಿಸಿ ಕ್ರಮಬದ್ಧ ಆಡಳಿತವನ್ನು ಕಟ್ಟಲು ಉದ್ಯಮಿಸಿದರು. ಇವರ ಸೈನ್ಯಕ್ಕೆ ತರಬೇತಿ ಕೊಡಲು ಮುಂದೆ ಬಂದವರು ಜರ್ಮನರು. ಅಲ್ಲಿ ಸ್ವಲ್ಪ ಕಾಲ ಅವ್ಯವಸ್ಥೆ ತೋರಿದಂತಿದ್ದಾಗ ಆಸ್ಟ್ರಿಯದ ಪ್ರಭು ಆತುರಪಟ್ಟು ಹಿಂದೆ ತನಗೆ ಸೇರಿದ್ದ ಬಾಸ್ನಿಯ-ಹರ್ಸಗೋವಿನ ಪ್ರಾಂತಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇದರಿಂದ ರಷ್ಯನ್ ಚಕ್ರವರ್ತಿಗೆ ಅಸಮಾಧಾನವಾಯಿತು. ತುರ್ಕಿಯ ಮೇಲೆ ಬಿದ್ದು ಸಿಕ್ಕಿದಷ್ಟನ್ನು ದಕ್ಕಿಸಿಕೊಳ್ಳುವುದು ಜಾಣತನವೆಂದು ಐರೋಪ್ಯರಾಷ್ಟ್ರಗಳು ಭಾವಿಸಿದುವು. ಇಟಲಿಯವರು ತುರ್ಕಿಯೊಡನೆ ಜಗಳ ತೆಗೆದು ಉತ್ತರ ಆಫ್ರಿಕದಲ್ಲಿ ಟ್ರಿಪೋಲಿ ಪ್ರದೇಶವನ್ನಾಕ್ರಮಿಸಿಕೊಂಡರು (1911). ಅದೇ ಒಳ್ಳೆಯ ಸಮಯವೆಂದು ಗ್ರೀಸಿನ ನಾಯಕ ವೆನಿಜೆಲಸ್ ಬಲ್ಗೇರಿಯ, ಸರ್ಬಿಯ ಮತ್ತು ಮಾಂಟೆ ನೀಗ್ರೊಗಳೊಂದಿಗೆ ಸೇರಿ ತುರ್ಕಿಯ ವಿರುದ್ಧವಾಗಿ ಬಾಲ್ಕನ್ ಲೀಗ್ ಎಂಬ ವ್ಯೂಹ ಕಟ್ಟಿದ. ಇದು ತುರ್ಕಿಯನ್ನು ಸೋಲಿಸಿತು (1912). ಯುರೋಪಿನಲ್ಲಿ ಸೇರಿದ್ದ ಭೂಭಾಗಗಳೆಲ್ಲವನ್ನೂ ತುರ್ಕಿ ಕಳೆದುಕೊಂಡಿತು. ಆದರೆ ವಿಜಯೀ ಬಾಲ್ಕನ್ ರಾಷ್ಟ್ರಗಳು ತಮ್ಮತಮ್ಮಲ್ಲೇ ಕಲಹವನ್ನಾರಂಭಿಸಿದುವು (1913). ಆಗ ಬ್ರಿಟನ್, ರಷ್ಯ, ಜರ್ಮನಿಗಳ ಮಂತ್ರಿಪ್ರಮುಖರು ಸಂಧಾನ ನಡೆಸಿ ಆ ಜಗಳಗಳನ್ನು ಪರಿಹರಿಸಿದರು. ಆದರೆ ಆಸ್ಟ್ರಿಯದ ಪ್ರಭು ಮಾತ್ರ ತನ್ನ ಆಸೆ ಆಕಾಂಕ್ಷೆಗಳನ್ನು ಬೆಳೆಸಿಕೊಳ್ಳುತ್ತಲೇ ಇದ್ದ.

19ನೆಯ ಶತಮಾನದ ಅಂತ್ಯದಲ್ಲಿ ಆಫ್ರಿಕ-ಏಷ್ಯಗಳಲ್ಲಿ ಸಾಮ್ರಾಜ್ಯ ಸಂಪಾದನೆಗೂ ವ್ಯಾಪಾರದ ಸವಲತ್ತುಗಳಿಗಾಗಿಯೂ ಐರೋಪ್ಯ ರಾಷ್ಟ್ರಗಳ ನಡುವೆ ತೀವ್ರ ಸ್ಪರ್ಧೆ ನಡೆದಿತ್ತು. ಇಂಗ್ಲಿಷರಿಗೂ ಫ್ರೆಂಚರಿಗೂ ನಡುವೆ ವಿರಸ ಬೆಳೆಯಿತು. ಸೂಡಾನ್ ಪ್ರದೇಶದಲ್ಲಿ ಬ್ರಿಟಿಷರು ನುಗ್ಗಿದಾಗ ಪಶ್ಚಿಮದ ಕಡೆಯಿಂದ ಫ್ರೆಂಚರು ಅಲ್ಲಿಗೆ ನುಗ್ಗಿಬಂದು ಆ ಪ್ರದೇಶ ತಮ್ಮದಾಗಬೇಕೆಂದು ಹಟ ಹಿಡಿದರು. ಆದರೆ ಆಫ್ರಿಕ-ಏಷ್ಯಗಳಲ್ಲಿ ಐರೋಪ್ಯರು ಪರಸ್ಪರವಾಗಿ ಹೊಡೆದಾಟ ನಡೆಸದೆ ಕೇವಲ ಸಂಧಾನಗಳಿಂದಲೇ ತಮ್ಮ ತಮ್ಮ ಸಾಮ್ರಾಜ್ಯ ವಿಸ್ತಾರಗಳನ್ನು ಗೊತ್ತುಮಾಡಿಕೊಂಡರು.

ಜರ್ಮನಿಯನ್ನು ಒಟ್ಟುಗೂಡಿಸಿದ ತರುವಾಯ ಬಿಸ್ಮಾರ್ಕ್ ದೂರಾಲೋಚನೆಯಿಂದ ಶಾಂತಿ ನೆಲೆಗೊಳಿಸಿ ಜರ್ಮನಿಯ ರೈಲುದಾರಿಗಳೂ ಕೈಗಾರಿಕೆಗಳೂ ಸ್ಥಳಜಲ ಸೈನ್ಯಗಳೂ ಅಭಿವೃದ್ಧಿಯಾಗಲು ಆಸ್ಪದವನ್ನು ಕಲ್ಪಿಸಿಕೊಟ್ಟ. 1884ರವರೆಗೂ ಹೊರಗಿನ ಸಾಮ್ರಾಜ್ಯಕ್ಕಾಗಿ ಜರ್ಮನರು ಉದ್ಯಮಿಸಲಿಲ್ಲ. ಆಫ್ರಿಕ-ಏಷ್ಯಗಳಲ್ಲಿ ಸಾಮ್ರಾಜ್ಯ ಪ್ರಯತ್ನವನ್ನು ಜರ್ಮನರು ಕೈಗೊಂಡದ್ದು ಸಾವಕಾಶವಾಯಿತು. ಆ ವೇಳೆಗೆ ಆಫ್ರಿಕದ ಉತ್ತಮ ಭಾಗಗಳು ಇತರರ ಪಾಲಾಗಿದ್ದುವು. ಆಫ್ರಿಕದ ವಾಯವ್ಯ ಭಾಗವೆಲ್ಲವೂ ಫ್ರೆಂಚರದಾಗಿತ್ತು. ಆದ್ದರಿಂದ ಜರ್ಮನರಿಗೆ ಫ್ರೆಂಚರಲ್ಲಿ ಅಸಮಾಧಾನ ಬೆಳೆದದ್ದು ಅನಿರೀಕ್ಷಿತವಲ್ಲ ಆ ಸಮಯದಲ್ಲಿ ಬ್ರಿಟನ್-ಜರ್ಮನಿಗಳು ಫ್ರೆಂಚರಿಗೆ ವಿರೋಧವಾಗಿ ಒಟ್ಟುಗೂಡಬಹುದಾಗಿತ್ತು. ಆದರೆ ವ್ಯಾಪಾರ ಪ್ರಪಂಚದಲ್ಲಿ ಬ್ರಿಟಿಷರಿಗೂ ಜರ್ಮನ್ನರಿಗೂ ಪೈಪೋಟಿ ಬೆಳೆಯುತ್ತಲೇ ಇತ್ತು. ಬ್ರಿಟಿಷರ ನೌಕಾಪ್ರಾಬಲ್ಯ ತಮ್ಮ ಅಭಿವೃದ್ಧಿಗೆ ಅಡ್ಡಿಯೆಂದು ಜರ್ಮನರು ಭಾವಿಸಿಕೊಂಡು ತಾವೂ ಹಡಗುಪಡೆಯನ್ನು ಬಲಪಡಿಸಿಕೊಳ್ಳುತ್ತಿದ್ದರು. 19ನೆಯ ಶತಮಾನದ ಕಡೆಕಡೆಗೆ ಬ್ರಿಟಿಷರೂ ಜರ್ಮನರೂ ಪೈಪೋಟಿಯ ಮೇಲೆ ಹಡಗುಗಳನ್ನು ನಿರ್ಮಿಸುತ್ತಿದ್ದರು. ಬ್ರಿಟಿಷರು ತಮ್ಮ ಪ್ರಧಾನ ನೌಕಾಬಲವನ್ನು ಭೂಮಧ್ಯಸಮುದ್ರದಿಂದ ಸಾಗಿಸಿ ಜರ್ಮನಿಗೆದುರಾಗಿ ಉತ್ತರ ಸಮುದ್ರದಲ್ಲಿಟ್ಟು ಕೊಂಡರು (1904).

ಜರ್ಮನ್ ಚಕ್ರವರ್ತಿ 2ನೆಯ ವಿಲಿಯಂ ಮಹತ್ವಾಕಾಂಕ್ಷಿ. ಆ ರಾಷ್ಟ್ರದಲ್ಲಿ ಸೈನ್ಯಮುಖ್ಯಸ್ಥರು ಅತ್ಯಂತ ಪ್ರಬಲರಾಗಿದ್ದರು. ಆಲ್ಸೇಸ್-ಲೊರೇನ್ ವಿಷಯದಲ್ಲಿ ಮಾತ್ರವಲ್ಲದೆ ಆಫ್ರಿಕದಲ್ಲೂ ಜರ್ಮನಿಗೆ ಫ್ರಾನ್ಸಿನ ಹಗೆತನವಿತ್ತು. ಸಾಮ್ರಾಜ್ಯ ಕಟ್ಟುವ ಆಸೆ ಹೆಚ್ಚಾಗಿಯೇ ಇತ್ತು. ಜರ್ಮನಿಯ ಕೈಸರ್ ತುರ್ಕಿಯ ಸುಲ್ತಾನನ ಸ್ನೇಹ ಕಟ್ಟಿಕೊಂಡು ಬರ್ಲಿನ್ ನಗರದಿಂದ ತುರ್ಕಿಯ ಮೂಲಕ ಬಾಗ್ದಾದಿನವರೆಗೆ ರೈಲುದಾರಿ ಹಾಕಿಸುವ ಸಂಧಾನದಲ್ಲಿ ತೊಡಗಿದ್ದ. ಜರ್ಮನ್ ವಶದಲ್ಲಿರುವ ಈ ರೈಲುದಾರಿಯಿಂದ ಅದು ಸಮುದ್ರಮಾರ್ಗಗಳನ್ನು ಬಿಟ್ಟು ಭೂಮಾರ್ಗಗಳ ಮೂಲಕವೇ ವ್ಯಾಪಾರ ನಡೆಸಬಹುದೆಂಬುದು ಕೈಸರನ ಆಲೋಚನೆ. ತುರ್ಕಿಯಲ್ಲಿ ಜರ್ಮನರ ಪ್ರವೇಶ ಬ್ರಿಟಿಷರಿಗೆ ಸರಿಬೀಳಲಿಲ್ಲ. ಹಿಂದೆ ರಷ್ಯದವರು ಪ್ರಬಲರಾಗಿ ತುರ್ಕಿಯನ್ನು ವಶಪಡಿಸಿಕೊಂಡಿದ್ದಿದ್ದರೆ ಯಾವ ಅಪಾಯ ತೋರಬಹುದಾಗಿತ್ತೋ ಅದೇ ಅಪಾಯ ಜರ್ಮನರಿಂದ ಸಂಭವಿಸುವಂತೆ ಆಯಿತು. ತುರ್ಕಿಯಲ್ಲಿ ಜರ್ಮನರು ಪ್ರಬಲರಾಗುವ ಅಂಶ ರಷ್ಯದವರಿಗೂ ಬೇಕಿರಲಿಲ್ಲ.

20ನೆಯ ಶತಮಾನದ ಆದಿಯಲ್ಲಿ ಈ ರೀತಿ ಐರೋಪ್ಯ ರಾಷ್ಟ್ರಗಳಲ್ಲಿ ಎರಡು ಭಾರಿ ವ್ಯೂಹಗಳಾಗಿದ್ದು ಪ್ರತಿ ರಾಷ್ಟ್ರದವರೂ ತಮ್ಮ ಯೋಗ್ಯತೆ ಮೀರಿ ಯುದ್ಧಕ್ಕೆ ಅಣಿಮಾಡಿ ಕೊಳ್ಳುತ್ತಿದ್ದರು. ಒಬ್ಬರ ಮೇಲೊಬ್ಬರಿಗೆ ಅತೀವ ಸಂಶಯ, ಭಯ, ಜಗಳಕ್ಕೆ ಕಾರಣ ತೋರಿದೊಡನೆ ಎಲ್ಲರೂ ಸಭೆ ಸೇರಿ ಇತ್ಯರ್ಥ ಮಾಡಿಕೊಳ್ಳುವ ಪ್ರಯತ್ನ ನಡೆದರೂ ಅದು ಫಲದಾಯಕವಾಗಿ ಮುಗಿಯುತ್ತಿರಲಿಲ್ಲ. ಬಾಲ್ಕನ್ ಕ್ಷೇತ್ರಗಳ ವಿಷಯದಲ್ಲಿ ಆಸ್ಟ್ರಿಯಕ್ಕೂ ರಷ್ಯಕ್ಕೂ ಹಗೆತನವಿತ್ತು. ಆಲ್ಸೇಸ್-ಲೊರೇನ್ ಮತ್ತು ಉತ್ತರ ಆಫ್ರಿಕಗಳ ವಿಚಾರದಲ್ಲಿ ಜರ್ಮನಿಯೂ ಫ್ರಾನ್ಸೂ ವೈರಿಗಳು, ಕೈಗಾರಿಕೆ ವ್ಯಾಪಾರಗಳಲ್ಲಿಯೂ ನೌಕಾಬಲ ರಚನೆಯಲ್ಲಿಯೂ ಜರ್ಮನಿ ಬ್ರಿಟನ್ ವಿರೋಧಿಗಳು. ಹೀಗಿರುವಲ್ಲಿ ಯಾವ ಘಟನೆಯಿಂದಲೂ ಕದನ ಉದ್ಭವಿಸುವ ಪರಿಸ್ಥಿತಿಯಿತ್ತು. 20ನೆಯ ಶತಮಾನದ ಆದಿ ಭಾಗವೆಲ್ಲ ಯುದ್ಧ ಪ್ರಾರಂಭವಾಗುವ ಮೊದಲು ಪ್ರತಿಕಕ್ಷಿಗಳು ನಡೆಸಬಹುದಾದ ದೃಷ್ಟಿ ಯುದ್ಧದಂತಿತ್ತು.

ಯುರೋಪಿನ ರಾಜ್ಯಗಳಲ್ಲಿ ವಸಾಹತುಗಳಿಗಾಗಿ ನಡೆದ ಈ ಪೈಪೋಟಿಗೆ ಆರ್ಥಿಕ ಕ್ಷೇತ್ರದಲ್ಲಾದ ಕ್ರಾಂತಿಯೂ ಒಂದು ಕಾರಣ. 19ನೆಯ ಶತಮಾನದ ಕೊನೆಯ ಮತ್ತು 20ನೆಯ ಶತಮಾನದ ಆದಿಭಾಗದ ಇತಿಹಾಸವೆಲ್ಲ ಐರೋಪ್ಯ ರಾಷ್ಟ್ರಗಳು ಮಾರುಕಟ್ಟೆಗಳಿಗಾಗಿ, ಕಚ್ಚಾಪದಾರ್ಥಗಳ ಪೂರೈಕೆಗಾಗಿ, ಹೆಚ್ಚಿನ ಬಂಡವಾಳವನ್ನು ರೂಢಿಸುವ ಸಲುವಾಗಿ, ಹೆಚ್ಚಿನ ಜನಸಂಖ್ಯೆಯನ್ನು ರವಾನಿಸುವುದಕ್ಕಾಗಿ ವಸಾಹತುಗಳನ್ನು ಕಟ್ಟುವುದರಲ್ಲಿ ನಡೆಸಿದ ಪೈಪೋಟಿಗಳಿಂದ ತುಂಬಿದೆ. ಐರೋಪ್ಯ ರಾಷ್ಟ್ರಗಳು ಆಫ್ರಿಕವನ್ನು ತಮ್ಮತಮ್ಮಲ್ಲೆ ಹಂಚಿಕೊಂಡವು. ಏಷ್ಯ ಮತ್ತು ಮಧ್ಯಪೂರ್ವದ ರಾಷ್ಟ್ರಗಳಿಗೂ ಐರೋಪ್ಯರ ವಸಾಹತು ಪೈಪೋಟಿ ಹಬ್ಬಿತು. ಇಂಥ ಹತೋಟಿಯಿಂದ ರಾಷ್ಟ್ರ-ರಾಷ್ಟ್ರಗಳಲ್ಲಿ ತಿಕ್ಕಾಟ ಹೆಚ್ಚಾಯಿತು. ಇಂಗ್ಲೆಂಡ್ ಮತ್ತು ಜರ್ಮನಿಗಳ ಮಧ್ಯೆ ವೈಮನಸ್ಯ ಬೆಳೆಯಲು ಈ ಪೈಪೋಟಿ ಒಂದು ಮುಖ್ಯ ಕಾರಣ. ಆಸ್ಟ್ರಿಯ-ಹಂಗರಿ ಮತ್ತು ರಷ್ಯಗಳ ನಡುವಣ ವಾಣಿಜ್ಯ ಪೈಪೋಟಿಯೂ ರಾಜಕೀಯ ದ್ವೇಷವಾಗಿ ಪರಿವರ್ತನೆಗೊಂಡಿತು. ಇಟಲಿ ಮತ್ತು ಆಸ್ಟ್ರಿಯಗಳ ನಡುವೆ ಇದೇ ಕಾರಣದಿಂದ ಮನಸ್ತಾಪ ಬೆಳೆಯಿತು.

1980ರ ತರುವಾಯ ಪ್ರತಿವರ್ಷವೂ ಇಂಗ್ಲೆಂಡಿನಲ್ಲಿ ಜರ್ಮನಿಯ ವಿರುದ್ಧ ಭಯ ಹೆಚ್ಚಾಯಿತು. ಜರ್ಮನಿ ಪ್ರಪಂಚದ ವಾಣಿಜ್ಯ ಮತ್ತು ವ್ಯಾಪಾರಕ್ಷೇತ್ರಗಳಲ್ಲಿ ತನ್ನನ್ನು ಹಿಂದೆ ಹಾಕಬಹುದೆಂಬ ಭಯ ಇಂಗ್ಲೆಂಡಿಗೆ ಇತ್ತು. 1900 – 1914ರ ವರೆಗಿನ ಕಾಲದಲ್ಲಿ ಬ್ರಿಟನಿನಲ್ಲಿ ಜರ್ಮನಿಯ ಬಗ್ಗೆ ಹೊರಡಿಸಿದ ಅನೇಕ ಹೇಳಿಕೆಗಳಲ್ಲಿ ಈ ಭಯ ಎದ್ದು ಕಾಣುತ್ತದೆ. ಬ್ರಿಟನಿನ ವ್ಯಾಪಾರಿವರ್ಗದವರೂ ಕೈಗಾರಿಕೋದ್ಯಮಿಗಳೂ ಜರ್ಮನಿಯ ಪ್ರಭಾವವನ್ನು ಕುಗ್ಗಿಸುವ ದಿಸೆಯಲ್ಲಿ ತಮ್ಮ ಸರ್ಕಾರ ಯಾವ ಕ್ರಮ ಕೈಗೊಂಡರೂ ಬೆಂಬಲ ನೀಡಲು ಸಿದ್ಧರಿದ್ದರು.

ಶಸ್ತ್ರಾಸ್ತ್ರಗಳ ಪೈಪೋಟಿಯೂ ಮಹಾಯುದ್ಧಕ್ಕೆ ಒಂದು ಪ್ರಬಲ ಕಾರಣವೆನ್ನಬಹುದು. ಯುರೋಪಿನ ರಾಷ್ಟ್ರಗಳಲ್ಲಿ ಏರ್ಪಟ್ಟಿದ್ದ ಪರಸ್ಪರ ವೈಷಮ್ಯ ಮತ್ತು ಸಂಶಯಗಳು ಯುದ್ಧಸನ್ನಾಹಕ್ಕೆ ಎಡೆಮಾಡಿಕೊಟ್ಟು ಶಸ್ತ್ರಾಸ್ತ್ರಗಳ ಪೈಪೋಟಿಗೆ ಕಾರಣವಾಗಿದ್ದುವು. ಇದರಿಂದ ಪ್ರತಿಯೊಂದು ರಾಷ್ಟ್ರವೂ ಸೇನಾಸಿದ್ಧತೆಯಲ್ಲಿ ಮತ್ತು ವಿನಾಶಕಾರಕ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲಿ ತೊಡಗುವಂತಾಯಿತು. 1868 – 1913ರವರೆಗೆ 45 ವರ್ಷಗಳ

ಅವಧಿಯಲ್ಲಿ ಪ್ರಪಂಚದ ರಾಷ್ಟ್ರಗಳು ಶಸ್ತ್ರಾಸ್ತ್ರಗಳಿಗಾಗಿ ಮಾಡುತ್ತಿದ್ದ ವೆಚ್ಚ 460 ಮಿಲಿಯನ್ ಡಾಲರುಗಳಿಂದ 2,531 ಡಾಲರುಗಳಿಗೆ ಏರಿತು. 20ನೆಯ ಶತಮಾನದ ಆದಿ ಭಾಗದಲ್ಲಿ ಇಡೀ ಯುರೋಪೇ ಅಪರಿಮಿತ ಸೇನೆಯ ಬೀಡಾಗಿ ಮಾರ್ಪಟ್ಟಿತೆನ್ನಬಹುದು.

ಯುದ್ಧ ಪ್ರಾರಂಭವಾದಾಗ ಜರ್ಮನರು ಕೆಲವು ತಿಂಗಳುಗಳಲ್ಲಿ ಜಯ ಲಭಿಸಬಹುದೆಂದು ನಿರೀಕ್ಷಿಸಿದರು (1914). ರಷ್ಯದ ಸೇನೆಗಳು ಒಟ್ಟುಗೂಡಿ ಓಡಾಡುವುದು ನಿಧಾನವಾದುದರಿಂದ ಜರ್ಮನರು ತಮಗೆ ಪೂರ್ವದ ಕಡೆಯಿಂದ ಆಪತ್ತು ತೋರಬಹುದೆಂದು ಚಿಂತಿಸುವ ಹಾಗಿರಲಿಲ್ಲ. ಫ್ರೆಂಚರು ರೋಷದಿಂದ ಯುದ್ಧ ನಡೆಸತಕ್ಕವರು. ಆದರೆ ಬೆಲ್ಜಿಯಂ ಮೂಲಕ ಫ್ರಾನ್ಸಿನ ವಾಯವ್ಯ ದಿಕ್ಕಿನಲ್ಲಿ ಮುತ್ತಿದರೆ ಫ್ರೆಂಚರು ಬೇಗನೆ ಸೋತಾರೆಂದು ಜರ್ಮನರು ಭಾವಿಸಲು ಕಾರಣವಿತ್ತು. ಜರ್ಮನರ ಯುದ್ಧ ಸನ್ನಾಹ ವಾಸ್ತವವಾಗಿ ಅದ್ಭುತವಾಗಿತ್ತು. ರಷ್ಯದ ಸೈನ್ಯಗಳು ಒಟ್ಟುಗೂಡುವುದರೊಳಗಾಗಿ ಫ್ರಾನ್ಸಿನಲ್ಲಿ ವೇಗದಿಂದ ಮುತ್ತಿಗೆ ನಡೆಸಿ ಫ್ರೆಂಚರನ್ನು ಸೋಲಿಸಿ ತರುವಾಯ ರಷ್ಯವನ್ನು ಸೋಲಿಸುವ ಕ್ರಮವನ್ನು ಅವರು ಇಟ್ಟುಕೊಂಡರು. ಬ್ರಿಟಿಷರಿಗೆ ಐರ್ಲೆಂಡಿನಲ್ಲಿ ಅಂತರ್ಯುದ್ಧವೊದಗುವಂತಿದ್ದುದರಿಂದಲೂ ನೌಕಾಬಲವೇ ವಿಶೇಷವಾಗಿದ್ದುದರಿಂದಲೂ ಜರ್ಮನರಿಗೆ ಈ ಕಾರ್ಯಕ್ರಮವು ಬೇಗನೆ ಮುಗಿದೀತೆಂದು ತೋರಿತು.

ಜರ್ಮನ್ ಸೈನ್ಯಗಳು ಬೆಲ್ಜಿಯಂಗೆ ನುಗ್ಗಿ ಅಲ್ಲಿಂದ ಹೊರಟು ಲಿಯೇಜ್ ಮುಂತಾದ ಪಟ್ಟಣಗಳನ್ನು ಒಂದೊಂದಾಗಿ ಹಿಡಿದುವು. ಬೆಲ್ಜಿಯಂ ರಾಜ್ಯವನ್ನು ದಾಟಿ ಫ್ರಾನ್ಸಿನೊಳಗೆ ಜರ್ಮನರು ಪ್ರವೇಶಿಸುವ ವೇಳೆಗೆ ಫ್ರೆಂಚರು ಅತಿಕ್ಷಿಪ್ರವಾಗಿ ಸಿದ್ಧರಾಗಿ ಅವರನ್ನೆದುರಿಸಿದರು. ಬ್ರಿಟಿಷರು ಬೇಗನೆ ಯುದ್ಧಭೂಮಿಗೆ ಸೈನ್ಯ ಕಳುಹಿಸಿದರು. ಜರ್ಮನರು ನಿರೀಕ್ಷಿಸಿದಷ್ಟು ವೇಗದಲ್ಲಿ ಜಯ ಲಭ್ಯವಾಗಲಿಲ್ಲ. ಅತ್ತ ರಷ್ಯನರೂ ಪೂರ್ವ ಪ್ರಷ್ಯವನ್ನೂ ಮುತ್ತಲು ಎರಡು ದೊಡ್ಡ ಸೈನ್ಯಗಳನ್ನು ಕಳುಹಿಸಿದರು. ಆಗ ಜರ್ಮನರು ಫ್ರಾನ್ಸಿನಲ್ಲಿದ್ದ ತಮ್ಮ ಸೈನ್ಯಗಳಲ್ಲಿ ಎರಡು ಭಾಗಗಳನ್ನು ಅಲ್ಲಿಂದೆತ್ತಿ ಪೂರ್ವಕ್ಕೆ ಕಳುಹಿಸಬೇಕಾಯಿತು. ಈ ಕಾರಣದಿಂದ ಜರ್ಮನ್ ಸೈನ್ಯಗಳು ದುರ್ಬಲಗೊಂಡಿದ್ದಾಗ್ಯೂ ಅವು ಫ್ರಾನ್ಸಿನಲ್ಲಿ ನುಗ್ಗಿ ಪ್ಯಾರಿಸ್ ಕಡೆಗೆ ಹೊರಡುತ್ತಿದ್ದುವು. ಫ್ರೆಂಚ್ ಸರ್ಕಾರ ಪ್ಯಾರಿಸ್ ಬಿಟ್ಟು ಬಾರ್ಡೋ ಪಟ್ಟಣಕ್ಕೆ ಹೊರಟಿತು. ಮಾರ್ನ್ ನದಿಯ ಬಳಿ ಫ್ರೆಂಚರೂ ಬ್ರಿಟಿಷರೂ ಸೇರಿ ಜರ್ಮನರನ್ನು ತಡೆದು ಹಿಮ್ಮೆಟ್ಟಿಸಿದರು. ಹಿನ್ನಡೆದ ಜರ್ಮನ್ ಸೇನೆ ಏನ್ ನದಿಯ ಬಳಿ ನಿಂತು ಸಮುದ್ರತೀರದವರೆಗೂ ವ್ಯಾಪಿಸಿ, ಫ್ರಾನ್ಸಿಗೆ ಉತ್ತರದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. ಬ್ರಿಟಿಷರೂ ಫ್ರೆಂಚರೂ ಜರ್ಮನರ ಎದುರಿಗೆ ನಿಂತ ಈ ಸೈನ್ಯಗಳು ದೀರ್ಘಕಾಲ ಕಳೆಯಬೇಕಾಗಿ ಬಂದಿತು.

ಪೂರ್ವದಲ್ಲಿ ಪ್ರಷ್ಯವನ್ನು ಮುತ್ತಿದ ರಷ್ಯದ ಸೈನ್ಯವನ್ನು ಜರ್ಮನ್ ದಂಡನಾಯಕರಲ್ಲಿ ಪ್ರಸಿದ್ಧರಾದ ಹಿಂಡನ್‌ಬರ್ಗ್ ಮತ್ತು ಲೂಡೆನ್‌ಡಾರ್ಫ್ ಎದುರಿಸಿದರು. ಟಾನೆನ್‌ಬರ್ಗ್ ಕದನದಲ್ಲೂ ಮಸುರಿಯನ್ ಸರೋವರಗಳ ಬಳಿಯ ಹೋರಾಟದಲ್ಲೂ ರಷ್ಯ ಸೋತಿತು. ಇತರೆಡೆಗಳಲ್ಲಿ ರಷ್ಯನರು ಹಿಮ್ಮೆಟ್ಟಬೇಕಾಯಿತು. ಜರ್ಮನರು ಮುನ್ನಡೆದು ರಷ್ಯನ್ ಸಾಮ್ರಾಜ್ಯದೊಳಕ್ಕೆ ತಮ್ಮ ಸೈನ್ಯಗಳನ್ನು ನುಗ್ಗಿಸಿದರು. ಬಾಲ್ಟಿಕ್ ತೀರದಿಂದ ಕಾರ್ಪೇಥಿಯನ್ ಶ್ರೇಣಿಯವರೆಗಿರುವ ವಿಶಾಲ ಭೂಭಾಗದಲ್ಲಿ ಜರ್ಮನ್–ರಷ್ಯನ್ ಸೈನ್ಯಗಳು ಎದುರುಬದುರಾಗಿ ಹೊಂಚುತ್ತ ಹೋರಾಡುತ್ತಿರಬೇಕಾಯಿತು.

ಯುದ್ಧದ ಮೊದಲನೆಯ ವರ್ಷದಲ್ಲೇ ತುರ್ಕಿಯ ಸುಲ್ತಾನ ಜರ್ಮನಿಯ ಕಡೆ ಸೇರಿದ. ಆಗ ಬ್ರಿಟಿಷರು ತುರ್ಕಿಯನ್ನು ಮುತ್ತುವ ಯೋಚನೆ ನಡೆಸಿದರು. ಡಾರ್ಡನೆಲ್ಸ್ ಮಾರ್ಗವನ್ನು ವಶಪಡಿಸಿಕೊಂಡು ರಷ್ಯದೊಡನೆ ಸೇರಿಕೊಳ್ಳುವ ಉದ್ದೇಶದಿಂದ ಸಣ್ಣ ಪರ್ಯಾಯದ್ವೀಪವಾದ ಗ್ಯಾಲಿಪೋಲಿಯನ್ನು ಮುತ್ತುವುದು ಅವರ ಯೋಚನೆಯಾಗಿತ್ತು. ಭೂ ಜಲಸೇನೆಗಳು ಒಟ್ಟುಗೂಡಿ ಆ ಪ್ರದೇಶವನ್ನು ಮುತ್ತಿದುವು. ಆದರೆ ಜಯ ಲಭಿಸಲಿಲ್ಲ. ಸಲೋನಿಕ್ ಒಂದು ಮಾತ್ರ ವಶವಾಯಿತು. ಅದೇ ವೇಳೆಗೆ ರಷ್ಯನರು ಪೋಲೆಂಡನ್ನು ಜರ್ಮನರಿಗೊಪ್ಪಿಸಿ ಹಿಮ್ಮೆಟ್ಟಿದರು. ಜರ್ಮನ್ ಪಕ್ಷ ಸೇರಿಕೊಂಡ ಬಲ್ಗೇರಿಯ ರಾಷ್ಟ್ರ ಸರ್ಬಿಯನರ ಮೇಲೆ ಯುದ್ಧ ಹೂಡಿತು. ಸರ್ಬಿಯನರು ಜರ್ಮನಿ, ಆಸ್ಟ್ರಿಯ ಮತ್ತು ಬಲ್ಗೇರಿಯಗಳನ್ನು ಎದುರಿಸಲಾರದೆ ಅಡಗಿಹೋದರು.

ದೂರ ಪ್ರಾಚ್ಯದಲ್ಲಿ ಜಪಾನ್ 1914ರ ಆಗಸ್ಟ್ ತಿಂಗಳಲ್ಲೇ ಬ್ರಿಟಿಷರ ಪಕ್ಷ ಸೇರಿ ಚೀನ ತೀರದಲ್ಲಿ ಜರ್ಮನರು ಆಕ್ರಮಿಸಿಕೊಂಡಿದ್ದ ರೆಯಾಟಾವನ್ನಾಕ್ರಮಿಸಿಕೊಂಡಿದ್ದರು. ಪೆಸಿಫಿಕ್ ಸಾಗರದಲ್ಲಿ ಜರ್ಮನರಿಗೆ ನೆಲೆಯೇ ಇಲ್ಲವಾಗಿತ್ತು. ಜರ್ಮನರು ದೊಡ್ಡ ಹಡಗುಪಡೆ ಕಟ್ಟಿಕೊಂಡಿದ್ದಾಗ್ಯೂ ಬ್ರಿಟಿಷರ ಬಲಕ್ಕೆ ಸಮನಾದ ಬಲ ಪಡೆದಿರಲಿಲ್ಲ. ಯುದ್ಧದ ಪ್ರಾರಂಭದಲ್ಲೇ ಯುದ್ಧ ನೌಕೆಗಳು ಜರ್ಮನ್ ಬಂದರುಗಳನ್ನು ಬಿಟ್ಟು ಹೊರಡದಂತೆ ಬ್ರಿಟಿಷ್ ನೌಕಾಬಲ ಅತಿಜಾಗ್ರತಿಯಿಂದ ದಿಗ್ಬಂಧನ ಹಾಕಿತ್ತು. ಅದು ಶತ್ರುಬಲವನ್ನು ಬಂಧನದಲ್ಲಿಡುವುದಲ್ಲದೆ ಬೇರೆ ಕಾರ್ಯಗಳನ್ನೂ ನಿರ್ವಹಿಸುತ್ತಿತ್ತು. ಬ್ರಿಟಿಷ್ ದ್ವೀಪಗಳ ಸುತ್ತಲೂ ಕೋಟೆ ಕಟ್ಟಿಕೊಂಡಂತೆ ಇದ್ದು ಸ್ವದೇಶ ರಕ್ಷಣೆಯನ್ನು ನಿರ್ವಹಿಸಿತು. ಬ್ರಿಟನ್ನಿನಿಂದ ಫ್ರಾನ್ಸಿಗೆ ಹಡಗುಗಳಲ್ಲಿ ಲಕ್ಷಾಂತರ ಸೈನಿಕರನ್ನು ಸಾಗಿಸಿಕೊಡುತ್ತಿತ್ತು. ಶತ್ರುಗಳ ವ್ಯಾಪಾರದ ಹಡಗುಗಳು ಯಾವ ಸಮುದ್ರದಲ್ಲೇ ಸಾಗುತ್ತಿರಲಿ ಅವನ್ನು ಬ್ರಿಟಿಷ್ ನೌಕಾಪಡೆ ತಡೆಯುತ್ತಿದ್ದುದರಿಂದ ಜರ್ಮನರ ಸಾಗರೋತ್ತರ ವ್ಯಾಪಾರವೇ ಸ್ಥಗಿತವಾಗಿತ್ತು. ಬ್ರಿಟನ್ನಿನ ಮಿತ್ರ ರಾಷ್ಟ್ರಗಳ ವ್ಯಾಪಾರ ಹಡಗುಗಳಿಗೆ ರಕ್ಷಣೆ ದೊರಕಿತ್ತು. ಎಲ್ಲಕ್ಕೂ ಮೇಲಾಗಿ ಸಮುದ್ರಮಾರ್ಗಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡ ಬ್ರಿಟನ್ನಿಗೆ ಅತ್ಯಾವಶ್ಯಕವಾಗಿ ಹೊರಗಿನಿಂದಲೇ ಬರಬೇಕಾಗಿದ್ದ ಆಹಾರಪದಾರ್ಥಗಳ ಸರಬರಾಜಿಗೆ ತೊಂದರೆಯಾಗಲಿಲ್ಲ.

ಸಮುದ್ರದ ಮೇಲೆ ಬ್ರಿಟಿಷರೊಂದಿಗೆ ಹೋರಾಡಲು ಜರ್ಮನಿಗಾಗಲಿಲ್ಲ. ಆದರೆ ಜರ್ಮನರು ಜಲಾಂತರ್ಗಾಮಿಗಳನ್ನು ನಿರ್ಮಿಸಿಕೊಂಡಿದ್ದುದಲ್ಲದೆ ಟಾರ್ಪಿಡೊ, ಮೈನ್ ಮುಂತಾದ ಅನೇಕ ಪ್ರಯೋಗಸಾಧನಗಳನ್ನು ಪಡೆದಿದ್ದರು. ಜರ್ಮನರು ಬ್ರಿಟಿಷರ ವ್ಯಾಪಾರವನ್ನು ನಾಶಗೊಳಿಸಬೇಕೆಂದು ಉದ್ದೇಶಿಸಿದರು (1917). ಬ್ರಿಟನಿಗೆ ಸರಕು ಹೊತ್ತು ತರುತ್ತಿದ್ದ ಹಡಗುಗಳನ್ನು ಸಮುದ್ರದಲ್ಲಿ ತಮ್ಮ ಜಲಾಂತರ್ಗಾಮಿಗಳಿಂದ ಮುಳುಗಿಸತೊಡಗಿದರು. ಬ್ರಿಟಿಷರ ಹಡಗುಗಳೆನ್ನಲ್ಲದೆ ಬ್ರಿಟನಿನೊಂದಿಗೆ ಮೈತ್ರಿಯಿಂದಿದ್ದ ದೇಶಗಳ ಹಡಗುಗಳಿಗೂ ಈ ಅಪಾಯ ತಟ್ಟಿತು. ಬ್ರಿಟನಿಗೆ ಸಾಮಾನು ತರುವ ಯಾವ ಹಡಗನ್ನಾದರೂ ಎಚ್ಚರಿಕೆ ಕೊಡದೆ ಧ್ವಂಸಗೊಳಿಸುವುದಾಗಿ ಜರ್ಮನರು ಪ್ರಕಟಿಸಿದರು. ಆ ಪ್ರಕಟಣೆಯಿಂದ ಅಮೆರಿಕದವರಿಗೆ ಮೊದಲೇ ಇದ್ದ ಅಸಮಾಧಾನ ಹೆಚ್ಚಿತು. ಲೂಸಿಟಾನಿಯ ಎಂಬ ಬ್ರಿಟಿಷ್ ಹಡಗು ಮುಳುಗಿದಾಗ ಅದರಲ್ಲಿದ್ದ ಅಮೆರಿಕನರು ಪ್ರಾಣ ಕಳೆದುಕೊಂಡಿದ್ದರು (1915). ತಮ್ಮ ಜಲಾಂತರ್ಗಾಮಿಗಳನ್ನು ಸರ್ವತ್ರ ಉಪಯೋಗಿಸುವುದಾಗಿ ಜರ್ಮನಿ ಘೋಷಿಸಿದ್ದರಿಂದ ಆಗಿನ ಅಮೆರಿಕದ ಅಧ್ಯಕ್ಷ ವಿಲ್ಸನ್ ಜರ್ಮನಿಯ ಮೇಲೆ ಯುದ್ಧ ಹೂಡಿದ. ಅಮೆರಿಕನ್ ಸೈನ್ಯ ಅಟ್ಲಾಂಟಿಕ್ ದಾಟಿಬರುವುದರೊಳಗಾಗಿ ಬ್ರಿಟನಿನಲ್ಲಿ ಜನರಿಗೆ ಆಹಾರವಿಲ್ಲದಂತೆ ಮಾಡಬಹುದೆಂದು ಜರ್ಮನಿ ಭಾವಿಸಿತು. ವಾಸ್ತವವಾಗಿ ಜರ್ಮನಿಯ ವ್ಯಾಪಾರವೂ ಬಂಧಿತವಾಗಿತ್ತು. ಜಲಾಂತರ್ಗಾಮಿಗಳ ಹಾವಳಿಯಿಂದ ಬ್ರಿಟನಿಗೂ ಕಷ್ಟಕಾಲವೊದಗಿತು. ಬ್ರಿಟನಿನಿಂದ ಹೊರಟ ಪ್ರತಿ ನಾಲ್ಕು ಹಡಗುಗಳಲ್ಲಿ ಒಂದು ಧ್ವಂಸವಾಗುತ್ತಿತ್ತು (1917). ಆಹಾರಾಭಾವದಿಂದಾಗಿ ಪಡಿತರ ವ್ಯವಸ್ಥೆ ಏರ್ಪಡಿಸಿ ಬ್ರಿಟನ್ ಕಾಲಯಾಪನೆ ಮಾಡಬೇಕಾಯಿತು. ಆದರೆ ಅಮೆರಿಕನರು ಯುದ್ಧದಲ್ಲಿ ಸೇರಿಕೊಂಡು ತಮ್ಮ ಸಮಸ್ತ ಹಡಗುಗಳನ್ನು ಮಿತ್ರರಾಷ್ಟ್ರಗಳ ಉಪಯೋಗಕ್ಕೆ ಬಿಟ್ಟುಕೊಡಲು ಸಿದ್ಧರಾದರು. ಬ್ರಿಟಿಷರೂ ಅಮೆರಿಕನರೂ ಜಲಾಂತರ್ಗಾಮಿಗಳನ್ನು ಅಡಗಿಸುವ ಉಪಾಯ ಸಾಧಿಸಿದ್ದಲ್ಲದೆ ಬೇಗ ಬೇಗ ಹೊಸ ಹಡಗುಗಳನ್ನು ಕಟ್ಟಿಕೊಂಡು ತಮ್ಮ ವ್ಯಾಪಾರ ರಕ್ಷಣೆಗೆ ಹೊಸ ಏರ್ಪಾಟು ಮಾಡಿಕೊಂಡಿದ್ದರಿಂದ ಜರ್ಮನಿಯ ಆಸೆ ಸಂಪೂರ್ಣ ಫಲಿಸಲಿಲ್ಲ.

ತಮ್ಮ ಜಲಾಂತರ್ಗಾಮಿಗಳಲ್ಲಿ ಹೆಚ್ಚಿನ ಭರವಸೆ ಇಟ್ಟಿದ್ದ ಜರ್ಮನರು ಪಶ್ಚಿಮ ರಣರಂಗದಲ್ಲಿ ಹೊಸ ಆಕ್ರಮಣ ಪ್ರಯತ್ನವನ್ನು ನಡೆಸದೆ ಹಿಂಡನ್‌ಬರ್ಗ್ ಮೇರೆಯನ್ನು ಭದ್ರಪಡಿಸಿಕೊಂಡು ಕಾಲನಿರೀಕ್ಷೆಯಲ್ಲಿದ್ದರು (1917). ಬ್ರಿಟಿಷರೂ ಫ್ರೆಂಚರೂ ಆಗ ಜರ್ಮನರು ಬಿಟ್ಟ ಪಾಳುನೆಲವನ್ನು ವಶಪಡಿಸಿಕೊಂಡಿದ್ದಲ್ಲದೆ ಆಗಾಗ್ಗೆ ಜರ್ಮನರ ಸೇನಾ ನೆಲೆಗಳನ್ನು ಮುತ್ತುವುದಕ್ಕೂ ತೊಡಗಿದರು.

1916ರ ಮೇ 31–ಜೂನ್ 1ರ ವರೆಗೆ ನಡೆದ ಜಟ್ಲೆಂಡ್ ನೌಕಾಯುದ್ಧವೇ ಒಂದನೆಯ ಮಹಾಯುದ್ಧದ ದೊಡ್ಡ ಜಲಯುದ್ಧವೆಂದು ಹೇಳಬಹುದು. ಇದರಲ್ಲಿ ಬ್ರಿಟನ್ ಮತ್ತು ಜರ್ಮನಿಗಳು ಭಾಗವಹಿಸಿದುವು. ಒಟ್ಟು ನೌಕಾಬಲಗಳ ಸಂಖ್ಯೆ, ತೂಕ ಮತ್ತು ಅಸ್ತ್ರಗಳ ಮೌಲ್ಯದಿಂದ ಇದು ಅಂದಿನವರೆಗಿನ ಇತಿಹಾಸದಲ್ಲೇ ಹೊಸ ದಾಖಲೆ ಸ್ಥಾಪಿಸಿತು. ಬ್ರಿಟಿಷರು ಈ ಕದನದಲ್ಲಿ 151 ಹಡಗುಗಳನ್ನು ತೊಡಗಿಸಿದ್ದರು. ಇದರಲ್ಲಿ 37 ವಾಣಿಜ್ಯ ಹಡಗುಗಳಿದ್ದವು. ಶತ್ರುಗಳ ಬಳಿ ಇದ್ದ ನೌಕೆಗಳ ಸಂಖ್ಯೆ 101. ಅವುಗಳಲ್ಲಿ 27 ವಾಣಿಜ್ಯ ಹಡಗುಗಳು. ಜರ್ಮನ್ ನೌಕಾಬಲಕ್ಕೆ ಶೇರ್ ನಾಯಕ. ಈ ಕದನದಲ್ಲಿ ಜರ್ಮನರ ಕಡೆ 11 ಹಡಗುಗಳು ನಷ್ಟವಾದುವು; ಮಡಿದವರ ಸಂಖ್ಯೆ 2545, ಬ್ರಿಟಿಷರು 14 ಹಡಗುಗಳನ್ನೂ 6097 ಜನರನ್ನೂ ಕಳೆದುಕೊಂಡರು. ಆದರೂ ಕೊನೆಯವರೆಗೂ ಬ್ರಿಟನ್ ಸಮುದ್ರದ ಮೇಲೆ ತನ್ನ ಹತೋಟಿ ಬಿಟ್ಟುಕೊಡಲಿಲ್ಲ. ಈ ಕದನದಲ್ಲಿ ಜಲಾಂತರ್ಗಾಮಿಗಳನ್ನು ಧಾರಾಳವಾಗಿ ಬಳಸಲಾಯಿತು. ಜರ್ಮನರು ಸೈನಿಕರೆನ್ನದೆ, ನಾಗರಿಕರೆನ್ನದೆ ನಿರ್ದಾಕ್ಷಿಣ್ಯವಾಗಿ ಶತ್ರುಹಡಗುಗಳ ಮೇಲೆ ಧಾಳಿ ನಡೆಸುತ್ತಿದ್ದರು. 1917ರವರೆಗೆ ತಟಸ್ಥ ನೀತಿಯನ್ನು ಅನುಸರಿಸುತ್ತಿದ್ದ ಅಮೆರಿಕ ಈ ಧಾಳಿಗಳಿಂದ ಕೋಪಗೊಂಡು ಯುದ್ಧದಲ್ಲಿ ಭಾಗವಹಿಸಲು ನಿರ್ಧರಿಸಿತು. ಒಟ್ಟಿನಲ್ಲಿ ನೌಕಾಬಲದಲ್ಲಿ ಬ್ರಿಟನ್ ಜರ್ಮನಿಗಿಂತ ಮುಂದಿತ್ತು. ಜರ್ಮನರ ನೌಕಾಪಡೆ ಶಸ್ತ್ರಾಸ್ತ್ರಸಜ್ಜಿತವಾಗಿ, ಒಳ್ಳೆಯ ಗುರಿ ಹೊಂದಿದ್ದರೂ ಬ್ರಿಟಿಷ್ ಪಡೆಗಳ ಮುಂದೆ ಅಂಥ ಶ್ರೇಷ್ಠ ಮಟ್ಟದ ಕಾರ್ಯಾಚರಣೆ ತೋರಿಸಲಾಗಲಿಲ್ಲ. ಒಂದನೆ ಮಹಾಯುದ್ಧದ ಸಮಯದಲ್ಲಿ ಮೊತ್ತಮೊದಲ ಬಾರಿಗೆ ವಿಮಾನಗಳನ್ನು ಬಳಸಲಾಯಿತು. ಅನೇಕ ಕಾಳಗಗಳು ನಡೆದುವು. ಜರ್ಮನರು ಮೊದಲು ಶತ್ರುಸೇನೆಗಳ ವಿರುದ್ಧ ಇಂಥ ವಿಮಾನಪಡೆಗಳನ್ನು ಬಳಸಿದರು. 1915ರ ಮೊದಲ ಭಾಗದಲ್ಲಿ ಅವರು ಬೆಲೂನುಗಳ (ಜ಼ೆಪ್‌ಲಿನ್‌ಗಳು) ಮೂಲಕ ಇಂಗ್ಲೆಂಡಿನ ತೀರಪ್ರದೇಶಗಳ ಮೇಲೆ ಬಾಂಬುಗಳನ್ನು ಸುರಿಸಲಾರಂಭಿಸಿದರು. 1916ರ ಕೊನೆಯವರೆಗೆ ಇಂಥ ಧಾಳಿಗಳು ನಡೆದುವು. ಅನಂತರ ಇವು ಕಡಿಮೆಯಾದುವು. ಏಕೆಂದರೆ ಬೆಲೂನುಗಳು ತಮ್ಮ ಬೃಹತ್ ಗಾತ್ರದಿಂದಾಗಿ ಸುಲಭವಾಗಿ ಶತ್ರುಗಳ ಬಂದೂಕುಗಳಿಗೆ ತುತ್ತಾಗುತ್ತಿದ್ದುವು. ಅನಂತರ ಕಂಡುಹಿಡಿದ ಸಿಡಿಗುಂಡುಗಳು ಇಂಥ ಬೆಲೂನುಗಳ ವಿರುದ್ಧ ಧಾಳಿ ನಡೆಸಲು ಸಹಾಯಮಾಡಿದುವು.

ಜ಼ೆಪ್‌ಲಿನ್‌ಗಳ ಉಪಯೋಗ ತಗ್ಗಿದ ಮೇಲೆ ಚಿಕ್ಕದಾದ, ಸುಲಭ ಬೆಲೆಯ, ವೇಗವಾಗಿ ಚಲಿಸಬಲ್ಲ, ಗಾಳಿಗಿಂತ ಭಾರವಾದ ವಿಮಾನಗಳು ಬಳಕೆಗೆ ಬಂದುವು. 1917ರ ಮೊದಲ ಭಾಗದಿಂದ ಇಂಥ ವಿಮಾನಗಳನ್ನು ಜರ್ಮನರು ಬಳಸಿಕೊಂಡು ಇಂಗ್ಲೆಂಡಿನ ಮೇಲೆ,

ಅದರಲ್ಲೂ ಲಂಡನ್ನಿನ ಮೇಲೆ ಧಾಳಿ ನಡೆಸಲು ಆರಂಭಿಸಿದರು. ಇವುಗಳ ರಚನೆಯ ವಿಧಾನವನ್ನು ಮಿತ್ರರಾಷ್ಟ್ರಗಳು ಕಂಡುಹಿಡಿದುಕೊಂಡ ಮೇಲೆ ಎರಡು ಪಕ್ಷಗಳ ಸೇನಾಬಲಗಳಿಗೂ ಇವು ಕಣ್ಣುಗಳೆಂದೆನಿಸಿದುವು. ಶತ್ರುಬಲದ ಮೇಲೆ ಹಾರಾಟ ನಡೆಸಿ ಸೈನ್ಯದ ಚಟುವಟಿಕೆಗಳನ್ನು ವೀಕ್ಷಿಸಲೂ ಷೆಲ್ ಧಾಳಿಯನ್ನು ಮುಂದಾಗಿ ತಿಳಿಸಲೂ ಶತ್ರುಸೈನ್ಯದ ಚಟುವಟಿಕೆಗಳ ಬಗ್ಗೆ ಚಿತ್ರ ತೆಗೆಯಲೂ ಶತ್ರುಗಳ ಮೇಲೆ ಮತ್ತು ನಗರಗಳ ಮೇಲೆ ಪ್ರಚಾರ ಚೀಟಿಗಳನ್ನು ಎರಚಲೂ ಇಂಥ ವಿಮಾನಗಳನ್ನು ಬಳಸುತ್ತಿದ್ದರು. ಮೊದಮೊದಲು ವಿಮಾನಗಳಿಗೆ ಚಿಕ್ಕ ಕೋವಿಯನ್ನೂ ಚಿಕ್ಕ ಬಂದೂಕುಗಳನ್ನೂ ಅಳವಡಿಸುತ್ತಿದ್ದರು. ಆದರೆ ಶೀಘ್ರದಲ್ಲೇ ಹಗುರವಾದ ಮೆಷಿನ್‌ಗನ್ನುಗಳನ್ನು ಅಳವಡಿಸಿದರು. ಮೇ 1915ರಲ್ಲಿ ನೆದರ್ಲೆಂಡಿನ 25 ವರ್ಷದ ಯುವಕ ಆಂಥೋನಿ ಪೋಕರ್ ಅವರೋಧಗಿಯರ್ (ಇಂಟರಪ್ಟರ್ ಗಿಯರ್) ಕಂಡುಹಿಡಿದ. ವಿಮಾನದ ಗಿಯರುಗಳಿಗೆ ಅಪಾಯವಾಗದಂತೆ ಮೆಷಿನ್‌ಗನ್ನುಗಳನ್ನು ಉಪಯೋಗಿಸಲು ಇದರಿಂದ ಸಹಾಯವಾಯಿತು.

ಒಂದನೆಯ ಮಹಾಯುದ್ಧದಲ್ಲಿ ಜರ್ಮನರು ಮೊದಲು ವಿಷವಾಯುವನ್ನು ಒಂದು ಮಾರಕಾಸ್ತ್ರದಂತೆ ಬಳಸಿದರು. ಅನಂತರ ಎಲ್ಲ ಪಕ್ಷಗಳವರೂ ಇದನ್ನು ಪ್ರಯೋಗಿಸಿದರು. ಅನೇಕರು ಇದರಿಂದ ತತ್‌ಕ್ಷಣ ಮಡಿಯದೆ ಇದ್ದರೂ ಅನಂತರ ಇದರ ಪ್ರಭಾವದಿಂದ ತೊಂದರೆಗೀಡಾದರು.

ಇಂಗ್ಲೆಂಡಿನ ಲೂಸಿಟಾನಿಯ ಪ್ರಯಾಣಿಕ ಹಡಗಿನ ಮುಳುಗಡೆಯಲ್ಲಿ ಅಮೆರಿಕನರ ಪ್ರಾಣ ನಷ್ಟವಾದಾಗ ಆ ಪ್ರಸಂಗವೇ ಅಮೆರಿಕನರು ಯುದ್ಧಪ್ರವೇಶ ಮಾಡಲು ತತ್‌ಕ್ಷಣದ ಕಾರಣವಾಯಿತು. ಜಲಸಮಾಧಿಯಾದ 250 ಪ್ರಯಾಣಿಕರ ಪೈಕಿ 144 ಮಂದಿ ಅಮೆರಿಕನರು. ಈ ಮುಳುಗಡೆಗಾಗಿ ಜರ್ಮನರು ವಿಷಾದವನ್ನೇನೋ ವ್ಯಕ್ತಪಡಿಸಿದರು. ಆದರೆ ಆ ಹಡಗಿನಲ್ಲಿ ಪ್ರಯಾಣಿಕರ ಜೊತೆಗೆ ಮದ್ದುಗುಂಡುಗಳೂ ಇದ್ದುವೆಂದು ಜರ್ಮನಿಯ ವಾದ.

ಜಲಾಂತರ್ಗಾಮಿ ಸಮರದ ವಿರುದ್ಧ ಜರ್ಮನಿಗೆ ಅಮೆರಿಕನ್ ಅಧ್ಯಕ್ಷ ವಿಲ್ಸನ್ ಪ್ರತಿಭಟನೆ ಕಳಿಸಿದರೂ ಜರ್ಮನಿಯಿಂದ ಅಸ್ಪಷ್ಟವಾದ ಕ್ಷಮಾಪಣೆಗಳೋ ಇನ್ನಷ್ಟು ಕೆಣಕುತ್ತರಗಳು ಲಭ್ಯವಾಗುತ್ತಿದ್ದುವು. ಅಮೆರಿಕನರು ಮಿತ್ರರಾಷ್ಟ್ರಗಳಿಗೆ ಸಾಲ ಸೋಲ ಕೊಟ್ಟು ಆಹಾರ ವಸ್ತುಗಳನ್ನೂ ಶಸ್ತ್ರಾಸ್ತ್ರಗಳನ್ನೂ ಕೊಳ್ಳಲು ನೆರವು ನೀಡುತ್ತಿದ್ದಾರೆಂಬುದೇ ಜರ್ಮನಿಗೆ ಅಮೆರಿಕದ ಮೇಲಿದ್ದ ಆಗ್ರಹ. ಜರ್ಮನಿಯ ಪ್ರಹಾರಗಳಿಂದಾಗಿ ಅದರ ವಿರುದ್ಧ ಅಮೆರಿಕದಲ್ಲಿ ಸಾರ್ವಜನಿಕಾಭಿಪ್ರಾಯ ಉದ್ರೇಕಗೊಂಡಿತು. ಎಂಥ ಉದ್ರಿಕ್ತ ಪರಿಸ್ಥಿತಿಯಲ್ಲೂ ನಮ್ಮನ್ನು ಯುದ್ಧದಿಂದ ದೂರವಿಟ್ಟಿದ್ದಾನೆ-ಎಂಬ ಕಾರಣದಿಂದಾಗಿ ವಿಲ್ಸನ್ ಮತ್ತೆ ಅಧ್ಯಕ್ಷನಾಗಿ ಆಯ್ಕೆಯಾದ (1916).

**ಅಮೆರಿಕದ ಪ್ರವೇಶ:** ಆದರೆ ಹೆಚ್ಚು ಕಾಲ ಅಮೆರಿಕ ಯುದ್ಧದಿಂದ ಹೊರನಿಲ್ಲುವಂತಿರಲಿಲ್ಲ. ಅಮೆರಿಕ ಯುದ್ಧಪ್ರವೇಶ ಮಾಡಿದರೆ ಮೆಕ್ಸಿಕೋ ಜಪಾನುಗಳು ಅದನ್ನು ಘಾತಿಸಬೇಕು ಎಂದು ಜರ್ಮನಿ ಚಿತಾವಣೆ ಮಾಡುತ್ತಿದ್ದುದೂ ಅಮೆರಿಕದ ಯುದ್ಧಕೈಗಾರಿಕೆಗಳನ್ನು ನಿಪಾತ ಮಾಡಲು ಪಿತೂರಿ ನಡೆಸುತ್ತಿದ್ದುದೂ ಗೂಢಾಚಾರರಿಂದ ಬಯಲಾದುವು. ಜರ್ಮನರು ತಮ್ಮ ಜಲಾಂತರ್ಗಾಮಿ ಯುದ್ಧವನ್ನು ಹೆಚ್ಚು ಮಾಡಿ ಇಂಗ್ಲೆಂಡನ್ನು ಸೋಲಿಸುವ ನಿಶ್ಚಯವನ್ನು ಘೋಷಿಸುತ್ತಲೇ ಅಧ್ಯಕ್ಷ ವಿಲ್ಸನ್ ಕಾಂಗ್ರೆಸಿಗೆ ಸಂದೇಶ ಕಳಿಸಿದ. 1917ನೆಯ ಏಪ್ರಿಲ್ 6ರಂದು ಅಮೆರಿಕದ ಕಾಂಗ್ರೆಸ್ ಯುದ್ಧ ಘೋಷಿಸಿತು.

ಅಮೆರಿಕ ಯುದ್ಧಪ್ರವೇಶ ಮಾಡಲು ಇದು ಕಾರಣವಾದರೂ ಈ ಯುದ್ಧ ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳ ಉಳಿವು-ಅಳಿವಿನ ಹೋರಾಟವೆಂಬ ನಂಬಿಕೆ ಅಧ್ಯಕ್ಷ ವಿಲ್ಸನನಲ್ಲಿ ಬಲಗೊಳ್ಳತೊಡಗಿತ್ತು. ಪ್ರಜಾಪ್ರಭುತ್ವಗಳ ವಿರುದ್ಧವಾಗಿ ನಿರಂಕುಶ ಪ್ರಭುತ್ವಗಳು ಸಂಘಟಿಸಿ ಹೋರಾಡುತ್ತಿದ್ದುವು. ವಿಶ್ವವ್ಯವಹಾರಗಳಲ್ಲಿ ಅಮೆರಿಕದ ಪಾತ್ರ ಈ ಪ್ರಜಾಪ್ರಭುತ್ವಗಳನ್ನು ಜಯಗೊಳ್ಳುವಂತೆ ಪುಷ್ಟೀಕರಿಸುವುದೇ ಎಂದೂ ಈ ಕಾರ್ಯವನ್ನು ಯಾರ ಮೇಲೂ ದ್ವೇಷ ಸಾಧಿಸದೆ ನೆರವೇರಿಸಿ, ವಿಜೇತ ಪರಾಜಿತ ರಾಷ್ಟ್ರಗಳನ್ನೆಲ್ಲ ರಾಷ್ಟ್ರಗಳ ಕೂಟದಲ್ಲಿ (ಲೀಗ್ ಆಫ್ ನೇಷನ್ಸ್) ಪ್ರಜಾಸತ್ತಾತ್ಮಕ ಲೋಕಸೌಭ್ರಾತೃತ್ವವನ್ನಾಗಿ ಒಟ್ಟುಗೂಡಿಸಬೇಕೆಂದೂ ವಿಲ್ಸನ್ ನಿಶ್ಚಯಿಸಿದ. ಇಂಥದೊಂದು ಕೂಟದಲ್ಲಿ ಎಲ್ಲ ಯುದ್ಧಗಳ ಮೂಲಕಾರಣಗಳಾದ ರಾಷ್ಟ್ರೀಯವಾದ, ಸಾಮ್ರಾಜ್ಯವಾದ, ಕರಾರುಗಳ ಮೂಲಕ ಸ್ಥಾಪಿತವಾದ ರಾಷ್ಟ್ರವ್ಯೂಹಗಳ ಸಮತೂಕ-ಮುಂತಾದ ಪ್ರವೃತ್ತಿಗಳನ್ನು ನಿವಾರಿಸಬೇಕು. ಈ ರೀತಿ ವಿಲ್ಸನ್ ಸೂಚಿಸಿದ ಹದಿನಾಲ್ಕು ಅಂಶಗಳ ಆಧಾರದ ಮೇಲೆ ಯುದ್ಧಾನಂತರದಲ್ಲಿ ಶಾಂತಿ ಕೌಲನ್ನು ಮಾಡಿಕೊಳ್ಳಲು ಸಾಧ್ಯ ಎಂದು ಆತ ಪ್ರತಿಪಾದಿಸಿದ.

ಅಮೆರಿಕ ತನ್ನ ಮಿತ್ರರಾಷ್ಟ್ರಗಳಿಗೆ ಕೋಟ್ಯಂತರ ಡಾಲರುಗಳಷ್ಟು ಸಾಲಗಳನ್ನೂ ಹಲವು ಹಡಗುಗಳ ತುಂಬ ಸರಬರಾಜನ್ನೂ ಮುಖ್ಯವಾಗಿ ಆಹಾರ ವಸ್ತುಗಳನ್ನೂ ನೀಡಬಹುದಾಗಿದ್ದರೂ ಸೈನಿಕರನ್ನು ಕಳಿಸುವುದೇ ದೊಡ್ಡ ಸಮಸ್ಯೆಯಾಗಿ ಕುಳಿತಿತ್ತು. ಇದ್ದ ಸೈನ್ಯ ಚಿಕ್ಕದು. ಸಾಕಷ್ಟು ಸೇನೆಯನ್ನು ಜಮಾಯಿಸಿ, ತರಬೇತು ಮಾಡಿ ಮೂರು ಸಾವಿರ ಮೈಲಿಗಳಾಚೆಯ ರಣರಂಗಗಳಿಗೆ ರವಾನಿಸುವ ಕಾರ್ಯವನ್ನು ಚಕಿತಗೊಳಿಸುವಷ್ಟು ತ್ವರೆಯಿಂದ ನಿರ್ವಹಿಸಲಾಯಿತು. ಇತರ ಪೌರರಂತೆ ಜರ್ಮನ್ ಮತ್ತು ಆಸ್ಟ್ರಿಯ-ಹಂಗರಿಯ ಮೂಲಕ್ಕೆ ಸೇರಿದ ಅಮೆರಿಕನ್ ಪೌರರೂ ಸೇನಾ ಜಮಾವಣೆಗೆ ನಮ್ರತೆಯಿಂದ ಬದ್ಧರಾದರು. ಒಂದೇ ವರ್ಷದ ಅವಧಿಯೊಳಗೆ ಫ್ರಾನ್ಸಿನಲ್ಲಿ ಜನರಲ್ ಜಾನ್ ಜೆ. ಪರ್ಷಿಂಗ್ ಕೈಕೆಳಗೆ 7 ಲಕ್ಷ ಸೈನಿಕರು ಸಿದ್ಧವಾಗಿದ್ದರು. ಮುಂದಿನ ಆರು ತಿಂಗಳೊಳಗೆ ಸೈನಿಕರ ಸಂಖ್ಯೆ 20 ಲಕ್ಷಕ್ಕೆ ಏರಿತು.

ಅಮೆರಿಕ ರಣಕ್ಕೆ ಸಿದ್ಧತೆಗೊಳ್ಳುತ್ತಿದ್ದ ವೇಗವನ್ನು ಕಂಡು ದಂಗುಬಡಿದ ಮಧ್ಯ ಐರೋಪ್ಯ ರಾಷ್ಟ್ರಗಳು 1918ರ ವಸಂತದಲ್ಲಿ ದೊಡ್ಡ ಆಘಾತ ಹೂಡಿ ಯುದ್ಧವನ್ನು ಕೊನೆಗೊಳಿಸಲು ಯತ್ನಿಸಿದುವು. ಮಿತ್ರಸೇನೆಗಳ ಉಚ್ಚಸೇನಾನಿ ಫ್ರಾನ್ಸಿನ ಮಾರ್ಷಲ್ ಫಾಕ್ ಅಗತ್ಯವಾದ ಕಡೆಯೆಲ್ಲ ಅಮೆರಿಕನ್ ಸೈನಿಕರನ್ನು ರಕ್ಷಣಾ ವ್ಯವಸ್ಥೆಗೆ ಬಳಸಿಕೊಂಡ. ಅಮೆರಿಕನ್ ಸೇನೆಗಳು ಶೌರ್ಯದಿಂದ ಹೋರಾಡಿ ಎಲ್ಲರ ಮೆಚ್ಚುಗೆ ಗಳಿಸಿದುವು.

ಜರ್ಮನರ ಆಘಾತವನ್ನು ತಡೆಗಟ್ಟಿದ ಕೂಡಲೆ ಅಮೆರಿಕನರು ಒಂದು ಪ್ರತ್ಯೇಕ ಸೇನೆಯಾಗಿ ಸಂಗ್ರಹಗೊಂಡು ತಮ್ಮ ಪಾಲಿಗೊಂದು ರಣರಂಗವನ್ನು ವಹಿಸಿಕೊಂಡರು. ಅಮೆರಿಕನರು ಸೇಂಟ್ ಮಿಹೀಲ್ ವಿಭಾಗದಲ್ಲಿ ಜರ್ಮನ್ ರಕ್ಷಣಾ ವ್ಯವಸ್ಥೆಯೊಳಕ್ಕೆ ನುಗ್ಗಿ ಮೆಷಿನ್‌ಗನ್ ನಿಬಿಡವಾದ ಮ್ಯೂಕ್ ಆರ್ಗನ್ ವಿಭಾಗದ ಮೂಲಕ 12 ಲಕ್ಷ ಸೇನೆಯೊಡನೆ ಮುನ್ನುಗ್ಗಿದರು. ಜರ್ಮನರು ಹಿಮ್ಮೆಟ್ಟಿ ಇಡೀ ರಂಗದ ಉದ್ದಕ್ಕೂ ಪರಾಜಿತರಾದರು. 1918ನೆಯ ನವೆಂಬರ್ 11ರಂದು ಯುದ್ಧಸ್ತಂಭನ ಏರ್ಪಟ್ಟಿತು. ಅಮೆರಿಕ ಯುದ್ಧಕ್ಕೆ ತಡವಾಗಿ ಬಂದು ಇತರರಿಗಿಂತ ಕಡಿಮೆ ಕಷ್ಟನಷ್ಟಗಳಿಗೆ ಒಳಗಾದರೂ ಅದು ಇಡೀ ಯುದ್ಧದ ತಕ್ಕಡಿಯನ್ನೇ ಏರುಪೇರು ಮಾಡಿ, ಪ್ರಜಾಪ್ರಭುತ್ವ ಲೋಕದಲ್ಲಿ ಉಳಿಯುವಂತೆ ಮಾಡಿತು.

ಜಪಾನ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿತು (ಆಗಸ್ಟ್ 1914). ಚೀನದಲ್ಲಿ ಜರ್ಮನರಿಗೆ ಸೇರಿದ್ದ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಇದನ್ನು ಚೀನ ಜರ್ಮನಿಗೆ ಗುತ್ತಿಗೆಯ ಮೇಲೆ ಕೊಟ್ಟಿತ್ತು (1898). ಒಂದನೆಯ ಮಹಾಯುದ್ಧ ಪ್ರಾರಂಭವಾದದ್ದು ಜಪಾನಿಗೆ ಅನುಕೂಲವೇ ಆಯಿತೆನ್ನಬಹುದು. ಅದು ಮಿತ್ರರಾಷ್ಟ್ರಗಳ ಪರ ಸೇರಿ ಪೂರ್ವ ಪ್ರಾಚ್ಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. ಜರ್ಮನ್ ಸೈನ್ಯ ಈ ಭಾಗದಲ್ಲಿ ಸ್ವಲ್ಪ ಸಂಖ್ಯೆಯಲ್ಲಿದ್ದುದರಿಂದ ಅಂಥ ದೊಡ್ಡ ಕಾಳಗವೇನೂ ನಡೆಯಲಿಲ್ಲ. ಜರ್ಮನರು ಬೇಗ ಜಪಾನಿಗೆ ಶರಣಾಗತರಾದರು. ಜಪಾನು ಪಡೆದುಕೊಂಡ ಪ್ರದೇಶಗಳನ್ನು ಚೀನಕ್ಕೆ ವಾಪಸು ಮಾಡದೆ ತನ್ನ ಅಧೀನದಲ್ಲೇ ಉಳಿಸಿಕೊಂಡಿತು. ಅದಲ್ಲದೆ, ಐರೋಪ್ಯ ರಾಷ್ಟ್ರಗಳು ತಮ್ಮತಮ್ಮ ಬದುಕಿಗಾಗಿ ಹೋರಾಟ ನಡೆಸುತ್ತಿದ್ದ ಇಂಥ ಕಠಿಣ ಸಂದರ್ಭಗಳನ್ನು ಉಪಯೋಗಿಸಿಕೊಂಡ ಜಪಾನ್ ಚೀನದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. ಜಪಾನ್ ಮತ್ತು ಬ್ರಿಟನ್ ಒಂದು ರಹಸ್ಯ ಒಪ್ಪಂದ ಮಾಡಿಕೊಂಡವು (ಫೆ. 1917). ಇದರ ಪ್ರಕಾರ ಜಪಾನ್ ಮೆಡಿಟರೇನಿಯನ್ ಸಮುದ್ರಕ್ಕೆ ಕೆಲವು ಯುದ್ಧದ ಹಡಗುಗಳನ್ನು ಕಳುಹಿಸಬೇಕೆಂದೂ ಇದಕ್ಕೆ ಪ್ರತಿಯಾಗಿ ಬ್ರಿಟನ್ ಜರ್ಮನರಿಂದ ವಶಪಡಿಸಿಕೊಂಡಿದ್ದ ಷಾಂಟುಂಗಿನ ಮತ್ತು ಪೆಸಿಫಿಕ್ ಸಾಗರದಲ್ಲಿ ಜರ್ಮನರಿಗೆ ಸೇರಿದ್ದ ಕೆಲವು ದ್ವೀಪಗಳ ಮೇಲೆ ಅಧಿಕಾರ ಬಿಟ್ಟುಕೊಡಬೇಕೆಂಬ ಸೂಚನೆಗೆ ಶಾಂತಿ ಕೌಲಿನ ಸಮಯದಲ್ಲಿ ಬೆಂಬಲ ಸೂಚಿಸುವುದಾಗಿಯೂ ಬ್ರಿಟನ್ ಒಪ್ಪಿತು. ಫ್ರಾನ್ಸ್ ಮಾರ್ಚ್ 1917ರಲ್ಲಿ ಇಂಥದೇ ಕರಾರುಗಳಿಗೆ ಒಪ್ಪಿಗೆ ಕೊಟ್ಟಿತು. ಇದಕ್ಕೆ ಬದಲು ಜಪಾನು ಚೀನವನ್ನು ಮಹಾಯುದ್ಧದಲ್ಲಿ ತೊಡಗುವಂತೆ ಮಾಡಬೇಕೆಂದು ಒಡಂಬಡಿಕೆಯಾಯಿತು. ಕೆಲವು ದಿನಗಳ ತರುವಾಯ ರಷ್ಯವೂ ಅನಂತರ ಇಟಲಿಯೂ ಇದಕ್ಕೆ ತಮ್ಮ ಒಪ್ಪಿಗೆ ನೀಡಿದವು.

ಯುದ್ಧ ಪ್ರಾರಂಭವಾಗುವ ಮೊದಲು, ಚೀನ ಯುದ್ಧದಲ್ಲಿ ಭಾಗವಹಿಸುವ ನಿಶ್ಚಯ ಹೊಂದಿತ್ತು. ಜಪಾನು ಯುದ್ಧವನ್ನು ನೆವವಾಗಿ ಉಪಯೋಗಿಸಿಕೊಂಡು ಚೀನದಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳಬಹುದೆಂಬ ಭೀತಿ ಅದಕ್ಕಿತ್ತು. 1914 ಮತ್ತು 1915ರಲ್ಲಿ ಚೀನ ಮಿತ್ರರಾಷ್ಟ್ರಗಳ ಪರವಾಗಿ ಯುದ್ಧದಲ್ಲಿ ಭಾಗವಹಿಸುವುದು ಬೇಕಾಗಿರಲಿಲ್ಲ. ಇದಕ್ಕೆ ಕಾರಣವೇನೆಂದರೆ ಯುದ್ಧಕ್ಕೆ ಚೀನ ಇಳಿದು, ತನ್ನ ಸೈನ್ಯವನ್ನು ಬಲಪಡಿಸಿಕೊಂಡು ಸಂಪತ್ತನ್ನು ವೃದ್ಧಿಸಿಕೊಂಡು, ಶಾಂತಿ ಸಂಧಾನಗಳಲ್ಲಿ ಭಾಗವಹಿಸುವುದು ಜಪಾನಿಗೆ ಇಷ್ಟವಾಗಿರಲಿಲ್ಲ. ಆದ್ದರಿಂದ 1917ರ ತನಕ ಜಪಾನ್ ಚೀನವನ್ನು ಯುದ್ಧ ಪ್ರವೇಶಿಸದಂತೆ ತಡೆಹಿಡಿದಿತ್ತು. ಆದರೆ 1917ರಲ್ಲಿ ಜಪಾನ್ ತನ್ನ ನೀತಿಯನ್ನು ಬದಲಾಯಿಸಿ, ಮೇಲೆ ತಿಳಿಸಿದ ಕಾರಣಗಳಿಂದಾಗಿ ಚೀನವನ್ನು ಯುದ್ಧದಲ್ಲಿ ಭಾಗವಹಿಸಲು ಪ್ರೇರೇಪಿಸಿತು. 1917 ಆಗಸ್ಟ್ 14ರಂದು ಜರ್ಮನಿ ಮತ್ತು ಆಸ್ಟ್ರಿಯ-ಹಂಗರಿಗಳ ಮೇಲೆ ಚೀನ ಯುದ್ಧ ಘೋಷಿಸಿತು. ಆಗ ಚೀನದಲ್ಲಿ ಎರಡು ಸರ್ಕಾರಗಳಿದ್ದುವು. ಒಂದು ಉತ್ತರದ ಪೀಕಿಂಗ್‌ನಲ್ಲಿ, ಮತ್ತೊಂದು ದಕ್ಷಿಣದ ಕ್ಯಾಂಟನ್‌ನಲ್ಲಿ. ಎರಡೂ ಸರ್ಕಾರಗಳು ಪ್ರತ್ಯೇಕವಾಗಿ ಯುದ್ಧ ಘೋಷಿಸಿದುವು.

ಚೀನ ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿದ್ದರಿಂದ ಹೆಚ್ಚಿನ ಪರಿಣಾಮ ಕಂಡುಬರಲಿಲ್ಲ. ಜರ್ಮನಿಗೆ ಸೇರಿದ್ದ ಯುದ್ಧನೌಕೆಗಳನ್ನು ಚೀನ ತನ್ನ ಬಂದರುಗಳಲ್ಲಿ ತಡೆಹಿಡಿದಿತ್ತು. ಅನಂತರ ಅವುಗಳನ್ನು ಮಿತ್ರರಾಷ್ಟ್ರಗಳಿಗೆ ಒಪ್ಪಿಸಿತು. ಚೀನದಿಂದ ಕೂಲಿಗಳೂ ಹೋಗಿ ಯುದ್ಧದ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ದುಡಿದರು. ಯುದ್ಧದಿಂದ ಜಪಾನಿಗೆ ತನ್ನ ದೇಶದಲ್ಲಿ ಹೆಚ್ಚಿನ ಪ್ರದೇಶಗಳನ್ನು ಬಿಟ್ಟುಕೊಡಬೇಕಾಯಿತು. ಯುದ್ಧ ಮುಗಿದ ಅನಂತರ ಚೀನಕ್ಕೆ ಪ್ಯಾರಿಸ್ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ದೊರೆಯಿತು. ಅಲ್ಲಿ ಚೀನ ಜಪಾನ್‌ಗಳ ಚಕಮಕಿ ನಡೆಯಿತು. ಜಪಾನು ಜರ್ಮನಿಗೆ ಸೇರಿದ್ದ ಷಾಂಟುಂಗ್ ಪ್ರದೇಶಗಳು ತನಗೆ ಸೇರಬೇಕೆಂದು ಕೇಳಿತು. ಚೀನ ಇದನ್ನು ವಿರೋಧಿಸಿತು. ಯುದ್ಧದ

ಸಮಯದಲ್ಲಿ ನಡೆದ ಗುಟ್ಟಾದ ಒಪ್ಪಂದಗಳ ಪ್ರಕಾರ ಫ್ರಾನ್ಸ್ ಮತ್ತು ಇಂಗ್ಲೆಂಡ್ ಜಪಾನಿಗೆ ಬೆಂಬಲ ಕೊಡಬೇಕಾಯಿತು. ಕೊನೆಗೆ ಜಪಾನ್ ಷಾಂಟುಂಗ್ ಪ್ರದೇಶವನ್ನು ಆಕ್ರಮಿಸಿ ಕೊಂಡಿತು. ಉಳಿದ ಜರ್ಮನ್ ವಸಾಹತುಗಳ ಮೇಲೆ ಹತೋಟಿ ಪಡೆದುಕೊಂಡಿತು. ಆದುದರಿಂದ ಚೀನ ನಿರಾಶೆಗೊಂಡು ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಲಿಲ್ಲ. ಅನಂತರ ಜರ್ಮನಿಯೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಂಡಿತು. ಚೀನ ರಾಷ್ಟ್ರಗಳ ಕೂಟದ ಸದಸ್ಯರಾಷ್ಟ್ರವಾಯಿತು.

ಒಂದನೆಯ ಮಹಾಯುದ್ಧ ಆರಂಭವಾದ ಮೂರು ತಿಂಗಳಲ್ಲೇ ಭಾರತೀಯ ಸೈನಿಕರು ಪಶ್ಚಿಮ ರಣಕ್ಷೇತ್ರದಲ್ಲಿ ಕಾದಾಡುತ್ತಿದ್ದರು. ಭಾರತ ಉಳಿದ ಬ್ರಿಟಿಷ್ ವಸಾಹತುಗಳಂತೆ, ಯುದ್ಧದ ಸಮಯದಲ್ಲಿ ಇಂಗ್ಲೆಂಡಿಗೆ ಅಧೀನವಾಗಿ ನಡೆದುಕೊಂಡಿತು. ಯುದ್ಧಕ್ಕಾಗಿ ಭಾರತ ಒದಗಿಸಿದ ಸೈನಿಕರ ಮತ್ತು ಭಾರತೀಯ ಕಾರ್ಮಿಕರ ಸಂಖ್ಯೆ 13,00,000 ಈಜಿಪ್ಟ್, ಚೀನ, ಆಫ್ರಿಕ, ಅರೇಬಿಯ, ಬಾಲ್ಕನ್ ಪ್ರದೇಶ ಮತ್ತು ಫ್ರಾನ್ಸಿನಲ್ಲಿ ಭಾರತೀಯರು ಸೇವೆ ಸಲ್ಲಿಸಿದರು. ಭಾರತ ಸರ್ಕಾರ ಇದಲ್ಲದೆ ಬ್ರಿಟನಿಗೆ 50,00,00,000 ಡಾಲರುಗಳನ್ನು ಒಪ್ಪಿಸಿತು. ಯುದ್ಧನಿಧಿಗಾಗಿ ನೂರಾರು ರಾಜಮಹಾರಾಜರು ನೀಡಿದ ಕಾಣಿಕೆ 2,50,00,000 ಡಾಲರುಗಳು, ಯುದ್ಧ ಮುಗಿದ ಅನಂತರ ಬ್ರಿಟನ್ ಮಾಂಟೆಗೊ–ಚೆಲ್ಮ್ಸ್‌ಫರ್ಡ್ ಸುಧಾರಣೆಗಳ ಮೂಲಕ ಭಾರತೀಯರಿಗೆ ಕೆಲವು ರಾಜಕೀಯ ಹಕ್ಕುಗಳನ್ನು ನೀಡಿತು.

**ಜರ್ಮನಿಯ ವಸಾಹತುಗಳಲ್ಲಿ ಯುದ್ಧ:** ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳಂತೆ ಜರ್ಮನಿಗೂ ಏಷ್ಯ–ಆಫ್ರಿಕಗಳಲ್ಲಿ ಅನೇಕ ವಸಾಹತುಗಳಿದ್ದು, ಜರ್ಮನಿಯ ಕೈಗಾರಿಕಾಭಿವೃದ್ಧಿಗೆ ಬೇಕಾದ ಕಚ್ಚಾಮಾಲುಗಳನ್ನು ಪೂರೈಸುತ್ತಿದ್ದು, ಅಷ್ಟೇ ಅಲ್ಲದೆ ಜರ್ಮನಿಯಲ್ಲಿ ತಯಾರಾದ ಸಿದ್ಧವಸ್ತುಗಳಿಗೆ ಮಾರುಕಟ್ಟೆಗಳಾಗಿದ್ದವು. ಮಹಾಯುದ್ಧ ಪ್ರಾರಂಭವಾದಾಗ ಮಿತ್ರರಾಷ್ಟ್ರಗಳು ಇವನ್ನು ವಶಪಡಿಸಿ ಕೊಳ್ಳಲು ಸಂಚು ಹೂಡಿದವು. ಇವುಗಳಿಂದ ದೊರಕುತ್ತಿದ್ದ ಅಮೂಲ್ಯವಾದ ಕಚ್ಚಾ ಸಾಮಗ್ರಿ ಜರ್ಮನಿಗೆ ರವಾನೆಯಾಗುವುದು ತಪ್ಪಿದರೆ ಆ ದೇಶದ ಆರ್ಥಿಕ ಸ್ಥಿತಿ ಕುಂಠಿತಗೊಂಡು ತಾವು ಯುದ್ಧದಲ್ಲಿ ಗೆಲ್ಲಲು ಸಹಾಯವಾಗುವುದೆಂಬುದು ಮಿತ್ರ ರಾಷ್ಟ್ರಗಳ ಆಲೋಚನೆ. ಈ ಯೋಚನೆಯ ಫಲವೇ ಜರ್ಮನಿಯ ವಸಾಹತುಗಳಲ್ಲಿ ನಡೆದ ಕದನಗಳು ಯುದ್ಧದ ರೂಪ ತಳೆಯಿತು.

ಪೂರ್ವ ಆಫ್ರಿಕದಲ್ಲಿ ಜರ್ಮನಿಗೆ ಸೇರಿದ ಅನೇಕ ವಸಾಹತುಗಳಿದ್ದುವು. ಇಲ್ಲಿ ನಡೆದ ಯುದ್ಧ ಸ್ವಲ್ಪ ದೀರ್ಘಕಾಲದ್ದಾಗಿದೆ. ಉಳಿದ ಜರ್ಮನ್ ವಸಾಹತುಗಳಲ್ಲಿ ಯುದ್ಧ ಬಹು ಶೀಘ್ರವೇ ಕೊನೆಗೊಂಡಿತು. ಚೀನದಲ್ಲಿ ಜರ್ಮನಿಗೆ ಸೇರಿದ ಪ್ರದೇಶಗಳನ್ನು ಜಪಾನ್ ಯುದ್ಧ ಘೋಷಿಸಿದ ತತ್‌ಕ್ಷಣ ಆಕ್ರಮಿಸಿಕೊಂಡಿತು. ಇಲ್ಲಿ ಜರ್ಮನರ ಸೇನಾಬಲ ಸ್ವಲ್ಪವೇ ಇದ್ದುದರಿಂದ ಜಪಾನೀಯರು ಬಹು ಸುಲಭವಾಗಿ ಜರ್ಮನರನ್ನು ಸೋಲಿಸಿದರು. ಅದಲ್ಲದೆ ದೂರದ ಯುರೋಪಿನಿಂದ ಚೀನಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ಸಾಗಿಸುವುದು ಅಸಾಧ್ಯವಾಗಿತ್ತು. ಜಪಾನಿಯರಾದರೂ ಹತ್ತಿರವೇ ಇದ್ದ ತಮ್ಮ ದೇಶದಿಂದ ಬೇಕಾದ ಶಸ್ತ್ರಾಸ್ತ್ರಗಳನ್ನು ಸುಲಭವಾಗಿ ಸಾಗಿಸಬಹುದಾಗಿತ್ತು.

ಜರ್ಮನಿಗೆ ಸೇರಿದ ಅನೇಕ ದ್ವೀಪಗಳು ಪೆಸಿಫಿಕ್ ಮಹಾಸಾಗರದಲ್ಲಿದ್ದುವು. ಜಪಾನ್, ಆಸ್ಟ್ರೇಲಿಯ ಮತ್ತು ನ್ಯೂಜಿ಼ಲೆಂಡ್‌ಗಳ ಸಹಾಯದಿಂದ ಬ್ರಿಟಿಷ್ ಯುದ್ಧನೌಕೆಗಳು ಜರ್ಮನಿಗೆ ಸೇರಿದ ಎಲ್ಲ ದ್ವೀಪಗಳನ್ನೂ ಆಕ್ರಮಿಸಿಕೊಂಡವು (1914).

ಆಫ್ರಿಕದಲ್ಲಿ ಜರ್ಮನರಿಗೆ ಸೇರಿದ್ದ ವಸಾಹತುಗಳು ಮಿತ್ರರಾಷ್ಟ್ರಗಳ ವಶವಾದುವು. ಫ್ರೆಂಚ್ ಮತ್ತು ಬ್ರಿಟಿಷ್ ವಸಾಹತು ಸೈನ್ಯಗಳಿಗೂ ಜರ್ಮನ್ ಸೈನ್ಯಗಳಿಗೂ ಆಫ್ರಿಕದ ಟೊಗೋಲ್ಯಾಂಡಿನಲ್ಲಿ ಯುದ್ಧ ನಡೆದು, ಸೋತ ಜರ್ಮನಿ ಟೊಗೋಲ್ಯಾಂಡನ್ನು ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಗಳಿಗೆ ಬಿಟ್ಟುಕೊಟ್ಟಿತು (1914). ಇದೇ ರೀತಿ ಕ್ಯಾಮರೂನ್ಸ್ ಬ್ರಿಟಿಷ್ ಮತ್ತು ಫ್ರೆಂಚರ ವಶವಾಯಿತು (1916). ಜರ್ಮನ್ ಪೂರ್ವ ಆಫ್ರಿಕದಲ್ಲಿ ಯುದ್ಧ ನಡೆಸಿತು (1915). ಜನರಲ್ ಜಾನ್ ಸಿ.ಸ್ಮಟ್ಸ್ ಬ್ರಿಟಿಷರ ಸೇನಾಧಿಪತಿಯಾಗಿ ಜರ್ಮನರ ವಿರುದ್ಧ ಧೈರ್ಯ ಸಾಹಸಗಳಿಂದ ಹೋರಾಡಿದ. ದಕ್ಷಿಣ ಆಫ್ರಿಕ, ಬೆಲ್ಜಿಯಂ ಕಾಂಗೋ, ಬ್ರಿಟಿಷ್ ಪೂರ್ವ ಆಫ್ರಿಕ, ರೊಡೇಷ್ಯಿಯ ಮತ್ತು ಪೋರ್ಚುಗೀಸ್ ಪೂರ್ವ ಆಫ್ರಿಕದ ಸೈನ್ಯಗಳಿಗೂ ಜರ್ಮನರಿಗೂ 1918ರ ನವೆಂಬರ್ 14ರ ವರೆಗೆ ಎಂದರೆ (ಮಹಾಯುದ್ಧ ಕೊನೆಗೊಂಡ ಮೇಲೂ ಮೂರು ದಿನ) ಯುದ್ಧ ನಡೆಯಿತು.

**ಯುದ್ಧದ ಅಂತಿಮ ಘಟ್ಟ:** ಯುದ್ಧ ಅಂತಿಮ ಘಟ್ಟ ಮುಟ್ಟಿತು (1917). ರಷ್ಯದಲ್ಲಿನ ಮಹಾಕ್ರಾಂತಿ ಒಂದು ಮಹಾಘಟನೆಯಾಗಿ ಪರಿಣಮಿಸಿ ಅಲ್ಲಿ ಬಾಲ್ಷೆವಿಕ್ ರಾಷ್ಟ್ರ ಸ್ಥಾಪನೆ ಯಾಯಿತು. ಅದನ್ನು ಕಟ್ಟಿದ ಲೆನಿನ್ ಜರ್ಮನಿಯೊಡನೆ ಯುದ್ಧ ನಿಲ್ಲಿಸಿದ. ರಷ್ಯನರು ಜರ್ಮನಿಯೊಡನೆ ಬ್ರೆಸ್ಟ್‌ಲಿಟಾಫ್ಸ್ಕ್‌ನಲ್ಲಿ ಒಪ್ಪಂದ ಮಾಡಿಕೊಂಡು ಹೋರಾಟದಿಂದ ದೂರವಾದರು (1918). ಈ ಕಾರಣದಿಂದ ಜರ್ಮನರು ತಮ್ಮ ಸರ್ವಚೈತನ್ಯವನ್ನೂ ಪಶ್ಚಿಮದಲ್ಲಿ ಒಡ್ಡಲು ಸಾಧ್ಯವಾಯಿತು. ಕಾಪೊರೆಟ್ಟೊದಲ್ಲಿ ಜರ್ಮನ್ ಸೈನ್ಯಗಳು ಇಟಲಿಯನ್ನು ಸೋಲಿಸಿದುವು. ಬಾಲ್ಕನ್ ಕ್ಷೇತ್ರಕ್ಕೂ ಮೂಡಲಲ್ಲಿ ತುರ್ಕಿ ಆ ವೇಳೆಗೆ ಸೋತಿತ್ತು. ಬ್ರಿಟಿಷರು ಮೆಸೊಪೊಟೇಮಿಯದಲ್ಲೂ ಪ್ಯಾಲೆಸ್ಟೈನಿನಲ್ಲೂ ಜಯ ಗಳಿಸಿದರು. ಆದರೆ ಜರ್ಮನ್ ದಳಪತಿ ಲೂಡೆನ್‌ಡಾರ್ಫ್ ಪಶ್ಚಿಮ ರಣರಂಗದಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಯಾಚರಣೆ ನಡೆಸಿದ. ಇದರಿಂದ ಮಿತ್ರರಾಷ್ಟ್ರಗಳಿಗೆ ಕಷ್ಟವಾಗಿದ್ದರೂ ಆಹಾರಾಭಾವದಿಂದ ಜರ್ಮನಿಯ ಸ್ಥಿತಿ ಹೆಚ್ಚು ಕಠಿಣವಾಗಿತ್ತು. ಆದ್ದರಿಂದ ಹೇಗಾದರೂ ಸಾಹಸಮಾಡದಿದ್ದರೆ ಅನಾಹುತ ಸಿದ್ಧವೆಂದು ತಿಳಿದು ಆ ದಳಪತಿ ಸರ್ವಶಕ್ತಿಯನ್ನೂ ವಿನಿಯೋಗಿಸಿ ಪಶ್ಚಿಮ ರಣರಂಗದಲ್ಲಿ ಬ್ರಿಟಿಷರನ್ನೂ ಫ್ರೆಂಚರನ್ನೂ ಗೆಲ್ಲಲು ಹವಣಿಸಿದ.

ಸಾಮ್ ನದಿಯ ಬಳಿಯಿದ್ದ ಬ್ರಿಟಿಷರ ಮೇಲೆ ಜರ್ಮನರು ಮೊದಲು ಬಿದ್ದು ಅವರನ್ನು ಹಿಮ್ಮೆಟ್ಟಿಸಿದರು. ಜರ್ಮನರು ಆಕ್ರಮಿಸಿಕೊಂಡಿದ್ದ ಮಾರ್ನ್‌ನದೀದಡದವರೆಗೆ ಈ ಸಾರಿಯೂ ವೇಗದಿಂದಲೂ ರಭಸದಿಂದಲೂ ನುಗ್ಗಿದರು (1914). ಜರ್ಮನರನ್ನು ಕುರಿತು ಸಾಕಷ್ಟು ಅನುಭವ ಪಡೆದಿದ್ದ ಬ್ರಿಟಿಷರೂ ಫ್ರೆಂಚರೂ ರಣಭೂಮಿಯಲ್ಲಿ ತಮಗೆ ಏಕದಂಡನಾಯಕನಿರ ಬೇಕೆಂದು ನಿಶ್ಚಯ ಮಾಡಿ ಮಾರ್ಷಲ್ ಫಾಕನನ್ನು ಅಧಿಪತಿಯಾಗಿ ಗೊತ್ತುಮಾಡಿಕೊಂಡರು. ಅಮೆರಿಕದ ಸೈನ್ಯಗಳೂ ಬಂದಿಳಿದುವು. ಜುಲೈ ತಿಂಗಳ ವೇಳೆಗೆ ಫಾಕ್ ಎಲ್ಲ ಬಲವನ್ನೂ ಒಟ್ಟುಗೂಡಿಸಿಕೊಂಡು ಆಕ್ರಮಣದಲ್ಲಿ ತೊಡಗಿ ಜರ್ಮನರನ್ನು ಪುನಃ ಹಿಂಡನ್‌ಬರ್ಗ್ ರೇಖೆಗೆ ಅಟ್ಟಿದ.

ಆ ವೇಳೆಗೆ ಮೂಡಲಲ್ಲಿ ಬಲ್ಗೇರಿಯ ಸೋತಿತ್ತು. ಆಸ್ಟ್ರಿಯವೂ ಇಟಲಿಯಿಂದ ವಿಟ್ಟಾರಿಯೊ ವೇನೆಟೊದಲ್ಲಿ ಸೋತಿತ್ತು. ಆಸ್ಟ್ರಿಯ–ಹಂಗರಿ ರಾಷ್ಟ್ರ ಧ್ವಂಸವೇ ಆಗಿತ್ತು. ಇನ್ನು ಮೂಡಲಿಗೆ ಪ್ಯಾಲೆಸ್ಟೈನಿನಲ್ಲಿ ದಳಪತಿ ಆಲೆನ್ಬಿ ತುರ್ಕಿ ಸೈನ್ಯಗಳನ್ನು ನಾಶಗೊಳಿಸಿ ಸಿರಿಯವನ್ನು ಮುತ್ತಿ ದಮಾಸ್ಕಸ್ ನಗರವನ್ನು ಹಿಡಿದುಕೊಂಡಿದ್ದ. ಈ ರೀತಿ ಎಲ್ಲೆಲ್ಲೊ ಪರಾಜಯಗಳೇ ಸಂಭವಿಸಿದ್ದರಿಂದ ಜರ್ಮನ್ ಸೈನ್ಯಮುಖ್ಯರಲ್ಲಿ ನಿರಾಶೆ ಮೂಡಿತು. ಲೂಡೆನ್ ಡಾರ್ಫ್ ರಾಜೀನಾಮೆ ಕೊಟ್ಟ. ಜರ್ಮನಿಯ ಒಳನಾಡಿನಲ್ಲಿ ಅಲ್ಲೋಲಕಲ್ಲೋಲವಾ ಯಿತು. ಚಕ್ರವರ್ತಿ ರಾಜಧಾನಿ ಬಿಟ್ಟು ಓಡಿದ. ಕೀಲ್ ಕಾಲುವೆಯಲ್ಲಿದ್ದ ಜರ್ಮನ್ ಹಡಗುಗಳ ನೌಕರರು ದಂಗೆಯೆದ್ದರು. ಮಿತ್ರರಾಷ್ಟ್ರಗಳು ತಾತ್ಕಾಲಿಕವಾಗಿ ಸ್ಥಾಪಿತವಾಗಿದ್ದ ಹೊಸ ಜರ್ಮನ್ ರಾಷ್ಟ್ರದೊಡನೆ ಹೋರಾಟ ನಿಲ್ಲಿಸಲೊಪ್ಪಿದುವು.

ಯುದ್ಧ ಮುಕ್ತಾಯಮಾಡಲು ಗೊತ್ತುಮಾಡಿಕೊಂಡಾಗಲೇ ಜರ್ಮನರು ತಮ್ಮ ಯುದ್ಧದ ಹಡಗುಗಳನ್ನೂ ವಿಮಾನಗಳನ್ನೂ ಫಿರಂಗಿಗಳನ್ನೂ ಒಪ್ಪಿಸಬೇಕೆಂದು ನಿಶ್ಚಯ ವಾಗಿತ್ತು (1918ರ ನವೆಂಬರ್ 11). ತಮ್ಮ ಯುದ್ಧದ ಹಡಗುಗಳನ್ನು ಜರ್ಮನರು ತಾವಾಗಿಯೇ ನಾಶಮಾಡಿಬಿಟ್ಟರು. ಆದ್ದರಿಂದ ಆ ಹಡಗುಗಳ ಹಂಚಿಕೆ ಹೇಗೆಂಬ ವ್ಯಾಜ್ಯಗಳಿಗೆ ಆಸ್ಪದವಿಲ್ಲ ವಾಯಿತು. ತಾವು ಯುದ್ಧ ಮಾಡಿದ್ದು ಮಹಾಪರಾಧ; ಇನ್ನುಮೇಲೆ ಯುದ್ಧಸನ್ನಾಹ ಮಾಡುವುದಿಲ್ಲ ಎಂದು ಜರ್ಮನಿಯ ತಾತ್ಕಾಲಿಕ ಸರ್ಕಾರ ಪ್ರಮಾಣ ಮಾಡಿತಲ್ಲದೆ ಯುದ್ಧದಲ್ಲಿ ಗೆದ್ದಿದ್ದ ರಾಷ್ಟ್ರಗಳಿಗೆ ಪರಿಹಾರ ಕೊಡುವುದಕ್ಕೂ ಒಪ್ಪಿಕೊಂಡಿತು. ಮಿತ್ರರಾಷ್ಟ್ರಗಳಿಗೆ ಆಗಿದ್ದ ವ್ಯಾಪಾರನಷ್ಟಕ್ಕಾಗಿ ತನ್ನ ವ್ಯಾಪಾರ ಹಡಗುಗಳನ್ನೂ ಒಪ್ಪಿಸಬೇಕಾಯಿತು.

**ಪರಿಣಾಮಗಳು:** ಒಂದನೆಯ ಮಹಾಯುದ್ಧ 1565 ದಿನಗಳ ಕಾಲ ನಡೆಯಿತು. ಈ ಯುದ್ಧ ನಡೆಸಲು ಆದ ವೆಚ್ಚ ಅಗಾಧ. ಇದನ್ನು ನಡೆಸಲು ನಿಯೋಜಿತರಾದ ಜನರ ಸಂಖ್ಯೆ 6.5 ಕೋಟಿ. 1.3 ಕೋಟಿ ಜನ ಯುದ್ಧದಲ್ಲೋ ಯುದ್ಧದಿಂದ ಗಾಯಗೊಂಡೋ ಮರಣಕ್ಕೀಡಾದರು. ಸು.2,20,00,000 ಜನ (ಮೂವರಲ್ಲಿ ಒಬ್ಬರಂತೆ) ಗಾಯಗೊಂಡರು. ಇವರ ಪೈಕಿ 70,00,000 ಜನ ಸಂಪೂರ್ಣವಾಗಿ ದೇಹದ ಸ್ವಾಸ್ಥ್ಯ ಕಳೆದುಕೊಂಡರು. ಗಾಯಗೊಂಡ ಅನೇಕರು ಕೆಲವೇ ವರ್ಷಗಳಲ್ಲಿ, ದೇಹದ ಗಾಯಗಳಿಂದಾಗಿ ಮಡಿದರು. ಷೆಲ್ ಧಾಳಿಗೆ ಒಳಗಾದ ಮತ್ತು ವಿಷವಾಯು ಪ್ರಯೋಗಕ್ಕೆ ತುತ್ತಾದ ಅನೇಕರು ಹೇಗೋ ಜೀವಚ್ಛವಗಳಾಗಿ ಬದುಕಿದರು.

1790 – 1913ರ ವರೆಗೆ ನಡೆದ ನೆಪೋಲಿಯಾನಿಕ್ ಯುದ್ಧಗಳೂ ಕ್ರಿಮಿಯನ್, ಡೇನಿಷ್, ಆಸ್ಟ್ರೋ–ಪ್ರಷ್ಯನ್ ಮತ್ತು ಅಮೆರಿಕನ್ ಅಂತರ್ಯುದ್ಧ, ಫ್ರಾಂಕೊ–ಪ್ರಷ್ಯನ್, ಬೋಯರ್, ರಷ್ಯ–ಜಪಾನ್ ಮತ್ತು ಬಾಲ್ಕನ್ ಯುದ್ಧಗಳೇ ಮುಂತಾದ ಎಲ್ಲ ಯುದ್ಧಗಳಲ್ಲೂ ಮಡಿದವರ ಸಂಖ್ಯೆಯ ಎರಡರಷ್ಟು ಮಂದಿ ಈ ಯುದ್ಧದಲ್ಲಿ ಮಡಿದರು. ಅಲ್ಲದೆ ಅವೆಲ್ಲಕ್ಕಿಂತ ಇದು ಹೆಚ್ಚು ಉಗ್ರ. ಯುದ್ಧದಲ್ಲಿ ಮಡಿದ ನಾಗರಿಕರ ಸಂಖ್ಯೆ ಸೈನಿಕರ ಸಂಖ್ಯೆಗಿಂತ ಹೆಚ್ಚು. ಯುದ್ಧದಲ್ಲಿ ನೇರವಾಗಿ ಭಾಗವಹಿಸದೆ ಇದ್ದವರನೇಕರು ಹಸಿವು, ರೋಗರುಜಿನ ಸಾಮೂಹಿಕ ಕೊಲೆ, ಸಾಂಕ್ರಾಮಿಕ ರೋಗ ಮತ್ತು ಧಾಳಿಗಳಿಗೆ ತುತ್ತಾಗಿ ಮರಣಹೊಂದಿದರು. ಅನೇಕ ದೇಶಗಳಲ್ಲಿ ಜನಸಂಖ್ಯೆಯ ಏರಿಕೆಯ ವೇಗ ಕಡಿಮೆಯಾಯಿತು.

ಪ್ರಾಣಹಾನಿಗಳು ಇಷ್ಟು ಅಪಾರವಾಗಿದ್ದರೆ, ಯುದ್ಧಕ್ಕೆ ಮಾಡಿದ ವೆಚ್ಚದ ಮೊತ್ತ ಭಾರಿಯ ಗಾತ್ರದ್ದು. ಸಮುದ್ರದ ಮೇಲೂ ಭೂಮಿಯ ಮೇಲೂ ಅಪಾರ ಐಶ್ವರ್ಯ ನಷ್ಟವಾಯಿತು. ಯುದ್ಧದ ಮೊದಲ ಮೂರು ವರ್ಷಗಳಲ್ಲಿ ಯುದ್ಧದಲ್ಲಿ ಭಾಗವಹಿಸಿದ ಎಲ್ಲ ಪಕ್ಷ–ವಿಪಕ್ಷಗಳ ದೈನಂದಿನ ವೆಚ್ಚ 12,30,00,000 ಡಾಲರುಗಳು, 1918ರ ವೇಳೆಗೆ ಇದು 24,40,00,000 ಡಾಲರುಗಳಿಗೆ ಏರಿತು. ಅಂದರೆ ಒಂದು ಗಂಟೆಗೆ ಸು. 1,00,00,000 ಡಾಲರ್. ಯುದ್ಧ ನಡೆಸಲು ಖರ್ಚು ಮಾಡಿದ ಒಟ್ಟು ಹಣ 18,600,00,00,000 ಡಾಲರು ಗಳು. ಇದರಲ್ಲಿ ಮಿತ್ರರಾಷ್ಟ್ರಗಳು 12,600,00,00,000 ಡಾಲರುಗಳನ್ನೂ ಮಧ್ಯರಾಷ್ಟ್ರಗಳು 600,00,00,000 ಡಾಲರುಗಳನ್ನೂ ಖರ್ಚು ಮಾಡಿದುವು. ಭೂಮಿಯ ಮತ್ತು ಸಮುದ್ರದ ಮೇಲೆ ಕ್ರಮವಾಗಿ 3,000,00,00,000 ಡಾಲರ್ ಮತ್ತು 700,00,00,000 ಡಾಲರ್ ಮೌಲ್ಯದ ಆಸ್ತಿಗಳ ನಷ್ಟ ಸಂಭವಿಸಿತು. ಉತ್ಪತ್ತಿಯಲ್ಲಿ ಆದ ನಷ್ಟ ಸು. 4,500,00,00,000

ಡಾಲರ್. ಯುದ್ಧದಲ್ಲಿ ನೀಡಿದ ನೆರವೂ ತಟಸ್ಥ ರಾಷ್ಟ್ರಗಳಿಗೆ ಸಂಭವಿಸಿದ ನಷ್ಟಕ್ಕೆ ನೀಡಿದ ಪರಿಹಾರವೂ 200,00,00,000 ಡಾಲರುಗಳಿಗಿಂತ ಹೆಚ್ಚಾಗಿದ್ದಿತು. ಒಟ್ಟು ಆರ್ಥಿಕ ನಾಶ 270,00,00,000 ಡಾಲರುಗಳು.

ಈ ಮೊತ್ತಕ್ಕೆ ಯುದ್ಧದಲ್ಲಿ ಸತ್ತವರ 67,00,00,000 ಡಾಲರುಗಳನ್ನು ಸೇರಿಸಿದರೆ, ಒಟ್ಟು 3,370,00,00,000 ಡಾಲರುಗಳಷ್ಟಾಗುತ್ತದೆ. ಈ ಎಣಿಕೆಯಲ್ಲಿ ಅಂಗವಿಕಲರಾದ ಸೈನಿಕರು ಮತ್ತು ನಾಗರಿಕರ ಲೆಕ್ಕ ಸೇರಿಲ್ಲ. ಯುದ್ಧಭಾಗಿ ರಾಷ್ಟ್ರಗಳು ಕೋಟ್ಯಂತರ ಡಾಲರುಗಳಷ್ಟು ಬಡ್ಡಿ ಹಣ ಕೊಡಬೇಕಾಗಿತ್ತು. ಇದೂ ಈ ಎಣಿಕೆಯಲ್ಲಿ ಸೇರಿಲ್ಲ. ಅನೇಕ ತಲೆಮಾರುಗಳವರೆಗೆ ಈ ಹಣ ತೆರಬೇಕಾಯಿತು. ಯುದ್ಧ ಮುಗಿದ ತರುವಾಯ ನಡೆದ ಶಾಂತಿಸಂಧಾನಗಳಲ್ಲಿ. ವಿವಿಧ ದೇಶಗಳ ನಾಯಕರ ಮೇಲೆ ಅಮಿತವಾದ ಜವಾಬ್ದಾರಿ ಬಿದ್ದಿತ್ತು. ಲಕ್ಷಾಂತರ ಜನಗಳನ್ನು ಬಲಿಕೊಟ್ಟು, ಕೋಟ್ಯಂತರ ಡಾಲರುಗಳಷ್ಟು ಹಣದ ವೆಚ್ಚದಲ್ಲಿ ಇಂಥ ಘೋರ ಯುದ್ಧ ನಡೆಸಿದ್ದಕ್ಕೆ ಪ್ರತಿಯಾಗಿ ಸರಿಯಾದ ಶಾಂತಿ ಒಪ್ಪಂದವನ್ನು ನಡೆಸುವುದೇ ನಾನಾ ದೇಶಗಳ ನಾಯಕರ ಮೇಲೆ ಆಗ ಬಿದ್ದ ಜವಾಬ್ದಾರಿ. ಅಪಾರ ನಷ್ಟ ಅನುಭವಿಸಿದ ರಾಷ್ಟ್ರಗಳೂ ಶಾಂತಿಯನ್ನು ಲಘುವಾಗಿ ಸ್ಥಾಪಿಸಲು ಇಷ್ಟಪಡಲಿಲ್ಲ. ಆದರೂ ತಮ್ಮ ತಮ್ಮ ದೇಶದ ಸ್ವಾರ್ಥಗಳನ್ನು ಮುಂದು ಮಾಡಿಕೊಂಡ ಶಾಂತಿ ಸಮ್ಮೇಳನದ ನಾಯಕರು ಅನೇಕ ವೇಳೆ ಆದರ್ಶವನ್ನೇ ಬಲಿಗೊಟ್ಟರು.

**ಶಾಂತಿ ಒಪ್ಪಂದಗಳು:** ಹೋರಾಟ ನಿಲ್ಲಿಸಿದ ತರುವಾಯ ಮಿತ್ರರಾಷ್ಟ್ರಗಳ ಪ್ರತಿನಿಧಿಗಳು ಪ್ಯಾರಿಸ್ ನಗರದಲ್ಲಿ ಸೇರಿ ಶಾಂತಿಯ ಒಪ್ಪಂದಗಳ ವಿಚಾರ ಪರ್ಯಾಲೋಚಿಸಲು ಮೊದಲಿಟ್ಟರು. ಮಿತ್ರರಾಷ್ಟ್ರಗಳಲ್ಲಿ ಸೇರಿದ್ದ ಪ್ರತಿರಾಷ್ಟ್ರದ ಪ್ರತಿನಿಧಿಯೂ ಅಲ್ಲಿಗೆ ಬಂದಿದ್ದ. ಅಮೆರಿಕ ಅಧ್ಯಕ್ಷ ವಿಲ್ಸನ್, ಬ್ರಿಟಿಷ್ ಪ್ರಧಾನಿ ಲಾಯ್ಡ್ ಜಾರ್ಜ್, ಫ್ರೆಂಚ್ ಪ್ರಧಾನಿ ಕ್ಲೆಮೆನ್ಸೂ ಇಟಲಿಯ ಪ್ರಧಾನ ಮಂತ್ರಿ ಆರ್ಲಾಂಡೋ ಇವರು ಈ ಮಾತುಕತೆಗಳಲ್ಲಿ ಭಾಗವಹಿಸಿದವರಲ್ಲಿ ಪ್ರಧಾನರು. ಪ್ಯಾರಿಸ್ ನಗರದಲ್ಲಿ ಸೇರಿದ ಮಿತ್ರಮಂಡಲಿಯ ಪ್ರಮುಖರು ಜಗತ್ತನ್ನೇ ಪುನಃ ಕಟ್ಟುವ ಕೆಲಸ ನಿರ್ವಹಿಸಬೇಕಾಗಿತ್ತು. ಅಧ್ಯಕ್ಷ ವಿಲ್ಸನ್ ಅಮೆರಿಕವನ್ನು ಯುದ್ಧದಲ್ಲಿ ಸೇರಿಸುವ ಮೊದಲು ತನ್ನ ಉದ್ದೇಶಗಳನ್ನು ಎಲ್ಲರಿಗೂ ತಿಳಿಯಪಡಿಸಿದ್ದ. ಯುದ್ಧ ಪುನಃ ಸಂಭವಿಸದಂಥ ವ್ಯವಸ್ಥೆ ಏರ್ಪಾಡಾಗಬೇಕೆಂಬುದು ಎಲ್ಲರ ಮನಸ್ಸಿನಲ್ಲೂ ಇತ್ತು. ವಿಲ್ಸನ್ ದೂರದೃಷ್ಟಿಯುಳ್ಳವ, ರಾಷ್ಟ್ರಗಳು ಜಾತಿ ಬಂಧುಗಳಂತಿದ್ದು ಅನ್ಯೋನ್ಯತೆಯಿಂದಿರಬೇಕು. ಮನಸ್ತಾಪಗಳು ತೋರಿದಾಗ ಅವು ನ್ಯಾಯ ರೀತಿಯಲ್ಲಿ ಪರಿಹಾರವಾಗಬೇಕು ಮತ್ತು ಯುದ್ಧ ಆಗಬಾರದು. ಇದು ಆತನ ಆಶಯ. ನಾನಾ ರಾಷ್ಟ್ರಗಳ ಮಧ್ಯೆ ಪಂಚಾಯಿತಿ ನಡೆಸಿ, ಜಗತ್ತಿನಲ್ಲಿ ನ್ಯಾಯ, ಶಾಂತಿಗಳನ್ನು ಕಾಪಾಡಬಲ್ಲ ಸಮಸ್ತ ರಾಷ್ಟ್ರಗಳ ಕೂಟವೊಂದು ಸ್ಥಾಪನೆಯಾಗಬೇಕೆಂಬುದಾಗಿ ಆತ ಹೇಳುತ್ತಿದ್ದ.

ಅಲ್ಲೋಲಕಲ್ಲೋಲವಾಗಿದ್ದ ಯುರೋಪಿನಲ್ಲಿ ಒಂದೊಂದು ಕುಲವೂ ಜಾತಿಯೂ ಪ್ರತ್ಯೇಕವಾಗಿ ಸ್ವತಂತ್ರ ರಾಷ್ಟ್ರನಿರ್ಮಾಣ ಮಾಡಿಕೊಳ್ಳುವುದಾದರೆ ಸ್ವಾತಂತ್ರ್ಯ ಸಾಧನೆಯ ಯುದ್ಧಗಳಿಗೆ ಅವಕಾಶವಿಲ್ಲದಂತಾದೀತೆಂದು ವಿಲ್ಸನ್ ಭಾವಿಸಿದ್ದ. ಆದ್ದರಿಂದ ಆತ ಮಧ್ಯ ಯುರೋಪಿನಲ್ಲಿ ಒಂದೊಂದು ಪಂಗಡವೂ ಪ್ರತ್ಯೇಕವಾಗಿ ಒಂದು ರಾಷ್ಟ್ರ ಕಟ್ಟಿಕೊಳ್ಳಲೆಂದು ವಾದಿಸಿದ. ಫ್ರೆಂಚರಿಗೆ ಆಲ್ಸೇಸ್–ಲೋರೇನ್ ಹಿಂತಿರುಗಿ ಬರಬೇಕಾಗಿತ್ತಲ್ಲದೆ ತಮಗಾದ ಅಪಾರ ನಷ್ಟವನ್ನು ಶತ್ರುಗಳಿಂದ ಕಟ್ಟಿಸಿಕೊಳ್ಳುವ ಉದ್ದೇಶವಿತ್ತು. ಬ್ರಿಟಿಷರಿಗೆ ಯುರೋಪಿನಲ್ಲಿ ಭೂಮಿಯ ಆಸೆಯಿರಲಿಲ್ಲ. ಆದರೆ ಜಲಾಂತರ್ಗಾಮಿಗಳ ಹಾವಳಿ ಅನುಭವಿಸಿದ್ದುದರಿಂದ ಶತ್ರುಗಳು ನಡೆಸಿದ ದೌಷ್ಟ್ಯವನ್ನೆಲ್ಲ ಕ್ಷಮಿಸಿ ಮರೆಯುವುದು ಸಾಧ್ಯವಿರಲಿಲ್ಲ. ಜರ್ಮನರನ್ನು ದಂಡಿಸಿ ಅವರಿಂದ ತಮ್ಮ ನಷ್ಟಕ್ಕೆ ತಕ್ಕ ಪರಿಹಾರದ್ರವ್ಯ ಪಡೆಯಬೇಕೆಂದು ಫ್ರೆಂಚರಂತೆ ಬ್ರಿಟಿಷರೂ ಭಾವಿಸಿದರು. ಇತರ ರಾಷ್ಟ್ರಗಳೂ ಜಯದಿಂದ ಲಾಭಗಿಟ್ಟಿಸುವ ಆಸೆ ಹೊಂದಿದ್ದುವು. ಯುದ್ಧದ ವೇಳೆಯಲ್ಲಿ ಪರಸ್ಪರವಾಗಿ ನೀಡಿದ ರಹಸ್ಯ ವಾಗ್ದಾನಗಳ ವಿಚಾರವನ್ನು ಬೇರೆ ಪರಿಶೀಲಿಸಬೇಕಾಗಿತ್ತು. ಸರ್ವರಿಗೂ ನ್ಯಾಯವೂ ಕ್ಷೇಮವೂ ಆಗಿರುವಂತೆ ಸಂಧಾನ ನೆರವೇರಿಸಬೇಕೆಂದಿದ್ದ ವಿಲ್ಸನ್‌ನ ಬಳಿಗೆ ಪ್ರತಿಯೊಂದು ದೇಶವೂ ನಿಯೋಗಗಳನ್ನು ಕಳುಹಿಸಿಕೊಟ್ಟಿತು. ಆತನಿಗೂ ಇತರರಿಗೂ ಬರಬರುತ್ತಾ ಹೊಂದಿಕೆ ಕಡಿಮೆಯಾಯಿತು. ಆದರೆ ಯಾರೂ ತಮ್ಮ ಆಸೆಗಳನ್ನೆಲ್ಲ ಸಾಧಿಸಿಕೊಳ್ಳಲಾಗಲಿಲ್ಲ. ಎಷ್ಟೋ ಗೋಷ್ಠಿಗಳೂ ಚರ್ಚೆಗಳೂ ನಡೆದ ಬಳಿಕ ಪ್ಯಾರಿಸಿನಲ್ಲೇ ಈ ಬಗ್ಗೆ ಒಪ್ಪಂದಗಳಾದವು. ಈ ಎಲ್ಲ ಕರಾರುಗಳನ್ನೂ ವರ್ಸೇಲ್ಸ್ ಒಪ್ಪಂದಗಳೆಂದು ಕರೆಯುವುದು ವಾಡಿಕೆಯಾದರೂ ಜರ್ಮನಿಯೊಂದಿಗೆ ಮಾಡಿಕೊಂಡ ಒಪ್ಪಂದಕ್ಕೆ ಮಾತ್ರ ಈ ಹೆಸರು ಅನ್ವರ್ಥವಾದದ್ದು. ಅದು ಆದದ್ದು ಪ್ಯಾರಿಸಿನ ಬಳಿಯ ವರ್ಸೇಲ್ಸ್ ನಗರದಲ್ಲಿ, ಆಸ್ಟ್ರಿಯ, ಬಲ್ಗೇರಿಯ, ತುರ್ಕಿ, ಹಂಗರಿಗಳೊಡನೆ ಬೇರೆಬೇರೆಯಾದ ಒಪ್ಪಂದಗಳೇ ಆದವು.

**ವರ್ಸೇಲ್ಸ್ ಒಪ್ಪಂದ:** 1919ರ ಜೂನ್ 28ರಂದು ಮಿತ್ರರಾಷ್ಟ್ರಗಳು ಜರ್ಮನಿಯೊಡನೆ ವರ್ಸೇಲ್ಸ್‌ನಲ್ಲಿ ಒಪ್ಪಂದ ಮಾಡಿಕೊಂಡವು. ಇದರ ಉದ್ದೇಶ ಅದರ ಪೀಠಿಕೆಯಲ್ಲಿ ಹೇಳಿರುವಂತೆ ಯುದ್ಧವಾತಾವರಣವನ್ನು ಕೊನೆಗಾಣಿಸಿ ಶಾಶ್ವತವಾದ ಶಾಂತಿ ಸ್ಥಾಪಿಸುವುದು. ಈ ಒಪ್ಪಂದ 15 ಭಾಗಗಳನ್ನು ಒಳಗೊಂಡಿದ್ದಿತು. ಇವಲ್ಲದೆ 140ರಷ್ಟು ಬೇರೆ ಬೇರೆ ಷರತ್ತುಗಳೂ ಅನೇಕ ಅನುಬಂಧಗಳೂ ಸೇರಿದ್ದವು.

ಆಲ್ಸೇಸ್–ಲೋರೇನ್ ಪ್ರದೇಶವನ್ನು ಫ್ರಾನ್ಸಿಗೆ ಹಿಂದಿರುಗಿಸಲಾಯಿತು. ಬೆಲ್ಜಿಯಂ ಸರ್ಕಾರ ನಡೆಸಿದ ಜನಮತಗಣನೆಯ ಆಧಾರದ ಮೇಲೆ ಆ ದೇಶಕ್ಕೆ 70,000 ಜನಸಂಖ್ಯೆಯುಳ್ಳ ಯೂಪೇನ್, ಮಾಲ್ಮೇಡೀ ಮತ್ತು ಮಾರ್‌ಸೆನಟ್‌ಗಳನ್ನು ಕೊಡಲಾಯಿತು. ಮತ್ತೊಂದು ಜನಮತಗಣನೆಯ ಆಧಾರದ ಮೇಲೆ ಡೆನ್ಮಾರ್ಕಿಗೆ ಉತ್ತರ ಷ್ಲೆಸ್‌ವಿಗ್ ಪ್ರಾಂತ ಕೊಡಲಾಯಿತು. ಪ್ರಷ್ಯ ಮತ್ತು ಆಸ್ಟ್ರಿಯ ಈ ಪ್ರಾಂತವನ್ನು ಡೆನ್ಮಾರ್ಕಿನಿಂದ ಕಸಿದುಕೊಂಡಿದ್ದವು (1864). ದಕ್ಷಿಣ ಷ್ಲೆಸ್‌ವಿಗ್ ಮಾತ್ರ ಜರ್ಮನಿಯಲ್ಲೇ ಉಳಿಯಿತು. ಉತ್ತರ ಸೈಲೇಷಿಯ ಪ್ರಾಂತದ ಒಂದು ಸಣ್ಣ ಭಾಗ ಹೋದದ್ದು ಚೆಕೊಸ್ಲೊವಾಕಿಯಕ್ಕೆ, ಹೊಸದಾಗಿ ಸ್ವಾತಂತ್ರ್ಯ ಪಡೆದ ಪೋಲೆಂಡಿಗೆ ಜರ್ಮನಿಯ ಪೋಸೆನ್ ಪ್ರಾಂತದ ಹಲವು ಭಾಗಗಳು ಮತ್ತು ಅಷ್ಟು ಪೋಲಿಷ್ ಜನಾಂಗದವರು ವಾಸಿಸುತ್ತಿದ್ದ 402.50ಮೀ ಉದ್ದ, 128.80 ಮೀ ಅಗಲವಿದ್ದ ಪಶ್ಚಿಮ ಪ್ರಷ್ಯವನ್ನು ಕೊಡಲಾಯಿತು. ಜರ್ಮನ್ ಜನಾಂಗದವರೇ ಹೆಚ್ಚಾಗಿದ್ದ ಡ್ಯಾನ್‌ಸಿಗ್ ಪಟ್ಟಣವನ್ನು ರಾಷ್ಟ್ರಗಳ ಕೂಟದ ಕೈಕೆಳಗೆ ಸ್ವತಂತ್ರ ಪಟ್ಟಣವೆಂದು ಘೋಷಿಸಲಾಯಿತು. ಆದರೆ ಪೋಲೆಂಡಿಗೆ ಈ ನಗರದ ಮೇಲೆ ಹಲವು ತಾಂತ್ರಿಕ ಹಾಗೂ ಆರ್ಥಿಕ ಹಕ್ಕುಗಳು ದೊರಕಿದವು.

ಜರ್ಮನರು ಯುದ್ಧಪೂರ್ವದಲ್ಲಿ ತಮಗೆ ಸೇರಿದ್ದ ವಸಾಹತುಗಳನ್ನು ಮಿತ್ರ ರಾಷ್ಟ್ರಗಳ ಸ್ವಾಧೀನಕ್ಕೆ ಒಪ್ಪಿಸಿದರು. ಇವು ರಾಷ್ಟ್ರಗಳ ಕೂಟದ ನಿಯುಕ್ತ ಪ್ರದೇಶಗಳಾಗಿ ಗ್ರೇಟ್‌ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಜಪಾನ್, ದಕ್ಷಿಣ ಆಫ್ರಿಕ ಒಕ್ಕೂಟ, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ಗಳ ವಶಕ್ಕೆ ಬಂದವು. ಜರ್ಮನಿ ಚೀನದ ಕ್ವೇಚಾವ್ ಪ್ರಾಂತದಲ್ಲಿ ಅನುಭವಿಸುತ್ತಿದ್ದ ವಿಶೇಷ ಹಕ್ಕು ಸೌಲಭ್ಯಗಳನ್ನು ಜಪಾನಿಗೆ ಬಿಟ್ಟುಕೊಡಬೇಕಾಯಿತು. ಚೀನ, ಥೈಲೆಂಡ್, ಲೈಬೇರಿಯ, ಮೊರಾಕೋ ಮತ್ತು ಈಜಿಪ್ಟ್‌ಗಳಲ್ಲಿ ಜರ್ಮನಿ ಹೊಂದಿದ್ದ ಎಲ್ಲ ವಿಶೇಷ ಹಕ್ಕುಗಳನ್ನೂ ಕಿತ್ತುಕೊಳ್ಳಲಾಯಿತು. ಜರ್ಮನರಿಗೆ ತುರ್ಕಿ ಮತ್ತು ಬಲ್ಗೇರಿಯಗಳಲ್ಲಿ ಸೇರಿದ್ದ ಆಸ್ತಿಪಾಸ್ತಿಗಳೂ ಮುಟ್ಟುಗೋಲಾದುವು.

ಲಕ್ಸೆಂಬರ್ಗನ್ನು ಜರ್ಮನ್ ಒಕ್ಕೂಟದಿಂದ ಬೇರ್ಪಡಿಸಲಾಯಿತು. ಅಲ್ಲಿಯ ರೈಲ್ವೆಗಳನ್ನು ಬಳಸಿಕೊಳ್ಳುವ ಹಕ್ಕೂ ಮೊಟಕುಗೊಂಡಿತು. ಜರ್ಮನಿ ರೈನ್ ನದಿಯ ಎಡದಂಡೆ ಯಲ್ಲಾಗಲೀ ಬಲದಂಡೆಯಲ್ಲಾಗಲೀ ಯಾವುದೇ ವಿಧವಾದ ರಕ್ಷಣೆಗೆ ಸೈನ್ಯಕಾರ್ಯಾಚರಣೆಗೆ ಸಂಬಂಧ ಪಟ್ಟಂಥ ಕಟ್ಟಡಗಳನ್ನು ಕೋಟೆ ಕೊತ್ತಲಗಳನ್ನು ಕಟ್ಟಕೂಡದೆಂದು ತೀರ್ಮಾನಿಸಲಾಯಿತು.

ಜರ್ಮನಿಯಿಂದ ಫ್ರಾನ್ಸಿಗೆ ಸ್ಯಾರ್ ಕಲ್ಲಿದ್ದಲು ಗಣಿ ಪ್ರದೇಶ ವರ್ಗವಾಯಿತು. ಒಂದನೆಯ ಮಹಾಯುದ್ಧ ಕಾಲದಲ್ಲಿ ಅದು ಫ್ರಾನ್ಸಿನ ಉತ್ತರ ಭಾಗದ ಅನೇಕ ಕಲ್ಲಿದ್ದಲು ಗಣಿಗಳನ್ನು ನಾಶಮಾಡಿದ್ದಕ್ಕೆ ಇದು ಪರಿಹಾರ; ಅಲ್ಲದೆ ಯುದ್ಧ ವೆಚ್ಚದ, ಒಂದು ಭಾಗಕ್ಕೆ ಇದು ಉತ್ತರ. ಇದಲ್ಲದೆ 15 ವರ್ಷಗಳ ಕಾಲ ಸ್ಯಾರ್ ಆಡಳಿತವನ್ನು ರಾಷ್ಟ್ರಗಳ ಕೂಟದ ಒಂದು ಸಮಿತಿಯ ಕೈಗೆ ಒಪ್ಪಿಸಬೇಕೆಂದು ತೀರ್ಮಾನವಾಯಿತು. ಜರ್ಮನಿ ಆಸ್ಟ್ರಿಯದ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕಾಯಿತು.

ವರ್ಸೇಲ್ಸ್ ಒಪ್ಪಂದದ 5ನೆಯ ಭಾಗದಲ್ಲಿ ಸೈನ್ಯ, ಜಲನೌಕೆ ಮತ್ತು ವಿಮಾನದಳಗಳಿಗೆ ಸಂಬಂಧಪಟ್ಟಂಥ ಕಾನೂನುಗಳಿವೆ. ಜರ್ಮನ್ ಸೈನ್ಯಬಲ 400 ಸೇನಾನಾಯಕರೂ ಸೇರಿ 1,00,000ಕ್ಕಿಂತ ಮೀರಬಾರದೆಂದಾಯಿತು. ಒಳನಾಡಿನ ಶಾಂತಿಸ್ಥಾಪನೆಯಲ್ಲಿ ನೆರವು ನೀಡುವುದೂ ದೇಶದ ಮೇರೆಗಳನ್ನು ಕಾಪಾಡಿಕೊಂಡು ಬರುವುದು ಮಾತ್ರವೇ ಇದರ ಕರ್ತವ್ಯ.

ಸೈನ್ಯಕ್ಕೆ ಬೇಕಾದ ಶಸ್ತ್ರಾಸ್ತ್ರ, ಮದ್ದುಗುಂಡುಗಳ ತಯಾರಿಕೆಯನ್ನೂ ಒಂದು ಮಿತಿಗಿಂತ ಹೆಚ್ಚಿಸುವಂತಿರಲಿಲ್ಲ. ಇವನ್ನು ಮಿತ್ರ ರಾಷ್ಟ್ರಗಳು ಸೂಚಿಸಿದ ಸ್ಥಳಗಳಲ್ಲಿ ಮಾತ್ರ ದಾಸ್ತಾನು ಮಾಡಬೇಕೆಂಬುದೂ ಒಂದು ಷರತ್ತು. ಯುದ್ಧಕ್ಕೆ ಸಂಬಂಧಪಟ್ಟ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವುದೂ ವಿಷವಾಯುಗಳು ಶಸ್ತ್ರಾಸ್ತ್ರಸಜ್ಜಿತವಾದ ವಾಹನಗಳು ಮತ್ತು ಟ್ಯಾಂಕುಗಳನ್ನು ತಯಾರಿಸುವುದೂ ಕೊಳ್ಳುವುದೂ ನಿಷಿದ್ಧ. ಬಲವಂತದಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವ ಕಾನೂನನ್ನು ತೆಗೆದುಹಾಕಿ ಸ್ವಂತ ಇಚ್ಛೆಯಿಂದ ಬರುವವರಿಗೆ ಮಾತ್ರ ಅವಕಾಶ ಕಲ್ಪಿಸಲಾಯಿತು. ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾಲಯಗಳು, ನಿವೃತ್ತರಾದ ಸೈನಿಕರ ಸಂಘಗಳು, ಷೂಟಿಂಗ್ ಕ್ಲಬ್‌ಗಳು ಪ್ರವಾಸಿ ಸಂಘಗಳೇ ಮುಂತಾದ ಎಲ್ಲ ಬಗೆಯ ಸಂಘ ಸಂಸ್ಥೆಗಳು ಸೈನ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುವುದನ್ನಾಗಲೀ, ಆ ವಿಷಯಗಳ ಬಗ್ಗೆ ಗಮನ ಹರಿಸುವುದನ್ನಾಗಲೀ ನಿಷೇಧಿಸಲಾಯಿತು.

ನೌಕಾದಳಕ್ಕೆ ಸಂಬಂಧಪಟ್ಟ ಷರತ್ತುಗಳು ಅಷ್ಟೇ ಕಠಿಣ. ಆರು ಯುದ್ಧ ನೌಕೆಗಳನ್ನು ಮಾತ್ರ ಅದು ಇಟ್ಟುಕೊಳ್ಳಬಹುದಾಗಿತ್ತು; ಜಲಾಂತರ್ಗಾಮಿಗಳನ್ನಿಟ್ಟುಕೊಳ್ಳುವಂತಿರಲಿಲ್ಲ. ಹೊಸದಾಗಿ ಯುದ್ಧನೌಕೆಗಳನ್ನು ಕಟ್ಟಬಾರದೆಂಬುದೂ ಒಂದು ವಿಧಿ, ನೌಕಾಬಲದ ಗಾತ್ರವನ್ನು 15,000ಕ್ಕೆ ಮಿತಿಗೊಳಿಸಲಾಯಿತು. ಈ ಸಂಖ್ಯೆಯಲ್ಲಿ 1500 ಜನ ಅಧಿಕಾರಿಗಳು. ವಾಣಿಜ್ಯನೌಕೆಯಲ್ಲಿ ಕೆಲಸ ಮಾಡುವ ಯಾವ ಜರ್ಮನನೂ ಯುದ್ಧನೌಕಾದಳದ ತರಬೇತಿ ತೆಗೆದುಕೊಳ್ಳುವಂತಿರಲಿಲ್ಲ. ಅನುಮತಿ ನೀಡಲಾದ ಸಂಖ್ಯೆಗಿಂತ ಹೆಚ್ಚಿಗೆ ಇದ್ದ ಎಲ್ಲ ನೌಕೆಗಳನ್ನೂ ಜರ್ಮನಿ ನಾಶಮಾಡಬೇಕಾಯಿತು. ಅದು ವಿಮಾನದಳ ಹೊಂದುವುದಕ್ಕೂ ಅವಕಾಶವಿರಲಿಲ್ಲ. ವಾಯುದಳಕ್ಕೆ ಸಂಬಂಧಪಟ್ಟ ಎಲ್ಲ ವಸ್ತುಗಳನ್ನೂ ಮಿತ್ರರಾಷ್ಟ್ರಗಳಿಗೆ ಹಿಂತಿರುಗಿಸಬೇಕಾಯಿತು.

ಜರ್ಮನಿ ಮತ್ತು ಅದರ ಮಿತ್ರರು ಮಹಾಯುದ್ಧಕ್ಕೆ ಕಾರಣರೆಂದು, ಆಕ್ರಮಣಕಾರರೆಂದು ಮತ್ತು ವಿನಾಶಕಾರಣರಾದವರೆಂದು ಘೋಷಿಸಲಾಯಿತು. ಯುದ್ಧದ ಸಾಮಾನ್ಯ ಕಾನೂನುಗಳನ್ನು ಮೀರಿ ಕ್ರೂರವಾಗಿ ವರ್ತಿಸಿದ ಎಲ್ಲರನ್ನೂ ಲೈಪ್‍ಜಿಗ್‍ನಲ್ಲಿ ವಿಚಾರಿಸಿ ಶಿಕ್ಷಿಸಬೇಕೆಂಬುದೂ ಈ ಒಪ್ಪಂದದ ಒಂದು ಅಂಶ. ಜರ್ಮನ್ ಚಕ್ರವರ್ತಿ ಎರಡನೆಯ ವಿಲಿಯಂನನ್ನು ಸಾರ್ವಜನಿಕವಾಗಿ ವಿಮರ್ಶಿಸಿ, ಅವನು ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ನೈತಿಕ ಪತನವನ್ನುಂಟುಮಾಡಿದ ವ್ಯಕ್ತಿ ಎಂದು ಪರಿಗಣಿಸಲಾಯಿತು. ವಿಶೇಷ ಸಮಿತಿಯೊಂದನ್ನು ಸ್ಥಾಪಿಸಿ ಅವನನ್ನು ವಿಚಾರಣೆಗೆ ಗುರಿಮಾಡಬೇಕೆಂಬುದೂ ಇಲ್ಲಿ ಆದ ಒಂದು ನಿರ್ಣಯ. ಮಿತ್ರರಾಷ್ಟ್ರಗಳಿಗೆ ಚಿನ್ನ, ಹಡಗುಗಳು, ಸೆಕ್ಯೂರಿಟಿಗಳು ಮತ್ತು ಪದಾರ್ಥಗಳ ಮೂಲಕ ಸು.500,00,000 ಡಾಲರ್ ಪರಿಹಾರ ಜರ್ಮನಿ ಕೊಡಬೇಕೆಂದು ತೀರ್ಮಾನಿಸಲಾಯಿತು.

ಇಷ್ಟು ಪರಿಹಾರಧನವನ್ನು ಪೂರ್ಣ ಹಣದ ರೂಪದಲ್ಲಿ ಕೊಡಲು ಜರ್ಮನಿ ಅಶಕ್ತವಾಗಿದ್ದುದರಿಂದ, ಅದು ಒಂದು ಭಾಗವನ್ನು ಮಿತ್ರರಾಷ್ಟ್ರಗಳು ಸೂಚಿಸುವ ಪದಾರ್ಥ ರೂಪದಲ್ಲಿ ಕೊಡಬಹುದಾಗಿತ್ತು. ಮಿತ್ರರಾಷ್ಟ್ರಗಳು ಕಳೆದುಕೊಂಡಿದ್ದ ನೌಕೆಗಳ ಬದಲಾಗಿ ಜರ್ಮನಿ ಕೊಡಬೇಕಾಗಿಬಂದ ವಾಣಿಜ್ಯನೌಕೆಗಳ ಸಂಖ್ಯೆ 1600.

ಜರ್ಮನಿ ಪ್ರತಿವರ್ಷ ಈ ಕೆಳಕಂಡಂತೆ ಕಲ್ಲಿದ್ದಲನ್ನು 10 ವರ್ಷಗಳ ಕಾಲ ಕೊಡಬೇಕು: ಫ್ರಾನ್ಸಿಗೆ 70,00,000 ಟನ್ನುಗಳು; ಬೆಲ್ಜಿಯಂಗೆ 80,00,000 ಟನ್ನುಗಳು; ಇಟಲಿಗೆ 77,00,000 ಟನ್ನುಗಳು. ಇದಲ್ಲದೆ ಫ್ರಾನ್ಸಿಗೆ ಜರ್ಮನಿ ಮೂರು ವರ್ಷಗಳ ಕಾಲ 35,000 ಟನ್ ಬೆಂಜ಼ಾಲ್, 50,000 ಟನ್ ಕೋಲ್ ಟಾರ್ ಮತ್ತು 30,000 ಟನ್ ಅಮೋನಿಯಂ ಸಲ್ಫೇಟನ್ನೂ ಕೊಡಬೇಕೆಂದು ವಿಧಿಸಲಾಯಿತು.

ಒಟ್ಟಿನಲ್ಲಿ ವರ್ಸೇಲ್ಸ್ ಒಪ್ಪಂದದಿಂದ ಜರ್ಮನಿಯ ವಿಸ್ತೀರ್ಣ ಮತ್ತು ಜನಸಂಖ್ಯೆ ಕಡಿಮೆಯಾಯಿತು. ಕಡಿಮೆಯಾದ ಜನಸಂಖ್ಯೆ 6,00,000. ಜರ್ಮನಿಯ ಎಲ್ಲ ವಸಾಹತುಗಳೂ ನಷ್ಟವಾದುವಲ್ಲದೆ ಹೊರದೇಶಗಳಲ್ಲಿ ತೊಡಗಿಸಿದ್ದ ಬಂಡವಾಳ, ಆಸ್ತಿಪಾಸ್ತಿಗಳಿಗೆ ಮುಟ್ಟುಗೋಲು ಹಾಕಲಾಯಿತು. 15.5% ವ್ಯವಸಾಯದ ಭೂಮಿಯನ್ನು, 12% ಜಾನುವಾರುಗಳನ್ನು ಮತ್ತು 10% ಕಾರ್ಖಾನೆಗಳನ್ನು ಜರ್ಮನಿ ಕಳೆದುಕೊಂಡಿತು. ಜರ್ಮನಿಯ ವಾಣಿಜ್ಯ ಹಡಗುಗಳನ್ನು 57,00,000 ಟನ್ನುಗಳಿಂದ 5,00,000 ಟನ್ನುಗಳಿಗೆ ಇಳಿಸಲಾಯಿತು. ಹಡಗುಬಲದಲ್ಲಿ ಅದು ಪಡೆದಿದ್ದ ಎರಡನೆಯ ಸ್ಥಾನ ನಷ್ಟವಾಯಿತು. ಜರ್ಮನಿಯ ಸೈನ್ಯ ಬೆಲ್ಜಿಯಂ ದೇಶದ ಸೈನ್ಯಕ್ಕಿಂತ ಸ್ವಲ್ಪ ಹೆಚ್ಚಾಗಿತ್ತಷ್ಟೆ. ಒಪ್ಪಂದದ ಪ್ರಕಾರ ಅದು ಐರೋಪ್ಯ ರಾಷ್ಟ್ರಗಳಿಗೆ ಪೊಟಾಷ್, ಕಬ್ಬಿಣ, ಕಲ್ಲಿದ್ದಲು, ಸತು, ಸೀಸ ಮುಂತಾದವನ್ನು ಕೊಡಬೇಕಾಗಿ ಬಂದದ್ದರಿಂದ ಅದು ಕೈಗಾರಿಕಾ ರಾಷ್ಟ್ರವಾಗಿ ತಲೆ ಎತ್ತುವುದು ಕಷ್ಟವಾಯಿತು. ವಸಾಹತುಗಳನ್ನು ಕಳೆದುಕೊಂಡಿದ್ದರಿಂದ ರಬ್ಬರ್, ಎಣ್ಣೆ ಮತ್ತು ಹತ್ತಿಗಳ ಪೂರೈಕೆಯೂ ತಪ್ಪಿತು. ಕೊನೆಯದಾಗಿ ಜರ್ಮನಿ ಖಾಲಿ ಚೆಕ್ಕನ್ನು ಕೊಟ್ಟು ಮಿತ್ರರಾಷ್ಟ್ರಗಳು, ನಿರ್ಧರಿಸಿದಷ್ಟು ಪರಿಹಾರವನ್ನು ಕೊಡುವುದಕ್ಕೆ ಒಪ್ಪಿಕೊಳ್ಳಬೇಕಾದ್ದೊಂದು ದೊಡ್ಡ ನಷ್ಟ.

ಆಸ್ಟ್ರಿಯದೊಡನೆ ಸೆಂಟ್–ಜರ್ಮೇನ್ ಒಪ್ಪಂದ: ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ಇಟಲಿಗಳು ಆಸ್ಟ್ರಿಯದೊಡನೆ ಸೆಂಟ್–ಜರ್ಮೇನ್ ಒಪ್ಪಂದ ಮಾಡಿಕೊಂಡವು. ಇದು ಮೂಲತಃ ವರ್ಸೇಲ್ಸ್ ಒಪ್ಪಂದವನ್ನೆ ಹೋಲುತ್ತಿತ್ತು. ಆಸ್ಟ್ರಿಯ ಇಟಲಿಗೆ ದಕ್ಷಿಣ ಟಿರೋಲು ಟ್ರೆಂಟೀನೋ, ಟ್ರೀಯಸ್ಟ್, ಐಸ್ಟ್ರಿಯ ಮತ್ತು ಡಾಲ್ಮೇಷಿಯಕ್ಕೆ ಆಚೆ ಇದ್ದ ಕೆಲವು ದ್ವೀಪಗಳನ್ನು ಬಿಟ್ಟುಕೊಟ್ಟಿತು. ಯುದ್ಧಕ್ಕೆ ಪೂರ್ವದಲ್ಲಿ ಆಸ್ಟ್ರಿಯಕ್ಕೆ ಸೇರಿದ್ದ ಬೊಹಿಮಿಯ, ಮೊರಾವಿಯ, ದಕ್ಷಿಣ ಆಸ್ಟ್ರಿಯದ ಕೆಲವು ಭಾಗಗಳು ಆಸ್ಟ್ರಿಯನ್ ಸೈಲೀಷಿಯದ ಮುಕ್ಕಾಲು ಭಾಗ ಈ ಪ್ರದೇಶಗಳನ್ನು ಸೇರಿಸಿ ಚೆಕೊಸ್ಲೊವಾಕಿಯದ ಒಂದು ಭಾಗವನ್ನಾಗಿ ಮಾಡಲಾಯಿತು. ಹೆಚ್ಚಾಗಿ ಕೈಗಾರಿಕೆಗಳಿಂದ ಆವೃತವಾಗಿದ್ದ ಟಿಷೇನ್ ಡಿಸ್ಟ್ರಿಕ್ಟನ್ನು ಪೋಲೆಂಡ್ ಮತ್ತು ಚೆಕೊಸ್ಲೊವಾಕಿಯಗಳಿಗೆ ಹಂಚಿಕೊಡಲಾಯಿತು. ಬುಕೋವಿನವನ್ನು ರೊಮೇನಿಯಕ್ಕೆ ಕೊಡಲಾಯಿತು. ಬಾಸ್ನಿಯ, ಹರ್ಸಗೋವಿನ ಮತ್ತು ಡಾಲ್ಮೇಷಿಯನ್ ತೀರಪ್ರದೇಶ ಮತ್ತು ದ್ವೀಪಗಳು ಯುಗೊಸ್ಲಾವಿಯಕ್ಕೆ ದೊರಕಿದುವು. ಒಟ್ಟಿನಲ್ಲಿ ಮೊದಲಿದ್ದುದಕ್ಕಿಂತ ಜನಸಂಖ್ಯೆಯಲ್ಲಿ ಮತ್ತು ವಿಸ್ತೀರ್ಣದಲ್ಲಿ ಐರಷ್ಟು ಕಡಿಮೆಯಾಯಿತು. ಆಸ್ಟ್ರಿಯ ಸಂಪೂರ್ಣವಾಗಿ ತನ್ನ ನೌಕಾಬಲವನ್ನು ಕಳೆದುಕೊಂಡಿತು. ಉಳಿದದ್ದೆಂದರೆ ಡ್ಯಾನ್ಯೂಬ್ ನದಿಯ ಮೇಲೆ 3 ಪೊಲೀಸ್ ದೋಣಿಗಳು ಮಾತ್ರ. ಅದು ಇಟ್ಟುಕೊಳ್ಳಬಹುದಾಗಿದ್ದ ಸೈನ್ಯ 30,000.

ಬಲ್ಗೇರಿಯದೊಡನೆ ನ್ಯೂಯಿಲಿ ಒಪ್ಪಂದ: ಬಲ್ಗೇರಿಯದೊಡನೆ ನ್ಯೂಯಿಲಿ ಒಪ್ಪಂದವಾಯಿತು (1919ರ ನವೆಂಬರ್ 27). ರಕ್ಷಣೆ, ರೈಲ್ವೆ ಮೊದಲಾದ ಕಾರಣಗಳಿಂದ ಪಶ್ಚಿಮ ಬಲ್ಗೇರಿಯದ ನಾಲ್ಕು ಚಿಕ್ಕಪ್ರದೇಶಗಳು ಯೂಗೊಸ್ಲಾವಿಯಕ್ಕೂ ಪಶ್ಚಿಮ ಥ್ರೇಸ್ ಗ್ರೀಸಿಗೂ ಸೇರಿದವು. ಗ್ರೀಸ್–ಬಲ್ಗೇರಿಯ ಮೇರೆಗಳಲ್ಲಿ ಸೂಕ್ತವಾದ ಬದಲಾವಣೆಗಳೂ ಆದವು. ಇದರಿಂದ ಬಲ್ಗೇರಿಯಕ್ಕೆ ಈಜಿಯನ್ ಸಮುದ್ರತೀರ ನಷ್ಟವಾಯಿತು. ಆರ್ಥಿಕ ಪ್ರಗತಿಗಾಗಿ ಮಾತ್ರ ಬಲ್ಗೇರಿಯಕ್ಕೆ ತೀರಪ್ರದೇಶಕ್ಕೆ ಪ್ರವೇಶ ದೊರಕಿಸಿಕೊಡಲು ಮಿತ್ರರಾಷ್ಟ್ರಗಳು ಒಪ್ಪಿದವು.

ಬಲ್ಗೇರಿಯದ ಸೈನ್ಯದ ಸಂಖ್ಯೆಯನ್ನು 20,000ಕ್ಕೆ ಇಳಿಸಲಾಯಿತು. ಇದರ ಜೊತೆಗೆ ಅದು 13,000 ದಷ್ಟು ಸೈನ್ಯಾಧಿಕಾರಿಗಳನ್ನು ಇಟ್ಟುಕೊಳ್ಳಬಹುದಾಗಿತ್ತು. 33,000ಕ್ಕಿಂತ ಹೆಚ್ಚಿನ ಬಂದೂಕುಗಳನ್ನು ಬಲ್ಗೇರಿಯ ಇಟ್ಟುಕೊಳ್ಳುವಂತಿರಲಿಲ್ಲ. ವಿಸ್ತೀರ್ಣ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಬಲ್ಗೇರಿಯಕ್ಕೆ ಆದ ನಷ್ಟ ಅಂಥ ಹೆಚ್ಚಿನದೇನಲ್ಲ. ಆದರೆ ಬಲ್ಗೇರಿಯ ಸಮುದ್ರತೀರವನ್ನು ಹೊಂದದ ರಾಷ್ಟ್ರವಾಗಿ ಬದಲಾವಣೆಗೊಂಡದ್ದರಿಂದ, ಆ ದೇಶ ಬಾಲ್ಕನ್ ರಾಷ್ಟ್ರಗಳಲ್ಲೆಲ್ಲ ಬಹು ಅಶಕ್ತ ರಾಷ್ಟ್ರವಾಗಿ ಪರಿಣಮಿಸಿತು.

ಹಂಗರಿಯೊಂದಿಗೆ ಟ್ರಿಯಾನಾನ್ ಒಪ್ಪಂದ: ವರ್ಸೇಲ್ಸ್‌ನ ಟ್ರಿಯಾನಾನ್ ಅರಮನೆಯಲ್ಲಿ ಹಂಗರಿಯೊಡನೆ ಮಿತ್ರರಾಷ್ಟ್ರಗಳು ಒಪ್ಪಂದ ಮಾಡಿಕೊಂಡುವು (1920ರ ಜೂನ್ 4). ಹಂಗರಿಯ ಸುತ್ತಮುತ್ತ ಇದ್ದ ರಾಜ್ಯಗಳಿಗೆ ಕೆಲವು ಸಣ್ಣಪುಟ್ಟ ಪ್ರದೇಶಗಳನ್ನು ಹಂಚಿಕೊಡಲಾಯಿತು. ಟ್ರಾನ್ಸಿಲ್‌ವೇನಿಯ ಮತ್ತು ಸು. 15ಲಕ್ಷ ಮಗ್ಯಾರರನ್ನು ರೊಮೇನಿಯಕ್ಕೂ ಕ್ರೋಷಿಯ–ಸ್ಲವೋನಿಯ ಪ್ರದೇಶಗಳನ್ನೂ 5ಲಕ್ಷ ಮಗ್ಯಾರರನ್ನೂ ಯುಗೋಸ್ಲಾವಿಯಕ್ಕೂ ಸೇರಿಸಲಾಯಿತು. ಸ್ಲೊವಾಕಿಯ ಹೊಸದಾಗಿ ಸ್ಥಾಪಿಸಲ್ಪಟ್ಟ ಚೆಕೊಸ್ಲಾವಾಕಿಯ ಗಣರಾಜ್ಯದ ಭಾಗವಾಯಿತು. ಕಾರ್ಪೇಥಿಯನ್ ಪರ್ವತಗಳ ಪೂರ್ವ ಮತ್ತು ದಕ್ಷಿಣಕ್ಕಿದ್ದ ಕೆಲವು ಪ್ರದೇಶಗಳು ಸೇರಿದ್ದೂ ಚೆಕೊಸ್ಲಾವಾಕಿಯಕ್ಕೆ. ಸು. 5ಲಕ್ಷ ಮಗ್ಯಾರರೂ 5ಲಕ್ಷ ರೂಥೇನಿಯನ್ ಜನರೂ ಈ ರೀತಿಯಾಗಿ ಚೆಕೊಸ್ಲಾವಾಕಿಯ ಗಣರಾಜ್ಯಕ್ಕೆ ಸೇರಿಹೋದರು. ಆಸ್ಟ್ರಿಯ ಪಶ್ಚಿಮ ಹಂಗರಿಯನ್ನು ಪಡೆಯಿತು. ಉಳಿದ ವಿಚಾರಗಳಲ್ಲಿ ಇದೂ ಆಸ್ಟ್ರಿಯ ಮತ್ತು ಬಲ್ಗೇರಿಯಗಳೊಡನೆ ಮಾಡಿಕೊಂಡ ಒಪ್ಪಂದಗಳಂತೆಯೇ ಇದೆ. ಹಂಗರಿಯ ಸೈನ್ಯ ನಿಗದಿಯಾದದ್ದು 35,000ಕ್ಕೆ. ಹಂಗರಿಯ ನೌಕಾಬಲವನ್ನು ಕೆಲವು ದೋಣಿಗಳಿಗೆ ಮಾತ್ರ ಸೀಮಿತಗೊಳಿಸಲಾಯಿತು. ಹಂಗರಿಯೂ ಪರಿಹಾರಧನ ಕೊಡಬೇಕಾಯಿತು.

ಒಂದನೆಯ ಮಹಾಯುದ್ಧ ಮತ್ತು ಪ್ಯಾರಿಸ್ ಶಾಂತಿಒಪ್ಪಂದಗಳ ಪರಿಣಾಮಗಳಿವು:

1. ಜರ್ಮನಿ, ಆಸ್ಟ್ರಿಯ–ಹಂಗರಿ, ರಷ್ಯ ಮತ್ತು ತುರ್ಕಿ ಸಾಮ್ರಾಜ್ಯಗಳು ನಾಶವಾದುವು. 2. ರಾಜ–ಮಹಾರಾಜರುಗಳ ಆಡಳಿತ ಅಳಿಸಿಹೋಗಿ ಗಣರಾಜ್ಯಗಳ ಅಲೆಯೊಂದು ಯುರೋಪಿನ ಮೇಲೆ ಆವರಿಸಿತು. ಯುರೋಪಿನಲ್ಲಿ, ಐದು ಗಣರಾಜ್ಯಗಳಿದ್ದವು (1914). ಆದರೆ ಯುದ್ಧದ ತರುವಾಯ 16 ಗಣರಾಜ್ಯಗಳು ಯುರೋಪ್ ಖಂಡದಲ್ಲಿ ಜನ್ಮತಳೆದುವು. 3. ಇದರ ಜೊತೆಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೂ ಸಡಿಲಗೊಂಡಿತು. ಇದಕ್ಕೆ ಕಾರಣ ಯುದ್ಧಾನಂತರ ಹೊಸ ಸರ್ಕಾರಗಳಲ್ಲಿ ಉದ್ಭವಿಸಿದ ಕಠಿಣ ಸಮಸ್ಯೆಗಳು. ಇದರಿಂದ ಯುರೋಪಿನಲ್ಲಿ ಮುಂದೆ ಅನೇಕ ಸರ್ವಾಧಿಕಾರಿಗಳು ನಿರಂಕುಶ ಆಡಳಿತ ನಡೆಸಿ ತಮ್ಮ ಜನರನ್ನು ಕಾಪಾಡುವ ಯತ್ನದಲ್ಲಿ ವಿನಾಶಕ್ಕೆ ಕಾರಣರಾದರು. 4. ಬಾಲ್ಶೆವಿಸಂ, ಫ್ಯಾಸಿಸಂ, ನಾಟ್ಸಿಸಂ–ಇವು ಆ ಕಾಲದಲ್ಲಿ ನಡೆದ ಮೂರು ದೊಡ್ಡ ರಾಜಕೀಯ–ಆರ್ಥಿಕ ಪ್ರಯೋಗಗಳು. 5. ಐರೋಪ್ಯ ರಾಷ್ಟ್ರಗಳಲ್ಲಿ ಪರಸ್ಪರ ಅಂತರವೇರ್ಪಟ್ಟು ಹೊಸ ರಾಷ್ಟ್ರಗಳು ಉದ್ಭವಿಸಿದವು. ಆಸ್ಟ್ರಿಯ–ಹಂಗರಿ ಸಾಮ್ರಾಜ್ಯ ನಾಶವಾಯಿತು. ಜರ್ಮನಿ ಮತ್ತು ರಷ್ಯಗಳ ಮೇರೆಗಳಲ್ಲಿ ಬದಲಾವಣೆಗಳಾದವು. ಹೊಸ ಹೊಸ ದೇಶಗಳು ಉದ್ಭವವಾದವು. ಹೊಸ ರಾಷ್ಟ್ರಗಳಾದ ಪೋಲೆಂಡು, ಚೆಕೊಸ್ಲೊವಾಕಿಯ ಮತ್ತು ಯುಗೊಸ್ಲಾವಿಯಗಳು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಹೆಚ್ಚಿನ ಪಾತ್ರ ಪಡೆದವು. ಒಂದನೆಯ ಮಹಾಯುದ್ಧಕ್ಕೆ ಮುಂಚೆ ಆರು ದೊಡ್ಡ ರಾಷ್ಟ್ರಗಳು ಯುರೋಪಿನ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಪ್ರಾಮುಖ್ಯ ಪಡೆದಿದ್ದವು. ಜರ್ಮನಿಯ ತಾತ್ಕಾಲಿಕ ಗ್ರಹಣದಿಂದಾಗಿ ಮತ್ತು ರಷ್ಯ ಹಾಗೂ ಆಸ್ಟ್ರಿಯ–ಹಂಗರಿಗಳ ಅವನತಿಯಿಂದಾಗಿ ಯುರೋಪಿನ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಹೆಚ್ಚಿನ ಸಂಖ್ಯೆಯ (ಹೊಸ ರಾಷ್ಟ್ರಗಳು ಸೇರಿದಂತೆ) ರಾಷ್ಟ್ರಗಳು ಭಾಗವಹಿಸಲು ಸಾಧ್ಯವಾಯಿತು. ಇದರಿಂದ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಬಿರುಸು ಹೆಚ್ಚಿತು. ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವುದು ಒಂದು ಕಷ್ಟದ ಕೆಲಸವಾಯಿತು. ಜರ್ಮನಿಯ ಸುತ್ತಮುತ್ತ ಉದ್ಭವಿಸಿದ್ದ ಚಿಕ್ಕಪುಟ್ಟ ರಾಷ್ಟ್ರಗಳು ಆಕ್ರಮಣಕಾರಿ ನಾಜಿಗಳ ಬಲೆಗೆ ಬಿದ್ದವು. 6. ಒಂದನೆಯ ಮಹಾಯುದ್ಧ ರಾಷ್ಟ್ರೀಯತೆಯ ಭಾವನೆಗಳನ್ನು ಕೆರಳಿಸಿತೆನ್ನಬಹುದು. ವಿವಿಧ ಜನಾಂಗದವರು ಪ್ರತ್ಯೇಕವಾಗಿ ತಾವೊಂದು ರಾಷ್ಟ್ರವಾಗಿ ಸೇರಲು ಹಕ್ಕಿದೆ ಎಂದು ತಿಳಿದು ಹೊಸ ರಾಷ್ಟ್ರಗಳನ್ನು ಕಟ್ಟಿದರು. ಈ ಉಗ್ರರೀತಿಯ, ಸ್ವಾರ್ಥಮನೋಭಾವದ ರಾಷ್ಟ್ರೀಯ ಭಾವನೆಗಳಿಂದ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ, ಹೆಚ್ಚಾಗಿ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಉದ್ಭವಿಸಿದ ಸಮಸ್ಯೆಗಳು ಅನೇಕ, ಆರ್ಥಿಕ ಪೈಪೋಟಿ, ದ್ವೇಷ, ಅಸೂಯೆಗಳಿಂದಾಗಿ ಯುರೋಪಿನಲ್ಲಿ ಒಂದು ಹೊಸ ರೀತಿಯ ಮಾನಸಿಕ ಕಾಯಿಲೆ ಉಂಟಾಯಿತು. 7. ಒಂದನೆಯ ಮಹಾಯುದ್ಧ ಬಿತ್ತರಿಸಿದ ರಾಷ್ಟ್ರೀಯತೆಯ ಭಾವನೆಗಳು ಮತ್ತು ಒಂದು ಜನಾಂಗದವರು ಸರ್ಕಾರವನ್ನು ತಾವೇ ರಚಿಸಿಕೊಳ್ಳುವ ಹಕ್ಕು ಇದೆಯೆಂಬ ತತ್ತ್ವ ವಸಾಹತುಗಳಿಗೂ ಹಬ್ಬಿತು. 8. ಅನೇಕರು ಮುಂದೆ ಯುದ್ಧ ಸಂಭವಿಸುವುದಿಲ್ಲವೆಂದು ನಂಬಿದ್ದರೂ ಶಾಂತಿ ಒಪ್ಪಂದಗಳು ಹಳೆಯ ಗಾಯಗಳನ್ನು ವಾಸಿಮಾಡುವ ಬದಲು ಹೊಸ ಗಾಯಗಳನ್ನು ಸೃಷ್ಟಿಸಿದುವು. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಸಂದೇಹ ಮತ್ತು ಭಯಗಳು ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲ. 9. ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಲು ಮತ್ತು ರಾಷ್ಟ್ರ–ರಾಷ್ಟ್ರಗಳ ನಡುವೆ ಸಹಕಾರ ಮನೋಭಾವವನ್ನು ಹೆಚ್ಚಿಸಲು ರಾಷ್ಟ್ರಗಳ ಕೂಟ ಮತ್ತು ವಿಶ್ವನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಆದರೆ ಇಂಥ ಸಂಸ್ಥೆಗಳು ಅನೇಕ ವೇಳೆ ಅವುಗಳಿಗೆ ಅಗತ್ಯವಾದ ಬೆಂಬಲವನ್ನು ಪಡೆಯಲು ಆಗಲಿಲ್ಲ. 10. ಮಹಾಯುದ್ಧದ ಸಮಯದಲ್ಲಿ ಹೆಚ್ಚಿನ ತೊಂದರೆಗೆ ಒಳಗಾದದ್ದೆಂದರೆ ಶಿಕ್ಷಣ ವ್ಯವಸ್ಥೆ. ಈ ಪರಿಸ್ಥಿತಿ ಯುದ್ಧ ಮುಗಿದ ಅನಂತರವೂ ಮುಂದುವರಿಯಿತು. ಆದರೆ ಯುವಕರಿಗೆ

ಸರಿಯಾದ ಶಿಕ್ಷಣ ಕೊಟ್ಟಲ್ಲಿ ಮುಂದಾಗಬಹುದಾದ ಅನಾಹುತವನ್ನು ತಪ್ಪಿಸಬಹುದೆಂಬ ಸಾಮಾನ್ಯ ಅಭಿಪ್ರಾಯ ಮೂಡಿತ್ತು. ಆದುದರಿಂದ ಮಕ್ಕಳ ಮತ್ತು ಯುವಕರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಕೊಡಲಾಯಿತು, ವಿದ್ಯಾಭ್ಯಾಸಕ್ಕೆ ಹೆಚ್ಚಿನ ಧನಸಹಾಯ ನೀಡಲಾಯಿತು. 11. ಚೀನ, ಜರ್ಮನಿ, ಇಟಲಿ ಮತ್ತು ಸೋವಿಯತ್ ರಷ್ಯಗಳಲ್ಲಿ ಯುವಕರ ಚಳವಳಿಗಳಿಗೆ ಹೆಚ್ಚಿನ ಪ್ರಾಧಾನ್ಯ ದೊರೆಯಿತು. ಮಹಾಯುದ್ಧದಿಂದ ಹದಗೆಟ್ಟಿದ್ದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳಿಂದ ಪ್ರಭಾವಿತರಾಗಿ, ಪ್ರಪಂಚದ ಯುವಕ-ಯುವತಿಯರು ಸಮಸ್ಯೆಗಳ ಅಧ್ಯಯನಕ್ಕೆ ಹೆಚ್ಚಿನ ಗಮನ ಕೊಡಲು ಪ್ರಾರಂಭಿಸಿದರಲ್ಲದೆ ತಮ್ಮ ತಮ್ಮ ಜನಾಂಗಗಳಿಗೆ ಪ್ರತ್ಯೇಕ ರಾಷ್ಟ್ರಗಳನ್ನು ಕಟ್ಟಬೇಕೆಂದು ಆಶಿಸಿದರು. 12. ಒಂದನೆಯ ಮಹಾಯುದ್ಧ ರಾಷ್ಟ್ರಗಳಿಗೆ ಸಹಕಾರ ಮನೋಭಾವ ಮತ್ತು ಒಟ್ಟಾಗಿ ಕೆಲಸಮಾಡುವ ಗುಣಗಳನ್ನು ಕಲಿಸಿಕೊಟ್ಟಿತೆನ್ನ ಬಹುದು. ಈ ಮೌಲ್ಯಗಳು ಯುದ್ಧ ಮುಗಿದು ಶಾಂತಿ ಬಂದ ಮೇಲೂ ನಾಶವಾಗಲಿಲ್ಲ. ಅನೇಕ ಅಂತಾರಾಷ್ಟ್ರೀಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಯುದ್ಧಕಾಲದಲ್ಲಿ ಒಡಮೂಡಿದ್ದ ಸಹಕಾರ ಮನೋಭಾವವನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಲಾಯಿತು. ವಿಶ್ವ ಸಮ್ಮೇಳನಗಳೂ ಸಾಮಾನ್ಯವಾದುವು. 13. ಒಂದನೆಯ ಮಹಾಯುದ್ಧದಿಂದ ವೈಜ್ಞಾನಿಕ ಹಾಗೂ ವಾಣಿಜ್ಯ ಬೆಳವಣಿಗೆಗಳಿಗೆ ದೊರಕಿದ ಉತ್ತೇಜನ ಅಗಾಧ. ಹೊಸ ಹೊಸ ಯಂತ್ರಗಳ ಬಳಕೆ, ಮಾರಕಾಸ್ತ್ರಗಳ ಪ್ರಯೋಗ. ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಪರಿಶೋಧನೆ. ಹಡಗು ನಿರ್ಮಾಣ, ವಿಮಾನಗಳ ರಚನೆ ಮತ್ತು ವಿನ್ಯಾಸಗಳಲ್ಲಿ ಬದಲಾವಣೆ, ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆ-ಇವು ಇನ್ನು ಕೆಲವು ಪರಿಣಾಮಗಳು, ಯುದ್ಧದ ದೆಸೆಯಿಂದಾಗಿ ಹೊರದೇಶಗಳಿಂದ ಬರುತ್ತಿದ್ದ ಪದಾರ್ಥಗಳು ನಿಂತುಹೋದದ್ದರಿಂದ ಅನೇಕ ದೇಶಗಳು ತಾವೇ ತಮಗೆ ಬೇಕಾದ ಪದಾರ್ಥಗಳನ್ನು ತಯಾರಿಸಿಕೊಳ್ಳಲಾರಂಭಿಸಿದುವು. 14. ಮಹಾಯುದ್ಧ ತಟಸ್ಥರಾಷ್ಟ್ರಗಳನ್ನು ಒಳಗೊಂಡಂತೆ ಎಲ್ಲ ದೇಶಗಳ ಆರ್ಥಿಕ ಪರಿಸ್ಥಿತಿಗಳನ್ನು ಹದಗೆಡಿಸಿತ್ತು. ಇದರಿಂದಾಗಿ ಪ್ರಪಂಚದಾದ್ಯಂತ ಆರ್ಥಿಕ ಪುನಾರಚನೆಯ ಆವಶ್ಯಕತೆ ಕಂಡುಬಂತು. ಮೊದಲನೆಯ ಮಹಾಯುದ್ಧದ ಪ್ರಭಾವದಿಂದ 1929ರ ಕೊನೆಯ ಭಾಗದಲ್ಲಿ ಒಂದು ದೊಡ್ಡ ಆರ್ಥಿಕ ಕುಸಿತ ಉಂಟಾಯಿತು.

1939ರ ಹೊತ್ತಿಗೆ ಮತ್ತೆ ಇನ್ನೊಂದು ಮಹಾಯುದ್ಧಕ್ಕೆ ಸನ್ನಾಹ ನಡೆದಿತ್ತು. ಇಂಥ ಭೀಕರ ಯುದ್ಧದಲ್ಲಿ ಉಂಟಾದ ಅಪಾರ ಸಾವುನೋವುಗಳನ್ನು ಮನಗಂಡ ರಾಷ್ಟ್ರಗಳು ಮತ್ತೊಂದು ಅಂಥ ಯುದ್ಧವಾಗದಂತೆ ಮಾಡಿ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನ ನಡೆಸಿದುವು. ಯುರೋಪಿನ ನಾಯಕರು, ರಾಜಕಾರಣಿಗಳು ಮತ್ತು ದಾರ್ಶನಿಕರು ಒಂದುಗೂಡಿ ಶಾಂತಿಸೌಹಾರ್ದಗಳ ಆಧಾರದ ಮೇಲೆ ಒಂದು ನೂತನ ಸಮಾಜವನ್ನು ರೂಪಿಸಲು ಯತ್ನಿಸಿದರು. ಒಂದನೆಯ ಮಹಾಯುದ್ಧವಾದ ಸ್ವಲ್ಪ ಕಾಲ ಈ ಕಾರ್ಯದಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳೂ ಮಗ್ನವಾಗಿದ್ದುವು. ಆದರೆ ಈ ಧ್ಯೇಯಸಾಧನೆಯಲ್ಲಿ ಏಕಮುಖತೆ ಕಂಡುಬರಲಿಲ್ಲ. ಯುರೋಪಿನ ರಾಷ್ಟ್ರಗಳ ಮುಖಂಡರು ಸಂಕುಚಿತ ಮನೋಭಾವ ತಳೆದರು. ತಮ್ಮ ತಮ್ಮ ದೇಶದ ಹಿತವೇ ಅವರಿಗೆ ಹೆಚ್ಚಾಯಿತು. ತಮ್ಮ ತಮ್ಮ ರಾಷ್ಟ್ರಗಳ ಪ್ರತಿಷ್ಠೆಯನ್ನು ಯಾವ ರೀತಿಯಲ್ಲಿ ಹೆಚ್ಚಿಸಬೇಕೆಂಬುದರ ಕಡೆ ಅವರ ಗಮನ ಹರಿದಿತ್ತೇ ವಿನಾ ಸುಭದ್ರ ಶಾಂತಿಯುತ ಸಮಾಜರಚನೆಯಲ್ಲಿ ಯಾವ ಬಗೆಯ ಆಸಕ್ತಿಯನ್ನೂ ಉತ್ಸಾಹವನ್ನೂ ಅವರು ತೋರಿಸಲಿಲ್ಲ. ಈ ಸಂಕುಚಿತ ಮನೋಭಾವ ಪ್ರದರ್ಶನದಿಂದಲೇ ಇವರು ಕೈಗೊಂಡ ಕಾರ್ಯಕ್ರಮಗಳು ಫಲ ಕೊಡದೆ ಮತ್ತೊಂದು ಮಹಾಯುದ್ಧಕ್ಕೆ ಮಾರ್ಗವಾಯಿತೆನ್ನಬಹುದು.

(ಕೆ.ಟಿ.ಆರ್.)

**ಎರಡನೆಯ ಮಹಾಯುದ್ಧ: ಉಗಮ:** 1918ರ ವರ್ಸೇಲ್ಸ್ ಕೌಲಿನ ಅನಂತರದ ಪರಿಸ್ಥಿತಿ. ವರ್ಸೇಲ್ಸ್ ಕೌಲಿನ ನಿಬಂಧನೆಗಳು, ಅದರ ಮಹತ್ತ್ವ, ನ್ಯೂನತೆ, ಒಂದನೆಯ ಮಹಾಯುದ್ಧದ ವಿಜಯೀ ರಾಷ್ಟ್ರಗಳು ಸೋತ ಜರ್ಮನಿಯ ಬಗ್ಗೆ ತಳೆದ ಧೋರಣೆ, ಅವು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡ ರೀತಿ, ನೂತನ ಯುರೋಪಿನ ನಿರ್ಮಾಣ, ಪ್ರಪಂಚದಲ್ಲಿ ಶಾಂತಿಸ್ಥಾಪನೆಯ ಪ್ರಯತ್ನ ವಿಫಲವಾದ ಬಗೆ ಮತ್ತು ಹಿಟ್ಲರನ ಆಕ್ರಮಣಕ್ಕೆ ಅನುವಾಗಿ ಒದಗಿಬಂದ ಅವಕಾಶ-ಇವೆಲ್ಲ ಎರಡನೆಯ ಮಹಾಯುದ್ಧಕ್ಕೆ ಕಾರಣಗಳು.

ಎರಡನೆಯ ಮಹಾಯುದ್ಧಕ್ಕೆ ಮುಂಚಿನ ವಿಶ್ವದ ಇತಿಹಾಸದಲ್ಲಿ ಒಂದನೆ ಮಹಾಯುದ್ಧವೇ(1914-18) ಅತ್ಯಂತ ಭೀಕರವಾದ ಯುದ್ಧವೆನಿಸಿತ್ತು. ಅದರಲ್ಲಿ ಉಂಟಾದ ಅಪಾರ ಸಾವುನೋವುಗಳನ್ನು ಮನಗಂಡ ರಾಷ್ಟ್ರಗಳು ಯುದ್ಧವನ್ನು ಕೊನೆಗಾಣಿಸಿ, ಜಗತ್ತಿನಲ್ಲಿ ಸ್ಥಿರವಾದ ಶಾಂತಿ ಸ್ಥಾಪಿಸಲು ಉದ್ಯುಕ್ತವಾಗಿದ್ದುವು. ಯುರೋಪಿನ ನಾಯಕರೂ ರಾಜಕಾರಣಿಗಳೂ ದಾರ್ಶನಿಕರೂ ಕಲೆತು ಸುಭದ್ರತೆ ಶಾಂತಿಗಳ ತಳಹದಿಯ ಮೇಲೆ ನೂತನಸಮಾಜವನ್ನು ರೂಪಿಸಲು ಪ್ರಯತ್ನಪಟ್ಟರು. ಈ ಕಾರ್ಯದಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳೂ ಮಗ್ನವಾಗಿದ್ದುವು. ಆದರೆ ಈ ಧ್ಯೇಯಸಾಧನೆಯಲ್ಲಿ ಏಕಮುಖತೆ ಕಂಡುಬರಲಿಲ್ಲ. ಯುರೋಪಿನ ರಾಷ್ಟ್ರಗಳ ನಾಯಕರು ಸಂಕುಚಿತ ಮನೋಭಾವ ತಳೆದು ತಂತಮ್ಮ ದೇಶಗಳ ಹಿತಗಳನ್ನೇ ಪ್ರಧಾನ ಮಾಡಿಕೊಂಡು ಅವುಗಳ ಪ್ರತಿಷ್ಠೆಗಳನ್ನು ಹೆಚ್ಚಿಸುವ ಯೋಜನೆಗಳಲ್ಲಿ ವಿಶೇಷ ಆಸಕ್ತಿ ವಹಿಸಿದ್ದರೇ ವಿನಾ ಸುಭದ್ರ ಶಾಂತಿಯುತ ಸಮಾಜದ ರಚನೆಯಲ್ಲಿ ಯಾವಬಗೆಯ ಆಸಕ್ತಿಯನ್ನಾಗಲಿ ಉತ್ಸಾಹವನ್ನಾಗಲಿ ತೋರಿಸಲಿಲ್ಲ. ಈ ಸಂಕುಚಿತ ಮನೋಭಾವದ ಪ್ರದರ್ಶನದಿಂದಲೇ ಆ ನಾಯಕರು ಕೈಗೊಂಡ ಯೋಜನೆಗಳಾವುವೂ ಫಲಕಾರಿಯಾಗದೆ ಎರಡನೆಯ ಮಹಾಯುದ್ಧ ಅನಿವಾರ್ಯವಾಯಿತು.

ಒಂದನೆಯ ಮಹಾಯುದ್ಧಾನಂತರ ನಾನಾ ಸಮಸ್ಯೆಗಳು ತಲೆದೋರಿದುವು. ವಿಶ್ವಶಾಂತಿ ಸ್ಥಾಪನೆ ಮತ್ತು ಸುಭದ್ರ ಸಮಾಜ ನಿರ್ಮಾಣದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಆಗ ಉದ್ಭವಿಸಿದ ಈ ಸಮಸ್ಯೆಗಳು ಅಡಚಣೆಯನ್ನುಂಟುಮಾಡಿದವು. ಈ ರಾಷ್ಟ್ರಗಳು ತಮ್ಮ ಪರಸ್ಪರ ಸಂಬಂಧದ ವಿಚಾರದಲ್ಲಿ ಹಳೆಯ ವಿಧಾನಗಳನ್ನೇ ಮುಂದುವರಿಸಿಕೊಂಡು ಬಂದವೇ ಹೊರತು, ಅವುಗಳ ಬದಲು ಹೊಸ ರೀತಿ ನೀತಿಗಳನ್ನು ರೂಪಿಸುವ ಗೋಜಿಗೇ ಹೋಗಲಿಲ್ಲ. ಮುಖ್ಯವಾಗಿ ರಾಷ್ಟ್ರಗಳ ವೈಯಕ್ತಿಕ ಭದ್ರತೆಯ ಪರಿಕಲ್ಪನೆಗೂ ಒಂದನೆ ಮಹಾಯುದ್ಧಾನಂತರ ಅಮೆರಿಕ ಅಧ್ಯಕ್ಷ ವಿಲ್ಸನರು ಪ್ರತಿಪಾದಿಸಿದ ಸಾಮೂಹಿಕ ಭದ್ರತೆಯ ಪರಿಕಲ್ಪನೆಗೂ ಈ ಎರಡು ಸಿದ್ಧಾಂತಗಳ ತಿಕ್ಕಾಟವೇ ಈ ಸಮಸ್ಯೆಯ ಮೂಲ. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ನಡುವಣ ಕಾಲದಲ್ಲಿ ಈ ಎರಡು ತತ್ತ್ವಗಳ ಘರ್ಷಣೆಯ ಪರಿಣಾಮವಾಗಿ ಯುರೋಪಿನ ರಾಷ್ಟ್ರಗಳು ಆಕ್ರಮಣಕಾರಿ ಧೋರಣೆಯನ್ನು ಮುಂದುವರಿಸಿ ತಾವೇ ಸ್ಥಾಪಿಸಿದ ರಾಷ್ಟ್ರಕೂಟವನ್ನು (ಲೀಗ್ ಆಫ್ ನೇಷನ್ಸ್) ಧಿಕ್ಕರಿಸಿದುವು. ಇಂಥ ಪರಿಸ್ಥಿತಿಯಲ್ಲಿ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು ಆಕ್ರಮಣಕಾರಿ ರಾಷ್ಟ್ರಗಳನ್ನು ಎದುರಿಸಲು ವಿಫಲವಾದುವು. ವರ್ಸೇಲ್ಸ್ ಕರಾರಿನ ಪ್ರಕಾರ ಹುಟ್ಟಿಕೊಂಡಿದ್ದ ಅನೇಕ ಸಣ್ಣ ರಾಷ್ಟ್ರಗಳೂ ಅವುಗಳಿಂದ ಉದ್ಭವಿಸಿದ ಗಡಿ ಸಮಸ್ಯೆಗಳು, ವಿಜಯೀರಾಷ್ಟ್ರಗಳೇ ಕೌಲಿನ ಪ್ರಣಾಳಿಕೆಯನ್ನು ಪಾಲಿಸದಿದದ್ದು-ಇವೇ ಜರ್ಮನಿ ಮತ್ತೆ ತಲೆ ಎತ್ತಿ ಪ್ರಬಲವಾಗಲು ಅವಕಾಶ ಮಾಡಿಕೊಟ್ಟಂತಾಯಿತು. ಅಲ್ಲದೆ ಆ ರಾಷ್ಟ್ರದ ನಾಯಕರು ಆಗಿನ ಯುರೋಪಿನ ಪರಿಸ್ಥಿತಿಯನ್ನು ತಮಗೆ ಬೇಕಾದ ರೀತಿಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಯಿತು.

ಒಂದನೆಯ ಮಹಾಯುದ್ಧದಲ್ಲಿ ಹೆಚ್ಚಿನ ಹಾನಿ ಹೊಂದಿದ ದೇಶವೆಂದರೆ ಫ್ರಾನ್ಸ್. ಆ ರಾಷ್ಟ್ರ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು, ಜರ್ಮನಿಯನ್ನೂ ಬಲಹೀನವನ್ನಾಗಿ ಮಾಡಿ, ಅದು ಯುರೋಪಿನಲ್ಲಿ ಪುನಃ ಪ್ರಬಲವಾಗದಂತೆ ನೋಡಿಕೊಳ್ಳುವ ಉದ್ದೇಶ ಹೊಂದಿತ್ತು. ಆ ಉದ್ದೇಶದ ಪೂರೈಕೆಗೆ ಬ್ರಿಟನ್ನೂ ಸಹಕರಿಸಲು ಸಿದ್ಧವಿತ್ತು. ಆದರೆ ಜರ್ಮನಿಯ ಬಗ್ಗೆ ಅದು ಉದಾರಭಾವ ತಳೆದಿತ್ತು. ಹೀಗಾಗಿ ಅಮೆರಿಕ ಮತ್ತು ಬ್ರಿಟನ್ನುಗಳಿಂದ ತನ್ನ ಭದ್ರತೆಯ ಬಗ್ಗೆ ಭರವಸೆಗಳು ಬಂದ ಅನಂತರವೇ ಫ್ರಾನ್ಸ್ ಜರ್ಮನಿಯನ್ನು ನಿರ್ಮೂಲಗೊಳಿಸುವ ಪ್ರಯತ್ನವನ್ನು ಕೈ ಬಿಟ್ಟಿತು. ಆದರೆ ಆ ರಾಷ್ಟ್ರಗಳು ತಾವು ಕೊಟ್ಟ ಮಾತಿನಂತೆ ನಡೆದುಕೊಳ್ಳದಿದ್ದಾಗ ಫ್ರಾನ್ಸ್‌ಗೆ ರಾಷ್ಟ್ರ ಕೂಟದಲ್ಲಿದ್ದ ನಂಬಿಕೆ ವಿಶ್ವಾಸ ಮಾಸಿಹೋದವು. ಫ್ರಾನ್ಸ್‌ಗೆ ಸೈನಿಕ ರಕ್ಷಣೆ ದೊರೆಯದಿದ್ದಾಗ, ಮಿಲಿಟರಿ ಒಪ್ಪಂದಕ್ಕೆ ಸಂಯುಕ್ತ ಸಂಸ್ಥಾನ ನಕಾರ ಸೂಚಿಸಿದಾಗ, ವರ್ಸೇಲ್ಸ್ ಕೌಲಿನ ತಳಹದಿಯೇ ಕುಸಿಯಿತೆನ್ನಬಹುದು. ಅಮೆರಿಕದ ಸೆನೆಟ್ ಸಭೆ ವರ್ಸೇಲ್ಸ್ ಕೌಲನ್ನು ಅಂಗೀಕರಿಸದಿದ್ದು ಮತ್ತೊಂದು ಪೆಟ್ಟಾಯಿತು. ಕೊನೆಗೆ ಯುರೋಪಿನಲ್ಲಿ ಶಾಂತಿ ಕಾಪಾಡಿಕೊಂಡು ಬರಲು ಒಂದು ಅಂತಾರಾಷ್ಟ್ರೀಯ ಸೇನೆಯನ್ನು ರೂಪಿಸಬೇಕೆಂಬ ಫ್ರಾನ್ಸಿನ ಸೂಚನೆಗೂ ಆ ರಾಷ್ಟ್ರದ ಒಪ್ಪಿಗೆ ದೊರೆಯಲಿಲ್ಲ. ಆದ್ದರಿಂದ ವರ್ಸೇಲ್ಸ್ ಒಪ್ಪಂದದ ವಿಚಾರದಲ್ಲಿ ಫ್ರಾನ್ಸ್ ಹೆಚ್ಚಿನ ಆಸಕ್ತಿ ತೋರಿಸಲಿಲ್ಲ. ಹೆಚ್ಚಿನ ನಷ್ಟ ಹೊಂದದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಶಾಂತಿ ಸ್ಥಾಪಿಸುವ ವಿಷಯದಲ್ಲಿ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಅಂತಾರಾಷ್ಟ್ರೀಯ ಸಂಸ್ಥೆಯ ಸ್ಥಾಪನೆಯ ಯೋಜನೆಯಲ್ಲಿ ಆಸಕ್ತಿ ತೋರಿಸಿದರೂ ಆ ಸಂಸ್ಥೆ ಪರಿಣಾಮಕಾರಿಯಾದ ಕಾರ್ಯಕ್ರಮ ಹೊಂದುವುದಕ್ಕೆ ಯಾವ ಮಾರ್ಗವನ್ನೂ ಸೂಚಿಸಲಿಲ್ಲ. ಅಲ್ಲದೆ ಸಂಯುಕ್ತ ಸಂಸ್ಥಾನ ರಾಷ್ಟ್ರಕೂಟದ ಸದಸ್ಯತ್ವವ ಪಡೆಯದಿದ್ದರಿಂದ ಆ ರಾಷ್ಟ್ರದ ಬಗ್ಗೆ ಸಂಶಯ ಇನ್ನೂ ಹೆಚ್ಚಾಯಿತು.

ವರ್ಸೇಲ್ಸ್ ಕೌಲು ಕರಾಳ ಒಪ್ಪಂದವೆಂದು ಹೇಳಿದವನು ಹಿಟ್ಲರ್. ಆದರೆ ಅದೇ ಮುಂದೆ ಸಂಭವಿಸಿದ ಎಲ್ಲ ಅನರ್ಥಗಳಿಗೂ ಮೂಲವೆಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಆ ಒಪ್ಪಂದದ ಅನಂತರವೂ ಜರ್ಮನಿ ಪ್ರಬಲ ರಾಷ್ಟ್ರವಾಗಿಯೇ ಉಳಿಯಿತು. ಅಲ್ಲದೆ ಆ ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸುವ ಅವಕಾಶ ಅದರಲ್ಲಿತ್ತು. ಹೊಸ ರಾಷ್ಟ್ರಗಳ ನಿರ್ಮಾಣ ಮತ್ತು ಅವುಗಳ ಭದ್ರತೆಯ ವಿಚಾರದಲ್ಲೂ ವರ್ಸೇಲ್ಸ್ ಕೌಲು ಸರಿಯಾದ ನಿರ್ಧಾರಗಳನ್ನೊಳಗೊಂಡಿತ್ತು. ಆದ್ದರಿಂದ ವರ್ಸೇಲ್ಸ್ ಒಪ್ಪಂದವನ್ನು ವೈರ ಪ್ರಚೋದಕ ಅನ್ಯಾಯಕಾರಿ ಕರಾರೆಂದು ಹೇಳುವುದರಲ್ಲಿ ಸತ್ಯಾಂಶವಿಲ್ಲ. ಆದರೆ ಸೋತ ರಾಷ್ಟ್ರಗಳು ಗೆದ್ದ ರಾಷ್ಟ್ರಗಳಿಗೆ ಯುದ್ಧದ ನಷ್ಟವನ್ನು ಭರ್ತಿಮಾಡಿಕೊಡಬೇಕೆಂಬ ಬಗ್ಗೆ ರಚಿತವಾಗಿದ್ದ ನಿಬಂಧನೆಗಳು ಮಾತ್ರ ವಾಸ್ತವಿಕ ಪರಿಸ್ಥಿತಿಗೆ ಅನುಗುಣವಾಗಿ ಇರಲಿಲ್ಲವೆಂದು ಹೇಳಬಹುದು. ಈ ಅಂಶವು ಜರ್ಮನಿಯಲ್ಲೇ ಉದ್ಭವಿಸಿದ ಪರಿಸ್ಥಿತಿಗಳೂ ಆ ದೇಶದ ಹಣದುಬ್ಬರಕ್ಕೆ ಕಾರಣವಾದುವು. ಈ ಆರ್ಥಿಕ ಬಿಕ್ಕಟ್ಟೇ ಯುದ್ಧಾನಂತರ ಜರ್ಮನಿಯಲ್ಲಿ ಸ್ಥಾಪಿತವಾಗಿದ್ದ ಗಣರಾಜ್ಯದ ಪತನಕ್ಕೂ ಕಾರಣವಾಯಿತು. ಈ ಪರಿಸ್ಥಿತಿಯಿಂದ ರೊಚ್ಚಿಗೆದ್ದ ಜರ್ಮನಿಯ ಮಧ್ಯಮವರ್ಗ ಗಣರಾಜ್ಯಸರ್ಕಾರವನ್ನು ಉರುಳಿಸಿ, ಜರ್ಮನಿಯ ರಾಜಕೀಯದಲ್ಲಿ ಹಿಟ್ಲರ್ ಪ್ರವೇಶಿಸುವುದಕ್ಕೂ ಅವಕಾಶಮಾಡಿಕೊಟ್ಟಿತು. ವರ್ಸೇಲ್ಸ್ ಕೌಲಿನ ಆರ್ಥಿಕ ನಿಬಂಧನೆಗಳು ಯುರೋಪಿನಲ್ಲಿ ತೀವ್ರ ಪರಿಣಾಮವನ್ನುಂಟು ಮಾಡಿದುವು. ಮಿತ್ರರಾಷ್ಟ್ರಗಳಲ್ಲಿ ಹೊಂದಾಣಿಕೆಯಿಲ್ಲದ್ದೂ ಆ ಕೌಲಿನ ವಿಧಿಗಳನ್ನು ಪಾಲಿಸದಿದ್ದದ್ದೂ ಅವುಗಳ ಆಚರಣೆಗೆ ಒತ್ತಾಯ ತರದಿದ್ದದ್ದೂ ಈ ಪರಿಣಾಮವನ್ನು ತೀವ್ರಗೊಳಿಸಿದವು.

ಎರಡನೆಯ ಮಹಾಯುದ್ಧದ ಪ್ರಾರಂಭಕ್ಕೆ ಮೊದಲು ಜರ್ಮನ್ ಜನತೆಯ ಜೀವನಮಟ್ಟ ಬಹಳಮಟ್ಟಿಗೆ ಸುಧಾರಿಸಿತು. ಹಿಟ್ಲರನ ಆಕ್ರಮಣಕ್ಕೆ ತುತ್ತಾದ ರಾಷ್ಟ್ರಗಳ ಸ್ಥಿತಿಗಿಂತ ಇದು ಉತ್ತಮವಾಗಿತ್ತು. ಆದಾಗ್ಯೂ ಹಿಟ್ಲರ್ ತನ್ನ ಅಪಪ್ರಚಾರಕ್ಕೆ ಈ ವಿಷಯವನ್ನೇ ಆರಿಸಿಕೊಂಡು ಇತರ ರಾಷ್ಟ್ರಗಳನ್ನೂ ಟೀಕಿಸತೊಡಗಿದ. ಮೈನ್ ಕಂಫ್ (ನನ್ನ ಹೋರಾಟ) ಆತ್ಮಕಥೆಯಲ್ಲಿ ಹಿಟ್ಲರ್ ತನ್ನ ಅನುಭವಗಳನ್ನೂ ಜರ್ಮನಿಯ ದುಃಸ್ಥಿತಿಯನ್ನೂ ಅದರ ನಿವಾರಣೋಪಾಯಗಳನ್ನೂ ವಿವರಿಸಿ, ಜರ್ಮನರು ಆರ್ಯರೆಂದೂ ಆರ್ಯತ್ವವನ್ನು ಅವರು ಉಳಿಸಿಕೊಂಡು ಅನಾರ್ಯರನ್ನು ನಾಶಗೊಳಿಸಬೇಕೆಂದೂ ಹೇಳಿದ್ದಲ್ಲದೆ ಇದಕ್ಕೆ ವಿಧಾನಗಳನ್ನೂ ಸೂಚಿಸಿದ. ಇದಲ್ಲದೆ ಜರ್ಮನಿಯ ಗತವೈಭವವನ್ನೂ ಸಮಕಾಲೀನ ಅವನತಸ್ಥಿತಿಯನ್ನೂ ವರ್ಣಿಸಿ ಇವೆರಡರ ವ್ಯತ್ಯಾಸವನ್ನು ಜನ ಮನಗಾಣುವಂತೆ ಮಾಡಿದ. ತಾನೊಬ್ಬನೇ ಪ್ರಾಮಾಣಿಕ ನಾಯಕನೆಂಬ, ಜರ್ಮನರ ಆಶೆ ಆಕಾಂಕ್ಷೆಗಳನ್ನು ಈಡೇರಿಸುವ ಶಕ್ತಿ ಇರುವುದು ತನಗೊಬ್ಬನಿಗೆ ಮಾತ್ರ ಎಂಬ ನಂಬಿಕೆಯನ್ನು ಜನರಲ್ಲಿ ಮೂಡಿಸಿದ.

ಎರಡು ಯುದ್ಧಗಳ ನಡುಗಾಲದಲ್ಲಿ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು ನಿಶ್ಶಸ್ತ್ರೀಕರಣದ ಮೂಲಕ ಶಾಂತಿ ಸ್ಥಾಪಿಸುವ ನಂಬಿಕೆ ಹೊಂದಿದ್ದವು. ನಿಶ್ಶಸ್ತ್ರೀಕರಣ ಸಭೆಗಳು ನಡೆಯುತ್ತಿದ್ದ ಸಮಯದಲ್ಲೇ ಆಕ್ರಮಣಗಳೂ ನಡೆಯುತ್ತಿದ್ದವು. ಆಕ್ರಮಣಕಾರೀ ರಾಷ್ಟ್ರಗಳು ತಮ್ಮ ಸೇನೆಗಳನ್ನು ಜಮಾಯಿಸಿ, ಶಸ್ತ್ರಾಸ್ತ್ರಗಳನ್ನು ಇಮ್ಮಡಿಗೊಳಿಸಿ ಹೆಚ್ಚಿಸಿಕೊಳ್ಳುತ್ತಿದ್ದ ಕಾಲದಲ್ಲೇ ಪ್ರಜಾಪ್ರಭುತ್ವ ರಾಷ್ಟ್ರಗಳು ನಿಶ್ಶಸ್ತ್ರೀಕರಣದಲ್ಲಿ ನಂಬಿಕೆ ಇಟ್ಟಿದ್ದು ಹಾಸ್ಯಾಸ್ಪದ ಸಂಗತಿಯಾಯಿತು. ವರ್ಸೇಲ್ಸ್ ಒಪ್ಪಂದ ಮತ್ತು ಅದರ ಅನಂತರದ ಒಪ್ಪಂದಗಳೆಲ್ಲವನ್ನೂ ಉಲ್ಲಂಘಿಸುವುದು ಹಿಟ್ಲರನಿಗೆ ಅತಿ ಸುಲಭವಾಯಿತು. 1933ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಆತ ತನ್ನ ಯೋಚನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ತೊಡಗಿ, 1936ರಲ್ಲಿ ಒಪ್ಪಂದಗಳನ್ನು ಮುರಿಯಲು ಪ್ರಾರಂಭಿಸಿದ. ಪ್ರಜಾಪ್ರಭುತ್ವ ರಾಷ್ಟ್ರಗಳ ದುರ್ಬಲತೆ, ಅವು ಸರಿಯಾದ ಕಾಲದಲ್ಲಿ ಕಾರ್ಯೋನ್ಮುಖವಾಗದೆ ಇದ್ದದ್ದು ಮತ್ತು ಹಿಟ್ಲರನ ರಾಜತಂತ್ರ–ಇವು ಎರಡನೆಯ ಮಹಾಯುದ್ಧಕ್ಕೆ ಕಾರಣಗಳೆಂದು ಹೇಳಬಹುದಾಗಿದೆ. ಇದರ ಆರಂಭಕ್ಕೆ ಮುಂಚಿನ ಕೆಲವು ಘಟನೆಗಳನ್ನು ಸ್ಥೂಲವಾಗಿ ಪರಿಶೀಲಿಸಬೇಕು.

ಯುರೋಪಿನಲ್ಲಿ ಈ ಆಕ್ರಮಣಕಾರರಿಗೆ ಮೊದಲು ಆಹುತಿಯಾದ ದೇಶವೇ ಆಸ್ಟ್ರಿಯ. 1938 ಮಾರ್ಚ್ 11ರಂದು ಹಿಟ್ಲರನ ಸೇನೆಗಳು ಆಸ್ಟ್ರಿಯವನ್ನು ಪ್ರವೇಶಿಸಿದವು. ಅನಂತರ ಹಿಟ್ಲರನ ಕಣ್ಣು ಚೆಕೊಸ್ಲೊವಾಕಿಯದ ಮೇಲೆ ಬಿತ್ತು. ಆಸ್ಟ್ರಿಯದ ಕಡೆಯಿಂದ ಚೆಕೊಸ್ಲೊವಾಕಿಯವನ್ನು ಆಕ್ರಮಿಸಿಕೊಳ್ಳುವುದು ಸುಲಭವಾಗಿತ್ತು. ಈ ಸಣ್ಣ ರಾಷ್ಟ್ರವನ್ನು ರಕ್ಷಿಸುವ ಹೊಣೆ ಹೊತ್ತಿದ್ದ ದೇಶಗಳೆಂದರೆ ಫ್ರಾನ್ಸ್ ಮತ್ತು ಸೋವಿಯತ್ ಒಕ್ಕೂಟ, ಬ್ರಿಟನ್ ಕೂಡ ರಕ್ಷಣೆಯ ಜವಾಬ್ದಾರಿಯಲ್ಲಿ ಪಾಲುಗೊಂಡಿತು. ಆದರೆ ಈ ರಾಷ್ಟ್ರಗಳಾವುವೂ ಚೆಕೊಸ್ಲೊವಾಕಿಯದ ಅಧ್ಯಕ್ಷ ಬೆನೆಷ್ ಮಾಡಿದ ಪ್ರಾರ್ಥನೆಗೆ ಯಾವ ಮನ್ನಣೆಯನ್ನೂ ಕೊಡಲಿಲ್ಲ. ಆಂಗ್ಲೊ–ಫ್ರೆಂಚ್ ಯೋಜನೆಯಂತೆ ಸುಡೇಟನ್ ಪ್ರದೇಶವನ್ನು ಜರ್ಮನಿಗೆ ಒಪ್ಪಿಸಬೇಕೆಂದು ಫ್ರಾನ್ಸ್ ಸಲಹೆಮಾಡಿತು. ಇದರಿಂದ ಆಕ್ರಮಣವನ್ನು ನಿಲ್ಲಿಸಿ, ಶಾಂತಿ ಕಾಪಾಡುವ ಮತ್ತೊಂದು ಸುವರ್ಣಾವಕಾಶವನ್ನು ಮಿತ್ರರಾಷ್ಟ್ರಗಳು ಕಳೆದುಕೊಂಡವು. ಸ್ವತಃ ಶಾಂತಿಪ್ರಿಯನಾಗಿದ್ದ ಬ್ರಿಟಿಷ್ ಪ್ರಧಾನಿ ಚೇಂಬರ್‌ಲಿನ್ ಹಿಟ್ಲರನನ್ನು ಮ್ಯೂನಿಕ್‌ನಲ್ಲಿ ಭೇಟಿ ಮಾಡಿ ಅವನ ನೀತಿಯನ್ನು ಖಂಡಿಸಿದ, ಆದರೆ ತನಗೆ ರಾಜ್ಯ ವಿಸ್ತರಣೆಯ ಆಸೆಯೇ ಇಲ್ಲವೆಂದು ಹಿಟ್ಲರ್ ಭರವಸೆ ಕೊಟ್ಟಾಗ ಚೇಂಬರ್ಲಿನ್ ಅವನೊಂದಿಗೆ ಒಂದು ಒಪ್ಪಂದ ಮಾಡಿಕೊಂಡ (ಸೆಪ್ಟೆಂಬರ್ 30). ಈ ಸಂಧಾನದಲ್ಲಿ ಸೋವಿಯತ್ ಒಕ್ಕೂಟವನ್ನು ಸೇರಿಸಿಕೊಳ್ಳಲಿಲ್ಲ. ಸುಡೇಟನ್ ಪ್ರದೇಶವನ್ನು ಹಿಟ್ಲರನಿಗೆ ಚೆಕೊಸ್ಲೊವಾಕಿಯ ಒಪ್ಪಿಸಬೇಕೆಂಬ ತೀರ್ಮಾನದಿಂದ ಅವನ ಆಕ್ರಮಣಶೀಲಪ್ರವೃತ್ತಿಗೆ ಬಹುಮಾನ ದೊರಕಿದಂತಾಯಿತು. ಮುಂದೆ ಮ್ಯೂನಿಕ್ ಒಪ್ಪಂದ ತೀವ್ರವಾದ ಟೀಕೆಗೆ ಗುರಿಯಾದರೂ ಚೇಂಬರ್ಲಿನ್ ಬ್ರಿಟನಿಗೆ ಹಿಂತಿರುಗಿದಾಗ ಜನತೆಯಿಂದ ಅವನಿಗೆ ದೊರಕಿದ ಸ್ವಾಗತ ಅಭೂತಪೂರ್ವ. ಆಗ ಹರಡುತ್ತಿದ್ದ ಯುದ್ಧದ ಭೀತಿ ನಿವಾರಿಸಿ ಶಾಂತಿ ನೆಲೆಗೊಳಿಸಲು ಚೇಂಬರ್ಲಿನ್ ಯಾವ ಕ್ರಮವನ್ನಾದರೂ ಕೈಗೊಳ್ಳಲು ತಯಾರಿದ್ದ. ಫ್ರಾನ್ಸ್ ಸಹ ಅದೇ ಧೋರಣೆ ತಳೆಯಿತು. ಅನಿವಾರ್ಯವಾದರೆ ಮಾತ್ರ ಹಿಟ್ಲರನೊಡನೆ ಯುದ್ಧಮಾಡಬೇಕೇ ಹೊರತು ಅಲ್ಪ ವಿಷಯಗಳಿಗೆ ಕೈಯೆತ್ತಬಾರದೆಂಬುದು ಚೇಂಬರ್ಲಿನನ ಅಭಿಪ್ರಾಯವಾಗಿತ್ತು. ಅಲ್ಲದೆ ತಮ್ಮ ದೇಶದ ಹಿತಕ್ಕೆ ಸಂಬಂಧಪಡದ ದೂರ ಪ್ರದೇಶದ ಕಲಹಗಳಲ್ಲಿ ಕೈಹಾಕುವುದು ಸರಿಯಿಲ್ಲವೆಂದು ಆತ ನಂಬಿದ್ದ.

1917ರ ಕ್ರಾಂತಿಯ ದಿನಗಳಿಂದ ಸೋವಿಯತ್ ಒಕ್ಕೂಟ ಹೊಸ ಸಮಾಜ ಸೃಷ್ಟಿಸುವ ಕಾರ್ಯದಲ್ಲಿ ತೊಡಗಿತ್ತು. ಆದ್ದರಿಂದಲೇ ಅದು ಒಂದನೆಯ ಮಹಾಯುದ್ಧದಿಂದ ನಿರ್ಗಮಿಸಿದ್ದು. ರಷ್ಯದಲ್ಲಿ ಮಾತ್ರವಲ್ಲದೆ ಯುರೋಪಿನ ಇತರ ರಾಷ್ಟ್ರಗಳಲ್ಲೂ ಈ ಕ್ರಾಂತಿ ಹರಡುವುದೆಂಬ ನಂಬಿಕೆ ಆದೇಶದ ನಾಯಕರಿಗಿತ್ತು. ಆದರೆ ಲೆನಿನನ ಈ ಕನಸು ನನಸಾಗಲಿಲ್ಲ. ಅದಕ್ಕೋಸ್ಕರ ಒಂದನೆಯ ಮತ್ತು ಎರಡನೆಯ ಯುದ್ಧಗಳ ನಡುವಿನ ಕಾಲದಲ್ಲಿ ಇತರ ರಾಷ್ಟ್ರಗಳಲ್ಲಿ ಕ್ರಾಂತಿಯ ವಾತಾವರಣ ಮೂಡಿಸುವ ಕಾರ್ಯದಲ್ಲಿ ಅವರು ಮಗ್ನರಾಗಿದ್ದರು. ಆದರೆ ಕ್ರಾಂತಿಯ ತತ್ತ್ವ ಸಾಮೂಹಿಕ ಕಾರ್ಯಾಚರಣೆಗೆ ಅಡ್ಡಿಯುಂಟುಮಾಡಿತು. ಅಲ್ಲದೆ ಪಾಶ್ಚಾತ್ಯ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಸಾಮ್ರಾಜ್ಯದಾಹ ಹೆಚ್ಚಾಗಿದೆಯೆಂದು ಸೋವಿಯತ್ ನಾಯಕರು ಹೇಳತೊಡಗಿ, ಜರ್ಮನಿಯ ನಾಜಿಸಂ ಮತ್ತು ಇಟಲಿಯ ಫ್ಯಾಸಿಸಂ ಹಾವಳಿಗಿಂತ ಸಾಮ್ರಾಜ್ಯಷಾಹಿಯೇ ಹೆಚ್ಚು ಹಾನಿಕರವೆಂದು ಪ್ರಚಾರ ಮಾಡಿದರು. ಸ್ಟಾಲಿನ್ ಒಂದು ಹೆಜ್ಜೆ ಮುಂದೆ ಹೋಗಿ, ಹಿಟ್ಲರ್ ತನ್ನ ಮಿತ್ರನೆಂಬಂತೆ ವ್ಯವಹರಿಸಿದ. ಆ ಸಮಯದಲ್ಲಿ ಜರ್ಮನಿಯನ್ನೆದುರು ಹಾಕಿಕೊಳ್ಳಲು ಆತ ಸಿದ್ಧನಿರಲಿಲ್ಲ. ಹಿಟ್ಲರನ ಸೇನೆಗಳು ರಷ್ಯದ ಕಡೆಗೆ ನುಗ್ಗಿದರೆ ಅದರಿಂದ ತಮಗೆ ಕ್ಷೇಮವೆಂದು ಪಶ್ಚಿಮದ ರಾಷ್ಟ್ರಗಳು ಬಗೆಯುವುವೆಂದೂ ಅವು ತನ್ನ ನೆರವಿಗೆ ಬರಲಾರವೆಂದೂ ಸೋವಿಯತ್ ಒಕ್ಕೂಟ ಭಾವಿಸಿತ್ತು. ಹೀಗಾಗಿ ಸೋವಿಯತ್ ಒಕ್ಕೂಟ ಮತ್ತು ಇತರ ರಾಷ್ಟ್ರಗಳು ಯುರೋಪಿನ ಸಮಸ್ಯೆಗಳ ನಿವಾರಣೆಯಲ್ಲಿ ಒಂದುಗೂಡಲಿಲ್ಲ. ಅವು ತಾಟಸ್ಥ್ಯನೀತಿ ಅನುಸರಿಸಿದವು. ಆದರೂ ಕೊನೆಯಲ್ಲಿ ಹಾನಿಯುಂಟಾಯಿತು. ಫ್ರಾನ್ಸಿನ ಪತನವಾಯಿತು. ಬ್ರಿಟನ್ ಮತ್ತು ಇಡೀ ನಾಗರಿಕ ಪ್ರಪಂಚವೇ ತೊಂದರೆಗೊಳಗಾಗಬೇಕಾಯಿತು.

ಸೆಪ್ಟೆಂಬರ್ 3ರಂದು ಬ್ರಿಟನ್ ಯುದ್ಧ ಘೋಷಿಸಿದಾಗ ಪ್ರಧಾನ ಮಂತ್ರಿ ಚೇಂಬರ್ಲಿನ್ ಭಾಷಣಮಾಡುತ್ತಾ ದೂರದ ಒಂದು ನಗರಕ್ಕಾಗಿ ನಾವೀಗ ಹೋರಾಟ ನಡೆಸುತ್ತಿಲ್ಲ. ನ್ಯಾಯಕ್ಕೆ ಮತ್ತು ಪ್ರಜಾಸತ್ತೆಯ ಕ್ಷೇಮಕ್ಕೆ ಹೋರಾಡುತ್ತಿದ್ದೇವೆ. ಯುರೋಪಿನಲ್ಲಿ ಹಿಟ್ಲರಿಸಂ ನಾಶವಾಗುವ ತನಕ ಹೋರಾಡುತ್ತೇವೆ ಎಂದು ಹೇಳಿದ. ಬ್ರಿಟನ್ನಿನ ಸೇನೆ ಫ್ರೆಂಚ್ ಸೇನೆಯೊಡಗೂಡಿ ವ್ಯೂಹವೊಂದನ್ನು ರಚಿಸಿಕೊಂಡಿತು. ಆದರೆ ಪೋಲೆಂಡಿನೊಂದಿಗೆ ಭೂಸಂಪರ್ಕವಿಲ್ಲದಿದ್ದುದರಿಂದ ಅದಕ್ಕೆ ಮಿತ್ರರಾಷ್ಟ್ರಗಳು ಯಾವ ವಿಧದಿಂದಲೂ ಸಹಾಯ ನೀಡಲು ಸಾಧ್ಯವಾಗಲಿಲ್ಲ. ಪೋಲೆಂಡಿನಲ್ಲಿ ಬಲಯುತ ಸೈನ್ಯವೇನೋ ಇತ್ತು. ಆದರೆ ಅಲ್ಲಿನ ಕೈಗಾರಿಕಾ ಉತ್ಪನ್ನ ಕಡಿಮೆಯಾಗಿದ್ದು ಸೇನೆಗೆ ಹೆಚ್ಚಿನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸ್ಥಿತಿಯಲ್ಲಿರಲಿಲ್ಲ. ಅಲ್ಲದೆ ಆಧುನಿಕ ಶಸ್ತ್ರಾಸ್ತ್ರಗಳ ಕೊರತೆಯಿತ್ತು. ಆದರೂ ಪೋಲೆಂಡಿನ ನಾಯಕರು ದೇಶದ ಅಶ್ವಸೇನೆಯ ಶಕ್ತಿಯಲ್ಲಿ ನಂಬಿಕೆಯಿಟ್ಟು, ಅದರ ಮೂಲಕ ಜರ್ಮನರ ಸುಸಜ್ಜಿತ ಸೇನೆಯನ್ನು ಎದುರಿಸಿ ಸೋಲಿಸಬಹುದೆಂಬ ಭಾವನೆ ಹೊಂದಿದ್ದರು. ಅಲ್ಲದೆ ಅವರು ಜರ್ಮನಿಯ ವಾಯುಬಲವನ್ನು ಕಡೆಗಣಿಸಿದ್ದರು.

ಪೊಲೀಸ್ ಸೈನ್ಯವೇನೋ ಯುದ್ಧರಂಗದಲ್ಲಿ ಮಹಾ ಪರಾಕ್ರಮದಿಂದ ಹೋರಾಡಿತು. ಆದರೆ ಪೋಲೆಂಡನ್ನು ರಕ್ಷಿಸುವ ಕಾರ್ಯದಲ್ಲಿ ಸರಿಯಾದ ಕ್ರಮಗಳನ್ನು ಅದರ ದಳಪತಿಗಳು ಕೈಗೊಂಡಿರಲಿಲ್ಲ. ಆದ್ದರಿಂದ ಜರ್ಮನರನ್ನು ತಡೆಗಟ್ಟಬಹುದಾದ ಅನೇಕ ಅವಕಾಶಗಳನ್ನು ಪೋಲೆಂಡ್ ಕಳೆದುಕೊಂಡಿತು. ಸೆಪ್ಟೆಂಬರ್ 3ರ ವೇಳೆಗೆ ಜರ್ಮನರು ಪೋಲೆಂಡಿನ ಮುಖ್ಯ ಪಟ್ಟಣಗಳನ್ನು ವಶಪಡಿಸಿಕೊಂಡಿದ್ದರೂ ಹತ್ತು ದಿನಗಳ ಯುದ್ಧದ ಅನಂತರ ವಾರ್ಸಾನಗರ ಜರ್ಮನರ ವಶವಾಯಿತು. ಅದೇ ಸಮಯದಲ್ಲಿ ಪೂರ್ವದಿಂದ ಸೋವಿಯತ್ ಸೇನೆಗಳು ನುಗ್ಗಿ ಪೂರ್ವ ಪೋಲೆಂಡಿನ ಪೂರ್ವಭಾಗವನ್ನು ಆಕ್ರಮಿಸಿಕೊಂಡವು. ಪೋಲೆಂಡ್ ರಾಷ್ಟ್ರ ಇತ್ತ ಜರ್ಮನಿ ಅತ್ತ ಸೋವಿಯತ್ ಒಕ್ಕೂಟ ಇವೆರಡರ ನಡುವೆ ಹಂಚಿಹೋಯಿತು.

ಪೋಲೆಂಡಿನ ವಿಭಜನೆಯ ಅನಂತರ ಸೋವಿಯತ್ ದೇಶ ಬಾಲ್ಟಿಕ್ ದೇಶಗಳಾದ ಲಿಥುವೇನಿಯ, ಲಾಟ್ವಿಯ, ಎಸ್ಟೋನಿಯಗಳನ್ನು ತನ್ನ ರಕ್ಷಣಾ ವ್ಯವಸ್ಥೆಯಲ್ಲಿ ಸೇರಿಸಿಕೊಂಡಿತು ತನ್ನ ರಕ್ಷಣೆಗೆ ಅಗತ್ಯವಾದ ಭಾಗಗಳನ್ನು ಬಿಟ್ಟುಕೊಡಬೇಕೆಂದು ಫಿನ್‌ಲೆಂಡನ್ನು ಕೇಳಿತು. ಅದಕ್ಕೆ ಫಿನ್‌ಲೆಂಡ್ ಒಪ್ಪಲಿಲ್ಲ. ಆದ್ದರಿಂದ ಸೋವಿಯತ್ ಸೇನೆ ಫಿನ್‌ಲೆಂಡಿಗೆ ನುಗ್ಗಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಸಹಾನುಭೂತಿ ಫಿನ್‌ಲೆಂಡ್ ಕಡೆಗಿತ್ತು. ಫಿನ್ನರು ಶೌರ್ಯದಿಂದ ಹೋರಾಡಿದರೂ ಗೆಲ್ಲಲಾಗಲಿಲ್ಲ. 1940 ಮಾರ್ಚ್ 13ರಂದು ಫಿನ್ನರು ಶರಣಾಗತರಾಗಿ ಸೋವಿಯತ್ ಷರತ್ತುಗಳನ್ನೆಲ್ಲ ಒಪ್ಪಿದರು.

ದೀರ್ಘಕಾಲದ ಪೂರ್ವಯೋಜನೆಯಿಲ್ಲದೆಯೇ ಹಿಟ್ಲರ್ ನಡೆಸಿದ ಆಕ್ರಮಣವೆಂದರೆ ನಾರ್ವೆ–ಡೆನ್ಮಾರ್ಕ್‌ಗಳ ಮೇಲಿನದು. ಆಗ ನಾರ್ವೆ ತಟಸ್ಥ ರಾಷ್ಟ್ರವಾಗಿತ್ತು. ಜರ್ಮನ್ ಹಡಗುಗಳು ನಾರ್ವೆ ತೀರದಲ್ಲಿ ಸುರಕ್ಷಿತವಾಗಿರಬಹುದೆಂದು ಭಾವಿಸಲಾಗಿತ್ತು. ಆದರೆ ಅದು ವಿದ್ಯಮಾನಗಳ ಮೇಲೆ ಕಣ್ಣಿಟ್ಟಿತ್ತು. ಹಿಟ್ಲರನ ಕೆಲವರು ಸಲಹೆಗಾರರು ನಾರ್ವೆಯ ಆಕ್ರಮಣ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದ್ದರು. ಜರ್ಮನಿಯ ಯುದ್ಧಕಾರ್ಯಾಚರಣೆಗೆ ನಾರ್ವೆಯ ನೆರೆಯ ರಾಜ್ಯವಾದ ಸ್ವೀಡನಿನ ಉಕ್ಕು ಅಗತ್ಯವಾಗಿತ್ತು. ನಾರ್ವೆ ಬ್ರಿಟನಿನ ವಶಕ್ಕೇನಾದರೂ ಹೋದರೆ ಈ ಸರಬರಾಜು ತಪ್ಪುವುದೆಂಬ ಅಂಜಿಕೆ ಜರ್ಮನಿಗೆ. ಬ್ರಿಟನು ನಾರ್ವೆ ತೀರದಲ್ಲಿದ್ದ ಜರ್ಮನ್ ಯುದ್ಧ ನೌಕೆಯೊಂದರ ಮೇಲೆರಗಿ ಅದರಲ್ಲಿದ್ದ ಯುದ್ಧ ಕೈದಿಗಳನ್ನು ಬಲವಂತದಿಂದ ವಶಪಡಿಸಿಕೊಂಡಾಗ ನಾರ್ವೆ ತನ್ನ ತಾಟಸ್ಥ್ಯ ನೀತಿಗೆ ಅನುಗುಣವಾಗಿ ಸುಮ್ಮನಿತ್ತು. ಬ್ರಿಟನ್ನಿನ ಕಾರ್ಯಾಚರಣೆಯಿಂದ ರೊಚ್ಚಿಗೆದ್ದ ಹಿಟ್ಲರ್ ನಾರ್ವೆ ಡೆನ್ಮಾರ್ಕುಗಳನ್ನು ಆಕ್ರಮಿಸಬೇಕೆಂದು ತತ್‌ಕ್ಷಣವೇ ತೀರ್ಮಾನಿಸಿದ. ಯಾವ ಸುಳಿವನ್ನೂ ಕೊಡದೆ ಜರ್ಮನ್ ಸೇನೆಗಳು ಈ ದೇಶಗಳನ್ನು ಮುತ್ತಿದವು. ಯುದ್ಧ ಮಾಡಲಾರದೆ ಡೆನ್ಮಾರ್ಕ್ ಅಧೀನವಾಯಿತು. ನಾರ್ವೆಯ ಅನೇಕ ನಗರಗಳಲ್ಲಿ ಜರ್ಮನ್ ಸೈನಿಕರು ಸೇರಿ ಪಿತೂರಿಗಾರರೊಡನೆ ಕಲೆತು ನಾರ್ವೆಯ ರಕ್ಷಣಾಕ್ರಮವನ್ನು ನಾಶಪಡಿಸಿದರು. ದೇಶಾಭಿಮಾನಿಗಳಾದ ನಾರ್ವೀಜಿಯನರು ಹೋರಾಟ ನಡೆಸಿದರೂ ಪ್ರಯೋಜನವೇನೂ ಆಗಲಿಲ್ಲ. ಮಿತ್ರಪಡೆಗಳ ಸಹಾಯ ಸಮಯಕ್ಕೆ ಸರಿಯಾಗಿ ಒದಗಲಿಲ್ಲ. ಹಿಟ್ಲರ್ ನಾರ್ವೆಯಲ್ಲಿ ಒಂದು ಕೈಗೊಂಬೆ ಸರ್ಕಾರ ರಚಿಸಿ ಮೇಜರ್ ಕ್ವಿಸ್ಲಿಂಗನನ್ನು ಅದರ ಮುಖ್ಯಸ್ಥನನ್ನಾಗಿ

ನೇಮಿಸಿದ. ರಾಷ್ಟ್ರದ್ರೋಹಿ ಕೈಗೊಂಬೆಗಳಿಗೆ ಕ್ವಿಸ್ಲಿಂಗ್‌ಗಳೆಂಬ ಹೆಸರು ಬಂದದ್ದು ಈ ಕ್ವಿಸ್ಲಿಂಗನ ನಡವಳಿಕೆಯಿಂದಲೇ. ಜರ್ಮನರು ಹೆಚ್ಚಿನ ಪೂರ್ವಸಿದ್ಧತೆಯಿಲ್ಲದೆ ಆತುರದ ಕ್ರಮವಾಗಿ ನಾರ್ವೆಯನ್ನು ಮುತ್ತದಿದ್ದರೆ ಬಹುಶಃ ಈ ಯುದ್ಧದ ಗತಿಯೇ ಬದಲಾಗುತ್ತಿತ್ತೇನೋ. ತಟಸ್ಥ ರಾಷ್ಟ್ರವೊಂದರ ಆಕ್ರಮಣ ನಡೆಸಿದ ಅಪವಾದವೂ ಅವರ ಅಪರಾಧಗಳ ಪಟ್ಟಿಗೆ ಸೇರಿಕೊಂಡಿದ್ದಷ್ಟೇ ಅಲ್ಲ : ಜರ್ಮನಿ ಸುಮ್ಮನಿದ್ದು ಮಿತ್ರ ರಾಷ್ಟ್ರಗಳೇ ನಾರ್ವೆಯನ್ನಾಕ್ರಮಿಸಿಕೊಳ್ಳಲು ಅವಕಾಶ ಕೊಟ್ಟಿದ್ದರೆ ಆಗ ಅದು ತನ್ನ ವಿಮಾನಪಡೆಯ ಸಾಮರ್ಥ್ಯವನ್ನು ಬಳಸಿಕೊಂಡು ಬ್ರಿಟನಿನ ನೌಕಾಪಡೆಯ ಮೇಲೆ ಎರಗಬಹುದಾಗಿತ್ತು. ನಾರ್ವೆಯಲ್ಲಿ ತಮ್ಮ ಆತ್ಮಗೌರವವನ್ನೂ ಕಳೆದುಕೊಳ್ಳಲೊಲ್ಲದ ಮಿತ್ರರಾಷ್ಟ್ರಗಳು ಅದಕ್ಕಾಗಿ ಬಲು ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಜರ್ಮನರು ಡೆನ್ಮಾರ್ಕ್ ಹಾಗೂ ದಕ್ಷಿಣ ಸ್ವೀಡನ್ ಮೂಲಕ ಪ್ರತೀಕಾರಕ್ರಮ ಕೈಕೊಳ್ಳುವುದು ಅಸಾಧ್ಯವೇನೂ ಆಗುತ್ತಿರಲಿಲ್ಲ. ನಾರ್ವೆಗೆ ಯುದ್ಧ ಸರಬರಾಜನ್ನು ಕಡಿದುಹಾಕಿ ಮಿತ್ರರಾಷ್ಟ್ರಗಳನ್ನು ಪೇಚಿನಲ್ಲಿ ಸಿಕ್ಕಿಸುವ ಅವಕಾಶವನ್ನು ಜರ್ಮನಿ ಕಳೆದುಕೊಂಡಿತೆನ್ನಬಹುದು. ನಾರ್ವೆಯಲ್ಲಾದ ಪರಾಭವ ಇಂಗ್ಲೆಂಡಿನಲ್ಲಿ ಬಹಳ ಕೋಲಾಹಲವನ್ನುಂಟು ಮಾಡಿತು, ಪಾರ್ಲಿಮೆಂಟಿನ ಒತ್ತಾಯದ ಫಲವಾಗಿ ಚೇಂಬರ್ಲಿನ್ ಚರ್ಚಿಲ್‌ಗೆ ಬ್ರಿಟನಿನ ಪ್ರಧಾನಿಯ ಪದವಿ ಒಪ್ಪಿಸಿದ. ಪಾರ್ಲಿಮೆಂಟಿನ ಮೂರು ಪಕ್ಷಗಳ ಸಮ್ಮಿಶ್ರ ಸರ್ಕಾರ ರಚಿಸಿ, ಯುದ್ಧವನ್ನು ಯಶಸ್ವಿಯಾಗಿ ಕೊನೆಗೊಳಿಸಬೇಕೆಂದು ಚರ್ಚಿಲ್ ಘೋಷಿಸಿದ ದಿನವೇ (1940 ಮೇ 10) ಹಿಟ್ಲರನೂ ಪಶ್ಚಿಮ ಯುರೋಪ್ ದಂಡಯಾತ್ರೆ ಪ್ರಾರಂಭಿಸಿದ. ಜರ್ಮನಿಯ ಮಿತ್ರತ್ವದಲ್ಲಿ ನಂಬಿಕೆ ಇಟ್ಟಿದ್ದ ಸಣ್ಣ ರಾಷ್ಟ್ರಗಳಾದ ಹಾಲೆಂಡ್ ಮತ್ತು ಬೆಲ್ಜಿಯಂಗಳ ಮೇಲೆ ವಿಮಾನ ಪಡೆಯ ಮೂಲಕ ಮತ್ತು ಭೂಮಾರ್ಗವಾಗಿ ಆಕ್ರಮಣ ನಡೆಸಿದ. ಆಕ್ರಮಣವೆಲ್ಲವೂ ವಿದ್ಯುದ್ವೇಗದಲ್ಲಿ ಸಂಭವಿಸಿದುವು. ಬೆಲ್ಜಿಯಂ ಮತ್ತು ಹಾಲೆಂಡಿನ ಸೈನ್ಯಗಳು ಒಂದುಗೂಡಬೇಕೆಂಬ, ಫ್ರೆಂಚ್ ಮತ್ತು ಬ್ರಿಟಿಷ್ ಪಡೆಗಳು ಅವುಗಳ ನೆರವಿಗೆ ಹೋಗಬೇಕೆಂಬ ಯೋಜನೆಯನ್ನು ರೂಪಿಸುವ ಮೊದಲೇ ಜರ್ಮನರು ಮುನ್ನುಗ್ಗಿ ಅಧಿಕ ಪ್ರಮಾಣದಲ್ಲಿ ತಮ್ಮ ಸೈನ್ಯವನ್ನು ಇಳಿಸಿ ಅಲ್ಲಿನ ಮುಖ್ಯಪಟ್ಟಣಗಳನ್ನು ನಾಶಮಾಡಿದರು; ಹಾಲೆಂಡಿನ ಮಧ್ಯಭಾಗವನ್ನಾಕ್ರಮಿಸಿ ಉತ್ತರ ದಕ್ಷಿಣಭಾಗಗಳನ್ನು ಪ್ರತ್ಯೇಕಿಸಿದರು. ಆಕ್ರಮಣ ನಡೆದ ಕೆಲವು ದಿನಗಳಲ್ಲಿ ಡಚ್ಚರು ಶರಣಾಗತರಾದರು.

ಹಾಲೆಂಡಿನ ಪತನಾನಂತರ ಬೆಲ್ಜಿಯಂ ಕಡೆ ಹಿಟ್ಲರನ ಸೇನೆಗಳು ನುಗ್ಗಿದವು. ಆ ಸೇನೆಗಳನ್ನು ತಡೆಯಲು ಬೆಲ್ಜಿಯಂಗೆ ಸಾಧ್ಯವಾಗಲಿಲ್ಲ. ಫ್ರಾನ್ಸಿನ ಮ್ಯಾಜಿನೊ ರಕ್ಷಣಾ ಸಾಲು ಜರ್ಮನ್ ಗಡಿಯ ಉದ್ದಕ್ಕೂ ಹಬ್ಬಿತ್ತೇ ವಿನಾ ಬೆಲ್ಜಿಯಂ ಗಡಿಯ ತನಕ ಹಬ್ಬಿರಲಿಲ್ಲ. ಜರ್ಮನರು ತಮ್ಮ ವಿಮಾನ ಪಡೆಯಿಂದ ಬೆಲ್ಜಿಯಂ ರಕ್ಷಣಾ ವ್ಯೂಹವನ್ನು ಭೇದಿಸಿ, ಮಿತ್ರರಾಷ್ಟ್ರಗಳ ಪ್ರಯತ್ನವನ್ನು ವಿಫಲಗೊಳಿಸಿದರು. ಅವುಗಳ ಸೇನೆಗಳು ಅಲ್ಲಿಂದ ತಪ್ಪಿಸಿಕೊಳ್ಳುವುದೇ ಅಸಾಧ್ಯದ ಕೆಲಸವಾಯಿತು. ಬೆಲ್ಜಿಯಂ ಸೇನೆ ಸಾಮರ್ಥ್ಯದಿಂದ ಹೋರಾಡಿದರೂ ನಿರ್ನಾಮವಾಗುವ ಸ್ಥಿತಿಗೆ ಬಂದು ಮೇ 27ರಂದು ಜರ್ಮನಿಗೆ ಶರಣಾಗತವಾಗದೆ ಅನ್ಯಥಾ ಮಾರ್ಗವಿರಲಿಲ್ಲ. ಮಿತ್ರಸೇನೆಗಳು ಮುಂದಿನ ದಾರಿ ಕಾಣದೆ ಹಿಮ್ಮೆಟ್ಟಿ ಡನ್‌ಕರ್ಕ್ ರೇವುಪಟ್ಟಣವನ್ನು ಸೇರಿದವು. ಆಗ ಬ್ರಿಟಿಷ್ ನೌಕೆ ತನಗೆ ಸಾಧ್ಯವಾದ ಹಡಗು ದೋಣಿ ತೆಪ್ಪಗಳನ್ನೆಲ್ಲ ಉಪಯೋಗಿಸಿ, ಯುದ್ಧದಲ್ಲಿ ಸೋತು ಬಳಲಿ ಆಹಾರವಿಲ್ಲದೆ ಕಂಗೆಟ್ಟ ಬ್ರಿಟಿಷ್, ಫ್ರೆಂಚ್ ಮತ್ತು ಇತರ ಸೈನಿಕರನ್ನು ರಕ್ಷಿಸಿ ಬ್ರಿಟನಿಗೆ ಕೊಂಡೊಯ್ದಿತು. ಯುದ್ಧದ ಇತಿಹಾಸದಲ್ಲಿ ಇದೊಂದು ಸಾಹಸದ ಸಾಧನೆ. ಈ ಕಾರ್ಯದಲ್ಲಿ ಸೈನಿಕರನ್ನು ಉಳಿಸಲು ಸಾಧ್ಯವಾಯಿತೇ ವಿನಾ ಯುದ್ಧಸಾಮಗ್ರಿಗಳನ್ನು ತರಲು ಸಾಧ್ಯವಾಗಲಿಲ್ಲ. 700 ಟ್ಯಾಂಕುಗಳನ್ನೂ 2400 ಫಿರಂಗಿಗಳನ್ನೂ 50,000 ಮೋಟಾರು ವಾಹನಗಳನ್ನೂ ಬ್ರಿಟನ್ ಕಳೆದುಕೊಂಡಿದ್ದರಿಂದ ಆದ ನಷ್ಟ ಅಪಾರ. ಈ ಪ್ರಕರಣದಲ್ಲಿ 13,000 ಸೈನಿಕರು ಪ್ರಾಣ ತೆತ್ತರು; ಮತ್ತೆ 40,000 ಜನ ಶತ್ರುವಿನ ಕೈಗೆ ಸಿಕ್ಕಿಬಿದ್ದರು.

ಬೆಲ್ಜಿಯಂ ಜರ್ಮನಿಯ ವಶವಾಗುವ ವೇಳೆಗೆ ಫ್ರಾನ್ಸ್ ತನ್ನ 30 ಸೈನಿಕ ಪಡೆಗಳನ್ನು ಯುದ್ಧದಲ್ಲಿ ಕಳೆದುಕೊಂಡಿತ್ತು. ಬ್ರಿಟಿಷ್ ಸೈನಿಕರು ಫ್ರಾನ್ಸಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿರಲಿಲ್ಲ. ಇಂಥ ಸಂದಿಗ್ಧ ಸನ್ನಿವೇಶದಲ್ಲಿ ಫ್ರೆಂಚರ ಸೇನಾಪತಿ ಜನರಲ್ ವೇಗಾನ್ ದೇಶದ ಸೈನಿಕ ಬಲವನ್ನು ಕ್ರೋಡೀಕರಿಸಿ, ಅದರ ಸ್ವಲ್ಪ ಭಾಗವನ್ನು ಮ್ಯಾಜಿನೊ ಸಾಲಿನ ರಕ್ಷಣೆಗೆ ಕಾದಿರಿಸಿದ. ಜನರಲ್ ವೇಗಾನ್ ರಣತಂತ್ರದಲ್ಲಿ ನಿಪುಣನೆಂದು ಕೀರ್ತಿ ಪಡೆದಿದ್ದರೂ ಆತನ ವ್ಯೂಹರಚನೆಯಾಗುವ ಮೊದಲೇ ಜರ್ಮನ್ ವಾಹನ ಪಡೆಗಳು ಸೋಮ್ ನದಿಯನ್ನೂ ರೂವಾನ್ ನಗರವನ್ನೂ ತಲುಪಿದ್ದವು. ಸೇನ್ ನದಿಯನ್ನು ದಾಟಿದ್ದು ಜೂನ್ 10 ರಂದು. ಆ ಸಮಭೂಮಿಯಲ್ಲಿ ಶತ್ರು ಸೈನೆಯನ್ನು ತಡೆಯುವುದು ಅಸಾಧ್ಯವಾಯಿತು. ರಾಜಧಾನಿಯಾದ ಪ್ಯಾರಿಸ್ ಕಡೆ ಧಾವಿಸಲು ಶತ್ರು ಸೇನೆಗಳಿಗೆ ಕಷ್ಟವಾಗಲಿಲ್ಲ. ಅಂದೇ ಮುಸೋಲಿನಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ಮೇಲೆ ಯುದ್ಧ ಘೋಷಿಸಿ ದಕ್ಷಿಣದ ಮಾರ್ಗವಾಗಿ ಫ್ರಾನ್ಸನ್ನು ಮುತ್ತಿದ. ಜೂನ್ 13ರಂದು ಪ್ಯಾರಿಸನ್ನು ಅರಕ್ಷಿತ ನಗರವೆಂದು ಘೋಷಿಸಲಾಯಿತು. 14ರಂದು ಜರ್ಮನರು ಪ್ಯಾರಿಸ್ ನಗರವನ್ನು ಪ್ರವೇಶಿಸಲು ಏನೂ ತೊಂದರೆಯಾಗಲಿಲ್ಲ. ಫ್ರಾನ್ಸಿನ ಕೀರ್ತಿಪ್ರತಿಷ್ಠೆಗಳು 15 ದಿನಗಳ ಯುದ್ಧದಲ್ಲಿಯೇ ಉಡುಗಿಹೋದವು. ಈ ಸಮಯದಲ್ಲಿ ಸೈನಿಕದಳಪತಿಗಳ ಬೆಂಬಲ ಪಡೆದ ವೇಗಾನ್ ಜರ್ಮನರೊಡನೆ ಹೋರಾಡಿ ನಾಶವಾಗುವ ಮೊದಲೇ ಶಾಂತಿ ಸಂಧಾನ ಮಾಡುವುದು ಉತ್ತಮ ಮಾರ್ಗವೆಂದು ಮಂತ್ರಿಮಂಡಲಕ್ಕೆ ಒತ್ತಾಯ ಮಾಡಿದ. ಇದಕ್ಕೊಪ್ಪದ ಫ್ರಾನ್ಸಿನ ಪ್ರಧಾನಿ ರೇನೋ ರಾಜೀನಾಮೆ ಯಿತ್ತ. ಅವನ ಸ್ಥಾನದಲ್ಲಿ ಪೇಟನ್ ಪ್ರಧಾನಿಯಾದ. ವೇಗಾನನ ಸಲಹೆಯನ್ನು ಒಪ್ಪಿ ತಾನು ಸಂಧಾನಕ್ಕಾಗಿ ಸಿದ್ಧವಿರುವುದಾಗಿ ಜೂನ್ 16ರಂದು ಪೇಟನ್ ಸರ್ಕಾರ ತಿಳಿಸಿತು. ಹಿಟ್ಲರನ ಷರತ್ತುಗಳೆಲ್ಲವನ್ನೂ ಪೇಟನನ ಸರ್ಕಾರ ಜೂನ್ 22ರಂದು ಒಪ್ಪಿತು. ಸೋತ ಜರ್ಮನ್ ಪ್ರತಿನಿಧಿಗಳು 1918ರಲ್ಲಿ ಯಾವ ಸ್ಥಳದಲ್ಲಿ ಶರಣಾಗತಿ ಪತ್ರಕ್ಕೆ ಸಹಿ ಹಾಕಿದ್ದರೋ ಅಲ್ಲೇ ಈಗ ಫ್ರೆಂಚ್ ಪ್ರತಿನಿಧಿಗಳು ಶರಣಾಗತಿಯ ಪತ್ರಕ್ಕೆ ರುಜು ಹಾಕಬೇಕಾಯಿತು.

ಫ್ರಾನ್ಸಿನ ಪತನದ ಅನಂತರ ಜರ್ಮನರ ಮುಂದಿನ ಗುರಿ ಬ್ರಿಟನ್ ಎಂದು ಎಲ್ಲರೂ ತಿಳಿದಿದ್ದರು. ಆದರೆ ಆಗ ಹಿಟ್ಲರ್ ಬ್ರಿಟನನ್ನು ವಶಪಡಿಸಿಕೊಳ್ಳುವ ಯಾವ ಯೋಜನೆಯನ್ನೂ ಹೊಂದಿರಲಿಲ್ಲ. ಏಕೆಂದರೆ, ಬ್ರಿಟನಿನ ರಕ್ಷಣಾ ವ್ಯವಸ್ಥೆ ಕುಸಿದಿದ್ದು, ಅದು ಯುದ್ಧ ಮುಂದುವರಿ ಸುವ ಸ್ಥಿತಿಯಲ್ಲಿರಲಿಲ್ಲವೆಂದೂ ಅಲ್ಲಿನ ಸರ್ಕಾರ ಆದಷ್ಟು ಬೇಗ ಜರ್ಮನರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಆತುರದಲ್ಲಿದೆಯೆಂದೂ ಹಿಟ್ಲರ್ ತರ್ಕಿಸಿದ್ದ. ಆದ್ದರಿಂದಲೇ ಜರ್ಮನ್ ವಾಯುಪಡೆ ಅತ್ತ ಕಡೆ ಕಣ್ಣು ಹಾಯಿಸಬಾರದೆಂದು ಆಜ್ಞೆ ಮಾಡಿದ್ದ. ಯುದ್ಧ ಮುಂದುವರಿಸುವುದೇ ತನ್ನ ಧ್ಯೇಯವೆಂದು ಬ್ರಿಟಿಷ್ ಪ್ರಧಾನಿ ಚರ್ಚಿಲ್ ಘೋಷಿಸಿದಾಗಲೂ ಹಿಟ್ಲರ್ ಅದನ್ನು ಕೇವಲ ಬೆದರಿಕೆಯ ಕೂಗಾಟವೆಂದೂ ಬ್ರಿಟನಿನ ಅಶಕ್ತತೆಯ ಬಗ್ಗೆ ತನ್ನ ಅಭಿಪ್ರಾಯ ಸರಿಯೆಂದೂ ಸಾರಿದ. ಆದರೆ ಸ್ವಲ್ಪ ಕಾಲದಲ್ಲೇ ಆ ನಂಬಿಕೆ ನಂದಿಹೋಯಿತು. ಸುಮಾರು ಒಂದು ತಿಂಗಳ ಕಾಲ ಹಿಟ್ಲರ್ ಸುಮ್ಮನಿದ್ದ. ಆಮೇಲೆ ನಿಜಸ್ಥಿತಿ ಅರಿವಾಗಿ 1940 ಜುಲೈ 2ರಂದು ಬ್ರಿಟನ್ನಿನ ಮೇಲೆ ಆಕ್ರಮಣ ನಡೆಸುವ ಕ್ರಮದ ವಿವರವನ್ನು ಮೊದಲ ಬಾರಿಗೆ ತನ್ನ ದಂಡನಾಯಕರೊಡನೆ ಹಿಟ್ಲರ್ ಚರ್ಚಿಸಿದ. ಆಗಸ್ಟ್ ಮಧ್ಯಭಾಗದ ವೇಳೆಗೆ ಸೈನ್ಯ ಸಿದ್ಧವಾಗಿರಬೇಕೆಂದು ಆಜ್ಞೆ ನೀಡಲಾಯಿತು.

ಜರ್ಮನ್ ಸೇನೆ ಈ ಕಾರ್ಯಾಚರಣೆಯ ಬಗ್ಗೆ ವಿಶೇಷ ತರಬೇತಿ ಪಡೆಯದಿದ್ದರೂ ಬ್ರಿಟನ್ ವಿಸ್ತಾರವಾದ ಸಾಗರ ತೀರವನ್ನು ಹೊಂದಿದ್ದರಿಂದ ಅದನ್ನು ಘಾತಿಸಲು ಉತ್ತಮ ಅವಕಾಶವಿತ್ತು. ಆಕ್ರಮಣಕ್ಕೆ ಮೊದಲು ವಿಮಾನಧಾಳಿ ನಡೆಸುವುದು ಜರ್ಮನಿಯ ಉದ್ದೇಶ. ಅದರಂತೆ ಎಡೆಬಿಡದೆ ಜರ್ಮನ್ ವಿಮಾನಗಳು ಇಂಗ್ಲೆಂಡಿನ ಮೇಲೆ ಧಾಳಿ ನಡೆಸಿದವು. 1940 ಆಗಸ್ಟ್ 8ರಂದು ಆರಂಭವಾದ ಧಾಳಿ ಅಕ್ಟೋಬರ್ ಕೊನೆಯ ತನಕ ನಿಲ್ಲಲಿಲ್ಲ. ಈ ವಿಮಾನ ಕದನಗಳಲ್ಲಿ ಜರ್ಮನಿಯ ವಿಮಾನಗಳು ವಿಶೇಷ ಸಂಖ್ಯೆಯಲ್ಲಿ ನಾಶವಾದವು. ಇಂಗ್ಲೆಂಡಿನ ಕಡೆ ಹತರಾದ ವಿಮಾನಚಾಲಕರ ಸಂಖ್ಯೆ 375. ಈ ಕದನದಲ್ಲಿ ಜರ್ಮನಿ ಮತ್ತು ಬ್ರಿಟನ್‌ಗಳ ಬಲಾಬಲಗಳ ಸತ್ತ್ವಪರೀಕ್ಷೆಯಾಗಿ ಇಂಗ್ಲೆಂಡ್ ಉಳಿದುಕೊಂಡಿತು. ಜರ್ಮನಿ ಬಾಂಬಿನ ಮಳೆ ಸುರಿಸಿದಾಗ ಇಂಗ್ಲಿಷರು ತಮ್ಮ ಅಮೂಲ್ಯವಸ್ತುಗಳನ್ನೂ ಹೆಂಗಸರು ಮಕ್ಕಳನ್ನೂ ಸುರಕ್ಷಿತ ಪ್ರದೇಶಗಳಿಗೆ ಸಾಗಿಸಿ ಸತತವಾಗಿ ಬೀಳುತ್ತಿದ್ದ ಬೆಂಕಿಯನ್ನು ಧೈರ್ಯದಿಂದ ಎದುರಿಸಿದರು. ಕಾರ್ಖಾನೆಗಳಲ್ಲಿ ಹರಿಕೇನ್, ಸ್ಪಿಟ್‌ಫೈರ್ ಎಂಬ ಯುದ್ಧವಿಮಾನಗಳನ್ನು ಅವು ತಯಾರಾಗಿ ಸಿದ್ಧವಾಗುತ್ತಿದ್ದಂತೆಯೇ ಹಾರಿಸಿ ಶತ್ರುವಿನ ಉಪದ್ರವವನ್ನು ತಡೆಗಟ್ಟಲಾ ಯಿತು. ಬ್ರಿಟಿಷರ ಸಂಕಟವೇನೂ ಕಡಿಮೆಯಿರಲಿಲ್ಲ. ಅಪಾರ ನಷ್ಟ, ಆಹಾರದ ಅಭಾವ, ನಿರಂತರ ಸಾವುನೋವು–ಈ ಯಾವುದಕ್ಕೂ ಎದೆಗೆಡದೆ ತಮ್ಮ ಒಳಗುದಿಗಳನ್ನು ಬದಿಗೊತ್ತಿ ಐಕಮತ್ಯದಿಂದ ಸೆಣಸಿ ನಿಂತು, ಅಮೆರಿಕ ಸಂಯುಕ್ತ ಸಂಸ್ಥಾನದಿಂದ ವಿಮಾನ, ಶಸ್ತ್ರಾಸ್ತ್ರ ಮತ್ತು ಆಹಾರ ಪದಾರ್ಥಗಳ ಸಹಾಯ ಪಡೆದು ಜಯಪ್ರದರಾದರು. ಆ ನಾಲ್ಕು ತಿಂಗಳ ವಿಮಾನಧಾಳಿಯಲ್ಲಿ ಬ್ರಿಟನಿನ ಜನತೆಗೆ ನರಕದ ಅನುಭವವಾಯಿತು. ಸು.50,000 ಜನ ಸತ್ತರು; ಲಂಡನ್ ನಗರದಲ್ಲಿ ಸು.11 ಲಕ್ಷ ಮನೆಗಳು ನೆಲಸಮವಾದವು. ಇಷ್ಟು ನಷ್ಟವಾದರೂ ಜರ್ಮನ್ ವಿಮಾನಗಳು ಬ್ರಿಟನಿನ ಕೈಗಾರಿಕಾ ಕೇಂದ್ರಗಳನ್ನು ನಾಶಪಡಿಸುವುದರಲ್ಲಾಗಲಿ ಅದರ ವಾಯು ಬಲವನ್ನು ಕುಂಠಿತಗೊಳಿಸುವುದರಲ್ಲಾಗಲಿ ಗಣನೀಯ ಯಶಸ್ಸು ಪಡೆಯಲಿಲ್ಲ.

ಅತ್ತ ಕಡೆ ಗ್ರೀಸಿನಿಂದಲೂ ಇತ್ತಕಡೆ ಬ್ರಿಟಿಷ್ ಸೈನ್ಯದಿಂದಲೂ ಪರಾಭವಗೊಂಡ ಮುಸೋಲಿನಿಯ ನೆರವಿಗೆ ಜರ್ಮನಿ ಬಂತು. ಬಲ್ಗೇರಿಯ ಮತ್ತು ರೊಮೇನಿಯ ಆಕ್ರಮಣ ನಡೆಸಿ, ಯೂಗಾಸ್ಲಾವಿಯದ ಮೇಲೆ ಬಿದ್ದು ಅದರ ರಾಜಧಾನಿ ಬೆಲ್‌ಗ್ರೇಡಿನ ಮೇಲೆ ಧಾಳಿ ನಡೆಸಿತು. ಆಲ್ಬೇನಿಯದಲ್ಲಿ ಯುದ್ಧ ಮಾಡುತ್ತಿದ್ದ ಗ್ರೀಕರನ್ನು ಎದುರಿಸಿ ಜರ್ಮನರು ಆ ಕಾರ್ಯಾಚರಣೆಯಲ್ಲಿ ಜಯಪ್ರದರಾದರು. ಗ್ರೀಕ್ ಸೈನ್ಯ ಶರಣಾಗತವಾಯಿತು. ಗ್ರೀಕರ ನೆರವಿಗೆ ಹೋದ ಬ್ರಿಟಿಷ್ ಸೇನೆಯ ಸ್ಥಿತಿ ಶೋಚನೀಯವಾಯಿತು.

ಉತ್ತರ ಆಫ್ರಿಕದಲ್ಲಿ ವೇವೆಲ್ ಜಯಶೀಲನಾಗಿದ್ದರೂ ಅವನಿದ್ದ ಪ್ರದೇಶಗಳ ಹಿಂಭಾಗದಲ್ಲಿ ಇಟಾಲಿಯನ್ ಸೇನೆಗಳು ಇದ್ದೇ ಇದ್ದವು. ವೇವಲನ ಒಂದು ಪಡೆ ಎರಿಟ್ರಿಯದ ಮೇಲೂ ಇನ್ನೊಂದು ದಕ್ಷಿಣ ಸೋಮಾಲಿ ಲ್ಯಾಂಡಿನ ಮೇಲೂ ನುಗ್ಗಿ ಇಟಾಲಿಯನ್ ಸೇನೆಗಳಿಗೆ ನಷ್ಟವುಂಟುಮಾಡಿದುವು. ಮುಸೋಲಿನಿಯ ಆಕ್ರಮಣಕ್ಕೆ ತುತ್ತಾಗಿದ್ದ ಇಥಿಯೋಪಿಯ 5 ವರ್ಷಗಳ ಅನಂತರ ವೇವೆಲನ ಕಾರ್ಯಾಚರಣೆಯಿಂದ ವಿಮೋಚನೆ ಹೊಂದಿತು.

ಉತ್ತರ ಆಫ್ರಿಕದಲ್ಲಿ ಬ್ರಿಟಿಷ್ ಸೇನೆಯ ಸಂಖ್ಯೆ ಕಡಿಮೆಯಾಗಿದ್ದ ಆ ಸಮಯದಲ್ಲಿ ಜರ್ಮನರು ಲಿಬಿಯದಲ್ಲಿ ದೊಡ್ಡ ಟ್ಯಾಂಕುಗಳ ಸೇನೆ ಇಳಿಸಿ, ಸಿಸಿಲಿಯಲ್ಲಿ ದೊಡ್ಡ ವಿಮಾನ ಪಡೆಯನ್ನು ಕೂಡಿಸಿ ಧಾಳಿ ನಡೆಸಿದರು. ಈ ಕಾರ್ಯಾಚರಣೆಯಿಂದ ವೇವೆಲನ ಸೇನೆ ಕರಗಿತು. ಬ್ರಿಟಿಷರ ಶ್ರೇಷ್ಠ ದಳಪತಿಗಳು ಜರ್ಮನರ ಸೆರೆಯಾಳುಗಳಾದರು. ಸಿಸಿಲಿಯಿಂದ ಜರ್ಮನ್ ವಿಮಾನಗಳು ದಾಳಿ ನಡೆಸಿದ್ದರಿಂದ ಬ್ರಿಟಿಷ್ ನೌಕೆಗಳು ಆ ಭಾಗದಲ್ಲಿ ಚಲಿಸುವುದೇ

ದುಸ್ತರವಾಯಿತು. ಇಷ್ಟಾದರೂ ಮಿತ್ರಪಕ್ಷ ಆಫ್ರಿಕದಲ್ಲಿ ಪಡೆದುಕೊಂಡಿದ್ದ ಪ್ರದೇಶಗಳನ್ನು ಜರ್ಮನಿ ಕಸಿದುಕೊಳ್ಳಲು ಸಾಧ್ಯವಾಗಲಿಲ್ಲ. ಹಿಟ್ಲರ್ ಸೋವಿಯತ್ ಒಕ್ಕೂಟದ ಮೇಲೆ ಅನಿರೀಕ್ಷಿತ ಧಾಳಿ ನಡೆಸಿದಾಗ ಇತಿಹಾಸದ ಪಥವೇ ಬದಲಾಯಿತೆನ್ನಬಹುದು. ಹಿಂದೆ ನೆಪೋಲಿಯನ್ ಅನುಭವಿಸಿದ ತೇಜೋವಧೆಯಂತೆ ಹಿಟ್ಲರನಿಗೂ ಅದೇ ರೀತಿಯ ಅನುಭವ ಉಂಟಾಯಿತು. ಹಿಟ್ಲರ್ ತನ್ನ ಸೈನ್ಯವನ್ನು ಪೂರ್ವದ ಕಡೆ ತಿರುಗಿಸಿದಾಗ ಬ್ರಿಟನಿನ ಸ್ಥಿತಿ ಸುಧಾರಿಸಿತೆನ್ನಬಹುದು. ಹಿಟ್ಲರನಾದರೋ ಸೋವಿಯತ್ ದೇಶವನ್ನು ಸೋಲಿಸುವ ಧ್ಯೇಯವನ್ನು ಮೊದಲಿಂದಲೇ ಹೊಂದಿದ್ದ. 1939ರಲ್ಲಿ ಸೋವಿಯತ್ ಒಕ್ಕೂಟದೊಡನೆ ಯುದ್ಧವಿರುದ್ಧ ಒಪ್ಪಂದ ಮಾಡಿಕೊಂಡಿದ್ದು ಕೇವಲ ತಾತ್ಕಾಲಿಕವೆಂದು ಹಿಟ್ಲರ್ ಭಾವಿಸಿದ್ದ. ಏಕೆಂದರೆ ಆತ ಮೊದಲಿಂದಲೂ ಬಾಲ್‌ಷೆವಿಸ್ಂನ ವಿರೋಧಿಯಾಗಿದ್ದು 1939ರ ಅನಂತರದ ಸ್ಟಾಲಿನನ ನಡೆವಳಿಕೆಯ ಬಗ್ಗೆ ಸಂಶಯ ಹೊಂದೇ ಇದ್ದ. ಸೋವಿಯತ್ ಒಕ್ಕೂಟದ ಮೇಲೆ ಯುದ್ಧ ಮಾಡುವ ನಿರ್ಧಾರ ಮಾಡಿ ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದ. ಅಂಥ ಸಮಯ 1941 ಜೂನ್ 22ರಂದು ಒದಗಿದಾಗ ಹಿಟ್ಲರ್ ಅದರ ಮೇಲೆ ತನ್ನ ಸೇನೆಗಳನ್ನು ನುಗ್ಗಿಸಿದ.

ಸೋವಿಯತ್–ಜರ್ಮನ್ ಯುದ್ಧವನ್ನು ಮಹಾಬಲರ ಯುದ್ಧವೆಂದು ಕರೆಯಲಾಗಿದೆ. ಯುದ್ಧತಂತ್ರದಲ್ಲಿ ನೈಪುಣ್ಯ ಪಡೆದಿದ್ದ, ಅದುವರೆಗೆ ನಡೆದ ಕದನಗಳಲ್ಲಿ ಜಯಶೀಲರಾಗಿದ್ದ ಜರ್ಮನ್ ಸೈನಿಕರಿಗೆ ಸೋವಿಯತ್ ಒಕ್ಕೂಟವನ್ನು ಸೋಲಿಸುವ ಕಾರ್ಯ ಕಷ್ಟವೆನಿಸಲಿಲ್ಲ. ಯುದ್ಧದ ಪ್ರಾರಂಭದಲ್ಲಿ ಅವರ ಕೈಯೇ ಮೇಲಾಗಿತ್ತು. ಹೊರವಲಯದ ಬಾಲ್ಟಿಕ್ ರಾಷ್ಟ್ರಗಳಲ್ಲಿ, ಪೂರ್ವ ಪೋಲೆಂಡ್ ಮತ್ತು ಬೆಸ್ಸರೇಬಿಯಗಳಲ್ಲಿ ಸೋವಿಯತ್ ಒಕ್ಕೂಟ ನಿರ್ಮಿಸಿಕೊಂಡಿದ್ದ ರಕ್ಷಣಾ ಪಂಕ್ತಿಗಳು ಅಲ್ಲಲ್ಲ ನಡೆದ ಘೋರ ಕಾಳಗಗಳಲ್ಲಿ ಕುಸಿದು ಬಿದ್ದುವು. ಜರ್ಮನ್ ಸೈನಿಕರು ಬಯಲು ಪ್ರದೇಶವಾದ ರಷ್ಯದ ಒಳಪ್ರಾಂತ್ಯಗಳಲ್ಲಿ ಪ್ರಸರಿಸಿ ಕೀಯೆಫ್, ಕಾರ್ಕೋಫ್ ನಗರಗಳನ್ನು ವಶಪಡಿಸಿಕೊಂಡು ಲೆನಿನ್‌ಗ್ರಾಡನ್ನೂ ರಾಜಧಾನಿಯಾದ ಮಾಸ್ಕೋ ನಗರವನ್ನೂ ಸುತ್ತುಗಟ್ಟಿ ದಕ್ಷಿಣದಲ್ಲಿ ಡೊನೆಟ್ಸ್ ನದೀಪಾತ್ರವನ್ನು ವಶಪಡಿಸಿಕೊಂಡು ಡಾನ್ ನದೀತೀರದ ರಾಸ್ಟಾವ್ ನಗರ ಪ್ರವೇಶಿಸಿದರು. ಆದರೆ ಸೋವಿಯತರು ಎದೆಗುಂದಲಿಲ್ಲ. ಶೌರ್ಯದಿಂದ ಕಾದಾಡಿ ರಾಸ್ಟಾವ್ ಅನ್ನು ಮತ್ತೆ ಸ್ವಾಧೀನ ಪಡಿಸಿಕೊಂಡರು. ಆದರೆ ಆ ವೇಳೆಗೆ ಅನೇಕ ಲಕ್ಷ ಚದರ ಮೈಲಿಗಳ ರಷ್ಯನ್ ಭೂಮಿ ಜರ್ಮನರ ವಶವಾಗಿತ್ತು. ಜರ್ಮನರು ಅಗಾಧ ಸಂಖ್ಯೆಯಲ್ಲಿ ಟ್ಯಾಂಕುಗಳನ್ನೂ ವಿಮಾನ ಬಲವನ್ನೂ ಉಪಯೋಗಿಸಿ ಉಕ್ರೇನ್ ಪ್ರದೇಶದತ್ತ ನುಗ್ಗಿದರು. ಕೈಗಾರಿಕಾ ಕೇಂದ್ರವಾದ ಉಕ್ರೇನ್ ಶತ್ರುವಶವಾದದ್ದು ಸೋವಿಯತ್ ಒಕ್ಕೂಟಕ್ಕೊದಗಿದ ದೊಡ್ಡ ವಿಪತ್ತು. ಆ ಪ್ರದೇಶ ಕೈಬಿಟ್ಟಿದ್ದರಿಂದ ಸೋವಿಯತರು ಯೂರಲ್ ಪ್ರಾಂತ್ಯದ ಕೈಗಾರಿಕೆಗಳನ್ನೂ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನ ಕಳುಹಿಸುತ್ತಿದ್ದ ಯುದ್ಧ ಸಾಮಗ್ರಿಗಳನ್ನೂ ಅವಲಂಬಿಸಬೇಕಾಯಿತು.

ಸೋವಿಯತ್–ಜರ್ಮನ್ ಯುದ್ಧ ಇನ್ನೂ ವಿಸ್ತಾರಗೊಂಡಿತ್ತು. ಅತ್ತಕಡೆ ಜಪಾನು ಜರ್ಮನ್ ದಿಗ್ವಿಜಯದಿಂದ ಉತ್ಸಾಹಗೊಂಡು 1941 ಡಿಸೆಂಬರ್ 7ರಂದು ಹವಾಯಿ ದ್ವೀಪದಲ್ಲಿನ ಪರ್ಲ್ ಹಾರ್ಬರಿನಲ್ಲಿ ಅಮೆರಿಕದ ದೊಡ್ಡ ನೌಕಾಪಡೆಯ ಮೇಲೆ ಹಠಾತ್ತನೆ ಧಾಳಿ ನಡೆಸಿದಾಗ ಅವರ ಅನೇಕ ಹಡಗುಗಳು ನಾಶಗೊಂಡುವು. ಇದರಿಂದ ಅಮೆರಿಕ ಸಂಯುಕ್ತ ಸಂಸ್ಥಾನದ ನೌಕಾಬಲ ಕುಂಠಿತವಾಯಿತೆನ್ನಬಹುದು. ಇದಾದ ಮೂರು ದಿನಗಳ ಅನಂತರ ಬ್ರಿಟಿಷರ ಪ್ರಸಿದ್ಧ ಯುದ್ಧ ನೌಕೆಗಳಾದ ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಪಲ್ಸ್ ಜಪಾನೀಯರ ಬಾಂಬುಗಳಿಗೀಡಾಗಿ ಮುಳುಗಿ ಹೋದವು. ಇದರಿಂದ ಪೆಸಿಫಿಕ್ ಮತ್ತು ಆಗ್ನೇಯ ಪ್ರದೇಶಗಳಲ್ಲಿ ಜಪಾನ್ ತನ್ನ ಆಕ್ರಮಣ ನಡೆಸಲು ಸುಲಭವಾಯಿತು. ಹಾಂಗ್‌ಕಾಂಗ್, ಮಲಯ ಮತ್ತು ಸಿಂಗಪುರಗಳು ಒಂದರ ಮೇಲೊಂದರಂತೆ ಜಪಾನೀಯರ ವಶವಾದವು. ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿದ್ದ ಫಿಲಿಪೀನ್ ದ್ವೀಪಸಮುದಾಯದಲ್ಲಿ ಜನರಲ್ ಮೆಕಾರ್ಥರನ ನಾಯಕತ್ವದಲ್ಲಿ ಹೋರಾಟ ನಡೆಸಿದರೂ ಅದಕ್ಕೆ ಹೊಸ ಸೇನೆಯ ಬೆಂಬಲ ಬಾರದೆ ಹೋದ ಪ್ರಯುಕ್ತ ಆ ಸೇನೆಯೂ ಶತ್ರುವಿನ ವಶವಾಯಿತು. ಬಂಗಾಲದ ಗಡಿ ತನಕ ಬರ್ಮವನ್ನಾಕ್ರಮಿಸಿ ಬರ್ಮ ರಸ್ತೆ ಹಿಡಿದುಕೊಂಡು ಚೀನವನ್ನು ಬೇರ್ಪಡಿಸಿ, ಅದಕ್ಕೆ ಹೊರಗಿನ ಸಂಪರ್ಕವೇ ಇಲ್ಲದಂತೆ ಮಾಡಿದ ಜಪಾನೀಯರು ತತ್ಕಾಲದಲ್ಲಿ ಅಜೇಯರೆನಿಸಿಕೊಂಡಿದ್ದರು.

ಪರ್ಲ್ ಹಾರ್ಬರ್ ಪ್ರಕರಣದ ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನ ಯುದ್ಧ ಘೋಷಣೆ ಮಾಡಿದಾಗ, ಅನೇಕ ಜಲಾಂತರ್ಗಾಮಿಗಳು ದೂರದ ಅಮೆರಿಕ ತೀರದವರೆಗೂ ಪೂರ್ವದಲ್ಲಿ ಭಾರತದವರೆಗೂ ಸಂಚರಿಸಿ ಅನೇಕ ಹಡಗುಗಳನ್ನು ಮುಳುಗಿಸಿದವು.

ಜರ್ಮನ್–ಸೋವಿಯತ್ ಯುದ್ಧದಲ್ಲಿ ಸೋವಿಯತರು ಚಳಿಗಾಲದ ಅವಕಾಶವನ್ನು ಉಪಯೋಗಿಸಿಕೊಂಡು ಜರ್ಮನರ ಮೇಲೂ ಅವರ ಸಂಚಾರ ವ್ಯವಸ್ಥೆಗಳ ಮೇಲೂ ಧಾಳಿ ನಡೆಸಿ ಅಪಾರ ಹಾನಿಯನ್ನುಂಟುಮಾಡಿದರು. ಜರ್ಮನರ ಸೇನೆ ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ, ಹಿಟ್ಲರನೇ ಸಮಸ್ತ ಸೇನಾ ನಾಯಕತ್ವವನ್ನು ವಹಿಸಿಕೊಂಡಿದ್ದರಿಂದ ಅವರಿಗೆ ಸ್ಫೂರ್ತಿ ಬಂದಂತಾಗಿತ್ತು. ಲೆನಿನ್‌ಗ್ರಾಡನ್ನು ವಶಪಡಿಸಿಕೊಳ್ಳುವುದೇ ಜರ್ಮನ್ ಸೇನೆಯ ಗುರಿ, ಭೂಭಾಗದಿಂದ ಎಲ್ಲ ಕಡೆಗಳಿಂದಲೂ ಆ ಪಟ್ಟಣವನ್ನು ಮುತ್ತಿದ್ದರು. ಆಹಾರವಿಲ್ಲದೆ, ಯುದ್ಧ ಸಾಮಗ್ರಿಗಳಿಲ್ಲದೆ ಸತತವಾಗಿ ಜರ್ಮನರ ಫಿರಂಗಿ ಏಟಿಗೆ ತುತ್ತಾಗಿದ್ದ ಸೋವಿಯತ್ ಸೇನೆಗಳು ಹಿಮಗಾಲ ಕಳೆದಾಗ ಅಪಜಯ ಅನುಭವಿಸಬೇಕಾಯಿತು. 1942 ಮೇ ತಿಂಗಳಲ್ಲಿ ಕಾರ್ಕೋಫ್ ನಗರವನ್ನು ಮರಳಿ ಹಿಡಿಯುವ ಪ್ರಯತ್ನವೂ ಫಲಿಸಲಿಲ್ಲ. ದಕ್ಷಿಣದಲ್ಲಿ ಜರ್ಮನರು ಸೆವಾಸ್ಟೊಪೋಲ್ ಕ್ರಿಮಿಯಗಳನ್ನು ವಶಪಡಿಸಿಕೊಂಡು, ತಮ್ಮ ಸ್ಥಾನ ಭದ್ರಗೊಳಿಸಿ, ಡೊನೆಟ್ಸ್ ಮತ್ತು ಡಾನ್ ನದಿಗಳ ಮಧ್ಯ ಪ್ರದೇಶದಲ್ಲಿ ಮುನ್ನುಗ್ಗಿದರು. ಅಲ್ಲಿ ಸೇನೆ ಇಬ್ಭಾಗವಾಯಿತು. ಒಂದು ಭಾಗದ ಗುರಿ ದಕ್ಷಿಣ ಕಾಕಸಸ್ ಆದರೆ ಮತ್ತೊಂದಕ್ಕೆ ವೋಲ್ಗಾತೀರದ ಕೈಗಾರಿಕಾನಗರ ಸ್ಟಾಲಿನ್‌ಗ್ರಾಡ್ ಗುರಿ. ಇಲ್ಲಿ ಭಯಂಕರ ಯುದ್ಧವಾಗಿ ಒಂದೊಂದು ಹೆಜ್ಜೆ ಮುಂದುವರಿಯಲೂ ಉಭಯ ಪಕ್ಷಗಳಲ್ಲೂ ಸಾವಿರಾರು ಜನ ಸತ್ತರು. ಎರಡನೆಯ ಮಹಾಯುದ್ಧದಲ್ಲಿ ಸ್ಟಾಲಿನ್‌ಗ್ರಾಡ್ ಯುದ್ಧವೇ ಎರಡನೆಯ ಮಹಾ ಘಟ್ಟ. ಆ ನಗರ ಹಿಟ್ಲರನ ವಶವಾಗಿದ್ದರೆ ಮುಂದೆ ಜರ್ಮನರನ್ನು ತಡೆಯಲು ಸಾಧ್ಯವಾಗುತ್ತಿರಲಿಲ್ಲ. ಸೋವಿಯತರು ಯುದ್ಧ ಮುಂದುವರಿಸಲಾಗುತ್ತಿರಲಿಲ್ಲ. ಜರ್ಮನರು ನಿರಂತರವಾಗಿ ಮುನ್ನುಗ್ಗಿ ಸೂಯೆಜ್ ಕಾಲುವೆಯನ್ನು ವಶಪಡಿಸಿಕೊಂಡು ಭಾರತಕ್ಕೆ ಕೂಡ ಬರಬಹುದಾಗಿತ್ತು. ಯೂರಲ್ ಪರ್ವತಪ್ರದೇಶದ ಕೈಗಾರಿಕೆಗಳೆಲ್ಲ ಅವರ ವಶವಾಗುತ್ತಿದ್ದುವು. ಆದರೆ ಇದೊಂದೂ ಸಾಧ್ಯವಾಗಲಿಲ್ಲ. ಏಕೆಂದರೆ ಸುಸಜ್ಜಿತ ಸೋವಿಯತ್ ಸೇನೆ 5 ತಿಂಗಳ ಸತತ ಕದನದ ಅನಂತರ, ಶತ್ರುವಿಗೆ ಏನೊಂದೂ ಸುಳಿವು ಕೊಡದೆ ವೋಲ್ಗಾ ನದಿ ದಾಟಿ, ಶತ್ರು ಸೇನೆಯನ್ನು ಸುತ್ತುಗಟ್ಟಿ ಹಠಾತ್ತನೆ ಅದರ ಮೇಲೆ ಬಿತ್ತು. ಈ ಆಕ್ರಮಣವನ್ನು ಜರ್ಮನರು ನಿರೀಕ್ಷಿಸಿರಲಿಲ್ಲ. 1943 ಜನವರಿ 31ರಂದು ಜರ್ಮನರು ಅಧಿಕ ಸಂಖ್ಯೆಯಲ್ಲಿ ಶರಣಾಗತರಾದರು. ಉಳಿದ ರಂಗಗಳಲ್ಲೂ ಸೋವಿಯತರು ಜಯ ಗಳಿಸಿದರು, ಕಾಕಸಸ್ ಕಡೆಗೆ ನುಗ್ಗಿದ್ದ ಜರ್ಮನ್ ಸೇನೆ ವಿಪತ್ತನ್ನು ಎದುರಿಸಬೇಕಾಯಿತು. ಹೀಗಾಗಿ ಡಾನ್ ಪ್ರದೇಶ, ವೋಲ್ಗಾ ತೀರ ಮತ್ತು ಕಾಕಸಸ್ ಪರ್ವತ ಪ್ರದೇಶಗಳು ಶತ್ರುವಿನಿಂದ ವಿಮೋಚನೆ ಹೊಂದಿದುವು.

ದಕ್ಷಿಣದಲ್ಲಿ ವಿಜಯಿಗಳಾದ ಸೋವಿಯತರು ಉತ್ತರ ಮತ್ತು ಮಧ್ಯ ಪ್ರದೇಶಗಳಲ್ಲೂ ಜಯ ಗಳಿಸಿದರು. ಲೆನಿನ್‌ಗ್ರಾಡ್ ಮತ್ತು ಮಾಸ್ಕೋಗಳಿಗೆ ಸನ್ನಿಹಿತವಾಗಿದ್ದ ಆಕ್ರಮಣ ನಿವಾರಣೆಯಾಯಿತು. ಸ್ಟಾಲಿನ್‌ಗ್ರಾಡಿಗೆ ಒದಗಿದ್ದ ವಿಪತ್ತನ್ನು ನಿವಾರಿಸಿದ ಸೋವಿಯತ್ ಸೇನೆ ಉತ್ತರಕ್ಕೆ ಸರಿದು ಡೊನೆಟ್ಸ್ ನದೀಪಾತ್ರವನ್ನು ಜರ್ಮನರಿಂದ ಕಸಿದುಕೊಂಡಿತು.

ಉತ್ತರ ಆಫ್ರಿಕದಲ್ಲೂ ಜರ್ಮನರ ಪ್ರಬಲ ಸೇನಾನಿ ರಾಮೆಲ್ ಮೊದಮೊದಲು ಮಿತ್ರಸೇನೆಗಳನ್ನು ಹಿಮ್ಮೆಟ್ಟಿಸಿ ಇಟಲಿ ಕಳೆದುಕೊಂಡಿದ್ದ ಭೂಭಾಗಗಳನ್ನು ವಶಪಡಿಸಿಕೊಂಡಿದ್ದ. ಆದರೆ 1942 ನವೆಂಬರ್ ತಿಂಗಳ ಆದಿಭಾಗದಲ್ಲಿ ನಡೆದ ಎಲ್ ಅಲಮೇನ್ ರಣರಂಗದಲ್ಲಿ ಸೋತು ಹಿಮ್ಮೆಟ್ಟಬೇಕಾಯಿತು. 1943 ಜನವರಿ 23ರಂದು ರಾಮೆಲನ ಬೆನ್ನಟ್ಟಿದ್ದ ಬ್ರಿಟಿಷ್ ಸೇನೆಗಳು ಟ್ರಿಪೋಲಿ ನಗರ ಹಿಡಿದುವು. ಅತ್ತ ಮೊರಾಕೋ ಅಲ್ಜೀರಿಯಗಳಿಂದ ಒಳನುಗ್ಗಿದ ಮಿತ್ರ ಸೇನೆಗಳು ಕ್ಯಾಸಬ್ಲಾಂಕ, ರಬಾತ್, ಬರಾನ್, ಅಲ್ಜಿಯರ್ಸ್‌ಗಳನ್ನು ವಶಪಡಿಸಿಕೊಂಡುವು. ಉತ್ತರ ಆಫ್ರಿಕದಲ್ಲಿದ್ದ ಫ್ರೆಂಚ್ ಸೇನೆ ಮಿತ್ರಪಕ್ಷಕ್ಕೆ ಸೇರಿತು. ಮಿತ್ರರಾಷ್ಟ್ರ ಪಡೆಗಳ ದಂಡನಾಯಕ ಐಸನ್‌ಹೌವರ್ ನೇತೃತ್ವದಲ್ಲಿ ಟ್ಯುನೀಷಿಯವನ್ನು ವಶಪಡಿಸಿಕೊಳ್ಳುವುದೇ ಅವರಿಗಿದ್ದ ಧ್ಯೇಯ. ದೊಡ್ಡ ಪ್ರಮಾಣದಲ್ಲಿ ಹಿಟ್ಲರ್ ಭಾರೀ ಸೇನೆಯನ್ನು ಅದರ ರಕ್ಷಣೆಗೆ ಕಳುಹಿಸಿಕೊಟ್ಟ. ಟ್ಯುನೀಷಿಯದಲ್ಲಿ ಜರ್ಮನರಿಗೆ ಅನೇಕ ಸೌಲಭ್ಯಗಳು ದೊರೆತಿದ್ದವು. ರಾಮೆಲ್ ಆ ಪ್ರದೇಶದ ರಕ್ಷಣೆಗಾಗಿ ಹೊಸ ವ್ಯೂಹವೊಂದನ್ನು ಕಟ್ಟಿದ್ದ. ಆದರೆ ರಾಮೆಲ್ ಜರ್ಮನಿಗೆ ಹಿಂತಿರುಗಿದಾಗ ಯುದ್ಧದ ಬಣ್ಣವೇ ಬದಲಾಯಿತು. ಜರ್ಮನ್ ವ್ಯೂಹ ಛಿದ್ರಗೊಂಡು ಎರಡು ಕಡೆಗಳಿಂದ ಮಿತ್ರಸೇನೆಗಳು ಮುನ್ನುಗ್ಗಿ ಬಂದಾಗ, ಮೇ ತಿಂಗಳ 6ನೆಯ ತಾರೀಕು ಜರ್ಮನ್ ಸೈನ್ಯಪಂಕ್ತಿ ಸಂಪೂರ್ಣವಾಗಿ ಮುರಿದು ಮಾರನೆಯ, ದಿನ ಟ್ಯೂನಿಸ್ ಮಿತ್ರಪಡೆಗಳ ಕೈವಶವಾಯಿತು. ಅದಾದ ಒಂದು ವಾರದೊಳಗೆ ಉತ್ತರ ಆಫ್ರಿಕದಲ್ಲಿದ್ದ ಸಮಸ್ತ ಶತ್ರು ಸೇನೆ ಕೈಸೆರೆಯಾಯಿತು. ಈ ದಂಡಯಾತ್ರೆಯಲ್ಲಿ ಭಾರತೀಯ ಯೋಧರು ವಹಿಸಿದ ಪಾತ್ರ ಮುಖ್ಯವಾದದ್ದು. ಅವರು ಜಗತ್ತಿನ ಗೌರವಕ್ಕೆ ಪಾತ್ರರಾದರು. ಟ್ಯುನೀಷಿಯ ಕದನದಲ್ಲಿ ಜಯಗಳಿಸಿದ್ದರಿಂದ ಉತ್ತರ ಆಫ್ರಿಕನ್ ತೀರಪ್ರದೇಶವೆಲ್ಲ ಶತ್ರುಗಳಿಂದ ವಿಮೋಚನೆ ಹೊಂದಿತು. ಮಿತ್ರ ರಾಷ್ಟ್ರಗಳ ನೌಕಾಪಡೆ ಮೆಡಿಟರೇನಿಯನ್ ಸಮುದ್ರದಲ್ಲಿ ಸಾಗಲು ಮುಂದೆ ಯಾವ ತೊಂದರೆಯೂ ಇರಲಿಲ್ಲ.

1943 ಜನವರಿ ತಿಂಗಳಲ್ಲಿ ಕ್ಯಾಸಬ್ಲಾಂಕನಲ್ಲಿ ಸೇರಿದ್ದ ಸಮ್ಮೇಳನದಲ್ಲಿ ಚರ್ಚಿಲ್–ರೂಸ್ವೆಲ್ಟರು ಒಂದು ಘೋಷಣೆ ಹೊರಡಿಸಿ ಶತ್ರುರಾಷ್ಟ್ರಗಳ ನಾಯಕರು ಮಾತ್ರವಲ್ಲದೆ ಆ ರಾಷ್ಟ್ರಗಳೂ ಯಾವ ಷರತ್ತೂ ಇಲ್ಲದೆ ಶರಣಾಗತವಾಗಬೇಕೆಂದು ಹೇಳಿದ್ದರು. ಮೊದಲು ಜರ್ಮನಿಯನ್ನು ಗೆದ್ದು ಅನಂತರ ಜಪಾನಿನ ಮೇಲೆ ದಂಡೆಯಾತ್ರೆ ನಡೆಸಬೇಕೆಂಬುದು ಮಿತ್ರನಾಯಕರ ತೀರ್ಮಾನ: ಆದರೂ ಜಪಾನಿನ ಮೇಲೆ ಉಸ್ತುವಾರಿ ಸಡಿಲಿಸಲಿಲ್ಲ. ಉತ್ತರ ಆಫ್ರಿಕ ಮತ್ತು ಸೋವಿಯತ್ ಕ್ಷೇತ್ರಗಳಲ್ಲಿ ಹೆಚ್ಚಿನ ಚಟುವಟಿಕೆ ಇರಲಿಲ್ಲ.

ಯುದ್ಧದಲ್ಲಿ ಮುಂದಿನ ಪ್ರಕರಣವೆಂದರೆ ಸಿಸಿಲಿಯ ಆಕ್ರಮಣ. 1943 ಜುಲೈ 10ರದು ಸಿಸಿಲಿಯ ಆಕ್ರಮಣದಲ್ಲಿ ನೌಕೆಗಳೂ ವಿಮಾನಗಳೂ ಭಾಗವಹಿಸಿದ್ದುವು. ಜರ್ಮನರು ಬಹು ಬುದ್ಧಿವಂತಿಕೆಯಿಂದ ಹೋರಾಡಿ ಬ್ರಿಟಿಷರು ಮುಂದುವರಿಯುವುದನ್ನು ತಡೆದರಾದರೂ ಅಮೆರಿಕನರು ದ್ವೀಪದ ಪಶ್ಚಿಮಭಾಗವನ್ನು ಆಕ್ರಮಿಸಿ ಸುಮಾರು ಏಳು ಸಹಸ್ರ ಜರ್ಮನರನ್ನು ಸೆರೆಹಿಡಿದರು. ಆ ದ್ವೀಪದಲ್ಲಿದ್ದ ಎಲ್ಲ ಇಟಾಲಿಯನ್ ಸೈನ್ಯವೂ ಮಿತ್ರ ಸೇನೆಗಳ ಕೈಸೆರೆಯಾಯಿತು.

ಸು. 38 ದಿನಗಳ ಆಕ್ರಮಣದ ಅನಂತರ ಸಿಸಿಲಿ ಸಂಪೂರ್ಣವಾಗಿ ವಶವಾಯಿತು. ಸಿಸಿಲಿಯಲ್ಲಿ ಪಡೆದ ವಿಜಯದಿಂದ ಮಿತ್ರರಾಷ್ಟ್ರ ಪಡೆಗಳು ಇಟಲಿಯ ಕಡೆ ಮುನ್ನುಗ್ಗುವುದಕ್ಕೆ ಯಾವ ತಡೆಯೂ ಇರಲಿಲ್ಲ. ಇಟಲಿಯ ಫ್ಯಾಸಿಸ್ಟ್ ಆಡಳಿತ ಕುಸಿದು ಮುಸೋಲಿನಿಯ ಸರ್ವಾಧಿಕಾರ ಕೊನೆಗೊಂಡಿದ್ದು ಆಗ. ಇಟಲಿಯ ಮಾರ್ಷಲ್ ಬಾಡಾಲ್ಯೋ ಯುದ್ಧವನ್ನು ಮುಂದುವರಿಸುವೆನೆಂದು ಬಹಿರಂಗವಾಗಿ ಘೋಷಿಸಿದರೂ ಗುಪ್ತವಾಗಿ ಮಿತ್ರ ರಾಷ್ಟ್ರಗಳೊಡನೆ ಸಂಧಾನ ನಡೆಸಿದ. ಇಟಾಲಿಯನರು ಯಾವ ಷರತ್ತೂ ಇಲ್ಲದೆ ಸಂಪೂರ್ಣವಾಗಿ ಶರಣಾಗತರಾದರು.

ಮುಸೋಲಿನಿಯ ಪತನದಿಂದ ಜರ್ಮನಿಗೆ ಪೆಟ್ಟು ಬಿದ್ದಂತಾಯಿತು. ಆದರೆ ಅದರ ಪರಿಣಾಮ ಜರ್ಮನಿಗೆ ಹೆಚ್ಚೇನೂ ಹಾನಿಕರವಾಗಿರಲಿಲ್ಲ. ಆದರೆ ಪೂರ್ವದಲ್ಲಿ ಸೋವಿಯತರು ತಮ್ಮ ಮುನ್ನುಗ್ಗುವಿಕೆಯನ್ನು ಮುಂದುವರಿಸಿದಾಗ, ಜರ್ಮನರು ತಾವು ವಶಪಡಿಸಿಕೊಂಡಿದ್ದ ಪಟ್ಟಣಗಳನ್ನು ಬಿಡಬೇಕಾಯಿತು. ಖರ್ಸ್ಕ್ ನಗರದಲ್ಲಿ ಒಂದು ವಾರ ಕದನ ನಡೆದು ಜರ್ಮನರು ಸಂಪೂರ್ಣ ಸೋತರು. 1944ರ ಆದಿ ಭಾಗದ ಹೊತ್ತಿಗೆ ಸೋವಿಯತರು ಜರ್ಮನರನ್ನು ಲೆನಿನ್‌ಗ್ರಾಡ್ ಪ್ರಾಂತದಿಂದ ಓಡಿಸಿದರು. ಉತ್ತರ ರಂಗದಲ್ಲಿ ಜರ್ಮನ್ ಸೇನಾ ಕೇಂದ್ರವಾದ ನಾವ್‌ಗೊರಾಡ್ ನಗರವೂ ಜರ್ಮನರ ಕೈಬಿಟ್ಟಿತು. ದಕ್ಷಿಣದಲ್ಲಿ ಸೋವಿಯತರು ಪೂರ್ವ ಪೋಲೆಂಡ್ ಗಡಿ ದಾಟಿ ಲುಕ್ ನಗರವನ್ನು ವಶಪಡಿಸಿಕೊಂಡರು. ಕ್ರಿಮಿಯ ಸೋವಿಯತರ ಕೈಸೇರಿದ್ದು ಏಪ್ರಿಲಿನಲ್ಲಿ. ಹೀಗಾಗಿ ಸೋವಿಯತ್ ಸೇನೆ ಎಲ್ಲ ಕ್ಷೇತ್ರಗಳಲ್ಲೂ ಮುಂದುವರಿಯಿತು. ದಕ್ಷಿಣದಲ್ಲಿ ರೂಮೇನಿಯ ಮತ್ತು ಪೋಲೆಂಡ್ ಗಡಿ ದಾಟಿದರಲ್ಲದೆ ಉತ್ತರದಲ್ಲಿ ಎಸ್ಟೋನಿಯ ಗಡಿಗೆ ಸಮೀಪದಲ್ಲಿದ್ದರು. ಜರ್ಮನರನ್ನು ಹಿಮ್ಮೆಟ್ಟಿಸಿದರೂ ಸೋವಿಯತರು ಬಿಡಲಿಲ್ಲ, ಅವರನ್ನು ಹಿಂಬಾಲಿಸಿ ರೂಮೇನಿಯ, ಹಂಗರಿ ಮುಂತಾದ ದೇಶಗಳನ್ನು ಜರ್ಮನರ ಅಧೀನದಿಂದ ತಪ್ಪಿಸಿ ತಮ್ಮ ಕಡೆಗೆ ಸೇರಿಸಿಕೊಂಡರು. 1944ರ ಜೂನಿನಲ್ಲಿ ಬ್ರಿಟಿಷರೂ ಅಮೆರಿಕನರೂ ಯುರೋಪಿಗೆ ನುಗ್ಗಿ ಪ್ಯಾರಿಸನ್ನು ವಶಪಡಿಸಿಕೊಂಡು ಸೆಪ್ಟೆಂಬರ್ ವೇಳೆಗೆ ಜರ್ಮನಿಯ ಗಡಿ ಮುಟ್ಟಿದರು.

1944 ಅಂತ್ಯವಾಗುವ ಹೊತ್ತಿಗೆ ಜರ್ಮನಿಯ ಸ್ಥಿತಿ ಸಂಪೂರ್ಣ ಕೆಟ್ಟಿತ್ತು. ಅದು ಯುರೋಪಿನ ಯಾವ ಪ್ರದೇಶದಲ್ಲೂ ನಿಂತು ಹೋರಾಡುವ ಸ್ಥಿತಿಯಲ್ಲಿರಲಿಲ್ಲ. ಸೋವಿಯತ್ ಸೇನೆ ವಾರ್ಸಾ ನಗರವನ್ನು ಹಿಡಿದು 1945 ಜನವರಿ 17ರಂದು. ಆ ತಿಂಗಳ ಅಂತ್ಯಕ್ಕೆ ಲಿಥೂವೆನಿಯ ಜರ್ಮನರಿಂದ ಬಿಡುಗಡೆ ಹೊಂದಿತು. ವಿಮೋಚನೆಗೊಂಡ ಪೋಲೆಂಡಿನಲ್ಲಿ ಸೋವಿಯತರಿಂದ ಒಂದು ಸ್ವತಂತ್ರ ಸರ್ಕಾರ ಸ್ಥಾಪಿತವಾಯಿತು. ಪಶ್ಚಿಮ ದಿಕ್ಕಿನಿಂದ ಮಿತ್ರಸೇನೆಗಳು ಬೆಲ್ಜಿಯಂ ಆಕ್ರಮಿಸಿ ಜರ್ಮನಿಯ ಒಳಹೊಕ್ಕುವು. 1945ರ ಆರಂಭದಲ್ಲಿ ಸೋವಿಯತರು ಜರ್ಮನಿಯೊಳಗೆ ನುಗ್ಗಿದರು. ಕೈಗಾರಿಕಾ ಕೇಂದ್ರ ರೂರ್ ಅವರ ವಶವಾದ್ದು ಏಪ್ರಿಲ್‌ನಲ್ಲಿ. ಏಪ್ರಿಲ್ 13ರಂದು ಅವರು ವಿಯನ್ನವನ್ನು ಹಿಡಿದು ವೇಗದಿಂದ ಮುನ್ನುಗ್ಗಿ 28ರಂದು ಬರ್ಲಿನನ್ನು ಮುತ್ತಿದರು. ಶತ್ರುಗಳ ಕೈಯಲ್ಲಿ ಸಿಕ್ಕಿಬೀಳುವುದು ಖಂಡಿತವೆಂಬುದನ್ನರಿತ ಹಿಟ್ಲರ್ ಏಪ್ರಿಲ್ 30ರಂದು ಆತ್ಮಹತ್ಯೆ ಮಾಡಿಕೊಂಡ. ಜರ್ಮನಿಯ ಯುದ್ಧನಾಯಕರು ಶರಣಾಗತರಾಗಲಾಗಿ ಯುದ್ಧಕೊನೆಗೊಂಡಿತು.

ಸ್ವತಂತ್ರ ಫ್ರಾನ್ಸಿನ ಸರ್ಕಾರದ ಮುಖ್ಯಾಧಿಕಾರಿ ಜನರಲ್ ಡ ಗಾಲನ ನೇತೃತ್ವದಲ್ಲಿ ಜರ್ಮನರೊಡನೆ ಹೋರಾಡಲು ಪಣ ತೊಟ್ಟು ಫ್ರೆಂಚ್ ಜನತೆಯೂ ಯುಗಾಸ್ಲಾವಿಯಾದ ಮಾರ್ಷಲ್ ಟೀಟೋ ಮತ್ತು ಅವನ ಅನುಯಾಯಿಗಳೂ ಗುಪ್ತ ಸಂಘಗಳೂ ಗೆರಿಲ್ಲಾ ಯೋಧರೂ ಹಿಟ್ಲರನ ಸೋಲಿಗೆ ಕಾರಣರೆಂಬುವುದನ್ನು ಮರೆಯುವಂತಿಲ್ಲ. ಜರ್ಮನಿಯ ಆಕ್ರಮಣಕ್ಕೊಳಗಾದ ಮೇಲೆ ಯುರೋಪಿನ ಯಾವ ಪ್ರದೇಶದಲ್ಲೂ ಜರ್ಮನ್ ಅಧಿಕಾರಿಗಳಿಗೆ ನೆಮ್ಮದಿ ಇರಲಿಲ್ಲ. ತಾವು ಆಕ್ರಮಿಸಿದ ರಾಷ್ಟ್ರಗಳಲ್ಲಿ ಜನತೆಯ ಸಹಕಾರ ಸಹಾಯಗಳನ್ನು ಪಡೆಯಲು ಜರ್ಮನರು ಎಷ್ಟು ಹೆಣಗಾಡಿದರೂ ಅವರಿಗೆ ಯಾವ, ಯಾರ ಬೆಂಬಲವು ಸಿಗಲಿಲ್ಲ. ಈ ಜನತೆಯ ಚಳವಳಿ ಮಿತ್ರ ಸೇನೆಗಳಿಗೆ ಉತ್ತೇಜನಕಾರಿಯಾದ್ದರಿಂದಲೇ ಅವು ಜರ್ಮನಿಯನ್ನು ಸೋಲಿಸಲು ಸಾಧ್ಯವಾಯಿತು.

**ಚೀನ–ಜಪಾನ್ ಯುದ್ಧ(1937–45):** ಜಪಾನ್ ಆಧುನಿಕ ರಾಷ್ಟ್ರವಾದಮೇಲೆ ತನ್ನ ಸೈನ್ಯವನ್ನು ಹೆಚ್ಚಿಸಿಕೊಂಡು, ಮಿಲಿಟರಿ ಸಂಪ್ರದಾಯ ಬೆಳೆಸಿಕೊಂಡು, ತನಗೆ ಸಮೀಪದಲ್ಲಿದ್ದ ರಾಷ್ಟ್ರಗಳ ಮೇಲೆ ಆಕ್ರಮಣ ಪ್ರಾರಂಭಿಸಿತು. ಆ ಆಕ್ರಮಣನೀತಿಯ ಉದಾಹರಣೆಯಾಗಿ 1894ರಷ್ಟು ಹಿಂದೆಯೇ ನಡೆದ ಚೀನ–ಜಪಾನ್ ಯುದ್ಧವನ್ನೂ 1905ರಲ್ಲಿ ನಡೆದ ರಷ್ಯ–ಜಪಾನ್ ಯುದ್ಧವನ್ನೂ ಉಲ್ಲೇಖಿಸಬಹುದು.

1931 ಸೆಪ್ಟೆಂಬರ್ 18ರಂದು ನಡೆದ ಮೂಕ್‌ಡೆನ್ ಘಟನೆಯೇ 1937–45ರ ಚೀನ–ಜಪಾನ್ ಯುದ್ಧಕ್ಕೆ ನಾಂದಿಯಾಯಿತು. ಆಗ ಜಪಾನ್ ಮೂಕ್‌ಡೆನ್ ಪಟ್ಟಣವನ್ನು ವಶಪಡಿಸಿಕೊಂಡು ಚೀನದ ಕಡೆ ಆಕ್ರಮಣ ನಡೆಸಲು ಹವಣಿಸಿತು. ಮಂಚೂರಿಯ ದುರಾಕ್ರಮಣದ ಬಗ್ಗೆ ರಾಷ್ಟ್ರಕೂಟದ ಮಧ್ಯಸ್ಥಿಕೆ ಮಾಡಬೇಕೆಂದು ಚೀನ ಕೇಳಿಕೊಂಡಿತು. ಆದರೆ ಅದು ಮಂಚೂರಿಯ ಸಮಸ್ಯೆಯನ್ನು ಕೂಲಂಕಷವಾಗಿ ವಿಚಾರಿಸಲು ಒಂದು ಸಮಿತಿಯನ್ನು ನೇಮಿಸಿತೇ ವಿನಾ ಜಪಾನಿನ ಆಕ್ರಮಣ ಧೋರಣೆಯನ್ನು ಖಂಡಿಸಲಿಲ್ಲ. ಅದರ ಸಾಮ್ರಾಜ್ಯಷಾಹಿ ನೀತಿಯನ್ನು ಮೊಟಕು ಮಾಡಲು ಯಾವ ಆಸಕ್ತಿಯನ್ನೂ ತೋರಿಸಲಿಲ್ಲ. ಆ ಸಂಸ್ಥೆಯ ಪ್ರಮುಖ ಸದಸ್ಯ ರಾಷ್ಟ್ರಗಳಾದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನ ಕೂಡ ಅತ್ತ ಕಡೆ ತಮ್ಮ ಗಮನ ಹರಿಸಲಿಲ್ಲ. ಅದರ ದೌರ್ಬಲ್ಯವನ್ನೂ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದ ಔದಾಸೀನ್ಯವನ್ನೂ ಗಮನಿಸಿದ ಜಪಾನೀ ನಾಯಕರು ಆಕ್ರಮಣಾ ನೀತಿಯನ್ನು ಮುಂದುವರಿಸಲು ನಿರ್ಧರಿಸಿದರು. ಜಪಾನು ರಾಷ್ಟ್ರಕೂಟದ ಸದಸ್ಯತ್ವವನ್ನು ತ್ಯಜಿಸಿ, ಮಂಚೂರಿಯವನ್ನು ಪೂರ್ಣವಾಗಿ ಆಕ್ರಮಿಸಿ ಅಲ್ಲಿ ಪ್ರಬಲ ಸೇನೆಯೊಂದನ್ನಿರಿಸಿತು. ಈ ಅನ್ಯಾಯದ ಆಕ್ರಮಣವನ್ನು ತಡೆಯಲು ರಾಷ್ಟ್ರಕೂಟ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

ಯುದ್ಧದ ಪ್ರಾರಂಭದಲ್ಲಿ ಜಪಾನೀಯರು ಚೀನದ ಉತ್ತರದಲ್ಲಿ ಧಾಳಿ ಆರಂಭಿಸಿದರು. ಚೀನೀಯರು ಅವರ ಮುನ್ನಡೆಯನ್ನು ತಡೆಯುವುದರಲ್ಲಿ ಯಶಸ್ವಿಯಾದರೂ ಕೊನೆಯಲ್ಲಿ ಉತ್ತರ ಪ್ರದೇಶಗಳನ್ನು ಬಿಟ್ಟುಕೊಟ್ಟು ಹಿಂತೆಗೆಯಬೇಕಾಯಿತು. 1937 ಆಗಸ್ಟ್ 13ರಂದು ಜಪಾನೀ ಸೇನೆಗಳು ಷಾಂಘೈ ಪಟ್ಟಣವನ್ನು ಮುತ್ತಿದಾಗ ಚೀನಿಯರು ಅದನ್ನು ರಕ್ಷಿಸಲು ಹೋರಾಡಿದರು. ಸು.3 ತಿಂಗಳ ಕಾಲ ಜಪಾನೀಯರ ಭೂ, ನೌಕಾ, ವಾಯು ಸೇನೆಗಳನ್ನು ಸತತವಾಗಿ ಎದುರಿಸಿ ಹೋರಾಡಿದರು. ಆದರೆ ಜಪಾನೀಯರು ಅಧಿಕ ಸಂಖ್ಯೆಯಲ್ಲಿ ಮುನ್ನುಗ್ಗಿದಾಗ ಚೀನೀಯರು ಆ ಪಟ್ಟಣವನ್ನು ತ್ಯಜಿಸಬೇಕಾಯಿತು. ಮುಂದೆ ಪಶ್ಚಿಮ ದಿಕ್ಕಿನಲ್ಲಿ ಮುಂದುವರಿದು ಜಪಾನೀಯರು ರಾಜಧಾನಿ ನ್ಯಾನ್‌ಕಿಂಗನ್ನು ವಶಪಡಿಸಿಕೊಂಡರು. ಕ್ಯಾಂಟನ್ ನಗರ ಕೈಬಿಟ್ಟಿತು. ಸಮುದ್ರ ತೀರದ ಎಲ್ಲ ರೇವು ಪಟ್ಟಣಗಳೂ ಜಪಾನೀಯರ ವಶವಾದುವು. ಜಪಾನ್ ಮುಂದುವರಿದಂತೆಲ್ಲ ಚೀನೀ ಸರ್ಕಾರ ತನ್ನ ಕೇಂದ್ರವನ್ನು ಹಿಂದಕ್ಕೊಯ್ಯುತ್ತ ಕೊನೆಗೆ ಒಳನಾಡಿನಲ್ಲಿದ್ದ ಚುಂಕಿಂಗ್ ನಗರದಲ್ಲಿ ಸ್ಥಾಪಿಸಿಕೊಂಡಿತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಷ್ಟ್ರಕೂಟವಾಗಲಿ 9 ರಾಷ್ಟ್ರಗಳ ಕರಾರಿಗೆ ಸಹಿ ಹಾಕಿದ್ದ ರಾಷ್ಟ್ರಗಳಾಗಲಿ ಚೀನದ ನೆರವಿಗೆ ಬರಲಿಲ್ಲ. ಇದರಿಂದ ಚೀನೀಯರಿಗೆ ನಿರಾಶೆಯಾದರೂ ಅವರು ಯುದ್ಧ ಮುಂದುವರಿಸುವ ನಿರ್ಧಾರ ಕೈಬಿಡಲಿಲ್ಲ. ಚೀನದ ಜನತೆ ಘೋರ ಕಷ್ಟಕ್ಕೊಳಗಾದರೂ ಶತ್ರುವಿಗೆ ಮಣಿಯದೆ, ಸೋಲನ್ನೊಪ್ಪದೆ ಹೋರಾಟ ಸಾಗಿಸಿತು. ಜಪಾನೀಯರು ನ್ಯಾನ್‌ಕಿಂಗ್ ನಗರದಲ್ಲಿ ಸರ್ಕಾರ ರಚಿಸಿ ಅದರ ಮೂಲಕ ತಮ್ಮ ಪ್ರಭಾವವನ್ನು ಹರಡಲು ಯತ್ನಿಸಿದರು. ಆ ಸರ್ಕಾರದ ಬೆಂಬಲದೊಡನೆ ಚುಂಕಿಂಗ್ ಸರ್ಕಾರವನ್ನು ಛಿದ್ರಗೊಳಿಸುವ ಉದ್ದೇಶದಿಂದ ಇತರ ಪಟ್ಟಣಗಳ ಮೇಲೆ ಬಾಂಬಿನ ಧಾಳಿ ನಡೆಸಲು ಪ್ರಾರಂಭಿಸಿದರು.

1939ರಲ್ಲಿ ಚೀನದ ಪರಿಸ್ಥಿತಿ ಅತ್ಯಂತ ಕಠಿಣವಾಗಿತ್ತು. ರಾಷ್ಟ್ರಕೂಟ ಯಾವ ನಿಶ್ಚಿತ ಧೋರಣೆಯನ್ನೂ ತಳೆದಿರಲಿಲ್ಲ. ಅದರ ಸದಸ್ಯ ರಾಷ್ಟ್ರಗಳು ಜಪಾನ್ ಬಳಸುತ್ತಿದ್ದ ವಿಷ ವಾಯುವಿನ ವಿರುದ್ಧ ನಿರ್ಣಯಗಳನ್ನು ಅನುಮೋದಿಸಿದುವೇ ವಿನಾ ಮತ್ತಾವ ಸ್ಪಷ್ಟ ನೀತಿಯನ್ನೂ ರೂಪಿಸಲಿಲ್ಲ. ಜಪಾನು ದಕ್ಷಿಣ ಚೀನವನ್ನು ಸುತ್ತುವರಿದ ಹೈನಾನ್ ಮತ್ತಿತರ ದ್ವೀಪಗಳನ್ನು 1939 ಮಾರ್ಚ್ ತಿಂಗಳಲ್ಲಿ ವಶಪಡಿಸಿಕೊಂಡಿತು. ಈ ಆಕ್ರಮಣವನ್ನು ಪೆಸಿಫಿಕಿನ ಮೂಕ್‌ಡೆನ್ ಘಟನೆ ಎಂದು ಚಿಯಾಂಗ್ ಎಚ್ಚರಿಸಿದರೂ ಪಾಶ್ಚಾತ್ಯ ರಾಷ್ಟ್ರಗಳು ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಸುಮ್ಮನಿದ್ದವು.

**ಅಟ್ಲಾಂಟಿಕ್ ಸಾಗರ ಮತ್ತು ಐರೋಪ್ಯ ಸಮುದ್ರಗಳ ಮೇಲಿನ ಯುದ್ಧ:** 1939 ಸೆಪ್ಟೆಂಬರ್ 3ರಂದು ಬ್ರಿಟನ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿದಾಗ ಜರ್ಮನಿಯ ನೌಕಾಬಲ ಶಕ್ತಿಯುತವಾಗಿತ್ತು. ಬ್ರಿಟನಿನ ನೌಕಾಪಡೆಯನ್ನು ನಾಶಮಾಡಿ ಅದಕ್ಕೆ ಆಹಾರ ಸಾಮಗ್ರಿಗಳು ತಲುಪದಂತೆಮಾಡಿ, ಅದರ ಮೇಲೆ ಆಕ್ರಮಣ ನಡೆಸಬೇಕೆಂದು ಹಿಟ್ಲರ್ ನಿರ್ಧರಿಸಿದ್ದ. ಜರ್ಮನರ ಕಡೆಯ ದೋಣಿಗಳೂ ಜಲಾಂತರ್ಗಾಮಿಗಳೂ ಕಾರ್ಯಾಚರಣೆಗೆ ಸಿದ್ಧವಾಗಿದ್ದವು. ತನ್ನ ನೌಕೆಯ ಸಹಾಯದಿಂದ ಆಹಾರ ಸಾಮಗ್ರಿಗಳ ಸರಬರಾಜಿಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದೂ ತನ್ನ ಸೇನೆಗಳನ್ನು ಶತ್ರುವಿನ ವಶದಲ್ಲಿರುವ ಪ್ರದೇಶಗಳಲ್ಲಿ ಇಳಿಸುವುದೂ ಶತ್ರು ಸೇನೆಗಳು ಬ್ರಿಟನ್ನಿನ ತೀರದಲ್ಲಿ ಇಳಿಯದಂತೆ ಮಾಡುವುದೂ ಬ್ರಿಟನ್ನಿನ ಧ್ಯೇಯಗಳಾಗಿದ್ದವು. ಆದರೆ ಈ ಎಲ್ಲ ಧ್ಯೇಯಗಳೂ ಏಕಕಾಲದಲ್ಲಿ ಸಾಧ್ಯವಿರಲಿಲ್ಲ.

ಭೂ ಯುದ್ಧಗಳಲ್ಲಿ ಜರ್ಮನಿ ಜಯ ಗಳಿಸಿತ್ತು. 1940 ಮೇ 14ರ ವೇಳೆಗೆ ನೆದರ್ಲೆಂಡ್ಸನ್ನೂ 4 ದಿನಗಳ ಅನಂತರ ಬ್ರಸೆಲ್ ಪಟ್ಟಣವನ್ನೂ ಮೇ 28ರಂದು ಬೆಲ್ಜಿಯಂ ದೇಶವನ್ನೂ ಆಕ್ರಮಿಸಿತ್ತು. ಮುಂದಿನ ಸರದಿ ಫ್ರಾನ್ಸಿನದು. ಬ್ರಿಟಿಷ್ ಸೇನೆಗಳು ಪ್ರತ್ಯೇಕಗೊಂಡು ನಾಜ಼ಿ ಪಡೆಗಳನ್ನು ಎದುರಿಸಲಾರದೆ, ತೀರದ ಕಡೆ ಪಲಾಯನ ಮಾಡಿದುವು. ಫ್ರಾನ್ಸಿನ ಬೆಂಬಲವನ್ನು ಕಳೆದುಕೊಂಡ ಬ್ರಿಟಿಷ್ ಸೇನಾಪಡೆ ಸ್ವದೇಶಕ್ಕೆ ಹಿಂತಿರುಗುವುದೇ ಅತ್ಯುತ್ತಮ ಮಾರ್ಗವೆಂದು ನಿರ್ಧರಿಸಿ, ಡನ್‌ಕರ್ಕಿನಿಂದ ವಾಪಸ್ಸು ಹೋದದ್ದೊಂದು ದೊಡ್ಡ ಸಾಹಸ.

ಪಶ್ಚಿಮ ಯುರೋಪಿನ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿದ ಜರ್ಮನಿಗೆ ವಿಸ್ತಾರವಾದ ದಕ್ಷಿಣ ಫ್ರಾನ್ಸಿನಿಂದ ಉತ್ತರ ನಾರ್ವೆವರೆಗಿನ ಸಾಗರತೀರ ಸಿಕ್ಕಿತು. ಇಂಗ್ಲೆಂಡನ್ನು ಘಾತಿಸಲು ಅನುಕೂಲವಾದದ್ದು ಇದರಿಂದ. 1940 ಆಗಸ್ಟ್ ತಿಂಗಳಲ್ಲಿ ಬ್ರಿಟನ್ನಿನ ಮೇಲಿನ ಆಕ್ರಮಣ ಸನ್ನಿಹಿತವಾದಾಗ, ಬ್ರಿಟನ್ನಿನ ಕದನ ಆರಂಭವಾದಾಗ, ಜರ್ಮನಿಯ ನೌಕಾಬಲ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುವುದಕ್ಕೆ ಅವಕಾಶ ಸಿಕ್ಕಿತೆನ್ನಬಹುದು. ಬ್ರಿಟನ್ನಿನ ಅನೇಕ ಯುದ್ಧನೌಕೆಗಳು ಮುಳುಗಿದ್ದು ಆ ಸಮಯದಲ್ಲೆ.

ಅಟ್ಲಾಂಟಿಕ್ ಸಾಗರದ ಮೇಲೆ ಬ್ರಿಟಿಷರಿಗೆ ಬರುತ್ತಿದ್ದ ಸಾಮಗ್ರಿಗಳನ್ನು ನಿಲ್ಲಿಸಲು ಜರ್ಮನಿ ತನ್ನ ಕೈಲಾದ್ದನ್ನೆಲ್ಲ ಮಾಡಿತು. ಒಟ್ಟು 1000 ಜಲಾಂತರ್ಗಾಮಿಗಳನ್ನೂ ಇದಕ್ಕಾಗಿ ಬಿಟ್ಟಿತ್ತು. ಅಟ್ಲಾಂಟಿಕ್ ಯುದ್ಧವೆಂದು ಕರೆಯಲಾಗಿರುವ ಸಾಹಸದಲ್ಲಿ ಜರ್ಮನರು ತಮ್ಮ

ಪ್ರಚಂಡ ನೌಕೆಯಾದ ಬಿಸ್‌ಮಾರ್ಕ್‌ನ್ನು ಉಪಯೋಗಿಸಿದರು. ಇದು ಬ್ರಿಟಿಷರ ಯುದ್ಧನೌಕೆ ಹೂಡನ್ನು ಮುಳುಗಿಸಿತು. ಅದು ಅಪಾರ ನಷ್ಟವನ್ನು ಉಂಟುಮಾಡಿದ ಮೇಲೆ, ಏಕಾಂಗಿಯಾಗಿದ್ದಾಗ, ಬ್ರಿಟಿಷ್ ನೌಕೆಗಳು ಅದನ್ನು ಮುಳುಗಿಸಿದವು.

1941 ಡಿಸೆಂಬರ್ ವೇಳೆಗೆ ಸಂಯುಕ್ತ ಸಂಸ್ಥಾನ ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳೆರಡರಲ್ಲೂ ಯುದ್ಧ ಮಾಡಬೇಕಾಯಿತು. ಅಟ್ಲಾಂಟಿಕ್‌ನಲ್ಲಿ ಬ್ರಿಟನಿಗೆ ಹೆಚ್ಚಿನ ನೆರವು ನೀಡುವುದೂ ಪೆಸಿಫಿಕ್ ಸಾಗರದಲ್ಲಿ ಜಪಾನಿನೊಡನೆ ಯುದ್ಧ ಮಾಡುವುದೂ ಆಗಿನ ಅದರ ಕಾರ್ಯ ವಿಧಾನ. 1942ರಲ್ಲಿ ತಮ್ಮ ಹಿತಗಳನ್ನು ರಕ್ಷಿಸಿಕೊಳ್ಳುವುದಷ್ಟೇ ಮಿತ್ರ ರಾಷ್ಟ್ರಗಳ ನೀತಿ. ಅಟ್ಲಾಂಟಿಕ್ ಕದನ ವೈಜ್ಞಾನಿಕ ಸಂಶೋಧನೆಗಳ ಮತ್ತು ತಂತ್ರ ಕೌಶಲದ ಯುದ್ಧ. ಜರ್ಮನಿಯ ದೋಣಿಗಳು ಅರಕ್ಷಿತ ಪ್ರದೇಶಗಳಾದ ಮೆಕ್ಸಿಕೋ ಕೊಲ್ಲಿ ಮತ್ತು ಕ್ಯಾರಿಬೀಯನ್ ಸಮುದ್ರಗಳನ್ನು ಪ್ರವೇಶಿಸಿ, ಮಿತ್ರ ನೌಕೆಗಳನ್ನು ಮುಳುಗಿಸಿದವು. ಈ ಪೀಡೆಯನ್ನು ನಿವಾರಿಸಲು ಸಾಧ್ಯವಾದದ್ದು 1943ರಲ್ಲಿ. ಜರ್ಮನರು ಜಲಾಂತರ್ಗಾಮಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಸಿದರೆ, ಮಿತ್ರ ರಾಷ್ಟ್ರಗಳು ಬಾಂಬರು ವಿಮಾನಗಳನ್ನು ತಯಾರಿಸಿ ಜರ್ಮನ್ ಕೈಗಾರಿಕಾ ಕೇಂದ್ರಗಳ ಮೇಲೆ ಧಾಳಿ ಮಾಡಿದವು. ಇದರ ಪರಿಣಾಮವಾಗಿ ಸಬ್‌ಮೇರಿನ್‌ಗಳ ತಯಾರಿಕೆ ಕಡಿಮೆಯಾಗತೊಡಗಿತು. ಮಿತ್ರ ರಾಷ್ಟ್ರಗಳ ಶಕ್ತಿ ಹೆಚ್ಚಿತು. ಯುರೋಪಿನಲ್ಲಿ ಯುದ್ಧದ ಅಂತ್ಯ ಸನ್ನಿಹಿತವಾಗುವ ವೇಳೆಗೆ ಬ್ರಿಟನಿನ ಯುದ್ಧನೌಕೆಗಳು ಪೆಸಿಫಿಕ್ ಸಾಗರಕ್ಕೆ ಬಂದು ಅಮೆರಿಕನ್ ನೌಕಾಬಲವನ್ನು ಸೇರಿಕೊಂಡು ಜಪಾನಿನ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿದವು.

**ಪೆಸಿಫಿಕ್ ಯುದ್ಧ:** ಜಪಾನ್ ಯುದ್ಧಪ್ರವೇಶ ಮಾಡಿದಾಗ ಹೆಚ್ಚಿನ ಆಸೆ, ಆಕಾಂಕ್ಷೆಗಳೇನನ್ನೂ ಹೊಂದಿರಲಿಲ್ಲ. ಮುಖ್ಯವಾಗಿ ತನ್ನ ಪೂರ್ವ ಏಷ್ಯ ಅಭ್ಯುದಯ ಯೋಜನೆಯ ಪ್ರಕಾರ ಕೊರಿಯ, ಮಂಚೂರಿಯ, ಚೀನ, ಇಂಡೊ–ಚೀನ, ಮಲಯ, ಬರ್ಮ ಮತ್ತು ಫಿಲಿಪೀನ್ಸನ್ನು ಆಕ್ರಮಿಸುವುದೇ ಜಪಾನಿನ ಆಗಿನ ಧ್ಯೇಯ. ಆ ಸಾಮ್ರಾಜ್ಯವನ್ನು ರಕ್ಷಿಸುವುದಕ್ಕಾಗಿ ಉತ್ತರ ಕ್ಯುರೈಲ್ ದ್ವೀಪಗಳಿಂದ ಹಿಡಿದು ದಕ್ಷಿಣದ ಮಾರ್ಷಲ್ ದ್ವೀಪಗಳ ವರೆಗೆ ರಕ್ಷಣಾ ವ್ಯೂಹವನ್ನು ರಚಿಸುವುದೇ ಜಪಾನಿನ ನಾಯಕರ ಗುರಿ. ಆದಷ್ಟು ಬೇಗ ಆ ಪ್ರದೇಶವನ್ನು ಆಕ್ರಮಿಸಿ, ಅಮೆರಿಕ ಸಂಯುಕ್ತ ಸಂಸ್ಥಾನದ ಪೆಸಿಫಿಕ್ ಪಡೆಯನ್ನು ನಾಶಮಾಡಿ, ಮಿತ್ರ ರಾಷ್ಟ್ರಗಳು ಒಪ್ಪಂದಕ್ಕೆ ಬರುವಂತೆ ಒತ್ತಾಯಪಡಿಸುವುದೇ ಜಪಾನಿನ ಅಪೇಕ್ಷೆ. ಈ ಗುರಿಯನ್ನು ಸಾಧಿಸಲು ಜಪಾನ್ 1941 ಡಿಸೆಂಬರ್ 7ರಂದು ಹವಾಯಿ ದ್ವೀಪದ ಪರ್ಲ್ ಹಾರ್ಬರಿನಲ್ಲಿದ್ದ ಅಮೆರಿಕದ ಪೆಸಿಫಿಕ್ ಸಾಗರದ ನೌಕಪಡೆಯ ಮೇಲೆ ಅನಿರೀಕ್ಷಿತ ಧಾಳಿ ನಡೆಸಿತು. ಈ ಧಾಳಿಯ ಪರಿಣಾಮವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದ 8 ಯುದ್ಧನೌಕೆಗಳ ಪೈಕಿ 5 ನೌಕೆಗಳು ಮುಳುಗಿದವು. ಉಳಿದ ನೌಕೆಗಳಿಗಾದ ನಷ್ಟವೂ ಅಧಿಕ. ಇದಲ್ಲದೆ ಬೇಕಾದಷ್ಟು ಕ್ರೂಯ್‌ಸರುಗಳೂ ಯುದ್ಧವಿಮಾನಗಳೂ ಡಿಸ್ಟ್ರಾಯರುಗಳೂ ನಷ್ಟ ಹೊಂದಿದವು. ಆದರೆ ಜಪಾನೀಯರು ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ನಷ್ಟವುಂಟಾಗಲಿಲ್ಲ. ಏಕೆಂದರೆ ಹವಾಯಿ ತೀರಪ್ರದೇಶದಲ್ಲಿದ್ದ ಮಿಲಿಟರಿ ಕೇಂದ್ರಗಳಾಗಲೀ ವಿದ್ಯುಚ್ಛಕ್ತಿಯ ಯಂತ್ರ ಸಮುದಾಯವಾಗಲೀ ತೈಲಾಗಾರಗಳಾಗಲೀ ಈ ಧಾಳಿಯಲ್ಲಿ ನಾಶವಾಗಲಿಲ್ಲ. ಆದ್ದರಿಂದ ಪರ್ಲ್ ಹಾರ್ಬರಿನ ಘಟನೆ ಸೈನಿಕ ದೃಷ್ಟಿಯಿಂದ ಯಾವ ಮಹತ್ತರ ಸಾಧನೆಯೂ ಆಗಿರಲಿಲ್ಲ. ಇದರಿಂದ ಜಪಾನು ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಯುದ್ಧದಲ್ಲಿ ಎದುರಿಸಬೇಕಾದ ಪ್ರಸಂಗ ಒದಗಿತು.

ಪೆಸಿಫಿಕಿನ ಎಲ್ಲ ಕ್ಷೇತ್ರಗಳಲ್ಲೂ ಜಪಾನು ಜಯಪ್ರದವಾಯಿತು. ಜಪಾನಿ ಸೇನೆಗಳು 1941 ಡಿಸೆಂಬರ್ ವೇಳೆಗೆ ಫ್ರೆಂಚ್ ಇಂಡೋ–ಚೀನ ಬಂದರುಗಳನ್ನೂ ಉಪಯೋಗಿಸಿಕೊಂಡು ಥೈಲೆಂಡಿನ ರಾಜಕೀಯದಲ್ಲಿ ಪ್ರವೇಶಿಸಿ, ಬ್ಯಾಂಕಾಕನ್ನು ವಶಪಡಿಸಿಕೊಂಡಿದ್ದವು. ಜಪಾನೀಯರು ಮುಂದುವರಿದು ಮಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಂದಿಳಿದು ಅದರ ಅರ್ಧಭಾಗವನ್ನು ಆಕ್ರಮಿಸಿಕೊಂಡರು. ಡಿಸೆಂಬರ್ ಅಂತ್ಯದ ವೇಳೆಗೆ ಸಿಂಗಪುರ ಬಿಟ್ಟು ಮಿಕ್ಕೆಲ್ಲ ಪ್ರದೇಶವು ಜಪಾನೀಯರ ವಶವಾಗಿತ್ತು, ಇವರ ಹಾವಳಿಯನ್ನು ತಡೆಗಟ್ಟಲು ಅಧ್ಯಕ್ಷ ರೂಸ್‌ವೆಲ್ಟ್ ಮತ್ತು ಬ್ರಿಟಿಷ್ ಪ್ರಧಾನಿ ಚರ್ಚಿಲ್ ಸಭೆ ಸೇರಿ, ಪೆಸಿಫಿಕ್ ಸಾಗರದಲ್ಲಿ ಮತ್ತು ಆಗ್ನೇಯ ಏಷ್ಯದಲ್ಲಿ ಒಂದು ಹೊಸ ರಕ್ಷಣಾ ವ್ಯವಸ್ಥೆ ಸ್ಥಾಪಿಸಿದರು. ಆದರೆ ಆ ವ್ಯವಸ್ಥೆ ರೂಪುಗೊಳ್ಳುವ ಮೊದಲೇ ಜಪಾನೀಯರು ಈಸ್ಟ್ ಇಂಡೀಸಿನ ಮುಖ್ಯ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. 1942 ಫೆಬ್ರವರಿ 8ರಂದು ಸಿಂಗಪುರ ಶರಣಾಗತ ವಾಯಿತು. ಅದೇ ತಿಂಗಳ 13ರಂದು ಜಪಾನೀಯರು ಸುಮಾತ್ರದಲ್ಲಿಳಿದರು. ಅವರ ಗಮನ ಪೂರ್ವದ ಕಡೆ ತಿರುಗಿತು. ಆಸ್ಟ್ರೇಲಿಯದ ಡಾರ್ವಿನಿನ ಮೇಲೆ ಅವರು ನಡೆಸಿದ ಧಾಳಿಯಿಂದ ಆದ ನಷ್ಟ ಅಪಾರ. ಹೀಗೆ ಬಾಲಿ ಮತ್ತು ಜಾವಾ ಜಪಾನೀಯರ ವಶವಾದವು. ಫಿಲಿಪೀನ್ಸಿನಲ್ಲಿ ಜನರಲ್ ಮೆಕಾರ್ಥರ ನಾಯಕತ್ವದಲ್ಲಿ ಅಮೆರಿಕನ್ ಸೇನೆ ಶೌರ್ಯದಿಂದ ಪ್ರಯೋಜನವಾಗಲಿಲ್ಲ. ಶಾಂತಿ ಸಾಗರದ ಆನೇಕ ದ್ವೀಪಗಳು ಜಪಾನೀಯರ ವಶವಾದವು. ಹಿಂದೂ ಸಾಗರದ ಹತೋಟಿ ಪಡೆಯುವ ಉದ್ದೇಶದಿಂದ ಜಪಾನೀಯರು ಅಂಡಮಾನ್ ದ್ವೀಪ ಹಿಡಿದರು.

ಹೀಗೆ ಜಪಾನೀಯರು ಯಾವ ಶಕ್ತಿಗೂ ಜಗ್ಗದೆ ಮುನ್ನುಗ್ಗುತ್ತಿದ್ದ ರೀತಿಯನ್ನು ನೋಡಿ ಕಳವಳಗೊಂಡ ಮಿತ್ರರಾಷ್ಟ್ರಗಳು ತಮ್ಮ ರಕ್ಷಣಾ ವ್ಯವಸ್ಥೆಯನ್ನು ಸುಧಾರಿಸಿ ಹೊಸ ನಮೂನೆಯ ರಕ್ಷಣಾವ್ಯೂಹ ರಚಿಸಿದರು. ಜನರಲ್ ಮೆಕಾರ್ಥರ್ 1942 ಏಪ್ರಿಲ್ 18ರಂದು ಆ ವ್ಯವಸ್ಥೆಯ ಅಧಿಕಾರ ವಹಿಸಿಕೊಂಡ. ಅದೇ ದಿನ ಅಮೆರಿಕನ್ ಬಾಂಬರುಗಳು ಟೋಕಿಯೋ ಮೇಲೆ ಬಾಂಬಿನ ಮಳೆಗರೆದವು. 1942 ಮೇ ತಿಂಗಳಲ್ಲಿ ನಡೆದ ಸಮುದ್ರ ಕದನದಲ್ಲೂ ಜೂನ್‌ನಲ್ಲಿ ನಡೆದ ಮಿಡ್‌ವೇ ದ್ವೀಪದ ನೌಕಾ ಕದನದಲ್ಲೂ ಮಿತ್ರರಾಷ್ಟ್ರಗಳ ವಿಮಾನಗಳು ಯಶ್ವಸಿಯಾಗಿ ಕಾರ್ಯನಿರ್ವಹಿಸಿದ್ದರಿಂದ ಜಪಾನಿನ ನೌಕಾ ಬಲಕ್ಕೆ ಆದ ಘಾಸಿ ಅಷ್ಟಿಷ್ಟಲ್ಲ. ಇದರಿಂದ ಮಿತ್ರ ರಾಷ್ಟ್ರಗಳ ಕಾರ್ಯಾಚರಣೆ ಇನ್ನೂ ಸುಗಮವಾಗಿ, ಆಸ್ಟ್ರೇಲಿಯಕ್ಕೆ ಸಂಭವಿಸಿದ್ದ ಅಪಾಯ ಕೊನೆಗೊಂಡಿತು. ಭಾರತಕ್ಕೆ ಉಂಟಾಗಿದ್ದ ಆಪತ್ತೂ ನಿವಾರಣೆಯಾಯಿತು. 1942 ಆಗಸ್ಟ್ ತಿಂಗಳಲ್ಲಿ ಸಾಲೋಮನ್ ದ್ವೀಪ ಸಮುದಾಯದ ಗ್ವಾಡಲ್‌ಕನಾಲ್‌ನಲ್ಲಿ ಆಮೆರಿಕನ್ ಸೈನ್ಯ ಬಂದಿಳಿದು 1943 ಫೆಬ್ರವರಿಯಲ್ಲಿ ಅದನ್ನು ಪೂರ್ಣ ವಶಪಡಿಸಿಕೊಂಡು ದ್ವೀಪದಿಂದ ದ್ವೀಪಕ್ಕೆ ಮುಂದುವರಿದು ಜಪಾನ್ ಭೂಭಾಗದ ಮೇಲೆಯೂ ಕಾರ್ಯಾಚರಣೆ ಮಾಡಲಾರಂಭಿಸಿದಾಗ ಜಪಾನಿಗೆ ಸೋಲು ಹತ್ತಿರವಾಯಿತೆನ್ನಬಹುದು.

ಮಹಾಯುದ್ಧದ ಪಶ್ಚಿಮ ರಂಗದಲ್ಲಿ ಜರ್ಮನಿ ಸೋತ ಮೇಲೆ ಇನ್ನುಳಿದಿದ್ದ ಶತ್ರುದೇಶವೆಂದರೆ ಜಪಾನ್ ಮಾತ್ರ. 1945 ಮೇ ತಿಂಗಳ ವೇಳೆಗೆ ಪೂರ್ವ ಏಷ್ಯ ಮತ್ತು ಪೆಸಿಫಿಕ್ ರಂಗಗಳಲ್ಲಿ ಮಿತ್ರ ಸೇನೆಗಳು ಅಪೂರ್ವ ಪ್ರಗತಿ ಸಾಧಿಸಿದ್ದವು. 1944ರ ಜುಲೈ–ಆಗಸ್ಟ್ ತಿಂಗಳುಗಳಲ್ಲಿ ಗ್ವಾಮ್ ದ್ವೀಪ ಅಮೆರಿಕನರ ವಶವಾಗಿತ್ತು. ಫಿಲಿಪೀನ್ ದ್ವೀಪಗಳ ಸಮೀಪದಲ್ಲಿ ಚಲಿಸುತ್ತಿದ್ದ ಜಪಾನೀ ಯುದ್ಧ ನೌಕಾಪಡೆಯನ್ನು ಮುಳುಗಿಸಲಾಯಿತು. ಆಕ್ಟೋಬರ್ 23–25ರಲ್ಲಿ ಫಿಲಿಪೀನ್ಸ್ ಬಳಿ ನಡೆದ ಕದನದಲ್ಲಿ ಅನೇಕ ಜಪಾನೀ ಹಡಗುಗಳು ಮುಳುಗಿದವು.

ಈ ಕಡೆ ಬರ್ಮ ರಂಗದಲ್ಲಿ ಭಾರತೀಯ ಸೈನಿಕರು ಅನೇಕ ನಗರಗಳನ್ನು ಹಿಡಿದರು. ಮಿತ್ರ ಸೇನೆಗಳು ಮೆಕಾರ್ಥರ್ ನೇತೃತ್ವದಲ್ಲಿ ಫಿಲಿಪೀನ್ಸ್‌ನ ರಾಜಧಾನಿ ಮನಿಲವನ್ನು ಪ್ರವೇಶಿಸಿದವು. ಓಕಿನಾವ ಮತ್ತು ಫಿಲಿಪೀನ್ಸ್‌ನಿಂದ ಟೋಕಿಯೋ ನಗರದ ಮೇಲೆ ವಿಮಾನಧಾಳಿಗೆ ಕೊನೆಯಿರಲಿಲ್ಲ. ಅತ್ತ ಕಡೆ ಸೋವಿಯತ್ ಜಪಾನ್ ಯುದ್ಧದ ತಾಟಸ್ಥ್ಯ ಕೌಲು ರದ್ದಾಗಿ, ಸೋವಿಯತರು ಜಪಾನಿನ ಮೇಲೆ ಯುದ್ಧವನ್ನು ಘೋಷಿಸಿದಾಗ ಜಪಾನಿಗೆ ವಿಪತ್ತು ಹತ್ತಿರಕ್ಕೆ ಬಂದಿತು. 1945 ಜೂನ್–ಜುಲೈ ತಿಂಗಳ ವೇಳೆಗೆ ಲುಸಾನ್ ಮತ್ತು ಓಕಿನಾವ ಸಂಪೂರ್ಣ ವಶವಾಗಿ ಜುಲೈ 5ರ ವೇಳೆಗೆ ಫಿಲಿಪೀನ್ಸ್ ದಂಡಯಾತ್ರೆ ಮುಕ್ತಾಯವಾಯಿತು. ಇಷ್ಟಾದರೂ ಜಪಾನಿನ ನಾಯಕರು ಶರಣಾಗತರಾಗುವ ಸೂಚನೆ ಕಾಣಲಿಲ್ಲ. ಜುಲೈ 17ರಂದು ಜರ್ಮನಿಯ ಪೋಟ್ಸ್‌ಡ್ಯಾಮ್ ನಗರದಲ್ಲಿ ಸ್ಟಾಲಿನ್, ಚರ್ಚಿಲ್ ಮತ್ತು ಅಧ್ಯಕ್ಷ ಟ್ರೂಮನ್ ಸಭೆ ಸೇರಿ ಜರ್ಮನಿಯ ಭವಿಷ್ಯ ನಿರ್ಧರಿಸಿದರು. ಅಲ್ಲದೆ ಪರಾಭವ ಹೊಂದಿದ ಜಪಾನಿಗೆ ಯುದ್ಧ ನಿಲ್ಲಿಸುವ ಸೂಚನೆ ಕಳುಹಿಸಿದರು. ಜಪಾನ್ ಈ ಶಾಂತಿ ಸೂಚನೆಯನ್ನು ನಿರಾಕರಿಸಿತು. ಯುರೋಪ್ ಯುದ್ಧದಿಂದ ಕೈ ಬಿಡುವುಮಾಡಿಕೊಂಡಿದ್ದ ಮಿತ್ರ ಪಕ್ಷದವರು ತಮ್ಮ ಸರ್ವಶಕ್ತಿಯನ್ನೂ ಜಪಾನಿನ ಮೇಲೆ ಪ್ರಯೋಗಿಸಲು ಸಿದ್ಧರಿದ್ದರೆಂಬುದನ್ನು ಅದು ಅರಿಯಲಿಲ್ಲ. ಯುದ್ಧಕೊನೆಗೊಳಿಸಿ, ಸಾವು ನೋವುಗಳನ್ನು ಕಡಿಮೆಮಾಡುವ ಉದ್ದೇಶದಿಂದ ಅಮೆರಿಕನ್ನರು ಪರಮಾಣು ಬಾಂಬನ್ನು 1945 ಆಗಸ್ಟ್ 6ರಂದು ಹಿರೋಷಿಮ ನಗರದ ಮೇಲೆ ಪ್ರಯೋಗಿಸಿದರು. ಆ ತಿಂಗಳ 9ನೆಯ ತಾರೀಕು ಸೋವಿಯತರು ಮಂಚೂರಿಯ ಗಡಿಯಲ್ಲಿ ಎರಡು ಪಟ್ಟಣಗಳನ್ನು ಹಿಡಿದರು. ಮತ್ತೊಂದು ಪರಮಾಣು ಬಾಂಬು ಅದೇ ದಿನ ನಾಗಸಾಕಿ ಬಂದರಿನ ಮೇಲೆ ಬಿತ್ತು. ಈ ಬಾಂಬಿನ ಪ್ರಯೋಗದಿಂದ ಉಂಟಾದ ಅಪಾರ ಹಾನಿಯನ್ನು ಮನಗಂಡ ಜಪಾನೀ ನಾಯಕರು ಆಗಸ್ಟ್ 10ರಂದು ತಮ್ಮ ಸೋಲನ್ನೊಪ್ಪಿಕೊಂಡರು. 14ರಂದು ಜನರಲ್ ಮೆಕಾರ್ಥರ್ ವಿಧಿಸಿದ ಷರತ್ತುಗಳನ್ನು ಒಪ್ಪಿಕೊಂಡು ಶರಣಾಗತರಾದರು. ಜಪಾನೀ ಶರಣಾಗತಿ ಪತ್ರಕ್ಕೆ ಸಹಿ ಬಿದ್ದದ್ದು ಸೆಪ್ಟೆಂಬರ್ 2ರಂದು, ಅಮೆರಿಕನ್ ಯುದ್ಧ ನೌಕೆ ಮಿಸೂರಿಯಲ್ಲಿ ಪೆಸಿಫಿಕ್ ಸಾಗರದ ಯುದ್ಧದ ಸಮಾಪ್ತಿಯೊಂದಿಗೆ ಎರಡನೆಯ ಮಹಾಯುದ್ಧವೂ ಮುಕ್ತಾಯವಾಯಿತು.

ಈ ಯುದ್ಧದ ಪರಿಣಾಮವಾಗಿ ವಿಶ್ವದಲ್ಲಿ ಎರಡು ಮಹತ್ತರವಾದ ರಾಜಕೀಯ ಬಣಗಳು ಉಳಿದುವು. ಸೋವಿಯತ್ ಪ್ರಭುತ್ವ ಮತ್ತು ಪಾಶ್ಚಾತ್ಯ ಪ್ರಜಾಪ್ರಭುತ್ವ. ಯುದ್ಧಾನಂತರ ಜರ್ಮನಿ ತನ್ನ ಹಿರಿಮೆಯನ್ನು ಕಳೆದುಕೊಂಡಿತು. 1918ರಲ್ಲಿ ವಿಜಯಿ ರಾಷ್ಟ್ರವಾಗಿದ್ದ ಮತ್ತು 1930ರ ವೇಳೆಗೆ ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲೊಂದಾಗಿದ್ದ ಫ್ರಾನ್ಸಿನ ಶಕ್ತಿ ಉಡುಗಿತು. ಇಟಲಿ ಸಣ್ಣ ರಾಷ್ಟ್ರವಾಗಿ ಉಳಿಯಿತು. ಹೀಗೆ ಯುರೋಪಿನ ಪ್ರಮುಖ ರಾಷ್ಟ್ರಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡುವು. ಸೋವಿಯತ್ ಒಕ್ಕೂಟವೊಂದೇ ಪ್ರಬಲ ರಾಷ್ಟ್ರವಾಗಿ ಮುಂದುವರಿಯಿತು. ಅನೇಕ ಐರೋಪ್ಯ ರಾಷ್ಟ್ರಗಳು ಸೋವಿಯತ್ ಶಕ್ತಿಯ ನೆರಳಲ್ಲಿರಬೇಕಾಯಿತು. ಯುರೋಪು ಎರಡು ಪಂಥಗಳ ಪ್ರಭಾವಕ್ಕೆ ಸಿಕ್ಕಿಬಿದ್ದು ಆರ್ಥಿಕ ಮುಗ್ಗಟ್ಟು ಮತ್ತು ಆಹಾರದ ಅಭಾವ ಸ್ಥಿತಿಯನ್ನು ಎದುರಿಸಬೇಕಾಯಿತು. ಯುದ್ಧದಲ್ಲಿ ಮುಖ್ಯ ಪಾತ್ರ ವಹಿಸಿದ ಮತ್ತೊಂದು ರಾಷ್ಟ್ರವಾದ ಬ್ರಿಟನ್ನಿನ ಶಕ್ತಿ ಕುಗ್ಗಿತು. ಯುದ್ಧದ ಅಗಾಧ ವೆಚ್ಚದ ಭಾರದಿಂದ ಬ್ರಿಟನ್ ಎದುರಿಸಬೇಕಾಗಿದ್ದ ಸಮಸ್ಯೆಗಳು ಅಪಾರವಾದವು.

ಪ್ರಪಂಚದಲ್ಲಿ ಹಿಂದುಳಿದ ದೇಶಗಳು ಮತ್ತು ವಸಾಹತು ಪ್ರದೇಶಗಳಲ್ಲಿ ಜನಜಾಗೃತಿಯುಂಟಾಗಿ ರಾಷ್ಟ್ರೀಯತೆಯ ಭಾವನೆ ಮೂಡಿದ್ದು ಮತ್ತೊಂದು ಪರಿಣಾಮ. ಎರಡನೆಯ ಮಹಾಯುದ್ಧ ಮಿತ್ರರಾಷ್ಟ್ರಗಳ ದೃಷ್ಟಿಯಲ್ಲಿ ಜಯಪ್ರದವಾಗಿ ಕೊನೆಗೊಂಡದ್ದು ಅಮೆರಿಕ ಸಂಯುಕ್ತಸಂಸ್ಥಾನದ ಅಗಾಧ ಕೈಗಾರಿಕಾ ಮತ್ತು ಸೈನಿಕ ಶಕ್ತಿಯಿಂದ: ಇದೂ ಸೋವಿಯತ್ ಒಕ್ಕೂಟ ಯುದ್ಧದಲ್ಲಿ ಪ್ರಧಾನ ಪಾತ್ರ ವಹಿಸಿದ್ದರಿಂದ.

ಮಹಾಯುದ್ಧಕ್ಕಾಗಿ ಆದ ವೆಚ್ಚ ಅಪಾರ. ಪ್ರಪಂಚದ ಸಂಪತ್ತೆಲ್ಲ ಯುದ್ಧಕ್ಕಾಗಿ, ಯುದ್ಧ ಸಾಮಗ್ರಿಗಳನ್ನು ತಯಾರಿಸುವುದಕ್ಕಾಗಿ, ಯುದ್ಧದ ಅಸ್ತ್ರಗಳನ್ನು ಕಂಡು ಹಿಡಿಯುವುದಕ್ಕಾಗಿ ವಿನಿಯೋಗವಾಗಬೇಕಾಯಿತು. ಇದು ಕೇವಲ ಮಹಾಬಲರ ಯುದ್ಧ. ಒಂದು ರೀತಿಯಲ್ಲಿ ವೈಜ್ಞಾನಿಕ ಯುದ್ಧ, ಮನಃಸ್ಥೈರ್ಯದ ಯುದ್ಧ. ಈ ರೀತಿಯ ಘರ್ಷಣೆಯಲ್ಲಿ ಪ್ರಚಾರದ ಪಾತ್ರ ಹೆಚ್ಚು. ಯುದ್ಧಕಾಲದಲ್ಲಿ ಈ ಪ್ರಚಾರ ನಾನಾ ಮುಖಗಳಲ್ಲಿ ನಡೆದು, ಮಿತ್ರ ಶತ್ರು ರಾಷ್ಟ್ರಗಳಲ್ಲಿ ಹೆಚ್ಚಿನ ವೈಷಮ್ಯವನ್ನುಂಟುಮಾಡಿತಲ್ಲದೆ, ಯುದ್ಧಾನಂತರದಲ್ಲಿ ಮಿತ್ರ ರಾಷ್ಟ್ರಗಳಲ್ಲೆ ವಿರಸ ಮೂಡಿಸಿತು. ಸಮಸ್ಯೆಗಳು ಜಟಿಲವಾಗಿ, ಶಾಂತಿ ಸ್ಥಾಪನೆ ದೂರ ಸರಿಯಿತು. ಯುದ್ಧ ಸಮಯದಲ್ಲಿ, ಹಿಟ್ಲರನನ್ನು ಎದುರಿಸಿ ಜಯಗಳಿಸುವುದರಲ್ಲಿ, ಇದ್ದ ಒಗ್ಗಟ್ಟು ಯುದ್ಧಾನಂತರ ಮಾಯವಾಯಿತು. ಯುದ್ಧದಲ್ಲಿ ಗೆದ್ದರೂ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಯುದ್ಧಮುಗಿದ ಮೇಲೆ ಒಂದು ಬಗೆಯ ಶೀತಲಯುದ್ಧ ಪ್ರಾರಂಭವಾಯಿತೆನ್ನಬಹುದು.

ಈ ಮಹಾಯುದ್ಧದಲ್ಲಿ ರಾಷ್ಟ್ರಗಳು ಮಾಡಿದ ವೆಚ್ಚದ ಬಗ್ಗೆ ನಿಖರವಾಗಿ ವಿವರ ನೀಡುವುದು ಅಸಾಧ್ಯ. ಯುದ್ಧದಲ್ಲಿ ಮಡಿದವರ ಬಗ್ಗೆಯೂ ಸರಿಯಾದ ಅಂಕಿ ಅಂಶಗಳನ್ನು ನೀಡುವುದು ದುಸ್ತರದ ಕೆಲಸ. ಸಾವು ನೋವು ನಷ್ಟಗಳ ಜೊತೆಗೆ ಮಾನವ ಅನುಭವಿಸಿದ ತೊಂದರೆಯನ್ನು ವರ್ಣಿಸುವುದು ಕಷ್ಟ. ಸೈನ್ಯದ ವೆಚ್ಚ, ವಾಯುಬಲ ಮತ್ತು ನೌಕಾಬಲದ ವೆಚ್ಚ ಇವುಗಳ ಜೊತೆಗೆ ಜನರು ಕಳೆದುಕೊಂಡ ಆಸ್ತಿ ಪಾಸ್ತಿ, ನಾಶಗೊಂಡ ಕೈಗಾರಿಕೆಗಳು, ಜನ ಕಳೆದುಕೊಂಡ ಕೆಲಸ–ಇವುಗಳ ನಷ್ಟವನ್ನೂ ಸೇರಿಸಬೇಕು. ಈ ಕೆಳಗೆ ಕೊಟ್ಟಿರುವ ಅಂಕಿ ಅಂಶಗಳು ಸ್ಥೂಲವಾಗಿ ಈ ವೆಚ್ಚದ ವ್ಯಾಪ್ತಿಯನ್ನು ಸೂಚಿಸುತ್ತವೆ.

1. ಮಿತ್ರ ಶತ್ರು ಪಕ್ಷಗಳಲ್ಲಿ ಒಟ್ಟು 57 ರಾಷ್ಟ್ರಗಳು ಯುದ್ಧದಲ್ಲಿ ಭಾಗವಹಿಸಿದ್ದವು. ಮಿತ್ರರಾಷ್ಟ್ರಗಳ ಕಡೆ ಈ ಯುದ್ಧದ ವೆಚ್ಚದಲ್ಲಿ ಬಹುಭಾಗವನ್ನು ಸಂಯುಕ್ತಸಂಸ್ಥಾನ ಹೊತ್ತಿತ್ತು. ಅದರಲ್ಲಿ ಇತರ ಪಾಲುದಾರ ರಾಷ್ಟ್ರಗಳೆಂದರೆ ಬ್ರಿಟನ್, ಕಾಮನ್‌ವೆಲ್ತ್, ರಷ್ಯ, ಚೀನ ಮತ್ತು ಫ್ರಾನ್ಸ್. ಅಕ್ಷರಾಷ್ಟ್ರಗಳ ಕಡೆ ಜರ್ಮನಿ, ಇಟಲಿ ಮತ್ತು ಜಪಾನ್.

2. ಯುದ್ಧದಲ್ಲಿ ಸತ್ತವರ ಸಂಖ್ಯೆ ಅಗಾಧ. ಯುದ್ಧದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನ 2,92,100 ಸೈನಿಕರನ್ನು, ಅಂದರೆ 1940 ಜನಗಣತಿಯ ಪ್ರಕಾರ 450ಕ್ಕೆ ಒಬ್ಬನಂತೆ, ಕಳೆದುಕೊಂಡಿತು. ಇತರರ ಪೈಕಿ ಯುದ್ಧರಂಗದಲ್ಲಿ ಮತ್ತು ಯುದ್ಧ ಕೈದಿಗಳಾಗಿ ಸತ್ತವರಲ್ಲಿ ಭೂವಾಯುಪಡೆಯವರು 2,34,874. ನೌಕಾಪಡೆ 36,950; ಅದಕ್ಕೆ ಸಂಬಂಧಪಟ್ಟವರು 19,733; ತೀರ ಪ್ರದೇಶದ ಕಾವಲುಗಾರರು 574.

3. ಬ್ರಿಟನ್ ಮತ್ತು ಕಾಮನ್‌ವೆಲ್ತ್‌ಗಳ ನಷ್ಟ ಹೀಗಿದೆ: ಸತ್ತವರ ಸಂಖ್ಯೆ 5,44,596; ಬ್ರಿಟನ್ನಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾವು ನೋವು ಉಂಟಾದವು. ಬ್ರಿಟನ್ನಿನಲ್ಲಿ ಸತ್ತವರ ಸಂಖ್ಯೆ 3,97,762. ಅಂದರೆ ಅದರ ಜನಸಂಖ್ಯೆಯಲ್ಲಿ ಪ್ರತಿ 150ಕ್ಕೆ ಒಬ್ಬನಂತೆ.

4. ಸೋವಿಯತ್ ಒಕ್ಕೂಟದಲ್ಲಿ ಸತ್ತವರ ಸಂಖ್ಯೆ 75,00,000 ಅಂದರೆ ಅದರ ಜನಸಂಖ್ಯೆಯಲ್ಲಿ ಪ್ರತಿ 22 ಜನರಲ್ಲಿ ಒಬ್ಬ ಪ್ರಾಣ ತೆತ್ತ.

5. ಫ್ರಾನ್ಸಿನಲ್ಲಿ 2,10,671 ಸೈನಿಕರು ಸತ್ತರು (200 ಜನಕ್ಕೆ ಒಬ್ಬ). ಫ್ರಾನ್ಸಿನ ಇತರ ಪ್ರಜೆಗಳಲ್ಲಿ 1,07,874 ಜನ ಪ್ರಾಣ ಕಳೆದುಕೊಂಡರು.

6. ಜರ್ಮನಿಯ 28,50,000 ಸೈನಿಕರು ಸತ್ತರು (25ಕ್ಕೆ 1).

7. ಇಟಲಿ 3,00,000 ಸೈನಿಕರನ್ನು ಕಳೆದುಕೊಂಡಿತು (150ಕ್ಕೆ 1).

8. ಸಾವಿನ ಪಟ್ಟಿಯಲ್ಲಿ ಮಿತ್ರ ರಾಷ್ಟ್ರಗಳ ಪೈಕಿ ಚೀನ ಎರಡನೆಯದು. 22,00,000 (200ಕ್ಕೆ 1) ಸೈನಿಕರನ್ನು ಕಳೆದುಕೊಂಡಿತು.

9. ಜಪಾನ್ 15,06,000 ಸೈನಿಕರನ್ನು ಕಳೆದುಕೊಂಡಿತು. (46ಕ್ಕೆ 1).

10. ಯುದ್ಧದಲ್ಲಿ ಮಿತ್ರ ಶತ್ರು ರಾಷ್ಟ್ರಗಳ ಸೈನಿಕರ ಸಾವಿನ ಸಂಖ್ಯೆ ಒಟ್ಟು 1,06,50,000. ಅಕ್ಷ ರಾಷ್ಟ್ರಗಳಲ್ಲಿ ಈ ಸಂಖ್ಯೆ 46,50,000.

11. ಇದಲ್ಲದೆ ಅನೇಕ ಸಣ್ಣಪುಟ್ಟ ರಾಷ್ಟ್ರಗಳು ಉದಾ: (ಪೋಲೆಂಡ್) ಹೆಚ್ಚಿನ ಪ್ರಮಾಣದಲ್ಲಿ ಸಾವು ನೋವುಗಳನ್ನನುಭವಿಸಿದವು.

12. ನಿರಾಶ್ರಿತರ ಸಮಸ್ಯೆ ಉದ್ಭವವಾಗಿ ಅನೇಕ ಸಂಸ್ಥೆಗಳು ಅದರ ನಿವಾರಣೆಗಾಗಿ ಯತ್ನಿಸಿದವು. ಅಂತಾರಾಷ್ಟ್ರೀಯ ನಿರಾಶ್ರಿತರ ಸಂಘ 72,800 ನಿರಾಶ್ರಿತರನ್ನು ಅವರವರ ರಾಷ್ಟ್ರಗಳಿಗೆ ಹಿಂದಿರುಗಿಸಿತು. 10,50,000 ನಿರಾಶ್ರಿತರಿಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ವಸತಿ ಕಲ್ಪಿಸಲಾಯಿತು. ಇಷ್ಟಾದರೂ ಈ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಯಲಿಲ್ಲ.

13. ದೂರಪ್ರಾಚ್ಯದಲ್ಲಿ ಜಪಾನಿನಿಂದ 10,00,000 ಜನರನ್ನು ಹಿಂತಿರುಗಿಸಲಾಯಿತು. ಜಪಾನಿಗೆ ವಾಪಸು ಕಳಿಸಲಾದವರ ಸಂಖ್ಯೆ 65,50,000. (ಎಸ್.ಕೆ.ಎಸ್.)

**ಮಹಾವೀರ:** ಪ್ರ.ಶ.ಪೂ.599–527. ಜೈನರ ಇಪ್ಪತ್ತನಾಲ್ಕನೆಯ ತೀರ್ಥಂಕರ. ಗೌತಮಬುದ್ಧನ ಹಿರಿಯ ಸಮಕಾಲೀನ. ಈತ ಮಗಧದೇಶದಲ್ಲಿ ಹುಟ್ಟಿದ. ಈಗೀನ ಚಂಪಾರಣ್ಯ, ಮುಜಫರಪುರ, ದರಭಂಗಾ ಮತ್ತು ಛಪರಾ ಜಿಲ್ಲೆಗಳಿಗೆ ಸೇರಿದ ಭಾಗಕ್ಕೆ ಹಿಂದೆ ವಜ್ಜಿಯೋ (ಲಿಚ್ಛವಿಯರ ನಾಡು) ಎಂದೂ ವಿದೇಹದೇಶವೆಂದೂ ಹೆಸರಿತ್ತು. ಅದರ ರಾಜಧಾನಿ ವೈಶಾಲಿ (ಈಗಿನ ಬಸಾಢನಗರ). ಈ ನಗರದ ಮಧ್ಯದಲ್ಲಿ ಗಂಡಕಿ ನದಿ ಹರಿಯುತ್ತಿದೆ. ಅದರ ಎರಡೂ ತೀರಗಳಲ್ಲಿ ವೈಶಾಲಿಯ ಎರಡು ಉಪನಗರಗಳಿದ್ದುವು. ಅವು ಒಂದು ಕ್ಷತ್ರಿಯ ಕುಂಡಗ್ರಾಮ; ಇನ್ನೊಂದು ಬ್ರಾಹ್ಮಣ ಕುಂಡಗ್ರಾಮ; ಅಲ್ಲಿ ಅನೇಕ ಗಣರಾಜ್ಯಗಳಿದ್ದುವು. ಅವುಗಳಲ್ಲಿ ಪರಸ್ಪರ ಯುದ್ಧಗಳಿಲ್ಲದೆ ಶಾಂತಿಯುತ ಸಹಬಾಳ್ವೆ ನೆಲಸಿದ್ದಿತು. ಈ ಗಣರಾಜ್ಯದಲ್ಲಿ ಚೇಟಕ ಎಂಬಾತ ವೈಶಾಲಿಯ ಪ್ರಸಿದ್ಧ ರಾಜ. ಆತ ಕಾಶಿ, ಕೋಸಲಗಳನ್ನುಳ್ಳ ಒಂಬತ್ತು ಲಿಚ್ಛವಿ ಹಾಗೂ ಮಲ್ಲರಾಜರ ಅಧಿಪತಿಯಾಗಿದ್ದ. ಈ ಚೇಟಕದ ಮಹಾರಾಜನಿಗೆ ಎಂಟು ಮಂದಿ ಹೆಣ್ಣು ಮಕ್ಕಳು, ಅವರಲ್ಲಿ ಹಿರಿಯಳಾದ ತ್ರಿಶಲಾದೇವಿಯನ್ನು(ಪ್ರಿಯಕಾರಿಣಿ) ಕುಂಡಲಪುರದ ಗಣ್ಯರಾಜ ಸಿದ್ಧಾರ್ಥಮಹಾರಾಜನಿಗೆ ಕೊಟ್ಟು ವಿವಾಹವಾಗಿದ್ದಿತು. ಸಿದ್ಧಾರ್ಥ ಜ್ಞಾತೃವಂಶಕ್ಕೆಸೇರಿದವ. ಸಿದ್ಧಾರ್ಥ, ತ್ರಿಶಲಾದೇವಿಯರು 23ನೆಯ ತೀರ್ಥಂಕರನಾದ ಪಾರ್ಶ್ವನಾಥನ ಶ್ರಮಣ ಪರಂಪರೆಯ ಅನುಯಾಯಿಗಳಾಗಿದ್ದರು. ಇವರ ಹೊಟ್ಟೆಯಲ್ಲಿ ಪ್ರ.ಶ.ಪೂ.599ನೆಯ ಸಂವತ್ಸರದಲ್ಲಿ ಚೈತ್ರ ಶುದ್ಧ ತ್ರಯೋದಶಿಯ ದಿವಸ ಮಹಾವೀರ ಜನಿಸಿದ. ಈ ಶಿಶು ಜನನವಾದಕೂಡಲೆ ನಾಡು ಸಂಪದ್ಭರಿತವಾಗಿ ಶಾಂತಿಸೌಖ್ಯಗಳು ವರ್ಧಿಸಿದುದರಿಂದ ಶಿಶುವಿಗೆ ವರ್ಧಮಾನನೆಂಬ ಹೆಸರಿಟ್ಟರು. ಕೆಲಕಾಲದ ಮೇಲೆ ಕೆಲವು ಯೋಗಿಗಳು ಈ ಶಿಶುವಿನ ದರ್ಶನ ಮಾಡಿ ಈತನ ಅಲೌಕಿಕ ಸಾಮರ್ಥ್ಯ ಕಂಡು ಬೆರಗಾಗಿ ಈತನನ್ನು ಮಹಾವೀರನೆಂದೂ ಈತನ ಬುದ್ಧಿ ಚಾತುರ್ಯಗಳಿಗೆ ಮೆಚ್ಚಿ ಸನ್ಮತಿ ಎಂದೂ ಕರೆದರು. ಮಹಾವೀರನಿಗೆ ಹುಟ್ಟುವಾಗಲೇ ಮತಿ, ಶ್ರುತ, ಅವಧಿಗಳೆಂಬ ಮೂರು ಪ್ರಕಾರದ ಜ್ಞಾನಗಳು ಲಭಿಸಿದ್ದುವು. ಮಹಾವೀರ ತೇಜಸ್ವಿಯಾಗಿ, ಮೇಧಾವಿಯಾಗಿ, ಸಕಲ ವಿದ್ಯಾ ಪಾರಂಗತನಾಗಿ ಬೆಳೆದನು. ಹೀಗೆ 30 ವರ್ಷಗಳು ಕಳೆದುವು. ಈತ ಯಾವಾಗಲೂ ಧ್ಯಾನಾಸಕ್ತನಾಗಿರುತ್ತಿದ್ದ, ಒಂದು ದಿನ ತನ್ನ ಹಿಂದಿನ ಭವಗಳ ಅರಿವಾಗಿ ಸಂಸಾರ ಅಸಾರವೆಂದು ಕಂಡು ವೈರಾಗ್ಯ ಅಂಕುರಿಸಿತು. ಆಗ ಮಹಾವೀರ ಐಹಿಕ ಸಂಪತ್ತನ್ನೂ ಭೋಗೋಪಯೋಗ ವಿಷಯಗಳನ್ನೂ ತೊರೆದು ಸಂನ್ಯಾಸ ಸ್ವೀಕರಿಸಿದ. ಆಗಲೇ ಅತನಿಗೆ ನಾಲ್ಕನೆಯದಾದ ಮನಃಪರ್ಯಾಯ (ಇನ್ನೊಬ್ಬರ ಮನಸ್ಸಿನಲ್ಲಿರುವ ಭಾವನೆಗಳನ್ನು ತಿಳಿಯುವುದು) ಜ್ಞಾನ ಲಭಿಸಿದುದು. ಮಹಾವೀರ 12 ವರ್ಷಗಳ ಕಾಲ ಉಗ್ರ ತಪಸ್ಸು ಆಚರಿಸಿದುದರ ಫಲವಾಗಿ ನಾಲ್ಕು ಘಾತಿ ಕರ್ಮಗಳು ನಾಶವಾಗಿ ಐದನೆಯ ಕೇವಲ ಜ್ಞಾನ (ಸರ್ವಜ್ಞತ್ವ) ಪ್ರಾಪ್ತಿವಾಯಿತು. ಈ ದೇವತೆಗಳಿಂದ ಸಮವಸರಣ ರಚನೆಯಾಯಿತು. ಆನಂತರ ಮಹಾವೀರ 30 ವರ್ಷಗಳ ಕಾಲ ಧರ್ಮೋಪದೇಶ ಮಾಡಿದ. ಕೊನೆಗೆ ಸಮವಸರಣ ಪರಿತ್ಯಜಿಸಿ ಪಾಟಲಿಪುತ್ರ (ಪಾಟ್ನ) ನಗರಕ್ಕೆ ಸಮೀಪದಲ್ಲಿರುವ ಪಾವಾಪುರಿಯ ಸರೋವರದ ಮಧ್ಯದ ಶಿಲೆಯ ಮೇಲೆ ನಿಂತು ಉಳಿದಿದ್ದ ಅಘಾತಿಕರ್ಮಗಳನ್ನು ನಾಶಮಾಡಿ ಆಶ್ವಯುಜ ಬಹುಳ ಚತುರ್ದಶಿಯ ರಾತ್ರಿಯ ಅಂತ್ಯ ಸಮಯದಲ್ಲಿ ಅಂದರೆ ಅಮಾವಾಸ್ಯೆಯ ಪ್ರಾತಃಕಾಲದಲ್ಲಿ ಸರ್ವಕರ್ಮಗಳಿಂದ ಮುಕ್ತನಾಗಿ ಸಿದ್ಧಪದವಿ ಪಡೆದ. ಈ ಜ್ಞಾನಜ್ಯೋತಿಯ ಪ್ರತೀಕವಾಗಿ ಆದಿನ ರಾತ್ರಿ ಜನರು ಅನೇಕ ದೀಪಗಳನ್ನು ಹೊತ್ತಿಸಿ ಮಹಾವೀರ ಸ್ವಾಮಿಯ ಪೂಜೆ ಸ್ತವನಗಳನ್ನು ನಡೆಸಿದರು. ಅದೇ ದೀಪಾವಳಿ ಹಬ್ಬ. (ಕೆ.ಎಸ್.ಡಿ.)

**ಮಹುರ್ಜರಿ:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿ ಬೃಹತ್ ಶಿಲಾಯುಗದ ವಸತಿ ಹಾಗೂ ಸಮಾಧಿ ನೆಲೆಗಳಲ್ಲದೆ ಆದಿಚಾರಿತ್ರಿಕ ಕಾಲದ ವಸತಿ ನೆಲೆಯಿದೆ. ಇದರ ಸಮೀಪದಲ್ಲಿ ಬೃಹತ್ ಶಿಲಾಯುಗ ಕಾಲದ ಜೂನಾಪಾನಿ ನೆಲೆಯಿದೆ. 1933ರಲ್ಲಿ ಜಿ.ಎ.ಪಿ. ಹಂಟರ್ ಈ ನೆಲೆಗಳನ್ನು ಗುರುತಿಸಿ ಇಲ್ಲಿ ಸಿಕ್ಕ ಅವಶೇಷಗಳನ್ನು ಪ್ರಕಟಿಸಿದ. ಇವನು ಸಂಗ್ರಹಿಸಿದ ಮುದ್ರೆ, ಸುಟ್ಟಇಟ್ಟಿಗೆ, ಇಂಟ್ಯಾಗ್ಲಿಯೊ ಹಾಗೂ ಅರೆಪ್ರಶಸ್ತ ಕಲ್ಲಿನ ಮಣಿಗಳು ಆದಿಚಾರಿತ್ರಿಕ ಕಾಲದವು. ಒಂದು ಮುದ್ರೆಯ ಮೇಲೆ ಅಪುಮಾದ ಅಥವಾ ಅಪ್ರಮಾದ ಎಂಬ ಬರೆಹವಿದೆ. ಮಹುರ್ಜರಿ ಮಣಿಗಾರಿಕೆಯ ಕೇಂದ್ರವಾಗಿದ್ದಿರಬೇಕೆಂದೂ ಈ ಮಣಿಗಳನ್ನು ಮಧ್ಯ ಏಷ್ಯಕ್ಕೆ ರಫ್ತು ಮಾಡಿತ್ತಿದ್ದಿರಬೇಕೆಂದೂ ಇವನು ಊಹಿಸಿದ. 1971 ರಲ್ಲಿ ಮಹುರ್ಜರಿಯಲ್ಲಿ ಮಾಧವರಾಜ ಎಂಬ ಬರೆಹವುಳ್ಳ ಗುಪ್ತ–ವಾಕಾಟಕ ಕಾಲದ ಮಣ್ಣಿನ ಮುದ್ರೆ ಹಾಗೂ ವಾಕಾಟಕರ ಎರಡನೆಯ ಪ್ರವರಸೇನನ ತಾಮ್ರಪಟ ಲಭಿಸಿದವು. ಇಲ್ಲಿಯ ಶಿಲಾವೃತ್ತ ಸಮಾಧಿಗಳು ಹಂಟರ್‌ನ ಗಮನಕ್ಕೆ ಬರದಿದ್ದುದು ಆಶ್ಚರ್ಯಕರ. ಜೂನಾಪಾನಿಯಲ್ಲಿ 1879 ರಲ್ಲೇ ರಿವೆಟ್ ಕಾರ್ನಾಕ್ ಸಮಾಧಿಗಳನ್ನು ಗುರುತಿಸಿ ಇಲ್ಲಿಂದ ಅವನು ಸಂಗ್ರಹಿಸಿದ ವಿವಿಧ ರೀತಿಯ ಕಬ್ಬಿಣ ಉಪಕರಣಗಳನ್ನು ಪ್ರಕಟಿಸಿದ್ದ. ಇವುಗಳಲ್ಲಿ ಕುದುರೆಯ ಕಡಿವಾಣದ ಭಾಗಗಳು, ಕೊಂಡಿ (ಬಕಲ್) ಹಾಗೂ ಬ್ರೋಷೆ ಗಮನಾರ್ಹ.

ಮಹುರ್ಜರಿಯಲ್ಲಿ 270ಕ್ಕೂ ಹೆಚ್ಚು ಕಲ್ಗುಪ್ಪೆವೃತ್ತ ಸಮಾಧಿಗಳು 2.5 ಕಿಮೀ ಪ್ರದೇಶದಲ್ಲಿ ಹರಡಿವೆ. ಇವನ್ನು 10 ವಲಯಗಳಲ್ಲಿ ವಿಭಜಿಸಲಾಗಿದೆ. 1970–72 ರಲ್ಲಿ ನಾಗಪುರ ವಿಶ್ವವಿದ್ಯಾಲಯ ಮಹುರ್ಜರಿಯಲ್ಲಿ 14 ಕಲ್ಗುಪ್ಪೆವೃತ್ತ ಸಮಾಧಿಗಳಲ್ಲಿ ಉತ್ಖನನ ನಡೆಸಿತು. ವೃತ್ತದ ವ್ಯಾಸ 11.38–18.2 ಮೀ. ವೃತ್ತಗಳನ್ನು ನೈಸರ್ಗಿಕ ಗರಸು ಪದರದ (ಮುರಮ್) ಮೇಲೆ ನಿರ್ಮಿಸಲಾಗಿದ್ದು ಶವವನ್ನು ಹೂಳಿ ಮಣ್ಣು ಮುಚ್ಚಿದ ಅನಂತರ ವೃತ್ತದ ಒಳಭಾಗದಲ್ಲಿ ಕಲ್ಲುತುಂಡುಗಳನ್ನು ತುಂಬಲಾಗಿತ್ತು. ಅಸ್ಥಿಪಂಜರಗಳು ಸಾಮಾನ್ಯವಾಗಿ ಉತ್ತರ–ದಕ್ಷಿಣಾಭಿಮುಖವಾಗಿದ್ದುವು. 3 ಸಮಾಧಿಗಳಲ್ಲಿ ಒಂದಕ್ಕಿಂತ ಹೆಚ್ಚು ಜನರ ಅಸ್ಥಿ ಅವಶೇಷಗಳಿದ್ದರೆ ಒಂದರಲ್ಲಿ ಜೋಡಿ ಅಸ್ಥಿಪಂಜರಗಳಿದ್ದವು. ಇವುಗಳೊಂದಿಗೆ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು, ಕಬ್ಬಿಣ, ತಾಮ್ರ ಹಾಗೂ ಚಿನ್ನದ ವಸ್ತು ಮತ್ತು ಆಭರಣಗಳು,

ಅಲಂಕರಿಸಿದ ಕಾರ್ನೇಲಿಯನ್ ಹಾಗೂ ಅಗೇಟ್ ಮಣಿಗಳು ಇದ್ದವು. ಒಂದು ಸಮಾಧಿಯಲ್ಲಿ ಕುದುರೆಯ ಅಸ್ಥಿ ಅವಶೇಷಗಳೂ ಕಡಿವಾಣದ ಭಾಗಗಳೂ ಮುಖಕ್ಕೆತೊಡಿಸಿದ್ದ ಆಭರಣಗಳೂ ತಾಮ್ರದ ಗಂಟೆಗಳೂ ಸಿಕ್ಕವು. ಮುಖದ ಆಭರಣವನ್ನು ತಾಮ್ರದ ಹಾಳೆಯಿಂದ ಮಾಡಿದ್ದು ಇದನ್ನು ಚರ್ಮದ ಹೊದಿಕೆಗೆ ಜೋಡಿಸಲು ಅನುವಾಗುವಂತೆ ಕಬ್ಬಿಣದ ಪಿನ್ನುಗಳನ್ನು ಅಳವಡಿಸಲಾಗಿತ್ತು. ಕಬ್ಬಿಣದ ಆಭರಣಗಳಲ್ಲಿ ಪಟ್ಟಿ ಬಿಗಿದ ಕೊಡಲಿಗಳು, ಭರ್ಜಿ, ಅರ, ಬಾಚಿ, ಉಳಿ ಹಾಗೂ ಬಾಣಲೆಗಳು ಮುಖ್ಯವಾದುವು. ತಟ್ಟೆ, ಮುಚ್ಚಳ ಹಾಗೂ ಬಳೆಗಳನ್ನು ತಾಮ್ರದಿಂದ ಮಾಡಲಾಗಿದೆ. ಚಿನ್ನದ ಆಭರಣಗಳೆಂದರೆ ತಂತಿಯಿಂದ ಮಾಡಿದ ಕಂಠಾಹಾರ ಹಾಗೂ ಕಿವಿಯೋಲೆಗಳು. ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು, ಅಭ್ರಕಯುಕ್ತ ಕೆಂಪು ಮಣ್ಪಾತ್ರೆಗಳು ಅಧಿಕವಾಗಿಯೂ ಕಪ್ಪುಚಿತ್ರಿತ ಕೆಂಪುಪಾತ್ರೆಗಳು ವಿರಳವಾಗಿಯೂ ಇದ್ದವು. ಕಪ್ಪು–ಕೆಂಪು ದ್ವಿವರ್ಣ ಪ್ರಕಾರದ ಆಲಿಕೆಯಾಕಾರದ ಮುಚ್ಚಳವೊಂದು ಗಮನಾರ್ಹ. ಇದರ ಮೇಲ್ತುದಿಯಲ್ಲಿ ಆಡಿನ ಬೊಂಬೆಯನ್ನು ಜೋಡಿಸಲಾಗಿದೆ.


ಮುಕ್ಕಾಲಿನ ತಾಮ್ರದ ಸಲಕರಣೆ

ಈ ನೆಲೆಯಲ್ಲಿ ಡೆಕ್ಕನ್ ಕಾಲೇಜು 2003–05ರಲ್ಲಿ ಮತ್ತೆ ಎರಡು ಕಲ್ಗುಪ್ಪೆ ವೃತ್ತಸಮಾಧಿಗಳಲ್ಲಿಯೂ ಆದಿಚಾರಿತ್ರಿಕ ನೆಲೆಯಲ್ಲಿಯೂ ಉತ್ಖನನ ನಡೆಸಿತು. ಒಂದು ಸಮಾಧಿಯಲ್ಲಿ ವೃತ್ತದ ಹೊರಸುತ್ತಿನಲ್ಲಿದ್ದ 4 ಶವಕುಣಿಗಳನ್ನೂ ಹೊರತೆಗೆಯಲಾಯಿತು. ಈ ಶವಕುಣಿಗಳಿಗೆ ಭೂಮೇಲ್ಮೈಯಲ್ಲಿ ಯಾವ ಗುರುತುಗಳೂ ಇರಲಿಲ್ಲ. ಮತ್ತೊಂದು ಸಮಾಧಿಯಲ್ಲಿ ಸಿಕ್ಕ ತಾಮ್ರದ ತ್ರಿಪಾದಿ ಹಾಗೂ ತ್ರಿಶೂಲವನ್ನು ಹೋಲುವ ವಸ್ತು ಅಪರೂಪವಾಗಿವೆ. ತ್ರಿಪಾದಿಗೆ ಗಂಟೆಯಾಕಾರದ ಕಾಲುಗಳಿವೆ. ಕಾಲಿಗೆ ತಾಗಿ ತಂತಿಯಿಂದ ಮಾಡಿದ ವೃತ್ತವಿದ್ದು ಇದರ ಮೇಲೆ ಮೂರು ಜಿಂಕೆಯ ಗೊಂಬೆಗಳನ್ನು ಕೂಡಿಸಲಾಗಿದೆ. ತ್ರಿಪಾದಿಯ ಮಧ್ಯಭಾಗದಲ್ಲಿ ಮೂರು ಹಕ್ಕಿಯ ಗೊಂಬೆಗಳನ್ನೂ ಮೇಲ್ಭಾಗದಲ್ಲಿ 3 ಮೀನಿನ ಗೊಂಬೆಗಳನ್ನೂ ಜೋಡಿಸಲಾಗಿದೆ. ಇದೇ ಸಮಯದಲ್ಲಿ ಸಮಾಧಿನೆಲೆಯ ಸಮೀಪದಲ್ಲಿ ಸಮಕಾಲೀನ ವಸತಿನೆಲೆಯನ್ನು ಶೋಧಿಸಿ ಉತ್ಖನನ ನಡೆಸಲಾಯಿತು. ಕುಟ್ಟಿಮಾಡಿದ ಮಣ್ಣಿನ ನೆಲಗಟ್ಟುಗಳು, ಒಲೆ, ಕಣಜದ ಕಟ್ಟೆ, ಮಣಿಗಳು, ಕಬ್ಬಿಣದ ವಸ್ತುಗಳು ಇಲ್ಲಿ ಕಂಡುಬಂದವು. ಆದಿಚಾರಿತ್ರಿಕ (ವಾಕಾಟಕ) ವಸತಿನೆಲೆಯ ಉತ್ಖನನದಲ್ಲಿ ತಯಾರಿಕೆಯ ವಿವಿಧ ಹಂತದಲ್ಲಿರುವ ಅರೆಪ್ರಶಸ್ತ ಮಣಿಗಳು ವಿಪುಲವಾಗಿದ್ದವು. (ಆರ್‌ಕೆ.)

**ಮಳಖೇಡ:** ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿರುವ ಐತಿಹಾಸಿಕ ಗ್ರಾಮ. ರಾಷ್ಟ್ರಕೂಟ ಸಾಮ್ರಾಜ್ಯದ ರಾಜಧಾನಿಯಾಗಿದ್ದ (ಮಾನ್ಯಖೇಟ) ಹೆಗ್ಗಳಿಕೆ ಇದರದು. ಭೀಮಾ ನದಿಯ ಉಪನದಿಯಾದ ಕಾಗಿಣದ ಎಡದಂಡೆಯ ಮೇಲಿದೆ. 1968 ರಲ್ಲಿ ಈ ಹಳ್ಳಿಯ ಸುತ್ತಮುತ್ತ ಅ.ಸುಂದರ ಅವರು ನಡೆಸಿದ ಸರ್ವೇಕ್ಷಣೆಯಲ್ಲಿ ಮಧ್ಯ ಹಳೆಶಿಲಾಯುಗ, ನವ ಶಿಲಾಯುಗ, ಆದಿ ಚಾರಿತ್ರಿಕ ಕಾಲ ಮತ್ತು ಮಧ್ಯಯುಗೀನ ಕಾಲದ ಅವಶೇಷಗಳು ಕಂಡುಬಂದಿವೆ.

ಕಾಗಿಣ ನದಿಯ ತಳದಲ್ಲಿ ಮತ್ತು ಎಡದಂಡೆಯ ಮೇಲೆ ಮಧ್ಯ ಹಳೆಶಿಲಾಯುಗದ ಹೆರೆಚಕ್ಕೆ ಮತ್ತು ಮೊನೆಗಳು ಕಂಡುಬಂದವು. ಇವು ಚರ್ಟ್‌ಯುಕ್ತ ಜಾಸ್ಪರ್ ಕಲ್ಲಿನಿಂದ ಮಾಡಿದ ಉಪಕರಣಗಳು. ಇದೇ ದಂಡೆಯ ಮೇಲೆ ಉತ್ತರಕ್ಕಿರುವ ದುಗ್ಗಮ್ಮನ ಅಣಿ ಎಂಬ ಹೆಸರಿನ ಏರು ದಿಣ್ಣೆಯಲ್ಲಿ ಅಲಗಿನಂತಹ ಚಕ್ಕೆಗಳೂ ಕೊಳವೆಯಾಕಾರದ ಮೂಲಶಿಲೆಯ ತಿರುಳೂ ದೊರೆತಿವೆ. ಕಾಗಿಣ ನದಿಯ ಬಲದಂಡೆಯ ಮೇಲೆ ದುಗ್ಗಮ್ಮನ ಅಣಿಯ ಎದುರಿಗೆ ಇರುವ ಸಮಖೇಡ ಎಂಬ ಸ್ಥಳದಲ್ಲಿ ಬೂದುಬಣ್ಣದ ಮಡಕೆ ಚೂರೊಂದು ಸಿಕ್ಕಿದ್ದು ಇದು ನವ ಶಿಲಾಯುಗದ ಮಣ್ಪಾತ್ರೆಯ ಲಕ್ಷಣಗಳನ್ನು ಹೊಂದಿದೆ. (ಎ.ಎಸ್.)

**ಮಾಂಟೆಗೋ–ಚೆಲ್ಮ್ಸ್‌ಫರ್ಡ್ ಶಿಕ್ಷಣ ಸುಧಾರಣೆ:** ಭಾರತೀಯರ ಆಡಳಿತಕ್ಕೆ ವರ್ಗಾಯಿಸಬಹುದಾದ ವಿಷಯಗಳನ್ನು ನಿರ್ಧರಿಸಲು ಆಧಾರಮಾಡಿಕೊಳ್ಳ ಬೇಕಾದ ತತ್ತ್ವಗಳನ್ನು ಕುರಿತು ಇಂಗ್ಲೆಂಡಿನ ರಾಜ್ಯ ಸಚಿವರಾಗಿದ್ದ ಮಾಂಟೆಗೋ ಮತ್ತು ಭಾರತದ ಗವರ್ನರ್ ಜನರಲ್ ಆಗಿದ್ದ ಚೆಲ್ಮ್ಸ್‌ಫರ್ಡ್ ಇವರಿಬ್ಬರು 1919ರಲ್ಲಿ ಸಲ್ಲಿಸಿದ ವರದಿ. ಇದನ್ನು ಆಧರಿಸಿ ಶಿಕ್ಷಣವನ್ನು ವರ್ಗಾವಣೆ ಪಟ್ಟಿಯಲ್ಲಿ ಸೇರಿಸಲಾಯಿತು. ಇದರ ಫಲವಾಗಿ ಆಂಗ್ಲೋ ಇಂಡಿಯನ್ನರು ಮತ್ತು ಯುರೋಪಿಯನ್ನರು ತಮ್ಮ ಹಿತಕ್ಕೆ ಧಕ್ಕೆ ಬರುವುದೆಂದು ಭಾವಿಸಿ ತಮ್ಮ ಶಿಕ್ಷಣವನ್ನು ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು ಇಲ್ಲವೆ ರಾಜ್ಯಸರ್ಕಾರ ಕಾಯ್ದಿರಿಸಿದ ವಿಷಯವೆಂದು ಪರಿಗಣಿಸಬೇಕು ಎಂದು ಅಹವಾಲು ಕೊಟ್ಟರು. ಆ ಬಗ್ಗೆ ಪ್ರಾಂತೀಯ ಸರ್ಕಾರಗಳಲ್ಲಿ ಒಮ್ಮತವಿರಲಿಲ್ಲ. ಉನ್ನತ ಶಿಕ್ಷಣವನ್ನು ಯುರೋಪಿಯನ್ನರ ಇಡೀ ಶಿಕ್ಷಣವನ್ನೂ ರಕ್ಷಿತಸೂಚಿಯಲ್ಲಿ ಸೇರಿಸಬೇಕೆಂದು ಬಂಗಾಲ ಸೂಚಿಸಿತು. ಇಡೀ ಶಿಕ್ಷಣವನ್ನು ಪ್ರಾಂತ್ಯಗಳಿಗೆ ವರ್ಗಾಯಿಸಬೇಕೆಂದು ಸಂಯುಕ್ತ ಪ್ರಾಂತ ಸೂಚಿಸಿತು. ಬಿಹಾರ್ ಮತ್ತು ಒರಿಸ್ಸ ಸರ್ಕಾರಗಳು ಪ್ರೌಢ, ಉನ್ನತ ಮತ್ತು ತಾಂತ್ರಿಕ ಶಿಕ್ಷಣಗಳನ್ನು ವರ್ಗಾಯಿಸುವುದನ್ನು ವಿರೋಧಿಸಿದವು. ಪಂಜಾಬ್ ತನ್ನ ಅಭಿಪ್ರಾಯವನ್ನು ಕಾಯ್ದಿರಿಸಿಕೊಂಡಿತು. ಅಸ್ಸಾಂ ಉನ್ನತ ಶಿಕ್ಷಣದ ವರ್ಗಾವಣೆಯನ್ನು ವಿರೋಧಿಸಿತು. ಮದ್ರಾಸು ಶಿಕ್ಷಣಶಾಖೆಯ ವರ್ಗಾವಣೆಯನ್ನೇ ವಿರೋಧಿಸಿತು. ಹೀಗೆ ಪ್ರಾಂತಗಳ ಭಿನ್ನಾಭಿಪ್ರಾಯಗಳ ಫಲವಾಗಿ ಮೇಲಿನ ಸುಧಾರಣೆ ಆಚರಣೆಗೆ ಬರುವುದು ನಿಧಾನವಾಯಿತು. ಕಡೆಗೆ ಭಾರತ ಸರ್ಕಾರದ ಬಂಗಾಲದ ಅಭಿಪ್ರಾಯಕ್ಕೆ ಬಲುಮಟ್ಟಿಗೆ ಒಪ್ಪಿಗೆ ನೀಡಿ ಕೆಲವು ರಕ್ಷಣೆಗಳೊಡನೆ ಇಡೀ ಶಿಕ್ಷಣವನ್ನು ಪ್ರಾಂತ ಸರ್ಕಾರಗಳಿಗೆ ವರ್ಗಾಯಿಸಿತು. ಹಾಗೆ ರಕ್ಷಿತವೆಂದು ಸೂಚಿಸಿದ ಅಂಶಗಳು ಹೀಗಿವೆ:

1. ಬನಾರಸ್ ಹಿಂದು ವಿಶ್ವವಿದ್ಯಾಲಯವನ್ನು ಮತ್ತು ಗವರ್ನರ್ ಜನರಲ್ ಇನ್–ಕೌನ್ಸಿಲ್ ಅಖಿಲ ಭಾರತೀಯವೆಂದು ಸೂಚಿಸುವ ಇತರ ವಿಶ್ವವಿದ್ಯಾಲಯಗಳನ್ನು ಭಾರತ ಸರ್ಕಾರವೇ ನೋಡಿಕೊಳ್ಳುವುದು.

2. ಭಾರತದ ಅರಸುಕುಮಾರರ ಕಾಲೇಜುಗಳು. ಸೈನಿಕರಿಗೂ ಸರ್ಕಾರ ಅಧಿಕಾರಿಗಳ ಮಕ್ಕಳಿಗೂ ಏರ್ಪಡಿಸಿರುವ ಶಿಕ್ಷಣ ಸಂಸ್ಥೆಗಳು ಸರ್ಕಾರದ ನೇರ ನಿಯಂತ್ರಣದಲ್ಲಿರಬೇಕಾದ್ದರಿಂದ ಅವು ವರ್ಗಾವಣೆಯಿಂದ ವಿನಾಯಿತಿ ಪಡೆಯುತ್ತವೆ.

3. ಆಂಗ್ಲೋ ಇಂಡಿಯನ್ನರ ಮತ್ತು ಯುರೋಪಿಯನ್ನರ ಶಿಕ್ಷಣಕ್ಕಿರುವ ಸಂಸ್ಥೆಗಳು ಪ್ರಾಂತೀಯ ಆಡಳಿತಕ್ಕೆ ಸೇರಿದರೂ ರಕ್ಷಿತ ವಿಷಯಗಳೆಂದು ಭಾವಿಸಲಾಗುತ್ತದೆ.

4. ಕಲ್ಕತ್ತ ವಿಶ್ವವಿದ್ಯಾಲಯಕ್ಕೂ ಬಂಗಾಲದ ಪ್ರೌಢಶಿಕ್ಷಣದ ಪುನರ್ವ್ಯವಸ್ಥೆಗೂ ಸೇರಿದ ವಿಷಯಗಳ ಬಗ್ಗೆ (ಪುನರ್ವ್ಯವಸ್ಥೆಯ ಅನಂತರ ಐದು ವರ್ಷಗಳ ಪರ್ಯಂತ ಮಾತ್ರ) ಶಾಸನ ಮಾಡುವ ಅಧಿಕಾರ ಕೇಂದ್ರ ಶಾಸನಸಭೆಗೆ ಸೇರಿರುತ್ತದೆ.

ಮೇಲಿನ ವಿವರಣೆಯಿಂದ ಶಿಕ್ಷಣ ಭಾಗಶಃ ಅಖಿಲ ಭಾರತವೂ ಭಾಗಶಃ ರಕ್ಷಿತವೂ ಭಾಗಶಃ ಮಿತಿಗಳೊಡನೆ ವರ್ಗಾಯಿಸಿದ್ದೂ ಭಾಗಶಃ ಮಿತಿಯಿಲ್ಲದೆ ವರ್ಗಾಯಿಸಿದ್ದೂ ಆಗಿ ಪರಿಣಮಿಸಿತು. ಹೀಗಾಗಲು ಭಿನ್ನರೀತಿಯ ಅಭಿಪ್ರಾಯಗಳಿಗೆ ಮನ್ನಣೆ ನೀಡಲು ಭಾರತ ಸರ್ಕಾರ ನಡೆಸಿದ ಯತ್ನವೇ ಕಾರಣ. ಮಾಂಟೆಗೋ–ಚೆಲ್ಮ್ಸ್‌ಫರ್ಡ್ ವರದಿಯನ್ನು ಆಧಾರಮಾಡಿಕೊಂಡು ಭಾರತ ಸರ್ಕಾರ ರೂಪಿಸಿದ ಸ್ವರೂಪದಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ 1921ರಲ್ಲಿ ಅದಕ್ಕೆ ಅನುಮೋದನೆ ನೀಡಿದ ಮೇಲೆ ಇತರ ಕೆಲವು ಬಾಬುಗಳಂತೆ ಶಿಕ್ಷಣವೂ ಪ್ರಾಂತೀಯ ಸರ್ಕಾರಗಳ ಆಡಳಿತಕ್ಕೆ ಬಂತು. ಈ ದ್ವಿತಂತ್ರ ಆಡಳಿತ ಆರಂಭವಾದೊಡನೆ ಕೇಂದ್ರ ಸರ್ಕಾರ ಶಿಕ್ಷಣಕ್ಕೆ ಹಣಕೊಡುವುದನ್ನು ನಿಲ್ಲಿಸಿತು. ಪ್ರಾಂತೀಯ ಸರ್ಕಾರಕ್ಕೆ ಆದಾಯ ಮೂಲ ಅಷ್ಟಾಗಿ ಇರಲಿಲ್ಲ. ಅಲ್ಲದೆ ಶಿಕ್ಷಣದ ಕೆಲವು ಅಂಶಗಳ ಬಗ್ಗೆ ಪ್ರಾಂತೀಯ ಸರ್ಕಾರ ಕೈಹಾಕುವ ಹಾಗಿರಲಿಲ್ಲ. ಜೊತೆಗೆ ಶಿಕ್ಷಣಕ್ಕೆ ಉನ್ನತ ಸ್ಥಾನದಲ್ಲಿದ್ದ ಐ. ಸಿ. ಎಸ್. ಅಧಿಕಾರಿಗಳು ಪ್ರಾಂತೀಯ ಶಿಕ್ಷಣಸಚಿವರೊಡನೆ ಸಹಕರಿಸುತ್ತಿರಲಿಲ್ಲ. ಅವರು ಲಂಡನ್ನಿನ ಭಾರತದ ರಾಜ್ಯ ಸಚಿವರಿಗೆ ನೇರವಾಗಿ ಹೊಣೆಗಾರರಾಗಿದ್ದರು. ಇಷ್ಟೆಲ್ಲ ಅವ್ಯವಸ್ಥೆಗೆ ಸಿಕ್ಕಿದ ಭಾರತೀಯರ ಆಡಳಿತಕ್ಕೆ ಬಂದರೂ ಪ್ರಗತಿ ಸಾಧಿಸದಾದುದು ಸ್ವಾಭಾವಿಕ. ಈ ಸುಧಾರಣೆಯಿಂದ ಪ್ರಾಂತೀಯ ಮಂಡಳಿಗಳ ಮಂತ್ರಿಗಳ ಅಧೀನಕ್ಕೆ ಶಿಕ್ಷಣ ಇಲಾಖೆಯನ್ನು ಒಪ್ಪಿಸಲಾಯಿತು. ಆದರೆ ವಿದ್ಯಾಸಂಸ್ಥೆಗಳಿಗೆ ಬರುತ್ತಿದ್ದ ಧನಸಹಾಯ ನಿಂತಿದ್ದರಿಂದ ಈ ಅವಧಿಯಲ್ಲಿ ಆರ್ಥಿಕ ಪರಿಸ್ಥಿತಿಯ ದುಸ್ಥಿತಿಯಿಂದಾಗಿ ಶಿಕ್ಷಣದ ಪ್ರಗತಿಗೆ ಕಾರ್ಯಕ್ರಮಗಳನ್ನು ರೂಪಿಸುವುದು ಕಷ್ಟವಾಯಿತು. (ಎನ್.ಎಸ್.ವಿ.)

**ಮಾಚುಪಿಚ್ಚು:** ಇಂಕ ಸಾಮ್ರಾಜ್ಯಕ್ಕೆ ಸೇರಿದ ಒಂದು ಸುಸಂರಕ್ಷಿತ ನಗರ; ದಕ್ಷಿಣ ಅಮೆರಿಕದ ಪೆರು ಪ್ರಾಂತ್ಯದಲ್ಲಿಯ ಕೂಸ್ಕೊ ಎಂಬ ಸ್ಥಳಕ್ಕೆ ವಾಯವ್ಯದಲ್ಲಿದೆ. ಕಡಿದಾದ


ಪ್ರಾಚೀನ ನಲೆ

ಪ್ರದೇಶದ ಮೇಲೆ ಸಾವಿರ ಅಡಿಗಳಿಗೂ ಮೀರಿದ ಎತ್ತರ. ಇಲ್ಲಿರುವ ಈ ನಗರ ಬಲುಮಟ್ಟಿಗೆ ದುರ್ಗಮವಾದುದು. ಈ ಕಾರಣದಿಂದಲೇ ಅದು ಸ್ಪಾನಿಷ್ ವೃತ್ತಾಂತಕಾರರಿಗೆ ಅಪರಿಚಿತವಾಗುಳಿಯಿತು. 1911ರಲ್ಲಿ ಹಿರಾಮ್ ಬಿಂಘಮ್ ಎಂಬಾತ ಈ ನಗರವನ್ನು ಅನ್ವೇಷಿಸಿದ.

ಕಲ್ಲುಕೆತ್ತನೆ ಕೆಲಸದ ಸೊಗಸಾದ ಉದಾಹರಣೆಗಳು ಇಲ್ಲಿ ಕಾಣಸಿಗುತ್ತವೆ. ಇಲ್ಲಿಯ ಕಟ್ಟಡಗಳಲ್ಲಿ ಮನೆ ಕಾಂಪೌಂಡುಗಳು, ದೇವಾಲಯಗಳು, ಗುಡಿಗಳು, ಕಲ್ಲಿನ ನೀರಬೋಗುಣಿಗಳ ಸಂಕೀರ್ಣ ವ್ಯವಸ್ಥೆ ಮುಂತಾದವು ಸೇರಿವೆ. ಈ ಭೂಪ್ರದೇಶದಲ್ಲಿಯ ಅಸಮತೆಯಿಂದಾಗಿ ಸಹಜವಾಗಿಯೇ ಹಲವೆಡೆ ಆವಶ್ಯಕವಾದ ಶಿಲಾ ಸೋಪಾನಗಳೂ ಇವೆ. (ಎಚ್.ಎಂ.ಎಸ್.ಆರ್.)

**ಮಾಪನ ಪದ್ಧತಿ:** ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತವಿದ್ದ ಸಾಂಪ್ರದಾಯಿಕ ಅಳತೆ ಪದ್ಧತಿ. ಬ್ರಿಟಿಷರು ಭಾರತಕ್ಕೆ ಬಂದಾಗ ಇಲ್ಲಿಯ ಜನಜೀವನ, ಕರ ಕಂದಾಯ ಪದ್ಧತಿಗಳನ್ನು ತಿಳಿದುಕೊಳ್ಳಲು ಮತ್ತು ಅದನ್ನು ತಮ್ಮ ಆಡಳಿತಕ್ಕೆ ಹೇಗೆ ಬಳಸಿಕೊಳ್ಳಬೇಕೆಂದು ತಿಳಿಯುವ ಪ್ರಯತ್ನ ಮಾಡಿದರು. ಕರ್ನಾಟಕದಲ್ಲಿ ಅಂತಹ ಪ್ರಯತ್ನದ ಫಲವಾಗಿ ಫ್ರಾನ್ಸಿಸ್ ಬುಕನನ್, ಥ್ಯಾಕರೆ, ಮನ್ರೋ, ಬೆಂಜಾಮಿನ್ ಹೈನ್ ಮೊದಲಾದವರು ಪ್ರಚಲಿತದಲ್ಲಿದ್ದ ಪದ್ಧತಿಯನ್ನು ತಮ್ಮ ಪದ್ಧತಿಯೊಂದಿಗೆ ಹೋಲಿಸಿ ದಾಖಲಿಸಿದ್ದಾರೆ. ಅದರಲ್ಲಿ ಅಳತೆ ಪದ್ಧತಿ ಪ್ರಮುಖವಾದುದು. ಅವರ ಕಲ್ಪನೆಯಲ್ಲಿ ಭಾರತೀಯ ಪದ್ಧತಿಗಳು ದೋಷಪೂರ್ಣವಾಗಿದ್ದವು. ಅವುಗಳಲ್ಲಿ ಏಕರೂಪತೆ ಸಾಧ್ಯವಿರಲಿಲ್ಲ. ಬುಕನನ್ ತನ್ನ ವರದಿಯಲ್ಲಿ ಗಾತ್ರ ಮಾಪನ ಊರಿಂದ ಊರಿಗೆ ಬೇರೆ ಇತ್ತೆಂಬುದನ್ನು ವಿವರವಾಗಿ ದಾಖಲಿಸಿದ್ದಾರೆ. ನಗರ ಪ್ರಾಂತ್ಯದಲ್ಲಿ 300 ಅಡಕೆಗಿಡ ನಾಟಿ ಸಾಮರ್ಥ್ಯ ಹೊಂದಿರುವ ಭೂಮಿಯನ್ನು ಶಾನುಭೋಗರು ತಮ್ಮ ಖಾತೆಯಲ್ಲಿ 100 ಗಿಡ ಎಂದು ಮಾತ್ರ ನಮೂದಿಸಿರುವುದನ್ನು ಉಲ್ಲೇಖಿಸಿ, ಇದು ಶಾನುಭೋಗರು ಸರ್ಕಾರಕ್ಕೆ ಮಾಡುತ್ತಿದ್ದ ವಂಚನೆ ಎಂದು ದಾಖಲಿಸಿದ್ದಾರೆ. ಬೆಂಜಮಿನ್ ಹೈನ್ ಮೈಸೂರು ಪ್ರಾಂತ್ಯದಲ್ಲಿ ಸೇರಿನಲ್ಲಿ ಕಾಳು ತುಂಬಿತುಳುಕುವಂತೆ ಅಳತೆ ಮಾಡುವದಕ್ಕೂ, ಕಂಠ ಮಟ್ಟಕ್ಕೆ ಅಳತೆ ಮಾಡುವುದಕ್ಕೂ ವ್ಯತ್ಯಾಸ ಇದ್ದು, ಕಂಠ ಮಟ್ಟಕ್ಕೆ ಅಳತೆ ಮಾಡುವುದರಿಂದ ತಾವು ಖರೀದಿಸುತ್ತಿದ್ದ ಧಾನ್ಯದಲ್ಲಿ ಮೋಸ ಆಗುತ್ತಿದೆಯೆಂದು ತಿಳಿದಿದ್ದರು.

ಭೂಮಿ ಅಳತೆ ಬಗ್ಗೆ ಬಾಂಬೆ ಗೆಝೆಟಿಯರಿನಲ್ಲಿ ಧಾರವಾಡ ಭಾಗದಲ್ಲಿ 9 ಕ್ಕೂ ಹೆಚ್ಚು ವಿವಿಧ ಅಳತೆಗಳಿದ್ದ ಬಗ್ಗೆ ಉಲ್ಲೇಖವಿದೆ. ಇದು ಗ್ರಾಮದಿಂದ ಗ್ರಾಮಕ್ಕೂ ಪ್ರಾಂತದಿಂದ ಪ್ರಾಂತಕ್ಕೂ ಬೇರೆಯಾಗಿದೆ. ತಮ್ಮ ಸರ್ವೆಕಾರ್ಯದಿಂದಾಗಿ ಈ ಭೂಮಿಗಳ ಸಮಾನ ಬ್ರಿಟಿಷ್ ಎಕರೆ ಮಾತ್ರ ಪಡೆಯಲು ಅನುಕೂಲವಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ. ಭಾರತೀಯ ಅಧ್ಯಯನಗಳು ಬ್ರಿಟಿಷ್ ಅಧ್ಯಯನ ಮಾದರಿಯ ಮುಂದುವರಿದ ಭಾಗವೇ ಆಗಿರುವುದರಿಂದ ಅನೇಕ ವಿದ್ವಾಂಸರು ಇದೇ ಅಭಿಪ್ರಾಯ ಹೊಂದಿದ್ದಾರೆ.

ವಿಶ್ವಕೋಶದಂತಹ ಪ್ರಾಚೀನ ಗ್ರಂಥಗಳಾದ ಕಲ್ಯಾಣ ಚಾಳುಕ್ಯ ಸೋಮೇಶ್ವರ ವಿರಚಿತ ಮಾನಸೋಲ್ಲಾಸ ಮತ್ತು ಕೆಳದಿ ಬಸವರಾಜ ರಚಿಸಿದ ಶಿವತತ್ವರತ್ನಾಕರ ಕೆಲವು ವಿಸ್ಮಯಗಳನ್ನು ತಿಳಿಸುತ್ತವೆ. ಅವುಗಳಲ್ಲಿ ಅಳತೆಗೂ ಸಂಬಂಧಿಸಿದ ಮಾಹಿತಿ ಇದೆ. ಕರ್ನಾಟಕದಲ್ಲೂ ಗಣಿತಶಾಸ್ತ್ರಜ್ಞರು ಇದ್ದರು. ರಾಷ್ಟ್ರಕೂಟರ ನೃಪತುಂಗನ ಕಾಲದ ಮಹಾವೀರಾಚಾರ್ಯ ಗಣಿತ ಸಾರಸಂಗ್ರಹ ಕೃತಿ ರಚಿಸಿದ್ದಾನೆ. ಹೊಯ್ಸಳರ ಕಾಲದಲ್ಲಿ ರಾಜಾದಿತ್ಯ ವ್ಯವಹಾರ ಗಣಿತ ಮತ್ತು ವಿಜಯನಗರ ಕಾಲದಲ್ಲಿ ತಿಮ್ಮರಸ ಕ್ಷೇತ್ರ ಗಣಿತ ಕೃತಿಗಳನ್ನು ರಚಿಸಿದ್ದಾರೆ. ಅಂದಿನ ಸಾಹಿತ್ಯದಲ್ಲಿ ಕೂಡಾ ಅಳತೆ ಪದ್ಧತಿಯ ಇಣುಕು ನೋಟಗಳನ್ನು ಕಾಣಬಹುದಾಗಿದೆ. ವ್ಯಾಪಾರದ ಗಾತ್ರ ಮಾಪನದಲ್ಲಿ ನಡೆಯುತ್ತಿದ್ದ ವಂಚನೆಯನ್ನು ಸೆಟ್ಟಿಯ ಬಳ್ಳ ಕಿರಿದು ಎಂಬ ಗಾದೆಯ ಮೂಲಕ ಉದಾಹರಿಸಿರುವುದನ್ನು ನೋಡಬಹುದು.

ಅಳತೆ ಎಂಬುದು ಒಂದನ್ನೊಂದು ಹೋಲಿಸುವ ಪ್ರಕ್ರಿಯೆ. ಒಂದು ವಸ್ತು ಇನ್ನೊಂದಕ್ಕಿಂತ ಹೇಗೆ ಭಿನ್ನ, ಉದ್ದವೋ ಗಿಡ್ಡವೋ, ಭಾರವೋ ಹಗುರವೋ, ಬಿಸಿಯೋ ತಣ್ಣಗೋ, ಗಾತ್ರದಲ್ಲಿ ಹಿಗ್ಗಿದೆಯೋ ಕುಗ್ಗಿದೆಯೋ ಇತ್ಯಾದಿ ಹೋಲಿಕೆಯಾಗಿದೆ. ಹೋಲಿಸಲ್ಪಡುವ ಪ್ರಮಾಣವನ್ನು ಮೂಲ ಪ್ರಮಾಣವೆಂದು ಪರಿಗಣಿಸಿ ವಸ್ತುವಿನ ಮಾಪನ ನಿರ್ಧರಿಸಲಾಗುತ್ತದೆ. ಮಾಪನವೆಂಬುದು ನಿರ್ದಿಷ್ಟ ಪ್ರಮಾಣದ ಗುಣಕ ಅಥವಾ ಭಾಗಕ ಅಂಶ. ಸಾಮಾನ್ಯ ಒಪ್ಪಿತ ಪ್ರಮಾಣಗಳು ಮತ್ತು ಅವುಗಳ ಪ್ರವರ್ತನಾ ಕೋಷ್ಟಕ ಇಂದು ಲಭ್ಯವಿದೆ. ಫುಟ್–ಪೌಂಡ್ ಪದ್ಧತಿಯು ಬ್ರಿಟಿಷರ ಕಾಲದಲಿ, ಮೆಟ್ರಿಕ್ ಪದ್ಧತಿ ಇಂದಿನ ಕಾಲದಲ್ಲಿ, ಎಸ್.ಐ. ಪದ್ಧತಿಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾರಿಯಲಿವೆ.

ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ಅಳತೆ ಪದ್ಧತಿ ಬ್ರಿಟಿಷರು ತಿಳಿದಿದ್ದಂತೆ ಗೊಂದಲಮಯವಾಗಿರಲಿಲ್ಲ. ಅದನ್ನು ಜನಸಾಮಾನ್ಯರು ಯಾವುದೇ ತೊಂದರೆ ಇಲ್ಲದೆ ಬಳಸುತ್ತಿದ್ದರೆಂಬುದನ್ನು ಶಾಸನಾಧಾರಗಳು ತೋರಿಸಿಕೊಡುತ್ತವೆ. ಕರ್ನಾಟಕದಲ್ಲಿ ಅನೇಕ ಅಳತೆ ಕೋಲುಗಳಿದ್ದವು. ಇವು ಭೂಮಿ ಅಳತೆಗಾಗಲೀ ಅಥವಾ ದೇವಾಲಯ ಹಾಗೂ ಇತರ ಕಟ್ಟಡಗಳ ನಿರ್ಮಾಣಕ್ಕಾಗಲಿ ಬಳಸಲ್ಪಡುತ್ತಿದ್ದವು. 16ನೆಯ ಶತಮಾನದಲ್ಲಿ ಪೆನುಗೊಂಡೆಯ ಸಮೀಪದಲ್ಲಿರುವ ಕಂಭಂ ಎಂಬ ಊರಿನ ಗಣಿತಶಾಸ್ತ್ರಜ್ಞ ತಿಮ್ಮರಸ ದೇಶ ದೇಶಕ್ಕೆ ತಕ್ಕ ಹಾಗೆ ಗಳೆಗಳಂ ತಿಳಿದುಕೊಂಬುವುದು ಎಂದಿದ್ದಾನೆ. ಕರ್ನಾಟಕದಲ್ಲಿ 100 ಕ್ಕೂ ಹೆಚ್ಚು ಅಳತೆ ಕೋಲುಗಳಿರುವುದು ಶಾಸನಾಧಾರಗಳಿಂದ ತಿಳಿಯುತ್ತದೆ ಮತ್ತು ಮೇಲಿನ ಹೇಳಿಕೆಯನ್ನು ಈ ಸಾಕ್ಷಿ ಪುಷ್ಟೀಕರಿಸುತ್ತದೆ. ಪ್ರಚಲಿತ ಸಮಕಾಲೀನ ಅಳತೆ ಕೋಲುಗಳ ಪ್ರತ್ಯಕ್ಷ ಪ್ರಮಾಣಗಳು ಪ್ರಾಚೀನ ದೇವಾಲಯಗಳ ಗೋಡೆಗಳ ಮೇಲೆ ಇಂದಿಗೂ ಕಾಣಸಿಗುತ್ತವೆ. ಕುರುಗೋಡು, ಶ್ರವಣಬೆಳಗೊಳ, ತಾಳಗುಂದ, ಡಂಬಳ, ತೀರ್ಥ, ಕೋಟಿಪುರ, ಬೇಲೂರು, ಎಲೆ ಬೇತೂರು, ಬಾಗಳಿ, ಅಮೃತಾಪುರ, ಗಂಡಸಿ, ಕಲಕೇರಿ, ಶಿರಸಗಿ, ಹಳೇಬೀಡು, ಮೂಗೂರು, ಹೊನ್ನವಳ್ಳಿ, ಹೊಸಗುಂದ, ಗೂಳೂರು, ಜೋಡಿ ಮತ್ತಿಗೋಡು, ಕೆಳದಿ, ಭಾಗಮಂಡಲ ಮುಂತಾದೆಡೆ ಇಂಥ ಪ್ರತ್ಯಕ್ಷ ಪ್ರಮಾಣಗಳು ಲಭ್ಯವಾಗಿವೆ.

ಮೂರ್ತಿ ನಿರ್ಮಾಣದಲ್ಲಿ ಅಳತೆಯನ್ನು ಬಳಸಿರುವ ಎರಡು ಉದಾಹರಣೆಗಳು ದೊರಕಿವೆ. ಶ್ರವಣಬೆಳಗೊಳದ ಗೊಮ್ಮಟಮೂರ್ತಿ ಪಾದದಡಿ ಇರುವ ಅಳತೆ ಪಟ್ಟಿಯಿಂದ, ಮೂರ್ತಿಯ ತಾಲಮಾನವು (ಮುಖದ ಹಣೆಯ ಕೂದಲ ತುದಿಯಿಂದ ಗದ್ದದ ಕೆಳ ಅಂಚಿನವರೆಗಿನ ಪ್ರಮಾಣ) ಅಲ್ಲಿಯ ಅಳತೆ ಪಟ್ಟಿಯ ಎರಡೂವರೆ ಪಟ್ಟು ಎಂದು ಸಿದ್ಧಮಾಡಬಹುದಾಗಿದ್ದು, ವಿಗ್ರಹವು ಸಪ್ತತಾಲ ಪ್ರಮಾಣದಲ್ಲಿ ಕೆತ್ತನೆ ಆಗಿರುವುದನ್ನು ಸೂಚಿಸುತ್ತದೆ. ಜಾವಗಲ್ಲು ಲಕ್ಷ್ಮೀನರಸಿಂಹ ದೇವಾಲಯದ ಹೊರಗೋಡೆ ಭಿತ್ತಿಯ ದಕ್ಷಿಣ ಭಾಗದಲ್ಲಿಯ ಶ್ರೀಧರ ವಿಗ್ರಹದಲ್ಲಿ ಶಿಲ್ಪಿ ಮಲ್ಲಿತಮ್ಮ ನವತಾಲ ಪ್ರಮಾಣವನ್ನು ಬಳಸಿರುವುದನ್ನು ಕಾಣಬಹುದು.

ಅಳತೆಗಳಲ್ಲಿ ಅಂಗುಲ ಮೂಲ ಪ್ರಮಾಣ. ಪರಮಾಣುವಿನ ಕನಿಷ್ಠ ಪ್ರಮಾಣವನ್ನು ಆಧರಿಸಿ ಎಂಟರ ಗುಣಕಗಳಲ್ಲಿ ಕ್ರಮವಾಗಿ ವಾಲಾಗ್ರ, ಲಿಕ್ಷಾ, ಯೂಕ, ಯವ ಮತ್ತು ಅಂಗುಲಗಳನ್ನು ಪಡೆಯಬಹುದು. ಎರಡು ಅಂಗುಲ ಪ್ರಮಾಣ ಗೋಲಕ (ಕಲಾ) ಮೂರು, ನಾಲ್ಕು, ಹನ್ನೆರಡು ಮತ್ತು ಇಪ್ಪತ್ತನಾಲ್ಕು ಅಂಗುಲಗಳ ಪ್ರಮಾಣ ಕ್ರಮವಾಗಿ ಅಧ್ಯರ್ಧಕ, ಭಾಗ, ವಿತಸ್ತಿ ಮತ್ತು ಅರತ್ನಿ. ಮೂವತ್ತೆರಡು ಅಂಗುಲ ಒಂದು ಹಸ್ತ ಪ್ರಮಾಣವಾದರೆ ಎಂಟು ಹಸ್ತ ಒಂದು ಗಳೆ ಎನ್ನಿಸುವುದು. ನಾಗವರ್ಮನ ಅಭಿಧಾನ ವಸ್ತುಕೋಶ ಗ್ರಂಥದಲ್ಲಿ ದೇಹವಯವಾದಿ ವರ್ಗಗಳಿಂದ ಪಡೆಯುವ ಗೇಣು, ತಾಳ, ವಿತಸ್ತಿ, ಗೋಕರ್ಣ, ಅರತ್ನೀ, ಮೊಳ, ರತ್ನಿ, ಪುರುಷ, ವ್ಯಾಮಗಳ ವಿವರಗಳಿವೆ. ಸಾಂಪ್ರದಾಯಿಕ ಸರಳ ಮಾಪನಗಳಾದ ಮೆಟ್ಟು, ಪಾದ, ಹೆಜ್ಜೆ, ಗಳೆ, ಗಜ, ಹರಿದಾರಿ, ದಂಡ, ಕ್ರೋಶ ಮತ್ತು ಯೋಜನೆಗಳು ಬಳಕೆಯಲ್ಲಿದ್ದವು.




ಅಕ್ಬರನ ಭೂ ಕಂದಾಯ ಪದ್ಧತಿಯನ್ನು ಎಲ್ಲೆಡೆ ಉಲ್ಲೇಖಿಸಲಾಗುತ್ತದೆ. ಕರ್ನಾಟಕದಲ್ಲಿ ಈ ರೀತಿಯ ಕಂದಾಯ ನಿಗದಿಯ ಪ್ರಯತ್ನ ಕಲ್ಯಾಣ ಚಾಳುಕ್ಯರ ಕಾಲದಲ್ಲೇ ಜಾರಿಗೆ ಬಂದಿತ್ತು. ಚಾಳುಕ್ಯ ಯುವರಾಜ ದಶವರ್ಮದೇವನು ಬಿಜಾಪುರ ಜಿಲ್ಲೆಯ ಕಾರಜೋಳ ಗ್ರಾಮದ 996ರ ಶಾಸನದಲ್ಲಿ ಉಲ್ಲೇಖಿತವಾಗಿ ರುವಂತೆ ಕಾಣುತ್ತದೆ. ಮನ್ಮಥ ಸಂವತ್ಸರದಲ್ಲಿ ಬೀಜ ಬಿತ್ತಿ ದುರ್ಮುಖಿ ಸಂವತ್ಸರದಲ್ಲಿ (ಮುಂದಿನ ವರ್ಷ) ಉತ್ಪನ್ನವಾದ ಬೆಳೆಯನ್ನು ನೋಡಿ ಭೂಮಿಯನ್ನು ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂದು ವರ್ಗೀಕರಿಸಿರುವುದನ್ನು ಕಾಣಬಹುದು.

ಭೂಮಿಗಳನ್ನು ಗದ್ದೆ, ಬೆದ್ದಲು, ತೋಟ, ತುಡಿಕೆ, ಕೆಂಗಾಳು, ಎರೆ, ಕಲ್ಲು ಮೊರಡಿ ಮುಂತಾಗಿ ವಿಂಗಡಿಸಿರುವುದನ್ನು ಕಾಣಬಹುದು. ಭೂಮಿಯ ವಿಸ್ತಾರದ ಪ್ರಮುಖ ಮಾಪನ ಮತ್ತರು. ಇದನ್ನು ಸಂಸ್ಕೃತದಲ್ಲಿ ನಿವರ್ತನ ಎಂದು ಕರೆಯಲಾಗಿತ್ತು. ಆದಿ ಕದಂಬರ ಶಾಸನದಲ್ಲಿ ಮಾಪನ ಉಪಾಂಗ ಕಂಭ. ಇದನ್ನು ಕಮ್ಮ ಎಂದು ಕರೆಯಲಾಗಿದೆ. ಒಂದು ಚದರ ಗಳೆ ಅಳತೆಯ ವಿಸ್ತೀರ್ಣ ಪ್ರಮಾಣ ಕಂಭ. ಭೂಮಿಯ ಗುಣ ಮತ್ತು ನೀರಾವರಿ ಸೌಲಭ್ಯ ಆಧರಿಸಿ ಒಂದು ಮತ್ತರಿನ ಪ್ರಮಾಣದಲ್ಲಿರುವ ಕಮ್ಮಗಳನ್ನು ನಿರ್ಧರಿಸಲಾಗಿತ್ತು. ಇದು ಸಾಮಾನ್ಯವಾಗಿ 100, 200, 450, 900 ಹೀಗೆ ಇತ್ತು. ಇದಲ್ಲದೇ ಮಾರು, ಹಾಗ, ಬೇಳೆ, ವೀಸ ಹಾಗೂ ಮಾರುಕೂರಿಗೆ, ಭಿಘಾ, ಕಾಟಿ, ಪಾಂಡ್, ಚಾವಾರ್ ಎಂಬ ವಿಸ್ತೀರ್ಣ ಪ್ರಮಾಣಗಳು ಇದ್ದುವು. ಮಾರ ಹೊಲವೊಂದು ಮೂವತ್ತಾರು ಭಿಘಾ ಹೊಂದಿತ್ತು, ಈ ವಿಸ್ತೀರ್ಣಕ್ಕೆ ಎರಡೂವರೆ ಗಿದ್ದನ ಜೋಳ ಬಿತ್ತನೆ ಬೀಜ ಬೇಕಾಗುತ್ತದೆ ಇದರಲ್ಲಿ ನೂರಿಪ್ಪತ್ತು ಅಕಡಿ ಸಾಲುಗಳಿರುತ್ತವೆ ಹೀಗೆ ಒಂದೇ ವಿಸ್ತೀರ್ಣ ಪ್ರಮಾಣಕ್ಕೆ ಅನೇಕ ತಿಳುವಳಿಕೆಗಳಿದ್ದುವು.

ಬುಕನನ್ ವರದಿಯಂತೆ ನಗರ ಪ್ರಾಂತದ ಶಾನುಭೋಗರು ಸರ್ಕಾರಕ್ಕೆ ಮೋಸದ ಲೆಕ್ಕ ನೀಡಿರಲಿಲ್ಲ ಅದು ಅಂದಿನ ಪದ್ಧತಿಯಾಗಿತ್ತು. ತೋಟವೊಂದರಲ್ಲಿ ಕಂಡಹಾಗೆ ಸಸಿ, ಫಲ ನೀಡುವ ಮರ, ಮುದಿ ಮರ ಮತ್ತು ಕೆಲವು ಸತ್ತ ಮರ (ಖಾಲಿ ಚೌಕ) ಇರುತ್ತಿದ್ದುವು. ಅವುಗಳಲ್ಲಿ ಫಲ ನೀಡುವ ಮರಗಳ ಸಂಖ್ಯೆಯನ್ನು ಮಾತ್ರ ಕಂದಾಯ ನಿಗದಿಗೆ ಪರಿಗಣಿಸಲಾಗಿತ್ತು. ಹೀಗಾಗಿ ಒಂದು ತೋಟದಲ್ಲಿ 300 ಗಿಡಗಳಿದ್ದರೂ ಅವುಗಳಲ್ಲಿ ಫಲ ನೀಡುವ ಮರಗಳು 100 ಮಾತ್ರ. ರೈಸ್ ಅವರು ತೋಟಗಳ ಕಂದಾಯ ನಿಗದಿದಾಯ ಎಂಬ ಪದ್ಧತಿಯನ್ನು ಅನುಸರಿಸಿ ಮಾಡುತ್ತಿದ್ದ ಲೆಕ್ಕಾಚಾರವೆಂದೂ ಇದು ಸಾವಿರ ಮರಗಳ ಆದಾಯವನ್ನು ಅನುಸರಿಸಿ ಮಾಡಲಾಗುತ್ತಿತ್ತೆಂದು ಉಲ್ಲೇಖಿಸಿದ್ದಾರೆ. ಆದರೆ ಕವಲೇದುರ್ಗ ಮಠದಲ್ಲಿರುವ ಶಾಸನಗಳಿಂದ ಸ್ಪಷ್ಟವಾಗುವ ವಿಷಯವೇನೆಂದರೆ ಕಂದಾಯ ಪ್ರಮಾಣ ತೋಟಗಳ ಉತ್ಪನ್ನದ ಸಾವಿರದ ಒಂದನೆಯ ಭಾಗ ಆಗಿತ್ತು.

ಉತ್ಪನ್ನದ ಸಾವಿರದ ಒಂದನೇಯ ಭಾಗ ಸಾವಿರ ಮರಗಳ ಆದಾಯ ಎಂದು ಬ್ರಿಟಿಷರಿಂದ ತಪ್ಪಾಗಿ ತಿಳಿಯಲ್ಪಟ್ಟಿತ್ತು. ಗಾತ್ರ ಮಾಪನದಲ್ಲಿ ಖಂಡುಗ ಹೆಚ್ಚು ಪ್ರಮಾಣ ಹೊಂದಿತ್ತು. ಇದರ ಇನ್ನೊಂದು ಹೆಸರು ಸಲಗೆ. ನಲ್ವತ್ತು ಕಂಭ ವಿಸ್ತೀರ್ಣ ಭೂಮಿಯಲ್ಲಿ ಒಂದು ಸಲಗೆ ಪ್ರಮಾಣ ಬೀಜ ಬಿತ್ತಲಾಗಿತ್ತೆಂದು ಶಾಸನಾಧಾರ ತಿಳಿಸುತ್ತದೆ. ಇಪ್ಪತ್ತು ಕೊಳಗಗಳ ಪ್ರಮಾಣ ಒಂದು ಖಂಡುಗಕ್ಕೆ ಸಮಾನವಾಗಿತ್ತು. ಕೊಳಗ, ಬಳ್ಳ, ಮಾನ, ಸೊಲ್ಲಗೆ ಮತ್ತು ಗಿದ್ದ ಪ್ರಮಾಣಗಳು ಅನುಕ್ರಮವಾಗಿ ಹಿಂದಿನ ಪ್ರಮಾಣದ ನಾಲ್ಕನೆಯ ಒಂದು ಭಾಗವಾಗಿತ್ತು. ಇದಲ್ಲದೆ ಕುಡುಬ, ಪ್ರಸ್ತ, ಅಡಕ, ಚಿಟ್ಟೆ, ಸೊಳಸ, ಸೊಂಟಿಗೆ, ಕೊಡ, ಹಳಿಗೆ, ಮುಡೆ, ಗಿದ್ದನ, ಪಡಿ, ಪಲ್ಲ, ಸೇರು, ಸಿದ್ದಿಗೆ, ದಡಿಯ, ಮಣ ಮುಂತಾದ ಗಾತ್ರ ಪ್ರಮಾಣಗಳ ಬಳಕೆಯೂ ಇತ್ತು. ಬಳಕೆಯ ಕ್ರಮವನ್ನು ಅನುಸರಿಸಿ ಕೃಷ್ಣರಾಜ ಕೊಳಗ, ಸುಲ್ತಾನಿ ಕೊಳಗ, ಕರಾರು ಕೊಳಗ, ಸಿಕ್ಕ ಕೊಳಗ, ದೇವ ಗೊಳಗ, ಧರ್ಮಗೊಳಗ, ಮೇಟಿಗೊಳಗ, ಧೂಳಿಗೊಳಗ ಮುಂತಾಗಿ ವಿಂಗಡಿಸಿರುವುದನ್ನು ಕಾಣಬಹುದು.



24 ಅಂಗುಲ (ಗಜ) ಅಳತೆ ಕೋಲು
ಕೆಳದಿ ವೀರಭದ್ರ ದೇವಾಲಯ ಹಿಂಬದಿ ಭಿತ್ತಿ

ತೂಕ ಮಾಪನದಲ್ಲಿ ಗದ್ಯಾಣ ಮತ್ತು ಹಣ ಬಳಕೆಯನ್ನು ನಾಣ್ಯಗಳ ತೂಕದ ವಿಷಯವಾಗಿ ಕಾಣುತ್ತೇವೆ. ಒಂದು ಗದ್ಯಾಣದಲ್ಲಿ ಹತ್ತು ಹಣಗಳಿದ್ದವು. ಗದ್ಯಾಣ, ಹಾಗ, ಬೇಳೆ, ವೀಸ, ಗಿದ್ದಕಾಣಿ ಪ್ರಮಾಣಗಳು ಅನುಕ್ರಮವಾಗಿ ಹಿಂದಿನ ಪ್ರಮಾಣದ ನಾಲ್ಕನೆಯ ಒಂದು ಭಾಗವಾಗಿತ್ತು. ಇದಲ್ಲದೇ ಸುವರ್ಣ, ಕರ್ಷ, ಪಲ, ಬಿಸಿಗೆ, ತೊಲ ಮುಂತಾದ ತೂಕ ಪ್ರಮಾಣಗಳ ಬಳಕೆ ಇತ್ತು. ಸಮಯ ಮಾಪನ ದೈನಂದಿನ ಗ್ರಹಗಳ ಚಲನವಲನವನ್ನು ಅನುಸರಿಸಿ ಮಾಡಲಾಗಿತ್ತು. ಸೂರ್ಯೋದಯ ಸೂರ್ಯಾಸ್ತಗಳ ಅವಧಿಯನ್ನು ಗಳಿಗೆಮಂಟಪ, ಸಂಧ್ಯಾಮಂಟಪಗಳಲ್ಲಿ ಲೆಕ್ಕ ಮಾಡಲಾಗುತ್ತಿತ್ತು. ಗಳಿಗೆ, ಮುಹೂರ್ತ, ಜಾವ, ಜಾಮ, ದಿನ, ಪಕ್ಷ, ಮಾಸ, ಋತು, ವರ್ಷ, ಸಂವತ್ಸರ, ಯುಗ ಹೀಗೆ ಕಾಲಮಾನವನ್ನು ವಿಭಾಗಿಸಲಾಗಿತ್ತು. ಮೊದಲು ಚಾಂದ್ರಮಾನ ಪದ್ಧತಿ ಬಳಕೆಯಲ್ಲಿದ್ದು 6–7ನೇ ಶತಮಾನದಲ್ಲಿ ಸೌರಮಾನ ಪದ್ಧತಿ ಬಳಕೆಯಲ್ಲಿ ಬಂದಿತು. ನಕ್ಷತ್ರ ಸಂಚಾರ ರಾಶಿಗಳ ಸಂಚಾರವಾಗಿ ಗುರುತಿಸಲ್ಪಟ್ಟಿತು. ಇಂದಿನ ಪಂಚಾಂಗ ಮತ್ತು ಗ್ರಿಗೋರಿಯನ್ ಕ್ಯಾಲೆಂಡರ್ ಈ ಎರಡೂ ಪದ್ಧತಿಗಳ ಮಿಶ್ರಣ ಆಗಿದೆ.

1961ರ ಭೂಸುಧಾರಣೆ ಕಾಯಿದೆ ಇಂದು ಜಾರಿಗೆ ಬಂದಿರುವ ಒಂದು ಕಾನೂನು ಆಗಿದೆ. ಇದರಲ್ಲಿ ಇಂದು ಒಪ್ಪಲಾಗಿರುವ ವಿವಿಧ ಭೂಮಿಗಳ ಪರಿವರ್ತಕ ಹೀಗಿದೆ:

1 ಎಕರೆ ಎ ಅಥವಾ ಬಿ ವರ್ಗದ ಭೂಮಿ =2 ಎಕರೆ ಸಿ ವರ್ಗದ ಭೂಮಿ = 4 ಎಕರೆ ಡಿ ವರ್ಗದ ಭೂಮಿ

ಸರಿ ಸುಮಾರು ಇದೇ ರೀತಿಯ ಭೂಮಿಯ ವರ್ಗೀಕರಣ / ಪರಿವರ್ತನೆ 12ನೆಯ ಶತಮಾನದ ಆದಿ ಭಾಗದಲ್ಲಿ ಕರ್ನಾಟಕದಲ್ಲೇ ಇತ್ತು. ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಮತ್ತು ಕುಡಿತಿನಿ ಶಾಸನಗಳಲ್ಲಿಯ ಮಾಹಿತಿಯನ್ನು ಆಧರಿಸಿದ ಲೆಕ್ಕಾಚಾರ ಈ ರೀತಿಯ ಅಂಶಗಳನ್ನು ದೃಢಪಡಿಸುತ್ತವೆ.

ಒಟ್ಟಾರೆಯಾಗಿ ಬಹು ಅಳತೆ ಪದ್ಧತಿ ಕರ್ನಾಟಕದಲ್ಲಿದ್ದರೂ ಅದರಲ್ಲಿ ಯಾವುದೇ ಸಂದಿಗ್ಧತೆ ಇರಲಿಲ್ಲ. ಅಳತೆಯ ಪ್ರಮಾಣಗಳು ಏನೇ ಇದ್ದರೂ ಅವುಗಳಲ್ಲಿಯ ಪರಿವರ್ತಕದ ಪ್ರಮಾಣ ಒಂದೇ ಆಗಿತ್ತು. 24 ಅಂಗುಲಗಳ ಅಳತೆ ಪಟ್ಟಿಯ ಬಳಕೆ ಕರ್ನಾಟಕದಲ್ಲಿ ಸಾವಿರ ವರ್ಷಕ್ಕೂ ಹಿಂದಿನಿಂದ ಇತ್ತೆಂದು ಪ್ರತ್ಯಕ್ಷ ಪ್ರಮಾಣಗಳು ಸಾಕ್ಷಿಯಾಗಿವೆ. ಈ ಪಟ್ಟಿ ಶ್ರವಣಬೆಳ್ಗೊಳದ ಗೊಮ್ಮಟೇಶ್ವರ ಮೂರ್ತಿಯ ಪಾದದಡಿಯಲ್ಲಿ (981), ಬೇಲೂರ ಚೆನ್ನಕೇಶವ ದೇವಾಲಯದ ಅಧಿಷ್ಠಾನ ಪಟ್ಟಿಕೆಯಲ್ಲಿ (1117), ಕೆಳದಿ ವೀರಭದ್ರ ದೇವಾಲಯದ ಹಿಂಬದಿಯ ಗೋಡೆಯಲ್ಲಿ (1672–97) ಮತ್ತು ಭಾಗಮಂಡಲದ ಭಗಂಡೇಶ್ವರ ದೇವಾಲಯದ ಅಧಿಷ್ಠಾನ ಹಿಂಭಾಗದಲ್ಲಿ ಇವೆ. ಈ ಸಾಕ್ಷಿಗಳಿಂದ ಕರ್ನಾಟಕದಲ್ಲಿ ಮಾಪನ ಪದ್ಧತಿಯ ಅವಿಚ್ಛಿನ್ನ ಪರಂಪರೆ ಇರುವುದನ್ನು ಕಾಣಬಹುದು. (ಜಿ.ಎಬಿ.)

**ಮಾಪಿಳ್ಳ ಬಂಡಾಯ:** ಕೇರಳದ ಮಾಪಿಳ್ಳ ಸಮುದಾಯದವರು ನಡೆಸಿದ ಬಂಡಾಯ. ಟಿಪ್ಪುಸುಲ್ತಾನನಿಗೆ ಸೇರಿದ್ದ ಮಲಬಾರ್ 1792ರಲ್ಲಿ ನಡೆದ 3ನೆಯ ಆಂಗ್ಲೊ–ಮೈಸೂರು ಯುದ್ಧದ ಬಳಿಕ ಬ್ರಿಟಿಷರ ಕೈವಶವಾಯಿತು. ಅನಂತರ ಅದು ಮದರಾಸು ಸಂಸ್ಥಾನದ ಭಾಗವಾಗಿ ಸೇರ್ಪಡೆಯಾಯಿತು. ಬ್ರಿಟಿಷರಿಗೂ ಮುಂಚೆ ಜಾರಿಯಲ್ಲಿದ್ದ ಭೂಕಂದಾಯ ಪದ್ಧತಿಯಲ್ಲಿ ಭೂಮಾಲೀಕ (ಜೆನ್ನಿ), ಕನಕ್ಕರನ್ (ರಕ್ಷಕ) ಮತ್ತು ರೈತ – ಈ ಮೂವರೂ ಫಸಲನ್ನು ಸಮಾನವಾಗಿ ಹಂಚಿಕೊಳ್ಳುತ್ತಿದ್ದರು. ಅದರೆ ಬ್ರಿಟಿಷರ ಆಡಳಿತ ಆರಂಭವಾದ ಮೇಲೆ ಈ ಪದ್ಧತಿ ರದ್ದಾಯಿತು. ಭೂಮಾಲೀಕರು ಹೆಚ್ಚು ಪ್ರಬಲರಾದರು. ಕನಕ್ಕರನ್‌ಗಳು ಲೇವಾದೇವಿದಾರರಾದರು. ಈ ವ್ಯವಸ್ಥೆ ಮುಂದೆ ಹಲವು ಸಮಸ್ಯೆಗಳಿಗೆ ದಾರಿಮಾಡಿತು. ಇಲ್ಲಿನ ವ್ಯವಸ್ಥೆ ಮುನ್ರೊ ವ್ಯವಸ್ಥೆಗಿಂತ ಭಿನ್ನವಾಗಿತ್ತು. ಈ ವ್ಯವಸ್ಥೆಯಲ್ಲಿ ಮಾಲೀಕನಿಗೆ ಗೇಣಿದಾರ ರೈತರಿಂದ ತನಗೆ ಇಷ್ಟ ಬಂದಷ್ಟು ಬಾಡಿಗೆ ವಸೂಲು ಮಾಡುವ, ಹಣ ನೀಡದಿದ್ದರೆ ಅವರನ್ನು ಹೊರನೂಕುವ ಅವಕಾಶ ದೊರಕಿತು. ಪರಿಹಾರಕ್ಕೆ ಮನವಿ ಸಲ್ಲಿಸಲು ನಾಯರ್‌ಗಳಿಂದಲೇ ತುಂಬಿಹೋಗಿದ್ದ ನ್ಯಾಯಾಲಯದ ಮೇಲೆ ಗೇಣಿದಾರ ಮಾಪಿಳ್ಳಗಳಿಗೆ ನಂಬಿಕೆ. ವಿಶ್ವಾಸ ಉಳಿದಿರಲಿಲ್ಲ. ಈ ಹಿನ್ನೆಲೆಯಲ್ಲಿ ದೌರ್ಜನ್ಯಕ್ಕೆ ಒಳಗಾದ ಗೇಣಿದಾರರು ಮತ್ತು ಅವರ ಕೂಲಿಗಳು ಮಾಲೀಕರ ವಿರುದ್ಧ ದಂಗೆ ಎದ್ದರು. 19ನೆಯ ಶತಮಾನವೊಂದರಲ್ಲೆ ಇಂಥ 45 ದಂಗೆಗಳು ನಡೆದವು. ಹಿಂದು ಭೂಮಾಲೀಕರು ಮತ್ತು ಮುಸ್ಲಿಂ (ಮಾಪಿಳ್ಳೆ) ಗೇಣಿದಾರರೇ ಹೆಚ್ಚಿದ್ದ ದಕ್ಷಿಣ ಮಲಬಾರಿನ ಎರನಾಡ್ ಮತ್ತು ವಲ್ಲುವನಾಡ್ ತಾಲೂಕುಗಳಲ್ಲಿ ಹೆಚ್ಚು ದಂಗೆಗಳಾದವು.

ಈ ದಂಗೆಗಳ ಕಾರಣವನ್ನು ಕಂಡುಹಿಡಿಯುವ ಸಲುವಾಗಿ 1851ರಲ್ಲಿ ಟಿ.ಎಲ್.ಸ್ಟ್ರೇಂಜ್ ಎಂಬ ವಿಶೇಷ ಕಮಿಷನರೊಬ್ಬರನ್ನು ನೇಮಿಸಲಾಯಿತು. ನಿಜವಾದ ಕಾರಣ ತಿಳಿದುಬಂದರೂ ಆತ ದಂಗೆಗೆ ಕೆಲವು ಮುಸ್ಲಿಮ್ ಗುರುಗಳು ಸೃಷ್ಟಿಸಿದ ಧಾರ್ಮಿಕ ಆಕ್ರೋಶವೇ ಕಾರಣ ಎಂದು ವ್ಯಾಖ್ಯಾನಿಸಿದ. ಆತನ ಈ ಹೇಳಿಕೆಯಿಂದ ರೊಚ್ಚಿಗೆದ್ದ ಮುಸ್ಲಿಮರು 1851ರ ಆಗಸ್ಟ್‌ನಲ್ಲಿ ಕೊಟ್ಟುಪರಂಪತ್ ರಾಮುಮೆನನ್ ಎಂಬ ಭೂಮಾಲೀಕನನ್ನು ಕೊಂದುಹಾಕಿದರು. ರಾಮು ಮೆನನ್ ಎಂದು ಕರೆಯಲಾಗುತ್ತಿದ್ದ ಕಡಕ್ಕಟಿಲ್ ನಂಬೂದರಿ ಎಂಬ ಬ್ರಾಹ್ಮಣ ಭೂಮಾಲೀಕನೂ ಹತ್ಯೆಗೀಡಾದ. ಕೊಲ್ಲತ್ತೂರಿಗೆ ತೆರಳಿದ ದಂಗೆಕೋರರು ಅಲ್ಲೂ ಒಬ್ಬ ಭೂಮಾಲೀಕನನ್ನು ಕೊಂದರು. ಹತ್ಯೆಗೀಡಾದವರೆಲ್ಲ ಶ್ರೀಮಂತ ಭೂಮಾಲೀಕರಾಗಿದ್ದರು. ಶೋಷಣೆಯ ವಿರುದ್ಧ ದಂಗೆ ಏಳಲು ಮುಸ್ಲಿಮರಲ್ಲಿದ್ದ ಧಾರ್ಮಿಕ ನಂಬಿಕೆಗಳು ಅವರ ನೈತಿಕ ಶಕ್ತಿಯನ್ನು ಇನ್ನಷ್ಟು ಗಟ್ಟಿಗೊಳಿಸಿದವು. ಕೆಲಕಾಲದ ಬಳಿಕ ಅವರಿಗೊಬ್ಬ ನಾರಾಯಣ ಮೆನನ್ ಎಂಬ ನಾಯಕನ ನೇತೃತ್ವ ದೊರಕಿತು.

ಈ ದಂಗೆಯನ್ನು ಮಟ್ಟಹಾಕಲು ಸರ್ಕಾರ ಮಾಪ್ಲಾ ಕಾಯ್ದೆ ಮತ್ತು ಮಾಪ್ಲಾ ವಾರ್ ನೈವ್ಸ್ ಕಾಯ್ದೆಯನ್ನು ಜಾರಿಗೆ ತಂದಿತು. ಅದರ ಪ್ರಕಾರ ಸರ್ಕಾರ ತನ್ನಿಷ್ಟ ಬಂದಷ್ಟು ದಂಡ ವಿಧಿಸಬಹುದಾಗಿತ್ತು; ಆಸ್ತಿಯನ್ನು ಜಪ್ತಿ ಮಾಡಬಹುದಿತ್ತು. ಇಷ್ಟೆಲ್ಲಾ ಆದರೂ ದಂಗೆ ನಿಲ್ಲಲಿಲ್ಲ. ಅಂತಿಮವಾಗಿ 1887ರಲ್ಲಿ ಮಲಬಾರ್ ಪರಿಹಾರ ಕಾಯ್ದೆಯನ್ನು ಜಾರಿಗೊಳಿಸಲಾಯಿತು. 1900ರಲ್ಲಿ ಅದನ್ನು ತಿದ್ದುಪಡಿ ಮಾಡಲಾಯಿತು. ಹೊಲಗಳಿಂದ ರೈತರು ಹೊರಗಟ್ಟಲ್ಪಟ್ಟದ್ದರೆ ಯಾವುದೇ ಪರಿಹಾರವನ್ನು ಕೇಳುವ ಹಕ್ಕಿಲ್ಲದಿದ್ದುದರಿಂದ ದಕ್ಷಿಣ ಮಲಬಾರಿನ ಹಲವು ತಾಲೂಕುಗಳ ರೈತರು ತೀವ್ರ ತೊಂದರೆ ಅನುಭವಿಸುವಂತಾಯಿತು.

ದಕ್ಷಿಣ ಮಲಬಾರಿನಲ್ಲಿ ಮತ್ತೆ ದಂಗೆಗಳು ಪ್ರಾರಂಭವಾದವು. ಅಲ್ಲಿನ ಪೊಕತ್ತೂರು ಎಂಬ ಹಳ್ಳಿಯಲ್ಲಿ 2170 ಮಾಪಿಳ್ಳಗಳು ಮತ್ತು 993 ಹಿಂದುಗಳಿದ್ದರು. ಅಲ್ಲಿನ ಬಹುತೇಕ ಭೂಮಿಗೆ ನೀಲಂಬರ್ ರಾಜಾ ಎಂಬುವವನೇ ಮಾಲೀಕನಾಗಿದ್ದ. ಅವನ ಕೈಕೆಳಗೆ ಹಲವಾರು ಮುಸ್ಲಿಮರಿದ್ದರು. ಇದು ಮೊದಲು ಕೊಂಚ ಸಂಚಲನ ಸೃಷ್ಟಿಸಿ ದಂಗೆಗೆ ದಾರಿ ಮಾಡಿತು. ಹಿಂದುಗಳಿಗಿಂತ ಹೆಚ್ಚು ಒಗ್ಗಟ್ಟಿನಿಂದ ಕೂಡಿದ್ದ ಮುಸ್ಲಿಂ ಯುವ ಸಮುದಾಯವೇ ಹೆಚ್ಚಿದ್ದರಿಂದ ಬ್ರಿಟಿಷರು ಕೂಡ ಮಧ್ಯಪ್ರವೇಶ ಮಾಡಲು ಹಿಂಜರಿದರು. ತಿರುರಂಗಡಿ ಎಂಬಲ್ಲಿ ಅತ್ಯಂತ ಹಳೆಯ ಮಸೀದಿಯನ್ನು ನೋಡಿಕೊಳ್ಳುತ್ತಿದ್ದ ಅಲಿ ಮುಸಲಿಯಾರ್ ಎಂಬುವವನನ್ನು ಮಾಪಿಳ್ಳಗಳು ತಮ್ಮ ನಾಯಕನನ್ನಾಗಿಸಿಕೊಂಡರು. 1912ರಲ್ಲಿ ಅವನು ಇಲ್ಲದ ವೇಳೆಯಲ್ಲಿ ಬ್ರಿಟಿಷರು ಮಸೀದಿಯನ್ನು ಧ್ವಂಸಗೊಳಿಸಿದರು. ಈ ಘಟನೆಯಿಂದ ತಿರುನಂಗಡಿಯಲ್ಲಿ ಮಾಪಿಳ್ಳಗಳು ಆಕ್ರೋಶಗೊಂಡರು. ಸರ್ಕಾರಿ ಕಚೇರಿಗಳನ್ನು ಲೂಟಿ ಮಾಡಿ ಬೆಂಕಿ ಹಚ್ಚಿದರು. ಈ ದಂಗೆ ಎರನಾಡ್, ವಲ್ಲುವನಾಡ್ ಮತ್ತು ಪೊನ್ನಾನಿ ತಾಲೂಕುಗಳಿಗೂ ಹಬ್ಬಿತು. ದಂಗೆಕೋರರಿಗೆ ಎಲ್ಲ ಭೂಮಾಲೀಕರ ವಿರುದ್ಧ ಅಪಾರ ಸಿಟ್ಟಿತ್ತು. ಹೀಗಾಗಿ ಹಲವು ಹಿಂದುಗಳು ಕೊಲೆಯಾದರು.

ಬಹಳ ಮುಖ್ಯರಾದ ದಂಗೆಕೋರರ ನಾಯಕರೆಂದರೆ ಹಿಂದುಗಳಿಗೆ ತಾನೇ ರಾಜಾ ಎಂದು ಘೋಷಿಸಿಕೊಂಡ ವಾರಿಯಂ ಕುನ್ನತ್ ಕುನ್ಹಮದ್ ಹಾಜಿ ಮತ್ತು ವಲ್ಲುವನಾಡಿನ ಕಿಲಾಫತ್ ಪ್ರದೇಶಕ್ಕೆ ತನ್ನನ್ನು ತಾನೇ ಗೌರ್ನರ್ ಎಂದು ಘೋಷಿಸಿಕೊಂಡ ಸಿತಿ ಕೊಯಾ ತಂಗಲ್. ಎಲ್ಲ ಮಾಪಿಳ್ಳಗಳನ್ನು ಶಿಕ್ಷಿಸುತ್ತೇವೆ ಎಂದು ಈ ನಾಯಕರು ಹೇಳಿಕೊಂಡರೂ ಹಿಂದುಗಳ ಮನೆಯಲ್ಲಿ ಕಳ್ಳತನ ಮಾಡಲು. ಲೂಟಿ ಮಾಡಲು, ಅಷ್ಟೇ ಅಲ್ಲದೆ ಅಮಾಯಕ ಹಿಂದುಗಳನ್ನು ಕೊಲ್ಲಲು ಮುಸ್ಲಿಮರಿಗೆ ಪ್ರೇರಣೆ ನೀಡಿದರು. ಕೊನೆಗೆ ಹಿಂದುಗಳನ್ನು ಮುಸ್ಲಿಮರನ್ನಾಗಿ ಪರಿವರ್ತಿಸಲೂ ಪ್ರಯತ್ನಿಸಿದರು.

ಈ ಧಾಳಿ ಭೂಮಾಲೀಕರ ಮತ್ತು ಬ್ರಿಟಿಷರ ವಿರುದ್ಧವಾಗಿತ್ತು. ನಂತರದ ದಿನಗಳಲ್ಲಿ ಬ್ರಿಟಿಷ್ ಪೊಲೀಸರ ಸಹಕಾರ ಪಡೆದು ತಮ್ಮ ಮೇಲೆ ದೌರ್ಜನ್ಯ ನಡೆಸಿದ್ದ ಮಾಪಿಳ್ಳಗಳ ಮೇಲೆ ಸೇಡು ತೀರಿಸಿಕೊಳ್ಳಲು ಹಿಂದುಗಳು ಪ್ರಾರಂಭಿಸಿದರು. ಹೀಗಾಗಿ ಭೂಮಾಲೀಕರ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧವಿದ್ದ ಈ ದಂಗೆಗೆ ಕೋಮುವಾದಿ ಬಣ್ಣವೂ ಸೇರಿಕೊಂಡಿತು. ಅದರ ಪರಿಣಾಮವಾಗಿ ನಾರಾಯಣ ಮೆನನ್ ನೇತೃತ್ವದ ಮುಖಂಡರ

ವಿರುದ್ಧವೂ ಮಾಪಿಳ್ಳೆಗಳು ದಂಗೆ ಎದ್ದರು. ಇದರ ಪರಿಣಾಮವಾಗಿ 1836ರಿಂದ 1854ರವರೆಗೆ 20 ದಂಗೆಗಳು ನಡೆದವು. ರಕ್ಷಣಾ ಪಡೆಗಳ ಕೈಯಲ್ಲಿ ಸಿಕ್ಕು ಹಲವು ಮಾಪಿಳ್ಳೆಗಳು ಹತರಾದರು. 1851ರಿಂದ 1921ರವರೆಗೂ ದಂಗೆಗಳು ನಡೆಯುತ್ತಲೇ ಇದ್ದವು. (ಎಂ.ಎಸ್.)

**ಮಾಯಾ:** ಮಧ್ಯ ಅಮೆರಿಕದಲ್ಲಿ 3–9ನೆಯ ಶತಮಾನದವರೆಗೆ ವ್ಯಾಪಿಸಿದ್ದ ಮಹಾನ್ ನಾಗರಿಕತೆಗೆ ಕಾರಣರಾದ ಜನ. ಇವರು ಕೇವಲ ನವಶಿಲಾಯುಗದ ತಂತ್ರಜ್ಞಾನದಿಂದ, ಲೋಹದ ಉಪಕರಣಗಳ ಹಾಗೂ ಚಕ್ರಗಳ ಪರಿಚಯವಿಲ್ಲದೆಯೇ ವಾಸ್ತುಶಿಲ್ಪಕ್ಷೇತ್ರದಲ್ಲಿ ಅದ್ಭುತ ಪ್ರಗತಿಸಾಧಿಸಿದರು; ವೈಜ್ಞಾನಿಕ ಉಪಕರಣಗಳಿಲ್ಲದೆಯೂ ಆಕಾಶ ವಿಜ್ಞಾನದಲ್ಲಿಯ ಇವರ ಸಾಧನೆಯಮಟ್ಟ ಬೆರಗನ್ನುಂಟುಮಾಡುತ್ತದೆ. ಚಿತ್ರಲಿಪಿ ಬರೆಹ, ಸಂಖ್ಯಾಶಾಸ್ತ್ರ ಕ್ಷೇತ್ರಗಳಲ್ಲಿಯೂ ಈ ಜನರ ಸಾಧನೆ ಅಪೂರ್ವವಾದುದು.

ಇಂದಿನ ಬೆಲಿಜ್, ಗ್ವಾಟೆಮಾಲದ ಬಹುಭಾಗ, ಕ್ವಿಂಟಾನ ರೂ ಹಾಗೂ ಯುಕಟಾನ್, ಕಾಂಪೀಚ್, ಟಬಾಸ್ಕೊ ಮತ್ತು ಪೂರ್ವ ಚಿಯಾಪಾಸ್ ಪ್ರದೇಶಗಳನ್ನೊಳಗೊಂಡ ಮೆಕ್ಸಿಕೊ–ಈ ಪ್ರದೇಶದಲ್ಲಿ ಮಾಯಾ ಜನರು ವಾಸಿಸುತ್ತಿದ್ದರು; ಪಶ್ಚಿಮ ಎಲ್‌ಸಲ್ವಡಾರ್ ಹಾಗೂ ಹೊಂಡುರಸ್ ಭಾಗದಲ್ಲೂ ಈ ಜನರು ನೆಲೆಸಿದ್ದರು. ಮಾಯಾ ನಾಗರಿಕತೆ ಹರಡಿದ ಪ್ರದೇಶ ಮೂರು ಬಗೆಯ ಭೂಭಾಗಗಳನ್ನೊಳಗೊಂಡಿದೆ. ದಕ್ಷಿಣದಲ್ಲಿ ಆಂಡಿಸ್ ಪರ್ವತ ಶ್ರೇಣಿಗಳಿಂದ ಕೂಡಿದ ಪ್ರದೇಶ; ಮಧ್ಯದಲ್ಲಿ ಉಷ್ಣವಲಯದ ದಟ್ಟ ಅರಣ್ಯದಿಂದ ಕೂಡಿದ ಬಯಲು ಪ್ರದೇಶ; ಹಾಗೂ ಉತ್ತರದಲ್ಲಿ ಯುಕಟಾನಿನ ಸುಣ್ಣಕಲ್ಲು ಭೂಮಿಯ ಶೀತಲ ಪ್ರಸ್ಥಭೂಮಿ. ಜನವಸತಿ ಹೆಚ್ಚಾಗಿದ್ದುದು ಸಮುದ್ರಮಟ್ಟದಿಂದ ಕೇವಲ 61–180 ಮೀ ವರೆಗೆ ಎತ್ತರವಿದ್ದ ಬಯಲು ಪ್ರದೇಶದಲ್ಲಿ; ಮಾಯಾ ನಾಗರಿಕತೆಯ ಶಿಷ್ಟಾಚಾರ ಯುಗಕ್ಕೆ (3–9ನೆಯ ಶತಮಾನ) ಸಂಬಂಧಪಟ್ಟ ಪ್ರದೇಶವಿದು. ತರುವಾಯದ ಪುನರುತ್ಥಾನ ಹಾಗೂ ಅವನತಿಯ ಕಾಲಗಳಿಗೆ ಉತ್ತರ ಯುಕಟಾನ್ ಪ್ರದೇಶ ಕೇಂದ್ರವಾಗಿದ್ದಿತು.

18ನೆಯ ಶತಮಾನದ ಕೊನೆಯ ದಶಕಗಳಲ್ಲಿ ಮಾಯಾ ನಾಗರಿಕತೆಯ ಅವಶೇಷಗಳನ್ನು ಪರಿಶೋಧಕರು ಪತ್ತೆ ಹಚ್ಚಿದರು. 1785ರಲ್ಲಿ ಪಲೆಂಕ್ ಎಂಬಲ್ಲಿ ಸ್ಪೇನ್ ದೇಶದ ಆಂಟೋನಿಯೊ ಡೆಲ್ ರಿಯೊ ಎಂಬಾತ ಉತ್ಖನನ ನಡೆಸಿದ. ಅನಂತರದ ವರ್ಷಗಳಲ್ಲಿ ಹಲವಾರು ಪ್ರವಾಸಿಗರು ಹಾಗೂ ಪುರಾತತ್ತ್ವಶಾಸ್ತ್ರಜ್ಞರು ದಟ್ಟ ಅರಣ್ಯಗಳಲ್ಲಿ ಹುದುಗಿಹೋಗಿದ್ದ ಮಾಯಾ ನಾಗರಿಕತೆಯ ಸಿರಿಸಂಪತ್ತನ್ನು ಬೆಳಕಿಗೆ ತಂದು ಮಾಯಾ ಇತಿಹಾಸದ ಬಗೆಗಿನ ಜ್ಞಾನ ಹೆಚ್ಚಲು ಕಾರಣರಾದರು. 1840ರ ದಶಕದಲ್ಲಿ ಜಾನ್ ಎಲ್ ಸ್ಟೀಫನ್ಸ್ ಎಂಬ ಅಮೆರಿಕದ ಪ್ರವಾಸಿ ವ್ಯಾಪಕವಾಗಿ ಸಂಚರಿಸಿ ಮಾಯಾ ಇತಿಹಾಸದ ಬಗ್ಗೆ ಎರಡು ಸಂಪುಟಗಳನ್ನು ಪ್ರಕಟಿಸಿದ. 19ನೆಯ ಶತಮಾನದಲ್ಲಿಯೇ ಗ್ರೇಟ್ ಬ್ರಿಟನ್ನಿನ ಆಲ್‌ಫ್ರೆಡ್ ಮಾಡ್‌ಸ್ಲೇ ಎಂಬ ವಿದ್ವಾಂಸ ಹಲವಾರು ಮಾಯಾ ಶಾಸನಗಳನ್ನು ಪ್ರತಿಮಾಡಿದ ಮತ್ತು ವಾಸ್ತುರಚನೆಗಳ ಮಾದರಿಗಳನ್ನು ಸಿದ್ಧಪಡಿಸಿದ. 1905–08ರಲ್ಲಿ ಎಡ್ವರ್ಡ್ ಥಾಂಪ್ಸನ್ ಎಂಬಾತ ಚೇಚೆನ್ ಈಟ್ಸಾದ ಪವಿತ್ರ ಯಾಗಬಾವಿಯ ಹೂಳೆತ್ತಿಸಿ ಸ್ವಚ್ಛಗೊಳಿಸಿದಾಗ ಚಿನ್ನ ಮತ್ತು ತಾಮ್ರದ ಕಾಣಿಕೆ ವಸ್ತುರಾಶಿಯೊಂದು ಲಭ್ಯವಾಯಿತು.

ಮೆಕ್ಸಿಕೊ ಹೊರಗೆ ಮಾಯಾ ನಾಗರಿಕತೆಯ ಅವಶೇಷಗಳ ಅತ್ಯುತ್ತಮ ಸಂಗ್ರಹವಿರುವುದು ಬ್ರಿಟಿಷ್ ಮ್ಯೂಸಿಯಮ್‌ನಲ್ಲಿ. ಮಾಯಾಜನರ ಕುಂಭಕಲೆ, ಶಿಲ್ಪ, ಸ್ಮಾರಕಸ್ತಂಭ, ಚಿತ್ರಲಿಪಿ ಹಾಗೂ ಚಿತ್ರಕಲೆ ಜೇಡಶಿಲೆಯ ಮೇಲಿನ ಕುಸುರಿ ಕೆಲಸಗಳಿಗೆ ಮಾದರಿಗಳನ್ನು ಇಲ್ಲಿ ಕಾಣಬಹುದು. ಕಳೆದ ಏಳೆಂಟು ದಶಕಗಳಲ್ಲಿ ಮಾಯಾ ಕುರಿತು ನಡೆಸಿದ ಪುರಾತತ್ತ್ವ ಸಂಶೋಧನೆಯ ಸಿಂಹಪಾಲು ಅಮೆರಿಕದ ಸಂಸ್ಥೆಗಳಿಗೆ, ಅದರಲ್ಲಿಯೂ ವಿಶೇಷವಾಗಿ ವಾಷಿಂಗ್‌ಟನ್ನಿನ ಕಾರ್ನೇಜ್ ಇನ್‌ಸ್ಟಿಟ್ಯೂಟಿಗೆ ಸಲ್ಲುತ್ತದೆ. ಮಾಯಾ ಇತಿಹಾಸದ ಅನೇಕ ಕೊಂಡಿಗಳು ನಮಗಿನ್ನೂ ಲಭ್ಯವಾಗಬೇಕಾಗಿದೆ. ಈಗ ದೊರೆತಿರುವುದು ಕುತೂಹಲಕಾರಿಯಾದ ಮತ್ತು ಗೋಜಲಾದ ಚಿತ್ರ ಮಾತ್ರವೆನ್ನಬಹುದು.

ಇತಿಹಾಸ: ಮಾಯಾ ಪೂರ್ವಜರು ಸಾವಿರಾರು ವರ್ಷಗಳ ಹಿಂದೆ ಏಷ್ಯದಿಂದ ವಲಸೆಹೊರಟು ಬಂದವರು. ಪ್ರ.ಶ.ಪೂ.3ನೆಯ ಸಹಸ್ರಮಾನದಲ್ಲಿ ಅಲೆಮಾರಿ ಬೇಟೆಗಾರರಾಗಿದ್ದ ಇವರು ಮುಸುಕಿನ ಜೋಳ ಮತ್ತು ತರಕಾರಿ ಬೇಸಾಯ ಕಲಿತಿದ್ದರು. ಪ್ರ.ಶ.ಪೂ.1500ರ ಹೊತ್ತಿಗೆ ಈ ಜನ ಗ್ರಾಮಗಳಲ್ಲಿ ಶಾಶ್ವತವಾಗಿ ನೆಲಸಿದ್ದರು. ನವಶಿಲಾಯುಗದ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದ ಇವರಿಗೆ ಮಣ್ಪಾತ್ರೆ ತಯಾರಿಕೆ ಹಾಗೂ ಬಟ್ಟೆ ನೇಯ್ಗೆ ತಿಳಿದಿತ್ತು. ಆದರೆ ಪ್ರಾಣಿಸಾಕಣೆ ಇನ್ನೂ ಪರಿಚಿತವಾಗಿರಲಿಲ್ಲ.

ಮಾಯಾ ಪ್ರದೇಶದಲ್ಲಿ ಹಲವು ವರ್ಷಗಳ ಕಾಲ ಪರಿಶೋಧನೆ ಉತ್ಖನನಗಳನ್ನು ನಡೆಸಿದ ಪ್ರಸಿದ್ಧ ಪುರಾತತ್ತ್ವ ಶಾಸ್ತ್ರಜ್ಞ ಜೆ.ಎರಿಕ್ ಎಸ್.ಥಾಂಸನ್ ಎಂಬಾತ ಮಾಯಾ ಇತಿಹಾಸಕಾಲವನ್ನು ವರ್ಗೀಕರಿಸಿದ್ದಾನೆ. ಇವರ ಅಭಿಪ್ರಾಯವನ್ನು ಬಹುಪಾಲು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಪ್ರ.ಶ.ಪೂ.ಸು. 250–ಪ್ರ.ಶ. 450ರ ಅವಧಿಯನ್ನು ಬೆಳವಣಿಗೆಯ ಯುಗವೆಂದು ಕರೆಯಲಾಗಿದೆ. ಈ ಕಾಲದಲ್ಲಿ ಮಾಯಾ ಜನ ಇತರ ಅಮೆರಿಕನ್ ಇಂಡಿಯನ್‌ರಿಂದ ವಿಭಿನ್ನವೂ ವಿಶಿಷ್ಟವೂ ಆದ ಸಂಸ್ಕೃತಿಯೊಂದನ್ನು ರೂಪಿಸಿ ಬೆಳೆಸಿದರು. ಈ ಸಂಸ್ಕೃತಿಗೂ ತರುವಾಯ ಬಂದ ಸಂಸ್ಕೃತಿಗೂ ಇರುವ ಸಾದೃಶ್ಯ–ವೈದೃಶ್ಯಗಳನ್ನೂ ಗುರುತಿಸಲು ದೊರೆಯುವ ಸಾಕ್ಷ್ಯಾಧಾರವೆಂದರೆ ಮಣ್ಪಾತ್ರೆಗಳು ಮಾತ್ರ. ಈ ಕಾಲಕ್ಕೆ ಸಂಬಂಧಿಸಿದ ಸ್ಮಾರಕಗಳೆಲ್ಲ ಪ್ರಾಯಶಃ ಮರಮುಟ್ಟುಗಳಲ್ಲಿ ನಿರ್ಮಿತವಾಗಿದ್ದಿರಬೇಕು. ಇಲ್ಲಿಯ ಹವಾಗುಣ ಪರಿಸ್ಥಿತಿಯಿಂದ ಈ ಯಾವ ಅವಶೇಷಗಳೂ ಸಂರಕ್ಷಿತವಾಗಿ ಉಳಿದಿಲ್ಲ. ಪ್ರ.ಶ.ಸು. 325–925ರ ಅವಧಿಯನ್ನು ಶಿಷ್ಟ ಸಂಪ್ರದಾಯದ ಯುಗವೆಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ವಾಸ್ತುಶಿಲ್ಪ, ಗಣಿತ, ಆಕಾಶ ವಿಜ್ಞಾನ ಮತ್ತಿತರ ಬೌದ್ಧಿಕ ಕ್ಷೇತ್ರಗಳಲ್ಲಿ ಅಪಾರ ಪ್ರಗತಿ ಸಾಧಿತವಾಯಿತು. ಇಂಥ ಪ್ರಗತಿಯನ್ನು ಕೊಲಂಬಸ್ ಪೂರ್ವ ಅಮೆರಿಕದ ಯಾವುದೇ ಜನರಿಂದಲೂ ಸಾಧಿಸಲಾಗಲಿಲ್ಲ. ಬೆಳವಣಿಗೆಯ ಕಾಲದ ಅಂತ್ಯ ಹಾಗೂ ಕ್ಲಾಸಿಕ್ ಯುಗದ ಆರಂಭ ಕಾಲದಲ್ಲಿದ್ದರು. ಶಿಲ್ಪಸ್ಮಾರಕ ಸ್ತಂಭಗಳ ಮೇಲೆ ತೇದಿ ಮತ್ತಿತರ ವಿವರಗಳನ್ನು ಚಿತ್ರಲಿಪಿಯಲ್ಲಿ ಕಂಡರಿಸಿದರು. ಪಲೆಂಕ್, ಪ್ಯಾದ್ರಸ್ ನೆಗ್ರಸ್, ಟಿಕಲ್, ವಾಕ್ಷಟೂನ್ ಮುಂತಾದ ನಗರಗಳು ಉತ್ತರ ಗ್ವಾಟೆಮಾಲ ಹಾಗೂ ಅದರ ನೆರೆಯ ಮೆಕ್ಸಿಕೊ ಪ್ರದೇಶದಲ್ಲಿ ಬೆಳೆದುವು. ಹೊಂಡುರಸ್ ಪ್ರದೇಶದ ಕೋಪನ್ ನಗರವೂ ಇದೇ ಕಾಲದ್ದೆನ್ನಲಾಗಿದೆ.



ಮಾಯಾ ನಾಗರಿಕತೆ, ಪಿರಮಿಡ್ ದೇವಾಲಯ

ಸು. 800–900ರ ನಡುವೆ ಪ್ರಾಚೀನ ಅಮೆರಿಕನ್ ಇತಿಹಾಸದಲ್ಲಿ ಅತಿ ನಿಗೂಢ ಘಟನೆಯೊಂದು ಸಂಭವಿಸಿತು. ಮಾಯಾ ಜನ ತಮ್ಮ ಧಾರ್ಮಿಕ ಹಾಗೂ ಕಾರ್ಯಾಚರಣೆಯ ಕೇಂದ್ರಗಳನ್ನು ಒಂದೊಂದಾಗಿ ಪರಿತ್ಯಜಿಸತೊಡಗಿದರು. ಕೆಲವೆಡೆ ಕಟ್ಟಡಗಳು ನಿರ್ಮಾಣ ಹಂತದಲ್ಲಿರುವಾಗಲೇ ಹಠಾತ್ತಾಗಿ ಪರಿತ್ಯಕ್ತವಾದ ನಿದರ್ಶನಗಳು ಕಾಣಸಿಗುತ್ತವೆ. ಆದುದರಿಂದ ಮಾಯಾಜನ ಸಾಮೂಹಿಕವಾಗಿ ಈ ಪ್ರದೇಶದಿಂದ ವಲಸೆಹೋದರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರು. ಆದರೆ ಈ ಅಭಿಪ್ರಾಯ ತಪ್ಪೆಂದು ಈಚಿನ ಶೋಧನೆಗಳಿಂದ ತಿಳಿದುಬಂದಿದೆ. ಬಹುಪಾಲು ಜನ ಈ ಕೇಂದ್ರಗಳನ್ನು ತ್ಯಜಿಸಿಹೋದದ್ದು ನಿಜ. ಹೀಗೆ ಹೋಗಲು ಕಾರಣವೇನೆಂಬುದನ್ನು ವಿದ್ವಾಂಸರು ಊಹಿಸುವ ಯತ್ನಮಾಡಿದ್ದಾರೆ. ರೋಗ–ರುಜಿನ, ಭೂಕಂಪ, ಹವಾಗುಣ ವಿಷಮತೆ, ಹೊರಗಿನ ಆಕ್ರಮಣ, ಮಾಯಾ ದೇವವಾಣಿಗೆ ಅರ್ಚಕವರ್ಗ ನೀಡಿದ ಅರ್ಥವಿವರಣೆ ಇತ್ಯಾದಿ ಕಾರಣಗಳನ್ನು ವಿದ್ವಾಂಸರು ಊಹಿಸಿದ್ದಾರೆ. ಕೆಲವು ವಿವರಣೆಗಳಂತೂ ಹಾಸ್ಯಾಸ್ಪದ ಕಲ್ಪನೆಗಳು. ಆದರೆ ಪ್ರಪಂಚದ ಇತಿಹಾಸದಲ್ಲಿ ಇತರೆಡೆಗಳಲ್ಲಿ ಕಂಡುಬಂದಿರುವಂತೆ ಇಲ್ಲಿಯೂ ರೈತಾಪಿವರ್ಗಕ್ಕೂ ಆಳರಸ–ಅರ್ಚಕವರ್ಗಕ್ಕೂ ಸಂಘರ್ಷವೇರ್ಪಟ್ಟು ಬಂಡಾಯ ನಡೆದಿರಬೇಕೆಂಬ ಊಹೆ ಸಮಂಜಸವಾದುದೆಂದು ತೋರುತ್ತದೆ. ಬಂಡಾಯವೆದ್ದ ಕೃಷಿಕಾರ್ಮಿಕರು ಅರ್ಚಕ–ಆಳರಸವರ್ಗದವರನ್ನು ಹತ್ಯೆಮಾಡಿದರು. ಇಲ್ಲವೆ ಓಡಿಸಿದರು ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಕೃಷಿವರ್ಗದ ಮೇಲೆ ಹೊಸ ಧಾರ್ಮಿಕ ಪರಿಕಲ್ಪನೆ ಹಾಗೂ ಆಚರಣೆಗಳನ್ನು ಹೇರಲು ಯತ್ನಿಸಿದಾಗ ಬಂಡಾಯ ಸಂಭವಿಸಿದ್ದಿರಬೇಕೆಂದು ಭಾವಿಸಲಾಗಿದೆ. ಕೃಷಿ ಕಾರ್ಮಿಕರು ತಮ್ಮ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತ ಉಳಿದಿದ್ದರಿಂದ ನಗರಕೇಂದ್ರಗಳು ಕೇಳುವವರಿಲ್ಲದೆ ಪಾಳುಬಿದ್ದುವು.

ಜೊತೆಗೆ ಇತರ ಕಾರಣಗಳೂ ಇಲ್ಲದಿರಲಿಲ್ಲ. ಪಶ್ಚಿಮದಿಂದ ಮೆಕ್ಸಿಕನ್ ಪ್ರಭಾವಗಳು ವ್ಯಾಪಿಸುತ್ತಿದ್ದುವು. ಹಾಗಾಗಿ ಕ್ಲಾಸಿಕ್ ಯುಗದ ಕೊನೆಯ ಹೊತ್ತಿಗೆ ಈ ಕಾರಣಗಳೇ ಚಳವಳಿಯ ಆವೇಗ ಪಡೆದುಕೊಂಡವೆನ್ನಬಹುದು. ಸುಮಾರು ಒಂದು ಶತಮಾನದ ತನಕ ಈ ಮೆಕ್ಸಿಕೊದ ಅಂತಸ್ಸರಣ ಮುಂದುವರಿಯಿತು. ಹೊಸ ಸಂಕರ ಸಂಸ್ಕೃತಿಯೊಂದು ರೂಪುಗೊಂಡಿತು. ವಿಶೇಷವಾಗಿ ಯುಕಟಾನ್ ಪ್ರದೇಶದ ಚೇಚೆನ್ ಈಟ್ಸಾ ಎಂಬ ನಗರದಲ್ಲಿಯ ವಾಸ್ತು ಅವಶೇಷಗಳಿಂದ ಈ ಆಕ್ರಮಣದಾರರು ಈಗಿನ ಮೆಕ್ಸಿಕೊ ನಗರದ ಉತ್ತರಕ್ಕಿರುವ ಪ್ರದೇಶದಿಂದ ಬಂದ ಟಾಲ್ಟೆಕ್ ಜನರೆಂದು ಸ್ಪಷ್ಟಪಡುತ್ತದೆ. ಇವರು ಯುಕಟಾನಿನ ಬಹುಭಾಗವನ್ನು ಆಳಿದರು. ಆದ್ದರಿಂದ ಈ ಕಾಲವನ್ನು ಮೆಕ್ಸಿಕೊದ ಯುಗವೆಂದು ಕರೆಯಲಾಗಿದೆ.

ಯೋಧಪ್ರಧಾನವಾದ ಟಾಲ್ಟೆಕ್ ಸಮುದಾಯದ ಸಂಪರ್ಕದಿಂದ ಸ್ಥಳೀಯ ಮಾಯಾ ಸಂಸ್ಕೃತಿಯಲ್ಲಿ ಹೊಸ ಪರಿಕಲ್ಪನೆಗಳು ಹುಟ್ಟಿಕೊಂಡವು. ಮೂಲಭೂತವಾಗಿ ಸೌಮ್ಯ ಸ್ವಭಾವದವರೂ ಶ್ರಮಜೀವಿಗಳೂ ಆದ ಮಾಯಾಜನರಲ್ಲಿ ಕ್ಷಾತ್ರಭಾವ ಹೆಚ್ಚಿತು. ಗರಿಸಹಿತನಾದ ಸರ್ಪದೇವತೆ ಕ್ವೆಟ್ಸಾಲ್‌ಕೊವಾಟ್ಲ್ ಮತ್ತಿತರ ಮೆಕ್ಸಿಕೊದ ದೇವತೆಗಳು ಮಾಯಾ ದೇವತಾ ಪರಿವಾರದಲ್ಲಿ ಸೇರಿಹೋದರು. ಮೆಕ್ಸಿಕೊದ ಧರ್ಮದಲ್ಲಿ ದೇವತೆಗಳನ್ನು ತೃಪ್ತಿಗೊಳಿಸಲು

ನರಮೇಧವನ್ನು ನಡೆಸುವ ಸಂಪ್ರದಾಯವಿತ್ತು. ಇದರ ಪರಿಣಾಮವಾಗಿ ಮಾಯಾ ಜನರಲ್ಲಿ ಹೋರಾಟದ ಮನೋಭಾವ ಬೆಳೆಯಿತು. ಪ್ರಾಚೀನ ಅಮೆರಿಕದಲ್ಲಿ ಒಂದು ವರ್ಗದವರ ಹಿಂಸಭಾವವನ್ನು ಉತ್ತೇಜಿಸಿ ಪೋಷಿಸುವ ಮತ್ತು ನರಬಲಿಯ ಶ್ರೇಷ್ಠತೆ ಉಜ್ವಲತೆಗಳನ್ನು ಸಾರುವ ಉದ್ದೇಶದಿಂದ ರಚಿತವಾದ ಜನಪ್ರಿಯ ಸಾಹಿತ್ಯವೂ ಗಣನೀಯವಾಗಿ ಹೆಚ್ಚಿತು. ಆದರೂ ಮೆಕ್ಸಿಕೊದ ಸಂಸ್ಕೃತಿಯನ್ನು ಮಾಯಾಜನ ರಕ್ತಗತ ಮಾಡಿಕೊಳ್ಳುತ್ತಿದ್ದಂತೆಯೇ ಆಕ್ರಮಣಕಾರರೇ ಮಾಯಾ ಜನಜೀವನ ವಿಧಾನವನ್ನು ಒಪ್ಪಿ ಅನುಸರಿಸುವ ಪರಿಯನ್ನು ಕಾಣುತ್ತೇವೆ. ಸಾಮಾನ್ಯವಾಗಿ ಇತಿಹಾಸದಲ್ಲಿ ನಾಗರಿಕತೆಗಳು ಆಕ್ರಮಣಕಾರರಿಂದ ಪ್ರಭಾವಿತವಾದುದನ್ನು ಕಾಣುತ್ತೇವೆ; ಆದರೆ ಇಲ್ಲಿ ಅದು ತಿರುಗುಮುರುಗಾಗಿದೆ. ಆದ್ದರಿಂದ 1200–1540ರ ನಡುವಣ ಕಾಲವನ್ನು ಮೆಕ್ಸಿಕೊದ ಲೀನತೆಯ ಕಾಲವೆಂದು ಕರೆಯಲಾಗಿದೆ.

1200ರ ಸುಮಾರಿಗೆ ಹುನಾಕಸೀಲ್ ಎಂಬ ಯೋಧನ ನೇತೃತ್ವದಲ್ಲಿ ಚೇಚೆನ್ ಈಟ್ಸಾ ಆಡಳಿತದ ವಿರುದ್ಧ ಬಂಡಾಯುವುಂಟಾಯಿತು. ಚೇಚೆನ್ ಈಟ್ಸಾ, ಮಾಯಪನ್ ಹಾಗೂ ವಾಕ್ಷಮಲ್ ನಡುವೆ ಏರ್ಪಟ್ಟಿದ್ದ ಮೈತ್ರಿಯ ಒಕ್ಕೂಟ ಭಗ್ನವಾಯಿತು. ಪರಸ್ಪರ ಕಾದಾಟಗಳಿಂದ ಚೇಚೆನ್ ಈಟ್ಸಾ ನಾಶವಾಯಿತು. ಹುನಾಕಸೀಲ್ ಯೋಧ ಮಾಯಪನ್ ಎಂಬಲ್ಲಿ ಹೊಸ ರಾಜಧಾನಿಯನ್ನು ಸ್ಥಾಪಿಸಿದ. 1450ರ ತನಕ ಈ ನಗರ ವಿಶಾಲ ಪ್ರದೇಶವೊಂದರ ಆಡಳಿತ ಕೇಂದ್ರವಾಯಿತು. ಆದರೆ ಇಲ್ಲಿಯ ಅಧಿಪರಿಗೂ ನಿಯಂತ್ರಿತ ನಗರ ಪ್ರಾಂತಗಳ ಆಡಳಿತಗಾರರಿಗೂ ವಿರಸವೇರ್ಪಟ್ಟಿತು. ಈ ಯಾದವೀ ಕಲಹದಿಂದ ವಾಸ್ತುಶಿಲ್ಪ ಇತ್ಯಾದಿ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವನತಿಯುಂಟಾಯಿತು. ಸ್ಪೇನ್ ದೇಶೀಯರಿಂದ ಆಕ್ರಮಿತವಾಗುವ ತನಕ ಈ ಪ್ರದೇಶದಲ್ಲಿ ಪರಸ್ಪರ ಕಾದಾಟ ಮುಂದುವರಿಯಿತು.

ತರುವಾಯದ ಕಾಲವನ್ನು ಸ್ಪೇನಿನ ಯುಗವೆಂದು ಕರೆಯಲಾಗಿದೆ. ಸ್ಪೇನ್ ದೇಶೀಯರು 16ನೆಯ ಶತಮಾನದ ಆರಂಭದ ದಶಕದಲ್ಲಿ ಮಾಯಾ ಪ್ರದೇಶವನ್ನು ಆಕ್ರಮಿಸಿದರು. ಮೊದಮೊದಲು ಈ ಆಕ್ರಮಣಕಾರರನ್ನು ಹಿಮ್ಮೆಟ್ಟಿಸುವಲ್ಲಿ ಮಾಯಾ ಜನ ಯಶಸ್ವಿಯಾದರು. ಆದರೆ ಅನತಿಕಾಲದಲ್ಲಿಯೇ ಪರಿಸ್ಥಿತಿ ಬದಲಾಯಿತು. 1523ರಲ್ಲಿ ಪೆಡ್ರೊ ಡಿ ಆಲ್ವರಾಡೊ ಎಂಬಾತನ ನೇತೃತ್ವದಲ್ಲಿ ಸ್ಪೇನಿನ ಸೇನಾ ತಂಡಗಳು ಗ್ವಾಟೆಮಾಲ ಪ್ರದೇಶಕ್ಕೆ ನುಗ್ಗಿದುವು. 1540ರ ದಶಕದಲ್ಲಿ ಫ್ರಾನ್ಸಿಸ್ಕೊ ಡಿ ಮಾಂಟಿಗೊ ಹಾಗೂ ಆತನ ಮಗ ಯುಕಟಾನ್ ಎಂಬ ಪ್ರದೇಶವನ್ನು ಜಯಿಸಿದರು. 1697ರಲ್ಲಿ ಪೇಟನ್ನಿನ ಇಟ್ಸಾ ಜನರು ಭೀಕರ ಹೋರಾಟಾನಂತರ ಶರಣಾಗತರಾದಾಗ ಮಾಯಾಜನರ ಪ್ರತಿರೋಧ ಕೊನೆಗೊಂಡಿತು.

ಜನಜೀವನ: ಚಿತ್ರಶಿಲ್ಪಗಳಿಂದ ಪ್ರಾಚೀನ ಮಾಯಾಜನರ ಸ್ಥೂಲಸ್ವರೂಪವನ್ನು ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಪ್ರಾಚೀನ ಹೂಳುಗಾಡುಗಳಲ್ಲಿ ಉತ್ಖನನ ನಡೆಸಿ ಹೊರ ತೆಗೆದಿರುವ ಅಸ್ಥಿ ಅವಶೇಷಗಳಿಂದ ಮತ್ತಷ್ಟು ವಿವರಗಳು ದೊರೆಯುತ್ತವೆ. ಇವುಗಳಿಂದ ಯುಕಟಾನ್ ಪರ್ಯಾಯ ದ್ವೀಪ ಹಾಗೂ ನೆರೆಹೊರೆಯ ಪ್ರದೇಶಗಳಲ್ಲಿ ಈಗ ವಾಸಿಸುತ್ತಿರುವ ಮಾಯಾ–ಇಂಡಿಯನ್ನರಂತೆಯೇ ಇವರ ಪೂರ್ವಜರು ಇದ್ದರೆಂದು ತಿಳಿದುಬರುತ್ತದೆ. ಈ ಮಾತು ಬಾಹ್ಯಸ್ವರೂಪಕ್ಕಷ್ಟೇ ಸೀಮಿತವಾದುದು. ಹಿಂದಿನ ಮಾಯಾ ಜನ ಕುಬ್ಜರು ಹಾಗೂ ಠೊಣಪರಾಗಿದ್ದರು. ಮೈಚರ್ಮ ನಸುಗಪ್ಪು ವರ್ಣದ್ದು. ಉಬ್ಬುಕಪೋಲಮೂಳೆಗಳುಳ್ಳ ಈ ಜನರಿಗೆ ಗಮನಾರ್ಹವಾಗಿ ಗುಂಡುತಲೆ ಹಾಗೂ ಕಪ್ಪು ಕೇಶವಿರುತ್ತಿತ್ತು. ಇಳುಕಲು ಹಣೆ ಇವರಿಗೆ ತುಂಬ ಇಷ್ಟ. ಹಾಗಾಗಿ ಇವರು ಮಕ್ಕಳ ತಲೆಗಳನ್ನು ಮಟ್ಟಸ ಮಾಡುತ್ತಿದ್ದರು. ಓರೆ ದೃಷ್ಟಿಯ ಸೂರ್ಯದೇವತೆಯ ಗೌರವಾರ್ಥವಾಗಿಯೋ ಏನೋ ಮಕ್ಕಳಿಗೂ ಮಾಲುಗಣ್ಣಾಗಲೆಂದು ತಾಯಂದಿರು ಮಕ್ಕಳ ಕಣ್ಣ ಮುಂದೆ ಮಣಿ ಸರಗಳನ್ನು ಓಲಾಡಿಸುತ್ತಿದ್ದರು. ಮಕ್ಕಳು ಬಹುಮಟ್ಟಿಗೆ ತಾಯಿತಂದೆಯರಿಂದಲೇ ವಿದ್ಯಾಭ್ಯಾಸ ಮಾಡುತ್ತಿದ್ದರು. ಅರ್ಚಕ, ಆಡಳಿತಗಾರರ ಮಕ್ಕಳಿಗೆ ಶಾಲಾ ಶಿಕ್ಷಣದ ಸೌಲಭ್ಯವಿದ್ದಿತು. ಅವರಿಗೆ ಇತಿಹಾಸ, ಚಿತ್ರಲಿಪಿ, ಖಗೋಳಶಾಸ್ತ್ರ, ಜ್ಯೋತಿಷ್ಯ ಹಾಗೂ ವೈದ್ಯ ವಿಷಯಗಳನ್ನು ಕಲಿಸಲಾಗುತ್ತಿತ್ತು. ಇತಿಹಾಸ ಹಾಗೂ ಪುರಾಣ ಕಥೆಗಳನ್ನು ತಿಳಿಸುವ ಮಂತ್ರಗಳನ್ನು ಮಕ್ಕಳು ಕಂಠಪಾಠ ಮಾಡುತ್ತಿದ್ದರು. ಈ ಜನ ಮಾತನಾಡುತ್ತಿದ್ದ ಮಾಯಾ ಭಾಷೆಯಲ್ಲಿ ಹಲವು ಒಳಪ್ರಭೇದಗಳಿದ್ದುವು. ಈ ಸಂಸ್ಕೃತಿಯ ಉಚ್ಛ್ರಾಯ ಕಾಲದಲ್ಲಿದ್ದ (200–800) ಮಾಯಾ ಜನರ ಸಂಖ್ಯೆ 20 ಲಕ್ಷವೆಂದು ಅಂದಾಜು ಮಾಡಲಾಗಿದೆ.

ಮಾಯಾ ಸಂಸ್ಕೃತಿಯ ನಗರಗಳು ಧಾರ್ಮಿಕ ಉತ್ಸವಗಳ, ವ್ಯಾಪಾರ ವ್ಯವಹಾರಗಳ ಹಾಗೂ ನ್ಯಾಯಾಡಳಿತದ ಕೇಂದ್ರಗಳಾಗಿದ್ದುವು. ಶಾಶ್ವತ ನಗರ ನಿವಾಸಿಗಳ ಸಂಖ್ಯೆ ಅತ್ಯಲ್ಪವಿರುತ್ತಿತ್ತು. ಬೃಹತ್ ಧಾರ್ಮಿಕ ಸಮಾರಂಭಗಳ ಸಮಯದಲ್ಲಿ ಮಾತ್ರ ಅರ್ಚಕರು ಬಂದು ಇಲ್ಲಿಯೆ ನೆಲಸುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಒಂಟೊಂಟಿ ಗುಡಿಸಲು ಅಥವಾ ಕೆಲವು ಗುಡಿಸಲುಗಳಲ್ಲಿ ಜನ ವಾಸಮಾಡುತ್ತಿದ್ದರು. ಈ ಗುಡಿಸಲುಗಳು ಆಯಾಕಾರದವು ಅಥವಾ ಅಂಡಾಕಾರದವು. ಮರದ ಕಂಬಗಳ ಗೋಡೆಗೆ ಕೆಲವೊಮ್ಮೆ ಮಣ್ಣು ಮೆತ್ತುತ್ತಿದ್ದುದುಂಟು. ಚಾವಣಿಗೆ ತಾಳೆ ಜಾತಿಯ ಮರದ ಗರಿ ಅಥವಾ ಹುಲ್ಲು ಹೊದಿಸಲಾಗುತ್ತಿತ್ತು. ಮದುವೆಯಾಗುವ ತನಕ ಬಾಲಕರು ಹಾಗೂ ತರುಣರು ಈಗಿನ ಡಾರ್ಮಿಟರಿಯಂಥ ಪ್ರತ್ಯೇಕ ವಾಸಗೃಹಗಳಲ್ಲಿರುತ್ತಿದ್ದರು.

ಕಾಳುಕಡ್ಡಿ, ತಿಂಗಳುಹುರುಳಿ (ಬೀನ್ಸ್), ಕುಂಬಳ ಹಾಗೂ ಗೆಣಸು ಮಾಯಾ ಜನರ ಮುಖ್ಯ ಆಹಾರ. ಮುಸುಕಿನ ಜೋಳ ಇವರ ಬದುಕಿನ ಜೀವನಾಡಿ ಧಾನ್ಯ. ಬೇಯಿಸಿದ ಅಥವಾ ಹುರಿದುಬಾಡಿಸಿದ ತಿನಿಸು, ಕಾಳುರೊಟ್ಟಿಗಳು ಈ ಜನರಿಗೆ ಪ್ರಿಯವಾಗಿದ್ದವು. ಅಪರೂಪವಾಗಿ ಮಾಂಸ ತಿನ್ನುತ್ತಿದ್ದರು. ನಾಯಿ ಹಾಗೂ ಟರ್ಕಿಕೋಳಿ ಇವರ ಸಾಕು ಪ್ರಾಣಿಗಳು. ಇತರ ಪ್ರಾಣಿಗಳ ಸಾಕಣೆ ಇವರಿಗೆ ತಿಳಿದಿರಲಿಲ್ಲ. ಹಾಗಾಗಿ ಇವರಲ್ಲಿ ಮಾಂಸಭಕ್ಷಣೆ ಸೀಮಿತವಾಗಿದ್ದಿತು. ವೇಷಭೂಷಣಗಳು ಸರಳವಾಗಿದ್ದುವು. ಹೆಚ್ಚಿನವು ಹತ್ತಿಯ ಉಡುಪುಗಳು. ಕೆಲವೊಮ್ಮೆ ಅವಕ್ಕೆ ಕಸೂತಿ ಹಾಕುತ್ತಿದ್ದರು; ಇಲ್ಲವೆ ವಿವಿಧ ಬಣ್ಣಗಳಲ್ಲಿ ವಿನ್ಯಾಸ ಬಿಡಿಸುತ್ತಿದ್ದರು. ಬಟ್ಟೆಯ ಅಂಚುಗಳನ್ನು ಗರಿಗಳಿಂದ ಅಲಂಕರಿಸುತ್ತಿದ್ದುದೂ ಉಂಟು. ಮರದ ತೊಗಟೆಯಿಂದ ಬಟ್ಟೆ ತಯಾರಿಸುವ ವಿಧಾನ ಈ ಜನರಿಗೆ ತಿಳಿದಿತ್ತು. ಅರ್ಚಕರು ಬೀಜಗಳಿಂದ ಮಾಡಿದ ಕಂಠಹಾರಗಳನ್ನೂ ಜೇಡಶಿಲೆ, ಚಿಪ್ಪು, ಮರ ಇವುಗಳಿಂದ ತಯಾರಿಸಿದ ಕರ್ಣಾಭರಣಗಳನ್ನೂ ಹಾಕಿಕೊಳ್ಳುತ್ತಿದ್ದರು. ಮಾಯಾ ಜನರಿಗೆ ನರ್ತನವೆಂದರೆ ಬಲು ಪ್ರೀತಿ, ಪ್ರತಿಯೊಂದು ಧಾರ್ಮಿಕ ಅಥವಾ ಸಾಮಾಜಿಕ ಸಮಾರಂಭದಲ್ಲಿಯೂ ಗಂಡಸರು ನರ್ತಿಸುತ್ತಿದ್ದರು. ಹೆಂಗಸರಿಗೆ ನರ್ತನ ನೋಡಲು ಅವಕಾಶವಿರಲಿಲ್ಲ. ಪ್ರತಿಯೊಂದು ನಗರದಲ್ಲಿಯೂ ನೃತ್ಯಾಂಗಣವಿರುತ್ತಿತ್ತು. ಇಂದಿನ ಬ್ಯಾಸ್ಕೆಟ್‌ಬಾಲ್ ಕ್ರೀಡೆಯನ್ನು ತುಸು ಹೋಲುವ ಆಟವೊಂದು ಇವರಲ್ಲಿ ಪ್ರಚಲಿತವಿತ್ತು.

ಧರ್ಮ ಈ ನಾಗರಿಕತೆಯ ಮೂಲ ಸ್ರೋತಬಿಂದು. ಮಳೆ (ಚಾಕ್), ಭೂಮಿ, ಧಾನ್ಯ, ಮೃತ್ಯು (ಆಹ್‌ಪಚ್) ಮುಂತಾದವಕ್ಕೆ ಸಂಬಂಧಿಸಿದ ದೇವತೆಗಳನ್ನೂ ಪಾತಾಳಲೋಕದ ದೇವತೆಗಳನ್ನೂ ಸೂರ್ಯ (ಕಿನಿಚ್ ಅಹಂ) ಚಂದ್ರರನ್ನೂ ಈ ಜನ ಆರಾಧಿಸುತ್ತಿದ್ದರು. ಅನೇಕ ದೇವತೆಗಳಿಗೆ ಒಂದಕ್ಕಿಂತ ಹೆಚ್ಚು ರೂಪಗಳಿದ್ದುವು. ಉದಾ: ನಾಲ್ವರು ಮಳೆ ದೇವತೆಗಳಿದ್ದು, ಪ್ರತಿಯೊಬ್ಬರನ್ನೂ ಒಂದೊಂದು ದಿಕ್ಕು ಹಾಗೂ ವರ್ಣಗಳಿಂದ ಗುರುತಿಸಲಾಗುತ್ತಿತ್ತು. ನೇಯ್ಗೆ ಮತ್ತು ಸುಖ ಪ್ರಸವಗಳಿಗೆ ಸಂಬಂಧಿಸಿದ ಸ್ತ್ರೀದೇವತೆ ಚಂದ್ರ. ಎಲ್ಲ ದೇವಮಾನವರೂ ಸೂರ್ಯಚಂದ್ರರಿಂದ ಉದಿಸಿದರೆನ್ನುವುದು ಇವರ ನಂಬುಗೆಯಾಗಿದ್ದಿತು; ಈಗಲೂ ಮಾಯಾ ಜನ ಸೂರ್ಯ–ಚಂದ್ರರನ್ನು ತಮ್ಮ ತಂದೆತಾಯಿಗಳೆಂದು ಕರೆದುಕೊಳ್ಳುತ್ತಾರೆ. ಮೆಕ್ಸಿಕನ್ ಪ್ರಭಾವದಿಂದಾಗಿ ಆ ಸಂಸ್ಕೃತಿಯ ದೇವತೆಗಳನ್ನೂ ಪ್ರಧಾನವಾಗಿ ಕುಕುಲ್ಕಾನ್ ಅಥವಾ ಕ್ವೆಟ್ಜಾಲ್‌ಕೊವಾಲ್ ದೇವತೆಯನ್ನೂ–ಇವರು ಆರಾಧಿಸಿದರು. ನರಮೇಧ ಪದ್ಧತಿ ಇವರಲ್ಲಿದ್ದರೂ ನೆರೆಯ ಆಜ್ಟೆಕ್ ಜನರಲ್ಲಿದ್ದಂತೆ ಬೃಹತ್ ಪ್ರಮಾಣದಲ್ಲಿರಲಿಲ್ಲ.

ಸೂರ್ಯ

ಮಾಯಾ ಅರ್ಚಕ ವರ್ಗದವರು ಪ್ರಧಾನವಾಗಿ ಕಾಲಕ್ಕೆ ಸಂಬಂಧಿಸಿದ ಸಮಸ್ಯೆಗಳ ಅಧ್ಯಯನದಲ್ಲಿ ಆಸಕ್ತರಾಗಿದ್ದರು. ಕಾಲದ ಪ್ರತಿಯೊಂದು ಘಳಿಗೆಯೂ ಮಾನವನ ಅದೃಷ್ಟದ ಮೇಲೆ ಪರಿಣಾಮ ಬೀರುವುದೆಂದೂ ಅದನ್ನು ನಿಯಂತ್ರಿಸುವ ಪ್ರತ್ಯೇಕ ದೈವವೊಂದಿದೆಯೆಂದೂ ಇವರು ನಂಬುತ್ತಿದ್ದರು. ಇವರ ಜ್ಯೋತಿಷ್ಯ ವಿಜ್ಞಾನದ ಖಚಿತತೆ ಅಚ್ಚರಿಯನ್ನುಂಟು ಮಾಡುತ್ತದೆ. ತೇದಿಗಳ ಕೋಷ್ಟಕಗಳನ್ನು ಇವರು ಸಿದ್ಧಪಡಿಸಿದ್ದರು. ಗ್ರಹಣ ಮುಂತಾದ ಸರ್ವದಿನಗಳನ್ನು ಮೊದಲೇ ತಿಳಿದುಕೊಳ್ಳಬಹುದಾಗಿತ್ತು. 360 ಮತ್ತು 365 ದಿನಗಳ ಸಾಮಾನ್ಯ ವರ್ಷಗಳನ್ನು ಹಾಗೂ 260 ದಿನಗಳ ಪವಿತ್ರ ವರ್ಷವನ್ನೂ (ಟ್ಜೊಲ್ಕಿನ್) ಇವರು ಲೆಕ್ಕ ಹಾಕಿ ರೂಪಿಸಿದ್ದರು. ಈ ಮೂರು ಬಗೆಯ ವರ್ಷಗಳಲ್ಲಿ ಪ್ರತಿಯೊಂದರಲ್ಲಿಯೂ ದಿನದಿನಕ್ಕೂ ಇವರು ಒಂದು ನಿರ್ದಿಷ್ಟ ಸಂಖ್ಯೆ ಹಾಗೂ ಸಂಕೇತಗಳನ್ನು ಬಳಸುತ್ತಿದ್ದರು ವರ್ಷ ವರ್ಷಗಳ ನಡುವೆ ಇರುವ ಪರಸ್ಪರ ಸಂಬಂಧ ಮಾಯಾ ಜನಜೀವನದಲ್ಲಿ ತುಂಬ ಮಹತ್ತ್ವ ಪಡೆದಿತ್ತು. ಬೀಜಬಿತ್ತನೆಯಿಂದ ಅಥವಾ ಗುಡಿಸಲು ಕಟ್ಟುವುದರಿಂದ ಹಿಡಿದು ಯುದ್ಧ ಆರಂಭಿಸುವ ತನಕ ಪ್ರತಿಯೊಂದು ಕಾರ್ಯಾರಂಭಕ್ಕೂ ಶುಭದಿನವನ್ನು ಅರ್ಚಕರು ಪಂಚಾಂಗ ನೋಡಿ ಲೆಕ್ಕ ಹಾಕಿ ನಿಶ್ಚಯಿಸುತ್ತಿದ್ದರು.

ಮಾಯಾಜನರ ಕಾಲಾನುಪೂರ್ವಿಯಲ್ಲಿಯೂ ದೇವದೇವತೆಗಳಿಗೆ ಪ್ರಾಧಾನ್ಯವಿದ್ದಿತು. ಇವರ ವಿಶ್ವದ ಕಲ್ಪನೆಯೂ ವಿಶಿಷ್ಟವಾದುದು. ಅದರ ಪ್ರಕಾರ ಒಂದರ ಮೇಲೊಂದರಂತೆ 13 ಆಂತರಿಕ ಲೋಕಗಳೂ ಒಂದರ ಕೆಳಗೊಂದರಂತೆ 9 ಪಾತಾಳ ಲೋಕಗಳೂ ಇದ್ದುವು. ಪ್ರತಿಯೊಂದು ಲೋಕಕ್ಕೂ ಒಬ್ಬೊಬ್ಬ ದೇವತೆ ಇದ್ದ. ಪ್ರಪಂಚದ ಸೃಷ್ಟಿಕರ್ತ ಹುನಾಬನಾದರೂ ಅವನಿಗಿಂತ ಪ್ರಮುಖನೆನಿಸಿದವನು ಆತನ ಮಗನಾದ ಇಟ್ಜಮ್ನ; ಈತ ಆಕಾಶ ಹಾಗೂ ದಿನರಾತ್ರಿಗಳ ಅಧಿದೈವ. ಇಕ್ಷ್‌ಚೆಲ್ ಎಂಬ ದೇವತೆ ಒಳ್ಳೆಯತನದ ಒಡೆಯ. ಈ ಜನರ ದೈನಂದಿನ ಬದುಕಿನಲ್ಲೂ ದೇವತೆಗಳ ಪಾತ್ರ ಗಣನೀಯವಾದುದಾಗಿತ್ತು.

ಗಣಿತ ಅಥವಾ ಸಂಖ್ಯಾಶಾಸ್ತ್ರ ಮಾಯ ಜನರಿಗೆ ತುಂಬ ಪ್ರಿಯವಾದಶಾಸ್ತ್ರ. ಈಗಿನ ದಶಮಾನ ಪದ್ಧತಿಯಂತೆ ಮಾಯಾ ಜನ ವಿಶಂತಿಮಾನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಚುಕ್ಕಿ ಹಾಗೂ ಗೆರೆಗಳಲ್ಲಿ ಸಂಖ್ಯೆಗಳನ್ನು ನಮೂದಿಸುತ್ತಿದ್ದರು; ಅವುಗಳ ಸ್ಥಾನ ಸಂಖ್ಯೆಯನ್ನು ನಿರ್ಧರಿಸುತ್ತಿತ್ತು. ಉದಾ: ಚುಕ್ಕಿ (1 ಅಥವಾ 20).= ಎಂಬುದನ್ನು 31ನ್ನು ಸೂಚಿಸಿದರೆ ಎಂಬುದು 61ನ್ನು ಸೂಚಿಸುತ್ತದೆ. ಇದಲ್ಲದೆ ಸಂಕೇತರೂಪಗಳಲ್ಲಿ ಇವರು 64 ಮಿಲಿಯನ್ ವರ್ಷಗಳಷ್ಟು ಬೃಹತ್ ಸಂಖ್ಯೆಯನ್ನು ಲೆಕ್ಕಹಾಕಿದ್ದಾರೆಂದರೆ ಇವರ ಸಂಖ್ಯಾ ಮೋಹ ಹಾಗೂ ಗಣಿತದಲ್ಲಿಯ ಪರಿಣತಿಯ ಬಗ್ಗೆ ಅರಿವುಂಟಾಗಬಹುದು. ಸೊನ್ನೆಯ ಉಪಯೋಗವೂ ಪ್ರಾಯಶಃ ಮಾಯಾ ಜನರಿಗೆ ತಿಳಿದಿತ್ತು. ಪಂಚಾಂಗಗಳನ್ನು ರೂಪಿಸಿದ ಮಾಯಾ ಜನರು ಕಾಲಗಣನೆಯನ್ನು ಬೃಹತ್ ಶಿಲ್ಪಸ್ಮಾರಕ ಸ್ತಂಭಗಳು, ಯಜ್ಞವೇದಿಗಳು, ಬೃಹತ್ ಸೋಪಾನಮಾರ್ಗಗಳು, ಬಾಗಿಲುವಾಡ ಹಾಗೂ ಗೋಡೆಗಳ ಮೇಲೆ ಕೆತ್ತಿ ಬಿಡಿಸಿದರು. ಆದರೆ ಇವರ ಚಿತ್ರಲಿಪಿ ಬರೆಹ ತುಂಬ ಸಂಕೀರ್ಣವಾದುದು. ಕೇವಲ ಸಂಖ್ಯೆಗೆ ಸಂಬಂಧಿಸಿದ ಕೆಲವು ಸಂಕೇತಗಳನ್ನಷ್ಟೇ ಪತ್ತೆ ಹಚ್ಚಲು ಸಾಧ್ಯವಾಗಿದೆ. ಈ ಬರೆಹದ ವಿಷಯ ಸ್ಥೂಲವಾಗಿ ತಿಳಿಯುತ್ತದಷ್ಟೇ. ಸಂಕೇತಗಳು ಭಾಗಶಃ ಧ್ವನ್ಯಾತ್ಮಕವೂ ಭಾಗಶಃ ಭಾವ ರೂಪಾತ್ಮಕವೂ ಆಗಿದ್ದ ಒಂದು ವಿಧದ ಚಿತ್ರಲಿಪಿಯಾಗಿವೆ, ಸು.850 ಸಂಕೇತಗಳು ಇದರಲ್ಲಿವೆ.

ಮಾಯಾ ಇಂಡಿಯನ್ನರ ಮಣ್ಣಿನ ಜಾಡಿ

ಮರದ ತೊಗಟೆಯನ್ನು ಜಜ್ಜಿ, ಅದರ ಮೇಲೆ ತೆಳುವಾಗಿ ಸುಣ್ಣ ಲೇಪಿಸಿ, ಅದರ ಮೇಲ್ಮೈಯಲ್ಲಿ ಚಿತ್ರಲಿಪಿ ಬರೆಹಗಳನ್ನೂ ರೇಖಾಚಿತ್ರಗಳನ್ನೂ ಮಾಯಾ ಜನರು ರಚಿಸಿದರು. ಇಂಥ ಹಸ್ತಪ್ರತಿಗಳು ಹಲವಾರಿದ್ದುವು. ಆದರೆ ಸ್ಪೇನಿನ ವಿಜಯಾನಂತರ ಬಿಷಪ್ ಡಿಯಾಗೊ ಡಿ ಲಂಡಾ ಎಂಬಾತನ ಆಜ್ಞೆಯ ಮೇರೆಗೆ ಇವೆಲ್ಲವನ್ನೂ ಕ್ಷುದ್ರಧರ್ಮಗ್ರಂಥಗಳೆಂದು ಸುಟ್ಟುಹಾಕಲಾಯಿತು. ಕೇವಲ ಮೂರು ಕೃತಿಗಳು ಡ್ರೆಸ್‌ಡೆನ್ ಕೋಡೆಕ್ಸ್, ಮ್ಯಾಡ್ರಿಡ್ ಕೋಡೆಕ್ಸ್ ಹಾಗೂ ಪ್ಯಾರಿಸ್ ಕೋಡೆಕ್ಸ್ (ಈ ಗ್ರಂಥಗಳನ್ನು ಸಂರಕ್ಷಿಸಿಟ್ಟಿರುವ ಸ್ಥಳಗಳ ಮೇಲೆ ಹೆಸರಿಸಲಾಗಿದೆ) ಲಭ್ಯವಾಗಿದೆ. ಇವುಗಳಲ್ಲಿ ಪ್ರಾಚೀನತಮವಾದ ಡ್ರೆಸ್‌ಡೆನ್ ಕೋಡೆಕ್ಸ್ ಅನ್ನು ಫಾಸ್ಟ್‌ಮನ್ ಎಂಬ ಜರ್ಮನ್ ಪುರಾತತ್ತ್ವಶಾಸ್ತ್ರಜ್ಞ ಅರ್ಥೈಸುವಲ್ಲಿ, ವಿಶೇಷವಾಗಿ ಕಾಲಾನುಪೂರ್ವಿಗೆ ಸಂಬಂಧಿಸಿದ ಗಣನೀಯ ಪ್ರಮಾಣದ ವಿವರಗಳನ್ನು ಪಡೆಯುವಲ್ಲಿ ಬಲುಮಟ್ಟಿಗೆ ಸಫಲನಾದ.

ಮಾಯಾ ಜನರ ವಾಸ್ತುಶಿಲ್ಪಕಲೆ ಧರ್ಮಕ್ಕೆ ನಿಕಟವಾಗಿ ಸಂಬಂಧಿಸಿದುದು, ಸ್ತಂಭ, ಪೀಠ ಹಾಗೂ ದೇಗುಲಭಾಗಗಳಲ್ಲಿ ದೇವದೇವತೆಯರ ಧಾರ್ಮಿಕ ಸನ್ನಿವೇಶಗಳ ಉಬ್ಬುಗೆತ್ತನೆಯ ಅಲಂಕರಣವಿರುತ್ತಿತ್ತು. ವಿನ್ಯಾಸಗಳು ಒತ್ತೊತ್ತಾಗಿದ್ದು ಅತಿಯೆಂದು ಈಗ ತೋರಬಹುದು. ಆದರೆ ಮಾಯಾ ಸಂಪ್ರದಾಯಾನುಸಾರ ದೇವ ದೇವತೆಗಳ ಎಲ್ಲ ಲಕ್ಷಣ ಸ್ವರೂಪಗಳನ್ನೂ ಇವರ ಶಿಲ್ಪಕಲೆ ಪ್ರತಿನಿಧಿಸುತ್ತದೆ. ದೈನಂದಿನ ಬದುಕಿನ ಚಿತ್ರಕ್ಕೆ ಶಿಲ್ಪಕಲೆಗಿಂತ ಚಿತ್ರಕಲೆಯಲ್ಲಿ ಹೆಚ್ಚು ಸ್ವಾತಂತ್ರ್ಯ ದೊರೆತಿದೆ. ಮೃಣ್ಪಾತ್ರೆ ಹಾಗೂ ದೇಗುಲ ಗೋಡೆಗಳ ಮೇಲೆ ಚಿತ್ರಕಲೆಯ ಕೌಶಲ ಗೋಚರಿಸುತ್ತದೆ. ಗಾಢವರ್ಣಗಳ ಬಳಕೆ ಮತ್ತು ನೆಳಲಿನ ವಿನ್ಯಾಸದ ಅನುಪಸ್ಥಿತಿಗಳಿಂದಾಗಿ ಇವರ ಚಿತ್ರಗಳು ಆಲಂಕಾರಿಕವಾಗಿ ತೋರುತ್ತವೆ.

ಎತ್ತರದ ಪಿರಮಿಡ್ಡುಗಳ ಮೇಲಿನ ಚಪ್ಪಟ್ಟೆಯ ಭಾಗದಲ್ಲಿ ಪುಟ್ಟ ದೇಗುಲಗಳ ನಿರ್ಮಾಣ ಮಾಯಾ ವಾಸ್ತುಶೈಲಿಯ ವೈಶಿಷ್ಟ್ಯ. ದೇಗುಲಗಳಿಗೆ ಮೆಟ್ಟಲೇರಿ ಅರ್ಚಕರು ಹೋಗಿ ಪೂಜೆ ಸಲ್ಲಿಸಿ ಬರುತ್ತಿದ್ದರು. ಕೆಳಗಣ ಅಂಗಣದಲ್ಲಿ ಸಾಮಾನ್ಯ ಜನ ನಿಂತು ಉತ್ಸವಾದಿಗಳನ್ನು ನೋಡಲು ಅವಕಾಶ ಕಲ್ಪಿಸಲಾಗಿದ್ದಿತು. ಎತ್ತರದ, ಆದರೆ ಕಿರಿದಾದ ಕಿಟಕಿಗಳಿಲ್ಲದ ಹಲವು ಕೋಣೆಗಳ ಕಟ್ಟಡಗಳನ್ನೂ ಈ ಜನ ನಿರ್ಮಿಸಿದ್ದರು. ಇವು ಧಾರ್ಮಿಕ ಸಮಾರಂಭ ಸಮಯದಲ್ಲಿ ಅರ್ಚಕರಿಗೆ ನಿದ್ರಾಕೊಠಡಿಗಳಾಗಿದ್ದುವೆಂದು ತೋರುತ್ತದೆ; ಹಾಗೆಯೇ ಪದಾರ್ಥಸಂಗ್ರಹಣೆಯ ಉಗ್ರಾಣವೂ ನ್ಯಾಯಾಡಳಿತದ ಕೇಂದ್ರವೂ ಆಗಿದ್ದವೆಂದು ತೋರುತ್ತದೆ. ವಾಸ್ತವವಾಗಿ ಮಾಯಾ ವಾಸ್ತುಶೈಲಿಯಲ್ಲೆಲ್ಲೂ ಕಮಾನು ಕಂಡುಬರುವುದಿಲ್ಲ. ಬೋದಿಗೆ ಕಟ್ಟಡಗಳನ್ನಷ್ಟೇ ನಿರ್ಮಿಸಲು ಇವರಿಗೆ ಸಾಧ್ಯವಾಯಿತು. ಈ ಎಲ್ಲ ನಿರ್ಮಾಣಗಳನ್ನು ಇವರು ಕಲ್ಲಿನ ಉಪಕರಣಗಳಿಂದಲೇ ಮಾಡಿದ್ದರೆನ್ನುವುದು ಗಮನಾರ್ಹ.

ಮಾಯಾ ಶಿಲ್ಪಕಲೆ ಪ್ರಪಂಚದ ಶ್ರೇಷ್ಠ ಕಲಾಶೈಲಿಗಳಲ್ಲೊಂದೆಂದು ಪರಿಗಣಿಸಲ್ಪಟ್ಟಿದೆ. ಶಿಲ್ಪಸ್ಮಾರಕ ಸ್ತಂಭಗಳು–ಸ್ಟೀಲಿ–ಈ ಶೈಲಿಯ ವೈಶಿಷ್ಟ್ಯ. ಸರ್ಪ, ಎರಡು ತಲೆಯ ಡ್ರ್ಯಾಗನ್, ಗರುಡ, ಮೂಗಿನ ದೇವತೆ ಮುಂತಾದವು ಹೆಚ್ಚು ಪ್ರತಿನಿಧಿತವಾಗಿರುವ ಶಿಲ್ಪಗಳು. ದಿವಂಗತ ಸಿಲ್ವೇನಸ್ ಮೋರ್ಲಿ ಮತ್ತು ಆತನ ಸಹೋದ್ಯೋಗಿಗಳು ವಾಕ್ಷಕ್ಟೂನ್ ಎಂಬಲ್ಲಿ ಅನ್ವೇಷಿಸಿದ ಹಲವಾರು ಸಾಕ್ಷ್ಯಾಧಾರಗಳಲ್ಲಿ ಸ್ಟೆಲಾನ್ಸೈನ್ ಎಂದು ಪರಿಚಿತವಾಗಿರುವ ಪ್ರಾಚೀನ ಶಿಲ್ಪಸ್ಮಾರಕ ಸ್ತಂಭ ಗಮನಾರ್ಹವಾದುದು. ಇದರ ಮೇಲೆ ಕೆತ್ತಿರುವ ತೇದಿ 328ಕ್ಕೆ ಸರಿಹೊಂದುತ್ತದೆ.

ಮಾಯಾ ಜನರ ಕುಂಭಕಲೆ ನಯನಾಜೂಕುಗಳಲ್ಲಿ ಉನ್ನತಮಟ್ಟ ಸಾಧಿಸಿತ್ತು. ಹೊಳಪುಳ್ಳ ನಯವಾದ ಮೃಣ್ಪಾತ್ರೆಗಳ ಮೇಲೆ ಜ್ಯಾಮಿತಿ ವಿನ್ಯಾಸಗಳಿಂದ ಮತ್ತು ಧಾರ್ಮಿಕ ಜೀವನ ದೃಶ್ಯಗಳಿಂದ ಅಲಂಕರಿಸಿದುದನ್ನು ಕಾಣುತ್ತೇವೆ.

ಮಾಯಾ ಜನ ಪ್ರಧಾನವಾಗಿ ಕೃಷಿಕರು. ಇವರಲ್ಲಿ ಕುಂಬ್ರಿ ಬೇಸಾಯ ಪದ್ಧತಿ ಪ್ರಚಲಿತವಿತ್ತು. ಕಲ್ಲಿನ ಕೊಡಲಿಗಳಿಂದ ಕಾಡನ್ನು ಕಡಿದು ಸುಟ್ಟು ಹೊಲಗಳನ್ನು ನಿರ್ಮಿಸುತ್ತಿದ್ದರು. ಅಗೆಯುವ ಕೋಲಿನಿಂದ ಬೂದಿಯ ನೆಲದಲ್ಲಿ ಉಳುಮೆ ಮಾಡಿ ಬಿತ್ತನೆ ಮಾಡುತ್ತಿದ್ದರು. ಇವರ ಬೆಳೆಗೆ ಮಾರಕ ಕೀಟಗಳ ಕಾಟವಿರಲಿಲ್ಲ. ಆದರೆ ಇವರ ಅಗೆಯುವ ಕೋಲುಗಳು ಬೇಗ ಮೊಂಡಾಗುತ್ತಿದ್ದವಾದ್ದರಿಂದ ಮೇಲಿಂದ ಮೇಲೆ ಅವನ್ನು ತಯಾರಿಸಿಕೊಳ್ಳ ಬೇಕಾಗುತ್ತಿತ್ತು. ಕಾಳುಕಡ್ಡಿ, ಬೀನ್ಸ್, ಗೆಣಸು, ಕುಂಬಳ, ಹತ್ತಿ, ಹೊಗೆಸೊಪ್ಪು, ಮರಗೆಣಸು ಹಾಗೂ ಕಕೇವೂ ಇವರ ಪ್ರಧಾನ ಬೆಳೆಗಳು. ಜೇನುಸಾಕಣೆ ಇತ್ತು.

ಚಕ್ರಗಳಿರುವ ವಾಹನಗಳ ಪರಿಚಯ ಮಾಯಾ ಜನರಿಗಿರಲಿಲ್ಲ. ನಗರಗಳನ್ನು ಅಥವಾ ನಗರದ ಇತರ ಭಾಗಗಳನ್ನು ಸಂಪರ್ಕಿಸಲು ಭೂಮಾರ್ಗಗಳಿದ್ದುವು. ಕಲ್ಲುಹಾಸಿನ ಈ ರಸ್ತೆಗಳು ಸು.9ಮೀ ಅಗಲವಾಗಿದ್ದುವು. ಪ್ರಾಯಶಃ ಧಾರ್ಮಿಕ ಮತ್ತು ನಾಗರಿಕ ಉತ್ಸವಾದಿ ಸಮಾರಂಭಗಳಿಗೆ ಇವನ್ನು ಬಳಸುತ್ತಿದ್ದಿರಬಹುದು. ಗಣ್ಯರನ್ನು ಗುಲಾಮರು ಮೇನಾಗಳಲ್ಲಿ ಹೊತ್ತು ಸಾಗಿಸುತ್ತಿದ್ದರು. ವ್ಯಾಪಾರಿಗಳು ಈ ರಸ್ತೆಗಳನ್ನು ಬಳಸುತ್ತಿದ್ದರಾದರೂ ಅನುಕೂಲತೆ ಇದ್ದ ಕಡೆಗಳಲ್ಲೆಲ್ಲ ಅವರು ಜಲಮಾರ್ಗವನ್ನೇ ಆರಿಸಿಕೊಂಡು ದೋಣಿಗಳಲ್ಲಿ ಸಾಮಾನು ಸರಂಜಾಮುಗಳೊಡನೆ ಪ್ರಯಾಣಿಸುತ್ತಿದ್ದರು. ತಗ್ಗುಗಾಡಿನ ಜನ ಚಿರತೆಚರ್ಮ, ಗರಿ, ರಾಳ, ಸುಣ್ಣ, ಫ್ಲಿಂಟ್ ಶಿಲೆಯ ಚಾಕು, ತಾಳೆಮರದ ಖಾದ್ಯಭಾಗ ಇತ್ಯಾದಿಗಳನ್ನು ಕೊಟ್ಟು ಬದಲಿಗೆ ಪ್ರಸ್ಥಭೂಮಿಯ ಜನರಿಂದ ಜೇಡಶಿಲೆ, ಕ್ವೆಟ್‌ಜಲ್ ಗರಿ, ಫ್ಲಿಂಟ್ ಶಿಲೆಯ ಚಾಕುಗಳ ತಯಾರಿಕೆಗೆ ಅವಶ್ಯವಾದ ಕಾಚಶಿಲೆ ಮೊದಲಾದವನ್ನು ಪಡೆಯುತ್ತಿದ್ದರು. ಯುಕಟಾನ್ ಪ್ರದೇಶ ಹೊಂಡುರಸ್‌ಗೆ ಉಪ್ಪು ಹಾಗೂ ಕಿನ್‌ಕಾಪು ಹತ್ತಿಯನ್ನು ರವಾನಿಸಿ ಅಲ್ಲಿಂದ ಕಕೇವೂ ಬೀಜ ತರಿಸಿಕೊಳ್ಳುತ್ತಿತ್ತು. ಇದನ್ನು ಹಣದ ರೀತಿಯಲ್ಲಿ ಚಲಾವಣೆಗೆ ಬಳಸಲಾಗುತ್ತಿತ್ತು.

ಆಡಳಿತ ವ್ಯವಸ್ಥೆ: ಮೊದಮೊದಲು ಕಾಲದ ಮಾಯಾ ಆಡಳಿತದ ಬಗ್ಗೆ ಏನೂ ತಿಳಿದುಬಂದಿಲ್ಲ. ಪ್ರಾಯಶಃ ಪ್ರತಿಯೊಂದು ನಗರವೂ ತನ್ನ ಸುತ್ತಮುತ್ತಲಿನ ಪ್ರದೇಶದ ಆಡಳಿತವನ್ನು ನಡೆಸುತ್ತಿದ್ದಿತು. ಪ್ರಾಚೀನ ಗ್ರೀಸ್‌ನಲ್ಲಿದ್ದಂತೆ ನಗರಾಡಳಿತ ಪದ್ಧತಿ ಇದ್ದಿರಬಹುದು. ಪ್ರತಿಯೊಂದರಲ್ಲೂ ಆಡಳಿತಗಾರರಿದ್ದರು. ನಗರಪ್ರಾಂತಗಳ ಒಕ್ಕೂಟವಿದ್ದಿರುವ ಸಾಧ್ಯತೆಯೂ ಉಂಟು. ಅನಂತರದ ಕಾಲದಲ್ಲಿ ಚೇಚೆನ್ ಈಟ್ಸಾ ಮತ್ತು ಮಾಯಪನ್ ನಗರಗಳು ಹೆಚ್ಚು ಪ್ರದೇಶವನ್ನಾಳಿ, ಆ ಭಾಗದ ನಗರ ಪ್ರಾಂತಗಳ ಆಡಳಿತವನ್ನು ನಿಯಂತ್ರಿಸಿದವು.

ಈಗಿನ ಮಾಯಾ: ಮಾಯಾ ನಾಗರಿಕತೆ ಇದ್ದ ಪ್ರದೇಶದಲ್ಲಿಂದು ಸು. 15 ಲಕ್ಷಕ್ಕೂ ಹೆಚ್ಚು ಜನ ವಾಸವಾಗಿದ್ದಾರೆ. ಚೋಲ್, ಲಕಾನ್‌ಡನ್, ಯುಕಟೆಕ್ ಮುಂತಾದ ಅನೇಕ ಬುಡಕಟ್ಟುಗಳಿಗೆ ಸೇರಿದ ಈ ಜನ ಇಂದಿನ ಮೆಕ್ಸಿಕೊ ಹಾಗೂ ಮಧ್ಯ ಅಮೆರಿಕದಲ್ಲಿ ಮಾಯಾ ಭಾಷೆಯಿಂದ ಬೆಳೆವಣಿಗೆ ಹೊಂದಿರುವ ಸು.20 ಭಾಷೆಗಳನ್ನು ಆಡುತ್ತಾರೆ. ರೋಮನ್ ಕೆಥೊಲಿಕರಾಗಿ ಪರಿವರ್ತಿತರಾಗಿದ್ದರೂ ಇವರು ಪ್ರಾಚೀನ ಧಾರ್ಮಿಕ ಆಚರಣೆಗಳಲ್ಲಿ ಕೆಲವನ್ನು ಈಗಲೂ ಅನುಸರಿಸುತ್ತಾರೆ. (ಎಚ್.ಎಂ.ಎನ್.ಆರ್.)

**ಮಾರ್ಕ್ಸ್, ಕಾರ್ಲ್:** 1818–83. ವೈಜ್ಞಾನಿಕ ಸಮಾಜವಾದದ ಪ್ರವರ್ತಕ. ಜರ್ಮನಿಯ ರೈನ್ ಪ್ರದೇಶದ ಟ್ರಿಯರ್ ನಗರದಲ್ಲಿ 1818 ಮೇ 5 ರಂದು ಜನಿಸಿದ. ಈತನ ತಂದೆ ಒಬ್ಬ ಯಶಸ್ವೀ ವಕೀಲನಾಗಿದ್ದ. ಜನ್ಮತಃ ಯಹೂದ್ಯ, ಆದರೆ ಕಾರ್ಲ್ ಹುಟ್ಟಿದ 6 ವರ್ಷಗಳ ಅನಂತರ ಪ್ರಾಟೆಸ್ಟಂಟ್ ಮತದ ಅನುಯಾಯಿಯಾದ (1824). ಇವರದು ನೆಮ್ಮದಿಯ ಕುಟುಂಬ. ಕಾರ್ಲ್‌ನ ಆರಂಭದ ಶಿಕ್ಷಣ ಟ್ರಿಯರ್ ಪಟ್ಟಣದ ಮೇಲು ದರ್ಜೆಯ ವಿದ್ಯಾಲಯದಲ್ಲಿ(ಜಿಮ್ನಾಸಿಯಮ್) ನಡೆಯಿತು. ಮುಂದೆ ಬಾನ್‌ನಲ್ಲೂ ಬರ್ಲಿನ್ನಿನಲ್ಲೂ ವಿದ್ಯಾಭ್ಯಾಸ ಮುಂದುವರಿಸಿ ನ್ಯಾಯಶಾಸ್ತ್ರ, ಇತಿಹಾಸ ಮತ್ತು ತತ್ತ್ವಶಾಸ್ತ್ರ ಕಲಿತ. ಮಾರ್ಕ್ಸ್ ತನ್ನ ಶಾಲಾಭ್ಯಾಸವನ್ನು ಕಡೆಗಣಿಸದಿದ್ದರೂ ಅಂದಿನ ಪದ್ಧತಿಯ ಪ್ರಕಾರ ವಿದ್ಯಾರ್ಥಿಗಳು ಬಾಯಿಪಾಠಮಾಡಬೇಕಾಗಿದ್ದ ಧಾರ್ಮಿಕ ಗ್ರಂಥಗಳ ಬಗೆಗೆ ಹೆಚ್ಚಿನ ಆಸಕ್ತಿ ತೋರಲಿಲ್ಲ. ಡೆಮೊಕ್ರಿಟಸ್ ಮತ್ತು ಎಪಿಕ್ಯೂರಸ್ಸರ ತತ್ತ್ವಶಾಸ್ತ್ರದ ಮೇಲೆ ಪ್ರಬಂಧ ರಚಿಸಿ ಯೇನ ವಿಶ್ವವಿದ್ಯಾಲಯದಿಂದ ಡಾಕ್ಟೊರೇಟ್ ಪದವಿ ಪಡೆದ (1841). ಈ ಪ್ರಬಂಧದ ಪ್ರಕಾರ ಮಾರ್ಕ್ಸ್ ಹೆಗೆಲ್ಲನ ಭಾವನಾವಾದೀ ಅನುಯಾಯಿಯಾಗಿದ್ದಿರಬಹುದೆಂದು ಅನ್ನಿಸಿದರೂ ಹೆಗೆಲ್ಲನ ವಿಚಾರಧಾರೆ ಮಾರ್ಕ್ಸ್‌ನ ಪೂರ್ಣ ಒಪ್ಪಿಗೆ ಪಡೆದಿರಲಿಲ್ಲವೆಂದು ವೇದ್ಯವಾಗುತ್ತದೆ. ಬರ್ಲಿನ್‌ನಲ್ಲಿ ಮಾರ್ಕ್ಸ್ ಯುವ ಹೆಗೆಲಿಯನ್ನರ (ವಾಮ ಹೆಗೆಲಿಯನ್ನರ) ಜೊತೆ ಕೂಡಿ ಅನೇಕ ಕೆಲಸ ಮಾಡಿದ. ಈ ವೇಳೆಗೆ ಆತ ಇನ್ನೂ ಭೌತವಾದೀ ಮನೋಧರ್ಮವನ್ನು ಅಂಗೀಕರಿಸಿರಲಿಲ್ಲ. ಮಾರ್ಕ್ಸ್ ಪ್ರಾಧ್ಯಾಪಕನಾಗಲು ಬಯಸಿದ. ಆದರೆ ಅಂದಿನ ಪರಿಸ್ಥಿತಿಯಲ್ಲಿ ಜರ್ಮನಿ ಪ್ರತಿಗಾಮೀ ನೀತಿ ತಳೆದಿದ್ದುದರಿಂದ ಇದು ಸಾಧ್ಯವಾಗಲಿಲ್ಲ. ಹೀಗಾಗಿ ಈತ ಪತ್ರಿಕೋದ್ಯಮವನ್ನು ಅವಲಂಬಿಸಬೇಕಾಯಿತು.

1842ರಲ್ಲಿ ರೈನ್ ಪತ್ರಿಕೆಯ ರೈನಿಷ್ ತ್ಸೈತೂಂಗ್ ಸಂಪಾದಕನಾಗಿ ಕೆಲಸ ಆರಂಭಿಸಿದ. ಇದರಲ್ಲಿ ಪ್ರಕಟವಾದ ಕ್ರಾಂತಿಕಾರಿ ಮತ್ತು ಪ್ರಜಾಸತ್ತಾತ್ಮಕ ಲೇಖನಗಳಿಂದ ಕೆರಳಿದ ಸರ್ಕಾರ 1843 ಜನವರಿಯಲ್ಲಿ ಈ ಪತ್ರಿಕೆಯನ್ನು ನಿಷೇಧಿಸಿತು. ಈತ ಸಂಪಾದಕನ ಕೆಲಸಕ್ಕೆ ರಾಜೀನಾಮೆ ನೀಡಬೇಕಾಯಿತು. ಪತ್ರಿಕೋದ್ಯಮದಲ್ಲಿ ತೊಡಗಿದ್ದಾಗ ಈತ ತನಗೆ ರಾಜ್ಯಶಾಸ್ತ್ರ ಮತ್ತು ರಾಜಕೀಯ ಅರ್ಥಶಾಸ್ತ್ರದಲ್ಲಿ ಸಾಕಷ್ಟು ಪರಿಣತಿ ಇಲ್ಲವೆಂದು ಮನಗಂಡು ಅವನ್ನು ಗಾಢವಾಗಿ ಅಭ್ಯಸಿಸತೊಡಗಿದ.

1843ರಲ್ಲಿ ಮಾರ್ಕ್ಸ್ ತನ್ನ ಬಾಳಗೆಳತಿಯಾದ ಜೆನ್ನಿಯನ್ನು ಮದುವೆಯಾದ. ಇವರದು ತುಂಬಾ ಅನ್ಯೋನ್ಯ ದಾಂಪತ್ಯ. ಈ ದಂಪತಿಗಳು ವಾಮ ಹೆಗಲಿಯನ್ ಆಗಿದ್ದ ಆರ್ನಾಲ್ಡ್ ರೂಬ್ ಜೊತೆಗೂಡಿ ಪ್ಯಾರಿಸ್ಸಿನಲ್ಲಿ ತಮ್ಮ ಮುಂದಿನ ಚಟುವಟಿಕೆಗಳನ್ನು ಆರಂಭಿಸಿದರು. ಇಲ್ಲಿ ಜರ್ಮನ್–ಫ್ರೆಂಚ್ ವಾರ್ಷಿಕ ಎಂಬ ನಿಯತಕಾಲಿಕೆಯನ್ನು ಪ್ರಕಟಿಸತೊಡಗಿದರು. ಇದನ್ನು ಜರ್ಮನಿಯಲ್ಲಿ ರಹಸ್ಯವಾಗಿ ಹಂಚಲು ಕಷ್ಟಸಾಧ್ಯವಾದ್ದರಿಂದ ಮೊದಲ ಸಂಚಿಕೆ ಪ್ರಕಟವಾದ ಕೆಲವೇ ದಿನಗಳಲ್ಲಿ ನಿಲ್ಲಿಸಬೇಕಾಯಿತು.



ಅಂದಿನ ದಿನಗಳಲ್ಲಿ ಫ್ರಾನ್ಸ್ ಬೂರ್ಜ್ವಾ ಪದ್ಧತಿಯ ಸಮಾನತೆ ಸ್ವಾತಂತ್ರ್ಯ ಹಾಗೂ ಭ್ರಾತೃತ್ವಗಳ ಉನ್ನತ ಧ್ಯೇಯಗಳನ್ನು ಮರೆತು ಸ್ವಾರ್ಥ ಸಂಪತ್ಸಂಗ್ರಹಣೆಯಲ್ಲಿ ಆಸಕ್ತಿ ವಹಿಸಿತ್ತು. ಇಂಥ ಬೂರ್ಜ್ವಾ ಸಮಾಜವನ್ನು ಯುರೋಪಿನ ಇತರ ರಾಷ್ಟ್ರಗಳಿಂದ ಹೆಚ್ಚಾಗಿ ಇಲ್ಲಿ ಟೀಕೆಗೊಳಪಡಿಸಲಾಗಿತ್ತು. ಸಮಾಜವಾದೀ ಚಿಂತನೆಗಳು ಪ್ರಥಮವಾಗಿ ಇಲ್ಲೇ ಕಾಣಿಸಿಕೊಂಡಿತು. ಮಾರ್ಕ್ಸ್ ಕೂಡ ಇಲ್ಲೇ ವೈಜ್ಞಾನಿಕ ಸಮಾಜವಾದವನ್ನು ರೂಪಿಸಿಕೊಂಡ.

ಸಿದ್ಧಾಂತವನ್ನು ವಸ್ತುಸ್ಥಿತಿಯೊಂದಿಗೆ ಕೂಡಿಸಲು ಮಾರ್ಕ್ಸ್ ಜರ್ಮನಿಯ ಕೈ ಕಸಬುದಾರರ ಮತ್ತು ಫ್ರೆಂಚ್ ಕಾರ್ಮಿಕರ ಜೊತೆಗೂಡಿ ಕೆಲಸ ಮಾಡಲು ಉಪಕ್ರಮಿಸಿದ. ಕ್ರಾಂತಿಕಾರಿ ಕಾರ್ಮಿಕರೊಡನೆ ಕೆಲಸಮಾಡಲು ನಿರತನಾದಾಗ ಶ್ರಮಜೀವಿಗಳಲ್ಲಿದ್ದ ನೈತಿಕ ಶಕ್ತಿ ಜ್ಞಾನದಾಹ ಮತ್ತು ಉದಾತ್ತ ಮಾನವೀಯತೆಗಳಿಂದ ಪ್ರಭಾವಿತನಾದ. ಫ್ರೆಡರಿಕ್ ಎಂಗೆಲ್ಸ್‌ನ ಪರಿಚಯವಾದದ್ದು ಇಲ್ಲಿಯೇ. ಇವರಿಬ್ಬರೂ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಪಾಲುಗೊಂಡದ್ದರಿಂದ ಇವರನ್ನು ಫ್ರಾನ್ಸ್‌ನಿಂದ ಹೊರದೂಡಲಾಯಿತು. ಇಬ್ಬರೂ ಬ್ರುಸ್ಸೆಲ್ಸ್ ಪಟ್ಟಣಕ್ಕೆ ತೆರಳಿದರು. ಅಲ್ಲಿ ಕಮ್ಯುನಿಸ್ಟ್ ಲೀಗ್ ಎಂಬ ರಹಸ್ಯ ಸಂಸ್ಥೆ ಸೇರಿ ಅದರ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು. ಈ ಸಂಸ್ಥೆಯ ಕೋರಿಕೆಯಂತೆ ಇವರು ಹೊಸ ಜಾಗತಿಕ ಮನೋಧರ್ಮದಿಂದ ಕೂಡಿರುವ ಮತ್ತು ಪ್ರಪಂಚ ಶ್ರಮಜೀವಿಗಳ ಕ್ರಾಂತಿಕಾರಿ ಪಾತ್ರ ನಿರೂಪಿಸುವ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ರಚಿಸಿದರು. ಈ ವೇಳೆಗೆ ಮಾರ್ಕ್ಸ್ ಪೂರ್ಣವಾಗಿ ಭೌತವಾದಿತತ್ತ್ವದ ಅನುಯಾಯಿಯಾಗಿದ್ದ.

ಈ ವೇಳೆಯಲ್ಲಿ ಬ್ರುಸ್ಸೆಲ್ಸ್ ನಗರದಲ್ಲಿದ್ದ ಜರ್ಮನ್ ವಲಸೆಗಾರರನ್ನು ಬೆಲ್ಜಿಯಮ್ಮಿನ ಸರ್ಕಾರ ತೀವ್ರ ಪ್ರತಿಬಂಧಕಗಳಿಗೆ ಒಳಪಡಿಸಿತ್ತು. ಇವನ್ನು ಪ್ರತಿಭಟಿಸಲು ಜರ್ಮನ್ ಕ್ರಾಂತಿಕಾರರು ಸಿದ್ಧರಾದರು. 1848 ಫೆಬ್ರವರಿ ಕ್ರಾಂತಿ ಆರಂಭವಾದಾಗ ಮಾರ್ಕ್ಸ್‌ನನ್ನು ಬೆಲ್ಜಿಯಂನಿಂದ ಹೊರದೂಡಲಾಯಿತು. ಮುಂದೆ ಈತ ಕೊಲೋನ್ ಪಟ್ಟಣ ಸೇರಿ ಹೊಸ ರೈನ್ ಪತ್ರಿಕೆಯ ಸಂಪಾದಕನಾದ. ಈ ಪತ್ರಿಕೆಯ ಮೂಲಕ ಈತ ಕ್ರಾಂತಿಕಾರಿ ಚಟುವಟಿಕೆಗಳಿಗೆ ಇತ್ತ ಬೆಂಬಲದ ಕಾರಣವಾಗಿ ಇವನನ್ನು ಜರ್ಮನಿಯಿಂದಲೂ ಗಡಿಪಾರು ಮಾಡಲಾಯಿತು. ಮತ್ತೆ ಪ್ಯಾರಿಸ್ಸಿಗೆ ತೆರಳಿದ. ಅಲ್ಲಿಯೂ ಅಂದಿನ ಸರ್ಕಾರ ಇವನನ್ನು ಉಳಿಯಬಿಡಲಿಲ್ಲ. ದೇಶಭ್ರಷ್ಟ ಮಾರ್ಕ್ಸ್ ಮುಂದೆ ಲಂಡನ್ ತಲುಪಿ ಜೀವನದ ಕೊನೆಯ ತನಕವೂ ಅಲ್ಲಿಯೇ ಇದ್ದ. ರಾಜಕೀಯ ದೇಶಭ್ರಷ್ಟ ಮಾರ್ಕ್ಸನ ಜೀವನ ಅಸಂಖ್ಯ ಸಂಕಷ್ಟಗಳಿಂದ ಕೂಡಿದ್ದಿತು ಮತ್ತು ಎಂಗೆಲ್ಸ್‌ನ ನೆರವಿನಿಂದ ಲಂಡನ್ನಿನಲ್ಲಿ ತನ್ನ ಬದುಕು ಸಾಗಿಸಿದ. ಇಲ್ಲಿಯೇ ಈತನ ಮೇರುಕೃತಿಯಾದ ಬಂಡವಾಳ (ದಾಸ್ ಕ್ಯಾಪಿಟಲ್) ರಚನೆ ಆದದ್ದು.

1860 ಮತ್ತು 1870 ರ ನಡುವೆ ನಡೆಯುತ್ತಿದ್ದ ಪ್ರಜಾಸತ್ತಾತ್ಮಕ ಚಟುವಟಿಕೆಗಳಲ್ಲಿ ಮಾರ್ಕ್ಸ್ ನವಚೈತನ್ಯದಿಂದ ಪಾಲುಗೊಂಡ. 1864ರಲ್ಲಿ ಸ್ಥಾಪಿತವಾದ ಪ್ರಥಮ ಇಂಟರ್‌ನ್ಯಾಷನಲ್‌ನಲ್ಲಿ ಕಾರ್ಮಿಕ ವರ್ಗದ ಮುನ್ನಡೆಗೆ ಶ್ರಮವಹಿಸಿ ಉತ್ಸಾಹದಿಂದ ದುಡಿದ. ಈ ಸಂಸ್ಥೆಯಲ್ಲಿ ವಹಿಸಿದ ಶ್ರಮದ ಕಾರಣವಾಗಿ ಆರೋಗ್ಯ ಹದಗೆಟ್ಟಿತು. ಇಂಥ ದುರ್ಭರ ಪರಿಸ್ಥಿತಿಯಲ್ಲೂ ಈತ ಬಂಡವಾಳದ ರಚನೆಯನ್ನು ಮುಂದುವರಿಸಿದ. ಆದರೆ ಈತನನ್ನು ತೀವ್ರವಾಗಿ ಬಾಧಿಸುತ್ತಿದ್ದ ಅನಾರೋಗ್ಯ ಈ ಕೃತಿಯ ಮೊದಲ ಸಂಪುಟದ ವಿನಾ ಇತರ ಎರಡು ಸಂಪುಟಗಳನ್ನು ಪೂರೈಸಲು ಅವಕಾಶ ಕೊಡಲಿಲ್ಲ. ಈತ 1883 ಮಾರ್ಚ್ 14 ರಂದು ಲಂಡನ್ನಿನಲ್ಲಿ ನಿಧನನಾದ. ಮಾರ್ಕ್ಸ್‌ವಾದಿ ಸಿದ್ಧಾಂತ: ಮಾರ್ಕ್ಸ್‌ವಾದ ಒಂದು ಸಮಗ್ರ ವಿಶ್ವದೃಷ್ಟಿ. 19ನೆಯ ಶತಮಾನದ ಮೂರು ಪ್ರಧಾನ ಸೈದ್ಧಾಂತಿಕ ವಿಚಾರಧಾರೆಗಳಾದ ಜರ್ಮನಿಯ ತತ್ತ್ವಶಾಸ್ತ್ರ, ಇಂಗ್ಲೆಂಡಿನ ರಾಜಕೀಯ ಅರ್ಥಶಾಸ್ತ್ರ ಮತ್ತು ಫ್ರಾನ್ಸಿನ ಸಮಾಜವಾದಿ ಚಿಂತನೆ ಇವನ್ನು ಮಾರ್ಕ್ಸ್ ಗಾಢವಾಗಿ ಅಭ್ಯಾಸ ಮಾಡಿ ಮತ್ತು ವಿಮರ್ಶಿಸಿ ಇವುಗಳ ಆಧಾರದ ಮೇಲೆ ತನ್ನ ಸಿದ್ಧಾಂತವನ್ನು ರಚಿಸಿದ. ವರ್ಗ ಹೋರಾಟದ ಅನುಭವವನ್ನೆಲ್ಲ ಒಂದುಗೂಡಿಸಿ ಅದರ ಆಧಾರದ ಮೇಲೆ ಹೊಸ ಸಮಾಜದ ರೂಪುರೇಷೆಗಳನ್ನು ನಿರೂಪಿಸಿದ.

ಆದರೆ ಇತ್ತೀಚಿನ ಜಾಗತೀಕರಣದ ಹಿನ್ನೆಲೆಯಲ್ಲಿ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳು ಎಷ್ಟರ ಮಟ್ಟಿಗೆ ಪ್ರಸ್ತುತವೆಂಬುದನ್ನು ಆಲೋಚಿಸಬೇಕಾಗಿದೆ. ಏಕೆಂದರೆ ಪ್ರಪ್ರಥಮ ಬಾರಿಗೆ ಮಾರ್ಕ್ಸನ ಕಮ್ಯುನಿಷ್ಟ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಅಪಾರಪ್ರಗತಿ ಸಾಧಿಸಿದ್ದ ಸೋವಿಯತ್ ಒಕ್ಕೂಟ ವ್ಯವಸ್ಥೆಯೇ ಇಂದು ಛಿದ್ರಗೊಂಡಿದೆಯಲ್ಲದೆ, ಇಂದಿನ ರಷ್ಯ ಆರ್ಥಿಕ ನೆರವಿಗಾಗಿ ಇತರ ದೇಶಗಳನ್ನು ಅವಲಂಬಿಸಬೇಕಾದ ಸ್ಥಿತಿನಿರ್ಮಾಣವಾಗಿರುವುದು ದುರಂತ.

ಮಾರ್ಕ್ಸನ ಇತರ ಕೃತಿಗಳು: ಕ್ರಿಟೀಕ್ ಆಫ್ ಹೆಗಲ್ಸ್ ಡಾಕ್ಟ್ರಿನ್ ಆಫ್ ದಿ ಸ್ಟೇಟ್ (1843), ಆನ್ ದಿ ಜ್ಯೂಯಿಶ್ ಕ್ವೆಶ್ಚನ್ (1843), ಎ ಕಾಂಟ್ರಿಬ್ಯೂಷನ್ ಟು ದಿ ಕ್ರಿಟೀಕ್ ಆಫ್ ಹೆಗಲ್ಸ್ ಫಿಲಾಸಫಿ ಆಫ್ ರೈಟ್, ಇಂಟ್ರಡಕ್ಷನ್ (1843–44), ಎಕ್ಸ್‌ಪರ್ಟ್ಸ್ ಫ್ರಮ್ ಜೇಮ್ಸ್ ಮಿಲ್ಸ್ ಎಲಿಮೆಂಟ್ಸ್ ಆಫ್ ಪೊಲಿಟಿಕಲ್ ಎಕಾನಮಿ (1844), ಎಕನಾಮಿಕ್ ಅಂಡ್ ಫಿಲಾಸಫಿಕಲ್ ಮ್ಯಾನ್ಯುಸ್ಕ್ರಿಪ್ಟ್ಸ್ (1844), ಕ್ರಿಟಿಕಲ್ ನೋಟ್ಸ್ ಆನ್ ದಿ ಆರ್ಟಿಕಲ್ ದಿ ಕಿಂಗ್ ಆಫ್ ಪ್ರಷ್ಯ ಎಂಡ್ ಸೋಷಿಯಲ್ ರಿಫಾರ್ಮ್ (1844), ದಿ ಥಿಸೀಸ್ ಆಫ್ ಫೊಯರ್‌ಬಾಹ್ (1845), ದಿ ಪಾವರ್ಟಿ ಆಫ್ ಫಿಲಾಸಫಿ (1846–47), ವೇಜ್ ಲೇಬರ್ ಅಂಡ್ ಕ್ಯಾಪಿಟಲ್ (1847), ಮ್ಯಾನಿಫೆಸ್ಟೊ ಆಫ್ ಕಮ್ಯೂನಿಸ್ಟ್ ಪಾರ್ಟಿ(ಎಂಗೆಲ್ಸ್ ಜೊತೆ 1847–48), ದಿ ಕ್ಲಾಸ್ ಸ್ಟ್ರಗಲ್ ಇನ್ ಫ್ರಾನ್ಸ್ (1850), ದಿ ಏಟೀನ್ ಬ್ರೂಮೇರ್ ಆಫ್ ಲೂಯಿ ಬೊನೋಪಾರ್ಟ(1852), ರೆವಲೇಶನ್ಸ್ ಆನ್ ದಿ ಕೊಲೋನ್ ಕಮ್ಯುನಿಷ್ಟ ಟ್ರಯಲ್(1852), ಸ್ಪೀಚ್ ಅಟ್ ದಿ ಆನಿವರ್ಸರಿ ಆಫ್ ದಿ ಪೀಪಲ್ಸ್ ಪೇಪರ್ (1856), ಗ್ರುಂಡಿಸ್ಸೆ (1857–58), ಎ ಕಾಂಟ್ರಿಬ್ಯೂಷನ್ ಟು ದಿ ಕ್ರಿಟೀಕ್ ಆಫ್ ಪೊಲಿಟಿಕಲ್ ಎಕಾನಮಿ (1859), ಆರ್ಟಿಕಲ್ಸ್ ಇನ್ ಡೈ ಪ್ರೆಸ್ ಆನ್ ದಿ ಸಿವಿಲ್ ವಾರಿನ್ ಇನ್ ಯುನೈಟೆಡ್ ಸ್ಟೇಟ್ಸ್ (1861), ಥಿಯರೀಸ್ ಸರ್ಪ್ಲಸ್ ವ್ಯಾಲ್ಯು ಸಂಪುಟ 1,23 (1861–63), ಪ್ರೊಕ್ಲಮೇಷನ್ ಆನ್ ಪೋಲೆಂಡ್ (1863), ಇನಾಗ್ಯುರಲ್ ಅಡ್ರೆಸ್ ಆಫ್ ದಿ ಇಂಟರ್ ನ್ಯಾಷನಲ್ ವರ್ಕಿಂಗ್ ಮೇನ್ಸ್ ಅಸೋಸಿಯೇಷನ್ (1864), ಪ್ರಾವಿಷನಲ್ ರೂಲ್ಸ್ ಆಫ್ ದಿ ಇಂಟರ್ ನ್ಯಾಷನಲ್ ವರ್ಕಿಂಗ್ ಮೆನ್ಸ್ ಅಸೋಷಿಯೇಷನ್(1864), ವೇಜಸ್ ಪ್ರೈಸ್ ಅಂಡ್ ಪ್ರಾಫಿಟ್(1865). ಕಾರ್ಲ್‌ಮಾರ್ಕ್ಸ್ ಬದುಕಿದ್ದಾಗ 1867ರಲ್ಲಿ ದಾಸ್ ಕ್ಯಾಪಿಟಲ್‌ನ ಮೊದಲ ಸಂಪುಟ ಪ್ರಕಟಿಸಿದ. ಇವನು ತೀರಿಕೊಂಡ ಮೇಲೆ ಏಂಗೆಲ್ಸ್ 1885, 1894ರಲ್ಲಿ 2ನೆಯ, 3ನೆಯ ಸಂಪುಟ ಪ್ರಕಟಮಾಡಿದ. ಇನ್‌ಸ್ಟ್ರಕ್ಷನ್ಸ್ ಫಾರ್ ದಿ ಡೆಲಿಗೇಟ್ಸ್ ಟು ದಿ ಜಿನೀವ ಕಾಂಗ್ರೆಸ್ (1867), ರಿಪೋರ್ಟ್ ದಿ ಬ್ರಸೆಲ್ಸ್ ಕಾಂಗ್ರೆಸ್, ರಿಪೋರ್ಟ್ ಟು ದಿ ಬಾಸೆಸಲ್ ಕಾಂಗ್ರೆಸ್ (1869), ದಿ ಜನರಲ್ ಕೌನ್ಸಿಲ್ ಟು ದಿ ಫೆಡೆರಲ್ ಕೌನ್ಸಿಲ್ ಆಫ್ ಫ್ರೆಂಚ್ ಸ್ವಿಟ್ಸರ್ಲೆಂಡ್(ಎ ಸರ್ಕ್ಯುಲರ್ ಲೆಟರ್ (1870), ಫಸ್ಟ್ ಅಡ್ರಸ್ ಆಫ್ ದಿ ಜನರಲ್ ಕೌನ್ಸಿಲ್ ಆನ್ ಫ್ರ್ಯಾಂಕೊ– ಪ್ರಷ್ಯನ್ ವಾರ್ (1870), ಸೆಕೆಂಡ್ ಅಡ್ರೆಸ್ ಆಫ್ ದಿ ಜನರಲ್ ಕೌನ್ಸಿಲ್ ಆನ್ ದಿ ಫ್ರ್ಯಾಂಕೊ– ಪ್ರಷ್ಯನ್ ವಾರ್ (1870), ದಿ ಸಿವಿಲ್ ವಾರ್ ಇನ್ ಫ್ರಾನ್ಸ್ (1871), ರಿಪೋರ್ಟ್ ಟು ದಿ ಹೇಗ್ ಕಾಂಗ್ರೆಸ್ (1872), ಪೊಲಿಟಿಕಲ್ ಇಂಡಿಫರೆಂಟಿಸಮ್ (1874), ಕಾನ್ಸ್ ಪೆಕ್ಟಸ್ ಆಫ್ ಬಾಕುನಿನ್ಸ್ ಬುಕ್ ಸ್ಟ್ಯಾಟಿಸಮ್ ಅಂಡ್ ಅಥಾರಿಟಿ (1874–75), ಎ ಕ್ರಿಟೀಕ್ ಆಫ್ ದಿ ಗೋಥಾ ಪ್ರೋಗ್ರಾಮ್ (1875) – ಇವನ ಇತರ ಕೃತಿಗಳು.

ಇಂದಿನ ಸಮಾಜದ ಮೇಲೆ ಮಾರ್ಕ್ಸ್ ಸಿದ್ಧಾಂತದ ಪ್ರಭಾವ: ಕಮ್ಯೂನಿಸ್ಟ್ ಪ್ರಣಾಳಿಕೆ ಪ್ರಕಟವಾದಾಗ (1847–48)ಮಾರ್ಕ್ಸ್ ಸಿದ್ಧಾಂತ ಹುಟ್ಟಿತೆನ್ನಬಹುದು. ಅದು ಪ್ರಕಟವಾಗಿ ಇಂದಿಗೆ (2008) 160 ವರ್ಷಗಳಾಗುತ್ತ ಬರುತ್ತಿವೆ. ಅಂದಿನಿಂದ ಇಂದಿನ ತನಕ ಅದರ ಧ್ಯೇಯಗಳು, ಅದರಿಂದ ಪ್ರೇರಿತವಾದ ಚಳವಳಿಗಳು ಇತಿಹಾಸದಲ್ಲಿ ಮಹತ್ತ್ವದ ಸ್ಥಾನ ಪಡೆದಿವೆ. ತತ್ತ್ವ ಜನತೆಯ ಮನಸ್ಸನ್ನು ಸೆರೆ ಹಿಡಿದಾಗ ಅದು ವಸ್ತು ಶಕ್ತಿಯಾಗಿ ಪರಿಣಮಿಸುತ್ತದೆ ಎಂದು ಮಾರ್ಕ್ಸ್ ಹೇಳಿದ. ಈಗ ಮಾರ್ಕ್ಸನ ತತ್ತ್ವಗಳು ಪ್ರಪಂಚದ ಬಹು ಜನರ ಮನಸ್ಸನ್ನು ತನ್ನ ಕಡೆಗೆ ಸೆಳೆದಿದೆ. ಸಮಾಜವನ್ನು ಬದಲಾವಣೆ ಮಾಡಲು ಇವನ ಸಿದ್ಧಾಂತ ಒಂದು ಪ್ರಬಲ ಅಸ್ತ್ರವಾಗಿದೆ. (ಜಿ.ಎಚ್.ಆರ್.)

**ಮಾರ್ಟಿನ್, ಲೂಥರ್:** 1483–1546. ಜರ್ಮನಿಯ ಧರ್ಮಪ್ರವರ್ತಕ ಹಾಗೂ ಧರ್ಮ ಪುನರುಜ್ಜೀವನ ಪಿತಾಮಹ. ಪ್ರಾಟೆಸ್ಟಂಟ್ ಪಂಥದ ಸ್ಥಾಪಕ. ಹುಟ್ಟಿದ್ದು ಐಸಲ್‌ಬೆನ್‌ನ ಸಾಕ್ಸೊನಿಯಲ್ಲಿ. ಈತನ ತಂದೆ ಮಾನ್ಸ್‌ಫೀಲ್ಡ್ ಗಣಿಗಳಲ್ಲಿ ಕೆಲಸಮಾಡುತ್ತಿದ್ದ. ಮ್ಯಾಗ್ಡಬರ್ಗ್ ಐಸನಾಕ್ ಮತ್ತು ಎರ್‌ಫರ್ಟ್‌ಗಳಲ್ಲಿ ಈತನ ವಿದ್ಯಾಭ್ಯಾಸ ನಡೆಯಿತು. ಸು.8 ವರ್ಷದವನಾದಾಗ

ಎರ್‌ಫರ್ಟ್‌ನಲ್ಲಿದ್ದ ಅಗಸ್ಟಿನ್ನರ ಸಂನ್ಯಾಸಿ ಮಠ ಸೇರಿದ. ಈತ 1507ರಲ್ಲಿ ಆಚಾರ್ಯವರ್ಗಕ್ಕೆ ಅಭಿಷೇಕ ಹೊಂದಿ ಮೂರನೆಯ ವರ್ಷವೇ ವಿಟನ್‌ಬರ್ಗ್ ಪಟ್ಟಣದ ಕಲಾಶಾಲೆಯ ಅಧ್ಯಾಪಕನಾಗಿ ನೇಮಕಗೊಂಡ. 1511ರಲ್ಲಿ ಅಗಸ್ಟಿನರ ಹನ್ನೊಂದು ಸಂನ್ಯಾಸಿ ಮಠಗಳ ಮೇಲಧಿಕಾರಿಯಾದ. 1525ರಲ್ಲಿ ಕ್ಯಾಥರೀನ ಫಾನ್‌ಬೊರ ಎಂಬಾಕೆಯನ್ನು ವಿವಾಹವಾದ.

ಲೂಥರ್ ಬೋಧನೆ ಕೆಥೊಲಿಕರ ಬೋಧನೆಯಂಥಲ್ಲದೆ ಬೇರೆ ರೀತಿಯದ್ದಾಗಿತ್ತು. ಜನರ ಅಮಿತ ಭಕ್ತಿ ಹಾಗೂ ತನ್ನ ಆತ್ಮರಕ್ಷಣೆ ಬಗ್ಗೆ ಚಿಂತನೆಮಾಡಿ ದಿನನಿತ್ಯ ನೆರವೇರಿಸ ಬೇಕಾದ ದಿವ್ಯ ಕರ್ಮಗಳ ಆಚರಣೆಯಲ್ಲಿ ನಿರುತ್ಸಾಹ ತೋರಿದ. ಕೆಲವು ಕಾಲದ ಅನಂತರ ಅವನ್ನು ಪೂರ್ಣವಾಗಿ ಬಿಟ್ಟುಬಿಟ್ಟ. ವ್ಯಕ್ತಿ ತನ್ನ ಪ್ರೀತಿ ವಿಶ್ವಾಸಗಳಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಡುವನೇ ವಿನಾ ತನ್ನ ಕಾರ್ಯಗಳಿಂದಲ್ಲ ಎಂಬ ಸಿದ್ಧಾಂತವನ್ನು ಬೋಧಿಸ ತೊಡಗಿದ. ಇದೇ ಸುವಾರ್ತೆಯ ತಿರುಳು ಎಂದು ಭಾವಿಸಿದ. ಈ ವಿಷಯಕ್ಕೆ ಸಂಬಂಧಿಸಿದಂತೆ ಅಗಸ್ಟಿನ್ನರ ಬೋಧನೆಗಳಲ್ಲಿ ಅನೇಕ ನಿದರ್ಶನಗಳು ಕಂಡುಬಂದು ಅವನ್ನೇ ಹಿಡಿದು ಸಾಧಿಸಿ ತನ್ನ ಬೋಧನೆಯ ಮೂಲಸಿದ್ಧಾಂತವಾಗಿ ಸ್ಥಾಪಿಸಿದ. ದೇವರಿಗೂ ಮನುಷ್ಯರಿಗೂ ಸಭೆ ಮತ್ತು ಅರ್ಚಕರು ಮಧ್ಯವರ್ತಿಗಳಾಗಿರುತ್ತಾರೆಂಬ ನಂಬಿಕೆಯನ್ನು ಅಲ್ಲಗಳೆದ. ಇದೇವೇಳೆಗೆ ಟೆಡ್‌ಸಲ್ ಎಂಬ ಸಂನ್ಯಾಸಿ ಹತ್ತನೆಯ ಲಿಯೋ ಎಂಬ ಪೋಪನಿಂದ ಇನ್‌ಡಲ್‌ಜನ್ಸ್ ಎಂಬ ಅಧಿಕಾರ ಪತ್ರಿಕೆಗಳನ್ನು ಮಾರಿ ರೋಮ್ ನಗರದ ಸೇಂಟ್ ಪೀಟರ್ಸ್ ದೇವಸ್ಥಾನದ ದುರಸ್ತಿಗಾಗಿ ಹಣವಸೂಲು ಮಾಡುತ್ತಿರುವುದನ್ನು ಕಂಡು ಅದನ್ನು ಪ್ರತಿಭಟಿಸುವ 95 ನಿಬಂಧಗಳನ್ನು ಬರೆದು ವಿಟನ್‌ಬರ್ಗ್‌ನ ಮುಖ್ಯ ದೇವಸ್ಥಾನದ ಕದಗಳಿಗೆ ಹಚ್ಚಿಸಿದ. ಈ ಕಾರ್ಯದಿಂದಾಗಿ ಜನರ ಆದರಣೆಗೆ ಪಾತ್ರನಾದ. ಆದರೆ ಇದರಿಂದ ಪಾಷಂಡ ಬೋಧನೆ ಹರಡಿಸುವ ಅಪರಾಧಕ್ಕೆ ರೋಮ್ ಸಭೆಯಲ್ಲಿ ವಿಚಾರಣೆಗೆ ಗುರಿಯಾಗಬೇಕಾಯಿತು. ಪೋಪನ ಅಗ್ರಹದಿಂದ ಸಾಕ್ಸೊನಿಯ ಅಧಿಕಾರಿಯಾದ ಮೂರನೆಯ ಫ್ರೆಡರಿಕನ ಆಶ್ರಯ ಸೇರಿದ. 1520ರಲ್ಲಿ ಲೂಥರ್ ತನ್ನ ಮೂಲಸಭೆಯನ್ನು ಪೂರ್ತಿಯಾಗಿ ಬಿಟ್ಟುಬಿಟ್ಟ. ಅನಂತರ ಅನೇಕ ಗ್ರಂಥಗಳ ಮೂಲಕ ತನ್ನ ಅನುಯಾಯಿಗಳ ನಂಬಿಕೆಗಳನ್ನು ಬಲಪಡಿಸಿ ಪ್ರತ್ಯೇಕವಾದ ಸಭೆಯನ್ನೇ ಸ್ಥಾಪನೆ ಮಾಡಿದ. ಬೈಬಲಿನ ಹೊಸ ಒಡಂಬಡಿಕೆಯನ್ನು ಗ್ರೀಕ್‌ನಿಂದ ಜರ್ಮನಿಗೆ ಅನುವಾದ ಮಾಡಿದ. ಹಳೆಯ ಒಡಂಬಡಿಕೆಯನ್ನು ಅನುವಾದ ಮಾಡಿ ಅದಕ್ಕೆ ಅನೇಕ ವ್ಯಾಖ್ಯಾನಗಳನ್ನೂ ಬರೆದ. (ಎಚ್.ಎಸ್.;ಎಚ್.ಡಿ.ಎಲ್.ಎ.)

**ಮಾರ್ಷಲ್, ಜಾನ್:** 1876–1914. ಭಾರತದ ಹೆಸರಾಂತ ಪುರಾತತ್ತ್ವಜ್ಞ. ಇಂಗ್ಲೆಂಡ್‌ನ ಚೆಸ್ಟರ್‌ನಲ್ಲಿ 1876ರ ಮಾರ್ಚ್ 19ರಂದು ಜನಿಸಿದ. ಕೇಂಬ್ರಿಜ್‌ನಲ್ಲಿ ವಿದ್ಯಾಭ್ಯಾಸ ಪಡೆದು 1902ರಲ್ಲಿ ಬ್ರಿಟಿಷ್ ಇಂಡಿಯ ಆಡಳಿತದಲ್ಲಿ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣಾಲಯದ ಮಹಾನಿರ್ದೇಶಕರಾಗಿ ನೇಮಕಗೊಂಡು. 1928 ರವರೆಗೆ ಆ ಹುದ್ದೆಯಲ್ಲಿದ್ದರು. ಇವರ ನೇತೃತ್ವದಲ್ಲಿ ಪ್ರಪಂಚ ಪ್ರಸಿದ್ಧವಾದ ಸಿಂಧೂ ನಾಗರಿಕತೆಯ ಪ್ರಥಮ ನೆಲೆಗಳಾದ ಹರಪ್ಪ ಮತ್ತು ಮೊಹೆಂಜೋದಾರೊ ಉತ್ಖನನಗಳು ನಡೆದು ಅಲ್ಲಿಯ ನಗರ ಸಂಸ್ಕೃತಿ ಬೆಳಕಿಗೆ ಬಂತು.

ಇವರ ಕಾಲಾವಧಿಯಲ್ಲಿ ಇಲಾಖೆಯ ನಿರ್ದಿಷ್ಟ ಕೆಲಸ ಕಾರ್ಯಗಳಿಗೆ ಒಂದು ಹೊಸ ದೃಷ್ಟಿಕೋನ ದೊರಕಿತು. ಪ್ರಾಚೀನ ಸ್ಮಾರಕಗಳ ಮತ್ತು ಮಹತ್ತ್ವದ ಅವಶೇಷಗಳನ್ನು ರಕ್ಷಿಸುವ ಮತ್ತು ಇವುಗಳ ಬಗ್ಗೆ ಒಂದು ಸೂಚಿಯನ್ನು ಸಿದ್ಧಮಾಡುವ ಕಾರ್ಯಕ್ರಮ ಹಾಕಿಕೊಳ್ಳಲಾಯಿತು. ಇವರ ಕಾಲದಲ್ಲಿ ಪ್ರಥಮ ಬಾರಿಗೆ ಭಾರತೀಯರಿಗೆ ಉತ್ಖನನಗಳಲ್ಲಿ ಭಾಗವಹಿಸಲು ಅವಕಾಶವನ್ನು ಮಾಡಿಕೊಡಲಾಯಿತು.

ಇವರು (1913–33) ತಕ್ಷಶಿಲೆಯಲ್ಲಿ ಉತ್ಖನನ ನಡೆಸಿದರು. ತಕ್ಷಶಿಲೆಯ ನೆಲೆಗಳಲ್ಲಿ ಒಂದಾದ ಸಿರ್ಕಪ್‌ನಲ್ಲಿಯೂ ಇವರ ಮಾರ್ಗದರ್ಶನದಲ್ಲಿ ಉತ್ಖನನ ನಡೆಸಲಾಯಿತು. ಇಲ್ಲಿ ಶಕರ ಕಾಲದಿಂದ ಪಾರ್ಥಿಯನ್ನರ ಕಾಲದವರೆಗಿನ ಹಂತದಲ್ಲಿ ಹೆಲನಿಸ್ಟಿಕ್(ಪ್ರಾಚೀನ ಗ್ರೀಕ್) ದೇವದೇವತೆಗಳು, ಗಾಂಧಾರ ಮಹಿಳೆಯರನ್ನು ಪ್ರತಿಬಿಂಬಿಸುವ ಅತ್ಯಂತ ಸುಂದರವಾದ ಗಾರೆ ಶಿಲ್ಪಗಳು, ತಕ್ಷಶಿಲೆಯ ಮೂರನೆಯ ಹಂತದ ಬುದ್ಧ ಮತ್ತು ಬೋಧಿಸತ್ವ ಗಾರೆ ಶಿಲ್ಪಗಳು ಗಮನಾರ್ಹ. 1918ರಲ್ಲಿ ಇಲ್ಲಿ ವಸ್ತು ಸಂಗ್ರಹಾಲಯ ಸ್ಥಾಪಿಸಲು ಅಸ್ತಿಭಾರ ಹಾಕಿದರು. ಅನಂತರ ಕಾಂಚಿ ಮತ್ತು ಸಾರನಾಥಗಳಲ್ಲಿ ಉತ್ಖನನ ನಡೆಸಿ ಭಾರತೀಯ ಸಂಸ್ಕೃತಿಯನ್ನು ಪ್ರಪಂಚದ ದೃಷ್ಟಿಗೆ ಬೀಳುವಂತೆ ಮಾಡಿದರು. 1914ರಲ್ಲಿ ಬ್ರಿಟಿಷ್ ಸರ್ಕಾರ ಇವರಿಗೆ ನೈಟ್ ಪದವಿ ಕೊಟ್ಟು ಗೌರವಿಸಿತು. ಇವರು 1958 ಆಗಸ್ಟ್ 17 ರಂದು ಗಿಲ್ಡ್‌ಫೋರ್ಡ್‌ನಲ್ಲಿ ನಿಧನರಾದರು. (ಎ.ಎಸ್)

**ಮಾವೋ ತ್ಸೆ ಡುಂಗ್:** 1893–1976. ಚೀನ ಕಮ್ಯುನಿಸ್ಟ್ ನಾಯಕ; ಚೀನಿ ಗಣರಾಜ್ಯದ ಪ್ರಥಮ ಅಧ್ಯಕ್ಷ (1949–69). ಆಧುನಿಕ ಚೀನದ ಚರಿತ್ರೆಯನ್ನು ನಿರ್ಮಾಣ ಮಾಡಿದ ಮಹಾನ್ ಚಾರಿತ್ರಿಕ ವ್ಯಕ್ತಿಗಳಲ್ಲೊಬ್ಬ. ಈತ ಚೀನದ ಹನನ್ ಪ್ರದೇಶದ ಬಡರೈತ ಕುಟುಂಬವೊಂದರಲ್ಲಿ 1893 ಡಿಸೆಂಬರ್ 26ರಂದು ಜನಿಸಿದ. ಈತನ ತಂದೆ ಮಾವೊ ಷನ್ ಷೆಂಗ್; ತಾಯಿ ವೆನ್ ಚೀ ಮ್ಯೆ. ಕುಟುಂಬದ ಹಿರಿಯ ಮಗನಾಗಿ ಹುಟ್ಟಿದ ಮಾವೊಗೆ ಇಬ್ಬರು ಸಹೋದರರೂ ಒಬ್ಬ ಸಹೋದರಿಯೂ ಇದ್ದರು. ಮುಂದೆ ಇವರೆಲ್ಲರೂ ಕ್ರಾಂತಿ ಹೋರಾಟದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮಡಿದರು. ಮಾವೊ ಹುಟ್ಟಿದ ನಾಡು ಸೈನಿಕ ಪರಂಪರೆ ಪರಾಕ್ರಮಗಳಿಗೆ ಹೆಸರಾದ ಪ್ರಾಂತ. 19ನೆಯ ಶತಮಾನದ ಕೊನೆಯಭಾಗದಲ್ಲಿ ಹನನ್ ಸೈನ್ಯ ತೈಪಿಂಗ್ ದಂಗೆಯನ್ನೂ ಸಿಂಕಿಯಾಂಗಿನ ಮುಸಲ್ಮಾನರ ದೊಂಬಿಯನ್ನೂ ಅಡಗಿಸುವ ಕಾರ್ಯದಲ್ಲಿ ಮುಂದಾಳುತನ ವಹಿಸಿತ್ತು. ಕ್ಷಾತ್ರ ಪರಂಪರೆ ಹಾಗೂ ಪಾಂಡಿತ್ಯ ಸಂಸ್ಕೃತಿಗಳಿಗೆ ಖ್ಯಾತಿಹೊಂದಿದ ನಾಡಿನಲ್ಲಿ ಮಾವೊ ಬೆಳೆದ. ಈತನ ತಂದೆ ಕೂಡ ಸೈನ್ಯದಲ್ಲಿ ಕೆಲಕಾಲ ಸೇವೆಮಾಡಿದ್ದ. ಮಾವೊ ಹಳ್ಳಿಯ ಶಾಲೆಯಲ್ಲಿ ವಿದ್ಯೆಯನ್ನು ಕಲಿತ. ಬಾಲ್ಯದಲ್ಲಿ ಕನ್‌ಫ್ಯೂಷಿಯಸ್ಸನ ಹೇಳಿಕೆಗಳನ್ನು ಬಾಯಿಪಾಠಮಾಡುತ್ತಿದ್ದ. 13ನೆಯ ವಯಸ್ಸಿನಲ್ಲಿಯೇ ತಂದೆಯೊಡನೆ ವಾದಿಸಲಾರಂಭಿಸಿ ತನ್ನ ಅಚಲ ನಿರ್ಧಾರದ ಲಕ್ಷಣಗಳನ್ನು ವ್ಯಕ್ತಪಡಿಸುತ್ತಿದ್ದ. ತಂದೆಯನ್ನು ಪ್ರತಿಭಟಿಸಿ ತನ್ನ ತಾಯಿಯ ಊರಿಗೆ ಹೋಗಿ ಅಲ್ಲಿ ಶಿಕ್ಷಣವನ್ನು ಮುಂದುವರಿಸಿದ. ಭೂಗೋಳ–ಇತಿಹಾಸಗಳನ್ನು ವ್ಯಾಸಂಗ ಮಾಡಿದ. ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಹನನ್ ಪ್ರಾಂತದಲ್ಲಿ ಯುದ್ಧನಡೆದಾಗ ತಾನು ಕಲಿಯುತ್ತಿದ್ದ ಚಂಗ್‌ಷಾ ಶಾಲೆಯನ್ನು ತೊರೆದು ವಿದ್ಯಾರ್ಥಿ ಸ್ವಯಂಸೇವಕನಾಗಿ ಸೇವೆಗೈದ. ಆಗ ಮಂಚೂ ರಾಜವಂಶ ಚೀನವನ್ನಾಳುತ್ತಿತ್ತು. ಅದು ಹೋಗಿ ಜನಪ್ರಿಯ ಸರ್ಕಾರ ಬರಬೇಕೆಂದು ನಡೆಯುತ್ತಿದ್ದ ಚಳವಳಿಗೆ ತರುಣ ಮಾವೊ ಬೆಂಬಲ ನೀಡಲು ಸುನ್‌ಯಾತ್ ಸೇನರ ಕ್ರಾಂತಿ ಚಳವಳಿಯಲ್ಲಿ ಭಾಗವಹಿಸಿದ. 1912ರಲ್ಲಿ ಚೀನ ಗಣರಾಜ್ಯವಾಗಿ ಘೋಷಿಸಿಕೊಂಡಿತು. ಆದರೆ ದೇಶದ ಒಗ್ಗಟ್ಟನ್ನು ಸಾಧಿಸಲಾಗಲಿಲ್ಲ.

ಒಂದನೆಯ ಮಹಾಯುದ್ಧ ಕಾಲದಲ್ಲಿ ತನ್ನ ತವರು ನಾಡಾದ ಹನನ್ ಪ್ರಾಂತ ಚೀನದ ರಾಷ್ಟ್ರೀಯ ವ್ಯವಹಾರದಲ್ಲಿ ಮಹತ್ತ್ವ ಕಳೆದುಕೊಳ್ಳುತ್ತಿದ್ದುದನ್ನು ಮಾವೋ ಗಮನಿಸಿದ. ದೇಶಾಭಿಮಾನದಿಂದ ಉಕ್ಕುತ್ತಿದ್ದ ಇವನ ಮನಸ್ಸು ಚೀನದ ಯುವಕರು ಹೇಗೆ ದೇಶಸೇವೆ ಮಾಡಬೇಕೆಂದು ಚಿಂತಿಸುತ್ತಿತ್ತು. 1918ರಲ್ಲಿ ಈತ ಪೀಕಿಂಗ್ ವಿಶ್ವವಿದ್ಯಾಲಯದಿಂದ ಪದವೀಧರನಾದ. ಚೀನಿ ಭಾಷೆಯಲ್ಲಿ ಪ್ರಕಟವಾಗಿದ್ದ ಕಾರ್ಲ್‌ಮಾರ್ಕ್ಸ್‌ನ ಸಾಹಿತ್ಯವನ್ನು ಅಭ್ಯಾಸಮಾಡಿದ. ಕಮ್ಯುನಿಸ್ಟ್ ಪ್ರಸಿದ್ಧ ಪತ್ರಿಕೆಯನ್ನು ಮೊದಲುಗೊಂಡು ಅನೇಕ ಪುಸ್ತಕಗಳನ್ನು ಓದಿ ಮನನ ಮಾಡಿದುದರ ಫಲವಾಗಿ ಮಾರ್ಕ್ಸ್‌ವಾದದ ಕಡೆಗೆ ಈತನ ಮನಸ್ಸು ಪ್ರೇರಿತವಾಯಿತು. ಮಾರ್ಕ್ಸ್ ಪಂಥದ ಪ್ರಚಾರದಲ್ಲಿ ಶ್ರದ್ಧೆ ವಹಿಸಿ ದುಡಿಯಲು ಆರಂಭಿಸಿದ. ಇದೇ ಸಂದರ್ಭದಲ್ಲಿ ಪೀಕಿಂಗ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರ ಮಗಳನ್ನು ಮದುವೆಯಾದ(1920). ಹತ್ತು ವರ್ಷಗಳ ಬಳಿಕ ಈಕೆ ಕ್ರಾಂತಿಯ ಸಮಯದಲ್ಲಿ ಮರಣದಂಡನೆಗೆ ಗುರಿಯಾದಳು.

ಮಾವೋ ಮತ್ತು ಇತರ ಹನ್ನೊಂದು ಜನ ಬುದ್ಧಿಜೀವಿಗಳು ಕಮ್ಯೂನಿಸ್ಟ್ ಪಕ್ಷವನ್ನು 1921ರಲ್ಲಿ ಷಾಂಗೈನಲ್ಲಿ ಸ್ಥಾಪಿಸಿದರು. ಮಾವೊ ಹನನ್ ನಾಡಿಗೆ ಹಿಂದಿರುಗಿ 1927ರತನಕ ಹನನ್ ಪ್ರಾಂತವನ್ನೇ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ. ಈ ಪ್ರಾಂತದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ. ಪಟ್ಟಣದ ಶ್ರಮಜೀವಿಗಳನ್ನೂ ಗಣಿಕೆಲಸಗಾರರನ್ನೂ ಸಂಘಟಿಸಿ. ಕೂಲಿಕಾರರ ಮುಷ್ಕರವನ್ನು ಯಶಸ್ವಿಯಾಗಿ ಸಂಘಟಿಸಿ ದುದಕ್ಕಾಗಿ 1922ರಲ್ಲಿ ಈತನನ್ನು ಸೆರೆಹಿಡಿಯಲು ಸರ್ಕಾರ ಆಜ್ಞೆಹೊರಡಿಸಿತ್ತು. 1923ರಲ್ಲಿ ಕ್ಯಾಂಟನ್‌ನಲ್ಲಿ ನಡೆದ ರಾಷ್ಟ್ರೀಯ ಕಮ್ಯೂನಿಸ್ಟ್ ಸಭೆಯಲ್ಲಿ ಕೇಂದ್ರಸಮಿತಿಯ ಸದಸ್ಯನಾಗಿ ಪ್ರಥಮಬಾರಿ ಚುನಾಯಿತನಾದ. ಸಂಘಟನೆಯ ಹೊಣೆ ಈತನ ಮೇಲೆ ಬಿತ್ತು. ಅನಂತರ ಚೀನದ ಕಮ್ಯೂನಿಸ್ಟ್ ಪಕ್ಷ ಚೀನದ ಕಾಮಿಂಟಾಂಗ್ (ರಾಷ್ಟ್ರೀಯ ಪಕ್ಷ) ಪಕ್ಷದೊಡನೆ ಕೂಡಿ ಕೆಲಸ ಮಾಡಲು ಪ್ರಾರಂಭಿಸಿತು. ಮಾವೊ ಕಾಮಿಂಟಾಂಗ್ ಪಕ್ಷದ ಕೇಂದ್ರ ಸಮಿತಿಯಲ್ಲಿದ್ದುಕೊಂಡು ಕ್ರಾಂತಿಕಾರಿ ಪಥದ ಶಂಕು ಸ್ಥಾಪನೆ ಮಾಡಿದ. ಸುನ್‌ಯಾತ್‌ಸೇನ್ ತೀರಿಕೊಂಡಮೇಲೆ (1925) ಅವನ ಸ್ಥಾನದಲ್ಲಿ ಅಧ್ಯಕ್ಷನಾದ ಚಿಯಾಂಗ್ ಕೈ ಷೇಕ್ ಸ್ಥಿರ ಸರ್ಕಾರ ಸ್ಥಾಪಿಸಿದರಾದರೂ ಜನತೆಯ ಕೈಗೆ ಅಧಿಕಾರ ಬಂದಿರಲಿಲ್ಲ. ಮಾವೊ, ಆಗ್ನೇಯ ಚೀನದಲ್ಲಿ ಚೀನೀ ಜನತಾ ಗಣರಾಜ್ಯಸ್ಥಾಪಿಸಿ ಚಿಯಾಂಗ್‌ಗೆ ವಿರುದ್ಧವಾಗಿ ನಿಂತ. ಕಮ್ಯೂನಿಸ್ಟ್ ತತ್ತ್ವ ಪ್ರಸಾರ ಮತ್ತು ಸಂಘಟನೆಗಳನ್ನು ಎಲ್ಲ ಕಡೆ ತೀವ್ರಗೊಳಿಸಿದ. ರೈತರ ಸಂಘಟನೆಯಿಂದ ಮಾತ್ರ ಸಾಮ್ರಾಜ್ಯವಾದವನ್ನು ಮುರಿಯಲು ಸಾಧ್ಯವೆಂಬುದು ಇವನ ನಂಬಿಕೆಯಾಗಿತ್ತು. ರಾಷ್ಟ್ರೀಯ ರೈತರ ಆಂದೋಲನದ ಮುಖ್ಯಸ್ಥನಾಗಿ ಮಾವೊ ದುಡಿಯಲಾರಂಭಿಸಿದ. ರಾಷ್ಟ್ರೀಯ ಕ್ರಾಂತಿ ಸೈನ್ಯವನ್ನು ತಯಾರಿಸುವುದು ಇವನ ಗುರಿಯಾಗಿತ್ತು. 1927 ಮಾವೋನ ಜೀವನದಲ್ಲಿ ಮುಖ್ಯ ಘಟ್ಟವೆನ್ನಬಹುದು. ಚೀನದ ಚರಿತ್ರೆಯಲ್ಲಿ ಕೂಡ ಇದು ನಿರ್ಧಾರಕ ವರ್ಷ. 1925–27ರಲ್ಲಿ ರೈತರು ಕಂದಾಯ ನಿರಾಕರಣೆ ಚಳವಳಿಯನ್ನು ಹೂಡಿದರು. ಹನನ್ ಪ್ರಾಂತದಲ್ಲಿ ಮಾವೋ ಇದಕ್ಕಾಗಿ ಶ್ರಮಿಸಿದ. ಆದರೆ ಸರ್ಕಾರದ ಸೈನ್ಯ ರೈತರ ದಂಗೆಯನ್ನು ದಮನಗೊಳಿಸಿತು; ಚಳವಳಿ ವಿಫಲವಾಯಿತು. ಈ ಘಟನೆ ಮುಂದೆ ಚೀನದ ರಾಜಕೀಯ

ಜೀವನದಲ್ಲಿ ಪರಿವರ್ತನೆಗೆ ಕಾರಣವಾಯಿತು. ಚೀನದ ಕಮ್ಯೂನಿಸ್ಟ್ ಪಕ್ಷ ಹಾಗೂ ಕಾಮಿಂಟಾಂಗ್ ಪಕ್ಷಗಳ ನಡುವೆ ಒಡಕು ಮೂಡಿತು. ಭಿನ್ನಾಭಿಪ್ರಾಯ ಬಲವಾಗಿ ಎರಡೂ ಪಕ್ಷಗಳು ನೇರವಾಗಿಯೇ ಕಾದಾಡತೊಡಗಿದವು. ಮಾವೋ ಕಮಿಂಟಾಂಗ್ ವಿರುದ್ಧವಾಗಿ ಕ್ರಾಂತಿ ಯುದ್ಧವನ್ನು ಸಂಘಟಿಸಲಾರಂಭಿಸಿದ. ಮಾಸ್ಕೋ ನಾಯಕತ್ವ ಸರಿಯಾದ ಮಾರ್ಗದರ್ಶನ ಮಾಡಲಿಲ್ಲವೆಂದು ಭಾವಿಸಿದ ಮಾವೊ ಪಟ್ಟಣಗಳ ಶ್ರಮಜೀವಿಗಳನ್ನು ಮಾತ್ರ ಸಂಘಟಿಸಿದರೆ ಸಾಲದು. ಮುಖ್ಯವಾಗಿ ಹಳ್ಳಿಗಳಲ್ಲಿ ರೈತರನ್ನು ಸಂಘಟಿಸಿದರೆ ಜನತಾಕ್ರಾಂತಿ ಯಶಸ್ವಿಯಾಗುವುದೆಂದು ಭಾವಿಸಿ ಆ ಪ್ರಕಾರ ಕಾರ್ಯೋನ್ಮುಖನಾದ.

ಗುಡ್ಡಗಾಡುಗಳಲ್ಲಿ ರೈತರನ್ನು ತರಬೇತಿಮಾಡಿ ಕೂಟಯುದ್ಧಕ್ಕಾಗಿ ಸೈನ್ಯವನ್ನು ಸಿದ್ಧಗೊಳಿಸಿದ. ಕಿಯಾಂಗ್ಸಿ ಎಂಬ ವಿಭಾಗದಲ್ಲಿ ಕೆಂಪು ಸೈನ್ಯ (ರೆಡ್ ಗಾರ್ಡ್ಸ್) ಕಾರ್ಯ ಪ್ರಾರಂಭಿಸಿತು. ಸ್ವತಂತ್ರ ನಾಯಕತ್ವ ಸಂಘಟನೆಗಳ ಅನುಭವ ಪಡೆದ ಮಾವೋ ಹೊಸ ಸಿದ್ಧಾಂತಗಳ ಕನಸು ಕಾಣಲಾರಂಭಿಸಿದ. 1929–31ರ ತನಕ ಈತ ಬಹಳ ಅಪಾಯದ ರಾಜಕೀಯ ಜೀವನ ನಡೆಸಿದ. ಕಮ್ಯೂನಿಸ್ಟ್ ನಿಯಂತ್ರಣಕ್ಕೊಳಗಾದ ಸರ್ಕಾರದ ನೆಲೆಯನ್ನು ಸ್ಥಾಪಿಸಿದ. ದಕ್ಷಿಣ ಮತ್ತು ಮಧ್ಯಚೀನದಲ್ಲಿ ಕಮ್ಯೂನಿಸ್ಟ್ ಶಕ್ತಿ ಬೆಳೆಯಿತು. 1931ರಲ್ಲಿ ಜಪಾನ್ ಮಂಚೂರಿಯದಲ್ಲಿ ಆಕ್ರಮಣ ನಡೆಸಿದಾಗ ಕೂಡ ಚಿಯಾಂಗ್ ಕೈಷೇಕ್ ಕೆಂಪು ಸೈನ್ಯವನ್ನು ಧ್ವಂಸಮಾಡುವ ಸನ್ನಾಹದಲ್ಲಿ ತೊಡಗಿದ್ದ. ಮಾವೋ ಆತನ ದೊಡ್ಡ ಸೈನ್ಯದೊಡನೆ ಜಾಣತನದಿಂದ ಹೋರಾಡಿ ತನ್ನ ಸೈನ್ಯವನ್ನು ರಕ್ಷಿಸಿಕೊಂಡ. ಆದರೆ ಈ ಯುದ್ಧದಲ್ಲಿ ಮಾವೋ ಹೆಚ್ಚು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಬೇಕಾಯಿತು. 1934ರಲ್ಲಿ ಚಿಯಾಂಗನ ಸೈನ್ಯದ ಆಕ್ರಮಣವನ್ನು ಎದುರಿಸಲಾರದೆ ತನ್ನ 85000 ಜನ ಬೆಂಬಲಿಗರೊಂದಿಗೆ ಈಶಾನ್ಯ ಚೀನಕ್ಕೆ ದೀರ್ಘಯಾತ್ರೆ ಕೈಗೊಂಡ. ಇದು ಅತ್ಯಂತ ಕಷ್ಟಕರವೂ ಅಪಾಯಕಾರಿಯೂ ಆಗಿತ್ತು. 9700ಕಿಮೀ ದೂರವನ್ನು ಒಂದು ವರ್ಷಕಾಲ ಪ್ರಯಾಣ ಮಾಡಿ ಷೇನ್ಸಿ ಪ್ರಾಂತವನ್ನು ಈ ಯಾತ್ರೆ ತಲುಪಿತು. ಅಳಿದುಳಿದ ಕಮ್ಯೂನಿಸ್ಟರನ್ನು ಸಂಘಟಿಸಿದ ಈ ಯಾತ್ರೆ ಚರಿತ್ರೆಯಲ್ಲಿ ದೀರ್ಘಯಾತ್ರೆ (ದಿ ಲಾಂಗ್ ಮಾರ್ಚ್) ಎಂದೇ ಪ್ರಸಿದ್ಧವಾಗಿದೆ.

ಎರಡನೆಯ ಮಹಾಯುದ್ಧಕಾಲದಲ್ಲಿ ಚೀನದ ಕಮ್ಯೂನಿಸ್ಟ್ ಪಕ್ಷ ಬಲಗೊಂಡಿತು. ಈ ಯುದ್ಧದ ಲಾಭ ಪಡೆದು ಮಾವೋ ತನ್ನ ನಾಯಕತ್ವವನ್ನು ಭದ್ರಪಡಿಸಿಕೊಂಡ. ಯುದ್ಧಕಾಲದಲ್ಲಿ ಕಾಮಿಂಟಾಂಗ್ ಸೇನೆ ಒಳನಾಡಿಗೆ ಸರಿದಂತೆಲ್ಲ ಮಾವೋ ಗೆರಿಲ್ಲ ಯುದ್ಧ ತಂತ್ರದ ಮೂಲಕ ಕಮ್ಯೂನಿಸಂನ್ನು ಹರಡತೊಡಗಿದ. 1945ರಲ್ಲಿ ಜಪಾನ್ ಸೋತಿತು. ಈ ವೇಳೆಗೆ ಮಾವೋ ಮುಖಂಡತ್ವದ ಚೀನಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆ ಹತ್ತು ಲಕ್ಷಕ್ಕೂ ಮಿಕ್ಕಿದ್ದು, ಅದರಲ್ಲಿ 9 ಲಕ್ಷ ಸೈನಿಕರಿದ್ದರು. ಮಾವೋ ಮತ್ತು ಚಿಯಾಂಗ್ ಕೈಷೇಕರಲ್ಲಿ ಒಮ್ಮತವನ್ನು ತರಬೇಕೆಂಬ ಅಮೆರಿಕದ ಪ್ರಯತ್ನ ವಿಫಲವಾಯಿತು. 1946ರಲ್ಲಿ ಮಂಚೂರಿಯದಲ್ಲಿ ಕಮ್ಯೂನಿಸ್ಟರಿಗೂ ಕಾಮಿಂಟಾಂಗ್ ಪಕ್ಷದವರಿಗೂ ಹೋರಾಟ ಆರಂಭವಾಯಿತು. 1949ರಲ್ಲಿ ಚಿಯಾಂಗ್ ಸರ್ಕಾರ ಕುಸಿಯಿತು. ಅದೇ ವರ್ಷ ಮಾವೋ ಚೀನಿ ಜನತಾ ಗಣರಾಜ್ಯ ಘೋಷಿಸಿ ಅದರ ಪ್ರಥಮ ಅಧ್ಯಕ್ಷನಾದ. 1959ರಲ್ಲಿ ಈ ಅಧ್ಯಕ್ಷತೆಗೆ ರಾಜೀನಾಮೆ ನೀಡಿದರೂ ಚೀನಿ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷನಾಗಿ ಮುಂದುವರಿದ.

ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಮಾವೋ ಕೊಡುಗೆ ಅಗಾಧವಾದದ್ದು. ಸಮಾನತೆಯ ಆಧಾರದ ಪ್ರಜಾಪ್ರಭುತ್ವದ ರಚನೆಗಾಗಿ ಈತ ಶ್ರಮಿಸಿದ. ಮಾವೋನ ಕೆಂಪು ಸೇನೆಯ ದೀರ್ಘಯಾತ್ರೆ, ಜಪಾನಿನ ವಿರುದ್ಧ ಯುದ್ಧ, ಚಿಯಾಂಗ್ ಕೈಷೇಕ್ ಸರ್ಕಾರದ ವಿರುದ್ಧ ಈ ಹೋರಾಟಗಳು (1925–49) ಆಧುನಿಕ ಚೀನದ ಅಸ್ತಿಭಾರವನ್ನು ನಿರ್ಮಿಸಿದುವು. ಆಡಳಿತಶಾಹಿಯ ವಿರೋಧ, ಸ್ವಾವಲಂಬನೆ, ಕ್ರಾಂತಿಕಾರಿ ಚಲನಶೀಲತೆ, ಪಕ್ಷದಲ್ಲಿ ಯಜಮಾನ ವ್ಯವಸ್ಥೆ ಬೆಳೆಯದಂತೆ ಎಚ್ಚರಿಕೆ–ಇವು ಮಾವೋ ಸಿದ್ಧಾಂತದ ಮೂಲಸೂತ್ರಗಳು.

1966ರಲ್ಲಿ ಮಾವೋ ಆರಂಭಿಸಿದ ಸಾಂಸ್ಕೃತಿಕ ಕ್ರಾಂತಿ ಹಲವೆಡೆಗಳಲ್ಲಿ ಬಹಳ ಮಟ್ಟಿಗೆ ಟೀಕೆಗೆ ಗುರಿಯಾಗಿದೆ. ಕ್ರಾಂತಿ ಕೊನೆಗೊಂಡಿಲ್ಲ, ಅದು ಮುಂದುವರಿಯಬೇಕು ಎಂದು ಮಾವೋ ಹೇಳಿದ. ಪಾಶ್ಚಾತ್ಯ ಮಾದರಿಯ ಬಂಡವಾಳ ಷಾಹಿ ವ್ಯವಸ್ಥೆ, ರಷ್ಯದ ಮಾದರಿಯ ವ್ಯವಸ್ಥೆ ಎರಡನ್ನೂ ತಿರಸ್ಕರಿಸಿ ಹೊಸ ಮಾದರಿಯ ಸಮಾಜ ರಚಿಸುವುದು ಅದರ ಉದ್ದೇಶವಾಗಿತ್ತು. ಆದರೆ ಅದು ಕೊನೆಗೆ ಬಹಳಷ್ಟು ಹಿಂಸೆಯಲ್ಲಿ ಪರ್ಯವಸಾನ ಗೊಂಡಿತು. ಕೊನೆಗೆ 1968ರ ವೇಳೆಗೆ ಚಳವಳಿ ಸ್ತಬ್ಧವಾಯಿತು. 1976 ಸೆಪ್ಟೆಂಬರ್ 9ರಂದು ಮಾವೋ ನಿಧನನಾದ. ಅನಂತರ ಈತನ ಪತ್ನಿ ಜಿಯಾಂಗ್‌ಕ್ವಿಂಗ್ ಮತ್ತು ಇತರ ಮೂವರು ಮಾವೋ ಸಿದ್ಧಾಂತವನ್ನೇ ಮುಂದುವರಿಸಲು ಯತ್ನಿಸಿದ್ದರು. ಆದರೆ ಅನಂತರ ಚೀನಿ ನಾಯಕತ್ವ ವಹಿಸಿದವರು ಈ ನಾಲ್ವರನ್ನು ಪಿತೂರಿಗಾರರೆಂದು ಕರೆದು ಇವರ ವಿರುದ್ಧ ಕ್ರಮ ತೆಗೆದುಕೊಂಡರು. ಅವರ ಆ ಪ್ರಯತ್ನ ವಿಫಲವಾಯಿತು.

ಮಾವೋ ಹುಟ್ಟು ಹೋರಾಟಗಾರನಾಗಿದ್ದಂತೆ ಉತ್ತಮ ಆಡಳಿತಗಾರನೂ ಬುದ್ಧಿಜೀವಿಯೂ ಆಗಿದ್ದ. ಕಮ್ಯುನಿಸ್ಟ್ ತತ್ತ್ವಗಳನ್ನು ನೂತನವಾಗಿ ಅರ್ಥಮಾಡಿ ಹೇಳುವುದರಲ್ಲಿಯೂ ಈತ ನಿಷ್ಣಾತನಾಗಿದ್ದ. ಈತ ಬರೆದಿರುವ ಅನೇಕ ಪುಸ್ತಕಗಳು ಕಮ್ಯುನಿಸ್ಟ್ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯಾಗಿವೆ. ಸ್ಟ್ರಾಟೆಜಿಕ್ ಪ್ರಾಬ್ಲಮ್ಸ್ ಆಫ್ ಚೈನಾಸ್ ರೆವಲೂಷನರಿ ವಾರ್ (1936), ಆನ್ ಪ್ರೊಟ್ರಾಕ್ಟೆಡ್ ವಾರ್ (1938), ಆನ್ ದಿ ನ್ಯೂ ಸ್ಟೇಜ್ (1938), ದಿ ಚೈನೀಸ್ ರೆವಲೂಷನ್ ಅಂಡ್ ದಿ ಚೈನೀಸ್ ಕಮ್ಯುನಿಸ್ಟ್ ಪಾರ್ಟಿ (1940), ಆನ್ ದಿ ನ್ಯೂ ಡೆಮಾಕ್ರಸಿ ಮೊದಲಾದವು ಈತನ ಕೆಲವು ಕೃತಿಗಳು. ಇವನ ಎಲ್ಲ ಬರೆಹಗಳನ್ನೊಳಗೊಂಡ ಕಲೆಕ್ಟೆಡ್ ರೈಟಿಂಗ್ಸ್ ಆಫ್ ಮಾವೋ ತ್ಸೆ ಡುಂಗ್ ಎಂಬ ಕೃತಿ ಹತ್ತು ಸಂಪುಟಗಳಲ್ಲಿ ಪ್ರಕಟವಾಗಿದೆ (1971–72). (ಎಚ್.ಎಸ್.ಕೆ.;ಜಿ.ಎಸ್.ಎಚ್.)

**ಮಿಟಾನ್ನಿ ಸಾಮ್ರಾಜ್ಯ:** ಪ್ರ.ಶ.ಪೂ.ಸು.1600ರಿಂದ ಉಚ್ಛ್ರಾಯಸ್ಥಿತಿಯಲ್ಲಿದ್ದ ಉತ್ತರ ಮೆಸಪೊಟೇಮಿಯ ಭಾಗದಲ್ಲಿದ್ದ ಒಂದು ಸಾಮ್ರಾಜ್ಯ. ಇದು ಅತ್ಯಂತ ಉನ್ನತ ಸ್ಥಿತಿಯಲ್ಲಿದ್ದಾಗ ಪಶ್ಚಿಮ ಇರಾನಿನಲ್ಲಿಯ ಕಿರ್ಕುಕ್ (ಪ್ರಾಚೀನ ಅರ್ರಪ್‌ಖ) ಮತ್ತು ಜಾಗ್ರೋಸ್ ಪರ್ವತ ಶ್ರೇಣಿ ಪ್ರದೇಶದಿಂದ ಅಸ್ಸೀರಿಯ ಒಳಗೊಂಡ ಮೆಡಟರೇನಿಯನ್ ಸಮುದ್ರದವರೆಗೂ ವಿಸ್ತರಿಸಿತ್ತು. ಇದರ ರಾಜಧಾನಿ ವಸ್ಸುಕನ್ನಿ. ಈಜಿಪ್ಟಿನ ಮೂರನೆಯ ತುಥ್ಮೋಸಿಸ್ ರಾಜನ ಸಮಕಾಲೀನನಾಗಿದ್ದ ಮಿಟಾನ್ನಿ ರಾಜ ಸೌಸ್ಸತರ್ ಕಾಲದಲ್ಲಿ ಉತ್ತರ ಸಿರಿಯದ ಅಲಲಖ್ ಮತ್ತು ಮೆಸಪೊಟೇಮಿಯದ ನೂಝಿ, ಕುರ್ರುಖನ್ನಿ ಮತ್ತು ಅರ್ರಪ್‌ಖ ನಗರಗಳು ಇವನ ರಾಜ್ಯದಲ್ಲಿ ಸೇರಿದ್ದವು. ಈಜಿಪ್ಟಿನವರು ಇವರನ್ನು ನಹರಿನ್ ಎಂದು ಕರೆಯುತ್ತಿದ್ದರು. ಈ ರಾಜ ಅಶುರ್‌ನಲ್ಲಿಯ ಅಸ್ಸೀರಿಯ ಅರಮನೆಯನ್ನು ಆಕ್ರಮಿಸಿಕೊಂಡಿದ್ದ. ನಾಲ್ಕನೆಯ ತುಥ್ಮೋಸಿಸ್ ಕಾಲದಲ್ಲಿ ಈಜಿಪ್ಟ್ ಮತ್ತು ಮಿಟಾನ್ನಿಗಳ ನಡುವೆ ಹೆಚ್ಚು ಸ್ನೇಹ ಸಂಬಂಧವಿತ್ತು. ಆಗ ಮಿಟಾನ್ನಿನ ಅರ್ತತಮನ ಮಗಳನ್ನು ಈಜಿಪ್ಟಿನ ರಾಜ ನಾಲ್ಕನೆಯ ತುಥ್ಮೋಸಿಸ್‌ನಿಗೆ ಮದುವೆ ಮಾಡಿಕೊಡಲಾಗಿತ್ತು. ಎರಡನೆಯ ಶುತ್ತರ್ವ (ಗಿಲುಖಿಪ) ಮತ್ತು ತುಶ್ರತ್ತ (ತದುಖಿಪ) ಹೆಣ್ಣು ಮಕ್ಕಳನ್ನು ಮೂರನೆಯ ಅಮೆನ್‌ಹೊಟೆಪ್‌ಗೆ ವಿವಾಹ ಮಾಡಿಕೊಟ್ಟಿದ್ದರು. ಈ ಸಾಮ್ರಾಜ್ಯದ ಕೊನೆಯ ಸ್ವತಂತ್ರ ರಾಜ ತುಶ್ರತ್ತ. ಈ ವೇಳೆಗೆ ಈಜಿಪ್ಟಿನ ಅಖೆನಟೆನ್ ಕಾಲದಲ್ಲಿ ಇವರ ಸಂಬಂಧ ತೀರ ದುರ್ಬಲಗೊಂಡಿತ್ತು. ಅಸ್ಸೀರಿಯ ಮತ್ತು ಹಿಟ್ಟೈಟರ ನಡುವೆ ಇದನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡೆದಿತ್ತು. ಹಿಟ್ಟೈಟನ ರಾಜ ಸುಪ್ಪಿಲುಲಿವುಮಸ್ ಇದರ ರಾಜಧಾನಿಯನ್ನು ನಾಶಪಡಿಸಿದ. ಹೋರಾಟದಲ್ಲಿ ತುಶ್ರತ್ತ ಕೊಲೆಯಾದ. ಇವನ ಅನಂತರ ಅರ್ತತಮ ರಾಜ ಈಜಿಪ್ಟಿಯನ್ನರನ್ನು ಪೂರ್ಣ ಕೈಬಿಟ್ಟು ಅಸ್ಸೀರಿಯದೊಡನೆ ಒಪ್ಪಂದ ಮಾಡಿಕೊಂಡ. ಆದರೆ ಸುಪ್ಪಿಲುಲಿವುಮಸ್‌ನು ತುಶ್ರತ್ತನ ಮಗ ಮತ್ತಿವಜನನ್ನು ಅರ್ತತಮನ ಬದಲಾಗಿ ರಾಜನನ್ನಾಗಿ ಮಾಡಿದ. ಅಂದಿನಿಂದ ಈ ರಾಜ್ಯ ಹಿಟ್ಟೈಟ್ ರಾಜ್ಯಕ್ಕೆ ಅಧೀನವಾಯಿತು. ಸ್ವಲ್ಪ ಸಮಯದಲ್ಲಿಯೇ ಅಸ್ಸೀರಿಯ ರಾಜ ಅದದ್–ನಿರರಿ I ಈ ರಾಜ್ಯವನ್ನು ವಶಪಡಿಸಿಕೊಂಡ. ತರುವಾಯ ರ್‍ಯಾಮ್ಸೆಸ್ II ಕಾಲದಲ್ಲಿ ಶಲ್‌ಮನೆಸೆರ್ I ಇದನ್ನು ಆಕ್ರಮಿಸಿಕೊಂಡ. ಅಷ್ಟು ಹೊತ್ತಿಗಾಗಲೆ ಯೂಫ್ರಟೀಸ್ ನದಿಯ ಪೂರ್ವಭಾಗವೆಲ್ಲ ಅಸ್ಸೀರಿಯ ರಾಜ್ಯಕ್ಕೆ ಸೇರಿ ಹೋಗಿತ್ತು.

ಮೂಲತಃ ಮಿಟಾನ್ನಿ ಜನರು ವೈದಿಕ ಜನ ಸಮುದಾಯದವರೆಂದು ತಿಳುವಳಿಕೆಯಿದೆ. ಇವರು ಮೆಸಪೊಟೇಮಿಯ ಪ್ರದೇಶಕ್ಕೆ ಬಂದು ನೆಲೆಸಿದರು. ಒಬ್ಬ ವೈದಿಕ ಯೋಧ ಈ ರಾಜ್ಯವನ್ನು ಆಳುತ್ತಿದ್ದ. ಈ ನಗರಗಳಲ್ಲಿ ಹೆಚ್ಚಾಗಿ ರಥಪಡೆ ಹೊಂದಿದ್ದ ಸೈನ್ಯವಿತ್ತು. ಇವರು ವಿಶಾಲವಾದ ಪ್ರದೇಶಗಳಲ್ಲಿ ಕುದುರೆಗಳನ್ನು ಬೆಳೆಸುತ್ತಿದ್ದರು. ಗಣ್ಯ ವ್ಯಕ್ತಿಗಳು ರಾಜರಿಂದ ಭೂಮಿಯನ್ನು ಪಡೆಯುತ್ತಿದ್ದರಾದರೂ ಇದನ್ನು ಮಾರಾಟಮಾಡುವಂತಿರಲಿಲ್ಲ. ಅದಕ್ಕಾಗಿ ಕಾನೂನಿಗೆ ಭಂಗವಾಗದಂತೆ ಮಾಡಲು ಕೊಳ್ಳುವವರಿಂದ ಮೊದಲೇ ಹಣ ಪಡೆದು ಅವರನ್ನು ದತ್ತು ತೆಗೆದುಕೊಳ್ಳುತ್ತಿದ್ದರು. ಉಣ್ಣೆಗಾಗಿ ಕುರಿ ಸಾಕುತ್ತಿದ್ದರು. ಪರದೇಶಗಳಿಗೆ ಮಾರಲು ವಿವಿಧ ವಸ್ತ್ರಗಳನ್ನು ಅರಮನೆಯೇ ಸಂಗ್ರಹಿಸುತ್ತಿತ್ತು. ಬ್ಯಾಬಿಲೋನಿಯ ಕಾನೂನನ್ನು ಮಾದರಿಯಾಗಿ ಇಟ್ಟುಕೊಂಡು ಸಾಮಾಜಿಕ ರಚನೆ ಮತ್ತು ನ್ಯಾಯ ಪರಿಪಾಲನೆ ಮಾಡಲಾಗುತ್ತಿತ್ತು.

ಈ ಜನವರ್ಗದವರ ವಸತಿ ನೆಲೆಗಳಲ್ಲಿ ಕೆಲವನ್ನು ಮಾತ್ರ ಉತ್ಖನನ ಮಾಡಿ ಬೃಹತ್ ಅರಮನೆಯನ್ನು ಪತ್ತೆಮಾಡಲಾಗಿದೆ. ಈ ಅರಮನೆಯ ಗೋಡೆಗಳ ಮೇಲೆ ಅತ್ಯಂತ ಸೊಗಸಾದ ವರ್ಣಚಿತ್ರಗಳಿದ್ದವು. ಸಣ್ಣ ಸಣ್ಣ ದೇವಾಲಯಗಳೂ ಬೆಳಕಿಗೆ ಬಂದಿವೆ. ನಗರಗಳ ಹೊರಗೆ ಸ್ಮಶಾನ ಇರುತ್ತಿತ್ತು. ಬ್ಯಾಬಿಲೋನಿಯ ಮತ್ತು ಅಸ್ಸೀರಿಯದ ಪ್ರಭಾವವುಳ್ಳ ಮುದ್ರಿಕೆಗಳು ದೊರೆತಿವೆ. ಕಪ್ಪುಬಣ್ಣದ ಮಡಕೆಯ ಮೇಲೆ ಬಿಳಿಬಣ್ಣದ ರೇಖಾ ಚಿತ್ರಗಳಿಂದ ಅಲಂಕರಿಸಲಾಗಿತ್ತು. (ಎ.ಎಸ್.;ಎನ್.ಎಲ್.)

**ಮಿರ್ಜಾನ:** ಉತ್ತರ ಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನಲ್ಲಿರುವ ಪ್ರಾಚೀನ ನೌಕಾನೆಲೆ. ಕಾರವಾರ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಮಟ ಉತ್ತರಕ್ಕೆ ಸು.10ಕಿಮೀ ದೂರದಲ್ಲಿದೆ. ಅಘನಾಶಿನಿ ನದಿಯ ಉತ್ತರ ತಟದಲ್ಲಿರುವ ಇದರ ಪಶ್ಚಿಮಕ್ಕೆ

ಅರಬ್ಬಿ ಸಮುದ್ರವಿದೆ. ಬೆಟ್ಟ ಗುಡ್ಡಗಳ ಪ್ರದೇಶದಿಂದ ಸುತ್ತುವರೆದಿರುವ ಕಡಲತೀರದ ಒಂದು ನಯನ ಮನೋಹರ ಸ್ಥಳವಿದು. ಇದನ್ನು ಕನ್ನಡದಲ್ಲಿ ಮಿದಿಜೆ ಎಂದು ಕರೆಯಲಾಗಿದೆ. 1 ರಿಂದ 3 ನೆಯ ಶತಮಾನದವರೆಗಿನ ಗ್ರೀಕ್ ಮತ್ತು ರೋಮನ್ನರು ವ್ಯಾಪಾರ ವಹಿವಾಟಿನ ಸಲುವಾಗಿ ಹಿಂದುಸ್ತಾನದ ಪಶ್ಚಿಮ ದಂಡೆಯಲ್ಲಿ ಮರ್ಯುರಿಸ್ ಎಂಬ ಬಂದರಿಗೆ ಬರುತ್ತಿದ್ದರೆಂದು ಪ್ಲೀನಿ (77), ಪುಟಿಂಜರ್ (100), ಟಾಲಮಿ (150) ಮತ್ತು ಪೆರಿಪ್ಲಸ್ (247) ಇವರ ಬರೆಹಗಳಿಂದ ತಿಳಿದುಬರುತ್ತದೆ. ಈ ಪ್ರಾಚೀನ ಮುರ್ಯುರಿಸ್ ಬಂದರೇ ಇಂದಿನ ಮಿರ್ಜಾನ್ ಎಂದು ಫೋಬ್ಸ್ (1784), ರೆನ್ನೆಲ್ (1788) ಮತ್ತು ರೋಬರ್‌ಸನ್ (1791) ತರ್ಕಿಸಿದ್ದಾರೆ. ಇಲ್ಲಿ 16ನೆಯ ಶತಮಾನದ ಕೋಟೆ, ಶಿವದೇವಾಲಯಗಳ ಜೊತೆಗೆ ಇತ್ತೀಚಿನ ಶಾಂತಿಕಾ ಪರಮೇಶ್ವರಿ ದೇವಾಲಯ, ಚರ್ಚು, ಮಸೀದಿ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳಿವೆ. ಮಹಿಷಾಸುರ ಮರ್ದಿನಿಯ ಶಿಲ್ಪ ಮತ್ತು ಭಗ್ನಗೊಂಡ ವೀರಗಲ್ಲುಗಳಿವೆ.

ಸ್ಥಳೀಯ ಪರಂಪರೆ ಹಾಗೂ ಸಮಕಾಲೀನ ಆಧಾರಗಳಿಂದ ಬಿಜಾಪುರದ ಆದಿಲ್‌ಶಾಹಿ ಸುಲ್ತಾನರ ಸಾಮಂತನಾದ ಪೊಂಡಾ ಶರೀಫ್ ಉಲ್–ಮುಲ್ಕ್ (1608–40) ಇಲ್ಲಿಯ ಕೋಟೆಯನ್ನು ಕಟ್ಟಿಸಿದನೆಂದು ತಿಳಿಯುತ್ತದೆ. ಬಂದರು ಸ್ಥಳದಲ್ಲಿ ನಿರ್ಮಿತವಾದ ಈ ಕೋಟೆ ವಿಜಯನಗರ ಅರಸೊತ್ತಿಗೆಯ ಕಾಲಾವಧಿಯಲ್ಲಿ ಪ್ರಮುಖ ಪಾತ್ರವಹಿಸಿತ್ತು.



ಮಿರ್ಜಾನ ಕೋಟೆ (ಉತ್ಖನನ), ಒಳಗಿನ ಒಂದು ಕಟ್ಟಡ

ಕರಿಮೆಣಸು, ದಾಲ್ಚಿನ್ನಿ ಹಾಗೂ ಇನ್ನಿತರ ಅರಣ್ಯೋತ್ಪನ್ನಗಳು ಇದೇ ಬಂದರಿನಿಂದ ಹೊರದೇಶಕ್ಕೆ ರಫ್ತಾಗುತ್ತಿದ್ದವು. ಹಾಗೆಯೇ ಶ್ರೇಷ್ಠ ತಳಿಯ ಕುದುರೆಗಳನ್ನು ಅರೇಬಿಯದಿಂದ ವಿಜಯನಗರಕ್ಕೆ ಆಮದು ಮಾಡಿಕೊಳ್ಳಲಾಗುತ್ತಿತ್ತೆಂದು ಡೊಮಿಂಗೊಪೆಯಿಸ್ (1520), ಡೆ ಬಾರ್ಬೋಸ (1580) ಮುಂತಾದವರ ಬರೆಹಗಳಿಂದ ತಿಳಿದುಬರುತ್ತದೆ. ವಿಜಯನಗರದ ಪತನಾನಂತರ ಈ ಕೋಟೆ ಗುಲ್ಬರ್ಗದ ಬಹಮನಿ ಸುಲ್ತಾನರ ಆಡಳಿತಕ್ಕೊಳಪಟ್ಟಿತ್ತು. ಅನಂತರ ಬಿಜಾಪುರದ ಆದಿಲ್‌ಶಾಹಿ, ಉತ್ತರಕನ್ನಡದ ಸಾಮಂತ ಅರಸುಮನೆತನಗಳ ಸುಪರ್ದಿಗೆ ಸೇರಿತು. ಕಾಲಕ್ರಮೇಣ ಇದು ಪೋರ್ಚುಗೀಸರ ವಶವಾಯಿತು. ಅನಂತರದಲ್ಲಿ ಹೈದರ್ ಅಲಿ ಹಾಗೂ ಟಿಪ್ಪು ಸುಲ್ತಾನರ ಕೈವಶವಾಯಿತು. ಆಂಗ್ಲೊ–ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಪತನಾನಂತರ ಕೊನೆಗೆ ಇದು ಬ್ರಿಟಿಷರಿಗೆ ಸೇರಿತು.

ಸು.11.8 ಎಕರೆಗಳಷ್ಟು ವಿಸ್ತಾರ ಹೊಂದಿರುವ ಈ ಕೋಟೆ ಅಷ್ಟ ಕೋನಾಕೃತಿಯ ರಚನೆಯಲ್ಲಿ ಎತ್ತರವಾದ ದಿಬ್ಬದ ಮೇಲೆ ಜಂಬಿಟ್ಟಿಗೆ ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ನಾಲ್ಕು ಪ್ರವೇಶದ್ವಾರಗಳನ್ನು ಒಳಗೊಂಡಿರುವ ಈ ಕೋಟೆಯ ಉತ್ತರದ ವಿಶಾಲ ದ್ವಾರ ಪ್ರಮುಖವಾಗಿದೆ. ಸುತ್ತಲೂ ಆಳವಾದ ಕಂದಕವಿದ್ದು ಇದನ್ನು ಸಮೀಪದ ಕುದುರೆಹಳ್ಳದ ನೀರಿನಿಂದ ಸದಾಕಾಲ ತುಂಬಿರುವಂತೆ ಮಾಡಲಾಗಿದೆ. ದೊಡ್ಡದಾದ ಕಡೆದ ಕಲ್ಲುಗಳಿಂದ ನಿರ್ಮಿಸಲ್ಪಟ್ಟ ಈ ಕೋಟೆಯ ಗೋಡೆ ವಿಶಾಲವಾಗಿದ್ದು, ವೃತ್ತಾಕಾರದ ಹನ್ನೊಂದು ಇಳಿಜಾರಾದ ಬುರುಜುಗಳನ್ನು ಸುತ್ತಲೂ ಕಟ್ಟಲಾಗಿದೆ. ಗೋಡೆಯಂಚಿನ ಮೇಲೆ ಕಮಾನುಗಳನ್ನು ಸುತ್ತಲೂ ಕಟ್ಟಿ, ಮಧ್ಯದಲ್ಲಿ ರಂಧ್ರಗಳನ್ನು ಮಾಡಲಾಗಿದೆ. ಈ ಕಮಾನುಗಳ ಹಿಂದೆ ಕೋಟೆ ಗೋಡೆಯ ಮೇಲೆ ಒಬ್ಬ ಮನುಷ್ಯ ನಡೆದಾಡುವಷ್ಟು ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ. ಮುಖ್ಯದ್ವಾರದ ಎದುರಿಗೆ ಕಂದಕ ಹಾಗೂ ಪ್ರವೇಶದ್ವಾರಗಳನ್ನು ಕೂಡಿಸುವ ಸೇತುವೆಮಾರ್ಗದ ಅವಶೇಷಗಳಿವೆ. ಮುಸ್ಲಿಂ ಹಾಗೂ ಪೋರ್ಚುಗೀಸರ ವಾಸ್ತುಶೈಲಿಯ ಅತ್ಯುತ್ತಮ ಸಂರಕ್ಷಣಾ ಅಂಶಗಳನ್ನು ಅಳವಡಿಸಿ ಈ ಕೋಟೆಯನ್ನು ಕಟ್ಟಲಾಗಿದೆ. ಇದು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ದೊಡ್ಡ ಮತ್ತು ಬಲಿಷ್ಠವಾದ ಕೋಟೆಗಳಲ್ಲೊಂದಾಗಿದೆ. ಇದರ ಎಲ್ಲ ಪಾರ್ಶ್ವಗಳಲ್ಲಿ ಸುರಂಗಮಾರ್ಗದ ಅವಶೇಷಗಳಿವೆಯಾದರೂ ಇವು ಎಲ್ಲಿ ಸಂಧಿಸುತ್ತವೆ ಎಂಬುದು ತಿಳಿದುಬರುವುದಿಲ್ಲ. ಕೋಟೆಯೊಳಗೆ ಕಲ್ಲಿನಿಂದ ನಿರ್ಮಿಸಿರುವ ಮೂರು ಬಾವಿಗಳಿವೆ.

ಉತ್ಖನನ: ಮಿರ್ಜಾನ ಕೋಟೆ ರಾಷ್ಟ್ರೀಯ ಸಂರಕ್ಷಿತ ಸ್ಮಾರಕಗಳಲ್ಲೊಂದು. ಇದು ವಿವಿಧ ಅರಸೊತ್ತಿಗೆಗಳ ಆಡಳಿತಾವಧಿಯಲ್ಲಿ ವಹಿಸಿದ ಪಾತ್ರ ಮತ್ತು ಸಮಕಾಲೀನ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳನ್ನು ಕುರಿತು ಅಧ್ಯಯನ ನಡೆಸಲು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಧಾರವಾಡ ವಲಯ 1999ರಲ್ಲಿ ಕೋಟೆಯ ಒಳಗಡೆ ಸು.3900 ಚ.ಮೀ ವಿಸ್ತಾರದಲ್ಲಿ ಉತ್ಖನನ ನಡೆಸಿತು. ನೆಲದಲ್ಲಿ ಹುದುಗಿದ್ದ ದಕ್ಷಿಣೋತ್ತರವಾಗಿ ನಿರ್ಮಿತವಾದ ಹಲವಾರು ಜಂಬಿಟ್ಟಿಗೆ ಕಲ್ಲಿನ ಕಟ್ಟಡಗಳ ರಚನೆಗಳನ್ನು ಹಾಗೂ ಇನ್ನಿತರ ಸಮಕಾಲೀನ ಅವಶೇಷಗಳನ್ನು ಶೋಧಿಸಲಾಯಿತು. ಇದು 35x29.5 ಮೀ ವಿಸ್ತಾರವಿದ್ದು ಲಾಳಾಕಾರದ ವಿನ್ಯಾಸದಲ್ಲಿದೆ. ಇದರ ಪೂರ್ವ, ಪಶ್ಚಿಮ ಮತ್ತು ದಕ್ಷಿಣದ ಪಾರ್ಶ್ವಗಳು ಕಟ್ಟಡಗಳಿಂದ ಸುತ್ತುವರೆದಿದ್ದು, ಉತ್ತರಕ್ಕೆ ಖಾಲಿ ಅಂಕಣ ಇದೆ. ಅಂಕಣದಲ್ಲಿ ಕಟ್ಟಡಗಳ ಮೇಲೇರಲು ಮೆಟ್ಟಿಲುಗಳಿವೆ. ದಕ್ಷಿಣದ ಕಟ್ಟಡ ಉಳಿದೆರಡು ಪಾರ್ಶ್ವಗಳಿಗಿಂತ ಎತ್ತರವಿದೆ. ಈ ಸ್ಥಳದಲ್ಲಿ ಬೃಹತ್‌ಪ್ರಮಾಣದಲ್ಲಿ ಹೆಂಚುಗಳು ಹಾಗೂ ಕಂಬದ ಕುಳಿಗಳು ಕಂಡುಬರುವುದರಿಂದ ಈ ಕಟ್ಟಡ ತ್ರಿಕೋಣಾಕಾರದ ಹೆಂಚಿನ ಮೇಲ್ಛಾವಣಿ ಹೊಂದಿತ್ತೆಂದು ತಿಳಿದುಬರುತ್ತದೆ.

ಇದು ಆಡಳಿತಕ್ಕೆ ಸಂಬಂಧಿಸಿದ ಪ್ರಮುಖ ಕಟ್ಟಡವಾಗಿದ್ದು, ಪ್ರಾಂತೀಯ ಅಧಿಕಾರಿ ಇದರ ದಕ್ಷಿಣ ಭಾಗದ ಎತ್ತರ ಪ್ರದೇಶದಲ್ಲಿ ಕುಳಿತು ಜನರೊಂದಿಗೆ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತಿದ್ದಿರಬೇಕೆಂದು ತರ್ಕಿಸಲಾಗಿದೆ. ಇದೇ ವಿನ್ಯಾಸದ ಕಟ್ಟಡ ವಿಜಯನಗರದ ಹಂಪಿಯಲ್ಲಿಯೂ ಕಂಡುಬಂದಿದೆ. ಈ ಕಟ್ಟಡದ ನೈರುತ್ಯಕ್ಕೆ ಆಯತಾಕಾರದ ಕಟ್ಟಡ ರಚನೆಗಳಿದ್ದು, ಇಲ್ಲಿ ಸುಟ್ಟ ಕರಿಮೆಣಸು ಮತ್ತು ಅಕ್ಕಿಯ ಜೊತೆಗೆ ಬೀಸುವ ಕಲ್ಲು, ಕಬ್ಬಿಣದ ತವ ಮತ್ತು ತುರಿಯುವ ಮಣೆ ಮುಂತಾದವು ದೊರೆತಿರುವುದರಿಂದ ಈ ಕಟ್ಟಡ ಅಡುಗೆ ಮನೆಯಾಗಿದ್ದಿರಬೇಕು, ಈ ಆಕಾರ ಕಟ್ಟಡದ ಪಶ್ಚಿಮಕ್ಕೆ 16 ಮೀ ಅಂತರದಲ್ಲಿ ಕೊರೆದ ಕಲ್ಲುಗಳಿಂದ ವೃತ್ತಾಕಾರವಾಗಿ ಕಟ್ಟಲ್ಪಟ್ಟ ದೊಡ್ಡ ನೀರಿನ ತೊಟ್ಟಿ (ಕೊಳ) ಸುಂದರವಾಗಿದೆ. ತೊಟ್ಟಿಯ ಒಳಗಡೆ ಗಿಲಾವು ಮಾಡಲಾಗಿದ್ದು, ಇದರಿಂದ ನೀರನ್ನು ಹರಿಸಲು ಕಟ್ಟಿದ ಕಾಲುವೆ, ಕಲ್ಲಿನಿಂದ ಕಟ್ಟಿದ ನೀರಿನ ಕೊಳಾಯಿಗಳಿವೆ. ಈ ಎರಡೂ ಕೊಳಾಯಿಗಳಿಗೆ ಇವುಗಳ ಪಶ್ಚಿಮಕ್ಕಿರುವ ಕೋಟೆಯ ಬಾವಿಯಿಂದ ನೀರು ಪೂರೈಕೆಯಾಗುತ್ತಿತ್ತು. ಕೊಳಾಯಿಗಳ ದಕ್ಷಿಣಕ್ಕೆ ನೆಲದಲ್ಲಿ ಕೊರೆಯಲಾದ 5 ಮೀ ಆಳದ 5ಥ3 ಮೀ ವಿಸ್ತಾರದ ಹೊಂಡವಿದೆ. ಇದಕ್ಕೆ ಯಾವುದೇ ಮೆಟ್ಟಿಲುಗಳಿಲ್ಲ. ಇದನ್ನು ಮದ್ದುಗುಂಡು, ಶಸ್ತ್ರಾಸ್ತ್ರಗಳ ಸಂಗ್ರಹಕ್ಕೆ ಬಳಸುತ್ತಿರಬಹುದೆಂದು ತರ್ಕಿಸಲಾಗಿದೆ.

ಉತ್ಖನನದಲ್ಲಿ ದೊರೆತ ಪ್ರಾಚ್ಯಾವಶೇಷಗಳಲ್ಲಿ 8.5 ಸೆಂಮೀ ವ್ಯಾಸದ 75 ತೋಪಿನ ಗುಂಡುಗಳು ಗಮನಾರ್ಹ. ಇವುಗಳ ತೂಕ 10–15 ಕಿಗ್ರಾಂ. 5 ಮುದ್ಗರಗಳು, ತಾಮ್ರದ ಉಂಗುರ, ತಾಮ್ರ ಹಾಗೂ ಸೀಸದ ನಾಣ್ಯಗಳು, ಸುಟ್ಟಮಣ್ಣಿನ ಮುದ್ರೆ, ಚೀನ ಪಿಂಗಾಣಿ ಪಾತ್ರೆ, ಕಬ್ಬಿಣದ ಬಾಚಿ, ಕೊಡಲಿ, ಸುತ್ತಿಗೆ, ಮೊಳೆ ಮುಂತಾದವು ದೊರೆತಿವೆ. ಹೈದರ್‌ಅಲಿ ಕಾಲಾವಧಿಯ 113 ತಾಮ್ರದ ನಾಣ್ಯಗಳು ದೊರೆತಿವೆ. ಕೆಲವುದರ ಒಂದು ಬದಿಯಲ್ಲಿ ಆನೆಯ ಚಿತ್ರ ಇನ್ನೊಂದು ಬದಿಯಲ್ಲಿ ಗುರುತಿಸಲಾಗದ ಅರೇಬಿಕ್ ಲಿಪಿಗಳನ್ನು ಟಂಕಿಸಲಾಗಿದೆ. ಸುಟ್ಟಮಣ್ಣಿನ ವೃತ್ತಾಕಾರದ ಮುದ್ರಾಂಕನಗಳು ದೊರೆತಿದ್ದು, ಅವುಗಳ ಮೇಲೆ ಅರೇಬಿಕ್ ಲಿಪಿ ಮತ್ತು ಪರ್ಷಿಯನ್ ಭಾಷೆಯ ನಸ್ತಲಿಕ್ ಶೈಲಿಯಲ್ಲಿ ರಹಮಾನ್ ಖಾನ್ ವಲದ್ ಗಾಝಿ ಫಾಹಿಮ್ ಅಂದರೆ ಗಾಝಿ ಫಾಹಿಮ್ಮನ ಮಗ ರಹಮನ್ ಖಾನ್ ಎಂದು ಬರೆಯಲಾಗಿದೆ. ಈ ಮುದ್ರೆಗಳ ಮೇಲಿರುವ 1183 ಹಿಜರಿ ಶಕವರ್ಷ 1769–70ಕ್ಕೆ ತಾಳೆಯಾಗುತ್ತದೆ. ಹೈದರ್ ಅಲಿಯ ಕಾಲಾವಧಿಯಲ್ಲಿ ರೆಹಮಾನ್‌ಖಾನ್ ಎಂಬ ಮುಖಂಡನನ್ನು ಮಿರ್ಜಾನ ಕೋಟೆಯ ಉಸ್ತುವಾರಿಗಾಗಿ ನೇಮಿಸಿರಬಹುದು.

ಗೋವದಲ್ಲಿ ಪೋರ್ಚುಗೀಸರ ಕಾಲಾವಧಿಯಲ್ಲಿ ಟಂಕಿಸಲಾದ 1652ರ ಸುವರ್ಣ ನಾಣ್ಯವೊಂದು ದೊರೆತಿರುವುದು ಗಮನಾರ್ಹ. ಇದರ ತೂಕ 3.79 ಗ್ರಾಂ ಮತ್ತು ವ್ಯಾಸ 1.9 ಸೆಂಮೀ. ಈ ನಾಣ್ಯದ ಮುಂಬದಿಯಲ್ಲಿ ಸೇಂಟ್ ಥಾಮಸ್‌ನ ಚಿತ್ರವಿದ್ದು, ಇದರ ಎಡಗೈಯಲ್ಲಿ ನೇಗಿಲಾಕಾರದ ಕಟ್ಟಿಗೆಯಿದೆ. ಈ ನಾಣ್ಯವನ್ನು ಪೋರ್ಚುಗೀಸ್ ವೈಸರಾಯಿಯಾದ ಕಾಂಡೆ–ಡೇ–ಸಾರ್ಜೆದಾಸ್ ಹೊರಡಿಸಿದ. ಇವನು ಪೋರ್ಚುಗಲ್‌ನ ಮೊನಾರ್ಕ್ ಡಿ–ಜೊವೊ IV ಕಾಲಾವಧಿಯಲ್ಲಿ ಗೋವದಿಂದ ಆಳುತ್ತಿದ್ದನೆಂದು ನಾಣ್ಯದ ಹಿಂಬದಿಯಲ್ಲಿರುವ ಬರೆಹದಿಂದ ತಿಳಿಯುತ್ತದೆ. ಈ ನಾಣ್ಯವನ್ನು ಆಭರಣವನ್ನಾಗಿಯೂ ಉಪಯೋಗಿಸಲಾಗುತ್ತಿತ್ತೆಂದು ಇದರ ಮೇಲಿರುವ ವೃತ್ತಾಕಾರದ ಕೊಂಡಿಯಿಂದ ತಿಳಿಯಬಹುದು. ಬಿಳಿಬಣ್ಣದ ಚೀನ ಪಿಂಗಾಣಿ ಪಾತ್ರೆಗಳ ಮೇಲೆ ನವಿಲು ಮತ್ತು ಹಾವಿನ ಚಿತ್ರಗಳನ್ನು ನೀಲಿಬಣ್ಣದಿಂದ ಚಿತ್ರಿಸಲಾಗಿದೆ. ಮಡಕೆ, ಕುಡಿಕೆಗಳು, ಗೃಹಬಳಕೆಯ ಲೋಹದ ವಸ್ತುಗಳಾದ ಚಾಕು, ಕೈಕೊಡಲಿ, ಬಾಜಿ, ಚಮಚ, ತುರಿಯುವ ಮಣೆ, ಇಕ್ಕಳ ಮೊಳೆಗಳು ದೊರೆತಿವೆ. (ಎನ್.ಎ.ವಿ.)

**ಮಿಲ್ಲರ್ ಸಮಿತಿ ವರದಿ:** ನೋಡಿ–ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗಗಳು

**ಮುಜೀಬುರ್ ರೆಹಮಾನ್, ಷೇಕ್:** 1920–75. ಬಾಂಗ್ಲಾದೇಶದ ಸ್ಥಾಪಕ, ನಾಯಕ, ಪ್ರಥಮ ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷ. ಇವರು 1920ರಲ್ಲಿ ಢಾಕಾನಗರಕ್ಕೆ ನೈರುತ್ಯದಲ್ಲಿ 97ಕಿಮೀ ದೂರವಿರುವ ತುಂಗಿಪಾರಾ ಎಂಬಲ್ಲಿ ಜನಿಸಿದರು. ಕಲ್ಕತ್ತದ ಇಸ್ಲಾಮಿಯಾ ಕಾಲೇಜಿನಲ್ಲಿ ಪದವೀಧರರಾಗಿ ಮುಂದೆ ಸ್ವಲ್ಪಕಾಲ ಢಾಕಾ ವಿಶ್ವವಿದ್ಯಾಲಯದಲ್ಲಿ

ನ್ಯಾಯಶಾಸ್ತ್ರ ಅಭ್ಯಾಸಮಾಡಿದರು. ಪೂರ್ವಪಾಕಿಸ್ತಾನವೆಂದು 1947ರಲ್ಲಿ ರೂಪುಗೊಂಡ ಈ ಪ್ರದೇಶಕ್ಕೆ ಸ್ವಾಯತ್ತತೆ ಬೇಕೆಂದು ಮುಜೀಬುರ್ ರೆಹಮಾನರ ಮುಂದಾಳತ್ವದ ಅವಾಮಿ ಲೀಗ್ ಹೋರಾಟ ಪ್ರಾರಂಭಿಸಿತು. 1970ರಲ್ಲಿ ಈ ಚಳವಳಿ ತೀವ್ರವಾಗಿ ಷೇಕರು ಪಶ್ಚಿಮ ಪಾಕಿಸ್ತಾನದ ನಾಯಕರೊಡನೆ ಮಾತುಕತೆಗೆ ಹೋದಾಗ ಅಲ್ಲಿ ಅವರನ್ನು ಬಂಧನದಲ್ಲಿ ಇಡಲಾಯಿತು. 1971ರಲ್ಲಿ ಈ ಚಳವಳಿ ಉಗ್ರವಾಗಿ ಪಶ್ಚಿಮ ಮತ್ತು ಪೂರ್ವ ಪಾಕಿಸ್ತಾನಗಳ ನಡುವೆ ಯುದ್ಧನಡೆದು ಭಾರತದ ಉದಾರ ಸಹಾಯದಿಂದ ಪೂರ್ವ ಪಾಕಿಸ್ತಾನ ಸ್ವತಂತ್ರವಾಗಿ 1971 ಡಿಸೆಂಬರ್ 16ರಂದು ಬಾಂಗ್ಲಾ ದೇಶದ ಉದಯವಾಯಿತು. ಬಿಡುಗಡೆಯಾಗಿ ಬಂದ ಇವರು 1972 ಜನವರಿಯಲ್ಲಿ ಪ್ರಥಮ ಪ್ರಧಾನ ಮಂತ್ರಿಯಾದರು. 1975ರಲ್ಲಿ ಅಧ್ಯಕ್ಷೀಯ ಮಾದರಿಯ ಸರ್ಕಾರದ ಸಂವಿಧಾನವನ್ನು ಜಾರಿಗೆ ತಂದು 1975 ಜನವರಿ 26ರಂದು ಷೇಕರು ತಾವೇ ಅಧ್ಯಕ್ಷರಾದರು. ಇವರ ಅಧ್ಯಕ್ಷತೆಯ ಬಾಂಗ್ಲಾದೇಶ ಕೃಷಿಕ್ ಶ್ರಮಿಕ ಅವಾಮಿಲೀಗ್ ಪಕ್ಷವನ್ನು ಬಿಟ್ಟು ಉಳಿದೆಲ್ಲ ರಾಜಕೀಯ ಪಕ್ಷಗಳನ್ನು ಬಹಿಷ್ಕರಿಸಲಾಯಿತು. ಆದರೆ 1975 ಆಗಸ್ಟ್ 15ರಂದು ಸೇನಾಕ್ರಾಂತಿ ನಡೆದು ಇವರನ್ನು ಮತ್ತು ಇವರ ಕುಟುಂಬದ ಕೆಲವರನ್ನೂ ಒಳಗೊಂಡು ಜೊತೆಗೆ ಪ್ರಧಾನಿ ಮೊಹಮದ್ ಮನ್ಸೂರ್‌ರನ್ನು ಹತ್ಯೆಮಾಡಲಾಯಿತು. ಇವರು ಸಮರ್ಥ ರಾಜಕೀಯ ಮುತ್ಸದ್ದಿಯಾಗಿ ಬಾಂಗ್ಲಾದೇಶವನ್ನು ಅಸ್ತಿತ್ವಕ್ಕೆ ತಂದು ಅದರ ಅಭಿವೃದ್ಧಿಗೆ ಕಾರಣರಾದರು. ಬಾಂಗ್ಲಾದೇಶ ವಿಶ್ವಸಂಸ್ಥೆಯಲ್ಲಿ 1975 ಸೆಪ್ಟೆಂಬರ್ 17 ರಂದು ಸದಸ್ಯತ್ವ ಪಡೆಯಿತು. *

**ಮುಧೋಳ:** ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು. ಬಿಜಾಪುರಕ್ಕೆ ನೈರುತ್ಯದಲ್ಲಿ ಸು.81 ಕಿಮೀ ದೂರದಲ್ಲಿದೆ. ಪ್ರಾಚೀನ ಸುಂದರ ಪಟ್ಟಣ ಮುದುವೊಳಲ್ ಇಂದಿನ ಮುಧೋಳವಾಗಿದೆ. ಇದು ಮುಧೋಳ, ಢವಳೇಶ್ವರ, ಜಂಬಗಿ, ಮಾಚಕನೂರ ಮತ್ತು ಲೋಕಾಪುರ ಎಂಬ ಪಂಚಮಹಲುಗಳನ್ನು ಹೊಂದಿತ್ತು. ಘೋರ್ಪಡೆ ಮನೆತನದವರು ಆಳಿದ ಸಂಸ್ಥಾನದ ಕೇಂದ್ರವಾಗಿತ್ತು. ಈ ಮನೆತನದಲ್ಲಿ ನವಕಸ ಮತ್ತು ಸಾತಕಸ ಎಂಬ ಎರಡು ಶಾಖೆಗಳಿದ್ದವು.

ನವಕಸ ಶಾಖೆಗೆ ಸೇರಿದ ಮುಧೋಳದ ಬಾಜೀ ಘೋರ್ಪಡೆ ಬಿಜಾಪುರದ ದರ್ಬಾರಿನಲ್ಲಿ ಸರದಾರನಾಗಿದ್ದ. ಅವನು ಸೈನ್ಯದಲ್ಲಿ ಅತ್ಯುತ್ತಮ ಸೇವೆಮಾಡಿದುದರಿಂದ ಮುಧೋಳ ಜಹಗೀರು ಅವನಿಗೆ ದೊರೆಯಿತು. ಬಾಜೀರಾಯನು ಕರ್ನಾಟಕದಲ್ಲಿ ಕಪಟತನದಿಂದ ಶಹಾಜಿಯನ್ನು ಸೆರೆಹಿಡಿದು ಬಿಜಾಪುರಕ್ಕೆ ಕಳಿಸಿದ್ದರಿಂದ ಶಿವಾಜಿ ಮುಧೋಳನ್ನು ಸುಟ್ಟ. ಮುಧೋಳ ಸಂಸ್ಥಾನಿಕರ ಅರಮನೆ ಊರ ಹೊರಗಿದೆ. ಇವರು ಮೂಲತಃ ರಜಪೂತರೆಂದೂ ಉದಯಪುರದ ರಾಣಾ ಕುಟುಂಬ ಇವರ ಮೂಲವೆಂದು ತಿಳಿಯುತ್ತದೆ. ಹೀಗೆ ಮುಧೋಳ ಸಂಸ್ಥಾನದ ಮೂಲ ಪುರುಷನಾಗಿ ಬಾಜೀರಾಯ ಉತ್ತಮ ಆಡಳಿತ ನಡೆಸಿದ. ತರುವಾಯ ಇವನ ಮಗ ಮಾಲೋಜಿ ಸಂಸ್ಥಾನದ ಒಡೆಯನಾದ. ಬಿಜಾಪುರವು ಹಾಳಾದ ಬಳಿಕ ಔರಂಗಜೇಬನು ಮಾಲೋಜಿಗೆ ಜಹಗೀರು ನೀಡಿದನು. ಇವನ ತರುವಾಯ ಅಕೋಜಿ, ಅನಂತರ ಇವನ ಮಗ ಪಿಶೋಜಿ. ತರುವಾಯ ಇವನ ಮಗ ಮಾಲೋಜಿ ಬಹಳ ಕಾಲ ಆಳಿದ. ಈತ 1805ರಲ್ಲಿ ಮರಣ ಹೊಂದಿದ. ಬಳಿಕ ಇವನ ಮಗ ನಾರಾಯಣರಾಯ 11 ವರ್ಷ ರಾಜ್ಯವನ್ನಾಳಿ 1816ರಲ್ಲಿ ನಿಧನನಾದ. ನಾರಾಯಣರಾಯನಿಗೆ ಗೋವಿಂದರಾಯ, ಲಕ್ಷ್ಮಣರಾಯ, ವೆಂಕಟರಾಯರೆಂಬ ಮೂವರು ಮಕ್ಕಳಿದ್ದರು. ಇವರಲ್ಲಿ ಅರಸೊತ್ತಿಗೆಯ ಸಲುವಾಗಿ ಜಗಳ ಹುಟ್ಟಿ ತಾಯಿಯ ಪ್ರಯತ್ನದಿಂದ ವೆಂಕಟರಾಯನಿಗೆ ರಾಜಾಧಿಕಾರ ದೊರೆಯಿತು. ಗೋವಿಂದರಾಯ ಮತ್ತು ಲಕ್ಷ್ಮಣರಾಯನಿಗೆ ಪೇಶ್ವೆಯವರ ದಂಡಿನಲ್ಲಿ ಸೈನಿಕರಾದರು.

ಪೇಶ್ವೆಯವರ ಅಷ್ಟೆಯ ಯುದ್ಧದಲ್ಲಿ ಗೋವಿಂದರಾಯ ಮಡಿದ. ಅದೇ ಕಾಲಕ್ಕೆ ಲಕ್ಷ್ಮಣರಾಯ ಬರೋಡ ಸಂಸ್ಥಾನ ಸೇರಿದ. ವೆಂಕಟರಾಯ 1854ರಲ್ಲಿ ಮರಣ ಹೊಂದಿದ. ಅವನ ಮಗ ಬಳವಂತರಾಯ ಎರಡು ವರ್ಷ ಆಳಿಕೆ ನಡೆಸಿ ನಿಧನನಾದ. ಬಳವಂತರಾಯನ ಮಗ ವೆಂಕಟರಾಯ ಪ್ರೌಢನಾದ ಬಳಿಕ ಅವನಿಗೆ 1882 ರಲ್ಲಿ ಮುಖತ್ಯಾರಿ (ರಾಜತ್ವ) ನೀಡಿದರಿಂದ ಅವನೇ ರಾಜ್ಯವಾಳಿದ. ಮುಂದೆ ಇವನ ಮಗ ಮಾಲೋಜಿ ರಾವ್ ಘೋರ್ಪಡೆ 1904ರಲ್ಲಿ ಅಧಿಕಾರಕ್ಕೆ ಬಂದು ನವೆಂಬರ 1937ರ ವರೆಗೆ ರಾಜ್ಯಭಾರ ಮಾಡಿ ಮುಂಬೈಯಲ್ಲಿ ಕಾಲವಶನಾದ. 1938ರಿಂದ ರಾಣೀ ಸಾಹೇಬರು ರೀಜಂಟರಾಗಿ (ಇಂಗ್ಲಿಷರ ಅಧೀನ) ಸಂಸ್ಥಾನ ವಿಲೀನವಾಗುವ ತನಕ ಒಳ್ಳೆಯ ಕಾರ್ಯಮಾಡಿದರು. ಈ ಸಂಸ್ಥಾನ ಉಳಿದೆಲ್ಲ ಸಂಸ್ಥಾನಗಳಂತೆ 1948ರಲ್ಲಿ ಕರ್ನಾಟಕ ಏಕೀಕರಣದಲ್ಲಿ ವಿಲೀನಗೊಂಡಿತು.

ಸಾಮಾಜಿಕವಾಗಿ ಮುಧೋಳದಲ್ಲಿ ಬೇಡರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮರಾಠರು, ಬ್ರಾಹ್ಮಣರು, ವೀರಶೈವರೂ ಇದ್ದರು. ಇದೇ ಸಂಸ್ಥಾನಕ್ಕೆ ಸಂಬಂಧಿಸಿದ ಹಲಗಲಿಯ ಬೇಡರು ನಿಶ್ಶಸ್ತ್ರೀಕರಣ ಕಾಯಿದೆಯಡಿ ಶಸ್ತ್ರಾಸ್ತ್ರ ಕಳೆದುಕೊಂಡು ದಂಗೆಯೆದ್ದುದರ ಫಲವಾಗಿ, 1857ರಲ್ಲಿ ಮುಧೋಳದ ಸಂತೆಯ ದಿನ 13 ಜನರನ್ನು ಬ್ರಿಟಿಷರು ಗಲ್ಲಿಗೇರಿಸಿದರು.

ಮುಧೋಳ ಸಂಸ್ಥಾನಿಕರು ತಮ್ಮ ಅರಮನೆ ಕಟ್ಟಡದ ಆವರಣದ ಕೆಲಭಾಗಗಳನ್ನು ಅಂಚೆಕಛೇರಿ, ಆಸ್ಪತ್ರೆ, ಗ್ರಂಥಾಲಯ, 5 ಧರ್ಮಶಾಲೆಗಳಿಗೆ ನೀಡಿದರು. ಅಲ್ಲದೆ ಊರ ಹೊರಗೆ ಕೆರೆ ಕಟ್ಟಿಸಿದರು. ಊರೊಳಗೆ ನಲ್ಲಿಯ ವ್ಯವಸ್ಥೆ ಮಾಡಿಸಿದರು. ಊರ ಹೊರವಲಯದಲ್ಲಿ ಸೈಯದ್ ಸಾಹೇಬ ಹೆಸರಿನಲ್ಲಿ ಮುಸ್ಲಿಮರಿಗಾಗಿ ಕೆರೆಯೊಂದಿತ್ತು. ವಿದ್ಯುತ್, ಗೋಶಾಲೆಗಳ ವ್ಯವಸ್ಥೆಯಿತ್ತು. ಶೈಕ್ಷಣಿಕವಾಗಿ ಕನ್ನಡ, ಮರಾಠಿ, ಇಂಗ್ಲಿಷ್ ಶಾಲೆಗಳಿದ್ದವು. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ವಿದ್ಯಾಭ್ಯಾಸ ವ್ಯವಸ್ಥೆಯಿತ್ತು. ಇಂಗ್ಲಿಷ್ ಶಿಕ್ಷಣಕ್ಕೆ ಮಾತ್ರ ಶುಲ್ಕ ಹೆಚ್ಚಿತ್ತು. ಧಾರ್ಮಿಕವಾಗಿ ಪ್ರಾಚೀನ ಪರಂಪರೆಯ ಶಿವ ದೇವಾಲಯ, ಶ್ವೇತಾಂಬರ ಜೈನ ದೇವಾಲಯ, ಶ್ರೀರಾಮ, ಮಾರುತಿ, ದತ್ತಾತ್ರೇಯ, ವೆಂಕಟೇಶ್ವರ ದೇವಾಲಯಗಳು ಮತ್ತು ರಾಘವೇಂದ್ರಸ್ವಾಮಿಗಳ ಮಠ, ಬ್ರಹ್ಮಗದ್ದಿಗೆ ಮಠಗಳಿವೆ. ರಾಜರಾಜೇಶ್ವರಿ, ಗೌರಿ ಮಹಾಲಿಂಗೇಶ್ವರ, ಬನಶಂಕರಿ, ಚನ್ನಗಿರೀಶ್ವರ ಮುಂತಾದ ದೇವಾಲಯಗಳಿವೆ. ಸಂಸ್ಥಾನಿಕರ ಕೋಟೆಯ ಆವರಣದಲ್ಲಿ ಸಿದ್ಧರಾಮೇಶ್ವರ ದೇವಾಲಯವಿದೆ. ಮುಧೋಳ ಸಂಸ್ಥಾನದಲ್ಲಿ ಶಿವಾಜಿ ಮತ್ತು ಗಣೇಶ ಉತ್ಸವಗಳು ವಿಜೃಂಭಣೆಯಿಂದ ಇಂದಿಗೂ ನಡೆಯುತ್ತವೆ. ಸಂಸ್ಥಾನ ಆವರಣದ ಸಿದ್ಧರಾಮೇಶ್ವರ ಜಾತ್ರೆಯನ್ನು ಪ್ರತಿವರ್ಷ ಜಾತಿ ಭೇದವಿಲ್ಲದೆ ಆಚರಿಸಲಾಗುತ್ತಿದೆ. ದತ್ತಾತ್ರೇಯ ಮತ್ತು ವೆಂಕಟೇಶ್ವರ ದೇವಾಲಯಗಳಿಗೆ ದಾನ ನೀಡಿರುವ ವಿಚಾರ ತಿಳಿದುಬಂದಿದೆ.

ಸಂಸ್ಥಾನದ ರಕ್ಷಣೆಗಾಗಿ ಮುಧೋಳದಲ್ಲಿ ಮದ್ದಿನ ಕಾರ್ಖಾನೆ ಇತ್ತು. ಪದಾತಿ ಮತ್ತು ಅಶ್ವ ದಳಗಳಿದ್ದವು. ಸೈನ್ಯ ವ್ಯವಸ್ಥೆ ಬಿಗಿಯಾಗಿತ್ತು. ಜನಸಾಮಾನ್ಯರ ಮೇಲೆ ಕರಭಾರ ಹೆಚ್ಚಾಗಿ ಸಂಸ್ಥಾನಿಕರ ವಿರುದ್ಧ ಪ್ರಜಾಸಂಘ ತಿರುಗಿಬಿದ್ದ ದುರಂತ ಘಟನೆ ನಡೆಯಿತು. ಪ್ರಜೆಗಳಿಗಾಗಿ ನ್ಯಾಯಾಲಯದ ವ್ಯವಸ್ಥೆಯಿರಲಿಲ್ಲ. ಪ್ರಜಾಪ್ರತಿನಿಧಿಗಳ ಸಭೆ ಕರೆಯುತ್ತಿರಲಿಲ್ಲ. ಸಂಸ್ಥಾನದ ನೌಕರಿಗಳಲ್ಲಿ ಕನ್ನಡಿಗರನ್ನು ತೆಗೆದುಕೊಳ್ಳುತ್ತಿರಲಿಲ್ಲ. ಪ್ರಾಣಿಬಲಿ ನಿಷೇಧವಾಗಿತ್ತು. ಸಾಕುಪ್ರಾಣಿಗಳನ್ನು ಕಟುಕರಿಗೆ ಮಾರಿದರೆ ಇನ್ನೂರು ರೂಪಾಯಿ ದಂಡ ಇಲ್ಲವೇ ಒಂದು ತಿಂಗಳು ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು. (ಕೆ.ಆರ್.ಎಂ.)

**ಮುಸ್ಸೋಲಿನಿ, ಬೆನಿಟೋ:** 1883–1945. ಫ್ಯಾಸಿಸ್ಟ್ ಸಿದ್ಧಾಂತದ ಸ್ಥಾಪಕ. ಇಟಲಿಯನ್ನು ಸು.21 ವರ್ಷಗಳ ಕಾಲ ಆಳಿದ ಸರ್ವಾಧಿಕಾರಿ. 1883 ಜುಲೈ 29ರಂದು ಇಟಲಿಯ ಈಶಾನ್ಯ ಭಾಗದ ಡೊವಿಯ ಎಂಬಲ್ಲಿ ಜನಿಸಿದ. ತಾಯಿ ಶಾಲಾ ಉಪಾಧ್ಯಾಯಿನಿ, ತಂದೆ ಕಮ್ಮಾರ. ಪ್ರಿಡಪ್ಪಿಯೋ ಎಂಬಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ಅನಂತರ ಈತನನ್ನು 14ನೆಯ ವರ್ಷದಲ್ಲಿ ಫಯೆಂಜಾ ಎಂಬಲ್ಲಿ ಕ್ರೈಸ್ತ ಭಿಕ್ಷುಗಳು ನಡೆಸುತ್ತಿದ್ದ ಶಾಲೆಯೊಂದಕ್ಕೆ ಸೇರಿಸಲಾಯಿತು. ಶಾಲೆಯ ಕಟ್ಟುನಿಟ್ಟಿನ ಶಿಸ್ತನ್ನು ವಿರೋಧಿಸಿ ಬಂಡಾಯವೆದ್ದ. ಇವನನ್ನು ದುರ್ನಡತೆಗಾಗಿ ಅಲ್ಲಿಂದ ಹೊರದೂಡಲಾಯಿತು. ತರುವಾಯ ಫೋರ್ಲಿ ಎಂಬಲ್ಲಿದ್ದ ಸಾಮಾನ್ಯ ಶಾಲೆಯೊಂದರಲ್ಲಿ ವ್ಯಾಸಂಗ ನಡೆಸಿದ. ಸ್ವಲ್ಪಕಾಲ ಅಲ್ಲಿ ಕೆಲಸ ಮಾಡಿದ; ಅಲ್ಲಿದ್ದಾಗ ತನ್ನ ಪುಂಡಾಟಿಕೆಯಿಂದಾಗಿ ಮೇಲಿಂದ ಮೇಲೆ ಅಲ್ಲಿಯ ಪೋಲೀಸರೊಡನೆ ಘರ್ಷಣೆಗಿಳಿದ. 1904ರಲ್ಲಿ ಇಟಲಿಗೆ ಹಿಂತಿರುಗಿ ಅಗತ್ಯವಾಗಿ ಪೂರೈಸಬೇಕಿದ್ದ ಸೈನಿಕ ಸೇವೆಗೆ 1905–06ರಲ್ಲಿ ಸೇರಿದ. ಮತ್ತೆ ಶಿಕ್ಷಕನಾದ.

1909ರಲ್ಲಿ ಆಸ್ಟ್ರಿಯದ ಟ್ರೆಂಟ್‌ಗೆ (ಈಗ ಇಟಲಿಗೆ ಸೇರಿದೆ) ತೆರಳಿ ಅಲ್ಲಿಯ ಸಮಾಜ ಸ್ವಾಮ್ಯವಾದ (ಸೋಷಿಯಲಿಸ್ಟ್) ಪತ್ರಿಕೆಯೊಂದರಲ್ಲಿ ಸ್ವಲ್ಪಕಾಲ ಕೆಲಸ ಮಾಡಿದ. ಈ ಕಾಲದಲ್ಲಿ ಕೆಲವುಸಾಹಿತ್ಯ ಕೃತಿಗಳನ್ನು ರಚಿಸಿದ. ಟ್ರೆಂಟ್ ಬಗ್ಗೆ ಇಟಲಿಗೆ ಇದ್ದ ಹಕ್ಕನ್ನು ಬಹಿರಂಗವಾಗಿ ಬೆಂಬಲಿಸಿದ್ದರಿಂದ ಈತನನ್ನು ಆಸ್ಟ್ರಿಯದಿಂದ ಗಡಿಪಾರು ಮಾಡಲಾಯಿತು. ಇಟಲಿಗೆ ಹಿಂತಿರುಗಿದ ತರುವಾಯ ಸಮಾಜ ಸ್ವಾಮ್ಯಪತ್ರಿಕೆಯ ಸಂಪಾದಕನಾದ. ಅನಂತರ ಇಟಲಿಯ ಪ್ರಮುಖ ಪತ್ರಿಕೆ ಎನಿಸಿದ ಅವಂತಿಯ ಸಂಪಾದಕನಾದ (1912). ಒಂದನೆಯ ಮಹಾಯುದ್ಧ ಆರಂಭವಾದಾಗ ಇಟಲಿ ತಕ್ಷಣವೇ ಜರ್ಮನಿಯ ವಿರುದ್ಧ ಸಮರ ಸಾರಬೇಕೆಂದು ಈತ ಪ್ರಬಲವಾಗಿ ಪ್ರತಿಪಾದಿಸಿದುದರಿಂದ ಸಮಾಜಸ್ವಾಮ್ಯವಾದಿ ಪಕ್ಷದ ಮುಖಂಡರ ಕೋಪಕ್ಕೆ ಗುರಿಯಾದ; ಪರಿಣಾಮವಾಗಿ 1914 ನವೆಂಬರ್ 25 ರಂದು ಈತನನ್ನು ಪಕ್ಷದಿಂದ ಉಚ್ಚಾಟಿಸಲಾಯಿತು. ಕೂಡಲೇ ಇಲ್ ಪೊಪೊಲೊ ಡಿ ಇಟಾಲಿಯಾ ಎಂಬ ತನ್ನದೇ ಆದ ಪತ್ರಿಕೆಯೊಂದನ್ನು ಹೊರಡಿಸಿ ಇಟಲಿ ಯುದ್ಧ ನಿರತವಾಗಬೇಕೆಂದು ಸಾರುವ ಉದ್ದೀಪಕ ಸಂಪಾದಕೀಯಗಳನ್ನು ಬರೆದ. ಇಟಲಿ ಯುದ್ಧಕ್ಕೆ ಪ್ರವೇಶಿಸಿದಾಗ ಸೈನ್ಯದ ಪಟ್ಟಿಯಲ್ಲಿ ಮುಸ್ಸೋಲಿನಿಯ ಹೆಸರು ಸೇರಿ ಆತ ಕಾರ್ಪೊರಲ್ ಆಗಿ ಸಕ್ರಿಯವಾಗಿ ಭಾಗವಹಿಸಿದ (1915 ಸೆಪ್ಟೆಂಬರ್‌ನಿಂದ 1917 ಫೆಬ್ರುವರಿ).

ಈತ ಫ್ಯಾಸಿಸ್ಟ್ ಎಂದು ಕರೆಯಲಾದ ಮೊದಲ ರಾಜಕೀಯ ಸಂಘವನ್ನು ಮಿಲಾನ್‌ನಲ್ಲಿ ಸ್ಥಾಪಿಸಿದ (1919). ಮೊದಮೊದಲು ಅದರ ಕಾರ್ಯಕ್ರಮ ಪ್ರಧಾನವಾಗಿ ರಾಷ್ಟ್ರೀಯ ಸ್ವರೂಪದ್ದಾಗಿದ್ದು ಅತೃಪ್ತ ಯುದ್ಧವೀರರಿಗೆ ಮನವಿ ಮಾಡಿಕೊಳ್ಳುವುದಾಗಿತ್ತು. ಪ್ರಾಚೀನ ರೋಮ್ ಸಾಮ್ರಾಜ್ಯದ ವೈಭವ ಪುನರ್ ಸ್ಥಾಪನೆಯನ್ನು ಪ್ರತಿಪಾದಿಸಿ ಇಟಲಿಯ ಜನತೆಗೆ

ಮುಸ್ಸೋಲಿನಿ ಕರೆನೀಡಿದ. ತರುವಾಯ ಈ ಕಾರಣಕ್ಕೆ ಶ್ರೀಮಂತ ಇಟಾಲಿಯನ್ನರ ಮನಗೆಲ್ಲಲು ಕಾರ್ಯತಂತ್ರವನ್ನು ರೂಪಿಸಿದ. 1922 ಅಕ್ಟೋಬರ್ ವೇಳೆಗೆ ಫ್ಯಾಸಿಸ್ಟ್‌ಪಾರ್ಟಿ ಬಲವಾಗಿ ಬೇರೂರಿ ಶಸ್ತ್ರಸಜ್ಜಿತ ಕಪ್ಪಂಗಿದಳವೆಂಬ ಫ್ಯಾಸಿಸ್ಟ್ ಯೋಧರ ಗುಂಪು ದುರ್ಬಲನಾದ ಮೂರನೆಯ ವಿಕ್ಟರ್ ಇಮ್ಯಾನ್ಯುಯೆಲ್ ಸರ್ಕಾರದ ನೇತೃತ್ವವನ್ನು ವಹಿಸಲು ಮುಸ್ಸೋಲಿನಿಗೆ ಆಹ್ವಾನ ನೀಡಬೇಕಾದ ಸನ್ನಿವೇಶ ಏರ್ಪಟ್ಟಿತು.

1935–36ರಲ್ಲಿ ಮುಸ್ಸೋಲಿನಿ ಇಥಿಯೋಪಿಯವನ್ನು ಆಕ್ರಮಿಸಿ ವಶಪಡಿಸಿಕೊಂಡ. ಇನ್ನೂ ಬಿಲ್ಲುಬಾಣ ಬಳಕೆಯ ಯುಗದಲ್ಲೇ ಇದ್ದ ಶಾಂತಸ್ವಭಾವದ ಆ ಜನರನ್ನು ಮೆಷಿನ್‌ಗನ್ ಧಾರಿಗಳಾದ ಇಟಲಿಯ ಸೈನಿಕರು ಸುಲಭವಾಗಿ ನುಚ್ಚುನೂರು ಮಾಡಿದರು. ಇಟಲಿಯ ಈ ಕ್ರಮವನ್ನು ಬ್ರಿಟನ್, ಫ್ರಾನ್ಸ್ ಹಾಗೂ ಇತರೆ ರಾಷ್ಟ್ರಗಳು ತೀವ್ರವಾಗಿ ವಿರೋಧಿಸಿದವು.

ಸ್ಪೇನ್ ದೇಶದಲ್ಲಿ ಬಂಡಾಯ ಸಂಭವಿಸಿದಾಗ ಮುಸ್ಸೋಲಿನಿ ಮತ್ತು ಅಡಾಲ್ಫ್ ಹಿಟ್ಲರ್ ಬಂಡಾಯದ ನೇತಾರ ಜನರಲ್ ಫ್ರಾನ್ಸಿಸ್ಕೊ ಫ್ರಾಂಕೊನನ್ನು ಬೆಂಬಲಿಸಲು ನಿರ್ಧರಿಸಿ, 1936ರಲ್ಲಿ ಆತನ ನೆರವಿಗೆ ಸೈನ್ಯ ಕಳುಹಿಸಿಕೊಟ್ಟರು. ಇಟಲಿ ಈ ಯುದ್ಧದಲ್ಲಿ ಜಯಗಳಿಸಿ ಅಲ್ಬೇನಿಯವನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

1940ರಲ್ಲಿ ಬಹಳಮಟ್ಟಿಗೆ ಫ್ರಾನ್ಸ್ ಮೇಲೆ ಜರ್ಮನಿ ಜಯಿಸಿದ ತರುವಾಯ ಈತ ಎರಡನೆಯ ಮಹಾಯುದ್ಧದ ರಂಗಕ್ಕೆ ಪ್ರವೇಶಿಸಿ ದಕ್ಷಿಣದ ಫ್ರಾನ್ಸನ್ನು ಆಕ್ರಮಿಸಿದ. ಕೆಲವು ದಿನಗಳಲ್ಲೇ ಫ್ರಾನ್ಸ್ ಶರಣಾಯಿತಾದರೂ ಬೇರೆಡೆಗಳಲ್ಲಿ ಇಟಲಿಯ ಸೈನ್ಯಕ್ಕೆ ಒಂದರ ಮೇಲೊಂದರಂತೆ ವಿಪತ್ತುಗಳುಂಟಾಗಿ ಪರಿಸ್ಥಿತಿ ಗಂಭೀರವಾಯಿತು. ಆಫ್ರಿಕ, ಗ್ರೀಸ್ ಮತ್ತು ಕೊನೆಗೆ ಇಟಲಿಯಲ್ಲಿಯೇ ಮುಸ್ಸೋಲಿನಿಯ ಸೈನ್ಯಕ್ಕೆ ಸೋಲುಂಟಾಯಿತು. ಇಟಲಿಯ ಸಂಪೂರ್ಣನಾಶವನ್ನು ಸ್ವಲ್ಪಕಾಲ ತಡೆಹಿಡಿಯುವುದು ಜರ್ಮನಿಗೆ ಸಮಸ್ಯೆಯಾಯಿತು. ಮುಸ್ಸೋಲಿನಿಯ ಕಾರ್ಯ ಫಲಪ್ರದವಾಗಲಿಲ್ಲ. 1943 ಜುಲೈನಲ್ಲಿ ಫ್ಯಾಸಿಸ್ಟ್ ಗ್ರ್ಯಾಂಡ್ ಕೌನ್ಸಿಲ್ ಮುಸ್ಸೋಲಿನಿಯ ವಿರುದ್ಧವಾಗಿ ತೀರ್ಮಾನ ತೆಗೆದುಕೊಂಡು ಅಧಿಕಾರವನ್ನು ರಾಜನಿಗೆ ವಹಿಸಿ, ಇವನನ್ನು ಅಧಿಕಾರದಿಂದ ಕಿತ್ತೊಗೆಯಿತು. ಜರ್ಮನಿಯ ಸೈನ್ಯ ಇವನ ಬೆಂಬಲಕ್ಕೆ ಬಂದು ಇವನನ್ನು ಉತ್ತರ ಇಟಲಿಯ ದುರ್ಬಲ ಸರ್ಕಾರದ ನೇತಾರನನ್ನಾಗಿಸಿತು.

1945ರ ವಸಂತಕಾಲದಲ್ಲಿ ಉತ್ತರ ಇಟಲಿಯಲ್ಲಿ ಜರ್ಮನ್ ಸೈನ್ಯಕ್ಕೆ ಸೋಲುಂಟಾಯಿತು. ಮುಸ್ಸೋಲಿನಿ ತನ್ನ ಪತ್ನಿ ಕ್ಲಾರಾ ಮತ್ತಿತರ ಕೆಲವು ಅನುಯಾಯಿಗಳೊಡನೆ ಉತ್ತರದತ್ತ ಪಲಾಯನ ಮಾಡಿದ. ಆದರೆ ಲೇಕ್ ಕಾಮೊ ಎಂಬಲ್ಲಿ ಇಟಲಿಯ ಗೂಢಚಾರರ ಕೈಗೆ ಸಿಕ್ಕಿಬಿದ್ದ; ಪತಿಪತ್ನಿಯರಿಬ್ಬರೂ ಗುಂಡೇಟಿಗೆ ಬಲಿಯಾದರು. ಅವರ ಕಳೇಬರಗಳನ್ನು ಮಿಲಾನ್‌ಗೆ ಕೊಂಡೊಯ್ದು ಗ್ಯಾರೇಜೊಂದರ ಬಳಿ ತೂಗುಹಾಕಲಾಯಿತು. ಆದರೆ ಮುಸ್ಸೋಲಿನಿ ಅನುಚರರ ಪ್ರದರ್ಶನವನ್ನು ತಡೆಯಲು ಶವಗಳನ್ನು ರಹಸ್ಯವಾಗಿರಿಸಬೇಕಾಯಿತು. 1957 ಆಗಸ್ಟ್‌ನಲ್ಲಿ ಇವನ ಇನ್ನೊಬ್ಬ ಪತ್ನಿಯ ಕೋರಿಕೆಯಂತೆ ಮುಸ್ಸೋಲಿನಿಯ ದೇಹವನ್ನು ಪ್ರಿಡಪ್ಪಿಯೊ ಎಂಬಲ್ಲಿ ಸಮಾಧಿ ಮಾಡಲಾಯಿತು.

ಇಟಲಿಯನ್ನು ಒಂದು ಮಹಾಸಾಮ್ರಾಜ್ಯವಾಗಿ ಬೆಳೆಸಲು ಮುಸ್ಸೋಲಿನಿ ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಈತ ತನ್ನ ಅಧಿಕಾರವಧಿಯಲ್ಲಿ ನಿರುದ್ಯೋಗ ಪ್ರಮಾಣವನ್ನು ತಗ್ಗಿಸಿದ ಮತ್ತು ರೈಲ್ವೆ ಸೇವೆಯಲ್ಲಿ ಸುಧಾರಣೆಗಳನ್ನು ಜಾರಿಗೆ ತಂದ. ಆದರೆ ಸುಧಾರಣೆಗಳಿಂದ ಸಾಮಾನ್ಯ ಜನ ದಾಸ್ಯಕ್ಕೊಳಗಾಗಿ ತಮ್ಮ ಸ್ವಾತಂತ್ರ್ಯವನ್ನೇ ಬಿಟ್ಟುಕೊಡಬೇಕಾಯಿತು. ಕೊಲೆ, ಗಡಿಪಾರು, ಖೈದಿಶಿಬಿರ ಮುಂತಾದ ಕ್ರೂರ ವಿಧಾನಗಳಿಂದ ಜನತೆಯ ಮೇಲೆ ಹಿಡಿತ ಸಾಧಿಸಿ ತನ್ನ ಶೌರ್ಯ ಸಾಹಸಗಳನ್ನು ಮೆರೆದ ಬಲವಂತನೀತ. ಇಟಲಿಯ ಪುರುಷರೆಲ್ಲ ಸೈನಿಕರೂ ಸ್ತ್ರೀಯರೆಲ್ಲ ಸೈನಿಕರ ತಾಯಂದಿರೂ ಆಗಿರಬೇಕೆನ್ನುವುದು ಈತನ ಕನಸಾಗಿತ್ತು. ಮುಸ್ಸೋಲಿನಿ ತನ್ನ ಪ್ರಜೆಗಳಿಂದ ಡ್ಯೂಸ್ ಡ್ಯೂಸ್ (ನಾಯಕ) ಎಂಬ ಘೋಷಣೆಯನ್ನೇ ಕೇಳಲು ತವಕಿಸುತ್ತಿದ್ದ. (ಎಚ್.ಎಂ.ಎನ್.ಆರ್.)

**ಮೂರ್ತಿಶಿಲ್ಪ:** ಶಿಲ್ಪಶಾಸ್ತ್ರ ಮೂರ್ತಿಗಳ ರಚನೆಯ ಲಕ್ಷಣಗಳನ್ನು ನಿರ್ದಿಷ್ಟವಾಗಿ ತಿಳಿಸುತ್ತದೆ. ಶಿಲ್ಪಶಾಸ್ತ್ರದಲ್ಲಿ ಪ್ರತಿಮೆಗಳನ್ನು ರಚಿಸುವ ಮೊದಲು, ಶಿಲ್ಪಿಯು ಆ ದೇವರ ರೂಪವನ್ನು ಮನನ ಮಾಡಿಕೊಳ್ಳಲು ಆ ದೇವರ ಧ್ಯಾನಶ್ಲೋಕವನ್ನು ಜಪಿಸುತ್ತಾನೆ. ಹೀಗೆ ಧ್ಯಾನದ ಮೂಲಕ ಮನಸ್ಸಿನಲ್ಲಿ ಮೂಡಿದ ಶಿಲ್ಪವನ್ನು ಭಾವಶಿಲ್ಪ ಎನ್ನುವರು. ಶಿಲ್ಪಿಗಳು ತಾನು ಕಂಡ ರೂಪವನ್ನು ಮರ/ಕಲ್ಲು/ ಮೇಣದಲ್ಲಿ ರೂಪಿಸುತ್ತಾರೆ. ಹೀಗೆ ನಿರ್ಮಿಸಿದ ಮೂರ್ತಿಯನ್ನು ಸುಮುಹೂರ್ತದಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡಲಾಗುವುದು. ಹೀಗೆ ಶಿಲೆಯ ಆಯ್ಕೆಯಿಂದ ಹಿಡಿದು ಮೂರ್ತಿ ಪ್ರತಿಷ್ಠಾಪನೆಯಂತ್ಯದ ವರೆಗಿನ ಶಾಸ್ತ್ರೀಯ ಮಗಳನ್ನು ಹಲವಾರು ಮೂರ್ತಿ ವಿಜ್ಞಾನ ಗ್ರಂಥಗಳಲ್ಲಿ ಸವಿಸ್ತಾರವಾಗಿ ವಿವರಿಸಿದೆ. ಇವುಗಳಲ್ಲಿ ಮಾನಸಾರ, ಮಯಮತ, ಅಪರಾಜಿತಪೃಚ್ಛ, ಸಮರಾಂಗಣ ಸೂತ್ರಧಾರ, 27 ಶೈವ, ವೈಖಾನಸ, ವೈಷ್ಣವ, ಶಾಕ್ತ, ಜೈನ, ಬೌದ್ಧ ಆಗಮಗಳು, ಪುರಾಣಗಳು ಮೊದಲಾದವು ಪ್ರಮುಖವಾಗಿವೆ. ಈ ಕೃತಿಗಳಲ್ಲಿ ಅಷ್ಟಾಗಿ ಗಮನಕ್ಕೆ ಬಾರದ ಒಂದೆರಡು ಗ್ರಂಥಗಳ ಮುಖ್ಯಾಂಶಗಳನ್ನು ಇಲ್ಲಿ ಸಂಕ್ಷೇಪಿಸಲಾಗಿದೆ.

*

**ಶಾಸ್ತ್ರಗ್ರಂಥಗಳು: ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ:** ಶಿಲ್ಪಾಗಮಗಳಲ್ಲಿ ಸುಪರಿಚಿತವಾದ, ಪ್ರಚಲಿತವಾದ, ಪ್ರಭಾವಶಾಲಿಯಾದ ಅಂಶುಮದ್ಭೇಶಾಗಮಕ್ಕೆ ಸೇರಿದ ಕೃತಿ ಕಾಶ್ಯಪ ಶಿಲ್ಪಶಾಸ್ತ್ರ. ಇದು ಗ್ರಂಥದ ಹೆಸರೇ ತಿಳಿಸುವಂತೆ ಕಾಶ್ಯಪ ಮುನಿಯಿಂದ ರಚಿತವಾದದ್ದೆಂದು ತಿಳಿಯಲಾಗಿದೆ.

ಈ ಕೃತಿಯಲ್ಲಿ ಒಟ್ಟು 98 ಪಟಲಗಳಿವೆ. ಇದರಲ್ಲಿ ಹೆಚ್ಚಾಗಿ ಶೈವ ಶಿಲ್ಪಗಳ ವಿವರಗಳಿವೆ. ಇದು ಶಿವನ 17 ಲೀಲಾವತಾರಗಳ ಮೂರ್ತಿ ಶಿಲ್ಪಗಳನ್ನು ವಿವರಿಸುತ್ತದೆ. ಇದರಲ್ಲಿ ತಾಲಮಾನ ಕ್ರಮದ ವಿವರಣೆ ಇದೆ. ಮೂರ್ತಿ ಶಿಲ್ಪದಲ್ಲಿಯೇ ವಿಷ್ಣು, ವಿನಾಯಕ, ಸ್ಕಂದ ಮತ್ತು ದೇವಿಯ ವಿವಿಧ ರೂಪಗಳ ವಿವರಗಳನ್ನು ನೀಡಲಾಗಿದೆ. ವಿಶೇಷವಾಗಿ ಸಪ್ತಮಾತೃಕೆಯರ ವಿವರಗಳನ್ನು ನೀಡಲಾಗಿದೆ. ನಂದಿ, ವೀರಭದ್ರ, ಷಣ್ಮುಖ, ಭೈರವ ಮೊದಲಾದ ಕ್ಷೇತ್ರಪಾಲರು, ಇಂದ್ರ, ಬ್ರಹ್ಮ ಮುಂತಾದ ಪರಿವಾರ ದೇವತೆಗಳ ಮೂರ್ತಿಗಳ ಲಕ್ಷಣ ಮತ್ತು ಅವುಗಳ ರಚನಾ ವಿಧಾನದ ಶಾಸ್ತ್ರೀಯ ವಿವರಣೆ ಇದೆ. ಶಿವಲಿಂಗಗಳ ಲಕ್ಷಣಗಳನ್ನು ನಾಗರ, ದ್ರಾವಿಡ ಮತ್ತು ವೇಸರ ಮಾದರಿಗಳಲ್ಲಿ ನಿರ್ಮಿಸುವ ವಿಧಾನ, ವಾಸ್ತು ಪುರುಷನ ಲಕ್ಷಣ ಇತ್ಯಾದಿಗಳನ್ನು ಕಲಾತ್ಮಕವಾಗಿ ವಿವೇಚಿಸಲಾಗಿದೆ.

ಈ ಕೃತಿಯಲ್ಲಿ 5 ಸಾವಿರಕ್ಕೂ ಅಧಿಕ ಸಂಸ್ಕೃತ ಶ್ಲೋಕಗಳಲ್ಲಿ ಮೂರ್ತಿಶಿಲ್ಪದ ವಿವರಗಳನ್ನು ನೀಡಲಾಗಿದೆ. ಶಿಲ್ಪಶಾಸ್ತ್ರಜ್ಞರಿಗೆ, ಅಧ್ಯಯನಶೀಲರಿಗೆ ಇದು ಅತ್ಯಂತ ಉಪಯುಕ್ತವಾದ ಕೃತಿ.

**ತಂತ್ರಸಾರ:** ಅಪೂರ್ವ ಧಾರ್ಮಿಕಗ್ರಂಥ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಅಷ್ಟಮಹಾಮಂತ್ರಗಳ ನಿರೂಪಣೆ ಮತ್ತು ಪೀಠಪೂಜೆ, ಅವರಣ–ಪೂಜೆ ಹಾಗೂ ದೇವರ ಪೂಜಾ ಕ್ರಮಗಳನ್ನು ವಿವರಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಕಲಶಪೂಜೆ, ಹೋಮಕುಂಡದ ಲಕ್ಷಣ, ಪರಿಮಾಣಗಳನ್ನು, ಹೋಮದ ವಿಧಾನಗಳನ್ನು ವಿವರಿಸಲಾಗಿದೆ. ವಿಶೇಷವಾಗಿ ಕಲಶದಲ್ಲಿನ ವಿವಿಧ ಭಗವದ್ರೂಪಗಳ ವಿವರ ನೀಡಿದ್ದಾರೆ. ಮೂರನೆಯ ಅಧ್ಯಾಯದಲ್ಲಿ ಪ್ರತಿಮೆಗಳ ರಚನೆ, ದೇವಾಲಯ ನಿರ್ಮಾಣ, ವಿಗ್ರಹಗಳ ಆಗಮೋಕ್ತ ಪ್ರತಿಷ್ಠಾ ವಿಧಾನ, ವಿಶೇಷವಾಗಿ ಕೇಶವಾದಿ 24 ಭಗವದ್ರೂಪಗಳ ವಿವರಗಳನ್ನು ನೀಡಿದ್ದಾರೆ. ನಾಲ್ಕನೆಯ ಅಧ್ಯಾಯದಲ್ಲಿ ಅನೇಕ ಮಂತ್ರಗಳು, ಅವುಗಳ ಧ್ಯಾನ ವಿಧಾನ, ಅಂಗನ್ಯಾಸ, ಕರನ್ಯಾಸ, ಪದ್ಮ, ಸ್ವಸ್ತಿಕ ಮುಂತಾದ ಆಸನಗಳ ವಿವರಗಳನ್ನು ನೀಡಲಾಗಿದೆ. ಪೂಜಾ ಪದ್ಧತಿ, ಮಂತ್ರ, ಜಪ, ದೇವತಾ ಮೂರ್ತಿಗಳ ನಿರ್ಮಾಣ, ದೇವಾಲಯ ನಿರ್ಮಾಣ ನಿಯಮಗಳ ಪರಿಚಯ ತಂತ್ರಸಾರದ ವಿಶೇಷತೆ. (ಜಿ.ವಿ.ಕೆ.)

**ಮೂರ್ತಿಶಿಲ್ಪ: ಲಕ್ಷಣ:** ದೇವಾಲಯದ ಗರ್ಭಗೃಹದಲ್ಲಿ ಮೂರ್ತಿಯನ್ನು ಒಮ್ಮೆ ಪ್ರತಿಷ್ಠಾಪನೆ ಮಾಡಿದರೆ, ಮತ್ತೆ ಆ ಸ್ಥಳದಿಂದ ತೆಗೆಯಲಾಗದು. ಇದನ್ನು ಅಚಲ ಬಿಂಬ, ಧ್ರುವಭೇದ, ಮೂಲಭೇದ ಎನ್ನುವರು. ಬಿಂಬಗಳ ಕೆತ್ತನೆಯ ರೂಪವನ್ನು ಗಮನಿಸಿ ಮತ್ತೊಂದು ರೀತಿಯಲ್ಲಿ ಮೂರ್ತಿಗಳನ್ನು ವಿಂಗಡಿಸಬಹುದು. ಬಿಂಬದ ಪ್ರತಿಯೊಂದು ಭಾಗವನ್ನು ಪೂರ್ಣವಾಗಿ ಕೆತ್ತಿದ್ದರೆ ಅದನ್ನು ಚಿತ್ರ ದುಂಡುಶಿಲ್ಪವೆಂದೂ, ಮುಂಭಾಗವನ್ನು ಮಾತ್ರ ಕಾಣುವಂತೆ ಕೆತ್ತಿದ್ದರೆ ಚಿತ್ರ/ಉಬ್ಬುಶಿಲ್ಪವೆಂದೂ ಬಟ್ಟೆ ಅಥವಾ ಗೋಡೆಯ ಮರದ ಫಲಕಗಳ ಮೇಲೆ ಬಿಡಿಸಿದ್ದ ಶಿಲ್ಪ, ಚಿತ್ರವಾದರೆ ಚಿತ್ರಾಭಾಸವೆಂದೂ ಕರೆಯುವರು. ಹೀಗೆಯೇ ಶಿಲ್ಪದ ಆಕಾರವನ್ನು ಗಮನಿಸಿ ಮೂರ್ತಿಯನ್ನು ಅಡಿಯಿಂದ ಮುಡಿಯವರೆಗೆ ಕೆತ್ತಿರುವ ಬಿಂಬವು ವ್ಯಕ್ತಬಿಂಬ, ಎದೆಯವರೆಗೆ ಮಾತ್ರ ಕೆತ್ತಿರುವ ಬಿಂಬವು ವ್ಯಕ್ತಾವ್ಯಕ್ತ ಬಿಂಬ, ಆಕಾರರಹಿತವಾದ ಪೂಜಾರ್ಹವಸ್ತುವು ಅವ್ಯಕ್ತ ಬಿಂಬವೆನ್ನಿಸಿದೆ.

ಸಾಮಾನ್ಯವಾಗಿ ಬಿಂಬಗಳಲ್ಲಿ ವ್ಯಕ್ತವಾದ ರೂಪ ಮತ್ತು ಭಾವಗಳಿಗುಣವಾಗಿ ಸೌಮ್ಯಬಿಂಬ ಶಾಂತ ಅಥವ ಪ್ರಸನ್ನ ಮತ್ತು ಉಗ್ರ/ರೌದ್ರ ಮೂರ್ತಿಗಳೆನ್ನಿಸುತ್ತವೆ.

ಮೂರ್ತಿಶಿಲ್ಪದಲ್ಲಿ ಗಮನಿಸಬೇಕಾದ ಮುಖ್ಯವಾದ ವಿವರಗಳು ಮೂರು ಭಂಗಿ ಮುದ್ರೆ ಮತ್ತು ಆಯುಧಗಳು ದೇವಾಲಯದ ಮೂಲಭೇದಗಳಲ್ಲಿ, ಬಿಂಬದ ಸ್ಥಿತಿಯನ್ನು ಗಮನಿಸಿ ಸ್ಥಾನಕ, ಆಸೀನ ಮತ್ತು ಶಯನಬಿಂಬಗಳೆಂದು ಮೂರು ಬಗೆಗಳನ್ನು ಗುರುತಿಸಲಾಗಿದೆ. ಈ ಬಿಂಬಗಳನ್ನು ಅವುಗಳ ಕ್ರಿಯೆಗನುಗುಣವಾಗಿ ಯೋಗಮೂರ್ತಿ, ಭೋಗ ಮೂರ್ತಿ, ವೀರ ಮತ್ತು ಅಭಿಚಾರಿಕಾ ಮೂರ್ತಿಗಳೆನ್ನುವರು. ಈ ಬಿಂಬಗಳನ್ನು ಗುರುತಿಸಲು ಸಹಾಯಕವಾಗುವಂತೆ ಬಿಂಬವು ನಿಶ್ಚಿತ ಭಂಗಿಯಲ್ಲಿದ್ದು, ನಿರ್ದಿಷ್ಟವಾದ ಆಸನ ಮತ್ತು ಮುದ್ರೆಗಳನ್ನು ಹೊಂದಿರುತ್ತದೆ.

ಬಾಗುವುದರಿಂದುಂಟಾಗುವ ದೇಹದ ನಿಲುವನ್ನು ಭಂಗಿ ಎನ್ನುವರು. ದೇಹದ ಅಂಗಾಂಗಳು ನೇರವಾಗಿದ್ದು, ಸಮಸ್ಥಿತಿಯಲ್ಲಿ ದೃಢವಾಗಿ ನಿಂತ ನಿಲುವಿಗೆ ಸಮಭಂಗಿ ಎಂದು ಹೆಸರು. ದೇಹದ ಯಾವುದಾದರೂ ಒಂದು ಭಾಗವು ನಸುಬಾಗಿದ್ದರೆ, ದ್ವಿಭಂಗಿ.

ಉಬ್ಬು ಶಿಲ್ಪಗಳು ಸಾಮಾನ್ಯವಾಗಿ ದ್ವಿಭಂಗಿಯಲ್ಲಿರುತ್ತವೆ. ದೇಹದಲ್ಲಿ ತಲೆ, ನಡು ಮತ್ತು ಜಘನಗಳು ನೇರವಾಗಿರದೇ, ಮೂರು ಕಡೆ ಬಾಗಿದ್ದರೆ ತ್ರಿಭಂಗಿ ಎನ್ನಿಸುವುದು. ಉದಾ: ವೇಣುಗೋಪಾಲ.

ದೇಹದ ಅನೇಕ ಭಾಗಗಳು ಹಲವೆಡೆ ಬಾಗಿದ್ದು, ವಿಲಕ್ಷಣವಾದ, ಭಂಗಿಯನ್ನು ತೋರಿದರೆ ಅತಿಭಂಗಿ ಎನ್ನಿಸುತ್ತದೆ. ಕೆಲವು ಮದನಿಕಾಬಿಂಬಗಳು, ಕೆಲವೊಮ್ಮೆ ಮಹಾನಟ ಶಿವ ಅತಿಭಂಗಿಯಲ್ಲಿವೆ.

ದೇಹವು ನೇರವಾಗಿದ್ದು, ಬಲಗಾಲನ್ನು ಮುಂಚಾಚಿ, ಸ್ವಲ್ಪ ಮುಂಬಾಗಿ ನಿಂತಿದ್ದರೆ ಇದನ್ನು ಆಲೀಢಭಂಗಿ ಎನ್ನುವರು. ವೀರಭದ್ರ, ತ್ರಿಪುರಾಂತಕ ಶಿವ ಮತ್ತು ಕೆಲವು ಮಾರುತಿ ಬಿಂಬಗಳು ಈ ಭಂಗಿಯಲ್ಲಿರುತ್ತವೆ. ದೇಹವು ನೇರವಾಗಿದ್ದು, ಎಡಗಾಲನ್ನು ಮುಂಚಾಚಿ ನಿಂತಭಂಗಿಗೆ ಪ್ರತ್ಯಾಲೀಢಭಂಗಿ ಎನ್ನುವರು. ಕೆಲವು ವೀರಗಲ್ಲು ಶಿಲ್ಪಗಳ ವೀರನ ಬಿಂಬದಲ್ಲಿ ಇದನ್ನು ಕಾಣಬಹುದು.

ಆಸನ: ಸಾಮಾನ್ಯವಾಗಿ ಪ್ರತ್ಯೇಕವಾಗಿರುವ ಸ್ತ್ರೀಬಿಂಬಗಳು ಆಸೀನಭಂಗಿಯಲ್ಲಿರುತ್ತದೆ. ಯೋಗಶಾಸ್ತ್ರವು ಧ್ಯಾನ ಮತ್ತು ಸಮಾಧಿಯನ್ನು ಸಾಧಿಸಲು ಕುಳಿತುಕೊಳ್ಳುವ ಭಂಗಿಯನ್ನು ತಿಳಿಸಿದೆ. ಇದನ್ನು ಆಸನಗಳೆನ್ನುವರು. ಶಿಲ್ಪಗಳಲ್ಲಿ ಕೆಲವು ಆಸನಗಳನ್ನು ಕೆತ್ತಲಾಗಿದ್ದು, ಇವು ಆ ಮೂರ್ತಿಯ ಮನೋಭಾವವನ್ನು ಅರಿಯುವಲ್ಲಿ ನೆರವಾಗುತ್ತವೆ. ಶಿಲ್ಪಗಳಲ್ಲಿ ಸಾಮಾನ್ಯವಾಗಿ ಪದ್ಮಾಸನ, ಸಿದ್ಧಾಸನ, ಯೋಗಾಸನ, ವೀರಾಸನ, ಸುಖಾಸನ, ಶಯನಾಸನಗಳಲ್ಲಿರುವಂತೆ ಬಿಡಿಸಿರುವುದನ್ನು ಕಾಣುತ್ತೇವೆ.

ಪದ್ಮಾಸನ ಅಡ್ಡಲಾಗಿ ಕಾಲುಗಳನ್ನು ಮಡಿಚಿ ಎರಡು ಪಾದಗಳು ತೊಡೆಗಳ ಮೇಲೆ ವಿರಮಿಸುವಂತೆ ಕುಳಿತ ಭಂಗಿಗೆ ಪದ್ಮಾಸನವೆನ್ನುವರು. ಒಂದು ಪಾದ ತೊಡೆಯ ಮೇಲಿದ್ದು ಇನ್ನೊಂದು ಪೀಠದ ಮೇಲಿದ್ದರೆ ಇದು ಸಿದ್ಧಾಸನ. ಮಧ್ಯಯುಗೀನ ಕಾಲದ ಕುಳಿತ ಬುದ್ಧ ತೀರ್ಥಂಕರ ಶಿಲ್ಪಗಳಲ್ಲಿ ಇದನ್ನು ಕಾಣಬಹುದು. ಪದ್ಮಾಸನದ ಭಂಗಿಯಲ್ಲಿ ಕುಳಿತು ಕೈಗಳೆ ಯೋಗಮುದ್ರೆಯಲ್ಲಿದ್ದರೆ ಯೋಗಾಸನವೆನಿಸುವುದು.

ಸಾಮಾನ್ಯವಾಗಿ ಎಡಗಾಲನ್ನು ಪೀಠದ ಮೇಲಿಟ್ಟು ಬಲಮಂಡಿಯನ್ನು ಎತ್ತರಿಸಿ ಕುಳಿತುಕೊಳ್ಳುವುದು ಸುಖಾಸನ. ಇಲ್ಲಿ ಬಲತೋಳು ಮಂಡಿಯನ್ನಾಧರಿಸಿರುತ್ತದೆ. ಉದಾ: ಸುಖಾಸೀನ ವಿಷ್ಣು; ಇಮ್ಮಡಿ ಪುಲಕೇಶಿ, ವೀಣಾಧರಶಿವ. ಮಂಚದಲ್ಲಿ ಮೇಲೆ ದೇಹವ ನ್ನೊರಗಿಸಿ ಮಲಗಿರುವ ಭಂಗಿಗೆ ಶಯನಾಸನವೆನ್ನುವರು.

ಹಸ್ತವಿನ್ಯಾಸಗಳು ಮತ್ತು ಮುದ್ರೆಗಳು: ಮೂರ್ತಿಗಳನ್ನು ಗುರುತಿಸುವಲ್ಲಿ ಮುಖ್ಯವಾದುದು ಮುದ್ರೆಗಳು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿವೆ. ಮುದ್ರೆ ಒಂದು ಭಾಷೆಯಂತಿದ್ದು, ಬೆರಳು ಮತ್ತು ಹಸ್ತವಿನ್ಯಾಸಗಳ ಮೂಲಕ ಬಿಂಬದ ಭಾವನೆಯನ್ನು ಪ್ರಕಟಿಸುತ್ತದೆ. ಮೂರ್ತಿಗಳಲ್ಲಿ ನಿಶ್ಚಿತ ಕ್ರಮದಲ್ಲಿರುವ ಕೈಗಳ ಸ್ಥಿತಿಗೆ ಹಸ್ತವೆಂದೂ ಬೆರಳುಗಳನ್ನು ಮಡಿಸಿದ ಸ್ಥಿತಿಯನ್ನು ಮುದ್ರೆ ಎಂದೂ ಕರೆಯುವರು.

ವರದಹಸ್ತ: ವರವನ್ನು ಕೊಡುತ್ತಿರುವಂತೆ ಪೂರ್ಣವಾಗಿ ತೆರೆದ ಅಂಗೈಬೆರಳುಗಳು ಕೆಳಮುಖವಾಗಿದ್ದರೆ ಅದು ವರದಹಸ್ತ.

ಅಭಯಹಸ್ತ: ದೇವತಾಮೂರ್ತಿಯು ಭಕ್ತನಿಗೆ, ರಕ್ಷಣೆಯನ್ನು ಸೂಚಿಸುವ ತೆರೆದ ಅಂಗೈ ಬೆರಳುಗಳು ಮೇಲ್ಮುಖವಾಗಿರುವ ಹಸ್ತ ವಿನ್ಯಾಸವೆ ಅಭಯಹಸ್ತ.

ಕಟಕ ಹಸ್ತ/ಸಿಂಹಕರ್ಣ ಹಸ್ತ: ತೋರು ಬೆರಳಿನ ತುದಿ ಹೆಬ್ಬೆರಳಿಗೆ ಸೇರಿ ಉಂಗುರದಾ ಕಾರವನ್ನು ರೂಪಿಸಿದ್ದರೆ ಅದನ್ನು ಕಟಕಹಸ್ತವಾಗುತ್ತದೆ. ವೃತ್ತಾಕಾರವಾಗಿದ್ದು ಸಿಂಹದ ಕಿವಿಯಂತಿರುವ ಈ ಉಂಗುರದ ನಡುವೆ ಕಮಲ/ಗಿಳಿ ಮುಂತಾದವನ್ನು ಸೇರಿಸುತ್ತಾರೆ.

ಸೂಚೀ ಹಸ್ತ: ತೋರುಬೆರಳು ಕೆಳಗಿರುವ ವಸ್ತುವನ್ನು ಸೂಚಿಸುವಂತೆ ಕೆಳಮುಖವಾಗಿ ದ್ದರೆ ಸೂಚೀ ಹಸ್ತವೆನಿಸುವುದು.

ತರ್ಜನೀಹಸ್ತ: ನಿಯಮವನ್ನು ವಿಧಿಸುವಂತೆ, ಎಚ್ಚರಿಕೆ ಹೇಳುತ್ತಿರುವಂತೆ ತೋರುಬೆರಳು ಮಾತ್ರ ಮೇಲ್ಮುಖವಾಗಿದ್ದರೆ ಈ ಹಸ್ತವಿನ್ಯಾಸವು ತರ್ಜನಿಹಸ್ತ. ಸೂಚೀ ಹಸ್ತವು ತರ್ಜನಿ ಹಸ್ತದ ಇನ್ನೊಂದು ಪ್ರಕಾರ.

ಕಟ್ಯಾವಲಂಬಿತ ಹಸ್ತ: ಕೆಲವು ಸ್ಥಾನಕಮೂರ್ತಿಗಳಲ್ಲಿ ತೋಳುಗಳನ್ನು ಅರ್ಧಮಡಚಿ ಹಸ್ತಗಳು ಕಟಿಯ ಮೇಲಿರುತ್ತದೆ. ಹೀಗೆ ಸೊಂಟದ ಮೇಲಕ್ಕೆ ಇಟ್ಟಿರುವುದರ ಭಾವ ಕಾಪಾಡುವೆನೆಂಬ ದೃಢನಿಶ್ಚಯದ ಸಂಕೇತವಾಗಿದೆ. ಇದು ಕಾರ್ಯತತ್ಪರತೆಯ ಸೂಚನೆಯಾಗಿದ್ದು ಇದನ್ನು ಕಟೀಹಸ್ತವೆಂದೂ ಕರೆಯುವರು.

ದಂಡಹಸ್ತ: ಇದು ತೋಳನ್ನು, ಆನೆಯ ಸೊಂಡಿಲಿನಂತೆ ಅಥವಾ ದಂಡದಂತೆ ನೇರವಾಗಿ ಮುಂಚಾಚಿರುವ ಹಸ್ತವಿನ್ಯಾಸವೇ ಗಜಹಸ್ತ ನಟರಾಜನ ಎಡಗೈಯೊಂದು ದಂಡಹಸ್ತ ಮುದ್ರೆಯಲ್ಲಿರುತ್ತದೆ. ವಿಶೇಷವಾಗಿ ನಾಟ್ಯ ಭಂಗಿಯಲ್ಲಿರುವ ಮೂರ್ತಿಗಳಲ್ಲಿ ಕಾಣುತ್ತದೆ.

ಅಂಜಲಿಹಸ್ತ: ಎರಡು ಅಂಗೈಗಳು ಒಟ್ಟಾಗಿ ಸೇರಿದ್ದು, ಅವು ಎದೆಯ ಮಟ್ಟದಲ್ಲಿ ಕೈಮುಗಿದಂತಿದ್ದರೆ ಅಂಜಲಿಹಸ್ತ ಎನ್ನುವರು. ಇದು ಪ್ರಣಾಮದ ಸಂಕೇತವಾಗಿದೆ.

ವಿಸ್ಮಯಹಸ್ತ: ಅಂಗೈ ಹಿಮ್ಮೊಗವಾಗಿದ್ದು, ಮೇಲೆತ್ತಿರುವ ಕೈಯ ಬೆರಳುಗಳು ಮೇಲ್ಮುಖ ವಾಗಿರುವ ಹಸ್ತವಿನ್ಯಾಸಕ್ಕೆ ವಿಸ್ಮಯ ಹಸ್ತ ಎನ್ನುವರು. ಇದು ಆಶ್ಚರ್ಯ ಹಾಗೂ ಅದ್ಭುತವನ್ನು ಸೂಚಿಸುತ್ತದೆ.

ಕರ್ತರಿಹಸ್ತ: ತೋರುಬೆರಳು ಮತ್ತು ಮಧ್ಯದ ಬೆರಳುಗಳು ಊರ್ಧ್ವಮುಂಡ್ರಾಕಾರದಲ್ಲಿದ್ದು ಹೊರಚಾಚಿರುವ ಅಂಗೈಯ ಹೆಬ್ಬೆರಳು, ಉಂಗುರದ ಬೆರಳುಗಳು ಸೇರಿದ್ದು, ಕಿರಿ ಬೆರಳು ಬಾಗಿರುತ್ತದೆ. ಈ ಹಸ್ತಮುದ್ರೆಯಿಂದ ಶಂಖ, ಚಕ್ರಗಳನ್ನು ಕೈ ಹಿಡಿದಿರುವಂತೆ ತೋರುತ್ತದೆ. ಈ ಹಸ್ತ ವಿನ್ಯಾಸವೇ ಕರ್ತರಿ ಹಸ್ತ.

ಮುದ್ರೆಗಳು: ಚಿನ್ಮುದ್ರೆ (ವ್ಯಾಖ್ಯಾನ ಮುದ್ರೆ): ಚಿನ್ಮುದ್ರೆಯನ್ನು ವ್ಯಾಖ್ಯಾನಮುದ್ರೆ, ಜ್ಞಾನಮುದ್ರೆ ಎಂದೂ ಕರೆಯುವರು. ಮುಮ್ಮೊಗವಾದ ಹೆಬ್ಬೆರಳು ಮತ್ತು ತೋರುಬೆರಳಿನ ತುದಿಗಳು ವೃತ್ತಾಕಾರದಂತೆ ಸೇರಿದ್ದು, ಉಳಿದ ಬೆರಳುಗಳು ತೆರೆದಿದ್ದರೆ ಇದನ್ನು ಚಿನ್ಮುದ್ರೆ ಎನ್ನುವರು. ಈ ಮುದ್ರೆಯನ್ನು, ವಿವರಣೆ ನೀಡುತ್ತಿರುವಲ್ಲಿ, ವ್ಯಾಖ್ಯಾನ ಮಾಡುತ್ತಿರುವ ಸಂದರ್ಭದಲ್ಲಿ ಹೀಗೆ ಬಳಸಲಾಗುವುದು, ಇದನ್ನು ವ್ಯಾಖ್ಯಾನ ಮುದ್ರೆ, ಸಂದರ್ಶನ ಮುದ್ರೆ ಎಂದೂ ಕರೆಯುವರು. ಈ ಮುದ್ರೆಯೊಂದಿಗೆ ಅಕ್ಷಮಾಲೆಯನ್ನು ಸೇರಿಸುವ ವಾಡಿಕೆ ಇದೆ.

ಯೋಗಮುದ್ರೆ: ಪದ್ಮಾಸನದಲ್ಲಿ ಕುಳಿತಿರುವ ಮೂರ್ತಿಯ ಕಾಲುಗಳ ಮೇಲೆ ಎಡ ಅಂಗೈಯ ಮೇಲೆ ಬಲ ಅಂಗೈಯನ್ನಿಡುವ ರೀತಿ ಯೋಗಮುದ್ರೆಯೆಂದೆನಿಸುವುದು.

ಜ್ಞಾನಮುದ್ರೆ: ತೋರುಬೆರಳು ಮತ್ತು ಹೆಬ್ಬೆರಳು ಸೇರಿಸಿದ ಕೈ ಎದೆಯ ಸಮೀಪದಲ್ಲಿದ್ದು ಅಂಗೈ ಎದೆಯ ಕಡೆಗಿದ್ದರೆ ಇದನ್ನು ಜ್ಞಾನಮುದ್ರೆ ಎನ್ನುವರು.

ಆಯುಧೋಪಕರಣಗಳು: ದೇವತಾ ಮೂರ್ತಿಗಳನ್ನು ನಿರ್ಮಿಸುವಾಗ, ಸಾತ್ವಿಕಗುಣದ ಶಾಂತಮೂರ್ತಿಗಳಾದರೆ ಎರಡು/ನಾಲ್ಕು ಕೈಗಳನ್ನು ರೂಪಿಸಿದ್ದು, ಮುಂದಿನ ಎರಡು ಕೈಗಳು ಸಾಮಾನ್ಯವಾಗಿ ಅಭಯ, ವರದ ಹಸ್ತಗಳಾಗಿರುತ್ತವೆ. ಮೂರ್ತಿಗಳ ವಿಶಿಷ್ಟ ಭಾವವನ್ನು ನಿರ್ದೇಶಿಸಲು, 6–8 ಕೈಗಳನ್ನು ಇನ್ನೂ ಹೆಚ್ಚು ಕೈಗಳನ್ನು ರೂಪಿಸಿದ ರಾಜಸಗುಣದ ತಾಮಸ ಮೂರ್ತಿಗಳೂ ಇವೆ. ಮೂರ್ತಿಗೆ ಹೆಚ್ಚು ಕೈಗಳಿದ್ದಾಗ ಆ ಕೈಗಳಲ್ಲಿರುವ ಆಯುಧಗಳು, ಮುದ್ರೆಗಳು ಆ ದೇವರ ವಿಶೇಷ ಗುಣಗಳನ್ನು ತಿಳಿಸುತ್ತವೆ. ದೇವತಾ ಮೂರ್ತಿಗಳು ಕೈಯಲ್ಲಿ ಹಿಡಿದಿರುವ ಆಯುಧಗಳಿಗೆ ಬದಲಾಗಿ ಇತರ ವಸ್ತುಗಳೂ ಇರುಬಹುದು ಉದಾಹರಣೆಗೆ ಕಮಲ, ಜಪಮಾಲೆ ಇತ್ಯಾದಿ. ಆಯುಧಗಳು ಮೂರ್ತಿಶಿಲ್ಪದಲ್ಲಿ ಪ್ರಧಾನ ಅಂಶವಾಗಿದೆ. ಅವುಗಳನ್ನು ಕೆಳಗಿನಂತೆ ಪಟ್ಟಿಮಾಡಬಹುದು.

ಶಂಖ, ಚಕ್ರ, ಗದೆ, ಖಡ್ಗ (ಕತ್ತಿ), ಖೇಟಕ (ಗುರಾಣಿ), ಮುಸುಲ (ಒನಕೆ), ಧನಸ್ಸು (ಬಿಲ್ಲು), ಬಾಣ, ಪರಶು (ಕೊಡಲಿ), ಹಲಾ (ನೇಗಿಲು), ಖಟ್ವಾಂಗ, ಟಂಕ, ಅಗ್ನಿ (ಬೆಂಕಿ), ಶೂಲ (ಭರ್ಜಿ/ ಈಟಿ), ಅಂಕುಶ, ಪಾಶ (ಹಗ್ಗ), ವಜ್ರ, ಶಕ್ತಿ (ಈಟಿ), ವೀಣಾ, ಮುರಳಿ (ಕೊಳಲು), ಡಮರು, ಗಂಟೆ, ಕಮಂಡಲ (ಗಿಂಡಿ), ದರ್ಪಣ (ಕನ್ನಡಿ), ಕಪಾಲ (ರುಂಡ, ತಲೆಚಿಪ್ಪು), ಸ್ರುಕ್ ಮತ್ತು ಸ್ರುವ (ಯಜ್ಞ–ಯಾಗಾದಿಗಳಲ್ಲಿ ಬಳಸುವ ಸೌಟು), ಪುಸ್ತಕ (ತಾಳೇಗರಿ), ಪದ್ಮ (ಕಮಲ, ತಾವರೆ), ನೀಲೋತ್ಪಲ (ನೈದಿಲೆ).

ಪ್ರಸಾಧನಗಳು ಮತ್ತು ಆಭರಣಗಳು: ಶರೀರದ ಅಲಂಕಾರಕ್ಕಾಗಿ ಬಳಸುವ ಆಭರಣಗ ಳನ್ನು ಅಂಗಭೂಷಣಗಳೆನ್ನುವರು. ಈ ಆಭರಣಗಳು ಬಿಂಬದ ಸೌಂದರ್ಯವನ್ನು ಹೆಚ್ಚಿಸಿ ವಿಶೇಷ ಕಳೆಯನ್ನು ತರುತ್ತವೆ. ಇದರಿಂದಲೂ ದೇವತಾಮೂರ್ತಿಗಳನ್ನು ಗುರುತಿಸಲು ಸಹಾಯವಾಗುತ್ತದೆ. ಆದ್ದರಿಂದಲೇ ದೇವತಾಮೂರ್ತಿಗಳು ಸರ್ವಾಭರಣ ಭೂಷಿತವಾಗಿ ಚಿತ್ತಾಪಹಾರಕವಾಗಿ ಇರಬೇಕೆಂದು ಶಿಲ್ಪಶಾಸ್ತ್ರಗಳು ವಿಧಿಸುತ್ತವೆ. ಅಂತೇ ಶಿಲ್ಪಿಯು ಆಯಾ ಬಿಂಬಕ್ಕೆ ಉಚಿತವಾದ (ಸಮಕಾಲಿನ) ಆಭರಣಗಳನ್ನು ಹೊಂದಿಸಿ ಸುಂದರವಾಗಿ ಕೆತ್ತಿರುವುದುಂಟು.

ಆಭರಣಗಳಲ್ಲಿ ಕೆಲವನ್ನು ಕೇವಲ ಪುರುಷ ಬಿಂಬದಲ್ಲೂ ಕೆಲವನ್ನು ವಿಶೇಷವಾಗಿ ಸ್ತ್ರೀಬಿಂಬಗಳಲ್ಲೂ ಕಾಣುತ್ತೇವೆ. ಆಭರಣಗಳ ರಚನೆಯನ್ನಾಧರಿಸಿ ಪತ್ರಕಲ್ಪ, ರತ್ನಕಲ್ಪ, ಚಿತ್ರಕಲ್ಪ ಮತ್ತು ಮಿಶ್ರಕಲ್ಪವೆಂದು ವಿಂಗಡಿಸುವರು. ಎಲೆ, ಹೂಗಳಿಂದ ನಿರ್ಮಿಸಿದ ಆಲಂಕಾರಿಕ ಆಭರಣವನ್ನು ಪತ್ರಕಲ್ಪ; ಮುತ್ತಿನಿಂದ ರಚಿಸಿದ ಆಭರಣ ರತ್ನಕಲ್ಪವಾದರೆ, ಹೂವು, ಎಲೆ ಮತ್ತಿತರ ಚಿತ್ತಾರಗಳನ್ನು ಅಮೂಲ್ಯವಾದ ಹರಳುಗಳ ಜೋಡಣೆಯಿಂದ ರೂಪಿಸಿದ್ದು ಚಿತ್ರಕಲ್ಪವೆನ್ನಿಸುತ್ತವೆ. ಎಲೆಗಳು, ಚಿನ್ನ, ಮುತ್ತು, ಹವಳ ಎಲ್ಲವನ್ನು ಸೇರಿಸಿ ಮಾಡಿದ್ದ ಆಭರಣವೇ ಮಿಶ್ರಕಲ್ಪ. ವಿಶೇಷವಾಗಿ ರಾಜರು ಧರಿಸುವ ಆಭರಣಗಳು ಮಿಶ್ರಕಲ್ಪದ ರೀತಿಯವು.

ಮಕುಟಗಳ (ಕಿರೀಟ ಮೌಳಿಗಳು) (ಹೆಡ್ ಗೇರ್) ಅವಯವಗಳಲ್ಲಿ ಶಿರವು ಪ್ರಧಾನವಾ ಗಿದ್ದು ಉತ್ತಮಾಂಗವೆನಿಸಿದೆ. ಶಿರವನ್ನು ಅಲಂಕರಿಸುವ ಭೂಷಣವು ಶಿರೋಭೂಷಣಗಳು. ಶಿರೋಭೂಷಣವನ್ನು ಮೌಳಿ ಎಂದೂ ಕರೆಯುವರು. ರಾಜರು ಧರಿಸುವುದು ಮಕುಟ (ಕಿರೀಟ), ಮಕುಟದಲ್ಲಿ ಜಟಾಮೌಳಿ, ಕಿರೀಟ, ಕರಂಡ ಮತ್ತು ಶಿರಸ್ತ್ರಕ ಎಂಬ ನಾಲ್ಕು ವಿಧಗಳನ್ನು ಮಾನಸಾರವು ತಿಳಿಸಿದೆ. ಈ ವಿಂಗಡಣೆ ಆ ಬಿಂಬಗಳ ಗುಣವಿಶೇಷವನ್ನು ತಿಳಿಸುತ್ತಿದೆ. ದೇವತಾಮೂರ್ತಿಗಳು ಕಿರೀಟ ಮಕುಟ ಜಟಾ ಮಕುಟ ಮತ್ತು ಕರಂಡ ಮಕುಟವನ್ನು ಧರಿಸಿರುತ್ತವೆ. ಕಿರೀಟ ಮಕುಟವು ಶಂಖುವಿನಾಕಾರದ ಟೋಪಿಯಂತಿದ್ದು ಮೇಲ್ತುದಿಯಲ್ಲಿ ಶಿರೋಮಣಿಯನ್ನು, ಹಿಂಭಾಗದಲ್ಲಿ ಶಿರಶ್ಚಕ್ರವನ್ನು ಹೊಂದಿರುತ್ತದೆ. ಚಿನ್ನದ ಹೂಗಳಿಂದಲೂ ರತ್ನಪಟ್ಟಿಕೆಗಳಿಂದಲೂ ಕೂಡಿದ ಇದನ್ನು ವಿಷ್ಣು, ಚಾಮುಂಡೇಶ್ವರಿ ಮತ್ತು ಚಕ್ರವರ್ತಿಗಳ ಮೂರ್ತಿಗಳಲ್ಲಿ ಕಾಣಬಹುದು. ಕರಂಡ ಮಕುಟವು ಅನ್ವರ್ಥನಾಮವಾಗಿ ಕರಂಡವೆಂದರೆ ತೆರೆದ ಬೋಗುಣಿಯಾಗಿದ್ದು, 2–3 ಬೋಗುಣಿಗಳನ್ನು ಜೋಡಿಸಿದಂತಿರುವ ಹೆಚ್ಚು ಎತ್ತರವಲ್ಲದ ಮಕುಟವನ್ನು ಕರಂಡ ಮಕುಟ ಎನ್ನುವರು. ದೇವಿಯರು, ಉಪ–

ದೇವತೆಗಳು, ಅಧಿರಾಜರು ಇದನ್ನು ಧರಿಸುವರು. ಜಟಾಮಕುಟವು ಕೂದಲನ್ನು ಎತ್ತರವಾಗಿ ಹೆಣೆದು ಕಟ್ಟಿದ ರೀತಿಗೆ ಜಟಾಮಕುಟ ಎನ್ನುವರು. ಶೈವಾಗಮವು ಐದುಜಟೆಗಳನ್ನು ಒಟ್ಟಿಗೆ ಹೆಣೆದು ಒಂದು ಅಥವಾ ಮೂರು ಸುತ್ತು ಸುತ್ತಿಗಂಟುಹಾಕಿರುತ್ತದೆ. ಉಳಿದ ಕೂದಲು ಸುತ್ತಲೂ ಹರಡಿರುತ್ತದೆ ಎಂದು ತಿಳಿಸಿವೆ. ಜಟಾಮಕುಟವನ್ನು ವಿಶೇಷವಾಗಿ ಶಿವ, ಬ್ರಹ್ಮ ಮತ್ತು ಮನೋನ್ಮಣಿಯ ಬಿಂಬಗಳಲ್ಲಿ ಕಾಣಬಹುದು. ಕೆಲವು ದೇವತಾಮೂರ್ತಿಗಳಲ್ಲಿ, ಜಟೆಯನ್ನು ಮಕುಟದಂತೆ ಕಟ್ಟಿರದೇ, ತಲೆಯ ಮೇಲೆ ಅಡ್ಡಲಾಗಿ ಸುತ್ತಿರುತ್ತದೆ. ಇದನ್ನು ಜಟಾಭಾರ ಎನ್ನುವರು. ದಕ್ಷಿಣಾಮೂರ್ತಿ, ಭೈರವ ಮತ್ತು ಕೆಲವು ಮುನಿಶಿಲ್ಪಗಳಲ್ಲಿ ಜಟಾಭಾರ ವನ್ನು (ಜಟಾಬಂಧ) ಕಾಣಬಹುದು. ಶಿರದ ಸುತ್ತಲೂ ಪ್ರಭಾವಳಿಯಂತೆ ಮಂಡಲಾಕಾರವಾಗಿ ಜಟೆಯು ಹರಡಿದ್ದರೆ ಜಟಾಮಂಡಲವೆನ್ನಿಸುತ್ತದೆ. ಶಿಲ್ಪಶಾಸ್ತ್ರವು ಸಾಮಾನ್ಯರ, ಸೇವಕರ ಬಿಂಬಗಳ ಶಿರದಲ್ಲೂ ಮುಂಡಾಸಿನಂತಹ ಭೂಷಣವಿರಬೇಕೆಂದು ತಿಳಿಸಿದ್ದು, ಇದನ್ನು ಶಿರಸ್ತ್ರಾಕವೆನ್ನುವರು.

ಸ್ತ್ರೀ ಬಿಂಬಗಳು, ಉಪದೇವತಾ ಮೂರ್ತಿಗಳಲ್ಲಿ ವಿಶೇಷವಾದ ಕೇಶಾಲಂಕಾರ ವಿರುತ್ತದೆ. ಕೇಶವನ್ನು ಬಂಧಿಸಲು ಪತ್ರಪಟ್ಟ, ಪುಷ್ಪಪಟ್ಟ, ರತ್ನಪಟ್ಟಗಳನ್ನು ಬಳಸಿರುತ್ತಾರೆ. ಸರಸ್ವತಿಯ ಬಿಂಬದಲ್ಲಿ ಕಾಣುವ ಕೇಶಾಲಂಕಾರವನ್ನು ಕೇಶಬಂಧ ಎನ್ನುವರು. ಲಕ್ಷ್ಮಿಯದು ಕುಂತಲ ವೆಂಬ ರೀತಿಯದಾದರೆ ಸಾಮಾನ್ಯಸ್ತ್ರೀಯರ ಬಿಂಬಗಳಲ್ಲಿ ಧಮ್ಮಿಲ್ಲವೆಂಬ ಪ್ರಕಾರವನ್ನು ಕಾಣುವೆವು. ಧಮ್ಮಿಲ್ಲವೆಂಬುದು ಕೂದಲನ್ನು ಬಳ್ಳಿಗಳಂತೆ ಸುತ್ತಿ ಸಡಿಲವಾಗಿ ಬಂಧಿಸುವ ಕ್ರಮ. ಚಾಮರಧಾರಿಣಿಯರ ಕೇಶವಿನ್ಯಾಸವನ್ನು ಅಲಕಚೂಡಕ ಎನ್ನುವರು. ಶಿಲ್ಪಗಳಲ್ಲಿ, ಚಿತ್ರಗಳಲ್ಲಿ ವಿವಿಧ ರೀತಿಯ ಕೇಶಾಲಂಕಾರದ ಸೊಬಗನ್ನು ಕಾಣಬಹುದು.

ಶಿಲ್ಪಶಾಸ್ತ್ರವು ಶ್ರೇಷ್ಠ ಬಿಂಬಗಳ ತಲೆಯ ಹಿಂಭಾಗದಲ್ಲಿ ಕೇವಲ ಶಿರವನ್ನಾವರಿಸುವಂತೆ ಅಗಲವಾದ ಶಿರಶ್ಚಕ್ರವಿರಬೇಕೆಂದು ತಿಳಿಸಿದೆ. ಇದು ಆ ಬಿಂಬಗಳ ಮಹತಿಯನ್ನು ಸಾರಲು ಆವಶ್ಯಕವೆಂದಿದೆ. ವೃತ್ತಾಕಾರ/ ಅರಳಿದ ಕಮಲದಂತೆ/ ಬಾದಾಮಿ ಆಕಾರದಲ್ಲಿ ಇದನ್ನು ಚಕ್ರದಂತೆ ಶಿರದ ಹಿಂಭಾಗದಲ್ಲಿ ಬಿಡಿಸಿರುತ್ತಾರೆ. ಪ್ರಭಾವಳಿ ಸುತ್ತಲೂ ಮೂರ್ತಿಯನ್ನು ಆವರಿಸಿರುತ್ತದೆ (ಶಿರಶ್ಚಕ್ರದ ಪ್ರಭೆ ಕೇವಲ ಶಿರದ ಸುತ್ತ ಹರಡಿರುತ್ತದೆ). ವೃತ್ತಾಕಾರವಾದ ಈ ಪ್ರಭಾವಳಿಯಲ್ಲಿ ಜ್ವಾಲೆಯ ಕಿರಣಗಳನ್ನೂ ಪ್ರಧಾನ ಆಯುಧಗಳನ್ನೂ ಅಷ್ಟದಿಕ್ಪಾಲಕರನ್ನೂ ಚಿಕಣಿ ಶಿಲ್ಪಗಳನ್ನೂ ಆಲಂಕಾರಿಕವಾಗಿ ಬಿಡಿಸಿರುತ್ತಾರೆ. ವಿಶೇಷವಾಗಿ ವಿಷ್ಣುವಿನ ಪ್ರಭಾವಳಿ ಯಲ್ಲಿ, ದಶಾವತಾರದ ಶಿಲ್ಪಗಳನ್ನು, ತೀರ್ಥಂಕರರ ಪ್ರಭಾವಳಿಯಲ್ಲಿ 24 ಜಿನ ಬಿಂಬಗಳನ್ನು ಬಿಡಿಸಿರುವುದುಂಟು.

ಕುಂಡಲಗಳು: ಕುಂಡಲಗಳು ಕಿವಿಯಲ್ಲಿ ಧರಿಸುವ ಆಭರಣ. ಅಗಲವಾದ ಕಿವಿಯ ಆಭರಣವು ತಾಟಾಂಕ (ತಾಡೋಲೆ/ಓಲೆ) ಎನ್ನಿಸಿದೆ. ಉಂಗುರದಾಕಾರದ ಕಿವಿಯ ಆಭರಣವನ್ನು ಕುಂಡಲವೆನ್ನುವರು. ಶಿಲ್ಪಗಳಲ್ಲಿ ನಾನಾ ಪ್ರಕಾರದ ಕುಂಡಲಗಳನ್ನು ಕಾಣುತ್ತೇವೆ. ಮಕರದ ಆಕಾರದ ಕುಂಡಲವು ಮಕರಕುಂಡಲ. ನಾನಾ ರತ್ನಗಳನ್ನು, ಹರಳುಗಳನ್ನು ಶೋಧಿಸಿ ಮಾಡಿದ ಮಕರಕುಂಡಲವು ಬಹುಶ್ರೇಷ್ಠವಾದುದಾಗಿದ್ದು, ಇದನ್ನು ಪ್ರಧಾನದೇವತೆಗಳ ಬಿಂಬಗಳಲ್ಲಿ ಗಣ್ಯ ವ್ಯಕ್ತಿಗಳ ಶಿಲ್ಪಗಳಲ್ಲಿ ಮಾತ್ರ ಕಾಣಬಹುದು. ಸರ್ಪದ ಫಣೆಯ ಆಕಾರವನ್ನು ಹೊಂದಿರುವ ಕುಂಡಲ–ಸರ್ಪಕುಂಡಲವಾದರೆ, ಕುಂಡಲದ ಮಧ್ಯೆ ಸಿಂಹ–ವಕ್ತ್ರವಿದ್ದರೇ ಸಿಂಹಕುಂಡಲವೆನಿಸುತ್ತದೆ. ಸರ್ಪಕುಂಡಲವನ್ನು ಶಿವನ ಕಿವಿಯಲ್ಲೂ ಸಿಂಹ ಕುಂಡಲವನ್ನು ದ್ವಾರಪಾಲಕರ ಕಿವಿಗಳಲ್ಲೂ ಕಾಣಬಹುದು. ರತ್ನ ಖಚಿತ ಕುಂಡಲವು ರತ್ನಕುಂಡಲವಾದರೆ, ಶಂಖವನ್ನು ಅಗಲವಾಗಿ ಕೊರೆದು ಮಾಡಿದ್ದು ಶಂಖಕುಂಡಲ, ಪತ್ರಕುಂಡಲ, ಶವಕುಂಡಲ – ಹೀಗೆ ನಾನಾ ರೀತಿಯ ಕುಂಡಲಗಳು ಬಳಕೆಯಲ್ಲಿದ್ದವು.

ಕಂಠಿಕೆ (ಉಪಗ್ರೀವ, ಕಂಠಿ, ಗ್ರೈವೇಯಕ): ಕುತ್ತಿಗೆ ಸುತ್ತ ಬರುವ ಇದು ಚಿನ್ನದ ಪಟ್ಟಿಯಂತಿದ್ದು ದಪ್ಪವಾದ ಸರದಂತಿರುತ್ತದೆ. ಇದನ್ನು ದಪ್ಪವಾದ ಮುತ್ತುಗಳಿಂದ ಅಥವಾ ರುದ್ರಾಕ್ಷಿ ಇಲ್ಲವೇ ಚಿನ್ನದ ಗುಂಡುಗಳಿಂದ ಮಾಡಿದ ಸರ. ಇದು ನಾನಾ ಆಕಾರದಲ್ಲಿದ್ದು, ಎಲ್ಲ ಕಾಲದ ಸ್ತ್ರೀಬಿಂಬಗಳಲ್ಲೂ ಕಾಣಬರುತ್ತದೆ.

ಹಾರಗಳು: ಕೊರಳಿನ ಆಭರಣವಾದ ಹಾರಗಳಲ್ಲಿ ನಾನಾ ವಿಧಗಳಿವೆ. ಭುಜದ ಮೇಲಿಂದ ಬರುವ ಸುವರ್ಣದ ಹಾರ, ಸಣ್ಣಸಣ್ಣ ಮುತ್ತಿನ ಸರಗಳನ್ನು ಸ್ಕಂಧಹಾರ (ಬಾಹುಪೂರ/ಭುಜಕೀರ್ತಿ/ಭುಜಸರ) ಎನ್ನಲಾಗುತ್ತದೆ. ನಕ್ಷತ್ರಾಕಾರದ ಚಿತ್ತಾರವಿದ್ದರೆ ನಕ್ಷತ್ರಮಾಲೆ, ಮುತ್ತುಗಳಿಂದಾದ ಹಾರ ರತ್ನಹಾರ. ಇದು ಒಂದೇ ಎಳೆಯದಾದರೆ ಏಕಾವಳಿ, ಮೂರು ಎಳೆಯ ಮುತ್ತಿನಹಾರ ತ್ರಿವಳಿ, ಐದು ಎಳೆಯ ಮುತ್ತಿನ ಹಾರ ಪಂಚಾವಳಿ, ಇವುಗಳನ್ನು ಶಿಲ್ಪದಲ್ಲಿ ಕಾಣಬಹುದು. ನಾನಾ ಹೂವು, ಬಳ್ಳಿಗಳ ಆಕಾರದ ಚಿತ್ತಾರವುಳ್ಳ ಮುತ್ತು, ಹವಳ, ವಜ್ರ ಮುಂತಾದ ಹರಳುಗಳಿಂದ ಕೂಡಿದ ಹಾರದ ಮಧ್ಯದಲ್ಲಿ ಸುಂದರವಾದ ಪದಕವನ್ನು ಜೋಡಿಸಿದ್ದು, ಕತ್ತಿಗೆ ಸರಿಹೊಂದುವಂತೆ ರಚಿಸಿರುವ ಹಾರವೇ ಪದಕದ ಹಾರ (ನೆಕ್ಲೆಸ್). ಇಂಥ ಸುಂದರವಾದ ಹಾರವು ಉದ್ದವಾಗಿದ್ದು ಎದೆಯ ಮಧ್ಯಭಾಗದ ವರೆಗೆ ಬರುವಂತಿದ್ದರೆ ಅದನ್ನು ಅರ್ಧಹಾರ (ಹೃನ್ಮಾಲೆ, ಉರಹಾರ) ಎನ್ನುವರು. ವಿಷ್ಣುವು ಧರಿಸುವ ವೈಜಯಂತಿ ಮಾಲೆ ವಿಶೇಷವಾದ ಉರಹಾರವಾಗಿದ್ದು, ವಿಷ್ಣುಪುರಾಣದ ಪ್ರಕಾರ ಮುತ್ತು, ಹವಳ, ವೈಢೂರ್ಯ, ನೀಲ ಮತ್ತು ವಜ್ರಗಳನ್ನು ಅನುಕ್ರಮವಾಗಿ ಉಳ್ಳ ಹಾರ ಉರಹಾರವಾಗಿದೆ. ಶಿಲ್ಪಗಳಲ್ಲಿ ಈ ವೈಜಯಂತಿಯನ್ನು ನಾನಾ ರೀತಿಯಲ್ಲಿ ಬಿಡಿಸಿದ್ದು, ವಿಶೇಷವಾಗಿ ಪಾದದವರೆಗೂ ಬರುವಂತೆ ಬಿಡಿಸಲಾಗಿದೆ. ಹೀಗೆ ಕೊರಳಿನಿಂದ ಇಳಿಬಿದ್ದ ದಪ್ಪದಾದ ಹಾರವನ್ನು ತೋರಹಾರವೆನ್ನುವರು.

ಚೆನ್ನವೀರ: ಎಡ ಬಲ ಭುಜಗಳ ಮೇಲಿಂದ ಯಜ್ಞೋಪವೀತದಂತೆ ಧರಿಸಿದ ಜೋಡಿ ಮಾಲೆಗಳು. ಎದೆಯಬಳಿ ಇವೆರಡು ಸೇರುವಲ್ಲಿ ಗಂಟು/ಪದಕದ ಹಿಡಿಕೆಯಿರುತ್ತದೆ. ಪದಕದ ಮುಂದಿನ ಹಾರವು ಕೆಳಸರಿದು ದೇಹದ ಹಿಂಭಾಗದಲ್ಲಿರುತ್ತದೆ. ಶಿಲ್ಪದಲ್ಲಿ ಇದನ್ನು ಕೆಲವೆಡೆ ಮುತ್ತಿನ ಹಾರದಂತೆ, ಇಲ್ಲವೇ ಚಿನ್ನದ ಪಟ್ಟಿಯಂತೆ ಕೆತ್ತಲಾಗಿದೆ.

ತೋಳ್ಬಂದಿ (ಕೇಯೂರ, ಅಂಗದ) : ತೋಳಿನಲ್ಲಿ ಧರಿಸುವ ಆಭರಣ. ಮಣಿಯುಕ್ತವಾದ ಪಟ್ಟಿಕೆಯಂತಿರುತ್ತದೆ. ಇದರ ಮಧ್ಯದಲ್ಲಿ ಅರಳಿದ ಕಮಲದ ಪುರಿತವಿರುತ್ತದೆ. ಸಾಮಾನ್ಯವಾದ ಪಟ್ಟಿಯಂತೆ, ಆಭರಣವನ್ನು ತೋಳ್ಬಂದಿ ಅಂಗದ ವೆನ್ನುವರು. ಕೇಯೂರವು ಮೂರು ಪಟ್ಟಿಯಂತಿದ್ದು ಹೊರಚಾಚಿದ ಎಲೆಯನ್ನು ಹೊಂದಿದ್ದರೆ ಪತ್ರಪೂರಿತ ಕೇಯೂರ, ಎಲೆಯ ಬದಲು ನಾಗರಹೆಡೆಯ ಚಿತ್ತಾರವಿದ್ದರೆ ನಾಗಬಂದಿ. ನಾಗಬಂದಿ ಶಿವನ ವಿಶೇಷವಾದ ಆಭರಣ. ತೋಳ್ಬಂದಿ ಕಡಗದಂತಿದ್ದರೆ ಅಂಗದ ಎನ್ನಿಸುವುದು. ಸಾಮಾನ್ಯವಾಗಿ ಎಲ್ಲ ಮೂರ್ತಿಶಿಲ್ಪಗಳಲ್ಲಿ ಈ ಆಭರಣವಿರುತ್ತದೆ.

ಬಳೆ (ಕಟಕ ವಲಯ ಕಡಗ): ವೃತ್ತಾಕಾರವಾಗಿ ಗಾತ್ರದಲ್ಲಿ ತೆಳುವಾಗಿದ್ದರೆ ಬಳೆ / ವಲಯವೆಂದೂ, ದಪ್ಪವಾದರೆ ಕಟಕ / ಕಡಗವೆನ್ನುತ್ತಾರೆ. ಪುರುಷ ಬಿಂಬಗಳಲ್ಲಿ ಸಾಮಾನ್ಯವಾದ 1–2 ಕಡಗಗಳಿದ್ದರೆ, ಸ್ತ್ರೀಬಿಂಬಗಳಲ್ಲಿ ಚಿತ್ತಾರವಾದ ಕಡಗಗಳೂ ಎಂಟು ಹತ್ತು ಬಳೆಗಳೂ ಇರುತ್ತವೆ. ಅರ್ಧನಾರೀಶ್ವರ ಶಿಲ್ಪದಲ್ಲಿ ಈ ಎರಡು ಪ್ರಕಾರವನ್ನು ಕಾಣಬಹುದು.

ಉಂಗುರ (ಅಂಗುಲೀಯಕ): ವಿಶೇಷವಾಗಿ ಹೊಯ್ಸಳಶಿಲ್ಪಗಳಲ್ಲಿ ವಂಕಿ ಆಕಾರದ ಉಂಗುರವನ್ನು, ಇಳಿಬಿದ್ದ ಮುಂದಿನ ಅತಿ ತೆಳುವಾದ ಸರಗಳುಳ್ಳ ಉಂಗುರಗಳನ್ನು, ನಾನಾ ಚಿತ್ತಾರವುಳ್ಳ ಉಂಗುರಗಳನ್ನು ಕಾಣಬಹುದು. ಹೊಯ್ಸಳ ಶಿಲ್ಪಗಳಲ್ಲಿ ಸ್ತ್ರೀ/ ಪುರುಷರ ಬಿಂಬಗಳಲ್ಲಿ ಎಲ್ಲ ಬೆರಳಲ್ಲೂ ಉಂಗುರಗಳಿದ್ದು ಒಂದೇ ಬೆರಳಿಗೆ 2–3 ಉಂಗುರಗಳಿರುವುದೂ ಉಂಟು.

ಮಣಿಬಂಧ (ಬಂದಿಲಿ): ಹೊಯ್ಸಳರ ಶಿಲ್ಪಗಳಲ್ಲಿ, ಅನಂತರದ ಕಾಲದಲ್ಲಿ ವಿಶೇಷವಾಗಿ ಕಾಣಬರುವ ಈ ಆಭರಣವು ರತ್ನದ ಹಾರ ಅಥವಾ ಚಿನ್ನದ ಎಳೆಗಳಿಂದ ಕೂಡಿದ್ದು ಮುಂಗೈಗೂ ಬೆರಳುಗಳಿಗೂ ಸೇರಿಸಿರುತ್ತದೆ. ಈ ಎಳೆಗಳು ಸೇರುವ ಮಧ್ಯಭಾಗದಲ್ಲಿ ಸುಂದರವಾದ ಪುಷ್ಪದ ಚಿತ್ತಾರವಿದ್ದು, ಮುಂಗೈ ಶೋಭೆಯನ್ನು ಹೆಚ್ಚಿಸುತ್ತದೆ. ಇದನ್ನನುಸರಿಸಿ ಇಂದು ಮೆಹಂದಿ (ಗೋರಂಟಿ) ಯಿಂದ ಮುಂಗೈ ಮೇಲೆ ಬಣ್ಣದ ಚಿತ್ತಾರವನ್ನು ಮಾಡುತ್ತಾರೆ.

ಯಜ್ಞೋಪವೀತ: ಹಿಂದಿನ ಕಾಲದಲ್ಲಿ ಯಜ್ಞದ ಸಮಯದಲ್ಲಿ, ಉಪವೀತದ ಮಾದರಿಯಲ್ಲಿ ಕೃಷ್ಣಾಜಿನವನ್ನು (ಜಿಂಕೆಯ ಚರ್ಮ) ಧರಿಸುತ್ತಿದ್ದು, ಇದನ್ನು ಯಜ್ಞೋಪವೀತ ಎನ್ನುತ್ತಿದ್ದರು. ಕೆಲವು ಪ್ರಾಚೀನ ಶಿಲ್ಪಗಳಲ್ಲಿ ಯಜ್ಞೋಪವೀತವು ಹೀಗೆಯೇ ಇದ್ದು ಜಿಂಕೆಯ ತಲೆಯನ್ನು ಬಿಡಿಸಲಾಗಿದೆ. ಉದಾ: ಬಾದಾಮಿಯ ತ್ರಿವಿಕ್ರಮನ ಶಿಲ್ಪ. ಅನಂತರದ ಕಾಲದ ಶಿಲ್ಪಗಳಲ್ಲಿ ಯಜ್ಞೋಪವೀತವು ಅಗಲವಾದ ಪಟ್ಟಿಯಂತಿದ್ದು. ಎದೆಯ ಬಳಿ ಗಂಟಿರುತ್ತದೆ. ಇದು ಎಡಭುಜದಿಂದ ಹೊರಟು, ಎದೆಯ ಮೇಲೆ ಹಾದು ಬಲಭುಜದ ಕೆಳಗಿನಿಂದ ಹಿಂದಕ್ಕೆ ಹೋಗಿರುತ್ತದೆ. ಆರೋಪ್ಯಸೂತ್ರವು ಒಂದು ಭಾಷಣವನ್ನು ಇದರಲ್ಲಿ ಆರೋಪ್ಯದಲ್ಲಿ ಪ್ರಾಲಂಬ ಮತ್ತು ಮಾಲಿಕಾಕಾರವೆಂದು 2 ವಿಧ. ಉಪವೀತವೆಂಬುದು ಪ್ರಾಲಂಬ ಪ್ರಕಾರವಾದರೆ, ಅಪಸವ್ಯ (ಬಲಭುಜದಿಂದ ಹೊರಟು ಎಡಕ್ಕೆ ಹಾಯ್ದರೆ) ಮಾಲಿಕಾಕಾರವೆಂದಿದ್ದಾರೆ. ಇದರಂತಾದರೆ ಅನಂತರದ ಕಾಲದ ಶಿಲ್ಪಗಳಲ್ಲಿ, ಪುರುಷ, ಸ್ತ್ರೀಭೇಧವಿಲ್ಲದೇ ಆಲಂಕಾರಿಕವಾಗಿರುವ ಯಜ್ಞೋಪವೀತವನ್ನು ಆರೋಪ್ಯಮಾಡಿ ಎನ್ನಬಹುದು. ಆರೋಪ್ಯಮಾಲೆಯು ಕೆಲವೆಡೆ ಪಟ್ಟಿಯಂತಿದ್ದರೆ, ಕೆಲವೊಮ್ಮೆ ದಪ್ಪವಾದ ಮುತ್ತಿನ ಹಾರದಂತಿದ್ದು ಎದೆಯ ಬಳಿಯ ಗಂಟಿನ/ಪದಕದ ನಂತರ ಕವಲಾಗಿ ಒಂದು ಭಾಗವು ನೇರವಾಗಿ ಇಳಿಬಿದ್ದಿರುತ್ತದೆ. ಇದು ಶಿಲ್ಪದ ಸೌಂದರ್ಯವರ್ಧಕ ಆಭರಣದಂತಿದೆ.

ಉದರಬಂಧ: ಎದೆ ಮತ್ತು ಹೊಟ್ಟೆ ಸಂಧಿಸುವಲ್ಲಿ ಪುರುಷರು ಧರಿಸುವ ಪಟ್ಟಿಯಂಥ ಆಭರಣವನ್ನು ಉದರಬಂಧವೆನ್ನುವರು. ಈ ಪಟ್ಟಿ ರತ್ನಯುಕ್ತವಾಗಿದ್ದು, ಪುಷ್ಪ, ಪತ್ರಗಳ ಚಿತ್ತಾರದಿಂದ ಕೂಡಿರುತ್ತದೆ. ಸ್ತ್ರೀಬಿಂಬಗಳಲ್ಲಿ ಉದರಬಂಧವಿರದೇ ಅನಂತರದ ಕಾಲದ ಶಿಲ್ಪಗಳಲ್ಲಿ ಮಾತ್ರ ಸ್ತನಬಂಧ/ಕುಚಬಂಧವನ್ನು ಕಾಣುತ್ತೇವೆ. ಈ ಆಭರಣವು ಕೇವಲ ಸ್ತನಗಳ ಮೇಲಿನ ಪಟ್ಟಿಕೆಯಾಗಿರುತ್ತದೆ.

ಕಟೀಸೂತ್ರ ಮತ್ತು ಉರಧಾಮ: ಟೊಂಕದ (ಸೊಂಟ) ಹತ್ತಿರ ಉಡುಪನ್ನು ಬಿಗಿಗೊಳಿಸುವ ಪಟ್ಟಿಗೆ ಕಟೀಸೂತ್ರ ಎನ್ನಲಾಗುತ್ತದೆ. ಮೂರು ಭಾಗಗಳಿಂದಾದ ಇದರ ನಡುವಿನಲ್ಲಿ ಸಿಂಹವಕ್ತ್ರ ವಿರಬೇಕೆಂದು ಮಾನಸಾರವು ತಿಳಿಸಿದರೆ ಇದನ್ನು ಕೃತ್ತಿಕಾಮನವೆಂದು ಬೇರೆ ಗ್ರಂಥ ಕರೆದಿದೆ. ಶಿಲ್ಪರತ್ನವು ಮೂರು ಪಟ್ಟಿಗಳ ಮಧ್ಯೆ ಮಿಗುವ (ಉಳಿಯುವ) ಸ್ಥಳವನ್ನು ಆಭರಣಯುಕ್ತವಾಗಿಸಬೇಕೆಂದಿದೆ. ಕಟೀ ಸೂತ್ರವು ಸೊಂಟವನ್ನಾವರಿಸಿದ ಆಭರಣ. ಇದನ್ನು ಡಾಬು (ಮೇಖಲೆ) ಎನ್ನುವರು. ಕಟೀಸೂತ್ರದಿಂದ ಕೆಳಗಿನ ಭಾಗದಲ್ಲಿ ಕಾಣಬರುವ ಆಭರಣವು ಉರಧಾಮ (ಕಂಚೀಧಾಮ) ಎನ್ನಿಸಿದೆ. ತೊಡೆಯನ್ನು ಆವರಿಸುವ ಈ ಆಭರಣದ ನಾನಾ ಮಾದರಿಗಳನ್ನು ಶಿಲ್ಪದಲ್ಲಿ ಕಾಣಬಹುದು. ನಾನಾ ಚಿತ್ತಾರಗಳುಳ್ಳ

ಉರಧಾಮದಲ್ಲಿ ಗೆಜ್ಜೆಗಳ, ಗಂಟೆಗಳ ಅಲಂಕಾರವೂ ಇರುತ್ತದೆ. ಕೆಲವು ಶಿಲ್ಪಗಳಲ್ಲಿ ಉರಧಾಮದ ಜೊತೆಗೆ ವಸ್ತ್ರವನ್ನು ಬಿಡಿಸಿದ್ದು, ವಸ್ತ್ರವು ಅರ್ಧಚಂದ್ರಾಕಾರದಲ್ಲಿದ್ದು. ಎಡನಡುವಿನಲ್ಲಿ ಕುಚ್ಚಿನಂತೆ ನೇತಾಡುತ್ತಿರುವಂತೆ ಬಿಡಿಸಲಾಗಿದೆ. ವಿಶೇಷವಾಗಿ ಚಾಲುಕ್ಯರ, ಹೊಯ್ಸಳರ ಶಿಲ್ಪಗಳಲ್ಲಿ ಸುಂದರವಾದ ಉರಧಾಮಗಳುಳ್ಳ ಶಿಲ್ಪಗಳಿವೆ.

ಪಾದದ ಆಭರಣಗಳು: ತೋಡ, ಅಂದಿಗೆಗಳು: ಅಂದಿಗೆಗಳು, ಅಂಗದಗಳಂತೆ (ಕಡಗದಂತೆ) ಇರುವ ಆಭರಣ. ಇವನ್ನು ಕಣಕಾಲಿನಲ್ಲಿ ಧರಿಸುವರು. ಇವು ದಪ್ಪವಾದ ಬಳೆಯಂತಿದ್ದು ಮಧ್ಯೆ ಮಧ್ಯೆ ಸಣ್ಣ ಗೆಜ್ಜೆ / ಗಂಟೆಗಳಿಂದ ಕೂಡಿರುತ್ತದೆ. ಸಾಮಾನ್ಯವಾದ ಕಡಗವಾದರೆ ಕಾಲ್ಕಡಗ / ಅಂದಿಗೆ ಎನ್ನುವರು. ಸಾಮಾನ್ಯವಾಗಿ ಇದು ಬೆಳ್ಳಿಯ ಆಭರಣ. ಹೊಯ್ಸಳರ ಕಾಲದ ಗರುಡ (ವೀರನು) ಧರಿಸುತ್ತಿದ್ದುದು ಮುತ್ತಿನ ಪೆಂಡೇರವೆಂಬ ಕಾಲ್ಕಡಗ. ವಿದ್ವಾಂಸರು, ವಾದಿಗಳು, ಜಟ್ಟಿಗಳು ಎದುರಾಳಿಗಳನ್ನು ಗೆದ್ದಾಗ ವಿಜಯದ ಕುರುಹಾಗಿ ಧರಿಸುತ್ತಿದ್ದ ಕಾಲಿನ ಆಭರಣ ತೋಡ. ಇದು ಚಿನ್ನದ ಕಾಲ್ಕಡಗ.

ಕಾಲ್ಗೆಜ್ಜೆ (ನೂಪುರ)–ಪಾದಜಾಲಕ: ಪಾದದ ಮೇಲೆ ಧರಿಸುವ ಪಾದ ಜಾಲಕವು ಮುಂಗಾಲಿನ ಶೋಭೆಯನ್ನು ಹೆಚ್ಚಿಸುತ್ತದೆ. ಇದರಲ್ಲಿ ಮುಖ್ಯವಾದ ಎಳೆಯೊಂದಿದ್ದು ಸಣ್ಣಸಣ್ಣ ನೇತಾಡುವ ತುಂಡುಗಳನ್ನು ಸೇರಿಸಿರುತ್ತಾರೆ. ಶಿಲ್ಪಗಳಲ್ಲಿ ಸ್ತ್ರೀಪುರುಷರಿಬ್ಬರಲ್ಲೂ ಕಾಣಬರುವ ಆಭರಣವಿದು. ನೂಪುರ ಕಾಲಿನ ಗೆಜ್ಜೆ–ಇದನ್ನು ನೃತ್ಯಗಾರ, ವಾದಕರ ಶಿಲ್ಪಗಳಲ್ಲಿ 4–5 ಸಾಲುಗೆಜ್ಜೆ ಪಟ್ಟಿಕಟ್ಟಿರುವುದನ್ನು ಕಾಣುತ್ತೇವೆ.

ಕಾಲುಂಗುರಗಳು: ಪ್ರಾಚೀನ ಶಿಲ್ಪಗಳಲ್ಲಿ ಎಲ್ಲ ಬೆರಳಿನಲ್ಲೂ ಉಂಗುರಗಳಿವೆ. ಹಿಂದೆ ಸ್ತ್ರೀ ಪುರುಷರಿಬ್ಬರೂ ಕಾಲುಂಗರಗಳನ್ನು ಧರಿಸುತ್ತಿದ್ದರು. ಹೊಯ್ಸಳ ಶಿಲ್ಪಗಳಲ್ಲಿ ನಾನಾ ರೀತಿಯ ಕಾಲುಂಗುರಗಳನ್ನು ಕಾಣಬಹುದು.

ಪಾದುಕೆಗಳು: ಎಲ್ಲ ದೇವತಾ ಬಿಂಬಗಳಲ್ಲೂ ಪಾದುಕೆಗಳನ್ನು ಬಿಡಿಸುವುದಿಲ್ಲ. ಪಾದುಕೆ ಸಮಾನಾಂತರವಾಗಿದ್ದು ಹಿಮ್ಮಡಿಯಭಾಗ ಎತ್ತರವಾಗಿರುವಂತೆ ಚಿತ್ರಿಸಿದ ಅಲಂಕಾರ ಸಾಧನವೇ ಪಾದುಕೆ. ವಿಶೇಷವಾಗಿ ಭೈರವ ಮತ್ತು ವೀರಭದ್ರ ಕ್ಷೇತ್ರಪಾಲನ ಶಿಲ್ಪಗಳಲ್ಲಿ ಪಾದುಕೆಗಳನ್ನು ಕಾಣುತ್ತೇವೆ. ಹೊಯ್ಸಳರ ಕೆಲವು ಮದನಿಕಾ ಶಿಲ್ಪಗಳಲ್ಲಿ ಎತ್ತರವಾದ ಪಾದುಕೆಗಳನ್ನು ನೋಡಬಹುದು. ಹೀಗೆ ದೇವತಾಮೂರ್ತಿಗಳು ಸರ್ವಾಭರಣ ಯುಕ್ತವಾಗಿದ್ದು ಅವುಗಳ ಸ್ವರೂಪ, ಗುಣವಿಶೇಷಗಳನ್ನರಿಯುವುದಲ್ಲಿ ಈ ಮೂರ್ತಿ ಶಿಲ್ಪದ ಲಕ್ಷಣಗಳ ಅರಿವು ಅಗತ್ಯವಾಗಿದೆ.

ಶಿಲ್ಪದ ತಾಳಮಾನ: ತಾಳಮಾನ ಪದ್ಧತಿಯು ಮೂರ್ತಿಶಿಲ್ಪಶಾಸ್ತ್ರದ ಪ್ರಮುಖ ಅಂಗ. ಮೂರ್ತಿಯೊಂದನ್ನು ನಿರ್ಮಿಸುವಾಗ ಶಿಲ್ಪಿಯು, ಆ ಬಿಂಬದ ಅಂಗಾಂಗಗಳ ಪ್ರಮಾಣ, ಮೂರ್ತಿಯ ಎತ್ತರಗಳನ್ನು ಸ್ವರೂಪ ಚಿಂತನೆಯ ಜೊತೆಗೆ ಗಮನಿಸುತ್ತಾನೆ. ಆಗಮ ಪುರಾಣಗಳು, ಶಿಲ್ಪರಚನೆಯಲ್ಲಿ ದೋಷವಿದ್ದ ಮೂರ್ತಿಗಳನ್ನು ಪೂಜಿಸಿದರೆ ಉಂಟಾಗುವ ವಿಪತ್ತುಗಳನ್ನು ತಿಳಿಸಿದೆಯಲ್ಲದೆ ದೇವಾನುದೇವತೆಗಳ ಔಚಿತ್ಯ ಸ್ಥಾನಗಳನ್ನು ಗಮನಿಸಿ ಅನೇಕ ವಿಧಗಳಾಗಿ ವಿಂಗಡಿಸಿದೆ. ಪ್ರತಿ ಮೂರ್ತಿನಿರ್ಮಾಣಕ್ಕೂ ನಿರ್ದಿಷ್ಟವಾದ ವಿಧಿನಿಯಮಗಳನ್ನು ಸೂಚಿಸಿವೆ. ಈ ನಿಯಮಗಳನ್ನು ಅನುಸರಿಸಿ ಶಿಲ್ಪ ರಚಿಸಿದಾಗ, ಬಿಂಬಗಳು ಕಲೆಯ ಪ್ರತೀಕವಾಗಿ ಅಮರವಾಗಿವೆ.

ಶಿಲ್ಪಶಾಸ್ತ್ರಗಳು ತಿಳಿಸುವ ಲಂಬ ತಾಳಮಾನ ರೀತಿಯಲ್ಲಿ, ಮೂರ್ತಿಯನ್ನು ಲಂಬಮಾನದಲ್ಲಿ ಅಳೆಯುವ ಅದರ ಎತ್ತರದ ಪ್ರಮಾಣವನ್ನು ತಿಳಿಸುವ ಅಳತೆಯ ಸಂಕೇತವೇ (ಮಾಪಕ) ತಾಳ. ತಾಳದ ಬಗೆಗೆ ಖಚಿತವಾದ ಒಂದೇ ಪ್ರಮಾಣವಿಲ್ಲ. ಬೇರೆ ಬೇರೆ ಗ್ರಂಥಗಳಲ್ಲಿ ಅಭಿಪ್ರಾಯಗಳಿವೆ. ತಾಳವೆಂಬ ಪದವನ್ನು ಅಂಗುಲ ವೆಂದೂ ಕರೆಯುವರು. ಶಿಲ್ಪಿಯ ಮಧ್ಯದ ಬೆರಳಿನ ಮಧ್ಯದ ಗೆಣ್ಣಿನ ಉದ್ದವು ತಾಳ/ಒಂದು ಅಂಗಲ ಎನ್ನಿಸಿದೆ. ಇದರಂತೆ ಕೈ ಹೆಬ್ಬೆಟ್ಟನ್ನು ಕನಿಷ್ಠ ಬೆರಳನ್ನೂ ಚಾಚಿ ತುದಿಯಿಂದ ತುದಿಗೆ ಅಳೆದ ಉದ್ದವೂ ಗೋಕರ್ಣ ಎನ್ನಿಸಿವೆ. ಕೈ ಹೆಬ್ಬೆಟ್ಟಿನಿಂದ ಮಧ್ಯದ ಬೆಟ್ಟನ್ನು ಚಾಚಿ ತುದಿಯಿಂದ ತುದಿಗೆ ಅಳೆದ ಉದ್ದ ತಾಲವೆನ್ನಿಸಿದೆ. ಮತ್ತೊಂದು ವಿಧವು ವಿಗ್ರಹದ ಹಣೆಯ ಮೇಲಂಚಿನಿಂದ ಗಲ್ಲದವರೆಗೆ ಅಳೆದರೆ ಬರುವ ಉದ್ದವನ್ನು ತಾಲವೆಂದಿದೆ. ಇದನ್ನು ಗಮನಿಸುವಲ್ಲಿ ಸಾಮಾನ್ಯವಾಗಿ 10 ಅಂಗುಲಗಳಿಗೆ ಒಂದು ತಾಲವೆಂದು ಪರಿಗಣಿಸಲಾಗುವುದು. (ವಿಎಲ್.ಕೆ.)

**ವಾಸ್ತುಗ್ರಂಥಗಳಲ್ಲಿ ತಾಲ ಮತ್ತು ಮಾನಗಳು:** ತಾಲಮಾನ ಕೋಷ್ಠಕ ಈ ಕೆಳಗಿನಂತಿದೆ:

1/8 ಅಂಗುಲ = 1 ಯವ

12 ಅಂಗುಲ = 1 ತಾಲ

1 ಅಂಗುಲ = 1 ಮಾತ್ರ

2 ಅಂಗುಲ = 1 ಗೋಲಕ

3 ಅಂಗುಲ = 1 ಕಲಾ

4 ಅಂಗುಲ = 1 ಭಾಗ

8 ಅಂಗುಲ = 1 ಯಾವಕ

12 ಅಂಗುಲ = 1 ಭಾಗ/1 ಯಾವಕ/1 ತಾಲ

ಇವುಗಳಿಗೆ ಅನುಗುಣವಾಗಿ ಮೂರ್ತಿಗಳನ್ನು, ಈ ತಾಲಮಾನಗಳನ್ನು ಎಂಟು ವಿಧಗಳಾಗಿ ವಿಂಗಡಿಸಲಾಗಿದೆ ಮತ್ತು ಪ್ರತಿಯೊಂದು ತಾಲಮಾನದಲ್ಲೂ ಉತ್ತಮ, ಅಧಮ ಮತ್ತು ಮಧ್ಯಮ ಎಂದು ಮೂರು ಪ್ರಕಾರಗಳಿವೆ. ಅವುಗಳನ್ನು ಹೀಗೆ ವಿಭಾಗಿಸಬಹುದು:

| ತಾಲ | ಮೂರ್ತಿ | ಉತ್ತಮ | ಮಧ್ಯಮ | ಅಧಮ | |
|---|---|---|---|---|---|
| 1. ದಶತಾಲ | ಮಾನಮೂರ್ತಿ | 124 ಅಂಗುಲ | 120 ಅಂಗುಲ | 116 ಅಂಗುಲ | ಎತ್ತರ |
| 2. ನವತಾಲ | (–„–) | 110 ಅಂಗುಲ | 106 ಅಂಗುಲ | 102 ಅಂಗುಲ | ಎತ್ತರ |
| 3. ಅಷ್ಟತಾಲ | (–„–) | 96 | 92 | 88 | ಎತ್ತರ |
| 4. ಸಪ್ತತಾಲ | (–„–) | 86/84 | 82/80 | 78/76 | ಎತ್ತರ |
| 5. ಷಟತಾಲ | (–„–) | 72 | 68 | 64 | ಎತ್ತರ |
| 6. ಪಂಚತಾಲ | (–„–) | 60 | 56 | 52 | ಎತ್ತರ |
| 7. ನಾಲ್ಕುತಾಲ | (–„–) | 48 | – | – | |
| 8. ಮೂರುತಾಲ | (–„–) | 36 | – | – | |

ವಿಗ್ರಹಗಳನ್ನು ತಯಾರಿಸುವಾಗ ಅಥವಾ ಕೆತ್ತುವಾಗ ಶಾಸ್ತ್ರಗಳಲ್ಲಿ ಈ ಮೇಲಿನ ಅಳತೆಗಳನ್ನು ಅನುಸರಿಸಿ ವಿವಿಧ ದೇವರ ಹಾಗೂ ವಿವಿಧ ಮಾದರಿಯ ವಿಗ್ರಹಗಳನ್ನು ನಿರ್ಮಿಸುವಂತೆ ಆದೇಶಿಸುವರು.

ಈ ಮೇಲಿನ ತಾಲಗಳನ್ನು ಉಪಯೋಗಿಸಿಕೊಂಡು ಯಾವ ಯಾವ ದೇವರ ಮೂರ್ತಿಗಳನ್ನು ಯಾವ ಯಾವ ತಾಲಗಳಲ್ಲಿ ನಿರ್ಮಿಸಬೇಕೆಂದು ಹಲವಾರು ಆಗಮಗ್ರಂಥಗಳು ನಿರ್ದೇಶಿಸುತ್ತವೆ. ಇವುಗಳ ಒಟ್ಟಾರೆ ಸಾರಂಶ ಈ ಕೆಳಕಂಡಂತಿದೆ:

ಉತ್ತಮ ದಶತಾಲ: ಪ್ರಧಾನ ದೇವತೆಗಳಾದ ಬ್ರಹ್ಮ, ವಿಷ್ಣು ಹಾಗೂ ಶಿವನ ಪ್ರತಿಮೆಗಳು.

ಮಧ್ಯಮ ದಶತಾಲ: ಶ್ರೀದೇವಿ(ಲಕ್ಷ್ಮೀ), ಭೂಮಿದೇವಿ, ಉಮೆ, ಸರಸ್ವತೀ, ದುರ್ಗಾ, ಸಪ್ತಮಾತೃಕೆಗಳು, ಉಷಾ ಹಾಗೂ ಜ್ಯೇಷ್ಠಾದೇವಿಯರು.

ಅಧಮ ದಶತಾಲ: ಇಂದ್ರಾದಿ ದಿಕ್ಪಾಲಕರು, ಚಂದ್ರ, ಸೂರ್ಯ, ಹನ್ನೆರಡು ಜನ ಆದಿತ್ಯರು, ಹನ್ನೊಂದು ರುದ್ರರು, ಎಂಟು ವಸುಗಳು, ಅಶ್ವಿನಿದೇವತೆಗಳು, ಭೃಗು, ಮಾರ್ಕಂಡೇಯ, ಗರುಡ, ಶೇಷ, ದುರ್ಗಾ, ಸುಬ್ರಹ್ಮಣ್ಯ, ಸಪ್ತಋಷಿಗಳು, ಗುರು, ಆರ್ಯ, ಚಂಡೇಶ ಮತ್ತು ಕ್ಷೇತ್ರಪಾಲ.

ನವತಾಲ: ಕುಬೇರ, ಒಂಬತ್ತು ಗ್ರಹಗಳು. ಉತ್ತಮ ನವತಾಲದ ಅಳತೆಯಲ್ಲಿ ದೈತ್ಯೇಶ, ಯಕ್ಷೇಶ, ಉರಗೇಶ, ಸಿದ್ಧರು, ಗಂಧರ್ವರು, ಚಾರಣರು, ವಿದ್ಯೇಶರು ಮತ್ತು ಶಿವನ ಅಷ್ಟಮೂರ್ತಿಗಳು.

ಅಷ್ಟತಾಲ: ಮನುಷ್ಯ.

ಸಪ್ತತಾಲ: ಬೇತಾಳ ಹಾಗೂ ಪ್ರೇತ.

ಷಟ್ತಾಲ: ಪ್ರೇತ.

ಪಂಚತಾಲ: ಕುಬ್ಜವಿಗ್ರಹ ಹಾಗೂ ವಿಘ್ನೇಶ್ವರ.

ಚತುಸ್ತಾಲ: ವಾಮನ ಹಾಗೂ ಕುಳ್ಳಗಿನ ಪ್ರತಿಮೆಗಳು, ಮಕ್ಕಳು.

ತ್ರಿತಾಲ: ಭೂತ ಮತ್ತು ಕಿನ್ನರ.

ದ್ವಿತಾಲ: ಕೂಷ್ಮಾಂಡ.

ಏಕತಾಲ: ಕಬಂಧ.

ಉದಾ: ಒಂದು ದಶತಾಲ ವಿಗ್ರಹದ ರಚನೆಗೆ ಶಾಸ್ತ್ರ ಹೇಳಿರುವ ಎಲ್ಲ ಅಂಗಗಳ ಅಳತೆಗಳು ಹೀಗಿವೆ: ಒಟ್ಟು ಅಳತೆ 124 ಅಂಗುಲ – ಅಂದರೆ 310ಸೆಂಮೀ, ಅಂದರೆ ಸು.10 ಅಡಿಗಳ ಎತ್ತರ. (ಎಸ್.ಪಿ.ಐ.)

ದೇವತಾಮೂರ್ತಿಗಳನ್ನು ನಿರ್ಮಿಸುವಲ್ಲಿ ಆ ಬಿಂಬಗಳು ತೋರಿಕೆಗೆ ಮಾನವರಂತೆ ಕಂಡರೂ ಶ್ರೇಷ್ಠರೆಂಬುದನ್ನು ತಿಳಿಸುವಂತೆ ಇದ್ದು, ಮೂರ್ತಿಯು ಸರ್ವಾಂಗ ಸುಂದರವಾಗಿಯೂ ಸರ್ವಾಭರಣಭೂಷಿತವಾಗಿ, ಚಿತ್ತಾಪಹಾರಕವಾಗಿರಬೇಕೆಂದು ಶಿಲ್ಪಶಾಸ್ತ್ರವು ತಿಳಿಸಿದೆ. ಇದಕ್ಕಾಗಿ ದೇವಾನುದೇವತೆಗಳ ಮೂರ್ತಿ ಪ್ರಮಾಣಗಳಲ್ಲಿ ವಿವಿಧ ವರ್ಗಗಳಾಗಿ ವಿಂಗಡಿಸಿದೆ. ಜಗತ್ತಿನ ಸ್ಥಿತಿಗತಿಗೆ ಕಾರಣವಾದ ಬ್ರಹ್ಮ, ವಿಷ್ಣು, ಮಹೇಶ್ವರರ ಮೂರ್ತಿಗಳನ್ನು ಉತ್ತಮ ದಶತಾಲ ಪ್ರಮಾಣದಲ್ಲಿ ನಿರ್ಮಿಸಬೇಕೆಂದಿದೆ. ಮೂರ್ತಿಗಳ ರಚನೆಯಲ್ಲಿ ಪ್ರಮುಖ ದೇವತೆಗಳನ್ನು ಉತ್ತಮ ತಾಲದಲ್ಲಿ (ತಾಲಮಾನಕ್ಕಿಂತ 4 ಅಂಗಲ ಹೆಚ್ಚಿರುವುದು ಅಂದರೆ 12 ಅಂಗುಲ–1 ತಾಲ–10 ತಾಲ–120 ಅಂಗುಲ + 4 = 124 ಅಂಗುಲ ಪ್ರಮಾಣದ ಬಿಂಬ ಉತ್ತಮದಶತಾಲದ ಬಿಂಬ) ಇರುತ್ತದೆ. ಇವರ ಪತ್ನಿಯರಾದ ಶ್ರೀದೇವಿ, ಭೂದೇವಿ, ಸರಸ್ವತಿ, ಪಾರ್ವತಿಯರ ಬಿಂಬಗಳು ಮಧ್ಯಮ ದಶತಾಲದಲ್ಲಿ (ಮರ್ಧಯಮವೆಂದರೆ ತಾಲಮಾನದಷ್ಟೇ ಪ್ರಮಾಣದಲ್ಲಿ) ಇರಬೇಕು. ಇತರ ದೇವತೆಗಳ ಉಪದೇವತೆಗಳೆಂದು ಕರೆಯಲಾಗಿದ್ದು ಅವರ ಬಿಂಬಗಳನ್ನು ಅಧಮ ದಶತಾಲದಲ್ಲಿ (ಅಧಮ ಎಂದರೆ ತಾಲಮಾನಕ್ಕಿಂತ 4ಅಂಗುಲ ಕಡಿಮೆ 120–4=116 ಅಂಗುಲಗಳು) ಇರಬೇಕೆಂದು ಶಾಸ್ತ್ರಗ್ರಂಥಗಳು ತಿಳಿಸಿವೆ. ಹೀಗೆಯೇ ಕುಬೇರ, ನವಗ್ರಹಬಿಂಬಗಳು (ನವಾರ್ಧ ತಾಲದಲ್ಲಿಯೂ ದೈತ್ಯರು ಗಂಧರ್ವರು (ಉತ್ತಮ ನವತಾಲ) ಯಕ್ಷರು, ಅಪ್ಸರೆಯರು (ನವತಾಲದ ಬಿಂಬಗಳಾಗಿವೆ.



**ಮಕುಟಗಳು**

| | |
|---|---|
| 1 | ಕಿರೀಟಮಕುಟ |
| 3, 4, 5 | ಕರಂಡಮಕುಟ |
| 6, 39, 40, 41, 42, 43 | ಜಟಾಮಕುಟ |
| 16 | ಜಟಾಭಾರ |
| 17 | ಶಿರಶ್ಚಕ್ರ |

**ಕುಂಡಲಗಳು**

| | |
|---|---|
| 12 | ಸಿಂಹಕುಂಡಲ |
| 13, 38 | ಓಲೆ |
| 14 | ಮಕರಕುಂಡಲ |
| 15, 44 | ನಾಗಕುಂಡಲ |
| 36, 37 | ರತ್ನಕುಂಡಲ |

**ಆಯುಧಗಳು**

| | |
|---|---|
| 7, 8 | ಶಂಖ |
| 9, 10, 18 | ಚಕ್ರ |
| 11, 24, 49 | ಗುರಾಣಿ |
| 19, 20 | ಅಗ್ನಿ |
| 21, 22, 23 | ಗದೆ |
| 25, 26 | ವಜ್ರ |
| 45, 46, 47 | ಖಡ್ಗ |
| 48, 50 ,59 | ಬಿಲ್ಲು |
| 51 | ಒನಕೆ (ಮುಸಲ) |
| 60, 61 | ಬಾಣ (ಛಾಪ) |
| 62, 63 | ಖಟ್ವಾಂಗ |
| 79, 80 | ಶೂಲ |
| 81, 82 | ತ್ರಿಶೂಲ |
| 93, 105, 106 | ಡಮರು |
| 87, 88, 89, 91 | ಪಾಶ |
| 83, 84, 85, 86 | ಅಂಕುಶ |

**ಆಭರಣಗಳು**

| | |
|---|---|
| 27, 28, 34, 35 | ಕಂಠಿಕೆ |
| 29 | ಬಾಹುಪೂರ |
| 30, 31, 32, 33 | ಉರಹಾರಗಳು |
| 94, 95, 96, 97 | ಕಡಗ |
| 98, 99, 100, 101, 102, 103 | ಉಂಗುರ |
| 75, 76, 77 | ಕೇಯೂರ |
| 72, 73, 74, 107, 108 | ಕಟಿಸೂತ್ರ |
| 78, 124 | ಪಾದಜಾಲಕ |
| 129 | ಮೇಖಲ |
| 123 | ಸರ್ವಾಭರಣಭೂಷಿತ ಮೂರ್ತಿ |

| | | | | | |
|---|---|---|---|---|---|
| **ಭಂಗಿಗಳು** | | **ಹಸ್ತಗಳು** | | 109, 110 | ಯಜ್ಞೋಪವೀತ |
| 125, 127 | ಸಮಭಂಗಿ | 64 | ಗಜ/ದಂಡಹಸ್ತ | 111 | ನೈದಿಲೆ ಪುಷ್ಪ |
| 130 | ದ್ವಿಭಂಗಿ | 65 | ಅಭಯಹಸ್ತ | 112 | ಅಕ್ಷಮಾಲ |
| 126 | ತ್ರಿಭಂಗಿ | 69 | ತರ್ಜನಿಹಸ್ತ | 113 | ಜಿಂಕೆ (ಮೃಗ) |
| 128 | ಅತಿಭಂಗಿ | 70 | ವರದಹಸ್ತ | 114 | ಗಂಟೆ |
| 53 | ಕಟ್ಯವಲಂಬಿತ | 71 | ಸೂಚಿಹಸ್ತ | 115 | ಕಮಂಡಲು |
| **ಮುದ್ರೆಗಳು** | | **ಆಸನಗಳು** | | 116 | ಪಾನಪಾತ್ರೆ |
| 52 | ಜ್ಞಾನಮುದ್ರೆ | 131, 134 | ಸುಖಾಸನ | 117, 118, 119 | ಸೃಕ್ (ಯಜ್ಞಸೌಟು) |
| 54, 66, 67, 68 | ಕಟಕಮುದ್ರೆ | 132 | ವೀರಾಸನ | 120 | ಪುಸ್ತಕ |
| 55 | ಯೋಗಮುದ್ರೆ | 133 | ಶಯನಾಸನ | 121 | ಕಮಲ |
| 56 | ಅಂಜಲಿಮುದ್ರೆ | **ವಿಶೇಷಣಗಳು** | | 2 | ಪ್ರಭಾವಳಿ |
| 57 | ಕರ್ತರಿಮುದ್ರೆ | 90, 92 | ವೀಣೆ | – | |
| 58 | ವಿಸ್ಮಯಮುದ್ರೆ | 104 | ಕೊಳಲು | 122 | ಮೂರ್ತಿಯ ತಾಲಮಾನ |

ಮನುಷ್ಯರ ಮೂರ್ತಿಗಳನ್ನು ಅಷ್ಟಮ ತಾಲದಲ್ಲಿಯೂ ಮಕ್ಕಳನ್ನು ಚತುಸ್ತಾಲದಲ್ಲಿ ನಿರ್ಮಿಸಬೇಕೆಂದಿರುವ ಶಾಸ್ತ್ರಗ್ರಂಥಗಳು ಕುಬ್ಜರನ್ನು ಪಂಚಮತಾಲದ ರಚನೆ ಎಂದು ತಿಳಿಸಿವೆ.

ವಿಗ್ರಹದ ಸ್ವರೂಪದ ಬಗೆಗೆ ತಿಳಿಸುತ್ತಾ ಮುಖವು ದುಂಡಾಗಿ / ಮೊಟ್ಟೆಯಾಕಾರದಲ್ಲಿರಬೇಕು. ಕಣ್ಣುಗಳು ಮೀನು / ಜಿಂಕೆಯ ಕಣ್ಣಿನಂತಿದ್ದರೆ, ಮೂಗು ಸಂಪಿಗೆಯ ಮೊಗ್ಗಿನಂತೆ ನೀಳವಾಗಿರಬೇಕೆಂದಿದೆ. ಕೊರಳು ಶಂಖದಂತಿದ್ದು ಕೈಕಾಲುಗಳು ಕಮಲದ ಪುಷ್ಪದಂತೆ, ಊರುಗಳು ಬಾಳೆಯ ಕಂಬದಂತಿರಬೇಕೆಂದೂ ತಿಳಿಸಿವೆ. ಒಟ್ಟಿನಲ್ಲಿ ಶಿಲ್ಪಶಾಸ್ತ್ರದ ನಿಯಮಗಳಿಗನುಗುಣವಾಗಿ ತಾಳಮಾನಯುಕ್ತವಾಗಿ ರಚಿಸಿದ ಶಿಲ್ಪಗಳು ಮಾತ್ರ ಭಕ್ತರ, ಭಾವುಕರ ಮನದಲ್ಲಿ ಭಕ್ತಿರಸವನ್ನು ಚಿಮ್ಮಿಸಿ ಮೂರ್ತಿಯಲ್ಲಿ ದೈವತ್ವದ ಕಳೆಯನ್ನು ಬಿಂಬಿಸುತ್ತವೆ. ಇಂಥ ಸುಂದರ ಪ್ರತಿಮೆಗಳನ್ನು ನಿರ್ಮಿಸಲು ಶಿಲ್ಪಿಗಳಿಗೆ ತಾಲಮಾನ ಅರಿವು ಅಗತ್ಯವಾಗುತ್ತದೆ. ಮೂರ್ತಿಶಿಲ್ಪಶಾಸ್ತ್ರದ ಬಗೆಗೆ ತಿಳಿಯುವಲ್ಲಿ ತಾಳಮಾನದ ಜ್ಞಾನವಿರದಿದ್ದರೆ, ಶಾಸ್ತ್ರಜ್ಞಾನ ಅಪೂರ್ಣವೆನಿಸುತ್ತದೆ. (ವಿ.ಎಲ್.ಕೆ.)

ಲೋಹ ಶಿಲ್ಪ ತಯಾರಿಕೆ: ಹೀಗೆ ಮೂರ್ತಿಶಿಲ್ಪ ಶಾಸ್ತ್ರ ಮತ್ತು ಆಯಾಯ ಮೌಖಿಕ ಪರಂಪರೆಯಂತೆ ಶಿಲೆ, ಮರ ಮೊದಲಾದ ವಿವಿಧ ಮಾಧ್ಯಮ ಮೂರ್ತಿ ರೂಪಣ ಮಾಡುವುದರಲ್ಲಿ ಲೋಹ ಮೂರ್ತಿಗಳ ಸೃಷ್ಟಿಗೆ ಒಂದು ವಿಶಿಷ್ಟ ತಂತ್ರ ಮತ್ತು ವಿಧಾನವನ್ನು ಅನುಸರಿಸಲಾಗುತ್ತದೆ. ಇದಕ್ಕೆ ಮಧೂಚ್ಛಿಷ್ಟ ವಿಧಾನವೆಂದು ಹೆಸರು.

**ಮಧೂಚ್ಛಿಷ್ಟ ವಿಧಾನ:** ಭಾರತೀಯ ಕಲಾಪರಂಪರೆಯಲ್ಲಿ ಲೋಹ ಮೂರ್ತಿಗಳು, ಅದರಲ್ಲೂ ಪಂಚಲೋಹ ಮೂರ್ತಿಗಳು ವಿಶಿಷ್ಟ. ದೇವರ ಪೂಜೆಗಾಗಿ ಅವರ ಇಷ್ಟ ದೇವತೆಗಳ ಮೂರ್ತಿಗಳನ್ನು ತಯಾರಿಸಿ ಇಟ್ಟುಕೊಳ್ಳುತ್ತಿದ್ದರು. ಈ ಲೋಹಮೂರ್ತಿ ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹಗಳದ್ದಾಗಿದ್ದುವು. ಚಿನ್ನ, ಬೆಳ್ಳಿ ಬಹಳ ದುಬಾರಿಯಾಗಿದ್ದುದರಿಂದ, ತಾಮ್ರದ ವಿಗ್ರಹವನ್ನು ತಯಾರುಮಾಡುವಾಗ ಅದಕ್ಕೆ ಸ್ವಲ್ಪ ಪ್ರಮಾಣದಲ್ಲಿ ಚಿನ್ನ ಬೆಳ್ಳಿಗಳನ್ನು ಸೇರಿಸುವ ಸಂಪ್ರದಾಯ ಬಂತು. ತಾಮ್ರಕ್ಕೆ ಹೆಚ್ಚಿನ ಗಡುಸುತನ ನೀಡಲು ಅದಕ್ಕೆ ತವರವನ್ನು 8:1ರ ಅಂಶದಲ್ಲಿ ಸೇರಿಸುತ್ತಿದ್ದರು. ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಧಾತುವನ್ನು ಸೇರಿಸಿ ಪಂಚಲೋಹದ ಒಂದು ಧಾತುವನ್ನು ತಯಾರಿಸುತ್ತಿದ್ದರು. ಕರಗಿಸಿದ ಈ ಲೋಹವನ್ನು ಎರಕದ ಮೂಲಕ ನಿರ್ದಿಷ್ಟ ಸ್ವರೂಪಕ್ಕೆ ತರುತ್ತಿದ್ದರು. ಪೂಜಾ ಪವಿತ್ರವೆಂದು ಪರಿಗಣಿಸಿರುವ ಈ ಲೋಹದ ವಸ್ತುಗಳೇ ಪಂಚಲೋಹದ ವಸ್ತುಗಳು ಮತ್ತು ವಿಗ್ರಹಗಳು.

ಎರಕದ ಮೂಲಕ ಲೋಹವಸ್ತುಗಳನ್ನು ತಯಾರಿಸುವ ವಿಧಾನ ನಮ್ಮ ಪೂರ್ವಜರಿಗೆ ಬಹಳ ಹಿಂದಿನಿಂದಲೇ ತಿಳಿದಿತ್ತು. ಆದರೆ ಈ ವಿಧಾನದ ಒಂದು ಸ್ಪಷ್ಟ ನಿರೂಪಣೆ ಸು.1060ರ ಚಾಳುಕ್ಯ ಚಕ್ರವರ್ತಿ ಎರಡನೆಯ ಸೋಮೇಶ್ವರ ರಚಿಸಿದ ಅಭಿಲಷಿತಾರ್ಥ ಚಿಂತಾಮಣಿ ಅಥವಾ ಮಾನಸೋಲ್ಲಾಸ ಎಂಬ ಗ್ರಂಥದಲ್ಲಿದೆ. ಈ ವಿಧಾನಕ್ಕೆ ಮಧೂಚ್ಛಿಷ್ಟ ವಿಧಾನ ಎಂದೂ ಹೆಸರಿದೆ. ಮಧು ಅಂದರೆ ತಯಾರಿಸಬೇಕಾಗಿರುವ ಪೂಜಾಮೂರ್ತಿ ಅಥವಾ ವಸ್ತುವಿನ ತದ್ರೂಪವನ್ನು ಜೇನುಮೇಣದಲ್ಲಿ ತಯಾರಿಸಿಕೊಳ್ಳಬೇಕು. ಈ ಮೇಣದ ವಸ್ತು ಸಂಪೂರ್ಣವಾಗಿ ಮುಚ್ಚುವಂತೆ ಶುದ್ಧ ಮಣ್ಣನ್ನು ದಪ್ಪವಾಗಿ ಅದರ ಸುತ್ತಲೂ ಮೆತ್ತಬೇಕು. ಹಾಗೆಯೇ ಈ ಮಣ್ಣಿನ ಮುದ್ದೆಗೆ ಸೂಕ್ತ ಸ್ಥಳದಲ್ಲಿ ಮೇಣದ ವಸ್ತುವಿನಿಂದ ಮಣ್ಣಿನ ಮುದ್ದೆಯ ಹೊರ ಅಂಚಿನವರೆಗೂ ರಂಧ್ರಗಳನ್ನು ಮಾಡಬೇಕು. ಈ ಮಣ್ಣಿನ ಮುದ್ದೆಯನ್ನು ನೆರಳಿನಲ್ಲಿ ಚೆನ್ನಾಗಿ ಒಣಗಲು ಕೆಲವು ದಿನಗಳ ಕಾಲ ಬಿಡಬೇಕು. ತರುವಾಯ ಈ ಮಣ್ಣಿನ ಮುದ್ದೆಯನ್ನು ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಬೇಕು. ಇದರಿಂದ ಒಳಗಿನ ಮೇಣದ ಮೂರ್ತಿ ಅಥವಾ ವಸ್ತು ಸಂಪೂರ್ಣವಾಗಿ ಕರಗಿ ರಂಧ್ರಗಳ ಮುಖಾಂತರ ಹೊರಕ್ಕೆ ಹರಿದು ಬರುವುದು. ಮಣ್ಣಿನ ಮುದ್ದೆಯ ಒಳಭಾಗದಲ್ಲಿ ಮೇಣವಿದ್ದ ಕಡೆಗಳಲ್ಲೆಲ್ಲಾ ಶೂನ್ಯ ಸ್ಥಳವೇರ್ಪಡುವುದು. ಇದನ್ನೇ ಮಧೂಚ್ಛಿಷ್ಟ ವಿಧಾನವೆಂದು ಹೆಸರಿಸಿರುವುದು. ಈ ಮಣ್ಣಿನ ಮುದ್ದೆಯೊಳಕ್ಕೆ ಚೆನ್ನಾಗಿ ಕರಗಿ ನೀರಾದ ಲೋಹಧಾತುವನ್ನು ಸಂಪೂರ್ಣವಾಗಿ ನಿಧಾನವಾಗಿ ತುಂಬಿಕೊಳ್ಳುವಂತೆ ಸುರಿಯಬೇಕು. ಲೋಹ ಧಾತು ನಿಧಾನವಾಗಿ ಆರಿ ಗಟ್ಟಿಯಾಗುವ ತನಕ ಬಿಟ್ಟು ಅನಂತರ ಮಣ್ಣಿನ ಮುದ್ದೆಯನ್ನು ನಿಧಾನವಾಗಿ ಒಡೆದು ಚೂರುಮಾಡಿದರೆ, ಮೇಣದ ಮೂರ್ತಿಯ/ವಸ್ತುವಿನ ರೂಪದಲ್ಲೇ ಲೋಹದ ವಸ್ತುವೊಂದು ಕಾಣುತ್ತದೆ. ಈ ಲೋಹ ವಸ್ತುವಿಗೆ ಬೇಕಾದ ರೀತಿಯ ಸೂಕ್ಷ್ಮ ಅಲಂಕರಣೆ, ಕೆತ್ತನೆ ಮುಂತಾದವನ್ನು ಮಾಡಿ, ಒರಟು ಭಾಗಗಳನ್ನು ನಯ ಮಾಡಿ, ಬೇಕಾದ ರೀತಿಯಲ್ಲಿ ನಿರ್ದಿಷ್ಟ ಗಾತ್ರದ ಲೋಹದ ವಸ್ತುಗಳನ್ನು ತಯಾರಿಸಬಹುದು. (ಎಂ.ಎಸ್.ಕೆ.)

ಈ ರೀತಿ ಮೂರ್ತಿಶಿಲ್ಪ ಶಾಸ್ತ್ರ ಹಾಗೂ ಪ್ರಾದೇಶಿಕ ಜನಸಾಮಾನ್ಯರ ಪರಿಕಲ್ಪನೆಗಳಿಗನುಗುಣವಾಗಿ ಶಿಲೆ, ಲೋಹ, ಮರ ಮೊದಲಾದವುಗಳಲ್ಲಿ ರೂಪಿಸಿದ ದೈವಿಕ ಮತ್ತು ಲೌಕಿಕ ಶಿಲ್ಪಗಳಲ್ಲಿ ಕೆಲವು ಗಮನಾರ್ಹ ಹಾಗೂ ವಿಶಿಷ್ಟ ಸಂಗತಿಗಳಿವೆ. ಅವುಗಳಲ್ಲಿ ಮಹಾನಟ ಶಿವ, ಕುಬ್ಜಗಣಗಳು, ಕಾಷ್ಠ ಮತ್ತು ಗಾರೆಯ ವಿಶೇಷವಾಗಿ ಲೌಕಿಕ ಶಿಲ್ಪಗಳು ಗಮನಾರ್ಹ. ಶಿಲ್ಪಗಳು ಸಮಕಾಲೀನ ಸಮಾಜದ ಜನಸಾಮಾನ್ಯರ ಮಾದರಿ, ವೇಷ ಭೂಷಣ, ಅರ್ಥಗರ್ಭಿತ ಭಾವ-ಭಂಗಿ, ಕೇಶಾಲಂಕಾರ, ನಾನಾ ಪ್ರಕಾರಗಳ ಆಯುಧ ಪೀಠೋಪಕರಣಗಳು ಪರಂಪರಾನುಗತ ಪ್ರಚಲಿತ ಸಾಹಿತ್ಯಕ ದೃಶ್ಯ, ಧಾರ್ಮಿಕ ಸಂಪ್ರದಾಯ ಮೊದಲಾದ ಸಾಂಸ್ಕೃತಿಕ ಆಗರಗಳೆಂಬುದನ್ನು ತಮ್ಮ ತಮ್ಮ ಹಲವಾರು ಗ್ರಂಥಗಳಲ್ಲಿ ಕೆಲವು ದಶಕಗಳಿಂದ ತಜ್ಞರು ವಿವೇಚಿಸಿದ್ದಾರೆಯಷ್ಟೆ. ಆದರೆ ಇತ್ತೀಚೆಗೆ ಇಂಥ ಅಸಂಖ್ಯಾತ ಮೂರ್ತಿ ಸಂಕುಲಗಳನ್ನು ಹೊಸ ಹೊಸ ದೃಷ್ಟಿಕೋನಗಳಿಂದ ನೋಡಿ, ಇವುಗಳಲ್ಲಿ ಅಡಗಿರುವ ಇನ್ನೂ ಸೂಕ್ಷ್ಮ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಉದಾಹರಣೆ ಗರ್ಭಧಾರಣೆಯಿಂದ ಹಿಡಿದು ಹುಟ್ಟಿಬೆಳೆದು ಮನುಷ್ಯ ಮರಣವನ್ನಪ್ಪುವವರೆಗಿನ ಜೀವನದ ಅಪರೂಪದ ಹಂತಗಳನ್ನು ಸೂಚಿಸುವ ಜೀವನ ಚಕ್ರವನ್ನು, ಸಾಮಾನ್ಯವಾಗಿ ವಿವಿಧ ಭಂಗಿಗಳಲ್ಲಿಯ ಸ್ತ್ರೀ ಶಿಲ್ಪಗಳು ಕೇವಲ ನಾಟ್ಯ ಭಂಗಿಗಳಾಗಿರದೆ ಅವುಗಳಲ್ಲಿ ಸುಲಭ ಮತ್ತು ಸರಳ ವಿಧಾನಗಳಿಂದ ಕೆಲವು ರೋಗಗಳಿಗೆ ಚಿಕಿತ್ಸಾ ವಿಧಾನಗಳ ಮಾರ್ಮಿಕ ಸೂಚನೆಗಳಿರುವುದನ್ನು ಗುರುತಿಸಲು ತಜ್ಞರು ಪ್ರಯತ್ನಿಸಿದ್ದಾರೆ. ಶಾಸ್ತ್ರೇತರ ಇನ್ನೊಂದು ಪ್ರಕಾರದ ಶಿಲ್ಪಗಳೆಂದರೆ, ಸಮಾಜದಲ್ಲಿ ತಮ್ಮ ತ್ಯಾಗ ಬಲಿದಾನದಿಂದ ವಿಶಿಷ್ಟ ಧಾರ್ಮಿಕ ಹಾಗೂ ಇತರೆ ಕಾರ್ಯ-ಸಾಧನೆಗಳಿಂದ ಸಮಾಜಕ್ಕೆ ಮಾದರಿಯಾಗಿ, ಸ್ಫೂರ್ತಿ ನೆಲೆಯಾಗಿ ಪ್ರಾಣತ್ಯಾಗ ಮಾಡಿದವರನ್ನು ಸಮಾಜವು ಮನಃಪೂರ್ವಕವಾಗಿ ನೆನೆಸಿಕೊಂಡು ಅವರ ನೆನಪು ಶಾಶ್ವತವಾಗಿ ಉಳಿಯಬೇಕೆಂಬ ಕೃತಜ್ಞತಾ ಭಾವದಿಂದ ಮೂಡಿಸಿದ ಶಿಲ್ಪಗಳು, ಸುಮಾರು 2ನೆಯ ಶತಮಾನದಿಂದ ವಿಶೇಷವಾಗಿ ವಿಜಯನಗರ ಹಾಗೂ ಅನಂತರ ಕಾಲದಲ್ಲಿ ಇಂಥ ಶಿಲ್ಪಗಳು ಅಸಂಖ್ಯಾತವಾಗಿವೆ. ಈ ಪ್ರಕಾರದ ಶಿಲ್ಪಸೃಷ್ಟಿ ಕೇವಲ ಸಮಾಜದ ಒಳಿತಿಗೆ ಪ್ರಾಣಾರ್ಪಣೆ ಮಾಡಿದ ಮಾನವರಿಗಲ್ಲದೆ ನಾಯಿ ಮೊದಲಾದ ಪ್ರಾಣಿಗಳಿಗೂ ಅಪರೂಪವಾಗಿ ಇಂಥ ಸ್ಮಾರಕ ಶಿಲೆಯನ್ನು ನಿಲ್ಲಿಸಲಾಗುತ್ತಿತ್ತು. ಇವೆಲ್ಲವನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ.

ನಿತ್ಯ ಜೀವನದಲ್ಲಿ ಬಾಲ್ಯಾವಸ್ಥೆಯ ಆಟ-ಪಾಠ-ಚೇಷ್ಟೆ ಮೊದಲಾದ ಸ್ವಾರಸ್ಯಕರ ಲೌಕಿಕ ವಿಷಯ ಪ್ರಧಾನವಾದ ಕುಬ್ಜಗಣ ಶಿಲ್ಪ ಸಮೂಹ ಇತಿಹಾಸದ ಆದಿ ಶತಮಾನಗಳಲ್ಲಿ (8ನೆಯ ಶತಮಾನದವರೆಗೆ) ವಿಶೇಷವಾಗಿ ಕಂಡುಬರುತ್ತವೆ. ಈ ಶಿಲ್ಪಗಳು ಹಾಸ್ಯಮಯವಾಗಿರುತ್ತವೆ. ಅನಂತರದ ಶತಮಾನಗಳಲ್ಲಿ ಈ ವರ್ಗದ ಶಿಲ್ಪಗಳು ಕಾಣಿಸಿಕೊಳ್ಳುವುದೇ ಇಲ್ಲ. ಎಂಥ ಗಂಭೀರ ಸ್ಥಿತಿಯಲ್ಲೂ ಈ ಗಿಡ್ಡಾಕೃತಿಯ ಬೊಜ್ಜು ಮೈಯ ಗಣಗಳ ಭಾವ ಭಂಗಿಗಳು, ಕುಣಿತ ನಗೆಯನ್ನು ಮೂಡಿಸದೆ ಇರುವುದಿಲ್ಲ. ಕಾಷ್ಠ-ಗಾರೆಯನ್ನು ಮಾಧ್ಯಮವಾಗಿ ಮಾಡಿಕೊಂಡು ಶಿಲ್ಪ ಶ್ರೀಮಂತಿಕೆಯನ್ನು ವೃದ್ಧಿಪಡಿಸಿದುದು, ಪ್ರಾಚೀನ ಗಾಂಧಾರ ಪ್ರದೇಶವನ್ನು ಹೊರತುಪಡಿಸಿ, ಬಹುಮಟ್ಟಿಗೆ ವಿಜಯನಗರ ಕಾಲದಿಂದ. ಇವುಗಳಲ್ಲಿ ಆಯಾಯ ಪ್ರದೇಶದ ಜನಸಾಮಾನ್ಯರ ಪರಂಪರಾನುಗತ ನಂಬಿಕೆಗಳ ಮೇಲಿಂದ ರೂಪಿಸಿದ ಶಿಲ್ಪಗಳು ಈ ಮಾಧ್ಯಮಗಳಲ್ಲಿ ದೊರೆಯುವಷ್ಟು ಇತರ ಮಾಧ್ಯಮಗಳಲ್ಲಿ ವಿಜಯನಗರ ಪೂರ್ವದಲ್ಲಿ ಕಾಣಬರುವುದಿಲ್ಲ.

ಮೂರ್ತಿಶಿಲ್ಪವನ್ನು ಹೊಸ ದೃಷ್ಟಿಕೋನಗಳಿಂದ ನೋಡುವ ಅಗತ್ಯವಿದೆ. (ಎ.ಎಸ್.)

**ನಾಟ್ಯಶಾಸ್ತ್ರ:** ಭರತ ಮುನಿಯಿಂದ ಸಂಗ್ರಹಿತವಾದ ಗ್ರಂಥ. ಇವನ ವೈಯಕ್ತಿಕ ಜೀವನದ ಬಗ್ಗೆ ಏನೂ ತಿಳಿದು ಬಂದಿಲ್ಲ. ಇವನ ಗ್ರಂಥದ ಕಾಲಮಾನವೂ ವಿವಾದಾಸ್ಪದವಾಗಿದೆ. ತಜ್ಞರ ಪ್ರಕಾರ ಪ್ರ.ಶ.ಪೂ.ಸು.300 ರಿಂದ 4ನೆಯ ಶತಮಾನ. ಈ ಗ್ರಂಥದ ಮಹತ್ವವನ್ನು ಕರ್ತೃ ಹೀಗೆ ಹೇಳಿದ್ದಾನೆ:

ಧರ್ಮ್ಯಮರ್ಥ್ಯಂ ಯಶಸ್ಯಂ ಚ ಸೋಪದೇಶಸ್ಯಸಂಗ್ರಹಮ್ ।
ಭವಿಷ್ಯತಶ್ಚ ಲೋಕಸ್ಯ ಸರ್ವಕರ್ಮಾನುದರ್ಶಕಮ್
ಸರ್ವಶಾಸ್ತ್ರಾರ್ಥಸಂಪನ್ನಂ ಸರ್ವಶಿಲ್ಪವಿಶಾರದಮ್
ನಾಟ್ಯಾಖ್ಯಂ ಪಂಚಮಂ ವೇದಂ ಸೇತಿಹಾಸಂ ಕರೋಮ್ಯಹಮ್ ( 1–14,15)

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಕುರಿತು ಜ್ಞಾನಕೊಡುವ ಪುರಾತನ ಕಥೆಗಳನ್ನೂ ಈ ಬಗೆಯ ಸಾಹಿತ್ಯರಚನೆಗಳನ್ನೂ ಇತಿಹಾಸ ಎನ್ನುವರು. ಅದನ್ನು ಪಂಚಮ ವೇದವೆಂದು ಕರೆಯಲಾಗುತ್ತಿತ್ತು. ಇತಿಹಾಸಯುಕ್ತವಾದ್ದರಿಂದಲೇ ನಾಟ್ಯಶಾಸ್ತ್ರ ಪಂಚಮವೇದವೆಂದು ಖ್ಯಾತಿಗೊಂಡಿದೆ.

ನಾಟ್ಯ ಪೂರ್ವದಲ್ಲಿ ಸಮ್ಮಿಶ್ರಕಲೆಯಾಗಿತ್ತು. ಲಲಿತಕಲೆಗಳ ಗಣಿಯೆಂದೇ ಪ್ರಖ್ಯಾತವಾಗಿರುವ ಇದರಲ್ಲಿ ನೃತ್ಯ, ಸಂಗೀತ, ಸಾಹಿತ್ಯ, ನಾಟಕ, ಚಿತ್ರಕಲೆ, ವಾಸ್ತುಶಿಲ್ಪ ಎಲ್ಲವೂ ಅಡಕವಾಗಿತ್ತು. ಅವು ಯಾವ ರೀತಿ ಇದ್ದವು ಮತ್ತು ಯಾವ ರೀತಿಯಾಗಿರಬೇಕೆಂಬುದನ್ನೂ ತಿಳಿಸುವುದೇ ನಾಟ್ಯಶಾಸ್ತ್ರ.

ಪ್ರಾಚೀನ ಭಾರತದಲ್ಲಿ ರೂಢಿಯಲ್ಲಿದ್ದ ನಾಟ್ಯ ಸಂಸ್ಕೃತಿಯ ಅಧ್ಯಯನ ನಮಗೆ ನಾಟ್ಯಶಾಸ್ತ್ರದಿಂದ ಸಾಧ್ಯವಾಗಿದೆ. ವಿಚಾರ ವೈಶಾಲ್ಯದಿಂದಲೂ ವಿಷಯಗಳ ಸಮಗ್ರತೆಯಿಂದಲೂ ನಾಟ್ಯಶಾಸ್ತ್ರ ಒಂದು ಪರಿಪೂರ್ಣಗ್ರಂಥವಾಗಿದೆ. ಪ್ರಾಚೀನ ಭಾರತೀಯ ನಾಟ್ಯಕಲೆಯ ಸ್ವರೂಪ, ತತ್ತ್ವ, ಪ್ರಕೃತಿಗಳನ್ನು ತಿಳಿಯಲು ದೊರೆಯುವ ಏಕಮಾತ್ರ ಸಾಧನವಾಗಿದೆ. ಲಲಿತಕಲೆಗಳ ವಿಸ್ತೃತವಿವರಣೆಯನ್ನು ಒಳಗೊಂಡ ವಿಶ್ವಕೋಶವಾಗಿದೆ. ಲೋಕರೂಢಿಯಲ್ಲಿ ಭರತನೇ ನಾಟ್ಯಶಾಸ್ತ್ರದ ರಚನಾಕಾರ ಎಂಬ ಮಾನ್ಯತೆ ಇದ್ದರೂ, ಭರತಮುನಿ ಎಂಬುವನೇ ಇದರ ಕರ್ತೃ ಎಂಬುದಕ್ಕೆ ಸ್ಪಷ್ಟ ಆಧಾರಗಳು ಇದುವರೆಗೆ ದೊರೆತಿಲ್ಲ. ಭಾರತೀಯ ಇತಿಹಾಸ ಪುರಾಣಗಳಲ್ಲಿ

ಅನೇಕ ಭರತರ ಉಲ್ಲೇಖಗಳು ದೊರಕಿದರೂ ನಾಟ್ಯಶಾಸ್ತ್ರದ ಭರತಮುನಿ ಇವರೆಲ್ಲರಿಗಿಂತ ಭಿನ್ನ ಎಂಬುದು ಸಾರ್ವತ್ರಿಕವಾಗಿ ಅಂಗೀಕೃತ ವಿಷಯವಾಗಿದೆ. ನಾಟ್ಯಶಾಸ್ತ್ರದ ಕವಿ-ಕಾಲಗಳ ಬಗೆಗೆ ಅಧ್ಯಯನ, ಚರ್ಚೆ, ವಾದಗಳು ಇಂದಿಗೂ ನಡೆದಿವೆ.

ಕವಿ ಕಾಲ ಪರಿಚಯ: ವೇದಗಳಲ್ಲಿ ನಾಟ್ಯದ ವರ್ಣನೆ ದೊರಕುತ್ತದೆ. ವೈದಿಕ ಆಚರಣೆಗಳಲ್ಲಿ, ಯಜ್ಞಯಾಗಾದಿಗಳಲ್ಲಿ, ಉತ್ಸವ, ಸಮಾರಂಭಗಳಲ್ಲಿ ನಾಟ್ಯ ಪ್ರಸ್ತುತವಾಗುತ್ತಿದ್ದುದು ತಿಳಿದುಬರುತ್ತದೆ.

ನಾಟ್ಯಶಾಸ್ತ್ರ ಗ್ರಂಥಕ್ಕಿಂತ ಮೊದಲು ಭರತನ ಪೂರ್ವದಲ್ಲಿ ಶಿಲಾಲಿ ಮತ್ತು ಕೃಶಾಶ್ವರೆಂಬುವರಿಂದ ನಟಸೂತ್ರಗಳು ರಚನೆಯಾಗಿತ್ತೆಂದು ಪಾಣಿನಿ ಮಹರ್ಷಿ ತಿಳಿಸುತ್ತಾನೆ. ಪತಂಜಲಿ ಸಹ ನಟಸೂತ್ರಗಳ ಬಗೆಗೆ ಉಲ್ಲೇಖಿಸುತ್ತಾನೆ. ಶಿಲಾಲಿ, ಕೃಶಾಶ್ವರಲ್ಲದೆ ಇನ್ನೂ ಅನೇಕ ಲೇಖಕರಿಂದ ಈ ವಿಷಯದ ಮೇಲೆ ರಚನೆಗಳಾಗಿತ್ತು ಎಂದು ತಿಳಿದುಬರುತ್ತದೆ. ಈ ಎಲ್ಲ ಹಿನ್ನೆಲೆಯಲ್ಲಿ ಹಾಗೂ ವಿದ್ವಾಂಸರ ಚರ್ಚೆಯ ಆಧಾರದಲ್ಲಿ ಹೀಗೆ ಹೇಳಬಹುದಾಗಿದೆ:

ನಾಟ್ಯಶಾಸ್ತ್ರಕ್ಕಿಂತ ಮೊದಲು ನಾಟ್ಯಕ್ಕೆ ಸಂಬಂಧಪಟ್ಟಂತೆ ಉತ್ತಮ ಶಾಸ್ತ್ರಗ್ರಂಥಗಳು ರಚನೆಯಾಗಿದ್ದಿರಬೇಕು. ಅವುಗಳ ಆಧಾರದ ಮೇಲೆಯೇ ಇಂದು ನಮಗೆ ದೊರೆತಿರುವ ನಾಟ್ಯಶಾಸ್ತ್ರವೂ ರಚನೆಯಾಗಿದ್ದಿರಬೇಕು. ಇಲ್ಲಿ ವಿಶ್ಲೇಷಿತ ವಿಷಯಗಳು ವ್ಯಕ್ತಿಗತವಿಚಾರವಾಗಿರದೆ, ಸಾಂಘಿಕ ಮಂಥನದ ವಿಚಾರಗಳೆಂದು ಒಪ್ಪಬಹುದಾಗಿದೆ. ಅಂತೆಯೇ ಇದರ ಕಾಲ (ಎಲ್ಲ ವಾದ-ಚರ್ಚೆಗಳನ್ನು ಅನುಲಕ್ಷಿಸಿ) ಪ್ರ.ಶ.ಪೂ.ಸು. 3-5ನೆಯ ಶತಮಾನದ ಕಾಲಘಟ್ಟವಾಗಿರಬಹುದೆಂದು ಸ್ಥೂಲವಾಗಿ ಹೇಳಬಹುದು.

5ನೆಯ ಶತಮಾನದ ಅನಂತರ ದೊರೆಯುವ ಎಲ್ಲ ಭಾರತೀಯ ಭಾಷೆಗಳ ಸಾಹಿತ್ಯ ರಚನೆಗಳಲ್ಲಿ, ಭರತನ ನಾಟ್ಯಶಾಸ್ತ್ರದ ಉಲ್ಲೇಖ ದೊರಕುತ್ತದೆ. ಇದಕ್ಕೆ ಶಾಸನಗಳೂ ಹೊರತಾಗಿಲ್ಲ. ತದನಂತರದಲ್ಲಿ ಸಂಸ್ಕೃತವಲ್ಲದೆ ಇತರ ಎಲ್ಲ ಭಾಷೆಗಳಲ್ಲಿಯೂ ನಾಟ್ಯಶಾಸ್ತ್ರವನ್ನು ಆಧರಿಸಿಯೇ ಕಾವ್ಯ, ನಾಟಕಗಳು ರಚನೆಯಾಗಿವೆ. ಅದರಲ್ಲಿಯೂ ಸಂಸ್ಕೃತ ಭಾಷೆಯಲ್ಲಿ ಇದರ ಅಡಿಜಾಡಿನಲ್ಲಿಯೇ ಅಸಂಖ್ಯ ರಚನೆಗಳಾಗಿವೆ. ಆದರೆ ನಾಟ್ಯಶಾಸ್ತ್ರದ ಆಳ-ಹರಿವು-ವ್ಯಾಪ್ತಿ ಮೀರುವ ಇನ್ನೊಂದು ರಚನೆ ಕಂಡುಬರುವುದಿಲ್ಲ. ಕೆಲವು ಇತರ ಮುಖ್ಯವಾದ ರಚನೆಗಳು ಹೀಗಿವೆ: ವಿಷ್ಣುಧರ್ಮೋತ್ತರಪುರಾಣ (5ನೆಯ ಶತಮಾನ), ಅಗ್ನಿಪುರಾಣ, ಅಭಿನವಗುಪ್ತನ ಅಭಿನವಭಾರತೀ ನಾಟ್ಯಶಾಸ್ತ್ರದ ಮೇಲಿನ ಏಕೈಕ ಉಪಲಬ್ಧ ವ್ಯಾಖ್ಯಾನ. ಇದರ ಆಧಾರವಿಲ್ಲದೆ ಇಂದು ನಾಟ್ಯಶಾಸ್ತ್ರದ ಅಧ್ಯಯನ ಸಾಧ್ಯವಿಲ್ಲವೆಂಬುವಷ್ಟರ ಮಟ್ಟಿಗೆ ಇದು ಪರಿಪೂರ್ಣ ಗ್ರಂಥವಾಗಿದೆ. ಇದರ ಕಾಲ ಸು.10ನೆಯ ಶತಮಾನ. ಇಂದಿಗೆ ಪ್ರಚಲಿತವಿರುವ ನೃತ್ಯಗಳಿಗೆ ಬಹುಮಟ್ಟಿಗೆ ಅಭಿನಯದರ್ಪಣವೇ ಆಧಾರಗ್ರಂಥ. ಧನಂಜಯನ ದಶರೂಪಕ (10ನೆಯ ಶತಮಾನ), ಭೋಜರಾಜನ ಶೃಂಗಾರಪ್ರಕಾಶ, ಸಾಗರನಂದಿಯ ನಾಟಕ ಲಕ್ಷಣರತ್ನಕೋಶ, ಶಾರದಾತನಯನ ಭಾವಪ್ರಕಾಶನ, ಭಾನುದತ್ತನ ರಸಮಂಜರೀ ಸೋಮೇಶ್ವರನ ಮಾನಸೋಲ್ಲಾಸ (12ನೆಯ ಶತಮಾನ), ಶಾರ್ಙ್ಗದೇವನ ಸಂಗೀತರತ್ನಾಕರ (12ನೆಯ ಶತಮಾನ), ಜಾಯಪ ಸೇನಾಪತಿಯ ನೃತ್ತರತ್ನಾವಲಿ, ಅಶೋಕಮಲ್ಲನ ನೃತ್ತಾಧ್ಯಾಯ, ರಾಮಚಂದ್ರ ಗುಣಚಂದ್ರರ ನಾಟ್ಯದರ್ಪಣ, ಪುಂಡರೀಕವಿಠಲನ ನರ್ತನ ನಿರ್ಣಯ, ಹಾಗೆಯೇ ಸಂಗೀತ ಚೂಡಾಮಣಿ, ಸಂಗೀತ ದರ್ಪಣ, ಸಂಗೀತ ಮುಕ್ತಾವಳಿ, ಲಾಸ್ಯರಂಜನ -ಹೀಗೆ ಇನ್ನು ಅನೇಕಾನೇಕ ಶಾಸ್ತ್ರಗ್ರಂಥಗಳಿವೆ.

ಆದರೆ ಸು.19ನೆಯ ಶತಮಾನದ ಹೊತ್ತಿಗೆ ಬಹುಮಟ್ಟಿಗೆ ಸಾಮಾನ್ಯ ಜನರ ತಿಳುವಳಿಕೆಯಿಂದ ಮರೆಯಾಗಿ ಹೋಗಿದ್ದ ನಾಟ್ಯಶಾಸ್ತ್ರವನ್ನು ಪುನಃ ಗಮನಕ್ಕೆ ತಂದ ಶ್ರೇಯಸ್ಸು ಪಾಶ್ಚಾತ್ಯರಿಗೆ ಸಲ್ಲುತ್ತದೆ. 1827ರಲ್ಲಿ ಹೆಚ್.ಹೆಚ್. ವಿಲ್ಸನ್ ಎಂಬುವರು ಮೊದಲಿಗೆ ಕೆಲವು ಹಸ್ತಪ್ರತಿಗಳಲ್ಲಿ ಇದನ್ನು ಪ್ರದರ್ಶಿಸಿದರು. 1894ರಲ್ಲಿ ಮುಂಬೈ ಕಾವ್ಯಮಾಲಾ ಪ್ರಕಾಶನದಿಂದ ನಾಟ್ಯಶಾಸ್ತ್ರದ ಕೆಲವೊಂದು ಹಸ್ತಪ್ರತಿಗಳು ಬೆಳಕು ಕಂಡವು. 1926ರಲ್ಲಿ ವಡೋದರದ ಗಾಯಕವಾಡ್ ಪ್ರಾಚ್ಯ ವಿದ್ಯಾಸಂಸ್ಥೆಯ 1-13 ಅಧ್ಯಾಯಗಳನ್ನು ಸಂಪಾದಕೀಯ ದೊಡನೆ ಪ್ರಕಟಿಸಿತು. ಮುಂದೆ 1929ರಲ್ಲಿ ಕಾಶಿಸಂಸ್ಕೃತಮಾಲಿಕೆ ಮತ್ತೊಂದು ಪ್ರಕಟಣೆಯನ್ನು ಹೊರತಂದಿತು. 1951ರಲ್ಲಿ ಕಲ್ಕತ್ತದ ಏಷ್ಯಾಟಿಕ್ ಸೊಸೈಟಿ, 2 ಸಂಪುಟಗಳಲ್ಲಿ ಎಲ್ಲ ಅಧ್ಯಾಯಗಳ ಅಧ್ಯಯನ - ಸಂಶೋಧನ ಸಂಪೂರ್ಣ ಭಾಷಾಂತರವನ್ನು ಪ್ರಕಟಿಸಿತು. ಇಲ್ಲಿಂದ ಮುಂದೆ ಅನೇಕ ಪ್ರತಿಷ್ಠಿತ ಸಂಸ್ಥೆಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನೆ, ಭಾಷಾಂತರ, ಸಂಪಾದಕೀಯ, ವ್ಯಾಖ್ಯಾನಗಳನ್ನು ಪ್ರಕಟಿಸುತ್ತಲೇ ಬಂದಿವೆ. ನಾಟ್ಯಶಾಸ್ತ್ರದ ಅಧ್ಯಯನ ನಿರಂತರವಾಗಿ ಸಾಗಿದೆ.

ನಾಟ್ಯಶಾಸ್ತ್ರದ ಸ್ವರೂಪ: ನಾಟ್ಯಶಾಸ್ತ್ರ ಪ್ರಶ್ನೋತ್ತರಶೈಲಿಯಲ್ಲಿ ರಚನೆಯಾಗಿದೆ. ಋಷಿಗಳು ಕೇಳುವ ಪ್ರಶ್ನೆಗಳಿಗೆ ವಿಷಯಗಳ ಪ್ರಸ್ತಾವನೆ ಹಾಗೂ ವಿವರಣೆಯ ರೂಪದಲ್ಲಿ ಉತ್ತರಗಳನ್ನು ಕೊಡುತ್ತಿರುವಂತೆ ಸಂವಾದ ರೂಪದಲ್ಲಿದೆ. ಇಂದು ಉಪಲಬ್ಧವಿರುವ ನಾಟ್ಯಶಾಸ್ತ್ರ ಸುಮಾರು ಆರು ಸಾವಿರ ಶ್ಲೋಕಗಳಷ್ಟು ವಿಸ್ತೃತವಾಗಿದೆ. ಶಾರದಾತನಯನು (13ನೆಯ ಶತಮಾನ) ತನ್ನ ಭಾವಪ್ರಕಾಶನದಲ್ಲಿ ಇದು ಮೊದಲಿಗೆ 12 ಸಾವಿರ ಶ್ಲೋಕಗಳ ಗ್ರಂಥವೆಂದೂ ನಂತರದಲ್ಲಿ 6 ಸಾವಿರ ಶ್ಲೋಕಗಳಿಗೆ ಸಂಕ್ಷೇಪಗೊಂಡಿತೆಂದೂ ತಿಳಿಸುತ್ತಾನೆ. ಈ ಆರುಸಾವಿರ ಶ್ಲೋಕಗಳು 36 ಅಧ್ಯಾಯಗಳಲ್ಲಿ ಹಂಚಿಹೋಗಿವೆ. (ಕೆಲವು ವಿದ್ವಾಂಸರು 37 ಅಧ್ಯಾಯಗಳಿವೆ ಎಂದು ಹೇಳುತ್ತಾರೆ.)

ಅಧ್ಯಾಯಗಳ ವಿಂಗಡಣೆ: 1 ರಿಂದ 36: 1.ನಾಟ್ಯೋತ್ಪತ್ತಿ. 2.ನಾಟ್ಯಗೃಹ ನಿರ್ಮಾಣ 3.ರಂಗದೈವತಪೂಜೆ. 4.ತಾಂಡವ ನೃತ್ತ ಲಕ್ಷಣ 5.ಪೂರ್ವರಂಗ. 6.ರಸಗಳು. 7.ಭಾವಗಳು. 8.ಉಪಾಂಗಾಭಿನಯ. 9.ಹಸ್ತಾಭಿನಯ. 10.ಶರೀರಾಭಿನಯ. 11.ಚಾರೀವಿಧಾನ. 12.ಮಂಡಲವಿಧಾನ. 13.ಗತಿಪ್ರಚಾರ. 14.ಪ್ರವೃತ್ತಿ-ಧರ್ಮೀ ವಿವರಣೆ. 15.ಛಂದೋವಿಧಾನ. 16.ಛಂದೋವಿಚಿತಿ. 17.ಅಲಂಕಾರ ಲಕ್ಷಣಗಳು. 18.ಭಾಷಾವಿಧಾನ. 19.ಕಾಕುಸ್ವರವ್ಯಂಜಕ. 20.ದಶರೂಪವಿಧಾನ. 21.ಸಂಧ್ಯಂಗವಿಕಲ್ಪ. 22.ವೃತ್ತಿ ವಿಕಲ್ಪ. 23.ಆಹಾರ್ಯಾಭಿನಯ. 24.ಸಾಮಾನ್ಯಾಭಿನಯ. 25.ಬಾಹ್ಯೋಪಚಾರ. 26.ಚಿತ್ರಾಭಿನಯ. 27.ಸಿದ್ಧಿವ್ಯಂಜಕ. 28.ಜಾತಿಲಕ್ಷಣ. 29.ಆತೋದ್ಯವಿಧಾನ. 30.ಸುಷಿರಾತೋದ್ಯ. 31.ತಾಲವಾದ್ಯ. 32.ಧ್ರುವಾಗೀತಗಳು. 33.ಪುಷ್ಕರವಾದ್ಯಗಳು. 34.ಪಾತ್ರಗಳ ಪ್ರಕಾರಗಳು. 35.ಪಾತ್ರವಿನಿಯೋಗ. 36.ನಾಟ್ಯದ ಅವತರಣ.

ನಾಟ್ಯಶಾಸ್ತ್ರದ ಸಾರಾಂಶ: ಮೊದಲನೆಯ ಅಧ್ಯಾಯ ನಾಟ್ಯೋತ್ಪತ್ತಿ. ಇಲ್ಲಿ ನಾಟ್ಯದ ಉತ್ಪತ್ತಿ ಹೇಗಾಯಿತೆಂಬ ವಿವರಗಳಿವೆ. ಕೃತಯುಗದ ಕೊನೆಗೆ ದೇವತೆಗಳೆಲ್ಲರೂ ಬ್ರಹ್ಮನಲ್ಲಿಗೆ ಹೋಗಿ ತಮಗೆ ಆಹ್ಲಾದಕರ ವಾತಾವರಣದಲ್ಲಿ ಸ್ವಲ್ಪ ಸಮಯವನ್ನು ಕಳೆಯಲು ಮನೋರಂಜನೆಗಾಗಿ ಏನನ್ನಾದರೂ ಸೃಷ್ಟಿಸಬೇಕೆಂದು ಕೇಳಿಕೊಂಡಾಗ ಬ್ರಹ್ಮನು ಋಗ್ವೇದದಿಂದ ವಾಚಿಕವನ್ನು, ಯಜುರ್ವೇದದಿಂದ ಆಂಗಿಕವನ್ನು, ಅಥರ್ವಣವೇದದಿಂದ ರಸವನ್ನು, ಸಾಮವೇದದಿಂದ ಸಂಗೀತ ಹಾಗೂ ನಾಟ್ಯವನ್ನು ಪಂಚಮವೇದವನ್ನಾಗಿ ತೆಗೆದುಕೊಂಡು ಸೃಷ್ಟಿಮಾಡಿ ಅದನ್ನು ಭರತಮುನಿಗೆ ಬೋಧಿಸಿ, ಆತ ಅವನ ನೂರು ಮಕ್ಕಳಿಗೆ ಇದನ್ನು ಕಲಿಸಿ ಪ್ರದರ್ಶಿಸಬೇಕೆಂದು ಆಜ್ಞೆ ಇತ್ತ. ಅದರಂತೆ ಇಂದ್ರನ ಧ್ವಜೋತ್ಸವದ ಸಂದರ್ಭದಲ್ಲಿ ದೇವತೆಗಳು ಮಾನವರು, ಋಷಿಗಳು ಮತ್ತು ಅಸುರರ ಮುಂದೆ ಅಮೃತಮಂಥನ ನಾಟ್ಯವನ್ನು ಭರತನು ಪ್ರದರ್ಶಿಸಿದನು. ದೇವತೆಗಳು ಬಹಳ ಸಂತೋಷಗೊಂಡು ಅನೇಕ ಪಾರಿತೋಷಕಗಳನ್ನು ನೀಡಿದರು. ಆದರೆ ಅಸುರರು ಬಹಳ ರೊಚ್ಚಿಗೆದ್ದು ತಮಗೆ ಅವಮಾನವಾಗಿದೆಯೆಂದು ಅನೇಕ ವಿಘ್ನಗಳನ್ನೊಡ್ಡಿದ್ದರು. ಪ್ರದರ್ಶನ ಹೀಗೆ ಅಪೂರ್ಣವಾಗಲು ಬ್ರಹ್ಮನು ಎಲ್ಲರಿಗೂ ಸಮಾಧಾನ ಹೇಳಿ ನಾಟ್ಯವೇದವು ಸಹೃದಯಪ್ರೇಕ್ಷಕನ ಮನೋರಂಜನೆಗಾಗಿ ಸೃಷ್ಟಿಯಾಗಿದೆ, ಅದರಂತೆಯೇ ಅದು ಉಪಯೋಗವಾಗಬೇಕೆಂದು ತಿಳಿಸಿದ. ಇವೆಲ್ಲ ಭರತನಿಂದ ಕ್ರೋಡೀಕೃತವಾಯಿತು. ನಾಟ್ಯಶಾಸ್ತ್ರವೇ ತಿಳಿಸುವಂತೆ ಇಲ್ಲಿಲ್ಲದ ಕಲೆಯಾಗಲಿ, ಶಿಲ್ಪವಾಗಲಿ, ವಿದ್ಯೆಯಾಗಲಿ, ಶಾಸ್ತ್ರವಾಗಲಿ, ಕರ್ಮವಾಗಲಿ, ಯೋಗವಾಗಲಿ, ಮತ್ತೊಂದು ಕಡೆ ಕಾಣಸಿಗದು. ಅಕ್ಷರಶಃ ಈ ವಾಕ್ಯಗಳಿಗೆ ಅನ್ವರ್ಥವೆಂಬಂತೆ ಇದು ಒಂದು ಮಹಾನ್ ವಿಶ್ವಕೋಶವೇ ಆಗಿದೆ.

ನೃತ್ತ-ನೃತ್ಯ-ನಾಟ್ಯ: ನಾಟ್ಯ ಪದವು ನಟ್ ಧಾತುವಿನಿಂದ ಬಂದಿದೆ. ನಟ್ ಎಂಬುದು ನೃತು ಧಾತುವಿನ ಪ್ರಾಕೃತರೂಪ. ನೃತು ಅಥವಾ ನಟ್ ಎಂದರೆ ಕುಣಿತ ಎಂದು ಅರ್ಥ, ಆದ್ದರಿಂದ ನೃತ್ತ, ನೃತ್ಯ, ನಾಟ್ಯ, ನಾಟಕ ಈ ಎಲ್ಲ ಪದಗಳ ಅರ್ಥ ಕುಣಿತ ಎಂದೇ ಆಗುತ್ತದೆ. ಇವೆಲ್ಲದರಲ್ಲಿ ಕುಣಿತ ಇದೆ. ಆದರೆ ಇವುಗಳಲ್ಲಿ ಪರಸ್ಪರ ವ್ಯತ್ಯಾಸವೂ ಇದೆ. ನೃತ್ತ ಕೇವಲ ತಾಳ ಲಯಕ್ಕೆ ಅನುಗುಣವಾಗಿ ಬರುವ ಕುಣಿತ. ಇಲ್ಲಿ ಕುಣಿತಕ್ಕೆ ಯಾವುದೇ ಪ್ರತ್ಯೇಕವಾದ ಅರ್ಥವಿಲ್ಲ. ತಾಲ-ಲಯಪ್ರಧಾನ. ನೃತ್ಯ ಹಾಡುವ ಸಂಗೀತ ಮತ್ತು ಸಾಹಿತ್ಯಕ್ಕೆ ತಕ್ಕಂತೆ ತಾಲ-ಲಯಪ್ರಮಾಣದಲ್ಲಿ ಅಭಿನಯಪೂರ್ವಕವಾಗಿ ನರ್ತಿಸುವುದಾಗುತ್ತದೆ. ಇಲ್ಲಿ ಭಾವ-ಅಭಿನಯಗಳಿಗೆ ಪ್ರಾಧಾನ್ಯ (ಅಭಿನಯ ಎಂದರೆ ತಾನು ತಿಳಿದಿದ್ದನ್ನು ಇನ್ನೊಬ್ಬರೆಡೆಗೆ ಪಸರಿಸುವುದು, ತಲುಪಿಸುವುದು, ಮುಟ್ಟಿಸುವುದೆಂದು ಸ್ಥೂಲವಾಗಿ ಹೇಳಬಹುದು). ಹಾಗೆಯೇ ನರ್ತಿಸುವಾಗ ಅನೇಕ ರೀತಿಯ ಚಲನೆಗಳನ್ನು ಮಾಡುತ್ತಾ ಪ್ರದರ್ಶನ ನೀಡಬೇಕಾಗುತ್ತದೆ. ಇದನ್ನು ದೇಹದ ಅಂಗೋಪಾಂಗ ಚಲನೆಗಳು ಎನ್ನುತ್ತಾರೆ. ಇವೆಲ್ಲ ಚಲನೆಗಳಿಗೂ ಶಾಸ್ತ್ರದ ಚೌಕಟ್ಟಿದೆ. ಈ ಶಾಸ್ತ್ರೀಯತೆಯನ್ನು ಮಾರ್ಗ ಎನ್ನುತ್ತಾರೆ. ವ್ಯಕ್ತಿ ತನ್ನಲ್ಲಿ ಬೆಳೆಸಿಕೊಂಡ ಪ್ರೌಢಿಮೆಯನ್ನು, ಒಂದು ಕಲೆಯಲ್ಲಿ ತನಗಿರುವ ಪಾಂಡಿತ್ಯವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಪ್ರದರ್ಶಿಸುವುದೇ ಮಾರ್ಗವಾಗುತ್ತದೆ. ಸಂಭ್ರಮದಿಂದ ಎಲ್ಲರೊಡನೆ ಸೇರಿ ತನ್ನ ಅನುಭವವನ್ನು ಎಲ್ಲರೊಡನೆ ಹಂಚಿಕೊಂಡು ಉತ್ಸಾಹದಲ್ಲಿ ಕುಣಿದು ಇನ್ನೊಬ್ಬರೂ ಕುಣಿಯುವಂತೆ ಮಾಡುವುದು ದೇಶಿಯಾಗುತ್ತದೆ. ವ್ಯಕ್ತಿಗತ ಪ್ರದರ್ಶನ ಮಾರ್ಗವಾದರೆ ಸಾಂಘಿಕ ಚಟುವಟಿಕೆ ದೇಶಿಯಾಗುತ್ತದೆ. ನಾಟ್ಯ ಎಂಬುದು ಒಬ್ಬ ವ್ಯಕ್ತಿಯ ಅನುಕರಣ. ಕಲಾವಿದ ಅಥವಾ ನಟ ಒಂದು ಪಾತ್ರವನ್ನು ಅನುಭವಿಸಿ ಅಭಿನಯಿಸುತ್ತಾ ಇತರ ಪರಿಕರಗಳ ಸಹಾಯದೊಡನೆ ಅಂದರೆ ವೇಷ ಭೂಷಣ, ಸಾಹಿತ್ಯ, ರಂಗ ಪರಿಕರಗಳು, ಬೆಳಕು, ಚಲನ, ವಿನ್ಯಾಸ, ಸಂಗೀತ ಸಂಯೋಜನೆ ಮುಂತಾದ ಎಲ್ಲ ಅಂಶಗಳನ್ನೊಳಗೊಂಡಂತೆ ಇಡಿಯಾಗಿ ಅನೇಕ ಕಲಾವಿದರೊಡನೆ ಸೇರಿ ಪ್ರಸ್ತುತಪಡಿಸುವುದೇ ನಾಟ್ಯವಾಗುತ್ತದೆ.

ಅಧ್ಯಾಯ ಆರರಲ್ಲಿ ನಾಟ್ಯಶಾಸ್ತ್ರದ ಎಲ್ಲ ವಿಷಯಗಳ ಸಂಗ್ರಹ ಶ್ಲೋಕವೊಂದು ಹೀಗಿದೆ:

ರಸಾಭಾವಾ ಹ್ಯಭಿನಯಾ ಧರ್ಮಿ ವೃತ್ತಿ ಪ್ರವೃತ್ತಯಃ<br>
ಸಿದ್ಧಿಃ ಸ್ವರಾಸ್ತಥಾತೋದ್ಯಂ ಗಾನಂ ರಂಗಶ್ಚ ಸಂಗ್ರಹಃ ॥

(1) ರಸ (2) ಭಾವ (3) ಅಭಿನಯ (4) ಧರ್ಮಿ (5) ವೃತ್ತಿ (6) ಪ್ರವೃತ್ತಿ (7) ಸಿದ್ಧಿ (8) ಸ್ವರ (9) ಆತೋದ್ಯ (10) ಗಾನ (11) ರಂಗ-ಇವುಗಳ ಅಧ್ಯಯನ ವಿಶ್ಲೇಷಣೆಯೇ ನಾಟ್ಯಶಾಸ್ತ್ರದ ಸ್ವರೂಪವಾಗಿದೆ. ಇಲ್ಲಿಂದ ಮುಂದಕ್ಕೆ ಹಸ್ತಪ್ರತಿ ಇಲ್ಲ. ಶಿಲ್ಪಗಳಲ್ಲಿ ನಾಟ್ಯಶಾಸ್ತ್ರದ

ನಿರೂಪಣೆ, ನಾಟ್ಯಶಾಸ್ತ್ರದ ಸ್ವರೂಪ ಇಂದಿನ ಪ್ರದರ್ಶನಕಲೆಗಳಲ್ಲಿ ಇಡಿಯಾಗಿ ದೊರಕದಿದ್ದರೂ ಹಿಡಿ ಹಿಡಿಯಾಗಿ ಭಾರತವರ್ಷವೇ ಅಲ್ಲದೇ ಇಡಿ ಏಷ್ಯ ಖಂಡದ ಎಲ್ಲ ಭಾಗಗಳ ನರ್ತನ–ನಾಟಕಗಳಲ್ಲಿ ಕಾಣಬಹುದಾಗಿದೆ.

ಇಂಥ ಅದ್ಭುತ ಕಲಾಪರಂಪರೆಯ ವಿಜ್ರಂಭಣೆ ಬೆಳವಣಿಗೆ ಬಗ್ಗೆ ಇತಿಹಾಸದುದ್ದಕ್ಕೂ ಶಾಸನಗಳಲ್ಲಿ ಉಲ್ಲೇಖಗಳು ಮತ್ತು ಶಿಲ್ಪಗಳು ಅಸಂಖ್ಯಾತ.

**ಶಾಸನಗಳಲ್ಲಿ ನೃತ್ಯ:** ಶಾಸನಗಳಲ್ಲಿ ನೃತ್ಯದ ಉಲ್ಲೇಖವೂ ಕೆಲವೆಡೆ ಇರುತ್ತದೆ. ಇವುಗಳಲ್ಲಿ ನೇರವಾಗಿ ನೃತ್ಯ ಎಂದೇ ಉಲ್ಲೇಖ ಆಗದಿರಬಹುದು. ಆದರೆ ಕೆಲವೊಮ್ಮೆ ಸೂಚ್ಯವಾಗಿ ಮತ್ತು ಕೆಲವೊಮ್ಮೆ ವಿವರವಾಗಿ ನೃತ್ಯ ಮತ್ತು ಅದಕ್ಕೆ ಸಂಬಂಧಪಟ್ಟ ಕಲೆ–ಕಲಾವಿದರ ಕುರಿತು ಮಾಹಿತಿಗಳು ದೊರೆಯುತ್ತವೆ. ಶಾಸನಗಳಲ್ಲಿ ಉಲ್ಲೇಖಿತ ನೃತ್ಯವಿಷಯ ವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. 1. ಒಬ್ಬ ವ್ಯಕ್ತಿಯ ಬಿರುದಾವಳಿಗಳಿಂದ ವ್ಯಕ್ತಿಯು ಯಾವ ವಿದ್ಯೆಗಳಲ್ಲಿ ಪಾರಂಗತನಾಗಿದ್ದನೆಂದು/ಳೆಂದು ತಿಳಿಸುವಾಗ ಪಾರಿಭಾಷಿಕ ಶಬ್ದಗಳ ಉಲ್ಲೇಖವಿರುತ್ತದೆ. 2. ದೇವಾಲಯಗಳಲ್ಲಿ ರಂಗಭೋಗ ಎಂಬ ಸೇವೆ ಪ್ರಚಲಿತದಲ್ಲಿದ್ದುದರ ಹಿನ್ನೆಲೆಯಲ್ಲಿ ನೃತ್ಯ ವಿಷಯಗಳನ್ನು ಗುರುತಿಸಬಹುದು.

ಶಾಸನಗಳ ಬಿರುದಾವಳಿಗಳಲ್ಲಿ ರಾಜವರ್ಗದವರು, ಸಾಮಂತರು, ದಂಡನಾಯಕರು ಮತ್ತು ಇತರ ಶ್ರೀಮಂತವರ್ಗದ ಕುಲೀನ ಸ್ತ್ರೀಯರು ಲಲಿತಕಲೆಗಳಲ್ಲಿ ಪಾಂಡಿತ್ಯ ಪಡೆದಿದ್ದರ ವರ್ಣನೆ 6ನೆಯ ಶತಮಾನದಿಂದಲೇ ಕಂಡುಬರುತ್ತದೆ. ಬಿರುದಾವಳಿಗಳಲ್ಲಿ ಮುಖ್ಯವಾಗಿ ನಟ, ನರ್ತಕ, ನರ್ತನ, ನೃತ್ಯ, ಭರತ, ಭರತಾಗಮ, ನೃತ್ಯಗೀತವಾದ್ಯ ಹೀಗೆ ನೃತ್ಯ ಮತ್ತು ಸಂಗೀತ ಶಾಸ್ತ್ರಗಳಲ್ಲಿ, ನಾಟ್ಯಶಾಸ್ತ್ರದಲ್ಲಿ ಪ್ರಾವೀಣ್ಯತೆ ಇತ್ತು ಎಂದು ತಿಳಿಸುವಾಗ ಈ ವಿಶಿಷ್ಟ ಪಾರಿಭಾಷಿಕ ಪದಗಳ ಉಲ್ಲೇಖ ದೊರೆಯುತ್ತದೆ. 6ನೆಯ ಶತಮಾನದ ಒಂದು ತಾಮ್ರ ಶಾಸನವು ಪುನ್ನಾಟ ವಂಶದ ತಮರಕಶ್ಯಪ ಮನೆತನದ ರಾಷ್ಟ್ರವರ್ಮನನ್ನು ವರ್ಣಿಸುವಾಗ ನಟನರ್ತನನಾದ್ಯುತ್ಸವೇಷು ಎಂದು ಒಂದೇ ಸಾಲಿನಲ್ಲಿ ಈತನು ಉತ್ತಮ ಕಲಾ ಪೋಷಕನು ಆಗಿದ್ದ ಎಂಬುದನ್ನು ತಿಳಿಸುತ್ತದೆ. 8ನೆಯ ಶತಮಾನದಲ್ಲಿ ಕನ್ನಡ ಮತ್ತು ಸಂಸ್ಕೃತದ ಎರಡು ಶಾಸನಗಳಲ್ಲಿ ಬಾದಾಮಿ ಚಳುಕ್ಯರ ಎರಡನೆಯ ವಿಕ್ರಮಾದಿತ್ಯನ ಕಾಲದಲ್ಲಿ ಒಬ್ಬ ಮಹಾನ್ ನಾಟ್ಯಾಚಾರ್ಯನು ಇದ್ದದ್ದು ಹಾಗೂ ಆತನ ಪಾಂಡಿತ್ಯದ ಮುಂದೆ ಇತರ ಕಲಾವಿದರು ನಲುಗಿ ಹೋಗುತ್ತಿದ್ದುದು, ಅವನ ಮುಂದೆ ಉಚಿತ ಮಾರ್ಗದಲ್ಲಿ ಅಗ್ರತಲಸಂಚರ ಎಂಬ ಪಾದ ಭೇದವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದವರು ಮಾತ್ರ ಉತ್ತಮ ನರ್ತಕರೆಂದು ಕರೆಯಿಸಿಕೊಳ್ಳುತ್ತಿದ್ದ ದಾಖಲೆ ಸಿಗುತ್ತದೆ, ಹಾಗೆಯೇ 11ನೆಯ ಶತಮಾನದ ಒಂದು ಶಾಸನದಿಂದ ಆ ಕಾಲದ ನೃತ್ಯ ಪದ್ಧತಿಯಲ್ಲಿ ನಾಟ್ಯಶಾಸ್ತ್ರದ (ಮಾರ್ಗೀಯ ಶೈಲಿಯು) ತನ್ನ ಪ್ರಾಶಸ್ತ್ಯವನ್ನು ಕಡಿಮೆಗೊಳಿಸಿಕೊಳ್ಳುತ್ತ ದೇಸಿಯ ಶೈಲಿಯ ಹುಟ್ಟಿಗೆ ಕಾರಣವಾದುದು ತಿಳಿದುಬರುತ್ತದೆ.

ಈ ರೀತಿಯ ಶಾಸನಗಳಿಂದ ಆ ಕಾಲಕ್ಕೆ ನೃತ್ಯ–ಸಂಗೀತಗಳು ಯಾವ ರೀತಿ ಪ್ರಚಲಿತದಲ್ಲಿತ್ತು ಮತ್ತು ಸಮಾಜದಲ್ಲಿ ಕಲಾವಿದರಿಗೆ ಮತ್ತು ಕಲೆಗೆ ಯಾವ ರೀತಿ ಮನ್ನಣೆ ದೊರೆಯುತ್ತಿತ್ತು ಎಂಬುದು ತಿಳಿದುಬರುತ್ತದೆ.

ಪ್ರಾಚೀನ ಭಾರತೀಯಸಂಸ್ಕೃತಿಯ ಪ್ರತೀಕವೆಂದೇ ಪರಿಗಣಿತವಾದ ವೇದಗಳಲ್ಲಿ ನೃತ್ಯದ ಉಲ್ಲೇಖವಿದೆ. ವೈದಿಕಸಂಪ್ರದಾಯದಲ್ಲಿ ಯಜ್ಞಯಾಗಗಳಲ್ಲಿ ವಿವಿಧ ನೃತ್ಯಗಳ ಪ್ರಸ್ತಾಪಗಳಿವೆ. ಸಂಸ್ಕೃತ ಕಾವ್ಯಗಳಿಂದ ದೇವಾಲಯದಲ್ಲಿ ನೃತ್ಯವು ಪ್ರಸ್ತುತವಾಗುತ್ತಿದ್ದ ನಿದರ್ಶನ ಗಳು ದೊರಕುತ್ತವೆ. ಪ್ರ.ಶ.ಪೂ. 2ನೆಯ ಶತಮಾನದ ಸಾಂಚಿ, ಬಾರಹುತ್ ಸ್ತೂಪಗಳಲ್ಲಿ ನೃತ್ಯಶಿಲ್ಪಗಳಿವೆ. ಕರ್ನಾಟಕದಲ್ಲಿಯೂ 550ರ ಸುಮಾರಿಗೆ ನಾಟ್ಯಶಾಸ್ತ್ರಾಧಾರಿತ ನೃತ್ಯಶಿಲ್ಪಗಳು ರಚನೆಗೊಂಡಿವೆ. 550ರ ಶಾಸನ ಒಂದರಲ್ಲಿ ನೃತ್ಯದ ಉಲ್ಲೇಖವಿದೆ. ಆದರೆ 8ನೆಯ ಶತಮಾನದ ಆರಂಭದಿಂದ ಶಾಸನಗಳಲ್ಲಿ ದೇವಾಲಯ ನೃತ್ಯದ ಸ್ಪಷ್ಟ ದಾಖಲೆಗಳು ದೊರಕುತ್ತವೆ.

ಆರಂಭಿಕ ಹಂತದಲ್ಲಿ ವಾರವಿಲಾಸಿನಿಯರಿಗೆ... ; ಗಾಂಧರ್ವರಿಗೆ... ; ರಂಗಶೋಭೆಯ ಸಮುದಾಯ ವರ್ಧನೆಗೆ...ಎಂದೂ 9ನೆಯ ಶತಮಾನಕ್ಕೆ ನೃತ್ಯಗೀತವಾದ್ಯಗಳಿಗೆ, ರಂಗಪೂಜೆಗೆ, ರಂಗಸೇವೆಗೆ ಎಂದೂ ಉಲ್ಲೇಖಗೊಂಡಿರುವ ಈ ಪದ್ಧತಿ 9ನೆಯ ಶತಮಾನದ ಅನಂತರ ಸಾಂಸ್ಥಿಕರೂಪವನ್ನು ತಳೆದು ದೇವಾಲಯ ನೃತ್ಯವು ರಂಗಭೋಗ ಎಂಬ ಮಾನ್ಯತೆಯನ್ನು ಪಡೆಯಿತು. ಅನಂತರ ಸು.500 ವರ್ಷಗಳ ಕಾಲ ರಂಗಭೋಗವು ಆಲಯ ಪರಂಪರೆಯ ಶ್ರೀಮಂತ ಸಂಸ್ಕೃತಿಯಾಗಿ ಮುಂದುವರೆಯಿತು. (ಕೆ.ವಿ.)

**ನಾಟ್ಯ ಶಿವ ಶಿಲ್ಪಗಳು:** ನೃತ್ಯ ಭಂಗಿಯಲ್ಲಿ ಅಭಿವ್ಯಕ್ತವಾಗಿರುವ ಸಮಗ್ರ ದೇವತಾ ಮೂರ್ತಿಗಳಲ್ಲಿ ಪರಶಿವನ ನಾಟ್ಯಭಂಗಿಗಳು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿವೆ. ನೃತ್ಯಶಿವನ ರೂಪಣದಲ್ಲಿ ಧಾರ್ಮಿಕ, ಆಧ್ಯಾತ್ಮಿಕ, ಕಲಾತ್ಮಕ ಮತ್ತು ತಾತ್ತ್ವಿಕಾಂಶಗಳು ಹೃದ್ಯವಾಗಿರುತ್ತವೆ. ಅನೇಕ ಸಂಖ್ಯೆಯಲ್ಲಿ, ಭಂಗಿಯಲ್ಲಿ ಲಭ್ಯವಾಗಿರುವ ನೃತ್ಯಶಿವನನ್ನು ನೋಡುತ್ತಿದ್ದರೆ ಶಿವನು ನಾನಾ ಕಾರಣಕ್ಕಾಗಿ ನರ್ತನಗೈಯ್ಯುತ್ತಲೇ ಇದ್ದಾನೆಂದು ವೇದ್ಯವಾಗು ತ್ತದೆ. ಪೌರಾಣಿಕ ಕಥೆಗಳನ್ನಾಧರಿಸಿ ರೂಪಿತವಾಗುವ ಪರಶಿವನ ವಿವಿಧ ರೂಪಗಳ ಪರಿಕಲ್ಪನೆಗಳು ಸೃಜನಶೀಲ ಶಿಲ್ಪಿಗಳ ಕೈ ಚಳಕದಲ್ಲಿ ಕಲಾತ್ಮಕ ಸಿರಿಯ ಪ್ರಪಂಚವನ್ನೇ ಸೃಷ್ಟಿಸಿವೆ. ಈ ರೀತಿ ಪ್ರಾರಂಭಿಕ ಹಂತದಲ್ಲಿ ಸೃಷ್ಟಿಸಲಾದ ನೃತ್ಯಶಿವನ ಪ್ರತಿರೂಪ ಮುಂದೆ ಭಾರತದಾದ್ಯಂತ ಪ್ರಚಲಿತವಾಗಿ ಆ ಭಂಗಿಗಳಿಂದಲೇ ಶಿಲ್ಪಕಲಾ ಶೈಲಿಯನ್ನು ಗುರುತಿಸುವ ಮಟ್ಟಕ್ಕೆ ಶಿವನ ನೃತ್ಯ ಭಂಗಿಗಳು ಮುಖ್ಯವಾಗುತ್ತವೆ. ಒಂದೊಂದು ಘಟ್ಟದಲ್ಲಿಯೂ ಒಂದೊಂದು ಪ್ರಮಾಣದಲ್ಲಿಯೂ ಒಂದೊಂದು ವಿನೂತನ ಭಂಗಿಯಲ್ಲಿಯೂ ರಚಿತವಾದ ಈ ಶಿವನ ನಾಟ್ಯಭಂಗಿಗಳು ಭಾರತೀಯ ಶಿಲ್ಪಕಲಾರಂಗದ ಮೇರುಕೃತಿಗಳ ಶ್ರೇಣಿಗೆ ಸೇರಿವೆ. ಭಾರತೀಯ ಸಂಸ್ಕೃತಿಯ ಸಂಕೇತಗಳಾಗಿ ಬೆಳೆದು ನಿಂತಿವೆ. ಶಿವನನ್ನು ದಿವ್ಯ ನರ್ತಕನಾಗಿ ಶಿಲ್ಪಿ ಕಲ್ಪಿಸಿಕೊಳ್ಳುವಾಗ ಸತ್ತ್ವಯುತ ಚಲನಾ ಮಾಧ್ಯಮದ ಮಾರ್ದನಿಗೆ ಒತ್ತು ನೀಡಿ ತನ್ನ ಮನ ಮತ್ತು ಕೈ ಚಳಕವನ್ನು ನಿರ್ದೇಶಿಸುತ್ತಾನೆ. ಶಿವನ ನೃತ್ಯ ವ್ಯೋಮಾತ್ಮಕ ಚಟುವಟಿಕೆಗಳಲ್ಲಿ ಪ್ರತಿಧ್ವನಿತವಾಗಿವೆ. ಈ ಚಿರಂತನ ನರ್ತನದಲ್ಲಿ ದುಷ್ಟಶಕ್ತಿಗಳ ಮೇಲೆ ಜಯದ ಸಾಧನೆ, ಮಾಯೆಯ ನಿರ್ಮೂಲನೆ, ಅನಂತದಲ್ಲಿ ಜೀವ ಲೀನವಾಗುವಿಕೆ ಮುಂತಾದ ಸಂದೇಶಗಳು ಧ್ವನಿಸುತ್ತವೆ. ಜೀವನದ ಸುಖದುಃಖಗಳನ್ನು ನಿಯಂತ್ರಿಸುತ್ತಾ ಸೃಷ್ಟಿ ಲಯಗಳ ಸಾಮರಸ್ಯವನ್ನು ಬೆಸೆಯುತ್ತಾ ಶಿವನು ತನ್ನ ಈ ಅಗೋಚರ ನರ್ತನ ಪ್ರಕ್ರಿಯೆಯಲ್ಲಿ ಇಡಿ ಸಂಸಾರವನ್ನೇ ಲೀನಗೊಳಿಸುತ್ತಾನೆ. ಪುರಾಣಗಳ ದಾರ್ಶನಿಕ ರೂಪಕಗಳು ಶಿವನ ಇಂತಹ ಪರಿಕಲ್ಪನೆಗಳ ಸುತ್ತ ಹೆಣೆದ ಲಯಬದ್ಧ ದಿವ್ಯರಚನೆಗಳು.

ಇಂತಹ ನೂರಾರು ಕಥಾನಕಗಳು ಕರ್ನಾಟಕದ ದೇವಾಲಯಗಳ ವಿವಿಧ ಭಾಗಗಳಲ್ಲಿ ಸಾಂದರ್ಭಿಕವಾಗಿ ಸಾದೃಶ್ಯಗೊಂಡಿವೆ. ಭಾರತದ ಇನ್ಯಾವ ಪ್ರಾಂತದಲ್ಲೂ ಕರ್ನಾಟಕದ ದೇವಾಲಯಗಳಲ್ಲಿ ಕಾಣುವಷ್ಟು ಶಿವನ ನೃತ್ಯಭಂಗಿಗಳ ಸಂಖ್ಯೆ ಮತ್ತು ವೈವಿಧ್ಯ ಕಂಡುಬರುವು ದಿಲ್ಲ. ಕರ್ನಾಟಕದ ರೂವಾರಿಗಳ ಕಲಾತ್ಮಕ ದೃಷ್ಟಿ ಅವರ ರಚನಾ ಕೌಶಲ ಅವರಿಗೆ ದೊರೆತ ಧಾರ್ಮಿಕ ಪರಿಸರ ಮತ್ತು ಚಿತ್ರಿಸುವ ಸ್ವಾತಂತ್ರ್ಯ– ಈ ಅಂಶಗಳು ಶಿವನ ನೃತ್ಯ ಶಿಲ್ಪಗಳ ಸಂಯೋಜನೆಯಲ್ಲಿ ಆರ್ದ್ರವಾಗಿ ಹರಿದು ಬಂದಿದೆ.

ಕರ್ನಾಟಕದಲ್ಲಿ ಶಿವನ ಆರಾಧನೆಗಾಗಿ ನಿರ್ಮಿಸಿರುವ ನೂರಾರು ಮಹಾನ್ ದೇವಾಲಯಗಳಿವೆ. ಗರ್ಭಗುಡಿಯಲ್ಲಿ ಲಿಂಗರೂಪಿಯಾಗಿ ಆರಾಧನೆಗೊಳ್ಳುವ ಶಿವ ಅದೇ ದೇವಾಲಯದ ಭಿತ್ತಿಯಲ್ಲಿ ವಿವಿಧ ರೂಪಗಳಿಂದ ರಾರಾಜಿಸುತ್ತಾನೆ. ಹಲವು ಮೂರ್ತಿಶಿಲ್ಪಶಾಸ್ತ್ರ ಆಧಾರದಿಂದ ರಚಿತವಾಗಿದ್ದರೆ ಇನ್ನು ಹಲವು ನಾಟ್ಯಶಾಸ್ತ್ರ ಆಧಾರದಿಂದ ರಚಿತವಾಗಿರುತ್ತವೆ. ಹೀಗಾಗಿ ಶಿವನ ವಿವಿಧ ರೂಪಗಳ ಪರಿಚಯ ಅದಕ್ಕೆ ಸಂಬಂಧಪಟ್ಟ ಘಟನೆಗಳು ನಮ್ಮನ್ನು ಪೌರಾಣಿಕ ಸತ್ವದೆಡೆಗೆ ಯೋಚಿಸಲು ಪ್ರೇರೇಪಿಸುತ್ತವೆ. ಶೈವಪುರಾಣಗಳು ರಚಿತವಾಗುತ್ತಿದ್ದ ಕಾಲದಿಂದ ಹಿಡಿದು ಶೈವ ಪಂಗಡಗಳ, ಕೃತಿಗಳ, ಆಗಮಗಳ ಬೆಳವಣಿಗೆಯ ಉದ್ದಕ್ಕೂ ಆಯಾ ನೆಲೆಯ ಹಿನ್ನೆಲೆಯಲ್ಲಿ ನಿರ್ಮಿಸಿದ ವಾಸ್ತುರಚನೆ ಶಿವನ ಶಿಲ್ಪಗಳ ಪ್ರತಿಪಾದನೆಯಲ್ಲಿ ರೂಪುಗೊಂಡಿವೆ. ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಹೊಯ್ಸಳ, ನೊಳಂಬ ಹಾಗೂ ವಿಜಯನಗರ ಕಾಲದ ವಾಸ್ತುರಚನೆಗಳಲ್ಲಿ ನಾಟ್ಯ ಶಿವನ ಪ್ರತಿಪಾದನೆ ಬೇರೆಲ್ಲಾ ನಾಟ್ಯಶಿಲ್ಪಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮೂಡಿಬಂದಿದೆ. ಧಾರ್ಮಿಕ, ಆಧ್ಯಾತ್ಮಿಕ, ಕಲಾತ್ಮಕ ಮತ್ತು ತಾತ್ತ್ವಿಕ ಅಭಿವ್ಯಕ್ತತೆ ಈ ಶಿಲ್ಪಗಳನ್ನು ಕಂಡರಿಸುವಾಗ ಶಿಲ್ಪಿ ಗಮನದಲ್ಲಿರಿಸಿದ ಮೂಲ ಅಂಶವಾಗಿದೆ.

6ನೆಯ ಶತಮಾನದ ಚಳುಕ್ಯ ಶಿಲ್ಪಶೈಲಿಯ ಮೇರುಕೃತಿಗಳಲ್ಲಿ ಬಾದಾಮಿಯ ನಟೇಶ ಶಿಲ್ಪ ಅಗ್ರಪಂಕ್ತಿಯಲ್ಲಿ ಮೆರೆಯುತ್ತದೆ. ಬಾದಾಮಿಯ ನಾಲ್ಕು ಗುಹಾಂತರ ರಚನೆಗಳಲ್ಲಿ ಮೊಟ್ಟಮೊದಲ ಶಿಲ್ಪ ಇದಾಗಿದೆ. ಭಾರತೀಯ ಚಾರಿತ್ರಿಕ ಆಧಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನಾಟ್ಯಾಗಮವನ್ನು ಸಮಗ್ರವಾಗಿ ರೂಪಿಸಿರುವ ಪೂರ್ಣಪ್ರಮಾಣದ ನಟೇಶನ ಶಿಲ್ಪ ಪ್ರಪ್ರಥಮ ಉದಾಹರಣೆಯಾಗಿದೆ. ಈ ವಿಷಯದಲ್ಲಿ ಚಾರಿತ್ರಿಕ ಅರಿವಿನ ಕೊರತೆಯಿಂದ ಅನೇಕ ಲೇಖಕರು ಚೋಳನಾಟ್ಯ ಶಿಲ್ಪವನ್ನೇ (ನಟರಾಜನೆಂದು ಪ್ರಖ್ಯಾತವಾಗಿ ರುವ) ಪ್ರಥಮವೆಂದು ತಿಳಿದು ಮತ್ತು ನಾಟ್ಯದ ಬೆಳವಣಿಗೆ ಆಗಿನಿಂದಲೇ ಆಗಿದೆಯೆಂದು ಭಾವಿಸುತ್ತಾರೆ. ಆದರೆ ಅವರು ಆಧರಿಸಿರುವ ಸಾಕ್ಷಿ ಹನ್ನೊಂದನೆಯ ಶತಮಾನದ್ದು.

ಕಲಾವಿಶ್ಲೇಷಣೆಯ ಎಲ್ಲ ಭೌತಿಕ ಅಂಶಗಳನ್ನು ಈ ಶಿಲ್ಪವು ಒಳಗೊಂಡಿದೆ. ರಚನಾ ತಂತ್ರದ ಅಂಶಗಳೂ ಪ್ರಮಾಣಬದ್ಧತೆಯ ನೈಪುಣ್ಯದೆಡೆಗೆ ಬೆರಳು ಮಾಡಿ ತೋರಿಸುತ್ತದೆ. ಸಂಯೋಜನಾ ತಂತ್ರದ ವಾಸ್ತವಿಕಾಂಶಗಳಾದ ರೇಖಾವಿನ್ಯಾಸ, ಅಂಗಾಂಗಳ ಸಮತೋಲನ, ಲಂಬ ಮತ್ತು ಅಡ್ಡಮಾನ ಅವುಗಳ ಪ್ರಮಾಣದಲ್ಲಿ 18 ಕೈಗಳನ್ನು ಸಂಯೋಜಿಸಿರುವ ರೀತಿ, ಪಕ್ಕದಲ್ಲಿ ಕೆಳಗೆ ಅಡ್ಡ ವಿನ್ಯಾಸದಲ್ಲಿ ಗಣೇಶ ಮತ್ತು ವಾದ್ಯಗಾರನ ಚಿತ್ರಣ ಮುಂತಾದ ಅಂಶಗಳು ಒಂದಕ್ಕೊಂದು ಪೂರಕವಾಗಿವೆ.

ಭರತನ ನಾಟ್ಯಶಾಸ್ತ್ರ ಸಂಪ್ರದಾಯವನ್ನು ಆಧರಿಸಿ ಚಳುಕ್ಯ ಶಿಲ್ಪಗಳು ಐಹೊಳೆಯ ಹುಚ್ಚಪ್ಪಯ್ಯ ಮಠ, ಪಟ್ಟದಕಲ್ಲಿನ ವಿರೂಪಾಕ್ಷ, ಸಂಗಮೇಶ್ವರ ಮತ್ತು ಪಾಪನಾಥ ದೇವಾಲಯ ಗಳಲ್ಲಿ ಊರ್ಧ್ವಜಾನು, ಚತುರ, ಅರ್ಧ ಮತ್ತಲಿ, ರೇಚಿತ ನಿಕುಟ್ಟಿತ, ಅರ್ಧಸೂಚಿ, ಪುಷ್ಪಸ್ವಸ್ತಿಕ ಮುಂತಾದ ಕರಣಗಳಲ್ಲಿ ನಾಟ್ಯಶಿವನ ಶಿಲ್ಪಗಳನ್ನು ಕಲಾತ್ಮಕವಾಗಿ ರಚಿಸಿದೆ. ರಾಷ್ಟ್ರಕೂಟರ ಕಾಲದ ಶಿವನ ನಾಟ್ಯಶಿಲ್ಪಗಳನ್ನು ಎಲ್ಲೋರದ ದಶಾವತಾರ ಮತ್ತು ಕೈಲಾಸ ಗುಹಾಂತರ ದೇವಾಲಯಗಳಲ್ಲಿ ಕಾಣುತ್ತೇವೆ. ಪೌರುಷಯುತವಾಗಿ ತೋರುವ ಈ ಶಿಲ್ಪಗಳು ರಸಭರಿತ ಕಲಾಕೃತಿಗಳು. ಮಾನವಾಕೃತಿಗೆ ಮೀರಿ ಭಾವನಾತ್ಮಕ ಚಲನೆಯಲ್ಲಿ ಆಲೀಢಸ್ಥಾನ, ಊರ್ಧ್ವಜಾನು ಮತ್ತು ಭುಜಂಗ ತ್ರಾಸಿತ ಕರಣಗಳಲ್ಲಿ ಶಿವನ ನರ್ತನವನ್ನು ರೂಪಿಸಲಾಗಿದೆ. ಕಲ್ಯಾಣ ಚಾಳುಕ್ಯರ ಕಾಲದ ನಾಟ್ಯಶಿವನ ಶಿಲ್ಪಗಳು ಪ್ರಮಾಣದಲ್ಲಿ ಚಿಕ್ಕದಾದರೂ ಒಂದು ಕರಣದಿಂದ

ಇನ್ನೊಂದು ಕರಣಕ್ಕೆ ಸಾಗುವ ಚಲನೆಗಳನ್ನು ಸ್ಪಷ್ಟವಾಗಿ ಸೂಸುವ ರಚನೆಗಳು. ಲಕ್ಕುಂಡಿ, ಇಟ್ಟಗಿಯ ದೇವಾಲಯಗಳಲ್ಲಿ ಹಲವು ಅಪರೂಪದ ನಾಟ್ಯ ಶಿವನ ಶಿಲ್ಪಗಳಿವೆ. ಹೊಯ್ಸಳರ ಕಾಲದ ನರ್ತನ ಶಿವನ ಶಿಲ್ಪಗಳಲ್ಲಿ ಮೊದಲಿನ ಸತ್ತ್ವ ಕಾಣದೆ ಆಭರಣಗಳಿಂದ, ಅಲಂಕಾರಗಳಿಂದ ಜಗ್ಗಿ ನರ್ತಿಸುವ ಭಾವ ತೋರುವುದು. ಹಳೇಬೀಡಿನ ಜೋಡಿ ದೇವಾಲಯಗಳ ಭಿತ್ತಿಗಳಲ್ಲಿ ಹಾಗೂ ಲಲಾಟ ಬಿಂಬಗಳಲ್ಲಿ ಊರ್ಧ್ವಜಾನು ಕರಣಗಳಲ್ಲಿ ನರ್ತಿಸುವ ಶಿವನ ರಚನೆಗಳನ್ನು ಕಾಣಲು ಸಾಧ್ಯ. ಈ ಹೊತ್ತಿಗೆ ಶಿವನ ನಾಟ್ಯಭಂಗಿಗಳಲ್ಲಿ ವೈವಿಧ್ಯ ಕಡಿಮೆಯಾಗಿರುವುದನ್ನು ಗಮನಿಸಬಹುದು. ವಿಜಯನಗರ ಕಾಲದಲ್ಲಿ ನಾಟ್ಯಶಿವನ ಶಿಲ್ಪಗಳೇ ವಿರಳವಾಗುತ್ತವೆ. ಲೋಹ ಶಿಲ್ಪಗಳು ನಟರಾಜನ ರೂಪದಲ್ಲಿ ಕಂಡುಬರುತ್ತವೆ. ಈ ವೇಳೆಗೆ ಚೋಳರ ಕಾಲದ ನಾದಾಂತಭಂಗಿಯಲ್ಲಿರುವ ನಟರಾಜ ಶಿವನ ಮೂರ್ತಿ ಹೆಚ್ಚು ಜನಪ್ರಿಯತೆಗಳಿಸಿದ್ದು ದೇವಾಲಯ ಭಿತ್ತಿಗಳಲ್ಲಿ ಶಿಲೆಯಲ್ಲಿ ಹಾಗೂ ಲೋಹ ಮಾಧ್ಯಮದಲ್ಲಿ ಶಿವನ ಆನಂದ ತಾಂಡವ ಮೂರ್ತಿ ಚಿರಸ್ಥಾಯಿಯಾಗಿ ಉಳಿಯುವಂತಾಯಿತು. ಭಾರತೀಯ ತಾತ್ತ್ವಿಕ ನೆಲೆಯನ್ನು ಪ್ರತಿಪಾದಿಸುವ ಒಂದು ಅದ್ವಿತೀಯ ಮೇರು ರಚನೆ ಈ ನಟರಾಜ ಶಿಲ್ಪವಾಗಿದೆ. (ಸಿ.ಎಂ.ಎಸ್.)

ನಮ್ಮ ದೇಶದ ಹಾಗೂ ಬೃಹದ್ಭಾರತದ ಎಲ್ಲ ಜನಪದ ನೃತ್ಯಗಳಲ್ಲಿ, ರಂಗನಾಟಕಗಳಲ್ಲಿ ಸಾಂಪ್ರದಾಯಿಕ ರಂಗಕಲೆಗಳಾದ ಯಕ್ಷಗಾನ, ಸಣ್ಣಾಟ, ದೊಡ್ಡಾಟ, ಭಾಗವತಮೇಳ ಮುಂತಾದುವಲ್ಲಿ ನಾಟ್ಯಶಾಸ್ತ್ರದ ಅಂಶಗಳಿವೆ. ಇಂದು ಪ್ರಚಲಿತವಿರುವ ಶಾಸ್ತ್ರೀಯ ನೃತ್ಯಗಳೆಂದು ಪರಿಗಣಿತವಾದ ಭರತನಾಟ್ಯ (ಸದಿರ್), ಕೂಚಿಪೂಡಿ, ಕಥಕ್, ಒಡಿಸ್ಸಿ, ಮಣಿಪುರಿ, ಮೋಹಿನೀ ಆಟ್ಟಂ, ಸತ್ರೀಯ ಮುಂತಾದ ಎಲ್ಲ ನೃತ್ಯಗಳಲ್ಲೂ ನಾಟ್ಯಶಾಸ್ತ್ರದ ಅನೇಕ ಅಂಶಗಳ ಅಳವಡಿಕೆ ಇದೆ. ಆದರೆ ಈ ನೃತ್ಯ ಪದ್ಧತಿಗಳು ನಾಟ್ಯಶಾಸ್ತ್ರದಲ್ಲಿ ತಿಳಿಸಿರುವ ಅಥವಾ ಆ ಕಾಲಕ್ಕೆ ಪ್ರಚಲಿತದಲ್ಲಿದ್ದ ನೃತ್ಯಗಳಾಗಿಲ್ಲ. ಕಾಲಾನಂತರದಲ್ಲಿ ಇವುಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಹಾಗೂ ಬೆಳವಣಿಗೆಗಳಾಗಿವೆ. (ಈ ಕಾಲದ ನೃತ್ಯಗಳು 300–400 ವರ್ಷಗಳಷ್ಟು ಈಚೆಗೆ ಹರಳುಗಟ್ಟಿವೆ) ನಾಟ್ಯಶಾಸ್ತ್ರದ ಅಂಶಗಳನ್ನು ತಿಳಿಯಬೇಕಾದರೆ ನಮಗೆ ಇಂದಿಗೆ ಉಳಿದಿರುವ ಸಾಕ್ಷ್ಯಾಧಾರಗಳೆಂದರೆ ನಾಟ್ಯಶಾಸ್ತ್ರದ ಸಮಕಾಲೀನವಾಗಿ ರಚಿತವಾದ ಅಂದರೆ 1 ರಿಂದ 1,200 ರವರೆಗೆ ರಚಿತವಾದ ಸಾಹಿತ್ಯ ಕೃತಿಗಳು ಮತ್ತು ಶಿಲ್ಪಗಳು. ಹಾಗೆ ನೋಡಿದರೆ ಶಿಲ್ಪಗಳೇ ಸ್ಪಷ್ಟ ದಾಖಲೆಗಳಾಗಿವೆ.

ಕರ್ನಾಟಕದ ಶಿಲ್ಪಗಳಂತೂ ಈ ನಿಟ್ಟಿನಲ್ಲಿ ನೃತ್ಯಶಿಲ್ಪಗಳ ಗಣಿ ಎಂದೇ ಪ್ರಖ್ಯಾತಿಪಡೆದಿವೆ. ನಾಟ್ಯಶಾಸ್ತ್ರ ಅತ್ಯಂತ ಪರಿಪಕ್ವತೆಯಲ್ಲಿ ಪ್ರಚಲಿತದಲ್ಲಿದ್ದ ಕಾಲ 5 ರಿಂದ 10ನೆಯ ಶತಮಾನ. ಆ ಕಾಲದಲ್ಲಿ ಕರ್ನಾಟಕದಲ್ಲಿ ಬಾದಾಮಿ ಚಳುಕ್ಯರ ಪ್ರಾಬಲ್ಯವಿತ್ತು. ಇದರಿಂದ ಇವರ ಕಾಲದ ಶಿಲ್ಪಗಳಲ್ಲಿ ನಾಟ್ಯಶಾಸ್ತ್ರದ ಯಥಾವತ್ತಾದ ಪ್ರದರ್ಶನ ನಿರೂಪಣೆ ಕಂಡುಬರುತ್ತದೆ. ಕರ್ನಾಟಕದಲ್ಲಿ ದಾಖಲೀಕರಣ ಸಂಸ್ಕೃತಿ ಇರಲಿಲ್ಲ. ಜೀವಂತ ಸಂಸ್ಕೃತಿ ಪ್ರಚಲಿತದಲ್ಲಿದ್ದಾಗ ಅದರ ಸಜೀವ ಪ್ರದರ್ಶನ ನಡೆಯುತ್ತಿತ್ತು. ಕರ್ನಾಟಕದ ಶಿಲ್ಪಗಳಲ್ಲಿ ಆ ಕಾಲಕ್ಕೆ ಪ್ರಚಲಿತದಲ್ಲಿದ್ದ ನೃತ್ಯ–ನಾಟ್ಯಗಳ ಪ್ರದರ್ಶನ ಚಾತುರ್ಯ ಅಡಗಿದೆ. ಇದಕ್ಕೆ ಸ್ಪಷ್ಟ ಆಧಾರ ಬಾದಾಮಿಯಲ್ಲಿರುವ ವಿಶ್ವ ಪ್ರಸಿದ್ಧವಾದ ನಟರಾಜ ಶಿಲ್ಪ. ಲೋಕರೂಢಿಯಲ್ಲಿ ಈ ಶಿಲ್ಪವನ್ನು ನಟರಾಜ ಎಂದರೂ ಇತಿಹಾಸದ ಅಧ್ಯಯನ ಹಿನ್ನೆಲೆಯಲ್ಲಿ ಇದನ್ನು ಮಹಾನಟನೆಂದೇ ಕರೆಯುವುದು ಸೂಕ್ತ. (ನಟರಾಜ ಶಿಲ್ಪದ ಬೆಳವಣಿಗೆ ಆದದ್ದು 12ನೆಯ ಶತಮಾನದ ಅನಂತರ.) ಕರ್ನಾಟಕ ನೃತ್ಯೇತಿಹಾಸಕ್ಕೆ ಸಂಬಂಧಪಟ್ಟಂತೆ ಬಾದಾಮಿ ಹಾಗೂ ರಾವಳಫಡಿ ಮಹಾನಟ ಶಿಲ್ಪಗಳೇ ಮೊದಲ ನೃತ್ತಶಿಲ್ಪಗಳಾಗಿವೆ. ರಾವಳಫಡಿ ಶಿಲ್ಪದಲ್ಲಿ ಮೂರ್ತಿರಚನೆ ಹಾಗೂ ನೃತ್ಯ ಶಾಸ್ತ್ರಗಳ ಸಮ್ಮೇಳವನ್ನು ಗಮನಿಸಿದರೆ ಬಾದಾಮಿಯ ಮಹಾನಟ ಆ ಕಾಲಕ್ಕೆ ಪ್ರಚಲಿತ ನೃತ್ತ ಕಲಾವಿದನಾಗಿ ಕಂಗೊಳಿಸುತ್ತಿದ್ದಾನೆ. (ಚಿತ್ರ–1) ಈ ಶಿಲ್ಪದಲ್ಲಿ ಶಿಲ್ಪಿಯು ಶಿವನಿಗೆ ಒಟ್ಟು 18 ಕೈಗಳಿಂದ ನರ್ತಿಸುತ್ತಿರುವಂತೆ ಚಿತ್ರಿಸಿದ್ದಾನೆ. ಇವುಗಳಲ್ಲಿ ಆರು ಕೈಗಳಲ್ಲಿ ವಿವಿಧ ಶಸ್ತ್ರಗಳಿವೆ. ಎರಡುಕೈಗಳಲ್ಲಿ ಸರ್ಪ ಇದೆ. ಇನ್ನುಳಿದಂತೆ 10 ಕೈಗಳಿಂದ ಮಾತ್ರ ನೃತ್ತಹಸ್ತಗಳೊಡನೆ ನರ್ತಿಸುತ್ತಿದ್ದಾನೆ. ಈ ನರ್ತನವು ಬಹಳ ಸ್ಪಷ್ಟವಾಗಿ ನಾಟ್ಯಶಾಸ್ತ್ರಾಧಾರಿತ ಕರಣಗಳಾಗಿವೆ. ಇಲ್ಲಿ ಒಟ್ಟು ಒಂಬತ್ತು ಕರಣಗಳನ್ನು ಗುರುತಿಸಬಹುದಾಗಿದೆ. ಅಪವಿದ್ಧ (4), ನಿಕುಟ್ಟಕ (9) ಮತ್ತಲ್ಲಿ (23), ಅರ್ಧಮತ್ತಲ್ಲಿ (28), ರೇಚಿತ ನಿಕ್ಕುಟ್ಟಿತ (29), ವಲಿತ (31), ಭುಜಂಗತ್ರಸ್ತರೇಚಿತ (35), ಆಕ್ಷಿಪ್ತ (55), ಸರ್ಪಿತ (81). ಇದು ಕರ್ನಾಟಕಶಿಲ್ಪಗಳಲ್ಲಿಯ ಒಂದು ಉತ್ಕೃಷ್ಟ ಉದಾಹರಣೆಯಾಗಿದೆ (ಚಿತ್ರ–2 ರಿಂದ 12).

ಬಾದಾಮಿ ಚಳುಕ್ಯರ ಕಾಲದಲ್ಲಿರುವ ದೇವಾಲಯಗಳ ಪೈಕಿ ಐಹೊಳೆಯ ದೇವಾಲಯಗಳಲ್ಲಿ ಶಿವ, ದುರ್ಗೆ, ಗಂಧರ್ವ ಶಿಲ್ಪಗಳಲ್ಲಿ, ಕುಬ್ಜಗಣಗಳಲ್ಲಿ, ನಾಟ್ಯಶಾಸ್ತ್ರದ ಅಂಶಗಳಿವೆ. ಅನಂತರ ಕಾಲದಲ್ಲಿ ಕರ್ನಾಟಕ ಸಾಂಸ್ಕೃತಿಕ ಬೆಳವಣಿಗೆಗೆ ಕಳಶಪ್ರಾಯರಾದ ಕಲ್ಯಾಣದ ಚಾಳುಕ್ಯರ ಕೊಡುಗೆಯಂತೂ ಅಪಾರ. ಈ ಕಾಲಕ್ಕೆ ನೃತ್ಯ ನಾಟ್ಯಶಾಸ್ತ್ರದ ಚೌಕಟ್ಟಿನಿಂದ ಹೊರಬರುತ್ತ ಹೊಸ ಹೊಸ ದೇಶೀಯ ಶೈಲಿಗಳನ್ನು ಅಳವಡಿಸಿಕೊಳ್ಳುತ್ತಿದ್ದ ನಿದರ್ಶನಗಳು ನೃತ್ತ ಶಿಲ್ಪಗಳಲ್ಲಿ ಸ್ಪಷ್ಟವಾಗಿ ಕಾಣಸಿಗುತ್ತವೆ. ಇದಕ್ಕೆ ಕುರುವತ್ತಿ, (ಚಿತ್ರ–13) ಇಟಗಿ, ಡಂಬಳ, ಬಳ್ಳಿಗಾವೆ, ಬಾಗಳಿ, ದೇವಾಲಯಗಳ ಶಿಲ್ಪಗಳೇ ನಿದರ್ಶನವಾಗಿವೆ. ಆದರೂ ಇಲ್ಲಿಯ ಶಿಲ್ಪಗಳಲ್ಲಿ ನಾಟ್ಯಶಾಸ್ತ್ರದ ಹಿನ್ನೆಲೆಯಲ್ಲಿ ಶಿಲ್ಪಗಳನ್ನು ರಚಿಸಿರುವುದನ್ನು ಕಾಣಬಹುದು. ಶಿಲ್ಪಗಳ ರಚನೆಗೆ ಮೂಲ ಶಿಲ್ಪಶಾಸ್ತ್ರಗ್ರಂಥಗಳಾದರೂ ಅವುಗಳಿಗೂ ಮೂಲ ಆಕರ ನಾಟ್ಯಶಾಸ್ತ್ರ ಶಿಲ್ಪಿ ಒಂದು ಶಿಲ್ಪವನ್ನು ರಚಿಸಬೇಕಾದಾಗ ನೃತ್ಯದ ಅದರಲ್ಲಿಯೂ ಆಂಗಿಕಾಭಿನಯದಲ್ಲಿ ಬರುವಂತಹ ಎಲ್ಲ ಅಂಶಗಳನ್ನು ಅಭ್ಯಾಸ ಮಾಡಿಯೇ ಶಿಲ್ಪರಚನೆಗೆ ತೊಡಗುತ್ತಿದ್ದರು. ಸಾಮಾನ್ಯವಾಗಿ ನೃತ್ತಶಿಲ್ಪಗಳಲ್ಲಿ ಸ್ಥಾನಕ, ಚಾರಿ, ಕರಣಗಳನ್ನು ನೃತ್ತಶಿಲ್ಪದ ರಚನೆಗೆ ಬಳಸುತ್ತಾರೆ. ಅದರಲ್ಲಿಯೂ ನೃತ್ಯಶಿಲ್ಪಗಳನ್ನು ರಚಿಸುವಾಗ ನಾಟ್ಯಶಾಸ್ತ್ರದ ಅಭ್ಯಾಸ ಅನಿವಾರ್ಯವಾಗಿತ್ತು. ಆದುದರಿಂದ ವಿಜಯನಗರದ ಕಾಲದವರೆಗೂ ನಾಟ್ಯಶಾಸ್ತ್ರದ ಅರಿವು,ಅಭ್ಯಾಸಗಳು ನಿರಂತರವಾಗಿದ್ದವು.

ಕರ್ನಾಟಕದ ಶಿಲ್ಪಿಗಳು ನಾಟ್ಯಶಾಸ್ತ್ರವನ್ನು ಅಭ್ಯಾಸಮಾಡಿದರೂ, ದೇವಾಲಯಗಳಲ್ಲಿ ಅಂದಿಗೆ ಪ್ರಸ್ತುತವಾಗುತ್ತಿದ್ದ ನೃತ್ಯ ಶೈಲಿಯಲ್ಲಿಯೇ ಶಿಲ್ಪಗಳನ್ನು ರಚಿಸುತ್ತಿದ್ದರು. ಇದು ಆ ಕಾಲದ ಶಿಲ್ಪಕಾರರು ಕರ್ನಾಟಕದ ಸಂಸ್ಕೃತಿಗೆ ನೀಡಿರುವ ಬಹು ಅಮೂಲ್ಯ ಕೊಡುಗೆಯಾಗಿದೆ. ಹೊಯ್ಸಳರ ಕಾಲಕ್ಕೆ ಅವರದ್ದೇ ವಿಶಿಷ್ಟ ದೇಶೀಶೈಲಿ ರೂಢಿಯಲ್ಲಿದ್ದುದು ಅತ್ಯಂತ ನಿಖರವಾಗಿ ಗೋಚರಿಸುತ್ತದೆ. ವಿಜಯನಗರದ ಕಾಲಕ್ಕೆ ನೃತ್ಯಗಳು ಹೊಯ್ಸಳರ ಛಾಪಿನಲ್ಲೇ ಮುಂದುವರಿದು ಹೆಚ್ಚಾಗಿ ದೇಶೀ ಶೈಲಿಯೇ ಬೆಳೆದದ್ದು ಸ್ಪಷ್ಟವಾಗುತ್ತದೆ. (ಚಿತ್ರ–14) ಜನ ಪರವಾದ ಜನಪದ ಶೈಲಿಯೇ ವಿಜಯನಗರಕಾಲಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿತ್ತು. ಇಂದಿಗೆ ಆಂಧ್ರಪ್ರದೇಶದಲ್ಲಿ ಪ್ರಚಲಿತವಿರುವ ಭಾಮಾಕಲಾಪಂ ಕೂಚಿಪೂಡಿ ನೃತ್ಯ ವಿಜಯನಗರ ಕಾಲದಲ್ಲಿಯ ಛಾಪನ್ನು ಇಂದಿಗೂ ಉಳಿಸಿಕೊಂಡಿದೆ. ಇಂದಿಗೂ ಪ್ರಚಲಿತವಿರುವ ಕೋಲಾಟ ಹಾಗೂ ಇತರ ಜಾನಪದನೃತ್ಯಗಳಲ್ಲಿ ಆ ಕಾಲದ ಕೆಲವೊಂದು ಎಳೆಗಳು ಜೀವಂತವಾಗಿವೆ. ನಾಟ್ಯಕಲೆ ನಮ್ಮ ಪ್ರಾಚೀನರ ಶ್ರೀಮಂತ ಸಂಸ್ಕೃತಿಯಾಗಿದೆ. (ಕೆ.ವಿ.)

**ರಾಗಮಾಲಾಶಿಲ್ಪ:** ಇವು ದೇವಾಲಯಗಳಲ್ಲಿ ಮತ್ತು ಗುಹಾಲಯಗಳಲ್ಲಿ ಕಂಡುಬರುವ ದೇವಾಂಗನ ಶಿಲ್ಪಗಳು ಹಾಗೂ ದಂಪತಿ ಶಿಲ್ಪಗಳು. ಕರ್ನಾಟಕದಲ್ಲಿ ಇವು ಬಾದಾಮಿ ಚಳುಕ್ಯರ ಕಾಲದಿಂದಲೇ ಸ್ವತಂತ್ರವಾಗಿ ಕಂಡುಬರುತ್ತವೆ. ವಿವಿಧ ಬಗೆಯ ವಾದ್ಯಗಳನ್ನು ನುಡಿಸುತ್ತ, ಹಾಡುತ್ತ, ನರ್ತನ ಭಂಗಿಯ ಆಕೃತಿಗಳಿವು. ಸಾಮಾನ್ಯವಾಗಿ ಮದನಿಕೆಯರೆಂದು ಗುರುತಿಸಲಾಗುವ ಈ ಶಿಲ್ಪಗಳು ಆಯಾ ಕಾಲಘಟ್ಟಗಳಲ್ಲಿ ವಿಶಿಷ್ಟವಾಗಿ ಅಂದಿನ ಕಲಾ ಸಂವೇದನೆಗಳಿಗೆ ಪೂರಕವಾಗಿ ಮೂಡಿಬಂದಿವೆ. ಇವುಗಳಲ್ಲಿ ಕಂಡುಬರುವ ಭಾವಭಂಗಿಗಳು ಸಂಗೀತಕ್ಕೂ ಪೂರಕವಾಗಿವೆ. ಇವುಗಳನ್ನು ರಾಗಮಾಲಾ ಚಿತ್ರಗಳಂತೆ ಗುರುತಿಸಲು ಸಾಧ್ಯವಾಗಿದೆ. ಶಿಲ್ಪಗಳಲ್ಲಿ ಇಂಥ ಅಧ್ಯಯನ ಈಚಿನ ಪರಿಕಲ್ಪನೆ.

ರಾಗಮಾಲಾ ಶಿಲ್ಪಗಳು

ರಾಗಮಾಲಾ ಚಿತ್ರಗಳಲ್ಲಿ, ಸಾಮಾನ್ಯವಾಗಿ ಉದ್ದೇಶಿತ ರಾಗದ ಲಕ್ಷಣಗಳನ್ನು ಹೇಳುತ್ತ ಅದನ್ನು ಹಾಡುವ ಕ್ರಮವನ್ನು ಹೇಳುತ್ತಾ ಅದಕ್ಕೆ ಪೂರಕವಾದಂತಹ ಚಿತ್ರಣವನ್ನು ಚಿತ್ರಕಲೆಯಲ್ಲಿ ಮಾಡಲಾಗಿರುತ್ತದೆ. ಉದಾಹರಣೆಗೆ ದಖನಿ ಸುಲ್ತಾನರ, ರಾಜಸ್ತಾನಿ ಮತ್ತು ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಶ್ರೀತತ್ತ್ವನಿಧಿಯ ರಾಗಮಾಲಾ ಚಿತ್ರಗಳು ಗಮನ ಸೆಳೆಯುತ್ತವೆ. ಇವುಗಳ ಕಾಲ 16ನೆಯ ಶತಮಾನದಿಂದ 19ನೆಯ ಶತಮಾನದವರೆಗೆ. ಆದರೆ ಪ್ರಸ್ತುತ 11, 12ನೆಯ ಶತಮಾನದಲ್ಲಿಯೇ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳ ಮೇಲೆ ರಚನೆಯಾಗಿರುವ ಕೆಲವು ದೇವಾಂಗನ ಶಿಲ್ಪಗಳನ್ನು ಹೆಸರಿಸುತ್ತಿರುವುದನ್ನು ಶಾಸನೋಕ್ತ ದಾಖಲೆಗಳೊಂದಿಗೆ ಗುರುತಿಸಲಾಗಿದೆ.

ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕಾಳಗಿ ಎಂಬ ಗ್ರಾಮದಲ್ಲಿಯ 11ನೆಯ ಶತಮಾನದಲ್ಲಿಯೇ ನಿರ್ಮಾಣವಾದ ಕಾಳೇಶ್ವರ ದೇವಾಲಯದ ಗರ್ಭಗೃಹದ ಹೊರಭಿತ್ತಿಯ ಮೇಲೆ ಕೆಲವು ದೇವಾಂಗನ ಶಿಲ್ಪಗಳಿವೆ. ಪ್ರತಿಯೊಂದು ಶಿಲ್ಪಗಳ ಮೇಲೂ 4–5 ಸಾಲುಗಳ ಶಾಸನವನ್ನು ಕಂಡರಿಸಲಾಗಿದೆ. ಈ ಶಿಲ್ಪಗಳು ಅತ್ಯಂತ ಸೊಗಸಾದ ಭಾವಭಂಗಿಗಳಲ್ಲಿ ನಿಂತಿದ್ದು ವಾದ್ಯಗಳೊಂದಿಗೆ ಗೀತ, ಗಾಯನ, ನೃತ್ಯ ಮಾಡುತ್ತಿರುವ ಭಂಗಿಯಲ್ಲಿವೆ. ಈ ಶಿಲ್ಪಗಳ ಮೇಲಿರುವ ಶಾಸನದ ಸಾಲುಗಳು ವಾಸ್ತವವಾಗಿ ದೇವತಾ ಸ್ತುತಿಗಳಾಗಿವೆ. ವಿಶೇಷವಾಗಿ ಗರ್ಭಗೃಹದಲ್ಲಿರುವ ಶಿವಲಿಂಗವನ್ನು ಹಲವಾರು ಹೆಸರುಗಳಿಂದ ಸ್ತುತಿಸಿರುವುದು ಶಾಸನೋಕ್ತವಾಗಿದೆ. ಇವುಗಳಲ್ಲಿ ಕುತೂಹಲಕಾರಿ ಅಂಶವೆಂದರೆ ಪ್ರತಿಯೊಂದು ಸ್ತುತಿಯ

ಕೊನೆಯಲ್ಲಿ ಯಾವ ರಾಗದಲ್ಲಿ ದೇವತಾಸ್ತುತಿಯನ್ನು ಹಾಡಲಾಗಿದೆ ಎಂಬುದನ್ನು ಉಲ್ಲೇಖಿಸಿದೆ. ಉದಾಹರಣೆಗೆ, ಈ ಶಾಸನಗಳಲ್ಲಿ ಗುರ್ಜರಿ ರಾಗ, ದೇಶಿ ರಾಗ, ಅಲ್ಲದೇ ಶ್ರೀ ರಾಗದ ಉಲ್ಲೇಖಗಳಿವೆ. ಇದರಿಂದ ಸ್ಪಷ್ಟವಾಗಿ ಈ ಶಿಲ್ಪಗಳು ಸಂಗೀತ ನರ್ತನದಲ್ಲಿ, ನಿರ್ದಿಷ್ಟ ರಾಗದಲ್ಲಿ ದೇವತಾ ಸ್ತುತಿಯನ್ನು ಮಾಡುತ್ತಿರುವ ರಾಗಮಾಲಾ ಶಿಲ್ಪಗಳಾಗಿವೆ. ಇಂತಹ ದಾಖಲೆಗಳು ಅತಿ ವಿರಳವೂ ವಿಶಿಷ್ಟವೂ ಆಗಿವೆ. ಈ ಭಾಗದ ದೇವಾಲಯಗಳಲ್ಲಿ ಸ್ತ್ರೀ ಶಿಲ್ಪಗಳೇ ಪ್ರಧಾನವಾಗಿ ಕಂಡುಬರುತ್ತಿದ್ದು ಇವುಗಳನ್ನು ಪ್ರಸ್ತುತ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ.

ಇದೇ ಕಾಲದ ಭೂಲೋಕ ಮಲ್ಲ ಸರ್ವಜ್ಞ ಸೋಮೇಶ್ವರನು ಸಂಪಾದಿಸಿದ ಮಾನಸೋಲ್ಲಾಸ (ಅಭಿಲಾಷಿತಾರ್ಥ ಚಿಂತಾಮಣಿ) ಕೃತಿಯಲ್ಲಿ ಸಂಗೀತ ರಾಗಗಳ ಕುರಿತಾದಂತೆ ಅತ್ಯಂತ ವಿವರವಾದಂತಹ ನಿರೂಪಣೆ ಇದೆ. 24ನೆಯ ಅಧ್ಯಾಯದ ಗೀತ ವಿನೋದ ಎಂಬ ಭಾಗದಲ್ಲಿ 121–197 ರವರೆಗಿನ ಶ್ಲೋಕಗಳಲ್ಲಿ ಆ ಕಾಲದಲ್ಲಿ ಪ್ರಚಲಿತದಲ್ಲಿದ್ದಂತಹ ರಾಗಗಳನ್ನು ಲಕ್ಷಣ ಸಹಿತವಾಗಿ ವಿವರಿಸಲಾಗಿದೆ. ಇದರಲ್ಲಿ ಗೌಡ, ಕೈಶಿಕ, ಹಿಂದೋಳ, ಗಾಂಧಾರ, ಸೋಮರಾಗ, ಮಾಲವ ಕೈಶಿಕ, ಹರ್ಷಪುರಿ, ದೇಶಿ, ಮಲ್ಹಾರ್, ಸಾವೇರಿ, ಭೈರವಿ, ಬಂಗಾಲ, ಕರ್ಣಾಟ ಬಂಗಾಲ, ಗುರ್ಜರಿ, ಶ್ರೀ, ಸೌರಾಷ್ಟ್ರ, ಕೌಶಿಕಿ, ವರಾಟಿ, ಆಹಿರಿ, ವೇಲಾವಲಿ, ಖಂಬಾರಿ, ತೋಡಿ, ಸೈಂಧವಿ, ರಾಮಕೃತಿ, ಕೋಲಾಹಲ ಮುಂತಾದ ರಾಗಗಳ ವಿವರಣೆಗಳು ದೊರೆಯುತ್ತವೆ. ಶಿಲ್ಪವನ್ನು ಕೆತ್ತುವಾಗ ಉದ್ದೇಶಿತ ರಾಗ ಹಾಗೂ ಶ್ಲೋಕಗಳನ್ನು ಸರಿಹೊಂದು ವಂತೆ ಮಾಡಿ ಶಿಲ್ಪವನ್ನು ರಚಿಸಿರುವುದು, ವಿಶೇಷವಾಗಿ ಶಿವನ ಹೆಸರನ್ನು ನೀಲಕಂಠ ಎಂದು ಹೇಳಿ ಸ್ತೋತ್ರವನ್ನು ಮಾಡಿರುವುದು ಕಾಳಗಿ ಶಿಲ್ಪಗಳಲ್ಲಿವೆ. ಈ ಶಿಲ್ಪಗಳು ಪ್ರಾಯಶಃ ಇದುವರೆಗೂ ತಿಳಿದಿರುವ ಮೊಟ್ಟಮೊದಲ ದೃಶ್ಯ ದಾಖಲೆಗಳೆಂದು ಹೇಳಿದರೆ ತಪ್ಪಾಗಲಾರದು. (ಆರ್.ಎಚ್.ಕೆ; ಎಲ್.ಆರ್.ಆರ್.)

**ಶಿಲ್ಪ ಮತ್ತು ಚಿಕಿತ್ಸಾ ಪದ್ಧತಿ:** ಪಶ್ಚಿಮ ಭಾರತದ ಗುಜರಾತ್ ರಾಜ್ಯದ ಪಾಟನ್ ಎಂಬಲ್ಲಿ 11ನೆಯ ಶತಮಾನದಲ್ಲಿ ಚಾಳುಕ್ಯರ ಅರಸು (ಸೋಲಂಕಿ ರಾಜವಂಶ) ಭೀಮದೇವನ ನೆನಪಿನಲ್ಲಿ ಆತನ ರಾಣಿ ಉದಯಮತಿ ಕಟ್ಟಿಸಿದ ಸ್ಮಾರಕ–ರಾಣಿ ಕಿಲಾವ್ ಎಂಬ ಏಳು ಅಂತಸ್ತಿನ ಮೆಟ್ಟಿಲು ಬಾವಿ. ಸಾಮಾನ್ಯ ಜನರಿಗೆ ಉಪಯುಕ್ತವಾಗುವ ಕೆರೆ, ಬಾವಿ, ದೇವಾಲಯಗಳನ್ನು ತಮಗೆ ಪ್ರಿಯರಾದವರ ಸ್ಮಾರಕಗಳಾಗಿ ನಿರ್ಮಿಸುವುದು ಆ ದಿನಗಳಲ್ಲಿ ವಾಡಿಕೆಯಾಗಿತ್ತು. ಅಂತೆಯೇ ನಿರ್ಮಿತವಾದದ್ದು ಈ ಬಾವಿ. ಇಲ್ಲಿಯ ಸು.800ಕ್ಕೂ ಹೆಚ್ಚು ಶಿಲ್ಪ ಕಲಾಕೃತಿಗಳಲ್ಲಿ, ವಿವಿಧ ಅಂತಸ್ತಿನ ಹಿಂದೂ ದೇವತೆಗಳ ನಡುನಡುವೆ ಸು.300 ಅಪ್ಸರೆಯರ ಶಿಲ್ಪಗಳಿವೆ. ಈ ಅಪ್ಸರೆಯರ ವಿಗ್ರಹಗಳು, ಭಾರತದ ಬೇರೆ ದೇವಾಲಯಗಳಲ್ಲಿರುವ ಅಪ್ಸರ ವಿಗ್ರಹಕ್ಕಿಂತ ಭಿನ್ನವಾಗಿ ಹಾಗೂ ವಿಶಿಷ್ಟವಾಗಿದ್ದು ಕುತೂಹಲ ಕೆರಳಿಸುತ್ತವೆ. ಕೆಲವೊಮ್ಮೆ ವಿವಿಧ ವಿಚಿತ್ರ ಭಂಗಿಗಳಲ್ಲಿರುವ ಅಪ್ಸರೆಯರು ಸ್ಥೂಲವಾಗಿ ನೋಡಿದಾಗ ನರ್ತನ ಶಿಲ್ಪಗಳೆಂದು ಭಾಸವಾಗುತ್ತದೆ. ಈ ಅಪ್ಸರೆಯರ ಜೊತೆಜೊತೆಯಲ್ಲಿ ಕುಬ್ಜ ಪರಿಚಾರಿಕೆಯರ ಶಿಲ್ಪಗಳೂ ಕೆಲಭಾಗದಲ್ಲಿ ಚಿತ್ರಸಂಕೇತವನ್ನೊಳಗೊಂಡ ಮಂಡಲದ ವಿನ್ಯಾಸವೂ ಕಂಡುಬರುತ್ತದೆ. ಹಲವು ಶಿಲ್ಪಗಳಲ್ಲಿ ಚೆಂಡಿನ ಆಕೃತಿ ಕಂಡುಬರುವುದಲ್ಲದೆ, ಸರ್ಪಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ದೇಹದ ವಿವಿಧ ಭಾಗಗಳನ್ನು, ಅಂಗಾಂಗಗಳನ್ನು ಸುತ್ತಿರುವ ಸರ್ಪಗಳು, ಹೆಡೆ ಎತ್ತಿ ಆಕ್ರಮಣಮಾಡಲು ಉದ್ಯುಕ್ತವಾದಂತೆ ಕಂಡುಬರುತ್ತವೆ. ಹೆಚ್ಚು ಸೂಕ್ಷ್ಮವಾಗಿ ಗಮನಿಸುತ್ತಾ ಹೋದಂತೆ ಇವು ಅಲಂಕೃತವಾದ, ಕಲಾತ್ಮಕ ಭಂಗಿಗಳು ಅಲ್ಲವೆಂಬ ಅನುಮಾನ ಖಚಿತವಾಗುತ್ತದೆ. ಯಾವುದೇ ನರ್ತನ ಶಿಲ್ಪಗಳಲ್ಲಿ ಕಂಡುಬರುವ ಸಂಗೀತಗಾರರ ಹಾಡೂ ವಾದ್ಯಕಾರರ ಸುಳಿವೂ ಈ ಶಿಲ್ಪಗಳಲ್ಲಿ ಇಲ್ಲ. ಶಾಸ್ತ್ರಗಳನ್ನೇ ಆಧರಿಸಿದ ಭಾರತದ ಪಾರಂಪರಿಕ ನೃತ್ಯಶೈಲಿಗಳಿಗೆ ಈ ಅಪ್ಸರ ಶಿಲ್ಪಗಳ ಕೆಲವು ಭಂಗಿಗಳು ಹೊಂದಿಕೊಳ್ಳುವುದಿಲ್ಲ. ಇದಲ್ಲದೆ, ಯಾರೂ ಕೈಯ್ಯಲ್ಲಿ ಹಿಡಿಯದ, ಯಾವ ಬೆಂಬಲವೂ ಇಲ್ಲದೆ ನಿಂತಿರುವಂತೆ ಮುಳ್ಳು ಹೊರಮೈಯುಳ್ಳ ಚೆಂಡುಗಳು, ಅಪ್ಸರೆಯ ದೇಹದ ಬೇರೆಬೇರೆ ಭಾಗಗಳಲ್ಲಿ ಮೈಗೆ ತಗಲುವಂತೆ ತೋರಿಸಲ್ಪಟ್ಟಿದೆ. ಹಾವು ಆವರಿಸಿರುವುದರ ಭಯ–ಆತಂಕಗಳಾಗಲೀ, ಚೆಂಡಿನೊಡನೆ ಆಟವಾಡುವ ಉಲ್ಲಾಸ, ಉತ್ಸಾಹವಾಗಲೀ ಅಪ್ಸರೆಯರಲ್ಲಿ ಕಂಡುಬರುವುದಿಲ್ಲ. ಯಾವುದೇ ನಿರ್ದಿಷ್ಟ ವಿಷಯಗಳನ್ನು ಬಿಂಬಿಸಲೆಂದೇ ಈ ಶಿಲ್ಪಗಳನ್ನು ನಿರ್ಮಿಸಿದ್ದು, ಇಲ್ಲಿಯ ಅಪ್ಸರೆಯರು ರೂಪದರ್ಶಿಗಳಂತೆ ಕಾರ್ಯನಿರ್ವಹಿಸುವಂತೆ ಕಾಣುತ್ತದೆ.

ಇವು ನಿರ್ಮಾಣಗೊಂಡ ಕಾಲದ ಜನಜೀವನದ ಎಲ್ಲ ಮುಖಗಳನ್ನೂ ಕೂಲಂಕಷವಾಗಿ ಅಭ್ಯಸಿಸುವುದು ಅತ್ಯಗತ್ಯ. ಹೀಗೆ ಪರೀಕ್ಷಿಸಿದಾಗ ಅಂದಿನ ಕಾಲದಲ್ಲಿ ಪ್ರಚಲಿತವಾಗಿದ್ದ ಹಲವಾರು ಚಿಕಿತ್ಸಾ ಪದ್ಧತಿಗಳನ್ನು ಇಲ್ಲಿ ನಿರೂಪಿಸಲಾಗಿದೆ ಎಂದು ವ್ಯಾಖ್ಯಾನಿಸಬಹುದು. ಮನಸ್ಸನ್ನು ಸದೃಢವಾಗಿ ಇರಿಸಿಕೊಳ್ಳಲು ದೈಹಿಕ ಆರೋಗ್ಯ ಅತ್ಯವಶ್ಯಕ ಎಂದು ನಂಬಲಾಗಿತ್ತು. ಪತಂಜಲಿಯ ಯೋಗಸೂತ್ರದ ಉಕ್ತಿಯಂತೆ– ಹೇಯಂ ದುಃಖಂ ಅನಾಗತಂ ಎಂದರೆ ಮುಂದೆ ಬರಬಹುದಾದ ವೇದನೆಗಳನ್ನು ತಡೆಯಲು ಸಾಧ್ಯ ಹಾಗೂ ತಡೆಯಲೇಬೇಕು. ಆರೋಗ್ಯ ಎಂದರೆ–ದೇಹ–ಮನಸ್ಸು–ಆತ್ಮಗಳ ಹಾರ್ದಿಕ ಸಂಬಂಧ ಅಥವಾ ಪ್ರಾಚೀನ ಯೋಗ ಸಂತ ಹಾಗೂ ಶಾಸ್ತ್ರಜ್ಞ ಪತಂಜಲಿ, ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಅನುಭವಿಸಿ ಅದನ್ನು ಕಾಪಾಡಿಕೊಳ್ಳುವ ರೀತಿನೀತಿಗಳ ಬಗ್ಗೆ ಹೇಳಿರುವ ಅಂಶಗಳು ಈ ಶಿಲ್ಪಗಳಿಗೆ ಸ್ಫೂರ್ತಿಯಾಗಿ ಕಂಡುಬರುತ್ತದೆ. ಸಾಮಾನ್ಯರ ದೋಷಪೂರಿತ ದೇಹಭಂಗಿ ಮತ್ತು ಆಹಾರ ಸೇವನೆಗಳಿಂದಾಗಿ ಮಾನವರು ತಮ್ಮ ದೇಹ ಹಾಗೂ ವಿವಿಧ ಅಂಗಗಳನ್ನು ದುರುಪಯೋಗಕ್ಕೊಳಪಡಿಸುತ್ತಾರೆ. ದೇಹಕ್ಕೆ ವೇದನೆಯಾದಾಗ ಮನಸ್ಸು ಕೂಡಾ ಕ್ಷುಬ್ಧಗೊಳ್ಳುವುದರಿಂದ ಆತ್ಮೋನ್ನತಿಯ ಮಾರ್ಗದಲ್ಲಿ ಅನಾರೋಗ್ಯವು ಯಾವಾಗಲೂ ಅಡಚಣೆಗಳನ್ನು ಒಡ್ಡುತ್ತದೆ. ಮೌಢ್ಯದಿಂದಾಗುವ ಇಂತಹ ಹಾನಿಗಳನ್ನು ತಪ್ಪಿಸುವುದೇ ಅಲ್ಲದೆ ಮುಂದೆ ಆಗಲಿರುವ ವೇದನೆಗಳನ್ನು ತಪ್ಪಿಸುವ ಹಲವು ಚಿಕಿತ್ಸಾ ಪದ್ಧತಿಗಳು ಇದ್ದವು. ಅಂದಿನ ಭಾರತದಲ್ಲಿ ಪ್ರಚಲಿತವಾಗಿದ್ದ ಪ್ರಕೃತಿ ಚಿಕಿತ್ಸಾ ಪದ್ಧತಿಗಳ ಪೈಕಿ ಆಯುರ್ವೇದ, ಆಕ್ಯುಪ್ರೆಶರ್, ಮುದ್ರಾವಿಜ್ಞಾನ, (ರಿಫ್ಲೆಕ್ಸಾಲಜಿ) ಪ್ರತಿಕ್ರಿಯಾಶಾಸ್ತ್ರ ಮುಂತಾದುವುಗಳ ಚಿಕಿತ್ಸಾ ಕ್ರಮಗಳನ್ನು ರಾಣಿಕಿವಾವ್‌ನಲ್ಲಿ ಗುರುತಿಸಬಹುದು. ಪ್ರತಿ ಅಪ್ಸರ ಶಿಲ್ಪವನ್ನು ಏಕಾಂಗಿಯಾಗಿ ನೋಡದೆ, ಶಿಲ್ಪದ ಜೊತೆಗಿರುವ ಪರಿಚಾರಿಕೆಯರ ಕುಬ್ಜ ಶಿಲ್ಪ, ಶಿಲ್ಪದೊಂದಿಗಿರಬಹುದಾದ, ಹಾವು, ಚೆಂಡು, ಚಾಮರ, ಆಕ್ಯು ಸಲಕರಣೆಗಳು ಮುಂತಾದ ಪರಿಕರಗಳು, ಧರಿಸಿರುವ ವೇಶಭೂಷಣ–ಆಭರಣಗಳು, ಶಿಲ್ಪದ ಕೆಳಗಿರುವ ಶಿಲ್ಪಾಕೃತಿ ಅಂದರೆ ಪಂಚತತ್ತ್ವದ ಮಂಡಲ ಚಿತ್ರಗಳು–ಇವೆಲ್ಲವನ್ನೂ ಒಳಗೊಂಡ ಇಡೀ ಶಿಲ್ಪ ಚೌಕಟ್ಟನ್ನು ಪರಿಶೀಲಿಸಿದಾಗ ಈ ಕಲಾಕೃತಿಗಳ ಅರ್ಥ ಸ್ಪಷ್ಟವಾಗುತ್ತಾ ಹೋಗುತ್ತದೆ. ಜೊತೆಗಿರುವ ಕುಬ್ಜ ಶಿಲ್ಪಗಳು ಮುಖ್ಯಶಿಲ್ಪಕ್ಕೆ ಪೂರಕವಾಗಿ ವರ್ತಿಸುತ್ತಾ ಮುಖ್ಯಶಿಲ್ಪದಲ್ಲಿ ತೋರಿಸದಿರುವುದನ್ನು ಇವುಗಳ ಮೂಲಕ ಬಿಂಬಿಸಿರುವುದೂ ಉಂಟು. ಹಲವು ಶಿಲ್ಪಗಳ ವಿವರಗಳನ್ನು ವಿಶ್ಲೇಷಿಸುವಾಗ ಸಾಂಕೇತಿಕ ಅರ್ಥ ವಿಸ್ತರಣೆಯು ಮಾನಸಿಕ ಹಾಗೂ ಆಧ್ಯಾತ್ಮಿಕ ಸ್ಥಿತಿಗಳನ್ನು ಸೂಚಿಸುವ ಸುಗಂಧ ದ್ರವ್ಯ ಚಿಕಿತ್ಸೆ, ಸರ್ಪದೋಪಾದಿಯ ಗೆರೆಗಳುಳ್ಳ ಗುಂಡು ಶಿಲೆಗಳು ಚಿಕಿತ್ಸೆಗಳನ್ನು ಸೂಚಿಸುವ ಶಿಲ್ಪಗಳೂ ಇವೆ. ಇಲ್ಲಿರುವ ಸು.300ಕ್ಕೂ ಹೆಚ್ಚು ಇಂತಹ ಶಿಲ್ಪಗಳಲ್ಲಿ, ಸು.50 ಶಿಲ್ಪಗಳ ಸೂಕ್ಷ್ಮ ಅಧ್ಯಯನದಿಂದ ಪ್ರಾಚೀನ ವೈದ್ಯಕೀಯ ವಿಧಾನಗಳ ಚಿತ್ರಣವೇ ಇಲ್ಲಿಯ ಪ್ರಮುಖ ಉದ್ದೇಶ ಎಂಬುದು ಸ್ಪಷ್ಟವಾಗಿದೆ. ನಿರ್ದಿಷ್ಟ ಶಿಲ್ಪದಲ್ಲಿ, ನಿರ್ದಿಷ್ಟ ವ್ಯಾಧಿ ಇಲ್ಲವೇ ದೈಹಿಕ ಬಾಧೆ ಹಾಗೂ ಅದಕ್ಕೆ ಯುಕ್ತ ಚಿಕಿತ್ಸಾಕ್ರಮಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗಿದೆ. ಶಿಲ್ಪದಲ್ಲಿ ಅಪ್ಸರೆಯ ದೇಹದ ನಿರ್ದಿಷ್ಟ ಭಾಗದ ಮೇಲೆ ಸುತ್ತಿಕೊಂಡಿರುವ ಸರ್ಪವು ಅಲ್ಲಿಯ ನಾಡಿಗಳಲ್ಲಿಯ ವೇದನೆ ಇಲ್ಲವೆ ಒತ್ತಡವನ್ನು ಸೂಚಿಸುತ್ತಿದ್ದು, ವಿಷದ ಸಂಗ್ರಹವಾಗಿರುವುದನ್ನು ಕಚ್ಚುತ್ತಿರುವ ಇಲ್ಲವೇ ಕಚ್ಚಲು ಉದ್ಯುಕ್ತವಾಗಿರುವ ಹಾವಿನಂತೆ ಸಾಂಕೇತಿಕವಾಗಿ ತೋರಿಸಲಾಗಿದೆ. ಆಕ್ರಮಣ ಮಾಡುತ್ತಿರುವ ಚೇಳು, ಕೋತಿ, ನಾಯಿ, ಇವು ವಿವಿಧ ಕೀಲುನೋವುಗಳನ್ನು ಸೂಚಿಸುತ್ತವೆ. ದೈಹಿಕ ಏರುಪೇರುಗಳ ಚಿಕಿತ್ಸೆಗಾಗಿ ಕೈಗೊಳ್ಳಬೇಕಾದ ಸರಳವಾದ ಚಾಚುವ ವ್ಯಾಯಾಮಗಳು ಸಂಬಂಧಪಟ್ಟ ಪ್ರತಿಕ್ರಿಯಾ ಬಿಂದುಗಳನ್ನು ಮರ್ದನ ಮಾಡುವುದು ಮುಂತಾದ ಕ್ರಮಗಳಿಂದ ದೇಹದ ಭಾಗವನ್ನು ಉತ್ತೇಜಿಸುವುದನ್ನು ಅನೇಕ ಶಿಲ್ಪಗಳಲ್ಲಿ ಸೂಚಿಸಲಾಗಿದೆ. ಅಪ್ಸರೆಯರ ಆಭರಣಗಳು ಕೂಡಾ ಶಿಲ್ಪಗಳ ಮೂಲ ಉದ್ದೇಶಕ್ಕೆ ಪೂರಕವಾಗಿವೆ. ಸರದಲ್ಲಿ ಪೋಣಿಸಿದಂತೆ ಕಾಣುವ ದೊಡ್ಡಗುಂಡು ಇಲ್ಲವೆ ಮಣಿಯು, ಉತ್ತೇಜಿಸಬೇಕಾದ ಆಕ್ಯು ಬಿಂದುವನ್ನು ಸೂಚಿಸಿರುವುದುಂಟು. ಅಂತೆಯೇ ವಿವಿಧ ಬಗೆಯ ಕಾಲ್ಬಳೆಗಳು ಕಾಲಿನಲ್ಲಿರುವ ಆಕ್ಯುಪಾಯಿಂಟ್‌ಗಳಿಗೆ ಸೂಚಕವಾಗಿವೆ. ಶಿಲ್ಪಗಳ ಕೆಳಭಾಗದಲ್ಲಿರುವ ಪ್ರಕೃತಿಯ ಪಂಚತತ್ತ್ವಗಳನ್ನು ಸಾಂಕೇತಿಕವಾಗಿ ಬಿಂಬಿಸುವ ವಿನ್ಯಾಸಗಳು ದೇಹದ, ಪಂಚತತ್ತ್ವಗಳನ್ನು ಬಿಂಬಿಸುತ್ತವೆ. ಕುಂಭ ಅಥವಾ ಕುಂಡ ಭೂಮಿಯನ್ನೂ ಅರ್ಧಚಂದ್ರ ಜಲವನ್ನೂ ಸೂರ್ಯ–ಅಗ್ನಿಯನ್ನೂ ಅಲೆಗಳ ವಿನ್ಯಾಸ ವಾಯುವನ್ನು ಹಾಗೂ ವೃತ್ತಾಕಾರ ಆಕಾಶವನ್ನೂ ಸೂಚಿಸುತ್ತವೆ. ಏರುಪೇರುಗೊಂಡ ದೇಹದ ಪಂಚತತ್ತ್ವಕ್ಕನುಗುಣವಾಗಿ ಸಂಕೇತಚಿತ್ರಗಳು ಚಿತ್ರಿಸಲ್ಪಟ್ಟಿವೆ.

ಈ ಹಿನ್ನಲೆಯಲ್ಲಿ ಕೆಲವು ಪ್ರಾತಿನಿಧಿಕ ಅಪ್ಸರ ಶಿಲ್ಪಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರತಿಯೊಂದು ಶಿಲ್ಪದ ಛಾಯಾಚಿತ್ರದೊಂದಿಗೆ ಅದರ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ಜೊತೆಯಲ್ಲಿರುವ ರೇಖಾ ಚಿತ್ರಗಳು ಶಿಲ್ಪದಲ್ಲಿ ಸೂಚಿಸಲ್ಪಟ್ಟ ಮರ್ಮಸ್ಥಾನಗಳನ್ನು ಮತ್ತು ಚಿಕಿತ್ಸಾಕ್ರಮಗಳನ್ನು ಸ್ಪಷ್ಟೀಕರಿಸುತ್ತವೆ.

ಚಿತ್ರ ಎ: ಆಕ್ಯುಪ್ರೆಶರ್ ಬಿಂದುಗಳು

ಚಿತ್ರ ಬಿ: ಪ್ರತಿಕ್ರಿಯಾ ವಿಜ್ಞಾನ ಬಿಂದುಗಳು.

ಚಿತ್ರ ಸಿ: ಪಂಚತತ್ತ್ವಗಳ ಸಮತೋಲನವನ್ನು ಉತ್ತಮಗೊಳಿಸುವ ಯೋಗಮುದ್ರೆಗಳು ವಿಚಲಿತಗೊಂಡ ನಿರ್ದಿಷ್ಟ ಮರ್ಮಸ್ಥಾನವನ್ನು ಎಂದರೆ, ಜೀವಶಕ್ತಿ ಬಿಂದುವನ್ನೂ ಆಕ್ಯೂ ಮರ್ಮಸ್ಥಾನದ ಚಿತ್ರ ತೋರಿಸುತ್ತದೆ. ಚಕ್ರಗಳ, ಮಂಡಲಗಳ ಚಿತ್ರವು ಆಯಾ ಅಪ್ಸರೆಯ ಆತ್ಮ ಪ್ರಜ್ಞೆಯ ಮಾನಸಿಕ ಸ್ಥಿತಿಯನ್ನು ಸೂಚಿಸುತ್ತದೆ. ಶಿಲ್ಪದ ತಳದಲ್ಲಿರುವ ಚಿತ್ರಸಂಕೇತಗಳನ್ನು ಆಯಾ ಚಿಕಿತ್ಸಾ ಸೂಚಕದಂತೆ ವಿವರಿಸಲಾಗಿದೆ. (ಚಿತ್ರಗಳಿಗೆ ನೋಡಿ ಪುಟ 1162–1163)

ಆಹಾರ ಪಚನ ಸಂಬಂಧಿ ಚಿಕಿತ್ಸೆ: ಭೌತಿಕ ಮಟ್ಟದಲ್ಲಿ ಅನ್ನಮಯ ಕೋಶದ ಜೀರ್ಣ ಪ್ರಕ್ರಿಯೆಯ ದೋಷ ಹಾಗೂ ಚಿಕಿತ್ಸಾ ವಿಧಾನಗಳ ಅಭಿವ್ಯಕ್ತಿ–ಈ ಶಿಲ್ಪ. ಇಲ್ಲಿಯ ಅಪ್ಸರೆಯ ಶಿಲ್ಪದಲ್ಲಿ ಜೀರ್ಣಾಂಗ ಸಂಬಂಧವಾದ ದೋಷ ಹಾಗೂ ಅದರ ವಿವಿಧ ಚಿಕಿತ್ಸಾ ಪದ್ಧತಿಯ ಕ್ರಮಗಳನ್ನು ಬಿಂಬಿಸಲಾಗಿದೆ. ಪ್ರತಿಕ್ರಿಯಾವಿಜ್ಞಾನ, ಮುದ್ರಾ ವಿಜ್ಞಾನ, ಆಕ್ಯುಪ್ರೆಶರ್ ಈ ಪದ್ಧತಿಗಳ ಚಿಕಿತ್ಸಾಕ್ರಮಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಹೊರನೋಟಕ್ಕೆ ಅಪ್ಸರೆ ತನ್ನ ತುಟಿಗಳಿಗೆ ರಂಗು ಹಚ್ಚುತ್ತಿರುವಂತಿದ್ದು – ಕಾಲಿಗೆ ಕುಬ್ಜಾಕೃತಿಯ ಪುರುಷನೊಬ್ಬ ಏನೋ ಒತ್ತುತ್ತಿರುವಂತೆ ತೋರುತ್ತದೆ. ಸೂಕ್ಷ್ಮವಾಗಿ

ಅಭ್ಯಸಿಸಿದಾಗ, ಇಲ್ಲಿ ಅಪ್ಸರೆ ತನ್ನ ಬಲಗೈಯಲ್ಲಿ ಒಂದು ಕಡ್ಡಿ ಇಲ್ಲಿವೇ ಔಷಧಿಯ ಬೇರಿನಂತೆ ತೋರುವ ಆಕ್ಯುಚಿಕಿತ್ಸೆಯ ಉಪಕರಣದಿಂದ ತನ್ನ ಮೇಲ್ತುಟಿಯ ಮಧ್ಯಭಾಗವನ್ನು ಒತ್ತಿಕೊಳ್ಳುತ್ತಿದ್ದಾಳೆ. ಮೇಲ್ತುಟಿಯ ಈ ಭಾಗ ಒಂದು ಪ್ರಮುಖ ಮಧ್ಯ ರೇಖೆಯ ಬಿಂದುವಾಗಿದ್ದು, ಅದನ್ನು ಕ್ರಮಬದ್ಧವಾಗಿ ಒತ್ತಿದಾಗ, ತಲೆಸುತ್ತು ಮತ್ತು ಮೂರ್ಛೆ ಹೋಗುವಂತಹ ಸಂವೇದನೆಗಳು ಶಮನಗೊಳ್ಳುತ್ತವೆ. ಯಾವುದೇ ನೋವನ್ನೂ ಕಡಿಮೆಮಾಡುವ, ಹಸ್ತದ ಹೆಬ್ಬೆಟ್ಟು ಮತ್ತು ತೋರುಬೆರಳಿನ ನಡುವಿನ ಪರದೆಯ ಭಾಗವನ್ನೂ ಮತ್ತೊಂದು ಆಕ್ಯುಉಪಕರಣದಿಂದ ಉತ್ತೇಜಿಸಿಕೊಳ್ಳುತ್ತಿದ್ದಾಳೆ. ಆಕೆಯ ಎಡಹಸ್ತ ಕೆಳಮುಖವಾದ ಪೃಥ್ವಿಮುದ್ರೆಯಲ್ಲಿದೆ. ನಿಗದಿತವಾಗಿ ಅಭ್ಯಾಸ ಮಾಡಿದಲ್ಲಿ ಈ ಮುದ್ರೆಯು ಜೀರ್ಣಶಕ್ತಿಯನ್ನು ಉದ್ದೀಪನಗೊಳಿಸುವುದೇ ಅಲ್ಲದೆ, ಮೈಯ್ಯನ್ನು ಹಗುರಗೊಳಿಸಿ ಶಕ್ತಿವೃದ್ಧಿ ಮಾಡುತ್ತದೆ. ಬಲಗೈಯಲ್ಲಿ ಆಕ್ಯೂ ಉಪಕರಣವನ್ನು ಅಪಾನಮುದ್ರೆಯಲ್ಲಿ ಹಿಡಿದಿದ್ದಾಳೆ. ಈ ಮುದ್ರೆ ದೇಹದಿಂದ ತ್ಯಾಜ್ಯ ಹಾಗೂ ವಿಷ ವಸ್ತುಗಳನ್ನು ವಿಸರ್ಜಿಸುವ ಶುದ್ಧೀಕರಣಕಾರ್ಯಕ್ಕೆ ಸಹಕಾರಿ ಮತ್ತು ಜೀರ್ಣಕ್ರಿಯೆಗೆ ಸಂಬಂಧಿಸಿದ ವಾಂತಿ, ಬಿಕ್ಕಳಿಕೆ, ಉದ್ವಿಗ್ನತೆಗಳನ್ನು ಈ ಮೂಲಕ ಪರಿಹರಿಸಬಹುದು. ಆಕೆಯ ಬಲಭಾಗದಲ್ಲಿ ಕುಬ್ಜಾಕೃತಿ ಯಲ್ಲಿರುವ ಪುರುಷವೈದ್ಯ. ಆಕೆಯ ಎಡ ಅಂಗಾಲಿನ ಮಧ್ಯಭಾಗವನ್ನು ಬಳಪದ ಕಡ್ಡಿಯಂತಹ ಆಕ್ಯುಉಪಕರಣದಿಂದ ಒತ್ತುತ್ತಿದ್ದಾನೆ. ತಾನು ಒತ್ತಡ ಹಾಕಬೇಕಾದ ನಿರ್ದಿಷ್ಟಸ್ಥಾನ ಹಾಗೂ ತೀವ್ರತೆಯ ಬಗ್ಗೆ ಖಚಿತಪಡಿಸಿಕೊಳ್ಳುವುದಕ್ಕಾಗಿ ಅಪ್ಸರೆಯ ಮುಖವನ್ನು ಪ್ರಶ್ನಾರ್ಥಕವಾಗಿ ನೋಡುತ್ತಿದ್ದಾನೆ ಈ ವೈದ್ಯ. ಶಿಲ್ಪ ಚೌಕಟ್ಟಿನ ಎಡಗಡೆ ಕೆಳಭಾಗದಲ್ಲಿರುವ ಸಂಕೇತ ಪಂಚತತ್ತ್ವಗಳದ್ದಾಗಿದ್ದು, ಸೂರ್ಯನ ಚಿತ್ರ ಎದ್ದುಕಾಣುವಂತಿದೆ. ಇದರಿಂದ ಪಿತ್ತ ದೋಷದಿಂದಾದ (ಜಠರಾಗ್ನಿಗೆ ಸಂಬಂಧಿಸಿದ) ಸಮಸ್ಯೆಗಳತ್ತ ಬೊಟ್ಟು ಮಾಡುತ್ತದೆ. ಆಯುರ್ವೇದೀಯ ರೋಗತಪಾಸಣೆಯ ಪ್ರಕಾರ ಇದು ಪಿತ್ತದೋಷವಾಗಿದೆ. ಇದಕ್ಕೆ ಪ್ರತಿಕ್ರಿಯಾವಿಜ್ಞಾನ ಚಿಕಿತ್ಸೆ ಕ್ರಮ ಸಹಾಯಕಾರಿ ಎಂದು ತೋರಿಸಲಾಗಿದೆ.

ಸೌಂದರ್ಯವರ್ಧನೆ: ಈ ಅಪ್ಸರ ಸ್ತ್ರೀಯು, ಮೇಲ್ನೋಟಕ್ಕೆ ಕಿವಿಯ ಆಭರಣವನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವಂತೆ ಭಾಸವಾಗುತ್ತಿದೆ. ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಈಕೆ ಒಂದು ಕಡ್ಡಿಯಂಥ ಸಾಧನದಿಂದ ಎಡಗಿವಿಯ ಸಮೀಪದ ಆಕ್ಯುಬಿಂದುವೊಂದನ್ನು ಉತ್ತೇಜಿಸುತ್ತಿದ್ದಾಳೆ. ಮುಖಕಾಂತಿಯನ್ನು ಹೆಚ್ಚಿಸಲು, ಸೌಂದರ್ಯವರ್ಧನೆಗಾಗಿ ಹಾಗೂ ಶೀತಸಂಬಂಧಿ ದವಡೆಯ ನೋವನ್ನು ಶಮನಗೊಳಿಸಲು ಈ ಬಿಂದುವನ್ನು ಉತ್ತೇಜಿಸಲಾಗುತ್ತದೆ. ಇದರಿಂದ ಮುಖದ ಚರ್ಮ ನುಣುಪಾಗಿ ಹೊಳೆಯುವುದಲ್ಲದೆ ಕಣ್ಣಿನ ಕಾಂತಿಯು ವರ್ಧಿಸುತ್ತದೆ ಮತ್ತು ಕೂದಲು ಅಕಾಲದಲ್ಲಿ ನೆರೆಯುವುದನ್ನು ತಪ್ಪಿಸುತ್ತದೆ. ಮುಖಸೌಂದರ್ಯದ ಅಂಶಗಳನ್ನು ಗಮನಿಸಲೆಂದೇ ಆಕೆ ಕನ್ನಡಿ ಹಿಡಿದು, ಹಣೆಯ ಮೇಲೆ ಮೂಡಬಹುದಾದ ರೇಖೆಗಳನ್ನು ಗುರುತಿಸಲು ಪ್ರಯತ್ನಿಸುತ್ತಿದ್ದಾಳೆ. ಆಕೆ ಹೋಪಿ ಇಯರ್ ಕ್ಯಾಂಡಲ್ ಬಳಸುತ್ತಿರುವಳೆಂದು ಅರ್ಥೈಸಬಹುದಾಗಿದೆ. ಹತ್ತಿಯ ನೂಲು, ಜೇನುಮೇಣ, ಸಸ್ಯ ಮೂಲದ ತೈಲ ಇವನ್ನು ಬಳಸಿ ಕೊಳವೆಯಂತೆ ಮಾಡಿರುತ್ತಾರೆ. ಈ ಕೊಳವೆಯ ಒಂದು ತುದಿಯ ಭಾಗ ಖಾಲಿಇದ್ದು, ಅದನ್ನು ಕಿವಿಯೊಳಗೆ ಇಲ್ಲ ದವಡೆಗಳ ಸಂದಿಬಿಂದುವಿನಲ್ಲಿ ಇರಿಸಿ, ಇನ್ನೊಂದು ತುದಿಗೆ ಅಗ್ನಿಸ್ಪರ್ಶ ಮಾಡಿದಾಗ, ಔಷಧಪೂರಿತವಾದ ಲಘುಶಾಖ ಉತ್ಪತ್ತಿಯಾಗುತ್ತದೆ. ತೈಲದೊಡಗೂಡಿದ ಬೆಚ್ಚಗಿನಗಾಳಿ ಮುಖ ನಿರ್ದಿಷ್ಟ ಬಿಂದುವನ್ನು ಉತ್ತೇಜಿಸಿ, ಬೆಚ್ಚಗೆ ಮಾಡುತ್ತದೆ. ಇಲ್ಲವೇ ಕಿವಿಯೊಳಗೆ ಕಟ್ಟಿಕೊಂಡ ಮೇಣವನ್ನು ಮೃದುಗೊಳಿಸುತ್ತದೆ. ಸೌಂದರ್ಯವರ್ಧನೆಗಾಗಿ, ಕಿವಿನೋವು ನಿವಾರಣೆಗೆ, ಕಿವಿಯೊಳಗಿನ ಶಬ್ದ ಹಾಗೂ ಶೀತಸಂಬಂಧಿ ಸಮಸ್ಯೆಗಳಿಗೆ ಈ ಚಿಕಿತ್ಸೆ ಮಾಡುತ್ತಾರೆ. ರಕ್ತಚಲನೆಯನ್ನು ಉತ್ತೇಜಿಸುವ ಈ ಚಿಕಿತ್ಸೆ, ಹಿತವಾದ, ಶಾಂತಗೊಳಿಸುವ ಸ್ವಾಸ್ಥ್ಯದ ಅನುಭವ ನೀಡುತ್ತದೆ.

ಮಾನಸಿಕ ಮತ್ತು ದೈಹಿಕ ಏರುಪೇರುಗಳು: ಈ ಶಿಲ್ಪದ ಅಪ್ಸರೆಯ ಮೈಮೇಲೆ ಎರಡು ಸರ್ಪಗಳು ಸುತ್ತಿಕೊಂಡಿವೆ. ಎರಡಗೈ ಮಣಿಕಟ್ಟನ್ನು ಸರ್ಪ ಬಿಗಿಯಾಗಿ ಸುತ್ತುವರಿದಿದ್ದು, ತೋಳು, ದೇಹಕ್ಕೆ ಸೇರುವ ಭಾಗಕ್ಕೆ ಸರಿಯಾಗಿ ಮೇಲೆಭುಜವನ್ನು ಕಚ್ಚಲು ಉದ್ಯುಕ್ತವಾಗಿರುವುದು ಆಕೆಯ ಎಡಭಾಗದ ಇಡಾ ನಾಡಿಯಲ್ಲಿ ತೊಂದರೆ ಇರುವುದನ್ನು ಸೂಚಿಸುತ್ತದೆ. ಸರ್ಪ ಬಿಗಿಯಾಗಿ ಸುತ್ತಿಕೊಂಡಿ ರುವ ಎಡಗೈ ಮಣಿಕಟ್ಟಿನಲ್ಲಿ ನೋವು ಇದ್ದು, ಇದು ಹೃದಯಾಘಾತ ಇಲ್ಲವೇ ಹೃದಯಬೇನೆಯ ಸಂದರ್ಭದಲ್ಲಿ ನೋವಿನ ಸೂಚಕವಾಗಿದೆ. ಅಪ್ಸರೆಯ ಬಲಗಾಲಿನ ತೊಡೆಯ ಭಾಗದಲ್ಲಿ ಕಚ್ಚುತ್ತಿರುವ ಸರ್ಪವು, ಆಕೆಯ ಪಿಂಗಳಾನಾಡಿಯೂ ತೊಂದರೆಗೆ ಸಿಲುಕಿದೆ ಎಂದು ಸೂಚಿಸುತ್ತದೆ. ವಿಷ ಹಾಗೂ ತ್ಯಾಜ್ಯ ವಸ್ತುಗಳ ಶೇಖರಣೆಯಿಂದ ಆಕೆಯ ಮನಃಶಕ್ತಿ (ಇಡಾನಾಡಿ) ಹಾಗೂ ಪ್ರಾಣಶಕ್ತಿ (ಪಿಂಗಳಾನಾಡಿ) ಎರಡೂ ಪ್ರಕ್ಷುಬ್ಧಗೊಂಡು, ದೈಹಿಕ ಮಟ್ಟದಲ್ಲಿ ಆಕೆಯ ಚಾಲಕ ಹಾಗೂ ಇಂದ್ರಿಯ ಸಂಬಂಧಿ ನರಮಂಡಲಗಳೆರಡೂ ಏರುಪೇರಾಗಿದೆ. ಮಾನಸಿಕ ಹಾಗೂ ದೈಹಿಕ ಏರುಪೇರುಗಳನ್ನು ಸರಿಪಡಿಸಲೆಂದೇ ಆಕೆ ತನ್ನ ಬಲಗೈಯ ಆಚಾರ್ಯಮುದ್ರೆಯಲ್ಲಿ ಸರ್ಪ ಶಿಲೆಯನ್ನು ಹಿಡಿದಿದ್ದಾಳೆ. ಸಾಮಾನ್ಯವಾಗಿ ಸರ್ಪ ಶಿಲೆ ಸಾಮಾನ್ಯವಾಗಿ ಈ ಸರ್ಪ ಶಿಲೆ ಎನ್ನುವುದು ತಿಳಿಹಸಿರು ಬಣ್ಣದಾಗಿದ್ದು ಅದರ ಮೇಲೆ ಬಿಳಿ ಅಥವಾ ಹಳದಿಯ ಅಂಕುಡೊಂಕಾದ, ಹಾವಿನ ವಿನ್ಯಾಸದ ಚಿತ್ತಾರದ ರೇಖೆಗಳು ಇರುತ್ತವೆ. ಆಚಾರ್ಯ ಮುದ್ರೆ ಹಿಡಿಯುವುದರಿಂದ ನಂಬಿಕೆ ಹಾಗೂ ಆತ್ಮ ಸ್ಥೈರ್ಯಗಳು ವರ್ಧಿಸುತ್ತದೆ. ಸರ್ಪ ಶಿಲೆ, ಅನಾಹತ ಚಕ್ರದ ಅಥವಾ ಹೃದಯ ಚಕ್ರದ ಏರುಪೇರುಗಳನ್ನು ಸಮತೋಲನಕ್ಕೆ ತರುವ ಒಂದು ಪ್ರಬಲ ಚಿಕಿತ್ಸೆಯಾಗಿದೆ. ಶಾಂತಿ, ಸಮಾಧಾನಗಳಿಗಾಗಿ ತಲೆಯ ಒಂದು ಪ್ರತಿಕ್ರಿಯಾ ಬಿಂದುವನ್ನು ತನ್ನ ಬಲಗೈ ಹೆಬ್ಬೆಟ್ಟಿನಿಂದ ಒತ್ತಿ ಉತ್ತೇಜಿಸುತ್ತಿದ್ದಾಳೆ. ಅವಳು ಎಡಗೈಯಲ್ಲಿ ಶೂನ್ಯಮುದ್ರೆಯನ್ನು ಸೂಚಿಸುತ್ತಿದ್ದಾಳೆ. ಈ ಮುದ್ರೆ ಅಸ್ಥಿಪಂಜರಕ್ಕೆ ಸಂಬಂಧಿಸಿದ ವೇದನೆಗಳನ್ನು ಶಮನಗೊಳಿಸುತ್ತದೆಯಲ್ಲದೆ ಜೋಮು ಹಿಡಿಯುವ ತೊಂದರೆಯನ್ನು ಪರಿಹರಿಸುತ್ತದೆ. ಹೃದಯ ಬೇನೆಯ ಸಂದರ್ಭದಲ್ಲಿ ಚಿಕಿತ್ಸೆಗೆ ಒಳಪಡಿಸ ಬೇಕಾಗದ ಜಾಗವನ್ನು ಚಿತ್ರ ಎ ಮತ್ತ ಎ1 ನಲ್ಲಿ ಸೂಚಿಸಲಾಗಿದೆ. ಮತ್ತು ಅವಳಿ ಹಿಡಿದಿರುವ ಮುದ್ರೆಯನ್ನು ಚಿತ್ರ ಸಿ ಯಲ್ಲಿ ತೋರಿಸಲಾಗಿದೆ.

ದೈಹಿಕ ಮತ್ತು ಮಾನಸಿಕ ನೈರ್ಮಲ್ಯ: ಇಲ್ಲಿ ನಿಂತ ಅಪ್ಸರೆ ಒಂದು ಶಿಶುವನ್ನು ಎತ್ತಿಕೊಂಡಿದ್ದಾಳೆ. ಬಲಭಾಗದಲ್ಲಿ ನೆಲದ ಮೇಲೆ ಬಾಗಿರುವ ಮತ್ತೊಂದು ಶಿಶುವಿನ ಗುದದ್ವಾರವನ್ನು ಇವಳ ಬಲಪಾದದ ಮುಟ್ಟಿದೆ. ದೇಹದ ತ್ಯಾಜ್ಯವಸ್ತುಗಳ ವಿಸರ್ಜನೆಗೆ ಸಹಾಯಕವಾದ ಅಪಾನ ಮುದ್ರೆಯಲ್ಲಿ ಕಮಂಡಲವನ್ನು ಆಕೆ ಹಿಡಿದಿದ್ದಾಳೆ. ತಾಯಿಯ ಕಂಕುಳಿನಲ್ಲಿರುವ ಶಿಶುವಿನ ಕೈಯ್ಯಲ್ಲಿ ಎರಡು ಚೆಂಡುಗಳು ಕಾಣುತ್ತವೆ. ಕೆಳಗಿರುವ ಕುಬ್ಜ ಸೇವಕಿ ಮಗುವನ್ನು ತನ್ನೆಡೆಗೆ, ಬಹುಶಃ ಆಟಕ್ಕೆ ಕರೆಯುವಂತೆ ಕೈ ಎತ್ತಿದ್ದಾಳೆ.

ಶೌಚ ಹಾಗೂ ಜೀವನೋತ್ಸಾಹಗಳ ನಿಕಟ ಬಾಂಧವ್ಯ ಈ ಶಿಲ್ಪವಸ್ತು ಎಂದು ವ್ಯಾಖ್ಯಾನಿಸಲಾಗಿದೆ. ದೈಹಿಕ ಮಟ್ಟದಲ್ಲಿ ತ್ಯಾಜ್ಯ ವಸ್ತುಗಳ ವಿಸರ್ಜನೆ ಹಾಗೂ ಸ್ವಚ್ಛತೆ ಎರಡೂ ಬಹುಮುಖ್ಯ ಮೌಲ್ಯಗಳು. ಮಲ, ಶ್ಲೇಷ ಮುಂತಾದ ವಿಷಯುಕ್ತ ಕಲ್ಮಶಗಳು ವಿಸರ್ಜನೆಗೊಳ್ಳದೆ ದೇಹದಲ್ಲೇ ಶೇಖರಿಸಲ್ಪಟ್ಟಲ್ಲಿ ನರಮಂಡಲ ಹಾಗೂ ಮಿದುಳಿನ ಸಮತೋಲವನ್ನು ನಾಶಮಾಡುತ್ತದೆ. ಅಣುಅಣುವೂ ತ್ಯಾಜ್ಯವಸ್ತುಗಳಲ್ಲೇ ಮುಳುಗಿ, ಪೋಷಕಾಂಶಗಳನ್ನು ಹೀರಿಕೊಳ್ಳುವ ಶಕ್ತಿಯನ್ನು ಕಳೆದುಕೊಂಡು ನಿಷ್ಕ್ರಿಯವಾಗುತ್ತದೆ ಕಲ್ಮಶಗಳಿಂದ ಮುಕ್ತವಾದ ಶರೀರ ಮೂತ್ರಾ ಸ್ವಸ್ಥವಾದ ಮನಸ್ಸಿಗೆ ಆವಾಸಸ್ಥಾನವಾಗಬಲ್ಲದು. ಶೌಚವನ್ನು ಬಿಂಬಿಸುವ ಶಿಶು ಹಾಗೂ ಉಲ್ಲಾಸದ ಸಂಕೇತವಾದ ಮತ್ತೊಂದು ಶಿಶು ಎರಡೂ ಅವಳಿಮಕ್ಕಳಂತೆ ಶಿಲ್ಪದಲ್ಲಿ ಬಿಂಬಿಸಲ್ಪಟ್ಟಿದೆ. ಅಪ್ಸರೆಯ ಹೃದಯಕ್ಕೆ ಸಮಾನಾಂತರ ವಾಗಿರುವ ಶಿಶುವನ್ನು ತೋರಿಸುವ ಮೂಲಕ ಅನಾಹತ ಚಕ್ರವನ್ನು ಎಂದರೆ ತಾಯಿಯ ನಿಸ್ವಾರ್ಥಭಾವವನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದೆ.

ರಾಣಿ ಉದಯಮತಿ ನಿರ್ಮಿಸಿರುವ ಈ ಮೆಟ್ಟಿಲುಬಾವಿ ಒಂದು ಅದ್ವಿತೀಯ ಹಾಗೂ ಶಾಶ್ವತ ಸ್ಮಾರಕವಾಗಿದೆ. ಜೀವನದ ಅತಿಮುಖ್ಯ ಅವಶ್ಯಕತೆಯಾದ ಜಲಮೂಲವನ್ನು ಜನತೆಗೆ ಒದಗಿಸಿಕೊಡುವುದೇ ಅಲ್ಲದೆ ಉತ್ತಮ ಹಾಗೂ ಆರೋಗ್ಯಕರ ಜೀವನಕ್ರಮದ ಅರಿವು ಮೂಡಿಸುವ ಉದಾತ್ತ ಉದ್ದೇಶವನ್ನೂ ಇಲ್ಲಿ ಗುರುತಿಸಬಹುದು. ಈ ಸ್ಮಾರಕದ ಹಿಂದಿರ ಬಹುದಾದ ಆಶಯಗಳನ್ನು ಹೀಗೆ ಪಟ್ಟಿಮಾಡಬಹುದು:

1. ದೈಹಿಕ ಪ್ರಜ್ಞೆಯ ಬಗ್ಗೆ ಜನರಿಗೆ ತಿಳುವಳಿಕೆ ನೀಡಿ ಆರೋಗ್ಯಪ್ರಜ್ಞೆಯನ್ನು ಉತ್ತೇಜಿಸುವುದು.
2. ಸಹಜ ಆಸನಗಳ ಚಿಕಿತ್ಸಕ ಮೌಲ್ಯಗಳ ತಿಳುವಳಿಕೆ ನೀಡಿ ಅಂಗಾಂಗಗಳನ್ನು ಚಾಚುವ ಅಭ್ಯಾಸಗಳನ್ನು ವ್ಯವಸ್ಥಿತವಾಗಿ ನಡೆಸಲು ಉತ್ತೇಜಿಸುವುದು.
3. ಸಣ್ಣಪುಟ್ಟ ದೈಹಿಕ ಸಮಸ್ಯೆಗಳು ಮತ್ತು ಖಾಯಿಲೆಗಳ ಕಾರಣ ಹಾಗೂ ಪರಿಹಾರಗಳ ತಿಳುವಳಿಕೆ ನೀಡುವುದು.
4. ಆಯುರ್ವೇದ, ಗಿಡ–ಮೂಲಿಕೆಗಳ ಔಷಧಿಗಳು, ದೇಹದ ಹಾಗೂ ಸಂಧಿಗಳ ಮರ್ದನ ಮುಂತಾದ, ತಮಗೆ ತಾವೇ ಮಾಡಿಕೊಳ್ಳಬಹುದಾದ ಪ್ರಕೃತಿಚಿಕಿತ್ಸಾ ಪದ್ಧತಿಗಳಿಗೆ ಉತ್ತೇಜನ ನೀಡುವುದು.
5. ದೇಹದ ಪಂಚತತ್ತ್ವಗಳಲ್ಲಿ ಸಮತೋಲನ ಸ್ಥಾಪಿಸುವಲ್ಲಿ ಮುದ್ರಾವಿಜ್ಞಾನದ ಮಹತ್ತ್ವ ಹಾಗೂ ಉಪಯುಕ್ತತೆಯ ಬಗ್ಗೆ ತಿಳುವಳಿಕೆ ನೀಡಿ ಉತ್ತೇಜಿಸುವುದು.
6. ಸದೃಢ ದೇಹದಲ್ಲಿ ಸದೃಢ ಮನಸ್ಸು ಎಂಬ ಉಕ್ತಿಯೊಡನೆ ಜನತೆಯ ಆಧ್ಯಾತ್ಮಿಕ ಮೌಲ್ಯಗಳನ್ನು ವೃದ್ಧಿಪಡಿಸುವುದು.
7. ಆ ಕಾಲದಲ್ಲಿ ಪ್ರಚಲಿತವಾಗಿದ್ದ ವಿವಿಧ ವೈದ್ಯಕೀಯ ಪದ್ಧತಿಗಳ ದಾಖಲಾತಿ.

ವೈದ್ಯಕೀಯ ಚಿಕಿತ್ಸಾ ವಿಧಾನಗಳು ಅಪ್ಸರ ವಿಗ್ರಹಗಳ ಮೂಲಕ ಸೂಚಿಸಿರುವುದು ಇಲ್ಲಿ ಮಾತ್ರ ಕಂಡುಬರುತ್ತದೆ.

ನಮ್ಮ ಪ್ರಾಚೀನ ಕಲಾಪ್ರಕಾರಗಳನ್ನು ಹೆಚ್ಚು ಸಂಕೀರ್ಣವಾಗಿ ವಿಶ್ಲೇಷಿಸುವುದರ ಅಗತ್ಯವನ್ನು ರಾಣಿ ಕಿ ವಾವ್ ಮನವರಿಕೆ ಮಾಡಿಕೊಡುತ್ತದೆ. (ಆರ್‌ಆರ್. )

**ಕಾಷ್ಠ ಶಿಲ್ಪಗಳು:** ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ಪರಿಸರದ ಕನ್ನಡ ಮಾತನಾಡುವ ಪ್ರದೇಶದ ದೈವಗಳನ್ನು ಪ್ರತಿನಿಧಿಸುವ ಮರದ ಉರುಗಳು ಹಾಗೂ ತುಳು, ಕನ್ನಡ ಪ್ರದೇಶದ ಕೋಟಿ ಚೆನ್ನಯರ ಆರಾಧನಾ ಕೇಂದ್ರಗಳಾದ ಗರೊಡಿಗಳಲ್ಲಿರುವ ಮರದ ಗೊಂಬೆಗಳು.

ದೈವದ ಉರುಗಳು: ಉಡುಪಿ ಜಿಲ್ಲೆಯ ಉತ್ತರಭಾಗ ಹಾಗೂ ಉತ್ತರಕನ್ನಡ ಜಿಲ್ಲೆಗಳ ದೈವದ ಮನೆ (ಗುಡಿ)ಗಳಲ್ಲಿ ದೈವವನ್ನು ಪ್ರತಿನಿಧಿಸುವ ಮರದ ಮೂರ್ತಿಗಳೇ ಉರುಗಳು (ರೂಪು>ರೂಹು>ರೂಉ>ಉರು). ಕರಾವಳಿಯ ದೈವದ ಮನೆಯೊಳಗಿನ ಉರುಸಾಲೆ ಯೊಳಗೆ ಲೋಕೋಪಕಾರಿಗಳಾಗಿ, ರಕ್ಷಕ ದೈವಗಳಾಗಿ ಪರಿಗಣಿತವಾಗುವ ಹಳೆಯಮ್ಮ, ಚಿಕ್ಕು, ಮಾಂಕಾಳಿ, ಜೋಗಿಪುರುಷ, ನಂದಿ, ಪಂಜುರ್ಲಿ (ಹಂದಿ), ಹುಲಿ ಮುಂತಾದ ದೈವಗಳನ್ನು ಕಾಣಬಹುದು. ಉಡುಪಿ ಜಿಲ್ಲೆಯ ಮೆಕ್ಕೆಕಟ್ಟು, ಬೆಣ್ಣೆ ಕುದುರು, ಮಾನದಕಟ್ಟೆ, ಹಿರಿಯಡಕ, ಮಣಿಕಲ್ಲು, ನೈಲಾಡಿ, ಬಿಲ್ಲಾಡಿ, ಬೀಜಾಡಿ, ಗೋಪಾಡಿ ಮುಂತಾದೆಡೆ ವೈವಿಧ್ಯಮಯ ಉರುಗಳು ಕಂಡುಬರುತ್ತವೆ. ಆದರೆ ಬಣ್ಣ ಹಾಗೂ ಸ್ವರೂಪಗಳಲ್ಲಿ ಒಂದೆಡೆಯ ಉರುಗಳಿಗೂ ಇನ್ನೊಂದೆಡೆಯದಕ್ಕೂ ವಿಶೇಷ ವ್ಯತ್ಯಾಸವಿರುವುದಿಲ್ಲ. ಈ ಉರುಗಳ ರಚನೆಯ ಹಿಂದೆ ಯಾವುದೇ ಶಾಸ್ತ್ರ, ಆಗಮಗಳ ಬೆಂಬಲವಿರುವುದಿಲ್ಲ. ಪರಂಪರಾನುಗತ ಅನುಭವ ಹಾಗೂ ಪಾಣರು ಹೇಳುವ ಹೊಗಳಿಕೆಯ ಹಾಡುಗಳ ಹಿನ್ನೆಲೆಯಲ್ಲಿ ಕುಶಲಕರ್ಮಿ ಗುಡಿಗಾರರು ಕಾಷ್ಠಶಿಲ್ಪಗಳನ್ನು ತಯಾರಿಸುತ್ತಾರೆ. ಉರುಗಳ ರೂಪ, ಸ್ವರೂಪ, ಆಕೃತಿಗಳ ಹಿಂದೆ ಅವು ಮೊದಲಿಗೆ ರೂಪುಗೊಂಡ ಕಾಲಮಾನದ ಸಾಮಾಜಿಕ, ಸಾಂಸ್ಕೃತಿಕ ಅಂಶಗಳಿವೆ. ಕುಂದಾಪುರದ ಕಟ್ಟೆರೆಯ ಒಂದೆರಡು ಉರುಗಳು ಲುಂಗಿತೊಟ್ಟು ತಲೆಗೆ ಮುಸ್ಲಿಮರು ಧರಿಸುವ ಕುಲಾವಿ ಧರಿಸಿವೆ. ಮುಖದ ಮೇಲೆ ಉದ್ದನೆಯ ಗಡ್ಡವಿದೆ. ಇದೇ ಮಾದರಿಯ ಉರುಗಳನ್ನು ಮೆಕ್ಕೆಕಟ್ಟೆಯಲ್ಲೂ ಕಾಣಬಹುದು. ಇಲ್ಲಿಯ ಕೆಲವು ಉರುಗಳು ಪೋರ್ಚುಗೀಸ್ ಸೈನಿಕರನ್ನು ಹೋಲುತ್ತವೆ.

ಕರಾವಳಿಯ ಉರುಗಳ ರೂಪ, ಆಕಾರ, ಸ್ವಭಾವಗಳ ಆಧಾರದ ಮೇಲೆ ಇವುಗಳ ಪ್ರಾಚೀನತೆಯನ್ನು ಊಹಿಸಬಹುದು. ಉಮ್ಮಳ್ತಿ, ತ್ರಿಶಿರ, ಖೇಚರಾವುತ, ಧೂಮ್ರಾಕ್ಷ, ದಂಷ್ಟ್ರಾಮುಖ, ಭೇತಾಳ, ವೀರಭದ್ರ–ಈ ಹೆಸರುಗಳು, ಉರುಗಳ ಆಕಾರ, ಸ್ವರೂಪ ಮತ್ತು ಬಣ್ಣಗಳನ್ನು ಕಂಡರೆ ಅವು ಮಧ್ಯಕಾಲೀನ ರಹಸ್ಯ ತಾಂತ್ರಿಕ ಪಂಥಗಳಿಗೆ ಹಾಗೂ ಶೈವ ಪಂಥಕ್ಕೆ ಸೇರಿರುವಂತೆ ಕಾಣುತ್ತವೆ. ಕರಾವಳಿಯ ಜನಪ್ರಿಯ ರಂಗಮಾಧ್ಯಮವಾಗಿರುವ ಸು. 15ನೆಯ ಶತಮಾನದಿಂದ ಬೆಳೆದುಕೊಂಡು ಬಂದಿರುವ ಯಕ್ಷಗಾನದ ಹಾಗೂ ಭೂತಾರಾಧನೆಯ ಮುಖವರ್ಣಿಕೆ, ವೇಷಭೂಷಣ ಕೇಶಾಲಂಕಾರ, ಆಭರಣಗಳ ಪ್ರಭಾವ ಉರುಗಳ ಮೇಲೆ ಆಗದಿದ್ದುದರಿಂದ ಇವು ಅದಕ್ಕಿಂತ ಪ್ರಾಚೀನವೆಂದು ತರ್ಕಿಸಬಹುದು.

ಹೀಗಾಗಿ ಉರುಗಳ ಪ್ರಾಚೀನತೆಯನ್ನು 14ನೆಯ ಶತಮಾನಕ್ಕಿಂತ ಹಿಂದಕ್ಕೆ ಕೊಂಡೊಯ್ಯ ಬಹುದು. ಉರುಗಳ ಭಯಾನಕ ಹಾಗೂ ಅತಿವಾಸ್ತವ ಸ್ವರೂಪ, ತ್ರಿಶಿರನಿಗೆ ಮೂರು ತಲೆ, ನಾಲ್ಕು ಕೈ, ತಿರುಚಿನ ಕತ್ತಿನ ನಂದಿ, ಎರಡು, ಮೂರು, ನಾಲ್ಕು ಮುಖದ ನಂದಿ, ನಾಗಜಟೆಯನ್ನು ಧರಿಸಿ ಹಲ್ಲು ಕಡಿಯುತ್ತಿರುವ ಧೂಮ್ರಾಕ್ಷ, 6.0 ಮೀ ಎತ್ತರದ ಖೇಚರಾವುತ ಇವುಗಳನ್ನು ಕಂಡಾಗ ಪ್ರಾಚೀನ ಕಾಲದ ರಹಸ್ಯ ತಾಂತ್ರಿಕ ಪಂಥಗಳು ನೆನಪಿಗೆ ಬರುತ್ತವೆ. ಬೌದ್ಧಧರ್ಮದಿಂದ ವಿಕಾಸಗೊಂಡಿರುವ ನಾಥಪಂಥ ಕರಾವಳಿಯನ್ನು 10ನೆಯ ಶತಮಾನದ ಹೊತ್ತಿಗಾಗಲೇ ಪ್ರವೇಶಿಸಿತ್ತು. ನಾಥಪಂಥ ಈ ನೆಲದ ವೈದಿಕ, ಶೈವಪಂಥದ ಅನೇಕಾಂಶಗಳನ್ನು ತನ್ನ ಉಳಿವಿಗಾಗಿ ತನ್ನಲ್ಲಿ ಅಳವಡಿಸಿಕೊಂಡಿತು. 10–11ನೆಯ ಶತಮಾನದ ಹೊತ್ತಿಗೆ ಕರ್ನಾಟಕದುದ್ದಕ್ಕೂ ಕಾಳಾಮುಖ, ಕಾಪಾಲಿಕ, ಲಕುಲೀಶ, ಪಾಶುಪತ ಪಂಥವು ನೆಲೆಯೂರಿತ್ತು. ಈ ತಾಂತ್ರಿಕರು ಭೈರವ, ತ್ರಿಶರ, ದುರ್ಗೆ, ಕಾಳಿಯ ಆರಾಧಕರಾಗಿದ್ದರು ಲಾಕುಳ ಶೈವರು ಬಹಳಷ್ಟು ಶಿವಾಲಯಗಳಿಗೆ ಕಾರಣರಾಗಿದ್ದರು. ಕರಾವಳಿಯ ಬಾರಕೂರು, ಹಾಲಾಡಿ, ಕುಂದಾಪುರ ಪರಿಸರದಲ್ಲಿದ್ದ ಹಾಗೂ ಇಂದಿಗೂ ಉಳಿದಿರುವ ಗಿರ್ಕಿಮಠ, ಬಂಡಿಮಠ, ರಾಯಪ್ಪನ ಮಠ–ಇವು ಒಂದು ಕಾಲದ ಲಾಕುಳ ಶೈವ ವಿದ್ಯಾಕೇಂದ್ರಗಳಾಗಿರಬೇಕು. ಮಂಗಳೂರಿನ ಕದ್ರಿ ಹಾಗೂ ಬಾರ್ಕೂರಿಗೆ ಸಮೀಪದ ಕೊಕ್ಕರ್ಣೆಗಳಲ್ಲಿ ಕಾಳಾಮುಖರ ಮಠಗಳಿದ್ದವು. ಕರಾವಳಿ ಜನಪದ ಕುಣಿತಗಳಾದ ಸಿದ್ದವೇಷ, ಪುರುಷ ವೇಷಗಳ ಆಚರಣೆ, ಕುಣಿತ, ವೇಷಭೂಷಣಗಳು ಹಾಗೂ ಇಲ್ಲಿ ಬರುವ ಹಾಡಿನ ಆಶಯಗಳನ್ನು ಕಂಡರೆ ಇದು ಮಧ್ಯಕಾಲೀನ ರಹಸ್ಯ ತಾಂತ್ರಿಕ ಪಂಥಗಳಿಗೆ ಸಂಬಂಧಿಸಿದಂತೆ ತೋರುತ್ತದೆ.

ಉರುಗಳಲ್ಲಿ ಯಾವುದೊಂದು ಪ್ರತಿಮೆಯೂ ನಿತ್ಯ ಸಹಜವಾಗಿಲ್ಲ ಎಲ್ಲವೂ ವಿಶಿಷ್ಟ, ಅಸಾಮಾನ್ಯ. ಆದರೆ ಬೆಕ್ಕು ದೈವದ ಉರು ಮಾತ್ರ ಇದಕ್ಕೆ ಅಪವಾದ. ಒಂದು ಬಗೆಯ ಉತ್ಪ್ರೇಕ್ಷೆ. ಉಮ್ಮಳ್ತಿ ಬೇಚರಾವುತ, ತ್ರಿಶರ, ಧೂಮ್ರಾಕ್ಷ, ಚೀನೀ ಭೂತ, ಪೊಲೀಸ್ ಉರು, ಒಕ್ಕೊಡಿನ ನಂದಿ, ಪಂಚಮುಖದ ನಂದಿ ಮುಂತಾದವು ಇದಕ್ಕೆ ಉದಾಹರಣೆ. ಸು.11–12ನೆಯ ಶತಮಾನದಿಂದ ಈ ಉರುಗಳು ಕರಾವಳಿಯಲ್ಲಿ ರಚನೆಗೊಂಡಿರಬಹುದು.

ಉಡುಪಿ–ಬ್ರಹ್ಮಾವರಕ್ಕೆ ಸಮೀಪದ ಮೆಕ್ಕೆಕಟ್ಟೆಯ ಉರುಗಳನ್ನು ಮಾದರಿಯಾಗಿ ತೆಗೆದುಕೊಂಡು ಪರಿಶೀಲಿಸಬಹುದು. ಇಲ್ಲಿಯ ಉರು ಸಾಲೆಯಲ್ಲಿ ಕನಿಷ್ಠ 0.60 ಮೀ, ಗರಿಷ್ಠ 6.0 ಮೀ ಎತ್ತರದ ವಿವಿಧ ಆಕಾರಗಳ ಉರುಗಳಿವೆ. ಇಲ್ಲಿಯ ಉರು ಸಮೂಹವನ್ನು ಪ್ರಾಣಿ ಉರುಗಳು, ಹೆಣ್ಣು ಉರುಗಳು, ಗಂಡು ಉರುಗಳು, ಅತಿಮಾನುಷ ಸ್ವರೂಪದ ಉರುಗಳೆಂದು ವರ್ಗೀಕರಿಸಬಹುದು. ಮೆಕ್ಕೆಕಟ್ಟೆ ಗುಡಿಯ ಪ್ರಧಾನ ದೈವ ನಂದಿಕೇಶ್ವರ. ಗರ್ಭಗುಡಿಯ ಒಳಗಿರುವ ಈ ಮೂರ್ತಿ ವಾಸ್ತವಿಕವಾಗಿ ಗೂಳಿಯದೇ ಆಗಿದೆ. ಇದರ ಎತ್ತರ ಸು. 0.90 ಮೀ. ಎರಡು ಕೋಡುಗಳು ಹಿಂದಕ್ಕೆ ಸರಿದಿರುವ ಕಿವಿಗಳು, ನಾಲ್ಕು ಕಾಲುಗಳು, ನಾಲಗೆ ಹೊರಗೆ ಚಾಚಿರುತ್ತದೆ. ನಂದಿಕೇಶ್ವರನ ಅಕ್ಕಪಕ್ಕಗಳಲ್ಲಿ ಪಾರ್ಶ್ವಮುಖ ನಂದಿ, ಒಕ್ಕೋಡು ನಂದಿ, ತ್ರಿಮುಖ ನಂದಿ, ಪಂಚಮುಖ ನಂದಿ, ಆಕಾಶನಂದಿ ಹಾಗೂ ನಂದಿಗೋಣಗಳ ಉರುಗಳಿವೆ. ಇವು ಗೂಳಿಗಳ ವಿವಿಧರೂಪಗಳೇ ಆಗಿವೆ. ಕತ್ತಿನ ಕೆಳಗೆ ಮನುಷ್ಯ, ಮೇಲೆ ನಂದಿಯ ಮುಖ. ಇಲ್ಲಿ ಪ್ರಸಾದವಾಗಿ ಭಸ್ಮವನ್ನು ನೀಡಲಾಗುತ್ತಿರುವುದನ್ನು ಗಮನಿಸಬೇಕು. ಇಲ್ಲಿಯ ಬ್ರಾಹ್ಮಣ ಅರ್ಚಕರು ಈ ಉರುಗಳು ಶಿವನ ಗಣಸಮೂಹಗಳು ಎನ್ನುವರು.

ಮೆಕ್ಕೆಕಟ್ಟೆ ನಂದಿಕೇಶ್ವರ ಗರ್ಭಗುಡಿಯ ಪಕ್ಕದ ಉರುಕೊಟ್ಟಿಗೆಯೊಳಗೆ ನೂರಾರು ಉರುಗಳು ಮೈಗೆ ಮೈತಾಗಿಸಿಕೊಂಡು ನಿಂತಿವೆ. ಸು.1.80 ಮೀ ಎತ್ತರದ ಆನೆ, ಅದರ ಮೇಲೆ ಕುಳಿತಿರುವ ಮಾವುತ, ಪಕ್ಕದಲ್ಲಿ ಕುದುರೆ, ಹುಲಿ, ಹುಲಿಮರಿ, ಕೋಳಿ, ಬೆಕ್ಕು, ಗರುಡನ ಉರುಗಳಿವೆ. ಗುಡಿಯ ಮುಂಭಾಗದಲ್ಲಿ ಹಲ್ಲುಕಿಸಿದ ಚೇಷ್ಟನಿರತ ಕಪಿಯ ಗೊಂಬೆ ಕುತೂಹಲಕರ; ಇದು ತನ್ನ ಒಂದು ಕೈಯಲ್ಲಿ ತಲೆತುರಿಸಿಕೊಳ್ಳುತ್ತಿದ್ದರೆ ಇನ್ನೊಂದು ಕೈಯಿಂದ ಜನನಾಂಗವನ್ನು ಹಿಡಿದುಕೊಂಡಿದೆ. ಹೊರನೋಟಕ್ಕೆ ಅಶ್ಲೀಲವೆನಿಸುವ ಭಂಗಿ ತಾಂತ್ರಿಕ ಲೋಕದೊಳಗೆ ವಿಶೇಷ ಅರ್ಥವನ್ನುಳ್ಳದ್ದಾಗಿರಬೇಕು.

ಸ್ತ್ರೀರೂಪದ ಉರುಗಳನ್ನು ಸಪ್ತಮಾತೃಕೆಯರು, ಬಗ್‌ಬೆಕ್ಕು, ಬಾಲ್‌ಬೆಕ್ಕು, ದೊಟ್ಟೆಕಾಲ್ ಚಿಕ್ಕು, ಅವತಾರ ಚಿಕ್ಕು, ಸಣ್ಣಮ್ಮ ಹಳೆಯಮ್ಮ, ಉಮ್ಮಳ್ತಿ, ಹೊನ್ನಮ್ಮ, ಮಾಸ್ತಿಯಮ್ಮ, ಯೋಗಿನಿ ಎಂದು ಕರೆಯಲಾಗುತ್ತದೆ. ಚಿಕ್ಕು ಅಥವಾ ಚಿಕ್ಕಮ್ಮ ಇಲ್ಲಿಯ ಅತ್ಯಂತ ಜನಪ್ರಿಯ ದೈವ. ಚಿಕ್ಕು, ಹಳೆಯಮ್ಮ, ಸಣ್ಣಮ್ಮ, ಹೊನ್ನಮ್ಮ ಇವರೆಲ್ಲ ಮೂಲತಃ ಜೈನ ಮಹಿಳೆಯರಾಗಿದ್ದು ಸತಿಹೋಗಿ, ಆರಾಧ್ಯದೈವಗಳಾದಂತೆ ಪಾಣರು ಹೇಳುವ ಹೊಗಳಿಕೆ ಹಾಡುಗಳಿಂದ ತಿಳಿದುಬರುತ್ತದೆ. ಈ ಸ್ತ್ರೀ ದೈವಗಳ ಉರುಗಳ ಮುಖದ ಸಾತ್ವಿಕಕಳೆ, ತೆರೆದ ಕಣ್ಣು, ಮಂದಸ್ಮಿತ ಮುಖ, ನೆರಿಗೆ ಹಿಡಿದ ಸೀರೆ, ಸೊಂಟದ ಪಟ್ಟಿ, ತುಂಡುತೋಳಿನ ರವಿಕೆ, ಎಡಕೈಯಲ್ಲಿ ಕನ್ನಡಿ, ಸೊಂಟ, ಕತ್ತು, ಮೂಗು ಮತ್ತು ಕೈಗಳಿಗೆ ಆಕರ್ಷಕ ಆಭರಣಗಳು, ಎಡಕ್ಕೆ ಇಳಿಬಿಟ್ಟ ಮುಡಿಯ ವಿಶಿಷ್ಟ ಕೇಶಾಲಂಕಾರಗಳು ಕರಾವಳಿಯ ಸಾಂಪ್ರದಾಯಿಕ ಮಹಿಳೆಯ ವೇಷಭೂಷಣಗಳನ್ನು ನೆನಪಿಸುತ್ತವೆ. ನಂದಿಯ ಮೇಲೆ ಕುಳಿತ ದುರ್ಗಾ ಪರಮೇಶ್ವರಿಯ ಬಲಕೈಯಲ್ಲಿ ಮರದ ಖಡ್ಗವಿದೆ. ಈ ಎಲ್ಲ ಸ್ತ್ರೀಪ್ರತಿಮೆಗಳಿಗೆ ಭಿನ್ನವಾಗಿ ಉಮ್ಮಳ್ತಿಯ ಉರು ಭಯಾನಕ ಸ್ವರೂಪದ್ದಾಗಿದೆ. ಕೋರೆಹಲ್ಲುಗಳ ತೆರೆದ ಬಾಯಿಯ ಬೃಹತ್‌ಗಾತ್ರದ ಸ್ತನಗಳು ರೌದ್ರಸೂಚಕವಾಗಿವೆ.

ಆನೆ, ಕುದುರೆ, ನಂದಿಯನ್ನು ವಾಹನವನ್ನಾಗಿಸಿಕೊಂಡ ಪುರುಷ ಸವಾರರು, ಕುಳಿತ ಭಂಗಿಯಲ್ಲಿರುವ ಜೋಗಿ ಪುರುಷ, ಹಸ್ರಲ ತಿಮ್ಮ, ಸೈನಿಕ ವೇಷದಲ್ಲಿರುವ ಪುರುಷ ಉರುಗಳು, ಅವರ ಕೈಯಲ್ಲಿರುವ ಆಯುಧಗಳು ಯುದ್ಧವೀರರನ್ನು ನೆನಪಿಸುತ್ತವೆ. ಕುಳಿತ ಭಂಗಿಯಲ್ಲಿರುವ ಜೋಗಿಪುರುಷನ ಉರು ನಾಥಪಂಥದ ಅನುಯಾಯಿಯಾಗಿ ಕಾಣಿಸಿ ಕೊಳ್ಳುತ್ತಾನೆ. ತಲೆಯ ಮೇಲಿನ ತ್ರಿಜಟೆ, ಹಣೆಯ ಮೇಲಿನ ಭಸ್ಮದ ನಾಮ, ಕಿವಿಯಲ್ಲಿ ತೂಗುತ್ತಿರುವ ದೊಡ್ಡ ಕುಂಡಲಗಳು, ರುದ್ರಾಕ್ಷಿಮಾಲೆ, ಕೈಯಲ್ಲಿ ಹಿಡಿದ ನವಿಲುಗರಿಗಳ ಕಟ್ಟು, ಮುಖದ ಮೇಲಿನ ಗಡ್ಡ ತುಂಬ ಕುತೂಹಲದಾಯಕವಾಗಿದೆ. ಗರ್ಭಗುಡಿಯ ಹೊರಭಾಗದಲ್ಲಿರುವ ಹಸ್ರ (ಹಸಲರ?) ತಿಮ್ಮನ ಉರು ಬೇಟೆಗಾರನನ್ನು ಸಂಕೇತಿಸುತ್ತದೆ. ಹಸ್ರತಿಮ್ಮನ ಇಕ್ಕೆಲಗಳಲ್ಲಿ ಎರಡು ಬೇಟೆನಾಯಿಗಳಿದ್ದು, ಕೈಯಲ್ಲಿ ದೊಡ್ಡ ಖಡ್ಗವಿದೆ. ವಾರ್ಷಿಕ ಮಾರಿಪೂಜೆಯ ಸಂದರ್ಭದಲ್ಲಿ ತಿಮ್ಮನಿಗೆ ರಕ್ತಾಹುತಿ (ಕೋಳಿ) ನೀಡಲಾಗುತ್ತದೆ. ಇದನ್ನು ಕಂಡಾಗ ಪರಿಸರದ ಬೇಟೆಗಾರಿಕೆಯಲ್ಲಿ ನಿಪುಣರಾದ ಹಸಲ ಸಮುದಾಯ ನೆನಪಿಗೆ ಬರುತ್ತದೆ. ಹೊರಬಾಗಿಲು ಪಕ್ಕದಲ್ಲಿ ಬಾಗಿಲ ಬೊಬ್ಬರ್ಯನ ಕಡಲ ಯುದ್ಧದಲ್ಲಿ ಜೀವಬಿಟ್ಟ ಮುಸ್ಲಿಂ ವ್ಯಾಪಾರಿ. ಉರುಸಾಲೆಯ ಖೇಚರಾವುತನ ಪ್ರತಿಮೆ ಸು.6.00 ಮೀ ಎತ್ತರವಾಗಿದ್ದು, ರುದ್ರರಮಣೀಯವಾಗಿದೆ. ತೆರೆದ ಅಗಲವಾದ ಕಣ್ಣುಗಳು, ಕೋರೆದಾಡೆಗಳು, ಸುಂದರವಾದ ಎತ್ತರವಾದ ಕಿರೀಟ, ಸೊಂಟಕ್ಕೆ ಚಲ್ಲಣಗೆಜ್ಜೆ, ಉದ್ದನೆಯ ಕಾಲು, ನಾಲ್ಕುಕೈಗಳು – ಈ ಮೂರ್ತಿಯ ವಿಶಿಷ್ಟಾಂಶಗಳು. ಒಂದು ಕೈಯಲ್ಲಿ ಕತ್ತಿ, ಇನ್ನೊಂದು ಕೈಯಲ್ಲಿ ನೇತಾಡುವ ಮನುಷ್ಯನ ರುಂಡ, ಇನ್ನೊಂದು ಕೈಯಲ್ಲಿ ಡಮರು. ಮೈಗೆ ಕಡುಕೆಂಪು ಬಣ್ಣ –ಈ ಮೂರ್ತಿಯ ಬೀಭತ್ಸರೂಪ ತಾಂತ್ರಿಕ ಪಂಥದ ಸಂಬಂಧದ ಬಗ್ಗೆ ಸುಳುಹು ನೀಡುತ್ತದೆ. ಸುಮಾರು ಇಷ್ಟೇ ಎತ್ತರದ ಇನ್ನೊಂದು ಮೂರ್ತಿ ತ್ರಿಶರನದು. ಮೂರು ತಲೆ, ನಾಲ್ಕು ಕೈ ನೋಡುವುದಕ್ಕೆ ಭಯಾನಕವಾದ ರೂಪ. ಭೈರವನ ವಿವಿಧ ರೂಪಗಳಾದ ಕಾಳಭೈರವ, ಬಟ್ವಾಂಗ ಭೈರವ, ಉನ್ಮತ್ತ ಭೈರವ ರೂಪ ನೋಟಕರಲ್ಲಿ ಭಯವನ್ನು ಹುಟ್ಟಿಸುತ್ತದೆ. ಜಟ್ಟಿಗರಾಯ ದ್ವಿಮುಖೇಶನಿಗೆ ಎರಡು ತಲೆ. ಮನುಷ್ಯರೂಪ. ಧೂಮ್ರಾಕ್ಷನ ಒಂದು ಕೈಯಲ್ಲಿ ಕತ್ತಿ, ಇನ್ನೊಂದರಲ್ಲಿ ಧೂಪದ ಗಿಂಡಿ.

ಉರುಗಳು ಕರಾವಳಿಯ ಆರಾಧನಾ ಲೋಕದ ವಿಸ್ಮಯಗಳು ಎನ್ನಬಹುದು. ಮಧ್ಯಕಾಲೀನ ರಹಸ್ಯ ತಾಂತ್ರಿಕ ಪಂಥಗಳ ದಟ್ಟವಾದ ಚಹರೆಯನ್ನು ಇಲ್ಲಿ ಕಾಣಬಹುದು. ಜೊತೆಗೆ ಈ ಪ್ರದೇಶದ ವೀರಯೋಧರ, ಸಾಂಸ್ಕೃತಿಕ ವೀರರ ಆರಾಧನಾ ಮೂರ್ತಿಗಳಾಗಿಯೂ ಗಮನಿಸಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಉದ್ದಕ್ಕೂ ಇರುವ ಕೋಟಿ ಚೆನ್ನಯರ ಆರಾಧನಾ ಕೇಂದ್ರ – ಗರೊಡಿಗಳಲ್ಲಿ ಅವಳಿ ವೀರರಾದ ಕೋಟಿ ಚೆನ್ನಯರ, ಕುಜುಂಬ ಕಾಂಜನ, ಬಿಕ್ಕು ಬಲ್ಲಾಳರಂತಹ ಯೋಧರ, ಜೋಗಿ ಪುರುಷನ ಮುಸ್ಲಿಮರ ಮಕ್ಕಳು ಎಂದು ಕರೆಯಲಾಗುವ

ಮುಸ್ಲಿಂ ಬಾಲಕರ ಮೂರ್ತಿಗಳನ್ನು ಕಾಣಬಹುದು. ಇವುಗಳನ್ನು ತುಳುವಿನಲ್ಲಿ ಪಾವೆ ಅಂದರೆ ಮೂರ್ತಿ ಎಂದು ಕರೆಯಲಾಗುವುದು. ಈ ಪಾವೆಗಳನ್ನು ಹಲಸಿನ ಮರಗಳಿಂದ ತಯಾರಿಸಲಾಗುವುದು. ಆಳೆತ್ತರದ ಮರದ ಪ್ರತಿಮೆಯ ವರ್ಣನೆ ಪಾಡ್ದನಗಳಲ್ಲಿ ಹೇಗೆ ಕೇಳಿ ಬರುತ್ತವೆಯೋ ಹಾಗೆಯೇ ಕೆತ್ತಲಾಗಿರುತ್ತದೆ. ಪಾಡ್ದವ ಒಂದರಲ್ಲಿ ತಲೆಯ ಮೇಲೆ ಚಪ್ಪರಕೊಂಬು ಎಂಬ ಕಿರೀಟ, ಸೊಂಟಕ್ಕೆ ಒಡ್ಡಿನೇವಲ ಚಲ್ಲಣಗೆಜ್ಜೆ, ಕಾಲಿಗೆ ಕಡವು, ಕೈಗೆ ಬಂಗಾರದ ಬಳೆ, ಕಿವಿಗೆ ನೇವಲದ ಕುಂಡಲ, ಕುತ್ತಿಗೆ ಹುಲಿಯುಗುರಿನ ಸರ, ಕೈಯಲ್ಲಿ ಆಯುಧ, ದೇಹಕ್ಕೆ ನಿಲುವಂಗಿ ಎಂಬ ವರ್ಣನೆ ಬರುತ್ತದೆ. ಸಾಮಾನ್ಯವಾಗಿ ಮೂರ್ತಿಯ ಎದೆ ಮತ್ತು ಹೊಟ್ಟೆಯ ಭಾಗವನ್ನು ಹಸುರು ಬಣ್ಣದಿಂದಲೂ ಮಿಕ್ಕಭಾಗವನ್ನು ಕೆಂಪು ಬಣ್ಣದಿಂದಲೂ ಅಲಂಕರಿಸಲಾಗುತ್ತದೆ. ಈ ಬಗೆಯ ಮರದ ಪಾಪೆ (ಉರುಶಿಲ್ಪ) ತಯಾರಿಸಲು ಗುಡಿಗಾರರಿಗೆ ಯಾವುದೇ ಶಾಸ್ತ್ರಾಧಾರ ಇಲ್ಲ. ಪರಂಪರಾಂಗತ ತಿಳಿವಳಿಕೆಯೇ ಆಧಾರ. ಕರಾವಳಿಯ 214 ಗರೊಡಿಗಳಲ್ಲಿ 69 ಗರೊಡಿಗಳಲ್ಲಿ ಮರದ ಮೂರ್ತಿಗಳಿರುವುದಾಗಿ ತಿಳಿದುಬಂದಿದೆ.

ಗರೊಡಿಯ ಬ್ರಹ್ಮಗುಂಡದೊಳಗಿನ ಇತರ ಮರದ ಮೂರ್ತಿಗಳೆಂದರೆ ಕುಜುಂಬ ಕಾಂಜವ, ಬಕ್ಕುಬಲ್ಲಾಳ್, ಮುಸ್ಲಿಮರ ಮಕ್ಕಳು ಮುಖ್ಯವಾದವು. ಇನ್ನು ಕೆಲವು ಗರೊಡಿಗಳಲ್ಲಿ ಮಾಯಂದಾಲ್, ಕಿನ್ನಿದಾರು ಹಾಗೂ ಜೋಗಿಪುರುಷನ ಮೂರ್ತಿಗಳು ಇರುತ್ತವೆ. ಕುಜುಂಬ ಕಾಂಜವ ಒಬ್ಬ ವೀರಯೋಧ. ಸಾಮಾನ್ಯವಾಗಿ ಎಲ್ಲ ಗರೊಡಿಗಳಲ್ಲಿ ಹೆಚ್ಚು ಕಡಮೆ 1.20–1.50ಮೀ ಎತ್ತರದ ಖಡ್ಗ, ಗುರಾಣಿಧರಿಸಿದ ವೀರಯೋಧನ ಮೂರ್ತಿ ಇರುತ್ತದೆ. ಇನ್ನು ಕೆಲವು ಗರೊಡಿ (ಕುರ್ಕಾಲ್)ಗಳಲ್ಲಿ ಯುದ್ಧರಂಗದ ಶಿರಸ್ತ್ರಾಣಧರಿಸಿದ ಪದಾತಿಯಂತಿರುತ್ತದೆ. ಇನ್ನೊಂದು ಮೂರ್ತಿ ಬಕ್ಕು ಬಲ್ಲಾಳನದು. ಕುದುರೆಯೇರಿರುವ ವೀರಯೋಧನಂತಿರುವ ಈ ಮೂರ್ತಿಯ ಕೈಯಲ್ಲಿ ಭಲ್ಲೆಯಂತಹ ಆಯುಧವಿರುತ್ತದೆ. ತುಳುನಾಡಿನ ಐತಿಹ್ಯದಂತೆ ಈತ ಪೆರ್ಮಲೆ ಬಲ್ಲಾಳನ ಭಾವನೆಂಟ. ಕೋಟಿ ಚೆನ್ನಯ್ಯರ ಆರಾಧನೆಯನ್ನು ವಿರೋಧಿಸಿದ ಫಲವಾಗಿ ಕಲ್ಲಾಗಿ ಹೋದನೆಂಬ ಪ್ರತೀತಿ. ಉಡುಪಿ ಪರಿಸರದ ಹೆಚ್ಚಿನ ಗರೊಡಿಗಳಲ್ಲಿ ಕೋಟಿಚೆನ್ನಯರ ಮೂರ್ತಿಯ ಪಕ್ಕಕ್ಕೆ ಇಬ್ಬರು ಮುಸ್ಲಿಮ್ ಮಕ್ಕಳ ಮರದ ಮೂರ್ತಿಗಳಿರುತ್ತವೆ. ಇದು ತುಳುನಾಡಿನ ಜನಮಂದಿಯ ಧರ್ಮಸಾಮರಸ್ಯಕ್ಕೆ ಒಂದು ನಿದರ್ಶನ. ಗರೊಡಿಗಳಲ್ಲಿರುವ ಇನ್ನೊಂದು ವಿಶಿಷ್ಟ ಮೂರ್ತಿಯೆಂದರೆ ಜೋಗಿಪುರುಷನದು. ಈ ಜೋಗಿ ಪುರುಷ ನಾಥಸಂಪ್ರದಾಯದ ಪ್ರಭಾವದಿಂದ ಬಂದನಾಗಿರಬೇಕು.

ಮಾಯಂದಾಲ್ (ಕನ್ನಡ ಮಾಯದವಳು) ಎಂಬ ಹೆಣ್ಣು ಮೂರ್ತಿ ಹೆಚ್ಚಿನ ಎಲ್ಲ ಗರೊಡಿಗಳಲ್ಲಿವೆ. ತಾಯ್ತನದ ಆರೈಕೆ, ಶಿಶುಮರಣ, ಫಲವಂತಿಕೆಯ ಪ್ರತೀಕವಾಗಿ ಈಕೆಯನ್ನು ತುಳುವರು ಆರಾಧಿಸುತ್ತಾರೆ. ಈ ಹೆಣ್ಣುಮೂರ್ತಿಯ ಪಕ್ಕದಲ್ಲಿ ಚಿಕ್ಕ ಮಗುವಿನ ಮೂರ್ತಿ ಇರುತ್ತದೆ. ಮೂರ್ತಿಯ ಎಡಕೈಯಲ್ಲಿ ತತ್ರ (ತಾಳೆಗರಿಯ ಕೊಡೆ) ಇರುತ್ತದೆ. ಕೆಲವು ಗರೊಡಿಗಳಲ್ಲಿ ಮಗು ತಾಯಿ ಮಾಯಂದಾಲ್‌ನ ಸೊಂಟದಲ್ಲಿ ಇರುವುದೂ ಉಂಟು. ತುಳುನಾಡಿನ ಏಳೆಂಟು ಗರೊಡಿಗಳಲ್ಲಿ ಜೀವಂತ ಕುದುರೆಯಷ್ಟೇ ಎತ್ತರದ ಮರದ ಕುದುರೆಯ ಆಕೃತಿ ಕಂಡುಬರುತ್ತದೆ. ಇದರ ಸ್ಥಾಪನೆಯ ಹಿನ್ನೆಲೆಯಲ್ಲಿ ಜನಪದ ಐತಿಹ್ಯವಿದೆ.

ಕರಾವಳಿಯ ದೈವದ ಮನೆಗಳ ಉರುಗಳು ಹಾಗೂ ಕೋಟಿಚೆನ್ನಯರ ಗರೊಡಿಗಳಲ್ಲಿನ ಪಾಪೆ(ಮೂರ್ತಿ)ಗಳು ಆರಾಧನಾ ಪ್ರಪಂಚದ ಸಾಂಕೇತಿಕ ಅಭಿವ್ಯಕ್ತಿಗಳು. (ಎ.ವಿ.ಎನ್‌ಎ.)

**ಗಾರೆಶಿಲ್ಪ:** ವಿವಿಧ ಮೂರ್ತಿಗಳನ್ನು ಗಾರೆಯಿಂದ ರಚಿಸುವ ಕಲೆ. ಪ್ರಾಚೀನ ಕಾಲದಿಂದಲೂ ಗಾರೆಯನ್ನು ವಾಸ್ತು ಮತ್ತು ಮೂರ್ತಿಶಿಲ್ಪಗಳ ರಚನೆಯಲ್ಲಿ ಬಳಸಿರುವುದನ್ನು ಕಾಣಬಹುದು. ಈಜಿಪ್ಟ್ ಸುಮೇರಿಯ ಮತ್ತು ಸಿಂಧೂ ನಾಗರಿಕತೆಗಳಲ್ಲಿ ಗಾರೆಯ ಬಳಕೆ ಬಗ್ಗೆ ಕುರುಹುಗಳಿವೆ. ಪ್ರಾಚೀನ ಭಿತ್ತಿ ಚಿತ್ರಗಳ ಹಿನ್ನಲೆಯಾಗಿ ಗಾರೆಯನ್ನು ಬಳಸಲಾಗಿದೆ. ಪ್ರಾಚೀನ ಗ್ರೀಕ್ ಮತ್ತು ರೋಮಿನ ಕಟ್ಟಡಗಳ ನಿರ್ಮಾಣದಲ್ಲಿ ಹಾಗೂ ಶಿಲ್ಪಕಲಾಕೃತಿಗಳ ರಚನೆಯಲ್ಲಿ ಗಾರೆ ಹೆಚ್ಚು ಬಳಕೆಗೊಂಡಿದೆ. ಈ ಕಾಲದಲ್ಲೇ ನಯ ಗಾರೆ ಒಂದು ಕಲಾಮಾಧ್ಯಮವಾಗಿ ರೂಪುಗೊಂಡಿತೆನ್ನಬಹುದು. ಭಾರತದಲ್ಲಿ ಗಾಂಧಾರ ಶೈಲಿಯಲ್ಲಿ ರಚನೆಗೊಂಡ ಬಹುತೇಕ ಬಿಡಿ ಆಕೃತಿಗಳು ಮತ್ತು ಫಲಕ ಶಿಲ್ಪಗಳು ಗಾರೆ ಮಾಧ್ಯಮವಾದವು. ಕರ್ನಾಟಕದಲ್ಲಿ ಶಾತವಾಹನರ ಕಾಲದಲ್ಲೇ ಕಟ್ಟಡಗಳ ನಿರ್ಮಾಣದಲ್ಲಿ ಸುಣ್ಣ ಗಾರೆಯನ್ನು ಬಳಸಲಾಗಿದೆ. ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ವಡಗ್ಗಾಂಪ್ ಮಾಧವಪುರದಲ್ಲಿ ನಡೆದ ಉತ್ಖನನಗಳು ಇಟ್ಟಿಗೆ ಕಟ್ಟಡಾವಶೇಷಗಳನ್ನು ಬೆಳಕಿಗೆ ತಂದಿವೆ. ಗಂಗರ ಕಾಲದ ದೇವಾಲಯಗಳಲ್ಲಿ ಭಿತ್ತಿ, ಚಾವಣಿ ಮತ್ತು ಶಿಖರಗಳ ರಚನೆಯಲ್ಲಿ ಇಟ್ಟಿಗೆಯೊಡನೆ ಗಾರೆಯನ್ನು ಬಳಸಲಾಗಿದೆ. ಬೌದ್ಧ ವಿಹಾರಗಳಲ್ಲಿನ ಭಿತ್ತಿ ರಚನೆಯಲ್ಲಿ ಗಾರೆಯನ್ನು ಕಾಣಬಹುದು. ಐಹೊಳೆಯ ಚಾಳುಕ್ಯ ಪೂರ್ವಕಾಲದ ಇಟ್ಟಿಗೆ ಕಟ್ಟಡದಲ್ಲಿ ಗಾರೆಯನ್ನು ಉಪಯೋಗಿಸಲಾಗಿದೆ. ಕಲ್ಯಾಣ ಚಾಳುಕ್ಯರ ಕಾಲದಲ್ಲೂ ಇಟ್ಟಿಗೆ ಗೋಡೆಯ ಮೇಲೆ ಗಾರೆ ಲೇಪನವನ್ನು ಮಾಡಿದ ಕುರುಹುಗಳು ಶಿಗ್ಗಾವಿ ತಾಲ್ಲೂಕಿನ ಬನ್ನಿಕೊಪ್ಪದ ಭೀಮೇಶ್ವರ ದೇವಾಲಯದಲ್ಲಿ ಕಾಣಬಹುದು. ಇದೇ ರೀತಿ ಹೊಯ್ಸಳ, ಮುಂದೆ ವಿಜಯನಗರ ಕಾಲಗಳಲ್ಲಿ ಗಾರೆ ಬಳಕೆಯನ್ನು ಕಾಣಬಹುದು. ಹಂಪಿಯ ಬಹುತೇಕ ಸ್ಮಾರಕಗಳಲ್ಲಿ ಗಾರೆಯನ್ನು ಬಳಸಲಾಗಿದೆ. ಬಿಜಾಪುರ, ಗುಲ್ಬರ್ಗ ಮತ್ತು ಬೀದರ್‌ನಲ್ಲಿನ ಮುಸ್ಲಿಂ ಸ್ಮಾರಕಗಳಲ್ಲಿ ಪ್ರಧಾನವಾಗಿ ಗಾರೆ ಬಳಕೆಗೊಂಡಿದೆ. ಅದರ ಪ್ರಭಾವ ವಿಜಯನಗರದ ಸ್ಮಾರಕಗಳಲ್ಲಿ ಎದ್ದು ಕಾಣುತ್ತದೆ. ಮುಖ್ಯವಾಗಿ ದೇವಾಲಯಗಳಲ್ಲಿಯ ಕೈಪಿಡಿ ಗೋಡೆಯ ಗೂಡುಗಳಲ್ಲಿ ಹಾಗೂ ಮಹಾದ್ವಾರ ಗೋಪುರಗಳಲ್ಲಿ ಗಾರೆ ಮೂರ್ತಿಶಿಲ್ಪಗಳನ್ನು ರಚಿಸಲಾಗಿದೆ. ಗಾರೆಯನ್ನು ಸುಣ್ಣ, ಮರಳು, ನೀರು, ಅಂಟುವಾಳಕಾಯಿ ಮತ್ತಿತರ ಅಂಟುಪದಾರ್ಥಗಳನ್ನು ಸೇರಿಸಿ ಸಿದ್ಧಪಡಿಸಲಾಗುವುದು. ಗಾರೆ ಮಿಶ್ರಣಗಳ ಅಳತೆ ಮತ್ತು ಪ್ರಮಾಣಗಳಿಗೆ ಸಂಬಂಧಿಸಿದಂತೆ ಸಂಸ್ಕೃತಿ ಸಾಹಿತ್ಯದ ಆಗಮಗಳು ಮತ್ತು ಶಿಲ್ಪ ಶಾಸ್ತ್ರ ಕೃತಿಗಳು ವಿವರಿಸಿವೆ. ಕಾಮಿಕಾಗಮ, ಹರಿಭಕ್ತವಿಲಾಸ ಮೊದಲಾದ ಕೃತಿಗಳಲ್ಲಿ ಗಾರೆ ಬಗೆಗಿನ ಮಾಹಿತಿಗಳುಂಟು. ಮುಖ್ಯವಾಗಿ ಗಾರೆಯ ಗುಣಮಟ್ಟ, ಅದನ್ನು ಬಳಸುವ ಉದ್ದೇಶವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಕಟ್ಟಡಗಳ ರಚನೆಗೆ ಮೇಲೆ ತಿಳಿಸಿದಂತೆ ಗಾರೆಯಲ್ಲಿ ಸುಣ್ಣ ಮತ್ತು ಮರಳು ಪ್ರಧಾನವಾಗಿರುತ್ತದೆ. ಆದರೆ ಶಿಲ್ಪಗಳ ರಚನೆಗೆ ಸುಣ್ಣ ಮತ್ತು ಮರಳಿನೊಂದಿಗೆ ಅಂಟುವಾಳ ಕಾಯಿ, ಬೆಲ್ಲ, ಮೊಟ್ಟೆ ಲೋಳೆರಸ, ಬಿಲ್ವಪತ್ರೆ ಕಾಯಿಗಳನ್ನು ಸೇರಿಸಿ ನುಣ್ಣಗೆ ಅರೆದು ಗಾರೆಯನ್ನು ತಯಾರಿಸಲಾಗುವುದು. ಆ ಗಾರೆಯನ್ನು ತಯಾರಿಸಿದ ಅನಂತರ ಕೆಲವು ದಿನಗಳವರೆಗೆ ಅದನ್ನು ಬಳಸಬಹುದು.

ಗಾರೆ ಶಿಲ್ಪಗಳು ಮಥುರಾದ ಕಾಲದಿಂದಲೂ ದೊರೆಯುತ್ತವೆ. ಮರಳಿನೊಂದಿಗೆ ಅಂಟು ಇತ್ಯಾದಿ ಪದಾರ್ಥಗಳನ್ನು ಸೇರಿಸಿ ಗಾರೆಯನ್ನು ಸಿದ್ಧಪಡಿಸುವ ಬಗೆಗೆ ಕಾಶ್ಯಪ ಶಿಲ್ಪ, ವಿಷ್ಣು ಧರ್ಮೋತ್ತರ ಪುರಾಣ ಮತ್ತು ಸಮರಾಂಗಣ ಸೂತ್ರಧಾರಗಳಲ್ಲಿ ಸಾಕಷ್ಟು ವಿವರಗಳಿವೆ. ಶಿಲ್ಪಗಳನ್ನು ಮಣ್ಣು, ಗಾರೆ, ಮರ, ಕಲ್ಲು, ಇಟ್ಟಿಗೆ, ಲೋಹ ಇತ್ಯಾದಿಗಳಿಂದ ರೂಪಿಸಿ ಅದಕ್ಕೆ ಸರಿಹೊಂದುವ ಬಣ್ಣಗಳನ್ನು ಲೇಪಿಸಿ, ಸುಂದರಗೊಳಿಸಬಹುದೆಂದು ಶ್ರೀಕುಮಾರನ ಚಿತ್ರಲಕ್ಷಣದಲ್ಲಿ ಹೇಳಿದೆ. ಗಾರೆ ಪ್ರತಿಮೆಗಳಿಗೆ ಬಣ್ಣ ಹಾಕಿರುವುದನ್ನು ಪಲ್ಲವರ ಕಾಲದ ಕಾಂಚಿಪುರಂನ ಕೈಲಾಸನಾಥ ದೇವಾಲಯ ಮತ್ತು ಚೋಳರ ಕಾಲದ ತಂಜಾವೂರಿನ ಬೃಹದೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಕೆಲವು ಉತ್ಸವ ಮೂರ್ತಿಗಳನ್ನು ಮರ, ಕಲ್ಲು, ಅಥವಾ ಮಣ್ಣಿನಿಂದ ತಯಾರಿಸಿ ಅವುಗಳ ಮೇಲೆ ತೆಳುವಾಗಿ ಗಾರೆಯನ್ನು ಲೇಪಿಸಿ ಬಣ್ಣ ಹಚ್ಚಿರುವುದನ್ನು ಹಾಗೂ ಅವುಗಳಿಗೆ ಅಭಿಷೇಕಾದಿಗಳನ್ನು ಮಾಡುವಂತಿಲ್ಲವೆಂಬ ವಿಚಾರ ಆಗಮಗಳಲ್ಲಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಗಾರೆಯ ಶಿಲ್ಪ ಗಾಂಧಾರ ಶಿಲ್ಪ ಕಾಲಕ್ಕಿಂತ ಹಳೆಯದೆಂದೂ ಆಕೃತಿಯ ಬಟ್ಟೆ ಮತ್ತು ಅಂಗಾಂಗಗಳ ಉಬ್ಬು ತಗ್ಗುಗಳನ್ನು ಸೂಚಿಸಲು ಮಾತ್ರ ಬಣ್ಣಗಳನ್ನು ಹಾಕಲಾಗುತ್ತದೆಂಬುದು ಕೆ.ಎಂ. ವರ್ಮ ಅವರ ಅಭಿಪ್ರಾಯ.

ಕರ್ನಾಟಕದ ಗಂಗರ ಕಾಲದ ದೇವಾಲಯಗಳಲ್ಲಿ ಗಾರೆಶಿಲ್ಪಗಳಿವೆ. ಚಾಮರಾಜನಗರ ತಾಲ್ಲೂಕಿನ ನರಸಮಂಗಲದ ರಾಮಲಿಂಗೇಶ್ವರ ದೇವಾಲಯದ ವಿಮಾನದಲ್ಲಿ ಗಾರೆ ವಿಗ್ರಹಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಉಳಿದು ಬಂದಿವೆ. ಸು.10–12 ನೆಯ ಶತಮಾನದ ಹಲವಾರು ದೇವಾಲಯಗಳ ಗರ್ಭಗೃಹಗಳಲ್ಲಿ ಗಾರೆಶಿಲ್ಪಗಳನ್ನು ರಚಿಸಿದ್ದು, ಇಂದಿಗೂ ಉಳಿದು ಬಂದಿವೆ. ಕೋಲಾರದ ಕೋಲಾರಮ್ಮ, ಅಂಗಡಿಗ್ರಾಮದ ವಾಸಂತಿಕಾ, ಕೂಡಲೂರಿನ ಬಸದಿ ಹಾಗೂ ದೇವಾಲಯ, ಹಾಸನದ ಹಾಸನಾಂಬ, ಕೆಲಸೂರಿನ ಬಸದಿ ಮುಂತಾದೆಡೆಗಳಲ್ಲಿ ಗಾರೆಯ ಬೃಹದಾಕಾರದ ಪೂಜಾ ವಿಗ್ರಹಗಳನ್ನು ಕಾಣಬಹುದು. ಮಂಡ್ಯ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೆಲವೆಡೆ ಗ್ರಾಮದೇವತೆಗಳು ಗಾರೆಯಿಂದ ರೂಪುಗೊಂಡಿವೆ. ಚನ್ನಪಟ್ಟಣ ತಾಲ್ಲೂಕಿನ ದೇವರ ಹೊಸಳ್ಳಿಯಲ್ಲಿರುವ ಸಂಜೀವರಾಯ (ಆಂಜನೇಯ) ಶಿಲ್ಪ ಗಾರೆಯದು. ಗ್ರಾಮದೇವತೆಗಳ ಗುಡಿಗಳಲ್ಲಿ ಗಾರೆಯ ನಗ್ನ ಸ್ತ್ರೀ ಮತ್ತು ಪುರುಷರ ಪ್ರತಿಮೆಗಳು ಹೆಚ್ಚಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯದ ವಡ್ಡಾರಾಧನೆ ಹಾಗೂ ಜಗನ್ನಾಥ ವಿಜಯ ಮೊದಲಾದ ಕಾವ್ಯಗಳಲ್ಲಿ ಲೆಪ್ಪದ ಬೊಂಬೆ ಎಂಬುದನ್ನು ಗಾರೆ ಪ್ರತಿಮೆಗಳಿಗೆ ಸಂವಾದಿಯಾಗಿ ಬಳಸಲಾಗಿದೆ. ಅಂದರೆ ಪ್ರತಿಮೆಯನ್ನು ಸಂಪೂರ್ಣ ಗಾರೆಯಿಂದ ಮಾಡದೆ ಮಣ್ಣು ಅಥವಾ ಕಲ್ಲಿನಲ್ಲಿ ಮಾಡಿದ ಒರಟು ರಚನೆಗಳ ಮೇಲೆ ಗಾರೆಯನ್ನು ಲೇಪಿಸಲಾಗುತ್ತಿತ್ತು. ಇಂಥಹ ಪ್ರತಿಮೆಗಳು ಚೋಳರ ಕಾಲದಲ್ಲಿಯೂ ರಚನೆಗೊಂಡಿವೆ. ಗಂಗೈಕೊಂಡ ಚೋಳಪುರಂನಲ್ಲಿ ಇಂಥ ಈ ಬಗೆಯ ಗೊಂಬೆಗಳನ್ನು ಈಗಲೂ ನೋಡಬಹುದು. ವಿಜಯನಗರ ಕಾಲದಲ್ಲಿ ಒರಟು ಶಿಲಾಕಂಬಗಳಿಗೆ ಗಾರೆ ಲೇಪನ ಮಾಡಿ ನಯಗೊಳಿಸಿ ಚಿತ್ರಗಳಿಂದ ಅಲಂಕರಿಸಲಾಗುತ್ತಿತ್ತು. ಮತ್ತೊಂದು ರೀತಿಯ ಗಾರೆಶಿಲ್ಪಗಳೆಂದರೆ, ಮೊದಲಿಗೆ ಕಬ್ಬಿಣದ ಕಂಬಿಗಳಿಂದ ಸ್ಥೂಲ ರಚನೆಯನ್ನು ಸಿದ್ಧಪಡಿಸಿಕೊಂಡು, ಅನಂತರ ಅದಕ್ಕೆ ಗಾರೆ ತುಂಬಲಾಗುತ್ತಿತ್ತು. ಇವು ಮೈಸೂರು ಅರಸರ ಕಾಲದ್ದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಆದರೆ ವಿಜಯನಗರ ಕಾಲದ ಗಾರೆ ಶಿಲ್ಪಗಳಲ್ಲೇ ಮರದ ಗೂಟ ಹಾಗೂ ಅವಶ್ಯವಿದ್ದಲ್ಲಿ ಮಾತ್ರ ಅಭಯ ಹಸ್ತ ಮತ್ತು ವರದ ಹಸ್ತಗಳ ರಚನೆಗೆ ಕಬ್ಬಿಣದ ಕಡ್ಡಿಗಳನ್ನು ಬಳಸುತ್ತಿದ್ದರು. ಬಹುಶಃ ಇದೇ ವಿಧಾನವನ್ನು ಮೈಸೂರು ಅರಸರು ಅನುಸರಿಸಿ ಅಭಿವೃದ್ಧಿಪಡಿಸಿರಬಹುದು.

ಶಿಲಾ ಪ್ರತಿಮೆಗಳಲ್ಲಿ ಕಂಡುಬರುವ ವಿಗ್ರಹಗಳ ನಿರ್ಮಾಣದ ಮಾನ, ಪ್ರಮಾಣ, ಉನ್ಮಾನ, ಪರಿಮಾಣ, ಉಪಮಾನ, ಲಂಬಮಾನ ಮೊದಲಾದ ಲಕ್ಷಣಗಳು ಗಾರೆಶಿಲ್ಪಗಳ ನಿರ್ಮಾಣದಲ್ಲೂ ಕಂಡುಬರುತ್ತವೆ. ದ್ರಾವಿಡ ಶೈಲಿಯ ಶಿಖರ ಮತ್ತು ಗೋಪುರಗಳಲ್ಲಿ ಗಾರೆ ಶಿಲ್ಪಗಳು ವಿಶೇಷವಾಗಿವೆ. ಇದಕ್ಕೆ ದ್ರಾವಿಡ ಮಾದರಿಯ ನಿರ್ಮಾಣ ಸ್ವರೂಪವೇ ಕಾರಣ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದನ್ನು ಹಂಪೆಯ ದೇವಾಲಯಗಳ ಶಿಖರ ಮತ್ತು ಗೋಪುರಗಳಲ್ಲಿ ರಚನೆಗೊಂಡಿರುವ ಅಸಂಖ್ಯಾತ ಗಾರೆಶಿಲ್ಪಗಳು

ಸಮರ್ಥಿಸುತ್ತವೆ. ಆದರೂ ಗಾರೆಶಿಲ್ಪಗಳ ರಚನೆಯ ಹಿಂದಿರುವ ಪ್ರಧಾನ ಉದ್ದೇಶ ವಾಸ್ತು ನಿರ್ಮಾಣಗಳನ್ನು ಅಲಂಕೃತಗೊಳಿಸುವುದಾಗಿದೆ. ಇದು ಬಿಡಿ ಶಿಲ್ಪವಾಗಿರಲಿ ಅಥವಾ ಉಬ್ಬು ಶಿಲ್ಪವಾಗಿರಲಿ ಹಿನ್ನಲೆಯಲ್ಲಿರುವ ವಾಸ್ತು ಭಾಗದ ಸೌಂದರ್ಯವನ್ನು ಹೆಚ್ಚಿಸುವುದಲ್ಲದೆ, ಖಾಲಿ ಕಾಣುವ ಸ್ಥಳವನ್ನು ಕಲಾಕೃತಿಗಳಿಂದ ತುಂಬುವುದಾಗಿತ್ತು. ಹೀಗಾಗಿ ವಾಸ್ತು ಅಲಂಕರಣದಲ್ಲಿ ಗಾರೆ ಪ್ರತಿಮೆಗಳು ಪ್ರಮುಖ ಪಾತ್ರ ವಹಿಸಿದ್ದವು.

ವಿಜಯನಗರ ಕಾಲದ ಗಾರೆ ಪ್ರತಿಮೆಗಳ ಅಧ್ಯಯನಕ್ಕೆ ಹಂಪಿ ಸೂಕ್ತ ಸ್ಥಳ. ಇಲ್ಲಿಯ ವಿರೂಪಾಕ್ಷ ದೇವಾಲಯ, ಕೃಷ್ಣದೇವಾಲಯ, ವಿಠ್ಠಲ ದೇವಾಲಯ, ಹಜಾರ ರಾಮ ದೇವಾಲಯ, ಮಾಲ್ಯವಂತ ರಘುನಾಥ ದೇವಾಲಯ, ಅಚ್ಯುತರಾಯ ದೇವಾಲಯ ಹಾಗೂ ಇನ್ನಿತರ ಸಣ್ಣ ಪುಟ್ಟ ದೇವಾಲಯಗಳಲ್ಲಿ ಗಾರೆಶಿಲ್ಪಗಳನ್ನು ಕಾಣಬಹುದು. ಅಲ್ಲದೆ ವಿಜಯನಗರ ಕಾಲದಲ್ಲಿ ಬೇರೆ, ಬೇರೆ ಪ್ರದೇಶಗಳಲ್ಲಿ ನಿರ್ಮಾಣಗೊಂಡ ದೇವಾಲಯಗಳ ಶಿಖರ, ರಾಯಗೋಪುರ ಮತ್ತು ಕೈಪಿಡಿಗೋಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಾರೆ ಪ್ರತಿಮೆಗಳು ರಚನೆಗೊಂಡವು. ಈ ಪ್ರತಿಮೆಗಳಲ್ಲಿ ಕೆಲವು ಸುಸ್ಥಿತಿಯಲ್ಲಿದ್ದು, ಉಳಿದಂತೆ ಭಗ್ನಗೊಂಡಿವೆ. ಅಲ್ಲದೆ ಗಾರೆಶಿಲ್ಪಗಳು ಸದಾ ತೆರೆದ ಸ್ಥಿತಿಯಲ್ಲಿದ್ದು, ಮಳೆ, ಗಾಳಿ ಮತ್ತು ಬಿಸಿಲುಗಳಿಂದ ಹಾಳಾಗುವ ಸಾಧ್ಯತೆಯೇ ಹೆಚ್ಚು. ಹೀಗೆ ಹಾಳಾದ ಶಿಲ್ಪಗಳನ್ನು ಕಾಲ ಕಾಲಕ್ಕೆ ಜೀರ್ಣೋದ್ಧಾರಗೊಳಿಸಿ ಸುಣ್ಣ ಬಣ್ಣಗಳನ್ನು ಹಚ್ಚಿರುವುದರಿಂದ ಅವುಗಳ ಸೌಂದರ್ಯ ಮರೆಯಾಗಿ ಒರಟು ರಚನೆಗಳಂತೆ ಕಂಡು ಬರುತ್ತವೆ. ಹೀಗಾಗಿ ಗಾರೆಶಿಲ್ಪಗಳ ಕಾಲಮಾನವನ್ನು ನಿರ್ದಿಷ್ಟವಾಗಿ ಗುರುತಿಸುವುದು ಕಷ್ಟ.

ವಿಜಯನಗರ ಕಾಲದ ಗಾರೆ ಶಿಲ್ಪಗಳು ಬೆಡಗುಬಿನ್ನಾಣಗಳಿಂದ ಕೂಡಿದ್ದು, ಹೊಯ್ಸಳ ಶಿಲ್ಪಗಳನ್ನು ನೆನಪಿಸುತ್ತವೆ. ಗಾರೆ ಹಸಿ ಹಿಟ್ಟಿನಂತಿರುವುದರಿಂದ ಶಿಲ್ಪಿ ತನ್ನೆಲ್ಲ ಕುಶಲತೆಯನ್ನು ಪ್ರಯೋಗಿಸಲು ಅವಕಾಶವಿದ್ದು, ಶಿಲ್ಪಗಳು ಅತ್ಯಂತ ಮನೋಜ್ಞವಾಗಿ ಮೂಡಿ ಬರಲು ಸಾಧ್ಯವಾಗಿದೆ. ಒಂದು ವೇಳೆ ರಚನೆ ಸರಿ ಬರದಿದ್ದರೆ, ಪುನಃ ಅದಕ್ಕೆ ಗಾರೆಯನ್ನು ಲೇಪಿಸಿ ಸುಂದರಗೊಳಿಸಲಾಗುತ್ತಿತ್ತು. ಹೀಗಾಗಿ ಗಾರೆ ಶಿಲ್ಪಗಳ ರಚನೆಯಲ್ಲಿ ತಿಳಿದೋ ತಿಳಿಯದೆಯೋ ಶಿಲ್ಪಿಯ ಸೃಜನಶೀಲತೆ ಪ್ರವೇಶವಾಗುತ್ತಿತ್ತು. ಇದರಿಂದಾಗಿ ಕೆಲವು ಗಾರೆ ಶಿಲ್ಪಗಳಲ್ಲಿ ನವ್ಯ ಗುಣಲಕ್ಷಣಗಳನ್ನು ಕಾಣಬಹುದು. ಮುಖ್ಯವಾಗಿ ವಿಜಯನಗರದ ಗಾರೆಶಿಲ್ಪಗಳು ನಾನಾ ಭಂಗಿಗಳಲ್ಲಿದ್ದು, ನೀಳ ರಚನೆಗಳಾಗಿವೆ. ಉದ್ದವಾಗಿದ್ದು, ತೆಳುವಾಗಿ ಬಳುಕುವ ಲಕ್ಷಣಗಳಿಂದ ಕೂಡಿವೆ. ಈ ಲಕ್ಷಣಗಳನ್ನು ಆ ಕಾಲದ ಶಿಲಾಶಿಲ್ಪಗಳಲ್ಲೂ ಕಾಣಬಹುದು. ಗಾರೆಶಿಲ್ಪಗಳಿಗೆ ವಸ್ತ್ರದ ಅಲಂಕರಣವಿದ್ದು, ಕಸೂತಿ ಕೆಲಸವನ್ನು ಮಾಡಲಾಗಿದೆ. ಮಣಿಗಳ ಹಾರಗಳು ಪ್ರಧಾನ ಆಭರಣಗಳಾಗಿ ಎದ್ದು ಕಾಣುತ್ತವೆ. ಗಾರೆ ಶಿಲ್ಪಗಳು ಗೋಡೆಗೆ ಒರಗಿ ನಿಂತ ಬಿಡಿಶಿಲ್ಪಗಳಂತೆ ರಚನೆಗೊಂಡಿವೆ. ಪ್ರತಿಮಾ ಶಾಸ್ತ್ರದ ಲಕ್ಷಣಗಳನ್ನೊಳಗೊಂಡ ಈ ಶಿಲ್ಪಗಳು ಅಂಗಾಂಗ ರಚನೆಯಲ್ಲಿ ಪ್ರಮಾಣ ಬದ್ಧತೆಯನ್ನು ಕಾಯ್ದುಕೊಂಡಿವೆ. ನುರಿತ ಶಿಲ್ಪಿಗಳ ಅನುಭವದ ಸಾಕಾರ ಮೂರ್ತಿಗಳಂತೆ ಕಂಡು ಬರುತ್ತವೆ ಹಾಗೂ ಸಮಕಾಲೀನ ಇತರ ಮಾಧ್ಯಮಗಳ ಪ್ರತಿಮೆಗಳಿಗೆ ಸರಿ ಸಮನಾಗಿ ನಿಲ್ಲುತ್ತವೆ. ವಿಜಯನಗರೋತ್ತರ ಕಾಲದಲ್ಲಿ ರಚನೆಗೊಂಡ ಗಾರೆಶಿಲ್ಪಗಳು ಉಬ್ಬು ರಚನೆಗಳಾಗಿದ್ದು, ಒರಟು ಒರಟಾಗಿವೆ. ಈ ರೀತಿಯ ಶಿಲ್ಪಗಳು ವಿರೂಪಾಕ್ಷ ದೇವಾಲಯದ ಕೈಪಿಡಿಗೋಡೆಯ ಕೆಲವು ಗೂಡುಗಳಲ್ಲಿ(ವೈಷ್ಣವ ಶಿಲ್ಪಗಳು) ಮತ್ತು ಮುಂದಿನ ಮಹಾದ್ವಾರ ಗೋಪುರದಲ್ಲಿವೆ. ಈ ಶಿಲ್ಪಗಳು ಕೇವಲ ಗೋಡೆಗಂಟಿದ ತೆಳು ಉಬ್ಬು ಶಿಲ್ಪಗಳಂತಿವೆ. ವಸ್ತ್ರ ಮತ್ತು ಆಭರಣಗಳ ಅಲಂಕರಣದಲ್ಲಿ ವಿಜಯನಗರ ಕಾಲದ ಶಿಲ್ಪಶೈಲಿಯನ್ನೇ ಅನುಸರಿಸಿದ್ದರೂ ಒರಟು ಲಕ್ಷಣಗಳು ಎದ್ದು ಕಾಣುತ್ತವೆ. ಹೀಗಾಗಿ ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಗಾರೆ ಪ್ರತಿಮೆಗಳನ್ನು ಕಾಣಬಹುದಾಗಿದೆ. ಆದರೆ ಉಳಿದ ದೇವಾಲಯಗಳಲ್ಲಿ ವಾಸ್ತು ನಿರ್ಮಾಣದೊಂದಿಗೆ ರಚನೆಗೊಂಡ ಗಾರೆಶಿಲ್ಪಗಳನ್ನು ಕಾಣಬಹುದು. ಅಂದರೆ ವಿಜಯನಗರ ಕಾಲದಲ್ಲೆ ರಚನೆಗೊಂಡ ಗಾರೆಶಿಲ್ಪಗಳಿವೆ. ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಶೈವಗಾರೆ ಶಿಲ್ಪಗಳು ಇದೇ ದೇವಾಲಯದ ಕಿರಿಯ ಗೋಪುರದಲ್ಲಿರುವ ಗಾರೆಶಿಲ್ಪಗಳು, ಕೃಷ್ಣ ದೇವಾಲಯದ ಮಹಾದ್ವಾರ ಗೋಪುರದ ಗಾರೆ ಪ್ರತಿಮೆಗಳು, ಹಜಾರರಾಮದೇವಾಲಯದ ಕೈಪಿಡಿಗೋಡೆಯಲ್ಲಿರುವ ಸಾಲುಗಾರೆ ಪ್ರತಿಮೆಗಳು, ಮಲಪನ ಗುಡಿಯ ಮಲ್ಲಿಕಾರ್ಜುನ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಗಾರೆ ಪ್ರತಿಮೆಗಳು ಹಾಗೂ ಮಾಲ್ಯವಂತ ರಘುನಾಥ ದೇವಾಲಯದ ಗೋಪುರಗಳಲ್ಲಿರುವ ಗಾರೆ ಪ್ರತಿಮೆಗಳು ಮುಖ್ಯವಾಗಿವೆ. ಕೆಲವೆಡೆ ಗಾರೆ ಪ್ರತಿಮೆಗಳಿಗೆ ವಿವಿಧ ಬಣ್ಣಗಳನ್ನು ಲೇಪಿಸಿ ಅಲಂಕರಿಸಲಾಗಿದೆ. ಇವುಗಳಲ್ಲಿ ದೇವತಾ ಶಿಲ್ಪಗಳಲ್ಲದೆ ಲೌಕಿಕ ಶಿಲ್ಪಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿವೆ.

ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಉಮಾಮಹೇಶ್ವರ, ನಾಟ್ಯಗಣಪ, ತ್ರಿಭಂಗಿಯಲ್ಲಿರುವ ಶಿವ, ನಂದಿರೂಢ ಶಿವಪಾರ್ವತಿ, ಶೈವಯತಿ, ಗಣಸಮೂಹ, ಚಾತುರಧಾರಿ ಸ್ತ್ರೀಯರು, ಭಕ್ತ ವೃಂದ ಗಾರೆ ಪ್ರತಿಮೆಗಳು ಉಲ್ಲೇಖಾರ್ಹ. ಕೊರಳಹಾರ, ತೋಳ್ಬಂದಿ, ಕಡಗ, ಡಾಬು ಮತ್ತು ಕಿರೀಟಗಳಿಂದ ಅಲಂಕೃತಗೊಂಡ ಈ ಪ್ರತಿಮೆಗಳು ಮನಮೋಹಕವಾಗಿವೆ. ಪುರುಷ ದೇವತೆಯನ್ನು ದೊಡ್ಡದಾಗಿಯೂ ಸ್ತ್ರೀದೇವತೆಯನ್ನು ಚಿಕ್ಕದಾಗಿಯೂ ರಚಿಸಲಾಗಿದೆ. ಕೃಷ್ಣದೇವಾಲಯದ ಮಹಾದ್ವಾರ ಗೋಪುರದ ಪಶ್ಚಿಮ ಭಾಗದಲ್ಲಿರುವ ಸೈನಿಕರ ಸಮೂಹ ಗಾರೆ ಶಿಲ್ಪಗಳನ್ನು ಕೃಷ್ಣದೇವರಾಯ ಒರಿಸ್ಸದ ಮೇಲೆ ಕೈಗೊಂಡ ದಂಡಯಾತ್ರೆಯ ಚಿತ್ರಣವೆನ್ನಲಾಗಿದೆ. ಇದರ ಬಹುಭಾಗ ಭಗ್ನಗೊಂಡಿದ್ದು ಇತ್ತೀಚೆಗೆ ಇದನ್ನು ಸಂರಕ್ಷಿಸಲಾಗಿದೆ.

ಹಂಪೆಯ ಗಾರೆ ಪ್ರತಿಮೆಗಳಲ್ಲಿ ಮಿಥುನ ಶಿಲ್ಪಗಳು ಪ್ರಮುಖವಾಗಿವೆ. ಇವುಗಳ ಮೈಮಾಟ ಆಕರ್ಷಕವಾಗಿದೆ. ವಿಠಲ ದೇವಾಲಯದ ಗೋಪುರದಲ್ಲಿ (ಪೂರ್ವ) ನಗ್ನ ಸ್ತ್ರೀಶಿಲ್ಪವೊಂದು ಲಜ್ಜಾಗೌರಿಶಿಲ್ಪದ ಮಾದರಿಯಲ್ಲಿದೆ. ವಿರೂಪಾಕ್ಷ ದೇವಾಲಯದ ದೊಡ್ಡ ಗೋಪುರದ ದಕ್ಷಿಣ ಮುಖದಲ್ಲಿರುವ ಮಿಥುನ ಶಿಲ್ಪಗಳು ಜೀವಂತಿಕೆಯಿಂದ ಕೂಡಿವೆ. ಸ್ತ್ರೀ ಪ್ರತಿಮೆಗಳು ತುಂಬು ಯೌವನವನ್ನು ಪ್ರಕಟಿಸುತ್ತವೆ. ಇವುಗಳ ಸುಂದರ ಕೇಶಾಲಂಕರಣ, ಲೇಪಾಕ್ಷಿ ವರ್ಣ ಚಿತ್ರಗಳಲ್ಲಿರುವ ಸ್ತ್ರೀಯರ ಕೇಶಾಲಂಕಾರವನ್ನು ಹೋಲುತ್ತವೆ. ಕೃಷ್ಣ ದೇವಾಲಯದ ಗೋಪುರದಲ್ಲಿರುವ ಗೋಪಿಕಾಸ್ತ್ರೀಯರ ಶಿಲ್ಪಗಳು ನಗ್ನವಾಗಿದ್ದರೂ ಸದಭಿರುಚಿಗೆ ಉತ್ತಮ ಉದಾಹರಣೆಗಳಾಗಿವೆ.

ಹೀಗೆ ಗಾರೆ ಪ್ರತಿಮೆಗಳು ವಿಜಯನಗರ ಕಾಲದ ವಾಸ್ತು ರಚನೆಗಳ ಅಲಂಕರಣವನ್ನು ಇಮ್ಮಡಿಸುವುದರಲ್ಲಿ ಪ್ರಮುಖ ಪಾತ್ರವಹಿಸಿವೆ. ವಿವಿಧ ಪಂಥದ ದೇವತೆಗಳು, ಪೌರಾಣಿಕ ಘಟನಾವಳಿಗಳು, ಪರಿವಾರ ದೇವತೆಗಳು, ಪ್ರಾಣಿಪಕ್ಷಿಗಳು, ರಾಜ, ರಾಣಿ, ಯತಿ ,ಶಿಷ್ಯ ಮತ್ತು ಇತರ ಸಮೂಹ ಗಾರೆ ಪ್ರತಿಮೆಗಳು ಪ್ರಮುಖವಾಗಿವೆ. ವಿಜಯನಗರ ಕಾಲದಲ್ಲಿ ಹಂಪಿ ಹೊರತುಪಡಿಸಿ ಇತರೆಡೆಗಳಲ್ಲಿ ನಿರ್ಮಾಣಗೊಂಡ ರಾಯಗೋಪುರ (ಮಹಾದ್ವಾರ ಗೋಪುರ) ಹಾಗೂ ಕೈಪಿಡಿ ಗೋಡೆಯ ಗೂಡುಗಳಲ್ಲಿ ಗಾರೆ ಪ್ರತಿಮೆಗಳು ನಿರ್ಮಾಣ ಗೊಂಡವು. ಉದಾ: ಮೇಲುಕೋಟೆ, ಕನಕಗಿರಿ, ಶ್ರೀರಂಗಪಟ್ಟಣ. ಈ ಹಿನ್ನೆಲೆಯಲ್ಲಿ ವಿಜಯನಗರ ಕಾಲದಲ್ಲಿ ಗಾರೆ ಪ್ರತಿಮೆಗಳನ್ನು ಶಿಲ್ಪಶಾಸ್ತ್ರದಲ್ಲಿ ಪರಿಣತಿ ಪಡೆದಿದ್ದ ಶಿಲ್ಪಿಗಳೆ ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ಈ ಕಾಲದ ಮರ, ಶಿಲೆ, ಲೋಹ ಮತ್ತು ಗಾರೆ ಪ್ರತಿಮೆಗಳು ಲಕ್ಷಣ ಮತ್ತು ಶೈಲಿಯಲ್ಲಿ ಒಂದೇ ಮಾದರಿಯಲ್ಲಿ ಕಂಡುಬರುತ್ತವೆ. ಅಂದರೆ ವಿಜಯನಗರ ಕಾಲದಲ್ಲಿ ಗಾರೆ ಕುಶಲಕಲೆಯಲ್ಲಿ ನುರಿತ ಶಿಲ್ಪಿಗಳ ಒಂದು ವರ್ಗವೇ ಇತ್ತೆಂಬುದು ಸುಸ್ಪಷ್ಟ ಆದರೆ ಗಾರೆ ಶಿಲ್ಪಿಗಳನ್ನು ಕುರಿತಂತೆ ಈವರೆಗೂ ಯಾವುದೇ ಮೂಲದ ಮಾಹಿತಿ ದೊರೆತಿಲ್ಲ. ಇನ್ನು ಮೈಸೂರು ಒಡೆಯರ ಕಾಲದಲ್ಲೂ ಹೆಚ್ಚಿನ ಸಂಖ್ಯೆಯ ಗಾರೆ ಪ್ರತಿಮೆಗಳನ್ನು ದೇವಾಲಯಗಳ ಗೋಪುರ ಮತ್ತು ಕೈಪಿಡಿಗೋಡೆಯ ಗೂಡುಗಳಲ್ಲಿ ನಿರ್ಮಿಸಲಾಯಿತು. ಕಾಲಕ್ರಮೇಣ ವಸತಿ ಗೃಹಗಳ ಅಲಂಕರಣೆಯಲ್ಲಿ ಗಾರೆಯನ್ನು ಯಥೇಚ್ಛವಾಗಿ ಬಳಸುವ ಪದ್ಧತಿ ರೂಢಿಯಾಯಿತು. ಸಿಮೆಂಟ್ ಮತ್ತಿತರ ಆಧುನಿಕ ವಸ್ತುಗಳ ಪ್ರವೇಶದಿಂದಾಗಿ ಗಾರೆ ಬಳಕೆ ಸ್ಥಗಿತಗೊಂಡಿತೆನ್ನಬಹುದು. ಆದರೂ ಕೆಲವು ಕೆಲಸಗಳಿಗೆ ಗಾರೆ ಬಳಕೆಗೊಳ್ಳುತ್ತಿದೆ. (ಸಿ.ಎಂ.)

**ಸ್ಮಾರಕ ಶಿಲ್ಪಗಳು:** ಪ್ರಾಚೀನ ಕರ್ನಾಟಕದಲ್ಲಿ ವೀರಗಲ್ಲು, ಮಹಾಸತಿ ಅಥವಾ ಮಾಸ್ತಿಕಲ್ಲು ಮತ್ತು ನಿಷಿಧಿಕಲ್ಲು ಮುಂತಾದವು ಮರಣಶಿಲ್ಪಗಳು. ಜೈನರ ಸಮಾಧಿಮರಣ (ನಿಷಿಧಿ), ಯುದ್ಧದಲ್ಲಿ ವೀರಮರಣ (ವೀರಗಲ್ಲು) ಮತ್ತು ಮೃತ ಪತಿಯೊಡನೆ ಸಹಗಮನ (ಮಾಸ್ತಿಕಲ್ಲು) ಇಂಥ ಸಂದರ್ಭಗಳಲ್ಲಿ ನಿರ್ಮಿಸುತ್ತಿದ್ದ ಸ್ಮಾರಕ ಶಿಲ್ಪಗಳು. ಸ್ಮಾರಕಗಳು ಕೇವಲ ಶಿಲ್ಪ ಇಲ್ಲವೆ ಕೇವಲ ಶಾಸನವಾಗಿರಬಹುದಾದರೂ ಓದುಬರಹ ತಿಳಿದವರು–ಓದುಬರಹ ತಿಳಿಯದವರಿಗೂ ವೇದ್ಯವಾಗಲೆಂದು ಕೆಲವು ಸಲ ಎರಡನ್ನೂ ಒಳಗೊಂಡಿರುವುದು.

ಭಾರತೀಯರ ಜೀವನದ ಪರಮಗುರಿ ಸದ್ಗತಿ ಸಂಪಾದನೆ. ಮೌಲ್ಯಾನುಸಂಧಾನ, ಆತ್ಮಾನುಸಂಧಾನ, ಆದರ್ಶಾನುಸಂಧಾನಗಳನ್ನು ಸದ್ಗತಿಗೆ ಸಾಧನಗಳನ್ನಾಗಿ ಪರಿಭಾವಿಸಿ ಕೊಂಡವರು. ಇವುಗಳಲ್ಲಿ ಆತ್ಮಬಲಿ, ಸಹಗಮನ ಮುಂತಾದ ಮೌಲ್ಯಾನುಸಂಧಾನ ಸದ್ಗತಿಯ ಹೆಸರಿನಲ್ಲಿ ರೂಪಿಸಿಕೊಂಡ ಒಂದು ಸಾಮಾಜಿಕ ಆಚರಣೆಯಾಗಿತ್ತು. ಧ್ಯಾನ, ತಪಸ್ಸು ಮೊದಲಾದ ಆತ್ಮಾನುಸಂಧಾನ ವ್ಯಕ್ತಿ ಜೀವನ ಪರಿಶುದ್ಧಿಯ ಸಾಧನ. ಮರಣ ಮುಖೇನ ಸದ್ಗತಿ ಸಾಧಿಸಿಕೊಡುವುದೆಂದು ಭಾವಿಸಿದವು ಆತ್ಮಾನುಸಂಧಾನಕ್ಕೆ ಸಂಬಂಧಪಟ್ಟ ಜೈನ ಸಮಾಧಿ ಮರಣ. ಜೈನರು ತಮ್ಮ ನಿತ್ಯ ಜೀವನಕ್ರಮದಲ್ಲಿ ಮಧ್ಯೆ ಮಧ್ಯೆ ಏಕಭುಕ್ತಿ, ಪಕ್ಷೋಪವಾಸ, ಮಾಸೋಪವಾಸಗಳೆಂಬ ಉಪವಾಸಗಳನ್ನು ಆಚರಿಸುತ್ತಿದ್ದು, ಮರಣ ಸನ್ನಿಹಿತವಾದ ಸಮಯದಿಂದ ಬಿಡದೆ ಪ್ರಾಣೋತ್ಕ್ರಮಣ ಪರ್ಯಂತ ಆಚರಿಸಿದರೆ ಅದು ಸಲ್ಲೇಖನವ್ರತ ವೆಂದಿದೆ. ಸಲ್ಲೇಖನವ್ರತವನ್ನು ಕ್ವಚಿತ್ತಾಗಿ ತೀರ್ಥಂಕರ ವಿಗ್ರಹದ ಸನ್ನಿಧಿಯಲ್ಲಿ ಆಚರಿಸುತ್ತಿದ್ದು ದಕ್ಕೆ ಮಲ್ಲಿಷೇಣನ ಸಮಾಧಿಮರಣ ಉದಾಹರಣೆಯಾಗಿದೆ. ಜೈನ ಸಂಪ್ರದಾಯದಲ್ಲಿ ವ್ರತ ಹಿಡಿದು ಸಾವನ್ನಪ್ಪಿದವರ ಸ್ಮಾರಕವೇ ನಿಷಿಧಿ ಶಿಲೆಗಳು. ಮುನಿಗಳು, ಕಂತಿಯರು, ರಾಜಪರಿವಾರದವರು, ಸಾಮಾನ್ಯರು ಪುರುಷರು ಮತ್ತು ಸ್ತ್ರೀಯರು ವ್ರತ ಹಿಡಿದು ಮರಣ ಹೊಂದಿರುವರ ನಿಷಿಧಿಕಲ್ಲುಗಳು ಕರ್ನಾಟಕದಲ್ಲಿ ಅಧಿಕವಾಗಿವೆ.

ಸಾಮಾನ್ಯವಾಗಿ ಇವು ಶಿಲಾಫಲಕಗಳಾಗಿರುತ್ತಿದ್ದರೂ ಅಪರೂಪವಾಗಿ ಸ್ತಂಭಾಕಾರದ ನಿಷಿಧಿಗಳಿವೆ. ನಿಷಿಧಿ ಶಿಲೆಗಳನ್ನು ಬರೆವಣಿಗೆಯುಳ್ಳವು, ಚಿತ್ರವುಳ್ಳವು, ಚಿತ್ರ ಮತ್ತು ಬರೆವಣಿಗೆ ಯುಳ್ಳವು ಎಂದು ವಿಂಗಡಿಸಬಹುದು. ಬೋಧಿಸುವ ಗುರು, ಕೇಳಿಸಿಕೊಳ್ಳುತ್ತಿರುವ ಶಿಷ್ಯ ಇಬ್ಬರ ಮಧ್ಯೆ ಪುಸ್ತಕ ಹೊತ್ತ ವ್ಯಾಸಪೀಠ ಸಾಮಾನ್ಯವಾಗಿ ನಿಷಿಧಿ ಶಿಲೆಗಳ ಚಿತ್ರಗಳಾಗಿವೆ. ನಿಷಿಧಿ ಶಿಲೆಗಳನ್ನು ಗುರುವಿಗೆ ಶಿಷ್ಯ, ಕೌಟುಂಬಿಕ ಸಂಬಂಧದವರು ನಿಲ್ಲಿಸಿರುವರು. ಗಂಗರಾಜನು ಗುರು ಶುಭಚಂದ್ರರಿಗಾಗಿ, ಗಂಗರಾಜನ ಮಗ ಬೊಪ್ಪ ತನ್ನ ದೊಡ್ಡಪ್ಪನ

ಮಗ ಏಚಿರಾಜನಿಗಾಗಿ, ಚೆಟ್ಟಿಕಬ್ಬೆ ಪತಿ ಹೊಯ್ಸಳಶೆಟ್ಟಿ ಮತ್ತು ಮಗ ಬೂಚರಿಗಾಗಿ ನಿಷಿಧಿ ನಿಲ್ಲಿಸಿರುವುದು ಗಮನಾರ್ಹ. ಆಗಾಗ ಸ್ವಾಮಿಭಕ್ತಿಗಾಗಿ (ಜೋಳವಾಳಿ) ವ್ರತ ಹಿಡಿದು ಯುದ್ಧದಲ್ಲಿ ಹೋರಾಡಿ ಮಡಿದ ನಿಂಬಸಾಮಂತ, ಮಗಳು ಶಾಂತಲೆಗಾಗಿ ವ್ರತ ಹಿಡಿದು ಮಡಿದ ತಾಯಿ ಮಾಚಿಕಬ್ಬೆಯರ ನಿಷಿಧಿಗಳಿವೆ.

ಭಾರತದಲ್ಲಿ ಧಾರ್ಮಿಕ ಬಲಿದಾನ ಪದ್ಧತಿ ಪ್ರಾಚೀನವಾದುದು. ಸೂರ್ಯಗ್ರಹಣ ಸಮಯದಲ್ಲಿ ರಾಹು ಸೂರ್ಯನನ್ನು ನುಂಗುವನೆಂಬ ಭಾವನೆ ಹಿಂದುಗಳ ದೃಷ್ಟಿಯಲ್ಲಿತ್ತು. ಆ ಸಮಯದಲ್ಲಿ ಸೂರ್ಯ ಅನುಭವಿಸುವ ಸಂಕಟದಲ್ಲಿ ಸಹಾನುಭೂತಿ ತೋರಿಸುವ ರೂಪದ ಚಿತಾಪ್ರವೇಶ ಮರಣದಿಂದ ಮೋಕ್ಷ ಪ್ರಾಪ್ತಿಯೆಂಬ ಭಾವನೆಯಾಗಿತ್ತು. ಧಾರವಾಡದ ಕನ್ನಡ ಸಂಶೋಧನೆ ಸಂಸ್ಥೆಯಲ್ಲಿರುವ ತಿಳವಳ್ಳಿ ಶಾಸನ ಶಿಲೆಯಲ್ಲಿ ರಾಹು ಹಾವಿನ ರೂಪದಿಂದ ಸೂರ್ಯನನ್ನು ನುಂಗುತ್ತಿರುವ, ಬೊಪ್ಪನು ಬೆಂಕಿಯಲ್ಲಿ ಹಾರುತ್ತಿರುವ ಚಿತ್ರವಿದೆ.

ಪ್ರಿಯವ್ಯಕ್ತಿಯ ಹೆಸರಿನಲ್ಲಿ ಪ್ರಾಣೋತ್ಕ್ರಮಣ ಮಾಡಿಕೊಳ್ಳುವ ಲೌಕಿಕ ಬಲಿದಾನ ಪದ್ಧತಿಯಿತ್ತು. ಇದರಲ್ಲಿ ಪತಿಗಾಗಿ ಪ್ರಿಯಸತಿ, ಒಡೆಯನಿಗಾಗಿ ಸೇವಕ ಬಲಿದಾನವಾಗುತ್ತಿದ್ದ. ಪತಿಗಾಗಿ ಸತಿ ಮಾಡುವ ಪ್ರಾಣೋತ್ಕ್ರಮಣಕ್ಕೆ ಸಹಗಮನವೆಂದೂ ಒಡೆಯನಿಗಾಗಿ ಸೇವಕ ಮಾಡುವ ಪ್ರಾಣೋತ್ಕ್ರಮಣಕ್ಕೆ ವೇಳವಾಳಿ (ಲೆಂಕವಾಳಿ) ಎಂದೂ ಹೆಸರು. ಪತಿಯೊಡನೆ ಸತಿ ಚಿತೆಯೇರಿದ ಸ್ಥಳದಲ್ಲಿ ಇಲ್ಲವೆ ಬೇರೆಡೆಯಲ್ಲಿ ನಿಲ್ಲಿಸಿರುವ ಶಿಲೆಯೇ ಮಹಾಸತಿಕಲ್ಲು ಅಥವಾ ಮಾಸ್ತಿಕಲ್ಲು. ಮಾಸ್ತಿಯಲ್ಲಿ ಎರಡು ವಿಧ: ಸಹಗಮನ – ಗಂಡನ ಶವದೊಂದಿಗೆ ಚಿತೆಯೇರುವುದು, ಅನುಗಮನ – ಪತಿ ದೂರದ ಸ್ಥಳದಲ್ಲಿ ಮಡಿದರೆ ಅವನ ಪ್ರಿಯವಸ್ತುವನ್ನು ಹಿಡಿದು ಚಿತೆಯೇರುವುದು.

5 ಅಥವಾ 6ನೆಯ ಶತಮಾನದ ಕವಡಿ ಶಾಸನ ಬನವಾಸಿ ಕದಂಬ ರವಿವರ್ಮನ ರಾಣಿಯ ಸಹಗಮನವನ್ನು ಉಲ್ಲೇಖಿಸುತ್ತದೆ. ಕರ್ನಾಟಕದಲ್ಲಿ ಈ ಪದ್ಧತಿಯನ್ನು ಕುರಿತು ಇದೇ ಪ್ರಥಮ ದಾಖಲೆಯಾಗಿದೆ. ಅನಂತರ 10ನೆಯ ಶತಮಾನದಿಂದ ಸಹಗಮನದ ಉಲ್ಲೇಖಗಳು ಸಿಕ್ಕುತ್ತವೆ. ವಿಜಯನಗರದ ಕಾಲದಿಂದ ಹೆಚ್ಚಾಗಿದೆ. ಈ ಪದ್ಧತಿ ಮುಂದುವರಿದುದನ್ನು ಬಾರ್ಬೋಸ (1500), ನ್ಯೂನಿಜ಼್ ಸೀಜರ್ ಫ್ರೆಡರಿಕ್ (1560), ಪಿಯತ್ರೊಡೆಲ್ಲಾವೆಲ್ಲೆ (1623) ಮೊದಲಾದವರ ದಿನಚರಿಗಳು ಉಲ್ಲೇಖಿಸುತ್ತವೆ. ಈಗ ತಿಳಿದಿರುವಂತೆ ಕೊನೆಯ ಮಾಸ್ತಿಕಲ್ಲು ಕೆಳದಿಯ 1619ರ ಶಾಸನ. ಪೂರ್ಣಯ್ಯನವರು ದಿವಾನರಾಗಿದ್ದ ಕಾಲದಲ್ಲಿ ತಲಕಾಡಿನ ಬ್ರಾಹ್ಮಣ ಸ್ತ್ರೀಗೆ ಸಹಗಮನಕ್ಕೆ ಒಪ್ಪಿಗೆ ಕೊಟ್ಟಿರುವ 1805ರ ಸನ್ನದಿನಲ್ಲಿಯ ವಿಷಯ ಕರ್ನಾಟಕ ರಾಜ್ಯ ಸರ್ಕಾರ ಪುರಾತತ್ತ್ವ ಇಲಾಖೆಯ ವರದಿಯಲ್ಲಿದೆ (1938).

ಈ ಸ್ಮಾರಕಗಳು ಕೆಲವು ಸ್ಥಳಗಳಲ್ಲಿ ಮಾಸ್ತಿಯಾದವರ ನೆನಪಿಗೆ ಕೇವಲ ಗುಂಡುಕಲ್ಲು ಸಾಮಾನ್ಯವಾಗಿ ಕೇವಲ ಎತ್ತಿದ ಬಲತೋಳಿನ ಶಿಲ್ಪಗಳು. ತೋಳು ಕೆಲವೊಮ್ಮೆ ಕಂಬದಿಂದ ಹೊರಟಿರುವಂತೆ ಚಿತ್ರಿತವಾಗಿರುತ್ತದೆ. ಎತ್ತಿದ ಬಲತೋಳುಳ್ಳ ಪೂರ್ಣ ಸ್ತ್ರೀ ಶಿಲ್ಪ ಹೆಗ್ಗೆರೆ, ಮುತ್ತೂರು, ಅಬ್ಬಲೂರು, ಹೇರೂರು ಮುಂತಾದ ಸ್ಥಳಗಳಲ್ಲಿವೆ. ಪತಿಯೊಂದಿಗೆ ಸ್ತ್ರೀ ವಿಗ್ರಹಗಳು ಅಲ್ಲಲ್ಲಿ ಸಿಗುತ್ತವೆ. ಪತಿಯ ಎಡಗಡೆ ಬಲಗೈ ಎತ್ತಿ ಸತಿ ನಿಂತಿರುತ್ತಾಳೆ. ಮನಗುಂಡಿಯಲ್ಲಿ ಪತಿಯೊಂದಿಗೆ ಆತನ ಎಲ್ಲ ಸತಿಯರ ವಿಗ್ರಹಗಳನ್ನು ಕೆತ್ತಿರುವ ಮಾಸ್ತಿಕಲ್ಲಿದೆ. ದಂಪತಿಗಳು ಪರಸ್ಪರ ಹೆಗಲ ಮೇಲೆ ಕೈ ಹಾಕಿದ್ದರೆ ಅವಳ ಬಲಗೈ ಗಂಡನ ಹೆಗಲ ಮೇಲಿರುವ ಕಾರಣ ಪ್ರತ್ಯೇಕವಾಗಿ ಎತ್ತಿದ ಬಲಗೈ ಬಿಡಿಸಲಾಗಿದೆ. ಪುರುಷ ಆಯುಧವನ್ನು ಹಿಡಿದಿದ್ದರೆ ಅದು ಅವನ ವೀರಮರಣವನ್ನು ಸೂಚಿಸುತ್ತದೆ. ಕಲ್ಯಾಣದ ನೆರೆಯ ಸಸ್ತಾಪುರ ಗ್ರಾಮದ ಮಾಸ್ತಿಶಿಲೆಯಲ್ಲಿ ಕಂಬದಿಂದ ಒಂದು ಕೈ ಚಾಚಿದ್ದು ಅದರ ಮೇಲ್ಭಾಗದಲ್ಲಿ ಸ್ವರ್ಗದಲ್ಲಿ ಕುಳಿತ ದಂಪತಿಗಳ ಚಿತ್ರ, ಕೆಳಭಾಗದಲ್ಲಿ ಚಿತೆಯಲ್ಲಿ ಮಲಗಿರುವ ದಂಪತಿಗಳ ಚಿತ್ರವಿದೆ. ಕರ್ನಾಟಕದಲ್ಲಿ ದಕ್ಷಿಣಭಾಗದಲ್ಲಿ ಮಾಸ್ತಿಕಲ್ಲುಗಳ ಸಂಖ್ಯೆ ಅಧಿಕ; ಉತ್ತರ ಭಾಗದಲ್ಲಿ ಕಡಿಮೆ.

ಯಜಮಾನನಿಗಾಗಿ ಹೋರಾಡಿ ಸತ್ತರೆ ಅವನಿಗಾಗಿ ನಿಲ್ಲಿಸಿದ ಸ್ಮಾರಕ ಶಿಲೆಯೆ ವೀರಗಲ್ಲು. ಅವನಿಗೆ ಶುಭ ಹಾರೈಸಿ ಇಲ್ಲವೆ ಅವನ ಮರಣದ ಸಂದರ್ಭದಲ್ಲಿ ಪ್ರಾಣಘಾತ ಮಾಡಿಕೊಂಡರೆ ವೇಳವಾಳಿ ಕಲ್ಲು ನಿಲ್ಲಿಸುತ್ತಾರೆ. ಬಸುರಾಳ ಗ್ರಾಮದ ಒಂದು ಕಲ್ಲಿನಲ್ಲಿ ಮೂರು ಸ್ತರಗಳಿದ್ದು ಕೆಳಗಿನ ಸ್ತರದಲ್ಲಿ ಕುದುರೆಯ ಮೇಲೆ ಕುಳಿತ ವೇಳವಾಳಿಯ ಮೆರವಣಿಗೆ, ಮಧ್ಯದ ಸ್ತರದಲ್ಲಿ ಬಗ್ಗಿಸಿದ ಗಳಕ್ಕೆ ಕೂದಲು ಕಟ್ಟಿಕೊಂಡು ಕೈಮುಗಿದು ಕುಳಿತ ವೇಳವಾಳಿ, ಅವನ ಪಕ್ಕದಲ್ಲಿ ಬಾಗಿದ ಖಡ್ಗ ಹಿಡಿದು ರುಂಡ ಹಾರಿಸಲು ಸಿದ್ಧನಾದ ವ್ಯಕ್ತಿ, ಮೇಲಿನ ಸ್ತರದಲ್ಲಿ ಈಶ್ವರಲಿಂಗದ ಎದುರು ಕೈಮುಗಿದು ಕುಳಿತ ವೇಳವಾಳಿ ಚಿತ್ರವಿದೆ. ಅಬ್ಬಲೂರಿನಲ್ಲಿ ಬಗ್ಗಿಸಿದ ಕೊಂಬೆಗೆ ತಲೆಕೂದಲು ಕಟ್ಟಿಸಿಕೊಂಡು ರುಂಡ ಹಾರಿಸಿಕೊಂಡ ಪತಿ, ಇಬ್ಬರು ಪತ್ನಿಯರ ಸಿಡಿದೆಲೆ ಶಿಲ್ಪವಿದೆ. ಇವು ಸಿಡಿತಲೆಗೆ ಉದಾಹರಣೆ. ಬಳ್ಳಿಗಾವೆಯಲ್ಲಿ ಪೆರುಮಾಳು ದೇವಸ್ಥಾನದ ಭೇರುಂಡೇಶ್ವರ ಕಂಬದ ತುದಿಯಿಂದ ಕೆಳಗೆ ನಿಲ್ಲಿಸಲಾದ ಬಾಣಗಳ ಮೇಲೆ ಬಿದ್ದು ಸತ್ತ ಚಿತ್ರವಿದೆ.

ಧರ್ಮಮಾರ್ಗಗಳಲ್ಲಿ ನಡೆವ ಧರ್ಮವೀರನಿಗೆ ಸಾಧ್ಯವಾಗುವ ಮೋಕ್ಷಸಾಧನೆ ಧಾರ್ಮಿಕ ಬಲಿದಾನ, ಲೌಕಿಕ ಬಲಿದಾನ ಮಾರ್ಗಗಳಿಂದಲೂ ಸಾಧ್ಯವೆಂಬ ಅಭಿಪ್ರಾಯ ಬೆಳೆದು, ಕೊನೆಗೆ ಯುದ್ಧದಲ್ಲಿ ಮಡಿದ ವೀರನಿಗೂ ಸಾಧ್ಯವೆಂಬ ಪರಂಪರೆ ಬೆಳೆಯಿತು. ಗ್ರಾಮರಕ್ಷಣೆ, ದೇಶರಕ್ಷಣೆ, ಗೋರಕ್ಷಣೆ ಮತ್ತು ಸ್ತ್ರೀರಕ್ಷಣೆಯ ಅವಶ್ಯಕತೆ ಅಧಿಕವಾದಂತೆ ಯುದ್ಧವೀರನಿಗೂ ಸಮಾನ ಸ್ಥಾನ ಲಭಿಸಿತು. ಹೋರಾಟದಲ್ಲಿ ಮಡಿದ ವೀರನಿಗೆ ನಿಲ್ಲಿಸುವ ಸ್ಮಾರಕಗಳು ಮೂರು ಬಗೆಯಾಗಿವೆ. ಗುಂಡುಕಲ್ಲುಗಳು, ವೀರಗಲ್ಲುಗಳು ಮತ್ತು ದೇವಾಲಯಗಳು. ವೀರಗಲ್ಲುಗಳು ಬರೆವಣಿಗೆಯುಳ್ಳವು, ವಿಗ್ರಹವುಳ್ಳವು, ಉಭಯರೀತಿಯವು ಎಂದು ಮೂರು ವಿಧ. ವಿಗ್ರಹಗಳುಳ್ಳ ವೀರಗಲ್ಲುಗಳು ಅಧಿಕವಾಗಿವೆ. ಮಧ್ಯಯುಗೀನ ಕಾಲದ ವೀರಗಲ್ಲು ಸಾಮಾನ್ಯವಾಗಿ ಮೂರು ಸ್ತರಗಳನ್ನು ಒಳಗೊಂಡಿರುತ್ತದೆ. ಕರ್ನಾಟಕದ ಅತ್ಯಂತ ಪ್ರಾಚೀನ ಕನ್ನಡ ಶಾಸನವಾದ ಹಲ್ಮಿಡಿ ಶಾಸನ ಕದಂಬ ಕಕುಸ್ಥನ ಆಳ್ವಿಕೆಯಲ್ಲಿ ಎಲ್ಲಭಟಾರಿಯ ಮಗ ವಿಜಅರಸ ಎಂಬುವನು ಸೇಂದ್ರಕ ಮತ್ತು ಬಾಣವಂಶದ ವೀರರ ಸಮ್ಮುಖದಲ್ಲಿ ಕೇಕಯ ಮತ್ತು ಪಲ್ಲವರೊಡನೆ ಯುದ್ಧಮಾಡಿ ಗೆದ್ದಾಗ ಅವನಿಗೆ ಪುರಸ್ಕಾರಕ್ಕಾಗಿ ಕೊಟ್ಟ ದಾನಪತ್ರ, ಇದು ಸತ್ತವರ ಸ್ಮಾರಕಕ್ಕಾಗಿ ನೆಟ್ಟ ವೀರಗಲ್ಲಲ್ಲ. ಆದರೆ ಇದೂ ಒಂದು ರೀತಿಯ ವೀರಗಲ್ಲು. ಹುಕ್ಕೇರಿಯಲ್ಲಿರುವ ಒಂದು ವೀರಗಲ್ಲಿನ ಕೆಳಗಿನ ಸ್ತರದಲ್ಲಿ ಗೋಗ್ರಹಣ ಯುದ್ಧದಲ್ಲಿ ಸೈನಿಕರ ಹೋರಾಟ, ಓಡುತ್ತಿರುವ ಹಸುಗಳನ್ನು, ಮಧ್ಯದ ಸ್ತರದಲ್ಲಿ ವೀರನನ್ನು ಅಪ್ಸರೆಯು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವುದು, ಮೇಲಿನ ಸ್ತರದಲ್ಲಿ ಅವನು ಶಿವಲಿಂಗದೆದುರು ಕೈಮುಗಿದು ಕುಳಿತಿರುವುದನ್ನು ಚಿತ್ರಿಸಲಾಗಿದೆ. ಅಮ್ಮಿನಭಾವಿ ವೀರಗಲ್ಲಿನಲ್ಲಿ ಹಿಟ್ಟೆಯನಾಯಕ ಅಶ್ವಾರೂಢನಾಗಿ ಯುದ್ಧಮಾಡಿದ ಚಿತ್ರ ಪ್ರಧಾನವಾಗಿದೆ. ವೀರಗಲ್ಲುಗಳಲ್ಲಿ ಕೆಳಗಿನ ಸ್ತರವು ಯೋಧರು, ಪದಾತಿಗಳು ಶಸ್ತ್ರಾಸ್ತ್ರ ಸಹಿತ ಹೋರಾಟದ ದೃಶ್ಯ, ಮಧ್ಯದ ಸ್ತರ ಮಡಿದ ವೀರನನ್ನು ಅಪ್ಸರೆಯರು ಎತ್ತಿಕೊಂಡೊಯ್ಯುವ ದೃಶ್ಯ, ಅವನು ಎಡ–ಬಲದ ಅಪ್ಸರೆಯರ ಭುಜದ ಮೇಲೆ ಎರಡು ಕೈಗಳನ್ನು ಇಟ್ಟಿರುವ ಇಲ್ಲವೆ ಅವನು ಕುಳಿತ ವಿಮಾನವನ್ನು ಅಪ್ಸರೆಯರು ಹೊತ್ತಿರುವ ಚಿತ್ರ, ಮೇಲಿನ ಸ್ತರದಲ್ಲಿ ಅವನು ಸ್ವರ್ಗದಲ್ಲಿ ದೇವಸನ್ನಿಧಿ ಸೇರಿದುದನ್ನು ಅಂದರೆ ಶಿವಲಿಂಗದೆದುರು ಕೈಮುಗಿದು ಕುಳಿತುದನ್ನು, ಜೈನನಾಗಿದ್ದರೆ ಜಿನ ವಿಗ್ರಹದ ಎದುರು ಕೈಮುಗಿದು ಕುಳಿತ ಚಿತ್ರ ಇರುತ್ತದೆ. ಪುರುಷರಂತೆಯೇ ಸ್ತ್ರೀಯರು ಸಮಯ ಬಂದಾಗ ಶಸ್ತ್ರವನ್ನು ಹಿಡಿದು ಹೋರಾಡಲು ಹಿಂಜರಿದವರಲ್ಲ. 1446ರ ಶಿಕಾರಿಪುರ ವೀರಗಲ್ಲು ತಂದೆ ಮಾದಿಗೌಡ ವೀರಸ್ವರ್ಗವೇರಲು ವೈರಿಗಳನ್ನು ಎದುರಿಸಿ ಮಗಳು ಹರಿಯಕ್ಕ ವೀರಮರಣವನ್ನಪ್ಪಿದಳೆಂದು ತಿಳಿಸುತ್ತದೆ. ಇದಲ್ಲದೆ ಹೇರೂರು, ಅರಸಿಬೀದಿ, ಗುಂಡೂರುಗಳಲ್ಲಿ ಸ್ತ್ರೀಯರ ಹೋರಾಟ ಮತ್ತು ವೀರಮರಣದ ಶಿಲ್ಪಗಳಿವೆ. (ಎನ್.ಎಲ್.)

**ನಾಯಿ ಸ್ಮಾರಕಗಳು:** ಮಾನವನ ಸಾಕುಪ್ರಾಣಿಗಳ ವರ್ಗದಲ್ಲಿ ನಾಯಿಗೆ ಆದ್ಯತೆಯ ಸ್ಥಾನ ಸಲ್ಲುತ್ತದೆ. ಅತಿಪ್ರಾಚೀನ ಕಾಲದಿಂದಲೂ ನಾಯಿ ವಿಶ್ವಾಸಕ್ಕೆ, ಕೃತಜ್ಞತೆಗೆ ಸಂಕೇತವಾಗಿದೆ. ಭಾರತದ ಪ್ರಾಚೀನ ಸಿಂಧೂ ಬಯಲಿನ ನಾಗರಿಕತೆಯ ಕಾಲದ ಹರಪ್ಪ ಜನರಿಗೆ ನಾಯಿ ಸಾಕುಪ್ರಾಣಿಯಾಗಿತ್ತು. ಈ ಸಂಸ್ಕೃತಿಯ ಪ್ರೌಢಹಂತದ ಕಾಲದ ಬರೆಹದಲ್ಲಿ ಪ್ರಾಣಿ ಮತ್ತು ಪಕ್ಷಿಗಳನ್ನು ಹೋಲುವಂತಹ ಚಿತ್ರಗಳ ಸಹಿತ ನಾಯಿಯ ಚಿತ್ರವನ್ನು ಕಾಣಬಹುದು. ಸುಟ್ಟಮಣ್ಣಿನ ನಾಯಿಯ ಪ್ರತಿಮೆಗಳೂ ಬಹುಸಂಖ್ಯೆಯಲ್ಲಿ ದೊರೆತಿವೆ. ನಾಯಿಯನ್ನು ಬೇಟೆಗಾಗಿ ಬಳಸುತ್ತಿದ್ದರು. ಇಲ್ಲಿ ಈ ಪ್ರಾಣಿಯ ಮೂರು ಜಾತಿಗಳನ್ನು ಗುರುತಿಸಬಹುದು: ಭಾರತದ ಪೇರಿಯ (ಹಳದಿ ಬಣ್ಣದ ಬೀದಿನಾಯಿ), ಮಾಸ್ಟಿಫ್ ಮತ್ತು ಬೇಟೆ ನಾಯಿ. ಲೋಥಲ್‌ನ ಪೇರಿಯ ನಾಯಿಯ ಪ್ರತಿಮೆ ನೆಟ್ಟಗೆ ನಿಂತಿರುವ ಬಾಲ ಮತ್ತು ಹೊರಚಾಚಿರುವ ನಾಲಗೆಯಿಂದ ಕೂಡಿದ್ದು ಬಹಳ ಯಥಾರ್ಥ ರೂಪದಲ್ಲಿ ಕಂಡುಬಂದಿದೆ. ಇಲ್ಲಿ ಸುಟ್ಟಮಣ್ಣಿನ ನಾಯಿಯ ಸಣ್ಣ ಗೊಂಬೆಗಳು ದೊರೆತಿವೆ. ಇವುಗಳನ್ನು ಮಕ್ಕಳು ಆಟಿಕೆಯಾಗಿ ಬಳಸುತ್ತಿದ್ದರು. ಲಾಂಗ್‌ನಾಜ್‌ (ಗುಜರಾತ್) ಜನರೂ ನಾಯಿಗಳನ್ನು ಸಾಕುತ್ತಿದ್ದರು. ಲೋಥಲನಲ್ಲಿ ಕಂಚನ್ನು ಎರಕ ಹೊಯ್ಯುವ ಕಲೆ ಜನಪ್ರಿಯವಾಗಿದ್ದಿತ್ತು. ಅಲ್ಲಿ ನಾಯಿಯ ಎರಡು ಮೂರ್ತಿಗಳು ದೊರೆತಿದ್ದು ಇವುಗಳನ್ನು ತಾಯಿತದಂತೆ ಬಳಸುತ್ತಿದ್ದರು.

ಮಾನವ ನಾಯಿಯನ್ನು ತನ್ನ ಕುಟುಂಬದ ಒಬ್ಬ ಸದಸ್ಯನಂತೆ, ಮಕ್ಕಳಂತೆ, ಸ್ನೇಹಿತನಂತೆ, ಆಳಿನಂತೆ ಅನೇಕ ರೀತಿಯಲ್ಲಿ ನಡೆಸಿಕೊಂಡಿದ್ದಾನೆ. ಬೇಟೆಯಾಡಿ ಬಂದನಂತರ ಬಂಗಾಲದ ಮಾಳರ್ ಎಂಬ ಜನಾಂಗದವರು ನಾಯಿಗೆ ಊತಣ ನೀಡುತ್ತಾರೆ. ಬೇಟೆ ನಾಯಿಯನ್ನು ಕೊಂದವನಿಗೆ ದಂಡವನ್ನು ವಿಧಿಸುತ್ತಿದ್ದರು. ನಾಯಿಗಳನ್ನು ಬೇಟೆಯಾಡಲು ಬಳಸುವಾಗ ಅವುಗಳಿಗೆ ಏಟು ಬೀಳದಂತೆ ಶಸ್ತ್ರಪ್ರಯೋಗ ಮಾಡಿ ಬೇಟೆಯಾಡುತ್ತಿದ್ದರು. ಈ ಬೇಟೆ ಕ್ರಮವನ್ನು ಶ್ವಗಣಿಕಾ ಎಂದು ಕರೆಯುತ್ತಿದ್ದರು. ಹೆಜ್ಜೆ ಗುರುತು ಹಿಡಿದು ಹೋಗಿ ಬೇಟೆಯಾಡುತ್ತಿದ್ದ ಪದ್ಧತಿಗೆ ಪಾದಪ್ರೇಕ್ಷ ಮಾರ್ಗ ಎಂದು ಕರೆಯುತ್ತಿದ್ದರು. ನಾಯಿಯ ಬಗ್ಗೆ ಇಷ್ಟು ವಿಶ್ವಾಸ ತೋರಲು ಮುಖ್ಯ ಕಾರಣವೆಂದರೆ ನಾಯಿ ತನ್ನ ಒಡೆಯನ ಬಗ್ಗೆ ತೋರುವ ನಿಷ್ಠೆ. ಇದನ್ನು ಅರಿತ ರಾಕ್ಷಸರು ಮತ್ತು ದೆವ್ವಗಳು ಜನರನ್ನು ಮೋಸಮಾಡಲು ಅವರಿಗೆ ಪ್ರಿಯವಾದ ನಾಯಿಯ ರೂಪದಲ್ಲಿ ಬರುತ್ತಾರೆಂಬ ನಂಬಿಕೆ ಹಲವು ಕಡೆ ಇದೆ.

ಪಂಜಾಬ್ ರಾಜ್ಯದ ಲಾಹೋರಿನಲ್ಲಿ ಒಂದು ವೀರನಾಯಿಯ ಗೋರಿ ಇದೆ. ಅದು ಮೃತಪಟ್ಟ ಸ್ಥಳದಲ್ಲೆ ಸಮಾಧಿ ನಿರ್ಮಿಸಲಾಗಿದೆ. ಈಗ ಅದೊಂದು ಪೂಜಾರ್ಹ ಸ್ಥಳವೇ ಆಗಿದೆ. ಬುಲಂದ್‌ಷಾರ್‌ನಲ್ಲಿ ಮೂವರು ಸಂತರ ಸಮಾಧಿಗಳಿದ್ದು ಅವುಗಳ ಬಳಿ ಅವರಿಗೆ ಪ್ರೀತಿ ಪಾತ್ರ ನಾಯಿಯ ಸಮಾಧಿ ಇದೆ. ಸಂತರ ಸಮಾಧಿಗಳಿಗೆ ತೋರುವ ಗೌರವವನ್ನು ನಾಯಿಗಳ ಸಮಾಧಿಗೂ ತೋರಲಾಗುತ್ತದೆ. ಮಧ್ಯಪ್ರದೇಶದ ಕೆಲವು ಹಳ್ಳಿಗಳಲ್ಲಿ ಮತ್ತು ಕಾಥೇವಾಡದಲ್ಲಿ ನಾಯಿಗಳಿಗಾಗಿಯೇ ಕಟ್ಟಿಸಿರುವ ದೇವಾಲಯಗಳಿವೆ.

ಕರ್ನಾಟಕದಲ್ಲಿ ನಾಯಿಗಳಿಗಾಗಿ ಹಾಕಿಸಿದ ಸ್ಮಾರಕ ಶಾಸನವನ್ನು ಮಂಡ್ಯ ಜಿಲ್ಲೆಯ ಆತಕೂರು, ಬೆಂಗಳೂರಿನ ಯಲಹಂಕ, ಕೋಲಾರ ಜಿಲ್ಲೆಯ ಮೇಲಾಗಾಣೆ ಮತ್ತು ಮಡಕಶಿರಾ ತಾಲ್ಲೂಕಿನ ಗೋಲ್ಲರಹಳ್ಳಿಯಲ್ಲಿ ಕಾಣಬಹುದಾಗಿದೆ. 950ರಲ್ಲಿ ರಾಷ್ಟ್ರಕೂಟರ ಮೂರನೆಯ ದಂಡಿನ ನಾಯಕ ಮಣಲೆತರನು ತನ್ನ ರಕ್ಷಣೆಗಾಗಿ ಹಂದಿಯೊಡನೆ ಹೋರಾಟ ನಡೆಸಿ ಮೃತಪಟ್ಟ ಕಾಳಿ ಎಂಬ ಹೆಸರಿನ ನಾಯಿಯ ನೆನಪಿಗೆ ಆತಕೂರಿನಲ್ಲಿ ಒಂದು ವೀರಗಲ್ಲು ನಿರ್ಮಿಸಿ ತನ್ನ ಶ್ವಾನ ಪ್ರೀತಿಯನ್ನು ಮೆರೆದಿರುವುದು ವಿಶೇಷ. ಅಷ್ಟೇ ಅಲ್ಲದೆ ಆ ನಾಯಿಯ ಹೆಸರಿನಲ್ಲಿ ಪೂಜೆ ನಡೆಯುವಂತೆ ನಿಯಮ ಮಾಡಿ ತಾನು ಆ ನಾಯಿಯನ್ನು ಪಡೆದ ಬಗೆಗೆ ಸುದೀರ್ಘ ವಿವರವನ್ನು ನೀಡಿದ್ದಾನೆ. ಮಣಲೆತರನಿಗೆ ಆ ನಾಯಿಯ ಬಗ್ಗೆ ಇದ್ದ ಇವನ ಅಪಾರ ಪ್ರೇಮ, ನಾಯಿ ಪ್ರೀತಿಗಾಗಿ ಶಾಸನ ನಿರ್ಮಿಸಿರುವುದು ಅಪರೂಪದ ಘಟನೆಯಾಗಿ ದಾಖಲಾಗಿದೆ. ಶಾಸನ ಕಲ್ಲನ್ನು ಚಲ್ಲಲಿಂಗೇಶ್ವರ ದೇವಾಲಯದ ಮುಂದೆ ನಿಲ್ಲಿಸಿದುದಾಗಿ ಶಾಸನದಲ್ಲಿ ಉಲ್ಲೇಖವಿದೆ. ಇದು ಈಗ ಬೆಂಗಳೂರಿನ ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ.

ನಾಯಿಗಾಗಿ ಹಾಕಿಸಿರುವ ಹಲವಾರು ವೀರಗಲ್ಲುಗಳು ದೊರೆಯುತ್ತವೆ. ಹಂದಿಯ ಬೇಟೆಯಲ್ಲಿ ಸತ್ತ ಪೂಣಿಗ ಎಂಬ ನಾಯಿಯ ಸ್ಮಾರಕವನ್ನು ತಣ್ಣೂರು ಮತ್ತು ಚೋರಗಿರಿಯನ್ನು ಆಳುತ್ತಿದ್ದ ಅರಸ ನಿಲ್ಲಿಸಿದ ವಿಷಯ ತಿಳಿದುಬರುತ್ತದೆ. ಹಾಗೆಯೇ ಹಂದಿಯೊಡನೆ ಹೋರಾಡಿ ಸತ್ತ ವೀರನಾಯಿಯ ವೀರಗಲ್ಲು ಯಲಹಂಕದಲ್ಲಿ ದೊರೆತಿದೆ. ಶಾಸನವಿಲ್ಲದ ನಾಯಿಯ ಸ್ಮಾರಕಗಳು ಹೊಸಕೋಟೆ ತಾಲ್ಲೂಕು ಕೋಡಿಹಳ್ಳಿ ಮತ್ತು ಕಟ್ಟಿಗೇನಹಳ್ಳಿ ಎಂಬ ಗ್ರಾಮಗಳಲ್ಲಿ ದೊರೆಯುತ್ತವೆ. ಬೆಂಗಳೂರು ಜಿಲ್ಲೆ ಆನೇಕಲ್ಲು ತಾಲ್ಲೂಕು ವಣಕನಹಳ್ಳಿ ಗ್ರಾಮದಲ್ಲಿಯೂ ಹಂದಿಯ ಬೇಟೆಯ ವೀರಗಲ್ಲು ಇದೆ. ಇಲ್ಲಿ ಹಂದಿಯೊಂದನ್ನು ಎರಡು ನಾಯಿಗಳು ಹಿಂದೆ ಮತ್ತು ಮುಂದೆ ಆಕ್ರಮಣ ಮಾಡುತ್ತಿರುವಂತೆ ಶಿಲ್ಪಿಸಲಾಗಿದೆ.

975ರ ವೀರಗಲ್ಲೊಂದರಲ್ಲಿ, ಲೋಕ ಮತ್ತು ಧಳಗ ಎಂಬ ನಾಯಿಗಳ ಸಹಾಯದಿಂದ ಹಂದಿಯನ್ನು ಬೇಟೆಯಾಡಿ, ಆ ಬೇಟೆಯಲ್ಲಿ ಎರಡು ನಾಯಿಗಳೂ ಸತ್ತಾಗ ಅವುಗಳಿಗೆ ಸ್ಮಾರಕವನ್ನು ಹಾಕಿಸುತ್ತಾ ಅದರಲ್ಲಿ ಲೋಕ ಎಂಬ ನಾಯಿ ಎಪ್ಪತ್ತೈದು ಹಂದಿಗಳನ್ನು ಕೊಂದಿತು ಹಾಗೂ ಧಳಗ ಎಂಬ ನಾಯಿ ಇಪ್ಪತ್ತಾರು ಹಂದಿಗಳನ್ನು ಕೊಂದಿತು ಎಂದು ಉಲ್ಲೇಖಿಸಲಾಗಿದೆ.

ಯಲಹಂಕ, ರಕೂರು, ನೆಲವಾಗಿಲು, ತಿಪ್ಪೂರು, ಕೋಡಿಹಳ್ಳಿ ಮತ್ತು ಬಳ್ಳಿಗಾವೆಯ ವೀರಗಲ್ಲುಗಳಲ್ಲಿ ನಾಯಿಗಳನ್ನು ಕುರಿತ ಕಾವ್ಯಮಯ ವರ್ಣನೆ ಕಂಡುಬರುತ್ತದೆ. ಪಂಪ ತನ್ನ ಕೃತಿ ವಿಕ್ರಮಾರ್ಜುನ ವಿಜಯದಲ್ಲಿ ಒಂದೆಡೆ (ಆಶ್ವಾಸ 5–46ರ ಪದ್ಯದ ಅನಂತರದ ಗದ್ಯ) ಹೀಗೆ ಹೇಳಿದ್ದಾನೆ: ಹಂದಿ ಬೇಟೆಯ ನಾಯಿ ಎಂತಹದೆಂದರೆ ತೆಳುವಾದ ಸೊಂಟ, ಅಗಲವಾದ ಎದೆ, ನೆಟ್ಟಗೆ ನಿಂತಿರುವ ಕಿವಿ, ಬಾಗಿದ ಹುಬ್ಬು, ದಪ್ಪನಾದ ಕಡುಪಾದ ಮಾಂಸವಿಲ್ಲದ ಕಾಲುಗಳು, ನೆಲವನ್ನು ಮುಟ್ಟದ ಉಗುರುಗಳಿಂದ ಕೂಡಿದ ಜಾತಿಯ ಕುದುರೆಯಂತೆ ವೇಗವಾಗಿ ಓಡುತ್ತಾ, ಶಾಕ್ತೇಯ ಮತದ ವಂಚಕನಂತೆ ತನ್ನ ಮಾರ್ಗವನ್ನು ಹಿಡಿದು ತೂಬಿನ ನೀರಿನ ಹಾಗೆ ಸಡಿಲವಾದ ತಕ್ಷಣವೇ ಅಡ್ಡವಾಗಿ ಹರಿದು, ಮಾನ್ಯರ ಸೇವಕನಂತೆ ನಂಬಿಸಿ, ಒತ್ತರದಂತೆ ಒತ್ತಿ ಉರಿಯು ಹರಡುವಂತೆ ಹರಡಿಕೊಳ್ಳುವುದು. ಇದು ಪಂಪ ಕೊಡುವ ಹಂದಿ ಬೇಟೆಯ ನಾಯಿಯ ಲಕ್ಷಣ. ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ತಾವರೆಕೆರೆಯಲ್ಲಿ ಬಿಳಿಯ ಬೆಣಚುಕಲ್ಲಿನ ಮೇಲೆ ಹೆಬ್ಬುಲಿಯೊಂದಿಗೆ ಹೋರಾಡುತ್ತಿರುವ ನಾಯಿಯ ಚಿತ್ರವನ್ನು ಬಿಡಿಸಲಾಗಿದೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾಲಯದ ಕಟ್ಟಡದ ಹಿಂಭಾಗದಲ್ಲಿ ಹೊಸದಾಗಿ ಕಟ್ಟಿರುವ ಗ್ರಂಥಾಲಯ ಕಟ್ಟಡದ ಬಳಿ ಆರೇಳು ನಾಯಿ ಸಮಾಧಿ ಕಲ್ಲುಗಳು ಇವೆ. ಅವುಗಳನ್ನು ಈಗ ಮೈಸೂರು ವಿಶ್ವವಿದ್ಯಾನಿಲಯದ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಈ ಕಲ್ಲುಗಳ ಮೇಲೆ ನಾಯಿಯ ಹೆಸರು ಹಾಗೂ ಅದು ಸತ್ತ ದಿನಾಂಕವನ್ನು ನಮೂದಿಸಲಾಗಿದೆ. ಕೆಲವು ಕಡೆ ನಾಯಿಯ ವಯಸ್ಸನ್ನು ದಾಖಲಿಸಿದೆ. (ಬಿ.ಸಿ.ಎಸ್.)

**ಮೃತ ಸರೋವರದ ಸುರುಳಿಗಳು:** ಮೃತ ಸರೋವರದ ವಾಯವ್ಯ ತೀರ ಪ್ರದೇಶದ ವಡಿ ಕುಮ್ರಾನಿನ 11 ಗವಿಗಳಲ್ಲಿ ಹೀಬ್ರು ಭಾಷೆಯಲ್ಲಿಯ ಬೈಬಲ್ ಸೇರಿದಂತೆ 900 ದಾಖಲೆಗಳನ್ನು 1947 ಮತ್ತು 1956ರಲ್ಲಿ ಶೋಧಿಸಲಾಯಿತು. ಇದುವರೆಗೆ ಉಳಿದು ಬಂದಿರುವ 100 ರ ಹಿಂದಿನ ಬೈಬಲ್ ಗ್ರಂಥದ ಪ್ರತಿ ಇದೊಂದೇ. ಇದರಿಂದ ಎರಡನೆಯ ಟೆಂಪಲ್ ಜುಡಾಯಿಸಂನಲ್ಲಿ ನಂಬಿಕೆ ಮತ್ತು ಆಚರಣೆಗಳಲ್ಲಿ ವೈವಿಧ್ಯ ವ್ಯತ್ಯಾಸಗಳನ್ನು ತಿಳಿಯಲು ಅತ್ಯಂತ ಉಪಯುಕ್ತ. ಈ ದಾಖಲೆಗಳಲ್ಲಿ ಕೆಲವನ್ನು ಈಗ ಜೆರುಸಲೇಮಿನ ಶ್ರೈನ್ ಆಫ್ ಬುರ್‌ನಲ್ಲಿ ಇಡಲಾಗಿದೆ. ಇಂಗಾಲ–14 ಕಾಲ ನಿರ್ಣಯ ವಿಧಾನ ಮತ್ತು ಈ ದಾಖಲೆಗಳಲ್ಲಿಯ ಬರೆವಣಿಗೆ ವಿಶ್ಲೇಷಣೆಯಿಂದ ಇವುಗಳ ಕಾಲಮಾನ ಪ್ರ.ಶ.ಪೂ.ಸು. 2ನೆಯ ಶತಮಾನ – ಪ್ರ.ಶ.1ನೆಯ ಶತಮಾನವೆಂದು ನಿರ್ಣಯಿಸಲಾಗಿದೆ. ಮುಖ್ಯವಾಗಿ ದಿ ಗ್ರೇಟ್ ಇಸಯ್ಯ ದಾಖಲೆಯನ್ನು ಇಂಗಾಲ–14ರ ಕಾಲನಿರ್ಣಯ ವಿಧಾನದಿಂದ ಪ್ರ.ಶ.ಪೂ.335–107 ಎಂದು ನಿರ್ಧರಿಸಲಾಗಿದೆ. ಈಜಿಪ್ಟಿನ ನಶ್ ಪಾಪ್ಯಲೆಸ್ ದಾಖಲೆಗಳಲ್ಲಿ ಹತ್ತು ಆಜ್ಞೆಯ (ಟೆನ್ ಕಮಾಂಡ್‌ಮೆಂಟ್ಸ್) ಪ್ರತಿಯಿದೆ. ಈ ದಾಖಲೆಗಳಲ್ಲಿ ಹೆಚ್ಚಿನವು (ಗೆವಿಲ್) ಪ್ರಾಣಿಯ ಚರ್ಮದ ಮೇಲೆ, ಉಳಿದವನ್ನು ಪಾಪಿರಸ್ ಮೇಲೆ ಬರೆಯಲಾಗಿದೆ. ಪಕ್ಷಿಗಳ ಗರಿಯನ್ನೇ ಲೇಖನಿಯಾಗಿ ಉಪಯೋಗಿಸಲಾಗಿದೆ. ಇದ್ದಲಿನ ಕಪ್ಪು ಮತ್ತು ಬಿಳಿ ಬಣ್ಣಗಳಲ್ಲಿ ಬರೆಯಲಾಗಿದೆ. ಒಂದು ದಾಖಲೆ ಮಾತ್ರ ತೆಳ್ಳನೆಯ ತಾಮ್ರದ ತಗಡಿನದಾಗಿದ್ದು ಅದರ ಮೇಲೆ ಕೊರೆದು ಜೋಡಿಸಲಾ ಗಿದೆ. ಶೇ.ಸು.80–85 ಭಾಗ ಈ ದಾಖಲಾತಿಗಳನ್ನು ಬೈಬಲಿನ ಹೀಬ್ರು ಮತ್ತು ಸಮಕಾಲೀನ ಹೀಬ್ರು ಭಾಷೆಯಲ್ಲಿ ಬರೆಯಲಾಗಿದೆ. ಇನ್ನು ಕೆಲವು ಅರಾಮಿಕ್ ಮತ್ತು ಕೊನ್ಯ ಗ್ರೀಕ್ ಭಾಷೆಯಲ್ಲಿ ಬರೆಯಲಾಗಿದೆ. ಹವ್‌ಕ್ಕು ಗ್ರಂಥದ ಮೇಲಿನ ಇಸಯ್ಯ ನಡುವಳಿಕೆ ಮಾರ್ಗದರ್ಶಿ ಮುಂತಾದವು ಈ ದಾಖಲೆಗಳಲ್ಲಿವೆ. ತಾಮ್ರದ ತಗಡಿನ ದಾಖಲೆಯಲ್ಲಿ ದೇವಾಲಯದ ಅಮೂಲ್ಯವಾದ ಚಿನ್ನ ಮತ್ತು ಇತರ ಪ್ರಶಸ್ತ ವಸ್ತುಗಳ ಪಟ್ಟಿಯಿದೆ. ಈ ದಾಖಲೆಗಳನ್ನು ಪ್ರಪ್ರಥಮವಾಗಿ ಮಹಮದ್ ಅಹಮದ್ ಎಲ್ ಹಮೆದ್ ಎಂಬ ಕುರಿಗಾಹಿ ನೋಡಿದ. ಈ ದಾಖಲೆಗಳನ್ನು ಹಲವಾರು ಜಾಡಿಗಳಲ್ಲಿ ಲಿನೆನ್ ಬಟ್ಟೆಯಲ್ಲಿ ಸುತ್ತಿಡಲಾಗಿತ್ತು. ಅನಂತರ ಇವುಗಳನ್ನು ಪ್ರಕಟಿಸಲಾಯಿತು. ಈ ದಾಖಲೆಗಳು ದೊರೆಯುವುದಕ್ಕೆ ಮೊದಲು 9ನೆಯ ಶತಮಾನದ ಹೀಬ್ರು ಬೈಬಲ್ ಗ್ರಂಥವುಳ್ಳ ಮೆಸೋರಿಟಿಕ್ ಗ್ರಂಥಗಳೇ ಅತ್ಯಂತ ಪ್ರಾಚೀನವೆಂದು ತಿಳಿಯಲಾಗಿತ್ತು. (ಎ.ಎಸ್.; ಎನ್.ಎಲ್.)

**ಮೆಂಫಿಸ್:** ಪ್ರಾಚೀನ ಈಜಿಪ್ಟಿನ ರಾಜಧಾನಿ ಎನಿಸಿದ್ದ ಒಂದು ನಗರ. ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಹಲವು ಸಲ ಇದು ಉಲ್ಲೇಖಗೊಂಡಿದೆ. ಕೈರೋ ನಗರಕ್ಕೆ ಸು.23ಕಿಮೀ ದಕ್ಷಿಣದಲ್ಲಿ ನೈಲ್ ನದಿಯ ಪಶ್ಚಿಮ ತೀರದಲ್ಲಿರುವ ಈ ನಗರ ಪ್‌ಟಾ ದೇವತೆಯ ಆರಾಧನೆಯ ಪ್ರಮುಖ ಕೇಂದ್ರವಾಗಿತ್ತು. ಮೀನೀಸ್ (ಪ್ರ.ಶ.ಪೂ.3200) ಎಂಬ ದೊರೆ ಇದನ್ನು ಮೇಲಿನ ಮತ್ತು ಕೆಳಗಿನ ಈಜಿಪ್ಟಿನ ಸಂಯುಕ್ತ ರಾಜ್ಯಗಳ ರಾಜಧಾನಿಯಾಗಿ ಮಾಡಿದಾಗ ಇದರ ಬಹುಮುಖ ಬೆಳೆವಣಿಗೆ ಆರಂಭವಾಯಿತು. ಪ್ರ.ಶ.ಪೂ.1570ರಲ್ಲಿ ಈಜಿಪ್ಟಿನಲ್ಲಿ ನವಸಾಮ್ರಾಜ್ಯ (ನ್ಯೂ ಎಂಪೈರ್) ಸ್ಥಾಪನೆಯಾಗುವ ತನಕ ಮೆಂಫಿಸ್ ಈಜಿಪ್ಟಿನ ಅತಿದೊಡ್ಡ ನಗರವಾಗಿ ಉಳಿದಿತ್ತು. ಆಮನ್ ದೇವತಾರಾಧನೆ ಪ್ರಬಲವಾಗಿ ತೀಬ್ಸ್‌ನಗರಕ್ಕೆ ಪ್ರಾಧಾನ್ಯ ಬಂದಾಗ ಮೆಂಫಿಸ್ ಬಹು ಶೀಘ್ರವಾಗಿ ಅವನತಿ ಹೊಂದಿತು; ನೈಲ್ ನದಿಯ ಇನ್ನೊಂದು ತೀರದಲ್ಲಿ ಪುಸ್ತಾತ್ ಎಂಬ ಅರೇಬಿಯ ನಗರದ ಉದಯದಿಂದಾಗಿ ಮೆಂಫಿಸ್‌ನ ಅವನತಿ ಇನ್ನಷ್ಟು ವೇಗವಾಗಿ ಆಯಿತು. ಪುಸ್ತಾತ್ ಹಾಗೂ ಕೈರೋ ನಗರಗಳ ನಿರ್ಮಾಣಕ್ಕೆ ಮೆಂಫಿಸ್ ಅವಶೇಷಗಳು ಕಲ್ಲುಗಣಿಗಳಾಗಿ ಪರಿಣಮಿಸಿದವು. ಹೀಗಾಗಿ ಮೆಂಫಿಸ್‌ನಲ್ಲಿ ಕೆಲವು ಕಲ್ಲು ರಾಶಿಯ ಗುಡ್ಡಗಳಷ್ಟೇ ಉಳಿದುಕೊಂಡಿವೆ; ಇವುಗಳಿಂದ ನಗರದ ಸ್ಥಿತಿ, ಅರಮನೆ ಮತ್ತು ದೇಗುಲಗಳು, ಆ್ಯಪಿಸ್‌ನ ವಾಸಸ್ಥಾನಗಳನ್ನು ಗುರುತಿಸಲು ಸಾಧ್ಯವಾಗಿದೆ. ಆದರೆ ಇಲ್ಲಿಯ ಸಕ್ಕಾರಾದ ಬೃಹತ್ ಗೋರಿಯೊಂದನ್ನು, ಗಾಳಿಗೆ ಹಾರಿಬಂದು ಸೇರಿದ ಮರಳರಾಶಿ ರಕ್ಷಿಸಿತು; ಈ ಗೋರಿ ಗೀಜಾದಿಂದ ದಷೂರ್‌ವರೆಗೆ ಸು.32ಕಿಮೀ ದೂರ ಹಬ್ಬಿದ ಪಿರಮಿಡ್ ಹಾಗೂ ಗೋರಿಗಳ ಶ್ರೇಣಿಯ ಒಂದು ಭಾಗವಾಗಿದೆ.

1861ರಲ್ಲಿ ಎ.ಎಫ್.ಎಫ್. ಮೆರಿಯಟ್ ಕಂಡುಹಿಡಿದ ಆ್ಯಪಿಸ್‌ನ ಸಮಾಧಿ ಗುಹೆ. 1905ರಲ್ಲಿ ಜೆ.ಇ.ಕ್ವಿಬೆಲ್ ಪತ್ತೆ ಮಾಡಿದ ಸೇಂಟ್ ಜೆರೆಮಿಯಸ್ ಕಾಪ್ಟರ್ ಕ್ರೈಸ್ತ ಸಂನ್ಯಾಸಿ ಮಠ–ಇವು ಇಲ್ಲಿಯ ಸ್ಮಾರಕಗಳಲ್ಲಿ ಮುಖ್ಯವಾದವು. ಈ ಎರಡನೆಯ ರಚನೆಯಲ್ಲಿ ಕೆಲವು ಗಮನಾರ್ಹ ಭಿತ್ತಿಚಿತ್ರ ಹಾಗೂ ಶಿಲ್ಪಗಳಿವೆ. ಗ್ರೀಕ್ ಕಲಾಶೈಲಿಯ ಮಣ್ಣಿನ ಪ್ರತಿಮಾ ಶಿರಗಳನ್ನು ಇಲ್ಲಿ ಸರ್ ಫ್ಲಿಂಡರ್ಸ್ ಪೆಟ್ರಿ ಕಂಡುಹಿಡಿದರು. ಇವು ಪರ್ಷಿಯನ್ ಆಳಿಕೆಯ ಕಾಲದಿಂದ ಟಾಲಮಿಯ ಕಾಲದ ಅವಧಿಗೆ ಸೇರಿದವು. (ಎಚ್.ಎಂ.ಎನ್.ಆರ್.)

**ಮೆಕ್ಕ:** ಸೌದಿ ಅರೇಬಿಯದ ಹೇಜಸ್‌ನ ಮುಖ್ಯಪಟ್ಟಣ ಮತ್ತು ಮುಸ್ಲಿಮರ ಪವಿತ್ರ ಯಾತ್ರಾಸ್ಥಳ ಹಾಗೂ ಮಹಮ್ಮದ್ ಪೈಗಂಬರನ ಜನ್ಮಸ್ಥಳ. ಕೆಂಪುಸಮುದ್ರದ ಜೆಡ್ಡ ರೇವು ಪಟ್ಟಣದಿಂದ ಪೂರ್ವಕ್ಕೆ 80 ಕಿಮೀ ದೂರದಲ್ಲಿರುವ ಈ ನಗರ ಒಂದುಕಾಲದಲ್ಲಿ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಪ್ರವಾದಿ ಮಹಮ್ಮದನ ಧರ್ಮಬೋಧೆ ಪ್ರಾರಂಭವಾದುದೂ ಈ ನಗರದಲ್ಲಿಯೇ. ಇಸ್ಲಾಮ್ ಧರ್ಮ ಅರೇಬಿಯದ ಹೊರಗಡೆ ಹರಡತೊಡಗಿದಾಗ, ಮೆಕ್ಕ ನಗರದ ರಾಜಕೀಯ ಪ್ರಭಾವ ಕುಂಠಿತಗೊಂಡು ಧಾರ್ಮಿಕ ಮಹತ್ತ್ವ ಹೆಚ್ಚಿತು.

ಇದೊಂದು ಅಗಲವಾದ ಕಣಿವೆ. ಇದರ ಸುತ್ತಲೂ ಎತ್ತರದ ಬೆಟ್ಟಗಳಿವೆ. ಪಶ್ಚಿಮದಲ್ಲಿ ಉಪನಗರಗಳು ಬೆಳೆದಿವೆ. ಕಣಿವೆಯ ಅತ್ಯಂತ ವಿಶಾಲ ಭಾಗದಲ್ಲಿ ಮೆಕ್ಕ ನಗರದ ಮಹಾ ಮಸೀದಿಯಿದೆ. ಮಸೀದಿಯಲ್ಲಿರುವುದು ವಿಸ್ತಾರ ಚತುಃಶಾಲೆ; ಚತುಃಶಾಲೆಯ ಸುತ್ತಲೂ ಅಮೃತಶಿಲೆಯ ಇಲ್ಲವೆ ಕರಿಕಲ್ಲಿನ ಸಾಲು ಗಂಬಗಳು; ಮಧ್ಯಭಾಗದಲ್ಲಿ ಕಾಬ **(ನೋಡಿ)** ಶಿಲೆಯಿದೆ. ಇಸ್ಲಾಮ್ ಧರ್ಮಸ್ಥಾಪನೆಗೂ ಹಿಂದೆಯೇ ನಿರ್ಮಿತವಾಗಿ, ಮತ್ತೆ ಪುನರ್ನಿರ್ಮಿತವಾದ ಈ ಕಾಬವೇ ಇಸ್ಲಾಮ್ ಧರ್ಮದ ಗರ್ಭಗುಡಿ. ಕಾಬವಿನ ಆಗ್ನೇಯ ಮೂಲೆಯ ಗೋಡೆಯಲ್ಲಿ ಬೆಳ್ಳಿಯ ಚೌಕಟ್ಟಿನಲ್ಲಿ ಅಚ್ಚರಿದಿಟ್ಟ ಶ್ಯಾಮಲ ಶಿಲೆ ಇಸ್ಲಾಮ್ ಧರ್ಮಕ್ಕೂ ಪೂರ್ವದಲ್ಲಿಯೇ ಪರಮ ಪೂಜ್ಯವಸ್ತುವಾಗಿದ್ದಿತು. ಈ ಶ್ಯಾಮಲ ಶಿಲೆ ಇಸ್ಲಾಮ್ ಧರ್ಮದ ಅತ್ಯಂತ ಪವಿತ್ರ ಸಂಕೇತ; ಯಾತ್ರಿಕರು ಅದಕ್ಕೆ ಮುತ್ತಿಡುತ್ತಾರೆ; ಇಲ್ಲವೆ ವಂದನೆ ಸಲ್ಲಿಸುತ್ತಾರೆ. ನೈರುತ್ಯಮೂಲೆಯಲ್ಲಿ ಕಂದುಬಣ್ಣದ ಯೆಮಿನಿ ಶಿಲೆಯಿದೆ. ಅದನ್ನು ಯಾತ್ರಿಕರು ಸ್ಪರ್ಶಿಸಬೇಕು. ಮನಸೆಳೆಯುವ ಕಸೂತಿ ಹಾಕಿದ ಕರಿಯ ದುಕೂಲ ಕಾಬವನ್ನು ಅಡಿಯಿಂದ ಮುಡಿಯವರೆಗೆ ಶೃಂಗರಿಸಿರುತ್ತದೆ. ಈ ದುಕೂಲಕ್ಕೆ ಕಿಸ್ವಾ ಎಂದು ಹೆಸರು. ಇದು ಈಜಿಪ್ಟ್ ದೇಶದಲ್ಲಿ ಸಿದ್ಧವಾಗುವುದು. ಪ್ರತಿವರ್ಷವೂ ಕಾಬವಿಗೆ ಹೊಸ ದುಕೂಲ ಬರುತ್ತದೆ. ಹಿಂದಿನ ವರ್ಷದ

ಕಿಸ್ವಾವನ್ನು ಕತ್ತರಿಸಿ ಯಾತ್ರಿಕರಿಗೆ ವಿಕ್ರಯಿಸಲಾಗುವುದು. ಮಸೀದಿಯೊಳಗೆ ಪ್ರಸಿದ್ಧವಾದ ಝಮ್ ಝಮ್ ಬಾವಿಯಿದೆ. ಬಾವಿಯ ನೀರು ಕೊಂಚ ಉಪ್ಪು. ಈ ನೀರಿಗೆ ಪವಾಡ ಶಕ್ತಿಯಿದೆಯೆಂದು ಯಾತ್ರಿಕರ ನಂಬಿಕೆ.

ಮೆಕ್ಕ ಯಾತ್ರೆಗೆ ಬರುವವರು ಬಿಳಿಯ ಬಟ್ಟೆ (ಇಹ್ರಾಮ್) ಧರಿಸಬೇಕು; ಅರಾಫತ್ ಬಯಲಿನಲ್ಲಿ ನಿಂತಿರಬೇಕು; ಮುನಾದಲ್ಲಿರುವ ಸೈತಾನನ ಪ್ರತಿಮೆಗೆ ಕಲ್ಲೆಸೆಯಬೇಕು; ಅಲ್ಲಿಂದ ಮೆಕ್ಕ ನಗರಕ್ಕೆ ತೆರಳಿ ಟಾವಫ್ (ಎಂದರೆ ಕಾಬವಿನ ಮಂಡಲಕ್ಕೆ ಪ್ರದಕ್ಷಿಣೆ ಹಾಕುವ) ವಿಧಿಯನ್ನೂ ಸಾಯ್ (ಎಂದರೆ ಸಾಫಾದಿಂದ ಮಾರ್ವಾವರೆಗೆ ಓಡುವ) ವಿಧಿಯನ್ನು ನೆರವೇರಿಸಬೇಕು; ಕೊನೆಗೆ ಮುಖಕ್ಷೌರ ಮಾಡಿಕೊಂಡು ತಲೆಗೂದಲು ಕತ್ತರಿಸಬೇಕು.

1924ರಲ್ಲಿ ನೇಜ್ಡ್ ರಾಜ ಇಬನ್ ಸಾವೂದ್ ಮೆಕ್ಕ ನಗರವನ್ನು ಹಿಡಿದ. ಅಂದಿನಿಂದ ಯಾತ್ರಿಕರು ನಿರ್ಭಯವಾಗಿ ಸಂಚರಿಸಲು ಸಾಧ್ಯವಾಗಿದೆ. ಇಲ್ಲಿ ಜನಾರೋಗ್ಯ ರಕ್ಷಣೆ ಸಮರ್ಪಕವಾಗಿದೆ. (ಸಿ.ಜಿ.ಎಸ್.)

**ಮೆಕ್ಸಿಕೊ:** ಲ್ಯಾಟಿನ್ ಅಮೆರಿಕದ ಉತ್ತರ ತುದಿಯಲ್ಲಿರುವ ಪುರಾತನ ದೇಶ. ಪ್ರ.ಶ.ಪೂ.ದಲ್ಲಿ ಮೆಕ್ಸಿಕೊದಲ್ಲಿ ವಾಸಿಸುತ್ತಿದ್ದ ಇಂಡಿಯನ್ನರ ಇತಿಹಾಸದ ಬಗ್ಗೆ ನಿಖರವಾದ ಮಾಹಿತಿ ದೊರೆತಿಲ್ಲ. ಇವರ ಆಯುಧಗಳು, ಅಲಂಕಾರಿಕ ವಸ್ತುಗಳು, ಧಾರ್ಮಿಕ ಸಂಕೇತಗಳು ಹಾಗೂ ಕಟ್ಟಡಗಳ ಅವಶೇಷಗಳ ಆಧಾರದ ಮೇಲೆ ತಿಳಿದಂತೆ ಮೆಕ್ಸಿಕೊ ಕಣಿವೆಯ ಇಂಡಿಯನ್ನರು ಬೆಳೆದ ಧಾನ್ಯಗಳನ್ನು ಹಿಟ್ಟು ಮಾಡುತ್ತಿದ್ದರು. ಇವರಿಗೆ ಬಟ್ಟೆ ನೇಯುವುದು ಮತ್ತು ಮಡಕೆ ತಯಾರಿಕೆ ಗೊತ್ತಿತ್ತು. ಹಸಿ ಇಟ್ಟಿಗೆಯಿಂದ ಮನೆಯನ್ನು ಕಟ್ಟುತ್ತಿದ್ದರು ಹಾಗೂ ಮನೆ ಬಳಕೆ ವಸ್ತುಗಳನ್ನು ಕಲ್ಲು, ಜೇಡಿಮಣ್ಣು, ಜ್ವಾಲಾಮುಖಿಯ ಲಾವಾದಿಂದುಂಟಾಗುವ ಗಾಜಿನಂಥ ಶಿಲೆಯಿಂದ ತಯಾರಿಸುತ್ತಿದ್ದರು.

ಟಾಲ್‌ಟೆಕ್ ಇಂಡಿಯನ್ನರು ಮೆಕ್ಸಿಕೊ ಕಣಿವೆಗೆ 900ಕ್ಕೆ ಮೊದಲು ವಲಸೆ ಬಂದರು. 900–1200ರ ತನಕ ಇವರ ಹಾಗೂ ಇತರ ಇಂಡಿಯನ್ನರ ನಾಗರಿಕತೆ ಉನ್ನತ ಮಟ್ಟದ್ದಾಗಿತ್ತು. ಅನಂತರ ಟಾಲ್‌ಟೆಕ್ ಇಂಡಿಯನ್ನರ ನಾಗರಿಕತೆ ಅತ್ಯುನ್ನತ ಮಟ್ಟದ್ದಾಗಿತ್ತು. ಕ್ರಮೇಣ ಟಾಲ್‌ಟೆಕ್ ಇಂಡಿಯನ್ನರ ಒಳಜಗಳಗಳ ಕಾರಣ ಅವರ ಶಕ್ತಿ ಕುಂದಿ ಬೇರೆ ಜನಾಂಗದವರು ಪ್ರಬಲರಾದರು. 1300 ವೇಳೆಗೆ ಆಜ್ಟೆಕ್ ಇಂಡಿಯನ್ನರು ಇಲ್ಲಿ ಪ್ರಬಲರಾಗಿ ದಕ್ಷಿಣ ಮೆಕ್ಸಿಕೊದ ಇತರ ಎಲ್ಲ ಬುಡಕಟ್ಟುಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಅವರ ರಾಜಧಾನಿ ಟೇನೋಜ್ ಟೀ ಟ್ಲಾನ್, ಈಗಿನ ಮೆಕ್ಸಿಕೊ ನಗರದ ಜಾಗದಲ್ಲಿದ್ದು ಈ ಸುಂದರ ನಗರದಲ್ಲಿ 1,00,000 ಜನರು ವಾಸಿಸುತ್ತಿದ್ದರೆಂದು ತಿಳಿದುಬರುತ್ತದೆ.

ಫ್ರಾನ್ಸಿಸ್ಕೊ ಹರ್ನಾಂಡೆಜ್ ಡಿ ಕಾರ್ಡೋ ಎಂಬ ಸ್ಪಾನಿಷ್ ಯೋಧ, ಪರಿಶೋಧಕ ಮೆಕ್ಸಿಕೊಗೆ ಬಂದ ಮೊದಲನೆಯ ಯುರೋಪಿಯನ್. ಅವನು 1517ರಲ್ಲಿ ಯುಕಟಾನ್ ಪರ್ಯಾಯ ದ್ವೀಪಕ್ಕೆ ಬಂದಿಳಿದಾಗ ಮಾಯಾ ಇಂಡಿಯನ್ನರು ಧಾಳಿಮಾಡಿ ಹೊಡೆದೋಡಿಸಿದರು. ಕ್ಯೂಬದ ಸ್ಪಾನಿಷ್ ಗವರ್ನರ್ ಡಿಗೋ ವೆಲಾಕ್ವೆಜ್ ತನ್ನ ಸೋದರಳಿಯ ಜಾನ್ ಡಿ ಗ್ರಿಜಾಲ್ವನನ್ನು ಮೆಕ್ಸಿಕೊಗೆ 1518ರಲ್ಲಿ ಕಳುಹಿಸಿದ. ಇವನು ಮೆಕ್ಸಿಕೊ ತೀರಕ್ಕೆ ಬಂದು ಇಂಡಿಯನ್ನರೊಡನೆ ಚಿನ್ನದ ವ್ಯಾಪಾರ ಮಾಡಿದ; ಈ ಪ್ರದೇಶಕ್ಕೆ ನ್ಯೂ ಸ್ಪೇನ್ ಎಂದು ಹೆಸರಿಟ್ಟ. 1518ರಲ್ಲಿ ಸ್ಪಾನಿಷ್ ಗವರ್ನರನಿಂದ ಕಳುಹಿಸಲ್ಪಟ್ಟ ಹೆರ್ನಾನ್ ಕೋರ್ಟೆಜ್ 600 ಸೈನಿಕರೊಡನೆ ಬಂದು ಆಜ್ಟೆಕ್ಕರನ್ನು ಸೋಲಿಸಿದ. ಅಂದಿನಿಂದ ಸ್ವತಂತ್ರ ದೇಶವಾಗುವ ತನಕ (1821) ಮೆಕ್ಸಿಕೊ ಸ್ಪೇನ್ ಸಾಮ್ರಾಜ್ಯ ಭಾಗವಾಗಿ ಮುಂದುವರಿಯಿತು. 1525 ವೇಳೆಗೆ ಸ್ಪೇನ್ ಆಡಳಿತ ದಕ್ಷಿಣದಲ್ಲಿ ಗ್ವಾಟೆಮಾಲ ಹಾಗೂ ಹೊಂಡುರಾಸ್‌ವರೆಗೆ ವಿಸ್ತರಿಸಲ್ಪಟ್ಟಿತ್ತು. ಮಧ್ಯ ಅಮೆರಿಕದ ಉಳಿದ ಭಾಗಗಳು ಆ ವೇಳೆಗಾಗಲೇ ಸ್ಪಾನಿಷರ ವಶವಾಗಿದ್ದು ಯುಕಟಾನಲ್ಲಿ ಮಾತ್ರ ಮಾಯಾ ಜನ ಪ್ರಬಲವಾಗಿ ವಿರೋಧಿಸಿದರು. ಈ ಪ್ರದೇಶ ಸ್ಪಾನಿಷರ ವಶಕ್ಕೆ ಬರಲು ಮತ್ತೆ 20 ವರ್ಷಗಳು ಬೇಕಾಯಿತು. ಒಳಭಾಗದ ಇಂಡಿಯನ್ನರು ಮತ್ತೆ ಒಂದೂವರೆ ಶತಮಾನಗಳಷ್ಟು ಕಾಲ ಸ್ವತಂತ್ರರಾಗಿದ್ದರು.

1535ರಲ್ಲಿ ನ್ಯೂಸ್ಪೇನ್, ಸ್ಪೇನ್ ದೇಶದ ವಸಾಹತು ಆಗಿ ಸ್ಪಾನಿಷ್ ಆಗಿ ಸ್ಪಾನಿಷ್ ದೊರೆ ರಾಜಪ್ರತಿನಿಧಿಯನ್ನು ನೇಮಿಸಿದ. ಸ್ಪಾನಿಷ್ ಆಡಳಿತಕಾಲದಲ್ಲಿ ಸ್ಪೇನ್ ದೇಶೀಯರೇ ಉನ್ನತ ಸರ್ಕಾರಿ ಹುದ್ದೆಗಳು ಹಾಗೂ ಚರ್ಚುಗಳಲ್ಲಿ ನೇಮಕವಾಗುತ್ತಿದ್ದರು. ಇಂಡಿಯನ್ನರಿಗೆ ಅತಿ ಕೆಳಮಟ್ಟದ ಉದ್ಯೋಗ ಮಾತ್ರ ಲಭಿಸುತ್ತಿತ್ತು.

1808ರಲ್ಲಿ ಒಂದನೆಯ ನೆಪೋಲಿಯನ್ ದೊರೆ ಸ್ಪೇನ್ ದೇಶವನ್ನು ಗೆದ್ದು ಏಳನೆಯ ಫರ್ಡಿನೆಂಡ್ ದೊರೆಯನ್ನು ಬಂಧನದಲ್ಲಿಟ್ಟ. ತನ್ನ ತಮ್ಮ ಜೋಸೆಫ್ ಬೋನಪಾರ್ಟಿಯನ್ನು ಸ್ಪಾನಿಷ್ ದೊರೆಯನ್ನಾಗಿ ಮಾಡಿದ. 1810 ಸೆಪ್ಟೆಂಬರ್ 16 ರಂದು ಸ್ಪಾನಿಷ್ ಜನ ಮಿಗೇಲ್ ಹಿಡಾಲ್ಗೊಯಿ ಕಾಸ್ಟಿಲ ಎಂಬ ಪಾದ್ರಿಯ ನೇತೃತ್ವದಲ್ಲಿ ದಂಗೆಯೆದ್ದರು. ಇದೇ ಮೆಕ್ಸಿಕನ್ ಸ್ವಾತಂತ್ರ್ಯ ಸಂಗ್ರಾಮದ ಪ್ರಥಮ ಹೆಜ್ಜೆಯಾಯಿತು. ಈಗಲೂ ಸೆಪ್ಟೆಂಬರ್ 15 ಮತ್ತು 16ರಂದು ಮೆಕ್ಸಿಕನ್ನರು ಸ್ವಾತಂತ್ರ್ಯ ದಿನಾಚರಣೆ ಆಚರಿಸುತ್ತಾರೆ.

ಅನಂತರ ಅನೇಕ ಬಾರಿ ದಂಗೆಗಳಾಗಿ 1811 ಜನವರಿಯಲ್ಲಿ ಸ್ಪಾನಿಷರು ಹಿಡಾಲ್ಗೋನನ್ನು ಬಂಧಿಸಿ ಮರಣದಂಡನೆ ವಿಧಿಸಿದರು. ಅವನ ಜತೆಗಾರನಾದ ಜೋಸ್ ಮಾರಿಯ ಮಾರೆಲೋಸ್ ಯಿ ಪವನ್ ಇದರ ನೇತೃತ್ವ ವಹಿಸಿಕೊಂಡ. ಇವನನ್ನು ಸಹ 1815ರಲ್ಲಿ ಬಂಧಿಸಿ ಕೊಲ್ಲಲಾಯಿತು. 1871ರ ವೇಳೆಗೆ ದಂಗೆಯನ್ನು ಅಡಗಿಸಲಾಯಿತು. 1820 ಡಿಸೆಂಬರ್‌ನಲ್ಲಿ ಅಗಸ್ಟಿನ್ ಡಿ ಇಟುರ್‌ಬೈಡ್ ಎಂಬ ಮೆಕ್ಸಿಕನ್ ಸೇನಾಧಿಕಾರಿಯನ್ನು ಸ್ಪಾನಿಷರ ವಿರುದ್ಧ ದಂಗೆಯನ್ನು ಅಡಗಿಸಲು ಕಳುಹಿಸಲಾಯಿತು. ಆದರೆ ಇವನು ದಂಗೆಕೋರರನ್ನು ಅಡಗಿಸುವ ಬದಲು ತಾನೇ ದಂಗೆಕೋರರ ನಾಯಕನಾದ. ಸ್ಪಾನಿಷ್ ಆಡಳಿತವನ್ನು ಕೊನೆಗಾಣಿಸಿ 1821 ಸೆಪ್ಟೆಂಬರ್‌ನಲ್ಲಿ ತಾನೇ ಆಡಳಿತದ ಮುಖ್ಯಸ್ಥನಾದ. 1822ರಲ್ಲಿ ಇಟುರ್‌ಬೈಡ್‌ನ ಸೈನಿಕರು ಅವನನ್ನು ಚಕ್ರವರ್ತಿಯೆಂದು ಘೋಷಿಸಿ ಮೊದಲನೆಯ ಅಗಸ್ಟಿನ್ ಎಂಬ ಬಿರುದನ್ನು ಕೊಟ್ಟರು. ಚುನಾಯಿತ ಕಾಂಗ್ರೆಸ್ ಇದನ್ನು ಒಪ್ಪಲಿಲ್ಲವಾದ್ದರಿಂದ ಕಾಂಗ್ರೆಸ್ಸನ್ನೇ ತೆಗೆದುಹಾಕಲಾಯಿತು. ಮುಂದೆ ಈತನ ವಿರುದ್ಧ ದಂಗೆಯೆದ್ದು 1823 ಮಾರ್ಚ್‌ನಲ್ಲಿ ಚಕ್ರವರ್ತಿಯ ಸ್ಥಾನ ಪರಿತ್ಯಾಗಮಾಡಲು ಬಲಾತ್ಕರಿಸಲಾಯಿತು. 1824 ಅಕ್ಟೋಬರ್ 4ರಂದು ಮೆಕ್ಸಿಕೊದೇಶವನ್ನು ಗಣರಾಜ್ಯವನ್ನಾಗಿ ಘೋಷಿಸುವ ರಾಜ್ಯಾಂಗವನ್ನು ಕಾಂಗ್ರೆಸ್ ಜಾರಿಗೆ ತಂದಿತು. ಗ್ವಾಡಲುಪೆ ವಿಕ್ಟೋರಿಯ ಎಂಬ ರಿಪಬ್ಲಿಕನ್‌ನಾಯಕನನ್ನು ಮೆಕ್ಸಿಕೊದ ಮೊದಲನೆಯ ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು. ಮುಂದಿನ 35 ವರ್ಷಗಳ ಕಾಲ ಸ್ವಾರ್ಥ ಸಾಧಕರಿಂದ ಒಳಜಗಳಗಳು ನಡೆದವು. 1835ರಲ್ಲಿ ಟೆಕ್ಸಾಸ್ ಮೆಕ್ಸಿಕೊದ ವಿರುದ್ಧ ದಂಗೆಯೆದ್ದಿತು. ಆ ಕಾಲದಲ್ಲಿ ಟೆಕ್ಸಾಸ್ ಮೆಕ್ಸಿಕೊದ ಪ್ರದೇಶವಾಗಿತ್ತು. ಆದರೆ ಅಲ್ಲಿಯ ಜನರೆಲ್ಲ ಅಮೆರಿಕ ಸಂಯುಕ್ತಸಂಸ್ಥಾನದಿಂದ ವಲಸೆ ಬಂದವರಾಗಿದ್ದರು. 1836ರಲ್ಲಿ ಟೆಕ್ಸಾಸ್ ಸ್ವತಂತ್ರವಾಯಿತು. ಮೆಕ್ಸಿಕೊ ಟೆಕ್ಸಾಸ್‌ನ ಜೊತೆಗೆ ನ್ಯೂ ಮೆಕ್ಸಿಕೊ, ಕಾನ್ಸಾಸ್, ಓಕ್ಲಹಾಮಾ, ಕೊಲರ್‍ಯಾಡೊ ಹಾಗೂ ವ್ಯೋಮಿಂಗ್‌ನ ಕೆಲವು ಭಾಗಗಳನ್ನೂ ಕಳೆದುಕೊಂಡಿತು.

1845ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನ ಟೆಕ್ಸಾಸನ್ನು ವಶಪಡಿಸಿಕೊಂಡ ಕಾರಣ 1846ರಲ್ಲಿ ಮೆಕ್ಸಿಕೊದೊಡನೆ ಯುದ್ಧವಾಯಿತು. ಮೆಕ್ಸಿಕೊ ಯುದ್ಧದಲ್ಲಿ ಸೋತು 1848 ಫೆಬ್ರುವರಿ 2ರಂದು ಗ್ವಾಡಸುಪೆ ಹಿಡಾಲ್ಗೊ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಇದರ ಪ್ರಕಾರ ಮೆಕ್ಸಿಕೊ ಕ್ಯಾಲಿಫೋರ್ನಿಯ, ನೆವಾಡ, ಉಟಾ, ಆರಿಜೋನ, ವ್ಯೋಮಿಂಗ್, ಕೊಲರ್‍ಯಾಡೊ ಮತ್ತು ನ್ಯೂ ಮೆಕ್ಸಿಕೊ ಇರುವ ಭಾಗಗಳನ್ನು ಅಮೆರಿಕ ಸಂಯುಕ್ತಸಂಸ್ಥಾನಗಳಿಗೆ ಬಿಟ್ಟುಕೊಡಬೇಕಾಯಿತು.

1860ರ ದಶಕದಲ್ಲಿ ರಾಜಕೀಯ ಹಾಗೂ ಸಾಮಾಜಿಕ ಸುಧಾರಣೆಗಳ ವಿರುದ್ಧ ಅಂತರ್ಯುದ್ಧ ನಡೆಯಿತು. ಮೆಕ್ಸಿಕೊ, ಗ್ರೇಟ್ ಬ್ರಿಟನ್, ಫ್ರಾನ್ಸ್, ಸ್ಪೇನ್‌ಗಳಿಗೆ ಕೊಡಬೇಕಾದ ಸು.100,000,000 ಡಾಲರುಗಳ ಸಾಲವನ್ನು ತೀರಿಸಲು ತಿರಸ್ಕರಿಸಿದುದರಿಂದ ಆ ದೇಶಗಳೊಡನೆ ಯುದ್ಧ ಪ್ರಾರಂಭವಾಯಿತು. 1863 ಜೂನ್‌ನಲ್ಲಿ ಮೆಕ್ಸಿಕೊ ನಗರವನ್ನು ಫ್ರಾನ್ಸ್ ವಶಪಡಿಸಿಕೊಂಡಿತು. 1864ರಲ್ಲಿ ನೆಪೋಲಿಯನ್ ದೊರೆಯಾಗಿ ಆಸ್ಟ್ರಿಯನ್ ರಾಜಕುಮಾರ ಮ್ಯಾಕ್ಸಿಮಿಲಿಯನ್‌ನನ್ನು ಮೆಕ್ಸಿಕೊದ ಚಕ್ರವರ್ತಿಯನ್ನಾಗಿ ಮಾಡಲು ಪ್ರಯತ್ನಿಸಿದ. ಇದರಿಂದ ಫ್ರಾನ್ಸ್ ಹಾಗೂ ಮೆಕ್ಸಿಕೊಗಳಿಗೆ ತೀವ್ರ ಯುದ್ಧವಾಯಿತು. 1867ರಲ್ಲಿ ಮೆಕ್ಸಿಕನ್ ಸೇನೆ ಮ್ಯಾಕ್ಸಿಮಿಲಿಯನನ್ನು ಸೆರೆಹಿಡಿದು ಗುಂಡಿಟ್ಟು ಕೊಂದಿತು. 1876ರಲ್ಲಿ ಪೋರ್ಫಿರಿಯೊ ಡಿಯಾಜ್ ಎಂಬ ಸೇನಾಧಿಕಾರಿ ತನ್ನ ಸರ್ಕಾರದ ವಿರುದ್ಧ ದಂಗೆಯೆದ್ದು ತಾನೇ ಅಧ್ಯಕ್ಷನಾದ. 1911ರ ತನಕ ಇವನು ಮೆಕ್ಸಿಕೊದ ಸರ್ವಾಧಿಕಾರಿಯಾಗಿದ್ದ. 1911ರಲ್ಲಿ ಇವನನ್ನು ಓಡಿಸಿ ಮಾಥೆರೋನನ್ನು ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು. 1913ರಲ್ಲಿ ಮತ್ತೊಬ್ಬ ಸೇನಾಧಿಕಾರಿಯಾದ ಜನರಲ್ ವೆರ್ಟಾ ಮಾಥೆರೋನನ್ನು ಕೊಂದು ತಾನೇ ಅಧ್ಯಕ್ಷನಾದ. 1914 ಜುಲೈ 15ರಂದು ಪದವಿಗೆ ರಾಜೀನಾಮೆ ನೀಡಿದ. 1914–19ರ ತನಕ ಅಧಿಕಾರಕ್ಕಾಗಿ ದೇಶದಲ್ಲಿ ಕಚ್ಚಾಟವಾಯಿತು. 1917ರಲ್ಲಿ ಮೆಕ್ಸಿಕೊ ಉದಾರನೀತಿಯ ಹೊಸ ರಾಜ್ಯಾಂಗವನ್ನು ಸ್ವೀಕರಿಸಿತು. ಇದರಲ್ಲಿ ಕ್ರಾಂತಿಯ ಮೂಲೋದ್ದೇಶಗಳಾದ ಭೂಮಾಲೀಕತ್ವದ ಸುಧಾರಣೆ, ಕಾರ್ಮಿಕರಿಗಾಗಿ ನಿಯಮಗಳು, ರೋಮನ್ ಕೆಥೊಲಿಕ್ ಚರ್ಚಿನ ಅಧಿಕಾರ ನಿಯಂತ್ರಿಸುವುದೇ ಮುಂತಾದವನ್ನು ಸೇರಿಸಲಾಯಿತು.

1900ರಿಂದ ಬ್ರಿಟಿಷ್, ಡಚ್ ಮತ್ತು ಅಮೆರಿಕನ್ ಕಂಪನಿಗಳ ಮಾಲೀಕತ್ವದಲ್ಲಿದ್ದ ತೈಲಬಾವಿಗಳನ್ನು ಮೆಕ್ಸಿಕೊ 1938ರಲ್ಲಿ ವಶಪಡಿಸಿಕೊಂಡಿತು. ಇದರ ಮುಖ್ಯ ಕಾರಣ ಈ ಕಂಪನಿಗಳು ತಮ್ಮ ಮೆಕ್ಸಿಕನ್ ಕೆಲಸಗಾರರ ವೇತನಗಳನ್ನು ಏರಿಸಲು ನಿರಾಕರಿಸಿದುದು. ಇದರಿಂದ ಅನೇಕ ದೇಶಗಳಲ್ಲಿಯ ಪೆಟ್ರೋಲಿಯಮ್ ಮಾರುಕಟ್ಟೆಗಳನ್ನು ಕಳೆದುಕೊಳ್ಳಬೇಕಾಗಿ ಬಂದರೂ ಮೆಕ್ಸಿಕೊ ದೃಢವಾಗಿದ್ದಿತು. 1942ರಲ್ಲಿ ಮೆಕ್ಸಿಕೊ ಅಮೆರಿಕನ್ ಕಂಪನಿಗಳಿಗೆ ಹಾಗೂ 1947ರಲ್ಲಿ ಬ್ರಿಟಿಷ್ ಹಾಗೂ ಡಚ್ ಕಂಪನಿಗಳಿಗೆ ಅವರ ತೈಲಬಾವಿಗಳ ಬೆಲೆಯನ್ನು ಪಾವತಿಮಾಡಿತು.

ಎರಡನೆಯ ಮಹಾಯುದ್ಧದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಇತರ ಮಿತ್ರ ರಾಷ್ಟ್ರಗಳೊಡನೆ ಸೇರಿ ಮೆಕ್ಸಿಕೊ ಯುದ್ಧ ಮಾಡಿತು. ಯುದ್ಧಾನಂತರ 1945ರಲ್ಲಿ ಮೆಕ್ಸಿಕೊ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಯಿತು. ಅನಂತರ ದೇಶ ತೀವ್ರವಾಗಿ ಅಭಿವೃದ್ಧಿ ಹೊಂದಿ ಸಂಪದ್ಯುಕ್ತವಾಯಿತು. ಮೆಕ್ಸಿಕೊ 31 ರಾಜ್ಯಗಳನ್ನು ಒಳಗೊಂಡಿದ್ದು ಒಂದು ಫೆಡರಲ್ ರಾಜ್ಯವನ್ನು ಒಳಗೊಂಡಿದೆ. (ಜಿ.ಎಸ್.ಎಸ್.)

**ಮೆಗಾಸ್ತನೀಸ್:** ಚಂದ್ರಗುಪ್ತಮೌರ್ಯನ ಆಸ್ಥಾನದಲ್ಲಿದ್ದ ಗ್ರೀಕ್ ರಾಯಭಾರಿ. ಇವನನ್ನು ಕಳಿಸಿದಾತ ಸೆಲ್ಯೂಕಸ್ ನೀಕೆಟರ್. ಚಂದ್ರಗುಪ್ತನ ಆಸ್ಥಾನದಲ್ಲಿ ಈತ ಪ್ರತಿಷ್ಠಿತ ರಾಯಭಾರಿಯಾಗಿದ್ದ. ರಾಜನೊಂದಿಗೆ ಆಪ್ತನಾಗಿದ್ದ. ತಾನು ಭಾರತದಲ್ಲಿ ಕಂಡು ಕೇಳಿದ ಸಂಗತಿಗಳನ್ನು ಇಂಡಿಕಾ ಎಂಬ ಗ್ರಂಥದಲ್ಲಿ ಬರೆದ. ಈ ಗ್ರಂಥದ ಮೂಲ ಪ್ರತಿ ಈಗ

ಲಭ್ಯವಿಲ್ಲದಿದ್ದರೂ ಅನಂತರದ ಇತಿಹಾಸಕಾರರಾದ ಅರಿಯನ್ ಮತ್ತು ಡಿಯೊಡರಸ್ ಮೊದಲಾದವರು ಈ ಕೃತಿಯ ಕೆಲವು ಭಾಗಗಳನ್ನು ಉಲ್ಲೇಖಿಸಿದ್ದಾರೆ. ಈ ಕೃತಿ ಮೌರ್ಯರ ಕಾಲದ ಜನಜೀವನ ಮತ್ತು ರಾಜಧರ್ಮ ತಿಳಿಯಲು ಮುಖ್ಯ ಆಕರ.

ಮೆಗಾಸ್ತನೀಸ್ ನೀಡಿರುವ ವಿವರಗಳಲ್ಲಿ ಕೆಲವು ಸಂಗತಿಗಳು ಹೀಗಿವೆ: ಯುದ್ಧಕಾಲದಲ್ಲಿ ಸಾಗುವಳಿಯಾದ ಭೂಮಿಯನ್ನು ಶತ್ರು ಸೈನ್ಯಗಳು ಹಾನಿ ಮಾಡುವುದಿಲ್ಲ. ಭೂಮಿಯಲ್ಲಿ ಬೆಳೆದ ಬೆಳೆಗೆ ಬೆಂಕಿಯಿಡುವ ಅಥವಾ ಮರಗಳನ್ನು ಕತ್ತರಿಸಿ ಹಾಕುವ ದುಷ್ಕೃತ್ಯಕ್ಕೆ ಶತ್ರುಗಳು ಕೈಹಾಕುವುದಿಲ್ಲ. ಹಿಂದೂಸ್ಥಾನದಲ್ಲಿ ಗಜದಳ ಸೈನ್ಯದ ಪ್ರಮುಖ ಅಂಗ. ಈ ದಳಕ್ಕೆ ಅಲೆಕ್ಸಾಂಡರ್ ಸಹ ಹೆದರಿದ್ದ. ಜನರಲ್ಲಿ ಶಿಸ್ತಿದೆ. ಕಳ್ಳತನ ಬಲು ಕಡಿಮೆ. ನ್ಯಾಯಾಲಯಗಳಿಗೆ ಹೋಗುವವರ ಸಂಖ್ಯೆ ವಿರಳ. ಪರಸ್ಪರ ನಂಬಿಕೆಯ ಮೇಲೆ ವ್ಯವಹಾರ ನಡೆಯುವುದು ಸ್ತ್ರೀಯರೇ ರಾಜನ ಅಂಗರಕ್ಷಕರು. ಈತ ಕೊಟ್ಟಿರುವ ವಿವರಗಳು ಅಂದಿನ ಇತಿಹಾಸ ರಚನೆಗೆ ಅಮೂಲ್ಯ ದಾಖಲೆ ಒದಗಿಸಿವೆ. (ಡಿ.ಎಸ್.ಜಿ.)

**ಮೆಟರ್ನಿಕ್, ಪ್ರಿನ್ಸ್‌ಫಾನ್:** 1773–1859. ಯುರೋಪಿನ ರಾಜಕೀಯ ಇತಿಹಾಸದಲ್ಲಿ ಪ್ರಧಾನ ಪಾತ್ರವಹಿಸಿದ ಆಸ್ಟ್ರಿಯದ ರಾಜನೀತಿಜ್ಞ; ರಾಯಭಾರಿ ಹಾಗೂ ರಾಜಕೀಯ ಮುಖಂಡ. ಯುರೋಪಿನಲ್ಲೆಲ್ಲ ಸಂಭವಿಸಿದ ರಾಷ್ಟ್ರೀಯ ಬಂಡಾಯಗಳನ್ನಡಗಿಸುವ ಆಸ್ಟ್ರಿಯ, ಪ್ರಷ್ಯ ಮತ್ತು ರಷ್ಯಗಳ ಪ್ರಯತ್ನಗಳಿಗೆ ಈತನೇ ಪ್ರೇರಕ ಮತ್ತು ಮಾರ್ಗದರ್ಶಕ ಶಕ್ತಿಯಾಗಿದ್ದ. 1773 ಮೇ 15ರಂದು ಕೊಬ್ಲೆಂಜ್ ಎಂಬಲ್ಲಿ ಜನಿಸಿದ. ಇವನ ಪೂರ್ಣ ಹೆಸರು ಕ್ಲೆಮೆನ್ಸ್ ವೆಂಜೆಲ್ ನೆಪೊಮುಕ್ ಲೊಥಾರ್ ಫಾನ್ ಮೆಟರ್ನಿಕ್ ಎಂದು. ತಂದೆ ಕೌಂಟ ಫ್ರಾನ್ಸಿಸ್ ಫಾನ್ ಮೆಟರ್ನಿಕ್ ಕೂಡ ರಾಜಕೀಯ ಕ್ಷೇತ್ರದಲ್ಲಿದ್ದವನೇ. ಸ್ಟ್ರಾಸ್‌ಬರ್ಗ ಮತ್ತು ಮೈಂಜ್‌ಗಳಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿದ. 1795 ರಲ್ಲಿ ಆಸ್ಟ್ರಿಯದ ಛಾನ್ಸಲರ್ ಆಗಿದ್ದ ಪ್ರಿನ್ಸ್ ವೆಂಜೆಲ್ ಕೌನಿಟ್ಜನ ಮೊಮ್ಮಗಳು ಎಲಿಯನೋರಾಳನ್ನು ವಿವಾಹವಾದ. ಈ ಸಂಬಂಧ ಮೆಟರ್ನಿಕನ ಬದುಕಿಗೆ ಹೊಸ ಆಯಾಮ ನೀಡಿತು. ಈತನ ಸುದೀರ್ಘ ರಾಜಕೀಯ ಜೀವನ ಆರಂಭವಾದ್ದು 1797ರಿಂದ.

ಅಚಲ ಮನೋಭಾವ, ವ್ಯಾಪಕ ಅನುಭವ, ನಿಖರ ತಿಳಿವಳಿಕೆ, ಮಹತ್ತ್ವಾಕಾಂಕ್ಷೆ, ದೂರದೃಷ್ಟಿ, ಪ್ರಭಾವಶಾಲಿ ವ್ಯಕ್ತಿತ್ವಗಳಿಂದ ಕೂಡಿದ ಮೆಟರ್ನಿಕ್ ರಾಜಕೀಯ ಕ್ಷೇತ್ರದಲ್ಲಿ ಬಹುಬೇಗ ಮೇಲೇರಿದ. 1797–99ರಲ್ಲಿ ರೆಸ್ಟಾಟ್ ಕಾಂಗ್ರೆಸ್ಸಿನಲ್ಲಿ ಪ್ರತಿನಿಧಿಯಾಗಿದ್ದ ; 1801ರಲ್ಲಿ ಡ್ರೆಸ್‌ಡೆನ್‌ನಲ್ಲಿ ಆಸ್ಟ್ರಿಯದ ಸಚಿವ ಹುದ್ದೆ ವಹಿಸಿಕೊಂಡ; 1803 ರಲ್ಲಿ ಪ್ರಷ್ಯದಲ್ಲಿ ರಾಯಭಾರಿಯಾದ. ನೆಪೋಲಿಯನ್ನನ ಕೋರಿಕೆಯ ಮೇರೆಗೆ ಫ್ರಾನ್ಸ್‌ನಲ್ಲಿ ಆಸ್ಟ್ರಿಯದ ರಾಯಭಾರಿಯಾದ (1806). 1809 ಕದನಸಮಯದಲ್ಲಿ ಬಂಧನಕ್ಕೊಳಗಾದರೂ ಶೀಘ್ರವೇ ಬಿಡುಗಡೆಹೊಂದಿ 1809ರ ಅಕ್ಟೋಬರ್ 8 ರಂದು ಆಸ್ಟ್ರೀಯದ ಛಾನ್ಸಲ್ ಅಥವಾ ಪ್ರಧಾನಿಯಾದ; ಮುಂದಿನ 38 ವರ್ಷಗಳ ತನಕ ಈ ಉನ್ನತ ಹುದ್ದೆಯಲ್ಲೆ ಮುಂದುವರಿದ.

ಮೊದಲ ನಾಲ್ಕು ವರ್ಷಗಳ ಕಾಲ ಮೆಟರ್ನಿಕ್ ಜಾಣ್ಮೆ ಕೌಶಲಗಳಿಂದ ಆಡಳಿತ ನಡೆಸಿ ನೆಪೋಲಿಯನ್ನನೊಡನೆ ಉಂಟಾದ ಹೋರಾಟದಿಂದ ದುರ್ಬಲವಾಗಿದ್ದ ಆಸ್ಟ್ರಿಯದ ಪರಿಸ್ಥಿತಿಯನ್ನು ಸಾಧಿಸಿದ. ಫ್ರಾನ್ಸ್ ರಷ್ಯಗಳ ತಿಕ್ಕಾಟದಲ್ಲಿ ಆಸ್ಟ್ರಿಯ ಫ್ರಾನ್ಸಿನೊಡನೆ ಒಪ್ಪಂದ ಮಾಡಿಕೊಂಡರೂ ರಷ್ಯದೊಡನೆ ವಿರೋಧ ಕಟ್ಟಿಕೊಳ್ಳದಿದ್ದುದು ಈತನ ರಾಜಕೀಯ ಮುತ್ಸದ್ದಿತನಕ್ಕೊಂದು ನಿದರ್ಶನ. ನೆಪೋಲಿಯನ್ನನ ಪರಾಭವದ ತರುವಾಯ ಎರಡೂ ದೇಶಗಳ ನಡುವೆ ಸಂಧಾನ ನಡೆಸಲು ನಿಷ್ಪಕ್ಷಪಾತ ಮಧ್ಯವರ್ತಿಯಾಗಿ ಮುಂದೆ ಬಂದ. 1813 ಜೂನ್ 26 ರಂದು ಡ್ರೆಸ್‌ಡೆನ್‌ನಲ್ಲಿ ನೆಪೋಲಿಯನ್ನನೊಡನೆ ಈತ ನಡೆಸಿದ ಒಂಬತ್ತು ಗಂಟೆಗಳ ಕಾಲದ ಮಾತುಕತೆ ಐರೋಪ್ಯ ಇತಿಹಾಸದಲ್ಲಿ ಸುವಿದಿತ ಸಂಗತಿ. 1814 ಏಪ್ರಿಲ್ 10 ರಂದು ಪ್ಯಾರಿಸಿಗೆ ಬಂದ ಈತನಿಗೆ ಅಭೂತ ಪೂರ್ವ ಸ್ವಾಗತ ದೊರೆಯಿತು. ವಿಯೆನ್ನಾ ಕಾಂಗ್ರೆಸ್ಸಿನಲ್ಲೂ ಈತನದು ಪ್ರಮುಖ ಪಾತ್ರ. ಆಸ್ಟ್ರಿಯದ ನಿಯಂತ್ರಣಕ್ಕೊಳಪಟ್ಟಂತೆ ಇಟಲಿಯ ಪ್ರಾಂತ್ಯಗಳ ಪುನರ್ವಿಂಗಡಣೆ ಈತನ ಸಾಧನೆಗಳಲ್ಲೊಂದು. ರಷ್ಯದ ಜಾರ್ ಅಲೆಗ್ಸಾಂಡರ್ ಈತನ ಕನ್ಸರ್ವೆಟಿವ್ ಸಿದ್ಧಾಂತಗಳಿಂದ ಪ್ರಭಾವಿತನಾಗಿದ್ದ.

ಪ್ರಜಾಪ್ರಭುತ್ವವನ್ನು ಹತ್ತಿಕ್ಕಿ ಹಳೆಯ ರಾಜಕೀಯ ನಿರಂಕುಶಪ್ರಭುತ್ವವನ್ನು ಮುಂದುವರಿಸಿಕೊಂಡು ಹೋಗಲು ವಿಯನ್ನ ಕಾಂಗ್ರೆಸ್ ಮತ್ತು ಮೆಟರ್ನಿಕ್ ನಡೆಸಿದ ಪ್ರಯತ್ನಗಳು ಸಫಲವಾಗಲಿಲ್ಲ. 1835ರಲ್ಲಿ ಫ್ರಾನ್ಸಿಸ್‌ನ ಮರಣಾನಂತರ ಮೆಟರ್ನಿಕ್ ಆಸ್ಟ್ರಿಯದಲ್ಲಿ ಯಾವುದೇ ಬದಲಾವಣೆ ತರಲು ಅಸಮರ್ಥನಾಗಿದ್ದ. 1848ರ ಮಾರ್ಚ್‌ನಲ್ಲಿ ಈತನನ್ನು ಅಧಿಕಾರ ಪದವಿಯಿಂದ ವಜಾಮಾಡಬೇಕೆಂಬ ಒತ್ತಾಯ ತೀವ್ರವಾದಾಗ ಈತ ರಾಜೀನಾಮೆ ನೀಡಿ ಇಂಗ್ಲೆಂಡಿಗೆ ಪಲಾಯನ ಮಾಡಿದ. 1851ರಲ್ಲಿ ವಿಯನ್ನಗೆ ಹಿಂದಿರುಗಿದರೂ ಮೆಟರ್ನಿಕನಿಗೆ ಮುಂದೆ ಯಾವುದೇ ಅಧಿಕಾರ ಪದವಿ ಲಭ್ಯವಾಗಲಿಲ್ಲ. ಈತ 1859 ಜೂನ್ 11ರಂದು ನಿಧನನಾದ. (ಎಚ್.ಎಮ್.ಎನ್.ಆರ್.)

**ಮೆರೋಯಿ:** ಒಂದು ಪ್ರಾಚೀನ ನಗರ. ಪ್ರ.ಶ.ಪೂ.700–300ರ ತನಕ ನ್ಯಾಪಟ ಇಥಿಯೋಪಿಯ ರಾಜರ ಆಳಿಕೆಯ ಕಾಲದಲ್ಲಿ ಇದು ದಕ್ಷಿಣದ ರಾಜಧಾನಿಯಾಗಿತ್ತು. ಸೂಡಾನಿನ ನೈಲ್‌ನದಿಯ ಪೂರ್ವ ತೀರದಲ್ಲಿ ವ್ಯಾಪಕವಾಗಿ ಇದರ ಅವಶೇಷಗಳು ಉಳಿದಿವೆ. ನೀಲಿನೈಲ್ ಪ್ರದೇಶದ ರೊಸೈರಿಸ್‌ನವರೆಗೆ ವ್ಯಾಪಕ ಪ್ರದೇಶದಲ್ಲಿ ಮೆರೋಯಿಟಿಕ್ ನಿವೇಶನಗಳು ವಿಸ್ತರಿಸಿವೆ. ಖಾರ್ಟೂಮಿನಿಂದ ಸು.350 ಕಿಮೀ ದಕ್ಷಿಣದಲ್ಲಿ ಮೆರೋಯಿಟಿಕ್ ಅವಶೇಷಗಳು ಇತ್ತೀಚೆಗೆ ಪತ್ತೆಯಾಗಿವೆ. 1844ರಲ್ಲಿ ಲೆಪ್ಸಿಯಸ್ ಎಂಬಾತ ಮೆರೋಯಿ ನಗರವನ್ನು ಪರಿಶೋಧಿಸಿ ಸಮೀಕ್ಷಿಸಿದಾಗ ರಾಜಗೃಹಗಳಿಂದ ಕೂಡಿದ ಪ್ರಾಕಾರ ಹಾಗೂ ಅರಮನೆಗಳಲ್ಲಿನ ಸ್ನಾನಗೃಹಗಳು ಪತ್ತೆಯಾದವು. ಆಸ್ಪಲೂತನ ಕಾಲಕ್ಕೆ, ಅಂದರೆ ಪ್ರ.ಶ.ಪೂ.590ರ ಸುಮಾರಿಗೆ, ಸೇರುವ ಇತರ ಕಟ್ಟಡಗಳೂ ಇಲ್ಲಿ ಕಂಡುಬಂದಿವೆ. ಇಲ್ಲಿ ಲಭ್ಯವಾದ ಅಗಸ್ಟಸ್ ಶಿರಶಿಲ್ಪವೊಂದು ಈಗ ಬ್ರಿಟಿಷ್ ಮ್ಯೂಸಿಯಂನಲ್ಲಿ ಸುರಕ್ಷಿತವಾಗಿದೆ. ಪ್ರಾಕಾರದ ಹೊರಗಿರುವ ಹಲವು ದೇವಾಲಯಗಳಲ್ಲಿ ಐಸಿಸ್, ಸಿಂಹ ದೇವತೆ ಆಪಿರೆಮಕ್ ಮತ್ತು ಸೂರ್ಯ ದೇಗುಲಗಳು ಮುಖ್ಯವಾದವು. ಇಲ್ಲಿಗೆ 3 ಕಿಮೀ ದೂರದಲ್ಲಿ ದಕ್ಷಿಣಕ್ಕೆ ರಾಣಿ ಕ್ಯಾಂಡೇಸ್ ಮತ್ತು ಆಕಿನಿರಾಸರ ಶಾಸನ ಶಿಲ್ಪ ಸ್ತಂಭಗಳಿಂದ ಕೂಡಿದ ಗುಡಿಯೊಂದಿದೆ. ಒಂದು ಶಾಸನದಲ್ಲಿ ಅಗಸ್ಟಸ್‌ನ ಉಲ್ಲೇಖವಿದೆ.

1921–23ರಲ್ಲಿ ಜೆರ್ಯಸ್ನರ್ ಎಂಬಾತ ಕೆಲವು ಸಮಾಧಿ ಹಾಗೂ ಪಿರಮಿಡ್ಡುಗಳಲ್ಲಿ ಉತ್ಖನನ ಕಾರ್ಯ ನಡೆಸಿದ. ಇಲ್ಲಿಯ ಪಿರಮಿಡ್ಡುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದೆ. ದಕ್ಷಿಣದಲ್ಲಿರುವ ಪಿರಮಿಡ್ಡುಗಳ ಗುಂಪು ಪ್ರ.ಶ.ಪೂ.8ರಿಂದ 3ನೆಯ ಶತಮಾನಗಳ ಕಾಲಾವಧಿಗೆ ಸೇರುತ್ತದೆ; ಇಲ್ಲಿ ಮೂವರು ಅರಸರನ್ನು ಸಮಾಧಿ ಮಾಡಲಾಗಿತ್ತೆಂದು ತಿಳಿದುಬರುತ್ತದೆ. ಉತ್ತರದಲ್ಲಿರುವ ಪಿರಮಿಡ್ಡುಗಳ ಗುಂಪು ಪ್ರ.ಶ.ಪೂ.3ನೆಯ ಶತಮಾನದ ಅನಂತರದ ಕಾಲದ್ದು. ಇಲ್ಲಿ ಮೂವತ್ತು ರಾಜರಾಣಿಯರ ಸಮಾಧಿಗಳಿಂದ ಕೂಡಿದ ಒಂದು ಪಿರಮಿಡ್ ಇತ್ತು ಎನ್ನಲಾಗಿದೆ. ಮೆರೋಯಿ ನಗರದ 1.5ಕಿಮೀ ಪಶ್ಚಿಮಕ್ಕೆ ಗಣ್ಯರ ದೊಡ್ಡ ಸ್ಮಶಾನ ಗೋಚರಿಸಿದೆ.

ಪ್ರ.ಶ.ಪೂ.400ರಿಂದ ಖಾರ್ಟೂಮಿನ ಉತ್ತರದಲ್ಲಿ ಅದಿರು ಕರಗಿಸಿ ಕಬ್ಬಿಣವನ್ನು ಪಡೆಯಲಾಗುತ್ತಿತ್ತು. ನೈಲ್ ನದಿಯ ದ್ವೀಪವೊಂದರಲ್ಲಿ ಹಾಗೂ ಲೇಕ್‌ಚಾಡ್ ಪ್ರದೇಶದಲ್ಲಿ ಅದಿರು ತೆಗೆಯುತ್ತಿದ್ದ ಗಣಿಗಳು ಕಂಡುಬಂದಿವೆ. ಇಲ್ಲಿ ಲಭ್ಯವಾದ ಮುಖ್ಯ ಶಾಸನಗಳು ಈಜಿಪ್ಟಿನ ಹೈರೋಗ್ಲಿಫೆಕ್ಸ್ (ಚಿತ್ರಲಿಪಿ) ಹಾಗೂ ಮೆರೋಯಿಟಿಕ್ ಲಿಪಿಗಳಲ್ಲಿವೆ. ಕೆಲವು ಗ್ರೀಕ್ ಲಿಪಿಯ ಶಾಸನ ತುಣುಕುಗಳೂ ದೊರೆತಿವೆ. (ಎಚ್.ಎಂ.ಎನ್.ಆರ್.)

**ಮೆಸಪೊಟೇಮಿಯ:** ಮಧ್ಯಪ್ರಾಚ್ಯದ ಯೂಫ್ರಟೀಸ್ ಮತ್ತು ಟೈಗ್ರೀಸ್ ನದಿಗಳ ನಡುವಣ ಪ್ರದೇಶವನ್ನು ಮೆಸಪೊಟೇಮಿಯ (ಎರಡು ನದಿಗಳ ನಡುವಣ ನಾಡು) ಎಂದು ಕರೆಯಲಾಗಿದೆ. ಆಗ್ನೇಯಕ್ಕೆ ಪರ್ಷಿಯನ್ ಖಾರಿ, ಪೂರ್ವ ಮತ್ತು ಉತ್ತರಕ್ಕೆ ಇರಾನ್, ಪಶ್ಚಿಮ ಹಾಗೂ ದಕ್ಷಿಣಕ್ಕೆ ಜೋರ್ಡಾನ್ ಆಚೆಗಿನ ಪ್ರದೇಶ ಮತ್ತು ಸೌದಿಅರೇಬಿಯದ ಮರುಭೂಮಿ–ಇವುಗಳಿಂದ ಆವೃತವಾದ ವಾಸಯೋಗ್ಯ ಪ್ರದೇಶ. ಇಲ್ಲಿಯ ಎರಡು ಪ್ರಮುಖ ಭೌಗೋಳಿಕ ವಿಭಾಗಗಳೆಂದರೆ ಉತ್ತರದ ಪ್ರಸ್ಥಭೂಮಿ ಮತ್ತು ದಕ್ಷಿಣದ ಬಯಲುಪ್ರದೇಶ. ಪ್ರಾಚೀನ ಕಾಲದಲ್ಲಿ ಬ್ಯಾಬಿಲೋನಿಯ ಮತ್ತು ಅಸ್ಸೀರಿಯಗಳನ್ನು ಒಳಗೊಂಡಿದ್ದ ಮೆಸಪೊಟೇಮಿಯ ಈಗ ಸ್ವತಂತ್ರ ಅರಬ್ಬೀ ರಾಜ್ಯವಾದ ಇರಾಕ್ ಆಗಿದೆ.

ತೂಗುತೋಟ

**ಇತಿಹಾಸ:** ಮೆಸಪೊಟೇಮಿಯದ ಪ್ರಸ್ಥಭೂಮಿಯಲ್ಲಿ ನವಶಿಲಾಯುಗದಷ್ಟು ಹಿಂದೆಯೇ ಮಾನವವಸತಿ ಆರಂಭವಾಯಿತೆಂದು ಹೇಳಬಹುದು. ಆದರೆ ಇಲ್ಲಿಯ ಬಯಲುಪ್ರದೇಶ ಪ್ರ.ಶ.ಪೂ.5–4 ನೆಯ ಸಹಸ್ರಮಾನದ ತನಕ ಶಿಲಾಯುಗ ಸಂಸ್ಕೃತಿಯೂ ಪ್ರವೇಶಿಸದ ಜವುಗು ಪ್ರದೇಶವಾಗಿ ಉಳಿದಿತ್ತು. ಹಾಗಿದ್ದರೂ ಮೊದಲ ಮಹಾನಾಗರಿಕತೆಗಳು ಹುಟ್ಟಿ ಬೆಳೆದುದು ಈ ಬಯಲು ಪ್ರದೇಶದಲ್ಲಿಯೇ. ಮೆಸಪೊಟೇಮಿಯದ ಇತಿಹಾಸವನ್ನು ಪ್ರಾಚೀನ

ಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲ ಎಂದು 3 ಪ್ರಧಾನ ಭಾಗಗಳಾಗಿ ವಿಂಗಡಿಸಬಹುದು. ಈ ಭಾಗಗಳು ಸಾಮ್ರಾಜ್ಯ, ವಂಶ ಅಥವಾ ಅಧಿಕಾರದಲ್ಲಿ ಉಂಟಾದ ಏರುಪೇರುಗಳಿಗೆ ಅನುಗುಣವಾಗಿ ಪುನರ್ವಿಂಗಡಣೆಯಾಗುತ್ತವೆ. ಈ ನದಿಗಳ ನಡುವಣ ಭೂಮಿಯಲ್ಲಿ ಸಾಮ್ರಾಜ್ಯಗಳು ಹುಟ್ಟಿಬೆಳೆದು, ಯಶಸ್ಸಿನ ಶಿಖರವೇರಿ, ಮುಂದೆ ಅವನತಿ ಹೊಂದಿವೆ.

ಮೆಸಪೊಟೇಮಿಯ ಇತಿಹಾಸದ ಕಾಲಾನುಪೂರ್ವ ಸೂಚಿ

| | ಪ್ರ.ಶ.ಪೂ. ಪ್ರ.ಶ. |
|---|---|
| **ಪ್ರಾಚೀನಯುಗ** | 4000 – 637 |
| ಸುಮೇರಿಯನ್ – ಅಕ್ಕಾಡಿಯನ್ | 4000 – 2000 |
| ಪ್ರಾಚೀನ ಬ್ಯಾಬಿಲೋನಿಯನ್ | 2000 – 1600 |
| ಹಿಟ್ಟೈಟ್ – ಕ್ಯಾಸೈಟ್ | 1600 – 1200 |
| ಮಧ್ಯ ಬ್ಯಾಬಿಲೋನಿಯನ್ | 1200 – 745 |
| ಅಸ್ಸೀರಿಯನ್ | 745 – 612 |
| ನವಬ್ಯಾಬಿಲೋನಿಯನ್ (ಚಾಲ್ಡೀಯನ್ಸ್) | 612 – 538 |
| ಪರ್ಷಿಯನ್ | 538 – 323 |
| ಸೆಲ್ಯೂಕಿಡ್ | 323 – 140 |
| ಪಾರ್ಥಿಯನ್ | 140 – 227 |
| ಸಸ್ಸಾನಿಯನ್ | 227 – 637 |
| **ಮಧ್ಯಯುಗ** | 637 – 1534 |
| ಕಲಿಫೇಟರು | 632 – 1258 |
| ಆರ್ಥೋಡಾಕ್ಸ್ | 632 – 661 |
| ಉಮಾಯದ್ | 661 – 750 |
| ಅಬ್ಬಾಸಿದ್ (ಅನಂತರ ಸೆಲ್‌ಜುಕ್‌ತುರ್ಕರು) | 750 – 1253 |
| ಮಂಗೋಲಿಯನ್ | 1258 – 1509 |
| ಪರ್ಷಿಯನ್ | 1509 – 34 |
| **ಆಧುನಿಕ ಯುಗ** | |
| ಆಟೋಮನ್ ತುರ್ಕರು | 1534 – 1917 |
| ಇರಾಕ್ ರಾಜ್ಯ | 1921 ರಿಂದ |

**ಸುಮೇರಿಯನ್–ಅಕ್ಕಾಡಿಯನ್(ಪ್ರ.ಶ.ಪೂ.4000–2000):** ಈ ಕಾಲದಲ್ಲಿ ಪ್ರಸ್ಥಭೂಮಿಯಲ್ಲಿ ನವಶಿಲಾಯುಗದ ಜನಸಮುದಾಯವೊಂದು ನೆಲಸಿದರೆ ಈಶಾನ್ಯದ ಯಾವುದೋ ಮೂಲದಿಂದ ಸುಮೇರಿಯನ್ನರು ಮತ್ತು ಮರುಭೂಮಿ ಸೆಮೈಟರು ಬಯಲು ಪ್ರದೇಶಕ್ಕೆ ಬಂದು ವಾಸಿಸಿದರು. ಇಲ್ಲಿಯ ಜವುಗು ಭೂಮಿಯಿಂದ ಹೆಚ್ಚಿನ ತೇವಾಂಶವನ್ನು ತೆಗೆದುಹಾಕಿದ ಸುಮೇರಿಯನ್ನರು ಶಾಶ್ವತ ತಳಹದಿಯ ಮೇಲೆ ವ್ಯವಸಾಯ ಆರಂಭಿಸಿದರು. ಶೀಘ್ರ ಕಾಲದಲ್ಲಿಯೇ ಈ ಜನರಿಂದ ನವನಾಗರಿಕತೆಯೊಂದು ಉದಿಸಿತು. ವಾಸ್ತುಶಿಲ್ಪ, ಲೋಹಶಿಲ್ಪಗಾರಿಕೆ, ಕ್ಯೂನಿಫಾರಮ್ ಅಥವಾ ಕೋನಾಕೃತಿಯ ಬರೆವಣಿಗೆ, ಸಾಹಿತ್ಯ, ಪಂಚಾಂಗದ ಉದ್ದೇಶಕ್ಕಾಗಿ ರೂಪುಗೊಂಡ ಖಗೋಳಶಾಸ್ತ್ರ, ಗುಲಾಮಗಿರಿ ಮುಂತಾದ ಹಲವು ಲಕ್ಷಣಗಳಿಂದ ಕೂಡಿದ ನಾಗರಿಕತೆ ಇವರದು.

ದಕ್ಷಿಣ ಬಯಲು ಪ್ರದೇಶದಲ್ಲಿ ಪರ್ಷಿಯನ್ ಖಾರಿಯ ಮೇಲ್ಭಾಗದಲ್ಲಿ ಸುಮೇರಿಯನ್ನರ ನಗರರಾಜ್ಯಗಳು ಹುಟ್ಟಿ ಹರಡಿದವು. ಪುರೋಹಿತ ಪ್ರಾಬಲ್ಯವಿರುವ ದೇವಪ್ರಭುತ್ವದ ತಳಹದಿಯ ಮೇಲೆ ವ್ಯವಸ್ಥೆಗೊಂಡ ಈ ರಾಜ್ಯಗಳಿಗೆ ರಾಜಕೀಯ ಸ್ವಾತಂತ್ರ್ಯವಿತ್ತು. ಈ ರಾಜ್ಯಗಳನ್ನು ಪೆಟಿಸಿ ಎಂಬ ರಾಜರು ಆಳುತ್ತಿದ್ದರು. ಪ್ರಸಿದ್ಧ ಸುಮೇರಿಯನ್ ನಗರರಾಜ್ಯಗಳೆಂದರೆ ಉರ್, ಎರಿಡು, ಉಮ್ಮ, ಎರೆಕ್ ಹಾಗೂ ನಿಪ್ಪುರ್–ಇವು ಪರಸ್ಪರ ವ್ಯಾಪಾರ ವ್ಯವಹಾರ ನಡೆಸಿದವು; ಅಂತೆಯೇ ಪರಸ್ಪರ ಕಾದಾಡಿದ ನಿದರ್ಶನಗಳೂ ಉಂಟು. ಉತ್ತರದಲ್ಲಿ ಮುಂದೆ ಬ್ಯಾಬಿಲಾನ್ ಎಂದು ಪರಿಚಿತವಾದ ಭೂಭಾಗದಲ್ಲಿ ಸೆಮಿಟಿಕ್ ಬುಡಕಟ್ಟಿನ ಜನ ಕಾಲಕ್ರಮೇಣ ಸುಮೇರಿಯನ್ ಸಂಸ್ಕೃತಿಯನ್ನು ಸ್ವೀಕರಿಸಿ ನಾಗರಿಕರಾಗುತ್ತಿದ್ದರು. ಅಕ್ಕಾಡ್ ಎಂದು ಕರೆಯಲಾದ ಪ್ರಮುಖ ಸೆಮಿಟಿಕ್ ಪ್ರದೇಶ ಪ್ರಬಲವಾಗಿ ಸುಮೇರಿಯನ್ ನಗರಗಳ ಮೇಲೆ ರಾಜಕೀಯ ಅಧಿಕಾರ ಸ್ಥಾಪಿಸಿತು. ಅಕ್ಕಾಡ್‌ನ ಮೊದಲನೆಯ ಸಾರಗಾನ್ (ಪ್ರ.ಶ.ಪೂ.ಸು.2637–1582) ಪ್ರಸಿದ್ಧ ದೊರೆ. ಈತ ಪರ್ಷಿಯನ್ ಖಾರಿಯಿಂದ ಮೆಡಿಟರೇನಿಯನ್ ಸಮುದ್ರದವರೆಗಿನ ಪ್ರದೇಶಗಳನ್ನು ಗೆದ್ದು ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿದ. ಸ್ವಲ್ಪಕಾಲ ಸೆಮೈಟರು ಬಯಲು ಪ್ರದೇಶದಲ್ಲಿ ಏಕತೆಯನ್ನು ಸ್ಥಾಪಿಸುವಲ್ಲಿ ಸಫಲರಾದರು. ಆದರೆ ಪ್ರ.ಶ.ಪೂ.2200ರಲ್ಲಿ ಅಕ್ಕಾಡಿಯನ್ನರು ಅವನತಿ ಹೊಂದಿದ ತರುವಾಯ ಅಧಿಕಾರದಲ್ಲಿ ಹೊಸ ಬಗೆಯ ವಿಕೇಂದ್ರೀಕರಣ ಉಂಟಾಯಿತು. ಸುಮೇರಿಯನ್ನರು ಮತ್ತೆ ಅಧಿಕಾರಕ್ಕೆ ಬಂದರು. 1900ರ ತನಕ ಅರ್.ಇಸಿನ್ ಮತ್ತು ಲಾರ್ಸಾ ರಾಜ್ಯಗಳು ಸುಮೇರಿಯನ್ನರವಾದವು. ಕೆಲವೊಮ್ಮೆ ಬಯಲು ಪ್ರದೇಶದ ಪ್ರಭಾವ ಅಸ್ಸೀರಿಯನ್ ಪ್ರಸ್ಥಭೂಮಿಯವರೆಗೂ ವಿಸ್ತರಿಸಿತು. ಇದರಿಂದಾಗಿ ಸುಮೇರಿಯನ್ ನಾಗರಿಕತೆ ಉತ್ತರದೆಡೆಗೆ ಹರಡಲು ಅನುಕೂಲವಾಯಿತು. ಈ ಸಂಸ್ಕೃತಿ ಗುಡ್ಡಗಾಡು ಜನರ ಧಾಳಿಗೀಡಾಗಿ ನಾಶವಾಯಿತು.

**ಪ್ರಾಚೀನ ಬ್ಯಾಬಿಲೋನಿಯನ್ (ಪ್ರ.ಶ.ಪೂ.2000–1600):** ಪ್ರಧಾನವಾಗಿ ಪಶ್ಚಿಮದ ಕಡೆಯಿಂದ ಸಂಭವಿಸಿದ ನವಸೆಮೆಟಿಕ್ ಆಕ್ರಮಣದ ಫಲವಾಗಿ ಪ್ರಾಚೀನ ಬ್ಯಾಬಿಲೋನಿಯನ್ ರಾಜ್ಯ ಸ್ಥಾಪಿತವಾಯಿತು. ಮತ್ತೊಮ್ಮೆ ಬಯಲು ಪ್ರದೇಶ ಒಂದುಗೂಡಿತು. ಬ್ಯಾಬಿಲಾನ್ ನಗರ ಈ ರಾಜ್ಯದ ರಾಜಧಾನಿಯಾಯಿತು. ಬ್ಯಾಬಿಲೋನಿಯನ್ನರು ಆಮೊರೈಟ್ ಪಂಗಡಕ್ಕೆ ಸೇರಿದವರು. ನವಸೆಮಿಟಿಕ್ ವಂಶದ ಆರನೆಯ ಅರಸ ಹಮುರಬಿ (ಪ್ರ.ಶ.ಪೂ.ಸು.1935–13) ಶ್ರೇಷ್ಠ ಆಡಳಿತಗಾರ. ಈತ ಜಾರಿಗೆ ತಂದ ಕಾನೂನು ನಿಯಮಗಳಿಂದ ಪ್ರಸಿದ್ಧನಾದ. ಪುರಾತನ ನಿಯಮ ಮತ್ತು ಸಂಪ್ರದಾಯಗಳನ್ನು ವಿಶ್ಲೇಷಿಸಿ ಕ್ರೋಢೀಕರಿಸಿ ಸಂಕ್ಷಿಪ್ತರೀತಿಯಲ್ಲಿ ಪ್ರಕಟಿಸಿದುದು ಈತನ ಮಹಾಸಾಧನೆ. ಜನಸಾಮಾನ್ಯರ ಅರಿವಿಗಾಗಿ 2.40ಮೀ ಎತ್ತರದ ಶಿಲೆಯ ಮೇಲೆ ತನ್ನ ಕಾನೂನುಗಳನ್ನು ಸೂರ್ಯನಿಂದ ಪಡೆಯುತ್ತಿರುವ ದೃಶ್ಯಗಳನ್ನು ಶಾಸನ ಸ್ತಂಭದ ಮೇಲ್ಭಾಗದಲ್ಲಿ ಕೆತ್ತಲಾಗಿದೆ. ಈತನ ಕಾನೂನು ನಿಯಮಗಳು ಮುಯ್ಯಿಗೆ ಮುಯ್ಯಿ ಎನ್ನುವ ತತ್ತ್ವದ ಆಧಾರದ ಮೇಲೆ ರೂಪಿತವಾಗಿದ್ದವು. ಉದಾಹರಣೆಗೆ ಜಗಳದಲ್ಲಿ ಒಬ್ಬ ಕಣ್ಣು ಕಳೆದುಕೊಂಡರೆ ಅದಕ್ಕೆ ಕಾರಣನಾದ ಇನ್ನೊಬ್ಬನ ಕಣ್ಣನ್ನೂ ಕೀಳಲಾಗುತ್ತಿತ್ತು. ಮರಣದಂಡನೆ ಸಾಮಾನ್ಯ ಶಿಕ್ಷೆಯಾಗಿತ್ತು.

ಉರುಳು ಮುದ್ರಿಕೆ

ಸುಮೇರಿಯನ್ ನಾಗರಿಕತೆಯ ಅಡಿಪಾಯದ ಮೇಲೆ ಪ್ರಾಚೀನ ಬ್ಯಾಬಿಲೋನಿಯನ್ ನಾಗರಿಕತೆ ಸ್ಥಾಪಿತವಾಯಿತು. ಆದರೆ ಪ್ರಾಚೀನ ಸುಮೇರಿಯನ್ ಭಾಷೆಗೆ ಬದಲಾಗಿ ಆಳರಸರ ಸೆಮಿಟಿಕ್ ಭಾಷೆ ಜಾರಿಗೆ ಬಂತು. ಹೊಸ ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳು ರೂಪುಗೊಂಡವು. ಆರ್ಥಿಕವಾಗಿ ಮಹತ್ತರ ಬದಲಾವಣೆಗಳುಂಟಾದವು. ಸರಕು ಹಿಂದಿನ ಅಥವಾ ಸೇವಾ ವಿನಿಮಯ ಆರ್ಥಿಕ ಪದ್ಧತಿ ಬದಲಾಗಿ ಚಿನ್ನ, ಬೆಳ್ಳಿ ಮತ್ತು ಕಂಚು ಪ್ರಮುಖ ವಿನಿಮಯ ಮಾಧ್ಯಮವಾದವು. ಬ್ಯಾಬಿಲೋನಿಯ ಹಾಗೂ ಅಸ್ಸೀರಿಯಗಳ ನಾಗರಿತೆಯ ಪ್ರಧಾನ ಲಕ್ಷಣಗಳ ಪೈಕಿ ಸೆಮೆಟಿಕ್ ಅಂಶವೂ ಒಂದು.

**ಮಿಟಾನಿಯನ್ ಮತ್ತು ಕ್ಯಾಸೈಟ್ (ಪ್ರ.ಶ.ಪೂ. 1600–1200):** ಈ ಕಾಲದಲ್ಲಿ ಸೆಮೈಟರ ಅಧಿಕಾರಕ್ಕೆ ತಾತ್ಕಾಲಿಕ ಗ್ರಹಣ ಹಿಡಿಯಿತು. ಪ್ರ.ಶ.ಪೂ.1600ರ ಸುಮಾರಿಗೆ ಬ್ಯಾಬಿಲೋನಿಯದಲ್ಲಿ ಮತ್ತು ಅದಕ್ಕಿಂತ ಒಂದು ಶತಕ ಮೊದಲೇ ಅಸ್ಸೀರಿಯದಲ್ಲಿ ಹೊಸ ಜನಸಮುದಾಯಗಳು ಪ್ರಾಧಾನ್ಯಕ್ಕೆ ಬಂದು ಉತ್ತರದ ಬೆಟ್ಟಸಾಲುಗಳೆಡೆಯಿಂದ ಬಂದ ಹರಿಯನ್ನರು ಸುಮೇರಿಯನ್ ಅಥವಾ ಸೆಮಿಟಿಕ್ ಭಾಷೆಯಿಂದ ಸಾಕಷ್ಟು ಭಿನ್ನವಾದ ಭಾಷೆಯೊಂದನ್ನು ಆಡುತ್ತಿದ್ದರು. ಈ ಜನರು ಅಸ್ಸೀರಿಯದಲ್ಲಿ ಎಲ್ಲೆಡೆ ಹರಡಿ ಮಿಟಾನಿಯನ್ ರಾಜ್ಯದ ಜನಸಂಖ್ಯೆಯ ಅತಿದೊಡ್ಡ ಭಾಗವಾದರು. ಮಿಟಾನಿಯನ್ ರಾಜ್ಯ ಪೂರ್ವದ ಪರ್ವತ ಪ್ರದೇಶ ಮತ್ತು ಮೇಲಣ ಯೂಫ್ರೆಟೀಸ್ ನಡುವಣ ಪ್ರಸ್ಥಭೂಮಿಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. (ಸು.1450–1350). ಆದರೆ ಈ ಕಾಲದಲ್ಲಿ ಮೆಸಪೊಟೇಮಿಯದ ಮೇಲೆ ಆಕ್ರಮಣ ನಡೆಸಿದವರಲ್ಲಿ ರಾಜಕೀಯ ಅಧಿಕಾರ ಇನ್ನೊಂದು ಪ್ರಾಯಶಃ ಅತಿಸಣ್ಣದಾದ–ಹೊಸ ಗುಂಪಿನ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ಇವರು ಇಂಡೊ–ಯುರೋಪಿಯನ್ ಭಾಷೆಗಳನ್ನಾಡುತ್ತಿದ್ದರು. ಇದು ಭಾರತವನ್ನು ಆಕ್ರಮಿಸಿದ ಆರ್ಯರಾಡುತ್ತಿದ್ದ ಭಾಷೆಗೆ ಸಂಬಂಧಿಸಿದ್ದೆಂದು ತೋರುತ್ತದೆ. ಮಿಟಾನಿಯ ಪ್ರಭುಗಳು ಮತ್ತು ಬ್ಯಾಬಿಲೋನಿಯದ ಕ್ಯಾಸೆಟ್ ದೊರೆಗಳು ಈ ಸಮುದಾಯದ ಪ್ರಧಾನ ಪ್ರತಿನಿಧಿಗಳಾಗಿದ್ದರು. ಪ್ರ.ಶ.ಪೂ. 1600ರ ಸುಮಾರಿಗೆ ಪ್ರಾಚೀನ ಬ್ಯಾಬಿಲೋನಿಯನ್ ವಂಶದ ಅಧಿಕಾರವನ್ನು ಕಿತ್ತೊಗೆದ ಕ್ಯಾಸೈಟರು ಪ್ರ.ಶ.ಪೂ.ಸು.1200ರ ತನಕ ಅಧಿಕಾರದಲ್ಲಿ ಉಳಿದರು. ಇವರ ಆಡಳಿತದಲ್ಲಿ ಗಣ್ಯಶ್ರೀಮಂತರಿಗೆ ಸ್ಥಾನವಿತ್ತು. ಆದರೆ ಅವರ ಸಂಖ್ಯೆ ಅತ್ಯಲ್ಪವಾಗಿತ್ತು. ಕ್ಯಾಸೈಟ್ ಅರಸರು

ಈಜಿಪ್ಟಿನ ಫ್ಯಾರೊ ಮತ್ತು ಹಿಟೈಟ್ ಮಹಾರಾಜರೊಂದಿಗೆ ಸರಿಸಮಾನ ಗೌರವಾದರದಿಂದ ವ್ಯಾಪಾರ ವ್ಯವಹಾರ ನಡೆಸುತ್ತಿದ್ದರು. ಆದರೆ ಕ್ಯಾಸೈಟ್ ಅರಸರ ಸಾಂಸ್ಕೃತಿಕ ಕೊಡುಗೆ ಅತಿಗೌಣವಾದುದು. ಬಯಲು ಪ್ರದೇಶದ ಅಧಿಕೃತ ಭಾಷೆಯಾಗಿ ಸೆಮಿಟಿಕ್ ಮುಂದುವರಿಯಿತು. ಬ್ಯಾಬಿಲೋನಿಯನ್ ನಾಗರಿಕತೆಯ ಪ್ರಧಾನ ಗುಣಲಕ್ಷಣಗಳು ಬದಲಾವಣೆ ಆಗದೆ ಉಳಿದುಬಂದವು.

ಪುನಶ್ಚೇತನಗೊಂಡ ಸೆಮಿಟಿಕ್‌ರಿಂದಾಗಿ ಹಿಟೈಟಿಯನ್ನರು ಹಾಗೂ ಕ್ಯಾಸೈಟ್ ರಾಜ್ಯಗಳು ಪತನ ಹೊಂದಿದವು. ಪ್ರ.ಶ.ಪೂ.14ನೆಯ ಶತಮಾನದಲ್ಲಿ ಅಸ್ಸೀರಿಯದಲ್ಲಿ ಸೆಮಿಟಿಕ್ ರಾಜ್ಯವೊಂದು ಸ್ಥಾಪಿತವಾದಾಗ, ಹಿಟೈಟರು ಪಶ್ಚಿಮದ ಮೇಲಣ ಯೂಫ್ರೆಟೀಸ್ ಪ್ರದೇಶದೆಡೆಗೆ ಸಾಗಬೇಕಾಯಿತು. ಪ್ರ.ಶ.ಪೂ.1350ರ ತರುವಾಯ ಅಸ್ಸೀರಿಯನ್ನರ ಮತ್ತು ಹಿಟೈಟರ ನಿರಂತರ ಒತ್ತಡದಿಂದಾಗಿ ಹಿಟೈಟಿಯನ್ನರ ರಾಜ್ಯ ನಿರ್ನಾಮವಾಯಿತು. ಅಂದಿನಿಂದ ಪ್ರಸ್ಥಭೂಮಿ ಅಸ್ಸೀರಿಯನ್ನರ ಅಧೀನಕ್ಕೊಳಪಟ್ಟಿತು. ಪ್ರ.ಶ.ಪೂ.ಸು.1300–1100 ಮತ್ತು 885–763 ಈ ಕಾಲಗಳಲ್ಲಿ ಅಸ್ಸೀರಿಯನ್ನರು ರಾಜಕೀಯ ಉನ್ನತಿ ಸಾಧಿಸಿದರು. ಕೊನೆಗೆ ಇವರು ಪ್ರ.ಶ.ಪೂ.745ರ ಬಳಿಕ ಮಧ್ಯ ಪ್ರಾಚ್ಯದಲ್ಲಿ ತಮ್ಮ ಮಹಾಸಾಮ್ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಮುನ್ನಡೆದರು.

ಎಲಮೈಟ್ ಗಣ್ಯಸ್ತ್ರೀ

**ಮಧ್ಯ ಬ್ಯಾಬಿಲೋನಿಯನ್ (ಪ್ರ.ಶ.ಪೂ.1200–745):** ಈ ಮಧ್ಯೆ ಬಯಲು ಪ್ರದೇಶದ ಸೆಮೈಟರು, ಕ್ಯಾಸೈಟರ್ ಅಧಿಕಾರವನ್ನು ಕಿತ್ತೊಗೆದಿದ್ದರು. ಮಧ್ಯೆ ಬ್ಯಾಬಿಲೋನಿಯನ್ ಕಾಲದಲ್ಲಿ ಬ್ಯಾಬಿಲೋನಿಯನ್ನರಿಗೂ ಅಸ್ಸೀರಿಯನ್ನರಿಗೂ ಹೋರಾಟ ಉಂಟಾಗಿ ಕೊನೆಗೆ ಎಲಾಮಿನ ಗಿರಿಜನ ಮತ್ತು ಮರುಭೂಮಿಯ ಬುಡಕಟ್ಟಿನ ಜನ ಅಸ್ಸೀರಿಯನ್ ಸಾಮ್ರಾಜ್ಯಷಾಹಿಯ ಅಧೀನಕ್ಕೊಳಪಟ್ಟರು. 689ರಲ್ಲಿ ಸೆನ್ನೆಚಿರಬ್ ಎಂಬಾತ ಬ್ಯಾಬಿಲಾನನ್ನು ಲೂಟಿಹೊಡೆದ. ಪ್ರ.ಶ.ಪೂ.7ನೆಯ ಶತಮಾನದ ಕೊನೆಯ ದಶಕಗಳ ತನಕ–ಬಂಡಾಯದ ಕೆಲವು ಸಂಕ್ಷಿಪ್ತ ಅವಧಿಗಳನ್ನು ಹೊರತುಪಡಿಸಿ–ಬ್ಯಾಬಿಲಾನ್ ಅಸ್ಸೀರಿಯದ ಪ್ರಾಂತವಾಗಿ ಉಳಿಯಿತು.

**ಅಸ್ಸೀರಿಯನ್ (ಪ್ರ.ಶ.ಪೂ.745–612):** ಹಳೆಯ ಒಡಂಬಡಿಕೆಯ ಇತಿಹಾಸದಲ್ಲಿ ವಹಿಸಿದ ಪಾತ್ರದಿಂದಾಗಿ ಪರಿಚಿತರಾದ ಕೆಲವು ಅರಸರು ಅಸ್ಸೀರಿಯನ್ ಸಿಂಹಾಸನಾಧೀಶರು: ಇಮ್ಮಡಿ ಸಾರಗಾನ್ ಸೆನ್ನೆಚಿರಬ್, ಈಜಿಪ್ಟನ್ನು ಗೆದ್ದ ಎಸರ್ ಹಡನ್ ಹಾಗೂ ಬ್ಯಾಬಿಲೋನಿಯನ್ ಸಾಹಿತ್ಯಸಂಪತ್ತನ್ನು ತನ್ನ ಸುಸಜ್ಜಿತ ಗ್ರಂಥಾಲಯದಲ್ಲಿ ಸಂಗ್ರಹಿಸಿದ ಅಸುರ್‌ಬನಿಪಾಲ್. ಅಸ್ಸೀರಿಯನ್ನರ ಆಡಳಿತದಲ್ಲಿ ಮೆಸಪೊಟೇಮಿಯ ಪ್ರದೇಶ ಸಿರಿಯ, ಪ್ಯಾಲಸ್ತೀನ್ ಮತ್ತು ಈಜಿಪ್ಟ್‌ಗಳನ್ನೊಳಗೊಂಡ ಮಹಾ ಸಾಮ್ರಾಜ್ಯದ ಒಂದು ಭಾಗವಾಗಿತ್ತು.

ಅಸುರ್‌ಬನಿಪಾಲನ ಆಳಿಕೆ ಅಸ್ಸೀರಿನ್ ಸಾಮ್ರಾಜ್ಯದ ಸುವರ್ಣಯುಗ, ಈತ ಮಹಾ ದಿಗ್ವಿಜಯಿ ಹಾಗೂ ಉತ್ತಮ ವಿದ್ವಾಂಸನೆಂದು ಪ್ರಸಿದ್ಧನಾದ. ಅತ್ಯಂತ ಶ್ರೇಷ್ಠ ಗ್ರಂಥಭಂಡಾರವನ್ನು ನಿರ್ಮಿಸಿದ. ಪ್ರ.ಶ.ಪೂ.626ರಲ್ಲಿ ಈತ ಮೃತನಾದ ತರುವಾಯ ಅಸ್ಸೀರಿಯನ್ ಸಾಮ್ರಾಜ್ಯ ಶೀಘ್ರಗತಿಯಲ್ಲಿ ಛಿದ್ರವಾಗತೊಡಗಿತು. 625ರಲ್ಲಿ ಬ್ಯಾಬಿಲೋನಿ ಯನ್ನರು ದಂಗೆ ಎದ್ದರು: ಮಾತ್ರವಲ್ಲದೆ ಇರಾನಿನ ಪ್ರಸ್ಥಭೂಮಿಯಿಂದ ಬಂದ ಮೀಡ ಜನರೊಂದಿಗೆ ಮೈತ್ರಿ ಏರ್ಪಡಿಸಿಕೊಂಡರು. ಇವರ ಒಗ್ಗಟ್ಟಿನಿಂದ ಆದ ಧಾಳಿಯಿಂದಾಗಿ (ಪ್ರ.ಶ.ಪೂ.612–538) ನೆಬೊಪೊಲಸ್ಸರ್ ಮತ್ತು ಆತನ ಉತ್ತರಾಧಿಕಾರಿ ನೆಬುಚಡ್ನಸರ್ ಎಂಬವರ ಕಾಲದಲ್ಲಿ ನವಬ್ಯಾಬಿಲೋನಿಯನ್ ರಾಜ್ಯ ಉದಯವಾಯಿತು. ಬಯಲುಪ್ರದೇಶಕ್ಕೆ ಮತ್ತೊಮ್ಮೆ ಪ್ರಾಮುಖ್ಯ ಲಭಿಸಿತು. ಇವರ ಆಡಳಿತ ಮೆಸಪೊಟೇಮಿಯದಾಚೆಗೆ ಹರಡಿ ಪ್ಯಾಲಸ್ತೀನ್ ಮತ್ತು ಸಿರಿಯ ಪ್ರದೇಶಗಳನ್ನೊಳಗೊಂಡಿತು. ಜೆರುಸಲೆಮ್ ಮೇಲಿನ ಆಕ್ರಮಣ ಮತ್ತು ಪ್ರ.ಶ.ಪೂ.597ರಲ್ಲಿ ಆರಂಭವಾದ ಯಹೂದಿಗಳ ಬಂಧನ ಇವನ ಕಾಲದ ಮುಖ್ಯ ಘಟನೆಗಳು. ಈತ ಬ್ಯಾಬಿಲಾನ್ ನಗರವನ್ನು ಜೀರ್ಣೋದ್ಧಾರಗೊಳಿಸಿದ. ಪ್ರಪಂಚದ ಅದ್ಭುತಗಳಲ್ಲಿ ಒಂದೆನಿಸಿದ ತೂಗಾಡುವ ತೋಟಗಳು ಈ ಅರಸನ ನಿರ್ಮಾಣ. ಸೈರಸನ ನಾಯಕತ್ವದಲ್ಲಿ ನಡೆದ ಪರ್ಷಿಯನ್ ಆಕ್ರಮಣಗಳಿಂದಾಗಿ ಚಾಲೀಯನ್ನರ ಆಳಿಕೆ ಕೊನೆಗೊಂಡಿತು. ಸೈರಸ್‌ನಿಂದ ಪರಾಜಿತರಾದ ನೆಬೊನೀಡಸ್ ಮತ್ತು ಅವನ ಮಗ ಬೆಲ್‌ಷಜರ್ ಸಹ ಹಳೆಯ ಒಡಂಬಡಿಕೆಯಲ್ಲಿ ಪ್ರಧಾನವಾಗಿ ಉಲ್ಲೇಖಿತರಾಗಿದ್ದಾರೆ.

ಈ ಪ್ರದೇಶ ಪ್ರ.ಶ.ಪೂ.539ರಲ್ಲಿ ಪರ್ಷಿಯನ್ನರ ವಶವಾದರೂ ಪ್ರ.ಶ.1ನೆಯ ಶತಮಾನದಲ್ಲಿ ಮಂಗೋಲರ ಧಾಳಿಯಾಗುವ ತನಕ ಇಲ್ಲಿಯ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯ ಕ್ಷೀಣಿಸಲಿಲ್ಲ. ಯಾವುದೇ ಗುಂಪು ಅಧಿಕಾರದಲ್ಲಿದ್ದರೂ ಸುತ್ತಮುತ್ತಣ ಪ್ರದೇಶದ ಆಡಳಿತಕೇಂದ್ರವಾಗಿ ಬ್ಯಾಬಿಲಾನ್ ಮೆರೆಯಿತು. ಈ ನಗರ ಹಾಗೂ ಸಿಲ್ಯುಕಿಯ ಮತ್ತು ಟೆಸಿಫೋನ್ ಪಟ್ಟಣಗಳು ಪರಸ್ಪರ ಅತ್ಯಂತ ಸನಿಹದಲ್ಲಿದ್ದವು. ವ್ಯವಸಾಯ ಉತ್ಪಾದನೆಯ ಸಾಧ್ಯತೆಗಳಿಂದಾಗಿ ಮತ್ತು ವ್ಯಾಪಾರ ವ್ಯವಹಾರಗಳಿಗೆ ಅನುಕೂಲಕರವಾದ ಸನ್ನಿವೇಶದಿಂದಾಗಿ ಬಯಲು ಪ್ರದೇಶ ಶ್ರೀಮಂತ ಹಾಗೂ ಜನಸಾಂದ್ರತೆಯ ಪ್ರಾಂತವಾಯಿತು. ಇತರ ಪ್ರದೇಶಗಳ ಆರ್ಥಿಕ ಸಂಪತ್ತಿನಲ್ಲಿ ಏರಿಳಿತಗಳುಂಟಾದರೂ ಬ್ಯಾಬಿಲೋನಿಯ ಮಾತ್ರ ಆರ್ಥಿಕ ಸ್ಥಿರತೆ ಹೊಂದಿದ್ದರಿಂದ ಸಮತೋಲನ ಸಾಧಿಸಿತು. ಅಲ್ಲದೆ ಮಧ್ಯಪ್ರಾಚ್ಯ ಗ್ರೀಕ್ ಮತ್ತು ರೋಮನ್ ನಾಗರಿಕತೆಗಳಿಗೆ ಒಂದು ಪ್ರಧಾನ ಸಹಾಯಕ ಕೇಂದ್ರವಾಗಿ ಬ್ಯಾಬಿಲೋನಿಯ ಪ್ರಾಚೀನಕಾಲದುದ್ದಕ್ಕೂ ಸಾಂಸ್ಕೃತಿಕ ಪ್ರಸರಣದ ಮೂಲ ಕೇಂದ್ರಗಳಲ್ಲೊಂದಾಗಿ ಉಳಿಯಿತು.

**ಪರ್ಷಿಯನ್ (ಪ್ರ.ಶ.ಪೂ.538–323):** ಮೆಸಪೊಟೇಮಿಯದ ಇತಿಹಾಸದಲ್ಲಿ ಸೈರಸ್ ಮಹಾಶಯನ ನೇತೃತ್ವದಲ್ಲಿ ಪರ್ಷಿಯನ್ನರ ಆಗಮನ ಒಂದು ಮಹತ್ತ್ವದ ಘಟನೆ. ಯೂಫ್ರಟೀಸ್–ಟೈಗ್ರಿಸ್ ಕಣಿವೆ ಪ್ರದೇಶ ಕಾಲ್ಡೀಯ ಮತ್ತು ಅಸ್ಸೀರಿಯ ಎಂದು ಎರಡು ಸತ್ರಪಿಗಳಾಗಿ ವಿಭಜಿತವಾಯಿತು. ಮೊದಲನೆಯ ಸತ್ರಪಿಯಲ್ಲಿ ಬಯಲುಪ್ರದೇಶವೂ ಎರಡನೆಯದರಲ್ಲಿ ಪ್ರಸ್ಥಭೂಮಿ ಸೇರಿದ್ದವು. ಸಿಂಧೂವಿನಿಂದ ನೈಲ್‌ವರೆಗೆ ವಿಸ್ತೃತವಾಗಿದ್ದ ವಿಶಾಲ ಪರ್ಷಿಯನ್ ಸಾಮ್ರಾಜ್ಯದ ನಾಲ್ಕು ಪ್ರಧಾನ ಆಡಳಿತ ಕೇಂದ್ರಗಳಲ್ಲಿ ಬ್ಯಾಬಿಲಾನ್ ಒಂದಾಗಿತ್ತೆಂಬುದರಿಂದಲೇ ಅದರ ಪ್ರಾಮುಖ್ಯವನ್ನು ಗುರುತಿಸಬಹುದು. ಮೆಸಪೊಟೇಮಿಯದಲ್ಲಿ ಬಹುಸಂಖ್ಯಾತರು ಸೆಮಿಟಿಕ್ ಜನಾಂಗದ ಪರ್ಷಿಯನ್ನರು. ಈ ಪ್ರದೇಶದಲ್ಲಿ ಪ್ರಚಲಿತವಿದ್ದ ಅರಾಮಿಕ್ ಭಾಷೆಯನ್ನೇ ಜನಸಂಪರ್ಕ ಭಾಷೆಯಾಗಿ ಬಳಸಬೇಕಾಯಿತು. ಕ್ಯೂನಿಫಾರಂನ ಸುಧಾರಿತ ರೂಪವನ್ನು ಆಧರಿಸಿದ ಲಿಪಿವ್ಯವಸ್ಥೆಯೊಂದನ್ನು ಪರ್ಷಿಯನ್ನರು ಅಳವಡಿಸಿಕೊಂಡರು ಎನ್ನುವ ಅಂಶವೂ ಈ ಪ್ರಾಚೀನ ಸಂಸ್ಕೃತಿಗೆ ದೊರೆತ ಇನ್ನೊಂದು ವಿಜಯವಾಗಿದೆ.

ಅಲೆಕ್ಸಾಂಡರ್‌ನ ನೇತೃತ್ವದಲ್ಲಿ ಗ್ರೀಕ್ ಮತ್ತು ಮ್ಯಾಸಿಡೋನಿಯನ್ನರ ಆಕ್ರಮಣದಿಂದ ನಾಶವಾಗುವ ತನಕ ಪರ್ಷಿಯನ್ ಸಾಮ್ರಾಜ್ಯ ಉಳಿದುಕೊಂಡು ಬಂತು. ಪ್ರ.ಶ.ಪೂ.335ರಲ್ಲಿ ಅಲೆಕ್ಸಾಂಡರನ ದಂಡಯಾತ್ರೆ ಆರಂಭವಾಯಿತು. ಪ್ರ.ಶ.ಪೂ.331ರಲ್ಲಿ ಆತ ಬ್ಯಾಬಿಲೋನಿಗೆ ಬಂದ; ಪ್ರ.ಶ.ಪೂ.325ರಲ್ಲಿ ಆತ ಪೌರ್ವಾತ್ಯ ವಿಜಯಗಳಿಂದ ಹಿಂದಿರುಗಿದಾಗ ಬ್ಯಾಬಿಲೋನಿನಲ್ಲಿ ತನ್ನ ಪ್ರಧಾನ ಆಡಳಿತ ಕೇಂದ್ರವನ್ನು ಸ್ಥಾಪಿಸಿದ; ಈ ನಗರದಲ್ಲಿಯೇ 323ರಲ್ಲಿ ಮೃತನಾದ. ಆತನ ಸಾಮ್ರಾಜ್ಯದ ಪತನಾನಂತರ ಮೆಸಪೊಟೇಮಿಯ ಮತ್ತು ಈಜಿಪ್ಟನ್ನು ಹೊರತುಪಡಿಸಿ ಪ್ರಾಚೀನ ಪರ್ಷಿಯನ್ ಸಾಮ್ರಾಜ್ಯದ ಬಹುಭಾಗ ಅಲೆಕ್ಸಾಂಡರನ ಸೇನಾನಿಗಳಲ್ಲೊಬ್ಬನಾದ ಸೆಲ್ಯೂಕಸನ ಅಧೀನವಾಯಿತು.

**ಸೆಲ್ಯೂಕಿಡ್ (ಪ್ರ.ಶ.ಪೂ.323–140):** ಸೆಲ್ಯೂಕಸ್ ಸ್ಥಾಪಿಸಿದ ವಂಶ ಮಧ್ಯ ಪ್ರಾಚ್ಯ ಪ್ರದೇಶವನ್ನು ಮುಂದಿನ 2 ಶತಮಾನಗಳ ಕಾಲ ಆಳಿತು. ಹೊಸ ರಾಜಧಾನಿಗೆ ಸಿಲ್ಯೂಕಿಯ ಎಂಬ ಹೆಸರು ಬಂತು. ಇದು ಇಂದಿನ ಬಾಗ್ದಾದಿನ ದಕ್ಷಿಣಕ್ಕೆ ಸು.30ಕಿಮೀ ದೂರದಲ್ಲಿ ಟೈಗ್ರಿಸ್ ನದಿದಂಡೆಯ ಮೇಲಿದೆ. ತನ್ನ ವೈಭವದ ಕಾಲದಲ್ಲಿ ಈ ಸಾಮ್ರಾಜ್ಯ ಪೂರ್ವದಲ್ಲಿ ಸಿಂಧೂನದಿ ಪ್ರದೇಶದವರೆಗೆ ಹಬ್ಬಿತ್ತು; ಇರಾನಿನ ಹಳೆಯ ಪ್ರದೇಶವನ್ನೊಳಗೊಂಡಿತ್ತು. ಪ್ರ.ಶ.ಪೂ.3ನೆಯ ಶತಮಾನದ ಮಧ್ಯಭಾಗದಲ್ಲಿ ಕ್ಯಾಸ್ಪಿಯನ್ ಸಮುದ್ರಕ್ಕೆ ದಕ್ಷಿಣದಲ್ಲಿರುವ ಈ ಭಾಗದಲ್ಲಿ (ಇರಾನ್) ಪರ್ಷಿಯನ್ ರಾಷ್ಟ್ರೀಯತೆಯ ಹೆಸರಿನಲ್ಲಿ ಹೊಸ ಚಳವಳಿಯೊಂದು ಹುಟ್ಟಿತು; ತಮ್ಮನ್ನು ಪರ್ಷಿಯನ್ನರ ಉತ್ತರಾಧಿಕಾರಿಗಳೆಂದು ಘೋಷಿಸಿಕೊಂಡ ಪಾರ್ಥಿಯನ್ನರು ವಿದೇಶಿ ಗ್ರೀಕ್ ಮತ್ತು ಮ್ಯಾಸಿಡೋನಿಯನ್ ಜನರ ವಿರುದ್ಧ ಇರಾನಿನ ಎಲ್ಲ ಪಂಗಡದವರೂ ಒಂದುಗೂಡಲು ಕರೆನೀಡಿದರು. ಇದಕ್ಕೆ ವ್ಯಾಪಕ ಬೆಂಬಲ, ಚಾಲನೆ ದೊರೆತು. ಸೆಲ್ಯೂಕಿಡ್ ವಿರೋಧಿ ಬಂಡಾಯದಿಂದ 3ನೆಯ ಶತಮಾನಾಂತ್ಯದಲ್ಲಿ (ಇರಾನಿನ) ಪರ್ಷಿಯದ ಸ್ವಾತಂತ್ರ್ಯ ಪುನಃ ಸ್ಥಾಪಿತವಾಯಿತು. ಪಾರ್ಥಿಯನ್ ಪ್ರಭುಗಳು ಪಶ್ಚಿಮದ ಮೆಸಪೊಟೇಮಿಯದತ್ತ ದೃಷ್ಟಿ ಹಾಯಿಸಿದರು. ಪ್ರಖ್ಯಾತ ದೊರೆ ಒಂದನೆಯ ಮಿಥ್ರಡೇಟ್ಸ್‌ನ ನೇತೃತ್ವದಲ್ಲಿ ಇರಾನಿನ ಗುಂಪೊಂದು ಟೈಗ್ರಿಸ್–ಯೂಫ್ರಟೀಸ್ ಪ್ರದೇಶದಿಂದ ಸೆಲ್ಯೂಕಿಡ್‌ರನ್ನು ಹೊರದೂಡಿತು. ಪಾರ್ಥಿಯನ್ನರು ಮೆಸಪೊಟೇಮಿಯದ ಒಡೆಯರಾದರು.

**ಪಾರ್ಥಿಯನ್ (ಪ್ರ.ಶ.ಪೂ.140–ಪ್ರ.ಶ.227):** ಮಧ್ಯಪ್ರಾಚ್ಯ ಪ್ರದೇಶದಲ್ಲಿ ಪಾರ್ಥಿಯನ್ನರು ರೋಮನ್ನರ ಪ್ರಬಲ ವಿರೋಧಿಗಳಾಗಿ ಕ್ರಾಸಸ್ ಮತ್ತು ಕರ್ತ ಪ್ರದೇಶಗಳನ್ನು ಗೆದ್ದರು. 114–16ರಲ್ಲಿ ರೋಮಿನ ಸಾಮ್ರಾಟ ಟ್ರಾಜನ್ ಪರ್ಷಿಯನ್ ಖಾರಿಯವರೆಗೂ ತನ್ನ ಆಳಿಕೆಯನ್ನು ವಿಸ್ತರಿಸಿದಾಗ ಇವರು ಆತನ ಧಾಳಿಗಳಿಗೆ ಬಲಿಯಾದರು. ಪರ್ಷಿಯನ್ ಸಾಮ್ರಾಜ್ಯದಲ್ಲಿ

ಹೇಗೋ ಹಾಗೆಯೇ ಪಾರ್ಥಿಯನ್ನರ ಕೈಕೆಳಗೂ ಮೆಸಪೊಟೇಮಿಯ ಒಂದು ಅತಿ ಮುಖ್ಯ ಪ್ರದೇಶವೂ ಆಡಳಿತ ಕೇಂದ್ರವೂ ಆಯಿತು. ಹಾಗಿದ್ದರೂ ಪ್ರ.ಶ.ಪೂ. 1ನೆಯ ಶತಮಾನದಲ್ಲಿ ಟೈಗ್ರಿಸ್ ದಂಡೆಯ ಮೇಲಿದ್ದ ಸಿಲ್ಯೂಕಿಯ ತನ್ನ ರಾಜಧಾನಿ ಪಟ್ಟಣವನ್ನೂ ಅದೇ ನದಿಯ ಇನ್ನೊಂದು ತೀರದಲ್ಲಿದ್ದ ಜೊಸಿಫೊನ್‌ಗೆ ಬಿಟ್ಟುಕೊಡಬೇಕಾಯಿತು.

ಟ್ರೋಜನ್ನಿನ ದಂಡಯಾತ್ರೆಗಳನ್ನು ಪಾರ್ಥಿಯನ್ ಸಾಮ್ರಾಜ್ಯ ಎದುರಿಸಿ ಉಳಿದು ಕೊಂಡಿತು; ತಾತ್ಕಾಲಿಕವಾಗಿ ರೋಮನ್ನರ ಕೈವಶವಾಗಿದ್ದ ಪ್ರದೇಶವನ್ನು ಮತ್ತೆ ಪಡೆದು ಕೊಂಡಿತು. ಮಾರ್ಕಸ್ ಅರೆಲಿಯಸ್‌ನ ಕಾಲದ ಧಾಳಿಗಳೂ ಪ್ಲೇಗ್ ಪೀಡೆಯಿಂದಾಗಿ ಪರಿಣಾಮಶೂನ್ಯವಾದುವು. ಮುಂದೆ ಸೆಪ್ಟಿಮಸ್ ಸೆವೆರಸ್ ಹಾಗೂ ಕರಕಲ್ಲರ ಆಕ್ರಮಣಗಳಿಂದಾಗಿ ದುರ್ಬಲ ಗೊಂಡ ಪಾರ್ಥಿಯನ್ನರು ಇರಾನಿನ ಹೊಸ ಒತ್ತಡವೊಂದಕ್ಕೆ ಸಿಲುಕಿ ಪತನ ಹೊಂದಬೇಕಾಯಿತು. ಮೊದಲ ಪರ್ಷಿಯನ್ ಸಾಮ್ರಾಜ್ಯದ ಸ್ಥಾಪಕರಾದ ಅಬೆಮಿನಿಡರಿಂದ ತಮ್ಮ ಅರಸರು ಬಂದವರೆಂದು ಹೇಳಿಕೊಳ್ಳುವ ಸಸ್ಸಾನಿಯನ್ ಪರ್ಷಿಯನ್ನರಿಂದ 224ರಲ್ಲಿ ಪಾರ್ಥಿಯನ್ ಸಾಮ್ರಾಜ್ಯ ತನ್ನ ಅಸ್ತಿತ್ವ ಕಳೆದುಕೊಂಡಿತು; ಮೆಸಪೊಟೇಮಿಯ ಸಸ್ಸಾನಿಯನ್ನರ ಅಧೀನಕ್ಕೊಳಪಟ್ಟಿತು.


ಅಕ್ಕಾಡಿಯನ್ ಲಿಪಿಯಲ್ಲಿರುವ ಶಾಸನ

**ಸಸ್ಸಾನಿಯನ್ (227–637):** ಪಾರ್ಥಿಯನ್ನರ ಬದಲಾಗಿ ಸಸ್ಸಾನಿಯನ್ನರು ರೋಮನರ ವಿರೋಧಿಗಳಾದಾಗ ದ್ವಿತೀಯ ಪರ್ಷಿಯನ್ ಸಾಮ್ರಾಜ್ಯ ಎಂದು ಕರೆಯ ಬಹುದಾದ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂತು. ಇವರ ಕಾಲದಲ್ಲಿಯೂ ಪೂರ್ವ–ಪಶ್ಚಿಮಗಳ ನಡುವಣ ಸಂಘರ್ಷ ಮುಂದುವರಿಯಿತು. ಒಮ್ಮೆ ಪೂರ್ವ ಮೇಲುಗೈ ಪಡೆದರೆ ಮತ್ತೊಮ್ಮೆ ಪಶ್ಚಿಮ ಮೇಲುಗೈ ಪಡೆಯುತ್ತಿತ್ತು. 3ನೆಯ ಶತಮಾನದ ಮಧ್ಯಭಾಗದಲ್ಲಿ ರೋಮನ್ ಸಾಮ್ರಾಟ ವಲೇರಿಯನ್‌ನ ಬಂಧನ, ಕ್ರಾಸಸ್ ಮೇಲಿನ ವಿಜಯ ಪಾರ್ಥಿಯನ್ನರದಾದರೆ, ಡಯೊಕ್ಲೆಶಿಯನ್‌ನ ವಿಜಯಗಳು ಮತ್ತು ಜೂಲಿಯನ್‌ದ ಅಪೊಸ್ಟೇಟ್‌ನ ಮೊದಲ ಯಶಸ್ಸು ಇವುಗಳಿಂದ ರೋಮನರು ಮೇಲುಗೈ ಸಾಧಿಸಿದರು. ಬೈಜಾಂಟೀಯನ್ ಕಾಲದಲ್ಲಿ ಕಾನ್‌ಸ್ಟ್ಯಾಂಟಿನೋಪಲ್‌ನಲ್ಲಿ ಸಸ್ಸಾನಿಯನ್ ವಿರುದ್ಧ ಪೂರ್ವಪ್ರದೇಶದ ಸಾಮ್ರಾಟರು ಹೋರಾಡಿದರೂ ಯಾವ ಮಹತ್ತ್ವದ ವಿಜಯವೂ ದೊರೆಯಲಿಲ್ಲ.

ಕೊನೆಗೆ ಅರಬರೆಂಬ ಬೆಡೋವಿಯನ್ ಸಮುದಾಯದ ಉದಯದಿಂದಾಗಿ ಸಸ್ಸಾನಿಯನ್ನರು ನಾಶವಾದರು. ಪ್ರಾಚೀನ ಕಾಲದ ಇತಿಹಾಸ ಕೊನೆಗೊಂಡಿತು. 632ರಲ್ಲಿ ಪ್ರವಾದಿ ಮಹಮ್ಮದ್ ಪೈಗಂಬರ್‌ನ ಮರಣಾನಂತರ ಅರಬರು ತಮ್ಮ ನಾಡಿನ ಹೊರಗೂ ವಿಸ್ತರಿಸಲಾರಂಭಿಸಿದರು. ಇಸ್ಲಾಮಿನ ನವಸ್ಫೂರ್ತಿಯಿಂದ ಅತ್ಯಂತ ಆವೇಶಭರಿತರಾಗಿದ್ದ ಅವರನ್ನು ತಡೆಯುವುದು ಅಸಾಧ್ಯವಾಗಿತ್ತು. ಸಿರಿಯ, ಪ್ಯಾಲಸ್ತೀನ್‌ಗಳನ್ನು ಜಯಿಸಲಾಯಿತು. 637ರಲ್ಲಿ ಮೆಸೊಪೊಟೇಮಿಯ ಅವಸಾನ ಹೊಂದಿತ್ತು.

**ಮಧ್ಯಯುಗ (632–1534): ಕಲಿಫೇಟರು (632–1258):** ಸಂಪ್ರಾದಯ, ಉಮಾಯಿದ್ ಹಾಗೂ ಅಬ್ಬಾಸಿದ್ ಕಲೀಫರ ಕೈಕೆಳಗೆ ಮೆಸಪೊಟೇಮಿಯ ತನ್ನ ಪ್ರಾಚೀನ ಆಡಳಿತಾತ್ಮಕ ಆರ್ಥಿಕ ಹಾಗೂ ಸಾಮಾಜಿಕ ಪ್ರಾಧಾನ್ಯವನ್ನು ಮುಂದುವರಿಸಿಕೊಂಡು ಬಂದಿತು. 762ರಲ್ಲಿ ಅಬ್ಬಾಸಿದ್ ಕಲೀಫನಾದ ಅಲ್–ಮನ್ಸೂರ್ ಬಾಗ್ದಾದ್ ನಗರ ನಿರ್ಮಿಸುವ ತನಕ ಜೆಸಿಫೊನ್ ಬದಲಾಗಿ ಯೂಫ್ರಟೀಸ್ ತೀರದ ಕುಫಾ ರಾಜಧಾನಿಯಾಗಿ ಮುಂದುವರಿಯಿತು. ಪ್ರಸಿದ್ಧ ಕಲೀಫನಾದ ಹಾರೂನ್ ಅಲ್ ರಷೀದನ ತವರೂರಾದ ಮತ್ತು ಅರೇಬಿಯನ್ ನೈಟ್ಸ್‌ನ ಕಥೆಗಳ ಕೇಂದ್ರಸ್ಥಳವಾದ ಬಾಗ್ದಾದ್ ಈಗಲೂ ಮೆಸಪೊಟೇಮಿಯದ ಎಂದರೆ ಈಗಿನ ಇರಾಕಿನ ರಾಜಧಾನಿಯಾಗಿದೆ. 8ನೆಯ ಶತಮಾನದಲ್ಲಿ ಬಾಗ್ದಾದ್ ಕೇವಲ ಪ್ರಾಂತೀಯ ರಾಜಧಾನಿಯಾಗಿರಲಿಲ್ಲ; ಕುಫಾನಗರ ಉಮಾಯದ್ದರ ಅಧೀನದಲ್ಲಿದ್ದುದರಿಂದ ಬಾಗ್ದಾದ್ ಹೊಸ ಅಬ್ಬಾಸಿದ್ ವಂಶದ ಸಾಮ್ರಾಜ್ಯದ ಆಡಳಿತ ಕೇಂದ್ರವೂ ಆಗಿತ್ತು. ಉಮಾಯದ್ದರ ಖಲೀಫರ ಕಾಲದಲ್ಲಿ ಡಮಾಸ್ಕಸ್ ನಗರ ಮುಸ್ಲಿಮ್ ಜಗತ್ತಿನ ರಾಜಕೀಯ ಕೇಂದ್ರವಾಗಿತ್ತು. ಡಮಾಸ್ಕಸ್‌ನಿಂದ ಬಾಗ್ದಾದಿಗೆ ಉಂಟಾದ ಈ ವರ್ಗಾವಣೆ ಅರಬ್ ಅರಸರ ಪರ್ಷಿಯನೀಕರಣವನ್ನು ಉತ್ತೇಜಿಸುವ ಪರಿಣಾಮ ಬೀರಿತೆಂದು ಹೇಳಲಾಗಿದೆ. ಅರಬ್ ಅರಸರ ರಾಜಕೀಯ ಚಿಂತನೆಗಳು ಮತ್ತು ಸಾಮಾಜಿಕ ವಿಧಿವಿಧಾನಗಳು ಅಳಿದುಳಿದ ಸಸ್ಸಾನಿಯನ್ ಪ್ರಭಾವಗಳಿಂದಾಗಿ ಮಾರ್ಪಾಟು ಹೊಂದಿದವು.

8–9ನೆಯ ಶತಮಾನಗಳಲ್ಲಿ ಪರಾಕಾಷ್ಠೆ ತಲುಪಿದ ಅಬ್ಬಾಸಿದರ ಚೈತನ್ಯೋತ್ಸಾಹ, ಕಾರ್ಯಶ್ರದ್ಧೆ ಕ್ರಮೇಣ ನಶಿಸಿಹೋಯಿತು. 11ನೆಯ ಶತಮಾನದ ಹೊತ್ತಿಗೆ ಸೆಲ್‌ಜುಕ್ ತುರ್ಕರು ತಮ್ಮ ಆಳಿಕೆಯನ್ನು ದಕ್ಷಿಣದ ಮೆಸಪೊಟೇಮಿಯಕ್ಕೆ ವಿಸ್ತರಿಸಿದರು. 1055 ಮತ್ತು 1194ರ ಅವಧಿಯಲ್ಲಿ ಸೆಲ್‌ಜುಕ್ ಸುಲ್ತಾನ ಅಲ್‌ತುಗ್ರಿಲ್ ಬಾಗ್ದಾದಿನಲ್ಲಿ ರಾಜ್ಯಭಾರ ನಿರ್ವಹಿಸಿದ.

**ಮಂಗೋಲಿಯನ್ (1258–1509):** 1218–22ರ ನಡುವೆ ಚೆಂಗೇಜ್‌ಖಾನನ ಮುಂದಾಳತ್ವದಲ್ಲಿ ಮಂಗೋಲರು ಪರ್ಷಿಯವನ್ನು ಆಕ್ರಮಿಸಿ ಮೆಸಪೊಟೇಮಿಯಕ್ಕೆ ಸಾಗಿಬಂದರೂ ಅದನ್ನು ದಮನಮಾಡಿ ಸ್ವಾಧೀನ ಪಡಿಸಿಕೊಂಡಾತ ಚೆಂಗೇಜ್‌ಖಾನನ ಮೊಮ್ಮಗನೂ ಕುಬ್ಲೈಖಾನನ ಸೋದರನೂ ಆದ ಹುಲ್ಗುಖಾನ್. ಬಾಗ್ದಾದಿಗೆ 1258 ಫೆಬ್ರವರಿ 10ರಂದು ಮುತ್ತಿಗೆ ಹಾಕಿದ. ಈತ ಹೋರಾಟ ನಡೆಸಿ ಸು.8 ಲಕ್ಷ ಜನರನ್ನು ಕೊಂದು ಆ ನಗರವನ್ನು ಕೈವಶಮಾಡಿಕೊಂಡ. ಮುಂದಿನ 80 ವರ್ಷಗಳ ಕಾಲ ಮೆಸಪೊಟೇಮಿಯ ಮಂಗೋಲ್ ಸಾಮ್ರಾಜ್ಯದ ಒಂದು ಪ್ರಾಂತವಾಯಿತು. ಅನಂತರದ ಎಪ್ಪತ್ತು ವರ್ಷಗಳ ಕಾಲ ಇದು ಮಂಗೋಲ್ ಪ್ರಾಂತದ ಅಧೀನದಲ್ಲಿಯೇ ಉಳಿಯಿತು.

1393ರಲ್ಲಿ ಭಯಂಕರನೆನಿಸಿದ ತೈಮೂರ್‌ಲಂಗ್‌ನ ಯುದ್ಧಗಳ ಮತ್ತು ದೌರ್ಜನ್ಯ ಕೃತ್ಯಗಳ ಪರಿಣಾಮವಾಗಿ ಈ ಪ್ರದೇಶದ ಬಹುಮಂದಿ ಹತರಾದರು. ಬಾಗ್ದಾದ್ ಹಾನಿಗೊಳಗಾಯಿತು. 1480ರಲ್ಲಿ ಟರ್ಕೊಮನ್ ಮತ್ತು ಬಿದೂಯಿನ್ ಪರ್ವತವಾಸಿಗಳು ಧಾಳಿನಡೆಸಿ ಮತ್ತಷ್ಟು ಹಾನಿಗೆ ಕಾರಣರಾದರು.

**ಪರ್ಷಿಯನ್(1509–34):** ಮಧ್ಯಯುಗದ ಅಂತ್ಯದ ವೇಳೆಗೆ ಪುನಶ್ಚೇತನ ಪಡೆದ ಪರ್ಷಿಯ ಮತ್ತೊಮ್ಮೆ ಟೈಗ್ರಿಸ್–ಯೂಫ್ರಟೀಸ್ ಕಣಿವೆ ಪ್ರದೇಶವನ್ನು ಜಯಿಸಿ ಕೆಲವು ವರ್ಷಗಳ ಕಾಲ ತನ್ನ ಅಧೀನದಲ್ಲಿಟ್ಟುಕೊಂಡಿತು. ಆದರೆ 16ನೆಯ ಶತಮಾನದ ಹೊತ್ತಿಗೆ ಮೆಸಪೊಟೇಮಿಯ ಪಾಳುಬಿದ್ದಿತು. ವ್ಯವಸಾಯಕ್ಕೆ ಹೆಚ್ಚಿನ ಗಮನಹರಿಸಿ ಅಭಿವೃದ್ಧಿಗೆ ಅತ್ಯಗತ್ಯವಾದ ನೀರಾವರಿ ವ್ಯವಸ್ಥೆಯಂತೂ ಮಂಗೋಲರ ಕಾಲದಲ್ಲಿ ಸಂಪೂರ್ಣವಾಗಿ ನಾಶವಾಗಿತ್ತು; ಕೃಷಿ ಭೂಮಿಯ ಬಹುಭಾಗ ಬೆಂಗಾಡಾಯಿತು. ಜನಸಂಖ್ಯೆಯಲ್ಲಿ ಕೂಡ ಅಗಾಧ ಇಳಿತ ಉಂಟಾಗಿದ್ದು ಇಂದಿಗೂ ಪೂರ್ಣವಾಗಿ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ.

**ಆಧುನಿಕ ಯುಗ: ಆಟೋಮನ್ ತುರ್ಕರು (1534–1917):** ಆಟೋಮನ್ ಸಾಮ್ರಾಟನಾದ ಸುಲ್ತಾನ್ ಸುಲೈಮಾನನ ಸೇನೆ ಪರ್ಷಿಯನ್ನರನ್ನು ಮೆಸಪೊಟೇಮಿಯದಿಂದ 1534ರಲ್ಲಿ ಹೊರದಬ್ಬಿತು. ಈ ಕಾಲದಿಂದ 20ನೆಯ ಶತಮಾನದ ತನಕ ಮೆಸಪೊಟೇಮಿಯ – ಅರೆಬರೆ ಸ್ವಾತಂತ್ರ್ಯದ ಕೆಲವು ಅವಧಿಗಳಿದ್ದರೂ ಅಥವಾ ಪರ್ಷಿಯನ್ನರು ತಾತ್ಕಾಲಿಕವಾಗಿ ಪ್ರಭಾವ ಬೀರಿದ ಅವಧಿಗಳಿದ್ದರೂ – ತುರ್ಕರ ಅಧೀನದಲ್ಲಿಯೇ ಇತ್ತೆಂದು ಸಾಮಾನ್ಯವಾಗಿ ಪರಿಗಣಿಸಬಹುದು. ಇವರ ಆಳಿಕೆಯಲ್ಲಿ 19ನೆಯ ಶತಮಾನದ ಉತ್ತರಾರ್ಧವನ್ನು ಪ್ರಗತಿಯ ಕಾಲ ಎಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ.

**ಇರಾಕ್ ರಾಜ್ಯ:** 1914ರಲ್ಲಿ ಒಂದನೆಯ ಮಹಾಯುದ್ಧದ ಆರಂಭಕಾಲದಲ್ಲಿ ಬ್ರಿಟಿಷರು ಬಸ್ರಾ ನಗರಕ್ಕೆ ಬಂದಿಳಿದರು. 1917ರಲ್ಲಿ ಬಾಗ್ದಾದ್ ಅವರ ವಶವಾಯಿತು. 1921 ಬ್ರಿಟಿಷರು ಇರಾಕ್‌ನ ಮೇಲೆ ಪರಮಾಧಿಕಾರ ಹೇರಿದರು. ದೊರೆ ಒಂದನೆಯ ಫೈಸಲ್ ಇರಾಕ್‌ನ ಸಿಂಹಾಸನವನ್ನೇರಿದ (**ನೋಡಿ–ಇರಾಕ್**).

(ಎಚ್.ಎಂ.ಎನ್.ಆರ್.)

**ಮೆಹರ್‌ಗಡ: ನೋಡಿ–ಬಲೂಚಿಸ್ತಾನ**

**ಮೆಹರೋಲಿ ಕಬ್ಬಿಣ ಸ್ತಂಭ:** ದೆಹಲಿಯ ಕುತುಬ್ ಮಿನಾರ್–ಕುವತುಲ್ ಇಸ್ಲಾಂ ಮಸೀದಿಯ ಒಳಾಂಗಣದಲ್ಲಿರುವ ಅಪರೂಪದ ಕಬ್ಬಿಣ ಸ್ತಂಭ. ಮೂಲತಃ ಈ ಸ್ತಂಭದ ತುದಿಯಲ್ಲಿ ಗರುಡ ಮೂರ್ತಿ ಇದ್ದುದರಿಂದ ಬಹುಮಟ್ಟಿಗೆ ಇದು ಒಂದು ವಿಷ್ಣು ದೇವಾಲಯದ ಗರುಡ ಧ್ವಜಸ್ತಂಭವೆಂದು ತೋರುತ್ತದೆ. ಏಕೆಂದರೆ ಇದರ ತುತ್ತ ತುದಿಯಲ್ಲಿರುವ ಚೌಕೋನ ಫಲಕದ ಕೇಂದ್ರದಲ್ಲಿ ಒಂದು ಗುಳಿಯಿದೆ. ಬಹುಶಃ ಗರುಡ ಮೂರ್ತಿಯ ಪೀಠದ ಗೂಟವನ್ನು ಸೇರಿಸುವ ಸಲುವಾಗಿ ಇದು ರಚನೆಗೊಂಡಿರಬೇಕು. ಈ ಸ್ತಂಭದ ಮೇಲೆ ನಾಲ್ಕನೆಯ ಶತಮಾನದ ಒಂದು ಶಾಸನವಿದೆ. ವಿಷ್ಣುಭಕ್ತನಾದ ಚಂದ್ರ ಎಂಬ ಬಲಿಷ್ಠ ರಾಜ ವಿಷ್ಣುಪಾದ ಎಂಬ ಬೆಟ್ಟದ ಮೇಲೆ ಈ ಧ್ವಜಸ್ತಂಭವನ್ನು ನಿಲ್ಲಿಸಿದನೆಂದೂ ಹೇಳಿದೆ. ಈ ರಾಜನು ಗುಪ್ತ ವಂಶದ ರಾಜ ಇಮ್ಮಡಿ ಚಂದ್ರಗುಪ್ತನೆಂದೂ (375–413) ಗುರುತಿಸಲಾಗಿದೆ. ಪ್ರಾಯಶಃ ಈ ಸ್ತಂಭದ ಮೂಲ ಸ್ಥಳ ಬೇರೆಯಾಗಿದ್ದು ಬಹುಶಃ ತೋಮಿರ ರಾಜ ಅಸಂಗಪಾಲ ಇದನ್ನು ಈಗಿರುವ ಪ್ರದೇಶಕ್ಕೆ ಸ್ಥಳಾಂತರಿಸಿರ ಬೇಕೆಂದು ಪ್ರತೀತಿ ಇದೆ. ಇದು ಸು.7.2 ಮೀ ಎತ್ತರವಾಗಿದ್ದು ಇದರ 93 ಸೆಂಮೀ ತಳಭಾಗ ಭೂಮಿಯಲ್ಲಿ ಹುದುಗಿದೆ. ಶುದ್ಧವಾದ ಕಬ್ಬಿಣದಿಂದ ಈ ಸ್ತಂಭ ನಿರ್ಮಿತವಾಗಿ 1600 ವರ್ಷಗಳು ಕಳೆದಿದ್ದರೂ ಇದಕ್ಕೆ ಸ್ವಲ್ಪವೂ ತುಕ್ಕು ಹಿಡಿದಿಲ್ಲದಿರುವುದು ಅತ್ಯಂತ ಆಶ್ಚರ್ಯದ ಸಂಗತಿ. ಮೊದಲು ಈ ಸ್ತಂಭವನ್ನು ಹಲವಾರು ವೃತ್ತಾಕಾರದ ಗಟ್ಟಿ ಬಿಲ್ಲೆಗಳಿಂದ ನಿರ್ಮಿಸಲಾಗಿದೆ ಎಂಬ ಅಭಿಪ್ರಾಯವಿತ್ತು. ಆದರೆ ಇತ್ತೀಚಿನ ಅಧ್ಯಯನದಿಂದ ಇಡೀ ಸ್ತಂಭವನ್ನು ಫೋರ್ಜ್ ವೆಲ್ಡಿಂಗ್ ತಂತ್ರದಲ್ಲಿ ಕಲ್ಲಿದ್ದಲಿನ ದಹನದಿಂದ ನಿರ್ಮಾಣ ಮಾಡಲಾಗಿದೆ ಯೆಂದು ವಿಜ್ಞಾನಿಗಳ ಈಚಿನ ಅಭಿಪ್ರಾಯ. ಕಾನ್ಪುರದ ಐಐಟಿಯ ಆರ್.ಬಾಲಸುಬ್ರಮಣಿಯಂ

ಅವರು ಈ ಸ್ತಂಭ ಅತಿ ದೀರ್ಘಾವಧಿಯಲ್ಲಿಯೂ ತುಕ್ಕು ಹಿಡಿಯದಿದ್ದ ವಿಷಯದ ಬಗ್ಗೆ ಸಂಶೋಧನೆ ನಡೆಸಿದಾಗ ಈ ಸ್ತಂಭದ ಮೈಮೇಲೆ ಯಾವುದೇ ರಾಸಾಯನಿಕ ಕ್ರಿಯೆಗೆ ಒಳಗಾಗದ ಅತಿ ತೆಳುವಾದ ಸುರಕ್ಷ ಪದರು ಇರುವುದು ಬೆಳಕಿಗೆ ಬಂದಿತು. ಈ ಕಬ್ಬಿಣದ ಸೂಕ್ಷ್ಮ ರಚನೆಯಲ್ಲಿ ಕಿಟ್ಟ ಮತ್ತು ಆಮ್ಲಜನಕ ಸಹಿತ ಐರನ್ ಆಕ್ಸೈಡ್‌ಗಳಿಂದ ಕೂಡಿದ ಕಣಗಳಿರುವುದು ಲೋಹದಲ್ಲಿ ಅತಿ ಹೆಚ್ಚಿನ ಪ್ರಮಾಣದ ರಂಜಕ ಮತ್ತು ಸುತ್ತಮುತ್ತಲಿನ ವಾತಾವರಣದಲ್ಲಿ ಒದ್ದೆಯಾಗುವಿಕೆ ಮತ್ತು ಒಣಗುವಿಕೆ ಸ್ತಂಭದ ಮೇಲಿನ ಸುರಕ್ಷ ಪದರಿಗೆ ಕಾರಣವಾಗಿದೆಯೆಂದು ತಜ್ಞರು ಗುರುತಿಸಿದರು. ಈ ಸ್ತಂಭ ಆಗಿನ ಕಾಲದ ಲೋಹತಜ್ಞರ ಲೋಹ ತಂತ್ರಗಾರಿಕೆಯ ವಿಶಿಷ್ಟ ನಿಪುಣತೆಗೆ ಸಾಕ್ಷಿ ಎಂದು ಬಾಲಸುಬ್ರಮಣಿಯಂ ಬಣ್ಣಿಸಿದ್ದಾರೆ.

2ನೆಯ ಚಂದ್ರಗುಪ್ತನ ಕಾಲದ ಕಬ್ಬಿಣದ ಸ್ತಂಭ

ಇವರು ಮತ್ತು ಇದೇ ಸಂಸ್ಥೆಯ ಇವರ ಹಿಂದಿನ ವಿದ್ಯಾರ್ಥಿ ಗದಾಧರ ಸಾಹು ಇಬ್ಬರೂ ಸೇರಿ ಈ ಸಂಶೋಧನೆಯನ್ನು ಮುಂದುವರೆಸಿ, ಸಿಮೆಂಟ್ ಕಾಂಕ್ರೀಟ್‌ನಲ್ಲಿಯೂ ವಿಶಿಷ್ಟ ವೈಜ್ಞಾನಿಕ ತಂತ್ರದಿಂದ ತುಕ್ಕುಹಿಡಿಯದಂಥ, ಹೆಚ್ಚು ಪ್ರಮಾಣದಲ್ಲಿ ತುಕ್ಕು ನಿರೋಧಕ ರಂಜಕವುಳ್ಳ ಕಬ್ಬಿಣವನ್ನು ಸಿದ್ಧಪಡಿಸಿದ್ದಾರೆ. ಕೇಸ್ ವೆಸ್ಟರ್ನ್ ರಿಸರ್ವ್ ವಿಶ್ವವಿದ್ಯಾಲಯ (ಕ್ಲೀವ್‌ಲೆಂಡ್, ಯು.ಎಸ್.ಎ.) ಮೆಟೀರಿಯಲ್ ಸೈನ್ಸ್ ಮತ್ತು ಎಂಜನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಗೆರ್‌ಹಾರ್ಡ್ ಇ, ವೆಲ್ಷ್ ಈ ವಿಜ್ಞಾನಿಗಳಿಗೆ ಬರೆದ ಅಭಿನಂದನ ಪತ್ರದಲ್ಲಿ ಸಾರ್ವಜನಿಕ ಕಟ್ಟಡ ನಿರ್ಮಾಣಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಉಪಯೋಗವನ್ನು ಅನುಲಕ್ಷಿಸಿದಾಗ ಇವರ ಶೋಧನೆ ವಿಶೇಷವಾಗಿ ಮಹತ್ತ್ವದ್ದಾಗಿದೆ ಎಂದು ಪ್ರಶಂಸಿಸಿದ್ದಾರೆ. ಹೆಚ್ಚಿನ ಸಂಶೋಧನೆ ಮುಂದುವರೆದಿದೆ. (ಎ.ಎಸ್.)

**ಮೇಡಂ ಬಿಕೈಜೀ ಕಾಮ:** 1861–1936. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ರಾಜನೀತಿಯನ್ನು ಖಂಡಿಸಿದ ಹೆಸರಾಂತ ಮಹಿಳೆ. ಇವರು 1861ರಲ್ಲಿ ಬೊಂಬಾಯಿಯಲ್ಲಿ ಜನಿಸಿದರು. ಇವರ ಪತಿ ರುಸ್ತುಂಕಾಮ ಪಾರ್ಸಿ ಸುಧಾರಕರು. ಅವರು ಬ್ರಿಟಿಷ್ ಪರವಾದ ಮನೋಭಾವನೆ ಹೊಂದಿದ್ದರು. ಮೇಡಂ ಕಾಮ ರಾಷ್ಟ್ರೀಯವಾದಿಯಾಗಿದ್ದು ಗಂಡನೊಡನೆ ಬಿನ್ನಾಭಿಪ್ರಾಯ ಹೊಂದಿ 1902ರಲ್ಲಿ ಲಂಡನ್‌ಗೆ ತೆರಳಿದರು. 1907 ಆಗಸ್ಟ್‌ನಲ್ಲಿ ಸ್ಟಟ್‌ಗಾರ್ಡ್‌ನಲ್ಲಿ ನಡೆದ ಸೋಷಿಯಲಿಸ್ಟ್ ಕಾಂಗ್ರೆಸ್‌ನಲ್ಲಿ ಭಾಗವಹಿಸಿ ಬ್ರಿಟಿಷ್ ಆಳಿಕೆಯ ದೌರ್ಜನ್ಯಗಳನ್ನು ಖಂಡಿಸಿದರು. ಅದೇ ಸಭೆಯಲ್ಲಿ ಭಾಗವಹಿಸಿದ್ದ ಬ್ರಿಟಿಷ್ ಪ್ರಧಾನಿ ರ‍್ಯಾಮ್ಸೆ ಮ್ಯಾಕ್‌ಡೊನಾಲ್ಡ್‌ನು ಮೇಡಂ ಕಾಮಳ ಭಾಷಣವನ್ನು ವಿರೋಧಿಸಿ ಸಭಾತ್ಯಾಗ ಮಾಡಿದ. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ನಾಯಕರ ಬೆಂಬಲವನ್ನು ಪಡೆದು ಭಾರತದಲ್ಲಿ ಬ್ರಿಟಿಷ್ ಆಳಿಕೆಯ ಮುಂದುವರಿಕೆಯು ಭಾರತೀಯರ ಮತ್ತು ಭಾರತದ ಅಧೋಗತಿಗೆ ಕಾರಣವಾಗುವುದು; ಆದ್ದರಿಂದ ಪ್ರಪಂಚದ ಸ್ವಾತಂತ್ರ್ಯ ಪ್ರೇಮಿಗಳೆಲ್ಲ ಬ್ರಿಟಿಷ್ ಗುಲಾಮಿತನದಿಂದ ಭಾರತ ಬಿಡುಗಡೆಯಾಗಲು ಸಹಕರಿಸಬೇಕು ಎಂಬ ಠರಾವನ್ನು ಅಂಗೀಕರಿಸುವಂತೆ ಮಾಡಿದರು. ಇವರು ತಮ್ಮ ಭಾಷಣದ ಕೊನೆಯಲ್ಲಿ ವಂದೇಮಾತರಂ ಪದಗಳನ್ನು ಒಳಗೊಂಡ ಭಾರತದ ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ಹಾರಿಸಿದರು. 1907ರಲ್ಲಿ ನ್ಯೂಯಾರ್ಕಿಗೆ ಭೇಟಿ ನೀಡಿದ ಇವರು ಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ನಾವು ಗುಲಾಮರಾಗಿದ್ದೇವೆ. ಅಮೆರಿಕದಲ್ಲಿರುವ ನನ್ನ ಒಂದೇ ಒಂದು ಉದ್ದೇಶವೆಂದರೆ ಬ್ರಿಟಿಷ್ ದೌರ್ಜನ್ಯಗಳನ್ನು ಸ್ವಾತಂತ್ರ್ಯಪ್ರಿಯ ಅಮೆರಿಕನ್ನರಿಗೆ ಬಹಿರಂಗ ಪಡಿಸುವುದೇ ಆಗಿದೆ ಎಂದು ತಿಳಿಸಿದರು. ಹೀಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಂಚರಿಸುತ್ತ ಭಾರತದ ಸ್ವಾತಂತ್ರ್ಯದ ಪರವಾಗಿ ಪ್ರಪಂಚದ ಸಹಾನುಭೂತಿ, ಬೆಂಬಲಗಳಿಸಲು ಪ್ರಯತ್ನಪಟ್ಟರು. 1908ರಲ್ಲಿ ಲಂಡನ್‌ನಲ್ಲಿ ತಮ್ಮ ಕ್ರಾಂತಿಕಾರಿ ಚಟುವಟಿಕೆಗಳನ್ನು ನಡೆಸಲು ಇಂಡಿಯ ಹೌಸ್, ನಂ. 65, ಕ್ರಾಂವೆಲ್ ಅವೆನ್ಯೂ, ಹೈಗೇಟ್ ಎಂಬ ವಿಳಾಸದ ಮನೆಯನ್ನು ಬಳಸಲು ಪ್ರಾರಂಭಿಸಿದರು. ಇಲ್ಲಿ ವಿ.ಡಿ. ಸಾವರ್ಕರ್, ಸರ್ದಾರ್ ಸಿಂಗ್ ರಾಣಾ, ಕೃಷ್ಣವರ್ಮ ಶ್ಯಾಮ್‌ಜೀ ಮೊದಲಾದವರು ಸಭೆ ಸೇರುತ್ತಿದ್ದರು. 1909ರಲ್ಲಿ ಪ್ಯಾರಿಸ್‌ನಲ್ಲಿದ್ದುಕೊಂಡು ಬ್ರಿಟಿಷ್ ವಿರೋಧಿ ಸಾಹಿತ್ಯವನ್ನೊಳಗೊಂಡ ಕರಪತ್ರಗಳನ್ನು ಮುದ್ರಿಸಿ ಭಾರತಕ್ಕೆ ಕಳುಹಿಸಲಾರಂಭಿಸಿದರು. ವಂದೇ ಮಾತರಂ ಎಂಬ ಇವರ ಪತ್ರಿಕೆ ಹಿಂಸಾತ್ಮಕ ಕ್ರಾಂತಿಯನ್ನು ಪ್ರಚೋದಿಸುವ 1935ರಲ್ಲಿ ಭಾರತಕ್ಕೆ ಹಿಂತಿರುಗಿದ ಕಾಮ ಇಲ್ಲಿಯೇ ನಿಧನರಾದರು. (ಕೆ.ಎಸ್‌ಡಿ.)

**ಮೈಕೆಲೆಂಜೆಲೋ:** 1475–1564. ಯುರೋಪಿನ ಬೌದ್ಧಿಕ ಕ್ರಾಂತಿಯ ಕಾಲದಲ್ಲಿ ಇಟಲಿಯಲ್ಲಿದ್ದ ಚಿತ್ರಕಾರ, ಶಿಲ್ಪಿ, ವಾಸ್ತುಶಿಲ್ಪಿ ಮತ್ತು ಕವಿ. ಬರೋಕ್ ಕಲಾಪದ್ಧತಿಯ ಆದ್ಯ ಪ್ರವರ್ತಕ. ಈತ 6 ಮಾರ್ಚ್ 1475ರಲ್ಲಿ ಇಟಲಿಯ ಪ್ರಸಿದ್ಧ ಫ್ಲಾರೆನ್ಸ್ ಕುಟುಂಬದಲ್ಲಿ ಕಾಪ್ರೆಸ್ ಎಂಬ ಹಳ್ಳಿಯಲ್ಲಿ ಜನಿಸಿದ. ಇವನ ತಂದೆ ಲುಡೊಂಕೋ ಬಾನಾರವಿಯ ಕಾಪ್ರೆಸ್ ನಗರದ ಆಡಳಿತಾಧಿಕಾರಿಯಾಗಿದ್ದ. ಚಿಕ್ಕಂದಿನಲ್ಲಿ ಮಗನ ಕಲಾಭಿರುಚಿಯನ್ನು ಗುರುತಿಸಿದ ಲುಡೊಂಕೋ ಇವನನ್ನು ಫ್ಲಾರೆನ್ಸಿನ ಪ್ರಸಿದ್ಧ ಚಿತ್ರಕಾರ ಡೊಮೆನಿಕೊ ಗಿರ್ಲಂಡಜೋ ಎಂಬವನ ಬಳಿ ಶಿಷ್ಯವೃತ್ತಿಗೆ ಕಳಿಸಿದ. ಆದರೆ ಮೈಕೆಲನಿಗೆ ಚಿತ್ರಕಲೆಗಿಂತ ಶಿಲ್ಪಕಲೆಯಲ್ಲಿ ಹೆಚ್ಚು ಆಸಕ್ತಿ. ಅದರಲ್ಲಿಯೂ ಡೊನಾಟೆಲ್ಲೊನ ಶಿಲ್ಪಕಲೆ ಈತನ ಮೇಲೆ ಗಾಢವಾದ ಪ್ರಭಾವ ಬೀರಿತು. ಡೊನಾಟೆಲ್ಲೊನ ಶಿಷ್ಯನೊಬ್ಬನ ಬಳಿ ಅಪ್ರೆಂಟಿಸ್ ಶಿಲ್ಪಿಯಾಗಿ ತನ್ನ ಕಲಾಜೀವನವನ್ನು ಆರಂಭಿಸಿದ. ಅನಂತರ ಲೊರೆನ್ಜೊ ಮೆಡಿಸಿ ಎಂಬ ಶ್ರೀಮಂತನ ಆಶ್ರಮದಲ್ಲಿದ್ದ ಗಿಯೊವನಿ ಬರ್ಟೊಲ್ಡೋ (1440–91) ಎಂಬ ಶಿಲ್ಪಿಯ ಶಿಷ್ಯನಾಗಿ ಮೆಡಿಸಿಯನ್ನು ಸೇರಿದ. ಹೀಗಾಗಿ ಇವನಿಗೆ ಲೊರೆನ್ಜೋನ ಆಶ್ರಯ, ಬರ್ಟೊಲ್ಡೋನ ಮಾರ್ಗದರ್ಶನದ ಜೊತೆಗೆ ಪ್ಲೇಟೊ ಅಕಾಡೆಮಿಯ ಸಾಮೀಪ್ಯ ದೊರೆತು ಇವನ ಕಲಾಜೀವನ ರೂಪಿತಗೊಂಡಿತು. 1494ರಲ್ಲಿ ಮೆಡಿಸಿ ಕುಟುಂಬದ ಅಧಿಕಾರದ ಪತನದ ಅನಂತರ ಈತ ಬೊಲೋನ ನಗರದಲ್ಲಿ ನಿರ್ಮಿತಗೊಳ್ಳುತ್ತಿದ್ದ ಸ್ಯಾನ್ ಪೆಟ್ರೋನಿಯೊ ಚರ್ಚಿನ ಶಿಲ್ಪ ಅಲಂಕರಣ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುವಂತಾಯಿತು. ಅಲ್ಲಿದ್ದಾಗ ಇವನಿಗೆ ಜಕೋಪೋ ಡೆಲ್ಲಾ ಕ್ವೆರ್ಷಿಯಾನ ಶಿಲ್ಪಗಳನ್ನು ಅಧ್ಯಯನ ಮಾಡುವ ಅವಕಾಶ ಸಿಕ್ಕಿತು. ಹೀಗೆ ತಾರುಣ್ಯದಲ್ಲಿ ಒದಗಿಬಂದ ಈ ಕಲಾನುಭವಗಳು ಬಹಳಷ್ಟು ಪ್ರಭಾವ ಬೀರಿದವು. ಈತ ಫ್ಲಾರೆನ್ಸಿನಲ್ಲಿ ಕೆಲವು ವರ್ಷಗಳನ್ನು ಕಳೆದ (1501–05). ಆಗ ಪ್ರಸಿದ್ಧ ಕಲಾಕಾರ ಲಿಯೊನಾರ್ಡೊ ಡ ವಿಂಚಿಯನ್ನು ಭೇಟಿಯಾದ; ಅವನ ಕಲಾನೈಪುಣ್ಯದಿಂದಲೂ ಸಾಕಷ್ಟು ಪ್ರಭಾವಿತನಾದ.

ಮೈಕೆಲೆಂಜೆಲೋನ ಆರಂಭದ ಗಮನಾರ್ಹ ಶಿಲ್ಪಗಳೆಂದರೆ ಮೆಡೋನಾ ಆಫ್ ದಿ ಸ್ಟೇರ್ಸ್, ಸೆಂಟಾರ್ಯ, ಸೆಂಟಾರ್ ಆಕ್ರಮಣದಿಂದ ರಕ್ಷಿತಳಾದ ಯುವತಿ, ಇವುಗಳಲ್ಲಿ ಮುಖ್ಯವಾದವು. ಇವನಿಗಿಂತ ಹಿಂದಿನ ಮತ್ತು ಇವನ ಸಮಕಾಲೀನ ಶಿಲ್ಪಿಗಳು ತಾಯಿಯ ತೊಡೆಯ ಮೇಲೆ ಮಲಗಿರುವಂತಹ ಮಗು ಯೇಸುವಿನ ದೇಹವನ್ನು ಕಡೆದಿದ್ದರೆ, ಈತ ಕುಳಿತಿರುವ ಮೆಡೋನಾ ಕಾಲುಗಳ ನಡುವೆ ನಿಂತಿರುವಂತೆ ಬಾಲ ಯೇಸುವನ್ನು ಕಂಡರಿಸಿದ.

ಇವನ ಬದುಕಿನ ಮಧ್ಯಕಾಲದ ಶಿಲ್ಪಗಳಲ್ಲಿ ಪ್ರಮುಖವಾದುವೆಂದರೆ ನಿದ್ರಿಸುತ್ತಿರುವ ಮಹಿಳೆ, ಮನ್ಮಥ (ಕ್ಯುಪಿಡ್), ಬ್ಯಾಕಸ್, ಮೋಸಸ್, ಡೇವಿಡ್ ಮುಂತಾದವು. ಇವುಗಳಲ್ಲಿ ಮೋಸೆಸ್‌ನ ಶಿಲ್ಪ ಅದ್ಭುತವಾಗಿದೆ. ರೋಮ್ ನಗರದ ಸಂತಪೀಟರ್ ಮಂದಿರದಲ್ಲಿ ಆಸೀನ ಭಂಗಿಯಲ್ಲಿರುವ ಈ ಮೂರ್ತಿ ಸು.2.40 ಮೀ ಎತ್ತರವಿದೆ. ಪೀಠದ ಮೇಲೆ ಮುಖ ತಿರುವಿ ಕುಳಿತ ತುಂಬುದೇಹ, ನಾಭಿಯತನಕ ಇಳಿದುಬಂದ ಗಡ್ಡಮೀಸೆಗಳಿಂದ ಅಲಂಕೃತವಾದ ಗಂಭೀರ ಮುಖಭಾವ, ಮುಪ್ಪಡರಿದ್ದರೂ ಸತ್ವಯುತ ಭಂಗಿ, ತೀಕ್ಷ್ಣ ನೋಟದ ಕ್ರೋಧಭಾವ – ಇವುಗಳಿಂದ ಈ ಶಿಲ್ಪ ಇವನ ಶಿಲ್ಪಗಳಲ್ಲೇ ವಿಶಿಷ್ಟವಾದುದಾಗಿದೆ. ಬೆಲ್ಜಿಯಂನ ವರ್ತಕರಿಗಾಗಿ ನಿರ್ಮಿಸಿದ 4.50ಮೀ ಎತ್ತರದ ಡೇವಿಡ್ ಶಿಲ್ಪದಲ್ಲಿ ಮೈಕೆಲನ ಜೀವನದರ್ಶನ, ಕಲಾನೈಪುಣ್ಯ, ರಸಪ್ರಜ್ಞೆ ಮತ್ತು ತಾಂತ್ರಿಕತೆಗಳು ಪರಿಪಕ್ವವಾಗಿ ನಿರೂಪಿತವಾಗಿವೆಯೆಂದು ಭಾವಿಸಲಾಗಿದೆ. ಯುರೋಪಿನ ಶಿಲ್ಪಕಲೆಯಲ್ಲಿ ಇದೊಂದು ಅದ್ವಿತೀಯ ನಿರ್ಮಾಣವೆಂದರೆ ಅತಿಶಯೋಕ್ತಿಯಲ್ಲ. ದೈತ್ಯ ಗಾಲಿಯಥನನ್ನು ಮರ್ದನ ಮಾಡಿದ ಅಸಮ ಸಾಹಸಿ ಡೇವಿಡ್‌ನ ಅಂತಸ್ಸತ್ವ, ಧೀರೋದಾತ್ತ ಸಹಜ ನಿಲುವು, ಆಂತರಿಕ ತುಮುಲದ ಭಾವಾಭಿವ್ಯಕ್ತಿ–ಇವು ಈ ಶಿಲ್ಪದಲ್ಲಿ ಜೀವಂತವಾಗಿವೆ.

ಮೈಕೆಲನ ಪರಿಪಕ್ವತೆಯ ಪ್ರತೀಕವಾಗಿರುವ, ಅಂತೆಯೇ ಬಹಳಷ್ಟು ವಿಮರ್ಶೆ–ಚರ್ಚೆಗಳ ವಸ್ತುವಾಗಿರುವ ಕೃತಿ ಪಿಯೆಟಾ (ಕರುಣಾಮೂರ್ತಿ). ಈ ಶಿಲ್ಪ ಇವನನ್ನು ಪ್ರಪಂಚದ ಒಬ್ಬ ಪ್ರಮುಖ ಕಲಾಚಾರ್ಯನನ್ನಾಗಿ ಮಾಡಿದೆ. ಇದೊಂದು ವಿಶಿಷ್ಟ ಕೃತಿಯಾಗಿದೆ. ಅಮೃತಶಿಲೆಯಲ್ಲಿ ಕಡೆದ ಈ ಕೃತಿಯಲ್ಲಿ ಶಿಲುಬೆಯಿಂದ ಇಳಿಸಿದ ಮೃತ ಮಗನನ್ನು ತೊಡೆಗಳ ಮೇಲೆ ಇಟ್ಟುಕೊಂಡಿರುವ ಮೇರಿ ತಾರುಣ್ಯದ ಚೆಲುವನ್ನು ಪ್ರತಿಬಿಂಬಿಸುತ್ತಾಳೆ. ಯೇಸುವಿನಮುಖದಲ್ಲಿ ಜೀವಂತವಾಗಿ ನಿದ್ರಿಸುತ್ತಿರುವ ಕಳೆಯಿದೆ. ಮಗನಿಗಿಂತಲೂ ತಾಯಿಯೇ ಚಿಕ್ಕ ವಯಸ್ಸಿನವಳೇನೋ ಎಂಬ ಭಾವನೆಯುಂಟಾಗುವಂತೆ ಮೇರಿಯ ಚೆಲುವು ಕಂಡರಣೆಗೊಂಡಿದೆ. ಈ ಅಂಶ ಶಿಲ್ಪದ ನ್ಯೂನತೆಯೆಂದೇ ಹೇಳಬಹುದಾದರೂ ಅದರ ಉತ್ಕೃಷ್ಟ ಕಲಾತ್ಮಕತೆ ಮತ್ತು ವಿನ್ಯಾಸ ಈ ಲೋಪವನ್ನು ಮುಚ್ಚಿಹಾಕುವುದೆಂದು ಹಲವು ವಿಮರ್ಶಕರ ಅಭಿಪ್ರಾಯ. ತಾಯಿ ತನ್ನ ಮಗುವಿನ ಸಾವಿಗಾಗಿ ಪಡುತ್ತಿರುವ ದುಃಖ, ಅನುಕಂಪ ಹೃದಯಂಗಮವಾಗಿ ಇಲ್ಲಿ ರೂಪಿತವಾಗಿದೆ. ಇವಲ್ಲದೆ ಈತನ ಹಲವಾರು ಸ್ಮಾರಕ ಶಿಲ್ಪಗಳು ಚರ್ಚುಗಳಲ್ಲಿ ಮತ್ತು ಇನ್ನಿತರ ಪ್ರಮುಖ ಸ್ಥಳಗಳಲ್ಲಿದ್ದು ಇವನ ಕಲಾ ಪ್ರೌಢಿಮೆಯನ್ನು ಸೂಸುತ್ತವೆ. ಇವುಗಳಲ್ಲಿ ಮುಖ್ಯವಾಗಿ ಲೊರೆನ್ಜೊ ಡ ಮೆಡಿಸಿ ಮತ್ತು ಗ್ವಿಲಿಯಾನೋ ಶಿಲ್ಪಗಳನ್ನು ಹೆಸರಿಸಬಹುದಾಗಿದೆ.

ಮೈಕೆಲೆಂಜೆಲೋ ಮಹಾನ್ ಶಿಲ್ಪಿಯಾಗಿದ್ದಂತೆ ಮಹಾನ್ ಚಿತ್ರಕಾರನೂ ಆಗಿದ್ದ. ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಇಲ್ಲದಿದ್ದರೂ ಸಿಸ್ಟೈನ್ ಚಾವಣಿಯ ಒಳಭಾಗವನ್ನು ಹಲವು ಅಂಕಣಗಳನ್ನಾಗಿ ವಿಭಜಿಸಿ, ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ ವಸ್ತುಗಳನ್ನು ಆಯ್ದುಕೊಂಡು

ವೈವಿಧ್ಯಮಯ ವರ್ಣಚಿತ್ರಗಳನ್ನು ರಚಿಸಿದ. ಇವನ ಚಿತ್ರಗಳು ಮೂರು ಆಯಾಮ (ತ್ರೀ ಡೈಮೆನ್‍ಷನ್) ಭಾವನೆಯನ್ನು ಉಂಟುಮಾಡುತ್ತಿದ್ದು ಶಿಲ್ಪಗಳೇನೋ ಎಂಬ ಭ್ರಮೆಯನ್ನು ಮೂಡಿಸುತ್ತವೆಂದು ಪ್ರಶಂಸಿಸಲಾಗಿದೆ. ಇಟಲಿಯ ರೋಮ್ ನಗರದ ವ್ಯಾಟ್‍ನಲ್ಲಿರುವ ಸಿಸ್ಟೈನ್ ಮಂದಿರದ ಚಾವಣಿಯಲ್ಲಿ ಚಿತ್ರಿಸಿರುವ ಚಿತ್ರಗಳಲ್ಲಿ ಈ ಗುಣವನ್ನು ಕಾಣಬಹುದು. ಶಕ್ತಿಪೂರ್ಣವಾದರೂ ಮುಗ್ಧನಂತಿರುವ ಹಾರುತ್ತಿರುವ ದೇವರು ತನ್ನೊಂದು ಬೆರಳಿನಿಂದ ಸ್ಪರ್ಶಿಸುವ ಮೂಲಕ ಆತ ರಕ್ಷಣೆಯನ್ನು ಸೂಚಿಸುತ್ತಿದ್ದಾನೆ. ಮುಂದಿನ ಚಿತ್ರದಲ್ಲಿ ಅದೇ ದೇವ ಆದಮನನ್ನು ಮೋಹಜಾಲಕ್ಕೆ ಸಿಕ್ಕಿಸುವ ಈವಳನ್ನು ಮತ್ತೊಂದು ಕೈಬೆರಳಿನಿಂದ ಸ್ಪರ್ಶಿಸುತ್ತ, ಅವರಿಬ್ಬರ ಮುಂದಣ ಸಂಬಂಧವನ್ನು ಸೂಚಿಸಿದ್ದಾನೆ. ದೇವರನ್ನು ನೋಡುತ್ತಿರುವ ಆದಮನ ದೃಷ್ಟಿ ಚಲಿಸಿ ಹರಿದು ಈವ್‍ಳತ್ತ ಕೇಂದ್ರೀಕೃತವಾಗಿದೆ. ಮತ್ತೊಂದು ಚೌಕಟ್ಟಿನಲ್ಲಿ ಈಡನ್ ತೋಟದಲ್ಲಿ ಆದಮ್ ಮತ್ತು ಈವ್ ಇವರಿಬ್ಬರ ಸಂಗಮದ ಚಿತ್ರವಿದೆ. ಈ ಎರಡು ಚಿತ್ರಗಳ ಮಧ್ಯೆ ವೃಕ್ಷವೊಂದು ಇದ್ದು ಚಿತ್ರಗಳನ್ನು ಬೇರ್ಪಡಿಸುತ್ತದೆ. ಈ ಚಿತ್ರಗಳಲ್ಲಿ ಮಾನವ ಅಂಗವಿನ್ಯಾಸ, ಕಾರ್ಯಗಳನ್ನು ಮನೋಜ್ಞವಾಗಿ ನಿರೂಪಿಸಲಾಗಿದೆ.

ಡೇವಿಡ್ ಶಿಲ್ಪ

ಇವನ ಚಿತ್ರಗಳಲ್ಲಿ ಪ್ರಪಂಚಖ್ಯಾತವಾದ ಮತ್ತೊಂದು ಚಿತ್ರ– ಅಂತಿಮ ತೀರ್ಪು (ಲಾಸ್ಟ್ ಜಡ್ಜ್‍ಮೆಂಟ್, 1534–41). ಪೋಪ್ ಜೂಲಿಯಸ್‍ನ ಅನಂತರ ಗದ್ದುಗೆಯನ್ನೇರಿದ 3ನೆಯ ಪೋಪ್ ಪಾಲನ ಆದೇಶದಂತೆ ರಚಿಸಿದ ಹಲವು ಚಿತ್ರಗಳಲ್ಲಿ – ಸಂತಪೀಟರನ ಉತ್ತಮಣ, ಸಂತಪಾಲನ ಮನಃಪರಿವರ್ತನೆ, ಹಗಲುರಾತ್ರಿಗಳು, ಸೂರ್ಯಚಂದ್ರ ನಕ್ಷತ್ರಗಳು, ಪ್ರಳಯ ಮುಂತಾದ ಸೃಷ್ಟಿ ನಿರೂಪಣಾ ಚಿತ್ರಗಳ ನಡುವೆ ಈ ಅಂತಿಮ ತೀರ್ಪು ಅಮೋಘವಾದುದೇ. ಮಾನವತೆಯ ಕೃತಕೃತ್ಯತೆಯನ್ನು ಈ ಚಿತ್ರ ಭಾವನಾತ್ಮಕವಾಗಿ ನಿರೂಪಿಸುತ್ತದೆ. ತನ್ನ ಇಳಿವಯಸ್ಸಿನಲ್ಲಿ ರೂಪಿಸಿದ ಈ ಚಿತ್ರ ಸಮೂಹ ಮೈಕೆಲನ ಜೀವನ ದೃಷ್ಟಿಯನ್ನೂ ಆಧ್ಯಾತ್ಮಿಕ ಪರಿಪಕ್ವತೆಯನ್ನೂ ಪ್ರತಿಬಿಂಬಿಸುತ್ತದೆಯೆಂದು ಹೇಳಲಾಗಿದೆ.

ಮೈಕೆಲೆಂಜೆಲೋನ ವಾಸ್ತು ವಿನ್ಯಾಸಗಳು ಸಹ ಗಮನಾರ್ಹ ಕೊಡುಗೆಗಳು. ರೋಮ್ ನಗರದ ಸಂತಪೀಟರನ ಮಂದಿರದ ವಿನ್ಯಾಸವನ್ನು ಮೊದಲಿಗೆ ಬ್ರಮಾಂಟೆ ರಾಫೆಲ್ ಮುಂತಾದವರು ರೂಪಿಸಿದ್ದರೂ 3ನೆಯ ಪೋಪ್ ಪಾಲನ (1534–49) ಆದೇಶದಂತೆ ಈತನ ಉಸ್ತುವಾರಿಗೆ ವಹಿಸಲಾಯಿತು. 1546ರಿಂದ ತನ್ನ ಮರಣದವರೆಗೂ (1584) ಆ ಕಾರ್ಯನಿರ್ವಹಿಸಿದ ಈತ ಮೂಲ ವಿನ್ಯಾಸದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿದ. ನಿರ್ಮಾಣ ಕಾರ್ಯ ಮುಗಿಯುವ ಮೊದಲೇ ತೀರಿಕೊಂಡಿದ್ದರಿಂದ ಮುಂದೆ ಅದರ ನಕಾಶೆಯಲ್ಲಿ ಕೆಲ ಬದಲಾವಣೆಗಳು ಆದರೂ ಮೈಕೆಲನ ವಾಸ್ತು ವೈಶಿಷ್ಟ್ಯವನ್ನು ಈ ಕಟ್ಟಡದಲ್ಲಿ ಕಾಣಬಹುದಾಗಿದೆ. ಮೈಕೆಲನ ಮತ್ತೊಂದು ವಾಸ್ತು ವಿನ್ಯಾಸವೆಂದರೆ ಉನ್ನತ ಬೌದ್ಧಿಕ ಕ್ರಾಂತಿಯುಗದ ಪ್ರತೀಕಗಳಾದ ಅರಮನೆ ವಿನ್ಯಾಸಗಳು. ಇವುಗಳಲ್ಲಿ ಪ್ರಮುಖವಾದುವೆಂದರೆ ರೋಮ್ ನಗರದಲ್ಲಿರುವ ಫಾರ್ನೆಸಿ ಭವನ. ಆ ಕಟ್ಟಡದ ಮೊದಲ ವಿನ್ಯಾಸಕಾರ ಆಂಟೋನಿಯೊ ಡ ಸಂಗಲ್ಲೊ; ಸುಧಾರಣೆಗೊಳಿಸಿದವನು ಈತ. ವಿಶಾಲ ಪ್ರಾಂಗಣದಲ್ಲಿ ನಡುವೆ ನಿಂತ ಆಯಾಕಾರದ ಬಹು ಅಂತಸ್ತಿನ ಕಮಾನುಗೂಡುಗಳನ್ನೊಳಗೊಂಡ ಭವನದ ಹೊರಭಾಗ ಶ್ರೀಮಂತಿಕೆಯನ್ನು ಸೂಸುವ ಭವ್ಯ ನಿರ್ಮಾಣವಾಗಿದೆ. ಅದರ ವಾತಾಯನಗಳು ಭಿತ್ತಿಯಲ್ಲಿ ಅಡಕವಾಗಿರದೆ ಮುಂಚಾಚಿದ್ದು, ವಾತಾಯನಗಳ ಮೇಲಿನ ಸೂರುಗಳು ಕಲಾತ್ಮಕವಾಗಿದ್ದು 16ನೆಯ ಶತಮಾನದ ಬರೋಕ್ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ಭಿತ್ತಿಯ ಪ್ರತಿ ಅಂಕಣ ಪ್ರತ್ಯೇಕ ಅಂಗದಂತೆ ಗೋಚರಿಸುತ್ತದೆ. ಒಟ್ಟಿನಲ್ಲಿ ಈ ನಿರ್ಮಾಣಗಳಲ್ಲಿ ವೈವಿಧ್ಯತೆ ಮತ್ತು ಭವ್ಯತೆಗಳು ಎದ್ದು ಕಾಣುವಂತಿದ್ದು ವಾಸ್ತು ಶಿಲ್ಪಿಯ ಪ್ರೌಢಿಮೆಗೆ ಸಾಕ್ಷಿಯಾಗಿದೆ.

ಇವನ ಕಲಾಕೃತಿಗಳು ಅಭೂತಪೂರ್ವವಾಗಿರುವಂತೆಯೇ ಇವನ ಜೀವನ ದೃಷ್ಟಿ ಡಾಂಟೆಯಂಥ ಕವಿ, ಪ್ಲೇಟೋನಂಥ ದಾರ್ಶನಿಕರ ವಾಙ್ಮಯಗಳಿಂದ ದೀಪ್ತವಾಗಿತ್ತು. ಪರಂಪರಾಗತ ಶಾಸ್ತ್ರೀಯ ಅಧ್ಯಯನದೊಂದಿಗೆ ಆಧುನಿಕತೆಯೂ ಸಮ್ಮಿಶ್ರವಾಗಿ ಇವನ ಕೃತಿಗಳು ವೈಶಿಷ್ಟ್ಯ ಪಡೆದಿದೆ. ಇವನಿಗೆ ಶರೀರಶಾಸ್ತ್ರದಲ್ಲಿದ್ದ ಅಗಾಧ ಜ್ಞಾನದಿಂದಾಗಿ ಪ್ರಮಾಣಬದ್ಧ ಪ್ರಾಣಿ, ಪಕ್ಷಿ ಮತ್ತು ಮಾನವ ದೇಹ ನಿರೂಪಣೆಯನ್ನು ಮಾಡಲು ಸಾಧ್ಯವಾಯಿತು. ಈತ ತನ್ನ ಹಿಂದಿನ ಮತ್ತು ಸಮಕಾಲೀನ ಕಲಾವಿದರ ಕೃತಿಗಳನ್ನು ಮಾದರಿಯನ್ನಾಗಿ ಆಯ್ದುಕೊಂಡರೂ ನಿರೂಪಣೆಯಲ್ಲಿ ಸ್ವಂತಿಕೆಯನ್ನೂ ಹೊಸತನ್ನೂ ಸಾಧಿಸುವುದರಲ್ಲಿ ಸಿದ್ಧಹಸ್ತನೆನಿಸಿದ್ದ ಇವನ ಜೀವಿತಾವಧಿಯಲ್ಲೇ ಇವನ ಬಗ್ಗೆ ಬರೆದ ವಿಮರ್ಶಕ ವಸಾರಿ ಇವನ ಸರಳ ಜೀವನವನ್ನೂ ಕಾರ್ಯನಿಷ್ಠೆಯನ್ನೂ ಮುಕ್ತವಾಗಿ ಪ್ರಶಂಸಿಸಿದ್ದಾನೆ. (ಬಿ.ಕೆ.ಜಿ.)

**ಮೈಕೆಲ್ ಹ್ಯೂಸನ್, ಕ್ರಾಫರ್ಡ್:** 1939– . ಪ್ರಾಚೀನ ಇತಿಹಾಸದ ವಿದ್ವಾಂಸ ಮತ್ತು ನಾಣ್ಯಶಾಸ್ತ್ರಜ್ಞ. 1939 ಡಿಸೆಂಬರ್ 7 ರಂದು ಟ್ವಿಕನ್‍ಹಾಮ್‍ನಲ್ಲಿ ಜನಿಸಿದ. ಆಕ್ಸ್‍ಫರ್ಡ್‍ನ ಸೇಂಟ್ ಪಾಲ್ ಶಾಲೆ ಮತ್ತು ಒರಿಯಲ್ ಕಾಲೇಜಿನಲ್ಲಿ ಮತ್ತು ರೋಮ್‍ನ ಬ್ರಿಟಿಷ್ ಸ್ಕೂಲ್‍ನಲ್ಲಿ ವಿದ್ಯಾಭ್ಯಾಸ ನಡೆಸಿದ. 1964–65ರಲ್ಲಿ ಪ್ರಿನ್ಸ್‍ಟನ್ ವಿಶ್ವವಿದ್ಯಾಲಯದಲ್ಲಿ ಎಲಿಜ಼ ಪ್ರೊಕ್ಟರ್ ಸಂದರ್ಶಕ ಫೆಲೋ ಆಗಿದ್ದರು. 1969–86ರ ವರೆಗೆ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಇತಿಹಾಸ ಪ್ರಾಧ್ಯಾಪಕನಾಗಿದ್ದ. ನಿವೃತ್ತಿಯ ಅನಂತರ ಅದೇ ವಿಶ್ವವಿದ್ಯಾಲಯದಲ್ಲಿ ವಿಶ್ರಾಂತ ಪ್ರಾಧ್ಯಾಪಕನಾಗಿ ಬೋಧಿಸಿದ (1986–2005). ಪವಿಯ, ಪದುವ, ಮಿರಾನ್ ಮುಂತಾದ 7 ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸಿದ. 1980 ರಲ್ಲಿ ಬ್ರಿಟಿಷ್ ಅಕಾಡೆಮಿಯ ಫೆಲೋ ಆಗಿದ್ದ. ಈತ ಇತಿಹಾಸ ಮತ್ತು ನಾಣ್ಯಗಳ ವಿಷಯವಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. (ಎ.ಎಸ್.;ಎನ್.ಎಲ್.)

**ಮೈತ್ರಕ:** 5–8ನೆಯ ಶತಮಾನದ ತನಕ ಪಶ್ಚಿಮ ಮಾಳವ ಮತ್ತು ಸೌರಾಷ್ಟ್ರ ಪ್ರದೇಶವನ್ನು ಆಳಿದ ಒಂದು ರಾಜವಂಶ. ಹೂಣರ ಧಾಳಿಗಳಿಂದ ಗುಪ್ತ ಸಾಮ್ರಾಜ್ಯ ಅಳಿದ ಮೇಲೆ ಉತ್ತರಭಾರತದಲ್ಲಿ ಹುಟ್ಟಿಕೊಂಡ ಹಲವು ರಾಜ್ಯಗಳಲ್ಲಿ ಮೈತ್ರಕರಾಜ್ಯವೂ ಒಂದು. ಭಟ್ಟಾರಕ ಈ ವಂಶದ ಮೂಲ ಪುರುಷ. ವಲ್ಲಭಿ ಈ ರಾಜ್ಯದ ರಾಜಧಾನಿ. ಗುಪ್ತ ಅಥವಾ ಗುಪ್ತವಲ್ಲಭಿ ಶಕೆಗಳಲ್ಲಿ ಕಾಲಸೂಚಿತವಾಗಿರುವ ಅನೇಕ ಮೈತ್ರಕಶಾಸನಗಳು ಲಭ್ಯವಾಗಿದ್ದರೂ ಅವುಗಳಲ್ಲಿ ಸಾಕಷ್ಟು ಚಾರಿತ್ರಿಕ ಮಾಹಿತಿಗಳು ಇಲ್ಲ. ಈ ವಂಶದ ಪ್ರಾಚೀನತಮ ದಾಖಲೆ ಎಂದರೆ ಮಹಾರಾಜ ದ್ರೋಣಸಿಂಹ ಹೊರಡಿಸಿದ ದಾನಶಾಸನ. ಭಟ್ಟಾರಕನ ಕಾಲ 465 ಮತ್ತು 475ರ ನಡುವೆ ಎಂದು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ.

ಭಟ್ಟಾರಕ ಮತ್ತು ಆತನ ಮಗ ಒಂದನೆಯ ಧರಸೇನ ತಮ್ಮನ್ನು ಸೇನಾಪತಿ ಎಂದು ಕರೆದುಕೊಂಡರು. ಆದ್ದರಿಂದ ಇವರು ಗುಪ್ತರ ಪ್ರತಿನಿಧಿಗಳಾಗಿ ಆಡಳಿತ ನಡೆಸಿದ್ದಿರಬಹುದೆಂದು ತಿಳಿಯಬಹುದು. ಭಟ್ಟಾರಕನ ಎರಡನೆಯ ಮಗ ದ್ರೋಣ ಸಿಂಹ ಮಹಾರಾಜ ಎನ್ನುವ ಬಿರುದು ಧರಿಸಿದ. ಈತನ ಪಟ್ಟಾಭಿಷೇಕವನ್ನು ಗುಪ್ತಸಾಮ್ರಾಟ ಬುಧಗುಪ್ತನೇ (467–95) ನೆರವೇರಿಸಿರಬೇಕು. ಆದರೂ ಇವರಿಬ್ಬರ ನಡುವಣ ಸಂಬಂಧ ಸ್ವಾಮಿ–ಭೃತ್ಯಸ್ವರೂಪದ್ದಾಗಿತ್ತೆಂದು ತಿಳಿದುಬರುವುದು. ದ್ರೋಣಸಿಂಹನ ತರುವಾಯ ಅಧಿಕಾರಕ್ಕೆ ಬಂದ ಇವನ ತಮ್ಮ ಮಹಾರಾಜ ಧ್ರುವಸೇನ ಸ್ವತಂತ್ರರಾಜನೆಂಬಂತೆ ಭೂದಾನ ನೀಡಿದರೂ ಗುಪ್ತ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದನೆಂಬುದಕ್ಕೆ ದಾಖಲೆಗಳಿವೆ. ದ್ರೋಣಸಿಂಹನ ತರುವಾಯ ಪಟ್ಟಕ್ಕೆ ಬಂದ 1ನೆಯ ಧ್ರುವಸೇನನನ್ನು (525–45) ಶಾಸನಗಳಲ್ಲಿ ಪರಮಭಟ್ಟಾರಕಪಾದಾನುಧ್ಯಾತ ಎಂದು ವರ್ಣಿಸಲಾಗಿದೆ. ಈತನ ತಮ್ಮ ಮಹಾರಾಜ ಧರಾಪಟ್ಟ. ಧರಾಪಟ್ಟನ ಮಗ ಗುಹಸೇನ (556–76) ಸಿಂಹಾಸನವೇರಿದನು. ಗುಹಸೇನನ ತರುವಾಯ ಅವನ ಮಗ 2ನೆಯ ಧರಾಸೇನ (571–90) ಹಾಗೂ ಮೊಮ್ಮಗ 1ನೆಯ ಶಿಲಾದಿತ್ಯ ಧರ್ಮಾದಿತ್ಯ (606–12) ಅರಸರಾದರು. 2ನೆಯ ಧರಾಸೇನ ಮಹಾರಾಜಾಧಿರಾಜ ಎಂಬ ಬಿರುದನ್ನು ಧರಿಸಿದ. ಈತನ ಕಾಲದಲ್ಲಿ ರಾಜ್ಯ ವಿಸ್ತರಣೆ ಯಾಯಿತು. ಗಾರುಲಕ ವಂಶದ ಅಧಿಪರು ಮೈತ್ರಕರ ಸಾಮಂತರಾಗಿದ್ದರು.

640ರಲ್ಲಿ ವಲ್ಲಭಿಯ ಅರಸನಾಗಿದ್ದವನು 2ನೆಯ ಧ್ರುವಸೇನ. ಈತ ಶಿಲಾದಿತ್ಯನ ಸೋದರನ ಮಗ. 6ನೆಯ ಶತಮಾನದ ಅಂತ್ಯ ಹಾಗೂ 7ನೆಯ ಶತಮಾನದ ಆದಿ ಕಾಲದಲ್ಲಿ ಪಶ್ಚಿಮಭಾರತದಲ್ಲಿ ಮೈತ್ರಕ ರಾಜ್ಯ ಅತ್ಯಂತ ಪ್ರಭಾವಶಾಲಿಯಾಗಿತ್ತೆಂದು ತಿಳಿದುಬರುವುದು.

1ನೆಯ ಶಿಲಾದಿತ್ಯನ ತರುವಾಯ ಆತನ ತಮ್ಮ ಖರಗ್ರಹ (616)ಹಾಗೂ ಖರಗ್ರಹನ ಮಗ 2ನೆಯ ಧರಾಸೇನ (623) ಅರಸರಾದರು. ಆದರೆ ಇವರ ಬಗೆಗೆ ಹೆಚ್ಚಿನ ವಿಷಯವೇನೂ ತಿಳಿದುಬರುವುದಿಲ್ಲ. ತರುವಾಯ ಅಧಿಕಾರಕ್ಕೆ ಬಂದ 2ನೆಯ ಧ್ರುವಸೇನ ಶಿಲಾದಿತ್ಯ 629ರ ಸುಮಾರಿಗೆ ಆಳಿಕೆಯನ್ನು ಆರಂಭಿಸಿದ. ಈತನ ಕಾಲದಲ್ಲಿ ಯುವಾನ್‍ಚಾಂಗ್ ಭಾರತಕ್ಕೆ ಬಂದಿದ್ದು ಶಿಲಾದಿತ್ಯ ಬೌದ್ಧಾಲಯವನ್ನು ನಿರ್ಮಿಸಿದ ಸಂಗತಿಯನ್ನು ತಿಳಿಸುತ್ತಾನೆ. ಸು. 640–41ರತನಕ ಈತ ರಾಜ್ಯವನ್ನಾಳಿದನೆಂದು ತೋರುತ್ತದೆ.

ಅನಂತರ ಅರಸನಾದ 4ನೆಯ ಧರಸೇನ (644–55) ಚಕ್ರವರ್ತಿ ಮುಂತಾದ ಸಾರ್ವಭೌಮ ಬಿರುದುಗಳನ್ನು ಪ್ರಥಮವಾಗಿ ಧರಿಸಿದ. ಈತ ಗೂರ್ಜರ ರಾಜ್ಯದ ಕೆಲವು ಪ್ರದೇಶಗಳನ್ನು ಜಯಿಸಿದ. ಮಹಾಕವಿ ಭಟ್ಟಿ ಈತನ ಆಸ್ಥಾನದಲ್ಲಿದ್ದ. 4ನೆಯ ಧರಸೇನನ ತರುವಾಯ ಸ್ವಲ್ಪ ಗೊಂದಲಮಯ ಪರಿಸ್ಥಿತಿ ಇತ್ತು. 3ನೆಯ ಶಿಲಾದಿತ್ಯ (662–84) ಅತ್ಯಂತ ಸಮರ್ಥನೂ ಪ್ರಭಾವಶಾಲಿಯೂ ಆಗಿದ್ದ ಅರಸ. ಈತ ಗೂರ್ಜರ ಪ್ರದೇಶವನ್ನು ಗೆದ್ದ. ಚಾಳುಕ್ಯ, ರಾಷ್ಟ್ರಕೂಟ ಶಾಸನಗಳು ಉಲ್ಲೇಖಿಸುವ ವಜ್ರಟ ಈತನೇ ಇರಬಹುದೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. 7ನೆಯ ಶಿಲಾದಿತ್ಯ ಮೈತ್ರಕ ವಂಶದ ಕೊನೆಯ ಅರಸ. 766–67ರಲ್ಲಿ ಈತ ರಾಜ್ಯವಾಳುತ್ತಿದ್ದ.

ದಿವಿರಪತಿ, ಮಹಾಸಂಧಿವಿಗ್ರಹಿ ಅಕ್ಷಪಟಲಾಧಿಪತಿ, ಪ್ರಮಾತೃ, ಆಯುಕ್ತಕ, ಕುಮಾರಮಾತ್ಯ, ದ್ರಾಂಗಿಕ, ಧ್ರುವಾಧಿಕರಣಿಕ, ಚೌರೋದ್ಧರಣಿಕ, ದಂಡಪಾಶಿಕ, ರಾಜಾಸ್ಥಾನೀಯ. ಅನುತ್ಪನ್ನ ಸಮುದ್ಗ್ರಾಹಕ ಮುಂತಾದ ಹಲವು ಅಧಿಕಾರಿಗಳನ್ನು ಮೈತ್ರಕ ಶಾಸನಗಳು ಹೆಸರಿಸುತ್ತವೆ. ಅರಬ್ ಧಾಳಿಕಾರರಿಂದ ಈ ವಂಶದ ಆಳಿಕೆ ಅಂತ್ಯಗೊಂಡಿತೆಂದು ಕೆಲವು ವಿದ್ವಾಂಸರೂ ಮತ್ತೆ ಕೆಲವರು ಪ್ರತೀಹಾರರಿಂದ ಕೊನೆಗೊಂಡಿತೆಂದೂ ಹೇಳುತ್ತಾರೆ. ಒಟ್ಟಿನಲ್ಲಿ 767–83ರ ನಡುವಣ ಕಾಲದಲ್ಲಿ ಇವರ ಆಳಿಕೆ ಕೊನೆಗೊಂಡಿತು. (ಎಚ್.ಎಂ.ಎನ್.ಆರ್.)

**ಮೈಸೂರು ಒಡೆಯರು:** 15ನೆಯ ಶತಮಾನದ ಆದಿಭಾಗದಲ್ಲಿ ಮೈಸೂರು ಜಿಲ್ಲೆಯ ಕೆಲವು ಭಾಗಗಳನ್ನು ಒಳಗೊಂಡಿದ್ದ ಚಿಕ್ಕ ಪಾಳೆಯಪಟ್ಟಿನಲ್ಲಿ ಅಧಿಕಾರ ಸ್ಥಾಪಿಸಿ ರಕ್ಕಸಗಿ–ತಂಗಡಗಿ ಯುದ್ಧದ ತರುವಾಯ ವಿಜಯನಗರ ಸಾಮ್ರಾಜ್ಯ ಶಿಥಿಲವಾಗುತ್ತಿದ್ದ ಕಾಲದಲ್ಲಿ ಕೆಲಕಾಲ ಸಾಮಂತರಾಗಿ ಅನಂತರ ಸ್ವತಂತ್ರರಾಗಿ ದಕ್ಷಿಣ ಕರ್ನಾಟಕದ ಹಲವು ಭಾಗಗಳನ್ನು ಆಕ್ರಮಿಸಿಕೊಂಡು ಮುಂದೆ ತಮ್ಮ ಪ್ರಭಾವವನ್ನು ಸುತ್ತಣ ಪ್ರದೇಶಗಳಿಗೂ ವಿಸ್ತರಿಸಿ 18ನೆಯ ಶತಮಾನದ ಉತ್ತರಾರ್ಧದಲ್ಲಿ ಕೆಲಕಾಲ ಲುಪ್ತವಾಗಿದ್ದ ಅಧಿಕಾರವನ್ನು ಮತ್ತೆ ಬ್ರಿಟಿಷರ ಸಹಾಯದಿಂದ ಪಡೆದು, ಅವರ ಅಧೀನತ್ವದಲ್ಲಿ ಈ ರಾಜ್ಯ ಭಾರತ ಒಕ್ಕೂಟದಲ್ಲಿ ಸೇರಿಹೋಗುವ ತನಕ (1948) ಆಳಿದ ರಾಜಮನೆತನ. ವಿಜಯನಗರ ಸಾಮ್ರಾಜ್ಯ ನಶಿಸಿದ ಮೇಲೆ ಆ ರಾಜ್ಯ ಬಿತ್ತಿಬೆಳೆಸಿದ ಹಲವು ಧ್ಯೇಯ ಮತ್ತು ಸಂಪ್ರದಾಯಗಳನ್ನು ಮುಂದುವರಿಸಿದ ಕೀರ್ತಿ ಈ ವಂಶದ್ದು. ಈ ದೃಷ್ಟಿಯಲ್ಲಿ ಮೈಸೂರುಒಡೆಯರ ರಾಜ್ಯ ದಕ್ಷಿಣ ಭಾರತದಲ್ಲಿ ಆಳಿದ ಇತರ ಎಲ್ಲ ವಿಜಯನಗರೋತ್ತರ ರಾಜ್ಯಗಳಿಗೂ ಶಿಖರಪ್ರಾಯವಾಗಿತ್ತು.

**ರಾಜಕೀಯ ಇತಿಹಾಸ:** ಶ್ರೀರಂಗಪಟ್ಟಣ ಮತ್ತು ಮೈಸೂರು ಈ ವಂಶದ ಅರಸರ ರಾಜಧಾನಿಗಳಾಗಿದ್ದವು. ರಾಜಾಧಿರಾಜ, ರಾಜಪರಮೇಶ್ವರ, ಅಪ್ರತಿಮ ವೀರ, ಬಿರುದೆಂತೆಂಬರ ಗಂಡ, ಕರ್ಣಾಟಕ ಸಿಂಹಾಸನಾಧೀಶ್ವರ ಇತ್ಯಾದಿ ಹಲವು ಬಿರುದುಗಳನ್ನು ಈ ವಂಶದ ಅರಸರು ಬಳಸುತ್ತಿದ್ದರು. ದಕ್ಷಿಣ ಕರ್ನಾಟಕದಲ್ಲಿ ದೊರಕುವ ಇವರ ಹಲವಾರು ಶಿಲಾ ಹಾಗೂ ತಾಮ್ರಶಾಸನಗಳು, ಮೈಸೂರು ಅರಮನೆ, ಮೈಸೂರು ಸರ್ಕಾರ, ದೆಹಲಿಯ ರಾಷ್ಟ್ರೀಯ ಪತ್ರಾಗಾರ, ಲಂಡನ್ನಿನ ಇಂಡಿಯ ಹೌಸ್ ಮುಂತಾದೆಡೆ ಗಳಲ್ಲಿರುವ ರಾಜಕೀಯ ದಾಖಲೆ ಪತ್ರಗಳು ಈ ರಾಜವಂಶದ ಇತಿಹಾಸವನ್ನು ರಚಿಸಲು ಮೂಲಾಧಾರಗಳು. ಇವಲ್ಲದೆ ಮೈಸೂರು ದೊರೆಗಳ ವಂಶಾವಳಿ, ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ, ಮೈಸೂರು ನಗರ ಪೂರ್ವೋತ್ತರ, ಮೈಸೂರು ರಾಜರ ಚರಿತ್ರೆ, ಕಳಲೆ ಅರಸುಗಳ ವಂಶಾವಳಿ, ಕಂಠೀರವ ನರಸರಾಜವಿಜಯ, ಚಿಕ್ಕದೇವರಾಯ ವಂಶಾವಳಿ, ಚಿಕ್ಕದೇವರಾಜ ವಿಜಯಂ, ಅಪ್ರತಿಮವೀರಚರಿತ್ರೆ ಮುಂತಾದ ಐತಿಹಾಸಿಕ ಗ್ರಂಥಗಳೂ ಸಹಾಯಕವಾಗಿವೆ.

ಈ ವಂಶದ ಮೊದಲ ಇತಿಹಾಸ ಅಸ್ಪಷ್ಟ. ಇದರ ಸ್ಥಾಪಕನಾದ ಯದುರಾಯ ಸೋದರ ಕೃಷ್ಣರಾಯನೊಡನೆ ದ್ವಾರಕೆಯಿಂದ ಇಲ್ಲಿ ಬಂದು ನೆಲೆಸಿದನೆಂಬ ಐತಿಹ್ಯವಿದೆಯಾದರೂ ಶಾಸನಗಳಲ್ಲಿ ಇದರ ಪ್ರಸ್ತಾಪ ಬರುವುದಿಲ್ಲ. ಆದ್ಯನಾದ ಯದುರಾಯ (ಸು. 1399–1423) ಸುಸಂದರ್ಭವೊದಗಿದಾಗ, ಮೈಸೂರಿನ ಆಗ್ನೇಯದಲ್ಲಿರುವ ಹದಿನಾಡು (ನಂಜನಗೂಡು ತಾಲ್ಲೂಕು ಹದಿನಾರು) ಮತ್ತು ಕಾರುಗಹಳ್ಳಿಗಳ ಪಾಳೆಯಪಟ್ಟಿನ ಆಧಿಪತ್ಯ ಸಾಧಿಸಿಕೊಂಡಿರಬೇಕು. ಈ ಸಂದರ್ಭದಲ್ಲಿ ಜಂಗಮನೊಬ್ಬ ಸಹಕರಿಸಿದನೆಂದೂ ಅವನ ಮೇಲಿನ ಗೌರವದಿಂದ ತಮ್ಮ ಹೆಸರಿನೊಡನೆ ಮೈಸೂರು ಅರಸರು ಒಡೆಯರು ಎಂಬ ಹೆಸರನ್ನು ಸೇರಿಸಿಕೊಳ್ಳುವ ಪರಿಪಾಠ ಬೆಳೆಯಿತೆಂದೂ ಪ್ರತೀತಿ. ಮುಂದಿನ ಅರಸರೆಲ್ಲ ಈ ಒಡೆಯರು ಎಂಬ ಕುಲನಾಮವನ್ನು ಬಳಸಿದರು.

ಯದುರಾಯನ ಅನಂತರ ಚಾಮರಾಜ (1423–59) , ತಿಮ್ಮರಾಜ–I (1459–78), ಹಿರಿಯ ಚಾಮರಾಜ–II (1478–1513), ಹಿರಿಯ ಬೆಟ್ಟದ ಚಾಮರಾಜ–III (1513–53) ಈ ಪುತ್ರ ಪರಂಪರೆಯಲ್ಲಿ ಕ್ರಮವಾಗಿ ಆಳಿದರು. ಮೂರನೆಯ ಚಾಮರಾಜನ ಮಗ ಎರಡನೆಯ ತಿಮ್ಮರಾಜ (1553–72) ಪಾಳೆಯಗಾರರನ್ನು ಗೆದ್ದು ಬಿರುದೆಂತೆಂಬರಗಂಡ ಎಂಬ ಬಿರುದನ್ನು ಪಡೆದುಕೊಂಡ. ಅನಂತರ ಆತನ ಕಿರಿಯ ತಮ್ಮ ಬೋಳ ಚಾಮರಾಜ (1572–76) ಪಟ್ಟಕ್ಕೆ ಬಂದು ವೆಂಕಟಾದ್ರಿನಾಯಕನನ್ನು ಜಯಿಸಿ ಅವನು ಬಳಸುತ್ತಿದ್ದ ಸುಗುಣ ಗಂಭೀರ ಎಂಬ ಬಿರುದನ್ನು ತಾನೇ ಧರಿಸಿದ. ಆತನ ಅಣ್ಣ ಕೃಷ್ಣರಾಜನ ಮಗ ಬೆಟ್ಟದ ದೇವರಾಜ (1576–78) ಕೆಲಕಾಲ ಆಳಿ ವಿರಕ್ತನಾಗಿ ತಮ್ಮನಾದ ರಾಜಒಡೆಯನಿಗೆ ಮೈಸೂರಿನಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿದ.

ಒಡೆಯರ ವಂಶದ ಚರಿತ್ರೆ ಸ್ಪಷ್ಟವಾಗಿ ಪ್ರಾರಂಭವಾಗುವುದು ಈ ಕಾಲದಲ್ಲಿ. ಕೇವಲ 33 ಹಳ್ಳಿಗಳನ್ನು ಹೊಂದಿದ್ದ ಮೈಸೂರು ಪಾಳೆಯಪಟ್ಟನ್ನು ದೊಡ್ಡ ರಾಜ್ಯವಾಗಿ ವಿಸ್ತರಿಸಿದವನು ರಾಜಒಡೆಯರ್ (1578–1617). ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ವಿಜಯನಗರದ ಪ್ರತಿನಿಧಿ ತಿರುಮಲರಾಯನಿಗೂ ವಿಜಯನಗರದ ಅರಸು ವೆಂಕಟನಿಗೂ ವೈಮನಸ್ಯವಿದ್ದ ಸಂದರ್ಭದಲ್ಲಿ ರಾಜ ಒಡೆಯರ್ ತಿರುಮಲನನ್ನು ಅಲಕ್ಷಿಸಿ ಮೈಸೂರಿನಲ್ಲಿ ಕೋಟೆಯನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಪ್ರದೇಶಗಳನ್ನು ಗೆದ್ದುಕೊಂಡ. ಕೊನೆಗೆ ತಿರುಮಲನನ್ನೂ ಎದುರಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಅರಸನಾದ. ವೆಂಕಟನ ಒಪ್ಪಿಗೆ ಪಡೆದು ಸ್ವತಃ ಈ ಭಾಗದಲ್ಲಿ ವಿಜಯನಗರದ ಪ್ರತಿನಿಧಿಯಾದ. ವೆಂಕಟ ಮೈಸೂರಿನ ಸಮೀಪದ ಕೆಲವು ಭಾಗಗಳನ್ನು, ಅನೇಕ ಚಿಕ್ಕಪುಟ್ಟ ಪಾಳೆಯಪಟ್ಟುಗಳನ್ನೆಲ್ಲ ಸದೆಬಡಿದ. ಶ್ರೀರಂಗಪಟ್ಟಣ ಮತ್ತು ಸುಮಾರು ಇಂದಿನ ಇಡೀ ಮೈಸೂರು ಜಿಲ್ಲೆ ಇವನ ವಶಕ್ಕೆ ಬಂದಿತು. ಈ ದಿಗ್ವಿಜಯಗಳ ಸ್ಮರಣಾರ್ಥವಾಗಿ ತನ್ನ ರಾಜಧಾನಿಯನ್ನು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಿ, ನವರಾತ್ರಿ ಆಚರಣೆಯನ್ನು 1610 ರಿಂದ ಆರಂಭಿಸಿದ. ಅನಂತರ ಪಟ್ಟಕ್ಕೆ ಬಂದ ರಾಜಒಡೆಯನ ಮೊಮ್ಮಗ ಚಾಮರಾಜ ಒಡೆಯನ ಕಾಲದಲ್ಲಿ (1617–37) ರಾಜ್ಯವಿಸ್ತರಣೆ ಮುಂದುವರಿದು, ಆತ ತಲಕಾಡು, ಹೊಳೆನರಸೀಪುರ ಮುಂತಾದ ಪಾಳೆಯಪಟ್ಟುಗಳನ್ನು ಮುರಿದುದಲ್ಲದೆ ಹಾಸನ, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳನ್ನೂ ಮೈಸೂರು ರಾಜ್ಯ ಒಳಗೊಳ್ಳುವಂತೆ ಮಾಡಿದ. ಆ ಸಮಯದಲ್ಲಿ ಬಹು ಬಲಿಷ್ಠವಾಗಿದ್ದ ಕೆಳದಿಯ ಅರಸರ ಮೇಲೂ ದಂಡೆತ್ತಿಹೋಗುವ ಮಟ್ಟಿಗೆ ಮೈಸೂರಿನ ಶಕ್ತಿ ಬೆಳೆದಿತ್ತು.

ಅನಂತರದ ದೊರೆ ಇಮ್ಮಡಿ ರಾಜಒಡೆಯರ್ (1637–38). ದಳವಾಯಿ ವಿಕ್ರಮರಾಯನ ಕುತಂತ್ರದಿಂದ ಕೊಲೆಯಾದ ಮೇಲೆ ಪಟ್ಟಕ್ಕೆ ಬಂದ ರಣಧೀರ ಕಂಠೀರವ ನರಸರಾಜ ಒಡೆಯರ್ (1638–59) ಬಹು ಬಲಿಷ್ಠನಾಗಿದ್ದ. ಈತ ಸಾಂಬಳ್ಳಿ, ಕಾವೇರಿ ಪುರ, ದಂಟಳ್ಳಿ, ಸಿಂಗಾನಲ್ಲೂರು, ತುರುವೇಕೆರೆ, ಆನೆಬಾಗೂರು, ತೋಳ್ಯ, ಚಂಗಪ್ಪಾಡಿ, ಮಾರಟಹಳ್ಳಿ, ಹಂಪಾಪುರ. ಪಿರಿಯಾಪಟ್ಟಣ, ಬೆಟ್ಟದಪುರ, ರುದ್ರಪಟ್ಟಣ, ಕಣ್ಣೆಗಾಲ (ಪಿರಿಯಾಪಟ್ಟಣದ ಬಳಿಯ), ಕಿತ್ತೂರು, ನಂಜರಾಜಪಟ್ಟಣ, ಕಲ್ಲೂರು, ಕಡಬ, ಮಾಯಸಮುದ್ರ, ಅರಕಲಗೂಡು, ಬಸವಾಪಟ್ಟಣ, ಹೆಬ್ಬೂರು, ಸೂಳೆಕೆರೆದುರ್ಗ, ಯಲಹಂಕನಾಡು, ಚೆನ್ನಗಿರಿ, ಗನ್ನಿಗ್ರಾಮ, ಮಾದಾಪುರ, ಕತ್ತರಿಘಟ್ಟ, ರತ್ನಗಿರಿ, ವೀರಭದ್ರನದುರ್ಗ, ಡಂಕಣಕೋಟೆ, ಸತ್ಯಮಂಗಲ, ಹೊಸೂರು –ಇವುಗಳನ್ನು ಗೆದ್ದುಕೊಂಡು ಬಿಜಾಪುರದ ರಣದುಲ್ಲಾಖಾನನೊಡನೆ ಹೋರಾಡಿ ಗೆದ್ದ. ಶ್ರೀರಂಗಪಟ್ಟಣ ಮತ್ತು ಮೈಸೂರು ರಾಜ್ಯದ ಸಂಪತ್ತನ್ನೂ ಶಕ್ತಿಯನ್ನೂ ವರ್ಧಿಸಿದ. ಪಶ್ಚಿಮದಲ್ಲಿ ಕೊಡಗಿನವರೆಗೂ ದಕ್ಷಿಣದಲ್ಲಿ ಸತ್ಯಮಂಗಲ ಮತ್ತು ಡಣಾಯಕನ ಕೋಟೆ, ಆಗ್ನೇಯದಲ್ಲಿ ಕಾವೇರಿ ಪಟ್ಟಣದವರೆಗೂ ಈತನ ರಾಜ್ಯ ವಿಸ್ತರಿಸಿತು. ನರಸರಾಜನ ಉತ್ತರಾಧಿಕಾರಿಯಾದ ದೇವರಾಜ ಒಡೆಯರ್ (1659–73) ಬಿಜಾಪುರ ಮತ್ತು ಗೋಲ್ಕೊಂಡದ ಸುಲ್ತಾನರು, ಕೆಳದಿಯ ನಾಯಕರು ಹಾಗೂ ಮಧುರೆಯ ನಾಯಕನ ಮೇಲೆ ಯುದ್ಧಗಳನ್ನು ನಡೆಸಿ ರಾಜ್ಯವನ್ನು ಪೂರ್ವದಲ್ಲಿ ಸೇಲಮ್ ದಕ್ಷಿಣದಲ್ಲಿ ಕೊಯಮತ್ತೂರು ಜಿಲ್ಲೆಯ ಧಾರಾಪುರ, ಉತ್ತರದಲ್ಲಿ ಚಿಕ್ಕನಾಯಕಹಳ್ಳಿಯವರೆಗೂ ವಿಸ್ತರಿಸಿದ.

ಶೂರನೂ ದಕ್ಷನೂ ಆದ ಚಿಕ್ಕದೇವರಾಜ ಒಡೆಯರ್ (1673–1704) ದೇವರಾಜ ಒಡೆಯನ ಹಿರಿಯ ಸೋದರನಾದ ದೊಡ್ಡದೇವರಾಜ ಒಡೆಯನ ಮಗ. ಈತ ಪಟ್ಟಕ್ಕೆ ಬಂದ ತರುವಾಯ ದೇವನಗಿರಿ, ಕೂಡ್ಲಿಗೆರೆ, ಕೊರಟಗೆರೆ, ಕುದೂರು, ವೀರಣ್ಣನ ದುರ್ಗ, ಮಧುಗಿರಿಯ ಕುಂಬಿ, ಹೊಸೂರು, ತುಮಕೂರು, ಕಂದಿಕೆರೆ, ತ್ಯಾಮಗೊಂಡ್ಲು, ಬೆಂಗಳೂರು, ಅವನಿ, ಪೆರೂರು, ಹೊಸಕೋಟೆ, ಮನ್ನಾರಗುಡಿ, ವಾಮಲೂರು, ಧರ್ಮಪುರಿ, ಕಾವೇರಿ ಪಟ್ಟಣ, ಅನಂತಗಿರಿ, ಬಾಗಡಿ, ಹಾರನಹಳ್ಳಿ, ಬಾಣಾವರ, ಕಡೂರು, ಸಕ್ಕರೆಪಟ್ಟಣ, ಬೇಲೂರು, ವಸ್ತಾರೆ, ಚಿಕ್ಕಮಗಳೂರು, ಮಹಾರಾಜನದುರ್ಗ, ಹಾಸನ, ಅರಕಲಗೂಡು, ಐಗೂರು, ಸಕಲೇಶಪುರ, ಕೊಡ್ಲಿಪೇಟೆ, ಶಾದಮಂಗಲ, ನಾಮಕಲ್ಲು ತಮ್ಮಂಬಟ್ಟಿ–ಇವುಗಳನ್ನು ಸಾಧಿಸಿಕೊಂಡು ದಕ್ಷಿಣ ಭಾರತದ ಅಪ್ರತಿಮ ವೀರನಾಗಿ, ಉತ್ತರದಲ್ಲಿ ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಿಂದ ಹಿಡಿದು ದಕ್ಷಿಣದಲ್ಲಿ ಪಳನಿ, ಆನೆಮಲೈವರೆಗೂ ಪಶ್ಚಿಮದಲ್ಲಿ ಕೊಡಗು, ಬೇಲೂರಿನಿಂದ ಹಿಡಿದು ಪೂರ್ವದಲ್ಲಿ ಸೇಲಮ್‌ವರೆಗೂ ಹಬ್ಬಿದ ವಿಶಾಲರಾಜ್ಯಕ್ಕೆ ಅಧಿಪತಿಯಾದ. ಆಡಳಿತವನ್ನು ವ್ಯವಸ್ಥೆಗೊಳಿಸಿದ. ಹೊಸ ಪ್ರದೇಶಗಳನ್ನು ಸಾಗುವಳಿಗೆ ಒಳಪಡಿಸಿ ದೇಶದ ಹಾಗೂ ಕೋಶದ ಸಂಪತ್ತನ್ನು ಹೆಚ್ಚಿಸಿದ. ಶ್ರೀಮಂತನಾಗಿ ನವಕೋಟಿ ನಾರಾಯಣನೆಂಬ ಹೆಸರು ಗಳಿಸಿದ. ಇದೇ ಸಂದರ್ಭದಲ್ಲಿ ಮರಾಠ ನಾಯಕರಾದ ಶಿವಾಜಿ ಹಾಗೂ ಸಾಂಬಾಜಿಯವರ ಆಕ್ರಮಣಗಳನ್ನು ಸಮರ್ಥವಾಗಿ ಎದುರಿಸಿ, ಹಿಮ್ಮೆಟ್ಟಿಸಿದನಲ್ಲದೆ ಮೊಗಲ್ ಚಕ್ರವರ್ತಿಯಾಗಿದ್ದ ಔರಂಗಜೇಬನೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿದ್ದು ಅನೇಕ ಸನ್ಮಾನಗಳನ್ನು ಪಡೆದ. ಇದು ಮೈಸೂರು ಇತಿಹಾಸದ ಉಚ್ಛ್ರಾಯಕಾಲ.

ಚಿಕ್ಕದೇವರಾಜನ ಮಗ ಇಮ್ಮಡಿ ಕಂಠೀರವ ನರಸರಾಜ (1704–14) ಮೂಕನೂ ನಿರ್ಬಲನೂ ಆಗಿದ್ದುದರಿಂದ ರಾಜ್ಯದ ಆಡಳಿತದಲ್ಲಿ ದಳವಾಯಿಗಳ ಕೈವಾಡ ಹೆಚ್ಚಾಯಿತು. ಅವರಲ್ಲಿ ಮುಖ್ಯವಾದವರು ಕಳಲೆಯ ದಳವಾಯಿಗಳು.

ಮೈಸೂರಿನ ಇತಿಹಾಸದಲ್ಲಿ ಚಿಕ್ಕದೇವರಾಜನ ಅನಂತರದ ಕಾಲವನ್ನು ದಳವಾಯಿಗಳ ಕಾಲ ಎಂದೇ ಕರೆಯಬಹುದು. ದೊಡ್ಡ ಕೃಷ್ಣರಾಜನ (ಕೃಷ್ಣರಾಜ ಒಡೆಯರ್–I) ಕಾಲದಲ್ಲಿ (1714–32) ಮುಸಲ್ಮಾನ ಮತ್ತು ಮರಾಠರ ಧಾಳಿಗಳಿಂದ ಮೈಸೂರು ಬೊಕ್ಕಸ ಬರಿದಾಯಿತು. ರಾಜ್ಯದ ಸ್ಥಿತಿ ಹದಗೆಟ್ಟಿತು. ಅನಂತರ ಸಿಂಹಾಸನವೇರಿದ ಆತನ ದತ್ತುಪುತ್ರ ಆರನೆಯ ಚಾಮರಾಜ (1732–34) ದಳವಾಯಿ ದೇವರಾಜಯ್ಯನ ದ್ರೋಹದಿಂದ ಕಬ್ಬಾಳು ದುರ್ಗದ ಸೆರೆಯಲ್ಲೇ ತನ್ನ ಜೀವಿತವನ್ನು ಕಳೆದ. ಅನಂತರ ಪಟ್ಟಕ್ಕೆ ಬಂದ ಇಮ್ಮಡಿ ಕೃಷ್ಣರಾಜ (1734–66) ಕಾಲದಲ್ಲಿ ಹೈದರನ ಅಧಿಕಾರ ಬೆಳೆಯತೊಡಗಿ ಕೊನೆಗೆ ಹೈದರ್ ಸರ್ವಾಧಿಕಾರಿಯಾದ. ಆತ ಮತ್ತು ಆತನ ಮಗ ಟಿಪ್ಪುಸುಲ್ತಾನನೂ ವಸ್ತುತಃ ಸಾರ್ವಭೌಮರಾದರು. ಇವರಿಬ್ಬರ ಆಳಿಕೆಯಲ್ಲಿ ಮೈಸೂರು ರಾಜ್ಯ ಬಹುವಾಗಿ ವಿಸ್ತರಿಸಿ ದಕ್ಷಿಣ ಭಾರತದ ಬೃಹತ್ ರಾಜಕೀಯ ಬಲವಾಗಿ ನೆಲೆಗೊಂಡರೂ ಮೈಸೂರು ರಾಜವಂಶದವರ ಕೈವಾಡವೇನೂ ಇದರಲ್ಲಿರಲಿಲ್ಲ.

ಈ ಸಂದರ್ಭದಲ್ಲಿ ಬಲು ಚಿಕ್ಕವಯಸ್ಸಿನಲ್ಲೇ ವಿಧವೆಯಾದ ಇಮ್ಮಡಿ ಕೃಷ್ಣರಾಜನ ಪತ್ನಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಮೈಸೂರು ರಾಜವಂಶದ ಆಳಿಕೆ ಅಳಿಯದಂತೆ ನೋಡಿಕೊಳ್ಳುವ ಪ್ರಯತ್ನ ನಡೆಸಿದಳು. ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಆಳಿಕೆಯಲ್ಲಿ ರಾಜಮನೆತನ ಹಲವು ಕಷ್ಟಗಳನ್ನು ಅನುಭವಿಸಬೇಕಾಗಿ ಬಂದರೂ ಧೃತಿಗೆಡದೆ, ಆಗಾಗ್ಗೆ ಮರಾಠರು

**ಮೈಸೂರು ಒಡೆಯರ ವಂಶಾವಳಿ:**




ಮತ್ತು ಬ್ರಿಟಿಷರೊಡನೆ ಗುಪ್ತಸಂಧಾನ ನಡೆಸುತ್ತಿದ್ದಳು. ವಂಶದ ಕುಡಿಗಳೂ ದುರದೃಷ್ಟವಶಾತ್ ಅಥವಾ ಕುತಂತ್ರದಿಂದ ಕಮರಿದಾಗ ಮಕ್ಕಳನ್ನು ದತ್ತು ತೆಗೆದುಕೊಂಡು ತನ್ನ ಪ್ರಯತ್ನ ಮುಂದುವರೆಸಿದಳು.

1799ರಲ್ಲಿ ಶ್ರೀರಂಗಪಟ್ಟಣ ಬ್ರಿಟಿಷರ ಕೈವಶವಾಗಿ ಟಿಪ್ಪುಸುಲ್ತಾನ್ ಮೃತನಾದಾಗ ಬ್ರಿಟಿಷರು ಮೈಸೂರು ರಾಜವಂಶಕ್ಕೆ ಮತ್ತೆ ಚೇತನ ನೀಡಿದರು. ಐದು ವರ್ಷದ ಬಾಲಕ ಮುಮ್ಮಡಿ ಕೃಷ್ಣರಾಜರ ಪಟ್ಟಾಭಿಷೇಕವಾಯಿತು. ದಿವಾನ್ ಪೂರ್ಣಯ್ಯನ ನುರಿತ ಆಡಳಿತ ಮತ್ತು ಬ್ರಿಟಿಷ್ ರೆಸಿಡೆಂಟರ ಮೇಲ್ವಿಚಾರಣೆಯಲ್ಲಿ ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥಿತವಾಯಿತು. ಮುಮ್ಮಡಿಕೃಷ್ಣರಾಜ ಒಡೆಯರ ಆಳಿಕೆಯಲ್ಲಿ ಮೊದಲ ವರ್ಷಗಳು ದಂಗೆಗಳಾದರೂ ಅವನ್ನು ನಿವಾರಿಸಲಾಯಿತು. ಆದರೆ ಅವರ ಕಾಲದಲ್ಲಿ ಎರಡು ಕ್ಷಾಮಗಳು ತಲೆದೋರಿದ್ದರಿಂದಲೂ 1830ರಲ್ಲಿ ನಗರ ಪ್ರಾಂತದಲ್ಲಿ ಬಂಡಾಯ ನಡೆದಿದ್ದರಿಂದಲೂ ದೇಶದ ಪರಿಸ್ಥಿತಿ ಕೆಟ್ಟಿತು. ಬ್ರಿಟಿಷರು ಈ ಸ್ಥಿತಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತ ನೀತಿಯೇ ಕಾರಣವೆಂಬ ನೆವದಿಂದ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ನೇರ ಆಡಳಿತವನ್ನು ಜಾರಿ ಮಾಡಿದರು. ರಾಜ್ಯದ ಅಧಿಕಾರ ಪುನಃ ಮೈಸೂರು ಒಡೆಯರ ಕೈತಪ್ಪಿತು (1831). ಐವತ್ತು ವರ್ಷಗಳ ರೆಸಿಡೆಂಟ್ ಪ್ರಭುತ್ವದ ಅನಂತರ ರಾಜ್ಯ ಮತ್ತೆ ಮೈಸೂರು ರಾಜರಿಗೆ ಹಸ್ತಾಂತರವಾಯಿತು. ಆಗ ಪಟ್ಟಕ್ಕೆ ಬಂದ ಒಂಬತ್ತನೆಯ ಚಾಮರಾಜ ಒಡೆಯರು ದಿವಾನರಾದ ರಂಗಾಚಾರ್ಲು ಮತ್ತು ಕೆ. ಶೇಷಾದ್ರಿ ಅಯ್ಯರ್ ಅವರುಗಳ ನೆರವಿನಿಂದ ಮೈಸೂರು ಸಂಸ್ಥಾನದಲ್ಲಿ ರೈಲ್ವೆ ಸ್ಥಾಪನೆ, ಕಟ್ಟೆ ನಾಲೆಗಳ ರಚನೆ ಮುಂತಾದ ಜನೋಪಯೋಗಿ ಕಾರ್ಯಗಳನ್ನೂ ರಾಜಪ್ರತಿನಿಧಿಸಭೆ ಮೊದಲಾದ ರಾಜಕೀಯ ಸಂಸ್ಥೆಗಳನ್ನೂ ಪ್ರಾರಂಭಿಸಿದ್ದಲ್ಲದೆ, ಆಡಳಿತ, ವಿದ್ಯಾಭ್ಯಾಸ, ಆರೋಗ್ಯ ಇತ್ಯಾದಿ ವಿಭಾಗಗಳನ್ನು ಬೆಳೆಸಿ ಮೈಸೂರು ಮಾದರಿ ಸಂಸ್ಥಾನವಾಗುವಂತೆ ಮಾಡಿದರು.

ಅನಂತರ ಇವರ ಹಿರಿಯಮಗ ನಾಲ್ವಡಿ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದರು. ಇವರು ದೇಶದ ಸ್ಥಿತಿಯನ್ನು ಉತ್ತಮಪಡಿಸುವ ಹಲವಾರು ಕ್ರಮಗಳನ್ನು ಕೈಗೊಂಡರು. ಕನ್ನಂಬಾಡಿಕಟ್ಟೆ, ಭದ್ರಾವತಿಯ ಕಬ್ಬಿಣದ ಕಾರ್ಖಾನೆ, ಶಿವಸಮುದ್ರದ ವಿದ್ಯುತ್ ಯೋಜನೆ ಮುಂತಾದ ಉಪಯೋಗಿ ಕಾರ್ಯಗಳನ್ನು ಕೈಕೊಂಡುದಲ್ಲದೆ, ರಾಜ್ಯದಲ್ಲಿ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಪ್ರಪ್ರಥಮ ದೇಶೀಯ ವಿಶ್ವವಿದ್ಯಾನಿಲಯವೆಂದೇ ಖ್ಯಾತವಾದ ಮೈಸೂರು ವಿಶ್ವವಿದ್ಯಾನಿಲಯವನ್ನೂ ಸ್ಥಾಪಿಸಿದರು (1916). ರಾಜ್ಯಾಡಳಿತದಲ್ಲಿ ಪ್ರಜೆಗಳಿಗೆ ಸಾಕಷ್ಟು ಅವಕಾಶ ಇರಬೇ ಕೆಂಬ ಉದ್ದೇಶದಿಂದ ಸ್ಥಳೀಯ ಸಂಸ್ಥೆ ಗಳನ್ನು ಅಭಿವೃದ್ಧಿಪಡಿಸಿದರು.



ಮೈಸೂರು ಒಡೆಯರ ವಂಶವೃಕ್ಷ, ಸಂತಾನ ಕಮಲ ಕಲ್ಪ

ಪ್ರಜಾ ಪ್ರತಿನಿಧಿ ಸಭೆಯನ್ನು ಪರಿಷ್ಕರಿಸಿದರು. ಹಲವಾರು ಲೋಕೋಪಯೋಗಿ ಕಾರ್ಯಗಳನ್ನು ಕೈಕೊಂಡು ಜನಪ್ರಿಯರಾದರು. ಇವರ ಕಾರ್ಯಸಾಧನೆಗಳಿಂದ ಅಂದಿನ ಮೈಸೂರು ಸಂಸ್ಥಾನ ಇತರ ಎಲ್ಲ ದೇಶೀಯ ಸಂಸ್ಥಾನಗಳಿಗಿಂತ ಬಹುಮುಂದುವರಿದಿತ್ತೆಂಬ ಖ್ಯಾತಿಯನ್ನು ಪಡೆಯಿತು. ಈ ಸಾಧನೆ ಗಳಿಗೆ ಸಮರ್ಥರಾದ ಪಿ.ಎನ್.ಕೃಷ್ಣ ಮೂರ್ತಿ, ಕಾಂತರಾಜ ಅರಸು, ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್– ಈ ದಿವಾನರುಗಳ ಸೇವೆಯೂ ಮುಖ್ಯವಾಗಿ ದೊರಕಿತು. ನಾಲ್ವಡಿ ಕೃಷ್ಣರಾಜ ಒಡೆಯರ ಮರಣಾನಂತರ ಯುವರಾಜ ಕಂಠೀರವ ನರಸರಾಜ ಒಡೆಯರ ಮಗ ಜಯಚಾಮರಾಜ ಒಡೆಯರ್ (1940 ಸೆಪ್ಟೆಂಬರ್ 8) ಪಟ್ಟಕ್ಕೆ ಬಂದರು. ದೊಡ್ಡಪ್ಪನ ಸಾಧನೆಗಳನ್ನು ಮುಂದುವರಿಸಿಕೊಂಡು ಒಂದು ದೇಶದ ಅಭಿವೃದ್ಧಿಗೆ ಮತ್ತಷ್ಟು ಕಾರಣರಾದರು. 1947ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿದ ಮೇಲೆ ಮೈಸೂರು ಸಂಸ್ಥಾನ ಭಾರತ ಒಕ್ಕೂಟದ ಕಕ್ಷೆಯಲ್ಲಿರುವಂತೆ 1948 ರಲ್ಲಿ ಒಪ್ಪಂದ ಮಾಡಿಕೊಂಡರು. ಭಾರತ ಗಣರಾಜ್ಯವಾಗುವ ತನಕ (1950 ಜನವರಿ 26) ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದರು. ಇಲ್ಲಿಗೆ ಮೈಸೂರು ರಾಜತ್ವ ಕೊನೆಗೊಂಡಿತು. ಸಂಸ್ಥಾನದ ರಾಜಪ್ರಮುಖರಾಗಿಯೂ ಅವರು ಸೇವೆ ಸಲ್ಲಿಸಿದರು.

**ಆಡಳಿತ ವ್ಯವಸ್ಥೆ:** ಮೈಸೂರು ಒಡೆಯರು ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಿದ್ದುದರಿಂದ ಆಡಳಿತ ಪದ್ಧತಿಯಲ್ಲಿ ಮೊದಲು ಇವರು ವಿಜಯನಗರದ ಪದ್ಧತಿಯನ್ನೇ ಅನುಸರಿಸಿದರು. ಕಾಲಕ್ರಮದಲ್ಲಿ ಇವರು ಪ್ರಬಲರಾದಂತೆ ಆಡಳಿತ ಪದ್ಧತಿಯಲ್ಲಿ ಹಲವು ಮಾರ್ಪಾಟುಗಳನ್ನು ಮಾಡಿಕೊಂಡರು.

ರಾಜ ಒಡೆಯ ಶ್ರೀರಂಗಪಟ್ಟಣವನ್ನಾಕ್ರಮಿಸಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದಮೇಲೆ ದಳವಾಯಿ ಮತ್ತು ಸರ್ವಾಧಿಕಾರಿಗಳನ್ನು ಆಡಳಿತ ನಿರ್ವಹಣೆಗಾಗಿ ನೇಮಿಸಿದ. ಪ್ರತಿ ಗ್ರಾಮದಲ್ಲಿಯೂ ಮೇಲ್ವಿಚಾರಣೆ, ರಕ್ಷಣೆ ಮತ್ತು ಕಂದಾಯ ವಸೂಲಿಗಳಿಗಾಗಿ ಅಧಿಕಾರಿಗಳನ್ನು ನೇಮಿಸಲಾಯಿತು. ರಾಜ್ಯವಿಸ್ತಾರವಾದಂತೆ ಒಳಾಡಳಿತವನ್ನು ನೋಡಿಕೊಳ್ಳಲು ಕಾರ್ಯಕರ್ತರನ್ನು ನೇಮಿಸಲಾಯಿತು. ಕಂಠೀರವ ನರಸರಾಜ ಒಡೆಯರ್ ದೂರದೃಷ್ಟಿಯುಳ್ಳ ಆಡಳಿತಗಾರನಾಗಿದ್ದ. ದಳವಾಯಿಗಳು ಸೈನ್ಯವನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡು ಪ್ರಜಾಡಳಿತದಲ್ಲಿಯೂ ಕೈವಾಡ ನಡೆಸುತ್ತಿದ್ದುದನ್ನು ತಪ್ಪಿಸಿ ತಾನೇ ಅಧಿಕಾರವನ್ನು ಕೈಯಲ್ಲಿರಿಸಿಕೊಂಡಿದ್ದ. ಇವನು ಶ್ರೀರಂಗಪಟ್ಟಣ ಮೊದಲಾದ ಕಡೆ ಟಂಕಸಾಲೆ ಸ್ಥಾಪಿಸಿದ. ಚಿಕ್ಕದೇವರಾಜ ಪಂಚಪ್ರಧಾನರನ್ನೊಳಗೊಂಡ ಸಚಿವ ಸಂಪುಟವನ್ನು ನೇಮಕಮಾಡಿದ್ದ. ರಾಜ್ಯಕ್ಕೆಲ್ಲ ಅನ್ವಯಿಸುವಂತೆ ಅಂಚೆ ವ್ಯವಸ್ಥೆ ಸ್ಥಾಪಿತವಾಯಿತು. ಭೂ ಮತ್ತು ಇತರ ಕಂದಾಯ ಕಾನೂನುಗಳನ್ನು ಕ್ರೋಡೀಕರಿಸಲಾಯಿತು. ಕೇಂದ್ರಾಡಳಿತವನ್ನು ಅಠಾರ ಕಛೇರಿಗಳೆಂಬ ಹದಿನೆಂಟು ಇಲಾಖೆಗಳಾಗಿ ವಿಭಾಗಿಸಲಾಯಿತು. ಅಧಿಕಾರಿಗಳಿಗೆ ಕೊಡಬೇಕಾದ ಸಂಬಳವನ್ನು ಅರ್ಧದಷ್ಟು ನಗದು ಹಣದ ರೂಪದಲ್ಲಿಯೂ ಉಳಿದ ಅರ್ಧವನ್ನು ಧಾನ್ಯರೂಪದಲ್ಲಿಯೂ ಪಾವತಿಮಾಡಲಾಗುತ್ತಿತ್ತು. ಪ್ರತಿನಿತ್ಯವೂ ಬೊಕ್ಕಸಕ್ಕೆ ಗೊತ್ತಾದ ಪ್ರಮಾಣದ ಹಣ ಸಲ್ಲಲೇಬೇಕೆಂಬ ನಿಯಮ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದ್ದು ಇದರಿಂದ ಭಂಡಾರದಲ್ಲಿ ಅಪಾರ ಹಣ ಶೇಖರವಾಗಿ ರಾಜನನ್ನು ನವಕೋಟಿನಾರಾಯಣನೆನ್ನುತ್ತಿದ್ದರು. ಆಡಳಿತ ಸುವ್ಯವಸ್ಥೆಯ ಜೊತೆಗೆ ತೂಕ ಅಳತೆಗಳನ್ನು ನಿರ್ದಿಷ್ಟಗೊಳಿಸಲಾಗಿತ್ತು. ಮಾರುಕಟ್ಟೆಗಳನ್ನು ನಿಯಂತ್ರಿಸಲಾಗಿತ್ತು. ಸೈನ್ಯಕ್ಕೆ ಬೇಕಾದ ಫಿರಂಗಿ, ಮದ್ದುಗುಂಡು ಇತ್ಯಾದಿ ಸೈನ್ಯೋಪಕರಣಗಳನ್ನು ತಯಾರಿಸುವ ಒಂದು ಕೇಂದ್ರವನ್ನು ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲಾಗಿತ್ತು. ಕಾವೇರಿ ನದಿಗೆ ಅಣೆಕಟ್ಟೆಯನ್ನು ಕಟ್ಟಿ ಚಿಕ್ಕದೇವರಾಜ ಮತ್ತು ದೊಡ್ಡದೇವರಾಜ ನಾಲೆಗಳೆಂಬ ಕಾಲುವೆಗಳನ್ನೂ ನಿರ್ಮಿಸಿದ್ದಲ್ಲದೆ ಹಲವಾರು ಕೆರೆಕಟ್ಟೆಗಳನ್ನು ಕಟ್ಟಿಸಿ ವ್ಯವಸಾಯಕ್ಕೆ ಅನುಕೂಲಮಾಡಿಕೊಟ್ಟಿದ್ದರು.

ಚಿಕ್ಕದೇವರಾಜ ಒಡೆಯರ್ ಅನಂತರ ದಳವಾಯಿಗಳ ಪ್ರಾಬಲ್ಯ ಹೆಚ್ಚಾಗಿ ಕೊನೆಗೆ ಹೈದರ್ ಮತ್ತು ಟಿಪ್ಪು ಇವರಿಗೆ ಆಡಳಿತ ಸೇರಿದಾಗ ಬಿಗಿ ಹೆಚ್ಚಾಗಿ ಸೈನ್ಯಕ್ಕೆ ಆಧುನಿಕ ತರಬೇತಿ ದೊರಕಿತು. ಅನಂತರ ಒಡೆಯರಿಗೆ ರಾಜ್ಯ ಹಿಂತಿರುಗಿದರೂ ಆಡಳಿತ ಪದ್ಧತಿ ಬ್ರಿಟಿಷರ ಆಳಿಕೆಯ ಪದ್ಧತಿಯಲ್ಲಿಯೇ ನಡೆಯಿತು. (ಕೆ.ಪಿ.)

**ಚಿತ್ರಕಲೆ:** ಇತರ ಲಲಿತಕಲೆಗಳಿಗೆ ದೊರೆತ ಪ್ರೋತ್ಸಾಹ ಒಡೆಯರ ಕಾಲದಲ್ಲಿ ಚಿತ್ರಕಲೆಗೂ ದೊರೆಯಿತು. ವಿಜಯನಗರದ ಅನಂತರ ಆ ಕಾಲದ ಚಿತ್ರ ಕಲೆಯನ್ನು ಅನುಸರಿಸಿ ಬೆಳೆಸಿದವರು ಮೈಸೂರು ಒಡೆಯರು. ಇವರ ಕಾಲದಲ್ಲಿ ಹೇರಳವಾಗಿ ವರ್ಣಚಿತ್ರಗಳ ರಚನೆ ಆಗಿದ್ದಿರಬೇಕು. ಆದರೆ ವಾಸ್ತುಶಿಲ್ಪಗಳಂತೆ ಹೆಚ್ಚು ದೃಢವಾದ ವಸ್ತುಗಳನ್ನು ಈ ಕಲೆಗೆ ಬಳಸಿಲ್ಲವಾದ್ದರಿಂದ ಅರಮನೆ, ಅಧಿಕಾರಿಗಳ ಮನೆ, ಪ್ರತಿಷ್ಠಿತರ ಗೃಹಗಳಲ್ಲಿ ಅವರ ವಿಲಾಸಕ್ಕೆ ರಟ್ಟು, ಹಲಗೆ, ತಾಟುಗಳ ಮೇಲೆ ಬರೆಸಿದ ಚಿತ್ರಗಳಲ್ಲಿ ಬಲುಪಾಲು ಕಾಲಕ್ರಮದಲ್ಲಿ ನಷ್ಟವಾಗಿದ್ದಿರಬೇಕು. ಹಾಗಲ್ಲದೆ ಇವರ ಕಾಲದಲ್ಲಿ ರಚನೆಗೊಂಡ ಭಿತ್ತಿಚಿತ್ರಗಳು ದೇವಾಲಯಗಳ, ಮಠಗಳ, ಮಹಲುಗಳ ಗೋಡೆ, ಚಾವಣಿಗಳ ಮೇಲೆ ಉಳಿದುಬಂದಿವೆ. ಜಲ ಅಥವಾ ತೈಲವರ್ಣದಿಂದ ಗೋಡೆಗಳನ್ನೋ ಚಾವಣಿಗಳನ್ನೋ ತೊಲೆಗಳನ್ನೋ ಆಧಾರವಾಗಿ ಮಾಡಿಕೊಂಡು ವಿಸ್ತಾರವಾದ ಚಿತ್ರರಚನೆ ಮಾಡಿರುವುದು ಅಲ್ಲಲ್ಲಿ ಕಂಡುಬಂದಿದೆ. ಈ ಕಾಲದ ಮೊದಲಿನ ಭಿತ್ತಿಚಿತ್ರಗಳು ವಿಜಯನಗರ ಚಿತ್ರಕಲೆಯನ್ನೇ ಹೋಲುತ್ತವೆ. ಈಗ ತಿಳಿದಿರುವ ಮಟ್ಟಿಗೆ ಬಹುಶಃ ಒಡೆಯರ ಕಾಲದ ಮೊದಲ ಚಿತ್ರಗಳೆಂದರೆ ಹರದನಹಳ್ಳಿಯಲ್ಲಿ ದಿವ್ಯಲಿಂಗೇಶ್ವರ ದೇವಾಲಯದ ಹಿಂದಿರುವ ಕೈಸಾಲೆಯ ಚಾವಣಿ ತೊಲೆಗಳ ಮೇಲೆ ರಚಿತವಾದವು. 17ನೆಯ ಶತಮಾನದ ಪ್ರಥಮಾರ್ಧಕ್ಕೆ ಸೇರಿಸಬಹುದಾದ ಚಿತ್ರಗಳಲ್ಲಿ ಲೇಪಾಕ್ಷಿಯಲ್ಲಿಯ ವಿಜಯನಗರ ಶೈಲಿಯ ವರ್ಣಚಿತ್ರಗಳ ಮಾದರಿಯನ್ನು ಕಾಣಬಹುದು. ಚಾವಣಿಯಿಂದ ನೀರು ಸೋರಿ ಈಗ ಈ ಚಿತ್ರಗಳು ಹೆಚ್ಚುಪಾಲು ಮಾಸಲಾಗಿ ಮಸುಕಾಗಿರುವುದಾದರೂ ಉಳಿದಿರುವಷ್ಟೇ ಚಿತ್ರಗಳು ಮೇಲ್ಮಟ್ಟವನ್ನು ಸೂಚಿಸುತ್ತವೆ. ತೊಲೆಗಳ ಮೇಲೆ, ಕೃಷ್ಣಲೀಲೆ, ಸಮುದ್ರಮಥನ, ಶಿವಲೀಲೆಗಳು, ಅಷ್ಟದಿಕ್ಪಾಲಕರು ಮುಂತಾದ ಹಲವು ಬಗೆಯ ಚಿತ್ರಣಗಳ ಸಾಲುಗಳಿರುವುವಲ್ಲದೆ ಕೆಲವು ಪ್ರಾಪಂಚಿಕ ವ್ಯವಹಾರಕ್ಕೆ ಸಂಬಂಧಿಸಿದ ಚಿತ್ರಗಳನ್ನು ಅಲ್ಲಲ್ಲಿ ಬಿಡಿಸಿರುವುದು ಕುತೂಹಲಕರವಾಗಿದೆ.

ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ನಿರ್ಮಿತವಾದ ಶ್ರವಣಬೆಳಗೊಳದ ಕಲ್ಯಾಣಿಯ ಒಂದು ಎತ್ತರವಾದ ಮಂಟಪದ ಚಾವಣಿ ತೊಲೆಗಂಬಗಳ ಮೇಲೆ ಚಿತ್ರಗಳು ತುಂಬಿದ್ದಂತೆ ತೋರುತ್ತವೆ. ಆದರೆ ಈಗ ಈ ಚಿತ್ರಗಳ ಕುರುಹು ಮಾತ್ರ ಅಲ್ಲಲ್ಲಿ ಕಂಡುಬರುತ್ತದೆ. ಹಿರಿಯೂರಿನ ತೇರು ಮಲ್ಲೇಶ್ವರ ದೇವಾಲಯದ ಮುಂದಿನ ಮಂಟಪ ಮತ್ತು ಎಡೆಯೂರು ಸಿದ್ಧಲಿಂಗೇಶ್ವರ ಮಠದ ಗೋಡೆಗಳ ಮೇಲೆ ಸುಮಾರು ಇದೇ ಕಾಲದ ಚಿತ್ರಗಳನ್ನು ನೋಡಬಹುದು. ಇವು ಬಲು ಮಟ್ಟಿಗೆ ಗಿರಿಜಾಕಲ್ಯಾಣ ಮತ್ತು ಇತರ ಶಿವಲೀಲೆಗಳನ್ನು ಕುರಿತದ್ದಾಗಿದೆ.

ಮುಂದಿನ ಘಟ್ಟಕ್ಕೆ ಸೇರಿದುದು ಸೀಬಿಯ ನರಸಿಂಹ ದೇವಾಲಯದಲ್ಲಿ ಮುಖಮಂಟಪ ಮತ್ತು ಮಹಾದ್ವಾರಗಳ ಒಳಚಾವಣಿ ತೊಲೆಗಳ ಮೇಲೆಲ್ಲ ತುಂಬಿ ಹೋಗಿರುವ ವರ್ಣಚಿತ್ರಗಳು. 18ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿರುವ ಈ ಚಿತ್ರಗಳು ವಿಷಯ ವೈವಿಧ್ಯಕ್ಕೆ ಹಲವು ಕಥೆಗಳ ವಿವರವಾದ ದೃಶ್ಯಾವಳಿಗಳಿಗೆ ಹೆಸರಾಗಿವೆ. ಇಲ್ಲಿ ವಿಷ್ಣುವಿನ ದಶಾವತಾರಗಳು, ಶಿವಲೀಲೆಗಳು, ರಾಮಾಯಣ, ಭಾರತ, ಭಾಗವತ, ಅಪರೂಪವಾದ ನರಸಿಂಹ, ಚಂಚುಲಕ್ಷ್ಮಿಯರ ಕಥೆಗಳುಂಟು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಚಿತ್ರಕಲೆಗೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಟಿಪ್ಪು ದರಿಯಾದೌಲತ್ ಅರಮನೆಯ ಗೋಡೆಗಳ ಮೇಲೆ ವ್ಯಕ್ತಿ ಚಿತ್ರಣಗಳನ್ನು ಬರೆಸಿದ್ದುದನ್ನು ಮಾದರಿಯಾಗಿಟ್ಟುಕೊಂಡು ಮುಮ್ಮಡಿ ಕೃಷ್ಣರಾಜ ಒಡೆಯರ್ ತಾವು 1861 ರಲ್ಲಿ ಕಟ್ಟಿಸಿದ ಜಗನ್ಮೋಹನ ಅರಮನೆಯ ಮೇಲಂತಸ್ತಿನ ದೊಡ್ಡದಾದ ಹಜಾರ ಮತ್ತು ಇಕ್ಕೆಲಗಳಲ್ಲಿಯ ಕೋಣೆಗಳ ಗೋಡೆಗಳ ಮೇಲೆ ಬಗೆಬಗೆಯ ವರ್ಣಚಿತ್ರಗಳನ್ನು ಬರೆಸಿದ್ದಾರೆ. ಇವುಗಳಲ್ಲಿ ಸಂತಾನಾಂಬುಜ ಅದರ ಎರಡು ಕಡೆಗಳಲ್ಲಿಯೂ ಭಾರತದ ಮತ್ತು ಹೊರಗಿನ ಹಲವಾರು ರಾಜರುಗಳ ಭಾವಚಿತ್ರಗಳು, ರಾಜನ ಅನೇಕ ಬಂಧುಗಳು ಮತ್ತು ಅಧಿಕಾರಿಗಳು, ವಿಜಯದಶಮಿಯ ಜಂಬೂಸವಾರಿಯ ವೈಭವದ ಮೆರವಣಿಗೆ, ಬೇಟೆಯ ಚಿತ್ರಗಳು, ಕಲ್ಪದ್ರುಮ, ವಸಂತೋತ್ಸವ ದೃಶ್ಯಗಳು ಕುತೂಹಲಕರವಾಗಿ ಚಿತ್ರಿತವಾಗಿವೆ. ತಮ್ಮ ತಂದೆ ಚಾಮರಾಜ ಒಡೆಯರ ಜನನದ ನೆನಪಿಗಾಗಿ ಚಾಮರಾಜನಗರದಲ್ಲಿ ಕಟ್ಟಿಸಿದ

ಜನನಮಂಟಪದಲ್ಲಿಯೂ ಗೋಡೆಗಳು ಇದೇ ರೀತಿ ವರ್ಣಚಿತ್ರಗಳಿಂದ ತುಂಬಿರುವುದನ್ನು ನೋಡಬಹುದು. ಈ ಕಾಲದ ಚಿತ್ರಮಂಟಪಗಳ ಗುಂಪಿಗೆ ಮುಡುಕುತೊರೆ ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯ ಪ್ರಾಕಾರದಲ್ಲಿರುವ ಚಿತ್ರಮಂಟಪವನ್ನೂ ಸೇರಿಸಬಹುದು. ಇಲ್ಲಿ ಭಿಕ್ಷಾಟನಮೂರ್ತಿ, ದೇವಿಮಹಾತ್ಮೆ, ಗಿರಿಜಾ ಕಲ್ಯಾಣ, ನಟರಾಜ ಮುಂತಾದ ಚಿತ್ರಗಳಿದ್ದು ಒಂದೊಂದಕ್ಕೂ ವಿವರಣಾತ್ಮಕವಾದ ಅಂಕಿತ ಇದೆ. ಈ ಮೇಲಿನ ಎಲ್ಲ ಚಿತ್ರಗಳೂ ದೇಶೀಶೈಲಿಯಲ್ಲಿಯೇ ರಚಿತವಾದವು.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅನೇಕ ಚಿತ್ರಕಾರರು ತಮ್ಮ ಪ್ರತಿಭೆ ತೋರಿದ್ದಾರೆ. ಇವರು ಕರ್ನಾಟಕ ಚಿತ್ರಶೈಲಿಯೊಂದಿಗೆ ಬಂಗಾಲಿ ಚಿತ್ರ ಕಲೆಯನ್ನೂ ಐರೋಪ್ಯ ಶೈಲಿಯನ್ನೂ ಮೈಗೂಡಿಸಿಕೊಂಡು ಚಿತ್ರರಚನೆ ಮಾಡಿರುವುದನ್ನು ನೋಡಬಹುದು. ಇವುಗಳಲ್ಲಿ ವೆಂಕಟಪ್ಪನವರು ಅರಮನೆಯ ಗೋಡೆಗಳ ಮೇಲೆ ಚಿತ್ರಿಸಿರುವ ದೃಶ್ಯಗಳು ಮನೋಜ್ಞವಾಗಿವೆ.

**ಲಲಿತಕಲೆಗಳು:** ಒಡೆಯರ ಆಳಿಕೆಯಲ್ಲಿ ಸಂಗೀತ, ನೃತ್ಯ ಮೊದಲಾದ ಇತರ ಲಲಿತ ಕಲೆಗಳಿಗೆ ಕೊಟ್ಟ ಪ್ರೋತ್ಸಾಹವೂ ಗಣನೀಯವಾದದ್ದು. ಆದರೆ ಇವು ಕೇವಲ ಶ್ರವ್ಯ ಮತ್ತು ದೃಶ್ಯಗಳಾದುದರಿಂದ ಬೇರೆ ಬೇರೆ ಬೆಳೆವಣಿಗೆಗಳನ್ನು ಗುರುತಿಸುವುದು ಅಸಾಧ್ಯ. ಆಗ ರಚಿತವಾದ ಗ್ರಂಥಗಳಲ್ಲಿ ಕಂಡುಬರುವ ವಿಷಯಗಳಿಂದ ಮಾತ್ರ ಕೆಲಮಟ್ಟಿಗೆ ಒಡೆಯರು ಲಲಿತಕಲೆಗಳಿಗೆ ಕೊಟ್ಟ ಪ್ರೋತ್ಸಾಹವನ್ನು ಗುರುತಿಸಬಹುದು.

ರಾಜಒಡೆಯರ್ ಅನಂತರ ಬಂದ ಚಾಮರಾಜ ಒಡೆಯರ್ ಸ್ವತಃ ಸಂಗೀತವಿದ್ವಾಂಸ. ಚಿಕ್ಕದೇವರಾಜ ಕವಿಯಾಗಿದ್ದಂತೆ ಸಂಗೀತ ತಜ್ಞನೂ ಆಗಿದ್ದ. ತಿರುಮಲಾರ್ಯ ಇವನ ಆಸ್ಥಾನದ ಕವಿಯಾಗಿದ್ದ.

ಸಂಗೀತದ ಬೆಳೆವಣಿಗೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಪಾತ್ರ ಹಿರಿದಾದುದು. ಇವರು ತಮ್ಮ ಆಸ್ಥಾನದಲ್ಲಿ ಘನತೆಗೆ ತಕ್ಕಂತೆ ವಿದ್ವಾಂಸರನ್ನು ಆದರಿಸಿ ಪೋಷಿಸಿದರು. ಚಾಮರಾಜಒಡೆಯರ್ ಆಸ್ಥಾನದಲ್ಲಿ ಪ್ರಖ್ಯಾತರಾದ ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣ, ಮೈಸೂರು ಸದಾಶಿವರಾವ್ ಮೊದಲಾದ ಘನವಿದ್ವಾಂಸರಿದ್ದರು. ನಾಲ್ಮಡಿ ಕೃಷ್ಣರಾಜ ಒಡೆಯರು ಸಂಗೀತಗಾರರಿಗೆ ಕೊಟ್ಟ ಉದಾರ ಆಶ್ರಯದಿಂದ ಹೊಸ ಹೊಸ ರಚನೆಗಳಿಗೂ ಕಲಾಪ್ರಾವೀಣ್ಯಕ್ಕೂ ಎಡೆಯಾಯಿತು. ಮೈಸೂರು ಸಂಗೀತಕ್ಕೆ ಪ್ರಸಿದ್ಧವಾಗಿ, ಸಂಗೀತಗಾರರನ್ನು ಮಾತ್ರವಲ್ಲದೆ ಸಂಗೀತಪ್ರಿಯರನ್ನೂ ಬಹುವಾಗಿ ಆಕರ್ಷಿಸುತ್ತಿತ್ತು. ಇವರ ಅನಂತರ ಬಂದ ಜಯಚಾಮರಾಜ ಒಡೆಯರು ಪಾಶ್ಚಾತ್ಯ, ಪೌರಾತ್ಯ ಸಂಗೀತಗಳೆರಡರಲ್ಲಿಯೂ ನಿಷ್ಣಾತರಾಗಿದ್ದುದಲ್ಲದೆ ಸ್ವತಃ ವಾಗ್ಗೇಯಕಾರರೂ ಆಗಿದ್ದರು. ಇವರ ಹಲವು ಕೃತಿಗಳು ಪ್ರಸಿದ್ಧವಾಗಿವೆ. ನೃತ್ಯದಲ್ಲಿ ಹಿಂದಿನಿಂದ ಬೆಳೆದು ಬಂದಿದ್ದ ಸಂಪ್ರದಾಯವನ್ನು ಉಳಿಸಿಕೊಂಡು ಅದನ್ನು ಪ್ರೌಢವಾಗಿ ಪ್ರದರ್ಶಿಸುತ್ತಿದ್ದ ಕೆಲವು ನೃತ್ಯಗಾತಿಯರು ಈ ರಾಜರ ಆಸ್ಥಾನಗಳಲ್ಲಿಯೂ ದೇವದಾಸಿಯರಾಗಿ ದೇವಾಲಯಗಳಲ್ಲೂ ಪೋಷಣೆ ಪಡೆದು ಆ ಸಂಪ್ರದಾಯ ಪೂರ್ಣವಾಗಿ ಮುಂದುವರೆಯಿತು. ಆಸ್ಥಾನದಲ್ಲಿದ್ದ ಜಟ್ಟಿ ತಾಯಮ್ಮ, ಮೈಸೂರು ವೆಂಕಟಲಕ್ಷ್ಮಮ್ಮ, ತ್ರಿಪುರ ಸುಂದರಮ್ಮ ಮೊದಲಾದ ಪ್ರಬುದ್ಧ ನೃತ್ಯಗಾರ್ತಿಯರು ಆಶ್ರಯ ಪಡೆದಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನೃತ್ಯ ಕಲೆ ಪುನರುಜ್ಜೀವಗೊಂಡಿತೆಂದು ಹೇಳಬಹುದು.

**ಸಾಹಿತ್ಯ:** ಮೈಸೂರು ಒಡೆಯರು ಸಾಹಿತ್ಯಕ್ಕೂ ಅಪರಿಮಿತವಾದ ಪ್ರೋತ್ಸಾಹವನ್ನು ಕೊಟ್ಟರು. ಕನ್ನಡ, ಸಂಸ್ಕೃತವಲ್ಲದೆ ತೆಲುಗು ಸಾಹಿತ್ಯಕ್ಕೂ ಇವರಿಂದ ಪ್ರೋತ್ಸಾಹ ದೊರೆತಿರುವುದು ಕಂಡುಬರುತ್ತದೆ.

**ವಾಸ್ತುಶಿಲ್ಪ:** ವಿಜಯನಗರದ ಪತನಾನಂತರ ಅವರ ವಾಸ್ತು ಮತ್ತು ಶಿಲ್ಪಶೈಲಿಯನ್ನನುಸರಿಸಿ ಮುಂದುವರಿಸಿದವರಲ್ಲಿ ಮೈಸೂರಿನ ಒಡೆಯರು ಪ್ರಮುಖರು. ಆದರೆ ವಿಜಯನಗರದ ಶೈಲಿಯಲ್ಲಿ ಕಂಡುಬರುವ ಶ್ರೀಮಂತ ಸೌಂದರ್ಯವಾಗಲಿ, ಭಾವದ ಅಭಿವ್ಯಕ್ತಿಯಾಗಲಿ ಇಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ.

ರಾಜ ಒಡೆಯರ್ ಕಾಲದಿಂದ ಆರಂಭಿಸಿ ಮೈಸೂರರಸರು ಹಲವಾರು ಗುಡಿಗೋಪುರಗಳನ್ನು ಕಟ್ಟಿಸಿದರು. ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವಾಲಯದ ಮುಂದಿನ ಮುಖಮಂಟಪದ ಕಂಬವೊಂದರ ಮೇಲಿನ ಮೂರ್ತಿಯನ್ನು ರಾಜ ಒಡೆಯರದೆಂದು ಗುರುತಿಸಲಾಗಿದ್ದು ಆ ಮಂಟಪವನ್ನು ಅವರು ಕಟ್ಟಿಸಿರುವ ಸಾಧ್ಯತೆ ಇದೆ. ಅಲ್ಲಿಯ ಕಲ್ಯಾಣಿಯ ನಿರ್ಮಾಪಕ ಐದನೆಯ ಚಾಮರಾಜ ಒಡೆಯರ್ ಅದರ ಒಂದು ಮೂಲೆಯಲ್ಲಿರುವ ಅಷ್ಟಮುಖದ ಮಂಟಪ ಸುಂದರವಾದ ಹಾಗೂ ವಿಶಿಷ್ಟವಾದ ಸ್ಮಾರಕ. ಒಂದನೆಯ ಕಂಠೀರವ ನರಸರಾಜ ಒಡೆಯರ್ ಕಟ್ಟಿಸಿರುವ ಶ್ರೀರಂಗಪಟ್ಟಣದ ನರಸಿಂಹಸ್ವಾಮಿ ದೇವಾಲಯ ದೊಡ್ಡದಾದ ಗರ್ಭಗೃಹ, ಅಡ್ಡಡ್ಡಲಾಗಿರುವ ಸುಕನಾಸಿ, ಅನೇಕ ಕಂಬಗಳಿರುವ ನವರಂಗ, ಪ್ರದಕ್ಷಿಣಾಪಥ, ಪಾತಾಳಾಂಕಣ, ಪ್ರಾಕಾರಗಳು, ನಾಲ್ಕು ಮೂಲೆಗಳಲ್ಲಿಯೂ ಬೇರೆ ಬೇರೆ ಗುಡಿಗಳು, ಮಹಾದ್ವಾರ ಮತ್ತು ಹೊರಗಿನ ಮುಖಮಂಟಪಗಳಿಂದ ಕೂಡಿದೆ. ಆದರೆ ವಾಸ್ತು ಸೌಂದರ್ಯ ದೃಷ್ಟಿಯಿಂದ ಸಾಮಾನ್ಯವಾದ ಕಟ್ಟಡ ಇದು. ಮೈಸೂರಿನಲ್ಲಿ ತ್ರಿಣೇಶ್ವರನ ಗುಡಿಯ ಮಹಾದ್ವಾರದ ಗೋಪುರ ಮತ್ತು ಚಾಮುಂಡಿಬೆಟ್ಟದ ಮೆಟ್ಟಲುಗಳ ಕರ್ತೃ ದೊಡ್ಡ ದೇವರಾಜ ಒಡೆಯರ್. ಚಿಕ್ಕದೇವರಾಜ ಒಡೆಯರ್ ಬೆಂಗಳೂರಿನಲ್ಲಿರುವ ಕೋಟೆ ವೆಂಕಟರಮಣಸ್ವಾಮಿ ದೇವಾಲಯವನ್ನು ಕಟ್ಟಿಸಿದ. ಇಲ್ಲಿಯ ದ್ರಾವಿಡ ರೀತಿಯ ಸಂಕೀರ್ಣ ಸ್ತಂಭಗಳು, ಗೋಡೆಯ ಮೇಲಿನ ಉಬ್ಬು ಶಿಲ್ಪ ಗಮನಿಸಬೇಕಾದಂಥವು. ಶ್ರೀರಂಗಪಟ್ಟಣದಲ್ಲಿ ಶ್ವೇತವರಾಹಸ್ವಾಮಿ ದೇವಾಲಯವನ್ನು ಈತ ನಿರ್ಮಿಸಿದ್ದಂತೆ ತಿಳಿದುಬರುತ್ತದೆ. ಗುಂಡ್ಲುಪೇಟೆಯಲ್ಲಿ ದೊಡ್ಡ ದೇವರಾಜರ ನೆನಪಿಗಾಗಿ ಇವನು ಕಟ್ಟಿಸಿದ ಪರವಾಸುದೇವ ದೇವಾಲಯ ಕಗ್ಗಲ್ಲಿನಲ್ಲಿ ದ್ರಾವಿಡ ರೀತಿಯಲ್ಲಿ ಕಟ್ಟಿರುವ ಮೈಸೂರರಸರ ಕಾಲದ ಉತ್ತಮವಾದ ಕಟ್ಟಡ. ಕಿರುಜಗಲಿಯ ಮೇಲಿರುವ ಈ ದೇವಾಲಯದ ಹೊರಗೋಡೆಗಳ ಮೇಲೆ ಅಲ್ಲಲ್ಲಿ ಒರಟಾದ ಅರೆಗಂಬಗಳೂ ಅರೆಗೋಪುರಗಳೂ ಇದ್ದು ವಿಶಾಲವಾದ ನವರಂಗದಲ್ಲಿ ಕಂಬಗಳ ಚೌಕಮುಖಗಳ ಮೇಲೆ ಹಲವಾರು ಮೂರ್ತಿಗಳನ್ನು ಬಿಡಿಸಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವಾಸ್ತು ಸಂಪ್ರದಾಯ ಪುನರುಜ್ಜೀವನಗೊಂಡಿತು. ಚಾಮರಾಜನಗರದ ಚಾಮರಾಜೇಶ್ವರ, ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿದೇವಾಲಯ ಮತ್ತು ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಗಳ ಹೊರಪ್ರಕಾರ, ಮಹಾದ್ವಾರದ ಗೋಪುರ, ಪ್ರಾಕಾರದ ಸುತ್ತಲೂ ಇರುವ ಗುಡಿಗಳು, ವರುಣದಲ್ಲಿ ದೇವರಾಜಮ್ಮಣ್ಣಿಯ ಹೆಸರಿನಲ್ಲಿ ಕಟ್ಟಿಸಿರುವ ಮಹದೇಶ್ವರ ದೇವಾಲಯ ಮೊದಲಾದವು ಇವರ ರಚನೆಗಳು. ಈ ಹಲವು ದೇವಾಲಯಗಳಲ್ಲಿ ಭಾರತೀಯ ಮುಸ್ಲಿಮ್ ಸಂಪ್ರದಾಯದಿಂದ ಉದ್ಭವವಾದ ಹಲವು ಚಿತ್ತಾರಗಳು ಮತ್ತು ವಿನ್ಯಾಸಗಳನ್ನು ಗಚ್ಚಿನಲ್ಲಿ, ಪೌಳಿ ಮತ್ತು ಗೋಪುರಗಳಲ್ಲಿ ಮೂಡಿಸಿರುವುದನ್ನು ಕಾಣಬಹುದು.

ಇಲ್ಲಿಯ ತನಕದ ಒಡೆಯರ ಕಾಲದ ವಾಸ್ತುಕಲೆಯಲ್ಲಿ ದೇಶೀ ಸಂಪ್ರದಾಯದ ಮುಂದುವರಿಕೆಯಷ್ಟೇ ಕಂಡುಬರುತ್ತದೆ. ಅದರಲ್ಲೂ ಈ ಹೆಚ್ಚಿನ ಕೃತಿಗಳನ್ನೆಲ್ಲ ವಿಜಯನಗರ ಶೈಲಿಯ ಅನುಕರಣೆಗಳೆಂದೇ ಹೇಳಬಹುದು. ಆದರೆ ವಿಜಯನಗರ ಕಾಲದ ಬೃಹತ್ ಗಾತ್ರವಾಗಲೀ ದೃಢಗಂಭೀರ ಪ್ರಮಾಣಗಳಾಗಲೀ ಈ ವಾಸ್ತುಕೃತಿಗಳಲ್ಲಿ ಕಾಣಲಾಗುವುದಿಲ್ಲ.

ಮೈಸೂರು ಸಂಸ್ಥಾನದಲ್ಲಿ ರೆಸಿಡೆಂಟರ ಆಳಿಕೆ ಆರಂಭವಾದ ಸಮಯದಿಂದ ಮುಂದೆ ಇಲ್ಲಿ ಪಾಶ್ಚಾತ್ಯ ವಾಸ್ತು ಸಂಪ್ರದಾಯ ಬೇರೂರಲಾರಂಭಿಸಿತು. ಮೈಸೂರು ಅರಸರ ಕಾಲದಲ್ಲಿ ಹಳೆಯ ದೇಶೀ ಸಂಪ್ರದಾಯಗಳು ಎಲ್ಲೋ ಕೆಲವೆಡೆ (ಉದಾ: ಶೃಂಗೇರಿಯ ಶಾರದಾ ದೇವಾಲಯ, ಮೈಸೂರು ಭುವನೇಶ್ವರಿ, ಕಾಮಕಾಮೇಶ್ವರಿ ದೇವಾಲಯಗಳು ಮೊದಲಾದವು) ಕಂಡುಬರುತ್ತವೆ. ಹೆಚ್ಚಿನ ಕೃತಿಗಳು ಲೌಕಿಕ ವಾಸ್ತುವರ್ಗಕ್ಕೆ ಸೇರಿದವು. ಪಾಶ್ಚಾತ್ಯ ಶೈಲಿ ಮತ್ತು ರಚನಾ ತಂತ್ರಗಳಿಂದ ರಚಿತವಾದ ಮೈಸೂರಿನ ಲಲಿತಮಹಲ್, ಜಯಮಹಲ್, ಮಹಾರಾಜ ಕಾಲೇಜು, ಓರಿಯಂಟಲ್ ಲೈಬ್ರರಿ, ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆ, ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರಿನ ಹೈಕೋರ್ಟ್ ಕಟ್ಟಡ, ಸೆಂಟ್ರಲ್ ಕಾಲೇಜು, ಅರಮನೆ ಮುಂತಾದವು ಈ ಹೊಸ ರಚನಾ ರೀತಿಯ ಉತ್ತಮ ಉದಾಹರಣೆಗಳು. ಮೈಸೂರಿನ ಅರಮನೆಯಲ್ಲೂ ಹಲವು ಪಾಶ್ಚಾತ್ಯ ಹಾಗೂ ದೇಶೀಯ ವಾಸ್ತು ಸಂಪ್ರದಾಯಗಳ ಮಿಶ್ರಣ ಇದೆ. ಮೈಸೂರಿನ ಕೃಷ್ಣರಾಜೇಂದ್ರ ಮತ್ತು ಚಾಮರಾಜೇಂದ್ರ ವೃತ್ತಗಳಲ್ಲಿ ಇರುವ ರಾಜರ ಪ್ರತಿಕೃತಿಯನ್ನು ಸ್ಥಾಪಿಸಿರುವ ಮಂಟಪಗಳು, ಅಲಂಕರಣ ವಾಸ್ತುವಿನ ಉತ್ತಮ ರಚನೆಗಳು.

**ಶಿಲ್ಪಕಲೆ:** ಶಿಲ್ಪದಲ್ಲೂ ವಿಜಯನಗರ ಸಂಪ್ರದಾಯ ಅನುಕರಣೆ ಕಂಡುಬರುತ್ತದೆ. ಚಾಮುಂಡಿಬೆಟ್ಟದ ಮೇಲಿನ ದೊಡ್ಡದೇವರಾಜ ಒಡೆಯರ್ ಕಾಲದ ಪ್ರಸಿದ್ಧವಾದ ಬೃಹದಾಕಾರದ ನಂದಿ ಸುಂದರ ಕೃತಿ. ಉತ್ತಮವಾಗಿ ರೂಪಿತವಾಗಿರುವ ಇನ್ನೊಂದು ಬೃಹತ್‌ನಂದಿ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿದೆ. ಇದು ದಳವಾಯಿ ವಿಕ್ರಮರಾಯ ಮಾಡಿಸಿದ್ದು. ಗುಂಡ್ಲುಪೇಟೆಯ ಪರವಾಸುದೇವ ದೇವಾಲಯದ ಮೂಲವಿಗ್ರಹ ಒಡೆಯರ ಕಾಲದ ಮೂರ್ತಿ ಶಿಲ್ಪಕ್ಕೆ ಒಂದು ಉತ್ತಮ ಉದಾಹರಣೆ. ಮುಖದಲ್ಲಿರುವ ವಿಶಾಲನೇತ್ರಗಳು, ತುಟಿಗಳನ್ನು ಕೊಂಕಿಸಿ ಮೂಡಿಸಿರುವ ಕೃತಕ ನಗೆ, ಗುಂಡುಮುಖ, ಕುಳ್ಳಾಗಿ ಕಾಣುವ ಸುಪುಷ್ಟ ದೇಹ, ಉದ್ದವಾಗಿ ಕಂಡರೂ ಚಪ್ಪಟೆಯಾದ ಮೂಗು, ಹೆಚ್ಚು ಗುಂಭವಾಗಿ ಬಿಡಿಸಿದ ಅಂಗಾಂಗಗಳು, ಮೂರ್ತಿ ಗಾತ್ರಕ್ಕೆ ದೊಡ್ಡದಾದ ಕಿರೀಟ, ಸೆಟೆದು ಕುಳಿತಿರುವಂತೆ ಇರುವ ಭಂಗಿ ಮುಂತಾದವನ್ನು ಗಮನಿಸಿದಾಗ ಸ್ವಾಭಾವಿಕತೆಗಿಂತಲೂ ಸಾಂಪ್ರದಾಯಿಕತೆ ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತದೆ. ಚಾಮರಾಜನಗರ, ನಂಜನಗೂಡು, ಮೈಸೂರು (ಪ್ರಸನ್ನ ಕೃಷ್ಣಸ್ವಾಮಿ) ಮುಂತಾದೆಡೆಯ ಮುಮ್ಮಡಿ ಕೃಷ್ಣರಾಜರ ದೇವಾಲಯಗಳಲ್ಲಿ ಅರವತ್ತಮೂರು ಪುರಾತನರು, ಆಳ್ವಾರರು, ಶಿವಲೀಲಾ ಮೂರ್ತಿಗಳು, ಬೇರೆ ಬೇರೆ ಹೆಸರಿನ ಹಲವು ಲಿಂಗಗಳು ಅಥವ ವಿಷ್ಣುವಿನ ಅವತಾರಗಳು ಇದ್ದು ಪ್ರಾಕಾರದ ಪೌಳಿಯಲ್ಲಿ ಗಣೇಶ, ಶೈವ ಅಥವಾ ವೈಷ್ಣವ ವಿಗ್ರಹಗಳು ಇತ್ಯಾದಿ ಗಚ್ಚಿನ ಮೂರ್ತಿಗಳನ್ನೂ ಕಾಣಬಹುದು. ಇವು ಶಿಲ್ಪಕಲೆಯನ್ನು ಅಭ್ಯಾಸ ಮಾಡುವವರಿಗೆ ತುಂಬ ಉಪಯುಕ್ತವಾಗಿವೆ.

ಈ ಕಾಲದಲ್ಲಿ ರಾಜರ ವ್ಯಕ್ತಿ ಶಿಲ್ಪಗಳು ವಿಶೇಷವಾಗಿ ಕಂಡುಬರುತ್ತವೆ. ಕಂಠೀರವ ನರಸರಾಜ ಒಡೆಯರ ಭಕ್ತವಿಗ್ರಹ ಉದ್ದವಾದ ನಿಲುವಂಗಿ, ಸೊಂಟಕ್ಕೆ ಸುತ್ತಿರುವ ವಸ್ತ್ರ, ಕೈಕೆಳಗೆ ಕವಚಗಳು, ಪಕ್ಕದಲ್ಲಿ ನೇತಾಡುತ್ತಿರುವ ಕತ್ತಿಗುರಾಣಿಗಳು, ಕಲ್ಲಿಮೀಸೆ, ಚೂಪಾದ ಆದರೆ ಚಪ್ಪಟೆಯಾಗಿ ಹರಡಿರುವ ಮೂಗು, ದೊಡ್ಡದಾದ ಕಣ್ಣುಗಳು, ತಲೆಕೂದಲನ್ನು ಎತ್ತಿ ಓರೆಯಾಗಿ ಕಟ್ಟಿರುವ ಮುಡಿ, ಕೈಮುಗಿದು ನೇರವಾಗಿ ನಿಂತಿರುವ ನಿಲುವು–ಇವುಗಳ ಅಳವಡಿಕೆಯಿಂದ ಆ ಕಾಲದ ವ್ಯಕ್ತಿ ಶಿಲ್ಪಗಳ ಉದಾಹರಣೆಯಾಗಿವೆ. ಗುಂಡ್ಲುಪೇಟೆಯ ಪರವಾಸುದೇವ ದೇವಾಲಯದ ಕಂಬವೊಂದರ ಮೇಲೆ ತನ್ನ ಪರಿವಾರದೊಂದಿಗೆ ಕುಳಿತಿರುವ ರಾಜನ ಮೂರ್ತಿ ಚಿಕ್ಕದೇವರಾಜ ಒಡೆಯರದಿರಬೇಕು. ನಂಜನಗೂಡು ಮೊದಲಾದೆಡೆಗಳಲ್ಲಿರುವ ಕೃಷ್ಣರಾಜ ಒಡೆಯರ ಮತ್ತು ಅವರ ರಾಣಿಯರ ಭಕ್ತ ವಿಗ್ರಹಗಳು ಬಲು ನಾಜೂಕಾಗಿ ಕೆತ್ತಿದ ಉತ್ತಮ ಪ್ರತಿಮೆಗಳಾಗಿವೆ.

ಈ ಕಾಲದ ಕಂಚಿನ ವಿಗ್ರಹಗಳು ಸಾಕಷ್ಟು ಸಂಖ್ಯೆಯಲ್ಲಿ ದೊರಕಿವೆ. 18ನೆಯ ಶತಮಾನದಲ್ಲಿ ದಳವಾಯಿ ಕಳಲೆ ನಂಜರಾಜಯ್ಯ ಮಾಡಿಸಿರುವ ನಟರಾಜ ಮೂರ್ತಿಗಳು ಹರದನಹಳ್ಳಿ, ತೆರಕಣಾಂಬಿ, ತಲಕಾಡು ಮುಂತಾದೆಡೆಗಳ ದೇವಾಲಯಗಳಲ್ಲಿವೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಈತ ಅರ್ಪಿಸಿದ 63 ಪುರಾತನ ಬಿಡಿ ಭಕ್ತವಿಗ್ರಹಗಳು ಇವೆ. ಈ ವಿಗ್ರಹಗಳು ವಿಜಯನಗರ ಸಂಪ್ರದಾಯದವು. ಬೆಳ್ಳಿ, ತಾಮ್ರ, ಹಿತ್ತಾಳೆ ಹಾಗೂ ಕಂಚಿನಲ್ಲಿ ಮಾಡಿದ ಗರುಡ, ಬಸವ, ಅನೆ ಮುಂತಾದ ಅನೇಕ ವಾಹನಗಳು ನಂಜನಗೂಡು, ಚಾಮುಂಡಿಬೆಟ್ಟ, ಶ್ರೀರಂಗಪಟ್ಟಣ ಮತ್ತು ಮೇಲುಕೋಟೆಯ ದೇವಾಲಯಗಳಲ್ಲಿವೆ. ಹೆಚ್ಚಿನವು ಮೈಸೂರು ಅರಸರ ಅದರಲ್ಲೂ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಣಿಕೆಗಳು.

ಒಡೆಯರ ಕಾಲದ ಮೂರ್ತಿಗಳ ಪ್ರಮಾಣ ಕಿರಿದು. ಇವುಗಳಲ್ಲಿ ಭಾವಪೂರ್ಣತೆಯಾಗಲೀ ನಿಲುವಿನಲ್ಲಿ ವಾಸ್ತವತೆಯಾಗಲೀ ಅಂಗಾಂಗಗಳಲ್ಲಿ ನಯಗಾರಿಕೆಯಾಗಲೀ ಚಲನೆಯಾಗಲೀ ಹೆಚ್ಚು ಕಾಣಿಸದು. ಸಾಂಪ್ರದಾಯಿಕವಾದ ಕಟ್ಟುಪಾಡುಗಳಿಗೊಳಗಾಗಿ ಆಗ ಬಳಕೆಯಲ್ಲಿದ್ದ ಶಿಲ್ಪಶಾಸ್ತ್ರಕ್ಕನುಗುಣವಾಗಿ ಕಂಡರಿಸಿರುವ ಇವರ ಮೂರ್ತಿಶಿಲ್ಪಗಳಲ್ಲಿ ವಿಜಯನಗರದ ಜೀವಂತ ಕಲೆಯ ಅನುಕರಣೆಯನ್ನು ಸ್ಪಷ್ಟವಾಗಿ ಕಾಣಬಹುದು.

**ಶಾಸನಗಳು, ದಾಖಲೆಗಳು:** ಮೈಸೂರು ಒಡೆಯರ ಕಾಲವು ಶಾಸನಗಳನ್ನು ಹಾಕಿಸುತ್ತಿದ್ದ ಪರಂಪರೆಯ ಕೊನೆಯಘಟ್ಟ. ಈಗ ದೊರೆತಿರುವ ಈ ಕಾಲದ ಐನೂರಕ್ಕೂ ಹೆಚ್ಚು ಶಾಸನ ದಾಖಲೆಗಳನ್ನು ಮುಖ್ಯವಾಗಿ ಮೂರು ಪಂಗಡಗಳಾಗಿ ವಿಂಗಡಿಸಬಹುದು: (ಲೋಹ, ತಾಮ್ರಶಾಸನಗಳು, ಶಿಲಾ ಶಾಸನಗಳು ಮತ್ತು ಸನ್ನದು ನಿರೂಪಗಳು ಈ ಮೂರು ಪ್ರಕಾರದ ಶಾಸನಗಳೂ ಒಂದರಿಂದೊಂದು ಭಿನ್ನ ರೀತಿಯಲ್ಲಿವೆ. ಸಂಖ್ಯಾಬಲದಲ್ಲಿ ಉಳಿದ ಎರಡಕ್ಕಿಂತ ತೀರ ಕಡಿಮೆಯಾಗಿರುವ ತಾಮ್ರಶಾಸನಗಳು ಎಲ್ಲ ದೃಷ್ಟಿಯಿಂದಲೂ ಹೆಚ್ಚು ಅಮೂಲ್ಯವಾದವು.

ತಾಮ್ರಶಾಸನಗಳು, ವಿಜಯನಗರದ ಅರಸರ ತಾಮ್ರಶಾಸನಗಳ ರಚನೆಯನ್ನನುಸರಿಸಿದ್ದರೂ ಅವುಗಳ ಹಲಗೆಗಳು ಗಾತ್ರದಲ್ಲಿ ದೊಡ್ಡವು; ಆಕಾರದಲ್ಲಿ ಹೆಚ್ಚು ಸುಧಾರಿಸಿವೆ. ಇವರ ಕೆಲವು ತಾಮ್ರಶಾಸನಗಳು ಬಹುಶಃ ಕರ್ನಾಟಕದ ಅರಸು ಮನೆತನಗಳಲ್ಲಿಯೇ ಅತ್ಯಂತ ದೊಡ್ಡವೆಂದು ಹೇಳಬಹುದು. ತಾಮ್ರಶಾಸನಗಳಲ್ಲಿ ಲಿಪಿ ಆರಂಭದಲ್ಲಿ ನಂದಿನಾಗರಿ; ಅನಂತರ ಕೆಲವು ಶಾಸನಗಳಲ್ಲಿ ಮೊದಲು ಪ್ರೌಢವಾದ ಕಾವ್ಯಶೈಲಿಯ, ಸಂಸ್ಕೃತದಲ್ಲಿದ್ದು ಅದೇ ವಿಷಯವನ್ನೇ ಕನ್ನಡ ಗದ್ಯದಲ್ಲಿ ಅನಂತರ ವಿವರಿಸಿರುತ್ತದೆ. ಈ ತಾಮ್ರಶಾಸನಗಳು ಬಹುತೇಕ ದತ್ತಿ ಶಾಸನಗಳಾಗಿದ್ದು ದತ್ತಿ ಬಿಟ್ಟ ಗ್ರಾಮಗಳ ಚತುಸ್ಸೀಮೆಗಳನ್ನು ಮಾತ್ರ ಕನ್ನಡದಲ್ಲಿಯೇ ವಿವರಿಸಲಾಗಿದೆ. ಈ ಚತುಸ್ಸೀಮೆಗಳ ವಿವರಗಳು ಬೇರೆ ರಾಜಮನೆತನಗಳ ಶಾಸನದಲ್ಲಿ ಎಲ್ಲಿಯೂ ಕಂಡುಬರದಷ್ಟು ವಿವರಪೂರ್ಣವಾಗಿ ಕೆಲವು ವೇಳೆ ಹಲವು ಹಲಗೆಗಳನ್ನಾವರಿಸುವಷ್ಟು ವಿಸ್ತಾರವಾಗಿರುತ್ತವೆ.

ಇವರಲ್ಲಿ ದೊಡ್ಡದೇವರಾಜ, ಚಿಕ್ಕದೇವರಾಜ, ಕಂಠೀರವ ನರಸರಾಜ, ಒಂದನೆಯ ಕೃಷ್ಣರಾಜ, ಎರಡನೆಯ ಕೃಷ್ಣರಾಜ ಮೊದಲಾದವರ ಹಲವಾರು ತಾಮ್ರ ಶಾಸನಗಳೂ ದೊರೆತಿವೆ. ಒಡೆಯರ ವಂಶಾವಳಿಯನ್ನು ವಿವರವಾಗಿ ತಿಳಿಸುವ ಈ ಶಾಸನಗಳು ಮೊದಲು ವಿಷ್ಣು ಬ್ರಹ್ಮರಿಂದಾರಂಭಿಸಿ ಚಂದ್ರನ ಮೂಲಕ ಯದುರಾಯನ ತನಕ ಪೌರಾಣಿಕ ವಂಶಾವಳಿಯನ್ನು ತಿಳಿಸಿ, ಯದುರಾಯನೂ ಅವರ ವಂಶದವರೂ ದ್ವಾರಕೆಯಲ್ಲಿ ಆಳುತ್ತಿದ್ದು ಆ ವಂಶದಲ್ಲಿ ಕೆಲವರು ಕರ್ಣಾಟಕ ದೇಶಕ್ಕೆ ಬಂದು ಇಲ್ಲಿಯ ಸೌಂದರ್ಯಕ್ಕೆ ಮನಸೋತು ಇಲ್ಲಿಯೇ ನೆಲೆಸಿದರೆಂದೂ ಮಹಿಷಾಪುರ ಇವರ ರಾಜಧಾನಿಯಾಯಿತೆಂದೂ ತಿಳಿಸುವುದಲ್ಲದೆ ಮುಂದೆ ಬೆಟ್ಟದ ಚಾಮರಾಜನಿಂದಾರಂಭಿಸಿದ ವಂಶಾವಳಿಯನ್ನು ವಿವರಿಸುತ್ತವೆ. ಮೊದಲಿನ ಕೆಲವು ಶಾಸನಗಳು ವಿಜಯನಗರದ ಸಾರ್ವಭೌಮತ್ವವನ್ನೊಪ್ಪಿ ಕೊಳ್ಳುತ್ತವೆ. ಮುಂದಿನವು ಒಡೆಯರು ಸ್ವತಂತ್ರವಾಗಿ ಆಳುತ್ತಿದ್ದುದನ್ನು ಸೂಚಿಸುತ್ತವೆ. ಚಿಕ್ಕದೇವರಾಜ, ಕೃಷ್ಣರಾಜರ ಆಸ್ಥಾನಗಳಲ್ಲಿದ್ದ ತಿರುಮಲಾರ್ಯ ಅನೇಕ ತಾಮ್ರಶಾಸನಗಳ ಕರ್ತೃ. ಸುಂದರವಾದ ಶೈಲಿಯಲ್ಲಿ ಕಾವ್ಯಮಯವಾಗಿ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ರಚಿಸಿರುವ ಈತನ ಶಾಸನ ಪದ್ಯಗಳು ಎಷ್ಟು ಸೊಗಸಾಗಿವೆಯೆಂದರೆ ಇವುಗಳಿಂದ ಮಿತ್ರವಿಂದಾಗೋವಿಂದ ನಾಟಕಕ್ಕೆ ಸಿಂಗರಾರ್ಯ ಪದ್ಯಗಳನ್ನಾರಿಸಿಕೊಂಡಿದ್ದಾನೆ. ಅಪ್ರತಿಮವೀರಚರಿತೆಯಲ್ಲಿಯೂ ಈ ಶಾಸನಗಳಲ್ಲಿಯ ಕೆಲವು ಪದ್ಯಗಳಿವೆ.

ಈ ತಾಮ್ರಶಾಸನಗಳಲ್ಲಿ ಚಾರಿತ್ರಿಕ ವಿಷಯಗಳು ತುಂಬಿವೆ. ಚಿಕ್ಕದೇವರಾಜ ನಡೆಸಿದ ಯುದ್ಧಗಳು ಕೃಷ್ಣರಾಜ ಮಾಡಿದ ದಾನಧರ್ಮಗಳು ಮುಂತಾದ ಹಲವು ವಿವರಗಳು ಇವುಗಳಿಂದ ತಿಳಿದುಬರುತ್ತವೆ. ಈ ತಾಮ್ರಶಾಸನಗಳನ್ನು ಹಾಕಿಸಿರುವ ಮುಖ್ಯ ಉದ್ದೇಶ ಅಗ್ರಹಾರಗಳನ್ನು ರಚಿಸಿ ಹಲವು ವೃತ್ತಿಗಳಾಗಿ ವಿಂಗಡಿಸಿ ದತ್ತಿ ಬಿಡುವುದು. ಅನೇಕ ಕಾರಣಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಹೀಗೆ ಗ್ರಾಮಗಳನ್ನು ದತ್ತಿ ಬಿಟ್ಟುದ್ದುಂಟು. ದಳವಾಯಿ ಕಳಲೆ ದೇವರಾಜಯ್ಯ ಹದಿನಾಲ್ಕು ಗ್ರಾಮಗಳಿಂದ ಕೂಡಿದ ರಾಮಚಂದ್ರಪುರ ಅಗ್ರಹಾರವನ್ನು ನಿರ್ಮಿಸಿದ ವಿಷಯವನ್ನು ತಿಳಿಸುವ ತಿರುಮಕೂಡಲು ನರಸೀಪುರ ತಾಲೂಕಿನ 16ನೇ ಶಾಸನ (ಸಂಖ್ಯೆ 16)ಅತ್ಯಂತ ದೊಡ್ಡದು. ಶಿಲಾಶಾಸನಗಳು ಸಾಮಾನ್ಯವಾಗಿ ಗದ್ಯರೂಪದಲ್ಲಿ ಕನ್ನಡದಲ್ಲಿದ್ದು ಶಾಸನ ಹಾಕಿಸಿರುವ ಉದ್ದೇಶವನ್ನು ಮಾತ್ರ ತಿಳಿಸುವ ವಸ್ತುನಿಷ್ಠ ಶಾಸನಗಳೇ ಹೆಚ್ಚು. ಒಡೆಯರು ಹಾಕಿಸಿರುವ ಈ ಶಾಸನಗಳಲ್ಲಿ ಶಾಸನ ಹಾಕಿಸಿದ ರಾಜನ ಮೂರು ಅಥವಾ ನಾಲ್ಕು ತಲೆಮಾರಿನ ವಂಶಾವಳಿಯನ್ನು ಕೊಡುವುದು ರೂಢಿ. ಚಿಕ್ಕದೇವರಾಜರ ಕಾಲದ ಮತ್ತು ಅನಂತರದ ಕೆಲವು ಶಾಸನಗಳಲ್ಲಿ ಬಿರುದೆಂತೆಂಬರಗಂಡ, ಲೋಕೈಕವೀರ, ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಪ್ರೌಢ ಪ್ರತಾಪನಪ್ರತಿಮವೀರನರಪತಿ ಮುಂತಾದ ಬಿರುದಾವಳಿಯನ್ನು ನೋಡಬಹುದು. ದೊಡ್ಡಶಾಸನಗಳಲ್ಲಿಯೂ ಸಾಹಿತ್ಯಾಂಶ ಇಲ್ಲವೇ ಇಲ್ಲವೆನ್ನಬಹುದು. ಚಿಕ್ಕದೇವರಾಜ ಮಳವಳ್ಳಿಯಲ್ಲಿ ಶೃಂಗಾರಕೊಳವೆಂಬ ಕೊಳವನ್ನು ಕಟ್ಟಿಸಿದ ವಿಷಯವನ್ನು ತಿಳಿಸುವ ಅಲ್ಲಿಯ ಶಾಸನ ಸಂಸ್ಕೃತದಲ್ಲಿ ಸುಂದರವಾದ ವೃತ್ತಗಳಿಂದ ರಚಿತವಾಗಿದ್ದು ಕೊನೆಯಲ್ಲಿ ಕನ್ನಡದಲ್ಲಿಯೂ ಆ ವಿಷಯವನ್ನು ತಿಳಿಸುತ್ತದೆ. ಕಲ್ಲಂಬಾಳಿನ ಹೊಯ್ಸಳರ ಕಾಲದ ದೇವಾಲಯವನ್ನು ಒಡೆಯರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿದ ವಿಷಯವನ್ನು ತಿಳಿಸುವ ಶಾಸನದ ಆರಂಭದಲ್ಲಿ ವಾಗಾರ್ಥಾವಿವ ಎಂದು ಮೊದಲಾಗುವ ರಘುವಂಶದ ಪ್ರಸಿದ್ಧವಾದ ಶ್ಲೋಕವನ್ನು ಕೊಟ್ಟಿರುವುದೊಂದು ವಿಶೇಷ. ಕಂಠೀರವ ನರಸರಾಜ ಕಂಠೀರಾಯ ಹಣವನ್ನು ಟಂಕಿಸಿದುದನ್ನು ಒಂದು ಶಾಸನ ತಿಳಿಸಿದರೆ ಮತ್ತೆರಡು ಶಾಸನಗಳು ಕಾಶಿ, ಗಯಾ ಪ್ರಯಾಗಗಳಲ್ಲಿ ದಾನಧರ್ಮಗಳಿಗಾಗಿ ಈ ರಾಜ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತವೆ. ಪವಾಡಗಳನ್ನು ತಿಳಿಸುವ ಕೆಲವು ಶಾಸನಗಳೂ ಉಂಟು. 1818 ರಲ್ಲಿ ಮೈಲಿಬೇನೆ ಮತ್ತು ಕಾಲರ ಹರಡಿದಾಗ ನಂಜಮ್ಮ ಎಂಬ ಕನ್ಯೆಯ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮಿ ಮತ್ತು ಉಜ್ಜಯಿನಿಯ ಮಹಾಕಾಳಿಯರು ಆವಿರ್ಭವಿಸಿ ಎಲ್ಲ ವರ್ಣದವರಿಗೂ ರೋಗಾದ್ಯುಪದ್ರವಗಳನ್ನು ಪರಿಹರಿಸಿದುದಾಗಿ ಕನ್ನಂಬಾಡಿಯ ಶಾಸನವೊಂದು ತಿಳಿಸುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ನೂರಾರು ಶಾಸನಗಳಿದ್ದರೂ ಅವು ಹೆಚ್ಚಾಗಿ ಮೂರ್ತಿಗಳ ಪೀಠದ ಮೇಲೆ, ಒಡವೆಗಳ ಮೇಲೆ ದೇವಾಲಯಗಳ ಪಾತ್ರೆಗಳ ಮೇಲೆ, ಉತ್ಸವ ವಿಗ್ರಹಗಳ ಮೇಲೆ ಇರುವ ಕಿರುಶಾಸನಗಳು. ನಂಜನಗೂಡು, ಚಾಮರಾಜನಗರ, ಮೈಸೂರು, ಮೇಲುಕೋಟೆ, ಶ್ರೀರಂಗಪಟ್ಟಣ ಮುಂತಾದ ಅನೇಕ ಕಡೆ ದೇವಾಲಯಗಳಿಗೆ ನೂರಾರು ಲೋಹ ಮತ್ತು ಶಿಲಾಮೂರ್ತಿಗಳನ್ನು ಮಾಡಿಸಿದುದಲ್ಲದೆ ಅವುಗಳ ಮೇಲೆ ಮೂರ್ತಿಗಳ ಹೆಸರು ಮತ್ತು ಅವನ್ನು ಮಾಡಿಸಿದವರ ಹೆಸರುಗಳಿವೆ. ಈ ಶಾಸನಗಳಲ್ಲಿ ವಿಷಯ ವೈವಿಧ್ಯತೆ ಕಡಿಮೆ. ಸನ್ನದುಗಳು, ನಿರೂಪಗಳು, ರಹದಾರಿ ಪತ್ರಗಳು ಮುಂತಾದ ಕೈಯಲ್ಲಿ ತಯಾರು ಮಾಡಿದ ಹಾಳೆಗಳ ಮೇಲಿರುವ ಐತಿಹಾಸಿಕ ದಾಖಲೆಗಳ ಸಂಖ್ಯೆಯೂ ಹೇರಳವಾಗಿವೆ. (ಎಂ.ಎಚ್.)

**ನಾಣ್ಯಗಳು:** ಮೈಸೂರು ಒಡೆಯರ ನಾಣ್ಯಗಳು ಇಕ್ಕೇರಿಯ ನಾಣ್ಯಗಳನ್ನೇ ವಿಶೇಷವಾಗಿ ಹೋಲುತ್ತವೆ. ಇವರು ಚಿನ್ನ, ಬೆಳ್ಳಿ ಮತ್ತು ತಾಮ್ರಲೋಹಗಳಲ್ಲಿ ನಾಣ್ಯಗಳನ್ನು ಅಚ್ಚು ಹಾಕಿಸಿದ್ದರೂ ಚಿನ್ನ ಮತ್ತು ತಾಮ್ರದ ನಾಣ್ಯಗಳೇ ವಿಶೇಷವಾಗಿ ದೊರೆತಿವೆ. ಈ ಮನೆತನದ ರಾಜರಲ್ಲಿ ಮೊಟ್ಟಮೊದಲನೆಯದಾಗಿ ನಾಣ್ಯಗಳನ್ನು ಅಚ್ಚುಹಾಕಿಸಿದವ ಕಂಠೀರವ ನರಸರಾಜ ಒಡೆಯರ್. ಇವನು ಹಣಗಳನ್ನು ಮಾತ್ರ ಟಂಕಿಸಿದ. ಇವು ಕಂಠೀರಾಯ ಹಣವೆಂದೇ ಹೆಸರಾಯಿತು. ಕಾಲಕ್ರಮದಲ್ಲಿ ದಿವಾನ್ ಪೂರ್ಣಯ್ಯ ಇದೇ ರೀತಿಯ ಹಣವನ್ನು ಅಚ್ಚುಹಾಕಿಸಿದ. ಚಿಕ್ಕದೇವರಾಜ ಒಡೆಯರ್ ವರಹ ಮತ್ತು ಹಣಗಳನ್ನು ಚಿನ್ನದಲ್ಲಿ ಟಂಕಿಸಿದ. ಇದೇ ಕಾಲದಲ್ಲಿ 46 ಮತ್ತು 23 ಗ್ರೇನ್ ತೂಕದ ತಾಮ್ರದ ನಾಣ್ಯಗಳು ಬಳಕೆಯಲ್ಲಿದ್ದವು. ಇವುಗಳು ಯಾರ ಕಾಲದ ನಾಣ್ಯಗಳೆಂದು ಖಚಿತವಾಗಿ ತಿಳಿದಿಲ್ಲವಾದರೂ ಕೆಲವು ವಿದ್ವಾಂಸರು ಇವುಗಳನ್ನು ಚಿಕ್ಕದೇವರಾಜನದ್ದೆಂದೂ ನಾಣ್ಯದ ಹಿಮ್ಮುಖದಲ್ಲಿನ ಸಂಖ್ಯೆಗಳು ಅವನ ಆಳ್ವಿಕೆಯ ವರ್ಷಗಳೆಂದೂ ಭಾವಿಸುತ್ತಾರೆ.

ತಾತ್ಕಾಲಿಕವಾಗಿ ಹಲವು ವರ್ಷಗಳ ಕಾಲ ಮಹಮ್ಮದೀಯರ ಆಳಿಕೆಗೆ ಒಳಪಟ್ಟಿದ್ದ ಮೈಸೂರು ಸಂಸ್ಥಾನ ಸ್ವತಂತ್ರವಾದ ಅನಂತರ ಮೈಸೂರು ಅರಸರು ತಮ್ಮ ನಾಣ್ಯಗಳನ್ನು ಮತ್ತೆ ಅಚ್ಚುಮಾಡಲು ಪ್ರಾರಂಭಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಬಾಲಕನಾಗಿದ್ದಾಗ ರೀಜೆಂಟನಾಗಿದ್ದ ದಿವಾನ್ ಪೂರ್ಣಯ್ಯ ಇಕ್ಕೇರಿಯ ವರಹಗಳ ಮಾದರಿಯಲ್ಲಿ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದ. ಹೊಸ ಇಕ್ಕೇರಿ ವರಹ ಎಂದು ಇವು ಪ್ರಸಿದ್ಧವಾಗಿದ್ದವು. ಮುಮ್ಮಡಿ ಕೃಷ್ಣರಾಜ ಒಡೆಯರು ಆಡಳಿತವನ್ನು ವಹಿಸಿಕೊಂಡ ಮೇಲೆ ಪೂರ್ಣಯ್ಯ ಹಾಕಿಸಿದ್ದ ನಾಣ್ಯಗಳನ್ನೇ ಸ್ವಲ್ಪ ಬದಲಾವಣೆಯೊಂದಿಗೆ ಮುಂದುವರಿಸಿದರು. ಇವುಗಳಿಗೆ (ಕರ್ತಾರ್) ರಾಜ ಇಕ್ಕೇರಿ ವರಹವೆಂದೂ ಹೆಸರಿದ್ದಿತ್ತು. ಇವರು ಹೊಸ ನಮೂನೆಯ ತಾಮ್ರದ ಪೈಸೆಗಳನ್ನೂ ಮುದ್ರಿಸಲು ಆರಂಭಿಸಿದರು. ಇವುಗಳಲ್ಲಿ ಅನೇಕ ನಮೂನೆಗಳನ್ನು ಕಾಣಬಹುದು. ಮೊದಲು ಅಚ್ಚಾದದ್ದು ಆನೆಕಾಸು ಎಂದು ಕರೆಯಲಾದ ನಾಣ್ಯ. ಇದರ ಮುಮ್ಮುಖದಲ್ಲಿ ಆನೆಯ ಚಿತ್ರ ಮತ್ತು ಹಿಮ್ಮುಖದಲ್ಲಿ ಶ್ರೀಕೃಷ್ಣರಾಜ ಎಂಬ ನಾಗರೀ ಬರಹವಿದೆ. ಅನಂತರ ಮೈಲಿಕಾಸು ಬಳಕೆಗೆ ಬಂದಿತು. ಇದರಲ್ಲಿ ಆನೆಯ ಮೇಲೆ ಶ್ರೀ ಎಂಬ ಕನ್ನಡ ಅಕ್ಷರ ಮತ್ತು ಹಿಮ್ಮುಖದಲ್ಲಿ ಇಂಗ್ಲಿಷಿನಲ್ಲಿ ಕ್ಯಾಷ್ ಎಂಬ ಬರೆಹ ಮತ್ತು ರೋಮನ್ ಸಂಖ್ಯೆಯಲ್ಲಿ (V, X, XX) ಅದರ ಮೌಲ್ಯ ಮತ್ತು ಕನ್ನಡದಲ್ಲಿ ಮಯಿಲಿಕಾಸು ಎಂಬ ಬರೆಹ ಕಾಣಬರುತ್ತದೆ. ಅನಂತರ ಮುಮ್ಮುಖದಲ್ಲಿ ಆನೆಯ ಮೇಲೆ ಕನ್ನಡದಲ್ಲಿ ಚಾ ಅಥವಾ ಚಾಮುಂಡಿ, ಹಿಮ್ಮುಖದಲ್ಲಿ ನಾಣ್ಯದ ಮೇಲ್ಭಾಗದಲ್ಲಿ ಕೃಷ್ಣ ಎಂಬ ಕನ್ನಡ ಬರೆಹ, ಅದರ ಕೆಳಗೆ ಮಯಿಲಿ ಕಾಸು (ಕನ್ನಡದಲ್ಲಿ) ಮತ್ತು ಇಂಗ್ಲಿಷಿನ ಕ್ಯಾಷ್ ಇರುವ ನಾಣ್ಯಗಳು ಅಚ್ಚಾದುವು. ಕೊನೆಗೆ ಆನೆಗೆ ಬದಲಾಗಿ ಸಿಂಹದ ಚಿತ್ರವೂ ಅದರ ಮೇಲೆ

ಶ್ರೀಚಾಮುಂಡಿ ಎಂಬ ಕನ್ನಡ ಬರೆಹ, ಸೂರ್ಯಚಂದ್ರರಿರುವ ಮುಮ್ಮುಖವೂ ಹಿಮ್ಮುಖದಲ್ಲಿ ನಾಣ್ಯದ ಮಧ್ಯದಲ್ಲಿ ಕೃಷ್ಣ ಎಂಬ ಬರೆಹ ಅದರ ಸುತ್ತಲೂ ವೃತ್ತಾಕಾರದಲ್ಲಿ XXV ಕ್ಯಾಷ್ ಎಂಬ ಇಂಗ್ಲಿಷ್ ಬರೆಹ, ಜರ್ಬಿ ಮಹಿಸೂರ್ ಎಂಬ ಪಾರಸೀ ಬರೆಹ ಮತ್ತು ಮಯಿಲಿ ಕಾಸು 25 ಎಂಬ ಕನ್ನಡ ಬರೆಹದ ನಾಣ್ಯಗಳು ಬಳಕೆಗೆ ಬಂದವು. 1833ರಲ್ಲಿ ಟಂಕಸಾಲೆ ಮೈಸೂರಿನಿಂದ ಬೆಂಗಳೂರಿಗೆ ಬದಲಾಯಿಸಲ್ಪಟ್ಟರೂ ಇದೇ ರೀತಿಯ ನಾಣ್ಯಗಳು ಅಚ್ಚಾಗುತ್ತಿದ್ದವು. 6¼ ಕಾಸಿನ ನಾಣ್ಯದಲ್ಲಿ ಸಿಂಹದ ಮೇಲೆ ಶ್ರೀ ಎಂಬ ಅಕ್ಷರ, ಹಿಮ್ಮುಖದಲ್ಲಿ ಕೃಷ್ಣ ಎಂಬ ಕನ್ನಡ ಬರೆಹ, ಜರ್ಬಿ ಮಹಿಸೂರ್ ಎಂಬ ಪಾರಸೀ ಬರೆಹ ಇವೆ. 1843 ರಲ್ಲಿ ಟಂಕಸಾಲೆ ಅಂತಿಮವಾಗಿ ಮುಚ್ಚಲ್ಪಟ್ಟಿತು. ಆ ವರ್ಷ ಅಚ್ಚಾದ ತಾಮ್ರದ ನಾಣ್ಯದಲ್ಲಿ ಮುಮ್ಮುಖದಲ್ಲಿ ಸಿಂಹದ ಚಿತ್ರ, ಅದರ ಮೇಲೆ ಶ್ರೀ ಎಂಬ ಅಕ್ಷರ, ಕೆಳಭಾಗದಲ್ಲಿ 1843, ಹಿಮ್ಮುಖದಲ್ಲಿ ಕೃಷ್ಣ ಎಂಬ ಕನ್ನಡ ಬರೆಹ, ಅದರ ಕೆಳಗೆ ಮಹಿಸೂರ್ ಜರ್ಬಿ ಎಂಬ ಪಾರಸೀ ಬರೆವಣಿಗೆಯನ್ನು ಕಾಣಬಹುದು. ಇದು ಮೈಸೂರು ಅರಸರು ಅಚ್ಚುಮಾಡಿಸಿದ ಕೊನೆಯ ನಾಣ್ಯ. (ಎ.ವಿ.ಎನ್.)

**ಮೈಸೂರು ರಾಜ್ಯದಲ್ಲಿ ಕೃಷಿಯ ವ್ಯಾಪಾರೀಕರಣ:** ಭಾರತ ಪ್ರಧಾನವಾಗಿ ಕೃಷಿ ಉದ್ಯೋಗದ ಗ್ರಾಮಗಳ ದೇಶ. ಬಹಳ ಹಿಂದಿನಿಂದಲೂ ಗೋದಿ, ಜೋಳ, ರಾಗಿ ಮುಂತಾದ ಕಾಳು ಕಡ್ಡಿಗಳನ್ನು ಬೆಳೆದು ಮಾರಾಟದಿಂದ ರೈತರು ತಮ್ಮ ಅಭಿವೃದ್ಧಿಯನ್ನು ಕಾಣುತ್ತಿದ್ದರು. ಈಚಿನ ಶತಮಾನಗಳಲ್ಲಿ ಬ್ರಿಟಿಷರ ಆಗಮನ ಕಾಲದಿಂದ ಈ ದಿಶೆಯಲ್ಲಿ ಬದಲಾವಣೆಗಳಾಗತೊಡಗಿದವು. ಇವರ ಅಧಿಕೃತ ಕಾನೂನು ಮತ್ತು ನಿಯಮಗಳನ್ನು ಆಡಳಿತದಲ್ಲಿ ಅಳವಡಿಸಿ ಕೃಷಿ ಉದ್ಯೋಗದಲ್ಲಿ ತೀವ್ರ ಪರಿಣಾಮಕಾರಿಯಾದ ಬದಲಾವಣೆಗಳನ್ನು ತರಲಾಯಿತು ಮತ್ತು ಲಾಭದಾಯಕ ಫಸಲುಗಳನ್ನು ಬೆಳೆಯಲು ಒತ್ತಾಯಿಸಲಾಯಿತು. ಇದು ರೈತರ ಹಾಗೂ ವನವಾಸಿಗಳ ಕೃಷಿ ಪದ್ಧತಿಗಳಿಗೆ ವಿರುದ್ಧವಾಗಿತ್ತು. ಬ್ರಿಟಿಷರು ಕಾಫಿ, ಟೀ, ಏಲಕ್ಕಿ, ಹತ್ತಿ, ಹೊಗೆಸೊಪ್ಪು ಮುಂತಾದ ಹಣದ ಬೆಳೆಗಳನ್ನು ತಂದರು. ಇದರಿಂದ ಆಹಾರ ಧಾನ್ಯಗಳ ಬೆಳೆ ಕಡಿಮೆಯಾಯಿತು. ತತ್ಪರಿಣಾಮವಾಗಿ ರೈತಾಪಿ ಜನರ ಸ್ಥಿತಿಗತಿಗಳು ಕೆಡುತ್ತಾ ಬಂದುವು.

1831ರಲ್ಲಿ ಸರ್ ಮಾರ್ಕ್ ಕಬ್ಬನ್ ಮೈಸೂರಿನ ಕಮಿಷನರಾದ ಮೇಲೆ ಏಲಕ್ಕಿಯನ್ನು ಬೆಳೆಯಲು ಪ್ರೋತ್ಸಾಹಿಸಿದ. ಅನಂತರ ಲಾರ್ಡ್ ಬೌರಿಂಗ್ ಕಮಿಷನರಾಗಿದ್ದಾಗ ಏಲಕ್ಕಿಯನ್ನು ಬೆಳೆಯಲು ಪಶ್ಚಿಮ ಘಟ್ಟದ ಅರಣ್ಯ ಭೂಮಿಯನ್ನು ಕೊಡಮಾಡಿದ. ಅತಿ ಹೆಚ್ಚು ಹಣ ಕೊಟ್ಟವನಿಗೆ ಈ ಭೂಮಿಯನ್ನು ಹರಾಜು ಹಾಕಿ ಅವನಿಂದ 28 ಪೌಂಡು ಏಲಕ್ಕಿಗೆ 2 ರೂಪಾಯಿ ತೆರಿಗೆ ವಸೂಲು ಮಾಡಲಾಗುತ್ತಿತ್ತು. ಬೇರೆ ಯಾವುದೇ ಉದ್ಯೋಗಗಳಿಗಿಂತ ಏಲಕ್ಕಿ ಬೆಳೆಯುವುದನ್ನು ಬಹಳ ಪ್ರೋತ್ಸಾಹಿಸಲಾಯಿತು.

ಬ್ರಿಟಿಷರು ಪ್ರೋತ್ಸಾಹಿಸಿದ ಇನ್ನೊಂದು ಲಾಭದಾಯಕ ಬೆಳೆಯೆಂದರೆ ಕಾಫಿ. ಮೊಟ್ಟಮೊದಲು ಕಾಫಿ ಬೀಜವನ್ನು ತಂದವನು 17ನೆಯ ಶತಮಾನದಲ್ಲಿ ಬಾಬಬುಡನ್ ಎಂಬ ಮುಸಲ್ಮಾನ ಸನ್ಯಾಸಿ ಎಂದು ಪ್ರತೀತಿ. ಇವನು ಮೆಕ್ಕಕ್ಕೆ ಹೋದಾಗ ಅಲ್ಲಿ ಕಾಫಿ ಬೀಜವನ್ನು ಸಂಗ್ರಹಿಸಿ ತಂದು ಚಿಕ್ಕಮಗಳೂರು ಬೆಟ್ಟದಲ್ಲಿ ನೆಟ್ಟು ಬೆಳೆಸಿದನಂತೆ. ಕ್ರಮೇಣ ಈ ಬೆಟ್ಟವನ್ನು ಬಾಬಾಬುಡನ್ ಬೆಟ್ಟವೆಂದು ಕರೆಯಲಾಯಿತಂತೆ. ಮುಮ್ಮಡಿ ಕೃಷ್ಣರಾಜ ಒಡೆಯರ್ (1811–31) ಕಾಲದಲ್ಲಿ ಮದರಾಸಿನ ಒಬ್ಬ ವರ್ತಕ ಈ ಬೆಟ್ಟದ ಮೇಲೆ ತಾನೊಬ್ಬನೇ ಸ್ವಾಮ್ಯವನ್ನು ಪಡೆದಿದ್ದನಂತೆ. ಆಗ ಇಲ್ಲಿ ಕಾಫಿ ಬೆಳೆ ತೀರ ಕಡಿಮೆ ಇತ್ತು. 1840ರಲ್ಲಿ ಕ್ಯಾನನ್ ಎಂಬುವವನು ಇಲ್ಲಿ ಸ್ಥಿರಾಸ್ತಿಯನ್ನು ಮಾಡಿಕೊಂಡು ಬಾಬಾಬುಡನ್ ಬೆಟ್ಟದ ಹತ್ತಿರ ಕಾಫಿ ಬೆಳೆಸಲು ಆರಂಭಿಸಿದ. ಮೈಸೂರು ಪ್ರಾಂತದ ಹೊರಗಡೆ ಇದಕ್ಕೆ ಹೆಚ್ಚು ಬೇಡಿಕೆಯಿದೆಯೆಂದು ತಿಳಿದು ಐರೋಪ್ಯರಿಗೆ ಇಲ್ಲಿಗೆ ಬಂದು ನೆಲೆಸಿ ಸುತ್ತಮುತ್ತೆಲ್ಲ ಕಾಫಿ ಬೆಳೆಯಲು ಕಬ್ಬನ್ ಪ್ರೋತ್ಸಾಹಿಸಿದ.

ಆರಂಭದಲ್ಲಿ ಕೇವಲ ನಾಲ್ಕು ದೊಡ್ಡ ದೊಡ್ಡ ತೋಟಗಳ ಮಾಲೀಕರು ಇದ್ದರು. ಇವರಿಗೆ ಕಾಫಿ ಬೆಳೆಯಲು ಭೂಮಿಯನ್ನು ಉದಾರವಾಗಿ ಕೊಡಲಾಯಿತು. 1860ರ ಹೊತ್ತಿಗೆ ಬಹಳ ಜನ ದೊಡ್ಡ ಬೇಸಾಯಗಾರರು ಇಲ್ಲಿ ನೆಲೆಸಿ ಬಹಳ ವಿಶಾಲವಾದ ತೋಟಗಳನ್ನು ಬೆಳೆಸಿದರು. ಇವರು ದಿನಗೂಲಿಯ ಮೇಲೆ ಬಂದು ಸ್ಥಳೀಯ ಜನರು ಕಾಫಿ ಬೆಳೆಯಲು ತಮ್ಮ ತಮ್ಮ ತೋಟಗಳಲ್ಲಿ ಕೆಲಸ ಮಾಡಲು ಅವಕಾಶ ಮಾಡಿದರು.

ಕ್ರಮೇಣ ಈ ದೊಡ್ಡ ಐರೋಪ್ಯ ಬೇಸಾಯಗಾರರು ತುಂಬ ಪ್ರಬಲರಾದರು ಮತ್ತು ತಮ್ಮದೇ ಒಂದು ಸಂಘವನ್ನು ಮಾಡಿಕೊಂಡರು. ಸರ್ಕಾರ ಒಂದು ಬಂಡಿ ಫಸಲಿಗೆ ಒಂದು ರೂಪಾಯಿ ತೆರಿಗೆಯನ್ನು ವಿಧಿಸಿತ್ತು. 1881ರಲ್ಲಿ ಒಂದು ಹೊಸ ಕಾನೂನನ್ನು ತಂದರು. ಇದರ ಪ್ರಕಾರ ಎಲ್ಲ ಬೇಸಾಯಗಾರರಿಗೆ 30 ವರ್ಷಗಳ ಅವಧಿಯ ಭೋಗ್ಯಕ್ಕೆ ಭೂಮಿಯನ್ನು ಕೊಡಲಾಯಿತು. ಕ್ರಮೇಣ ಸ್ಥಳೀಯ ಬೇಸಾಯಗಾರರೂ ಕಾಫಿ ಬೆಳೆಯಲು ಚಿಕ್ಕಮಗಳೂರಿನಲ್ಲಿ ನೆಲೆಸಿದರು. ಸು.1890 ರಲ್ಲಿ 662 ಯುರೋಪಿಯನ್ನರು ಕಾಫಿ ಬೆಳೆಯುತ್ತಿದ್ದರು. ಇದರಿಂದ ಸ್ಥಳೀಯ ರೈತರು ಐರೋಪ್ಯ ಬೇಸಾಯಗಾರರಿಗೆ ಕಾಫಿ ಬೆಳೆಯಲು ತಮ್ಮ ಭೂಮಿಯನ್ನು ಬಿಡಬೇಕಾಯಿತು. ಕೆಲವು ಸಲ ಇವರನ್ನು ಕಾಫಿ ಬೆಳೆಯಲು ಒತ್ತಾಯಿಸುತ್ತಿದ್ದರು.

ಸು.1896–97ರಲ್ಲಿ 146676 ಎಕರೆ ಭೂಮಿಯಲ್ಲಿ ಕಾಫಿ ಬೆಳೆಯಲಾಗುತ್ತಿತ್ತು. 1840–41 ರಿಂದ 1897–98ರಲ್ಲಿ ಕಾಫಿ ಬೆಳೆಯುವ ಭೂಮಿ 140,501ರಿಂದ 145,550 ಎಕರೆಯಷ್ಟು ಹೆಚ್ಚಿತು. ಹೀಗಾಗಲು ಕೆಲವು ಕಾರಣಗಳಿವೆ. ಸರಿಯಾಗಿ ವರ್ಷ ವರ್ಷ ಮಳೆ ಬಾರದೆ ಪರಂಪರಾನುಗತ ಕೃಷಿಯನ್ನು ನಿಲ್ಲಿಸಿದುದು. ಹಲವಾರು ಐರೋಪ್ಯರಿಗೆ ಚಿನ್ನದ ಗಣಿಗಾರಿಕೆ ಹೆಚ್ಚು ಲಾಭದಾಯಕವಾಗಿ ಕಂಡಿತು. ಈ ಸಮಯದಲ್ಲಿ ದಕ್ಷಿಣ ಅಮೆರಿಕದ ಬ್ರೆಜಿಲ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಕಾಫಿ ತೋಟಗಳ ಆರಂಭವಾಯಿತು. ಹೀಗಾಗಿ ದಿನದಿಂದ ದಿನಕ್ಕೆ ಕಾಫಿ ಬೆಳೆಯುವ ಪ್ರದೇಶ ಕ್ಷೀಣಿಸುತ್ತ ಬಂದಿತು (1947).

ಕಬ್ಬು ಮತ್ತು ಹೊಗೆಸೊಪ್ಪು ಬೇಸಾಯದಲ್ಲಿ ಆಗಿನ ಕಮಿಷನರಿಗೆ ಆಸಕ್ತಿಯಿದ್ದುದರಿಂದ, ರೈತರಿಗೆ ಅವನ್ನು ಬೆಳೆಯಲು ತಿಳಿಸಿದರು. ವಿಶೇಷವಾಗಿ 1910ರ ಅನಂತರ ಹೆಚ್ಚಿನ ಸಕ್ಕರೆಯನ್ನು ಮಂಡ್ಯ ಜಿಲ್ಲೆಯಲ್ಲಿ ಉತ್ಪತ್ತಿ ಮಾಡಲಾಯಿತು. ಒಟ್ಟಿನಲ್ಲಿ ಮೈಸೂರು ಪ್ರಾಂತದಲ್ಲಿ ಸು.41,555 ಎಕರೆಯಷ್ಟು ಕಬ್ಬನ್ನು 15,068 ಎಕರೆಯಷ್ಟು ಹೊಗೆಸೊಪ್ಪನ್ನು ಬೆಳೆಯಲಾಗುತ್ತಿತ್ತು.

ಈ ಸಂದರ್ಭದಲ್ಲಿ ಇನ್ನೊಂದು ಗಮನಾರ್ಹ ಅಂಶವೆಂದರೆ ಅಧಿಕ ಹತ್ತಿ ಬೆಳೆ. ಕಾಫಿ ಬೇಸಾಯ ಇಳಿಮುಖವಾಗುವುದಕ್ಕೆ ಇದೂ ಒಂದು ಕಾರಣ. ಅಮೆರಿಕ 1861–65ರ ದೇಶಿಯ ಯುದ್ಧದ ಪರಿಣಾಮವಾಗಿ ಹತ್ತಿ ಬೆಳೆ ಮಿತಿಮೀರಿ ಹೆಚ್ಚಾಯಿತು. ಬಳ್ಳಾರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಹತ್ತಿ ಬೆಳೆ ಆರಂಭವಾಯಿತು. ಬೆಂಗಳೂರಿನಲ್ಲಿ 1884ರಲ್ಲಿ ದಿ ಮೈಸೂರ್ ಸ್ಪಿನ್ನಿಂಗ್ ಆಂಡ್ ಮ್ಯಾನುಫ್ಯಾಕ್ಚರಿಂಗ್ ಮಿಲ್ಸ್ ಎಂಬ ಹತ್ತಿ ಗಿರಣಿ ಮತ್ತು 1887ರಲ್ಲಿ ಉಣ್ಣೆ, ಹತ್ತಿ, ರೇಷ್ಮೆ ಗಿರಣಿಗಳು ಆರಂಭವಾದುವು. ಕ್ರಮೇಣ ಹಲವಾರು ಕಾರ್ಖಾನೆಗಳು ಆರಂಭವಾದುವು. ಸ್ವಲ್ಪ ಸಮಯದ ಅನಂತರ ದಾವಣಗೆರೆ ಮತ್ತು ಚಿತ್ರದುರ್ಗ ಹತ್ತಿ ಉತ್ಪಾದನೆ ಮತ್ತು ಬಟ್ಟೆ ತಯಾರಿಕೆಯ ಕೇಂದ್ರಗಳಾದುವು. ಈ ಭಾಗದಲ್ಲಿ 151,901 ಎಕರೆಯಷ್ಟು ಹತ್ತಿ ಬೆಳೆಯಲಾರಂಭಿಸಿದರು.

ವಸಾಹತುಶಾಹಿ ಬ್ರಿಟಿಷರ ಕಾಲದಲ್ಲಿ ಕೇವಲ ಮೈಸೂರು ಪ್ರಾಂತವಲ್ಲದೆ ಇಡೀ ದೇಶದಲ್ಲೆಲ್ಲ ಹಣದ ಬೆಳೆಗಳನ್ನು ಪ್ರೋತ್ಸಾಹಿಸಲಾಯಿತು. ಇದರಿಂದ ರೈತರಿಗೆ ಅನಾನುಕೂಲವಾದರೂ ಬ್ರಿಟಿಷರಿಗೆ ಹೆಚ್ಚು ಲಾಭವಾಯಿತು. ಹಲವಾರು ಐರೋಪ್ಯರು ದೊಡ್ಡ ಹಿಡುವಳಿಯನ್ನು ಪಡೆದು ಸಾವಿರಾರು ರೈತರನ್ನು ದಿನಗೂಲಿಗಳನ್ನಾಗಿ ಮಾಡಿದರು. ಐರೋಪ್ಯರ ಅನುಕೂಲಕ್ಕೋಸ್ಕರ ಸ್ಥಳೀಯರು ತಮ್ಮ ಜಮೀನುಗಳನ್ನು ತೆರಬೇಕಾಯಿತು. (ಎಂ.ಎಸ್.)

**ಮೊಗಲರು:** ಭಾರತವನ್ನು ಆಳಿದ ಮೊಗಲ್ ರಾಜವಂಶ (1526–1858). ಒಂದನೆಯ ಪಾಣಿಪತ್ ಕದನದಲ್ಲಿ ಇಬ್ರಾಹಿಂ ಲೋದಿಯನ್ನು ಸೋಲಿಸಿ ದೆಹಲಿ ಮತ್ತು ಆಗ್ರಗಳನ್ನು ವಶಪಡಿಸಿಕೊಂಡ ಜಾಹಿರುದ್ದೀನ್ ಮಹಮದ್ ಬಾಬರ್ ಈ ವಂಶದ ಸ್ಥಾಪಕ. ಈತ ತಾಯಿಯ ಕಡೆಯಿಂದ ತೈಮೂರನ ಮತ್ತು ತಂದೆಯ ಕಡೆಯಿಂದ ಚೆಂಗೇಸ್‌ಖಾನನ ವಂಶಕ್ಕೆ ಸೇರಿದವ. 1527ರಲ್ಲಿ ಸಂಭವಿಸಿದ ಖನುವಾ ಕದನದಲ್ಲಿ ಮೇವಾಡದ ರಾಣಾ ಸಂಗ್ರಾಮವನ್ನು ಸೋಲಿಸಿದ ಬಾಬರ್ ಮರುವರ್ಷವೇ ಆಫ್ಘನ್ನರನ್ನು ಘಗ್ರ ಕದನದಲ್ಲಿ ಸೋಲಿಸಿ ತನ್ನ ರಾಜ್ಯವನ್ನು ಬಿಹಾರ ಬಂಗಾಲಗಳಿಗೂ ವಿಸ್ತರಿಸಿದ. ಈ ವಿಜಯಗಳಿಂದ ಉತ್ತರ ಭಾರತದ ಸಾರ್ವಭೌಮನಾದ ಬಾಬರ್ 1530ರಲ್ಲಿ ಕೊನೆಯುಸಿರೆಳೆದ.

ಮೊಗಲ್ ವಂಶಕ್ಕೆ ಸೇರಿದ 19 ಸುಲ್ತಾನರ ಪೈಕಿ ಮೊದಲ 6 ಮಂದಿಯನ್ನು–ಬಾಬರ್ (1526–30), ಹುಮಾಯೂನ್ (1530–56); 1540–55ರ ಅವಧಿಯನ್ನು ಹೊರತುಪಡಿಸಿ), ಅಕ್ಬರ್ (1556–1605), ಜಹಾಂಗೀರ್ (1605–27), ಷಹಜಹಾನ್ (1627–58) ಹಾಗೂ ಔರಂಗಜೇಬ (1658–1707)–ಮಹಾಮೊಗಲರೆಂದು ಕರೆಯಲಾಗಿದೆ.

ಅಕ್ಬರನ ಕಾಲದಲ್ಲಿ ಇಡೀ ಉತ್ತರ ಭಾರತ ಹಾಗೂ ದಖನ್ನಿನ ಖಾಂದೇಶ್ ಮತ್ತು ಬೀರಾರ್ ಪ್ರದೇಶಗಳು ಮೊಗಲ್ ಸಾಮ್ರಾಜ್ಯಕ್ಕೆ ಸೇರಿದ್ದುವು. ಔರಂಗಜ಼ೇಬನ ಕಾಲದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಮೊಗಲ್ ಸಾಮ್ರಾಜ್ಯ ವಿಸ್ತರಿಸಿತು. ಆದರೆ, ನಿಭಾಯಿಸಲಾಗದಷ್ಟು ಬೃಹತ್ತಾಗಿ ಸಾಮ್ರಾಜ್ಯ ಬೆಳೆದುಬಿಟ್ಟಿತೆಂಬ ಸತ್ಯವನ್ನು ತರುವಾಯ ಸಂಭವಿಸಿದ ಘಟನೆಗಳು ತೋರಿಸಿಕೊಟ್ಟವು. ಅಕ್ಬರ್ ಮತ್ತು ಔರಂಗಜ಼ೇಬ್ ಅನುಸರಿಸಿದ ಸಾಮ್ರಾಜ್ಯಶಾಹಿ ರೀತಿನೀತಿಗಳಲ್ಲಿ ಅಜಗಜಾಂತರವಿತ್ತು. ಅಕ್ಬರನ ಧರ್ಮಸಹಿಷ್ಣುತೆಯ ನೀತಿಯನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟು ಭಾರತವನ್ನು ಇಸ್ಲಾಮೀ ರಾಷ್ಟ್ರವನ್ನಾಗಿ ಮಾಡಲು ಹೊರಟ ಔರಂಗಜ಼ೇಬನ ನೀತಿಯಿಂದಾಗಿ ಸ್ವಾಭಾವಿಕವಾಗಿಯೇ ಅಸಮಾಧಾನದಿಂದ ಕುದಿದ ಹಿಂದುಗಳು ದಂಗೆ ಎದ್ದರು. ಅವರ ಪೈಕಿ ಪ್ರಮುಖರು ಮಹಾರಾಷ್ಟ್ರದಲ್ಲಿ ಶಿವಾಜಿಯ ನೇತೃತ್ವದಲ್ಲಿ ಮರಾಠರು. ಅನಂತರ ಪಂಜಾಬಿನಲ್ಲಿ ಸಿಖ್ಖರು. ಅಕ್ಬರನ ಕಾಲದಿಂದ ಮೊಗಲ್ ಸಿಂಹಾಸನಕ್ಕೆ ನಿಷ್ಠಬೆಂಬಲಿಗರಾಗಿದ್ದ ರಜಪೂತರು ಕೂಡ, ವಿಶೇಷವಾಗಿ ರಾಜಪುಟಾನದವರು ಮತ್ತು ಬುಂದೇಲಖಂಡದ ಜಾಟರು, ಮೊಗಲ್ ನೀತಿಯನ್ನು ವಿರೋಧಿಸುವ ಪ್ರವೃತ್ತಿ ತೋರಿದರು. ಇಷ್ಟೇ ಅಲ್ಲದೆ ಪೋರ್ಚುಗಲ್, ಹಾಲೆಂಡ್, ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಿಂದ ಬಂದ ಐರೋಪ್ಯ ವ್ಯಾಪಾರಿಗಳ ಶಾಂತಿಯುತ ವಾಣಿಜ್ಯ ವ್ಯವಹಾರಗಳ ಮರೆಯಲ್ಲಿ ರಾಜಕೀಯ ಮಹತ್ತ್ವಾಕಾಂಕ್ಷೆಗಳಿದ್ದವು. ಸುಸಜ್ಜಿತ ನೌಕಾಬಲ, ಸೈನಿಕರ ಶಿಸ್ತು ತರಬೇತಿ, ಯೋಜನಾ ನೈಪುಣ್ಯಗಳಲ್ಲಿ ಮೊಗಲರು ಬ್ರಿಟಿಷರಿಗೆ ಸಾಟಿಯಾಗಿರಲಿಲ್ಲ.

ಜಹಾಂಗೀರ್ ಆಳಿಕೆಯ ಅಂತ್ಯದಿಂದ ಮೊಗಲ್ ಸಿಂಹಾಸನದ ಉತ್ತರಾಧಿಕಾರಕ್ಕಾಗಿ ನಡೆದ ಕಚ್ಚಾಟ ಮೊಗಲ್ ಸಾಮ್ರಾಜ್ಯದ ಸಾಮಾನ್ಯ ಲಕ್ಷಣವಾಗಿ ಪರಿಣಮಿಸಿತು. ಇದರಿಂದ ಅಧಿಕಾರಿಶಕ್ತಿ, ಸದೃಢತೆ ಶಿಥಿಲಗೊಂಡವು. ಹೀಗಾಗಿ ತರುವಾಯದ ಮೊಗಲ್ ಸಾಮ್ರಾಟರೆಂದು ಪರಿಚಿತರಾದ ಸುಲ್ತಾನರ ಆಳಿಕೆಯ ಕಾಲಗಳಲ್ಲಿ ಸಾಮ್ರಾಜ್ಯದ ಎಲ್ಲೆಗಳು ಬಲುಬೇಗನೆ ಕುಗ್ಗತೊಡಗಿದವು.

1739ರಲ್ಲಿ ನಾದಿರ್ ಷಾ ಮತ್ತು 1751–67ರ ತನಕ ಅಹಮದ್ ಷಾ ಅಬ್ದಾಲಿಯ ಆಕ್ರಮಣಗಳಿಂದ ಮೊಗಲ್ ಸಾಮ್ರಾಜ್ಯ ಮತ್ತಷ್ಟು ಜರ್ಜರಿತವಾಯಿತು. ಅನಂತರದ ಮೊಗಲ್ ಸಾರ್ವಭೌಮರೆಂದರೆ 1ನೆಯ ಬಹಾದುರ್ ಷಾ ಅಥವಾ 1ನೆಯ ಷಾ ಆಲಂ (1707–12), ಜಹಂದರ್ ಷಾ (1712–13), ಫರ್ರುಕ್ಸಿಯಾರ್ (1713–19), ರಫೀ–ಉದ್–ದರಾಜತ್ (1719), ರಫಿ–ಉದ್–ದೌಲಹ್ (1719), ನೆಕುಸಿಯಾರ್ (1719), ಇಬ್ರಾಹಿಂ (1719), ಮುಹಮ್ಮದ್ ಷಾ (1719–48), ಅಹಮದ್ ಷಾ (1748–54), 2ನೆಯ ಆಲಂಗೀರ್ (1754–59), 2ನೆಯ ಷಾ ಆಲಂ (1759–1806), 2ನೆಯ ಅಕ್ಬರ್ (1806–37) ಹಾಗೂ 2ನೆಯ ಬಹಾದುರ್ ಷಾ (1837–57).

ಔರಂಗ್‌ಜೇಬ್ (ರೇಖಾ ಚಿತ್ರ)

ಮೊದಲನೆಯ ಪಾಣಿಪತ್ ಕದನದಲ್ಲಿ (1526) ಬಾಬರ್ ಜಯಗಳಿಸಿದ ಮೊಗಲ್ ಸಾಮ್ರಾಜ್ಯ ಸ್ಥಾಪಿಸಿದ. 2ನೆಯ ಪಾಣಿಪತ್ ಕದನದಲ್ಲಿ (1556) ಜಯಪಡೆದು ಅಕ್ಬರ್ ಅದನ್ನು ಸದೃಢಗೊಳಿಸಿದ. 3ನೆಯ ಪಾಣಿಪತ್ ಕದನದಲ್ಲಿ (1761) ಅದೇ ಮೊಗಲ್ ಸಾಮ್ರಾಜ್ಯ ಮಾರಕ ಆಘಾತಕ್ಕೀಡಾದುದು ಇತಿಹಾಸದ ವ್ಯಂಗ್ಯಗಳಲ್ಲೊಂದು. ಔಧ್‌ನ (ಅವಧ್) ನವಾಬ ಶೂಜ–ಉದ್–ದೌಲನ ಸಹಾಯ ಪಡೆದ ಅಹಮದ್ ಷಾ ಅಬ್ದಾಲಿ ಮೊಗಲ್ ಸಾಮ್ರಾಟ ಷಾ ಆಲಂ ಹಾಗೂ ಆತನ ಮರಾಠ ಬೆಂಬಲಿಗರನ್ನು ಈ ನಿರ್ಣಾಯಕ ಹೋರಾಟ ದಲ್ಲಿ ಸೋಲಿಸಿದ. ತರುವಾಯ ಮೊಗಲ್ ಸಾಮ್ರಾಜ್ಯದ ಅಸ್ತಿತ್ವ ಹಾಗೂ ಸ್ಥಾನಮಾನ ತೀರಾ ಹೀನಾಯಕರವಾದುದಾಗಿತ್ತು. ಈ ಕಾಲದ ಇತಿಹಾಸವೆಂದರೆ ಆಂತರಿಕ ಕಚ್ಚಾಟ, ಹಿಂದುಗಳ ದಂಗೆ ಹಾಗೂ ಬ್ರಿಟಿಷರ ಒಡೆದು ಆಳುವ ಕುಟಿಲ ರಾಜಕಾರಣಗಳಷ್ಟೇ. ಕೊನೆಯ ಮೊಗಲ್ ಸುಲ್ತಾನ್ 2ನೆಯ ಬಹಾದುರ್ ಷಾ ಬ್ರಿಟಿಷರು ನೀಡಿದ ವರ್ಷಾಶನವನ್ನು ಅವಲಂಬಿಸಿ ಬದುಕಬೇಕಾಯಿತು. 1858ರ ಪ್ರಸಿದ್ಧ ದಂಗೆಯಲ್ಲಿ ಈತನ ಪಾತ್ರವಿದ್ದಿತೆಂಬ ಆರೋಪದ ಮೇಲೆ ಈತನನ್ನು ಯಂಗನ್‌ಗೆ ಕಳುಹಿಸಲಾಯಿತು, 1862ರಲ್ಲಿ ಈತ ಮೃತನಾದ.

**ಆಡಳಿತ:** ಮೊಗಲರ ಆಡಳಿತ ವ್ಯವಸ್ಥಿತವಾಗಿ ರೂಪುಗೊಂಡಿದ್ದು ಅಕ್ಬರ್‌ನ ಕಾಲದಲ್ಲಿ. ಮೊಗಲರ ಆಡಳಿತ ವ್ಯವಸ್ಥೆಯಲ್ಲಿ ಸುಲ್ತಾನನಿಗೆ ಪರಮೋಚ್ಚ ಸ್ಥಾನ; ಆತನ ನಿರ್ಧಾರ ಪ್ರಶ್ನಾತೀತ; ಆತನ ಮಾತೇ ವೇದವಾಕ್ಯ, ಆಡಳಿತ, ಸೈನ್ಯ, ನ್ಯಾಯ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಆತನೇ ಸರ್ವಾಧಿಕಾರಿ. ಹೀಗಾಗಿ ಆತ ಸಮರ್ಥನೂ ಸ್ಥಿರಚಿತ್ತನೂ ಸಬಲನೂ ಆಗಿರಬೇಕಿತ್ತು. ಆದರೆ ಪ್ರಭುತ್ವ ವಂಶಪಾರಂಪರ್ಯವಾಗಿ ಬರುತ್ತಿದ್ದುದರಿಂದ ಎಲ್ಲ ತೆರನ ವ್ಯಕ್ತಿಗಳೂ ಮೊಗಲ್ ಸಿಂಹಾಸನವನ್ನೇರಿದರು. ದುರ್ಬಲ ಸುಲ್ತಾನರ ಕಾಲದಲ್ಲಿ ಆಡಳಿತ ಶಿಥಿಲವಾಯಿತು. ಸುಲ್ತಾನರಿಗೆ ಹಲವು ಮಂತ್ರಿಗಳಿದ್ದರೂ ದಿವಾನ, ಮೀರ್‌ಬಕ್ಷಿ, ಖಾನ್–ಇ–ಸಮನ್ ಹಾಗೂ ಸದರ್–ಇ–ಸದರ್ ಪ್ರಮುಖರಾಗಿದ್ದರು. ಮಂತ್ರಿ ಹುದ್ದೆಗೆ ಸರಿಸಮನಾದ ಹಲವಾರು ಅಧಿಕಾರದ ಪದವಿಗಳಿದ್ದವು. ಇವರ ನೇಮಕ ಸುಲ್ತಾನನ ಇಚ್ಛಾನುಸಾರ ನಡೆಯುತ್ತಿತ್ತು. ಜನಾಭಿಪ್ರಾಯವನ್ನು ಸುಲ್ತಾನನಿಗೆ ಪರಿಣಾಮಕಾರಿಯಾಗಿ ತಿಳಿಸಬಲ್ಲ ಯಾವ ಸಂಘ ಸಮಿತಿಯೂ ಇರಲಿಲ್ಲ. ಸುಲ್ತಾನ ಪ್ರಭಾವಶಾಲಿಯಾಗಿರುವ ತನಕ ಆಡಳಿತಯಂತ್ರ ಆತನ ಮರ್ಜಿಗನುಗುಣವಾಗಿ ನಡೆಯುತ್ತಿತ್ತು; ಆದರೆ ಆತ ದುರ್ಬಲನಾದಾಗ ಮಹತ್ವಾಕಾಂಕ್ಷಿ ಹಾಗೂ ತುಂಬ ಪ್ರಭಾವಶಾಲಿ ಮಂತ್ರಿ, ಅಧಿಕಾರಿಗಳ ತಾಳಕ್ಕೆ ತಕ್ಕಂತೆ ಸುಲ್ತಾನ ಕುಣಿಯಬೇಕಾದ ಅನಿವಾರ್ಯ ಪರಿಸ್ಥಿತಿ ಏರ್ಪಟ್ಟಿತು.

ಅಧಿಕಾರಶಾಹಿಯಲ್ಲಿ ನಾಗರಿಕ ಹಾಗೂ ಸೈನಿಕ ಎಂಬ ಭೇದವಿರಲಿಲ್ಲ (ಹಿರಿಯ ಅಧಿಕಾರಿಗಳೆಲ್ಲ ಮೂವತ್ತರ ಮೂರು ಶ್ರೇಣಿಗಳಲ್ಲಿ ಸೇರಿದವರಾಗಿದ್ದರು (ಮನ್ಸಬ್ದಾರರು). ಮೊದಲು ಇವರ ವೇತನ ನಗದಿನ ರೂಪದಲ್ಲಿತ್ತು; ಕ್ರಮೇಣ ವಿಭಾಗದಲ್ಲಿ ಆದಾಯದ ವಸೂಲಿಯಲ್ಲಿ ಭಾಗಶಃ ಅಥವಾ ಜಹಗೀರಿನ ರೂಪದಲ್ಲಿ ಕೊಡಲಾಯಿತು. ಈ ಮನ್ಸಬ್ದಾರಿ ವ್ಯವಸ್ಥೆಯೇ ಮೊಗಲ್ ಆಡಳಿತದ ತಳಹದಿಯಾಗಿತ್ತು. ಅದೇ ಅಧಿಕಾರಿಗಳ ಸ್ಥಾನಮಾನ ಹಾಗೂ ವೇತನಗಳನ್ನು ನಿರ್ಧರಿಸುತ್ತಿತ್ತು. ಈ ಹುದ್ದೆಗಳಿಗೆ ಯಾವುದೇ ಅರ್ಹತೆ ಅಥವಾ ಪರೀಕ್ಷೆಯಲ್ಲಿ ತೇರ್ಗಡೆ ಬೇಕಿರಲಿಲ್ಲ; ಸುಲ್ತಾನನ ಕೃಪೆಯೇ ಬೇಕಾದ ಅರ್ಹತೆ. ಪ್ರಧಾನವಾಗಿ ಮುಸ್ಲಿಮರನ್ನು, ವಿಶೇಷವಾಗಿ ಪರಕೀಯ ಮುಸ್ಲಿಮರನ್ನು ಅಧಿಕಾರಿಗಳಾಗಿ ನೇಮಕ ಮಾಡುತ್ತಿದ್ದುದೇ ಹೆಚ್ಚು. ಸ್ಥಳೀಯ ಜನರ ಭಾವನೆ ಅಭಿಪ್ರಾಯಗಳಿಗೆ ಬೆಲೆ ಕೊಡುತ್ತಿರಲಿಲ್ಲ.

ಸಾಮ್ರಾಜ್ಯವನ್ನು ಹಲವಾರು ಸುಬಾಗಳಾಗಿ ವಿಂಗಡಿಸಲಾಗಿತ್ತು. ಅಕ್ಬರನ ಕಾಲದಲ್ಲಿ 15, ಜಹಾಂಗಿರನ ಕಾಲದಲ್ಲಿ 17 ಹಾಗೂ ಔರಂಗಜೇಬನ ಕಾಲದಲ್ಲಿ 21 ಸುಬಾಗಳಿದ್ದುವು. ಒಂದೊಂದು ಸುಬಾ ಹಲವು ಸರ್ಕಾರಗಳಿಂದ (ಬ್ರಿಟಿಷರ ಕಾಲದ ಜಿಲ್ಲೆಗಳಿಗೆ ಸಮನಾದದ್ದು ಸರ್ಕಾರ್) ಕೂಡಿತ್ತು; ಸರ್ಕಾರ ಹಲವು ಗ್ರಾಮ ಸಹಿತವಾದ ಪರಗಣಗಳಿಂದ ಕೂಡಿತ್ತು. ಪ್ರಾಂತೀಯ ಆಡಳಿತದ ಮುಖ್ಯಸ್ಥ ಸುಬೇದಾರ; ಇವನಷ್ಟೇ ಪ್ರಮುಖನಾದ ಮತ್ತು ಕಂದಾಯ ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳುವ ದಿವಾನನೂ ಇದ್ದ. ಇಬ್ಬರೂ ಪರಸ್ಪರ ಪ್ರತಿಬಂಧಕಗಳಂತೆ ಇದ್ದುದರಿಂದ ಪ್ರಾಂತ್ಯದಲ್ಲಿ ದಂಗೆಯ ಸಂಭವನೀಯತೆ ಅತ್ಯಲ್ಪವಾಗಿತ್ತು. ಬಕ್ಷಿ, ಖ್ವಾಜಿ, ಸದರ್ ಮುಂತಾದ ಅಧಿಕಾರಿಗಳಿದ್ದು ಆಡಳಿತದಲ್ಲಿ ನೆರವಾಗುತ್ತಿ ದ್ದರು. ಪ್ರತಿಯೊಂದು ಸರ್ಕಾರದ ಕಾನೂನು ಮತ್ತು ಶಾಂತಿಪಾಲನೆ ಫೌಜುದಾರನೆಂಬ ಅಧಿಕಾರಿಯ ದಾಗಿತ್ತು. ಪ್ರಮುಖ ಪುರ ಪಟ್ಟಣಗಳಲ್ಲಿ ಕೊತ್ವಾಲನೆಂಬ ಅಧಿಕಾರಿ ಇರುತ್ತಿದ್ದ. ಪ್ರಾಂತದ ಸಮಾಚಾರ ತಿಳಿಸುವ ವರದಿಗಾರರೂ ರಹಸ್ಯ ವರದಿ ಕಳಿಸುವ ಗೂಢಚಾರರು ಇದ್ದುದರಿಂದ ಎಚ್ಚರ ವಹಿಸಬೇಕಾದ ಸಂದರ್ಭಗಳು ಮುಂಚಿತವಾಗಿಯೇ ಸುಲ್ತಾನನಿಗೆ ತಿಳಿಯುತ್ತಿದ್ದವು.

ಭೂಕಂದಾಯವೇ ಮೊಗಲ್ ಸಾಮ್ರಾಜ್ಯದ ಆದಾಯದ ಪ್ರಧಾನ ಮೂಲ. ಸುಂಕ, ಕಪ್ಪಕಾಣಿಕೆ, ಟಂಕಮುದ್ರೆ, ಯುದ್ಧದಲ್ಲಿಯ ಲೂಟಿವಸ್ತುಗಳು ಮೊದಲಾದವು ಆದಾಯದ ಕೆಲವು ಬಾಬುಗಳು. ಸಾಮಾನ್ಯವಾಗಿ ಒಟ್ಟು ಬೆಳೆಯ 1/3 ಭಾಗವನ್ನು ರೈತ ಒಪ್ಪಿಸಬೇಕಾಯಿತು. ಬೆಳೆಯನ್ನು ಅಂದಾಜುಮಾಡಲು ನಿಖರವಾದ ಖಚಿತ ಕ್ರಮಗಳಿದ್ದವು. ನಗದುರೂಪಕ್ಕೆ ಹೆಚ್ಚು ಪ್ರಾಶಸ್ತ್ಯವಿದ್ದರೂ ಕಂದಾಯವನ್ನು ನಗದು ಅಥವಾ ಧಾನ್ಯರೂಪಗಳಲ್ಲಿ ನೀಡಬಹುದಿತ್ತು. ತತ್ಪೂರ್ವದ ಮೂರು ಅಥವಾ ಹತ್ತು ವರ್ಷಗಳಲ್ಲಿದ್ದ ಧಾನ್ಯ ಬೆಲೆಗಳನ್ನು ಪರಿಶೀಲಿಸಿ ನಗದಿನ ಮೊತ್ತ ನಿರ್ಧಾರವಾಗುತ್ತಿತ್ತು. ಸಾಮ್ರಾಜ್ಯದ ಎಲ್ಲೆಡೆ ಕಂದಾಯ ಪದ್ಧತಿ ಏಕರೂಪವಾಗಿರಲಿಲ್ಲ.

ಮೊಗಲ್ ಸೇನಾಬಲ ಪದಾತಿ, ಅಶ್ವ, ಫಿರಂಗಿ ಹಾಗೂ ನೌಕಾದಳಗಳಿಂದ ಕೂಡಿತ್ತು. ಅಶ್ವದಳಕ್ಕೆ ಹೆಚ್ಚಿನ ಪ್ರಾಧಾನ್ಯವಿತ್ತು; ಪದಾತಿದಳ ಸಂದರ್ಭಾನುಸಾರ ನಾಗರಿಕ ಹಾಗೂ ರೈತಾಪಿ ಜನರಿಂದ ಕೂಡಿದುದಾಗಿತ್ತು. ಸ್ಥಳೀಯ ಅಥವಾ ವಿದೇಶೀ ಬಂದೂಕುಗಳಿಂದ ಕೂಡಿದ ಫಿರಂಗಿ ದಳ ಹಿಂದುರಾಜ್ಯಗಳಿಗೆ ಹೋಲಿಸಿದರೆ ಉತ್ತಮವಾದುದೂ ಬ್ರಿಟಿಷರ ಬಲಕ್ಕೆ ಹೋಲಿಸಿದರೆ ಅಷ್ಟೇನೂ ಉತ್ತಮವಲ್ಲದ್ದಾಗಿತ್ತು. ನದಿಗಳಲ್ಲಿಯ ವಾಹನಸಂಚಾರ ಸಂರಕ್ಷಣೆ ನಿಯಂತ್ರಣಗಳಿಗಷ್ಟೇ ಅವರ ನೌಕಾದಳ ಸೀಮಿತವಾಗಿತ್ತು. ಸಮುದ್ರ ಮಾರ್ಗ ಸಂಚಾರಗಳತ್ತ ಗಮನಕೊಡದಿದ್ದುದು ಇವರ ಆಡಳಿತದ ಪ್ರಧಾನ ದೋಷಗಳಲ್ಲೊಂದು. ಮನ್‌ಸಬ್‌ದಾರಿ ವ್ಯವಸ್ಥೆಗೆ ಅನುಗುಣವಾಗಿ ರೂಪಿತವಾದ ಇವರ ಸೇನೆಯಲ್ಲಿ ಶಿಸ್ತು ತರಬೇತಿಗಳಿರಲಿಲ್ಲ; ರಾಜಸ್ತಾನದ ವೈಭವ ಪ್ರದರ್ಶನ ಯುದ್ಧರಂಗದಲ್ಲಿಯೂ ಇತ್ತು. ಅದಕ್ಷತೆ ಮನೆ ಮಾಡಿತ್ತು. ಹೀಗಾಗಿ 1739ರಲ್ಲಿ ನಾದಿರ್ ಷಾನಿಂದ ಇವರ ಸೈನ್ಯ ಪರಾಜಿತವಾಯಿತು. ಮುಂದೆ ಅಹಮದ್ ಷಾ ಅಬ್ದಾಲಿಯಿಂದ ಸೋಲುಂಡಿತು; ಇಂಗ್ಲಿಷರ ಶ್ರೇಷ್ಠ ಯುದ್ಧ ಸಾಮಗ್ರಿ ಸಂಪತ್ತಿನ ಮುಂದೆ ಇವರ ಸೈನ್ಯ ಶರಣಾಗಬೇಕಾಯಿತು.

ಬಾಬರನು ಹುಲಿಯನ್ನು ಬೇಟೆಯಾಡುತ್ತಿರುವುದು

**ವಾಸ್ತುಶಿಲ್ಪ:** ಜನಸಾಮಾನ್ಯರ ಬಾಳು ದುಸ್ಸಹನೀಯವಾಗಿದ್ದರೂ ಇವರ ಆಡಳಿತ ಕಾಲದಲ್ಲಿ ವಾಸ್ತುಶಿಲ್ಪಕ್ಕೆ ವಿಶೇಷ ಪ್ರೋತ್ಸಾಹ ದೊರೆಯಿತು. ಬಾಬರನ ಕಾಲದಲ್ಲಿ ಆಗ್ರ, ಸಿಕ್ರಿ ಮುಂತಾದ ಕಡೆಗಳಲ್ಲಿ ಸಾವಿರಾರು ಶಿಲ್ಪಿಗಳು ನಿರ್ಮಾಣ ಕಾರ್ಯಗಳಲ್ಲಿ ತೊಡಗಿದ್ದರು. ಆದರೆ ಈ ಕಾಲದ ಕಟ್ಟಡಗಳಲ್ಲಿ ಕೆಲವು ಅವಶೇಷಗಳು ಮಾತ್ರ ಲಭ್ಯವಾಗಿವೆ. ಷೇರ್‌ಷಾನ ಕಾಲದಲ್ಲಿ ಕಟ್ಟಲಾದ ದೆಹಲಿಯ ಪುರಾನಖಿಲಾ ಎಂದು ಕರೆಯಲಾಗಿರುವ ರಚನೆ ಹಾಗೂ ಸಸಾರಾಮ್‌ನಲ್ಲಿರುವ ಸಮಾಧಿ ಕಟ್ಟಡಗಳು ಗಮನಾರ್ಹ. ಈ ಎರಡನೆಯ ಕಟ್ಟಡದಲ್ಲಿ ಹಿಂದು ಮತ್ತು ಮುಸ್ಲಿಮ್ ವಾಸ್ತುಶಿಲ್ಪ ಕಲ್ಪನೆಗಳ ಮಧುರ ಸಂಗಮವನ್ನು ನೋಡಬಹುದು. ಅಕ್ಬರ್ ಸ್ವತಃ ಒಬ್ಬ

ವಾಸ್ತುಶಿಲ್ಪಜ್ಞನಾಗಿದ್ದ. ಫತೇಪುರ್‌ಸಿಕ್ರಿ ಈತನ ಕಲ್ಪನಾ ಸಾಮರ್ಥ್ಯದ ನನಸು; ಇದನ್ನು ಆತನ ಮನಸ್ಸಿನ ದರ್ಪಣವೆಂದೂ ಕರೆಯಲಾಗಿದೆ. ವಿಶೇಷವಾಗಿ ಅಮೃತಶಿಲೆಯನ್ನು ಬಳಸಲಾಯಿತು. ದಿವಾನ್-ಎ-ಖಾನ್ ಜಾಮಿಮಸೀದಿ, ಪಂಚಮಹಲ್ ಮುಂತಾದವು ಈ ಕಾಲದ ಗಮನಾರ್ಹ ಕಟ್ಟಡಗಳು, ನೂರ್‌ಜಹಾನ್ ಕಟ್ಟಿಸಿದ ಇತ್ಮದುದ್ದೌಲನ ಸಮಾಧಿ ರಜಪೂತ ಶೈಲಿಯನ್ನು ಅನುಕರಿಸಿ ಕಟ್ಟಿದ ವಿಶಿಷ್ಟರಚನೆ. ಷಹಜಹಾನ್ ಕಟ್ಟಿಸಿದ ತಾಜ್‌ಮಹಲ್ **(ನೋಡಿ)** ಹುಣ್ಣಿಮೆಯ ಸೊರಗೊಳ್ಳುವ, ಅನುಪಮ ಭವ್ಯ ಸಮಾಧಿ ಕಟ್ಟಡ. ಷಹಜಹಾನನ ತರುವಾಯ ಮೊಗಲ್ ವಾಸ್ತುಶಿಲ್ಪ ಉಪೇಕ್ಷೆಗೀಡಾಗಿ ಅವನತಿ ಹೊಂದಿತು. ಔರಂಗಜೇಬನ ಕಟ್ಟಾ ಧರ್ಮನಿಷ್ಠೆ ಕಲಾಕರ್ಮಿಗಳ ಪ್ರತಿಭೆಗೆ ಮಾರಕವಾಗಿ ಪರಿಣಮಿಸಿತು. (ಎಚ್.ಎಂ.ಎಸ್.ಆರ್.)

ಷಹಜಹಾನ್

**ನಾಣ್ಯಗಳು:** ಹಿಂದುಸ್ಥಾನದಲ್ಲಿ ಮುಸ್ಲಿಮರ ಆಗಮನದಿಂದ ಇವರ ನಾಣ್ಯಗಳು ನಮ್ಮಲ್ಲಿ ಬೆಳಕಿಗೆ ಬಂದವು. ಇವರ ಕಾಲದಲ್ಲಿ ನಾಣ್ಯಗಳ ಬೆಳವಣಿಗೆಯೂ ಸ್ವಲ್ಪ ಮಾರ್ಪಾಡಾ ಯಿತು. ಮುಖ್ಯವಾಗಿ ಈ ಬದಲಾವಣೆಯು ನಾಣ್ಯಗಳನ್ನು ತಯಾರಿಸಲು ಬಳಕೆಯಲ್ಲಿದ್ದ ಧಾತುವಿನಿಂದ ಶುರುವಾಯಿತು. ಆಗ ಬಳಕೆಯಲ್ಲಿದ್ದ ಧಾತುಗಳೆಂದರೆ ಬಂಗಾರ, ಬೆಳ್ಳಿ, ಬಿಲ್ಲಾನ್ (ಬೆಳ್ಳಿ ಮತ್ತು ತಾಮ್ರ ಅಥವಾ ಕಂಚಿನ ಮಿಶ್ರಣ) ಮತ್ತು ತಾಮ್ರ. ನಾಣ್ಯಗಳನ್ನು ಸಿಕ್ಕ ಎಂದು ಕರೆಯುತ್ತಿದ್ದರು. ಸಿಕ್ಕ ಎಂದರೆ ಮುದ್ರಿಸಿದ ಎಂಬ ಅರ್ಥವೇ ಹೊರತು ನಾಣ್ಯಗಳ ಮೌಲ್ಯಮಾಪನವನ್ನು ತೋರಿಸುತ್ತಿರಲಿಲ್ಲ. ನಾಣ್ಯಗಳ ಮೇಲೆ ರೂಪಾಯಿ, ಅರ್ಧರೂಪಾಯಿ ಎಂಬ ಮೌಲ್ಯವನ್ನು ಮುದ್ರಿಸುತ್ತಿರಲಿಲ್ಲ. ನಾಣ್ಯಗಳು ಸಾಮಾನ್ಯವಾಗಿ ಗುಂಡಗಿದ್ದರೂ ಚೌಕಾಕಾರದ ಮತ್ತು ಬೇರೆ ಬೇರೆ ಆಕಾರಗಳ ನಾಣ್ಯಗಳು ಬಳಕೆಯಲ್ಲಿದ್ದವು.

ನಾಣ್ಯಗಳ ಮೇಲೆ ರಾಜನ ಹೆಸರು. ಅವನ ಬಿರುದಾವಳಿಗಳನ್ನೊಳಗೊಂಡ ಬರೆವಣಿಗೆ ಇರುತ್ತಿತ್ತು. ದೊರೆ ಪಟ್ಟಾಭಿಷಿಕ್ತನಾಗುತ್ತಿದ್ದಂತೆಯೇ ಅವನ ಹೆಸರನ್ನು ನಾಮಾವಳಿ ಪುಸ್ತಕದಲ್ಲಿ ಬರೆದು ಅವನ ಹೆಸರಿನಲ್ಲಿ ನಾಣ್ಯಗಳನ್ನು ನಾಣ್ಯಗಳ ಮೇಲೆ ನಾಣ್ಯ ಮುದ್ರಿಸಿದ ದಿನಾಂಕ ಮತ್ತು ಟಂಕಸಾಲೆಯ ಹೆಸರನ್ನು ಮುದ್ರಿಸಿದರು. ಮೊದಮೊದಲು ಇವುಗಳ ಮೇಲೆ ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳನ್ನು ಉಪಯೋಗಿಸುತ್ತಿದ್ದರು. ಮೊಟ್ಟಮೊದಲು ಬೆಳಕಿಗೆ ಬಂದ ನಾಣ್ಯಗಳಲ್ಲಿಯ ಬರೆವಣಿಗೆ ಖೂಫಿ ಆಗಿದ್ದು ಸ್ವಲ್ಪಕಾಲದ ಅನಂತರ ನಷ್ಕ ಎಂಬ ಬರೆವಣಿಗೆ ಅದರ ಸ್ಥಾನವನ್ನು ಆಕ್ರಮಿಸಿತು, ಕಾಲಕ್ರಮೇಣ ನಸ್ತಾಲಿಕ್ ಬಳಕೆಗೆ ಬಂದಿತು. ದಿನಾಂಕವನ್ನು ಹಿಜರಿ ಶಕೆಯಲ್ಲಿ ನಮೂದಿಸಲಾಗುತ್ತಿತ್ತು. ಅಂಕೆಗಳನ್ನು 15ನೆಯ ಶತಮಾನದತನಕ ಶಾಸನಗಳಲ್ಲಿ ಉಪಯೋಗಿಸದೇ ಇದ್ದರೂ ನಾಣ್ಯಗಳಲ್ಲಿ 12ನೆಯ ಶತಮಾನದಿಂದಲೇ ಅಂಕೆಗಳ ಪ್ರಯೋಗ ಪ್ರಾರಂಭವಾಯಿತು.

ನಾಣ್ಯಗಳ ನಮೂನೆಗಳು ಅದರ ತೂಕ, ಬೆಲೆ ಮತ್ತು ಧಾತುವಿನ ಮೇಲೆ ನಿರ್ಧಾರವಾಗುತ್ತಿತ್ತು. ಒಂದು ತೊಲ ಅಂದರೆ 96 ರತಿಗಳು ಅಥವಾ 172.8 ಗುಂಜಿಗಳಾಗಿರುತ್ತಿತ್ತು. ಬೆಳ್ಳಿಯ ನಾಣ್ಯಕ್ಕೆ ಸಮವಾಗಿತ್ತು. ನಾಣ್ಯದ ಮೌಲ್ಯವನ್ನು ದೊರೆಯ ಹೆಸರು. ಬಿರುದಾವಳಿ ಮತ್ತು ಅವುಗಳ ತೂಕದಿಂದ ನಿರ್ಧರಿಸಲಾಗುತ್ತಿತ್ತು. ಮುದ್ರಿಸಿದ ತಾರೀಖು, ಬಿರುದು, ಟಂಕಸಾಲೆ ಇವೆಲ್ಲ ಒಂದೇ ಆದರೆ ಅವುಗಳನ್ನು ಒಂದೇ ನಮೂನೆಗೆ ಸೇರಿಸಲಾಗುತ್ತಿತ್ತು. ಇವುಗಳಲ್ಲಿ ವ್ಯತ್ಯಾಸವಿದ್ದರೆ ಬೇರೆ ನಮೂನೆಯಾಗಿ ವಿಂಗಡಿಸಲಾಗುತ್ತಿತ್ತು. ಬಾಬರನ ಕಾಲದಲ್ಲಿ ಮಧ್ಯಏಷ್ಯ ಮಾದರಿಯ ನಾಣ್ಯಗಳು ಮುದ್ರಿಸಲಾದವು. ಅಕ್ಬರನ ಕಾಲದಲ್ಲಿ ನಿಜವಾದ ಮೊಗಲ್ ರೀತಿಯನ್ನೇ ಅನುಸರಿಸಿದ; ಅಲ್ಲದೆ ಅವನು ನಿಯಮಿಸಿದ್ದ ತೂಕವನ್ನೇ ಸಂಪೂರ್ಣವಾಗಿ ಅಳವಡಿಸಿಕೊಂಡ. ತಾಮ್ರದಲ್ಲಿ 660 ಗುಂಜಿಯ ತೂಕದ ನಾಣ್ಯವನ್ನು ಹೊರಡಿಸಿ ಅದನ್ನು ಟಂಕ ಎಂದು ಕರೆದ. ಮೊದಲು ಈ ಹೆಸರನ್ನು ಬೆಳ್ಳಿಯ ನಾಣ್ಯಗಳಿಗೆ ಕೊಡಲಾಗಿತ್ತು. ಈತನ ಮೊದಲ 30 ವರ್ಷಗಳ ರಾಜ್ಯಭಾರದಲ್ಲಿ ನಾಣ್ಯಗಳಲ್ಲಿ ಯಾವ ರೀತಿಯ ಬದಲಾವಣೆಯೂ ಬರಲಿಲ್ಲ. ಆದರೆ 30 ವರ್ಷಗಳ ಅನಂತರ ನಾಣ್ಯಗಳ ಮೇಲೆ ಬರುವ ದಂತಕಥೆ ಮತ್ತು ಬಿರುದುಗಳನ್ನು ಬದಲಾಯಿಸ ಲಾಯಿತು. ಅಕ್ಬರ್ ತನ್ನ ಹೆಸರನ್ನು ತೆಗೆದು ಬದಲಾಗಿ ಲಾ ಇಲಾಹಿ ಉಲ್ಲುಲ್ಲ ಮೊದಲಾದು ವನ್ನು ಸೇರಿಸಿದ. ಅಲ್ಲಾಹ್ ಉ ಅಕ್ಬರ್ ಇಲ್ಲಾ ಇಲಾಲುಹ (ದೇವರು ದೊಡ್ಡವನು, ಅವನ ದಯೆ ಯಾವಾಗಲೂ ಇರಲಿ) ಎಂಬ ಬರೆಹವನ್ನು ಸೇರಿಸಿದ. ಮುಂಭಾಗದಲ್ಲಿ ಬರೆಹವಿದ್ದರೆ ಹಿಂಭಾಗದಲ್ಲಿ ಟಂಕಸಾಲೆಯ ಹೆಸರು ಮುದ್ರಿಸಲಾಗುತ್ತಿತ್ತು. ಈತ ಮೊಟ್ಟ ಮೊದಲ ಬಾರಿಗೆ ದೆಹಲಿ ಸುಲ್ತಾನರ ನಾಣ್ಯಗಳನ್ನು ಟಂಕಿಸಿ ಅವುಗಳ (ಚಿನ್ನ ಬೆಳ್ಳಿ ನಾಣ್ಯಗಳ) ಮೇಲೆ ದ್ವಿಪದಿಯಲ್ಲಿ ದಂತಕಥೆಗಳನ್ನು ಮುದ್ರಿಸಿದ. ಪಕ್ಷಿ ಮತ್ತು ಪ್ರಾಣಿಗಳನ್ನು ಪರ್ಷಿಯನ್ ಭಾಷೆಯಲ್ಲಿ ವರ್ಷ ಮತ್ತು ತಿಂಗಳನ್ನು ನಮೂದಿಸಲು ಆರಂಭಿಸಿದ. ಆದರೆ ಈ ನಾಣ್ಯಗಳ ಸಂಖ್ಯೆ ಕಡಿಮೆ ಇದ್ದಿತು. ಕಾಲಕ್ರಮೇಣ ಹಿಜರಿ ಶಕೆಯಲ್ಲಿಯೂ ಕಾಲವನ್ನು ಸೂಚಿಸಲು ಪ್ರಾರಂಭಿಸಿದ. ಇವನ ಕಾಲದಲ್ಲಿ ದಮಡಿ ಎಂಬ ನಾಣ್ಯ ಬೆಳಕಿಗೆ ಬಂದುದಲ್ಲದೆ 1/3, 1/4, 1/2 ಅಂಶಗಳನ್ನು 1/10, 1/4, 1/20 ಎಂಬ ದಶಮಾಂಶಗಳನ್ನು ಆರಂಭಿಸಿದ. ಟಂಕ ಅಥವಾ ಟಂಕಿಗಳನ್ನು ಮುದ್ರಿಸಿ ಅದರಮೇಲೆ ಎರಡು ಟಂಕಿ, ನಾಲ್ಕು ಟಂಕಿ ಎಂದು ಮುದ್ರಿಸಿದ. ತಾಮ್ರದ ನಾಣ್ಯಗಳನ್ನು ಬಿಟ್ಟರೆ ಬೆಳ್ಳಿ ಮತ್ತು ಬಂಗಾರದ ನಾಣ್ಯಗಳಲ್ಲಿ ಮೌಲ್ಯವನ್ನು ನಮೂದಿಸಿಲ್ಲ. ಇವನ ಜಾಲ್ಲಾಜಲಾಲು ಮಾದರಿಯ ನಾಣ್ಯಗಳು ಅತ್ಯಂತ ಕಲಾಪೂರ್ಣವಾಗಿವೆ. ಈತ 1, 5, 10, 100 ಮತ್ತು 200 ತೊಲಗಳ ನಾಣ್ಯಗಳನ್ನು ಆರಂಭಿಸಿದ. ಇವುಗಳಲ್ಲಿ ಹೆಚ್ಚು ತೂಕದ್ದು ಜ್ಞಾಪಕಾರ್ಥವಾಗಿ ಬಿಡುಗಡೆ ಮಾಡಿದವುಗಳಾಗಿ ದ್ದವು. ಅಲ್ಲದೆ, ಮೊತ್ತಮೊದಲಿಗೆ ಇವನ ಕಾಲದಲ್ಲಿ ಬಹಳ ಸಣ್ಣ ನಾಣ್ಯಗಳೂ ಚಲಾವಣೆಗೆ ಬಂದವು. ಇವುಗಳನ್ನು ನಿಥರ್, ನೂರ್ ಅಫ್ಸನ್, ಖಇರ್ ಖುಬುಲಿ ಎಂದು ಕರೆಯಲಾಗುತ್ತಿತ್ತು. ಇವುಗಳನ್ನು ಕಾಣಿಕೆಯಾಗಿ ನೀಡಲು ಉಪಯೋಗಿಸುತ್ತಿದ್ದರು.

ಜಹಾಂಗೀರನ ಬೆಳ್ಳಿ ಮತ್ತು ಬಂಗಾರದ ನಾಣ್ಯಗಳು ತಯಾರಿಕೆ ಮತ್ತು ನಮೂನೆಯಲ್ಲಿ ಅತ್ಯುತ್ತಮವಾದುವೆಂದು ಹೆಸರುಗಳಿಸಿವೆ. ನಾಣ್ಯಗಳ ಮೇಲೆ ಶ್ಲೋಕಗಳನ್ನು ಮುದ್ರಿಸಿದ್ದು ಅದರಲ್ಲಿ ರಾಜನ ಹೆಸರು ಮತ್ತು ಟಂಕಸಾಲೆಯ ಹೆಸರು ಇರುತ್ತಿತ್ತು. ಅಕ್ಬರ್ ಮತ್ತು ಜಹಾಂಗೀರನ ಚಿತ್ರಪಟಗಳಿಂದ ಕೂಡಿದ ಬಲುಸುಂದರ ನಾಣ್ಯಗಳೂ ದೊರಕಿವೆ. ಇವುಗಳನ್ನು ಚಿತ್ರಪಟಗಳ ಮೊಹರು ಕರೆಯಲಾಗುತ್ತಿತ್ತು. ಕೆಲಕಾಲದ ಅನಂತರ ರಾಶಿ ಚಕ್ರ ಅಥವಾ ರಾಶಿ ಮಂಡಲವನ್ನು ನಾಣ್ಯಗಳ ಮೇಲೆ ಮುದ್ರಿಸಲಾಯಿತು. ಇವುಗಳನ್ನು ಆಗ್ರ ಟಂಕಸಾಲೆಯಿಂದ ಟಂಕಿಸಲಾಯಿತು.

ಷಹಜಹಾನ್ ಚೌಕಾಕಾರದ ಮತ್ತು ಗುಂಡಗಿರುವ ನಾಣ್ಯಗಳನ್ನು ಜೊತೆ ಜೊತೆಯಾಗಿ ಮುದ್ರಿಸಿದ. ಈತ ಚಾಂದ್ರಮಾನ ವರ್ಷವನ್ನು ನಾಣ್ಯಗಳ ಮೇಲೆ ಮುದ್ರಿಸಿ ಸೌರಮಾನ ಮತ್ತು ಹಿಜರಿ ಶಕೆಯನ್ನು ಸಂಪೂರ್ಣವಾಗಿ ಕೈಬಿಟ್ಟ.

ಔರಂಗಜೇಬನ ಕಾಲದಲ್ಲಿ ಕರ್ನಾಟಕದ ಕೆಲವು ಭಾಗಗಳು ಅವನ ಆಡಳಿತಕ್ಕೆ ಒಳಪಟ್ಟಿದ್ದುವು. ದೊಡ್ಡಬಳ್ಳಾಪುರ, ಹೊಸಕೋಟೆ, ಗುತ್ತಿ ಮತ್ತು ಕೋಲಾರ ಮುಂತಾದ ಸ್ಥಳಗಳಲ್ಲಿನ ಟಂಕಸಾಲೆಗಳಲ್ಲಿ ಚಿನ್ನದ ಪಣಂ ನಾಣ್ಯಗಳು ಟಂಕಿಸಲ್ಪಟ್ಟಿದ್ದವು. ದೇವನಹಳ್ಳಿ ಮತ್ತು ನಂದಿಯಲ್ಲಿ ಟಂಕಿಸಲಾದ ಹಣಗಳೂ ಬೆಳಕಿಗೆ ಬಂದಿವೆ. (ಸಿ.ಕೆ.ಎಂ.)

**ಮೊಟ್ಟೂರು:** ತಮಿಳುನಾಡು ರಾಜ್ಯದ ಉತ್ತರ ಆರ್ಕಾಟಿನ ಚೆಂಗಂ ತಾಲೂಕಿನಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಇಲ್ಲಿ ಹಲವಾರು ಬೃಹತ್ ಶಿಲಾ ಸಂಸ್ಕೃತಿಯ ಕಲ್ಲುವೃತ್ತ ಗೋರಿಗಳಿವೆ. ಕುತೂಹಲದ ವಿಷಯವೆಂದರೆ ಒಂದು ವೃತ್ತದಲ್ಲಿ ಸಾಂಕೇತಿಕವಾಗಿ ಮನುಷ್ಯಾಕೃತಿಯ ಬೃಹತ್ ಕಲ್ಲುಚಪ್ಪಡಿಯೊಂದನ್ನು ನೆಟ್ಟಿರುವುದು. ಇದು ಸು.3.10 ಮೀ ಎತ್ತರ, 1.65


ಬೃಹತ್ ಶಿಲಾಗೋರಿಯ ಬೃಹತ್ ಕಲ್ಗೊಂಬೆ

ಮೀ ಅಗಲ ಮತ್ತು 2.2–0.25 ಮೀ ದಪ್ಪವಾಗಿದೆ. ಎರಡೂ ಬದಿಗಳಲ್ಲಿ ಸು.0.95 ಮೀ ಉದ್ದದಷ್ಟು ಬಾಗಿದ ಹಸ್ತಾಕೃತಿಯಿದೆ. ಕಾಲುಗಳನ್ನು ತೋರಿಸಿಲ್ಲ, ಬದಲಾಗಿ ಬಂಡೆ ವಿಸ್ತಾರವಾಗುತ್ತಾ ಈ ಆಕೃತಿಯನ್ನು ನಿಲ್ಲಿಸಲು ಆಖಂಡವಾಗಿದೆ. ಸ್ಥಳೀಯರು ಇಲ್ಲಿಯ ಕಲ್ಲು ಗೋರಿಗಳನ್ನು ವಳ್ಳಿಯರ್ ವೀಡು ಎಂದೂ ಈ ಬೃಹತ್ ಮಾನವಾಕೃತಿಯನ್ನು ವಳ್ಳಿಯರ್ ದೇವರ್ ಎಂದೂ ಕರೆಯುತ್ತಾರೆ. ಆ ಜನರು ಅತಿ ಕುಳ್ಳರು, ಸು.10 ರಿಂದ 15 ಸೆಂಮೀ ಎತ್ತರವಿದ್ದರು ಎಂಬುದು ಸ್ಥಳೀಯರ ನಂಬಿಕೆ. ಇವರು ಮೊಲಗಳಿಂದ

ಗದ್ದೆ ಉಳುಮೆ ಮಾಡಿಸುತ್ತಿದ್ದರಂತೆ. ಆ ಪ್ರದೇಶದಲ್ಲಿ ಒಮ್ಮೆ ಬೆಂಕಿ ಮಳೆ ಬೀಳುವುದಾಗಿಯೂ ಎಲ್ಲವೂ ನಾಶವಾಗಿ ಹೋಗುವುದಾಗಿಯೂ ಭವಿಷ್ಯ ತಿಳಿಯಲಾಗಿ ಆ ಜನ ದಕ್ಷಿಣದ ಕಡೆಗೆ ಹೋಗಬೇಕೆಂದು ತೀರ್ಮಾನಿಸಿದರು. ಜೊತೆಗೆ ದೇವರನ್ನು ತೆಗೆದುಕೊಂಡು ಹೋಗಬೇಕೆಂದಿದ್ದರು. ಆದರೆ ದೇವತೆ ಒಪ್ಪಲಿಲ್ಲ. ಆಗ ಅವರು ಅದರ ತಲೆ ಕಡಿದು ಅದನ್ನು ತೆಗೆದುಕೊಂಡು ಹೋದರಂತೆ. ಆದ್ದರಿಂದ ಇದಕ್ಕೆ ರುಂಡವಿಲ್ಲವೆಂದು ಹೇಳುತ್ತಾರೆ. ಈ ಆಕೃತಿ ದಕ್ಷಿಣ ಬದಿಯ ಕಲ್ಲುವೃತ್ತದೊಳಗಿದೆ. ಇದೇ ರೂಪದ ಇನ್ನೊಂದು ಗೊಂಬೆ ಮುನ್ನಿಯತ್ತರ್ ಎಂಬ ಗ್ರಾಮದಲ್ಲಿಯ ಒಂದು ಪ್ರಾಚೀನ ನೆಲೆಯಲ್ಲಿ ಹಾಗೂ ಕರ್ನಾಟಕದ ಕುಮತಿ (ಬಳ್ಳಾರಿ ಜಿಲ್ಲೆ, ಹರಪನ ಹಳ್ಳಿ ತಾಲ್ಲೂಕು), ಆಂಧ್ರಪ್ರದೇಶದ ಐದಾರು ಬೃಹತ್ ಶಿಲಾ ಗೋರಿಗಳ ನೆಲೆಯಲ್ಲಿ ಶೋಧವಾಗಿದೆ. ಈ ಕಲ್ಲು ಗೊಂಬೆಯಿರುವ ಕಲ್ಲುವೃತ್ತವನ್ನು ಉತ್ಖನನ ಮಾಡಿದಾಗ ವೃತ್ತದ ಮಧ್ಯದಲ್ಲಿ ಒಂದು ಕಲ್ಲು ಚಪ್ಪಡಿಯ ಕೋಣೆ ಗೋರಿಯಿದ್ದು ಅವರೊಳಗೆ ಯಥಾ ಪ್ರಕಾರ ಮಾನವನ ಅಸ್ಥಿ ಅವಶೇಷಗಳು, ಪೂರ್ಣ ಕಪ್ಪು, ಕಪ್ಪು-ಕೆಂಪು ದ್ವಿವರ್ಣದ, ಹಾಗೂ ಶುಭ್ರ ಕೆಂಪುವರ್ಣದ ಮಣ್ಪಾತ್ರೆಗಳು, ಕಬ್ಬಿಣದ ಉಪಕರಣಗಳು ಇದ್ದವು. (ಎ.ಎಸ್.;ಎನ್.ಎಲ್.)

**ಮೊದೇರ:** ಗುಜರಾತ್ ರಾಜ್ಯದ ಮೆಹಸಾನ ಜಿಲ್ಲೆಯ ವಾಯವ್ಯ ದಿಕ್ಕಿಗೆ 25 ಕಿಮೀ ದೂರಲ್ಲಿರುವ ಐತಿಹಾಸಿಕ ಹಿನ್ನೆಲೆಯಿರುವ ಪುಟ್ಟಗ್ರಾಮ. ಇದು ಇಲ್ಲಿರುವ ಚಾಳುಕ್ಯರ ಕಾಲದ ಸೂರ್ಯ ದೇವಾಲಯದಿಂದಾಗಿ ಪ್ರಸಿದ್ಧಿ ಪಡೆದಿದೆ. ಇದರಲ್ಲಿ ಮಂಟಪದ ಕಂಬಗಳ ಮೇಲಿನ ಶಿಲ್ಪಗಳು ಯುವಕ-ಯುವತಿಯರಲ್ಲಿಯ ಸಹಜ ಕಾಮೋನ್ಮಾದದಿಂದ ಹಿಡಿದು, ಗರ್ಭಧಾರಣೆ, ಹುಟ್ಟು ಮೊದಲಾದ ಹಂತಗಳ ಮೂಲಕ ಅಂತಿಮವಾಗಿ ಸಾವಿನವರೆಗೆ ಜೀವನ ಚಕ್ರದ ಪ್ರಮುಖ ಘಟ್ಟಗಳನ್ನು ನಿರೂಪಿಸುವ ಕ್ರಮ ಅಸಾಮಾನ್ಯ.

ಈ ದೇವಾಲಯವನ್ನು 1026ರಲ್ಲಿ ನಿರ್ಮಿಸಲಾಗಿದೆಯೆಂದು ಶಿಲಾಶಾಸನಗಳಿಂದ ತಿಳಿದುಬಂದಿದೆ. ಈ ದೇವಾಲಯವು ಹೊರಗೋಡೆಯಲ್ಲಿನ ವಿಗ್ರಹಗಳು ಸುಂದರವಾದ ಕಂಬಗಳು, ಜಯಸ್ತಂಭಗಳು, ಚಿತ್ತಾಕರ್ಷವಾದ ತೋರಣಗಳು, ಬಳಿಯಲ್ಲಿರುವ ಚಿಕ್ಕ ಮಂದಿರಗಳು ಹಾಗೂ ಒಂದು ದೊಡ್ಡ ಕೊಳದಿಂದ ಕಂಗೊಳಿಸುತ್ತದೆ. ನಸುಗೆಂಪು ಮರಳುಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಈ ಮಂದಿರವು ಸೋಲಂಕಿವಂಶಜರ ಕಲಾನೈಪುಣ್ಯತೆಗೆ ಸಾಕ್ಷಿ ಮಾತ್ರವಲ್ಲದೆ, ಆಗಿನ ಭಕ್ತಿಪಥ ಮತ್ತು ಜೀವನ ಶೈಲಿಯ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತದೆ.

ರಜಸ್ವಲೆ ಸ್ತ್ರೀ

ಈ ಸೂರ್ಯ ದೇವಾಲಯದಲ್ಲಿ ಮುಂದಿರುವ ಸೂರ್ಯಕುಂಡ, ಸಭಾಮಂಟಪ ಮತ್ತು ಗೂಢಮಂಟಪ ಎಂದು 3 ಭಾಗಗಳಿವೆ. ಸೂರ್ಯಕುಂಡ ಅಥವಾ ರಾಮಕುಂಡವು ದೇವಾಲಯದ ಮುಂದಿರುವ ಒಂದು ಚಚ್ಚೌಕಾಕಾರದ ದೊಡ್ಡಕೊಳ. ಇದು ಸು. 100 ಚ.ಮೀ ಗಳಿದ್ದು, 108 ಚಿಕ್ಕ ಗೋಪುರಗಳನ್ನೂ ಅನೇಕ ಮೆಟ್ಟಿಲುಗಳನ್ನೂ ಒಳಗೊಂಡು ರಮಣೀಯವಾಗಿದೆ. ಇದಲ್ಲದೆ ಪಂಚಾಯತನದ ಸೂಚಕವಾಗಿ ವಿಷ್ಣು, ಗಣೇಶ, ಶಿವ ಹಾಗೂ ದುರ್ಗಿಯ ನಾಲ್ಕು ಸಣ್ಣಮಂದಿರಗಳೂ ಇವೆ. ಸೂರ್ಯಕುಂಡದ ಮುಂದೆ ಎರಡು ಅತ್ಯಾಕರ್ಷಕವಾದ ಕೀರ್ತಿಸ್ತಂಭಗಳಿವೆ. ಇದರ ಮೇಲಿದ್ದ ತೋರಣ ಉಳಿದಿಲ್ಲ. ಸೊಲಾಂಕಿಯ ಕಾಲದ ತೋರಣವನ್ನು ಅತ್ಯಾಕರ್ಷಕವಾಗಿ ಕೆತ್ತಲಾಗುತ್ತಿತ್ತು. ಇದರ ಅನತಿ ದೂರದಲ್ಲಿ ಸಭಾಮಂಟಪವಿದೆ. ಸುಂದರ ಕೆತ್ತನೆ ಕೆಲಸ ಮತ್ತು ಕೆಳಭಾಗದಲ್ಲಿ ಅನೇಕ ಉಬ್ಬುಶಿಲ್ಪಗಳನ್ನೊಳಗೊಂಡ 52 ಕಂಬಗಳ ಈ ಸಭಾಮಂಟಪ ಎಲ್ಲೆಡೆಯೂ ತೆರೆದಿದೆ. ಮೂಲೆಗಳಲ್ಲಿ ಆಸನಗಳಿದ್ದು, ಯಾವ ಮೂಲೆಯಿಂದಲಾದರೂ ಕೇಂದ್ರಭಾಗವನ್ನು ಕಂಬಗಳ ಮರೆಯಿಲ್ಲದೆ ನೋಡಲು ಸಾಧ್ಯವಿರುವುದು ಇದರ ವೈಶಿಷ್ಟ್ಯ. ಪುರಜನರು ನೆರೆಯಲು ಅನುಕೂಲವಾಗಿದ್ದ ಈ ಮಂಟಪವನ್ನು ನೃತ್ಯಮಂಟಪವೆಂದೂ ಕರೆಯಲಾಗುತ್ತದೆ. ಸಭಾಮಂಟಪದ ಮುಂದೆ ಗೂಢಮಂಟಪ ಅಥವಾ ಧ್ಯಾನಕಕ್ಷ ಬೇರೆಯಾಗಿದೆ. ಗರ್ಭಗೃಹದಲ್ಲಿ ಹಿಂದೆ ಸೂರ್ಯದೇವರ ವಿಗ್ರಹವಿತ್ತು.

ಈ ಮಂಟಪದ ಕಂಬಗಳಲ್ಲಿ ಅನೇಕ ಶಿಲ್ಪಗಳಿದ್ದು, ಕುತೂಹಲ ಕೆರಳಿಸುವ ಕೆಲವು ಅಪರೂಪದ ಜೀವನ ಚಕ್ರದ ಶಿಲ್ಪಚಿತ್ರಗಳು ಹೀಗಿವೆ. ಒಂದು ಕಂಬದ ಕೆಳಭಾಗದಲ್ಲಿ ಬಹಿಷ್ಠಾವಸ್ಥೆಯಲ್ಲಿರುವ ತರುಣಿಯ ಚಿತ್ರವಿದೆ. ಮುಖ್ಯದೇವರ ಮುಂದೆ ಈ ವಿಷಯವನ್ನೊಳಗೊಂಡ ಶಿಲ್ಪ ಸೋಜಿಗವೇ ಸರಿ. ತರುಣಿಯ ಯೋನಿಭಾಗದಿಂದ ತೋರಿಸಿರುವ ವಿಸರ್ಜನೆಯಿಂದ ಇದು ಬಹಿಷ್ಠಾವಸ್ಥೆ ಎಂದು ತಿಳಿಯಬಹುದು. ಈ ಅವಸ್ಥೆ ಪ್ರಕೃತಿ ನಿಯಮ. ಹಾಗಾಗಿ ಇದು ಅಪವಿತ್ರವೆಂದಾಗಲೀ ಸಾಮಾಜಿಕವಾಗಿ ನಿಷಿದ್ಧ ಎಂದಾಗಲೀ ತಿಳಿಯದೆ, ಜೀವಕುಲವೃದ್ಧಿಗೆ ಅತ್ಯವಶ್ಯಕ ಎಂದು ಬೆಂಬಲನೀಡಲು ಈ ಶಿಲ್ಪವನ್ನು ರಚಿಸಿರಬಹುದು.

ಶಿಶುವಿನ ಜನನ

ಈ ಅವಸ್ಥೆಯಲ್ಲಿಯ ದೈಹಿಕ ಏರು ಪೇರುಗಳನ್ನು ನೀಗಿಸಲು ಹಿಡಿಯಬೇಕಾದ ಯೋಗಮುದ್ರೆಗಳನ್ನು ಈ ಶಿಲ್ಪದಲ್ಲಿ ತೋರಿಸಲಾಗಿದೆ. ಇದೇ ರೀತಿ ಇನ್ನೊಂದು ಸ್ಥಂಬದಲ್ಲಿ ಹಸ್ತಮೈಥುನದಲ್ಲಿರುವ ತರುಣನ ಶಿಲ್ಪವಿದೆ. ಕಿರಿಯರು ಪ್ರೌಢಾವಸ್ಥೆಗೆ ತಲಪಿದಾಗ ಆಗುವ ದೈಹಿಕ ಬದಲಾವಣೆಗಳ ಬಗ್ಗೆ ತಿಳಿಯಪಡಿಸುವುದೇ ಇದರ ಉದ್ದೇಶವಾಗಿರಬಹುದು.

ಇಲ್ಲಿಯ ಒಂದು ಕಂಬದಲ್ಲಿ, ಎರಡು ಶಿಲ್ಪಗಳು ಕುತೂಹಲಕಾರಿಯಾಗಿವೆ. ಪ್ರೌಢದೆಶೆಯಲ್ಲಿರುವ ತರುಣ ತರುಣಿಯ ಅಪೇಕ್ಷೆ ಹಾಗೂ ದೈಹಿಕ ಮಿಲನದ ಚಿತ್ರವಿದೆ. ಇದರ ಪಕ್ಕದಲ್ಲಿ ಗರ್ಭಿಣಿ ಸ್ತ್ರೀಯ ಉದರ ಪರೀಕ್ಷೆಯ ಚಿತ್ರವಿದೆ. ಗರ್ಭಿಣಿ ಅಕ್ಕಪಕ್ಕದಲ್ಲಿರುವವರ ನೆರವಿನಿಂದ ನಡೆಯುತ್ತಿರುವಂತೆ ಕೆತ್ತಲಾಗಿದೆ. ಈ ಎರಡೂ ಶಿಲ್ಪಗಳು ಒಂದು ಸರಣಿಯಲ್ಲಿರುವುದರಿಂದ ದೈಹಿಕ ಮಿಲನದ ಪರಿಣಾಮ, ಗರ್ಭಾವಸ್ಥೆ ಎಂದು ಸುಸ್ಪಷ್ಟಜ್ಞಾನ ನೀಡುತ್ತವೆ.

ದೇವಾಲಯದ ಹೊರಗೋಡೆಯಲ್ಲಿಯ ಜನಸಾಮಾನ್ಯರ ಜೀವನಶೈಲಿಯನ್ನು ಬಿಂಬಿಸುವ ಸಾಲುಕೆತ್ತನೆಗಳಲ್ಲಿ ಮಗುವನ್ನು ಪ್ರಸವಿಸುತ್ತಿರುವ ಮಹಿಳೆಯ ಶಿಲ್ಪವಿದೆ. ಗರ್ಭಿಣಿಯ ಯೋನಿಭಾಗದಿಂದ ಮಗುವಿನ ಅರ್ಧದೇಹ ಹೊರಬಂದಿರುವುದನ್ನು ಕಾಣಬಹುದು. ಕೈಗಳಿಂದ ಮೇಲಿರುವ ಆಧಾರ ಬಳೆಗಳ ಮೂಲಕ ಬೆಂಬಲ ಪಡೆಯಬೇಕಾದ ವೈಖರಿ ಮತ್ತು ಕುಳಿತು ಪ್ರಸವಿಸುವ ಭಂಗಿಯ ಚಿತ್ರಣವಿದೆ. ಗುರುತ್ವಾಕರ್ಷಣೆಯ ದಿಶೆಯಲ್ಲಿ ಪ್ರಸವಿಸುವುದು ಸುಖಪ್ರಸವಕ್ಕೆ ದಾರಿ ಎಂದು ಸೂಚಿಸಲು ಈ ಶಿಲ್ಪವಿರಬಹುದು. ಪ್ರಸವ ಸಂದರ್ಭದಲ್ಲಿ ಗಂಡಸರ ಉಪಸ್ಥಿತಿಯನ್ನು ಬಿಂಬಿಸುವ ಹಾಗೂ ನೀರಿನ ಕೊಡವನ್ನು ಹಿಡಿದಿರುವ ಚಿತ್ರಣವನ್ನು ನೋಡಬಹುದು.

ಹೊರಗೋಡೆಯ ಸಾಲು ಕೆತ್ತನೆಯಲ್ಲಿ ಸ್ತ್ರೀಯು ಮಗುವನ್ನು ಹಿಡಿದಿರುವ ಶಿಲ್ಪವಿದೆ. ಪ್ರಸವದ ಅನಂತರ ಹೊಕ್ಕಳ ಬಳ್ಳಿಯನ್ನು ಹಲ್ಲಿನಿಂದ ಕಚ್ಚಿ ತುಂಡರಿಸುತ್ತಿರುವ ಮಹಿಳೆಯ ಚಿತ್ರವಿದು. ಹೆರಿಗೆಯ ಸಮಯದಲ್ಲಿ ಮಹಿಳೆ ಬಂಜೆಯಾಗಿ ಇದ್ದರೆ, ಹೊಕ್ಕಳ ಬಳ್ಳಿಯನ್ನು ಬೇರ್ಪಡಿಸಲು ಉಪಾಯವನ್ನು ಸೂಚಿಸಿದ್ದಾರೆ. ಮಗುವಿನ ಹೊಕ್ಕಳ ಬಳ್ಳಿ, ಮಾತೆಯ ಬಾಯಿಯಲ್ಲಿದೆ. ಈ ಶಿಲ್ಪವು ಮುರಿದುಹೋಗಿರುವುದು ವಿಷಾದನೀಯ. ಈ ಕೆತ್ತನೆಯ ಪಕ್ಕದಲ್ಲಿ ಮಹಿಳೆಯರು ಸಂಭಾಷಿಸುತ್ತಿರುವ ಚಿತ್ರವಿದ್ದು, ಹುಯ್ಯಸಾಪು ಜೀವನದಲ್ಲಿರುವ ಸಾಮಾನ್ಯ ಸಂಗತಿಗಳಂತೆ ತೋರಿಸಲಾಗಿದೆ. ಇದರ ಪಕ್ಕದಲ್ಲಿ ಮೃತದೇಹವನ್ನು ಹೊತ್ತೊಯ್ಯುತ್ತಿರುವ ಶಿಲ್ಪವೂ ಇದೆ.

ದೇವಾಲಯದ ಮುಂಭಾಗದಲ್ಲಿ ಇರುವ ಈ ಎತ್ತರದ ಸ್ಥಂಭ ಮಾನವ ಗೋಪುರದಂತೆ ಕಾಣುವ ಅಪರೂಪದ ಶಿಲ್ಪಕೃತಿ. ಇದರಲ್ಲಿ ಮಾನವರು ಒಬ್ಬರ ಮೇಲೆ ಮತ್ತೊಬ್ಬರು ಆಧಾರ ಪಡೆದು, ನಿರಂತರವಾಗಿ ಮೇಲೇರುತ್ತಿರುವಂತಿದೆ. ಇದು ಒಂದು ರೀತಿಯ ಕಾಲಸ್ಥಂಭದ ಚಿತ್ರದಂತೆ ಕಾಣಬರುತ್ತದೆ. ಪೀಳಿಗೆಗಳು ನಿರಂತರವಾಗಿ ಒಂದರನಂತರ ಮತ್ತೊಂದು ಬೆಳೆದು, ಹಳೆಯ ಪೀಳಿಗೆ ಕಾಲಗರ್ಭದಲ್ಲಿ ಸೇರಿಹೋಗುವ, ಜೀವನದ ವಾಸ್ತವಾಂಶದ ಶಿಲ್ಪಕೃತಿ ಕಾಲಗರ್ಭದ ನಿರಂತರ ಹರಿವಿನ ಭಾವನಾರೂಪವಾದ ಈ ಶಿಲ್ಪ, ಜೀವನದಲ್ಲಿ ಯಾರೂ ಶಾಶ್ವತರಲ್ಲ-ಕಾಲಾಂತರದಲ್ಲಿ ಸರಿದುಹೋಗುವ ಅಲ್ಪಜೀವಿಗಳೆಂದು ಶಿಲ್ಪದ ಮೂಲಕ ತಿಳಿಯಪಡಿಸಿದ್ದಾರೆ. ಈ ಚಿತ್ರಗಳನ್ನು ಒಂದು ಸರಣಿಯಲ್ಲಿಟ್ಟು ವಿಶ್ಲೇಷಿಸಿದಾಗ, ಮಕ್ಕಳಿಗೆ ಲೈಂಗಿಕ ಶಿಕ್ಷಣದ ಬಗ್ಗೆ ಸುಸ್ಪಷ್ಟಜ್ಞಾನ ನೀಡುವಲ್ಲಿ ಸೋಲಾಂಕಿ

ರಾಜವಂಶದವರು ತೋರಿಸಿರುವ ಕಾಳಜಿ ಗಮನಾರ್ಹವಾದದ್ದು (ಮೈನೆರೆಯುವಿಕೆ, ಮಿಲನ, ಜನನ ಮುಂತಾದ, ಸಾಮಾನ್ಯವಾಗಿ ಗೌಪ್ಯವಾಗಿ ಮುಚ್ಚಿಡುವ ವಿಚಾರಗಳನ್ನು ನಿರ್ಭಿಡೆಯಿಂದ ದೇವಾಲಯದಲ್ಲಿ ವೈಜ್ಞಾನಿಕವಾಗಿ ತಿಳಿಯಪಡಿಸಿದ್ದಾರೆ). ಮೈನೆರೆಯುವಿಕೆಯ



ಆಗತಾನೆ ಜನಿಸಿದ ಮಗುವಿನ ಹೊಕ್ಕಳು ಬಳ್ಳಿ ಕೊಯ್ಯುವುದು

ಅರ್ಥ, ಹುಡುಗ ಮತ್ತು ಹುಡುಗಿ ಪ್ರೌಢದೆಶೆಗೆ ತಲಪಿದಾಗ ಉಂಟಾಗುವ ದೈಹಿಕ ಬದಲಾವಣೆಗಳು, ಅನಂತರ ಉದ್ಭವಿಸುವ ಮಿಲನದ ಅಪೇಕ್ಷೆ, ಅದರ ಪರಿಣಾಮ, ಮಗುವಿನ ಜನನ, ಬೆಳವಣಿಗೆ ಅನಂತರ ಸಾವು ಈ ವಿಚಾರಗಳ ಬಗ್ಗೆ ಹಿರಿಯರು ಕಿರಿಯರಿಗೆ ಸಂಕೋಚದಿಂದ ಸೂಕ್ತ ಮಾಹಿತಿ ನೀಡದೆ ಅಥವಾ ಅಲಕ್ಷ್ಯದಿಂದ ನಿಕೃಷ್ಟಭಾವನೆ ತಾಳದೆ, ಜೀವಕುಲದ ಉದ್ಧಾರಕ್ಕೆ ಈ ಹಂತಗಳು ಅನಿವಾರ್ಯ ಎಂಬುದನ್ನು ತಿಳಿಯಪಡಿಸಲು ದೇವಾಲಯದಲ್ಲಿ ಈ ಶಿಲ್ಪಗಳನ್ನು ರೂಪಿಸಿದ್ದಾರೆ ಎಂದು ವಿಶ್ಲೇಷಿಸಬಹುದು. ಪ್ರಪಂಚದಲ್ಲಿ ನಿರಂತರವಾಗಿ ನಡೆಯುತ್ತಿರುವ ಸೃಷ್ಟಿ, ಸ್ಥಿತಿ ಹಾಗೂ ಲಯದ ವಾಸ್ತವಾಂಶವನ್ನು ಮುಕ್ತವಾಗಿ ಚಿತ್ರಿಸಿರುವುದು ಮೊಡೇರ ಸೂರ್ಯದೇವಾಲಯದ ಒಂದು ವೈಶಿಷ್ಟ್ಯ. (ಆರ್‌ಆರ್.)

**ಮೊಹೆಂಜೋದಾರೊ:** ಪ್ರ.ಶ.ಪೂ. 3ನೆಯ ಸಹಸ್ರಮಾನದ ಸಿಂಧೂ ನಾಗರಿಕತೆಗೆ ಸಂಬಂಧಿಸಿದ ಪ್ರಧಾನ ನಿವೇಶನ. ವಿಶ್ವ ಪರಂಪರೆಯ ಸಾಂಸ್ಕೃತಿಕ ನೆಲೆ. ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಲಾರ್ಕಾನ್ ಜಿಲ್ಲೆಯಲ್ಲಿ ಡೊಕ್ರಿ ರೈಲ್ವೆನಿಲ್ದಾಣದಿಂದ ಸು.11 ಕಿಮೀ ದೂರದಲ್ಲಿದೆ. 1912ರಲ್ಲಿ ಡಿ. ಆರ್. ಭಂಡಾರ್ಕರ್ ಇಲ್ಲಿಯ ಕೆಲವು ಅವಶೇಷಗಳ ಛಾಯಾಚಿತ್ರ ತೆಗೆದಿದ್ದರು. ಆದರೆ ಈ ನಿವೇಶನದ ಮಹತ್ತ್ವ ಬೆಳಕಿಗೆ ಬಂದದ್ದು 1922ರಲ್ಲಿ ಆರ್.ಡಿ. ಬ್ಯಾನರ್ಜಿ ಎಂಬ ವಿದ್ವಾಂಸರಿಂದ. 1923ರಲ್ಲಿ ಇವರು ಇಲ್ಲಿಯ ಸ್ತೂಪ ಪ್ರದೇಶದಲ್ಲಿ ಅಗೆಯುತ್ತಿದ್ದಾಗ ಕೆಲವು ಕುಷಾಣ ನಾಣ್ಯಗಳೂ ಸೇರಿದಂತೆ ಅನೇಕ ವಸ್ತುಸಾಮಗ್ರಿಗಳು ದೊರೆತವು. ಸುಮಾರು ಇದೇ ಸಮಯದಲ್ಲಿ ಹರಪ್ಪ ಎಂಬಲ್ಲಿ ಭೂಶೋಧನೆಯಲ್ಲಿ ನಿರತರಾಗಿದ್ದ ಡಿ.ಆರ್.ಸಾಹ್ನಿಯವರಿಗೆ ಕುಂಭಾವಶೇಷಗಳು ಚಿತ್ರಸಂಕೇತವಿರುವ ಮುದ್ರೆಗಳೂ ಲಭ್ಯವಾದವು. ಇವೆರಡೂ ನಿವೇಶಗಳಲ್ಲಿ ಉಪಲಬ್ದವಾದ ಅವಶೇಷಗಳನ್ನು ಅಧ್ಯಯನಮಾಡಿದ ಸರ್ ಜಾನ್ ಮಾರ್ಷಲ್ ಅವರು 1924ರ ಇಲಸ್ಟ್ರೇಟೆಡ್ ಲಂಡನ್ ನ್ಯೂಸ್ ಪತ್ರಿಕೆಯಲ್ಲಿ ತಮ್ಮ ಸಂಶೋಧನೆಯನ್ನು ಪ್ರಕಟಿಸಿದರು.

ಮೊಹೆಂಜೋದಾರೊ ಎಂದರೆ ಸತ್ತವರ ದಿಬ್ಬ ಎಂದು ಮಾರ್ಷಲ್ ಅರ್ಥೈಸಿದ್ದರೆ, ಸಂಗಮದ ದಿಬ್ಬ ಎನ್ನುವುದು ಎಫ್. ಡಬ್ಲ್ಯು. ಥಾಮಸ್ ನೀಡುವ ಅರ್ಥ. ಸು.125 ಹೆಕ್ಟೇರ್ ನಷ್ಟು ಪ್ರದೇಶದಲ್ಲಿ ಸಿಂಧೂ ನದಿಯ ಪ್ರವಾಹ ಪ್ರದೇಶದಲ್ಲಿಯ ಹಿಮಯುಗದ ಏಣಿನ ಮೇಲೆ ಹರಡಿರುವ ನಿವೇಶನದಲ್ಲಿ ಕ್ರಮವಾಗಿ ಮಾರ್ಷಲ್, ಎ.ಹೆಚ್. ದಾನಿ, ಇ.ಜೆ.ಎಚ್. ಮ್ಯಾಕೆ, ಜಿ.ಎಫ್. ಡೇಲ್ಸ್, ಸರ್ ಮಾರ್ಟಿಮರ್ ವೀಲರ್ ಉತ್ಖನನ ನಡೆಸಿದ್ದಾರೆ. 1980ರ ದಶಕದಲ್ಲಿ ಮೈಕೇಲ್ ಜಾನ್‌ಸನ್ ಮತ್ತು ಮೌರಿಜ್ಜಿಯಾ ತೋಸಿ ಇವರ ನೇತೃತ್ವದಲ್ಲಿ ಜರ್ಮನ್ ಮತ್ತು ಇಟಲಿಯ ಸರ್ವೇಕ್ಷಣೆ ತಂಡಗಳು ಈ ನೆಲೆಯ ಸೂಕ್ಷ್ಮವಿವರಗಳ ಸಂಗ್ರಹ, ಕಟ್ಟಡಗಳ ದಾಖಾಲಾತಿ ಅಲ್ಲಿಯ ಆಯ್ದ ಭಾಗಗಳಲ್ಲಿ ಪದರು ವಿನ್ಯಾಸವನ್ನು ತಿಳಿಯಲು ಅಡ್ಡಲಾಗಿ ಸಮತಟ್ಟು ಮಾಡಿ ಈ ನಾಗರಿಕತೆಯ ಬಗ್ಗೆ ಹೆಚ್ಚಿನ ವಿಷಯ ಸಂಗ್ರಹ ಮಾಡಿದರು. ಇಲ್ಲಿಯ ಕಟ್ಟಡಗಳು ಹರಪ್ಪಾದವಕ್ಕಿಂತ ಸುಸ್ಥಿತಿಯಲ್ಲಿದ್ದವು. ಕಡಿಮೆ ಮಳೆ, ಏರುಪೇರಿನ ಉಷ್ಣತೆ, ಧೂಳು ಬಿರುಗಾಳಿಗಳಿಂದ ಕೂಡಿರುವ ಇಂದಿನ ಮೊಹೆಂಜೋದಾರೊ ಹಿಂದೊಮ್ಮೆ ದಟ್ಟಕಾಡುಗಳಿಂದ, ಸಮೃದ್ಧ ಮಳೆಯಿಂದ ಕೂಡಿದ ವಾಸಯೋಗ್ಯ ಪ್ರದೇಶವಾಗಿತ್ತು. ಸುಟ್ಟ ಇಟ್ಟಿಗೆಯ ಬಳಕೆ ಇದನ್ನು ಸಮರ್ಥಿಸುತ್ತದೆ. ಅಲ್ಲದೆ ಸಿಂಧೂ ಮುದ್ರೆಗಳ ಮೇಲೆ ಆನೆ, ಘೇಂಡಾಮೃಗ, ಹುಲಿ ಮುಂತಾದ ಪ್ರಾಣಿಗಳ ಚಿತ್ರಗಳು ಕಂಡುಬಂದಿವೆ. ಸಾಮಾನ್ಯವಾಗಿ ಈ ಬಗೆಯ ಪ್ರಾಣಿಗಳು ವಾಸಿಸುವುದು ದಟ್ಟವಾದ ಅರಣ್ಯಪ್ರದೇಶಗಳಲ್ಲಿಯೇ. ಸಪ್ತಸಿಂಧೂ ಪ್ರದೇಶದಲ್ಲಿ ಮಳೆ ಹೆಚ್ಚೆಂದು ಋಗ್ವೇದದಲ್ಲಿ ಹೇಳಿರುವುದೂ ಗಮನಾರ್ಹ. ಸಿಂಧೂನದಿಯ (ಅಥವಾ ಅದರ ಪ್ರಮುಖ ಶಾಖೆಯ) ತೀರದಲ್ಲಿಯೇ ಹಿಂದೆ ಮೊಹೆಂಜೋದಾರೊ ನಗರವಿತ್ತು. ಈಗ ಸಿಂಧೂ ನದಿ ಮೊಹೆಂಜೋದಾರೊದಿಂದ ಸು. 5 ಕಿಮೀ ದೂರದಲ್ಲಿ ಹರಿಯುತ್ತಿದೆ. ಈ ನಗರವು ಬಹುಶಃ ಒಂದು ಆಡಳಿತ ಕೇಂದ್ರವಾಗಿತ್ತೆಂದು ತೋರುತ್ತದೆ.

ಕಬ್ಬಿಣ ಬಿಟ್ಟು ಮತ್ತೆಲ್ಲ ಲೋಹಗಳ ಬಳಕೆ ಇದ್ದುದರಿಂದ ಸಿಂಧೂಸಂಸ್ಕೃತಿಯನ್ನು ತಾಮ್ರ–ಶಿಲಾ ಸಂಸ್ಕೃತಿ ಎಂದು ಕರೆಯಲಾಗಿದೆ. ನಗರ ನಿರ್ಮಾಣದಲ್ಲಿ ಪ್ರಧಾನವಾಗಿ ಅನುಸರಿಸಬೇಕಾದ ರೀತಿ ನೀತಿಗಳೆಲ್ಲ ಮೊಹೆಂಜೋದಾರೊದಲ್ಲಿರುವುದು ಗಮನಾರ್ಹ. ಪಶ್ಚಿಮ ಭಾಗದಲ್ಲಿ ಗೋಪುರ ದಕ್ಷಿಣದಲ್ಲಿ ರಕ್ಷಣಾ ಗೋಡೆಗಳು ಕಂಡುಬಂದಿವೆ. ವಿಶಾಲವಾದ ಬೀದಿಗಳು, ಬಾವಿ ಸಹಿತ ಆಯತಾಕಾರದ ಕಟ್ಟಡಗಳು, ಉತ್ತಮ ಒಳಚರಂಡಿ ವ್ಯವಸ್ಥೆ ಈ ನಗರದ ಪ್ರಧಾನ ಲಕ್ಷಣಗಳು. ಮೊಹೆಂಜೋದಾರೊವನ್ನು ಬರಿದಾದ ಈಗಿನ ಲಂಕಾಷೈರ್ ನಗರದಂತೆ ಕಾಣುತ್ತದೆ ಎಂದು ಮಾರ್ಷಲ್ ವರ್ಣಿಸಿದ್ದಾರೆ. ಈ ನಗರದ ಜನಸಂಖ್ಯೆ ಆಗ ಸು.35,000 ಎಂದು ಅಂದಾಜು ಮಾಡಲಾಗಿದೆ.

ಅವಶ್ಯಕತೆ ದೃಷ್ಟಿಯಿಂದ ಸರಳ ಕಟ್ಟಡಗಳನ್ನು ನಿರ್ಮಿಸಿದ ಇಲ್ಲಿಯ ಜನರು ಆರೋಗ್ಯ ಹಾಗೂ ಶುಚಿತ್ವಕ್ಕೆ ವಿಶೇಷ ಗಮನವಿತ್ತಿದ್ದರು. ನೆಲದ ಇಳಿಜಾರು, ನೀರು ಹೊರಹೋಗಲು ವ್ಯವಸ್ಥೆ ಮುಂತಾದವು ಸ್ನಾನದ ಕೋಣೆಗಳಲ್ಲಿ ಎದ್ದು ಕಾಣುತ್ತದೆ. ಆ ಕಾಲದಲ್ಲಿ ಬಚ್ಚಲಿನ ನೀರು ಹೊರಹೋಗಿ ರಸ್ತೆಯ ಒಳಚರಂಡಿಗೆ ಸೇರುವಂತೆ ವ್ಯವಸ್ಥೆಯಿರುವುದು ಬೆರಗುಂಟುಮಾಡುತ್ತದೆ. ಕಟ್ಟಡಗಳಲ್ಲಿ ಸಭಾಭವನ ಹಾಗೂ ಸಾರ್ವಜನಿಕ ಸ್ನಾನದ ತೊಟ್ಟಿಗಳು ಗಮನಿಸಬೇಕಾದ ರಚನೆಗಳು. 1925–26ರಲ್ಲಿ ಬೆಳಕಿಗೆ ಬಂದ ಮಹಾಸ್ನಾನ ಕೊಳದ ಕೆಲವು ಭಾಗಗಳನ್ನು 1927–28ರಲ್ಲಿ ಮ್ಯಾಕೆಯವರು ಪರಿಶೋಧಿಸಿದರು. 54x32.4ಮೀ ವಿಸ್ತೀರ್ಣದ ಕಟ್ಟಡದೊಳಗಿದ್ದ ಆಜುಕೋಳದ ವಿಸ್ತೀರ್ಣ 12x9.20ಮೀ. ಒಳ ಅಂಗಳದ ಮಧ್ಯದಲ್ಲಿ ಕೊಳವಿದ್ದು ನಾಲ್ಕು ಕಡೆಗೂ ಮೊಗಸಾಲೆಗಳಿವೆ. ಸ್ನಾನತೊಟ್ಟಿಯ ಪಕ್ಕದಲ್ಲಿ ನೀರು ಜಿನುಗದಂತೆ ಮಾಡಲು ವಿಶೇಷವಾಗಿ ನಿರ್ಮಿಸಿದ ಇಟ್ಟಿಗೆಯ ಚೂರುಗಳ ಅಂಚುಗಳಿಗೆ ಬಿಟುಮನ್ನಿನ ಲೇಪನವಾಗಿದೆ. ಕೊಳಕ್ಕೆ ನೀರನ್ನು ಒದಗಿಸುವ ಹಾಗೂ ಹೊರ ಸಾಗಿಸುವ



ಸಿಂಧೂ–ಸರಸ್ವತಿ ನಾಗರಿಕತೆ ನಗರ, ಮೊಹೆಂಜೋದಾರೊ

ವ್ಯವಸ್ಥೆ ಪರಿಪೂರ್ಣವಾಗಿತ್ತು. ಈ ಬಗೆಯ ವಿಶಿಷ್ಟ ವ್ಯವಸ್ಥೆ ಇತರ ಸಮಕಾಲೀನ ನಾಗರಿಕತೆಗಳಾವುದರಲ್ಲಿಯೂ ಕಾಣದ ಅಂಶವಾಗಿದೆ. ಕೊಳಕ್ಕೆ ಆರು ಪ್ರವೇಶದ್ವಾರಗಳಿವೆ. 1927–28ರಲ್ಲಿ ಸ್ತೂಪದ ಮತ್ತು ಪವಿತ್ರಸ್ನಾನ ಕೊಳದ ನಡುವೆ ಸ್ನಾನಗೃಹಗಳ ಸಮೂಹವೊಂದು ಪತ್ತೆಯಾಯಿತು. ಪ್ರಾಯಶಃ ಪುರೋಹಿತವರ್ಗದವರ ಬಳಕೆಗಾಗಿ ಇವನ್ನು ನಿರ್ಮಿಸಿದ್ದಿರಬೇಕೆಂದು ಊಹಿಸಲಾಗಿದೆ.

ಇಲ್ಲಿಯ ಉತ್ತರ–ದಕ್ಷಿಣ ರಸ್ತೆ ವಿಶಾಲವಾಗಿದ್ದು ದ್ವಿಚಕ್ರವಾಹನ ಮತ್ತು ಪಾದಚಾರಿಗಳ ಓಡಾಟಕ್ಕೆ ಅನುಕೂಲಕರವಾಗಿತ್ತು. ಹೆಚ್ಚು ಜನಸಂಚಾರವಿದ್ದುದು 9.90ಮೀ ಅಗಲ, ಸುಮಾರು 1ಕಿಮೀ ಉದ್ದದ ಪೂರ್ವ ಬೀದಿಯಲ್ಲಿ. 2.70ಮೀ–3.90ಮೀ ಅಗಲವುಳ್ಳ ಹಲವು ಬೀದಿಗಳಿದ್ದವು. ಧಾನ್ಯ ಸಂಗ್ರಹ ಕಟ್ಟಡಗಳನ್ನೂ ಮೊಹೆಂಜೋದಾರೊದಲ್ಲಿ ಗುರುತಿಸಲಾಗಿದೆ. ಗೋದಿ, ಬಾರ್ಲಿ, ಖರ್ಜೂರ, ಹತ್ತಿ ಮುಂತಾದವು ಆಗಿನ ಮುಖ್ಯ ಬೆಳೆಗಳು.

ಪ್ರಾಣಿಸಾಕಾಣಿಕೆ ಮುಖ್ಯ ಕಸುಬು. ಮಾಂಸಾಹಾರವಿದ್ದಿತು. ನೂಲು ತೆಗೆಯುವುದು, ಬಣ್ಣ ಹಾಕುವುದು, ಕಸೂತಿ ಮುಂತಾದವು ಇತರ ಕಸಬುಗಳಾಗಿದ್ದವು. ಹೆಂಗಸರು ಅಲಂಕಾರಪ್ರಿಯ ರಾಗಿದ್ದರು. ವಿವಿಧ ವಿನ್ಯಾಸದ ವಿಪುಲ ಆಭರಣಗಳು, ಕಾಡಿಗೆ ಕಡ್ಡಿ, ರಂಗು ಮುಂತಾದವು ಇಲ್ಲಿ ಲಭ್ಯವಾಗಿವೆ. ಕೋಳಿಕಾಳಗ ಜನಪ್ರಿಯ ಕ್ರೀಡೆಯಾಗಿತ್ತು. ಗೂಳಿ–ಎಮ್ಮೆಗಳೊಡನೆ ಹೋರಾಡುವ ಸ್ಪರ್ಧೆಯೂ ಇತ್ತೆಂದು ತೋರುತ್ತದೆ. ಮಕ್ಕಳ ಆಟದ ವಸ್ತು ರಾಶಿಯಲ್ಲಿ ಪಗಡೆ ದಾಳ, ಗೋಲಿ, ಚೆಂಡು ಮುಂತಾದವು ಸಿಕ್ಕಿವೆ. ಮಾಪನದಲ್ಲಿ ಚರ್ಟ್‌ಶಿಲೆಯಲ್ಲಿ ಸಿದ್ಧಪಡಿಸಿದ ಹಲವು ಬಗೆಯ ತೂಕದ ಬಟ್ಟುಗಳು ಬಳಕೆಯಲ್ಲಿದ್ದವು. ಇವು ಸೂಸಾ ಮತ್ತು ಇರಾಕ್‌ಗಳಲ್ಲಿ ದೊರೆತ ತೂಕದ ಬಟ್ಟುಗಳಿಗಿಂತ ಹೆಚ್ಚು ನಿಖರವಾದವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಚಿಪ್ಪಿನ ಮಾನದ ತುಣುಕನ್ನು ಮ್ಯಾಕೆ ಇಲ್ಲಿ ಅನ್ವೇಷಿಸಿದ್ದಾರೆ. ಗೃಹಕೃತ್ಯದ ಸಾಮಗ್ರಿಗಳು, ತಿಗುರಿಯ ಮೇಲೆ ಮಾಡಿದ ವಿವಿಧ ಮಣ್ಪಾತ್ರೆಗಳು, ತಾಮ್ರ ಹಾಗೂ ಕಂಚಿನ ಭರ್ಜಿ, ಶೂಲ, ಶಿರ, ಬಾಣ, ಬಗೆಬಗೆಯ ಚಾಕುಗಳು, ಕತ್ತಿ, ಸೂಜಿ, ದಬ್ಬಳ, ಮೀನುಗಾಳ, ಗದೆ ಮುಂತಾದ ಹತ್ತು ಹಲವು ಸಾಮಗ್ರಿಗಳು ಇಲ್ಲಿ ಉಪಲಬ್ಧವಾಗಿವೆ. ಇಲ್ಲಿ ಕಂಡುಬಂದ ಗರಗಸ ಪ್ರಪಂಚದಲ್ಲಿಯೇ ಪ್ರಾಚೀನವಾದುದೆಂದು ಸರ್ ಫ್ಲಿಂಡರ್ಸ್ ಪೆಟ್ರಿ ಸೂಚಿಸಿದ್ದಾರೆ. ಮಣ್ಣಿನ ಗಿಲಿಕೆ, ಕೋಳಿ ಅಥವಾ ಪಾರಿವಾಳ ರೂಪದ ಪೀಪಿ, ಚಕ್ರ, ಪ್ರಾಣಿ ಗೊಂಬೆಗಳು, ಹಕ್ಕಿ ಬಂಡಿ, ಪೀಠೋಪಕರಣ ಮುಂತಾದ ಆಟದ ವಸ್ತುಗಳನ್ನು ಮಣ್ಣಿನಲ್ಲಿ ಕಲಾತ್ಮಕವಾಗಿ ತಯಾರಿಸಲಾಗುತ್ತಿತ್ತು.

ಮೊಹೆಂಜೋದಾರೊ ಮುದ್ರೆಗಳು

ಜೇಡಿಮಣ್ಣಿನ ಪ್ರತಿಮೆಗಳೂ ಇಲ್ಲಿ ದೊರೆತಿವೆ. ಮೂರು ಎಸಳಿನ ವಿನ್ಯಾಸದ ಮೇಲುವಸ್ತ್ರ ಹೊದ್ದಿರುವ ಪುರೋಹಿತರಾಜ ಅಥವಾ ಶ್ರೀಮಂತನ ಶಿಲಾಮೂರ್ತಿ ಸುಪ್ರಸಿದ್ಧವಾದುದು. ಅರ್ಧನಿಮೀಲಿತ ನೀಳನೇತ್ರ, ಚಾಚಿದ ಮೂಗು, ಸಾಮಾನ್ಯ ಗಾತ್ರದ ಬಾಯಿ, ಸಣ್ಣಗಡ್ಡದ ಈ ಮೂರ್ತಿ ಸಿಂಧೂ ಜನರ ಕಲಾಪ್ರಜ್ಞೆಗೆ ಹಾಗೂ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಕಲ್ಲಿನ ಪ್ರತಿಮೆಗಳು ವಿರಳ. ನೃತ್ಯ ಹುಡುಗಿ ಎಂದು ಕರೆಯಲಾದ ಕಂಚಿನ ಗೊಂಬೆ ಲೋಹ ಶಿಲ್ಪ ಶ್ರೇಷ್ಠತೆಗೆ ಒಂದು ಉತ್ತಮ ಉದಾಹರಣೆ: ಪ್ರಾಣಿಚಿತ್ರದಲ್ಲಿ ಕಂಡುಬರುವ ಸಹಜ ಸೊಬಗು ಮನಸೆಳೆಯುತ್ತದೆ. ಹಲವಾರು ಮುದ್ರೆಗಳ ಮೇಲಿನ ಗೂಳಿ, ಕಾಡುಕೋಣ, ಘೇಂಡಾಮೃಗ, ಹುಲಿ, ಕರಡಿ ಮುಂತಾದವನ್ನು ಗಮನಿಸಿದರೆ ಈ ಅಂಶ ಸ್ಪಷ್ಟಪಡುತ್ತದೆ. ಸಿಂಧೂ ಮುದ್ರೆಗಳ ಮೇಲಿನ ಬರೆಹಗಳನ್ನು ಹಂಟರ್ ಲಾಂಗ್‌ಡನ್ ಹ್ರಾಂಜಿಯವರಿಂದ ಹಿಡಿದು ಈಚಿನ ಐರಾವತ ಮಹಾದೇವನ್, ಎಸ್.ಆರ್.ರಾವ್. ಶಂಕರ ಮೊಕಾಶಿ ಪುಣೇಕರ್, ಎನ್.ಯು.ಕಲ್ಯಾಣರಾಮನ್ ಮತ್ತಿತರ ಹಲವು ವಿದ್ವಾಂಸರು ಓದಲು ಪ್ರಯತ್ನಿಸಿದ್ದಾದರೂ ಸರ್ವಸಮ್ಮತ ಅಭಿಪ್ರಾಯವಿನ್ನೂ ಮೂಡಿಲ್ಲ. ವಿದ್ವಾಂಸರ ಅಧ್ಯಯನ ಪ್ರಯತ್ನಗಳು ಮುಂದುವರೆದಿವೆ.

ಇಲ್ಲಿಯ ಜನರ ಧಾರ್ಮಿಕ ಜೀವನದ ಬಗೆಗೆ ಕೆಲವು ಸುಳಿವುಗಳಷ್ಟೇ ದೊರೆಯುತ್ತವೆ. ಮಾತೃದೇವತೆಯ ಆರಾಧನೆ ಪ್ರಧಾನವಾಗಿತ್ತು. ಮಣ್ಣಿನ ನಗ್ನಸ್ತ್ರೀ ಮೂರ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಶಿವಲಿಂಗ, ವೃಷಭ, ವೃಕ್ಷಾದಿಗಳನ್ನೂ ಪೂಜಿಸಲಾಗುತ್ತಿತ್ತು. ಹುಲಿ, ಆನೆ, ಘೇಂಡಾಮೃಗ ಮುಂತಾದವೂ ಪೂಜ್ಯವಸ್ತುಗಳಾಗಿದ್ದಿರಬಹುದು.

ಈ ನೆಲೆಯಲ್ಲಿ ಹಲವು ಸಮಾಧಿಗಳೂ ಗೋಚರಿಸಿದ್ದು ಅವುಗಳಲ್ಲಿ ಮೃತನಿಗೆ ಸಂಬಂಧಿಸಿದ ವಸ್ತುಗಳನ್ನೂ ಹುಗಿದಿಟ್ಟದ್ದು ಕಂಡುಬಂದಿದೆ. ಕಳೇಬರಗಳನ್ನು ಪಶುಪಕ್ಷಿಗಳಿಗೆ ತೆರೆದಿಟ್ಟು, ಉಳಿದ ಅಸ್ಥಿಗಳನ್ನು ಆರಿಸಿ ಸಮಾಧಿಮಾಡುವ ಪದ್ಧತಿಯೂ ಆಗ ಇತ್ತು. ಇವನ್ನು ಅಸಮಗ್ರ ಹುಗಿತವೆಂದು ಪರಿಗಣಿಸಲಾಗಿದೆ. ಭಸ್ಮಪಾತ್ರೆಗಳು ಸಿಕ್ಕಿರುವುದರಿಂದ ದಹನಾನಂತರ ಹೂಳುವ ಪದ್ಧತಿಯೂ ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ. ಮೊಹೆಂಜೋದಾರೊ ಹಠಾತ್ತಾಗಿ ದಾಳಿಗೀಡಾಗಿ ನಾಶವಾದಂತೆ ತೋರುತ್ತದೆ. ವಿವಿಧ ಭಂಗಿಯಲ್ಲಿ ಎಲ್ಲೆಂದರಲ್ಲಿ ಬಿದ್ದಿರುವ ಜನರ ಅಸ್ಥಿಪಂಜರಗಳು ಈ ಅಭಿಪ್ರಾಯಕ್ಕೆ ಪೋಷಕವಾಗಿವೆ ಎಂಬ ಅಭಿಪ್ರಾಯವಿದ್ದಿತ್ತು. ಆದರೆ 1960ರಿಂದ ನಡೆದ ಅಧ್ಯಯನಗಳಿಂದ ಈ ಅಭಿಪ್ರಾಯದಲ್ಲಿ ನಿಜಾಂಶವಿಲ್ಲವೆಂದು ಸಾಬೀತಾಗಿದೆ. ನದಿಯ ಅನೂಹ್ಯ ಪ್ರವಾಹ, ಅರಣ್ಯಗಳ ನಾಶ ಇತ್ಯಾದಿ ಸಂಗತಿಗಳೂ ಈ ಬಗೆಯ ಹಠಾತ್‌ನಾಶಕ್ಕೆ ಕಾರಣವಾಗಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ಕನಿಷ್ಠ ಏಳು ಬಾರಿ ಈ ನಗರ ಪ್ರವಾಹಕ್ಕೆ ತುತ್ತಾಗಿರುವುದು ಕಂಡು ಬಂದಿದೆ. (ಎಚ್.ಎಂ.ಎನ್.ಆರ್.)

**ಮೋಸಸ್:** ಇಸ್ರೇಲ್ ಯಹೂದಿ ಜನತೆಯ ಧಾರ್ಮಿಕ ನಾಯಕ; ಪ್ರವಾದಿ. ಯಹೂದಿ, ಕ್ರೈಸ್ತ ಹಾಗೂ ಇಸ್ಲಾಮ್ ಧರ್ಮಗಳಲ್ಲಿ ಹೆಚ್ಚಿನ ಗೌರವಕ್ಕೆ ಪಾತ್ರನಾದವ. ಸಿನ್ಯೆ ಪರ್ವತದ (ಹೊರೆಬ್) ಮೇಲೆ ದೇವರಾದ ಯಾಹ್ವೆ ಜೊತೆ ಇಸ್ರೇಲಿಗಳು ಮಾಡಿಕೊಂಡ ಒಪ್ಪಂದದ ಮಧ್ಯವರ್ತಿ.

ಬೈಬಲಿನ ಮೊದಲ ಐದು ಗ್ರಂಥಗಳಲ್ಲಿ (ವಿಶೇಷವಾಗಿ ವಿಮೋಚನಾಕಾಂಡದಲ್ಲಿ) ಮೋಸಸನ ಬಗೆಗೆ ವಿವರಗಳು ಐತಿಹ್ಯಗಳ, ಮೌಖಿಕ ಹಾಗೂ ಲಿಖಿತ ಸಂಪ್ರದಾಯಗಳ, ಚಾರಿತ್ರಿಕ ಅಂಶಗಳ ಬೆರಕೆಯಾಗಿದ್ದರೂ ಇವನೊಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದ ಎಂಬುದನ್ನು ವಿದ್ವಾಂಸರು ಒಪ್ಪುತ್ತಾರೆ. ಇವನು ಹುಟ್ಟಿದ್ದು ಪ್ರ.ಶ.ಪೂ.ಸು.14ನೆಯ ಶತಮಾನದಲ್ಲಿ. ಮೋಸಸನ ಜನನವಾದಾಗ ಯಹೂದಿಗಳು ಈಜಿಪ್ಟಿನಲ್ಲಿ ಸೆರೆಯಾಳುಗಳಾಗಿ ಗುಲಾಮರಂತೆ ದುಡಿಯುತ್ತಿದ್ದರು. ಗುಲಾಮರಲ್ಲಿ ಜನಾಂಗದಲ್ಲಿ ಗಂಡುಮಕ್ಕಳು ಇರಬಾರದೆಂಬ ಹಾಗೂ ಹುಟ್ಟಿದ ಯಹೂದಿ ಗಂಡು ಕೂಸುಗಳನ್ನೆಲ್ಲ ಕೊಲ್ಲಬೇಕೆಂಬ ರಾಜಶಾಸನವಿತ್ತು. ಇಂಥ ಹೊತ್ತಿನಲ್ಲಿ ಮೋಸಸ್ ಯಹೂದಿ ದಂಪತಿಗಳ ಮಗನಾಗಿ ಜನಿಸಿದ. ಮಗುವನ್ನು ಮೂರು ತಿಂಗಳ ಕಾಲ ಸಾಕಿ, ರಾಜಶಾಸನದಿಂದ ಉಪಾಯವಾಗಿ ರಕ್ಷಿಸಿ, ಈಜಿಪ್ಟಿನ ರಾಜಕುಮಾರಿಯ ಕಣ್ಣಿಗೆ ಮಗು ಬೀಳುವಂತೆ ಮಾಡಿದವಳು ಮೋಸಸನ ತಾಯಿ. ಆಕೆ ಮಗುವನ್ನು ಬುಟ್ಟಿಯೊಂದರಲ್ಲಿ ಮುಚ್ಚಿಟ್ಟು ನೈಲ್‌ನದಿಯಲ್ಲಿ ಅದನ್ನು ತೇಲಿ ಬಿಟ್ಟಳು. ನೀರಿನಲ್ಲಿ ತೇಲುತ್ತಿದ್ದ ಬುಟ್ಟಿಯಿಂದ ಮಗುವನ್ನು ಎತ್ತಿಕೊಂಡ ರಾಜಪುತ್ರಿ ಅದನ್ನು ಸ್ವಂತ ಮಗನಂತೆ ಸಾಕಬೇಕೆಂದುಕೊಂಡು, ಪಾಲನೆಪೋಷಣೆಗೆ ಹೀಬ್ರು ಹೆಂಗಸೊಬ್ಬಳನ್ನು ನೇಮಿಸಬೇಕೆಂದಿರುವಾಗ ಮೋಸಸನು ರಾಜಕುಮಾರಿಯ ಸಾಕುಮಗನಾಗಿ ಈಜಿಪ್ಟಿನ ರಾಜಾಸ್ಥಾನದಲ್ಲಿ ಬೆಳೆದು ಸಕಲ ವಿದ್ಯಾ ಸಂಪನ್ನನಾದ. ಒಮ್ಮೆ ಹೀಬ್ರು ಗುಲಾಮನೊಬ್ಬನನ್ನು ಹಿಂಸಿಸುತ್ತಿದ್ದ ಈಜಿಪ್ಟಿನ ಒಬ್ಬ ಮೇಲ್ವಿಚಾರಕನನ್ನು ಮೋಸಸ್ ತಡೆಯಲು ಹೋಗಿ ಕೊಂದುಬಿಟ್ಟ. ಅನಂತರದ ಪರಿಣಾಮಗಳಿಗೆ ಅಂಜಿ ಮೀಡಿಯನ್ ಪ್ರದೇಶಕ್ಕೆ ಓಡಿ ಹೋದ. ಅಲ್ಲಿ ಪುರೋಹಿತ ಜೆತ್ರೊವಿನ ಮನೆಯಲ್ಲಿಯೇ ನೆಲಸಿದ. ಅನಂತರ ಅವನ ಹೆಣ್ಣು ಮಕ್ಕಳಲ್ಲಿ ಒಬ್ಬಳಾದ ಸೆಪ್ಪೂರಾ ಎಂಬುವಳನ್ನು ಮದುವೆಯಾದ. ಇವರಿಗೆ ಇಬ್ಬರು ಮಕ್ಕಳಾದರು.

ಇಸ್ರೇಲಿಯರನ್ನು ವಿಮೋಚನೆಗೊಳಿಸಿದವನು ಹಾಗೂ ದೇವರ ಹತ್ತು ಕಟ್ಟಳೆಗಳನ್ನು ಇಸ್ರೇಲಿಯರಿಗೆ ತಂದು ಕೊಟ್ಟವನು ಮೋಸಸ್. ಸಿನ್ಯೆ ಪರ್ವತದ ಬಳಿ ಜ್ವಾಲಾವೃತವಾದರೂ ಸುಟ್ಟು ಹೋಗದ ಒಂದು ಪೊದೆಯನ್ನು ಪರೀಕ್ಷಿಸಲು ಹೋದಾಗ ಅದು ಪವಿತ್ರಕ್ಷೇತ್ರವೆಂದು ದೇವರೇ ಮೋಸಸ್‌ಗೆ ತಿಳಿಸಿದ. ಅಂದು ಆರಂಭವಾದ ದೇವರ ಸಂಬಂಧ–ಸಂಪರ್ಕ ಮೋಸಸನ ಸಾವಿನವರೆಗೆ ಮುಂದುವರಿಯಿತು. ಇಸ್ರೇಲಿಯರು ಈಜಿಪ್ಟಿನಲ್ಲಿ ಕಷ್ಟಪಡುತ್ತಿರುವುದನ್ನು ತಪ್ಪಿಸಿ ಅವರನ್ನು ವಿಮೋಚನೆಗೊಳಿಸಲು ದೇವರು ಮೋಸಸನನ್ನು ನಿಯಮಿಸಿದ. ಈ ಕಾರ್ಯಕ್ಕೆ ತನ್ನ ಶಕ್ತಿ ಸಾಲದೆಂದು ಹಿಂಜರಿದ ಈತನಿಗೆ ಏರೋನ್ ಎಂಬವನು ಸಹಾಯವನ್ನು ಪವಾಡಗಳನ್ನು ಮಾಡುವ ಶಕ್ತಿಯನ್ನು ದೇವರು ಕೊಟ್ಟ. ಈಜಿಪ್ಟಿಗೆ ಹಿಂದಿರುಗಿ ಬಂದು ಇಸ್ರೇಲಿಯರನ್ನು ಬಂಧಮುಕ್ತಗೊಳಿಸುವಂತೆ ಫೇರೋನನ್ನು ಕೋರಿದ. ಎಷ್ಟು ಬೇಡಿಕೊಂಡರೂ ಉಪಯೋಗವಾಗದಿದ್ದಾಗ ಅನೇಕ ಪವಾಡಗಳನ್ನು ಮೆರೆದು ಕಠಿಣ ಮಾರಿಗಳನ್ನು (ಪ್ಲೇಗ್) ಈಜಿಪ್ಟಿನ ಮೇಲೆ ತರಿಸಿದ. ಕಡೆಯ ಮಾರಿಯಲ್ಲಿ ರಾಜನ ಮೊದಲನೆಯ ಮಗ ಮತ್ತು ಈಜಿಪ್ಟಿಯನ್ನರ ಮೊದಲ ಗಂಡುಸಂತಾನ ನಾಶವಾದಾಗ ಫೆರೊ ದೊರೆ ಇಸ್ರೇಲಿಯರನ್ನು ಬಂಧ ಮುಕ್ತಗೊಳಿಸಲು ಒಪ್ಪಿಕೊಂಡ. ಆದರೆ ದೊರೆ ಮತ್ತೆ ಮನಸ್ಸು ಬದಲಾಯಿಸಿ ಅವರನ್ನು ಹೋಗಲು ಬಿಡಬಾರದೆಂದುಕೊಂಡು ಸೈನ್ಯವನ್ನು ಬೆನ್ನಟ್ಟಿ ಕಳುಹಿಸಿದ. ಆದರೆ ಆ ವೇಳೆಗಾಗಲೇ ಮೋಸಸನ ನೇತೃತ್ವದಲ್ಲಿ ಕೆಂಪುಸಮುದ್ರದ ಮೂಲಕ ಯಹೂದಿಗಳೆಲ್ಲ ಪಾರಾದರು. ಈಜಿಪ್ಟ್ ಸೈನ್ಯ ಮಾತ್ರ ನೀರುಪಾಲಾಯಿತು. ಅನಂತರ ಸಿನ್ಯೆ ಪರ್ವತವನ್ನು ಸೇರಿ ಇಸ್ರೇಲ್ ಜನ ದೇವರಾದ ಯಾಹ್ವೆಯೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡರು. ಈ ಒಪ್ಪಂದ ದಶಾಜ್ಞೆಗಳಲ್ಲೂ (ಟೆನ್‌ಕಮಾಂಡ್‌ಮೆಂಟ್ಸ್) ಒಡಂಬಡಿಕೆಯ ಗ್ರಂಥದಲ್ಲೂ (ವಿಮೋಚನಾಕಾಂಡ 20:1–17:21–23) ದಾಖಲಾಗಿದೆ. ಇಸ್ರೇಲಿಗೆ ಕೇನಾನ್ ನಾಡನ್ನು ಕೊಡುವೆನೆಂದು ದೇವರು ವಾಗ್ದಾನಮಾಡಿದ್ದ. ವಾಗ್ದಾನವಾಗಿದ್ದ ಈ ನಾಡು ತಲುಪುವ ಮೊದಲು ಮರುಭೂಮಿಯಲ್ಲಿ ಪರ್ಯಟನ ಮಾಡುತ್ತಿರುವಾಗ ಪ್ರಾಪ್ತವಾದ ಸಂಕಷ್ಟಗಳನ್ನೆಲ್ಲ ಮೋಸಸನು ಇಸ್ರೇಲಿಯರಿಗೆ ಮಾರ್ಗದರ್ಶಕನಾಗಿ ನಿಂತು ಅವರನ್ನು ರಕ್ಷಿಸಿದ. ಕೊನೆಗೆ ವಾಗ್ದಾನವಾಗಿದ್ದ ನಾಡಿನ ಪರ್ಯಂತ ಅವರನ್ನು ಕರೆತಂದ. ಇಷ್ಟಕ್ಕೆ ಮೋಸಸನ ಕರ್ತವ್ಯ ನೆರವೇರಿತು. ಕೇನಾನ್ ನಾಡನ್ನು ಅವನು ಪ್ರವೇಶಿಸಲಿಲ್ಲ. ನೀಬೊ ಪರ್ವತದ ಬಳಿ ಮೋಸಸ್ ಕೊನೆಯುಸಿರೆಳೆದ.

ದಶಾಜ್ಞೆಗಳನ್ನಲ್ಲದೆ, ಬೈಬಲಿನ ಮೊದಲ ಐದು ಗ್ರಂಥಗಳ ಕರ್ತೃತ್ವವನ್ನು ಮೋಸಸನ ಹೆಸರಿಗೇ ಆರೋಪಿಸಲಾಗಿದೆ. ಕೆಲವು ಉಲ್ಲೇಖಗಳೂ ಇದನ್ನು ಭಾಗಶಃ ಸಮರ್ಥಿಸುತ್ತವೆ (ವಿವೇಚನಾಕಾಂಡ 24:4). ಇಸ್ರೇಲಿಯರ ಜೀವನ ರೀತಿಯನ್ನು ಸರ್ವಸಮರ್ಪಕವಾಗಿ ನಿಯಂತ್ರಿಸಲು ಈ ದಶಾಜ್ಞೆಗಳು ಸಾಲದಾದವು. ಇವುಗಳು ಸೇರಿದಂತೆ ಹಲವು ವಿಧಿ ವಿಧಾನಗಳನ್ನು ನಿಯಮಗಳನ್ನು ಒಡಂಬಡಿಕೆಯ ಗ್ರಂಥ ಒಳಗೊಳ್ಳುತ್ತದೆ. ಈ ಗ್ರಂಥವನ್ನು ಮೋಸಸ್ ಬರೆದನೆಂದು ಸಂಪ್ರದಾಯದ ನಂಬಿಕೆ. ಬೈಬಲಿನ ಮೊದಲ 5 ಗ್ರಂಥಗಳ ಬಗೆಗೆ ಸಿಗುವ ಬಾಹ್ಯ ಉಲ್ಲೇಖಗಳಲ್ಲಿ ಮೋಸಸನ ಪ್ರಸ್ತಾಪವಿಲ್ಲ. ಇವುಗಳ ಅನಂತರ ಬೈಬಲಿನಲ್ಲಿ ಬರುವ ಪ್ರವಾದಿಗಳ ಗ್ರಂಥಗಳಲ್ಲೂ ಇವನ ಪ್ರಸ್ತಾಪ ಕಡಿಮೆ. ಇಸ್ರೇಲ್ ಜನತೆಯ ಏಳು ಬೀಳುಗಳಲ್ಲಿ ಯಾಹ್ವೆಯ ನೇರ ಹಸ್ತಕ್ಷೇಪವನ್ನೇ ಎತ್ತಿಹಿಡಿಯಬೇಕೆಂಬ ಇಸ್ರೇಲಿಯರ ಮನೋಭಾವ ಇದಕ್ಕೆ ಕಾರಣವಿರಬೇಕು. ಹೀಗಿದ್ದರೂ ಪ್ರಾಕೃತ ಸ್ಥಿತಿಯಲ್ಲಿದ್ದು ಚದುರಿ ಹೋಗಿದ್ದ ಯಹೂದಿಗಳನ್ನೆಲ್ಲ ಬುಡಕಟ್ಟಿನ ವ್ಯವಸ್ಥೆಯಲ್ಲಿ ಸೇರಿಸಿ, ಒಬ್ಬ ರಾಜನ ಕೈಕೆಳಗೆ ಒಂದು ರಾಷ್ಟ್ರವನ್ನಾಗಿ ಕಟ್ಟಿದವನು ಮೋಸಸ್. ಇಸ್ರೇಲಿಯರ ಚರಿತ್ರೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಲ್ಲಿ ಮೋಸಸನ ಜೀವನ ವೃತ್ತಾಂತವನ್ನು ಅರಿಯುವುದು ಮುಖ್ಯವೆನಿಸುತ್ತದೆ. (ಜಿ.ಡಿ.)

**ಮೌಂಟ್ ಬ್ಯಾಟನ್, ಲಾರ್ಡ್:** 1900–79. ಭಾರತದ ಕೊನೆಯ ವೈಸ್‌ರಾಯ್ ಹಾಗೂ ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್. ಲೂಯಿಸ್ ಫ್ರಾನ್ಸಿಸ್ ಆಲ್ಬರ್ಟ್ ವಿಕ್ಟರ್ ನಿಕೋಲಾಸ್ ಎಂಬುದು ಇವನ ಮೊದಲ ಹೆಸರು. ಬ್ರಿಟಿಷ್ ಭೂ, ನೌಕಾ ಮತ್ತು ವಾಯುಪಡೆಗಳ ಮೇಲಧಿಕಾರಿ ಮತ್ತು ಕಮಾಂಡೋಗಳ ಮುಖ್ಯಸ್ಥ. ರಾಜನೀತಿಜ್ಞ. ಇವನು 1900 ಜೂನ್ 25 ರಂದು ಮಿಡ್ಸರ್‌ನಲ್ಲಿ ಜನಿಸಿದ. ಐದನೆಯ ಜಾರ್ಜ್‌ನ ರಕ್ತ ಸಂಬಂಧಿ, ಆಸ್ಟ್ರಿಯಾ ಸಂಜಾತ ಬ್ಯಾಟನ್ ಬರ್ಗ್‌ನ ದೊರೆ ಲೂಯಿಸ್ ಅಲೆಕ್ಸಾಂಡರ್ ಇವನ ತಂದೆ. ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳ ಮೊಮ್ಮಗಳು ರಾಣಿ ವಿಕ್ಟೋರಿಯ ಇವನ ತಾಯಿ. ಲಾಕರ್ಸ್ ಪಾರ್ಕ್, ಬಸ್‌ಬೋರ್ನ್ ಮತ್ತು ಡಾರ್ಟ್‌ಮೌತ್‌ಗಳಲ್ಲಿ ವಿದ್ಯಾಭ್ಯಾಸ ಪಡೆದ. 1913ರಲ್ಲಿ ನೌಕಾಪಡೆಯ ವಿದ್ಯಾರ್ಥಿಯಾಗಿ ರಾಯಲ್ ನೌಕಾಪಡೆಯನ್ನು ಸೇರಿ 1916ರಲ್ಲಿ ಹಡಗಿನ ಮಿಡ್‌ಷಿಪ್‌ಮ್ಯಾನ್ ಆದ. ಅನಂತರ 12ನೆಯ ಸಬ್‌ಮೆರಿನ್ ಫ್ಲೊಟಿಲ್ಲಾದಲ್ಲಿ ಸಬ್‌ಲೆಫ್ಟಿನೆಂಟ್, ಲೆಫ್ಟಿನೆಂಟ್ (1920) ಆಗಿ ಕಾರ್ಯ ನಿರ್ವಹಿಸಿದ. ಇದೇ ಅವಧಿಯಲ್ಲಿ ಲಾರ್ಡ್ ಪದವಿಯನ್ನು ಗಳಿಸಿದ ಮೌಂಟ್ ಬ್ಯಾಟನ್ ಲೂಯಿಸ್ ಲಾರ್ಡ್ ಎಂದು ಹೆಸರು ಬದಲಾಯಿಸಿಕೊಂಡ. ಮಿಲ್‌ಫೋರ್ಡ್ ಹೆವನ್‌ದ ಮೊದಲ ಮೊಕ್ವೆಸ್ ಆಗಿ ಶ್ರೀಮಂತ ಪದವಿಗೆ ಏರಿದ. 1921ರಲ್ಲಿ ವೇಲ್ಸ್‌ನ ರಾಜಕುಮಾರನಿಗೆ ಸೇನಾಪತಿ ಸಹಾಯಕನಾಗಿ (ಏಡ್–ಡ–ಕ್ಯಾಂಪ್) ಭಾರತ, ಜಪಾನ್ ಮತ್ತು ದೂರ ಪೂರ್ವ ದೇಶಗಳಿಗೆ ಪ್ರವಾಸಕೈಗೊಂಡ. 1922ರಲ್ಲಿ ಬ್ರಿಟಿಷ್ ಸಾರಿಗೆ ಸಚಿವ ಲಾರ್ಡ್ ಮೌಂಟ್ ಟೆಂಪಲ್‌ನ ಮಗಳಾದ ಎಡ್ವಿನಾ ಸಿಂಥಿಯಾ ಅನೆಟ್ ಆಷ್‌ಲೀ ಎಂಬವಳನ್ನು ವಿವಾಹವಾದ. 1928ರಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿ, 1932ರಲ್ಲಿ ಕ್ಯಾಪ್ಟನ್ ಹುದ್ದೆಗೆ ಬಡ್ತಿ ಪಡೆದ. ಮರು ವರ್ಷವೇ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳ ನಿರೂಪಕನಾಗಿ ಅರ್ಹತೆ ಗಳಿಸಿದ. 1937ರಲ್ಲಿ ಆರನೆಯ ಜಾರ್ಜ್ ದೊರೆಯ ಆಪ್ತಸೇನಾಪತಿ ಸಹಾಯಕನಾದ. ಕೆಲ್ಲಿ ಮತ್ತು 5ನೆಯ ಫ್ಲೊಟಿಲ್ಲಾ ವಿಧ್ವಂಸಕಗಳ ಹತೋಟಿಗಾಗಿ ಕಮಾಂಡರ್ ಆಗಿ ನೇಮಕಗೊಂಡ. 1941ರಲ್ಲಿ ವಾಯುಪಡೆಯ ಕಮಾಂಡರ್ ಆದ. 1943–46ರ ಅವಧಿಗೆ ಆಗ್ನೇಯ ಏಷ್ಯಕ್ಕೆ ಸಂಬಂಧಿಸಿದಂತೆ ಪ್ರಧಾನ ದಂಡನಾಯಕನಾಗಿ ಅಧಿಕಾರವಹಿಸಿಕೊಂಡ. ಬರ್ಮದ ಮೇಲೆ ಧಾಳಿ ನಡೆಸಲು ಯತ್ನಿಸಿದ ಜಪಾನಿನ ಮೇಲೆ ಯಶಸ್ವಿಯಾಗಿ ಆಕ್ರಮಣ ನಡೆಸಿದ.

ಭಾರತದ ಸ್ವಾತಂತ್ರ್ಯ ಚಳವಳಿ ನಿರ್ಣಾಯಕ ಹಂತ ತಲುಪಿದ್ದೂ ಇವನ ಕಾಲದಲ್ಲಿಯೇ. ಬ್ರಿಟನ್ನಿನಲ್ಲಿ ಸರ್. ಆಟ್ಲಿಯವರ ನಾಯಕತ್ವದ ಕಾರ್ಮಿಕ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಮೊದಲಿನಿಂದಲೂ ಭಾರತದ ಸ್ವಾತಂತ್ರ್ಯದ ಬಗ್ಗೆ ಸಹಾನುಭೂತಿ ಹೊಂದಿದ್ದ ಕಾರ್ಮಿಕ ಪಕ್ಷ ಮತ್ತು ಸರ್ಕಾರ ಭಾರತಕ್ಕೆ ಸ್ವಾತಂತ್ರ್ಯ ನೀಡಲು ದೃಢನಿರ್ಧಾರಕೈಗೊಂಡು 1946ರಲ್ಲಿ ಕ್ಯಾಬಿನೆಟ್ ಆಯೋಗವನ್ನು ಭಾರತಕ್ಕೆ ಕಳುಹಿಸಿಕೊಟ್ಟಿತು. 1948ರ ಜೂನ್ ಒಳಗೆ ಭಾರತಕ್ಕೆ ಅಧಿಕಾರವನ್ನು ಹಸ್ತಾಂತರ ಮಾಡಲಿದೆ ಎಂದು ಬ್ರಿಟಿಷ್ ಪ್ರಧಾನಿ ಆಟ್ಲೀ 1947. ಫೆಬ್ರುವರಿ 20 ರಂದು ಘೋಷಿಸಿದ 21 ದಿನಕ್ಕೆ (22ನೆಯ ಮಾರ್ಚ್) ಹೊಸ ವೈಸ್‌ರಾಯ್ ಭಾರತಕ್ಕೆ ಬಂದ. ಭಾರತ ಮತ್ತು ಪಾಕಿಸ್ತಾನದ ವಿಭಜನೆ ಅನಿವಾರ್ಯ ಎಂಬುದನ್ನು ಭಾರತಕ್ಕೆ ಮನದಟ್ಟು ಮಾಡಿಸುವುದು ಇವನ ಮೊದಲ ಉದ್ದೇಶವಾಗಿತ್ತು. ಆದರೆ ಗಾಂಧೀಜಿಯವರು, ವಿಭಜನೆಯಾದರೆ ಅದು ನನ್ನ ಹೆಣದ ಮೇಲೆ ಮಾತ್ರ ಎಂದು ಘೋಷಿಸಿದ್ದರು. ಅಬ್ದುಲ್ ಕಲಾಂ ಆಜಾದ್ ಕೂಡ ವಿಭಜನೆಗೆ ವಿರುದ್ಧವಾಗಿದ್ದರು. ಆದರೆ ಮುಸ್ಲಿಮರಿಗೆ ಪ್ರತ್ಯೇಕ ಪಾಕಿಸ್ತಾನ ಬೇಕೆಬೇಕು ಎಂದು ಮಹಮದ್ ಅಲಿ ಜಿನ್ನಾ ಪಟ್ಟುಹಿಡಿದಿದ್ದರು. ಈ ಹಿನ್ನೆಲೆಯಲ್ಲಿ 1947 ಜೂನ್ 3ರಂದು ಮೌಂಟ್ ಬ್ಯಾಟನ್ ಪರಿಹಾರ ಸೂತ್ರ ಕಂಡುಹಿಡಿದರು. ಅದೇ ಜೂನ್ 3ರ ಮೌಂಟ್ ಬ್ಯಾಟನ್ ಯೋಜನೆ. ಈ ಯೋಜನೆ ಬ್ರಿಟಿಷರು ಭಾರತಕ್ಕೆ ಅಧಿಕಾರ ಹಸ್ತಾಂತರ ಮಾಡುವುದನ್ನೇ ಮುಖ್ಯವಾಗಿಸಿಕೊಂಡಿತ್ತು. ಬಹುಸಂಖ್ಯಾತರ ಮುಸ್ಲಿಮರು ಭಾರತದಲ್ಲಿರಬೇಕೆ ಅಥವಾ ಪ್ರತ್ಯೇಕ ಪಾಕಿಸ್ತಾನವನ್ನು ಆಯ್ಕೆ ಮಾಡಿಕೊಳ್ಳಬೇಕೆ ಎಂಬ ಆಯ್ಕೆ ಪ್ರಶ್ನೆಗಳು ಇಲ್ಲಿದ್ದವು. ಸಿಂಧ್ ಮತ್ತು ಬಲೂಚಿಸ್ತಾನ್‌ನಲ್ಲಿ ಅಲ್ಲಿಯ ಪ್ರಾಂತೀಯ ಸದಸ್ಯ ನಿರ್ಧಾರ ಕೈಗೊಳ್ಳಬೇಕಿತ್ತು. ಬಂಗಾಲ ಮತ್ತು ಪಂಜಾಬಿನ ಶಾಸಕರ ಮುಂದೆ ಎರಡು ಆಯ್ಕೆಗಳಿದ್ದವು. ಮುಸ್ಲಿಂ ಮತ್ತು ಮುಸ್ಲಿಮೇತರರು ಎಂದು ವಿಭಾಗವಾದರೆ ಬಹುತೇಕರು ಪಾಕಿಸ್ತಾನಕ್ಕೆ ಸೇರುವುದು, ಈ ಸಂಬಂಧ ತೀರ್ಮಾನ ಕೈಗೊಳ್ಳಲು ಉತ್ತರ–ಪಶ್ಚಿಮ ಪ್ರಾಂತಗಳಲ್ಲಿ ಮತ್ತು ಅಸ್ಸಾಂನ ಸೈಲ್‌ಹೆಟ್‌ನ ಮುಸ್ಲಿಮರು ಹೆಚ್ಚಿರುವ ಪ್ರದೇಶಗಳಲ್ಲಿ ವಿಶೇಷ ವ್ಯವಸ್ಥೆ / ಚರ್ಚೆ / ಸಂವಾದಗಳನ್ನು ಏರ್ಪಡಿಸಲಾಯಿತು. ಈ ಪ್ರದೇಶಗಳಲ್ಲಿ ಬೃಹತ್ ಸಮಾವೇಶ (ರೆಫರಂಡಮ್)ವನ್ನು ಏರ್ಪಡಿಸಲೂ ಸಿದ್ಧತೆಗಳು ನಡೆದವು. ಭಾರತದ ವಿಧಾನ ಸಭೆಗಳು ಯಥಾ ಪ್ರಕಾರ ಮುಂದುವರಿದರೂ ಪಾಕಿಸ್ತಾನಕ್ಕೆ ಸೇರಬಯಸುವ ಪ್ರದೇಶಗಳಲ್ಲಿ ಪ್ರತ್ಯೇಕ ಕ್ಷೇತ್ರ ರಚನೆ ಮಾಡಬೇಕು ಎಂದೂ ಹೇಳಲಾಗಿತ್ತು. ಈ ಯೋಜನೆ ಪ್ರಕಟವಾದ ಸಂದರ್ಭದಲ್ಲೇ ಮೌಂಟ್ ಬ್ಯಾಟನ್ ಅಧಿಕಾರದ ಅಂತಿಮ ಹಸ್ತಾಂತರ 1948 ಜೂನ್ ಒಳಗೆ ಅಥವಾ ಆಗಸ್ಟ್ 15ರಂದು ನಡೆಯಲಿದೆ ಎಂದು ಸ್ಪಷ್ಟಪಡಿಸಿದ. ಪ್ರಾಂತೀಯ ಆಯ್ಕೆಗಳು ನಿರೀಕ್ಷೆಯಂತೆಯೇ ನಡೆದವು. ಬಲೂಚಿಸ್ತಾನ್, ಸಿಂಧ್ ಮತ್ತು ನಾರ್ತ್ ವೆಸ್ಟ್ ಪ್ರಾಂತಗಳು ಪಾಕಿಸ್ತಾನವನ್ನು ಆಯ್ಕೆ ಮಾಡಿಕೊಂಡವು. ಪಂಜಾಬ್ ಮತ್ತು ಬಂಗಾಲದ ಮುಂದೆ ಎರಡು ಆಯ್ಕೆಗಳಿದ್ದವು. ಪ್ರಾಂತಗಳು ಭಾರತದಿಂದ ಪ್ರತ್ಯೇಕಗೊಳ್ಳುತ್ತವೆ, ಆದರೆ ಅವುಗಳ ಮುಸ್ಲಿಂ ಅಲ್ಪಸಂಖ್ಯಾತ ಪ್ರದೇಶಗಳು ಭಾರತಕ್ಕೆ ಸೇರಿರುತ್ತವೆ. ಸೈಲ್‌ಹೆಟ್ ಪಾಕಿಸ್ತಾನದ ಪೂರ್ವಭಾಗಕ್ಕೆ ಸೇರಲು ತೀರ್ಮಾನಿಸಿತು. ಪಂಜಾಬ್ ಮತ್ತು ಬಂಗಾಲದ ಮುಸ್ಲಿಂ ಮತ್ತು ಮುಸ್ಲಿಮೇತರ ಪ್ರದೇಶಗಳನ್ನು ವಿಭಜಿಸಲು ಗಡಿ ಕಮಿಷನ್‌ಗಳನ್ನು ರಚಿಸಲಾಯಿತು. ಸರ್ ಸೈರಿಲ್ ರಾಡ್‌ಕ್ಲಿಫ್ ಅವರು ಎರಡು ಟ್ರಿಬ್ಯುನಲ್‌ಗಳ (ನ್ಯಾಯಾಲಯ) ಅಧ್ಯಕ್ಷರಾಗಿದ್ದರು. ಈ ಯೋಜನೆಯೊಂದಿಗೆ ಭಾರತದ ಹಣಕಾಸು ಸಂಪನ್ಮೂಲಗಳು ವಿಭಜನೆಗೊಳ್ಳಬೇಕಾಯಿತು. ವಿಭಜನೆಗೊಂಡ ಎರಡೂ ದೇಶಗಳು ಪ್ರತ್ಯೇಕ ನಾಗರಿಕ ಸೇವೆ ಮತ್ತು ಸೈನ್ಯ ವ್ಯವಸ್ಥೆಯನ್ನು ರೂಪಿಸಿಕೊಂಡವು. ದುರದೃಷ್ಟವೆಂದರೆ ರಾಜಪ್ರಭುತ್ವ ಜಾರಿಯಲ್ಲಿದ್ದ ಪ್ರದೇಶಗಳ ಬಗ್ಗೆ ಈ ಯೋಜನೆಯಲ್ಲಿ ಏನೂ ಹೇಳಿರಲಿಲ್ಲ. ಬ್ರಿಟಿಷರು ಭಾರತಬಿಟ್ಟು ಹೋದ ಮೇಲೆ ಎಲ್ಲ ಪ್ರಾಂತಗಳೂ ಸ್ವತಂತ್ರಗೊಳ್ಳುತ್ತವೆ ಎಂದು ಅಷ್ಟೆ ಸ್ಪಷ್ಟ ಸೂಚನೆ ನೀಡಿದ್ದ. ಎಲ್ಲ ಪ್ರಾಂತ್ಯಗಳನ್ನೊಳಗೊಂಡಿದ್ದ ದೇಶವೊಂದರ ಕನಸನ್ನು ನೆಹರು ಕಂಡಿದ್ದರು. ಹೀಗೆ 1947ರ ಆಗಸ್ಟ್ 15ರಂದು ದೇಶ ಸ್ವತಂತ್ರಗೊಳ್ಳುವಲ್ಲಿ ಮೌಂಟ್ ಬ್ಯಾಟನ್ ಯೋಜನೆ ಒಂದು ಪ್ರಮುಖ ಮೈಲಿಗಲ್ಲಾಗಿ ಮೂಡಿಬಂತು.

ಅನಂತರ 1948ರ ಜೂನ್‌ವರೆಗೆ ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ಕಾರ್ಯನಿರ್ವಹಿಸಿದ. ಅನಂತರ ಇಂಗ್ಲೆಂಡಿಗೆ ವಾಪಸಾದ ಇವನು ನಾಲ್ಕನೆಯ ಸೀಲಾರ್ಡ್ (1950–52), ಮೆಡಿಟರೇನಿಯನ್ ನೌಕಾಬಲದ ಪ್ರಧಾನ ಸೇನಾಧಿಪತಿ (1952–54), ಪ್ರಥಮ ಸೀಲಾರ್ಡ್ (1955–59)ಆಗಿ ಸೇವೆ ಸಲ್ಲಿಸಿದ. 1956ರಲ್ಲಿ ನೌಕಾಬಲದ ಅಧಿಪತಿಯಾಗಿ, ರಕ್ಷಣಾ ಸಿಬ್ಬಂದಿಯ ಮುಖ್ಯಸ್ಥನಾಗಿ (1959–65) ಕಾರ್ಯನಿರ್ವಹಿಸಿದ. 1979 ಆಗಸ್ಟ್ 27ರಂದು ಐರಿಸ್ ರಿಪಬ್ಲಿಕನ್ ಸೇನೆಯಿಂದ ಹತ್ಯೆಗೀಡಾದ. (ಎಂ.ಎಸ್.)

**ಮೌಖರಿ:** ಸು.554 ರಿಂದ 606ರ ತನಕ ಉತ್ತರ ಪ್ರದೇಶದ ಪೂರ್ವಭಾಗ ಮಗಧದೇಶದ ಗಯ ಪ್ರದೇಶವನ್ನಾಳಿದ ಒಂದು ರಾಜ ಮನೆತನ. ದೊರೆ ಈಶಾನವರ್ಮ 554ರಲ್ಲಿ ಗುಪ್ತ ವಂಶದ ಕೊನೆಯ ದೊರೆಯನ್ನು ಸೋಲಿಸಿ ಮಹಾರಾಜಾಧಿರಾಜನೆಂಬ ಬಿರುದು ತಳೆದು ಆಳಿಕೆ ಪ್ರಾರಂಭಿಸಿದ. ಆದರೆ ಈತ 550 ರಿಂದಲೇ ರಾಜನಾಗಿದ್ದನೆಂದೂ ಕೆಲವು ಕಡೆ ಉಲ್ಲೇಖವಿದೆ.

ಮೌಖರಿ ಪ್ರಾಚೀನವಂಶವೊಂದರ ಹೆಸರು. ಪಾಣಿನಿ ಮತ್ತು ಪತಂಜಲಿಗೆ ಈ ಹೆಸರು ತಿಳಿದಿತ್ತು. 239ರ ಮೌರ್ಯ ಬ್ರಾಹ್ಮಿಲಿಪಿ ಶಾಸನವೊಂದು ಮೋಖಲೀಣಂ ಎಂದು ಮೌಖರಿಯ ಸೇನಾನಿಯೊಬ್ಬನನ್ನು ಉಲ್ಲೇಖಿಸಿದೆ. ಮೂರನೆಯ ಶತಮಾನದಲ್ಲಿ ಮೌಖರಿ ವಂಶದ ಹಲವು ಶಾಖೆಗಳು ರಜಪುಟಾನ ಪ್ರದೇಶದಲ್ಲಿದ್ದುದಕ್ಕೆ ಶಾಸನಾಧಾರಗಳಿವೆ. ಮುಂದೆ ಪ್ರಖ್ಯಾತಿಗೆ ಬಂದ ಬಳಿಕ ಮೌಖರಿಗಳು ತಮ್ಮನ್ನು ಮಹಾಭಾರತ ಉಲ್ಲೇಖಿಸುವ ಮದ್ರದೇಶದ ರಾಜ ಅಶ್ವಪತಿಯ ವಂಶಜರೆಂದು ಗುರುತಿಸಿಕೊಂಡರು. ಮುಖರ ಎಂಬ ಪದದಿಂದ ಮೌಖರಿ ಉಗಮಿಸಿದೆ ಎಂದು ಹರ್ಷಚರಿತೆ ತಿಳಿಸುತ್ತದೆ. ಇವರನ್ನು ಅಶ್ವಪತಿ ವೈವಸ್ವತ ಮನುವಿನಿಂದ ಪಡೆದ ನೂರು ಮಕ್ಕಳ ವಂಶದವರೆಂದು 554ರ ಹರಹ ಶಾಸನ ಉಲ್ಲೇಖಿಸಿದೆ.

ಉತ್ತರ ಭಾರತದ ಇತಿಹಾಸದಲ್ಲಿ ಮೌಖರಿಗಳು ದೀರ್ಘಕಾಲ ಪಾತ್ರವಹಿಸಿದ್ದರು. ಇತ್ತೀಚೆಗೆ ಕೋಟಾ ಪ್ರಾಂತ್ಯದಲ್ಲಿ ದೊರಕಿರುವ ಮೂರು ಶಾಸನಗಳಲ್ಲಿ ಇವರನ್ನು ಮಹಾಸೇನಾಪತಿಗಳೆಂದು ವರ್ಣಿಸಿದೆ. ಬಾರಾಬರ್ ಮತ್ತು ನಾಗಾರ್ಜುನಿ ಬೆಟ್ಟಗಳ ಶಾಸನ ಗಳಲ್ಲಿ ಗಯಪ್ರದೇಶದಲ್ಲಿ 6ನೆಯ ಶತಮಾನದ ಪೂರ್ವಾರ್ಧದಲ್ಲಿ ಯಜ್ಞವರ್ಮ, ಈತನ ಮಗ ಶಾರ್ದೂಲವರ್ಮ ಮತ್ತು ಶಾರ್ದೂಲವರ್ಮನ ಮಗ ಅನಂತವರ್ಮ ಎಂಬ ಮೂವರು ಮೌಖರಿ ಅರಸು ಆಳುತ್ತಿದ್ದರೆಂಬ ಉಲ್ಲೇಖವಿದೆ. ಇವರೆಲ್ಲ ಗುಪ್ತ ಸಾಮ್ರಾಟರ ಸಾಮಂತರಾಗಿದ್ದರೆಂದು ತಿಳಿದು ಬರುತ್ತದೆ.

ಕನೌಜಿನ ಮೌಖರಿವಂಶದ ಅರಸರು ಹೆಚ್ಚು ಪ್ರಸಿದ್ಧ. ಈ ವಂಶದ ರಾಜಮುದ್ರೆಗಳು ಮಹಾರಾಜ ಹರಿವರ್ಮ ಮತ್ತು ಆತನ ಅರಸಿ ಜಯಸ್ವಾಮಿನಿ, ಮಹಾರಾಜ ಆದಿತ್ಯವರ್ಮ ಹಾಗೂ ಹರ್ಷಗುಪ್ತ ಉಪಗುಪ್ತ ಮತ್ತು ಮಹಾರಾಜಾಧಿರಾಜ ಈಶಾನವರ್ಮ ಮತ್ತು ಲಕ್ಷ್ಮೀಪತಿ, ಮಹಾರಾಜಾಧಿರಾಜ ಸರ್ವವರ್ಮ ಮತ್ತು ಇಂದ್ರಭಟ್ಟಾರಿಕಾ ಹಾಗೂ ಅವಂತಿವರ್ಮ ಮೊದಲಾದ ಅರಸರ ಹಾಗೂ ಅವರ ಪತ್ನಿಯರ ಹೆಸರನ್ನು ಒಳಗೊಂಡಿದೆ. ಮೊದಲಿನ ಹಲವು ದೊರೆಗಳು ಸಮಕಾಲೀನ ಮಗಧದ ಉತ್ತರ ಕಾಲೀನ ಗುಪ್ತ ಅರಸರೊಡನೆ ವಿವಾಹ ಸಂಬಂಧ ಬೆಳೆಸಿದ್ದರೆಂದೂ ಹಾಗೂ ಅವರ ಸಾಮಂತರೂ ಆಗಿದ್ದರೆಂದೂ ತಿಳಿದುಬರುತ್ತದೆ. ಈಶಾನವರ್ಮನ ಕಾಲದಿಂದ ಈ ವಂಶದ ಪ್ರತಿಷ್ಠೆ–ಗೌರವ ಹೆಚ್ಚಿತೆಂದು ಈತ ಧರಿಸಿದ ಬಿರುದುಗಳಿಂದ ಗೊತ್ತಾಗುತ್ತದೆ. ಈತನ ಹಾಗೂ ಈತನ ಮಗ ಸರ್ವವರ್ಮನ ಕಾಲದಲ್ಲಿ ಉತ್ತರಕಾಲೀನ ಗುಪ್ತರೊಡನೆ ಸಂಘರ್ಷವೇರ್ಪಟ್ಟಿತು. ಮೊದಲು ಈಶಾನವರ್ಮ ಸೋತರೂ ತರುವಾಯ ಸರ್ವವರ್ಮ ಜಯಸಾಧಿಸಿದ. ಈಶಾನವರ್ಮನನ್ನು ಮೌಖರಿ ವಂಶದ ಮೊದಲ ಸ್ವತಂತ್ರ ರಾಜನೆಂದು ವಿದ್ವಾಂಸರು ಪರಿಗಣಿಸಿದ್ದಾರೆ.

ಈಶಾನವರ್ಮ ಒಬ್ಬ ಸಮರ್ಥದೊರೆ. ಈತ ಆಂಧ್ರರು, ಶೂಲಿಕರು ಹಾಗೂ ಗೌಡದೇಶದವರ ಮೇಲೆ ಯುದ್ಧಮಾಡಿ ಜಯಗಳಿಸಿದನೆಂದು ಶಾಸನಗಳಿಂದ ತಿಳಿದು ಬರುತ್ತದೆ. ಕ್ರಮವಾಗಿ ಇದು ಪೂರ್ವ ಮತ್ತು ಪಶ್ಚಿಮ ದಖನ್ ಪ್ರದೇಶದಲ್ಲಿ ಆಳುತ್ತಿದ್ದ ವಿಷ್ಣುಕುಂಡಿ ಮತ್ತು ಚಾಳುಕ್ಯರನ್ನು ಹಾಗೂ ಬಂಗಾಲದಲ್ಲಿ ಆಳುತ್ತಿದ್ದ ವಂಶವೊಂದನ್ನು ಸೂಚಿಸುತ್ತದೆಂದು ಭಾವಿಸಲಾಗಿದೆ. ಈಶಾನವರ್ಮ ಮತ್ತು ಆತನ ಮಗ ಸರ್ವವರ್ಮರು ಹೂಣರೊಡನೆ ಕಾದಾಡಿ ಅವರನ್ನು ಸೋಲಿಸಿದರು.

ಸರ್ವವರ್ಮ ಮತ್ತು ಅವಂತಿವರ್ಮರು ಪ್ರಬಲ ಅರಸರಾಗಿದ್ದರು. ಸರ್ವವರ್ಮನಿಂದ ಪ್ರಾಯಶಃ ಗುಪ್ತದೊರೆ ದಾಮೋದರ ಪರಾಜಿತನಾದ. ಇವರೀರ್ವರ ಕಾಲದಲ್ಲಿ ಮಗಧದ ಭಾಗಗಳು ಮತ್ತು ಈಗಿನ ಉತ್ತರಪ್ರದೇಶ ಇವರ ಆಡಳಿತವ್ಯಾಪ್ತಿಗೆ ಸೇರಿತ್ತೆಂದು ಹೇಳಬಹುದು. ಮೌಖರಿ ಅರಸರ ಶಾಸನ–ನಾಣ್ಯಾಧಾರಗಳೆಲ್ಲ ಇಲ್ಲಿಯೇ ದೊರೆತವು. ಅವಂತಿವರ್ಮ ಮತ್ತು ಈತನ ಮಗನ ಕಾಲಕ್ಕೆ ಕನೌಜ್ ರಾಜಧಾನಿಯಾಗಿತ್ತೆಂದು ತೋರುತ್ತದೆ. ಈಶಾನ ವರ್ಮ ಸು.550–76ರ ತನಕ, ಸರ್ವವರ್ಮ 576–80ರ ತನಕ ಹಾಗೂ ಅವಂತಿವರ್ಮ 580–606ರ ತನಕ ಆಳಿದರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಅರಸರ ತೇದಿ ಇರುವ ನಾಣ್ಯಗಳು ದೊರೆತಿವೆ.

ಬಾಣನ ಹರ್ಷಚರಿತದ ಪ್ರಕಾರ ಗೃಹವರ್ಮ ಅವಂತಿವರ್ಮನ ಮಗ ಹಾಗೂ ಉತ್ತರಾಧಿಕಾರಿ. ಈತ ಸ್ಥಾಣೇಶ್ವರದ ಪುಷ್ಯಭೂತಿ ವಂಶದ ಪ್ರಭಾಕರವರ್ಧನನ ಮಗಳೂ ರಾಜ್ಯವರ್ಧನ ಮತ್ತು ಹರ್ಷವರ್ಧನರ ಸೋದರಿಯೂ ಆದ ರಾಜ್ಯಶ್ರೀಯನ್ನು ವಿವಾಹವಾದ. ಆದರೆ ಮಾಳವದ ರಾಜ ದೇವಗುಪ್ತ ಗೃಹವರ್ಮನನ್ನು ಕೊಂದು ರಾಜ್ಯಶ್ರೀಯನ್ನು ಕನೂಜಿನಲ್ಲಿ ಸೆರೆಯಿಟ್ಟ. ಮುಂದೆ ರಾಜ್ಯವರ್ಧನ ಮಾಳವದ ರಾಜನನ್ನು ಕೊಂದು ತಂಗಿಯನ್ನು ಸೆರೆಯಿಂದ ಬಿಡಿಸಿದನೆಂದೂ ಗೌಡದೇಶದ ರಾಜ ಶಶಾಂಕ ರಾಜ್ಯವರ್ಧನನನ್ನು ತನ್ನ ಅರಮನೆಗೆ ಸ್ವಾಗತಿಸಿ, ರಾಜ್ಯವರ್ಧನ ನಿರಾಯುಧನಾಗಿದ್ದಾಗ ಕೊಂದನೆಂದೂ ಅನಂತರ ಹರ್ಷವರ್ಧನ ಇವನನ್ನು ಕೊಂದನೆಂದೂ ಹೇಳುವುದುಂಟು. ಗೃಹವರ್ಮನ ತರುವಾಯ ಆ ಪ್ರದೇಶವೆಲ್ಲ ಹರ್ಷವರ್ಧನನ ಸಾಮ್ರಾಜ್ಯಕ್ಕೆ ಸೇರಿತು. ಗೃಹವರ್ಮನ ಮರಣದೊಂದಿಗೆ ಮೌಖರಿ ವಂಶದವರ ಆಳಿಕೆ ಮುಗಿಯಿತು. (ಎಚ್.ಎಂ.ಎನ್.ಆರ್.)

**ಮೌರ್ಯವಂಶ:** ಕರ್ನಾಟಕದಲ್ಲಿ ಇತಿಹಾಸಯುಗ ಆರಂಭವಾಗುವುದು, ಸಧ್ಯ ತಿಳಿದಂತೆ ಪ್ರಶ.ಪೂ.4–3ನೆಯ ಶತಮಾನಗಳಿಂದ. ಉತ್ತರ ಭಾರತದಲ್ಲಿ ಆಳುತ್ತಿದ್ದ ಮೌರ್ಯ ವಂಶದ ಅರಸರು ಕರ್ನಾಟಕದ ಉತ್ತರ ಭಾಗದಲ್ಲಂತೂ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರೆಂ ಬುದಕ್ಕೆ ಸಾಕ್ಷ್ಯಾಧಾರಗಳಿವೆ. ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ (ಚಿತ್ರದುರ್ಗ), ಮಸ್ಕಿ, ಕೊಪ್ಪಳ (ರಾಯಚೂರು), ಉದೆಗೊಳಂ, ನಿಟ್ಟೂರು (ಬಳ್ಳಾರಿ) ಶಾಸನಗಳನ್ನು ಮತ್ತು ಸನ್ನತಿಯ(ಗುಲ್ಬರ್ಗ) 13 ಮತ್ತು 14ನೆಯ ಬೃಹತ್ ಬಂಡೆ ಶಾಸನಗಳು ಮತ್ತು ಪ್ರತ್ಯೇಕ ಎರಡು ಕಳಿಂಗ ಶಾಸನ ಪ್ರತಿಗಳು ಇವೆ. ಇವುಗಳಿಂದ ಕರ್ನಾಟಕದಲ್ಲಿ ಗುಲ್ಬರ್ಗ, ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಂತೂ ನೇರವಾಗಿ ಮೌರ್ಯ ಸಾಮ್ರಾಜ್ಯದ ಅಧೀನಕ್ಕೊಳಪಟ್ಟ ಪ್ರದೇಶಗಳೆಂಬುದು ಸ್ಪಷ್ಟವಾಗುತ್ತದೆ.

ಅಶೋಕ ತನ್ನ ಸಾಮ್ರಾಜ್ಯದ ದಕ್ಷಿಣ ಮೇರೆಯಲ್ಲಿ ಸ್ನೇಹ ಬಾಂಧವ್ಯ ಹೊಂದಿದ್ದ ರಾಜ್ಯಗಳಲ್ಲಿ ಸತಿಯಪುತವೂ ಒಂದು. ಚೋಡ, ಪಾಡ, ಕೇರಳಗಳು ಕ್ರಮವಾಗಿ ಚೋಳ, ಪಾಂಡ್ಯ ಮತ್ತು ಕೇರಳ ಪ್ರದೇಶಗಳಾಗಿವೆ. ಸತಿಯಪುತವನ್ನು ಗುರುತಿಸುವಲ್ಲಿ ಮಾತ್ರ ಹಲವಾರು ಭಿನ್ನಭಿಪ್ರಾಯಗಳಿವೆ. ಈ ಸತಿಯಪುತವು ತುಳುಭಾಷೆಯನ್ನಾಡುವ ಮಂಗಳೂರಿನ ಸಮೀಪದ ಪ್ರದೇಶವೆಂದೂ ತಮಿಳುನಾಡಿನ ಕೊಯಮತ್ತೂರು ಸಮೀಪದ ಸತ್ಯಮಂಗಲಂ ಎಂದೂ ತಮಿಳುನಾಡಿನ ಕಾಂಚೀಪುರವೆಂದೂ ಸಾತ್ವತವೆಂದೂ ಕೊಂಗುನಾಡ ಕೋಶರ್ ಎಂದೂ ಗುರುತಿಸಲಾಗಿದೆ.

ಇವರು ಸಾತವಾಹನರ ಪೂರ್ವಜರಾಗಿದ್ದು, ಮಂಗಳೂರಿನ ಸುತ್ತಲ ಪ್ರದೇಶದಲ್ಲಿದ್ದವ ರೆಂಬ ಅಭಿಪ್ರಾಯವಿದೆ. ಇವೆಲ್ಲ ವಿಚಾರಗಳನ್ನು ಮತ್ತು ತಮಿಳು ಸಂಗಮ್ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಮೌರ್ಯರ ಉಲ್ಲೇಖಗಳ ಕೂಲಂಕಷವಾದ ಪರಿಶೀಲನೆ ಯಿಂದ ಸತಿಯಪುತವು ತಮಿಳುನಾಡಿನ ಪ್ರದೇಶವಾಗಿದ್ದು, ಇದರ ಮೇಲ್ಭಾಗದವರೆವಿಗೂ ಮೌರ್ಯ ಸಾಮ್ರಾಜ್ಯ ವಿಸ್ತರಿಸಿತ್ತೆಂಬ ತರ್ಕವು ಇದೆ. ಒಟ್ಟಿನಲ್ಲಿ ಸತಿಯಪುತ ದಕ್ಷಿಣಕನ್ನಡ ಜಿಲ್ಲೆಯ ಭಾಗವಾಗಿದ್ದಲ್ಲಿ ಅಲ್ಲಿಯವರೆಗಿನ ಕರ್ನಾಟಕದ ಪ್ರದೇಶಗಳೆಲ್ಲವೂ ಅಶೋಕ ಸಾಮ್ರಾಜ್ಯದ ಒಂದು ಭಾಗವಾಗಿತ್ತೆಂದರೆ ತಪ್ಪಾಗಲಾರದು.

ಆದರೆ ವಾಸ್ತವವಾಗಿ ಅಶೋಕ ಸ್ವತಃ ಈ ಪ್ರದೇಶಗಳನ್ನು ಗೆದ್ದುಕೊಳ್ಳಲಿಲ್ಲ. ಅವನು ಹೂಡಿದ ಯುದ್ಧ ಒಂದೇ–ಕಳಿಂಗದ ವಿರುದ್ಧ. ಆದ್ದರಿಂದ ಅವನ ಸಾಮ್ರಾಜ್ಯದ ಈ ಭಾಗಗಳೆಲ್ಲವೂ ಆತನಿಗೆ ಅನುವಂಶಿಕವಾಗಿ ಬಂದ ಮೌರ್ಯ ಸಾಮ್ರಾಜ್ಯದ ಭಾಗಗಳು. ಅಶೋಕನ ತಂದೆ ಬಿಂದುಸಾರ ಶಾಂತಿಪ್ರಿಯನು. ಕದನಗಳಾನ್ನಾವುದನ್ನೂ ಹೂಡಲಿಲ್ಲ. ತಾತ ಚಂದ್ರಗುಪ್ತನು ಸಾಮ್ರಾಜ್ಯದ ಸ್ಥಾಪಕ. ಆತ ತನ್ನ ಜೀವಿತದ ಬಹುಕಾಲ ನಂದ ರೊಡನೆಯೇ ಹೋರಾಡಬೇಕಿತ್ತು. ಮಗಧ ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳುವುದರಲ್ಲಿ ನಿರತನಾಗಿದ್ದ ಆತನ ಗಮನ ದಕ್ಷಿಣ ಭಾರತದ ಕಡೆ ಹರಿಯಲು ಸಾಧ್ಯವೇ ಇರಲಿಲ್ಲ.

ಚಂದ್ರಗುಪ್ತ ಸೋಲಿಸಿದ ನಂದರನ್ನು ಕುರಿತು ಅನಂತರದ ಮಹಾವಂಶ, ಬೃಹತ್ಕಥಾ, ಮುದ್ರಾರಾಕ್ಷಸದ ಕತೆಗಳಲ್ಲಿಯ ಹೇಳಿಕೆಗಳನ್ನು, ಸಾಂಪ್ರದಾಯಿಕ ನಂಬುಗೆಗಳನ್ನು ಮೇಳೈಸಿದರೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಅನಂತರ ಕೊನೆಯ ಅರಸನಾದ ಮಹಾಪದ್ಮನು ಪ್ರಬಲ ಹಾಗೂ ಮಹತ್ತ್ವಾಕಾಂಕ್ಷಿ ಸರ್ವಕ್ಷತ್ರಾಸ್ತಕನೆಂದು ವರ್ಣಿಸಲ್ಪಟ್ಟಿವೆ. ಪುರಾಣಗಳು ಈತನನ್ನು ಏಕರಾಟ್ ಎಂದು ಕರೆದಿವೆ. ಕುಂತಲದೇಶವನ್ನು ಆಳಿದವರಲ್ಲಿ ನವನಂದರು ಮೊದಲಿಗರೆಂದು ಉಲ್ಲೇಖಿತರಾಗಿದ್ದಾರೆ. ಭಾಗವತದಲ್ಲಿ (ದ್ವಾದಶ ಸ್ಕಂಧ, ಮೊದಲನೆಯ ಅಧ್ಯಾಯ) ಮಹಾನಂದಿಯ ಮಗ ಮಹಾಪದ್ಮನೆಂದೂ ಏಕಚಕ್ರಾಧಿಪತಿಯಾಗಿದ್ದನೆಂದೂ ಅನಂತರ ಆತನ ಎಂಟು ಮಕ್ಕಳು 100 ವರ್ಷಗಳು ಆಳಿದ್ದು, ಅನಂತರ ನವನಂದನು ಬ್ರಾಹ್ಮಣನೊಬ್ಬನ ನೆರವಿನಿಂದ ಪಟ್ಟಕ್ಕೆ ಬಂದನೆಂದೂ ಅದೇ ಬ್ರಾಹ್ಮಣನು ಅನಂತರ ಇಂದ್ರಗುಪ್ತ (ಚಂದ್ರಗುಪ್ತ?)ನನ್ನು ಗಾದಿಯ ಮೇಲೆ ಕುಳ್ಳಿರಿಸಿದನೆಂದೂ ಹೇಳಿದೆ. ಪುರಾಣಗಳಲ್ಲಿ ಈತನು ಮಹಾನಂದನಿಗೆ ಶೂದ್ರಪತ್ನಿಯಲ್ಲಿ ಹುಟ್ಟಿದನೆಂದಿದೆ. ಗ್ರೀಕರ ಉಲ್ಲೇಖಗಳಲ್ಲಿ ಈತನ ತಂದೆ ಶೂದ್ರನಾಗಿದ್ದನೆಂದೂ ಹೇಳಿದೆ. ಬೌದ್ಧ ಗ್ರಂಥವಾದ ಮಹಾವಂಶ ಟೀಕಾದಲ್ಲಿ ಈತನನ್ನು ಅಜ್ಞಾತ ಕುಲಕ್ಕೆ ಸೇರಿದವನೆಂದಿದೆ. ಈತನನ್ನೂ ಈತನ ಎಂಟು ಮಕ್ಕಳನ್ನೂ ಒಟ್ಟುಗೂಡಿಸಿ ನವನಂದ ಸೋದರರೆಂದು ಹೇಳಲಾಗಿದೆ. (ಅವರು ಕ್ರಮವಾಗಿ ಉಗ್ರಸೇನ, ಪಣ್ಡುಕ, ಪಣ್ಡುಗತಿ, ಭೂತಪಾಲ, ರಾಷ್ಟ್ರಪಾಲ, ಗೋವಿಷಣ್ಣಕ, ದಶಸಿದ್ಧಕ, ಕೈವರ್ತ ಮತ್ತು ಧನರೆಂದು ಅವರನ್ನು ಹೆಸರಿಸಿದೆ. ಪುರಾಣಗಳಲ್ಲಿ ಮಹಾಪದ್ಮನನ್ನೂ ಆತನ ಮಗ ಸುಮಾಲ್ಯನನ್ನೂ ಮಾತ್ರ ಉಲ್ಲೇಖಿಸಿದೆ. ಹಿರಿಯ ಸೋದರನಾಗಿದ್ದ ಉಗ್ರಸೇನ ಸೀಮಾ ಪ್ರದೇಶದಲ್ಲಿ ವಾಸಿಸುತ್ತಿದ್ದ (ಪಚ್ಚಂತವಾಸಿಕ). ಕಳ್ಳರ ಗುಂಪೊಂದು ಈತನನ್ನು ಸೆರೆಹಿಡಿಯಿತು. ಅವರಲ್ಲೊಬ್ಬ ನಾಗಿ ಬೆರೆತುಹೋದ ಈತ ತಾನಾಗಿಯೆ ಆ ಗುಂಪಿನ ನಾಯಕನಾದ. ಮಗಧವನ್ನು ಈತ ಗೆದ್ದು ಕೊಂಡನೆಂದಿದೆ. ಅದು ಹೇಗೆ ಎಂಬುದರ ವಿವರಣೆಯಿಲ್ಲ.

ಪುರಾಣಗಳ ಪ್ರಕಾರ ಮಹಾಪದ್ಮನು ಅಂದು ಅಸ್ತಿತ್ವದಲ್ಲಿದ್ದ ಹಲವಾರು ಕ್ಷತ್ರಿಯ ರಾಜ್ಯಗಳನ್ನು ಸದೆಬಡಿದ. ಹೀಗೆ ನಂದರ ರಾಜ್ಯವನ್ನು ಭದ್ರವಾದ ಅಡಿಪಾಯದ ಮೇಲೆಯೇ ಕಟ್ಟಲಾಯಿತು. ಇವರ ರಾಜ್ಯ ದಖನಿನ ಹಾಗೂ ಅದಕ್ಕೂ ದಕ್ಷಿಣದ ಕೃಷ್ಣಾ–ತುಂಗಭದ್ರಾ ಪ್ರದೇಶಗಳವರೆಗೂ ಹಬ್ಬಿತ್ತೆಂಬುದು ಬಹುಶಃ ಸಮಂಜಸವಾದ ಊಹೆ. ಗೋದಾವರಿ ತೀರದ ನಾಂದೇಡವನ್ನು ನವನಂದ ಡೆಹ್ರಾ ಎಂದು ವರ್ಣಿಸಿರುವುದು ಬಹುಶಃ ನಂಬಲರ್ಹ ವಾದುದು. ಚಂದ್ರಗುಪ್ತನು ನಂದರನ್ನು ಸೋಲಿಸಿದ ಪರಿಣಾಮವಾಗಿ ಆ ಸಾಮ್ರಾಜ್ಯದ ಭಾಗವಾಗಿದ್ದ ಕರ್ನಾಟಕದ ಭಾಗಗಳು ಮೌರ್ಯರ ಸ್ವಾಧೀನಕ್ಕೆ ಬಂದಿರಬಹುದು. ಎಂತಲೇ ಅಶೋಕ ತನ್ನ ರಾಜ್ಯದ ದಕ್ಷಿಣದಲ್ಲಿದ್ದ ಈ ಸೀಮಾ ಪ್ರದೇಶಗಳಲ್ಲಿ ಬೃಹತ್ ಬಂಡೆ ಮತ್ತು ಲಘು ಪ್ರಸ್ತರ ಶಾಸನಗಳನ್ನು ಹಾಕಿಸಿದ. ಆದರೆ ಸಾಂತ್ವನ ನುಡಿಗಳಿಂದ ಮೌರ್ಯ ಚಕ್ರವರ್ತಿ ಅಶೋಕನ ಕಳಿಂಗ ಶಾಸನಗಳ ಪ್ರತಿಗಳು ಸನ್ನತಿಯಲ್ಲಿಯೂ ಇದ್ದುದನ್ನು ಮತ್ತು ತನ್ನ ಕೆಲವು ಕಿರುಬಂಡೆ ಶಾಸನಗಳಲ್ಲಿ ವೈಯಕ್ತಿಕ ಹೆಸರನ್ನು ತಿಳಿಸಿರುವು ದನ್ನೂ ಬೃಹತ್ ಶಿಲಾಸಂಸ್ಕೃತಿ ಸಮುದಾಯದ ದೊಡ್ಡ ಪ್ರಮಾಣದ ಸಮೃದ್ಧ ಕಬ್ಬಿಣ ಕೈಗಾರಿಕೆಯನ್ನು ಗಮನಿಸಿದಾಗ ಬಹುಶಃ ಚಕ್ರವರ್ತಿಯೆ ಈ ಪ್ರದೇಶವನ್ನು ಗೆದ್ದುಕೊಂಡು ಇಲ್ಲಿಯ ಜನರಿಗೆ ತನ್ನ ಪರಿಚಯ ಮತ್ತು ಸಾಂತ್ವನವನ್ನು ತಿಳಿಸುವ ಶಾಸನಗಳನ್ನು ಹಾಕಿಸಿರಬಹುದು.(ಜಿ.ಎಸ್.)

ಬ್ರಹ್ಮಗಿರಿ ಶಾಸನದಲ್ಲಿ ದೇವಾನಾಂಪ್ರಿಯನೆನಿಸಿದ ಅಶೋಕನ ಆಜ್ಞೆಯನ್ನು ಸುವರ್ಣಗಿರಿ ಯಲ್ಲಿದ್ದ ಆರ್ಯಪುತ್ರ ಹಾಗೂ ಮಹಾಮಾತ್ರರು ಇಸಿಲದ ಮಹಾಮಾತ್ರನಿಗೆ ತಿಳಿಸಿದ ಉಲ್ಲೇಖವಿದೆ. ಇಲ್ಲಿ ಆರ್ಯಪುತ್ರ ಎಂಬ ಮಾತು ರಾಜಪುತ್ರ–ಯುವರಾಜನಿಗೆ ಸಂಬಂಧಿಸಿದ ಪದ. ಸಹಜವಾಗಿಯೇ ಈ ಭಾಗ ಸಾಮ್ರಾಜ್ಯದ ಆಡಳಿತ ಪ್ರಾಂತಗಳಲ್ಲೊಂದಾಗಿದ್ದು,

ಈ ವಿಭಾಗದ ಆಡಳಿತಕ್ಕೆ ಮಹಾಮಾತ್ರನೆಂಬ ಅಧಿಕಾರಿ ನೇಮಕಗೊಂಡಿದ್ದ. ಸುವರ್ಣಗಿರಿ ಹಿರಿಯ ಆಡಳಿತ ಭಾಗ. ಇದರ ಮುಖ್ಯ ಸ್ಥಳ ಸುವರ್ಣಗಿರಿ. ಇದು ಮಸ್ಕಿಯ ಸಮೀಪದ ಕನಕಗಿರಿ ಎಂದೂ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಜೊನ್ನಗಿರಿಯೇ ಆಗಿರಬಹುದೆಂದೂ ಊಹಿಸಲಾಗಿದೆ. ಆದರೆ ಇದು ಬ್ರಹ್ಮಗಿರಿಯೇ ಆಗಿರಬಹುದೆಂದು ಮತ್ತೊಂದು ವಾದ ಇದ್ದು, ಸತ್ಯಸಮೀಪವೆನಿಸಿದ ಇದನ್ನು ಬಹುಮಟ್ಟಿಗೆ ಒಪ್ಪಲಾಗಿದೆ. ಈ ಪ್ರಾಂತದ ಆಡಳಿತಕ್ಕೆ ರಾಜಪುತ್ರ–ಯುವರಾಜನೊಬ್ಬನನ್ನು ನೇಮಕಗೊಳಿಸಲಾಗುತ್ತಿದ್ದು, ಆತನ ಅಧೀನಾಧಿಕಾರಿ ಮಹಾಮಾತ್ಯ.

ಅಶೋಕನ ತಾತನಾದ ಚಂದ್ರಗುಪ್ತ ಜೈನಧರ್ಮವನ್ನು ಸ್ವೀಕರಿಸಿ ತನ್ನ ಅಂತಿಮ ದಿನಗಳನ್ನು ಕರ್ನಾಟಕದ ಜೈನಕ್ಷೇತ್ರವಾದ ಶ್ರವಣಬೆಳಗೊಳದಲ್ಲಿ ಕಳೆದನೆಂಬ ಒಂದು ಸಾಂಪ್ರದಾಯಿಕ ನಂಬುಗೆಯಿದೆ. ಶ್ರವಣಬೆಳಗೊಳದ ದಿನಾಂಕವಿಲ್ಲದ 6–7ನೆಯ ಶತಮಾನದ ಶಾಸನ ಇದಕ್ಕೆ ಪ್ರಮುಖ ಆಧಾರ. ಆದರೆ ಈ ಶಾಸನವನ್ನು ಅರ್ಥೈಸುವಲ್ಲಿ, ಅದರ ವಿಶ್ಲೇಷಣೆಯಲ್ಲಿ ಹಲವಾರು ಭಿನ್ನಾಭಿಪ್ರಾಯಗಳಿವೆ. ಮಹಾವೀರನ ನಿರ್ವಾಣಾನಂತರ ಗೌತಮ ಗಣಧರರೇ ಮೊದಲಾದ ಅನೇಕ ಯತಿಗಳು ಜೈನಗುರುಗಳಾಗಿದ್ದರು. ಇವರಲ್ಲಿ ಒಬ್ಬರು ಭದ್ರಬಾಹುಸ್ವಾಮಿ. ಇವರು ಶ್ರುತಕೇವಲಿ. ಇವರು ಉಜ್ಜಯಿನಿಯಲ್ಲಿದ್ದಾಗ ಹನ್ನೆರಡು ವರ್ಷಗಳ ಭೀಕರ ಬರಗಾಲ ದೇಶವನ್ನು ಕ್ಷೋಭೆಗೆ ಒಳಪಡಿಸುತ್ತದೆ ಎಂಬ ಭವಿಷ್ಯವಾಣಿಯಾಯಿತು. ಇದನ್ನರಿತು ಯತಿಸಂಘವು ಸಂಪೂರ್ಣವಾಗಿ ಉತ್ತರ ಪಥದಿಂದ ದಕ್ಷಿಣಾ ಪಥಕ್ಕೆ ವಲಸೆ ಬರುತ್ತಾ ಕ್ರಮೇಣ ನೂರಾರು ಜನಪದಗಳನ್ನೂ ಗ್ರಾಮಗಳನ್ನೂ ಸಂತೋಷದಿಂದಿದ್ದ ಜನ–ಧನ–ಕನಕ–ಸಸ್ಯ–ಗೋಮಹಿಷಾದಿ ಕುಲವನ್ನೂ ಒಳಗೊಂಡ ದೇಶವೊಂದಕ್ಕೆ ಬಂದಿತು. ಇಲ್ಲಿ ಪ್ರಭಾಚಂದ್ರನೆಂಬ ಹೆಸರಿನ ಆಚಾರ್ಯನೊಬ್ಬ ತನ್ನ ಅವಸಾನಕಾಲ ಸಮೀಪಿಸುತ್ತಿರುವುದನ್ನು ಅರಿತು ಸಮಾಧಿ ಹೊಂದಬೇಕೆಂಬ ಬಯಕೆಯಿಂದ ಸಂಘವನ್ನು ಬಿಟ್ಟು ಒಬ್ಬನೇ ಶಿಷ್ಯನೊಡನೆ ಈ ಕಟವಪ್ರಗಿರಿಯಲ್ಲಿ (ಶ್ರವಣಬೆಳಗೊಳ) ಜೀವವನ್ನು ತೊರೆದ.

ಸು.9–10ನೆಯ ಶತಮಾನದ ಎರಡು ಶಾಸನಗಳಲ್ಲಿ ಕಳ್ವಪ್ಪು, ಭದ್ರಬಾಹು ಮತ್ತು ಚಂದ್ರಗುಪ್ತರ ಪ್ರಸ್ತಾಪವಿದೆ. ಭದ್ರವಾಗಿದ್ದ ಜೈನಧರ್ಮ ಅನಂತರ ಸ್ವಲ್ಪ ಅಳುಕಿದಾಗ ಶಾಸ್ತಿಸೇನಮುನಿ ಇದನ್ನು ಪುನಃ ಬಲಯುತವನ್ನಾಗಿ ಮಾಡಿದ. ಹೀಗೆ ಭದ್ರಬಾಹು–ಚಂದ್ರಗುಪ್ತರು ಶ್ರವಣಬೆಳಗೊಳದ ಚಿಕ್ಕಬೆಟ್ಟದ ಗುಹೆಯಲ್ಲಿ ವಾಸ್ತವ್ಯ ಮಾಡಿದ್ದು, ಅಲ್ಲಿಯೇ ತಮ್ಮ ದೇಹವನ್ನು ತ್ಯಜಿಸಿದರೆಂಬ ನಂಬಿಕೆ ಸು. 2ನೆಯ ಶತಮಾನದ ವೇಳೆಗಾಗಲೇ ದೃಢವಾಗಿ ಬೇರೂರಿತು.

ಚಂದ್ರಗುಪ್ತನ (ಪ್ರ.ಶ.ಪೂ.ಸು.321–297) ಅನಂತರ ಆತನ ಮಗ ಬಿಂದುಸಾರ ಪಟ್ಟಕ್ಕೆ ಬಂದ. ಗ್ರೀಕ್ ಬರೆಹಗಾರರು ಈತನನ್ನು ಅಮಿತ್ರೊಕೇಟಿಸ್ ಎಂದು ಕರೆದಿದ್ದಾರೆ. ಸಂಸ್ಕೃತದ ಅಮಿತ್ರಘಾತ್ ಎಂಬ ಪದದ ಗ್ರೀಕ್ ರೂಪಾಂತರವಿರಬಹುದು. ಶತ್ರುವಿನಾಶಕ ಎಂಬುದು ಇದರ ಅರ್ಥ. ಆದರೆ ಈತನಿಗೆ ಶತ್ರುಗಳೇ ಇರಲಿಲ್ಲವೇನೋ. ಜೈನ ಕೃತಿಕಾರರು ಸಿಂಹಸೇನನೆಂದು ಕರೆದಿದ್ದಾರೆ. ಈತ ಶಾಂತಿಪ್ರಿಯ. ಈತನ ಆಸಕ್ತಿ, ಅಭಿರುಚಿಗಳು ಅಪಾರ. ತನಗೆ ಸಿಹಿ ಮದ್ಯ, ಒಣಗಿದ ಅತ್ತಿಹಣ್ಣು ಮತ್ತು ಸೋಫಿಸ್ಟ್ ಎಂದು ಕರೆಯಲಾದ ಗ್ರೀಕ್ ವೇದಾಂತಿಯನ್ನು ಕಳುಹಿಸಬೇಕೆಂದು ಕೋರಿದ. ಒಂದು ಸಾರಿ ದಖನ್ನಿನ ಪ್ರದೇಶದಲ್ಲಿ ದಂಡಯಾತ್ರೆ ಕೈಗೊಂಡನೆಂದು ತೋರುವುದು.

ಅಶೋಕ ಪ್ರ.ಶ.ಪೂ.274ರಲ್ಲಿ ಸಿಂಹಾಸನವನ್ನು ಏರಿದ. ಆತನ ಸಾಮ್ರಾಜ್ಯದಿಂದ ಹೊರಗಿದ್ದ ಪೂರ್ವತೀರದ ಕಳಿಂಗವನ್ನು ಆಕ್ರಮಿಸಲು ಯುದ್ಧ ಹೂಡಿದ. ಆದರೆ ಪರಿಣಾಮ ಮಾತ್ರ ಭೀಕರವಾಗಿತ್ತು. 1,50,000 ಜನರು ಮೃತರಾದರು. ಅಷ್ಟೇ ಸಂಖ್ಯೆಯ ಜನ ದೇಶಭ್ರಷ್ಟರಾದರು. ಅದಕ್ಕೂ ಬಹಳಷ್ಟು ಹೆಚ್ಚಿನ ಜನ ನಾಶವಾದರು. ಈ ಸಂಖ್ಯೆಗಳಲ್ಲಿ ಉತ್ಪ್ರೇಕ್ಷೆ ಇದ್ದಿರಬಹುದಾದರೂ ಈ ಹತ್ಯಾಕಾಂಡ ಅವನ ಹೃದಯವನ್ನು ಘಾಸಿಗೊಳಿಸಿತ್ತು. ಆ ಸಮಯದಲ್ಲಿ ಬೌದ್ಧ ಗುರುವಿನ ಬೋಧನೆಯ ಪರಿಣಾಮವಾಗಿ ಯುದ್ಧವನ್ನು ನಿಲ್ಲಿಸಿದ. ಇನ್ನು ಮೇಲೆ ಯುದ್ಧಗಳು ಸಲ್ಲವು ಎಂದು ಘೋಷಿಸಿದ. ಅಹಿಂಸಾಮಾರ್ಗವನ್ನು ಎತ್ತಿಹಿಡಿದ (**ನೋಡಿ–ಅಶೋಕ**).

ಹೊರದೇಶದ ಸಮಕಾಲೀನ ಅರಸುಗಳಾದ ಸಿರಿಯ ದೇಶದ ನಿಕಟಾಸನ ಮೊಮ್ಮಗ ಅನ್ತಿಯೊಕಸ್ ಥಿಯೊ, ಈಜಿಪ್ಟಿನ 2ನೆಯ ಟಾಲಮಿ ಫಿಲಡೆಲ್ಸಸ್ (ಪ್ರ.ಶ.ಪೂ.276–237), ಮ್ಯಾಸಿಡೋನಿಯದ ಅಂತಿಗೋನಸ್ ಗೊನಾಟಸ್ (ಪ್ರ.ಶ.ಪೂ.276–239), ಸೈರಿನ್ನಿನ ಮಗಸ್ (ಪ್ರ.ಶ.ಪೂ.300–250) ಹಾಗೂ ಎಪಿರಸ್ಸಿನ ಅಲೆಕ್ಸಾಂಡರ್ (ಪ್ರ.ಶ.ಪೂ. 272–255) ಇವರೊಡನೆ ಉತ್ತಮ ಬಾಂಧವ್ಯವಿತ್ತು. ದಕ್ಷಿಣ ಹಾಗೂ ಪಶ್ಚಿಮದಲ್ಲಿಯ ಹೊರ ರಾಷ್ಟ್ರಗಳಿಗೆ ಈ ಬಾಂಧವ್ಯ ಸೀಮಿತವಾಗಿತ್ತು. ತನ್ನ ಮಗ, ಮಗಳು ಹಾಗೂ ಬೌದ್ಧ ಭಿಕ್ಷುಗಳನ್ನು ಬೌದ್ಧಧರ್ಮ ಪ್ರಚಾರಕೋಸ್ಕರ ಬನವಾಸಿ ಪ್ರದೇಶಕ್ಕೂ ಸಿಂಹಳ (ಶ್ರೀಲಂಕ) ದ್ವೀಪಕ್ಕೂ ಕಳುಹಿಸಿದ. ತತ್ಪರಿಣಾಮವಾಗಿ ಕರ್ನಾಟಕದಲ್ಲಿ ಬೌದ್ಧಧರ್ಮ ಪ್ರವೇಶವಾಗಿ ಪ್ರಸಾರವಾಯಿತು.

**ಆಡಳಿತ:** ಮೌರ್ಯಕಾಲೀನ ಆಡಳಿತವನ್ನು ತಿಳಿಯಲು ಮೆಗಾಸ್ತನೀಸನ ವೃತ್ತಾಂತ ಹಾಗೂ ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಅವನೇ ಬರೆಯಿಸಿದ ಶಾಸನಗಳು ಲಭ್ಯವಿರುವ ಪ್ರಧಾನ ಆಕರಗಳು. ಮೊದಲನೆಯದು ಅಲ್ಪಸ್ವಲ್ಪ ಉಪಲಬ್ಧವಿದೆ. ಆದರೆ ಗ್ರೀಕ್ ಚರಿತ್ರಕಾರರ ಕೃತಿಗಳಲ್ಲಿಯ ಉಲ್ಲೇಖಗಳಿಂದ ಭಾಗಶಃ ತಿಳಿಯಲು ಸಾಧ್ಯ.

ಮೌರ್ಯ ಸಾಮ್ರಾಜ್ಯ ವಿಶಾಲವಾಗಿದ್ದು ಹಲವು ಪ್ರಾಂತಗಳಿಂದ ಕೂಡಿತ್ತು. ಪ್ರಾಂತಗಳ ಆಡಳಿತವನ್ನು ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಗ್ರಾಮಸಭೆಗಳಿಂದ ಗ್ರಾಮದ ಆಡಳಿತ ನಡೆಯುತ್ತಿತ್ತು. ರಾಜನಿಗೆ ಆಡಳಿತದಲ್ಲಿ ಮಂತ್ರಿ ಪರಿಷತ್ತು ನೆರವು ನೀಡುತ್ತಿತ್ತು. ಅಶೋಕ ಸ್ತ್ರೀ ಅಧ್ಯಕ್ಷ ಮಾಹಾಮಾತ್ರನೆಂಬ ಪ್ರತ್ಯೇಕ ಮಂತ್ರಿ ಪದವಿಯನ್ನು ಸೃಷ್ಟಿಸಿದ್ದ. ರಾಜೂಕನೆಂಬ ಅಧಿಕಾರಿ ರಾಜ್ಯದಲ್ಲೆಲ್ಲ ಪ್ರವಾಸಮಾಡಿ ಜನರ ಸ್ಥಿತಿಗತಿಗಳನ್ನು ತಿಳಿದು ಆಡಳಿತದಲ್ಲಿ ನೆರವಾಗುತ್ತಿದ್ದ. ದೇಶದಲ್ಲಿನ ವಿದ್ಯಮಾನಗಳನ್ನು ವರದಿ ಮಾಡಲು ಗೂಢಚಾರರಿದ್ದರು. ಅಧಿಕಾರ ಗ್ರಾಮೀಣ ಹಂತದಲ್ಲಿ ಬಹುಮಟ್ಟಿಗೆ ವಿಕೇಂದ್ರಿಕೃತವಾಗಿತ್ತು.

ಮೆಗಾಸ್ತನೀಸನಿಂದ ಪಾಟಲಿಪುತ್ರದ ಪೌರಾಡಳಿತಕ್ರಮದ ಪರಿಚಯ ಲಭ್ಯವಾಗಿದೆ. ನಗರ ಪಾಲಿಕೆಗೆ ಪೌರಾಡಳಿತದ ಪ್ರಧಾನಾಧಿಕಾರಿ; ಈತನ ನೇತೃತ್ವದಲ್ಲಿದ್ದ ಐವರು ಸದಸ್ಯರ ಆರು ಸಮಿತಿಗಳು ನಗರದ ಔದ್ಯೋಗಿಕ ಕಾರ್ಯ, ವಿದೇಶಿಯರ ಮೇಲ್ವಿಚಾರಣೆ, ಜನನ ಮರಣಗಳ ದಾಖಲಾತಿ, ವ್ಯಾಪಾರ, ತೂಕ ಮತ್ತು ಅಳತೆಯ ಪರಿಶೀಲನೆ, ಕೈಗಾರಿಕಾವಸ್ತುಗಳ ತಯಾರಿಕೆ ಹಾಗೂ ಮಾರಾಟ ಮತ್ತು ಮಾರಾಟವಾದ ವಸ್ತುಗಳ ಬೆಲೆಯ ದಶಾಂಶ ಅಥವಾ ಷಡ್ಭಾಗ ಸುಂಕ ವಸೂಲಿ–ಈ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಮಾರುಕಟ್ಟೆ, ಬಂದರು ದೇವಾಲಯ ಮತ್ತಿತರ ಲೋಕೋಪಯೋಗಿ ಕೆಲಸಗಳೂ ಪೌರಾಡಳಿತದ ವ್ಯಾಪ್ತಿಗೆ ಸೇರಿದ್ದವು.

ಸೈನ್ಯ, ಪದಾತಿ, ಅಶ್ವ, ಗಜ ಹಾಗೂ ರಥ ದಳಗಳಿಂದ ಕೂಡಿತ್ತು. ಪ್ರತಿಯೊಂದು ದಳದ ಕಾರ್ಯನಿರ್ವಹಣೆಗೆ ಪ್ರತ್ಯೇಕ ಮಂಡಲಿ ಇತ್ತು. ಅರಸನೇ ಪ್ರಧಾನ ಸೇನಾಧಿಕಾರಿ. ಸೇನಾಡಳಿತಕ್ಕೆ ಸಂಬಂಧಿಸಿದಂತೆ ಮೂವತ್ತು ಜನರ ಪ್ರತ್ಯೇಕ ಕಚೇರಿ ಇತ್ತು. ಚಂದ್ರಗುಪ್ತನ ಸೈನ್ಯದಲ್ಲಿ ಆರು ಲಕ್ಷ ಸೈನಿಕರು, ಮೂವತ್ತು ಸಾವಿರ ಕುದುರೆ, ಒಂಬತ್ತು ಸಾವಿರ ಆನೆ ಹಾಗೂ ಎಂಟು ಸಾವಿರ ರಥಗಳಿದ್ದುವೆಂದು ತಿಳಿದುಬಂದಿದೆ.

ರಾಜ್ಯದ ಆದಾಯದ ಪ್ರಮುಖ ಮೂಲ ಭೂ ಕಂದಾಯ. ಉದ್ಯೋಗ, ಗಣಿ ಅರಣ್ಯ ಮುಂತಾದವುಗಳಿಂದ ಬಂದ ಆದಾಯ, ಸಾಮಂತ ಅರಸರು ನೀಡಿದ ಕಪ್ಪಕಾಣಿಕೆಗಳೂ ರಾಜಭಂಡಾರಕ್ಕೆ ಸೇರುತ್ತಿದ್ದವು. ಇವುಗಳ ಉಸ್ತುವಾರಿಗೆ ಸಮೂಹರ್ತ ಎಂಬ ಅಧಿಕಾರಿ ಇದ್ದ. ಕೌಟಿಲ್ಯನ ಕೃತಿ ಹಲವು ತೆರನ ಅಧಿಕಾರಿಗಳನ್ನು, ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ವಿವರಿಸುತ್ತದೆ.

ವ್ಯವಸಾಯವೆ ಜನರ ಪ್ರಧಾನ ಕಸಬಾಗಿತ್ತು. ಕುಶಲಕಲೆ ಮತ್ತಿತರ ಉದ್ಯೋಗಗಳಲ್ಲಿಯೂ ಪರಿಶ್ರಮ ಹೊಂದಿದ್ದರು. ಜನ ಪ್ರಾಮಾಣಿಕರಾಗಿದ್ದು ಕಳ್ಳತನ ದರೋಡೆಗಳು ಅಪರೂಪವಾಗಿದ್ದವು. ಜನತೆಯ ಸಂರಕ್ಷಣೆಗಾಗಿ ರಕ್ಷಕ ಪಡೆಯೂ ಇತ್ತು. ದಂಡನೀತಿ ಕಠಿಣವಾಗಿತ್ತು. ಜನ ಸಾನಮಾನ್ಯರು ಸುಖ ನೆಮ್ಮದಿಯಿಂದ ಜೀವಿಸುತ್ತಿದ್ದರೆಂದು ಗ್ರೀಕ್ ಚರಿತ್ರಕಾರನ ವಿವರಣೆಗಳಿಂದ ತಿಳಿದುಬರುತ್ತದೆ. ಅಶೋಕ ತನ್ನ ಪ್ರಜೆಗಳನ್ನು ಮಕ್ಕಳಂತೆ ಪ್ರೀತಿವಾತ್ಸಲ್ಯಗಳಿಂದ ಸಲಹಿದ; ಜನಸಾಮಾನ್ಯರ ಆಡುನುಡಿಗೆ ಪ್ರಾಶಸ್ತ್ಯ ನೀಡಿದ.ಮೌರ್ಯ ಸಾಮ್ರಾಜ್ಯದ ದಕ್ಷಿಣ ಪ್ರಾಂತವಾಗಿದ್ದ ಸುವರ್ಣಗಿರಿಯಲ್ಲಿ ಉತ್ತರ ಕರ್ನಾಟಕ ಒಂದು ಭಾಗವಾಗಿತ್ತು. ಅತ್ಯಂತ ದಕ್ಷಿಣಕ್ಕೆ ಇಸಿಲ ಎಂಬ ಉಪಘಟ್ಟವಿದ್ದಿತು. ಇದನ್ನು ಚಕ್ರವರ್ತಿಯ ಮಹಾಮಾತ್ರರೆಂಬ ಮಂತ್ರಿಗಳು ಆಳುತ್ತಿದ್ದರು. ಪ್ರಾಂತದ ಕೇಂದ್ರವಾಗಿದ್ದ ಸುವರ್ಣಗಿರಿಯಲ್ಲಿ ಇಂಥ ಮಹಾಮಾತ್ರರು ಆಡಳಿತಗಾರರಾಗಿದ್ದರು. ಚಕ್ರವರ್ತಿ ಇವರ ಮೂಲಕ ತನ್ನ ಆಜ್ಞೆ ಧೋರಣೆಗಳನ್ನು ಇಸಿಲ ಮಹಾಮಾತ್ರರಿಗೆ ತಿಳಿಸುತ್ತಿದ್ದರಿಂದ ಪ್ರಾಯಶಃ ಇವರು ಹಿರಿಯ ಮಂತ್ರಿಗಳಾಗಿ ದ್ದರೆಂದು ತೋರುತ್ತದೆ. ಸುವರ್ಣಗಿರಿಯನ್ನು ಸಮಾಧಾನಕರವಾಗಿ ಇನ್ನೂ ಸರಿಯಾಗಿ ಗುರುತಿಸಿಲ್ಲ. ಆಂಧ್ರಪ್ರದೇಶದ ಈ ಚಕ್ರವರ್ತಿಯ ಶಾಸನವಿರುವ ಮತ್ತು ಅರ್ಥಪೂರ್ಣ ಹೆಸರಿರುವ ಜೊನ್ನಗಿರಿ (ಕರ್ನೂಲ್ ಜಿಲ್ಲೆ) ಅಥವಾ ರಾಯಚೂರು ಜಿಲ್ಲೆಯ ಪ್ರಾಚೀನ ಚಿನ್ನದ ಗಣಿಯಿರುವ, ಚಿನ್ನದ ನಿಕ್ಷೇಪವಿರುವ ಹಟ್ಟಿಗ್ರಾಮ ಮತ್ತು ಚಕ್ರವರ್ತಿಯ ಹೆಸರುಳ್ಳ ಕಿರು ಬಂಡೆ ಶಾಸನವಿರುವ ಮಸ್ಕಿ ಇದಾಗಿರಬಹುದೆಂಬ ಭಿನ್ನ ಭಿನ್ನ ಅಭಿಪ್ರಾಯಗಳಿವೆ. ಇತ್ತೀಚೆಗೆ ಸನ್ನತಿಯಲ್ಲಿ ದೊರೆತ ಅಶೋಕನ ಶಾಸನಗಳು ಮತ್ತು ಕಳಿಂಗ ಪ್ರತ್ಯೇಕ ಶಾಸನಗಳಿಂದಲೂ ಮೌರ್ಯ ಸಾಮ್ರಾಜ್ಯದ ನೆಲೆಯೆಂದು ಗೊತ್ತಾಗಿದೆ. ಈ ನೆಲೆಯಲ್ಲಿಯ ಉತ್ಖನನದಲ್ಲಿ ದೊರೆತ ಮೌರ್ಯ ಕಾಲದ ಚಿತ್ರಫಲಕವೂ ಅರ್ಥಗರ್ಭಿತ. ತರುವಾಯ ಕಾಲದ ಹೊತ್ತಿಗೆ ಇದು ದೊಡ್ಡ ಬೌದ್ಧಕೇಂದ್ರವಾಗಿ ಬೆಳೆಯಿತು. ಆದ್ದರಿಂದ ಇದೇ ಆ ಕಾಲದ ಸುವರ್ಣಗಿರಿ ಇರಬಹುದೇ ಎಂಬ ಪ್ರಶ್ನೆಯನ್ನು ಬಿಡಿಸಬೇಕಾಗಿದೆ. ಮಸ್ಕಿ ಅಥವಾ ಸನ್ನತಿಯು ಸುವರ್ಣಗಿರಿಯಾಗಿದ್ದಲ್ಲಿ ಮೌರ್ಯ ಸಾಮ್ರಾಜ್ಯದ ದಕ್ಷಿಣ ಪ್ರಾಂತದ ಆಡಳಿತ ಕೇಂದ್ರ ಮತ್ತು ಉಪಕೇಂದ್ರಗಳು ಉತ್ತರ ಕರ್ನಾಟಕದ ದೊಡ್ಡ ಮತ್ತು ಉಪ ಆಡಳಿತ ಘಟಕಗಳಾಗಿದ್ದವು. ಇನ್ನು ಈ ಚಕ್ರವರ್ತಿಯ ಕಿರುಬಂಡೆ ಶಾಸನಗಳಿರುವ ಜಟಿಂಗರಾಮೇಶ್ವರ, ನಿಟ್ಟೂರು, ಉದೆಗೊಳಂ, ಕೊಪ್ಪಳಗಳಲ್ಲಿ ಬ್ರಹ್ಮಗಿರಿ, ಮಸ್ಕಿ ನೆಲೆಗಳಂತೆ ಅನುಕ್ರಮವಾಗಿ ಶಿಲಾಯುಗ, ಕಬ್ಬಿಣ ಯುಗ, ಬೃಹತ್‌ಶಿಲಾ ಮತ್ತು ಆದಿ ಇತಿಹಾಸಕಾಲದ ಸಾಂಸ್ಕೃತಿಕ ಬೆಳೆವಣಿಗೆಯನ್ನು ಕಾಣಬಹುದು.*

ಶಾಸನಗಳಲ್ಲಿಯ ವಿಷಯವನ್ನು ಪ್ರತಿ ತಿಷ್ಯ (ಪುಷ್ಯ) ನಕ್ಷತ್ರದಂದು ಜನಗಳಿಗೆ ಅಧಿಕಾರಿಗಳು ಈ ಉಪಕೇಂದ್ರಗಳಲ್ಲಿದ್ದು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಿರಬಹುದು. ಆದ್ದರಿಂದ ಉತ್ತರ ಕರ್ನಾಟಕ ಬಹುಭಾಗ ಬಲವಾದ ಆಡಳಿತ ವ್ಯವಸ್ಥೆಗೆ ಒಳಪಟ್ಟಿತ್ತೆಂದು ಕಾಣುತ್ತದೆ. ರಾಜ, ಯುವರಾಜ, ಮಹಾಮಾತ್ರ, ಧರ್ಮ ಮಹಾಮಾತ್ರ, ಅಂತಮಹಾಮಾತ್ರ ಪ್ರಾದೇಶಿಕ, ರಾಷ್ಟ್ರೀಕ, ರಜ್ಜುಕ, ಯುಕ್ತ ಆಯುಕ್ತ ಮೊದಲಾದ ಅಧಿಕಾರಿಗಳಿದ್ದರು. ರಾಜನ ನಿರ್ದೇಶನದಂತೆ

ಉಳಿದವರು ತಮ್ಮ ತಮ್ಮ ಅಧಿಕಾರ ಸ್ಥಾನದಿಂದ ಆಡಳಿತವನ್ನು ನಡೆಸುತ್ತಿದ್ದರು. ಈ ಅಧಿಕಾರಿಗಳಲ್ಲಿ ಲಿಪಿಕಾರನೂ ಒಬ್ಬ. ಬ್ರಹ್ಮಗಿರಿಯ ಬಂಡೆ ಶಾಸನವನ್ನು ಬರೆದವನು ಚಪಡನೆಂಬ ಲಿಪಿಕಾರ. ಮಹಾಮಾತ್ರರು ಹಾಗೂ ಇತರ ಅಧಿಕಾರಿಗಳಿಗೆ ಸಂಬಳಗಳನ್ನು ಬೊಕ್ಕಸದಿಂದ ಕೊಡುತ್ತಿದ್ದನೆಂದು ಹೇಳಿದೆ ಯಾದರೂ ಹಲವಾರು ಸಂದರ್ಭಗಳಲ್ಲಿ ಅವರ ಸೇವೆಗೆ ತಕ್ಕಂತೆ ಅವರಿಗೆ ಭೂಮಿಗಳನ್ನು ದಾನವಾಗಿ ನೀಡಿ ಅದರ ಫಲಾನುಭವಿಗಳು ಅವರೇ ಆಗಿರುವಂತಹ ಏರ್ಪಾಡು ಇದ್ದಂತೆ ತೋರುತ್ತದೆ.

**ಸಾಮಾಜಿಕ:** ವರ್ಣಪದ್ಧತಿ ಅಸ್ತಿತ್ವದಲ್ಲಿದ್ದು ಮೂರನೆಯ ವರ್ಣಕ್ಕೆ ಸೇರಿದ ವೈಶ್ಯರಿಗೆ ಬ್ರಾಹ್ಮಣ ಮತ್ತು ಕ್ಷತ್ರಿಯರಿಗಿದ್ದಷ್ಟು ಸಾಮಾಜಿಕ ಸ್ಥಾನಮಾನಗಳಿರಲಿಲ್ಲ. ಆದರೂ ವಾಣಿಜ್ಯ, ವ್ಯವಹಾರಗಳು ಅವರ ವಶದಲ್ಲಿದ್ದುದರಿಂದ ಅವರು ಆರ್ಥಿಕವಾಗಿ ಬಲಿಷ್ಠರಾಗಿದ್ದರು. ಆದರೂ ಈ ವ್ಯವಸ್ಥೆಯಿಂದ ನೊಂದವರಾಗಿದ್ದರು. ಸಾಮಾಜಿಕ ಬಿಗುವು ಒಳಗೊಳಗೇ ಕಾಣಿಸಿಕೊಳ್ಳ ತೊಡಗಿತ್ತು. ಬೌದ್ಧ ಮತ್ತು ಅದಕ್ಕೂ ಹೆಚ್ಚಾಗಿ ಜೈನಧರ್ಮ ಇಂತಹವರನ್ನು ತನ್ನ ಕಕ್ಷೆಗೆ ಸೆಳೆದುಕೊಂಡಿತು. ನಗರಗಳಲ್ಲಿ ಶ್ರೇಣಿಗಳ ಮುಖ್ಯಸ್ಥರು (ಕರ್ನಾಟಕದ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಪಟ್ಟಣಶೆಟ್ಟಿಗಳು) ನಗರಾಡಳಿತದ ಮೇಲೆ ಹತೋಟಿಯನ್ನು ಹೊಂದಿದ್ದರು. ರಾಜ್ಯದ ಕಾನೂನುಗಳನ್ನು ರೂಪಿಸುವಂತಹ ಹಕ್ಕು ಅರಸನದೇ ಆದರೂ ಆತ ತನ್ನ ಸಲಹೆಗಾರರಾದ ಮಹಾಮಾತ್ರ ಮೊದಲಾದವರ ನೆರವನ್ನು, ಸಲಹೆಯನ್ನು ಪಡೆಯುತ್ತಿದ್ದ. ಭೂಮಿಯನ್ನು ಅಳೆಯುವ ರಜ್ಜುಕರು ವೈಯಕ್ತಿಕ ಹಿಡುವಳಿದಾರರ ಭೂಮಿಯ ವಿಸ್ತೀರ್ಣಗಳನ್ನು ಅಳೆದು ಅವುಗಳ ಮೇರೆಗಳನ್ನು ದಾಖಲಿಸುತ್ತಿದ್ದರು.

ಅಶೋಕ ಬೌದ್ಧಧರ್ಮದಿಂದ ಆಕರ್ಷಿತನಾದ ಬಳಿಕ ಧರ್ಮ ಎಂಬ ಮಾತಿಗೆ ಹೆಚ್ಚಿನ ಅರ್ಥ ನೀಡಲಾಯಿತು. ಸಮಾಜವು ಧರ್ಮದ ನೆಲಗಟ್ಟಿನ ಮೇಲೆ ನಿಂತಿದ್ದು, ಇವನ ಕಾಲದಲ್ಲಿ ಇದರ ವ್ಯಾಪ್ತಿ ವಿಸ್ತಾರವಾಗಿತ್ತು. ಪ್ರಜೆಗಳ ಸಾಮಾಜಿಕ ಜವಾಬ್ದಾರಿಯ ದೃಷ್ಟಿ ಇದರಲ್ಲಡಗಿತ್ತು. ಒಬ್ಬನ ವೈಯಕ್ತಿಕ ಭದ್ರತೆಯು ಶ್ರೇಯಸ್ಸಿಗಿಂತಲೂ ಮಿಗಿಲಾದುದು. ಸಮಾಜದ ಭದ್ರತೆ, ಶ್ರೇಯಸ್ಸು, ಪರನಿಂದನೆ, ಪರಪೀಡನೆಗಳಿಗೆ ಇಲ್ಲಿ ಸ್ಥಾನವಿರಲಿಲ್ಲ. ರಾಜ್ಯದ ವಿರುದ್ಧ ದಂಗೆ ಏಳುವ, ಸಂಘರ್ಷಗಳನ್ನು ಸೃಷ್ಟಿಸುವ ಕಾರ್ಯನಿಷಿದ್ಧವಾಗಿತ್ತು. ಒಂದೆಡೆ ಸಾಮೂಹಿಕವಾಗಿ, ಸಾಮಾಜಿಕವಾಗಿ ಕಲೆಯುವ (ಈಗಿನ ಕ್ಲಬ್‌ಗಳಂತಹ ಸಂಘಗಳು) ಸಂದರ್ಭಗಳಲ್ಲಿ. ಇಂತಹ ಕಡೆ ಅನಿಷ್ಟ ಧೋರಣೆಗಳು, ದೃಷ್ಟಿಗಳು ಸಹ ಉತ್ಪನ್ನವಾಗಬಹುದು ಎಂಬ ಕಾರಣದಿಂದ ಇಂತಹ ಸಮಾಜವನ್ನು ಸ್ವಲ್ಪಮಟ್ಟಿಗೆ ಸಂದೇಹಾಸ್ಪದವಾಗಿ ಕಂಡು ಅವುಗಳ ಬಗೆಗೆ ಹೆಚ್ಚು ಜಾಗರೂಕತೆಯನ್ನು ತಾಳುವ ಮನೋಭಾವ ಹೊಂದಿದ್ದ ಅಹಿಂಸೆ, ಪ್ರಜಾಹಿತ ಧರ್ಮನೀತಿಯ ತಳಹದಿಗಳಾಗಿದ್ದವು.

**ಧರ್ಮ:** ಪ್ರ.ಶ.ಪೂ.6ನೆಯ ಶತಮಾನದಲ್ಲಿ ಭಾರತದಲ್ಲಿ ಧಾರ್ಮಿಕ, ವೈಚಾರಿಕ ಕ್ರಾಂತಿ ಕಾಣಿಸಿಕೊಂಡಿತು. ವೈದಿಕಧರ್ಮಕ್ಕೆ ಭಿನ್ನವಾಗಿ ದ್ವಿವಿಧ ಪ್ರತಿಕ್ರಿಯೆ ಕಾಣಿಸಿಕೊಂಡಿತು. ಹಿಂದು ದೇವರ ಇರುವಿಕೆ ಹಾಗೂ ಆವಶ್ಯಕತೆಗಳ ವಿರುದ್ಧ ಕಾಣಿಸಿಕೊಂಡ ಸ್ವಲ್ಪಮಟ್ಟಿಗೆ ನಾಸ್ತಿಕತೆಯತ್ತ ವಾಲುವ ಒಂದು ಪ್ರತಿಕ್ರಿಯೆ ಹಾಗೂ ಆಧ್ಯಾತ್ಮಿಕ ವಿಷಯಗಳಲ್ಲಿ ಬ್ರಾಹ್ಮಣರ ಮೇಲುಗೈ ವಿರುದ್ಧ ಕಾಣಿಸಿಕೊಂಡ, ಭಕ್ತಿಯಿಂದ ಸುಪ್ರೀತಗೊಳಿಸಬಹುದಾದ ಏಕದೇವತ್ವವಾದ. ಹೊಸ ವಿಚಾರಗಳನ್ನೊಳಗೊಂಡ ಆಧ್ಯಾತ್ಮಿಕತೆ ಮತ್ತು ಹೊಸ ಮತಗಳ ಹುಟ್ಟು, ಇವುಗಳ ಪರಿಣಾಮ, ಇವುಗಳ ಆಜೀವಿಕ, ನಿರ್ಗ್ರಂಥ, ಪರಿವ್ರಾಜಕ, ಅವಿರುದ್ಧಕ, ದೇವಧಾರ್ಮಿಕ ಇತ್ಯಾದಿ. ಇವುಗಳನ್ನು ಬೌದ್ಧಗ್ರಂಥ-ಅಂಗುತ್ತರ ನಿಕಾಯದಲ್ಲಿ ವಿವರಿಸಲಾಗಿದೆ. ಇದಲ್ಲದೆ ಮೃಗ-ಗಜ, ಅಶ್ವ, ಗೋವು, ದೇವ-ದೇವಕಿ, ವಾಸುದೇವ, ಬಲದೇವ, ನಾಗರು, ಯಕ್ಷರು, ಗಂಧರ್ವರು, ಸೂರ್ಯ, ಚಂದ್ರಾದಿಗ್ರಹಗಳು ಇವರ ವಿಶಿಷ್ಟ ಆರಾಧನೆ. ಆದರೆ ಇವುಗಳಲ್ಲಿ ನಾಲ್ಕು ಧರ್ಮಗಳಾದ ಬೌದ್ಧ, ಜೈನ, ವೈಷ್ಣವ, ಶೈವದ ಮಟ್ಟಿಗೆ ಸ್ಥಿರವಾಗಿ ಉಳಿದವು. ಪ್ರಾಚೀನ ಸಾಂಪ್ರದಾಯಿಕ ಶ್ರದ್ಧೆಗಳು ಹಾಗೂ ಜನಾದರಣೀಯ ಉಪಾಸನೆಗಳನ್ನು ಶೈವ-ವೈಷ್ಣವ ಧರ್ಮಗಳಲ್ಲುಂಟಾದ ಸುಧಾರಣೆಗಳೆಂದು ಭಾವಿಸಲಾಯಿತು. ಬೌದ್ಧ, ಜೈನ ಧರ್ಮಗಳು ವೈದಿಕ ಸಂಪ್ರದಾಯ ವಿರುದ್ಧದ ಧರ್ಮಗಳೆನಿಸಿ ಕೊಂಡವು. ವೈಷ್ಣವ-ಶೈವ ಧರ್ಮಗಳಲ್ಲಿ ಕಂಡುಬರುವ ಸಾಮಾನ್ಯ ಅಂಶಗಳೆಂದರೆ ಭಕ್ತಿ ಮತ್ತು ಪ್ರಸಾದ. ಭಕ್ತಿ ತೀವ್ರವಾದಾಗ ದೈವದಲ್ಲಿ ಶರಣಾಗುತ್ತದೆ. ಪ್ರಸಾದ ಎಂಬುದು ಅನುಗ್ರಹ. ಅದರಿಂದ ಭಕ್ತನಿಗೆ ಲಭಿಸುವ ಮುಕ್ತಿ. ಈ ಎರಡು ಧರ್ಮಗಳ ಪರಮೋಚ್ಚ ದೇವರುಗಳು ವಿಷ್ಣು ಹಾಗೂ ಶಿವ ಎರಡೂ ಧರ್ಮಗಳಲ್ಲಿ ಅನೇಕ ಭಿನ್ನಾಭಿಪ್ರಾಯಗಳೂ ತಲೆ ಎತ್ತಿದುವು. ಈ ದೇವರುಗಳ ಸುತ್ತಲೂ ರಂಜಿತ ಕಥೆಗಳು ಹೆಣೆದುಕೊಂಡವು. ಆಗಲೇ ಜನಪ್ರಿಯವಾಗಿದ್ದ ರಾಮಾಯಣ, ಮಹಾಭಾರತ ಈ ಮೊದಲಾದ ಕಥೆಗಳು, ಕಾವ್ಯಗಳು, ಸಾಹಿತ್ಯ ಕೃತಿಗಳೂ ಹುಟ್ಟಿಕೊಂಡವು. ವೇದಕಾಲದಿಂದಲೂ ಈ ಭಿನ್ನತೆಗಳಿದ್ದರೂ ಅಂತಿಮವಾಗಿ ದೇವನೊಬ್ಬ, ನಾಮ ಹಲವು ಎಂಬ ಮೂಲ ಭಾವನೆ ಮೂಡಿಬಂದಿತ್ತು. ಮೌರ್ಯಚಕ್ರವರ್ತಿ ಶ್ರಮಣರನ್ನಲ್ಲದೆ ಬ್ರಾಹ್ಮಣರೊಡನೆಯೂ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದ. ವೈದಿಕ ಪ್ರಾಚೀನ ಶೈವ ವೈಷ್ಣವ ಧರ್ಮಗಳು ಬೆಳೆಯುತ್ತಿದ್ದರೂ ಈ ಧರ್ಮಗಳ ಮತ್ತು ಧರ್ಮಾನುಯಾಯಿಗಳ ಸ್ಥಿತಿಗತಿಗಳ ಬಗ್ಗೆ ಯಾವುದೇ ಸ್ಪಷ್ಟ ಚಿತ್ರವು ಸಿಗುತ್ತಿಲ್ಲ.

ಬೌದ್ಧಧರ್ಮ, ಜೈನಧರ್ಮಗಳು ಹಾಗಲ್ಲ. ತಮ್ಮದೇ ಆದ ಆಚಾರಗಳನ್ನು, ನಿಯಮಗಳನ್ನು ರೂಪಿಸಿಕೊಂಡವು. ಆದರೆ ಈ ಎರಡೂ ಧರ್ಮಗಳು ವೈದಿಕ ಸಂಸ್ಕೃತಿ, ಉಪನಿಷತ್ತುಗಳ ಬೋಧನೆಗಳ ಮೇಲೆಯೇ ತಮ್ಮ ತತ್ತ್ವಗಳನ್ನು ರೂಪಿಸಿಕೊಂಡಿವೆ. ಅಶೋಕನ ಆಶ್ರಯದಲ್ಲಿ ಪಾಟಲಿಪುತ್ರದಲ್ಲಿ ಸೇರಿದ ಬೌದ್ಧರ ಮೂರನೆಯ ಮಹಾಸಭೆ ಭಾರತದಲ್ಲಿ ಮತ್ತು ಭಾರತದ ಹೊರಗಡೆ ಬೌದ್ಧಧರ್ಮದ ಭವಿತವ್ಯದ ದೃಷ್ಟಿಯಿಂದ ಬಹಳ ಪರಿಣಾಮಕಾರಿಯಾದ ಸಭೆ ಎನಿಸಿತು. ಈ ಮಹಾಸಭೆಯ ಅನಂತರ ಬೌದ್ಧಧರ್ಮದ ಪ್ರಚಾರಕ್ಕೋಸ್ಕರ ಬೌದ್ಧ ಭಿಕ್ಷುಗಳನ್ನು ಭಾರತದ ಬೇರೆ ಬೇರೆ ಭಾಗಗಳಿಗೆ ಕಳಿಸಲಾಯಿತು. ಶ್ರೀಲಂಕ ದೇಶದ ಆಖ್ಯಾನವೆನಿಸಿದ ಮಹಾವಂಶ ಗ್ರಂಥದಲ್ಲಿ ಧರ್ಮ ಪ್ರಚಾರಕ್ಕಾಗಿ ವಿವಿಧ ಪ್ರದೇಶಗಳಿಗೆ ಹೋದ ಥೇರರ ಹೆಸರುಗಳನ್ನು ಉಲ್ಲೇಖಿಸಲಾಗಿದ್ದು, ಥೇರ ಮಹಾದೇವ ಮಹಿಷಮಂಡಲಕ್ಕೂ ಥೇರ ರಕ್ಖಿತ ವನವಾಸಕ್ಕೂ ಭೇಟಿ ಕೊಟ್ಟರೆಂದು ಅದರಲ್ಲಿ ಹೇಳಲಾಗಿದೆ. ಈಗಿನ ಮೈಸೂರಿನ ಸುತ್ತಮುತ್ತಲಿನ ಭಾಗವನ್ನು ಮಹಿಷಮಂಡಲ ಎಂದೂ ಈಗಿನ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ಸುತ್ತಮುತ್ತಲಿನ ಪ್ರದೇಶವನ್ನು ವನವಾಸ ಎಂದೂ ಸಾಮಾನ್ಯವಾಗಿ ವಿದ್ವಾಂಸರು ಗುರುತಿಸುತ್ತಾರೆ. ಥೇರ ರಕ್ಖಿತನ ವನವಾಸದಲ್ಲಿ ಅನಮತಗ್ಗ ಸಂಯುತ್ತದ ಬೋಧನೆ ಪ್ರಭಾವದಿಂದ 60,000 ಜನರು ಬೌದ್ಧಧರ್ಮಕ್ಕೆ ಸೇರಿದರು. 37,000 ಜನರಿಗೆ ಪಬ್ಬಜ್ಜಾ ದೀಕ್ಷೆಯನ್ನು ಕೊಟ್ಟನೆಂದೂ 500 ವಿಹಾರಗಳನ್ನು ಕಟ್ಟಿಸಿದನೆಂದೂ ಮಹಾವಂಶ ಹೇಳುತ್ತದೆ. ಮಹಿಷಮಂಡಲದಲ್ಲಿ ಮಹಾದೇವ ದೇವದೂತ ಸುತ್ತಂತವನ್ನು ಬೋಧಿಸಿದ. ನಲ್ವತ್ತು ಸಾವಿರ ಜನರಿಗೆ ಪಬ್ಬಜ್ಜಾ ದೀಕ್ಷೆಯನ್ನು ಕೊಟ್ಟ. ಈ ಮಾತುಗಳಲ್ಲಿ ಅತಿಶಯೋಕ್ತಿಯನ್ನು ಅಲ್ಲಗಳೆಯಲಾಗದಿದ್ದರೂ ಸ್ವಲ್ಪಮಟ್ಟಿಗಾದರೂ ನಿಜಾಂಶವಿದೆ.

**ಜೈನಧರ್ಮ:** ಭದ್ರಬಾಹು ಶ್ರುತಕೇವಲಿಯರಲ್ಲಿ ಕೊನೆಯವನು. ಉತ್ತರ ಭಾರತದಲ್ಲಿ ದೊಡ್ಡ ಬರಗಾಲ ಬೀಳಬಹುದೆಂಬುದನ್ನು ಮನಗಂಡು ತನ್ನ ಅನುಯಾಯಿಗಳ ಸಮೂಹ ದೊಂದಿಗೆ ಭದ್ರಬಾಹು ದಕ್ಷಿಣ ಭಾರತಕ್ಕೆ ಬಂದನೆಂದೂ ಅನುಯಾಯಿಗಳಲ್ಲಿ ಚಂದ್ರಗುಪ್ತ ಮೌರ್ಯನೂ ಇದ್ದನೆಂದೂ ಜೈನರ ಸಂಪ್ರದಾಯಗಳೂ ದಂತಕಥೆಗಳೂ ಹೇಳುತ್ತವೆ. ಅವರೆಲ್ಲ ಕರ್ನಾಟಕದ ದಕ್ಷಿಣದಲ್ಲಿರುವ ಶ್ರವಣಬೆಳಗೊಳಕ್ಕೆ ಬಂದರೆಂದು ಮತ್ತು ಅಲ್ಲಿಯ ಚಂದ್ರಗಿರಿ ಬೆಟ್ಟದ ಮೇಲೆ ಚಂದ್ರಗುಪ್ತ ಮೌರ್ಯ ಜೈನವ್ರತಾಧಾರಿಯಾಗಿ ಮಡಿದನೆಂದು ಈ ಐತಿಹ್ಯಗಳು ಹೇಳುತ್ತವೆ. ಈ ಮೌರ್ಯ ಸಾಮ್ರಾಜ್ಯದ ಸ್ಥಾಪಕನೆ ಈ ಚಂದ್ರಗುಪ್ತನೆಂದು ಕೆಲವರು ಹೇಳುತ್ತಾರೆ. ಆದರೆ ಅವನು ಸಾಮ್ರಾಟ ಅಶೋಕ ಮೌರ್ಯನ ಮೊಮ್ಮಗನ ಮಗನಾದ ಸಂಪ್ರತಿ ಚಂದ್ರಗುಪ್ತನಾಗಿದ್ದನೆಂದು ಇನ್ನಿತರರು ಹೇಳುತ್ತಾರೆ. ಅದೇನೆ ಇದ್ದರೂ ಈ ಸಂಪ್ರದಾಯದಲ್ಲಿ ಸತ್ಯಾಂಶಗಳಿದ್ದರೆ ಕರ್ನಾಟಕದಲ್ಲಿ ಜೈನರ ಪ್ರವೇಶವಾದದ್ದು ಪ್ರ.ಶ.ಪೂ.3ನೆಯ ಶತಮಾನದಷ್ಟು ಹಿಂದೆ ಎಂದು ಹೇಳಬೇಕಾಗುತ್ತದೆ.

**ಆರ್ಥಿಕ:** ವ್ಯವಸಾಯ ರಾಜ್ಯದ ಆರ್ಥಿಕ ಪ್ರಗತಿಯ ಬೆನ್ನೆಲುಬಾಗಿತ್ತು. ಭೂಮಿಯೆಲ್ಲವೂ ರಾಜನದೇ ಆಗಿದ್ದರೂ ವೈಯಕ್ತಿಕ ಹಿಡುವಳಿದಾರರೂ ಇದ್ದರು. ಇವರಿಗೆ ಭೂಮಿದಾನವಾಗಿ ಬಂದಿರಬೇಕು ಅಥವಾ ಕೊಂಡದ್ದಿರಬೇಕು. ಎಂತಲೇ ಉತ್ಪನ್ನದ ಸ್ವಲ್ಪ ಭಾಗವಲ್ಲದೆ ಭೂಮಿಗೆ ಕಂದಾಯ ಕೊಡಬೇಕಾಗಿತ್ತು. ರಾಜ್ಯದ ಹಿತಕ್ಕಾಗಿ ಹೆಚ್ಚು ಹೆಚ್ಚು ಭೂಮಿಯನ್ನು ಉಳುಮೆಗೆ ಅಳವಡಿಸಲಾಗುತ್ತಿತ್ತು. ಈ ಕಾರ್ಯದಲ್ಲಿ ಒತ್ತೆಯಾಳುಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ಬಹುಮಟ್ಟಿಗೆ ಇವರು ಯುದ್ಧದಲ್ಲಿ ಸೆರೆ ಸಿಕ್ಕವರು. ಕಳಿಂಗದ ಕದನದಲ್ಲಿ ದೇಶಭ್ರಷ್ಟರಾದವರನ್ನೆಲ್ಲ ಬಹುಶಃ ತನ್ನ ರಾಜ್ಯಕ್ಕೆ ಕಳುಹಿಸಿ ಅವರನ್ನು ಇಂತಹ ಹೊಸ ಹೊಸ ಪಾಳಯ (ಪಾಳ್ಯ), ವಸಾಹತುಗಳನ್ನು ಕಟ್ಟಲು ಬಳಸಲಾಗಿತ್ತೆಂಬ ಅಭಿಪ್ರಾಯವಿದೆ. ಗುಲಾಮಗಿರಿ ಅಸ್ತಿತ್ವದಲ್ಲಿದ್ದರೂ ಗುಲಾಮರ ಹಾಗೂ ಅವರ ಸ್ವಾಮಿಯ ನಡುವಣ ಸಂಬಂಧ ಕಾನೂನಿಗೊಳಪಟ್ಟಿತ್ತು. ಜನ್ಮತಃ ಅಥವಾ ಸ್ವತಃ ತನ್ನನ್ನು ಮಾರಾಟ ಮಾಡಿಕೊಂಡ, ಯುದ್ಧದಲ್ಲಿ ಕೈದು ಸಿಕ್ಕ ಸೈನಿಕರು ಗುಲಾಮರಾಗುತ್ತಿದ್ದರು. ಆದರೆ ಅವರಿಗೆ ಸ್ವಾತಂತ್ರ್ಯವನ್ನು ಹಿಂದಕ್ಕೆ ಪಡೆದುಕೊಳ್ಳುವ ಕಾನೂನುಬದ್ಧವಾದ ಮಾರ್ಗಗಳಿದ್ದುವು.

ಕೇಂದ್ರೀಕೃತ ಸುವ್ಯವಸ್ಥಿತ ಆಡಳಿತದಲ್ಲಿ ಕೈಕಸಬುಗಳಿಗೆ ಪ್ರೋತ್ಸಾಹ ದೊರೆಯುವ ಕಸಬುದಾರರ ಶ್ರೇಣಿಗಳು ಅಸ್ತಿತ್ವಕ್ಕೆ ಬಂದವು. ಇವೇ ಮುಂದೆ ಸಣ್ಣ ಪ್ರಮಾಣದ ಕೈಗಾರಿಕೆಗಳಾಗಿ ಪರಿವರ್ತನೆಗೊಂಡವು. ಶಸ್ತ್ರಾಸ್ತ್ರಗಳನ್ನು ತಯಾರಿಸುವ, ನೌಕೆಗಳನ್ನು ಕಟ್ಟುವ ಕಸಬುದಾರರನ್ನು ಸರ್ಕಾರವೇ ನೇರವಾಗಿ ನೇಮಿಸಿಕೊಳ್ಳುತ್ತಿತ್ತು. ಇವರು ತೆರಿಗೆಗಳಿಂದ ಮುಕ್ತರಾಗಿದ್ದರು. ಆದರೆ ಇವರು ವಾಣಿಜ್ಯ ತೆರಿಗೆಗಳನ್ನು ನೀಡಬೇಕಿತ್ತು. ಶ್ರೇಣಿಗಳ ಸದಸ್ಯತ್ವ ವೈಯಕ್ತಿಕ ಬಾಧೆಗಳನ್ನು ನಿವಾರಿಸುತ್ತಿತ್ತು. ಸಿದ್ಧವಸ್ತುಗಳೆಲ್ಲದಕ್ಕೂ ತೆರಿಗೆ ನೀಡಬೇಕಾಗಿದ್ದು, ಆ ವಸ್ತುಗಳ ಮೇಲೆ ಅವು ಸಿದ್ಧವಾದ ತೇದಿಯನ್ನು ನಮೂದಿಸಲಾಗುತ್ತಿತ್ತು. ಮಾರಾಟದ ಮೇಲೆ ಸರ್ಕಾರ ಕಟ್ಟುನಿಟ್ಟಾದ ನಿಯಂತ್ರಣ ಹೊಂದಿತ್ತು. ತೆರಿಗೆಗಳನ್ನು, ಭಾರೀ ಮೊತ್ತದ ದಂಡಗಳನ್ನು ತುಂಬಬೇಕಾಗಿತ್ತು. ಗಳಿಸಬಹುದಾದ ಲಾಭದ ಮೇಲೂ ನಿಯಂತ್ರಣವಿದ್ದು, ಸಾಲ ನೀಡುವ ವ್ಯವಹಾರ ಸಹಜವಾಗಿಯೇ ಅಸ್ತಿತ್ವದಲ್ಲಿದ್ದು, ಶೇ. 1/10 ಮೀರದಂತೆ ಎಚ್ಚರ ವಹಿಸಲಾಗುತ್ತಿತ್ತು.

(ಬಿ.ಆರ್.ಜಿ.)

**ನಾಣ್ಯಪದ್ಧತಿ:** ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿದ್ದ ಪದಾರ್ಥ ವಿನಿಮಯ ಪದ್ಧತಿಯಲ್ಲದೆ ನಗರ ಪ್ರದೇಶಗಳಲ್ಲಿಯ ವ್ಯಾಪಾರ-ವ್ಯವಹಾರಗಳಲ್ಲಿ ವಿನಿಮಯದ ಸಾಧನವೆಂದು ನಾಣ್ಯವನ್ನು ಬಳಸುವ ಪದ್ಧತಿ ಕರ್ನಾಟಕದಲ್ಲಿ ಎಂದಿನಿಂದ ಪ್ರಾರಂಭವಾಯಿತು ಎಂಬುದು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಏಕೆಂದರೆ ಈ ದಿಕ್ಕಿನಲ್ಲಿ ಸಾಕಷ್ಟು ಸಾಕ್ಷ್ಯಗಳು ದೊರೆಯುತ್ತಿಲ್ಲ. ಭಾರತದ ಇತರ ಭಾಗಗಳಲ್ಲಿ ಇದ್ದಂತೆ ಕರ್ನಾಟಕದಲ್ಲಿಯೂ ಅತ್ಯಂತ ಪ್ರಾಚೀನ ನಾಣ್ಯಗಳೆಂದರೆ ಮುದ್ರಾಂಕಿತ ನಾಣ್ಯಗಳಾಗಿದ್ದವು. ಕರ್ನಾಟಕದಲ್ಲಿ ಉತ್ತರ ಭಾರತದ

ಮುದ್ರಾಂಕಿತ ನಾಣ್ಯಗಳೇ ಚಲಾವಣೆಯಲ್ಲಿದ್ದವು. ಏಕೆಂದರೆ ವ್ಯಾಪಾರಕ್ಕಾಗಿ ಬರುತ್ತಿದ್ದ ಉತ್ತರ ಭಾರತದ ವರ್ತಕರು ಈ ನಾಣ್ಯಗಳನ್ನು ದಕ್ಷಿಣ ಭಾರತದಲ್ಲಿ ಇತರ ಭಾಗಗಳಿಗೆ ತಂದಂತೆ ಕರ್ನಾಟಕಕ್ಕೂ ತರುತ್ತಿದ್ದರು. ಕರ್ನಾಟಕ ಕೂಡ ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದುದರಿಂದ, ಮೌರ್ಯರ ಪ್ರಸಿದ್ಧವಾದ ಮುದ್ರಾಂಕಿತ ನಾಣ್ಯಗಳು ಕರ್ನಾಟಕದಲ್ಲಿಯೂ ಚಲಾವಣೆಯಲ್ಲಿ ಇದ್ದವು. ಈ ನಾಣ್ಯಗಳನ್ನು ಕರ್ನಾಟಕದಲ್ಲಿಯೇ ಟಂಕಿಸುತ್ತಿದ್ದರೊ ಇಲ್ಲವೆ ಟಂಕಿತಗೊಂಡ ನಾಣ್ಯಗಳನ್ನು ಕರ್ನಾಟಕದ ಹೊರಗಿನಿಂದ ತರಿಸಿಕೊಳ್ಳಲಾಗುತ್ತಿತ್ತೊ ಎಂಬುದು ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಆದರೆ ಪ್ರ.ಶ.ಪೂರ್ವದಲ್ಲಿಯೇ ಕರ್ನಾಟಕದಲ್ಲಿ ಲೋಹವಿದ್ಯೆ ಮತ್ತು ತಂತ್ರ ಬೆಳೆದುಕೊಂಡು ಬಂದಿತ್ತು. ಮೌರ್ಯರ ಕಾಲದಲ್ಲಿಯೂ ಈ ಕಲೆ ಕರ್ನಾಟಕದಲ್ಲಿ ಇತ್ತು. ಆದ್ದರಿಂದ ಕರ್ನಾಟಕದಲ್ಲಿ ದೊರೆತ ಮೌರ್ಯರ ಮುದ್ರಾಂಕಿತ ನಾಣ್ಯಗಳನ್ನು ಕರ್ನಾಟಕದಲ್ಲಿಯೆ ಟಂಕಿಸಿರಬಹುದೆಂದು ಕೆಲ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಮೌರ್ಯರ ಸಂಕೇತ ಮತ್ತು ನಾಣ್ಯರಚನಾ ತಂತ್ರವನ್ನೇ ಬಳಸಲಾಗಿರಬಹುದೆಂದು ಅವರ ಮತವಾಗಿದೆ.

ನೆರೆಯ ಪ್ರಾಂತಗಳಾದ ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ದೊರೆತಷ್ಟು ಮೌರ್ಯರ ಮುದ್ರಾಂಕಿತ ನಾಣ್ಯಗಳು ಕರ್ನಾಟಕದಲ್ಲಿ ದೊರೆಯುವುದಿಲ್ಲ. ಆದರೆ ಸಿಕ್ಕಷ್ಟು ನಾಣ್ಯಗಳ ಆಧಾರದಿಂದ ಅವುಗಳ ರಚನೆ ಮತ್ತು ಕಾಲಮಾನಗಳ ಬಗ್ಗೆ ಮಾತ್ರ ಹೇಳಲು ಸಾಧ್ಯ. 1978ರಲ್ಲಿ ಸು.5000 ದಷ್ಟು ಇಂತಹ ಮುದ್ರಾಂಕಿತ ನಾಣ್ಯಗಳ ಒಂದು ರಾಶಿಯು ದೊರೆಯಿತು. ಅದು ಚಿಕ್ಕ ಸಿಂದಗಿಯಲ್ಲಿ (ಕೊಪ್ಪಳ) ದೊರೆತ ನಿಧಿ. ಇಡೀ ದಕ್ಷಿಣ ಭಾರತದಲ್ಲಿ ಮುದ್ರಾಂಕಿತ ಮೌರ್ಯ ನಾಣ್ಯಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ದೊರೆತದ್ದು ಇಲ್ಲಿಯೆ. ಇವು ಒಂದು ತಾಮ್ರದ ತಂಬಿಗೆಯಲ್ಲಿ ದೊರೆತವು. ಆ ತಂಬಿಗೆ ಒಂದು ಮಣ್ಣಿನ ಮಡಕೆ ಯಲ್ಲಿತ್ತು. ತಾಮ್ರದ ತಂಬಿಗೆ ಭುಜ ಭಾಗದಲ್ಲಿ ಚಂತಸ ಎಂದು ಕೆತ್ತಲಾಗಿದೆ. ಅಂದರೆ ಆ ತಂಬಿಗೆ ಮತ್ತು ಅದರಲ್ಲಿಯ ನಾಣ್ಯಗಳು ಚಂತಸ ಎಂಬವನಿಗೆ ಸೇರಿರಬಹುದು. ಚಂತ ಎಂದರೆ ಒಬ್ಬ ವ್ಯಕ್ತಿ ಹೆಸರು ಎಂದು ಊಹಿಸಿದರೆ ಅರ್ಥವಾಗಬಹುದು. ಈ ಬರೆಹ ಬ್ರಾಹ್ಮಿ ಲಿಪಿಯಲ್ಲಿದೆ. ಪುರಾತನ ಲಿಪಿಶಾಸ್ತ್ರದ ಮೇರೆಗೆ ಇದರ ಬ್ರಾಹ್ಮಿ ಲಿಪಿ ಪ್ರ.ಶ.2–3ನೆಯ ಶತಮಾನಗಳ ಲಿಪಿಯಾಗಿದೆ. ಈ ನಾಣ್ಯಗಳು ಮೌರ್ಯರ ನಾಣ್ಯ ಲಕ್ಷಣಗಳನ್ನು ಹೋಲುತ್ತವೆ ಎಂದು ಹೇಳಲಾಗಿದೆ.

ಸು.40 ವರ್ಷಗಳ ಹಿಂದೆ ಮುದ್ರಾಂಕಿತ ಕೆಲ ನಾಣ್ಯಗಳು ದೊರೆತರೂ ಇವುಗಳ ಮೂಲ ಎಲ್ಲಿ ಎಂಬುದು ಗೊತ್ತಾಗುವುದಿಲ್ಲ. ಅವು ಮೌರ್ಯರ ನಾಣ್ಯಗಳ ಮಾದರಿಯಲ್ಲಿವೆ. ಅವು ಕರ್ಷಪಣ, ಅರ್ಧಕರ್ಷಪಣ ಹಾಗೂ ಒಂದು ಮೂರಾಂಶ ಕರ್ಷಪಣ ಶ್ರೇಣಿಯಲ್ಲಿದ್ದು, ಅನುಕ್ರಮವಾಗಿ 52, 28 ಹಾಗೂ 13 ಗ್ರೇನುಗಳಷ್ಟಿವೆ. ಈ ನಾಣ್ಯಗಳ ಮೇಲೆ ಸೂರ್ಯ, ನವಿಲು, ವೃಷಭ, ಆನೆ, ಚೈತ್ಯ ಮತ್ತು ಸ್ವಸ್ತಿಕ ಚಿಹ್ನೆಗಳಿವೆ.

ಇತ್ತೀಚೆಗೆ ಉತ್ಖನನಗಳಲ್ಲಿಯೂ ಮುದ್ರಾಂಕಿತ ನಾಣ್ಯಗಳು ದೊರೆತಿವೆ. ಮೊದಲು 1947ರ ಚಂದ್ರವಳ್ಳಿ ಉತ್ಖನನಗಳಲ್ಲಿ ಅವು ದೊರೆತದ್ದು. ನಾಣ್ಯ ದೀರ್ಘ ಚೌಕಾಕೃತಿಯಲ್ಲಿದೆ. ಇದು ಬೆಳ್ಳಿಯ ನಾಣ್ಯ. ಪಂಚ್ ಮಾಡಿದ್ದು. ಇದರ ಮೇಲೆ ಸೂರ್ಯ, ಡಮರು, ಬಾಣದ ತುದಿ, ಹೂವಿನ ನಕ್ಷೆ ಮತ್ತು ಬೆಟ್ಟಗಳ ಐದು ಸಂಕೇತಗಳಿವೆ. ಅದು ಮಧ್ಯ ಆಂಧ್ರ ಹಂತದಲ್ಲಿ ಅಂದರೆ ಇತಿಹಾಸ ಕಾಲ ಪ್ರಾರಂಭದಲ್ಲಿ ದೊರೆತಿದೆ. ಇನ್ನೊಂದು ಒಂಟಿಯಾದ ಪಂಚ್ ಮಾಡಿದ ನಾಣ್ಯ ದೊರೆತಿದೆ. ಇದು ಸಾತವಾಹನರ ಕಾಲದ ಒಂದು ಗಜಪೃಷ್ಠ ವಿನ್ಯಾಸದ ಇಟ್ಟಿಗೆ ಕಟ್ಟಡದ ಒಳ ಮತ್ತು ಹೊರ ಬದಿಗಳಲ್ಲಿ ಬನವಾಸಿಯ ಉತ್ಖನನದಲ್ಲಿ ದೊರೆತಿದೆ. ಚೌಕಾಕಾರದಲ್ಲಿ ಇದ್ದ ಈ ನಾಣ್ಯ ಬೆಳ್ಳಿಯದು. ಕರ್ನಾಟಕದಲ್ಲಿ ದೊರೆತ ಪಂಚ್ ಮಾಡಿದ ನಾಣ್ಯಗಳಲ್ಲಿ ಇದು ಅತಿ ಹಳೆಯದ್ದು.

ವಡಗಾಂವ್–ಮಾಧವಪುರ **(ನೋಡಿ)** ನಿವೇಶನದಲ್ಲಿ ಇತಿಹಾಸ ಪ್ರಾರಂಭದ ಸಾತವಾಹನರ ಅನೇಕ ಪುರಾತನ ವಸ್ತುಗಳು ದೊರೆತಿವೆಯಷ್ಟೆ. ಇವು ಬಹುಶಃ ಪ್ರ.ಶ.1–2 ಶತಮಾನಗಳಿಗೆ ಸಂಬಂಧಪಟ್ಟಂಥವು. ಒಂದು ಸಾತವಾಹನ ಕಾಲದ ಮನೆಯ ಕೋಣೆಯಲ್ಲಿ ಈ ಮುದ್ರಾಂಕಿತ ನಾಣ್ಯಗಳು ದೊರೆತವು. ಆದ್ದರಿಂದ ಇವು ಒಂದನೆಯ ಶತಮಾನದ ಪೂರ್ವದಲ್ಲಿ ಅಲ್ಲದ್ದಿದ್ದರೂ ಒಂದನೆಯ ಶತಮಾನದಲ್ಲಾದರೂ ಚಲಾವಣೆಯಲ್ಲಿ ಇದ್ದಿರ ಬಹುದು. ಕನಿಷ್ಠ ಎಂಟು ಮುದ್ರಾಂಕಿತ ನಾಣ್ಯಗಳಿವೆ. ಇವು ಐದು ಚಿಹ್ನೆಗಳನ್ನು ಹೊಂದಿದ್ದು, ಇವುಗಳಲ್ಲಿ ಸೂರ್ಯ, ಬೆಟ್ಟ, ವೃಷಭಾಕಾರ, ಗೋಪುರ, ಶಿಖರ ಇವು ಪ್ರಮುಖವಾಗಿವೆ. ಆದರೆ ಈ ನಾಣ್ಯಗಳನ್ನು ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಿ ಅರ್ಥ ಹೇಳಬೇಕಾದ ಆವಶ್ಯಕತೆ ಇದೆ. ಈ ಎಲ್ಲ ಸಾಕ್ಷ್ಯಗಳನ್ನು ನೋಡಿದರೆ ಕರ್ನಾಟಕದ ಅತಿ ಪ್ರಾಚೀನ ನಾಣ್ಯಗಳು ಮುದ್ರಾಂಕಿತ ನಾಣ್ಯಗಳಾಗಿರುತ್ತಿದ್ದವು ಎಂಬುದು ಸ್ಪಷ್ಟವಿದೆ. ಕರ್ನಾಟಕದಲ್ಲಿಯ ಇಂತಹ ನಾಣ್ಯಗಳ ಮೇಲೆ ಮೌರ್ಯರ ಪಂಚ್ ಮಾಡಿದ ನಾಣ್ಯಗಳ ಪ್ರಭಾವ ಇದ್ದುದು ಸ್ಪಷ್ಟವಿದೆ. ಇವು ಬೆಳ್ಳಿ ಮತ್ತು ತಾಮ್ರದ ನಾಣ್ಯಗಳಾಗಿವೆ. ಮೌರ್ಯರ ಕಾಲದಿಂದ ಪ್ರ.ಶ.3ನೆಯ ಶತಮಾನದವರೆಗೂ ಅವು ಚಲಾವಣೆಯಲ್ಲಿ ಇದ್ದವು. (ಎ.ವಿ.ಎನ್.)

**ಭಾಷೆ–ಸಾಹಿತ್ಯ–ಕಲೆ:** ಮೌರ್ಯ ಚಕ್ರವರ್ತಿ ಜನಸಾಮಾನ್ಯ ಭಾಷೆಯಾದ ಪ್ರಾಕೃತವನ್ನೇ ಬಳಸಿದನೆಂದು ಅವನ ಎಲ್ಲ ಶಾಸನಗಳಿಂದ ವೇದ್ಯ. ಕರ್ನಾಟಕವೂ ಸೇರಿದಂತೆ, ದಕ್ಷಿಣ ಭಾರತದಲ್ಲೆಲ್ಲ ಈ ಭಾಷೆ ಬಳಕೆಯಲ್ಲಿತ್ತು. ಜೊತೆಗೆ ಸಂಸ್ಕೃತ ಬಹುಶಃ ವಿದ್ವಜ್ಜನರ ಭಾಷೆಯಾಗಿತ್ತು. ಪಾಣಿನಿಯ ವ್ಯಾಕರಣ ಗ್ರಂಥ ಅಷ್ಟಾಧ್ಯಾಯಿ, ಕೌಟಿಲ್ಯನ ಅರ್ಥಶಾಸ್ತ್ರ, ಪತಂಜಲಿಯ ಮಹಾಭಾಷ್ಯ, ಭರತನ ನಾಟ್ಯಶಾಸ್ತ್ರ ಉತ್ತಮ ಸಂಸ್ಕೃತ ಗ್ರಂಥಗಳು. ಇವು ಮೌರ್ಯ ಪೂರ್ವ–ಮೌರ್ಯ–ಮೌರ್ಯ ಉತ್ತರ ಕಾಲದವು. ಕರ್ನಾಟಕದಲ್ಲಿಯ ಇವೆರಡು ಭಾಷೆಗಳು ಸಾಮಾನ್ಯ ಮತ್ತು ಶಿಷ್ಟಸಂಪ್ರದಾಯದ ಜನವರ್ಗಗಳಲ್ಲಿ ಉಪಯೋಗ ದಲ್ಲಿದ್ದವು. ಕರ್ನಾಟಕದಲ್ಲಿರುವ ಅಶೋಕನ ಎಲ್ಲ ಶಾಸನಗಳು ಪ್ರಾಕೃತ ಭಾಷೆಯಲ್ಲಿವೆ ಮತ್ತು ಇವುಗಳಲ್ಲಿಯ ವಿಷಯವನ್ನು ಜನರಿಗೆ ಘೋಷಿಸಬೇಕೆಂದು ರಾಜಾಜ್ಞೆಯಿದ್ದುದರಿಂದ ಜನರಿಗೂ ಈ ಭಾಷೆಯ ತಿಳಿವಳಿಕೆಯಿದ್ದಿರಬೇಕು. ಇವುಗಳಲ್ಲದೆ ಪ್ರಾದೇಶಿಕ ಭಾಷೆಯೂ ಜನರ ಆಡುಭಾಷೆ ಯಾಗಿತ್ತೆಂಬ ಅಸ್ಪಷ್ಟ ಸುಳಿವು ಬ್ರಹ್ಮಗಿರಿಯ ಅಂದಿನ ಹೆಸರಾದ ಇಸಿಲ ಶಬ್ದದಿಂದ ಇದೆಯೆಂದು ವಿದ್ವಾಂಸರು ಅನುಮಾನಿಸುತ್ತಾರೆ. ಈ ಶಬ್ದವು ಸಂಸ್ಕೃತ ಪ್ರಾಕೃತಜನ್ಯವಲ್ಲ. ಬೇರೆ ಯಾವ ಭಾಷೆಯೂ ಆಗಿರದೆ ಕನ್ನಡವೇ ಈ ಪ್ರದೇಶದಲ್ಲಿ ಬೆಳೆದು ಬಂದದ್ದರಿಂದ ಪ್ರಾಯಶಃ ಇಸಿಲ ಶಬ್ದ ಕನ್ನಡ ಜನ್ಯವಾಗಿರಬೇಕೆಂಬುದು ತರ್ಕ. ಇಸಿಲ್ ಎಂದರೆ ಕೋಟೆ ಎಂದರ್ಥವಾಗುತ್ತದೆ. ಆ ಕಾಲದ ನಗರಕ್ಕೆ ವಿಶಿಷ್ಟವಾದ ಕೋಟೆಯಿದ್ದು ಹಾಗೆ ಹೆಸರು ಬಂದಿದೆಯೆ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗಿದೆ.

ಈ ಭಾಷೆಗಳನ್ನು ಬರೆಯಲು ಉಪಯೋಗಿಸಿದ ಲಿಪಿ ಬ್ರಾಹ್ಮಿ; ಅಶೋಕನ ಕಾಲದಿಂದ ಆದಿ ಕದಂಬ–ಗಂಗರವರೆಗೆ ಎಲ್ಲ ಶಾಸನಗಳಲ್ಲಿ ಬ್ರಾಹ್ಮಿ ಲಿಪಿಯನ್ನೆ ಬಳಸಲಾಗಿದೆ. ಬ್ರಹ್ಮಗಿರಿಯ ಅಶೋಕನ ಶಾಸನದ ಕೊನೆಯ ಸಾಲಿನ ಕೊನೆಯ ಪದ ಲಿಪಿಕರೇಣ (ಲಿಪಿಕಾರನಿಂದ) ಮಾತ್ರ ಖರೋಷ್ಠಿ ಲಿಪಿಯಲ್ಲಿದೆ. ಇಡೀ ಕರ್ನಾಟಕದಲ್ಲಿ ಖರೋಷ್ಠಿ ಲಿಪಿಯ ಬಳಕೆಯಿರುವುದು ಇದೊಂದರಲ್ಲಿ ಮಾತ್ರ. ಸಂಖ್ಯೆಗಳನ್ನು ಸಂಕೇತಗಳಿಂದ ತೋರಿಸುವ ಕ್ರಮವಿತ್ತು. ಬ್ರಹ್ಮಗಿರಿಯ ಶಾಸನದಲ್ಲಿ ಅಶೋಕನು ಧರ್ಮ ಪ್ರಚಾರಕ್ಕೋಸ್ಕರ ಪ್ರವಾಸ ಮಾಡಿದ ದಿನಗಳು 256 ಅನ್ನು, 200, 50, 6 ಎಂಬ ಮೂರು ಸಂಖ್ಯೆಗಳಿಂದ ತೋರಿಸಿದೆ. ಅಂದರೆ 1–10 ಮತ್ತು 20, 30 ಹಾಗೂ 100, 200 ಇತ್ಯಾದಿ ಸಂಖ್ಯೆಗಳಿಗೆ ಪ್ರತ್ಯೇಕ ಪ್ರತ್ಯೇಕ ಸಂಖ್ಯೆಗಳಿದ್ದವೆಂದು ಹೇಳಬಹುದು.

ಈ ಕಾಲದಲ್ಲಿ ಈ ಪ್ರದೇಶದಲ್ಲಿ ರಚಿತವಾದ ಯಾವುದೇ ಸಾಹಿತ್ಯಕೃತಿಗಳು ಇದುವರೆಗೆ ಲಭ್ಯವಿಲ್ಲದಿದ್ದರೂ ರಾಮಾಯಣ, ಮಹಾಭಾರತ, ಬೌದ್ಧ ತ್ರಿಪಿಟಕಗಳು, ಹೆಚ್ಚಾಗಿ ಜಾತಕ ಕಥೆಗಳು, ಜೈನ ಸಿದ್ಧಾಂತಗಳು ಜನಪ್ರಿಯವಾಗಿದ್ದು, ಬರೆದಿಟ್ಟ ಈ ಕೃತಿಗಳು ಜನರಲ್ಲಿದ್ದಿರಬೇಕು. ಗಂಗ–ಕದಂಬರ ಕಾಲದ ಶಾಸನಗಳಲ್ಲಿ ಮನುಸ್ಮೃತಿ, ರಾಮಗೀತಾ, ಭೀಷ್ಮಗೀತಾ, ವಿದುರಗೀತಾ, ಸುಬಂಧು, ಕೌಟಿಲ್ಯನ ಅರ್ಥಶಾಸ್ತ್ರಗಳ ಉಲ್ಲೇಖ ಪದೇ ಪದೇ ಬರುತ್ತದೆ.

ಮೌರ್ಯ ಕಾಲದ ಕಲೆಯ ವಿಶಿಷ್ಟ ಲಕ್ಷಣ ಶೈಲಿಯನ್ನು ತೋರಿಸುವಂಥ ಯಾವುದೇ ವಸ್ತು ಅವಶೇಷಗಳು ಇತ್ತೀಚಿನವರೆಗೂ ಶೋಧವಾಗಿರಲಿಲ್ಲ. ಜಟಂಗರಾಮೇಶ್ವರದ ಕಿರುಬಂಡೆ ಶಾಸನದ ಕೆಳಗೆ ಬಾಹ್ಯರೇಖೆಯಲ್ಲಿ ಮೂಡಿಸಿದ ಪಾದದ್ವಯಗಳ ಚಿತ್ರವಿದೆ. ಬಹುಮಟ್ಟಿಗೆ ಪವಿತ್ರ ಬುದ್ಧಪಾದವಿರಬೇಕು. ಇದನ್ನು ಸಾಂಕೇತಿಕವಾಗಿ ತೋರಿಸಲಾಗಿದೆ. ತರುವಾಯ ಸಾತವಾಹನ ಕಾಲದ ಸನ್ನತಿಯ ಬುದ್ಧಪಾದ ಶಿಲ್ಪಗಳಿಗೆ ಇದು ಪೂರ್ವಭಾವಿ ಹಂತವಾಯಿ ತೆಂದು ಹೇಳಬಹುದು.

**ವಾಸ್ತುಶಿಲ್ಪ:** ಚಂದ್ರಗುಪ್ತನ ಅರಮನೆಯ ವರ್ಣನೆಯನ್ನು ಕಂಡ ಮೆಗಾಸ್ತನೀಸನ ಬರೆಹದಿಂದ ಅಶೋಕನ ಅರಮನೆಯ ಭವ್ಯತೆಯನ್ನು ಚೀನಿ ಯಾತ್ರಿಕ ಫಾ–ಹಿಯಾನ್ ಕೊಂಡಾಡಿದ್ದಾನೆ. ಆದರೆ ಮರಮುಟ್ಟುಗಳಿಂದ ನಿರ್ಮಿತವಾದ ಮೌರ್ಯರಚನೆಗಳು ಬಹು ಕಾಲ ಉಳಿದುಬರಲಿಲ್ಲ. ಅಶೋಕನ ಕಾಲದಲ್ಲಿ ವಾಸ್ತುಶಿಲ್ಪದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಆರಂಭವಾಯಿತು. ಈತ ತನ್ನ ಶಾಸನಗಳಲ್ಲಿ ಹೇಳಿಕೊಂಡಂತೆ ವಾಸ್ತುಶಿಲ್ಪ ನಿರ್ಮಾಣಕ್ಕೆ ದೊಡ್ಡ ಪ್ರಮಾಣದಲ್ಲಿ ಕಲ್ಲಿನ ಮಾಧ್ಯಮವನ್ನು ಆರಿಸಿಕೊಂಡಿದ್ದು ಅವು ಬಹುಕಾಲ ಉಳಿಯಲೆಂದು. ಅಶೋಕ ಅನೇಕ ಸ್ತೂಪಗಳನ್ನು ಕಟ್ಟಿಸಿದನೆಂದು ಬೌದ್ಧ ಗ್ರಂಥಗಳಿಂದ ತಿಳಿದುಬರುತ್ತದೆ. ಇವನ ಕಾಲದಲ್ಲಿ ಸೃಷ್ಟಿಸಿದ ಬಾರಾಬರ್ ಮತ್ತು ಸುದಾಮ ಬೆಟ್ಟದ ಗುಹಾರಚನೆಗಳು ಒಂದೇ ಬಂಡೆಯಲ್ಲಿ ಕೊರೆಯಲಾದ ಸರಳ ರಚನೆಗಳು. ಸಾಂಚಿ, ಸಾರನಾಥಗಳಲ್ಲಿ ಅಶೋಕ ಸ್ತೂಪಗಳನ್ನು ಕಟ್ಟಿಸಿದ ಸಾಂಚಿ ಸ್ತೂಪ ಮೂಲತಃ ದೊಡ್ಡ ಪ್ರಮಾಣದ ಇಟ್ಟಿಗೆಯ ಕಟ್ಟಡ. ಮೌರ್ಯಕಾಲದ ಪ್ರಧಾನ ವಾಸ್ತುಕೃತಿಗಳೆಂದರೆ ಸ್ತಂಭಗಳು. ಸು.30 ಸ್ತಂಭಗಳು ದೊರೆತಿದ್ದು, ಒಂದೊಂದು 40–50 ಟನ್ ತೂಗುತ್ತವೆ. ಇವುಗಳ ನಯನುಣುಪು ನಿಬ್ಬೆರಗುಗೊಳಿಸುತ್ತದೆ. ರಾಮಪೂರ್ವ, ಸಾರನಾಥ, ಸಾಂಚಿ, ಸಂಕೀಸ ಮುಂತಾದೆಡೆ ಇವು ಕಾಣಸಿಗುತ್ತವೆ. ಇವುಗಳ ಮೇಲಿನ ಪ್ರಾಣಿಶಿಲ್ಪ ಹಾಗೂ ಲತಾವಿನ್ಯಾಸ ನಯನಮನೋಹರವಾಗಿದೆ. ಅಶೋಕನ ಸಾರನಾಥ ಸ್ತಂಭಶಿಲ್ಪ ಸ್ವತಂತ್ರ ಭಾರತದ ರಾಷ್ಟ್ರಚಿಹ್ನೆಯಾಗಿದೆ. ಧೌಲಿಯ ಆನೆಯ ಉಬ್ಬುಶಿಲ್ಪ ಗಮನಾರ್ಹವಾದ್ದು. (ಎಚ್.ಎಂ.ಎಸ್.ಆರ್.)

**ಚಿತ್ರಿತ ವೃತ್ತಶಿಲಾಫಲಕ:** ಸನ್ನತಿಯ 1993–95ರ ಉತ್ಖನನದಲ್ಲಿ ಸಾತವಾಹನ ಪೂರ್ವದ ಅತ್ಯಂತ ಕೆಳಗಿನ (ಪ್ರಾಚೀನ) ಪದರಿನಲ್ಲಿ ಮೌರ್ಯ–ಪೂರ್ವದ ಮತ್ತು ಮೌರ್ಯ ಕಾಲೀನ ಔತ್ತರೇಯ ಮೆರುಗಿನ ಕಪ್ಪು ಲೇಪನದ ಪಾತ್ರೆಚೂರುಗಳೊಡನೆ ದೊರಕಿದ ಒಂದು ಅಪರೂಪದ ಹೊಳಪಾದ ಕೆಂಪು ಮರಳುಕಲ್ಲಿನ ಚಿತ್ರಿತ ವೃತ್ತಫಲಕ ಒಂದು ಮಹತ್ತ್ವಪೂರ್ಣ ಕಲಾಕೃತಿ. ಸು.15 ಸೆಂಮೀ ವ್ಯಾಸದ ಈ ಫಲಕ ಸು.1 ಸೆಂಮೀ ನಷ್ಟು ಹಬ್ಬಿದೆ. ಮಧ್ಯದಲ್ಲಿ ಸಮಾನಾಂತರದಲ್ಲಿ ಕೇಂದ್ರದಿಂದ ಅಂಚಿನವರೆಗೂ ಉದ್ದವಿರುವ

ಮೂರು ತಾಳೆ ಮರದಂಥ ಮರಗಳಿವೆ. ಇವುಗಳ ನಡುವೆ ನಿಂತ ಭಂಗಿಯಲ್ಲಿಯ (ನಗ್ನ?) ಒಂದು ಸ್ತ್ರೀ ಉಬ್ಬುಶಿಲ್ಪವಿದ್ದು, ವಿರಳವಾಗಿ ಆಭರಣಗಳಿಂದ ಅಲಂಕೃತವಾಗಿದೆ. ನೀಳ ಶರೀರ, ಅತಿ ಕಿರಿದಾದ ಸೊಂಟ, ವಿಶಾಲವಾದ ನಡುವಿನ ಕೆಳಭಾಗವಿದ್ದು, ಒಬ್ಬ ಸುಂದರ ಸ್ತ್ರೀಯ ಮಾತೃತ್ವದ ಲಕ್ಷಣಗಳನ್ನು ಮನಮುಟ್ಟುವಂತೆ ರೂಪಿಸಲಾಗಿದೆ. ಕೈಗಳೆರಡನ್ನೂ ಬೀಸು ಮಾಡಲಾಗಿದೆ. ಕಾಲುಗಳ ಅಕ್ಕ-ಪಕ್ಕದಲ್ಲಿ ಒಂದೊಂದು ಹಂಸವಿದೆ. ತಲೆಯ ಬದಿಗಳಲ್ಲಿ ಜಿಂಕೆ-ಟಗರು, ಕುದುರೆ-ಸಿಂಹ ಮತ್ತು ಆನೆ(?)ಇವೆ. ಅಲ್ಲದೆ ಒಂದೊಂದು ಪುಷ್ಪವಿದೆ. ಒಂದು ಭಾಗದಲ್ಲಿ ಪುಷ್ಪಚಿತ್ರದ ಬದಲು ಬ್ರಾಹ್ಮಿ ಅಕ್ಷರಮ ಇರುವಂತೆ ಕಾಣುತ್ತದೆ. ಇಂಥ ಚಿತ್ರಫಲಕಗಳು ಮೌರ್ಯಕಾಲದ ಸಾಂಸ್ಕೃತಿಕ ಅವಶೇಷಗಳೊಡನೆ ಇದ್ದವು. ಬಹುಶಃ ಇದು ಸಂತಾನಾಭಿವೃದ್ಧಿ, ಕಟ್ಟಳೆಗಳಿಗೆ ಸಂಬಂಧಪಟ್ಟ ಫಲಕವಿರಬಹುದೆಂಬುದು ತಜ್ಞರ ಅಭಿಪ್ರಾಯ.

ಈ ಕಾಲದ ದಕ್ಷಿಣ ಕರ್ನಾಟಕದ ಐತಿಹಾಸಿಕ ಚಿತ್ರ ತೀರ ಮಸುಕಾಗಿದ್ದು ಏನೂ ತಿಳಿಯದ ಹಾಗಿದೆ. ಆದರೆ ಕಾವೇರಿ ನದಿಬಯಲಿನ ತಿರುಮಕೂಡಲು ನರಸೀಪುರ, ಹೆಮ್ಮಿಗೆ, ಬನಹಳ್ಳಿ ಮೊದಲಾದೆಡೆಗಳಲ್ಲಿಯ ಉತ್ಖನನಗಳಲ್ಲಿ ದೊರೆತ ಪ್ರ.ಶ.ಪೂ.ಸು.3ನೆಯ ಶತಮಾನ, ಪ್ರ.ಶ.1-2ನೆಯ ಶತಮಾನದ ಜನ ವಾಸ್ತವ್ಯದ ಅವಶೇಷಗಳು ಹೇರಳವಾಗಿವೆ. ಇವೆಲ್ಲವೂ ಗ್ರಾಮೀಣ ಜನಸಾಮಾನ್ಯರ ದೈನಂದಿನ ಜೀವನದ ಹರುಕು-ಮುರುಕು ಸ್ಥೂಲ ಚಿತ್ರವನ್ನು ಕೊಡುತ್ತವೆ.

ಈ ಹಿಂದೆ ಚರ್ಚಿಸಿದಂತೆ ಅಶೋಕನ 12 ಮತ್ತು 13ನೆಯ ಬೃಹತ್ ಬಂಡೆಶಾಸನಗಳಲ್ಲಿ ಉಲ್ಲೇಖಿತವಾದ ದಕ್ಷಿಣ ಭಾರತದ ಚೋಳ, ಕೇರಳಪುತ, ಸತಿಯಪುತಗಳಲ್ಲಿ ಕೆಲವು ವಿದ್ವಾಂಸರ ಪ್ರಕಾರ ಕೊನೆಯದು ದಕ್ಷಿಣ ಕನ್ನಡ ಜಿಲ್ಲೆ ಭಾಗವಾಗಿದ್ದಲ್ಲಿ, ಬನವಾಸಿ ಸೇರಿದಂತೆ ದಕ್ಷಿಣ ಕರ್ನಾಟಕದ ಸ್ವಲ್ಪ ಭಾಗ ಅಶೋಕನ ಸಾಮ್ರಾಜ್ಯದಲ್ಲಿತ್ತೆಂದು ಹೇಳಲು ಸಾಧ್ಯ. ಆದರೆ ಈ ಶತಮಾನದ ಸು.80ರ ದಶಕದ ಆದಿಯಲ್ಲಿ ಬೆಳಕಿಗೆ ಬಂದ ಜಂಬೈಯ (ಧರ್ಮಪುರಿ ಜಿಲ್ಲೆ, ತಮಿಳುನಾಡು) ಪ್ರಶ.ಪೂ.3-2 ಶತಮಾನದ ಒಂದು ಶಾಸನದಲ್ಲಿ ಸ್ಪಷ್ಟವಾಗಿ ಸತಿಯಪುತ ಎಂದಿದೆ. ಆದ್ದರಿಂದ ಸತಿಯಪುತವು ಕೊಂಗುನಾಡು ಪ್ರದೇಶ ಎಂಬ ಒಂದು ವರ್ಗದ ವಿದ್ವಾಂಸರ ವಾದಕ್ಕೆ ಬಲ ಸಿಕ್ಕಂತಾಗಿದೆ. ಆದರೆ ಈ ಶಾಸನದಲ್ಲಿ ತಮಿಳು ವರ್ಣಮಾಲೆಯ ಒಂದೆರದು ವಿಶಿಷ್ಟ ಅಕ್ಷರಗಳೂ ಸಂಕೇತಗಳೂ ಇವೆಯೆಂಬ ಅನುಮಾನವಿದೆ. ಆದ್ದರಿಂದ ಈ ಶಾಸನವೂ ಮೌರ್ಯ ಕಾಲದ್ದೆಂದು ಗಟ್ಟಿಯಾಗಿ ಹೇಳಲು ಬರಲಾರದೆಂಬ ಅನುಮಾನ ವಿದೆ. ಇದರ ಹೊರತಾಗಿ ಶಾಸನ ಈ ದಿಶೆಯಲ್ಲಿ ತುಂಬ ಮಹತ್ತ್ವದ್ದು.

2ನೆಯ ಶತಮಾನದ ಟಾಲಮಿಯ ಎ ಗೈಡ್ ಟು ಜಿಯಾಗ್ರಫಿಯಲ್ಲಿ ಪೂನೋಟ ಎಂಬ ಒಂದು ಸ್ಥಳದ ಉಲ್ಲೇಖವಿದೆ. ಇದು ಇತಿಹಾಸಕಾಲದ ಪುನ್ನಾಟನಾಡು ಆಗಿರಬೇಕೆಂಬ ಅಭಿಪ್ರಾಯವಿದೆ. ಈ ಗುರುತಿಸುವಿಕೆ ಸರಿಯಾಗಿದ್ದಲ್ಲಿ ಆ ಕಾಲದಲ್ಲಿ ಪುನ್ನಾಟ ಒಂದು ಸ್ಥಳದ ಹೆಸರಾಗಿತ್ತು.ವ್ಯಾಪಾರ ವಾಣಿಜ್ಯ ವ್ಯವಹಾರಗಳಿಗೆ ಅದು ಪ್ರಸಿದ್ಧವಾಗಿತ್ತೆಂದು ತೋರುತ್ತದೆ. ಇದರಿಂದ ಕ್ರಮೇಣ ಆ ಪ್ರದೇಶಕ್ಕೂ ಆ ಸ್ಥಳದ ಹೆಸರೇ ಬಂತೆಂದು ಹೇಳಬಹುದು.

ಇತ್ತೀಚಿನ ತಲಕಾಡಿನ ಉತ್ಖನನದಲ್ಲಿ ಆದಿ ಇತಿಹಾಸ ಕಾಲದ ಸ್ತರಗಳಲ್ಲಿ ಕೃತಕ ರೋಮ್ (ದೇಶದ) ನಾಣ್ಯ, ಪ್ರಾಯಶಃ ಇಂಥ ಕೃತಕ ನಾಣ್ಯಗಳನ್ನು ತಯಾರು ಮಾಡುತ್ತಿದ್ದ ಸಣ್ಣ ಭಟ್ಟಿಯ ಹತ್ತಿರ ಸಿಕ್ಕಿದೆ. ಇವೆಲ್ಲ ಕೃತಕವಾಗಿದ್ದರೂ ತಲಕಾಡು ರೋಮ್ ದೇಶದ ವ್ಯಾಪಾರದಲ್ಲಿ ಭಾಗಿಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಬನವಾಸಿ ಪ್ರದೇಶಕ್ಕೆ ಅಶೋಕ ಬೌದ್ಧಧರ್ಮ ಪ್ರಚಾರಕ್ಕೆ ತನ್ನ ಬಂಧುಗಳನ್ನೂ ದೊಡ್ಡ ಸಂಖ್ಯೆಯಲ್ಲಿ ಬೌದ್ಧ ಭಿಕ್ಷುಗಳನ್ನೂ ಕಳುಹಿಸಿದ ಸಂಗತಿಯನ್ನು ಈಗಾಗಲೇ ಗಮನಿಸಲಾಗಿದೆ. ಅನಂತರ ಕಾಲದಲ್ಲಿ ಸಿಂಹಳ ದ್ವೀಪಕ್ಕೆ ಅಲ್ಲಿಯ ಅನುರಾಧಪುರ ಬೌದ್ಧ ಸ್ತೂಪ ಪ್ರತಿಷ್ಠಾಪನೆ ಸಮಾರಂಭದಲ್ಲಿ ಭಾಗವಹಿಸಲು ಬನವಾಸಿಯಿಂದ ದೊಡ್ಡ ಪ್ರಮಾಣದಲ್ಲಿ ಬೌದ್ಧ ಭಿಕ್ಷು ತಂಡ ಹೋಯಿತು. ಆದ್ದರಿಂದ ಬನವಾಸಿ ಪ್ರದೇಶದಲ್ಲಿ ಅಶೋಕನ ಕಾಲದಿಂದ 3ನೆಯ ಶತಮಾನದ ಅಂತ್ಯದವರೆಗೂ ಬೌದ್ಧಧರ್ಮ ಹೆಚ್ಚು ಅಭಿವೃದ್ಧಿಯಲ್ಲಿದ್ದಿರ ಬೇಕು. ಆದರೆ ಇದುವರೆಗೆ ಆಕಸ್ಮಿಕವಾಗಿ ಹಾಗೂ ವೈಜ್ಞಾನಿಕ ಉತ್ಖನನಗಳಲ್ಲಿ ಹಲವಾರು ಮಹತ್ತ್ವದ ಮೂರ್ತಿ ಶಿಲ್ಪಗಳು, ಇಟ್ಟಿಗೆಯ ಧಾರ್ಮಿಕ ಕಟ್ಟಡಗಳು ಸಿಕ್ಕಿದ್ದರೂ ಸನ್ನತಿಯಲ್ಲಿ ದ್ದಂತೆ ಇಲ್ಲಿ ಸಾತವಾಹನ ಪೂರ್ವ ಕಾಲದ ಬೌದ್ಧಧರ್ಮದ್ದಂತೂ ಇರಲಿ, ಯಾವುದೇ ಸಾಂಸ್ಕೃತಿಕ ಅವಶೇಷಗಳು ದೊರಕದಿರುವುದು ಒಂದು ಕುತೂಹಲಕಾರಿ ಪ್ರಶ್ನೆ. ಕೂಲಂಕಷ ಅನ್ವೇಷಣೆ, ವ್ಯಾಪಕ ಉತ್ಖನನಗಳಿಂದ ಇದನ್ನು ಬಿಡಿಸಲು ಸಾಧ್ಯವಾಗಬಹುದು.

ಕರ್ನಾಟಕದಲ್ಲಿ ಮೌರ್ಯ ಆಡಳಿತ ಒಂದು ರಾಜಕೀಯ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಹಾಕಿತು. ಒಳ್ಳೆ ತರಬೇತಿಯನ್ನು ಹೊಂದಿದ, ಸದಾ ಸಿದ್ಧವಿರುವ ಶಿಸ್ತಿನ ಸೈನ್ಯದ ಏರ್ಪಾಡು ಒಂದು ಮಹತ್ತ್ವದ ಬೆಳವಣಿಗೆ. ರಾಜ್ಯದ ವ್ಯಾಪಾರ-ವ್ಯವಹಾರಗಳಲ್ಲಿ ಅಧಿಕೃತ ನಾಣ್ಯ ಚಲಾವಣೆ ಆರಂಭವಾಯಿತು. ಆಗಿನ ಭಾರತ ದೇಶದ ಯಾವುದೇ ಪ್ರದೇಶದೊಡನೆ ಸಂಬಂಧ ವ್ಯವಹಾರವನ್ನು ಸಮರ್ಥವಾಗಿ ಮತ್ತು ವೇಗವಾಗಿ ನಡೆಸಲು ಲಿಪಿಯ ವ್ಯಾಪಕ ಬಳಕೆಯ ಅಗತ್ಯವಿತ್ತು. ಇಂಥ ಸಂದರ್ಭದಲ್ಲಿ ಮೌರ್ಯ ಸಾಮ್ರಾಜ್ಯ ಪತನದ ಹಂತದಲ್ಲಿ ಈಗಿನ ಮಹಾರಾಷ್ಟ್ರ ಭಾಗದಲ್ಲಿ ಪ್ರ.ಶ.ಪೂ.ಸು.1ನೆಯ ಶತಮಾನದಲ್ಲಿ ಸಾತವಾಹನರು ತಮ್ಮ ರಾಜ್ಯ ಕಟ್ಟಲು ಹವಣಿಸಿದರು. ಕ್ರಮೇಣ ಉತ್ತರ ಕರ್ನಾಟಕದ ಬಳ್ಳಾರಿ ಪ್ರದೇಶದಲ್ಲಿ ಸಾತವಾಹನೀಹಾರ ಉದಯವಾಯಿತು. (ಎ.ಎಸ್.)

**ಮ್ಯಾಕ್ಸ್ ಮುಲರ್, ಫ್ರೆಡ್ರಿಕ್:** 1823-1900. ಅಂತಾರಾಷ್ಟ್ರೀಯ ಖ್ಯಾತಿಯ ಪ್ರಾಚ್ಯ ವಿದ್ಯಾಸಂಶೋಧಕ ಹಾಗೂ ವೇದವಿದ್ಯಾಕೋವಿದ. ಹುಟ್ಟಿನಿಂದ ಜರ್ಮನಿಯವ ನಾದರೂ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವನ್ನು ತನ್ನ ಕಾರ್ಯಕ್ಷೇತ್ರವಾಗಿ ಮಾಡಿಕೊಂಡ. ತಂದೆ ಜರ್ಮನ್ ಭಾಷೆಯ ಖ್ಯಾತ ಕವಿ ವಿಲ್ಹೆಲ್ಮ್ ಮುಲರ್ (1794-1827). ಲೀಪ್‌ಜಿಗ್ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾಷೆಗಳ ಅಧ್ಯಯನ ಮಾಡಿ ಇಪ್ಪತ್ತನೆಯ ವಯಸ್ಸಿನಲ್ಲೇ ಡಾಕ್ಟೊರೇಟ್ ಪದವಿ ಗಳಿಸಿದ. ಮುಂದೆ ಭಾಷಾವಿಜ್ಞಾನ, ತತ್ತ್ವಶಾಸ್ತ್ರಗಳಲ್ಲಿ ಅಧ್ಯಯನ ಮುಂದುವರಿಸಿ, 1845ರಲ್ಲಿ ಪ್ಯಾರಿಸ್ ನಗರದಲ್ಲಿ ಸಂಸ್ಕೃತ ಪಂಡಿತನಾಗಿದ್ದ ಯೂಜಿನ್ ಬರ್ನೌಫರ ಸಂಪರ್ಕದಿಂದ ವೇದ, ಅವೆಸ್ತ ಮುಂತಾದ ಪ್ರಾಚೀನ ಧರ್ಮಗ್ರಂಥಗಳ



ವಿಶೇಷಾಭ್ಯಾಸ ನಡೆಸಿದ. ಅಲ್ಲಿ ಇವನ ಸಹಪಾಠಿಗಳಾಗಿದ್ದವರು ರುಡಾಲ್ಫ್ ರೋಟ್, ಥಿಯೋಡೋರ್ ಗೋಲ್ಡ್ ಸ್ಟುಕರ್ ಮೊದಲಾದ ಮೇಧಾವಿಗಳು.

ಬರ್ನೌಫರ ಸೂಚನೆಯಂತೆ ಮ್ಯಾಕ್ಸ್ ಮುಲರ್ ಋಗ್ವೇದ ಸಂಹಿತೆಯ ಪ್ರಥಮ ಮುದ್ರಣದ ಪ್ರಯತ್ನ ಕೈಗೊಂಡ. ಇದಕ್ಕಾಗಿ ಋಗ್ವೇದದ ಮೂಲಪಾಠ ಹಾಗೂ ಸಾಯಣ ಭಾಷ್ಯಗಳ ಅನೇಕ ಹಸ್ತಪ್ರತಿಗಳನ್ನು ಸಂಪಾದಿಸಿ ಪಾಠ ನಿರ್ಣಯಕಾರ್ಯ ನಡೆಸಿದ. ಇದರ ವೆಚ್ಚವನ್ನು ಈಸ್ಟ್ ಇಂಡಿಯ ಕಂಪನಿ ವಹಿಸಿಕೊಂಡಿತು. ಕೆಲಕಾಲ ಲಂಡನ್‌ನಲ್ಲೇ ಇದ್ದರೂ ಈ ಋಗ್ವೇದ ಸಂಪುಟಗಳು ಆಕ್ಸ್‌ಫರ್ಡ್ ನಗರದ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದ ಕಾರಣ ಆಕ್ಸ್‌ಫರ್ಡಿಗೇ ಹೋಗಬೇಕಾಯಿತು. 1849ರಲ್ಲಿ ಋಗ್ವೇದ - ಮೊದಲ ಸಂಪುಟ, ಸಾಯಣಭಾಷ್ಯಸಮೇತವಾಗಿ ಹೊರಬಂದಿತು. ಹೀಗಾಗಿ ಆಕ್ಸ್‌ಫರ್ಡ್‌ಗೆ ಹೋದ ಮುಲರ್ ಜೀವಮಾನ ಪರ್ಯಂತ ಅಲ್ಲಿಯೇ ಉಳಿದ. ಅಲ್ಲಿ ಆಧುನಿಕ ಐರೋಪ್ಯ ಭಾಷಾಪ್ರಾಧ್ಯಾಪಕನಾಗಿ ಸೇರಿದರೂ 1853ರಲ್ಲಿ ಬೋಡೀಲಿಯನ್ ಗ್ರಂಥಭಂಡಾರಿಯ ಹುದ್ದೆ ಪಡೆದ. ಆ ಹುದ್ದೆಯಲ್ಲಿ 1863ರ ತನಕವೂ ಮುಂದುವರಿದ. ಅನಂತರ ಮತ್ತೆ ಆ ಸ್ಥಾನಕ್ಕೆ ಆಯ್ಕೆಯಾಗಿ 1894ರಲ್ಲಿ ವಿಶ್ರಾಂತಿ ಪಡೆದ.

1859ರಲ್ಲಿ ಮ್ಯಾಕ್ಸ್ ಮುಲರ್ ಇಂಗ್ಲೆಂಡಿನ ಜಾರ್ಜಿಯಾನ ಅದಿಲೇಡ್ ಎಂಬಾಕೆಯನ್ನು ಮದುವೆಯಾದ. ಅದೇ ವರ್ಷ ಪ್ರಾಚೀನ ಸಂಸ್ಕೃತ ಸಾಹಿತ್ಯ ಚರಿತ್ರೆ (ಹಿಸ್ಟರಿ ಆಫ್ ಏನ್ಷಿಯಂಟ್ ಸ್ಯಾನ್ಸ್‌ಕ್ರಿಟ್ ಲಿಟರೇಚರ್) ಎಂಬ ಪ್ರಮುಖ ಗ್ರಂಥವನ್ನು ಪ್ರಕಟಿಸಿದ. ಆ ಗ್ರಂಥದ ವ್ಯಾಪ್ತಿ ಕೇವಲ ವೇದಕಾಲಕ್ಕೆ ಸೀಮಿತವಿದ್ದರೂ ವೇದ ಗ್ರಂಥಗಳ ಕಾಲನಿರ್ಣಯದ ವಿಷಯದಲ್ಲಿ ಅಮೂಲ್ಯವಾದ ಸೂಚನೆಗಳನ್ನು ಒಳಗೊಂಡಿದೆ. ಈ ಗ್ರಂಥರಚನೆಗಾಗಿ ಮ್ಯಾಕ್ಸ್ ಮುಲರ್ ಇನ್ನೂ ಅಚ್ಚಾಗದಿದ್ದ ಹಸ್ತಪ್ರತಿಗಳ ಅಪಾರ ರಾಶಿಯನ್ನೇ ಶೋಧಿಸಿದ.

ಭಾಷಾವಿಜ್ಞಾನವನ್ನು ಕುರಿತು ರಾಯಲ್ ಇನ್‌ಸ್ಟಿಟ್ಯೂಟ್ ಸಂಸ್ಥೆಯಲ್ಲಿ 1861-63ರಲ್ಲಿ ಉಪನ್ಯಾಸಗಳನ್ನು ನೀಡಿ ಮಹಾವಿದ್ವಾಂಸನೆಂಬ ಖ್ಯಾತಿಗೆ ಪಾತ್ರನಾದ. ತೌಲನಿಕ ಭಾಷಾವಿಜ್ಞಾನ ದಲ್ಲಿ ಕೆಲಸ ಮಾಡಿದ. 19ನೆಯ ಶತಮಾನದ ವಿದ್ವಾಂಸರಲ್ಲೆಲ್ಲ ಇವನಿಗೆ ಅಗ್ರಮಾನ್ಯತೆ ಸಲ್ಲುವಂತಾಗಲು ಇವನ ಭಾಷೆಯ ಸೊಬಗೂ ಒಂದು ಕಾರಣ. ಶಬ್ದ ಮತ್ತು ಅರ್ಥಗಳ ಸಂಬಂಧ ಎಷ್ಟೊಂದು ಗಾಢ ಎಂಬುದನ್ನು ಇವನ ಇನ್ನೊಂದು ಗ್ರಂಥ ಭಾಷಾವಿಜ್ಞಾನ (1887) ಎತ್ತಿ ತೋರಿಸುತ್ತದೆ. ಈ ಗ್ರಂಥಗಳ ಜನಪ್ರಿಯತೆಯಿಂದಾಗಿ ಮ್ಯಾಕ್ಸ್ ಮುಲರ್‌ನ ಸಲುವಾಗಿಯೇ ತೌಲನಿಕ ಭಾಷಾವಿಜ್ಞಾನ ಪ್ರಾಧ್ಯಾಪಕ ಪೀಠವೊಂದು ಆಕ್ಸ್‌ಫರ್ಡಿನಲ್ಲಿ ಸ್ಥಾಪಿತವಾಯಿತು (1868); ಆ ಪೀಠವನ್ನು ಇವನು 1875 ರ ತನಕ ಅಲಂಕರಿಸಿದ್ದ. ಜರ್ಮನಿಯ ಸ್ಟ್ರಾಸ್‌ಬರ್ಗ್ ವಿಶ್ವವಿದ್ಯಾಲಯ ಇವನಿಗೆ ಸಂಸ್ಕೃತ ಪ್ರಾಧ್ಯಾಪಕ ಪದವಿಗಾಗಿ ಆಹ್ವಾನಿಸಿತು (1879). ಆ ಹುದ್ದೆಯನ್ನು ಸ್ವೀಕರಿಸಿದ. ಅಲ್ಲಿ ಒಂದು ಬೇಸಗೆ ಅವಧಿಯ ಕಾಲ ಉಪನ್ಯಾಸಗಳನ್ನು ನೀಡಿದ. ಅದರಿಂದ ಬಂದ ಗೌರವ ಧನವನ್ನು ಸಂಸ್ಕೃತ ವಿಷಯದಲ್ಲಿ ಶಿಷ್ಯವೃತ್ತಿಗಳಿಗಾಗಿ ದತ್ತಿಯೆಂದು ಆ ವಿಶ್ವವಿದ್ಯಾಲಯಕ್ಕೇ ದಾನ ಮಾಡಿ ಆಕ್ಸ್‌ಫರ್ಡಿಗೆ ಹಿಂದಿರುಗಿದ.

ತೌಲನಿಕ ದೇವತಾರಹಸ್ಯವಿಜ್ಞಾನಶಾಸ್ತ್ರಕ್ಕೂ ಇವನೇ ಜನಕ ಎನ್ನುವಂತಾಯಿತು. ಭಾಷಾ ಪ್ರತಿಬಿಂಬದ ಮಾಧ್ಯಮದಿಂದ ಪೌರಾಣಿಕ ದೇವತಾ ಕಲ್ಪನೆಗಳ ಮೂಲರೂಪವನ್ನ ರಿಯಲು ಸಂಶೋಧನೆ ನಡೆಸಿ, ಅನೇಕ ಪ್ರಬಂಧಗಳನ್ನು ಬರೆದ.

ತೌಲನಿಕ ದೇವತಾ ರಹಸ್ಯ ವಿಜ್ಞಾನದಂತೆ ವಿವಿಧ ಮತಧರ್ಮಗಳ ಸಂಶೋಧನೆಗೂ ಮ್ಯಾಕ್ಸ್‌ಮುಲರ್ ಮೊದಲಿಗ. 1870ರಲ್ಲಿ ಮತ ಧರ್ಮ-ವಿಜ್ಞಾನ ಎಂಬ ಶೀರ್ಷಿಕೆಯಿಂದ ಉಪನ್ಯಾಸಗಳನ್ನು ಆರಂಭಿಸಿದ. ಧರ್ಮ ಪ್ರಚಾರ ಸಂಸ್ಥೆಗಳು ಎಂಬ ಬಗ್ಗೆ 1873ರಲ್ಲೂ ಮತಧರ್ಮದ ಉತ್ಪತ್ತಿ ಮತ್ತು ವಿಕಾಸ ಎಂಬ ಬಗೆಗೆ 1878ರಲ್ಲೂ (ಹಿಬ್ಬರ್ಟ್ ಉಪನ್ಯಾಸಗಳು)

ಮತ್ತು ಮತಧರ್ಮಗಳ ವಿವಿಧಾಂಕಗಳ ಬಗ್ಗೆ 1892ರಲ್ಲೂ (ಗಿಫರ್ಡ್ ಉಪನ್ಯಾಸಗಳು) ಇವನು ಮಾಡಿದ ಉಪನ್ಯಾಸಗಳು ಇಂದಿಗೂ ಅಮೋಘ ಎನಿಸುವಂತೆ ಬೋಧ ಪ್ರದವಾಗಿವೆ. ಈ ಎಲ್ಲ ವಿದ್ವತ್ ಸಾಧನೆಗಳನ್ನೂ ಮೀರಿದ ಮಹಾಸಾಧನೆಯೆಂದರೆ ಇವನು 1875ರಲ್ಲಿ ತಾನೇ ಸಂಪಾದಕತ್ವ ವಹಿಸಿ ಆರಂಭಿಸಿದ ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್ ಎಂಬ ಗ್ರಂಥಮಾಲೆ. ಇದರ ಪ್ರಕಾಶನ ಸಂಸ್ಥೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಮುದ್ರಣಾಲಯ. ಕ್ರೈಸ್ತಧರ್ಮಕ್ಕಿಂತ ಭಿನ್ನವಾದ ಅನೇಕ ಮತಧರ್ಮಗಳ ಪ್ರಮುಖ ಗ್ರಂಥಗಳನ್ನೆಲ್ಲ ಪರಿಣತ ವಿದ್ವಾಂಸರಿಂದ ಇಂಗ್ಲಿಷ್‌ಗೆ ಅನುವಾದ ಮಾಡಿಸಿ ಈ ಗ್ರಂಥಮಾಲೆಯ ಸಂಪುಟಗಳಲ್ಲಿ ಒದಗಿಸಲಾಗಿದೆ. ವಿವಿಧ ಧರ್ಮಗಳ ತೌಲನಿಕ ಅಧ್ಯಯನಕ್ಕೆ ಈ ಗ್ರಂಥಮಾಲೆ ಇಂದಿಗೂ ಬಲು ಉಪಯುಕ್ತವಾಗಿದೆ. ಇದರಲ್ಲಿ ಸ್ಮೃತಿ, ಧರ್ಮಶಾಸ್ತ್ರ ಮುಂತಾದ ಕೃತಿಗಳನ್ನೂ ವೈದಿಕ, ಬೌದ್ಧ, ಜೈನ ಮುಂತಾದ ಮತಧರ್ಮಗಳಲ್ಲಿನ ಆಕರ ಗ್ರಂಥಗಳನ್ನೂ ಆಯ್ದು ಸಂಸ್ಕೃತ, ಪಾಳಿ, ಪ್ರಾಕೃತ ಮುಂತಾದ ಭಾಷೆಗಳಿಂದ ಅನುವಾದ ಮಾಡಲಾಗಿದೆ; ಅಷ್ಟೇ ಅಲ್ಲ ಚೀನಿ, ಅರೇಬಿಕ್, ಅವೆಸ್ತ, ಪಹ್ಲವಿ ಮುಂತಾದ ಭಾಷೆಗಳ ಧರ್ಮಗ್ರಂಥಗಳನ್ನೂ ಸೇರಿಸಿಕೊಳ್ಳಲಾಗಿದೆ. ಈ ಗ್ರಂಥಮಾಲೆಗೆ ಸ್ವಯಂ ಮ್ಯಾಕ್ಸ್ ಮುಲರ್ ವೇದ ಧರ್ಮದ ಬಗೆಗೆ ಮೂರು ಪೂರ್ಣ ಸಂಪುಟಗಳನ್ನು ಒದಗಿಸಿದ್ದಾನೆ. ಇವನ ಋಗ್ವೇದ–ಸಭಾಷ್ಯ ಸಂಪುಟಗಳು (ಪ್ರಥಮಾವೃತ್ತಿ 1873) ಸಂಸ್ಕೃತ ವಿದ್ವತ್ತಿನ ಕ್ಷೇತ್ರದಲ್ಲಿ ಮೇರುಕೃತಿ.

ಇಷ್ಟೊಂದು ಸಂಶೋಧನೆಯಲ್ಲಿ ಮುಳುಗಿದ್ದರೂ ಮ್ಯಾಕ್ಸ್ ಮುಲರ್‌ಗೆ ಸರಸ ಸಾಹಿತ್ಯ ರಚನೆಯಲ್ಲೂ ನಿರಂತರ ಆಸಕ್ತಿಯಿತ್ತು. ಇವನು ಬರೆದ ಅನೇಕ ಸಾಹಿತ್ಯ ಪ್ರಬಂಧಗಳು ಹಾಗೂ ಜೀವನ ಸ್ಮೃತಿಗಳು ಕ್ಲಿಪ್ಸ್ ಫ್ರಮ್ ಎ ಜರ್ಮನ್ ವರ್ಕ್‌ಷಾಪ್ ಎಂಬ ಶೀರ್ಷಿಕೆಯಲ್ಲಿ ನಾಲ್ಕು ಬೃಹತ್ ಸಂಪುಟಗಳಲ್ಲಿ ಪ್ರಕಟವಾಗಿವೆ. ಓಲ್ಡ್ ಲ್ಯಾಂಗ್ ಸೈನ್ (1898–99) ಎಂಬ ಎರಡು ಸಂಪುಟಗಳ ಪ್ರಕಟಣೆಯಿಂದಾಗಿ ಜರ್ಮನಿ, ಸ್ವೀಡನ್, ಇಂಗ್ಲೆಂಡ್, ಆಸ್ಟ್ರಿಯ, ಹಂಗರಿ, ರೋಮ್, ಲಿಸ್ಬನ್ ಮುಂತಾದೆಡೆಗಳ ವಿದ್ಯಾಸಂಸ್ಥೆಗಳ ಗೌರವ ಸದಸ್ಯತ್ವಗಳು ಇವನನ್ನು ಹುಡುಕಿಕೊಂಡು ಬಂದವು. ಇವನ ನೆನಪಿಗೆ ಸ್ಥಾಪಿತವಾದ ಒಂದು ನಿಧಿ ಇಂದಿಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾಷೆ–ಧರ್ಮ ಮುಂತಾದವುಗಳ ಅಧ್ಯಯನದ ಪೋಷಣೆಗೆ ಮೀಸಲಾಗಿ ಉಳಿದಿದೆ. ರಾಮಕೃಷ್ಣ ಪರಮಹಂಸರನ್ನು ಸಂದರ್ಶಿಸುವ ಆಕಾಂಕ್ಷೆ ಇವನಿಗಿತ್ತು. ಆದರೆ ಅದು ಕೈಗೂಡಲಿಲ್ಲ. (ಕೆ.ಕೆಎಂ.)

**ಮ್ಯಾಗ್ನಕಾರ್ಟ:** ಇಂಗ್ಲೆಂಡಿನ ದೊರೆ 2ನೆಯ ಜಾನ್ ಮತ್ತು ಸಣ್ಣ ಜಹಗೀರುದಾರರು, ಚರ್ಚಿನ ಪಾದ್ರಿಗಳು, ಸಾಮಾನ್ಯ ಪ್ರಜೆಗಳು ಇವರ ನಡುವೆ ಏರ್ಪಟ್ಟ ರಾಷ್ಟ್ರೀಯ ಒಪ್ಪಂದ. ಇದನ್ನು ಮಹಾಸನ್ನದು ಎಂದು ಕರೆಯಲಾಗಿದೆ. ಜಾನ್ (1191–1215) ಕ್ರೂರಿ, ನೀಚ, ಸ್ವೇಚ್ಛಾಚಾರಿ ಮತ್ತು ದುರ್ಬಲ ರಾಜನಾಗಿದ್ದ. ಅತಿಯಾದ ತೆರಿಗೆ ಭಾರದಿಂದ ರೊಚ್ಚಿಗೆದ್ದ ಪ್ರಜೆಗಳು ಮತ್ತು ಜಹಗೀರುದಾರರು ರಾಜನ ವಿರುದ್ಧ ದಂಗೆಯೆದ್ದರು. ಕ್ಯಾಂಟರ್‌ಬರಿ ಆರ್ಚ್ ಬಿಷಪ್ ಈ ಹೋರಾಟಕ್ಕೆ ಬೆಂಬಲ ನೀಡಿದ. ಇವರ ಹೋರಾಟಕ್ಕೆ ಸಾರ್ವಜನಿಕರ ಅಭಿಪ್ರಾಯವೂ ಅನುಕೂಲಕರವಾಗಿತ್ತು. ಈ ಹೋರಾಟ ಸಾರ್ವಭೌಮತ್ವವನ್ನು ನಾಶಪಡಿಸುವುದಕ್ಕೆ ಆಗಿರದೆ ತಮ್ಮ ಹಕ್ಕುಗಳನ್ನು ಪಡೆಯುವುದಾಗಿತ್ತು. ಕೊನೆಗೆ 1215ರಲ್ಲಿ ಇದಕ್ಕಾಗಿ ಸಿದ್ಧಪಡಿಸಿದ ಒಂದು ಒಪ್ಪಂದಕ್ಕೆ ದೊರೆ 2ನೆಯ ಜಾನ್ ಒಪ್ಪಿಗೆಯಿತ್ತು ಸಹಿ ಹಾಕಿದ. ಮಹಾಸನ್ನದು ಒಂದು ರೀತಿಯ ಊಳಿಗಮಾನ್ಯ ಪದ್ಧತಿಯ ದಾಖಲೆಯಾಗಿದ್ದರೂ ಸುಧಾರಣೆಗಳನ್ನು ಒಳಗೊಂಡಿದೆ. ಇದನ್ನು ಇಂಗ್ಲೆಂಡಿನ ಇತಿಹಾಸದಲ್ಲಿ ಪ್ರಥಮ ರಾಜಕೀಯ ಶಾಸನ ಬದ್ಧವಾದ ಹೋರಾಟದ ಸಂಕೇತವೆಂದು ಬಣ್ಣಿಸಲಾಗಿದೆ. ಇದು 63 ಉಪಪ್ರಕರಣಗಳನ್ನು ಒಳಗೊಂಡಿದೆ. ಇದರಡಿಯಲ್ಲಿ ಭೂಹಿಡುವಳಿದಾರರು, ಚರ್ಚು ಮತ್ತು ಪ್ರಜೆಗಳಿಗೆ ಭದ್ರತೆ ಮತ್ತು ಸ್ವಾತಂತ್ರ್ಯ ಒದಗಿತು.


ಚರ್ಕವರ್ತಿ 2ನೆಯ ಜಾನ್ ಮಹಾಸನ್ನದನ್ನು ಸಹಿ ಮಾಡುತ್ತಿರುವುದು

ಈ ಸನ್ನದಿನ ಮಹತ್ತ್ವದ ಭಾಗಗಳು ಹೀಗಿವೆ: ಇದರ 12ನೆಯ ಅಧ್ಯಾಯದಲ್ಲಿ ಗ್ರೇಟ್‌ಕೌನ್ಸಿಲ್‌ನ್ನು ಬಿಟ್ಟು ಒಡೆಯನು ಊಳಿಗ ತೆರ ಹಾಕುವಂತಿಲ್ಲ ಅಥವಾ ಸಹಾಯವಾಗಲಿ ಮಾಡುವಂತಿಲ್ಲ. 14ನೆಯ ಅಧ್ಯಾಯದಲ್ಲಿ ಗ್ರೇಟ್‌ಕೌನ್ಸಿಲ್‌ನ ಸ್ವರೂಪ ಮತ್ತು ಅಧಿಕಾರಗಳ ನಿರೂಪಣೆಯಿದೆ. ಅಧ್ಯಾಯ 39ರಲ್ಲಿ ಯಾವ ಸ್ವತಂತ್ರ ಪ್ರಜೆಯನ್ನೂ ಬಂಧಿಸುವುದು, ಸೆರೆಗೆ ಹಾಕುವುದು, ಉಚ್ಚಾಟಿಸುವುದು, ದೇಶಭ್ರಷ್ಟ ಗಡಿಪಾರು ಅಥವಾ ಪೀಡಿಸುವುದಾಗಲಿ, ಆ ಪ್ರದೇಶದ ನ್ಯಾಯ ಪದ್ಧತಿಯಿಂದ ನ್ಯಾಯ ಬದ್ಧವಾದ ವಿಚಾರಣೆ ಮತ್ತು ತೀರ್ಮಾನವಿಲ್ಲದೆ ಮಾಡುವ ಹಾಗಿಲ್ಲ. ಅಧ್ಯಾಯ 40ರಲ್ಲಿ ವ್ಯಕ್ತಿಯ ಹಕ್ಕನ್ನಾಗಲಿ ಅಥವಾ ನ್ಯಾಯವನ್ನಾಗಲಿ ಯಾರೂ ನಿರಾಕರಿಸುವಂತಿಲ್ಲ. ಇದು ರಾಜನಿಂದ ಬರೆಸಿಕೊಂಡ ಸನ್ನದು. ಹಿರಿಯ ಪಿಟ್ಟ್ ಇದನ್ನು ಇಂಗ್ಲೆಂಡಿನ ಸಂವಿಧಾನದ ಬೈಬಲ್ ಎಂದು ಹೇಳಿದ್ದಾನೆ. ಇದು ಪ್ರಜಾಪ್ರಭುತ್ವಕ್ಕೆ ಹಾಕಿದ ತಳಹದಿ, ಸ್ವಾತಂತ್ರ್ಯದ ಸಾಕ್ಷಾತ್ಕಾರ. ಇದು ಇಂಗ್ಲಿಷ್ (ಇಂಗ್ಲೆಂಡ್) ಸಂವಿಧಾನದ ಮೊದಲ ಮಹಾದಾಖಲೆಯೆನಿಸಿದೆ. (ಎನ್.ಎಲ್.)

**ಮ್ಯಾರಥಾನ್:** ಗ್ರೀಸಿನ ಅಥೆನ್ಸ್ ನಗರದ ಈಶಾನ್ಯದಲ್ಲಿ ಸು.40 ಕಿಮೀ ದೂರದಲ್ಲಿರುವ ಒಂದು ಕಿರಿದಾದ ಮೈದಾನ. ಗ್ರೀಕರೂ ಪರ್ಷಿಯನ್ನರೂ ಪ್ರ.ಶ.ಪೂ.490ರಲ್ಲಿ ಕಾದಾಡಿದ ಯುದ್ಧಭೂಮಿ. ಪರ್ಷಿಯದ ದೊರೆ ಡೇರಿಯಸ್‌ನ ವಿರುದ್ಧ ಅಯೋನಿಯನ್ನರು ದಂಗೆ ಎದ್ದರು. ಇದರಿಂದ ಕುಪಿತನಾದ ಡೇರಿಯಸ್ ಇವರನ್ನು ಅಡಗಿಸಲು ದೊಡ್ಡ ಸೈನ್ಯವನ್ನು ಕಳುಹಿಸಿದ. ಅಯೋನಿಯನ್ನರಿಗೆ ಅಥೆನ್ಸ್, ಎರಿಟ್ರಿಯದಿಂದ ಸಹಾಯ ದೊರಕಿದರೂ ಅವರು ಸೋತರು. ಡೇರಿಯಸ್ ದಂಗೆಕೋರರಿಗೆ ಸಹಾಯ ನೀಡಿದ ಅಥೆನ್ಸ್ ನಗರವನ್ನು ಮುತ್ತಲು ನಿರ್ಧರಿಸಿದ. ಮೊದಲ ದಂಡಯಾತ್ರೆ ನಿಷ್ಫಲವಾಯಿತು. ಮತ್ತೊಂದು ನೌಕಾ ಸೇನೆಯನ್ನು ಸಿದ್ಧಗೊಳಿಸಿದ. ಈ ಸೈನ್ಯ ಎರಿಟ್ರಿಯವನ್ನು ನಾಶಮಾಡಿ ಅಥೆನ್ಸ್ ಕಡೆಗೆ ತಿರುಗಿತು. ಅಥೆನ್ಸ್‌ಗೆ 40ಕಿಮೀ ದೂರದ ಮ್ಯಾರಥಾನ್ ಬಯಲುಪ್ರದೇಶದಲ್ಲಿ ಕಾಳಗ ನಡೆಯಿತು. ತಮ್ಮ ಎರಡು ಪಟ್ಟು ಸೈನಿಕರಿದ್ದ ಪರ್ಷಿಯನ್ನರನ್ನು ಗ್ರೀಕರು ಸೋಲಿಸಿದರು. ಈ ಕದನ ಇತಿಹಾಸದಲ್ಲಿ ಒಂದು ನಿರ್ಧಾರಕ ಕದನವೆಂದು ಪ್ರಸಿದ್ಧವಾಯಿತು. ಅಥೇನಿಯನ್ನರ ಧೈರ್ಯ, ಸಾಹಸ, ದೇಶಾಭಿಮಾನ ಎಲ್ಲರನ್ನೂ ಬೆರಗುಗೊಳಿಸಿತು.

ಗ್ರೀಕರು ಆಗ ತಮಗಿಂತಲೂ ಹೆಚ್ಚು ಸೈನ್ಯವಿದ್ದ ಪರ್ಷಿಯನ್ನರನ್ನು ಸೋಲಿಸಲು ಸ್ಪಾರ್ಟದ ನೆರವು ಕೋರಿದರು. ಅದಕ್ಕಾಗಿ ಅಥೆನ್ಸ್ ನಗರದ ವೇಗದ ಓಟಗಾರನಾಗಿದ್ದ ಫೀಡಿಪಿಡೆಸ್‌ನನ್ನು ಸಹಾಯದ ಯಾಚನೆಗೆ ಕಳುಹಿಸಿಕೊಟ್ಟರು. ಸು.240 ಕಿಮೀ ದೂರದ ಸ್ಪಾರ್ಟಕ್ಕೆ ಆತ ಓಡಿಹೋಗಿ ತನ್ನ ಕಾರ್ಯ ನೆರವೇರಿಸಿದ. ಆದರೆ ಸೇನೆ ಬರುವುದರೊಳಗೆ ಯುದ್ಧ ಮುಗಿದು ಗ್ರೀಕರು ಪರ್ಷಿಯನ್ನರನ್ನು ಸೋಲಿಸಿದ್ದರು. ತಮ್ಮ ಜಯದ ಸುದ್ದಿಯನ್ನು ತಿಳಿಸಲು ಅಲ್ಲಿಂದ ಫೀಡಿಪಿಡೆಸ್ ಮತ್ತೆ ಸು.36.75 ಕಿಮೀ ದೂರ ಓಡಿಬಂದು ತಮ್ಮ ಜನರಿಗೆ ಸುದ್ದಿ ತಿಳಿಸಿದ; ಅದರೆ ಒಂದೇ ಸಮನೆ ಹೆಚ್ಚುದೂರ ಓಡಿದ್ದರಿಂದ ಅಲ್ಲೇ ಕುಸಿದು ಬಿದ್ದು ಸತ್ತ. ಗ್ರೀಕರ ದೇಶಭಕ್ತಿ ಫೀಡಿಪಿಡೆಸ್‌ನ ಸಾಹಸದಿಂದ ಪ್ರಸಿದ್ಧವಾಯಿತು.

ಇಂದು ಮ್ಯಾರಥಾನ್ ಒಲಂಪಿಕ್ ಕ್ರೀಡೆಯ ಒಂದು ಭಾಗವಾಗಿದೆ. 42.195 ಕಿಮೀ ದೂರ ಮತ್ತು ಅದಕ್ಕೂ ಅಧಿಕ ದೂರದ ಓಟಕ್ಕೆ ಮ್ಯಾರಥಾನ್ ಎಂದು ಕರೆಯಲಾಗುತ್ತದೆ. (ಎಸ್.ಕೆ.ಕೆ.)

**ಮ್ಯಾಸಿಡೋನಿಯ:** ನೈರುತ್ಯ ಯುರೋಪಿನ ಬಾಲ್ಕನ್ ಪರ್ಯಾಯ ದ್ವೀಪದಲ್ಲಿರುವ ಒಂದು ಪರ್ವತಮಯ ಪ್ರದೇಶ. ಏಜಿಯನ್ ಸಮುದ್ರದ ವಾಯವ್ಯ ದಿಕ್ಕಿನ ಗ್ರೀಸ್ ಮತ್ತು ಯೂಗೋಸ್ಲಾವಿಯ ರಾಜ್ಯಗಳಲ್ಲಿ ಹಂಚಿಹೋಗಿದೆ. ರಾಜಧಾನಿ ಗ್ರಿವೆನಾ. ಯೂಗೋಸ್ಲಾವಿಯ ಭಾಗದ ರಾಜಧಾನಿ ಸ್ಕಾಪ್‌ಯೆ.

ಪ್ರ.ಶ.ಪೂ.4ನೆಯ ಶತಮಾನದಲ್ಲಿ ಗ್ರೀಸಿನ ಉತ್ತರಕ್ಕಿದ್ದ ಮ್ಯಾಸಿಡೋನಿಯವನ್ನು ಆಳುತ್ತಿದ್ದ ಎರಡನೆಯ ಫಿಲಿಪ್ (ಪ್ರ.ಶ.ಪೂ.359–336) ಮ್ಯಾಸಿಡೋನಿಯ ಸಾಮ್ರಾಜ್ಯದ ಸ್ಥಾಪಕ. ಈತ ತಮ್ಮತಮ್ಮಲ್ಲಿ ಬಡಿದಾಡುತ್ತಿದ್ದ ಗ್ರೀಕ್ ನಗರ ರಾಜ್ಯಗಳನ್ನು ಗೆದ್ದು ಗ್ರೀಸ್ ದೇಶವನ್ನು ಒಟ್ಟುಗೂಡಿಸಿ ತನ್ನ ಅಧೀನದಲ್ಲಿಟ್ಟುಕೊಂಡ. ಅಲ್ಲದೆ ಪರ್ಷಿಯ ಸಾಮ್ರಾಜ್ಯವನ್ನು ಗೆಲ್ಲುವ ಪೂರ್ಣ ಯೋಜನೆಯನ್ನು ತಯಾರಿಸಿದ್ದ. ಆದರೆ ಈತ ಆಕಸ್ಮಿಕ ಮರಣಹೊಂದಿದ. ಅವನ ಶೂರ ಮಗ ಅಲೆಕ್ಸಾಂಡರ್ (ಪ್ರ.ಶ.ಪೂ. 356–23) ತನ್ನ ತಂದೆಯ ಆಸೆಯನ್ನು ಪೂರ್ಣಗೊಳಿಸಿದ. ಈಜಿಪ್ಟ್, ಪರ್ಷಿಯ ಸಾಮ್ರಾಜ್ಯ ಮತ್ತು ಭಾರತದ ಪಂಜಾಬಿನವರೆಗೆ ಆಳುತ್ತಿದ್ದ ಅರಸರನ್ನು ಗೆದ್ದ. ಅಲೆಕ್ಸಾಂಡರನ ಮರಣದ ಕಾಲಕ್ಕೆ ಮ್ಯಾಸಿಡೋನಿಯ ಸಾಮ್ರಾಜ್ಯ ಗ್ರೀಸ್ ಮತ್ತು ಬಾಲ್ಕನ್ ರಾಷ್ಟ್ರಗಳು, ಏಷ್ಯಮೈನರ್, ಈಜಿಪ್ಟ್, ಸಿರಿಯ, ಪರ್ಷಿಯ ಮತ್ತು ಪಂಜಾಬಿನವರೆಗಿನ ಎಲ್ಲ ದೇಶಗಳನ್ನೊಳಗೊಂಡಿತ್ತು. ಇವನ ಮರಣದ ಅನಂತರ ಈ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸ್ವತಂತ್ರ ರಾಜ್ಯಗಳು ಉದಯವಾದವು. ಈ ರಾಜ್ಯಗಳ ಕೆಲವು ಅರಸರಲ್ಲಿ ಪ್ರಮುಖರಾದ ಫ್ರಿಜಿಯದ ಅರಸು ಆ್ಯಂಟಿಗೋನಸ್ ಮತ್ತು ಅವನ ಮಗ ಡೆಮೆಟ್ರಿಯಸ್, ಸಿರಿಯದ ಸೆಲ್ಯೂಕಸ್–ಇವರು ಸಾಮ್ರಾಜ್ಯವನ್ನು ಮುಂದುವರೆಸಲು ಮಾಡಿದ ಪ್ರಯತ್ನಗಳು ನಡೆಯಲಿಲ್ಲ. ಕಡೆಗೆ ಈ ಸಾಮ್ರಾಜ್ಯದ ಬಹುಭಾಗಗಳನ್ನು ರೋಮಿನ ಸೈನ್ಯಾಧಿಕಾರಿಗಳು ಗೆದ್ದುಕೊಂಡರು. ಪ್ರ.ಶ.ಪೂ.64ರಲ್ಲಿ ಸಿರಿಯ ರೋಮ್ ಸಾಮ್ರಾಜ್ಯಕ್ಕೆ ಸೇರಿತು. ಮುಂದೆ ಆಧುನಿಕ ಕಾಲದಲ್ಲಿ 1912–13 ರ ಬಾಲ್ಕನ್ ಯುದ್ಧಗಳ ಪರಿಣಾಮವಾಗಿ ಮ್ಯಾಸಿಡೋನಿಯ, ಸರ್ಬಿಯ (ಇಂದಿನ ಯೂಗೋಸ್ಲಾವಿಯ) ಗ್ರೀಸ್ ಮತ್ತು ಬಲ್ಗೇರಿಯ ದೇಶಗಳಲ್ಲಿ ಹಂಚಿಹೋಯಿತು. (ಕೆ.ವಿ.ಎಸ್‌ಯು.)

# ಯ

**ಯಂಗ್ ಶಾವೋ:** ಚೀನದ ನವಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಒಂದು ನೆಲೆ. ವಾಯವ್ಯ ಚೀನದ ಹೊನಾನ್ ಪ್ರಾಂತದ ಬೆಟ್ಟಪ್ರದೇಶಕ್ಕೆ ಸೀಮಿತವಾದ ನವಶಿಲಾಯುಗ ಸಂಸ್ಕೃತಿಯನ್ನೇ ಯಂಗ್ ಶಾವೋ ಸಂಸ್ಕೃತಿ ಎಂದು ಗುರುತಿಸಲಾಗಿದೆ. ಇದು ಆಗ್ನೇಯ ಏಷ್ಯ ಹಾಗೂ ಫಿಲಿಪೀನ್ಸ್‌ಗಳಿಗೆ ಹರಡಿರಬಹುದಾದರೂ ಮೂಲತಃ ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಟರ್ಕಿಯ ಮತ್ತು ಟಿಬೇಟಿಯನ್ನರ ಬುಡಕಟ್ಟು ಜನಾಂಗದವರಿಂದ ಉಂಟಾದ ಸಂಸ್ಕೃತಿ. ಆಂಡರ್ಸನ್ ಈ ಸಂಸ್ಕೃತಿಯ ಅನ್ವೇಷಕ.

ಇಲ್ಲಿ ಬಿಳಿ, ಕೆಂಪು ಹಾಗೂ ಕಪ್ಪುಬಣ್ಣದ ವಿನ್ಯಾಸಗಳ ಅಲಂಕರಣವಿರುವ ಮಣ್ಪಾತ್ರೆಗಳು ದೊರೆತಿವೆ. ಈ ವೈವಿಧ್ಯಮಯ ಮಣ್ಪಾತ್ರೆಗಳಲ್ಲಿ ಗಮನಾರ್ಹವೆನಿಸುವ ತ್ರಿಪಾದಿ ಪಾತ್ರೆಗಳು ಕಲಾತ್ಮಕವಾಗಿದ್ದು ಇತಿಹಾಸಕಾಲೀನ ಚೀನಿ ಕಲಾವರ್ಗಕ್ಕೆ ಸಂಬಂಧಿಸುತ್ತವೆಂದು ತಿಳಿಯಲಾಗಿದೆ. ಯಂಗ್ ಶಾವೋ ಸಂಸ್ಕೃತಿ ಪ್ರ.ಶ.ಪೂ.700ರ ವರೆಗೂ ಜೀವಂತವಾಗಿದ್ದು, ಅಲ್ಲಿಯ ಕುಂಬಾರರು ಚೀನಿ ಇತಿಹಾಸ ಕಾಲದ ಕಂಚಿನ ಲೋಹ ಪಾತ್ರೆಗಳನ್ನು ಅನುಕರಿಸಿ ಮಣ್ಪಾತ್ರೆಗಳನ್ನು ತಯಾರಿಸಿರಬಹುದೆಂದು ಊಹಿಸಲಾಗಿದೆ. ಈ ಸಂಸ್ಕೃತಿಯ ಜನರು ತಮ್ಮ ಉಪಕರಣಗಳಿಗೆ ಕಲ್ಲಿನ ಜೊತೆಗೆ ಜೇಡ್ ಶಿಲೆಯನ್ನೂ ಹೆಚ್ಚಾಗಿ ಬಳಸಿದ್ದಾರೆ. ಇಲ್ಲಿ ಆಯತಾಕಾರದ ಕೊಡಲಿಗಳು ಸಿಕ್ಕಿವೆ. ಜೊತೆಗೆ ಮೂಳೆಯ ಉಪಕರಣಗಳೂ ದೊರೆತಿವೆ. ಈ ಸಂಸ್ಕೃತಿಯ ಜನರಿಗೆ ವ್ಯವಸಾಯ ಹಾಗೂ ಪಶುಪಾಲನೆ ಪ್ರಧಾನ ಕಸಬುಗಳಾಗಿದ್ದವು. ಈ ಸಂಸ್ಕೃತಿಯ ಮಣ್ಪಾತ್ರೆಗಳಿಗೂ ಕುಕುಟೇನಿ ಮತ್ತು ಅನೌ ಮಣ್ಪಾತ್ರೆಗಳಿಗೂ ಇರುವ ಕೆಲವು ಸಾದೃಶ್ಯಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. (ಎಚ್.ಎಂ.ಎನ್.ಆರ್.)

**ಯಡಿಯಾಪುರ:** ಗುಲ್ಬರ್ಗ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ರಾಬರ್ಟ್ ಬ್ರೂಸ್‌ಫುಟ್ ಇದನ್ನು ಶೋಧಿಸಿದ. ಬೈಚಬಾಳುಹಳ್ಳದ ಕೊಳ್ಳದಲ್ಲಿ ಸುರಪುರ ನದಿ ಸಂಗಮದಲ್ಲಿ ಸು.200 ಚ.ಮೀ ವಿಸ್ತಾರದಲ್ಲಿ ಈ ಆದಿ ಹಳೆಶಿಲಾಯುಗ ಸಂಸ್ಕೃತಿಯ ನೆಲೆಯಿದೆ. ಇದರ ಪೂರ್ವಕ್ಕೆ ಧಾರವಾಡ ಪದರುಗಲ್ಲು ಬಂಡೆಗಳಿವೆ. ಉಳಿದ ಮೂರು ಬದಿಗಳಲ್ಲಿ ಬಿಳಿಬಣ್ಣದ ಗಪ್ಪು ಶೇದಿಶಿಲೆ ಜೇಡಿಗಲ್ಲುಗಳ ಪ್ರಸ್ತ ಪ್ರದೇಶವಿದೆ. ಇಲ್ಲಿಯ ಫತೇಪುರ ಹಳ್ಳದ ದಂಡೆಗಳ ಮೇಲಿರುವ ಹಲವಾರು ಅಶೂಲಿಯನ್ ವಸತಿ ನೆಲೆಗಳಲ್ಲಿ ಇದೂ ಒಂದು. ಇದು ಯಥಾಸ್ಥಾನದಲ್ಲಿರುವ ಪ್ರಾಥಮಿಕ ನೆಲೆ. ಉತ್ಖನನಗೊಂಡ ಸ್ಥಳದ ಪೂರ್ವ ಭಾಗದಲ್ಲಿ (ಸು.12 ಚ.ಮೀ ವಿಸ್ತಾರದಲ್ಲಿ) ಇರುವ ನೆಲಗಟ್ಟಿನಲ್ಲಿ ಕಂದುಬಣ್ಣದ ಚರ್ಟ್‌ನಲ್ಲಿ ಮಾಡಿದ ಸಣ್ಣ ಉಪಕರಣಗಳು ದೊರೆತಿವೆ. ಉಳಿದ ಭಾಗಗಳಲ್ಲಿ ಗ್ರಾನೈಟ್ ನೀಸ್ ಶಿಲೆಯಲ್ಲಿ ಮತ್ತು ಗರಸು ಕಣಗಳುಳ್ಳ ಒರಟು ಕಲ್ಲುಗಳಲ್ಲಿ ಮಾಡಿದ ಉಪಕರಣಗಳು ದೊರೆತಿವೆ. ಕೈಗೊಡಲಿಗಳು, ಬಹುಮುಖಿ ಉಪಕರಣಗಳು, ಮಚ್ಚು, ಕತ್ತಿ, ಸೀಳುಗತ್ತಿಗಳು, ಚಾಕುವಿನ ತರಹದ ಉಪಕರಣ ಮುಂತಾದವು ಇವೆ. ಹತ್ತಿರದ ಹುಣಸಗಿ ಕೊಳ್ಳದಲ್ಲಿ ಗಪ್ಪು ಶೇದಿಕಲ್ಲನ್ನು ಬಳಸಲಾಗಿದೆ. ಬೈಚಬಾಳು ಕೊಳ್ಳದ ಕೆಲ ನೆಲೆಗಳಲ್ಲಿ ನಶಿಸಿಹೋದ ಕಾಡುಕುದುರೆ, ದನ, ಆನೆಯ ಪಳೆಯುಳಿಕೆಗಳು ದೊರೆತಿವೆ.

ಹುಣಸಗಿ ಮತ್ತು ಬೈಚಬಾಳುಗಳಲ್ಲಿ ಅಶೂಲಿಯನ್ ಹಂತದ ವಸತಿಯ ಒಂದು ಮುಖ್ಯ ಸಂಗತಿಯೆಂದರೆ 20 ರಿಂದ 25 ವ್ಯಕ್ತಿಗಳು ಗುಂಪುಗೂಡಿ ಇರುತ್ತಿದ್ದುದು. ಇಲ್ಲಿರುವ ಒಟ್ಟು ನೆಲೆಗಳು ಮತ್ತು ಸಂಪನ್ಮೂಲಗಳ ಸಾಧ್ಯಾಸಾಧ್ಯತೆಗಳನ್ನು ಗಮನಿಸಿದರೆ ಈ ಎರಡೂ ಕೊಳ್ಳಗಳಲ್ಲಿ ಸು.500 ಜನ ವಾಸವಿದ್ದಿರಬಹುದೆಂದು ಅಂದಾಜು ಮಾಡಬಹುದು. ಹುಣಸಗಿ ಮತ್ತು ಬೈಚಬಾಳು ಕೊಳ್ಳಗಳಲ್ಲಿಯ ಅಶೂಲಿಯನ್ ನಿವೇಶನಗಳಾದ ಕಲದೇವನಹಳ್ಳಿ, ಸಡಬ ಮತ್ತು ತಗ್ಗಿನಹಳ್ಳಿಗಳ ಕಾಲಗಣನೆಯನ್ನು ಯುರೇನಿಯಮ್–ಥೋರಿಯಮ್ ತಂತ್ರದಿಂದ ಮಾಡಲಾಗಿದೆ. ಕಲದೇವನಹಳ್ಳಿಯ ನೀರಿನ ಚಿಲುಮೆಯಿಂದಾದ ಪದರಕ್ಕೆ ದೊರೆತ ಎರಡು ಕಾಲಮಾನಗಳು: 1,74,000 – 35,000 ವರ್ಷ ಮತ್ತು 1,66,000–15,000/13,000 ವರ್ಷಗಳು; ಸಡಬದ ದವಡೆಹಲ್ಲಿನ ಕಾಲ 2,90,405 – 20,999 – 18,186 ವರ್ಷಗಳು; ತಗ್ಗಿನಹಳ್ಳಿಯ ಅವಶೇಷಗಳ ಎರಡು ಕಾಲಮಾನಗಳು: 2,87,371 – 27,169 ಮತ್ತು 18,180 ವರ್ಷಗಳು. ಈ ಆಧಾರದ ಮೇಲೆ ಈ ಸಂಸ್ಕೃತಿ ಹಿಮಯುಗದ ಮಧ್ಯಭಾಗದಿಂದ ಅಂತ್ಯಭಾಗದ ಆರಂಭದ ಅವಧಿಯದು ಎಂದು ನಿಷ್ಕರ್ಷಿಸಬಹುದು. (ಎ.ಎಸ್.)

**ಯಹೂದಿ:** ಸೆಮಿಟಿಕ್ ಬುಡಕಟ್ಟಿಗೆ ಸೇರಿದ ಜನ. ಅರಬ್ ಮರುಭೂಮಿಯ ಉತ್ತರ ಭಾಗದಲ್ಲಿ ಅಲೆಮಾರಿಗಳಾಗಿ ಜೀವಿಸುತ್ತಿದ್ದವರು. ಇವರಿಗೊಬ್ಬ ಅಧಿಪತಿ ಇರುತ್ತಿದ್ದ. ಪ್ರ.ಶ.ಪೂ.ಸು.2 ಸಾವಿರ ವರ್ಷಗಳಿಗೂ ಹಿಂದೆ ತಮ್ಮ ಪ್ರಾಣಿಗಳಿಗೆ ಮೇವು ಸಂಪಾದಿಸಿಕೊಳ್ಳಲು ಅಲೆಯುತ್ತಿದ್ದರು. ಹೀಗೆ ಅಲೆಯುವಾಗ ಸಾಮಾನ್ಯವಾಗಿ ಝರಿಗಳ, ಓಯಸಿಸ್‌ಗಳ ಸಮೀಪ ಬೀಡುಬಿಡುತ್ತಿದ್ದರು. ಈ ಜನ ಸುಮೇರಿಯದ ಉರ್‌ನಿಂದ ಬಂದು ಪ್ಯಾಲಸ್ತೀನಿನಲ್ಲಿ ಪ್ರಶ.ಪೂ.ಸು.2200ರ ವೇಳೆಗೆ ನೆಲೆಸಿದರು. ಮೋಸೆಸ್‌ನ ಕಾಲದಲ್ಲಿ ಇವರು ಈಜಿಪ್ಟಿನಾದ್ಯಂತ ವ್ಯಾಪಿಸಿದ್ದರು. ಬೈಬಲಿನ ಕತೆಗಳಲ್ಲಿ ಮತ್ತು ಧಾರ್ಮಿಕ ಸಾಹಿತ್ಯಗಳಲ್ಲಿ ಮೋಸೆಸ್‌ನ ಬಗೆಗೆ ಅನೇಕ ವಿವರಗಳು ತಿಳಿಯುತ್ತವೆ. ಬಾಲ್ಯದಿಂದಲೂ ಸಾಮಾಜಿಕವಾಗಿ ಕೆಳಮಟ್ಟದಲ್ಲಿದ್ದ ಹಾಗೂ ಸಮಾಜದಿಂದ ಬಹಿಷ್ಕೃತರಾದವರ ಬಗೆಗೆ ಹೆಚ್ಚಿನ ಅನುಕಂಪ ಹೊಂದಿದ್ದ. ಯಹೂದಿಗಳ ಪೂರ್ವೇತಿಹಾಸವನ್ನು ತಿಳಿದಾಗ ಇವನಿಗೆ ತನ್ನ ಜನರ ಬಗೆಗೆ ಅತೀವ ಅನುಕಂಪ ಉಂಟಾಯಿತು. ಒಮ್ಮೆ ನಿಷ್ಕರುಣಿಯಾದ ಈಜಿಪ್ಟಿಗನೊಬ್ಬ ಯಹೂದಿ ಗುಲಾಮನನ್ನು ಚಾಟಿಯಿಂದ ಥಳಿಸುತ್ತಿದ್ದುದನ್ನು ಕಂಡು ಅತಿ ಕ್ರುದ್ಧನಾದ. ಅವನನ್ನು ಕೊಂದು ಪಲಾಯನಮಾಡಿ ಮರಳುಗಾಡಿನಲ್ಲಿ ಆಶ್ರಯ ಪಡೆದು ಮಿದಿಯಾನ್ ಎಂಬಲ್ಲಿ ತಂಗಿದ. ಅಲ್ಲಿ ಸಂಸಾರಿಯೂ ಆದ. ಆದರೆ ಯಹೂದಿಗಳನ್ನು ಮರೆಯಲು ಅವನಿಗೆ ಸಾಧ್ಯವಾಗಲಿಲ್ಲ. ಅವರನ್ನು ಮುಕ್ತಗೊಳಿಸಿ ಸ್ವತಂತ್ರ ರಾಷ್ಟ್ರವಾಗಿ ಸಂಘಟಿಸಬೇಕು, ಅವರಿಗೊಂದು ಧರ್ಮ, ದೇವರನ್ನು ಕಲ್ಪಿಸಬೇಕೆಂದು ತುಡಿಯುತ್ತಿದ್ದ. ಒಮ್ಮೆ ಪವಿತ್ರ ಹೋರೆಬ್ (ಮೌಂಟ್ ಸಿನಯ್) ಪರ್ವತದ ಬಳಿ ತನ್ನ ಮಾವನ ಕುರಿಗಳನ್ನು ಕಾಯುತ್ತಿದ್ದಾಗ ಇವನಿಗೆ ದೈವ ಸಾಕ್ಷಾತ್ಕಾರವಾಯಿತು. ಅದು ಇವನ ಹಾಗೂ ಯಹೂದಿ ಜನರ ಭವಿಷ್ಯವನ್ನು ರೂಪಿಸಿತು. ಮುಂದಿನ ದಿನಗಳಲ್ಲಿ ಈಜಿಪ್ಟನ್ನು ಪ್ರವೇಶಿಸಿ ಯಹೂದಿಗಳು ದಂಗೆ ಏಳುವಂತೆ ಮಾಡಿದ. ಮೋಸೆಸ್ ಗುಲಾಮರನ್ನು ಮುಕ್ತಗೊಳಿಸಬೇಕೆಂದು ದೊರೆ ಫೇರೋನನ್ನು ಕೋರಿದ. ಕಠಿಣಹೃದಯಿಯಾದ ಫೇರೋ ಯಹೂದಿಗಳನ್ನು ಮತ್ತಷ್ಟು ತುಚ್ಛವಾಗಿ ನಡೆಸಿಕೊಂಡ. ಆಗ ದೇವರಾದ ಯಹೋವ ಈಜಿಪ್ಟಿನ ಮೇಲೆ ಹತ್ತು ಮಾರಕ ಪೀಡೆಗಳನ್ನು ಕಳಿಸಿದ. ಮೋಸೆಸ್ ಯಹೂದಿಗಳನ್ನು ಬಿಡುಗಡೆಗೊಳಿಸಿ ಪವಿತ್ರ ಪರ್ವತದ ಬಳಿಗೆ ಒಯ್ದಾಗ ದೇವರು ಮತ್ತು ಯಹೂದಿಗಳ ನಡುವೆ ಒಡಂಬಡಿಕೆ ಆಯಿತೆಂದೂ ಪ್ರತೀತಿ. ಇದಕೋಸ್ಕರವೇ ದೇವರ ದಶಾಜ್ಞೆಗಳು (ಟೆನ್ ಕಮಾಂಡ್‌ಮೆಂಟ್ಸ್) ರೂಪಿತವಾದುದ್ದು. ಒಡಂಬಡಿಕೆಯಿಂದಾಗಿ ಯಹೂದಿಗಳು ತಾವು ದೇವರಿಂದ ಆರಿಸಲ್ಪಟ್ಟ ವಿಶೇಷ ಜನರೆಂದು ನಂಬುತ್ತಾರೆ.

ಕ್ರಿಸ್ತನಿಗೆ ಮೊದಲು ಸು.1300 ವರ್ಷಗಳ ಹಿಂದೆ ಮೋಸೆಸ್ ಯಹೂದಿಗಳನ್ನು ಹೀಗೆ ಮುಕ್ತಗೊಳಿಸಿ, ಫಲವತ್ತಾದ ಕೇನನ್ ನಾಡಿಗೆ ಒಯ್ದ. ಜೋರ್ಡಾನ್ ನದಿ ಮತ್ತು ಮೆಡಿಟರೇನಿಯನ್ ಸಮುದ್ರಗಳ ನಡುವಿನ ಈ ಸ್ಥಳದಲ್ಲಿ 300 ವರ್ಷಗಳತನಕ ಯಹೂದಿಗಳಿಗೂ ಕೇನನ್ ಮೂಲವಾಸಿಗಳಿಗೂ ನಿರಂತರ ಕದನವಾಯಿತು. ಯಹೂದಿಗಳ ಮೊದಲ ರಾಜ ಸಾಲೋ; ಇವನ ಅನಂತರ ಬಂದ ಡೇವಿಡ್ ಎರಡೂ ಗುಂಪುಗಳನ್ನು ತಾತ್ಕಾಲಿಕವಾಗಿ ಒಂದುಗೂಡಿಸುವಲ್ಲಿ ಸಫಲನಾದ. ತರುವಾಯ ಅವನ ಮಗ ಸಾಲೋಮನ್ ಕಾಲದಲ್ಲಿ ಜೆರುಸಲೇಮಿನ ಸಂಪತ್ತು ಹೆಚ್ಚಿತು. ಯಹೋವ ಎಂಬಾತ ದೇವಾಲಯವನ್ನು ಕಟ್ಟಿಸಿದ. ಯಹೂದಿಗಳು ಏಕದೇವನಿಷ್ಠರಾದದ್ದು ಆಗಲೇ. ಡೇವಿಡ್‌ನ ತರುವಾಯ ಇಸ್ರೇಲ್ ಎರಡು ಸ್ವತಂತ್ರ ರಾಜ್ಯಗಳಾಗಿ ಒಡೆಯಿತು. ಉತ್ತರದ ದೊಡ್ಡರಾಜ್ಯ ಇಸ್ರೇಲ್ ಮತ್ತು ದಕ್ಷಿಣದ ಸಣ್ಣರಾಜ್ಯ ಜೂಡ.

**ಧರ್ಮ:** ಪ್ರ.ಶ.ಪೂ.ಸು.2000 ವರ್ಷ ಹಿಂದೆಯೇ ಈ ಧರ್ಮದ ಉಗಮವನ್ನು ಗುರುತಿಸಬಹುದು. ಕಲ್ಲು, ಗಿಡಗಳು, ಕುರಿ, ಹಸು, ಪರ್ವತಗಳನ್ನು ಪೂಜಿಸುತ್ತಿದ್ದ ಅಲೆಮಾರಿಗಳಾದ ಈ ಜನ ಯಹೋವಯಹ್ವೆನೆಂಬ ರಾಷ್ಟ್ರೀಯ ದೇವತೆಯನ್ನು ಕಲ್ಪಿಸಿ ಕೊಂಡು ಏಕದೇವತಾ ನಿಷ್ಠರಾದರು. ನಿರಂತರ ಆಕ್ರಮಣಗಳಿಗೆ ಒಳಗಾದ ಯಹೂದಿಗಳಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸಿದವರು ಅನೇಕ ಪ್ರವಾದಿಗಳು. ಕಾಲಕಾಲಕ್ಕೆ ಬಂದ ಧಾರ್ಮಿಕ ವ್ಯಕ್ತಿಗಳ ಬೋಧನೆಯೇ ಯಹೂದಿಗಳ ಪವಿತ್ರ ಗ್ರಂಥ.

ಯಹೂದಿ ಧರ್ಮಕ್ಕೂ ಕ್ರೈಸ್ತಧರ್ಮಕ್ಕೂ ನಿಕಟ ಸಂಬಂಧವಿದೆ. ಯಹೂದಿ ಧರ್ಮವೇ ತಳಹದಿ. ಕ್ರಿಸ್ತ ಮತ್ತು ಅವನ ಹನ್ನೆರಡು ಮಂದಿ ಶಿಷ್ಯರು ಯಹೂದಿ ವಂಶದಲ್ಲಿಯೇ ಜನಿಸಿದರು. ಕ್ರಿಸ್ತನ ಬೋಧನೆಗಳಲ್ಲಿ ಪ್ರತಿಫಲವಾಗಿ ಇರುವುದು ಯಹೂದಿ ಧರ್ಮಶಾಸ್ತ್ರ ಸಂಪ್ರದಾಯಗಳೇ. ಏಕದೇವೋಪಾಸನೆ, ಸೃಷ್ಟಿಕ್ರಮ, ಆಡಂ ಮತ್ತು ಈವ್ ಅವರ ಅವಿಧೇಯತೆ, ಹತ್ತು ದೈವಾಜ್ಞೆಗೂ ಋಜುಮಾರ್ಗ ಮತ್ತು ಪ್ರೇಮ, ರಕ್ಷಕ ದೇವನಾದ ಮೆಸ್ಸೈಯನ ನಿರೀಕ್ಷೆ–ಇವು ಎರಡರಲ್ಲೂ ಸಮಾನ ಅಂಶಗಳು. ಹೀಬ್ರು ಪವಿತ್ರ ಗ್ರಂಥಗಳನ್ನೇ ಕ್ರೈಸ್ತರು ಹಳೆಯ ಒಡಂಬಡಿಕೆ ಎನ್ನುವುದು. ಕ್ರೈಸ್ತರ ದೃಷ್ಟಿಯಲ್ಲಿ ಯಹೂದಿಗಳು ಕ್ರಿಸ್ತನನ್ನು ಮಾನ್ಯಮಾಡಲು ವಿಫಲರಾದ ಸೋದರರು.

ಯಹೂದಿಗಳು ಹಾಗೂ ಕ್ರೈಸ್ತರು ತಮ್ಮ ಧರ್ಮಗ್ರಂಥವನ್ನು ಬೈಬಲ್ ಎಂದೇ ಕರೆಯುತ್ತಾರೆ. ಗ್ರೀಕ್ ಪದದಿಂದ ಹುಟ್ಟಿಕೊಂಡ ಈ ಪದದ ಅರ್ಥ ಅಧ್ಯಾಯಗಳು ಎಂದು. ಈಗ ಲಭ್ಯವಿರುವಂತೆ ಯಹೂದಿಗಳ ಧರ್ಮಗ್ರಂಥದ ಅತ್ಯಂತ ಹಳೆಯ ಪ್ರತಿ ಪ್ರ.ಶ.ಪೂ. 2ನೆಯ ಶತಮಾನದಷ್ಟು ಪ್ರಾಚೀನವಾದುದು. ಇದರ ಭಾಷೆ ಪ್ರಧಾನವಾಗಿ ಹೀಬ್ರು ಆದ್ದರಿಂದ ಹೀಬ್ರು ಬೈಬಲ್ ಎಂದೂ ಹೆಸರಿದೆ. ಇದನ್ನೇ ಕ್ರೈಸ್ತರು ತಮ್ಮ ಬೈಬಲ್‌ನಲ್ಲಿ ಹಳೆಯ ಒಡಂಬಡಿಕೆ ಎಂದು ಕರೆದಿದ್ದಾರೆ. ಹೀಬ್ರು ಬೈಬಲನ್ನು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ. ಬೋಧನೆಗಳು: ಇದಕ್ಕೆ ತೋರಾ ಎನ್ನುತ್ತಾರೆ. ಜೆನೆಸಿಸ್, ಎಕ್ಸೋಡಸ್, ಲೆವಿಟಿಕಸ್, ನಂಬರ್ಸ್ ಮತ್ತು ಡೆಟರೋನಮಿ ಎಂಬ ಐದು ಅಧ್ಯಾಯಗಳು ಇದರಲ್ಲಿವೆ. ಪೆಂಟಚ್ ಎಂದೂ ಇವಕ್ಕೆ ಹೆಸರು. ಜಗತ್ತಿನ ಸೃಷ್ಟಿ, ಕುಲ ಗುರುಗಳಾದ ಅಬ್ರಹಾಂ,

ಐಸಾಕ್, ಜಾಕಬ್, ಜೋಸೆಫ್‌ರ ಕತೆ, ಮೋಸಸ್ ಯಹೂದಿಗಳನ್ನು ಬಿಡುಗಡೆಗೊಳಿಸಿ ಕೇನನ್‌ಗೆ ಒಯ್ದವರೆಗಿನ ಕತೆ, ದೇವರು ಮೋಸಸ್‌ನಿಗೆ ಬೋಧಿಸಿದ ಶಾಸನಗಳೂ ಇದರಲ್ಲಿವೆ. ಇದರಲ್ಲಿ ಬರುವ ದಶಾಜ್ಞೆಗಳು ಹೀಗಿವೆ:

1 ಈಜಿಪ್ಟಿನಿಂದಲೂ ಗುಲಾಮಿಕೆಯಿಂದಲೂ ನಿಮ್ಮನ್ನು ಬಿಡುಗಡೆಗೊಳಿಸಿದ ದೇವ ನಾನು. 2 ನನ್ನ ಹೊರತು ನೀವು ಅನ್ಯದೇವರನ್ನು ಶರಣುಹೋಗಬಾರದು. ಸ್ವರ್ಗ ಭೂಮಿ ಅಥವಾ ಸಮುದ್ರ ತಳದ ಯಾವ ಪ್ರತಿಮೆಯನ್ನೂ ಪೂಜಿಸತಕ್ಕದ್ದಲ್ಲ. ಅಸೂಯಾಪರ ದೇವತೆಯಾದ ನಾನು, ನನ್ನನ್ನು ದ್ವೇಷಿಸುವವರ ಪಾಪಕ್ಕಾಗಿ ಅವರ ಪೀಳಿಗೆಯನ್ನು ಮೂರು ಅಥವಾ ನಾಲ್ಕು ತಲೆಮಾರುಗಳತನಕ ಕಾಡುತ್ತೇನೆ. ನನ್ನನ್ನು ಪೂಜಿಸಿ ನನ್ನ ಅಜ್ಞೆಗಳನ್ನು ಪರಿಪಾಲಿಸುವವರಿಗೆ ನಾನು ದಯಾಪರನಾಗಿರುತ್ತೇನೆ. 3 ವ್ಯರ್ಥವಾಗಿ ದೇವರ ಹೆಸರು ಬಳಸಬೇಡಿ. ಹಾಗೆ ಮಾಡಿದವನು ಪಾಪಿ ಎಂದೇ ಪರಿಗಣಿತನಾಗುತ್ತಾನೆ. 4 ಸಬ್ಬತ್ ದಿನವನ್ನು ನೆನಪಿಡು ಮತ್ತು ಅದರ ಪಾವಿತ್ರ್ಯವನ್ನು ಕಾಯ್ದುಕೊ. ಆರು ದಿನಗಳಲ್ಲಿ ದೇವರು ಸ್ವರ್ಗ, ಭೂಮಿ, ಸಮುದ್ರ ಹಾಗೂ ಅವುಗಳಲ್ಲಿರುವುದನ್ನೆಲ್ಲಾ ಸೃಷ್ಟಿಸಿದ. ಏಳನೆಯ ದಿನ ವಿಶ್ರಾಂತಿ ಪಡೆದ. ಆ ಕಾರಣದಿಂದಲೇ ದೇವರು ಸಬ್ಬತ್ ದಿನವನ್ನು ಕರುಣಿಸಿ ಅದನ್ನು ಪವಿತ್ರಗೊಳಿಸಿದ. ನೀನು ಆರು ದಿನಗಳಲ್ಲಿ ಎಲ್ಲ ಕೆಲಸವನ್ನು ಮಾಡು ಅದರೆ ಏಳನೆಯ ದಿನವಾದ ಪವಿತ್ರ ಸಬ್ಬತ್ ದಿನಗಳಲ್ಲಿ ನೀನಾಗಲಿ, ನಿನ್ನ ಮಗ, ಮಗಳು, ಗಂಡಾಳು, ಹೆಣ್ಣಾಳು, ಆಕಳು, ಆಗಂತಕರು ಯಾರೂ ದುಡಿಯಬಾರದು. 5 ನಿನ್ನ ತಂದೆ ತಾಯಿಗಳನ್ನು ಗೌರವಿಸು. 6 ಕೊಲ್ಲಬೇಡ. 7 ವ್ಯಭಿಚಾರವೆಸಗಬೇಡ. 8 ಕಳಬೇಡ. 9 ನಿನ್ನ ನೆರೆಯವನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳಬೇಡ. 10 ನಿನ್ನ ನೆರೆಯವನ ಮನೆ, ಹೆಂಡತಿ, ಗಂಡಾಳು, ಹೆಣ್ಣಾಳು, ಎತ್ತು, ಕತ್ತೆ ಅಥವಾ ಯಾವುದನ್ನೂ ಆಶಿಸಬೇಡ.

ಇವೇ ಯಹೂದಿ ಧರ್ಮದ ಮೂಲದಲ್ಲಿದ್ದು ಅವರನ್ನು ಪ್ರಭಾವಿತಗೊಳಿಸಿರುವುದು. ಅವುಗಳಿಗೆ ಅತಿನಿಷ್ಠೆಯಿಂದ ಇರಬೇಕಾದುದನ್ನು ಮೋಸಸ್‌ನಿಂದ ಮೊದಲ್ಗೊಂಡು ಎಲ್ಲ ಪ್ರವಾದಿಗಳೂ ಒತ್ತಿ ಹೇಳಿದ್ದಾರೆ.

2 ಪ್ರವಾದಿಗಳು: ಈ ಭಾಗದಲ್ಲಿ ಪ್ರಾಚೀನ ಪ್ರವಾದಿಗಳಾದ ಜೋಷುವ, ಜಡ್ಜಸ್, ಸಾಮ್ಯುಯಲ್, ಕಿಂಗ್ಸ್ ಮತ್ತು ಅನಂತರದ ಪ್ರವಾದಿಗಳಾದ ಇಸಯ, ಜೆರೆಮಯ, ಎಜೆಕಿಲ್ ಹಾಗೂ ಇತರ ಹನ್ನೆರಡು ಉಪಪ್ರವಾದಿಗಳ ವಿವರಗಳಿವೆ. ಪ್ರಾಚೀನ ಇಸ್ರೇಲಿನ ಪ್ರಶ.ಪೂ. 11ನೆಯ ಶತಮಾನದ ಮಧ್ಯಭಾಗದಲ್ಲಿ ಪ್ರವಾದಿಗಳ ಚಟುವಟಿಕೆ ಚುರುಕಾಯಿತು. ಪ್ರಶ.ಪೂ.11–8ನೆಯ ಶತಮಾನದ ತನಕ ಪ್ರವಾದಿಗಳು ತಮ್ಮ ಕಾರ್ಯಸಾಧನೆಗೆ ಗಮನವಿತ್ತರು; ಬರೆವಣಿಗೆಗೆ ಇಳಿಯಲಿಲ್ಲ. ಪ್ರ.ಶ.ಪೂ.8–6ನೆಯ ಶತಮಾನದತನಕ ಪ್ರಾಚೀನ ಇಸ್ರೇಲಿನ ಧಾರ್ಮಿಕ ಮತ್ತು ನೈತಿಕ ಜೀವನ ಸ್ವರೂಪವನ್ನು ರೂಪಿಸಿದರು. ಯಹೂದಿ ಧರ್ಮದ ಪ್ರಗತಿ, ವಿಕಾಸ ಮತ್ತು ಸ್ವರೂಪವನ್ನು ರೂಪಿಸಿದರು. ಯಹೂದಿ ಧರ್ಮದ ಪ್ರಗತಿ, ವಿಕಾಸ ಮತ್ತು ಸ್ವರೂಪಕ್ಕೆ ಇವರೇ ಕಾರಣರು. ಯಹೋವನನ್ನು ಜಾಗತಿಕ ದೇವತೆಯಾಗಿ ಕಲ್ಪಿಸಿದ್ದು ಇವರೇ. ಧರ್ಮಾಚರಣೆಗಿಂತ ನೀತಿಗೆ ಹೆಚ್ಚು ಒತ್ತುಕೊಟ್ಟರು.

3 ಸಾಹಿತ್ಯ: ಇದರಲ್ಲಿ ಕಾವ್ಯ (ಸಾಮ್ಸ್, ಪ್ರಾವರ್ಬ್ಸ್, ಜಾಬ್), 5 ಸ್ಕ್ರಾಲ್‌ಗಳು–ಸಾಂಗ್‌ಆಫ್ ಸೋಲೋಮನ್, ರೂತ್, ಲಾಮೆಂಟೇಷನ್ಸ ಎಕ್ಲೆಸಿ (ಯಾಸ್ಟ್ ಮತ್ತು ಎಸ್ತರ), ಚರಿತ್ರೆ (ಎಜ್ರಾ–ನೆಹೆಮಿಯ, ಕ್ರಾನಿಕಲ್ಸ್), ಭವಿಷ್ಯ (ಡಾನಿಯಲ್) ಎಂಬ ವಿಷಯ ವಿವರಗಳಿವೆ. ಯಹೂದಿ ಧರ್ಮದ ಸ್ಫೂರ್ತಿದಾಯಕ ಬುದ್ಧಿಮತ್ತೆ ಇರುವುದು ಇವರ ಸಾಹಿತ್ಯದಲ್ಲಿ. ಕಾವ್ಯ, ಗಾದೆ, ತತ್ತ್ವದರ್ಶನ, ವೈವಿಧ್ಯಪೂರ್ಣ ಸಂಗ್ರಹ ಇದು. ಜಾಣ್ನುಡಿಗಳು, ಸುತಿಗೀತೆಗಳು, ಒಳಿತು ಕೆಡಕುಗಳ ತರ್ಕ ಇಲ್ಲಿದೆ. ಜಾಬ್ ತನ್ನ ತತ್ತ್ವದರ್ಶನದಂತೆಯೇ ಕಾವ್ಯೋನ್ನತಿಯಲ್ಲಿಯೂ ಅಪೂರ್ವವಾದುದನ್ನು ಸೃಷ್ಟಿಸಿದ. ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ವ್ಯವಹಾರಿಕ, ಸಾರ್ವಜನಿಕ ವ್ಯವಹಾರಗಳು, ನಡೆನುಡಿ, ನೀತಿ–ಇವುಗಳ ದರ್ಶನ ಇವರ ವಸ್ತುಗಳಾಗಿದ್ದುವು.

ಹಳೆಯ ಒಡಂಬಡಿಕೆ ಧರ್ಮಸೂತ್ರ ಮಾತ್ರವಾಗಿರದೆ ಉನ್ನತ ಮಟ್ಟದ ಚರಿತ್ರೆ, ಕಾವ್ಯ, ತತ್ತ್ವಶಾಸ್ತ್ರ ಕೂಡ ಆಗಿದೆ. ಇದು ಸೃಷ್ಟಿಯ ಕತೆಯೊಂದಿಗೆ ಪ್ರಾರಂಭವಾಗಿ ಎಜ್ರಾನ ಕಾಲ ಮತ್ತು ಅವನು ಮಾಡಿದ ಸುಧಾರಣೆಗಳನ್ನು ಒಳಗೊಂಡಿದೆ.

ಹೀಬ್ರು ಬೈಬಲ್ ಮುಗಿದು ಅದು ಸಂಕಲನವಾಗುವ ವೇಳೆಗೆ ಯಹೂದಿ ಧರ್ಮದಲ್ಲಿ ಅಪಾರ ಬದಲಾವಣೆಗಳಾಗಿದ್ದುವು. ಈ ಬದಲಾವಣೆಗಳಿಂದಾಗಿ ಬರೆವಣಿಗೆಯಲ್ಲಿದ್ದ ಧರ್ಮಸೂತ್ರಗಳನ್ನು ವಿವಿಧ ಬಗೆಗಳಲ್ಲೂ ಅರ್ಥೈಸಲಾಯಿತು. ಈ ಮೌಖಿಕ ಸಂಪ್ರದಾಯಕ್ಕೆ ಬೈಬಲಿನಷ್ಟೇ ಗೌರವ ಸಂದಿತು. ಇದೆ 63 ವಿಭಾಗಗಳುಳ್ಳ 6 ಗ್ರಂಥಗಳಾಗಿ ಲಿಖಿತವಾಯಿತು. ಹೀಬ್ರು ಭಾಷೆಯಲ್ಲಿ ಬಂದ ಈ ಗ್ರಂಥಕ್ಕೆ ಮಿಶ್ನಾ ಎಂದು ಹೆಸರು. ಮುಂದೆ ಯಹೂದಿಗಳ ಬಳಕೆಯ ಭಾಷೆ ಅರಾಮಿಕ್ ಆದಾಗ ಈ ಗ್ರಂಥಕ್ಕೂ ವ್ಯಾಖ್ಯಾನದ ಅಗತ್ಯ ಬಂತು. ಇಂಥ ವ್ಯಾಖ್ಯಾನದ ಗ್ರಂಥವೇ ಜೆಮರಾ. ಇವೆರಡೂ ಸೇರಿ ಇರುವ 40 ಗ್ರಂಥಗಳಿಗೆ ಒಟ್ಟಾಗಿ ಟಾಲ್ಮುಡ್ ಎಂಬ ಹೆಸರಿದೆ. ಇದರಲ್ಲೂ ಪ್ಯಾಲಸ್ತೀನ್ ಮತ್ತು ಬ್ಯಾಬಿಲೋನಿಯಗಳ ಎರಡು ಸಂಪ್ರದಾಯಗಳಿವೆ. ಈಗ ಯಾವುದೇ ಧಾರ್ಮಿಕ ವ್ಯವಹಾರಕ್ಕೆ ಬ್ಯಾಬಿಲೋನಿಯ ಟಾಲ್ಮುಡ್ ಆಧಾರವಾಗುತ್ತದೆ.

ಮಿದ್ರಶ್ ಎಂದರೆ ಅನ್ವೇಷಣೆ. ಇವು ಧಾರ್ಮಿಕ ಗ್ರಂಥಗಳ ವ್ಯಾಖ್ಯಾನಗಳು. ಹೀಬ್ರು ಬೈಬಲಿನ ಅನಂತರ ಯಹೂದಿಗಳು ಅತಿ ಪವಿತ್ರವೆಂದು ಎಣಿಸುವುದು ಟಾಲ್ಮುಡ್ ಮತ್ತು ಮಿದ್ರಶ್‌ಗಳನ್ನು. ಇವುಗಳ ಆಧಾರದಿಂದ ಯಹೂದಿ ಧರ್ಮದ ತತ್ತ್ವ, ನಂಬಿಕೆ ಮತ್ತು ಆಚಾರಗಳನ್ನು ಹೀಗೆ ಸಂಗ್ರಹಿಸಬಹುದು: ಯಹೂದಿ ಧರ್ಮ ಕಟ್ಟುನಿಟ್ಟಿನ ಏಕದೇವೋಪಾಸನೆ ಯನ್ನು ಪಾಲಿಸುವಂಥದು. ದೇವರು ಏಕಮೇವಾದ್ವಿತೀಯ, ಶರೀರರಹಿತ, ನ್ಯಾಯಪಕ್ಷಪಾತಿ, ಸತ್ಯ–ಸೌಂದರ್ಯ ದಯೆಗಳ ದಿವ್ಯ ಆಗರ. ಎಲ್ಲರನ್ನೂ ಶುದ್ಧಗೊಳಿಸುವ ಶಕ್ತಿ ಇರುವುದೇ ಅವನ ವಿಶೇಷ ಲಕ್ಷಣ. ಅವನ ಅಂತರ್ಯಾಮಿತ್ವಕ್ಕಿಂತಲೂ ಅವರು ಲೋಕಾತೀತವನೆಂಬ ಭಾವನೆಗೆ ಹೆಚ್ಚಿನ ಒತ್ತು ಇದೆ. ದೇವರ ಅಸ್ತಿತ್ವಕ್ಕೆ ಈ ಸೃಷ್ಟಿಯೇ ಸಾಕ್ಷಿ. ಇವನು ಅರಿಯದ ಯಾವುದೂ ಈ ಜಗತ್ತಿನಲ್ಲಿಲ್ಲ. ಭೂಮಿಯ ಜನರ ಪಾಪಗಳ ಕಾರಣದಿಂದಾಗಿ ಇವನ ಸಾನಿಧ್ಯ ದೂರವಾಯಿತು. ಸಂಪ್ರದಾಯ, ಶ್ರದ್ಧೆ ಮತ್ತು ಪ್ರಜ್ಞೆಯ ಮೂಲಕ ಇವನನ್ನು ಅರಿಯಬಹುದು. ಸಾರ್ವಭೌಮನಾದ ಯಹೋದ ತನ್ನ ಆಜ್ಞೆಗಳನ್ನು ಉಲ್ಲಂಘಿಸಿದವರನ್ನು ಸಮರ್ಥವಾಗಿ ದಂಡಿಸುತ್ತಾನೆ. ಆದರೆ ಅದು ತಂದೆ ಮಕ್ಕಳನ್ನು ಶಿಕ್ಷಿಸುವಂತೆ ವಾತ್ಸಲ್ಯಪೂರ್ಣವಾದುದು. ಇವನನ್ನು ನಿರಂತರವಾಗಿ ಪೂಜಿಸಬೇಕು. ಸಂತೃಪ್ತಿ, ಭಕ್ತಿ ಅಥವಾ ಅರ್ಪಣೆ, ಉತ್ಸಾಹ–ಈ ಮೂರು ಭಕ್ತನಲ್ಲಿರಬೇಕಾದ ಪ್ರಮುಖ ಗುಣಗಳು. ದೇವರನ್ನು ಪ್ರೀತಿಸುವುದೆಂದರೆ ಇವನ ಸಾನ್ನಿಧ್ಯದ ಉತ್ಕಟ ಹಂಬಲ, ಇವನ ಪಾವಿತ್ರ್ಯದ ಅಕಲಂಕ ಅನುಸರಣ, ಇವನ ತತ್ತ್ವಗಳ ಅಧ್ಯಯನ ಹಾಗೂ ಚಿಂತನ. ಮೂರ್ತಿಪೂಜೆ ಇಲ್ಲಿ ನಿಷಿದ್ಧ.

ಪ್ರಾರ್ಥನೆ ಮತ್ತು ಪಶ್ಚಾತ್ತಾಪಕ್ಕೆ ಈ ಧರ್ಮದಲ್ಲಿ ಮಿಗಿಲಾದ ಸ್ಥಾನವಿದೆ. ಪ್ರಾರ್ಥನೆ ಭಕ್ತನನ್ನು ಉದಾತ್ತಗೊಳಿಸುತ್ತದೆ. ದೇವರದಯೆಯಿಂದ ಮಾನವನ ಕಾರ್ಯಗಳು ಬೇಗ ಸಿದ್ಧಿಸುತ್ತವೆ. ಎಲ್ಲ ಯಹೂದಿಗಳು ಪಶ್ಚಾತ್ತಾಪಕ್ಕೆ ಮಹತ್ತ್ವ ಕೊಟ್ಟಿದ್ದಾರೆ. ಸ್ವರ್ಗದ ಬಾಗಿಲು ಪ್ರಾರ್ಥನೆಗೆ ಮುಚ್ಚಿರಬಹುದು; ಕಣ್ಣೀರಿಗೆ ಮುಚ್ಚಿರುವುದಿಲ್ಲ.

ಅನುಭಾವ ಮತ್ತು ಅನುಭಾವಿಗಳಿಗೆ ಇಲ್ಲಿ ಸ್ಥಾನವಿದೆ. ಈ ಮತದ ಅನುಭಾವ ಪಂಥಕ್ಕೆ ಹಾಸೆಡಿಸಮ್ ಎಂದು ಹೆಸರು. ಕಬ್ಬಾಲಗಳು ಆಗಮಗಳು. ಇವುಗಳಲ್ಲಿ ಭಗವಂತನೊಡನೆ ಸಾಯುಜ್ಯ ಪಡೆಯುವ ಪ್ರಯತ್ನಗಳಿವೆ. ಇದೊಂದು ರೀತಿಯ ಯೋಗವೂ ಹೌದು.

ಮನುಷ್ಯನನ್ನು ದೇವರ ಹೋಲಿಕೆಯಲ್ಲಿ ಸೃಷ್ಟಿಸಲಾಗಿದೆ; ಆದ್ದರಿಂದಲೇ ಆತ ದೇವರಿಗೆ ಅತ್ಯಂತ ಪ್ರಿಯನಾಗಿದ್ದಾನೆ. ಪ್ರೀತಿಯ ಲೇಪದಿಂದ ದೈವೀಕನಾಗುವುದು ಅವನ ಗುರಿ. ವಿರಕ್ತಿಗಿಂತಲೂ ಸಂಸಾರವೇ ಯೋಗ್ಯ ಕಾರ್ಯಸ್ಥಾನ. ಗರ್ವ, ಅಸತ್ಯ, ಮುಗ್ಧರನ್ನೂ ಪವಿತ್ರರನ್ನೂ ಹಿಂಸಿಸುವುದು, ದುಷ್ಟ ವಿಚಾರಚಿಂತನೆ, ಉಪದ್ರವ, ಸುಳ್ಳುಸಾಕ್ಷಿ, ವೈಷಮ್ಯದ ಬೀಜಬಿತ್ತುವುದು ಕೆಟ್ಟ ಗುಣಗಳು. ವಾದ ಮಾಡಬಾರದು, ಪರರನ್ನು ಪೀಡಿಸಬಾರದು. ದ್ವೇಷಿಸಬಾರದು, ಸುಳ್ಳು ಶಪಥಗಳನ್ನು ಮಾಡಬಾರದು, ಸಿಟ್ಟು ಕೂಡದು ಮುಂತಾದವು ಅವನಿಗೆ ಕೊಟ್ಟಿರುವ ನಿರ್ದೇಶನಗಳು. ಮಾನವನ ಅಸ್ತಿತ್ವದ ನಿಜವಾದ ಗುರಿ ಫಲಾಪೇಕ್ಷೆ ಇಲ್ಲದೆ ಒಳ್ಳೆಯದು ಮಾಡುವುದು; ಕೆಟ್ಟದ್ದನ್ನು ಕೆಟ್ಟದ್ದು ಎಂಬುದಕ್ಕಾಗಿಯೇ ಮಾಡದಿರುವುದು; ಶಿಕ್ಷೆಯ ಹೆದರಿಕೆಯಿಂದಲ್ಲ. ಒಳ್ಳೆಯವ ಕಷ್ಟಪಡುವುದು, ಕೆಟ್ಟವ ಸುಖ ಪಡುವಂಥ ಹೊರನೋಟ ಸಾಕ್ಷ್ಯಗಳು ಸನ್ಮಾರ್ಗಕ್ಕೆ ಆಧಾರವಲ್ಲ ಎಂಬುದು ಇದರ ವಿವರಣೆ. ಈ ಧರ್ಮ ಅಶಾಶ್ವತವಾದ ಬದುಕಿನಲ್ಲಿ ನಮ್ಮ ತೀವ್ರ ಶ್ರಮಗಳನ್ನು ವಿಶ್ಲೇಷಿಸಿ ಈ ಜೀವನದ ನಿಗೂಢತೆಯತ್ತ ದಿಕ್ಕು ತೋರಿಸುತ್ತದೆ.

ನಡತೆಯ ವಿಷಯದಲ್ಲಿ ಕಟ್ಟುನಿಟ್ಟಾದ ನಿಯಮಗಳಿವೆ. ಪ್ರತಿ ಯಹೂದಿಯೂ ನಿತ್ಯ ಮೂರು ಸಲ ಪ್ರಾರ್ಥನೆ ಮಾಡಬೇಕು. ಧರ್ಮಗ್ರಂಥಗಳ ಆಯ್ದಭಾಗಗಳನ್ನು ನಿತ್ಯ ಪಠನ ಮಾಡಬೇಕು. ಸಾಮೂಹಿಕ ಪ್ರಾರ್ಥನೆ ಇವರ ಪದ್ಧತಿ. ಪವಿತ್ರವಾದ ಗೃಹಜೀವನವನ್ನು ಇದು ಬೋಧಿಸುತ್ತದೆ. ಇತಿಹಾಸದುದ್ದಕ್ಕೂ ಮನೆಯನ್ನೇ ದೇವರ ಆವಾಸಸ್ಥಾನವಾಗಿ ಮಾಡಲು ಈ ಜನ ಯತ್ನಿಸಿದ್ದಾರೆ. ಇಲ್ಲಿ ಕೌಟುಂಬಿಕ ಜೀವನಕ್ಕೆ ಗೌರವವಿದೆ. ಗಂಡನು ಹೆಂಡತಿಯ ಮೂಲಭೂತ ಹಕ್ಕನ್ನು ನಿರಾಕರಿಸಬಾರದು. ಇವರಿಬ್ಬರ ಸಂಬಂಧ ಪವಿತ್ರವಾದುದು. ಮಾಂಸಾಹಾರಿಗಳಾದರೂ ಇವರು ಪ್ರಾಣಿಗಳನ್ನು ಕೊಲ್ಲುವ ವಿಷಯದಲ್ಲಿ ಕೆಲ ನಿಯಮಗಳನ್ನು ಪಾಲಿಸುತ್ತಾರೆ. ಹಾಗೆಯೇ ಬಡವರು, ದುರ್ಬಲರು, ಸೆರೆಯಾಳುಗಳು, ಪೀಡಿತರ ವಿಚಾರದಲ್ಲಿ ದಯೆಯಿಂದ ನಡೆದುಕೊಳ್ಳುವಂತೆ ಈ ಧರ್ಮಬೋಧಿಸುತ್ತದೆ. ಅಲ್ಲದೆ ಸಹಜೀವಿಯನ್ನು ದ್ವೇಷಿಸುವುದೆಂದರೆ ದೇವರನ್ನು ದ್ವೇಷಿಸಿದಂತೆಯೇ. ನೆರೆಯವನ ಸಂಪತ್ತು ಗೌರವಗಳ ರಕ್ಷಣೆಯ ಹೊಣೆ ಎಲ್ಲರ ಮೇಲಿದೆ. ಶತ್ರುವಿನ ವಿಷಯದಲ್ಲಿ ಮಾತ್ರ ಅವನನ್ನು ಕ್ಷಮಿಸಬಹುದು; ಪ್ರೀತಿಸಲಾಗದು. ಏಕೆಂದರೆ ನ್ಯಾಯವಿಲ್ಲದ ಪ್ರೀತಿ ದುರುಪಯೋಗವಾಗುತ್ತದೆ. ಸ್ವರ್ಗ, ನರಕ, ಪುನರ್ಜನ್ಮಗಳನ್ನು ಅವರು ನಂಬುತ್ತಾರೆ. ಪ್ರವಾದಿ ಅವತರಿಸಿ ಪವಿತ್ರ ಜೆರುಸಲೇಮಿನಲ್ಲಿ ತನ್ನ ಶಾಂತಿರಾಜ್ಯವನ್ನು ಸ್ಥಾಪಿಸುತ್ತಾನೆಂಬುದು ಇವರ ವಿಶ್ವಾಸ.

ಇದು ಕರ್ಮಾಚರಣೆಯ ಶಿಷ್ಟಾಚಾರದ ಧರ್ಮ. ಉತ್ಸವಾಚರಣೆಗಳ ಪಾತ್ರ ಯಹೂದಿ ಗಳಲ್ಲಿ ದೊಡ್ಡದು. ವಿಶ್ರಾಂತಿ ದಿನವಾಗಿ ಸಬ್ಬತ್, ಏಕ್ಸೋಡಸ್ ಮತ್ತು ಅದಕ್ಕೆ ಸಂಬಂಧಿಸಿದ ಘಟನೆಗಳ ನೆನಪಿಗಾಗಿ ಪಾಸ್ ಓವರ್ ಹಬ್ಬಗಳು ನಡೆಯುತ್ತವೆ. ಪರಟಕೋಸ್ಟ್, ದೇವರು ಶಾಸನ ವಿಧಿಸಿದ್ದರೊಂದಿಗೆ ಹೊಂದಿಕೊಂಡರೆ, ಮರಳುಗಾಡಿನಲ್ಲಿ ಅಲೆಯುತ್ತಿದ್ದಾಗ ಗುಡಾರ ಗಳಲ್ಲಿ ತಂಗುತ್ತಿದ್ದುದರ ನೆನಪು ತಬರ್ನಕಲ್ಸ್, ದಿ ಡೇ ಆಫ್ ರಿಮೆಂಬರೆನ್ಸ್ (ಹೊಸವರ್ಷ) ಕಳೆದ ವರ್ಷದ ಆತ್ಮ ನಿರೀಕ್ಷಣೆಯ ದಿನ. ಈ ಆಚರಣೆಗಳೆಲ್ಲವೂ ತಮ್ಮ ಜನರ ಸಂಘಟನೆಯ ಉದ್ದೇಶದಿಂದಲೇ ಇವೆಯೆಂಬುದನ್ನು ಪ್ರವಾದಿಗಳು ಆಗಿಂದಾಗ್ಗೆ ಸ್ಪಷ್ಟಪಡಿಸಿದ್ದಾರೆ. ಪ್ರಪಂಚದ ಎಲ್ಲ ಕಡೆಯ ಪ್ರವೃತ್ತಿಯಂತೆಯೇ ಈ ಧರ್ಮದಲ್ಲೂ ಈಗ ಅತಿ ನಿಷ್ಠಾವಂತರು, ಪರಿವರ್ತನಶೀಲರು ಮತ್ತು ಸಮನ್ವಯ ಶೀಲರನ್ನು ಕಾಣಬಹುದಾಗಿದೆ. (ವಿ.ಎಚ್.)

**ಯಕ್ಷ:** ಸೃಷ್ಟಿಯಲ್ಲಿ ಮೊತ್ತಮೊದಲು ಚತುರ್ಮುಖ ಹುಟ್ಟಿದ. ತರುವಾಯ ಚತುರ್ಮುಖ ಜಲವನ್ನು ಸೃಷ್ಟಿಸಿದ. ಈ ಜಲದ ರಕ್ಷಣೆಗಾಗಿ ಕೆಲವು ಪ್ರಾಣಿಗಳನ್ನು ಜೊತೆಯಲ್ಲಿಯೇ ಸೃಜಿಸಿದ. ಈ ಪ್ರಾಣಿಗಳೆಲ್ಲವು ಹಸಿವು ನೀರಡಿಕೆಗಳಿಂದ ಕೂಡಿದ್ದವು. ತಮ್ಮನ್ನು ಸೃಜಿಸಿದ ಬ್ರಹ್ಮನ ಬಳಿಗೆ ಬಂದು ತಮ್ಮ ಕೆಲಸವೇನೆಂದು ಕೇಳಿಕೊಂಡವು. ಚತುರ್ಮುಖ ಈ ಜಲವನ್ನು ರಕ್ಷಿಸಿರಿ ಎಂದ. ಇದನ್ನು ಕೇಳಿ ಕೋಪಗೊಂಡ ಕೆಲವು ಪ್ರಾಣಿಗಳು ಜಲವನ್ನು ಕುಡಿದವು. ಮತ್ತೆ ಕೆಲವು ರಕ್ಷಣೆಯನ್ನು ಮಾಡಿದವು. ನೀರು ಕುಡಿದವರನ್ನು ಯಕ್ಷ ಎಂತಲೂ ನೀರನ್ನು ರಕ್ಷಿಸಿದವರನ್ನು ರಕ್ಷ (ರಾಕ್ಷಸ) ಎಂತಲೂ ಕರೆದ. ಹೀಗೆ ಯಕ್ಷರ ಉತ್ಪತ್ತಿ.

ಕುಬೇರ ಯಕ್ಷ, ಬೆಸನಗರ

ಯಕ್ಷರ ಅಧಿಪತಿ ಕುಬೇರ. ಇವನ ಪ್ರಜೆಗಳೇ ಯಕ್ಷರು. ದೇವತೆಗಳಲ್ಲಿ ಇವರದೊಂದು ಪಂಗಡ. ಕಾವೇರಿ, ನರ್ಮದಾ ನದಿಗಳ ಸಂಗಮವಾದ ಪವಿತ್ರ ತೀರ್ಥಕ್ಷೇತ್ರದಲ್ಲಿ ಸ್ನಾನಮಾಡಿ ಮಹಾದೇವನನ್ನು ಪೂಜಿಸಿದ ಕಾರಣ ಕುಬೇರ ಯಕ್ಷ ರಾಜ್ಯಾಧಿಪತಿಯಾದ. ಕುಬೇರನ ಆಸ್ಥಾನದಲ್ಲಿ ಶಂಖಪದ್ಮ, ಮಣಿಭದ್ರ, ಶ್ವೇತಭತ್ರ, ಗುಹ್ಯಕ, ಸ್ಥೂಣಕ, ಸೂರ್ಯಭಾನು, ವೇಣು, ಗಂಡಪಿಂಡ, ವೃಷಾರ, ದ್ರುಮ, ಹಿಮಚಂದ್ರ, ಪಿಂಗಳಾಕ್ಷ, ಪ್ರಪಾಲಕ ಮೊದಲಾದ ಅನೇಕ ಯಕ್ಷರು ಕುಬೇರನನ್ನು ಓಲೈಸುತ್ತಿರುತ್ತಾರೆಂದು ಪುರಾಣ ಪ್ರತೀತಿ. (ಎಂ.ವಿ.ವಿ.)

**ಯಿವೊಸೊ:** ಕೊರಿಯದ ದಕ್ಷಿಣ ಕಿಯೊಲ್ಲ ಪ್ರಾಂತದ ಪ್ರಾಗೈತಿಹಾಸಿಕ ನೆಲೆ. ಇಲ್ಲಿ ನವಶಿಲಾಯುಗದ ಒಂದು ಸಮಾಧಿಯಲ್ಲಿ ಮೊದಲ ಬಾರಿಗೆ ಜೋಡಿ ಅಸ್ಥಿಪಂಜರಗಳು ಉತ್ಖನನದಲ್ಲಿ ಕಂಡುಬಂದವು. ಒಂದು ಅಸ್ಥಿಪಂಜರ ಸ್ತ್ರೀಯದ್ದಾಗಿದ್ದು 158 ಸೆಂಮೀ


ಒಂದೇ ಕುಣಿಯಲ್ಲಿರುವ ಜೋಡಿ ಅಸ್ಥಿಪಂಜರಗಳು

ಉದ್ದವಿತ್ತು. ಇದರ ಬಲ ತೋಳಿನಲ್ಲಿ ಕಪ್ಪೆಚಿಪ್ಪಿನ ತೋಳಬಂದಿಯಿತ್ತು. ಮತ್ತೊಂದು ಅಸ್ಥಿಪಂಜರ 165 ಸೆಂಮೀ ಉದ್ದವಿದ್ದು ಇದರ ಲಿಂಗನಿರ್ಣಯ ಸಾಧ್ಯವಾಗಲಿಲ್ಲ. ಒಟ್ಟಿನಲ್ಲಿ ಕೊರಿಯದಲ್ಲಿ ಇದುವರೆಗೆ ದೊರೆತಿರುವ ಅತಿ ಪ್ರಾಚೀನ ಮಾನವ ಅವಶೇಷಗಳ ಪಟ್ಟಿಗೆ ಇವು ಸೇರುತ್ತವೆ. (ವಿ.ಎಸ್.)

**ಯುರೋಪ್:** ಪ್ರಪಂಚದ 7 ಭೂಖಂಡಗಳಲ್ಲಿ ಒಂದು ಮತ್ತು ಅಟ್ಲಾಂಟಿಕ್ ಸಾಗರದಲ್ಲಿ ಚಾಚಿಕೊಂಡಿರುವ ಒಂದು ದೊಡ್ಡ ಪರ್ಯಾಯ ದ್ವೀಪ.

**ಸನ್ನಿವೇಶ ಮತ್ತು ವಿಸ್ತೀರ್ಣ:** ಈ ಖಂಡದಲ್ಲಿರುವ ಸ್ಕ್ಯಾಂಡಿನೇವಿಯ, ಪೋರ್ಚುಗಲ್, ಸ್ಪೇನ್, ಇಟಲಿ ಮುಂತಾದವು ಪರ್ಯಾಯ ದ್ವೀಪಗಳಾಗಿವೆ. ಯುರೋಪಿನ ತೀರಪ್ರದೇಶ ಬಹು ಅಂಕುಡೊಂಕಿನಿಂದ ಕೂಡಿದ್ದು ಸು.60,973ಕಿಮೀ ಉದ್ದವಿದೆ. ಯುರೋಪ್ ಖಂಡ $36^{o}$ ಉತ್ತರ ಅಕ್ಷಾಂಶದಿಂದ $71^{o}$ ಉತ್ತರ ಅಕ್ಷಾಂಶಗಳವರೆಗೂ ಮತ್ತು $10^{o}$–$27^{o}$ ಪಶ್ಚಿಮ ರೇಖಾಂಶದಿಂದ $57^{o}$ ಪೂರ್ವ ರೇಖಾಂಶಗಳವರೆಗೂ ಹರಡಿದೆ. ಕಾರ, ಬೇರೆಂಟ್ಸ್ ಮತ್ತು ಶ್ವೇತ ಸಮುದ್ರಗಳನ್ನೊಳಗೊಂಡ ಇದರ ಉತ್ತರದಲ್ಲಿ ಆರ್ಕ್‌ಟಿಕ್ ಸಾಗರ, ದಕ್ಷಿಣದಲ್ಲಿ ಮೆಡಿಟರೇನಿಯನ್, ಏಜಿಯನ್ ಮತ್ತು ಏಡ್ರಿಯಾಟಿಕ್ ಸಮುದ್ರಗಳು, ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ಆಗ್ನೇಯದಲ್ಲಿ ಕಪ್ಪುಸಮುದ್ರ, ಪೂರ್ವಕ್ಕೆ ಕ್ಯಾಸ್ಪಿಯನ್ ಸಮುದ್ರ, ಕಾಕಸಸ್ ಮತ್ತು ಯೂರಲ್ ಪರ್ವತ ಶ್ರೇಣಿಗಳು ಈ ಖಂಡವನ್ನು ಸುತ್ತುವರಿದಿವೆ. ಇವುಗಳಲ್ಲದೆ ಅನೇಕ ಆಖಾತಗಳು, ಅಳಿವೆಗಳು, ಭೂಕಂಠಗಳು, ಜಲಸಂಧಿಗಳು ಇಲ್ಲಿವೆ. ಇದರ ಒಟ್ಟು ಭೌಗೋಳಿಕ ಪ್ರದೇಶ ಸು.10,458,000ಚ.ಕಿಮೀ. ಇದು ಪ್ರಪಂಚದ ಒಟ್ಟು ವಿಸ್ತೀರ್ಣದಲ್ಲಿ ಶೇ.7 ರಷ್ಟಿದೆ. ಇದರ ಬಹುಭಾಗ ಸಮಶೀತೋಷ್ಣವಲಯದಲ್ಲಿದ್ದು ಸಾಗರ, ಸಮುದ್ರಗಳ ಪ್ರಭಾವದಿಂದಾಗಿ ಹಿತಕರ ಹವೆಯಿದ್ದು ಜನವಸತಿಗೆ ತುಂಬ ಅನುಕೂಲವಾಗಿದೆ. ಯುರೋಪ್ ಪದದ ಮೂಲ ಅಕ್ಕಾಡಿಯನ್ ಭಾಷೆಯಲ್ಲಿ ಎರಬ್ ಅಂದರೆ ಸೂರ್ಯ ಮುಳುಗುವ ಪ್ರದೇಶ ವೆಂದರ್ಥ. ಜಗತ್ತಿನಲ್ಲಿ ಮತ್ತೆಲ್ಲೂ ಕಾಣಲಾರದಷ್ಟು ವೈವಿಧ್ಯಮಯ ಮಾನವ ಚಟುವಟಿಕೆಗಳು ನಿರಂತರವಾಗಿ ನಡೆದದ್ದು ಇಲ್ಲಿಯೆ. ಯುರೋಪಿನ ಮಹಾನ್ ಲೇಖಕ ಮಾರ್ಲೋ ಇದನ್ನು ಅಪರಿಮಿತವಾದ ಸಂಪನ್ಮೂಲಗಳು ಅಡಕವಾಗಿರುವ ಒಂದು ಕೊಠಡಿ ಎಂದು ಹೇಳಿದ್ದಾರೆ. ಅತ್ಯಾಧುನಿಕ ಕೈಗಾರಿಕೆಗಳ ಹಾಗೂ ಅಂತಾರಾಷ್ಟ್ರೀಯ ವ್ಯಾಪಾರ ವಾಣಿಜ್ಯ ಕ್ರಾಂತಿಯ ಅಂಕುರಾರ್ಪಣವಾದದು ಇಲ್ಲೇ. ಯುರೋಪಿನಲ್ಲಿ ಜನ್ಮತಾಳಿದ ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳು ಇಂದು ಜಗತ್ತಿನ ಎಲ್ಲಾ ಭಾಗಗಳಲ್ಲಿ ಹರಡಿವೆ. ಪ್ರಜಾಪ್ರಭುತ್ವ ಸಮಾಜವಾದ, ವ್ಯಕ್ತಿ ಸ್ವಾತಂತ್ರ್ಯ, ಕ್ರಾಂತಿಯ ಮನೋಭಾವ ಹಾಗೂ ರಾಷ್ಟ್ರೀಯತೆಯನ್ನು ಆಧರಿಸಿದ ರಾಷ್ಟ್ರಗಳು ಇಲ್ಲಿ ಜನ್ಮತಾಳಿವೆ.

ಯುರೋಪ್ ವೈವಿಧ್ಯಮಯವಾದ ಭೌಗೋಳಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಲಕ್ಷಣಗಳನ್ನೊಳಗೊಂಡಿದೆ. ಅದಕ್ಕನುಸಾರವಾಗಿ ಉತ್ತರ ಯುರೋಪ್, ಪಶ್ಚಿಮ ಯುರೋಪ್, ಪಶ್ಚಿಮದ ತೀರಪ್ರದೇಶಗಳು, ಮಧ್ಯ ಯುರೋಪ್, ದಕ್ಷಿಣ ಯುರೋಪಿನ ಮಧ್ಯ ಪ್ರದೇಶ, ಮೆಡಿಟೇರಿಯನ್ ಪ್ರದೇಶ ಮತ್ತು ಪೂರ್ವ ಯುರೋಪ್ ಎಂದು ಈ ಖಂಡವನ್ನು ವಿಭಾಗಿಸಬಹುದು. ಉತ್ತರ ಯುರೋಪ್ ನಾರ್ವೆ, ಸ್ವೀಡನ್, ಫಿನ್ಲೆಂಡ್, ಹಾಗೂ ಐಸ್ಲೆಂಡ್ ದೇಶಗಳನ್ನೂ ಪಶ್ಚಿಮ ತೀರಪ್ರದೇಶ, ಬ್ರಿಟಿಷ್ ದ್ವೀಪಗಳು, ನೆದರ್‌ಲೆಂಡ್, ಫ್ರಾನ್ಸ್, ಬೆಲ್ಜಿಯಮ್, ಲಕ್ಸೆಮ್‌ಬರ್ಗ್ ದೇಶಗಳನ್ನೂ ಮಧ್ಯ ಯುರೋಪ್ ಪ್ರದೇಶ ಜರ್ಮನಿ, ಚೆಕೊಸ್ಲೊವಾಕಿಯ, ಪೋಲೆಂಡ್, ಸ್ವಿಟ್ಜರ್ಲೆಂಡ್ ಮತ್ತು ಆಸ್ಟ್ರಿಯ ದೇಶಗಳನ್ನೂ ದಕ್ಷಿಣ ಯುರೋಪಿನ ಮಧ್ಯ ಪ್ರದೇಶ ಹಂಗೆರಿ, ಯೂಗೋಸ್ಲಾವಿಯ, ರೊಮೇನಿಯ ಮತ್ತು ಬಲ್ಗೇರಿಯ ದೇಶಗಳನ್ನೂ ಮೆಡಿಟರೇನಿಯನ್ ಪ್ರದೇಶ ಗ್ರೀಸ್, ಮಾಲ್ಟಾ, ಇಟಲಿ, ದಕ್ಷಿಣ ಜರ್ಮನಿ, ದಕ್ಷಿಣ ಫ್ರಾನ್ಸ್, ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳನ್ನೂ ಪೂರ್ವ ಯುರೋಪ್ ರಷ್ಯವನ್ನೂ ಒಳಗೊಂಡಿದೆ.

**ಇತಿಹಾಸ ಮತ್ತು ಸಂಸ್ಕೃತಿ:** ಯುರೋಪಿನಲ್ಲಿ ಸು.40,000 ವರ್ಷಗಳಷ್ಟು ಹಿಂದೆಯೇ ನಿಯಾಂಡರ್ತಲ್ ಮನುಷ್ಯ ವಾಸಿಸುತ್ತಿದ್ದ. ಇತಿಹಾಸದುದ್ದಕ್ಕೂ ಏಷ್ಯದಿಂದ ಯುರೋಪಿಗೆ ವಲಸೆಗಾರರು ಬಂದು ನೆಲೆಸುತ್ತಿದ್ದರು. ಇವರು ಇಂಡೊ–ಯುರೋಪಿಯನ್ ಗುಂಪಿನ ಕಕೇಷಿಯನ್ ಭಾಷೆಯನ್ನು ಬಳಸುತ್ತಿದ್ದರು. ಇವರ ಕಾಲವನ್ನು ಕಂಚಿನಯುಗವೆಂದು ಕರೆಯಲಾಗುತ್ತದೆ. ಪ್ರ.ಶ.ಪೂ.1700ರ ಹೊತ್ತಿಗೆ ಏಜಿಯನ್ ಸಮುದ್ರದ ಆಸುಪಾಸಿನಲ್ಲಿ ಮೊದಲು ಕೃಷಿ ಮತ್ತು ಪಶುಸಂಗೋಪನೆಗಳು ಕಂಡುಬಂದವು. ದಕ್ಷಿಣ ಬಾಲ್ಕನ್ ಪ್ರದೇಶದಲ್ಲಿ ಪ್ರ.ಶ.ಪೂ.ಸು.6000 ದ ಹೊತ್ತಿಗೆ ಶಾಶ್ವತ ಮಾನವ ನೆಲೆಗಳು ಸ್ಥಾಪಿತವಾದವು. ಕೇಂದ್ರ ಯುರೋಪಿನಲ್ಲಿ ಪ್ರ.ಶ.ಪೂ.5000ದಲ್ಲಿ ವ್ಯವಸಾಯ ವಿಸ್ತಾರಗೊಂಡಿತು. ಪ್ರ.ಶ.ಪೂ. 2000ದ ವೇಳೆಗೆ ಐತಿಹಾಸಿಕವಾಗಿ ಮಹತ್ತರವಾದ ಜನಾಂಗಗಳೂ ರಾಷ್ಟ್ರಗಳೂ ಬೆಳೆಯುವಂತಹ ವಾತಾವರಣ ನಿರ್ಮಾಣವಾಯಿತು.

ಫ್ರಾನ್ಸ್, ದಕ್ಷಿಣ ಜರ್ಮನಿ ಮತ್ತು ಸುತ್ತಲಿನ ಪ್ರದೇಶದಲ್ಲಿ ಆರಂಭಕಾಲದ ಕೆಲ್ಟ್ ಜನಾಂಗದವರು ವಾಸಿಸುತ್ತಿದ್ದರು ಎಂದು ಅಭಿಪ್ರಾಯಪಡಲಾಗಿದೆ. ಈ ಸಂಸ್ಕೃತಿ ಬ್ರಿಟನ್, ಐರ್ಲೆಂಡ್, ಕೇಂದ್ರ ಯುರೋಪ್, ಕಾರ್ಪೆಥಿಯನ್ಸ್ ಮತ್ತು ಬಾಲ್ಕನ್ ಪ್ರದೇಶಗಳಿಗೆ ಹಬ್ಬಿತು. ಜರ್ಮಾನಿಕ್ ಅಥವಾ ಟ್ಯುಟಾನಿಕ್ ಜನಾಂಗದವರ ಮೂಲಗಳ ಬಗೆಗೆ ಸ್ಪಷ್ಟವಾದ ವಿವರಗಳು ದೊರೆತಿಲ್ಲ. ಕಂಚಿನ ಯುಗದ ಕೊನೆಯ ವೇಳೆಗೆ ಇವರು ದಕ್ಷಿಣ ಸ್ವೀಡನ್, ಡೇನಿಷ್, ಪರ್ಯಾಯದ್ವೀಪ ಮತ್ತು ಉತ್ತರ ಜರ್ಮನಿಗಳಲ್ಲಿ ಹರಡಿಕೊಂಡಿದ್ದಿರಬಹುದೆಂದು ಅಭಿಪ್ರಾಯಪಡಲಾಗಿದೆ. ಕೆಲ್ಟಿಕ್ ಬುಡಕಟ್ಟುಗಳು ವಾಸಿಸುತ್ತಿದ್ದ ಪ್ರದೇಶಗಳಿಗೂ ಇವರು ಬಂದರು. ಕಪ್ಪುಸಮುದ್ರದ ವಾಯವ್ಯ ಭಾಗದಲ್ಲಿ ಕಾರ್ಪೇಥಿಯನ್ ಬೆಟ್ಟಗಳಾಚೆ ಬಾಲ್ಟಿಕ್ ಸಮುದ್ರದವರೆಗಿನ ಹುಲ್ಲುಗಾವಲು ಪ್ರದೇಶದಲ್ಲಿ ಹಲವು ಬುಡಕಟ್ಟಿನ ಜನರು ವಾಸಿಸುತ್ತಿದ್ದರು. ಇವರಲ್ಲಿ ಅಲೆಮಾರಿ ಜನಾಂಗದ ಸಿಥಿಯನ್ನರು ಮುಖ್ಯರು.

**ಪ್ರಾಚೀನ ಗ್ರೀಕ್ ಸಂಸ್ಕೃತಿ:** ಗ್ರೀಸಿನ ಇತಿಹಾಸವನ್ನು ರೂಪಿಸುವಲ್ಲಿ ಅದರ ಸನ್ನಿವೇಶವೂ ಭೌತಲಕ್ಷಣಗಳೂ ವಾಯುಗುಣವೂ ಬಹಳ ಮುಖ್ಯಪಾತ್ರ ವಹಿಸಿವೆ. ಗ್ರೀಕರು ಮೊದಲು ನಾಗರಿಕತೆಯ ಬೆಳಕನ್ನು ಕಂಡದ್ದು ಕ್ರೀಟನ್ನರಿಂದ. ಪ್ರ.ಶ.ಪೂ.1600–1200ರ ವರೆಗೆ ಗ್ರೀಸಿನಲ್ಲಿ ಕ್ರೀಟನ್ನರ ತಾಮ್ರಯುಗದ ನಾಗರಿಕತೆ ಮತ್ತು ಸಂಸ್ಕೃತಿ ಪ್ರವರ್ಧಮಾನವಾಗಿತ್ತು. ಆಗಿನ ಅವಶೇಷಗಳು ಮೈಸೀನಿ ಪಟ್ಟಣದಲ್ಲಿ ಬಹಳ ಮಟ್ಟಿಗೆ ಕಂಡುಬಂದದ್ದರಿಂದ ಪುರಾತತ್ತ್ವಜ್ಞರು ಆ ಕಾಲವನ್ನು ಮೈಸೀನೀಯರ ಕಾಲವೆಂದು ಕರೆದಿದ್ದಾರೆ. ಗ್ರೀಸಿನ ಪ್ರಸಿದ್ಧ ಕವಿ ಹೋಮರ್ ತನ್ನ ಬರೆವಣಿಗೆಯಲ್ಲಿ ಏಷ್ಯ ಮೈನರಿನಲ್ಲಿಯ ಟ್ರಾಯ್, ಗ್ರೀಸಿನ ಮೈಸೀನಿ ಮತ್ತು ಕ್ರೀಟ್ ದ್ವೀಪಗಳನ್ನು ವರ್ಣಿಸಿದ್ದಾನೆ. ಪುರಾತತ್ತ್ವಜ್ಞರ ಶೋಧನೆಗಳಿಗೆ ಈ ವರ್ಣನೆ ಸಹಾಯಕವಾಯಿತು. 1870ರಲ್ಲಿ ಜರ್ಮನ್ ವ್ಯಾಪಾರಿ ಶ್ಲೀಮನ್ನನೂ 1900ರಲ್ಲಿ ಇಂಗ್ಲೆಂಡಿನ ಆರ್ಥರ್ ಎವಾನ್ಸ್‌ನೂ ಈಜಿಯನ್ ಪ್ರದೇಶದಲ್ಲಿ ಭೂಶೋಧನೆ ಮಾಡಿದರು. ಟ್ರಾಯ್, ಮೈಸೀನೀ ಮತ್ತು ನಾಸಸ್ ಪಟ್ಟಣಗಳಲ್ಲಿ ಸಿಕ್ಕಿದ ಅವಶೇಷಗಳು ಒಂದೇ ಬಗೆಯಾಗಿದ್ದುದರಿಂದ

ಒಟ್ಟಿನಲ್ಲಿ ಇದನ್ನು ಈಜಿಯನ್ ನಾಗರಿಕತೆ ಎಂದು ಕರೆಯಲಾಗಿದೆ. ಗ್ರೀಸಿನ ಇತಿಹಾಸದಲ್ಲಿ ಈಜಿಯನ್ ನಾಗರಿಕತೆ ಬಹಳ ಮುಖ್ಯವಾದುದು. ಪ್ರ.ಶ.ಪೂ.3000ದಲ್ಲಿ ಪ್ರಾರಂಭವಾದ ಈ ನಾಗರಿಕತೆ ತನ್ನ ಪ್ರಾಚೀನತೆಯಿಂದ ಶಿಲಾಯುಗಕ್ಕೆ ಸೇರಿದೆನ್ನಲಾಗಿದೆ. ಇಲ್ಲಿಯ ಜನ ವ್ಯಾಪಾರಿಗಳು. ಯುದ್ಧದಲ್ಲಿ ಭಲ್ಲೆ, ಕತ್ತಿಗಳನ್ನೂ ಚರ್ಮದ ಶಿರಸ್ತ್ರಾಣಗಳನ್ನೂ ಉಪಯೋಗಿಸುತ್ತಿದ್ದರು. ಈಜಿಯನರು ಚಿತ್ರಕಲೆಯನ್ನೂ ಬರೆವಣಿಗೆಯನ್ನೂ ತಿಳಿದಿದ್ದರೆಂದು ನಾಸಸ್ ನಗರದ ಉತ್ಖನನಗಳಿಂದ ತಿಳಿದುಬರುತ್ತದೆ. ವ್ಯವಸಾಯವೂ ಇವರ ಕಸಬಾಗಿತ್ತು. ಇವರು ಪ್ರಕೃತಿದೇವತೆಯ ಪೂಜಕರಾಗಿದ್ದರು. ಸತ್ತವರಿಗೆ ಸಮಾಧಿ ಕಟ್ಟಿ, ಅದರ ಮೇಲೆ ಕೆತ್ತನೆಯ ಕೆಲಸ ಮಾಡುತ್ತಿದ್ದರು. ನಾಸಸ್ ಪಟ್ಟಣದಲ್ಲಿ ಅರಮನೆಯ ಅವಶೇಷಗಳು ಸಿಕ್ಕಿವೆ. ಇದರಲ್ಲಿ ಎರಡು, ಮೂರು ಅಂತಸ್ತುಗಳು, ದೊಡ್ಡ ಪಡಸಾಲೆ, ಕೊಠಡಿಗಳು, ಚಕ್ರವ್ಯೂಹಗಳುಳ್ಳ ಆವಾರಗಳು ಇವೆ. ಗೋಡೆ ಚಿತ್ರಾಲಂಕೃತ, ನೀರಿನ ಸರಬರಾಜು, ಚರಂಡಿ ವ್ಯವಸ್ಥೆ, ಸ್ನಾನದ ಕೊಠಡಿಗಳು—ಇವು ಕ್ರೀಟನರ ಜೀವನ ವೈಶಿಷ್ಟ್ಯವನ್ನು ತೋರಿಸುತ್ತವೆ. ಈ ವೈಭವಯುಕ್ತವಾದ ನಾಗರಿಕತೆ ಪ್ರ.ಶ.ಪೂ.1350ರ ವೇಳೆಗೆ ಅಕಸ್ಮಾತ್ ನಾಶವಾಯಿತು.

ರೋಮನ್ ಕೇಂದ್ರಸ್ಥಳ

ಗ್ರೀಕರ ಆಗಮನ: ಪ್ರ.ಶ.ಪೂ.1200–550ರಲ್ಲಿ ಗ್ರೀಸ್ ದೇಶ ಈಜಿಯನ್ ಸಮುದ್ರದಾಚೆಯ ಟ್ರಾಯ್, ಏಷ್ಯ ಮೈನರಿನ ಅನೇಕ ಪ್ರದೇಶಗಳು, ಕಪ್ಪುಸಮುದ್ರದ ದಕ್ಷಿಣ ತೀರದ ಭಾಗ ಮತ್ತು ಆಫ್ರಿಕದ ಮೆಡಿಟರೇನಿಯನ್ ಸಮುದ್ರತೀರಗಳನ್ನೊಳಗೊಂಡಿತ್ತು. ಇವರದು ಅನೇಕ ಪಂಗಡಗಳನ್ನೊಳಗೊಂಡ ಜನಾಂಗವಾಗಿತ್ತು. ಇವರ ಭಾಷೆ ಸಂಸ್ಕೃತ, ಪರ್ಷಿಯನ್ ಭಾಷೆಗಳನ್ನೂ ಹೋಲುತ್ತಿದ್ದುದರಿಂದ ಇವರು ಆರ್ಯರ ಅಥವಾ ಇಂಡೋ–ಯುರೋಪಿಯನ್ನರ ಬುಡಕಟ್ಟಿಗೆ ಸೇರಿದವರೆಂದು ಹೇಳಬಹುದು. ಪ್ರ.ಶ.ಪೂ.1100ರಲ್ಲಿ ಉತ್ತರದ ಕಡೆಯಿಂದ ಅನಾಗರಿಕರಾದ ಡೋರಿಯನರು ನುಗ್ಗಿ ಬಂದು, ಧಾಳಿ ನಡೆಸಿ ಹೋದೆಡೆಯಲ್ಲೆಲ್ಲ ನಾಗರಿಕತೆಯ ಕುರುಹುಗಳನ್ನು ನಾಶಮಾಡಿದರು. ಅಕೀಯನರು ಒಂದು ಗುಂಪು ಕ್ರೀಟ್ ದ್ವೀಪವನ್ನು ಆಕ್ರಮಿಸಿಕೊಂಡು ಈಜಿಯನ್ ನಾಗರಿಕತೆಯನ್ನು ಪೂರ್ಣವಾಗಿ ನಾಶಮಾಡಿತು. ಮತ್ತೊಂದು ಗುಂಪಿನವರು ಟ್ರಾಯ್ ಪಟ್ಟಣವನ್ನು ವಶಪಡಿಸಿಕೊಂಡು ಫ್ರಿಜಿಯದಲ್ಲಿ ನೆಲಸಿ ಫ್ರಿಜಿಯನ್ನರೆಂದು ಹೆಸರಾದರು. ಇವರು ಮುಂದೆ ಟ್ರೋಜನರೆಂದೂ ಎನಿಸಿಕೊಂಡರು. ಹೀಗೆ ನಾನಾ ಗುಂಪುಗಳು ತಂಡತಂಡವಾಗಿ ವಲಸೆ ಬಂದು, ಧಾಳಿ ಮಾಡಿ ಗ್ರೀಸಿನ ಎಲ್ಲೆಡೆಗಳಲ್ಲೂ ನೆಲೆಸಿದವು. ಇವರೆಲ್ಲ ಒಂದೇ ಬುಡಕಟ್ಟಿನವರು. ಒಂದೇ ಬಗೆಯ ಭಾಷೆ ಆಡುತ್ತಿದ್ದರು. ಇವರನ್ನು ಒಟ್ಟಿನಲ್ಲಿ ಗ್ರೀಕರು ಅಥವಾ ಹೆಲೆನರು ಎಂದು ಕರೆಯುತ್ತಾರೆ. ಪುರಾತನ ಕಾವ್ಯಗಳಲ್ಲಿ ಗ್ರೀಸ್ ದೇಶವನ್ನು ಹೆಲ್ಲಾಸ್ ಎಂದು ಕರೆಯುತ್ತಿದ್ದರಿಂದ ಇವರನ್ನು ಹೆಲೆನರು ಎಂದು ಕರೆಯಲಾಗಿದೆ. ಮೈಸೀನಿ ನಾಗರಿಕತೆಯನ್ನು ನಾಶಮಾಡಿದ ಅಕೀಯನರ ಅನಂತರದ ಇತಿಹಾಸವನ್ನು ತಿಳಿಯಲು ಹೋಮರ್ ಕವಿಯ ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳೇ ಮೂಲಾಧಾರಗಳು.

ಗ್ರೀಕರ ದೇವೇಂದ್ರನೆನಿಸಿದ ಜ್ಯೂಸ್ ದೇವತೆ ಟ್ಯಾಂಟಲಸನಿಗೆ ಜನ್ಮವಿತ್ತನೆಂದು ಒಂದು ಕತೆ. ಈತ ಫ್ರಿಜಿಯದ ಅರಸನಾದ. ಟ್ಯಾಂಟಲಸನ ಮಗ ಪಿ ಲಾಪ್ಸ್. ಅಗಮೆಮ್ನಾನ್ ಮತ್ತು ಮೆನಲಸರು ಪೀಲಾಪ್ಸನ ಮಗನಾದ ಏಟ್ರಿಯಸನ ಮಕ್ಕಳು, ಟ್ಯಾಂಟಲಸನ ಮರಿಮಕ್ಕಳು. ಅಪ್ರತಿಮ ಯೋಧರೆನಿಸಿದ ಇವರು ಟ್ರೋಜನ್ ಕದನದಲ್ಲಿ ಭಾಗವಹಿಸಿದರು. ಟ್ರಾಯ್ ರಾಜಕುಮಾರ ಪ್ಯಾರೀಸ್ ಸ್ಪಾರ್ಟದ ಹೆಲೆನಳನ್ನು ಅಪಹರಿಸಿಕೊಂಡು ಹೋಗಿದ್ದ. ಇದಕ್ಕೆ ಸೇಡು ತೀರಿಸಿಕೊಳ್ಳಲು ಗ್ರೀಕರು ಟ್ರಾಯ್ ನಗರವನ್ನು ಮುತ್ತಿ ನಾಶಮಾಡಿದರು. ಇದು ಇಲಿಯಡಿನ ಕಥಾವಸ್ತು. ಈ ಘಟನೆಯ ಅನಂತರ ಒಡಿಸಸ್ ವೀರ ಸ್ವದೇಶಕ್ಕೆ ಹಿಂದಿರುಗುವಾಗ ಅನುಭವಿಸಿದ ಕಷ್ಟಪರಂಪರೆಗಳ ಕಥನ ಹೋಮರನ ಒಡಿಸಿಯಲ್ಲಿದೆ. ಈ ಎರಡು ಮಹಾಕಾವ್ಯಗಳ ಕರ್ತೃ ಹೋಮರ ಎನ್ನಲಾಗಿದೆ. ಈ ಮಹಾಕಾವ್ಯಗಳು ಗ್ರೀಕರೆಲ್ಲರಿಗೂ ಪವಿತ್ರ ಗ್ರಂಥಗಳು, ಭಾರತದ ರಾಮಾಯಣ, ಮಹಾಭಾರತಗಳಂತೆ. ಇವು ಗ್ರೀಕ್ ವೀರರ ಶೌರ್ಯ ಕಥನಗಳು. ಅಲ್ಲಿಯ ಹಾಡುಗಾರರು ಈ ಕಾವ್ಯಗಳನ್ನು ಹಾಡುತ್ತ ಊರಿಂದೂರಿಗೆ ಸಂಚರಿಸುತ್ತಿದ್ದರು. 6ನೆಯ ಶತಮಾನದಲ್ಲಿ ಈ ಎರಡು ಕಾವ್ಯಗಳನ್ನು ಬರೆದಿಡಲಾಯಿತು. ಈ ಕಾವ್ಯಗಳಲ್ಲಿ ಗ್ರೀಸಿನ ಆಗಿನ ರಾಜಕೀಯ ಸಾಮಾಜಿಕ ಸ್ಥಿತಿಗತಿಗಳ ವರ್ಣನೆಯಿದೆ. ಆ ಕಾಲದಲ್ಲೇ ರಾಜತ್ವ, ಶ್ರೀಮಂತ ಪ್ರಭುತ್ವ ಮತ್ತು ಪ್ರಜಾಪ್ರಭುತ್ವಗಳು ಉಗಮಿಸುತ್ತಿದ್ದುವೆಂಬುದು ಇವುಗಳಿಂದ ತಿಳಿದುಬರುತ್ತದೆ.

ಗ್ರೀಸಿನ ಇನ್ನೊಬ್ಬ ಕವಿ ಹೆಸಿಯಡ್ (ಪ್ರ.ಶ.ಪೂ.750–700). ತನ್ನ ತಿಯೊಗಮಿಯ ಕಾವ್ಯದಲ್ಲಿ ಗ್ರೀಕರು ತಮ್ಮ ಅಸಂಖ್ಯಾತ ದೇವತೆಗಳಲ್ಲಿಟ್ಟಿದ್ದ ಭಯಭಕ್ತಿಗಳ ನಿರೂಪಣೆಯಿದೆ. ಮಾನವರಂತೆಯೇ ಗ್ರೀಕ್‌ದೇವತೆಗಳೂ ಆಟಪಾಟಗಳಲ್ಲಿ ತೊಡಗುತ್ತಿದ್ದರು. ಮಾನವ ಸಹಜವಾದ ವೈಮನಸ್ಯ, ಪ್ರೇಮ, ಕ್ರೌರ್ಯ ಪೂರಿತರು. ಹೇಡೀಸ್ ಅಧೋಲೋಕದ, ಪಿತೃಲೋಕದ ದೇವತೆ, ಏರೀಸ್ ಯುದ್ಧದೇವತೆ, ಅಪಾಲೊ ಬೆಳಕಿನ, ಎಪೊಸಾಸ್ ಅಗ್ನಿಯ, ಡಯೊನಿಸಸ್ ಮದ್ಯದ, ಅಥೇನ ಕಲೆಯ, ಆಪ್ರೋಡೈಟಿ ಪ್ರೇಮದ ಅಧಿದೇವತೆಗಳು – ಹೇಡ್ಸನ ಮಕ್ಕಳು.

ಅಕೀಯನರು ಮೈಸೀನೀಯರಿಗಿಂತ ಹೆಚ್ಚು ಒರಟು. ವ್ಯವಸಾಯ ಇವರ ಮುಖ್ಯ ಕಸಬು. ಮೊದಮೊದಲು ಇವರ ಇಡೀ ಪರಿವಾರ ಉಳುವ ಭೂಮಿಯ ಮೇಲೆ ಸ್ವಾಮ್ಯ ಹೊಂದಿತ್ತು. ಕುಟುಂಬಕ್ಕೆ ಪಿತೃ ಪ್ರಧಾನನಾದರೂ ಅವನಿಗೆ ಜಮೀನನ್ನು ಮಾರುವ ಹಕ್ಕಿರಲಿಲ್ಲ. ಆದರೆ ಕ್ರಮೇಣ ಭೂಮಿಯನ್ನು ಶ್ರೀಮಂತರು ಕ್ರಯಕ್ಕೆ ಪಡೆದುಕೊಂಡರು. ಸಮುದ್ರ ವ್ಯಾಪಾರ ಸುಲಭವಾಗಿತ್ತು. ವಿನಿಮಯಕ್ಕೆ ಕಬ್ಬಿಣ, ಕಂಚು, ಚಿನ್ನದ ತುಂಡುಗಳನ್ನು ಉಪಯೋಗಿಸುತ್ತಿದ್ದರು. ಯುದ್ಧಸಮಯದಲ್ಲಿ ಗುಂಪಿನ ಮುಖ್ಯಸ್ಥನೇ ಸರ್ವಾಧಿಕಾರಿಯಂತೆ ಪರಿವಾರ ಕ್ಷೇಮದ ಹೊಣೆ ಹೊರುತ್ತಿದ್ದ. ಪ್ರಜೆಗಳ ಬೆಂಬಲಕ್ಕಾಗಿ ಗುಂಪಿನ ಮುಖಂಡ ಅವರ ಸಭೆಯನ್ನು ಕರೆಯುತ್ತಿದ್ದ. ಅವರ ಅಭಿಪ್ರಾಯಕ್ಕೆ ಮನ್ನಣೆ ಇತ್ತು. ಮೊದಮೊದಲು ಈ ಮುಖಂಡನನ್ನು ಅಧಿಕಾರಚ್ಯುತನಾಗಿ ಮಾಡಬಹುದಿತ್ತು. ಆದರೆ ಕ್ರಮೇಣ ರಾಜತ್ವ ಅನುವಂಶಿಕವಾಯಿತು. ಆತನನ್ನು ಸಮಾಜದ ಸೇನಾನಿ, ನ್ಯಾಯಾಧೀಶ ಮತ್ತು ಪುರೋಹಿತನೆಂದು ಭಾವಿಸಲಾಯಿತು.

ಟ್ರೋಜನ್ ಕದನದ ಬಳಿಕ ಗ್ರೀಸಿನಲ್ಲಿ ಅನೇಕ ಬದಲಾವಣೆಗಳುಂಟಾದವು. ಅಕೀಯನರ ಮೇಲೆ ಧಾಳಿ ಮಾಡಿದ ಡೋರಿಯನರು ಇಲ್ಲಿ ನೆಲಸಿ ಇಲ್ಲಿಯ ಜನರೊಡನೆ ಬೆರೆತರು. ಇವರೊಡನೆ ಅಯೋನಿಯನರು ಸೇರಿದರು. ಇವರೆಲ್ಲ ಕೂಡಿ ಗ್ರೀಕರೆನಿಸಿಕೊಂಡರು. ಜನಸಂಖ್ಯೆಯ ಒತ್ತಡ ಹೆಚ್ಚಾಗಿದ್ದುದರಿಂದ ಸ್ವಾತಂತ್ರ್ಯ ಪ್ರೇಮಿಗಳಾದ ಗ್ರೀಕರು ಬೇರೆ ಕಡೆಗೆ ವಲಸೆ ಹೊರಟರು. ಕೆಲವರು ಈಜಿಯನ್ ಸಮುದ್ರವನ್ನು ದಾಟಿ ಏಷ್ಯ ಮೈನರಿನ ಕೆಲವು ಭಾಗಗಳಲ್ಲಿ ನೆಲೆಸಿದರು. ಪ್ರ.ಶ.ಪೂ.750–500 ಕಾಲದ ಗ್ರೀಕರ ವಸಾಹತುಗಳಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ, ವಾಣಿಜ್ಯಕ ಮುಂತಾದ ಅನೇಕ ಕಾರಣಗಳಿದ್ದವು. ಫಲವತ್ತಾದ ಮತ್ತು ವ್ಯಾಪಾರಕ್ಕೆ ಅನುಕೂಲವಿದ್ದ ಪ್ರದೇಶಗಳಲ್ಲಿ ಗ್ರೀಕ್ ವಸಾಹತುಗಳು ಹರಡಿದ್ದವು. ಗ್ರೀಕರು ನೆಲಸಿದಲ್ಲೆಲ್ಲ ಒಲಿಂಪಿಕ್ ಕ್ರೀಡಾಪಂದ್ಯಗಳು, ದಿವ್ಯವಾಣಿ, ಒಂದೇ ಭಾಷೆ, ಹೋಮರನ ವೀರ ಕಾವ್ಯಗಳಲ್ಲಿಯ ಪೂಜ್ಯ ಭಾವನೆ – ಇವು ಗ್ರೀಕ್ ಸಂಘಟನೆಯ ಮುಖ್ಯ ಅಂಶಗಳು.

ಈ ವಲಸೆಗಳ ಪರಿಣಾಮವಾಗಿ ಜನಜೀವನದಲ್ಲೂ ಮಾರ್ಪಾಡುಗಳಾದವು. ಹಿಂದಿನ ಗ್ರಾಮಜೀವನಕ್ಕೆ ಬದಲು ನಗರಜೀವನ ಆರಂಭವಾಯಿತು. ವ್ಯಾಪಾರೋದ್ಯಮಗಳು ಹೆಚ್ಚಿದಂತೆಲ್ಲ ಹಿಂದಿನ ವಿನಿಮಯ ಪದ್ಧತಿಗೆ ಬದಲು ನಾಣ್ಯದ ಉಪಯೋಗ ಜಾರಿಗೆ ಬಂದಿತು. ಆಡಳಿತದಲ್ಲಿ ಹೆಚ್ಚಿನ ಹತೋಟಿಯ ಆವಶ್ಯಕತೆ ಉಂಟಾಯಿತು. ಪ್ರತಿಯೊಂದು ನಗರವೂ ರಾಜ್ಯವೆನಿಸಿಕೊಂಡು ಪ್ರತ್ಯೇಕವಾದ ಸರ್ಕಾರವನ್ನು ಪಡೆಯಿತು. ಆಕ್ರೊಪಲಿಸ್ ನಗರ ಜೀವನದ ಕೇಂದ್ರ, ದುರ್ಗ. ನಗರರಾಜ್ಯದ ಉನ್ನತ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಿ ಅದರಲ್ಲಿ ಆ ನಗರದ ರಾಜ ಪ್ರಮುಖ ವಾಸಿಸುತ್ತಿದ್ದ. ಗ್ರೀಸ್ ದೇಶ ಪರ್ವತಮಯವಾಗಿದ್ದುದರಿಂದ ಅಲ್ಲಿ ಒಳಸಂಚಾರ ಪ್ರಯಾಸಕರವಾಗಿತ್ತು. ಆದ್ದರಿಂದ ಗ್ರೀಕರು ವಿಶಾಲವಾದ ರಾಜ್ಯವನ್ನು ಕಟ್ಟಲಿಲ್ಲ. ನಗರರಾಜ್ಯವೇ ಅವರಲ್ಲಿಯ ಉಚ್ಚಮಟ್ಟದ ರಾಜಕೀಯ ಘಟಕವಾಯಿತು. ನಗರ ರಾಜ್ಯಗಳ ನಡುವೆ ಸಾಮಾನ್ಯವಾಗಿ ಕಲಹಗಳಿದ್ದುವು. ಸ್ಪಾರ್ಟ ಮತ್ತು ಅಥೆನ್ಸ್ ಪ್ರಮುಖ ನಗರರಾಜ್ಯಗಳು.

ಹೋಮರನ ಕಾಲದಲ್ಲಿ ಗಣರಾಜ್ಯವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಅನಂತರ ರಾಜ ಪ್ರಭುತ್ವ ಜಾರಿಗೆ ಬಂತು. ರಾಜ ನಿರಂಕುಶಾಧಿಕಾರಿಯಾಗಿದ್ದ. ಅವನಿಗೆ ಆಡಳಿತ ವಿಷಯದಲ್ಲಿ ಸಲಹೆ ನೀಡಲು ಕುಲಗಳ ಮುಖ್ಯಸ್ಥರನ್ನೊಳಗೊಂಡ ಮಂತ್ರಾಲೋಚಕ ಸಭೆಯೊಂದಿತ್ತು. ಸ್ವತಂತ್ರ ಪೌರರನ್ನೊಳಗೊಂಡ ಒಂದು ಪ್ರಜಾಪ್ರತಿನಿಧಿ ಸಭೆಯೂ ಇತ್ತು. ಇದು ತನ್ನ ಬೇಡಿಕೆಗಳನ್ನೂ ಸೂಚನೆಗಳನ್ನೂ ಹಿರಿಯರ ಸಭೆಗೆ ಅನುಮೋದನೆಗೆ ಕಳುಹಿಸುತ್ತಿತ್ತು. ಆದರೂ ಕ್ರಮೇಣ ರಾಜ ದರ್ಪಿಷ್ಠನಾಗಿ ಪ್ರಜಾಪೀಡಕನಾದಾಗ ಜನ ಅವನನ್ನು ವಿರೋಧಿಸಿದರು. ಪ್ರ.ಶ.ಪೂ.8ನೆಯ ಶತಮಾನದ ವೇಳೆಗೆ ರಾಜತ್ವ ಕ್ಷೀಣಿಸಿ ನಗರದ ಶ್ರೀಮಂತ ಪ್ರಜೆಗಳು ಆಡಳಿತ ನಿರ್ವಹಣೆಯನ್ನು ವಹಿಸಿದರು. ಶ್ರೀಮಂತವರ್ಗ ರಾಜನನ್ನು ಹೊರದೂಡುವುದರ ಹಾಗೂ ರಾಜನನ್ನು ಆರಿಸುವುದರ ಮೂಲಕವೇ ಅನುವಂಶಿಕ ರಾಜಪದ್ಧತಿಯನ್ನು ತೊಲಗಿಸಿತು. ರಾಜ ರಾಜ್ಯದ ಇತರ ಅಧಿಕಾರಿಗಳಂತೆ ಒಬ್ಬ ಅಧಿಕಾರಿಯಾದ.

ಕಾನೂನುಗಳ ಕ್ರೋಢೀಕರಣ ಶ್ರೀಮಂತ ಪ್ರಭುತ್ವದ ವಿಶಿಷ್ಟ ಕೊಡುಗೆ. ಮೊದಮೊದಲು ಕಾನೂನುಗಳು ಲಿಖಿತರೂಪದಲ್ಲಿಲ್ಲದೆ ಸಾಂಪ್ರದಾಯಿಕವಾಗಿದ್ದಾಗ, ಅವನ್ನು ತನಗೆ ಅನುಕೂಲವಾಗಿ ಅರ್ಥವಿಸುವ ಹಕ್ಕನ್ನು ಶ್ರೀಮಂತವರ್ಗ ಪಡೆದಿತ್ತು. ಆದರೆ ಕ್ರಮೇಣ ಪ್ರಜೆಗಳು ಈ

ಪದ್ಧತಿಯನ್ನು ವಿರೋಧಿಸಿದಾಗ ಕಾನೂನುಗಳನ್ನು ಕ್ರೋಢೀಕರಿಸುವ ಕಾರ್ಯ ಆರಂಭವಾಯಿತು. ಇವು ಅಪರಾಧ, ದಂಡಗಳು, ಜನರ ಆಚಾರ, ಅಭಿರುಚಿ, ಉಡುಗೆ ತೊಡುಗೆಗಳಲ್ಲೂ ನಿರ್ದಿಷ್ಟವಾದ ಕಟ್ಟಳೆಗಳನ್ನು ರೂಪಿಸತೊಡಗಿದವು. ವಾಣಿಜ್ಯಾಭಿವೃದ್ಧಿಯಿಂದ ದೇಶ ಶ್ರೀಮಂತವಾಯಿತಾದರೂ ಆ ಶ್ರೀಮಂತಿಕೆಯಲ್ಲಿ ಎಲ್ಲರಿಗೂ ಪಾಲು ಇರಲಿಲ್ಲ. ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಶ್ರೀಮಂತರು ರೈತರ ಹಿತಗಳನ್ನು ನಿರ್ಲಕ್ಷಿಸಿದರು. ಪ್ರಜಾಶೋಷಣೆ ಸಾಮಾನ್ಯ ಜನತೆಯನ್ನು ಕಂಗೆಡಿಸಿತು. ಬಡವರು ಗುಲಾಮರಾದರು. ಬೇಸತ್ತ ಜನ ಶ್ರೀಮಂತಪ್ರಭುತ್ವವನ್ನು ಕೊನೆಗಾಣಿಸಿದರು. ಶೋಷಿತವರ್ಗದ ನಾಯಕನ ಕೈಗೆ ಅಧಿಕಾರ ವರ್ಗಾವಣೆಯಾಯಿತು. ಇಂಥ ಜನ ನಾಯಕನನ್ನು ಟೈರಂಟ್ ಎಂದು ಕರೆಯಲಾಗಿದೆಯಾದರೂ ಆ ಪದಕ್ಕೆ ಕ್ರೂರಿ, ಪ್ರಜಾಪೀಡಕ ಎಂಬ ಈಗಿನ ಅರ್ಥವನ್ನು ಅನ್ವಯಿಸಲಾಗದು. ವಾಸ್ತವಿಕವಾಗಿ ಈತ ಜನನಾಯಕ; ಜನರ ಹಿತರಕ್ಷಣೆಗಾಗಿ ಶ್ರೀಮಂತರ ದರ್ಪ ಆಡಳಿತದ ವಿರುದ್ಧ ಮಸೆದು ಬಲಪ್ರಯೋಗ ಮಾಡಿ ಅವರನ್ನು ಅಧಿಕಾರದಿಂದ ಹೊರದೂಡಿ ಅಧಿಕಾರದ ಸೂತ್ರಗಳನ್ನು ವಹಿಸಿದ. ಈತ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವ ನಿರಂಕುಶ ಪ್ರಭುವಾಗಿದ್ದ. ಆದರೆ ಕ್ರಮೇಣ ಇಂಥ ನಾಯಕರೂ ಅಧಿಕಾರಮದದಿಂದ ತಮ್ಮ ಕರ್ತವ್ಯವನ್ನು ಮರೆತು ಪ್ರಜಾಪೀಡಕರಾದರು. ಇವರೂ ಅದೇ ಕಾರಣದಿಂದ ಅಧಿಕಾರವನ್ನು ಕಳೆದುಕೊಂಡರು. ಕೊನೆಗೆ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂತು.

ಸ್ಪಾರ್ಟನರ ರಾಜಕೀಯ ಪದ್ಧತಿಯ ಶಿಖರದಲ್ಲಿ ಇಬ್ಬರು ಅರಸರಿದ್ದರು. ಇವರು ಅಧಿಕಾರವನ್ನು ಮುಂದುವರಿಸುತ್ತ ಬಂದರಾದರೂ ಲೈಕರ್ಸನ (ಪ್ರ.ಶ.ಪೂ.600) ಸುಧಾರಣೆಗಳ ಪರಿಣಾಮವಾಗಿ ಕ್ರಮೇಣ ತಮ್ಮ ಅಧಿಕಾರವನ್ನು ಯೂಸಫರರಿಗೆ ಬಿಟ್ಟುಕೊಟ್ಟರು. ಜೆರೂಷಿಯ ಎಂಬುದು ಶಿಷ್ಟಸಭೆ. ಇಬ್ಬರು ರಾಜರ ಜೊತೆಗೆ 28 ಮಂದಿ ಹಿರಿಯರು ಇದರ ಸದಸ್ಯರಾಗಿದ್ದರು. ಅಪೆಲ ಎಂಬ ಪೌರಸಭೆಯ ಅನುಮತಿಗೆ ಕಳುಹಿಸಬೇಕಾದ ಎಲ್ಲ ವಿಷಯಗಳನ್ನೂ ಇವರು ಮೊದಲು ಪರಿಶೀಲಿಸುತ್ತಿದ್ದರು. ಜೆರೂಷಿಯದ ಸದಸ್ಯರಿಗೆ 60 ವರ್ಷ ವಯಸ್ಸಾಗಬೇಕಿತ್ತು. ಇವರು ಚುನಾಯಿತ ಸದಸ್ಯರು. ಈ ಶಿಷ್ಟ ಸಭೆ ಉಚ್ಚ ನ್ಯಾಯಾಲಯವೂ ಆಗಿತ್ತು. ಅಪೆಲ ಸಾಮಾನ್ಯ ಸದಸ್ಯರ ಸಭೆ. ಇದಕ್ಕೆ ಸದಸ್ಯರಾಗುವ ಎಲ್ಲ ಪೌರರು ಕನಿಷ್ಠ 30 ವರ್ಷ ವಯಸ್ಸಿನವರು. ಜೆರೂಷಿಯದ ಪರಿಶೀಲನೆಗೆ ಬಂದ ವಿಷಯಗಳನ್ನು ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕು ಈ ಸಭೆಗೆ ಇತ್ತು. ನ್ಯಾಯಾಧಿಕಾರಿಗಳನ್ನು ನೇಮಿಸುವ, ಅರಸನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಂತಿಮ ಒಪ್ಪಿಗೆ ನೀಡುವ ಅಧಿಕಾರ ಈ ಸಭೆಗೆ ಇತ್ತಾದರೂ ಯಾವ ವಿಷಯವನ್ನೂ ಮಂಡಿಸುವ ಅಧಿಕಾರ ಇದಕ್ಕಿರಲಿಲ್ಲ. ಯೊಫರೇಟ್ ಎಂಬ ಸಂಸ್ಥೆಯಲ್ಲಿ ಐದು ಜನ ಸರ್ವಾಧಿಕಾರಿಗಳಿದ್ದರು. ಅರಸರ ಅಧಿಕಾರಗಳನ್ನು ಕ್ರಮೇಣ ಇವರು ತಮ್ಮದನ್ನಾಗಿ ಮಾಡಿಕೊಂಡರು.

ಎಲ್ಲಕ್ಕಿಂತ ಮುಖ್ಯವಾದುದು ಸ್ಪಾರ್ಟ ಜನರಲ್ಲಿ ಮೂಡಿಬಂದ ಸೈನಿಕ ಶಿಸ್ತು. ಪ್ರಜೆಗಳು ರಾಜ್ಯದ ಕಾನೂನನ್ನು ಸರ್ವವಿಧದಲ್ಲೂ ಗೌರವಿಸಬೇಕಾಗಿತ್ತು. ಸ್ಪಾರ್ಟದ ಪ್ರಜೆಗಳು ಸರ್ಕಾರದ ಸೊತ್ತು. ಅವರ ಜೀವನವನ್ನು ರೂಪಿಸುತ್ತಿದ್ದುದು ಸರ್ಕಾರ. ಮಗು ಹುಟ್ಟಿದ ಕೂಡಲೇ ಟೆಗೇಟಸ್ ಗುಡ್ಡದ ಮೇಲಿನ ಬಯಲಿನಲ್ಲಿ ಮೂರು ದಿನಗಳನ್ನು ಕಳೆಯಬೇಕಿತ್ತು. ಆಮೇಲೂ ಬದುಕುಳಿದ್ದಲ್ಲಿ ಅದನ್ನು ರಾಷ್ಟ್ರದ ಪ್ರಜೆ ಎಂದು ಸ್ವೀಕರಿಸಿ, ಸರ್ಕಾರದಿಂದ ನಿಯಮಿತರಾದ ದಾದಿಗಳು ಪೋಷಿಸುತ್ತಿದ್ದರು. ಅನಂತರ ಏಳನೆಯ ವರ್ಷದಿಂದ 13ನೆಯ ವರ್ಷದವರೆಗೆ ಅದಕ್ಕೆ ದೈಹಿಕ ಶಿಕ್ಷಣ ಕೊಡಲಾಗುತ್ತಿತ್ತು. ಕಟ್ಟುನಿಟ್ಟಾದ ನಿಯಮಗಳನ್ನು ಶಿಸ್ತಿನಿಂದ ಪಾಲಿಸುವುದು ಮಕ್ಕಳು ಕಲಿಯಬೇಕಾಗಿದ್ದ ಮೊದಲ ಪಾಠ. ಮಾನಸಿಕ ಶಿಕ್ಷಣ ಮಹತ್ತ್ವದ್ದಾಗಿರಲಿಲ್ಲ. ಇವರ ಜೀವನ ದೇಶದ ರಕ್ಷಣೆಗೆ ಮುಡಿಪಾಗಿತ್ತು. ಇವರ ಜೀವನೋಪಾಯಕ್ಕೆ ಸರ್ಕಾರ ಭೂಮಿಯನ್ನು ಕೊಡುತ್ತಿತ್ತು. ಹೆಲಿಟರು ಅದನ್ನು ಸಾಗುವಳಿ ಮಾಡಿ ಧಾನ್ಯವನ್ನು ಒಡೆಯನಿಗೆ ಸಲ್ಲಿಸುತ್ತಿದ್ದರು. ಯೋಗ್ಯರಾದ ಬಲಿಷ್ಠ, ಆರೋಗ್ಯವಂತ ಮಕ್ಕಳನ್ನು ರಾಷ್ಟ್ರಕ್ಕೆ ಒದಗಿಸುವುದು ಮದುವೆಯ ಗುರಿ. ಮಹಿಳೆಯರು ದೃಢಕಾಯರಾಗಿದ್ದು ಉತ್ಸಾಹಕರವಾದ ಪೀಳಿಗೆಯನ್ನು ಪಡೆಯುವ ಹೊಣೆ ಹೊತ್ತಿದ್ದರು. ಪ್ರಜೆಗಳಲ್ಲಿ ದುರಾಶೆಗೆ ಅವಕಾಶವಿಲ್ಲದಿರಲು ಚಿನ್ನ, ಬೆಳ್ಳಿ ಮುಂತಾದ ಅಮೂಲ್ಯ ಲೋಹಗಳ ನಾಣ್ಯಗಳನ್ನು ಬಳಸದೆ ಕಬ್ಬಿಣದ ತುಂಡುಗಳನ್ನು ವಿನಿಮಯಕ್ಕಾಗಿ ಬಳಸಲಾಗುತ್ತಿತ್ತು. ಇಡೀ ರಾಷ್ಟ್ರವೇ ಒಂದು ಸೈನಿಕ ಶಿಕ್ಷಣ ಶಾಲೆಯಾಗಿ ಮಾರ್ಪಟ್ಟಿತ್ತು.

ಅಥೆನ್ಸ್: ಗ್ರೀಕ್ ನಗರ ರಾಜ್ಯಗಳಲ್ಲಿ ಅಥೆನ್ಸ್ ಪ್ರಸಿದ್ಧವಾದದ್ದು. ಗೀಕ್ ಸಂಸ್ಕೃತಿಯ ಕೇಂದ್ರನಗರವಿದು. ಪ್ರ.ಶ.ಪೂ.ಸು.700ರ ವೇಳೆಗೆ ಆಟಿಕ ಪ್ರದೇಶದ ಹಲವಾರು ನಗರಗಳು ಅಥೆನ್ಸ್ ರಾಜ್ಯದ ಭಾಗಗಳಾಗಿದ್ದುವು. ಹಳೆಯ ಕುಟುಂಬಗಳು, ಶ್ರೀಮಂತ ರೈತವರ್ಗಗಳು ಅಧಿಕಾರದ ತಕ್ಕಡಿ ಹಿಡಿದಿದ್ದುವು. ಡೋರಿಯನರ ಧಾಳಿಯ ಸಮಯದಲ್ಲಿ ಕೊಡ್ರಸ್ ಎಂಬ ಅರಸ ಆಳುತ್ತಿದ್ದನಾದರೂ ಅವನ ಅನಂತರ ಪ್ರ.ಶ.ಪೂ.752ರ ಆರ್ಕನ್ ಎಂಬ ನಾಯಕನ ಕೈಗೆ ಶ್ರೀಮಂತರು ಅಧಿಕಾರವಿತ್ತರು. ಅನಂತರ ಅದು 10 ವರ್ಷಗಳಿಗೆ ಸೀಮಿತಗೊಂಡಿತು (ಪ್ರ.ಶ.ಪೂ.683). ಈಗ ಇವನೊಂದಿಗೆ ಇನ್ನೂ ಎಂಟುಜನ– ಒಬ್ಬ ಬೆಸಿಲಿಯನ್ (ರಾಜ, ಧರ್ಮಾಧಿಕಾರಿ), ಸೇನಾನಿ (ಪೊಲೆಮಾರ್ಕಸ್) ಮತ್ತು 6 ಜನ ಥೆಸ್ಮೊಥಿಟಿಸ್ ಎಂಬ ಕಾನೂನಿನ ಅಧಿಕಾರಿಗಳು ಇದ್ದರು. ಅಥೆನ್ಸಿನ ಸಂವಿಧಾನದಲ್ಲಿ ರಾಜನೆಂಬ ಹೆಸರು ಉಳಿದರೂ ರಾಜತ್ವ ಉಳಿಯಲಿಲ್ಲ. ಬೂಲಿ ಎಂಬ ಸಭೆ ಆರೆ ಬೆಟ್ಟದ ಬುಡದಲ್ಲಿ ಸಭೆ ಸೇರಿ ಈ ಅಧಿಕಾರವರ್ಗವನ್ನು ಚುನಾಯಿಸುತ್ತಿತ್ತು. ಇದಕ್ಕೆ ಈರಪಗಸ್ ಎಂಬ ಹೆಸರೂ ಇದೆ. ಇದು ಶ್ರೀಮಂತರ ಸಭೆ. ಸಮಾಜದಲ್ಲಿ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಶ್ರೀಮಂತರು, ವ್ಯಾಪಾರಿಗಳು ಮತ್ತು ಕಸಬುದಾರರು ಹಾಗೂ ಒಕ್ಕಲಿಗರು ಎಂಬ ಮೂರು ವರ್ಗಗಳಿದ್ದುವು. ವ್ಯವಸಾಯಗಾರರ ಹಿಡುವಳಿಗಳು ಆರಂಭದಲ್ಲಿ ಹಿಂದಾಗಿದ್ದರೂ ಕುಲ ಬೆಳೆದಂತೆಲ್ಲ, ಅವರ ಜನಸಂಖ್ಯೆ ಹೆಚ್ಚಿದಂತೆಲ್ಲ, ಭೂಮಿ ವಿಂಗಡವಾಗಿ ಲಾಭದಾಯಕವಾಗದೆ ಕ್ರಮೇಣ ಈ ತುಂಡು ಭೂಮಿಗಳನ್ನು ಇವರು ಶ್ರೀಮಂತರಿಗೆ ವಿಕ್ರಯಿಸಿ ಅವರ ತೊತ್ತುಗಳಾಗಿ ದುಡಿದರು. ಗುಲಾಮವರ್ಗ ಕ್ರಮೇಣ ಬೆಳೆಯಿತು. ಪಟ್ಟಣಗಳಲ್ಲಿ ಮಧ್ಯಮವರ್ಗದವರು ಸ್ವತಂತ್ರ ಕೂಲಿಗಾರರನ್ನು ಆರ್ಥಿಕ ದುಃಸ್ಥಿತಿಗೀಡುಮಾಡಿ ಗುಲಾಮರ ಸಂಖ್ಯೆ ಹೆಚ್ಚಲು ಕಾರಣರಾದರು. ಸಾಮಾಜಿಕ ಪರಿಸ್ಥಿತಿ ಅಲ್ಲೋಲಕಲ್ಲೋಲವಾಯಿತು. ಕ್ರೇಡೋ ಎಂಬ ಥೆಸ್ಮೊಥಿಟ (ಪ್ರ.ಶ.ಪೂ.620) ಕಾನೂನುಗಳನ್ನು ಕ್ರೋಢೀಕರಿಸಿ ಬರೆಹಕ್ಕೆ ಇಳಿಸಿ ಆಟಿಕದಲ್ಲಿ ಶಾಂತ ಪರಿಸ್ಥಿತಿಯನ್ನು ಉಂಟುಮಾಡಲು ಯತ್ನಿಸಿದ. ಈತ ರೂಪಿಸಿದ ಕಾನೂನುಗಳಲ್ಲಿ ವಿಧಿಸಲಾದ ದಂಡನೆಗಳು ಅತಿ ಕ್ರೂರವಾಗಿದ್ದುವು. ಆದರೆ ಇದು ಸಾಲಗಾರರಿಗೂ ಗುಲಾಮರಿಗೂ ಇತರ ಶೋಷಿತಜನರಿಗೂ ಯಾವ ವಿಧದ ರಕ್ಷಣೆಯನ್ನೂ ನೀಡಲಿಲ್ಲ.

ವರ್ತುಲ ರಂಗಮಂದಿರ, ರೋಮ್

ಇಂಥ ಸಂದರ್ಭದಲ್ಲಿ ಪ್ರ.ಶ.ಪೂ.594ರಲ್ಲಿ ಆರ್ಕನ್ ಮುಖ್ಯನಾಗಿ ಸೋಲಾನ್ ಆರಿಸಲ್ಪಟ್ಟ. ಸಮಾಜದ ವಾತಾವರಣವನ್ನು ತಿಳಿಗೊಳಿಸಲು ಈತನಿಗೆ ಸರ್ವಾಧಿಕಾರವನ್ನೀಯಲಾಯಿತು. ಈತ ಜಾರಿಗೆ ತಂದ ಸುಧಾರಣೆಗಳು ಶ್ರೀಮಂತರ ಹಾಗೂ ಬಡವರ ಮಧ್ಯೆ ಶಾಂತಿಯನ್ನು, ಹೊಂದಾಣಿಕೆಯನ್ನು ಏರ್ಪಡಿಸುವ ಯತ್ನವಾಗಿತ್ತು. ವ್ಯವಸಾಯ ಕ್ಷೇತ್ರವನ್ನು ಎಲ್ಲ ಸಾಲಗಳಿಂದ ಮುಕ್ತಗೊಳಿಸಿ ರಾಜಕೀಯ ಕೈದಿಗಳನ್ನು ಬಂಧನದಿಂದ ವಿಮೋಚಿಸಿ, ಡ್ರೇಕೋನ ಕಾನೂನುಗಳನ್ನು ಹಿಂದಕ್ಕೆ ಪಡೆದು, ಹೊಸ ಕಾನೂನುಗಳು ಆರ್ಥಿಕ ಸಾಮಾಜಿಕ ತಾರತಮ್ಯವಿಲ್ಲದೆ ಎಲ್ಲರಿಗೂ ಏಕರೀತಿಯಾಗಿ ಅನ್ವಯಿಸುವಂತೆ ಜನರು ತೆರಿಗೆಗಳನ್ನು ಕೊಡುವ ಪ್ರಜಾಹಕ್ಕುಗಳನ್ನು ಪಡೆಯುವ ಏರ್ಪಾಡನ್ನು ಮಾಡಿದ. ಬೂಲಿ ಸಂಸ್ಥೆಗೆ ಇದ್ದ ಕಾನೂನು ರಚನಾಧಿಕಾರವನ್ನು ತೆಗೆದು 400 ಸದಸ್ಯರ ಹೊಸ ಸಭೆಯೊಂದನ್ನೂ ಹೆಲಿಯ ಎಂಬ ಸಾರ್ವಜನಿಕ ನ್ಯಾಯಾಲಯವನ್ನೂ ಸ್ಥಾಪಿಸಿದ.

ಸೋಲಾನನ ಸುಧಾರಣೆಗಳು ಪ್ರಜಾಪ್ರಭುತ್ವಕ್ಕೆ ತಳಹದಿ ಹಾಕಿದರೂ ಇದರಿಂದ ಅನೇಕ ಪಂಗಡಗಳುಂಟಾಗಿ ಇವುಗಳ ನಡುವೆ ಕಲಹಗಳೇರ್ಪಟ್ಟುವು, ಪೆಸಿಸ್ಟ್ರೇಟಸಸ್ ಎಂಬ ಗುಡ್ಡಗಾಡಿನ ಪರಾಕ್ರಮಶಾಲಿಯೊಬ್ಬ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿದ (ಪ್ರ.ಶ.ಪೂ.556). ಈತ ಉತ್ತಮ ಆಡಳಿತಗಾರ. ಇವನ ಆಡಳಿತದಲ್ಲಿ ರಾಷ್ಟ್ರ ಪ್ರಗತಿ ಸಾಧಿಸಿತು. ಅಥೆನ್ಸ್ ನಗರ ಸುಂದರವಾಯಿತು. ಅಥೆನಾ ದೇವತೆಗೆ ಈತ ಆಲಯವನ್ನು ಕಟ್ಟಿಸಿ, ಪ್ರತಿ ವರ್ಷ ಸಂಗೀತ ನೃತ್ಯ ಸಮಾರಂಭಗಳನ್ನೇರ್ಪಡಿಸಿ, ಸಾಹಿತಿಗಳಿಗೆ ಕವಿಗಳಿಗೆ ಪ್ರೋತ್ಸಾಹವಿತ್ತು ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿದ. ಇವನ ಅನಂತರ ಇವನ ಇಬ್ಬರು ಮಕ್ಕಳು ತಂದೆಯ ನೀತಿಯನ್ನೇ ಅನುಸರಿಸಿದರು. ಆದರೆ ಅನಂತರ ಬಂದವರು ಅಧಿಕಾರಮದದಿಂದ ದರ್ಪಿಷ್ಠರು. ಕೊನೆಗೆ ಕ್ಲೀಸ್ಥನೀಸ್ ಸ್ಪಾರ್ಟದ ಸೈನ್ಯ ಸಹಾಯ ಪಡೆದು ಅಥೆನ್ಸಿನಲ್ಲಿ ರಾಜಕೀಯ ಕ್ರಾಂತಿಗೆ ದಾರಿ ಮಾಡಿ, ಕೊನೆಗೆ ತಾನೇ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡ. ಈತನೂ ಹಲವಾರು ರಾಜಕೀಯ ಸುಧಾರಣೆಗಳನ್ನು ಆಚರಣೆಗೆ ತಂದ. ಹತ್ತು ಹೊಸ ಕುಲಗಳನ್ನೇರ್ಪಡಿಸಿ ಒಂದೊಂದು ಕುಲದಿಂದ 50 ಜನ ಪ್ರತಿನಿಧಿಗಳಿರುವ 500 ಸದಸ್ಯರ ಹೊಸ ಸಮಾಲೋಚನ ಸಭೆಯನ್ನು ಸ್ಥಾಪಿಸಿದ. ಸಮಾಜ ದ್ರೋಹಿಯಾದ ನಾಯಕನನ್ನು ದೇಶಭ್ರಷ್ಟನಾಗಿ ಮಾಡುವ ಹೊಸ ವ್ಯವಸ್ಥೆಯನ್ನು ಏರ್ಪಡಿಸಿದ. ಇದು ಸಾಮಾಜಿಕ ಬಹಿಷ್ಕಾರ ಎನಿಸಿತು. ಇವನ ಹಲವಾರು ಸುಧಾರಣೆಗಳು ಸೋಲಾನ್ ಹಾಕಿದ ತಳಹದಿಯನ್ನು ಬಲಗೊಳಿಸಿದುವು.

ಪರ್ಷಿಯನರ ಧಾಳಿ: ಪ್ರ.ಶ.ಪೂ.7ನೆಯ ಶತಮಾನದಲ್ಲಿ ಪಶ್ಚಿಮ ಏಷ್ಯದಲ್ಲಿ ನೆಲಸಿದ್ದ ಗ್ರೀಕರು ಲಿಡಿಯ ದೇಶದ ರಾಜನಿಗೆ ಸೋತು ಶರಣಾದರು. ಲಿಡಿಯ, ಮಿಡಿಯ ಮತ್ತು ಪರ್ಷಿಯ ಇವು ಪಶ್ಚಿಮ ಏಷ್ಯದ ಇರಾನ್ ಪ್ರದೇಶದ ಮೂರು ರಾಜ್ಯಗಳು. ಪ್ರ.ಶ.ಪೂ.500ರಲ್ಲಿ ಪರ್ಷಿಯದ ರಾಜ ಸೈರಸ್ ಲಿಡಿಯ ಮತ್ತು ಮಿಡಿಯ ರಾಜ್ಯಗಳನ್ನು ಜಯಿಸಿ, ಅಲ್ಲಿ ತನ್ನ ಪ್ರತಿನಿಧಿಗಳಾಗಿ ಸತ್ರಪರನ್ನು ನೇಮಿಸಿದ. ಗ್ರೀಕರು ಪರ್ಷಿಯನರಿಗೆ ಪೊಗದಿಯನ್ನು ಕೊಟ್ಟು ಸೈನಿಕ ಸೇವೆಯನ್ನೂ ಮಾಡಬೇಕಾಗಿತ್ತು. ಪ್ರ.ಶ.ಪೂ.499ರಲ್ಲಿ ಡೇರಿಯಸ್ ರಾಜ್ಯವನ್ನು 20 ಪ್ರಾಂತಗಳನ್ನಾಗಿ ವಿಂಗಡಿಸಿ ಸತ್ರಪರನ್ನು ನೇಮಿಸಿದ. ಗ್ರೀಕರನ್ನು ತನ್ನ ಹತೋಟಿಯಲ್ಲಿಟ್ಟು ಕೊಂಡ. ಆಗ ಪಶ್ಚಿಮ ಏಷ್ಯದ ಗ್ರೀಕರೆಲ್ಲ ದಂಗೆ ಏಳಲು ಸಿದ್ಧರಾದರು. ಇಷ್ಟರಲ್ಲಿ ನಾಕ್ಸಸ್ ದ್ವೀಪದಲ್ಲಿ ಶ್ರೀಮಂತರಿಗೂ ಪ್ರಜಾಪ್ರಭುತ್ವವಾದಿಗಳಿಗೂ ಅಂತರ್ಯುದ್ಧ ಆರಂಭವಾಯಿತು. ಇಲ್ಲಿಯ ಶ್ರೀಮಂತರು ಸಾರ್ಡಿಸ್ ನಗರದ ಸತ್ರಪರಲ್ಲಿ ಮೊರೆಯಿಟ್ಟರು. ಆರ್ಟ್ ಫರ್ನಸ್ ಎಂಬ ಸತ್ರಪಮಿಲೆಟಸ್ ನಗರದಿಂದ ಓಡಿಸಲ್ಪಟ್ಟ ಅರಿಸ್ಟಗೊರಸನೆಂಬ ನಿರಂಕುಶ ಪ್ರಭುವಿ ನೊಡನೆ ನಾಕ್ಸಸ್ ಮೇಲೆ ದಂಡೆಯಾತ್ರೆ ಹೊರಟ. ಮಧ್ಯಮಾರ್ಗದಲ್ಲಿ ಏನೋ ವೈಮನಸ್ಯದ ಕಾರಣವಾಗಿ ಅರಿಸ್ಟಗೊರಸ್ ಬೇರೆಯಾಗಿ ಪಶ್ಚಿಮ ಏಷ್ಯದ ಎಲ್ಲ ಗ್ರೀಕರನ್ನೂ ಪರ್ಷಿಯನ್ನರ

**ನೀರು ಸರಬರಾಜಿನ ಮೇಲ್ಗಾಲುವೆ (ರೋಮನ್ ಅಕ್ವಿಡಕ್ಟ್)**

ವಿರುದ್ಧ ದಂಗೆ ಏಳಲು ಪ್ರಚೋದಿಸಿದ. ಸ್ಪಾರ್ಟದ ಸಹಾಯ ಕೋರಿ ವಿಫಲವಾದಾಗ ಅಥೆನ್ಸಿನ ಸಹಾಯ ಪಡೆದು ಸಾರ್ಡಿಸ್ ನಗರದ ಮೇಲೆ ದಂಡೆತ್ತಿಹೋಗಿ ಸೋತುಹೋದ. ಅಯೋನಿಯನರ ಹೊಡೆದಾಟ ನಿಷ್ಫಲವಾಗಿ ಅವರ ದಂಗೆ ಕೊನೆಗೊಂಡಿತು. ಡೇರಿಯಸ್ ಸಾರ್ಡಿಸ್ ನಗರವನ್ನು ಸುಟ್ಟ. ಗ್ರೀಕರ ಮೇಲೆ ಸೇಡು ತೀರಿಸಿಕೊಳ್ಳಲು ತನ್ನ ಅಳಿಯ ಮಾರ್ಡೋನಿಯಸನ ನಾಯಕತ್ವದಲ್ಲಿ ಸೈನ್ಯವನ್ನು ಗ್ರೀಸಿಗೆ ಕಳುಹಿಸಿದ. ಆದರೆ ಪ್ರಕೃತಿಯ ವಿರೋಧದಿಂದಾಗಿ ಪರ್ಷಿಯನರಿಗೆ ಅಪಜಯವಾಯಿತು.

ಡೇರಿಯಸ್ ಮತ್ತೊಂದು ಸೇನೆಯನ್ನು ಸಿದ್ಧಪಡಿಸಿ ಗ್ರೀಕ್ ಪ್ರದೇಶಗಳಲ್ಲಿ ಭೂಮಿ, ನೀರನ್ನು ನಿರ್ಬಂಧದಿಂದ ಕೇಳಲು ಸ್ಪಾರ್ಟ, ಅಥೆನ್ಸ್ ರಾಷ್ಟ್ರಗಳು ಇದನ್ನು ವಿರೋಧಿಸಿದುವು. ಆಗ ಡೇರಿಯಸ್ ಎರಡನೆಯ ದಂಡಯಾತ್ರೆ ಕೈಗೊಂಡು ಹಿಪ್ಪಿಯಸ್ ಎಂಬ ದೇಶಭ್ರಷ್ಟನ ನೆರವಿನಿಂದ ಎರಿಟ್ರಿಯ ನಗರವನ್ನು ನಾಶಮಾಡಿದ. ಪರ್ಷಿಯನರು ಅಥೆನ್ಸಿಗೆ 20 ಕಿಮೀ ದೂರದ ಮ್ಯಾರಥಾನ್ ಎಂಬಲ್ಲಿ ನೆಲೆಯೂರಿದರು. ಪ್ರಪಂಚದ ಇತಿಹಾಸದಲ್ಲಿ ಮ್ಯಾರಥಾನ್ ಕದನ ಒಂದು ನಿರ್ಣಾಯಕ ಕದನವೆಂದು ವರ್ಣಿಸಲಾಗಿದೆ. ಅಥಿನಿಯನರು ಸಮಯ ನೋಡಿ ಪರ್ಷಿಯನರನ್ನು ಮುತ್ತಿದರು. ಪರ್ಷಿಯನರು ಸೋತರೂ ಅಥೆನ್ಸ್ ನಗರಕ್ಕೆ ಶಾಶ್ವತ ವಿಜಯ ದೊರಕಲಿಲ್ಲ. ಡೇರಿಯಸ್ ಇನ್ನೂ ಪ್ರಬಲಸೇನೆಯನ್ನು ಸಿದ್ಧಪಡಿಸಿ ಯುದ್ಧಮಾಡಲು ನಿರ್ಧರಿಸಿದ. ಆದರೆ ಅಷ್ಟರಲ್ಲೇ ಅವನು ತೀರಿಕೊಂಡ. ಅವನ ಮಗ ಗ್ರೀಸ್ ದೇಶದ ಮೇಲೆ ದಂಡೆತ್ತಿ ಬಂದ. ಈ ಸಮಯದಲ್ಲಿ ಅಥೆನ್ಸಿನ ನಾಯಕತ್ವವನ್ನು ತಿಮಿಸ್ಟಾಕ್ಲೀಸನೂ ಸ್ಪಾರ್ಟದ ನಾಯಕತ್ವವನ್ನು ಲಿಯೋನಿಡಾಸನೂ ವಹಿಸಿಕೊಂಡರು. ಕಾರಿಂತ್ ಭೂಶಿರದಲ್ಲಿ ಗ್ರೀಕರ ರಾಷ್ಟ್ರ ಸಭೆಯನ್ನೇರ್ಪಡಿಸಿ ಪರ್ಷಿಯನರ ವಿರುದ್ಧವಾದ ಪಂಗಡವೊಂದನ್ನು ನಿರ್ಮಿಸಿದರು. ಸ್ಪಾರ್ಟದ ಲಿಯೋನಿಡಾಸ್ ತರ್ಮಾಪಿಲೀ ಕಣಿವೆಯ ಬಳಿ ಪರ್ಷಿಯನರನ್ನು ಎದುರಿಸಿದರೂ ದೇಶದ್ರೋಹಿಯೊಬ್ಬನ ಒಳ ಸಂಚಿನಿಂದಾಗಿ ಪರ್ಷಿಯನರಿಗೆ ಶರಣಾಗಬೇಕಾಯಿತು.

ಅಥೆನ್ಸಿಗೆ ಗಂಡಾಂತರ ಒದಗಿತ್ತು. ಡೆಲ್ಫಿ ದಿವ್ಯವಾಣಿಯ ಆದೇಶದಂತೆ ತಿಮಿಸ್ಟಾಕ್ಲೀಸ್ ಎಲ್ಲ ಪೌರರಿಗೂ ನೌಕೆಗಳನ್ನು ಸೇರುವಂತೆ ಹೇಳಿದ. ಅಥೆನ್ಸ್ ಮತ್ತು ಆಟಿಕ ಪ್ರದೇಶಗಳನ್ನು ಬಿಟ್ಟು ಉಳಿದೆಡೆಗಳಲ್ಲಿ ಎಲ್ಲರೂ ನೌಕೆಗಳನ್ನು ಸೇರಿದರು. ಪರ್ಷಿಯನರು ಆಟಿಕ ಪ್ರದೇಶವನ್ನು ದಾಟಿ, ಅಥೆನ್ಸ್ ನಗರವನ್ನು ಮುತ್ತಿ ಅಲ್ಲಿಯ ದೇವಾಲಯಗಳನ್ನೆಲ್ಲ ಸುಟ್ಟುಹಾಕಿದರು. ಕಾರಿಂತ ಭೂಶಿರದ ಸಾಲಾಮಿಸ್ ದ್ವೀಪದಲ್ಲಿದ್ದ ಅಥಿನಿಯನರ ನೌಕೆಗೆ ಪರ್ಷಿಯನರು ಅಡ್ಡನಿಂತಾಗ ತಿಮಿಸ್ಟಾಕ್ಲೀಸ್ ಅವರನ್ನು ಥಟ್ಟನೆ ಮುತ್ತಿದ. ಇಕ್ಕಟ್ಟಿನ ಪ್ರದೇಶವಾದ್ದರಿಂದ ಪರ್ಷಿಯನರು ಪೂರ್ಣ ಸೋತು ಏಷ್ಯ ಪ್ರಾಂತ್ಯಕ್ಕೆ ಮರಳಿದರು. ಪರ್ಷಿಯನರ ದಂಡಯಾತ್ರೆ ಗಳನ್ನು ವಿಫಲಗೊಳಿಸಿ ಅದ್ಭುತ ಜಯಗಳಿಸಿದ ಅಥೆನ್ಸ್ ರಾಷ್ಟ್ರ, ಏಷ್ಯದ ಗ್ರೀಕರನ್ನೆಲ್ಲ ಸೇರಿಸಿ ಒಂದು ಒಕ್ಕೂಟವನ್ನು ಸ್ಥಾಪಿಸಿತು. ಅನೇಕ ಗ್ರೀಕ್ ರಾಷ್ಟ್ರಗಳು ಈ ಒಕ್ಕೂಟವನ್ನು ಸೇರಿದುವು. ಪಶ್ಚಿಮ ಏಷ್ಯದ ಗ್ರೀಕರಿಗೆ ಸಹಾಯಕವಾಗಿ, ಅಲ್ಲಿಂದ ಪರ್ಷಿಯನರನ್ನು ಓಡಿಸಬೇಕೆಂಬುದೇ ಒಕ್ಕೂಟದ ಮುಖ್ಯ ಉದ್ದೇಶವಾಗಿತ್ತು. ಕೈಮನ್ ಎಂಬ ಶೂರ ಒಕ್ಕೂಟದ ಸೇನಾಪತಿಯಾಗಿದ್ದ. ಈ ಸಂಘ ಅಥೆನ್ಸ್ ಸಾಮ್ರಾಜ್ಯವಾಗಿ ಬದಲಾಯಿತು.

ಪೆರಿಕ್ಲೀಸನ ಯುಗ: ಪ್ರ.ಶ.ಪೂ.467–429. ಈ ಕಾಲದಲ್ಲಿ ಗ್ರೀಕ್ ನಾಗರಿಕತೆ ಅತ್ಯುನ್ನತ ಮಟ್ಟಕ್ಕೇರಿತು. ಪೆರಿಕ್ಲೀಸ್ ಆರ್ಕನ್ ಆದ ಮೇಲೆ ಅಥೆನ್ಸ್ ಸಾಹಿತ್ಯ, ಕಲೆ, ತತ್ತ್ವಜ್ಞಾನ ಮುಂತಾದವುಗಳಲ್ಲಿ ಪರಿಪೂರ್ಣತೆ ಪಡೆಯಿತು. ಆದ್ದರಿಂದ ಇವನ ಕಾಲವನ್ನು ಸುವರ್ಣ ಯುಗವೆಂದು ಕರೆಯುವರು. ಪೆರಿಕ್ಲೀಸ್ ಉಚ್ಚ ಕುಲದಲ್ಲಿ ಹುಟ್ಟಿ ಉತ್ತಮ ಶಿಕ್ಷಣ ಪಡೆದಿದ್ದ. ರಾಜಕಾರಣಿಗಳಿಗಿರಬೇಕಾದ ಗುಣಗಳೆಲ್ಲ ಇವನಲ್ಲಿದ್ದುವು. 30 ವರ್ಷಗಳಿಗೂ ಹೆಚ್ಚು ಕಾಲ ಸಾರ್ವಜನಿಕ ಕ್ಷೇತ್ರದಲ್ಲಿ ಮುಂದಾಳಾಗಿದ್ದ. ಇವನ ರಾಜಕೀಯ ಸುಧಾರಣೆಗಳು ಸೋಲಾನನ ಕಾರ್ಯವನ್ನು ಪೂರ್ಣಗೊಳಿಸಿದುವು. ಈಸ್ಕಲಸ್, ಯೂರಿಪಿಡೀಸ್, ಸಾಫೋಕ್ಲೀಸ್ ಇವರು ದುರಂತ ನಾಟಕಗಳನ್ನು ರಚಿಸಿದರು. ಇದರಿಂದ ಜನರ ವಿಚಾರಶಕ್ತಿ ಬೆಳೆದು ಕಲಾಭಿರುಚಿ ಬೆಳೆಯಿತು. ಸುಖಾಂತ್ಯ ನಾಟಕಗಳೂ ಬಂದುವು. ಅರಿಸ್ಟಾಫನೀಸ್ ಇಂಥ ನಾಟಕಗಳನ್ನು ಬರೆದಿದ್ದಾನೆ. ಸುಪ್ರಸಿದ್ಧ ಇತಿಹಾಸಕಾರರಾದ ಹಿರೋಡಾಟಸ್ ಮತ್ತು ತುಸಿಡೈಡೀಸ್ ಅಥೆನ್ಸಿನವರು. ಸಾಕ್ರಟೀಸ್, ಪ್ಲೇಟೊ ಮತ್ತು ಅರಿಸ್ಟಾಟಲ್ ಎಂಬ ಸುಪ್ರಸಿದ್ಧ ಮೇಧಾವಿಗಳು ಇದೇ ಯುಗದವರು. ವಾಸ್ತುಶಿಲ್ಪ, ಚಿತ್ರಶಿಲ್ಪ, ಮೂರ್ತಿಶಿಲ್ಪ, ಸಂಗೀತ ಗ್ರೀಕರ ಜೀವಾಳಗಳಾಗಿದ್ದುವು. ಸತ್ಯ, ಸೌಂದರ್ಯ, ಸೌಜನ್ಯ ಇವು ಮೂರೂ ಮನುಷ್ಯನ ಎಲ್ಲ ಕೃತಿಗಳಲ್ಲೂ ಸಮರಸವಾಗಿ ಕೂಡಿರಬೇಕೆಂದು ಗ್ರೀಕರು ನಂಬಿದ್ದರು. ಆಕ್ರೊಪಲಿಸ್ ಎಂಬಲ್ಲಿ ಪಾರ್ತಿನಾನ್ ಮತ್ತು ಇತರ ದೇವಮಂದಿರಗಳಲ್ಲಿ ಫಿಡಿಯಾಸ್ ಎಂಬ ಶಿಲ್ಪಿ ತನ್ನ ಕಲಾಪ್ರೌಢಿಮೆಯನ್ನು ತೋರಿಸಿದ್ದಾನೆ. ಹೀಗೆ ಈ ಕಾಲದಲ್ಲಿ ಅಥೆನ್ಸಿನ ಜನತೆ ಅಮೋಘವಾದ ಸಾಂಸ್ಕೃತಿಕ ಸಾಧನೆಯನ್ನು ಮಾಡಿತು.

ಆದರೆ ರಾಜಕೀಯ ವಿಷಯಗಳಲ್ಲಿ ಮಾತ್ರ ಅಥೆನ್ಸ್ ಅನುಸರಿಸಿದ ನೀತಿ ಪ್ರಗತಿ ವಿರೋಧವಾಗಿತ್ತು. ತನ್ನ ಮಿತ್ರರಾಷ್ಟ್ರಗಳನ್ನೆಲ್ಲ ಉಪಾಯದಿಂದಲೋ ಬಲ ಪ್ರಯೋಗದಿಂದಲೋ ತನ್ನ ಅಧೀನಕ್ಕೊಳಪಡಿಸಿಕೊಂಡು ಒಂದು ಸಾಮ್ರಾಜ್ಯವನ್ನೇ ಕಟ್ಟಿಕೊಂಡಿತು. ಪೆರಿಕ್ಲೀಸ್ ಪ್ರ.ಶ.ಪೂ.446ರಲ್ಲಿ ಸ್ಪಾರ್ಟ ರಾಷ್ಟ್ರದೊಡನೆ 30 ವರ್ಷಗಳ ಕೌಲನ್ನು ಮಾಡಿಕೊಂಡ.

ಪೆರಿಕ್ಲೀಸನ ಅನಂತರ ಎಲ್ಲೆಡೆಯಲ್ಲೂ ಅಥೆನ್ಸ್ ರಾಷ್ಟ್ರವಿರೋಧಿ ದಂಗೆಗಳು ಏಳತೊಡಗಿದವು. ಪೆಲೊಪೊನೇಷ್ಯನ್ ಯುದ್ಧದಲ್ಲಿ ಅಥೆನ್ಸ್ ತನ್ನ ನಾಯಕತ್ವವನ್ನು ಕಳೆದುಕೊಂಡಿತು. ಅಥೆನ್ಸಿನ ನಾಶದಿಂದ ಸ್ವಾತಂತ್ರ್ಯ ಲಭಿಸಿತೆಂದು ಗ್ರೀಕ್ ರಾಷ್ಟ್ರಗಳು ಸಂತೋಷಪಡುವಷ್ಟರಲ್ಲಿ ಅವರ ಮೇಲೆ ಸ್ಪಾರ್ಟದ ದಬ್ಬಾಳಿಕೆ ಆರಂಭವಾಯಿತು. ನಿರಂಕುಶ ಪ್ರಭುತ್ವ ಆರಂಭವಾಯಿತು.

ಪ್ರ.ಶ.ಪೂ.377ರಲ್ಲಿ ಅಥೆನ್ಸ್ ಮತ್ತಿತರ ರಾಷ್ಟ್ರಗಳು ಒಕ್ಕೂಟವೊಂದನ್ನು ಸ್ಥಾಪಿಸಿಕೊಂಡು ನಾಕ್ಸಸ್ ಮತ್ತು ಕಾರ್ಸಿರ ಕದನಗಳಲ್ಲಿ ಸ್ಪಾರ್ಟದ ನೌಕಾಶಕ್ತಿಯನ್ನು ಪೂರ್ಣ ನಾಶಮಾಡಿದುವು. ಅನಂತರ ಸ್ಪಾರ್ಟ ಅಥೆನ್ಸಿನೊಡನೆ ಕಾಲಿಯಸ್ ಕೌಲು (ಪ್ರ.ಶ.ಪೂ.371) ಮಾಡಿಕೊಂಡು, ಎಲ್ಲ ನಗರಗಳೂ ಸ್ವತಂತ್ರವಾಗಿರಬೇಕೆಂದು ಒಪ್ಪಿತು. ಆದರೆ ಭಿನ್ನಾಭಿಪ್ರಾಯ ಹುಟ್ಟಿತು. ಲ್ಯೂಕ್ಟ್ರ ಕದನದಲ್ಲಿ ತೀಬ್ಸ್ ಸ್ಪಾರ್ಟವನ್ನು ಸೋಲಿಸಿ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿತು. ಉತ್ತರ ಗ್ರೀಸಿನಲ್ಲಿ ಪಿಲಾಪಿಡಾಸನೂ ದಕ್ಷಿಣದಲ್ಲಿ ಇಪಾಮಿನಾಂಡಸನೂ ತಮ್ಮ ಪ್ರಭುತ್ವ ಸ್ಥಾಪಿಸಲು ಆಕ್ರಮಣವನ್ನಾರಂಭಿಸಿದರು. ಪ್ರ.ಶ.ಪೂ.364ರಲ್ಲಿ ತೆಸಲಿಯ ಅಲೆಕ್ಸಾಂಡರನ ಜೊತೆ ಯುದ್ಧ ಮಾಡಿದಾಗ ಪಿಲಾಪಿಡಾಸ್ ಸತ್ತ. ಆದರೂ ತೀಬನರು ಅಲೆಕ್ಸಾಂಡರನನ್ನು ಸೋಲಿಸಿದರು. ಇಪಾಮಿನಾಂಡಸ್ ದಕ್ಷಿಣದಲ್ಲಿ ಆಗಾಗ್ಗೆ ಆಕ್ರಮಣ ನಡೆಸಿ ಇತರ ರಾಷ್ಟ್ರಗಳ ವಿರೋಧಕ್ಕೆ ಗುರಿಯಾದ. ಪ್ರ.ಶ.ಪೂ.362ರಲ್ಲಿ ದಕ್ಷಿಣ ಗ್ರೀಸಿನ ಮೇಲೆ ನಾಲ್ಕನೆಯ ಸಾರಿ ದಂಡಯಾತ್ರೆ ನಡೆಸಿದಾಗ, ಮಾಂಡನಿಯ ಕದನದಲ್ಲಿ ಇಪಾಯಿನಾಂಡಸ್ ಮರಣ ಹೊಂದಿದ. ತೀಬ್ಸ್ ರಾಷ್ಟ್ರ ಮುಕ್ತಾಯವಾಯಿತು.

ಮ್ಯಾಸಿಡಾನ್ ದಂಡಯಾತ್ರೆ: ಗ್ರೀಸಿನ ಒಳಜಗಳ ಮ್ಯಾಸಿಡೋನಿಯದ ಪ್ರಾಬಲ್ಯಕ್ಕೆ ಕಾರಣವಾಯಿತು. ಮ್ಯಾಸಿಡೋನಿಯ ಗ್ರೀಸಿನ ಉತ್ತರಕ್ಕಿದೆ. ಅಲ್ಲಿಯ ಜನ ಗ್ರೀಕ್ ಬುಡಕಟ್ಟಿ ನವರೇ. ಇವರು ಅನಾಗರಿಕರಾಗಿಯೇ ಉಳಿದಿದ್ದರು. ರಾಜನೀತಿನಿಪುಣನಾದ ಫಿಲಿಪ್ ಎಂಬವನು ಸೈನ್ಯ ಸುಧಾರಣೆ ಮಾಡಿ, ಉತ್ತರ ಗ್ರೀಸಿನ ಅನೇಕ ಪ್ರದೇಶಗಳನ್ನು ಜಯಿಸಿ ಮ್ಯಾಸಿಡೋನಿಯವನ್ನು ವಿಸ್ತರಿಸಿದ. ಅವನಿಗೆ ಅಥೆನ್ಸ್ ರಾಷ್ಟ್ರದ ಮೇಲೆ ವಿಶೇಷವಾದ ಗೌರವವಿತ್ತು. ತನ್ನ ಮಗ ಅಲೆಕ್ಸಾಂಡರನಿಗೆ ಅರಿಸ್ಟಾಟಲ್‌ನನ್ನು ಗುರುವಾಗಿ ನೇಮಿಸಿದ. ಪ್ರ.ಶ.ಪೂ.338ರಲ್ಲಿ ಡೆಮಾಸ್ತನೀಸ್ ಫಿಲಿಪನ ವಿರುದ್ಧ ಯುದ್ಧಕ್ಕೆ ಪ್ರಚೋದಿಸಿದ. ಖರೋನಿಯ ಕದನದಲ್ಲಿ ಫಿಲಿಪ್ ಅಥೆನ್ಸ್ ವಿರುದ್ಧ ಹೋರಾಡಿ ಪೂರ್ಣ ಜಯಶಾಲಿಯಾದ. ಈ ಕದನದಿಂದ ಗ್ರೀಕರು ತಮ್ಮ ಸ್ವಾತಂತ್ರ್ಯವನ್ನು ಸಂಪೂರ್ಣ ಕಳೆದುಕೊಂಡರು. ಫಿಲಿಪ್ ತನ್ನ ಒಳ್ಳೆಯ ಗುಣಗಳಿಂದ ಗ್ರೀಕರನ್ನು ಆಕರ್ಷಿಸಿ, ಪ್ರ.ಶ.ಪೂ.337ರಲ್ಲಿ ಎಲ್ಲ ಗ್ರೀಸ್ ರಾಷ್ಟ್ರಗಳನ್ನೂ ಸೇರಿಸಿ ಕಾರಿಂತ್ ರಾಷ್ಟ್ರಸಭೆ ನಡೆಸಿದ. ಎಲ್ಲ ರಾಷ್ಟ್ರಗಳೂ ಉತ್ಸಾಹದಿಂದ

ಸೈನ್ಯ ಕಳುಹಿಸುವುದಾಗಿ ಒಪ್ಪಿದುವು. ಪೂರ್ವದಿಕ್ಕಿನ ದಂಡಯಾತ್ರೆ ಕೈಗೊಳ್ಳುವ ಸಮಯಕ್ಕೆ ಕಾರಣಾಂತರದಿಂದ ಫಿಲಿಪ್ ವಿವಾಹ ವಿಚ್ಛೇದನ ಮಾಡಿಕೊಂಡ. ಆತನ ಪತ್ನಿ ತನ್ನ ಮಗ ಅಲೆಕ್ಸಾಂಡರ್ ಮುಂದೆ ರಾಜನಾಗಬೇಕೆಂದು ಪ್ರ.ಶ.ಪೂ.336ರಲ್ಲಿ ಗಂಡನನ್ನು ಮೋಸದಿಂದ ಕೊಲ್ಲಿಸಿದಳು.

ಅಲೆಕ್ಸಾಂಡರ್ ಮಹಾಶಯ: ಪ್ರ.ಶ.336–323. ಫಿಲಿಪನ ಮರಣಾನಂತರ ಎಲ್ಲೆಡೆಯಲ್ಲೂ ದಂಗೆ ಏಳಲು ಆರಂಭವಾಯಿತು. ಅಲೆಕ್ಸಾಂಡರ್ ದಂಗೆಯನ್ನು ಅಡಗಿಸಿ, ಶತ್ರುಗಳನ್ನು ನಾಶಮಾಡಿದ. ತಾರುಣ್ಯದಲ್ಲೇ ಉಚ್ಚಶಿಕ್ಷಣವನ್ನು ಪಡೆದಿದ್ದ ಈತನಿಗೆ ಗ್ರೀಕರ ಕಲೆ ಸಾಹಿತ್ಯಗಳಲ್ಲಿ ಅಭಿರುಚಿಯಿತ್ತು. ಗ್ರೀಕರು ಅಲೆಕ್ಸಾಂಡರನನ್ನೇ ತಮ್ಮ ನಾಯಕನೆಂದು ಒಪ್ಪಿದರು. ಗ್ರೀಸ್ ಅವನ ಹತೋಟಿಯಲ್ಲಿತ್ತು. ಆತ ದೇಶದಲ್ಲಿ ಭದ್ರತೆ ಸ್ಥಾಪಿಸಿ ಏಷ್ಯದ ಮೇಲೆ ದಂಡಯಾತ್ರೆಗೆ ಸಿದ್ಧನಾದ. ಎಲ್ಲೆಡೆಯೂ ಗ್ರೀಕ್ ನಾಗರಿಕತೆಯನ್ನು ಸ್ಥಾಪಿಸಬೇಕೆಂಬುದೇ ಅವನ ಉದ್ದೇಶವಾಗಿತ್ತು. ದಂಡಯಾತ್ರೆ ಹೊರಟು ಗ್ರೀಸಿನಿಂದ ಪಂಜಾಬಿನವರೆಗೆ ಸಾಮ್ರಾಜ್ಯ ವಿಸ್ತರಿಸಿದ. ಗ್ರೀಕ್ ನಾಗರಿಕತೆ ಇಲ್ಲೆಲ್ಲ ಹಬ್ಬಿತು. ದಂಡಯಾತ್ರೆಯಿಂದ ಹಿಂದಿರುಗುತ್ತಿದ್ದಾಗ ಅಲೆಕ್ಸಾಂಡರ್ ತೀರಿಕೊಂಡ. ಅವನ ಮರಣದೊಂದಿಗೆ ಪ್ರಾಚೀನ ಗ್ರೀಸಿನ ವೈಭವದ ಇತಿಹಾಸ ಕೊನೆಗೊಂಡಿತು.

ಅಲೆಕ್ಸಾಂಡರನ ಧಾಳಿ ಗ್ರೀಸ್ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿತಾದರೂ ಸಾಂಸ್ಕೃತಿಕವಾಗಿ ಇದರ ಪರಿಣಾಮ ಅಪಾರವಾದುದು. ತನ್ನ ಸುತ್ತಲಿನ ದ್ವೀಪಗಳಿಗಷ್ಟೇ ಸೀಮಿತವಾಗಿದ್ದ ಗ್ರೀಕ್ ಸಂಸ್ಕೃತಿ ಇತರೆಡೆಗೂ ವ್ಯಾಪಿಸಿತು. ಪರ್ಷಿಯ, ಈಜಿಪ್ಟ್, ಬ್ಯಾಬಿಲೋನಿಯ ಸಂಸ್ಕೃತಿಗಳ ಪರಿಚಯ, ಪರಸ್ಪರ ಪ್ರಭಾವ ಗಾಢವಾದುವು. ಈತನಿಗೆ ಹೆಲೆನಿಸ್ಟಿಕ್ ಸಂಸ್ಕೃತಿ, ಸಿದ್ಧಾಂತ, ಕಲೆಗಳನ್ನು ಕುರಿತು ಬಹಳ ಗೌರವವಿತ್ತು. ಈ ಸಂಸ್ಕೃತಿ ಪೌರಸ್ತ್ಯ ದೇಶಗಳಲ್ಲೂ ಹರಡಬೇಕೆಂಬ ಅವನ ಆಸೆ ಈಡೇರಿತು. ಅವನ ದಂಡನಾಯಕರು ಒಬ್ಬೊಬ್ಬರೂ ಸತ್ತ್ವ ಶಾಲಿಗಳಾಗಿದ್ದ ಕಾರಣ ಸಾಮ್ರಾಜ್ಯ ಛಿದ್ರವಾಯಿತು. ಇದರಿಂದ ಗ್ರೀಸ್ ದೇಶದಲ್ಲಿ ನೂರಾರು ನಗರ ರಾಜ್ಯಗಳು ಪುನಃ ತಲೆ ಎತ್ತಿದವು. ಸೆಲ್ಯೂಷಿಯ ಸಾಮ್ರಾಜ್ಯ ಅಲೆಕ್ಸಾಂಡರನ ಸಾಮ್ರಾಜ್ಯದ ಉತ್ತರಾಧಿಕಾರಿ ಎನಿಸಿಕೊಂಡರೂ ಮೊದಲಿನ ಸಾಮರ್ಥ್ಯ, ಒಟ್ಟುಗೂಡಿಸುವ ಶಕ್ತಿ ಅಲ್ಲಿಯ ಅರಸರಲ್ಲಿರಲಿಲ್ಲ. ಸಾಮಾನ್ಯವಾಗಿ ಗ್ರೀಸ್ ದೇಶದ ಪ್ರಾಚೀನ ಇತಿಹಾಸ ಅಲೆಕ್ಸಾಂಡರನೊಂದಿಗೆ ಅಂತ್ಯಗೊಳ್ಳುತ್ತದೆ ಎಂಬುದಕ್ಕೆ ಇದೊಂದು ಮುಖ್ಯ ಕಾರಣ. ಈತ ಗ್ರೀಕ್ ನಗರರಾಜ್ಯಗಳಲ್ಲದೆ ಗ್ರೀಕ್ ಪದ್ಧತಿಯಿಂದ ಪ್ರಭಾವಿತಗೊಂಡ. ಗ್ರೀಕರದೆಂದೇ ಹೇಳಬಹುದಾದ ಎಪಿರಸ್, ಜುಡಿಯ, ಬೈಜ಼ಾಂಟಿಯಂ, ಇಟಲಿ, ಸಿಸಿಲಿ ಮುಂತಾದ ನಗರರಾಜ್ಯಗಳು ತಲೆಯೆತ್ತಿದುವು. ಸ್ಪಾರ್ಟ ನಗರ ಮ್ಯಾಸಿಡೋನಿಯದೊಡನೆ ಹೋರಾಡಿ ಗೆದ್ದಿತ್ತಾದರೂ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟು, ಪ್ರಜೆಗಳಲ್ಲಿ ಆರ್ಥಿಕ ಅಸಮಾನತೆ ವಿಷಮಿಸಿ ಕ್ರಾಂತಿಯುಂಟಾಯಿತು. ಇಬ್ಬರು ರಾಜರಿಗೆ ಬದಲು 3ನೆಯ ಕ್ಲಿಯಾಮೆನೀಸ್ ಅಧಿಕಾರಕ್ಕೆ ಬಂದ. ಆದರೂ ಇದರಿಂದ ಯಾವ ಹಿತವೂ ಉಂಟಾಗಲಿಲ್ಲ. ವರ್ಗ ಕಲಹ ಮುಂದುವರಿದು ಸರ್ವಾಧಿಕಾರಕ್ಕೆ ಎಡೆಮಾಡಿತು. ನಬಿಸ್ ಎಂಬಾತ ಸರ್ವಾಧಿಕಾರಿಯಾದ (ಪ್ರ.ಶ.ಪೂ.207). ಈತ ಬಡವರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಿ ಜಹಗೀರುದಾರರನ್ನು ಹೊರದೂಡಿ ಜಮೀನುಗಳನ್ನು ರಾಷ್ಟ್ರೀಕರಿಸಿದ. ಇವನ ಈ ಕ್ರಮ ಇವನಿಗೆ ಖ್ಯಾತಿಯನ್ನು ತಂದುದಲ್ಲದೆ ನೆರೆಯ ರಾಜ್ಯಗಳೂ ಇವನನ್ನು ನಾಯಕನಾಗಿ ಒಪ್ಪುವಂತೆ ಮಾಡಿತು. ಅಕೀಯನ್ ಲೀಗಿನ ಸರ್ವಾಧಿಕಾರಿಯಾದ ಈತನನ್ನು ಹೊರದೂಡಲು ಹೊಂಚುಹಾಕಿದ ಹಲವರು ರೋಮಿನ ಸಹಾಯ ಬಯಸಿದರು. ಆದರೆ ಇವನನ್ನು ಸೋಲಿಸಲಾಗಲಿಲ್ಲ. ಕೊನೆಗೆ ವಿಧಿ ಇವನನ್ನು ವಂಚಿಸಿತು. ಕೊಲೆಗಡುನೊಬ್ಬನಿಂದ ಈತ ಹತನಾದ. ಅನಂತರ ಉಂಟಾದ ಅವ್ಯವಸ್ಥೆಯ ಪರಿಣಾಮವಾಗಿ ಸ್ಪಾರ್ಟದಲ್ಲಿ ಕ್ರಾಂತಿಯಾಯಿತು. ಸ್ಪಾರ್ಟದ ಪ್ರತ್ಯೇಕ ಇತಿಹಾಸ ಕೊನೆಗೊಂಡಿತು (ಪ್ರ.ಶ.ಪೂ.188).

ಗ್ರೀಸಿನ ನಗರರಾಜ್ಯಗಳು ಕುಸಿದಾಗ ಒಂದು ಕಡೆ ಸೆಲ್ಯೂಕಿಡ್ ಸಾಮ್ರಾಜ್ಯ, ಇನ್ನೊಂದು ಕಡೆ ರೋಮಿನ ಪ್ರಭಾವ ಗ್ರೀಕರನ್ನು ಆಹ್ವಾನಿಸುತ್ತಿತ್ತು. ಸೆಲ್ಯೂಕಿಡ್ ಸಾಮ್ರಾಜ್ಯ ಹೆಚ್ಚಾಗಿ ಏಷ್ಯಕ್ಕೆ ಸೀಮಿತವಾಗಿತ್ತು. ಗ್ರೀಕ್ ಸಂಸ್ಕೃತಿ ತನ್ನ ಪ್ರಭಾವವನ್ನು ಅದರ ಮೇಲೆ ಬೀರಿದ್ದರೂ ಪೌರಸ್ತ್ಯ ಸಂಸ್ಕೃತಿ ಅದನ್ನು ಮೈಗೂಡಿಸಿಗೊಂಡಿತೇ ಹೊರತು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳಲಿಲ್ಲ. ಗ್ರೀಕ್ ಜನ ತಮ್ಮ ಪ್ರತ್ಯೇಕತೆಯನ್ನುಳಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ರೋಮ್ ಪ್ರಬಲವಾಗುತ್ತಿದ್ದಾಗ ಕೊನೆಗೆ ಗ್ರೀಸ್ ರೋಮಿನ ಕಡೆ ಒಲಿದುದಕ್ಕೆ ಇದೊಂದು ಮುಖ್ಯ ಕಾರಣ. ಮೊದಮೊದಲು ರೋಮಿನ ಸಾರ್ವಭೌಮತ್ವವನ್ನು ಗ್ರೀಸ್ ವಿರೋಧಿಸಿತು. ಗ್ರೀಸಿನಲ್ಲಿ ಪ್ರಾಬಲ್ಯ ಪಡೆದಿದ್ದ ಅಕೀಯನ್ ಲೀಗಿನ ಕೇಂದ್ರವಾದ ಕಾರಿಂತ್ ಪಟ್ಟಣವನ್ನು ಪ್ರ.ಶ.ಪೂ. 146ರಲ್ಲಿ ರೋಮನರು ಸ್ವಾಧೀನಪಡಿಸಿಕೊಂಡರು. ಇದರೊಂದಿಗೆ ಗ್ರೀಸ್ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಆದರೆ ಗ್ರೀಕ್ ಸಂಸ್ಕೃತಿ ಮುಂದಿನ ಪಾಶ್ಚಾತ್ಯ ಸಂಸ್ಕೃತಿಗೆ ತಳಹದಿಯಾಯಿತು.

ಜೂನ್ 1973ರಲ್ಲಿ ಗ್ರೀಕ್ ಪ್ರಧಾನಿ ಜಾರ್ಜ್ ಪಪಡೊಪೌಲೊಸ್ ಗ್ರೀಸ್ ಗಣರಾಜ್ಯವಾಗುವುದೆಂದು ಘೋಷಿಸಿದ. ಎರಡು ತಿಂಗಳುಗಳೊಳಗೆ ರಾಜ್ಯದಲ್ಲಿ ಪ್ರಜಾಭಿಮತ ಪಡೆಯುವುದಾಗಿಯೂ ಘೋಷಿಸಲಾಯಿತು. ತನ್ಮೂಲಕ 1974ರ ಅಂತ್ಯದ ವೇಳೆಗೆ ಹೊಸ ಪಾರ್ಲಿಮೆಂಟಿಗಾಗಿ ಚುನಾವಣೆಗಳು ನಡೆಯುವುವೆಂದು ತಿಳಿಸಿ ಅಲ್ಲಿಯವರೆಗೂ ಗ್ರೀಕ್ ಗಣರಾಜ್ಯಕ್ಕೆ ತಾನೇ ಅಧ್ಯಕ್ಷನೆಂದೂ ಸಾರಿಕೊಂಡ. ಗ್ರೀಸಿನಲ್ಲಿ ಅಸ್ತಿತ್ವದಲ್ಲಿದ್ದ 11 ವರ್ಷಗಳ ರಾಜತ್ವ ಕೊನೆಗೊಂಡಿತು. (ಆರ್.ಪಿ.;ಬಿ.ಆರ್.ಜಿ.;ಎ.ಎಂ.ಆರ್.)

**ರೋಮನ್ ಸಂಸ್ಕೃತಿ:** ಪ್ರ.ಶ.ಪೂ.2ನೆಯ ಶತಮಾನದಲ್ಲಿ ಗ್ರೀಕರು ರೋಮನ್ನರ ಹತೋಟಿಗೆ ಬಂದರು. ಇಟಲಿಯಲ್ಲಿ ಆರಂಭಿಸಿ ಯುರೋಪಿನಲ್ಲಿ ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿದರು. ಗ್ರೀಕರು ಆರಂಭಿಸಿದ್ದ ಸಂಸ್ಕೃತಿ ಪ್ರಸಾರ ಕಾರ್ಯವನ್ನು ರೋಮನ್ನರು ಮುಂದುವರಿಸಿದ್ದಲ್ಲದೇ ರಾಜ್ಯ ವ್ಯವಸ್ಥೆ, ಮಿಲಿಟರಿ ವ್ಯವಸ್ಥೆ ಮತ್ತು ಕಾನೂನು ಇವುಗಳಲ್ಲಿ ತಮ್ಮದೇ ಆದ ವಿಶಿಷ್ಟವಾದ ಕಾಣಿಕೆಗಳನ್ನು ನೀಡಿದರು. ಹಲವು ಸಂಸ್ಕೃತಿಗಳ ಸಮನ್ವಯವನ್ನು ರೋಮನ್ನರು ಸಾಧಿಸಿ, ಶಾಂತಿಯನ್ನು ಸ್ಥಾಪಿಸಿದರು. ಸಾಮ್ರಾಜ್ಯದಲ್ಲೆಲ್ಲ ಮುಕ್ತ ವ್ಯಾಪಾರಕ್ಕೆ ಅವಕಾಶವಿತ್ತು. ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತಧರ್ಮ ಉಗಮಗೊಂಡು ಯುರೋಪಿನಲ್ಲಿ ಹರಡಿತು. ಸಾಂಪ್ರದಾಯಿಕ ಗ್ರೀಕೊ–ರೋಮನ್–ಪೇಗನ್ ಸಂಸ್ಕೃತಿ ಅವನತಿ ಹೊಂದಿ, ಕ್ರಿಶ್ಚಿಯನ್ ಚರ್ಚ್ ಪ್ರಧಾನ ಶಕ್ತಿಯಾಯಿತು.

ರೋಮನ್ ಸಾಮ್ರಾಜ್ಯದ ರಾಜಧಾನಿಯನ್ನು ಕಾನ್‍ಸ್ಟಾಂಟಿನೋಪಲ್ ನಗರಕ್ಕೆ 330ರಲ್ಲಿ ವರ್ಗಾಯಿಸಲಾಯಿತು. ರೋಮನ್ ಚಕ್ರಾಧಿಪತ್ಯ ಪೂರ್ವ ಮತ್ತು ಪಶ್ಚಿಮ ಭಾಗಗಳೆಂದು 395ರಲ್ಲಿ ಒಡೆಯಿತು. ಎರಡೂ ಭಾಗಗಳು ಅನಾಗರಿಕ ಜನಾಂಗಗಳ ಧಾಳಿಗಳಿಗೆ ತುತ್ತಾದವು. ಪಶ್ಚಿಮದ ಸಾಮ್ರಾಜ್ಯ ಜನಸಂಖ್ಯೆಯಲ್ಲಿಯ ಇಳಿತ ಮತ್ತು ಅಧಿಕಾರವರ್ಗದವರ ಬಿಗಿ ಧೋರಣೆಗಳಿಂದ ಕುಂದಿತು. ಇದರ ಜೊತೆಗೆ ಪಶ್ಚಿಮ ಮತ್ತು ಪೂರ್ವ ದಿಕ್ಕುಗಳಿಂದ ಧಾವಿಸಿ ಬಂದ ಅನಾಗರಿಕ ಬುಡಕಟ್ಟಿನವರು ಇದರ ಗಡಿಗಳನ್ನು ಹಿಂದಕ್ಕೆ ಸರಿಸುತ್ತ ಸಾಗಿದರು. ಅಟ್ಟಿಲನ ನಾಯಕತ್ವದಲ್ಲಿ 451ರಲ್ಲಿ ಹೂಣರು ಪೂರ್ವಭಾಗದ ಸಾಮ್ರಾಜ್ಯಕ್ಕೆ ಮುತ್ತಿಗೆ ಹಾಕಿದರು. ಒಂದೊಂದಾಗಿ ಯುರೋಪಿಯನ್ ಪ್ರದೇಶಗಳು ಅವರ ಅಧೀನವಾದವು. ಬ್ರಿಟನ್ ದೇಶದ ಏಂಜಲ್ಸ್ ಮತ್ತು ಸ್ಯಾಕ್ಸನ್‍ಗಳ ಗಾಲ್ ಪ್ರದೇಶ, ವಿಸಿಗಾಥ್ಸ್, ಬರ್ಗಂಡಿಯನ್ಸ್ ಮತ್ತು ಫ್ರಾಕ್ಸ್ ಜನಾಂಗದವರ, ಇಟಲಿ ಅಸ್ಟ್ರೊಗಾಥ್ಸ್‌ರ ಮತ್ತು ಉತ್ತರ ಆಫ್ರಿಕ ವಂಡಾಲರ ಕೈವಶವಾಯಿತು. ಹೀಗೆ ರೋಮನ್ ಸಾಮ್ರಾಜ್ಯ ನಾಶವಾಗಿ, ಎಲ್ಲೆಲ್ಲೂ ಅಸ್ಥಿರತೆ ಏರ್ಪಟ್ಟರೂ ಕ್ರಿಶ್ಚಿಯನ್ ಚರ್ಚ್ ತನ್ನ ಐಕ್ಯತೆಯನ್ನು ಕಾಪಾಡಿಕೊಂಡಿತು. ಕ್ರಮೇಣ ಹಂತ ಹಂತವಾಗಿ ಅನಾಗರಿಕ ಜನಾಂಗದವರು ಕ್ರೈಸ್ತಧರ್ಮಕ್ಕೆ ಮತಾಂತರ ಗೊಂಡರು. ಅಂತಿಮವಾಗಿ ಪೋಪ್ ಚಕ್ರಾಧಿಪತಿಯ ಸ್ಥಾನವನ್ನು ಕೊಡುವ ಅಧಿಕಾರ ಪಡೆದುಕೊಂಡ. 6ನೆಯ ಶತಮಾನದಲ್ಲಿ ಲೊಂಬಾರ್ಡರು ಇಟಲಿಯ ಮೇಲೆ ಆಕ್ರಮಣ ಮಾಡಿದರೆ, 8ನೆಯ ಶತಮಾನದಲ್ಲಿ ಮುಸ್ಲಿಮರ ಸ್ಪೆಯಿನ್ ಮತ್ತು ಗಾಲ್‍ಗಳನ್ನು ಆಕ್ರಮಿಸಲು ಯತ್ನಿಸಿದಾಗ ಅವರ ಮುನ್ನುಗ್ಗುವಿಕೆಯನ್ನು 732ರಲ್ಲಿ ಟೂರ್ಸ್ ಎಂಬಲ್ಲಿ ಚಾರ್ಲ್ಸ್‌ಮಾರ್ಟಲ್ ತಡೆದಿದ್ದು ಪ್ರಮುಖ ಘಟನೆ ಆಯಿತು. ಅವನ ಮೊಮ್ಮಗ ಚಾರ್ಲ್ಸ್‌ಮೇನ್ ಈ ಕಾರ್ಯವನ್ನು ಜಯಪ್ರದವಾಗಿ ಮುಂದುವರೆಸಿ, ಕೇಂದ್ರ ಯುರೋಪಿನಲ್ಲಿ, ಇಬ್ರೊ ನದಿಯಿಂದ ಡ್ಯಾನ್ಯೂಬ್‌ವರೆಗೆ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿ, 800ರಲ್ಲಿ ಪೋಪ್ ಮೂರನೆಯ ಲಿಯೋನ ಹಸ್ತದಿಂದ ಕಿರೀಟ ಧಾರಣೆ ಮಾಡಿಕೊಂಡು, ಪವಿತ್ರ ರೋಮನ್ ಚಕ್ರವರ್ತಿ ಎಂಬ ಕೀರ್ತಿಗೆ ಪಾತ್ರನಾದ. ಚಾರ್ಲ್ಸ್‌ಮೇನ್ ಸಾಮ್ರಾಜ್ಯ ಅವನ ಮೊಮ್ಮಕ್ಕಳ ಕಾಲದಲ್ಲಿ ಫ್ರಾನ್ಸ್ ಮತ್ತು ಜರ್ಮನಿ ಎಂದು ವಿಭಜನೆಯಾಯಿತು. ಇಟಲಿ ಸಣ್ಣ ಸಣ್ಣ ಸಂಸ್ಥಾನಗಳಾಗಿ ಒಡೆಯಿತು.

ಮುಂದಿನ ಶತಮಾನಗಳಲ್ಲಿ ರಾಜರ ಮತ್ತು ಶ್ರೀಮಂತವರ್ಗಗಳ ನಡುವೆ ಘರ್ಷಣೆಗಳು ನಡೆದು, ಯುರೋಪಿಯನ್ ಇತಿಹಾಸ ಅಸ್ಪಷ್ಟಯುಗಕ್ಕೆ ಕಾಲಿಟ್ಟಿತು. ಕಾಲಕ್ರಮೇಣ ರಾಜರು ತಮ್ಮ ಅಧಿಕಾರವನ್ನು ಹೆಚ್ಚಿಸಿಕೊಳ್ಳುತ್ತಾ ಹೋದರು; ಶ್ರೀಮಂತ ವರ್ಗದ ಅಧಿಕಾರ ಕುಗ್ಗಿತು. ಇಂಥ ಅರಾಜಕತ್ವದ ಕಾಲದಲ್ಲಿ ಯುರೋಪಿನಲ್ಲಿ ಊಳಿಗಮಾನ್ಯ ಪದ್ಧತಿ ಉಗಮಗೊಂಡು ಸು.500ರವರೆಗೂ ಮುಂದುವರೆಯಿತು. ಈ ಕಾಲದಲ್ಲಿ ಬೈಜಾಂಟೀಯನ್ ಚರ್ಚ್ ಪೋಪ್‍ನ ಅಧಿಕಾರ ಸಂಬಂಧಗಳಿಂದ ಬೇರ್ಪಟ್ಟಿತು. ಇದರಿಂದ ಯುರೋಪಿನ ಚರ್ಚ್‍ನಲ್ಲಿ ವಿಭಜನೆಯುಂಟಾಗಿ ಅದು ಇಂದಿಗೂ ಮುಂದುವರೆದಿದೆ. ಪ್ಯಾಲಸ್ತೀನ್ ಏಳನೆಯ ಶತಮಾನದಲ್ಲಿ ಮುಸ್ಲಿಮರ ವಶವಾಯಿತು. 11ನೆಯ ಶತಮಾನದಲ್ಲಿ ಸೆಲ್‍ಜುಕ್ ಟರ್ಕರು ಇದನ್ನು ಆಕ್ರಮಿಸಿಕೊಂಡಾಗ ಕ್ರಿಶ್ಚಿಯನ್ ಯಾತ್ರಿಕರಿಗೆ ಪವಿತ್ರ ಸ್ಥಳಗಳಿಗೆ ಹೋಗಿ ಬರಲು ತೊಂದರೆಯುಂಟಾಗಿ ಕ್ರೈಸ್ತರ ಪವಿತ್ರಸ್ಥಳಗಳ ವಿಮೋಚನೆಗಾಗಿ ಧರ್ಮಯುದ್ಧ 11ನೆಯ ಶತಮಾನದಿಂದ 13ನೆಯ ಶತಮಾನದವರೆಗೆ ನಡೆಯಿತು. ಈ ಯುದ್ಧಗಳು ಯುರೋಪಿನ ಮೇಲೆ ನಾನಾ ರೀತಿಯ ಪರಿಣಾಮವನ್ನುಂಟುಮಾಡಿದವು. ಕೆಲವು ವೇಳೆ ಇವರಲ್ಲಿ ಐಕ್ಯತೆಯನ್ನು ಸಾಧಿಸಲು ಸಹಾಯಕವಾದರೆ ಮತ್ತೆ ಕೆಲವು ಬಾರಿ ಅವು ರಾಜಕೀಯ ಅಸ್ಥಿರತೆಯನ್ನುಂಟುಮಾಡಿದವು. ಚರ್ಚಿನ ಮತ್ತು ಪೋಪನ ಪ್ರಭಾವ ಹೆಚ್ಚಿತು. ಯುರೋಪಿಗೆ ಅನೇಕ ರೀತಿಯ ಆರ್ಥಿಕ ಲಾಭಗಳುಂಟುಮಾಡಿದವು. ಇಂಗ್ಲೆಂಡ್, ಸ್ಪೇನ್ ಮತ್ತು ಫ್ರಾನ್ಸ್ ರಾಷ್ಟ್ರೀಯತೆಯನ್ನು ರೂಢಿಸಿಕೊಂಡು ಬೆಳೆದವು; ಊಳಿಗಮಾನ್ಯ ವ್ಯವಸ್ಥೆ ದುರ್ಬಲವಾಗ ತೊಡಗಿತು. 1317–1453ರ ಅವಧಿಯಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ನಡುವೆ ನಡೆದ ನೂರು ವರ್ಷಗಳ ಯುದ್ಧದ ಪರಿಣಾಮವಾಗಿ ಫ್ರಾನ್ಸಿನಲ್ಲಿ ಐಕ್ಯತೆಯುಂಟಾಯಿತು. 1453ರಲ್ಲಿ ಟರ್ಕರು ಕಾನ್‍ಸ್ಟಾಂಟಿನೋಪಲ್ ನಗರವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದು ಯುರೋಪಿಯನ್ ಇತಿಹಾಸದಲ್ಲಿ ಪ್ರಮುಖ ಘಟ್ಟವಾಯಿತು. ಇಲ್ಲಿದ್ದ ಗ್ರೀಕ್ ಪಂಡಿತರು ಪಶ್ಚಿಮ ಯುರೋಪಿಗೆ, ಮುಖ್ಯವಾಗಿ ಇಟಲಿಯ ವೆನಿಸ್ ಮುಂತಾದ ನಗರಗಳಿಗೆ ಬಂದು ನೆಲಸಿದ್ದರಿಂದ ಇಲ್ಲೆಲ್ಲಾ ಜ್ಞಾನ ಪುನರುಜ್ಜೀವನ ಚಳವಳಿ ನಡೆದು ಯುರೋಪ್ ಆಧುನಿಕ ಯುಗಕ್ಕೆ ಕಾಲಿಡುವಂತಾಯಿತು.

**ಆಧುನಿಕ ಯುಗದ ಆರಂಭ:** ನಾಲ್ಕು ಪ್ರಮುಖ ಘಟನೆಗಳು ಯುರೋಪನ್ನು ಊಳಿಗಮಾನ್ಯ ಕಾಲದಿಂದ ಆಧುನಿಕ ಕಾಲಕ್ಕೆ ಕರೆದೊಯ್ದವು. (1) ಭೌಗೋಳಿಕ ಅನ್ವೇಷಣೆಗಳು (2) ಪುನರುಜ್ಜೀವನ ಚಳವಳಿ (3) ಧಾರ್ಮಿಕ ಸುಧಾರಣೆ (4) ರಾಷ್ಟ್ರೀಯತೆಯ ಆಧಾರದ ಮೇಲೆ ರಾಜ್ಯಗಳ ಉಗಮ. 15 ಮತ್ತು 16ನೆಯ ಶತಮಾನಗಳ ಅವಧಿಯಲ್ಲಿ ಅಮೆರಿಕ ಮತ್ತು ಪೌರಸ್ತ್ಯ ದೇಶಗಳಿಗೆ ಸಮುದ್ರಮಾರ್ಗ ಕಂಡುಹಿಡಿದು ಹೊಸ ಯುಗ ಆರಂಭವಾಯಿತು. ಪೋರ್ಚುಗೀಸ್ ದೊರೆ ಹೆನ್ರಿ ನ್ಯಾವಿಗೇಟರ್ (1384–1460) ಇಂಥ ಕಾರ್ಯಕ್ಕೆ ಬುನಾದಿ ಹಾಕಿದ. ಬಾರ್ತೊಲೋಮೆ ಡಯಾಜ್, ವಾಸ್ಕೋಡಗಾಮ, ಕೊಲಂಬಸ್, ವೆಸ್‍ಪುಸ್ಸಿ ಮತ್ತು ಮೆಗಲ್ಲಾನ್ ಎಂಬ ಸಾಹಸಿ ನಾವಿಕರು ಭೌಗೋಳಿಕ ಅನ್ವೇಷಣೆ ನಡೆಸಿದವರಲ್ಲಿ ಪ್ರಮುಖರು. ಇಂಗ್ಲೆಂಡಿನ ನಾವಿಕರಾದ ಡೇವಿಸ್, ಹಾಕಿನ್ಸ್, ಡ್ರೇಕ್ ಮುಂತಾದವರೂ ಇದಕ್ಕೆ ನೆರವಾದರು. ಇದರ ಪರಿಣಾಮವಾಗಿ ಯುರೋಪ್ ವಸಾಹತುಗಳನ್ನು ಎಲ್ಲೆಡೆ ಸ್ಥಾಪಿಸಿತು. ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳ ಪುನರ್ ಪರಿಶೀಲನೆಯಿಂದ ಅಥವಾ ಪುನರಭ್ಯಾಸದಿಂದ ನಡೆದ ಚಳವಳಿಯನ್ನು ಪುನರುಜ್ಜೀವನ ಎಂದು ಕರೆಯಲಾಗುತ್ತದೆ. ಪುನರುಜ್ಜೀವನ ಯುರೋಪಿನ ಜನರ ಬದುಕಿನ ಎಲ್ಲ ಕ್ಷೇತ್ರಗಳಿಗೂ ಹೊಸತನವನ್ನು, ಎಚ್ಚರವನ್ನು ತಂದುಕೊಟ್ಟಿತಲ್ಲದೆ, ಮಧ್ಯಯುಗದಿಂದ ಆಧುನಿಕ ಯುಗಕ್ಕೆ ಪರಿವರ್ತನೆಗೊಳ್ಳಲು ಸಹಾಯಮಾಡಿತು. ಇಟಲಿಯಲ್ಲಿ ಆರಂಭವಾದ ಪುನರುಜ್ಜೀವನ ಚಳವಳಿ ಮುಂದೆ ಇಂಗ್ಲೆಂಡ್, ಫ್ರಾನ್ಸ್, ಸ್ವೀಡನ್ ಮತ್ತು ಜರ್ಮನ್ ದೇಶಗಳಿಗೂ ಹಬ್ಬಿತು. ಧರ್ಮಶಾಸ್ತ್ರದಿಂದ ದೂರಸರಿದು ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಕೃತಿಗಳಿಂದ ಸ್ಫೂರ್ತಿ ಪಡೆದ ಮಾನವತಾವಾದಿಗಳಾದ ಸಿಸಿರೋ, ಪೆಟ್ರಿಯಾರ್ಕ್, ಮಾರ್ಟಿನ್ ಲೂಥರ್, ಬೊಕಾಷಿಯೋ, 3ನೆಯ ಪೋಪ್ ನಿಕೋಲಸ್, ಡಾಂಟೆ, ಸರ್ವಾಂಟಿಸ್ ಮುಂತಾದ ಬುದ್ಧಿಜೀವಿಗಳು ಮಾನವನ ವ್ಯಕ್ತಿತ್ವವನ್ನು ಉತ್ತಮ ಗೊಳಿಸುವ ದಿಸೆಯಲ್ಲಿ ಕೆಲಸ ಮಾಡಿದರು; ಕೃತಿಗಳನ್ನು ರಚಿಸಿದರು. ಪುನರುಜ್ಜೀವನ ಕಾಲದ ಸಾಹಿತಿಗಳಲ್ಲಿ ಇಂಗ್ಲೆಂಡಿನ ಷೇಕ್ಸ್‍ಪಿಯರ್, ಸ್ಪೇನ್‍ನ ಸರ್ವಾಂಟಿಸ್ ಮೊದಲಾದವರನ್ನು ಹೆಸರಿಸಬಹುದು. ವಾಸ್ತುಶಿಲ್ಪಕ್ಷೇತ್ರದಲ್ಲಿ ಹೊಸ ಶೈಲಿ ರೂಪುಗೊಂಡು ಅದು ಚರ್ಚು ಮತ್ತು ಇತರ ಸಾರ್ವಜನಿಕ ಕಟ್ಟಡಗಳಲ್ಲಿ ಕಾಣಿಸಿಕೊಂಡಿತು. ಗ್ರೀಕ್ ಮತ್ತು ರೋಮನ್ ಶೈಲಿಯ ಬಾಗಿದ ಕಮಾನುಗಳು ಗ್ರೀಕ್ ದೇವಾಲಯಗಳ ಸರಳವಾದ ಗುಮ್ಮಟಗಳು ರೂಢಿಗೆ ಬಂದವು. ಇಟಲಿಯ ಪ್ರಪಂಚಖ್ಯಾತರಾದ ಲಿಯೊನಾರ್ಡೊ ಡ ವಿಂಚಿ, ಮೈಕೆಲೆಂಜೆಲೋ ಮತ್ತು ರಾಫೆಲ್ ಇವರೆಲ್ಲ ಈ ಕಾಲದವರು. ಲಿಯೊನಾರ್ಡೊ ಡ ವಿಂಚಿಯ ಪ್ರಸಿದ್ಧವಾದ ವರ್ಣಚಿತ್ರ ಮೊನಾಲೀಸಾ ಮತ್ತು ಅಂತಿಮ ಭೋಜನ ಈ ಕಾಲದ್ದು.

ಗೆಲಿಲಿಯೋ, ಕೋಪರ್ನಿಕಸ್, ಜಾನ್ ಕೆಪ್ಲರ್ ಮತ್ತು ಐಸಾಕ್ ನ್ಯೂಟನ್ ಈ ಯುಗದ ಪ್ರಸಿದ್ಧ ವಿಜ್ಞಾನಿಗಳು. ಗೆಲಿಲಿಯೋ ದೂರದರ್ಶಕ ಯಂತ್ರವನ್ನು ಉಪಜ್ಞಿಸಿದ. ಸೂರ್ಯ ವಿಶ್ವದ ಕೇಂದ್ರ, ಅದನ್ನು ಭೂಮಿ ಸುತ್ತುತ್ತಿದೆ ಎಂದು ಕೋಪರ್ನಿಕಸ್ ಪ್ರತಿಪಾದಿಸಿದ. ಜರ್ಮನಿಯ ಜಾನ್ ಯೋಹಾನ್ ಕೆಪ್ಲರ್ ಗಣಿತಾತ್ಮಕ ಖಗೋಳಶಾಸ್ತ್ರಕ್ಕೆ ತಳಹದಿ ಹಾಕಿದ. ಸೂರ್ಯ ಮತ್ತು ಅವನ ಸುತ್ತ ನಿರ್ದಿಷ್ಟ ಪಥದಲ್ಲಿ ಸುತ್ತುವ ಗ್ರಹಗಳನ್ನು ನಿಯಂತ್ರಿಸುತ್ತಿರುವುದು ಗುರುತ್ವಾಕರ್ಷಣೆಯ ನಿಯಮ ಎಂದು ನ್ಯೂಟನ್ ಪ್ರತಿಪಾದಿಸಿದ. ಯೋಹಾನ್ ಗುಟೆನ್‍ಬರ್ಗ್‍ನಿಂದ ಪ್ರಥಮ ಬಾರಿಗೆ ಜರ್ಮನಿಯಲ್ಲಿ ಮುದ್ರಣಾಲಯ ಆರಂಭವಾಯಿತು. ಕಾಕ್ಸ್‍ಟನ್ ಇಂತಹುದೇ ಮುದ್ರಣಾಲಯವನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಿದ. ಯುರೋಪಿನ ನಾಗರಿಕತೆ ಮತ್ತು ಸಂಸ್ಕೃತಿಯ ಬೆಳವಣಿಗೆಯ ಇತಿಹಾಸದಲ್ಲಿ ಮುದ್ರಣಾಲಯ ಮಹತ್ತರ ಪಾತ್ರವಹಿಸಿತು. ನಾವಿಕರ ದಿಕ್ಸೂಚಿ ಮತ್ತು ಸಿಡಿಮದ್ದನ್ನು ಸಿದ್ಧಪಡಿಸಿದುದು ಇದೇ ಕಾಲದಲ್ಲಿ. ಸಿಡಿಮದ್ದು ಕಂಡುಹಿಡಿದುದು ಯುದ್ಧ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಉಂಟುಮಾಡಿತು. ಹೀಗೆ ಪುನರುಜ್ಜೀವನ ಯುರೋಪಿನ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮಹಾನ್ ಬದಲಾವಣೆಗಳನ್ನು ಮೂಡಿಸಿತು. ಧಾರ್ಮಿಕ ಕ್ಷೇತ್ರದಲ್ಲಿ ಮಾರ್ಟಿನ್ ಲೂಥರ್ (1483–1546) ಪೋಪ್ ಮತ್ತು ಚರ್ಚಿನ ವಿರುದ್ಧ ಚಳವಳಿಯನ್ನು ನಡೆಸಿ ಯುರೋಪಿನಲ್ಲಿ ಪ್ರಾಟೆಸ್ಟಂಟ್ ಮತದ ಸ್ಥಾಪನೆಗೆ ಕಾರಣವಾದ. ಬೈಬಲ್ ಗ್ರಂಥ ಜರ್ಮನ್ ಮತ್ತು ಯುರೋಪಿಯನ್ ಭಾಷೆಗಳಿಗೆ ತರ್ಜುಮೆಗೊಂಡಿತು. ಧಾರ್ಮಿಕ ಚಳವಳಿಯ ಪರಿಣಾಮವಾಗಿ ಯುರೋಪಿನಲ್ಲಿ ಕ್ರೈಸ್ತಧರ್ಮ ಪ್ರಾಟೆಸ್ಟಂಟ್ ಮತ್ತು ಕೆಥೊಲಿಕ್ ಎಂಬ ಎರಡು ವಿರುದ್ಧ ಬಣಗಳಾದವು. ಇಂಗ್ಲೆಂಡ್, ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಮತ್ತು ಉತ್ತರ ಜರ್ಮನಿ ಪ್ರಮುಖ ಪ್ರಾಟೆಸ್ಟಂಟ್ ರಾಷ್ಟ್ರಗಳಾದರೆ, ಇಟಲಿ, ಆಸ್ಟ್ರಿಯ ಮತ್ತು ದಕ್ಷಿಣ ಜರ್ಮನಿ ಪ್ರಮುಖ ಕೆಥೊಲಿಕ್ ರಾಜ್ಯಗಳಾದವು. ಇಂಥ ಪರಿಸ್ಥಿತಿಯಲ್ಲಿ ಕೆಥೊಲಿಕರನ್ನು ಪ್ರಾಟೆಸ್ಟಂಟ್‍ರ ದೇಶಗಳಲ್ಲೂ ಪ್ರಾಟೆಸ್ಟಂಟರನ್ನು ಕೆಥೊಲಿಕ್ ದೇಶಗಳಲ್ಲೂ ಹಿಂಸಿಸ ತೊಡಗಿದರು. ಪ್ರಾಟೆಸ್ಟಂಟ್‍ರ ಪ್ರಾಬಲ್ಯವನ್ನು ತಡೆಯಲು ಕೆಥೊಲಿಕ್‍ರು ತಮ್ಮ ಚರ್ಚಿನಲ್ಲಿ ಪ್ರತಿ ಸುಧಾರಣೆಯನ್ನು 1145ರ ಟ್ರೆಂಟ್ ಸಭೆಯ ಗೊತ್ತುವಳಿಗೆ ಅನುಸಾರವಾಗಿ ನಡೆಸಿದರು. ಪೋಪ್ ಮತ್ತು ಪುರೋಹಿತ ವರ್ಗದವರು ಹೇಗೆ ನಡೆದುಕೊಳ್ಳಬೇಕೆಂದು ಸೂತ್ರಗಳನ್ನು ತಯಾರಿಸಲಾಯಿತು. ಸಂತ ಇಗ್ನೇಷಿಯಸ್ ಲಯೊಲನ ಸೊಸೈಟಿ ಆಫ್ ಜೀಸಸ್ ಸಂಘದ ಜೆಸೂಯಿಟರು ಈ ದಿಸೆಯಲ್ಲಿ ಮಹತ್ತರ ಕಾರ್ಯವನ್ನು ಮಾಡಿದರು (1534). ಕೊನೆಯದಾಗಿ ಪುನರುಜ್ಜೀವನ ಚಳವಳಿಯಿಂದಾಗಿ ರಾಷ್ಟ್ರೀಯ ಪ್ರಜ್ಞೆ ಅನೇಕ ಯುರೋಪಿಯನ್ ಜನಾಂಗದವರಲ್ಲಿ ಮೂಡಿತು. ಒಂದೇ ಭಾಷೆಗೆ ಸೇರಿದ ಜನಾಂಗದವರು ರಾಷ್ಟ್ರೀಯ ಪ್ರಜ್ಞೆಯುಳ್ಳ ಅರಸರಿಗೆ ಬೆಂಬಲವಾಗಿ ನಿಂತರು. ಇಂತಹ ರಾಷ್ಟ್ರೀಯ ಅರಸರ ಅಧೀನದಲ್ಲಿ ಅಭಿವೃದ್ಧಿಗೆ ಬಂದ ಪ್ರಮುಖ ರಾಷ್ಟ್ರಗಳೆಂದರೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ಸ್ಪೇನ್. ಹೀಗೆ 15–16ನೆಯ ಶತಮಾನಗಳಲ್ಲಿ ಯುರೋಪ್ ಆಧುನಿಕತೆಗೆ ಕಾಲಿಟ್ಟಿತು.

(ಎಸ್.ಕೆ.ಎಸ್.)

**ಯುವಾನ್ ಚಾಂಗ್:** 600–64. ಚೀನದ ಬೌದ್ಧ ಯಾತ್ರಿಕ ಮತ್ತು ವಿದ್ವಾಂಸ; ಇವನನ್ನು ಹುಯೆನ್‍ತ್ಸಾಂಗ್ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಇವನು 600ರಲ್ಲಿ ಚೀನದ ಹೊನನ್ ಪ್ರಾಂತದ ಕೌ–ಷಿಕ್ ಎಂಬ ನಗರದ ಸಮೀಪದ ಮೆನ್–ಪಾಪ್–ಕು ಎಂಬ ಹಳ್ಳಿಯಲ್ಲಿ ಹುಟ್ಟಿದ. ಇವನ ತಂದೆ ವೈನ್–ಹುಯಿ ಸುಸಂಸ್ಕೃತ ಮನೆತನಕ್ಕೆ ಸೇರಿದ್ದು ಸ್ವತಃ ವಿದ್ವಾಂಸನಾಗಿದ್ದ. ಇವನ ನಾಲ್ಕು ಜನ ಮಕ್ಕಳಲ್ಲಿ ಯುವಾನ್ ಚಾಂಗ್ ಕೊನೆಯವನು. ಈತ ತನ್ನ ಮೂವತ್ತನೆಯ ವಯಸ್ಸಿನಲ್ಲಿ ಬೌದ್ಧ ಧರ್ಮಾವಲಂಬಿಯಾದ. ಇವನಿಗೆ ಬಾಲ್ಯದಲ್ಲಿ ಒಳ್ಳೆಯ ಶಿಕ್ಷಣ ದೊರೆತಿದ್ದು ಸೂಕ್ಷ್ಮಗ್ರಾಹಿಯೂ ವಾಚಾಳಿಯೂ ಬಹುಶ್ರುತನೂ ಆಗಿದ್ದು ಪಂಡಿತನೆನಿಸಿದ. ಭಾರತಕ್ಕೆ ಹೋಗಿ ಅಲ್ಲಿ ದೊರೆಯುವ ಮೂಲ ಬೌದ್ಧ ಗ್ರಂಥಗಳನ್ನು ಅಭ್ಯಾಸಮಾಡಿ ಬೌದ್ಧಧರ್ಮದ ಸೂಕ್ಷ್ಮಾತಿಸೂಕ್ಷ್ಮ ತತ್ತ್ವಗಳನ್ನು ತಿಳಿದು ತನ್ನ ದೇಶದ ಜನರಲ್ಲಿ ಅವನ್ನು ಪ್ರಚುರಪಡಿಸಬೇಕೆಂಬುದು ಇವನ ಹಂಬಲವಾಗಿತ್ತು. ಇವನು ಭಾರತಕ್ಕೆ ಪ್ರಯಾಣ ಬೆಳಸಲು ಅಲ್ಲಿನ ರಾಜನಿಂದ ಪ್ರೋತ್ಸಾಹ ದೊರೆಯದಿದ್ದರೂ ಸ್ವಂತ ಸಾಹಸದಿಂದ ತನ್ನ ರಾಜ್ಯವನ್ನು ತೊರೆದು ಭಾರತದ ಹಾದಿ ಹಿಡಿದ.

ವರ್ಣಚಿತ್ರ

ಈತ ಕಲ್ಪನೆಗೂ ಎಟುಕದ ರೀತಿಯಲ್ಲಿ ಕಷ್ಟಪಟ್ಟು ಕುದುರೆ, ಒಂಟೆ, ಹೇಸರಗತ್ತೆಗಳ ಮೇಲೆ ಮತ್ತು ಕಾಲ್ನಡಿಗೆಯಲ್ಲಿ ಮರುಭೂಮಿಗಳನ್ನೂ ಹಿಮಾಚ್ಛಾದಿತ ಪರ್ವತಗಳನ್ನೂ ಗಿರಿಕಂದರಗಳನ್ನೂ ದಾಟಿ ಹಿಂದುಕುಶ್ ಪರ್ವತ ಮಾರ್ಗದಲ್ಲಿ ಬಂದು ಪೆಷಾವರ್ ಮೂಲಕ ಕಾಶ್ಮೀರ ಮತ್ತು ಪಂಜಾಬ್‍ಗಳನ್ನು ಹಾದು ಉತ್ತರ ಭಾರತವನ್ನು ಪ್ರವೇಶಿಸಿದ. ಆಗ ಸ್ಥಾನೇಶ್ವರದಲ್ಲಿ ಹರ್ಷವರ್ಧನನ ಆಳಿಕೆ. ಇವನು ಭಾರತ ತಲುಪಿದ ಕಾಲ ಸು.630. ಯೋಗಾಯೋಗವೆಂಬಂತೆ ಹರ್ಷವರ್ಧನ ಬೌದ್ಧಧರ್ಮದಲ್ಲಿ ನಿಷ್ಠೆ ಹೊಂದಿದ್ದ. ಯುವಾನ್ ಚಾಂಗ್‍ನ ಬರುವನ್ನು ಆದರದಿಂದ ಸ್ವಾಗತಿಸಿದನಲ್ಲದೆ ಅವನಿಗೆ ಎಲ್ಲ ಪ್ರೋತ್ಸಾಹಗಳನ್ನು ನೀಡಿದ. ಈತ ಭಾರತದ ವಿವಿಧ ಬೌದ್ಧಪೀಠಗಳನ್ನು ಸಂದರ್ಶಿಸಿ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹಿಸಿದ. ಸಂಸ್ಕೃತ ಮತ್ತು ಪಾಳಿ ಭಾಷೆಗಳನ್ನು ಕಲಿತು ಅನೇಕ ಕೃತಿಗಳನ್ನು ಅನುವಾದಿಸಿ ಕೊಂಡ. ಕಪಿಲವಸ್ತು, ಪಾಟಲಿಪುತ್ರ, ನಲಂದ, ತಾಮ್ರಲಿಪಿ, ನಾಗಾರ್ಜುನಕೊಂಡ ಗಳಿಗೆ ಭೇಟಿನೀಡಿ ವಿದ್ವಾಂಸರೊಂದಿಗೆ ಚರ್ಚಿಸಿ ತನ್ನ ಜ್ಞಾನವನ್ನು ಹೆಚ್ಚಿಸಿಕೊಂಡ. ದಕ್ಷಿಣ ಮತ್ತು ಪಶ್ಚಿಮ ಭಾರತದಲ್ಲಿ ಪ್ರವಾಸ ಮಾಡಿ ಕಾಂಚಿ, ಪುನ್ನಾಟ, ಬನವಾಸಿ, ನಾಸಿಕ ಹಾಗೂ ವಲ್ಲಭಿಗಳನ್ನು ಸಂದರ್ಶಿಸಿದ. ಕರ್ನಾಟಕ ಸಾಮ್ರಾಜ್ಯವನ್ನು ಬಾದಾಮಿಯಿಂದ ಆಳುತ್ತಿದ್ದ ಚಳುಕ್ಯ ಪುಲಕೇಶಿಯ ಬಗ್ಗೆ ಕೆಲವು ಮಾಹಿತಿಗಳನ್ನು ಇವನು ನೀಡಿದ್ದಾನೆ. ಪುಲಕೇಶಿ ಹರ್ಷವರ್ಧನನ ಸೈನ್ಯವನ್ನು ಹಿಮ್ಮೆಟ್ಟಿಸಿದ ವಿಚಾರವಾಗಿ ತಿಳಿಸಿದ್ದಾನೆ. ಕನ್ನಡಿಗರ ಸತ್ಯಸಂಧತೆ ಮತ್ತು ಸನ್ನಡತೆಗಳನ್ನು ಕೊಂಡಾಡಿದ್ದಾನೆ. ಇವನು ಸಿಂಹಳಕ್ಕೆ ಹೋಗಿರಲಿಲ್ಲವೆಂದೂ ದಕ್ಷಿಣ ಭಾರತದ ಪ್ರವಾಸ ಕಾಲದಲ್ಲಿ ಆ ದೇಶದ ಬಗೆಗೆ ವಿವರಗಳನ್ನು ತಿಳಿದು ಬಂದಿದ್ದನೆಂಬುದು ಇತಿಹಾಸಕಾರರ ಅಭಿಪ್ರಾಯ.

ಇವನು ಹರ್ಷವರ್ಧನ ಏರ್ಪಡಿಸಿದ್ದ ಮಹಾಬೌದ್ಧ ಸಮ್ಮೇಳನದಲ್ಲಿ ಭಾಗವಹಿಸಿ ಅಗ್ರಮಾನ್ಯತೆಗೆ ಪಾತ್ರನಾದ. ಅಸ್ಸಾಂ ಮತ್ತು ಕಾಶ್ಮೀರ ರಾಜರುಗಳಿಂದ ಗೌರವಕ್ಕೆ ಪಾತ್ರನಾದ. 644ರ ಹೊತ್ತಿಗೆ ಚೀನಕ್ಕೆ ಹಿಂದಿರುಗಲು ನಿರ್ಧರಿಸಿದ್ದ. ಹರ್ಷವರ್ಧನ ಇವನ ಪ್ರಯಾಣಕ್ಕೆ ಸಕಲ ಏರ್ಪಾಟುಗಳನ್ನು ಮಾಡಿ ಬೀಳ್ಕೊಟ್ಟ. ಯಾತ್ರಿಕ ರಾಜ, ಸಮಕಾಲೀನ ಶಾಕ್ಯಮುನಿ, ಕಾನೂನು ಪಂಡಿತ, ಜ್ಞಾನಸೂರ್ಯ ಎಂದೆಲ್ಲ ಹರ್ಷ ಇವನನ್ನು ವರ್ಣಿಸಿದ್ದಾನೆ. ಹೋಗುವಾಗ ಬಳಸು ದಾರಿಯನ್ನು ತೊರೆದು ಪೆಷಾವರದಿಂದ ನೇರವಾಗಿ ಕ್ಯಾಷ್‍ಘರ್, ಯಾರ್ಕಂಡ್ ಮತ್ತು ಖೋತಾನ್ ಮೂಲಕ ಚಾಂಗ್ ರಾಜ್ಯವನ್ನು ತಲುಪಿದ. ಈತ ಚೀನಕ್ಕೆ ಹಿಂದಿರುಗಿದ್ದು ಭಾರಿ ಸುದ್ದಿಯನ್ನು ಮಾಡಿತು. ಚಕ್ರವರ್ತಿ ಇವನಿಗೆ ಅದ್ದೂರಿಯ ಸ್ವಾಗತ ನೀಡಿದ. ಚೀನಕ್ಕೆ ಹೋದ ಮೇಲೆ ತಾನು ತೆಗೆದುಕೊಂಡು ಹೋಗಿದ್ದ ಹಸ್ತಪ್ರತಿಗಳ ಭಾಷಾಂತರ ಕಾರ್ಯವನ್ನು ಮುಂದುವರಿಸಿದ. ರಾಜಕುಮಾರರೂ ಮಂತ್ರಿಗಳೂ ಇವನ ಪ್ರವಚನ ಕೇಳಲು ಬರುತ್ತಿದ್ದರು. ತಾನು ಮಾರ್ಗಮಧ್ಯದಲ್ಲಿ ಕಳೆದುಕೊಂಡಿದ್ದ ಕೆಲವು ಹಸ್ತಪ್ರತಿಗಳ ನಕಲುಗಳನ್ನು ಭಾರತದಿಂದ ತರಿಸಿಕೊಂಡ. 652ರಲ್ಲಿ ಒಂದು ಚೈತ್ಯವನ್ನು ಕಟ್ಟಿಸಿ ಅದರಲ್ಲಿ ತಾನು ತಂದಿದ್ದ ಗ್ರಂಥಗಳನ್ನು ಮತ್ತು ಬುದ್ಧನ ವಿಗ್ರಹಗಳನ್ನು ಸುರಕ್ಷಿತವಾಗಿಟ್ಟ. 658ರಲ್ಲಿ ಚೀನದ ರಾಜಧಾನಿಗೆ ಬಂದು ನೆಲೆಸಿದ. ಅಲ್ಲಿನ ಅರಮನೆಯೊಂದನ್ನು ಇವನ ವಾಸ್ತವ್ಯಕ್ಕೆ ಬಿಟ್ಟುಕೊಡಲಾಯಿತು. ಇವನು

ಸಿ-ಯು-ಕಿ ಎಂಬ ಗ್ರಂಥದಲ್ಲಿ ತನ್ನ ಪ್ರವಾಸ ಕಥನವನ್ನು ಬರೆದಿಟ್ಟಿದ್ದಾನೆ. ಈ ಗ್ರಂಥವನ್ನು ಬಿಲ್ ಮತ್ತು ವಾಟರ್ಸ್ ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದ್ದಾರೆ. ಇವನ ಬರೆವಣಿಗೆಗಳು ಸ್ಪಷ್ಟತೆ, ನಿಖರತೆ ಮತ್ತು ಸುಂದರ ಶೈಲಿಗೆ ಹೆಸರಾಗಿವೆ. ಅವು ಚೀನಿ ಸಾಹಿತ್ಯದ ಭವ್ಯತೆಯ ಹೆಗ್ಗುರುತೆಂದು ಚೀನಿಯರು ಭಾವಿಸುತ್ತಾರೆ. ಇವನು ಒಟ್ಟು 74 ಗ್ರಂಥಗಳನ್ನು ಭಾಷಾಂತರಿಸಿದ್ದಾನೆಂದು ತಿಳಿದುಬರುತ್ತದೆ. ಚೀನಿ ಮತ್ತು ಸಂಸ್ಕೃತ ಭಾಷೆಗಳ ನಿಘಂಟನ್ನು ರಚಿಸಿದ. ಪ್ರವಾಸದ ಕಾಠಿಣ್ಯ ಮತ್ತು ಬರೆವಣಿಗೆ ಮತ್ತು ಬೋಧನೆಗಳ ಶ್ರಮದಿಂದ ಇವನ ದೇಹಾರೋಗ್ಯ ದುರ್ಬಲಗೊಳ್ಳುತ್ತಾ ಬಂದು 664 ಅಕ್ಟೋಬರ್ 13ರಂದು ನಿಧನನಾದ.

ಬೌದ್ಧಧರ್ಮ ಚೀನದಲ್ಲಿ ಪ್ರಚಾರ ಪಡೆಯಲು ಯುವಾನ್ ಚಾಂಗ್ ನೀಡಿದ ಕೊಡುಗೆ ಅಪಾರವಾದುದು. ಚೀನದಲ್ಲಿ ಇವನದೇ ಆದ ಹೊಸ ಬೌದ್ಧತತ್ತ್ವಶಾಸ್ತ್ರ ಸ್ಥಾಪಿತವಾಯಿತು. ಚೀನಿ ಬೌದ್ಧಸನ್ಯಾಸಿಗಳು ಭಾರತದಲ್ಲಿ ಯಾತ್ರೆ ಕೈಗೊಳ್ಳಲು ಇವನು ಸಾಕಷ್ಟು ಪ್ರೇರೇಪಿಸಿದ. ಈ ಮೂಲಕ ಭಾರತ ಚೀನ ಸಂಬಂಧಗಳು ಹೆಚ್ಚಿದವು. ಭಾರತೀಯ ರಾಜರುಗಳೊಂದಿಗೆ ಚೀನಿ ಚಕ್ರವರ್ತಿ ರಾಜಕೀಯ ಸಂಬಂಧ ಹೊಂದುವಂತಾಯಿತು. ಯುವಾನ್ ಚಾಂಗ್‌ನ ನಿಧನಾನಂತರ ಚೀನಿ ಚಕ್ರವರ್ತಿ ಇವನ ಗೌರವಾರ್ಥವಾಗಿ ಸಮಾಧಿ ಕಟ್ಟಿ ಗೋಪುರ ನಿರ್ಮಿಸಿದ. (ಡಿ.ಎಸ್.ಜೆ.)

**ಯೇಲೇಶ್ವರಮ್:** ಆಂಧ್ರಪ್ರದೇಶ ರಾಜ್ಯದ ನಲ್ಗೊಂಡ ಜಿಲ್ಲೆಯಲ್ಲಿರುವ ಒಂದು ಗ್ರಾಮ. ಕೃಷ್ಣನದಿಯ ಎಡದಂಡೆಯ ಮೇಲಿದೆ. ಇಲ್ಲಿ ಐದು ಕಡೆಗಳಲ್ಲಿ ಪುರಾತತ್ತ್ವ ನೆಲೆಗಳಿವೆ. ಪೆದ್ದವಾಗು ನಾಲೆಯ ಹತ್ತಿರ ಹಳೆ ಶಿಲಾಯುಗದ ಅವಶೇಷಗಳೂ ಕೃಷ್ಣಾಪುರಂ, ಲೋಹಮಂಚೆರು ಮತ್ತು ವೀರಗೋಯಲ್‌ಗುಂತಗಳಲ್ಲಿ ಬೃಹತ್‌ಶಿಲಾ ಸಂಸ್ಕೃತಿಯ ಕಲ್ಲುಗೋರಿಗಳೂ ದೇವಾಲಯಗಳೂ ಇವೆ. ಕೃಷ್ಣಾಪುರಂನಲ್ಲಿ ಕಲ್ಲುವೃತ್ತಗಳು 5.49ಮೀ – 12.14ಮೀ ವ್ಯಾಸವುಳ್ಳದ್ದಾಗಿವೆ. ಉಳಿದೆರಡು ನೆಲೆಗಳಲ್ಲಿ ಭಾಗಶಃ ನೆಲದಡಿಯಲ್ಲಿರುವ ಕಂಡಿಕೋಣೆ ಗೋರಿಗಳಿವೆ. ಲೋಹಮಂಚೆರುವಿನಲ್ಲಿರುವ 20 ಬೃಹತ್‌ಶಿಲಾ ಸಮಾಧಿಗಳಲ್ಲಿ 5 ಕಲ್ಗೋರಿಗಳನ್ನು ಉತ್ಖನನ ಮಾಡಲಾಯಿತು. ಒಂದರಲ್ಲಿ ಕಂಡಿಸಹಿತವಾದ ಎರಡು ಭಾಗಗಳನ್ನಾಗಿ ವಿಭಜಿಸಿದ ಕೋಣೆ ಗೋರಿಯಿತ್ತು. ವೀರಗೋಯಲ್‌ಗುಂತದಲ್ಲಿ 23 ಬೃಹತ್‌ಶಿಲಾ ಸಮಾಧಿಗಳಿದ್ದು 3ರಲ್ಲಿ ಉತ್ಖನನ ಮಾಡಲಾಗಿದೆ. ಇವು ಕಂಡಿ ಕೋಣೆ ಗೋರಿಗಳು. ಎಲ್ಲ ಕಲ್ಗೋರಿಗಳಲ್ಲಿ ತಲೆಬುರುಡೆ ಸಹಿತ ಮಾನವ ಅಸ್ಥಿ ಅವಶೇಷಗಳು, ಮಣ್ಪಾತ್ರೆಗಳು ಮತ್ತು ಕಬ್ಬಿಣದ ಉಪಕರಣಗಳಿವೆ. ಇಲ್ಲಿ ದೊರೆತ ಅಸ್ಥಿ ಅವಶೇಷಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗಿದೆ. ಈ ಜನ ಎತ್ತರವೂ ದೃಢಕಾಯರೂ ಆಗಿದ್ದರು. ದೇವಾಲಯದ ಉತ್ಖನನದಲ್ಲಿ ಅತ್ಯಂತ ಕೆಳಗಿನ ಹಂತದಲ್ಲಿ ನಾಲ್ಕು ಪ್ರಕಾರಗಳ ಬೃಹತ್ ಶಿಲಾಗೋರಿಗಳು ಬೆಳಕಿಗೆ ಬಂದವು. ಇವು ಭಾಗಶಃ ನೆಲದಡಿಯಿರುವ ಕೋಣೆಗೋರಿ, ಕಂಡಿಕೋಣೆ ಗೋರಿ, ಅಸ್ಥಿಪಾತ್ರೆ ಮತ್ತು ಕಲ್ಲುವೃತ್ತ ಶವಕುಣಿಗಳು. ಈ ಕಲ್ಗೋರಿಗಳು 3ನೆಯ ಶತಮಾನಕ್ಕಿಂತ ಪೂರ್ವದ್ದೆಂಬುದು ಉತ್ಖನನಕಾರರ ಅಭಿಪ್ರಾಯ. ಈ ನೆಲೆಯಲ್ಲಿ ಅನುಕ್ರಮವಾಗಿ 6 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ. ಅತ್ಯಂತ ಪ್ರಾಚೀನವಾದದ್ದು ಬೃಹತ್‌ಶಿಲಾ ಸಂಸ್ಕೃತಿ. ಇದರ ಅನಂತರ ಇತಿಹಾಸ ಕಾಲದ ಇಕ್ಷ್ವಾಕು ಹಂತವಿದೆ. ಈ ನೆಲೆಯ ಸಮೀಪ ಇದೇ ಕಾಲದ ಒಂದು ಸ್ನಾನಘಟ್ಟ ಮತ್ತು ಸ್ತಂಭ ಮಂಟಪಗಳಿವೆ. ಸ್ನಾನಘಟ್ಟದ ಕಲ್ಲುಮೆಟ್ಟಿಲುಗಳ ಮೇಲೆ ತೆಲುಗು ಶಾಸನಗಳಿವೆ. ಇಲ್ಲಿ ಗಜಪೃಷ್ಠಾಕೃತಿ ವಿನ್ಯಾಸದ ಹಲವು ಶೈವ, ವೈಷ್ಣವ ದೇವಾಲಯಗಳಿವೆ. ಸ್ನಾನಘಟ್ಟದ ಹತ್ತಿರ ಚಾಳುಕ್ಯರ ಕಾಲದ ಶಿಲಾ ದೇವಾಲಯಗಳಿವೆ. ಇವುಗಳಲ್ಲಿ ಯೇಲೇಶ್ವರಮ್ ಸ್ವಾಮಿ ದೇವಾಲಯ ಮಹತ್ತ್ವದ್ದಾಗಿದೆ. (ಎ.ಎಸ್.)



ನೆಲದಡಿಯ ಜೋಡಿ ಕೋಣೆಗೋರಿ

**ಯೇಸುಕ್ರಿಸ್ತ:** ಕ್ರೈಸ್ತಧರ್ಮ ಸ್ಥಾಪಕ. ಈತ ಮನುಕುಲದ ಸಂರಕ್ಷಣೆಗಾಗಿ ಧರೆಗಿಳಿದು ಬಂದ ದೇವಪುತ್ರನೆಂದು ಕ್ರೈಸ್ತಧರ್ಮೀಯರ ನಂಬಿಕೆ. ಕ್ರೈಸ್ತೇತರರು ಕೂಡ ಯೇಸುಕ್ರಿಸ್ತನನ್ನು ಮಹಾನ್ ಬೋಧಕನೆಂದು ಒಪ್ಪುತ್ತಾರೆ. ಮನುಕುಲದ ಮೇಲೆ ಗಾಢ ಪ್ರಭಾವ ಬೀರಿದ ಧಾರ್ಮಿಕ ವ್ಯಕ್ತಿಗಳಲ್ಲಿ ಯೇಸುವಿನ ಹೆಸರು ಮೊದಲನೆಯ ಸ್ಥಾನದಲ್ಲಿ ನಿಲ್ಲುತ್ತದೆ. ಇಸ್ಲಾಂ ಧರ್ಮಸ್ಥಾಪಕನಾದ ಮಹಮ್ಮದ್ ಪೈಗಂಬರ್ ಕೂಡ ಈತನನ್ನು ಮಹಾನ್ ಪ್ರವಾದಿ (ಪ್ರಾಫೆಟ್) ಎಂದು ನಂಬಿದ್ದ. ಯೇಸುವಿನ ಅನೇಕ ಆಲೋಚನೆಗಳನ್ನು ಆತ ತನ್ನ ಧರ್ಮಬೋಧನೆಯಲ್ಲಿ ಅಳವಡಿಸಿಕೊಂಡಿದ್ದಾನೆ. ಪ್ರಜಾಪ್ರಭುತ್ವದ ಬೇರುಗಳನ್ನು ಯೇಸುವಿನ ಧಾರ್ಮಿಕ ಬೋಧನೆಗಳಲ್ಲಿ ಕಾಣಬಹುದು.

ಹೀಬ್ರು ಭಾಷೆಯಲ್ಲಿ ಜೀಸಸ್ (ಕನ್ನಡದಲ್ಲಿ ಯೇಸು) ಎಂಬ ಪದಕ್ಕೆ ಪಾಪಗಳಿಂದ ರಕ್ಷಿಸುವವ, ಉದ್ಧಾರಕ ಎಂಬ ಅರ್ಥವಿದೆ. ಕ್ರೈಸ್ಟ್ ಎಂಬ ಪದ ಗ್ರೀಕ್ ಭಾಷೆಯ ಕ್ರಿಸ್ತೊಸ್ ಎಂಬ ಪದದಿಂದ ಬಂದಿದೆ. ಕ್ರಿಸ್ತ ಎಂದರೆ ಉದ್ಧಾರಕ (ಮೆಸ್ಸೆಯ), ಅಭಿಷಿಕ್ತ, ದೇವರ ಉದ್ದೇಶವನ್ನು ಸಾಧಿಸಲು ಆರಿಸಲ್ಪಟ್ಟವ ಎಂದರ್ಥ. ಮೇರಿಯ ಗರ್ಭದಲ್ಲಿ ಜನಿಸಿದ ಯೇಸುಕ್ರಿಸ್ತ ದೇವಕುಮಾರ, ಮಾನವಕುಲದ ರಕ್ಷಕ, ಮೃತ್ಯುಂಜಯನಾದ ಕರ್ತ, ಕಾಲಾಂತ್ಯದಲ್ಲಿ ಲೋಕವನ್ನು ಉದ್ಧರಿಸುವವ ಎಂಬುದು ಕ್ರೈಸ್ತ ಸಭೆಯ ನಂಬಿಕೆ. ಈತನ ಜೀವನ ಮತ್ತು ಬೋಧನೆಯ ವಿಷಯಗಳನ್ನು ಸ್ಥೂಲವಾಗಿ ಇಲ್ಲಿ ಕೊಟ್ಟಿದೆ.

ಮೂಲ ಗ್ರಂಥಗಳು: ಯೇಸುವಿನ ಜೀವನಕ್ಕೂ ಬೋಧನೆಗೂ ಆಧಾರವಾಗಿರುವ ಮುಖ್ಯ ಮೂಲ ಗ್ರಂಥಗಳು ಹೊಸ ಒಡಂಬಡಿಕೆಯ (ನ್ಯೂ ಟೆಸ್ಟಮೆಂಟ್) ಆದಿಭಾಗದಲ್ಲಿರುವ ಮ್ಯಾಥ್ಯೂ, ಮಾರ್ಕ್, ಲ್ಯೂಕ್, ಜಾನ್ –ಇವರ ನಾಲ್ಕು ಸುವಾರ್ತೆಗಳು (ಗಾಸ್ಪಲ್ಸ್). ಇವುಗಳಲ್ಲಿ ಮಾರ್ಕನು ಬರೆದ ಸುವಾರ್ತೆ ಕಾಲ ಗಣನೆಯಲ್ಲಿ ಮೊದಲನೆಯದೆಂಬುದು ವಿದ್ವಾಂಸರ ಅಭಿಪ್ರಾಯ. ಯೇಸುವಿನ ಜೀವನಕ್ಕೆ ಸಂಬಂಧಿಸಿದ ಮುಖ್ಯ ವಿಷಯಗಳು ಆತನ ಸೇವೆಯ ಕಾಲ, ಆತನ ಬಾಧೆ, ಮರಣ, ಪುನರುತ್ಥಾನ – ಇವುಗಳನ್ನು ಮಾರ್ಕನು ಸಂಕ್ಷೇಪವಾಗಿ ವಿವರಿಸಿದ್ದಾನೆ. ಉಳಿದ ಸುವಾರ್ತಾಕರಿಗೆ ಮಾರ್ಕನ ಗ್ರಂಥ ಆಧಾರ. ಜಾನ್‌ನ ಸುವಾರ್ತೆ ಯೇಸುವಿನ ಜೀವನಕ್ಕೆ ಕೆಲವು ಮುಖ್ಯ ಚಾರಿತ್ರಿಕ ಅಂಶಗಳನ್ನೂ ಬೋಧನೆಯ ಭಾಗಗಳನ್ನೂ ಆಧ್ಯಾತ್ಮಿಕ ದೃಷ್ಟಿಯಿಂದ ವಿಚಾರಿಸಿ, ಆತ ಮಾನವಾವತಾರವೆತ್ತಿ ಬಂದಿರುವ ದೇವರ ದೂತನಾಗಿದ್ದಾನೆ (ಜಾನ್ 1 : 14) ಎಂಬುದನ್ನು ನಿರೂಪಿಸುವ ಉದ್ದೇಶದಿಂದ ಬರೆಯಲಾಗಿದೆ. ಈ ನಾಲ್ಕು ಸುವಾರ್ತೆಗಳ ಕಾಲ ಮತ್ತು ಬರೆಯಲಾದ ಸ್ಥಳಗಳ ವಿಷಯವಾಗಿ ಸಾಧಾರಣವಾಗಿ ಸ್ವೀಕರಿಸಿರುವ ಅಭಿಪ್ರಾಯಗಳು ಹೀಗಿವೆ:

| ಸುವಾರ್ತೆ ಕಾಲ | ಪ್ರ.ಶ. | ಸ್ಥಳ |
| --- | --- | --- |
| 1. ಮಾರ್ಕ್ | 60–65 | ಜೆರುಸಲೇಮ್ |
| 2. ಮ್ಯಾಥ್ಯೂ | 80–90 | ರೋಮ್ |
| 3. ಲ್ಯೂಕ್ | 75–90 | ಕೈಸರೈಯ |
| 4. ಜಾನ್ | 90–100 | ಎಫಿಸಸ್ |

ಚಾರಿತ್ರಿಕ ಹಿನ್ನಲೆ: ಕ್ರೈಸ್ತಧರ್ಮ ಯೇಸುಕ್ರಿಸ್ತನ ಚಾರಿತ್ರಿಕ ಜೀವನದ ಆಧಾರದ ಮೇಲೆ ನಿಂತಿದೆ. ಯೇಸುಕ್ರಿಸ್ತನ ಕಾಲದಲ್ಲಿ ಪ್ಯಾಲಸ್ತೀನ್ ದೇಶ ರೋಮನರಿಗೆ ಸೇರಿತ್ತು. ರೋಮ್ ಸರ್ಕಾರ ದೇಶದ ಬೇರೆಬೇರೆ ಭಾಗಗಳಿಗೆ ರಾಜ್ಯಪಾಲರನ್ನು ನೇಮಿಸಿ ಅವರ ಮೂಲಕ ಆಡಳಿತವನ್ನು ನಡೆಸುತ್ತಿತ್ತು. ಸತ್ಯವೆಂದರೇನು ಎಂಬ ಪ್ರಮುಖ ಪ್ರಶ್ನೆಯನ್ನು ಕ್ರಿಸ್ತನಿಗೆ ಹಾಕಿದ ಪೈಲಟ್ (ಪಿಲಾತ) (ಆಡಳಿತ ಕಾಲ ಸು.26–36) ಇಂಥ ರಾಜ್ಯಪಾಲರಲ್ಲಿ ಒಬ್ಬ. ಸ್ವಾತಂತ್ರ್ಯಪ್ರಿಯರಾದ ಯಹೂದಿಗಳು ರೋಮನರಿಗೆ ವಿರೋಧವಾಗಿ ಆಗಾಗ್ಗೆ ದಂಗೆ ಏಳುತ್ತಿದ್ದರು. ಆದ್ದರಿಂದ ರೋಮ್ ಸರ್ಕಾರ ಇವರ ಬಗ್ಗೆ ಬಹುಜಾಗ್ರತೆ ವಹಿಸಬೇಕಾಗಿತ್ತು. ಯಹೂದಿಗಳಲ್ಲಿ ಆ ಕಾಲದಲ್ಲಿ ಹಲಕೆಲವು ಪಂಗಡಗಳಿದ್ದುವು. ಫ್ಯಾರಿಸೀ ಪಂಗಡದವರು ಜನತಾ ಪಕ್ಷದವರು; ಇವರು ಧರ್ಮಬೋಧಕರಾಗಿದ್ದು ನ್ಯಾಯಪ್ರಮಾಣವನ್ನು ಬಹು ನಿಷ್ಠೆಯಿಂದ ಪಾಲಿಸುತ್ತ ಅದನ್ನು ಜನರಿಗೆ ಉಪದೇಶಿಸುತ್ತಿದ್ದರು. ಅವರಲ್ಲಿ ಕೆಲವರು ಉಗ್ರವಾದಿಗಳಾಗಿದ್ದು ಅಗತ್ಯವಿದ್ದಾಗ ತಮ್ಮ ಸ್ವಾತಂತ್ರ್ಯಕ್ಕಾಗಿ ರಕ್ತಚೆಲ್ಲಲೂ ಹಿಂಜರಿಯುತ್ತಿರಲಿಲ್ಲ. ಸ್ಯಾಜೂಸೀ ಗುಂಪಿನವರು ಪುರೋಹಿತವರ್ಗಕ್ಕೆ ಸೇರಿದವರು. ಬಲುಮಟ್ಟಿಗೆ ಕುಲೀನರಾಗಿದ್ದ ಇವರು ತಮ್ಮ ಅನುಕೂಲತೆಗಾಗಿ ರೋಮನರ ಅಧಿಕಾರವನ್ನು ಒಪ್ಪಿಕೊಂಡು ಅವರ ಅಧೀನರಾಗಿ ಧಾರ್ಮಿಕ ಆಡಳಿತ ನಡೆಸುತ್ತಿದ್ದರು. ಯೇಸುಕ್ರಿಸ್ತನನ್ನು ಪೂಜಿಸುವ ತೀರ್ಮಾನ ಮಾಡಿದ ಮೇರಿ ಗುಂಪಿನವರು ಈ ಪಂಗಡಕ್ಕೆ ಸೇರಿದವರು. ಇವರಲ್ಲದೆ ಆ ಕಾಲದಲ್ಲಿ ಯಾವ ಪಂಗಡಗಳಿಗೂ ಸೇರದ ಭಕ್ತರೂ ನಿರಹಂಕಾರಿಗಳೂ ಸರಳರೂ ಆದ ಸಾವಿರಾರು ಜನ, ದೇವರು ತಾನೇ ತಕ್ಕ ಸಮಯದಲ್ಲಿ ತಮಗೆ ಮೆಸ್ಸೆಯನೆಂಬ ಸ್ವಾತಂತ್ರ್ಯ ವೀರನನ್ನು ಕಳುಹಿಸಿ ಕೊಡುವ ಎಂಬ ಮಹದಾಸೆಯಿಂದಿದ್ದರು. ಇಂಥ ಕುಟುಂಬ ಒಂದರಲ್ಲಿ ಯೇಸುಕ್ರಿಸ್ತ ಜನ್ಮವೆತ್ತಿದ.

ಯೇಸುಕ್ರಿಸ್ತನ ಜೀವನ ಮತ್ತು ಸೇವೆಯ ಸಂಕ್ಷಿಪ್ತ ವೃತ್ತಾಂತ: ಯೇಸುವಿನ ಜನನ ವೃತ್ತಾಂತ ಲ್ಯೂಕ್‌ನ ಸುವಾರ್ತೆಯಲ್ಲಿ (ಅಧ್ಯಾಯ 2) ಮತ್ತು ಮ್ಯಾಥ್ಯೂ ಸುವಾರ್ತೆಯಲ್ಲಿ (ಅಧ್ಯಾಯ 1 ವಚನ 18ರಿಂದ, ಅಧ್ಯಾಯ 2 ವಚನ 23ರಲ್ಲಿ) ಕಂಡುಬರುತ್ತದೆ. ಯೇಸು ಕನ್ಯೆ ಮೇರಿಯಲ್ಲಿ ಜನಿಸಿದ. ಆತನ ಜನನದ ಶುಭ ವಾರ್ತೆಯನ್ನು ಹೊಲದಲ್ಲಿದ್ದ ಕುರುಬರು ಮೊದಲು ತಿಳಿದುಕೊಂಡಿದ್ದು, ಪೌರ್ವಾತ್ಯ ದೇಶಗಳಿಂದ ಬಂದ ಜ್ಞಾನಿಗಳು ಯೇಸು ಶಿಶುವನ್ನು ಮೊದಲು ಆರಾಧಿಸಿದ್ದು ಈ ಮೊದಲಾದ ವಿಷಯಗಳು ಸುವಾರ್ತೆಗಳಲ್ಲಿ ಅಡಕವಾಗಿವೆ. ಯೇಸು ಹನ್ನೆರಡು ವರುಷದ ಬಾಲಕನಾಗಿದ್ದಾಗ ತನ್ನ ತಂದೆತಾಯಿಗಳೊಡನೆ ಜೆರುಸಲೇಮ್‌ನ ದೇವಾಲಯಕ್ಕೆ ಹೋಗಿ ಅಲ್ಲಿಯ ಧರ್ಮಪಂಡಿತರೊಡನೆ ಧಾರ್ಮಿಕ

ವಿಷಯಗಳನ್ನು ಕುರಿತು ಜಿಜ್ಞಾಸೆ ನಡೆಸಿದ (ಲ್ಯೂಕ್ 2 : 41–51) ಎಂಬ ವಿಷಯವನ್ನು ಬಿಟ್ಟರೆ ಯೇಸುವಿನ ಆರಂಭದ ವರ್ಷಗಳ ವಿಷಯವಾಗಿ ಸುವಾರ್ತೆಗಳಲ್ಲಿ ಅನೇಕ ಉಲ್ಲೇಖಗಳಿದ್ದರೂ ಅವುಗಳಿಗೆ ಯಾವ ಚಾರಿತ್ರಿಕ ಆಧಾರಗಳೂ ಇಲ್ಲ. ಆತನಿಗೆ ಸು.30 ವರ್ಷವಾದಾಗ ಮನೆಯಿಂದ ಹೊರಟು ಗೆಲಿಲೀ ಸೀಮೆಗೆ ಬಂದು ಜಾನ್‌ನಿಂದ ದೀಕ್ಷಾಸ್ನಾನ ಮಾಡಿಸಿಕೊಂಡು ತನ್ನ ಸಾರ್ವಜನಿಕ ಸೇವೆಯನ್ನು ಆರಂಭಿಸಿದ ಕಾಲ ಪರಿಪೂರ್ಣವಾಯಿತು. ದೇವರ ರಾಜ್ಯ ಸಮೀಪಿಸಿತು. ದೇವರಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ (ಮಾರ್ಕ್ 1:15) ಎಂಬುವುದು ಆತನ ಆದ್ಯ ಸಂದೇಶ. ಯೇಸುಕ್ರಿಸ್ತನ ಸೇವೆಯ ಕುರಿತಾದ ಕಾಲಗಣನೆಯನ್ನು ನಿರ್ಣಯಿಸುವುದು ಸುಲಭವಲ್ಲದಿದ್ದರೂ ಸು.28–30ರ ತನಕ ಆತ ತನ್ನ ಸಾರ್ವಜನಿಕ ಸೇವೆಯನ್ನು ಮಾಡಿ ಇಹವನ್ನು ತ್ಯಜಿಸಿದನೆಂದು ಹೇಳಬಹುದು.

ಆರಂಭದಲ್ಲಿ ಆತ ಯಹೂದಿಗಳ ಸಭಾಮಂದಿರಗಳಲ್ಲಿ ಬೋಧಿಸುತ್ತಿದ್ದ. ಕ್ರಮೇಣ ಬಹುಮಂದಿ ಅದನ್ನು ಕೇಳಲು ಕೂಡಿಬರುತ್ತಿದ್ದ ಕಾರಣ ಗೆಲಿಲೀಯ ಸಮುದ್ರದ ತೀರದಲ್ಲಿಯೂ ಇತರ ಪ್ರದೇಶಗಳಲ್ಲಿಯೂ ಆತ ಪ್ರಯಾಣ ಮಾಡುತ್ತ ಬೋಧಿಸುತ್ತಿದ್ದ. ಪ್ರಯಾಣದ ಕಾಲದಲ್ಲಿ ತನ್ನ ಸೇವೆಯನ್ನು ಮುಂದುವರಿಸಲು ಆರಿಸಿಕೊಂಡ ಶಿಷ್ಯರನ್ನು ತರಬೇತು ಮಾಡುವುದು ಆತನ ಒಂದು ಮುಖ್ಯ ಉದ್ದೇಶವಾಗಿತ್ತು. ಬೋಧನಾಕಾಲದ ಆರಂಭದಲ್ಲಿಯೇ ಯೇಸು ತನ್ನ ಅನುಯಾಯಿಗಳಲ್ಲಿ 12 ಮಂದಿಯನ್ನು ತನ್ನ ಶಿಷ್ಯರಾಗುವಂತೆ ಆರಿಸಿಕೊಂಡ. ಜೇಮ್ಸ್ ದಲೆಸ್, ಸೈಮನ್, ಆಂಡ್ರ್ಯೂ ಜೇಮ್ಸ್, ಜಾನ್ ಬಾರ್ಥೊಲೋಮೆ ಥಾಡಿಯಸ್, ಪೀಟರ್, ಥಾಮಸ್, ಫಿಲಿಪ್, ಮ್ಯಾಥ್ಯೂ, ಜುದಾಸ್–ಇವರೇ ಆ ಹನ್ನೆರಡು ಮಂದಿ ಶಿಷ್ಯರು. ಸೈಮನ್, ಪೀಟರ್, ಜೇಮ್ಸ್, ಜಾನ್ ಇವರು ಪ್ರಮುಖರು. ಆತ ಹನ್ನೆರಡು ಮಂದಿಯನ್ನು ಆರಿಸಿ ಅವರು ತನ್ನ ಸಂಗಡ ಇರಬೇಕೆಂತಲೂ ದೆವ್ವಗಳನ್ನು ಬಿಡಿಸುವ

ಕೊನೆಯ ಭೋಜನ, ಲಿಯೊನಾರ್ಡೊ ಡ ವಿಂಚಿಯ ವರ್ಣಚಿತ್ರ

ಅಧಿಕಾರವುಳ್ಳವರಾಗಿ ಸುವಾರ್ತೆಯನ್ನು ಸಾರುವುದಕ್ಕೆ ತಾನು ಅವರನ್ನು ಕಳುಹಿಸುವೆನೆಂತಲೂ ಅವರಿಗೆ ತಿಳಿಸಿದ (ಮಾರ್ಕ್ 3: 14, 15). ಈ ಕಾರಣದಿಂದ ಯೇಸುವಿನ ಶಿಷ್ಯರನ್ನು ಅಪಾಸಲ್ಸ್ ಅಂದರೆ ಪ್ರವರ್ತಕರು ಎಂದು ಕರೆಯಲಾಗುತ್ತದೆ.

ಅದ್ಭುತಕಾರ್ಯಗಳು ಅಥವಾ ಪವಾಡಗಳು: ಯೇಸು 36 ಪವಾಡಗಳನ್ನು ಮೆರೆದನೆಂದು ಗಾಸ್ಪೆಲ್‌ಗಳಲ್ಲಿ ಹೇಳಿದೆ. ಸುವಾರ್ತೆಯಲ್ಲಿ ವಿವರಿಸಿರುವ ಯೇಸುವಿನ ಅದ್ಭುತ ಕಾರ್ಯಗಳು, ದೇವರ ಶಕ್ತಿ ಮಾನವನ ಜೀವನದಲ್ಲಿ ಪ್ರಭಾವ ಬೀರುತ್ತದೆ ಎಂಬುದನ್ನು ಸೂಚಿಸುವುದಕ್ಕಾಗಿಯೇ ಹೊರತು ಜನರನ್ನು ತನ್ನ ಕಡೆಗೆ ಆಕರ್ಷಿಸಿಕೊಳ್ಳುವ ಉದ್ದೇಶದಿಂದ ಮಾಡಿದವುಗಳಲ್ಲ. ಕ್ರಿಸ್ತನ ಬೋಧನೆಗೂ ಮಹತ್ಕಾರ್ಯಗಳಿಗೂ ನಿಕಟ ಸಂಬಂಧವಿದೆ. ಆತ ದೇವರ ರಾಜ್ಯದ ಸುವಾರ್ತೆಯನ್ನು ಸಾರಿಹೇಳುವ ಮೂಲಕ ದೇವರ ಶಕ್ತಿಯನ್ನು ಪ್ರದರ್ಶಿಸಿದ.

ಸುವಾರ್ತೆಯ ಪ್ರಕಟಣೆ: ತಾನು ದೇವರ ಸುವಾರ್ತೆಯನ್ನು ಸರ್ವರಿಗೂ ಪ್ರಕಟಪಡಿಸಲು ಬಂದಿದ್ದೇನೆಂಬುದನ್ನು ಯೇಸು ಆರಂಭದಿಂದಲೇ ಸ್ಪಷ್ಟಪಡಿಸಿದ. ಸರಳವಾದ ಸಾಮ್ಯಗಳ (ಪ್ಯಾರಬಲ್ಸ್) ಮೂಲಕ ತನ್ನ ಸಂದೇಶ ಜನರಿಗೆ ಅರ್ಥವಾಗುವಂತೆ ಬೋಧಿಸಿದ. ಸುವಾರ್ತೆಯಲ್ಲಿ ಇಂಥ ಸು.70 ಕಥೆಗಳನ್ನು ಗುರುತಿಸಲಾಗಿದೆ. ರಲೋಕ ರಾಜ್ಯ ಸಾಸಿವೆಯ ಕಾಳಿಗೆ, ಹುಳಿಹಿಟ್ಟಿಗೆ, ಹೊಲದಲ್ಲಿ ಹೂತಿಟ್ಟ ದ್ರವ್ಯಕ್ಕೆ, ಬಹು ಬೆಲೆಯುಳ್ಳ ಮುತ್ತಿಗೆ ಸಮಾನವಾಗಿದೆ (ಮ್ಯಾಥ್ಯೂ 13)– ಈ ಮೊದಲಾದ ಉಪಮೆಗಳನ್ನು ಜನರಿಗೆ ಅರ್ಥವಾಗುವ ರೀತಿಯಲ್ಲಿ ಉಪಯೋಗಿಸಿದ. ದೇವರ ಶಕ್ತಿಯನ್ನು ಜನರು ಸ್ವೀಕರಿಸುವುದಾಗಲೀ ತಿರಸ್ಕರಿಸುವುದಾಗಲೀ ಅದು ಅವರ ಜವಾಬ್ದಾರಿಕೆ; ತಿರಸ್ಕಾರದಿಂದ ಶಾಪ, ಸ್ವೀಕಾರದಿಂದ ಆಶೀರ್ವಾದ ದೊರಕುತ್ತದೆ. ಆದ್ದರಿಂದ ಜನರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರಕಡೆ ತಿರುಗಬೇಕು ಎಂಬುದು ಕ್ರಿಸ್ತನ ಕರೆ. ಯೇಸುವಿನ ಸೇವೆಯ ಮೂಲಕ ಜನರ ಮೇಲಾದ ಪರಿಣಾಮ: ಜನರೆಲ್ಲರೂ ಕ್ರಿಸ್ತನ ಪ್ರಭಾವದಿಂದಲೂ ಬೋಧನೆಯಿಂದಲೂ ಆಕರ್ಷಿಸಲ್ಪಟ್ಟರು. ಸದಾ ದೊಡ್ಡ ಗುಂಪುಗಳು ಆತನನ್ನು ಹಿಂಬಾಲಿಸುತ್ತಿದ್ದವು. ಒಂದು ಸಂದರ್ಭದಲ್ಲಿ ಆತನ ಬೋಧನೆ ಕೇಳಲು ಬಂದ ಜನರ ಗುಂಪಿನಲ್ಲಿ ಗಂಡಸರೇ ಐದು ಸಾವಿರ ಮಂದಿ ಇದ್ದರು. ಜನರು ಹೀಗೆ ಆತನನ್ನು ಹಿಂಬಾಲಿಸಲು ಕೆಲವು ಕಾರಣಗಳಿದ್ದವು. ಆತನ ಅಧಿಕಾರ ವಾಣಿ, ಆಳವಾದ ಆಧ್ಯಾತ್ಮಿಕ ತಿಳಿವಳಿಕೆ, ದೇವರ ಮೇಲಿನ ಭರವಸೆ, ಸರಳವಾದ ಬೋಧನಾ ರೀತಿ, ನಿರೀಕ್ಷೆ ಶಾಂತಿಗಳ ಸಂದೇಶ–ಇವೆಲ್ಲವೂ ಜನರ ಮನಸ್ಸನ್ನು ಸೆಳೆದುವು. ಆದರೂ ಕೇವಲ ಜನಪ್ರಿಯನಾಗುವುದು ಕ್ರಿಸ್ತನ ಉದ್ದೇಶವಾಗಿರಲಿಲ್ಲ. ಅಲ್ಲದೆ ಅಂಥ ಪೊಳ್ಳು ಉತ್ಸಾಹದಿಂದ ಆತ ಮೋಸಹೋಗಲೂ ಇಲ್ಲ. ತನ್ನ ಬೋಧನೆಯನ್ನು ಜನರು ಎಷ್ಟರಮಟ್ಟಿಗೆ ಸ್ವೀಕರಿಸುತ್ತಾ ರೆಂಬುದನ್ನು ಬಿತ್ತುವವನ ಸಾಮ್ಯದಲ್ಲಿ (ಮಾರ್ಕ್ 4:3–9) ಆತ ಸ್ಪಷ್ಟಮಾಡಿದ. ಜಾನ್ ಹೇಳುವಂತೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ. ಆತ ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ ಆವಶ್ಯಕತೆಯಿರಲಿಲ್ಲ (ಜಾನ್ 2/24.25).

ಕ್ರೈಸ್ತನನ್ನು ಕುರಿತು ಧಾರ್ಮಿಕ ಮುಂದಾಳುಗಳ ವಿರೋಧ: ಇದಕ್ಕೆ ಸ್ಪಷ್ಟವಾದ ಕೆಲವು ಕಾರಣಗಳಿದ್ದವು. ಪ್ಯಾರಿಸೀಯರ ಕೇವಲ ಆಚಾರಬದ್ಧ ಧರ್ಮ ಜೀವನ ಕಪಟವೆಂದು ಕ್ರಿಸ್ತ ಹೇಳಿದ (ಲ್ಯೂಕ್ 11/42–52). ಸಾಂಪ್ರದಾಯಿಕ ಬೋಧನೆಗಳನ್ನು ಅನುಸರಿಸಿದರೆ ಮಾತ್ರವೇ ನವಜೀವನ ಶಕ್ತಿಯೂ ದೇವರ ಕುರಿತು ಜೀವದಾಯಕ ತಿಳಿವಳಿಕೆಯೂ ಬರಲಾರವು ಎಂಬುದನ್ನು ಆತ ಒತ್ತಿ ಹೇಳಿದ (ಮಾರ್ಕ್ 7/6 ಮು.). ಉಪವಾಸ ಮಾಡುವುದು (ಮಾರ್ಕ್ 2/18). ಸಬ್ಬತ್ ದಿನ ಆಚರಣೆ (ಲ್ಯೂಕ್ 13 10–17)–ಈ ಮೊದಲಾದವುಗಳು ಬರೀ ಆಚಾರಬದ್ಧವಾಗಿದ್ದರೆ ಅವುಗಳಿಂದ ಆಧ್ಯಾತ್ಮಿಕ ಲಾಭವಿಲ್ಲವೆಂಬುದು ಆತನ ಬೋಧನೆ. ಸಮೇರಿಟನ್ನರು, ಕೀಳುಜಾತಿಯವರು, ಸುಂಕದವರು, ಪಾಪಿಗಳು ಮೊದಲಾದವರೊಡನೆ ಆತ ಸ್ನೇಹಭಾವದಿಂದ ವರ್ತಿಸಿದ್ದು, ಪಾಪಗಳನ್ನು ಕ್ಷಮಿಸಲು ತನಗೆ ಅಧಿಕಾರ ಉಂಟೆಂದು ಧೈರ್ಯವಾಗಿ ಹೇಳಿದ್ದು (ಮಾರ್ಕ್ 2:10)– ಇವೆಲ್ಲವೂ ಕೆಲವು ಧಾರ್ಮಿಕ ಮುಂದಾಳುಗಳ ವಿರೋಧಕ್ಕೆ ಕಾರಣಗಳಾದವು.

ಸ್ವಲ್ಪಕಾಲ ಆತ ತನ್ನ ಸಾರ್ವಜನಿಕ ಸೇವೆಯನ್ನು ಬಿಟ್ಟು ತನ್ನ ಶಿಷ್ಯರೊಡನೆ ಬೇರೆ ಬೇರೆ ಕಡೆಗಳಲ್ಲಿ ಪ್ರಯಾಣ ಮಾಡಬೇಕಾಗಿ ಬಂತು (ಮಾರ್ಕ್ 7:24:29). ಈ ಪ್ರಯಾಣ ಕಾಲದಲ್ಲಿ ಶಿಷ್ಯರನ್ನು ತರಬೇತು ಮಾಡಲು ಆತನಿಗೆ ಹೆಚ್ಚಿನ ಸಂದರ್ಭವೊದಗಿತು; ಅಲ್ಲದೆ ಶಿಷ್ಯರೂ ಆತನ ಮಹತ್ತ್ವವನ್ನು ಕುರಿತು ಆಳವಾಗಿ ತಿಳಿದುಕೊಳ್ಳುವುದು ಸಾಧ್ಯವಾಯಿತು. ಈ ಕಾಲದಲ್ಲಿ ಪೀಟರನು ಯೇಸು ಕೇಳಿದ ಪ್ರಶ್ನೆಗೆ ಉತ್ತರವಾಗಿ ಜೀವಸ್ವರೂಪನಾದ ದೇವರಕುಮಾರ ಎಂದು ಅರಿಕೆ ಮಾಡಿದ. ತಾನು ಒಬ್ಬ ರಾಜಕೀಯ ಉದ್ಧಾರಕನಲ್ಲ; ಲೌಕಿಕ ಸ್ವಾತಂತ್ರ್ಯವನ್ನು ಹಿಂಸಾಮಾರ್ಗದ ಮೂಲಕ ಸ್ಥಾಪಿಸುವುದು ತನ್ನ ಉದ್ದೇಶವಲ್ಲವೆಂಬುದನ್ನು ಕ್ರಿಸ್ತ ಅವರಿಗೆ ಬೋಧಿಸಿದ. ದೇವಕುಮಾರನಾಗಿರುವ ತಾನು ದೇವೇಚ್ಛೆಯನ್ನು ನೆರವೇರಿಸಬೇಕಾದರೆ ತ್ಯಾಗ ಜೀವನದ ಶ್ರಮಮಾರ್ಗ ಅಗತ್ಯವೆಂದು ಶಿಷ್ಯರಿಗೆ ತಿಳಿಸುತ್ತ ಬಂದ. ಮನುಷ್ಯನಾಗಿ ತಾನು ಬಹು ಕಷ್ಟಗಳನ್ನು ಅನುಭವಿಸಿ ಹಿರಿಯರಿಂದಲೂ ಶಾಸ್ತ್ರಗಳಿಂದಲೂ ನಿರಾಕೃತನಾಗಿ ಕೊಲ್ಲಲ್ಪಟ್ಟು ಮೂರುದಿನದ ಮೇಲೆ ಜೀವಿತನಾಗಿ ಎದ್ದು ಬರಬೇಕಾಗಿದೆ ಎಂದು ಉಪದೇಶಿಸುವುದಕ್ಕೆ ಪ್ರಾರಂಭ ಮಾಡಿದ (ಮಾರ್ಕ್ 8:31).

ಆಮೇಲೆ ಆತ ಶಿಷ್ಯರೊಡನೆ ಯಹೂದಿಗಳ ಮುಖ್ಯ ಧಾರ್ಮಿಕ ಕೇಂದ್ರವಾದ ಜೆರುಸಲೇಮಿಗೆ ಪ್ರಯಾಣ ಬೆಳೆಸಿದ. ತನ್ನ ಅವಸಾನ ಸಮಯ ಹತ್ತಿರ ಬಂತೆಂಬುದನ್ನು ತಿಳಿದುಕೊಂಡು ಶಿಷ್ಯರೊಡನೆ ಅಂತಿಮ ಭೋಜನವನ್ನು (ಲಾಸ್ಟ್ ಸಪ್ಪರ್) ಮಾಡಿದ ಸಂದರ್ಭದಲ್ಲಿ (ಮಾರ್ಕ್ 14:17–25) ತನ್ನ ಮರಣದ ಮೂಲಕ ಹೊಸ ಒಡಂಬಡಿಕೆಯೊಂದನ್ನು ಸ್ಥಾಪಿಸಿದ್ದಲ್ಲದೆ ತಾನು ಗುರುವಾಗಿದ್ದರೂ ಶಿಷ್ಯರ ಕಾಲುಗಳನ್ನು ತೊಳೆದು ವಿನೀತ ಭಾವವನ್ನು ತೋರಿಸಿದ (ಜಾನ್ 13:1–20). ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿರಲಾಗಿ ನೀವು ಸಹ ಒಬ್ಬರ ಕಾಲನ್ನು ತೊಳೆಯುವ ಹೊಣೆ ಹೊತ್ತಿದ್ದೀರಿ (ಜಾನ್ 13:14) ಎಂದು ಹೇಳಿದ. ತನ್ನ ಶಿಷ್ಯರಿಗೆ ಬ್ರೆಡ್ ಮತ್ತು ವೈನ್ ನೀಡಿ ಇದು ನನ್ನ ದೇಹ, ಇದು ನನ್ನ ರಕ್ತ ಎಂದು ತಿಳಿಸಿದ. (ಮಾರ್ಕ್ 14:22–50) ಗೆತ್ಸೆಮನೆ ತೋಟದಲ್ಲಿ ಶಿಷ್ಯರೊಡನೆ ಪ್ರಾರ್ಥನೆಯಲ್ಲಿ ನಿರತನಾಗಿದ್ದಾಗ ಜುದಾಸ್‌ನ ವಂಚನೆಯಿಂದ ವೈರಿಗಳಿಗೆ ಸೆರೆಸಿಕ್ಕಿ ಶಿಲುಬೆಗೇರಿಸಲ್ಪಟ್ಟ (ಮಾರ್ಕ್15). ಸಮಾಧಿಯಲ್ಲಿ ಹೂಳಲ್ಪಟ್ಟ ಮೇಲೆ ಮೂರನೆಯ ದಿನದಲ್ಲಿ ಪುನರುತ್ಥಾನವಾಗಿ ಬಂದ (ಜಾನ್ ಅಧ್ಯಾಯ 20 ಮತ್ತು 21). ಶಿಲುಬೆಗೇರಿಸಿದ ಸಂದರ್ಭದಲ್ಲಿ ಯೇಸು ಹೇಳಿದ ಕಡೆಯ ಮಾತುಗಳಿವು; ತಂದೆಯೇ ಅವರನ್ನು ಕ್ಷಮಿಸು. ಅವರು ಮಾಡುತ್ತಿರುವ ಕೆಲಸ ಅವರಿಗೇ ತಿಳಿಯದು.

ಯೇಸುಕ್ರಿಸ್ತನ ಬೋಧನೆ: ಸರಳತೆ, ಅಧಿಕಾರವಾಣಿ, ಜನರ ತಿಳಿವಳಿಕೆಯ ಮಟ್ಟಕ್ಕೆ ಅನುಗುಣವಾದ ಬೋಧನಾ ಕ್ರಮ. ದೈನಂದಿನ ಜೀವನದಿಂದ ಆರಿಸಿಕೊಂಡ ಸಾಮ್ಯಗಳ ಉಪಯೋಗ–ಇವು ಕ್ರಿಸ್ತನ ಬೋಧನೆಯ ಕೆಲವು ಮುಖ್ಯ ಲಕ್ಷಣಗಳು. ಕರುಣೆಯುಳ್ಳ ಸಮೇರಿಟನ್, ದಾರಿತಪ್ಪಿದ ಮಗ, ಐಶ್ವರ್ಯವಂತನಾದ ಬುದ್ಧಿಹೀನ–ಇವೇ ಮೊದಲಾದ ಸಾಮ್ಯಗಳು ನೈತಿಕ ಸೂತ್ರಗಳನ್ನೂ ದೇವಲೋಕದ ಸಂದೇಶವನ್ನೂ ಜನರಿಗೆ ಸ್ಪಷ್ಟಮಾಡುವ ಸಾಧನಗಳಾಗಿವೆ. ಯೇಸುವಿನ ಪುನರುತ್ಥಾನ (ರಿಸರೆಕ್ಷನ್): ಯೇಸುಕ್ರಿಸ್ತ ಮರಣವನ್ನು ಜಯಿಸಿದ ನಾಯಕನೆಂಬುದು ಕ್ರೈಸ್ತಸಭೆಯ ನಂಬಿಕೆ. ಸುವಾರ್ತೆಗಳ ಸಾಕ್ಷಿಯ ಮೇರೆಗೆ

ಕ್ರೈಸ್ತ ಸಂದೇಶದ ಆರಂಭ ಮತ್ತು ಕ್ರೈಸ್ತಸಭೆಯ ಅಸ್ತಿಭಾರ ಅವನ ಪುನರುತ್ಥಾನದ ಮೇಲಿದೆ ಎಂದೇ ಹೇಳಬೇಕು. ಮಾನವರು ಅನ್ಯಾಯದಿಂದ ಆತನನ್ನು ಬಾಧೆಗೊಳಪಡಿಸಿ ತ್ಯಜಿಸಿದರು; ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದ; ಆದುದರಿಂದ ಮೃತ್ಯುಂಜಯನಾದ ಯೇಸುವಿನ ಮೇಲೆ ನಂಬಿಕೆಯಿಡಬೇಕೆಂದು ಆದಿ ಕ್ರೈಸ್ತ ಸುವಾರ್ತೆ ಪ್ರಕಟಣೆ, ಕಷ್ಟ, ಬಾಧೆ, ಮರಣಕ್ಕೆ ಅಧೀನವಾಗಿರುವ ಈ ಲೋಕದಲ್ಲಿ ಪಾಪಿ ಮಾನವರು ನಿರಾಶೆಪಡುವ ಅಗತ್ಯವಿಲ್ಲ; ಕ್ರಿಸ್ತನ ಮೂಲಕ ನಿತ್ಯತೆ ಭಕ್ತರಿಗೆ ದೊರಕಲು ಸಾಧ್ಯ ಎಂಬುದನ್ನು ಸ್ಥಾಪಿಸುವುದು, ದೇವರ ಅಸ್ತಿತ್ವದಲ್ಲಿ ನಂಬಿಕೆಯುಂಟುಮಾಡುವುದು ಪುನರುತ್ಥಾನದ ಮೂಲ ಉದ್ದೇಶ.

(ಎಸ್.ಜೆ.ಎಸ್.ಎ.)

# ರ

**ರಜಾಕಾರರ ಚಳವಳಿ:** ಭಾರತ ಸ್ವಾತಂತ್ರ್ಯದ ಸಂದರ್ಭದಲ್ಲಿ ಹೈದರಾಬಾದಿನ ನಿಜಾಮನ ಪರವಾಗಿ ಹೋರಾಡಿದ ಮುಸ್ಲಿಂ ಸಂಘಟನೆಯನ್ನು ರಜಾಕಾರರು ಎಂಬ ಹೆಸರಿನಲ್ಲಿ ಗುರುತಿಸಲಾಗುತ್ತಿದ್ದು ಅವರು ನಡೆಸಿದ ಚಳವಳಿ. ಭಾರತ ಸ್ವತಂತ್ರವಾದರೂ ಕೆಲವು ಸಂಸ್ಥಾನಿಕರು ಸ್ವತಂತ್ರ ಭಾರತದಲ್ಲಿ ವಿಲೀನವಾಗಲು ಮನಸ್ಸು ಮಾಡದೆ ಸ್ವತಂತ್ರರಾಗಿಯೇ ಉಳಿಯಲು ಇಚ್ಛಿಸಿದ್ದರು. ಅಂತಹ ಸಂಸ್ಥಾನಿಕರಲ್ಲಿ ಹೈದರಾಬಾದಿನ ನಿಜಾಮನೂ ಒಬ್ಬ. ಭಾರತದ ಸ್ವಾತಂತ್ರ್ಯ ಚಳವಳಿ ತೀವ್ರಗೊಂಡಿದ್ದಾಗ ಅದನ್ನು ಹತ್ತಿಕ್ಕಲು ನಿಜಾಮ ಪರೋಕ್ಷವಾಗಿ ಸಹಾಯ ಮಾಡಿ ಇಥೆಹಾದ್ ಎಲ್. ಮುಸ್ಲಿಮೀನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದ. ಈ ಸಂಸ್ಥೆಯ ಪ್ರಮುಖ ಉದ್ದೇಶ ನಿಜಾಮನ ಪರವಾಗಿ ಕೆಲಸ ಮಾಡುವುದಾಗಿತ್ತು. ಈ ಸಂಸ್ಥೆ 1947ರ ಅನಂತರ ಪ್ರಬಲವಾಯಿತು. ನಿಜಾಮ ಇದಕ್ಕೆ ಬಹಿರಂಗವಾಗಿ ಬೆಂಬಲ ನೀಡತೊಡಗಿದ್ದ. ಈ ಸಂಸ್ಥೆಯೇ ಮುಂದೆ ರಜಾಕಾರರ ಸಂಘಟನೆಯ ಕೇಂದ್ರವಾಗಿ ರೂಪಗೊಂಡಿತು. ಖಾಸಿಂ ರಜ್ವಿ ಇದರ ನಾಯಕನಾಗಿದ್ದ. ಈತ ಮೂಲತಃ ಗುಲ್ಬರ್ಗ ಜಿಲ್ಲೆಯ ಚಿಂಚೋಳಿಗೆ ಸೇರಿದವನು. ಸಾಮಾನ್ಯವಾಗಿ ಗ್ರಾಮಗಳಲ್ಲಿರುವ ಮುಸಲ್ಮಾನ ಯುವಕರು ಈ ಖಾಸಿಂ ರಜ್ವಿಯ ಅನುಯಾಯಿಗಳಾದ ರಜಾಕಾರರು. ಇವನು ಸಂಘಟಿಸಿದ ರಜಾಕಾರ ಸೇನೆ ಎಲ್ಲೆಡೆ ವ್ಯಾಪಿಸಿತ್ತು.

1948 ಜನವರಿ 26 ರಂದು ಗುಲ್ಬರ್ಗದ ಯುಗಯಳಸಂಗಿಯಲ್ಲಿ ಒಂದು ಬೃಹತ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತ ಖಾಸಿಂ ರಜ್ವಿ ಹಿಂದುಗಳಿಗೆ ಸ್ವಾತಂತ್ರ್ಯ ನೀಡುವುದು ಅಲ್ಲಾಹಜರತನ ಅಭಿಲಾಷೆಯ ವಿರುದ್ಧವಾಗಿದೆ. ಒಂದು ವೇಳೆ ಭಾರತದ ಸೈನ್ಯ ಹೈದರಾಬಾದ್ ರಾಜ್ಯ ಪ್ರವೇಶಿಸಿದರೆ ಅಲ್ಲಿ ಅದಕ್ಕೆ ಒಂದು ಕೋಟಿ ಹಿಂದುಗಳ ಮೂಳೆ ಹಾಗೂ ಬೂದಿ ಸಿಗುತ್ತದೆ ಎಂದು ಬಹಿರಂಗವಾಗಿಯೇ ಹೇಳಿದ. 1948 ಫೆಬ್ರವರಿಯ ಸಮಾವೇಶದಲ್ಲಿ ಈತ ದೆಹಲಿಯ ಕೆಂಪುಕೋಟೆಯ ಮೇಲೆ ಅಸಫ್ ಜಾಹನ ಧ್ವಜ ಹಾರಿಸುವ ಇಚ್ಛೆ ವ್ಯಕ್ತಪಡಿಸಿದ್ದ. ರಜಾಕಾರರ ಸಂಘದ ಶಾಖೆಗಳು ಹೈದರಾಬಾದ್ ರಾಜ್ಯಾದ್ಯಾಂತ ಹರಡಿಕೊಂಡಿದ್ದವು. ಇವು ಪ್ರತಿಗ್ರಾಮದಲ್ಲೂ ತನ್ನ ಶಾಖೆ ಹೊಂದಿದ್ದು ಅಲ್ಲಿನ ಹಿಂದುಗಳ ಹಾಗೂ ರಾಷ್ಟ್ರೀಯವಾದಿಗಳ ಮೇಲೆ ದೌರ್ಜನ್ಯ ಮಾಡುತ್ತಿದ್ದವು. ಹಿಂದುಗಳ ಆಸ್ತಿ-ಪಾಸ್ತಿಗಳ ಲೂಟಿ, ಹಿಂದು ಸ್ತ್ರೀಯರ ಮೇಲೆ ಅತ್ಯಾಚಾರ ಮಾಡುವುದು ಅಂದಿನ ಈ ಸಂಘದ ನಿತ್ಯದ ಚಟುವಟಿಕೆಯ ಒಂದು ಭಾಗವಾಗಿತ್ತು. ಕಾಂಗ್ರೆಸ್ಸಿಗೆ ಸೇರಿದ ಹಾಗೂ ಅದರೊಂದಿಗೆ ಸಂಬಂಧ ಹೊಂದಿದ್ದ ವ್ಯಕ್ತಿಗಳ ಮೇಲೂ ದೌರ್ಜನ್ಯ ಮಾಡುತ್ತಿದ್ದರು. ಈ ನಡುವೆ ನಿಜಾಮ ಪಾಕಿಸ್ತಾನ ಸರಕಾರಕ್ಕೆ 30 ಕೋಟಿ ಸಾಲ ನೀಡಿದ್ದ. ಈ ಸಂದರ್ಭದಲ್ಲಿ ಪಾಕಿಸ್ತಾನ ಭಾರತದ ವಿರುದ್ಧ ಯುದ್ಧ ಸನ್ನಾಹದಲ್ಲಿತ್ತು. ಆಗ ಭಾರತ ಸರ್ಕಾರ ಈ ಕ್ರಮವನ್ನು ತೀವ್ರವಾಗಿ ಖಂಡಿಸಿ ಹೈದರಾಬಾದ್ ರಾಜ್ಯದ ಮೇಲೆ ಆರ್ಥಿಕ ದಿಗ್ಬಂಧನ ಹೇರಿತು. ಇದರಿಂದ ಹೈದರಾಬಾದ್ ಸಂಸ್ಥಾನದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು ಕಾಣಿಸಿಕೊಂಡಿತು. ಇದಕ್ಕೆ ಮೊದಲು ನಿಜಾಮ ಇಂಗ್ಲೆಂಡ್, ಆಸ್ಟ್ರೇಲಿಯ, ಅಮೆರಿಕ, ಸಿರಿಯ, ಪಾಕಿಸ್ತಾನಗಳಿಂದ ಕಳ್ಳ ಸಾಗಾಣಿಕೆಯ ಮೂಲಕ ಸು.22 ಕೋಟಿ ರೂ ಬೆಲೆಯ ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡಿದ್ದ. ಇದಲ್ಲದೆ ರಜಾಕಾರರು 1948 ಮಾರ್ಚ್ 31 ರಂದು ಶಸ್ತ್ರಾಸ್ತ್ರ ಸಂಗ್ರಹಣೆಗೆ ಹೈದರಾಬಾದ್ ಶಸ್ತ್ರಾಸ್ತ್ರ ಸಪ್ತಾಹ ಆಚರಿಸಿ ಜನರಿಂದ ಬಲವಂತವಾಗಿ ಹಣವನ್ನು ಸಂಗ್ರಹಿಸಿದರು. ಈ ನಡುವೆ ನಿಜಾಮ ಹಿಂದುಳಿದ ವರ್ಗಗಳ ಮತ್ತು ದಲಿತರ ಬೆಂಬಲ ಪಡೆಯಲು ಪ್ರಯತ್ನಿಸಿದ.

ಒಟ್ಟಿನಲ್ಲಿ ರಜಾಕಾರರು ಹೈದರಾಬಾದ್‍ನಲ್ಲಿ ಭಯಾನಕ ಆಳ್ವಿಕೆಯನ್ನು ಮಾಡಿದರು. ಅವರು ರೈಲುಗಳನ್ನು ತಡೆದು ಅಲ್ಲಿನ ಪ್ರಯಾಣಿಕರ ಸಂಪತ್ತನ್ನು ಲೂಟಿ ಮಾಡುತ್ತಿದ್ದರು. 1948 ಸೆಪ್ಟೆಂಬರ್ 7 ರಂದು ಭಾರತದ ಗಡಿಯ ಮೇಲೆ ಧಾಳಿ ಮಾಡಿದ ರಜಾಕಾರರು 150 ಜನರನ್ನು ಹತ್ಯೆ ಮಾಡಿದರು.

ಇದರಿಂದ ಭಾರತ ಸರ್ಕಾರ ಹೈದರಾಬಾದ್ ಮೇಲೆ ತೀವ್ರ ಕ್ರಮ ಕೈಗೊಳ್ಳಲು ಮುಂದಾಯಿತು. ಆದರೆ ಹೈದರಾಬಾದ್‍ನ ನಿಜಾಮ ಈ ಕ್ರಮಗಳನ್ನು ಪ್ರತಿಭಟಿಸಿ ಶ್ಯಾಮ ಸುಂದರ ಹಾಗೂ ಮೋಹನಲಾಲ್‍ಜಂಗರ ನೇತೃತ್ವದಲ್ಲಿ ಒಂದು ನಿಯೋಗವನ್ನು ವಿಶ್ವಸಂಸ್ಥೆಗೆ ಕಳುಹಿಸಿ ಹೈದರಾಬಾದ್‍ನ ಅಸ್ತಿತ್ವವನ್ನು ಹಾಗೂ ಸ್ವಾತಂತ್ರ್ಯವನ್ನು ರಕ್ಷಿಸುವಂತೆ ಮನವಿ ಮಾಡಿಕೊಂಡ. ಇದರಿಂದ ಪರಿಸ್ಥಿತಿ ಇನ್ನೂ ಬಿಗಡಾಯಿಸಿತು. ರಜಾಕಾರರು ಹೈದರಾಬಾದ್ ಮಾತ್ರವಲ್ಲದೆ ಭಾರತದ ಗಡಿ ಪ್ರದೇಶದ ಮೇಲೂ ಧಾಳಿ ಮಾಡಿದ್ದರಿಂದ, ಭಾರತ ಸರ್ಕಾರ ಅನಿವಾರ್ಯವಾಗಿ ತೀವ್ರ ಕ್ರಮ ಕೈಗೊಳ್ಳಲು ಮುಂದಾಯಿತು. 1948 ರ ಸೆಪ್ಟೆಂಬರ್ 9ರಂದು ಗೃಹ ಮಂತ್ರಿ ವಲ್ಲಭಭಾಯಿ ಪಟೇಲರು ಪೊಲೀಸ್ ಕಾರ್ಯಾಚರಣೆಗೆ ಆಜ್ಞೆ ನೀಡಿದರು. ಮೇಜರ್ ಜನರಲ್ ಚೌಧರಿ ಹಾಗೂ ಲೆಫ್ಟಿನೆಂಟ್ ಜನರಲ್ ರಾಜೇಂದ್ರ ಸಿನ್ಹಾರವರು ನೇತೃತ್ವ ವಹಿಸಿದ್ದರು. ಆಗ ಹೈದರಾಬಾದ್ ರಾಜ್ಯಕ್ಕೆ ಮುತ್ತಿಗೆ ಹಾಕಲಾಯಿತು. 1948 ರ ಸೆಪ್ಟೆಂಬರ್ 14 ಮತ್ತು 15 ರಂದು ತೀವ್ರವಾದ ಕದನ ನಡೆಯಿತು. ನಿಜಾಮನ ಸೈನ್ಯ ಮತ್ತು ರಜಾಕಾರರು ಸೋಲನ್ನು ಅನುಭವಿಸಿದರು. 1948 ಸೆಪ್ಟೆಂಬರ್ 17 ರಂದು ಲಿಯಾಕ್ ಅಲಿ ನೇತೃತ್ವದ ಹೈದರಾಬಾದ್ ರಾಜ್ಯದ ಮಂತ್ರಿ ಮಂಡಲ ರಾಜೀನಾಮೆ ನೀಡಿತು. ಅನಂತರ 1948 ಸೆಪ್ಟೆಂಬರ್ 18ರಂದು ಸಂಜೆ 5 ಗಂಟೆಗೆ ಹೈದರಾಬಾದ್ ಸೈನ್ಯ ಮೇಜರ್ ಜನರಲ್ ಎಲ್.ಎಡ್ರೋಸರ ನೇತೃತ್ವದಲ್ಲಿ ಭಾರತೀಯ ಪಡೆಗೆ ಶರಣಾಯಿತು. ಇಲ್ಲಿಗೆ ಪೊಲೀಸ್ ಕಾರ್ಯಾಚರಣೆ ಕೊನೆಗೊಂಡಿತು. 1948 ಸೆಪ್ಟೆಂಬರ್ 19 ರಂದು ಖಾಸಿಂ ರಜ್ವಿಯನ್ನು ಬಂಧಿಸಲಾಯಿತು. ಖಾಸಿಂ ರಜ್ವಿಯ ಬಂಧನವಾದರೂ ಅವನ ಅನೇಕ ಸಹಚರರು ಇನ್ನೂ ಪ್ರತಿರೋಧ ಒಡ್ಡುತ್ತಿದ್ದರು. ಆಗ ಸ್ಥಳೀಯ ಜನತೆಯ ಬೆಂಬಲ ದಿಂದ ಅವರನ್ನು ಮಟ್ಟ ಹಾಕಲಾಯಿತು. ಇನ್ನುಳಿದ ರಜಾಕಾರರಿಗೆ ಶರಣಾಗುವಂತೆ ಸೂಚಿಸಲಾಯಿತು. ಆದರೆ ಅವರು ಅದನ್ನು ಒಪ್ಪದ ಕಾರಣ 1948 ಅಕ್ಟೋಬರ್ 13 ರಂದು ಎಲ್ಲ ರಜಾಕಾರರನ್ನು ಬಂಧಿಸಲಾಯಿತು. ಇದರಿಂದ ಹೈದರಾಬಾದ್ ರಾಜ್ಯದಲ್ಲಿ ನಡೆಸಿದ ಪೊಲೀಸ್ ಕಾರ್ಯಾಚರಣೆ ಪೂರ್ಣಗೊಂಡಿತು. (ಎನ್.ವೈ.ಎಚ್.)

**ರಣಜಿತ್ ಗುಹ:** ದಕ್ಷಿಣ ಏಷ್ಯ ಅಧ್ಯಯನ ಕ್ಷೇತ್ರದ ಹೆಸರಾಂತ ವಿದ್ವಾಂಸರು, ಕೆಳಸ್ತರ ವರ್ಗಗಳ ಅಧ್ಯಯನ ಕ್ಷೇತ್ರದಲ್ಲಿ ಗುರುತಿಸಿಕೊಂಡವರು. ಇವರು ಮೊದಲಿಗೆ ಭಾರತದಿಂದ ಬ್ರಿಟಿಷ್ ಸಂಸ್ಥಾನಕ್ಕೆ ವಲಸೆ ಹೋಗಿ ಅಲ್ಲಿಂದ ಆಸ್ಟ್ರಿಯದ ವಿಯನ್ನಕ್ಕೆ ಹೋಗಿ ನೆಲೆಸಿದ್ದಾರೆ. ಇವರ ಪ್ರಮುಖ ಕೃತಿಗಳು: ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪೆಸೆಂಟ್ ಇನ್‍ಸರ್ಜೆನ್ಸಿ ಇನ್ ಕಲೋನಿಯಲ್ ಇಂಡಿಯ; ಡಾಮಿನನ್ಸ್ ವಿದೌಟ್ ಹೆಜಿಮನಿ: ಹಿಸ್ಟರಿ ಅಂಡ್ ಪವರ್ ಇನ್ ಕಲೋನಿಯಲ್ ಇಂಡಿಯ; ಸೆಲೆಕ್ಟೆಡ್ ಸಬ್‍ಆಲ್ಟರ್ನ್ ಸ್ಟಡೀಸ್; ಎ ಸಬ್‍ಆಲ್ಟರ್ನ್ ಸ್ಟಡೀಸ್ ರೀಡರ್. (ಎ.ಎಸ್.;ಎನ್.ಎಲ್)

**ರಣಜಿತ್ ಸಿಂಹ:** 1780-1839: ಸಿಖ್ ಸಾಮ್ರಾಜ್ಯ ಸ್ಥಾಪಕ. ಮೊಗಲ್ ಸಾಮ್ರಾಜ್ಯದ ಅವನತಿ ಹಾಗೂ ಆಫ್ಘನ್ನರ ಧಾಳಿಗಳ ನಡುವಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಪಂಜಾಬನ್ನು ಒಂದುಗೂಡಿಸಿ ಸಾಮ್ರಾಜ್ಯವನ್ನಾಗಿ ಮಾಡಿದ ಕೀರ್ತಿ ಇವನದು. ಈತ 1780 ನವೆಂಬರ್ 2ರಂದು ಗುಜ್ರಾನವಾಲದಲ್ಲಿ ಜನಿಸಿದ. ತಂದೆ ಮಹಾನ್‍ಸಿಂಗ್ ಸುಕೇರಚಾಕೀಯಾ ಪಂಗಡದ (ಮಿಸಲ್) ಮುಖ್ಯಸ್ಥ. 12 ವರ್ಷವಾಗಿದ್ದಾಗಲೇ ತಂದೆಯ ಮರಣಾನಂತರ 1792 ರಲ್ಲಿ ಮಿಸಲ್‍ನ ಒಡೆಯನಾದ.

ರಣಜಿತ ಸಿಂಹ ಬಾಲ್ಯದಿಂದಲೂ ಎದುರಾದ ಪ್ರತಿಕೂಲ ಪರಿಸ್ಥಿತಿಯಿಂದ ಪಾಠ ಕಲಿತ ಸನ್ನಿವೇಶದ ಶಿಶು. ತನ್ನ ಅನುಭವದ ಫಲವಾಗಿ ಮುಂಜಾಗರೂಕತೆ, ರಾಜಕೀಯನೀತಿ, ಸಾಹಸ ಪ್ರವೃತ್ತಿ, ಮುತ್ಸದ್ದಿತನಗಳನ್ನು ಬೆಳೆಸಿಕೊಂಡ.

1797ರಲ್ಲಿ ಪೂರ್ಣ ಅಧಿಕಾರ ವಹಿಸಿದಾಗ ಪಂಜಾಬ್ ಒಡೆದ ಮನೆ. ಆಗ ಇದ್ದಂತಹ 27 ಮಿಸಲ್‍ಗಳಲ್ಲಿ ಸದಾ ಕಚ್ಚಾಟ ಹಾಗೂ ಅಶಾಂತಿ. ನೆರೆಯ ಮಿಸಲ್‍ಗಳಾದ ಭಾಂಗಿ, ಅಹ್ಲುವಾಲಿಯ, ಕನ್ಹೇಯ ಪುಟ್ಟ ಮಿಸಲ್‍ಗಳನ್ನು ನಿರ್ನಾಮ ಮಾಡಲು ಪ್ರಯತ್ನಿಸುತ್ತಿದ್ದವು. ಈ ಪರಿಸ್ಥಿತಿಯಲ್ಲಿ ಸುಕೇರ ಚಾಕೀಯಾ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದೇ ದುಸ್ತರವಾಗಿತ್ತು. ಅದೇ ಸಮಯದಲ್ಲಿ ಜಮಾನ್‍ಷಾಹ್ ಎಂಬ ಆಫ್ಘನ್ ದೊರೆ ಪಂಜಾಬಿನ ಮೇಲೆ ಧಾಳಿ ಮಾಡಿದಾಗ ಉಂಟಾದ ಕ್ಷೋಭೆಯ ಸ್ಥಿತಿಯ ಲಾಭ ಪಡೆದ ರಣಜಿತ ಸಿಂಹ ಧಾಳಿಕೋರ ಜಮಾನ್‍ಷಾಹನೊಂದಿಗೆ ಸಹಕರಿಸಿ ಅವನ ನಂಬಿಕೆಯನ್ನು ಗಳಿಸಿದ. ಜಮಾನ್‍ಷಾಹ

ಹಿಂದಿರುಗಿ ಹೋಗುವಾಗ ಭಾಂಗ್‌ಗಳಿಗೆ ಸೇರಿದ್ದ ಲಾಹೋರ್ ನಗರದ ಒಡೆತನ ರಣಜಿತ ಸಿಂಹನಿಗೆ ಕೊಟ್ಟ. ಅದೊಂದು ಪರಿಣಾಮಕಾರಿಯಾದ ಬೆಳವಣಿಗೆ. ಜಮಾನ್‌ಷಾಹನ ಸ್ನೇಹದ ಹಿನ್ನೆಲೆಯಲ್ಲಿ ತನ್ನ ನೆರೆಯ ಪ್ರಾಂತಗಳ ಮೇಲೆ ಧಾಳಿ ನಡೆಸಿದ. 1802 ರಲ್ಲಿ ಭಾಂಗಿಯರ ಮತ್ತೊಂದು ಮುಖ್ಯನಗರ ಅಮೃತಸರವನ್ನು ವಶಪಡಿಸಿಕೊಂಡು ತನ್ನ ರಾಜಕೀಯ ಪ್ರತಿಷ್ಠೆ ಹೆಚ್ಚಿಸಿಕೊಂಡ. ಅಮೃತಸರ ಸಿಖ್ಖರ ಪವಿತ್ರನಗರವೂ ಆಗಿದ್ದು ಅವನಿಗೆ ಸಿಖ್ಖರ ಖಾಲ್ಸಾ (ಸಂಘಟನೆ) ಮಾನ್ಯತೆ ದೊರೆತು ಸಿಖ್ಖರಲ್ಲೇ ಶಕ್ತಿಶಾಲಿ ಎನಿಸಿಕೊಂಡ.

ಅಲ್ಲಿಂದ ಮುಂದೆ ಸತತ ಧಾಳಿಗಳಿಂದ ಅಹ್ಲುವಾಲಿಯ, ಪುಲಕನ ಕನ್ಹೇಯರನ್ನು ಸೋಲಿಸಿ ಜಲಂಧರ, ಪಾಟಿಯಾಲ, ಲೂದಿಯಾನ ಮುಂತಾದ ಪ್ರಮುಖ ಪ್ರಾಂತಗಳ ಮೇಲೆ ಒಡೆತನವನ್ನು ಸಾಧಿಸಿದ. ಇವನ ಮಿಂಚಿನ ಕಾರ್ಯಾಚರಣೆಗಳಿಂದ ಭೀತರಾದ ಉಳಿದ ಮಿಸಲ್‌ಗಳವರು ಮಾಳ್ವದಲ್ಲಿದ್ದ ಬ್ರಿಟಿಷರ ಸಹಾಯ ಕೋರಿದರು. ಇಂಗ್ಲಿಷರಿಗೂ ಇವನ ಏಳಿಗೆಯ ಬಗ್ಗೆ ಹೆದರಿಕೆ ಇದ್ದುದರಿಂದ ಅವರು ರಣಜಿತ್ ಸಿಂಹನೊಂದಿಗೆ ಸ್ನೇಹ ಬೆಳೆಸಲು ನಿರ್ಧರಿಸಿದರು. 1806 ಸರ್ ಮೆಟಕಾಫ್ ಲಾಹೋರಿಗೆ ಭೇಟಿ ನೀಡಿ ಸಂಧಾನ ಆರಂಭಿಸಿದ.

ಅಮೃತಸರ ಒಪ್ಪಂದ 1809: ಗವರ್ನರ್ ಜನರಲ್ ಮಿಂಟೊನ ಅಪೇಕ್ಷೆಯ ಮೇರೆಗೆ ರಣಜಿತ್‌ಸಿಂಹ ಇಂಗ್ಲಿಷರೊಂದಿಗೆ ಸ್ನೇಹಪೂರ್ವಕ ಒಪ್ಪಂದಕ್ಕೆ ಸಹಿ ಹಾಕಿದ. ತನ್ನ ವ್ಯವಹಾರ ಗಳಲ್ಲಿ ಇಂಗ್ಲಿಷರು ಹಸ್ತಕ್ಷೇಪ ಮಾಡುವುದಿಲ್ಲವೆಂಬ ಭರವಸೆ ಇವನಿಗೆ ದೊರೆಯಿತು. ಸಟ್ಲೇಜ್ ನದಿಯ ಪೂರ್ವಕ್ಕಿರುವ ಪ್ರಾಂತಗಳನ್ನು ಗೆದ್ದುಕೊಳ್ಳುವ ಮುಕ್ತ ಅವಕಾಶ ಇವನಿಗೆ ದೊರೆಯಿತು. ತಾನು ಇಂಗ್ಲಿಷರ ಪ್ರಾಂತಗಳ ಮೇಲೆ ಧಾಳಿ ಮಾಡುವುದಿ ಲ್ಲವೆಂದೂ ಇಂಗ್ಲಿಷರ ವಿರುದ್ಧ ಮರಾಠ ರಿಗೆ ಹಾಗೂ ಪಿಂಡಾರಿಗಳಿಗೆ ಸಹಾಯ ನೀಡುವುದಿಲ್ಲವೆಂದೂ ಒಪ್ಪಿಕೊಂಡ. ಈ ಒಪ್ಪಂದ ಈತನ ರಾಜಕೀಯ ಮುನ್ನಡೆಯಲ್ಲಿ ಪ್ರಮುಖ ಮೈಲಿಗಲ್ಲಾಯಿತು. ಇದರಿಂದ ರಣಜಿತ್ ಸಿಂಹನ ಸ್ಥಾನಮಾನ ಹೆಚ್ಚಾಯಿತು. ಇವನನ್ನು ಪಂಜಾಬಿನ ಏಕಮೇವ ದೊರೆ ಯೆಂದು ಗುರುತಿಸುವಂತಾಯಿತು. ಅವನು ಪಂಜಾಬಿನ ಸಿಂಹ ಎಂಬ ಬಿರುದಿಗೆ ಪಾತ್ರ ನಾದ. ಇಂಗ್ಲಿಷರು ತಮ್ಮ ಸ್ವಾರ್ಥದಿಂದಲೇ ಈತನನ್ನು ಬೆಂಬಲಿಸಿದ್ದರು. ಆಫ್ಘಾನಿಸ್ತಾನದ ಮೂಲಕ ಬರಬಹುದಾಗಿದ್ದ ರಷ್ಯನ ರನ್ನು ತಡೆಯಲು, ಪಂಜಾಬನ್ನು ತಡೆ ರಾಜ್ಯವನ್ನಾಗಿ (ಬಫರ್ ಸ್ಟೇಟ್) ಮಾಡಲಾಯಿತೆಂಬ ಅಭಿಪ್ರಾಯವಿದೆ.

ಇಂಗ್ಲಿಷರೊಂದಿಗಿನ ಒಪ್ಪಂದದಿಂದ ಉತ್ತೇಜಿತನಾದ ರಣಜಿತ್ ಸಿಂಹ, ಧಾಳಿಗಳನ್ನು ಕೈಗೊಂಡು 1813ರಲ್ಲಿ ಅಟೋಕ ಮುಲ್ತಾನ, 1811ರಲ್ಲಿ ದೋಗ್ರಾಗಳಿಂದ ಕಾಂಗ್ರ, 1819 ರಲ್ಲಿ ಕಾಶ್ಮೀರ, 1823ರಲ್ಲಿ ಪೇಷಾವರವನ್ನು ಗೆದ್ದುಕೊಂಡು ತನ್ನ ರಾಜ್ಯವನ್ನು ವಿಸ್ತರಿಸಿದ. ಪೇಷಾವರದಿಂದ ಮಾಳ್ವವರೆಗೆ ಹಾಗೂ ಕಾಂಗ್ರದಿಂದ ರಜಪುಟಾಣದವರೆಗಿದ್ದ ವಿಶಾಲ ಸಾಮ್ರಾಜ್ಯ ಅವನದಾಯಿತು.

1814ರಲ್ಲಿ ಆಫ್ಘಾನಿಸ್ತಾನದಿಂದ ನಿರಾಶ್ರಿತನಾಗಿದ್ದ ಷಹಜಹಾನನಿಗೆ ಆಶ್ರಯ ನೀಡಿ ಅವನಿಂದ ಬೆಲೆಬಾಳುವ ಕೊಹಿನೂರು ವಜ್ರವನ್ನು ವಶಪಡಿಸಿಕೊಂಡ. 1838ರಲ್ಲಿ ಷಹಜಹಾನ್ ಹಾಗೂ ಇಂಗ್ಲಿಷರೊಂದಿಗೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು 1839 ರಲ್ಲಿ ನಿಧನನಾದ.

ರಣಜಿತ್‌ಸಿಂಹ ಸಿಖ್‌ರಾಜ್ಯ ಸ್ಥಾಪಕನಾಗಿದ್ದರೂ ವಿನಮ್ರತೆಯಿಂದ ತನ್ನ ರಾಜ್ಯವನ್ನು ದೇವರ ರಾಜ್ಯ ಸರ್ಕಾರ ಜೀ ಖಾಲಾ ಎಂದು ಕರೆದು ತಾನು ತನ್ನ ರಾಜ್ಯದ ಪ್ರಥಮ ಸೇವಕನೆಂದು ಹೇಳಿಕೊಳ್ಳುತ್ತಿದ್ದ. ತನ್ನ ಸರಳತೆ ಹಾಗೂ ಆದರ್ಶಗಳಿಂದ ಪ್ರಜೆಗಳ ಅಪಾರ ಪ್ರೇಮಕ್ಕೆ ಪಾತ್ರನಾಗಿದ್ದ.

ಈತನ ಆಡಳಿತದಲ್ಲಿ ಮೊಗಲರ ಶೈಲಿಯನ್ನು ಮುಂದುವರೆಸಿದರೂ ಅದು ಊಳಿಗಮಾನ್ಯ ವ್ಯವಸ್ಥೆಯನ್ನು ಹೋಲುತ್ತಿತ್ತು, ರಾಜನ ನಿರಂಕುಶಾಧಿಕಾರಕ್ಕೆ ಒಳಗಾಗಿತ್ತು. ರಾಜನ ಸಹಾಯ ಕ್ಕಾಗಿ ಮಂತ್ರಿಮಂಡಲ ಪಕ್ಷ, ಆದರೆ ರಾಜನದೇ ಪರಮಾಧಿಕಾರ. ಎಲ್ಲ ವರ್ಗದವರಿಗೂ ಆಡಳಿತ ಸೇವೆಯಲ್ಲಿ ಮುಕ್ತ ಅವಕಾಶ ನೀಡಿದ. ಖಡ್ಗದ ಸಹಾಯದಿಂದ ಸ್ಥಾಪಿಸಲ್ಪಟ್ಟು, ಸೈನ್ಯದ ಬಲವನ್ನವಲಂಬಿಸಿದ ಇವನ ರಾಜ್ಯ ಸೈನಿಕ ರಾಜ್ಯವಾಗಿತ್ತು. ಬ್ರಿಟಿಷರ ಹಾಗೆ ಫ್ರೆಂಚ್ ಅಧಿಕಾರಿಗಳ ಸೈನ್ಯವನ್ನು ಆಧುನೀಕರಣಗೊಳಿಸಲಾಗಿತ್ತು. ಸೈನ್ಯಕ್ಕಾಗಿಯೇ ರಾಜ್ಯದ ಆದಾಯದ ಬಹುಪಾಲನ್ನು ಖರ್ಚು ಮಾಡಲಾಗುತ್ತಿತ್ತೆಂಬ ಆಪಾದನೆಯಿದೆ. ಸೈನ್ಯಾಧಿಕಾರಿ ಗಳನ್ನು ಆಡಳಿತ ಸೇವೆಯಲ್ಲಿ ಬಳಸಿಕೊಳ್ಳಲಾಗುತ್ತಿತ್ತು. ಇವನ ವೈಯಕ್ತಿಕ ಸಾಧನೆಯ ಮೇಲೆ ನಿಂತಿದ್ದ ರಾಜ್ಯ ಇವನು ಮರಣ ಹೊಂದಿದ ಎರಡು ದಶಕಗಳಲ್ಲಿಯೇ ಅವಸಾನ ಹೊಂದಿತು. 1848ರಲ್ಲಿ ಎರಡನೆಯ ಆಂಗ್ಲೋ ಸಿಖ್ಖ್ ಯುದ್ಧದ ಅನಂತರ ಡಾಲ್‌ಹೌಸಿ ಪಂಜಾಬನ್ನು ತನ್ನ ನೇರ ಆಡಳಿತಕ್ಕೊಳಪಡಿಸಿದ. (ಪಿ.ಬಿ.ಕೆ.)

**ರತ್ನಗಿರಿ:** ಒರಿಸ್ಸ ರಾಜ್ಯದ ಕಟಕ್ ಜಿಲ್ಲೆಯಲ್ಲಿರುವ ಬೌದ್ಧಕೇಂದ್ರ. ಟಿಬೆಟಿಯನ್ ಗ್ರಂಥಗಳಲ್ಲಿರುವ ಉಲ್ಲೇಖಗಳನ್ನು ಗಮನಿಸಿ ತಾರಾನಾಥರು ಇಲ್ಲಿಯ ವಿಹಾರವನ್ನು ಬುದ್ಧೋಪಾಸಕ ಎನ್ನುವನ ಆಳಿಕೆಯಲ್ಲಿ ನಿರ್ಮಿಸಲಾಗಿದೆಯೆಂದು ಹೇಳಿದ್ದಾರೆ. ಇಲ್ಲಿ ಹೀನಯಾನ ಮತ್ತು ಮಹಾಯಾನ ಪಂಥಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಸಂರಕ್ಷಿಸಿಡಲಾಗಿತ್ತು. ನೂರಾರು ಬೌದ್ಧ ಸನ್ಯಾಸಿಗಳು ಇಲ್ಲಿದ್ದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಡಿ. ಮಿತ್ರ ಅವರು ನಡೆಸಿದ ಉತ್ಖನನದಲ್ಲಿ ಮುಖ್ಯ ಸ್ತೂಪ, ಚಿಕ್ಕ ಸ್ತೂಪಗಳು, ಮೂರು ಮಠಗಳು ಹಾಗೂ ಅನೇಕ ದೇವಾಲಯಗಳ ಅವಶೇಷಗಳು ಬೆಳಕು ಕಂಡವು. ಇಲ್ಲಿ ಸಣ್ಣ ಸ್ತೂಪಗಳು ಹೇರಳವಾಗಿವೆ. ಇವು ಈ ಬೌದ್ಧಕೇಂದ್ರದ ಜನಪ್ರಿಯತೆಗೆ ಬಲವಾದ ಪುರಾವೆಯಾಗಿವೆ. ಬೆಟ್ಟದ ಮೇಲಿನ ಬಯಲಿನಲ್ಲಿ ಮುಖ್ಯ ಸ್ತೂಪದ ಅವಶೇಷಗಳಿವೆ. ಇದರ ವರ್ತುಲಾಕಾರದ ಇಟ್ಟಿಗೆ ವೇದಿಕೆ ಗಮನ ಸೆಳೆಯುತ್ತದೆ. ಮಣ್ಣನ್ನು ಗಾರೆಯಂತೆ ಬಳಸಿದ್ದರೂ ಮೂಲದಲ್ಲಿ ಈ ವೇದಿಕೆಯನ್ನು ನಿರ್ಮಿಸುವಾಗ ಬಿಳಿ ಸುಣ್ಣಗಾರೆಯನ್ನು ಬಳಸಲಾಗಿತ್ತು. ಗಾರೆಯ ಕುರುಹುಗಳು ಅಲ್ಲಲ್ಲಿ ಉಳಿದಿವೆ. ವೇದಿಕೆಯ ಎರಡೂ ಬದಿಗಳಲ್ಲಿ ಅಲಂಕೃತವಾದ ಹೊರಚಾಚುಗಳಲ್ಲಿ ಗೂಡುಗಳಿವೆ. ಗುಪ್ತರ ಕಾಲದ ಸ್ತೂಪವೊಂದರ ಅವಶೇಷಗಳ ಮೇಲೆ ಈ ಸ್ತೂಪವನ್ನು 9ನೆಯ ಶತಮಾನಕ್ಕೂ ಮುಂಚೆ ನಿರ್ಮಿಸಲಾಯಿತು. ಈ ಸ್ತೂಪದ ಸುತ್ತಮುತ್ತ ಇಟ್ಟಿಗೆ ಮತ್ತು ಕಲ್ಲುಗಳಿಂದ ನಿರ್ಮಿಸಲಾದ ಸಣ್ಣ ಸಣ್ಣ ಅನೇಕ ಸ್ತೂಪಗಳಿವೆ. ಗುಂಪು ಗುಂಪಾಗಿರುವ ಇಂಥ ಸ್ತೂಪಗಳ ಗೋಡೆಗಳಲ್ಲಿ ಬರೆಹವುಳ್ಳ ಮಣ್ಣಿನ ಫಲಕಗಳು ಮತ್ತು ಬೌದ್ಧಧರ್ಮೀಯ ಧಾರಿಣಿಯರು ಇದ್ದಾರೆ. ಕೆಲವು ಸ್ತೂಪಗಳಲ್ಲಿ ಅಸ್ಥಿಯಿದೆ. ಸ್ತೂಪದ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಸಣ್ಣಗಾತ್ರದ ಏಕಶಿಲೆಯ ನೂರಾರು ಸ್ತೂಪಗಳು ಚದುರಿವೆ.



ಬೌದ್ಧ ಸ್ಮಾರಕ

ಮುಖ್ಯ ಸ್ತೂಪದ ಉತ್ತರ ಭಾಗದಲ್ಲಿ ಎರಡು ವಿಹಾರಗಳ ಅವಶೇಷಗಳಿವೆ. ವಿಹಾರಗಳ ಮಧ್ಯೆ ಓಣಿಯಿದೆ. ಒಂದು ವಿಹಾರ 16.50ಚ.ಮೀ ವಿಸ್ತಾರವಾಗಿದೆ. ಭವ್ಯವಾಗಿರುವ ಇದರ ಸಭಾಂಗಣವನ್ನು 24 ಕಂಬಗಳ ಪಡಸಾಲೆಯೊಂದಿಗೆ ಜೋಡಿಸಲಾಗಿದೆ. ಪಡಸಾಲೆಯ ಹಿಂದಿನ ಗೋಡೆಯ ಮಧ್ಯದಲ್ಲಿ ಬುದ್ಧನ ವಿಗ್ರಹವಿದ್ದ ಗೂಡಿದೆ. ಈ ಗೂಡನ್ನು ಕುಸುರಿಯುಳ್ಳ ಶಿಲಾಚೌಕಟ್ಟಿನಿಂದ ಅಲಂಕರಿಸಲಾಗಿದೆ. ಬುದ್ಧನ ವಿಗ್ರಹ 4.59ಮೀ ಎತ್ತರವಾಗಿದೆ. ವಿಹಾರಕ್ಕೆ ಮೇಲುಪ್ಪರಿಗೆಯಿತ್ತು, ನೈರುತ್ಯದಲ್ಲಿ ಕಲ್ಲಿನ ಸೋಪಾನದ ಅವಶೇಷಗಳಿವೆ. ವಾಸ್ತುಶಿಲ್ಪ ವೈಭವ, ವಿಪುಲ ಸಂಖ್ಯೆಯ ವಿಗ್ರಹಗಳು ಮತ್ತು ಖನಿಜಧಾತುವಿನಿಂದ ನಿರ್ಮಿಸಲಾಗಿರುವ ಬಾಗಿಲುವಾಡದಿಂದ ವಿಹಾರ ರಮ್ಯವಾಗಿದೆ. ಹೆಚ್ಚಿನ ವಸತಿ ಸೌಕರ್ಯಕ್ಕಾಗಿ ಮೊದಲ ಅಂತಸ್ತನ್ನು ನಿರ್ಮಿಸಲಾಯಿತು. ಮೂರನೆಯ ಹಂತದ ನಿರ್ಮಾಣದಲ್ಲಿ ಪ್ರಾಕಾರವನ್ನು ನಿರ್ಮಿಸಲಾಯಿತು. ಎರಡನೆಯ ವಿಹಾರ 8.70ಮೀ ವಿಸ್ತೀರ್ಣವಾಗಿದೆ. ಇದನ್ನು ಮೊದಲನೆಯ ವಿಹಾರದ ಮೊದಲ ಹಂತದ ನಿರ್ಮಾಣದ ಅನಂತರ ನಿರ್ಮಿಸಲಾಗಿದೆ. ಇದರಲ್ಲಿ ಕಮಾನಿನಾಕಾರದ ಚೆಂದದ ಕೆತ್ತನೆಯಿರುವ ಕಿಟಕಿಗಳಿರುವ 18 ಕೋಣೆಗಳಿವೆ. ಮಧ್ಯದ ಗೂಡಿನಲ್ಲಿ ವರದಹಸ್ತದ ಬುದ್ಧಮೂರ್ತಿ ಇದೆ. ಹಿಂದೆ ಇದ್ದ ವಿಹಾರದ ಅವಶೇಷಗಳ ಮೇಲೆ ಈ ವಿಹಾರವನ್ನು ಕಟ್ಟಲಾಯಿತು. ಹಿಂದಿನ ವಿಹಾರದ ಕಾಲ ಸು.7ನೆಯ ಶತಮಾನ.

ಒಂದನೆಯ ವಿಹಾರದ ಹಿಂದಿರುವ ಕಟ್ಟಡದಲ್ಲಿ ಒಂದೊಂದೇ ಕಿಟಕಿಯಿರುವ ಮೂರು ಕೋಣೆಗಳಿವೆ. ಈ ಕಟ್ಟಡದ ಮೂಲೆಯೊಂದರಲ್ಲಿ ಸೋಮವಂಶೀಯ ರಾಜ ಕರ್ಣನ ಎರಡು ತಾಮ್ರಪಟಗಳು ದೊರಕಿವೆ. 9–10ನೆಯ ಶತಮಾನದ ದೇವಾಲಯಗಳು ವಿಹಾರಗಳ ಆಸುಪಾಸಿನಲ್ಲಿವೆ.

ಉತ್ಖನನದಲ್ಲಿ ಸಿಕ್ಕ ಇತರ ವಸ್ತುಗಳಲ್ಲಿ ಬುದ್ಧನ ಮೂರ್ತಿಗಳು, ಕಂಚಿನ ಸ್ತೂಪಗಳು, ಛತ್ರಗಳು, ಕಬ್ಬಿಣದ ಚೂರಿಗಳು ಮುಖ್ಯವಾಗಿವೆ. ಕಂಚಿನ ವಸ್ತುಗಳು ರತ್ನಗಿರಿಯ ಲೋಹತಾಂತ್ರಿಕ ಪರಿಣತಿಯನ್ನು ಸೂಚಿಸುತ್ತದೆ. ಮುದ್ರೆಗಳು, ಮಣ್ಣಿನ ಹಲಗೆಗಳು, ಸುಡಾವೆಮಣ್ಣಿನ ಗೊಂಬೆಗಳಿಗೆ ರತ್ನಗಿರಿ ಪ್ರಸಿದ್ಧಿಯಾಗಿತ್ತು. ಕೆಲವು ಮುದ್ರೆಗಳ ಮೇಲೆ ಶ್ರೀರತ್ನಗಿರಿ ಮಹಾವಿಹಾರಿಯಾರ್ಯ–ಭಿಕ್ಷು–ಸಂಘಸ್ಯ ಎನ್ನುವ ಬರೆಹವಿದೆ. (ಎ.ಎಸ್.)

**ರಷ್ಯ:** ಯುರೋಪ್ ಖಂಡದ ಪ್ರಮುಖ ದೇಶಗಳಲ್ಲಿ ಒಂದಾದ ಏಷ್ಯ ಮತ್ತು ಯುರೋಪ್ ಖಂಡಗಳೆರಡರಲ್ಲೂ ಇದು ಹಿಂದೆ ವಿಸ್ತರಿಸಿಕೊಂಡಿತ್ತು. ಇದರ ವಿಸ್ತಾರಕ್ಕನು ಗುಣವಾಗಿ ವೈವಿಧ್ಯಮಯ ಭೂಲಕ್ಷಣಗಳುಳ್ಳ ಪ್ರದೇಶಗಳಿಂದ ಕೂಡಿತ್ತು. ಹಾಗೆಯೇ ಅನೇಕ ಬುಡಕಟ್ಟು, ಭಾಷೆ ಮತ್ತು ಸಂಸ್ಕೃತಿಗಳ ಜನಸಮುದಾಯಗಳಿಂದ ಕೂಡಿದ್ದು ಕೆಲವು ಶತಮಾನಗಳ ವಿಕಾಸದ ಅನಂತರ ಒಂದು ರಾಷ್ಟ್ರವೆನಿಸಿತು. ಈ ಖಂಡಾಂತರ ಲಕ್ಷಣಗಳುಳ್ಳ

ರಷ್ಯದ ಇತಿಹಾಸ ಅಷ್ಟೇ ಅಸ್ಪಷ್ಟ ಹಿನ್ನಲೆಯಿಂದ ಕೂಡಿದೆ. ಹಿಂದಿನ ಒಕ್ಕೂಟಕ್ಕೆ ಸಂಬಂಧಿಸಿದಂತೆ ಇಲ್ಲಿ ಐತಿಹಾಸಿಕ ನೋಟವಿದೆ. ಇತಿಹಾಸಪೂರ್ವ ಮಾನವನ ಅತ್ಯಂತ ಪ್ರಾಚೀನ ವಾಸಸ್ಥಳಗಳಲ್ಲಿ ರಷ್ಯ ಒಂದು. ವೋಲ್ಗಾ, ಡಾನ್ ಮತ್ತು ಡ್ಯಾನ್‌ಫಿರ್ ನದಿ ಬಯಲುಗಳು ಹಾಗೂ ಬಾಲ್ಟಿಕ್, ಕ್ಯಾಸ್ಪಿಯನ್ ಹಾಗೂ ಕಪ್ಪು ಸಮುದ್ರದ ತೀರಗಳಲ್ಲಿ ಪ್ರಾಚೀನ ಮಾನವನ ನೆಲೆಗಳಿದ್ದವು. ಪ್ರಪಂಚದ ಅತ್ಯಂತ ಹೆಚ್ಚು ವಿಸ್ತಾರವಾದ ಭೂಭಾಗವನ್ನು ಹೊಂದಿದ್ದ ರಷ್ಯ, ಸೈಬೀರಿಯದ ಶೀತಲ ಪ್ರದೇಶ, ಉತ್ತರಧ್ರುವ ಪ್ರದೇಶ ಹಾಗೂ ದಕ್ಷಿಣದ ಮರುಭೂಮಿ ವಲಯ ಮತ್ತು ಹುಲ್ಲುಗಾವಲುಗಳಿಂದಾಗಿ ವ್ಯವಸಾಯಕ್ಕೆ ಯೋಗ್ಯವಲ್ಲದ ಹೆಚ್ಚು ಭೂಪ್ರದೇಶವನ್ನು ಹೊಂದಿದೆ. ಇದರಿಂದಾಗಿ ಕೃಷಿ ಅವಲಂಬಿತ ಜನರ ವಸಾಹತೀಕರಣ ವ್ಯವಸ್ಥಿತವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡಲು ಸಾಧ್ಯವಾಗಲಿಲ್ಲ. ಏಷ್ಯ ಭಾಗದ ರಷ್ಯದಲ್ಲಿ ಹೆಚ್ಚಾಗಿ ಅಲೆಮಾರಿ ಜನಜೀವನವಿದ್ದು ಇಲ್ಲಿನ ಜನ ಸಮೂಹಗಳು ಆ ಪ್ರದೇಶದಲ್ಲಿ ದೊರೆಯುತ್ತಿದ್ದ ಜೇನು, ಮೇಣ, ಅಂಬರ್, ತುಪ್ಪಳ ಮುಂತಾದ ಸಂಗ್ರಹಣೆಯ ಮೇಲೆ ಅವಲಂಬಿತರಾಗಿದ್ದರು.

ರೋಮನ್ನರ ಕಾಲದಲ್ಲಿ ರೂಢಿಗೆ ಬಂದ ಪಶ್ಚಿಮ ದೇಶಗಳ ಮತ್ತು ಪೂರ್ವದ ಚೀನಗಳ ನಡುವಿನ ವಾಣಿಜ್ಯ ಸಂಪರ್ಕ ಮಧ್ಯಏಷ್ಯದ ಮೂಲಕ ನಡೆಯುತ್ತಿತ್ತು. ಇದರಿಂದಾಗಿ ಈಗಿನ ಆಫ್ಘಾನಿಸ್ತಾನದ ಉತ್ತರಕ್ಕಿರುವ ತಾಷ್ಕೆಂಟ್, ಕಾಷಗರ್ ಮುಂತಾದವು ವಾಣಿಜ್ಯ ಕೇಂದ್ರಗಳಾಗಿ ಬೆಳೆದಿದ್ದವು. ಇಲ್ಲಿ ಕುಷಾಣರ ಕನಿಷ್ಕ ಚಕ್ರವರ್ತಿಯ ಕಾಲದಲ್ಲಿ (ಪ್ರ.ಶ.1ನೆಯ ಶತಮಾನ) ಬೌದ್ಧ ಕೇಂದ್ರಗಳು ಮತ್ತು ರಾಜಕೀಯ ವ್ಯವಸ್ಥೆ ನೆಲೆಗೊಂಡಿದ್ದು ಕಂಡುಬರುತ್ತದೆ. ಮಧ್ಯಪ್ರಾಚ್ಯದ ವ್ಯಾಪಾರಿಗಳು ದಕ್ಷಿಣದ ಕಡೆಯಿಂದ ರಷ್ಯ ಪ್ರದೇಶವನ್ನು ಪ್ರವೇಶಿಸಿದರು. ಪೂರ್ವಯುರೋಪ್ ಕಡೆಯಿಂದಲೂ ಇಲ್ಲಿನ ಅರಣ್ಯೋತ್ಪನ್ನಗಳಿಗಾಗಿ ಸಾಹಸಿಗಳು ಈ ಪ್ರದೇಶಗಳಿಗೆ ಬಂದು ಇಲ್ಲಿನ ಸ್ಲಾವ್ ಜನರೊಡನೆ ಸಂಪರ್ಕ ಸಾಧಿಸಿದರು.

ರಷ್ಯದ ಇತಿಹಾಸ ಕೇಂದ್ರ ಪ್ರಾರಂಭವಾದದ್ದು ಈಗಿನ ಮಾಸ್ಕೋ ಮತ್ತು ಕೀವ್ ನಗರಗಳ ಸುತ್ತಲ ಪ್ರದೇಶದಲ್ಲಿ. ಸು.8 ಮತ್ತು 9ನೆಯ ಶತಮಾನದವರೆಗೂ ಅಸಂಘಟಿತ ಪ್ರದೇಶವಾಗಿ ಉಳಿದುಕೊಂಡಿದ್ದ ಈ ಭೂಭಾಗಕ್ಕೆ ಸ್ಕ್ಯಾಂಡಿನೇವಿಯನ್ನರು ಲಗ್ಗೆ ಹಾಕಿದರು. ಅವರು ಅರಣ್ಯೋತ್ಪನ್ನ ವಸ್ತುಗಳ ಜೊತೆಗೆ ನಾಟಾವನ್ನು ಅರಸಿಕೊಂಡು ಹೊರಟವರು. ಸ್ಥಳೀಯರು ಸರಳಜೀವನ ನಡೆಸುತ್ತಿದ್ದುದರಿಂದ ಮತ್ತು ಮುಗ್ಧರಾಗಿದ್ದುದರಿಂದ ಸುಧಾರಿತ ಆಯುಧಗಳೊಂದಿಗೆ ಹೊರಟ ಈ ಜನರಿಗೆ ಗೆಲವು ಸುಲಭವಾಯಿತು. ಉತ್ತರ ಇರಾನ್ ಮತ್ತು ಉತ್ತರ ಆಫ್ರಿಕದಲ್ಲಿ ನೆಲೆಗೊಂಡಿದ್ದ ವರ್ತಕ ಸಂಸ್ಥೆಗಳು ಗುಲಾಮರನ್ನು ಅರಸಿಕೊಂಡು ಬಂದುದ್ದರಿಂದ ಕೆಳಗಿನ ವೋಲ್ಗಾ, ಡಾನ್ ಮತ್ತು ಡ್ಯಾನ್‌ಫಿರ್ ನದಿ ಕಣಿವೆಗಳಲ್ಲಿ ಮಾನವ ಚಟುವಟಿಕೆಗಳು ಹೆಚ್ಚಿದವು. ಖಜರ್ ರಾಜ್ಯ ಇಂತಹ ಜನರಿಂದಲೇ ಊರ್ಜಿತಕ್ಕೆ ಬಂತು.

**ಸ್ಕ್ಯಾಂಡಿನೇವಿಯ ರಾಜಕೀಯ ವ್ಯವಸ್ಥೆ:** ಸು.8ನೆಯ ಶತಮಾನದಿಂದ 11ನೆಯ ಶತಮಾನದ ಮಧ್ಯ ಭಾಗದವರೆಗೂ ವಲಸೆಬಂದ ಸ್ಕ್ಯಾಂಡಿನೇವಿಯನ್ನರು ರೂಢಿಸಿದ ಸಾಮಾಜಿಕ ವ್ಯವಸ್ಥೆ ರಷ್ಯದ ನಾಗರಿಕತೆಯ ವಿಕಾಸಕ್ಕೆ ಬುನಾದಿಯಾಯಿತು. ರಷ್ಯದ ಪಶ್ಚಿಮಭಾಗದಲ್ಲಿ ಇಂದಿನ ನಾರ್ವೆ, ಡೆನ್ಮಾರ್ಕ್, ಸ್ವೀಡನ್, ಫಿನ್ಲೆಂಡ್ ಮತ್ತು ಐಸ್ಲೆಂಡ್‌ಗಳು ಸೇರಿದಂತೆ ಈ ರಾಜಕೀಯ ಸಂಘಟನೆ ಹುಟ್ಟಿತು. ಈ ಜನರಿಗೆ ನೌಕೆಗಳನ್ನು ನಿರ್ಮಿಸುವುದು ಮತ್ತು ನದಿಗಳ ಮೂಲಕ ದೋಣಿಗಳಲ್ಲಿ ವ್ಯಾಪಾರ ನಡೆಸುವುದು ಮುಖ್ಯ ಕಸಬಾಗಿತ್ತು. ಮೆಡಿಟರೇನಿಯನ್ ದೇಶಗಳು, ಪಶ್ಚಿಮ ಯುರೋಪ್ ಮತ್ತು ಏಷ್ಯ ದೇಶಗಳ ನಡುವೆ ನಡೆಯುತ್ತಿದ್ದ ವಾಣಿಜ್ಯ ವ್ಯವಹಾರಗಳಲ್ಲಿ ಪಾಲ್ಗೊಳ್ಳಲು ಈ ರಾಜಕೀಯ ಶಕ್ತಿ ಪ್ರಯತ್ನಿಸಿ ಅದಕ್ಕಾಗಿ ಇಂಗ್ಲೆಂಡಿನ ಹೆಚ್ಚು ಭಾಗವನ್ನು ತನ್ನ ಅಧೀನಪಡಿಸಿಕೊಂಡಿತು. ವೈಕಿಂಗರೆಂದು ಹೆಸರಾದ ಇವರು 11ನೆಯ ಶತಮಾನದವರೆಗೂ ಆಳಿದರು. ಈ ಕಾಲದಲ್ಲೇ ಕೀವ್ ಮತ್ತು ನೋವಗ್ರಡ್ ರಾಜ್ಯಗಳು ಹುಟ್ಟಿದವು. ಸ್ಥಳೀಯ ಸ್ಲಾವ್ ಮತ್ತು ಫಿನ್ ಜನರು ಸುಲಭವಾಗಿ ಸ್ಕ್ಯಾಂಡಿನೇವಿಯನ್ನರ ಅಧೀನರಾದರು. ಸು.1500ರ ಹೊತ್ತಿಗೆ ಸ್ಕ್ಯಾಂಡಿನೇವಿಯ ಸಾಮ್ರಾಜ್ಯ ವ್ಯವಸ್ಥೆ ಕುಸಿದು ಸ್ವೀಡನ್ ಮತ್ತು ರಷ್ಯದ ನಡುವೆ ರಾಜಕೀಯ ಸಂಪರ್ಕ ಕಡಿದುಹೋಯಿತು.

ಸ್ಕ್ಯಾಂಡಿನೇವಿಯನ್ ರಾಜಕೀಯ ಸಂಘಟನೆ ಇದ್ದ ಕಾಲದ ಸಾಹಸಿ ಸಮುದಾಯಗಳಲ್ಲಿ ವರಂಜಿಯನ್ನರೆಂಬುವರು ಮುಖ್ಯರು. ಇವರು ವಿವಿಧ ಮೂಲಗಳಿಗೆ ಸೇರಿದ ಜನರಾಗಿದ್ದು ಯುದ್ಧಪ್ರಿಯ ನಾಯಕರುಗಳ ನೇತೃತ್ವದಲ್ಲಿ ಗುಂಪುಗೂಡುತ್ತಿದ್ದರು. ಇವರನ್ನೆಲ್ಲ ಸೇರಿಸಿ ರಕ್ಸ್ ಜನರೆಂದು ಕರೆಯಲಾಯಿತು. 10ನೆಯ ಶತಮಾನದ ಪ್ರಾರಂಭದಲ್ಲಿ ಕಾನ್‌ಸ್ಟಾಂಟಿನೋಪಲ್ ಮೇಲೆ ಮತ್ತು ಉತ್ತರ ಕಾಕಸಸ್ ಮೇಲೆ ಇವರು ಧಾಳಿ ಮಾಡಿದ ಬಗ್ಗೆ ಪುರಾವೆಗಳಿವೆ. ಈ ಅವಧಿಯಲ್ಲಿ ಬಾಲ್ಟಿಕ್‌ನಿಂದ ಕಪ್ಪುಸಮುದ್ರದವರೆಗೂ ವಾಣಿಜ್ಯ ಮಾರ್ಗ ಅಭಿವೃದ್ಧಿಗೊಂಡಿತು. ಮುಂದೆ ಇದು ಕೀವ್ ರಾಜ್ಯ ಸ್ಥಾಪನೆಗೆ ನಾಂದಿಯಾಯಿತು. ಆದರೆ ಈ ವರಂಜಿಯನ್ ರಷ್ಯನರು ಕೀವಿಯನ್ ರಾಜ್ಯ ಸ್ಥಾಪಕರೇ ಅಲ್ಲವೇ ಎಂಬ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

**ಕಜ್ಞಾರರು:** ರಷ್ಯ ಪೂರ್ವದ ಮತ್ತು ಉತ್ತರ ಭಾಗದಲ್ಲಿ ರಾಜಕೀಯ ವ್ಯವಸ್ಥೆ ನೆಲೆಗೊಳ್ಳುತ್ತಿದ್ದ ಕಾಲದಲ್ಲಿ ಅದರ ದಕ್ಷಿಣ ಭಾಗದಲ್ಲಿ ತುರ್ಕಿ ಮತ್ತು ಇರಾನಿ ಅಲೆಮಾರಿಗಳು ಉತ್ತರ ಕಾಕಸಸ್‌ನಲ್ಲಿ ಕಜ್ಞಾರ್ ಪಂಗಡಗಳ ಒಕ್ಕೂಟ ರಾಜ್ಯವನ್ನು ಸ್ಥಾಪಿಸಿದರು. ಯಹೂದಿ ವರ್ತಕರೂ ಇದರಲ್ಲಿ ಸೇರಿದ್ದರು. ತಮ್ಮದೇ ಆದ ಅಶ್ವದಳವನ್ನು ಹೊಂದಿದ್ದ ಇವರು ಅಲ್ಲಿ ನೆಲೆಗೊಂಡಿದ್ದ ಹೂಣರ ಸಂಬಂಧವಾದ ಬುಲ್ಗಾರ್‌ರನ್ನು ಚದುರಿಸಿದರು. ದಕ್ಷಿಣದಲ್ಲಿ ಬೈಜಾಂಟೀಯನ್ ಮತ್ತು ಅರಬ್ ಆಕ್ರಮಣಗಳನ್ನು ಎದುರಿಸಿದರು. ಕಜ್ಞಾರ್ ಮತ್ತು ಕಾನ್‌ಸ್ಟಾಂಟಿನೋಪಲ್‌ಗಳ ನಡುವಿನ ಸಂಪರ್ಕ ನಿಕಟವಾಯಿತು. ಆದರೆ ಇವರು 737ರಲ್ಲಿ ಅರಬ್ಬರಿಗೆ ಸೋತರು. ಇದರಿಂದ ತಮ್ಮ ರಾಜಧಾನಿಯನ್ನು ಉತ್ತರಕ್ಕೆ ಕೆಳಗಿನ ವೋಲ್ಗಾ ದಂಡೆಯ ಇಟಲ್‌ಗೆ ಸ್ಥಳಾಂತರಿಸಿದರು. ಅಲ್ಲಿರಸ್ ಮತ್ತು ಹಂಗೇರಿಯನ್ನರ ಒತ್ತಡದ ನಡುವೆಯೂ 10ನೆಯ ಶತಮಾನದವರೆಗೂ ಪ್ರಬಲರಾಗಿದ್ದರು.

**ಕೀವ್ ರಾಜ್ಯ:** ವರಂಜಿಯನ್‌ರಲ್ಲಿ ಸಮರ್ಥನಾದ ರಾಜಕುಮಾರ ಸ್ವಯಾತೊಸ್ಲಾವ್ 9ನೆಯ ಶತಮಾನದಲ್ಲಿ ಕೀವ್ ರಾಜ್ಯ ಸ್ಥಾಪಿಸಿದ. ಈ ರಾಜ್ಯಕ್ಕೆ ಈಗಿನ ಉಕ್ರೇನಿಯನ್ ಪ್ರದೇಶದಲ್ಲಿ ನೀಪರ್ ನದಿಯ ದಂಡೆಯ ಮೇಲಿರುವ ಕೀವ್ ನಗರ ರಾಜಧಾನಿಯಾಯಿತು. ಇವನ ಉತ್ತರಾಧಿಕಾರಿಗಳು 10ನೆಯ ಶತಮಾನದ ಕೊನೆಯ ಹೊತ್ತಿಗೆ ಕೀವ್ ರಾಜ್ಯವನ್ನು ಪ್ರಬಲ ಸ್ಥಿತಿಗೆ ತಂದರು. ವ್ಲಾಡಿಮಿರ್ (ಸು. 980–1015) ಕೀವ್ ರಾಜ್ಯವನ್ನು ಅತ್ಯಂತ ವೈಭವ ಸ್ಥಿತಿಗೆ ತಂದ ಪ್ರಸಿದ್ಧ ರಾಜ. ನೀಪರ್ ನದಿಯ ಮೂಲಕ ಕಪ್ಪುಸಮುದ್ರದ ತೀರ ಪ್ರದೇಶಗಳಿಗೆ ವಾಣಿಜ್ಯ ಸಂಪರ್ಕ ಹೆಚ್ಚಿತು. ಸ್ಕ್ಯಾಂಡಿನೇವಿಯ ಮತ್ತು ಕಾನ್‌ಸ್ಟಾಂಟಿನೋಪಲ್ ನಡುವಿನ ವಾಣಿಜ್ಯ ಮಾರ್ಗ ಉಚ್ಛ್ರಾಯಸ್ಥಿತಿಗೆ ಬಂದಿತು. ಕೀವ್ ನಗರ 12ನೆಯ ಶತಮಾನದವರೆಗೂ ಪ್ರಸಿದ್ಧ ಪ್ರಾಚೀನ ನಗರವಾಗಿ ಮೆರೆಯಿತು. ರಾಜ ನೆರೆಹೊರೆಯ ಐರೋಪ್ಯ ರಾಜ್ಯಗಳೊಂದಿಗೆ ರಾಜ ತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿದ. 988ರಲ್ಲಿ ಕಾನ್‌ಸ್ಟಾಂಟಿನೋಪಲ್‌ನ ಕ್ರೈಸ್ತ ಧರ್ಮಗುರುಗಳನ್ನು ಆಹ್ವಾನಿಸಿ ರಷ್ಯದಲ್ಲಿ ಸಂಪ್ರದಾಯವಾದಿ ಚರ್ಚ್ ಸ್ಥಾಪನೆಯಾಗಲು ಕಾರಣನಾದ. ತಂದೆಯಿಂದ ಮಗನಿಗೆ ಬರುವಂತೆ ಉತ್ತರಾಧಿಕಾರ ನ್ಯಾಯ ವ್ಯವಸ್ಥೆಯನ್ನು ರಷ್ಯದಲ್ಲಿ ಅಂಗೀಕರಿಸಲಾಯಿತು. ಇದರಿಂದ ಸಮಕಾಲೀನ ಕ್ರೈಸ್ತಧರ್ಮದ ಕಲೆ, ತತ್ತ್ವಶಾಸ್ತ್ರ ಮತ್ತು ಸಾಹಿತ್ಯಗಳು ಈ ಪ್ರದೇಶದ ಜನರಿಗೆ ಪರಿಚಯವಾದವು. ಹೀಗೆ ರಷ್ಯದ ಪೂರ್ವ ಆಗ್ನೇಯ ಭಾಗದಲ್ಲಿ ಒಂದು ದೃಢವಾದ ಸಂಸ್ಕೃತಿ ಬೆಳೆಯಲು ಕೀವ್ ರಾಜ್ಯ ಅಪಾರ ಕಾಣಿಕೆ ಸಲ್ಲಿಸಿತು.

ವ್ಲಾಡಿಮಿರ್‌ನ ಮರಣಾಂತರ (1018) ಇವನ 12 ಜನ ಗಂಡು ಮಕ್ಕಳು ರಾಜ್ಯದ ವಿವಿಧ ಭಾಗಗಳಲ್ಲಿ ತಮ್ಮ ಹಕ್ಕು ಸ್ಥಾಪಿಸಿಕೊಂಡು ಆಳತೊಡಗಿದರು. ರಾಜ್ಯದಲ್ಲಿ ಸೈನ್ಯ ಒದಗಿಸಿದ್ದಕ್ಕೆ ಜಹಗೀರು ಪಡೆಯುವ ಊಳಿಗಮಾನ್ಯ ಪದ್ಧತಿ ನೆಲೆಯೂರಿ 11ನೆಯ ಶತಮಾನದ ಅಂತ್ಯದಲ್ಲಿ ನಡೆದ ಧರ್ಮಯುದ್ಧಗಳ ಕಾರಣವಾಗಿ ಮೆಡಿಟರೇನಿಯನ್ ಪ್ರದೇಶದ ಮೂಲಕ ಪೂರ್ವ ಪಶ್ಚಿಮ ದೇಶಗಳ ನಡುವೆ ನಡೆಯುತ್ತಿದ್ದ ವ್ಯಾಪಾರ ವಾಣಿಜ್ಯ ಮಾರ್ಗಗಳಲ್ಲಿ ವ್ಯತ್ಯಯ ಉಂಟಾಯಿತು. ಇದು ಕೀವ್ ರಾಜ್ಯದ ಆದಾಯಕ್ಕೆ ಧಕ್ಕೆ ತಂದಿತು. ಸ್ಥಳೀಯ ರಾಜರುಗಳು ಹೊರದೇಶಗಳೊಂದಿಗೆ ಸ್ವತಂತ್ರ ವ್ಯಾಪಾರ ಸಂಬಂಧಗಳನ್ನು ಹೊಂದಲು ಹವಣಿಸಿದ್ದು ರಾಜಕೀಯ ದುರ್ಬಲತೆಗೆ ಕಾರಣವಾಯಿತು. 1169ರಲ್ಲಿ ಸುಜ್‌ದಾಲ್‌ನ ಆಂಡ್ರ್ಯೂ ಎಂಬ ದೊರೆ ಕೀವ್ ನಗರದ ಮೇಲೆ ದಾಳಿಯಿಟ್ಟು ಅದನ್ನು ಹಾಳುಗೆಡವಿದ. 12ನೆಯ ಶತಮಾನದ ಅಂತ್ಯ ಭಾಗದ ಹೊತ್ತಿಗೆ ಶಿಥಿಲವಾಗಿದ್ದ ಕೀವ್ ವ್ಯವಸ್ಥೆ 1240ರಲ್ಲಿ ನಡೆದ ಮಂಗೋಲರ ಧಾಳಿಯಿಂದ ಸಂಪೂರ್ಣವಾಗಿ ನಿರ್ನಾಮವಾಯಿತು.

**ನೋವಗ್ರಾಡ್ ರಾಜ್ಯ:** ಕೀವ್ ರಾಜ್ಯದ ಕಾಲದಲ್ಲಿ ಫಿನ್ಲೆಂಡ್ ಕೊಲ್ಲಿ ಮತ್ತು ಪೈಪಸ್ ಸರೋವರಗಳ ಆಸುಪಾಸಿನಿಂದ ಯೂರಲ್ ಬೆಟ್ಟಗಳವರೆಗೆ ವಾಯವ್ಯ ರಷ್ಯದಲ್ಲಿ ಸ್ಥಾಪಿತವಾದ ಸಣ್ಣ ರಾಜ್ಯ. ನೋವಗ್ರಾಡ್ ಪಟ್ಟಣ ರೋರಿಕ್‌ರ ಮೊದಲ ನೆಲೆಯಾಯಿತು. ಕೀವ್ ರಾಜ್ಯ ಕ್ಷೀಣಿಸಿದಾಗ ಇಲ್ಲಿನ ಅರಸ 1136ರಲ್ಲಿ ಸ್ವಾತಂತ್ರ್ಯ ಘೋಷಿಸಿಕೊಂಡ. ಈ ರಾಜ್ಯ ಮಂಗೋಲ್ ಟಾರ್ಟರರ ಧಾಳಿಗೆ ಮಣಿಯಲಿಲ್ಲ. ಜರ್ಮನಿ ಮತ್ತು ಸ್ವೀಡನ್ನಿನ ಮೇಲೆ ಯಶಸ್ವಿಯಾಗಿ ಯುದ್ಧಮಾಡಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು; ಮಾಸ್ಕೋ ರಾಜ್ಯದ ಪ್ರತಿಸ್ಪರ್ಧಿಯಾಗಿದ್ದಿತು. ನೋವಗ್ರಾಡ್ ಬೋಯರ್ ವ್ಯಾಪಾರಿ ಕುಟುಂಬಗಳ ಬಹುಜನರ ಆಳ್ವಿಕೆಗೆ ಒಳಪಟ್ಟಿತು. ದಂಡನಾಯಕ, ಮೇಯರ್ ಮತ್ತು ಹಿರಿಯರ ಸಭೆ ಗಳು ನಗರಾಡಳಿತವನ್ನು ನೋಡಿಕೊಳ್ಳುತ್ತಿದ್ದವು. ಆರ್ಚ್ ಬಿಷಪ್ ರಾಜ್ಯದ ಆಗುಹೋಗುಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ ಅಲ್ಲಿನ ಅನೇಕ ಚರ್ಚ್‌ಗಳು, ಕತೀಡ್ರಲ್‌ಗಳು, ಕ್ರೈಸ್ತ ಮಠಗಳು ಉಳಿದುಬಂದಿವೆ. 1478ರಲ್ಲಿ ಈ ರಾಜ್ಯ ಮಾಸ್ಕೋ ರಾಜ್ಯಕ್ಕೆ ಸೇರಿಹೋದರೂ ಅದರ ಆರ್ಥಿಕ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯ ಉಳಿದುಕೊಂಡು ಬಂತು.

ವಾಯವ್ಯ ಪ್ರಾಂತದಲ್ಲಿ ಮಧ್ಯಯುಗದಲ್ಲಿ ಪಿಮೊಲಾನ್ಸ್ಕ ಪಾಲಾಟ್ಸ್ಕ ಟರ್‌ನಾವೊ, ಪಿಸ್ಸ್ಕ ಹಾಗೂ ವೊಲ್ಲೀನ ರಾಜ್ಯಗಳು ಲಿಥುವೇನಿಯದಿಂದ ನಿಯಂತ್ರಿಸಲ್ಪಡುತ್ತಿದ್ದವು. ಬೈಲೋರಷ್ಯನ್ನರು ಮತ್ತು ಉಕ್ರೇನಿಯನ್ನರು ಇಲ್ಲಿನ ಪ್ರಧಾನ ಜನಸಮೂಹವಾಗಿದ್ದು ಇದೊಂದು ಅಂತಾರಾಷ್ಟ್ರೀಯ ಸಂಘಟನೆಯಂತೆ ಇದ್ದಿತು. 15ನೆಯ ಶತಮಾನದ ಹೊತ್ತಿಗೆ ಇಲ್ಲಿನ ರಾಜರು ಸ್ಲಾವಿಕ್ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದರು. ಹಳೆಯ ಕೀವ್ ರಾಜ್ಯದ ಬಹುಭಾಗವನ್ನು ಒಳಗೊಂಡು ಈ ರಾಜ್ಯ ವಿಟೌಟಾಸ್‌ನ (1392–1430) ಕಾಲದಲ್ಲಿ ಹೆಚ್ಚು ಪ್ರಾಬಲ್ಯಕ್ಕೆ ಬಂತು. 1385ರಲ್ಲಿ ಈ ರಾಜ್ಯ ಪೋಲೆಂಡ್ ರಾಜ್ಯಕ್ಕೆ ಸೇರಿಹೋಯಿತು.

ಈಶಾನ್ಯ ಪ್ರಾಂತದಲ್ಲಿ ಓಕಾ ಮತ್ತು ವೋಲ್ಗಾ ನದಿಗಳ ನಡುವಿನ ಪ್ರದೇಶ ಮಾಸ್ಕೋ ರಾಜ್ಯದ ಪ್ರಧಾನ ಭಾಗವಾಗಿತ್ತು. ವ್ಲಾಡಿಮಿರ್‌ನ ವಂಶಸ್ಥರು ಇಲ್ಲಿ ಆಳುತ್ತಿದ್ದು ಡ್ಯಾನಿಯನ್ನನ ಮಗ ಇವಾನ್‌ನ ಕಾಲದಲ್ಲಿ (1328–41) ಈ ರಾಜ್ಯ ಬಹು ವಿಸ್ತಾರಗೊಂಡು ಸಂಪದ್ಭರಿತವಾಯಿತು.

ನೈರುತ್ಯ ಪ್ರಾಂತ್ಯದ ಭಾಗ ಮುಖ್ಯವಾಗಿ ಗ್ಲೇಷಿಯ ಮತ್ತು ವೋಲ್ಹೀನ್ ರಾಜ್ಯಗಳನ್ನು ಒಳಗೊಂಡಿತ್ತು. ಕೀವ್ ಪ್ರಭಾವ ವಲಯದಿಂದ ಹೊರತಾದ ಈ ಭಾಗ ಫಲವತ್ತಾದ ಪ್ರದೇಶವಾಗಿತ್ತು. 1240ರಲ್ಲಿ ಮಂಗೋಲರ ಧಾಳಿಯಿಂದ ಪತನವಾಯಿತು. ಅಂತಿಮವಾಗಿ ಈ ರಾಜ್ಯಗಳು ಲಿಥುವೇನಿಯ ಮತ್ತು ಪೋಲೆಂಡ್‍ಗಳ ಅಧೀನವಾದವು.

**ಮಂಗೋಲರ ಆಕ್ರಮಣ ಮತ್ತು ಪರಿಣಾಮಗಳು:** 13ನೆಯ ಶತಮಾನದ ಮೊದಲ ಭಾಗದಲ್ಲಿ ರಷ್ಯದ ಬಹುಭಾಗ ಮಂಗೋಲರ ಆಕ್ರಮಣಕ್ಕೆ ತುತ್ತಾಯಿತು. ಧರ್ಮಯುದ್ಧಗಳಿಂದಾಗಿ ಮಧ್ಯ ಏಷ್ಯದ ಮೂಲಕ ಚೀನ ಮತ್ತು ಪೆಸಿಫಿಕ್ ತೀರವನ್ನು ಸಂಪರ್ಕಿಸುತ್ತಿದ್ದ ವ್ಯಾಪಾರ ಮಾರ್ಗಗಳು ಬದಲಾದವು. ಇದರಿಂದ ಮಂಗೋಲರಿಗೆ ಅನೇಕ ತೊಂದರೆಗಳುಂಟಾದವು. ಆಗ ಅವರು ಚಂಗೇಸ್‍ಖಾನನ (1167–1227) ನೇತೃತ್ವದಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸತೊಡಗಿದರು. ಚಂಗೇಸ್‍ಖಾನ್ ಅಲೆಮಾರಿ ತುರ್ಕಿ ಸಮುದಾಯಗಳನ್ನು ಮತ್ತು ಮುಸ್ಲಿಂ ವರ್ತಕರನ್ನು ಒಗ್ಗೂಡಿಸಿ ಒಂದು ಬೃಹತ್ ಸೈನ್ಯ ಕಟ್ಟಿದ. 1223ರಲ್ಲಿ ಹಿಂದಿನ ಕೀವ್ ಸಾಮ್ರಾಜ್ಯದ ಪ್ರದೇಶದೊಳಗೆ ನುಗ್ಗಿದ ಮಂಗೋಲ ಸೈನ್ಯ ವೊಲ್ಹೀನ, ಗ್ಲೇಷಿಯ ಮತ್ತು ಪೊಲೋಟಸ್ ರಾಜ್ಯಗಳ ಸಂಯುಕ್ತ ಸೈನ್ಯವನ್ನು ಕಲ್ಕ ನದಿ ದಂಡೆಯ ಮೇಲೆ ನಡೆದ ಯುದ್ಧದಲ್ಲಿ ಸೋಲಿಸಿತು. ಇತರ ಸಣ್ಣಪುಟ್ಟ ರಾಜ್ಯಗಳು ಸುಲಭವಾಗಿ ಮಂಗೋಲರ ವಶವಾದವು. ಚಂಗೇಸ್‍ಖಾನನು ಯೂರಲ್ ಪರ್ವತ ಪ್ರದೇಶದವರೆಗೆ ರಷ್ಯವನ್ನು ತನ್ನ ಅಧೀನಕ್ಕೆ ತೆಗೆದುಕೊಂಡ. ಅದರಲ್ಲಿ ನೋವಗ್ರಾಡ್‍ನ ಉತ್ತರ ಭಾಗ ಮಾತ್ರ ಮಂಗೋಲರ ಹಿಡಿತದಿಂದ ಹೊರಗುಳಿದಿತ್ತು.

ಸಂತ ಸೋಫಿಯ (ಪ್ರ.ಶ.537), ಇಸ್ತಾಂಬುಲ್

ಪೆಸಿಫಿಕ್ ಸಾಗರ ತೀರದಿಂದ ಮೆಡಿಟರೇನಿಯನ್ ತೀರದವರೆಗೆ ತಮ್ಮ ದಿಗ್ವಿಜಯ ಸಾಧಿಸಿದ ಮಂಗೋಲರು ಈ ವಿಸ್ತಾರ ಭೂಭಾಗವನ್ನೆಲ್ಲ ಆಳುವ ಹಂಬಲ ಹೊಂದಿದ್ದರು. ಚಂಗೇಸ್‍ಖಾನನ ಮಗ ಕುಬ್ಲಾಯ್‍ಖಾನನೂ ಅಷ್ಟೇ ಮಹತ್ವಾಕಾಂಕ್ಷೆಯುಳ್ಳವನಾಗಿದ್ದ. ಇದರಿಂದಾಗಿ ಮಂಗೋಲರು ಚೀನ, ಪರ್ಷಿಯ ಮತ್ತು ರಷ್ಯಗಳಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದರು. ತಮ್ಮ ವಾಣಿಜ್ಯ ಸಾಮ್ರಾಜ್ಯಕ್ಕೆ ರಷ್ಯದ ಇಟಲ್ ಎಂಬಲ್ಲಿ ಹೊಸ ರಾಜಧಾನಿಯನ್ನು ಸ್ಥಾಪಿಸಿ 1260ರಲ್ಲಿ ರಾಜಧಾನಿಯನ್ನು ವೋಲ್ಗೊಗ್ರಾಡ್‍ನ ಬಳಿಯ ಪಾರೈಗೆ ಸ್ಥಳಾಂತರಿಸಲಾಯಿತು. ಇಲ್ಲಿನ ಪಟ್ಟಣಗಳು ವಾಣಿಜ್ಯ ವ್ಯವಹಾರಗಳಿಂದ ಕೂಡಿದ್ದು ಗೋಲ್ಡನ್ ಹೋರ್ಡ್ ಸಾಮ್ರಾಜ್ಯವೆಂದು ಪ್ರಸಿದ್ಧವಾಯಿತು.

ಮಂಗೋಲರ ಆಳ್ವಿಕೆಯನ್ನು ಟಾರ್ಟರರ ಆಳ್ವಿಕೆ ಎಂದೂ ಕರೆಯುವುದಕ್ಕೆ ಕಾರಣ ಈ ಟಾರ್ಟರರು ಸ್ಥಳೀಯ ರಾಜರುಗಳ ಮೂಲಕವೇ ಆ ಪ್ರದೇಶಗಳನ್ನು ಆಳಿದ್ದು. ಇದರಿಂದಾಗಿ ಅವರು ಆ ಪ್ರದೇಶಗಳ ಮೂಲಭೂತ ಸಂಸ್ಕೃತಿಯಲ್ಲಿ ಬದಲಾವಣೆ ತರಲಿಲ್ಲ. ವಾಣಿಜ್ಯ ಮತ್ತು ಕಂದಾಯ ವಸೂಲಿಯಲ್ಲಿ ಹೆಚ್ಚಾಗಿ ತುರ್ಕರು ಮತ್ತು ಮುಸ್ಲಿಂ ವರ್ತಕರು ನಿಯುಕ್ತರಾಗಿದ್ದರು. ಕ್ರಮೇಣ ಸ್ಥಳೀಯ ಪಂಗಡಗಳ ನಾಯಕರುಗಳು ಮಂಗೋಲರಿಗೆ ಪ್ರತಿಭಟನೆ ತೋರತೊಡಗಿದರು. ಒಜ್‍ಬೆಗ್ (1314–41) ಇವರ ಪ್ರತಿಭಟನೆಯನ್ನು ಹತ್ತಿಕ್ಕಿ ನಿಯಂತ್ರಣ ಸಾಧಿಸಿದ.

ಈ ಮಧ್ಯೆ ತುರ್ಕರ ದಿಗ್ವಿಜಯಗಳು, ತೈಮೂರನ ಅಲ್ಪಕಾಲದ ಶೀಘ್ರ ಯಶಸ್ಸು ಇವು ಮಂಗೋಲ್ ಸಾಮ್ರಾಜ್ಯ ವ್ಯವಸ್ಥೆಯನ್ನು ಅಲುಗಿಸಿದವು. 1357ರ ಅನಂತರ ಸಮಸ್ಯೆಗಳು ತಲೆದೋರಿದವು. ಸಾರೈನಿಂದ ಆಳುತ್ತಿದ್ದ ಖಾನನಿಗೆ ಪ್ರದೇಶವನ್ನು ಟಾರ್ಟರ್ ನಾಯಕನೊಬ್ಬ ಪ್ರತ್ಯೇಕಗೊಳಿಸಿದ. ಪೂರ್ವ ಭಾಗಗಳು ತೈಮೂರನ ಅಧೀನಕ್ಕೆ ಬಂದವು. ಇರಾನ್, ಕಾಕಸಸ್ ಮತ್ತು ಪೂರ್ವ ಭಾಗಗಳು ಅನಟೋಲಿಯಗಳ ಮೇಲೆ ಸ್ವಾಮಿತ್ವ ಸ್ಥಾಪಿಸಿದ ತೈಮೂರ್ ರಷ್ಯದ ಟಾರ್ಟರ್ ಪ್ರದೇಶಗಳ ಮೇಲೆ ದಂಡಯಾತ್ರೆ ಕೈಗೊಂಡ. ಅವನು ಕೆಳಗಿನ ವೋಲ್ಗಾ ಮೂಲಕ ಉತ್ತರರಷ್ಯ ಮೂಲದ ರಾಜ್ಯಗಳ ಎಲ್ಲೆಯನ್ನು ತಲುಪಿ ಟಾಟರ್ ಸಾಮ್ರಾಜ್ಯ ವ್ಯವಸ್ಥೆಯನ್ನು ದುರ್ಬಲಗೊಳಿಸಿದ. ಮುಂದೆ ಮಂಗೋಲರ ಆಳ್ವಿಕೆ ಪುನಶ್ಚೇತನಗೊಳ್ಳಲಿಲ್ಲ. ಅಂತರ ಯುದ್ಧಗಳು ಹೆಚ್ಚಿದವು. 15ನೆಯ ಶತಮಾನದ ಅಂತ್ಯದ ಹೊತ್ತಿಗೆ ಟಾರ್ಟರ್ ಸಾಮ್ರಾಜ್ಯ ಅಳಿದು ಮಾಸ್ಕೋ ರಾಜ್ಯ ಅಭಿವೃದ್ಧಿಯಾಗತೊಡಗಿತು. ಮಾಸ್ಕೋ ರಾಜ್ಯವನ್ನು ಅಲೆಕ್ಸಾಂಡರ್ ನೆವ್‍ಸ್ಕಿಯ ಮಗ ಡ್ಯಾನಿಯನ್ ಎಂಬಾತ 1295ರಲ್ಲಿ ಸ್ಥಾಪಿಸಿದ. ಇದು 14ನೆಯ ಶತಮಾನದ ಕೊನೆಯ ಹೊತ್ತಿಗೆ ಪ್ರಮುಖ ಸ್ಥಳೀಯ ರಾಜ್ಯವಾಗಿ ರಷ್ಯದ ಪ್ರಾತಿನಿಧಿಕ ರಾಷ್ಟ್ರೀಯ ರಾಜ್ಯವಾಯಿತು.

2ನೆಯ ವ್ಯಾಸಿಲಿಯ ಮಗ 3ನೆಯ ಐವಾನ್ (1462–1505) ಬೈಲೊರಷ್ಯ ಮತ್ತು ಉಕ್ರೇನ್ ಪ್ರದೇಶಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. 1478ರಲ್ಲಿ ನಾವ್‍ಗರಾಡ್ ರಾಜ್ಯವನ್ನು ಸ್ವಾಧೀನಕ್ಕೆ ತೆಗೆದುಕೊಂಡದ್ದು ಇವನ ಮಹಾಸಾಧನೆಗಳಲ್ಲೊಂದು. ಇವನು ಬೈಜಾಂಟೀಯನ್ ಕೊನೆ ಚಕ್ರವರ್ತಿಯ ಸೋದರ ಸೊಸೆ ಸೋಫಿಯಾಳನ್ನು ಮದುವೆಯಾಗಿ ರಷ್ಯದ ರಾಜಮನೆತನದ ಪ್ರತಿಷ್ಠೆಯನ್ನು ಹೆಚ್ಚಿಸಿದ. 1503ರಲ್ಲಿ ಲಿಥುವೇನಿಯದೊಂದಿಗೆ ಒಪ್ಪಂದ ಮಾಡಿಕೊಂಡು ರಷ್ಯದ ಅಜೇಯ ರಾಜನೆನಿಸಿದ; ಇವನ ಉತ್ತರಾಧಿಕಾರಿಯಾಗಿ ಬಂದ ಇವನ ಮಗ 3ನೆಯ ವ್ಯಾಸಿಲಿ ರಾಜ್ಯವನ್ನು ಇನ್ನೂ ವಿಸ್ತರಿಸಿದ.

ಮೊದಲ ಬಾರಿಗೆ ಜ಼ಾರ್ ಬಿರುದು ಧರಿಸಿದ 4ನೆಯ ಐವಾನನು 1547ರಲ್ಲಿ ಪಟ್ಟಕ್ಕೆ ಬಂದ. ಇವನು ಒರಟನೂ ನಿಷ್ಕರುಣಿಯೂ ದರ್ಪಿಷ್ಠನೂ ದಕ್ಷನೂ ಆಗಿದ್ದ. ಇವನಿಗೆ ಭೀಕರ ಐವಾನ್ ಎಂಬ ಹೆಸರೂ ಬಂದಿತ್ತು. ಐವಾನ್ ಮಾಸ್ಕೋ ರಾಜ್ಯದ ಗಡಿಗಳನ್ನು ಪೂರ್ವದಲ್ಲಿ ಸೈಬೀರಿಯದವರೆಗೂ ವಿಸ್ತರಿಸಿ ಅದಕ್ಕೆ ರಷ್ಯನ್ ಸಾಮ್ರಾಜ್ಯದ ರೂಪುಕೊಟ್ಟ. ಆದರೆ ಪ್ರಜೆಗಳು, ಸಾಮಂತರು ಹಾಗೂ ಭೂಮಾಲೀಕರನ್ನು ಅನುಮಾನದಿಂದ ನೋಡುತ್ತ ಅವರನ್ನು ಪೀಡಿಸುತಿದ್ದ. 1584ರವರೆಗೂ ಇವನು ಆಳಿದ.

4ನೆಯ ಐವಾನನ ಅನಂತರ ರಷ್ಯದಲ್ಲಿ ಹೇಳಿಕೊಳ್ಳುವಂತಹ ಮಹತ್ವದ ಘಟನೆಗಳು ಜರುಗಲಿಲ್ಲ. 1ನೆಯ ಪೀಟರ್ ಸಿಂಹಾಸನಕ್ಕೆ ಬಂದು 1689ರಿಂದ ಸ್ವತಂತ್ರವಾಗಿ ಆಳತೊಡಗಿದ. ಈತ ಮಾಸ್ಕೋ ರಾಜ್ಯದ ಜ಼ಾರ್ ಪದವಿಯನ್ನು ಉನ್ನತಿಗೇರಿಸಿ ರಷ್ಯದ ಚಕ್ರವರ್ತಿಯೆಂದು ಘೋಷಿಸಿಕೊಂಡ. ಆಡಳಿತದಲ್ಲಿ ಸಲಹೆ ಪಡೆಯಲು ಸೆನೆಟ್ ಎಂಬ ರಾಜಕೀಯ ಸಭೆಯನ್ನು ಸ್ಥಾಪಿಸಿ ಮುಂದಿನವರಿಗೆ ದಾರಿಯಾದ. ಆಟೋಮನ್ ಸಾಮ್ರಾಜ್ಯದ ಬೆಂಬಲದಿಂದ ಆಗಾಗ ಧಾಳಿಯನ್ನು ನಡೆಸುತ್ತಿದ್ದ ಕ್ರಿಮಿಯದ ಟಾರ್ಟರರನ್ನು ನಿಯಂತ್ರಿಸಿ ಅಜೋವ್ ಪಟ್ಟಣವನ್ನು ವಶಪಡಿಸಿಕೊಂಡ. 1696–97ರಲ್ಲಿ ಹಾಲೆಂಡ್ ಮತ್ತು ಇಂಗ್ಲೆಂಡ್ ಸೇರಿದಂತೆ ಯುರೋಪಿನ ಪ್ರವಾಸ ಕೈಗೊಂಡು ಅಲ್ಲಿನ ಪ್ರಗತಿಯನ್ನು ಗಮನಿಸಿದ. ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾದವರನ್ನು ಅಲ್ಲಿಂದ ಕರೆಸಿ ರಷ್ಯದ ಕೈಗಾರಿಕೆಗಳ ಅಭಿವೃದ್ಧಿಯ ಜವಾಬ್ದಾರಿ ವಹಿಸಿದ. ತುರ್ಕಿಯ ವಿರುದ್ಧ ಪಾಶ್ಚಾತ್ಯ ದೇಶಗಳೊಡನೆ ರಾಜಕೀಯ ಸಂಧಾನ ನಡೆಸಿದ. 1700–1721ರವರೆಗೂ ಸ್ವೀಡನ್ನಿನೊಡನೆ ಹಗೆತನ ಸಾಧಿಸಿ ಕೊನೆಗೆ ಶಾಂತಿ ಒಪ್ಪಂದ ಮಾಡಿಕೊಂಡ. ಇವನ ಕಾಲದಲ್ಲಿ ರಷ್ಯಕ್ಕೆ ಲಿವೋನಿಯ, ಎಸ್ಟೋನಿಯ, ಇಂಗರ್ಮನ್‍ಲೆಂಡ್ ಮತ್ತು ಕರೇಲಿಯದ ಭಾಗ ಸೇರಿಕೊಂಡವು. ಈತ 1712ರಲ್ಲಿ ಕ್ಯಾಥರೀನ್ ಎಂಬುವಳನ್ನು ವಿವಾಹವಾದ.

1ನೆಯ ಪೀಟರ್‍ನ ಆಳಿಕೆ ರಷ್ಯದಲ್ಲಿ ಹುಟ್ಟು ಹಾಕಿದ ಸಾಮಾಜಿಕ, ಸಾಂಸ್ಥಿಕ ಮತ್ತು ಬೌದ್ಧಿಕ ಪ್ರವೃತ್ತಿಗಳು ಮುಂದಿನ 2 ಶತಮಾನಗಳ ಕಾಲ ರಷ್ಯದಲ್ಲಿ ಅತ್ಯಂತ ಪ್ರಭಾವ ಬೀರಿದವು. ಈತ ಅಧಿಕಾರಿಗಳ ನೇಮಕ ಮತ್ತು ಬಡ್ತಿಯಲ್ಲಿ ದಕ್ಷತೆಗೆ ಆದ್ಯತೆ ನೀಡಿದ. ಸರ್ಕಾರಿ ಕಚೇರಿಗಳಲ್ಲಿ ಸಮಯಪಾಲನೆ ಹಾಗೂ ದಾಖಲೆಗಳ ರಕ್ಷಣೆಯನ್ನು ಜಾರಿಗೆ ತಂದ. ತಪ್ಪುಮಾಡಿದ ತನ್ನ ಮಗನನ್ನೇ ಕಟುವಾಗಿ ಶಿಕ್ಷಿಸಿದ. ಇವನು ಜೈಲಿನಲ್ಲಿ ಅಸುನೀಗಿದ. ಪ್ರತಿಯೊಬ್ಬ ರಾಜ ತನ್ನ ಉತ್ತರಾಧಿಕಾರಿಯನ್ನು ಆಯ್ಕೆಮಾಡಬೇಕು, ಅದು ಆನುವಂಶಿಕವಾಗಿ ಬರಕೂಡದೆಂದು 1722ರಲ್ಲಿ ಆಜ್ಞೆಹೊರಡಿಸಿದ. ನೊಬಲ್ಲರು, ಜಮೀನ್ದಾರರು, ವರ್ತಕರು, ಪುರೋಹಿತರು–ಇವರೆಲ್ಲ ನಡೆಸಿಕೊಂಡು ಬರುತ್ತಿದ್ದ ಆನುವಂಶಿಕ ವೃತ್ತಿಗಳಿಂದ ಸೃಷ್ಟಿಯಾಗಿದ್ದ ಜಾತಿ ಪದ್ಧತಿಯನ್ನು ಬದಲಾಯಿಸಿದ. ಎಲ್ಲ ವರ್ಗದವರೂ ಶಿಕ್ಷಣ ಕಲಿಯಲು ಅವಕಾಶ ಕಲ್ಪಿಸಿದ. ಚರ್ಚ್‍ನ ಜಗದ್ಗುರು 1700ರಲ್ಲಿ ಕಣ್ಮರೆಯಾದಾಗ ಆ ಸ್ಥಾನದಲ್ಲಿ ಯಾರನ್ನೂ ನೇಮಿಸದೆ ಅದನ್ನು ಒಂದು ಅಧಿಕಾರಿ ವ್ಯವಸ್ಥೆಯನ್ನಾಗಿ ಪರಿವರ್ತಿಸಿದ. ಇವನು ಜಾರಿಗೆ ತಂದ ಕೇಂದ್ರಸರ್ಕಾರದ ಆಡಳಿತ ವ್ಯವಸ್ಥೆ 1917ರವರೆಗೂ ಮುಂದುವರೆಯಿತು. ಇವನ ಕಾಲದಲ್ಲಿ ಕಬ್ಬಿಣದ ಕೈಗಾರಿಕೆ, ಗಣಿಗಾರಿಕೆ, ನೌಕಾ ನಿರ್ಮಾಣಗಳು ಹೆಚ್ಚು ಪ್ರೋತ್ಸಾಹ ಪಡೆದವು. ಇವನ ಸಾಮ್ರಾಜ್ಯ ಕಪ್ಪು ಸಮುದ್ರ, ಬಾಲ್ಟಿಕ್ ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರ ತೀರದವರೆಗೂ ವಿಸ್ತರಿಸಿತು. ಪೀಟರ್ ರಷ್ಯವನ್ನು ದೊಡ್ಡ ಶಕ್ತಿಯನ್ನಾಗಿ ಪರಿವರ್ತಿಸಿದ. 1703ರಲ್ಲಿ ಸೇಂಟ್ ಪೀಟರ್ಸ್ ಬರ್ಗ್ ಎಂಬ ಹೆಸರಿನ ಹೊಸ ರಾಜಧಾನಿಯನ್ನು ಸ್ಥಾಪಿಸಿದ. ವಿಜ್ಞಾನ ಮತ್ತು ನೌಕಾ ಅಕಾಡೆಮಿಗಳ ಸ್ಥಾಪನೆಗೆ ಕ್ರಮಕೈಗೊಂಡ. ಜನರು ಪಾಶ್ಚಾತ್ಯ ಮಾದರಿಯ ವೇಷ ಭೂಷಣಗಳನ್ನು ತೊಡಲು ಪ್ರೋತ್ಸಾಹಿಸಿದ. ಈ ಬಗೆಯ ಅನೇಕ ಕಾರಣಗಳಿಂದ ಪೀಟರ್ ಮಹಾಶಯನ ಆಳಿಕೆ ಕ್ರಾಂತಿಕಾರಕವಾಗಿದ್ದು ಅದು ಮುಂದಿನ 2 ಶತಮಾನಗಳವರೆಗೆ ರಷ್ಯದ ಮೇಲೆ ತನ್ನ ಪ್ರಭಾವ ಬೀರಿತು.

ಪೀಟರ್ ತನ್ನ 52ನೆಯ ವಯಸ್ಸಿನಲ್ಲಿ ಹಠಾತ್ತನೆ ನಿಧನನಾದ (1725). ಈತ ನಿಧನನಾಗುವ ವೇಳೆಗೆ ಕೆಲವು ಸಮಸ್ಯೆಗಳು ಪರಿಹಾರವಾಗದೆ ಹಾಗೆಯೇ ಉಳಿದಿದ್ದವು. ತನ್ನ ಉತ್ತರಾಧಿಕಾರಿಯ ಬಗ್ಗೆ ಇವನು ಯಾವುದೇ ನಿರ್ಧಾರ ಮಾಡದಿದ್ದುದು ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿತ್ತು. ಇದರಿಂದ ಉಂಟಾದ ಗೊಂದಲದಲ್ಲಿ 5ನೆಯ ಐವಾನನ

ಮಗಳು ಅನ್ನಾ 1730ರಲ್ಲಿ ಸಿಂಹಾಸನವೇರಿದಳು. ಈಕೆ ದುರ್ಬಲ ಆಡಳಿತಗಾರಳಾಗಿದ್ದು ಅಧಿಕಾರಿಗಳ ಪ್ರಭಾವ ಹೆಚ್ಚಿತು. ಅನಂತರ ಪೀಟರನ ಮಗಳು ಎಲಿಜûಬೆತ್ ಪೆಟ್ರೊವ್ನ್ 1741–1762ರ ವರೆಗೂ ಆಳಿದಳು. ಈಕೆ ರದ್ದಾಗಿದ್ದ ತನ್ನ ತಂದೆಯ ಕಾಲದ ಸೆನೆಟನ್ನು ಮರು ಸ್ಥಾಪಿಸಿದಳು. ಪೀಟರ್‌ನ ಅನೇಕ ಸುಧಾರಣೆಗಳು ಈ ಕಾಲದಲ್ಲಿ ಮರುಜೀವ ಪಡೆದವು. ಈಕೆ 1755ರಲ್ಲಿ ಮಾಸ್ಕೋ ವಿಶ್ವವಿದ್ಯಾಲಯ ಸ್ಥಾಪಿಸಿದಳು. ಸೇಂಟ್‌ಪೀಟರ್ಸ್‌ಬರ್ಗ್‌ನಲ್ಲಿ ಲಲಿತಕಲಾ ಅಕಾಡೆಮಿ ಸ್ಥಾಪಿಸಿದಳು. ಇವಳ ಕಾಲದಲ್ಲಿ ರಷ್ಯದ ವಾಣಿಜ್ಯ ವ್ಯವಹಾರ ಅಭಿವೃದ್ಧಿಯಾಯಿತು.

2ನೆಯ ಕ್ಯಾಥರಿನ್ (1762–96) ರಷ್ಯ ಕಂಡ ಪ್ರಸಿದ್ಧ ಚಕ್ರವರ್ತಿನಿ. ಈಕೆ ಜರ್ಮನ್ ರಾಜಮನೆತನದ ಮಗಳು. ರಷ್ಯದ 3ನೆಯ ಪೀಟರ್‌ನನ್ನು ವಿವಾಹವಾಗಿದ್ದ ಈಕೆ ಸೆರೆಮನೆಯಲ್ಲಿ ಆತ ಕೊಲೆಯಾದ ಅನಂತರ 1762ರಲ್ಲಿ ಸಿಂಹಾಸನವೇರಿದಾಗ ಈಕೆಗೆ 30 ವರ್ಷಗಳು. ಈಕೆ ವಿಸ್ತರಣಾವಾದಿಯಾಗಿದ್ದಳು. ಲಿಥುವೇನಿಯದ ಗ್ರಾಂಡ್ ಡಚಿಯು ರಷ್ಯದ ಆಳ್ವಿಕೆಗೆ ಒಳಪಟ್ಟಿತು. 1774ರ ಒಪ್ಪಂದದ ಮೇರೆಗೆ ಕಪ್ಪುಸಮುದ್ರದ ಉತ್ತರ ತೀರ, 1783ರಲ್ಲಿ ಕ್ರಿಮಿಯ ಇವು ರಷ್ಯ ಸಾಮ್ರಾಜ್ಯಕ್ಕೆ ಸೇರಿದವು. ಯೂರಲ್ ಪರ್ವತಗಳಾಚೆಗೆ ಸ್ಟೆಪ್ಪಿ ಮೈದಾನಗಳಿಗೆ ರಷ್ಯದ ಸಾಮ್ರಾಜ್ಯ ವಿಸ್ತರಿಸಿತು. ಆಟೋಮನ್ ಸಾಮ್ರಾಜ್ಯದೊಂದಿಗೆ ಬಾಲ್ಕನ್ ರಾಜ್ಯಗಳ ವಿಷಯದಲ್ಲಿ ರಷ್ಯ ಸತತವಾಗಿ ಹೋರಾಡಿತು. ರಾಣಿಯ ಆಪ್ತ ವ್ಯಕ್ತಿಯಾಗಿದ್ದ ಜಿ.ಎ.ಪೊಟೊಂಕಿನ್ ಆಗಿನ ಸಾಮ್ರಾಜ್ಯದ ನೀತಿಯನ್ನು ರೂಪಿಸುವಲ್ಲಿ ಪ್ರಮುಖ ನಾಗಿದ್ದನೆಂದು ತಿಳಿದುಬರುತ್ತದೆ. ಸೆನೆಟ್‌ಗೆ ಆಡಳಿತದ ಮೇಲುಸ್ತುವಾರಿಯನ್ನು ವಹಿಸ ಲಾಯಿತು. ಅದು ಮೇಲ್ಮನವಿಯ ಉಚ್ಚನ್ಯಾಯಾಲಯವೂ ಆಗಿತ್ತು. ಈಕೆ ಅಸಾಧಾರಣ ಬೌದ್ಧಿಕ ಮತ್ತು ದೈಹಿಕ ಸಾಮರ್ಥದ ವ್ಯಕ್ತಿಯಾಗಿದ್ದಳು. ಈಕೆ ಪೀಟರ್ ಮಹಾಶಯನಂತೆ ಆಡಳಿತದ ವಿವರಗಳನ್ನು ಖುದ್ದಾಗಿ ಪರಿಶೀಲಿಸುತ್ತಿದ್ದಳು. ಜಮೀನುಗಳ ಹಿಡುವಳಿಗಳನ್ನು ಅಳತೆ ಮಾಡಿಸಿ ಸರಹದ್ದುಗಳನ್ನು ಗುರುತಿಸಲು ಏರ್ಪಾಡು ಮಾಡಿದಳು. ಊಳಿಗಮಾನ್ಯ ಜಮೀನ್ದಾರರಿಗೆ ತಮ್ಮ ಜಮೀನಿನ ಹಕ್ಕುಗಳ ಬಗ್ಗೆ ಪೂರ್ಣ ಒಡೆತನವನ್ನು ಕೊಟ್ಟಳು. ಸ್ಥಳೀಯ ಸಂಸ್ಥೆಗಳಿಗೆ 1785ರಲ್ಲಿ ಒಂದು ರಾಜಾಜ್ಞೆ ಹೊರಡಿಸುವ ಮೂಲಕ ಅಧಿಕಾರ ಕೊಟ್ಟಳು. ಪಟ್ಟಣಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳು ಮೇಲೆದ್ದವು. ನಗರೀಕರಣಕ್ಕೆ ಪ್ರೋತ್ಸಾಹ ಒದಗಿತು.

ಕ್ಯಾಥರಿನ್ ರೈತಾಪಿಗಳ ಜೀತ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಕೆಲವೊಮ್ಮೆ ಜಮೀನ್ದಾರರು ತಮ್ಮ ಜಮೀನುಗಳೊಂದಿಗೆ ಜೀತದಾಳುಗಳನ್ನು ಮಾರುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ವ್ಯವಸಾಯದ ಅಭಿವೃದ್ಧಿ ಕುಂಠಿತವಾಗಿದ್ದುದಲ್ಲದೆ ರೈತ ಗುಲಾಮರ ಸಮಸ್ಯೆ ದೇಶವನ್ನೇ ಕಾಡುತ್ತಿತ್ತು. ಅಸಂತೃಪ್ತರಾದ ರೈತರು ಪೂರ್ವಯುರೋಪಿನಲ್ಲಿ 1773–74ರಲ್ಲಿ ದಂಗೆಯೆದ್ದರು. ಅವರನ್ನು ನಿರ್ದಯವಾಗಿ ಹತ್ತಿಕ್ಕಲಾಯಿತು. ಈ ಸಮಸ್ಯೆ ರಷ್ಯದ ಕ್ರಾಂತಿ ಯವರೆಗೂ ಮುಂದುವರಿದಿದ್ದು ಅಲ್ಲಿನ ಚಕ್ರವರ್ತಿಗಳಿಗೆ ತಮ್ಮ ಪ್ರಾದೇಶಿಕ ವಿಸ್ತರಣೆಯ ಯುದ್ಧಗಳಿಗಾಗಿ ಹಣ ಮತ್ತು ಸಂಪನ್ಮೂಲ ಬೇಕಾಗಿತ್ತು. ವ್ಯವಸಾಯಪ್ರಧಾನ ದೇಶವಾಗಿದ್ದ ರಷ್ಯಕ್ಕೆ ಭೂಮಾಲೀಕರಿಂದ ಹೆಚ್ಚಾಗಿ ಅದು ಒದಗುತ್ತಿತ್ತು. ಆ ಕಾರಣವಾಗಿ ಅವರು ಜೀತದಾಳುಗಳ ಕಡೆಗೆ ಗಮನ ಕೊಟ್ಟು ಭೂಮಾಲೀಕರನ್ನು ಎದುರುಹಾಕಿಕೊಳ್ಳಲು ಮನಸ್ಸು ಮಾಡಲಿಲ್ಲ. ಸ್ವತಃ ಲೇಖಕಿ, ಅನೇಕ ಕಥೆಗಳನ್ನೂ ನಾಟಕಗಳನ್ನೂ ಬರೆದಿದ್ದಾಳೆ. ಈಕೆಯ ಕಾಲದಲ್ಲಿ ಆಧುನಿಕ ರಷ್ಯನ್ ಸಾಹಿತ್ಯ ಬೆಳೆಯಿತು. ಆದರೆ ಈಕೆ ಸಾಹಿತಿಗಳ ಸ್ವಾತಂತ್ರ್ಯವನ್ನು ಸಹಿಸುತ್ತಿರಲಿಲ್ಲ. ಅಲೆಕ್ಸಾಂಡರ್ ರ್‍ಯಾಡಿಷ್ಚೆವ್ ಎಂಬ ಲೇಖಕ ಸೇಂಟ್‌ಪೀಟರ್ಸ್ ಬರ್ಗ್‌ನಿಂದ ಮಾಸ್ಕೋಗೆ ಪ್ರಯಾಣ ಎಂಬ ಕೃತಿಯನ್ನು ಬರೆದು 1790ರಲ್ಲಿ ಪ್ರಕಟಿಸಿದ. ಅದರಲ್ಲಿ ಜೀತದಾಳುಗಳನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದುದ್ದು ಮತ್ತು ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರದ ಬಗ್ಗೆ ಚಿತ್ರಣಗಳಿದ್ದವು. ಈ ಕೃತಿಯನ್ನು ಸಹಿಸದ ಚಕ್ರವರ್ತಿನಿ ಲೇಖಕನನ್ನು ಸೈಬೀರಿಯಕ್ಕೆ ಗಡೀಪಾರು ಮಾಡಿದಳು. ಆತ ರಷ್ಯದ ಬುದ್ಧಿಜೀವಿಗಳಲ್ಲಿ ಹುತಾತ್ಮನಾದ ಮೊದಲ ವ್ಯಕ್ತಿ. ಕ್ಯಾಥರಿನ್ ಸು.1796ರಲ್ಲಿ ನಿಧನಳಾದಾಗ ಈಕೆಯ ಮಗ 1ನೆಯ ಪಾಲ್ (1796–1801) ಸಿಂಹಾಸನಕ್ಕೆ ಬಂದರೂ ಅರಮನೆಯ ಒಳಸಂಚಿಗೆ ಬಲಿಯಾಗಿ ಕೊಲೆಗೀಡಾದ.

19ನೆಯ ಶತಮಾನ (1801–1971) ಹಾಗೂ 20ನೆಯ ಶತಮಾನದ ಎರಡು ದಶಕಗಳು ರಷ್ಯದ ಪಾಲಿಗೆ ಅತ್ಯಂತ ಸ್ಥಿತ್ಯಂತರದ ಕಾಲವಾಗಿ ಪರಿಣಮಿಸಿತು. ಇದು ಅಂತಾರಾಷ್ಟ್ರೀಯ ರಾಜಕೀಯ ವಿದ್ಯಮಾನಗಳಲ್ಲಾಗುತ್ತಿದ್ದ ಕ್ಷಿಪ್ರ ಬೆಳವಣಿಗೆಗಳು ಆಧುನಿಕ ಅಭಿವೃದ್ಧಿಯ ಒತ್ತಡ ಹಾಗೂ ಆಂತರಿಕ ವರ್ಗ ಕ್ಷೋಭೆಗಳಿಗೆ ರಷ್ಯದ ಚಕ್ರವರ್ತಿಗಳು ತೋರಿಸಿದ ಪ್ರತಿಕ್ರಿಯೆ ಇತ್ಯಾದಿಗಳಿಂದ ಕೂಡಿದೆ.

1801–1825ರವರೆಗೂ ಆಳಿದ 1ನೆಯ ಅಲೆಕ್ಸಾಂಡರ್ ನೆಪೋಲಿಯನ್ನನ ಆಕ್ರಮಣಗಳನ್ನು ಎದುರಿಸಬೇಕಾಯಿತು. ನೆಪೋಲಿಯನ್ ರಷ್ಯದ ಪ್ರದೇಶಗಳನ್ನು ಗೆಲ್ಲುತ್ತಾ ಕೊನೆಗೆ ಮಾಸ್ಕೋ ನಗರವನ್ನು ವಶಪಡಿಸಿಕೊಂಡ. ಆದರೆ ರಷ್ಯದ ವಿಸ್ತಾರ ಭೂಭಾಗದಲ್ಲಿ ತನ್ನ ಹತೋಟಿ ಸಾಧಿಸುವುದಾಗಲೀ ಅಲ್ಲಿನ ಚಳಿಯನ್ನು ಅವನ ಸೈನ್ಯ ತಡೆಯುವುದಾಗಲೀ ಸಾಧ್ಯವಾಗದೆ ಹಿಂದಿರುಗಲು ನಿಶ್ಚಯಿಸಿದ. ಅಷ್ಟರಲ್ಲಿ ಸನ್ನದ್ಧವಾಗಿದ್ದ ರಷ್ಯದ ಸೈನ್ಯ ಫ್ರೆಂಚರ ಸೈನ್ಯವನ್ನು ಬೆನ್ನಟ್ಟಿ ಅಪಾರ ಹಾನಿಯುಂಟುಮಾಡಿತು. ಈ ಯುದ್ಧದಲ್ಲಿ ರಷ್ಯ ಸೈನಿಕ ವೆಚ್ಚ ಮಿತಿಮೀರಿ ಆರ್ಥಿಕ ಸ್ಥಿರತೆಗೆ ಧಕ್ಕೆಯಾಯಿತು. ರಷ್ಯದ 1830ರವರೆಗೂ ತುರ್ಕಿಯೂ ಸೇರಿದಂತೆ ಪೂರ್ವ ಯುರೋಪಿನ ದೇಶಗಳೊಡನೆ ಸಣ್ಣಪುಟ್ಟ ಯುದ್ಧಗಳಲ್ಲಿ ಪಾಲ್ಗೊಳ್ಳಬೇಕಾಯಿತು. ಅಲೆಗ್ಸಾಂಡರ್ ಅನೇಕ ಸುಧಾರಣೆಗಳನ್ನು ತರುವ ಮನಸ್ಸುಳ್ಳವನಾಗಿದ್ದರೂ ಎಡೆಬಿಡದ ಯುದ್ಧಗಳು ದೇಶದ ಬಡತನ ಮತ್ತುದೇಶದ ಹೆಚ್ಚು ವಿಸ್ತಾರದಿಂದಾಗಿ ಸುಧಾರಣೆಗೆ ಅವಕಾಶವಾಗಲಿಲ್ಲ.

ಅಲೆಗ್ಸಾಂಡರ್‌ನ ಅನಂತರ 1825ರಲ್ಲಿ ಅಧಿಕಾರಕ್ಕೆ ಬಂದ 1ನೆಯ ನಿಕೋಲಸ್ ಅತ್ಯಂತ ನಿರ್ದಯಿ ಮತ್ತು ಯುದ್ಧಪ್ರಿಯ ಚಕ್ರವರ್ತಿಯಾಗಿದ್ದ. 1855ರವರೆಗೂ 3 ದಶಕ ಗಳಷ್ಟು ದೀರ್ಘಕಾಲ ಆಳಿದ ಇವನು ರಷ್ಯವನ್ನು 3 ಮುಖ್ಯ ಯುದ್ಧಗಳಲ್ಲಿ ತೊಡಗಿಸಿದ. ಅದಕ್ಕೂ ಮೊದಲು ತಾನು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿಯೇ ಅಂದರೆ 1825ರ ಡಿಸೆಂಬರ್‌ನಲ್ಲಿ ಸೇಂಟ್ ಪೀಟರ್ಸ್‌ಬರ್ಗ್ ಸೈನಿಕರ ದಂಗೆಯನ್ನು ಎದುರಿಸಿ ಅಡಗಿಸಿದ್ದ. ಈ ದಂಗೆಯನ್ನು ಹುಟ್ಟುಹಾಕಿದವರು ಮುಂದೆ ಡಿಸೆಂಬರಿಷ್ಟ್ ಎಂಬ ಹೆಸರಿನಿಂದ ಪರಿಚಿತರಾದರು. ಆಗಿನಿಂದ ನಿಷ್ಠುರನಾಗಿ ನಡೆದುಕೊಳ್ಳಲು ಪ್ರಾರಂಭಿಸಿದ ನಿಕೋಲಸ್ ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸಿದ. ಶಂಕಿತರ ಚಲನವಲನಗಳ ಬಗ್ಗೆ ನಿಗಾ ಇಡಲು ಗುಪ್ತಚಾರರನ್ನು ನೇಮಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಿದ.

ಕಡಿಮೆ ವೇತನವನ್ನು ಪಡೆಯುತ್ತಿದ್ದ ಮತ್ತು ಸಾಕಷ್ಟು ಶಿಕ್ಷಣ ಪಡೆಯದ ಸರ್ಕಾರಿ ಸಿಬ್ಬಂದಿ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾಗತೊಡಗಿತು. ನಿಕೋಲಸ್ ಆಡಳಿತವನ್ನು ಕೇಂದ್ರೀಕೃತಗೊಳಿಸಿದಂತೆಲ್ಲ ಅದಕ್ಷತೆ ಮತ್ತು ದ್ರೋಹ ಹೆಚ್ಚಿತು. ಮಂತ್ರಿಮಂಡಲವನ್ನು ನಿರ್ಲಕ್ಷಿಸಿ ಅಧಿಕಾರವನ್ನೆಲ್ಲ ತನ್ನ ಕೈಗೆ ತೆಗೆದುಕೊಂಡು ರಾಜ ಪ್ರಜೆಗಳ ಕುಂದುಕೊರತೆಗಳ ಬಗ್ಗೆ ಕುರುಡಾದ. ಕೈಗಾರಿಕೆಯಲ್ಲಿ ಗಣಿಗಾರಿಕೆಯೊಂದನ್ನುಳಿದು ಇತರ ರಂಗಗಳು ಹಿಂದೆ ಬಿದ್ದವು. ಬಟ್ಟೆ ಗಿರಣಿ ಉದ್ಯಮ ಸ್ವಲ್ಪ ಮಟ್ಟಿನ ಪ್ರಗತಿ ಸಾಧಿಸಿತು. 1851ರಲ್ಲಿ ಮೊದಲ ರೈಲುಮಾರ್ಗ ಸೇಂಟ್ ಪೀಟರ್ಸ್‌ಬರ್ಗ್ ಮತ್ತು ಮಾಸ್ಕೊಗಳ ನಡುವೆ ಪ್ರಾರಂಭವಾಯಿತು.



**ರುವಾರ್ತರ್ ಚರ್ಚ್, ಇಸ್ತಾಂಬುಲ್**

ಅಲೆಗ್ಸಾಂಡರ್, ಪುಷ್ಕಿನ್‌ರಂತಹ ಲೇಖಕರ ಬರೆಹಗಳನ್ನು ಅಧಿಕಾರಶಾಹಿ ಸಂಶಯದಿಂದ ನೋಡತೊಡಗಿತು. ಪ್ಯೆಯಾಟರ್ ಎಂಬ ಲೇಖಕನ ಒಂದು ಪತ್ರದ ಕೆಲವು ಸಾಲುಗಳು ಕೆಳಕಂಡಂತಿವೆ: ರಷ್ಯ ಪಶ್ಚಿಮಕ್ಕೂ ಸೇರಿಲ್ಲ ಪೂರ್ವಕ್ಕೂ ಸೇರಿಲ್ಲ, ಪ್ರಪಂಚದಲ್ಲಿ ಏಕಾಂಗಿಯಾಗುಳಿದು ನಾವು ಪ್ರಪಂಚಕ್ಕೇನೂ ಕೊಡಲಿಲ್ಲ, ಇಂದು ನಾವು ಬೌದ್ಧಿಕ ಪ್ರಪಂಚದಲ್ಲಿ ಒಂದು ಶೂನ್ಯವಾಗಿ ಉಳಿದಿದ್ದೇವೆ. ಇದು ಅಂದಿನ ರಷ್ಯದ ವಾಸ್ತವ ಸ್ಥಿತಿಯಾಗಿದ್ದರೂ ಹೀಗೆ ಬರೆದವನನ್ನು ಚಕ್ರವರ್ತಿ ಹುಚ್ಚನೆಂದು ಕರೆದ. ಜನರ ಆಶೋತ್ತರಗಳನ್ನು ಪ್ರತಿನಿಧಿಸುವ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಸಲಹಾ ಸಭೆಯನ್ನು ಪುನರ್‌ರಚಿಸಲು ಬುದ್ಧಿಜೀವಿಗಳು ಚಕ್ರವರ್ತಿಯನ್ನು ಕೋರಿದರು. ಆದರೆ ಈ ಕೋರಿಕೆಯನ್ನು ರಾಜ ತಿರಸ್ಕರಿಸಿದ.

ರಷ್ಯ ತನ್ನ ಸಾಮರ್ಥ್ಯವನ್ನು ಮೀರಿ ವಿಸ್ತರಿಸಿಕೊಳ್ಳುತ್ತಲೇ ಇತ್ತು. 1801ರಲ್ಲಿ ಕಾಕಸಸ್‌ನ ಜಾರ್ಜಿಯಾವನ್ನು 1840ರಲ್ಲಿ, ಕಜûಕ್‌ಸ್ತಾನವನ್ನು ಮತ್ತು 1849ರಲ್ಲಿ ಅಲಾಸ್ಕ ಜಲಸಂಧಿಯ ವರೆಗಿನ ಪ್ರದೇಶವನ್ನು ಸೇರ್ಪಡೆ ಮಾಡಿಕೊಂಡಿತು. 1813ರಲ್ಲಿ ಪರ್ಷಿಯನ್ ಬಾಕು ಪರ್ಯಾಯ ದ್ವೀಪ ಸೇರಿದಂತೆ ಅಜರ್‌ಬೈಜಾನ್ ಪ್ರದೇಶವನ್ನು ರಷ್ಯಕ್ಕೆ ಒಪ್ಪಿಸಿತು. ನಿಕೋಲಸನು ಪ್ರಷ್ಯದ ರಾಜಕುಮಾರಿಯನ್ನು ವಿವಾಹವಾದುದರಿಂದ ಅದು ಮಹತ್ತ್ವದ ರಾಜಕೀಯ ಪರಿಣಾಮವನ್ನು ಉಂಟುಮಾಡಿತು. 1828ರಲ್ಲಿ ತುರ್ಕಿಯ ಮೇಲೆ ಆಕ್ರಮಣ ನಡೆಸಿ ಅದರ ರಾಜಧಾನಿಯವರೆಗೂ ಮುನ್ನುಗ್ಗಿ ಸುಲ್ತಾನನಿಂದ ಬಲಾತ್ಕಾರವಾಗಿ ಒಪ್ಪಂದಕ್ಕೆ ಸಹಿ ಹಾಕಿಸಿಕೊಳ್ಳಲಾಯಿತು. ತುರ್ಕಿ ಸಾಮ್ರಾಜ್ಯದ ಕೆಲವು ಪ್ರದೇಶಗಳ ಮೇಲೆ ರಷ್ಯದ ಪಾಲಕತ್ವವನ್ನು ಹೇರಲಾಯಿತು. ಗ್ರೀಸ್‌ಗೆ ಸ್ವಾತಂತ್ರ್ಯ ಕೊಡಲು ತುರ್ಕಿ ಒಪ್ಪಿತು. 1836ರಲ್ಲಿ ಪೋಲೆಂಡಿನ ದಂಗೆಯನ್ನು ಅಡಗಿಸಲಾಯಿತು. 1849ರಲ್ಲಿ ಆಸ್ಟ್ರಿಯದ ವಿರುದ್ಧ ಹಂಗೇರಿಯನ್ನರು ನಡೆಸಿದ ದಂಗೆಯನ್ನು ಹತ್ತಿಕ್ಕಲು ರಷ್ಯ ಅವರಿಗೆ ನೆರವಾಯಿತು.

1854–1856ರವರೆಗೂ ನಡೆಸಿದ ಕ್ರಿಮಿಯ ಯುದ್ಧ ರಷ್ಯ ಸಾಮ್ರಾಜ್ಯದ ಬಂಡವಾಳವನ್ನು ಬಯಲು ಮಾಡಿತು. ರಷ್ಯದ ಒತ್ತಡ ಮತ್ತು ಆಕ್ರಮಣ ನೀತಿಯನ್ನು ಸಹಿಸದ ತುರ್ಕಿ 1853ರಲ್ಲಿ ಅದರ ಮೇಲೆ ಯುದ್ಧ ಸಾರಿತು. ರಷ್ಯದ ಪ್ರಾದೇಶಿಕ ದಾಹವನ್ನು ತಡೆಯಲು ಅದರ ವಿರುದ್ಧ 1854ರಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳು, 1855ರಲ್ಲಿ ಸಾರ್ಡೀನಿಯವೂ ತುರ್ಕಿಯ ಪರವಾಗಿ ಯುದ್ಧರಂಗ ಪ್ರವೇಶಿಸಿತು. ಕ್ರಿಮಿಯ ಪರ್ಯಾಯ ದ್ವೀಪದಲ್ಲಿ

ನಡೆದ ಈ ಯುದ್ಧದಲ್ಲಿ ಸೋತ ರಷ್ಯ 1856ರಲ್ಲಿ ಪ್ಯಾರಿಸ್ ಒಪ್ಪಂದಕ್ಕೆ ಸಹಿಹಾಕಿ ಆಕ್ರಮಿಸಿಕೊಂಡಿದ್ದ ಟರ್ಕಿಯ ಭೂಭಾಗವನ್ನು ತೆರವು ಮಾಡಬೇಕಾಯಿತು. ಕ್ರಿಮಿಯ ಯುದ್ಧದ ಅನಂತರ 1917ರವರೆಗೆ ರಷ್ಯವನ್ನು ಮೂವರು ಚಕ್ರವರ್ತಿಗಳು ಆಳಿದರು. 2ನೆಯ ಅಲೆಕ್ಸಾಂಡರ್ (1855–81) 3ನೆಯ ಅಲೆಕ್ಸಾಂಡರ್ (1881–94) ಮತ್ತು 2ನೆಯ ನಿಕೋಲಾಸ್ (1894–1917)–ಇವರುಗಳ ಕಾಲದಲ್ಲಿ ರಷ್ಯ ಸಾಮಾಜಿಕವಾಗಿ ಅತೃಪ್ತಿ, ಹತಾಶೆ ಮತ್ತು ರೋಷಗಳ ಆಗರವಾಗಿದ್ದಿತು. ಆದರೆ ಸಾಮ್ರಾಜ್ಯವಾದಿಗಳೂ ವಿಸ್ತರಣಾದಾಹಿಗಳೂ ನಿರಂಕುಶರೂ ಆಗಿದ್ದ ಈ ಚಕ್ರವರ್ತಿಗಳು ರಷ್ಯವನ್ನು ಯುದ್ಧದಿಂದ ಯುದ್ಧಕ್ಕೆ ಬಿಕ್ಕಟ್ಟಿನಿಂದ ಮತ್ತೆ ಬಿಕ್ಕಟ್ಟಿಗೆ ದೂಡಿದರು.

ದುರ್ಬಲವಾಗಿದ್ದ ಚೀನವನ್ನು ತನ್ನ ಅಧಿಕಾರದ ಕಕ್ಷೆಯಲ್ಲಿ ಸೇರಿಸಿಕೊಳ್ಳಬೇಕೆಂಬ ಮಹದಾಸೆಯಿಂದ ರಷ್ಯ 19ನೆಯ ಶತಮಾನದಲ್ಲಿ ನಿರಂತರವಾಗಿ ಪೆಸಿಫಿಕ್ ಸಾಗರದ ಕಡೆಗೆ ಅತಿಕ್ರಮಣ ಮಾಡತೊಡಗಿತು. ಇದರ ಪರಿಣಾಮವಾಗಿ ಮಂಚೂರಿಯದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿತು. 1860ರಲ್ಲಿ ಚೀನ ಮತ್ತು ರಷ್ಯಗಳ ನಡುವೆ ಒಪ್ಪಂದ ಏರ್ಪಟ್ಟು ಚೀನಕ್ಕೆ ರಷ್ಯ ಅಮೂರ್ ನದಿಯ ಉತ್ತರಭಾಗ ಮತ್ತು ಉಸುರೀ ನದಿಯ ಪೂರ್ವಭಾಗ ಬಿಟ್ಟುಕೊಟ್ಟಿತು. 1864ರ ಹೊತ್ತಿಗೆ ಕಕೇಷಿಯನ್ನರನ್ನು ನಿಗ್ರಹಿಸಲಾಯಿತು. ರಷ್ಯ ಮತ್ತು ಅಮೆರಿಕಗಳು ಅಲಾಸ್ಕ ದ್ವೀಪಗಳ ಮೇಲೆ ಒಡೆತನ ಹೊಂದಿದವು. 1877ರಲ್ಲಿ ರಷ್ಯ ಟರ್ಕಿಯ ಮೇಲೆ ಯುದ್ಧ ಸಾರಿತು. ಕದನದ ತರುವಾಯ ಟರ್ಕಿಯ ಬಲ್ಗೇರಿಯ ರಾಜ್ಯವನ್ನು ರಚಿಸಿ ಸ್ವತಂತ್ರಗೊಳಿಸಲು ಒಪ್ಪಿಕೊಂಡಿತು.

1890ರ ದಶಕದಲ್ಲಿ ಸರ್ಕಾರ ರಷ್ಯೀಕರಣ ನೀತಿಯನ್ನು ಅನುಸರಿಸಿತು. ರಷ್ಯ ವಶಪಡಿಸಿ ಕೊಂಡಿದ್ದ ವಿಸ್ತಾರ ಭೂಭಾಗಗಳ ಜನಸಮುದಾಯಗಳು ಜ಼ಾರ್ ಚಕ್ರವರ್ತಿಗೆ ನಿಷ್ಠೆ ತೋರಿಸಿದರಷ್ಟೇ ಸಾಲದು ಅವು ರಷ್ಯೀಕರಣಗೊಳ್ಳಬೇಕೆಂಬುದು ಪ್ರಭುತ್ವದ ಇಚ್ಛೆಯಾಗಿತ್ತು. ಜರ್ಮನ್ ಮೂಲದ ಜನರು ಮತ್ತು ಬಾಲ್ಟಿಕ್ ಪ್ರದೇಶದ ಜನರಿಗೆ ಕಲಿಸುತ್ತಿದ್ದ ಪ್ರೌಢಶಾಲೆಗಳಲ್ಲಿ ರಷ್ಯನ್ ಭಾಷೆಯನ್ನು ಕಡ್ಡಾಯಗೊಳಿಸಲಾಯಿತು. ಈ ರಷ್ಯೀಕರಣ ನೀತಿಯಿಂದ ರೊಚ್ಚಿಗೆದ್ದ ಫಿನ್ಲೆಂಡಿನ ಭಯೋತ್ಪಾದಕರು ರಷ್ಯದ ಗವರ್ನರ್ ಜನರಲ್‌ನನ್ನು ಕೊಲೆ ಮಾಡಿದರು. ಆರ್ಮೇನಿಯನ್ನರು ತಮ್ಮ ಚರ್ಚ್ ಮತ್ತು ಶಾಲೆಗಳ ವ್ಯವಸ್ಥೆಯಲ್ಲಿ ರಷ್ಯ ಹಸ್ತಕ್ಷೇಪ ಮಾಡುವುದನ್ನು ವಿರೋಧಿಸಿದರು. ಹಾಗೇ ಕ್ರೈಸ್ತ ಮತ್ತು ಮುಸ್ಲಿಂ ಗುರುಗಳು ತಮ್ಮ ತಮ್ಮ ಮತಕ್ಕೆ ಇತರೇ ಗುಂಪುಗಳನ್ನು ಸೆಳೆಯಲಾರಂಭಿಸಿದರು. ಯಹೂದಿಗಳಿಗೆ ವಿವಿಧ ರೀತಿಯಲ್ಲಿ ತೊಂದರೆಯಾಗುವಂತಹ ಕಾನೂನುಗಳನ್ನು ರಚಿಸಲಾಯಿತು.

**ಜಪಾನ್‌ನೊಂದಿಗೆ ಯುದ್ಧ (1904–05):** 1896ರಲ್ಲಿ ಚೀನದೇಶ ರಷ್ಯಕ್ಕೆ ಪೆಸಿಫಿಕ್ ಬಂದರಾದ ವ್ಲಾಡಿವೋಸ್ಟಾಕ್‌ಗೆ ರೈಲುದಾರಿ ನಿರ್ಮಿಸಲು ಅನುಮತಿ ನೀಡಿತು. 2 ವರ್ಷಗಳ ತರುವಾಯ ರಷ್ಯ ಲಿಯೆಡುನ್ ಪರ್ಯಾಯ ದ್ವೀಪದಲ್ಲಿ ಡೈರನ್ ಮತ್ತು ಆರ್ಥರ್ ಎಂಬಲ್ಲಿ ಬಂದರುಗಳನ್ನು ನಿರ್ಮಿಸಿತು. ಮಂಚೂರಿಯ ಮತ್ತು ಕೊರಿಯಗಳಲ್ಲಿ ತನ್ನ ಹಿತಾಸಕ್ತಿಗಳನ್ನು ಬೆಳೆಸಿಕೊಂಡಿದ್ದ ಜಪಾನ್ 1894–95ರಲ್ಲಿ ಚೀನವನ್ನು ಸೋಲಿಸಿ ಅದರಿಂದ ಹೆಚ್ಚಿನ ಸವಲತ್ತುಗಳನ್ನು ಪಡೆದಿತ್ತು. ಅದು ಈ ವಲಯದಲ್ಲಿ ರಷ್ಯದ ಆಕಾಂಕ್ಷೆಗಳಿಗೆ ಕಡಿವಾಣ ಹಾಕಲು ಅದರ ಮೇಲೆ ಯುದ್ಧ ಸಾರಿತು. 1904–05ರಲ್ಲಿ ನಡೆದ ಯುದ್ಧದಲ್ಲಿ ರಷ್ಯ ಸೋಲನ್ನೊಪ್ಪಿಕೊಳ್ಳಬೇಕಾಯಿತು. ಪೋರ್ಟ್ಸ್‌ಮೌತ್ ಒಪ್ಪಂದದ (1905) ಪ್ರಕಾರ ರಷ್ಯ ಕೊರಿಯದ ಮೇಲಿನ ತನ್ನ ವಶದಲ್ಲಿ ಮಂಚೂರಿಯ ರೈಲು ಮಾರ್ಗದ ಮೇಲಿನ ಅಧಿಕಾರ ಗಳನ್ನು ಜಪಾನಿಗೆ ಬಿಟ್ಟುಕೊಟ್ಟಿತು. ಸಖಾನ್ ದ್ವೀಪದ ದಕ್ಷಿಣ ಭಾಗಗಳು ಜಪಾನಿನ ವಶವಾದವು.

1860ರ ದಶಕದಲ್ಲಿ ರಷ್ಯದಲ್ಲಿ ಕ್ರಾಂತಿಕಾರಿ ಗುಂಪುಗಳು ಕಂಡುಬಂದವು. ಕಾರಣ ವ್ಯವಸಾಯದಲ್ಲಿ ಜೀತ ಪದ್ಧತಿಯ ಮುಂದುವರಿಕೆ, ವಿದ್ಯಾವಂತರಿಗೆ ಉದ್ಯೋಗಾವಕಾಶಗಳ ಕೊರತೆ, ನಿರಂಕುಶ ಪ್ರಭುತ್ವದಿಂದಾಗಿ ಬುದ್ಧಿಜೀವಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ, ವಿವಿಧ ಭಾಷೆ ಮತ್ತು ಸಂಸ್ಕೃತಿಯನ್ನು ಮತ್ತು ಸಮುದಾಯಗಳ ಮೇಲೆ ಒತ್ತಾಯವಾಗಿ ರಷ್ಯನ್ ಸಂಸ್ಕೃತಿಯನ್ನು ಮತ್ತು ಅಧಿಕಾರವನ್ನು ಹೇರುತ್ತಿದ್ದದ್ದು, ಶತಮಾನಗಳ ಕಾಲದಿಂದಲೂ ಆಳರಸರು ವ್ಯವಸಾಯ ಭೂಮಿಯನ್ನು ಶ್ರೀಮಂತ ಜಮೀನ್ದಾರರ ಕೈಗೊಪ್ಪಿಸಿ ದುಡಿಯುವ ಮಾರ್ಗವನ್ನು ಶೋಷಿಸಲು ಅವಕಾಶ ಕೊಟ್ಟಿದ್ದು, ವ್ಯವಸಾಯದ ಹಿಂದುಳಿದಿರುವಿಕೆಗೆ ಮತ್ತು ದೇಶದಲ್ಲಿನ ಜನರ ಬಡತನಕ್ಕೆ ಬಹಳಷ್ಟು ಕಾರಣವಾಗಿತ್ತು.

ಕ್ರಿಮಿಯ ಯುದ್ಧದಲ್ಲಿ ರಷ್ಯ ಸೋತ ಮೇಲೆ ಈ ದೋಷಗಳ ಬಗ್ಗೆ ಗಮನ ಹರಿಸಿದ 2ನೆಯ ಅಲೆಕ್ಸಾಂಡರ್ ಕೆಲವೊಂದು ಸುಧಾರಣೆಗಳನ್ನು ಕೈಗೊಳ್ಳಲು ಮುಂದಾಗಿ 1861ರಲ್ಲಿ ವ್ಯವಸಾಯ ಜೀತಪದ್ಧತಿಯನ್ನು ರದ್ದುಪಡಿಸಲು ಒಂದು ಕಾರ್ಯಕ್ರಮ ಪ್ರಕಟಿಸಿದ. ಅದರಂತೆ ಜೀತದಾಳುಗಳನ್ನು ಗುಲಾಮ ಸ್ಥಾನದಿಂದ ಮುಕ್ತಗೊಳಿಸಲಾಯಿತು. ಆದರೆ ಅವರು ಭೂಮಾಲೀಕರಿಗೆ ಹೆಚ್ಚಿನ ಬೆಲೆ ನೀಡಿ ತಮ್ಮ ಜಮೀನುಗಳನ್ನು ಉಳಿಸಿಕೊಳ್ಳಬೇಕಾಗಿತ್ತು. ರೈತರ ಫಲವತ್ತಾದ ಜಮೀನಿನ ಬದಲು ಅವರಿಗೆ ತುಂಡು ಜಮೀನುಗಳು ಮಾತ್ರ ದೊರಕಿದವು. ಒಟ್ಟಿನಲ್ಲಿ ಬಡರೈತರ ಜೀವನಮಟ್ಟ ಉತ್ತಮವಾಗಲಿಲ್ಲ.

ಬುದ್ಧಿಜೀವಿ ವರ್ಗಗಳು ಸಂವಿಧಾನ ಸಭೆ ರಚಿಸಲು ಒತ್ತಾಯಿಸಿದವು. 1866ರಲ್ಲಿ ಜ಼ಾರ್ ಚಕ್ರವರ್ತಿಯ ಹತ್ಯೆಗಾಗಿ ಪ್ರಯತ್ನ ನಡೆಯಿತು. ಸರ್ಕಾರ ಸ್ವಲ್ಪ ಮಟ್ಟಿಗೆ ಎಚ್ಚೆತ್ತು ಕೊಂಡಿತು. 1870ರಲ್ಲಿ ಪ್ರಮುಖ ನಗರಗಳಲ್ಲಿ ಸೀಮಿತ ಚುನಾವಣೆಗಳಿಂದ ಆಯ್ಕೆಯಾಗುವ ಪುರಸಭೆಯನ್ನು ರಚಿಸಿತು. 1874ರಲ್ಲಿ ಸೈನ್ಯದಲ್ಲೂ ಸುಧಾರಣೆ ತರಲಾಯಿತು. ಗ್ರಾಮಗಳಲ್ಲಿ ಜೆಮ್‌ಸ್ಟೊವ್ ಎಂಬ ಸಮಿತಿಯನ್ನು ರಚಿಸಿ ಜನರ ಕುಂದುಕೊರತೆಯನ್ನು ಕೇಳಲು ನಾಗರಿಕ ಸೌಕರ್ಯಗಳನ್ನು ಒದಗಿಸಲು ಒಂದು ವೇದಿಕೆ ಕಲ್ಪಿಸಲಾಯಿತು. ಆದರೆ ಪಾಶ್ಚಿಮಾತ್ಯ ಸಮಾಜವಾದಿ ವಿಚಾರಗಳಿಂದ ಪ್ರಭಾವಿತರಾಗಿದ್ದ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿದ್ದ ಯುವಕರು ಇದರಿಂದ ತೃಪ್ತರಾಗಲಿಲ್ಲ. 1873–74ರ ಹೊತ್ತಿಗೆ ವಿಶ್ವವಿದ್ಯಾಲಯ ಗಳ ವಿದ್ಯಾರ್ಥಿಗಳು ತಂಡಗಳನ್ನು ಕಟ್ಟಿಕೊಂಡು ಸಂಘಟಿತರಾದರು. ಈ ತಂಡಗಳಲ್ಲಿ ಮಹಿಳೆಯರೂ ಇದ್ದರು. ಅವರು ಹಳ್ಳಿಗಳಿಗೆ ಹೋಗಿ ಜನರನ್ನು ಎಚ್ಚರಿಸತೊಡಗಿದರು. ಪ್ರಗತಿಪರ ಯುವಕರನ್ನು ಪೋಲೀಸರು ಬಂಧಿಸಿದರು. 1881 ಮಾರ್ಚ್ 13ರಂದು 2ನೆಯ ಅಲೆಕ್ಸಾಂಡರ್ ಚಕ್ರವರ್ತಿಯ ಕೊಲೆಯಾಯಿತು. ಈ ಕೃತ್ಯಕ್ಕಾಗಿ ಐವರನ್ನು ಗಲ್ಲಿಗೇರಿಸಲಾಯಿತು.

3ನೆಯ ಅಲೆಕ್ಸಾಂಡರ್‌ನ ಒಳಾಡಳಿತ ಮಂತ್ರಿ ಡಿಮಿಟ್ರಿ ಟಾಲ್‌ಸ್ಟಾಯ್ ಪ್ರತಿಗಾಮಿ ಕ್ರಮಗಳನ್ನು ಕೈಗೊಂಡ. ಗ್ರಾಮಾಂತರ ಪ್ರದೇಶಗಳಲ್ಲಿ ರಚಿಸಿದ್ದ ಜೆಮ್‌ಸ್ಟೊವ್ ಎಂಬ ಸಮಿತಿಗಳ ಅಧಿಕಾರಗಳನ್ನು ಇವನು ಕುಂಠಿತಗೊಳಿಸಿದ. 1889ರಲ್ಲಿ ಗ್ರಾಮಗಳ ವ್ಯವಹಾರಗಳನ್ನು ನಿರ್ವಹಿಸಲು ಸ್ಥಳೀಯ ಅಧಿಕಾರಿಗಳನ್ನು ನೇಮಿಸಲಾಯಿತು. ನ್ಯಾಯಾಧೀಶ ಹುದ್ದೆಗೆ ಇದ್ದ ಚುನಾವಣಾ ಪದ್ಧತಿಯನ್ನು ಕೈಬಿಡಲಾಯಿತು. ಸರ್ಕಾರಿ ನೌಕರರು ಬಡಜನರ ಬಗ್ಗೆ ಕೀಳು ಭಾವನೆ ಬೆಳೆಸಿಕೊಂಡರು. ಡಿಮಿಟ್ರಿಯ ದಮನಕಾರಿ ನೀತಿಯಿಂದಾಗಿ ಜನಸಾಮಾನ್ಯರು ಉರಿದೆದ್ದರು. 2ನೆಯ ನಿಕೋಲಸ್ (1894–1917) ಅಧಿಕಾರಕ್ಕೆ ಬಂದ ಮೇಲೆ ಉಗ್ರಗಾಮಿ ಚಟುವಟಿಕೆಗಳು ತೀವ್ರರೂಪ ತಾಳಿದವು. ಸಲಹಾ ಸಮಿತಿ ರಚಿಸುವುದೂ ಸೇರಿದಂತೆ ಎಲ್ಲ ಸುಧಾರಣೆಗಳಿಗೂ ನಿಕೋಲಸ್ ತಣ್ಣೀರೆರಚಿದ. 1877–1905ರ ಅವಧಿಯಲ್ಲಿ 4 ಕೋಟಿ ಹೆಕ್ಟೇರ್ ಭೂಮಿ ಭೂಒಡೆಯರಾದ ಗೇಣಿದಾರರಿಗೆ ಹಸ್ತಾಂತರವಾದರೂ ಅದರಲ್ಲಿ ಹೆಚ್ಚಿನದು ಗೇಣಿದಾರರು ಖರೀದಿಸಿದ್ದಾಗಿತ್ತು. ವ್ಯವಸಾಯ ಪದ್ಧತಿ ಮತ್ತು ಉತ್ಪಾದನೆಗಳೆರಡೂ ಹಿಂದೆ ಬಿದ್ದಿದ್ದವು. ಜನಸಂಖ್ಯೆ ಹೆಚ್ಚಳ; ಕಾರ್ಮಿಕರ ಅಧಿಕ ಲಭ್ಯತೆ ಉಂಟಾಗಿತ್ತು. ಇದು ಭೂಮಿಯ ಮರು ಹಂಚಿಕೆಗೆ ಬೇಡಿಕೆ ಮುಂದಿಡಲು ವಿವಿಧ ಕ್ರಾಂತಿಕಾರಿ ಸಂಘಟನೆಗಳಿಗೆ ಪ್ರೇರಣೆಯಾಯಿತು. ಕೈಗಾರಿಕಾ ಕ್ಷೇತ್ರದಲ್ಲಿ ಕಬ್ಬಿಣ ಮತ್ತು ಯುದ್ಧ ಸಾಮಾಗ್ರಿಗಳ ತಯಾರಿಕಾ ಘಟಕಗಳು ಅಭಿವೃದ್ಧಿಗೊಂಡರೂ ಕಾರ್ಮಿಕರು ಕನಿಷ್ಠ ಸಂಬಳದಲ್ಲಿ ಕೆಲಸ ಮಾಡಬೇಕಾಗಿತ್ತು. ಸರ್ಕಾರದ ಸುಂಕ ನೀತಿಯಿಂದಾಗಿ ಮತ್ತು ಲೋಹ ವಸ್ತುಗಳನ್ನು ಹೆಚ್ಚಿನ ಬೆಲೆಕೊಟ್ಟು ಸರ್ಕಾರ ಖರೀದಿಸುತ್ತಿದ್ದುದರಿಂದ ವರ್ತಕ ಸಮುದಾಯ ಶೀಘ್ರವಾಗಿ ಅನುಕೂಲ ಸ್ಥಿತಿಗೆ ಬಂದಿತು. ವರ್ತಕರು ಮತ್ತು ಕೈಗಾರಿಕೋದ್ಯಮಿಗಳು ನಿರಂಕುಶ ಪ್ರವೃತ್ತಿಯನ್ನು ಬೆಳೆಸಿಕೊಂಡರು. ಇದು ಜನಸಾಮಾನ್ಯರಲ್ಲಿ ನಗರಗಳ ಶ್ರೀಮಂತ ವರ್ಗದ ಬಗ್ಗೆ ಜಿಗುಪ್ಸೆ ಹುಟ್ಟಲು ಕಾರಣವಾಯಿತು.

19ನೆಯ ಶತಮಾನದ ರಷ್ಯನ್ ಸಾಹಿತ್ಯ ಸಾಮ್ರಾಜ್ಯಶಾಹಿ ವಿರೋಧಿ ಭಾವನೆ ಜನರಲ್ಲಿ ಮನೆಮಾಡಲು ನೆರವು ನೀಡಿತು. ಟಾಲ್‌ಸ್ಟಾಯ್, ದಾಸ್ತಾಯೆವ್‌ಸ್ಕಿ, ಅಲೆಗ್ಸಾಂಡರ್ ಬ್ಲಾಕ್ ಮತ್ತಿತರ ಆ ಕಾಲದ ಪ್ರಮುಖ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಬರೆದರು. ಜೀವನದ ಸಂಕಷ್ಟಗಳನ್ನು ಚಿತ್ರಿಸಿದರು. ಬುದ್ಧಿಜೀವಿಗಳ ವರ್ಗದಿಂದ ಅಸಂಖ್ಯಾತ ವೃತ್ತಿಪರ ಕ್ರಾಂತಿಕಾರರು ಉದಯಿಸಿದರು. ನಾಗರಿಕ ಹಕ್ಕುಗಳನ್ನು ನಿರ್ಬಂಧಿಸಿದ್ದರಿಂದ ಮತ್ತು ರಾಜಕೀಯ ಪಕ್ಷಗಳನ್ನು ನಿಷೇಧಿಸಿದ್ದರಿಂದ ಸಮಾಜವಾದಿಗಳು ಅನ್ಯ ಮಾರ್ಗಗಳ ಮೂಲಕ ಸಂಘಟಿತರಾಗುವುದು ಅಗತ್ಯವಾಯಿತು.

19ನೆಯ ಶತಮಾನದ ಮಧ್ಯ ಭಾಗದಲ್ಲಿ ಕಾರ್ಲ್‌ಮಾರ್ಕ್ಸ್ ಸಮಾಜವಾದಕ್ಕೆ ಒಂದು ತೀವ್ರ ಸ್ವರೂಪದ ಸಿದ್ಧಾಂತ ಸೇರಿಸಿ ಬಂಡವಾಳಶಾಹಿ ವ್ಯವಸ್ಥೆ ಕಿತ್ತುಹಾಕಿ ಕಾರ್ಮಿಕ ವರ್ಗದ ಪ್ರಭುತ್ವ ಸ್ಥಾಪಿಸುವುದರಿಂದ ಸರ್ವಜನರ ಕಲ್ಯಾಣ ಸಾಧ್ಯವೆಂದು ಪ್ರತಿಪಾದಿಸಿದ. ಎಂಗೆಲ್ಸ್ ಕೂಡ ತಮ್ಮದು ಮಾತ್ರ ವಾಸ್ತವ ಸಮಾಜವಾದವೆಂದು ಉಳಿದವರದು ಕಾಲ್ಪನಿಕ ಸಮಾಜವಾದವೆಂದು ಮಾರ್ಕ್ಸ್‌ನ ಸಮಾಜವಾದವನ್ನು ಪ್ರಚುರಪಡಿಸಿದ. ಇವರ ಈ ಸಮತಾವಾದದ ಸಿದ್ಧಾಂತ ಶೋಷಿತ ವರ್ಗದ ನಾಯಕತ್ವ ಹೊಂದಿದ್ದ ಬುದ್ಧಿಜೀವಿಗಳಿಗೆ ಹೊಸ ಆಶಾಕಿರಣವಾಯಿತು.

ರಷ್ಯ ಇಂತಹ ಕ್ರಾಂತಿಗೆ ಹೇಳಿಮಾಡಿಸಿದಂತಹ ವೇದಿಕೆ ಒದಗಿಸಿತು. ಅಲ್ಲಿನ ಪ್ರಭುತ್ವ ಜನಸಾಮಾನ್ಯರಿಂದ ದೂರ ಉಳಿದು ಅವರ ದ್ವೇಷಕ್ಕೆ ಪಕ್ಕಾಗಿತ್ತು. ವರ್ತಕರು, ಭೂ ಒಡೆಯರು ಜನರ ಕೆಂಗಣ್ಣಿಗೆ ಗುರಿಯಾಗಿದ್ದರು. 1902ರಿಂದ ಲೆನಿನ್ ಎಂದು ಹೆಸರಾದ ವ್ಲಾದಿಮಿರ್ ಇಲಿಚ್ ಉಲ್ಯನೊವ್ ಮತ್ತು ಇತರರ ನೇತೃತ್ವದಲ್ಲಿ ಕ್ರಾಂತಿಕಾರಿ ಸಂಘಗಳು 1902ರಿಂದ ಹುಟ್ಟಿಕೊಂಡವು. 1901ರಲ್ಲಿ ಹುಟ್ಟಿದ ಸಮಾಜವಾದಿ ಕ್ರಾಂತಿಕಾರಿಗಳ ಸಂಸ್ಥೆಯ ಸದಸ್ಯರು ಗ್ರಾಮಮಟ್ಟದಲ್ಲಿ ಗುಪ್ತವಾಗಿ ಕಮ್ಯೂನಿಸಂ ಅಂದರೆ ಕಾರ್ಮಿಕರ ಭೂ ಒಡೆತನದ ಬಗ್ಗೆ ಪ್ರಚುರಪಡಿಸಿದರು. 1898ರಲ್ಲಿ ಸ್ಥಾಪಿತವಾಗಿದ್ದ ಸಮಾಜವಾದಿ ಪ್ರಜಾಪ್ರಭುತ್ವವಾದಿಗಳಲ್ಲಿ ಎರಡು ಗುಂಪು ಹುಟ್ಟಿಕೊಂಡಿತು. ಲೆನಿನ್ನನ ಗುಂಪಿನವರು ಬೋಲ್ಶೆವಿಕ್ ಪಕ್ಷದವರೆಂದೂ ಉಳಿದವರು ಮೆನ್ಷೆವಿಕ್ ಪಕ್ಷವೆಂದೂ ಕರೆದುಕೊಂಡರು. ಲೆನಿನ್ ರೈತರನ್ನು ಸಂಘಟಿಸುವಲ್ಲಿ ಮತ್ತು ಪಕ್ಷದಲ್ಲಿ ಶಿಸ್ತು ಸಂಯಮಗಳನ್ನು ಮೂಡಿಸುವಲ್ಲಿ ಕಾರ್ಯಶೀಲನಾದ. ರಷ್ಯದ ಸೈನ್ಯಗಳು ಜಪಾನಿನ ಕೈಯಲ್ಲಿ ದಯನೀಯವಾಗಿ ಸೋತದ್ದು ಮತ್ತು ಬಾಲ್ಟಿಕ್ ಪ್ರದೇಶದಲ್ಲಿ ಅದರ ನೌಕಾದಳ ನಾಶವಾದದ್ದು ಸಾರ್ವಜನಿಕರು ಸರ್ಕಾರವನ್ನು ಹೀನಾಯವಾಗಿ ಕಾಣಲು

ಅವಕಾಶ ಕಲ್ಪಿಸಿತು. ಜನರಲ್ಲಿ ಹುಟ್ಟಿದ ಅಸಮಾಧಾನ ಪ್ರತಿಭಟನಾರೂಪದಲ್ಲಿ ಸ್ಫೋಟಗೊಂಡಿತು. ಸರ್ಕಾರ ಘೋಷಿಸಿದ್ದ ಕಾರ್ಮಿಕ ಸಂಘಗಳ ಸಕ್ರಿಯ ಸದಸ್ಯನಾಗಿದ್ದ ಜಾರ್ಜಿ ಗಪಾನನ ನೇತೃತ್ವದಲ್ಲಿ 1905 ಜನವರಿ 22ರಂದು ಹೊರಟ ಒಂದು ದೊಡ್ಡ ಗುಂಪು ಚಳಿಗಾಲದ ಅರಮನೆಯ ಮುಂದಿನ ವೃತ್ತದತ್ತ ನಡೆಯಿತು. ಆಗ ನಡೆದ ಗೋಲಿಬಾರ್‌ನಲ್ಲಿ ನೂರಾರು ಜನ ಸತ್ತರು ಮತ್ತು ಗಾಯಗೊಂಡರು. ಮುಂದೆ ಮುಷ್ಕರಗಳು, ಪ್ರತಿಭಟನೆಗಳು, ಬೀದಿ ಹೋರಾಟಗಳು, ರೈತ ದಂಗೆಗಳು, ಸೈನ್ಯ ಮತ್ತು ನೌಕಾಪಡೆಗಳಲ್ಲಿ ದಂಗೆಗಳು ನಡೆಯತೊಡಗಿದವು. ವಿಶೇಷವಾಗಿ ರಷ್ಯನ್ನರು ಕಡಿಮೆ ಇರುವ ಪೋಲೆಂಡ್, ಲಾತ್ವಿಯ, ಜಾರ್ಜಿಯ, ಉಕ್ರೇನ್ ಮತ್ತು ಅಜರ್‌ಬೈಜಾನ್‌ಗಳಲ್ಲಿ ಈ ಚಳವಳಿಗಳು ನಡೆದುವು. ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಕಾರ್ಮಿಕರ ಸೋವಿಯತ್ ರಚಿತವಾಯಿತು.

ಈ ಗಲಭೆಗಳಿಗೆ ಅಂಜಿದ ಚಕ್ರವರ್ತಿ ಡೂಮಾ ಎಂಬ ರಾಷ್ಟ್ರೀಯ ಸಂಸತ್ತನ್ನು ರಚಿಸಿದ. ಇದಕ್ಕೆ 1906ರಲ್ಲಿ ಚುನಾವಣೆ ನಡೆದು ಅದರಲ್ಲಿ ಎಡಪಂಥೀಯರು ಹೆಚ್ಚಾಗಿ ಚುನಾಯಿತರಾದರು. ಸಮಾಜವಾದಿ ಕ್ರಾಂತಿಕಾರಿಗಳು ಈ ಚುನಾವಣೆಯನ್ನು ಬಹಿಷ್ಕರಿಸಿದರು. ಡೂಮಾ ಶಿಫಾರಸು ಮಾಡಿದ ಭೂ ಸುಧಾರಣೆ ಕೈಗೊಳ್ಳಲು ಮತ್ತು ನಾಗರಿಕ ಹಕ್ಕುಗಳನ್ನು ಕೊಡಲು ಸರ್ಕಾರ ನಿರಾಕರಿಸಿತು. ಝಾರ್ ಡೂಮಾವನ್ನು ವಿಸರ್ಜಿಸಿದ. 1907ರಲ್ಲಿ ಎರಡನೆಯ ಬಾರಿಗೆ ಡೂಮಾಕ್ಕೆ ಚುನಾವಣೆ ನಡೆಸಿದರೂ ಅನತಿ ಕಾಲದಲ್ಲೇ ಅದನ್ನೂ ವಿಸರ್ಜಿಸಲಾಯಿತು. ಮುಷ್ಕರಗಳನ್ನು ನಿಷೇಧಿಸಲಾಯಿತು. ಬುದ್ಧಿಜೀವಿಗಳು ಸರ್ಕಾರದಿಂದ ದೂರ ಸರಿದರು. ರಾಜನು ಹೊಗಳುಭಟ್ಟರಿಂದ ಸುತ್ತುವರಿದನು. ಗ್ರೆಗರಿ ರಾಸ್‌ಪುಟಿನ್ ಎಂಬಾತ ರಾಣಿಯ ಬೆಂಬಲದಿಂದ ಅತ್ಯಂತ ಪ್ರಭಾವಶಾಲಿಯಾದ.

**ಒಂದನೆಯ ಮಹಾಯುದ್ಧ ಮತ್ತು 1917ರ ಮಹಾಕ್ರಾಂತಿ:** ರಷ್ಯ ಜಪಾನಿಗೆ ಸೋತಮೇಲೆ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿತ್ತು. ತುರ್ಕಿ ಮತ್ತು ಜರ್ಮನ್ ರಾಷ್ಟ್ರಗಳನ್ನುಳಿದು ಇತರ ಐರೋಪ್ಯ ರಾಷ್ಟ್ರಗಳೊಂದಿಗೆ ಹೊಂದಾಣಿಕೆಯ ನೀತಿ ಅನುಸರಿಸುತ್ತಿತ್ತು. 1914ರಲ್ಲಿ ಪ್ರಾರಂಭವಾದ ಒಂದನೆಯ ಮಹಾಯುದ್ಧದಲ್ಲಿ ಜರ್ಮನಿ, ಆಸ್ಟ್ರಿಯ, ಹಂಗರಿ ಮತ್ತು ತುರ್ಕಿಗಳು ಶತ್ರುಪಕ್ಷದಲ್ಲೂ ಬ್ರಿಟನ್, ಫ್ರಾನ್ಸ್ ತರುವಾಯ ಅಮೆರಿಕ, ರಷ್ಯಗಳು ಸೇರಿದಂತೆ ಜಪಾನ್ ಇಟಲಿ ಆದಿಯಾಗಿ ಹಲವಾರು ರಾಷ್ಟ್ರಗಳು ಮಿತ್ರ ಪಕ್ಷದಲ್ಲೂ ನಿಂತು ಯುದ್ಧ ಮಾಡಿದವು. ರಷ್ಯ ಜರ್ಮನಿಯ ಆಕ್ರಮಣವನ್ನು ಎದುರಿಸಿ ಹೋರಾಡಬೇಕಾಯಿತು. ಈ ಯುದ್ಧದಲ್ಲಿ ರಷ್ಯ 1915ರ ಹೊತ್ತಿಗೆ 10ಲಕ್ಷ ಜನರನ್ನು ಕಳೆದುಕೊಳ್ಳಬೇಕಾಯಿತು.

ರಷ್ಯದ ಆರ್ಥಿಕ ಸ್ಥಿತಿ ದಿನೇ ದಿನೇ ಕುಸಿಯಿತು. ಆಹಾರ ವಸ್ತುಗಳಿಗೆ, ಸರಕುಸಾಮಗ್ರಿಗಳಿಗೆ ತೀವ್ರ ಅಭಾವವುಂಟಾಯಿತು. 1916ರ ಡಿಸೆಂಬರ್‌ನಲ್ಲಿ ರಾಸ್‌ಪುಟಿನ್ ಕೊಲೆಯಾದ. ಇದರಿಂದ ಚಕ್ರವರ್ತಿ ಅಧೀರಗೊಂಡ. 1917ರ ಜನವರಿಯಲ್ಲಿ ರಾಜಧಾನಿಯಲ್ಲಿ ಆಹಾರವಸ್ತುಗಳ ಸರಬರಾಜು ಬಹುತೇಕ ನಿಂತುಹೋಗಿ ಸೈನಿಕ ಶಿಬಿರಗಳಲ್ಲಿ ದಂಗೆಗಳಾದವು. ಸೈನಿಕರು ದಂಗೆಕೋರರ ಗುಂಪುಗಳನ್ನು ನಿಯಂತ್ರಿಸಲು ಹಿಂದೇಟು ಹಾಕಿದರು. ಚಕ್ರವರ್ತಿ 3ನೆಯ ನಿಕೋಲಸ್ ಸೈನಿಕ ಶಿಬಿರದಿಂದ ಪೆಟ್ರೊಗ್ರಾಡ್‌ಗೆ ಹಿಂದಿರುಗುತ್ತಿದ್ದಾಗ ಅವನನ್ನು ತಡೆದು ಅವನಿಂದ ಪದತ್ಯಾಗ ಪತ್ರ ಪಡೆಯಲಾಯಿತು. ಸಾವಿರ ವರ್ಷಗಳ ರಷ್ಯದ ರಾಜಮನೆತನ ಹೀಗೆ ಕೊನೆಗೊಂಡಿತು. ರಾಜಕುಮಾರ ಗಾರ್ಗಿಯ ಪ್ರಧಾನ ಮಂತ್ರಿತ್ವದಲ್ಲಿ ಡೂಮಾ ಹಂಗಾಮಿ ಸರ್ಕಾರವನ್ನು ರಚಿಸಿತು.

ಕ್ರಾಂತಿಕಾರಿಗಳಿಗೆ ಒಂದನೆಯ ಮಹಾಯುದ್ಧ ವರದಾನವಾಗಿ ಪರಿಣಮಿಸಿತು. ರಾಷ್ಟ್ರಾದ್ಯಂತ ಕಾರ್ಮಿಕ ಸಂಘಗಳು ರಚಿತವಾದವು. ಲೆನಿನ್ 1917 ಏಪ್ರಿಲ್ 16ರಂದು ಸ್ವಿಟ್ಜರ್‌ಲೆಂಡಿನಿಂದ ಪೆಟ್ರೋಗ್ರಾಡ್‌ಗೆ ಬಂದ. ಇವನು ಹಂಗಾಮಿ ಸರ್ಕಾರವನ್ನು ಕಿತ್ತೊಗೆದು ಕಾರ್ಮಿಕ ಸಂಘಗಳ ಅಧಿಕಾರವನ್ನು ಕೈಗೆ ತೆಗೆದುಕೊಳ್ಳಬೇಕೆಂದು ಕರೆಕೊಟ್ಟ. ಇವನಿಗೆ ಮೆನ್ಷೆವಿಕ್ ನಾಯಕ ಟ್ರಾಟ್‌ಸ್ಕಿ ಬೆಂಬಲಕೊಟ್ಟ. ಬೋಲ್ಷೆವಿಕ್ ಪಕ್ಷದ ಸದಸ್ಯರ ಸಂಖ್ಯೆ ಎರಡು ಲಕ್ಷಕ್ಕೆ ಏರಿತು.

ಜುಲೈನಲ್ಲಿ ನಡೆದ ಪ್ರದರ್ಶನಗಳಿಂದಾಗಿ ಟ್ರಾಟ್‌ಸ್ಕಿ ಬಂಧನಕ್ಕೊಳಗಾದರೆ ಲೆನಿನ್ ಫಿನ್ಲೆಂಡಿಗೆ ಬಂದು ರಾಜ್ಯ ಮತ್ತು ಕ್ರಾಂತಿ ಎಂಬ ಪುಸ್ತಕವನ್ನು ಬರೆದ. ಟ್ರಾಟ್‌ಸ್ಕಿಯನ್ನು ತರುವಾಯ ಬಿಡುಗಡೆ ಮಾಡಿದರೆ, ಲೆನಿನ್ ಗುಟ್ಟಾಗಿ ಪೆಟ್ರೊಗ್ರಾಡಿಗೇ ಬಂದ. ಅಕ್ಟೋಬರ್ 23ರಂದು ಬೋಲ್ಷೆವಿಕ್ ಪಕ್ಷ ಸಶಸ್ತ್ರ ದಂಗೆ ನಡೆಸಲು ಕರೆಕೊಡುವ ನಿರ್ಣಯವನ್ನು ಅಂಗೀಕರಿಸಿತು. ನವೆಂಬರ್ 6ರಂದು ಬೋಲ್ಷೆವಿಕರು ಮುಖ್ಯ ಸರ್ಕಾರಿ ಕಟ್ಟಡಗಳನ್ನು ವಶಪಡಿಸಿಕೊಂಡರು. ಸೈನ್ಯ ಹಂಗಾಮಿ ಸರ್ಕಾರದ ಆದೇಶಗಳನ್ನು ಪಾಲಿಸಲು ನಿರಾಕರಿಸಿತು. ನವೆಂಬರ್ 7ರಂದು ಬೋಲ್ಷೆವಿಕರು ಹಂಗಾಮಿ ಸರ್ಕಾರವನ್ನು ಪದಚ್ಯುತಗೊಳಿಸಿರುವುದಾಗಿ ಘೋಷಿಸಿದರು. ಕ್ರಾಂತಿ ರಕ್ತರಹಿತವಾಗಿ ನಡೆದು ಸಚಿವರುಗಳನ್ನೆಲ್ಲ ಬಂಧಿಸಲಾಯಿತು. ಜನತಾ ಸರ್ಕಾರಕ್ಕೆ ಲೆನಿನ್ ಅಧ್ಯಕ್ಷನಾಗಿ (ಪ್ರಧಾನಮಂತ್ರಿ) ನಿಯೋಜಿತನಾದ.

ಕಮ್ಯುನಿಸ್ಟ್ ಸರ್ಕಾರ ಪ್ರಪಂಚದಲ್ಲೇ ಮೊದಲ ಬಾರಿಗೆ ರಷ್ಯದಲ್ಲಿ ಅಧಿಕಾರಕ್ಕೆ ಬಂದು ದಾಖಲೆ ಸ್ಥಾಪಿಸಿತು. ಅದು ಖಾಸಗಿ ಆಸ್ತಿಯನ್ನು ರದ್ದುಪಡಿಸಿತು. ಕೈಗಾರಿಕೆಗಳನ್ನು ಕಾರ್ಮಿಕರ ನಿಯಂತ್ರಣಕ್ಕೆ ನೀಡಿತು; ರಾಜ್ಯ ಮತ್ತು ಧರ್ಮಗಳನ್ನು ಬೇರ್ಪಡಿಸಿತು. ಸ್ತ್ರೀಪುರುಷರಿಗೆ ಸಮಾನ ಕಾನೂನುಬದ್ಧ ಸ್ಥಾನಮಾನಗಳನ್ನು ನೀಡಿತು. 1918ರ ಫೆಬ್ರವರಿಯಿಂದ ರಷ್ಯದ ಕಾಲಗಣನೆ ಹೋಗಿ ಪಾಶ್ಚಿಮಾತ್ಯ ಕ್ಯಾಲೆಂಡರ್ ಪದ್ಧತಿ ಜಾರಿಗೆ ಬಂದಿತು. ಹೀಗೆ 1917ರ ಮಹಾ ಕ್ರಾಂತಿಯಿಂದ ರಷ್ಯ ಹೊಸ ಜೀವನ ವಿಧಾನಕ್ಕೆ ಅಡಿಯಿಟ್ಟಿತು. ಲೆನಿನ್ ಸರ್ಕಾರ ಒಂದನೆಯ ಮಹಾಯುದ್ಧದಿಂದ ಹಿಂದಕ್ಕೆ ಸರಿದು ಜರ್ಮನಿ ಯೊಂದಿಗೆ 3 ಮಾರ್ಚ್ 1918ರಂದು ಬ್ರೆಸ್ಟ್‌ಲಿಟೋವ್‌ಸ್ಕಿ ಒಪ್ಪಂದವನ್ನು ಮಾಡಿಕೊಂಡಿತು. ಇದರಿಂದ ರಷ್ಯ ಪೂರ್ವ ಯುರೋಪಿನ ಅನೇಕ ಪ್ರಾಂತ್ಯಗಳನ್ನು ಜರ್ಮನಿಗೆ ಬಿಟ್ಟುಕೊಡ ಬೇಕಾಯಿತು. ಆದರೆ ಅದಕ್ಕೆ ಕ್ರಾಂತಿಯನ್ನು ಭದ್ರಗೊಳಿಸಲು ಕಾಲಾವಕಾಶ ದೊರೆಯಿತು. ಮುಂದೆ ಯುದ್ಧದಲ್ಲಿ ಜರ್ಮನಿ ಸೋತಾಗ ಹೆಚ್ಚಿನ ಪ್ರದೇಶಗಳು ಹಿಂದಕ್ಕೆ ಬಂದವಾದರೂ ಪೋಲೆಂಡ್ ಸ್ವತಂತ್ರವಾಯಿತು.

ರಷ್ಯದಲ್ಲಿ ಕಮ್ಯುನಿಸ್ಟರು ಅಧಿಕಾರ ಹಿಡಿದ ಅನಂತರ ಕಮ್ಯುನಿಸ್ಟ್ ತತ್ತ್ವಗಳನ್ನು ವಾಸ್ತವವಾಗಿ ಅನುಷ್ಠಾನಗೊಳಿಸುವ ಹೊಣೆಗಾರಿಕೆ ಅವರ ಮೇಲೆ ಬಿತ್ತು. ಈ ಸಂಬಂಧವಾಗಿ ಕಮ್ಯುನಿಸ್ಟರಲ್ಲೇ ತೀವ್ರವಾದಿಗಳು, ಮಧ್ಯಮವಾದಿಗಳು ಎಂಬ ಎರಡು ಗುಂಪುಗಳಿದ್ದವು. ಕೆಲವು ಪ್ರತಿ ಚಳವಳಿಗಳೂ ನಡೆದವು. ಇದನ್ನೆಲ್ಲ 1920ರ ಹೊತ್ತಿಗೆ ತಹಬದಿಗೆ ತರಲಾಯಿತು. ಬೋಲ್ಷೆವಿಕ್ ಪಕ್ಷ ಮೇಲುಗೈ ಪಡೆಯಿತು. ಪ್ರೊಲಿಟೇರಿಯನ್ ಅಥವಾ ಶ್ರಮಿಕರ ಸರ್ವಾಧಿಕಾರ ಬಿಟ್ಟು ಇನ್ನೇನೂ ಇರಕೂಡದೆಂಬ ನಿರ್ಧಾರಕ್ಕೆ ಬರಲಾಯಿತು. ಈ ಘರ್ಷಣೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಅಸುನೀಗಿದರೆ ಕಮ್ಯುನಿಸ್ಟ್ ಆಡಳಿತದಿಂದ ದೂರವಿರಲು ಲಕ್ಷಾಂತರ ಜನ ವಲಸೆ ಹೋದರು.

ಲೆನಿನ್ 1922ರಲ್ಲಿ ಜೋಸೆಫ್ ಸ್ಟಾಲಿನ್‌ನನ್ನು ಪಕ್ಷದ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿದ. ಈ ಹುದ್ದೆ ಕಮ್ಯುನಿಸ್ಟ್ ಆಳ್ವಿಕೆಯುದ್ದಕ್ಕೂ ಅತ್ಯಂತ ಪ್ರಭಾವಶಾಲಿ ಹುದ್ದೆಯಾಗಿದ್ದಿತು. ಪಾಲಿಟ್‌ಬ್ಯೂರೊ ಎಂಬ ನೀತಿನಿರೂಪಕ ಸಮಿತಿ ಮತ್ತು ರಾಜಕೀಯ ಸಂಘಟನಾ ಸಮಿತಿಗಳು ರಚಿತವಾದವು. ಪಕ್ಷದಲ್ಲಿ ಕ್ರಮೇಣ ಪ್ರಜಾತಂತ್ರ ಲಕ್ಷಣಗಳು ಹೋಗಿ ವ್ಯಕ್ತಿಪ್ರಧಾನ ಆಡಳಿತ ಕಾರ್ಯರೂಪಕ್ಕೆ ಬಂದಿತು. ಲೆನಿನ್ ತನ್ನ ಕೊನೆಗಾಲದಲ್ಲಿ ಸ್ಟಾಲಿನ್‌ನನ್ನು ವಿರೋಧಿಸಿ ಟ್ರಾಟ್‌ಸ್ಕಿ ಮತ್ತು ಜಿನೋವೀವ್‌ರನ್ನು ಬೆಂಬಲಿಸಿದ. ಆದರೆ ಅಷ್ಟೊತ್ತಿಗೆ ಸ್ಟಾಲಿನ್ ಪ್ರಬಲನಾಗಿದ್ದ. ಲೆನಿನ್ 1924ರ ಜನವರಿಯಲ್ಲಿ ತೀರಿಕೊಂಡಾಗ ಸ್ಟಾಲಿನ್ ಕೈ ಮೇಲಾಯಿತು. ಟ್ರಾಟ್‌ಸ್ಕಿ ಮತ್ತು ಅವನ ಬೆಂಬಲಿಗರನ್ನು ಸ್ಟಾಲಿನ್ ಗಡೀಪಾರು ಮಾಡಿದ. 1929ರಲ್ಲಿ ಟ್ರಾಟ್‌ಸ್ಕಿ ದೇಶವನ್ನೇ ಬಿಡಬೇಕಾಯಿತು. 1940ರಲ್ಲಿ ಮೆಕ್ಸಿಕೊದಲ್ಲಿ ಟ್ರಾಟ್‌ಸ್ಕಿ ಕೊಲೆಗೀಡಾದ.

**ಸ್ಟಾಲಿನ್ ಯುಗ:** ಆದರ್ಶಯುತವಾಗಿ ಕಟ್ಟಿದ ಕಮ್ಯುನಿಸ್ಟ್ ಪಕ್ಷ ಅದರ ಆಳಿಕೆಯ ಪ್ರಾರಂಭದಲ್ಲೇ ನೈತಿಕ ಸ್ಥೈರ್ಯವನ್ನು ಕಳೆದುಕೊಂಡಿತು. ಅದಕ್ಕೆ ಕಾರಣ ಕ್ರಾಂತಿಯಲ್ಲಿ ಹೋರಾಡಿದ, ದುಡಿದ ನಾಯಕರು ಹಾಗೂ ಕಾರ್ಯಕರ್ತರಿಗೆ ಸಮಾನ ಪ್ರತಿಫಲ ದೊರಕಲಿಲ್ಲ. ಪಕ್ಷದ ಪ್ರಮುಖ ಹುದ್ದೆಯನ್ನು ಹಿಡಿದ ಸ್ಟಾಲಿನ್ ಎಲ್ಲರನ್ನೂ ಸಂಶಯದಿಂದ ನೋಡತೊಡಗಿದ. ಅನುಮಾನ ಬಂದ ಕೂಡಲೇ ಅವನು ಎಷ್ಟೇ ತ್ಯಾಗಮಯಿಯಾಗಿರಲೀ ಜನಪ್ರಿಯನಾಗಿರಲೀ ಅಂತಹ ನಾಯಕನನ್ನು ನಿರ್ನಾಮ ಮಾಡತೊಡಗಿದ. ಇದರಿಂದ ಸರ್ಕಾರ ಮತ್ತು ಸಮಾಜದಲ್ಲಿ ಕುಟಿಲತೆಯ ವಾತಾವರಣದಲ್ಲಿ ತಾಂಡವವಾಡತೊಡಗಿತು.

ಸರ್ಕಾರ 1921ರಲ್ಲಿ ಯೋಜನಾ ಆಯೋಗವನ್ನು ರಚಿಸಿತು. 1927ರಲ್ಲಿ ಸೇರಿದ್ದ ಪಕ್ಷದ 15ನೆಯ ಅಧಿವೇಶನದಲ್ಲಿ ಪಂಚವಾರ್ಷಿಕ ಯೋಜನೆಯನ್ನು ರೂಪಿಸಲು ನಿರ್ಣಯ ಕೈಗೊಳ್ಳಲಾಯಿತು. 1932ರವರೆಗೂ ನಡೆದ ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬೃಹತ್ ಕೈಗಾರಿಕೆಗಳು ವ್ಯವಸಾಯದ ಉತ್ಪಾದನೆ ಮತ್ತು ಗ್ರಾಹಕರ ವಸ್ತುಗಳ ತಯಾರಿಕೆಗೆ ಅಭಿವೃದ್ಧಿಗೊಂಡರೂ ಸಮುದಾಯ ಬೇಸಾಯ ಪದ್ಧತಿಯಿಂದಾಗಿ ವ್ಯವಸಾಯ ಕ್ಷೇತ್ರದಲ್ಲಿ ಗಣನೀಯ ಸಾಧನೆಯಾಗಲಿಲ್ಲ. ಹೊಸ ಅಂಕಿಅಂಶಗಳನ್ನು ಅಧಿಕಾರಿಗಳು ಸಿದ್ಧಪಡಿಸತೊಡಗಿದರು.

1933ರಿಂದ ಪ್ರಾರಂಭವಾದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆ ಮತ್ತು ತಾಂತ್ರಿಕ ಪ್ರಗತಿ ಗಮನಾರ್ಹವಾಗಿ ಮುನ್ನಡೆಯಿತು. ಆದರೆ ಕಮ್ಯುನಿಸಂನ ಆಡಳಿತದ ಉದ್ದಕ್ಕೂ ಸವಾಲಾಗಿಯೇ ನಿಂತ ಸಮುದಾಯ ಬೇಸಾಯ ಪದ್ಧತಿಯ ಪ್ರಗತಿಯಲ್ಲಿ ಸಮಸ್ಯೆಗಳು ತಲೆದೋರಿದವು. ಸ್ಟಾಲಿನ್ ರೈತರಿಂದ ಒತ್ತಾಯಪೂರ್ವಕ ಅಗತ್ಯ ಪ್ರಮಾಣದ ದವಸಧಾನ್ಯಗಳನ್ನು ಸಂಗ್ರಹಿಸಲು ಆದೇಶಿಸಿದಾಗ ಇದನ್ನು ಪ್ರತಿಭಟಿಸಿದ ಲಕ್ಷಾಂತರ ರೈತರನ್ನು ಸೈಬೀರಿಯಕ್ಕೆ ಕಳುಹಿಸಲಾಯಿತು. ಉಳಿದ ರೈತರಲ್ಲಿ ಬೇಸಾಯದ ಬಗ್ಗೆ ಉತ್ಸಾಹ ಮತ್ತು ಶ್ರದ್ಧೆಗಳು ಕಡಿಮೆಯಾದವು.

1934ರಿಂದ 1941ರ ಅವಧಿಯಲ್ಲಿ ಲೇಖಕರು, ಅಧಿಕಾರಿಗಳು, ಪಕ್ಷದ ನಾಯಕರು ಮತ್ತು ಕಾರ್ಯಕರ್ತರನ್ನು ಸ್ಟಾಲಿನ್ ಹತ್ತಿಕ್ಕಿದ ರೀತಿ ಸರ್ವಾಧಿಕಾರಿ ಇತಿಹಾಸದಲ್ಲಿ ಅಪರೂಪದ್ದು. ಅನೇಕರನ್ನು ಪಕ್ಷದ್ರೋಹ ಮತ್ತು ದೇಶದ್ರೋಹದಂತಹ ಆರೋಪ ಹೊರಿಸಿ ಗಡಿಪಾರು ಮಾಡಿದ. ಜಿನೊವಿವ್‌ನನ್ನು ಗಲ್ಲಿಗೇರಿಸಿದ. ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರನ್ನೂ ಶಿಕ್ಷಿಸದೆ ಬಿಡಲಿಲ್ಲ. ಈ ಹುಚ್ಚು ಆಡಳಿತದಿಂದ ಇಡೀ ಪ್ರಜಾಸಮುದಾಯ ನಿಸ್ತೇಜವಾಯಿತು. ತನ್ನದೇ ಆದ ಸಂವಿಧಾನವನ್ನು 1936ರಲ್ಲಿ ಜಾರಿಗೆ ತಂದು ಅದಕ್ಕೆ ಪ್ರಜಾಸತ್ತಾತ್ಮಕ ಸ್ವರೂಪ ಕೊಟ್ಟಿರುವುದಾಗಿ ಘೋಷಿಸಿದ. ವಂಶವಾಹಿ ತತ್ತ್ವವನ್ನು ಬೋಧಿಸಲು ತೊಂದರೆ ಒಡ್ಡಲಾಯಿತು. ನಿಕೋಲಾಸ್ ಎಂಬ ವಂಶವಿಜ್ಞಾನದ ವಿಜ್ಞಾನಿಯನ್ನು ಸೆರೆಗೆ ತಳ್ಳಲಾಯಿತು.

ಎರಡನೆಯ ಮಹಾಯುದ್ಧ ರಷ್ಯಕ್ಕೆ ಅತ್ಯಂತ ದುಬಾರಿಯಾಗಿ ಪರಿಣಮಿಸಿತು. ಪ್ರಾರಂಭದಲ್ಲಿ ಜರ್ಮನಿಯ ಹಿಟ್ಲರ್‌ನೊಡನೆ ಸಂಧಾನದಲ್ಲಿ ತೊಡಗಿದ ಅದು ಬಾಲ್ಟಿಕ್ ಪ್ರದೇಶಗಳನ್ನು ವಶಪಡಿಸಿಕೊಂಡು ತನ್ನ ಸರಹದ್ದುಗಳನ್ನು ವಿಸ್ತರಿಸುವ ಉದ್ದೇಶ ಹೊಂದಿತ್ತು. ಜರ್ಮನಿಯೊಂದಿಗೆ 1939ರಲ್ಲಿ ಪರಸ್ಪರ ಅನಾಕ್ರಮಣ ಒಪ್ಪಂದವೊಂದನ್ನು ಮಾಡಿಕೊಂಡಿತು. ಆದರೆ 1941ರಲ್ಲಿ ಹಿಟ್ಲರ್ ರಷ್ಯದ ಗಡಿಗಳನ್ನು ಅತಿಕ್ರಮಿಸಿ ಒಳನುಗ್ಗಿದ. ಜರ್ಮನ್ ಸೈನ್ಯ ಹೆಚ್ಚಿನ ಪ್ರತಿರೋಧವಿಲ್ಲದೆ ರಾಜಧಾನಿ ಮಾಸ್ಕೋ ಮತ್ತು ಲೆನಿನ್‌ಗ್ರಾಡ್‌ಗಳ ಬಾಗಿಲಿಗೆ ಬಂದು ನಿಂತಿತು. ರಷ್ಯನ್ನರು ತಮ್ಮೆಲ್ಲ ಶಕ್ತಿ ಸಾಮರ್ಥ್ಯಗಳಿಂದ ಜರ್ಮನ್ನರನ್ನು ಎದುರಿಸಿದರು. ಆಗ ಚಳಿಗಾಲ ತೀವ್ರವಾಗಿದ್ದುದು ಜರ್ಮನರಿಗೆ ಪ್ರತಿಕೂಲವಾಯಿತು. 1944ರ ವರೆಗೂ ಹೋರಾಡಿ ಜರ್ಮನರನ್ನು ರಷ್ಯದ ನೆಲದಿಂದ ಹೊರದೂಡಿದರು. ಕೊನೆಗೆ ಹಿಟ್ಲರ್ ಸೋಲತೊಡಗಿದಾಗ ರಷ್ಯದ ಸೈನ್ಯ ಬರ್ಲಿನ್ ಪ್ರವೇಶಿಸಿತು.

ರಷ್ಯ ಈ ಯುದ್ಧದಲ್ಲಿ 75ಲಕ್ಷ ಜನರನ್ನು ಕಳೆದುಕೊಂಡಿತು. ಲಕ್ಷಾಂತರ ಕೋಟಿರೂಬೆಲ್‌ಗಳ ಸ್ಥಿರಚರಾಸ್ತಿಗಳ ನಷ್ಟ ಸಂಭವಿಸಿತು. ಪಶ್ಚಿಮದಲ್ಲಿ ಜರ್ಮನಿ, ಪ್ರಷ್ಯ ಮತ್ತು ಬಲ್ಗೇರಿಯಗಳು ಸೋತದ್ದು ಮತ್ತು ಪೂರ್ವದಲ್ಲಿ ಜಪಾನ್ ಸೋತದ್ದು ರಷ್ಯ ತನ್ನ ಸರಹದ್ದುಗಳ ರಕ್ಷಣೆಗೆ ಅನುಕೂಲಕರವಾದ ಷರತ್ತುಗಳನ್ನು ವಿಧಿಸಲು ಸಾಧ್ಯವಾಯಿತು. ಚೀನ ಸಹ ದುರ್ಬಲವಾಗಿದ್ದರಿಂದ ಮಧ್ಯ ಏಷ್ಯ ಮತ್ತು ಮಂಗೋಲಿಯಗಳಲ್ಲೂ ತನ್ನ ಹಿತಾಸಕ್ತಿಗಳನ್ನು ಕಾಯ್ದುಕೊಂಡಿತು. ಪೂರ್ವಜರ್ಮನಿ, ಪೋಲೆಂಡ್, ಚೆಕೊಸ್ಲೊವಾಕೀಯ, ಆಲ್ಬೇನಿಯ, ರೊಮೇನಿಯ, ಯುಗೋಸ್ಲಾವಿಯ, ಕೊರಿಯ ಮೊದಲಾದ ಕಡೆಗಳಲ್ಲಿ ಕಮ್ಯುನಿಸ್ಟ್ ಪ್ರಭುತ್ವ ಅಧಿಕಾರಕ್ಕೆ ಬರಲು ರಷ್ಯ ನೆರವು ನೀಡಿತು. ನೆರೆಯ ಬೃಹತ್ ರಾಷ್ಟ್ರ ಚೀನದಲ್ಲಿ ಕಮ್ಯುನಿಸ್ಟ್ ಕ್ರಾಂತಿಯಾಗಲು ಇದರ ಪಾತ್ರವೂ ಇದ್ದಿತು. ಎರಡನೆಯ ಮಹಾಯುದ್ಧದ ನಂತರದ ನಾಲ್ಕೈದು ವರ್ಷಗಳಲ್ಲಿ ಪ್ರಪಂಚದ ರಾಜಕೀಯ ಭೂಪಟ ಬದಲಾಗಿ ಕಮ್ಯುನಿಸ್ಟ್ ಬಣ ಎಂಬ ದೊಡ್ಡ ರಾಷ್ಟ್ರಗಳ ಒಂದು ಸಮುದಾಯವೇ ರೂಪುಗೊಂಡಿತು. ಈ ಬಣಕ್ಕೆ ರಷ್ಯ, ಇನ್ನೊಂದು ಕಡೆ ಪ್ರಜಾಪ್ರಭುತ್ವ ಬಣಕ್ಕೆ ಅಮೆರಿಕ ನಾಯಕ ರಾಷ್ಟ್ರಗಳಾದವು. ರಷ್ಯ, ಅಮೆರಿಕ, ಚೀನ, ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್‌ಗಳು ವಿಶ್ವಸಂಸ್ಥೆಯ ಭದ್ರತಾ ಮಂಡಲಿಯಲ್ಲಿ ಸ್ಥಾನ ಪಡೆದವು.

1950ರಲ್ಲಿ ರಷ್ಯ ಮತ್ತು ಚೀನಗಳ ನಡುವೆ ಒಪ್ಪಂದ ಏರ್ಪಟ್ಟಿತು. ಸ್ಟಾಲಿನ್ 1952ರಲ್ಲಿ ನಿಧನನಾಗುವ ಹೊತ್ತಿಗೆ ರಷ್ಯ ಬೃಹತ್ ಕೈಗಾರಿಕೆ ಮತ್ತು ಸೈನಿಕ ಶಕ್ತಿಯಲ್ಲಿ ಅಮೆರಿಕಕ್ಕೆ ಹೆಗಲೆಣೆಯಾಗಿ ನಿಂತಿತು. ಯಥಾಪ್ರಕಾರ ಸರ್ಕಾರಕ್ಕೆ ರೈತ ಮತ್ತು ವ್ಯವಸಾಯ ಕೂಲಿಕಾರರ ಜೀವನಮಟ್ಟವನ್ನು ಗಣನೀಯವಾಗಿ ಸುಧಾರಿಸಲು ಸಾಧ್ಯವಾಗಲಿಲ್ಲ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯಗಳ ಅನುಪಸ್ಥಿತಿಯಲ್ಲಿ ಜನರು ಸದಾ ಬಂಧನಕ್ಕೊಳಗಾಗುವ ಅಥವಾ ಕೇಂದ್ರೀಕೃತ ಶಿಬಿರಗಳಿಗೆ ರವಾನೆಯಾಗುವ ಆತಂಕದಿಂದ ಕಾಲ ಕಳೆಯಬೇಕಾಯಿತು. ಬುದ್ಧಿಜೀವಿಗಳು ರಚನಾತ್ಮಕ ಮತ್ತು ಮುಕ್ತ ಕೃತಿಗಳನ್ನು ರಚಿಸುವ ಸ್ಥಿತಿ ಇರಲಿಲ್ಲ.

**ಕ್ರುಶ್ಚೇವ್ ಯುಗ (1953–64):** 1953ರ ಸೆಪ್ಟೆಂಬರ್‌ನಲ್ಲಿ ನಡೆದ ಕೇಂದ್ರ ಸಮಿತಿಯ ಅಧಿವೇಶನದಲ್ಲಿ ಕ್ರುಶ್ಚೇವ್ ಪಕ್ಷದ ಪ್ರಥಮ ಕಾರ್ಯದರ್ಶಿಯಾಗಿ ಚುನಾಯಿತರಾದರು. ಇವರು ಸ್ಟಾಲಿನ್ನನ ಕಾಲದಲ್ಲಿ ಜನರು ಅನುಭವಿಸಿದ ಬಿಗಿ ವಾತಾವರಣವನ್ನು ಸ್ವಲ್ಪ ಸಡಿಲಗೊಳಿಸಿದರು. ವ್ಯವಸಾಯದ ಬಗ್ಗೆ ಇವರಿಗೆ ಆಳವಾದ ತಿಳುವಳಿಕೆಯಿದ್ದು ಅದರ ಪ್ರಗತಿಗೆ ಶ್ರಮಿಸಿದರು. ಸೈಬೀರಿಯ ಮತ್ತು ಕಜಕ್‌ಸ್ತಾನಗಳಲ್ಲಿ ವ್ಯವಸಾಯವನ್ನು ವಿಸ್ತರಿಸಲಾಯಿತು. ಅಧ್ಯಕ್ಷರಾಗಿದ್ದ ಮಾಲ್ಯೆನ್‌ಕಾಫೆರಿಗೆ ಕ್ರುಶ್ಚೇವ್ ಜೊತೆ ಭಿನ್ನಾಭಿಪ್ರಾಯವಿದ್ದುದರಿಂದ 1955ರಲ್ಲಿ ಕ್ರುಶ್ಚೇವ್ ಮತ್ತು ಅಮೆರಿಕದ ಅಧ್ಯಕ್ಷರು ಜಿನೀವದಲ್ಲಿ ಸೇರಿ ವಿಶ್ವಶಾಂತಿಗಾಗಿ ಮಾತುಕತೆ ನಡೆಸಿದರು. ಕ್ರುಶ್ಚೇವ್ ಮತ್ತು ಬುಲ್ಗಾನಿನ್ ಇಬ್ಬರೂ 1955ರಲ್ಲಿ ಭಾರತಕ್ಕೆ ಭೇಟಿ ನೀಡಿದರು. ಭಾರತ ರಷ್ಯದ ಆಪ್ತ ರಾಷ್ಟ್ರವಾಯಿತು. ಮಧ್ಯಪ್ರಾಚ್ಯದ ಅರಬ್‌ರಾಷ್ಟ್ರಗಳೊಂದಿಗೂ ರಷ್ಯ ಒಳ್ಳೆಯ ಸಂಬಂಧಗಳನ್ನಿಟ್ಟುಕೊಂಡಿತು. ಬಂಡವಾಳಶಾಹಿ ರಾಷ್ಟ್ರಗಳೊಂದಿಗೆ ಶಾಂತಿಯ ಸಹಬಾಳ್ವೆಗೆ ಒತ್ತು ನೀಡಿದರು.

1956ರಲ್ಲಿ ಪಕ್ಷದ 20ನೆಯ ಅಧಿವೇಶನವನ್ನು ಕರೆದು ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ತರುವುದಾಗಿ ಭರವಸೆ ಕೊಟ್ಟರು. 1957ರಲ್ಲಿ ರಷ್ಯ ಯಶಸ್ವಿಯಾಗಿ ಖಂಡಾಂತರ (ಬ್ಯಾಲಸ್ಟಿಕ್) ಕ್ಷಿಪಣಿಗಳನ್ನು ಉಡಾಯಿಸಿತು. ಅದೇ ವರ್ಷ ಉಪಗ್ರಹ ಸ್ಪುಟ್ನಿಕ್ 1 ಮತ್ತು ಸ್ಪುಟ್ನಿಕ್ 11 ಅನ್ನು ಅಂತರಿಕ್ಷಕ್ಕೆ ಹಾರಿಸಿತು. ರಷ್ಯದ ಪ್ರಭಾವ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಹೆಚ್ಚಿತು. 1958ರ ಮಾರ್ಚ್ ತಿಂಗಳಲ್ಲಿ ಪ್ರಧಾನ ಕಾರ್ಯದರ್ಶಿ ಜತೆಗೆ ಕ್ರುಶ್ಚೇವ್ ರಾಷ್ಟ್ರದ ಪ್ರಧಾನಿಯೂ ಆದರು. 1959ರಲ್ಲಿ ಕ್ರುಶ್ಚೇವ್ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಭೇಟಿ ನೀಡಿದರು. 1961ರಲ್ಲಿ ಬರ್ಲಿನ್ ಗೋಡೆ ನಿರ್ಮಿಸಲಾಯಿತು. 1962ರಲ್ಲಿ ಉಂಟಾದ ಕ್ಯೂಬ ಬಿಕ್ಕಟ್ಟಿನಿಂದಾಗಿ ಅಮೆರಿಕ ಮತ್ತು ರಷ್ಯಗಳ ನಡುವಿನ ಸಂಬಂಧಗಳು ಸೂಕ್ಷ್ಮವಾದವು. 1962ರಲ್ಲಿ ಚೀನ ಭಾರತದ ಗಡಿಗಳನ್ನು ಅತಿಕ್ರಮಿಸಿದಾಗ ರಷ್ಯ ಚೀನಕ್ಕೆ ಬೆಂಬಲ ನೀಡಲಿಲ್ಲ. ಚೀನಕ್ಕೆ ಅಣುಶಕ್ತಿ ತಂತ್ರಜ್ಞಾನವನ್ನು ಕೊಡಲು ನಿರಾಕರಿಸಿತು. 1963ರಲ್ಲಿ ಅಮೆರಿಕ ಮತ್ತು ಇಂಗ್ಲೆಂಡಿನೊಂದಿಗೆ ಅಣ್ವಸ್ತ್ರಗಳ ಪರೀಕ್ಷೆ ನಿರ್ಬಂಧ ಒಪ್ಪಂದ ಮಾಡಿಕೊಳ್ಳಲಾಯಿತು. ಪಕ್ಷದೊಳಗಿನ ಒತ್ತಡ ಹೆಚ್ಚಾಗಿ 1964ರಲ್ಲಿ ನಿವೃತ್ತಿಯನ್ನು ಘೋಷಿಸಿ ಅಧಿಕಾರದಿಂದ ನಿರ್ಗಮಿಸಿದರು. ಸ್ಟಾಲಿನ್ನನ ಉಕ್ಕಿನ ಕವಚದಿಂದ ರಷ್ಯವನ್ನು ಹೊರತಂದು ಅದು ಜಗತ್ತಿನೊಂದಿಗೆ ಬೆರೆಯುವಂತೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡುವಂತೆ ಮಾಡಿದ ಕೀರ್ತಿ ಕ್ರುಶ್ಚೇವ್‌ಗೆ ಸಲ್ಲುತ್ತದೆ.

**ಬ್ರೆಜ್ನೇವ್ ಯುಗ (1964–82):** ಕ್ರುಶ್ಚೇವ್‌ರ ಅನಂತರ ಲಿಯೊನಿಡ್ ಬ್ರೆಜ್ನೇವ್ ಪ್ರಥಮ ಕಾರ್ಯದರ್ಶಿಯಾಗಿ ಚುನಾಯಿತರಾದರು. ಕಮ್ಯುನಿಸ್ಟ್‌ಪಕ್ಷವನ್ನು ಪ್ರೋಲಿಟೇರಿಯಟ್ ಪಕ್ಷ ಅನ್ನುವ ಬದಲು ಸಮಗ್ರ ಜನತಾಪಕ್ಷವೆಂದು ಪರಿಗಣಿಸಲಾಯಿತು. ಆದರೆ ಬ್ರೆಜ್ನೇವ್ ಬಹುಬೇಗ ಪ್ರಭಾವೀವ್ಯಕ್ತಿಯಾದರು. ಪೊಡ್ಗೊರ್ನಿಯವರನ್ನು ಸುಪ್ರೀಂ ಸೋವಿಯತ್‌ನ ಅಧ್ಯಕ್ಷರನ್ನಾಗಿ ಮಾಡಲಾಯಿತು. ಪ್ರಥಮ ಕಾರ್ಯದರ್ಶಿಯ ಹುದ್ದೆಯನ್ನು ಪ್ರಧಾನ ಕಾರ್ಯದರ್ಶಿಯೆಂದು ಬದಲಾಯಿಸಲಾಯಿತು.

ಕೈಗಾರಿಕಾ ವಲಯದಲ್ಲಿ ಯುದ್ಧ ಶಸ್ತ್ರಾಸ್ತ್ರಗಳು ಮತ್ತು ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆಗಳು ಅಭಿವೃದ್ಧಿಗೆ ಬಂದರೆ ಗ್ರಾಹಕರ ಸರಕುಗಳ ಉತ್ಪಾದನೆಯಲ್ಲಿ ಅಷ್ಟು ಪ್ರಗತಿಯಾಗಲಿಲ್ಲ. ವ್ಯವಸಾಯದ ಅಭಿವೃದ್ಧಿಗೆ ಹಲವಾರು ಕ್ರಮಗಳನ್ನು ಕೈಗೊಂಡರೂ ನಿರೀಕ್ಷಿತ ಗುರಿ ಸಾಧಿಸಲಾಗಲಿಲ್ಲ. ಕ್ರುಶ್ಚೇವ್ ಕಾಲದಲ್ಲಿ ತಂದಿದ್ದ ಸುಧಾರಣೆಗಳನ್ನು ಬಹುಮಟ್ಟಿಗೆ ಕೈಬಿಡಲಾಯಿತು. ಅಧಿಕಾರಶಾಹಿ ಯಾವುದೇ ಮೂಲಭೂತ ಬದಲಾವಣೆಗಳಿಗೆ ಮುಂದಾಗುತ್ತಿರಲಿಲ್ಲ. ಒಟ್ಟಿನಲ್ಲಿ ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದಾಗ ರಷ್ಯದ ಆರ್ಥಿಕ ಪ್ರಗತಿ ಹಿಂದೆ ಬಿದ್ದಿತು. ಪಂಚವಾರ್ಷಿಕ ಯೋಜನೆಗಳ ಮೂಲಕ ಕ್ರುಶ್ಚೇವ್ 1970ರ ಹೊತ್ತಿಗೆ ಸಾಧಿಸಬೇಕೆಂದು ಹಾಕಿಕೊಂಡಿದ್ದ ಗುರಿಯನ್ನು ಸಾಧಿಸಲಾಗಲಿಲ್ಲ.

ಸಾಹಿತ್ಯ, ಕಲೆ, ಶಿಲ್ಪ–ಇಂಥ ಸೃಜನಶೀಲತೆಯ ಮೇಲೆ ಸರ್ಕಾರದ ಒತ್ತಡ ಮುಂದುವರಿಯಿತು. ಇವೆಲ್ಲ ಮುಖ್ಯವಾಗಿ ದೇಶದ ಸಾಮಾಜಿಕ ಸಂದೇಶವನ್ನು ಸಾರಬೇಕೆಂದು ಸರ್ಕಾರದ ನಿಲುವಾಗಿತ್ತು. ಕ್ರುಶ್ಚೇವ್ ಕೇಂದ್ರೀಕೃತ ಶಿಬಿರದ ತೀವ್ರ ಅನುಭವಗಳನ್ನು ಸಾಹಿತ್ಯದಲ್ಲಿ ಚಿತ್ರಿಸಲು ಅವಕಾಶ ಕೊಟ್ಟಿದ್ದರೆ ಅವನ ಉತ್ತರಾಧಿಕಾರಿಗಳು ಅದನ್ನು ನಿರಾಕರಿಸಿದರು. ಹೊರದೇಶಗಳಲ್ಲಿ ಬೇರೆ ಹೆಸರಿನಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದ ಲೇಖಕರನ್ನು ಬಂಧಿಸಿದರು. ಕೆಲವರನ್ನು ಶ್ರಮಿಕ ಶಿಬಿರಗಳಿಗೆ ಒತ್ತಾಯದಿಂದ ಸೇರಿಸಲಾಯಿತು. ನೊಬೆಲ್ ಪ್ರಶಸ್ತಿ ವಿಜೇತ ಸೋಲ್ಜೆನಿಟ್ಸನ್‌ನನ್ನು ಪೀಡಿಸಿ ಅವನ ಕೃತಿಗಳನ್ನು ನಿಷೇಧಿಸಿದರು. 1970ರಲ್ಲಿ ಬಂಧನದಲ್ಲಿಟ್ಟಿದ್ದ ಲೇಖಕರನ್ನು ಬಿಡುಗಡೆ ಮಾಡುವಂತೆ 63 ಮಂದಿ ಜನಪ್ರಿಯ ಲೇಖಕರು ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಸ್ಟಾಲಿನ್ ಕಾಲದಲ್ಲಿ ಸಕ್ರಿಯರಾಗಿದ್ದು ಕ್ರುಶ್ಚೇವ್ ಕಾಲದಲ್ಲಿ ಹಿನ್ನೆಲೆಗೆ ಸರಿದಿದ್ದವರಿಗೆ ಮತ್ತೆ ಸ್ಥಾನಮಾನಗಳನ್ನು ಕೊಡುವುದರ ವಿರುದ್ಧ ಪ್ರತಿಭಟಿಸಿ ಸಾರ್ವಜನಿಕ ಜೀವನದ 25 ಜನ ಗೌರವಾನ್ವಿತರು ಬ್ರೆಜ್ನೇವ್‌ಗೆ ಪತ್ರ ಬರೆದರು. ನಾಗರಿಕ ಹಕ್ಕುಗಳನ್ನು ಸ್ಥಾಪಿಸುವುದು, ಹೆಚ್ಚಿನ ಬೌದ್ಧಿಕ ಸ್ವಾತಂತ್ರ್ಯ ನೀಡುವುದು ಮತ್ತು ಸಂಘ ಸಂಸ್ಥೆಗಳನ್ನು ಪ್ರಜಾಸತ್ತಾತ್ಮಕಗೊಳಿಸಲು ವಿಚಾರವಂತರು ಬೇಡಿಕೆ ಸಲ್ಲಿಸುತ್ತಿದ್ದರು. ಒಟ್ಟಿನಲ್ಲಿ ಕಮ್ಯುನಿಸ್ಟ್ ಕ್ರಾಂತಿ ನಡೆದು 50 ವರ್ಷಗಳು ಕಳೆದರೂ ರಷ್ಯ ಈ ವ್ಯವಸ್ಥೆಗೆ ಮನಃಪೂರ್ವಕವಾಗಿ ತೆರೆದುಕೊಳ್ಳಲಿಲ್ಲ.

ಬ್ರೆಜ್ನೇವ್ ಮತ್ತು ಕೊಸಿಗಿನ್‌ರ ಕಾಲದಲ್ಲಿ ಚೀನ ಮತ್ತು ರಷ್ಯಗಳ ನಡುವೆ ಅನೇಕ ಕಾರಣಗಳಿಂದಾಗಿ ವಿರಸ ಹೆಚ್ಚಿತು. ಸರಹದ್ದಿನ ವಿವಾದದಿಂದ 1969ರ ಮಾರ್ಚ್‌ನಲ್ಲಿ ಉಸ್ಸುರೀ ನದಿ ದಂಡೆಯ ಉದ್ದಕ್ಕೂ ರಕ್ತಪಾತದ ಘರ್ಷಣೆಗಳಾದವು. ಆಗಸ್ಟ್‌ನಲ್ಲಿ ಸಿಂಕಿಯಾಂಗ್ ಪ್ರದೇಶದಲ್ಲೂ ಘರ್ಷಣೆಗಳಾದವು. ಚೀನದ ಪ್ರಭಾವವನ್ನು ಉತ್ತರ ಕೊರಿಯದಲ್ಲಿ ತಗ್ಗಿಸಲು ಆ ದೇಶಕ್ಕೆ ರಷ್ಯ ನೆರವು ನೀಡತೊಡಗಿತು. ಇದರಿಂದ ಸಮಗ್ರ ಕಮ್ಯುನಿಸ್ಟ್ ಪ್ರಪಂಚ ಏಕಶಿಲೆಯಂತೆ ಉಳಿಯದೆ ಅದರಲ್ಲಿ ಬಿರುಕು ಕಾಣಿಸಿಕೊಂಡಿತು. ರೊಮೇನಿಯ ಗಣರಾಜ್ಯ ಸ್ವತಂತ್ರ ನಿಲುವು ತಳೆಯಲು ತೊಡಗಿದಾಗ ಮತ್ತು ಚೀನದೊಂದಿಗೆ ಸ್ನೇಹ ಬೆಳೆಸಲು ಪ್ರಯತ್ನಿಸಿದಾಗ ರಷ್ಯ ಅದನ್ನು ಹತ್ತಿಕ್ಕಲು ಪ್ರಯತ್ನಿಸಿತು. ಚೆಕೊಸ್ಲೊವಾಕೀಯದಲ್ಲಿ ತನ್ನ ಹಿತಾಸಕ್ತಿಗಳಿಗೆ ಧಕ್ಕೆಯಾಗುತ್ತಿದೆ ಎಂದು ಭಾವಿಸಿದ ರಷ್ಯ 1968ರಲ್ಲಿ ಅದರ ಮೇಲೆ ಸೈನಿಕ ಕಾರ್ಯಾಚರಣೆ ನಡೆಸಿತು. ತೃತೀಯ ಜಗತ್ತಿಗೆ ಸೇರಿದ ಭಾರತ ಪಾಕಿಸ್ತಾನ ಮತ್ತು ಅರಬ್ ರಾಷ್ಟ್ರಗಳೊಂದಿಗೆ ರಷ್ಯದ ಸಂಬಂಧಗಳು ಸೌಹಾರ್ದಯುತವಾಗಿದ್ದವು. 1962ರಲ್ಲಿ ನಡೆದ ಭಾರತ –ಪಾಕಿಸ್ತಾನದ ಯುದ್ಧವನ್ನು ಕೊನೆಗೊಳಿಸಿ ಶಾಂತಿ ಸ್ಥಾಪಿಸುವಲ್ಲಿ ರಷ್ಯ ಆಸಕ್ತಿ ವಹಿಸಿತು. ಇದರ ಪರಿಣಾಮವಾಗಿ ತಾಷ್ಕೆಂಟ್ ಒಪ್ಪಂದ ಏರ್ಪಟ್ಟಿತು. 1966ರಲ್ಲಿ ಮಾಸ್ಕೋ ಮತ್ತು ನ್ಯೂಯಾರ್ಕ್‌ಗಳ ನಡುವೆ ವಾಣಿಜ್ಯ ವಿಮಾನ ಸಂಚಾರ ಪ್ರಾರಂಭವಾದವು. ಆದರೆ 1979ರಲ್ಲಿ ರಷ್ಯ ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನಡೆಸಿದಾಗ ಅಮೆರಿಕದೊಂದಿಗಿನ ಸಂಬಂಧಗಳು ಬಿಗಿಗೊಂಡವು.

1971ರಲ್ಲಿ ಬ್ರೆಜ್ನೇವ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಮತ್ತೆ ಚುನಾಯಿತರಾದರು. 1976ರಲ್ಲಿ ಇವರನ್ನು ಸೋವಿಯತ್ ಒಕ್ಕೂಟದ ಮಾರ್ಷಲ್ ಆಗಿ ಮಾಡಲಾಯಿತು. ಸ್ಟಾಲಿನ್ ಮಾತ್ರ ಈ ಸ್ಥಾನವನ್ನು ಪಡೆದಿದ್ದ. ಬ್ರೆಜ್ನೇವ್ 1977ರಲ್ಲಿ ಪ್ರಿಸೀಡಿಯಂನ ಅಧ್ಯಕ್ಷರಾಗಿದ್ದ ಪೊಡ್ಗೊರ್ನಿ ಅವರನ್ನು ಆ ಹುದ್ದೆಯಿಂದ ವಜಾ ಮಾಡಿದಾಗ ಸಾಮೂಹಿಕ ನಾಯಕತ್ವ ವ್ಯವಸ್ಥೆ ಕೊನೆಗೊಂಡಿತು. ಆ ಸ್ಥಾನಕ್ಕೆ ಅದೇ ವರ್ಷ ಜೂನ್ 16ರಂದು ಬ್ರೆಜ್ನೇವ್ ಅವಿರೋಧವಾಗಿ ಚುನಾಯಿತರಾದರು. ಈ ಎರಡೂ ಹುದ್ದೆಗಳನ್ನು ಏಕಕಾಲದಲ್ಲಿ ಪಡೆದವರಲ್ಲಿ ಬ್ರೆಜ್ನೇವ್ ಮೊದಲಿಗರಾಗಿದ್ದು ಈ ಎರಡೂ ಹುದ್ದೆಗಳನ್ನು ಇವರು ತಮ್ಮ ನಿಧನದವರೆಗೂ (10 ನವೆಂಬರ್ 1982) ಉಳಿಸಿಕೊಂಡಿದ್ದರು.

ಬ್ರೆಜ್ನೇವ್ ಒಂದು ರೀತಿಯಲ್ಲಿ ಸ್ಟಾಲಿನ್‌ನಂತೆ ದೀರ್ಘಕಾಲ ಆಳಿ ಅವನ ಕೆಲವು ಆದರ್ಶಗಳನ್ನು ನಂಬಿದ್ದ ವ್ಯಕ್ತಿ. ಆದರೆ ಆಡಳಿತದಲ್ಲಿ ಭ್ರಷ್ಟಾಚಾರವನ್ನು ಮತ್ತು ಅದಕ್ಷತೆಯನ್ನು ಗಣನೀಯವಾಗಿ ನಿವಾರಿಸಲಾಗಲಿಲ್ಲ. ಕೆಲವು ಬಂಡವಾಳಶಾಹಿ ದೇಶಗಳು ಸಾಧಿಸಿದ

ಪ್ರಗತಿಯ ಅಳತೆಗೋಲಲ್ಲಿ ನೋಡಿದಾಗ ರಷ್ಯ ತೀರ ಹಿಂದೆ ಬಿದ್ದಿತು. ರಷ್ಯ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಕೈಹಾಕುತ್ತಿದ್ದುದರಿಂದ ಮತ್ತು ಸೈನ್ಯ ವ್ಯವಸ್ಥೆಗೆ ಭಾರಿ ವೆಚ್ಚ ಮಾಡುತ್ತಿದ್ದುದರಿಂದ ಖಜಾನೆಯ ಮೇಲೆ ಭಾರಿ ಹೊರೆಬಿತ್ತು. ಆದ್ದರಿಂದ ಬ್ರೆಜ್ನೇವ್‌ರ ವಿಫಲತೆ ಇಡೀ ಕಮ್ಯುನಿಸ್ಟ್ ವ್ಯವಸ್ಥೆಯ ವಿಫಲತೆಯಾಗಿ ಪರಿಣಮಿಸಿತು.

ಬ್ರೆಜ್ನೇವ್ ಅನಂತರ ಅಧಿಕಾರಕ್ಕೆ ಬಂದ ಯೂರಿ ಆಂಡ್ರೊಪೊವ್ (1982–84) ಸ್ವಲ್ಪಕಾಲ ಮಾತ್ರ ಅಧಿಕಾರದಲ್ಲಿದ್ದುದರಿಂದ ಹೆಚ್ಚಿನ ಬದಲಾವಣೆಗಳನ್ನು ತರಲಾಗಲಿಲ್ಲ. ಅವರ ಉತ್ತರಾಧಿಕಾರಿ ಕಾನ್‌ಸ್ಟಾಂಟಿನ್ ಚೆರ್ನೆಂಕೊ ಬಹುಬೇಗ ಅಂದರೆ 1985ರಲ್ಲಿ ನಿಧನರಾದರು. ಅವರ ಅನಂತರ ಪ್ರಧಾನ ಕಾರ್ಯದರ್ಶಿಯಾದ ಮೈಕೇಲ್ ಗೊರ್ಬಚೇವ್‌ರ ಆಡಳಿತ ಕಾಲ ಮಹತ್ತ್ವದ ಘಟನಾವಳಿಗಳಿಂದ ಕೂಡಿದ್ದಿತು. ಗೊರ್ಬಚೇವ್ ಆರ್ಥಿಕರಂಗದಲ್ಲಿ ರಷ್ಯ ಅನುಭವಿಸಿದ್ದ ವಿಫಲತೆಯನ್ನು ಸರಿದೂಗಿಸಲು ವಾಸ್ತವ ಸಂಗತಿಗಳ ಬೆಳಕಿನಲ್ಲಿ ಮುನ್ನಡೆಯತೊಡಗಿದರು. ಕಮ್ಯುನಿಸ್ಟ್ ಸಿದ್ಧಾಂತ ಪರಮಸತ್ಯವೆಂದು ಸಾರುವುದಕ್ಕಿಂತ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆದ್ಯತೆ ಕೊಟ್ಟರು. ಇದರಿಂದ ಇವರು ಅನೇಕ ಹೊಂದಾಣಿಕೆ ಕ್ರಮಗಳನ್ನು ಕೈಗೊಂಡು ಟೀಕೆಗೂ ಗುರಿಯಾದರು. ಇವರು ಗ್ಲಾಸ್‌ನೊಸ್ಟ್ ಅಥವಾ ಉದಾರೀಕರಣ ಎಂಬ ನೀತಿಯನ್ನು ಪ್ರತಿಪಾದಿಸಿದರು. 1941ರಿಂದ ಈಚೆಗೆ ಮೊದಲಬಾರಿಗೆ 1988ರ ಜೂನ್‌ನಲ್ಲಿ ಪಕ್ಷದ ವಿಶೇಷ ಅಧಿವೇಶನವನ್ನು ಕರೆದು ಪೆರಿಸ್ಟ್ರೊಯ್ಕ ಎಂಬ ಸಮಗ್ರ ರಾಜಕೀಯ ಸೂತ್ರವನ್ನು ಮಂಡಿಸಿದರು. 1989ರ ಮಾರ್ಚ್‌ನಲ್ಲಿ ಜನಪ್ರತಿನಿಧಿಗಳ ಸಭೆಗೆ ಬೊರಿಸ್ ಎಲ್ಸಿನ್ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸುಧಾರಣಾವಾದಿಗಳು ಚುನಾಯಿತರಾದರು. ಮೇನಲ್ಲಿ ಗೊರ್ಬಚೇವ್ ಹೊಸದಾಗಿ ಸೃಷ್ಟಿಸಿದ ಕಾರ್ಯನಿರ್ವಾಹಕ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾದರು. ಸೋವಿಯತ್‌ನ ವಿವಿಧ ಕುಲಸಂಬಂಧವಾದ ಗಣ್ಯ ಪ್ರತಿನಿಧಿಗಳು ಹೆಚ್ಚಾಗಿ ಆಯ್ಕೆಗೊಂಡರು. 1989ರಲ್ಲಿ ಮುಕ್ತ ಚುನಾವಣೆ ನಡೆಯಿತು. ಬೊರಿಸ್‌ಎಲ್ಸಿನರು ಸುಪ್ರೀಂ ಸೋವಿಯತ್‌ನ ಅಧ್ಯಕ್ಷರಾಗಿ ಚುನಾಯಿತರಾದರು.

ಈ ಹೊತ್ತಿಗೆ ರಷ್ಯ ಏಕಕಾಲದಲ್ಲಿ ತುರ್ತಾಗಿ ಎರಡು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿತ್ತು. ಮೊದಲನೆಯದು, ಆರ್ಥಿಕ ಉದಾರೀಕರಣವನ್ನು ಹೇಗೆ ಮಾಡುವುದೆಂಬುದು, ಎರಡನೆಯದು ವಿವಿಧ ಭಾಷಿಕ ಮತ್ತು ಕುಲಸಂಬಂಧಿ ಸಮುದಾಯಗಳಿಗೆ ಹೆಚ್ಚಿನ ಅಧಿಕಾರ ನೀಡುವುದು. ಎರಡನೆಯ ಪ್ರಶ್ನೆಗೆ ತುರ್ತಾಗಿ ಆದ್ಯತೆ ಕೊಡದಿದ್ದರೆ ಸೋವಿಯತ್ ರಷ್ಯ ಚೂರುಚೂರಾಗಿ ಒಡೆದು ಹೋಗುವ ಅಪಾಯವಿದ್ದಿತು. ಶತಮಾನಗಳ ಕಾಲದಿಂದ ರಷ್ಯದ ಸಾಮ್ರಾಟರೆಲ್ಲರೂ ಪೂರ್ವ ಯುರೋಪಿನಲ್ಲಿ ಹಾಗೂ ಈಗಿನ ಇರಾನ್ ಮತ್ತು ಆಫ್ಘಾನಿಸ್ತಾನಗಳ ಸರಹದ್ದಿನ ಮಧ್ಯಏಷ್ಯದಲ್ಲಿ ಅವಿರತವಾಗಿ ರಷ್ಯನ್ನರಲ್ಲದ ಮತ್ತು ವಿಶೇಷವಾಗಿ ಮಧ್ಯ ಏಷ್ಯದಲ್ಲಿ ಕ್ರೈಸ್ತರಲ್ಲದ ಸಮುದಾಯಗಳು ಹೆಚ್ಚಾಗಿರುವ ಪ್ರದೇಶಗಳನ್ನು ರಷ್ಯದ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುತ್ತಲೇ ಬಂದಿದ್ದರು. ಅವು ಸ್ವತಂತ್ರಗೊಂಡಾಗ ಅಥವಾ ಇತರ ರಾಷ್ಟ್ರಗಳ ಅಧೀನವಾದಾಗಲೂ ಬಿಡದೆ ಮತ್ತೆ ಮತ್ತೆ ತಮಗೆ ಅನುಕೂಲವಾದ ಸಂದರ್ಭಗಳಲ್ಲೆಲ್ಲ ರಷ್ಯದ ಅಧಿಕಾರ ವಲಯದೊಳಗೆ ಸೇರಿಸಿಕೊಂಡರು. ಈಗ ಈ ರಷ್ಯೀಕರಣದಿಂದ ಬೇಸತ್ತು ಮೆದುವಾಗಿ ಪ್ರತಿಭಟಿಸುತ್ತಿದ್ದವರು ಸಂಘಟಿತರಾಗಿ ದೃಢವಾಗಿ ಪ್ರತಿಭಟಿಸತೊಡಗಿದರು. ಸಾಧ್ಯವಾದರೆ ಸಶಸ್ತ್ರ ಸಂಘರ್ಷವನ್ನು ನಡೆಸಲು ಸಿದ್ಧರಾದರು. ಆಗ ರಷ್ಯನ್ನರು ಅಲ್ಪಸಂಖ್ಯಾತರಾಗಿದ್ದ ಈ ಪ್ರದೇಶಗಳಲ್ಲಿ ಗಲಭೆಗಳಿಗೆ, ಅವಕಾಶ ಕೊಟ್ಟರೆ ವಿದೇಶಿಹಸ್ತಕ್ಷೇಪಕ್ಕೆ ಅವಕಾಶವಾಗುವುದಲ್ಲದೆ ಕೇಂದ್ರ ಸರ್ಕಾರದ ಅಧಿಕಾರಕ್ಕೆ ಧಕ್ಕೆ ಬರುತ್ತದೆಂದು ಯೋಚಿಸಿದ ಸರ್ಕಾರ ಹೊಸ ಯೋಜನೆಯೊಂದನ್ನು ರೂಪಿಸಿತು.

1991ರ ಡಿಸೆಂಬರ್‌ನಲ್ಲಿ ಒಂದು ಘೋಷಣೆ ಹೊರಡಿಸಿ ಹಿಂದಿನ ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟವನ್ನು (ಯು.ಎಸ್.ಎಸ್.ಆರ್.) ವಿಸರ್ಜಿಸಲಾಯಿತು. ಅದರ ಸ್ಥಾನದಲ್ಲಿ ರಷ್ಯದ ಸಮಾಜವಾದಿ ಮಹಾಒಕ್ಕೂಟವನ್ನು (ಫೆಡರೇಷನ್ ಆಫ್ ಸೋಷಿಯಲಿಷ್ಟ್ ರಿಪಬ್ಲಿಕ್ ಆಫ್ ರಷ್ಯ) ರಚಿಸಲಾಯಿತು. ಇದರಂತೆ 20 ಗಣರಾಜ್ಯಗಳು (ಇದರಲ್ಲಿ ಹಿಂದಿನ ವ್ಯವಸ್ಥೆಯಂತೆ 16 ರಾಜ್ಯಗಳು ಸ್ವಾಯತ್ತವಾಗಿದ್ದವು). 49 ಆಡಳಿತಾತ್ಮಕ ಘಟಕಗಳು 6 ಕ್ರೈಗಳು ಅಥವಾ ಪ್ರಾಂತ್ಯಗಳು ಅಸ್ತಿತ್ವಕ್ಕೆ ಬಂದವು. ಮಾಸ್ಕೋ ಮತ್ತು ಪೀಟರ್ಸ್‌ಬರ್ಗ್‌ಗಳಿಗೆ ವಿಶೇಷ ಆಡಳಿತ ಸ್ಥಾನಮಾನ ನೀಡಲಾಯಿತು. ಜೊತೆಗೆ ಸ್ವತಂತ್ರ ರಾಜ್ಯಗಳ ಕಾಮನ್‌ವೆಲ್ತ್ (ಕಾಮನ್‌ವೆಲ್ತ್ ಆಫ್ ಇಂಡಿಪೆಂಡೆಂಟ್ ಸ್ಟೇಟ್ಸ್) ಎಂಬ ಒಂದು ವೇದಿಕೆಯನ್ನು ರಚಿಸಿ ಎಲ್ಲ ರಾಜ್ಯಗಳು ಅದರ ಅಡಿ ರಕ್ಷಣೆ ಮತ್ತು ವಿದೇಶಾಂಗ ನೀತಿಯನ್ನು ಹೊರತುಪಡಿಸಿ ಉಳಿದಂತೆ ವಿದೇಶಿ ವ್ಯಾಪಾರವೂ ಸೇರಿದಂತೆ ಎಲ್ಲ ವಿಷಯಗಳಲ್ಲೂ ಸ್ವತಂತ್ರ ಸ್ಥಾನಮಾನ ಪಡೆಯಲು ಅನುವು ಮಾಡಿಕೊಡಲಾಯಿತು. ಹೀಗೆ ರಚಿತವಾದ ರಾಜ್ಯಗಳು ಈ ಮುಂದಿನಂತಿವೆ.

ಎಸ್ಟೋನಿಯ, ಉಕ್ರೇನ್, ಬೈಲೊರಷ್ಯ, ಆರ್ಮೇನಿಯ, ಅಜರ್‌ಬೈಜಾನ್, ಜಾರ್ಜಿಯ, ಮೊಲ್ಡೆವಿಯ, ಲಾತ್ವಿಯ, ಲಿಥುವೇನಿಯ, ಚೆಚನ್ಯ, ತಜಾಕಿಸ್ತಾನ್, ಉಜ್ಬೇಕಿಸ್ತಾನ್, ಕಿರ್ಗಿಜ್‌ಸ್ತಾನ್, ಕಜಕ್‌ಸ್ತಾನ್, ತುರ್ಕ್‌ಮೇನಿಸ್ತಾನ್, ಇಂಗುಸ್ತಿಯ. ಸೋವಿಯತ್ ಸರ್ಕಾರ ಈ ವ್ಯವಸ್ಥೆಯನ್ನು ಮಾಡಿ ಎಲ್ಲ ಗಣರಾಜ್ಯಗಳನ್ನು ತೃಪ್ತಿಪಡಿಸಲು ಸಾಧ್ಯವಾಗಿಲ್ಲ. ಅವುಗಳಲ್ಲಿ ಹೆಚ್ಚಿನವು ಸಂಪೂರ್ಣ ಸಾರ್ವಭೌಮತೆ ಕೇಳುತ್ತಿವೆ. ಕೆಲವು ಸಾರ್ವಭೌಮ ರಾಷ್ಟ್ರಗಳೆಂದೇ ಘೋಷಿಸಿಕೊಂಡಿವೆ. ವಿಶೇಷವಾಗಿ ಮಧ್ಯ ಏಷ್ಯದ ರಾಜ್ಯಗಳಲ್ಲಿ ಇದು ಕಂಡುಬಂದಿದೆ. ಚೆಚನ್ಯ ರಾಜ್ಯದ ಸ್ವಾತಂತ್ರ್ಯ ಕೋರಿಕೆಯನ್ನು ಹತ್ತಿಕ್ಕಲು ರಷ್ಯ ಸೈನಿಕ ಕಾರ್ಯಾಚರಣೆ ನಡೆಸಿತು. ಇದರಿಂದ ಪಾಶ್ಚಾತ್ಯ ದೇಶಗಳ ಟೀಕೆಗೆ ಒಳಗಾಯಿತು. 1992ರಲ್ಲಿ ಉತ್ತರ ಅಸೀಸಿಯದಲ್ಲಿ ರಕ್ತಪಾತವಾಗಿ ಸಾವಿರಾರು ಜನರು ವಲಸೆಹೋದರು. ಈ ರಾಜ್ಯಗಳ ವಿವಾದ ಪೂರ್ಣವಾಗಿ ಬಗೆಹರಿದಿಲ್ಲ. ಒಟ್ಟಿನಲ್ಲಿ ರಷ್ಯ ಇತರ ಅಲ್ಪ ಸಂಖ್ಯಾತ ಸಮುದಾಯಗಳನ್ನು ತನ್ನಲ್ಲಿ ಐಕ್ಯ ಮಾಡಿಕೊಳ್ಳುವಲ್ಲಿ ಸಫಲವಾಗದಿರುವುದು ಕಂಡುಬಂದಿದೆ. ರಷ್ಯನ್ ಭಾಷೆಯನ್ನು ಎಲ್ಲ ಪ್ರಾಂತ್ಯಗಳಲ್ಲೂ ಕಡ್ಡಾಯವಾಗಿ ಹೇರಹೊರಟಿದ್ದು ಈ ಸ್ಫೋಟಕ್ಕೆ ಎಡೆಯಾದ ಕಾರಣಗಳಲ್ಲೊಂದು.

**ಸರ್ಕಾರ:** 1993ರ ಡಿಸೆಂಬರ್‌ನಲ್ಲಿ ರಷ್ಯದ ಮಹಾ ಒಕ್ಕೂಟ ಒಂದು ಸಂವಿಧಾನವನ್ನು ಅಳವಡಿಸಿಕೊಂಡಿತು. ಇದರ ಮೇರೆಗೆ ರಾಷ್ಟ್ರದ ಅಧಿಕಾರ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಹಂಚಿಕೆಯಾಗಿದೆ. ಪ್ರತಿಯೊಂದು ಇನ್ನೊಂದರಿಂದ ಸ್ವತಂತ್ರವಾದ ಅಂಗಗಳಾಗಿವೆ. ರಷ್ಯ ಫೆಡರೇಷನ್ನಿನ ಅಧ್ಯಕ್ಷರೇ ರಾಷ್ಟ್ರದ ಮುಖ್ಯರು ಮತ್ತು ಸಮಗ್ರ ಸಶಸ್ತ್ರ ಪಡೆಗಳ ಮಹಾದಂಡನಾಯಕರು. ಅಧ್ಯಕ್ಷರ ಅವಧಿ ನಾಲ್ಕು ವರ್ಷಗಳು. ಅಧ್ಯಕ್ಷರನ್ನು ನೇರವಾಗಿ ಜನರು ಚುನಾಯಿಸುತ್ತಾರೆ. ಅಧ್ಯಕ್ಷರು ಸರ್ಕಾರದ ಮುಖ್ಯರನ್ನು ಅಥವಾ ಪ್ರಧಾನ ಮಂತ್ರಿಯನ್ನು ನೇಮಿಸಬಹುದು.

ಕೇಂದ್ರ ಶಾಸಕಾಂಗ ದ್ವಿಸದನ ಸ್ವರೂಪದ್ದಾಗಿರುತ್ತದೆ. ಇದರ ಅವಧಿಯೂ 4 ವರ್ಷಗಳು. ಮೇಲ್ಮನೆಯಲ್ಲಿ 178 ಸದಸ್ಯರಿದ್ದರೆ ಕೆಳಮನೆಯಲ್ಲಿ 450 ಸದಸ್ಯರಿರುತ್ತಾರೆ. ರಷ್ಯ ಇಂದು ಬಹುತೇಕವಾಗಿ ಪ್ರಜಾತಂತ್ರಾತ್ಮಕ ರಾಷ್ಟ್ರದಂತೆ ಕಾರ್ಯನಿರ್ವಹಿಸುವ ಸಂವಿಧಾನವನ್ನು ಅಂಗೀಕರಿಸಿದೆ. ಇದರಿಂದಾಗಿ ಒಂದು ಕ್ರಾಂತಿಯ ಮೂಲಕ ಬದಲಾಯಿಸಬೇಕಾಗಿದ್ದ ವ್ಯವಸ್ಥೆ ಸೌಮ್ಯವಾಗಿ ಬದಲಾದಂತಾಗಿದೆ. ಆದರೆ ಬದಲಾದ ವ್ಯವಸ್ಥೆಯ ಅನುಷ್ಠಾನದ ಮೇಲೆ ಅದರ ಭವಿಷ್ಯ ನಿಂತಿದೆ. ಬೋರಿಸ್ ಎಲ್ಸಿನ್ ಎರಡನೆಯ ಬಾರಿಗೆ ಅಧ್ಯಕ್ಷರಾಗಿ 1996 ಆಗಸ್ಟ್ 9ರಂದು ಅಧಿಕಾರ ವಹಿಸಿಕೊಂಡರು. ವಿಕ್ಟರ್ ಚರ್ನೋಮಿರ್‌ದಿನ್ ಪ್ರಧಾನ ಮಂತ್ರಿಯಾಗಿದ್ದಾರೆ.

ಬೋರಿಸ್ ಎಲ್ಸಿನ್‌ರ ಕಾಲದ ಪ್ರಮುಖ ಒಪ್ಪಂದವೆಂದರೆ 1997ರ ಮೇನಲ್ಲಿ ಜನಾಂಗೀಯ ಕದನ ನಿಲುಗಡೆಗೆ ಸಮ್ಮತಿಸಿ ಚೆಚನ್ಯದೊಂದಿಗೆ ಯುದ್ಧ ವಿರಾಮಕ್ಕೆ ಸಹಿ ಹಾಕಿದರು. 1998ರಲ್ಲಿ ರಷ್ಯ ಆರ್ಥಿಕ ದುಸ್ಥಿತಿಗೆ ತಲುಪಿತ್ತು. ಅಧ್ಯಕ್ಷರಾಗಿದ್ದ ಎಲ್ಸಿನ್ ತಮ್ಮ ಸಂಸತ್ತನ್ನು ವಜಾಗೊಳಿಸಿ, ಪ್ರಧಾನ ಮಂತ್ರಿಯನ್ನೂ ವಜಾಗೊಳಿಸಿದರು. ಆರ್ಥಿಕವಾಗಿ ದೃಢನಿಲುವು ತಳೆಯಲು ಅನುಕೂಲವಾಗುವಂತೆ ಸೆರ್ಗಿಕಿರಿಯನ್‌ಕೊರವರನ್ನು ಪ್ರಧಾನಿಯಾಗಿ ನೇಮಿಸಿಕೊಂಡರು ಮತ್ತೆ ಇವರನ್ನು ವಜಾಗೊಳಿಸಿ ಸೆಪ್ಟಂಬರ್ 1998ರಲ್ಲಿ ಯೆವ್‌ಗೇನಿ, ನಿಮ ಪ್ರಿಯಕೋವ್‌ರವರನ್ನು ಪ್ರಧಾನಿಪಟ್ಟಕ್ಕೆ ತಂದರು. ಆದರೂ ಎಲ್ಸಿನ್‌ರವರ ಆರೋಗ್ಯದಂತೆ ದೇಶದ ಆರ್ಥಿಕ ಪರಿಸ್ಥಿತಿಯು ಸಹ ಹದಗೆಟ್ಟಿತು.

ಆಗಸ್ಟ್ 1999ರಲ್ಲಿ ಇಸ್ಲಾಮಿಕ್ ಉಗ್ರರು ಚೆಚನ್ಯ ಹಾಗೂ ಪಕ್ಕದ ದಾಗಿಸ್ತಾನ್ ರಾಜ್ಯಗಳನ್ನು ಒಗ್ಗೂಡಿಸಲು ಪ್ರಯತ್ನಿಸಿ ಹಲವಾರು ನಗರಗಳಲ್ಲಿ ದಂಗೆ ನಡೆಸಿತು. ರಷ್ಯದ ಸೇನೆ ಹಾಗೂ ಬಂಡುಕೋರರ ದಾಳಿಗೆ ಹಲವು ಜನ ನಾಗರಿಕರು ಜೀವ ತೆರಬೇಕಾಯಿತು.

ಡಿಸೆಂಬರ್ 1999ರಲ್ಲಿ ನಡೆದ ಪಾರ್ಲಿಮೆಂಟ್ (ಡೂಮ) ಚುನಾವಣೆಯಲ್ಲಿ ಪ್ರಧಾನಿಯಾಗಿದ್ದ ಪುಟಿನ್‌ರವರು ಅಧಿಕ ಬಹುಮತ ಪಡೆದು 1999 ಡಿಸೆಂಬರ್ 31ರಂದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಪುಟಿನ್‌ರವರು ಅಧ್ಯಕ್ಷರಾಗಿ ಆಯ್ಕೆ ಗೊಂಡನಂತರ ಅಮೆರಿಕ ಹಾಗೂ ಯುರೋಪಿನ ರಾಷ್ಟ್ರಗಳ ನಡುವೆ ಹೆಚ್ಚಿನ ಸಂಬಂಧಗಳು ಬೆಸೆದುಕೊಂಡಿವೆ. ಪುಟಿನ್‌ರವರ ದೃಢನಿರ್ಧಾರ ಹಾಗೂ ಖಾಸಗಿ ಸಹಭಾಗಿತ್ವದ ನೆರವಿನಿಂದ ರಷ್ಯ ಆರ್ಥಿಕವಾಗಿಯೂ ಬಲಗೊಳ್ಳುತ್ತಿದೆ. 2006ರಲ್ಲಿ ನಡೆದ ಚುನಾವಣೆಯಲ್ಲಿ ಪುಟಿನ್ ಎರಡನೆಯ ಬಾರಿಗೆ ರಷ್ಯದ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ದೇಶದ ಆರ್ಥಿಕ ಹಾಗೂ ರಾಜಕೀಯ ರಂಗದಲ್ಲಿ ಹೊಸ ಆಶಾಕಿರಣಗಳು ಗೋಚರಿಸುತ್ತಿವೆ. (ಡಿ.ಎಸ್.ಜಿ.)

**ರಾಂಕೆ, ಲಿಯೋಪಾಲ್ಡ್ ವಾನ್:** ಜರ್ಮನಿಯ ಆಧುನಿಕ ಇತಿಹಾಸ ಪಿತಾಮಹ. ಇವನು 1795 ಡಿಸೆಂಬರ್ 20 ರಂದು ತುರಿಂಜಿಯದ ವೀಹೆ ಎಂಬಲ್ಲಿ ಜನಿಸಿದ. ಮೊದಲು ಬರ್ಲಿನ್‌ನಲ್ಲಿ ಇತಿಹಾಸ ಶಿಕ್ಷಕನಾಗಿದ್ದ ಇವನು ಅನಂತರ ಪ್ರಷ್ಯ ಸರ್ಕಾರದಲ್ಲಿ ಕೆಲಸಕ್ಕೆ ಸೇರಿದ. 1825 ರಲ್ಲಿ ಇತಿಹಾಸದ ಪ್ರಾಧ್ಯಾಪಕನಾಗಿ ಮತ್ತೆ ಬರ್ಲಿನ್‌ಗೆ ಹಿಂತಿರುಗಿದ. 1494 – 1514 ರ ಕಾಲಘಟ್ಟದ ಇತಿಹಾಸದ ಬಗೆಗೆ ಒಂದು ಪ್ರಬಂಧ ರಚಿಸಿ ಸಾಂಪ್ರದಾಯಿಕ ಇತಿಹಾಸವನ್ನು ಟೀಕಿಸಿದ. ಇವನ ಪ್ರಭಾವ ಜರ್ಮನಿಯನ್ನೂ ದಾಟಿ ಲಂಡನ್, ಅಮೆರಿಕದಲ್ಲೂ ವ್ಯಾಪಿಸಿತ್ತು. ಇತಿಹಾಸದಲ್ಲಿ ಹೇಳಿಕೊಳ್ಳುವಂಥ ಆಸಕ್ತಿ ಇಲ್ಲದಿದ್ದಾಗ್ಯೂ ಇವನು ನೀಬರ್‌ನ ರೋಮನ್ ಇತಿಹಾಸಕ್ಕೆ ಮರುಳಾಗಿದ್ದ. ಲೂಥರ್, ಜೊಹಾನ್ ಫಿಚೆ ಮತ್ತು ಗಯಟೆಯ ಚಿಂತನೆಗಳನ್ನು ಇಷ್ಟಪಟ್ಟು ಆಯ್ಕೆಮಾಡಿಕೊಂಡ. ಆಕರಗಳ ವಿಮರ್ಶಾತ್ಮಕ ಅಧ್ಯಯನವನ್ನು ಮೊಟ್ಟಮೊದಲಿಗೆ ವೈಜ್ಞಾನಿಕ ವಿಧಾನದಲ್ಲಿ ಬಳಸಿದವನಾಗಿಯೂ ಇವನು ಗಮನ ಸೆಳೆದ.

ಇತಿಹಾಸ ರಚನೆಯ ವಿಷಯದಲ್ಲಿ ಇವನದು ಮೂರು ಮಹತ್ತ್ವದ ಕೊಡುಗೆಗಳು. ಇವನ ಮೊದಲ ಗ್ರಂಥ ಹಿಸ್ಟರಿ ಆಫ್ ದ ರೋಮನ್ಸ್ ಆ್ಯಂಡ್ ಟ್ಯೂಟಾನಿಕ್ ನೇಷನ್ಸ್ (1824). ಅನಂತರ ಇವನು ಮೂರು ಸಂಪುಟಗಳಲ್ಲಿ ಹಿಸ್ಟರಿ ಆಫ್ ದ ಪೋಪ್ಸ್ (1834–36), ಒಂಬತ್ತು ಸಂಪುಟಗಳಲ್ಲಿ ವರ್ಲ್ಡ್ ಹಿಸ್ಟರಿ (1881–88) ಎಂಬ ಗ್ರಂಥಗಳನ್ನು

ಪ್ರಕಟಿಸಿದ. ಐತಿಹಾಸಿಕ ಸಂಪನ್ಮೂಲಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲನೆಗೆ ಒಳಪಡಿಸಬಹುದು ಎಂದು ಸಾಧಿಸಿದ್ದು ಇವನ ಎರಡನೆಯ ಮಹತ್ತ್ವದ ಕೊಡುಗೆ. ವಸ್ತುನಿಷ್ಠ ಸಂಶೋಧನೆ ಅತ್ಯಗತ್ಯ ಎಂದು ಪ್ರತಿಪಾದಿಸಿದ ಇವನಿಗೆ ಎಲ್ಲಕ್ಕಿಂತ ರಾಜಕೀಯ ಇತಿಹಾಸ ದೊಡ್ಡದು ಎನಿಸಿತ್ತು. ಇವನ ಮೂರನೆಯ ಕೊಡುಗೆ ಇತಿಹಾಸದ ತತ್ತ್ವಶಾಸ್ತ್ರದಲ್ಲಿ. ಇವನಿಗೆ ದೈವಿಕ ಹಾಗೂ ಅತಿಮಾನುಷ ಶಕ್ತಿಗಳಲ್ಲಿ ನಂಬಿಕೆ ಇತ್ತು. ಇವನ ಪ್ರಕಾರ ಪ್ರಪಂಚದ ಚರಿತ್ರೆ ಎಂದರೆ, ವಿಶ್ವದ ಆಗುಹೋಗುಗಳಲ್ಲಿ, ಚಲನೆಯಲ್ಲಿ, ಅಸ್ತಿತ್ವದಲ್ಲಿ ವ್ಯಕ್ತಿಗಳು ಮತ್ತು ರಾಷ್ಟ್ರಗಳ ಪಾತ್ರ (ವ್ಯಕ್ತಿಗಳು ಮತ್ತು ರಾಷ್ಟ್ರಗಳ ಪಾತ್ರ ನಿರ್ವಹಣೆಯೇ ಪ್ರಪಂಚದ ಚರಿತ್ರೆಯನ್ನು ರೂಪಿಸಿದೆ ಎಂಬುದು ಆತನ ಅಭಿಮತ). ಪ್ರಪಂಚದಲ್ಲಿ ದೇವರ ಚಿಂತನೆಗಳೇ ವ್ಯಕ್ತಿಗೆ ತತ್ತ್ವಗಳಾಗಿ ಕಂಡು ಮರೆಯಾಗುವ ಈ ಚಿಂತನೆಗಳ ಜೊತೆಗಿನ ಮುಖಾಮುಖಿಯಲ್ಲೆ ಇತಿಹಾಸದ ರಹಸ್ಯ ಅಡಗಿದೆ ಎಂದು ವಾದಿಸಿದ. ಇತಿಹಾಸದಲ್ಲಿ ವಸ್ತುನಿಷ್ಠ ನಿಲುವು ಇರಬೇಕು ಮತ್ತು ಇತಿಹಾಸದಲ್ಲಿ ದೈವತ್ವದ ಪಾತ್ರ ಇದೆ ಎಂಬುದನ್ನು ಬಹಳ ಮಂದಿ ಸುಲಭವಾಗಿ ಒಪ್ಪುವುದಿಲ್ಲ. ಸತ್ಯದ ಪ್ರತಿಪಾದನೆ ಮಾಡುವ ಪೂಜಾರಿ ಪಾತ್ರ ವಹಿಸುವ ಜವಾಬ್ದಾರಿಯಿಂದ ತಂತಾನೆ ವಿಮುಖನಾದ ಇವನು ಅದರಲ್ಲೆ ಮುಳುಗಿ ಹೋದವನಂತೆಯೂ ಕಾಣಿಸುವುದು ವಿಶೇಷ. ಇವನು ಇತರೆ ಚಿಂತಕರ ಆಧ್ಯಾತ್ಮಿಕ, ತಾತ್ತ್ವಿಕ ಚಿಂತನೆಗಳನ್ನು ತಿರಸ್ಕರಿಸಿದ. ಈತನ ಕೃತಿಗಳು ಸಂತ ಅಗಸ್ಟಿನ್‌ನ ಧಾರ್ಮಿಕ ಮೌಲ್ಯಗಳನ್ನು ಒಳಗೊಂಡಿದೆ ಎಂಬುದನ್ನು ಗಮನಿಸಬೇಕು. ಪ್ರಭುತ್ವ ಎಂಬುದು ಆತನಿಗೆ ನೈತಿಕವಾದ ಪರಿಕಲ್ಪನೆ, ಅದು ಚರ್ಚಿನಷ್ಟೇ ನೈತಿಕವಾದ ಸಂಗಾತಿಯಂತೆ. ಐತಿಹಾಸಿಕ ತತ್ತ್ವಕ್ಕೆ ಹೊಸ ಅರ್ಥ ನೀಡಲು ರಾಂಕೆ ಪ್ರಯತ್ನಿಸಿದ. ಆದರೆ ಜರ್ಮನ್ ವಿದ್ವಾಂಸರು ಇವನನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಪೋಪರ ಇತಿಹಾಸ, ಜರ್ಮನಿಯ ಪ್ರಗತಿಯ ಇತಿಹಾಸ, ಫ್ರೆಂಚ್ ಇತಿಹಾಸ, ರಷ್ಯದ ಇತಿಹಾಸ–ಇವು ಇವನ ಪ್ರಮುಖ ಕೃತಿಗಳು. ಈ ಎಲ್ಲ ಕೃತಿಗಳಲ್ಲೂ ಇವನು ವೈಜ್ಞಾನಿಕ ಚಿಂತನೆಯನ್ನು ಗಟ್ಟಿಗೊಳಿಸಲು ಯತ್ನಿಸಿದ್ದಾನೆ. ಸಂಪನ್ಮೂಲಗಳಾಗಿ ಬಳಕೆಗೊಳ್ಳುವ ಐತಿಹಾಸಿಕ ವಸ್ತುಗಳು ಮತ್ತು ದಾಖಲೆಗಳು ವೈಯಕ್ತಿಕ ಮತ್ತು ರಾಜಕೀಯ ಪೂರ್ವಗ್ರಹಗಳಿಂದ ಕೂಡಿರುತ್ತವೆಯಾದ್ದರಿಂದ ಅವುಗಳನ್ನು ಅತ್ಯಂತ ಎಚ್ಚರಿಕೆಯಿಂದ ಗಮನಿಸಬೇಕು ಎಂದು ತನ್ನ ಕೃತಿಯಲ್ಲಿ ಸ್ಪಷ್ಟವಾಗಿ ಹೇಳಿದ. ಜನ ಯಾವಾಗಲೂ ಅಸಲಿ ಅಥವಾ ಮೂಲ ವಸ್ತು ಮಾಹಿತಿಗಳನ್ನೇ ಅವಲಂಬಿಸ ಬೇಕು ಎಂಬುದು ಇವನ ಇರಾದೆಯಾಗಿತ್ತು. ಹೀಗೆ ರಾಂಕೆ ಆಧುನಿಕ ಕಾಲದ ಇತಿಹಾಸಜ್ಞನಾಗಿ ಮೂಡಿಬಂದ. ಅಸಲಿ ಸಂಪನ್ಮೂಲಗಳ ಬಳಕೆ ಹಾಗೂ ಅವುಗಳಿಗೆ ನೀಡಿರುವ ಮಹತ್ತ್ವ ಈ ವಿಚಾರಗಳಲ್ಲಿ ಈ ಬಗೆಯ ಚಿಂತನೆಗಳನ್ನು ನಡೆಸಿದವರಲ್ಲಿ ಈತನೇ ಮೊದಲಿಗ. (ಎಂ.ಎಸ್.)

**ರಾಖಿಗಡಿ:** ಹರಿಯಾಣ ರಾಜ್ಯದ ಹಿಸ್ಸಾರ್ ಜಿಲ್ಲೆಯಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಇಲ್ಲಿ ಒಟ್ಟು 6 ಪ್ರಾಚೀನ ದಿಬ್ಬಗಳಿದ್ದು ಇವು 105 ಹೆಕ್ಟೇರ್ ಪ್ರದೇಶದಲ್ಲಿ ಹರಡಿವೆ. 1960ರ ದಶಕದಲ್ಲಿ ಇಲ್ಲಿಯ ಅವಶೇಷಗಳನ್ನು ಗಮನಿಸಲಾಯಿತು. ಇಲ್ಲಿ 1997–2000ದವರೆಗೆ ಉತ್ಖನನ ನಡೆಯಿತು. ವಿಶಾಲವಾಗಿರುವ ಮುಖ್ಯ ದಿಬ್ಬದ ಮೇಲೆ ರಾಖಿಖಾಸ ಮತ್ತು ರಾಖಿಶಾಹಪುರ ಎನ್ನುವ ಹಳ್ಳಿಗಳಿವೆ. ಈ ದಿಬ್ಬದ ದಕ್ಷಿಣ ಭಾಗದಲ್ಲಿರುವ ಪ್ರಾಚೀನ ನದಿಪಾತ್ರ ದೃಶದ್ವತಿ ನದಿಯದಾಗಿರಬಹುದು.

ಉತ್ಖನನದಲ್ಲಿ ದೊರೆತ ಪುರಾವಶೇಷಗಳನ್ನು ಎರಡು ಹಂತಗಳಲ್ಲಿ ವರ್ಗೀಕರಿಸಲಾಗಿದೆ. ಹಂತ 1 ಆದಿ ಹರಪ್ಪ ಸಂಸ್ಕೃತಿ, ಹಂತ 2 ಪ್ರೌಢ ಹರಪ್ಪ ಸಂಸ್ಕೃತಿ. ಆದಿ ಹರಪ್ಪ ಹಂತವನ್ನು 2 ಉಪಹಂತಗಳಾಗಿ ವರ್ಗೀಕರಿಸಲಾಗಿದೆ. ಇವು: ನಗರಪೂರ್ವ (1ಎ) ಮತ್ತು ನಗರ ರಚನೆಯ (1ಬಿ) ಹಂತಗಳು (ಪ್ರಿ ಫಾರ್ಮೇಟಿವ್ ಮತ್ತು ಫಾರ್ಮೇಟಿವ್ ಅರ್ಬನಿಸಂ).

ಆದಿ ಹರಪ್ಪ ಕಾಲದ ನಗರಪೂರ್ವ ಹಂತದಲ್ಲಿ ಗ್ರಾಮ ಸಂಸ್ಕೃತಿಯ ಪ್ರಭಾವ ಗಾಢವಾಗಿದೆ. ಸು. 2 ಮೀ ವ್ಯಾಸದ ವೃತ್ತಾಕಾರದ ಮನೆಗಳ ಹಸಿಇಟ್ಟಿಗೆಯ ತಳಗಟ್ಟುಗಳು ದೊರಕಿವೆ. ತಳಗಟ್ಟಿನ ಸುತ್ತಲೂ ಮರದ ಕಂಬಗಳ ಗುಳಿಗಳಿವೆ. ಆದ್ದರಿಂದ ಮನೆಯ ಗೋಡೆಗಳು ಮಣ್ಣು ಮೆತ್ತಿದ ಬೊಂಬಿನದ್ದಾಗಿರಬಹುದು. ಇದಲ್ಲದೆ ಪೂರ್ಣವಾಗಿ ಹಸಿಇಟ್ಟಿಗೆಯಿಂದ ನಿರ್ಮಿಸಿರುವ ಕಟ್ಟಡವೂ (2.20 x 1.60 ಮೀ) ಕಂಡುಬಂದಿದೆ. ಇದರಲ್ಲಿ ಉಪಯೋಗಿಸಿರುವ ಇಟ್ಟಿಗೆಯ ಅಳತೆ (33x24x9 ಸೆಂಮೀ) 1:2:3 ಪ್ರಮಾಣವನ್ನು ಹೋಲದಿರುವುದು ಗಮನಾರ್ಹ. ಈ ಕಟ್ಟಡದ ಒಳಗಿನ ನೆಲವನ್ನು ಮಣ್ಣಲ್ಲಿ ಸಾರಿಸಿದ್ದು ಹೊರಭಾಗದ ನೆಲಗಟ್ಟನ್ನು ಸುಟ್ಟಇಟ್ಟಿಗೆಯ ಚೂರುಗಳಿಂದ ಮಾಡಲಾಗಿತ್ತು.

ಆದಿ ಹರಪ್ಪ ಕಾಲದ ನಗರ ರಚನೆಯ ಹಂತದಲ್ಲಿ ಹಸಿ ಹಾಗೂ ಸುಟ್ಟಇಟ್ಟಿಗೆಯಿಂದ ಕಟ್ಟಿದ ಅನೇಕ ಕಟ್ಟಡಗಳ ಅವಶೇಷಗಳು ದೊರೆತವು. ಇಟ್ಟಿಗೆಗಳು 1:2:3 ಪ್ರಮಾಣದಲ್ಲಿವೆ. ಕೆಲವು ಇಟ್ಟಿಗೆಗಳ ಮೇಲೆ ಹರಪ್ಪ ಸಂಸ್ಕೃತಿಯ ಅಕ್ಷರಗಳನ್ನು ಹೋಲುವ ಸಂಕೇತಗಳಿವೆ. ಸುಟ್ಟಇಟ್ಟಿಗೆಯಿಂದ ನಿರ್ಮಿಸಿರುವ ಚರಂಡಿಗಳು ವ್ಯವಸ್ಥಿತ ನಗರಯೋಜನೆಯ ಸೂಚನೆಗಳಾಗಿವೆ. ಒಂದು ಕಡೆ ಚರಂಡಿಯ ಪಕ್ಕದಲ್ಲಿ ಇಳಿಜಾರಾಗಿರುವ ಗಟ್ಟಿ ನೆಲವೂ ನೆಲದಲ್ಲಿ ಗುಂಡಿಗಳೂ ಕಂಡುಬಂದವು. ಈ ಗುಂಡಿಗಳಲ್ಲಿ ಬಟ್ಟೆಗೆ ಬಣ್ಣವನ್ನು ಹಾಕಲಾಗುತ್ತಿದ್ದು ಉಳಿದ ದ್ರಾವಣವನ್ನು ಇಳಿಜಾರು ನೆಲದ ಮೇಲೆ ಚರಂಡಿಯ ಕಡೆ ಹರಿದು ಬಿಡಲಾಗುತ್ತಿತ್ತೆಂದು ಊಹಿಸಲಾಗಿದೆ. ಇನ್ನೊಂದು ಚರಂಡಿಯಲ್ಲಿ ಬೂದಿ ಮತ್ತು ಶಂಖದ ಚೂರುಗಳು ಸಿಕ್ಕಿದ್ದರಿಂದ ಇದರ ಸಮೀಪದಲ್ಲಿ ಶಂಖದ ಆಭರಣಗಳ ಕಾರ್ಯಾಗಾರ ಇದ್ದಿರಬಹುದೆಂದು ಊಹಿಸಲಾಗಿದೆ. ಈ ಹಂತದಲ್ಲಿ ಬರೆಹವಿಲ್ಲದ ಮುದ್ರೆಗಳು, ಲಿಪಿಚಿಹ್ನೆಗಳಿರುವ ಮಡಕೆ ಚೂರುಗಳು, ಚರ್ಟ್‌ಕಲ್ಲಿನ ಅಲಗುಗಳು, ತೂಕದ ಬಟ್ಟುಗಳು ಇತ್ಯಾದಿ ಸಿಕ್ಕಿವೆ. ಮಣ್ಪಾತ್ರೆಗಳು ಕಾಲಿಬಂಗನ್ ಮತ್ತು ಬನಾವಳಿಯ ಸಮಕಾಲೀನ ಪಾತ್ರೆಗಳನ್ನು ಹೋಲುತ್ತವೆ. ತಿಗುರಿಯ ಮೇಲೆ ಮಾಡಿದ ಪಾತ್ರೆಗಳಲ್ಲದೆ ಕೈಯಿಂದ ಮಾಡಿದ ಪಾತ್ರೆಗಳೂ ಕೆಲವೊಂದಿದ್ದವು. ಹಗುರವಾಗಿಯೂ ತೆಳುವಾಗಿಯೂ ಇರುವ ಮಂದಗೆಂಪು ಮತ್ತು ಗುಲಾಬಿಬಣ್ಣದ ಪಾತ್ರೆಗಳ ಮೇಲೆ ಕಪ್ಪು ಮತ್ತು ಬಿಳಿಬಣ್ಣದಲ್ಲಿ ಚಿತ್ರಗಳಿವೆ. ಮಡಕೆಯ ಕತ್ತು ಹಾಗೂ ಭುಜಭಾಗದ ಮೇಲೆ ಸರಳ ಪಟ್ಟೆಗಳು, ಗೆರೆಗಳು, ಚುಕ್ಕಿಗಳ ಸಾಲು, ತ್ರಿಕೋಣಾಕಾರದ ಜಾಲ, ಮೀನಿನ ಉರುಪೆಯಂಥ ವಿನ್ಯಾಸ, ಗೆರೆಗಳ ತುದಿಯಲ್ಲಿ ಚುಕ್ಕೆ, ಅರಳಿ ಎಲೆ ಮುಂತಾದ ಚಿತ್ರಗಳಿವೆ. ಮಡಕೆ, ಬೋಗುಣಿ, ಕಾಲಿರುವ ತಟ್ಟೆ ಮತ್ತು ಬಟ್ಟಲು ಇವು ಸಾಮಾನ್ಯ ಆಕಾರಗಳು. ಇದೇ ಆಕಾರ ಮತ್ತು ಚಿತ್ರಗಳ ಬೂದುಬಣ್ಣದ ಪಾತ್ರೆಗಳೂ ಇವೆ. ಆದಿ ಹರಪ್ಪ ಸಂಸ್ಕೃತಿಯ ಆರಂಭದಿಂದಲೇ ಇಲ್ಲಿ ಹಾಕ್ರ ಪಾತ್ರೆಗಳು ಬಳಕೆಯಲ್ಲಿದ್ದವು. ಇವುಗಳಲ್ಲಿ 4 ಬಗೆಗಳಿವೆ: ಚೂಪಾದ ಉಪಕರಣದಿಂದ ಮಡಕೆಯ ಮೇಲೆ ಮಾಡಿರುವ ವಿನ್ಯಾಸಗಳು, ಮಣ್ಣನ್ನು ಮಡಕೆಯ ಮೇಲೆ ಮೆತ್ತಿ ಮಾಡಿರುವ ವಿನ್ಯಾಸಗಳು, ತೆಳುವಾದ ಮಣ್ಣಿನ ಲೇಪವನ್ನು ಮಡಕೆಯ ಮೇಲೆ ತಟ್ಟಿ ಮಾಡಿರುವ ರಚನೆ, ತಿಗುರಿಯ ಮೇಲೆ ತಿರುಗುತ್ತಿರುವ ಮಡಕೆಗೆ ಚೂಪಾದ ಉಪಕರಣವನ್ನು ಒತ್ತಿ ಮಾಡಿರುವ ಅಡ್ಡಪಟ್ಟೆಗಳ ರಚನೆ. ಈ ಕಾಲದ ತಾಮ್ರದ ಸಾಮಗ್ರಿಗಳಲ್ಲಿ ಬಾಣದ ಮೊನೆ, ಸೂಜಿ ಮತ್ತು ಬಳೆಗಳಿವೆ. ಚರ್ಟ್ ಕಲ್ಲಿನ ಅಲಗುಗಳು, ಅರೆಯುವ ಕಲ್ಲು, ಬಳಪದ ಮತ್ತು ಅಮೂಲ್ಯವಾದ ಕಲ್ಲಿನ ಮಣಿಗಳು ಇವೆ.

ಈ ಹಂತದಲ್ಲಿ ಗ್ರಾಮೀಣ ಸಂಸ್ಕೃತಿ ನಗರೀಕರಣಕ್ಕೆ ಸಜ್ಜಾಗುತ್ತಿದ್ದ ಲಕ್ಷಣಗಳು ಸ್ಪಷ್ಟವಾಗಿವೆ. ಬರವಣಿಗೆ, ಮುದ್ರೆಗಳು, ತೂಕದ ಬಟ್ಟುಗಳು, ಇಟ್ಟಿಗೆಗಳ ಪ್ರಮಾಣದಲ್ಲಿ ಏಕರೂಪತೆ, ಕಲ್ಲು, ಶಂಖ, ತಾಮ್ರ, ಚಿನ್ನದ ಆಭರಣಗಳು, ಉಪಕರಣ ಕಾರ್ಯಾಗಾರ ಈ ಸಂಕ್ರಮಣದ ಕುರುಹುಗಳಾಗಿವೆ.

ಪ್ರೌಢ ಹರಪ್ಪ ಸಂಸ್ಕೃತಿಯ ಅವಶೇಷಗಳಲ್ಲಿ ಕೋಟೆಗೋಡೆಗಳು ಪ್ರಮುಖವಾದುವು. ಗೋಡೆಯ ನಡುಭಾಗದಲ್ಲಿ ಹಸಿಇಟ್ಟಿಗೆಗಳನ್ನೂ ಹೊರಭಾಗದಲ್ಲಿ ಸುಟ್ಟಇಟ್ಟಿಗೆಗಳನ್ನೂ ಉಪಯೋಗಿಸಲಾಗಿತ್ತು. ಕೋಟೆಯ ಒಳಗೆ ಹಸಿಇಟ್ಟಿಗೆಯ ಜಗಲಿ ಅಥವಾ ವೇದಿಕೆಗಳಿದ್ದು ಇವುಗಳ ಮೇಲೆ ಇದ್ದಿಲು, ಬೂದಿ ಮತ್ತು ದನಗಳ ಮೂಳೆಗಳಿದ್ದ ಗುಂಡಿಗಳೂ ಅಗ್ನಿಕುಂಡಗಳೂ ಇದ್ದವು. ಹತ್ತಿರದಲ್ಲಿಯೇ ಒಂದು ಬಾವಿ ಇತ್ತು. ಪ್ರವೇಶದ್ವಾರ, ಮೆಟ್ಟಿಲು ಮತ್ತು ನಾಲ್ಕು ಕಡೆ ರಸ್ತೆ ಇರುವ ಈ ಜಗಲಿ ಸಾರ್ವಜನಿಕ ಉಪಯೋಗಕ್ಕಾಗಿದ್ದಿರಬಹುದು. ಚರಂಡಿಗಳು ಸುಟ್ಟಇಟ್ಟಿಗೆಯಿಂದ ಮಾಡಲಾಗಿದ್ದುವು. ಮನೆಯ ಮಲಿನ ನೀರು ಭೂಮಿಯಲ್ಲಿ ಹೂತಿರುವ ದೊಡ್ಡ ಮಡಕೆಗಳಲ್ಲಿ ಸಂಗ್ರಹವಾಗುತ್ತಿತ್ತು. ಈ ಹಂತದಲ್ಲಿ ಕುಂಬಾರನ ಆವಿಗೆ ದೊರಕಿದೆ. ಮಣಿಕಾರನ ಕಾರ್ಯಾಗಾರದ ಅವಶೇಷಗಳಲ್ಲಿ ತಯಾರಿಕೆಯ ವಿವಿಧ ಹಂತಗಳಲ್ಲಿರುವ ಸು. 3000 ಮಣಿಗಳು, ಪೂರ್ಣ ಮಣಿಗಳು ಗಮನಾರ್ಹ. ಇವನ್ನು ಕಾರ್ನೇಲಿಯನ್, ಅಗೇಟ್, ಜಾಸ್ಪರ್ ಮುಂತಾದ ಕಲ್ಲುಗಳಿಂದ ಮಾಡಲಾಗಿದೆ. ಮಣಿಗಳನ್ನು ಉಜ್ಜಿ ಹೊಳಪು ಕೊಡುವುದಕ್ಕೆ ಬಳಸಲಾದ ಕಲ್ಲುಗಳು (ಪಾಲಿಶರ್) ಮತ್ತು ಮಣಿಗಳನ್ನು ಕಾಯಿಸುತ್ತಿದ್ದ ಅಗ್ಗಿಷ್ಟಿಕೆಗಳು ಉತ್ಖನನದಲ್ಲಿ ಕಂಡುಬಂದಿವೆ. ಮೂಳೆ ಮತ್ತು ದಂತದ ಬಾಚಣಿಗೆ, ಸೂಜಿ, ಚೂಪಾದ ಸಲಕರಣೆ, ಮೂಳೆಯ ಚೂರುಗಳು, ಜಿಂಕೆಯ ಕೊಂಬುಗಳು ಮತ್ತು ದಂತ ಮತ್ತು ಶಂಖದ ಚೂರುಗಳು ಸಿಕ್ಕಿವೆ. ರಾಖಿಗಡಿಯಂಥ ಒಳನಾಡ ಪ್ರದೇಶದಲ್ಲಿ ಶಂಖ ಮತ್ತು ದಂತ ಸಿಕ್ಕಿರುವುದು ಇವುಗಳ ವ್ಯಾಪಾರವನ್ನೂ ಇವುಗಳ ಉಪಕರಣ–ಆಭರಣಗಳಿಗಿದ್ದ ಬೇಡಿಕೆಯನ್ನೂ ಸೂಚಿಸುತ್ತದೆ. ಈ ಹಂತದ ಪಾತ್ರೆಗಳನ್ನು ಕೆಂಪು ಮತ್ತು ಬೂದುಬಣ್ಣದ ಪಾತ್ರೆಗಳಾಗಿ ವರ್ಗೀಕರಿಸಲಾಗಿದೆ. ಕೆಂಪುಪಾತ್ರೆಯಲ್ಲಿ ಮೂರು ಪ್ರಕಾರಗಳಿವೆ; ಕೆಂಪು ಲೇಪವುಳ್ಳ ಪಾತ್ರೆಗಳು, ಕಪ್ಪುಬಣ್ಣದ ಚಿತ್ರವುಳ್ಳ ಕೆಂಪು ಲೇಪದ ಪಾತ್ರೆಗಳು ಮತ್ತು ಕಪ್ಪುಬಣ್ಣದ ಚಿತ್ರವಿರುವ ಲೇಪರಹಿತ ಕೆಂಪು ಪಾತ್ರೆಗಳು. ಗಾಢ ಕೆಂಪು ಲೇಪದ ಮೇಲೆ ಕಪ್ಪುಬಣ್ಣದಲ್ಲಿ ಅರಳಿ ಎಲೆಗಳು, ತಾಳೆ ಮರದ ಎಲೆ, ನವಿಲು, ಕೊಕ್ಕರೆ, ಹಕ್ಕಿಗಳು, ಮೀನು, ವೃತ್ತಗಳು, ಗೆರೆ–ಪಟ್ಟೆಗಳ ತ್ರಿಕೋಣಾಕಾರ ಮುಂತಾದ ವಿನ್ಯಾಸಗಳನ್ನು ಸುಂದರವಾಗಿ ಬಿಡಿಸಲಾಗಿದೆ. ಕೆಂಪುಪಾತ್ರೆಗಳಲ್ಲಿ ರಂಧ್ರವುಳ್ಳ ಹೂಜಿ, ಪಾನಪಾತ್ರೆಗಳು (ಗಾಬ್ಲೆಟ್), ಕಾಲಿರುವ ತಟ್ಟೆ, ಸಾಮಾನ್ಯ ತಟ್ಟೆಗಳು, ಮಡಕೆ, ಬೋಗುಣಿ, ದೊಡ್ಡ ಜಾಡಿ, ಹಂಡೆ ಮುಂತಾದುವುಗಳಿವೆ. ಇದೇ ಆಕಾರಗಳು ಬೂದುಬಣ್ಣದ ಪಾತ್ರೆಗಳಲ್ಲೂ ಕಂಡುಬರುತ್ತವೆ. ಈ ಪ್ರಕಾರದ ಪಾತ್ರೆಗಳು ಕಡಿಮೆ; ಇವುಗಳ ಮೇಲೆ ಚಿತ್ರಗಳಿಲ್ಲ. ಇವಲ್ಲದೆ ಅಪರೂಪದ ಕೆಲವು ಪಾತ್ರೆಗಳು ಇಲ್ಲಿ ಸಿಕ್ಕಿವೆ. ಇವು ರಿಸರ್ವ್ ಸ್ಲಿಪ್ ವೇರ್, ಕಟ್ ವೇರ್ ಮತ್ತು ಬಾರ್ಬೊಟಿನೊ ಪಾತ್ರೆಗಳು. ಕಟ್ ವೇರ್ ಪಾತ್ರೆಗಳಲ್ಲಿ ಹಸಿ ಮಡಕೆಯ ಮೇಲೆ ಚೂರಿಯಿಂದ ತ್ರಿಕೋಣಾಕಾರದ ಮತ್ತು ಕಣ್ಣಿನಾಕಾರದ ತೂತುಗಳನ್ನು ಮಾಡಲಾಗಿದೆ. ಬಾರ್ಬೊಟಿನೊ ಅಥವಾ ಮೊಡವೆ ಪಾತ್ರೆಗಳಲ್ಲಿ ಪುಟ್ಟ–ಪುಟ್ಟ ಮಣ್ಣಿನ ಹೆಂಟೆಗಳನ್ನು ಮಡಕೆಯ ಮೇಲೆ ಅಂಟಿಸಲಾಗಿದ್ದು ಇವು ಮೊಡವೆಯಂತೆ ಕಾಣುತ್ತವೆ. ಈ ಕಾಲದ ಪಾತ್ರೆಗಳಲ್ಲಿ ಚೂಪಾದ ಉಪಕರಣದಲ್ಲಿ ಕೊರೆದು ಮಾಡಿದ

ಹಾಗೂ ಕಪ್ಪೆಚಿಪ್ಪಿನಲ್ಲಿ, ಉಗುರಿನಲ್ಲಿ ಒತ್ತಿ ಮಾಡಿರುವ ಅಲಂಕಾರಗಳೂ ಕಂಡುಬರುತ್ತವೆ. ಈ ಹಂತದ ಮತ್ತೊಂದು ಗಮನಾರ್ಹ ಅವಶೇಷವೆಂದರೆ ಉರುಳು ಆಕೃತಿಯ ಫಯಾನ್ಸ್‌ನ ಮುದ್ರೆ, ಇದರ ಒಂದು ಕಡೆ ಐದು ಅಕ್ಷರಗಳೂ ಮತ್ತೊಂದು ಕಡೆ ಮೊಸಳೆಯ ಚಿಹ್ನೆಯೂ ಇದೆ. ಇತರ ಅವಶೇಷಗಳಲ್ಲಿ ವೃತ್ತಾಕಾರದ ಸುಟ್ಟಮಣ್ಣಿನ ತಾಯಿತ ಮತ್ತು ಆನೆ, ಫಯಾನ್ಸ್ ಮತ್ತು ಬಳಪದಕಲ್ಲಿನ ಚೌಕಾಕಾರದ ಮುದ್ರೆಗಳು ಇವೆ. ಒಂದು ಮುದ್ರೆಯ ಮೇಲೆ ಮನುಷ್ಯ, ಗೂಳಿ, ಆನೆ, ಹುಲಿ ಮತ್ತು ಏಕಶೃಂಗಗಳನ್ನು ಮೂಡಿಸಲಾಗಿದೆ. ಆಭರಣಗಳಲ್ಲಿ ಕೂದಲನ್ನು ಕಟ್ಟುವ ಚಿನ್ನದ ಪಟ್ಟಿ; ಬೆಳ್ಳಿ, ತಾಮ್ರ ಮತ್ತು ಶಂಖದ ಬಳೆಗಳು, ಅಮೂಲ್ಯ ಕಲ್ಲುಗಳ ಮಣಿಗಳು, ಎಚ್ಚಿದ ಕಾರ್ನೇಲಿಯನ್ ಮಣಿಗಳು ಸಿಕ್ಕಿವೆ.

ಪ್ರಾಣಿಮೂಳೆಗಳು ವಿಪುಲವಾಗಿ ದೊರೆತಿವೆ. ಹೆಚ್ಚಾಗಿ ಸಿಕ್ಕಿರುವುದು ಎಮ್ಮೆಯ ಮೂಳೆಗಳು. ಇವಲ್ಲದೆ ಇಲಿ ಮತ್ತು ಹೆಗ್ಗಣದ ಮೂಳೆಗಳು ಕಂಡುಬಂದಿವೆ. ಜಿಂಕೆ, ಮೊಲ, ಕಾಡುಹಂದಿ ಮೂಳೆಗಳು ವಿರಳವಾಗಿವೆ. ಮೀನು ಮತ್ತು ಹಕ್ಕಿಗಳ ಮೂಳೆಯೂ ಉತ್ಖನನದಲ್ಲಿ ದೊರಕಿವೆ. ಧಾನ್ಯಾವಶೇಷಗಳಲ್ಲಿ ಸುಟ್ಟ ಗೋದಿ ಮತ್ತು ಜವೆಯ ಕಾಳುಗಳಿವೆ.

(ಯು.ಎಸ್.)

**ರಾಜಗೀರ್:** ಬಿಹಾರ ರಾಜ್ಯದ ನಳಂದ (ನಾಲಂದ) ಜಿಲ್ಲೆಯಲ್ಲಿರುವ ಐತಿಹಾಸಿಕ ಸ್ಥಳ; ಪ್ರಪಂಚದ ಪ್ರಾಚೀನ ಪಟ್ಟಣಗಳಲ್ಲೊಂದು. ಹಿಂದಿನ ರಾಜಗೃಹವೇ ಇಂದಿನ ರಾಜಗೀರ್. ಬೌದ್ಧ, ಜೈನ, ಹಿಂದು ಮತ್ತು ಮುಸ್ಲಿಮ್ ಧರ್ಮೀಯರಿಗೆ ಯಾತ್ರಾಸ್ಥಳ. ಈ ಪಟ್ಟಣಕ್ಕೆ ವಸುಮತಿ, ಬಾರ್ಹದ್ರಥಪುರ, ಗಿರಿವ್ರಜ, ಕುಶಾಗ್ರಪುರ ಮುಂತಾದ ಹೆಸರುಗಳಿದ್ದವು. ರಾಮಾಯಣದಲ್ಲಿ ಬರುವ ವಸುಮತಿ ಎಂಬ ಹೆಸರು ಪ್ರಾಯಶಃ ಬ್ರಹ್ಮನ ನಾಲ್ಕನೆಯ ಮಗ ವಸುವಿನಿಂದ ಬಂದಿರಬೇಕು. ಆತ ಈ ನಗರದ ಸ್ಥಾಪಕನೆಂದು ಪರಂಪರೆ ಹೇಳುತ್ತದೆ. ಮಹಾಭಾರತದ ಪ್ರಕಾರ ಪ್ರಸಿದ್ಧ ಬೃಹದ್ರಥನ ಮರಿಮೊಮ್ಮಗ ಜರಾಸಂಧ ಸ್ಥಾಪಿಸಿದ ರಾಜಧಾನಿ ಬಾರ್ಹದ್ರಥಪುರ. ಈ ನಗರದ ಸುತ್ತಲೂ ಇರುವ ಪ್ರದೇಶ ಗಿರಿಗಳಿಂದ ಆವೃತವಾಗಿರುವುದರಿಂದ ಇದು ಗಿರಿವ್ರಜ. ಜೈನ, ಬೌದ್ಧ ಗ್ರಂಥಗಳ ಮತ್ತು ಯುವಾನ್‌ಚಾಂಗನ ಬರೆವಣಿಗೆಯ ಪ್ರಕಾರ ಇಲ್ಲಿ ಬೆಳೆಯುತ್ತಿದ್ದ ಸುವಾಸನಾಯುಕ್ತ ಹುಲ್ಲಿನಿಂದ ಮತ್ತು ಬೃಹದ್ರಥನ ಅನಂತರ ಆಳಿದ ಕುಶಾಗ್ರರಾಜನ ಹೆಸರಿನಿಂದ ಕುಶಾಗ್ರಪುರ ಎಂಬ ಹೆಸರುಬಂತು. ನೂರಾರು ವರ್ಷಗಳವರೆಗೆ ಈ ನಗರ ಮಗಧ ರಾಜ್ಯದ ರಾಜಧಾನಿಯಾಗಿದ್ದುದರಿಂದ

ನಗರದ ಒಂದು ವಿಹಂಗಮ ನೋಟ

ಇದಕ್ಕೆ ರಾಜಗೃಹ ಎಂಬ ಹೆಸರು. ರಾಜಗೃಹವನ್ನು ಐದು ಬೆಟ್ಟಗಳು ಸುತ್ತುವರಿದಿವೆ. ಮಹಾಭಾರತದಲ್ಲಿ ಈ ಬೆಟ್ಟಗಳನ್ನು ವೈಭಾರ, ಪಾಂಡವ, ವೈಪುಲ್ಯ, ಗೃಧ್ರಕೂಟ ಹಾಗೂ ಋಷಿಗಿರಿ ಎಂದು ಹೆಸರಿಸಲಾಗಿದೆ. ವೈಭಾರ, ವಿಪುಲ, ರತ್ನ, ಛಠಾ, ಶೈಲ, ಉದಯ ಹಾಗೂ ಸೋನಾ ಎಂಬ ಏಳು ಬೆಟ್ಟಗಳ ಹೆಸರುಗಳು ಈಗ ಪ್ರಚಲಿತವಿದೆ.

ಬುದ್ಧನ ಸಮಕಾಲೀನರಾದ ಬಿಂದುಸಾರ ಮತ್ತು ಅಜಾತಶತ್ರುವಿನ ಕಾಲದಲ್ಲಿ ರಾಜಗೃಹ ಪ್ರಸಿದ್ಧಿ ಪಡೆಯಿತು. ಈ ಪ್ರದೇಶದಲ್ಲಿ ಮೊದಲು ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಉತ್ಖನನ ನಡೆಸಿದ. ಅನಂತರ ಜೆ. ಮಾರ್ಷಲ್, ವಿ.ಎಚ್. ಜಾಕ್‌ಸನ್, ಡಿ.ಆರ್. ಪಾಟೀಲ್, ಆರ್. ಸಿಂಗ್ ಮೊದಲಾದವರು ಉತ್ಖನನ ಮಾಡಿದರು.

ರಾಜಗೃಹದಲ್ಲಿ ಕೋಟೆಗೋಡೆಯ ಅವಶೇಷಗಳೂ ಸಿಹಿನೀರಿನ ಬಿಸಿನೀರ ಬುಗ್ಗೆಗಳೂ ಇವೆ. ಈ ಕೋಟೆಯಲ್ಲಿ ಪ್ರ.ಶ.ಪೂ. 3ನೆಯ ಶತಮಾನಕ್ಕೆ ಸೇರಿದ ಬೌದ್ಧಧರ್ಮಕ್ಕೆ ಸಂಬಂಧಿಸಿದ ಸುಡಾವೆಮಣ್ಣಿನ ಗೊಂಬೆಗಳು, ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳು, 14 ಮುದ್ರಾಂಕಿತ ನಾಣ್ಯಗಳು, 6 ತಾಮ್ರದ ನಾಣ್ಯಗಳು, ಬುದ್ಧನ ಶಿಲ್ಪಗಳು, ಮಣ್ಣಿನ ಗೋಡೆಗಳ ಉಗ್ರಾಣಗಳು ದೊರೆತಿವೆ. ವೈಭಾರ ಬೆಟ್ಟದಲ್ಲಿ ಜರಾಸಂಧನನ್ನು ಭೀಮ ಮಲ್ಲಯುದ್ಧದಲ್ಲಿ ಕೊಂದ ಸ್ಥಳವೊಂದನ್ನು ಗುರುತಿಸಲಾಗಿದೆ. ಬೆಟ್ಟದ ಪೂರ್ವದ ಇಳಿಜಾರಿನಲ್ಲಿ ಮತ್ತು ಬಿಸಿನೀರಿನ ಬುಗ್ಗೆಗಳ ಸಮೂಹದ ಮಧ್ಯೆ ಜರಾಸಂಧ್ ಕ ಬೈಠಕ್ ಎಂದು ಕರೆಯುವ ಕಲ್ಲಿನ ಗುಹೆ ಇದೆ. ಬೆಟ್ಟದ ಮೇಲೆ ಸೋನ್ ಭಂಡಾರ್ ಎಂಬ ಹೆಸರಿನ ಗುಹೆಗಳಿವೆ. ಗುಹೆಗಳ ಗೋಡೆಯ ಮೇಲೆ ಜೈನ ತೀರ್ಥಂಕರರ ಶಿಲ್ಪಗಳಿವೆ. ಬುದ್ಧನ ಮಹಾಪರಿನಿರ್ವಾಣದ ಅನಂತರ ರಾಜಗೃಹದಲ್ಲಿ 500 ಬೌದ್ಧ ಸನ್ಯಾಸಿಗಳು ಸೇರಿ ನಡೆಸಿದ ಸಮ್ಮೇಳನ ಸಪ್ತಪರ್ಣಿ ಗುಹೆಯಲ್ಲಿ ನಡೆಯಿತೆಂದು ಹೇಳಲಾಗುತ್ತದೆ. ಬಿಂದುಸಾರ ಬುದ್ಧನಿಗೆ ಕಾಣಿಕೆಯಾಗಿ ಕೊಟ್ಟನೆಂದು ಹೇಳಲಾದ ವೇಣುವನವನ್ನು (ಬಿದಿರಿನ ಕಾಡು) ಬೌದ್ಧರ ವಿಹಾರವಾಗಿ ಮಾರ್ಪಡಿಸಲಾಗಿದೆ. ಇಲ್ಲಿಯೆ ಕಲಂದಕ ತಟಾಕವನ್ನೂ ಗುರುತಿಸಲಾಗಿದೆ.

ಗೃಧ್ರಕೂಟ ಬೆಟ್ಟದ ಮೇಲೆ ಬೌದ್ಧರ ಪವಿತ್ರ ಸ್ಥಳವೊಂದಿದೆ. ಬುದ್ಧ ಇಲ್ಲಿ ತನ್ನ ಅನುಯಾಯಿಗಳಿಗೆ ಧರ್ಮೋಪದೇಶ ಮಾಡುತ್ತಿದ್ದನೆನ್ನಲಾಗಿದೆ. ತಪ್ಪಲಿನಲ್ಲಿ ಬೆಟ್ಟದ ಮೇಲಕ್ಕೆ ಹೋಗಲು ಬಿಂದುಸಾರ ನಿರ್ಮಿಸಿದನೆಂದು ಹೇಳುವ ಪ್ರಾಚೀನ ರಸ್ತೆಯಿದೆ. ಜಪಾನಿನ ಬೌದ್ಧ ಯಾತ್ರಿಕರು ಕಟ್ಟಿಸಿರುವ ಶಾಂತಿಸ್ತೂಪ ಗೃಧ್ರಕೂಟಕ್ಕೆ ಸೇರಿದಂತಿದೆ. ರತ್ನಗಿರಿ ಬೆಟ್ಟದ ಮೇಲೆ ಒಂದು ದೇವಾಲಯವನ್ನು ಸ್ತೂಪದ ಹತ್ತಿರದಲ್ಲೆ ಕಟ್ಟಲಾಗಿದೆ. ವೈದ್ಯ ಜೀವಕ ಬುದ್ಧನಿಗೆ ಮಾವಿನ ತೋಪನ್ನು ದಾನವಾಗಿ ನೀಡಿದ ಸ್ಥಳವನ್ನು ಸಹ ಗುರುತಿಸಲಾಗಿದೆ. ಕಲ್ಲಿನ ಗೋಡೆ ಆವರಿಸಿರುವ ಪ್ರದೇಶದಲ್ಲಿ ಅಜಾತಶತ್ರು ಬಿಂದುಸಾರನನ್ನು ಗೃಹಬಂಧನದಲ್ಲಿ ಇರಿಸಿದನೆಂದು ಹೇಳಲಾಗುತ್ತದೆ. ಇಲ್ಲಿಯ ವರ್ತುಲಾಕಾರವಾಗಿರುವ ಒಂದು ಇಟ್ಟಿಗೆ ಕಟ್ಟಡದಲ್ಲಿ ಹಿಂದುಧರ್ಮಕ್ಕೆ ಸಂಬಂಧಿಸಿದ ಗುಪ್ತರ ಕಾಲದ ಪ್ರತಿಮೆಗಳು, ಮಥುರ ಮಾದರಿಯ ಮರಳುಗಲ್ಲಿನ ಶಿಲ್ಪಗಳು ದೊರೆತಿವೆ. ಈ ಪ್ರದೇಶ ನಾಗೋಪಾಸನೆಯ ಕೇಂದ್ರವೂ ಆಗಿತ್ತು. ಮಹಾಭಾರತದ ಪ್ರಕಾರ ರಾಜಗೃಹ ನಾಗಮಣಿಯ ಸ್ವರ್ಗ ಪ್ರದೇಶ. ಮಣಿಯಾರ್ ಮಠ ಪ್ರಾಚೀನ ಕಾಲದಲ್ಲಿ ಮಣಿನಾಗದೇವರು ಇದ್ದ ಪ್ರದೇಶವೆಂದು ಗುರುತಿಸಲಾಗಿದೆ. ಕುಷಾಣ ಕಾಲದ ಮಣಿನಾಗನಿಗೆ ಸಂಬಂಧಿಸಿದ ಶಾಸನ ದೊರೆತಿದ್ದು, ಇಲ್ಲಿ ವಿಭಿನ್ನ ಆಕಾರದ ಮಣ್ಣಿನ ಜಾಡಿಗಳು ದೊರೆತಿವೆ. ಇದೇ ತರಹದ ಜಾಡಿಗಳನ್ನು ಇಂದು ಬಂಗಾಲದಲ್ಲಿ ಮಾನಸ ದೇವತೆಯ ಆರಾಧನೆಯಲ್ಲಿ ಬಳಸಲಾಗುತ್ತಿದೆ. ಎಫ್.ಆರ್.ಅಲ್ಚಿನ್ ಈ ಜಾಡಿಗಳನ್ನು ಶುದ್ಧೀಕರಣಕ್ಕೆ ಬಳಸಲಾಗುತ್ತಿತ್ತೆಂದು ಸೂಚಿಸಿದ್ದಾರೆ. ಹಳೆಶಿಲಾಯುಗಕ್ಕೆ ಸೇರಿದ ಅವಶೇಷಗಳೂ ಇಲ್ಲಿಯ ಉತ್ಖನನಗಳಲ್ಲಿ ದೊರೆತಿವೆ. (ಡಿ.ಎಂ.ಎಸ್.)

**ರಾಜಗೋಪಾಲಾಚಾರಿ, ಚಕ್ರವರ್ತಿ:** 1878–1972. ಸ್ವತಂತ್ರ ಭಾರತದ ಎರಡನೆಯ ಗವರ್ನರ್ ಜನರಲ್; ವಿದ್ವಾಂಸ. ಶ್ರೇಷ್ಠ ರಾಜಕಾರಣಿ ಹಾಗೂ ಪ್ರಥಮ ಭಾರತೀಯ ಗವರ್ನರ್ ಜನರಲ್. ಸಿಂಗಾರಮ್ಮಾಳ್-ನಲ್ಲಾಂ ಚಕ್ರವರ್ತಿ ಅಯ್ಯಂಗಾರ್ ಈ ದಂಪತಿಗಳ 3ನೆಯ ಮಗನಾಗಿ 1878 ಡಿಸೆಂಬರ್ 9 ರಂದು ಜನನ. ರಾಜಾಜಿಯವರ ತಂದೆ ಸೇಲಂ ಜಿಲ್ಲೆಯ ಹೊಸೂರು ತಾಲ್ಲೂಕಿನ ತೊರಪಳ್ಳಿ ಗ್ರಾಮದ ಗ್ರಾಮಾಧಿಕಾರಿಯಾಗಿದ್ದರು. ಸಂಪ್ರದಾಯಸ್ಥ ಶ್ರೀವೈಷ್ಣವ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ಓದು ಮತ್ತು ಅನುಭವಗಳಿಂದ ಶ್ರೇಷ್ಠ ವಿಚಾರವಾದಿಗಳಾಗಿ ರಾಜಾಜಿ ಎಂದೇ ಹೆಸರು ಪಡೆದರು. ಇವರ ಕುಟುಂಬದ ಅನೇಕ ಹಿರಿಯರು ಆಗಿನ ಮೈಸೂರು ಸಂಸ್ಥಾನದ ಆಸ್ಥಾನ ವಿದ್ವಾಂಸರಾಗಿದ್ದರು.

ಹುಟ್ಟಿದ ಹಳ್ಳಿಯಲ್ಲಿ ಅಕ್ಷರಾಭ್ಯಾಸ ಮಾಡಿದ ಇವರು ಹೊಸೂರಿನಲ್ಲಿ ಇಂಗ್ಲಿಷ್ ಪ್ರಾಥಮಿಕ ಶಿಕ್ಷಣ ಪಡೆದು ಪ್ರೌಢಶಾಲಾ ಶಿಕ್ಷಣಕ್ಕಾಗಿ ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಬೆಂಗಳೂರಿಗೆ ಬಂದರು. ಮುಂದೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿ, ತಮ್ಮ ಹದಿನೆಂಟನೆಯ ವರ್ಷದಲ್ಲಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜು ಸೇರಿದರು. ಅನಂತರ ಎರಡು ವರ್ಷ ಕಾನೂನು ವ್ಯಾಸಂಗ ಮುಗಿಸಿ ವಕೀಲಿ ವೃತ್ತಿಯನ್ನು ಅಲ್ಲೇ ಪ್ರಾರಂಭಿಸಿದರು.

ಇವರು 1900ರಲ್ಲಿ ಅಲಮೇಲು ಮಂಗಮ್ಮಾಳ್ ಅವರನ್ನು ವಿವಾಹವಾದರು. ಆದರೆ ಇವರ ಪತ್ನಿ 1917ರಲ್ಲಿ ತೀರಿಕೊಂಡರು. ರಾಜಾಜಿ ಓದು ಮತ್ತು ಜನಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಹಾಭಾರತ, ಗೀತೆ, ಬೈಬಲ್, ಇವರಿಗೆ ಪ್ರಿಯವಾದ ಗ್ರಂಥಗಳಾಗಿದ್ದವು. ಜೊತೆಗೆ ಷೇಕ್ಸ್‌ಪಿಯರ್, ವಾಲ್ಟರ್ ಸ್ಕಾಟ್, ಟಾಲ್‌ಸ್ಟಾಯ್, ಥೋರೋನ ಸಿವಿಲ್ ಡಿಸ್ಒಬಿಡಿಯನ್ಸ್ ಇವರನ್ನು ಸೆಳೆಯಿತು. ಇದರಿಂದಾಗಿ ಆಗಿನ ಅಸಹಕಾರ ಚಳವಳಿಗೆ ಓಗೊಟ್ಟರು. ಕಾಲೇಜಿನಲ್ಲಿದ್ದಾಗಲೇ ಟಯಟ್ ಎಂಬ ಆಂಗ್ಲ ಪ್ರಾಧ್ಯಾಪಕರಿಂದ ಪ್ರಭಾವಿತರಾಗಿದ್ದರಲ್ಲದೇ ಸಿ. ವಿಜಯ ರಾಘವಾಚಾರ್, ಆನಿಬೆಸೆಂಟ್ ಮತ್ತು ಸರೋಜಿನಿ ನಾಯ್ಡು ಮುಂತಾದವರು ವ್ಯಕ್ತಿತ್ವದ ಮೇಲೆ ವಿಶೇಷ ಪ್ರಭಾವ ಬೀರಿದವರೆನ್ನಬಹುದು. ಗಾಂಧೀಜಿಯವರ ಜೊತೆ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ಜೀವನಪರ್ಯಂತ ಅವರನ್ನು ತಮ್ಮ ಮಾರ್ಗದರ್ಶಕರಾಗಿ ಸ್ವೀಕರಿಸಿದರು. ಕಲ್ಕತ್ತದಲ್ಲಿ 1906ರಲ್ಲಿ ದಾದಾಭಾಯಿ ನವರೋಜಿಯವರು ಕಾಂಗ್ರೆಸ್ ಅಧ್ಯಕ್ಷ ಪೀಠದಿಂದ ಮಾಡಿದ ಭಾಷಣದಿಂದ ಸ್ಫೂರ್ತಿ ಪಡೆದು ಕಾಂಗ್ರೆಸ್ ಕಡೆಗೆ ಆಕರ್ಷಿತರಾದರು. 1919ರಲ್ಲಿ ರೌಲಟ್ ಕಾಯಿದೆ ಜಾರಿಗೆ ಬಂದು ಪ್ರತಿಭಟನೆಯ ಬೆಂಕಿಯಲ್ಲಿ ದೇಶ ಹೊತ್ತಿ ಉರಿಯುತ್ತಿದ್ದ ಸಂದರ್ಭದಲ್ಲಿ ಗಾಂಧೀಜಿಯವರನ್ನು ಮೊದಲ ಬಾರಿ ಭೇಟಿ ಮಾಡಿದರು. ಅಲ್ಲಿಂದ ಮುಂದೆ ಸ್ವಾತಂತ್ರ್ಯ ಚಳವಳಿಯ ಮಂಚೂಣಿಯಲ್ಲಿ ಒಬ್ಬರಾದರು. ಇವರು ಭಾರತೀಯ ಸಮಾಜ ಮತ್ತು ಆರ್ಥಿಕ ವ್ಯವಸ್ಥೆಗಳ ಪ್ರತಿಪಾದಕರಾಗಿದ್ದರು. ಅಸ್ಪೃಶ್ಯತೆಯ ವಿರುದ್ಧ ಅವಿರತ ಹೋರಾಟ ನಡೆಸಿದ. ಇವರು 1939ರಲ್ಲಿ ಮದರಾಸಿನ ಮುಖ್ಯಮಂತ್ರಿ

ಗಳಾಗಿದ್ದಾಗ ದೇವಾಲಯ ಪ್ರವೇಶ ಕಾನೂನನ್ನು ಜಾರಿಗೆ ತಂದರು. ಧರ್ಮ, ಸಮಾಜ, ರಾಜಕೀಯ ಮತ್ತು ಆರ್ಥಿಕಸ್ಥಿತಿಗಳು ಒಂದನ್ನೊಂದು ಅವಲಂಬಿಸಿವೆ. ಧಾರ್ಮಿಕ ಮುಕ್ತ ವಾತಾವರಣ ಇರದಿದ್ದರೆ ಸಮಾಜ ಮುಕ್ತವಾಗಿರುವುದಿಲ್ಲ. ಸಮಾಜದಲ್ಲಿ ಮುಕ್ತ ಮತ್ತು ಸಮಾನತೆಯ ವಾತಾವರಣವಿರದಿದ್ದಲ್ಲಿ ರಾಜಕೀಯ ಮತ್ತು ಆರ್ಥಿಕ ಸ್ತರಗಳು ತಾವಾಗಿಯೇ ಹಿಂದುಳಿಯುತ್ತವೆ ಎಂಬುದು ಇವರ ಅಭಿಪ್ರಾಯ. ಪ್ರಾಚೀನ ಭಾರತದ ಜಾತಿ ಪದ್ಧತಿಯ ಬಗ್ಗೆ ಮೃದುಧೋರಣೆಯನ್ನು ಹೊಂದಿದ್ದರೂ ಆಧುನಿಕ ಸಂದರ್ಭದಲ್ಲಿ ವೃತ್ತಿ, ಶಿಕ್ಷಣ ಇತ್ಯಾದಿಗಳು ಜಾತಿಯ ಆಧಾರದ ಮೇಲೆ ರೂಪುಗೊಳ್ಳುವ ಬಗ್ಗೆ ಕಡು ವಿರೋಧಿಯಾಗಿದ್ದರು. ಗಂಡು ಹೆಣ್ಣು ತಮಗೆ ಇಷ್ಟವಾದವರನ್ನು ವರಿಸುವ ವಾತಾವರಣ ಸಮಾಜದಲ್ಲಿರಬೇಕೆಂದು ಇವರ ಅಭಿಪ್ರಾಯ. ಇವರು ಸ್ವಾತಂತ್ರ್ಯ ಮತ್ತು ಸಮಾನತೆಗಳ ಉಗ್ರಪ್ರತಿಪಾದಕರಾಗಿದ್ದರೂ ಕುಟುಂಬ ವ್ಯವಸ್ಥೆ ನಮ್ಮ ನಾಗರಿಕತೆಯ ಅಡಿಪಾಯವಾಗಿರುವುದರಿಂದ, ಅದರೊಳಗಿನ ಗಂಡು-ಹೆಣ್ಣಿನ ತಾರತಮ್ಯವನ್ನು ನಾಶಗೊಳಿಸಲಾಗದು ಎಂದು ನಂಬಿದ್ದರು.



ಇವರು ಭಗವದ್ಗೀತೆಯ ಕರ್ಮ ಸಿದ್ಧಾಂತದ ಕಟ್ಟಾ ಅನುಯಾಯಿ. ಹಿಂದು ಧರ್ಮದ ಬಗ್ಗೆ ಇವರು ಓದಿರುವುದಕ್ಕಿಂತ ತಾಯಿಯಿಂದ ಕಲಿತದ್ದೇ ಹೆಚ್ಚು. ಧಾರ್ಮಿಕ ನಂಬಿಕೆಗಳು ಉತ್ತಮ ನಡವಳಿಕೆಗಳನ್ನು ರೂಪಿಸಿಕೊಳ್ಳಲು ಬುನಾದಿ ಎಂದು ತಿಳಿದಿದ್ದರು. ಹಿಂದು ಧರ್ಮ ಇಂದಿಗೂ ಭಾರತದಲ್ಲಿ ಅರ್ಥ ಕಳೆದುಕೊಂಡಿಲ್ಲವೆಂದು ಭಾವಿಸಿದ್ದರು. ಹಿಂದು ಧರ್ಮ ಸಮಸ್ತ ಮಾನವ ಕುಲದ ಜ್ಞಾನವನ್ನು ಜ್ಞಾಪಕ ಪರಂಪರೆಯಲ್ಲಿಟ್ಟಿದೆ. ಅಗಾಧ ತಿಳಿವಳಿಕೆ, ಅನ್ಯಧರ್ಮ ಸಹಿಷ್ಣುತೆ, ಸತ್ಯಾನ್ವೇಷಣೆಗಳ ದೃಷ್ಟಿಯಲ್ಲಿ ಅದಕ್ಕೆ ಪರ್ಯಾಯವೇ ಇಲ್ಲ. ಆದರೆ ಅನೇಕ ಅರ್ಥಹೀನ, ಮೂಢಾಚರಣೆಗಳು ಈ ಧರ್ಮದಲ್ಲಿ ನುಸುಳಿವೆ; ಇವುಗಳನ್ನು ತ್ಯಜಿಸಬೇಕೇ ವಿನಃ ಧರ್ಮವನ್ನಲ್ಲ ಎಂಬುದು ಇವರ ಅಭಿಪ್ರಾಯ.

ಕಾಂಗ್ರೆಸ್ಸಿನ ಮುಖ್ಯಮಂತ್ರಿಯಾಗಿ ಯಾವ ಅಂಧಾಭಿಮಾನ ಇಲ್ಲದೆ ಮೂಲ ಭೂತ ಶಿಕ್ಷಣದ ಬಗೆಗಿನ ಕಾಂಗ್ರೆಸ್‌ನ ರಾಷ್ಟ್ರೀಯ ಶಿಕ್ಷಣ ಪರಿಕಲ್ಪನೆಯನ್ನು ಒಪ್ಪಿಕೊಂಡರು. ಆದರೆ ಅದರಲ್ಲಿ ಗುರುಕುಲ ಶಿಕ್ಷಣ ಪದ್ಧತಿಯನ್ನು ಅಳವಡಿಸಲು ಯತ್ನಿಸಿದರು. ಆದರೆ ಇದು ಅಷ್ಟಾಗಿ ಪರಿಣಾಮ ಬೀರಲಿಲ್ಲ. ಆರಂಭದಲ್ಲಿ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಒಪ್ಪಬೇಕೆಂದು ಇವರು ಒತ್ತಾಯಿಸಿದರು. ಆದರೆ ಕ್ರಮೇಣ ಹಿಂದಿಯ ದುರಭಿಮಾನದ ದುಷ್ಪರಿಣಾಮಗಳ ಅರಿವಾಗತೊಡಗಿ ಇಂಗ್ಲಿಷನ್ನು ಭಾರತದ ಸಂಪರ್ಕ ಭಾಷೆಯಾಗಿ ಬಳಸಲು ಪ್ರತಿಪಾದಿಸಲಾರಂಭಿಸಿದರು. ಇವರು ಮಾತೃಭಾಷಾಭಿಮಾನಿ. ಬೋಧನೆಗೆ ಮಾತೃಭಾಷೆಯೇ ಸರ್ವಶ್ರೇಷ್ಠ. ಅದು ವಿದ್ಯಾರ್ಥಿಯ ಗ್ರಹಣಸಾಮರ್ಥ್ಯವನ್ನು ಮತ್ತು ಅಭಿವ್ಯಕ್ತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಬಿತ್ತರಗೊಳಿಸುತ್ತದೆ ಎಂದು ಹೇಳಿದ್ದಾರೆ.

ರಾಜಾಜಿ ದಕ್ಷ ಆಡಳಿತಗಾರರು. ದೂರದೃಷ್ಟಿಯುಳ್ಳವರು. ರಷ್ಯ ಮತ್ತು ಚೀನಗಳು ಎರಡನೆಯ ಮಹಾಯುದ್ಧದಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ ತರುವಾಯ ಮಹಾನ್ ಶಕ್ತಿಶಾಲಿಗಳಾಗುತ್ತವೆಂದು 1943 ರಲ್ಲೇ ಹೇಳಿದ್ದರು. ಭಾರತ ಸ್ವಾತಂತ್ರ್ಯ ಪಡೆಯಬೇಕಾದರೆ ಅನಿವಾರ್ಯವಾಗಿ ಮುಸ್ಲಿಮರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ ಎಂದೂ ಹೇಳಿದ್ದರು. ಮುಸ್ಲಿಮರು ಸಂಯುಕ್ತ ಭಾರತದಲ್ಲಿರುವ ಅಥವಾ ಪ್ರತ್ಯೇಕ ಘಟಕಗಳಾಗಿ ಸಂಯುಕ್ತ ಭಾರತದಲ್ಲಿರುವ ಅಥವಾ ಪ್ರತ್ಯೇಕ ಸಾರ್ವಭೌಮ ರಾಜ್ಯಗಳಲ್ಲಿರುವ ಆಯ್ಕೆಯನ್ನು ಇವರು ಸೂಚಿಸಿದ್ದರು. ಇದು ಸಿ.ಆರ್.ಸೂತ್ರ ಎಂದು ಪ್ರಸಿದ್ಧವಾಗಿದೆ. ಆದರೆ ದುರದೃಷ್ಟಾವಶಾತ್ ಮುಸ್ಲಿಂ ನಾಯಕ ಜಿನ್ನಾ ಈ ಸೂತ್ರವನ್ನು ಒಪ್ಪಲಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ಧೋರಣೆಗೆ ಬೇಸತ್ತು ಇವರು ರಾಜೀನಾಮೆ ನೀಡಿ ಕಾಂಗ್ರೆಸ್‌ನಿಂದ ಹೊರಬಂದರು. ರಾಷ್ಟ್ರೀಯ ಸರ್ಕಾರದ ಅಗತ್ಯವನ್ನು ಮನಗಂಡ ರಾಜಾಜಿ ಕ್ರಿಪ್ಸ್ ಅನುಮೋದನೆಗಳನ್ನು ಕಾಂಗ್ರೆಸ್ ನಿರಾಕರಿಸಿದಾಗ ಉಗ್ರವಾಗಿ ಟೀಕಿಸಿದರು. ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಇವರು ಭಾಗವಹಿಸಲಿಲ್ಲ. ಎರಡನೆಯ ಮಹಾಯುದ್ಧದಲ್ಲಿ ಬ್ರಿಟನ್ ಗೆದ್ದು ಪ್ರಜಾಪ್ರಭುತ್ವ ಸರ್ಕಾರ ಭಾರತದಲ್ಲಿ ಸ್ಥಾಪನೆಯಾಗುತ್ತದೆ ಎಂಬ ಆಶಯವನ್ನು ಇವರು ಹೊಂದಿದ್ದರು.

ಇವರು ಉನ್ನತ ಸ್ಥಾನಕ್ಕೇರಿದ್ದು ತಮ್ಮ ತ್ಯಾಗ ಮತ್ತು ಯಶಸ್ವಿ ಕಾರ್ಯನಿರ್ವಹಣೆಗಳಿಂದ. ಆರಂಭದಲ್ಲಿ ಇವರು ಸೇಲಂ ನಗರಪಾಲಿಕೆಯ ಅಧ್ಯಕ್ಷರಾಗಿದ್ದರು. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಪಾನ ವಿರೋಧಿ ಚಳುವಳಿಯ ಸದಸ್ಯರಾಗಿದ್ದರು. ಪಾನವಿರೋಧ ಇವರ ಬದುಕಿನ ಬದ್ಧತೆಯಾಗಿತ್ತು. ಪಾನ ವಿರೋಧದ ಬಗ್ಗೆ ಅಸಂಖ್ಯಾತ ಕರಪತ್ರಗಳನ್ನು ಹಂಚಿದರು ಹಾಗೂ ಶಿಬಿರಗಳನ್ನು ನಡೆಸಿದರು. 1937ರಲ್ಲಿ ಮದರಾಸಿನಲ್ಲಿ ಪಾನನಿಷೇಧವನ್ನು ಜಾರಿಗೆ ತಂದು ಕಡೆಯವರೆಗೂ ತಮ್ಮ ತೀರ್ಮಾನಕ್ಕೆ ಬದ್ಧರಾಗಿದ್ದರು. ದಕ್ಷಿಣ ಭಾರತದಲ್ಲಿ ಕಾನೂನುಭಂಗ ಚಳವಳಿಯ ಮಂಚೂಣಿ ನಾಯಕರಾಗಿದ್ದರು. 1926-29 ರ ಅವಧಿಯಲ್ಲಿ ತಿರುಚೆನ್ನೆಗೋಡಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು; ತರುವಾಯ ಇದು ಖಾದಿ ಉತ್ಪಾದನೆಯ ಪ್ರಮುಖ ಕೇಂದ್ರವಾಯಿತು. ಈ ಆಶ್ರಮ ಹಳ್ಳಿಗರ ಬದುಕಿನ ಅಭಿವೃದ್ಧಿಗಾಗಿ, ಜಾತೀಯತೆಯ ನಿರ್ಮೂಲನೆಗಾಗಿ ಶ್ರಮಿಸಿತು. ಹಳ್ಳಿಗರ ಶ್ರೇಯೋಭಿವೃದ್ಧಿಗಾಗಿಯೇ ವಿಮೋಚನಂ ಎಂಬ ತಮಿಳು ಪತ್ರಿಕೆಯನ್ನು ಆರಂಭಿಸಿದರು.

ಇವರು ವೇದಾರಣ್ಯಂನಲ್ಲಿ ಆರಂಭಿಸಿದ ಉಪ್ಪಿನ ಸತ್ಯಾಗ್ರಹ ತಮಿಳು ನಾಡಿನಾದ್ಯಂತ ಜಾಗೃತಿಯನ್ನುಂಟುಮಾಡಿತು. ಇವರು 1921-22 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಕಾರ್ಯದರ್ಶಿಯಾಗಿದ್ದರು. ಅನೇಕ ವರ್ಷಗಳ ಕಾಲ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ತಮಿಳುನಾಡಿನ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಮದರಾಸು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿದ್ದ ಇವರು (1937-39) ಮಹಾಯುದ್ಧಕ್ಕೆ ಕಾಂಗ್ರೆಸ್ ಸಹಕರಿಸದೇ ಅಸಹಕಾರ ಚಳವಳಿಯನ್ನು ಬೆಂಬಲಿಸಿದ್ದರಿಂದ ಬೇಸತ್ತು ಮುಖ್ಯಮಂತ್ರಿ ಪದವಿಯನ್ನು ತ್ಯಜಿಸಿದರು.

1946-47ರಲ್ಲಿ ಗವರ್ನರ್ ಜನರಲ್‌ನ ಕಾರ್ಯನಿರ್ವಹಣಾ ಸಮಿತಿಯ ಸದಸ್ಯರಾಗಿದ್ದ ಇವರು 1947ರ ಆಗಸ್ಟ್‌ನಿಂದ ನವೆಂಬರ್‌ವರೆಗೆ ಪಶ್ಚಿಮ ಬಂಗಾಲದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದರು. ನವೆಂಬರ್ 1947ರಲ್ಲಿ ಗವರ್ನರ್ ಜನರಲ್ ಆಗಿ ಔಪಚಾರಿಕವಾಗಿ ನೇಮಕವಾದ ಇವರು ತರುವಾಯ 1948-50ರ ವರೆಗೆ ಈ ಹುದ್ದೆಯನ್ನು ನಿರ್ವಹಿಸಿದರು. ಅನಂತರ ಮೇಯಿಂದ ಡಿಸೆಂಬರ್ 1950 ರ ವರೆಗೆ ಜನಾದೇಶ ಪಡೆಯದೆಯೇ ಕೇಂದ್ರ ಸರ್ಕಾರದ ಮಂತ್ರಿ ಆಗಬೇಕಾಯಿತು. 1951 ರಲ್ಲಿ ಗೃಹಖಾತೆಯ ಸಚಿವರಾಗಿ ಕಾರ್ಯನಿರ್ವಹಿಸಿದರು. ಮದರಾಸು ವಿಧಾನ ಸಭೆಯಲ್ಲಿ ಕಾಂಗ್ರೆಸ್ ಸಂಕಷ್ಟ ಪರಿಸ್ಥಿತಿಯಲ್ಲಿ ಇದ್ದಾಗ ಪಕ್ಷ ನಡೆಸಲು ಮತ್ತೆ ಇವರನ್ನು ಆಹ್ವಾನಿಸಲಾಯಿತು. 1952-54ರ ಅವಧಿಗೆ ಮತ್ತೊಮ್ಮೆ ಮದರಾಸಿನ ಮುಖ್ಯಮಂತ್ರಿಯಾಗಿದ್ದರು. ಅನಂತರ ನಿಧಾನವಾಗಿ ಕಾಂಗ್ರೆಸ್‌ನಿಂದ ದೂರ ಸರಿದು ಇವರು ಸ್ವತಂತ್ರಪಕ್ಷದ ಸಂಸ್ಥಾಪಕರಾದರು.

ರಾಜಾಜಿ ಮಹಾನ್ ವಾಗ್ಮಿ. ಎಂಥ ಕಠಿಣ ವಿಷಯವನ್ನೂ ಸರಳ ಶೈಲಿಯಲ್ಲಿ ಮನಮುಟ್ಟುವಂತೆ ವಿವರಿಸುವ ಕುಶಲತೆ ಇವರಲ್ಲಿತ್ತು. ಇವರು ತಮಿಳು ಮತ್ತು ಇಂಗ್ಲಿಷ್ ಭಾಷೆಗಳ ಶ್ರೇಷ್ಠ ಬರೆಹಗಾರರೂ ಹೌದು. ಅಸಂಖ್ಯಾತ ವಿದ್ವತ್ಪೂರ್ಣ ಉಪನ್ಯಾಸಗಳನ್ನು ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲೂ ತರುವಾಯದಲ್ಲೂ ನೀಡಿದರು. ಆಧುನಿಕ ತಮಿಳು ಸಾಹಿತ್ಯದಲ್ಲಿ ಇವರ ಸಣ್ಣಕಥೆಗಳಿಗೆ ವಿಶಿಷ್ಟ ಸ್ಥಾನವಿದೆ. ಭಾರತ ಮತ್ತು ರಾಮಾಯಣ (ಚಕ್ರವರ್ತಿ ಮಗನ್) ಕೃತಿಗಳನ್ನು ಈ ಮಹಾಕಾವ್ಯಗಳ ನಿಜ ಸ್ವರೂಪವನ್ನು ತಿಳಿಸುವುದಕ್ಕಾಗಿ ತಮಿಳಿನಲ್ಲಿ ರಚಿಸಿದರು. ತಮಿಳಿನಲ್ಲಿ ರಚಿತವಾದ ಇವರ ಮಹಾಭಾರತ ಕೃತಿ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿದೆ. ರಾಮಕೃಷ್ಣ ಉಪನಿಷತ್ ಎಂಬ ಕೃತಿಗೆ ಮದರಾಸು ಸರ್ಕಾರದ ಪ್ರಶಸ್ತಿ ದೊರಕಿದೆ. ಇಂಗ್ಲಿಷ್‌ನಲ್ಲಿ ರಚಿತವಾಗಿರುವ ಇವರ ರಾಮಾಯಣ ಹಾಗೂ ಮಹಾಭಾರತ ಕೃತಿಗಳು ಪ್ರಪಂಚದಾದ್ಯಂತ ಅನೇಕ ಭಾಷೆಗಳಿಗೆ ತರ್ಜುಮೆಗೊಂಡಿವೆ. ವೈಜ್ಞಾನಿಕ ವಿಚಾರದ ನೆಲೆಯಲ್ಲಿ ಮುನ್ಸೂಚನೆಗಳನ್ನು ನುಡಿಯಲು ಸಾಧ್ಯವಿದೆ ಎಂಬುದನ್ನು ತೋರಿಸುವುದಕ್ಕಾಗಿ ಮುಡಿಯುಮಾ ಎಂಬ ವೈಜ್ಞಾನಿಕ ಗ್ರಂಥವನ್ನು ತಮಿಳಿನಲ್ಲಿ ರಚಿಸಿದ್ದಾರೆ. ಸಂಸ್ಕೃತ ಮತ್ತು ತಮಿಳುಭಾಷೆಗಳಲ್ಲಿ ವಿದ್ವತ್ತಿದೆ ಎಂದು ಹೇಳಿಕೊಳ್ಳದಿದ್ದರೂ ತಿರುಮಂತ್ರಮ್, ಕಂಬರಾಮಾಯಣ, ಆಳ್ವಾರ್ ಗೀತೆಗಳು, ಉಪನಿಷತ್‌ಗಳು ಹಾಗೂ ತೋಲ್‌ಕಾಪ್ಪಿಯಂ-ಕೃತಿಗಳ ಮೇಲಿನ ಇವರ ಅಗಾಧ ಪಾಂಡಿತ್ಯ ತಮಿಳು ಮತ್ತು ಸಂಸ್ಕೃತದ ಮೇಲಿನ ಪ್ರಭುತ್ವವನ್ನು ತೋರಿಸುತ್ತದೆ.

ಇವರದು ಮೇರು ವ್ಯಕ್ತಿತ್ವ ಸರಳ ಸಂಪನ್ನರು. ಶುಭ್ರ ಬಿಳಿ ಜುಬ್ಬಾ, ಧೋತಿ ಉಡುಗೆಯಲ್ಲಿ ಸದಾ ಕಾಣಿಸಿಕೊಳ್ಳುತ್ತಿದ್ದ ಇವರ ಮುಖದಲ್ಲಿ ಎಲ್ಲರನ್ನೂ ಆಕರ್ಷಿಸುವ ಮಂದಹಾಸ ವಿರುತ್ತಿತ್ತು. ರಾಜಾಜಿ 1972ರಲ್ಲಿ ನಿಧನರಾದರು. ಇವರ ಆಡಳಿತ, ರಾಜಕೀಯ ದಕ್ಷತೆ, ಸಾಹಿತ್ಯ ಸೇವೆ, ಸಾಮಾಜಿಕ ಕೆಲಸಕಾರ್ಯಗಳನ್ನು ಗುರುತಿಸಿ ಭಾರತ ಸರ್ಕಾರ 1954ರಲ್ಲಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. (ಎಸ್‌ಆರ್‌ಐ.ಬಿ.)

**ರಾಜಘಟ್ಟ:** ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಿಂದ 8 ಕಿಮೀ ದೂರದಲ್ಲಿರುವ ಪುರಾತತ್ತ್ವ ನೆಲೆ; ಬೌದ್ಧಕೇಂದ್ರ. ಇಲ್ಲಿಯ ಪ್ರಾಚೀನ ಸಂಸ್ಕೃತಿಯ ಕುರುಹುಗಳು ಈ ಸ್ಥಳದ ಇತಿಹಾಸವನ್ನು ಪ್ರ.ಶ.ಪೂ. ಶತಮಾನಗಳಿಗೆ ಕೊಂಡೊಯ್ಯುತ್ತವೆ. ಬೃಹತ್ ಶಿಲಾಸಂಸ್ಕೃತಿಯ ಹಲವಾರು ಕಲ್ಲನೆ ಗೋರಿಗಳು ಇಲ್ಲಿ ಕಂಡುಬಂದಿವೆ. ಅನಂತರ ಆದಿ ಚಾರಿತ್ರಿಕ ಕಾಲ, ಗಂಗ, ಹೊಯ್ಸಳ, ವಿಜಯನಗರ ಕಾಲದ ಸಂಸ್ಕೃತಿಗಳ ಕುರುಹುಗಳಿವೆ. ರಾಜಘಟ್ಟದ ಆಸುಪಾಸಿನಲ್ಲಿ ಯಾವುದೇ ನದಿ-ತೊರೆಗಳಿಲ್ಲ. ಗ್ರಾಮದ ಸಮೀಪದಲ್ಲಿರುವ ದೊಡ್ಡ ಕೆರೆ ಪ್ರಾಚೀನವಾಗಿದ್ದು, ಈ ಕೆರೆಯೇ ಇಲ್ಲಿಯ ಜನವಸತಿಗೆ ಜೀವಾಳವಾಗಿತ್ತೆಂದು ತೋರುತ್ತದೆ. ಈ ನೆಲೆಯ ಮಹತ್ತ್ವವಿರುವುದು 2001 ಮತ್ತು 2004 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ನಡೆಸಿದ ಪುರಾತತ್ತ್ವ ಉತ್ಖನನದಲ್ಲಿ. ಬೌದ್ಧ ಸಂಸ್ಕೃತಿಯ ಕುರುಹುಗಳು ಉತ್ಖನನದಲ್ಲಿ ವಿಪುಲವಾಗಿ ದೊರೆತಿವೆ.

ಕರ್ನಾಟಕದಲ್ಲೇ ಹಿಂದೆಂದೂ ಕಂಡುಬಂದಿರದಂತಹ ಬೌದ್ಧಧರ್ಮದ ವಿಶಿಷ್ಟ ಅವಶೇಷಗಳು ಇವಾಗಿವೆ. ಇದರಿಂದಾಗಿ ದಕ್ಷಿಣ ಭಾರತದ ಬೌದ್ಧಧರ್ಮದ ಇತಿಹಾಸದಲ್ಲಿ ರಾಜಘಟ್ಟ ಒಂದು ಮೈಲಿಗಲ್ಲಾಗಿದೆ. ಈ ಹೆಸರು ಈ ಊರಿಗೆ ಹೇಗೆ ಬಂದಿತು ಎಂಬುದಕ್ಕೆ ಸಮರ್ಥನೀಯ ಕಾರಣಗಳು ದೊರಕಿಲ್ಲ. ವಾರಾಣಸಿಯ ಬಳಿಯ ರಾಜಘಾಟ್ ಒಂದು ಪ್ರಸಿದ್ಧ ಪ್ರಾಚೀನ ಬೌದ್ಧಕೇಂದ್ರ. ಅಲ್ಲಿಂದ ದಕ್ಷಿಣಕ್ಕೆ ವಲಸೆ ಬಂದ ಬೌದ್ಧ ಭಿಕ್ಷುಗಳು ಈ ಸ್ಥಳದಲ್ಲಿ ನೆಲೆಸಿ, ತಮ್ಮ ಮೂಲಸ್ಥಳದ ಹೆಸರನ್ನೇ ತಮ್ಮ ಹೊಸನೆಲೆಗೆ ಇಟ್ಟಿರಬಹುದೇ ಎಂಬುದು ಊಹೆಮಾತ್ರ.

ರಾಜಘಟ್ಟ ಗ್ರಾಮದ ಆಗ್ನೇಯಕ್ಕೆ ಸು. 50 ಹೆ. ವಿಶಾಲವಾದ ಕೃಷಿ ಭೂಮಿಯಿದೆ. ಈ ಭೂಮಿ ಒಂದೆರಡು ದಶಕದ ಹಿಂದೆ ಸು. 1.8–2.4 ಮೀ ಎತ್ತರದ ಬೂದುಮಣ್ಣಿನ ರಾಶಿಯಿಂದ ಕೂಡಿತ್ತು. ಇದರಿಂದಾಗಿ ಈ ಪ್ರದೇಶವನ್ನು ಸ್ಥಳೀಯರು ಬೂದಿಗುಂಡಿ ಎಂದು ಕರೆಯುತ್ತಿದ್ದರು. ಈಗ ಬೂದುಮಣ್ಣು ಕೃಷಿಗಾಗಿ ಸ್ಥಳಾಂತರಗೊಂಡಿದೆ. ಅಲ್ಲಲ್ಲಿ ಪ್ರಾಚೀನ ಅವಶೇಷಗಳನ್ನುಳ್ಳ ಸಣ್ಣ–ಸಣ್ಣ ದಿಬ್ಬಗಳನ್ನು ಮಾತ್ರ ಈಗ ಕಾಣಬಹುದು.



ಬೌದ್ಧ ಚೈತ್ಯಾಲಯ ಮತ್ತು ವಿಹಾರ

ಬೂದಿಗುಂಡಿ ಪ್ರದೇಶಕ್ಕೆ ಹೊಂದಿಕೊಂಡಂತೆ, ಅದಕ್ಕೆ ಉತ್ತರದಲ್ಲಿ ಸ್ವಲ್ಪ ಎತ್ತರವಾದ ಗಟ್ಟಿಮಣ್ಣಿನ ಪ್ರದೇಶವಿದೆ. ಇಲ್ಲಿ ಕೈಗೊಂಡ ಉತ್ಖನನದಲ್ಲಿ ಇಟ್ಟಿಗೆಯಲ್ಲಿ ನಿರ್ಮಿಸಲಾಗಿದ್ದ ಒಂದು ಚೈತ್ಯಾಲಯ ಮತ್ತು ಅದನ್ನು ಸುತ್ತುವರೆದಿದ್ದ ಪ್ರಾಕಾರ, ವಿಹಾರ ಮುಂತಾದ ಕಟ್ಟಡಗಳ ತಳಪಾಯ ಪತ್ತೆಯಾಯಿತು. ಕರ್ನಾಟಕದಲ್ಲಿ ಕಂಡುಬಂದಿರುವ ಏಕೈಕ ಬೌದ್ಧ ಚೈತ್ಯ – ವಿಹಾರದ ಸಂಕೀರ್ಣ ಇದಾಗಿದೆ. ಇದರ ಜೊತೆಗೆ ಇನ್ನೂ ಅನೇಕ ಕುತೂಹಲಕಾರಿ ಬೌದ್ಧ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗಿದ್ದು, ರಾಜಘಟ್ಟ ಪ್ರಾಚೀನ ಕರ್ನಾಟಕದ ಒಂದು ಸಮೃದ್ಧ ಬೌದ್ಧ ನೆಲೆಯಾಗಿತ್ತೆಂದು ಸ್ಥಿರಪಡಿಸುತ್ತದೆ.

ಚೈತ್ಯಾಲಯ: ಸುಟ್ಟ ಇಟ್ಟಿಗೆಯಿಂದ ನಿರ್ಮಿತವಾದ ಈ ಚೈತ್ಯಾಲಯ 11.5 ಮೀ ಉದ್ದ ಮತ್ತು 9.5ಮೀ ಅಗಲವಾಗಿದ್ದು ದಕ್ಷಿಣಾಭಿಮುಖವಾಗಿದೆ. ಇದರ ಮಧ್ಯದಲ್ಲಿ 4.3X2.5 ಮೀ ವಿಸ್ತೀರ್ಣದ ಒಂದು ಹಜಾರವಿದೆ. ಹಜಾರದಲ್ಲಿ ಕಂಬಗಳಿದ್ದ ಕುರುಹುಗಳಿಲ್ಲ. ಇದರ ಒಳ ಹಿಂಬದಿ ಅರ್ಧ ವೃತ್ತಾಕಾರವಾಗಿದ್ದರೆ, ಹೊರಹಿಂಬದಿ ಚೌಕಾಕಾರವಾಗಿದೆ. ಹಜಾರದ ಸುತ್ತಲೂ ಆಯತಾಕಾರದ ಒಂದು ಪ್ರದಕ್ಷಿಣ ಪಥವಿದೆ. ಇದರ ಅಗಲ 0.75 ಮೀ. ಚೈತ್ಯಾಲಯದ ಹೊರಗೋಡೆಯಲ್ಲಿ ಕೋಷ್ಠಗಳು, ಜಾಲಂಧ್ರಗಳು ಇದ್ದುದಕ್ಕೆ ಸೂಕ್ಷ್ಮ ಸಾಕ್ಷ್ಯಗಳು ದೊರೆತಿವೆ. ದಕ್ಷಿಣ ಮುಖದಲ್ಲಿ ಕಲ್ಲಿನ ಕಂಬಗಳ ಆಸರೆಯ ಮೇಲೆ ನಿಂತಿದ್ದ ಮುಖಮಂಟಪವೊಂದಿತ್ತು. ಇದರ ಮುಂದೆ ಕಟಾಂಜನಗಳು ಮತ್ತು ಚಂದ್ರಶಿಲೆ ಕಂಡುಬಂದಿವೆ. ಕಟ್ಟಡವನ್ನು ಸಂಪೂರ್ಣವಾಗಿ ಇಟ್ಟಿಗೆ, ಮಣ್ಣಿನಿಂದ ನಿರ್ಮಿಸಿ ಸುಣ್ಣದ ಗಾರೆಯಿಂದ ಗಿಲಾವು ಮಾಡಲಾಗಿತ್ತು. ಅಂದಕ್ಕಾಗಿ ಸುಣ್ಣವನ್ನೂ ಕೆಂಪುಬಣ್ಣವನ್ನೂ ಕಟ್ಟಡಕ್ಕೆ ಬಳಿದಿದ್ದರು. ಕಟ್ಟಡ ವಾಸ್ತು ಮತ್ತು ಶಿಲ್ಪ ಅಲಂಕರಣಗಳಿಂದ ಕಂಗೊಳಿಸುತ್ತಿತ್ತು. ವಾಸ್ತು ಅಲಂಕರಣಕ್ಕಾಗಿ ವಿವಿಧಾಕಾರದ, ಗಾತ್ರದ ಅಚ್ಚುಗಳಿಂದ ತಯಾರಿಸಿದ ವಿಶೇಷ ರೀತಿಯ ಇಟ್ಟಿಗೆಗಳನ್ನು ಬಳಸಿದ್ದರು. ಇಟ್ಟಿಗೆಗಳ ಗಾತ್ರ, ವಿನ್ಯಾಸ, ರೂಪಗಳನ್ನು ನೋಡಿದರೆ ವೈವಿಧ್ಯಮಯವಾದ ವಾಸ್ತು ಅಲಂಕರಣ ದಿಂಡುಗಳು, ಬೋದಿಗೆಗಳು ಈ ಕಟ್ಟಡದ ರಚನೆಯಲ್ಲಿ ಬಳಕೆಯಾಗಿದ್ದವು ಎನ್ನಬಹುದು. ಪ್ರದಕ್ಷಿಣ ಪಥಕ್ಕೆ ಗಾಳಿಬೆಳಕಿಗಾಗಿ ಅನೇಕ ಮರದ ಜಾಲಂಧ್ರಗಳನ್ನು ಕೂಡಿಸಿದ್ದರು. ಜಾಲಂಧ್ರದ ಕೆಳಭಾಗದಲ್ಲಿ ಕಟಾಂಜನಗಳನ್ನು ಕೂಡಿಸಿದ್ದರು. ಕಟಾಂಜನದ ಸ್ತಂಭಿಕೆಗಳು ವಿಶೇಷ ವಿನ್ಯಾಸದ ಇಟ್ಟಿಗೆಗಳ ಜೋಡಣೆಯಿಂದ ಕೂಡಿದ್ದವು. ಚೌಕ, ಅಷ್ಟಮುಖಿ, ವೃತ್ತಾಕಾರದ ಇಟ್ಟಿಗೆಗಳು, ಊರ್ಧ್ವ–ಅಧೋಪದ್ಮಗಳುಳ್ಳ ಚೌಕ ಇಟ್ಟಿಗೆಗಳು ಈ ಸ್ತಂಭಿಕೆಗಳಲ್ಲಿ ಬಳಸಲ್ಪಟ್ಟಿದ್ದವು. ಪ್ರತಿಯೊಂದು ಇಟ್ಟಿಗೆಯ ಮಧ್ಯದಲ್ಲಿ ಕೊಳವೆ ರೀತಿಯ ರಂಧ್ರಮಾಡಿ ಅವಕ್ಕೆ ಸಣ್ಣ–ಸಣ್ಣ, ಸುಟ್ಟಮಣ್ಣಿನ ಕೂರುಗೂಟಗಳನ್ನು (ಟೆನನ್) ಸಿಕ್ಕಿಸಿ, ನಿರ್ದಿಷ್ಟ ಆಕಾರಕ್ಕೆ ಸರಿಹೊಂದುವ ಇಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಕೂಡಿಸಿ ನಯ ಗಾರೆಯ ಗಿಲಾವು ಮಾಡಲಾಗಿತ್ತು. ಇದುವರೆಗೂ ಬೇರೆಡೆ ಪತ್ತೆಯಾಗದಿರುವಂತಹ ಒಂದು ವಿಶೇಷ ತಾಂತ್ರಿಕ ವಿಧಾನ ಇದಾಗಿದೆ. ಭಿತ್ತಿಯ ಭಾಗವನ್ನು ಪ್ರಾಣಿ, ಸಸ್ಯ ಹಾಗೂ ಮೂರ್ತಿಶಿಲ್ಪ ಮತ್ತು ನಿರ್ದಿಷ್ಟ ರೇಖಾಕೃತಿ ಹಾಗೂ ಅನಿರ್ದಿಷ್ಟ ಆಕಾರಗಳಿಂದ ಅಲಂಕರಿಸಲಾಗಿತ್ತು. ಈ ಎಲ್ಲ ರೀತಿಯ ಶಿಲ್ಪರೂಪಣಗಳು ಉತ್ಖನನದಲ್ಲಿ ಹೇರಳವಾಗಿ ಪತ್ತೆಯಾಗಿವೆ. ಗಚ್ಚುಶಿಲ್ಪಗಳನ್ನು ಇಟ್ಟಿಗೆಯ ಚೂರು, ಗಾರೆ ಮತ್ತು ಸುಣ್ಣದಿಂದ ತಯಾರಿಸಿದ್ದರು. ಈ ಶಿಲ್ಪರೂಪಣಗಳು ವಿವಿಧ ಮುಖಭಾವ, ಭಂಗಿಗಳಿಂದ ಆಕರ್ಷಕವಾಗಿರುವ ರಸಗಳಿಂದ ಕಂಗೊಳಿಸುವ ಬೌದ್ಧ ಕಥಾನಕ ಶಿಲ್ಪಗಳು. ಚೈತ್ಯದ ಹೊರಗೋಡೆ ಹಾಗೂ ಮೇಲ್ಛಾವಣಿ ಇಟ್ಟಿಗೆ ಗಾರೆಯಿಂದ ನಿರ್ಮಿತವಾಗಿತ್ತು.

ವಿಹಾರ: ಚೈತ್ಯಾಲಯದ ಸುತ್ತಲೂ ಬೃಹತ್ತಾದ ಪೌಳಿಗೋಡೆ ಮತ್ತು ವಿಹಾರದ ಕೊಠಡಿಗಳ ಸಾಲು ಇತ್ತು. ಚೈತ್ಯದ ಎಡಪಾರ್ಶ್ವದಲ್ಲಿ ಅಂದರೆ ಪೂರ್ವ ದಿಕ್ಕಿನಲ್ಲಿ, 9 ಮೀ ದೂರದಲ್ಲಿ, ಸಾಲಾಗಿ ನಿರ್ಮಿತವಾದ ಏಳು ಕೊಠಡಿಗಳ ಅಡಿಪಾಯ ದೊರೆತಿದೆ. ಕೊಠಡಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಿರಬಹುದು. ಪ್ರತಿ ಕೊಠಡಿ 2.5X2.5 ಮೀ ವಿಸ್ತೀರ್ಣವಿದ್ದು, ಎಲ್ಲವೂ ಪಶ್ಚಿಮಕ್ಕೆ ಅಂದರೆ ಚೈತ್ಯಾಲಯದ ಅಂಗಳಕ್ಕೆ ಮುಖಮಾಡಿವೆ. ಪ್ರತಿಕೊಠಡಿಗೂ ಪ್ರತ್ಯೇಕವಾದ, ಅಂಗಳಕ್ಕೆ ತೆರವಾದ ಬಾಗಿಲುಗಳಿದ್ದವು. ಕೊಠಡಿಗಳ ನೆಲ ದಮ್ಮಸು ಮಾಡಿದ ಮಣ್ಣಿನದ್ದಾಗಿತ್ತೆಂದು ಕಾಣುತ್ತದೆ. ಈ ವಿಹಾರ ಸಂಕೀರ್ಣದ ಒಂದು ವಿಶೇಷವೆಂದರೆ, ಕೊಠಡಿ ಸಾಲಿನ ಉತ್ತರ ತುದಿಯಲ್ಲಿ ಪೂರ್ವದಿಕ್ಕಿಗೆ ಮುಖಮಾಡಿ ಕಟ್ಟಿರುವ ಒಂದು ಸಣ್ಣ ಸ್ನಾನದ ಮನೆ. ಈ ಕೊಠಡಿಯನ್ನು ಸ್ವಲ್ಪ ಎತ್ತರಿಸಿದ ಅಧಿಷ್ಠಾನದ ಮೇಲೆ ನಿರ್ಮಿಸಿದ್ದಾರೆ. ವಿಹಾರದ ಹಿಂಭಾಗದಿಂದ ಇದಕ್ಕೆ ಪ್ರವೇಶ. ಇದಕ್ಕೆ ಕಲ್ಲಿನ ಮೂರು ಮೆಟ್ಟಿಲುಗಳಿವೆ. ಕೊಠಡಿಯ ನೆಲದ ವಿಸ್ತೀರ್ಣಕ್ಕೆ ಹೆಚ್ಚು ಕಡಿಮೆ ಹೊಂದುವಂತೆ ಒಂದು ದೊಡ್ಡದಾದ ಕಲ್ಲುಚಪ್ಪಡಿಯನ್ನು ಹಾಸಿದೆ. ನೆಲದಲ್ಲಿ ರಂಧ್ರ ಮಾಡಿ ನೀರು ಹೊರಹೋಗುವ ವ್ಯವಸ್ಥೆಯಿದೆ. ಹೊರಬಂದ ನೀರು ಕಟ್ಟಡದಿಂದ 2.5ಮೀ ದೂರದವರೆಗೂ ಹರಿದುಹೋಗಲು ಇಟ್ಟಿಗೆಯ ಚರಂಡಿ ನಿರ್ಮಿಸಿ ಅದನ್ನು ಕಲ್ಲುಚಪ್ಪಡಿಯಿಂದ ಮುಚ್ಚಿದೆ.

ಪ್ರಾಕಾರ: ಚೈತ್ಯಾಲಯದ ಉತ್ತರದಿಕ್ಕಿನಲ್ಲಿ 7ಮೀ ಅಂತರದಲ್ಲಿ ಎತ್ತರವಾದ ಪ್ರಾಕಾರ ವಿದೆ. ಈ ಪ್ರಾಕಾರಕ್ಕೆ ಉತ್ತರ ಮಧ್ಯಭಾಗದಲ್ಲಿ ದ್ವಾರವಿತ್ತು. ದ್ವಾರಮಂಟಪವಿದ್ದ ಸೂಚನೆಯೂ ಇದೆ. ಈ ದ್ವಾರದ ಮೂಲಕ ಪ್ರಾಕಾರಕ್ಕೆ ಇಳಿಯಲು ಮೂರು ಕಲ್ಲು ಮೆಟ್ಟಿಲಿನ ಸೋಪಾನವಿದೆ. ಸೋಪಾನದ ಮುಂದೆ ಚಂದ್ರಶಿಲೆಯಿದೆ. ಸೋಪಾನದ ಎರಡೂ ಪಾರ್ಶ್ವಗಳಲ್ಲಿ ಇಟ್ಟಿಗೆ ನಿರ್ಮಿತ ಕಟಾಂಜನವಿದೆ. ಸೋಪಾನಕ್ಕೆ ಸೇರಿಕೊಂಡಂತೆ ಪಶ್ಚಿಮದಲ್ಲಿ ಹರಕೆ ಮೂರ್ತಿಗಳನ್ನು ಹಾಕುವಂಥ ಒಂದು ಸಣ್ಣ ಗುಂಡಿಯೂ ಇದೆ. ಪ್ರಾಕಾರದ ಗೋಡೆಯ ದಪ್ಪ 1.4 ಮೀ. ಸುಟ್ಟ ಇಟ್ಟಿಗೆಯಲ್ಲಿ, ಸದೃಢವಾಗಿ ನಿರ್ಮಿಸಿದ ಈ ಗೋಡೆಯ ಎತ್ತರ ಸು.5 ಮೀ ಇದ್ದಿರಬಹುದು. ಪ್ರಾಕಾರದ ಗೋಡೆಯ ಒಳಮುಖದಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಕೋಷ್ಠಗುಡಿಗಳಿದ್ದವು. ಪ್ರತಿಗುಡಿಗೂ ಪ್ರಮಾಣಬದ್ಧ ಅಧಿಷ್ಠಾನವಿದೆ. ಕೋಷ್ಠಗುಡಿಗಳಲ್ಲಿ ಗಾರೆಗಚ್ಚಿನ ಬೌದ್ಧ ಶಿಲ್ಪಗಳು ಇದ್ದುದಕ್ಕೆ ಸಾಕ್ಷ್ಯಾಧಾರಗಳಿವೆ. ಪ್ರಾಕಾರದ ಒಳಮುಖಕ್ಕೆ ಒತ್ತಿಕೊಂಡು ನಿರ್ಮಿತವಾಗಿದ್ದ ಈ ಕೋಷ್ಠಗುಡಿಗಳು ಅನಂತರ ಕಾಲದಲ್ಲಿ ಕಲ್ಲಿನಲ್ಲಿ ನಿರ್ಮಿತವಾದ ಕಂಚಿಯ ಕೈಲಾಸನಾಥ ದೇವಾಲಯದ ಪ್ರಾಕಾರದ ಕೋಷ್ಠಗುಡಿಗಳ ಮುನ್–ಮಾದರಿಗಳೆಂದು ಹೇಳಬಹುದು. ಹೀಗಾಗಿ ಪ್ರಾಚೀನ ಇಟ್ಟಿಗೆಯ ಕಟ್ಟಡಗಳು ತರುವಾಯದ ಶಿಲಾವಾಸ್ತು ರೂಪಗಳಿಗೆ ಮಾದರಿಗಳಾಗಿದ್ದವು ಎಂಬ ವಿಷಯ ಸ್ಪಷ್ಟವಾಗುತ್ತದೆ. ಪ್ರಾಕಾರದ ಒಳಗೆ, ಚೈತ್ಯಾಲಯದ ಸುತ್ತಲಿನ ಅಂಗಳಕ್ಕೆ ಚಪ್ಪಡಿಕಲ್ಲುಗಳ ಹಾಸು ಇತ್ತು. ಅಂಗಳದ ನಾಲ್ಕೂ ಮೂಲೆಗಳಲ್ಲಿ ಆಯಕ ಕಟ್ಟೆಗಳಿದ್ದುವು. ಆಯಕ ಕಟ್ಟೆಗಳ ಮೇಲೆ ಒಂದೊಂದು ಆಯಕ ಸ್ತಂಭವಿತ್ತು. ಆಯಕ ಸ್ತಂಭಗಳಲ್ಲಿ ಆಗ್ನೇಯದ ಕಂಬ ಮಾತ್ರ ಸುಸ್ಥಿತಿಯಲ್ಲಿ ಉಳಿದಿದೆ.

ಬೌದ್ಧ ಚೈತ್ಯಾಲಯ ಸಂಕೀರ್ಣವಲ್ಲದೆ ರಾಜಘಟ್ಟದಲ್ಲಿ ಬೌದ್ಧ ಸಂಸ್ಕೃತಿಯ ಇನ್ನಿತರ ಅವಶೇಷಗಳೂ ದೊರೆತಿವೆ. ಇವುಗಳಲ್ಲಿ ಮಹತ್ತ್ವವಾದದ್ದೆಂದರೆ ನೂರಾರು ಸಂಖ್ಯೆಯಲ್ಲಿ ದೊರೆತಿರುವ ಮಣ್ಣಿನ ಸಣ್ಣ ಹರಕೆ ಸ್ತೂಪಗಳು. ವಿವಿಧಾಕಾರದ, ಗಾತ್ರದ ಅಚ್ಚಿನಲ್ಲಿ ತಯಾರಿಸಿದ ಈ ಸ್ತೂಪಗಳು 50–600 ಗ್ರಾಂ ತೂಕದವರೆಗೂ ಇವೆ. ಹಸಿಮಣ್ಣನ್ನು ಸ್ತೂಪಾಕಾರದ ಅಚ್ಚಿನೊಳಗೆ ಒತ್ತಿ ತುಂಬಿ ಹೊರತೆಗೆದು ಬಿಸಿಲಿನಲ್ಲಿ ಒಣಗಿಸಿ ಮಾಡಿದ ಸ್ತೂಪಗಳಿವು. ಇವುಗಳ ಮೇಧಿ, ಅಂಡಭಾಗಗಳು ವಿವಿಧ ರೂಪಗಳದ್ದಾಗಿವೆ. ಮೇಲ್ತುದಿಯಲ್ಲಿ ಅಲಂಕರಣಕ್ಕಾಗಿ ಛತ್ರಾವಳಿಯನ್ನು ನವಿರಾದ ಬೇರೆ ವಸ್ತುಗಳಿಂದ ತಯಾರಿಸಿ ಸಿಕ್ಕಿಸಲಾಗುತ್ತಿತ್ತು. ಮುದ್ದಾದ ಈ ಸ್ತೂಪಗಳ ಮತ್ತೊಂದು ವಿಶೇಷತೆಯೆಂದರೆ ಪ್ರತಿ ಸ್ತೂಪದ ಒಳಭಾಗದಲ್ಲಿ ಸೇರಿಸಿರುವ ಮಣ್ಣಿನ ಬಿಲ್ಲೆಗಳು. ಒಡೆದು ಛಿದ್ರವಾದ ಅನೇಕ ಸ್ತೂಪಗಳು ದೊರೆತಿವೆ. ಅವುಗಳೆಲ್ಲದರಲ್ಲೂ ಒಂದೊಂದು ಕಾಸಿನ ರೂಪದ ಮಣ್ಣಿನ ಬಿಲ್ಲೆಗಳು ಇರುವುದು ಕಂಡುಬಂದಿದೆ. ಈ ಬಿಲ್ಲೆಗಳು ಒಂದು ಮುಖದಲ್ಲಿ ಮಾತ್ರ ಐದು ಸಾಲಿನ ಮುದ್ರಾಶಾಸನವನ್ನು ಹೊಂದಿರುತ್ತವೆ. ಅದರ ಪಾಠ ಎಲ್ಲದರಲ್ಲೂ ಒಂದೇ ರೀತಿಯದು: ಯೇ ಧಮ್ಮ ಹೇತುಪ್ಪಭವ ತೇಸ ಹೇತು ತಥಾಗತೋ ಆಹಂ ತೇಸ ಚ ಯೋ ನಿರೋಧೋ ಏವ ವಾದಿ ಮಹಾಸಮಣೋ. ಈ ಲಿಪಿ ದಾಕ್ಷಿಣಾತ್ಯ ಬ್ರಾಹ್ಮಿ, ಭಾಷೆ ಪ್ರಾಕೃತ ಮತ್ತು ಸಂಸ್ಕೃತದ ಮಿಶ್ರಣ. ಲಿಪಿಯ ಲಕ್ಷಣಗಳು 5–7ನೆಯ ಶತಮಾನದ ವರೆಗಿನ ಕಾಲವನ್ನು ಸೂಚಿಸುತ್ತವೆ. ರಾಜಘಟ್ಟದಲ್ಲಿನ ಬೌದ್ಧ ಸಂಸ್ಕೃತಿಯ ಕಾಲವನ್ನು

**

ನಿರ್ಧರಿಸುವುದಕ್ಕೆ ನೇರ ಆಧಾರಗಳು ದೊರೆತಿಲ್ಲವಾದ ಕಾರಣ, ಈ ಮಣ್ಣಿನ ಬಿಲ್ಲೆಗಳ ಲಿಪಿಯ ಕಾಲಮಾನವನ್ನು ಆಧರಿಸಿ, ಇದರ ಕಾಲವನ್ನು ಸಹ ಸು. 400 ರಿಂದ 600 ರವರೆಗೆ ಎಂದು ನಿರ್ಧರಿಸಲಾಗಿದೆ.

ರಾಜಘಟ್ಟ ಉತ್ಖನನದಲ್ಲಿ ಹರಕೆಯ ಸ್ತೂಪಗಳ ಜೊತೆಗೆ ಒಂದು ಪದಕ ಮುದ್ರೆಯೂ ಸಿಕ್ಕಿದೆ. ಧ್ಯಾನಮುದ್ರೆಯಲ್ಲಿ ಕುಳಿತಿರುವ ಬುದ್ಧನ ಚಿತ್ರವುಳ್ಳ ಈ ಪದಕ ಮಣ್ಣಿನಿಂದ ಮಾಡಿದುದು. ಇದರ ಸುತ್ತಳತೆ ಸು.18–20 ಸೆಂಮೀ, ದಪ್ಪ 1.25ಸೆಂಮೀ. ಪದಕದ ಒಂದು ಮುಖ ಮಾತ್ರ ಚಿತ್ರಿತವಾಗಿದೆ. ಹಿಂಭಾಗ ಖಾಲಿ. ಮುಖಭಾಗದಲ್ಲಿ ಧ್ಯಾನಾಸನದಲ್ಲಿ ಕುಳಿತ ಬುದ್ಧ ತಲೆಯ ಹಿಂದೆ ಪ್ರಭಾವಳಿ ಇದೆ. ತಲೆಯ ಇಕ್ಕೆಲಗಳಲ್ಲಿ ಚಾಮರಗಳಿವೆ. ಬುದ್ಧನ ಮುಂದೆ ಇಕ್ಕೆಲಗಳಲ್ಲಿ ಒಂದೊಂದು ಸಣ್ಣ ಸ್ತೂಪಗಳ ಚಿತ್ರಣವೂ ಇದೆ. ಬುದ್ಧನ ಈ ರೀತಿಯ ಮೂರ್ತಿಯನ್ನು ಅಮಿತಾಭನೆಂದು ಗುರುತಿಸಲಾಗಿದೆ. ಮಹಾಯಾನ ಪಂಥದ ಇಂದಿನ ಟಿಬೆಟನ್ನರು ಈ ರೀತಿಯ ಧ್ಯಾನಿ ಬುದ್ಧ ಮೂರ್ತಿಯನ್ನು ಅಮಿತಾಭ ನೆಂದು ಪೂಜಿಸುತ್ತಾರೆ. ವಿಶೇಷವೆಂದರೆ ರಾಜಘಟ್ಟದ ಹರಕೆಯ ಸ್ತೂಪಗಳ ರೀತಿಯ ಸ್ತೂಪಗಳನ್ನು ವಿವಿಧಾಕಾರದ ಅಚ್ಚುಗಳಲ್ಲಿ ತಯಾರಿಸಿ ಇಂದಿಗೂ ಬುದ್ಧನಿಗೆ ಅರ್ಪಿಸುವ ವಾಡಿಕೆಯಿದೆ. ಹೀಗಾಗಿ ರಾಜಘಟ್ಟದ ಬೌದ್ಧಧರ್ಮವನ್ನು ಮಹಾಯಾನ ಪಂಥದ್ದಿರಬೇಕೆಂದು ಊಹಿಸಲಾಗಿದೆ. ದಕ್ಷಿಣ ಕರ್ನಾಟಕ ದಲ್ಲಿ ಬೌದ್ಧಧರ್ಮ ಅಸ್ತಿತ್ವದಲ್ಲಿತ್ತೇ ಎಂಬ ಜಿಜ್ಞಾಸೆ ವಿದ್ವಾಂಸರಲ್ಲಿ ಇರುವ ಸಂದರ್ಭದಲ್ಲಿ ರಾಜಘಟ್ಟದ ಈ ಹೊಸ ಸಂಶೋಧನೆ ಮಹತ್ತ್ವದ್ದೆನಿಸುತ್ತದೆ. (ಎಂ.ಎಸ್.ಕೆ.)

**ರಾಜನ ಕೋಳೂರು:** ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ಬೃಹತ್ ಶಿಲಾಸಂಸ್ಕೃತಿಯ ಸಮಾಧಿ ನೆಲೆ. ಮೆಡೋಸ್ ಟೇಲರ್ ಪ್ರಪ್ರಥಮವಾಗಿ ಈ ನೆಲೆಯ ಬಗೆಗೆ 1853ರಲ್ಲಿ ರೇಖಾಚಿತ್ರ ಸಹಿತ ವರದಿ ಪ್ರಕಟಿಸಿದ. ಇದು ಭೀಮ ಶ್ರೇಣಿಯ ಸುಣ್ಣ ಹಾಗೂ ಕೆಂಪು ಮರಳುಕಲ್ಲಿನ ಗುಡ್ಡಪ್ರದೇಶವಾಗಿದೆ. ಗ್ರಾಮದ ಪಶ್ಚಿಮಕ್ಕೆ ಸು.1.5 ಕಿಮೀ ದೂರದಲ್ಲಿಯ ಸರ್ಕಾರಿ ಘಡಿಯಲ್ಲಿ ಸು.90 ಕಲ್ಗೋರಿಗಳಿವೆ. ಇವುಗಳನ್ನು ಸ್ಥಳೀಯರು ಆರ್ಯರ ಮೋರಿಯ ಗುಡಿಗಳೆಂದು ಕರೆಯುವುದು ಕುತೂಹಲಕಾರಿ. ಬಹುಪಾಲು ಗೋರಿ ಗಳು ಇಂದು ದುಸ್ಥಿತಿಯಲ್ಲಿವೆ. ಉತ್ತಮ ಸ್ಥಿತಿಯಲ್ಲಿರುವ ಗೋರಿಗಳು ನೆಲದ ಮೇಲೆ ದೊಡ್ಡ ಕಲ್ಲುಚಪ್ಪಡಿಗಳನ್ನು ನೆಟ್ಟಗೆ ನಿಲ್ಲಿಸಿ ಮಾಡಿದ ಆಯತಾಕಾರದ ಕೋಣೆಯಂತಿವೆ. ಇವುಗಳ



ಬೃಹತ್ ಶಿಲಾಗೋರಿಗಳ ನೆಲೆ

ಒಂದು ಬದಿಯ ಚಪ್ಪಡಿಯ ಮಧ್ಯಭಾಗದಲ್ಲಿ ಕಂಡಿ ಇರುವುದು ಟೇಲರ್‌ನ ಚಿತ್ರಗಳಿಂದಲೂ ಸುಸ್ಥಿತಿಯಲ್ಲಿರುವ 2 ಗೋರಿಗಳಿಂದಲೂ ತಿಳಿದುಬರುತ್ತದೆ. ಒಂದು ಕಲ್ಗೋರಿಯಲ್ಲಿಯ ಕಂಡಿ ದಕ್ಷಿಣಮುಖವಾಗಿದೆ. ಇವುಗಳಲ್ಲಿ ಅತ್ಯಂತ ದೊಡ್ಡದು ಒಳಭಾಗದಲ್ಲಿ 2ಮೀ ಉದ್ದ, 1.5ಮೀ ಅಗಲ ಮತ್ತು 1.5 ಮೀ ಎತ್ತರವಿದೆ. ಅತ್ಯಂತ ಚಿಕ್ಕದು 50×50×20 ಸೆಂಮೀ ಇದೆ. ಇವಲ್ಲದೆ ಕೆಲವು ಚಿಕ್ಕಚಿಕ್ಕ ಕಲ್ಗೋರಿಗಳಿವೆ. ನೆಲೆಯ ಸಮೀಪದಲ್ಲಿ ಕೋಣೆಗೋರಿಗಳುಳ್ಳ ನಾಲ್ಕು ಕಲ್ಲುವೃತ್ತಗಳಿವೆ. ಈ ಕಲ್ಗೋರಿಗಳು ಉತ್ತರ ಕರ್ನಾಟಕದ ಕೋಣೆಗೋರಿಗಳ ಬೆಳವಣಿಗೆಯ ಮಧ್ಯದ ಹಂತವನ್ನು ಸೂಚಿಸುತ್ತವೆ. ಇವುಗಳ ಕಾಲಮಾನ ಪ್ರ.ಶ.ಪೂ.ಸು.1000–800. (ಎ.ಎಸ್.;ಎನ್.ಎಲ್.)

**ರಾಜ ನಲ್ ಕ ಟೀಲ:** ಉತ್ತರಪ್ರದೇಶ ರಾಜ್ಯದ ಸೋನ್‌ಭದ್ರ ಜಿಲ್ಲಾಕೇಂದ್ರ ರಾಬರ್ಟ್‌ಗಂಜ್‌ನಿಂದ 29ಕಿಮೀ ಪೂರ್ವದಲ್ಲಿರುವ ಪುರಾತತ್ತ್ವ ನೆಲೆ. ಕರ್ಮನಾಶ ನದಿಯ ತಿರುವಿನಲ್ಲಿರುವ ಈ ನೆಲೆ 780x420 ಮೀ ವಿಸ್ತಾರವಾಗಿದೆ. 1994 ರಲ್ಲಿ ರಾಜ್ಯ ಸರ್ಕಾರದ ಪುರಾತತ್ತ್ವ ಇಲಾಖೆ ಇದನ್ನು ಶೋಧಿಸಿ 1995–97ರ ಅವಧಿಯಲ್ಲಿ ಉತ್ಖನನ ನಡೆಸಿತು. ಇಲ್ಲಿ 3.8ಮೀ ದಪ್ಪದ ವಸತಿ ಪದರದಲ್ಲಿ 4 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ.

1ನೆಯ ಹಂತದಲ್ಲಿ ಕೆಂಪು, ಕಪ್ಪು–ಕೆಂಪು ದ್ವಿವರ್ಣ, ಪೂರ್ಣ ಕಪ್ಪು ಲೇಪನವುಳ್ಳ ಮತ್ತು ಬೂದುವರ್ಣದ ಮಣ್ಪಾತ್ರೆಗಳಿವೆ. ಕೆಲವು ಪಾತ್ರೆಗಳ ಮೇಲೆ ಹುರಿಯನ್ನು ಒತ್ತಿ ಮೂಡಿಸಿದ ಅಲಂಕರಣವಿದೆ. ಕೈಯಿಂದ ಮಾಡಿದ ಗಡಿಗೆಗಳು ಅಲ್ಪ ಪ್ರಮಾಣದಲ್ಲಿವೆ. ಪೀಠವುಳ್ಳ ಬಟ್ಟಲು, ತಳದಲ್ಲಿ ತೂತುಗಳುಳ್ಳ ಬಟ್ಟಲು, ಒಳಲೆ ಆಕಾರದ ಬಟ್ಟಲು ಮುಂತಾದುವು ಹೆಚ್ಚಿನ ಪ್ರಮಾಣದಲ್ಲಿ ದೊರೆತಿವೆ. ಕೆಲವು ಪಾತ್ರೆಗಳ ಮೇಲೆ ಬಿಳಿ ಅಥವಾ ನಸುಹಳದಿ, ಕಪ್ಪು ಮತ್ತು ಕೆಂಪುಬಣ್ಣದಲ್ಲಿ ಅಲೆಯಾಕಾರದ ಮತ್ತು ಚುಕ್ಕೆಗಳ ರೇಖಾಚಿತ್ರಗಳಿವೆ. ಒಂದು ಪಾತ್ರೆ ತುಂಡಿನ ಮೇಲೆ ಕಪ್ಪುಬಣ್ಣದ ಮನುಷ್ಯಾಕೃತಿ ಇದೆ. ಇನ್ನು ಕೆಲವು ಮಡಕೆಗಳ ಮೇಲೆ ಗೀರುಚಿತ್ರಗಳಿವೆ. ಮರದ ಗೂಟದ ಗುಳಿಗಳು ಆ ಕಾಲದ ಮನೆಗಳ ವಿನ್ಯಾಸವನ್ನು ಸೂಚಿಸುತ್ತವೆ. ಇಂತಹ ಮನೆಗಳಲ್ಲಿ ಮಡಕೆ ಚೂರುಗಳನ್ನು ಕೆಂಪುಮಣ್ಣಿನಲ್ಲಿ ಮಿಶ್ರಮಾಡಿ ನೆಲಕ್ಕೆ ದಮ್ಮಸು ಮಾಡಿರುವುದು ಕಂಡುಬಂದಿದೆ. ಹುಲ್ಲುಕಡ್ಡಿ ಮತ್ತು ಮಣ್ಣಿನ ತಡಿಕೆ ಗೋಡೆಗಳ ಅವಶೇಷಗಳು ದೊರೆತಿವೆ. ಬಾಣದ ಮೊನೆ ಮುಂತಾದ ಎಲುಬಿನ ಉಪಕರಣಗಳು, ಮಣ್ಣಿನ ಮತ್ತು ಕಲ್ಲಿನ ಮಣಿಗಳು, ನೀಳ ಚಕ್ಕೆಗಳು, ಕವಣೆ ಕಲ್ಲು ಮುಂತಾದ ಅವಶೇಷಗಳೂ ದೊರೆತಿವೆ. ಈ ಹಂತದ ಜನರಿಗೆ ವ್ಯವಸಾಯದಲ್ಲಿ ತಕ್ಕಮಟ್ಟಿನ ಅನುಭವವಿದ್ದಂತೆ ಕಾಣುತ್ತದೆ. ಬತ್ತ, ಜವೆ, ಹೆಸರು, ಅವರೆ ಮುಂತಾದ ಕಾಳುಕಡ್ಡಿಗಳ ಅವಶೇಷಗಳನ್ನು ಸಂಗ್ರಹಿಸಲಾಗಿದೆ. ಇಂಗಾಲ–14 ಕಾಲಮಾನದ ಆಧಾರದ ಮೇಲೆ ಈ ಹಂತವನ್ನು ಪ್ರ.ಶ.ಪೂ. 1800–1700ರಿಂದ 1400–1300 ಎಂದು ನಿರ್ಧರಿಸಲಾಗಿದೆ.



ವರ್ಣರೇಖಾ ಚಿತ್ರಿತ ಮಣ್ಪಾತ್ರೆ ಚೂರುಗಳು

2ನೆಯ ಹಂತದಲ್ಲಿ ಅಲಗು, ಬಾಣದ ಮೊನೆ, ಈಟಿ ಮೊನೆ, ಉಳಿ ಮುಂತಾದ ಕಬ್ಬಿಣದ ಉಪಕರಣಗಳು, ಹಿಂದಿನ ಹಂತದಲ್ಲಿದ್ದಂಥ ಮಣ್ಪಾತ್ರೆಗಳು ದೊರೆತಿವೆ. ಕೆಲವು ಪಾತ್ರೆಗಳ ಮೇಲೆ ಕೆಮ್ಮಣ್ಣಿನ ರೇಖಾಚಿತ್ರಗಳಿರುವುದು ಈ ಹಂತದ ಒಂದು ವೈಶಿಷ್ಟ್ಯ. ಕಪ್ಪು ಲೇಪನವುಳ್ಳ ಪಾತ್ರೆಗಳು, ವಿಶೇಷವಾಗಿ ಬಟ್ಟಲುಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಿವೆ. ಚುಳ್ಳಿ ಲೋಟದಂಥ ವಿಶಿಷ್ಟ ಆಕಾರದ ಪಾತ್ರೆ ಈ ಹಂತದಲ್ಲಿರುವುದು ಗಮನಾರ್ಹ. ಚುಕ್ಕೆಗಳ ಸಾಲು, ಅಂಕುಡೊಂಕು ಗೆರೆಗಳು ಹಾಗೂ ಗೀರುಚಿತ್ರಗಳು, ಮೆತ್ತಿ ಮಾಡಿದ ಅಲಂಕರಣ ಮುಂತಾದುವುಗಳಿಂದ ಪಾತ್ರೆಗಳನ್ನು ಅಲಂಕರಿಸಲಾಗಿದೆ. ಮನೆಗಳೂ ಹಿಂದಿನ ಹಂತದಲ್ಲಿದ್ದಂತೆ ಇವೆ. ಬಡಿಗಲ್ಲು, ಅಗ್ಗಿಷ್ಟಿಕೆ ಮುಂತಾದ ಸಾಂಸ್ಕೃತಿಕ ಅವಶೇಷಗಳೂ ಕಣಜಗಳೂ ಮನೆಗಳಲ್ಲಿದ್ದುವು. ಈ ಹಂತದಲ್ಲಿ ಮೂಳೆ ಉಪಕರಣಗಳೂ ಪ್ರಾಣಿಮೂಳೆಗಳೂ ಹೆಚ್ಚಾಗಿವೆ. ಜಿಂಕೆ ಕೊಂಬುಗಳಿಂದಲೂ ಇವರು ಉಪಕರಣಗಳನ್ನು ತಯಾರಿಸುತ್ತಿದ್ದರು. ಕೆಲವು ಮೂಳೆಗಳ ಮೇಲೆ ಮಚ್ಚಿನಿಂದ ಕತ್ತರಿಸಿದ ಗುರುತು ಮತ್ತು ಸುಟ್ಟ ಚಿಹ್ನೆಗಳಿರುವುದರಿಂದ ಇವರು ಮಾಂಸಹಾರವನ್ನೂ ಸೇವಿಸುತ್ತಿದ್ದರು ಎನ್ನಲಾಗಿದೆ. ಕಾಳುಕಡ್ಡಿಗಳ ಅವಶೇಷಗಳ ಜೊತೆಗೆ ಹುರುಳಿ, ನವಣೆಗಳು ದೊರೆತಿವೆ. ಸಣ್ಣ ಕಲ್ಲುಚಕ್ಕೆಗಳು, ಚಿಪ್ಪು, ಮಣ್ಣಿನ ಮತ್ತು ಕಲ್ಲಿನ ಮಣಿಗಳು, ತಾಮ್ರದ ಬಳೆಗಳು, ನಯ ಮಾಡಿದ ಕಲ್ಲಿನ ಚಪ್ಪಟೆ ಕೊಡಲಿಗಳು, ರುಬ್ಬುಕಲ್ಲು ಮುಂತಾದ ಅವಶೇಷಗಳು ಈ ಹಂತದಲ್ಲಿ ಸಿಕ್ಕಿವೆ. ಇಂಗಾಲ–14 ಕಾಲಮಾನದ ಪ್ರಕಾರ ಈ ಹಂತ ಪ್ರ.ಶ.ಪೂ. 1400–1300 ರಿಂದ 700–600 ರವರೆಗಿನದು.

3ನೆಯ ಹಂತದಲ್ಲಿ ಹಿಂದಿನ ಹಂತದ ಕೆಲವು ಪಾತ್ರೆಗಳಲ್ಲದೆ ಔತ್ತರೇಯ ಮೆರುಗಿನ ಕಪ್ಪುಪಾತ್ರೆ ದೊರೆಯುತ್ತದೆ. ಸುಡಾವೆಮಣ್ಣಿನ ಆಟದ ಗಾಡಿ ಚಕ್ರಗಳು, ಗೂಳಿಗೊಂಬೆ, ಶಿಲೆಯ ಆನೆ, ತೂತಿನ ಮಣಿಗಳು, ಕವಣೆ ಕಲ್ಲು ಕೂಡ ಸಿಕ್ಕಿವೆ. ಈ ಹಂತದ ಕಾಲಮಾನ ಪ್ರ.ಶ.ಪೂ.ಸು.700–600 ರಿಂದ 300–200.

4ನೆಯ ಹಂತದ ಅವಶೇಷಗಳು ನೆಲೆಯ ಒಂದು ಭಾಗದಲ್ಲಿ ಮಾತ್ರ ಕಂಡುಬಂದಿವೆ. ಇಲ್ಲಿ ಗುಪ್ತ ಮತ್ತು ಗುಪ್ತೋತ್ತರ ಕಾಲದ ಕೆಂಪುವರ್ಣದ ಪಾತ್ರೆಗಳು, ಮನೆಯ ನೆಲಗಳು, ಅಗ್ಗಿಷ್ಟಿಕೆ, ಕಲ್ಲಿನ ಸುತ್ತಿಗೆ, ಆಟದ ಕಾಯಿಗಳು, ಗೂಳಿಗೊಂಬೆ, ಆಟದ ಗಾಡಿಯ ಚಕ್ರಗಳು, ಆಂಟಿಮನಿ ಕಡ್ಡಿಗಳು, ಬಳೆ, ಉಂಗುರ, ಕಬ್ಬಿಣದ ಉಪಕರಣಗಳು, ಗಾಜಿನ ಬಳೆಗಳು ಹೇರಳವಾಗಿ ದೊರೆತಿವೆ.

ಈ ಉತ್ಖನನದಿಂದ ವಿಂಧ್ಯಪ್ರಸ್ಥಭೂಮಿ ಪ್ರದೇಶದ ಪೂರ್ವಭಾವಿ ಇತಿಹಾಸ ಹಂತದ ಜನಜೀವನ ಶೈಲಿಯನ್ನು ಸ್ಥೂಲವಾಗಿ ತಿಳಿಯಲು ಸಾಧ್ಯವಾಗಿದೆ. ಸು.3400 ವರ್ಷಗಳ ಹಿಂದೆಯೇ ಕಬ್ಬಿಣದ ಬಳಕೆ ಇದ್ದುದು ಮಹತ್ತ್ವದ ವಿಷಯ. (ಆರ್‌ಟಿ.)

**ರಾಜಾರಾಮ ಮೋಹನ ರಾಯ್:** 1772–1833. ಸಮಾಜ ಸುಧಾರಕ, ಶಿಕ್ಷಣ ತಜ್ಞ, ಪತ್ರಿಕೋದ್ಯಮಿ, ಆಧುನಿಕ ಭಾರತದ ಯುಗಪ್ರವರ್ತಕ. ಬಂಗಾಲದ ಹೂಗ್ಲಿ ಜಿಲ್ಲೆಯ ರಾಧಾನಗರದ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ 1772 ಮೇ 22 ರಂದು ಜನಿಸಿದರು. ಇವರ ಪೂರ್ವಜರು ಬಂಗಾಲ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಾಗಿನಿಂದಲೂ ಅಧಿಕಾರಿಗಳಾಗಿದ್ದರು. ರಾಯ್ ಎಂಬ ಬಿರುದನ್ನು ಇವರ ಮುತ್ತಜ್ಜ ಕೃಷ್ಣಚಂದ್ರ ಬ್ಯಾನರ್ಜಿಯ ವರಿಗೆ ಬಂಗಾಲದ ನವಾಬ ನೀಡಿದ. ಅಂದಿನಿಂದಲೂ ಇವರ ಕುಟುಂಬದ ಹೆಸರಿನೊಂದಿಗೆ

ರಾಯ್ ಸೇರಿಕೊಂಡು ಬಂತು. ರಾಮಮೋಹನರಾಯರ ತಂದೆ ರಮಾಕಾಂತರಾಯ್ ಮತ್ತು ತಾಯಿ ತಾರಣೀದೇವಿ. ರಾಮಮೋಹನರಾಯ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮನೆಯಲ್ಲಿಯೇ ಪೂರೈಸಿದರು. ಅನಂತರ ಅರಾಬಿಕ್, ಪರ್ಷಿಯನ್ ಭಾಷೆಗಳನ್ನು ಕಲಿಯಲು ಪಾಟ್ನಕ್ಕೆ ತೆರಳಿದರು. ಪರ್ಷಿಯನ್, ಅರಾಬಿಕ್ ಮತ್ತು ಸಂಸ್ಕೃತ ಭಾಷೆಗಳನ್ನು ಕಲಿತ ಮೇಲೆ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಇಂಗ್ಲಿಷ್ ಓದಲು ಪ್ರಾರಂಭಿಸಿದರು. ಕುರಾನನ್ನು ಅಭ್ಯಾಸಮಾಡಿದರು. ಇದರ ಜೊತೆಗೆ ಸೂಫಿ ಸಿದ್ಧಾಂತವೂ ಇವರನ್ನು ಆಕರ್ಷಿಸಿತು. ಇಸ್ಲಾಂಧರ್ಮದಲ್ಲಿ ಮೂರ್ತಿಪೂಜೆ ಇಲ್ಲದಿದ್ದದ್ದು ಇವರಿಗೆ ಮೆಚ್ಚುಗೆ ಆಗಿತ್ತು. ಏಕದೇವತಾ ವಾದದಲ್ಲಿ ನಂಬಿಕೆ ದೃಢವಾಯಿತು. ಇವರೊಬ್ಬ ಅಸಾಮಾನ್ಯ ವಿದ್ಯಾರ್ಥಿಯಾಗಿದ್ದು ತರ್ಕ, ಯೂಕ್ಲಿಡ್, ಅರಿಸ್ಟಾಟಲಿನ ತತ್ತ್ವಶಾಸ್ತ್ರ ಮೊದಲಾದವುಗಳನ್ನು ಅರಗಿಸಿಕೊಂಡರು.

ಪಾಟ್ನದಿಂದ ಹಿಂದಿರುಗಿದ ಬಳಿಕ ಇವರು ಹಿಂದುಸಮಾಜದಲ್ಲಿ ಪ್ರಚಲಿತವಿದ್ದ ಮೂರ್ತಿಪೂಜೆ ಮತ್ತು ಮೂಢನಂಬಿಕೆಗಳನ್ನು ಕುರಿತು ಒಂದು ಪುಸ್ತಕವನ್ನು ಬರೆದರು. ಇವರ ತಂದೆಗೆ ಮಗನ ಕ್ರಾಂತಿಕಾರಿ ದೃಷ್ಟಿಕೋನ ಇಷ್ಟವಾಗಲಿಲ್ಲ. ತಂದೆ ಮಕ್ಕಳಿಬ್ಬರಲ್ಲೂ ಮತಭೇದ ತಲೆದೋರಿದಾಗ ರಾಯ್ ಮನೆಯಿಂದ ಹೊರನಡೆದರು. ಅನಂತರ ಭಾರತದ ಹಲವು ಪ್ರಾಂತ್ಯಗಳಲ್ಲಿ ಸಂಚರಿಸಿ ಟಿಬೆಟ್‍ಗೆ ತೆರಳಿದರು. ಟಿಬೆಟಿಯನ್ನರಲ್ಲಿದ್ದ ಮೂರ್ತಿಪೂಜೆ ಯನ್ನು ಕಂಡು ಟೀಕಿಸಿದರು. ಇದರಿಂದ ಲಾಮಾಗಳ ಅಸಮಾಧಾನಕ್ಕೆ ಗುರಿಯಾದರು. ತಮ್ಮ 16ನೆಯ ವಯಸ್ಸಿನಲ್ಲಿ ಆಟೊಬಯಗ್ರಫಿಕಲ್ ಸ್ಕೆಚ್ ಎಂಬ ಕೃತಿ ರಚಿಸಿದರು. ಇದರಲ್ಲಿ ಹಿಂದುಗಳಲ್ಲಿ ಪ್ರಚಲಿತವಿದ್ದ ಮೂರ್ತಿಪೂಜೆಯನ್ನು ಕಟುವಾಗಿ ಟೀಕಿಸಿದರು. ಅಲೆಮಾರಿ ಜೀವನವನ್ನು ಮುಕ್ತಾಯಗೊಳಿಸಿ ಸ್ವಗ್ರಾಮಕ್ಕೆ ಹಿಂದಿರುಗಿದರು.



ರಾಮಮೋಹನ್ ರಾಯ್ ಅವರು ಈಸ್ಟ್ ಇಂಡಿಯ ಕಂಪನಿಯಲ್ಲಿ 1803 ರಲ್ಲಿ ಕೆಲಸಕ್ಕೆ ಸೇರಿದರು. ತಾಮಸ್ ವುಡ್‍ಫೋರ್ಡ್ ಎಂಬಾತನ ಮುನ್ಷಿಯಾಗಿ ಮುರ್ಷಿದಾಬಾದಿಗೆ ತೆರಳಿದರು. ಅಲ್ಲಿ ಪರ್ಷಿಯನ್ ಭಾಷೆಯಲ್ಲಿ ತುಲಫ್–ಉಲ್–ಮುವಾಹಿದ್ದೀನ್ (ಏಕದೇವತಾವಾದಕ್ಕೆ ಕಾಣಿಕೆ) ಎಂಬ ಗ್ರಂಥ ರಚಿಸಿದರು. ರಾಮಮೋಹನ್ ರಾಯ್ ಇಸ್ಲಾಂ, ಕ್ರೈಸ್ತ, ಬೌದ್ಧ, ಹಿಂದು ಧರ್ಮಗಳನ್ನು ಆಳವಾಗಿ ಅಧ್ಯಯನ ಮಾಡಿ ಅದರ ತತ್ತ್ವಗಳನ್ನು ಅರಗಿಸಿಕೊಂಡಿದ್ದರು. ಎಲ್ಲ ಧರ್ಮಗಳೂ ದೇವನಿದ್ದಾನೆಂಬ ನಂಬಿಕೆಯಿಂದ ಕೂಡಿದ್ದುವು. ಇದನ್ನು ಅರ್ಥಮಾಡಿಕೊಂಡು ದೇವನೊಬ್ಬನೆ ಎಂಬ ನಂಬಿಕೆಯುಳ್ಳವರಾಗಿ, ಇದನ್ನು ವಿಶ್ವಧರ್ಮವಾಗಿ ಬೆಳೆಸುವಲ್ಲಿ ಇವರು ಆಸಕ್ತಿ ವಹಿಸಿದರು.

ತಾಮಸ್ ವುಡ್‍ಫೋರ್ಡ್ ಅನಾರೋಗ್ಯದಿಂದ ತೆರಳಿದ ಅನಂತರ 1805 ರಲ್ಲಿ ರಾಮಘಡದಲ್ಲಿ ಜಾನ್ ಡಿಗ್ಬೀ ಎಂಬಾತನಲ್ಲಿ ಇವರು ಖಾಸಗಿ ಮುನ್ಷಿಯಾದರು. ಭಾಗಲ್‍ಪುರ್, ರಾಮ್‍ಘಡ್‍ಗಳಲ್ಲಿ ಕೆಲಸ ಮಾಡಿದ ಅನಂತರ ಉತ್ತರ ಬಂಗಾಲದ ರಂಗಪುರಕ್ಕೆ ಜಾನ್ ಡಿಗ್ಬೀಗೆ ಸಹಾಯಕರಾಗಿ 1809ರಲ್ಲಿ ಹೋಗಿ 1814ರ ವರೆಗೆ ಇದ್ದರು. ಇಲ್ಲಿಯೇ ಇವರಿಗೆ ತಾಂತ್ರಿಕ ಪಾಂಡಿತ್ಯವುಳ್ಳ ಹರಿಹರಾನಂದ ತೀರ್ಥಸ್ವಾಮಿಯವ ರೊಂದಿಗೆ ಒಡನಾಟ ದೊರೆಯಿತು. ಇವರ ಸಹಾಯದಿಂದ ತಾಂತ್ರಿಕ ಸಾಹಿತ್ಯವನ್ನು ಅಭ್ಯಸಿಸಿದರು. ರಂಗಪುರದಲ್ಲಿದ್ದಾಗ ರಾಮಮೋಹನರಿಗೆ ಜೈನರ ಸಂಪರ್ಕ ದೊರೆತು ಜೈನಧರ್ಮದ ಕಲ್ಪಸೂತ್ರಗಳನ್ನು ಮತ್ತು ಶಾಸ್ತ್ರಗ್ರಂಥಗಳನ್ನು ಓದುವ ಅವಕಾಶ ಲಭ್ಯವಾಯಿತು. ಡಿಗ್ಬೀ ಇಂಗ್ಲೆಂಡಿನಿಂದ ತಂದ ವಾರ್ತಾಪತ್ರಿಕೆಗಳು ಇವರ ಇಂಗ್ಲಿಷ್ ಭಾಷೆಯ ಜ್ಞಾನವನ್ನು ಹೆಚ್ಚಿಸಿದುವಲ್ಲದೆ ಯುರೋಪಿನ ಮತ್ತು ಇಂಗ್ಲೆಂಡಿನ ರಾಜಕೀಯ ಬೆಳವಣಿಗೆಯನ್ನು ಅರಿಯಲು ಸಹಾಯ ಮಾಡಿದವು. ಯುರೋಪಿನಲ್ಲಿ ಬದಲಾದ ರಾಜಕೀಯ ಸ್ಥಿತಿ ಮತ್ತು ಯುರೋಪಿಯನ್ನರಲ್ಲಿ ಮೂಡಿದ್ದ ಸ್ವಾತಂತ್ರ್ಯದ ಕಲ್ಪನೆ ಇವರಿಗೆ ರಾಜಕೀಯದ ಹೆಚ್ಚಿನ ಜ್ಞಾನ ಮೂಡಿಸಿತು.

ಡಿಗ್ಬೀ ಭಾರತವನ್ನು ಬಿಟ್ಟ ಅನಂತರ 1814 ರಲ್ಲಿ ರಾಯ್ ಅವರು ಈಸ್ಟ್ ಇಂಡಿಯ ಕಂಪನಿಯ ನೌಕರಿಗೆ ರಾಜೀನಾಮೆ ನೀಡಿ ಕಲ್ಕತ್ತದಲ್ಲಿ ನೆಲೆಸಿದರು. ತಮ್ಮ ಜೀವನವನ್ನು ಧರ್ಮ ಪ್ರಚಾರಕ್ಕಾಗಿ ಮೀಸಲಿಡಲು ನಿರ್ಧರಿಸಿದರು. 1815 ರಲ್ಲಿ ವೇದಾಂತವನ್ನು ಬಂಗಾಲಿ ಭಾಷೆಗೆ ಅನುವಾದಿಸಿದರು. ಅನಂತರ ಕೇನೋಪನಿಷತ್ತನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದರು.

1815ರಲ್ಲಿ ಆತ್ಮೀಯ ಸಭಾ ಎಂಬ ಸಂಘವನ್ನು ಹುಟ್ಟುಹಾಕಿದರು. ಇದರ ಮೂಲಕ ಹಿಂದುಗಳಲ್ಲಿದ್ದ ಮೂಢನಂಬಿಕೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಹೆಣ್ಣುಮಕ್ಕಳ ಮಾರಾಟ, ಜಾತಿವ್ಯವಸ್ಥೆ ಮತ್ತು ವೇಶ್ಯಾಪದ್ಧತಿಗಳ ವಿರುದ್ಧ ಸಮರ ಸಾರಿದರು. 1811ರಲ್ಲಿ ಇವರ ಅಣ್ಣ ಜಗಮೋಹನ್ ಸಾವಿಗೀಡಾದ ಸಂದರ್ಭದಲ್ಲಿ ಆತನ ಹೆಂಡತಿಯನ್ನು ಸತಿಯಾಗಿಸಿದ ರೀತಿ ಇವರ ಮನಸ್ಸಿಗೆ ಆಘಾತವನ್ನುಂಟುಮಾಡಿತು. ಹೆಣ್ಣು ಮಕ್ಕಳಿಗೆ ಗಂಡನ ಮತ್ತು ತಂದೆಯ ಆಸ್ತಿಯಲ್ಲಿ ಹಕ್ಕಿರಬೇಕು ಮತ್ತು ಸತಿಪದ್ಧತಿ ರದ್ದಾಗಬೆಕೆಂದು ಆತ್ಮೀಯ ಸಭಾದ ಮೂಲಕ ಹೋರಾಟ ನಡೆಸಿದರು. 1820ರಲ್ಲಿ ಸತಿಸಹಗಮನದ ಬಗ್ಗೆ ಬಂಗಾಲಿಯಲ್ಲಿ ಬರೆದ ಪುಸ್ತಕವನ್ನು ಇಂಗ್ಲಿಷ್‍ಗೆ ಅನುವಾದ ಮಾಡಿದರು. ವೇದಾಂತಶಾಸ್ತ್ರ, ವೇದಾಂತಸಾರವನ್ನು ಬಂಗಾಲಿ ಭಾಷೆಗೆ ಅನುವಾದಿಸಿದರು (1815–16). ವೇದಾಂತವನ್ನು ಇದೇ ಕಾಲದಲ್ಲಿ ಇಂಗ್ಲಿಷ್‍ಗೆ ಅನುವಾದಿಸಿದರು. ಈಷ ಮತ್ತು ಕೇನೋಪನಿಷತ್ತುಗಳನ್ನು ಬಂಗಾಲಿ ಹಾಗೂ ಇಂಗ್ಲಿಷಿಗೆ ; ಮಂಡೂಕ, ಕಠೋಪನಿಷತ್ತುಗಳನ್ನು ಬಂಗಾಲಿ ಭಾಷೆಗೆ ಅನುವಾದಿಸಿದರು (1817). 1823ರಲ್ಲಿ ದಿ ಎನ್‍ಕ್ರೋಚ್ ಮೆಂಟ್ ಆನ್ ದಿ ರೈಟ್ಸ್ ಆಫ್ ದಿ ಹಿಂದು ಫೀಮೇಲ್ ಎಂಬ ಪುಸ್ತಕ ಪ್ರಕಟಿಸಿದರು. ಸಮಾಜದಲ್ಲಿದ್ದ ಜಾತಿ ಪದ್ಧತಿಯನ್ನು ವಿರೋಧಿಸಿ ಮೃತ್ಯುಂಜಯನ ಬಜ್ರಸೂಚಿ ಎಂಬ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದರು (1827).

1821ರಲ್ಲಿ ಏಕದೇವತಾವಾದಿಗಳು ಕಲ್ಕತ್ತದಲ್ಲಿ ಒಂದು ಸಂಘ ಪ್ರಾರಂಭಿಸಿದರು. ಈ ಸಂಘಕ್ಕೆ ರಾಮಮೋಹನರು ಮಾರ್ಗದರ್ಶನ ನೀಡಿದುದಲ್ಲದೆ ಅನುವಾದವನ್ನು ಕೊಟ್ಟರು. ಜನರಲ್ಲಿ ಜಾಗೃತಿಯನ್ನು ಮೂಡಿಸುವುದು, ವಿದ್ಯಾವಂತರನ್ನಾಗಿ ಮಾಡುವುದು, ಆ ಮೂಲಕ ಮೂಢನಂಬಿಕೆ, ಮತಾಂಧತೆ ಮತ್ತು ಧರ್ಮಾಂಧತೆಯನ್ನು ಹೋಗಲಾಡಿಸುವ ಗುರಿ ಇಟ್ಟುಕೊಂಡಿದ್ದರು.

ಬಂಗಾಲದ ಶ್ರೀರಾಂಪುರ ಎಂಬ ನಗರದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಜನರ ಅಸಹಾಯಕತೆಯನ್ನು ಬಳಸಿಕೊಂಡು ಮತಾಂತರಗೊಳಿಸುವ ಚಟುವಟಿಕೆಯಲ್ಲಿ ತೊಡಗಿದ್ದರು. ರಾಮಮೋಹನರು ಎರಡು ಪತ್ರಿಕೆಗಳನ್ನು ಪ್ರಾರಂಭಿಸಿ ಜನರಿಗೆ ಅರಿವನ್ನು ನೀಡುವ ಮತ್ತು ಮಿಷನರಿಗಳು ಜನರಲ್ಲಿ ಬೀರುತ್ತಿದ್ದ ಪ್ರಭಾವವನ್ನು ಟೀಕಿಸುವ ಕೆಲಸ ಮಾಡಿದರು. ವೇದಾಂತ ಮತ್ತು ಉಪನಿಷತ್ತುಗಳಲ್ಲಿದ್ದ ಹಿಂದು ಧರ್ಮದ ಸತ್ತ್ವವನ್ನು ಜನರಿಗೆ ಪರಿಚಯಿಸಿದರು.

ಕ್ರಿಶ್ಚಿಯನ್ ಮಾದರಿಯ ಏಕದೇವತಾವಾದ ಜನರಲ್ಲಿ ಹೆಚ್ಚಿನ ಪರಿಣಾಮ ಬೀರದೆಂದು ಮನಗಂಡ ಇವರು ಬ್ರಹ್ಮಸಮಾಜ ಸಂಸ್ಥೆಯನ್ನು ಸ್ಥಾಪಿಸಿದರು (1828). ಶಿಷ್ಯ ತಾರಾಚಂದ್ರ ಚಕ್ರವರ್ತಿ ಇದರ ಪ್ರಥಮ ಕಾರ್ಯದರ್ಶಿ. ಇಲ್ಲಿ ವೇದ ಉಪನಿಷತ್ತುಗಳ ಪಠಣ, ಬ್ರಹ್ಮಸಂಕೀರ್ತನಗಳು ನಡೆಯುತ್ತಿದ್ದುವು. ಬ್ರಹ್ಮ ಸಮಾಜದ ಸ್ಥಾಪನೆ ಕೆಲವು ಕ್ರಿಶ್ಚಿಯನ್ನರಿಗೆ ಪ್ರಿಯವಾಗದಿದ್ದರೂ ಕಲ್ಕತ್ತೆಯ ವಿದ್ಯಾವಂತರಲ್ಲಿ ಮನ್ನಣೆ ಗಳಿಸಿತು. ಬ್ರಹ್ಮ ಸಮಾಜ ಒಂದು ಗುಂಪಿನ, ಒಂದು ಧರ್ಮದ ಪ್ರಾರ್ಥನಾ ಮಂದಿರವಾಗಿರದೆ ಎಲ್ಲ ಏಕದೇವತಾವಾದಿಗಳ ತಾಣವಾಗಿತ್ತು.

ರಾಮಮೋಹನರಾಯರ ಕೌಟಂಬಿಕ ಮತ್ತು ವೈವಾಹಿಕ ಜೀವನ ಸುಖಕರವಾಗಿರಲಿಲ್ಲ. ಇವರ ತಂದೆಯ ಆಸ್ತಿಯ ವಿಷಯದಲ್ಲಿ ಅಣ್ಣನ ಮಗ ಗೋವಿಂದ ಪ್ರಸಾದ್ ಕೋರ್ಟ್‍ನಲ್ಲಿ ಮೊಕದ್ದಮೆ ಹೂಡಿದ್ದ. ತಾರಿಣಿದೇವಿಯೊಂದಿಗೂ ಇವರಿಗೆ ಮನಸ್ತಾಪವಿತ್ತು. ಇವರ ಸುಧಾರಣೆಗಳನ್ನು ಕುಟುಂಬದ ಸದಸ್ಯರಾರೂ ಒಪ್ಪಿಕೊಳ್ಳಲಿಲ್ಲ.

ರಾಮಮೋಹನರಾಯರು ಸತಿಸಹಗಮನ ವಿರುದ್ಧ ನಡೆಸಿದ ಸತತ ಹೋರಾಟದ ಪರಿಣಾಮವಾಗಿ 1829 ಡಿಸೆಂಬರ್ 4ರಂದು ಸತಿಪದ್ಧತಿ ಕಾನೂನುಬಾಹಿರವೆಂದು ವಿಲಿಯಂ ಬೆಂಟಿಕ್ ಘೋಷಿಸಿದ. ಇದರಿಂದಾಗಿ ಭಾರತೀಯ ಪರಂಪರೆಯ ಒಂದು ಅಮಾನವೀಯ ಅನಿಷ್ಟ ಸಾಮಾಜಿಕ ಪದ್ಧತಿ ಕೊನೆಗೊಂಡಿತು. ಇವರು ಸಂಬದ್ ಕೌಮುದಿ ಮತ್ತು ಮಿರತ್–ಉಲ್–ಅಖ್‍ಬಾರ್ ಎಂಬ ಎರಡು ವಾರ ಪತ್ರಿಕೆಗಳನ್ನು ನಡೆಸುತ್ತಿದ್ದರು. ಇವುಗಳಲ್ಲಿ ಜನರ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಮಹತ್ತ್ವ ನೀಡಿದ್ದರು. ಇಂಡಿಯನ್ ಜ್ಯೂರಿ ಬಿಲ್ 1827ರಲ್ಲಿ ಭಾರತದಲ್ಲಿ ಜಾರಿಗೆ ಬಂತು. ಇದರಲ್ಲಿದ್ದ ನ್ಯೂನತೆಗಳ ಬಗ್ಗೆ ರಾಯ್ ಅವರು ವಿರೋಧ ವ್ಯಕ್ತಪಡಿಸಿದ್ದರು. ಹಿಂದುಗಳ ಉತ್ತರಾಧಿಕಾರ ಹಕ್ಕಿನ ಬಗ್ಗೆ ಬ್ರಿಟಿಷ್ ನ್ಯಾಯಾಧೀಶರು ಡೋಲಾಯಮಾನ ಸ್ಥಿತಿಯಲ್ಲಿದ್ದಾಗ ರಾಮಮೋಹನರು ದಿ ರೈಟ್ಸ್ ಆಫ್ ಹಿಂದುಸ್ ಓವರ್ ಆನ್ಸಿಸ್ಟರಲ್ ಪ್ರಾಪರ್ಟಿ ಅಕಾರ್ಡಿಂಗ್ ಟು ದಿ ಲಾ ಆಫ್ ಬೆಂಗಾಲ್ ಎಂಬ ಪುಸ್ತಕವನ್ನು ಹೊರತಂದರು. ಇಲ್ಲಿ ಮಿತಾಕ್ಷರ ಮತ್ತು ದಾಯಾಭಾಗ ಪದ್ಧತಿಯಲ್ಲಿರುವ ವ್ಯತ್ಯಾಸವನ್ನು ವಿವರಿಸಿದ್ದಾರೆ.

ರಾಮಮೋಹನರು 1830 ನವೆಂಬರ್ 15 ರಂದು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಇಂಗ್ಲೆಂಡಿಗೆ ಹೊರಡುವ ಸಮಯದಲ್ಲಿ ಮೊಗಲ್ ಚಕ್ರವರ್ತಿ ಇವರಿಗೆ ರಾಜ ಎಂಬ ಬಿರುದನ್ನು ನೀಡಿ, ತಮ್ಮ ರಾಜಕೀಯ ವಿಚಾರಗಳ ಬಗ್ಗೆ ಮಾತನಾಡುವ ರಾಯಭಾರಿಯನ್ನಾಗಿ ಪರಿಗಣಿಸಬೇಕೆಂದು ಬ್ರಿಟಿಷ್ ಸರಕಾರಕ್ಕೆ ತಿಳಿಸಿದ. ಭಾರತದಲ್ಲಿದ್ದ ಬ್ರಿಟಿಷ್ ಅಧಿಕಾರಿ ಇದನ್ನು ಮಾನ್ಯಮಾಡಲಿಲ್ಲ. ಆದರೆ ಇಂಗ್ಲೆಂಡಿನ ಮಂತ್ರಿಮಂಡಲ ಭಾರತದ ಮೊಗಲ್ ದೊರೆಯ ರಾಯಭಾರಿಯೆಂದು ಮಾನ್ಯನೀಡಿತು. ಮೊಗಲ್ ಚಕ್ರವರ್ತಿ ನೀಡಿದ್ದ ರಾಜ ಎಂಬ ಬಿರುದನ್ನು ಸಹ ಒಪ್ಪಿಕೊಂಡಿತು. ರಾಯ್ ಅವರು ಭಾರತದ ಸಮಸ್ಯೆಗಳನ್ನು ಆಡಳಿತ ನಿಯಂತ್ರಣ ಮಂಡಳಿಗೆ ತಿಳಿಸಿದರು. ಭಾರತದ ಕೃಷಿಕರ ದುಃಖಸ್ಥಿತಿಯನ್ನು ವಿವರಿಸಿದರು. ಕಂದಾಯ ಸಮಸ್ಯೆ ಕುರಿತಂತೆ ಪುಸ್ತಕವೊಂದನ್ನು ಹೊರತಂದರು (1831). ಭಾರತದಲ್ಲಿ ಸಂಗ್ರಹವಾದ ಕಂದಾಯವನ್ನು ಇಂಗ್ಲೆಂಡಿನಲ್ಲಿ ವೆಚ್ಚಮಾಡಬಾರದೆಂದು ಆಗ್ರಹಿಸಿದರು. ಭಾರತದ ನ್ಯಾಯಪದ್ಧತಿಯನ್ನು ಕುರಿತು ಪ್ರಶ್ನೋತ್ತರ ರೂಪದಲ್ಲಿ ಒಂದು ಗ್ರಂಥವನ್ನು ಸೆಪ್ಟೆಂಬರ್‌ನಲ್ಲಿ ಪ್ರಕಟಿಸಿದರು (1831). ಅರ್ಹತೆಯುಳ್ಳ ಭಾರತೀಯರನ್ನು ನ್ಯಾಯಾಂಗದ ಹುದ್ದೆಗಳಿಗೆ ಆಯ್ಕೆ ಮಾಡಬೇಕೆಂಬ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಲೋಕಸೇವಾ

ವ್ಯವಸ್ಥೆಯನ್ನು ಸಮರ್ಪಕಗೊಳಿಸಿ ಅರ್ಹರಾದ ಭಾರತೀಯರನ್ನೇ ನೇಮಿಸುವಂತೆ ತಿಳಿಸಿದರು. ಇವರು ಇಂಗ್ಲೆಂಡಿನಲ್ಲಿ ಅನಾರೋಗ್ಯ ಪೀಡಿತರಾಗಿ 1833 ಸೆಪ್ಟೆಂಬರ್ 27 ರಂದು ಬ್ರಿಸ್ಟಲ್‌ನಲ್ಲಿ ನಿಧನರಾದರು. ಇವರ ಅಂತ್ಯಕ್ರಿಯೆ ಅರ್ನೋವೆಲ್ ಸಮಾಧಿ ಸ್ಥಳದಲ್ಲಿ ಹಿಂದುಧರ್ಮದ ಪ್ರಕಾರ ನಡೆಯಿತು. *

**ರಾಜೇಂದ್ರಪ್ರಸಾದ್, ಬಾಬು:** 1884–1963. ಸ್ವತಂತ್ರ ಭಾರತದ ಪ್ರಥಮ ರಾಷ್ಟ್ರಪತಿ, ಶ್ರೇಷ್ಠ ನ್ಯಾಯವಾದಿ, ಶಿಕ್ಷಣತಜ್ಞ, ರಾಜಕಾರಣಿ, ಗಾಂಧಿವಾದಿ, ದೇಶಭಕ್ತ, ಸ್ವಾತಂತ್ರ್ಯಯೋಧ. ಇವರು ಬಿಹಾರ ರಾಜ್ಯದ ಸರಣ್ ಜಿಲ್ಲೆಯ ಜೀರಾದೇಯಿ ಗ್ರಾಮದ ರೈತ ಕುಟುಂಬವೊಂದರಲ್ಲಿ 1884 ಡಿಸೆಂಬರ್ 3ರಂದು ಜನಿಸಿದರು. ಇವರ ತಂದೆ ಮಹಾದೇವ ಸಹಾಯ್, ತಾಯಿ ಕಮಲೇಶ್ವರಿ ದೇವಿ. ರಾಜೇಂದ್ರಪ್ರಸಾದರು ಆ ದಂಪತಿಗಳ ಐದನೆಯ ಮತ್ತು ಕೊನೆಯ ಸಂತಾನ. ಇವರ ತಂದೆ ಪರ್ಷಿಯನ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪರಿಣತರಾಗಿದ್ದರು. ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಗಳಲ್ಲಿ ಅವರಿಗೆ ಆಸಕ್ತಿಯಿತ್ತು. ರಾಜೇಂದ್ರರು ಐದಾರು ವರ್ಷದವರಾಗಿದ್ದಾಗ ಅವರಿಗೆ ಮೌಲ್ವಿಗಳಿಂದ ಪರ್ಷಿಯನ್ ಭಾಷೆಯಲ್ಲಿ ಅಕ್ಷರಾಭ್ಯಾಸ ಮಾಡಿಸಲಾಯಿತು. ಇವರು ತಮ್ಮ 18ನೆಯ ವಯಸಿನಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಪ್ರಥಮರಾಗಿ ಉತ್ತೀರ್ಣರಾದರು(1902). ಇವರಿಗೆ 13ನೆಯ ವಯಸ್ಸಿನಲ್ಲೇ ರಾಜಬಂಶಿ ದೇವಿಯವರೊಂದಿಗೆ ವಿವಾಹವಾಗಿತ್ತು. ಇವರು 1906ರಲ್ಲಿ ಬಿಹಾರಿನಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ದುಡಿದರು. 1911ರಲ್ಲಿ ಆ ಪಕ್ಷವನ್ನು ಸೇರಿದರು. ಎಂ.ಎ. ಪದವಿಯ ಅನಂತರ ಮುಜಫರ್‌ಪುರ ಕಾಲೇಜಿನಲ್ಲಿ ಶಿಕ್ಷಕರಾದರು. ಬಿ.ಎಲ್. ಪದವಿಗಳಿಸಿ ಅನಂತರ ಆಗಸ್ಟ್‌ನಲ್ಲಿ ಕಲ್ಕತ್ತದಲ್ಲಿ ನ್ಯಾಯವಾದಿ ಯಾದರು (1908). 1915ರಲ್ಲಿ ಎಂ.ಎಲ್. ಪದವಿ ಪಡೆದರು. 1916ರಲ್ಲಿ ಉಚ್ಚ ನ್ಯಾಯಾಲಯ ಪಾಟ್ನದಲ್ಲಿ ಸ್ಥಾಪಿತವಾದಾಗ ವಕೀಲಿ ಮುಂದುವರಿಸಿದರು. ವೃತ್ತಿಯಲ್ಲಿ ಯಶಸ್ಸು ದೊರೆಕಿತು. ಪಾಟ್ನಕ್ಕೆ ಬಂದ ಮೇಲೆ ಬಿಹಾರ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಹಾಯಕ ಕಾರ್ಯದರ್ಶಿಯಾಗಿ ಕೆಲವು ವರ್ಷ ಕೆಲಸ ಮಾಡಿದರು. ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾದ ಸಾರ್ವಜನಿಕ ನಾಯಕರನೇಕರಲ್ಲಿ ರಾಜೇಂದ್ರ ಪ್ರಸಾದ ಒಬ್ಬರು. ಕಲ್ಕತ್ತೆಯಲ್ಲಿ 1915ರಲ್ಲಿ ಗಾಂಧೀಜಿಯವರ ಪ್ರಥಮ ಭೇಟಿಯಾಯಿತು. ಆಮೇಲೆ 1917ರ ಏಪ್ರಿಲ್‌ನಲ್ಲಿ ಕಲ್ಕತ್ತ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಗೆ ಇನ್ನಷ್ಟು ಸಮೀಪವಾದರು. ಜಲಿಯನ್ ವಾಲಾಬಾಗ್‌ನಲ್ಲಿ ನರಹತ್ಯೆ, ಪಂಜಾಬಿನಲ್ಲಿ ಬ್ರಿಟಿಷರ ದುರಾಡಳಿತ, ಖಿಲಾಫತ್ ಚಳವಳಿ ಮೊದಲಾದ ಘಟನೆಗಳಿಂದ ದೇಶದ ರಾಜಕೀಯದ ಗತಿಯಲ್ಲಿ ತೀವ್ರ ಬದಲಾವಣೆಯಾಯಿತು. ಇವರು ರಾಷ್ಟ್ರೀಯ ಆಂದೋಲನದಲ್ಲಿ ಪೂರ್ಣವಾಗಿ ಧುಮುಕಿದರು. ದೇಶ್ ಮತ್ತು ಸರ್ಚ್‌ಲೈಟ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. ಇವರೂ ಇವರ ಗೆಳೆಯರೂ ಸೇರಿ ಪಾಟ್ನ–ಗಯ ಮಾರ್ಗದಲ್ಲಿ ಒಂದು ರಾಷ್ಟ್ರೀಯ ಕಾಲೇಜನ್ನು ತೆರೆದರು. ರಾಜೇಂದ್ರ ಪ್ರಸಾದರು ಅದರ ಪ್ರಿನ್ಸಿಪಾಲರಾದರು. ಗಾಂಧೀಜಿಯವರ ಸಲಹೆಯ ಮೇರೆಗೆ ಬಿಹಾರ ವಿದ್ಯಾಪೀಠದ ಸ್ಥಾಪನೆಯಾಯಿತು. ಹಿಂದಿ ಮತ್ತು ಖಾದಿ ಪ್ರಚಾರಕ್ಕಾಗಿ ಬಹಳ ಶ್ರಮಿಸಿದರು. ಹಿಂದು–ಮುಸ್ಲಿಂ ಏಕತೆಗಾಗಿ ದುಡಿದರು. 1934ರ ಜನವರಿ 14ರಂದು ಬಿಹಾರದಲ್ಲಿ ಭೂಕಂಪ ಸಂಭವಿಸಿದಾಗ ಇವರು ತಮ್ಮ ಆಯಾಸ ಅನಾರೋಗ್ಯಗಳನ್ನು ಲೆಕ್ಕಿಸದೆ ಭೂಕಂಪದಿಂದ ನೊಂದವರ ಸೇವೆಮಾಡಿದರು.



1934ರಲ್ಲಿ ಮುಂಬಯಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಇವರು ಆಯ್ಕೆಯಾದರು. ನಾಗಪುರದಲ್ಲಿ ಸೇರಿದ್ದ ಅಖಿಲ ಭಾರತ ಹಿಂದಿ ಸಾಹಿತ್ಯ ಸಮ್ಮೇಳನಕ್ಕೂ ಇವರು ಅಧ್ಯಕ್ಷರಾಗಿದ್ದರು. 1936ರಲ್ಲಿ ಬಿಹಾರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. 1942ರ ಆಗಸ್ಟ್ 8ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕೆಂಬ ಗೊತ್ತುವಳಿಯನ್ನು ಅಂಗೀಕರಿಸಿತು. ಸದಾಖತ್ ಆಶ್ರಮದಲ್ಲಿ ಅಸ್ವಸ್ಥರಾಗಿದ್ದ ರಾಜೇಂದ್ರ ಪ್ರಸಾದರನ್ನು ಮರುದಿನವೇ ಸೆರೆಹಿಡಿಯಲಾಯಿತು. 1945ರಲ್ಲಿ ಜೂನ್ 15ರ ವರೆಗೆ ಇವರು ಸೆರೆಮನೆಯಲ್ಲಿದ್ದರು. ಆ ಸಮಯದಲ್ಲಿ ಇವರು ಇಂಡಿಯ ಡಿವೈಡೆಡ್ ಎಂಬ ಗ್ರಂಥವನ್ನೂ ಆತ್ಮಕಥೆಯನ್ನೂ ಹೆಚ್ಚು ಕಡಿಮೆ ಪೂರ್ತಿಗೊಳಿಸಿದರು. ಇಂಡಿಯ ಡಿವೈಡೆಡ್ 1946ರ ಜನವರಿಯಲ್ಲಿ ಪ್ರಕಟವಾಯಿತು. ಅದು ಪಾಕಿಸ್ತಾನದ ಪ್ರಶ್ನೆಗೆ ಸಂಬಂಧಿಸಿದ ಕೃತಿ. ಭಾರತ ವಿಭಜನೆಯ ಬೇಡಿಕೆ, ಅದಕ್ಕೆ ಕಾರಣಗಳು, ಅದರ ಸಾಧ್ಯತೆ, ಸೂಕ್ತತೆ, ಸಾಧಕಬಾಧಕಗಳು ಮುಂತಾದ ವಿಷಯಗಳನ್ನು ಕುರಿತು ಇವರು ತಮ್ಮ ಅನಿಸಿಕೆಗಳನ್ನು ಜನತೆಯ, ಅದರಲ್ಲೂ ವಿಶೇಷವಾಗಿ ಮುಸ್ಲಿಂ ಜನತೆಯ ಮುಂದಿಟ್ಟು ಪಾಕಿಸ್ತಾನದ ಬೇಡಿಕೆ ಅವ್ಯಾವಹಾರಿಕವಾದುದು ಎಂಬುದನ್ನು ಮನದಟ್ಟುಮಾಡಿಕೊಡಲು ಈ ಕೃತಿಯಲ್ಲಿ ಯತ್ನಿಸಿದ್ದರು. ಇವರ ಆತ್ಮಕಥೆ ಹಿಂದಿಯಲ್ಲಿದೆ. ಇದು 1947ರಲ್ಲಿ ಪ್ರಕಟವಾಯಿತು. ಇಂಗ್ಲಿಷಿಗೂ ಇತರ ಕೆಲವು ಭಾರತೀಯ ಭಾಷೆಗಳಿಗೂ ಇದು ಅನುವಾದಗೊಂಡಿದೆ. ಈ ಆತ್ಮಕಥೆಗೆ ಚಾರಿತ್ರಿಕ ಮಹತ್ತ್ವವಿದೆ. ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ವಸ್ತುಸ್ಥಿತಿಗಳ ಮತ್ತು ವ್ಯಕ್ತಿಗಳ ಮೇಲೆ ಇದು ಸಾಕಷ್ಟು ಬೆಳಕು ಬೀರುತ್ತದೆ.

ರಾಜೇಂದ್ರ ಪ್ರಸಾದರು 1945ರ ಜೂನ್ 15ರಂದು ಬಿಡುಗಡೆಗೊಂಡರು. 1946ರ ಸೆಪ್ಟೆಂಬರ್ 2ರಂದು ದೆಹಲಿಯಲ್ಲಿ ನಡುಗಾಲ ಸರ್ಕಾರ ಅಸ್ತಿತ್ವಕ್ಕೆ ಬಂತು. ಆ ಸರ್ಕಾರದ 12 ಮಂತ್ರಿಗಳಲ್ಲಿ ಇವರೂ ಒಬ್ಬರಾಗಿದ್ದರು. ಮುಂದೆ ಇವರು ಭಾರತ ಸಂವಿಧಾನ ಸಭೆಯ ತಾತ್ಕಾಲಿಕ ಅಧ್ಯಕ್ಷ ಪದವಿಗೆ ಸರ್ವಾನುಮತದಿಂದ ಆಯ್ಕೆಯಾದರು. ಎರಡು ವರ್ಷಗಳ ಅನಂತರ ಮಂತ್ರಿಪದವಿಯನ್ನು ತ್ಯಜಿಸಿದರು. ಸಂವಿಧಾನದ ರಚನೆಯಲ್ಲಿ ಇವರ ಪಾತ್ರ ಮಹತ್ತ್ವದಾಗಿತ್ತು. 1950ರ ಜನವರಿ 26ರಂದು ಹೊಸ ಸಂವಿಧಾನ ಕಾರ್ಯರೂಪಕ್ಕೆ ಬಂದಿತು. ಭಾರತ ಗಣರಾಜ್ಯದ ಪ್ರಥಮ ರಾಷ್ಟ್ರಪತಿಯ ಸ್ಥಾನಕ್ಕೆ ಇವರು ಆಯ್ಕೆಯಾದರು. ರಾಷ್ಟ್ರಪತಿಯಾಗಿದ್ದಾಗಲೂ ಇವರ ಜೀವನ ಸರಳವಾಗಿತ್ತು. ಇವರಿಗೂ ಪ್ರಧಾನಿಯಾಗಿದ್ದ ನೆಹರೂ ಅವರಿಗೂ ನಡುವೆ ಒಮ್ಮೊಮ್ಮೆ ಭಿನ್ನಾಭಿಪ್ರಾಯಗಳಿರುತ್ತಿದ್ದುವು. ಮಾನವನ ಅವಶ್ಯಕತೆಗಳು ಮತ್ತು ಸಂಗ್ರಹಣಶೀಲತೆ ಇವು ಆತ್ಮಸಂಯಮದ ಮೂಲಕ ನಿಯಂತ್ರಿತವಾಗಬೇಕು; ವ್ಯವಸಾಯೋತ್ಪಾದನೆ ಅಧಿಕವಾಗಬೇಕು; ಗ್ರಾಮ ಕೈಗಾರಿಕೆಗಳ ಪುನರುಜ್ಜೀವನವಾಗಬೇಕು; ಅವು ವಿಸ್ತೃತವಾಗಬೇಕು; ಪುರಾತನ ಸಾಹಚರ್ಯ ಮನೋಭಾವ ಮತ್ತೆ ಜನರಲ್ಲಿ ಮೂಡಬೇಕು; ಗಾಂಧೀಜಿಯವರ ತತ್ತ್ವಗಳ ಮೇಲೆ ಗ್ರಾಮ ಜೀವನದ ಪುನರ್ವ್ಯವಸ್ಥೆಯಾಗಬೇಕು ಎಂದು ಇವರು ಬಯಸಿದ್ದರು. ಆದರೆ ಕೈಗಾರಿಕೀಕರಣದ ಆಕರ್ಷಣೆಯನ್ನು ತಡೆಗಟ್ಟುವುದು ದೇಶಕ್ಕೆ ಅಸಾಧ್ಯವಾಗಿತ್ತು. ಇದರಿಂದ ಇವರು ಅಸಂತುಷ್ಟರಾಗಿದ್ದರು. 1962ರ ಮೇ 8ರಂದು ರಾಷ್ಟ್ರಪತಿ ಸ್ಥಾನದಿಂದ ನಿವೃತ್ತರಾದರು. 1963 ಫೆಬ್ರವರಿ 28ರಂದು ನಿಧನರಾದರು. ಹೊಸಸಮಾಜದಲ್ಲಿ ಹೊಸ ಮನುಷ್ಯನ ನಿರ್ಮಾಣದ ಗಾಂಧೀಜಿಯವರ ಭವ್ಯ ಆದರ್ಶವನ್ನು ಬಲವಾಗಿ ನಂಬಿದ್ದವರಲ್ಲಿ ರಾಜೇಂದ್ರ ಪ್ರಸಾದರೂ ಒಬ್ಬರು. ಭಾರತ ಸರ್ಕಾರ ಇವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು (1962). (ಜಿ.ಎನ್.ಕೆ.)

**ರಾಥೋರರು:** ಭಾರತದ ವಾಯವ್ಯ ಭಾಗದ ಪ್ರದೇಶ ಹಿಂದಿನ ರಜಪುತಾನ (ಇಂದಿನ ರಾಜಸ್ತಾನ) ರಾಜ್ಯದ 36 ಬುಡಕಟ್ಟುಗಳಲ್ಲಿನ ಒಂದು ಪ್ರಮುಖ ರಾಜಮನೆತನ. ರಾಜಸ್ತಾನದಲ್ಲಿ ಸು.12 ನೆಯ ಶತಮಾನದ ಕೊನೆಯಿಂದ 18 ನೆಯ ಶತಮಾನದಲ್ಲೂ ಮುಂದೆ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೂ ಬ್ರಿಟಿಷರ ಆಶ್ರಿತ ಸಂಸ್ಥಾನವಾಗಿ ತಮ್ಮ ಅಸ್ತಿತ್ವವನ್ನು ಇವರು ಉಳಿಸಿಕೊಂಡಿದ್ದರು.

ಮಾರವಾಡ ಮತ್ತು ಬಿಕನೀರ್‌ಗಳ ದಾಯಾದಿ ರಾಥೋರರ ರಾಜಮನೆತನಗಳು ತಾವು ಕನೌಜ್‌ನ ಗಾಹಡ್ವಾಲ ರಾಜಪುತ್ರ ಮನೆತನದ ಶಾಖೆಗಳೆಂದು ಹೇಳಿಕೊಂಡಿವೆ. ಆದರೆ ಇತಿಹಾಸ ಸಂಶೋಧಕರು ಈ ಅಂಶವನ್ನು ಅಲ್ಲಗಳೆದು ರಾಥೋರರಿಗೂ ಗಾಹಡ್ವಾಲ ಮನೆತನಕ್ಕೂ ವಿವಾಹ ಸಂಬಂಧ ನಡೆಯುತ್ತಿದ್ದುದರ ಜೊತೆಗೆ ಇತರ ಆಧಾರಗಳಿಂದ ರಾಥೋರರ ಮನೆತನದವರು ಉತ್ತರ ಭಾರತದಲ್ಲಿ ನೆಲೆಸಿದ ಕರ್ನಾಟಕದ ರಾಷ್ಟ್ರಕೂಟ ಮನೆತನದ ಶಾಖೆಯೊಂದರ ವಂಶಿಕರೆಂದು ನಿರೂಪಿಸಿದ್ದಾರೆ. ಬದೌನ್ ರಾಷ್ಟ್ರಕೂಟ ಶಾಖೆ 8–9ನೆಯ ಶತಮಾನದಲ್ಲೇ ನೆಲೆಸಿದ್ದಿತು. ಈ ಮನೆತನದವರು ತರುವಾಯ ರಾಠೌಡ ಎಂಬ ಹೆಸರು ಪಡೆದರು. ಇವರು ಹಸ್ತಿಕುಂಡಿ ಅಥವಾ ಈಗಿನ ಹಠಿವುಂಡಿಯ ರಾಷ್ಟ್ರಕೂಟರ ಉತ್ತರಾಧಿಕಾರಿಗಳು. ಅಲ್ಲಿ ಹತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟರು ಆಳುತ್ತಿದ್ದದಕ್ಕೆ ಶಾಸನಗಳು ದೊರೆತಿವೆ. ಈ ಮನೆತನದ ಸೀಹನೆಂಬ ರಾಜ 1273 ರಲ್ಲಿ ಮೃತನಾದ. ಸೀಹನ ಮಗ ಆಸ್ಥಾನ ಮತ್ತು ಆತನ ಮಗ ಧೂಹಡನ ಬಗ್ಗೆ ಜೋಧ್‌ಪುರ ರಾಜ್ಯದ ಪಚ್‌ಭದ್ರ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಉಲ್ಲೇಖವಿದೆ. ಧೂಹಡ 1309 ರಲ್ಲಿ ನಿಧನನಾದ ಬಗ್ಗೆ ಶಾಸನವೊಂದರಿಂದ ತಿಳಿದುಬರುತ್ತದೆ. ಅವನೇ ಮಾರವಾಡ ಅಥವಾ ಮಾರವಾರದ ರಾಥೋರ್ ಮನೆತನದ ಸ್ಥಾಪಕ. ಅವನು ಖೇರನ್ನು ವಶಪಡಿಸಿಕೊಂಡು ಅಲ್ಲಿನ ಗೋಹಿಲ್ ರಾಜನನ್ನು ಪದಚ್ಯುತಿಗೊಳಿಸಿ ತನ್ನ ಅಧಿಕಾರವನ್ನು ಸ್ಥಾಪಿಸಿದ.

14ನೆಯ ಶತಮಾನದಲ್ಲಿ ರಾಥೋರರ ಇತಿಹಾಸ ಮಹತ್ತ್ವದ ಘಟನೆಗಳಿಂದ ಕೂಡಿದ್ದೆಂದರೂ ಸ್ಪಷ್ಟವಾದ ಆಧಾರಗಳಿಲ್ಲದೆ ಮಸುಕಾಗಿದೆ. ಇಲ್ಲಿನ ಕಥನದ ಪ್ರಕಾರ ಧೂಹಡ ರಾಯಪಾಲ, ಕನ್ಹಾಪಾಲ, ಜಲನ್ಸಿ, ಛಡೋ. ತಿಡೊ, ಸಲ್‌ಖಾ ಮತ್ತು ಮಲ್ಲಿನಾಥರು ಈ ಶತಮಾನದಲ್ಲಿ ಅನುಕ್ರಮವಾಗಿ ಆಳಿರುವುದು ತಿಳಿದುಬರುತ್ತದೆ. ಇವರೆಲ್ಲರ ಸಂಬಂಧಗಳೂ ಕ್ರಮವಾಗಿ ತಂದೆ ಮಗನ ಸಂಬಂಧಗಳೆಂದು ಸಹ ಹೇಳಲಾಗಿದೆ. ಆದರೆ ಇತಿಹಾಸಕಾರರು ಈ ವಂಶಪರಂಪರೆ ಕಾಲಾನುಕ್ರಮದಂತೆ ಸಂಗತವಾಗಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಆದರೂ ಈ ಮನೆತನದ ಪ್ರಮುಖ ಏಳುಬೀಳುಗಳನ್ನು ಗುರುತಿಸಲು ಅನೇಕ ಆಧಾರಗಳು ದೊರೆತಿವೆ.

ದೆಹಲಿ ಸುಲ್ತಾನಶಾಹಿ ಅಲಾವುದ್ದೀನ್ ಖಿಲ್ಜಿ (1296 – 1316) ಮಾರವಾಡ ಮತ್ತು ಗುಜರಾತ್‍ಗಳನ್ನು ವಶಪಡಿಸಿಕೊಂಡ. ಇದರಿಂದಾಗಿ ರಾಥೋರರು ಮುಸಲ್ಮಾನರೊಡನೆ ಸೆಣಸುವುದು ಅನಿವಾರ್ಯವಾಯಿತು. ಇವರೊಂದಿಗೆ ನಡೆಸಿದ ಯುದ್ಧಗಳಲ್ಲಿ ರಾಥೋರ ಮನೆತನದ ರಾಜರುಗಳಾಗಿದ್ದ ಕನ್ಹಪಾಲ, ಜಲನ್ಸಿ, ಮತ್ತು ತಿಡೊ ಎಂಬವರು ಬೇರೆ ಬೇರೆ ಕಾಲದಲ್ಲಿ ಹತರಾದರೆಂದು ತಿಳಿದುಬರುತ್ತದೆ. ಸಲ್‍ಖಾ ಮತ್ತು ಮಲ್ಲಿನಾಥರು ಮುಸ್ಲಿಮರ ಪರಮಾಧಿಕಾರವನ್ನು ಒಪ್ಪಿಕೊಂಡು ತಮ್ಮ ಸ್ಥಾನವನ್ನು ಉಳಿಸಿಕೊಂಡರು. ಹದಿನಾಲ್ಕನೆಯ ಶತಮಾನ ಬಹುಭಾಗ ಅಲ್ಲಾವುದ್ದೀನ್ ಖಿಲ್ಜಿ, ಮಹಮ್ಮದ್ ಬಿನ್ ತುಗಲಕ್ ಮತ್ತು ಫಿರೋಜ್ ಷಾ ರಂತಹ ಪ್ರಬಲ ಸುಲ್ತಾನರು ದೆಹಲಿಯಲ್ಲಿ ಆಳುತ್ತಿದ್ದುದರಿಂದ ರಾಥೋರರಿಗೆ ತಮ್ಮ ರಾಜ್ಯವನ್ನು ವಿಸ್ತರಿಸಲು ಆಸ್ಪದವಾಗಲಿಲ್ಲ.

ರಾಥೋರ ರಾಜ್ಯದ ಮೂರು ದಿಕ್ಕಿನಲ್ಲಿ ಮುಸ್ಲಿಂ ಅಧೀನಪ್ರದೇಶಗಳಿದ್ದರೆ ವಾಯವ್ಯಕ್ಕೆ ಭಟ್ಟಿಗಳೆಂಬ ಹಿಂದು ರಾಜ್ಯ ಪ್ರದೇಶವಿತ್ತು. ಆ ಭಟ್ಟಿಗಳೊಂದಿಗೂ ಇವರು ಯುದ್ಧಗಳನ್ನು ನಡೆಸಿದರು. ತಿಡೋನು ಮಡಿದಾಗ ಅವನ ಮಕ್ಕಳಾದ ಕಾನ್ಹಡ ಮತ್ತು ಸಲ್‍ಖಾರ ನಡುವೆ ಉತ್ತರಾಧಿಕಾರಕ್ಕಾಗಿ ಪೈಪೋಟಿ ನಡೆಯಿತು. ಸಲ್‍ಖಾನ ಮಗ ಮಲ್ಲಿನಾಥ ರಾವ್ ಎಂಬ ಬಿರುದು ಧರಿಸಿ ಖೇರ್‌ಗೆ ಸಮೀಪದ ಮೆವೊಯಿಂದ ಆಳಲು ಪ್ರಾರಂಭಿಸಿದ. ದೆಹಲಿಯ ಸುಲ್ತಾನರ ಆಳಿಕೆ ದುರ್ಬಲವಾದಾಗ ಮಲ್ಲಿನಾಥ ರಾಜ್ಯವನ್ನು ವಿಸ್ತರಿಸಿದ. ಆದರೆ ಮಲ್ಲಿನಾಥನ ನಿಧನಾನಂತರ ಆತನ ಮಗನಿಗೆ ಸಿಂಹಾಸನ ದೊರೆಯದೆ ಆತನ ತಮ್ಮ ವೀರಮಾಜೀಯ ಮಗ ಚುಂಡಾ ಅಧಿಕಾರಕ್ಕೆ ಬಂದ.

ಚುಂಡಾನ ಕಾಲದಲ್ಲಿ ಪ್ರತಿಹಾರರ ಅಥವಾ ಪರಿಹಾರರ ಮಾಂಡೋರ್ ಪಟ್ಟಣ ಮಾರವಾಡ ರಾಜ್ಯಕ್ಕೆ ಸೇರಿತು. ಅಲ್ಲಿನ ಮುಸ್ಲಿಂ ಆಳಿಕೆಯನ್ನು ಚುಂಡಾ ಕೊನೆಗಾಣಿಸಿದ. ಅವನು ತನ್ನ ರಾಜಧಾನಿಯನ್ನು ಮೆವೊದಿಂದ ಮಾಂಡೋರ್‌ಗೆ ವರ್ಗಾಯಿಸಿದ. ಚುಂಡಾ ಮೇವರದ ಸಿಸೋದಿಯ ಮನೆತನದೊಂದಿಗೆ ವಿವಾಹ ಸಂಬಂಧ ಬೆಳೆಸಿದ್ದು ರಾಥೋರರ ಪ್ರತಿಷ್ಠೆ ಹೆಚ್ಚಲು ಕಾರಣವಾಯಿತು. ಅವರ ಬಾಹುಬಲದಿಂದ ಚುಂಡಾ ಮುಸ್ಲಿಮರ ಪ್ರಬಲ ನೆಲೆಯಾಗಿದ ನಾಗೌರನ್ನು ಆಕ್ರಮಿಸಿಕೊಂಡ. ಆದರೆ ಮುಂದೆ ಮುಸ್ಲಿಮರ ಸಂಯುಕ್ತ ಸೈನ್ಯದೊಡನೆ ಹೋರಾಡುತ್ತ 1422ರಲ್ಲಿ ಚುಂಡಾ ಮೃತನಾದ. ಆತನ ಮಕ್ಕಳಲ್ಲಿ ಉತ್ತರಾಧಿಕಾರದ ವಿವಾದ ಉಂಟಾಗಿ ಕೊನೆಗೆ ಆತನ ಹಿರಿಯ ಮಗ ರಣಮಲ್ಲ ಸಿಂಹಾಸನವೇರಿದ. ಇವನ ಕಾಲದಲ್ಲಿ ಮಾರವಾರ ಮತ್ತು ಮೇವಾರ ರಾಜ್ಯಗಳು ನಡೆಸಿದ ಜಂಟಿ ಕಾರ್ಯಾಚರಣೆಗಳಿಂದಾಗಿ ನಾಗೌರ್ ಪ್ರಾಂತ್ಯ ಇವರ ವಶವಾಯಿತು. ಅದನ್ನು ಎರಡೂ ರಾಜ್ಯಗಳು ಹಂಚಿಕೊಂಡವು. ದುರದೃಷ್ಟವಶಾತ್ ಮೇವಾರದ ವಿದ್ಯಮಾನಗಳಲ್ಲಿ ರಣಮಲ್ಲ ಅತಿಯಾಗಿ ಮಧ್ಯಪ್ರವೇಶಿಸಿದ್ದರಿಂದ ಅಲ್ಲಿನ ಸರದಾರರು ಸಹಿಸದೆ ರಣಮಲ್ಲನನ್ನು 1438 ರಲ್ಲಿ ಕೊಂದುಹಾಕಿದರು.

ರಣಮಲ್ಲನ ಮಗ ಜೋಧ ನಿರಾಶ್ರಿತನಾಗಿ ಮರುಭೂಮಿಯಲ್ಲಿ ಅಲೆಯಬೇಕಾಯಿತು. ಗುಜರಾತ್ ಮತ್ತು ಮಾಳ್ವದ ಸುಲ್ತಾನರ ಜಂಟಿ ಕಾರ್ಯಚರಣೆಯಿಂದಾಗಿ ಮೇವಾರದ ರಾಣ ಕುಂಬ ದುರ್ಬಲನಾದ ಸಂದರ್ಭವನ್ನು ಬಳಸಿಕೊಂಡು ಜೋಧ ಚೇತರಿಸಿಕೊಂಡ. ಇವನು ಮೇವಾರದ ಸಿಸೋದಿಯಾ ಸರ್ದಾರರನ್ನು ತನ್ನ ರಾಜ್ಯದಿಂದ ಹೊರಹಾಕಿದ. ಮಾಂಡೋರ್ ಮತ್ತು ಅಜ್ಮೀರ್‌ಗಳು ಸೇರಿ ಅನೇಕ ಮುಖ್ಯಸ್ಥಳಗಳು ಮೇವಾರ ರಾಜ್ಯಕ್ಕೆ ಸೇರಿದವು. 1459ರಲ್ಲಿ ಇವನು ಲೂನಿ ನದಿಯ ದಂಡೆಯಲ್ಲಿ ಒಂದು ರಾಜಧಾನಿಯನ್ನು ಸ್ಥಾಪಿಸಿದ. ಅದು ಮುಂದೆ ಇವನ ಹೆಸರಿನಲ್ಲಿ ಜೋಧಪುರವೆಂದು ಪ್ರಸಿದ್ಧಿಗೆ ಬಂತು.

ಜೋಧನಿಗೆ ಹದಿನೇಳು ಗಂಡು ಮಕ್ಕಳಿದ್ದರು. ಇವರಲ್ಲಿ ಕೆಲವರು ಹೊಸ ಪ್ರದೇಶಗಳಿಗೆ ಹೋಗಿ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡರು. ಹೀಗೆ ಅಸ್ತಿತ್ವಕ್ಕೆ ಬಂದ ಪುಟ್ಟರಾಜ್ಯಗಳಲ್ಲಿ ಸಾತಲ್‌ನ ಹೆಸರಿನ ಸಾತರಲ್‌ಮೇರ್ ಮತ್ತು ಬೀಕಾನ ಹೆಸರಿನ ಬಿಕನೇರ್ ಮುಖ್ಯವಾದವು. ದುದಾ ಎಂಬನು ಮೆರ್ತನದಿಂದ ಆಳತೊಡಗಿದ. ಮುಂದೆ ಇವು ರಾಥೋರ ಮನೆತನದ ಶಾಖೆಗಳಾದವು.

1488ರಲ್ಲಿ ಜೋಧ ನಿಧನನಾದ. ತರುವಾಯದ ನಲವತ್ತು ವರ್ಷಗಳಲ್ಲಿ ಮೂವರು ರಾಜರು ಆಳಿದರು. ಅವರೆಂದರೆ ಸಾತಲ್ (1488 – 91) ಸುಜಾ, 1491 – 1515 ಮತ್ತು ಗಾಂಗಾ (1515–40). ಈ ಅವಧಿಯಲ್ಲಿ ಉತ್ತರಾಧಿಕಾರಕ್ಕಾಗಿ ಒಳಜಗಳಗಳು ಹೆಚ್ಚಿದುವು. ಕೇಂದ್ರ ಅಧಿಕಾರ ತನ್ನ ಶಾಖಾ ಮನೆತನಗಳ ಮೇಲೆ ಹತೋಟಿ ಸ್ಥಾಪಿಸಲು ಪ್ರಯತ್ನಿಸುತ್ತಿದ್ದಿತು. ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿ ದೆಹಲಿಯ ಮೊಗಲ್ ಆಳಿಕೆ ಸ್ಥಾಪಿತವಾದರೂ ಅದು ಸ್ಥಿರಗೊಂಡಿರದಿದ್ದುದರಿಂದ ರಾಜಪುತಾನದಲ್ಲಿನ ಮನೆತನಗಳ ನಡುವೆ ಹೋರಾಟಗಳು ನಡೆಯುತ್ತಲೇ ಇದ್ದುವು. ರಾಥೋರರು ಅಜ್ಮೀರವನ್ನು ವಶಪಡಿಸಿಕೊಂಡಿದ್ದು ಈ ಕಾಲದ ಮುಖ್ಯ ಸಾಧನೆಯಾಯಿತು.

ರಾಥೋರರ ರಾಜ್ಯ ಇತರ ಅನೇಕ ರಜಪೂತ ರಾಜ್ಯಗಳಂತೆ ಕುಲ ಪ್ರಧಾನವಾಗಿದ್ದಿತು. ಇದರಲ್ಲಿ ರಾಜನ ರಕ್ತಸಂಬಂಧಿಗಳು ಪ್ರಾಂತ್ಯಾಧಿಕಾರಿಗಳಾಗಿ ಮತ್ತು ಸರದಾರರಾಗಿ ಇರುತ್ತಿದ್ದರು. ರಾಜನ ವೈಯಕ್ತಿಕ ಸಾಮರ್ಥ್ಯದ ಮೇಲೆ ಆಡಳಿತದ ದಕ್ಷತೆ ಅವಲಂಬಿಸಿದ್ದಿತು. ದೆಹಲಿ ಸಿಂಹಾಸನಕ್ಕೆ ಅಕ್ಬರ್ ಉತ್ತರಾಧಿಕಾರಿಯಾಗಿ ಬಂದ ಮೇಲೆ ಉತ್ತರ ಭಾರತದ ರಾಜಕೀಯ ಚಿತ್ರವೇ ಬದಲಾಯಿತು. ಅಕ್ಬರ್ ತನ್ನ ಸಾಮ್ರಾಜ್ಯದ ವಿತರಣೆ ಮತ್ತು ಭದ್ರತೆಗೆ ಹೆಚ್ಚು ಗಮನ ನೀಡಿದ. 1561 ರಲ್ಲಿ ಇವನು ರಾಜಪುತಾನವನ್ನು ಪ್ರವೇಶಿಸಿ ಜೋಧಪುರದ ಮೇಲೆ ಧಾಳಿ ಮಾಡಿದ. ಮೇವಾರದ ಚಿತ್ತೂರನ್ನು ವಶಪಡಿಸಿಕೊಂಡು ಸಾವಿರಾರು ಜನರ ಹತ್ಯೆಗೈದ. ಇದರಿಂದಾಗಿ ಇಡೀ ರಾಜಪುತಾನವೇ ತಲ್ಲಣಿಸಿ ಹೋಯಿತು. ಆದರೆ ಅಕ್ಬರ್ ಮುಂದೆ ರಾಜಪುತ್ರರಾಜರ ಶಕ್ತಿ ಸಾಮರ್ಥ್ಯಗಳು ಮತ್ತು ಧೈರ್ಯಸಾಹಸಗಳನ್ನು ತನ್ನ ಸಾಮ್ರಾಜ್ಯದ ಅಭ್ಯುದಯಕ್ಕಾಗಿ ಬಳಸಿಕೊಳ್ಳುವ ನಿರ್ಧಾರ ಮಾಡಿದ. ಅದರ ಪರಿಣಾಮವಾಗಿ ಅನೇಕ ರಾಜರುಗಳು ಇವನಿಗೆ ಹೆಣ್ಣುಮಕ್ಕಳನ್ನು ಕೊಟ್ಟು ರಕ್ತಸಂಬಂಧ ಬೆಳಸಿದರು. ಅನೇಕ ರಾಜರು ದೆಹಲಿಯ ಆಸ್ಥಾನದಲ್ಲಿದ್ದು ಸಾಮ್ರಾಜ್ಯದ ಹಿತಕ್ಕಾಗಿ ದುಡಿದರು. ಅಂತವರಲ್ಲಿ ಜೋಧಪುರದ ಜಸವಂತಸಿಂಹ ಒಬ್ಬ. ಔರಂಗಜೇಬನ ಕಾಲದಲ್ಲಿ ಮೊಗಲ್ ಮತ್ತು ರಜಪುತಾನದ ರಾಜರುಗಳ ಸಂಬಂಧ ಹದಗೆಟ್ಟಿತು. ಜಸವಂತಸಿಂಹನನ್ನು ಔರಂಗಜೇಬ ದಖ್ಖನ್ನಿನಿಂದ ವಾಯವ್ಯ ಸರಹದ್ದಿಗೆ ವರ್ಗಾಯಿಸಿದ. ಅಲ್ಲಿ 1679 ರಲ್ಲಿ ಅವನು ಸೈನಿಕ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ಮೃತನಾದ. ಆಗ ಔರಂಗಜೇಬ ಜೋಧ್‌ಪುರ ರಾಜ್ಯವನ್ನು ವಶಪಡಿಸಿಕೊಂಡು ತನ್ನ ಅಧೀನಕ್ಕೆ ತಂದುಕೊಂಡ. ಮಾರವಾರದ ಜಸವಂತ ಸಿಂಹನ ಇಬ್ಬರು ಪತ್ನಿಯರು ತಲಾ ಒಬ್ಬೊಬ್ಬ ಗಂಡು ಮಕ್ಕಳಿಗೆ ಜನ್ಮ ನೀಡಿದರು. ಅವರಲ್ಲಿ ಉಳಿದುಕೊಂಡ ಅಜಿತ್‌ಸಿಂಹ ಎಂಬುವನು ರಾಜ್ಯದ ಹಿತೈಷಿ ಮಂತ್ರಿಯೊಬ್ಬನ ಆರೈಕೆಯಲ್ಲಿ ಬೆಳೆದ. ಔರಂಗಜೇಬ ಈ ಬಾಲಕನ ಹಕ್ಕುದಾರಿಕೆಯನ್ನು ನಿರ್ಲಕ್ಷಿಸಿದ ಹಾಗೂ ಇವನನ್ನು ಇಸ್ಲಾಂ ಧರ್ಮವನ್ನೊಪ್ಪಲು ಒತ್ತಾಯಿಸಿದ. ಔರಂಗಜೇಬ್ ದಖ್ಖನ್ನಿನ ವ್ಯವಹಾರಗಳಲ್ಲಿ ಮುಳುಗಿದಾಗ ಮೇವಾರದ ಅರಸುಮನೆತನ ಪುನಶ್ಚೇತನಗೊಂಡು ಅಜಿತ್‌ಸಿಂಹ ಅಧಿಕಾರಕ್ಕೆ ಬಂದ.

1709ರಲ್ಲಿ ಔರಂಗಜೇಬನ ಮಗ ಮತ್ತು ಉತ್ತರಾಧಿಕಾರಿ ಬಹದ್ದೂರ್ ಷಾ ಅಜಿತ್‌ಸಿಂಹನಿಗೆ ಮಾನ್ಯತೆ ನೀಡಿದ. ಹದಿನೆಂಟನೆಯ ಶತಮಾನದ ಪ್ರಥಮಾರ್ಧದಲ್ಲಿ ಮಾರವಾರ ಅಥವಾ ಜೋಧ್‌ಪುರ ರಾಜ್ಯ ಮೊಗಲರು ಮತ್ತು ಮರಾಠರು ಮೇಲುಗೈಗಾಗಿ ನಡೆಸಿದ ಹೋರಾಟದಲ್ಲಿ ನೆಮ್ಮದಿಯನ್ನು ಕಳೆದುಕೊಂಡಿತು. ಮರಾಠರು ಇತರ ರಜಪೂತ ರಾಜ್ಯಗಳಂತೆಯೇ ಜೋಧ್‌ಪುರವನ್ನು ಕೊಳ್ಳೆಹೊಡೆದರು. ಜೊತೆಗೆ ಮುಸ್ಲಿಂ ನಾಯಕನೊಬ್ಬನ ನೇತೃತ್ವದಲ್ಲಿ ಪಿಂಡಾರಿಗಳು ಜನರ ಸುಲಿಗೆ ಮಾಡುತ್ತಿದ್ದರು. ಆಗಾಗ ಆಫ್ಘಾನಿಸ್ತಾನದ ಮೂಲದ ಪಠಾಣರು ಧಾಳಿ ಮಾಡುತ್ತಿದ್ದರು. ಮರಾಠರು ಪಾಣಿಪತ್ ಯುದ್ಧದಲ್ಲಿ (1761) ಅಫ್ಘನ್ನರಿಗೆ ಸೋತ ಅನಂತರ ಜೋಧಪುರ ರಾಜ್ಯ ಇತರ ರಜಪೂತ ರಾಜ್ಯಗಳಂತೆಯೇ ಉಸಿರಾಡತೊಡಗಿತು.

ಬ್ರಿಟಿಷರು ಭಾರತದ ಮೇಲೆ ಕ್ರಮೇಣ ಹತೋಟಿ ಸಾಧಿಸತೊಡಗಿದ್ದು ಹತ್ತೊಂಬತ್ತನೆಯ ಶತಮಾನದ ಪ್ರಾರಂಭಕ್ಕೆ ಮರಾಠರನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರು. ಬ್ರಿಟಿಷರು ಮತ್ತು ಮರಾಠರ ನಡುವೆ ಆದ ಒಪ್ಪಂದದ ಮೇರೆಗೆ ಜೋಧಪುರ ರಾಜ್ಯ 1818ರಲ್ಲಿ ಬ್ರಿಟಿಷರ ಆಶ್ರಿತ ರಾಜ್ಯವಾಗಿ ಪರಿವರ್ತಿತವಾಯಿತು. ಬಿಕನೇರ್ ಕೂಡ ಈ ಪದ್ಧತಿಗೆ ಸೇರಿತು. ಬ್ರಿಟಿಷರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಒಳಾಡಳಿತ ಸ್ವಾತಂತ್ರ್ಯ ಮಾತ್ರ ರಾಥೋರ ರಾಜರಿಗೆ ಉಳಿಯಿತು. ಇತರ ಕೆಲವು ರಾಜ್ಯಗಳಂತೆಯೇ ಜೋಧಪುರ ಒಂದನೆಯ ದರ್ಜೆಯ ಸಂಸ್ಥಾನಗಳ ಸಾಲಿಗೆ ಸೇರಿತು.

ಭಾರತ ಸ್ವಾತಂತ್ರ್ಯ ಪಡೆದಾಗ ಇದು ಭಾರತ ಒಕ್ಕೂಟದಲ್ಲಿ ವಿಲೀನವಾಯಿತು. 1949ರಲ್ಲಿ ರಾಜಸ್ತಾನ ರಾಜ್ಯದ ಭಾಗವಾಯಿತು. ಜೋಧಪುರದಲ್ಲಿ ದೊಡ್ಡ ಕೋಟೆ ಮತ್ತು ಅರಮನೆಗಳಿವೆ. ಸೂರ್‌ಸಿಂಹ ಕಟ್ಟಿಸಿದ ಮೋತಿಮಹಲ್, ಅಭಯ ಸಿಂಹ ಕಟ್ಟಿಸಿದ ಪೂಲ್ ಮಹಲ್ ಸುಂದರವಾಗಿದೆ. ಮಾಂಡೋರ್‌ನಲ್ಲಿ ಜೋಧಪುರದ ಸಂಸ್ಥಾನಿಕರ ಸ್ಮಾರಕ ಪ್ರತಿಮೆಗಳಿವೆ.

(ಡಿ.ಎಸ್.ಜಿ.)

**ರಾಧಾಕೃಷ್ಣನ್, ಸರ್ವಪಲ್ಲಿ:** 1888–1975. ಭಾರತದ ಎರಡನೆಯ ರಾಷ್ಟ್ರಪತಿ, ಶಿಕ್ಷಣತಜ್ಞ, ಸಮರ್ಥ ಆಡಳಿತಗಾರ ಮತ್ತು ಶ್ರೇಷ್ಠ ತತ್ತ್ವಶಾಸ್ತ್ರಜ್ಞ. ದಾರ್ಶನಿಕರೆಲ್ಲ ದೊರೆಗಳಾಗಬೇಕು; ದೊರೆಗಳು ದಾರ್ಶನಿಕರಾಗಬೇಕು–ಎಂದ ಗ್ರೀಕ್ ತತ್ತ್ವಜ್ಞಾನಿ ಪ್ಲೇಟೊನ ಆದರ್ಶವನ್ನು ಸಾದರ್ಶಗೊಳಿಸಿದವರು. ಭಾರತದ ರಾಷ್ಟ್ರಪತಿಯಾಗಿ ಇವರು ಆಯ್ಕೆಗೊಂಡಾಗ, ಇದು ತತ್ತ್ವಜ್ಞಾನಕ್ಕೆ ಸಂದ ಗೌರವ ಎಂದವರು ಮತ್ತೊಬ್ಬ ಜಗದ್ವಿಖ್ಯಾತ ದಾರ್ಶನಿಕ ಬರ್ಟ್ರಂಡ್ ರಸಲ್. ವೇದ–ವೇದಾಂತ ರಾಧಾಕೃಷ್ಣನ್ ಅವರ ಧಮನಿಗಳಲ್ಲಿ ಹರಿಯುತ್ತಿತ್ತು. ಪ್ರಸ್ಥಾನತ್ರಯ ಇವರಿಗೆ ಆರ್ಷೇಯವಾಗಿ ಬಂದ ಕುಲಧನ.

ಸರ್ವಪಲ್ಲಿ ರಾಧಾಕಷ್ಣನ್ ಎಂದು ಹೆಸರಾದ ಇವರು 1888 ಸೆಪ್ಟೆಂಬರ್ 5ರಂದು ಈಗಿನ ಆಂಧ್ರ ಪ್ರದೇಶ ರಾಜ್ಯಕ್ಕೆ ಸೇರಿರುವ ಚಿತ್ತೂರು ಜಿಲ್ಲೆಯ ತಿರುತ್ತಣಿಯಲ್ಲಿ ಜನಿಸಿದರು. ತಂದೆ ವೀರಾಸ್ವಾಮಿ, ತಾಯಿ ಸೀತಮ್ಮ. ತಂದೆ ಜಮೀನ್ದಾರಿ ವ್ಯವಸ್ಥೆಗೊಳಪಟ್ಟಿದ್ದ ಪ್ರದೇಶದಲ್ಲಿ ತಹಶೀಲ್ದಾರರಾಗಿದ್ದರು. ಸರ್ವಪಲ್ಲಿ ಎಂಬುದು ಇವರ ಮನೆತನದ ಹೆಸರು. ಇವರ ಆರಂಭಿಕ ವಿದ್ಯಾಭ್ಯಾಸ ತಿರುಪತಿಯ ಲೂಥರ್ ಮಿಶನರಿ ಶಾಲೆಯಲ್ಲಿ ನಡೆಯಿತು (1896–1900). ಎಳೆಯ ವಯಸ್ಸಿನಲ್ಲಿಯೇ ವೇದಾಂತ ವಿದ್ಯೆ ಇಂದಿನ ದೃಷ್ಟಿಕೋನದಿಂದ ಅಭ್ಯಾಸ. ತರುವಾಯ ವೆಲ್ಲೂರು ಕಾಲೇಜು (1900–04) ಅನಂತರ ಮದರಾಸಿನ ಕ್ರಿಶ್ಚಿಯನ್ ಕಾಲೇಜುಗಳಲ್ಲಿ (1904–08) ವಿದ್ಯಾಭ್ಯಾಸ ಮುಂದುವರಿಸಿದರು. ಇವರದು ಸಂಪ್ರದಾಯಸ್ಥ

ಮನೆತನವಾಗಿದ್ದರೂ ವಿದ್ಯಾಭ್ಯಾಸ ಮಾಡಿದರು. ಇವರು ಓದಿನ ನಡುವೆಯೇ 1906ರಲ್ಲಿ ಶಿವಕಾಮಮ್ಮ ಎಂಬವರನ್ನು ವಿವಾಹವಾದರು. ಇವರ ಮಾತೃಭಾಷೆ ತೆಲುಗು. ಜೊತೆಗೆ ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ ಗಳಿಸಿದ್ದರು. ವೇದ ಮತ್ತು ಉಪನಿಷತ್‌ಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಶಿಕ್ಷಣ, ಸಂಸ್ಕೃತಿ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ ಯಾವುದೇ ವಿಷಯ ಇವರ ಆಸಕ್ತಿಯ ಕ್ಷೇತ್ರವಾಗಿರುತ್ತಿತ್ತು. ಈ ಇಲ್ಲ ವಿಷಯಗಳನ್ನು ಕುರಿತಂತೆ ಇವರು ವಿಪುಲವಾಗಿ ಬರೆದಿದ್ದಾರೆ. ಆದರೆ ಇವರ ಪ್ರಾತಿನಿಧಿಕ ಕಾರ್ಯಕ್ಷೇತ್ರ ತತ್ತ್ವಶಾಸ್ತ್ರ. ಬಿ.ಎ. ಪದವಿಯಲ್ಲಿ ಓದುವಾಗ ತತ್ತ್ವಶಾಸ್ತ್ರದತ್ತ ಇವರ ಒಲವು ಹರಿದು ಬದುಕಿನ ಕೊನೆಯ ಕ್ಷಣದವರೆಗೂ ಸಾಗಿತು. ಬ್ರಹ್ಮಚರ್ಯ ಹಾಗೂ ಬ್ರಹ್ಮಜ್ಞಾನ ಇವುಗಳಿಗೆ ರಾಧಾಕೃಷ್ಣನ್ ಅಪೂರ್ವ ಅರ್ಥವಂತಿಕೆಯನ್ನು ನೀಡಿದರು. ತತ್ತ್ವಶಾಸ್ತ್ರ ಅಥವಾ ಆಧ್ಯಾತ್ಮವಿದ್ಯೆ ಎಂದರೆ ಕೇವಲ ಚಿಂತನಾ ವಿಧಾನವಲ್ಲ, ಅದು ಮಾದರಿಯಾಗಿ ಬದುಕುವ ವಿಧಾನ ಎಂಬುದನ್ನು ಇವರು ಕಾರ್ಯತಃ ಸಾಧಿಸಿತೋರಿಸಿದರು. ಅಖಂಡ ಪಾಂಡಿತ್ಯ, ಅತ್ಯುತ್ತಮ ಪ್ರವಚನಕಾರ ಮತ್ತು ಉದಾತ್ತ ಭಾಷ್ಯಕಾರರೆಂಬ ಹೆಗ್ಗಳಿಕೆ ಇವರದು.

ಶಿಕ್ಷಣ ಹಾಗೂ ತತ್ತ್ವಶಾಸ್ತ್ರ ಕ್ಷೇತ್ರಗಳಿಗೆ ರಾಧಾಕೃಷ್ಣನ್ ನೀಡಿದ ಸೇವೆ ಅಪೂರ್ವವಾದುದು. ಇವರ ಜೀವನ ಆರಂಭಗೊಂಡದ್ದೇ ತತ್ತ್ವಶಾಸ್ತ್ರ ಅಧ್ಯಾಪನ ವೃತ್ತಿಯಿಂದ. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವೃತ್ತಿಯನ್ನಾರಂಭಿಸಿದ ಇವರು ತರುವಾಯ ಅದೇ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾದರು. 1918–21ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಿನಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಮುಂದೆ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿ 1921–31ರವರೆಗೆ ಸೇವೆ ಸಲ್ಲಿಸಿದರು. ಆಗಲೇ ಗುರುದೇವ ರವೀಂದ್ರ ಮತ್ತು ಗಾಂಧೀಜಿಯವರ ಪರಿಚಯ ಇವರಿಗೆ ಲಭ್ಯ. ಈ ನಡುವೆ 1931ರಲ್ಲಿ ಆಂಧ್ರ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿ ನೇಮಕಗೊಂಡು 1936ರ ವರೆಗೆ ಸೇವೆ ಸಲ್ಲಿಸಿದರು. ಮತ್ತೆ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾದರು (1937–44). ಬನಾರಸ್ ಹಿಂದು ವಿಶ್ವವಿದ್ಯಾಲಯದ ಕುಲಪತಿಗಳಾಗಿ (1939–48), ದೆಹಲಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ (1953–62) ಸೇವೆಸಲ್ಲಿಸಿದರು. ಶಿಕ್ಷಣಕ್ಷೇತ್ರದಲ್ಲಿ ರಾಧಾಕೃಷ್ಣನ್ ಅವರ ಹೆಸರು ಹೊರದೇಶಗಳಿಗೂ ವಿಸ್ತರಿಸಿತು. ಪೌರ್ವಾತ್ಯ ಧರ್ಮ ಹಾಗೂ ನೀತಿಶಾಸ್ತ್ರದ ಪ್ರಾಧ್ಯಾಪಕರಾಗಿ (1932–52) ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ ರಾಧಾಕೃಷ್ಣನ್ ಪ್ರಥಮ ಭಾರತೀಯ. ಮ್ಯಾಂಚೆಸ್ಟರ್. ಆಕ್ಸ್‌ಫರ್ಡ್ ಷಿಕಾಗೊ, ಲಂಡನ್‌ಗಳಲ್ಲಿನ ಅನೇಕ ವಿಶ್ವವಿದ್ಯಾಲಯಗಳಲ್ಲಿ ಆಹ್ವಾನಿತ ಉಪನ್ಯಾಸಕರಾಗಿದ್ದ ರಾಧಾಕೃಷ್ಣನ್ ಪೌರ್ವಾತ್ಯ ತತ್ತ್ವಶಾಸ್ತ್ರಕ್ಕೆ ಜಾಗತಿಕ ನೆಲೆಯಲ್ಲಿ ಆಧುನಿಕ ದೃಷ್ಟಿಕೋನವನ್ನು ಅಳವಡಿಸಿ ಈ ಬಗ್ಗೆ ಪಾಶ್ಚಾತ್ಯ ವಿದ್ವಾಂಸರಿಗೆ ಆಸಕ್ತಿ ಉಂಟಾಗುವಂತೆ ಮಾಡಿದರು.

ಭಾರತೀಯ ನಿಯೋಗದ ಮುಖ್ಯಸ್ಥರಾಗಿ ಯುನೆಸ್ಕೊಗೆ 1946–50ರ ಅವಧಿಯಲ್ಲಿ ಹಲವುಬಾರಿ ಭೇಟಿನೀಡಿದರು. ವಿಶ್ವವಿದ್ಯಾಲಯಗಳ ಶಿಕ್ಷಣ ಆಯೋಗದ ಅಧ್ಯಕ್ಷರಾಗಿ 1948ರಲ್ಲಿ ಭಾರತ ಸರ್ಕಾರದಿಂದ ನೇಮಕಗೊಂಡರು. ಯುನೆಸ್ಕೊ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ (1952). ಪಿ.ಇ.ಎನ್.ಕಾಂಗ್ರೆಸ್ ಅಧ್ಯಕ್ಷರಾಗಿ, ಅಂತಾರಾಷ್ಟ್ರೀಯ ಪಿ.ಇ.ಎನ್. ಉಪಾಧ್ಯಕ್ಷರಾಗಿ, ಬ್ರಿಟಿಷ್ ಅಕಾಡೆಮಿಯ ಗೌರವ ಸದಸ್ಯರಾಗಿ (1962), ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ 1962ರಲ್ಲಿ ಜರುಗಿದ ತತ್ತ್ವಶಾಸ್ತ್ರ ಸಮ್ಮೇಳನಕ್ಕೆ ಕಲ್ಕತ್ತ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಭಾರತೀಯ ಹಾಗೂ ಪೌರ್ವಾತ್ಯ ರಾಷ್ಟ್ರಗಳ ತತ್ತ್ವಜ್ಞಾನದ ಸೊಬಗನ್ನು, ಆದರ್ಶಗಳನ್ನು ಪ್ರಪಂಚಕ್ಕೆ ಪರಿಚಯಿಸಿದರು. ತತ್ತ್ವಶಾಸ್ತ್ರಜ್ಞರ ಗ್ರಂಥಭಂಡಾರ ಮಾಲಿಕೆಯಲ್ಲಿ ವಿಶ್ವಮಾನ್ಯರಾದ ಜಿ.ಇ.ಮೂರೆ, ಬರ್ಟ್ರೆಂಡ್ ರಸಲ್ ಮತ್ತು ಕಾರ್ಲ್‌ಜೆಸ್ಪರ್‌ರ ಜೊತೆಯಲ್ಲಿ ರಾಧಾಕೃಷ್ಣನ್ ಅವರ ತತ್ತ್ವಶಾಸ್ತ್ರದ ವಿಚಾರಧಾರೆಯನ್ನು ಪ್ರತ್ಯೇಕ ಸಂಪುಟದಲ್ಲಿ ನ್ಯೂಯಾರ್ಕಿನ ಪ್ರತಿಷ್ಠಿತ ತ್ಯುದರ್ ಪ್ರಕಾಶನ ಸಂಸ್ಥೆ ಪ್ರಕಟಿಸಿದೆ.

ಸೋವಿಯತ್ ರಷ್ಯದಲ್ಲಿ ಭಾರತದ ರಾಯಭಾರಿಯಾಗಿದ್ದ (1949–52) ರಾಧಾಕೃಷ್ಣನ್ ಭಾರತಕ್ಕೆ ಮರಳಿಬಂದ ತರುವಾಯ ಭಾರತದ ಉಪರಾಷ್ಟ್ರಪತಿಗಳಾಗಿಯೂ (1952–62), ರಾಷ್ಟ್ರಪತಿಗಳಾಗಿಯೂ (1962–67) ಸೇವೆಸಲ್ಲಿಸಿದರು. ಇವರಿಗೆ ಭಾರತ ಸರ್ಕಾರ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು (1954). ಯಾರಿಗೂ ಸಂದರ್ಶನ ನೀಡದಿದ್ದ ರಷ್ಯದ ಸರ್ವಾಧಿಕಾರಿ ಸ್ಟಾಲಿನ್ ಇವರಿಗೆ ಮೂರು ಬಾರಿ ಅವಕಾಶ ನೀಡಿದ್ದು ಒಂದು ವಿಶೇಷ. ರಾಷ್ಟ್ರಪತಿಯಾಗಿ ಆ ಸ್ಥಾನಕ್ಕೆ ಘನತೆ ತಂದುಕೊಟ್ಟರು.

ರಾಧಾಕೃಷ್ಣನ್ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚಳವಳಿಗಳ ತೀವ್ರ ಸಂದರ್ಭಗಳಲ್ಲೂ ತಮ್ಮ ಆಯ್ಕೆಯ ಕ್ಷೇತ್ರಗಳನ್ನು ತೊರೆದವರಲ್ಲ. ಶಿಕ್ಷಣ, ಸೇವೆ, ತಾತ್ತ್ವಿಕ ವಿಚಾರಧಾರೆ, ಸಾಹಿತ್ಯ ಸೃಷ್ಟಿ, ಆಡಳಿತ ಇವುಗಳನ್ನೆಲ್ಲ ಏಕಕಾಲಕ್ಕೆ ಇವರು ನಿರ್ವಹಿಸಿದ ರೀತಿ ಬೆರಗುಗೊಳಿಸುವಂಥದ್ದು. 1908ರಲ್ಲಿ ತಮ್ಮ ಸ್ನಾತಕೋತ್ತರ ಪದವಿಗಾಗಿ ರಚಿಸಿದ ಎತಿಕ್ಸ್ ಆಫ್ ವೇದಾಂತ ಅಂಡ್ ಇಟ್ಸ್ ಮೆಟೀರಿಯಲ್ ಪ್ರೀಸಪೋಸಿಷನ್ (ವೇದಾಂತದ ನೀತಿತತ್ತ್ವಗಳು ಮತ್ತು ಅದರ ವಾಸ್ತವಿಕ ಮುಂಭಾವನೆ) ಗ್ರಂಥ ಇವರ ತಾತ್ತ್ವಿಕ ಪ್ರಖರತೆಯನ್ನು ಮೊತ್ತಮೊದಲು ಸಾದರಪಡಿಸಿತು. ಆಗ ಇವರಿಗೆ ಇಪ್ಪತ್ತರ ವಯಸ್ಸು. ಮದರಾಸು ವಿಶ್ವವಿದ್ಯಾಲಯ ಪ್ರಕಟಿಸಿದ ಈ ಕೃತಿ ತತ್ತ್ವಶಾಸ್ತ್ರ ಕ್ಷೇತ್ರದಲ್ಲಿ ಇವರ ಸ್ಥಾನ ನಿರ್ದೇಶನಕ್ಕೆ ಕಾರಣವಾಯಿತು. ದಿ ಫಿಲಾಸಫಿ ಆಫ್ ರವೀಂದ್ರನಾಥ ಟಾಗೂರ್(1918). ಐಡಿಯಲಿಸ್ಟ್ ವ್ಯೂ ಆಫ್ ಲೈಫ್(1932), ಈಸ್ಟರ್ನ್ ರಿಲಿಜನ್ಸ್ ಅಂಡ್ ವೆಸ್ಟರ್ನ್ ಥಾಟ್(1939), ದಿ ರೆಯ್ನ್ ಆಫ್ ರಿಲಿಜಿಯನ್ ಇನ್ ಕಾಂಟೆಂಪೊರರಿ ಫಿಲಾಸಫಿ(1920). ಇಂಡಿಯನ್ ಫಿಲಾಸಫಿ (1923,1927 ಎರಡು ಸಂಪುಟಗಳು), ದಿ ಹಿಂದು ವ್ಯೂ ಆಫ್ ಲೈಫ್ (1932)–ಇವು ರಾಧಾಕೃಷ್ಣನ್ ಅವರ ಬಹುಮುಖ್ಯ ಕೃತಿಗಳು. ಇವರು ಅನುವಾದಿಸಿರುವ ಹಾಗೂ ಸಂಪಾದಿಸಿರುವ ಕೃತಿಗಳಲ್ಲಿ ಭಗವದ್ಗೀತ(1948), ದಿ ಪ್ರಿನ್ಸಿಪಲ್ ಉಪನಿಷತ್ಸ್(1953), ಬ್ರಹ್ಮಸೂತ್ರ(1960)–ಇವು ಅತ್ಯಂತ ಗಮನಾರ್ಹವಾದುವು. ರಾಧಾಕೃಷ್ಣನ್ ರಾಜತಾಂತ್ರಿಕರಾಗಿ ಜಪಾನ್, ಸಿಂಗಪುರ, ಇಂಡೊನೇಷ್ಯ, ಚೀನ, ಬೆಲ್ಜಿಯಮ್, ಪೋಲೆಂಡ್, ಚೆಕೊಸ್ಲೊವಾಕಿಯ, ಸೋವಿಯತ್ ರಷ್ಯ, ಹಂಗರಿ, ಬಲ್ಗೇರಿಯ, ಪೂರ್ವ ಮತ್ತು ಕೇಂದ್ರ ಆಫ್ರಿಕ ದೇಶಗಳಿಗೆ 1956ರಲ್ಲಿ ಭೇಟಿ ನೀಡಿದರು. ಈ ಮಧ್ಯೆ 1956ರಲ್ಲಿ ಇವರ ಪತ್ನಿ ತೀರಿಕೊಂಡರು. ನೆರೆರಾಷ್ಟ್ರಗಳಾದ ಚೀನ, ಮಂಗೋಲಿಯ, ಹಾಂಕಾಂಗ್‌ಗಳಿಗೆ 1957ರಲ್ಲಿ ಸೌಹಾರ್ದ ಭೇಟಿನೀಡಿ ಆ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ ವೃದ್ಧಿಸುವಂತೆ ಶ್ರಮಿಸಿದರು. ನೇಪಾಲ (1963), ರಷ್ಯ, ಐರ್ಲೆಂಡ್ (1964) ದೇಶಗಳಿಗೆ ಅಧಿಕೃತ ಭೇಟಿನೀಡಿ ರಾಜಕೀಯ ಮುತ್ಸದ್ದಿಯಾಗಿ ಜಾಗತಿಕ ಭ್ರಾತೃತ್ವಕ್ಕಾಗಿ ಶ್ರಮಿಸಿದರು. ಇವರನ್ನು ಅನೇಕ ರಾಷ್ಟ್ರಗಳು ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಗಳು, ವಿಶ್ವವಿದ್ಯಾಲಯಗಳು ಪುರಸ್ಕರಿಸಿವೆ. ನೈಟ್‌ಹುಡ್ (1931), ಟೆಹರಾನ್ ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್ (1963), ನೇಪಾಲದ ತ್ರಿಭುವನ್ ವಿಶ್ವವಿದ್ಯಾಲಯ ನೀಡಿದ ಗೌರವ ಡಿಲಿಟ್, ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಗೌರವ ಡಾಕ್ಟರ್ ಆಫ್ ಲಾ (1963), ಮಾಸ್ಕೊ ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್ (1964), ಐರ್ಲೆಂಡ್ ನ್ಯಾಷನಲ್ ವಿಶ್ವವಿದ್ಯಾಲಯ ನೀಡಿದ ಗೌರವ ಡಾಕ್ಟರ್ ಆಫ್ ಲಾ(1964)–ಈ ಪುರಸ್ಕಾರಗಳು ಮುಖ್ಯವಾದುವು. ಇವುಗಳಲ್ಲದೆ ಆಕ್ಸ್‌ಫರ್ಡ್, ಕೇಂಬ್ರಿಜ್, ರೋಮ್ ಮುಂತಾದ ವಿಶ್ವವಿದ್ಯಾಲಯಗಳು ನೀಡಿದ ನೂರಕ್ಕೂ ಮಿಕ್ಕಿದ ಗೌರವ ಪುರಸ್ಕಾರಗಳು, ಬಕಿಂಗ್‌ಹ್ಯಾಮ್ ಅರಮನೆ ನೀಡಿದ ಆರ್ಡರ್ ಆಫ್ ಮೆರಿಟ್ ಗೌರವ ಸದಸ್ಯತ್ವ (1963) ಮೊದಲಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ರಾಧಾಕೃಷ್ಣನ್ ಒಂದೆಡೆ ತಮ್ಮ ಜೀವನದ ಬಗ್ಗೆ ಹೀಗೆ ಹೇಳಿಕೊಂಡಿದ್ದಾರೆ: ಹಿರಿಯರಿಂದ ಕಿರಿಯರಿಗೆ ಬರಬಹುದಾದ ಹುಟ್ಟಿನ ಹಿರಿಮೆಯನ್ನಾಗಲೀ ಸಂಪತ್ತಿನ ಸೊಬಗನ್ನಾಗಲೀ ನಾನು ನನ್ನ ಎಳೆತನದಲ್ಲಿ ಕಾಣಲಿಲ್ಲ. ನಾನು ನಾನಾಗಿಯೆ ಬಾಳಿದೆ, ನಾನಾಗಿಯೇ ಬೆಳೆದೆ, ದೇವರ ದಯದಿಂದ ಮಾತ್ರ ಬೆಳಕು ಕಂಡೆ. ಈ ಮಾತುಗಳಲ್ಲಿ ಸರ್ವಪಲ್ಲಿಯವರು ಬದುಕನ್ನು ನೋಡಿದ ದೃಷ್ಟಿ, ಗ್ರಹಿಸಿದ ರೀತಿಗಳು ಆದರ್ಶಪ್ರಾಯವಾಗಿ ಮೂಡಿವೆ. ಇವರು 1975 ಏಪ್ರಿಲ್ 17ರಂದು ನಿಧನ ಹೊಂದಿದರು. (ಎಸ್‌ಆರ್‌ಐ.ಬಿ.)

**ರಾಬರ್ಟ್ ಬ್ರೂಸ್‌ಫುಟ್:** 1834–1912. ಹೆಸರಾಂತ ಬ್ರಿಟಿಷ್ ಭೂವಿಜ್ಞಾನಿ ಹಾಗೂ ಪುರಾತತ್ತ್ವಜ್ಞ, ಭಾರತೀಯ ಪ್ರಾಗಿತಿಹಾಸದ ಪಿತಾಮಹ ಎಂದು ಪ್ರಸಿದ್ಧನಾದವನು. 1834 ಸೆಪ್ಟಂಬರ್ 22ರಂದು ಇಂಗ್ಲೆಂಡಿನ ಗ್ಲೌಸೆಸ್ಟರ್‌ನಲ್ಲಿರುವ ಚೆಲ್ಟೆನ್‌ಹ್ಯಾಮ್ ಎಂಬ ಪಟ್ಟಣದಲ್ಲಿ ಜನಿಸಿದ. 1858ರಲ್ಲಿ ಮದರಾಸು ಮತ್ತು ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ ಭೂವಿಜ್ಞಾನ ಸರ್ವೇಕ್ಷಣ ಇಲಾಖೆಯಲ್ಲಿ ಸಹಾಯಕ ಭೂವಿಜ್ಞಾನಿಯಾಗಿ ಸೇರಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿ 1885ರಲ್ಲಿ ನಿರ್ದೇಶಕನಾದ. 1891ರಲ್ಲಿ ಈ ಹುದ್ದೆಯಿಂದ ನಿವೃತ್ತನಾದ ಅನಂತರ ಬರೋಡ ರಾಜ್ಯದ ಭೂವಿಜ್ಞಾನ ಇಲಾಖೆಯಲ್ಲಿ ನಿರ್ದೇಶಕನಾಗಿ ಕೆಲಸ ಮಾಡಿದ. ಅನಂತರ 1894ರಲ್ಲಿ ಮೈಸೂರು ಸಂಸ್ಥಾನದ ಭೂವಿಜ್ಞಾನ ಇಲಾಖೆಯ ನಿರ್ದೇಶಕನಾದ (1894–97). ಭೂವಿಜ್ಞಾನ ಹಾಗೂ ಪುರಾತತ್ತ್ವ ಎರಡೂ ಕ್ಷೇತ್ರಗಳಲ್ಲಿ ಇವನಿಗೆ ಸಮಾನ ಒಲವಿತ್ತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಯುರೋಪಿನಲ್ಲಿ ನಡೆಯುತ್ತಿದ್ದ ಮಹತ್ತ್ವಪೂರ್ಣ ಪ್ರಾಗ್ಯೆತಿಹಾಸಿಕ ಸಂಶೋಧನೆಗಳಿಂದ ಪ್ರೇರಿತನಾಗಿದ್ದ. ಈತ ತನ್ನ ಕರ್ತವ್ಯ ನಿರ್ವಹಣೆಯ ಜೊತೆಗೆ ಪ್ರಾಗ್ಯೆತಿಹಾಸಿಕ ಅವಶೇಷಗಳನ್ನು ಹುಡುಕುತ್ತಿದ್ದ. ತತ್ಪರಿಣಾಮವಾಗಿ 1863 ಮೇ 30ರಂದು ಮದರಾಸಿನ ಸಮೀಪದ ಪಲ್ಲವರಂ ಎಂಬಲ್ಲಿ ಭಾರತದಲ್ಲಿ ಮೊತ್ತಮೊದಲ ಆದಿ ಹಳೆಶಿಲಾಯುಗ ಉಪಕರಣವನ್ನು ಪತ್ತೆಹಚ್ಚಿದ. ತನ್ಮೂಲಕ ಭಾರತದಲ್ಲಿ ಹಳೆಶಿಲಾಯುಗ ಸಂಶೋಧನೆಗೆ ಚಾಲನೆ ನೀಡಿದ. ಇದೇ ವರ್ಷ ತನ್ನ ಸಹೋದ್ಯೋಗಿ ವಿಲಿಯಂ ಕಿಂಗ್‌ನೊಡನೆ ಪಲ್ಲವರಂನ ಸಮೀಪವಿರುವ ಅತ್ತಿರಂಪಾಕ್ಕಂನಲ್ಲಿ ಹಳೆ ಶಿಲಾಯುಗದ ಉಪಕರಣಗಳನ್ನು ಕಂಡುಹಿಡಿದ. 1864ರಲ್ಲಿ ಪಲ್ಲವರಂನಲ್ಲಿ ಈತ

ಮತ್ತಷ್ಟು ಉಪಕರಣಗಳನ್ನು ಸಂಗ್ರಹಿಸಿದ. 1866ರಲ್ಲಿ ಮದ್ರಾಸ್ ಜರ್ನಲ್ ಆಫ್ ಲಿಟರೇಚರ್ ಅಂಡ್ ಸೈನ್ಸ್ ಎಂಬ ಸಂಶೋಧನ ಪತ್ರಿಕೆಯಲ್ಲಿ ಈ ಉಪಕರಣಗಳು ಹಾಗೂ ಅವು ದೊರೆತ ಭೂಸ್ತರವನ್ನು ಕುರಿತು ವಿವರಣಾತ್ಮಕ ವೈಜ್ಞಾನಿಕ ಪ್ರಬಂಧವನ್ನು ಪ್ರಕಟಿಸಿದ. 1867–91ರವರೆಗೆ ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ವಿಪುಲವಾಗಿ ಪ್ರಾಗೈತಿಹಾಸಿಕ ಸರ್ವೇಕ್ಷಣೆಯನ್ನು ಕೈಗೊಂಡ. 1884ರಲ್ಲಿ ಕರ್ನೂಲಿನ ಭಿಲ್ಲಸರ್ಗಮ್ ಗುಹೆಯಲ್ಲಿ ಈತ ಮೂಳೆಯ ಉಪಕರಣಗಳನ್ನು ಪತ್ತೆಹಚ್ಚಿ ಇವನ್ನು ಯುರೋಪಿನ ಅಂತ್ಯ ಹಳೆಶಿಲಾಯುಗದ ಸಂಸ್ಕೃತಿಗಳಲ್ಲೊಂದಾದ ಮ್ಯಾಗ್ಡಲೇನಿಯನ್‌ನೊಂದಿಗೆ ಹೋಲಿಸಿರುವುದು ಒಂದು ಮಹತ್ತ್ವಪೂರ್ಣ ವಿಚಾರವಾಗಿದೆ. ಕರ್ನಾಟಕದಲ್ಲಿ ವಿಶೇಷವಾಗಿ ನವಶಿಲಾಯುಗದ ಹಲವು ನೆಲೆಗಳನ್ನು ತಿರುಮಕೂಡಲು ನರಸಿಪುರ (ಕಾವೇರಿ ನದಿ ಬಯಲು), ಬಳ್ಳಾರಿ ಪ್ರದೇಶದಲ್ಲಿ ಕಂಡುಹಿಡಿದ. ಅಲ್ಲದೆ ಈ ಪ್ರದೇಶದ ಲ್ಲಿರುವ ಬೂದಿದಿಬ್ಬಗಳು ನವಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ್ದು ಇವು ಸುಟ್ಟ ಸೆಗಣಿಯಿಂದ ರೂಪುಗೊಂಡವು ಎಂಬ ವಿಚಾರವನ್ನು ಮೊದಲ ಬಾರಿಗೆ ತಿಳಿಸಿದ.



ಈತ ಒಟ್ಟು 492 ನೆಲೆಗಳನ್ನು ಕಂಡುಹಿಡಿದ; ಇವುಗಳಲ್ಲಿ 42 ಹಳೆಶಿಲಾಯುಗ, 252 ನವಶಿಲಾಯುಗ, 17 ಆದಿ ಕಬ್ಬಿಣಯುಗದ ನೆಲೆಗಳು. ತ್ರಿಯುಗ ಸಿದ್ಧಾಂತವನ್ನು ಭಾರತದಲ್ಲಿ ಮೊದಲ ಬಾರಿಗೆ ಪ್ರಯೋಗಾತ್ಮಕವಾಗಿ ಅಳವಡಿಸಿಕೊಂಡು ಅಧ್ಯಯನ ಮಾಡಿದ. ತಾನು ಸಂಗ್ರಹಿಸಿದ ಪ್ರಾಚ್ಯಾವಶೇಷಗಳನ್ನು ಈತ ಮದರಾಸಿನ ಸರ್ಕಾರಿ ವಸ್ತುಸಂಗ್ರಹಾಲಯಕ್ಕೆ ನೀಡಿದ. ಈ ಕುರಿತು ಈತ ತಯಾರಿಸಿದ ಎರಡು ವಸ್ತುವಿವರ ಪಟ್ಟಿಯನ್ನು ಈ ಸಂಗ್ರಹಾಲಯ ಪ್ರಕಟಿಸಿದೆ (ದಿ ಫುಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರಿ ಹಿಸ್ಟಾರಿಕ್ ಆಂಟಿಕ್ವಿಟೀಸ್–1914; ದಿ ಫುಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರಿ ಹಿಸ್ಟಾರಿಕ್ ಅಂಡ್ ಪ್ರೋಟೊ ಹಿಸ್ಟಾರಿಕ್ ಆಂಟಿಕ್ವಿಟೀಸ್–ನೋಟ್ಸ್ ಆನ್ ದೇರ್ ಏಜಸ್ ಅಂಡ್ ಡಿಸ್ಟ್ರಿಬ್ಯೂಷನ್–1916). ಈತನ ಹೆಸರಿನಲ್ಲಿ ಸುಮಾರು 23 ಪ್ರಕಟಣೆಗಳಿವೆ (1866–1916). 1867ರಲ್ಲಿ ಜಿಯಲಾಜಿಕಲ್ ಸೊಸೈಟಿ ಆಫ್ ಲಂಡನ್ ಈತನನ್ನು ಫೆಲೊ ಆಗಿ ಆಯ್ಕೆ ಮಾಡಿತು. ಈತ 1912 ಡಿಸೆಂಬರ್ 29ರಂದು ಕಲ್ಕತ್ತದಲ್ಲಿ ನಿಧನನಾದ. (ವಿ.ಎಸ್.)

**ರಾಬರ್ಟ್ ಬ್ರೇಯ್ಡ್‌ವುಡ್:** 1907–2003. ಅಮೆರಿಕದ ಪುರಾತತ್ತ್ವಜ್ಞ ಹಾಗೂ ಮಾನವಶಾಸ್ತ್ರಜ್ಞ. 1907 ಜುಲೈ 29ರಂದು ಮಿಶಿಗನ್‌ನ ಡೆಟ್ರಾಯಿಟ್‌ನಲ್ಲಿ ಜನಿಸಿದ. 1933ರಲ್ಲಿ ಮಿಶಿಗನ್ ವಿಶ್ವವಿದ್ಯಾಲಯದಿಂದ ವಾಸ್ತುಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದ. 1934–38ರವರೆಗೆ ಶಿಕಾಗೊ ವಿಶ್ವವಿದ್ಯಾಲಯದ ಓರಿಯೆಂಟಲ್ ಇನ್‌ಸ್ಟಿಟ್ಯೂಟ್ ಟರ್ಕಿಯ ಅಮುಕ್ ಬಯಲಿನಲ್ಲಿ ನಡೆಸಿದ ಕ್ಷೇತ್ರಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸಿದ್ದ. ಇದೇ ಸಮಯದಲ್ಲಿ ಲಿಂಡಳೊಡನೆ ವಿವಾಹವಾಯಿತು. ಮುಂದೆ ಇವನ ಕ್ಷೇತ್ರಕಾರ್ಯ ಹಾಗೂ ಸಂಶೋಧನೆಗಳಲ್ಲಿ ಇವಳು ಜೊತೆಗಾರ್ತಿಯಾದಳು. 1943ರಲ್ಲಿ ಶಿಕಾಗೊ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದು ಇದೇ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗ ಹಾಗೂ ಓರಿಯೆಂಟಲ್ ಇನ್‌ಸ್ಟಿಟ್ಯೂಟ್‌ನಲ್ಲಿ ನಿವೃತ್ತಿಯವರೆಗೆ ಪ್ರಾಧ್ಯಾಪಕನಾಗಿ ಕಾರ್ಯ ನಿರ್ವಹಿಸಿದ.

ಈತ ಸಮೀಪಪ್ರಾಚ್ಯದಲ್ಲಿ ಪ್ರಾಗಿತಿಹಾಸದ ಅಧ್ಯಯನಕ್ಕೆ ಚಾಲನೆ ನೀಡಿದವರಲ್ಲಿ ಮೊದಲಿಗ. 1947ರಲ್ಲಿ ಇವನು ಇರಾಕ್‌ನಲ್ಲಿ ಆರಂಭಿಸಿದ ಜಾರ್ಮೊ ಪ್ರಾಜೆಕ್ಟ್ ಪ್ರಾಗಿತಿಹಾಸ ಸಂಶೋಧನೆಯ ಒಂದು ಮೈಲಿಗಲ್ಲು. ಆಹಾರೋತ್ಪಾದನೆ ಅಥವಾ ಕೃಷಿಯ ಮೂಲ ಹಾಗೂ ಪರಿಣಾಮಗಳ ಬಗೆಗಿನ ಮೂಲಭೂತ ಪ್ರಶ್ನೆಗಳು ಇವನ ಸಂಶೋಧನೆಯ ಬುನಾದಿಯಾಗಿದ್ದವು. ಈ ಪ್ರದೇಶದಲ್ಲಿ ಆಹಾರೋತ್ಪಾದನೆಗೆ ಪ್ರಪ್ರಥಮವಾಗಿ ಹೊರಳಿಕೊಂಡ ಸಂಸ್ಕೃತಿಯ ಕುರುಹುಗಳಿಗಾಗಿ ಉತ್ಖನನಗಳನ್ನು ನಡೆಸಿದ. ಅದೇ ತಾನೇ ಪ್ರಾಚುರ್ಯಕ್ಕೆ ಬಂದಿದ್ದ ಇಂಗಾಲ–14 ತಂತ್ರದ ಪ್ರಯೋಜನವನ್ನೂ ಪಡೆದುಕೊಂಡ. ಇದೊಂದು ಪರಿಸರ ಸಂಬಂಧಿ ವಿಷಯವಾದ್ದರಿಂದ ಭೂವಿಜ್ಞಾನಿಗಳು, ಜೀವವಿಜ್ಞಾನಿಗಳು ಈ ಸಂಶೋಧನೆಯಲ್ಲಿ ಭಾಗಿಯಾದರು. ಮಹತ್ತ್ವಪೂರ್ಣ ಸಂಶೋಧನೆಯಾದ್ದರಿಂದ 1954ರಲ್ಲಿ ಪ್ರತಿಷ್ಠಿತ ನ್ಯಾಷನಲ್ ಸೈನ್ಸ್ ಫೌಂಡೇಷನ್ ಅನುದಾನ ದೊರೆಯಿತು. ಅನಂತರ ಇರಾಕ್‌ನಲ್ಲಿ ರಾಜಕೀಯ ಪರಿಸ್ಥಿತಿ ಹದಗೆಟ್ಟ ಕಾರಣ ಇವನು ಇರಾನ್ ಹಾಗೂ ಟರ್ಕಿಯೆಡೆಗೆ ತನ್ನ ಗಮನ ಹರಿಸಿದ. ಇಸ್ತಾಂಬುಲ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ದಕ್ಷಿಣ ಟರ್ಕಿಯಲ್ಲಿಯ ಕಯೊನು ನೆಲೆಯಲ್ಲಿ ಉತ್ಖನನ ನಡೆಸಿ ಈ ಪ್ರದೇಶದಲ್ಲಿ 8000–12000 ವರ್ಷಗಳ ಹಿಂದಿನ ಅವಧಿಯಲ್ಲಿ ಬೇಟೆಗಾರಿಕೆಯಿಂದ ಆಹಾರೋತ್ಪಾದನೆಗೆ ಮಾನವ ಹೊರಳಿದ ಎಂಬುದನ್ನು ಸಾಬೀತುಪಡಿಸುವ ಅವಶೇಷಗಳನ್ನು ಬೆಳಕಿಗೆ ತಂದ. ಪುರಾತತ್ತ್ವ ಕ್ಷೇತ್ರದಲ್ಲಿಯ ಸಾಧನೆಗಾಗಿ ಇವನಿಗೆ ಅಮೆರಿಕದ ಆರ್ಕಿಯಲಾಜಿಕಲ್ ಇನ್‌ಸ್ಟಿಟ್ಯೂಟ್ 1971ರಲ್ಲಿ ಪದಕ ನೀಡಿ ಸನ್ಮಾನಿಸಿತು. (ವಿ.ಎಸ್.)

**ರಾಮಕೃಷ್ಣ ಪರಮಹಂಸ:** 1836–86. ಭಾರತದ ಮಹಾಜ್ಞಾನಿ. ಸರ್ವಧರ್ಮ ಸಮನ್ವಯ ಸಾಧಕ. ಬಂಗಾಲದ ಹೂಗ್ಲಿ ಜಿಲ್ಲೆಯ ಕಾಮಾರಪುಕುರ (ಕಮರ್‌ಪುಕುರ್) ಎಂಬ ಸಣ್ಣಹಳ್ಳಿಯಲ್ಲಿ 1836 ಫೆಬ್ರವರಿ 18ರಂದು ಸಂಪ್ರದಾಯಸ್ಥ ಬ್ರಾಹ್ಮಣ ಮನೆತನದಲ್ಲಿ ಜನಿಸಿದರು. ತಂದೆ ಖುದಿರಾಮ ಚಟ್ಟೋಪಾಧ್ಯಾಯ. ತಾಯಿ ಚಂದ್ರಮಣಿದೇವಿ. ಈ ದಂಪತಿಗಳಿಗೆ ರಾಮಕುಮಾರ, ರಾಮೇಶ್ವರ, ಕಾತ್ಯಾಯಿನಿ, ಗದಾಧರ ಮತ್ತು ಸರ್ವಮಂಗಳೆ ಎಂಬ ಐವರು ಮಕ್ಕಳಿದ್ದರು. ಗದಾಧರ ಚಟ್ಟೋಪಾಧ್ಯಾಯ ಎಂಬುದು ರಾಮಕೃಷ್ಣರ ಪೂರ್ವದ ಪೂರ್ಣ ಹೆಸರು. ಶ್ರೀರಾಮ ಇವರ ಮನೆದೇವರು. ಆದಕಾರಣ ಇವರ ತಂದೆ ತಮ್ಮ ಗಂಡುಮಕ್ಕಳಿಗೆ ರಾಮನಾಮ ಸೇರಿಸಿ ಕರೆಯುತ್ತಿದ್ದರು. ಹಾಗಾಗಿ ಗದಾಧರನನ್ನು ರಾಮಕೃಷ್ಣ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಗದಾಧರ ಮುಂದೆ ರಾಮಕೃಷ್ಣರೆಂದೇ ಲೋಕವಿಖ್ಯಾತರಾದರು.

ಐದುವರ್ಷದ ಗದಾಧರನನ್ನು ಕಾಮಾರಪುಕುರದ ಶಾಲೆಗೆ ಹಾಕಿದರು. ನೆರೆ ಹೊರೆಯವರು ಇವನ ಜಾಣ್ಮೆಗೆ ಮೆಚ್ಚಿ ಪುರಾಣಕಥೆ, ಸ್ತೋತ್ರಪಾಠಗಳನ್ನು ಹೇಳಿಕೊಡುತ್ತಿದ್ದರು. ಅದನ್ನು ಬಹುಬೇಗ ಕಲಿತುಕೊಳ್ಳುತ್ತಿದ್ದ. ಬಂಗಾಲಿಯಲ್ಲಿ ಓದುಬರೆಹ ಕಲಿತಿದ್ದರೂ ಇಂಗ್ಲಿಷ್, ಸಂಸ್ಕೃತಗಳ ಪರಿಚಯವಿತ್ತು. ಗಣಿತ ಮಾತ್ರ ಇವನ ತಲೆಗೆ ಹತ್ತಲಿಲ್ಲವೆನ್ನುವರು. ಅಭಿನಯಕಲೆ, ಶಿಲ್ಪಕಲೆಯಲ್ಲೂ ಗದಾಧರನಿಗೆ ಪರಿಶ್ರಮವಿದ್ದು ಮಾವಿನ ತೋಪಿನಲ್ಲಿ ಬಯಲಾಟಗಳನ್ನಾಡುವುದು, ದೇವದೇವಿಯರ ಮಣ್ಣುಗೊಂಬೆ ಮಾಡುವುದು ಇವೇ ಮೊದಲಾದ ಆಟಗಳಿಂದ ತನ್ನ ಓರಗೆಯವರಿಗೆಲ್ಲ ಅಚ್ಚುಮೆಚ್ಚಿನವನಾಗಿದ್ದ. ಗದಾಧರ ಏಳು ವರ್ಷದವನಾಗಿದ್ದಾಗ ತಂದೆ ಖುದಿರಾಮ ತೀರಿಕೊಂಡರು. ಒಂಬತ್ತನೆಯ ವರ್ಷದಲ್ಲಿ ಗದಾಧರನಿಗೆ ಉಪನಯನವಾಯಿತು. ಇವನು ಹುಟ್ಟಿದ ದಿನದಿಂದಲೂ ಎತ್ತಿ ಆಡಿಸಿ ಸಲಹಿದ ಧನಿ ಎಂಬಾಕೆ ಉಪನಯನಕ್ಕೆ ತಾನೇ ಪ್ರಥಮ ಭಿಕ್ಷಾಮಾತೆಯಾಗಬೇಕೆಂದು ಗದಾಧರನನ್ನು ಕೇಳಿಕೊಂಡಿದ್ದಳು. ಆಕೆ ಶೂದ್ರ ಸ್ತ್ರೀಯಾಗಿದ್ದುದರಿಂದ ಅಣ್ಣ ರಾಮಕುಮಾರ ಸಮ್ಮತಿಸಲಿಲ್ಲ. ಗದಾಧರ ಹಠಹಿಡಿದಾಗ ಅಣ್ಣ ಸಮ್ಮತಿಸಿದ. ಧನಿ ಪ್ರಥಮ ಭಿಕ್ಷಾಮಾತೆಯಾಗಿ ತನ್ನ ಆಸೆಯನ್ನು ಪೂರೈಸಿಕೊಂಡಳು.

ರಾಯರಾಜಚಂದ್ರದಾಸನೆಂಬ ಜಮೀನ್ದಾರನು ಸ್ವರ್ಗಸ್ಥನಾದ ಮೇಲೆ ಆತನ ಧರ್ಮಪತ್ನಿ ರಾಣಿ ರಾಸಮಣಿ ದಕ್ಷಿಣೇಶ್ವರದಲ್ಲಿ ಕಾಳಿಕಾದೇವಾಲಯವನ್ನು ಕಟ್ಟಿಸಿದಳು. ರಾಸಮಣಿ ಬೆಸ್ತರವಳಾದರೂ ಶ್ರೀಮಂತಿಕೆ, ಔದಾರ್ಯ ಮತ್ತು ಈಶ್ವರ ಭಕ್ತಿಗಳಿಂದ ಆಕೆಗೆ ರಾಣಿ ಎಂಬ ಬಿರುದು ಸಿಕ್ಕಿತ್ತು. ಆದರೆ ಶೂದ್ರಳು ಕಟ್ಟಿಸಿದ ಕಾಳಿಕಾದೇವಾಲಯಕ್ಕೆ ಬ್ರಾಹ್ಮಣ ಪೂಜಾರಿ ದೊರಕುವುದು ಕಷ್ಟವಾಯಿತು. ಕೊನೆಗೆ ರಾಮಕುಮಾರ ಕಾಳಿದೇವಿಯ ಪ್ರತಿಷ್ಠಾಪನೆಯ ಪುಣ್ಯಕಾರ್ಯಕ್ಕೆ ಸಮ್ಮತಿಸಿ ಆ ದೇವಿಯ ಅರ್ಚಕನಾಗಿ ಅಲ್ಲಿಯೇ ಉಳಿದ. ಗದಾಧರನೂ ಅಣ್ಣನೊಡನೆ ಉಳಿಯಬೇಕಾಯಿತು. ಮುಂದೆ ಗದಾಧರನ ಸೋದರಮಾವನೂ ರಾಸಮಣಿಯ ಅಳಿಯನಾದ ಮಥುರನಾಥರ ಬಾಲ್ಯಸ್ನೇಹಿತನೂ ಆದ ಹೃದಯರಾಮ ಚಟ್ಟೋಪಾಧ್ಯಾಯನ ಒತ್ತಾಸೆಯಿಂದ ಕಾಳಿಕಾದೇವಾಲಯದ ಸಮುಚ್ಚಯದಲ್ಲೇ ಇದ್ದ ರಾಧಾಗೋವಿಂದ ಮಂದಿರದ ಶ್ರೀಕೃಷ್ಣನ ಪೂಜಾ ಭಾರ ಗದಾಧರನ ಮೇಲೆ ಬಿತ್ತು.

ರಾಮಕುಮಾರ ಮಹಾಶಕ್ತಿಸಾಧಕನಾದ ಕೇನರಾಮಭಟ್ಟಾಚಾರ್ಯನಿಂದ ಗದಾಧರನಿಗೆ ಮಂತ್ರೋಪದೇಶ ಮಾಡಿಸಿದ. ರಾಮಕುಮಾರನಿಗೆ ಆರೋಗ್ಯವಿರದೆ ವಿಶ್ರಾಂತಿಗಾಗಿ ಕಾಮಾರಪುಕರಕ್ಕೆ ಹೋಗಿ ಅಲ್ಲೆ ಕಾಲವಾದ. ಅಣ್ಣನ ಮರಣ ವಾರ್ತೆ ಗದಾಧರನ ಎದೆನಡುಗಿಸಿತು. ತಂದೆ ಸತ್ತಮೇಲೆ ಅಣ್ಣನೇ ಸರ್ವಸ್ವವಾಗಿದ್ದ. ಗದಾಧರನಿಗೆ ಲೋಕದ ನಶ್ವರತೆಯಲ್ಲಿದ್ದ ನಂಬುಗೆ ದೃಢವಾಯಿತು; ಹಾಗೆಯೇ ಈಶ್ವರಪರವಾದ ಹಂಬಲ, ಚಿಂತೆ ಅಧಿಕವಾಯಿತು. ವಿಕ್ಷುಬ್ಧ ಸಂಸಾರ ಸಮುದ್ರವನ್ನು ದಾಟಬೇಕೆಂದು ಮಹಾಯಾತ್ರೆಗೆ ಸಿದ್ಧನಾದ. ಕೆಲವು ದಿನಗಳ ಅನಂತರ ಕಾಳಿಕಾದೇವಿಯ ಅರ್ಚಕನಾಗಿ ಮುಂದುವರೆಯುವಂತೆ ಇವನನ್ನು ಒಪ್ಪಿಸಲಾಯಿತು. 1855ರಲ್ಲಿ ದಕ್ಷಿಣೇಶ್ವರದ ಭವತಾರಿಣಿ ಅರ್ಚಕರಾಗಿನಿಂತ ಮೇಲೆ ರಾಮಕೃಷ್ಣರ ಆಧ್ಯಾತ್ಮ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಶಾಸ್ತ್ರಗಳು ಸಾರುವಂತೆ ಶಾಂತಭಾವ, ದಾಸ್ಯಭಾವ, ಸಖ್ಯಭಾವ, ವಾತ್ಸಲ್ಯಭಾವ ಮತ್ತು ಮಧುರಭಾವ ಎಂಬ ಐದು

ಬಗೆಯ ಭಾವಸಾಧನೆಗಳನ್ನು ರಾಮಕೃಷ್ಣರು ಸಾಧಿಸಿದರು. ಕಠಿಣ ಸಾಧನೆಗಳಿಂದ ಬರುಬರುತ್ತ ಇವರ ದೇಹ ಕೃಶವಾಗತೊಡಗಿತು. ಯಾವುದೋ ಜಾಡ್ಯ, ಕಾಡುತ್ತಿರಬಹುದೆಂದು ಮಥುರನಾಥ ಕಲ್ಕತ್ತದಿಂದ ವೈದ್ಯರನ್ನು ಕರೆಸಿ ಔಷಧೋಪಚಾರ ಮಾಡಿಸಿದ. ತಾಯಿ ಚಂದ್ರಮಣಿದೇವಿ ರಾಮಕೃಷ್ಣರಿಗೆ ಹುಚ್ಚು ಬಿಡಿಸುವ ನೆಪದಲ್ಲಿ ಕಾಮಾರಪುಕರಕ್ಕೆ ಕರೆಸಿಕೊಂಡು ಮದುವೆಮಾಡಲು ನಿಶ್ಚಯಿಸಿದರು. ಜಯರಾಮ ಬಾಟಿಯದ ರಾಮಚಂದ್ರ ಮುಖ್ಯೋಪಾಧ್ಯಾಯರ ಮಗಳು ಐದು ವರ್ಷದ ಶಾರದಾಮಣಿದೇವಿಯೊಂದಿಗೆ ಇಪ್ಪತ್ತೂರು ವರ್ಷದ ರಾಮಕೃಷ್ಣರ ವಿವಾಹವಾಯಿತು. ಹೆಣ್ಣಿನ ಮೈಮೇಲಿದ್ದ ಒಡವೆಗಳು ಕಣ್ಮರೆಯಾದುದನ್ನು ಕಂಡ ವಧುವಿನ ತಂದೆ ಕಡೆಯವರು ಹುಡುಗಿಯನ್ನೇ ಎತ್ತಿಕೊಂಡು ತಮ್ಮ ಮನೆಗೆ ಹೊರಟಹೋದರಂತೆ. ನನ್ನ ಹೆಂಡತಿಯನ್ನು ಅವರು ಹೊತ್ತುಕೊಂಡು ಹೋದರೆ ಏನಾಯಿತು, ಆಗಿರುವ ಮದುವೆಯನ್ನು ರದ್ದು ಮಾಡಲಾಗುವುದೇ ಎಂದು ರಾಮಕೃಷ್ಣರು ತಾಯಿಗೆ ತಮಾಷೆ ಮಾಡಿ ಸಮಾಧಾನಪಡಿಸಿದರಂತೆ, ಇದಾದಮೇಲೆ ಒಂದೂವರೆ ವರ್ಷ ಕಾಮಾರಪುಕರದಲ್ಲಿ ಇದ್ದ ರಾಮಕೃಷ್ಣರು ಅನಂತರ ದಕ್ಷಿಣೇಶ್ವರಕ್ಕೆ ಬಂದರು.

1861ರಲ್ಲಿ ರಾಣಿ ರಾಸಮಣಿ ಸ್ವರ್ಗಸ್ಥಳಾದಳು. ಅವಳ ಅಳಿಯನಾದ ಮಥುರನಾಥ ತನ್ನ ಸಂಪತ್ತನ್ನು ರಾಮಕೃಷ್ಣರ ಸಿದ್ಧಿಸಾಧನೆಗೆ ಸದ್ವಿನಿಯೋಗ ಮಾಡಿದ. ಎರಡು ವರ್ಷಗಳು ಕಳೆದುಹೋದವು. ಒಂದು ದಿನ ಪ್ರಾತಃಕಾಲ ಯಶೋಹರ ಜಿಲ್ಲೆಯ ಕುಲೀನ ಬ್ರಾಹ್ಮಣ ವಂಶದ ಭೈರವಿ ಬ್ರಾಹ್ಮಣಿ ಎಂಬ ನಲವತ್ತು ವರ್ಷದ ಸನ್ಯಾಸಿನಿ ರಾಮಕೃಷ್ಣರ ಬಳಿಗೆ ಬಂದಳು. ಆಕೆ ವಿದ್ವಾಂಸೆ, ವೈಷ್ಣವ ಸಂಪ್ರದಾಯಕ್ಕೆ ಸೇರಿದವಳು. ಭಕ್ತಿಶಾಸ್ತ್ರದಲ್ಲಿ ಅತಿಶಯವಾದ ಪಾಂಡಿತ್ಯ ಸಂಪಾದಿಸಿದ್ದಳು. ರಾಮಕೃಷ್ಣರ ಭಾವಾವೇಶದ ಮೈಉರಿಯನ್ನು ಗಂಧಲೇಪನದಿಂದ ಉಪಚರಿಸಿ, ಇವರಿಗೆ ವೈಷ್ಣವ ಮತ್ತು ತಾಂತ್ರಿಕ ಸಾಧನೆಗಳನ್ನು ಉಪದೇಶಿಸಿದಳು. ಸಂಪೂರ್ಣ ಇಂದ್ರಿಯ ನಿಗ್ರಹವೇ ತಾಂತ್ರಿಕ ಸಾಧನೆಯ ಪರಮಗುರಿ. ಆತ್ಮನನ್ನು ಬ್ರಹ್ಮದಲ್ಲಿ ಐಕ್ಯಗೊಳಿಸುವುದೇ ಮೋಕ್ಷ. ಇದರಿಂದ ಅಣಿಮಾದಿ ಅಷ್ಟಸಿದ್ಧಿಗಳೂ ರಾಮಕೃಷ್ಣರ ಸ್ವಾಧೀನವಾದುವು.

ಹದಿನಾಲ್ಕು ವರ್ಷದ ಕುಮಾರಿ ಶಾರದಾಮಣಿದೇವಿ ಪತಿಯ ಚಿತ್ರವಿಚಿತ್ರ ಕಥೆ ಕೇಳಿ, ತಂದೆ ಮನೆಯಿಂದ ಕಾಮಾರಪುಕುರಕ್ಕೆ ಬಂದಳು. ರಾಮಕೃಷ್ಣರು ಶಾರದಾಮಣಿ ದೇವಿಯನ್ನು ಆದರದಿಂದ ಬರಮಾಡಿಕೊಂಡರು. ಸನ್ಯಾಸಗ್ರಹಣ ಮಾಡಿದ್ದರೂ ಆಜನ್ಮ ಬ್ರಹ್ಮಚರ್ಯ ವ್ರತವನ್ನು ಕೈಗೊಂಡಿದ್ದರೂ ರಾಮಕೃಷ್ಣರು ಪತ್ನಿ ಶಾರದಾಮಣಿಯನ್ನು ಕೈಬಿಡಲಿಲ್ಲ. ನಾನು ಎಲ್ಲ ಸ್ತ್ರೀಯರನ್ನು ಜಗನ್ಮಾತಾ ಸ್ವರೂಪಿಣಿಯೆಂದು ನೋಡಲು ಕಲಿತಿದ್ದೇನೆ.

ನಿನ್ನಲ್ಲಿಯೂ ನಾನು ಅದನ್ನೇ ನೋಡುತ್ತೇನೆ. ಆದರೆ ನೀನು ನನ್ನನ್ನು ಲೌಕಿಕಕ್ಕೆ (ಮಾಯೆಗೆ) ಎಳೆಯಲಾಶಿಸಿದರೆ ವಿವಾಹಧರ್ಮಕ್ಕೆ ಅನುಗುಣವಾಗಿ ನಿನ್ನಿಚ್ಛೆಯಂತೆ ನಡೆಯಲು ಸಿದ್ಧನಿದ್ದೇನೆ ಎಂದ ರಾಮಕೃಷ್ಣರ ಮಾತಿಗೆ ನಾನು ನಿಮ್ಮ ಸಹಧರ್ಮಿಣಿ. ನಿಮ್ಮನ್ನು ಸಂಸಾರಕ್ಕೆಳೆಯಲು ನಾನೆಂದೂ ಬಯಸೆನು. ನಿಮ್ಮ ಸೇವೆಯೇ ನನ್ನ ಜೀವನದ ಪೂಜೆಯಾಗಿರಲಿ ಎಂದು ಶಾರದಾಮಣಿ ಹೇಳಿದರು. ಪರಮಹಂಸರಿಗೆ ಪರಮಾನಂದವಾಯಿತು. ಸ್ವಗ್ರಾಮದಲ್ಲಿ ಆರುತಿಂಗಳು ಕಳೆಯುವ ವೇಳೆಗೆ ರಾಮಕೃಷ್ಣರ ಆರೋಗ್ಯ ಸುಧಾರಿಸಿತು, ದಕ್ಷಿಣೇಶ್ವರಕ್ಕೆ ಹಿಂತಿರುಗಿದರು.

ಮಥುರಾನಾಥನು ರಾಮಕೃಷ್ಣ ಪರಮಹಂಸರ ಜೊತೆಗೂಡಿ ಕಾಶಿ, ಪ್ರಯಾಗ, ಬೃಂದಾವನ ಮುಂತಾದ ಪವಿತ್ರಕ್ಷೇತ್ರಗಳಿಗೆ ತೀರ್ಥಯಾತ್ರೆಗೆ ಹೋಗಿಬಂದ. ಪರಮಹಂಸರು ದರಿದ್ರ ನಾರಾಯಣರ ಸೇವೆಯನ್ನು ಮಾಡಿದ ಪ್ರಸಂಗಗಳು ಜರುಗಿದವು. 1871ರಲ್ಲಿ ಮಥುರನಾಥ ತೀರಿಕೊಂಡ.

1872ರಲ್ಲಿ ದಕ್ಷಿಣೇಶ್ವರಕ್ಕೆ ಬಂದ ಶಾರದಾಮಣಿದೇವಿಗೆ ಪರಮಹಂಸರೊಂದಿಗೆ ಅಧ್ಯಾತ್ಮ ಸಾಧನೆಯಲ್ಲಿ ನೇರವಾದರು. ಪರಮಹಂಸರಿಂದ ಪೂಜಿತಳಾದ ಶಾರದಾದೇವಿ ಲೋಕಕ್ಕೆಲ್ಲ ಮಹಾಮಾತೆಯಾದರು. ರಾಮಕೃಷ್ಣರ ಪ್ರಥಮ ಶಿಷ್ಯೆ ಕೂಡ ಆದರು.

ರಾಮಕೃಷ್ಣ ಪರಮಹಂಸರ ಆಧ್ಯಾತ್ಮಜೀವನದಲ್ಲಿ ಮುಮುಕ್ಷುಗಳು, ಸುಧಾರಕರು, ಶಿಷ್ಯೋತ್ತಮರು ಸೇರಿದ್ದಾರೆ. ಪರಮಹಂಸರೇ ಕೆಲವರನ್ನು ಹೋಗಿ ಕಂಡರೆ, ಕೆಲವರು ಈ ಗುರುದೇವನಿದ್ದೆಡೆಗೆ ಬಂದು ದೀಕ್ಷೆ ಪಡೆದಿದ್ದಾರೆ. ರಾಮಕೃಷ್ಣರು ಈಶ್ವರನ ಅಸಂಖ್ಯ ಕಿರಣಗಳಲ್ಲಿ ತಮಗೆ ಕಾಣದುದು ಬೇರೆಯವರಿಗೆ ಕಂಡಿರಬಹುದೆಂಬ ಭಾವನೆಯಿಂದ ಸಮಕಾಲೀನರನ್ನು ಸಂದರ್ಶಿಸಿದ್ದಾರೆ. ಒಬ್ಬಿಬ್ಬರನ್ನು ಪರೀಕ್ಷೆಗೂ ಗುರಿಮಾಡಿದ್ದಾರೆ. ಒರೆಗಲ್ಲಿಗೆ ಹಚ್ಚಿ ನೋಡದೆ ಇವರು ಯಾವುದನ್ನೂ ಚಿನ್ನವೆಂದು ಒಪ್ಪುತ್ತಿರಲಿಲ್ಲ. ಶ್ರೀಮಂತನೂ ಶಿಷ್ಟಾಚಾರಿಯೂ ಆದ ಮಹರ್ಷಿ ದೇವೇಂದ್ರನಾಥ ಟಾಗೂರ್, ಮಹಾವ್ಯಕ್ತಿ ದಯಾನಂದ ಸರಸ್ವತಿ, ಮಹಾಪಂಡಿತ ಈಶ್ವರಚಂದ್ರ ವಿದ್ಯಾಸಾಗರ, ಪ್ರಸಿದ್ಧ ಕಾದಂಬರಿಕಾರ ಬಂಕಿಮಚಂದ್ರ ಚಟ್ಟೋಪಾಧ್ಯಾಯ, ವಿಚಕ್ಷಣಪಂಡಿತ ಶಶಿಧರ ಮೊದಲಾದವರು ಪರಮಹಂಸರ ಉಪದೇಶಾಮೃತವನ್ನು ಸವಿದವರು. ರಾಮಚಂದ್ರದತ್ತ, ಮನೋಹರಮಿತ್ರ, ಸುರೇಂದ್ರಮಿತ್ರ, ಪ್ರಸಿದ್ಧ ನಾಟಕಕಾರ ಗಿರೀಶಚಂದ್ರ, ದುರ್ಗಾಚರಣನಾಗ ಮೊದಲಾದವರು ಗುರುದೇವ ಸಂಸಾರಿಶಿಷ್ಯರಲ್ಲಿ ಅದ್ವಿತೀಯರು. ಕೋಲ್ಕೊತ್ತದ ವಿದ್ಯಾಸಾಗರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯನೂ ಬ್ರಹ್ಮಸಮಾಜದ ಸದಸ್ಯನೂ ಆದ ಮಹೇಂದ್ರನಾಥಗುಪ್ತ ಅಗ್ರಮಾನ್ಯ ಶಿಷ್ಯ. 1881ರಲ್ಲಿ ಮಹಾಜ್ಯೋತಿಯ ಬಳಿಗೆ ಮತ್ತೊಂದು ದಿವ್ಯಜ್ಯೋತಿ ಆಗಮಿಸಿದಂತೆ ಬಂದ ಸ್ವಾಮಿ ವಿವೇಕಾನಂದ (ನರೇಂದ್ರನಾಥ)–ಇವರು ರಾಮಕೃಷ್ಣ ಪರಮಹಂಸರ ಸಂನ್ಯಾಸಿ ಶಿಷ್ಯರಲ್ಲಿ ಅಗ್ರಮಾನ್ಯರಾದವರು. ಪರಮಹಂಸರಿಂದ ಮಂತ್ರದೀಕ್ಷೆ ಕೈಕೊಂಡು ಶಾರದಾದೇವಿಯ ಅನವರತ ಸಂಗಿನಿಯಾಗಿ, ಸ್ತ್ರೀಯರಿಗೆ ವಿದ್ಯಾಸಂಸ್ಥೆ ಸ್ಥಾಪಿಸಿದ ಜೋಗಿನ್‌ಮಾ, ಗೋಲಾಸ್‌ಮಾ ಗೌರಿದಾಸಿ, ಅಘೋರಮಣಿದೇವಿ (ಗೋಪಾಲನ ತಾಯಿ)–ಇವರು ಅನುಗ್ರಹಿತ ಸ್ತ್ರೀಭಕ್ತೆಯರು.

ದಕ್ಷಿಣೇಶ್ವರದಲ್ಲಿ ರಾಮಕೃಷ್ಣ ಪರಮಹಂಸರು ಧರ್ಮಪಿಪಾಸುಗಳ ಹೃದಯತೃಷ್ಣೆಯನ್ನು ತಮ್ಮ ವಚನಾಮೃತದಿಂದ ನೀಗಲು ಅನವರತ ದುಡಿದರು. ಸಾಮತಿ, ಕಥೆ, ಹಾಸ್ಯ ಮತ್ತು ತತ್ತ್ವಬೋಧೆಗಳಿಂದ ಶಿಷ್ಯರಿಗೆ ದರ್ಶಕರಿಗೆ ಹೃದಯಭಾರವಾಗದಂತೆ ತತ್ತ್ವೋಪದೇಶ ಮಾಡಿದರು. ವಿವೇಕಾನಂದರು ತಾವು ಪರಮಹಂಸರ ಪ್ರೇಮದಾಸ ಎಂದು ಹೇಳಿಕೊಂಡಿದ್ದಾರೆ. ರಾಮಕೃಷ್ಣರು ವಿಮರ್ಶಾತ್ಮಕ ಬುದ್ಧಿಯನ್ನು ಚೆನ್ನಾಗಿ ರೂಢಿಸಿಕೊಳ್ಳಬೇಕೆಂದೂ ಹೇಳುತ್ತಿದ್ದರು. ನಾನು ಹಿಂದು ಕ್ರೈಸ್ತ ಇಸ್ಲಾಂ ಧರ್ಮಗಳನ್ನೂ ಇನ್ನುಳಿದ ಅನೇಕ ವಿಧವಿಧವಾದ ಪಂಥಗಳನ್ನೂ ಸಾಧಿಸಿದ್ದೇನೆ. ಭಿನ್ನ ಭಿನ್ನ ಮಾರ್ಗಗಳಿಂದ ಸರ್ವರೂ ಏಕಮಾತ್ರ ಸತ್ಯದೆಡೆಗೆ ಹೋಗುತ್ತಿದ್ದಾರೆ. ನೀವು ಎಲ್ಲ ಮತಗಳನ್ನೂ ಪರೀಕ್ಷಿಸಬೇಕು. ಒಂದುಸಾರಿಯಾದರೂ ಎಲ್ಲ ಹಾದಿಗಳಲ್ಲಿಯೂ ತಿರುಗಾಡಿ ಬರಬೇಕು. ಹಿಂದುಗಳು, ಮುಸಲ್ಮಾನರು, ಬ್ರಹ್ಮಸಮಾಜಗಳು, ವೈಷ್ಣವ ಪಂಥಿಗಳು ಎಲ್ಲರೂ ಸುಮ್ಮನೆ ಕಚ್ಚಾಡುತ್ತಿದ್ದಾರೆ. ಯಾವನು ಕೃಷ್ಣನೋ ಅವನೇ ಶಿವನು; ಅದೇ ಕಾಳಿ, ಆದಿಶಕ್ತಿ; ಆತನೇ ಯೇಸು, ಆತನೇ ಅಲ್ಲಾ. ಒಬ್ಬ ರಾಮನಿಗೆ ನೂರು ನಾಮಗಳು. ಸರೋವರಕ್ಕೆ ಅನೇಕ ಘಟ್ಟಗಳಿವೆ ಒಂದು ಘಟ್ಟದಲ್ಲಿ ಹಿಂದುಗಳು ಕಲಶಗಳಲ್ಲಿ ನೀರು ಮೊಗೆದು ಅದನ್ನು ಜಲ ಎಂದು ಕರೆಯುತ್ತಾರೆ; ಮತ್ತೊಂದರಲ್ಲಿ ಮುಸಲ್ಮಾನರು ಪಕಾಲಿಗಳಲ್ಲಿ ನೀರು ತುಂಬಿಕೊಂಡು ಪಾನಿ ಎಂದು ಕರೆಯುತ್ತಾರೆ. ಮೂರನೆಯದರಲ್ಲಿ ಕ್ರೈಸ್ತರು ವಾಟರ್ ಎಂದು ಕರೆಯುತ್ತಾರೆ. ಬೇರೆ ಬೇರೆ ಹೆಸರುಗಳಿದ್ದರೂ ವಸ್ತುವೊಂದೇ; ಆ ಒಂದೇ ವಸ್ತುವನ್ನೇ ಎಲ್ಲರೂ ಅರಸುತ್ತಿರುವುದು. ಭೇದವೆಂಬುದೆಲ್ಲ ಹೆಸರಿನಲ್ಲಿ, ರುಚಿಯಲ್ಲಿ. ಭಾವದಲ್ಲಿ ಒಬ್ಬೊಬ್ಬನೂ ಅವನವನ ದಾರಿಯನ್ನೇ ಹಿಡಿದು ನಡೆಯಲಿ. ಪರಮಹಂಸರ ದೃಷ್ಟಿಯಲ್ಲಿ ದ್ವೈತ ವಿಶಿಷ್ಟಾದ್ವೈತ ಅದ್ವೈತಗಳು ಪರಸ್ಪರ ವಿರೋಧವಾಗಿರಲಿಲ್ಲ, ಒಂದು ಇನ್ನೊಂದಕ್ಕೆ ಮೆಟ್ಟಿಲಾಗಿತ್ತು. ಬ್ರಹ್ಮವೇ ಶಕ್ತಿ, ಶಕ್ತಿಯೇ ಬ್ರಹ್ಮ. ನೇತಿ ನೇತಿ ಎಂದು ಹೇಳಿದಂತೆಯೇ ಇತಿ ಇತಿ ಎಂದೂ ಸಾರಿದರು. ಅದ್ವೈತವು ಸಾಧನೆಯ ಕಟ್ಟಕಡೆಯ ಮಾತು ಅಥವಾ ಮೌನ. ಅದನ್ನು ಸಮಾಧಿಯಲ್ಲಿ ಅನುಭವಿಸಬೇಕು. ಏಕೆಂದರೆ ಅದು ಮನಸ್ಸಿಗೂ ಮಾತಿಗೂ ಮೀರಿದ್ದು; ಮನಸ್ಸು ಬುದ್ಧಿಗಳಿಗೆ ವಿಶಿಷ್ಟಾದ್ವೈತವೇ ತುತ್ತತುದಿಯ ಸಿದ್ಧಿ; ಸಿದ್ಧಿ ಸಾಧಕನ ಪರಮಧ್ಯೇಯ ಹೊನ್ನು, ಹೆಣ್ಣು, ಮಣ್ಣುಗಳ ತ್ಯಾಗ. ಕಾಮಿನಿಯ ತ್ಯಾಗವೆಂದರೆ ಸ್ತ್ರೀದ್ವೇಷ ಅಥವಾ ತಿರಸ್ಕಾರ ಎಂದಲ್ಲ. ಕಾಮಿನೀತ್ಯಾಗವೆಂದರೆ ಕಾಮತ್ಯಾಗ ಅಥವಾ ಇಂದ್ರಿಯ ನಿಗ್ರಹ. ಪುರುಷರಿಗೆ ಕಾಮಿನೀತ್ಯಾಗವನ್ನು ಬೋಧಿಸಿದರೆ ಸ್ತ್ರೀಯರಿಗೆ ಪುರುಷತ್ಯಾಗವನ್ನು ಬೋಧಿಸಿರುವರು. ಹೊನ್ನಿನ ತ್ಯಾಗವೆಂದರೆ ದಾರಿದ್ರ್ಯಲೋಲುಪತೆ ಎಂದಲ್ಲ; ಐಶ್ವರ್ಯವನ್ನು ಸನ್ಮಾರ್ಗದಿಂದ ಆರ್ಜಿಸಿ ಸದುಪಯೋಗಪಡಿಸಬೇಕು. ದೇವರು ಕೊಟ್ಟ ಧನವನ್ನು ದೇವರ ಸೇವೆಗೆ ಉಪಯೋಗಿಸಬೇಕು. ದುಃಖಿಗಳ ಸೇವೆಯೂ ದೇವರ ಸೇವೆಯೇ. ಹೀಗೆ ದರಿದ್ರ ನಾರಾಯಣನ ಸೇವೆ ಪರಮಹಂಸರ ಬೋಧನೆಯಲ್ಲಿ ಮುಖ್ಯವಾದುದಾಗಿತ್ತು.

ಲೋಕಕಲ್ಯಾಣದ ಆಧ್ಯಾತ್ಮಸಾಧನೆಯಲ್ಲಿ ತಮ್ಮ ಇಡೀ ಬದುಕನ್ನು ತೊಡಗಿಸಿಕೊಂಡ ಪರಮಹಂಸರು ಗಂಟಲ ಬೇನೆಗೆ ತುತ್ತಾಗಿ 1886 ಆಗಸ್ಟ್ 16ರಂದು ಇಹಲೋಕವನ್ನು ತ್ಯಜಿಸಿದರು. (ಎಲ್.ಆರ್.)

**ರಾಮಕೃಷ್ಣ ಮಿಷನ್:** ಸಾಮಾಜಿಕ ಸೇವೆಯಲ್ಲಿ ನಿರತವಾದ ಭಾರತದ ಒಂದು ಧಾರ್ಮಿಕ ಸಂಸ್ಥೆ. ಕಲ್ಕತ್ತದಲ್ಲಿ 1897 ಮೇ 1ರಂದು ಸ್ವಾಮಿ ವಿವೇಕಾನಂದರು ಈ ಸಂಸ್ಥೆಯನ್ನು ಸ್ಥಾಪಿಸಿದರು. ರಾಮಕೃಷ್ಣ ಪರಮಹಂಸರ ಬೋಧನೆಗಳನ್ನು ಪ್ರಚಾರಮಾಡುವುದು ಮತ್ತು ಭಾರತೀಯರ ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸುವುದು ಮತ್ತು ಸಾಮಾಜಿಕ ಕಾರ್ಯದಲ್ಲಿ ತೊಡಗುವುದು. ಈ ಸಂಸ್ಥೆಯ ಮುಖ್ಯ ಉದ್ದೇಶಗಳು.

ರಾಮಕೃಷ್ಣರ ನಿಧನದ ಬಳಿಕ(1886) ಅವರ ಅವಿವಾಹಿತ ಶಿಷ್ಯರಲ್ಲಿ ಕೆಲವರು ತಮ್ಮ ಕುಟುಂಬ ಜೀವನಕ್ಕೆ ಹಿಂದಿರುಗದೆ ತ್ಯಾಗ ಮತ್ತು ಸಾಧನೆಯ ಜೀವನವನ್ನೇ ಮುಂದುವರಿಸಲು ನಿರ್ಧರಿಸಿದರು. ಕೋಲ್ಕೊತ್ತದ ಬಾರಾನಗರ ಎಂಬಲ್ಲಿ ಇವರೆಲ್ಲ ಕಲೆತು ಕಠೋರ ತಪಸ್ಸಿನ ಜೀವನ ಪ್ರಾರಂಭಿಸಿದರು. ರಾಮಕೃಷ್ಣರ ಭಕ್ತರು ಇವರಿಗೆಲ್ಲ ಆರ್ಥಿಕ ನೆರವು ನೀಡುತ್ತಿದ್ದರು. ಹೀಗೆ ಸನ್ಯಾಸಿ ಮತ್ತು ಭಕ್ತರ ನಿಕಟ ಬಾಂಧವ್ಯ ಮೊದಲಾಯಿತು. ಇವರಿಗೆಲ್ಲ ಸ್ಫೂರ್ತಿಯ ಮುಂದಾಳು ನರೇಂದ್ರ(ವಿವೇಕಾನಂದ). ಬಾರಾನಗರದ ಪಾಳುಮನೆಯನ್ನೇ ರಾಮಕೃಷ್ಣ ಸಂಘದ ಪ್ರಥಮ ಸನ್ಯಾಸಿ ಮಠವೆಂದು ಕರೆಯಬಹುದಾಗಿದೆ.

1897 ಮೇ 1ರಂದು ರಾಮಕೃಷ್ಣರ ಆಪ್ತ ಭಕ್ತರಾದ ಬಲರಾಮಬೋಸರ ಮನೆಯಲ್ಲಿ ಸನ್ಯಾಸಿ ಮತ್ತು ಭಕ್ತರು ಒಂದೆಡೆ ಸೇರಿದರು. ಸ್ವಾಮಿ ವಿವೇಕಾನಂದರ ನೇತೃತ್ವದ ಈ ಸಭೆಯಲ್ಲಿ ರಾಮಕೃಷ್ಣ ಮಹಾಸಂಘ ಸ್ಥಾಪನೆಯ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಸಂಘದ ಮೂಲ ಉದ್ದೇಶಗಳು ಎರಡು: 1 ರಾಮಕೃಷ್ಣರ ಜೀವನವನ್ನು ಆದರ್ಶವಾಗಿಟ್ಟುಕೊಂಡು ತ್ಯಾಗ ಮತ್ತು ಆಧ್ಯಾತ್ಮಿಕ ಸಾಧನೆಯ ಪರಿಶುದ್ಧ ಜೀವನವನ್ನು ನಡೆಸುವ ಸನ್ಯಾಸಿ ವೃಂದವನ್ನು ಸೃಷ್ಟಿಸುವುದು. 2 ಗೃಹಸ್ಥ ಭಕ್ತರ ಸಹಾಯದೊಂದಿಗೆ ಜಾತಿ, ಮತ, ಜನಾಂಗ,

ಲಿಂಗಭೇದಗಳಿಲ್ಲದೆ ಸಮಾಜದ ಬೇರೆ ಬೇರೆ ಸೇವಾಕಾರ್ಯಗಳಲ್ಲಿ ತೊಡಗುವುದು. ತನ್ನ ಮೋಕ್ಷ ಸಾಧನೆಯ ಜೊತೆಗೆ ಜಗತ್ತಿನ ಹಿತಸಾಧನೆಗೆ ಶ್ರಮಿಸಬೇಕು ಎಂಬ ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಸಂಘದ ಧ್ಯೇಯೋದ್ದೇಶ ಅಡಗಿದೆ. ರಾಮಕೃಷ್ಣ ಮಹಾಸಂಘಕ್ಕೆ ಎರಡು ಮುಖ್ಯ ಶಾಖೆಗಳಿವೆ: ಒಂದು ರಾಮಕೃಷ್ಣ ಮಠ ಮತ್ತೊಂದು ರಾಮಕೃಷ್ಣ ಮಿಷನ್. ರಾಮಕೃಷ್ಣ ಮಠದ ಕಾರ್ಯವ್ಯಾಪ್ತಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳಿಗೆ ಸೀಮಿತವಾಗಿದೆ. ರಾಮಕೃಷ್ಣ ಮಿಷನ್ ಶಿಕ್ಷಣವೇ ಮೊದಲಾದ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ನಿರತವಾಗಿದೆ. ಪ್ರಪಂಚದಾದ್ಯಂತ ಈ ಎರಡೂ ಶಾಖೆಗಳ 135 ಕೇಂದ್ರಗಳೂ 30 ಉಪಕೇಂದ್ರಗಳೂ ಇವೆ. ಇವುಗಳ ಪ್ರಧಾನ ಕೇಂದ್ರ ಕೋಲ್ಕೊತ್ತದ ಸಮೀಪವಿರುವ ಬೇಲೂರು ಮಠ.

ಬೇಲೂರು ಮಠ, ಕೋಲ್ಕೊತ್ತ

ಮಹಾಸಂಘದ ಸದಸ್ಯರು ಆಧ್ಯಾತ್ಮಿಕ ಸಾಧನೆಯ ವಿಷಯದಲ್ಲಿ ಅನುಸರಿಸುವುದು ರಾಮಕೃಷ್ಣರ ಸಮನ್ವಯ ತತ್ತ್ವವನ್ನು. ಯಾವುದೇ ಧರ್ಮ, ಮತ ಮತ್ತು ಸಂತರ ಉಪಯುಕ್ತ ಸಲಹೆಗಳನ್ನು ಇವರು ಉದಾರ ಮನೋಭಾವದಿಂದ ಸ್ವೀಕರಿಸುತ್ತಾರೆ. ಸಾಧನೆ, ಕರ್ಮ ಮತ್ತು ಶಾಸ್ತ್ರಾಧ್ಯಯನ ಈ ಮೂರಕ್ಕೂ ಸಮಾನವಾದ ಪ್ರಾಧಾನ್ಯತೆ ಕೊಡಲಾಗಿದೆ. ದುಡಿಮೆಯೇ ಪ್ರಾರ್ಥನೆ, ಆತ್ಮನಿಗ್ರಹವೇ ತ್ಯಾಗ, ಇಡೀ ಜೀವನವೇ ಧರ್ಮ–ಇವು ರಾಮಕೃಷ್ಣ ಮಹಾಸಂಘದ ಆದರ್ಶಗಳು. ಪ್ರತಿಯೊಬ್ಬ ವ್ಯಕ್ತಿಯ ಸರ್ವತೋಮುಖ ಬೆಳೆವಣಿಗೆಯ ಮೂಲಸೂತ್ರವಾದ ನಾಲ್ಕು ಯೋಗಗಳ ಸಮನ್ವಯ ಮಾರ್ಗವನ್ನು ಸಂಘವು ಅನುಸರಿಸುತ್ತದೆ. ಇದನ್ನು ಸಾಂಕೇತಿಕವಾಗಿ ಪ್ರತಿನಿಧಿಸುವ ಮಹಾಸಂಘದ ಚಿಹ್ನೆ ಅಥವಾ ಲಾಂಛನ ರಚಿಸಿದವರು ಸ್ವಾಮಿ ವಿವೇಕಾನಂದರು. ಈ ಚಿಹ್ನೆಯಲ್ಲಿ ಕಾಣುವ ಸರೋವರದ ಅಲೆಗಳು ಕರ್ಮವನ್ನೂ ಕಮಲವು ಭಕ್ತಿಯನ್ನೂ ಉದಯಿಸುತ್ತಿರುವ ಸೂರ್ಯ ಜ್ಞಾನವನ್ನೂ ಸುತ್ತಿಕೊಂಡಿರುವ ಸರ್ಪ ಯೋಗ ಹಾಗೂ ಜಾಗೃತ ಕುಂಡಲಿನೀ ಶಕ್ತಿಯನ್ನೂ ಪ್ರತಿನಿಧಿಸುತ್ತವೆ. ಹಂಸ ಪರಮಾತ್ಮನ ಪ್ರತೀಕ. ಕರ್ಮ, ಭಕ್ತಿ, ಜ್ಞಾನ ಮತ್ತು ಯೋಗ ಇವುಗಳ ಸಮನ್ವಯದ ಮೂಲಕ ಪರಮಾತ್ಮನ ದರ್ಶನ ಲಾಭವಾಗುತ್ತದೆ ಎಂಬುದು ಅದರ ಭಾವಾರ್ಥ. ಮಹಾಸಂಘ ಮತೀಯವಾದುದಲ್ಲ. ಜಾತಿ, ಮತ ಲಿಂಗಭೇದಗಳಿಲ್ಲದೆ ಎಲ್ಲರನ್ನೂ ಅದು ಒಳಗೊಂಡಿದೆ. ಕೋಮು ಸಂಬಂಧದ ಚಟುವಟಿಕೆಗಳಲ್ಲಿ ಈ ಸಂಸ್ಥೆ ಭಾಗವಹಿಸುವುದಿಲ್ಲ. ಯಾವುದೇ ರೀತಿಯ ಪವಾಡಗಳಿಗೂ ರಹಸ್ಯ ಸಿದ್ಧಾಂತಗಳಿಗೂ ಸಂಘ ಮನ್ನಣೆ ನೀಡುವುದಿಲ್ಲ. ಎಷ್ಟೇ ಸಾಮಾಜಿಕ ಸೇವೆಯಲ್ಲಿ ಕಾರ್ಯ ನಿರತವಾಗಿದ್ದರೂ ರಾಜಕೀಯ ರಂಗದೊಂದಿಗೆ ಸಂಘ ಯಾವ ಸಂಬಂಧವನ್ನೂ ಇಟ್ಟುಕೊಂಡಿಲ್ಲ. ಸಂಘ ಆಧುನಿಕ ಮನೋಭಾವವನ್ನು ಹೊಂದಿದ್ದು ವೈಜ್ಞಾನಿಕ ಮತ್ತು ವೈಚಾರಿಕ ಪ್ರವೃತ್ತಿಯನ್ನು ಅನುಸರಿಸುತ್ತದೆ. ಮೂಢನಂಬಿಕೆ, ಮಡಿವಂತಿಕೆ, ಜಾತಿನಿಯಮ–ಇವುಗಳಿಗೆ ಸಂಘದಲ್ಲಿ ಅವಕಾಶವಿಲ್ಲ. ಶಿವಜ್ಞಾನೇ ಜೀವ ಸೇವಾ ಎಂಬ ರಾಮಕೃಷ್ಣರ ಸೂತ್ರರೂಪದ ಹೇಳಿಕೆಯೆ ಮಹಾಸಂಘದ ಸೇವಾ ಕಾರ್ಯಗಳ ನಿರ್ದಿಷ್ಟ ತತ್ತ್ವವಾಗಿದೆ. ರಾಮಕೃಷ್ಣ ಮಹಾಸಂಘದ ಸಾಮಾಜಿಕ ಚಟುವಟಿಕೆಗಳಲ್ಲಿ ಶಿಕ್ಷಣ ಕ್ಷೇತ್ರ ಪ್ರಮುಖವಾದುದು. ಸ್ವಾಮಿ ವಿವೇಕಾನಂದರ ಶಿಕ್ಷಣತತ್ತ್ವವನ್ನು ಅನುಸರಿಸುವುದು ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಬೆಳೆವಣಿಗೆಯೆ ಇದರ ಪ್ರಧಾನ ಗುರಿ. ದೇಶದಾದ್ಯಂತ ನೂರಾರು ಆದರ್ಶ ಶಿಕ್ಷಣ ಸಂಸ್ಥೆಗಳನ್ನು ಸಂಘ ನಡೆಸುತ್ತಿದೆ. ವಿವಿಧ ಪದವಿ ಕಾಲೇಜುಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ವೈದ್ಯಕೀಯ, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ಅನಾಥಾಶ್ರಮಗಳು, ವಯಸ್ಕರ ಶಿಕ್ಷಣ ಕೇಂದ್ರಗಳು, ಕೃಷಿ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು ಸೇವಾಕಾರ್ಯದಲ್ಲಿ ಸೇರಿವೆ. ಭಾರತದ ವಿವಿಧೆಡೆ 655 ಶಿಕ್ಷಣ ಸಂಸ್ಥೆಗಳು ಕೆಲಸ ಮಾಡುತ್ತಿವೆ.

ಇಂಗ್ಲಿಷ್, ದೇಶೀಯ ಮತ್ತು ವಿದೇಶಿಯ ಭಾಷೆಗಳಲ್ಲಿ ಪ್ರಮಾಣಭೂತವಾದ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಲಾಗುತ್ತಿದೆ. ಉಪನಿಷತ್, ಭಗವದ್ಗೀತೆ ಮುಂತಾದ ಗ್ರಂಥಗಳ ಪ್ರಕಟಣೆ, ಪಾರಾಯಣಾದಿಗಳನ್ನೂ ಮಾಡಲಾಗುತ್ತಿದೆ. ರಾಮಕೃಷ್ಣ, ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನ ಸಂದೇಶಗಳನ್ನೊಳಗೊಂಡ ಕೃತಿಶ್ರೇಣಿಗಳನ್ನು ಪ್ರಕಟಿಸಲಾಗಿದೆ. ಸಂಘಕ್ಕೆ ಸೇರಿದಂತೆ ಒಟ್ಟು 16 ಪ್ರಕಟಣಾ ಕೇಂದ್ರಗಳಿವೆ. ಇವುಗಳಲ್ಲಿ ಕೋಲ್ಕೊತ್ತ ಮತ್ತು ಚೆನ್ನೈನಲ್ಲಿರುವ ಕೇಂದ್ರಗಳು ವಿಶೇಷವಾಗಿ ಇಂಗ್ಲಿಷ್ ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಉಳಿದ ಕೇಂದ್ರಗಳು ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತವೆ. ಇಂಗ್ಲಿಷ್ ಮತ್ತು ಇತರ ದೇಶಭಾಷೆಗಳಲ್ಲಿ ಅನೇಕ ಧಾರ್ಮಿಕ ಪತ್ರಿಕೆಗಳನ್ನೂ ಪ್ರಕಟಿಸಲಾಗುತ್ತಿದೆ. ಇಂಥ 15 ಮಾಸಪತ್ರಿಕೆಗಳು ಭಾರತದಲ್ಲಿ ಹೆಚ್ಚಿನ ಜನಪ್ರಿಯತೆ ಗಳಿಸಿವೆ.

ಸ್ವಾಮಿ ವಿವೇಕಾನಂದರು ಆಶಿಸಿದ್ದಂತೆ ಅವರ ನಿಧನದ ಬಳಿಕ ಸ್ತ್ರೀಯರಿಗಾಗಿ ಶಾರದಾ ಮಠ ಪ್ರಾರಂಭವಾಯಿತು (1953). ಇದರ ಪ್ರಧಾನ ಕೇಂದ್ರ ಕೋಲ್ಕೊತದ ದಕ್ಷಿಣೇಶ್ವರದಲ್ಲಿದೆ. ರಾಮಕೃಷ್ಣ ಮಹಾಸಂಘದ ಬಗೆಗಿನ ಎಲ್ಲ ನಿಯಮಗಳೂ ಇದಕ್ಕೂ ಅನ್ವಯವಾಗುತ್ತದೆ.

ನ್ಯೂಯಾರ್ಕಿನ ವೇದಾಂತ ಸೊಸೈಟಿ ಅಮೆರಿಕದಲ್ಲಿರುವ ರಾಮಕೃಷ್ಣ ಮಿಷನ್‌ನ ಅತ್ಯಂತ ಹಳೆಯ ಶಾಖೆ. ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿದ್ದಾಗ (1893) ನಡೆಸಿದ ಉಪನ್ಯಾಸಗಳ ಬಳಿಕ ಈ ಸಂಸ್ಥೆ ಅಸ್ತಿತ್ವಕ್ಕೆ ಬಂತು. 1898 ರಲ್ಲಿ ರಾಮಕೃಷ್ಣ ಮಿಷನ್ನಿನ ಅಂಗಸಂಸ್ಥೆಯಾಯಿತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಭಾರತೀಯ ಧರ್ಮವನ್ನು ಪ್ರಚಾರಪಡಿಸುವಲ್ಲಿ ಈ ಸಂಸ್ಥೆಯ ಪಾತ್ರ ಹಿರಿದಾದುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ಕೇಂದ್ರಗಳ ಪ್ರಧಾನ ಉದ್ದೇಶ ರಾಮಕೃಷ್ಣ ಪರಮಹಂಸರ ಬೋಧನೆಗಳನ್ನು ಪ್ರಚುರಪಡಿಸುವುದೇ ಆಗಿದೆ. ಭಾರತದಲ್ಲಿರುವ ರಾಮಕೃಷ್ಣ ಮಿಷನ್‌ನ 86 ಮಠಗಳು ವೈದ್ಯಕೀಯ, ಶೈಕ್ಷಣಿಕ ಹಾಗೂ ದೀನದಲಿತರ ಸೇವೆಯಲ್ಲಿ ತೊಡಗಿವೆ. (ಎಲ್.ಆರ್.)

**ರಾಮದಾಸ:** 1608–81. ಮಹಾರಾಷ್ಟ್ರದ ಒಬ್ಬ ಸಂತ. ಸಮರ್ಥ ರಾಮದಾಸ ಎಂದು ಪ್ರಸಿದ್ಧನಾದವನು. ಪೂರ್ವಾಶ್ರಮದ ಹೆಸರು ನಾರಾಯಣ. ಈತನ ಪೂರ್ವಜರು ಠೋಸರ್ ಮನೆತನದವರು, ತಂದೆ ಸೂರ್ಯಾಜಿ ಪಂತ ಠೋಸರ್, ತಾಯಿ ರಾಣೂಬಾಯಿ; ಸಹೋದರ ಗಂಗಾಧರ. ಬಾಲ್ಯದಲ್ಲಿ ರಾಮದಾಸ ಬಹಳ ತುಂಟನಾಗಿದ್ದ. ಅಧ್ಯಯನದಲ್ಲಿ ಚುರುಕಾಗಿದ್ದರೂ ತುಂಟತನ ಹೆಚ್ಚಾಗಿತ್ತು. ಈತನ ಜನ್ಮಸ್ಥಳ ಜಾಂಬಗಾವ್. ಅಲ್ಲಿಯ ಆಂಜನೇಯ ಸ್ವಾಮಿ ಈತನ ಆರಾಧ್ಯದೇವತೆ. ಅಲ್ಲಿಯೇ ಈತನಿಗೆ ರಾಮನ ದರ್ಶನವಾಯಿತೆಂದು ಹೇಳಲಾಗಿದೆ. ಮದುವೆ ಮಾಡಿದರೆ ಮಗನ ತುಂಟತನ ಕಡಿಮೆಯಾಗಬಹುದೆಂದು ತಾಯಿ ರಾಣೂಬಾಯಿ ಮದುವೆಯನ್ನು ಏರ್ಪಡಿಸಿದಳು. ಮದುವೆಯ ಮಂಟಪದಲ್ಲಿ ಮಂಗಳಾಷ್ಟಕ ಆರಂಭವಾಗಿ ದ್ವಿಜರು ಸುಮುಹೂರ್ತಾ ಸಾವಧಾನ ಎನ್ನುತ್ತಿದ್ದಂತೆಯೆ ನಾರಾಯಣ ಲಗ್ನಮಂಟಪದಿಂದ ಹೊರಗೆ ಹೊರಟುಹೋದ. ಗೋದಾವರಿ–ನಂದಿನಿ ಸಂಗಮ ಕ್ಷೇತ್ರ, ನಾಸಿಕ್ ಮುಂತಾದ ಅನೇಕ ಕಡೆಗಳಲ್ಲಿ ನಿಂತು ತಪಸ್ಸನ್ನಾಚರಿಸಿದ. ಗೋದಾವರಿ ತೀರದಿಂದ ಹಿಮಾಲಯದ ಬದರೀ ಕ್ಷೇತ್ರದವರೆಗೆ ಸಂಚಾರಮಾಡಿ ಅಲ್ಲಿಂದ ದಕ್ಷಿಣದ ಎಲ್ಲ ಪ್ರಸಿದ್ಧಕ್ಷೇತ್ರಗಳಿಗೂ ಹೋಗಿ ತಾಯಿಯ ದರ್ಶನಕ್ಕೆಂದು ಪುನಃ ಜಾಂಬಗಾವ್‌ಗೆ ಬಂದ. ವಯೋವೃದ್ಧೆ ತಾಯಿಯ ದರ್ಶನ ಹಾಗೂ ಆಕೆಯ ಆಶೀರ್ವಾದ ಪಡೆದು ಮತ್ತೆ ಹೊರಟು ಕೃಷ್ಣಾತೀರದ ಅನೇಕ ಸ್ಥಳಗಳಲ್ಲಿ ಆಂಜನೇಯ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಲ್ಲದೆ ಜಾಫಳ್ ಗ್ರಾಮದಲ್ಲಿ ರಾಮಮಂದಿರವನ್ನು ಕಟ್ಟಿಸಿ ಅಲ್ಲಿಯೇ ನಿಂತ. ಈ ರಾಮಮಂದಿರಕ್ಕೆ ಶಿವಾಜಿ ಮಹಾರಾಜ ಹಾಗೂ ಆದಿಲ್ ಶಾಹಿ ರಾಜರು ಮತ್ತು ಅನೇಕ ಧನಿಕರು ದಾನದತ್ತಿಗಳನ್ನು ಕೊಟ್ಟಿದ್ದಾರೆ.

ಏಕದೇವತಾ ಉಪಾಸನೆಯನ್ನೂ ಭಕ್ತಿಮಾರ್ಗದ ಮೂಲಕ ಪರಮಾತ್ಮನ ಕಡೆಗೆ ಚಿತ್ತವನ್ನು ಹರಿಸಲು ಅವಶ್ಯವಾದ ಪದ್ಧತಿಯನ್ನೂ ನಿರೂಪಿಸಿದ. ಇದನ್ನು ರಾಮದಾಸೀ ಸಂಪ್ರದಾಯ, ಶ್ರೀ ಸಂಪ್ರದಾಯ, ಸಮರ್ಥಸಂಪ್ರದಾಯ, ದಾಸ ಸಂಪ್ರದಾಯ, ಮಹಾರಾಷ್ಟ್ರ ಧರ್ಮ ಮತ್ತು ರಾಘವನ ಧರ್ಮ ಮುಂತಾದ ಹಲವು ಹೆಸರುಗಳಿಂದ ಗುರುತಿಸಲಾಗುತ್ತದೆ. ಈ ಸಂಪ್ರದಾಯದ ಕಾರ್ಯ, ಕಾರ್ಯೋದ್ದೇಶ, ಸಮಾಜ ಮತ್ತು ಉಪಾಸ್ಯ ಸಂಗತಿ ಇವುಗಳನ್ನು ನಿರ್ಧರಿಸಿದ ಮೇಲೆ ರಾಮದಾಸ ಅದರ ಪ್ರಸರಣೆಗೆಂದು ಮಠ, ಮಹಂತ, ದಿನಚರ್ಯೆ ಇತ್ಯಾದಿಗಳ ರೀತಿನೀತಿಗಳನ್ನು ರೂಪರೇಷೆಗಳನ್ನೂ ಸಂಯೋಜಿಸಿದ. ರಾಷ್ಟ್ರೀಯ ಸ್ತರದಲ್ಲಿ ಈ ಸಮಾಜದ ಸಂಘಟನೆಯನ್ನೂ ಮಾಡಿದ. ರಾಮದಾಸೀ ಪಂಥದಲ್ಲಿ ದ್ವೈತಾದ್ವೈತಗಳ ಸಮನ್ವಯವಿದೆ. ರಾಮದಾಸನ ವಾಙ್ಮಯವೂ ವಿಪುಲವಾಗಿದೆ. ದಾಸಬೋಧ, ರಾಮಾಯಣ, ಪಂಚವೀಸ ಪ್ರಶ್ನವ ಪಂಚೀಕರಣಾದೀ ಅಭಂಗ, ದ್ವಾದಶ ಓವೀ ಶತಕ,

ಕರುಣಾಷ್ಟಕ–ಇವು ಇವನ ಕೃತಿಗಳು. ಇವುಗಳಲ್ಲಿ ದಾಸಬೋಧ ಪ್ರಸಿದ್ಧವಾದುದು. ಕನ್ನಡಕ್ಕೆ ಭಾಷಾಂತರ ಗೊಂಡಿದೆ. ಪ್ರಪಂಚ ಹಾಗೂ ಪರಮಾರ್ಥಗಳ ಸಮನ್ವಯವೇ ಈ ಕೃತಿಯ ಸಿದ್ಧಿ ಹಾಗೂ ಸಾಧನಗಳು. (ಎಸ್.ಜಿ.ಎ.)

**ರಾಮದುರ್ಗ:** ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ವಾಯವ್ಯಕ್ಕೆ ಸು.25ಕಿಮೀ ದೂರದಲ್ಲಿರುವ ಒಂದು ಅಪರೂಪದ ಗುಹಾಲಯ. ನಾಯಕನಹಟ್ಟಿಗೆ ಹೋಗುವ ರಸ್ತೆಯಿಂದ ಬೋಸೇದೇವರ ಹಟ್ಟಿ ರಸ್ತೆಗೆ ತಿರುಗಿ ಮುನ್ನಡೆದರೆ ಎದುರಿಗೆ ಕಾಣುತ್ತದೆ. ದೇವಾಲಯವಿರುವ ಗುಡ್ಡಕ್ಕೆ ಹೊಸಗುಡ್ಡ, ರಾಮದುರ್ಗದ ಗುಡ್ಡವೆಂದು ಕರೆಯುತ್ತಾರೆ. ಇಲ್ಲಿಯ ಗ್ರಾನೈಟ್ ಗುಡ್ಡವನ್ನು ಕಡಿದು ಪಶ್ಚಿಮಾಭಿಮುಖವಾಗಿರುವಂತೆ ಗುಹಾಲಯವನ್ನು ನಿರ್ಮಿಸಲಾಗಿದೆ. ದೇವಾಲಯದ ರಕ್ಷಣೆಗಾಗಿ ಇತ್ತೀಚೆಗೆ ಕಬ್ಬಿಣದ ಜಾಲಂಧ್ರದ ಬಾಗಿಲೊಂದನ್ನು ಅಳವಡಿಸಲಾಗಿದೆ.

ಸರಳ ಮುಖವಿನ್ಯಾಸವುಳ್ಳ ಗುಹಾದೇವಾಲಯ ಸು.9ಮೀ ಉದ್ದ, 21 ಮೀ ಅಗಲವಿದೆ. ಒಳಗಡೆ ಅರ್ಧಮಂಟಪ ಮತ್ತು ಗರ್ಭಗೃಹವಿರುವ ಇದರ ಪಶ್ಚಿಮ ಗೋಡೆಯಲ್ಲಿ ಮೂರು ದೇವಕೋಷ್ಠಕಗಳಿವೆ. ದೇವಾಲಯದ ಒಳಗಡೆ ಇರುವ ಕಂಬಗಳು 2.40ಮೀ ಎತ್ತರ ಇವೆ. 8 ಅರೆಕಂಬಗಳು, 4 ಪೂರ್ಣಕಂಬಗಳು ಇವೆ. ಪ್ರತಿ ಕಂಬ ತಳಭಾಗದಲ್ಲಿ 0.75ಮೀ ಚಚ್ಚೌಕಾಕಾರವಾಗಿದೆ. ಕಂಬಗಳು ಮತ್ತು ಅರೆಕಂಬಗಳು ವಾಸ್ತುಶೈಲಿಯಲ್ಲಿ ಒಂದೇ ಬಗೆಯಲ್ಲಿವೆ. ಕಂಬಗಳಲ್ಲಿ ವಿಜಯನಗರ ಮಾದರಿಯ ಪುಷ್ಪಬೋದಿಗೆಗಳಿವೆ. ಗುಹಾಲಯದ ಮೇಲ್ಚಾವಣಿಯಲ್ಲಿ ವರಾಹವತಾರ, ನರಸಿಂಹ, ಬೇಡರ ಕಣ್ಣಪ್ಪ, ಮಹಿಷಮರ್ಧಿನಿ, ಶಿವ, ಪಾರ್ವತಿ, ನಂದಿ, ರಾಮ, ಸೀತೆ, ಲಕ್ಷ್ಮಣ, ದಶಾವತಾರ, ಸರಸ್ವತಿ, ವಿವಿಧ ನಮೂನೆಯ ಆಂಜನೇಯ ಮೂರ್ತಿಗಳು, ಭೈರವ, ಷಣ್ಮುಖ, ಗಣಪತಿ, ವೀರಭದ್ರ, ಕುದುರೆ, ರಥವನ್ನು ಎಳೆಯುತ್ತಿರುವ 3 ಶಿಲ್ಪಗಳು, ವಿವಿಧ ಭಂಗಿಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದು ಕುಳಿತಿರುವ ಶಿವನ ಶಿಲ್ಪ, ಹೂ, ಬಳ್ಳಿಗಳ ದೃಶ್ಯ, ಕೃಷ್ಣ, ಕಾಳಿಂಗ ಮರ್ದನ, ನಾಗಕನ್ಯೆಯರು, ಗಂಡುಭೇರುಂಡ ಹಾಗೂ ಇನ್ನಿತರ ಶಿಲ್ಪಗಳಿವೆ. ದೇವಾಲಯದ ಒಳ ಚಾವಣಿಯಲ್ಲಿ 6 ಅಂಕಣಗಳಿದ್ದು ಪುಷ್ಪಾಲಂಕಾರ ಹಾಗೂ ಅಷ್ಟದಿಕ್ಪಾಲಕರು, ಮಧ್ಯದಲ್ಲಿ ಕಮಲದ ಹೂ, ಗಂಡುಭೇರುಂಡ, ಕೆಲವು ಪಕ್ಷಿಗಳು, ಸಿಂಹದ ತಲೆ, ಇನ್ನಿತರ ಶಿಲ್ಪಗಳಿಂದ ಅಲಂಕರಣ ಗೊಂಡಿದೆ. ಸುಕನಾಸಿಯ ಭಾಗ 2.55ಮೀ ಅಗಲ, 21.15ಮೀ ಉದ್ದವಿದೆ. ಇದರಲ್ಲಿ ಯಾವುದೇ ಶಿಲ್ಪಗಳಿಲ್ಲದೆ ತುಂಬಾ ಸರಳವಾಗಿದೆ. ಬಾಗಿಲು ಸರಳವಾಗಿದೆ. ಇದರಲ್ಲಿ ಯಾವುದೇ ವಾಸ್ತು ಶಿಲ್ಪದ ಅಲಂಕಾರವಿಲ್ಲ. ಬಾಗಿಲು ಚೌಕಟ್ಟಿನ ಕೆಳಭಾಗದಲ್ಲಿ ಚಿಕ್ಕ ಶಿಲ್ಪಗಳು, ಶೈವ ದ್ವಾರಪಾಲಕರ ಶಿಲ್ಪಗಳು, ನಾಲ್ಕು ಕೈಗಳಲ್ಲಿ ತ್ರಿಶೂಲ ಡಮರುಗ ಹಿಡಿದಿದ್ದರೆ ಮತ್ತೆರಡು ಕೈಗಳು ವರದ ಹಸ್ತ ಮತ್ತು ಅಭಯಹಸ್ತ ಮುದ್ರೆಯಲ್ಲಿವೆ.

ಗರ್ಭಗುಡಿಯ ಬಾಗಿಲಿನ ಎಡ ಮತ್ತು ಬಲಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಇವಲ್ಲದೆ ಶ್ರೀದೇವಿ, ಭೂದೇವಿಯರ ಶಿಲ್ಪಗಳು ಮೇಲ್ಭಾಗದಲ್ಲಿ ಶಿವ–ಪಾರ್ವತಿ ಶಿಲ್ಪಗಳಿವೆ. 11 ಸೆಂಮೀ ಉದ್ದ, 7.5 ಸೆಂಮೀ ಅಗಲ ಇರುವ ರಾಮೇಶ್ವರ ಲಿಂಗವಿದೆ. 7 ಹೆಡೆಯ ನಾಗಶಿಲ್ಪ ಈ ಲಿಂಗವನ್ನು ಸುರುಳಿ ಸುತ್ತಿದೆ. ವಾಸ್ತು ಶೈಲಿಯ ಆಧಾರದ ಮೇಲೆ ವಿಜಯನಗರದ ತರುವಾಯ ಇಲ್ಲವೇ ವಿಜಯನಗರದ ಕೊನೆಯ ಕಾಲದಲ್ಲಿ ಈ ದೇವಾಲಯ ನಿರ್ಮಾಣ ಆಗಿರಬಹುದೆನ್ನಲಾಗಿದೆ. (ಆರ್‌ಡಿಆರ್.)

**ರಾಮಾನುಜಾಚಾರ್ಯ:** 1017–1137. ವಿಶಿಷ್ಟಾದ್ವೈತ ವೇದಾಂತದ ಪ್ರಮುಖ ಪ್ರತಿಪಾದಕರು. ಆಚಾರ್ಯಪರಂಪರೆಯ ಪ್ರಮುಖರಲ್ಲೊಬ್ಬರಾದ ಯಾಮುನಾಚಾರ್ಯರ ಶಿಷ್ಯ ಪರಂಪರೆಗೆ ಸೇರಿದವರು. ಚೆನ್ನೈ ಸಮೀಪದಲ್ಲಿರುವ ಶ್ರೀ ಪೆರುಂಬುದೂರಿನಲ್ಲಿ 1017ರಲ್ಲಿ ಜನನ. ತಂದೆ ಕೇಶವ ಸೋಮಯಾಜಿ (ಕೇಶವಾಚಾರ್ಯ), ತಾಯಿ ಕಾಂತಿಮತಿ. ಹದಿನೈದು ವರ್ಷದ ರಕ್ಷಾಂಬಾಳ್ ಎಂಬವರೊಂದಿಗೆ ರಾಮಾನುಜರ ವಿವಾಹವಾಯಿತು. ಇದೇ ಕಾಲದಲ್ಲಿ ತಂದೆ ತೀರಿಕೊಂಡರು. ವಿದ್ಯಾಭ್ಯಾಸವನ್ನು ಕಾಂಚೀಪುರದ ಅದ್ವೈತ ವಿದ್ವಾಂಸರಾದ ಯಾದವ ಪ್ರಕಾಶರಲ್ಲಿ ಪ್ರಾರಂಭಿಸಿದರು. ವೇದಾಂತದ ಅಧ್ಯಯನವನ್ನು ಮಾಡತೊಡಗಿದರು. ಆದರೆ ಯಾದವ ಪ್ರಕಾಶರಲ್ಲಿ ಬಹಳಕಾಲ ಅಧ್ಯಯನವನ್ನು ಮುಂದುವರಿಸಲಿಲ್ಲ. ಉಪನಿಷದ್ವಾಕ್ಯಗಳ ಅರ್ಥವನ್ನು ವಿವರಿಸುವ ಸಂದರ್ಭದಲ್ಲಿ ಇಬ್ಬರಲ್ಲೂ ಭಿನ್ನಾಭಿಪ್ರಾಯ ಉಂಟಾಯಿತು. ರಾಮಾನುಜರು ಅವರನ್ನು ತೊರೆದು ಸ್ವತಂತ್ರವಾಗಿ ಯೋಚಿಸತೊಡಗಿದರು.

ರಾಮಾನುಜರು ಗೊಂದಲದಲ್ಲಿದ್ದಾಗಲೆಲ್ಲ ಇವರಿಗೆ ಧೈರ್ಯ ಮತ್ತು ವಿಶ್ವಾಸವನ್ನು ತುಂಬುತ್ತಿದ್ದವರು ಕಾಂಚೀಪೂರ್ಣರು. ಶ್ರೀರಂಗದಲ್ಲಿ ಯಾಮುನಾಚಾರ್ಯರು ಆರೋಗ್ಯವಿಲ್ಲದೆ ತಮ್ಮ ಉತ್ತರಾಧಿಕಾರಿಗಾಗಿ ಶೋಧದಲ್ಲಿದ್ದಾಗ ರಾಮಾನುಜರ ಹೆಸರು ಅವರ ಕಿವಿಗೆ ಬಿತ್ತು. ಇವರನ್ನೇ ತಮ್ಮ ಮುಂದಿನ ಉತ್ತರಾಧಿಕಾರಿಯನ್ನಾಗಿ ಮಾಡಲು ಸಂಕಲ್ಪಮಾಡಿ ತಮ್ಮ ಮತ್ತೊಬ್ಬ ಶಿಷ್ಯರಾದ ಮಹಾಪೂರ್ಣ ಎಂಬವರನ್ನು ಕಳುಹಿಸಿ ರಾಮಾನುಜರನ್ನು ಶ್ರೀರಂಗಕ್ಕೆ ಕರೆಸಿಕೊಂಡರು. ಆದರೆ ರಾಮಾನುಜರು ಬರುವುದರೊಳಗೆ ಯಾಮುನಾಚಾರ್ಯರು ನಿಧನರಾಗಿದ್ದರು. ಅವರ ಮೂರು ಕೈಬೆರಳುಗಳು ಮಡಚಿಕೊಂಡಿದ್ದುವು. ಇವು ಯಾಮುನಾಚಾರ್ಯರ ಮೂರು ಮನೋರಥಗಳ ಸಂಕೇತವೆಂದು ರಾಮಾನುಜರು ತಿಳಿದು ನೆರೆದ ಜನಸ್ತೋಮದ ಎದುರಲ್ಲಿ ತಮ್ಮ ಗುರುಗಳ ಇಷ್ಟಾರ್ಥವನ್ನು ಈಡೇರಿಸುವುದಾಗಿ ತಿಳಿಸಿದರು. ಬ್ರಹ್ಮಸೂತ್ರಗಳಿಗೆ ವಿಶಿಷ್ಟಾದ್ವೈತಪರವಾದ ವ್ಯಾಖ್ಯಾನ ಬರೆಯುವುದು, ವಿಷ್ಣು ಸಹಸ್ರನಾಮದ ಭಾಷ್ಯ ಮತ್ತು ದಿವ್ಯಪ್ರಬಂಧಗಳಿಗೆ ಟೀಕೆ ಬರೆಯುತ್ತೇನೆಂದು ಪ್ರತಿಜ್ಞೆ ಮಾಡಿದರು. ಆಗ ಮಡಚಿಕೊಂಡಿದ್ದ ಯಾಮುನಾಚಾರ್ಯರ ಕೈಬೆರಳುಗಳು ತೆರೆದುಕೊಂಡವೆಂದು ಪ್ರತೀತಿ. ಇದು ಬ್ರಹ್ಮಸೂತ್ರಕ್ಕೆ ಹೊಸದೊಂದು ಭಾಷ್ಯವನ್ನು ಶ್ರೀವೈಷ್ಣವ ಸಿದ್ಧಾಂತದ ಪ್ರಕಾರ ಬರೆಯುವುದಕ್ಕೆ ನಾಂದಿಯಾಯಿತು.

ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತರಾಗಿದ್ದ ರಾಮಾನುಜರಿಗೆ ಲೌಕಿಕ ಆಸಕ್ತಿ ಇರಲಿಲ್ಲ. ರಾಮಾನುಜರಲ್ಲಿ ಮನಸೋತ ಹಲವರು ಇವರ ಶಿಷ್ಯತ್ವವನ್ನು ಪಡೆದರು. ಹೆಂಡತಿಯ ಮನೋರಥವನ್ನು ಅರಿತ ಇವರು ಆಕೆಗೆ ಬೇಕಾದುದೆಲ್ಲವನ್ನು ನೀಡಿ ತವರಿಗೆ ಕಳುಹಿಸಿದರು. ಸನ್ಯಾಸಾಶ್ರಮ ಪ್ರವೇಶಿಸಿದರು. ಅನಂತರ ಇವರು ಕಾಂಚೀಪುರದ ಮಠಕ್ಕೆ ಬಂದು ನೆಲೆಸಿದರು. ಇದರಿಂದ ತತ್ತ್ವಪ್ರಸಾರಕ್ಕೆ ಹೆಚ್ಚಿನ ಅನುಕೂಲವೇ ಆಯಿತು. ಕೆಲವು ದಿವಸಗಳ ಅನಂತರ ಕಾಂಚೀಪುರವನ್ನು ತ್ಯಜಿಸಿ ಶ್ರೀರಂಗಕ್ಕೆ ಬಂದು ಯಾಮುನಾಚಾರ್ಯರ ಮಠದ ಅಧಿಪತ್ಯವನ್ನು ವಹಿಸಿಕೊಂಡರು. ಗೋಷ್ಠೀಪೂರ್ಣರಿಂದ ಮಂತ್ರೋಪದೇಶವನ್ನು ಪಡೆದರು. ಗುರುಗಳಿಂದ ಪಡೆದ ಮಂತ್ರವನ್ನು ಗೋಪ್ಯವಾಗಿಡಬೇಕೆಂದು ನಿಯಮಿತವಾಗಿದ್ದರೂ ಜಗದೋದ್ಧಾರಕ್ಕಾಗಿ ದೇವಸ್ಥಾನದ ಗೋಪುರವನ್ನೇರಿ ನೆರೆದಿದ್ದ ಜನಸ್ತೋಮಕ್ಕೆ ಉಪದೇಶ ಮಾಡಿದರು.

ಶ್ರೀರಂಗದ ಅರಸ ಕುಲೋತ್ತುಂಗ ಚೋಳರಾಜ ಶೈವಭಕ್ತನಾಗಿದ್ದ. ಈತ ರಾಮಾನುಜರ ವೈಷ್ಣವ ಸಿದ್ಧಾಂತ ಪ್ರಚಾರಕ್ಕೆ ಕೋಪಗೊಂಡ. ರಾಜನ ಕ್ರೋಧಕ್ಕೊಳಗಾದ ರಾಮಾನುಜರು ಶ್ರೀರಂಗವನ್ನು ತ್ಯಜಿಸಿ ಅಲ್ಲಿಂದ ಕರ್ನಾಟಕಕ್ಕೆ ಬಂದರು. ಇವರಿಗೆ ಕರ್ನಾಟಕದಲ್ಲಿ ಭವ್ಯಸ್ವಾಗತ ದೊರೆಯಿತು. ಆಗ ಆಳುತ್ತಿದ್ದವ ಹೊಯ್ಸಳ ಬಿಟ್ಟಿದೇವ. ಇವನಿಗೆ ಇಲ್ಲಿ ವೈಷ್ಣವಧರ್ಮದ ದೀಕ್ಷೆಯನ್ನು ನೀಡಿ ವಿಷ್ಣುವರ್ಧನ ಎಂಬ ಹೆಸರುಕೊಟ್ಟರು. ವಿಷ್ಣುವರ್ಧನ ರಾಮಾನುಜರ ಅಪೇಕ್ಷೆಯಂತೆ ಬೇಲೂರಿನಲ್ಲಿ ಚೆನ್ನಕೇಶವನ ಗುಡಿ, ತಲಕಾಡಿನಲ್ಲಿ ಕೀರ್ತಿನಾರಾಯಣ, ಗದಗಿನಲ್ಲಿ ವೀರನಾರಾಯಣ, ಮೇಲುಕೋಟೆಯಲ್ಲಿ ಚೆಲುವನಾರಾಯಣನ ಗುಡಿಗಳನ್ನು ಕಟ್ಟಿಸಿದ. ರಾಮಾನುಜರು ತಮ್ಮ ಪ್ರಯಾಣದ ಅವಧಿಯಲ್ಲಿ ಸಾಲಿಗ್ರಾಮ, ತೊಂಡನೂರುಗಳಿಗೆ (ತೊಣ್ಣೂರು) ಭೇಟಿ ನೀಡಿ ಅಲ್ಲೆಲ್ಲ ವಿಶಿಷ್ಟಾದ್ವೈತ ದರ್ಶನದ ಪ್ರಚಾರ ಕೈಗೊಂಡರು. ಬಳಿಕ ಮೇಲುಕೋಟೆಗೆ ಬಂದು ಅಲ್ಲಿ ಸುಮಾರು ಹದಿನಾಲ್ಕು ವರ್ಷಗಳ ಕಾಲ ನೆಲೆಸಿದ್ದು ಅನಂತರ ಶ್ರೀರಂಗಕ್ಕೆ ಹಿಂತಿರುಗಿದರು. ಅನೇಕ ವಿಷ್ಣುದೇವಾಲಯಗಳಲ್ಲಿ ಪಾಂಚರಾತ್ರ ಆಗಮಗಳ ಪ್ರಕಾರ ಪೂಜಾವಿಧಾನಗಳನ್ನು ಏರ್ಪಡಿಸಿದರು. ತಮ್ಮ ವ್ಯಾಖ್ಯಾನಗಳ ಮೂಲಕ ವಿಶಿಷ್ಟಾದ್ವೈತ ವೇದಾಂತವನ್ನು ಯಶಸ್ವಿಯಾದ ರೀತಿಯಲ್ಲಿ ಪ್ರಚಾರ ಮಾಡಿದರು. ಈ ಸಂದರ್ಭದಲ್ಲಿ ಅವರು ಕೈಗೊಂಡ ಸಮಾಜೋ–ಧಾರ್ಮಿಕ ಸುಧಾರಣಾ ಕಾರ್ಯಗಳು ಅವರ ವ್ಯಕ್ತಿತ್ವವನ್ನು ಮತ್ತಷ್ಟು ಹೆಚ್ಚಿಸಿದವು. ಉದಾಹರಣೆಗೆ ಮೇಲುಕೋಟೆ ಮುಂತಾದ ದೇವಾಲಯಗಳಲ್ಲಿ ಅಸ್ಪೃಶ್ಯರಿಗೂ ಪ್ರವೇಶವಕಾಶ ದೊರಕಿತ್ತಲ್ಲದೆ, ಪ್ರಸಿದ್ಧ ವೈರಮುಡಿ ಮೊದಲಾದ ಉತ್ಸವಗಳಲ್ಲಿ ಅಸ್ಪೃಶ್ಯರೇ ಮೊದಲಾದವರು ಪಾಲ್ಗೊಳ್ಳುತ್ತಿದ್ದರು. ಅಸ್ಪೃಶ್ಯ ಆಂಡಾಳ್ ಸಂತಳ ವಿಗ್ರಹವನ್ನು ಶ್ರೀ ವೈಷ್ಣವ ದೇವಾಲಯಗಳಲ್ಲಿ ಪ್ರತಿಷ್ಠಾಪಿಸುವ ಪರಿಪಾಠವು ಸಹ ಆರಂಭವಾಯಿತು.

ರಾಮಾನುಜಾಚಾರ್ಯರು ಪೂರ್ವಾಚಾರ್ಯರುಗಳ ಮಾರ್ಗವನ್ನು ಮನದಟ್ಟುಮಾಡಿಕೊಂಡು ಬ್ರಹ್ಮಸೂತ್ರಗಳಿಗೂ ಭಗವದ್ಗೀತೆಗೂ ವಿಶಿಷ್ಟಾದ್ವೈತ ಪರವಾಗಿ ಭಾಷ್ಯ ರಚಿಸಿದರು. ಇದಲ್ಲದೆ ಅದಕ್ಕೆ ಸಿದ್ಧಾಂತರೂಪ ಕೊಟ್ಟು ಶ್ರೀವೈಷ್ಣವ ಸಂಪ್ರದಾಯವನ್ನೂ ಜೊತೆಜೊತೆಯಲ್ಲೇ ಪ್ರಚುರಪಡಿಸಿ ಪಂಡಿತಪಾಮರರೆಲ್ಲರ ಆತ್ಮೋಜ್ಜೀವನಕ್ಕೆ ಮಾರ್ಗದರ್ಶನ ಮಾಡಿದರು. ಇವರು ರಚಿಸಿದ ಗ್ರಂಥಗಳಲ್ಲಿ ಪ್ರಸಿದ್ಧವಾದವು ಇವು; ಶ್ರೀಭಾಷ್ಯ ಎಂಬುದು ಬ್ರಹ್ಮಸೂತ್ರಗಳಿಗೆ ಇರುವ ವಿಸ್ತಾರವ್ಯಾಖ್ಯಾನ. ವೇದಾಂತಸಾರ, ವೇದಾಂತದೀಪ ಎಂಬುವು ಅದೇ ಸೂತ್ರಗಳಿಗೆ ಸಂಗ್ರಹರೂಪದ ವ್ಯಾಖ್ಯಾನಗಳು. ಗೀತಾಭಾಷ್ಯ ಎಂಬುದು ಭಗವದ್ಗೀತೆಗೆ ವಿಶಿಷ್ಟಾದ್ವೈತಪರವಾದ ಭಾಷ್ಯ. ವೇದಾಂತಸಂಗ್ರಹ ಎಂಬುದು ಉಪನಿಷದ್ವಾಕ್ಯಗಳಿಗೆ ವಿಶಿಷ್ಟಾದ್ವೈತಪರವಾದ ಅರ್ಥವಿವರಣೆ, ಗದ್ಯತ್ರಯಗಳು ಎಂದು ಹೆಸರಾಗಿರುವ ಶ್ರೀರಂಗಗದ್ಯ, ಶರಣಾಗತಿಗದ್ಯ ಮತ್ತು ಶ್ರೀವೈಕುಂಠಗದ್ಯಗಳು ಆತ್ಮೋಜ್ಜೀವನ ಮಾಡಿಕೊಳ್ಳುವಲ್ಲಿ ನೆರವಾಗುವ ಸ್ತೋತ್ರಗಳು. ತಮ್ಮ ವಾದ ಸ್ವಕಪೋಲಕಲ್ಪಿತವಲ್ಲವೆಂದು ತೋರಿಸಲೂ ಅದು ಪ್ರಾಚೀನತಮವಾದುದೆಂದು ಸ್ಥಾಪಿಸಲೂ ತಮಗೆ ಪೂರ್ವಾಚಾರ್ಯರಾಗಿದ್ದವರ ಹೆಸರುಗಳನ್ನು ಹೀಗೆ ಉಲ್ಲೇಖಿಸಿದ್ದಾರೆ: ಅಂಕ, ದ್ರಾವಿಡ, ಗುಹದೇವ, ಕಪರ್ದಿ, ಭಾರುಚಿ, ಬೋಧಯನ ಮೊದಲಾದವರು, ಇವರೊಡನೆ ಯಾಮುನಾಚಾರ್ಯರ ಉಪದೇಶಗಳಿಂದಲೂ ಆಳ್ವಾರರ ಪ್ರಬಂಧಗಳಿಂದಲೂ ರಾಮಾನುಜರು ಸ್ಫೂರ್ತಿ ಪಡೆದರು. ಆಚಾರ್ಯರ ಮತ್ತು ಆಳ್ವಾರರ ಉಪದೇಶಗಳನ್ನು ಸಮನ್ವಯಗೊಳಿಸಿದ ಇವರಿಗೆ ಉಭಯ ವೇದಾಂತ ಪ್ರವರ್ತಕ ಎಂಬ ಬಿರುದೂ ಬಂದಿದೆ. ಇವರು 1137ರಲ್ಲಿ ದೇಹತ್ಯಾಗ ಮಾಡಿದರು.

ರಾಮಾನುಜರ ತರುವಾಯ ಇವರ ಪಂಥ ಎರಡು ಶಾಖೆಗಳಾಗಿ ಒಡೆಯಿತು. ಈ ಶಾಖೆಗಳು ತೆಂಕಲೈ ಮತ್ತು ವಡಕಲೈ. ಈ ಶಾಖೆಗಳಿಗೆ ಪರಸ್ಪರ ಹದಿನೆಂಟು ಅಂಶಗಳಲ್ಲಿ ಸಿದ್ಧಾಂತಗತ ಭೇದಗಳಿವೆ. ತೆಂಕಲೈ ಮತದ ಪ್ರಧಾನ ಆಚಾರ್ಯರು ಶ್ರೀಪಿಳ್ಳೈ ಲೋಕಾಚಾರ್ಯರು (ಹದಿಮೂರನೆಯ ಶತಮಾನ). ವಡಕಲೈ ಮತದ ಪ್ರಸಿದ್ಧ ಆಚಾರ್ಯರು ಲೋಕಾಚಾರ್ಯರ ಸಮಕಾಲೀನರೇ ಆದ ವೆಂಕಟನಾಥರು ಅಥವಾ ವೇದಾಂತ ದೇಶಿಕರು. (ಎಂ.ವೈ.)

**ರಾಮಾಪುರಂ:** ಆಂಧ್ರಪ್ರದೇಶ ರಾಜ್ಯದ ಕರ್ನೂಲು ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬಿ. ನರಸಿಂಹಯ್ಯ ಅವರ ನೇತೃತ್ವದಲ್ಲಿ 1980–81ರಿಂದ 1983–84ರ ವರೆಗೆ ಉತ್ಖನನ ನಡೆಯಿತು. ಒಂದೇ ಸಂಸ್ಕೃತಿಗೆ ಸೇರಿದ 85–90 ಸೆಂಮೀ ಮಂದದ ವಸತಿ ಪದರ ಇಲ್ಲಿದ್ದು ಇದನ್ನು ಎ, ಬಿ ಹಾಗೂ ಸಿ ಎಂದು 3 ಉಪಹಂತಗಳಾಗಿ ವಿಂಗಡಿಸಲಾಗಿದೆ.

1ಎ ಹಂತದಲ್ಲಿ ಸೂಕ್ಷ್ಮಶಿಲೋಪಕರಣಗಳೂ ಉಜ್ಜಿ ನಯಗೊಳಿಸಿದ ಕಲ್ಲಿನ ಉಪಕರಣಗಳೂ ಕೈಯಲ್ಲಿ ತಯಾರಿಸಿದ, ಉಜ್ಜಿ ಹೊಳಪುಗೊಳಿಸಿದ ಕೆಂಪು, ಬೂದು ಮತ್ತು ಕಪ್ಪುಮಣ್ಣಿನ ಪಾತ್ರೆಗಳೂ ಇವೆ. ಕೆಂಪುಬಣ್ಣದ ಕೆಲವು ಪಾತ್ರೆಗಳ ಮೇಲೆ ಕಪ್ಪು ಮತ್ತು



ಮೇಕೆಯ ಅಸ್ಥಿಅವಶೇಷಗಳು

ನೇರಳೆ ಬಣ್ಣಗಳಲ್ಲಿ ಸಮಾನಾಂತರ ಪಟ್ಟಿಗಳು, ಪಾತ್ರೆಯ ಸುತ್ತಲೂ ಸಾಗುವ ಲಂಬ ರೇಖಾ ಸಮೂಹ, ಬೀಸುಗೆರೆಗಳು, ಅಲೆಯಂತಹ ವಿನ್ಯಾಸ ಮತ್ತು ಏಕಕೇಂದ್ರವುಳ್ಳ ಅರೆವರ್ತುಲಗಳು ಮುಂತಾದ ರೇಖಾವಿನ್ಯಾಸಗಳಿವೆ. ಮಣ್ಪಾತ್ರೆಗಳ ಪ್ರಮುಖ ಆಕಾರಗಳೆಂದರೆ ಬಟ್ಟಲು, ನಳಿಕೆಯುಳ್ಳ ಬಟ್ಟಲು, ಬೋಗುಣಿ ಹಾಗೂ ಅಗಲ ಬಾಯಿಯ ಪಾತ್ರೆಗಳು. ಸಣ್ಣ ಅಲಗುಗಳು, ಹೆರೆಚಕ್ಕೆಗಳು, ಅರ್ಧಚಂದ್ರಾಕೃತಿಗಳು, ಮೊನೆಗಳು, ತಿರುಳುಗಲ್ಲು, ಮೂಲಶಿಲೆಗಳು ಮುಂತಾದ ಸೂಕ್ಷ್ಮಶಿಲೋಪಕರಣಗಳಿವೆ. ಇವನ್ನು ಪ್ರಮುಖವಾಗಿ ಚಕಮಕಿ ಕಲ್ಲಿನಿಂದ ಮಾಡಲಾಗಿದೆ. ಅಗೇಟ್, ಕ್ಯಾಲ್ಸೆಡನಿ, ಬೆಣಚುಕಲ್ಲು ಹಾಗೂ ಕ್ವಾರ್ಟ್ಸೈಟ್‌ಗಳನ್ನೂ ವಿರಳವಾಗಿ ಬಳಸಲಾಗಿದೆ. ಈ ಉಪಹಂತದ ಜನರಿಗೆ ತಾಮ್ರದ ಪರಿಚಯವಿತ್ತೆಂಬುದು ಸುರುಳಿ ಸುತ್ತಿದ ತಂತಿಯ ಚೂರು ಮತ್ತು ಗುರುತಿಸಲು ಸಾಧ್ಯವಾಗದ ವಸ್ತುಗಳಿಂದ ದೃಢಪಡುತ್ತದೆ. ಮೃದು ಹಸುರುಗಲ್ಲಿನ ಬಿಲ್ಲೆಮಣಿಗಳು ಉಲ್ಲೇಖಾರ್ಹ.

1ಬಿ ಉಪಹಂತ ಹಿಂದಿನ ಉಪಹಂತದ ಮುಂದುವರಿಕೆಯೇ ಆಗಿದೆ. ಆದರೆ ಇಲ್ಲಿ ಸೂಕ್ಷ್ಮ ಶಿಲೋಪಕರಣಗಳಿಲ್ಲ. ಕೈಯಿಂದ ಮಾಡಿದ, ಉಜ್ಜಿ ಹೊಳಪುಗೊಳಿಸಿದ, ಬೂದು–ಕಂದು ದ್ವಿವರ್ಣ ಮಣ್ಪಾತ್ರೆಯ ತಯಾರಿಕೆ ಈ ಹಂತದಲ್ಲಿ ಆರಂಭವಾಯಿತು. ಕೆಂಪು ಲೇಪನವುಳ್ಳ ಮಣ್ಪಾತ್ರೆಯ ಬಳಕೆಯಲ್ಲಿಯೂ ಗಮನಾರ್ಹ ಹೆಚ್ಚಳ ಕಂಡುಬರುತ್ತದೆ. ಕಬ್ಬಿಣದ ಬಳಕೆಯೂ ಪ್ರಪ್ರಥಮವಾಗಿ ಕಂಡುಬರುತ್ತದೆ. ಸುಡಾವೆಮಣ್ಣಿನ ವಸ್ತುಗಳು, ಮಣಿಗಳು, ತಾಮ್ರದ ಗಂಟೆಯೊಂದರ ನಾಲಗೆ, ಕುಂಟೆಬಿಲ್ಲೆ ಮುಂತಾದುವು ಇತರ ಅವಶೇಷಗಳು.

1ಸಿ ಉಪಹಂತದಲ್ಲಿ ತಾಮ್ರದ ಬಳಕೆ ಮುಂದುವರೆದುದನ್ನು ಗಮನಿಸಬಹುದು. ಅಲ್ಲದೆ ಬೂದು–ಕಂದು ದ್ವಿವರ್ಣ ಕುಂಭಕಲೆ ಸುಧಾರಣೆಯನ್ನು ತೋರುತ್ತದೆ. ಈ ಹಂತದ ಕೊನೆಯ ಹೊತ್ತಿಗೆ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ಕಾಣಿಸಿಕೊಂಡವು. ಮಣ್ಪಾತ್ರೆಗಳಲ್ಲಿ ಬಾಹ್ಯ ಪ್ರಭಾವವನ್ನು ಸೂಚಿಸುವ ಕಲಶದ ರೀತಿಯ ಮುಚ್ಚಳ, ಮರಳು ಗಡಿಯಾರದಾಕಾರದ ಪೀಠ ಮುಂತಾದ ಹೊಸ ಪ್ರಕಾರಗಳಿವೆ. ನೀರಹೂಜಿಗಳು, ಗುಂಡಗಿನ ತಳದ ಬೋಗುಣಿ, ಸಮಾಧಿಯಲ್ಲಿ ಬಳಸಲಾದ ಮಡಕೆ ಮುಂತಾದ ಪಾತ್ರೆಗಳನ್ನು ತಯಾರಿಸುವಲ್ಲಿ ನಿಧಾನವಾಗಿ ತಿರುಗುವ ತಿಗುರಿಯನ್ನು ಬಳಸಿರುವುದು ಗಮನಾರ್ಹ. ಉಪಕರಣಗಳಲ್ಲಿ ಚಪ್ಪಟೆ ಕೊಡಲಿ, ಉಳಿ, ಚಿಮಟ, ಹೆರೆಯುವ ಸಾಧನ, ಸುರುಳಿ ಸುತ್ತಿದ ತಂತಿ, ಸೂಜಿ ಮುಂತಾದುವನ್ನು ಉಲ್ಲೇಖಿಸಬಹುದು. ಬಹುಮಟ್ಟಿಗೆ ಶವಕುಣಿಗಳಿಂದ ಸಂಗ್ರಹಿಸಲಾದ ಕಬ್ಬಿಣದ ಉಪಕರಣಗಳಲ್ಲಿ ಭರ್ಜಿಯ ಮೊನೆ, ಬಾಣಾಗ್ರ, ಕ್ಷೌರದ ಕತ್ತಿ, ಹೆರೆಯುವ ಸಾಧನ ಅಥವಾ ಮೋಚಿ ಬಳಸುವಂಥ ಉಪಕರಣ, ಮೊಳೆ ಮುಂತಾದುವು ಸೇರಿವೆ. ಒಂದು ಶವಕುಣಿಯಲ್ಲಿ ಕಂಡುಬಂದ ಕುತೂಹಲಕಾರಿ ವಸ್ತುವೆಂದರೆ ತೆಳುಮೈಯುಳ್ಳ ಪರಶುವಿನಂಥ ಉಪಕರಣಗಳು. ಇತರ ಅವಶೇಷಗಳಲ್ಲಿ ಚಿಪ್ಪು, ಮೂಳೆ, ಸುಡಾವೆಮಣ್ಣು ಮತ್ತು ಬಳಪದಕಲ್ಲಿನಿಂದ ತಯಾರಿಸಿದ ಮಣಿಗಳು, ಸುಡಾವೆಮಣ್ಣಿನ ಗೂಳಿಗಳಿವೆ. ಗೂಳಿಗೊಂಬೆಯೊಂದರ ಮೇಲೆ ಕೆಂಪುಗೆರೆಗಳನ್ನು ಎಳೆದಿದ್ದು ಪ್ರಾಯಶಃ ವಿಲಕ್ಷಣವಾಗಿ ಚಿತ್ರಿಸಿದ ಪ್ರಾಣಿಗೊಂಬೆಗಳ ಶಿರವನ್ನು ಕುಂಭಗಳಿಗೆ ಜೋಡಿಸಲಾಗುತ್ತಿತ್ತೆಂದು ಹೇಳಬಹುದು. ಮತ್ತೊಂದು ಪ್ರಮುಖ ಅವಶೇಷವೆಂದರೆ ರಂಧ್ರವಿರುವ ಚುಳ್ಳಿ ಬೋಗುಣಿಗಳು. ಇಂಥ ಬೋಗುಣಿಗಳಿಗೆ 4, 5, 6 ಅಥವಾ 8 ಚುಳ್ಳಿಗಳಿದ್ದವು. ಆಳವಾದ ಬೋಗುಣಿಗಳಲ್ಲಿ ಹೆಚ್ಚಿನವಕ್ಕೆ ತಳಭಾಗದಲ್ಲಿ 25 ರಂಧ್ರಗಳಿದ್ದರೆ ಮತ್ತೆ ಕೆಲವಕ್ಕೆ 75 ರಿಂದ 121 ರಂಧ್ರಗಳಿದ್ದವು.

ಎಲ್ಲ ಉಪಹಂತಗಳಲ್ಲಿಯೂ ಜನ ವೃತ್ತಾಕಾರ (ವ್ಯಾಸ 8.2 ರಿಂದ 2.2 ಮೀ) ಅಥವಾ ದೀರ್ಘವೃತ್ತಾಕಾರದ (11–3.15 x 2.2 ಮೀ) ತಡಿಕೆ ಗುಡಿಸಲುಗಳಲ್ಲಿ ವಾಸವಾಗಿದ್ದರು. 1ಸಿ ಉಪಹಂತದಲ್ಲಿ ಗಜಪೃಷ್ಠಾಕಾರದ ವಿನ್ಯಾಸವುಳ್ಳ ಒಂದು ಗುಡಿಸಲಿತ್ತು. ಈ ಮಾದರಿಯ ಗುಡಿಸಲುಗಳ ನಿರ್ಮಾಣ ವಿಶಿಷ್ಟವಾದುದು. ಗುಡಿಸಲಿನ ನಿರ್ಮಾಣಕ್ಕೆ ಮುಂಚೆ ವೃತ್ತಾಕಾರದ ಕಾಲುವೆಯೊಂದನ್ನು ಅಗೆದು ಅದರಲ್ಲಿ ಬೊಂಬು ಅಥವಾ ಉದ್ದನೆಯ ಮರದ ಕಂಬಗಳನ್ನು ನೆಡಲಾಗುತ್ತಿತ್ತು. ಅನಂತರ ಎಲ್ಲ ಕಂಬಗಳ ತುದಿಗಳನ್ನು ಸೇರಿಸಿ ಕಟ್ಟಿ ಬಿಗಿಗೊಳಿಸಲಾಗುತ್ತಿತ್ತು. ಈ ಕೋನಾಕೃತಿಯ ರಚನೆಗೆ ಹುಲ್ಲಿನ ಹೊದಿಕೆ ಇರುತ್ತಿತ್ತು. ಮಳೆನೀರು ಒಳಗೆ ಬರದಂತೆ ಚಿಕ್ಕ ಚಪ್ಪಡಿಗಳನ್ನು ಕಾಲುವೆಯ ಸುತ್ತಲೂ ಜೋಡಿಸಿ ಅವನ್ನು ಮಣ್ಣಿನ ದಿಣ್ಣೆಯಿಂದ ಬಲಪಡಿಸಲಾಗುತ್ತಿತ್ತು.

ಈ ಕಾಲದ ಜನರು ಗೋವು, ಎಮ್ಮೆ, ಮೇಕೆ, ಕುರಿ, ಹಂದಿ ಮೊದಲಾದ ಪ್ರಾಣಿಗಳನ್ನು ಸಾಕಿದ್ದರು. ಗೋವನ್ನು ಕೇವಲ ಆಹಾರಕ್ಕಾಗಿ ಸಾಕಿಕೊಂಡಿದ್ದರೆ, ಎಳೆ ವಯಸ್ಸಿನಲ್ಲಿಯೆ ಅವನ್ನು ಕೊಲ್ಲುತ್ತಿರಬೇಕಿತ್ತು; ಆದರೆ ಇಲ್ಲಿ ವಯಸ್ಸಾದ ಗೋವಿನ ವಧೆ ಮಾಡುತ್ತಿದ್ದ ಸೂಚನೆಗಳು ಕಂಡುಬಂದಿರುವುದು ಆಸಕ್ತಿ ಮೂಡಿಸುತ್ತದೆ. ಪ್ರಾಣಿಗಳ ಬೆನ್ನುಮೂಳೆ, ಪಕ್ಕೆಲುಬು ಹಾಗೂ ಕೈಕಾಲು ಮೂಳೆಗಳ ಕೆಳಭಾಗಗಳು ದೊರೆಯದಿರುವುದರಿಂದ ಬಹುಪಾಲು ಪ್ರಾಣಿಗಳನ್ನು ವಸತಿಯ ಹೊರಗೆ ವಧಿಸಿ ಮಾಂಸಭಾಗಗಳನ್ನು ತಂದಿರುವ ಹಾಗೆ ಕಾಣುತ್ತದೆ. ಕಡವೆ, ಜಿಂಕೆ ಮುಂತಾದ ಕಾಡುಪ್ರಾಣಿ ಗಳನ್ನೂ ಹಕ್ಕಿಗಳನ್ನೂ ಆಗಾಗ ಬೇಟೆಯಾಡುತ್ತಿದ್ದರು. ಜೊತೆಗೆ ಮೀನು ಮತ್ತು ಮೃದ್ವಂಗಿಗಳಂಥ ಜಲಚರಗಳನ್ನೂ ಆಹಾರಕ್ಕೆ ಬಳಸಿಕೊಳ್ಳುತ್ತಿದ್ದರು. ಕಡಲಚಿಪ್ಪಿನ ತುಣುಕುಗಳು ದೊರೆತಿರುವುದರಿಂದ ಇವರು ಸಮುದ್ರ ತೀರದ ಜನರೊಡನೆ ಸಂಪರ್ಕ ಹೊಂದಿದ್ದ ಸಾಧ್ಯತೆಯಿದೆ. ಮೂಳೆಯ ಉಪಕರಣಗಳನ್ನು ತಯಾರಿಸುವ ತಂತ್ರಜ್ಞಾನ ಇವರಿಗೆ ತಿಳಿದಿತ್ತು. ಬಾಚಣಿಗೆಯಂಥ ವಸ್ತು, ಹೆರೆಯುವ ಚೆಕ್ಕೆ, ರಂಧ್ರಕ, ಮೊನೆ, ಸಲಾಕೆ ಮುಂತಾದ ಮೂಳೆಯ ವಸ್ತುಗಳಿವೆ.

ಮೂರು ಉಪಹಂತಗಳಲ್ಲಿಯೂ 20 ಸೆಂಮೀ–80 ಸೆಂಮೀ ವ್ಯಾಸದ ಅನೇಕ ಗುಳಿಗಳಿವೆ. ಗುಳಿಗಳೊಳಗೆ ಅರೆಬರೆ ಸುಟ್ಟ ಮಣ್ಪಾತ್ರೆ ಚೂರುಗಳು, ಸುಟ್ಟು ಕರಕಲಾದ ಹಾಗೂ ಸುಡದ ಪ್ರಾಣಿ ಮೂಳೆಗಳು; ಬಹುಮಟ್ಟಿಗೆ ತಲೆಕೆಳಗಾಗಿ ಇಟ್ಟ ಪೂರ್ಣ ಮಡಕೆಗಳು, ಕೆಲವೊಮ್ಮೆ ಒಂದರ ಮೇಲೊಂದರಂತೆ ತಲೆಕೆಳಗಾಗಿಟ್ಟಿದ್ದ ಬಟ್ಟಲುಗಳು, ಗೂಳಿ, ಗೂಳಿಯ ತಲೆ, ನಾಯಿ ಮುಂತಾದ ಸುಡಾವೆಮಣ್ಣಿನ ಗೊಂಬೆಗಳು ಇದ್ದುವು. ಕೆಲವು ಗುಳಿಗಳ ಮಧ್ಯಭಾಗದಲ್ಲಿ ನೇರ ನಿಲ್ಲಿಸಿದ ಕಲ್ಲುಚಪ್ಪಡಿಗಳು ಮಾತ್ರ ಇದ್ದುವು. ಬೂದಿ, ಸುಟ್ಟಧಾನ್ಯ ಅಥವಾ ಹುಲ್ಲು ಬೀಜಗಳ ಕುರುಹುಗಳೂ ಬಳಪದ ಕಲ್ಲಿನ ಬಿಲ್ಲೆಮಣಿಗಳೂ ಸುಡಾವೆಮಣ್ಣಿನ ತಕಲಿಗಳೂ ಕೆಲವೊಂದರಲ್ಲಿ ಇದ್ದುವು.



ತಾಮ್ರ–ಶಿಲಾಸಂಸ್ಕೃತಿಯ ತಾಮ್ರದ ಆಭರಣ, ಉಪಕರಣಗಳು

1ಎ ಉಪಹಂತದ ಮನೆಗಳಲ್ಲಿ ಮಾತ್ರ ಧಾನ್ಯ ಶೇಖರಣ ಗುಳಿಗಳಿದ್ದುವು. ಇವನ್ನು ಮನೆಯ ಹೊರಗಡೆ ಅಗೆಯಲಾಗಿತ್ತು. ಅನಂತರದ ಹಂತಗಳಲ್ಲಿ ಇವುಗಳಲ್ಲಿ ಕಸಕಡ್ಡಿಗಳಂಥ ತ್ಯಾಜ್ಯವನ್ನು ತುಂಬಲಾಯಿತು ಅಥವಾ ಪ್ರಾಣಿಗಳನ್ನು ಸಮಾಧಿ ಮಾಡಲು ಬಳಸಿಕೊಳ್ಳಲಾಯಿತು. 1ಬಿ ಮತ್ತು ಸಿ ಉಪಹಂತದಲ್ಲಿ ಸಣ್ಣ ಕಟ್ಟೆಯ ಮೇಲೆ ನಿಲ್ಲಿಸಿದ ಕಣಜಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸುವ ಸಂಪ್ರದಾಯವಿತ್ತು.

1ಎ ಉಪಹಂತದ ಜನರು ಮೃತ ಮಕ್ಕಳನ್ನು ಮನೆಯ ಹೊರಗೆ ಅಥವಾ ಮನೆಯೊಳಗೆ ಮಡಕೆಗಳಲ್ಲಿ ಹೂಳುತ್ತಿದ್ದರು. ಇವರ ಶವಸಂಸ್ಕಾರ ಪದ್ಧತಿಯಲ್ಲಿ 4 ಪ್ರಕಾರಗಳಿವೆ: ಬಾಯಿಗೆ ಬಾಯಿ ಕೂಡುವಂತೆ ಅಡ್ಡಲಾಗಿ ಇಲ್ಲವೇ ಲಂಬವಾಗಿ ಇಟ್ಟ ಎರಡು ಮಡಕೆಗಳು; ನೇರವಾಗಿಟ್ಟ ಅಥವಾ ಅಡ್ಡಲಾಗಿ ಮಲಗಿಸಿದ ಏಕ ಮಡಕೆ; ಆಳವಿರದ ಗುಂಡಿ ಸಮಾಧಿಗಳು. ಪೂರ್ಣ ಅಥವಾ ಆಂಶಿಕವಾದ ಈ ಸಮಾಧಿಗಳಲ್ಲಿ ಸಾಮಾನ್ಯವಾಗಿ ಅಸ್ಥಿಯಲ್ಲದೆ ಇತರ ವಸ್ತುಗಳಿರುತ್ತಿರ ಲಿಲ್ಲ. ಈ ಹಂತಕ್ಕೆ ಸೇರಿದ ಎಲ್ಲ ಸಮಾಧಿಗಳೂ 3 ವರ್ಷದೊಳಗಿನ ಮಕ್ಕಳದಾಗಿರುವುದು ಗಮನಾರ್ಹ. ಇದೇ ಪ್ರಕಾರಗಳು 1ಬಿ ಹಂತದಲ್ಲಿ ಮುಂದುವರೆದವು. ಹೊಸ ಪ್ರಕಾರವೆಂದರೆ ಒಂದೇ ಸಮಾಧಿಯಲ್ಲಿ ಒಂದನ್ನು ನೇರವಾಗಿಯೂ ಮತ್ತೊಂದನ್ನು

ಅಡ್ಡಲಾಗಿಯೂ ಹೂಳಿದ ಮಡಕೆಗಳು. ಈ ಹಂತಕ್ಕೆ ಸೇರಿದ ಸಮಾಧಿಗಳು ಕೆಲವು ಅಂಶಗಳಲ್ಲಿ ಭಿನ್ನವಾಗಿವೆ. ಉದಾಹರಣೆಗೆ ಎಲ್ಲ ಸಮಾಧಿಗಳು ಪೂರ್ವಾಭಿಮುಖವಾಗಿಲ್ಲದಿರುವುದು; ಮೇಕೆಯ ತಲೆಬುರುಡೆ ಮತ್ತು ಮೂಳೆಗಳು ಮಾನವ ಅಸ್ಥಿ ಅವಶೇಷಗಳೊಡನೆ ಸಾಮಾನ್ಯವಾಗಿ ಕಂಡುಬಂದಿರುವುದು; ಮಾನವ ತಲೆಬುರುಡೆಯ ಬಳಿಯೇ ಮೇಕೆಯ ತಲೆಬುರುಡೆಯನ್ನು ಇಟ್ಟಿರುವುದು ಇತ್ಯಾದಿ. ಮೃತಮಕ್ಕಳ ವಯಸ್ಸು ಕೆಲವು ತಿಂಗಳಿಂದ ಹತ್ತು ವರ್ಷಗಳವರೆಗೆ ನದಾಗಿತ್ತು. ಬಾಯಿಗೆ ಬಾಯಿ ಕೂಡುವಂತೆ 2 ಮಡಕೆಗಳನ್ನಿಟ್ಟಿದ್ದ ಒಂದು ಸಮಾಧಿಯಲ್ಲಿ ಮಡಕೆಗಳಿಗಿಂತ ಶವ ಉದ್ದವಾಗಿದ್ದುದರಿಂದ ದೇಹದ ಮೇಲ್ಭಾಗ ಮತ್ತು ಕೆಳಭಾಗಗಳು ಮಡಕೆಗಳ ಒಳಗೂ ನಡುಭಾಗ ತೆರೆದಂತೆಯೂ ಇರುವ ಹಾಗೆ ಮಡಕೆಗಳನ್ನು ಜೋಡಿಸಲಾಗಿತ್ತು. ಕೆಲವು ಸಂದರ್ಭಗಳಲ್ಲಿ ಮಡಕೆಯಲ್ಲಿ ಕೊರೆದ ರಂಧ್ರದ ಮೂಲಕ ಕಾಲಿನ ಮೂಳೆಗಳು ಹೊರಚಾಚಿದ್ದವು.



ತಾಮ್ರ-ಶಿಲಾಸಂಸ್ಕೃತಿಯ ಮಣ್ಪಾತ್ರೆಗಳ ಚೂರುಗಳು

1ಸಿ ಉಪಹಂತದಲ್ಲಿದ್ದ ಐದು ಬಗೆಯ ಸಮಾಧಿಪದ್ಧತಿಗಳೆಂದರೆ: ಆಳವಿಲ್ಲದ ಗುಂಡಿಸಮಾಧಿ (ಮಕ್ಕಳದ್ದು), ಗುಂಡಿ ಸಮಾಧಿ, ನೆಲದಡಿಯ ಕೋಣೆ, ನೇರವಾಗಿ ಹೂಳಿದ ಮಡಕೆ ಮತ್ತು ಅಡ್ಡಲಾಗಿ ಹೂಳಿದ ಎರಡು ಮಡಕೆಗಳು. ಆಳವಿಲ್ಲದ, ದೀರ್ಘ ಚತುರಸ್ರಾಕಾರದ ಗುಂಡಿ ಸಮಾಧಿಯಲ್ಲಿ ಶವದೊಡನೆ ನಳಿಕೆ ಪಾತ್ರೆಯನ್ನು ಸಾಮಾನ್ಯವಾಗಿ ಇಟ್ಟದ್ದಾರೆ. ಇದೇ ಪ್ರಕಾರದ ಮತ್ತೊಂದು ಸಮಾಧಿಯಲ್ಲಿ ನಳಿಕೆ ಇರುವ ಬೋಗುಣಿಯೊಂದರಲ್ಲಿ ಶಿಶುವಿನ ಮೂಳೆಗಳೂ ವರ್ಣಚಿತ್ರಿತ ನಳಿಕೆ ಪಾತ್ರೆಯೂ ಮೇಕೆಯ ತಲೆಬುರುಡೆಯೂ ಇದ್ದುವು. ನೆಲಕೋಣೆ ಸಮಾಧಿಗಳಲ್ಲಿ ಎರಡು ವಿಧಗಳಿವೆ: ಶಿಲುಬೆಯಾಕೃತಿಯ ನೆಲಕೋಣೆ ಹಾಗೂ ಅವಳಿ ನೆಲಕೋಣೆ. ನೆಲಕೋಣೆಯೊಂದರಲ್ಲಿ ಕೈಕಾಲು ಮಡಿಸಿದ ಸಂಪೂರ್ಣ ಅಸ್ಥಿಪಂಜರವೊಂದು ದೊರೆತಿರುವುದು ಸ್ವಾರಸ್ಯಕರ. ಬಿಲ್ಲಿನಂಥ ಕಬ್ಬಿಣದ ಉಪಕರಣ ಮತ್ತಿತರ ವಸ್ತುಗಳು ಇಲ್ಲಿದ್ದವು. ಒಂದು ಗುಂಡಿ ಸಮಾಧಿಯಲ್ಲಿ ಬೂದಿಯ ಪದರದ ಮೇಲೆ ಅಸ್ಥಿಪಂಜರವಿತ್ತು. ಇದರ ಕಾಲುಗಳು ಅರೆಬರೆ ಸುಟ್ಟ, ಸೀಳಿದ ಬಿದಿರುಚೂರುಗಳಿಂದ ಮುಚ್ಚಲ್ಪಟ್ಟಿದ್ದವು. ಪರಶುವಿನಂಥ ಒಂದು ಕಬ್ಬಿಣದ ವಸ್ತು, ಕಬ್ಬಿಣದ ಮುಕ್ಕಾಲುಮಣೆ, ತಾಮ್ರದ ಗಂಟೆಗಳು (ಕೆಂಪು ಮಡಕೆಯೊಂದರಲ್ಲಿ ಏಳುಗಂಟೆಗಳಿದ್ದುವು) ಈ ಗುಂಡಿಯ ಒಳಗೆ ಕಂಡುಬಂದವು. ಇಲ್ಲಿ ದೊರೆತ ಇತರ ಗಮನಾರ್ಹ ವಸ್ತುಗಳೆಂದರೆ ಹಕ್ಕಿಯ ಶಿರೋಭಾಗದಾಕೃತಿಯ ಮುಚ್ಚಳ, ಮೂರುಕಾಲಿನ ಜಾಡಿಗಳು, ರಂಧ್ರಗಳಿರುವ ಕುಂಭ, ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು, ಬೂದುಬಣ್ಣದ ಮೆರುಗಿನ ನಳಿಕೆ ಪಾತ್ರೆ, ಮಡಕೆಗಳು.

ಈ ಉತ್ಖನನದ ಮಹತ್ತ್ವದ ಶೋಧವೆಂದರೆ ತ್ರಿಕೋನಾಕೃತಿಯ, ತೆಳು ಕಡಪಕಲ್ಲಿನ ಚಪ್ಪಡಿಗಳಿಂದ ನಿರ್ಮಿಸಿದ ಮಾನವಾಕೃತಿಯ ಒರಟು ಕೆತ್ತನೆಗಳು. ಇವುಗಳ ಜೊತೆಗೆ ಪ್ರಾಣಿಮೂಳೆಗಳು, ಕಪ್ಪು- ಕೆಂಪು ದ್ವಿವರ್ಣ ಪಾತ್ರೆಗಳು ಮೂರು ಗುಂಡಿಗಳಲ್ಲಿ ದೊರೆತಿದ್ದು ಇವು 1ಬಿ ಉಪಹಂತಕ್ಕೆ ಸೇರುತ್ತವೆ. ಇದ್ದಲು-ಬೂದಿ ಸಹಿತವಾದ ಒಲೆ ಅಥವಾ ಕುಲುಮೆಗಳೂ ಉತ್ಖನನದಲ್ಲಿ ಕಂಡುಬಂದವು. ಇನ್ನೊಂದು ಪ್ರಮುಖ ಶೋಧನೆಯೆಂದರೆ 1ಎ ಉಪಹಂತದ ಸ್ತರದ ಕೆಳಗಿದ್ದ ಸೂಕ್ಷ್ಮಶಿಲೋಪಕರಣಗಳ ಪದರ.

ಬೃಹತ್ ಶಿಲಾಸಮಾಧಿಗಳು: ಉರುವಂಕ ನದಿಯ ಪಶ್ಚಿಮ ದಂಡೆಯ ಮೇಲೆ ತಾಮ್ರ-ಶಿಲಾಯುಗ ನೆಲೆಯ 1.5ಕಿಮೀ ಆಗ್ನೇಯಕ್ಕೆ 27 ಬೃಹತ್ ಶಿಲಾಯುಗ ಸಮಾಧಿಗಳಿವೆ. ಏಳು ಸಮಾಧಿಗಳಲ್ಲಿ ಉತ್ಖನನವಾಗಿದೆ. ಇವೆಲ್ಲವೂ ಗುಂಡಿ ಸಮಾಧಿಗಳು. ಸು. 16 ಮೀ ವ್ಯಾಸ ಮತ್ತು 1.15 ಮೀ ಎತ್ತರದ ಸಮಾಧಿ ಎಲ್ಲಕ್ಕಿಂತ ದೊಡ್ಡದು. ಇದರ ಮೇಲೆ ಒರಟು ಕಲ್ಲುಗಳನ್ನು ಗುಪ್ಪೆಯ ರೀತಿ ರಾಶಿ ಹಾಕಲಾಗಿದೆ. ಈ ಸಮಾಧಿಯಲ್ಲಿ 2.65x2.3 ಅಳತೆಯ, ಉತ್ತರ-ದಕ್ಷಿಣಾಭಿಮುಖವಾಗಿರುವ ಆಯತಾಕಾರದ ಗುಂಡಿಯನ್ನು ಸುಣ್ಣಕಲ್ಲಿನ ತಳಬಂಡೆಯೊಳಗೆ ಅಗೆದಿದ್ದಾರೆ. 95 ಸೆಂಮೀ ಆಳದ ಈ ಗುಂಡಿಯ ಕೆಳಗೆ ಪೂರ್ವ-ಪಶ್ಚಿಮ ಅಭಿಮುಖವಾಗಿರುವ ಇನ್ನೊಂದು ಗುಂಡಿಯಿದ್ದು ಇದು 90 ಸೆಂಮೀ ಆಳವಿದೆ. ಗುಂಡಿಯ ಒಟ್ಟು ಆಳ 1.85 ಮೀ. ಮಡಕೆಗಳು ಹಾಗೂ ಕಬ್ಬಿಣವಸ್ತುಗಳನ್ನು ಕೆಳಗುಂಡಿಯ ಅಸಮನೆಲದ ಮೇಲೆ ಸಾಲಾಗಿ ಇಡಲಾಗಿದೆ. ಗುಂಡಿಯನ್ನು ಕಪ್ಪು ಆವೆಮಣ್ಣಿನಿಂದ 1.15 ಮೀ ವರೆಗೆ ತುಂಬಿಸಲಾಗಿದೆ. ಬೋಗುಣಿಯಾಕಾರದ ತಗ್ಗು ಉಂಟಾಗುವಂತೆ ಆವೆಮಣ್ಣನ್ನು ತುಂಬಿಸಲಾಗಿದೆ. ತಗ್ಗಿನ ಮೇಲ್ಮೈಯಲ್ಲಿ ಕಲ್ಲುಚಪ್ಪಡಿ ತುಣುಕುಗಳನ್ನು ಹಾಸಿದೆ. ಅನಂತರ ಕಂದುಬಣ್ಣದ ಮಣ್ಣಿನಿಂದ ಬೋಗುಣಿಯಾಕಾರದ ತಗ್ಗನ್ನು ಒತ್ತಿ ತುಂಬಲಾಗಿದೆ. ಗುಂಡಿಯ ಸುತ್ತ (ನೆಲದಡಿಯಲ್ಲಿ) 5.57ಮೀ ವ್ಯಾಸದ ವೃತ್ತಾಕಾರದ ಗಾರೆರಹಿತ ಗೋಡೆಯಿದೆ. ಗರಿಷ್ಠ ಒಂಬತ್ತು ವರಸೆಗಳ ಈ ಗೋಡೆಯನ್ನು ಕಲ್ಲುಚಪ್ಪಡಿಗಳಿಂದ ನಿರ್ಮಿಸಲಾಗಿದೆ. ಇಡೀ ರಚನೆಯ ಮೇಲೆ ಒರಟು ಕಲ್ಲುಚಪ್ಪಡಿ ತುಣುಕುಗಳ ಗುಪ್ಪೆಯಿದೆ. ಈ ಸಮಾಧಿಯೊಳಗೆ 38 ಪಾತ್ರೆಗಳು ದೊರೆತಿವೆ – ಕಪ್ಪು-ಕೆಂಪು ದ್ವಿವರ್ಣದ ಏಳು ಗೋಲಾಕಾರದ ಮಡಕೆ; ಕಪ್ಪುಬಣ್ಣದ ಗಂಟೆಯಾಕಾರದ ಪಾತ್ರೆ; ಆರು ಸಿಂಬಿ; 4ಕಾಲಿನ ಮೂರು ಜಾಡಿಗಳು; ರಂಧ್ರಗಳುಳ್ಳ ಕುಂಭ ಹಾಗೂ 16 ಇತರ ಮಣ್ಪಾತ್ರೆಗಳು (ಕೆಂಪು ವರ್ಣದವು). ಕಬ್ಬಿಣದ ವಸ್ತುಗಳಲ್ಲಿ ಸಣ್ಣ ಕಠಾರಿ, ಶಂಕುವಿನಾಕಾರದ ಹಿಡಿಕೆಯುಳ್ಳ ಉದ್ದನೆಯ ಭರ್ಜಿಗಳಿದ್ದುವು (1.53 ಮೀ).

ಉತ್ಖನನ ಮಾಡಿದ ಇನ್ನಿತರ ಆರು ಸಮಾಧಿಗಳಲ್ಲಿಯೂ ಇಂಥವೇ ಲಕ್ಷಣಗಳಿವೆಯಾದರೂ ವೃತ್ತದ ಗಾತ್ರ, ಗುಂಡಿಯ ಆಳ ಮತ್ತು ಸಮಾಧಿವಸ್ತುಗಳಲ್ಲಿ ವ್ಯತ್ಯಾಸವಿದೆ. ಒಂದು ಸಮಾಧಿಯಲ್ಲಿ ಮಣ್ಪಾತ್ರೆಗಳ ಜೊತೆಗೆ 26 ಶಂಖಚಿಪ್ಪುಗಳಿದ್ದುವು. ಇವುಗಳಲ್ಲಿ 17 ನ್ನು ಭಲ್ಲೆಯಂಥ (1.1 ಮೀ ಉದ್ದ, 10 ಸೆಂಮೀ ಅಗಲ) ಕಬ್ಬಿಣದ ವಸ್ತುವಿನೊಡನೆ ಕುಂಭವೊಂದರಲ್ಲಿ ಇಡಲಾಗಿತ್ತು. ಕಬ್ಬಿಣದ ಪಟ್ಟಿ, ವೃತ್ತಾಕಾರದ ಕಲ್ಲಿನ ಒರಳು ಇತರ ಅವಶೇಷಗಳು. ಶಂಖದ ಚೂರುಗಳಲ್ಲಿ ತೂತುಗಳಿದ್ದು ಇವನ್ನು ಹಾರದ ಭಾಗಗಳಾಗಿ ಬಳಸಿದ್ದಿರಬಹುದು. (ಬಿ.ಎನ್.)

**ರಾಯ್‌ಪುರ:** ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯಲ್ಲಿರುವ ಬೃಹತ್‌ಶಿಲಾ ಸಂಸ್ಕೃತಿಯ ಗೋರಿ ನೆಲೆ. ಊನ ನದಿಯ ಬಲದಂಡೆ ಮೇಲೆ 10 ಹೆ. ಜಾಗದಲ್ಲಿ ಶಿಲಾ ಗೋರಿಗಳು ಹರಡಿವೆ. ರಾಯ್‌ಪುರ್‌ನ ಸುತ್ತಮುತ್ತಲಿನ ಪ್ರದೇಶದಲ್ಲಿ ಒಟ್ಟು 391 ಕಲ್ಲುವೃತ್ತ ಗೋರಿಗಳನ್ನು ಗುರುತಿಸಲಾಗಿದೆ. ಈ ಕಲ್ಲುವೃತ್ತಗಳು 4 ಪ್ರತ್ಯೇಕ ಸಮೂಹಗಳಲ್ಲಿವೆ. 3 ಮತ್ತು 4ನೆಯ ಗುಂಪಿನ ಎರಡೆರಡು ಗೋರಿಗಳಲ್ಲಿ ಡೆಕ್ಕನ್ ಕಾಲೇಜಿನ ಎಸ್.ಬಿ.ದೇವ್, ದೆಗ್ಲೂರ್‌ಕರ್ ಮತ್ತು ಗೌರಿ ಲಾಡ್ ಅವರು 1984-85 ಮತ್ತು 1987-90ರಲ್ಲಿ ಉತ್ಖನನ ನಡೆಸಿದರು.

ಉತ್ಖನನ ನಡೆಸಿದ 4 ಗೋರಿಗಳಲ್ಲಿ ವೃತ್ತಗಳೊಳಗಿನ ಜಾಗವನ್ನು ಸಣ್ಣಸಣ್ಣ ಕಲ್ಲುಗಳಿಂದ ತುಂಬಲಾಗಿತ್ತು. ಒಂದು ಗೋರಿಯೊಳಗೆ ವಿದರ್ಭ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಶವಕುಣಿಯಿರದೆ ಚಪ್ಪಡಿಗಳಿಂದ ನಿರ್ಮಿಸಿದ ಕಲ್ಮನೆಯಿದ್ದುದು (1.8X0.6 ಮೀ) ವಿಶೇಷ. ಕಲ್ಮನೆ 2 ಸಮ ಭಾಗಗಳಾಗುವಂತೆ ಒಳಗಡೆ ಮಧ್ಯದಲ್ಲಿ ಚಪ್ಪಡಿಯನ್ನು ನಿಲ್ಲಿಸಲಾಗಿತ್ತು. ಕಲ್ಮನೆಯೊಳಗೆ ಯಾವುದೇ ಅವಶೇಷಗಳಿರಲಿಲ್ಲ; ಹೊರಭಾಗದಲ್ಲಿ 3 ಜನರ ಅಸ್ಥಿ ಅವಶೇಷಗಳಿದ್ದು ಜೊತೆಯಲ್ಲಿ ಕಪ್ಪು-ಕೆಂಪು ದ್ವಿವರ್ಣ ಪಾತ್ರೆ, ಹೊಳಪಿನ ಕಪ್ಪು ಪಾತ್ರೆ ಮತ್ತು ಅಭ್ರಕ-ಮಿಶ್ರಿತ ಕೆಂಪು ಪಾತ್ರೆಗಳು, ಕಬ್ಬಿಣದ ಮೊಳೆ, ದೀಪ, ಬಾಚಿ, ಬಾಣದ ಮೊನೆಗಳು, ತಾಮ್ರದ ಬಳೆ, ಕೊರಳ ಆಭರಣ, ಪಕ್ಷಿಯಾಕಾರದ ಹಿಡಿಕೆಯಿರುವ ಮುಚ್ಚಳಗಳಿದ್ದವು. ಇಂಥ ಸಮಾಧಿ ಕಾಣಿಕೆಗಳು ಇತರ ಸಮಕಾಲೀನ ನೆಲೆಗಳಾದ ಮಹುರ್ಜರಿ, ತಕಲ್‌ಘಾಟ್‌ಗಳಲ್ಲಿಯೂ ಕಂಡುಬಂದಿವೆ. ಇಲ್ಲಿ ಅಗೆದ ಇನ್ನೊಂದು ಇದೇ ಪ್ರಕಾರದ ಗೋರಿಯಲ್ಲಿ ಇತರ ಅವಶೇಷಗಳೊಂದಿಗೆ ವರ್ಣಚಿತ್ರಿತ ಮಣ್ಪಾತ್ರೆಗಳೂ ತಾಮ್ರದ ಕುದುರೆಯ ಆಭರಣಗಳೂ ಇದ್ದವು. ಈ ಗೋರಿಯಲ್ಲಿ ಮನುಷ್ಯನ ಅಸ್ಥಿ ಚೂರುಗಳೊಂದಿಗೆ ಕುದುರೆಯ ಅಸ್ಥಿ ಅವಶೇಷಗಳೂ ಇದ್ದವು. ಉಳಿದೆರಡು ಗೋರಿಗಳಲ್ಲಿ ಕಲ್ಮನೆಯಿರಲಿಲ್ಲ; ಭೂಮಟ್ಟದಲ್ಲಿ ಕಲ್ಲುವೃತ್ತಗಳನ್ನು ಮಾತ್ರ ನಿರ್ಮಿಸಲಾಗಿತ್ತು. ಒಂದರಲ್ಲಿ ಮೇಲೆ ಹೇಳಿದ ಪ್ರಕಾರಗಳ ಮಣ್ಪಾತ್ರೆಗಳೊಂದಿಗೆ (ಚಿತ್ರಿತ ಪಾತ್ರೆ ಹೊರತುಪಡಿಸಿ) ಎರಡು ಕುದುರೆಗಳ ಸಂಪೂರ್ಣ ಅಸ್ಥಿಪಂಜರಗಳಿದ್ದು ಇವು ಬಲಿಕೊಟ್ಟ ಪ್ರಾಣಿಗಳೆಂದು ಅನುಮಾನಿಸಲಾಗಿದೆ. ಜೊತೆಯಲ್ಲಿ ಕಬ್ಬಿಣದ ಕೊಡಲಿ, ಕತ್ತರಿ ಕಟ್ಟು, ಬಾಚಿ, ಸಲಿಕೆಗಳನ್ನೂ ತಾಮ್ರದ ಬಳೆಗಳನ್ನೂ ಇಡಲಾಗಿತ್ತು. ಒಟ್ಟಿನಲ್ಲಿ ಈ ನೆಲೆಯಲ್ಲಿ ಕಂಡುಬಂದಿರುವ ಕಲ್ಮನೆ ಗೋರಿಗಳು ವಿದರ್ಭದ ಇನ್ನಾವುದೇ ಬೃಹತ್ ಶಿಲಾಯುಗದ ಗೋರಿ ನೆಲೆಗಳಲ್ಲಿ ಈವರೆಗೆ ಕಂಡುಬಂದಿಲ್ಲ ಎಂಬುದು ಗಮನಾರ್ಹ. (ವೈ.ಎಚ್.)

**ರಾವ್, ಎಸ್.ಆರ್.:** 1922- . ಪ್ರಸಿದ್ಧ ಪುರಾತತ್ತ್ವಜ್ಞ ಹಾಗೂ ಸಿಂಧೂಲಿಪಿತಜ್ಞ. ಇವರ ಪೂರ್ಣ ಹೆಸರು ಶಿಕಾರಿಪುರ ರಂಗನಾಥರಾವ್. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಆನಂದಾಪುರದಲ್ಲಿ 1922ರಲ್ಲಿ ಜನಿಸಿದರು. ಜಡೆ, ಶಿವಮೊಗ್ಗಗಳಲ್ಲಿ ಪ್ರೌಢಶಾಲೆಯವರೆಗಿನ ವ್ಯಾಸಂಗವನ್ನು ಪೂರೈಸಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು ಅನಾಥಾಲಯದಲ್ಲಿದ್ದು ಇತಿಹಾಸದಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದರು. ಮೆಕಿಂತಾಷ್ ಮತ್ತು ಎಂ.ಎಚ್. ಕೃಷ್ಣ ಅವರಿಂದ ಇವರು ಹೆಚ್ಚು ಪ್ರಭಾವಿತರಾದರು. ಪ್ರಥಮ ಶ್ರೇಣಿಯಲ್ಲಿ ಪದವಿ ಗಳಿಸಿದ ಇವರಿಗೆ ಸರ್ ಹ್ಯೂಕ್ಲಾಂಡಿ ಚಿನ್ನದ ಪದಕ ದೊರೆಯಿತು. ಅನಂತರ ನಾಗಪುರ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಗಳಿಸಿದರು. 1947ರಲ್ಲಿ ಬರೋಡ ಸಂಸ್ಥಾನದ ಪುರಾತತ್ತ್ವ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾದರು.

ಶಾಸನಶಾಸ್ತ್ರ ಮತ್ತು ನಾಣ್ಯಶಾಸ್ತ್ರಗಳಲ್ಲಿಯೂ ತರಬೇತಿ ಹೊಂದಿದ ಇವರಿಗೆ ಬರೋಡದ ಕಲಾಭವನದಿಂದ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಹಾಗೂ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯಿಂದ ಸಂರಕ್ಷಣೆ ಮತ್ತು ಉತ್ಖನನ ವಿಷಯಗಳಲ್ಲಿ ಪರಿಣತಿ ದೊರೆಯಿತು.

ಪ್ರಾಗೈತಿಹಾಸಿಕ ಪುರಾತತ್ತ್ವ ಕ್ಷೇತ್ರದಲ್ಲಿ ಜ್ಞಾಯ್ನರ್ ಅವರಿಂದ, ಕಂಚುಯುಗದ ಪಶ್ಚಿಮ ಏಷ್ಯದ ಪುರಾತತ್ತ್ವದಲ್ಲಿ ಕ್ಲಾಡ್ ಸೋರ್ಬೋರ್ನ್ ಅವರಿಂದ ಹಾಗೂ ಪ್ರಾಚೀನ ಲಿಪಿಶಾಸ್ತ್ರದಲ್ಲಿ ನೌಗಯರ್ಡ್ ಅವರಿಂದ ತರಬೇತಿ ಹೊಂದಿದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆರ್ಕಿಯಾಲಜಿಸ್ಟ್ ಆಗಿ ನೇಮಕಗೊಂಡರು. ನಿವೃತ್ತರಾಗುವ ವರೆಗೂ (1980) ಈ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. ಯುರೋಪಿನ ರಾಷ್ಟ್ರಗಳು, ಪಶ್ಚಿಮ ಏಷ್ಯ, ರಷ್ಯ ಮತ್ತು ಅಮೆರಿಕಗಳಲ್ಲಿ ಪ್ರವಾಸ ಮಾಡಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಸಿಂಧೂ ಸಂಸ್ಕೃತಿಯನ್ನು ಕುರಿತು ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಲೋಥಲ್ ಅಂಡ್ ದಿ ಇಂಡಸ್ ಸಿವಿಲೈಜೇಷನ್ ಎಂಬ ಇವರ ಕೃತಿಗೆ 1981ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಡಿ.ಲಿಟ್ ಪದವಿ ನೀಡಿ ಗೌರವಿಸಿತು.

ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಆರ್ಥಿಕ ನೆರವಿನಿಂದ ಭಾರತದ ಸಮುದ್ರದಲ್ಲಿ ಮುಳುಗಿದ ಪ್ರಾಚೀನ ನಗರ/ಗ್ರಾಮ/ಹಡಗು/ವಸ್ತುಗಳಿಗೆ ಸಂಬಂಧಿಸಿದಂತೆ ಸಾಗರ ಪುರಾತತ್ತ್ವ ಅಧ್ಯಯನಗಳು ಎಂಬ ಸಂಶೋಧನ ಯೋಜನೆಯ ನೇತೃತ್ವ ವಹಿಸಿ ಕೆಲಸ ಮಾಡಿದ ಹೆಮ್ಮೆ ಇವರದು. 1948ರಲ್ಲಿ ಶಿಶುಪಾಲಗಡದಲ್ಲಿ ನಡೆಸಲಾದ ಉತ್ಖನನದಲ್ಲಿ ತಂತ್ರವಿಧಾನಗಳ ಬಗ್ಗೆ ಅನುಭವಗಳಿಸಿದ ಇವರು ಗುಜರಾತಿನ ಅಮ್ರೇಲಿಯಲ್ಲಿ ಚಿಕ್ಕ ಪ್ರಮಾಣದಲ್ಲಿಯಾದರೂ ವೈಜ್ಞಾನಿಕ ಸ್ವರೂಪದ ಉತ್ಖನನ ನಡೆಸಿ ಅಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ವಿಶಿಷ್ಟ ಲಕ್ಷಣದ ದಹನಾನಂತರ ಅಸ್ಥಿ ಸಂಚಯನ ಸಂಸ್ಕಾರದ ವಿಶಿಷ್ಟ ಪದ್ಧತಿಯೊಂದನ್ನು ಇವರು ಬೆಳಕಿಗೆ ತಂದರು.

ಸಿಂಧೂ ಸಂಸ್ಕೃತಿಗೆ ಸಂಬಂಧಿಸಿದಂತೆ ಗುಜರಾತ್-ಕಚ್ಛ್ ಪ್ರದೇಶದಲ್ಲಿಯೇ ಸು.50ಕ್ಕೂ ಹೆಚ್ಚು ನೆಲೆಗಳನ್ನು ಪತ್ತೆ ಮಾಡಿದರು. ರಂಗಪುರ ಮತ್ತು ಲೋಥಲ್‌ಗಳಲ್ಲಿ ಉತ್ಖನನ ನಡೆಸಿ ಇಲ್ಲಿಯ ರಚನೆಗಳು ಮತ್ತು ಮಾನವ ನಿರ್ಮಿತ ವಸ್ತುಗಳು ಸಿಂಧೂ ಸಂಸ್ಕೃತಿಯ ಪ್ರೌಢಹಂತವೊಂದನ್ನು ಪ್ರತಿನಿಧಿಸುವಲ್ಲಿ ಹೇಗೆ ಮಹತ್ತ್ವದ್ದಾಗಿವೆ ಎಂಬುದನ್ನು ಪ್ರಮಾಣೀಕರಿಸಿದರು. ಲೋಥಲ್ 1954ರಲ್ಲಿ ಪರಿಶೋಧಿತವಾಯಿತು. 1955-62ರವರೆಗೆ ಇಲ್ಲಿ ನಡೆದ ಉತ್ಖನನಗಳಿಂದ ಸಿಂಧೂ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕು ಬಿದ್ದಿತು. ಲೋಥಲ್ ಪ್ರಪಂಚದಲ್ಲಿಯೇ ಪ್ರಾಚೀನ ಬಂದರುಗಳಲ್ಲೊಂದಾಗಿದ್ದು ಇಲ್ಲಿಯ ಜನರು ಬಹರೇನ್‌ದ್ವೀಪ, ಇಂದಿನ ಇರಾನ್ ಮತ್ತು ಇರಾಕ್ ಪ್ರದೇಶಗಳ ಪ್ರಾಚೀನ ಜನರೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದರೆಂದು ತಿಳಿದುಬಂತು. ಲೋಥಲ್‌ನಲ್ಲಿ 213ಮೀ ಉದ್ದ, 37.20ಮೀ ಅಗಲದ ಮೊತ್ತಮೊದಲ ಹಡಗುಕಟ್ಟೆ ಗೋಚರಿಸಿತು.

ಸಮುದ್ರ ಹಾಗೂ ನದೀತೀರದ ನೆಲೆಗಳು ಪ್ರವಾಹಗಳಿಗೆ ತುತ್ತಾಗಿ ನಾಶಹೊಂದುತ್ತಿದ್ದ ಅಂಶವನ್ನು ಲೋಥಲ್ ಸ್ಪಷ್ಟವಾಗಿ ತೋರಿಸಿಕೊಟ್ಟಿತು. ಪ್ರ.ಶ.ಪೂ. 1900ರ ತರುವಾಯ ಸಿಂಧೂ ಸಂಸ್ಕೃತಿಯ ಜನರು ಹಂಚಿಹರಡಿ ಹೋಗಿ ಹಳ್ಳಿಗಳನ್ನು ಕಟ್ಟಿಕೊಂಡು ವಾಸಮಾಡತೊಡಗಿದರು. ಕಾಲಿಬಂಗನ್ ಮತ್ತು ಲೋಥಲ್ ಉತ್ಖನನಗಳಿಂದ ಜನರು ಅಗ್ನಿಪೂಜೆ ಮಾಡುತ್ತಿದ್ದ ಅಂಶ ಬೆಳಕಿಗೆ ಬಂದಿದೆ. ಸಿಂಧೂ ಜನರಿಗೆ ಕುದುರೆಗಳ ಪರಿಚಯವಿರಲಿಲ್ಲ ಎಂಬ ವಾದಕ್ಕೆ ಪ್ರತ್ಯುತ್ತರವಾಗಿ ಕುದುರೆಯ ಎಲುಬುಗಳು ಲೋಥಲ್ ಮತ್ತು ಸುರಕೋಟಡಗಳಲ್ಲಿ ದೊರೆತಿವೆ. ಭಾರತದಲ್ಲಿ ಸಮುದ್ರದಲ್ಲಿ ಮುಳುಗಿಹೋದ ಪ್ರಾಚೀನ ನೆಲೆಗಳ ಅಧ್ಯಯನಕ್ಕೆ ಇವರ ಕೊಡುಗೆ ದೊಡ್ಡದು. ಬೆಟ್‌ದ್ವಾರಕ ಮತ್ತು ವಿದ್ಯಾನಗರಗಳಲ್ಲಿ ನಡೆಸಿದ ಪರಿಶೋಧನೆಗಳಿಂದ ಹೆಚ್ಚಿನ ಮಾಹಿತಿ ದೊರೆತಿದೆ. ಪ್ರ.ಶ.ಪೂ. 14ನೆಯ ಶತಮಾನದಿಂದ ದ್ವಾರಕೆ ಸಮುದ್ರದಲ್ಲಿ ಮುಳುಗಿಹೋದ ವಿಷಯ ಬೆಳಕಿಗೆ ಬಂದಿದೆ.

ತಮಿಳುನಾಡಿನ ಪೈಯಂಪಲ್ಲಿ ಮತ್ತು ಆಂಧ್ರಪ್ರದೇಶದ ಶಿವವರಂಗಳಲ್ಲಿ ಇವರು ಪ್ರಾಗೈತಿಹಾಸಿಕ ಸಂಸ್ಕೃತಿಯನ್ನು ಕಂಡುಹಿಡಿದರು. ಐಹೊಳೆ, ಪಟ್ಟದಕಲ್ಲುಗಳಲ್ಲಿ ಸಾತವಾಹನ-ಕದಂಬ ಕಾಲದ ವಸತಿನೆಲೆಯನ್ನು ತೋರಿಸಿಕೊಟ್ಟರು. ಕಾವೇರಿಪಟ್ಟಣ, ಎಲಿಫೆಂಟ, ಚಂದ್ರಪುರ ಮುಂತಾದ ಹಲವೆಡೆ ಇವರ ಪರಿಶೋಧನ ಕಾರ್ಯಗಳು ನಡೆದವು. ಮಧ್ಯಕಾಲೀನ ಇತಿಹಾಸಕ್ಕೆ ಸಂಬಂಧಿಸಿದಂತೆ ಇವರು ಪರಿಶೋಧನೆ ನಡೆಸಿದ ನೆಲೆಗಳಲ್ಲಿ ಮಹಾರಾಷ್ಟ್ರದ ರಾಯಗಡ ಮತ್ತು ಕರ್ನಾಟಕದ ಹಂಪಿ ಮುಖ್ಯವಾದವು. ಹಂಪಿಯಲ್ಲಿ ಪತ್ತೆಯಾದ ಬೌದ್ಧಶಾಸನ ಮತ್ತು ಕಟ್ಟಡ ಅವಶೇಷಗಳಿಂದ ಹಂಪಿಯ ಪ್ರಾಚೀನತೆ ಒಮ್ಮೆಲೇ ಸುಮಾರು ಒಂದೂವರೆ ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಯಿತು. ಇವರ ಸೇವಾವಧಿಯಲ್ಲಿ ಸಂರಕ್ಷಿತವಾದ ಸ್ಮಾರಕಗಳು ನೂರಾರು. ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಳ್ಳಿಗಾವೆ, ಲಕ್ಕುಂಡಿ ಮುಂತಾದ ಕಡೆಗಳಲ್ಲಿ ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಿದರು. ಭಾರತದ ಪ್ರಾಚೀನಕಾಲದ ಗಣಿಗಾರಿಕೆ ಮತ್ತು ಲೋಹವಿದ್ಯೆ ಎಂಬ ವಿಷಯವನ್ನು ಕುರಿತು ಇತರ ತಜ್ಞರೊಡನೆ ಸೇರಿ ಪ್ರಬಂಧ ಸಿದ್ಧಪಡಿಸಿ ಎಡಿನ್‌ಬರ್ಗ್‌ನಲ್ಲಿ ನಡೆದ 15ನೆಯ ಅಂತಾರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ಮಂಡಿಸಿ ವಿದ್ವಾಂಸರ ಮೆಚ್ಚುಗೆ ಗಳಿಸಿದರು (1977).

ಸಿಂಧೂಲಿಪಿಯನ್ನು ಓದುವಲ್ಲಿ ಇವರು ನಡೆಸಿದ ಸತತ ಸಂಶೋಧನೆ ಇವರ ಅತಿಮುಖ್ಯ ಸಾಧನೆಗಳಲ್ಲಿ ಒಂದು. ಇವರು 1960ರಲ್ಲಿ ಸಿಂಧೂ ಮುದ್ರೆಗಳ ಮೇಲಿನ ಲಿಪಿಯ ಅಧ್ಯಯನವನ್ನು ಆರಂಭಿಸಿದರು. ಬ್ರಾಹ್ಮಿಲಿಪಿಯನ್ನು ಆಧಾರವಾಗಿಟ್ಟುಕೊಂಡು ಸಿಂಧೂಲಿಪಿಯ ಮೂಲಚಿಹ್ನೆಗಳನ್ನು ಪತ್ತೆ ಹಚ್ಚುವಲ್ಲಿ ಹೆಚ್ಚು ಸಫಲರಾದರು. ಅವುಗಳಿಗೆ ಧ್ವನಿಮೌಲ್ಯ ಕೊಡುವ ನಿಟ್ಟಿನಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಛಾಡ್ವಿಕ್ ಅವರ ಸಲಹೆಯಂತೆ ಸೆಮಿಟಿಕ್ ಲಿಪಿಯನ್ನು ಅಭ್ಯಸಿಸಿ ಎರಡು ಲಿಪಿಗಳ ನಡುವಣ ಸಾದೃಶ್ಯವನ್ನು ಗಮನಿಸಿದರು. ಸೆಮಿಟಿಕ್ ಲಿಪಿಯ ಧ್ವನಿಮೌಲ್ಯವನ್ನು ಸಿಂಧೂಲಿಪಿಗೆ ಅನ್ವಯಿಸಿದಾಗ ಸಿಂಧೂ ಲಿಪಿಯ ಭಾಷೆ ಆದಿ ವೇದಕಾಲದ ಸಂಸ್ಕೃತ ಎಂಬುದು ಇವರಿಗೆ ಮನವರಿಕೆಯಾಯಿತು. ಈ ನಿಟ್ಟಿನಲ್ಲಿ ರಾಯರ ಪಾಠ ಅನೇಕ ವಿದ್ವಾಂಸರಿಗೆ ಒಪ್ಪಿಗೆಯಾಗಿದೆ. ಸಮುದ್ರದಲ್ಲಿ ಮುಳುಗಿದ ಶ್ರೀಕೃಷ್ಣನ ದ್ವಾರಕೆ (2005) ಇವರ ಇತ್ತೀಚಿನ ಕೃತಿ.

ಇವರ ಸಾಧನೆ ಸಿದ್ಧಿಗಳಿಗಾಗಿ ಅನೇಕ ಸನ್ಮಾನಗಳು ದೊರೆತಿವೆ. ರಂಗವಲ್ಲಿ ಎಂಬುದು ಇವರಿಗೆ ಅರ್ಪಿಸಲಾದ ಅಭಿನಂದನಗ್ರಂಥ. ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯದ 6ನೆಯ ವಾರ್ಷಿಕ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಇಲ್ಲಿ ಇವರಿಗೆ ತಾಮ್ರಪತ್ರ ನೀಡಿ ಗೌರವಿಸಲಾಯಿತು. ನೆಹರು ಫೆಲೋಶಿಫ್ (1977) ಪಡೆದ ಮೊದಲ ಕನ್ನಡಿಗ ಇವರು. ಮಿಥಿಕ್ ಸೊಸೈಟಿ ಇವರನ್ನು ವರ್ಷದ ವಿದ್ವಾಂಸ ಎಂದು ಗೌರವಿಸಿದೆ (1981).

(ಎಚ್.ಎಂ.ಎನ್.ಆರ್.)

**ರಾಷ್ಟ್ರಕೂಟ ವಂಶ:** 8ನೆಯ ಶತಮಾನದ ಮಧ್ಯಭಾಗದಿಂದ 10ನೆಯ ಶತಮಾನದ ಕೊನೆಯ ಪಾದದವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗಗಳನ್ನು ಆಳಿದ ರಾಜಮನೆತನ. ಪ್ರಾರಂಭದಲ್ಲಿ ಬಾದಾಮಿ ಚಳುಕ್ಯರ ಆಶ್ರಿತರಾಗಿದ್ದು ಸ್ವಶ್ರಮದಿಂದ ರಾಜ್ಯ ಸಾಧಿಸಿ, ಚಳುಕ್ಯರ ರಾಜಕೀಯ ಉತ್ತರಾಧಿಕಾರಿಗಳಾಗಿ, 1ನೆಯ ಕೃಷ್ಣ, ಧ್ರುವ, 3ನೆಯ ಗೋವಿಂದ, 1ನೆಯ ಅಮೋಘವರ್ಷ (ನೃಪತುಂಗ), 3ನೆಯ ಕೃಷ್ಣ ಮುಂತಾದ ಹೆಸರಾಂತ ರಾಜರ ಪರಿಶ್ರಮದಿಂದ ಕರ್ನಾಟಕದ ಕ್ಷಾತ್ರಪ್ರಭಾವವನ್ನು ದಕ್ಷಿಣ ಭಾರತದಲ್ಲಷ್ಟೇ ಅಲ್ಲದೆ ಉತ್ತರ ಭಾರತದಲ್ಲಿ ಒಂದು ಕಡೆ ಕನೂಜಿನವರೆಗೂ ಇನ್ನೊಂದು ಕಡೆ ಮಿಥಿಲೆಯವರೆಗೂ ಹಬ್ಬಿಸಿ ಸಮಕಾಲೀನ ಭಾರತೀಯ ರಾಜಕೀಯದಲ್ಲಿ ಪರಮೋಚ್ಚ ಶಕ್ತಿಯಾಗಿ ಮೆರೆದ ಕನ್ನಡ ಮೂಲದ ರಾಜವಂಶ. ಈ ವಂಶದ ಇತಿಹಾಸ ಕರ್ನಾಟಕದಲ್ಲಿ ಒಂದು ಹೆಮ್ಮೆಯ ಅಧ್ಯಾಯ.

**ರಾಜಕೀಯ ಇತಿಹಾಸ:** ರಾಷ್ಟ್ರಕೂಟ-ಇದೊಂದು ಅಧಿಕಾರ ಸೂಚಕ ಪದ. ಇದರ ಪ್ರಾಚೀನತೆಯನ್ನು ಮೌರ್ಯರ ಶಾಸನಗಳಲ್ಲಿ ಬಳಸಲಾದ ರಾಷ್ಟ್ರಿಕ ಎಂಬ ಮಾತಿನಲ್ಲಿ ಗುರುತಿಸಬಹುದು. ಈ ಪದ ಪ್ರಾಕೃತದಲ್ಲಿ ರಠಿ ಎಂದಾಯಿತು. ರಠಿ, ಮಹಾರಠಿ ಎಂದು ಬಿರುದಾಂಕಿತರಾದ ಕೆಲವರು ಸಾಮಂತರು ದಕ್ಷಿಣ ಹಾಗೂ ಪಶ್ಚಿಮ ಭಾರತದಲ್ಲಿ ಆಳುತ್ತಿದ್ದುದು ತಿಳಿದಿದೆ. ರಾಷ್ಟ್ರಕೂಟ ಎಂಬುದು ಸಂಸ್ಕೃತದ ರಾಷ್ಟ್ರ (ದೇಶ, ಪ್ರದೇಶ) ಮತ್ತು ಕೂಟ (ಮುಖ್ಯಸ್ಥ) ಎಂಬ ಪದಗಳಿಂದ ಉಂಟಾದ ನಾಮಪದ. ಗ್ರಾಮಕೂಟ (ಗಾವುಂಡ, ಗೌಡ) ಗ್ರಾಮಕ್ಕೆ ಅಧಿಪತಿ ಇದ್ದಂತೆ, ರಾಷ್ಟ್ರಕೂಟ ಒಂದು ಪ್ರದೇಶದ ಅಧಿಪತಿ. ಆಂಧ್ರಪ್ರದೇಶದ ಪ್ರಾಚೀನ ಶಾಸನಗಳಲ್ಲಿ ರಟ್ಟಂಗುಡಿ ಎಂಬ ಹೆಸರಿನ ಪ್ರಾದೇಶಿಕ ಅಧಿಕಾರಿ ಕಾಣಿಸಿಕೊಂಡಿದ್ದಾನೆ. ಇದು ಸಹ ರಾಷ್ಟ್ರಕೂಟಕ್ಕೆ ಸಮಾನ ಪದ. ವಾಸ್ತವದಲ್ಲಿ ಅಕಾಲ ವರ್ಷ, ಧಾರಾವರ್ಷ, ಪ್ರಭೂತವರ್ಷ, ಅಮೋಘವರ್ಷ ಹಾಗೂ ಸುವರ್ಣವರ್ಷ ಎಂಬಲ್ಲಿನ ವರ್ಷ ವೃಷ್ಟಿ ಎಂಬ ಶಬ್ದದ ತದ್ಭವರೂಪ. ವೃಷ್ಟಿ>ರಿಷ್ಟಿ>ರಟ್ಟ ಆಗಿದೆ. ಇಲ್ಲಿ ರಟ್ಟ ಎಂಬ ಮಳೆಯ ಶಾಸ್ತ್ರವನ್ನು ಜ್ಞಾಪಿಸಿಕೊಳ್ಳಬಹುದು.

ಬಾದಾಮಿ ಚಳುಕ್ಯರ ಕಾಲದಲ್ಲಿ ರಾಷ್ಟ್ರಕೂಟರ ಕೆಲವು ಮನೆತನಗಳು ಇದ್ದುವು. ಮಾನಾಂಕ, ದೇವರಾಜ, ಭವಿಷ್ಯ, ಅಭಿಮನ್ಯು ಈ ರೀತಿ ಪುತ್ರಾನುಕ್ರಮದಲ್ಲಿ ಸು.7ನೆಯ ಶತಮಾನದಲ್ಲಿ ಮಾನಾಪುರ ರಾಜಧಾನಿಯಿಂದ ಆಳುತ್ತಿದ್ದರು. ಇವರು ಮಧ್ಯಪ್ರದೇಶದ ಹೊಷಂಗಾಬಾದ್ ಪ್ರದೇಶದಲ್ಲಿ ಆಳುತ್ತಿದ್ದರೆಂದು ಕೆಲವರೂ ಮಹಾರಾಷ್ಟ್ರದ ಸತಾರ ಜಿಲ್ಲೆಯ ಮಾನ್ ಇವರ ರಾಜಧಾನಿ ಎಂದು ಮತ್ತೆ ಕೆಲವರೂ ಅಭಿಪ್ರಾಯ ಪಟ್ಟಿದ್ದಾರೆ. ರಾಷ್ಟ್ರಕೂಟ ಶಿವರಾಜನ ಮಗ ಗೋವಿಂದರಾಜ ಎಂಬುವನು ಚಳುಕ್ಯ ವಿಕ್ರಮಾದಿತ್ಯನ (ಇಮ್ಮಡಿ) ಮಾಂಡಲಿಕನಾಗಿದ್ದ. ಇವನ ರಾಜಧಾನಿ ಮಾನಾಪುರ, ಸತಾರದ ಬಳಿಯ ಮಾನವೇ ಇದಾಗಿದ್ದಿರಬಹುದು. ರಾಷ್ಟ್ರಕೂಟರ ಇನ್ನೊಂದು ಮನೆತನ ಅಚಲಪುರದಲ್ಲಿತ್ತು (ಈಗಿನ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಎಲಿಚ್‌ಪುರ). ಈ ಮನೆತನದ ಧ್ರುವರಾಜ, ಸ್ವಾಮಿಕರಾಜ ಮತ್ತು ನನ್ನರಾಜ ಎಂಬ ಮೂರು ತಲೆಮಾರಿನ ಮಾಂಡಲಿಕರು ಕಾಣಿಸಿಕೊಂಡಿದ್ದಾರೆ. ಇವರು ಚಳುಕ್ಯ ವಿನಯಾದಿತ್ಯ ಮತ್ತು ವಿಜಯಾದಿತ್ಯರ ಸಾಮಂತರಾಗಿದ್ದರು. ಗುಲ್ಬರ್ಗ ಜಿಲ್ಲೆಯ ಮಾನ್ಯಖೇಟದಿಂದ (ಮಳಖೇಡ) ಆಳಿದ ರಾಷ್ಟ್ರಕೂಟ ವಂಶೀಯರ ಕಾರ್ಯಸ್ಥಾನವೆಲ್ಲ ಮಹಾರಾಷ್ಟ್ರದಲ್ಲೇ ಇರುವುದರಿಂದ ಇವರು ಮೂಲತಃ ಮಹಾರಾಷ್ಟ್ರದವರು

ಎಂಬ ಅಭಿಪ್ರಾಯವಿದೆ. ಆದರೆ ವಿದ್ವಾಂಸರಾದ ಅಳತೇಕರರು ತೋರಿಸಿರುವ ಆಧಾರಗಳು ರಾಷ್ಟ್ರಕೂಟರು ಕರ್ನಾಟಕದವರು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ವಂಶದವರಲ್ಲಿ ಲತ್ತಲೂರ ಪುರವರಾಧೀಶ್ವರ ಎಂಬ ಬಿರುದು ಇರುವ ಕಾರಣ ಈ ಮನೆತನದ ಮೂಲ ಸ್ಥಾನ ಲತ್ತಲೂರು (ಈಗ ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯಲ್ಲಿರುವ ಲಾತೂರು) ಆಗಿರಬೇಕು. ಮೂಲತಃ ರಟ್ಟನ ಊರಾಗಿದ್ದ ಇದು ಕ್ರಮೇಣ ಲತ್ತನ ಊರು ಲತ್ತಲೂರು ಎಂದು ಪರಿವರ್ತಿತವಾದಂತೆ ಕಾಣುತ್ತದೆ. ಈಗಿನ ಕರ್ನಾಟಕದ ಗುಲ್ಬರ್ಗ, ಬೀದರ್ ಜಿಲ್ಲೆಗಳ ಎಲ್ಲೆಗೆ ಹೊಂದಿಕೊಂಡಿರುವ ಈ ಪ್ರದೇಶದಲ್ಲಿ ದೊರೆತಿರುವ ಕನ್ನಡ ಶಾಸನಗಳು ಆ ಭಾಗವೆಲ್ಲ ಹಿಂದೆ ಕರ್ನಾಟಕದ ಭಾಗವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿವೆ. ಬಾದಾಮಿ ಚಳುಕ್ಯ ರಾಜ್ಯ ಉತ್ತರ ದಖನ್, ಗುಜರಾತ್, ಆಂಧ್ರಪ್ರದೇಶಕ್ಕೆಲ್ಲ ವಿಸ್ತರಿಸಿದಾಗ ಆ ಮನೆತನದವರು ಅಲ್ಲಲ್ಲ ನೆಲಸಿದ್ದಂತೆ ಕರ್ನಾಟಕದಲ್ಲಿದ್ದ ಅವರ ನಿಷ್ಠ ಸಾಮಂತರಿಗೂ ಚಳುಕ್ಯರು ಬೇರೆ ಬೇರೆ ಪ್ರಾಂತಗಳ ಅಧಿಕಾರವನ್ನು ವಹಿಸಿಕೊಟ್ಟಿದ್ದು, ಅವರಲ್ಲಿ ರಾಷ್ಟ್ರಕೂಟರು ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ನೆಲೆಗೊಂಡಿರಬೇಕು. ಆದರೆ ಕರ್ನಾಟಕದ ಹೊರಗೆ ನೆಲೆಸಿದ್ದರೂ ಇವರು ಮೂಲತಃ ಕನ್ನಡನಾಡಿನವರೆಂಬುದನ್ನು ಅವರ ಶಾಸನಗಳೇ ತೋರಿಸುತ್ತವೆ. ಜಬಲಪುರದ ಬಳಿಯ ಜುರಾ ಎಂಬಲ್ಲಿ ದೊರೆತ ಮೂರನೆಯ ಕೃಷ್ಣನ ಪ್ರಶಸ್ತಿ, ಇತರ ರಾಷ್ಟ್ರಕೂಟರ ಶಾಸನಗಳು ಉತ್ತಮ ಶೈಲಿಯ ಕನ್ನಡದಲ್ಲಿವೆ. ಗುಜರಾತಿನಲ್ಲಿ ನೆಲೆಯೂರಿದ ರಾಷ್ಟ್ರಕೂಟ ಮನೆತನದವರು ಶಾಸನಗಳಿಗೆ ಆ ಪ್ರದೇಶದ ಲಿಪಿಯನ್ನೇ ಉಪಯೋಗಿಸಿದ್ದರೂ ರಾಜರ ರುಜು ಮಾತ್ರ ಕನ್ನಡ ಅಕ್ಷರಗಳಲ್ಲಿ ಇರುತ್ತದೆ. ಮೇಲಾಗಿ ಅಸಗವ್ವೆ, ಅಬ್ಬಲಬ್ಬೆ, ಇಮ್ಮಡಿ ರೇವಕ್ಕ ಮುಂತಾದ ಹೆಸರುಗಳು ಅವರ ಕನ್ನಡತನವನ್ನು ಸಾರಿ ಹೇಳುತ್ತವೆ. ರಾಷ್ಟ್ರಕೂಟರು ಕನ್ನಡ ಸಾಹಿತ್ಯಕ್ಕೂ ಅಪಾರ ಪ್ರೋತ್ಸಾಹವನ್ನಿತ್ತಿರುವುದು ಇವರು ಕನ್ನಡನಾಡಿನವರೆಂಬುದನ್ನು ಸಮರ್ಥಿಸುತ್ತದೆ.

ರಾಷ್ಟ್ರಕೂಟ ಮನೆತನದ ರಾಜಲಾಂಛನ ಗರುಡ. ನಾಣ್ಯಗಳು ಮತ್ತು ತಾಮ್ರಪತ್ರಗಳ ಮೇಲೆ ಗರುಡನಲ್ಲದೆ ಶಿವನ ಚಿತ್ರವಿರುವುದೂ ಉಂಟು. ರಾಷ್ಟ್ರಕೂಟರು ತಮ್ಮ ಶಾಸನಗಳಲ್ಲಿ ಶಿವ, ವಿಷ್ಣು ಇಬ್ಬರನ್ನೂ ಸ್ತುತಿಸುವರಾದ ಕಾರಣ ಇವರು ಮತೀಯ ವಿಚಾರಗಳಲ್ಲಿ ಉದಾರಿಗಳಿದ್ದರೆಂದು ಹೇಳಬಹುದು. ಈ ಅರಸರು ಜೈನಧರ್ಮಕ್ಕೆ ಕೊಟ್ಟ ವಿಶೇಷ ಆಶ್ರಯವೂ ಈ ಧೋರಣೆಯನ್ನೇ ವ್ಯಕ್ತಪಡಿಸುತ್ತದೆ.

ರಾಷ್ಟ್ರಕೂಟರು ಶ್ರೀ ಪೃಥ್ವೀವಲ್ಲಭ ಮುಂತಾದ ಅನೇಕ ಬಾದಾಮಿ ಚಳುಕ್ಯರ ಬಿರುದುಗಳನ್ನು ಉಪಯೋಗಿಸಿಕೊಂಡರು. ಅರಬ್ ಪ್ರವಾಸಿಗರು ತಮ್ಮ ಬರೆಹಗಳಲ್ಲಿ ಇವರನ್ನು ವಲ್ಲಭ, ಬಲ್ಲಹ ಎಂದು ಹೆಸರಿಸಿದ್ದಾರೆ.

ರಾಷ್ಟ್ರಕೂಟ ಮನೆತನದ ಮೊದಲ ಅರಸರ ಕಾಲದಲ್ಲಿ ಲತ್ತಲೂರು ಇವರ ರಾಜಧಾನಿಯಾಗಿದ್ದಿರಬಹುದು. ದಂತಿದುರ್ಗನ ಕಾಲದಲ್ಲಿ ಎಲ್ಲೋರ ರಾಷ್ಟ್ರಕೂಟ ರಾಜಧಾನಿಯಾಗಿತ್ತು. ಸಾಮ್ರಾಜ್ಯ ವಿಸ್ತಾರವಾದಂತೆ ಅಗತ್ಯಕ್ಕನುಗುಣವಾಗಿ ರಾಜ್ಯಮಧ್ಯದಲ್ಲಿದ್ದ ಮಾನ್ಯಖೇಟವನ್ನು (ಮಳಖೇಡ) ನೃಪತುಂಗ ನಿರ್ಮಿಸಿ ಅಲಂಕರಿಸಿದ. ಅನಂತರ ಕೊನೆಯವರೆಗೂ ಅದು ಸಾಮ್ರಾಜ್ಯದ ಪ್ರಮುಖ ರಾಜಧಾನಿಯಾಗಿ ಉಳಿಯಿತು. ಮಾನ್ಯಖೇಟದ ವೈಭವದ ವರ್ಣನೆ ಶಾಸನಗಳಲ್ಲಿಯೂ ಸಾಹಿತ್ಯ ಗ್ರಂಥಗಳಲ್ಲಿಯೂ ವಿದೇಶೀ ಪ್ರವಾಸಿಗಳ ಲೇಖನಗಳಲ್ಲಿಯೂ ಸಿಗುತ್ತದೆ. ಮಯೂರಖಿಂಡಿ (ನಾಸಿಕ್ ಜಿಲ್ಲೆಯ ಮಾರ್ಖಂಡ ಅಥವಾ ಚಂದಾ ಜಿಲ್ಲೆಯ ಮಾರ್‌ಕಂಡಿ), ಕಂಧರಪುರ (ನಾಂದೇಡ್ ಜಿಲ್ಲೆಯ ಕಂಧಾರ) ಮತ್ತು ಪ್ರತಿಷ್ಠಾನಗಳು (ಪೈಠಣ) ಸಹ ಕೆಲವು ಸಂದರ್ಭಗಳಲ್ಲಿ ಇವರ ರಾಜಧಾನಿಗಳಾಗಿದ್ದುವೆಂದು ತಿಳಿಯುತ್ತದೆ.

ಚಳುಕ್ಯ ವಂಶದ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಪ್ರಾಬಲ್ಯಕ್ಕೆ ಬಂದ ಮೊದಲ ರಾಷ್ಟ್ರಕೂಟ ಅರಸ ದಂತಿದುರ್ಗ. ಎಲ್ಲೋರದ ಶಾಸನದಲ್ಲಿ ಅವನ ಪೂರ್ವಜರಾದ ದಂತಿವರ್ಮ, ಇಂದ್ರ I, ಗೋವಿಂದರಾಜ, ಕರ್ಕ II, ಇಂದ್ರ II–ಇವರನ್ನು ಆ ಕ್ರಮದಲ್ಲಿ ನಮೂದಿಸಿದೆ.

ದಂತಿದುರ್ಗ (ಸು. 735–56) ಇಮ್ಮಡಿ ಇಂದ್ರನ ಮಗ. ಇವನು ತನ್ನ ಸಾಹಸಕ್ಕೆ ತಕ್ಕುದಾದ ಖಡ್ಗಾವಲೋಕ ಎಂಬ ಬಿರುದು ಧರಿಸಿದ್ದ. ಈತ ಮೊದಲು ಬಾದಾಮಿ ಚಳುಕ್ಯರ ಸಾಮಂತನಾಗಿ ಮಹಾರಾಷ್ಟ್ರದ ಉತ್ತರಭಾಗದಲ್ಲಿ ಆಳುತ್ತಿದ್ದ. ಕಾಂಚಿ ವಿಜಯ ಯಾತ್ರೆಯಲ್ಲಿ ಇಮ್ಮಡಿ ಚಳುಕ್ಯ ವಿಕ್ರಮಾದಿತ್ಯನಿಗೂ ಅರಬರ ಮುನ್ನಡೆಯನ್ನು ತಡೆಯುವುದರಲ್ಲಿ ಗುಜರಾತಿನ ಮಂಡಲೇಶ್ವರನಾದ ಅವನಿಜನಾಶ್ರಯ ಪುಲಕೇಶಿಗೂ ಸಹಾಯಕನಾಗಿದ್ದು ಯುದ್ಧರಂಗದಲ್ಲಿ ಪರಿಣತಿ ಪಡೆದ ದಂತಿದುರ್ಗ, ಸಾಮ್ರಾಟ ವಿಕ್ರಮಾದಿತ್ಯನ ಮರಣಾನಂತರ ಸ್ವತಂತ್ರನಾಗಲು ಹವಣಿಸಿದ. ಮೊದಲು ದಕ್ಷಿಣ ಗುಜರಾತಿನ ಚಳುಕ್ಯರನ್ನೂ ನಾಂದೀಪುರೀಯ ಗೂರ್ಜರರನ್ನೂ ಸೋಲಿಸಿ ರಾಜ್ಯ ಆಕ್ರಮಣ ಮಾಡಿಕೊಂಡುದಲ್ಲದೆ ಮಾಳವ, ಕೋಸಲ ರಾಜ್ಯಗಳ ಮೇಲೂ ಪ್ರಭುತ್ವವನ್ನು ಸಾರಿ ಉತ್ತರ ದಖನ್ನಿನಲ್ಲಿ ಪ್ರಬಲನಾದ. ಸಾಮ್ರಾಟರಾದ ಚಳುಕ್ಯರು ಪಲ್ಲವಯುದ್ಧಗಳಲ್ಲಿ ನಿರತರಾಗಿದ್ದುದೂ ಮಹತ್ವಾಕಾಂಕ್ಷಿಯಾದ ದಂತಿದುರ್ಗನಿಗೆ ಒಳ್ಳೆಯ ಅವಕಾಶವನ್ನು ಒದಗಿಸಿದ್ದಿತು. ಮೊದಲು ಪಲ್ಲವರ ಸ್ನೇಹ ಸಾಧಿಸಿ ಅನಂತರ ಕೀರ್ತಿವರ್ಮನ ಮೇಲೆ ಯುದ್ಧ ಹೂಡಿ ಜಯಗಳಿಸಿ ದಕ್ಷಿಣ ಮಹಾರಾಷ್ಟ್ರದ ಭಾಗಗಳನ್ನೂ ಆಕ್ರಮಿಸಿದ. ಆದರೆ ಚಳುಕ್ಯ ಮೂಲೋತ್ಪಾಟನ ಮಾಡುವಷ್ಟರಲ್ಲಿ ಮೃತನಾದ (ಸು.756).

ಕೃಷ್ಣ (ಸು.756–74) ಸಹ ಇನ್ನೊಮ್ಮೆ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ, ಪ್ರಾಯಶಃ ರಣರಂಗದಲ್ಲಿ ಕೊಂದು ಅಳಿದುಳಿದ ಚಳುಕ್ಯರ ಅಧಿಕಾರವನ್ನು ಕಿತ್ತುಕೊಂಡ. ಚಳುಕ್ಯ ಸಾಮ್ರಾಜ್ಯದ ಮೇಲೆ ರಾಷ್ಟ್ರಕೂಟರ ಪತಾಕೆಯನ್ನು ಹಾರಿಸಿದ್ದಲ್ಲದೆ, ದಕ್ಷಿಣದಲ್ಲಿ ತಲಕಾಡು ಗಂಗರನ್ನೂ ಪೂರ್ವದಲ್ಲಿ ವೆಂಗಿಯ ಚಳುಕ್ಯರನ್ನೂ ಬಗ್ಗುಬಡಿದು ಉತ್ತರದಲ್ಲಿ ವಿಂಧ್ಯದಿಂದ ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯವರೆಗೆ ಮತ್ತು ಪಶ್ಚಿಮ ಸಮುದ್ರದಿಂದ ಹಿಡಿದು ಸುಮಾರು ವಾರಂಗಲ್ಲಿನವರೆಗಿನ ವಿಶಾಲ ಪ್ರದೇಶದ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿ, ದಕ್ಷಿಣ ಭಾರತದಲ್ಲಿ ರಾಷ್ಟ್ರಕೂಟ ಶಕ್ತಿಯನ್ನು ಅದ್ವಿತೀಯವಾಗಿ ಬೆಳೆಸಿ ಮುಂದೆ ಉತ್ತರಭಾರತ ಮತ್ತು ತಮಿಳು ನಾಡಿನಲ್ಲಿ ರಾಷ್ಟ್ರಕೂಟ ಬಲ ಹಬ್ಬಲು ಅಡಿಪಾಯವನ್ನು ಹಾಕಿದ.

**ರಾಷ್ಟ್ರಕೂಟರ ವಂಶಾವಳಿ:**



ಯುವರಾಜನಾಗಿದ್ದಾಗ ಗಂಗವಾಡಿ ಮತ್ತು ವೆಂಗಿಯ ಯುದ್ಧಗಳಲ್ಲಿ ಯಶಸ್ಸು ಪಡೆದಿದ್ದ ಕೃಷ್ಣನ ಹಿರಿಯ ಮಗ ಇಮ್ಮಡಿ ಗೋವಿಂದ (ಸು.774–80) ಪಟ್ಟಕ್ಕೆ ಬಂದ ಅನಂತರ ವಿಲಾಸಪ್ರಿಯನಾಗಿ ಆಡಳಿತದಲ್ಲಿ ಆಸಕ್ತಿ ಕಳೆದುಕೊಂಡ. ಸಹಜವಾಗಿಯೇ ಇವನಿಗಿಂತಲೂ ಹೆಚ್ಚು ದಕ್ಷನಾದ ಇವನ ತಮ್ಮ ಧ್ರುವ ತನ್ನ ಅಧಿಕಾರವನ್ನು ಹೆಚ್ಚಿಸಿಕೊಂಡ. ಸೋದರನನ್ನು ಗೋವಿಂದ ಎದುರಿಸಿದನೆಂಬುದೊಂದು ಊಹೆ. ಆದರೆ ಆಗತಾನೇ ಪ್ರಾಬಲ್ಯಕ್ಕೆ ಬರತೊಡಗಿದ್ದ ಧೀಮಂತನಾದ ಧ್ರುವನಿಗೆ ಗೋವಿಂದ ಸ್ವಸಮ್ಮತಿಯಿಂದಲೇ ರಾಜ್ಯಾಧಿಕಾರವನ್ನೊಪ್ಪಿಸಿಬಿಟ್ಟನೆಂಬ ಇನ್ನೊಂದು ಅಭಿಪ್ರಾಯವೂ ಇದೆ.

ಧ್ರುವ (ಸು.780–93) ರಾಷ್ಟ್ರಕೂಟ ವಂಶದ ಅತಿ ಸಮರ್ಥ ಅರಸ. ಪಟ್ಟಕ್ಕೆ ಬರುತ್ತಿದ್ದಂತೆಯೇ, ಈ ಹಿಂದೆ ತನ್ನ ಅಣ್ಣನ ಪಕ್ಷ ವಹಿಸಿದ್ದ ಗಂಗರು ಮತ್ತು ಪಲ್ಲವರನ್ನು ಸೋಲಿಸಿ ಸೇಡನ್ನು ತೀರಿಸಿಕೊಂಡದ್ದಲ್ಲದೆ, ಗಂಗವಾಡಿಯನ್ನು ಆಕ್ರಮಿಸಿ ಅಲ್ಲಿ ತನ್ನ ಮಗ ಸ್ತಂಭನನ್ನು ಪ್ರಾಂತ್ಯಾಧಿಕಾರಿಯಾಗಿ ಮಾಡಿ, ರಾಷ್ಟ್ರಕೂಟ ರಾಜ್ಯದ ಎಲ್ಲೆಯನ್ನು ಕಾವೇರಿ ನದಿಯವರೆಗೆ ವಿಸ್ತರಿಸಿದ. ಈ ಸಮಯದಲ್ಲಿ ಗೂರ್ಜರ ಪ್ರತಿಹಾರ ವಂಶದ ಅರಸನಾದ ವತ್ಸರಾಜ ಮತ್ತು ಬಂಗಾಲದ ಧರ್ಮಪಾಲ ಇವರುಗಳು ಉತ್ತರಾಪಥದಲ್ಲಿ ಕೀರ್ತಿವೆತ್ತಿದ್ದ ಕನೂಜಿನ ಆಕ್ರಮಣಕ್ಕಾಗಿ ಹೋರಾಡಿದರು. ಆಗ ಕನೂಜಿನಲ್ಲಿ ಆಳುತ್ತಿದ್ದ ಪರಸ್ಪರ ಸೆಣಸುತ್ತಿದ್ದರು. ಈ ಸಂದರ್ಭದಲ್ಲಿ ಧ್ರುವ ಉತ್ತರ ಭಾರತಕ್ಕೆ ನುಗ್ಗಿ, ವತ್ಸರಾಜನನ್ನು ರಾಜಸ್ತಾನದ ಮರಳುಗಾಡಿಗೆ ಅಟ್ಟಿ, ಧರ್ಮಪಾಲನನ್ನೂ ಸದೆಬಡಿದು, ಅಪಾರ ಐಶ್ವರ್ಯವನ್ನು ದೋಚಿದ. ಈ ಸಾಧನೆಯಿಂದ ರಾಷ್ಟ್ರಕೂಟ ರಾಜ್ಯವೇನೂ ವಿಸ್ತಾರಗೊಳ್ಳಲಿಲ್ಲವಾದರೂ ಈ ಅರಸುಮನೆತನದ ಖ್ಯಾತಿ ಭಾರತದಲ್ಲೆಲ್ಲ ಹಬ್ಬಿತು. ದಕ್ಷಿಣದಲ್ಲಿ ವೆಂಗಿಯ ಚಳುಕ್ಯ ಮನೆತನದ ವಿಷ್ಣುವರ್ಧನ ತನ್ನ ಮಗಳು ಶೀಲಭಟ್ಟಾರಿಕೆಯನ್ನು ಧ್ರುವನಿಗೆ ಮದುವೆಮಾಡಿಕೊಟ್ಟು ಅವನ ಸ್ನೇಹ ಸಂಪಾದಿಸಿದ. ದಕ್ಷಿಣದಲ್ಲಿ ಗಂಗರ ಎರಡನೆಯ ಶಿವಮಾರನನ್ನು ಸೋಲಿಸಿ ಸೆರೆಯಲ್ಲಿಟ್ಟ. ಪಲ್ಲವರ ನಂದಿವರ್ಮ (I) ಈತನ ಸಾಮಂತಿಕೆಯನ್ನು ಒಪ್ಪಿದ. ಹೀಗೆ ಧ್ರುವ ಇಡೀ ಭರತಖಂಡದ ಏಕೈಕ ಸಾಮ್ರಾಟನಾಗಿ ಮೆರೆದ. ರಾಷ್ಟ್ರಕೂಟ ರಾಜ್ಯ ಸಮಕಾಲೀನ ಭಾರತದ ಬೃಹತ್ ಸಾಮ್ರಾಜ್ಯವಾಯಿತು.



ಗುಹೆ ೧೦, ಎಲ್ಲೋರ

ಧ್ರುವನ ಇಚ್ಛೆಯಂತೆ ಅವನ ಮೂರನೆಯ ಮಗನಾದ ಮುಮ್ಮಡಿ ಗೋವಿಂದ (ಸು.793–814) ಅನಂತರ ಪಟ್ಟಕ್ಕೆ ಬಂದ. ಈತ ಪಟ್ಟಕ್ಕೆ ಬಂದ ತರುಣದಲ್ಲಿ ಅಣ್ಣನಾದ ಸ್ತಂಭನಿಂದ ತೊಂದರೆಗಳು ಉದ್ಭವಿಸಿದರೂ ಅದೇ ನೆವದಲ್ಲಿ ಅಣ್ಣನ ಸಹಕಾರಿಗಳಾಗಿದ್ದ ಗಂಗ, ನೊಳಂಬ, ಪಲ್ಲವರನ್ನೆಲ್ಲಾ ಬಗ್ಗಿಸಿ ದಕ್ಷಿಣಾಪಥದ ಆಧಿಪತ್ಯವನ್ನು ಭದ್ರವಾಗಿ ಸ್ಥಾಪಿಸಿಕೊಂಡು ಉತ್ತರ ಭಾರತದಲ್ಲಿ ವಿಜಯಯಾತ್ರೆಯನ್ನು ಕೈಗೊಂಡ. ಅಲ್ಲಿ ಗೂರ್ಜರ ಪ್ರತೀಹಾರ ವಂಶದ 2ನೆಯನಾಗಭಟ್ಟ, ಕನೂಜಿನ ಚಕ್ರಾಯುಧ, ಬಂಗಾಲದ ಧರ್ಮಪಾಲರನ್ನು ಸೋಲಿಸಿ ರಾಷ್ಟ್ರಕೂಟರ ಪ್ರಭಾವವನ್ನು ಉತ್ತರಾಪಥದಲ್ಲೆಲ್ಲ ಹಬ್ಬಿಸಿದ (ಸು.800). ಅಷ್ಟರಲ್ಲಿ ದಕ್ಷಿಣದಲ್ಲಿ ಹಲವು ರಾಜರು ಒಟ್ಟುಗೂಡಿ ಗೋವಿಂದನ ರಾಜ್ಯಾಕ್ರಮಣಕ್ಕೆ ಸನ್ನಾಹ ನಡೆಸಿದ್ದರು. ಇದೂ ಗೋವಿಂದನ ಶೌರ್ಯ ಪ್ರದರ್ಶನಕ್ಕೆ ಕೀರ್ತಿವೃದ್ಧಿಗೆ ಕಾರಣವೇ ಆಯಿತು. ದಕ್ಷಿಣಕ್ಕೆ ಬಂದ ಗೋವಿಂದ ಗಂಗರೇ ಮೊದಲಾದ ದಕ್ಷಿಣದ ಅರಸರ ಸಂಯುಕ್ತ ಸೈನ್ಯವನ್ನು ತುಂಗಭದ್ರೆಯ ಬಳಿ ಧ್ವಂಸಮಾಡಿ (ಸು. 802), ಅಲ್ಲಿಂದ ಮುನ್ನಡೆದು ಪಲ್ಲವ, ಪಾಂಡ್ಯ, ಕೇರಳ ದೇಶಗಳ ಮೇಲೂ ಧಾಳಿ ಮಾಡಿದ. ಈ ಸಾಧನೆಗಳನ್ನು ಕೇಳಿದ ಸಿಂಹಳದ ಅರಸು ಗೋವಿಂದನ ಸ್ನೇಹ ಯಾಚಿಸಿ ತನ್ನ ಹಾಗೂ ತನ್ನ ಪ್ರಧಾನಿಯ ವಿಗ್ರಹಗಳನ್ನು ಕಾಣಿಕೆಯಾಗಿ ನೀಡಿದ. ಇವುಗಳನ್ನು ಕಾಂಚೀಪುರದ ಶಿವಾಲಯದಲ್ಲಿ ಕೀರ್ತಿಸ್ತಂಭಗಳಂತೆ ಸ್ಥಾಪಿಸಲಾಯಿತು. ವೆಂಗಿಯ ಚಳುಕ್ಯ ಅರಸು ಇಮ್ಮಡಿ ವಿಜಯಾದಿತ್ಯ ಸ್ವತಂತ್ರನಾಗಲು ಪ್ರಯತ್ನಿಸಿದಾಗ ಅಲ್ಲೂ ನುಗ್ಗಿ ತನಗೆ ಅನುಕೂಲನಾದ ಭೀಮನಿಗೆ ರಾಜ್ಯ ವಹಿಸಿದ. ರಾಜ್ಯ ವಿಸ್ತರಣೆ, ಸಂಘಟನೆ, ಮುತ್ಸದ್ದಿತನ, ಅಸಾಧಾರಣ ಶೌರ್ಯ, ಧೈರ್ಯ, ಯುಕ್ತಿಗಳಲ್ಲಿ ಮತ್ತು ರಾಷ್ಟ್ರಕೂಟರ ಶ್ರೇಷ್ಠತೆಯನ್ನು ಸ್ಥಾಪಿಸುವಲ್ಲಿ ಮೂರನೆಯ ಗೋವಿಂದ ತನ್ನ ತಂದೆ ಧ್ರುವನಿಗಿಂತ ಒಂದು ಕೈಮೇಲಾಗಿದ್ದ. ಸಿಂಹಳದಿಂದ ಹಿಮಾಲಯದವರೆಗೆ ಸೌರಾಷ್ಟ್ರದಿಂದ ಬಂಗಾಲದವರೆಗೆ ಭಾರತವರ್ಷ ರಾಷ್ಟ್ರಕೂಟ ಸೈನ್ಯದ ಪದಾಘಾತಕ್ಕೆ ಬಾಗಿತ್ತು. ಗೋವಿಂದ ರಾಷ್ಟ್ರಕೂಟ ಅರಸರಲ್ಲಿಯೇ ಅತ್ಯಂತ ಪ್ರತಾಪಶಾಲಿ ಎಂಬುದರಲ್ಲಿ ಸಂದೇಹವಿಲ್ಲ. ಉತ್ತರದಲ್ಲಿ ಗೆದ್ದ ರಾಜ್ಯಗಳಲ್ಲಿ ತಮ್ಮ ಪ್ರಭುತ್ವವನ್ನು ಕಾಪಾಡಿಕೊಳ್ಳಲು ಗೋವಿಂದ ಗುಜರಾತ್ ಪ್ರಾಂತವನ್ನೇರ್ಪಡಿಸಿ ಅಲ್ಲಿ ತಮ್ಮನಾದ ಇಂದ್ರನನ್ನು ಅವನ ಅನಂತರ ಅವನ ಮಗನಾದ ಕರ್ಕಸುವರ್ಣವರ್ಷನನ್ನೂ ಮಹಾ ಮಂಡಲೇಶ್ವರರೆಂದು ನೇಮಿಸಿದ. ಇದೇ ಮುಂದೆ ಗುಜರಾತಿನ ರಾಷ್ಟ್ರಕೂಟ ಶಾಖೆಯಾಯಿತು.

ಗೋವಿಂದ ಸಾಯುವಾಗ ಅಮೋಘವರ್ಷ ಚಿಕ್ಕವನಾಗಿದ್ದ ಕಾರಣ ಅವನ ರಕ್ಷಣೆ ಮತ್ತು ಸಾಮ್ರಾಜ್ಯ ರಕ್ಷಣೆಗಾಗಿ ಗುಜರಾತಿನಲ್ಲಿದ್ದ ಕರ್ಕಸುವರ್ಣ ವರ್ಷನನ್ನು ಕರೆಸಿಕೊಂಡ. ಆತನನ್ನು ರಾಜಕುಮಾರನ ಪಾಲಕನೆಂದು ನೇಮಿಸಿದ.

1ನೆಯ ಅಮೋಘವರ್ಷನ (ನೃಪತುಂಗ, ಸು.814–78) ಆಳಿಕೆ ಶಾಂತಿಯುತವಾಗಿ ನಡೆಯಲು ಸಾಧ್ಯವಿರಲಿಲ್ಲ. ವಿಸ್ತಾರವಾದ ಸಾಮ್ರಾಜ್ಯ, ಅಪ್ರಬುದ್ಧ ಬಾಲಕ ಚಕ್ರವರ್ತಿ, ಅಸಂತುಷ್ಟ ತಳಮಳದಲ್ಲಿಯೇ ಕಸಿವಿಸಿ ಪಡುತ್ತಿದ್ದ ಸಾಮಂತ ಅರಸರು ಹೆಚ್ಚಿನ ಲಾಭದಾಯಕ ಅಧಿಕಾರಸ್ಥಾನಗಳಿಗಾಗಿ ಮೇಲಾಡುತ್ತಿದ್ದ ಅರಮನೆಯ ಪರಿವಾರ, ಇವರೆಲ್ಲರ ಸಂಯುಕ್ತ ಪ್ರಯತ್ನದಿಂದ ಸಾಮ್ರಾಜ್ಯದಲ್ಲಿ ದಂಗೆಗಳಾದುವು. ಆದರೆ ಕರ್ಕನು ವಿಪ್ಲವ, ವಿದ್ರೋಹಿಗಳನ್ನೆಲ್ಲ ಹತ್ತಿಕ್ಕಿ ಸಿಂಹಾಸನವನ್ನು ಭದ್ರಪಡಿಸಿದ. ಆಳಿಕೆಯ ಪ್ರಾರಂಭದಲ್ಲೇ ಹುಟ್ಟಿದ ತೊಂದರೆಗಳು ಇವನ ರಾಜ್ಯ ಕಾಲದ ಅಂತ್ಯದವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಮುಂದುವರಿದುವು. ದಕ್ಷಿಣದಲ್ಲಿ ತಲಕಾಡಿನ ಗಂಗರು, ಪೂರ್ವದಲ್ಲಿ ವೆಂಗಿಯ ಚಳುಕ್ಯರು ಸ್ವತಂತ್ರವಾಗಲು ಸತತ ಪ್ರಯತ್ನಗಳನ್ನು ನಡೆಸುತ್ತಿದ್ದುದರಿಂದ ಅಮೋಘವರ್ಷ ತನ್ನ ಕಾಲವನ್ನೆಲ್ಲ ರಾಜ್ಯದ ಭದ್ರತೆಗಾಗಿಯೇ ವ್ಯಯಮಾಡಬೇಕಾಯಿತು. ಉತ್ತರದಲ್ಲಿ ಇವನ ಜ್ಞಾತಿಗಳಾದ ಗುಜರಾತಿನ ರಾಷ್ಟ್ರಕೂಟರು ವಲ್ಲಭನೆಂಬ ಅರಸನಿಂದ ಸೋಲಿಸಲ್ಪಟ್ಟುದಾಗಿ ತಿಳಿದಿದೆ. ಈ ವಲ್ಲಭ ಅಮೋಘವರ್ಷನೆಂಬುದು ಹಲವರ ಅಭಿಪ್ರಾಯ. ಆದರೆ ಅಮೋಘ ವರ್ಷನಿಗೆ ಅವರು ನಿಷ್ಠೆಯನ್ನೇ ತೋರಿದ್ದರು. ಆಪತ್ಸಹಾಯಕರಾಗಿದ್ದರು. ಆದ್ದರಿಂದ ವಲ್ಲಭ ಚಳುಕ್ಯ ಮನೆತನದ ಒಬ್ಬ ಅರಸಾಗಿರಬಹುದೆಂಬುದು ಹೆಚ್ಚು ಸಮಂಜಸವಿದ್ದಂತೆ ತೋರುತ್ತದೆ. ರಾಜ್ಯದ ಸುತ್ತಲೂ ನಡೆಯುತ್ತಿದ್ದ ಈ ಯುದ್ಧಗಳಿಂದಾಗಿ ರಾಜ್ಯ ವಿಸ್ತಾರದ ಯೋಚನೆಯೂ ಸಾಧ್ಯವಿರಲಿಲ್ಲ. ಪ್ರಾಯಶಃ ಈ ವಿದ್ಯಮಾನಗಳಿಂದ ಜುಗುಪ್ಸೆಗೊಂಡ ಅಮೋಘವರ್ಷ ರಾಜ್ಯಾಡಳಿತಕ್ಕಿಂತಲೂ ಹೆಚ್ಚಾಗಿ ಧರ್ಮ, ಸಾಹಿತ್ಯದ ಕಡೆಗೇ ತನ್ನ ಒಲವನ್ನು ಹರಿಸಿದಂತೆ ತೋರುತ್ತದೆ. ಇಂಥ ಸಂದರ್ಭದಲ್ಲಿ ರಾಷ್ಟ್ರಕೂಟ ರಾಜ್ಯ ಉಳಿದು ಬಂದುದು ಪ್ರಾಯಶಃ ಇವನ ತಂದೆ ಗಳಿಸಿದ್ದ ಬಲದ ಮುಂದುವರಿಕೆ ಮತ್ತು ಕರ್ಕ, ಬಂಕೇಶ ಮುಂತಾದ ನಿಷ್ಠಾವಂತ ಯೋಧರ ಶ್ರಮದಿಂದಾಗಿ ಎಂದೇ ಹೇಳಬಹುದು.

ಇಮ್ಮಡಿ ಕೃಷ್ಣ (878–914) ತನ್ನ ತಂದೆ ಅಮೋಘವರ್ಷನ ಮರಣಾನಂತರ ಪಟ್ಟಕ್ಕೆ ಬಂದ. ತನ್ನ ತಂದೆಯ ಮೆದು ನೀತಿಯಿಂದ ಶತ್ರುಗಳು ಆಕ್ರಮಣಕಾರಿ ಮನೋಭಾವವನ್ನು ತಾಳಿದ್ದರು. ಈತ ತನ್ನ ಆಳ್ವಿಕೆಯ ಆರಂಭದಲ್ಲಿಯೇ ಗೂರ್ಜರ ಪ್ರತೀಹಾರ ವಂಶದ ಭೋಜನ ದಾಳಿಯನ್ನು ಎದುರಿಸಬೇಕಾಯಿತು. ನರ್ಮದಾ ನದಿಯ ದಡದಲ್ಲಿ ನಡೆದ ಕದನದಲ್ಲಿ ಭೋಜನ ಕೈ ಮೇಲಾಗಿ ಕೃಷ್ಣ ಹಿಂಜರಿದ. ಇದರಿಂದ ಉತ್ತೇಜಿತನಾದ ಭೋಜ ಪಶ್ಚಿಮಕ್ಕೆ ಸಾಗಿ ಗುಜರಾತಿನಲ್ಲಿ ಅಧಿಕಾರದಲ್ಲಿದ್ದ ರಾಷ್ಟ್ರಕೂಟ ವಂಶದ ಸಾಮಂತ ಇಮ್ಮಡಿ ಕೃಷ್ಣನೊಡನೆ ಕಾದಿದ. ಈ ಕೃಷ್ಣನು ಭೋಜನನ್ನು ಸೋಲಿಸಿ ಉಜ್ಜಯಿನಿಯವರೆಗೂ ಬೆನ್ನಟ್ಟಿ ಹೋಗಿ ಆ ನಗರವನ್ನು ವಶಪಡಿಸಿಕೊಂಡ. ಹೀಗೆ ಇನ್ನೊಮ್ಮೆ ಮೂಲ ರಾಷ್ಟ್ರಕೂಟ ಮನೆತನದ ಹಿತರಕ್ಷಣೆಯ ಜವಾಬ್ದಾರಿ ಯನ್ನು ಸಾಮಂತ ಮನೆತನದ ಇಮ್ಮಡಿ ಕೃಷ್ಣ ಹೊತ್ತ. ರಾಜ್ಯದ ಪೂರ್ವದಲ್ಲಿ ವೆಂಗಿಯ ಗುಣಗ ವಿಜಯಾದಿತ್ಯ ಹಿಂದಿನ ಸೋಲನ್ನು ನೆನೆದು ಸೇಡು ತೀರಿಸಲೆಂಬಂತೆ ಕೃಷ್ಣನು ಭೋಜನೊಡನೆ ಸೆಣಸುತ್ತಿದ್ದ ಸಂದರ್ಭವನ್ನು ಉಪಯೋಗಿಸಿ ರಾಜ್ಯದ ಉತ್ತರ ಭಾಗಗಳನ್ನು ಆಕ್ರಮಿಸಲು ಹೋರಾಡಿದ ನಾದರೂ ವೆಂಗಿಯರ ಕೈಮೇಲಾಯಿತು. ವಿಜಯಾದಿತ್ಯ ಹಿಂದೆ ತಮ್ಮದಾಗಿದ್ದ ಎಲ್ಲ ಪ್ರದೇಶಗಳನ್ನೂ ಮರಳಿ ಪಡೆದುದಲ್ಲದೆ ಅಚಲಪುರ, ಕಿರಣಪುರಗಳನ್ನು ತಾತ್ಕಾಲಿಕವಾಗಿ ಸ್ವಾಧೀನ ಪಡಿಸಿಕೊಂಡ. ಚಳುಕ್ಯರ ಸೇನಾನಿ ಪಾಂಡುರಂಗ ಕದನಗಳಲ್ಲಿ ಪ್ರಮುಖ ಪಾತ್ರವಹಿಸಿದ. ಆದರೆ ಗುಣಗ ವಿಜಯಾದಿತ್ಯ ಸತ್ತಕೂಡಲೆ ಇಮ್ಮಡಿ ಕೃಷ್ಣ ವೇಮುಲವಾಡದ ಚಳುಕ್ಯ ಮನೆತನದ ಬದ್ದೆಗನ ನೆರವಿನಿಂದ ವೆಂಗಿನಾಡಿನ ಮೇಲೆ ದಂಡೆತ್ತಿ ಭೀಮನನ್ನು ಸೆರೆಹಿಡಿದ. ಶೀಘ್ರದಲ್ಲಿಯೇ ಭೀಮ ಸ್ವತಂತ್ರನಾಗಿ ಹೋರಾಟಗಳು ಮುಂದುವರಿದವಾದರೂ ಕೊನೆಗೆ ಉಭಯತ್ರರ ನಡುವೆ ಕದನವಿರಾಮವೇರ್ಪಟ್ಟಿತು.

ಈ ಹೊತ್ತಿಗೆ ದಕ್ಷಿಣದಲ್ಲಿ ಚೋಳರು ಕ್ರಮೇಣ ಪ್ರಬಲರಾಗುತ್ತಿದ್ದ ಕಾರಣ ಕೃಷ್ಣ ಅವರ ಸ್ನೇಹ ಬಯಸಿ ತನ್ನ ಮಗಳನ್ನು ಚೋಳರ ಮೊದಲನೆಯ ಆದಿತ್ಯನೊಂದಿಗೆ ಮದುವೆ ಮಾಡಿಕೊಟ್ಟ. ಈ ದಂಪತಿಗಳಿಗೆ ಹುಟ್ಟಿದ ಮಗ ಕನ್ನರ. ಆದಿತ್ಯನ ಇನ್ನೊಬ್ಬಳು ಹೆಂಡತಿಯ ಮಗನಾದ ಒಂದನೆಯ ಪರಾಂತಕ ಈ ಒಂದನೆಯ ಕನ್ನರನ ಪ್ರತಿಸ್ಪರ್ಧಿಯಾಗಿ ನಿಂತ. ಉತ್ತರಾಧಿಕಾರಕ್ಕಾಗಿ ಇವರೀರ್ವರ ನಡುವೆ ಹೋರಾಟಗಳಾದುವು. ಇಮ್ಮಡಿ ಕೃಷ್ಣ ಮೊಮ್ಮಗನ

ನೆರವಿಗೆ ಧಾವಿಸಿದನಾದರೂ ವಲ್ಲಾಳದಲ್ಲಿ ನಡೆದ ಕದನದಲ್ಲಿ ಪರಾಂತಕ ಗೆದ್ದ. ಚಳುಕ್ಯ ಇಮ್ಮಡಿ ವಿಕ್ರಮಾದಿತ್ಯನ ವೇಳೆಗೆ ಗುಜರಾತಿನ ತೀರಪ್ರದೇಶಗಳಲ್ಲಿ ದಾಳಿಮಾಡುತ್ತಿದ್ದ ಅರಬರು ಕಾಲದ ತಮ್ಮ ಧೋರಣೆಯನ್ನು ಬದಲಿಸಿಕೊಂಡು ಶಾಂತಿಪ್ರಿಯರಾಗಿದ್ದರು. ಇಮ್ಮಡಿ ಕೃಷ್ಣ ಇವರೊಡನೆ ಸ್ನೇಹ ಬೆಳೆಸಿದ. ತಜ್ಜಿಕರೆಂದು (ತಾಜಿಕ) ಕರೆಯಲ್ಪಟ್ಟ ಇವರು ಈತನ ರಾಜ್ಯದಲ್ಲಿ ಅಧಿಕಾರಿಗಳೂ ಆಗಿದ್ದರು. ಸಂಜಾನ್ ಪ್ರಾಂತಾಧಿಕಾರಿ ಒಬ್ಬ ತಾಜಿಕ. ಈತನ ಮಂತ್ರಿ ಒಬ್ಬ ಹಿಂದು ಧರ್ಮೀಯ. ಉತ್ತರದಲ್ಲಿ ಕಳಚುರಿಗಳೊಡನೆ, ದಕ್ಷಿಣದಲ್ಲಿ ಚೋಳರೊಡನೆ ವೈವಾಹಿಕ ಸಂಬಂಧವನ್ನು ಬೆಳೆಸಿದರೂ ಅವು ಬಯಸಿದ ಫಲ ನೀಡಲಿಲ್ಲ. ಪೂರ್ವಜರು ವಿಸ್ತರಿಸಿದ್ದ ರಾಜ್ಯದ ಹಲವು ಭಾಗಗಳು ಕೈಬಿಟ್ಟವು. ಆದರೂ ರಾಷ್ಟ್ರಕೂಟ ಗಡಿಗಳನ್ನು ಕಾಯ್ದುಕೊಂಡ ಕೀರ್ತಿ ಈತನಿಗೆ ಸಲ್ಲುತ್ತದೆ.

ಇಮ್ಮಡಿ ಕೃಷ್ಣ ಜೀವಿಸಿರುವಾಗಲೇ ಇವನ ಮಗ ಜಗತ್ತುಂಗ ಮರಣಹೊಂದಿದ್ದ ಕಾರಣ ಮೊಮ್ಮಗನಾದ ಮುಮ್ಮಡಿ ಇಂದ್ರ 914ರಲ್ಲಿ ಪಟ್ಟಕ್ಕೆ ಬಂದ. ಅನಿರೀಕ್ಷಿತವಾಗಿ ರಾಷ್ಟ್ರಕೂಟ ಸಾಮ್ರಾಜ್ಯದ ಉತ್ತರ ಗಡಿಯಲ್ಲಿ ಧಾಳಿ ಮಾಡಿ ನಾಸಿಕದ ಹತ್ತಿರದ ಗೋವರ್ಧನನನ್ನು ಆಕ್ರಮಿಸಿದ. ಪರಮಾರ ವಂಶದ ಉಪೇಂದ್ರನನ್ನು ಸೋಲಿಸಿ ಹಿಮ್ಮೆಟ್ಟಿಸಿದುದು ಇವನ ಮೊದಲ ಸಾಧನೆ. ಆ ಬಳಿಕ ತನ್ನ ಪೂರ್ವಜರಂತೆ ಉತ್ತರ ದಿಗ್ವಿಜಯವನ್ನು ಬಯಸಿದ ಅರಸನಿಗೆ ಗೂರ್ಜರ ಪ್ರತೀಹಾರ ವಂಶದ ಎರಡನೆಯ ಭೋಜ ಮತ್ತು ಮಹೀಪಾಲರ ನಡುವೆ ಏರ್ಪಟ್ಟಿದ್ದ ವಿರಸ ಅವಕಾಶ ಒದಗಿಸಿತು. ಕನೂಜನ್ನು ವಶಪಡಿಸಿಕೊಂಡ ಇಂದ್ರ ಪಲಾಯನ ಮಾಡುತ್ತಿದ್ದ ಮಹೀಪಾಲನ ಬೆನ್ನಟ್ಟಲು ತನ್ನ ಸಾಮಂತನಾದ ವೇಮುಲವಾಡದ ಚಳುಕ್ಯ ಇಮ್ಮಡಿ ನರಸಿಂಹನನ್ನು ಕಳಿಸಿದ. ಈ ಘಟನೆಗಳನ್ನು ಪಂಪಕವಿ ತನ್ನ ಭಾರತದಲ್ಲಿ ಪ್ರಸ್ತಾಪಿಸಿದ್ದಾನೆ. ಕೃಷ್ಣ ಹಿಂದಿರುಗಿದ ಬಳಿಕ ಮಹೀಪಾಲ ಚಂದೇಲ ಮನೆತನದ ಹರ್ಷನ ನೆರವಿನಿಂದ ಕನೂಜನ್ನು ಮನಃ ವಶಪಡಿಸಿಕೊಂಡ.

ಇಂದ್ರನ ಬಳಿಕ ಇವನ ಹಿರಿಯ ಮಗ ಎರಡನೆಯ ಅಮೋಘವರ್ಷ (929–30) ಪಟ್ಟಕ್ಕೆ ಬಂದನಾದರೂ ಒಂದು ವರ್ಷದೊಳಗೇ ಅವನ ತಮ್ಮ ನಾಲ್ಕನೆಯ ಗೋವಿಂದ (930–35) ಇವನನ್ನು ಬದಿಗೊತ್ತಿ ಸಿಂಹಾಸನವನ್ನೇರಿದ. ಆದರೆ ಈತ ಪ್ರಜೆಗಳ ಮನ್ನಣೆಗೆ ಪಾತ್ರವಾಗಲಿಲ್ಲ. ಈತನ ವಿರುದ್ಧ ಹೂಡಲಾದ ಸಂಚಿನಲ್ಲಿ ಗಂಗರ ಇಮ್ಮಡಿ ಬೂತುಗ ಹಾಗೂ ವೇಮುಲವಾಡದ ಅರಿಕೇಸರಿ ಪ್ರಮುಖ ಪಾತ್ರ ವಹಿಸಿದರು. ಗೋವಿಂದನು ಅರಿಕೇಸರಿಯನ್ನು ಕದನದಲ್ಲಿ ಎದುರಿಸಿದನಾದರೂ ಇವನ ಚಿಕ್ಕಪ್ಪನಾದ ಮುಮ್ಮಡಿ ಅಮೋಘವರ್ಷನನ್ನು (ಸು.935–39) ಸಾಮಂತರು ಪಟ್ಟಕ್ಕೆ ತಂದರು. ಈ ವೇಳೆಗಾಗಲೇ ವಯೋವೃದ್ಧನಾದ ಅಮೋಘವರ್ಷ ಸ್ವಭಾವತಃ ಧಾರ್ಮಿಕ ಪ್ರವೃತ್ತಿಯವನೂ ಆದಕಾರಣ ರಾಜಕಾರ್ಯವನ್ನೆಲ್ಲ ತನ್ನ ಮಗನಾದ ಯುವರಾಜ ಮೂರನೆಯ ಕೃಷ್ಣನಿಗೆ ವಹಿಸಿದ. ಇಮ್ಮಡಿ ಬೂತುಗ ಕೃಷ್ಣನ ಸೋದರಿ ರೇವಕನಿಮ್ಮಡಿಯನ್ನು ಲಗ್ನವಾಗಿದ್ದ. ಕೃಷ್ಣನ ಬೆಂಬಲದಿಂದ ಸೋದರನಾದ ಮುಮ್ಮಡಿ ರಾಚಮಲ್ಲನನ್ನು ಯುದ್ಧದಲ್ಲಿ ಕೊಂದು, ಗಂಗವಾಡಿಗೆ ಸ್ವತಃ ಅಧಿಕಾರಿಯಾಗಿ ಕೃಷ್ಣನಿಗೆ ನಿಷ್ಠೆಯನ್ನು ತೋರಿಸಿದ. ಕೃಷ್ಣನ ತಾಯಿ ಕಳಚುರಿ ಮನೆತನಕ್ಕೆ ಸೇರಿದವಳು. ತಂದೆ ಬಹುಕಾಲ ಮಾವನ ರಾಜ್ಯದಲ್ಲೇ ನೆಲಸಿದ್ದ. ಆದರೂ ಯಾವುದೋ ಕಾರಣದಿಂದ ಅವರ ಮೇಲೂ ದಂಡೆತ್ತಿ ಕಳಚುರಿಯ ಯುವರಾಜ ಸಾಹಸ ತುಂಗನನ್ನು ಸೋಲಿಸಿದ. ಇದರಿಂದ ಅವರೀರ್ವರ ನಡುವಣ ಸೌಹಾರ್ದಕ್ಕೆ ಧಕ್ಕೆಯುಂಟಾಯಿತು.

ಇಷ್ಟೂ ಸಾಲದೆ ಗೂರ್ಜರ ಪ್ರತೀಹಾರರ ಮೇಲೆ ದಂಡೆತ್ತಿ ಹೋಗಿ ಚಿತ್ರಕೂಟ, ಕಾಲಂಜರ ಕೋಟೆಗಳನ್ನು ವಶಪಡಿಸಿಕೊಂಡು, ಹೆಸರಿಗೆ ಮಾತ್ರ ಅರಸನಾಗಿದ್ದ ಅಮೋಘವರ್ಷನ ಮರಣಾನಂತರ (ಸು.939) ಮೂರನೆಯ ಕೃಷ್ಣ ಪಟ್ಟಕ್ಕೆ ಬಂದ. ರಾಜ್ಯದ ಆಂತರಿಕ ವ್ಯವಸ್ಥೆಯನ್ನು ಭದ್ರಮಾಡಿ ಸ್ಥಿತ್ಯಂತರವಾಗಿದ್ದ ತಮಿಳುನಾಡಿನ ರಾಜಕೀಯದಲ್ಲಿ ಕೈಹಾಕಿದ ಚೋಳರ ಪರಾಂತಕ ಈ ಮೊದಲೇ ರಾಷ್ಟ್ರಕೂಟರ ವಿರೋಧಿಯಾಗಿದ್ದ. ರಾಜ್ಯಭ್ರಷ್ಟನಾಗಿದ್ದ ನಾಲ್ವಡಿ ಗೋವಿಂದನಿಗೆ ಆಶ್ರಯ ನೀಡಿ ವೈರತ್ವವನ್ನು ವೃದ್ಧಿಸಿದ. ಈಗ ಕೃಷ್ಣ ಗಂಗ ಬೂತುಗನ ಸಹಾಯದೊಡನೆ ಚೋಳರ ವಿರುದ್ಧ ದಂಡೆತ್ತಿ ತಕ್ಕೋಲದಲ್ಲಿ ನಡೆದ ಕದನದಲ್ಲಿ ಚೋಳರ ಯುವರಾಜನಾದ ರಾಜಾದಿತ್ಯನನ್ನು ಕೊಂದ. ತೊಂಡೈಮಂಡಲವನ್ನು ಗೆದ್ದು ಕಾಂಚೀಪುರದಿಂದ ತಂಜಾವೂರುವರೆಗಿನ ಪ್ರದೇಶವನ್ನು ಆಕ್ರಮಿಸಿ, ರಾಮೇಶ್ವರದವರೆಗೂ ಸಾಗಿ ಅಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದ. ಪಾಂಡ್ಯರೂ ಕೇರಳರೂ ಸಿಂಹಳೀಯರೂ ವಿನಮ್ರರಾದರು. ಉತ್ತರ ಆರ್ಕಾಟ್ ಜಿಲ್ಲೆಯ ಮೇಲ್ಪಾಡಿ ಕೆಲಕಾಲ ಇವನ ರಾಜಧಾನಿಯಾಯಿತು.

ಈ ಹೊತ್ತಿಗೆ ಉತ್ತರದಲ್ಲಿ ಗೂರ್ಜರ ಪ್ರತೀಹಾರರು ಮತ್ತೆ ಪ್ರಬಲರಾಗಿದ್ದರು. ಹೊಸದಾಗಿ ಅಧಿಕಾರಕ್ಕೆ ಬಂದಿದ್ದ ಬುಂದೇಲಖಂಡದ ಚಂದೇಲರು ಚಿತ್ರಕೂಟ ಮತ್ತು ಕಾಲಂಜರ ಕೋಟೆಗಳನ್ನು ಹಿಡಿದುಕೊಂಡಿದ್ದರು (ಸು. 950). ಗಂಗ ಇಮ್ಮಡಿ ಮಾರಸಿಂಹನ ಮುಖಂಡತ್ವದಲ್ಲಿ ರಾಷ್ಟ್ರಕೂಟ ಸೈನ್ಯ ಉತ್ತರ ದಂಡಯಾತ್ರೆಯನ್ನು ಕೈಗೊಂಡು (ಸು. 963) ಚಂದೇಲರನ್ನೂ ಮಾಳವದ ಪರಮಾರ ವಂಶದ ಸೀಯಕ ಹರ್ಷನನ್ನೂ ಸೋಲಿಸಿತು. ರಾಷ್ಟ್ರಕೂಟ ಅಧಿಕಾರ ನರ್ಮದೆಯ ಉತ್ತರಕ್ಕೂ ಹಬ್ಬಿತು.

ಪೂರ್ವತೀರದಲ್ಲಿ ವೆಂಗಿಮಂಡಲದಲ್ಲಿ ತಲೆ ಎತ್ತಿದ ಅಂತಃಕಲಹಗಳಲ್ಲಿ ಪ್ರವೇಶಿಸಿ ತನಗೆ ಅನುಕೂಲನಾದ ಇಮ್ಮಡಿ ಯುದ್ಧಮಲ್ಲನ ಮಗ ಬಾಡಪನಿಗೆ ವೆಂಗಿ ರಾಜ್ಯವನ್ನು ವಹಿಸಿ ಅವನು ರಾಷ್ಟ್ರಕೂಟ ಸಾಮಂತತ್ವವನ್ನು ಒಪ್ಪಿಕೊಂಡಿರುವ ವ್ಯವಸ್ಥೆ ಮಾಡಲಾಯಿತು. ಈ ವಿಧದಲ್ಲಿ ಮೂರನೆಯ ಕೃಷ್ಣ ಹಿರಿಯರ ಬೃಹತ್ ಸಾಧನೆಗಳನ್ನು ಅನುಕರಿಸಿ ದಕ್ಷಿಣ ಭಾರತವನ್ನೆಲ್ಲ ರಾಷ್ಟ್ರಕೂಟ ಏಕಚ್ಛತ್ರದಡಿಗೆ ತಂದು ಉತ್ತರ ಭಾರತದಲ್ಲೂ ಪ್ರಭಾವಿಯಾಗಿ ಮೆರೆದ.

ಕೃಷ್ಣನ ಸೋದರ ಖೊಟ್ಟಿಗನ ಸಿಂಹಾಸನಾರೋಹಣದಿಂದ (967) ರಾಷ್ಟ್ರಕೂಟರ ಅವನತಿ ಪ್ರಾರಂಭವಾಯಿತು. ಪಟ್ಟಕ್ಕೇರುವಾಗಲೇ ಮುದುಕನಾಗಿದ್ದ ಈತ ಆಡಳಿತದಲ್ಲಿಯೂ ಶೌರ್ಯದಲ್ಲಿಯೂ ದುರ್ಬಲನಾಗಿದ್ದ. ಎಂತಲೇ ಕೃಷ್ಣನ ದಂಡಯಾತ್ರೆಗಳಲ್ಲಿ ನೊಂದ ರಾಜರೆಲ್ಲ ಈಗ ತಲೆಯೆತ್ತಿದರು. ಪರಮಾರ ವಂಶದ ಸೀಯಕ ಹರ್ಷ ರಾಜಧಾನಿ ಮಳಖೇಡಕ್ಕೆ ನುಗ್ಗಿ ಅದನ್ನು ಸಂಪೂರ್ಣವಾಗಿ ಲೂಟಿ ಮಾಡಿದ. ಗಂಗರ ಇಮ್ಮಡಿ ಮಾರಸಿಂಹ ಪರಮಾರನನ್ನು ಹಿಮ್ಮೆಟ್ಟಿಸಿದನಾದರೂ ಈ ಹೊಡೆತದಿಂದ ರಾಷ್ಟ್ರಕೂಟರ ಪ್ರತಿಷ್ಠೆ ಪರಮಾಧಿಕಾರಗಳಿಗೆ ಧಕ್ಕೆಯುಂಟಾಯಿತು. ಇದಾದ ಸ್ವಲ್ಪ ದಿನಗಳಲ್ಲಿ ಖೊಟ್ಟಿಗ ನಿಧನನಾದ (972).

ಇವನ ಅನಂತರ ಇನ್ನೊಬ್ಬ ಸೋದರ ನಿರುಪಮನ ಮಗ 2ನೆಯ ಕರ್ಕ ಒಂದು ವರ್ಷ ಮಾತ್ರ ರಾಜ್ಯವಾಳಿದ. ರಾಜನ ಅಸಾಮರ್ಥ್ಯ, ದುರ್ವ್ಯವಹಾರಗಳು ರಾಜ್ಯದ ಅಧಃಪತನಕ್ಕೆ ಕಾರಣವಾದುವು. ಮಾಂಡಲಿಕರು, ಅಧಿಕಾರಿಗಳು, ಪ್ರಜೆಗಳು ಅತೃಪ್ತರಾದರು. ಗೊಂದಲ, ಅಶಾಂತಿ ಹೆಚ್ಚಿತು. ಈ ಸಮಯದಲ್ಲಿ ರಾಷ್ಟ್ರಕೂಟರ ಅಧೀನ ಅಧಿಕಾರಿಯಾಗಿದ್ದ ಚಾಳುಕ್ಯ ವಂಶದ ಇಮ್ಮಡಿ ತೈಲಪ ಕ್ರಾಂತಿಯ ಮುಂದಾಳತ್ವವನ್ನು ವಹಿಸಿದ. ಎರಡು ನೂರು ವರ್ಷಗಳ ಹಿಂದೆ ತನ್ನ ಚಳುಕ್ಯ ಪೂರ್ವಜರಿಂದ ಅಧಿಕಾರ ಕಿತ್ತುಕೊಂಡಿದ್ದ ರಾಷ್ಟ್ರಕೂಟ

ಲಕುಲೀಶ ಶಿವ

ದಂತಿದುರ್ಗನ ಯುಕ್ತಿಯನ್ನೇ ತಾನೂ ಮಾಡಿ ಕಳೆದುಹೋದ ಚಾಳುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸುವ ಧ್ಯೇಯದಿಂದ ತೈಲಪನು ಮುನ್ನಡೆದ. ರಾಷ್ಟ್ರಕೂಟರಿಂದ ಅವಮಾನಿತನಾಗಿದ್ದ ಚೇದಿಯ ಕಳಚುರಿಗಳು ನಿರಾಸಕ್ತರಾಗಿ ಘಟನಾವಳಿಗಳ ಮೂಕಪ್ರೇಕ್ಷಕರಾಗಿದ್ದರು. ತೈಲಪ ಬಲವಾದ ಸೈನ್ಯದೊಂದಿಗೆ ರಾಷ್ಟ್ರಕೂಟ ರಾಜಧಾನಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡ. ಕರ್ಕನೇನೋ ಪಾರಾಗಿ 991ರವರೆಗೂ ಶಿವಮೊಗ್ಗ ಜಿಲ್ಲೆಯ ಒಂದು ಗ್ರಾಮದಲ್ಲಿ ಬಹು ದೀನಸ್ಥಿತಿಯಲ್ಲಿ ಬದುಕಿದ. ರಾಷ್ಟ್ರಕೂಟ ವಂಶದ ಅಭಿಮಾನಿಯೂ ಹಿತೈಷಿಯೂ ಬಂಧುವೂ ಆದ ಇಮ್ಮಡಿ ಮಾರಸಿಂಹ ಮುಂತಾದವರು ಕೃಷ್ಣನ ಮೊಮ್ಮಗ ನಾಲ್ಕನೆಯ ಇಂದ್ರನನ್ನು ಬೆಂಬಲಿಸಿ ಹೋರಾಡಿದರಾದರೂ ಸಫಲರಾಗಲಿಲ್ಲ. 967ರಲ್ಲಿ ಮೂರನೆಯ ಕೃಷ್ಣನ ಆಳಿಕೆಯಲ್ಲಿ ಉಚ್ಛ್ರಾಯದ ತುದಿಗೇರಿದ್ದ ರಾಷ್ಟ್ರಕೂಟ ಸಾಮ್ರಾಜ್ಯ ಕೇವಲ ಆರು ವರ್ಷಗಳಲ್ಲಿ ಅಂದರೆ 973ರಲ್ಲಿ ಅಸ್ತಂಗತವಾಯಿತು.

ಭಾರತದ ಕೆಲವೇ ಮಹಾಸಾಮ್ರಾಜ್ಯಗಳಾದ ಮೌರ್ಯ, ಗುಪ್ತ, ಪ್ರತಿಹಾರ, ವಿಜಯನಗರ ಸಾಮ್ರಾಜ್ಯಗಳ ಜೊತೆಯಲ್ಲಿ ಸರಿಸಮವಾಗಿ ನಿಲ್ಲಬಲ್ಲ ಸಾಮ್ರಾಜ್ಯ ರಾಷ್ಟ್ರಕೂಟರದು. ಸಮಕಾಲೀನ ಅರಬ್ ಲೇಖಕ ಸುಲೇಮಾನ್‌ನ ಪ್ರಕಾರ ಆಗಿನ ಪ್ರಪಂಚದ ನಾಲ್ಕು ಮಹಾಸಾಮ್ರಾಜ್ಯಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಒಂದಾಗಿತ್ತು. (ಜಿ.ಆರ್.ಪಿ.;ಬಿ.ಆರ್.ಜಿ.)

ಹಲವಾರು ರಾಷ್ಟ್ರಕೂಟ ಶಾಖೆಗಳಿದ್ದು ಅವು ಭಾರತದ ತುಂಬ ವ್ಯಾಪಿಸಿಕೊಂಡಿವೆ. ಗುಜರಾತ್, ರಾಜಸ್ತಾನ (ಬಿಕನೇರ್ ರಾಜಮನೆತನ, 1947ರಲ್ಲಿ ಭಾರತ ಸರ್ಕಾರದಲ್ಲಿ ವಿಲೀನವಾಯಿತು), ಮಿಥಿಲೆ (ಬಿಹಾರ) ಮತ್ತೆ ಕರ್ನಾಟಕದಲ್ಲೇ ಬನವಾಸಿ ಹಾಗೂ ಬೆಳಗಾಂವಿ ಜಿಲ್ಲೆಗಳಲ್ಲಿ ಎರಡು ಮನೆತನಗಳಿದ್ದವು. ಸೌಂದತ್ತಿಯ ರಟ್ಟರು ಬೆಳಗಾಂವಿ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದರೆ, ಬನವಾಸಿಯ ರಾಷ್ಟ್ರಕೂಟರು ಬನವಾಸಿಯಿಂದ ಚಿತ್ರದುರ್ಗ ಜಿಲ್ಲೆಯವರೆಗೆ ರಾಜ್ಯವಾಳಿದರು; ಮಹಾಮಂಡಲೇಶ್ವರರಾಗಿ ಮೆರೆದರು. ಈ ಶಾಖೆಯ ಶಂಕರಗಂಡ

(II) ಹಾಗೂ ಸಿಂಗಣದೇವ ಬಹಳ ಪ್ರಸಿದ್ಧ ರಾಜರು. ಶಂಕರಗಂಡ ಕೊಪ್ಪಳದಲ್ಲಿ ಜಯಧೀರ ಜಿನಾಲಯವನ್ನು ಕಟ್ಟಿಸಿದ್ದಾನೆ. ಸಿಂಗಣದೇವನು ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಆಹವಮಲ್ಲ ಸೋಮೇಶ್ವರ (I) ದೊರೆಯ ಅಳಿಯನಾಗಿದ್ದ. ಚಾಳುಕ್ಯ ಸಾಮ್ರಾಜ್ಯವನ್ನು ಚೋಳರಿಂದ ಕೊಲ್ಲಿಪಾಕೆಯಲ್ಲಿ ರಕ್ಷಿಸಿದ. ಅಂತೆಲೆ ಇವನಿಗೆ ಕೊಳ್ಳಿಪಾಕೆಯ ಗೋವ ಹಾಗೂ ಮಾವನ ಗಂಧವಾರಣ ಎಂಬ ಬಿರುದುಗಳಿದ್ದವು. ಆರಂಭದಲ್ಲಿ ಇವರು ವಾರಂಗಲ್ಲಿನ ಹತ್ತಿರವಿದ್ದರು. ಇವರ ಒಂದು ಕನ್ನಡ ಶಿಲಾಶಾಸನ ಆ ಜಿಲ್ಲೆಯ ಜಾಫರಗದ್ದ ಸ್ಥಳದಲ್ಲಿ ದೊರಕಿದೆ. ವಂಶವೃಕ್ಷ ಇಂತಿದೆ:

**ಯಾದವವಂಶ**

ಪೆರದ
- ಹರಿಯಮ್ಮ
  - ಘಾಣರಾಜ
    - ಶಂಕರಗಂಡ (I)
      - ಆಪ್ಪುವರಾಜನ್
        - ಗೊಮ್ಮರಸ
          - ಅಸಗಮರಸ (I)
            - ಶಂಕರಗಂಡ (II)
              - ಸಿಂಗಣದೇವ (ಚಿತ್ರದುರ್ಗ)
              - ಅಸಗಮರಸ (II) (1074)
              - ಶಂಕರಗಂಡ (III) (1077)

**ಆಡಳಿತ ವ್ಯವಸ್ಥೆ:** ಕೇಂದ್ರ ಸರ್ಕಾರ ರಾಜನನ್ನೊಳಗೊಂಡ ಮಂತ್ರಿಮಂಡಲದಿಂದ ಕೂಡಿದ್ದಾಗಿತ್ತು. ರಾಜತ್ವ ವಂಶಪಾರಂಪರ್ಯವಾಗಿತ್ತು. ಸಾಮಾನ್ಯವಾಗಿ ರಾಜನ ಜ್ಯೇಷ್ಠಪುತ್ರ ಯುವರಾಜನಾಗಿ, ಮುಂದೆ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗುತ್ತಿದ್ದ. ಆದರೆ ದಕ್ಷತೆಯನ್ನು ಆಧರಿಸಿ ಯುವರಾಜನನ್ನು ಆಯ್ಕೆ ಮಾಡುವ ಪದ್ಧತಿಯೂ ಇದ್ದಿತೆಂಬುದು ಸ್ಪಷ್ಟ ಯುವರಾಜ ಸಾಮಾನ್ಯವಾಗಿ ರಾಜಧಾನಿಯಲ್ಲಿರುತ್ತಿದ್ದ. ಆದರೆ ಕಿರಿಯ ರಾಜಕುಮಾರರನ್ನು ಪ್ರಾಂತ್ಯಾಧಿಕಾರಿಗಳಾಗಿ ನೇಮಿಸುತ್ತಿದ್ದರು. ರಾಜನು ಪ್ರಾಪ್ತವಯಸ್ಕನಾಗಿಲ್ಲದಿದ್ದರೆ ಒಬ್ಬ ಪುರುಷಸಂಬಂಧಿಯನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸುತ್ತಿದ್ದರು. ಮಂತ್ರಿಮಂಡಲದ ಗಾತ್ರ ಇತ್ಯಾದಿಗಳು ಸ್ಪಷ್ಟವಾಗಿ ತಿಳಿಯದಿದ್ದರೂ ಸಾಮಾನ್ಯವಾಗಿ ಪ್ರಧಾನಿ, ಸಂಧಿವಿಗ್ರಹಿ, ಭಂಡಾರಿ, ಕಂದಾಯ ಇಲಾಖೆಯ ಮುಖ್ಯಾಧಿಕಾರಿ, ಸೇನಾಪತಿ ಮತ್ತು ಪುರೋಹಿತರು ಮಂತ್ರಿಮಂಡಲದ ಸದಸ್ಯರಾಗಿರುತ್ತಿದ್ದರು. ಇವರೆಲ್ಲರೂ ದಕ್ಷ ಸೈನಿಕರೂ ಆಗಿದ್ದು ಕದನದಲ್ಲಿ ಭಾಗವಹಿಸುತ್ತಿದ್ದರು. ಮಂತ್ರಿಗಳಲ್ಲಿ ಕೆಲವರು ಸಣ್ಣ ಪ್ರಾಂತ್ಯಗಳ ಸಾಮಂತರೂ ಆಗಿದ್ದರು. ಈ ಅಧಿಕಾರಿಗಳಿಗೆ ಭೂಮಿಗಳನ್ನು, ಗ್ರಾಮಗಳನ್ನು ಸರ್ವಮಾನ್ಯ ದತ್ತಿಗಳಾಗಿ ಕೊಡುವುದರ ಮೂಲಕ ಅವರ ಸಂಬಳಗಳನ್ನು ಪೂರೈಸಲಾಗುತ್ತಿತ್ತು. ನಿರ್ದಿಷ್ಟ ಮೊತ್ತವನ್ನು ಹಣದ ರೂಪದಲ್ಲಿ ಪಾವತಿ ಮಾಡುತ್ತಿರಲಿಲ್ಲ. ರಾಷ್ಟ್ರಕೂಟರ ಸಾಮ್ರಾಜ್ಯವನ್ನು ಆಡಳಿತದ ಅನುಕೂಲ ಕೋಸ್ಕರ ಅನೇಕ ರಾಷ್ಟ್ರಗಳನ್ನಾಗಿ ವಿಂಗಡಿಸಲಾಗಿದ್ದಿತು. ರಾಷ್ಟ್ರಪತಿಯು ಪ್ರತಿಯೊಂದು ರಾಷ್ಟ್ರದ ಮುಖ್ಯ ಅಧಿಕಾರಿ. ಈಗಿನ ಡಿವಿಷನ್‌ಗಳಿಗೆ ಸಮಾನವಾಗಿರಬಹುದಾದ ಒಂದೊಂದು ರಾಷ್ಟ್ರದಲ್ಲೂ ಜಿಲ್ಲೆಗಳಂತಹ ನಾಲ್ಕೈದು ವಿಷಯಗಳಿದ್ದು ಇವುಗಳ ಆಡಳಿತ ವಿಷಯ ಪತಿಗೆ ಒಳಪಟ್ಟಿತ್ತು. ಪ್ರತಿ ವಿಷಯದಲ್ಲೂ ಸು.1,000 ದಿಂದ 4,000ದವ ರೆಗೆ ಗ್ರಾಮಗಳಿದ್ದವು. ಪುಣಕ ವಿಷಯದಲ್ಲಿ 1,000 ಗ್ರಾಮಗಳಿದ್ದರೆ ಕರಹಾಟಕ ವಿಷಯದಲ್ಲಿ 4,000 ಗ್ರಾಮಗಳಿದ್ದುವು. ಭುಕ್ತಿಗಳು ವಿಷಯಗಳ ಒಳವಿಭಾಗಗಳು. ಒಂದೊಂದು ಭುಕ್ತಿಯಲ್ಲೂ ಸು.50 ರಿಂದ 70 ಗ್ರಾಮಗಳಿರುತ್ತಿದ್ದವು. ಗ್ರಾಮ ಆಡಳಿತ ವಿಭಾಗಗಳಲ್ಲಿ ಕನಿಷ್ಠ ಘಟಕ. ರಾಷ್ಟ್ರಪತಿಯು ತನ್ನ ಆಡಳಿತ ಕಕ್ಷೆಗೊಳಪಟ್ಟ ಪ್ರದೇಶದ ಶಾಂತಿಪಾಲನೆಗೆ, ರಕ್ಷಣೆಗೆ ಜವಾಬ್ದಾರನಾಗಿದ್ದ. ಸೈನ್ಯದ ಪೌರಾಡಳಿತದ ಮುಖ್ಯಾಧಿಕಾರಿಯಾಗಿದ್ದ ಈತ ಸಾಮಂತರ ಕಿರಿಯ ಅಧಿಕಾರಿಗಳ ನಿಷ್ಠೆಯ ವಿಷಯದಲ್ಲಿ ಎಚ್ಚರ ವಹಿಸಿ, ಅವರನ್ನು ಹತೋಟಿಯಲ್ಲಿಡುತ್ತಿದ್ದ. ಆಯಾ ಪ್ರದೇಶದ ಕಂದಾಯದ ವಸೂಲಿ ಆತನ ಜವಾಬ್ದಾರಿ. ಅರಸನ ಅನುಮತಿಯಿಲ್ಲದೆ ಆದಾಯದಲ್ಲಿ ವ್ಯತ್ಯಯಗಳನ್ನು ಮಾಡುವ ಹಿರಿಯ ಕಿರಿಯ ಅಧಿಕಾರಿಗಳನ್ನು ನೇಮಿಸುವ ಹಕ್ಕು ಈತನಿಗಿರಲಿಲ್ಲ. ಸುಮಾರು ಇದೇ ವಿಧದ ಜವಾಬ್ದಾರಿಗಳು ತಮ್ಮ ತಮ್ಮ ಆಡಳಿತ ಕ್ಷೇತ್ರಗಳಲ್ಲಿ ವಿಷಯಪತಿ, ಭೋಗಪತಿಗಳಿಗೂ ಇದ್ದಿತು. ಹಲವೊಮ್ಮೆ ಈ ಅಧಿಕಾರಿಗಳ ದಕ್ಷತೆಯನ್ನು ಪರಿಗಣಿಸಿ ಈ ಹುದ್ದೆಗಳು ವಂಶಪಾರಂಪರ್ಯ ವಾಗಿರುತ್ತಿದ್ದವು.

ವಿಷಯಗಳ ಅಧಿಕಾರಿಗಳಾಗಿದ್ದ ವಿಷಯಪತಿಗಳು ರಾಷ್ಟ್ರಪತಿಗಳಿಗೆ ಜವಾಬ್ದಾರಿ ಹೊಂದಿದ್ದರು. ವಿಷಯ ಅಥವಾ ಜಿಲ್ಲೆಗಳನ್ನು ಭುಕ್ತಿಗಳೆಂದು ಪುನರ್ವಿಂಗಡಿಸಿ ಇವುಗಳ ಆಡಳಿತವನ್ನು ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಭೋಗಪತಿ ಅಥವಾ ಭೋಕರ ಎಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದ. ಭುಕ್ತಿಗಳನ್ನು 10ರಿಂದ 30 ಗ್ರಾಮಗಳನ್ನೊಳಗೊಂಡ ವೃತ್ತಗಳನ್ನಾಗಿ ಪುನರ್ವಿಂಗಡಿಸಲಾಗಿತ್ತು. ಇವುಗಳ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಅಥವಾ ಪ್ರಾಂತ್ಯಾಧಿಕಾರಿಗಳ ನೆರವಿನಿಂದ ಆಡಳಿತ ನಡೆಸುತ್ತಿದ್ದರು. ಪ್ರತಿ ಗ್ರಾಮ ಗಾವುಂಡ ಎಂಬ ವಂಶಪಾರಂಪರ್ಯ ಅಧಿಕಾರಿಯ ಹತೋಟಿಯಲ್ಲಿದ್ದಿತು. ಈತ ಜನಗಳ ಪ್ರತಿನಿಧಿಯಾಗಿದ್ದ. ಪ್ರತಿಗ್ರಾಮಕ್ಕೂ ಒಬ್ಬ ಗಾವುಂಡನಿದ್ದ. ಈತ ಗ್ರಾಮ ಸೈನ್ಯದ ಮೇಲ್ವಿಚಾರಣೆಯನ್ನು ಹೊಂದಿದ್ದನಲ್ಲದೆ ಗ್ರಾಮದ ಕಂದಾಯ ವಸೂಲಿಗೂ ಜವಾಬ್ದಾರಿ ಹೊಂದಿದ್ದು ಗ್ರಾಮಸಭೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ. ಸ್ವಲ್ಪಮಟ್ಟಿಗೆ ನ್ಯಾಯಾಡಳಿತವೂ ಇವನ ಅಧಿಕಾರದ ವ್ಯಾಪ್ತಿಗೊಳಪಟ್ಟಿತ್ತು. ಒಟ್ಟಿನಲ್ಲಿ ಈತ ಗ್ರಾಮಾಡಳಿತದ ಮುಖ್ಯಾಧಿಕಾರಿಯಾಗಿದ್ದ. ಈತನ ಸಂಭಾವನೆ ಕಂದಾಯರಹಿತ ಜಮೀನಾಗಿದ್ದಿತು. ಈತನ ಸಹಾಯಕ್ಕೆ ಗ್ರಾಮದ ಲೆಕ್ಕಿಗ ಇರುತ್ತಿದ್ದ. ಗ್ರಾಮಸಭೆಗಳಿದ್ದುವು. ಅಗ್ರಹಾರಗಳಲ್ಲಿ ಬ್ರಾಹ್ಮಣರನ್ನೊಳ ಗೊಂಡ ಮಹಾಜನ ಸಭೆಗಳಿದ್ದುವು. ನಗರ ಮತ್ತು ಪಟ್ಟಣಗಳು ಪುರಪತಿ ಅಥವಾ ನಗರಪತಿಗಳೆಂಬ ಅಧಿಕಾರಿಗಳ ಹತೋಟಿಯಲ್ಲಿದ್ದುವು. ಅವರು ಸಮಿತಿಗಳ ನೆರವಿನಿಂದ ಪೌರಾಡಳಿತವನ್ನು ನೋಡಿಕೊಳ್ಳುತ್ತಿದ್ದರು. ಶಾಸನಗಳಲ್ಲಿ ಒಮ್ಮೊಮ್ಮೆ ಗ್ರಾಮಮಹತ್ತರ, ವಿಷಯಮಹತ್ತರ, ರಾಷ್ಟ್ರಮಹತ್ತರ ಮುಂತಾದ ಪದಗಳು ಕಂಡುಬಂದಿದ್ದು, ಇವು ಗ್ರಾಮವಿಷಯ ಅಥವಾ ರಾಷ್ಟ್ರದ ಸಭೆಗಳ ಸದಸ್ಯರನ್ನು (ಹಿರಿಯರನ್ನು) ಸೂಚಿಸುತ್ತವೆ. (ಎ.ವಿ.ಎನ್.;ಬಿ.ಆರ್.ಜಿ)

**ಆರ್ಥಿಕ ಸಾಮಾಜಿಕ ಸ್ಥಿತಿ:** ರಾಷ್ಟ್ರಕೂಟರ ಕಾಲದ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಲು ರಾಷ್ಟ್ರಕೂಟರ ಶಾಸನಗಳನ್ನಲ್ಲದೆ ಸಮಕಾಲೀನ ದಕ್ಷಿಣ ಭಾರತದ ದಾಖಲೆಗಳನ್ನು ಅವಲಂಬಿಸಬೇಕು. ರಾಜ್ಯಕ್ಕೆ ಆದಾಯ ಮುಖ್ಯವಾಗಿ ಪ್ರಕೃತಿಸಂಪನ್ಮೂಲಗಳಿಂದಲೂ ದಂಡಯಾತ್ರೆಗಳಿಂದಲೂ ಬರುತ್ತಿತ್ತು. ವ್ಯವಸಾಯ ಜನರ ಮುಖ್ಯ ಕಸುಬಾಗಿದ್ದಿತು. ದಖನ್ ಪ್ರಸ್ಥಭೂಮಿಯ ಉತ್ತರ ಭಾಗದಲ್ಲಿ ಜೋಳ, ಸಜ್ಜೆ, ಎಣ್ಣೆಬೀಜಗಳು ಮತ್ತು ಹತ್ತಿಯನ್ನು ಬೆಳೆಯುತ್ತಿದ್ದರು. ಹತ್ತಿಯನ್ನು ಹೇರಳವಾಗಿ ದಕ್ಷಿಣ ಗುಜರಾತ್, ಖಾನ್‌ದೇಶ ಮತ್ತು ಬೀರಾರ್‌ನಲ್ಲಿ ಬೆಳೆಯುತ್ತಿದ್ದರು. ಕೊಂಕಣ ಪ್ರದೇಶದಲ್ಲಿ ತೆಂಗು, ಅಡಕೆ ಮತ್ತು ಬತ್ತವನ್ನು ಬೆಳೆಯುತ್ತಿದ್ದರು. ಪಶ್ಚಿಮ ಘಟ್ಟಗಳಲ್ಲಿ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಗಂಧ, ತೇಗ, ಎಬೊನಿ (ಕರಿಯ ಮರ) ಮರಗಳ ಸಂಪತ್ತು ವಿಪುಲವಾಗಿತ್ತು. ಈ ಮರಗಳಲ್ಲಿ ತಯಾರಿಸಿದ ವಸ್ತುಗಳನ್ನು ಬೇರೆ ದೇಶಕ್ಕೆ ರಫ್ತು ಮಾಡುತ್ತಿದ್ದರು. ತೀರಪ್ರದೇಶಗಳಲ್ಲಿ ಸಾಂಬಾರ ಪದಾರ್ಥಗಳನ್ನು ಬೆಳೆಯುತ್ತಿದ್ದರು. ರಾಜ್ಯದ ಹಲವು ಭಾಗಗಳಲ್ಲಿ ಮುಖ್ಯವಾಗಿ ತೀರಪ್ರದೇಶಗಳಲ್ಲಿ ಹೇರಳವಾಗಿ ಮಳೆಯಾಗುತ್ತಿತ್ತು. ರಾಷ್ಟ್ರಕೂಟ ಅರಸರು ಅನೇಕ ಕೆರೆಗಳನ್ನು ಕಟ್ಟಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟಂಥ ನಿದರ್ಶನಗಳು ಬೇಕಾದಷ್ಟಿವೆ. ಕುಂಬಾರಿಕೆ, ನೇಯ್ಗೆ, ಮರಗೆಲಸ, ಲೋಹದ ಕೆಲಸ, ದಂತದ ಕೆತ್ತನೆ ಮೊದಲಾದುವು ಜನರ ಇತರ ಕಸಬಾಗಿದ್ದವು.

ಖನಿಜಸಂಪತ್ತು ಹೇರಳವಾಗಿತ್ತು. ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರದ ಕೆಲವು ಭಾಗಗಳಲ್ಲಿ ತಾಮ್ರದ ಗಣಿಗಳಿದ್ದವು. ಕಡಪ, ಬಳ್ಳಾರಿ, ಕರ್ನೂಲು, ಗೋಲ್ಕೊಂಡ ಪ್ರದೇಶಗಳಲ್ಲಿ ಅಮೂಲ್ಯವಾದ ರತ್ನದ ಹರಳುಗಳು ದೊರೆಯುತ್ತಿದ್ದವು. ಇಂದಿಗೂ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ವಜ್ರಕರೂರು ಮುಂತಾದ ಕೆಲವು ಭಾಗಗಳಲ್ಲಿ ವಜ್ರದ ಹರಳುಗಳು ದೊರೆಯುತ್ತವೆ. ರಾಷ್ಟ್ರಕೂಟರ ರಾಜಧಾನಿಯಾದ ಮಾನ್ಯಖೇಟ ವಜ್ರವೈಢೂರ್ಯಗಳ ಮಾರುಕಟ್ಟೆಯ ಮುಖ್ಯಕೇಂದ್ರವಾಗಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಅನೇಕ ಕೈಗಾರಿಕೆಗಳು ಬೆಳಕಿಗೆ ಬಂದಿವೆ. ಬಟ್ಟೆ ಕೈಗಾರಿಕೆ ಅತಿ ಮುಖ್ಯವಾದುದಾಗಿತ್ತು. ಮಿನ್ನಾಗರ, ಗುಜರಾತ್, ಉಜ್ಜಯಿನಿ, ಪೈಥಾನ್ ಮತ್ತು ತಗರ ಬಟ್ಟೆಗಿರಣಿಗಳ ಕೇಂದ್ರಗಳಾಗಿದ್ದವು. ಪೈಥಾನ್ ಮತ್ತು ವಾರಂಗಲ್ಲುಗಳು ಮಸ್ಲಿನ್ ಬಟ್ಟೆಯ ತಯಾರಿಕೆಗೆ ಪ್ರಸಿದ್ಧಿಯಾಗಿದ್ದವು. ಚರ್ಮದ ಕೈಗಾರಿಕೆ ಈ ಕಾಲದ ಮತ್ತೊಂದು ಮುಖ್ಯವಾದ ಕೈಗಾರಿಕೆಯಾಗಿತ್ತು. ಹದಮಾಡಿದ ಚರ್ಮವನ್ನು ಇಂದಿನ ಮಹಾರಾಷ್ಟ್ರದ ಥಾಣಾದಿಂದ ಅರೇಬಿಯ ಮತ್ತು ಪರ್ಷಿಯ ದೇಶಗಳಿಗೆ ರಫ್ತುಮಾಡುತ್ತಿದ್ದರು. ಚಾಪೆ ಕೈಗಾರಿಕೆ ಪ್ರಸಿದ್ಧಿಯಾಗಿತ್ತು ಬಣ್ಣಬಣ್ಣದ ಚಾಪೆಗಳನ್ನು ತಯಾರಿಸಿ ರಫ್ತು ಮಾಡುತ್ತಿದ್ದರು. ಮೈಸೂರಿನಲ್ಲಿ ಆನೆಗಳು ಹೇರಳವಾಗಿದ್ದುದರಿಂದ ಅದು ದಂತದ ಕೈಗಾರಿಕೆಯ ಕೇಂದ್ರವಾಗಿತ್ತು.

ಪಾಶ್ಚಾತ್ಯ ರಾಷ್ಟ್ರಗಳೊಡನೆ ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚು ವ್ಯಾಪಾರ ಸಂಪರ್ಕವಿದ್ದಿತು. ಬ್ರೋಚ್, ಕಲ್ಯಾಣ ಮುಖ್ಯವಾದ ಬಂದರುಗಳು. ನೌಸಾರಿ, ಸೊಪಾರ, ಥಾಣಾ, ಸೈಮೂರ್, ದಾಬೋಲ್, ಜಯಗಡ, ದೇವಗಡ ಇತರ ಬಂದರುಗಳು. ಬೆಲೆಬಾಳುವ ವಜ್ರ, ನೀಲಿ, ಸುಗಂಧದ್ರವ್ಯ ಮತ್ತು ಪರಿಮಳ ವಸ್ತುಗಳು, ಹತ್ತಿಯ ನೂಲು, ಹತ್ತಿಬಟ್ಟೆ, ಮಸ್ಲಿನ್ ಬಟ್ಟೆ, ಹದಮಾಡಿದ ಚರ್ಮ, ಗಂಧದ ಮತ್ತು ತೇಗದ ಮರದಿಂದ ತಯಾರಿಸಿದ ವಸ್ತುಗಳು, ದಂತದ ವಸ್ತುಗಳು–ಇವು ಹೊರದೇಶಕ್ಕೆ ರಫ್ತಾಗುತ್ತಿದ್ದವು. ಖರ್ಜೂರ, ಇಟಲಿಯ ದ್ರಾಕ್ಷಾರಸ, ಅಮೃತಶಿಲೆ, ಗಾಜು, ತವರ, ಸೀಸ ಮತ್ತು ಇತರ ಪದಾರ್ಥಗಳನ್ನು ಆಮದುಮಾಡಿಕೊಳ್ಳುತ್ತಿದ್ದರು. ವಿದೇಶ ವ್ಯಾಪಾರ ಅತಿ ಬಿರುಸಿನಿಂದ ನಡೆಯುತ್ತಿತ್ತು. ಎತ್ತಿನ ಗಾಡಿ ಆಂತರಿಕ ಸಾರಿಗೆಯ ಮುಖ್ಯ ಸಾಧನವಾಗಿತ್ತು. ಜೊತೆಗೆ ಕುದುರೆಯನ್ನು ಸಾರಿಗೆಯ ಸಾಧನವನ್ನಾಗಿ ಉಪಯೋಗಿಸಲಾಗುತ್ತಿತ್ತು. ಗ್ರಾಮದ ಕುಶಲಕರ್ಮಿಗಳಾದ ಬಡಗಿಗಳು, ಲೋಹಗೆಲಸದವರು, ಕುಂಬಾರರು ತಮ್ಮದೇ ಆದ ಸಮುದಾಯವನ್ನು ಹೊಂದಿದ್ದರು. ಇವರು ರೈತರಿಗೆ ತಮ್ಮ ಸಹಾಯವನ್ನು ನೀಡಿ ಅವರು ಬೆಳೆದುದರಲ್ಲಿ ಸ್ವಲ್ಪಭಾಗವನ್ನು ಪಡೆಯುತ್ತಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ಕೂಡ ಆರ್ಥಿಕ ಕ್ಷೇತ್ರದಲ್ಲಿ ಸಾಮಾನ್ಯವಾಗಿ ವಸ್ತುವಿನಿಮಯ ಪದ್ಧತಿ ಮುಂದುವರಿಯಿತು. ಇದರ ಜೊತೆಗೆ ನಾಣ್ಯಪದ್ಧತಿ ಬಳಕೆಯಲ್ಲಿತ್ತು. ರಾಷ್ಟ್ರಕೂಟ ಅರಸರು ಅನೇಕ ರೀತಿಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಅಚ್ಚುಹಾಕಿಸಿದ್ದರು. ದ್ರಮ್ಮ, ಸುವರ್ಣ, ಗದ್ಯಾಣಕ, ಕಲಂಜು ಮತ್ತು ಕಾಸು ಮುಖ್ಯವಾಗಿ ಬಳಕೆಯಲ್ಲಿದ್ದ ನಾಣ್ಯಗಳು. ವ್ಯಾಪಾರಕ್ಕೆ ಮತ್ತು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಸಾಲ ದೊರೆಯುತ್ತಿತ್ತು. ಆಗಿನ ವ್ಯಾಪಾರ ಶ್ರೇಣಿಗಳು ಆಧುನಿಕ ಬ್ಯಾಂಕಿನ ರೀತಿಯಲ್ಲಿ ವ್ಯಾಪಾರಿಗಳಿಗೆ ಮತ್ತು ಕೈಗಾರಿಕೋದ್ಯಮಿಗಳಿಗೆ ಸಾಲ ನೀಡುತ್ತಿದ್ದವು. ಮೇಲೆ ವಿವರಿಸಿದ ಅಂಶಗಳಿಂದಾಗಿ ರಾಷ್ಟ್ರಕೂಟರ ಕಾಲದಲ್ಲಿ ದಕ್ಷಿಣ ಭಾರತ ಆರ್ಥಿಕ ಸಮೃದ್ಧಿಯಿಂದ ಕೂಡಿತ್ತೆಂಬುದು ತಿಳಿದುಬರುತ್ತದೆ. ವಿದೇಶಿವ್ಯಾಪಾರ, ಕಟ್ಟಡಗಳ ರಚನೆ, ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆ ಮತ್ತು ಅವರು ನೀಡುತ್ತಿದ್ದ ದಾನದತ್ತಿಗಳು ಆ ಕಾಲದ ಆರ್ಥಿಕ ಸಮೃದ್ಧಿಯನ್ನು ಪ್ರದರ್ಶಿಸುತ್ತವೆ.

ಇಬನ್ ಖುರ್ದಾದ್ ಬೇ ಸುಲೇಮಾನ್, ಅಲ್‌ಮಸೂದಿ ಮತ್ತು ಆಲ್ಬೆರೂನಿ ಅವರ ಗ್ರಂಥಗಳು ರಾಷ್ಟ್ರಕೂಟರ ಕಾಲದ ಸಾಮಾಜಿಕ ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ಅನುಕೂಲ ವಾಗಿವೆ. ಸಮಾಜದಲ್ಲಿ ಏಳು ಜಾತಿಗಳಿದ್ದವೆಂದು ಇಬನ್ ಖುರ್ದಾದ್ ಬೇ ವಿವರಿಸಿದ್ದಾನೆ. ಇವುಗಳಲ್ಲಿ ಹಿಂದಿನಿಂದಲೂ ರೂಢಿಯಲ್ಲಿದ್ದ ನಾಲ್ಕು ವರ್ಣಗಳೂ ಸೇರಿಕೊಂಡಿವೆ. ಅವನು ತನ್ನ ಗ್ರಂಥದಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರ ಬಗ್ಗೆ ವಿವರಣೆ ನೀಡಿದ್ದಾನೆ.



ಯಕ್ಷಯಕ್ಷಿ–ಜಬಲ ಮತ್ತು ಹಾರಿತಿ, ಎಲ್ಲೋರ

ಬ್ರಾಹ್ಮಣರು ಹೋಮ, ವ್ರತ, ಪೂಜೆ, ವೇದಾಧ್ಯಯನ ಮೊದಲಾದ ಕಾರ್ಯಗಳಲ್ಲಿ ತೊಡಗಿದ್ದರು. ಆಗಿನ ಕಾಲದಲ್ಲಿ ಸಾಮಾನ್ಯವಾಗಿ ವಿದ್ಯಾಭ್ಯಾಸ ಕ್ಷೇತ್ರ ಬ್ರಾಹ್ಮಣರಿಗೆ ಮೀಸಲಾಗಿದ್ದುದರಿಂದ ಅನೇಕ ವಿದ್ವಾಂಸರು ಈ ಜಾತಿಗೆ ಸೇರಿದವರಾಗಿದ್ದರು. ಆಡಳಿತ ಕ್ಷೇತ್ರದಲ್ಲೂ ಬ್ರಾಹ್ಮಣರು ಅಧಿಕ ಸಂಖ್ಯೆಯಲ್ಲಿದ್ದರು. ಆದರೆ ಶಂಕರಾಚಾರ್ಯರು ವಿವರಿಸಿರುವಂತೆ ರಾಷ್ಟ್ರಕೂಟರ ಕಾಲದಲ್ಲಿ ನಾಲ್ಕು ವರ್ಣದವರು ಧರ್ಮಗ್ರಂಥಗಳಲ್ಲಿ ವಿವರಿಸಿರುವಂತೆ ಕಟ್ಟುನಿಟ್ಟಾಗಿ ತಮ್ಮ ತಮ್ಮ ವೃತ್ತಿಗಳನ್ನು ಅನುಸರಿಸುತ್ತಿರಲಿಲ್ಲ. ಅವರು ವಿವಿಧ ಕಸಬುಗಳನ್ನು ಅವಲಂಬಿಸಿದ್ದರು. ಅನೇಕ ಬ್ರಾಹ್ಮಣರು ವ್ಯಾಪಾರ, ವ್ಯವಸಾಯ, ಸೈನಿಕ ವೃತ್ತಿ ಮೊದಲಾದ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಲು ಪ್ರಾರಂಭಿಸಿದ್ದರು. ತೆರಿಗೆ ಮತ್ತು ಮರಣದಂಡನೆಯಿಂದ ಬ್ರಾಹ್ಮಣರು ತಪ್ಪಿಸಿಕೊಂಡಿದ್ದರೆಂದು ಆ ಕಾಲದ ಆಧಾರಗಳು ತಿಳಿಸುತ್ತವೆ. ಆದರೆ ಈ ವಿನಾಯಿತಿಯು ಎಲ್ಲ ಬ್ರಾಹ್ಮಣರಿಗೂ ಅನ್ವಯಿಸಿರಲಿಲ್ಲ. ಅದು ಕೇವಲ ಕೆಲವು ಧರ್ಮಗುರುಗಳಿಗೆ ಮತ್ತು ವಿದ್ವಾಂಸರಿಗೆ ಮಾತ್ರ. ಅಲ್ಲದೆ ರಾಷ್ಟ್ರಕೂಟರ ಕಾಲದಲ್ಲಿ ಬ್ರಾಹ್ಮಣರು ಮರಣದಂಡನೆಗೆ ಗುರಿಯಾದಂಥ ಯಾವ ಘಟನೆಯೂ ತಿಳಿದುಬಂದಿಲ್ಲ. ಬಹುಶಃ ಬ್ರಾಹ್ಮಣರಿಗೆ ಅತಿ ಹೆಚ್ಚಿನ ಅಥವಾ ಕ್ರೂರಶಿಕ್ಷೆ ಎಂದರೆ ಕೈ ಅಥವಾ ಕಾಲನ್ನು ಕತ್ತರಿಸುವ ಪದ್ಧತಿಯಾಗಿತ್ತೆಂದು ತಿಳಿದುಬರುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಅರಬ್ ದೇಶದ ಕೆಲವು ಮಹಮದೀಯ ಪ್ರವಾಸಿಗರು ಕ್ಷತ್ರಿಯರಿಗೆ ಬ್ರಾಹ್ಮಣರು ವಿಧೇಯರಾಗಿದ್ದರು ಎಂಬುದಾಗಿ ವಿವರಿಸಿದ್ದಾರೆ. ಸತ್‌ಕ್ಷತ್ರಿಯರು ಕ್ಷತ್ರಿಯರಲ್ಲೇ ಉನ್ನತವರ್ಗಕ್ಕೆ ಸೇರಿದವರಾಗಿದ್ದರು. ಸತ್‌ಕ್ಷತ್ರಿಯರು ಬ್ರಾಹ್ಮಣರಿಗಿಂತ ಮೇಲ್ಮಟ್ಟದವರೆಂದು ಪರಿಗಣಿಸಲ್ಪಟ್ಟಿದ್ದರು. ಕ್ಷತ್ರಿಯರು ಕೂಡ ತಮಗೆ ಮೀಸಲಾಗಿದ್ದ ಯುದ್ಧ ಮತ್ತು ಆಡಳಿತ ಕ್ಷೇತ್ರಕ್ಕೆ ಮಾತ್ರ ಹೊಂದಿಕೊಂಡಿರದೆ ವಿವಿಧ ವೃತ್ತಿಗಳನ್ನು ಅವಲಂಬಿಸಿದ್ದರು. ಕ್ಷತ್ರಿಯರು ಈ ಕಾಲದಲ್ಲಿ ಯಜ್ಞಯಾಗಗಳನ್ನು ಮಾಡುವುದಕ್ಕೆ ಅಷ್ಟೊಂದು ಪ್ರಾಮುಖ್ಯ ನೀಡಿರಲಿಲ್ಲ. ಅವರು ವೇದಗಳನ್ನು ಅಧ್ಯಯನ ಮಾಡುವ ಅವಕಾಶ ಹೊಂದಿದ್ದರೂ ಅವುಗಳಿಗೆ ಹೆಚ್ಚು ಮಹತ್ತ್ವ ನೀಡಲಿಲ್ಲ. ಅದರ ಬದಲು ಅವರು ಪುರಾಣಗಳಲ್ಲಿ ಹೇಳಿರುವ ಕಟ್ಟಳೆಗಳಿಗೆ ಹೆಚ್ಚು ಮಹತ್ತ್ವ ನೀಡಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ವೈಶ್ಯರ ಸ್ಥಾನಮಾನಗಳು ಕಡಿಮೆಯಾಗಿದ್ದವು. ವೈಶ್ಯರು ಮತ್ತು ಶೂದ್ರರ ನಡುವೆ ಇದ್ದಂಥ ಅಂತರ ಬಹು ಕಡಿಮೆ. ಶೂದ್ರರು ಕೂಡ ಶತಮಾನಗಳಿಂದಲೂ ಬೆಳೆದು ಬಂದಿದ್ದಂತಹ ಮೇಲ್ವರ್ಗದವರ ಸೇವೆ ಮಾಡಬೇಕೆಂಬ ನಂಬಿಕೆಯನ್ನು ಬದಿಗೊತ್ತಿ ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮ ಪ್ರಭಾವ ಬೀರಲು ಪ್ರಾರಂಭಿಸಿದರು. ವ್ಯಾಪಾರ ಮಾಡುವುದು, ಯುದ್ಧದಲ್ಲಿ ತೊಡಗುವುದು ಮೊದಲಾದ ಕಸಬುಗಳನ್ನು ಆರಿಸಿಕೊಂಡು ಐಶ್ವರ್ಯ ಸಂಪಾದನೆಯಲ್ಲಿ ತೊಡಗಿದರು.

ಈ ಕಾಲದಲ್ಲಿ ಮೊದಲಿನಿಂದಲೂ ಬೆಳೆದು ಬಂದಿದ್ದಂತಹ ಅವಿಭಕ್ತ ಕುಟುಂಬ ಪದ್ಧತಿಯೇ ಮುಂದುವರಿಯಿತು. ಅಂತರ್ಜಾತೀಯ ವಿವಾಹಗಳು ಅಪರೂಪವಾಗಿದ್ದರೂ ಅಸಂಭವವೇನಾಗಿರಲಿಲ್ಲ. ಸ್ತ್ರೀಯರಲ್ಲಿ ಘೋಷಾಪದ್ಧತಿ ಇರಲಿಲ್ಲ. ಸತಿಸಹಗಮನ ಪದ್ಧತಿ ರಾಷ್ಟ್ರಕೂಟರ ಕಾಲದಲ್ಲಿ ಅಷ್ಟೇನೂ ರೂಢಿಯಲ್ಲಿರಲಿಲ್ಲ. ರಾಷ್ಟ್ರಕೂಟರ ಕಾಲದಲ್ಲಿ ಸ್ತ್ರೀಯರು ಆಡಳಿತದಲ್ಲಿ ಪಾಲ್ಗೊಂಡ ಉದಾಹರಣೆಗಳಿವೆ.

ರಾಷ್ಟ್ರಕೂಟ ಅರಸರು ವಿದ್ಯಾಭ್ಯಾಸಕ್ಕೂ ಹೆಚ್ಚು ಪ್ರೋತ್ಸಾಹ ನೀಡಿದರು. ಮಠಗಳು ಮತ್ತು ಅಗ್ರಹಾರಗಳು ಆಗಿನ ಕಾಲದ ವಿದ್ಯಾಕೇಂದ್ರಗಳಾಗಿದ್ದವು. ಈ ಸಂಸ್ಥೆಗಳಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದುದಲ್ಲದೆ ಸಾರ್ವಜನಿಕರು ಉದಾರ ಕೊಡುಗೆಯನ್ನು ಕೊಡುತ್ತಿದ್ದರು. ಉಚ್ಚವ್ಯಾಸಂಗದ ವಿದ್ಯಾರ್ಥಿಗಳು ವೇದ, ವ್ಯಾಕರಣ, ಜ್ಯೋತಿಷ್ಯ, ಸಾಹಿತ್ಯ, ಮೀಮಾಂಸೆ, ಧರ್ಮಶಾಸ್ತ್ರ, ಪುರಾಣ, ನ್ಯಾಯ ಮೊದಲಾದ ವಿಷಯಗಳನ್ನು ಓದಬೇಕಾಗಿತ್ತು. ಕೆಲವು ಶಾಸನಗಳು ಈ ಕಾಲದಲ್ಲಿದ್ದ ಕೆಲವು ವಿದ್ಯಾಕೇಂದ್ರಗಳನ್ನು ವಿವರಿಸಿವೆ. ಧಾರವಾಡ ಜಿಲ್ಲೆಯ ಹೆಬ್ಬಾಳಿನಲ್ಲಿ ಒಂದು ದೊಡ್ಡ ಮಠವಿದ್ದಿತ್ತು. ನಾಲ್ಕನೆಯ ಗೋವಿಂದನ ಶಾಸನ ಧಾರವಾಡ ಜಿಲ್ಲೆಯಲ್ಲಿದ್ದ ಮತ್ತೊಂದು ವಿದ್ಯಾಕೇಂದ್ರವಾದ ಕಳಸ ಅಗ್ರಹಾರಕ್ಕೆ ದತ್ತಿನೀಡಿದುದನ್ನು ವಿವರಿಸುತ್ತದೆ. ದತ್ತಿಯ ಒಂದು ಭಾಗವನ್ನು ಪ್ರಾಧ್ಯಾಪಕರಿಗೆ ಸಂಬಳ ನೀಡುವುದಕ್ಕೆಂದು ಮೀಸಲಾಗಿಡಲಾಗಿತ್ತು. ಸಾಲೊಟಗಿ ರಾಷ್ಟ್ರಕೂಟರ ಕಾಲದ ಬಹುಪ್ರಸಿದ್ಧ ವಿದ್ಯಾಸಂಸ್ಥೆಯಾಗಿತ್ತು. ಇದರ ಮೂಲ ಹೆಸರು ಪಾವಿಟ್ಟಿಗೆ. ಇದು ರಾಷ್ಟ್ರಕೂಟರ ಅರಸ ಮುಮ್ಮಡಿ ಕೃಷ್ಣನ ಕಾಲಕ್ಕೆ ಸೇರಿದುದು. ಇಲ್ಲಿಗೆ ವಿದ್ಯಾರ್ಥಿಗಳು ದೇಶದ ನಾನಾ ಭಾಗಗಳಿಂದ ಬರುತ್ತಿದ್ದರು. ವಿದ್ಯಾರ್ಥಿಗಳಿಗೋಸ್ಕರ ಇಪ್ಪತ್ತೇಳು ವಸತಿಗೃಹಗಳಿದ್ದವು. ಈ ವಿದ್ಯಾಸಂಸ್ಥೆಯ ಮುಖ್ಯಸ್ಥನಿಗೆ ಸು.250 ಎಕರೆ ಜಮೀನಿನ ಆದಾಯ ನೀಡಲಾಗಿತ್ತು. ಮುಮ್ಮಡಿ ಇಂದ್ರನ ಕಾಲದಲ್ಲಿ ನಾಗಾವಿಯಲ್ಲಿ ಒಂದು ದೊಡ್ಡ ವಿದ್ಯಾಕೇಂದ್ರವಿದ್ದಿತು. ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ ಕೂಡ ಒಂದು ಪ್ರೌಢ ವಿದ್ಯಾಕೇಂದ್ರವಾಗಿತ್ತೆಂಬುದರಲ್ಲಿ ಯಾವ ಸಂಶಯವೂ ಇಲ್ಲ.(ಎಸ್.)

**ವಾಸ್ತುಶಿಲ್ಪ:** ರಾಷ್ಟ್ರಕೂಟರ ಆಳಿಕೆಯ ಕಾಲದಲ್ಲಿ ಗುಹಾವಾಸ್ತು ಹಾಗೂ ನಿರ್ಮಿತಿ ವಾಸ್ತು ದೇವಾಲಯಗಳು ಅನೇಕ ಸಂಖ್ಯೆಯಲ್ಲಿ ನಿರ್ಮಾಣಗೊಂಡವು. ಆದರೂ ರಾಷ್ಟ್ರಕೂಟರ ಗುಹಾಲಯಗಳಿಗೇ ಅವುಗಳ ಸೌಂದರ್ಯ, ವೈಭವ, ಬೃಹದಾಕಾರ ಮತ್ತು ತಂತ್ರಗಳಿಂದಾಗಿ ಹೆಚ್ಚಿನ ಪ್ರಾಶಸ್ತ್ಯ ದೊರೆತಿದೆ.

ರಾಷ್ಟ್ರಕೂಟರ ಸುಪ್ರಸಿದ್ಧ ಗುಹಾದೇವಾಲಯಗಳು ಎಲ್ಲೋರ, ಜೋಗೇಶ್ವರಿ, ಧಾರೇಶ್ವರ ಮತ್ತು ಎಲಿಫೆಂಟದಲ್ಲಿವೆ. ಇವರ ಕಾಲದಲ್ಲಿ ಗುಹಾದೇವಾಲಯಗಳಲ್ಲದೆ, ಒಂದೇ ಕಲ್ಲಿನಲ್ಲಿ ಕೊರೆದ–ಕಡೆದ ತಂತ್ರದಲ್ಲಿ ಕಂಡರಿಸಿದ ದೇವಾಲಯಗಳೂ ಅಸ್ತಿತ್ವಕ್ಕೆ ಬಂದವು.

ಎಲ್ಲೋರದ ದಶಾವತಾರ ಗುಹಾಲಯ ರಾಷ್ಟ್ರಕೂಟ ಕಾಲದ ಗುಹಾ ದೇವಾಲಯಗಳಲ್ಲಿ ಅತೀ ಪ್ರಾಚೀನವೆಂದು ಪರಿಗಣಿಸಲ್ಪಟ್ಟಿದೆ. ಆದರೂ ಎಲಿಫೆಂಟದ ಶೈವ ಗುಹಾಲಯಗಳು ಕಲಾಭ್ಯಾಸಿಗಳ ಮನಸ್ಸನ್ನು ಹೆಚ್ಚು ಆಕರ್ಷಿಸಿವೆ. ಪ್ರಾಚೀನ ಘಾರಾಪುರಿಯಾದ ಎಲಿಫೆಂಟ ಮುಂಬೈಯಿಂದ 10ಕಿಮೀ ದೂರವಿರುವ ಒಂದು ನಡುಗಡ್ಡೆ ಇಲ್ಲಿಯ ಮುಖ್ಯ ಗುಹಾದೇವಾಲಯ 39ಮೀ ಚಚ್ಚೌಕ ಇರುವುದು. ಅದರಲ್ಲಿ 30 ದೊಡ್ಡ ದೊಡ್ಡ ಕಂಬಗಳುಳ್ಳ ಮಹಾಮಂಟಪವಿದೆ.

ಈ ಗುಹೆ ವಾಸ್ತುಶೈಲಿಗಾಗಿ ಅಷ್ಟು ಪ್ರಸಿದ್ಧಿ ಪಡೆದಿರದೆ, ಇಲ್ಲಿಯ ಮಹೇಶ ಮೂರ್ತಿಯಿಂದಾಗಿ ಪ್ರಪಂಚಪ್ರಸಿದ್ಧವಾಗಿದೆ. ಈ ಬೃಹದಾಕಾರದ ಮೂರ್ತಿಯನ್ನು ದಕ್ಷಿಣದ ಗೋಡೆಯ ಕೋಷ್ಠದಲ್ಲಿ ಕೊರೆಯಲಾಗಿದೆ. ಈ ಮೂರ್ತಿ ಸು.5.4 ಮೀ ಎತ್ತರವಿದೆ. ಸ್ಥೂಲದರಲ್ಲಿ ಹೇಳಬೇಕೆಂದರೆ ಈ ಮೂರ್ತಿ ಶಿವನ ಸದ್ಯೋಜಾತ, ವಾಮದೇವ, ಅಘೋರ ಅಂಶಗಳನ್ನು ನಿರೂಪಿಸುತ್ತವೆ. ಎಡಬದಿ, ಮುಂಬದಿ ಮತ್ತು ಬಲಬದಿಯ ಮುಖಗಳು ಕ್ರಮವಾಗಿ ವಾಮದೇವ, ಸದ್ಯೋಜಾತ ಮತ್ತು ಅಘೋರ ರೂಪಗಳು. ಎಲಿಫೆಂಟದಲ್ಲಿರುವ ಇತರ ಶ್ರೇಷ್ಠ ಶಿಲ್ಪಗಳೆಂದರೆ ಶಿವಯೋಗೀಶ್ವರ, ಮಹಾನಟ, ಗಂಗಾಧರ ಶಿವ, ಅರ್ಧನಾರೀಶ್ವರ, ಕಲ್ಯಾಣಸುಂದರಮೂರ್ತಿ ಮತ್ತು ಅಂಧಕಾಸುರಸಂಹಾರಮೂರ್ತಿ. ರಾವಣನು ಕೈಲಾಸ ಪರ್ವತವನ್ನೆತ್ತುತ್ತಿರುವ ದೃಶ್ಯವಂತೂ ಬಹಳ ಆಕರ್ಷಕವಾಗಿದೆ.

ಎಲ್ಲೋರದ ದಶಾವತಾರ ಗುಹಾಲಯ ಎರಡು ಅಂತಸ್ತಿನಿಂದ ಕೂಡಿದ್ದು ದೊಡ್ಡದಿದೆ. ಇದನ್ನು 15ನೆಯ ನಂಬರಿನ ಗುಹೆಯೆಂದೂ ಗುರುತಿಸಲಾಗಿದೆ. ಈ ಗುಹಾಲಯದಲ್ಲಿ ದಂತಿದುರ್ಗನ ಶಿಲಾಶಾಸನವೊಂದಿದೆ. ಕೆಳ ಅಂತಸ್ತಿನಲ್ಲಿ 14 ಕಂಬಗಳ ಮಂಟಪವಿದ್ದರೆ,

ಮೇಲಿನ ಅಂತಸ್ತಿನ ದೊಡ್ಡ ಮಂಟಪದಲ್ಲಿ 18 ಕಂಬಗಳಿವೆ. ಗೋಡೆಗಳಲ್ಲಿ ಅರ್ಧಗಂಬಗಳ ಮಧ್ಯದಲ್ಲಿ ಬೃಹತ್ ಕೋಷ್ಠ ಶಿಲ್ಪಗಳಿವೆ. ಇವುಗಳಲ್ಲಿ ಅಂಧಕಾಸುರನನ್ನು ವಧಿಸುತ್ತಿರುವ ಶಿವ, ಪಗಡೆಯಾಟದಲ್ಲಿ ನಿರತ ಶಿವ–ಪಾರ್ವತಿಯರು, ಲಿಂಗೋದ್ಭವ ಶಿವ, ತ್ರಿವಿಕ್ರಮ, ಅರ್ಧನಾರೀಶ್ವರ, ವರಾಹ, ನಟರಾಜ ಮತ್ತು ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವ ನರಸಿಂಹರ ಶಿಲ್ಪಗಳು ಶ್ರೇಷ್ಠ ಮಟ್ಟದವಾಗಿವೆ.

ಎಲ್ಲೋರದ ಸ್ಮಾರಕಗಳಲ್ಲಿ 16ನೆಯ ಗುಹೆ ಕೈಲಾಸ ದೇವಾಲಯವೆಂದು ಹೆಸರುವಾಸಿಯಾಗಿದೆ. ಇಡೀ ಗುಹಾದೇವಾಲಯಗಳ ಪರಂಪರೆಯಲ್ಲೇ ಅತ್ಯುತ್ತಮವಾದುದು ಎಂಬ ಹೆಮ್ಮೆಗೆ ಪಾತ್ರವಾಗಿದೆ. ಭಾರತದ ಗುಹಾಂತರ್ಗತ ವಾಸ್ತುಶಿಲ್ಪ ಪರಾಕಾಷ್ಠತೆಯನ್ನು ಇದು ಪ್ರತಿಬಿಂಬಿಸುತ್ತದೆ. ಕೈಲಾಸ ದೇವಾಲಯವನ್ನು ಪರ್ವತ ಶ್ರೇಣಿಯಲ್ಲಿ ಒಂದು ಏಕಶಿಲಾ ಗುಡ್ಡದಲ್ಲಿ ಕೊರೆಯಲಾಗಿದ್ದು, ಸು.3300 ಚ.ಮೀ ವಿಸ್ತೀರ್ಣವನ್ನು ಒಳಗೊಂಡಿದೆ. 38



ಕಲ್ಯಾಣ ಸುಂದರಮೂರ್ತಿ, ಎಲ್ಲೋರ

ಮೀ ಎತ್ತರವಾಗಿದೆ. ಈ ಗುಹಾದೇವಾಲಯದ ನಿರ್ಮಾಣ ವಿಧಾನ ಅನುಪಮವಾದುದು. ಈ ವಿಧಾನವನ್ನು ಈ ರೀತಿ ವರ್ಣಿಸಬಹುದು: ಏಕಶಿಲಾ ಬೆಟ್ಟದ ಭಾಗವನ್ನು ಆರಿಸಿ ಆ ಸ್ಥಳದಲ್ಲಿ ಬೆಟ್ಟದ ನೆತ್ತಿಯ ಮೇಲಿಂದ ಇಂಗ್ಲಿಷ್ U ಅಕ್ಷರದ ಆಕಾರದಲ್ಲಿ ಸು.8 ಮೀ ಅಗಲ, 38ಮೀ ಆಳದ ಗುಂಡಿಯನ್ನು ತೋಡಿದ್ದಾರೆ. ಅನಂತರ U ಅಕ್ಷರದ ಮಧ್ಯ ಭಾಗದಲ್ಲಿ ಉಳಿದಿದ್ದ ಏಕಶಿಲಾ ದಿಂಡನ್ನು ಹೊರಭಾಗದಲ್ಲಿ ಅಡಿಯಿಂದ ಮುಡಿಯವರೆಗೆ, ದೇವಾಲಯ ರೂಪದಲ್ಲಿ, ಶಿಲ್ಪದಂತೆ ಕೆತ್ತನೆಮಾಡಿದ್ದಾರೆ. ಅನಂತರ ಈ ದೇವಾಲಯ ರೂಪದಲ್ಲಿ, ದ್ವಾರಗಳಿರುವ ಭಾಗಗಳಲ್ಲಿ ಮತ್ತೆ ಒಳಕ್ಕೆ ಕೊರೆದು, ಸಂಪೂರ್ಣ ಹಾಗೂ ವಿಶಾಲ ದೇವಾಲಯದ ಒಳರೂಪವನ್ನು ಕಂಡರಿಸಿದ್ದಾರೆ. ಈ ರೀತಿಯಲ್ಲಿ ವಿಶಾಲ ದೇವಾಲಯವೊಂದರ ಒಳ–ಹೊರ ಭಾಗಗಳನ್ನು ತ್ರಿಶೂಲ, ಡಮರು ಸ್ತಂಭಗಳನ್ನು ಗಜಶಿಲ್ಪಗಳು, ನಂದಿ ಮಂಟಪ, ಮಹಾದ್ವಾರ ಇತ್ಯಾದಿ ಎಲ್ಲ ಭಾಗಗಳನ್ನೂ ಬೃಹದಾಕಾರದಲ್ಲಿ, ಏಕಶಿಲೆಯಲ್ಲಿ ಕಂಡರಿಸಲಾದ ಸ್ಮಾರಕ ಇಡೀ ಪ್ರಪಂಚದಲ್ಲಿ ಇದೊಂದೇ ಆಗಿರುವುದು ರಾಷ್ಟ್ರಕೂಟ ಶಿಲ್ಪಿಗಳ ಅಮೋಘ ಸಾಧನೆಯಾಗಿದೆ.

ಈ ದೇವಾಲಯವನ್ನು ನಿರ್ಮಿಸಿದವನು 1ನೆಯ ಕೃಷ್ಣ. ಅದ್ಭುತ ಸೌಂದರ್ಯದಿಂದ ಶೋಭಿಸುತ್ತಿರುವ ಈ ನಿರ್ಮಿತಿಯನ್ನು ಕುರಿತು ಬರೋಡ ತಾಮ್ರಶಾಸನ ಹೀಗೆ ಹೇಳುತ್ತದೆ: ಆಕಾಶದಲ್ಲಿ ಸಂಚಾರ ಮಾಡುವ ವಿದ್ಯಾಧರರು ಎಳಾಪುರದ ಈ ಅದ್ಭುತ ಸೃಷ್ಟಿಯನ್ನು ನೋಡಿ ಆಶ್ಚರ್ಯಪಡುತ್ತಾರೆ. ಇವು ಬ್ರಹ್ಮ ಮತ್ತು ಶಿವ ಇವರ ನಿವಾಸಗಳೇ ಸರಿ. ಇಂತಹ ಅಚ್ಚರಿಯನ್ನು ಈ ಮೊದಲು ಬೇರೆಲ್ಲೂ ನಾವು ಕಾಣಲಿಲ್ಲ ಎಂದು ಉದ್ಗರಿಸುತ್ತಾರೆ. ಅಷ್ಟೇಕೆ, ಈ ದೇವಾಲಯದ ಶಿಲ್ಪಿಯೇ ಮತ್ತೆ ಇಂಥದೇ ಒಂದು ಕೃತಿಯನ್ನು ತಾನು ನಿರ್ಮಿಸಬಲ್ಲನೆ ಎಂದು ತನ್ನ ಸಾಮರ್ಥ್ಯವನ್ನು ಕುರಿತೇ ಸಂದೇಹಪಡುತ್ತಾನೆ ಎಂದಿದ್ದಾನೆ ಸುಪ್ರಸಿದ್ಧ ವಾಸ್ತು ಇತಿಹಾಸ ತಜ್ಞ ಪರ್ಸಿಬ್ರೌನ್.

ಪಶ್ಚಿಮಕ್ಕೆ ಮುಖವಾಗಿರುವ ಈ ದೇವಾಲಯ ಒಂದು ವಿಶಾಲವಾದ ಅಂಗಳದಲ್ಲಿದೆ. ಒಂದು ಪ್ರವೇಶದ್ವಾರ, ನಂದಿಮಂಟಪ, ಸು.17 ಮೀ ಎತ್ತರದ ಎರಡು ಏಕಶಿಲಾಸ್ತಂಭಗಳು ಮತ್ತು ಪೂರ್ಣರೂಪದ ಆನೆಗಳ ವಿಗ್ರಹಗಳಿವೆ. ದೇವಾಲಯ ಎರಡು ಅಂತಸ್ತುಗಳನ್ನು ಹೊಂದಿದೆ. ಕೆಳ ಅಂತಸ್ತಿನ ತಳಭಾಗದಲ್ಲಿ ಭಾರೀ ಆನೆಗಳನ್ನು ಕೆತ್ತಲಾಗಿದೆ, ಇಡೀ ದೇವಾಲಯವನ್ನು ಈ ಆನೆಗಳು ಹೊತ್ತಿರುವಂತೆ ಕಾಣಿಸುತ್ತದೆ. ಮೇಲಂತಸ್ತಿನಲ್ಲಿ 16 ಕಂಬಗಳ ಮಂಟಪವಿದೆ, ಹಿಂಭಾಗದಲ್ಲಿ ಗರ್ಭಗೃಹವಿದೆ. ಅದರ ಸುತ್ತ ಐದು ಸಣ್ಣ ಗರ್ಭಗೃಹಗಳಿವೆ. ಮುಖ್ಯ ಪ್ರಾಸಾರದ ಸುತ್ತ ಐದು ಸಣ್ಣ ಪ್ರಾಸಾದಗಳಿವೆ. ಮುಖ್ಯ ಪ್ರಾಸಾದ ದ್ರಾವಿಡ ಮಾದರಿಯದಾಗಿದ್ದು ದ್ರಾವಿಡ ಮೂರು ಹಂತಗಳಲ್ಲಿದೆ. ಮೇಲ್ತುದಿಯಲ್ಲಿ ಅಷ್ಟಭುಜಾಕೃತಿಯ ಶಿಖರವಿದೆ. ಪ್ರಾಸಾದದ ಗಮನಾರ್ಹವಾದ ಒಂದು ಅಂಶ ಸುಕನಾಸಿ ಮುಂಚಾಚು, ಇದು ಪಟ್ಟದಕಲ್ಲಿನಲ್ಲಿ ಬಾದಾಮಿ ಚಳುಕ್ಯರು ನಿರ್ಮಿಸಿದ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳ ಸುಕನಾಸಿಯನ್ನು ನೆನಪಿಗೆ ತರುತ್ತದೆ. ಗರ್ಭಗೃಹ ಮತ್ತು ಮಂಟಪಗಳಲ್ಲಿ ದೇವಕೋಷ್ಠಗಳಿದ್ದು, ಅಪಾರ ಸೌಂದರ್ಯವುಳ್ಳ ಶಿಲ್ಪಕಲಾ ಕೃತಿಗಳು ಅಲ್ಲಿ ತುಂಬಿವೆ.

ಕೈಲಾಸ ದೇವಾಲಯ ವಾಸ್ತುಶಿಲ್ಪ ಅಚ್ಚರಿ ಮಾತ್ರವಲ್ಲ, ಅತೀವ ಸುಂದರವಾದ ಮೂರ್ತಿಶಿಲ್ಪಗಳ ಭಂಡಾರವೂ ಆಗಿದೆ. ಇಲ್ಲಿಯ ಶಿಲ್ಪಕಲಾ ಯೋಜನೆಯೇ ವಿಸ್ತಾರವಾದದ್ದು. ಕಥನಾತ್ಮಕ ಶಿಲ್ಪಗಳು, ಮಹಾಭಾರತದ ದೃಶ್ಯಗಳು, ಕೃಷ್ಣನ ಜೀವನದ ಘಟನೆಗಳು ಮತ್ತು ರಾಮಾಯಣ ಸಂದರ್ಭಗಳು ಇವುಗಳ ಕೆತ್ತನೆಯು ಗೋಡೆಗಳ ಮೇಲೆ ಮಂಟಪಕ್ಕೆ ಏರಿ ಹೋಗುವ ಮೆಟ್ಟಿಲುಗಳ ಪಾರ್ಶ್ವಗಳಲ್ಲಿ ಚಿತ್ರಿತವಾಗಿವೆ. ಕೆಳ ಅಂತಸ್ತಿನ ಶಿಲ್ಪಗಳಲ್ಲಿ ಗಜಾಸುರ ಸಂಹಾರ ಶಿವ, ದಕ್ಷಿಣಾಮೂರ್ತಿ, ಗಂಗಾ, ಯಮುನಾ, ನರಸಿಂಹ, ಚಾಮುಂಡಾ, ಲಕ್ಷ್ಮಿ, ತ್ರಿಪುರ ಸಂಹಾರ ಶಿವ, ಕೈಲಾಸಪರ್ವತವನ್ನು ಎತ್ತಲು ಪ್ರಯತ್ನಿಸುತ್ತಿರುವ ರಾವಣ ಮುಂತಾದವು ಮುಖ್ಯವಾದುವು. ಪ್ರಧಾನ ಗರ್ಭಗೃಹದ ಭಾಗದಲ್ಲಿ ಗಂಗಾಧರನಾದ ಶಿವ, ಗಜೇಂದ್ರನನ್ನು ಕಾಪಾಡುತ್ತಿರುವ ವಿಷ್ಣು, ಅಂಧಕಾಸುರವಧೆ, ನಟರಾಜ, ಶಿವ, ಬ್ರಹ್ಮ, ವಿಷ್ಣು, ದುರ್ಗಾ, ವಾಲಿ–ಸುಗ್ರೀವರ ಕಾಳಗ, ಜಟಾಯು ರಾವಣನನ್ನು ಆಕ್ರಮಿಸುತ್ತಿರುವುದು, ಲಿಂಗೋದ್ಭವ ಶಿವ ವಿಗ್ರಹಗಳಿವೆ. ಮುಖ್ಯ ದೇವಾಲಯದ ಬಲಭಾಗಕ್ಕೆ ಇರುವ ಲಂಕೇಶ್ವರ ಗುಡಿ ಮತ್ತು ನಂದಿಮಂಟಪಗಳಲ್ಲಿ ಸೂರ್ಯ, ವರಾಹ, ಪಾರ್ವತಿ, ಗಣೇಶ, ಮೂರು ಮುಖದ ಶಿವ, ಶಿವ ಪಾರ್ವತಿ, ನದೀ ದೇವತೆಗಳು ಈ ಸುಂದರವಾದ ಕೆಲವು ಮೂರ್ತಿಗಳಿವೆ. ಕೈಲಾಸ ದೇವಾಲಯದ ಶಿಲ್ಪಗಳು, ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಮತ್ತು ಕಾಂಚಿಯ ಕೈಲಾಸನಾಥ ದೇವಾಲಯಗಳಲ್ಲಿರುವ ಅಂಥವೇ ವಿಗ್ರಹಮಾದರಿ ಪರಂಪರೆಯಿಂದ ಬಹುಮಟ್ಟಿಗೆ ಪ್ರಭಾವಿತವಾಗಿರುವಂತೆ ತೋರುತ್ತದೆ.

ಎಲ್ಲೋರದಲ್ಲಿಯ ಜೈನ ಗುಹಾಲಯಗಳು ರಾಷ್ಟ್ರಕೂಟ ಶೈಲಿಯ ಕೊನೆಯ ಹಂತವನ್ನು ಪ್ರತಿನಿಧಿಸುತ್ತವೆ. ಏಕಶಿಲೆಯಲ್ಲಿ ಕಂಡರಿಸಿದ ಇಲ್ಲಿಯ ಛೋಟಾ ಕೈಲಾಸ ದೇವಾಲಯ ದೊಡ್ಡ ಕೈಲಾಸ ದೇವಾಲಯದ ಅನುಕರಣೆ. ಇದಕ್ಕೆ ಮೂರು ಅಂತಸ್ತಿನ ಪ್ರಾಸಾದವಿದೆ. ಪ್ರಾಕಾರದ ಮುಂಭಾಗದಲ್ಲಿರುವ ಗೋಪುರ ಕೂಡ ಏಕಶಿಲಾರಚಿತ. ಇಂದ್ರಸಭಾ ಮತ್ತು ಜಗನ್ನಾಥಸಭಾ ಗುಹಾಲಯಗಳು ಕೂಡ ಜೈನ ಸಂಪ್ರದಾಯಕ್ಕೆ ಸೇರಿದವುಗಳು.

ಇಂದ್ರಸಭಾ (32 ನೆಯ ಗುಹೆ) ಎಲ್ಲೋರದಲ್ಲಿರುವ ಅತ್ಯಂತ ಸುಂದರವಾದ ಜೈನ ಕಲಾಕೃತಿ. ಈ ಏಕಶಿಲಾ ಗುಡಿ ಒಂದು ಅಂಗಳದ ನಡುವೆ ಇದೆ, ಒಳಗೆ ಕೆತ್ತಿರುವ ಇಂದ್ರ ಮತ್ತು ಶಚೀದೇವಿಯರ ವಿಗ್ರಹಗಳಿಂದಾಗಿ ಈ ಹೆಸರನ್ನು ಪಡೆದಿದೆ. ಇಂದ್ರಸಭಾದ ಗೋಡೆಗಳಲ್ಲಿ ಶಾಂತಿನಾಥ, ಪಾರ್ಶ್ವನಾಥ ಮುಂತಾದ ತೀರ್ಥಂಕರರ ಮೂರ್ತಿಗಳನ್ನು ಕೆತ್ತಲಾಗಿದೆ. ಎಲ್ಲೋರದ ಇಂದ್ರಸಭೆ, ಛೋಟಾ ಕೈಲಾಸ, ಜಗನ್ನಾಥ ಸಭೆ ಮತ್ತು 31 ಹಾಗೂ 34ನೆಯ ಗುಹಾಲಯಗಳಲ್ಲಿ ಗೊಮ್ಮಟನ ಶಿಲ್ಪಗಳಿವೆ. 10ನೆಯ ಶತಮಾನದಲ್ಲಿ ಕೊರೆದು ನಿರ್ಮಿಸಲಾದ ಇಂದ್ರಸಭೆಯಲ್ಲಿಯೇ ಬಾಹುಬಲಿಯ ನಾಲ್ಕು ಶಿಲ್ಪಗಳಿವೆ.

ನಿರ್ಮಿತಿ ದೇವಾಲಯಗಳು: ಬಾದಾಮಿಯ ಚಳುಕ್ಯರ ವಾಸ್ತುಶಿಲ್ಪ ಕೇಂದ್ರಗಳಾದ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಆಲಂಪುರ ಇತ್ಯಾದಿಗಳಲ್ಲಿ ರಾಷ್ಟ್ರಕೂಟರು ದೇವಾಲಯಗಳನ್ನು ನಿರ್ಮಿಸುವ ಜೊತೆಗೆ ಬೇರೆ ಬೇರೆ ಹೊಸ ಸ್ಥಳಗಳಲ್ಲಿಯೂ ದೇವಾಲಯಗಳನ್ನು ಇವರು ನಿರ್ಮಿಸಿದ್ದಾರೆ. ಆಂಧ್ರಪ್ರದೇಶದ ಆಲಂಪುರ, ಮಹಾನದಿ, ಭವನಾಶಿಸಂಗಮ, ಪ್ರಾತಕೋಟಾ, ಪಂಚಲಿಂಗ, ವೆಲ್ದುರ್ತಿ ಮತ್ತು ಬಂಡ್ರತಂಡ್ರಪಾಡು ಗ್ರಾಮಗಳಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯಗಳಿವೆ.

ಉತ್ತರ ಕರ್ನಾಟಕದಲ್ಲಿಯ ರಾಷ್ಟ್ರಕೂಟರ ಕಾಲದ ದೇವಾಲಯಗಳ ಸಂಖ್ಯೆ ದಕ್ಷಿಣ ಕರ್ನಾಟಕಕ್ಕಿಂತ ಅಧಿಕವಾಗಿದೆ. ಐಹೊಳೆ, ಪಟ್ಟದಕಲ್ಲು, ಸಿರಿವಾಳ, ಹಳ್ಳೂರು, ಸವಡಿ, ಇಂಡಿ, ಬೇಲೂರು (ಬಾದಾಮಿ ಬಳಿ), ರೋಣ, ಕೊಣ್ಣೂರು, ಕಳಸಾಪುರ, ಲಕ್ಕುಂಡಿ, ಯಂಕಂಚಿ, ಲಕ್ಷ್ಮೇಶ್ವರ, ನರೇಗಲ್, ಕುಡುತಿನಿ, ಕೊಳಗಲ್ಲು, ಹೊಸ ಮಹಾಕೂಟ, ಶಿರಸ್ಥಳ್ಳಿ, ಮಾವಳಿ, ಗದಗ, ರಾಜೂರು, ಕುಕ್ಕನೂರು ಮತ್ತು ಗೌಜ ಇತ್ಯಾದಿ ಸ್ಥಳಗಳಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯಗಳನ್ನು ಕಾಣಬಹುದು. ಕುಕನೂರಿನ ನವಲಿಂಗ, ಲಕ್ಷ್ಮೇಶ್ವರದ ಬಾಳೇಶ್ವರ, ಐಹೊಳೆಯ ಅಂಬಿಗರಗುಡಿ, ಅಳ್ಳಿಬಸಪ್ಪ ಮತ್ತು ಕೊಂತಗುಡಿ ಸಂಕೀರ್ಣದಲ್ಲಿಯ ಒಂದೆರಡು ದೇವಾಲಯಗಳು ಹಾಗೂ ಗಳಗನಾಥ ಗುಂಪಿನಲ್ಲಿಯ ಕೆಲವು ದೇವಾಲಯಗಳು;

ಬೇಲೂರಿನ ಪರಮೇಶ್ವರ ಗುಡಿ, ಹಳ್ಳೂರಿನ ಕಾಶೀವಿಶ್ವೇಶ್ವರ, ಪಟ್ಟದಕಲ್ಲಿನ ಜೈನಬಸದಿ, ಮಳಖೇಡದ ಚಿಕ್ಕಬಸದಿ, ಹೊಸಮಹಾಕೂಟದ ಅಡಕೇಶ್ವರ ಹಾಗೂ ಸೂಡಿಯ ಜೋಡು ಕಲಶ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ಕೆಲವು ಮುಖ್ಯ ದೇವಾಲಯಗಳು.

ರಾಷ್ಟ್ರಕೂಟ ವಾಸ್ತುಶಿಲ್ಪಿಗಳು ಮತ್ತು ಕಲಾವಿದರು ತಮ್ಮದೇ ಆದ ವಿಶಿಷ್ಟತೆಯನ್ನು ತಮ್ಮ ಕೃತಿಗಳಲ್ಲಿ ತೋರಿಸಲು ಪ್ರಯತ್ನಪಟ್ಟರು. ಅಂದ ಮಾತ್ರಕ್ಕೆ ಆಗಲೇ ಸಿದ್ಧವಾಗಿದ್ದ ಪ್ರಾಚೀನ ಚಳುಕ್ಯ ವಾಸ್ತುಶಿಲ್ಪ ಸಂಪ್ರದಾಯವನ್ನು ತೊರೆದುಬಿಟ್ಟರು ಎಂದರ್ಥವಲ್ಲ. ಹೊಸಬಗೆಯ ಅಲಂಕಾರಗಳನ್ನೂ ಹೊಸಬಗೆಯ ದೇವಾಲಯ ತಳವಿನ್ಯಾಸವನ್ನೂ ಸುಧಾರಿತ ಗೋಡೆ ಮಾದರಿಗಳನ್ನೂ ಪ್ರಾಚೀನ ಚಳುಕ್ಯ ಕಾಲದವಕ್ಕಿಂತ ಭಿನ್ನವಾದ ಕಂಬಗಳನ್ನು ಇವರು ರೂಪಿಸಿಕೊಂಡರು. ಅಂತೂ ರಾಷ್ಟ್ರಕೂಟ ವಾಸ್ತುಶಿಲ್ಪ ಪ್ರಾಚೀನ ಚಳುಕ್ಯ ವಾಸ್ತುಶಿಲ್ಪದ ಗಣನೀಯವಾಗಿ ಪ್ರಭಾವಕ್ಕೊಳಗಾಗಿದೆ. ಬೆಳೆಯುತ್ತಿರುವ ಸೌಂದರ್ಯಾಭಿರುಚಿ ಧಾರ್ಮಿಕ ಪರಿಗಣನೆಗಳಿಗೆ ಮತ್ತು ಉದ್ದೇಶಗಳಿಗೆ ತಕ್ಕಂತೆ ಅವರು ಬದಲಾವಣೆಗಳನ್ನು ಮಾಡಿಕೊಂಡು, ದ್ವಿಕೂಟ ಮತ್ತು ತ್ರಿಕೂಟ ದೇವಾಲಯಗಳನ್ನು ರಾಷ್ಟ್ರಕೂಟ ವಾಸ್ತುಶಿಲ್ಪಗಳು ನಿರ್ಮಿಸಿದರು. ಈ ಕಾಲದಲ್ಲಿ ತ್ರೈಪುರುಷ ಪರಿಕಲ್ಪನೆ ಪ್ರಚುರವಾಗಿದ್ದುದರಿಂದ ತ್ರಿಮೂರ್ತಿಗಳನ್ನು ಒಂದೇ ಗುಡಿಯಲ್ಲಿ ಅಥವಾ ಬೇರೆ ಬೇರೆ ಗುಡಿಗಳಲ್ಲಿ ಪ್ರತಿಷ್ಠಿಸಲಾಗುತ್ತಿತ್ತು.

ಈ ಕಾಲದಲ್ಲಿ ಮೂರು ಬಗೆಯ ಕಲ್ಲುಗಳನ್ನು ನಿರ್ಮಾಣ ಕಾರ್ಯದಲ್ಲಿ ಬಳಸಿರುವಂತೆ ಕಂಡುಬರುತ್ತದೆ: 1) ಕೆಂಪು ಮರಳುಗಲ್ಲು 2) ಗ್ರಾನೈಟ್ 3) ಬಳಪದ ಕಲ್ಲು (ಶಿಸ್ಟ್). ಪ್ರಾಚೀನ ಚಳುಕ್ಯ ರಾಜ್ಯದ ಹೃದಯಭಾಗದಲ್ಲಿ, ಅಂದರೆ ಬಿಜಾಪುರ (ಇಂದಿನ ಬಾಗಲಕೋಟೆ) ಪ್ರದೇಶದ ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಗೂಡೂರು, ನಂದವಾಡಿಗೆ ಮುಂತಾದ ಕಡೆ ಕೆಂಪುಮರಳುಗಲ್ಲನ್ನು ಬಳಸಿ ದೇವಾಲಯಗಳನ್ನು ನಿರ್ಮಿಸಲಾಗಿದೆ. ವಿರುಪಾಕ್ಷ ದೇವಾಲಯದ ಉತ್ತರ ಬದಿಯಲ್ಲಿರುವ ಹಂಪಿಯಲ್ಲಿ ಸಣ್ಣದೊಂದು ರಾಷ್ಟ್ರಕೂಟ ಕಾಲದ ಮಹಿಷಮರ್ಧಿನಿ ದೇವಾಲಯ ಕೆಂಪುಮರಳುಗಲ್ಲಿನದು ಎಂಬುದನ್ನೂ ಗಮನಿಸಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಕಟ್ಟಲಾದ ಅನೇಕ ರಾಷ್ಟ್ರಕೂಟರ ದೇವಾಲಯಗಳು ಹಾಗೂ ಗುಲ್ಬರ್ಗ ಜಿಲ್ಲೆಯ ಕೆಲವು ಗ್ರಾನೈಟ್ ಕಲ್ಲಿನಿಂದ ನಿರ್ಮಿತವಾದವು. ಕುಡತಿನಿ, ಹಂಪಿ, ಸಿರವಾಲಗಳಲ್ಲಿ ಇವುಗಳನ್ನು ನೋಡಬಹುದು. ರಾಷ್ಟ್ರಕೂಟ ಆಳಿಕೆಯ ಕೊನೆಯವರ್ಷಗಳಲ್ಲಿ ದೇವಾಲಯ ನಿರ್ಮಾಣದ ಮಾಧ್ಯಮವಾಗಿ ಬಳಪದಕಲ್ಲನ್ನು ಬಳಸಲಾಯಿತು. ಬೆಳಗಾಂವಿ ಜಿಲ್ಲೆಯ ಸೋಗಲ ಮತ್ತು ಹೂಲಿಗಳಲ್ಲಿರುವ ದೇವಾಲಯದಲ್ಲಿ ಇದು ಸ್ಪಷ್ಟಪಡುತ್ತದೆ. ಇಲ್ಲಿ ಸ್ವಾರಸ್ಯವಾದ ವಿಷಯವೆಂದರೆ ಗ್ರಾನೈಟ್ ಮತ್ತು ಕೆಂಪುಮರಳುಗಲ್ಲು ದೇವಾಲಯಗಳಲ್ಲಿ ಶಿಲ್ಪಕಲಾ ಕೆತ್ತನೆ ಕಡಿಮೆ; ಆದರೆ ಬಳಪದಕಲ್ಲು ಬಳಸಿದ ದೇವಾಲಯಗಳಲ್ಲಿ ವಿವರವಾಗಿ ಕಂಡರಿಸಿದ ಬಾಗಿಲುವಾಡಗಳನ್ನೂ ಇತರ ಉಬ್ಬುಶಿಲ್ಪಗಳನ್ನೂ ಕಾಣಬಹುದು. ಇದಕ್ಕೆ ಒಳ್ಳೆಯ ಮಾದರಿ ಹೂಲಿಯ ಅಂಧಕೇಶ್ವರ ದೇವಾಲಯ.

ರಾಷ್ಟ್ರಕೂಟಯುಗದ ಗಮನಾರ್ಹವಾದ ಒಂದು ಅಂಶ ಐಹೊಳೆಯಲ್ಲಿ ಬಹುಸಂಖ್ಯೆಯ ತ್ರಿಕೂಟಗಳು ನಿರ್ಮಾಣವಾದದ್ದು. ಇವೆಲ್ಲವೂ ರಾಷ್ಟ್ರಕೂಟ ಆಳಿಕೆಯ ಕೊನೆಯ ವರ್ಷಗಳಿಗೆ ಸೇರುತ್ತವೆ. ಕುಂದರಗಿ ದೇವಾಲಯ ಸಮೂಹ ಎಂದು ಸಾಮಾನ್ಯವಾಗಿ ಉಲ್ಲೇಖಿಸುವ ಈ ದೇವಾಲಯಗಳನ್ನು ಕೆಂಪುಮರಳು ಕಲ್ಲಿನಿಂದ ನಿರ್ಮಿಸಲಾಗಿದೆ. ಇವೆಲ್ಲವೂ ತ್ರಿಕೂಟಮಾದರಿಯವು. ಒಂದೇ ನವರಂಗವನ್ನು ಹಂಚಿಕೊಳ್ಳುವ ಮೂರು ಗರ್ಭಗೃಹಗಳನ್ನು ಹೊರಗಿನಿಂದ ಫಾಂಸನ (ಕದಂಬ ನಾಗರ) ಪ್ರಾಸಾದಗಳಿಂದ ಗುರುತಿಸಬಹುದು. ಪ್ರಧಾನ ಗರ್ಭಗೃಹದ ಎದುರಿಗಿರುವ ಏಕೈಕ ಪ್ರವೇಶದ್ವಾರಕ್ಕೆ ಒಂದು ಸಣ್ಣ ಕೈಸಾಲೆಯಿದೆ. ಇಲ್ಲಿ ಕಕ್ಷಾಸನವಿದ್ದು, ಚಾವಣಿಗೆ ಆಶ್ರಯಕೊಟ್ಟಿರುವ ಕಂಬಗಳು ಇದರ ಮೇಲೆ ನಿಂತಿವೆ.

ರಾಷ್ಟ್ರಕೂಟ ಕಾಲದ ಸ್ವಾರಸ್ಯವಾದ ಮತ್ತೊಂದು ಲಕ್ಷಣವೆಂದರೆ ಈ ಲಕ್ಷಣ ಬಾದಾಮಿ ಚಳುಕ್ಯರ ಮೇಗುತಿ ಬಸದಿಯಲ್ಲಿ ಕಂಡುಬಂದರೂ ರಾಷ್ಟ್ರಕೂಟರ ಕಾಲದಲ್ಲಿ ಜನಪ್ರಿಯವಾದಂತೆ ತೋರುತ್ತದೆ. ಅಂತಸ್ತುಗಳಿರುವ ಬಸದಿಗಳ ನಿರ್ಮಾಣ. ಬಾದಾಮಿಗೆ ಅನತಿದೂರದ ಪಟ್ಟದಕಲ್ಲು ಮತ್ತು ಹಳ್ಳೂರುಗಳಲ್ಲಿರುವ ಜೈನ ಬಸದಿಗಳು, ಐಹೊಳೆಯ ಸೆಟ್ಟವ್ವ ದೇವಾಲಯ ಇವೆಲ್ಲ ಅಂತಸ್ತುಗಳಿರುವ ರಚನೆಗಳು. ಸೆಟ್ಟವ್ವ ಬಸದಿ ಅಂತಸ್ತಿರುವ ಬಸದಿ. ವಿನ್ಯಾಸದಲ್ಲಿ ಹಾಗೂ ನಿರ್ವಹಣೆಯಲ್ಲಿ ಗಮನಾರ್ಹ ಅಂಶಗಳನ್ನೊಳಗೊಂಡಿದೆ. ಇದೊಂದು ತ್ರಿಕೂಟ ಬಸದಿ. ಇಲ್ಲಿ ಮೂರು ಗರ್ಭಗೃಹಗಳೂ ಮೂರು ಅರ್ಧಮಂಟಪಗಳು ಮತ್ತು ಒಂದು ಸಮಾನವಾದ ನವರಂಗಗಳಿವೆ. ಮಧ್ಯದ ಗರ್ಭಗೃಹದ ಮೇಲೆ ಇರುವ ಶಿಖರದಲ್ಲಿ ಮೇಲಂತಸ್ತಿನ ಗರ್ಭಗೃಹವಿದೆ. ಇದಕ್ಕೆ ತಾಗಿಕೊಂಡ ಒಂದು ಮುಖಮಂಟಪ ಅಥವಾ ಕೈಸಾಲೆ ಇದೆ. ಮೇಲಿನ ಗರ್ಭಗೃಹದ ಅಳತೆ ಸು. 1.30ಮೀ. ಕೈಸಾಲೆ ಇದಕ್ಕಿಂತ ಚಿಕ್ಕದು. ಈ ತ್ರಿಕೂಟ ಬಸದಿಯೇ ಮುಂದೆ ಹೊಯ್ಸಳರ ಕಾಲದ ತ್ರಿಕೂಟ ರಚನೆಗಳಿಗೆ ಸ್ಫೂರ್ತಿ ನೀಡಿರುವುದು ಸಹಜ.

ಈ ಸಂದರ್ಭದಲ್ಲಿ ನರೇಗಲ್ಲಿನಲ್ಲಿರುವ ನಾರಾಯಣ ಮತ್ತು ಸೋಮೇಶ್ವರ ದೇವಾಲಯಗಳನ್ನು ಉಲ್ಲೇಖಿಸುವುದು ಸೂಕ್ತ. ಇವು ವಿಶಿಷ್ಟವಾದ ವಿನ್ಯಾಸವನ್ನು ಹೊಂದಿವೆ. ಮೊದಲು ಒಂದು ದೇವಾಲಯವಾಗಿದ್ದುದನ್ನು ವಿಭಾಗಿಸಿ ಎರಡು ಬೇರೆಬೇರೆ ಹೆಸರಿನ ದೇವಾಲಯಗಳನ್ನಾಗಿ ಮಾಡಲಾಗಿದೆ. ಮೂಲತಃ ಇದೊಂದು ಜೈನ ಬಸದಿ. ಗಂಗ 2ನೇ ಬೂತುಗನ ರಾಣಿ ಪದ್ಮಬ್ಬರಸಿ 950ರಲ್ಲಿ ಕಟ್ಟಿಸಿದಳು. ಇದು ಕರ್ನಾಟಕದಲ್ಲಿ ಅತ್ಯಂತ ದೊಡ್ಡದಾದ ರಾಷ್ಟ್ರಕೂಟ ದೇವಾಲಯಗಳಲ್ಲಿ ಒಂದು. ಗರ್ಭಗೃಹ, ಅರ್ಧಮಂಟಪ, ವಿಶಾಲವಾದ ಮುಖಮಂಟಪಕ್ಕೆ ತೆರೆದುಕೊಳ್ಳುವ ಒಂದು ನವರಂಗಗಳಿವೆ. ಮುಖಮಂಟಪದ ಎರಡೂ ಪಕ್ಕಗಳಲ್ಲಿ ಆಯಾಕಾರದ ಗರ್ಭಗೃಹಗಳಿವೆ. ಇದನ್ನು ತ್ರಿಕೂಟ ಬಸದಿ ಎಂದು ಒಪ್ಪುವುದೇ ಆದ ಪಕ್ಷದಲ್ಲಿ ಸ್ವಾರಸ್ಯವಾದ ತ್ರಿಕೂಟ ವಿನ್ಯಾಸವನ್ನು ಇದು ಒದಗಿಸುತ್ತದೆ. ಸಾಮಾನ್ಯವಾಗಿ ತ್ರಿಕೂಟದಲ್ಲಿ ಗರ್ಭಗೃಹಗಳನ್ನು ಮೂರು ದಿಕ್ಕುಗಳಿಗೆ ಮುಖವಾಗಿರುವಂತೆಯೋ ಇಲ್ಲವೆ ಒಂದರ ಪಕ್ಕದಲ್ಲೊಂದರಂತೆಯೋ ನಿರ್ಮಿಸಲಾಗುತ್ತದೆ. ಬೇರೆಬೇರೆ ದಿಕ್ಕುಗಳಿಗೆ ಮುಖವಾಗಿರುವುದರಿಂದ ಇವಕ್ಕೆ ಸಮಾನವಾದ ಒಂದೇ ನವರಂಗವಿರುತ್ತದೆ. ರಾಷ್ಟ್ರಕೂಟಾನಂತರದ ಕಾಲಕ್ಕೆ ಸೇರಿದ ಇಂತಹ ಅನೇಕ ದೇವಾಲಯಗಳು ಮತ್ತು ಬಸದಿಗಳು ಇವೆ. ಕೊನೆಯಪಕ್ಷ ಒಂದು ಪ್ರಾಚೀನ ಚಳುಕ್ಯರ ದೇವಾಲಯ ಈ ವಿನ್ಯಾಸದಲ್ಲಿ ನಿರ್ಮಿತವಾಗಿತ್ತು. ಆದರೆ ಇಲ್ಲಿ ನರೇಗಲ್ಲಿನಲ್ಲಿ ಮುಖ್ಯ ಗರ್ಭಗೃಹಕ್ಕೆ ಮಾತ್ರ ನವರಂಗವಿದೆ. ಇನ್ನೆರಡು ಗರ್ಭಗೃಹಗಳನ್ನು ನವರಂಗದ ವ್ಯಾಪ್ತಿಯ ಹೊರಗೆ ಮುಖಮಂಟಪವನ್ನು ಹಂಚಿಕೊಳ್ಳುವ ರೀತಿಯಲ್ಲಿ ನಿರ್ಮಿಸಲಾಗಿದೆ.



**ಅಂಬಿಕ, ಜೈನ ಗುಹಾಲಯ 34, ಎಲ್ಲೋರ**

ಈ ಬಸದಿಯ ಒಂದು ಲಕ್ಷಣವೆಂದರೆ ಮುಖ್ಯ ಗರ್ಭಗೃಹದಲ್ಲಿ ಒಬ್ಬ ಜಿನನ ಮೂರ್ತಿಯಿರುತ್ತದೆ, ಪರಸ್ಪರ ಅಭಿಮುಖವಾಗಿ ಆಯಾಕಾರದಲ್ಲಿರುವ ಇನ್ನೆರಡು ಗರ್ಭಗೃಹಗಳಲ್ಲಿ ಚತುರ್ವಿಂಶತಿ ಜಿನರ ವಿಗ್ರಹಗಳಿವೆ. ಆಯಾಕಾರದ ಪೀಠಗಳಿದ್ದು, ಅವುಗಳಲ್ಲಿ ನಡುವೆ 24 ಜಿನವಿಗ್ರಹಗಳನ್ನು ಕೂಡಿಸಲು 24 ರಂಧ್ರಗಳನ್ನು ಮಾಡಲಾಗಿದೆ. ಹೀಗೆ ಚತುರ್ವಿಂಶತಿ ಜಿನ ವಿಗ್ರಹಗಳ ಎರಡು ತಂಡವನ್ನು ಈ ಎರಡು ಗರ್ಭಗೃಹಗಳಲ್ಲಿ ಪ್ರತಿಷ್ಠಿಸಿರುವುದೀಗ ಈ ಬಸದಿಯ ವೈಶಿಷ್ಟ್ಯವಾಗಿದೆ.

ರಾಷ್ಟ್ರಕೂಟರ ಕಾಲದ ಬಹುತೇಕ ಎಲ್ಲ ದೇವಾಲಯಗಳ ಅಧಿಷ್ಠಾನ ಹೆಚ್ಚು ಎತ್ತರವಾಗಿರುವುದಿಲ್ಲ. ಬಾದಾಮಿ ಚಳುಕ್ಯ ಕಾಲದ ಕಪೋತ ಭಾಗ ಸಾಮಾನ್ಯವಾಗಿ ಇಲ್ಲಿ ಕಂಡುಬರುವುದಿಲ್ಲ. ಆದರೆ ಆ ಕಾಲದ ಅಧಿಷ್ಠಾನದಲ್ಲಿಯ ಕುಮುದ ಭಾಗ ಮತ್ತು ಚೌಕಗಳುಳ್ಳ ಪಟ್ಟಿಕಾ ಭಾಗಗಳು ಮಾತ್ರ ಈ ಕಾಲದಲ್ಲಿಯೂ ಮುಂದುವರಿದಿವೆ. ಹಳ್ಳೂರಿನ ಮೇಲ್ಗುಡಿಯನ್ನು ಉದಾಹರಣೆಗಾಗಿ ನೋಡಬಹುದು. ಕೆಲವೆಡೆ ಅಧಿಷ್ಠಾನದ ಚೌಕ ಭಾಗಗಳು ಉಬ್ಬುಶಿಲ್ಪಗಳಿಂದ ಅಲಂಕೃತವಾಗಿರುವುದೂ ಉಂಟು.

ಬಾದಾಮಿ ಚಳುಕ್ಯರ ಕಾಲದ ದೇವಾಲಯಗಳ ಹೊರಗೋಡೆಗಳನ್ನಲಂಕರಿಸಿದ್ದ ಕೋಷ್ಠಗಳು ರಾಷ್ಟ್ರಕೂಟರ ಕಾಲದ ದೇವಾಲಯಗಳಲ್ಲಿಯೂ ಮುಂದುವರಿಯುವ ಜೊತೆಗೆ ಅವುಗಳ ಸಂಖ್ಯೆಯೂ ಹೆಚ್ಚಿತು. ಕುಕ್ಕನೂರಿನ ನವಲಿಂಗ ದೇವಾಲಯದ ಗೋಡೆಗಳ ಸವಿವರ ಅಧ್ಯಯನಕ್ಕೆ ಸಾಮಗ್ರಿಗಳನ್ನೊದಗಿಸುತ್ತವೆ. ಎದ್ದು ಕಾಣುವ ಎತ್ತರವಾದ ಅರ್ಧಗಂಬಗಳು, ಸಾಧಾರಣ ಎತ್ತರದ ಅರ್ಧಗಂಬಗಳು ಮತ್ತು ಕೋಷ್ಠಗಳು ಇಲ್ಲಿವೆ. ಈ ಕೋಷ್ಠಗಳು ಬಾದಾಮಿ ಚಳುಕ್ಯರ ಕಾಲದ ಕೋಷ್ಠಗಳಿಗಿಂತ ಹೆಚ್ಚು ಆಳವಾಗಿದ್ದು, ಸಾಮಾನ್ಯವಾಗಿ ಮೂರ್ತಿಶಿಲ್ಪವನ್ನೊಳಗೊಂಡಿರುತ್ತವೆ. ಕೆಲವೊಮ್ಮೆ ಕೋಷ್ಠಗಳ ಅಕ್ಕಪಕ್ಕದಲ್ಲಿಯೂ

ಮೂರ್ತಿಗಳನ್ನು ಕೆತ್ತಲಾಗಿದೆ. ಕೋಷ್ಠಗಳ ಪಕ್ಕದಲ್ಲಿರುವ ಅರ್ಧಗಂಬಗಳು, ಕೀರ್ತಿಮುಖ, ಮುತ್ತಿನ ಸರ ಹಾಗೂ ಲತಾಸುರುಳಿಗಳಿಂದ ಅಲಂಕೃತವಾಗಿದೆ. ಕೋಷ್ಠಗಳ ಮೇಲ್ಭಾಗ ಶಿಖರ ಅಥವಾ ಮಕರ ತೋರಣಗಳಿಂದ ಕೂಡಿದೆ. ಕೆಲವೊಮ್ಮೆ ಎತ್ತರ ಅರ್ಧಗಂಬಗಳ ಮಧ್ಯೆ ರಸಿಕ ದಂಪತಿಗಳ, ರತಿ–ಮನ್ಮಥರ ಶಿಲ್ಪಗಳನ್ನು ಬಿಡಿಸುವುದೂ ಕಂಡುಬರುತ್ತದೆ.

ರಾಷ್ಟ್ರಕೂಟರ ಆಳಿಕೆಯ ಕೊನೆಯ ಹಂತದ ದೇವಾಲಯಗಳ ಹೊರಗೋಡೆಯ ಸ್ವರೂಪಾಧ್ಯಯನಕ್ಕೆ ಲಕ್ಷ್ಮೇಶ್ವರದ ಬಾಳೇಶ್ವರ ದೇವಾಲಯ ಒಂದು ಒಳ್ಳೆಯ ಉದಾಹರಣೆ. ಜಗತಿಯೊಂದರ ಮೇಲೆ ಕಟ್ಟಲಾಗಿರುವ ಈ ದೇವಾಲಯಗಳ ಗೋಡೆಯಲ್ಲಿ ಕೂಡ ಎತ್ತರವಾದ ಅರ್ಧಗಂಬ ಮತ್ತು ಕೋಷ್ಠಗಳಿವೆ. ಅರ್ಧಗಂಬಗಳ ಒಂದು ವೈಶಿಷ್ಟ್ಯವೆಂದರೆ ಇವೆಲ್ಲ ಚೌಕಾಕಾರವಾಗಿದ್ದು ಕಾಂಡದ ಮೇಲ್ಭಾಗದಲ್ಲಿ ಮೂರು ಮುಖದ ಸ್ತೂಪಿಯಾಕಾರದ ಭಾಗ, ಫಲಕ ಇದರ ಮೇಲೆ ಬೋದಿಗೆ ಇವೆ. ಕೋಷ್ಠಗಳ ಮೇಲ್ಭಾಗದಲ್ಲಿ ದೊಡ್ಡ ಪ್ರಮಾಣದ ಚೈತ್ಯದಾಕಾರದ ಗೂಡು ಇಲ್ಲವೆ ಸೂಕ್ಷ್ಮ ಕೆತ್ತನೆಯ ಕೆಲಸದಿಂದ ಕೂಡಿದ ಮಕರ ತೋರಣ ಗಳಿವೆ. ಕೋಷ್ಠಗಳಲ್ಲಿ ಸುಂದರ ದೇವತಾ ಮೂರ್ತಿಗಳನ್ನು ಕೆತ್ತಲಾಗಿದೆ. ಕೆಲವೆಡೆ ಕೋಷ್ಠಗಳ ಅಕ್ಕಪಕ್ಕಗಳಲ್ಲಿ ದೊಡ್ಡ ಆಕಾರದ ಶಿಲ್ಪಗಳನ್ನು ಕೊರೆಯಲಾಗಿದೆ. ಕೋಷ್ಠಗಳ ತುದಿ ದೇವಾಲಯ ಮಾಳಿಗೆಯನ್ನು ಮುಟ್ಟಿರುತ್ತದೆ. ಗೋಡೆಗಳ ಮೇಲೆ ಅಲ್ಲಲ್ಲಿ ಸರಳ ರೂಪದ ಜಾಲಂಧ್ರಗಳನ್ನು ಅಳವಡಿಸಿದೆ. ಬಾಳೇಶ್ವರ ದೇವಾಲಯದ ಗೋಡೆಗಳ ಮೇಲೆ ಕೊರೆದ ಉಬ್ಬು ಶಿಲ್ಪಗಳಲ್ಲಿ ನೃತ್ಯ ಗಣಪತಿ, ನಟರಾಜ, ಗಜಾಸುರನ ಸಂಹಾರಮೂರ್ತಿ ಉಗ್ರನರಸಿಂಹ, ಮಹಿಷಮರ್ದಿನಿ, ಅರ್ಧನಾರೀಶ್ವರ, ವೃಷಭಾರೂಢಶಿವನ ಶಿಲ್ಪಗಳು ಗಮನಾರ್ಹ.

ರಾಷ್ಟ್ರಕೂಟರ ದೇವಾಲಯಗಳಲ್ಲಿ ಅನೇಕ ಭಾಗಗಳ ಅಲಂಕರಣಕ್ಕಾಗಿ ಮಕರ ತೋರಣ ವನ್ನು ಉಪಯೋಗಿಸಲಾಗಿದೆ. ಹೊರಗೋಡೆಗಳಲ್ಲಿಯ ಕೋಷ್ಠಗಳ ಅಲಂಕರಣೆಗೆ ಇವುಗಳ ಉಪಯೋಗ ಹೆಚ್ಚಾಗಿದ್ದುದನ್ನು ಮೇಲೆ ಹೇಳಲಾಗಿದೆ. ಗರ್ಭಗೃಹ ದ್ವಾರದ ಅಲಂಕರಣೆಗೂ ಮಕರ ತೋರಣವನ್ನು ಬಳಸಿದುದನ್ನು ಈ ಕಾಲದ ದೇವಾಲಯಗಳಲ್ಲಿ ಕಾಣಬಹುದು. ಇದೇ ರೀತಿ ಮಕರ ತೋರಣಗಳನ್ನು ದೇವಾಲಯದ ಮುಂಭಾಗದಲ್ಲಿ ನಿಲ್ಲಿಸುವ ಸಂಪ್ರದಾಯ ರಾಷ್ಟ್ರಕೂಟರ ಕಾಲದಲ್ಲಿ ಪ್ರಾರಂಭವಾಯಿತು. ಈ ಕಾಲದಲ್ಲಿ ರಚಿತವಾದ ಮಕರ ತೋರಣ ಐಹೊಳೆಯ ಮಲ್ಲಿಕಾರ್ಜುನಗುಡಿಯ ಮುಂದಿರುವುದು ಇದಕ್ಕೆ ನಿದರ್ಶನ. ಸುಂದರವಾಗಿ ಕೆತ್ತಿದ ಮತ್ತೊಂದು ಮಕರ ತೋರಣ ಗಳಗನಾಥ ದೇವಾಲಯದ ಗುಂಪಿನಲ್ಲಿದೆ. ಮಲ್ಲಿಕಾರ್ಜುನ ಗುಡಿಯ ಮುಂದಿರುವ ಮಕರ ತೋರಣವನ್ನು ಎತ್ತರವಾದ ಎರಡು ಕಂಬಗಳ ಮೇಲೆ ಅಳವಡಿಸಲಾಗಿದೆ. ಮಕರ ತೋರಣಗಳನ್ನು ಗರ್ಭಗುಡಿಯ ಮುಂದೆ ಎರಡು ಕಂಬಗಳ ಮೇಲೆ ಅಳವಡಿಸುವ ಸಂಪ್ರದಾಯ ರಾಷ್ಟ್ರಕೂಟರ ಕಾಲದಿಂದಲೇ ಆರಂಭವಾಯಿತೆಂದು ಹೇಳಬಹುದು. ಸೊಗಲದ ಸೋಮೇಶ್ವರ ದೇವಾಲಯದ ಗರ್ಭಗುಡಿಯ ಮುಂಭಾಗದ ಅರ್ಧಮಂಟಪದ ಮುಂದೆ ಇಂತಹ ಮಕರ ತೋರಣವಿದೆ. ಕಂಬಗಳ ಮೇಲೆ ಸುಂದರವಾಗಿ ಕೆತ್ತಿದ ತ್ರಿಪುರಾಂತಕ, ಭೈರವ, ಅಪ್ಸರೆ, ಮಹಿಷಮರ್ದಿನಿಯರ ಉಬ್ಬು ಚಿತ್ರಗಳಿವೆ. ಈ ಕಂಬಗಳ ಮೇಲೆ ಸೂಕ್ಷ್ಮ ಕೆತ್ತನೆಯ ಮಕರ ತೋರಣವಿದೆ. ಈ ಎರಡೂ ಮಕರಗಳ ನಡುವೆ ಗಂಧರ್ವ, ಬ್ರಹ್ಮ, ನಟರಾಜ ಹಾಗೂ ವಿಷ್ಣು ದೇವತೆಗಳ ಚಿಕ್ಕ ಚಿಕ್ಕ ಮೂರ್ತಿಗಳನ್ನು ಕೆತ್ತಲಾಗಿದೆ.

ರಾಷ್ಟ್ರಕೂಟ ಆಳಿಕೆಯ ಆರಂಭದ ದೇವಾಲಯಗಳಲ್ಲಿ ಮಂಜೂರಿನ ಕೆಳಗೆ, ಗೋಡೆಯ ಮೇಲ್ಭಾಗಕ್ಕೆ ಹತ್ತಿಕೊಂಡಂತೆ ಸಾಲಾಗಿ ಕಪೋತ (ಪಾರಿವಾಳ) ಪಕ್ಷಿಗಳಿರುವುದನ್ನೂ ಇಲ್ಲಿ ಸ್ಮರಿಸಬಹುದು. ಇಂತಹ ಅಲಂಕಾರ ಶೈಲಿಯನ್ನು ರಾಷ್ಟ್ರಕೂಟರು ಎಂಟು ಮತ್ತು ಒಂಬತ್ತ ನೆಯ ಶತಮಾನಗಳ ತಮ್ಮ ದೇವಾಲಯಗಳಲ್ಲಿ ಮುಂದುವರಿಸಿದರು. ಇಂತಹ ಆಲಂಕಾರಿಕ ಪಕ್ಷಿಗಳನ್ನು ಕುಕ್ಕನೂರಿನ ನವಲಿಂಗ, ಹಳ್ಳೂರಿನ ಮೇಲ್ಗುಡಿ (ಇದೊಂದು ಬಸದಿ) ಮುಂತಾದ ದೇವಾಲಯಗಳಲ್ಲಿಯೂ ನೋಡಬಹುದು. ಆದರೆ ಹತ್ತನೆಯ ಶತಮಾನದಿಂದ ದೇವಾಲಯ ಗಳಲ್ಲಿ ಹೀಗೆ ಪಕ್ಷಿಗಳನ್ನು ಮಂಜೂರಿನ ಕೆಳಭಾಗದಲ್ಲಿ ಕೊರೆಯುವುದು ಕಾಣಬರುವುದಿಲ್ಲ.

ರಾಷ್ಟ್ರಕೂಟರ ಕಾಲದ ದೇವಾಲಯಗಳ ಗೋಡೆಗಳಲ್ಲಿ ಜಾಲಂಧ್ರಗಳನ್ನು ಅಳವಡಿಸುವ ಸಂಪ್ರದಾಯ ಮುಂದುವರೆಯಿತು. ಆದರೆ ಈ ಕಾಲದ ಜಾಲಂಧ್ರಗಳ ಸರಳ ಮತ್ತು ಅನಲಂಕೃತವಾಗಿದೆ. ಹಳ್ಳೂರಿನ ಮೇಲ್ಗುಡಿಯಲ್ಲಿ ಕಾಣಬರುವ ಜಾಲಂಧ್ರಗಳು ದೊಡ್ಡ ಪ್ರಮಾಣದ್ದಾಗಿದ್ದು, ಬಾದಾಮಿ ಚಳುಕ್ಯರ ಕಾಲದ ಲಾಡಖಾನ, ಚಿಕ್ಕಿಗುಡಿಗಳಲ್ಲಿರುವ ಜಾಲಂಧ್ರ ಗಳನ್ನು ನೆನಪಿಸುತ್ತವೆ. ಈ ಜಾಲಂಧ್ರಗಳ ಮೇಲೆ ಅರಳಿದ ಕಮಲಗಳನ್ನು ಕೆತ್ತಲಾಗಿದೆ.

ರಾಷ್ಟ್ರಕೂಟರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಎರಡು ವಿಧದ ಕಂಬಗಳನ್ನು ಕಾಣಬಹುದು. ಮೊದಲನೆಯ ವಿಧದ ಕಂಬಗಳು ಚೌಕಾಕಾರವಾಗಿದ್ದು ಕಾಂಡಭಾಗದಲ್ಲಿ ಅಡ್ಡಪಟ್ಟಿಕೆಗಳಿರುತ್ತವೆ. ಕೆಲವೆಡೆ ಈ ಅಡ್ಡಪಟ್ಟಿಕೆಗಳಲ್ಲಿ ಪತ್ರಲತೆ, ಲತಾಸುಳಿವು, ಮಣಿಸರ, ಪ್ರಾಣಿ, ಮನುಷ್ಯ, ದೇವತೆಗಳ ಶಿಲ್ಪಗಳನ್ನು ಕೆತ್ತಿರುವುದುಂಟು. ಮೇಲಿನ ಅಡ್ಡಪಟ್ಟಿಕೆಗೆ ಹೊಂದಿ ಕೊಂಡಂತೆ ಮೇಲ್ಭಾಗದಲ್ಲಿ ತ್ರಿಕೋಣಾ ತಾಳಾಕಾರದ ಅಲಂಕಾರವಿರುತ್ತದೆ. ಮೇಲಿನ ಮತ್ತು ಕೆಳಗಿನ ಅಡ್ಡಪಟ್ಟಿಕೆಗಳನ್ನು ಉದ್ದ ಪಟ್ಟಿಕೆಯೊಂದರಿಂದ ಕೂಡಿಸಿರುವುದು ಇಲ್ಲಿಯ ಇನ್ನೊಂದು ವಿಶೇಷ. ಈ ಕಂಬಗಳ ಮೇಲ್ಭಾಗದಲ್ಲಿ ಕಲಶದಂತಹ ಅಲಂಕರಣವಿರುತ್ತದೆ. ಎರಡನೆಯ ವಿಧದ ಕಂಬಗಳಲ್ಲಿ ಚೌಕಾಕಾರದ ಮತ್ತು ದುಂಡಾಕಾರದ ಭಾಗಗಳಿರುತ್ತವೆ. ಈ ಕಂಬಗಳನ್ನು ಚೌಕಾಕಾರದ ಪೀಠದ ಮೇಲೆ ನಿಲ್ಲಿಸಲಾಗಿದ್ದು ಇವುಗಳ ಕೆಳಭಾಗ ಚೌಕಾಗಿದ್ದರೆ, ಮೇಲ್ಭಾಗ ದುಂಡಾಗಿರುತ್ತದೆ. ಈ ಕಂಬಗಳೇ ಮುಂದೆ ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಕಂಬಗಳಿಗೆ ಸ್ಫೂರ್ತಿ ಒದಗಿಸಿದವು. ಇಂಥ ಕಂಬಗಳನ್ನು ಪಟ್ಟದಕಲ್ಲಿನ ಜೈನಬಸದಿ, ಐಹೊಳೆಯ ರಾಷ್ಟ್ರಕೂಟರ ದೇವಾಲಯ ಮತ್ತು ಕುಬಟೂರಿನ ರಾಮೇಶ್ವರ ದೇವಾಲಯಗಳಲ್ಲಿ ನೋಡಬಹುದು. ಕೆಲವು ರಾಷ್ಟ್ರಕೂಟರ ದೇವಾಲಯಗಳಲ್ಲಿ ಇನ್ನೊಂದು ಬಗೆಯ ಕಂಬಗಳಿರುವುದು ಕಂಡುಬಂದಿದೆ. ಸೊಗಲದ ಸೋಮೇಶ್ವರ ದೇವಾಲಯದ ಅರ್ಧಮಂಟಪದ ಮುಂದಿರುವ ಕಂಬಗಳು ಕೆಳಭಾಗದಲ್ಲಿ ಚೌಕಾಕಾರವಾಗಿದ್ದು, ಮಧ್ಯಭಾಗ ಉರುಳೆಯಾಕಾರವಾಗಿದೆ. ಮೇಲ್ಭಾಗ ದುಂಡಾದ ಸ್ತಂಭಾಗ್ರ ಮತ್ತು ಚೌಕಾಕಾರದ ಹಲಗೆಯನ್ನೊಳಗೊಂಡಿದೆ. ಕಂಬದ ಮಧ್ಯಭಾಗದಲ್ಲಿಯ ದುಂಡಗಿರುವ ಪಟ್ಟಿಗಳಲ್ಲಿ ಮಣಿಸರ, ಪತ್ರಲತೆಗಳು ಕಾಣುತ್ತವೆ. ಕಂಬದ ಚೌಕಾಕಾರದ ಭಾಗದಲ್ಲಿ ಭೈರವಿ, ತ್ರಿಪುರಾಂತಕ, ಗಜಾಸುರಸಂಹಾರ ಮತ್ತು ಮಹಿಷಮರ್ದಿನಿಯ ಕೆತ್ತನೆಗಳಿವೆ.

ಗರ್ಭಗೃಹದ ದ್ವಾರದ ಚೌಕಟ್ಟು ಸಾಮಾನ್ಯವಾಗಿ ಹೆಚ್ಚು ಆಲಂಕಾರಿಕವಾಗಿರುವುದಿಲ್ಲ. ದ್ವಾರ ಶಾಖೆಗಳಲ್ಲಿ ಅರ್ಧಗಂಬಗಳಿರುವುದು ಸಾಮಾನ್ಯವಾಗಿದೆ. ಕೆಲವು ಸಲ ಈ ಅರ್ಧಗಂಬ ಉರುಳೆಯಾಕಾರದ ಕಾಂಡವನ್ನು ಹೊಂದಿರುತ್ತದೆ. ದ್ವಾರದ ಕೆಳಭಾಗದಲ್ಲಿ ಅನೇಕ ಸಂದರ್ಭ ಗಳಲ್ಲಿ ಪೂರ್ಣ ಕುಂಭಗಳನ್ನು ಕೆತ್ತಿರುವುದನ್ನು ಕಾಣಬಹುದು. ಐಹೊಳೆಯಲ್ಲಿರುವ ರಾಷ್ಟ್ರಕೂಟರ ಕೆಲವು ದೇವಾಲಯಗಳಲ್ಲಿ ಗರ್ಭಗೃಹ ದ್ವಾರದ ಲಲಾಟ–ಬಿಂಬದಲ್ಲಿ ಗರುಡನ ಮೂರ್ತಿಯನ್ನು ಕೆತ್ತಿರುವರು. ರಾಷ್ಟ್ರಕೂಟರ ಕಾಲದ ಗರ್ಭಗೃಹದ್ವಾರದ ಇನ್ನೊಂದು ಲಕ್ಷಣವೆಂದರೆ, ದ್ವಾರದ ಮೇಲ್ಭಾಗದಲ್ಲಿ ಎರಡೂ ಕಡೆ ಮಕರಗಳನ್ನು ಕೆತ್ತಿರುವುದು. ಇಂತಹ ಮಕರಗಳು ಪಟ್ಟದಕಲ್ಲಿನಲ್ಲಿರುವ ಬಾದಾಮಿ ಚಳುಕ್ಯರ ಕಾಲದ ವಿರೂಪಾಕ್ಷ ಪಾಪನಾಥ ಮುಂತಾದ ದೇವಾಲಯಗಳಲ್ಲಿ ಕಂಡುಬರುತ್ತವೆ. ಈ ಮಕರಗಳನ್ನು ದ್ವಾರಗಳ ಮೇಲ್ಭಾಗದಲ್ಲಿ ಕೊರೆಯುವ ಸಂಪ್ರದಾಯ ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚು ಜನಪ್ರಿಯವಾಯಿತು. ಇಂತಹ ಮಕರಗಳನ್ನು ಐಹೊಳೆಯ ಅಳ್ಳಿ ಬಸಪ್ಪನಗುಡಿ ಮತ್ತು ಪಟ್ಟದಕಲ್ಲಿನ ಜೈನ ಬಸದಿಯಲ್ಲಿ ಕಾಣಬಹುದು.

ಐಹೊಳೆಯ ನಾಡರಗುಡಿ ರಾಷ್ಟ್ರಕೂಟ ದೇವಾಲಯಗಳ ಪ್ರಾಚೀನ ಮಾದರಿಗಳಲ್ಲಿ ಒಂದು. ಇದರಲ್ಲಿ ಒಂದು ಗರ್ಭಗೃಹ, ಒಂದು ಸಭಾಮಂಟಪ ಮತ್ತು ಒಂದು ಕೈಸಾಲೆಗಳಿವೆ. ಗರ್ಭಗೃಹದ ಮೇಲೆ ಕದಂಬ ನಾಗರ ಪ್ರಾಸಾದವಿದೆ. ಐಹೊಳೆಯಲ್ಲಿ ಚಾಳುಕ್ಯರು ಸ್ಥಾಪಿಸಿದ ಸಂಪ್ರದಾಯಗಳಿಗನುಗುಣವಾಗಿ ಈ ದೇವಾಲಯವನ್ನು ಕೆಂಪುಮರಳುಗಲ್ಲಿನಿಂದ ನಿರ್ಮಿಸ ಲಾಗಿದೆ. ಅಧಿಷ್ಠಾನ ಪ್ರಾಚೀನ ಚಾಳುಕ್ಯ ಅಧಿಷ್ಠಾನಕ್ಕಿಂತ ಬೇರೆಯಾಗಿಲ್ಲ. ಅದರಲ್ಲಿ ಉಪಾನ, ಜಗತಿ, ಗಳ, ಕೂಡುಗಳಿಂದ ಅಲಂಕೃತವಾದ ಕಪೋತಗಳು ಇವೆ.

902ರಲ್ಲಿ ನಿರ್ಮಿಸಿದ, ನಂದವಾಡಿಗೆಯ ಮೂಕ ಬಸವಣ್ಣನ ದೇವಾಲಯ ರಾಷ್ಟ್ರಕೂಟ ಕಾಲದ ಕೆಲವೇ ಕಾಲನಿಗದಿಯಾದ ದೇವಾಲಯಗಳಲ್ಲಿ ಒಂದು. ಇದೊಂದು ಸಣ್ಣ ದೇವಸ್ಥಾನ. ಒಂದು ಗರ್ಭಗೃಹ, ಒಂದು ಅರ್ಧಮಂಟಪ ಮತ್ತು ಒಂದು ನವರಂಗಗಳಿವೆ. ಸಮೀಪದಲ್ಲೇ ಸುಲಭವಾಗಿ ದೊರಕುತ್ತಿದ್ದ ಕೆಂಪುಮರಳುಗಲ್ಲಿನಿಂದ ನಿರ್ಮಿಸಲಾಗಿದೆ. ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲು ಮೊದಲಾದ ಪ್ರಾಚೀನ ಚಾಳುಕ್ಯ ಕೇಂದ್ರಗಳ ಬಳಿ ಇದ್ದುದರಿಂದ ಸಹಜವಾಗಿಯೇ ಈ ದೇವಾಲಯ ಚಾಳುಕ್ಯ ಶೈಲಿಯ ಲಕ್ಷಣಗಳನ್ನು ಒಳಗೊಂಡಿದೆ. ಪದ್ಮಾಲಂಕಾರದಿಂದ ಕೂಡಿದ ಗರ್ಭಗೃಹದ್ವಾರ, ಗೋಡೆ ಕಂಬಗಳು, ಲತಾಚಿತ್ರಗಳು, ಸೆಜ್ಜದ ಮಧ್ಯದಲ್ಲಿ (ಲಲಾಟ ಬಿಂಬ) ಗರುಡನು ಸರ್ಪದ ಬಾಲವನ್ನು ಹಿಡಿದಿರುವ ಬಿಂಬ ವಿರುತ್ತದೆ. ಈ ದ್ವಾರದ ಇನ್ನೊಂದು ವಿಶೇಷವೆಂದರೆ, ಪ್ರಾಚೀನ ಚಳುಕ್ಯ ಮಾದರಿಯಲ್ಲಿ ಗರುಡನು ಹಾವನ್ನು ಹಿಡಿದಿರುವ ಶಿಲ್ಪವಿದ್ದರೂ ಗರುಡನ ಮೇಲೆ ಒಂದು ಗಜಲಕ್ಷ್ಮಿಯ ಮೂರ್ತಿ ಇಲ್ಲದೆ. ದ್ವಾರದ ಪಾರ್ಶ್ವಗಳಲ್ಲಿ ಎತ್ತರವಾದ ದ್ವಾರಪಾಲರ ವಿಗ್ರಹಗಳಿವೆ.

ಬೆಳ್ವಲನಾಡಿನ ಕೊಳನಾರು ಅಂದರೆ, ಈಗಿನ ಕೊಣ್ಣೂರು (ಧಾರವಾಡ ಜಿಲ್ಲೆ) ರಾಷ್ಟ್ರಕೂಟರ ಕಾಲದಲ್ಲಿ ಒಂದು ಆಡಳಿತ ಕೇಂದ್ರವಾಗಿತ್ತು. 860ರಲ್ಲಿ ರಾಷ್ಟ್ರಕೂಟ ದೊರೆ 2ನೆಯ ಅಮೋಘವರ್ಷನ ಆಳಿಕೆಯಲ್ಲಿ ಕೊಳನೂರಿನ ಅಧಿಕಾರಿ ಬಂಕೆಯರಸ ಇಲ್ಲಿ ಜೈನ ಬಸದಿಯೊಂದನ್ನು ಕಟ್ಟಿಸಿದ. ಬಂಕೆಯರಸನ ವಿನಂತಿಯ ಮೇರೆಗೆ ಅಮೋಘವರ್ಷ ಈ ಬಸದಿಗೆ ಒಂದು ಹಳ್ಳಿಯನ್ನು ದತ್ತಿಯಾಗಿ ನೀಡಿದ. ಈ ಬಸದಿಯನ್ನು ಈಗ ಪರಮೇಶ್ವರ ದೇವಾಲಯವೆಂದು ಕರೆಯಲಾಗುತ್ತದೆ. ಇದು ರಾಷ್ಟ್ರಕೂಟರ ಆರಂಭಕಾಲದ ದೇವಾಲಯ ಗಳಲ್ಲಿ ಒಂದು. ಆ ಮೇಲಿನ ಕಾಲಗಳಲ್ಲಿ ಈ ಬಸದಿಯ ಕೆಲವು ಭಾಗಗಳು ಜೀರ್ಣೋದ್ಧಾರ ಗೊಂಡಿದ್ದರೂ ವಾಸ್ತುಶೈಲಿಯ ದೃಷ್ಟಿಯಿಂದ ಇದರ ಮಹತ್ವ ಕಡಿಮೆ ಯಾಗಿಲ್ಲ. ಸವದಿಯಲ್ಲಿ ರುವ ಬ್ರಹ್ಮೇಶ್ವರ ದೇವಾಲಯದಂತೆ, ಈ ಬಸದಿಯ ತಲವಿನ್ಯಾಸ ಉಲ್ಲೇಖಾರ್ಹವಾಗಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳು ಇಲ್ಲಿವೆ. ಗರ್ಭಗೃಹದ ಅಧಿಷ್ಠಾನ ಮತ್ತು ಹೊರಗೋಡೆಗಳ ವಿನ್ಯಾಸ ಆಕರ್ಷಣೀಯವಾಗಿವೆ. ವಿನ್ಯಾಸ ನಕ್ಷತ್ರಾಕಾರದಲ್ಲಿದೆ. ಅಧಿಷ್ಠಾನ ಮತ್ತು ಗೋಡೆಗಳಲ್ಲಿ ಹದಿಮೂರು ಮೂಲೆಗಳನ್ನು ಅಳವಡಿಸಲಾಗಿದ್ದು, ಇದು ನಕ್ಷತ್ರಾಕಾರದ ತಲವಿನ್ಯಾಸಕ್ಕೆ ಮೂಲವಾಗಿದೆ. ಈ ರೀತಿಯ ನಕ್ಷತ್ರಾಕಾರದ ತಲವಿನ್ಯಾಸ ಕಲ್ಯಾಣ ಚಾಳುಕ್ಯರ ಮತ್ತು ಹೊಯ್ಸಳರ ದೇವಾಲಯಗಳ ವಿಶಿಷ್ಟ ಲಕ್ಷಣವೆಂದು ಹೇಳಲಾಗಿದೆ. ಆದರೆ ಕೊಣ್ಣೂರಿನ ದೇವಾಲಯದಲ್ಲಿ ಕಲ್ಯಾಣ ಚಾಳುಕ್ಯರಿಗಿಂತ ಸು. 120 ವರ್ಷಗಳ ಮುಂಚೆಯೇ ಈ ತಲವಿನ್ಯಾಸವನ್ನು ಅಳವಡಿಸಿರುವುದು ಗಮನೀಯವಾಗಿದೆ. ಈ ತಲವಿನ್ಯಾಸವೇ ಕಲ್ಯಾಣ ಚಾಳುಕ್ಯ ಸ್ಥಪತಿಗಳಿಗೆ ಪ್ರೇರಣೆ ನೀಡಿದುದರಲ್ಲಿ ಸಂದೇಹವಿಲ್ಲ.

ಇದೇ ರೀತಿಯಾಗಿ ನಕ್ಷತ್ರಾಕಾರದ ತಲವಿನ್ಯಾಸವಿರುವ ಇನ್ನೊಂದು ದೇವಾಲಯ ನರಗುಂದದ ದಂಡೇಶ್ವರ ದೇವಾಲಯ. ಇದೊಂದು ನಿರಂಧಾರ ದೇವಾಲಯ. ಗರ್ಭಗೃಹ, ಶುಕನಾಸಿ, ನವರಂಗಗಳಿರುವ ಈ ಚಿಕ್ಕ ದೇವಾಲಯದಲ್ಲಿ ನವರಂಗಕ್ಕೆ ಹೋಗಲು ಒಂದೇ ಬಾಗಿಲಿದ್ದು ಅದನ್ನು ಬಲಗೋಡೆಯಲ್ಲಿ ಅಳವಡಿಸಲಾಗಿದೆ. ದೇವಾಲಯದ ಅಧಿಷ್ಠಾನ ಉಪಾನ, ಜಗತಿ, ಕಂಪ, ಪಟ್ಟ, ಚೌಕಾಕಾರದ ಹಾಗೂ ದೀರ್ಘಚತುರಸ್ರಾಕಾರದ ಭಾಗಗಳು ಇರುವ ಇನ್ನೊಂದು ಪಟ್ಟಿಕೆಗಳನ್ನು ಒಳಗೊಂಡಿದೆ. ಗೋಡೆಗಳ ಮುಂಭಾಗದಲ್ಲಿ ಅರೆಗಂಬಗಳು ಮತ್ತು ಅವುಗಳ ನಡುವೆ ಪಂಜರಗಳು ಇವೆ. ಪಂಜರಗಳ ಮೇಲುಭಾಗದಲ್ಲಿ ಚಾಳುಕ್ಯ ಮಾದರಿಯ ಇಲ್ಲವೆ, ರೇಖಾನಾಗರ ಮಾದರಿಯ ಶಿಖರಗಳ ಅಲಂಕಾರವಿದೆ. ಹೊರಗೋಡೆಯಲ್ಲಿ ಮೂರ್ತಿಶಿಲ್ಪಗಳು ಇಲ್ಲದುದು ಗಮನಾರ್ಹವಾಗಿದೆ.

ನವರಂಗ ದ್ವಾರ ಆಸಕ್ತಿಯನ್ನು ಕೆರಳಿಸುತ್ತದೆ. ದ್ವಾರಶಾಖೆಗಳಲ್ಲಿ ಉರುಳೆಯಾಕಾರದ ಅರೆಗಂಬಗಳನ್ನು ಕೊರೆಯಲಾಗಿದೆ. ಅವುಗಳ ಕೆಳಭಾಗಗಳಲ್ಲಿ ಪೂರ್ಣಕುಂಭಗಳನ್ನು ಕೆತ್ತಿದ್ದಾರೆ. ಹೀಗೆ ದ್ವಾರಗಳನ್ನು ಅಲಂಕರಿಸಲು ಕುಂಭಗಳನ್ನು ಅಳವಡಿಸುವ ಸಂಪ್ರದಾಯ ರಾಷ್ಟ್ರಕೂಟ ದೇವಾಲಯಗಳ ಒಂದು ವಿಶಿಷ್ಟ್ಯ ಲಕ್ಷಣ. ಈ ರೀತಿಯಾಗಿ ಕುಂಭದ ಅಲಂಕಾರ ವಿರುವ ದ್ವಾರಗಳನ್ನು ಐಹೊಳೆಯ ಅನೇಕ ದೇವಾಲಯಗಳಲ್ಲಿ ನೋಡಬಹುದು.

ಹಲಾಯುಧ ಲಾಂಛನ, ಮಾವಳಿ ವೀರಗಲ್ಲು

ಪಟ್ಟದಕಲ್ಲಿನ ಜೈನ ಬಸದಿ ಹಳ್ಳಿಯ ಪಶ್ಚಿಮಕ್ಕಿದ್ದು ರಾಷ್ಟ್ರಕೂಟ ಬಸದಿಗಳಲ್ಲಿ, ಹಳ್ಳೂರಿನದ ರಂತೆಯೇ ಪ್ರಾಚೀನವಾದುದು. ಇದು ಸಾಂಧಾರ ಮಾದರಿಯ ಬಸದಿ. ಇದರಲ್ಲಿ ಒಂದು ಗರ್ಭಗೃಹ, ಪ್ರದಕ್ಷಿಣಪಥ, ಅರ್ಧ ಮಂಟಪ, ನವರಂಗ ಮತ್ತು ಮುಖ ಮಂಟಪಗಳಿವೆ. ಮುಖಮಂಟಪದಲ್ಲಿ ಕಕ್ಷಾಸನಗಳಿವೆ. ಗರ್ಭಗೃಹದ ಮೇಲೆ ಎರಡು ಅಂತಸ್ತುಗಳಿವೆ. ಬಸದಿಯಲ್ಲಿ ಮೇಲಿನ ಗರ್ಭಗೃಹವೂ ಇದೆ. ಕೆಳಗಿನ ಅಂತಸ್ತು ಒಂದು ಗರ್ಭಗೃಹವಾಗಿದೆ. ಇದು ದ್ರಾವಿಡ ಮಾದರಿ ಶಿಖರದಲ್ಲಿ ಸೇರಿಕೊಂಡಿದೆ. ಈ ಬಸದಿಯ ವಿಶಿಷ್ಟ ಲಕ್ಷಣವೆಂದರೆ, ಮುಖಮಂಟಪದಲ್ಲಿ ನವರಂಗದ ಮುಂದಿನ ದ್ವಾರದ ಎರಡೂ ಪಕ್ಕಗಳಲ್ಲಿ ದೊಡ್ಡ ಗಾತ್ರದ ಆನೆಗಳು ಗೋಡೆಯಿಂದ ಹೊರಬಂದಿರುವಂತೆ ಕೆತ್ತಿರುವುದು. ಇವು ಎಲ್ಲೋರದ ಇಂದ್ರಸಭೆಯ ಆನೆಗಳನ್ನು ನೆನಪಿಗೆ ತರುತ್ತವೆ. ನವರಂಗ ದ್ವಾರದಲ್ಲಿ ಕಂಬತೋಳಿನ ಕೆಳಭಾಗದಲ್ಲಿ, ರಾಷ್ಟ್ರಕೂಟ ದ್ವಾರಗಳ ಸಾಮಾನ್ಯ ಲಕ್ಷಣವಾದ ಕುಂಭಗಳ ಜೊತೆಗೆ ಪದ್ಮ ಹಾಗೂ ಶಂಖನಿಧಿ ಯಕ್ಷರನ್ನು ಕೆತ್ತಲಾಗಿದೆ. ದ್ವಾರದ ಮೇಲ್ಭಾಗದ ಪಕ್ಕಗಳಲ್ಲಿ ದೊಡ್ಡಮಕರಗಳಿವೆ. ಇದು ರಾಷ್ಟ್ರಕೂಟ ದ್ವಾರಗಳಲ್ಲಿ ಸಾಮಾನ್ಯ. ಇದಕ್ಕೆ ಅತ್ಯುತ್ತಮ ಉದಾಹರಣೆ ಯನ್ನು ಐಹೊಳೆಯಲ್ಲಿ ಅಳ್ಳಿ ಬಸಪ್ಪ ದೇವಾಲಯದಲ್ಲಿ ನೋಡಬಹುದು.

ಹಳ್ಳೂರಿನ ಬಸದಿಯನ್ನು ಮೇಲ್ಗುಡಿ ಎಂದೂ ಕರೆಯಲಾಗುತ್ತದೆ. ಇದು ಸಾಂಧಾರ ಮಾದರಿಯದಾಗಿದ್ದು ಗರ್ಭಗೃಹ, ಪ್ರದಕ್ಷಿಣ ಪಥ ಮತ್ತು ಸಭಾಮಂಟಪಗಳಿವೆ. ಪಟ್ಟದಕಲ್ಲಿನ ಬಸದಿಯಲ್ಲಿರುವಂತೆ ಇಲ್ಲೂ ಮೇಲಂತಸ್ತಿನ ಗರ್ಭಗುಡಿಯಿದೆ. ಸರಳವಾದ ಕಲ್ಲಿನ ಜಾಲರಿಗಳಿಗೆ ಈ ಬಸದಿ ಗಮನಾರ್ಹವಾಗಿದೆ ಮತ್ತು ಹೊರಗೋಡೆಗಳಲ್ಲಿ ಎಂಟು ಭಾರೀ ಗಾತ್ರದ ಶಿಲ್ಪಗಳಿವೆ. ಇವುಗಳಲ್ಲಿ ನಾಲ್ಕು ಬಾಹುಬಲಿ ಮೂರ್ತಿಗಳು, ಉಳಿದ ನಾಲ್ಕು ಪಾರ್ಶ್ವನಾಥನವು. ಇಲ್ಲಿ ಗಮನಿಸಬೇಕಾದುದೇನೆಂದರೆ, ಎರಡು ಬಾಹುಬಲಿ ಮೂರ್ತಿಗಳಲ್ಲಿ ಉದ್ದವಾದ ತಲೆಗೂದಲಿದ್ದರೆ, ಇನ್ನೆರಡರಲ್ಲಿ ಸುರುಳಿಗೂದಲರಾಶಿಯಿರುವುದು. ಬಾಹುಬಲಿ ಶಿಲ್ಪಗಳಿಗೆ ಸಂಬಂಧಿಸಿದಂತೆ ಈ ನಾಲ್ಕು ಮೂರ್ತಿಗಳೂ ಒಂದು ಸಂಧಿಕಾಲ ವನ್ನು ಪ್ರತಿನಿಧಿಸುತ್ತವೆ. ಅದು ಬಾಹುಬಲಿಯ ನೀಳಕೇಶರಾಶಿ ಗುಂಗುರು ಕೇಶರಾಶಿಗೆ ಪರಿವರ್ತನೆಯಾದ ಕಾಲ.

(ಆರ್.ಎಸ್.ಎಸ್.)

**ನಾಣ್ಯಗಳು:** ದ್ರಮ್ಮ, ಸುವರ್ಣ, ಗದ್ಯಾಣ, ಕಾಸು, ಕಳಂಜು, ಮುಂಜಾಡಿ ಮತ್ತು ಅಕ್ಕಂ ಎಂಬ ಹೆಸರಿನ ನಾಣ್ಯಗಳನ್ನು ರಾಷ್ಟ್ರಕೂಟರ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಇವುಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿ ಲಭಿಸುವುದಿಲ್ಲ. ದ್ರಮ್ಮಗಳಲ್ಲಿ ಎರಡು ರೀತಿ–ಚಿನ್ನದ ಮತ್ತು ಬೆಳ್ಳಿಯ ದ್ರಮ್ಮಗಳು. ಶಾಸನಗಳ ಆಧಾರದ ಮೇಲೆ ಸುವರ್ಣವೆಂಬ ನಾಣ್ಯ ವಿಶೇಷವಾಗಿ ಪ್ರಚಾರದಲ್ಲಿತ್ತೆಂದೂ ತೂಕದ್ದಾಗಿರಬೇಕೆಂದೂ ಅಳತೇಕರ್ ಊಹಿಸಿದ್ದಾರೆ. ಒಂದು ಗದ್ಯಾಣಕ್ಕೆ ಎರಡು ಕಳಂಜುಗಳು ಸಮ ಎಂದು ಶಾಸನವೊಂದರಲ್ಲಿ ಹೇಳಿದೆ. ಅಂದರೆ ಇದು 48 ಗ್ರೇನ್ ತೂಕದ್ದಾಗಿರಬೇಕು. 20 ಕಾಸುಗಳಿಗೆ 7 ಕಳಂಜುಗಳು ಸಮವೆಂದು ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ಕಳಂಜು ನಾಣ್ಯದ ಇಪ್ಪತ್ತನೆಯ ಒಂದು ಭಾಗದ ನಾಣ್ಯಕ್ಕೆ ಮುಂಜಾಡಿ ಎಂದು ಹೆಸರಿದ್ದಿತು. ಬಹುಶಃ ಇದು ಎರಡೂವರೆ ಗ್ರೇನ್ ತೂಕದ ನಾಣ್ಯ. ಒಂದು ಕಾಸಿನ ಇಪ್ಪತ್ತನೆಯ ಒಂದು ಭಾಗವೇ ಅಕ್ಕಂ ಎಂಬ ನಾಣ್ಯ.

ಮಹಾರಾಷ್ಟ್ರದಲ್ಲಿ ದೊರಕಿದ ಕೆಲವು ನಾಣ್ಯಗಳಲ್ಲಿ ಶ್ರೀಕೃಷ್ಣರಾಜಸ್ಯ ಎಂಬ ಬರೆಹವಿದೆ. ಇವು ರಾಷ್ಟ್ರಕೂಟ ಒಂದನೆಯ ಕೃಷ್ಣನ ನಾಣ್ಯಗಳೆಂದು ಕೆಲವರು ಭಾವಿಸಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇವು ಕಳಚುರಿ ನಾಣ್ಯಗಳೆಂದು ತಿಳಿದುಬಂದಿದೆ. ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡದಲ್ಲಿ 140 ಗ್ರೇನ್ ತೂಕದ 3/4 ಅಂಗುಲ ವ್ಯಾಸದ ತಾಮ್ರದ ನಾಣ್ಯಗಳು ದೊರಕಿದ್ದು ಅವುಗಳ ಮೇಲಿನ ಬರೆಹದಲ್ಲಿ ಕಾಕರಾಯ ಎಂಬ ಹೆಸರಿದೆಯೆಂದು ಓದಿ ಕೆಲವು ವಿದ್ವಾಂಸರು ಇವು ರಾಷ್ಟ್ರಕೂಟ ಇಮ್ಮಡಿ ಕರ್ಕರಾಜನದ್ದೆಂದು ಅಭಿಪ್ರಾಯಪಟ್ಟರು. ಆದರೆ ಮತ್ತೆ ಕೆಲವರು ಈ ಬರೆಹವನ್ನು ಕಾಕತೀಯ ಎಂದು ಓದಿ ಅವುಗಳು ಆ ರಾಜವಂಶಕ್ಕೆ ಸೇರಿದವೆಂದು ಹೇಳಿದ್ದಾರೆ. ಒಟ್ಟಿನಲ್ಲಿ ಈ ವಿಷಯದಲ್ಲಿ ಒಮ್ಮತವಿಲ್ಲ. ಎಂ.ಎಚ್.ಕೃಷ್ಣ ಅವರು 57.9 ಗ್ರೇನ್ ತೂಕದ ಕೆಲವು ಚಿನ್ನದ ನಾಣ್ಯಗಳನ್ನು ರಾಷ್ಟ್ರಕೂಟರ ನಾಣ್ಯಗಳೆಂದು ಹೇಳಿದ್ದಾರೆ. ಅವುಗಳಲ್ಲಿ ಒಂಬತ್ತು ಮುದ್ರೆಗಳಿವೆ ಮತ್ತು ಪರ ಶ್ರೀ ಎಂಬ ಬರೆಹವಿದೆ. ಮಾನ್ಯ ಎಂಬ ಕನ್ನಡ ಬರೆಹವಿರುವುದು ಮಾನ್ಯಖೇಟವನ್ನು ನಿರ್ದೇಶಿಸಿದೆಯೆಂದೂ ಅವರ ವಾದ. ಆದರೆ ಇವಿನ್ನೂ ಖಚಿತವಾಗಿಲ್ಲ. ಹೀಗಾಗಿ ಖಚಿತವಾಗಿ ರಾಷ್ಟ್ರಕೂಟರಿಗೇ ಸೇರಬಹುದಾದ ನಾಣ್ಯಗಳಿನ್ನೂ ದೊರಕಿಲ್ಲವೆಂದೇ ಹೇಳಬೇಕಾಗಿದೆ.

(ಎ.ವಿ.ಎನ್.)

**ಶಾಸನಗಳು:** ಇದುವರೆಗೂ ರಾಷ್ಟ್ರಕೂಟರ ಹಲವಾರು ಶಿಲಾಶಾಸನಗಳು ಸು.35 ತಾಮ್ರಶಾಸನಗಳು ದೊರೆತಿವೆ. ತಾಮ್ರಶಾಸನಗಳಲ್ಲಿ ಕೆಲವು ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪಕನಾದ ದಂತಿದುರ್ಗನ ಪೂರ್ವಜರ ಹಾಗೂ ಈ ರಾಜನ ಅನಂತರ ಬಂದ ಚಕ್ರವರ್ತಿಗಳ ವಂಶಾವಳಿಯನ್ನು ನೀಡುತ್ತವೆ. ಈ ವಂಶದ ಅರಸರ ರಾಜಕೀಯ ಸಾಧನೆಗಳು, ಅವರು ಧರಿಸಿದ ವಿವಿಧ ಬಿರುದಾವಳಿಗಳು, ಮಾಡಿದ ದಾನಧರ್ಮಗಳು, ಇತರ ಸಾಂಸ್ಕೃತಿಕ ಚಟುವಟಿಕೆಗಳು ಮುಂತಾದವುಗಳನ್ನು ಇವರ ಶಾಸನಗಳಿಂದ ತಿಳಿಯಬಹುದು. ತಾಮ್ರಶಾಸನಗಳು ಸಾಮಾನ್ಯವಾಗಿ ನಾಗರೀಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿವೆ. ಬ್ರಿಟಿಷ್ ಮ್ಯೂಸಿಯಮ್‍ನಲ್ಲಿರುವ ಕನ್ನಡ ಲಿಪಿ ಮತ್ತು ಭಾಷೆಯನ್ನೊಳಗೊಂಡ ಗೋವಿಂದನ ಶಾಸನವೊಂದು ಇದಕ್ಕೆ ಅಪವಾದ. ಈ ಮನೆತನದ ಹಲವಾರು ಶಾಖೆಗಳು ಸು. 7–8ನೆಯ ಶತಮಾನಗಳಲ್ಲಿ ಗುಜರಾತ್ (ಖೇಟ್ ಮಂಡಳ), ಅಮರಾವತಿ (ಮಹಾರಾಷ್ಟ್ರ) ಪ್ರದೇಶಗಳಲ್ಲಿ 10–12ನೆಯ ಶತಮಾನಗಳಲ್ಲಿ ಪಠಾರಿ (ಭೋಪಾಲ್ ಪ್ರದೇಶ), ಧನೋಪ ಮತ್ತು ಬಿಜಾಪುರ (ರಾಜಸ್ತಾನ), ಮಗಧ ಪ್ರದೇಶಗಳಲ್ಲಿ ಆಳುತ್ತಿದ್ದರೆಂದು ಶಿಲಾ ಮತ್ತು ತಾಮ್ರಶಾಸನಗಳಿಂದ ತಿಳಿದುಬರುತ್ತದೆ. ಇವುಗಳಲ್ಲಿ ಔರಂಗಾಬಾದ್, ಖಾನ್‍ದೇಶ, ನಾಸಿಕ್ ಪ್ರದೇಶಗಳನ್ನು ಎಲ್ಲೋರದಿಂದ ರಟ್ಟರೆಂಬ ಶಾಖೆ ಆಡಳಿತ ನಡೆಸಿ ಹೆಚ್ಚು ಪ್ರಸಿದ್ಧವಾಗಿದೆ.

ಇವರ ತಾಮ್ರಶಾಸನಗಳ ಮುದ್ರೆಗಳಲ್ಲಿ ವೀರಾಸನದಲ್ಲಿ ಕುಳಿತು ಕೈಮುಗಿದುಕೊಂಡಿರುವ ಗರುಡನ ಅಥವಾ ತೆಕ್ಕೆಹಾಕಿಕೊಂಡಿರುವ ಎರಡು ಸರ್ಪಗಳ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು ಆ ಸರ್ಪಗಳ ಹೆಡೆಗಳನ್ನು ಕೈಗಳಲ್ಲಿ ಹಿಡಿದುಕೊಂಡ ಗರುಡನ ಚಿತ್ರವಿರುತ್ತದೆ. ಜೊತೆಗೆ ಬಲಭಾಗದಲ್ಲಿ ಗಣೇಶ, ಚಾರಿ, ದೀಪಸ್ತಂಭ, ಕೆಳಗೆ ಸ್ವಸ್ತಿಕವಿರುತ್ತದೆ. ಚಾರಿಯ ಮೇಲೆ ಸೂರ್ಯ ಚಂದ್ರರು, ಮತ್ತೊಂದು ಬದಿಯಲ್ಲಿ ಲಿಂಗ, ಅಂಕುಶ ಮೊದಲಾದ ಚಿತ್ರಗಳಿರುತ್ತವೆ. ಅಪೂರ್ವವಾಗಿ ಚತುರ್ಬಾಹು ವಿಷ್ಣುವಿನ ಮೂರ್ತಿ ಇರುತ್ತದೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲೂ ಇವರ ಶಿಲಾಶಾಸನಗಳು ಲಭಿಸಿವೆ. ತಮಿಳುನಾಡಿನ ಶಿಲಾಶಾಸನಗಳು ತಮಿಳು ಭಾಷೆ ಮತ್ತು ಲಿಪಿಗಳಲ್ಲಿವೆ. ರಾಷ್ಟ್ರಕೂಟರ ಶಿಲಾಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿರುವುದು ಕರ್ನಾಟಕದಲ್ಲಿ; ಅದರಲ್ಲೂ ಧಾರವಾಡ ಜಿಲ್ಲೆಯಲ್ಲಿ.

ಈ ವಂಶದವರ ಆಳಿಕೆಯ ಅನಂತರದ ಶತಮಾನಗಳ ಶಾಸನಗಳಿಗೆ ಹೋಲಿಸಿದಾಗ ಇವರ ಶಿಲಾಶಾಸನಗಳು ಸಂಕ್ಷಿಪ್ತ ರೂಪದಲ್ಲಿವೆ ಎನ್ನಬಹುದು. ಆರಂಭದ ಪ್ರಾರ್ಥನಾ ಶ್ಲೋಕಗಳು ಅಪೂರ್ವವಾಗಿದ್ದು, ನೇರವಾಗಿ ಅರಸನ ಆಳಿಕೆಯ ಪ್ರಸ್ತಾಪ, ಆತನ ಸಾಮಂತಾಧಿಕಾರಿಯ ಉಲ್ಲೇಖ, ಶಾಸನದ ಕಾಲ ಮತ್ತು ಉದ್ದೇಶಗಳ ವಿವರಣೆಗಳನ್ನು ಇವರ ಕನ್ನಡ ಶಾಸನಗಳಲ್ಲಿ ಕಾಣಬಹುದು. ಶಕಕಾಲವನ್ನು ಅಂಕೆಗಳಿಗಿಂತ ಹೆಚ್ಚಾಗಿ ಶಕನೃಪಕಾಲಾತೀತ ಸಂವತ್ಸರಶತಂಗಳೆಣ್ಬೂನೂರನಾಲ್ವತ್ತಾರು ಎಂದು ಅಕ್ಷರಗಳಲ್ಲಿ ಸೂಚಿಸುವ ಪದ್ಧತಿ ಸಾಮಾನ್ಯ. ಹೆಚ್ಚು ವಸ್ತುನಿಷ್ಠವಾದ ಈ ಶಾಸನಗಳಲ್ಲಿ ಸಾಹಿತ್ಯಾಂಶ ಬಹು ಕಡಿಮೆ; ಅಕ್ಷರಗಳು ಹೆಚ್ಚು ದುಂಡಾಗಿದ್ದು ಮುಂದಿನ ಶತಮಾನಗಳಲ್ಲಿ ಹೆಚ್ಚಿನ ಮಾರ್ಪಾಡುಗಳಿಗೆ ಅವಕಾಶವಿಲ್ಲದೆ ಸ್ಥಿರರೂಪವನ್ನು ಈಗ ಪಡೆದುವೆನ್ನಬಹುದು. ಸಮಕಾಲೀನ ಗಂಗರ ಶಾಸನಗಳಿಗಿಂತ ರಾಷ್ಟ್ರಕೂಟರ ಶಾಸನಗಳಲ್ಲಿ ಕನ್ನಡ ಭಾಷೆಯ ಬಳಕೆ ಹೆಚ್ಚು. ಭಾಷೆಯ ರಚನೆ, ಶಾಸನಗಳನ್ನು ಬರೆಯುವ ಒಂದು ಕ್ರಮ ಈಗ ಕಾಣಿಸಿಕೊಂಡು ಭಾಷೆ ಸಂಸ್ಕಾರಗೊಂಡಿತು. ಪದ್ಯಶಾಸನಗಳಿಗಿಂತ ಗದ್ಯಶಾಸನಗಳೇ ಸಂಖ್ಯೆಯಲ್ಲಿ ಹೆಚ್ಚು. ತಮಿಳುನಾಡಿನ ತಮಿಳುಶಾಸನಗಳೆಲ್ಲ ಮೂರನೆಯ ಕೃಷ್ಣನ ಕಾಲಕ್ಕೆ ಸೇರಿದವು. ಅನ್ಯಭಾಷಾಪ್ರದೇಶ ಸ್ವಾಧೀನವಾದಾಗ ಅಲ್ಲಿನ ಪ್ರಜೆಗಳಿಗೆ ಅರ್ಥವಾಗುವಂತೆ ಅವರ ಭಾಷೆಯನ್ನೇ ಬಳಸಿದುದೂ ಗಮನಾರ್ಹ ಸಂಗತಿ.

ದಂತಿದುರ್ಗನ ಎಲ್ಲೋರ ತಾಮ್ರಶಾಸನ (ಶ.ವ.663) ಮತ್ತು ಸಾಮನಗಡ ತಾಮ್ರಶಾಸನಗಳಿಂದ (ಶ.ವ.675) ಈ ಮನೆತನದ ಆರನೆಯವನಾದ ಇವನು ಕಲಿತನದಿಂದ ಮಾಳವ ಪ್ರದೇಶದಲ್ಲಿ ರಾಜ್ಯಾಧಿಕಾರವನ್ನು ಪಡೆದು ಅದನ್ನು ವಿಸ್ತರಿಸುತ್ತ ಕೊನೆಗೆ ಬಾದಾಮಿ ಚಳುಕ್ಯ

ಚಕ್ರವರ್ತಿ ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಇವನ ರಾಜ್ಯದಲ್ಲಿ ನಾಲ್ಕು ಲಕ್ಷ ಗ್ರಾಮಗಳಿದ್ದು ಪ್ರತಿಯೊಂದರಿಂದಲೂ ಇವನ ತಾಯಿ ಭೂದಾನ ಮಾಡಿದಳೆಂದು ತಿಳಿಸುತ್ತದೆ. ಇದು ಇವನ ಮಾತೃಭಕ್ತಿಯ ದ್ಯೋತಕವಾಗಿದೆ.

ಇವನ ಅನಂತರ ಇವನ ಅಣ್ಣನ ಮಗನಾದ ಒಂದನೆಯ ಕೃಷ್ಣನ ರಾಜ್ಯ ವಿಸ್ತರಣೆಯ ವಿವರಗಳು ಇವನ ಮಗ ಧ್ರುವಮಹಾರಾಜನ ಪಿಂಪಾರಿಶಾಸನ ಮತ್ತು ಅವನ ರಾಣಿ ಶೀಲಮಹಾದೇವಿಯ ಜಟಾಯಿ ತಾಮ್ರಶಾಸನದಿಂದಲೂ ತಿಳಿದುಬರುತ್ತದೆ. ಗಂಗರ ರಾಜಧಾನಿಯಾದ ಮಣ್ಣೆಯನ್ನು ಆಕ್ರಮಣಮಾಡಿ, ತಮಿಳುನಾಡಿನ ಕಾಂಚಿಯವರೆಗೂ ದಿಗ್ವಿಜಯ ಸಾಧಿಸಿದ್ದನೆಂಬ ವಿಷಯ ತಳೆಗಾಂವ್ ತಾಮ್ರಶಾಸನದಲ್ಲಿ ಪ್ರಸ್ತಾಪವಾಗಿದೆ. ಈತನದೇ ಆದ ಪುಣೆ-ತಳೆಗಾಂವ್ ಮತ್ತು ಭಾಂಡಕ ಶಾಸನಗಳಿಂದ ಈತ ನೀಡಿದ ದಾನಗಳ ವಿಷಯ ತಿಳಿದುಬರುತ್ತದೆ. ಗುಜರಾತಿನ ಸುವರ್ಣವರ್ಷ ಕರ್ಕರಾಜನ ಬರೋಡ ಶಾಸನ ಏಲಾಪುರದಲ್ಲಿ ಅದ್ಭುತವಾದ ಶಂಭುಗೃಹವನ್ನು ಒಂದನೆಯ ಕೃಷ್ಣ ನಿರ್ಮಾಣ ಮಾಡಿಸಿದನೆಂದು ತಿಳಿಸುತ್ತದೆ. ಇದನ್ನು ದೇವ್ರೋಲಿ ತಾಮ್ರಶಾಸನ ಪುಷ್ಟೀಕರಿಸುತ್ತದೆ. ಇವನಿಗೆ ಅಕಾಲವರ್ಷ, ಶುಭತುಂಗ, ಮಹಾಪ್ರಲಯ ವರಾಹ ಮುಂತಾದ ಬಿರುದಾವಳಿಗಳಿದ್ದುವು.

ಒಂದನೆಯ ಕೃಷ್ಣನ ಮಗ ಇಮ್ಮಡಿ ಗೋವಿಂದರಾಜ ಸ್ವಲ್ಪಕಾಲದವರೆಗೆ ಚಕ್ರವರ್ತಿಯಾಗಿದ್ದು ವಿಷಯಲಂಪಟನಾದುದರಿಂದ ತನ್ನ ತಮ್ಮ ಧ್ರುವನಿಗೆ ರಾಜ್ಯಭಾರವನ್ನು ಒಪ್ಪಿಸಿದನೆಂದು ಮೂರನೆಯ ಕೃಷ್ಣನ ರಾಧನಪುರ ಮತ್ತು ದೇವ್ರೋಲಿ ಶಾಸನಗಳಲ್ಲಿ ಹೇಳಿದೆ. ಧ್ರುವನ ಕೀರ್ತಿಯನ್ನು ದೌಲತಾಬಾದ್ ಶಾಸನದಲ್ಲಿ (ಶ.ವ.715) ವರ್ಣಿಸಲಾಗಿದೆ.

ಮೂರನೆಯ ಗೋವಿಂದನ ಸು.14 ತಾಮ್ರಶಾಸನಗಳು ದೊರೆತಿವೆ. ನವಸಾರಿ ಶಾಸನದ (ಶ.ವ.738) ಪ್ರಕಾರ ಇವನ ಅಣ್ಣ ಕಂಬಯ್ಯ ಹನ್ನೆರಡು ಪ್ರಬಲ ರಾಜರೊಡಗೂಡಿ ಗೋವಿಂದನ ಮೇಲೆ ದಂಗೆ ಎದ್ದನೆಂದೂ ಸಿಸವಾಯಿ ಮತ್ತು ರಾಧನಪುರ ಶಾಸನಗಳಿಂದ ಈ ಬಂಡನ್ನು ಗೋವಿಂದ ಅಡಗಿಸಿದನೆಂದೂ ತಿಳಿಯುತ್ತದೆ. ಇವನು ಪ್ರಭೂತವರ್ಷ, ಜಗತ್ತುಂಗ, ಅನುಪಮ, ಕೀರ್ತಿನಾರಾಯಣ, ವೃತ್ತಭುಜ, ತ್ರಿಭುವನಧವಳ ಮುಂತಾದ ಬಿರುದುಗಳನ್ನು ಹೊಂದಿದ್ದ.

ಗೋವಿಂದನ ಮಗ ಸುಪ್ರಸಿದ್ಧ ಒಂದನೆಯ ಅಮೋಘವರ್ಷನ ಸಂಜಾನ ತಾಮ್ರಶಾಸನ ಅವನ ಚರಿತ್ರೆಗೆ ಬಹಳ ಮಹತ್ತ್ವದ್ದಾಗಿದೆ. ಇದರಲ್ಲಿ ಅವನ ತಂದೆಯ ಪರಾಕ್ರಮದ ವರ್ಣನೆ, ಮಂತ್ರಿವರ್ಗಕ್ಕೆ ಕೊಟ್ಟ ಗೌರವ, ಶತ್ರುನಿಗ್ರಹ, ಉತ್ತರಭಾರತದಲ್ಲಿ ಹಿಮಾಲಯದವರೆಗೂ ನಡೆಸಿದ ದಿಗ್ವಿಜಯ, ನರ್ಮದಾ ನದಿಯ ಭಾಗದಲ್ಲಿ ಬೀಡುಬಿಟ್ಟಾಗ ಕೋಸಳ, ವೆಂಗಿ, ಡಹಳ, ಓಡ್ರಕ, ಮಾಳವರನ್ನು ಸೋಲಿಸಿದ್ದು, ವಿಂಧ್ಯ ಪರ್ವತದ ತಟದಲ್ಲಿ ಅನೇಕ ಪುಣ್ಯಕರ್ಮಗಳನ್ನು ಮಾಡಿಸಿ ಕೇರಳ ಪಾಂಡ್ಯ ಚೋಳ ಪಲ್ಲವ ರಾಜರನ್ನು ತನ್ನ ಪ್ರತಾಪದಿಂದ ನಿಸ್ತೇಜರನ್ನಾಗಿ ಮಾಡಿದ್ದು ಸಿಂಹಳದ ರಾಜರು ಮತ್ತು ಅವನ ಮುಖ್ಯಮಂತ್ರಿಯು ಒಂದನೆಯ ಅಮೋಘವರ್ಷನ ಶಿಲಾಪ್ರತಿಮೆಗಳನ್ನು ಮಾಡಿಸಿ ಏಲಾಪುರಕ್ಕೆ ತಂದು ಕಾಣಿಕೆ ಕೊಟ್ಟ ವಿಷಯಗಳು ಉಲ್ಲೇಖವಾಗಿವೆ. ಇವನು ಲೋಕದಲ್ಲಿ ಶಾಂತಿಗೋಸ್ಕರ ಮಹಾಲಕ್ಷ್ಮಿಗೆ ತನ್ನ ಎಡಗೈ ಹೆಬ್ಬೆಟ್ಟನ್ನು ಕತ್ತರಿಸಿ ದಾನಮಾಡಿದನೆಂದೂ ಹಲವು ಸಲ ವಿರಕ್ತಿಯಿಂದ ರಾಜ್ಯವನ್ನು ಪರಿತ್ಯಾಗ ಮಾಡಿದನೆಂದೂ ಹೇಳಲಾಗಿದೆ. ಕೊಣ್ಣೂರು ಶಿಲಾಶಾಸನದಿಂದ ಅಮೋಘವರ್ಷನ ಮಹಾದಂಡನಾಯಕ ಬಂಕೇಶ ಸಾಮಂತರ ಸಹಾಯವಿಲ್ಲದೆ ಏಕಾಕಿಯಾಗಿ ಹೋಗಿ ಗಂಗರಾಜನ ನೀತಿಮಾರ್ಗನನ್ನು ಸೋಲಿಸಿ ತನ್ನ ಚಕ್ರವರ್ತಿಗೆ ಸಂತೋಷವನ್ನುಂಟುಮಾಡಿದ ಕೊಳನೂರಿನಲ್ಲಿ (ಕೊಣ್ಣೂರು) ಒಂದು ಅಪೂರ್ವ ಶೈಲಿಯ ಜಿನದೇವಾಲಯವನ್ನು ಕಟ್ಟಿಸಿದ ವಿಷಯ ತಿಳಿಯುತ್ತದೆ.

ಬಾಗುಂಬ್ರ ಶಾಸನದಲ್ಲಿ ಮುಮ್ಮಡಿ ಇಂದ್ರನು ಇಮ್ಮಡಿ ಕೃಷ್ಣನ ಅನಂತರ ಪಟ್ಟಕ್ಕೆ ಬಂದದ್ದು, ಕುರಂದಕ ಕ್ಷೇತ್ರದಲ್ಲಿ ಇವನ ಪಟ್ಟಬಂಧ ಮಹೋತ್ಸವ ಆದದ್ದು, ಕ್ಯಾಂಬೆ ಶಾಸನಗಳಲ್ಲಿ ಇವನು ಪಟ್ಟಕ್ಕೆ ಬರುವ ಮುಂಚೆಯೇ ಕನೂಜ್ ರಾಜ್ಯವನ್ನು ಗೆದ್ದದ್ದು ಹೇಳಲಾಗಿದೆ. ಇವನ ಸಂಜಾನ ತಾಮ್ರಶಾಸನ (ಶ.ವ.848) ತಾಜಿಕರು ಅವನ ಮಂಡಲಾಧಿಕಾರಿಗಳಾಗಿದ್ದು ಸಂಜಾನ ಮಂಡಲವನ್ನು ಈ ವಂಶದ ಮಧುಮತಿ (ಮಹಮ್ಮದ್) ಸುಗತಿಪ ಎಂಬ ಹೆಸರಿನಿಂದ ಆಳುತ್ತಿದ್ದನೆಂದು ಹೇಳಿದೆ.

ಮುಮ್ಮಡಿ ಗೋವಿಂದನ ಕ್ಯಾಂಬೆ ತಾಮ್ರಶಾಸನದಲ್ಲಿ ಈ ರಾಜನು ತನ್ನ ಪಟ್ಟಬಂಧ ಮಹೋತ್ಸವವನ್ನು ಗೋದಾವರಿ ತೀರದಲ್ಲಿದ್ದ ಕಪಿತ್ಥರ ಎಂಬ ಗ್ರಾಮದಲ್ಲಿ ಮಾಡಿಸಿಕೊಂಡನೆಂದೂ ಈ ಸಂದರ್ಭದಲ್ಲಿ ಬ್ರಾಹ್ಮಣರಿಗೆ 600 ಅಗ್ರಹಾರಗಳನ್ನೂ, 2 ಲಕ್ಷ ಸುವರ್ಣಗಳನ್ನೂ, ದೇವಾಲಯಗಳಿಗೆ 800 ಗ್ರಾಮಗಳನ್ನೂ, 4 ಲಕ್ಷ ಸುವರ್ಣಗಳನ್ನೂ, 32 ಲಕ್ಷ ದ್ರಮ್ಮಗಳನ್ನೂ ದಾನಮಾಡಿದನೆಂದೂ ಹೇಳಿದೆ. ಸಾಂಗ್ಲಿ ಶಾಸನದ ಪ್ರಕಾರ ಇವನು ನಿತ್ಯ ಬ್ರಹ್ಮಧೇಯ ಭೂದಾನವನ್ನು ಮತ್ತು ದೇವಭೋಗ ಅಗ್ರಹಾರಗಳನ್ನು ದಾನಕೊಟ್ಟನೆಂದು ತಿಳಿದುಬರುತ್ತದೆ.

ಮುಮ್ಮಡಿ ಅಮೋಘವರ್ಷನ ಮೂವರು ಮಕ್ಕಳಲ್ಲಿ ಹಿರಿಯವನಾದ ಮುಮ್ಮಡಿ ಕೃಷ್ಣ ಯುವರಾಜನಾಗಿದ್ದು, ಚಿತ್ರದುರ್ಗ ತಾಲ್ಲೂಕಿನ ಒಂದು ಶಾಸನ (ಶ.ವ. 861) ಆತ ಪಟ್ಟಕ್ಕೆ ಬಂದ ವರ್ಷವನ್ನು ಹೇಳುತ್ತದೆ. ಮಧ್ಯಪ್ರದೇಶ ಜುರಾದಲ್ಲಿಯ ಕನ್ನಡ ಶಾಸನ ಸುಪ್ರಸಿದ್ಧ ಕರಹಾಡ ಶಾಸನದಲ್ಲಿ ಚೋಳರನ್ನು ಬೇರುಸಹಿತ ಕಿತ್ತು ಪಾಂಡ್ಯ, ಚೇರ, ಸಿಂಹಳ ರಾಜರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡು ರಾಮೇಶ್ವರದಲ್ಲಿ ಜಯಸ್ತಂಭವನ್ನು ನಡೆಸಿದನೆಂದು ಹೇಳಿದೆ. ಆತಕೂರು ಶಿಲಾಶಾಸನದಲ್ಲಿ (ಶ.ವ. 892) ಇವನು ಚೋಳರ ಮೇಲೆ ತಕ್ಕೋಲದಲ್ಲಿ ನಡೆಸಿದ ಯುದ್ಧ, ಅದರಲ್ಲಿ ಚೋಳ ರಾಜ ಪರಾಂತಕನ ಮಗ ರಾಜಾದಿತ್ಯನ ಮರಣ ಮುಂತಾದ ವಿವರಗಳಿವೆ. ಸಾಲೋಟಗಿ ಸ್ತಂಭಶಾಸನ (ಶ.ವ. 867) ಕೃಷ್ಣನ ಪ್ರಧಾನಮಂತ್ರಿ ಮಹಿಷ ವಿಷಯದಲ್ಲಿಯ ಕಾಂಚನ-ಮುದುವೊಳಲ ನಾರಾಯಣನು ವಿದ್ಯಾಶಾಲೆಯನ್ನು ಕಟ್ಟಿಸಿದ್ದು, ಅದಕ್ಕೆ ಪಾವಿಟ್ಟಿಗೆ ಗ್ರಾಮದ ಅಧಿಪತಿ ಚಕ್ರಾಯುಧ ಬುಧ ದಾನಮಾಡಿದ್ದನ್ನು ವಿಸ್ತಾರವಾಗಿ ತಿಳಿಸುತ್ತದೆ. ಇವನಿಗೆ ಅಕಾಲವರ್ಷ, ಶ್ರೀವಲ್ಲಭ, ಪರನಾರೀಸಹೋದರ ಮುಂತಾದ ಬಿರುದುಗಳಿದ್ದವು.

ಮುಮ್ಮಡಿ ಕೃಷ್ಣನ ಅನಂತರ ಪಟ್ಟಕ್ಕೆ ಬಂದ ಅವನ ತಮ್ಮ ಖೊಟ್ಟಿಗನ ಕೆಲವು ಶಾಸನಗಳಿವೆ. ಇವನಿಗೆ ಯಶಕೆನಲ್ಲಾತನೆಂಬ ಬಿರುದು ಇದ್ದಿತೆಂದು ಕ್ಯಾಸನೂರು ಶಾಸನ ತಿಳಿಸುತ್ತದೆ.

ಈ ಅರಸರ ತಾಮ್ರಶಾಸನಗಳಲ್ಲಿ ಅವುಗಳನ್ನು ರಚಿಸಿದ ಹಲವಾರು ಕವಿಗಳ ಉಲ್ಲೇಖಗಳಿವೆ. ಒಂದನೆಯ ಕೃಷ್ಣನ ಪುಣೆ ತಾಮ್ರಶಾಸನದ ಕರ್ತೃ ಇಂದ್ರ, ಧ್ರುವನ ಪಿಂಪಾರಿ ಮತ್ತು ಜಟ್ಟಾಯಿ ಶಾಸನಗಳನ್ನು ಬರೆದ ಮಹಾಸಂಧಿವಿಗ್ರಹಾಧಿಕೃತ ಪ್ರೇಮಾಂದಲ ಮತ್ತು ವಸುದೇವ, ಗೋವಿಂದನ ಶಾಸನಗಳ ಕರ್ತೃಗಳೆಂದು ಹೆಸರಿಸಲಾದ ಕಕ್ಕಯ್ಯ, ಅರುಣಾದಿತ್ಯ ಮತ್ತು ಶ್ರೀಧರ ಮುಂತಾದವರು ಗಮನಾರ್ಹರು. (ಎ.ಎಸ್.;ಬಿ.ಆರ್.ಜಿ.)

**ಸಾಹಿತ್ಯ:** ರಾಷ್ಟ್ರಕೂಟರ ವೈಭವಪೂರ್ಣ ಆಳಿಕೆಯ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳೆರಡಕ್ಕೂ ಹೆಚ್ಚಿನ ಪ್ರೋತ್ಸಾಹ ದೊರಕಿತು. ಈ ಎರಡು ಭಾಷೆಗಳಲ್ಲೂ ಅನೇಕ ಉದ್ಗ್ರಂಥಗಳು ರಚನೆಯಾದುವು. ಕನ್ನಡ ಭಾಷೆಯ ಬೆಳೆವಣಿಗೆಯ ದೃಷ್ಟಿಯಿಂದ ರಾಷ್ಟ್ರಕೂಟರ ಕಾಲ ಒಂದು ಪರ್ವಕಾಲವೆಂದು ಹೇಳಿದರೆ ತಪ್ಪಾಗಲಾರದು. ಕನ್ನಡ ಸಾಹಿತ್ಯದ ಉಪಲಬ್ಧ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದ ಕವಿರಾಜಮಾರ್ಗ ಈ ಕಾಲದ್ದು. ಆದಿಕವಿ ಪಂಪ ರಾಷ್ಟ್ರಕೂಟರ ಕಾಲದ ಮತ್ತೊಬ್ಬ ಪ್ರಸಿದ್ಧ ಕವಿ. ಇವನು ರಾಷ್ಟ್ರಕೂಟರ ಸಾಮಂತನಾದ ಚಾಳುಕ್ಯ ಅರಿಕೇಸರಿಯ ಆಶ್ರಯದಲ್ಲಿದ್ದು ಆದಿಪುರಾಣ, ವಿಕ್ರಮಾರ್ಜುನವಿಜಯ ಎಂಬ ಎರಡು ಕಾವ್ಯಗಳನ್ನು ರಚಿಸಿದ. ಈ ಕಾಲದ ಮತ್ತೊಬ್ಬ ಕವಿ ಪೊನ್ನ. ಈತ ಪ್ರಖ್ಯಾತ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಆಸ್ಥಾನಕವಿಯಾಗಿದ್ದ. ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತು ರಚಿತವಾದ ಶಾಂತಿಪುರಾಣ ಇವನ ಮಹಾಕಾವ್ಯ. ಇದಲ್ಲದೆ ಭುವನೈಕರಾಮಾಭ್ಯುದಯ ಮೊದಲಾದ ಕಾವ್ಯಗಳನ್ನು ಈತ ರಚಿಸಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವಡ್ಡಾರಾಧನೆಯೂ ರಾಷ್ಟ್ರಕೂಟರ ಕಾಲದ್ದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗುಣನಂದಿ, ಗುಣವರ್ಮ ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಉಳಿದ ಪ್ರಸಿದ್ಧ ಕವಿಗಳು.

ರಾಷ್ಟ್ರಕೂಟ ರಾಜರು ಸಂಸ್ಕೃತಕ್ಕೂ ಹೆಚ್ಚು ಪ್ರೋತ್ಸಾಹ ನೀಡಿದರು. ಆದ್ದರಿಂದ ಈ ಕಾಲದಲ್ಲಿ ಉತ್ತಮ ಗ್ರಂಥಗಳು ಸಂಸ್ಕೃತದಲ್ಲಿಯೂ ರಚಿತವಾದವು. ವೀರಸೇನ, ಜಿನಸೇನ ಹಾಗೂ ಗುಣಭದ್ರರು ಪ್ರಸಿದ್ಧ ಲೇಖಕರು. ಧವಲ, ಮಹಾಧವಲ, ಜಯಧವಲ ಹಾಗೂ ಮಹಾಪುರಾಣಗಳು ಇವರಿಂದ ಬರೆಯಲ್ಪಟ್ಟಿವೆ. ವ್ಯಾಕರಣಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳು ಸಂಸ್ಕೃತದಲ್ಲಿಯೂ ರಚಿತವಾದವು. ವ್ಯಾಕರಣ ವಿದ್ವಾಂಸನಾದ ದುರ್ಗಸಿಂಹ ಕಾತಂತ್ರಸೂತ್ರಗಳ ಮೇಲೆ ವೃತ್ತಿಯನ್ನು ಬರೆದ. ಒಂದನೆಯ ಅಮೋಘವರ್ಷನ ಆಸ್ಥಾನದಲ್ಲಿದ್ದ ಶಾಕಟಾಯನ ಶಬ್ದಾನುಶಾಸನವೆಂಬ ಸೂತ್ರಗ್ರಂಥವನ್ನು ರಚಿಸಿದ್ದಲ್ಲದೆ ಇದೇ ಗ್ರಂಥವನ್ನು ಕುರಿತು ವೃತ್ತಿಯನ್ನೂ ಬರೆದ. ತನ್ನ ಆಶ್ರಯದಾತನ ಗೌರವಾರ್ಥವಾಗಿ ಆ ವೃತ್ತಿಗೆ ಅಮೋಘವೃತ್ತಿ ಎಂದು ಹೆಸರಿಟ್ಟ. ನಳಚಂಪೂ ಕಾವ್ಯವನ್ನು ಬರೆದ ತ್ರಿವಿಕ್ರಮ ಈ ಕಾಲದವನು. ಇವನ ಮತ್ತೊಂದು ಗ್ರಂಥ ಮದಾಲಸ ಚಂಪೂ. ಸ್ವಯಂ ಕವಿಯಾಗಿದ್ದ ಅಮೋಘವರ್ಷ ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಇವನ ಪ್ರಶ್ನೋತ್ತರಮಾಲಿಕಾ ಸಂಸ್ಕೃತದ ಜ್ಞಾನಭಂಡಾರಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿದೆ. ಅಮೋಘವರ್ಷನ ಆಶ್ರಯದಲ್ಲೇ ಮಹಾವೀರಾಚಾರ್ಯನು ಗಣಿತಸಾರಸಂಗ್ರಹ ಎಂಬ ಗ್ರಂಥವನ್ನು ರಚಿಸಿದ. ಮುಮ್ಮಡಿ ಕೃಷ್ಣನ ಕಾಲಕ್ಕೆ ಸೇರಿದ ಹಲಾಯುಧ ಕೋಶವೆಂಬ ನಿಘಂಟು, ಕವಿರಹಸ್ಯ ಹಾಗೂ ಮೃತ ಸಂಜೀವಿನಿ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಈ ಕಾಲದಲ್ಲಿ ಬಾಳಿದ ಭಾರತದ ಶ್ರೇಷ್ಠ ತತ್ತ್ವಜ್ಞಾನಿಗಳಲ್ಲೊಬ್ಬರಾದ ಶಂಕರಾಚಾರ್ಯರು ಅದ್ವೈತದ ಮಹಾ ಸಂಪ್ರದಾಯ ಹರಡುವುದಕ್ಕೆ ಮುಖ್ಯ ಕಾರಣರಾದರು. ಮತ್ತೊಬ್ಬ ಸಂಸ್ಕೃತ ವಿದ್ವಾಂಸ ಜೈನ ಸೋಮದೇವ ಸೂರಿಯು ರಾಷ್ಟ್ರಕೂಟರ ಮಾಂಡಲಿಕರಾದ ವೇಮುಲವಾಡದ ಚಾಳುಕ್ಯರ ಆಶ್ರಯದಲ್ಲಿದ್ದ. ಇವನು ಯಶಸ್ತಿಲಕ ಎಂಬ ಚಂಪೂಗ್ರಂಥವನ್ನು ರಚಿಸಿದ್ದಾನೆ. ನೀತಿವಾಕ್ಯಾಮೃತ ಇವನ ಮತ್ತೊಂದು ಉದ್ಗ್ರಂಥ. ಇದು ಕೌಟಿಲ್ಯನ ಅರ್ಥಶಾಸ್ತ್ರದ ಮಾದರಿಯಲ್ಲಿ ರಚಿತವಾದ ಷಟ್ಖಂಡಾಗಮ ಒಂದು ಅಮೂಲ್ಯ ಕೃತಿ. ರಾಷ್ಟ್ರಕೂಟ ಅರಸರ ಆಶ್ರಯದಲ್ಲಿಯೇ ಇದ್ದ ಗುರು ಶಿಷ್ಯರಾದ ವೀರಸೇನ ಮತ್ತು ಜಿನಸೇನರು ಧವಳ ಮತ್ತು ಜಯಧವಳಾ ಎಂಬ ಒಂದು ಲಕ್ಷ ಶ್ಲೋಕ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಅದನ್ನು ಪೂರ್ಣಗೊಳಿಸಿದ ಕೀರ್ತಿ ಜಿನಸೇನರ ಶಿಷ್ಯರಾದ ಗುಣಭದ್ರರಿಗೆ ಸಲ್ಲುತ್ತದೆ. ಪ್ರಸಿದ್ಧ ಜೈನ ತಾರ್ಕಿಕನಾದ ವಿದ್ಯಾನಂದ ಸಮಂತಭದ್ರರ ಆಪ್ತಮೀಮಾಂಸಾ ಎಂಬ ಗ್ರಂಥದ ಮೇಲೆ ಅಷ್ಟಸಾಹಸೀ

ಎಂಬ ಭಾಷ್ಯವನ್ನು ಬರೆದ. ಅವನು ಆಪ್ತಪರೀಕ್ಷಾ ಎಂಬ ಗ್ರಂಥವನ್ನು ಕೂಡ ರಚಿಸಿದ. ಮತ್ತೊಬ್ಬ ತಾರ್ಕಿಕನಾದ ಮಾಣಿಕ್ಯನಂದಿಯಿಂದ ರಚಿಸಲ್ಪಟ್ಟ ಪರೀಕ್ಷಾ ಮುಖ ಸೂತ್ರ ಮತ್ತು ಪ್ರಭಾಚಂದ್ರನ ಪ್ರಮೇಯ ಕಮಲಮಾರ್ತಾಂಡ ಮೊದಲಾದ ಜೈನಸಿದ್ಧಾಂತ ಗ್ರಂಥಗಳು ಕೂಡ ರಾಷ್ಟ್ರಕೂಟರ ಕಾಲದಲ್ಲಿ ರಚಿತವಾದ ಗ್ರಂಥಗಳೆಂದು ಅಭಿಪ್ರಾಯ ಪಡಲಾಗಿದೆ. ಮಿಥಿಲೆಯ ರಾಷ್ಟ್ರಕೂಟ ದೊರೆ ಶಾಕ್ಯದೇವ ನಾಟ್ಯಶಾಸ್ತ್ರಕ್ಕೆ ವ್ಯಾಖ್ಯಾನವನ್ನು ಬರೆದಿದ್ದಾನೆ. *

**ರಾಸ್ಪುಟಿನ್:** 1871-1916. ರಷ್ಯನ್ ಪಾದ್ರಿ. 1871ರಲ್ಲಿ ಪಶ್ಚಿಮ ಸೈಬೀರಿಯದ ಟ್ಯುಮೆನ್ ಬಳಿಯಲ್ಲಿನ ಪೊಕ್ರೋವಸ್ಕೋಯ್ ಎಂಬ ಹಳ್ಳಿಯಲ್ಲಿ ಜನಿಸಿದ. ಚಕ್ರವರ್ತಿ ನಿಕೋಲಸ್‌ನ ಆಸ್ಥಾನದಲ್ಲಿ ಪ್ರಬಲ ವ್ಯಕ್ತಿಯೂ ಚಕ್ರವರ್ತಿಯ ಆಪ್ತನೂ ಆಗಿದ್ದ. ನೋವಿಖ್ ಎನ್ನುವುದು ಇವನ ಮೂಲ ಕುಟುಂಬನಾಮ. ಈತ ಸಾಂಪ್ರದಾಯಿಕ ಶಿಕ್ಷಣ ಪಡೆಯದಿದ್ದರೂ ಚುರುಕು ಬುದ್ಧಿಯವನೂ ಸಾಮಯಿಕ ಚಾಣಾಕ್ಷತೆಯುಳ್ಳ ವ್ಯಕ್ತಿಯೂ ಆಗಿದ್ದ. 1904ರ ವರೆಗೆ ಈತ ತನ್ನ ಹುಟ್ಟೂರಿನಲ್ಲಿಯೇ ವಾಸಿಸಿದ್ದ. ಅನಂತರ ತನ್ನ ಕುಟುಂಬವನ್ನು ತೊರೆದು ಧರ್ಮಪ್ರಚಾರಕನಾದ.

ಬಾಲ್ಯದಲ್ಲಿ ಖಿಲಿಸ್ಟೀ (ಫಾಜಿಲ್ಲೆಂಟ್ಸ್) ಎಂಬ ಪಂಥದ ಪ್ರಭಾವಕ್ಕೆ ಒಳಗಾಗಿದ್ದ. ತಾನು ದೈವ ಪ್ರೇರಿತನೆಂದೂ ಅದ್ಭುತ ಪವಾಡಗಳನ್ನು ಮಾಡಬಲ್ಲವನೆಂದೂ ಘೋಷಿಸಿಕೊಂಡು ಪಾಷಂಡವಾದವನ್ನು ಪ್ರಚುರಪಡಿಸಿದ. ಈ ಕಾರಣಕ್ಕಾಗಿ ಈತ ಜನರ ದೂಷಣೆಗೆ ಗುರಿಯಾದ; ರಾಸ್ಪುಟಿನ್ ಎಂಬ ಹೆಸರು ಪಡೆದ.



ಈತ ತಾನೊಬ್ಬ ಪುಣ್ಯಾತ್ಮನೆಂದೇ ದೃಢವಾಗಿ ನಂಬಿದ್ದ. ಯಾತ್ರೆ ಹೊರಟು 1903ರಲ್ಲಿ ಸೇಂಟ್‌ಪೀಟರ್ಸ್‌ಬರ್ಗ್ ತಲುಪಿದ. ಅಲ್ಲಿಯ ಧರ್ಮಾಧ್ಯಕ್ಷರೊಂದಿಗೆ ಸ್ನೇಹ ಸಂಪಾದಿಸಿ ಶ್ರೀಮಂತ ಪ್ರಭುತ್ವದ ಸಮಾಜದಲ್ಲಿ ಪ್ರವೇಶ ಪಡೆದ; ತನ್ನ ಆಧ್ಯಾತ್ಮಯೋಗವನ್ನು ಪ್ರಚುರ ಪಡಿಸಿದ. ಹೀಗಾಗಿ ಈತ ಬಹುಬೇಗ ಮಹಿಳಾ ಭಕ್ತವೃಂದದ ಕೇಂದ್ರಬಿಂದುವಾದ. 1905ರ ನವೆಂಬರ್‌ನಲ್ಲಿ ಇವನನ್ನು ಗ್ರೇಟ್ ಬ್ರಿಟನ್ನಿನ ರಾಜದಂಪತಿಗಳಿಗೆ ಪರಿಚಯಿಸಲಾಯಿತು. ಹೀಮೊಫಿಲಿಯ ರೋಗದಿಂದ ಬಳಲುತ್ತಿದ್ದ ರಷ್ಯನ್ ಚಕ್ರವರ್ತಿಯ ಮಗ ಅಲೆಕ್ಸಿಸ್ ಮತ್ತು ಚಕ್ರವರ್ತಿನಿ ಅಲೆಕ್ಸಾಂಡ್ರ ಅವರ ಮೇಲೆ ಇವನ ಆಧ್ಯಾತ್ಮಿಕ ಬೋಧೆ ಶಮನಕಾರಕ ಪ್ರಭಾವವನ್ನು ಬೀರಿತು. ಸಾಮ್ರಾಜ್ಯ ರಕ್ಷಣೆಗಾಗಿ ದೇವರೇ ಕಳುಹಿಸಿದ ಸಂತನೆಂದು ಈತನನ್ನು ಚಕ್ರವರ್ತಿ ಬಳಗ ಭಾವಿಸಿತು. ಚಕ್ರವರ್ತಿ ನಿಕೋಲಸ್ ಮೇಲೆ ಈತ ಹೆಚ್ಚಿನ ಪ್ರಭಾವ ಬೀರಲಾಗಲಿಲ್ಲ, ಆದರೆ ಚಕ್ರವರ್ತಿನಿಯ ಒತ್ತಾಯಕ್ಕೆ ಆತ ಮಣಿಯಬೇಕಾಯಿತು. ದೃಢವಾದ ನಿರಂಕುಶ ಪ್ರಭುತ್ವವಿರಬೇಕೆಂದು ರಾಸ್‌ಪುಟಿನ್ ಚಕ್ರವರ್ತಿಯನ್ನೇ ಒತ್ತಾಯಿಸಿದ. ಈತ ತನ್ನ ಪ್ರಭಾವದಿಂದಾಗಿ ರಾಜಾಸ್ಥಾನ ಹಾಗೂ ಮಠಗಳನ್ನು ದುರ್ಮಾರ್ಗಕ್ಕೆಳೆದ.

ಈತನನ್ನು ಕೊಲೆ ಮಾಡಲು 1914ರಲ್ಲಿ ವಿಫಲ ಯತ್ನ ನಡೆಯಿತು. 1915ರ ಸೆಪ್ಟೆಂಬರ್‌ನಲ್ಲಿ ಚಕ್ರವರ್ತಿ ನಿಕೋಲಸ್ ಒಂದನೆಯ ಮಹಾಯುದ್ಧದ ಯುದ್ಧರಂಗದಲ್ಲಿದ್ದಾಗ ಚಕ್ರವರ್ತಿನಿ ಇವನೊಡನೆ ಗೃಹಾಡಳಿತ ಕೈಗೊಂಡಳು. ನೇಮಕಾತಿಗಳಲ್ಲಿ ಈತನ ಅಭಿಪ್ರಾಯಗಳಿಗೆ ಆದ್ಯತೆ ದೊರೆಯಿತು. ಸಮರ್ಥರೂ ಪ್ರಾಮಾಣಿಕರೂ ಆಗಿದ್ದ ಅನೇಕ ಸಚಿವರನ್ನೂ ಅಧಿಕಾರಿಗಳನ್ನೂ ಈತ ವಜಾ ಮಾಡಿದ. ಈತನ ಹಸ್ತಕ್ಷೇಪದಿಂದಾಗಿ ಸಾಮಾನ್ಯ ಆಡಳಿತ ವ್ಯವಸ್ಥೆಯೂ ಕುಸಿದುಬಿತ್ತು. ಇದರಿಂದಾಗಿ ಆಸ್ಥಾನ ಹಾಗೂ ಸಾರ್ವಜನಿಕರ ನಡುವೆ ಅಗಾಧ ಕಂದರ ನಿರ್ಮಾಣಗೊಂಡಿತು. ಇವನ ದುಷ್ಕಾರ್ಯಗಳಿಂದ ಬೇಸತ್ತ ಸಂಪ್ರದಾಯ ಪಾಲಕ ಜನವರ್ಗ ವಿ.ಎಂ.ಪುರಿಶ್‌ಕೆವಿಚ್ ಎಂಬುವನ ನೇತೃತ್ವದಲ್ಲಿ ರಷ್ಯದ ದೊರೆ ಡಿಮಿಟ್ರಿ ಪಾವಲೊವಿಚ್ ಹಾಗೂ ಅನುಯಾಯಿಗಳೊಂದಿಗೆ ಸಾಮ್ರಾಜ್ಯ ರಕ್ಷಣೆಗಾಗಿ 1916 ಡಿಸೆಂಬರ್ 31ರ ರಾತ್ರಿ ಇವನನ್ನು ಗುಂಡಿಟ್ಟು ಕೊಲ್ಲಲಾಯಿತು. ಈ ಕೊಲೆ ಸ್ವಾಯತ್ತಾಧಿಪತ್ಯದ ತತ್ತ್ವಗಳನ್ನು ಎತ್ತಿ ಹಿಡಿಯಬೇಕೆಂಬ ಅಲೆಕ್ಸಾಂಡ್ರಳ ಸಂಕಲ್ಪವನ್ನು ಬಲಪಡಿಸಿತು. ಆದರೆ ಕೆಲವೇ ದಿನಗಳಲ್ಲಿ ಕ್ರಾಂತಿ ನಡೆದು ಸಮಗ್ರ ಚಕ್ರಾಧಿಪತ್ಯ ಅವಸಾನಗೊಂಡಿತು. (ಆರ್.ಎಮ್.ಕೆ.)

**ರಿಸ್ಲೆ, ಎಚ್. ಎಚ್.:** 1851-1911. ಬ್ರಿಟಿಷ್ ಪುರಾತತ್ತ್ವಜ್ಞ ಮತ್ತು ಮಾನವ ಶಾಸ್ತ್ರಜ್ಞ. ಹರ್ಬಟ್ ಹೋಪ್ ರಿಸ್ಲೆ ಇವನ ಪೂರ್ಣ ಹೆಸರು. 1851 ಜನವರಿ 4 ರಂದು ಜನಿಸಿದ. ತಂದೆ ಜಾನ್ ಹೋಲ್ ಪೋರ್ಡ್ ರಿಸ್ಲೆ. ಇವರು ಮೂಲತಃ ವಿನ್‌ಚೆಸ್ಟರ್‌ನಿಂದ ಬಂದವರು. ಈತ 1873ರಲ್ಲಿ ಬಿ.ಎ. ಪದವಿಯನ್ನು ಪಡೆದ. ಭಾರತದ ಇಂಡಿಯನ್ ಸಿವಿಲ್ ಸರ್ವಿಸ್‌ನ ಸೇವೆಯ ಮೇರೆಗೆ ಭಾರತಕ್ಕೆ ಬಂದ (1873). ಈತನ ಸೇವೆ ಮಿಡ್ನಾಪುರದಲ್ಲಿ ಪ್ರಾರಂಭವಾಯಿತು. ಆಗ ಅಲ್ಲಿನ ವಿವಿಧ ಸಂಸ್ಕೃತಿ ಮತ್ತು ವೈವಿಧ್ಯಮಯ ಜನಸಮೂಹ ಕಂಡು, ಅವರ ಬಗ್ಗೆ ಆಸಕ್ತಿ ಮೂಡಿ ಅಧ್ಯಯನವನ್ನು ಆರಂಭಿಸಿದ, ಒರಾನ್ ಆದಿವಾಸಿಗಳ ಬಗ್ಗೆ ಪ್ರಬಂಧವನ್ನು ಬರೆದ.

ಹಂಟರ್ ಎಂಬಾತ ಭಾರತೀಯ ಸಂಖ್ಯಾಶಾಸ್ತ್ರ ಸರ್ವೇಕ್ಷಣವನ್ನೂ (1869) ಇಂಪೀರಿಯಲ್ ಗೆಜಿಟಿಯರನ್ನೂ (1881) ಪ್ರಕಟಿಸಿದ. ರಿಸ್ಲೆಯ ಒಲವು ಮಾನವಶಾಸ್ತ್ರ, ಸಮಾಜಶಾಸ್ತ್ರದ ಕಡೆ ಹೆಚ್ಚು ಇದ್ದುದರಿಂದ ಇವನನ್ನು ಭಾರತೀಯ ಸಂಖ್ಯಾಶಾಸ್ತ್ರ ಸರ್ವೇಕ್ಷಣೆಯಲ್ಲಿ ಸಹಾಯಕ ನಿರ್ದೇಶಕನಾಗಿ ಸೇರಿಸಿ ಕೊಳ್ಳಲಾಯಿತು(1875). ಈತ ಗುಡ್ಡಗಾಡು ಜಿಲ್ಲೆಗಳಾದ ಹಜಾರಿಬಾಗ್ ಮತ್ತು ಲೂಹೋಗಡದ ಗೆಜಿಟಿಯರನ್ನು ಹೊರತಂದ. ಇವನ ಕಾರ್ಯ ದಕ್ಷತೆಯನ್ನು ಅರಿತ ಪಶ್ಚಿಮ ಬಂಗಾಲ ಸರ್ಕಾರ 1879ರಲ್ಲಿ ಇವನನ್ನು ಸಹಾಯಕ ಕಾರ್ಯದರ್ಶಿಯಾಗಿ ನೇಮಿಸಿತು. ಈತ ಅನಂತರ ತನ್ನ ಕಾರ್ಯ ವ್ಯಾಪ್ತಿಯನ್ನು ಛೋಟಾ ನಾಗಪುರಕ್ಕೆ ವಿಸ್ತರಿಸಿದ(1880). ಜರ್ಮನ್ ಮಹಿಳೆಯೊಬ್ಬಳನ್ನು ಮದುವೆಯಾದ. ಈತನ ಕಾರ್ಯ ದಕ್ಷತೆಯನ್ನು ಮೆಚ್ಚಿದ ಬಂಗಾಲದ ಲೆಫ್ಟಿನೆಂಟ್ ಗೌರ್‍ನರ್ ರಿವರ್ಸ್ ತಾಮ್‌ಸನ್ ಇವನನ್ನು ಬುಡಕಟ್ಟು ಸಮೂಹದ ಬಗ್ಗೆ ಅಧ್ಯಯನ ಮಾಡಲು ಆಯ್ಕೆ ಮಾಡಿದ (1885). ಜೇಮ್ಸ್ ಎಂಬಾತ ತಾನು ಪಶ್ಚಿಮ ಬಂಗಾಲದ ಜನರ ಬಗ್ಗೆ ಕೈಗೊಂಡ ಅಧ್ಯಯನದ ಅಪೂರ್ಣ ಮಾಹಿತಿಗಳನ್ನು ರಿಸ್ಲೆಗೆ ನೀಡಿದ. ಅದನ್ನು ಬಳಸಿಕೊಂಡ ಈತ ಅಪಾರ ಪರಿಶ್ರಮದಿಂದಾಗಿ ದಿ ಡಿಸ್ಕ್ರಿಪ್ಟಿವ್ ಎಥ್ನಾಲಜಿ ಆಫ್ ಬೆಂಗಾಲ್ (1872) ಮತ್ತು ಗೆಜಿಟಿಯರ್ ಆಫ್ ಸಿಕ್ಕಿಂ (1894) ಎಂಬ ಗ್ರಂಥಗಳನ್ನು ಪ್ರಕಟಿಸಿದ.

ಸಂಸ್ಕೃತಿ ಅಧ್ಯಯನದಲ್ಲಿ ಮಾನವಶಾಸ್ತ್ರದ ಮಹತ್ತ್ವವನ್ನು ಅರಿತ ಈತ ಭಾರತದ ಸಿವಿಲ್ ಸರ್ವಿಸ್‌ನಲ್ಲಿ ಮಾನವಶಾಸ್ತ್ರವನ್ನು ಬೋಧಿಸಬೇಕೆಂದು ಪ್ರತಿಪಾದಿಸಿದ. ಇದನ್ನು ಆರ್.ಸಿ. ಟೆಂಪಲ್ ಅನುಮೋದಿಸಿದ (1913). ಇದಕ್ಕೆ ಬ್ರಿಟಿಷ್ ಮಾನವಶಾಸ್ತ್ರಜ್ಞರೂ ಸಹಮತ ವ್ಯಕ್ತಪಡಿಸಿದರು. ತದನಂತರ ಮಾನವಶಾಸ್ತ್ರವನ್ನು ಶಾಲೆ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲು ಪ್ರಾರಂಭಿಸಲಾಯಿತು. ಅನಂತರ ಈತ ಜನಗಣತಿಯ ಕಮೀಷನರಾಗಿ ನೇಮಕಗೊಂಡ (1901 ಮತ್ತು 1911).

1901 ಮತ್ತು 1911ರ ಜನಗಣತಿಯ ವರದಿಗಳನ್ನು ಈತ ಪೂರ್ಣ ಗೊಳಿಸಿದ. ದಿ ಪೀಪಲ್ ಆಫ್ ಇಂಡಿಯ ಎಂಬ ಪುಸ್ತಕವನ್ನು ಪ್ರಕಟಿಸಿದ (1908). ಲಾರ್ಡ್‌ಕರ್ಜನ್‌ನ ಆಳಿಕೆಯಲ್ಲಿ ಈತನನ್ನು ಗೃಹಕಾರ್ಯದರ್ಶಿಯಾಗಿ ನೇಮಿಸಲಾಯಿತು (1909). ಈತ ಎಥ್ನಲಾಜಿಕಲ್ ಸರ್ವೆಯಲ್ಲಿ ನಿರ್ದೇಶಕನಾಗಿ, ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್‌ನ ಅಧ್ಯಕ್ಷನಾಗಿ, ಇಂಡಿಯನ್ ಮ್ಯೂಸಿಯಂನ ಟ್ರಸ್ಟಿಯಾಗಿ, ರಾಣಿ ವಿಕ್ಟೋರಿಯ ಮೆಮೋರಿಯಲ್ ಕಮಿಟಿ ಕಾರ್ಯದರ್ಶಿಯಾಗಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ. ಭಾರತೀಯ ಸಿವಿಲ್ ಸರ್ವಿಸ್‌ನ ಸೇವೆಯ ತರುವಾಯ ಇಂಗ್ಲೆಂಡ್‌ನಲ್ಲಿ ಭಾರತದ ಕಚೇರಿಗೆ ಕಾರ್ಯದರ್ಶಿಯಾಗಿ ನೇಮಕವಾದ(1910). ಭಾರತದ ಸಾಮಾಜಿಕ ಮತ್ತು ಮಾನವಶಾಸ್ತ್ರೀಯ ಅಧ್ಯಯನ ವಿಧಾನಗಳಲ್ಲಿ ಪ್ರಮುಖ ಸ್ಥಾನಗಳಿಸಿದ್ದ ಈತ 1911 ಸೆಪ್ಟೆಂಬರ್ 30 ರಂದು ವಿಂಬಲ್ಡನ್‌ನಲ್ಲಿ ನಿಧನನಾದ. (ಎಚ್.ಎಂ.ಎಂ.)

**ರುದ್ರಮಹಾದೇವಿ:** 1261-95. ಕಾಕತೀಯ ರಾಜವಂಶದ ಪ್ರಸಿದ್ಧ ರಾಣಿ. ರುದ್ರಾಂಬಾ ಎಂಬುದು ಈಕೆಯ ಇನ್ನೊಂದು ಹೆಸರು. ಕಾಕತೀಯ ದೊರೆ ಗಣಪತಿದೇವನ ಮಗಳು. ತಂದೆಯ ಜೊತೆಯಲ್ಲಿಯೇ ರಾಜ್ಯವಾಳುತ್ತಿದ್ದು, ಅವನ ಅನಂತರ ತಾನೇ ರಾಣಿಯಾಗಿ ರುದ್ರದೇವ ಮಹಾರಾಜ ಎನ್ನುವ ಪುರುಷನಾಮದಿಂದ ರಾಜ್ಯವಾಳಿದಳು. ಗಣಪತಿದೇವನಿಗೆ ಗಂಡು ಮಕ್ಕಳಿಲ್ಲದಿದ್ದುದರಿಂದ ತನ್ನ ಜ್ಯೇಷ್ಠ ಪುತ್ರಿ ರುದ್ರಮಹಾದೇವಿಗೆ ಪಟ್ಟಕಟ್ಟಿ, ತನ್ನ ಜೊತೆ ಜಂಟಿ ರಾಜ್ಯಭಾರ ಮಾಡಲು ಅವಕಾಶ ಕಲ್ಪಿಸಿದ. ರಾಜವಂಶದವರಿಗೆ ಇದು ಅಸಮಾಧಾನವನ್ನುಂಟುಮಾಡಿತು. ಗಣಪತಿಗೆ ವೃದ್ಧಾಪ್ಯ ಆವರಿಸಿದಾಗ ರುದ್ರಮಹಾದೇವಿಯೇ ಸಂಪೂರ್ಣವಾಗಿ ರಾಜ್ಯಭಾರದಲ್ಲಿ ತೊಡಗಿದಳು (1290). ಒಂದೆರಡು ವರ್ಷಗಳಲ್ಲಿ ಗಣಪತಿ ಅಧಿಕಾರದಿಂದ ನಿವೃತ್ತನಾದ. ಸ್ತ್ರೀಯೊಬ್ಬಳ ಕೈಕೆಳಗೆ ಸಾಮಂತರಾಗಿರುವುದನ್ನು ಸಹಿಸದ ಅನೇಕರು ದಂಗೆ ಎದ್ದರು. ಆದರೆ ಧೈರ್ಯದಿಂದ ಹೋರಾಡಿ, ಈ ದಂಗೆಗಳ ಹುಟ್ಟಡಗಿಸಿ ಈಕೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಳು. ಈ ಕಾರ್ಯದಲ್ಲಿ ಅಂಬದೇವ, ಕನ್ನರನಾಯಕ, ಮಲ್ಲಿಕಾರ್ಜುನ ನಾಯಕ ಮೊದಲಾದವರು ಈಕೆಗೆ ಸಹಾಯಕರಾಗಿ ನಿಂತರು.

ಹೊರಗಿನ ಶತ್ರುಗಳು ಈ ಅವಕಾಶವನ್ನು ಉಪಯೋಗಿಸಿಕೊಂಡು ಕಾಕತೀಯರ ಪ್ರಭಾವವನ್ನು ಕುಗ್ಗಿಸಲು ಪ್ರಯತ್ನಿಸಿದರು. ಕಳಿಂಗದ ಗಜಪತಿ ದೊರೆ ಒಂದನೆಯ ನರಸಿಂಹ ಈಕೆಯ ಆಳಿಕೆಯ ಪ್ರಾರಂಭದ ವರ್ಷಗಳಲ್ಲಿ ವೆಂಗಿಯನ್ನು ತನ್ನ ವಶಮಾಡಿಕೊಂಡಿದ್ದುದು ತಿಳಿದುಬರುತ್ತದೆ. ಗಜಪತಿ ಮತ್ಸವಂಶದ ಸಾಮಂತ ಒಡ್ಡಾಡಿಯ ಜೊತೆ ಸೇರಿ ಕಾಕತೀಯ ರಾಜ್ಯಕ್ಕೆ ಮುತ್ತಿಗೆ ಹಾಕಿ, ಗೋದಾವರಿ ತೀರದ ದಾಕ್ಷಾರಾಮದವರೆಗಿನ ಪ್ರದೇಶವನ್ನೂ ಆಕ್ರಮಿಸಿಕೊಂಡ. ಪೋತಿನಾಯಕ ಮತ್ತು ಪ್ರೋಲಿನಾಯಕರ ನೇತೃತ್ವದಲ್ಲಿ ರುದ್ರಮಹಾದೇವಿ ಒಂದು ಸೈನ್ಯವನ್ನು ಕಳುಹಿಸಿದಳು. ಈ ಸೈನ್ಯ ಗಜಪತಿ ಮತ್ತು ಸ್ನೇಹಿತರನ್ನು ಸಂಪೂರ್ಣವಾಗಿ

ಸೋಲಿಸಿ, ಕಾಕತೀಯರ ಅಧಿಕಾರವನ್ನು ಕರಾವಳಿ ಆಂಧ್ರದಲ್ಲಿ ಪುನಃ ನೆಲಸುವ ಹಾಗೆ ಮಾಡಿತು. ಮಧುರೆಯ ಪಾಂಡ್ಯರು ಕಾಕತೀಯ ರಾಜ್ಯದ ಅನೇಕ ಭಾಗಗಳನ್ನು ಆಕ್ರಮಿಸಿ ಕೊಂಡರು. ತೆಲುಗು ಚೋಡ ರಾಜನನ್ನು ಪದಚ್ಯುತನನ್ನಾಗಿಸಿ ಕಂಚಿಯ ಸುತ್ತುಮುತ್ತಲ ಪ್ರದೇಶಗಳನ್ನು ಪಾಂಡ್ಯರು ಆಕ್ರಮಿಸಿಕೊಂಡರು. ರುದ್ರಮಹಾದೇವಿಯ ಸಾಮಂತನಾದ ಅಂಬದೇವ ವೀರಾವೇಶದಿಂದ ಹೋರಾಡಿ ಮೊದಮೊದಲು ಜಯವನ್ನು ಗಳಿಸಿದರೂ ಕೊನೆಗೆ ಪಾಂಡ್ಯರಿಂದ ಪರಾಜಿತನಾದ. ಸ್ವಲ್ಪ ಕಾಲದವರೆಗೆ ಕಾಕತೀಯ ರಾಜ್ಯದ ಕೆಲವು ಭಾಗಗಳು ಪಾಂಡ್ಯರ ಸಾಮಂತರ ಅಧೀನದಲ್ಲಿದ್ದವು.

ಸೇವುಣ ದೊರೆ ಮಹಾದೇವ ರುದ್ರಮಹಾದೇವಿಯ ಮೇಲೆ ಯುದ್ಧ ಮಾಡಲು ನಿರ್ಧರಿಸಿದ. ಇವರಿಬ್ಬರಿಗೂ ನಡೆದ ಯುದ್ಧದಲ್ಲಿ ಮಹಾದೇವ ಮೊದಲು ಮೇಲುಗೈ ಪಡೆದ. ತ್ರಿಕಳಿಂಗ ರಾಣಿಯನ್ನು ಸೋಲಿಸಿ ಪಂಚಮಹಾಶಬ್ದಗಳನ್ನು ಕಸಿದುಕೊಂಡು, ಆನೆಗಳನ್ನು ಅಪಹರಿಸಿದ; ಆದರೆ ಸ್ತ್ರೀಯಾದ್ದರಿಂದ ಈಕೆಯನ್ನು ಮಹಾದೇವ ಕೊಲ್ಲಲಿಲ್ಲ ವೆಂದು ಸೇವುಣ ಶಾಸನಗಳು ತಿಳಿಸುತ್ತವೆ. ಆದರೆ ಸಿದ್ಧೇಶ್ವರ ಚರಿತ್ರಮು ಮತ್ತು ಪ್ರತಾಪಚರಿತ್ರಮು ಎಂಬ ತೆಲುಗು ಗ್ರಂಥಗಳಿಂದ ತಿಳಿಯಬರುವ ಸಂಗತಿ ರುದ್ರಮಹಾದೇವಿಯ ಪರವಾಗಿದೆ. ಹದಿನೈದು ದಿನಗಳ ಘೋರ ಯುದ್ಧದ ಅನಂತರ ಮಹಾದೇವ ಸೋತು ದೇವಗಿರಿಗೆ ಓಡಿಹೋದನೆಂದೂ ರುದ್ರಮಹಾದೇವಿಗೆ ಚಿನ್ನದ ನಾಣ್ಯಗಳನ್ನು ಕಾಣಿಕೆಯಾಗಿ ಒಪ್ಪಿಸಿದನೆಂದೂ ಈ ಗ್ರಂಥಗಳು ತಿಳಿಸುತ್ತವೆ. ಸಾರಂಗ ಪಾಣಿ ಎಂಬ ಒಬ್ಬ ಸೇವುಣ ರಾಜಕುಮಾರ ರುದ್ರಮಹಾದೇವಿಯ ಆಶ್ರಯದಲ್ಲಿದ್ದ ಎನ್ನುವ ವಾದವೂ ಇದೆ. ಒಟ್ಟಿನಲ್ಲಿ ಈ ವಿಷಯದಲ್ಲಿ ಖಚಿತವಾದ ಮಾಹಿತಿ ದೊರಕುವುದಿಲ್ಲ. ಸೇವುಣ ರಾಮಚಂದ್ರನ ಕಾಲದಲ್ಲಿಯೂ ರುದ್ರಮಹಾದೇವಿ ಸೇವುಣರ ಮೇಲೆ ಯುದ್ಧಮಾಡಬೇಕಾಗಿ ಬಂತು. ಗೋನವಿಠಲ ಮತ್ತು ಮನುಮ ಗಂಡಗೋಪಾಲನ ನೇತೃತ್ವದಲ್ಲಿ ಕಾಕತೀಯ ಸೈನ್ಯ ಹಾಲುವೆ ಮತ್ತು ಮಾನುತಿ ಎಂಬ ಕೋಟೆಗಳನ್ನು ವಶಪಡಿಸಿಕೊಂಡಿತು. ಹೀಗೆ ರುದ್ರಮಹಾದೇವಿ ಸೇವುಣರನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಳು.

ರುದ್ರಮಹಾದೇವಿ 34 ವರ್ಷಗಳ ಕಾಲ ಕಾಕತೀಯ ರಾಜ್ಯವನ್ನು ಸ್ಥೈರ್ಯದಿಂದ ನಡೆಸಿದಳು. ಈಕೆ ಪೂರ್ವ ಚಾಳುಕ್ಯ ರಾಜಕುಮಾರ ನಿಡದವೋಲುವಿನ ವೀರಭದ್ರನನ್ನು ವರಿಸಿದ್ದಳು. ಇವರಿಗೆ ಮುಮ್ಮಡಮ್ಮ ಮತ್ತು ರುಯ್ಯಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಮೊದಲನೆಯ ಮಗಳಿಗೆ ಮಹಾದೇವನಿಂದ ವೀರರುದ್ರ ಅಥವಾ ಪ್ರತಾಪರುದ್ರ ಎಂಬ ಮಗ ಜನಿಸಿದ. ಈ ಮೊಮ್ಮಗನೇ ರುದ್ರ ಮಹಾದೇವಿಯ ಅನಂತರ ಕಾಕತೀಯ ದೊರೆಯಾದ.

ಆಂಧ್ರ ಮತ್ತು ಭಾರತದ ಚರಿತ್ರಾರ್ಹ ಮಹಿಳೆಯರಲ್ಲಿ ಈಕೆಯ ಉಲ್ಲೇಖನೀಯ ಹೆಸರು. ಪುರುಷ ವೇಷ ಧರಿಸಿ ಸಕಲ ರಾಜಕೀಯ ವ್ಯವಹಾರಗಳನ್ನೂ ನಿರ್ವಹಿಸುತ್ತಿದ್ದಳು. ಧೈರ್ಯ ಶೌರ್ಯಗಳಲ್ಲಿ ಯಾವ ರಾಜನಿಗೂ ಕಡಿಮೆ ಇರಲಿಲ್ಲ. ಈಕೆಯ ಆಳಿಕೆಯಲ್ಲಿ ಪ್ರಜೆಗಳು ಸುಖ ಸಮಾಧಾನದಿಂದ ಬಾಳಿದರು. ರಾಜ್ಯಭಾರ ಕಾಲದಲ್ಲಿ ವಿಶೇಷವಾಗಿ ಯುದ್ಧಗಳನ್ನು ಮಾಡಬೇಕಾಗಿ ಬಂದರೂ ಸಾಂಸ್ಕೃತಿಕ ವಿಷಯಗಳಲ್ಲಿಯೂ ಸಾಕಷ್ಟು ಆಸಕ್ತಿ ವಹಿಸಿದ್ದಳು. ಈಕೆ ಶೈವ ಮತ್ತು ವೈಷ್ಣವ ಮುನಿಗಳಿಗೆ ದಾನದತ್ತಿಗಳನ್ನು ನೀಡಿದಳು. ವಿಶ್ವೇಶ್ವರ ಶಿವದೇಶಿಕ ಈಕೆಯ ರಾಜಗುರುವಾಗಿದ್ದು, ಅನೇಕ ಶೈವಮಠಗಳಿಗೆ ದಾನಗಳನ್ನು ಕೊಡಿಸಿದ. ಈಕೆಯ ಆಡಳಿತ ಸುಗಮವಾಗಿದ್ದು ಜನಾನುರಾಗಿಯಾಗಿತ್ತೆಂದು ತಿಳಿದುಬರುತ್ತದೆ. ಇವಳು ದೊಡ್ಡ ದೊಡ್ಡ ದೇವಾಲಯಗಳನ್ನು ನಿರ್ಮಿಸಲಿಲ್ಲವಾದರೂ ಅನೇಕ ದೇವಾಲಯಗಳಿಗೆ ದಾನದತ್ತಿಗಳನ್ನು ಕೊಟ್ಟಳು. ಆ ಕಾಲದ ಶಾಸನಗಳಲ್ಲಿ ಈಕೆಯನ್ನು ಪ್ರಶಂಸಿಸಿರುವುದು ಕಂಡುಬರುತ್ತದೆ. ಕಷ್ಟಕರ ಸಮಯದಲ್ಲಿ ಕಾಕತೀಯ ರಾಜ್ಯಕ್ಕೆ ರಾಣಿಯಾಗಿ ರಾಜ್ಯವನ್ನು ಚೆನ್ನಾಗಿ ಕಾಪಾಡಿ ಅದನ್ನು ತನ್ನ ಮೊಮ್ಮಗನಿಗೆ ಕೊಟ್ಟ ಕೀರ್ತಿ ಈಕೆಗೆ ಸೇರುತ್ತದೆ. ದಕ್ಷಿಣ ಭಾರತದಲ್ಲಿ ಸ್ವತಂತ್ರವಾಗಿ ಆಳಿದ ರಾಣಿಯರಲ್ಲಿ ರುದ್ರಮಹಾದೇವಿಗೆ ಉನ್ನತ ಸ್ಥಾನವಿದೆ (**ನೋಡಿ– ಕಾಕತೀಯರು**). (ಎ.ವಿ.ಎನ್.)

**ರೂಸ್‌ವೆಲ್ಟ್, ಥಿಯೋಡರ್:** 1858–1919. ಅಮೆರಿಕದ 26ನೆಯ ಅಧ್ಯಕ್ಷ (1901–09). ರಾಷ್ಟ್ರಧುರೀಣ, ಯೋಧ, ಅನ್ವೇಷಕ, ಗ್ರಂಥಕಾರ, ಪರಿಸರಪ್ರೇಮಿ, ಪ್ರಗತಿಪರ ಚಿಂತಕ, ಬೃಹತ್ ವ್ಯಾಪಾರ–ಕೈಗಾರಿಕರಂಗಗಳಲ್ಲಿದ್ದ ಅಡಚಣೆ– ಆತಂಕಗಳಲ್ಲಿ ಸಾರ್ವಜನಿಕ ಹಿತಗಳ ರಕ್ಷಣೆಗೆ ಶ್ರಮಿಸಿದವ. ವಿದೇಶೀ ವ್ಯವಹಾರಗಳಲ್ಲಿ ಅಮೆರಿಕದ ಪ್ರಭಾವವನ್ನು ಯುರೋಪ್–ಏಷ್ಯ ಖಂಡಗಳಿಗೆ ವಿಸ್ತರಿಸಿದವ.

ಈತ 1858 ಅಕ್ಟೋಬರ್ 27ರಂದು ನ್ಯೂಯಾರ್ಕ್ ನಗರದಲ್ಲಿ ಜನಿಸಿದ. ಇವನ ತಂದೆ ಹಾಲೆಂಡ್ ಮೂಲದ ವರ್ತಕ; ತಾಯಿ ಮಾರ್ಥಾ ಬುಲಕ್. ರೂಸ್‌ವೆಲ್ಟ್ ಬಾಲ್ಯದಲ್ಲಿ ಆಸ್ತಮಾ ರೋಗ ಮತ್ತು ಕಣ್ಣಿನ ಬೇನೆಯಿಂದ ಬಳಲುತ್ತಿದ್ದ. ಸತತವಾಗಿ ಅಂಗಸಾಧನೆ, ಮುಷ್ಟಿಕಾಳಗ, ಕುದುರೆ ಸವಾರಿ ಹಾಗೂ ದೀರ್ಘ ಕಾಲ್ನಡಿಗೆ ಅಭ್ಯಾಸ ಮಾಡಿ ತನ್ನ ವ್ಯಾಧಿಗಳನ್ನು ಪರಿಹರಿಸಿಕೊಂಡಿದ್ದಲ್ಲದೆ ಉತ್ತಮ ದೇಹದಾರ್ಢ್ಯಕ್ಕೆ ಮಾದರಿಯಾದ. ಹಾರ್ವರ್ಡ್ ಕಾಲೇಜು ಸೇರಿ 1880ರಲ್ಲಿ ಬಿ.ಎ. ಪದವಿ ಪಡೆದ. ಓದುವುದರಲ್ಲಿ ಬುದ್ಧಿವಂತನೆನಿಸಿದ. ಈತ ತನ್ನ ಕಾಲೇಜು ದಿನಗಳಲ್ಲೇ ಹಿಸ್ಟರಿ ಆಫ್ ದ ನೇವಲ್ ವಾರ್ (1812) ಎಂಬ ಗ್ರಂಥವನ್ನು ಬರೆಯಲು ಪ್ರಾರಂಭಿಸಿದ್ದ. ನೇರನುಡಿ, ನಿಷ್ಪಕ್ಷಪಾತತೆ, ಹೊಗಳಿಕೆಗೆ ಉಬ್ಬದ ಗುಣಗಳನ್ನು ಮೈಗೂಡಿಸಿಕೊಂಡು ನಾಯಕನಾಗುವ ವ್ಯಕ್ತಿತ್ವ ಪಡೆದ. ಇವನು 1881ರಲ್ಲಿ ನ್ಯೂಯಾರ್ಕ್ ಅಸೆಂಬ್ಲಿಗೆ ಚುನಾಯಿತನಾದ. ಮುಂದೆ ತನ್ನ ನಿರ್ಭೀತ ಮಾತು, ದೂರದೃಷ್ಟಿ ಹಾಗೂ ಪರಿಶುದ್ಧ ಹಸ್ತದಿಂದಾಗಿ ರಿಪಬ್ಲಿಕನ್ ಪಕ್ಷದ ಪ್ರಮುಖ ಸದಸ್ಯರಲ್ಲೊಬ್ಬನೆನಿಸಿದ. 19ನೆಯ ಶತಮಾನದ ಕೊನೆಯ ದಶಕದಲ್ಲಿ ಅಮೆರಿಕದಲ್ಲಿ ಕಂಡುಬಂದ ಪ್ರಗತಿಪರ ಚಳವಳಿಯ ಪ್ರಮುಖ ಮುಖಂಡರಲ್ಲೊಬ್ಬನಾದ.

ಈತ 1899ರಲ್ಲಿ ಬಾಲ್ಟಿಮೋರ್‌ನಲ್ಲಿ ನಡೆದ ಲೋಕಸೇವಾ ಸುಧಾರಣೆಗಳ ಸಮ್ಮೇಳನದಲ್ಲಿ ಭಾಗವಹಿಸಿ ಸರ್ಕಾರಿ ನೌಕರಿಗಳಿಗೆ ನೇಮಿಸುವಲ್ಲಿ ದಕ್ಷತೆಗೆ ಆದ್ಯತೆ ನೀಡಬೇಕೆಂದು ಪ್ರತಿಪಾದಿಸಿದ. ಇವನ ಪ್ರಗತಿಪರ ವಿಚಾರಗಳಿಂದ ಪ್ರಭಾವಿತನಾದ ಆಗಿನ ಅಧ್ಯಕ್ಷ ಹ್ಯಾರಿಸನ್ ಈತನನ್ನು ಲೋಕಸೇವಾ ಆಯೋಗದ ಸದಸ್ಯನನ್ನಾಗಿ ನೇಮಿಸಿದ. 3 ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದು ಅನಂತರ ನ್ಯೂಯಾರ್ಕ್ ನಗರದ ಪೊಲೀಸ್ ಕಮಿಷನರ್ ಆಗಿ ನೇಮಕಗೊಂಡ. 2 ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದು ಅನೇಕ ಸುಧಾರಣೆಗಳನ್ನು

ಮಾಡಿದ. ಅನಂತರ ನೌಕಾ ಸೇವಾ ಇಲಾಖೆಯಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡ. ಸ್ವಲ್ಪ ಕಾಲದಲ್ಲೇ ಸ್ಪೇನ್ ದೇಶದೊಡನೆ ಯುದ್ಧ ಘೋಷಿತವಾದಾಗ ಯೋಧನಾಗಿ ರಫ್ ರೈಡರ್ಸ್ ಪಡೆಯ ನಾಯಕನಾಗಿ ಹೋರಾಡಿದ. ಲೆಫ್ಟಿನೆಂಟ್ ಕರ್ನಲ್ ಮತ್ತು ಕರ್ನಲ್ ಸ್ಥಾನಗಳಲ್ಲಿದ್ದು ಸೇವೆ ಸಲ್ಲಿಸಿದ. ಯುದ್ಧಾನಂತರ ಈತನಿದ್ದ ರೆಜಿಮೆಂಟ್ ವಿಸರ್ಜನೆಗೊಂಡ ಮೇಲೆ ಪುನಃ ರಾಜಕೀಯ ಕ್ಷೇತ್ರ ಪ್ರವೇಶಿಸಿದ.

ರಿಪಬ್ಲಿಕನ್ ಪಕ್ಷದಿಂದ ನ್ಯೂಯಾರ್ಕ್ ನಗರದ ಗವರ್ನರ್ ಹುದ್ದೆಗೆ ಸ್ಪರ್ಧಿಸಿ ಜಯಶೀಲ ನಾದ. ಎಲ್ಲ ಪಕ್ಷಗಳ ಸ್ವಾರ್ಥಪರರನ್ನು ದೂರವಿರಿಸಿ ಸ್ವಚ್ಛ ಆಡಳಿತ ನೀಡಲು ಕ್ರಮಕೈಗೊಂಡ. ಈ ಕ್ರಮದಿಂದ ಅತೃಪ್ತಿಗೊಂಡ ಪಕ್ಷದ ವರಿಷ್ಠರು 1900ರಲ್ಲಿ ಅಧಿಕಾರವಿಲ್ಲದ ಉಪಾಧ್ಯಕ್ಷ ಪದವಿಗೆ ಇವನನ್ನು ಅಭ್ಯರ್ಥಿಯನ್ನಾಗಿಸಿದರೂ ಅಧ್ಯಕ್ಷ ಮ್ಯಾಕಿನ್ಲೆಯ ಹತ್ಯೆಯ ಅನಂತರ 1901ರ ಸೆಪ್ಟೆಂಬರ್‌ನಲ್ಲಿ ಅಧ್ಯಕ್ಷ ಪದವಿ ಪಡೆದ.

ಅಮೆರಿಕದ ಅಧ್ಯಕ್ಷನಾಗಿ ರೂಸ್‌ವೆಲ್ಟ್ ಮಾಡಿದ ಸಾಧನೆಗಳು ಇತಿಹಾಸದ ಮೇಲೆ ಮಹತ್ವಪೂರ್ಣವಾದ ಪ್ರಭಾವ ಬೀರಿದವು. ಇವನು ಸ್ವಭಾವತಃ ಉದಾರವಾದಿಯಾಗಿದ್ದು ಅಂದು ನಡೆಯುತ್ತಿದ್ದ ಪ್ರಗತಿಪರ ಚಳವಳಿಯ ಗುರಿಗಳು ಈಡೇರಲು ಹೃದಯಪೂರ್ವಕವಾಗಿ ಶ್ರಮಿಸಿದ. ಅನೇಕ ವರ್ಷಗಳಿಂದ ಸರ್ಕಾರದ ಆಡಳಿತ ಯಂತ್ರ ಜಡ್ಡುಗಟ್ಟಿ ಹೋಗಿತ್ತು. ಭ್ರಷ್ಟಾಚಾರ ಮನೆಮಾತಾಗಿತ್ತು. ಇವನು ಅಧಿಕಾರ ವಹಿಸಿಕೊಂಡ ಪ್ರಾರಂಭದಲ್ಲೇ ಮಾಡಿದ ಮೊದಲ ಕೆಲಸವೆಂದರೆ ಆಡಳಿತವನ್ನು ಚುರುಕುಗೊಳಿಸಿದ್ದು. ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಬೇರುಬಿಟ್ಟಿದ್ದ ವೃತ್ತಿನಿರತ ರಾಜಕಾರಣಿಗಳನ್ನು ನಿವಾರಿಸಿ ಯುವಕರಿಗೆ ಅವಕಾಶ ಕಲ್ಪಿಸಲು ಅನೇಕ ಚುನಾವಣಾ ಸುಧಾರಣೆಗಳನ್ನು ಈತ ಜಾರಿಗೆ ತಂದ. ಕಾನೂನು ರಚಿಸುವಲ್ಲಿ ಮತ್ತು ಅವುಗಳ ಅರ್ಹತೆ ನಿರ್ಧರಿಸುವಲ್ಲಿ ಮತದಾರರಿಗೆ ಅಧಿಕಾರ ಕೊಟ್ಟ. ಬಹುಕಾಲದಿಂದ ನೂರಾರು ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆಗಳು ಪ್ರಮುಖಪಾತ್ರವಹಿಸಿ ಅಮೆರಿಕದ ಆರ್ಥಿಕತೆಯ ಮೇಲೆ ಹಿಡಿತ ಹೊಂದಿದ್ದವು. ಈ ಸಂಸ್ಥೆಗಳ ಆಡಳಿತ ನಿರ್ವಹಣೆಗೆ ಅನೇಕ ನಿರ್ಬಂಧಗಳನ್ನು ವಿಧಿಸಿ ಬಿಡಿ ವ್ಯಕ್ತಿಗಳು ಸಾಹಸೋದ್ಯಮದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿದ. ಕಾನೂನು ವಿರುದ್ಧ ನಡೆಯುವವರನ್ನು ಪತ್ತೆ ಹಚ್ಚಲು 1903ರಲ್ಲಿ ಒಂದು ಇಲಾಖೆಯನ್ನು ಸ್ಥಾಪಿಸಿದ. ಕಲ್ಲಿದ್ದಲು ಗಣಿ ಕಾರ್ಮಿಕರು ಮತ್ತು ನೌಕರರು ನಡೆಸುತ್ತಿದ್ದ ಮುಷ್ಕರಕ್ಕೆ ಸಹಾನುಭೂತಿ ತೋರಿಸಿದ. ಅವರ ಸಂಬಳ ಸಾರಿಗೆ ಹೆಚ್ಚಳಕ್ಕೆ ಕಾನೂನು ಮಾಡಿದ. ರೈಲ್ವೆ ಕಂಪನಿಗಳಿಂದ ರೈತರ ಶೋಷಣೆ ತಪ್ಪಿಸಲು ಸರಕು ಸಾಗಣೆ ಶುಲ್ಕ ವಿಧಿಸುವಲ್ಲಿ ನಿಯಂತ್ರಣ ಹೇರಿದ. ಕಲುಷಿತ ಆಹಾರ ನೀಡುವುದು ಮತ್ತು ಹಾನಿಕಾರಕ ಔಷಧಿ ನೀಡುವುದರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡ.

1904ರಲ್ಲಿ ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ಗೆದ್ದ ಅನಂತರ ಯಾವ ಒತ್ತಡಕ್ಕೂ ಒಳಗಾಗದೆ ಆಡಳಿತ ಸುಧಾರಣೆಗಳನ್ನು ಕೈಗೊಂಡ. ಸಾಮಾನ್ಯ ಮತ್ತು ಶ್ರೀಮಂತ ಇಬ್ಬರಿಗೂ ತನ್ನ ಕಛೇರಿ ಸಮಾನವಾಗಿ ಸದಾ ತೆರೆದಿರುತ್ತದೆ ಎಂದು ಘೋಷಿಸಿದ. ರಾಷ್ಟ್ರದ ಪ್ರಾಕೃತಿಕ ಸಂಪತ್ತನ್ನು ಕಬಳಿಸುತ್ತಿದ್ದವರಿಗೆ ಸಿಂಹಸ್ವಪ್ನವಾದ. ರಾಷ್ಟ್ರದ ಅರಣ್ಯಗಳ ಸಂರಕ್ಷಣೆಗೆ ಕಾನೂನುಗಳನ್ನು ರಚಿಸಿದ. ನೀರಾವರಿ ಪ್ರದೇಶವನ್ನು ವಿಸ್ತರಿಸುವುದರ ಮೂಲಕ ರೈತರ ಅಭಿನಂದನೆಗೆ ಪಾತ್ರನಾದ. ನ್ಯಾಯಾಲಯಗಳಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು. ಅಂತಾರಾಷ್ಟ್ರೀಯ ರಾಜಕೀಯದಲ್ಲೂ ಈತ ತನ್ನ ಪ್ರಭಾವ ಬೀರಿದ. ರಷ್ಯ ಮತ್ತು ಜಪಾನ್‌ಗಳ ನಡುವೆ

ಯಶಸ್ವಿಯಾಗಿ ಮಧ್ಯಸ್ಥಿಕೆ ವಹಿಸಿ ಶಾಂತಿ ಸ್ಥಾಪಿಸಲು ನೆರವಾದ. 1903ರಲ್ಲಿ ಪನಾಮಾ ಕಾಲುವೆ ಪ್ರದೇಶವನ್ನು ಅಮೆರಿಕದ ವಶಕ್ಕೆ ತಂದ. ಕ್ಯೂಬದಲ್ಲಿ ಕಾನೂನು ವ್ಯವಸ್ಥೆ ಪುನರ್ ಸ್ಥಾಪನೆಯಾಯಿತು. ವೆನಿಜೂಲದಲ್ಲಿ ಮನ್ರೊ ಸೂತ್ರದ ಅನುಷ್ಠಾನ ವನ್ನು ಸಮರ್ಥಿಸಿದ. ಕೊಲಂಬಿಯದಿಂದ ಇಸ್ತಮಸನ್ನು ರಕ್ಷಿಸಿದ. ಹೀಗೆ ಆಂತರಿಕ ಮತ್ತು ವಿದೇಶಿ ನೀತಿಯಲ್ಲಿ ರೂಸ್‌ವೆಲ್ಟ್ ಹೊಸ ಅಧ್ಯಾಯ ತೆರೆದ. 1908ರಲ್ಲಿ ಅಧ್ಯಕ್ಷೀಯ ಚುನಾವಣೆ ಬಂತು. ಆಗ ತಾನು ಹಿಂದೆ ಘೋಷಿಸಿದ್ದ ಮಾತಿನಂತೆ ಸ್ಪರ್ಧಿಸದೆ ತನ್ನ ನಿಕಟವರ್ತಿ ವಿಲಿಯಂ ಹೋವರ್ಡ್ ಟ್ಯಾಫ್ಟ್ ಅಧ್ಯಕ್ಷನಾಗಲು ಸಹಾಯ ನೀಡಿದ. ಈತ ಅಧ್ಯಕ್ಷಸ್ಥಾನ ಬಿಟ್ಟ ಅನಂತರ ಪೂರ್ವ ಆಫ್ರಿಕಕ್ಕೆ ಬೇಟೆ ಪ್ರವಾಸ ಕೈಗೊಂಡ. ಇವನು ಕೆಲವು ತಿಂಗಳುಗಳ ತರುವಾಯ ಅಲ್ಲಿಂದ ಹಿಂದಿರುಗಿದಾಗ ರಾಜಕೀಯದಲ್ಲಿ ಅನೇಕ ಬದಲಾವಣೆ ಗಳಾಗಿದ್ದವು. ಇವನ ಉತ್ತರಾಧಿಕಾರಿ ಟ್ಯಾಫ್ಟ್ ಜನಪ್ರಿಯತೆ ಕಳೆದುಕೊಳ್ಳುವ ಹಾದಿಯಲ್ಲಿದ್ದ. ರಿಪಬ್ಲಿಕನ್ ಪಕ್ಷದಿಂದ ಮುಂದಿನ ಬಾರಿಗೆ ಈತನೇ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಬೇಕೆಂಬ ಒತ್ತಡ ಬಂದರೂ ಪಕ್ಷದ ವರಿಷ್ಠರು ಟ್ಯಾಫ್ಟ್‌ನನ್ನು ನಾಮಕರಣ ಮಾಡಿದಾಗ ಸ್ವತಂತ್ರನಾಗಿ ಸ್ಪರ್ಧಿಸಿ ಸೋತರೂ ಟ್ಯಾಫ್ಟ್‌ನಿಗಿಂತ ಅಧಿಕ ಮತಗಳಿಸಿದ. ಡೆಮಾಕ್ರೆಟಿಕ್ ಪಕ್ಷದ ವುಡ್ರೊವಿಲ್ಸನ್ ಅಧ್ಯಕ್ಷನಾದ. ಮುಂದೆ ರಾಜಕೀಯಕ್ಕೆ ವಿದಾಯ ಹೇಳಿದ ಈತ ಸಾಹಸ ಕಾರ್ಯಗಳಲ್ಲಿ ತೊಡಗಿದ. ಒಂದನೆಯ ಮಹಾಯುದ್ಧದಲ್ಲಿ ಸ್ವಯಂಸೇವಕರ ತಂಡದ ನಾಯಕನಾಗಿ ಭಾಗವಹಿಸಿದ. ಈ ಯುದ್ಧದಲ್ಲಿ ಇವನ ಎಲ್ಲ ನಾಲ್ಕು ಗಂಡು ಮಕ್ಕಳೂ ಭಾಗವಹಿಸಿದ್ದರು. ಒಬ್ಬ ಮಗನ ಬಲಿದಾನವೂ ಆಯಿತು.

ಈತನದು ಬಹುಮುಖ ವ್ಯಕ್ತಿತ್ವ. ದ ವಿನ್ನಿಂಗ್ ಆಫ್ ದ ವೆಸ್ಟ್, ಎ ಹಿಸ್ಟರಿ ಆಫ್ ನ್ಯೂಯಾರ್ಕ್, ಎನ್ ಆಟೋಬಯಾಗ್ರಫಿ, ಆಫ್ರಿಕನ್ ಗೇಮ್ ಟ್ರಯಲ್ಸ್, ದ ಬ್ರೆಜಿಲಿಯನ್ ವೈಲ್ಡರ್‌ನೆಸ್ ಮೊದಲಾದ ಗ್ರಂಥಗಳನ್ನು ರಚಿಸಿದ. 1906ರಲ್ಲಿ ಶಾಂತಿಪ್ರಿಯ ಕಾರ್ಯಗಳಿಗಾಗಿ ಇವನಿಗೆ ನೊಬೆಲ್ ಪುರಸ್ಕಾರ ಲಭಿಸಿತು. ಈತ 1919 ಜನವರಿ 5ರಂದು ನಿಧನಹೊಂದಿದ. ಇವನ ಪಾರ್ಥಿವ ಶರೀರವನ್ನು ಓಸ್ಟರ್‌ಬೇಯ ಯಂಗ್ಸ್ ಮೆಮೋರಿಯಲ್ ಸಿಮೆಟ್ರಿಯಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು. (ಡಿ.ಎಸ್.ಜೆ.;ಬಿ.ಪಿ.ಐ.)

**ರೆಡ್ ಇಂಡಿಯನ್ನರು:** ಅಮೆರಿಕದಲ್ಲಿ ನೂರಾರು ರೆಡ್ ಇಂಡಿಯನ್ ಜನವರ್ಗ ಗಳಿವೆ. ಅಪಾಚಿ, ನವಾಹೋ, ಕ್ರೀ, ಒಜಿಬ್ವಾ, ಚೆಯಿನ್ನೆ, ಅರಪಾಹೋ, ಇರೊಕ್ವೊಯಿಸ್, ಒಮಾಹಾ, ಚೆರೋಕೀ, ಜುನಿ-ಇವು ಉತ್ತರ ಅಮೆರಿಕದ ಮುಖ್ಯ ರೆಡ್ ಇಂಡಿಯನ್ ಜನವರ್ಗಗಳು. ಆಜ್ಟೆಕ್, ನಿಕರಾಗುವನ್, ಮಾಯಾ-ಇವು ಮಧ್ಯ ಅಮೆರಿಕದ ಮುಖ್ಯ ಜನವರ್ಗಗಳು. ಚಿಬೇಹಾ, ಚೆಕೊ, ಬಾರ್ಬಕೋವಾ, ಐಮಾರಾ, ಯುಂಕಾ, ಚಾಂಗೋ, ಅರವಾಕ್, ಕರೀಬ್-ಇವು ದಕ್ಷಿಣ ಅಮೆರಿಕದ ಮುಖ್ಯ ಜನವರ್ಗಗಳು.

ಲಾಂಛನ

ರೆಡ್ ಇಂಡಿಯನ್ ಭಾಷೆಗಳು: ಅಮೆರಿಕದಲ್ಲಿರುವ ಹಲವಾರು ಭಾಷಾ ಕುಟುಂಬಗಳಲ್ಲಿ ರೆಡ್ ಇಂಡಿಯನ್ ಭಾಷಾ ಕುಟುಂಬವೂ ಒಂದು. ಮುಖ್ಯವಾದವು ಎಸ್ಕಿಮೊ, ಅಲ್ಗೋಂಕ್ವಿಯನ್, ಅಥಬಾಸ್ಕನ್, ಉಟೋ-ಅಜ್‌ಟೆಕನ್, ಪೆನೂಟಿಯನ್, ಸಿಯೋವನ್, ಮಾಯನ್, ತಾರಸ್ಕನ್, ಮಿಕ್ಸ್‌ಟೆಕನ್, ಜಪೋಟೆಕನ್, ಚಿಬೇಹ, ಅರವಾಕನ್, ಇಮಾರನ್, ಕರಿಬನ್ ಇತ್ಯಾದಿ. ಪ್ರತಿಯೊಂದು ಭಾಷಾ ಕುಟುಂಬದಲ್ಲಿಯೂ ಹಲವಾರು ಭಾಷೆಗಳಿವೆ.

ಸಾಮಾಜಿಕ-ರಾಜಕೀಯ ಸ್ಥಿತಿ: ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ರೆಡ್ ಇಂಡಿಯನರಿಗೆ ಪ್ರತ್ಯೇಕವಾಗಿ ಕಾದಿರಿಸಿದ ವಿಶಾಲವಾದ ಪ್ರದೇಶಗಳಿವೆ. ಈ ಪ್ರದೇಶಗಳಲ್ಲಿ ಇತರರ ಪ್ರವೇಶವನ್ನು ನಿಷೇಧಿಸಲಾಗಿದೆ. ಆದರೆ ರೆಡ್ ಇಂಡಿಯನ್ನರು ತಮಗೆ ಕಾದಿರಿಸಿದ ಯಾವುದೇ ಸ್ಥಳಗಳಲ್ಲಿ ನೆಲಸಲು ಸ್ವತಂತ್ರರು. (ಎಚ್.ಕೆ.ಬಿ.)

**ರೇಣಿಗುಂಟ:** ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿ ಆದಿಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಶಿಲೋಪಕರಣಗಳು ದೊರಕಿವೆ. 1960ರ ದಶಕದಲ್ಲಿ ಎಂ.ಎಲ್.ಕೆ.ಮೂರ್ತಿ ಅವರು ರೇಣಿಗುಂಟ, ರಲ್ಲಕಲವ ಇತ್ಯಾದಿ ನೆಲೆಗಳನ್ನು ಸಮೀಕ್ಷಿಸಿದರು. ಸ್ವರ್ಣಮುಖಿ ನದಿಯ ಉಪನದಿಯಾದ ರಲ್ಲಕಲವದಲ್ಲಿ ಉಪಕರಣಗಳನ್ನು ಸಂಗ್ರಹಿಸಿ 1968ರಲ್ಲಿ ಪ್ರಕಟಿಸಿದರು. ಪದರ ವಿಶ್ಲೇಷಣಾತ್ಮಕ ಅಧ್ಯಯನ ಮಾಡಿ ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗದ ಉಪಕರಣಗಳನ್ನು ಗುರುತಿಸಿದರು. ಅಂತ್ಯಹಿಮಯುಗ ಅಥವಾ ಈಗಿನ ಯುಗದ ಸಂಸ್ಕೃತಿಗಳ ಉಪಕರಣಗಳು ಇವಾಗಿರಬಹುದು. ಇಲ್ಲಿ ದೊರಕಿರುವ ಅಂತ್ಯ ಹಳೆಶಿಲಾಯುಗ ಕಾಲದ ಸಮಾನಾಂತರ ಅಂಚಿನ ನೀಳಚಕ್ಕೆ ಉಪಕರಣಗಳು, ಕೊರೆಯುಳಿಗಳು ಮತ್ತು ಇತರ ತ್ಯಾಜ್ಯ ವಸ್ತುಗಳಿಂದ ಈ ನೆಲೆಯನ್ನು ಉಪಕರಣ ತಯಾರಿಕಾ ನೆಲೆ ಎಂದು ಹೇಳಬಹುದು. ಆದಿ, ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗ ಉಪಕರಣಗಳನ್ನು ಮುಖ್ಯವಾಗಿ ಬೆಣಚುಕಲ್ಲಿನಲ್ಲಿ ತಯಾರಿಸಿದ್ದರೆ ಸೂಕ್ಷ್ಮಶಿಲಾಯುಗದಲ್ಲಿ ಹೆಚ್ಚಾಗಿ ಬೆಣಚುಕಲ್ಲು ಮತ್ತು ವಿವಿಧ ರೀತಿಯ ಅರೆಪ್ರಶಸ್ತ ಕಲ್ಲುಗಳಲ್ಲಿ ಉಪಕರಣಗಳನ್ನು ತಯಾರಿಸಲಾಗಿದೆ. ಇವುಗಳಲ್ಲಿ ಹೆಚ್ಚಿನವು ಅನಿರ್ದಿಷ್ಟ ಆಕೃತಿಗಳ ಉಪಕರಣಗಳಾಗಿವೆ. ರೇಣಿಗುಂಟದ ಅಂತ್ಯ ಹಳೆಶಿಲಾಯುಗ ಕಾಲದ ಉಪಕರಣ ತಯಾರಿಕಾ ತಾಂತ್ರಿಕತೆ ಸ್ಥಳೀಯವಾಗಿ ಮಧ್ಯ ಹಳೆಶಿಲಾಯುಗದ ಉಪಕರಣ ತಂತ್ರಜ್ಞಾನದಿಂದ ಬೆಳೆದುಬಂದಿದೆಯೆಂದು ಎಂ.ಎಲ್.ಕೆ.ಮೂರ್ತಿಯವರ ಅಭಿಪ್ರಾಯ. (ಆರ್.ಎನ್.ಎಸ್.)

**ರೈತ ಚಳವಳಿ:** ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಸಮಕಾಲೀನ ವ್ಯವಸ್ಥೆಯ ಪ್ರತಿಭಟನೆಯೊಡನೆ ಹುಟ್ಟಿಕೊಂಡ ಹೋರಾಟ. ಭಾರತದಲ್ಲಿ ಇಲ್ಲಿಯವರೆಗೆ ಸು.100 ರೈತ ಚಳವಳಿಗಳು ನಡೆದಿವೆ ಎಂದು ಅಂದಾಜುಮಾಡಲಾಗಿದೆ. ಮೊಗಲರ ಕಾಲದಿಂದ ಈವರೆಗೆ ಭಾರತದಲ್ಲಿ 77 ರೈತ ಹೋರಾಟಗಳ ದಾಖಲೆಯನ್ನು ಕ್ಯಾಥಲೀನ್ ಗಾಫ್ ಎಂಬಾಕೆ ಕೊಟ್ಟಿದ್ದಾಳೆ. ಇಂಥ ಚಳವಳಿಗಳನ್ನು ಆಕೆ ಐದು ವಿಧವಾಗಿ ವಿಂಗಡಿಸಿದ್ದಾಳೆ. ಈ ಪಟ್ಟಿಗೆ ಡಿ.ಎನ್. ಧನಗರೆ ಎಂಬಾತ ಮತ್ತೊಂದು ಪ್ರಕಾರವನ್ನು ಸೇರಿಸಿದ್ದಾನೆ. ರೈತ ಚಳವಳಿಯ ಆರು ವಿಧಗಳು ಹೀಗಿವೆ: 1. ಪುನರ್‌ಸ್ಥಾಪನ ದಂಗೆಗಳು, 2. ಧಾರ್ಮಿಕ ಚಳವಳಿಗಳು, 3. ಸಮಾಜನಿಷ್ಠ ದರೋಡೆಗಳು, 4. ಭಯೋತ್ಪಾದಕ ಪ್ರತೀಕಾರಗಳು, 5. ಜನತಾ ಚಳವಳಿಗಳು ಮತ್ತು 6. ಸುಧಾರಣಾವಾದಿ ಚಳವಳಿಗಳು.

ಸ್ವಾತಂತ್ರ್ಯಪೂರ್ವ ರೈತ ಚಳವಳಿಗಳು ಹೆಚ್ಚಾಗಿ ಪರಕೀಯರ ವಿರುದ್ಧ ನಡೆದವು. ಭೂಸಂಬಂಧವುಳ್ಳ ಎಲ್ಲ ವರ್ಗದ ರೈತರೂ ಇಂಥ ಚಳವಳಿಗಳಲ್ಲಿ ಭಾಗವಹಿಸಿದ್ದಾರೆ. ಮೊದಲ ಎರಡು ಹಂತದ ಚಳವಳಿಗಳಲ್ಲಿ ಪರಕೀಯರಿಂದಾಗಿ ಭೂಮಿ ಕಳೆದುಕೊಂಡ ಪಾಳೆಯಗಾರರು, ಹಳೆಯ ಪ್ರಭುಗಳು, ಆಡಳಿತಗಾರರು, ದಿವಾಳಿ ಎದ್ದ ರೈತರು, ಕೈಕಸಬುಗಳನ್ನು ಕಳೆದುಕೊಂಡವರು, ಕೂಲಿ ಕಾರ್ಮಿಕರು, ಧರ್ಮಗುರುಗಳು ಹಾಗೂ ಆದಿವಾಸಿ ಮುಖಂಡರು ಭಾಗವಹಿಸಿದ್ದಾರೆ.

ಶ್ರೀಮಂತರು ಹಾಗೂ ಭೂಮಾಲೀಕರ ಕಿರುಕುಳದಿಂದ ಬದುಕುಗೆಟ್ಟ ಶಕ್ತಿಶಾಲಿಗಳು ಅವರ ವಿರುದ್ಧ ನಿಂತು, ಅವರ ಆಸ್ತಿ-ಪಾಸ್ತಿಯನ್ನು ದರೋಡೆ ಮಾಡಿದರು. ದರೋಡೆ ಮಾಡಿದ ಆಸ್ತಿಯಲ್ಲಿ ಬಹುಪಾಲನ್ನು ನೊಂದವರಿಗೆ, ಬಡವರಿಗೆ ಹಂಚಿದರು. ಈ ಕಾರಣವಾಗಿ ಇವರ ದರೋಡೆಗಳು ಸಮಾಜನಿಷ್ಠವಾಗಿದ್ದವು ಎನ್ನಬಹುದು. 17 ಹಾಗೂ 18ನೆಯ ಶತಮಾನಗಳಲ್ಲಿ ಮಧ್ಯಭಾರತದ ಠಕ್ಕರು, ಮದರಾಸು ಪ್ರಾಂತದ ಕಳ್ಳರ್, ಕೇರಳದ ಸನ್ಯಾಸಿ-ಫಕೀರರು ಈ ಕ್ರಿಯೆಯಲ್ಲಿ ತೊಡಗಿದ್ದರು.

ಭಯೋತ್ಪಾದಕ ಪ್ರತೀಕಾರದ ಹಲವು ಹೋರಾಟಗಳು ನಡೆದಿವೆ. ಶ್ರೀಮಂತರು, ಭೂ ಮಾಲೀಕರು, ಸರ್ಕಾರಿ ಅಧಿಕಾರಿಗಳಿಂದ ಒಕ್ಕಲೆಬ್ಬಿಸುವಿಕೆ, ಅಧಿಕ ಕಂದಾಯ, ಬಿಟ್ಟಿ ಕೆಲಸಗಳಂಥ ಹಿಂಸಾತ್ಮಕ ಒತ್ತಡಗಳಿಂದ ಈ ಹೋರಾಟಗಳು ಹುಟ್ಟಿಕೊಂಡಿವೆ. ತೀವ್ರಗಾಮಿ ಎಡಪಂಥೀಯ ಹೋರಾಟಗಳು ಈ ಗುಂಪಿನಲ್ಲಿ ಬರುತ್ತವೆ. ಸ್ವಾತಂತ್ರ್ಯ ಹೋರಾಟ ಸಂದರ್ಭದ ರೈತ ಚಳವಳಿಗಳು ಜನತಾ ಆಂದೋಲನದೊಳಗೆ ಸೇರಿಕೊಂಡು ಬಂದವು. ಸ್ವಾತಂತ್ರ್ಯಪೂರ್ವ ಹಾಗೂ ಅನಂತರದಲ್ಲಿ ಸುಧಾರಣಾ ನೆಲೆಯ ಚಳವಳಿಗಳು ನಡೆದಿವೆ.

ಬಹುಶಃ ಮೊಗಲ್ ಸಾಮ್ರಾಜ್ಯದ ಬೆಳವಣಿಗೆಯ ಆರಂಭ ಭಾರತದ ರೈತ ಹೋರಾಟಗಳಿಗೆ ನೆಲೆ ಕಲ್ಪಿಸಿಕೊಟ್ಟಂತೆ ಕಾಣುತ್ತದೆ. ಹೊಸ ರೀತಿಯ ಭೂ ವಿಂಗಡನೆ, ಹಂಚಿಕೆ ಹಾಗೂ ಕಂದಾಯ ನಿಗದಿ ಕ್ರಮ ಭಾರತದ ಭೂಒಡೆತನದ ನೆಲೆಯನ್ನು ಅಲ್ಲಾಡಿಸಿತು. ಆದರ ಪರಿಣಾಮವಾಗಿ ಬೇರೆ ಬೇರೆ ರೀತಿಯಲ್ಲಿ ರೈತರು ಸಂಘಟಿತರಾದರು. ಕೆಲಮಟ್ಟಿಗೆ ಆಡಳಿತ ವ್ಯವಸ್ಥೆಯನ್ನೂ ಪ್ರಶ್ನಿಸಿದರು. ಕೈಗಾರಿಕಾ ಕ್ರಾಂತಿಗೆ ಮೊದಲು ಭೂಒಡೆತನದಲ್ಲಿ ಆದ ಬದಲಾವಣೆಗಳು ರಾಜ್ಯಗಳ ನಾಶ ಹಾಗೂ ಉದಯದ ಕಥೆಗಳಾಗಿವೆ. ಇವು ರೈತರ ಭೂಮಿಯನ್ನು ಕುರಿತ ನಿಜ ಕಥೆಗಳು. ಮೊಗಲರ ಕಾಲದಲ್ಲಿ ನಡೆದ ಸತ್ನಾಮಿಗಳ ಹೋರಾಟ ಇದಕ್ಕೆ ಉತ್ತಮ ಉದಾಹರಣೆ. ಈ ಹೋರಾಟಗಳು ಸಮುದಾಯದ ರೂಪವನ್ನು ಪಡೆಯುತ್ತಿದ್ದವೇ ಹೊರತು ವರ್ಗ ರೂಪವಲ್ಲ. ಬಹಳ ಮುಖ್ಯವಾಗಿ ಈ ಕಾಲದ ಹೋರಾಟಗಳು ಕೆಲವೇ ಪ್ರದೇಶಗಳಿಗೆ ಸೀಮಿತವಾದ ಕಾರಣ ಅವು ರಾಷ್ಟ್ರವ್ಯವಸ್ಥೆಯನ್ನು ಪ್ರಶ್ನಿಸಲು ಅಸಾಧ್ಯವಾಯಿತು. ಮೊಗಲರೂ ಈ ದೇಶದ ಪ್ರಜೆಗಳೇ ಆಗಿ ಹೋದುದರಿಂದ ಆ ಕಾಲದ ರೈತ ಪ್ರತಿಭಟನೆಗಳು ಹೆಚ್ಚು ಸಾಮೂಹಿಕ ಸ್ವರೂಪ ಪಡೆದುಕೊಂಡಂತೆ ಕಾಣುವುದಿಲ್ಲ.

ಬ್ರಿಟಿಷರು ಹೊರಗಿನಿಂದ ಭಾರತಕ್ಕೆ ಬಂದರಾದರೂ ಇಲ್ಲಿಯವರಾಗಲಿಲ್ಲ. ಅವರು ಇಲ್ಲಿಂದ ಸಂಪತ್ತನ್ನು ಒಯ್ಯುವ ವ್ಯಾಪಾರಿ ರಾಜಪ್ರಭುಗಳಾಗಿದ್ದರು. ವ್ಯವಸಾಯ ಜೀವನಕ್ಕೆ ಸ್ಪರ್ಧಿಯಾಗಿ ಕೈಗಾರಿಕಾ ಸಂಸ್ಕೃತಿಯನ್ನು ಬೆಳೆಸತೊಡಗಿದರು. ಭಾರತದ ವ್ಯಾವಸಾಯಿಕ ಉತ್ಪನ್ನಗಳು ಇಂಗ್ಲೆಂಡಿನ ಕೈಗಾರಿಕೀಕರಣವನ್ನು ಅಭಿವೃದ್ಧಿಗೊಳಿಸುವ ಸಾಧನವಾದವು. ಸರ್ಕಾರದ ಬೊಕ್ಕಸ ತುಂಬಲು ಹಾಗೂ ತಮ್ಮ ಯುದ್ಧ ವೆಚ್ಚವನ್ನು ಭರಿಸಲು ಇವರು ಭಾರತದ ವ್ಯವಸಾಯಗರ ಮೇಲೆ ಹೆಚ್ಚು ಕಂದಾಯ ವಿಧಿಸಿದರು. ನೇರ ಕಂದಾಯ ವಸೂಲಿಯಾಗಲು ಕೃಷಿಕರ ಮಧ್ಯೆ ಅನೇಕ ಬಗೆಯ ಮಧ್ಯವರ್ತಿಗಳನ್ನು ತಂದರು.

ಹೊಸ ಭೂಮಾಲೀಕರು, ಜಹಗೀರುದಾರರು, ಇನಾಂದಾರರು, ವ್ಯಾಪಾರಿಗಳು, ಅಧಿಕಾರಿಗಳು ಸ್ಥಾಪಿತರಾದರು. ಅನೇಕ ರೈತರು ಭೂಮಿ ಕಳೆದುಕೊಂಡು ಕೂಲಿಗಳಾದರು. ಸ್ವಯಂ ಬೇಸಾಯ ಸಂಸ್ಕೃತಿಯ ಆದಿವಾಸಿಗಳ ಮೇಲೆ ಇದು ತೀವ್ರ ಪರಿಣಾಮ ಬೀರಿತು. ಅವರು ಹೊಸ ಜಮೀನುದಾರರ ಕೈಕೆಳಗೆ ಬರುವಂತಾಯಿತು. ಸ್ಥಳೀಯ ಗುಡಿಕೈಗಾರಿಕೆಗಳು ನಾಶವಾದುವು. ಯಾರ್ಕ್‌ಷೈರ್‌ನಿಂದ ಬಟ್ಟೆಬರೆಗಳನ್ನು ಕೊಳ್ಳುವ ಸ್ಥಿತಿ ಉಂಟಾಯಿತು. ವಾಣಿಜ್ಯ ಬೆಳೆಗಳನ್ನು ಬೆಳೆಯಲು ಒತ್ತಾಯ, ಹಿಂಸೆ ಕೊಡಲಾಯಿತು. ಆಹಾರ ಬೆಳೆಗಳು ಗಣನೀಯವಾಗಿ ಕಡಿಮೆಯಾದವು. ಸಾಮಾನ್ಯರ ಜೀವನ ನಿರ್ವಹಣೆ ಕಷ್ಟವಾಯಿತು. ತೆರಿಗೆ ಕೊಟ್ಟು ಉಳಿದುದರಲ್ಲಿ ಜೀವನ ಸಾಗಿಸುವುದು ದುಸ್ತರವಾಯಿತು. ಈ ಕಾರಣದ ಮೇಲೆ ಆದಿವಾಸಿ ಕೃಷಿಕರು, ಬೇರೆ ಬೇರೆ ನೆಲೆಯಲ್ಲಿ ಕೃಷಿ ಮಾಡುತ್ತಿದ್ದ ರೈತರು ಸ್ಥಳೀಯ ನೆಲೆಯಲ್ಲಿ ಸಂಘಟನೆಗೊಂಡು ಪ್ರತ್ಯಕ್ಷವಾಗಿ ಸ್ಥಳೀಯ ಭೂಮಾಲೀಕರನ್ನು, ಪರೋಕ್ಷವಾಗಿ ಬ್ರಿಟಿಷರನ್ನು ವಿರೋಧಿಸುವುದು ಅನಿವಾರ್ಯವಾಯಿತು.

ಸ್ವಾತಂತ್ರ್ಯಪೂರ್ವದ ರೈತ ಹೋರಾಟಗಳು ಪ್ರಾದೇಶಿಕವಾದುವು; ಅವುಗಳ ಉದ್ದೇಶ ಕೂಡ ಸೀಮಿತವಾಗಿರುತ್ತಿತ್ತು. ಸದ್ಯದ ನೋವಿಗೆ ಪರಿಹಾರ ಕಂಡುಕೊಳ್ಳುವುದು ಮುಖ್ಯ ಅಪೇಕ್ಷೆಯಾಗಿತ್ತು. ಶತ್ರುಗಳನ್ನೂ ಸಮಸ್ಯೆಗಳನ್ನೂ ಸ್ಪಷ್ಟವಾಗಿ ಗುರುತಿಸಿ ಹೋರಾಡುವ ಭೂಮಿಕೆ ಇನ್ನೂ ಸಿದ್ಧವಾಗಿರಲಿಲ್ಲ. ಬಹಳ ಮುಖ್ಯವಾಗಿ ಈ ಹೋರಾಟಗಳು ತಮ್ಮ ಪೂರ್ವಾಶ್ರಮ ಜೀವತತ್ತ್ವ ಹಾಗೂ ವರ್ಗಗಳಿಂದ ಹೊರಗೆ ಬರಲು ಇಚ್ಛಿಸಲಿಲ್ಲ. ಆದುದರಿಂದಲೇ ಈ ರೈತ ಹೋರಾಟಗಳ ಜೊತೆಗೆ ಮತ, ಧರ್ಮ ಮುಂತಾದ ನಿರ್ಬಂಧಗಳು ಹೇರಿಕೊಂಡಿದ್ದವು. ಈ ಸನ್ನಿವೇಶದಲ್ಲಿ ಕಂಡು ಬಂದ ಮುಖ್ಯ ನೆಲೆಯ ಹೋರಾಟಗಳಿವು: 1772–80 ಸಂನ್ಯಾಸಿ – ಫಕೀರರ ದಂಗೆಗಳು, 1855ರ ಸಂತಾಲ ದಂಗೆ, 1860ರ ನೀಲಿ ಬೆಳೆಗಾರರ ಚಳವಳಿ, 1875ರ ದಕ್ಷಿಣದ ದಂಗೆಗಳು, 1863–1931ರ ಮಾಪಿಳ್ಳ ದಂಗೆಗಳು, 1928ರ ಬಾರ್ಡೋಲಿಯ ರೈತ ಸತ್ಯಾಗ್ರಹ, 1945–46ರ ವಾರಲಿ ಆದಿವಾಸಿಗಳ ಹೋರಾಟ ಹಾಗೂ 1946–47ರ ತೇಭಾಗ ಚಳವಳಿ.

ರೈತರು ತಮ್ಮ ಹಿಂಸೆಗೆ ಸಂನ್ಯಾಸಿ, ಫಕೀರರ ವೇಷದಲ್ಲಿ ಸಂಘಟನೆಗೊಂಡು ಪ್ರತಿಕ್ರಿಯಿಸಿದ ರೀತಿಯೇ ಸಂನ್ಯಾಸಿ–ಫಕೀರರ ದಂಗೆ. ಇವು ರೈತಾಪಿ ಜನರ ಪ್ರಥಮ ಪ್ರತಿಭಟನೆಗಳು, ಬ್ರಿಟಿಷರ ವಿರುದ್ಧದ ಮೊದಲ ಯುದ್ಧಗಳು. ಬ್ರಿಟಿಷರ ಆಡಳಿತ ಹಾಗೂ ಕಂದಾಯ ನೀತಿಯನ್ನು ಪ್ರತಿಭಟಿಸಿದಾಗ ಬ್ರಿಟಿಷ್ ಸೈನ್ಯ ಹಳ್ಳಿ ಹಳ್ಳಿಗಳನ್ನೇ ನಾಶಮಾಡುತ್ತಿತ್ತು. ಈ ಘಟನೆಗಳಿಂದ ನೆಲೆ ಕಳೆದುಕೊಂಡವರು ಸಂಘಟಿತರಾಗಿ ಬ್ರಿಟಿಷರ ಪರವಾಗಿದ್ದ ಭೂಮಾಲೀಕರನ್ನೂ ಆಡಳಿತಗಾರರನ್ನೂ ಅವರ ಸೇವಕರನ್ನೂ ಹಿಡಿದು ಬಡಿಯುತ್ತಿದ್ದರು. ಬ್ರಿಟಿಷ್ ಸರ್ಕಾರಕ್ಕೆ ಸೇರಬೇಕಾದ ಹಣವನ್ನು ಕೊಳ್ಳೆ ಹೊಡೆಯುತ್ತಿದ್ದರು. ಬಿಹಾರ, ಬಂಗಾಲ ಹಾಗೂ ಪೂರ್ವ–ಈಶಾನ್ಯ ಭಾರತದ ಹಲವು ಪ್ರದೇಶಗಳಿಗೆ ಈ ದಂಗೆಗಳು ಹರಡಿದ್ದವು.

ಸಂತಾಲರ ದಂಗೆ ಭಾರತದ ಆರ್ಥಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಮೇಲೆ ಬ್ರಿಟಿಷರು ಹಾಕಿದ ಒಂದು ದೊಡ್ಡ ಬರೆ. ಸಂತಾಲರು ನಿಜವಾದ ಬೇಸಾಯಗಾರರು. ಇವರದು ಬೇಸಾಯವನ್ನು ಆಧರಿಸಿದ ರಾಜ್ಯ ಪದ್ಧತಿ ಹಾಗೂ ಸಾಂಸ್ಕೃತಿಕ ಜೀವನ. ಬ್ರಿಟಿಷರ ಹೊಸ ಭೂ ಹಂಚಿಕೆ ಹಾಗೂ ಬಡತನದ ಕಾರಣವಾಗಿ ಇವರು ಹೊಸ ಭೂಮಾಲೀಕರಿಗೆ ತಮ್ಮ ಜಮೀನಿನ ಒಡೆತನ ಬಿಟ್ಟುಕೊಟ್ಟು ಅವರಲ್ಲಿ ಕನಿಷ್ಠ ಕೂಲಿಗಾಗಿ ದುಡಿಯುವ ಕೂಲಿಕಾರರಾಗಬೇಕಾಯಿತು. ನೆಲಬಿಡಿ ಇಲ್ಲವೆ ಗೇಣಿಕೊಡಿ ಎಂದು ಹೊಸ ಮಾಲೀಕರು ಇವರಿಗೆ ತಾಕೀತು ಮಾಡಿದರು. ಜಮೀನುದಾರರ, ಪೋಲೀಸರ, ಅಧಿಕಾರಿಗಳ ಮತ್ತು ಸಾಲಗಾರರ ಹಿಂಸೆ, ಹೆಂಡತಿ ಮಕ್ಕಳ ಮೇಲಿನ ದೌರ್ಜನ್ಯ, ತೂಕ ಮತ್ತು ಮಾರಾಟದಲ್ಲಿ ಮೋಸ – ಈ ಕಾರಣಗಳಿಂದಾಗಿ ಮುಗ್ಧರಾದ ಈ ಬುಡಕಟ್ಟು ಜನ ತತ್ತರಿಸಿ ಹೋದರು. ಬದುಕುವ ಕೊನೆಯ ಆಸೆಯಾಗಿ ಹೋರಾಟಕ್ಕೆ ನಿಂತರು. ಸಾವಿರ ಸಾವಿರ ಸಂಖ್ಯೆಯಲ್ಲಿ ಸಂಘಟಿತರಾಗಿ ಹಿಂಸೆಯ ಮಾರ್ಗ ಹಿಡಿದು ತಮ್ಮ ಅಸ್ತಿತ್ವ ಸ್ಥಾಪಿಸಿಕೊಳ್ಳಲು ಹೊರಟರು. ಬ್ರಿಟಿಷ್ ಸೈನ್ಯ ಸಂತಾಲ ಸಮುದಾಯವನ್ನು ಸದೆ ಬಡಿಯಿತು. ಸಂತಾಲರು ತಮ್ಮ ಬಿಲ್ಲು ಬಾಣ ಮತ್ತು ದೈಹಿಕ ಶಕ್ತಿಗಳಿಂದಲೇ ನೈತಿಕ ಹೋರಾಟವನ್ನು ಮುಂದುವರಿಸಿದರು. ಈ ದಂಗೆಯಲ್ಲಿ ಸು.25 ಸಾವಿರ ಸಂತಾಲರು ಸತ್ತರೆಂದು ವರದಿ.

ಬಂಗಾಲ, ಬಿಹಾರ ಪ್ರದೇಶದ ನೀಲಿ ಬೆಳೆಗಾರರೆಂದರೆ ಆ ಕಾಲದ ಬ್ರಿಟಿಷ್ ಹಾಗೂ ಬ್ರಿಟಿಷ್ ಪರ ಭೂಮಾಲೀಕರ, ಗುಲಾಮರು ಎಂದೇ ಹೇಳಬೇಕು. ತಮ್ಮ ಹೊಟ್ಟೆಗೆ ಅನ್ನ ಬೆಳೆದುಕೊಳ್ಳುವುದಕ್ಕೆ ಅವಕಾಶವಿಲ್ಲದೆ ಆಳುವ ಪ್ರಭುಗಳ ಬಟ್ಟೆಗೆ ಬೇಕಾದ ನೀಲಿ ಬಣ್ಣಕೊಡುವ ಬೆಳೆ ಬೆಳೆದು ಕೊಡುವ ಕೈದಿಗಳಂತೆ ಇವರು ದುಡಿದರು. ಇವರ ಮೇಲಿನ ಹಿಂಸೆ ಹೇಳಲಸದಳ. ಬದುಕು ತೀರ ಕಷ್ಟ ನೀಲಿ ಬೆಳೆಗಾರರಾದ ಹಿಂದು ಮುಸ್ಲಿಮ್ ನೌಕರರು ತಮ್ಮ ಶೋಷಣೆಯನ್ನು ಪ್ರತಿಭಟಿಸಿದರು. ಶೋಷಕರಿಗೆ ಮುತ್ತಿಗೆ ಹಾಕಿದರು. ಸರ್ಕಾರದ ಮಧ್ಯ ಪ್ರವೇಶದಿಂದ ಸ್ವಲ್ಪ ಪರಿಹಾರವನ್ನೂ ಪಡೆದರು.

ದಖನ್ ದಂಗೆಯ ಮೂಲಸ್ಥಾನ ಮುಂಬಯಿ ಪ್ರಾಂತದ ಪುಣೆ ಮತ್ತು ಅಹಮದ್‌ನಗರ ಪ್ರದೇಶಗಳು. ಇವು ರೈತವಾರಿ ಜಿಲ್ಲೆಗಳಾಗಿದ್ದವು. ಮುಂಬಯಿ ಸರ್ಕಾರ ಕಂದಾಯ ಹೆಚ್ಚಿಸುತ್ತಾ ಹೋಯಿತು. ಸ್ಥಳೀಯ ಸಾಹುಕಾರರ ಬಡ್ಡಿವ್ಯವಹಾರ ಜನರ ಮೈಮೇಲೆ ಅಮರಿಕೊಂಡಿತು. ಇದರಿಂದಾಗಿ ಚಿಕ್ಕ ಪುಟ್ಟ ರೈತರೆಲ್ಲ ಜಮೀನು ಕಳೆದುಕೊಳ್ಳುತ್ತ ಹೋದರು. ಸಿಟ್ಟುಗೊಂಡ ಅವರು ಸಂಘಟಿತರಾಗಿ ಬಡ್ಡಿ ವ್ಯಾಪಾರಿಗಳಿಗೆ ಮುತ್ತಿಗೆ ಹಾಕಿದರು. ಸಾಲ ಪತ್ರಗಳನ್ನು ಕಿತ್ತು ಸುಟ್ಟುಹಾಕಿದರು. ದಂಗೆ ಅಡಗಿಸಲು ಸೈನ್ಯ ಬಂತು. ಸೆರೆಸಿಕ್ಕವರಿಗೆ ಹಿಂಸೆಯ ಜೊತೆಗೆ ಪುಂಡುಗಂದಾಯ ಹಾಕಲಾಯಿತು.

ಮಾಪಿಳ್ಳೆಗಳ ದಂಗೆ ಆರ್ಥಿಕ ಸ್ವರೂಪದಲ್ಲಿ ಕಾಣಿಸಿಕೊಂಡರೂ ಅದರ ಅಂತರಂಗ ಅವರ ಧಾರ್ಮಿಕ ಅಸ್ತಿತ್ವದಲ್ಲಿದೆ. ಅರಬ್ ದೇಶಗಳಿಂದ ಬಂದ ವ್ಯಾಪಾರಿಗಳು ಹಾಗೂ ಕೇರಳದ ಸ್ಥಳೀಯ ಹೆಣ್ಣುಗಳ ವೈವಾಹಿಕ ಸಂಬಂಧದಿಂದ ಹುಟ್ಟಿದವರು ಮಾಪಿಳ್ಳೆಗಳು. ಇವರು ಕೇರಳದ ಆ ಕಾಲದ ಭೂಒಡೆಯರಾದ ನಂಬೂದರಿಗಳು ಹಾಗೂ ಅವರ ಸಹವಾಸಿಗಳಾದ ನಾಯರ್‌ಗಳಲ್ಲಿ ಕೃಷಿಕೂಲಿಗಾಗಿ ಕೆಲಸ ಮಾಡುತ್ತಿದ್ದರು. ಇವರು ಹೆಚ್ಚಿನ ಗೇಣಿ ಕೊಡಬೇಕಿತ್ತು, ಕೊಡದಿದ್ದರೆ ಒಕ್ಕಲೆಬ್ಬಿಸುತ್ತಿದ್ದರು. ಸಾಮಾಜಿಕವಾಗಿ ಹೀನಾಯವಾಗಿ ನೋಡಿಕೊಳ್ಳುತ್ತಿದ್ದರು. ಬಹಳಕಾಲದ ಈ ಹಿಂಸೆಯಿಂದಾಗಿ ಅವರು ಸಿಡಿದೆದ್ದರು. 1863–1921ರ ವರೆಗೆ ಸು.50 ದಂಗೆಗಳಾದವು. ಅನೇಕ ಹಿಂಸಾಕೃತ್ಯಗಳು ನಡೆದವು. ಸಾವಿರಾರು ಮಾಪಿಳ್ಳೆಗಳು ಸತ್ತರು. ಈ ಎಲ್ಲದಕ್ಕೆ ಅವರ ಧಾರ್ಮಿಕ ಗುರುಗಳ ಬೆಂಬಲವೂ ಇತ್ತು. ಒಂದು ಕಡೆ ತಮ್ಮ ಭೂ ಮಾಲೀಕರ ವಿರುದ್ಧ ಹೋರಾಡಿದರು. ಮತ್ತೊಂದು ಕಡೆ ಹಿಂದೂ ಧರ್ಮದವರಿಂದ ಬಹಿಷ್ಕೃತರಾಗಿ ದೂರವಿರಿಸಲ್ಪಟ್ಟ ಜನರೊಂದಿಗೆ ಸ್ನೇಹ–ವೈವಾಹಿಕ ಸಂಬಂಧ ಬೆಳೆಸಿಕೊಂಡು ತಮ್ಮ ಜನಸಂಖ್ಯೆಯನ್ನು ವೃದ್ಧಿಸಿಕೊಂಡರು. ಕೊನೆಗೆ ಒಂದು ರಾಜಕೀಯ ಬಲವಾಗಿ ರೂಪುಗೊಂಡರು.

ಗಾಂಧಿಯವರ ಸತ್ಯಾಗ್ರಹ ಪರಿಕಲ್ಪನೆ ರೂಪುಗೊಳ್ಳುವವರೆಗಿನ ರೈತ ಹೋರಾಟಗಳು ದೈಹಿಕ ಹಿಂಸೆಗಳಾಗಿದ್ದವು. ಸತ್ಯಾಗ್ರಹ ರೈತ ಹೋರಾಟದ ಅಸ್ತ್ರವಾದ ಮೇಲೆ ಅವು ಮಾನಸಿಕ ಹಿಂಸೆ–ಪ್ರತಿ ಹಿಂಸೆಯ ಸ್ವರೂಪ ಪಡೆದವು. ಗಾಂಧಿಯವರು ಎತ್ತಿಕೊಂಡ ಪ್ರಪ್ರಥಮ ಹೋರಾಟವೆಂದರೆ ಚಂಪಾರಣ್–ಇದು ಮೂಲತಃವಾಗಿ ಬಿಹಾರದ ನೀಲಿಬೆಳೆಗಾರರ ಪರವಾಗಿ ನಡೆಸಿದ ಹೋರಾಟ. ಕೆಲಮಟ್ಟಿಗೆ ರೈತರ ಸಮಸ್ಯೆಗಳ ಪರವಾಗಿ ಹೋರಾಡಲು ಕಾಂಗ್ರೆಸ್ ನಿರ್ಧರಿಸಿತು. 1928ರ ಬಾರ್ಡೋಲಿಯ ರೈತ ಸತ್ಯಾಗ್ರಹ ಇದಕ್ಕೊಂದು ಉದಾಹರಣೆ. ಈ ಹೋರಾಟ ಎರಡು ಹಂತದಲ್ಲಿ ನಡೆಯಿತು. ಇದರ ನೇತೃತ್ವವನ್ನು ಗಾಂಧೀಯವರ ಸಮ್ಮತಿಯಂತೆ ಸರ್ದಾರ್ ವಲ್ಲಭಭಾಯಿ ಪಟೇಲ್ ವಹಿಸಿದ್ದರು. ಅವರನ್ನು ಬಾರ್ಡೋಲಿಯ ವೀರ ಎಂದೂ ಕರೆಯಲಾಯಿತು. ಗಾಂಧಿ ಹಾಗೂ ಕಾಂಗ್ರೆಸ್‌ಗೆ ರೈತರ ವಿಷಯಗಳನ್ನು ಎತ್ತಿಕೊಳ್ಳಲು ಬೇರೆ ಕಾರಣಗಳು ಕೂಡ ಇದ್ದವು. ರೈತರನ್ನು ರಾಷ್ಟ್ರೀಯ ಹೋರಾಟದಲ್ಲಿ ಒಂದು ಅಂಗವನ್ನಾಗಿಸಿದರೆ ರಾಷ್ಟ್ರೀಯ ಹೋರಾಟಕ್ಕೆ ಬಲ ಬರುತ್ತದೆ ಎಂಬ ನಂಬಿಕೆ ಇದಕ್ಕೆ ಕಾರಣ. ಆದ ಕಾರಣ ರಾಷ್ಟ್ರೀಯ ಹೋರಾಟದ ಕಾಲದಲ್ಲಿ ರೈತರ ಪರವಾಗಿ ಕಾಂಗ್ರೆಸ್– ಗಾಂಧಿ ವಕಾಲತ್ತು ವಹಿಸಿದರು. ಈ ವಕಾಲತ್ತು ಕಾಂಗ್ರೆಸ್‌ನ ವಿವಿಧ ಅಧೀವೇಶನದಲ್ಲಿ ಅಂಗೀಕರಿಸಿದ ವಿವಿಧ ನಿರ್ಣಯಗಳಲ್ಲಿ ಗೇಣಿ ಮಾಫಿಯಾ ಬಗ್ಗೆ, ಭೂ ಕಂದಾಯದ ಬಗ್ಗೆ ಇತ್ಯಾದಿಗಳಲ್ಲಿ ಕಾಣಬಹುದು.

ಸೂರತ್ ಪ್ರಾಂತದ ಭೂಮಾಲೀಕರು ಮತ್ತು ಅವರ ಗೇಣಿದಾರರ ಮಧ್ಯೆ ವೈಮನಸ್ಯ ಉಂಟಾಯಿತು. ದೂಬ್ಲಾ, ನಾಯಿಕ, ಚೋಧ್ರಾ, ದೂಧಿಯಾ, ಗಾಮಿಟ ಮೊದಲಾದ ಕೂಲಿಕಾರ ಜನ ಪಟಿದಾರ ಭೂಮಾಲೀಕ–ವ್ಯಾಪಾರಿಗಳ ವಿರುದ್ಧ ತಿರುಗಿ ಬಿದ್ದರು. ಪಟಿದಾರರಿಂದ ಪಡೆದ ಸಾಲಕ್ಕೆ ತಮ್ಮ ಚಿಕ್ಕಪುಟ್ಟ ಭೂಮಿಯನ್ನೂ ಕಳೆದುಕೊಂಡರು. ಜೊತೆಗೆ ಮುಂಬಯಿ ಸರ್ಕಾರ ಸೇ. 22ರಷ್ಟು ಕಂದಾಯ ಏರಿಸಿತು. ಇದರ ಹೊರೆ ಗೇಣಿದಾರ ಕೂಲಿಕಾರ್ಮಿಕರ ಮೇಲೆ ಬಿತ್ತು. ಸಾಯುವವನ ಮೇಲೆ ಕಲ್ಲು ಎತ್ತಿಹಾಕಿದಂತಾಯಿತು. ಇದನ್ನು ಎಲ್ಲ ರೈತರೂ ವಿರೋಧಿಸಿ ಒಂದಾದರು. ಚಳವಳಿ ಸರ್ಕಾರದ ವಿರುದ್ಧವಾಯಿತು. ಸರ್ಕಾರ ಇವರನ್ನು ಹತ್ತಿಕ್ಕಲು ಅನಾಗರಿಕ ಕ್ರಮಗಳನ್ನು ಅನುಸರಿಸಿತು. ವಲ್ಲಭಭಾಯಿ ಪಟೇಲ್ ಹಾಗೂ ಇತರ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಸರ್ಕಾರದ ವಿರುದ್ಧ ಸತ್ಯಾಗ್ರಹ ನಡೆಯಿತು. ಸೇ. 22 ಕಂದಾಯ 6¼ಕ್ಕೆ ಇಳಿಸುವ ಮೂಲಕ ಸತ್ಯಾಗ್ರಹ ಯಶಕಂಡಿತು.

ವಾರಲಿ ಆದಿವಾಸಿಗಳ ಹೋರಾಟ ಸಂತಾಲ ದಂಗೆಯ ರೀತಿಯದಾದರೂ ಕಮ್ಯೂನಿಸ್ಟ್ ಪಕ್ಷದ ಬೆಂಬಲದೊಂದಿಗೆ ವ್ಯವಸ್ಥಿತವಾಗಿ ನಡೆಯಿತು. ಒಂದು ಕಾಲಕ್ಕೆ ಭೂಮಿ ಹೊಂದಿ ಉತ್ತಮ ಸ್ಥಿತಿಯಲ್ಲಿದ್ದ ಇವರನ್ನು ಮುಂಬಯಿಯ ವಿವಿಧ ವರ್ಗದ ಜನ ಶೋಷಣೆ ಮಾಡುತ್ತಿದ್ದರು. ಕೊನೆಗೆ ಅತ್ಯಂತ ದೀನಸ್ಥಿತಿಯ ಕೂಲಿಕಾರ್ಮಿಕರನ್ನಾಗಿ ಮಾಡಿದರು. ಸರ್ಕಾರ, ಸಾಹುಕಾರ, ಅಧಿಕಾರಿ, ದಲ್ಲಾಳಿಗಳು ಸೇರಿಕೊಂಡು ಇವರ ಬದುಕನ್ನು ನರಕ ಸಮಾನ ಮಾಡಿದರು. ಕಮ್ಯೂನಿಸ್ಟ್ ಪಕ್ಷದ ತಾತ್ತ್ವಿಕತೆಯ ಅಡಿಯಲ್ಲಿ ಒಂದಾಗಿ ತಮ್ಮ ದಾಸ್ಯದ ವಿರುದ್ಧ ಇವರು ತೀವ್ರ ಹೋರಾಟ ನಡೆಸಿದರು. ಭಾರತ ಕಿಸಾನ್ ಸಭಾ ನಾಯಕತ್ವದ ಈ ಹೋರಾಟ ಕೆಲಮಟ್ಟಿಗಾದರೂ ಸಫಲತೆ ಪಡೆಯಿತು.

ಬಂಗಾಲದಲ್ಲಿ ನಡೆದ ತೇಭಾಗ ರೈತ ಚಳವಳಿ ಮೂರನೆಯ ಎರಡು ಪಾಲು ಫಸಲು ತಮಗೆ ಇರಬೇಕು ಎಂದು ಗೇಣಿದಾರರು ನಡೆಸಿದ ಹೋರಾಟ. ಅಖಿಲ ಭಾರತ ಕಿಸಾನ್‌ಸಭಾ ಹಾಗೂ ಬಂಗಾಲ ಕಿಸಾನ್‌ಸಭಾ ನಾಯಕತ್ವದಲ್ಲಿ ಈ ಹೋರಾಟ ತನ್ನ ಬೇಡಿಕೆಯನ್ನು ಈಡೇರಿಸಿಕೊಂಡಿತು.

5 ವರ್ಷಗಳ ಕಾಲ ನಡೆದ ತೆಲಂಗಾಣ ರೈತ ಹೋರಾಟ ವಿಶಿಷ್ಟ ಬಗೆಯದು. ಮೂಲತಃ ಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನ ಇದರ ಗುರಿ. ಉರ್ದು ಭಾಷೆಗಿದ್ದ ರಾಜ ಮನ್ನಣೆಯಿಂದಾಗಿ ತೆಲುಗು ಸಾಹಿತ್ಯ ಸಂಸ್ಕೃತಿಗಳು ಕಳಾಹೀನವಾಗಿದ್ದವು. ಇದನ್ನು

ಮನಗಂಡ ಮಧ್ಯಮ ವರ್ಗದ ಸಾಹಿತಿ-ಚಿಂತಕರು 1921ರಲ್ಲಿ ಆಂಧ್ರ ಜನಸಂಘಮ್ ಎಂಬ ಸಂಸ್ಥೆಯನ್ನು ಕಟ್ಟಿಕೊಂಡರು. 1928ರ ಹೊತ್ತಿಗೆ ಇದು ಆಂಧ್ರ ಮಹಾಸಭಾ ಆಗಿ ವಿಸ್ತೃತಗೊಂಡಿತು. ಆರ್ಥಿಕ ಸಮಸ್ಯೆಗಳಾದ ಬಿಟ್ಟಿ ಚಾಕರಿ, ಪುಕ್ಕಟೆ ವಸ್ತುಗಳನ್ನು ಕೊಡುವ ಪದ್ಧತಿ ಹಾಗೂ ಅಸ್ಪೃಶ್ಯತೆ, ಬಾಲ್ಯವಿವಾಹ, ವಿಧವಾ ಸಮಸ್ಯೆಯಂಥ ಸಾಂಸ್ಕೃತಿಕ ಅಂಶಗಳನ್ನು ಈ ಸಭೆ ತನ್ನ ಕಾರ್ಯಕ್ರಮಗಳನ್ನಾಗಿ ಸ್ವೀಕರಿಸಿತು.

ಹೈದರಾಬಾದ್ ನಿಜಾಮ ಅಪಾರ ಆಸ್ತಿ ಹೊಂದಿದ್ದು ಅಲ್ಲಿ ರೈತರು ಪುಕ್ಕಟೆ ದುಡಿದು ಬೆಳೆಕೊಡಬೇಕಾಗಿತ್ತು. ಮತ್ತೊಂದು ಕಡೆ ಹೆಚ್ಚಿನ ತೆರಿಗೆ ಕೊಡಬೇಕಿತ್ತು. ಭೂಮಾಲೀಕರು ತುಂಡರಸರಾಗಿ ಭೂಮಿಯಲ್ಲಿ ದುಡಿಯುವವರನ್ನು ಜೀವಂತ ಹಿಂಡುತ್ತಿದ್ದರು. ಇದನ್ನು ಆಂಧ್ರ ಮಹಾಸಭಾ ಖಂಡಿಸಿ ಜನಸಂಘಟನೆ ಮಾಡಿತು. ಇದರಲ್ಲಿ ಕಿಸಾನ್‌ಸಭಾದ ಕಮ್ಯುನಿಸ್ಟರು ಬಹಳ ಸಂಖ್ಯೆಯಲ್ಲಿ ಭಾಗವಹಿಸಿದರು. 1946 ಜುಲೈ ಹೊತ್ತಿಗೆ ತೆಲಂಗಾಣ ರೈತ ಚಳವಳಿಗೆ ಒಂದು ಸ್ಪಷ್ಟ ರೂಪ ಬಂತು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಈ ಹೋರಾಟಕ್ಕೆ ಮತ್ತೊಂದು ತಿರುವು ಉಂಟಾಯಿತು. ನಿಜಾಮ ತಾನು ಭಾರತಕ್ಕೆ ಸೇರುವುದಿಲ್ಲವೆಂದ. ದೇಶೀ ಚಿಂತಕರಿಗೆ ಇದು ಸಾಕಾಗಿತ್ತು. ಭಾರತ ಸರ್ಕಾರಕ್ಕೂ ಈ ಸಂದರ್ಭ ಸೂಕ್ತವೆನಿಸಿತು. ಹಲವು ಕಡೆಯಿಂದ ಹೋರಾಟಕ್ಕೆ ಬೆಂಬಲ ದೊರಕಿತು. ಹೈದರಾಬಾದ್ ಬಿಡುಗಡೆಯೂ ದುಡಿಯುವ ರೈತರ ಬಿಡುಗಡೆಯೂ ಒಂದೇ ವೇದಿಕೆಯ ಆಸಕ್ತಿಗಳಾದವು. ಇದು ಸತ್ಯಾಗ್ರಹವಾಗಿರಲಿಲ್ಲ, ಅಂತರ್‌ಯುದ್ಧವಾಗಿತ್ತು. ಹಿಂಸೆ-ಪ್ರತಿಹಿಂಸೆಗಳು ತಾಂಡವವಾಡಿದವು. ಹೈದರಾಬಾದ್ ಪ್ರಾಂತ ಭಾರತದೊಳಗೆ ವಿಲೀನಗೊಂಡ ಅನಂತರ ಹೋರಾಟ ತಣ್ಣಗಾಯಿತು. ಕಾಂಗ್ರೆಸ್ಸಿಗರು ಮತ್ತು ಇತರರು ಸೇರಿ ಕಮ್ಯುನಿಸ್ಟರನ್ನು ಒಂಟಿ ಮಾಡಿದರು. ಚುನಾವಣಾ ಹೋರಾಟದ ಕಡೆಗೆ ನಡೆದರು.

ಈ ಹೋರಾಟ ಭಾರತದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ರೈತ ಹೋರಾಟಗಳ ಪ್ರವೃತ್ತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಭಾರತೀಯ ಪಕ್ಷ ಸಿದ್ಧಾಂತಗಳ ನೆಲೆಗಳನ್ನು ಪರಿಚಯ ಮಾಡಿಕೊಡುತ್ತದೆ. ವಿವಿಧ ರೈತ ವರ್ಗಗಳ ಹಿತಾಸಕ್ತಿಯನ್ನು ವಿಂಗಡಿಸಿ ತಿಳಿಸಿಕೊಡುತ್ತದೆ. ನಕ್ಸಲ್‌ಬಾರಿ (1960), ಶ್ರೀಕಾಕುಳಂ (1965-70) ರೈತ ಹೋರಾಟದ ಬೀಜಗಳನ್ನು ಹುಟ್ಟಿಸಿತು. ಸಾಮಾಜಿಕ-ಆರ್ಥಿಕ ಹೋರಾಟಕ್ಕೆ ರಾಜಕೀಯ ಶಕ್ತಿಯನ್ನು ಬಳಸುವ ಅನಿವಾರ್ಯತೆಯನ್ನು ಈ ಮೂರೂ ರೈತ ಹೋರಾಟಗಳು ತಿಳಿಸುತ್ತವೆ.

ಭಾರತಕ್ಕೆ ಸ್ವಾತಂತ್ರ್ಯ ಬರುವ ಸಾಧ್ಯತೆ ಕಂಡಂತೆಲ್ಲ, ಸ್ವಾತಂತ್ರ್ಯ ಸಿಕ್ಕಿದ ಆರಂಭದ ದಿನಗಳ ತನಕ ರೈತ ಹೋರಾಟಗಳು ಹೊಸ ದಿಕ್ಕನ್ನು ಪಡೆದವು. ಬೇಡಿಕೆಗಳು ಸಮಾನತಾ ಅವಕಾಶಗಳಾಗಿ ಮಾರ್ಪಟ್ಟವು. ಸರ್ವಾಧಿಕಾರದ ವಿರೋಧ ಪ್ರಜಾಪ್ರಭುತ್ವವನ್ನು ಬಲಪಡಿಸುವ ಶಕ್ತಿಯಾಗಿ ಮಾರ್ಪಟ್ಟಿತು. ಬೇಡಿಕೆಗಳನ್ನು ಹಕ್ಕುಗಳ ಒತ್ತಾಯಗಳಾಗಿ ಮಂಡಿಸಲಾಯಿತು. 1. ಉಳುವವನಿಗೆ ಭೂಮಿ. ಹೆಚ್ಚಿನ ಭೂಮಿಯನ್ನು ಭೂಹೀನರಿಗೆ ಹಂಚುವುದು, 2. ಲಾಭದಾಯಕ ಬೆಲೆಗಾಗಿ ಹೋರಾಟ, 3. ಸಾಲದ ಹೊರೆಯಿಂದ ಮುಕ್ತಿ, 4. ಲೆವಿ, ತೆರಿಗೆ, ಸರ್‌ಚಾರ್ಜುಗಳ ವಿರುದ್ಧ ಚಳವಳಿ, 5. ಕೃಷಿ ಕೂಲಿಗಳಿಗೆ ಕನಿಷ್ಠ ವೇತನ ನಿಗದಿ, 6. ಭೂಹೀನರಿಗೆ ನಿವೇಶನ, 7. ಗುಡಿ ಕೈಗಾರಿಕೆಗಳಿಗೆ ಆದ್ಯತೆ, 8. ಕೈಗಾರಿಕೆ ಮತ್ತು ಕೃಷಿ ಬೆಳೆಗಳ ಬೆಲೆಗಳಲ್ಲಿ ಸಮಾನತೆ ತರುವುದು, 9. ಸಾಗುವಳಿಯಾಗದ ಭೂಮಿಗೆ ಕೃಷಿ ಸೇನೆ, 10. ಚತುಸ್ತಂಭ ರಾಷ್ಟ್ರ ನಿರ್ಮಾಣ.

ರೈತ ಹೋರಾಟಗಳಿಂದ ಕರ್ನಾಟಕ ಹೊರಗೆ ಉಳಿದಿರಲಿಲ್ಲ. ಬೇರೆ ಬೇರೆ ಹೆಸರು ಹಾಗೂ ಉದ್ದೇಶದಿಂದ ಹಲವು ರೈತರ ಹಿತಾಸಕ್ತಿಯನ್ನು ಕುರಿತ ಹೋರಾಟಗಳು ನಡೆದವು. 1799ರ ಧೋಂಡಿಯಾ ವಾಘ ಮತ್ತು ಸಂಗಡಿಗರ ಆದಿವಾಸಿಗಳ ದಂಗೆ, ಇದೇ ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ರೈತರು ಹೊಸ ಗೇಣಿಯ ವಿರುದ್ಧ ಕರನಿರಾಕರಣೆ ಚಳವಳಿಯನ್ನು ನಡೆಸಿದರು. ಇವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಹಳೇ ಮೈಸೂರಿನ ನಗರ(ಇಂದಿನ ಶಿವಮೊಗ್ಗ) ಪ್ರಾಂತದಲ್ಲಿ ನಡೆದ ನಗರ ರೈತರ ದಂಗೆ ಇದು ಶರತ್‌ವ್ಯವಸ್ಥೆ- ಭೂಮಿಯನ್ನು ಅತ್ಯಂತ ಹೆಚ್ಚಿನ ಹರಾಜಿಗೆ(ಬಿಡ್ಡುದಾರರು) ನೀಡುವುದರ ವಿರುದ್ಧವಾಗಿದ್ದರೂ ಈ ಹೋರಾಟದಲ್ಲಿ ಅಬ್ರಾಹ್ಮಣ ಚಳವಳಿಯ ಕೆಲವು ಮೂಲಭೂತ ಅಂಶಗಳನ್ನು ಕಾಣಬಹುದು. 1803ರ ಬಳ್ಳಾರಿಯ ಪಾಳೆಗಾರರ ದಂಗೆ, 1830ರ ಸಂಗೊಳ್ಳಿ ರಾಯಣ್ಣನ ಬಂಡು, 1830-31ರ ಬೂದಿಬಸಪ್ಪನ ಬಂಡು, 1857ರ ಹಲಗಲಿಯ ಬೇಡರ ಬಂಡು, ನರಗುಂದದ ಬಾಬಾ ಸಾಹೇಬನ ಬಂಡು ಇತ್ಯಾದಿ. ನೇರವಾಗಿ ರೈತರ ಸಾಮಾನ್ಯ ಸಮಸ್ಯೆಗಳನ್ನು ಮುಂದಿರಿಸಿ ಕೊಂಡು ಅಂಕೋಲ, ಶಿರಸಿ, ಸಿದ್ಧಾಪುರ, ಹಿರೆಕೆರೂರು ಮೊದಲಾದ ಕಡೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕರನಿರಾಕರಣೆ ಚಳವಳಿಗಳು ನಡೆದವು. ಸ್ವಾತಂತ್ರ್ಯಾನಂತರದ ಪ್ರಮುಖ ರೈತ ಹೋರಾಟಗಳಿವು: ಕಾಗೋಡು ಸತ್ಯಾಗ್ರಹ (1950-51), ಸಾಗರ-ತೀರ್ಥಹಳ್ಳಿ ತಾಲ್ಲೂಕುಗಳ ಗೇಣಿದಾರರ ಹೋರಾಟ (1950-51), ಹಳಿಯಾಳ ರೈತ ಕೂಲಿಕಾರರ ಚಳವಳಿ (1979) ಹಾಗೂ ಕರ್ನಾಟಕ ರಾಜ್ಯ ರೈತ ಸಂಘದ ಚಳವಳಿ (1980).

ಮೊದಲೆರಡು ಹೋರಾಟಗಳು ಒಂದರ ಮುಂದುವರಿಕೆಯೇ ಮತ್ತೊಂದು ಎನ್ನುವಂತಿವೆ. ಕಾಂಗ್ರೆಸ್‌ನ ಸತ್ಯಾಗ್ರಹದಿಂದ ಆರಂಭಗೊಂಡ ಈ ಚಳವಳಿಗಳು ಕೊನೆಗೆ ಸಮಾಜವಾದಿಗಳ ಕೈಗೆ ಬಂದವು. ಅವು ಹೋರಾಟದ ಪ್ರಜ್ಞೆಯನ್ನು ಮೂಡಿಸಿ ಹಿಂದೆ ಸರಿದವು.

ಕಾಗೋಡು ಗ್ರಾಮದಲ್ಲಿದ್ದ ಏಳೂರಿನ ಹೆಸರಾದ ಗೌಡರ ಭೂಒಡೆತನದಲ್ಲಿ ಕೂಲಿಗಳಾಗಿದ್ದವರು ನಡೆಸಿದ ಹೋರಾಟ ತುಂಬ ಪ್ರಸಿದ್ಧವಾಗಿದೆ. 70 ದೀವರ ಕುಟುಂಬ, 18 ದಲಿತ ಕುಟುಂಬ, 3 ಮಡಿವಾಳ ಕುಟುಂಬ ಹಾಗೂ ಒಂದು ಅಕ್ಕಸಾಲಿ ಕುಟುಂಬಗಳು ಗೌಡರ ಗೇಣಿದರ, ಅಳತೆ, ಶೋಷಣೆ ವಿರುದ್ಧ ಪ್ರತಿಭಟಿಸಿದರು. ಇವರ ಪರವಾಗಿ ಮಲೆನಾಡ ಗೇಣಿದಾರರ ಸಂಘ (1946), ಸಾಗರ ತಾಲ್ಲೂಕು ರೈತಸಂಘ (1948) ಬೆಂಬಲಕ್ಕೆ ನಿಂತವು. ಕಾಗೋಡು ಸತ್ಯಾಗ್ರಹದ ಬೀಜಬಿತ್ತಿದ್ದು ಗಣಪತಿಯಪ್ಪ ಇದನ್ನು ನಿರ್ವಹಿಸಿದ ಮುಖ್ಯರೆಂದರೆ ಕಡಿದಾಳ್ ಮಂಜಪ್ಪ, ಗರುಡಶರ್ಮ, ಜಿ.ಸದಾಶಿವರಾಯ, ಭಾ.ಸು.ಕೃಷ್ಣಮೂರ್ತಿ, ಸೀತಾರಾಮ ಐಯ್ಯಂಗಾರ್, ಶಾಂತವೇರಿ ಗೋಪಾಲಗೌಡ, ಎಸ್.ರಾಮಯ್ಯ, ಎಸ್.ಜಿ.ಗೋವಿಂದಪ್ಪ - ಮೊದಲಾದವರು. ಈ ಹೋರಾಟಕ್ಕೆ ದೆಹಲಿಯಿಂದ ರಾಮಮನೋಹರ ಲೋಹಿಯಾ ಬಂದರು, ನೇರವಾಗಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಸ್ಥಳೀಯ ಹೋರಾಟಗಾರರನ್ನು ಹುರಿದುಂಬಿಸಿದರು. ಈ ಹೋರಾಟದ ಅಗತ್ಯವನ್ನು ಒತ್ತಿ ಹೇಳಿದರು.

ಕರ್ನಾಟಕದಲ್ಲಿ ಬಹು ದೊಡ್ಡದಾಗಿ ಬೆಳೆದ ಚಳವಳಿ ಕರ್ನಾಟಕ ರಾಜ್ಯ ರೈತ ಸಂಘ ನಡೆಸಿದ್ದು. ಇದು 1980ರಲ್ಲಿ ಹುಟ್ಟಿಕೊಂಡಿತು. ಇದಕ್ಕೆ ಮೂಲ ಪ್ರೇರಣೆ ದೊರಕಿದ್ದು ಮಲಪ್ರಭಾ ನೀರಾವರಿ ಪ್ರದೇಶದ ನರಗುಂದ, ನವಲಗುಂದ ಘಟನೆಗಳ ಮೂಲಕ. ಮಲಪ್ರಭಾ ಅಣೆಯ ನೀರು ತಮಗೆ ವರದಾನವಾಗುತ್ತದೆ ಎಂದು ನರಗುಂದ, ನವಲಗುಂದ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕಿನ ರೈತರು ನಂಬಿದ್ದರು. ಆ ಮಣ್ಣಿನ ಗುಣದಿಂದಾಗಿ ಅಣೆಯ ನೀರು ಕಾಲುವೆಗಳಲ್ಲಿ ಸರಿಯಾಗಿ ಹರಿಯಲಿಲ್ಲ. 1976ರಲ್ಲಿ ನೀರು ಬಂದರೂ ಸರ್ಕಾರ 1974ರಿಂದ ನೀರು ಹಾಗೂ ಅಭಿವೃದ್ಧಿ ತೆರಿಗೆಯನ್ನು ವಿಧಿಸಿತು. ಭೂಮಿ ಕಳೆದುಕೊಂಡವರಿಗೆ ಪರಿಹಾರ ಸಿಗುವುದು ತಡವಾಯಿತು. ಇದಕ್ಕೆ ಪೂರಕವಾಗುವಂತೆ ಈ ಅಣೆಯ ನೀರನ್ನು ನೀರಾವರಿ ಬೆಳೆಗೆ ಬಳಸುವಂತಿಲ್ಲ ಎಂದು ಸರ್ಕಾರ ಕಟ್ಟುಮಾಡಿತು. ಇದೇ ಸಂದರ್ಭದಲ್ಲಿ ಸರ್ಕಾರದ ವರಲಕ್ಷ್ಮಿ ಹತ್ತಿ ಬೀಜ ಪಡೆದು ಬೆಳೆ ಬೆಳೆದರೆ ಹಾಕಿದ ಹಣ ಕೈಗೆ ಬರದೆಹೋಯಿತು. ಅಧಿಕಾರಿಗಳ ಹಿಂಸೆ ಅಪಾರವಾಯಿತು. 1980 ಜುಲೈ 21ರಂದು ರೈತಜಾಥಾ ನಡೆಯಿತು. ಅಧಿಕಾರಿಗಳ ಧಿಮಾಕಿನಿಂದಾಗಿ ಕೆಲ ರೈತರು ಗುಂಡೇಟಿಗೆ ಬಲಿಯಾದರು. ಇದು ಆ ಭಾಗದಲ್ಲಿ ರೈತ ಚಳವಳಿ ಹುಟ್ಟಲು ಕಾರಣವಾಯಿತು. ಅದರ ನೇತೃತ್ವವನ್ನು ಹಳಕಟ್ಟಿ, ಹೊಸಕೇರಿ, ಯಾವಗಲ್, ಕಪ್ಪಣ್ಣವರ್ ಮೊದಲಾದ ಕಮ್ಯುನಿಸ್ಟ್ ಚಿಂತಕರು ವಹಿಸಿದರು.

ಶಿವಮೊಗ್ಗ, ಹಾಸನ, ಮಡಿಕೇರಿ, ಮೈಸೂರು, ಮಂಡ್ಯ, ರಾಯಚೂರು, ಬೆಳಗಾಂವಿ, ಧಾರವಾಡ ಜಿಲ್ಲೆಗಳಲ್ಲಿ ಚಳವಳಿ ವ್ಯಾಪಕವಾಯಿತು. ನೀರಿನ ಕರದ ವಿರುದ್ಧ ಆರಂಭವಾದ ಈ ರೈತ ಚಳವಳಿ ರೈತರ ಮೇಲೆ ಹೇರಿಕೊಂಡಿದ್ದ ವಿವಿಧ ಸಾಲ ಮನ್ನಾಕ್ಕಾಗಿ ಮುನ್ನಡೆಯಿತು. ಮುಂದುವರಿದು ಲೆವಿ ವಿರೋಧ, ಕೃಷಿ ಬೆಳೆಗಳಿಗೆ ನ್ಯಾಯಬೆಲೆ ಕೇಳುವ ಹಂತವನ್ನು ತಲುಪಿತು. ಸರ್ಕಾರದ ಸಾಲ ಜಪ್ತಿಗೆ ಪ್ರತಿಯಾಗಿ ಮರುಜಪ್ತಿ ಚಳವಳಿ ಶುರುವಾಯಿತು. ಈ ವಿಸ್ತೃತ ರೈತ ಚಳವಳಿಯ ನೇತೃತ್ವವನ್ನು ಶಿವಮೊಗ್ಗದ ಹಿರಿಯ ಗಾಂಧೀವಾದಿ ಹಾಗೂ ಕಾಂಗ್ರೆಸ್ ಮುಖಂಡ ಎಚ್.ಎಸ್.ರುದ್ರಪ್ಪ ವಹಿಸಿಕೊಂಡರು. ಇದರ ಕಾರ್ಯದರ್ಶಿಯಾಗಿ ಎನ್.ಡಿ. ಸುಂದರೇಶ್ ನೇಮಕಗೊಂಡರು. ಎಂ.ಡಿ ನಂಜುಂಡಸ್ವಾಮಿ ಸಂಚಾಲಕರೆಂದು ನಿಯೋಜಿತರಾದರು. ಈ ಚಳವಳಿಗೆ ಬಹುಬೇಗ ಆಕರ್ಷಿತರಾದವರೆಂದರೆ ಕರ್ನಾಟಕದ ಹಳೆಯ ಹಾಗೂ ಹೊಸ ಸಮಾಜವಾದಿಗಳು.

ರೈತಾಪಿ ಜನರ ಬಡತನಕ್ಕೆ ಮತ್ತು ಋಣಬಾಧೆಗೆ ಕಾರಣಗಳು ರೈತಾಪಿ ಜನರಲ್ಲ, ಬೇಸಾಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಲೆವಿ ನೀತಿ, ಬೆಲೆ ನೀತಿ, ಸಾಲ ನೀತಿ ಮತ್ತು ಕಂದಾಯ ನೀತಿಗಳು ಅವರ ಬಡತನಕ್ಕೆ ನೇರ ಕಾರಣಗಳು. ಸರ್ಕಾರದ ಯೋಜನಾ ನೀತಿ ಎಲ್ಲಕ್ಕಿಂತ ಮುಖ್ಯಕಾರಣ. ಆದ್ದರಿಂದ 1. ಕಾರ್ಮಿಕರಿಗೆ ಹೆಚ್ಚಿನ ಕೂಲಿ, 2. ಗೇಣಿದಾರರಿಗೆ ಭೂಮಿ, 3. ಗ್ರಾಮಗಳಿಗೆ ಸೇ.80 ಯೋಜನಾ ವೆಚ್ಚ, 4. ಬೇಸಾಯಗಾರರ ಮಕ್ಕಳಿಗೆ ಸೇ.80 ಹುದ್ದೆ ಮೀಸಲು, 5. ಎಲ್ಲ ಕಂದಾಯ ರದ್ದು, 6. ರೈತರ ಬೆಳೆಗಳಿಗೆ ನ್ಯಾಯಬೆಲೆ : ವೈಜ್ಞಾನಿಕ ಬೆಲೆ, 7. ರೈತರ ಎಲ್ಲ ಸಾಲ ರದ್ದು (ಲೆವಿ ಮೂಲಕ ಅವರು ಸಾಲದ ನೂರು ಪಟ್ಟು ಹಣವನ್ನು ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ), 8. ರೈತರ ವಸ್ತುಗಳನ್ನು ಜಪ್ತಿ ಮಾಡಿದರೆ ಮರುಜಪ್ತಿ ಮಾಡಲಾಗುವುದು ಎಂಬ ತೀರ್ಮಾನಕ್ಕೆ ಬರಲಾಯಿತು.

ಹೀಗೆ ಆರ್ಥಿಕ ಬೇಡಿಕೆಗಳ ಮೂಲಕ ಕರ್ನಾಟಕದ ಬಹುಭಾಗವನ್ನು ವ್ಯಾಪಿಸಿದ ಈ ರೈತ ಚಳವಳಿ ಸಾಂಸ್ಕೃತಿಕ ಆಂದೋಲನಕ್ಕೂ ಕೈಹಾಕಿತು. ಜಾತಿ ನಿರ್ಮೂಲನೆ, ಸರಳ ಮದುವೆ, ಸಾಂಸ್ಕೃತಿಕ ಸಮಾನತೆ, ಸ್ವಾಭಿಮಾನ, ಲಂಚ ನಿರ್ಮೂಲನೆ, ಸ್ತ್ರೀ ಸಮಾನತೆ - ಹೀಗೆ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ರೈತ ಸಾಹಿತ್ಯ ರಚನೆ ಮಾಡುವುದರ ಜೊತೆಗೆ ಸಾವಿರಾರು ಸರಳ ಮದುವೆಗಳನ್ನು ವರದಕ್ಷಿಣೆ ಹಾಗೂ ಸಂಪ್ರದಾಯ ಬಿಟ್ಟು ಕಾರ್ಯರೂಪಕ್ಕೆ ತಂದಿತು.

1980ರ ದಶಕವನ್ನು ನವ ರೈತ ಚಳವಳಿ ಕಾಲಘಟ್ಟವೆನ್ನಲಾಗುತ್ತದೆ. ಮಹಾರಾಷ್ಟ್ರದಲ್ಲಿ ಶರದ್ ಜೋಶಿ ನೇತೃತ್ವದಲ್ಲಿ ಶೇತ್ಕರಿ ಸಂಘಟನೆ; ಕರ್ನಾಟಕದಲ್ಲಿ ರೈತಸಂಘ ನಾರಾಯಣ ಸ್ವಾಮಿನಾಯ್ಡು ನೇತೃತ್ವದಲ್ಲಿ ತಮಿಳುಗ ವ್ಯವಸಾಯ್‌ಗಳ್ ಸಂಘಮ್, ಉತ್ತರಪ್ರದೇಶದಲ್ಲಿ ಮಹೇಂದ್ರಸಿಂಗ್ ಟಿಕಾಯತ್ ನೇತೃತ್ವದಲ್ಲಿ ಭಾರತೀಯ ಕಿಸಾನ್ ಯೂನಿಯನ್ ಇತ್ಯಾದಿಗಳು ಹುಟ್ಟಿಕೊಂಡವು. ಕರ್ನಾಟಕದಲ್ಲಿ ಕಾವೇರಿ ನೀರಿಗಾಗಿ ನಡೆದ ಹೋರಾಟ ಅತ್ಯಂತ ಮಹತ್ವದ

ಚಳವಳಿಯಾಗಿದ್ದು ಅದಿನ್ನೂ ಪೂರ್ಣಗೊಂಡಿಲ್ಲ. ಇವುಗಳನ್ನು ನವ ರೈತ ಚಳವಳಿಗಳೆಂದು ಕರೆಯಲು ಕಾರಣಗಳಿದ್ದವು. ಒಂದು, ಇವುಗಳು ಹೊಸ ಅಭಿವೃದ್ಧಿಯ ಪಥವನ್ನು ಪ್ರಶ್ನಿಸಲು ಆರಂಭಿಸಿದ್ದವು; ಎರಡು, ವರ್ಗ ಸಾಮರಸ್ಯವನ್ನು ಪ್ರತಿಪಾದಿಸಿದ್ದವು; ಮೂರು, ರೈತ, ದೇಶ, ಅಭಿವೃದ್ಧಿ ಇತ್ಯಾದಿ ವಿಷಯಗಳಿಗೆ ಹೊಸ ವ್ಯಾಖ್ಯಾನ ಹಾಗೂ ಚೌಕಟ್ಟುಗಳನ್ನು ನೀಡಿದ್ದವು; ನಾಲ್ಕು, ಹೋರಾಟದ ವಿಷಯಗಳು ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾಗಿರದೆ, ಅಂತಾರಾಷ್ಟ್ರೀಯ ವಿಷಯಗಳಾಗಿದ್ದವು–ಬಹು ರಾಷ್ಟ್ರೀಯ ಕಂಪನಿಗಳ ಹುನ್ನಾರ, ಜಾಗತೀಕರಣದ ಹಿಂದಿರುವ ಅಜೆಂಡಾಗಳು ಇತ್ಯಾದಿ. ಕೊನೆಯದಾಗಿ ಇವುಗಳ ಹೋರಾಟದ ಪರಿಧಿಯು ಕೂಡ ಜಾಗತಿಕವಾಗತೊಡಗಿತ್ತು– ಇವುಗಳ ಹೋರಾಟ ಸಿಯಟಲ್, ಪ್ರಾಗ್, ನ್ಯೂಯಾರ್ಕ್, ಲಂಡನ್ ಇತ್ಯಾದಿಗಳಾದವು. ಬಹು ಮುಖ್ಯವಾಗಿ ಇವು ಅಹಿಂಸೆಯನ್ನು ಪ್ರತಿಪಾದಿಸುವ ಹೋರಾಟಗಳಾಗಿದ್ದವು. ರೈತ ಸಂಘಟನೆಗಳಿಂದ ಕೆಂಟಕಿ ಫ್ರೈಡ್ ಚಿಕನ್, ಮೆಕ್‌ಡೊನಾಲ್ಡ್ ಮೊನ್ಸಾಂಟೊಗಳ ಮೇಲೆ ಆಕ್ರಮಣ ನಡೆದರೂ ಇವು ಅಹಿಂಸಾ ಹೋರಾಟದ ರೂಪದಲ್ಲಿದ್ದವು. 1990–2000ರ ದಶಕದಲ್ಲಿ ಇವುಗಳ ಹೋರಾಟ ತೀವ್ರತೆ ಕಡಿಮೆಯಾದರೂ ಇವುಗಳು ರೈತ ಹೋರಾಟಗಳಿಗೆ ಹೊಸ ಆಯಾಮ ನೀಡುವುದರಲ್ಲಿ ಸಫಲವಾಗಿವೆ. (ಎಚ್.ಎಸ್.ಆರ್.;ಎಂ.ಎಚ್.ಎ.)

**ರೈಸ್, ಬಿ.ಎಲ್.:** 1837–1927. ಶಿಕ್ಷಣ, ಗ್ರಂಥಸಂಪಾದನೆ, ಪ್ರಾಕ್ತ್ಯವಸ್ತು ಸಂಶೋಧನೆ, ಶಾಸನಗಳ ಸಂಗ್ರಹ ಹಾಗೂ ಮುದ್ರಣ ಕ್ಷೇತ್ರಗಳಲ್ಲಿ ದುಡಿದ ವಿದ್ವಾಂಸ. ಬೆಂಜಮಿನ್ ಲೂಯಿ ರೈಸ್ ಎಂಬುದು ಇವರ ಪೂರ್ಣ ಹೆಸರು. ಬೆಂಗಳೂರಿನಲ್ಲಿ 1837 ಜುಲೈ 17 ರಂದು ಜನಿಸಿದ್ದು ಪ್ರಾಥಮಿಕ ಶಿಕ್ಷಣವನ್ನು ಬೆಂಗಳೂರಿನಲ್ಲಿಯೇ ಪೂರೈಸಿದ ರೈಸ್ ಉನ್ನತ ವ್ಯಾಸಂಗಕ್ಕಾಗಿ 1848ರಲ್ಲಿ ಇಂಗ್ಲೆಂಡಿಗೆ ತೆರಳಿದರು. 1860ರಲ್ಲಿ ಭಾರತಕ್ಕೆ ಬಂದು ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ (1860–65 ರವರೆಗೆ), ಮೈಸೂರು ಮತ್ತು ಕೊಡಗು ಪ್ರಾಂತಗಳ ಶಾಲಾ ಇನ್ಸ್‌ಪೆಕ್ಟರ್ ಆಗಿ (1865–68; 1870–73 ರವರೆಗೆ), ಮೈಸೂರು ಸರ್ಕಾರದ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ (1868–69, 1873–83 ರವರೆಗೆ), ಕಾರ್ಯದರ್ಶಿಯಾಗಿ (1883–90ರವರೆಗೆ) ಕಾರ್ಯನಿರ್ವಹಿಸಿದರು. 1884ರಲ್ಲಿ ಮೈಸೂರು ಸರ್ಕಾರ ಪ್ರಾಚ್ಯವಸ್ತು ಸಂಶೋಧನ ಶಾಖೆಯನ್ನಾರಂಭಿಸಿದಾಗ ಇವರು ತಮ್ಮ ಹುದ್ದೆಯ ಜೊತೆಗೆ ಈ ಶಾಖೆಯ ಒಪ್ಪೊತ್ತಿನ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದರು. ಶಾಸನ ಸಂಪತ್ತಿನ ಪ್ರಾಮುಖ್ಯವನ್ನು ಅರಿತ ಆಗಿನ ಸರ್ಕಾರ ಇವರನ್ನು ಪುರಾತತ್ತ್ವ ಸಂಶೋಧನ ಶಾಖೆಯ ಪೂರ್ಣಕಾಲದ ನಿರ್ದೇಶಕರನ್ನಾಗಿ 1890ರಲ್ಲಿ ನೇಮಿಸಿತು. ಈ ನಡುವೆ 1881–83 ರ ಅವಧಿಯಲ್ಲಿ ಮೈಸೂರು ಸಂಸ್ಥಾನದ ಜನಗಣತಿ ಸರ್ವೇಕ್ಷಣೆಯ ಮುಖ್ಯಾಧಿಕಾರಿಯಾಗಿ ಹಾಗೂ ಭಾರತದಲ್ಲಿದ್ದ ಬ್ರಿಟಿಷ್ ಸರ್ಕಾರ ಶಿಕ್ಷಣದ ಸ್ಥಿತಿ–ಗತಿ ಕುರಿತು ಸರ್. ಡಬ್ಲ್ಯೂ.ಡಬ್ಲ್ಯೂ. ಹಂಟರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದಾಗ ಅದರ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದರು. ಹೀಗೆ 1906ರವರೆಗೂ ಅವಿಶ್ರಾಂತವಾಗಿ ದುಡಿದ ರೈಸ್ ತಮ್ಮ 70ನೆಯ ವಯಸ್ಸಿನಲ್ಲಿ ನಿವೃತ್ತರಾಗಿ ತಾಯ್ನಾಡಿಗೆ ಮರಳಿ ಹ್ಯಾರೋಪಟ್ಟಣದಲ್ಲಿ ನೆಲಸಿದರು.



ಕನ್ನಡದಲ್ಲಿ ಪಾಂಡಿತ್ಯವನ್ನು ಪಡೆದುಕೊಂಡಿದ್ದ ಇವರು ಶಿಕ್ಷಣಾಧಿಕಾರಿಗಳಾಗಿ ಸಂಸ್ಥಾನದಲ್ಲೆಲ್ಲ ಸಂಚರಿಸುತ್ತಿದ್ದಾಗ ಸ್ಥಳಪುರಾಣಗಳು, ಚಾರಿತ್ರಿಕ ವಿಷಯಗಳು, ಪುರಾತನ ಗ್ರಂಥಗಳು ಇವೇ ಮೊದಲಾದುವನ್ನು ಸಂಗ್ರಹಿಸುತ್ತ, ಅಲ್ಲಲ್ಲಿ ದೊರೆಯುತ್ತಿದ್ದ ಶಾಸನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು.

ಇವರು ಶಿಕ್ಷಣಾಧಿಕಾರಿಗಳಾಗಿದ್ದಾಗ 1868ರಲ್ಲಿ ಜಾರಿಗೆ ತಂದ ಕನಿಷ್ಠ ಹೋಬಳಿಗೊಂದರಂತೆಯಾದರೂ ಶಾಲೆಯನ್ನು ತೆರೆದು ಶಿಕ್ಷಣವನ್ನು ಪ್ರಸರಿಸುವ ಯೋಜನೆ 1854ರ ವುಡ್ಸನ ವರದಿಯನ್ನಾಧರಿಸಿತು. ಈ ನಾಡಿನ ಸಂಚಾರದಿಂದ ಉಂಟಾದ ಅಪಾರ ಅನುಭವದ ಫಲವಾಗಿ ಇವರಲ್ಲಿ ಗೆಜೆಟಿಯರ್ ಎಂಬ ಕಲ್ಪನೆ ಮೂಡಿ 1877–79ರ ಅವಧಿಯಲ್ಲಿ ಮೂರು ಸಂಪುಟಗಳ ಮೈಸೂರ್ ಅಂಡ್ ಕೂರ್ಗ್ ಗೆಜೆಟಿಯರ್‌ಗಳನ್ನು ಪ್ರಕಟಿಸಿದರು. ಮೊದಲ ಎರಡು ಸಂಪುಟಗಳು ಮೈಸೂರು ಪ್ರಾಂತವನ್ನು ಕುರಿತ ಮಾಹಿತಿಯನ್ನೂ, ಮೂರನೆಯ ಸಂಪುಟ ಕೊಡಗು ಪ್ರಾಂತವನ್ನು ಕುರಿತ ಮಾಹಿತಿಯನ್ನೂ ನೀಡುತ್ತವೆ. ಈ ಕೃತಿಗಳು ನಾಡಿನ ನೆಲ–ಜಲ–ಪರಂಪರೆ–ಇತಿಹಾಸ–ಭಾಷೆ–ಸಂಸ್ಕೃತಿಯನ್ನು ಕುರಿತ ಅಮೂಲ್ಯ ಅಧಿಕೃತ ಮಾಹಿತಿ ನೀಡುತ್ತವೆ. ಅನಂತರ ಈ ಕೃತಿಗಳ ಮಾಹಿತಿಯು ಸಂಗ್ರಹ ರೂಪದಲ್ಲಿ ಇಂಪೀರಿಯಲ್ ಗೆಜೆಟಿಯರ್‌ನ ಭಾಗವಾಯಿತು. ಕನ್ನಡದಲ್ಲಿ ಗ್ರಂಥಸಂಪಾದನೆಯ ಕಾರ್ಯವನ್ನು ಆರಂಭಿಸಿದವರಲ್ಲಿ ರೈಸರೂ ಒಬ್ಬರು. ಇವರ ಈ ಕಾರ್ಯದಲ್ಲಿ ಜಿ.ಎಸ್. ಪಾಠಕ್ ಮುಂತಾದ ಸ್ಥಳೀಯ ವಿದ್ವಾಂಸರು ನೆರವಾದರು. ರೈಸರು ಸಂಚಾರ ಮಾಡುತ್ತಿದ್ದಾಗ ಸಂಗ್ರಹಿಸಿದ ಓಲೆಗರಿ ಗ್ರಂಥಗಳ ಪ್ರಕಟಣೆಗಾಗಿ ಓರಿಯಂಟಲ್ ಲೈಬ್ರರಿ ಎಂಬ ಗ್ರಂಥಭಂಡಾರ ದಡಿಯಲ್ಲಿ ಕರ್ನಾಟಕ ಭಾಷಾಭೂಷಣ (1884), ಕರ್ನಾಟಕ ಶಬ್ದಾನುಶಾಸನ (1890), ಪಂಪರಾಮಾಯಣ (1892), ಪಂಪಭಾರತ (1898), ಕವಿರಾಜಮಾರ್ಗ (1898), ಕಾವ್ಯಾವಲೋಕ, ಅಮರಕೋಶ – ಮುಂತಾದ ಕೆಲವು ಅಮೂಲ್ಯ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ, ಬಿಬ್ಲಿಯೋಥಿಕ ಕರ್ನಾಟಿಕ ಗ್ರಂಥ ಮಾಲಿಕೆಯಲ್ಲಿ ಪ್ರಕಟಿಸಿದರು.

ಸು.2000 ವರ್ಷಗಳಷ್ಟು ಪ್ರಾಚೀನತಮ ಅಗಸ್ಟಸ್ ಹಾಗೂ ಟೈಬೀರಿಯಸ್ ರಾಜರ ಅಧಿಕೃತಮುದ್ರೆಯುಳ್ಳ ರೋಮನ್ ಬೆಳ್ಳಿನಾಣ್ಯಗಳನ್ನು ಬೆಂಗಳೂರಿನಲ್ಲಿರುವ ವಿಮಾನ ಕಾರ್ಖಾನೆಯ ಬಳಿ 1891ರಲ್ಲಿ ಪತ್ತೆಯಾಯಿತು. ರೋಮನ್‌ಸಾಮ್ರಾಜ್ಯಕ್ಕೂ ಕರ್ನಾಟಕಕ್ಕೂ ಇದ್ದ ವ್ಯಾಪಾರ ಸಂಬಂಧದ ಬಗ್ಗೆ ರೈಸ್ ಬೆಳಕು ಚೆಲ್ಲಿದರು.

ಅಲ್ಲದೆ ಇವರು ಬರೆದ ಕನ್ನಡ ನಾಡಿನ ಸಾಹಿತ್ಯ ಚರಿತ್ರೆ ಕುರಿತ ಸು. 70 ಲೇಖನಗಳು ಇಂಡಿಯನ್ ಆಂಟಿಕ್ವೆರಿ ಮುಂತಾದ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ತಾವು ಕೆಲವು ಲಾವಣಿಗಳನ್ನು ಸಂಗ್ರಹಿಸಿದ ಅಂಶವನ್ನು ರೈಸ್ ಅವರು ಹೇಳಿಕೊಂಡಿದ್ದಾರೆ. ಇವರಿಗೆ ಕನ್ನಡ ಭಾಷೆಯ ಬಗ್ಗೆ ತುಂಬ ಪ್ರೀತಿಯಿತ್ತು. ರೈಸ್ ಅವರ ಮಹತ್ತ್ವದ ಕೊಡುಗೆ ಎಂದರೆ ಇವರು ಪ್ರಕಟಿಸಿದ ಶಾಸನಗಳು. ಮೈಸೂರು ಸರ್ಕಾರ 1884ರಲ್ಲಿ ಪ್ರಾಚ್ಯವಸ್ತು ಸಂಶೋಧನ ಶಾಖೆಯನ್ನು ಆರಂಭಿಸಿದಾಗ ರೈಸ್‌ರವರನ್ನು ಈ ಶಾಖೆಯ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಈ ಅವಧಿಯಲ್ಲಿ ರೈಸ್ ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಲ್ಲಿ ದೊರೆಯುವ ಅನೇಕ ಶಾಸನಗಳನ್ನು ಸಂಗ್ರಹಿಸಬೇಕೆಂಬ ಯೋಜನೆಯನ್ನು ಕೈಗೊಂಡು 1886ರಲ್ಲಿ ಕೊಡಗಿನ 23 ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಿಕದ ಮೊದಲ ಸಂಪುಟವಾಗಿ ಪ್ರಕಟಿಸಿದರು. ಇದು ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಗೆ ನಾಂದಿಯಾಯಿತು. 1889ರಲ್ಲಿ ಹೊರತಂದ ಎರಡನೆಯ ಸಂಪುಟದಲ್ಲಿ ಶ್ರವಣಬೆಳಗೊಳದಲ್ಲಿ ದೊರೆತ 144 ಶಾಸನಗಳು ಸೇರಿದ್ದವು. ಇವೆರಡೂ ಸಂಪುಟಗಳ ಪ್ರಕಟಣೆಯಿಂದ ಅಪಾರ ಶಾಸನ ಸಂಪತ್ತಿನ ಪ್ರಾಮುಖ್ಯವನ್ನು ಅರಿತ ಆಗಿನ ದಿವಾನರಾದ ಸರ್ ಶೇಷಾದ್ರಿ ಅಯ್ಯರ್ ಅವರ ಸಲಹೆಯಂತೆ ಮೈಸೂರು ಸಂಸ್ಥಾನದಲ್ಲಿ ಪ್ರತ್ಯೇಕವಾದ ಪುರಾತತ್ತ್ವ ಇಲಾಖೆಯನ್ನು 1890ರಲ್ಲಿ ಸ್ಥಾಪಿಸಲಾಯಿತು. ಆಗ ರೈಸ್‌ರವರನ್ನು ಪುರಾತತ್ತ್ವ ಇಲಾಖೆಯ ಪೂರ್ಣಕಾಲದ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಅನಂತರ 16 ವರ್ಷಗಳ ಕಾಲ ಮೈಸೂರು ಪ್ರಾಂತದ ಪ್ರತಿ ಜಿಲ್ಲೆಯ ಹಳ್ಳಿಹಳ್ಳಿಗಳನ್ನು ಸುತ್ತಿ ಶಾಸನಗಳನ್ನು ಸಂಗ್ರಹಿಸಿ ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯಡಿ ವಿವಿಧ ಸಂಪುಟಗಳಲ್ಲಿ ಪ್ರಕಟಿಸಿದರು. 1894 ಮತ್ತು 1898ರಲ್ಲಿ ಮೈಸೂರು (ಸಂಪುಟ 3–4); 1902ರಲ್ಲಿ ಹಾಸನ (ಸಂ 5); 1901ರಲ್ಲಿ ಕಡೂರು (ಸಂ. 6); 1902 ಮತ್ತು 1904ರಲ್ಲಿ ಶಿವಮೊಗ್ಗ (ಸಂ. 7–8); 1905ರಲ್ಲಿ ಬೆಂಗಳೂರು (ಸಂ. 9); 1905ರಲ್ಲಿ ಕೋಲಾರ (ಸಂ. 10); 1903ರಲ್ಲಿ ಚಿತ್ರದುರ್ಗ (ಸಂ. 11); ಮತ್ತು 1905ರಲ್ಲಿ ತುಮಕೂರು (ಸಂ. 12)– ಹೀಗೆ 1886–1906ರವರೆಗಿನ 20 ವರ್ಷಗಳ ಅವಧಿಯಲ್ಲಿ ರೈಸ್ ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸಿದ ಶಾಸನಗಳು ಒಟ್ಟು 8,869. ಈ ಶಾಸನ ಸಂಪುಟಗಳು ಇತರ ರಾಜ್ಯಗಳಿಗೆ ಮಾದರಿಯಾದವು. ಇವುಗಳಲ್ಲಿ ಶಾಸನ ಪಾಠ ಕನ್ನಡ ಮತ್ತು ರೋಮನ್ ಲಿಪಿಗಳಲ್ಲಿದೆ ಹಾಗೂ ಇಂಗ್ಲಿಷ್‌ನಲ್ಲಿ ಭಾಷಾಂತರ ಸಾರಾಂಶವನ್ನು ಬಹುಮಟ್ಟಿಗೆ ನೀಡಿದೆ. ಅಲ್ಲದೆ ಪ್ರತಿಯೊಂದು ಸಂಪುಟದ ಮಹತ್ತ್ವವನ್ನು ಕುರಿತು ವಿಸ್ತೃತವಾದ ಮುನ್ನುಡಿಯನ್ನು ರೈಸರೇ ಬರೆದಿದ್ದಾರೆ. ಈ ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳು ಕರ್ನಾಟಕದ ಇತಿಹಾಸ – ಸಂಸ್ಕೃತಿಗಳ ಅಧ್ಯಯನಕ್ಕೆ ಮೂಲ ಆಕರಗಳಾಗಿವೆ. ಕೆಲವು ಶಾಸನಗಳು ಭಾರತದ ಇತಿಹಾಸ – ಸಂಸ್ಕೃತಿಗಳ ಮೇಲೂ ಮಹತ್ತ್ವದ ಬೆಳಕನ್ನು ಬೀರುತ್ತವೆ. ಈ ಸಂಪುಟಗಳಿಗೆ ಮುಂದೆ ಆರ್. ನರಸಿಂಹಾಚಾರ್ಯ, ಎಂ.ಎಚ್.ಕೃಷ್ಣ ಮೊದಲಾದ ವಿದ್ವಾಂಸರು ಹೊಸ ಶಾಸನಗಳನ್ನು ಸೇರಿಸಿದರು. ಈ ಶಾಸನಗಳಿಂದ ತಿಳಿದುಬರುವ ಇತಿಹಾಸವನ್ನು ಸಂಗ್ರಹವಾಗಿ ತಿಳಿಸುವ ಮೈಸೂರ್ ಅಂಡ್ ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್ ಎಂಬ ಕೃತಿಯನ್ನು ರೈಸ್ 1909ರಲ್ಲಿ ಹೊರತಂದರು. ಇದರಲ್ಲಿ ಎಪಿಗ್ರಾಫಿಯ ಕರ್ನಾಟಿಕದ 12 ಸಂಪುಟಗಳ ಎಲ್ಲ ಶಾಸನಗಳಿಂದ ತಿಳಿದು ಬರುವ ಕರ್ನಾಟಕದ ಚರಿತ್ರೆಯ ತಿರುಳನ್ನು ಚಿತ್ತಾಕರ್ಷಕ ಶೈಲಿಯಲ್ಲಿ ನಿರೂಪಿಸಿದ್ದಾರೆ. ರೈಸ್ ಅವರು ಸಂಗ್ರಹಿಸಿ ಪ್ರಕಟಿಸಿದ ಶಾಸನ ಸಂಪುಟಗಳು ಪರಿಷ್ಕೃತಗೊಂಡು, ಇನ್ನಷ್ಟು ಹೊಸ ಶಾಸನಗಳೊಂದಿಗೆ ಈಚಿನ ದಶಕಗಳಲ್ಲಿ ಪ್ರಕಟಗೊಳ್ಳುತ್ತಿವೆ. ಕನ್ನಡ ನಾಡಿಗೆ ಸಂಬಂಧಿಸಿದಂತೆ ರೈಸರಿಗೆ ಯುಕ್ತವಾಗಿಯೆ ಶಾಸನಾಧ್ಯಯನ ಪಿತಾಮಹ ಎಂಬ ಖ್ಯಾತಿ ಲಭಿಸಿದೆ. ಬ್ರಿಟಿಷ್ ಸರ್ಕಾರ ಸಿ.ಐ.ಇ. (ಕಂಪ್ಯಾನಿಯನ್ ಆಫ್ ದಿ ಆರ್ಡರ್ ಆಫ್ ದಿ ಇಂಡಿಯನ್ ಎಂಪೈರ್) ಎಂಬ ಪದವಿಯನ್ನು ಇವರಿಗೆ ನೀಡಿ ಗೌರವಿಸಿತು. ಮದರಾಸು ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪದವಿಯನ್ನಿತ್ತು ಗೌರವಿಸಿತು. ಪ್ರಸಿದ್ಧ ವಿದ್ವಾಂಸ ಎಲ್.ಡಿ.ಬಾರ್ನೆಟ್ ರವರು ಇಂಡಿಯನ್ ಆಂಟಿಕ್ವೆರಿ ನಿಯತಕಾಲಿಕೆಯ ವಿಶೇಷ ಸಂಚಿಕೆಯಲ್ಲಿ ಬಿ.ಎಲ್.ರೈಸ್‌ರನ್ನು ಕುರಿತು ಅವಿಶ್ರಾಂತ ದುಡಿಮೆ, ನಿರಂತರ ಅಧ್ಯಯನ, ಸತ್ಯಾನ್ವೇಷಣೆಗಾಗಿ

ಮನಃಪೂರ್ವಕ ಅರ್ಪಣೆ–ಇವುಗಳಿಂದ ರೈಸ್‌ರವರು ದಕ್ಷಿಣಭಾರತದ ಚರಿತ್ರೆ – ಸಾಹಿತ್ಯಗಳ ಅಭ್ಯಾಸಕ್ಕೆ ಉತ್ತೇಜನಕೊಟ್ಟು ಜ್ಞಾನಾರ್ಜನೆಗೆ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ ಎಂದು ಬರೆದರು. ಇವರು 1927 ಜುಲೈ 10 ರಂದು ನಿಧನರಾದರು. (ಜಿ.ಟಿ.ಎಸ್.)

**ರೈಸ್, ಇ. ಪಿ.:** 1849–1936. ಕನ್ನಡಕ್ಕಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸರಲ್ಲೊಬ್ಬರು. 1849 ಏಪ್ರಿಲ್ 26 ರಂದು ಬೆಂಗಳೂರಿನಲ್ಲಿ ಜನಿಸಿದರು. ಎಡ್ವರ್ಡ್ ಪೀಟರ್ ರೈಸ್ ಎಂಬುದು ಇವರ ಪೂರ್ಣ ಹೆಸರು. ಕ್ರೈಸ್ತಧರ್ಮ ಪ್ರಚಾರಕರಾಗಿದ್ದ ಇವರ ತಂದೆ ಬೆಂಜಮಿನ್ ಹೋಲ್ಟ್ ರೈಸ್‌ರು ಬೆಂಗಳೂರಿನ ಲಂಡನ್ ಮಿಷನರಿ ಸೊಸೈಟಿಯಲ್ಲಿ ಕೆಲಸ ನಿರ್ವಹಿಸಿದವರು. ಶಾಸನಾಧ್ಯಯನ ಪಿತಾಮಹರೆಂಬ ಖ್ಯಾತಿ ಪಡೆದಿರುವ ಬೆಂಜಮಿನ್ ಲೂಯಿ ರೈಸ್ ಇವರ ಹಿರಿಯ ಸಹೋದರರು. ಹಾಗಾಗಿ ಇವರುಗಳನ್ನು ಕನ್ನಡ ಸಾಹಿತ್ಯ ವಲಯದಲ್ಲಿ ಒಂದೇ ಕುಟುಂಬದ ತ್ರಿಮೂರ್ತಿ ವಿದ್ವಾಂಸರೆಂದೇ ಗುರುತಿಸಲಾಗಿದೆ. ತಂದೆಯೊಂದಿಗೆ ಬೆಂಗಳೂರಿನಲ್ಲಿ ಬೆಳೆದ ಇವರು ಕ್ರೈಸ್ತಧರ್ಮದ ಜೊತೆಗೆ ಕನ್ನಡ ಭಾಷೆ–ಸಾಹಿತ್ಯಗಳನ್ನು ಅಭ್ಯಾಸ ಮಾಡಿದರು. ಬೆಂಗಳೂರು ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಕ್ರೈಸ್ತಧರ್ಮ ಪ್ರಚಾರಕರಾಗಿ 1873–95ರ ತನಕ ಕೆಲಸ ನಿರ್ವಹಿಸಿದ ಇವರು ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿಯೂ ಸೇವೆ ಸಲ್ಲಿಸಿದರು. ಒಟ್ಟಾರೆ ಧರ್ಮಪ್ರಚಾರ, ವಿದ್ಯಾಪ್ರಸಾರ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವಿಶ್ರಾಂತವಾಗಿ ದುಡಿದು 1915 ರಲ್ಲಿ ಸ್ವದೇಶಕ್ಕೆ ಮರಳಿದರು.

ಕ್ರೈಸ್ತಧರ್ಮದ ಇತಿಹಾಸ ಮತ್ತು ಆಚರಣೆಯನ್ನು ಕುರಿತು ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿದ ಇವರು ಹಳೆಯ ಒಡಂಬಡಿಕೆ(ಓಲ್ಡ್ ಟೆಸ್ಟಮೆಂಟ್)ಯನ್ನು ಸರಳಗನ್ನಡದಲ್ಲಿ ಬರೆದು ಪ್ರಕಟಿಸಿದರು (1890). ಅಲ್ಲದೆ ಹೊಸ ಒಡಂಬಡಿಕೆಯನ್ನು ಆಧರಿಸಿ ಮೋಸಸ್‌ನ ಧರ್ಮಶಾಸ್ತ್ರದಲ್ಲಿ ಆದಿಕಾಂಡವೆಂಬ ಮೊದಲ ಭಾಗವನ್ನು 1908 ರಲ್ಲೂ ಮೋಸಸ್ ಧರ್ಮಶಾಸ್ತ್ರದಲ್ಲಿ ಯಾತ್ರಾಕಾಂಡವೆಂಬ ದ್ವಿತೀಯ ಭಾಗವನ್ನು 1909ರಲ್ಲೂ ಕನ್ನಡದಲ್ಲಿ ಬರೆದು ಪ್ರಕಟಿಸಿದರು. ಹಾಗೆಯೇ ಕನ್ನಡ ಬೈಬಲ್ ಕೀರ್ತನೆಗಳೆಂಬ ಕಿರುಹೊತ್ತಗೆಯನ್ನು ಮತ್ತು ಬೈಬಲ್ ಕುರಿತ ಹಲವು ಲೇಖನಗಳನ್ನು ಕನ್ನಡದಲ್ಲಿ ಬರೆದರು. ಇವರು ಬರೆದ ಎರಡು ಹಾಡುಗಳು ಕನ್ನಡ ಸಂಗೀತ ಸಂಗ್ರಹ ದಲ್ಲಿ ಪ್ರಕಟವಾಗಿವೆ.

ಆಂಗ್ಲ ಭಾಷೆಯಲ್ಲಿ ರೈಸರು ಮೂರು ಕೃತಿಗಳನ್ನು ರಚಿಸಿದ್ದಾರೆ. ಇವರು 1915 ರಲ್ಲಿ ಪ್ರಕಟಿಸಿದ ಎ ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್ ಎಂಬುದು ಆಂಗ್ಲಭಾಷೆಯಲ್ಲಿ ರಚಿತವಾದ ಮೊದಲ ಕನ್ನಡ ಸಾಹಿತ್ಯ ಚರಿತ್ರೆಯಾಗಿದೆ. ಇದು ಕನ್ನಡ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಮಹತ್ತ್ವದ ಕೃತಿಯಾಗಿದೆ ಮತ್ತು ಕನ್ನಡ ಸಾಹಿತ್ಯವನ್ನು ಒಟ್ಟಾಗಿ ಗ್ರಹಿಸುವ ಮೊದಲ ಪ್ರಯತ್ನವೆನ್ನಬಹುದು. 12 ಅಧ್ಯಾಯಗಳ ಈ ಕೃತಿಯಲ್ಲಿ ಜೈನ, ವೀರಶೈವ, ವೈಷ್ಣವ, ಆಧುನಿಕ–ಎಂಬ ನಾಲ್ಕು ವಿಭಾಗಗಳಲ್ಲಿ ಕನ್ನಡ ಸಾಹಿತ್ಯದ ಒಂದು ಸ್ಥೂಲ ಪರಿಚಯವನ್ನು ಮಾಡಿಕೊಡಲಾಗಿದೆ. ಕನ್ನಡ ಸಾಹಿತ್ಯದ ವಿಮರ್ಶೆಯನ್ನು ಮಾಡುತ್ತಾ ಇವರು ನೀಡಿರುವ ಕೆಲವು ಅಭಿಪ್ರಾಯಗಳು ಗಮನಾರ್ಹವಾಗಿವೆ. ಇವರ ಅನುವಾದ ಸಾಮರ್ಥ್ಯ ಉತ್ತಮ ಮಟ್ಟದ್ದು, ಹಾಗೆಯೇ ಈ ಕೃತಿಯಲ್ಲಿ ಅನೇಕ ಅಂಶಗಳು ಅಪೂರ್ಣವಾಗಿವೆ. ಕೆಲವು ದೋಷಗಳೂ ಇವೆ. ಈ ಕೃತಿಯನ್ನು ಸಂಗಮನಾಥ ಜಿ.ಹಂಡಿ ಮತ್ತು ಪೌಲಿನಾ ಎಂ. ನಂದಗಾಂ ಅವರುಗಳು ಕನ್ನಡ ಭಾಷೆಗೆ ಭಾಷಾಂತರಿಸಿದ್ದಾರೆ. ಆಂಗ್ಲ ಭಾಷೆಯಲ್ಲಿ ಬರೆದ ಇವರ ಇತರ ಕೃತಿಗಳಿವು: ಬೆಂಜಮಿನ್ ರೈಸ್ ಆರ್ ಫಿಫ್ಟಿ ಇಯರ್ಸ್ ಇನ್ ದಿ ಮಾಸ್ಟರ್ಸ್ ಸರ್ವಿಸ್ ಮತ್ತು ದಿ ಮಹಾಭಾರತ ಅನ್ಯಾಲಿಸಿಸ್ ಅಂಡ್ ಇಂಡೆಕ್ಸ್. ಇವರು ಇಂಗ್ಲೆಂಡಿನ ಹ್ಯಾರೋ ಪಟ್ಟಣದಲ್ಲಿ ತಮ್ಮ ವಿಶ್ರಾಂತ ಜೀವನ ನಡೆಸಿ 1936ರ ಜುಲೈನಲ್ಲಿ ನಿಧನರಾದರು.

(ಜಿ.ಟಿ.ಎಸ್.)

**ರೋಜಡಿ:** ಗುಜರಾತ್ ರಾಜ್ಯದ ಸೌರಾಷ್ಟ್ರ ಪ್ರದೇಶದಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿ ವಿ.ಪಿ. ಪಾಂಡ್ಯ ಅವರು 1962–65ರವರೆಗೆ ಉತ್ಖನನ ಮಾಡಿದರು. ಹರಪ್ಪ ಸಂಸ್ಕೃತಿಯ ಮೂರು ಹಂತಗಳನ್ನು ಇಲ್ಲಿ ಗುರುತಿಸಲಾಯಿತು. ಜೊತೆಗೆ ಹೊಳಪಿನ ಕೆಂಪುಪಾತ್ರೆ (100–300) ಮತ್ತು ಮಧ್ಯಯುಗೀನ ಕಾಲದ ವಸತಿ ಅವಶೇಷಗಳು ದೊರೆತವು. ಇಂಗಾಲ–14 ಕಾಲಮಾನದ ಪ್ರಕಾರ ಆದಿ ಹರಪ್ಪ ಸಂಸ್ಕೃತಿಯ ಕಾಲಮಾನ ಪ್ರ.ಶ.ಪೂ.2260–1925. 1982–86 ಮತ್ತು 1992–95ರವರೆಗೆ ಇಲ್ಲಿ ಮತ್ತೆ ಉತ್ಖನನ ಮಾಡಲಾಗಿ ಹರಪ್ಪ ಸಂಸ್ಕೃತಿಯ ಮೂರು ಹಂತಗಳ ಕಾಲಮಾನವನ್ನು ನಿರ್ದಿಷ್ಟವಾಗಿ ಗೊತ್ತುಮಾಡಲಾಯಿತು. ಇವು: ಹಂತ ಸಿ– ಪ್ರ.ಶ.ಪೂ.1900–1700, ಹಂತ ಬಿ– ಪ್ರ.ಶ.ಪೂ.2200–1900 ಮತ್ತು ಹಂತ ಎ–ಪ್ರ.ಶ.ಪೂ.2500–2200. ಇಲ್ಲಿಯ ಮಣ್ಣಿನ ಮನೆಗಳು ಕಲ್ಲುಗುಂಡುಗಳ ತಳಪಾಯದ ಮೇಲೆ ನಿರ್ಮಿತವಾಗಿವೆ. ಸುಟ್ಟ ಇಲ್ಲವೆ ಹಸಿಇಟ್ಟಿಗೆಗಳ ಬಳಕೆಯಿಲ್ಲ. ಸ್ನಾನದ ಕಟ್ಟೆ, ಬಾವಿ, ಚರಂಡಿ ಮುಂತಾದುವುಗಳು ಇಲ್ಲಿ ಇಲ್ಲ. ನೆಲೆಯ ದಕ್ಷಿಣದಲ್ಲಿ ಕಟ್ಟಡಗಳನ್ನು ಎ ಮತ್ತು ಬಿ ಹಂತಗಳ ಅವಶೇಷಗಳ ಮೇಲೆ ನಿರ್ಮಿಸಲಾಗಿತ್ತು. ಪೂರ್ವಭಾಗದಲ್ಲಿಯ ತ್ರಿಕೋಣಾಕೃತಿಯ ಕಟ್ಟಡ ಅಪರೂಪವಾದುದು. ನೆಲೆಯ ಪಶ್ಚಿಮ ಭಾಗದಲ್ಲಿ ಒಳ ಸುತ್ತಿನ ಕೋಟೆಯ ಭಾಗಗಳಿದ್ದುವು. ಈ ನೆಲೆಯಲ್ಲಿ ಒಂದು ಭಾಗದಲ್ಲಿ ಜನವಸತಿಯಿದ್ದರೆ ಇನ್ನೊಂದು ಭಾಗದಲ್ಲಿ ಪ್ರಾಣಿಗಳ ಕೊಟ್ಟಿಗೆಯಿತ್ತು. ವಸತಿಯ ಕೇಂದ್ರಭಾಗದಲ್ಲಿ ಅಂಗಳವಿರುವ ಮನೆಗಳ ಸಾಲು ಇತ್ತು. ಇದರ ಸಮೀಪದಲ್ಲಿಯೇ ಇಕ್ಕಟಾದ ಉದ್ದನೆಯ ಕೊಟ್ಟಿಗೆ, ಪೂರ್ವಭಾಗದಲ್ಲಿ ದವಸ ಒಕ್ಕುವ ಸ್ಥಳ ಮತ್ತು ಧಾನ್ಯ ಸಂಗ್ರಹದ ಕಣಜಗಳಿದ್ದುವು. ಸಿ ಹಂತದಲ್ಲಿ ಹೊರಸುತ್ತಿನ ರಕ್ಷಣಾ ಗೋಡೆಯನ್ನು ಕಟ್ಟಲಾಯಿತು. ಇದರಲ್ಲಿ ಮಹಾದ್ವಾರವಿದೆ. ಆದರೆ ದ್ವಾರದಲ್ಲಿ ಮತ್ತು ಗೋಡೆಗಳಲ್ಲಿ ಎಲ್ಲಿಯೂ ಕೊತ್ತಳಗಳಿಲ್ಲ. ಇದು ಬಹುಶಃ ದನಕರುಗಳು ತಪ್ಪಿಸಿಕೊಳ್ಳದಂತೆ ಕಟ್ಟಿದ ಗೋಡೆಯಾಗಿರಬೇಕು. ಉತ್ಖನನದಲ್ಲಿ ಒಂದು ದೊಡ್ಡ ಚಚ್ಚೌಕ ಕಟ್ಟಡ ಕಂಡುಬಂದಿದೆ. ಯಾವ ಉದ್ದೇಶಕ್ಕಾಗಿ ಇದನ್ನು ಕಟ್ಟಲಾಗಿದೆ ಯೆಂಬುದು ತಿಳಿದಿಲ್ಲ. ಈ ನೆಲೆಯಿಂದ ವಿವಿಧ ಸಸ್ಯಗಳ ಸು. 10,000 ಕಾಳುಗಳನ್ನು ಸಂಗ್ರಹಿಸಲಾಗಿದೆ. ರಾಗಿ, ಜೋಳ ಇವು ವಿಶೇಷವಾಗಿ ಕಂಡುಬಂದ ಕಾಳುಗಳು. ಇವರು ಆಹಾರಕ್ಕಾಗಿ ಕಾಳುಕಡ್ಡಿಗಳನ್ನು ಬೆಳೆಯುತ್ತಿದ್ದರು ಮತ್ತು ಹಣ್ಣು–ಕಾಯಿಗಳನ್ನು ಸಂಗ್ರಹ ಮಾಡುತ್ತಿದ್ದರೆಂಬುದು ಇದರಿಂದ ಖಚಿತಪಟ್ಟಿದೆ. ಕೆಂಪು ಮತ್ತು ಕಂದು–ಹಳದಿ ಬಣ್ಣದ ಪಾತ್ರೆಗಳು, ತಟ್ಟೆ, ಹಿಡಿಯಿರುವ ಬಟ್ಟಲು, ಜಾಡಿ ಮುಂತಾದವು ಇಲ್ಲಿ ಸಿಕ್ಕಿವೆ. ಆದರೆ ಸಿಂಧ್ ಪ್ರದೇಶದ ಹರಪ್ಪ ನಾಗರಿಕತೆಯ ವಿಶಿಷ್ಟ ಪಾತ್ರೆಗಳು ಕಂಡುಬಂದಿಲ್ಲ. ಚಪ್ಪಟೆಯಾಗಿರುವ ತಾಮ್ರದ ಕೊಡಲಿ, ಪರಶುವಿನ ಆಕಾರದ ಕೊಡಲಿ, ಮೀನಿನ ಗಾಳ ಮುಂತಾದ ತಾಮ್ರದ ವಸ್ತುಗಳು ಸಿಕ್ಕಿರುವುದು ವಿಶೇಷ. ಪರಶುವಿನ ಮೇಲೆ ನಾಲ್ಕು ಗಂಟಿನ ರೇಖಾಚಿತ್ರವಿದೆ. ಒಂದೇ ಒಂದು ಒಡೆದ ಮಣಿ ಇಲ್ಲಿ ಸಿಕ್ಕಿದೆ. ಈ ನೆಲೆಯಲ್ಲಿ ಯಾವುದೇ ವಿಧದ ಕೈಗಾರಿಕಾ ಚಟುವಟಿಕೆಯ ಅವಶೇಷಗಳು ಸಿಕ್ಕಿಲ್ಲದಿರುವುದು ಗಮನಾರ್ಹ. ಈ ಎಲ್ಲ ಆಧಾರಗಳಿಂದ ಹರಪ್ಪ ಸಂಸ್ಕೃತಿಯ ಕಾಲದಲ್ಲಿ ಇದು ಕೃಷಿಕರ ಮತ್ತು ಪಶುಪಾಲಕರ ನೆಲೆಯಾಗಿತ್ತೆಂದು ಹೇಳಬಹುದು. ಹರಪ್ಪ ನಾಗರಿಕತೆ ಶಾಶ್ವತವಾಗಿ ಅಳಿಯಲಿಲ್ಲ; ಹೊಸ ಜೀವನಶೈಲಿಯ ರೂಪದಲ್ಲಿ ಮುಂದುವರಿಯಿತೆಂಬುದನ್ನು ಇದರಿಂದ ತಿಳಿಯಬಹುದು. (ಎ.ಎಸ್.;ಎನ್.ಎಲ್.)

**ರೋಪರ್ (ರೂಪರ್):** ಪೂರ್ವ ಪಂಜಾಬಿನ ಅಂಬಾಲ ಜಿಲ್ಲೆಯ ಸಟ್ಲೆಜ್‌ನದಿ ಎಡದಂಡೆಯ ಮೇಲಿರುವ ಹರಪ್ಪ ಸಂಸ್ಕೃತಿಯ ವಸತಿ ನೆಲೆ. 1953–56ರಲ್ಲಿ ವೈ.ಡಿ. ಶರ್ಮ ಅವರು ಉತ್ಖನನ ನಡೆಸಿ ನಾಲ್ಕು ಸಾಂಸ್ಕೃತಿಕ ಹಂತಗಳನ್ನು ಇಲ್ಲಿ ಗುರುತಿಸಿದ್ದಾರೆ. ಮೊದಲನೆಯದು ಹರಪ್ಪ ಸಂಸ್ಕೃತಿಯ ಹಂತ. ವರ್ಣಚಿತ್ರಿತ ಬೂದುಬಣ್ಣದ ಮಣ್ಪಾತ್ರೆ ಸಂಸ್ಕೃತಿಯಕಾಲ, ಕುಷಾಣ ಮತ್ತು ಗುಪ್ತರಕಾಲ ಹಾಗೂ ಮಧ್ಯಯುಗೀನ ಕಾಲಗಳು

ರೋಪರ್‌ನಲ್ಲಿರುವ ಕುಂದರಿಕೆ ಬಾವಿಗಳು

ಅನಂತರದ ಹಂತಗಳಾಗಿವೆ. ಅತ್ಯಂತ ಕೆಳಸ್ತರದಲ್ಲಿರುವ ಹರಪ್ಪ ಸಂಸ್ಕೃತಿಯ ಅವಶೇಷಗಳಿಂದ ನಗರ ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲವಾದರೂ ಈ ಸಂಸ್ಕೃತಿಯ ಇತರ ಲಕ್ಷಣಗಳೆನಿಸಿರುವ ಒಳ ಚರಂಡಿ ವ್ಯವಸ್ಥೆ ಹಾಗೂ ವೇದಿಕೆಗಳು ಇಲ್ಲಿಯೂ ಕಂಡುಬಂದಿವೆ.

ಈ ನೆಲೆಯಲ್ಲಿ ಸ್ಟಿಯಟೈಟ್‌ನ ಚಕ್ರಾಕಾರದ ಮಣಿಗಳು, ತಾಮ್ರದ ಕೊಡಲಿ, ಚೆರ್ಟ್‌ಕಲ್ಲಿನ ಉದ್ದ ಅಲಗು, ಘನಾಕೃತಿಯ ತೂಕದ ಬಟ್ಟುಗಳು, ಚಿತ್ರಲಿಪಿಯುಳ್ಳ ಚದರಾಕಾರದ ಸ್ಟಿಯಟೈಟ್ ಮುದ್ರೆ ದೊರೆತಿವೆ. ಇವೆಲ್ಲವೂ ಸಿಂಧೂ–ಸರಸ್ವತಿ ಸಂಸ್ಕೃತಿ ನಾಗರಿಕತೆಯ ವೈಶಿಷ್ಟ್ಯಗಳೇ ಆಗಿವೆ. ಹರಪ್ಪ ಮಾದರಿಯ ಕೆಲವು ಮಣ್ಪಾತ್ರೆಗಳೂ ದೊರೆತಿವೆ. ಕೊಕ್ಕುಳ್ಳ ಪಾತ್ರೆ (ಬೀಕರ್) ಇಂಥ ಒಂದು ಉದಾಹರಣೆ. ಎಸ್ ಆಕಾರವುಳ್ಳ ಪಾತ್ರೆ ಇಲ್ಲಿ ವಿರಳವಾಗಿರುವುದು ಒಂದು ವಿಶೇಷ. ಈ ನೆಲೆಯಲ್ಲಿ ದೊರೆತಿರುವ ಏಕೈಕ ಮುದ್ರೆಯಲ್ಲಿ ಪ್ರಾಣಿಯ ಆಕೃತಿಯಾಗಲೀ ರಂಧ್ರಗಳಿರುವ ಗುಬುಟಾಗಲೀ ಇಲ್ಲ. ಇವು ಲೋಥಲ್‌ನ ಹರಪ್ಪ ಸಂಸ್ಕೃತಿಯ ಪ್ರೌಢ ಹಂತದ ಮುದ್ರೆಗಳಿಗಿಂತ ಅಂತ್ಯ ಕಾಲದ ಮುದ್ರೆಗಳಿಗೆ ಹೆಚ್ಚು ಹೋಲುತ್ತವೆ. ಸಿಂಧೂ–

ಸರಸ್ವತಿ ನಾಗರಿಕತೆಯ ಇಳಿಮುಖ ಕಾಲದ ಕುರುಹಾಗಿರುವ ಚೂಪಾದ ತಳವುಳ್ಳ ಮಡಕೆ (ಪಾಯಿಂಟೆಡ್ ಗಾಬ್ಲೆಟ್) ಇಲ್ಲಿ ದೊರೆತಿದೆ. ಹರಪ್ಪ ಜನ ರೋಪರ್‌ನಲ್ಲಿ ಬಹಳ ತಡವಾಗಿ ಬಂದು ನೆಲೆಸಿರುವುದಕ್ಕೆ ಇದು ಸ್ಪಷ್ಟಸೂಚನೆ ಎಂದು ಹೇಳಲಾಗಿದೆ. ಹರಪ್ಪದಲ್ಲಿ ಕಂಡುಬರುವ ವಿಶಿಷ್ಟ ಮಣ್ಪಾತ್ರೆ ಮಾದರಿಗಳೆಂದರೆ ಕಾಲಿರುವ ತಟ್ಟೆ, ರಂಧ್ರಗಳುಳ್ಳ ಕೊಳವೆಯಾಕಾರದ ಜಾಡಿ, ಸಣ್ಣಕತ್ತಿನ ಜಾಡಿ ಮತ್ತು ಕಿರಿದಾದ ಹಾಗೂ ತೆಳ್ಳಗಿನ ದೊಡ್ಡ ತಟ್ಟೆಗಳು ಮತ್ತು ವರ್ಣಚಿತ್ರಿತ ಬೂದುಬಣ್ಣದ ಮಣ್ಪಾತ್ರೆಗಳು. ಮುದ್ರೆಗಳ ಹೋಲಿಕೆಯ ಮೇಲೆ ಈ ನೆಲೆ ಹರಪ್ಪ ಸಂಸ್ಕೃತಿಯ ಪ್ರೌಢಾವಸ್ಥೆಯ ಕಾಲದ್ದೆಂದು (ಪ್ರ.ಶ.ಪೂ.2100–1400) ಹೇಳಬಹುದು. ಇಲ್ಲಿ ಆಯತಾಕಾರದ ಇಟ್ಟಿಗೆಯ ವೇದಿಕೆ ಇರುವುದು ವಿಶೇಷ. ರೋಪರ್ ಮತ್ತು ಹರಪ್ಪ ನೆಲೆಯನ್ನು ಬಿಟ್ಟರೆ ಕಪ್ಪು–ಕೆಂಪು ದ್ವಿವರ್ಣದ ಮಡಕೆಗಳು ಅಪರೂಪವಾಗಿ ಗುಜರಾತಿನ ಲೋಥಲ್, ಸುರಕೋಟಡ ಮುಂತಾದ ನೆಲೆಗಳಲ್ಲಿವೆ.

ಈ ನೆಲೆಯಲ್ಲಿ ಯಾವುದೇ ಧಾರ್ಮಿಕ ಕಟ್ಟಡಗಳು ದೊರೆತಿಲ್ಲ. ನೆಲೆಯ ಪಶ್ಚಿಮದಲ್ಲಿ ಈ ಜನರ ಸಮಾಧಿಗಳಿವೆ. ಸಮಾಧಿ ಗುಂಡಿಗಳು ಸಾಮಾನ್ಯವಾಗಿ 2.4x1.0ಮೀ ಉದ್ದಗಲ ಹಾಗೂ 0.67ಮೀ ಆಳವಾಗಿವೆ. ಒಟ್ಟು 13 ಸಮಾಧಿಗಳಲ್ಲಿ 13 ವ್ಯಕ್ತಿಗಳ ಅಸ್ಥಿಪಂಜರಗಳು ದೊರೆತಿವೆ. ತಲೆ ವಾಯವ್ಯ ದಿಕ್ಕಿಗಿರುವಂತೆ ಶವವನ್ನು ಇಡಲಾಗಿದೆ. ಒಂದು ಕಡೆಯಲ್ಲಿ ಮಾತ್ರ ಶವವನ್ನು ಉತ್ತರ–ದಕ್ಷಿಣವಾಗಿ ಇಡಲಾಗಿದೆ. ಜಾಡಿಗಳು, ಕಾಲಿರುವ ತಟ್ಟೆ ಮಂತಾದುವುಗಳನ್ನು ಸಾಮಾನ್ಯವಾಗಿ ಶವದ ತಲೆ ಇಲ್ಲವೆ ಕಾಲುಗಳ ಬಳಿ ಇಡಲಾಗುತ್ತಿತ್ತು. ಕೆಲವು ಕಡೆ ಶವದ ಅಕ್ಕಪಕ್ಕಗಳಲ್ಲಿಟ್ಟಿರುವುದೂ ಉಂಟು. ಒಂದು ಕಡೆ ಮಾತ್ರ ಮಡಕೆಗಳ ಮೇಲೆ ಶವವನ್ನಿಟ್ಟಿರುವುದು ಕಂಡುಬಂದಿದೆ. ಈ ಸಮಾಧಿಗಳಲ್ಲಿ 2ರಿಂದ26 ಮಡಕೆಗಳಿದ್ದುದು ಕಂಡುಬಂದಿದೆ. ಜೊತೆಗೆ ಫಯಾನ್ಸ್‌ಗಾಜು ಹಾಗೂ ಶಂಖದ ಬಳೆಗಳು, ತಾಮ್ರದ ಉಂಗುರ, ಮಣಿಗಳು ದೊರೆತಿವೆ. ಒಂದು ಸಮಾಧಿಯಲ್ಲಿ ಶವದ ಎಡ ಮಣಿಕಟ್ಟಿನಲ್ಲಿ ಫಯಾನ್ಸ್‌ನ ಬಳೆ ಇದ್ದುದು ಕಂಡುಬಂದಿದೆ. ಒಂದು ಸಮಾಧಿಯ ಕೆಳಗೆ ನಾಯಿಯ ಅಸ್ಥಿಪಂಜರವಿರುವುದು ಇಲ್ಲಿಯ ಶವಸಂಸ್ಕಾರ ವಿಧಿಯ ಕುರಿತಾಗಿ ಸ್ವಲ್ಪವಾದರೂ ಬೆಳಕು ಚೆಲ್ಲಲು ಸಹಕಾರಿಯಾಗಿದೆ.

ಲೋಥಲ್‌ನಲ್ಲಿ (ಪ್ರ.ಶ.ಪೂ.2000) ಯಾವ ಜನರಿದ್ದರೋ ಬಹುಶಃ ಅದೇ ಜನಾಂಗದವರೇ ಇಲ್ಲಿಯೂ ಇದ್ದಿರಬಹುದೆಂದು ಮಾನವಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಜನಾಂಗೀಯ ದೃಷ್ಟಿಯಿಂದ 4 ಸಾವಿರ ವರ್ಷಗಳ ಹಿಂದೆ ಹರಪ್ಪ ಮತ್ತು ರೋಪರ್‌ಗಳಲ್ಲಿದ್ದ ಜನರಿಗೂ ಇಂದಿನ ಪಂಜಾಬಿನ ಜನತೆಗೂ ಹೆಚ್ಚು ವ್ಯತ್ಯಾಸವಿಲ್ಲವೆಂದು ಹೇಳಲಾಗಿದೆ. ಗುಜರಾತ್ ಮತ್ತು ಪಂಜಾಬಿನ ಜನರು ಇಂಡೊ–ಆರ್ಯನ್ ಭಾಷಾ ಕುಟುಂಬಕ್ಕೆ ಸೇರಿದವರು. ಸಿಂಧೂ ಬಯಲು ಹಾಗೂ ಗುಜರಾತಿನ ನೆಲೆಗಳಲ್ಲಿದ್ದ ಹರಪ್ಪ ಜನ ಎರಡು ಅಥವಾ ಇನ್ನೂ ಹೆಚ್ಚು ಜನಾಂಗೀಯ ವರ್ಗಗಳಿಗೆ ಸೇರಿದವರು. ಇಂಡೊ–ಆರ್ಯನ್ ಭಾಷೆ ಬಳಸುತ್ತಿರುವ ಇಂದಿನ ಜನರೊಂದಿಗೆ ಅವರ ಸಾಮ್ಯ ಪ್ರಾಯಶಃ ಹೆಚ್ಚಾಗಿದೆ ಎಂದು ಹೇಳಬಹುದು. ಮಹಾಪೂರದಂತಹ ನೈಸರ್ಗಿಕ ಅನಾಹುತಗಳ ತರುವಾಯ ಹರಪ್ಪ ಜನ ಸಿಂಧೂ ಮತ್ತು ಸಾಬರಮತಿ ಕಣಿವೆಗಳನ್ನು ತ್ಯಜಿಸಿ ಹೆಚ್ಚು ಸುರಕ್ಷಿತವಾದ ಎತ್ತರದ ಪ್ರದೇಶಗಳನ್ನು ಹುಡುಕಿಕೊಂಡು ಹೊರಟಿರಬಹುದು. ಸಿಂಧೂ ಬಯಲಿನ ಕೆಲವರು ಘಗ್ಗರ್ ಕಣಿವೆಗೂ ಮತ್ತೆ ಕೆಲವರು ಸಟ್ಲೆಜ್ ಬಯಲಿಗೂ ಹೋದರು. ಇದರಿಂದಾಗಿ ರೋಪರ್ ನೆಲೆ ಅಸ್ತಿತ್ವಕ್ಕೆ ಬಂದಿತೆಂಬ ಅಭಿಪ್ರಾಯವಿದೆ. ಈ ನೆಲೆ ನೈಸರ್ಗಿಕ ವಿಪತ್ತುಗಳಾದ ಮಹಾಪೂರ, ಭೂಕಂಪ ಅಥವಾ ಭೀಕರ ರೋಗಗಳಿಗೆ ತುತ್ತಾಗಿ ನಾಶವಾಗಿರಬಹುದು. (ಬಿ.ಸಿ.ಎಸ್.)

**ರೋಸೆಟ ಶಿಲೆ:** ಈಜಿಪ್ಟ್‌ನ ನೈಲ್ ನದಿ ಮುಖಜ ಭೂಮಿಪ್ರದೇಶದಲ್ಲಿ ಅಲೆಕ್ಸಾಂಡ್ರಿಯ ನಗರದ ಸಮೀಪ ಇರುವ ರೋಸೆಟ ಎಂಬ ಸ್ಥಳದಲ್ಲಿ ದೊರೆತ ಶಿಲಾಫಲಕ (ರೋಸೆಟ ಸ್ಟೋನ್). ಇದನ್ನು 1799ರಲ್ಲಿ ಫ್ರಾನ್ಸಿನ ಯೋಧ ಬೌಚರ್ಡ್ ಎಂಬುವವನು ಪತ್ತೆ ಮಾಡಿದ. ಇದರ ಮೇಲೆ ಹಿರೋಗ್ಲಿಫಿಕ್, ಡೆಮಾಟಿಕ್ ಮತ್ತು ಗ್ರೀಕ್ ಲಿಪಿಗಳಲ್ಲಿ ಬರೆಯಲಾಗಿರುವ ಶಾಸನ ಪಂಕ್ತಿಗಳಿವೆ. ಮೆಂಫಿಸ್ ನಗರದ ಪುರೋಹಿತರಿಂದ ಬರೆಯಲಾದ ಈ ಶಾಸನದಲ್ಲಿ ಐದನೆಯ ಟಾಲಮಿ ಎಪಿಫಾನೆಸ್ (ಪ್ರ.ಶ.ಪೂ. 205–180) ತನ್ನ ಆಳಿಕೆಯ 9ನೆಯ ವರ್ಷದಲ್ಲಿ ತಾನು ಪಟ್ಟಕ್ಕೆ ಬಂದ ಘಟನೆಯ ಸ್ಮಾರಕವಾಗಿ ಈ ಶಾಸನವನ್ನು ಬರೆಸಿದ.


ರೋಸೆಟ ಶಾಸನ

ಇಂಗ್ಲೆಂಡಿನ ಭೌತವಿಜ್ಞಾನಿ ಥಾಮಸ್ ಯಂಗ್ (1773–1829) ಈ ಶಾಸನದ ಮೇಲೆ ರಾಜರ ಹೆಸರುಗಳನ್ನು ಆಯಾಕಾರದ ಕಂಸಗಳಲ್ಲಿ ಬರೆದಿದ್ದುದನ್ನು ಪತ್ತೆಹಚ್ಚಿ 18–19ನೆಯ ಶತಮಾನಗಳಲ್ಲಿ ಓದಲು ಬರುತ್ತಿದ್ದ ಗ್ರೀಕ್ ಲಿಪಿಯ ಸಹಾಯದಿಂದ ಹಿರೋಗ್ಲಿಫಿಕ್ ಲಿಪಿಯನ್ನು ಓದುವುದು ಸಾಧ್ಯವೆಂದು ತೋರಿಸಿಕೊಟ್ಟ. ಇದಲ್ಲದೆ ರಾಜರ ಹೆಸರಿನ ಹದಿಮೂರು ಸಂಕೇತಗಳ ಪೈಕಿ ಆರಕ್ಕೆ ಸರಿಯಾದ, ಮತ್ತೆ ಮೂರಕ್ಕೆ ಬಲುಮಟ್ಟಿಗೆ ಸರಿಯಾದ ಧ್ವನ್ಯಾತ್ಮಕ ಮೌಲ್ಯಗಳನ್ನೂ ಸೂಚಿಸಿದ. ಶಿಲೆಯ ಮೇಲೆ ಬಿಡಿಸಲಾಗಿದ್ದ ಚಿತ್ರಲಿಪಿಗಳಲ್ಲಿನ ಪ್ರಾಣಿ, ಪಕ್ಷಿಗಳ ಚಿತ್ರಗಳ ಸಹಾಯದಿಂದ ಬರವಣಿಗೆಯ ದಿಕ್ಕನ್ನೂ ಸೂಚಿಸಿದ.

ಫ್ರಾನ್ಸಿನ ಜೀನ್–ಫ್ರಾಂಕಾಯ್ ಚಾಂಪೋಲಿಯಲ್ ಎಂಬ ವಿದ್ವಾಂಸ 1821–22ರಲ್ಲಿ ಯಂಗನ ಕಾರ್ಯವನ್ನು ಮುಂದುವರೆಸಿ ಹಿರೋಗ್ಲಿಫಿಕ್ ಲಿಪಿ ಮತ್ತು ಗ್ರೀಕ್ ಲಿಪಿಗಳ ಪರಸ್ಪರ ಮೌಲ್ಯಗಳನ್ನು ನಿರ್ಧರಿಸಿ ಹಿರೋಗ್ಲಿಫಿಕ್ ಲಿಪಿಯನ್ನು ಪೂರ್ಣವಾಗಿ ಓದುವ ಹಾಗೆ ಮಾಡಿದಲ್ಲದೆ ಡೆಮಾಟಿಕ್ ಲಿಪಿಯನ್ನೂ ಓದಿದ. ಕೆಲವು ಚಿಹ್ನೆಗಳು ಅಕ್ಷರ ರೂಪದಲ್ಲೂ ಕೆಲವು ವರ್ಣಾತ್ಮಕ ರೂಪದಲ್ಲೂ ಮತ್ತೆ ಕೆಲವು ಭಾವಾತ್ಮಕ ರೂಪದಲ್ಲೂ ಇವೆಯೆಂದು ಚಾಂಪೋಲಿಯನ್ ತೋರಿಸಿದ. ಶಾಸನವನ್ನು ಮೊದಲು ಗ್ರೀಕ್ ಭಾಷೆಯಲ್ಲಿ ಬರೆದು ಬಳಿಕ ಅದನ್ನು ಹಿರೋಗ್ಲಿಫಿಕ್ ಭಾಷೆಗೆ ಅನುವಾದಿಸಲಾಯಿತೆಂದೂ ನಿರ್ಧರಿಸಿದ. ಈ ನಿರ್ಧಾರಗಳು ಮುಂದೆ ವಿಪುಲವಾದ ಪ್ರಾಚೀನ ಈಜಿಪ್ಟಿನ ಬರೆಹಗಳನ್ನು ಓದಲು ಸಹಾಯಕವಾದುವು. ಈ ಶಿಲೆ ಈಗ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಮ್ಮಿನಲ್ಲಿದೆ. (ಟಿ.ವಿ.ಎಸ್.)

**ರೋಮ್:** ಪಶ್ಚಿಮ ಯುರೋಪಿನ ದಕ್ಷಿಣದಲ್ಲಿರುವ ಸರ್ವತಂತ್ರ ಸ್ವತಂತ್ರದೇಶ, ಇಟಲಿಯ ರಾಜಧಾನಿ. ಸು.2000 ವರ್ಷಗಳ ಇತಿಹಾಸವಿರುವ ಮಾನವ ಸಾಂಸ್ಕೃತಿಕ ಕೇಂದ್ರ. ಕೆಥೊಲಿಕ್ ಧರ್ಮಗುರು ಪೋಪ್ ಇರುವ ವ್ಯಾಟಿಕನ್ ನಗರವನ್ನೊಳಗೊಂಡ ಧಾರ್ಮಿಕ ಕೇಂದ್ರ ನಗರ ಹಾಗೂ ಪ್ರಸಿದ್ಧ ಐತಿಹಾಸಿಕ ಸುಂದರ ಸ್ಥಳ. ಟೆರಿನಿಯನ್ ಸಮುದ್ರಕ್ಕೆ ಪೂರ್ವದಲ್ಲಿ 16ಕಿಮೀ ದೂರದಲ್ಲಿ ಮಧ್ಯಇಟಲಿಯ ಪ್ರಸಿದ್ಧವಾದ ಏಳು ಬೆಟ್ಟಗಳ ಪ್ರದೇಶದಲ್ಲಿ ಟೈಬರ್‌ನದಿಯ ಎರಡೂ ದಂಡೆಗಳ ಮೇಲೆ ಈ ಮಹಾನಗರವಿದೆ. ಇಟಲಿ ಪರ್ಯಾಯ ದ್ವೀಪದಲ್ಲಿರುವ ರೋಮ್ ಹಿಂದೆ ರೋಮನ್ ಸಾಮ್ರಾಜ್ಯವಾಗಿತ್ತು. ಟೈಬರ್ ನದಿ ಈ ನಗರ ಮಧ್ಯದಲ್ಲಿ ಹರಿಯುವುದು. ನಗರ ಭೂಪ್ರದೇಶ ಅಸಮ ಮೈದಾನದಿಂದಲೂ ವಾಯವ್ಯ ಗಡಿಯಲ್ಲಿ ಉತ್ತರ ಮತ್ತು ಪೂರ್ವದಲ್ಲಿ ಅಪೆನ್ನೈನ್ ಪರ್ವತದ ಇಳಿಜಾರಿನಿಂದಲೂ ಕೂಡಿದೆ. ಮಧ್ಯ ಇಟಲಿಯ ಪಶ್ಚಿಮದ ಪ್ರಮುಖ ಚಿರಾಯು ನಗರವೆನಿಸಿಕೊಂಡಿದೆ. ಪ್ರ.ಶ.ಪೂ.753ರಲ್ಲಿ ಈ ನಗರ ನಿರ್ಮಾಣವಾಗಿರಬಹುದು ಎಂದು ಅಂದಾಜಿಸಲಾಗಿದೆ.

ಪ್ರಪಂಚದ ಪ್ರಮುಖ ಪುರಾತನ ಸುಂದರ ದೇವಾಲಯಗಳು, ಚರ್ಚ್,ಸಾರ್ವಜನಿಕ ಸ್ನಾನಗೃಹ, ಕ್ರೀಡಾ ಸಮುಚ್ಚಯ ಹಾಗೂ ಅರಮನೆಗಳನ್ನೊಳಗೊಂಡು ಪ್ರವಾಸಿಗರ ನೆಚ್ಚಿನ ತಾಣವೆನಿಸಿದೆ. ರೋಮ್ ಪ್ರಪಂಚದ ಪುರಾತನ ಕಲೆಗೆ ಪ್ರಸಿದ್ಧಿಯಾಗಿದೆ. ಪೋಪ್ ಜಾರ್ಜ್ XIII ಎಂಬಾತನ ಕಾಲದಲ್ಲಿ ಅನೇಕ ಸಂಸ್ಥೆಗಳು ಅಭಿವೃದ್ಧಿ ಹೊಂದಿದವು. ಪ್ರಪಂಚದ ಪ್ರಮುಖ ಗ್ರಂಥಾಲಯಗಳಾದ ಬಿಬ್ಲಿಯೋತಿಕ ನಜಿಯಾನಾಲ್ ಸೆಂಟ್ರಲ್ ವಿಟ್ಟೋರಿಯೋ ಎಮಿನೇಲೇ II, ಜೊತೆಗೆ ಫ್ಲಾರೆನ್ಸ್‌ನ ಬಿಬ್ಲಿಯೋತಿಕ ಥಿಯಾನಾಲೆ ಸೆಂಟ್ರಲ್ ಲೈಬ್ರರಿ ಬೃಹತ್ ಪ್ರಾಚೀನ ಇತಿಹಾಸದ ಗ್ರಂಥಾಲಯಗಳಾಗಿದ್ದು 15,00,000 ಪುಸ್ತಕಗಳನ್ನು ಒಳಗೊಂಡಿವೆ. ದ ಬಿಬ್ಲಿಯೋತಿಕ ಅಲೆಕ್ಸಾಂಡ್ರಿನಾ ಲೈಬ್ರರಿ 1667ರಲ್ಲಿ ಪೋಪ್ ಅಲೆಗ್ಸಾಂಡರ್ VII ಎಂಬಾತನಿಂದ ಸ್ಥಾಪಿಸಲ್ಪಟ್ಟಿದ್ದು 3,36,000 ಪುಸ್ತಕಗಳನ್ನು ಹೊಂದಿದೆ. ವ್ಯಾಟಿಕನ್ ನಗರ ವ್ಯಾಟಿಕನ್ ಲೈಬ್ರರಿಯನ್ನು ಹೊಂದಿದ್ದು 5,00,000 ಗ್ರಂಥಗಳನ್ನೂ 60,000 ಅಪೂರ್ವ ದಾಖಲೆಗಳನ್ನೂ ಹೊಂದಿದೆ.

ಮ್ಯೂಸಿಯಂ ಮತ್ತು ಗ್ಯಾಲರಿಗಳು: ರೋಮ್‌ನ ಪುರಾತತ್ತ್ವ ಇಲಾಖೆಗೆ ಸೇರಿದ ವಿವಿಧ ವಸ್ತುಸಂಗ್ರಹಾಲಯಗಳೂ ಚಿತ್ರ ಪ್ರದರ್ಶನಾಲಯಗಳೂ ಇಲ್ಲಿವೆ. ರೋಮ್‌ನಲ್ಲಿರುವ ವಿವಿಧ ವಸ್ತುಸಂಗ್ರಹಾಲಯಗಳೂ ಚಿತ್ರಕಲಾ ಪ್ರದರ್ಶನಾಲಯಗಳೂ ಪ್ರಪಂಚ ಪ್ರಸಿದ್ಧವೂ ಬಹು ಅಮೂಲ್ಯವಾದವೂ ಆಗಿವೆ. ವ್ಯಾಟಿಕನ್ ಅರಮನೆಯಲ್ಲಿ ಲಿಯನಾರ್ಡೊ ಡ ವಿಂಚಿ, ಮೈಕೆಲೆಂಜೆಲೋ ಮತ್ತು ರಾಫೆಲ್ ಇಂಥ ಮಹನೀಯರ ಅಮೋಘವಾದ ಚಿತ್ರಗಳಿವೆ. 1471ರಲ್ಲಿ ರೋಮ್‌ನ ಪ್ರಥಮ ವಸ್ತುಸಂಗ್ರಹಾಲಯ ಕ್ಯಾಪಿಟೋಲೈನ್ ಪ್ರಾರಂಭವಾಯಿತು.

ರೋಮ್‌ನಲ್ಲಿರುವ ಚರ್ಚ್‌ಗಳು, ಅರಮನೆಗಳು ಮತ್ತು ಸುಂದರ ಕಾರಂಜಿಗಳು ಪ್ರಪಂಚ ಪ್ರಸಿದ್ಧವಾದವು. ವ್ಯಾಟಿಕನ್ ನಗರದಲ್ಲಿರುವ ಸಂತ ಪೀಟರನ ಬೆಸಲಿಕ ಯುರೋಪಿನ ಅತ್ಯಂತ ದೊಡ್ಡ ಚರ್ಚ್. ಪುನರುಜ್ಜೀವನ ಕಾಲದ ಕಟ್ಟಡ ಶೈಲಿಗೆ ಇದು ಗುರುತಾಗಿದೆ. ಮೈಕೆಲಂಜೆಲೋ 1500ರಲ್ಲಿ ಈ ಚರ್ಚನ್ನು ರೂಪಿಸಿದನೆನ್ನುವರು. ಈ ಚರ್ಚಿನ ಒಳಗೆ ಅನೇಕ ಅಮೂಲ್ಯ ಕಲಾಕೃತಿಗಳನ್ನು ಅಳವಡಿಸಲಾಗಿದೆ.

**ಇತಿಹಾಸ:** ಪುರಾತನ ನಾಗರಿಕತೆಯ ತೊಟ್ಟಿಲೆನಿಸಿದ ರೋಮ್ ಐತಿಹಾಸಿಕ ನಗರ. ರೋಮನ್ನು ಪ್ರ.ಶ.ಪೂ. 753ರಲ್ಲಿ ಸ್ಥಾಪಿಸಲಾಯಿತು. ಪುರಾಣ ಕಾಲದಲ್ಲಿ ಟೈಬರ್ ನದಿ ದಂಡೆಯಲ್ಲಿ ರೋಮ್ ಸಾಮ್ರಾಜ್ಯ ಸ್ಥಾಪಿಸಿ ರಕ್ಷಿಸುವ ಸಲುವಾಗಿ ರೋಮ್ಯುಲಸ್ ಮತ್ತು ರೀಮಸ್‌ರು ಹೆಣ್ಣು ತೋಳದಿಂದ ಸಾಕಲ್ಪಟ್ಟ ದೇವರಮಕ್ಕಳು. ಆ ಸಹೋದರರ ಹೆಸರಿಗೆ ಸಂಬಂಧಪಟ್ಟ ಹಾಗೆ ನಗರವನ್ನು ರೋಮ್ ಎಂದು ಕರೆಯಲಾಯಿತು. ಈ ನಗರ ಕಂಚಿನ ಯುಗದಲ್ಲಿ ಪ್ರ.ಶ.ಪೂ.1500ರಲ್ಲಿಯೇ ಬೃಹತ್ ಕಟ್ಟಡಗಳು, ಕೋಟೆಗಳು, ಆಲಯಗಳಿಗೆ ಪ್ರಮುಖವಾಗಿದ್ದುದಾಗಿತ್ತು. ಅದು ಪ್ರ.ಶ.ಪೂ.1000–600ರವರೆಗೆ ರಾಜಕೀಯ

ವಾಗಿ ಭಾರತೀಯ–ಯುರೋಪ್ ಸಂಸ್ಕೃತಿಯೊಡನೆ ಸಂಬಂಧವನ್ನುಂಟುಮಾಡಿತ್ತು. 1 ಮತ್ತು 2ನೆಯ ಶತಮಾನದಲ್ಲಿ ರೋಮ್ ಪ್ರಪಂಚದಲ್ಲಿಯೇ ಶಕ್ತಿ ಮತ್ತು ಹೆಮ್ಮೆಯ ಸಾಮ್ರಾಜ್ಯವಾಗಿ ಅಭಿವೃದ್ಧಿಹೊಂದಿ ಇಟಾಲಿಯನ್ನರ ಆಳ್ವಿಕೆಗೆ ಒಳಪಟ್ಟಿತ್ತು.

6ನೆಯ ಶತಮಾನದಲ್ಲಿ ರೋಮನ್ ಸಂರಕ್ಷಣೆ ಸಂಪೂರ್ಣವಾಗಿ ರೋಮನ್‌ಕೆಥೊಲಿಕ್ ಚರ್ಚ್‌ಗಳ ಅಧೀನಕ್ಕೆ ಒಳಪಟ್ಟಿತ್ತು. 1143ರ ರೋಮ್‌ಕ್ರಾಂತಿ ಮತ್ತು 1420ರ ಸ್ವಾವಲನ್ನರ ಆಡಳಿತದ ಅನಂತರ ರೋಮ್ ಸಾಮ್ರಾಜ್ಯ ವಿಸ್ತಾರವಾಯಿತು. 1871ರಲ್ಲಿ ರೋಮ್

ರೋಮನ್ ಸಭಾಸ್ಥಳ (ವರ್ಣಚಿತ್ರ)

ಇಟಲಿಯ ರಾಜಧಾನಿಯಾಯಿತು. 1920ರ ಮುಸ್ಸೋಲಿನಿಯ ಕ್ರಾಂತಿಯಿಂದಾಗಿ ರೋಮ್‌ನ ಪುರಾತನ ನಾಗರಿಕತೆ ಮತ್ತು ವೈಭವ ಪುನಃ ಸ್ಥಾಪಿತವಾಯಿತು. ಇದು ಅಗಸ್ಟಸ್ ಸೀಸರ್ (ಪ್ರ.ಶ.ಪೂ.63–14), ಮಾರ್ಕಸ್ ಆರಿಲಿಯಸ್ (121–180), ತತ್ತ್ವಜ್ಞಾನಿ ಅರಸ ಸೀಸರ್ ಬೋರ್ಜಿಯ(1476–1507) ಮೊದಲಾದ ಸೈನ್ಯಾಧಿಕಾರಿಗಳು ಇಲ್ಲಿ ಆಳಿದರು. ಒಲಂಪಿಕ್ ಕ್ರೀಡೆಗಳಿಂದಲೂ ರೋಮ್ ನಗರ ಪ್ರಪಂಚ ಪ್ರಸಿದ್ಧವಾಗಿದೆ.

ರೋಮ್‌ನಗರದಲ್ಲಿ ಈಗಲೂ ಪುರಾತನ ಬೃಹತ್ ಕಟ್ಟಡಗಳ ಚರಿತ್ರಾರ್ಹ ಅವಶೇಷ ಗಳನ್ನು ನೋಡಬಹುದು. ಆ ಕಾಲದ ಜನ ಸಾರ್ವಜನಿಕ ಚರ್ಚೆಗೆ ಬಳಸುತ್ತಿದ್ದ ಕೂಡು ಚೌಕಗಳಲ್ಲಿನ ಕಟ್ಟಡಗಳೂ ದೇವಾಲಯಗಳೂ ಸ್ನಾನಗೃಹಗಳೂ ಗ್ಲಾಡಿಯೇಟರ್ಸ್ ಎಂದು ಕರೆಯುತ್ತಿದ್ದ ತರಬೇತಿ ಹೊಂದಿದ ಶೂರ ಸೈನಿಕ ಹೋರಾಟಗಾರರು ಪರಸ್ಪರ ಕಾದಾಡುತ್ತಿದ್ದ 8ನೆಯ ಶತಮಾನದ ತೆರೆದ ಸ್ಥಳಗಳೂ ಇವೆ. ಬಯಲು ರಂಗಮಂದಿರವಿದ್ದಂತೆ ಆಗಿನ ಜನರಿಗೆ ಕಾದುವ ಬಯಲು ಯುದ್ಧಭೂಮಿಯೂ ಇದ್ದು ಅದು ಜನರಂಜನೆಗೂ ಅವಕಾಶ ಮಾಡಿಕೊಡಲಾಗಿತ್ತು. ಯುದ್ಧಕೈದಿಗಳ ಪರಸ್ಪರ ಹೋರಾಟ ಸಾವಿನಲ್ಲಿ ಪರ್ಯಾವಸಾನವಾಗು ತ್ತಿತ್ತು. ವೀರರು ಕಾಡುಮೃಗಗಳೊಡನೆ ಹೋರಾಡುವುದೂ ಮನರಂಜನೆಯ ಜನರಂಜನೆಯ ಒಂದು ಭಾಗವಾಗಿತ್ತು. ತಮ್ಮ ಧರ್ಮಕ್ಕೆ ವಿರುದ್ಧವಾಗಿ ಬೆಳೆಯುತ್ತಿದ್ದ ಕ್ರೈಸ್ತಧರ್ಮವನ್ನು ಹತ್ತಿಕ್ಕುವ ಕಾರ್ಯವಾಗಿ ಸೆರೆಹಿಡಿದ ಕ್ರೈಸ್ತಧರ್ಮೀಯರನ್ನು ಸಿಂಹಗಳನ್ನು ಬಿಟ್ಟು ಕೊಲ್ಲಿಸಲಾಗುತ್ತಿತ್ತು. ಈ ಬಯಲು ಮಂದಿರಗಳ ಅವಶೇಷಗಳನ್ನು ಈಗಲೂ ಸಂರಕ್ಷಿಸಿಕೊಂಡು ಬರಲಾಗಿದೆ. ಹಾಗೆಯೇ 200ರ ಕಾರಕಲ್ಲ ಸಾಮೂಹಿಕ ಸ್ನಾನಗೃಹವನ್ನೂ ರಕ್ಷಿಸಿಕೊಂಡು ಬರಲಾಗಿದೆ. 300ರಲ್ಲಿ ಕಟ್ಟಿದ್ದೆನ್ನುವ ಡಿಯೊಕ್ಲಿಸಿಯನ್ ಸ್ನಾನಗೃಹ ಏಕಕಾಲದಲ್ಲಿ 3000 ಮಂದಿಗೆ ಅವಕಾಶ ಒದಗಿಸುವಂತಹ ದೊಡ್ಡದೂ ವಿಶಾಲವೂ ಆದದ್ದಾಗಿತ್ತು. ಸ್ನಾನಗೃಹಗಳನ್ನು ಅಮೃತಶಿಲೆಯಿಂದ ಭವ್ಯವಾಗಿ ಕಟ್ಟಲಾಗುತ್ತಿತ್ತು. ಅಲ್ಲಿ ಅನೇಕ ಸುಂದರ ವಿಗ್ರಹಗಳಿಂದ, ವಿವಿಧ ಬಣ್ಣಗಳ ಗಾಜುಗಳಿಂದ ರಚಿಸಿದ ಚಿತ್ರಗಳಿಂದ ಅಲಂಕರಿಸಲಾಗಿದೆ. ರೋಮನ್ನರು ತಮ್ಮ ದೇವತೆಗಳಿಗಾಗಿ ಕಟ್ಟಿದ ಪಾನ್‌ಥಿಯನ್‌ಗಳನ್ನು (ದೇವಾಲಯಗಳು) ಎಚ್ಚರಿಕೆಯಿಂದ ರಕ್ಷಿಸಿಕೊಂಡು ಬರಲಾಗಿದೆ. ಸು.315ರಲ್ಲಿ ನಿರ್ಮಿಸಿದ ಕಾನ್‌ಸ್ಟಾನ್‌ಟೈನ್ ವಿಶೇಷವಾಗಿ ಅಲಂಕೃತವಾಗಿದ್ದು ಎಚ್ಚರಿಕೆಯಿಂದ ಇಂದಿನವರೆಗೂ ರಕ್ಷಿಸಿಕೊಂಡು ಬರಲಾಗಿದೆ. ಒಂದು ದೊಡ್ಡ ಸಾರ್ವಜನಿಕ ಉದ್ಯಾನವನದ ಮಧ್ಯದಲ್ಲಿ ದೊಮಸ್ ಆರಿಯ (ಹೊನ್ನಿನ ಮನೆ) ಎನ್ನುವ ಭೂಗತವಾಗಿರುವ ದೊಡ್ಡ ಬಂಗಲೆಯಿದೆ. ಇದು ಚಕ್ರವರ್ತಿ ನೀರೋನ ಅರಮನೆ ಯಾಗಿತ್ತೆಂದು ಹೇಳುವರು. ವಿಶಾಲ ಪ್ರದೇಶವನ್ನಾವರಿಸಿರುವ ಇದರ ಕೆಲವು ಗೋಡೆಗಳ ಮೇಲೆ ಬಣ್ಣ ಬಳಿಯಲಾಗಿದ್ದು ಇಂದಿಗೂ ಅದನ್ನು ನೋಡಬಹುದಾಗಿದೆ. ರೋಮನ್ನರು ಯುದ್ಧಗಳಲ್ಲಿ ಗಳಿಸಿದ ಜಯಕ್ಕಾಗಿ ಸು.100ರಲ್ಲಿ ಕಟ್ಟಿಸಿದ ಮಾರ್ಕಸ್ ಆರೇಲಿಯಾಸ್ ಕಟ್ಟಡವಿದ್ದು ಇದರಲ್ಲಿ ಯುದ್ಧದ ಚಿತ್ರಗಳನ್ನು ಬಿಡಿಸಲಾಗಿದೆ. ಇಲ್ಲಿ ನಿಂತ ಭಂಗಿಯ ಸಂತಪಾಲನ ವಿಗ್ರಹವಿದೆ(1589). ಪ್ರ.ಶ.ಪೂ. 28ರಲ್ಲಿ ರೋಮನ್ನರ ಮೊದಲ ಚಕ್ರವರ್ತಿ ಅಗಸ್ಟಸ್ ತನಗೂ ತಮ್ಮ ಕುಟುಂಬ ವರ್ಗದವರಿಗೂ ಕಟ್ಟಿಸಿದ ಭವ್ಯ ಸಮಾಧಿ (ಮಾಸೊಲೀಯಂ) ಈಗಲೂ ಆಕರ್ಷಕ ಸ್ಥಳವಾಗಿದೆ. ಹೊರಗಿನವರ ಆಕ್ರಮಣ ತಡೆಗಟ್ಟಲು ಸು. ಪ್ರ.ಶ.ಪೂ. 200ರಲ್ಲಿ ಕಟ್ಟಿದ ರಕ್ಷಣಾಗೋಡೆಗಳ ಅವಶೇಷಗಳಿವೆ.

ಜರ್ಮನಿಕ್ ಬುಡಕಟ್ಟು ಆಡಳಿತಕ್ಕೆ ಒಳಪಟ್ಟ ರೋಮ್ ಅವನತಿಯತ್ತ ಹೊರಳಿತು. ಬೈಜಾಂಟೀಯನ್‌ನ ಚಕ್ರವರ್ತಿ ಒಂದನೆಯ ಜಸ್ಟೀನಿಯನನು ಆಸ್ಟ್ರೋಗೋತ್‌ರನ್ನು 500ರ ನಡುವೆ ರೋಮಿನಿಂದ ಹೊರಗಟ್ಟಿ ರೋಮನ್ನರ ಆಳಿಕೆಯನ್ನು ಸ್ಥಾಪಿಸಿದ. ರೋಮ್ 700ರ ಹೊತ್ತಿಗೆ ಪೋಪ್‌ರ ಪ್ರಭಾವದಿಂದ ಹೆಚ್ಚು ಬಲವಾಯಿತು. ಲಂಬಾರ್ಡರು ರೋಮನ್ನು ಆಕ್ರಮಿಸುವುದನ್ನು ಎರಡನೆಯ ಪೋಪ್ ಸ್ಟೀಫನ್, ಫ್ರಾಕನ್ನರ ರಾಜನಾದ ಪೆಪಿನ್ನನ ಸಹಾಯದಿಂದ ತಡೆದ. 756ರಲ್ಲಿ ಪೆಪಿನ್ ರೋಮನ್ನೂ ಅದರ ಸುತ್ತಲ ಪ್ರದೇಶವನ್ನೂ ಪೋಪರಿಗೆ ಒಪ್ಪಿಸಿದ. ಇಟಲಿಯ ದೇಶಾಭಿಮಾನಿ ಕೊಲ ಡಿ ರಿಯೆಂಜೊ ಎಂಬಾತ 1347ರಲ್ಲಿ ಪ್ರಥಮವಾಗಿ ಪ್ರಜಾಪ್ರಭುತ್ವ ಸ್ಥಾಪಿಸಿದ. ಆದರೆ ಮುಂದಿನ ದಿನಗಳ ಹೋರಾಟದಲ್ಲಿ ಆತ ಸತ್ತ. ಪುನರುಜ್ಜೀವನಕಾಲದಲ್ಲಿ ರೋಮ್ ಬಹಳಷ್ಟು ಅಭಿವೃದ್ಧಿಹೊಂದಿತು. 1527ರಲ್ಲಿ ಜರ್ಮನ್ ಮತ್ತು ಸ್ಪ್ಯಾನಿಷ್ ಸೈನ್ಯ ರೋಮನ್ನು ಲೂಟಿಮಾಡಿ ಸಾವಿರಾರು ರೋಮನ್ನರನ್ನು ಕೊಂದಿತು. ಮುಂದೆ 1500ರ ಉಳಿದ ಕಾಲದಿಂದ 1600ರ ವರೆಗೆ ಬಂದ ಪೋಪರು ಅನೇಕ ದೊಡ್ಡ ಕಟ್ಟಡಗಳನ್ನು ನಿರ್ಮಿಸಿ ರೋಮನ್ನು ಮತ್ತೆ ವೈಭವಕ್ಕೆ ತಂದರು.

1798ರಲ್ಲಿ ನೆಪೋಲಿಯನ್ ಇಟಲಿ ಪರ್ಯಾಯ ದ್ವೀಪವನ್ನು ವಶಪಡಿಸಿಕೊಂಡು ರೋಮನ್ನು ತನ್ನ ಚಕ್ರಾಧಿಪತ್ಯದ ಎರಡನೆಯ ರಾಜಧಾನಿಯನ್ನಾಗಿ ಘೋಷಿಸಿದ. ಪೋಪರಿಗೆ ಇದ್ದ ಎಲ್ಲ ರಾಜಕೀಯ ಅಧಿಕಾರವನ್ನು ಕಿತ್ತುಹಾಕಿದ. ಇದನ್ನು ವಿರೋಧಿಸಿದ 7ನೆಯ ಪೋಪ್ ಪಿಯಸ್‌ನನ್ನು ಸೆರೆಗೆ ಹಾಕಿಸಿದ. ನೆಪೋಲಿಯನ್ನನ ಸೋಲಿನ ಅನಂತರ 1815ರಲ್ಲಿ ಮತ್ತೆ ಪೋಪರು ಹಿಂದಿನಂತೆ ಎಲ್ಲ ಅಧಿಕಾರಗಳನ್ನು ವಶಪಡಿಸಿಕೊಂಡರು. 1500ರಲ್ಲಿ ಇಟಲಿಯ ಸ್ವಾತಂತ್ರ್ಯಕ್ಕಾಗಿ ಹೋರಾಟ ಪ್ರಾರಂಭವಾಯಿತು. 1848ರಲ್ಲಿ ಕ್ರಾಂತಿಕಾರರು ಇಟಲಿಯನ್ನು ಗಣರಾಜ್ಯವನ್ನಾಗಿ ಘೋಷಿಸಿದರು. 9ನೆಯ ಪೋಪ್ ಪಿಯಸ್ ಇದನ್ನು ವಿರೋಧಿಸಿ, ಓಡಿಹೋಗಬೇಕಾಯಿತು. ಆದರೆ 1849ರಲ್ಲಿ ಫ್ರೆಂಚ್ ಸೈನ್ಯ ರೋಮನ್ನು ವಶಪಡಿಸಿಕೊಂಡು ಮತ್ತೆ ಪೋಪರನ್ನು ಅಧಿಕಾರಕ್ಕೆ ತಂದಿತು. 1861ರಲ್ಲಿ ಇಟಲಿಯ ಚಕ್ರವರ್ತಿ ಎರಡನೆಯ ವಿಕ್ಟರ್ ಎಮಾನ್ಯುಯಲ್ ಕಾಲದಲ್ಲಿ ರೋಮ್ ಇಟಲಿಯ ರಾಜಧಾನಿ ಯಾಗಿರಲಿಲ್ಲ. ಇಟಲಿಯ ಸ್ವಯಂಸೇವಕರು 1867ರಲ್ಲಿ ರೋಮನ್ನು ವಶಪಡಿಸಿಕೊಳ್ಳಲು

ಸಿಂಗರಿಸಿದ ಗವಿ ಕೋಣೆ

ಪ್ರಯತ್ನಿಸಿದಾಗ ಫ್ರೆಂಚ್ ಸೈನಿಕರು ಇದಕ್ಕೆ ಅವಕಾಶ ನೀಡಲಿಲ್ಲ. 1870ರಲ್ಲಿ ಫ್ರೆಂಚರ ನಿರ್ಗಮನವಾದ ಬಳಿಕ ವಿಕ್ಟರ್ ಎಮಾನ್ಯುಯಲ್ ಯಾವ ಪ್ರತಿರೋಧವೂ ಇಲ್ಲದೆ ರೋಮನ್ನು ಪ್ರವೇಶಿಸಿದ. ಪೋಪರ ಅಧಿಕಾರವನ್ನೆಲ್ಲ ಹಿಂದಕ್ಕೆ ಪಡೆದ. ಇದನ್ನು ಪ್ರತಿಭಟಿಸಿ 9ನೆಯ

ಪೋಪ್ ಪಿಯಸ್ ವ್ಯಾಟಿಕನ್ ನಗರದಲ್ಲಿರತೊಡಗಿದ. 1871ರಲ್ಲಿ ವಿಕ್ಟರ್ ಎಮಾನ್ಯುಯಲ್ ರೋಮನ್ನು ಇಟಲಿಯ ರಾಜಧಾನಿಯನ್ನಾಗಿ ಮಾಡಿಕೊಂಡ. ಮುಂದೆ 1929ರಲ್ಲಿ ಆದ ಒಪ್ಪಂದದಂತೆ ರೋಮನ್ನು ಇಟಲಿಯ ರಾಜಧಾನಿಯಾಗಿ ರೋಮನ್ ಕೆಥೊಲಿಕರ ಧರ್ಮಾಧಿಕಾರಿಗಳೆಲ್ಲ ಒಪ್ಪಿದರು. ವ್ಯಾಟಿಕನ್ ನಗರವನ್ನು ಒಂದು ಸ್ವತಂತ್ರ ರಾಜ್ಯವೆಂದು ಪರಿಗಣಿಸಲಾಯಿತು. ರೋಮನ್ನು ಆಳಿದ ಚಕ್ರವರ್ತಿಗಳಲ್ಲಿ ಜೂಲಿಯಸ್ ಸೀಸರ್‌ನನ್ನು ವಿಲಿಯಂ ಷೇಕ್ಸ್‌ಪಿಯರ್ ತನ್ನ ನಾಟಕದ ಮೂಲಕ ಎಲ್ಲಾ ದೇಶದವರಿಗೆ ಪರಿಚಯಿಸುವುದರ ಜೊತೆ ಜೊತೆಯಲ್ಲೆ ರೋಮನ್ ಸಾಮ್ರಾಜ್ಯದ ಪ್ರಚಾರವೂ ಆಯಿತು. ಬೆನಿಟೊ ಮುಸ್ಸೋಲಿನಿ ಸರ್ವಾಧಿಕಾರಿ ಇಟಲಿಯನ್ನೂ ರೋಮನ್ನೂ ಒಂದು ಶಕ್ತಿಶಾಲಿ, ಸುಂದರ ರಾಷ್ಟ್ರ ಹಾಗೂ ನಗರವನ್ನಾಗಿ ಮಾಡಿದನೆಂದು ಪರಿಗಣಿಸಲಾಗಿದೆ. ಈತ 1935ರಲ್ಲಿ ರೋಮ್ ವಿಶ್ವವಿದ್ಯಾಲ ಯದ ಆವರಣ ವನ್ನು ಪೂರ್ಣಗೊಳಿಸಿದ. 1938ರಲ್ಲಿ ಕೇಂದ್ರ ರೈಲು ನಿಲ್ದಾಣ ಪ್ರಾರಂಭಿಸಿದ. ಮುಸ್ಸೋಲಿನಿ ಇದನ್ನು ಪ್ರಾರಂಭಿಸಿದ ನಾದರೂ ಎರಡನೆಯ ಮಹಾಯು ದ್ಧದ ಪರಿಣಾಮ ಇದರ ಕೆಲಸ ನಿಧಾನಗತಿಯಲ್ಲಿ ಸಾಗಿದರೂ 1950 ರಲ್ಲಿ ಇದರ ಕೆಲಸ ಪೂರ್ಣಗೊಂಡಿತು. 1938ರಲ್ಲಿ ಮುಸ್ಸೋಲಿನಿಯಿಂದ ನಿರ್ಮಿಸಲ್ಪಟ್ಟ ಮತ್ತೊಂದು ಪ್ರಮುಖ ನಿರ್ಮಾಣವೆಂದರೆ ಯೂನಿವರ್ಸಲ್ ಎಕ್ಸಿಬಿಷನ್ ಆಫ್ ರೋಮ್ (ಯು.ಎ.ಆರ್.). 1942ರಲ್ಲಿ ಇಲ್ಲಿ ವಿಶ್ವವ್ಯಾಪಾರಮೇಳವನ್ನು ಯೋಜಿಸಲಾಗಿತ್ತು. ರೋಮ್ ನಗರದ ಹೊಸ ರೈಲ್ವೆ ನಿಲ್ದಾಣದಿಂದ ಯು.ಏ.ಆರ್. ನಡುವೆ ವಿಶಾಲವಾದ ಸುರಂಗಮಾರ್ಗ ನಿರ್ಮಾಣಗೊಂಡಿದೆ. 1960ರಲ್ಲಿ ಇಲ್ಲಿ ಚಳಿಗಾಲದ ಒಲಂಪಿಕ್ ಕ್ರೀಡಾಕೂಟ ಆಯೋಜನೆಗೊಂಡಿತ್ತು. 1980ರಿಂದ ರೋಮ್‌ನ ಆಡಳಿತ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಗೆ ಮುಂದಾಗಿದೆ.



ಪೊಸಿಡಾನ್ (ಪ್ರ.ಶ.ಪೂ.2ನೆಯ ಶತಮಾನ)

1990ರಲ್ಲಿ ಮತ್ತೊಂದು ಬೃಹತ್ ಸಭಾಂಗಣವನ್ನು ರಚಿಸಲು ರೋಮ್ ಸರ್ಕಾರ ಕಾರ್ಯ ಪ್ರಾರಂಭಿಸಿದೆ. ಸಹಸ್ರಮಾನೋತ್ಸಹವದ ಅಂಗವಾಗಿ ಕೈಗೆತ್ತಿಕೊಂಡಿರುವ ಅನೇಕ ನಿರ್ಮಾಣಗಳಿಗೆ ವಿರೋಧವು ಸಹ ವ್ಯಕ್ತವಾಗುತ್ತಿದೆ. ಆದರೂ ವಾಸ್ತುಶಿಲ್ಪದ ನಿರ್ಮಾಣದಲ್ಲಿ ರೋಮ್ ತನ್ನ ಪರಂಪರೆಯನ್ನು ಇಂದಿಗೂ ಸಹ ಮುಂದುವರೆಸುತ್ತಿದೆ. (ಕಿವಿ.)

ರೋಮನ್ ಸಿಂಹಾಸನ: ಪ್ರಶ.79ರಲ್ಲಿ ವೆಸೂವಿಯಸ್ ಅಗ್ನಿ ಪರ್ವತದ ಸ್ಫೋಟದಿಂದ ನಾಶವಾಗಿ ಹೋದ ಮೂರು ಪಟ್ಟಣಗಳಲ್ಲಿ ಒಂದಾದ ಹರ್ಕ್ಯುಲೇನಿಯದಲ್ಲಿಯ ಉತ್ಖನನದಲ್ಲಿ ಸು.25ಮೀ ಆಳದಲ್ಲಿ ರೋಮ್ ಸಾಮ್ರಾಜ್ಯದ ಸಿಂಹಾಸನದ ಅವಶೇಷ ಬೆಳಕಿಗೆ ಬಂದಿದೆ. ಪ್ರಾಚೀನ ದೇವತೆಗಳ ಉಬ್ಬು ಶಿಲ್ಪಗಳಿಂದ ಅಲಂಕರಿಸಲ್ಪಟ್ಟಿದಂತಹ ಸಿಂಹಾಸನದ ಎರಡು ಕಾಲುಗಳು ಮತ್ತು ಬೆನ್ನಾಸರೆಯ ಭಾಗ ಮಾತ್ರ ದೊರಕಿದೆ. ಜೂಲಿಯಸ್ ಸೀಸರನ ಮಾವನ ಮನೆಯಿದ್ದ ಪ್ರದೇಶವೆಂದು ನಂಬಲಾದ ವಿಲ್ಲಾದ ಪಪಿರಿ ಸಮೀಪದ ಸ್ಥಳದಲ್ಲಿ ನಡೆದ ಈ ಉತ್ಖನನದಲ್ಲಿ ಇದು ಪತ್ತೆಯಾಗಿದ್ದು ಇದೊಂದು ಅಪೂರ್ವ ಶೋಧನೆ ಎಂದು ಬಣ್ಣಿಸಲಾಗಿದೆ. (ಎ.ಎಸ್.)

**ರೋಮನ್ ಸಂಸ್ಕೃತಿ:** ಪ್ರಾಚೀನ ಕಾಲದ ಪಾಶ್ಚಾತ್ಯ ದೇಶದ ಪ್ರಭಾವಶಾಲಿ ಸಂಸ್ಕೃತಿಗಳ ಲ್ಲೊಂದು. ಪ್ರಾಚೀನ ರೋಮನ್ನರು ಹಲವಾರು ಸಾಂಸ್ಕೃತಿಕ ಹವ್ಯಾಸಗಳನ್ನು ಪ್ರಾಚೀನ ಗ್ರೀಕರಿಂದ ಪಡೆದುಕೊಂಡಿದ್ದರು. ರೋಮನ್ನರ ದಿನನಿತ್ಯದ ರೂಢಿಗಳು ಮತ್ತು ನಿಯಮಗಳು ಹಾಗೂ ವಾಸ್ತುಶಿಲ್ಪದ ಮಾದರಿ ಹಾಗೂ ಶೈಲಿಗಳಿಗೆ ಗ್ರೀಕ್ ಸಂಸ್ಕೃತಿ ಸ್ಫೂರ್ತಿಯಾಗಿದೆ. ಪ್ರಾಚೀನ ರೋಮನ್ನರು ಮೊದಲಿಗೆ 12 ಪಟ್ಟಿಗಳು ಎಂಬ ನಿಯಮಾನುಸಾರ ಆಳಿಕೆ ನಡೆಸುತ್ತಿದ್ದರು. ಇದು ಪ್ರತಿಯೊಬ್ಬ ರೋಮನ್ನನಿಗೂ ನೀತಿ ಮತ್ತು ಜೀವನಮಟ್ಟವನ್ನು ಕಲ್ಪಿಸಿಕೊಟ್ಟಿತ್ತು. ಸಂಸ್ಕೃತಿಗೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳು ನ್ಯಾಯಾಧೀಶರ ನಿರ್ದೇಶನ ಗಳನ್ನು ಅವಲಂಬಿಸಿದ್ದವು. ನ್ಯಾಯಾಧೀಶರು ಸಾಮಾನ್ಯವಾಗಿ ಪ್ರಾಮಾಣಿಕರಾಗಿರುತ್ತಿರಲಿಲ್ಲ. 12 ಪಟ್ಟಿಗಳನ್ನು ಅನಂತರ ಸಾಮ್ರಾಟ ಅಗಸ್ಟಸ್ ಅಭಿವೃದ್ಧಿ ಪಡಿಸಿದ (ಗ್ರಾಫಿ). ಇತಿಹಾಸಕಾರರು ಗುರುತಿಸಿರುವಂತೆ ಕೆಲವು ರೋಮನ್ ಸಾಮ್ರಾಟರು ಸಂಶಯಾಸ್ಪದವಾಗಿ ಸಾಯುತ್ತಿದ್ದರು. ಅಂದರೆ ಅವರ ಸಾವಿನ ಬಗ್ಗೆ ಯಾವುದೇ ಆಧಾರಗಳು ಇರುತ್ತಿರಲಿಲ್ಲ ಅಥವಾ ಕಡಮೆ ಇರುತ್ತಿದ್ದವು. ಇವೆಲ್ಲವೂ ರೋಮನ್ ಸಾಮ್ರಾಟರ ಆಡಳಿತ ಕಾಲಕ್ಕೆ ಸೇರಿದ್ದು. ತರುವಾಯ ರೋಮ್ ಗಣರಾಜ್ಯವಾಗಿ ಮಾರ್ಪಟ್ಟಿತು.

**ದೈನಂದಿನ ಜೀವನ:** ಪ್ರಾಚೀನ ರೋಮನ್ನರ ದೈನಂದಿನ ಜೀವನ ಬೆಳಗಿನ ಉಪಾಹಾರ ದೊಂದಿಗೆ ಪ್ರಾರಂಭವಾಗುತ್ತಿತ್ತು. ಸಾಮಾಜಿಕವಾಗಿ ಕೆಳ ಸ್ತರದಲ್ಲಿದ್ದ ರೋಮನ್ನರನ್ನು ಪ್ಲಿಬಿಯನ್ಸ್ ಎಂದು ಕರೆಯಲಾಗುತ್ತಿತ್ತು. ಇವರು ಸಾಮಾನ್ಯವಾಗಿ ರೊಟ್ಟಿಯನ್ನು ನೀರು ಅಥವಾ ದ್ರಾಕ್ಷಾರಸದಲ್ಲಿ ಅದ್ದಿ ತಿನ್ನುತ್ತಿದ್ದರು. ಮೇಲ್ದರ್ಜೆಯ ರೋಮನ್ನರನ್ನು ಪೆಟ್ರಿಷಯನ್ಸ್ ಎಂದು ಕರೆಯಲಾಗುತ್ತಿತ್ತು. ಇವರು ಮಾಂಸ, ಹಣ್ಣು, ತರಕಾರಿ, ರೊಟ್ಟಿ ಹಾಗೂ ಜೇನನ್ನು ಸೇವಿಸುತ್ತಿದ್ದರು. ರೋಮನ್ನರು ದಿನದ ಆರಂಭದಲ್ಲಿ ಟೋಗ ಎಂಬ ಲುಂಗಿಯಂಥ ವಸ್ತ್ರವನ್ನು ಸುತ್ತಿಕೊಳ್ಳುತ್ತಿದ್ದರು. ಅನಂತರದ ಕಾಲದಲ್ಲಿ ಟ್ಯುನಿಕ್ ಎಂಬ ಆಧುನಿಕ ಟೀಶರ್ಟ್‌ನಂಥ ಬಟ್ಟೆಯನ್ನು ಧರಿಸುತ್ತಿದ್ದರು. ಇದು ಸಹಜವಾಗಿತ್ತು. ಚಿಕ್ಕ ಮಕ್ಕಳ ದಿರಸು ಮಂಡಿಯವರೆಗೆ ಇದ್ದು ತಿಳಿಕೆಂಪು ಬಣ್ಣದ ಅಂಚು ಇರುತ್ತಿತ್ತು. ಮಕ್ಕಳು ಪ್ರಾಪ್ತವಯಸ್ಸಿಗೆ ಬಂದಂತೆ ಅವರ ದಿರಸುಗಳು ಬಿಳಿಯ ಬಣ್ಣದವಾಗಿರುತ್ತಿದ್ದುವು. ರೋಮನ್ನರು ಸಾಮಾನ್ಯವಾಗಿ ಸಾರ್ವಜನಿಕ ಸಭಾ ಸ್ಥಳಗಳಿಗೆ ಭೇಟಿ ನೀಡುತ್ತಿದ್ದರು. ಆ ಸ್ಥಳ ನಗರದ ವಾಣಿಜ್ಯ ಕೇಂದ್ರವಾಗಿದ್ದು ಅಲ್ಲಿ ಜನರು ಲೇವಾದೇವಿ, ವ್ಯಾಪಾರ, ಖರೀದಿ ಮತ್ತು ಮಾರಾಟಗಳನ್ನು ಮಾಡುತ್ತಿದ್ದರು. ಸಾರ್ವಜನಿಕ ಸಭೆ ಸ್ಥಳಗಳಲ್ಲಿ ಸಾರ್ವಜನಿಕ ಭಾಷಣಗಳು, ಹಬ್ಬಗಳು ಮತ್ತು ಧಾರ್ಮಿಕ ಆಚರಣೆಗಳೂ ನಡೆಯುತ್ತಿದ್ದವು. ದಿನನಿತ್ಯ ಮಕ್ಕಳು ಸಂಘಟಿತ ಶಾಲೆಗಳಿಗೆ ಹೋಗುತ್ತಿದ್ದರು. ರೋಮನ್ನರು ಪುರಾತನ ಗ್ರೀಕ್ ವಿದ್ಯಾಭ್ಯಾಸ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಪರಿಣಾಮಾತ್ಮಕವಾಗಿ ಮಾತನಾಡುವುದು ಮತ್ತು ಚರ್ಚೆ ಮಾಡುವುದನ್ನು ಕಲಿಯುವುದು ರೋಮ್‌ನ ಶಿಕ್ಷಣದ ಮುಖ್ಯ ಉದ್ದೇಶವಾಗಿತ್ತು. ಶಾಲೆಗಳು ಸೂರ್ಯೋದಯಕ್ಕೆ ಮುಂಚೆಯೇ ಪ್ರಾರಂಭಗೊಂಡು ಮಧ್ಯಾಹ್ನದ ವೇಳೆಗೆ ಅಂತ್ಯಗೊಳ್ಳುತ್ತಿದ್ದುವು. ಕಲಿಕೆಯ ಪ್ರಾರಂಭದ ದಿನಗಳಲ್ಲಿ ಸಾಮಾನ್ಯವಾಗಿ ಮಕ್ಕಳು ಮನೆಯಲ್ಲೇ ತಮ್ಮ ತಂದೆ–ತಾಯಿಗಳಿಂದ ಎಲ್ಲ ಬಗೆಯ ವಿದ್ಯೆಗಳನ್ನೂ ಕಲಿಯುತ್ತಿದ್ದರು. ತಂದೆಯು ಗಂಡು ಮಕ್ಕಳಿಗೆ ರೋಮನ್ ಕಾನೂನು, ಇತಿಹಾಸ, ರೂಢಿ ಆಚರಣೆಗಳು ಮತ್ತು ದೈಹಿಕ ಕಸರತ್ತುಗಳ ತರಬೇತಿಯನ್ನು ನೀಡುತ್ತಿದ್ದ. ಇದು ಅವರನ್ನು ಯುದ್ಧಕ್ಕೆ ಸಿದ್ಧಮಾಡುತ್ತಿತ್ತು. ಹೆಣ್ಣು ಮಕ್ಕಳಿಗೆ ನೂಲುವುದು, ನೇಯುವುದು ಮತ್ತು ಹೊಲಿಗೆ ಹಾಕುವುದನ್ನು ತಾಯಂದಿರು ಕಲಿಸುತ್ತಿದ್ದರು. ಪ್ರಾಚೀನ ರೋಮನ್ನರಲ್ಲಿದ್ದ ಸಾಮಾನ್ಯ ಸಾಂಪ್ರದಾಯಿಕ ರೂಢಿ ಎಂದರೆ ಸಾರ್ವಜನಿಕ ಸ್ನಾನಗೃಹಗಳಿಗೆ ಹೋಗುವುದು. ಬಹಳಷ್ಟು ರೋಮನ್ ಸ್ತ್ರೀ ಪುರುಷರು ದಿನದಲ್ಲಿ ಒಮ್ಮೆಯಾದರೂ ಸ್ನಾನಗೃಹಗಳಿಗೆ ಹೋಗುತ್ತಿದ್ದರು. ಸ್ನಾನಗೃಹಗಳು ತಣ್ಣೀರು ಮತ್ತು ಬಿಸಿನೀರಿನ ಕೊಳಗಳು, ವಲ್ಲಿ(ಟವೆಲ್), ಗುಲಾಮ ಸೇವಕರು, ಹಬೆಯ ಕೋಣೆಗಳು, ಮಸಾಜು ವ್ಯವಸ್ಥೆ, ವ್ಯಾಯಾಮ ಕೊಠಡಿ ಮತ್ತು ಕ್ಷೌರಗೃಹಗಳನ್ನು ಹೊಂದಿರುತ್ತಿದ್ದವು. ಒಂದು ಕಾಲಕ್ಕೆ ಪ್ರಾಚೀನ ರೋಮ್‌ನಲ್ಲಿ



ಹೆಫೈಸ್ಟೋಸ್ ದೇವಾಲಯ

900 ಸಾರ್ವಜನಿಕ ಸ್ನಾನಗೃಹಗಳಿದ್ದುವೆಂದು ತಿಳಿದುಬರುತ್ತದೆ. ಚಿಕ್ಕ ಸ್ನಾನಗೃಹಗಳಲ್ಲಿ 300 ಜನರು ಸ್ನಾನ ಮಾಡಬಹುದಾಗಿತ್ತು. ದೊಡ್ಡ ಸ್ನಾನಗೃಹಗಳಲ್ಲಿ 1500 ಜನರು ಸ್ನಾನ ಮಾಡಬಹುದಾಗಿತ್ತು. ಈ ರೂಢಿ ಅವರ ಸಂಸ್ಕೃತಿಯ ವೈಶಿಷ್ಟ್ಯವಾಗಿತ್ತು. ದಿನಕಳೆದಂತೆ ಶ್ರೀಮಂತ ರೋಮನ್ನರು ವಿಶ್ರಮಿಸುತ್ತಿದ್ದರು ಹಾಗೂ ಬಡವರು ನಿರಂತರವಾಗಿ ಕೆಲಸ ಮಾಡುತ್ತಿದ್ದರು. ದಿನದ ಅಂತ್ಯದಲ್ಲಿ ರೋಮನ್ನರು ಸಾವಿರಾರು ಸಂಖ್ಯೆಯ ದೇವರುಗಳನ್ನು ಹಲವಾರು ರೀತಿಯಲ್ಲಿ ಪೂಜಿಸುತ್ತಿದ್ದರು. ಸಾಮಾನ್ಯವಾಗಿ ರೋಮನ್ನರು ತಮ್ಮ ಮನೆಗಳಲ್ಲಿ ಒಂದು ಕೊಠಡಿ ಅಥವಾ ಹೊಳೆಯುವ ವಸ್ತುವನ್ನು ದೇವರ ಪೂಜೆಗೋಸ್ಕರವೇ ಹೊಂದಿರುತ್ತಿದ್ದರು. ರೋಮನ್ನರು ಮನರಂಜನೆಯನ್ನು ಕೂಡ ಬಹಳ ಇಷ್ಟಪಡುತ್ತಿದ್ದರು. ಹಲವಾರು ರಂಗಮಂದಿರಗಳಿದ್ದು, ಸಾಮಾನ್ಯವಾಗಿ ಅಲ್ಲಿಗೆ ಮುಕ್ತ ಪ್ರವೇಶವಿದ್ದು, ಶ್ರೀಮಂತ–ಬಡವರೆಲ್ಲರೂ ಯಾವ ಭೇದವಿಲ್ಲದೆ ಭಾಗವಹಿಸುತ್ತಿದ್ದರು.

ರೋಮನ್ನರದು ಪಿತೃಪ್ರಧಾನ ಕುಟುಂಬ ವ್ಯವಸ್ಥೆ. ತಂದೆ ಕುಟುಂಬದ ಯಜಮಾನ ನಾಗಿರುತ್ತಿದ್ದ ಹಾಗೂ ತನ್ನ ಕುಲವನ್ನು ಪ್ರತಿನಿಧಿಸುತ್ತಿದ್ದ. ವಂಶಪಾರಂಪರ್ಯ ಅಧಿಕಾರದಲ್ಲಿ ಆಸ್ತಿ, ಭೂಮಿ, ನೌಕರರು, ಸ್ವತಂತ್ರರೆಲ್ಲರೂ ಯಜಮಾನನ ಅಧೀನದಲ್ಲಿರುತ್ತಿದ್ದರು. ಅಧೀನದಲ್ಲಿರುವವರನ್ನು ಕುಟುಂಬದ ಸದಸ್ಯರೆಂದು ಪರಿಗಣಿಸಲಾಗುತ್ತಿತ್ತು. ಕುಟುಂಬದ ರಕ್ಷಣೆ ಹಾಗೂ ಹೆಚ್ಚು ಉತ್ಪಾದನೆ ಮಾಡುವುದು ಇಂಥ ದೊಡ್ಡ ಕುಟುಂಬದ ಉದ್ದೇಶವಾಗಿತ್ತು.

ರೋಮನ್ನರು ತಮ್ಮ ಮನೆಗಳನ್ನು ಒಂದು ದೊಡ್ಡ ಅಂಗಳದ ಸುತ್ತ ಕಟ್ಟುತ್ತಿದ್ದು ಅವುಗಳಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ಪ್ರತ್ಯೇಕ ದ್ವಾರಗಳಿರುತ್ತಿದ್ದವು. ತೆರೆದ ಚಾವಣಿ ಹೊಗೆ ಹೊರ ಹೋಗಲು ಅನುವು ಮಾಡಿಕೊಟ್ಟಿತ್ತು, ಮಳೆ ನೀರು ಒಳ ಬರುವಂತೆ ಮಾಡುತ್ತಿತ್ತು. ತೆರೆದ ಮನೆಯ ಮಧ್ಯದ ಅಂಗಳ(ನಡುಮನೆ) ಸಾಮಾನ್ಯವಾಗಿ ವಿಶ್ರಾಮದ ಸ್ನಾನಗೃಹ, ಕುರ್ಚಿಗಳು ಮತ್ತು ಕೆಲವೊಮ್ಮೆ ಕೈತೋಟವನ್ನು ಹೊಂದಿರುತ್ತಿತ್ತು. ಮನೆಯ ಒಳಾಂಗಣದಲ್ಲಿ ವಿಭಕ್ತ ಕುಟುಂಬಗಳಿಗೆ ಕೊಠಡಿಗಳು, ಒಂದು ಭೋಜನ ಕೊಠಡಿ, ಒಳಾಂಗಣ ಸ್ನಾನ ಕೊಠಡಿಗಳು ಇರುತ್ತಿದ್ದವು.

ಪ್ರಾಚೀನ ರೋಮನ್ನರು ವಾಸ್ತುಶಿಲ್ಪದ ಕೌಶಲಕ್ಕೆ ಪ್ರಸಿದ್ಧರಾಗಿದ್ದರು. ಅವರು ಮಹಾನ್ ಕಟ್ಟಡಗಳಾದ ಬಯಲುಚಂದ್ರಾಂಗಣ (ಕಲಾಸಿಯಮ್), ಮೇಲ್ಗಾಲುವೆಗಳು (ಆಕ್ವಿಡಕ್ಟ್) ಮತ್ತು ವರ್ತುಲಾಕಾರದ ಸರ್ವದೇವ ಮಂದಿರಗಳನ್ನು (ಪ್ಯಾಂತಿಯನ್) ಕಟ್ಟಿಸಿದ್ದರು. ಅರ್ಚಕರು ಮೊದಲು ಶಿಲ್ಪಿಗಳಾಗಿದ್ದು ಏನೇ ಆದರೂ ಅದು ದೇವರ ಇಚ್ಛೆಯಿಂದ ಎಂದು ಹೇಳಲು ಅವರು ಇಂಥವನ್ನು ನಿರ್ಮಿಸುತ್ತಿದ್ದರು. ರೋಮನ್ ಶಿಲ್ಪಿಗಳು ಮೊದಲಿಗೆ ಗ್ರೀಕರಿಂದ ಈ ಕಲಾವಂತಿಕೆಯನ್ನು ಕಲಿತರು. ಅನಂತರ ತಮ್ಮ ವಿಶಿಷ್ಟವಾದ ಕಲ್ಪನಾತೀತ ಬೆಳವಣಿಗೆಯಿಂದ ಪ್ರಪಂಚ ವಿಖ್ಯಾತರಾದರು. (ಎಸ್‌ಯು.ಎಸ್.)

**ರೋಮ್ಯುಲಸ್ ಮತ್ತು ರೀಮಸ್:** ರೋಮ್‌ನಗರ ಸ್ಥಾಪಕರು. ಇವರ ಬಗ್ಗೆ ಇರುವ ದಂತಕಥೆ ರೋಮನ್ ಸಾಹಿತ್ಯದಲ್ಲಿ ಬಹಳ ಮಹತ್ತ್ವಪೂರ್ಣವಾದುದು. ಈ ಅವಳಿ ಸಹೋದರರು ಅಲ್ಬಲಾಂಗದ ದೊರೆ ನ್ಯೂಮಿಟರನ ಮಗಳ ಮಕ್ಕಳು. ನ್ಯೂಮಿಟರ್‌ನ ತಮ್ಮ ಆಮುಲಸ್ ಅಣ್ಣನ ಮೇಲೆ ದಂಗೆಯೆದ್ದು ರಾಜ್ಯವನ್ನು ವಶಪಡಿಸಿಕೊಂಡ. ಆತನ ಮಗಳು ರೀಸಿಲ್ವಿಯ ಕನ್ಯೆಯಾಗಿಯೇ ಉಳಿಯಬೇಕೆಂದು ನಿರ್ಬಂಧ ಹೇರಿದ. ಆದರೆ ಮಾರ್ಸ್‌ದೇವತೆ ರೀಸಿಲ್ವಿಯಳನ್ನು ಪ್ರೇಮಿಸಿದ. ಅವನಿಂದ ರೀಸಿಲ್ವಿಯ ಎರಡು ಮಕ್ಕಳನ್ನು ಪಡೆದಳು. ಇದನ್ನು ತಿಳಿದ ಆಮುಲಸ್ ಮಕ್ಕಳನ್ನು ಬುಟ್ಟಿಯಲ್ಲಿ ಹಾಕಿ ಟೈಬರ್ ನದಿಗೆ ಎಸೆದು ಕೊಲ್ಲಲು ಯತ್ನಿಸಿದ. ಆದರೆ ಆ ಬುಟ್ಟಿ ನದಿಯಲ್ಲಿ ತೇಲಿಕೊಂಡು ಹೋಗಿ ಪಾಲಟೈನ್ ಬೆಟ್ಟದ ಬುಡದಲ್ಲಿಯ ಪವಿತ್ರ ಅಂಜೂರ ಮರದ ಬಳಿ ದಂಡೆಗೆ ಬಂದು ಸೇರಿತು. ಅಲ್ಲೇ ಇದ್ದ ಹೆಣ್ಣುತೋಳವೊಂದು ಈ ಅವಳಿ ಮಕ್ಕಳಿಗೆ ಹಾಲುಣಿಸಿ ಪೋಷಿಸಿತು. ಫಾಟುಲಸ್ ಎಂಬ ಗೊಲ್ಲ ಈ ಮಕ್ಕಳನ್ನು ತೆಗೆದುಕೊಂಡುಹೋಗಿ ಸಾಕಿದ. ಅವನ ಆಶ್ರಯದಲ್ಲಿ ಬೆಳೆದ ರೋಮ್ಯುಲಸ್ ಮತ್ತು ರೀಮಸ್ ಸಾಹಸಿ ತರುಣರಾದ ಮೇಲೆ

ತೋಳವೊಂದು ರೋಮ್ಯುಲಸ್ ಮತ್ತು ರೀಮಸ್‌ಗೆ ಹಾಲೂಡುತ್ತಿರುವುದು

ಆಮುಲಸ್‌ನನ್ನು ಕೊಂದು ತಮ್ಮ ತಾತ ನ್ಯೂಮಿಟರ್‌ಗೆ ಮತ್ತೆ ಸಿಂಹಾಸನವನ್ನು ದೊರಕಿಸಿ ಕೊಟ್ಟರು. ತಾವು ಟೈಬರ್ ನದಿಯ ದಡ ಸೇರಿದ ಸ್ಥಳದಲ್ಲಿ ಒಂದು ನಗರವನ್ನು ಸ್ಥಾಪಿಸಿದರು. ರೋಮ್ಯುಲಸ್ ಕಟ್ಟಿದ ಕೋಟೆಗೋಡೆಯನ್ನು ದಾಟಲು ಹೋದ ರೀಮಸ್ ತನ್ನ ತಪ್ಪಿಗಾಗಿ ಪ್ರಾಣತೆತ್ತ.

ರೋಮ್ಯುಲಸ್ ಹೊಸದಾಗಿ ನಿರ್ಮಿಸಿದ ರಾಜಧಾನಿಗೆ ಸುತ್ತಲಿನ ಪ್ರದೇಶಗಳಿಂದ ಜನರು ಬಂದು ನೆಲಸಲು ಅನೇಕ ಅವಕಾಶಗಳನ್ನು ಕಲ್ಪಿಸಿದ. ನೆರೆರಾಜ್ಯ ಸರ್ಬೈನರನ್ನು ರೋಮಿಗೆ ಆಹ್ವಾನಿಸಿ ಅವರ ಸ್ತ್ರೀಯರು ರೋಮನ್ನರನ್ನು ಮದುವೆಯಾಗಿ ಅಲ್ಲಿ ನೆಲಸುವಂತೆ ಮಾಡಿದ. ರೋಮ್ಯುಲಸ್ ಸರ್ಬೈನರ ದೊರೆ ಟೈಟಸ್‌ನೊಂದಿಗೆ ಜಂಟಿಯಾಗಿ ಆಳಿಕೆ ನಡೆಸಿದ. ಟೈಟಸ್‌ನ ಮರಣಾನಂತರ ರೋಮ್ಯುಲಸ್ ಒಬ್ಬನೇ ಆಡಳಿತ ನಡೆಸಿ ಅನೇಕ ಕಾನೂನುಗಳನ್ನು ರಚಿಸಿದ. ಸಮಾಜದಲ್ಲಿ ಮೂರು ಸಮುದಾಯಗಳನ್ನೂ ಒಂದೊಂದು ಸಮುದಾಯದಲ್ಲಿ ಕ್ಯೂರಿ ಎಂಬ ಹತ್ತು ವಿಭಾಗಗಳನ್ನೂ ಸ್ಥಾಪಿಸಿದ. ಹಿರಿಯನಾಗರಿಕರಿಂದ ಕೂಡಿದ ಸೆನೆಟ್ ಸಭೆಯನ್ನು ಸ್ಥಾಪಿಸಿದ. ರಾಜ್ಯದ ಸುಗಮ ಆಡಳಿತ ಮತ್ತು ಸಮಾಜದ ಭದ್ರತೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಿದ. ಈ ರೀತಿ 40 ವರ್ಷಗಳ ಕಾಲ ಯಶಸ್ವಿಯಾಗಿ ರಾಜ್ಯಭಾರ ಮಾಡಿದ. ಈತ ಒಮ್ಮೆ ಚಂಡಮಾರುತಕ್ಕೆ ಸಿಕ್ಕಿ ಕಣ್ಮರೆಯಾದ. ತಮ್ಮ ದೊರೆ ಒಬ್ಬ ದೇವತೆಯಾದನೆಂದು ನಂಬಿದ ರೋಮನ್ನರು ಅಂದಿನಿಂದ ಇವನನ್ನು ಕ್ವಿರಿನಸ್ ದೇವನೆಂದು ಕರೆದು ಆರಾಧಿಸಲು ಆರಂಭಿಸಿದರು. (ಎಂ.ವಿ.ಎಸ್.)

**ರೋಮಿಲ ಥಾಪರ್:** 1931–. ಭಾರತದ ಪ್ರಸಿದ್ಧ ಇತಿಹಾಸಕಾರ್ತಿ. 1931ರಲ್ಲಿ ಜನನ. ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪೂರೈಸಿದ ಇವರು 1958ರಲ್ಲಿ ಎ.ಎಲ್. ಬ್ಯಾಷಾಂ ಮಾರ್ಗದರ್ಶನದಲ್ಲಿ ಲಂಡನ್ ವಿಶ್ವವಿದ್ಯಾಲಯದಿಂದ ಡಾಕ್ಟೊರೇಟ್ ಪದವಿ

ಪಡೆದರು. ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತ ಇತಿಹಾಸದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಕಾರ್ನೆಲ್ ಹಾಗೂ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯಗಳಲ್ಲಿ ಕೆಲಕಾಲ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1983ರಲ್ಲಿ ಇವರು ಭಾರತೀಯ ಇತಿಹಾಸ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಶಿಕಾಗೊ, ಆಕ್ಸ್‌ಫರ್ಡ್, ಕಲ್ಕತ್ತ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಿವೆ. ಭಾರತ ಸರ್ಕಾರ ನೀಡಿದ ಪದ್ಮಭೂಷಣ ಪ್ರಶಸ್ತಿಯನ್ನು ಇವರು ನಿರಾಕರಿಸಿದ್ದರು (2005). ಒಟ್ಟು 17 ಪುಸ್ತಕಗಳನ್ನೂ 4 ಸಂಪಾದಿತ ಕೃತಿಗಳನ್ನೂ ಇವರು ಪ್ರಕಟಿಸಿದ್ದಾರೆ. ಅಶೋಕ ಅಂಡ್ ದಿ ಡಿಕ್ಲೈನ್ ಆಫ್ ದಿ ಮೌರ್ಯಾಸ್ (1961), ಏನ್ಷಿಯಂಟ್ ಇಂಡಿಯನ್ ಸೋಷಿಯಲ್ ಹಿಸ್ಟರಿ (ಸಂಪಾದಿತ, 1978), ಎ ಹಿಸ್ಟರಿ ಆಫ್ ಇಂಡಿಯ (1966), ಅರ್ಲಿ ಇಂಡಿಯ: ಫ್ರಮ್ ದಿ ಆರಿಜಿನ್ಸ್ ಟು ಎ.ಡಿ. 1300 (2002), ಫ್ರಂ ಲೀನಿಯೇಜ್ ಟು ಸ್ಟೇಟ್–ಇವು ಇವರ ಮುಖ್ಯ ಕೃತಿಗಳು. ಪ್ರಾಚೀನ ಇತಿಹಾಸ ಅಧ್ಯಯನದಲ್ಲಿ ವ್ಯಕ್ತಿಗತ ನಿಲುವುಗಳನ್ನು ಖಂಡಿಸುವ ಇವರ ಬರೆಹಗಳು ವಸ್ತುನಿಷ್ಠ ವಿಮರ್ಶೆಗೆ ಹೆಸರಾಗಿವೆ. (ವಿ.ಎಸ್.)

**ರ್ಯಾಪ್ಸನ್, ಇ.ಜೆ.:** 1861–1937. ಸುಪ್ರಸಿದ್ಧ ಭಾರತೀಯಶಾಸ್ತ್ರ (ಇಂಡಾಲಜಿ) ವಿದ್ವಾಂಸ. 1861ರಲ್ಲಿ ಇಂಗ್ಲೆಂಡಿನ ಲೀಸಸ್ಟರ್‌ನಲ್ಲಿ ಜನಿಸಿದ. ಅಭಿಜಾತ ವಿಷಯಗಳೊಂದಿಗೆ ಟ್ರೈಪಾಸ್ ಅನ್ನು 1883ರಲ್ಲಿ ಗಳಿಸಿ ಭಾರತೀಯಶಾಸ್ತ್ರದ ಬಗ್ಗೆ ತನ್ನ ಆಸಕ್ತಿಯನ್ನು ಬೆಳೆಸಿಕೊಂಡ. 1887ರಲ್ಲಿ ಬ್ರಿಟಿಷ್ ಮ್ಯೂಸಿಯಂನ ನಾಣ್ಯಶಾಸ್ತ್ರ ವಿಭಾಗದಲ್ಲಿ ಸಹಾಯಕನಾಗಿ ಕೆಲಸಕ್ಕೆ ಸೇರಿದ. ಈ ಸಮಯದಲ್ಲಿ ಈತ ಖರೋಷ್ಠಿ ಲಿಪಿಯ ಬಗೆಗೆ ಪರಿಣತಿ ಪಡೆದು ವಿದ್ವಾಂಸ ನೆನಿಸಿಕೊಂಡ. ಚೀನಿ ತುರ್ಕಿಸ್ತಾನದಲ್ಲಿ ಸರ್ ಅರಲ್‌ಸ್ಟೇನ್ ಎಂಬಾತ ಸಂಗ್ರಹಿಸಿದ ಖರೋಷ್ಠಿ ಶಾಸನಗಳನ್ನು ಓದಲು ಈತನೇ ಅತ್ಯಂತ ಸಮರ್ಥನೆಂದು ಪರಿಗಣಿಸಿದ ಅಧಿಕಾರಿಗಳು ಈ ಕೆಲಸವನ್ನು ಇವನಿಗೆ ವಹಿಸಿಕೊಟ್ಟರು. 1906ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಸಂಸ್ಕೃತ ಪೀಠಕ್ಕೆ ಇವನನ್ನು ಆಯ್ಕೆ ಮಾಡಲಾಯಿತು. ಈ ವಿಶ್ವವಿದ್ಯಾಲಯ ಕೇಂಬ್ರಿಜ್ ಹಿಸ್ಟರಿ ಆಫ್ ಇಂಡಿಯ ಎಂಬ ಮಾಲಿಕೆಯನ್ನು ಆರಂಭಿಸಿದಾಗ ಮೊದಲಿನ ಎರಡು ಸಂಪುಟಗಳಿಗೆ ಈತನನ್ನು ಸಂಪಾದಕನನ್ನಾಗಿ ನೇಮಿಸಿತು. 1920ರಲ್ಲಿ ಈತ ಸರ್ ಅರಲ್‌ಸ್ಟೇನನ ಸಂಗ್ರಹದ ಖರೋಷ್ಠಿ ಶಾಸನಗಳ ಮೊದಲ ಸಂಪುಟವನ್ನು ಪ್ರಕಟಿಸಿದ. 1927 ಮತ್ತು 1929ರಲ್ಲಿ ಬೊಯರ್ ಮತ್ತು ಸೆನಾರ್ಟ್ ಅವರ ಸಹಾಯದೊಡನೆ ಈ ಶಾಸನ ಸಂಪುಟದ ಎರಡು ಮತ್ತು ಮೂರನೆಯ ಸಂಪುಟಗಳನ್ನು ಪ್ರಕಟಿಸಿದ.

1922ರಲ್ಲಿ ಈತ ಕೇಂಬ್ರಿಜ್ ಹಿಸ್ಟರಿಯ ಮೊದಲ ಸಂಪುಟವನ್ನು ಪ್ರಕಟಿಸಿದ. ಇದರಲ್ಲಿ ಪ್ರಾಚೀನ ಭಾರತಕ್ಕೆ ಸಂಬಂಧಿಸಿದಂತೆ ಮೂರು ಅಧ್ಯಾಯಗಳನ್ನು ಬರೆದ. ಈ ಅಧ್ಯಾಯಗಳು ಇಂದಿಗೂ ಪ್ರಮಾಣ ಪೂರ್ವಕವಾಗಿದ್ದು ಈತನ ವಿದ್ವತ್ತಿಗೆ ಸಾಕ್ಷಿಯಾಗಿವೆ ಎಂಬುದು ವಿದ್ವಾಂಸರ ಅಭಿಪ್ರಾಯ. ಖಚಿತವಾದ ಆಕರಗಳ ಕೊರತೆಯಿಂದಾಗಿ ಪ್ರಾಚೀನ ಭಾರತದ ಇತಿಹಾಸವನ್ನು ರಚಿಸುವುದು ಇಲ್ಲವೇ ಸಂಪಾದಿಸುವುದು ಬಲು ಕಷ್ಟದ ಕೆಲಸ. ಆದರೆ ಈತ ಸಂಪಾದಿಸಿರುವ ಕೇಂಬ್ರಿಜ್ ಇತಿಹಾಸದ ಮೊದಲನೆಯ ಸಂಪುಟದಲ್ಲಿ ಅತ್ಯಂತ ಜಾಗರೂಕತೆಯಿಂದ ಊಹಾಪೋಹಗಳನ್ನು ಬಿಟ್ಟು ಖಚಿತವಾಗಿಯೂ ನಿರ್ದುಷ್ಟವಾಗಿಯೂ ಸಂಪಾದನೆ ಮಾಡಿ ಇದೊಂದು ಮಾದರಿ ಸಂಪುಟವಾಗುವ ಹಾಗೆ ಮಾಡಿರುವುದು ಈತನ ಹೆಚ್ಚುಗಾರಿಕೆ. ಇದೇ ಮಾಲೆಯ ಎರಡನೆಯ ಸಂಪುಟವನ್ನು ಸಂಪಾದಿಸುವ

ಕೆಲಸದಲ್ಲಿ ತೊಡಗಿದಾಗ ಈತ ನಿಧನಹೊಂದಿದ. ಈತನಿಗೆ ನಾಣ್ಯಶಾಸ್ತ್ರ ಅತ್ಯಂತ ಪ್ರಿಯವಾದ ವಿಷಯವಾಗಿತ್ತು. 1897ರಲ್ಲಿ ಈತ ರಚಿಸಿದ ಇಂಡಿಯನ್ ಕಾಯಿನ್ಸ್ ಖಚಿತತೆಗೆ ಹೆಸರಾದ ನಾಣ್ಯಗ್ರಂಥ. ಇದರಲ್ಲಿ ವಿಶೇಷವಾಗಿ ಪ್ರಾಚೀನ ಭಾರತದ ಅಂದರೆ ಮಹಮ್ಮದೀಯರಿಗೂ ಮುಂಚಿನ ನಾಣ್ಯಶಾಸ್ತ್ರ ಇತಿಹಾಸದ ಪ್ರಮುಖ ಸಂಗತಿಗಳಿವೆ. ಈ ಗ್ರಂಥದಲ್ಲಿ ಕೊಟ್ಟಿರುವ ಗ್ರಂಥಸೂಚಿ ಅತ್ಯಂತ ಉಪಯುಕ್ತ ವೆನಿಸಿದೆ. 1908ರಲ್ಲಿ ಬ್ರಿಟಿಷ್ ಮ್ಯೂಸಿಯಂನ ಸಂಗ್ರಹದಲ್ಲಿದ್ದ ಭಾರತೀಯ ನಾಣ್ಯಗಳನ್ನು ಕುರಿತು ಯಾದಿಯನ್ನು ತಯಾರಿಸಿದ. ಕ್ಯಾಟಲಾಗ್ ಆಫ್ ಕಾಯಿನ್ಸ್ ಆಫ್ ಆಂಧ್ರ ಡೈನಾಸ್ಟಿ, ವೆಸ್ಟರ್ನ್ ಸತ್ರಪ್ಸ್, ದಿ ತ್ರೈಕೂಟಕ ಡೈನಾಸ್ಟಿ ಅಂಡ್ ದಿ ಬೋಧಿ ಡೈನಾಸ್ಟಿ ಇನ್ ದಿ ಬ್ರಿಟಿಷ್ ಮ್ಯೂಸಿಯಂ ಎಂಬ ಈ ಗ್ರಂಥ ನಾಣ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವೆನಿಸಿದೆ. ಇದರಲ್ಲಿ ಸಾತವಾಹನ ರಾಜವಂಶದ ವಿವಿಧ ರಾಜರುಗಳ ಮೇಲೆ ಬರೆದಿರುವ ಟಿಪ್ಪಣಿ ಹಾಗೂ ಪೀಠಿಕೆ ವಿದ್ವತ್ಪೂರ್ಣವಾಗಿದ್ದು ಬಲು ಉಪಯುಕ್ತ ವೆನಿಸಿದೆ. ಇಂದಿಗೂ ಬ್ರಿಟಿಷ್ ಮ್ಯೂಸಿಯಂನಲ್ಲಿರುವ ಈ ರಾಜವಂಶಗಳ ನಾಣ್ಯ ನಮೂನೆಗಳಿಗೆ ಇದೇ ಅತ್ಯಂತ ಪ್ರಮಾಣಭೂತ ಗ್ರಂಥವಾಗಿದೆ. ಇಷ್ಟೇ ಅಲ್ಲದೆ ಇಂಡಿಯನ್ ಆಂಟಿಕ್ವೆರಿ ಮತ್ತು ಇತರ ನಿಯತಕಾಲಿಕೆಗಳಲ್ಲಿ ಈತ ಹತ್ತಾರು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾನೆ. 1914ರಲ್ಲಿ ಈತ ಪ್ರಕಟಿಸಿದ ಏನ್ಷೆಂಟ್ ಇಂಡಿಯ ಎಂಬ ಗ್ರಂಥ ಅಂದಿನವರೆಗೆ ದೊರಕಿದ್ದ ಎಲ್ಲ ಆಕರಗಳನ್ನು ಸಮಗ್ರವಾಗಿ ಕಲೆಹಾಕಿ ರಚಿಸಿದ ಗ್ರಂಥ. ಅನೇಕ ಮುದ್ರಣಗಳನ್ನು ಕಂಡಿರುವ ಈ ಗ್ರಂಥ ಬಹಳ ಜನಪ್ರಿಯವಾಗಿದೆ. (ಎ.ವಿ.ಎನ್.)

**ರ್ಯಾಮ್ಸೆಸ್ II:** ಈಜಿಪ್ಟಿನ ಪ್ರಸಿದ್ಧ ದೊರೆ (ಪ್ರ.ಶ.ಪೂ.1290–24). ಇವನು ಚಿಕ್ಕಂದಿನಲ್ಲಿಯೇ ಪಟ್ಟಕ್ಕೆ ಬಂದು ತನ್ನ ತಂದೆ ಒಂದನೆಯ ಸೆತಿಯೊಡನೆ ಸಹ ಆಡಳಿತ ನಡೆಸಿದ (ಕೊರೆಜೆಂಟ್). ತನ್ನ ಆಡಳಿತದ ಮೊದಲ ಅವಧಿಯಲ್ಲಿ ಸಿರಿಯದ ಮೇಲೆ ಹಿಟ್ಟೈಟರ ಹಿಡಿತವನ್ನು ಕೊನೆಗೊಳಿಸಲು ಯತ್ನಿಸಿದ. ಪ್ರ.ಶ.ಪೂ.ಸು. 1285ರಲ್ಲಿ ಹಿಟ್ಟೈಟರೊಡನೆ ಕದೇಶ್ ಎಂಬಲ್ಲಿ ನಿರಂತರ ಕಾಳಗ ಮಾಡಿ ವಿಜಯಿಯಾದ. ಆದರೆ ಪ್ರ.ಶ.ಪೂ. 1269ರಲ್ಲಿ ಹಿಟ್ಟೈಟರ ದೊರೆಯೊಡನೆ ಒಪ್ಪಂದ ಮಾಡಿಕೊಂಡು ಸಿರಿಯವನ್ನು ಇಬ್ಬರೂ ಹಂಚಿಕೊಂಡರು. ಈತ ತನ್ನ ಸುದೀರ್ಘ ಆಳಿಕೆಯ ಬಹುಪಾಲು ಸಮಯವನ್ನು ಬೃಹತ್‌ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಸಿದ. ಇವನ ಆಳಿಕೆಯಲ್ಲಿ ಅನೇಕ ಭವ್ಯ ಕಟ್ಟಡಗಳೂ ದೇವಾಲಯಗಳೂ ನಿರ್ಮಾಣಗೊಂಡವು. ಈತ ನೈಲ್ ನದಿಯ ಮುಖಜಭೂಮಿಯಲ್ಲಿ ಹೊಸ ರಾಜಧಾನಿಯನ್ನು ಕಟ್ಟಿದ. ಕಾರ್ನಾಕ್‌ನಲ್ಲಿ ಅಮನ್‌ರೇ ಎಂಬ ದೇವಾಲಯದ ಬೃಹತ್ ಸಭಾಂಗಣವನ್ನು ಪೂರ್ಣಗೊಳಿಸಿದ. ಅಬು ಸಿಂಬೆಲ್ ಎಂಬಲ್ಲಿ ಬೃಹತ್ ಶಿಲಾದೇವಾಲಯಗಳನ್ನು ನಿರ್ಮಿಸಿದ. ಈತನ ಮಮ್ಮಿಯನ್ನು ಈಜಿಪ್ಟಿನ ಕೈರೋ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ. ಬೈಬಲ್‌ನಲ್ಲಿ ಉಲ್ಲೇಖಿತವಾಗಿರುವ ಫೆರೋ ಬಹುಶಃ ಈತನೇ ಇರಬೇಕೆಂದು ಅಭಿಪ್ರಾಯಪಡಲಾಗಿದೆ. *



ರ್ಯಾಮ್ಸೆಸ್ ಶಿಲ್ಪದ ಶಿರೋಭಾಗ

**ರ್ಯಾಡ್‌ಕ್ಲಿಫ್ ಗಡಿ ಆಯೋಗ:** ಭಾರತದ ಉಪಖಂಡವನ್ನು ವಿಭಜಿಸಲು ಹಾಗೂ ಪಂಜಾಬ್ ಮತ್ತು ಬಂಗಾಲ ಪ್ರಾಂತಗಳ ಗಡಿರೇಖೆಯನ್ನು ಗುರುತಿಸಲು ಪಂಜಾಬ್ ಮತ್ತು ಬಂಗಾಲ ಗಡಿ ಆಯೋಗಗಳೆಂಬ ಎರಡು ಗಡಿ ಆಯೋಗಗಳನ್ನು ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ 1947 ಜೂನ್ 30 ರಂದು ನೇಮಿಸಿದರು. ಈ ಎರಡೂ ಗಡಿ ಆಯೋಗಗಳಿಗೆ ಸರ್ ಸಿರಿಲ್ ರ್ಯಾಡ್‌ಕ್ಲಿಫ್‌ರನ್ನು ಅಧ್ಯಕ್ಷರನ್ನಾಗಿ ಬ್ರಿಟಿಷ್ ಸರ್ಕಾರ ನೇಮಿಸಿತು. ಈ ಗಡಿ ಆಯೋಗಗಳಿಗೆ ಭಾರತದ ಪ್ರಮುಖ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿತು. ಬಂಗಾಲದ ಗಡಿ ಆಯೋಗಕ್ಕೆ ಬಿ. ಕೆ. ಮುಖರ್ಜಿ, ಸಿ. ಎಸ್. ವಿಶ್ವಾಸ್ ಕಾಂಗ್ರೆಸ್ ಪ್ರತಿನಿಧಿಗಳಾಗಿಯೂ ಅಬುಸಲೇ ಮಹಮ್ಮದ್ ಅಕ್ರಂ ಮತ್ತು ಎಸ್. ಎ. ರೆಹಮಾನ್ ಮುಸ್ಲಿಂ ಲೀಗ್ ಪ್ರತಿನಿಧಿಗಳಾಗಿ ನೇಮಕಗೊಂಡಿದ್ದರು. ಪಂಜಾಬ್ ಗಡಿ ಆಯೋಗಕ್ಕೆ ಮೆಹರ್‌ಚಂದ್ ಮಹಾಜನ್, ತೇಜ್‌ಸಿಂಗ್, ದಿನ್ ಮೊಹಮದ್, ಮೊಹಮದ್ ಮುನಿರ್ ಸದಸ್ಯರಾಗಿದ್ದರು. ಈ ಎರಡೂ ಗಡಿ ಆಯೋಗಗಳಿಗೆ ಆ ಪ್ರಾಂತಗಳ ಮುಸ್ಲಿಂ ಬಹುಸಂಖ್ಯಾತ ಮತ್ತು ಮುಸ್ಲಿಮೇತರ ಬಹುಸಂಖ್ಯಾತ ಪ್ರದೇಶಗಳನ್ನು ಗುರುತಿಸಿ ಗಡಿಯನ್ನು ನಿರ್ಧರಿಸಬೇಕಾದಂತಹ ಜವಾಬ್ದಾರಿಯುತ ಕಾರ್ಯವನ್ನು ವಹಿಸಲಾಗಿತ್ತು. ಗಡಿ ಆಯೋಗಗಳ ಅಧ್ಯಕ್ಷರಾದ ಸರ್‌ಸಿರಿಲ್ ರ್ಯಾಡ್‌ಕ್ಲಿಫ್ ಇಂಗ್ಲೆಂಡ್‌ನಲ್ಲಿ ವಕೀಲರಾಗಿದ್ದವರು. ರ್ಯಾಡ್‌ಕ್ಲಿಫ್ ತಮ್ಮ ಜೀವಮಾನದಲ್ಲಿ ಭಾರತಕ್ಕೆ ಒಮ್ಮೆಯೂ ಭೇಟಿ ನೀಡಿರಲಿಲ್ಲ. ಅಧ್ಯಕ್ಷರಾದ ರ್ಯಾಡ್‌ಕ್ಲಿಫ್ ಪಂಜಾಬ್ ಮತ್ತು ಬಂಗಾಲ ಗಡಿ ಆಯೋಗಗಳ ಸದಸ್ಯರ ಜೊತೆ ಸಮಾಲೋಚಿಸಿ ವರದಿ ತಯಾರಿಸಲು ಪ್ರಯತ್ನಿಸಿದರು. ಆದರೆ ಸದಸ್ಯರ ಅಸಹಕಾರದಿಂದ ಅದು ಸಾಧ್ಯವಾಗಲಿಲ್ಲ.

ರ್ಯಾಡ್‌ಕ್ಲಿಫ್ ಗಡಿ ವರದಿಯನ್ನು 1947 ಆಗಸ್ಟ್ 17 ರಂದು ಪ್ರಕಟಿಸಲಾಯಿತು. ಈ ವರದಿ ಬಂಗಾಲ ಮತ್ತು ಪಂಜಾಬ್ ಪ್ರಾಂತಗಳನ್ನು ವಿಭಜಿಸುವಾಗ ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳು ಮತ್ತು ಮುಸ್ಲಿಮೇತರ ಬಹುಸಂಖ್ಯಾತ ಪ್ರದೇಶಗಳೆಂಬ ಮಾನದಂಡವನ್ನು ಬಳಸಿ ಎರಡು ಭಾಗಗಳಾಗಿ ವಿಭಜಿಸಿತು. ಬಂಗಾಲ ಪ್ರಾಂತದ ಒಟ್ಟು ಭೂವ್ಯಾಪ್ತಿ 1,29,360 ಕಿಮೀ. ಮತ್ತು ಜನಸಂಖ್ಯೆ 60.3 ದಶಲಕ್ಷ ಇದರಲ್ಲಿ ಪಶ್ಚಿಮ ಬಂಗಾಲಕ್ಕೆ 47,025 ಕಿಮೀ ಭೂಪ್ರದೇಶ ಮತ್ತು 21.2 ದಶಲಕ್ಷ ಜನಸಂಖ್ಯೆಯನ್ನು ಗಡಿ ಆಯೋಗವು ನಿಗದಿಗೊಳಿಸಿತು. ಬಂಗಾಲದ ಒಟ್ಟು ಮುಸ್ಲಿಂ ಜನಸಂಖ್ಯೆಯಲ್ಲಿ ಶೆ. 16.06 ಭಾಗ ಪಶ್ಚಿಮ ಬಂಗಾಲದಲ್ಲೂ ಇನ್ನುಳಿದ 83.94 ಭಾಗ ಪೂರ್ವ ಬಂಗಾಲದಲ್ಲುಳಿದರು. ಆದರೆ ಮುಸ್ಲಿಮೇತರ ಜನಸಂಖ್ಯೆಯ ಒಟ್ಟು ಶೇ. 58.22 ಭಾಗ ಪಶ್ಚಿಮ ಬಂಗಾಲದಲ್ಲುಳಿದು ಇನ್ನುಳಿದ ಶೆ. 41.78 ಭಾಗ ಪೂರ್ವ ಬಂಗಾಲದಲ್ಲುಳಿದರು. ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳೆಂದು ಚಿತ್ತಗಾಂಗ್ ಪರ್ವತ ಪ್ರದೇಶಗಳನ್ನು ಮತ್ತು ಗಡಿಯಲ್ಲಿದ್ದ ಖುಲ್ನಾ ಜಿಲ್ಲೆಯನ್ನು ಪಾಕಿಸ್ತಾನಕ್ಕೆ ನೀಡಲಾಯಿತು. ಆದರೆ ಅಲ್ಲಿದ್ದ ಹಿಂದೂಗಳ ಬಹುಮತವನ್ನು ಪರಿಗಣಿಸಲಿಲ್ಲ.

ಪಂಜಾಬ್ ಪ್ರಾಂತದ ಒಟ್ಟು ಭೂವ್ಯಾಪ್ತಿ 264000 ಚ.ಕಿಮೀ ಮತ್ತು ಒಟ್ಟು ಜನಸಂಖ್ಯೆ 28.4 ದಶಲಕ್ಷ. ವಿಭಜನೆಯಲ್ಲಿ ಪಾಕಿಸ್ತಾನದ ಭಾಗವಾದ ಪಶ್ಚಿಮ ಪಂಜಾಬ್‌ಗೆ 1,33,300ಕಿಮೀ ಭೂಭಾಗ ಮತ್ತು 15.9 ದಶಲಕ್ಷ ಜನಸಂಖ್ಯೆಯನ್ನು ನಿಗದಿಗೊಳಿಸಲಾಯಿತು. ಪೂರ್ವ ಪಂಜಾಬ್‌ಗೆ 59200 ಚ.ಕಿಮೀ ಭೂಪ್ರದೇಶ ಮತ್ತು 12.5 ದಶಲಕ್ಷ ಜನಸಂಖ್ಯೆಯನ್ನು ನೀಡಲಾಯಿತು. ರ್ಯಾಡ್‌ಕ್ಲಿಫ್ ಗಡಿ ವರದಿ ಪ್ರಕಟವಾದ ನಂತರ ಅನೇಕ ಪತ್ರಿಕೆಗಳು ವರದಿಯನ್ನು ಟೀಕಿಸಿದವು. ಗಡಿಯನ್ನು ನಿರ್ಧರಿಸುವಾಗ ಬಹುಸಂಖ್ಯಾತ ಅಂಶವನ್ನಲ್ಲದೆ ಇನ್ನಿತರ ಅಂಶಗಳನ್ನು ಪರಿಗಣಿಸಬೇಕೆಂದು ಗಡಿ ಆಯೋಗಗಳಿಗೆ ತಿಳಿಸಲಾಗಿತ್ತು. ಈ ಇನ್ನಿತರ ಅಂಶಗಳಾವುವು ಎಂಬುದನ್ನು ನಿಖರವಾಗಿ ತಿಳಿಸದಿದ್ದುದೇ ಮುಂದಿನ ಪ್ರಮಾದಗಳಿಗೆ ಕಾರಣವಾಯಿತು. ರ್ಯಾಡ್‌ಕ್ಲಿಫ್ ಗಡಿ ಆಯೋಗ ಆ ಪ್ರದೇಶಗಳ ವಿಭಜನೆ ಮಾಡುವಾಗ ಸಾಂಸ್ಕೃತಿಕ, ಆರ್ಥಿಕ ಅಂಶಗಳನ್ನು ಪರಿಗಣಿಸದೆ ವರದಿ ತಯಾರಿಸಿದುದು ಅವೈಜ್ಞಾನಿಕ ಕ್ರಮವಾಗಿತ್ತು. ಗಡಿ ನಿರ್ಧಾರದ ಪ್ರಕಟಣೆ ಹೊರಬೀಳುತ್ತಿದ್ದಂತೆ ತಮ್ಮ ತಮ್ಮ ದೇಶವನ್ನು ಸೇರಿಸಿಕೊಳ್ಳಲು ನಿರಾಶ್ರಿತರ ಪ್ರವಾಹವೇ ಹರಿದುಬಂತು. ವಿಭಜಿತವಾದ ಬಂಗಾಲ ಮತ್ತು ಪಂಜಾಬ್‌ನಲ್ಲಿ ನಿರಾಶ್ರಿತರ ಹಾವಳಿ, ಕೋಮುಹತ್ಯೆ ಮಿತಿಮೀರಿತು. ಆ ವೇಳೆಯಲ್ಲಿ ಸು.6 ಲಕ್ಷ ಜನರು ಸಾವಿಗೀಡಾಗಿ 1,40,000,00 ಜನ ಮನೆಮಠಗಳನ್ನು ಕಳೆದುಕೊಂಡು ನಿರಾಶ್ರಿತರಾದರು. (ಕೆ.ಎಸ್‌ಡಿ.)

# ಲ

**ಲಕ್ಕುಂಡಿ:** ಗದಗ ಜಿಲ್ಲೆಯ ಗದಗ–ಬೆಟಗೇರಿಯಿಂದ 11 ಕಿಮೀ ದೂರದಲ್ಲಿರುವ ಐತಿಹಾಸಿಕ ಸ್ಥಳ. ಪ್ರಾಚೀನಕಾಲದಲ್ಲಿ ಲೊಕ್ಕಿಗುಂಡಿ ಎಂದು ಪ್ರಸಿದ್ಧವಾಗಿದ್ದ ಈ ಊರು 11–12ನೆಯ ಶತಮಾನಗಳಲ್ಲಿ ಬೆಳ್ವೊಲ 300 ಪ್ರಾಂತಕ್ಕೆ ಸೇರಿತ್ತು. ಬೆಳ್ವೊಲದ 18 ಅಗ್ರಹಾರಗಳಲ್ಲಿ ಇದೂ ಒಂದಾಗಿತ್ತು. ಶಾಸನಗಳಲ್ಲಿ ಈ ಊರನ್ನು ಶ್ರೀಗೆವಿಭೂತಿಗೆ ಧರ್ಮಕ್ಕಾಗರಮೆನಲಿಂದ್ರನಗ್ಗದಮರಾವತಿಗಂ ಭೋಗಾವತಿಗಂ ಸಲೆ ಮೇಲಾಗಿಪ್ಪುದು ಧರೆಗೆ ಎಂದು ಪ್ರಕಟಿಸಲಾಗಿದೆ. ದಾಶರಥಿವಿನಿರ್ಮಿತ ರಾಮದರತ್ತಿ, ಶ್ರೀಮದ್ರಾಮಮಹೇಂದ್ರದತ್ತ ಎಂದು ಕರೆದಿದೆ. ಇಲ್ಲಿಯ ಮಹಾಜನರನ್ನು ವಿದಿತವೇದಾರ್ಥವಿದ್ಯಾಪಾರಗರ್, ಷಟ್ಕರ್ಮನಿರತರ್, ಸಪ್ತಸೋಮ ಸಂಸ್ಥಾವಭೃತಾವಗಾಹನಪವಿತ್ರೀಕೃತಶರೀರರ್, ಅಷ್ಟಾದಶಧರ್ಮಶಾಸ್ತ್ರಕುಶಳರ್, ಶಾಪಾನುಗ್ರಹಸಮರ್ತ್ಥರ್, ವೈಷ್ಣಚಗೀತಮನೋಹರರ್ ದ್ವಿಜಕುಳತಿಳಕರ್ ಎಂದು ವರ್ಣಿಸಲಾಗಿದೆ. ಲೊಕ್ಕಿಗುಂಡಿಯೊಂದಿಗೆ ರನ್ನಕವಿಯ ಆಶ್ರಯದಾತೆ ದಾನಚಿಂತಾಮಣಿ ಅತ್ತಿಮಬ್ಬೆಯ ಹೆಸರು ಬೆಸೆದುಕೊಂಡಿದೆ. ಈಕೆ ಇಲ್ಲಿ ಬ್ರಹ್ಮಜಿನಾಲಯವೊಂದನ್ನು ಕಟ್ಟಿಸಿದ ಸಂಗತಿ, ಈ ಜಿನಾಲಯಕ್ಕೆ ದತ್ತಿಬಿಡುವಂತೆ ಕಲ್ಯಾಣದ ಚಾಳುಕ್ಯದೊರೆ ಇಜಿವಬೆಡಂಗ ಸತ್ಯಾಶ್ರಯನಲ್ಲಿ ಬಿನ್ನವಿಸಿಕೊಂಡ ಸಂಗತಿ ಇಲ್ಲಿಯ ಎರಡು ಶಾಸನಗಳಿಂದ ತಿಳಿದುಬರುತ್ತದೆ. ಇದು ಕೆಲಕಾಲ ಒಂದು ಉಪರಾಜಧಾನಿಯಾಗಿತ್ತು. ಹೊಯ್ಸಳ ಇಮ್ಮಡಿಬಲ್ಲಾಳ ಇದನ್ನು ತನ್ನ ನೆಲೆವೀಡಾಗಿ ಮಾಡಿ ಕೊಂಡಿದ್ದ. ಇಲ್ಲಿ ಬಲವಾದ ಕೋಟೆಯೊಂದಿದ್ದು ಅದನ್ನು ಆಕ್ರಮಿಸಲು ಈತನಿಗೂ ಸೇವುಣರ ಭಿಲ್ಲಮನಿಗೂ ನಡುವೆ ಕದನಗಳಾದುವೆಂದು ತಿಳಿದುಬರುತ್ತದೆ. 1189–90ರಲ್ಲಿ ಭಿಲ್ಲಮ ಹೊಯ್ಸಳರಿಗೆ ಸೇರಿದ್ದ ಪ್ರದೇಶಗಳನ್ನು ಆಕ್ರಮಿಸಲು ತನ್ನ ರಾಜ್ಯದ ದಕ್ಷಿಣಕ್ಕೆ ದಂಡೆತ್ತಿ ಸೊರಟೂರನ್ನು

ಆಕ್ರಮಿಸಿದ. ಇದನ್ನು ಕಂಡ ಹೊಯ್ಸಳ ಬಲ್ಲಾಳ ಭಿಲ್ಲಮನನ್ನು ಅಲ್ಲಿಂದ ಹೊರದೂಡಲು ಸೈನ್ಯಾಚರಣೆ ಕೈಗೊಂಡ. ಆಗ ನಡೆದ ಪ್ರಸಿದ್ಧವಾದ ಸೊರಟೂರಿನ ಕದನದಲ್ಲಿ ಭಿಲ್ಲಮನನ್ನು ಬಲ್ಲಾಳ ಹಿಮ್ಮೆಟ್ಟಿಸಿದ. ಅನಂತರ ಆತ ಮುಂಜಾಗರೂಕತೆಯ ದೃಷ್ಟಿಯಿಂದ ಕೆಲಕಾಲ ಲೊಕ್ಕಿಗುಂಡಿಯನ್ನೇ ತನ್ನ ನೆಲೆವೀಡಾಗಿ ಮಾಡಿಕೊಂಡ. ಈ ಸುತ್ತಲಿನ ಪ್ರದೇಶಕ್ಕಾಗಿ ಈ ಎರಡು ಬಣಗಳ ನಡುವೆ ಕಲಹಗಳು ಆಗುತ್ತಲೇ ಇದ್ದುವು. ಭಿಲ್ಲಮನ ಅನಂತರ ಜೈತುಗಿ ಲಕ್ಕುಂಡಿಯನ್ನು ಪ್ರಯಾಸಪಟ್ಟು ಆಕ್ರಮಿಸಿದನಾದರೂ ಮತ್ತೊಮ್ಮೆ ಬಲ್ಲಾಳ ಅದನ್ನು

ಬ್ರಹ್ಮ ಜಿನಾಲಯ

ಕಸಿದುಕೊಂಡ. 12ನೆಯ ಶತಮಾನದ ಅನಂತರ ಲೊಕ್ಕಿಗುಂಡಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಕಲ್ಯಾಣದ ಚಾಳುಕ್ಯರ ಆಳಿಕೆಯ ಕಾಲದಲ್ಲಿ ಇದೊಂದು ಪ್ರಮುಖ ಟಂಕಸಾಲೆಯಾಗಿತ್ತು. ಅನೇಕ ಶಾಸನಗಳಲ್ಲಿ ಪ್ರಸ್ತಾಪಿಸಲ್ಪಟ್ಟ ಇತಿಹಾಸ ಪ್ರಸಿದ್ಧ ಲೊಕ್ಕಿಯ ಪೊಂಗದ್ಯಾಣ ಇಲ್ಲಿಯ ಟಂಕಸಾಲೆಯಲ್ಲಿ ಅಚ್ಚಾದುದು.

ಲಕ್ಕುಂಡಿಯಲ್ಲಿ ಮಲ್ಲಿಕಾರ್ಜುನ, ಸೋಮೇಶ್ವರ, ನನ್ನೇಶ್ವರ, ವೀರಭದ್ರ, ಚಂದ್ರಮೌಳೇಶ್ವರ, ಮಾಣಿಕೇಶ್ವರ ಮುಂತಾದ 20ಕ್ಕೂ ಹೆಚ್ಚು ದೇವಾಲಯಗಳಿವೆ. ಇವನ್ನು ಕಟ್ಟಿಸಿದ ಕಾಲ ಸ್ಪಷ್ಟವಿಲ್ಲವಾದರೂ ಇಲ್ಲಿ ಲಭ್ಯವಾಗಿರುವ ಶಾಸನಗಳಲ್ಲೆಲ್ಲ ಕಲ್ಯಾಣ ಚಾಳುಕ್ಯ ಅರಸ ವಿಕ್ರಮಾದಿತ್ಯ ಹಾಗೂ ಅನಂತರ ಆಳಿದ ಮುಮ್ಮಡಿ ತೈಲಪ ಹಾಗೂ ನಾಲ್ವಡಿ ಸೋಮೇಶ್ವರರ ಮತ್ತು ಕಳಚುರಿ ಹಾಗೂ ಹೊಯ್ಸಳ ಅರಸರ ಶಾಸನಗಳು ಅತಿ ಪ್ರಾಚೀನವಾದುವು.

ಕಾಶೀವಿಶ್ವನಾಥನ ದೇವಾಲಯದಲ್ಲಿ ಹೊಯ್ಸಳರ ಕಲೆಯ ಭವ್ಯತೆಯನ್ನು ಕಾಣಬಹುದು. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ವೈಭವದಿಂದ ಮೆರೆಯುತ್ತಿದ್ದ ಈ ದೇವಾಲಯ ಚೋಳರ ದುರಾಕ್ರಮಣಕ್ಕೊಳಗಾಗಿ ಭಗ್ನವಾಗಿತ್ತು. ಇಲ್ಲಿಯ ಗರ್ಭಗುಡಿಯ ಮುಂದಿನ ಪಡಸಾಲೆಯ ತೊಲೆಯ ಕಂಬದಲ್ಲಿ ಮುಮ್ಮಡಿ ತೈಲಪನ ಎರಡು ಶಾಸನಗಳಿವೆ. ಅಲ್ಲದೆ, ಈ ಭಾಗದ ಕಲೆಯನ್ನು ದೇವಾಲಯದ ಹೊರಾಂಗಣದ ಹಾಗೂ ಮಹಾದ್ವಾರದ ಕಲೆಗೆ ಹೋಲಿಸಿ ನೋಡಿದಾಗ ಈ ಒಳಭಾಗ ಮೂಲತಃ ಚಾಳುಕ್ಯರ ಕಾಲದ ಕಟ್ಟಡ ಎಂಬುದು ಸ್ಪಷ್ಟವಾಗುತ್ತದೆ. ಈ ದೇವಾಲಯವನ್ನು ಹಿಂದೆ ಕವತಾಳೇಶ್ವರಾಲಯ ಎಂದು ಕರೆಯುತ್ತಿದ್ದಂತೆ ದೇವಾಲಯದ ತೊಲೆಗಳಲ್ಲಿಯ ಶಾಸನಗಳಿಂದ ಕಂಡುಬರುತ್ತದೆ. 1162ರಲ್ಲಿ ಬಾಚಿರಾಜ ಮತ್ತು ಮಾಕಿಕವ್ವೆಗಳ ಪುತ್ರ ಲೊಕ್ಕಿಗುಂಡಿಯ ಶ್ರೀಸಾಸಿರ್ವ್ವರ ಪ್ರಿಯಪುತ್ರನೆನಿಸಿದ ಪೆಗ್ಗಡೆಯರ ತ್ರಿಭುವನಮಲ್ಲ ಕೇಶವದೇವನು ಗ್ರಾಮಾಧಿದೈವವಾದ ಕವತಾಳೇಶ್ವರದ ಆಚಾರ್ಯರಾದ ಸೋಮೇಶ್ವರ ಪಂಡಿತರಿಗೆ ವರ್ಷಂಪ್ರತಿ 3 ಹೊನ್ನನ್ನು ದೇವರ್ಗ್ಗೆ ಪ್ರಭಾತದ ತುಯ್ಯಲನಿವೇದ್ಯ ಕ್ಕೆಂದು ದಾನಮಾಡಿದನೆಂದು ತಿಳಿದುಬರುತ್ತದೆ. ದೇವಾಲಯದ ಹೊರಗೋಡೆಯ ಮೇಲೆ ರಾಮಾಯಣದ ಕೆಲವು ಚಿತ್ರಗಳನ್ನು ಕೆತ್ತಲಾಗಿದೆ.

ಲಕ್ಕುಂಡಿಯ ದೇವಾಲಯಗಳಲ್ಲೆಲ್ಲ ಹಾಲು ಬಸವಣ್ಣ ಮತ್ತು ವೀರಭದ್ರ ದೇವಾಲಯ ಪ್ರಾಚೀನವಾದುವು. ಇವು 10ನೆಯ ಶತಮಾನದ ಉತ್ತರಾರ್ಧ ಕಾಲದವು. ಕಲ್ಯಾಣ ಚಾಳುಕ್ಯರ ಕಾಲದ ವಾಸ್ತುಶೈಲಿಯ ಒಂದು ಅಂಶವಾದ ಕಲಾಪೂರ್ಣವಾದ ದ್ವಾರಗಳಿಗೆ ಪ್ರಾಚೀನ ಹಾಗೂ ಉತ್ತಮ ನಿದರ್ಶನ. ಎರಡು ಪಕ್ಕಗಳಲ್ಲಿ ಇನ್ನೆರಡು ಸಣ್ಣಗೋಡೆಗಂಬಗಳು, ಅವುಗಳಿಂದ ಹೊಮ್ಮಿ ಗೋಪುರದ ಮೇಲೆ ಬಾಗಿದಂತೆ ತೋರುವ ಸುಳಿ ಸುಂದರವಾಗಿವೆ. ಇಲ್ಲಿನ ಗರ್ಭಗುಡಿಯ ಸಿಂಹಾಸನದಲ್ಲಿರುವ ಕಪ್ಪುಶಿಲೆಯ ಮಹಾವೀರನ ವಿಗ್ರಹ ಈಗ ಭಗ್ನವಾಗಿದೆ. ಜಿನನ ಎರಡೂ ಪಕ್ಕದಲ್ಲಿ ಚೌರಿಯನ್ನು ಹೊತ್ತ ಸೇವಕರಿದ್ದಾರೆ. ಅಲ್ಲದೆ ಗರ್ಭಗುಡಿಯ ಎರಡೂ ಕಡೆ ಬ್ರಹ್ಮ ಹಾಗೂ ಸರಸ್ವತಿಯ ವಿಗ್ರಹಗಳಿವೆ. ಈಗ ಸರಸ್ವತಿಯ ವಿಗ್ರಹ ಶಿಥಿಲವಾಗಿದೆ. ಈ ಗ್ರಾಮದಲ್ಲಿ ಇನ್ನೂ ಎರಡು ಬಸದಿಗಳಿವೆ. ಇವುಗಳಲ್ಲಿ ಒಂದನ್ನು ಈಗ ನಾಗನಾಥಾಲಯವೆನ್ನುತ್ತಾರೆ. ಆದರೆ ವಾಸ್ತವಿಕವಾಗಿ ಇದು ಪಾರ್ಶ್ವನಾಥ ಬಸದಿ. ಈಗ ಅದರ ಗರ್ಭಗುಡಿಯಲ್ಲಿ ವಿಗ್ರಹದ ಪೀಠ ಹಾಗೂ ಪಾರ್ಶ್ವನಾಥ ತಲೆಯ ಮೇಲಿರಬೇಕಾದ ಹೆಡೆಯುಳ್ಳ ಸರ್ಪ ಮಾತ್ರ ಇದೆ. ಈ ಜೈನ ಬಸದಿಗೆ ಘಟಾಂತಿಕೆಯ ಬಸದಿ ಎಂಬ ಇನ್ನೊಂದು ಬಸದಿ ಪ್ರತಿಬದ್ಧವಾಗಿತ್ತೆಂದು ಶಾಸನಗಳಲ್ಲಿ ಹೇಳಿದೆ. ಇವಲ್ಲದೆ ನೋಂಪಿಯ ಬಸದಿ, ಕಮ್ಮಟ ಜಿನಾಲಯ ಎಂಬ ಇನ್ನೂ ಎರಡು ಬಸದಿಗಳ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಈಗಿನ ಗಣೇಶನ ಗುಡಿಯ ಮಾಳಿಗೆಗೆ ಸೇರಿಸಿರುವ ಕಲ್ಲಿನಲ್ಲಿರುವ ಶಾಸನ (1165) ಚಾಳುಕ್ಯ ನಾಲ್ಕನೆಯ ಸೋಮೇಶ್ವರನದು. ಇದರಲ್ಲಿ ನೋಂಪಿಯ ಬಸದಿಯ ದೇವರಿಗೆ, ಕಮ್ಮಟೇಶ್ವರ ದೇವರಿಗೆ ಮತ್ತು ಕಮ್ಮಟ ಜಿನಾಲಯದ ಶಾಂತಿನಾಥ ದೇವರಿಗೆ ನೀಡಲಾದ ದಾನಗಳನ್ನು ನಿರೂಪಿಸಲಾಗಿದೆ. (ಬಿ.ಆರ್.ಜಿ.)

ಲಕ್ಕುಂಡಿಯ ಈಶಾನ್ಯಕ್ಕೆ 5ಕಿಮೀ ದೂರದಲ್ಲಿ ನವಶಿಲಾಯುಗ ವಸತಿನೆಲೆಯಿದೆ. ಸು.1 ಹೆ. ವಿಸ್ತಾರವಿರುವ ಈ ನೆಲೆ ಬೂದಿಬಸವಣ್ಣ ಗುಡಿಯ ವಾಯವ್ಯಕ್ಕೆ 0.5 ಕಿಮೀ ದೂರದಲ್ಲಿದೆ. ನೆಲೆಯ ಸಮೀಪ ಸಣ್ಣಹಳ್ಳವೊಂದು ಮಳೆಗಾಲದಲ್ಲಿ ಹರಿಯುತ್ತದೆ. ಕರ್ನಾಟಕದ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ಇಲಾಖೆ ಈ ನೆಲೆಯಲ್ಲಿ 2004–05ರಲ್ಲಿ ಆರ್. ಗೋಪಾಲ್ ಮತ್ತು ಅ. ಸುಂದರ ಅವರ ನೇತೃತ್ವದಲ್ಲಿ ಉತ್ಖನನ ನಡೆಸಿತು. ಸು. 65–70 ಸೆಂಮೀ ದಪ್ಪದ ವಸತಿಪದರದಲ್ಲಿ 4 ಸ್ತರಗಳನ್ನು ಗುರುತಿಸಲಾಯಿತು. 2ನೆಯ ಸ್ತರದಲ್ಲಿ ಸು.3000 ವರ್ಷ ಹಿಂದಿನ ನವಶಿಲಾಯುಗದ ಅಂತ್ಯ ಹಂತದ ಅವಶೇಷಗಳೂ ಆದಿ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳೂ ಇದ್ದವು. ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳಲ್ಲಿ ಹೊಳಪಿನ ಕಪ್ಪು, ಕೆಂಪು, ಕಪ್ಪು– ಕೆಂಪು ದ್ವಿವರ್ಣದ ಮಣ್ಪಾತ್ರೆಗಳು, ಕಬ್ಬಿಣದ ಬಾಣದ ಮೊನೆ, ಮನುಷ್ಯನ ಅಸ್ಥಿ ತುಣುಕುಗಳುಳ್ಳ ಪಾತ್ರೆ, ಪ್ರತ್ಯೇಕ ಸಿಂಬಿಗಳ ಮೇಲಿಟ್ಟ ಅರೆಗೋಲಾಕಾರದ ಮೂರು ಬಟ್ಟಲುಗಳು ಇದ್ದ ಒಂದು ಶವಕುಣಿ ಉಲ್ಲೇಖಾರ್ಹ. ಈವರೆಗೆ ರಾಯಚೂರಿನ ಮಸ್ಕಿ ಮತ್ತು ಆಂಧ್ರಪ್ರದೇಶದ ರಾಮಾಪುರಂನಲ್ಲಿ ಮಾತ್ರ ಬೃಹತ್ ಶಿಲಾಯುಗದ ವಸತಿನೆಲೆಯಲ್ಲಿಯೇ ಶವಕುಣಿಗಳು ಕಂಡುಬಂದಿದ್ದು ಈಗ ಲಕ್ಕುಂಡಿಯೂ ಈ ಪಟ್ಟಿಗೆ ಸೇರುತ್ತದೆ. ಇದೇ ಸ್ತರದಲ್ಲಿ ನವಶಿಲಾಯುಗ ಸಂಸ್ಕೃತಿಯ ಅಭ್ರಕ ಮಿಶ್ರಿತ ಬೂದು ಮತ್ತು ನಸುಗೆಂಪು ವರ್ಣದ ಮಣ್ಪಾತ್ರೆ ಚೂರುಗಳು, ಕರಿಕಲ್ಲಿನ ತ್ರಿಕೋಣಾಕೃತಿಯ ಕೊಡಲಿಗಳು, ಚರ್ಟ್ ಕಲ್ಲಿನ ಚಕ್ಕೆಗಳು, ಬೂದುಬಣ್ಣದ ಮಣ್ಣಿನ ದಮ್ಮಸು ಮಾಡಿದ ನೆಲದ ಭಾಗಗಳು, ಪ್ರಾಣಿಮೂಳೆಗಳು ಮುಂತಾದುವು ಇದ್ದುವು. ಬೂದಿ ಕಿಟ್ಟದ ಗಟ್ಟಿಯೂ ವಿರಳವಾಗಿ ಕಂಡುಬಂದವು. ದಮ್ಮಸು ಮಾಡಿದ ನೆಲದ ಭಾಗಗಳು ಪ್ರಾಯಶಃ ದೊಡ್ಡ ಬೂದಿದಿಬ್ಬದ ತಳಭಾಗವಾಗಿರಬಹುದು. ಇದು ನಿಜವಾದಲ್ಲಿ ಲಕ್ಕುಂಡಿ ಬೂದಿದಿಬ್ಬ ನೆಲೆಗಳ ನೈರುತ್ಯ ಗಡಿಯಾಗುತ್ತದೆ. 3ನೆಯ ಸ್ತರದಲ್ಲಿ ಕೇವಲ ನವಶಿಲಾಯುಗ ಸಂಸ್ಕೃತಿಯ ಅವಶೇಷಗಳಿದ್ದುವು. ತಾತ್ಕಾಲಿಕ ವಸತಿಗಾಗಿ ಅಥವಾ ಧಾನ್ಯ–ಕಾಳು ಶೇಖರಣೆಗಾಗಿ ನೆಲದಲ್ಲಿ ತೋಡಿದ ಸು. 1–1.25 ಮೀ ವ್ಯಾಸದ ಮತ್ತು

ಪ್ರಾಚೀನ ನೆಲೆ ಉತ್ಖನನ, ಬೃಹತ್ ಶಿಲಾ ಸಂಸ್ಕೃತಿಯ ಶವಕುಣಿ

70–75 ಸೆಂಮೀ ಆಳದ ಗುಂಡಿಗಳು ಈ ಸ್ತರದಲ್ಲಿದ್ದುದು ಕುತೂಹಲಕಾರಿ. ಒಂದು ಗುಂಡಿಯನ್ನು ಉತ್ಖನನ ಮಾಡಲಾಗಿ ಅದರೊಳಗೆ ನವಶಿಲಾಯುಗ ಸಂಸ್ಕೃತಿಯ ಆದಿ ಹಂತದ ಅವಶೇಷಗಳಿದ್ದುವು. ಕರ್ನಾಟಕದಲ್ಲಿ ಮೊದಲಬಾರಿಗೆ ಲಕ್ಕುಂಡಿಯಲ್ಲಿ ನವಶಿಲಾಯುಗ ಹಂತದ ವಸತಿ/ಧಾನ್ಯ ಸಂಗ್ರಹಣ ಗುಂಡಿಗಳು ಕಂಡುಬಂದಿವೆ.

ಶ್ರೀಪ್ರಭುದೇವರ ಮಠದ ಹತ್ತಿರ ನಡೆಸಿದ ಉತ್ಖನನದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಮತ್ತು ವಿಜಯನಗರೋತ್ತರ ಕಾಲದ ಸಾಂಸ್ಕೃತಿಕ ಹಂತಗಳನ್ನು ಕ್ರಮವಾಗಿ ತೋರಿಸುವ ಅವಶೇಷಗಳು ದೊರೆತವು. ಹಲವಾರು ಕೊಠಡಿಗಳು ಹಾಗೂ ಅಡುಗೆ ಮನೆಯಿದ್ದ ಒಂದು ವಿಶಾಲ ಕಟ್ಟಡ, ಭವ್ಯ ಶಿಲಾದೇವಾಲಯದ ತಳಪಾಯ, ರಾಷ್ಟ್ರಕೂಟ ಕಾಲದ ಕಲ್ಲಿನ ಕೋಟೆಯ ಹಾಗೂ ಒಂದು ಮನೆಯ ಕಲ್ಲಿನ ಗೋಡೆ ಮುಂತಾದ ಅವಶೇಷಗಳನ್ನು ಇಲ್ಲಿ ಶೋಧಿಸಲಾಯಿತು. ಕೆಲವು ವರ್ಷಗಳ ಹಿಂದೆ ಈ ನೆಲೆಯ

ಮತ್ತೊಂದು ಭಾಗದಲ್ಲಿ ಇತಿಹಾಸ ಆರಂಭ ಕಾಲದ (ಪ್ರ.ಶ.ಪೂ.ಸು.2ನೆಯ ಶತಮಾನ –ಪ್ರ.ಶ.2ನೆಯ ಶತಮಾನ) ಕೆಮ್ಮಣ್ಣಿನ ಲೇಪನದಡಿ ಬಿಳಿಬಣ್ಣದ ರೇಖಾಚಿತ್ರಗಳಿರುವ ಮಣ್ಪಾತ್ರೆಗಳ ಚೂರುಗಳು ಸಿಕ್ಕಿದ್ದವು. (ಎ.ಎಸ್.)

**ಲಕ್ಷ್ಮೀನಾರಾಯಣರಾವ್, ಎನ್.:** 1898–1979. ಪ್ರಸಿದ್ಧ ಶಾಸನ ತಜ್ಞ, ಸಂಶೋಧಕ. ಪೂರ್ಣಹೆಸರು ನೆಲಮಂಗಲ ಲಕ್ಷ್ಮೀನಾರಾಯಣರಾವ್. ಮೈಸೂರು ವಿಶ್ವವಿದ್ಯಾನಿಲಯದಿಂದ ಇತಿಹಾಸದಲ್ಲಿ ಎಂ.ಎ. ಪದವಿ ಪಡೆದು (1920), ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಶಾಸನ ಸಂಶೋಧನ ವಿಭಾಗದಲ್ಲಿ ಕನ್ನಡ ಶಾಸನ ಸಂಶೋಧನ ವಿದ್ಯಾರ್ಥಿಯಾಗಿ ಸೇರಿದರು (1921). ಶಾಸನಗಳ ಬಗ್ಗೆ ಕ್ಷೇತ್ರಕಾರ್ಯ ನಡೆಸಿ ಕನ್ನಡ ಶಾಸನಗಳ ಅಧ್ಯಯನದಲ್ಲಿ ನಿರತರಾದರು. ಹಲವಾರು ವೀರಗಲ್ಲುಗಳನ್ನೂ, ರಾಮರೆಡ್ಡಿಪಲ್ಲೆಯ ಬೌದ್ಧ ನಿವೇಶನವನ್ನೂ, ಅಲ್ಲೂರಿನ ಬ್ರಾಹ್ಮಿ ಶಾಸನವನ್ನೂ ಕಂಡುಹಿಡಿದರು. ಹಿಂದಿನ ಬೊಂಬಾಯಿ ಕರ್ನಾಟಕ ಭಾಗಗಳಲ್ಲಿ ಕ್ರಮಬದ್ಧವಾದ ಗ್ರಾಮವಾರು ಸರ್ವೇಕ್ಷಣೆ ಕಾರ್ಯಕ್ಕಾಗಿ ನೇಮಕಗೊಂಡು (1926), ಅನಂತರ ಭಾರತ ಸರ್ಕಾರದ ಶಾಸನತಜ್ಞರ ಸಹಾಯಕನಾಗಿ ಉದಕಮಂಡಲದಲ್ಲಿ ಕೆಲಸಮಾಡಿದರು. ಇವರು ದೇಶದ ಬಗ್ಗೆ ಸಿದ್ಧಗೊಳಿಸಿದ ಶಾಸನ ವಿಮರ್ಶೆಗಳು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಪ್ರಕಟವಾಗಿವೆ. ಬೊಂಬಾಯಿ ಕರ್ನಾಟಕ ಪ್ರದೇಶದ ಶಾಸನಗಳ ಬಗ್ಗೆ ಫ್ಲೀಟ್ ಅವರು ಸಿದ್ಧಗೊಳಿಸಿದ್ದ ಹಳೆಯ ಸಂಗ್ರಹಗಳನ್ನೂ ಈ ಕಾಲದಲ್ಲಿ ಇವರು ಪಟ್ಟಿಮಾಡಿದರು. ದಕ್ಷಿಣ ಭಾರತದ 6ನೆಯ ಮತ್ತು 7ನೆಯ ಸಂಪುಟಗಳನ್ನು ತಯಾರಿಸು ವುದರಲ್ಲಿ ನೆರವು ನೀಡಿದಲ್ಲದೆ, ಅದೇ ಶಾಸನ ಗ್ರಂಥ ಮಾಲಿಕೆಯ 9ನೆಯ ಸಂಪುಟದ 1ನೆಯ ಮತ್ತು 2ನೆಯ ಭಾಗಗಳು, 11ನೆಯ ಸಂಪುಟದ ಭಾಗ 1– ಇವುಗಳ ಸಂಪಾದನ ಕಾರ್ಯದಲ್ಲಿ ಸಹಾಯ ನೀಡಿದರು. ಸಂಪುಟ 10ರ ಅನುಬಂಧವನ್ನು ತಯಾರಿಸಿದರು. ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಪ್ರತಿಮಾಡಿಕೊಂಡು 6ನೆಯ ವಿಕ್ರಮಾದಿತ್ಯನ ಎಲ್ಲ ಶಾಸನಗಳನ್ನೂ ಒಳಗೊಂಡ ಸಂಪುಟ 11–ಭಾಗ 2ರ ಸಂಪಾದನೆಯನ್ನು ಮಾಡಿದರು. ಅನಂತರ 1943ರಲ್ಲಿ ಶಾಸನ ಇಲಾಖೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಹುದ್ದೆಗೆ ನೇಮಕಗೊಂಡರು. 1947ರಲ್ಲಿ ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟರಾಗಿ ಬಡ್ತಿ ಪಡೆದರು. 1953ರಲ್ಲಿ ಭಾರತ ಸರ್ಕಾರದ ಶಾಸನತಜ್ಞರಾಗಿ ನೇಮಕವಾಗಿ, ಅವಧಿಗೆ ಸಂಬಂಧಪಟ್ಟ ದಕ್ಷಿಣ ಭಾರತದ ಶಾಸನಗಳ ವಾರ್ಷಿಕ ವರದಿಗಳನ್ನು ಪ್ರಕಟಿಸಿದರು (1939–43 ಮತ್ತು 1943–45). ಅನಂತರ ಭಾರತ ಶಾಸನಗಳ ವಾರ್ಷಿಕ ವರದಿಯನ್ನು ಪ್ರಕಟಿಸಿದರು (1947–51). 1955ರಲ್ಲಿ ನಿವೃತ್ತರಾದರು. ಅನಂತರ ವಿಶೇಷ ಅಧಿಕಾರಿಯಾಗಿ ಪುನರ್ ನೇಮಕಗೊಂಡರು (1956). ಆಗ ಇವರು ದಕ್ಷಿಣ ಭಾರತದ ಶಾಸನಗಳ 18ನೆಯ ಸಂಪುಟವನ್ನು ಸಿದ್ಧಗೊಳಿಸಿದರು. ಇದರಲ್ಲಿ 1932–35ರಲ್ಲಿ ಬೊಂಬಾಯಿ ಕರ್ನಾಟಕ ಭಾಗದಲ್ಲಿ ಪ್ರತಿಮಾಡಿಕೊಂಡ ಶಾಸನಗಳೂ ಸೇರಿವೆ. ಇವರು ಎಪಿಗ್ರಾಫಿಯ ಇಂಡಿಕ ಸಂಪುಟಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಆರ್.ಎಸ್.ಪಂಚಮುಖಿಯವರೊಡನೆ ಕರ್ನಾಟಕದ ಅರಸು ಮನೆತನಗಳು ಎಂಬ ಗ್ರಂಥವನ್ನು ಪ್ರಕಟಿಸಿದರು. ಮಹಾರಾಷ್ಟ್ರ ಗೆಜೆಟಿಯರ್‌ನ ಪ್ರಾಚೀನ ಇತಿಹಾಸ ವಿಭಾಗಕ್ಕೆ ಬಾದಾಮಿ ಚಳುಕ್ಯರ ಬಗ್ಗೆ ಒಂದು ಅಧ್ಯಯನವನ್ನು ಬರೆದು ಕೊಟ್ಟರು (1967). ನೊಳಂಬರ ವಂಶಾವಳಿ ಮತ್ತು ಕಾಲಾನುಕ್ರಮ, ಇಕ್ಕೇರಿಯ ನಾಯಕರು ಎಂಬ ಲೇಖನಗಳನ್ನು ಪ್ರಕಟಿಸಿದ್ದಾರೆ. ಮೈಸೂರು ಗೆಜೆಟಿಯರ್ ಪ್ರಕಟಣೆಯ ಸಲಹಾ ಸಮಿತಿಯ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದ ಇವರು 1979 ಜನವರಿ 14ರಂದು ನಿಧನರಾದರು.(ಕೆ.ಜಿ.ಕೆ.)

**ಲಕ್ಷ್ಮೀಬಾಯಿ, ಝೂನ್ಸಿರಾಣಿ:** ಝೂನ್ಸಿ ಸಂಸ್ಥಾನದ ರಾಣಿ. ಬ್ರಿಟಿಷರ ವಿರುದ್ಧ ಧೈರ್ಯವಾಗಿ ಹೋರಾಟ ನಡೆಸಿದ ಧೀರಮಹಿಳೆ. 1835 ನವೆಂಬರ್ 19ರಂದು ಕಾಶಿಯಲ್ಲಿ ಜನಿಸಿದಳು. ತಂದೆ ಮೋರೋಪಂತ ತಾಂಬೆ, ತಾಯಿ ಭಾಗೀರಥೀಬಾಯಿ. ಈಕೆಯ ಬಾಲ್ಯದ ಹೆಸರು ಮನೂಬಾಯಿ. ಈಕೆ ಮೂರು ವರ್ಷದ ಬಾಲೆಯಾಗಿರುವಾಗಲೇ ತಾಯಿ ತೀರಿಕೊಂಡಳು. ತಂದೆಯ ಪ್ರೀತಿಯ ಮಗಳಾಗಿ, ಹೆಚ್ಚಿನ ಸಮಯವನ್ನು ಅವರೊಂದಿಗೆ ಕಳೆದಳು. ಮೋರೋಪಂತ ತಾಂಬೆಯ ಆಶ್ರಿತ ಅಪ್ಪಾಸಾಹೇಬ. ಆತನ ಮಕ್ಕಳು ಹಾಗೂ ಮನೂಬಾಯಿ ಒಂದೇ ವಯಸ್ಸಿನವರಾದ್ದರಿಂದ ಅವರೊಂದಿಗೆ ಈಕೆಯ ವಿದ್ಯಾಭ್ಯಾಸ ಒಟ್ಟಿಗೆ ನಡೆಯಿತು. ಅಪ್ಪಾಸಾಹೇಬ ಅನಾರೋಗ್ಯದಿಂದ ತೀರಿಕೊಂಡಾಗ ಮೋರೋಪಂತ ತಾಂಬೆ ಬಾಜೀರಾಯನ ಆಶ್ರಯ ಕೋರಿದ. 2ನೆಯ ಬಾಜೀರಾಯ ಪೇಶ್ವೆ ಸ್ಥಾನವನ್ನು ಕಳೆದುಕೊಂಡ ಅನಂತರದಲ್ಲಿ ಚಿತ್ತೂರಿಗೆ ಬಂದು ನೆಲೆಸಿದ. ಮೋರೋಪಂತ ತಾಂಬೆಯೂ ಅವನೊಟ್ಟಿಗೆ ಚಿತ್ತೂರಿಗೆ ಬಂದು ನೆಲೆಸಿದ.

ಮನುಬಾಯಿ ಬಾಲ್ಯವನ್ನು ಹೆಚ್ಚಾಗಿ ಪುರುಷರೊಟ್ಟಿಗೆ ಕಳೆದುದರ ಪರಿಣಾಮವಾಗಿ ಇವಳು ಯುದ್ಧ ಕಲೆಯನ್ನು ಕಲಿಯಲು ಆಸಕ್ತಿ ತೋರಿದಳು. ಬಾಜೀರಾಯನ ಮಕ್ಕಳೊಂದಿಗೆ ಈಕೆ ಯುದ್ಧ ಕಲೆ ಕಲಿಯಲು ತಂದೆ ವ್ಯವಸ್ಥೆ ಮಾಡಿದ. ಕುದುರೆ ಸವಾರಿ, ಕತ್ತಿವರಸೆ ಮುಂತಾದ ಯುದ್ಧಕಲೆಗಳಲ್ಲಿ ಪರಿಣತಿ ಸಾಧಿಸಿದಳು. ಸಣ್ಣ ವಯಸ್ಸಿನಲ್ಲಿಯೇ ಬಹಳ ತೀಕ್ಷ್ಣವಾದ, ಸೂಕ್ಷ್ಮವಾದ ಪರಿಶೀಲನಜ್ಞಾನವನ್ನು ಈಕೆ ಪಡೆದಿದ್ದಳು. ಇವಳ ಏಳನೆಯ ವಯಸ್ಸಿನಲ್ಲಿ ಝೂನ್ಸಿ ಸಂಸ್ಥಾನದ ರಾಜ ಗಂಗಾಧರ ನವಲ್‌ಕರ್‌ನೊಡನೆ ಲಗ್ನವಾಯಿತು (1842). ಅಂದಿನಿಂದ ಅತ್ತೆ ಮನೆಯವರು ಇವಳನ್ನು ಲಕ್ಷ್ಮೀಬಾಯಿ ಎಂದು ಕರೆದರು. ವಿವಾಹದ ಅನಂತರ ಝೂನ್ಸಿ ಸಂಸ್ಥಾನದ ಪುಸ್ತಕ ಭಂಡಾರ ಇವಳ ಜ್ಞಾನ ವಿಕಾಸಕ್ಕೆ ನೆರವಾಯಿತು. ಗಂಗಾಧರ ನವಲ್‌ಕರ್‌ನ ಆಳಿಕೆಯಲ್ಲಿ ಝೂನ್ಸಿ ಪ್ರಗತಿ ಕಂಡಿತು. ಬ್ರಿಟಿಷರ ಅಧೀನದಲ್ಲಿದ್ದರೂ ಯಾವುದೇ ದಂಗೆ, ಗಲಭೆಗಳಿಲ್ಲದೆ ರಾಜ್ಯ ಶಾಂತಿಯಿಂದಿತ್ತು. ಲಕ್ಷ್ಮೀಬಾಯಿ ಸಂಸ್ಥಾನದ ಉತ್ತರಾಧಿಕಾರಿಗೆ ಜನ್ಮವಿತ್ತರೂ (1851) ಮಗು ಹೆಚ್ಚು ಕಾಲ ಉಳಿಯಲಿಲ್ಲ. ಪುತ್ರನ ಅಕಾಲಿಕ ಮರಣದಿಂದ ಗಂಗಾಧರ ನವಲ್‌ಕರ್ ಅನಾರೋಗ್ಯಕ್ಕೆ ತುತ್ತಾಗಿ ಮರಣ ಹೊಂದಿದ (1856 ನವೆಂಬರ್ 21). ಕೇವಲ ಇಪ್ಪತ್ತೊಂದು ವರ್ಷದ ಲಕ್ಷ್ಮೀಬಾಯಿ ರಾಜ್ಯದ ಚುಕ್ಕಾಣಿಯನ್ನು ಹಿಡಿದಳು. ಪತಿಯ ಆಶಯದಂತೆ ಸಂಬಂಧಿಕರ ಮಗುವನ್ನು ದತ್ತು

ತೆಗೆದುಕೊಂಡಳಾದರೂ ಈ ದತ್ತು ಸ್ವೀಕಾರವನ್ನು ಬ್ರಿಟಿಷರು ನಿರಾಕರಿಸಿದರು. ಗಂಗಾಧರ ನವಲ್‌ಕರ್ ಇದ್ದಾಗ ನಡೆದ ಒಪ್ಪಂದದಂತೆ ಬ್ರಿಟಿಷರು ಅನಂತರದಲ್ಲಿ ನಡೆದುಕೊಳ್ಳದೆ ಝೂನ್ಸಿ ಸಂಸ್ಥಾನದಲ್ಲಿ ಸಣ್ಣಪುಟ್ಟ ದಂಗೆ ಪ್ರಾರಂಭಿಸಿದರು. ಸದಾಶಿವ ನಾರಾಯಣ ಮತ್ತು ನಥೇಖಾನ ಈ ದಂಗೆ ಏಳಲು ಕಾರಣರಾಗಿದ್ದರು. ಈಕೆ ಬುದ್ಧಿವಂತಿಕೆಯಿಂದ ದಂಗೆಯನ್ನು ನಿಗ್ರಹಿಸಿ, ಪ್ರಜೆಗಳು ನಿರ್ಭಯರಾಗಿ ಜೀವಿಸಲು ಅನುವು ಮಾಡಿದಳು.

ಶಿಸ್ತಿನ ಸಿಪಾಯಿ, ನೇರ ನಡೆನುಡಿಯವಳಾದ ಲಕ್ಷ್ಮೀಬಾಯಿ ಸಂಸ್ಥಾನದ ಆಡಳಿತವನ್ನು ತಾನೇ ಕುಳಿತು ಅವಲೋಕಿಸುತ್ತಿದ್ದಳು. ಇವಳು ಕಚೇರಿಗೆ ಹೋಗುವಾಗ ಪುರುಷ ಉಡುಗೆ ತೊಟ್ಟರೂ ಉಳಿದಂತೆ ಬಿಳಿ ವಸ್ತ್ರ ಹಾಗೂ ಸರಳ ಆಭರಣಗಳನ್ನು ಧರಿಸುತ್ತಿದ್ದಳು. ಕುದುರೆ ಸವಾರಿ ಹಾಗೂ ಯುದ್ಧಕಲೆಗಳಲ್ಲಿ ಅಪಾರ ಅನುಭವ ಪಡೆದಿದ್ದ ಇವಳು ತನ್ನ ಸಂಸ್ಥಾನದ ಆಡಳಿತವನ್ನು ದಕ್ಷತೆಯಿಂದ ನಿರ್ವಹಿಸಿ ಶಾಂತಿ ಕಾಪಾಡಿದಳು. ಆಕ್ರಮಣಶೀಲ ಬ್ರಿಟಿಷರ ಮತ್ತು ಭಾರತದ ಸ್ವಾತಂತ್ರ್ಯವಾದಿಗಳ ನಡುವೆ ಅಲ್ಲಲ್ಲಿ ಘರ್ಷಣೆಗಳು ನಡೆಯುತ್ತಿದ್ದುವು. ಇಂಥ ಘರ್ಷಣೆ ಮಾಡುತ್ತಿದ್ದ ವ್ಯಕ್ತಿಗಳನ್ನು ಬ್ರಿಟಿಷರು ಎಚ್ಚರದಿಂದ ಕಾಯುತ್ತಿದ್ದರು. ಇಂಥ ಸಮಯದಲ್ಲಿ ಸಾಧುವೇಷದಲ್ಲಿ ಬಂದ ಭಾರತೀಯ ಸ್ವಾತಂತ್ರ್ಯ ಪ್ರೇಮಿಯೊಬ್ಬನಿಗೆ ಝೂನ್ಸಿ ರಾಣಿ ಧನಸಹಾಯ ಮಾಡಿದ ವಿಚಾರ ಬ್ರಿಟಿಷರ ಕಿವಿಗೆ ಬಿತ್ತು. ಬ್ರಿಟಿಷರು ಈಕೆಯ ಬಗ್ಗೆ ಅನುಮಾನಗೊಂಡು ತಕ್ಷಣ ಈಕೆಯ ಆಳಿಕೆಯಲ್ಲಿದ್ದ ಝೂನ್ಸಿ ಸಂಸ್ಥಾನವನ್ನು ಪಡೆಯಲು ಪ್ರಯತ್ನಿಸಿದರು. ಇವಳು ದಂಗೆಕೋರರ ಪರವಾಗಿ ಕೆಲಸ ಮಾಡುತ್ತಿದ್ದಾಳೆಂದು ಆರೋಪಿಸಿದಾಗ ರಾಣಿ ಮತ್ತು ಬ್ರಿಟಿಷರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಸ್ವಾಭಿಮಾನಿಯಾದ ಇವಳು ರಾಜ್ಯವನ್ನು ಬ್ರಿಟಿಷರಿಗೆ ಹಿಂತಿರುಗಿಸಲು ನಿರಾಕರಿಸಿದಾಗ ಯುದ್ಧ ನಡೆಯುವ ಸಾಧ್ಯತೆಗಳು ಹೆಚ್ಚಾದುವು. ಸಂಸ್ಥಾನದ ಸಂರಕ್ಷಣೆಗಾಗಿ ಯುದ್ಧ ಸಿದ್ಧತೆಗಳನ್ನು ಮಾಡಿಕೊಂಡು ಪ್ರಜೆಗಳಲ್ಲಿ ಧೈರ್ಯತುಂಬಿ, ಝೂನ್ಸಿ ಕೋಟೆಯನ್ನು ಬಲಪಡಿಸಿದಳು. ಪ್ರಜೆಗಳ ನಿಷ್ಠೆ, ಇವಳ ಹೋರಾಟ ಮನೋಭಾವ ಬ್ರಿಟಿಷರಿಗೆ ಪ್ರಾರಂಭದಲ್ಲಿ ಕಷ್ಟವಾಯಿತು. ಆದರೆ ಬ್ರಿಟಿಷರು ಸರ್ ಹೂರೋಜ್‌ನ ಮುಖಂಡತ್ವದಲ್ಲಿ ಝೂನ್ಸಿ ಕೋಟೆಗೆ ಮುತ್ತಿಗೆ ಹಾಕಿದರು (1858 ಮಾರ್ಚ್ 22). ಇವಳು ಅತ್ಯಂತ ದಕ್ಷತೆ, ಶೌರ್ಯದಿಂದ ಹೋರಾಟ ನಡೆಸಿದಳು. ಬ್ರಿಟಿಷರ ಫಿರಂಗಿ ಹೊಡೆತಗಳಿಂದ ಕೋಟೆ ಭಗ್ನಗೊಂಡರೂ ಕೋಟೆಯನ್ನು ಸರಿಪಡಿಸಿದಳು. ಯುದ್ಧಕಾಲದಲ್ಲಿ ಇವಳು ತನ್ನ ಪ್ರಜೆಗಳ ಬೆಂಬಲ ಹಾಗೂ ತಾತ್ಯಾಟೋಪೆಯ ಸೇನೆಯೊಂದಿಗೆ ಸೇರಿಕೊಂಡು ಬ್ರಿಟಿಷರ ಧಾಳಿಗೆ ಪ್ರತಿಧಾಳಿಯನ್ನು ನೀಡಿದಳಾದರೂ ಬ್ರಿಟಿಷರ ಸುಸಜ್ಜಿತ ಸೇನೆಯ ಎದುರು ಸೋಲು ಒಪ್ಪಿಕೊಳ್ಳಬೇಕಾಯಿತು. ಝೂನ್ಸಿ ಕೋಟೆ ಬ್ರಿಟಿಷರ ವಶವಾಗುತ್ತಿದ್ದಾಗಲೇ ಇವಳು ಮತ್ತು ಇವಳ ಅಂಗರಕ್ಷಕ ದಳ ತಪ್ಪಿಸಿಕೊಂಡು ಕಾಲ್ಪಿಗೆ ಹೋಗಿ ತಾತ್ಯಾಟೋಪಿಯನ್ನು ಸೇರಿಕೊಂಡರು. ಅನಂತರ ಬ್ರಿಟಿಷರು ಕಾಲ್ಪಿಯ ಮೇಲೆ ಧಾಳಿ ಮಾಡಿದರು. ಆಗ ಇವಳು ಮತ್ತು ತಾತ್ಯಾಟೋಪಿ ಸಮಾಲೋಚಿಸಿ ಬ್ರಿಟಿಷರನ್ನು ದಿಕ್ಕುತಪ್ಪಿಸುವ ಪ್ರಯತ್ನ ಮಾಡಿದರು. ಅದರಂತೆ ಇವರು ಬ್ರಿಟಿಷರ ಸ್ನೇಹಿತ ಸಿಂಧ್ಯನ ರಾಜ್ಯ ಗ್ವಾಲಿಯರ್ ಮೇಲೆ ಧಾಳಿ ನಡೆಸಿದರು. ಇವರ ಧಾಳಿಗೆ ಸಿಂಧ್ಯ ಮತ್ತು ಈತನ ಬೆಂಗಲಿಗರು ಅಲ್ಲಿಂದ ತಪ್ಪಿಸಿಕೊಂಡು ಓಡಿಹೋದರು. ಬ್ರಿಟಿಷರು ತಮ್ಮ ಸ್ನೇಹಿತನ ರಾಜಧಾನಿಯನ್ನು ಹಿಂತಿರುಗಿಸಲು ಗ್ವಾಲಿಯರ್‌ಗೆ ಮುತ್ತಿಗೆ ಹಾಕಿದರು. ಲಕ್ಷ್ಮೀಬಾಯಿ ತಾತ್ಯಾಟೋಪಿಯೊಂದಿಗೆ ಕೋಟೆಯೊಳಗೆ ಬ್ರಿಟಿಷರ ಚಲನವಲನಗಳನ್ನು ಗಮನಿಸುತ್ತಿರುವಾಗ ಹೊರಗಿನಿಂದ ಬಂದ ಫಿರಂಗಿಯ ಗುಂಡು ತಗುಲಿ ನಿಧನಳಾದಳು (1858 ಜೂನ್ 17). ಕೋಟೆ ಮತ್ತು ಫೂಲ್‌ಬಾಗ್‌ಗಳ ನಡುವೆ ನದಿತೀರದಲ್ಲಿ ಈಕೆಯ ಸಂಸ್ಕಾರವನ್ನು ನೆರವೇರಿಸಲಾಯಿತು. *

**ಲಜ್ಜಾಗೌರಿ:** ಭಾರತೀಯ ಸಂಸ್ಕೃತಿಯಲ್ಲಿ ವೈದಿಕ ಸಂಸ್ಕೃತಿಗಿಂತ ಭಿನ್ನವಾದ ವಿಶಿಷ್ಟವಾದ ನೂರಾರು ಭಿನ್ನ ಸಂಸ್ಕೃತಿಗಳಿವೆ. ಇವು ತಮ್ಮದೇ ಮೂಲ ಉದ್ದೇಶ ಮತ್ತು ವ್ಯಾಪ್ತಿಯನ್ನು ಒಳಗೊಂಡ ಸ್ವತಂತ್ರ ಸಂಸ್ಕೃತಿಗಳಾಗಿವೆ ಎಂಬುದು ವಿದ್ವಾಂಸರ ಅಭಿಪ್ರಾಯ. ಇಂತಹ

ಆದಿ ಸಂಸ್ಕೃತಿಗಳಲ್ಲಿ ಲಜ್ಜಾಗೌರಿಯ ಸಂಪ್ರದಾಯವೂ ಒಂದು. ಎಲ್ಲ ಜೀವಸೃಷ್ಟಿಗೆ ಜನನೇಂದ್ರಿಯವೇ ಮೂಲ. ಇದರಿಂದಾಗಿ ಅದು ದೈವವೆಂಬ ನಂಬಿಕೆ ಮೂಡಿತು. ಜನನೇಂದ್ರಿಯ ಮಾನವನನ್ನು ಹೊರ ಪ್ರಪಂಚಕ್ಕೆ ತರುವ ತಾಯಿಯ ಒಂದು ಮುಖ್ಯ ಅಂಗ ಎಂಬ ಅರಿವಿನಿಂದ ಮಾತೃದೇವತೆ ಎಂಬ ನಂಬಿಕೆಯ ಜೊತೆಗೆ ಜನನೇಂದ್ರಿಯದ ಆರಾಧನೆಯೇ ಮಾತೃ ಆರಾಧನೆ ಎಂಬ ನಿಲುವಿನಲ್ಲಿ ಇದರ ಆರಾಧನೆ ಬೆಳೆಯಿತು. ಮಾತೃ ದೇವತೆಯ ಸಂಕೇತವಾಗಿ ಈ ಅಂಗವನ್ನು ಆರಾಧಿಸುವುದು ಒಂದು ಸಂಪ್ರದಾಯವಾಯಿತು.


ನಾಗನಾಥದೇವಾಲಯದ ಹತ್ತಿರವಿದ್ದ ಲಜ್ಜಾಗೌರಿ, ನಾಗರಾಳ

ಮಾತೃ ದೇವತೆ ಭಾರತೀಯ ಸಂಸ್ಕೃತಿಯಲ್ಲಿ ಆದ್ಯ ಶಕ್ತಿಯಾಗಿದ್ದಾಳೆ. ಭಾರತೀಯರ ನಿತ್ಯದ ಧಾರ್ಮಿಕ ಬದುಕಿನಲ್ಲಿಯೂ ಶಕ್ತಿ ಉಪಾಸನೆ ಪ್ರಧಾನವಾಗಿಯೆ ಇದೆ. ಸಿಂಧೂ-ಸರಸ್ವತಿ ಸಂಸ್ಕೃತಿಯ ಹಂತದಿಂದ ಹಿಡಿದು ಇಂದಿಗೂ ಹಳ್ಳಿಗಳಲ್ಲಿ ಗ್ರಾಮದೇವತೆಗಳ ಉಪಾಸನೆಯನ್ನು ಕಾಣಬಹುದು. ಮಾತೃ ದೇವತೆ ಮೂರ್ತಿಗಳು ಪ್ರಥಮವಾಗಿ ಕರಂಡಕದ ಸುಂದರ ಸ್ವರೂಪದಲ್ಲಿದ್ದವು. ಕ್ರಮೇಣ ಈ ಪರಿಕಲ್ಪನೆ ವಿಕಾಸಗೊಂಡು ಬಹು ಭುಜಗಳಿಂದಲೂ ವಿವಿಧ ಆಯುಧಗಳಿಂದಲೂ ಕೂಡಿದ ಮೂರ್ತಿಗಳ ಉಪಾಸನೆ ಪ್ರಾರಂಭವಾಯಿತು. ಇವುಗಳಲ್ಲಿ ರೂಢಿಯಲ್ಲಿ ಲಜ್ಜಾಗೌರಿ, ಭವಾನಿ ನಗ್ನ ಕಬಂಧ, ಕಮಲ ಗಂಗೆ ಎಂದೆಲ್ಲ ಸ್ಥಳೀಯ ಹೆಸರುಗಳಿಂದ ಕರೆಯಲ್ಪಟ್ಟ ಒಂದು ವಿಶಿಷ್ಟ ಪ್ರಕಾರ ಮೂರ್ತಿ ಕಲ್ಪನೆ ಮತ್ತು ಶಿಲ್ಪಗಳು ಪ್ರ.ಶ.ಸು. 1–8ನೆಯ ಶತಮಾನದವರೆಗೆ ಅಲ್ಲಲ್ಲಿ ಕಂಡುಬಂದಿವೆ. ಒಬ್ಬ ನಗ್ನ ಸ್ತ್ರೀ ಕಾಲುಗಳನ್ನು ಮೇಲೆಳೆದುಕೊಂಡು ಅಂಗಾತನ ಮಲಗಿದ ಸ್ಥಿತಿಯಲ್ಲಿರುತ್ತದೆ. ತಲೆಯ ಭಾಗದಲ್ಲಿ ಅರಳಿದ ಕಮಲ, ಮೇಲೆತ್ತಿದ ಕೈಗಳಲ್ಲಿ ಕಮಲ ಪುಷ್ಪಗಳಿರುತ್ತವೆ.

ಭಾರತದ ಹಲವು ನೆಲೆಗಳ ಉತ್ಖನನಗಳಲ್ಲಿ ಇಂಥ ವಿಗ್ರಹಗಳು ದೊರೆತಿವೆ. ಸ್ಟೆಲ್ಲಾಕ್ರಾಮ್ರಿಶ್, ಎಚ್.ಡಿ.ಸಾಂಕಳಿಯ, ಜೆ.ಎನ್.ತಿವಾರಿ, ಕಾಡ್ರಿಂಗ್ಟನ್, ಎಂ.ಎ.ಮುರೆ, ಜಾನ್‌ಮಾರ್ಷಲ್, ಹಂಟರ್, ಕ್ಯಾಂಪ್‌ಬೆಲ್, ಎಂ.ಆರ್.ಶರ್ಮ, ಧವಳೀಕರ್ ಮತ್ತು ಶ್ರೀವಾಸ್ತವ ಮೊದಲಾದ ವಿದ್ವಾಂಸರು ತಮ್ಮ ತಮ್ಮ ಪುರಾತತ್ತ್ವ ಉತ್ಖನನ/ ಅನ್ವೇಷಣೆಗಳಲ್ಲಿ ದೇವಿ ಮೂರ್ತಿಗಳ ಪ್ರತಿರೂಪಗಳನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಿದ್ದಾರೆ. ಆಂಧ್ರಪ್ರದೇಶದ ಆಲಂಪುರ, ನಾಗಾರ್ಜುನಕೊಂಡ, ಮಹಾರಾಷ್ಟ್ರದ ತೇರ್, ನೆವಾಸ, ಮಹುರ್ಜರಿ, ಭೋಕರ್ದನ್, ಉತ್ತರ ಪ್ರದೇಶದ ಭೀತ ಮತ್ತು ಕೌಶಾಂಬಿ. ಕರ್ನಾಟಕದ ಬಾದಾಮಿ ಹತ್ತಿರ ನಾಗರಾಳ, ಮಹಾಕೂಟ, ಬಿ.ಎನ್.ಜಾಲಿಹಾಳ, ಸಿದ್ಧನಕೊಳ್ಳ, ಐಹೊಳೆ, ಮಜಿತಿ (ಬೆಳಗಾಂವಿ ಜಿಲ್ಲೆ) ಕೆಲವು ವಿಗ್ರಹಗಳು ನಾಭಿಯಿಂದ ಕೆಳಭಾಗವಷ್ಟೇ ಇದ್ದರೆ ಮತ್ತೆ ಕೆಲವು ಕುತ್ತಿಗೆಯವರೆಗೆ ಇವೆ. ಕೈಗಳಲ್ಲಿಯೂ ಕಮಲದ ಹೂ ಇಲ್ಲವೆ ಮೊಗ್ಗುಗಳಿವೆ. ತೇರ್‌ನಲ್ಲಿ ದೊರೆತ ಒಂದು ಮಣ್ಣಿನ ವಿಗ್ರಹದ ಬೆನ್ನಿನ ಮೇಲೆ ಬದಿಗಳಲ್ಲಿ ನಾಲ್ಕು ಕಮಲ ಪುಷ್ಪದ ಉಬ್ಬು ಚಿತ್ರವಿದೆ. ಮಾಂಡಸೋರ್‌ನ (ಮಧ್ಯಪ್ರದೇಶ) ವಿಗ್ರಹದಲ್ಲಿ ಕಮಲದ ಶಿರದ ಬದಲು ಸ್ತ್ರೀ ಶಿರವೇ ಇದೆ.

ಫ್ರಾನ್ಸ್ ಎಚ್.ಪಿ.ಎಮ್. ಜಾನ್‌ಸೆನ್ 1991ರಲ್ಲಿ ಬರ್ಲಿನ್‌ನಲ್ಲಿ ನಡೆದ ಸೌತ್ ಏಷ್ಯನ್ ಆರ್ಕಿಯಾಲಜಿ ಸಮ್ಮೇಳನದಲ್ಲಿ ಆನ್ ದಿ ಆರಿಜನ್ ಅಂಡ್ ಡೆವಲಪ್‌ಮೆಂಟ್ ಆಫ್ ದಿ ಸೊ-ಕಾಲ್ಡ್ ಲಜ್ಜಾಗೌರಿ ಎಂಬ ವಿಷಯದಲ್ಲಿ ಅದುವರೆವಿಗೂ ದೊರೆಕಿರುವ ನೂರಾರು ವಿಗ್ರಹಗಳ ಅಧ್ಯಯನ ಮಾಡಿ ನಾಲ್ಕು ಮಾದರಿಗಳನ್ನು ವಿಂಗಡಿಸಿ ಪ್ರಬಂಧ ಮಂಡಿಸಿದರು:

1. ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಕರ್ಲಪಲಂನಲ್ಲಿಯ (ವಿಜಯವಾಡ ವಸ್ತುಸಂಗ್ರಹಾಲಯ) ಸುಣ್ಣಕಲ್ಲಿನ ಅರೆ ಉಬ್ಬು ಶಿಲ್ಪದಲ್ಲಿ ಉದರದ ಭಾಗಕ್ಕೆ ಮೇಖಲೆ ಆಭರಣ ಅಲಂಕಾರವಿದೆ, ಉದರದ ಮೇಲೆ ಅರಳಿದ ಕಮಲವಿದೆ. ಅಂಗಾಲು ಮೇಲಕ್ಕೆ ತಿರುಗಿದೆ (ಉತ್ತಾನಪಾದ). ಕಾಲಿನ ಮಣಿಕಟ್ಟಿನಲ್ಲಿ ಎರಡು ಮಂಜೀರಗಳು ಮತ್ತು ಪಾದಾಂಗದ (ಕಾಲುಬಳೆ)ಗಳಿವೆ. ಇದು ಸಾತವಾಹನ/ಇಕ್ಷ್ವಾಕು ಅವಧಿಯದಾಗಿದೆ ಎಂಬ ಅಭಿಪ್ರಾಯವಿದೆ. ಇದರ ಕಾಲಮಾನ 2–3ನೆಯ ಶತಮಾನ. ಆಂಧ್ರದ ಕೊಂಡಾಪುರದ (ಹೈದರಾಬಾದ್ ವಸ್ತುಸಂಗ್ರಹಾಲಯ) ಚೌಕಾಕಾರದ ಸುಡಾವೆ ಮಣ್ಣಿನ ಬಿಲ್ಲೆ ಕರ್ಲಪಲಂ ರೀತಿಯಿದ್ದರೂ ಪಾದಗಳು ಕಮಲದ ಮೇಲಿದೆ, ಮೇಲ್ಭಾಗದ ಮೂಲೆಯಲ್ಲಿ ಅಲಂಕೃತವಾದ ಪೂರ್ಣಕುಂಭವಿದೆ. ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಉದರ ಕುಂಭದಂತಿದೆ. ಕಮಲದ ಸಮೇತ ಇದು ಪೂರ್ಣಕಲಶದಂತಿದೆ. ಇದು ಸಾತವಾಹನ ಕಾಲದ್ದು, ಬಹುಶಃ 2ನೆಯ ಶತಮಾನ. ಕುಂಭ ಮಾದರಿಯದು 1–4ನೆಯ ಶತಮಾನದ ಅವಧಿಯಲ್ಲಿತ್ತು. 2. ಕರಶಿರಗಳಿಲ್ಲದ ಮುಂಡ ಹಾಗೂ ಉಬ್ಬು ಸ್ತನವುಳ್ಳದು ಇನ್ನೊಂದು ಮಾದರಿ. ಈ ತರಹದ್ದು ನಾಗರ್ಧನ್‌ದಲ್ಲಿ (ನಾಗಪುರ ವಸ್ತುಸಂಗ್ರಹಾಲಯ) ಮತ್ತು ಮಹುರ್ಜರಿಯಲ್ಲಿ ದೊರೆತಿವೆ. ಕೆಲವದರಲ್ಲಿ ಸ್ತನವುಳ್ಳ, ತೋಳುಗಳಿಲ್ಲದ ಸ್ತ್ರೀ ಶಿಲ್ಪವಿದ್ದು ಜೊತೆಯಲ್ಲಿ ಲಿಂಗ, ವೃಷಭ ಮತ್ತು ಸಿಂಹದ ಶಿರ ಶಿಲ್ಪಗಳಿವೆ. ಇಂಥ ಮಾದರಿಯವು 3ನೆಯ ಶತಮಾನದಿಂದ ದೊರೆಯುತ್ತವೆ. ಇಂಥ ಶಿಲ್ಪಗಳು ಹೆಚ್ಚಾಗಿ ವಾಕಾಟಕ ಪ್ರದೇಶದಲ್ಲಿ, ವಿಶೇಷವಾಗಿ ವಿದರ್ಭ ಪ್ರದೇಶದಲ್ಲಿವೆ. ಭೋಕರ್ದನ್ ಉತ್ಖನನದಲ್ಲಿ ದೊರೆತ ಇಂಥ ಮೂರ್ತಿಗಳು 5–6ನೆಯ ಶತಮಾನದ ಅವಧಿಯವೆಂಬ ಅಭಿಪ್ರಾಯವಿದೆ. ನಾಗಾರ್ಜುನಕೊಂಡದಲ್ಲಿ ಸಿಕ್ಕಿರುವ ಸುಣ್ಣದಕಲ್ಲಿನ ಪ್ರತಿಮೆಯಲ್ಲಿ ರಾಜಶ್ರೀ ಚಂತಮೂಲನ ರಾಣಿ ಖಂದುವಲಾ ಈ ಪ್ರತಿಮೆಯನ್ನು ಮಾಡಿಸಿದಳೆಂಬ ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿಯ ಶಾಸನವಿದೆ. ಇಕ್ಷ್ವಾಕುಗಳ ಕಾಲಮಾನದ ಆಧಾರದ ಮೇಲೆ ಇದು 3ನೆಯ ಶತಮಾನದ ಕೊನೆಯ ದಶಕದ್ದೆಂಬ ಅಭಿಪ್ರಾಯವಿದೆ. 3. ಪ್ರತಿಮೆಯಲ್ಲಿ ತೋಳು, ಕೈಗಳಲ್ಲಿ ಕಮಲದ ಮೊಗ್ಗು, ಶಿರಭಾಗದಲ್ಲಿ ಕಮಲವಿರುವುದು ಮತ್ತೊಂದು ಮಾದರಿ. 7ನೆಯ ಶತಮಾನದಲ್ಲಿ ಕರ್ನಾಟಕದ ಬಾದಾಮಿ ಚಳುಕ್ಯರ ಕಾಲದಲ್ಲಿ ಈ ಪ್ರಕಾರದ ಶಿಲ್ಪಗಳು ಬಾದಾಮಿ-ಐಹೊಳೆ-ಪಟ್ಟದಕಲ್ಲುಗಳಲ್ಲಿ ವಿಶೇಷವಾಗಿವೆ. ಕರ್ನಾಟಕದ ನಾಗರಾಳದ ನಾಗನಾಥ ದೇವಾಲಯದ ಬಳಿ ದೊರೆತ ಕರಿಶಿಲೆಯ ಲಜ್ಜಾಗೌರಿ ಮೂರ್ತಿ ಇದುವರೆಗಿನ ಮೂರ್ತಿಗಳಲ್ಲಿ ಅತ್ಯಂತ ಸುಂದರ, ಈಗ ಇದನ್ನು ಬಾದಾಮಿ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಮಜತಿಯದು (ಕರ್ನಾಟಕ) ಒಂದು ಕಲ್ಲಿನ ಚೌಕೋನ ಫಲಕ. ಇದು ಪ್ರಾಯಶಃ 2–3ನೆಯ ಶತಮಾನದ್ದು. 4. ಪ್ರತಿಮೆಯ ಕೈಯಲ್ಲಿ ಕಮಲ, ಕಮಲದ ಶಿರದ ಬದಲು ಸಹಜ ಸ್ತ್ರೀ ಶಿರವಿರುವುದು ಮಗದೊಂದು ಮಾದರಿ. ಮಧ್ಯಪ್ರದೇಶದ ಮಾಂಡಸೋರ್‌ನಲ್ಲಿಯ ವಿಕ್ರಮ ಕೀರ್ತಿ ಮಂದಿರದ ಕಲ್ಲಿನ ಶಿಲ್ಪ ಶಿರವುಳ್ಳ ಸ್ತ್ರೀ ಶಿಲ್ಪ. ಇದರ ಕಾಲ ಸು.7ನೆಯ ಶತಮಾನ.

ಕರ್ನಾಟಕದ ಮಹಾಕೂಟ ಮತ್ತು ಸಿದ್ಧನಕೊಳ್ಳಗಳಲ್ಲಿ ಲಜ್ಜಾಗೌರಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ದೇವಿಯನ್ನು ಸ್ತ್ರೀಯರು ಸಂತಾನ ಪ್ರಾಪ್ತಿಯ ಉದ್ದೇಶದಿಂದ ಉಪಾಸಿಸುತ್ತಾರೆ. ಕರ್ನಾಟಕದ ಕೆಲವಾರು ಸ್ಥಳಗಳಲ್ಲಿ ಲಜ್ಜಾಗೌರಿ ಆರಾಧನೆಯ ಕುರುಹುಗಳಿವೆ.


ಲಜ್ಜಾಗೌರಿ ಫಲಕ, ಮಜತಿ

ನಾಗಮಂಗಲದಲ್ಲಿ ಇಂದಿಗೂ ದಂಡಿಗಮ್ಮನ ಕುಂಡಿಪೂಜೆ ಆಚರಣೆಯಲ್ಲಿದೆ. ಬಾದಾಮಿಯ ಸಮೀಪದ ಮಹಾಕೂಟದಲ್ಲಿರುವ ಲಜ್ಜಾಗೌರಿಯ ಪೂಜೆ ಆಚರಣೆಯಲ್ಲಿದೆ. ಹೀಗೆ ಮಾತೃದೇವತಾರಾಧನೆ 1–8ನೆಯ ಶತಮಾನದವರೆಗೂ ವಿಪುಲವಾಗಿ ಆಚರಣೆಯಲ್ಲಿದ್ದು, ಅನಂತರದ ಶತಮಾನಗಳಲ್ಲಿ ಮರೆಯಾಗಿ ಪೂರ್ಣ ದೇವಿ ಸ್ವರೂಪದಲ್ಲಿ ಆರಾಧನೆ ಪ್ರಾರಂಭವಾಯಿತು.

'(ಎನ್.ಎಲ್.)

**ಲಹುರದೇವ:** ಉತ್ತರಪ್ರದೇಶ ರಾಜ್ಯದ ಪುರಾತತ್ತ್ವ ನೆಲೆ. ಮೂರು ಕಡೆಗಳಲ್ಲಿ ಸರೋವರದಿಂದ ಸುತ್ತುವರಿದಿರುವ ಈ ನೆಲೆಯ ವಿಸ್ತೀರ್ಣ 200x500 ಮೀ. ರಾಜ್ಯ ಪುರಾತತ್ತ್ವ ಇಲಾಖೆ ಲಖನೌದ ಬೀರ್‌ಬಲ್ ಸಾಹ್ನಿ ಇನ್‌ಸ್ಟಿಟ್ಯೂಟ್ ಆಫ್ ಪೇಲಿಯೊಬಾಟನಿ ಮತ್ತು ಲಖನೌ ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದ ಸಹಯೋಗದೊಡನೆ 2001–04 ಮತ್ತು 2005–06ರ ವರೆಗೆ ಈ ನೆಲೆಯಲ್ಲಿ ಉತ್ಖನನ ನಡೆಸಿತು. ಐದು ಸಾಂಸ್ಕೃತಿಕ ಹಂತಗಳನ್ನು ಇಲ್ಲಿ ಗುರುತಿಸಲಾಯಿತು.

ಒಂದನೆಯ ಹಂತವನ್ನು (ಪ್ರಾರಂಭಿಕ ಕೃಷಿ ಹಂತ) ಎರಡು ಉಪಹಂತಗಳಾಗಿ ವಿಭಾಗಿಸಲಾಗಿದೆ. ಉಪಹಂತ Iಎ ನಲ್ಲಿಯ 50–70 ಸೆಂಮೀ ದಪ್ಪದ ಸಾಂಸ್ಕೃತಿಕ ಪದರದಲ್ಲಿ ಕೆಂಪು–ಕಪ್ಪು ದ್ವಿವರ್ಣ ಮತ್ತು ಕೆಂಪುಬಣ್ಣದ ಪಾತ್ರೆಗಳು ದೊರೆತಿವೆ. ಇವು ಕೈಯಿಂದ ಹಾಗೂ ಮಂದಗತಿಯಲ್ಲಿ ತಿರುಗುವ ತಿಗುರಿಯ ಮೇಲೆ ಮಾಡಿದ ಪಾತ್ರೆಗಳು. ಹೆಚ್ಚಿನ ಪಾತ್ರೆಗಳ ಮೇಲೆ ಲೇಪನವಿದೆ ಅಥವಾ ಹುರಿಯನ್ನು ಒತ್ತಿ ಮಾಡಿದ ಅಲಂಕರಣೆಯಿದೆ. ವರ್ಣಚಿತ್ರ ಮತ್ತು ಗೀರುವಿನ್ಯಾಸಗಳು ಅಪರೂಪ. ಬಟ್ಟಲು, ಕಾಲಿರುವ ಬಟ್ಟಲು, ಬುಗುಟೆಯುಳ್ಳ ಪಾತ್ರೆ, ಸಣ್ಣ ಬಟ್ಟಲು ಮತ್ತು ಪಾತ್ರೆ ಸಾಮಾನ್ಯ ನಮೂನೆಗಳು. ವೃತ್ತ ಅಥವಾ ಅಂಡಾಕಾರ ತಳವಿನ್ಯಾಸದ ಗುಡಿಸಲುಗಳು, ಕಂಬಗಳ ಗುಳಿಗಳು, ತಡಿಕೆಯ ಗೋಡೆಗಳು, ಸುಟ್ಟಮಣ್ಣಿನ ತುಂಡುಗಳು, ದಮ್ಮಸು ಮಾಡಿದ ಮಣ್ಣಿನ ನೆಲ ಮುಂತಾದ ವಸತಿ ಗೃಹಾವಶೇಷಗಳು ದೊರೆತಿವೆ. ಸು.15–20ಮೀ ಉದ್ದದ, ಸು.23–53ಸೆಂಮೀ ಅಗಲದ ಕಾಲುವೆಯ ನಿರ್ಮಾಣ ಗಮನಾರ್ಹ. ಎಲುಬಿನ ಉಪಕರಣಗಳು, ಸ್ಟಿಯಟೈಟ್ ಹಾಗೂ ಅರೆಪ್ರಶಸ್ತ ಕಲ್ಲುಗಳ ಮಣಿಗಳು, ಕೃಷಿಯಿಂದ ಬೆಳೆದ ಹಾಗೂ ಕಾಡು ಅಕ್ಕಿ ಕಾಳುಗಳು, ನೀಲಗಾಯ್, ಹಕ್ಕಿ, ಮೀನು, ಆಮೆ ಮುಂತಾದ ಪ್ರಾಣಿಗಳ ಎಲುಬಿನ ಅವಶೇಷಗಳು ಇಲ್ಲಿವೆ. ಇಂಗಾಲ–14ರ ಕಾಲಮಾಪನದ ಪ್ರಕಾರ ಈ ಹಂತ ಪ್ರಶ.ಪೂ.7ನೆಯ ಸಹಸ್ರಮಾನದ ಮಧ್ಯಭಾಗದಿಂದ 3ನೆಯ ಸಹಸ್ರಮಾನದ ಪ್ರಾರಂಭದ ನಡುವಿನ ಅವಧಿಯದು.

ಉಪಹಂತ Iಬಿ: 50 ಸೆಂಮೀ ದಪ್ಪದ ಪದರದಲ್ಲಿ ಕಾಡು ಅಕ್ಕಿ, ಕೃಷಿಯಿಂದ ಬೆಳೆದ ಅಕ್ಕಿ, ಜವೆ, ಗೋದಿ, ಕೆಂಪುತೊಗರಿ, ಬಟಾಣಿ ಮುಂತಾದ ಕಾಳು–ಧಾನ್ಯಗಳು, ಹಸು ಮತ್ತು ಎಮ್ಮೆಯ ಮೂಳೆಗಳು ಕಂಡುಬಂದಿವೆ. ತಾಮ್ರದ ಬಾಣದ ಮೊನೆ, ಮೀನಿನ ಗಾಳ ಗಮನಾರ್ಹ. ಕಾಲಿರುವ ಬಟ್ಟಲು, ಕೊಕ್ಕಿನ ಪಾತ್ರೆ, ದಪ್ಪ ತಳದ ತೂತಿನ ಪಾತ್ರೆ ಮುಖ್ಯ ಆಕಾರಗಳು. ಹೆಚ್ಚಿನ ಮಣ್ಪಾತ್ರೆಗಳ ಮೇಲೆ ಲೇಪನವಿದೆ. ಮಣ್ಪಾತ್ರೆಗಳನ್ನು ವರ್ಣಚಿತ್ರ, ಮೆತ್ತೆ ಅಲಂಕರಣೆ, ಗೀರುವಿನ್ಯಾಸಗಳಿಂದ ಅಲಂಕರಿಸಲಾಗಿದೆ. ಸ್ಟಿಯಟೈಟ್ ಮತ್ತು ಅರೆಪ್ರಶಸ್ತ ಕಲ್ಲಿನ ಮಣಿಗಳು, ಎಲುಬಿನ ಮತ್ತು ಕಲ್ಲಿನ ಉಪಕರಣಗಳು ದೊರೆತಿವೆ. ಕುಂಬಾರಿಕೆ ಮತ್ತು ವಸತಿ ನಿರ್ಮಾಣ ಕ್ರಮ ಉಪಹಂತ Iಎ ನಂತೆ ಮುಂದುವರೆದಿದೆ. ಇಂಗಾಲ–14 ಕಾಲನಿರ್ಣಯದ ಪ್ರಕಾರ ಈ ಹಂತದ ಕಾಲಮಾನ ಪ್ರ.ಶ.ಪೂ.300–2000.

ಹಂತ II (ಸುಧಾರಿತ ಕೃಷಿ ಹಂತ): ಇಲ್ಲಿ ಸಾದಾ ಮತ್ತು ಕಪ್ಪುಬಣ್ಣದ ಲೇಪನವಿರುವ ಉತ್ತಮ ಪಾತ್ರೆಗಳು, ಕಪ್ಪು–ಕೆಂಪು ದ್ವಿವರ್ಣ, ಬೂದು ಮತ್ತು ಕೆಂಪುಪಾತ್ರೆಗಳು ಇವೆ. ಧಾನ್ಯ ಸಂಗ್ರಹಣೆಯ ಮಣ್ಣಿನ ಗುಡಾಣ, ಸುಡಾವೆಮಣ್ಣಿನ ಹೆಂಚುಗಳು, ಗುರುತಿಸಲಾಗದ ಸುಡಾವೆಮಣ್ಣಿನ ವಸ್ತುಗಳ ಪೀಠಭಾಗ ಈ ಹಂತದ ಆದಿಭಾಗದಲ್ಲಿರುವುದು ಗಮನಾರ್ಹ. ಸುಡಾವೆಮಣ್ಣಿನ, ಸ್ಟಿಯಟೈಟ್ ಮತ್ತು ಅರೆಪ್ರಶಸ್ತ ಕಲ್ಲುಗಳ ಮಣಿಗಳು, ಎಲುಬಿನ ಬಾಣದ ಮೊನೆ, ದಬ್ಬಳ ಮತ್ತು ಸೂಕ್ಷ್ಮಮೊನೆ, ಕಲ್ಲಿನ ಚಪ್ಪಟೆ ಕೊಡಲಿ, ಸುತ್ತಿಗೆ, ಚೆಂಡು, ತಾಮ್ರದ

1ಎ ಹಂತದ ಅಕ್ಕಿ ಕಾಳಿನ ಅವಶೇಷಗಳು

ಉಪಕರಣಗಳು, ಪ್ರಾಣಿಗಳ ಕರಕಲಾದ ಎಲುಬುಗಳು ಮತ್ತು ಸಸ್ಯಗಳ ಅವಶೇಷಗಳು ದೊರೆತಿವೆ. ಉಜ್ಜಿ ನಯಗೊಳಿಸಿದ ಮೂಳೆಯ ಬಾಣದ ಮೊನೆಗಳು ಕೌಶಲವನ್ನು ತೋರುತ್ತವೆ. ಕೆಲವೊಂದನ್ನು ಹಿಡಿಕೆಗೆ ಸಿಕ್ಕಿಸಲು ಅನುವಾಗುವಂತೆ ಮಾಡಲಾಗಿದೆ. ಕೆಲವಕ್ಕೆ ಮುಳ್ಳುಗಳಿವೆ. ಕೆಲವು ಎಲುಬಿನ ಉಪಕರಣಗಳಲ್ಲಿ ರಂಧ್ರಗಳಿವೆ. ಇಂಗಾಲ–14 ಕಾಲಮಾನದ ಪ್ರಕಾರ ಈ ಹಂತವನ್ನು ಪ್ರ.ಶ.ಪೂ.ಸು.2000–1200ದ ಅವಧಿಗೆ ಸೇರಿಸಲಾಗಿದೆ.

ಹಂತ III (ಹೆಚ್ಚು ಸುಧಾರಿತ ಕೃಷಿ/ಆದಿ ಕಬ್ಬಿಣ ಹಂತ): ಈ ಹಂತದಲ್ಲಿ ಕಬ್ಬಿಣ ಬಳಕೆಗೆ ಬಂದಿತು. ಮಣ್ಪಾತ್ರೆಗಳು ಹಿಂದಿನ ಹಂತದಲ್ಲಿರುವಂತೆಯೇ ಇದ್ದವು. ಹುರಿಯ ಗುರುತಿನ ಮಣ್ಪಾತ್ರೆಗಳ ಸಂಖ್ಯೆ ಕಡಿಮೆಯಾಯಿತು. ತಟ್ಟೆಗಳು ಮೊದಲಬಾರಿಗೆ ಕಾಣಿಸಿಕೊಂಡವು. ಕಬ್ಬಿಣದ ಚಾಕು, ಮೊಳೆ, ಕುಡುಗೋಲು (?) ಮುಂತಾದ ಕಬ್ಬಿಣದ ಉಪಕರಣಗಳು, ಬಾಣದ ಮೊನೆ, ದಬ್ಬಳ ಮುಂತಾದ ಎಲುಬಿನ ಉಪಕರಣಗಳು, ತಾಮ್ರ, ಸುಡಾವೆಮಣ್ಣಿನ, ಕಲ್ಲಿನ ಉಪಕರಣಗಳು ಮತ್ತು ಪ್ರಾಣಿ ಹಾಗೂ ಸಸ್ಯಗಳ ಅವಶೇಷಗಳು ದೊರೆತಿವೆ. ಧಾನ್ಯ ಸಂಗ್ರಹಣ ಗುಡಾಣ ಮತ್ತು ಮಣ್ಣಿನ ಗೋಡೆಗಳ ಹೊರತಾಗಿ ಗೃಹನಿರ್ಮಾಣ ವಿಧಾನ ಹಿಂದಿನಂತೆಯೇ ಇದೆ. ಈ ಹಂತದ ಇಂಗಾಲ–14 ಕಾಲಮಾನ ಪ್ರ.ಶ.ಪೂ. 1205–1181.




ಚಿತ್ರಿತ ಮಡಕೆಚೂರುಗಳು

ಹಂತ IV (ಔತ್ತರೇಯ ಮೆರುಗಿನ ಕಪ್ಪುಪಾತ್ರೆ ಹಂತ): ಸು.1.2ಮೀ ದಪ್ಪದ ಪದರದಲ್ಲಿ ಉತ್ಕೃಷ್ಟವಾದ ಮೆರುಗಿನ ಕಪ್ಪುಪಾತ್ರೆಗಳಿವೆ. ಹಿಂದಿನ ಹಂತದ ಮಣ್ಪಾತ್ರೆಗಳ ಬಳಕೆ ಮುಂದುವರೆಯಿತು. ಕಬ್ಬಿಣ ಕಿಟ್ಟಗಳು ಕಂಡುಬಂದಿರುವುದು ಗಮನಾರ್ಹ. ತಾಮ್ರ ಮತ್ತು ಎಲುಬಿನ ಉಪಕರಣಗಳು, ಸುಡಾವೆ ಮಣ್ಣಿನ, ಅರೆಪ್ರಶಸ್ತ ಕಲ್ಲಿನ ಮತ್ತು ಸ್ಟಿಯಟೈಟ್ ಮಣಿಗಳಿವೆ.

ಹಂತ V (ಪ್ರ.ಶ.ಪೂ. ಅಂತ್ಯ–ಪ್ರ.ಶ. ಆರಂಭದ ಅವಧಿ): ಸುಟ್ಟ ಇಟ್ಟಿಗೆಯ ಕಟ್ಟಡ ಮತ್ತು ಬಾವಿ, ಔತ್ತರೇಯ ಮೆರುಗಿನ ಕಪ್ಪುಪಾತ್ರೆ, ಕಪ್ಪು ಲೇಪನದ, ಕಪ್ಪು–ಕೆಂಪು ದ್ವಿವರ್ಣ ಮತ್ತು ಬೂದುವರ್ಣದ ಪಾತ್ರೆಗಳು ಗಮನಾರ್ಹ. ಸುಡಾವೆಮಣ್ಣಿನ ಮನುಷ್ಯಾ ಕೃತಿಗಳು, ಮಣಿಗಳು, ಕುಷಾಣರ ನಾಣ್ಯಗಳು, ಗುಪ್ತರ ಮತ್ತು ಗುಪ್ತೋತ್ತರ ಕಾಲದ ಮಣ್ಪಾತ್ರೆ ಚೂರುಗಳು ಸಿಕ್ಕಿವೆ. ಈ ಹಂತದ ಕಾಲಮಾನ ಪ್ರ.ಶ.ಪೂ.ಸು.200–ಪ್ರ.ಶ.600–700.

ಬತ್ತಿದ ಸರೋವರದ ತಳದಲ್ಲಿ ಅಗೆದ ಗುಂಡಿಯಲ್ಲಿ ಕಳೆದ 10,000 ವರ್ಷಗಳಲ್ಲಿ ಸಂಚಯನಗೊಂಡ ಸಸ್ಯಾಂಗಾರ (ಪೀಟ್) ಹಾಗೂ ಕೆಸರುಮಣ್ಣಿನ ಪದರಗಳಿದ್ದು ಇವುಗಳಿಂದ ಇದ್ದಿಲಿನ ತುಣುಕುಗಳು, ಕೃಷಿಮಾಡಿದ ಹಾಗೂ ಮಾಡದ ಧಾನ್ಯಗಳ ಪರಾಗಗಳು, ಡಯಾಟಮ್ ಮತ್ತು ಫೈಟೊಲಿಥ್‌ಗಳನ್ನು ಸಂಗ್ರಹಿಸಲಾಯಿತು. 10,000 ವರ್ಷಗಳ ಹಿಂದೆಯೇ ಇಲ್ಲಿ ಮಾನವ ಚಟುವಟಿಕೆಗಳು ಆರಂಭಗೊಂಡಿದ್ದವು ಎಂಬುದಕ್ಕೆ ಈ ಅಂಶಗಳು ಸೂಚನೆಯೊದಗಿಸುತ್ತವೆ. ಈ ಪರಿಸರದಲ್ಲಿ ಸು.9720 ವರ್ಷಗಳ ಹಿಂದೆಯೆ ಬತ್ತದ ಗದ್ದೆಗಳಿದ್ದಿರಬಹುದೆಂದು ಸೂಕ್ಷ್ಮಾವಶೇಷಗಳಿಂದ ಊಹಿಸಬಹುದಾಗಿದೆ. (ಆರ್‌ಟಿ.)

**ಲಾಂಗ್‌ನಾಜ್:** ಗುಜರಾತ್ ರಾಜ್ಯದ ಮೆಹಸಾನ ಜಿಲ್ಲೆಯಲ್ಲಿರುವ ಸೂಕ್ಷ್ಮ ಶಿಲಾಯುಗದ ವಸತಿ ನೆಲೆ. ಗುಜರಾತಿನಲ್ಲಿ ಶೋಧಿಸಲ್ಪಟ್ಟ ಮೊಟ್ಟಮೊದಲ ಸೂಕ್ಷ್ಮಶಿಲಾ ಯುಗದ ನೆಲೆ ಎಂಬುದು ಇದರ ಹೆಗ್ಗಳಿಕೆ. ಹಳೆಶಿಲಾಯುಗ ಮತ್ತು ನವಶಿಲಾಯುಗ ಹಂತಗಳ ನಡುವಿನ ಸಂಸ್ಕೃತಿಯನ್ನು ಪತ್ತೆಹಚ್ಚುವ ಉದ್ದೇಶದಿಂದ ಸಾಂಕಳಿಯ ಅವರು ಕೈಗೊಂಡ ಗುಜರಾತ್ ಎಕ್ಸ್‌ಪೆಡಿಷನ್ ಯೋಜನೆಯ ಕ್ಷೇತ್ರಕಾರ್ಯದಲ್ಲಿ ಈ ನೆಲೆ ಬೆಳಕಿಗೆ ಬಂದಿತು. 1944–63ರ ನಡುವೆ ಸಾಂಕಳಿಯ ಅವರ ತಂಡ ಇಲ್ಲಿ ಉತ್ಖನನ ನಡೆಸಿತು. ಈ ನೆಲೆಯ ಸ್ತರಕ್ರಮ ಸ್ಪಷ್ಟವಾಗಿ ತಿಳಿದಿಲ್ಲ. ಸು.2.5 ಮೀ ದಪ್ಪದ ಪದರದಲ್ಲಿ ಸೂಕ್ಷ್ಮಶಿಲೋಪಕರಣ, ಮಣ್ಪಾತ್ರೆ, ಪ್ರಾಣಿಮೂಳೆಗಳು, ಮಾನವ ಸಮಾಧಿಗಳು ಹಾಗೂ ಲೋಹ ವಸ್ತುಗಳು ಚದುರಿದ್ದವು. ಅವಶೇಷಗಳು ಅಧಿಕವಾಗಿದ್ದುದು ಮೇಲ್ಭಾಗದ ಸ್ತರದಲ್ಲಿ (ಸು.1.5 ಮೀ). ಸೂಕ್ಷ್ಮಶಿಲೋಪಕರಣಗಳು ಚರ್ಟ್, ಕ್ಯಾಲ್ಸೆಡನಿ, ಬೆಣಚುಕಲ್ಲು, ಕಾರ್ನೇಲಿಯನ್ ಕಲ್ಲುಗಳಿಂದ ತಯಾರಾದುವು. ಇವು ಸ್ಥಳೀಯವಾಗಿ ದೊರೆಯುವ ಶಿಲೆಗಳಲ್ಲ. ಹಾಗಾಗಿ ಇವುಗಳ ಬಳಕೆಯಲ್ಲಿ ಜಾಗರೂಕತೆ ಎದ್ದು ತೋರುತ್ತದೆ. ಅಲ್ಲದೆ ಇವನ್ನು ಉಪಕರಣ ತಯಾರಿಕೆಯಲ್ಲಿ ಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ಶಿಲೋಪಕರಣ ತಯಾರಿಕೆಯಲ್ಲಿ ಕೌಶಲ ಕಾಣುವುದಿಲ್ಲ. ಅತಿ ಸಣ್ಣ ಅಲಗುಗಳು ಇಲ್ಲಿ ಅಧಿಕವಾಗಿವೆ. ತ್ರಿಕೋನ, ಅರ್ಧಚಂದ್ರಾಕೃತಿ, ಮೊನೆ, ಕೊರೆಯುಳಿ, ಹೆರೆಚಕ್ಕೆ ಮೊದಲಾದ ನಮೂನೆಗಳು ವಿರಳವಾಗಿವೆ. ತಿರುಳುಗಲ್ಲುಗಳೂ ತ್ಯಾಜ್ಯ ಚಕ್ಕೆಗಳೂ ಇರುವುದರಿಂದ ಉಪಕರಣಗಳು ಇಲ್ಲಿಯೇ ತಯಾರಾದುವೆಂಬುದು ಖಚಿತ.

ಕ್ವಾರ್ಟ್ಸೈಟ್‌ನ ಸಣ್ಣತುಂಡುಗಳು, ಉಪಕರಣವಾಗಿ ಉಪಯೋಗಿಸಿದಂತೆ ಕಾಣುವ ಫೇಂಡಾಮೃಗದ ಭುಜದ ಮೂಳೆ, ಉಜ್ಜಿ ನಯಗೊಳಿಸಿದ ಶಿಸ್ತ್ ಕಲ್ಲಿನ ಕೊಡಲಿ, ಕ್ವಾರ್ಟ್ಸೈಟ್‌ನ ತೂತಿರುವ ವರ್ತುಲಾಕಾರದ ಕಲ್ಲು ಮುಂತಾದುವು ಗಮನಾರ್ಹ. ಇವು ಆರಂಭಿಕ ಹಂತದ ಕೃಷಿಯ ಸೂಚಕಗಳಾಗಿವೆ ಅಥವಾ ಸಮಕಾಲೀನ ತಾಮ್ರ–ಶಿಲಾಯುಗ ವಸತಿ ನೆಲೆಗಳೊಂದಿಗಿನ ಸಂಪರ್ಕವನ್ನು ತಿಳಿಸುತ್ತವೆ. ಇಲ್ಲಿ ಸಿಕ್ಕಿರುವ ಶುದ್ಧ ತಾಮ್ರದಿಂದ ತಯಾರಿಸಿದ ಒಂದು ಚಾಕು ಇಂತಹ ಸಂಪರ್ಕದ ಸಂಕೇತವಾಗಿದೆ. ಕಬ್ಬಿಣದ ಒಂದು ಬಾಣದ ಮೊನೆ ಹಾಗೂ ಹೆಮಟೈಟಿನ ತುಂಡುಗಳು ಇಲ್ಲಿ ಸಿಕ್ಕಿವೆ.

14 ಮಾನವ ಸಮಾಧಿಗಳಲ್ಲಿ 13ರಲ್ಲಿ ಶವವನ್ನು ಕೈಕಾಲು ಮಡಿಸಿದ ಭಂಗಿಯಲ್ಲಿಯೂ ಒಂದರಲ್ಲಿ ನೇರಭಂಗಿಯಲ್ಲಿಯೂ ಹೂಳಲಾಗಿತ್ತು. ಕೆಲವೊಂದರಲ್ಲಿ ಕ್ವಾರ್ಟ್ಸೈಟ್ ತುಂಡುಗಳನ್ನು ತಲೆಯ ಬದಿಯಲ್ಲಿ ಇಡಲಾಗಿತ್ತು. ಉಪ್ಪುನೀರಿನ ಶಂಖಚಿಪ್ಪುಗಳು ಕೆಲವು ಸಮಾಧಿಗಳಲ್ಲಿದ್ದುವು. ಇಲ್ಲಿ ದೊರೆತ ಮೂಳೆಗಳು ವಿವಿಧ ಜಾತಿಯ ಜಿಂಕೆ, ಕಾಡು ಹಂದಿ, ನೀಲಗಾಯ್, ತೋಳ, ಇಲಿ, ಅಳಿಲು ಹಾಗೂ ಮುಂಗುಸಿಯವು. ಸುಟ್ಟ ಮೂಳೆಗಳು ಗಣನೀಯ ಸಂಖ್ಯೆಯಲ್ಲಿವೆ. ಮಣ್ಪಾತ್ರೆಗಳ ಸಣ್ಣ ಚೂರುಗಳು ದೊರೆತಿರುವುದರಿಂದ ಆಕಾರಗಳನ್ನು ತಿಳಿಯುವುದು ಸಾಧ್ಯವಾಗಿಲ್ಲ. ಹೆಚ್ಚಿನ ಪಾತ್ರೆಗಳು ಕೈಯಿಂದಲೇ ತಯಾರಾದುವು. ಕೆಲವೊಂದು ಮಾತ್ರ ತಿಗುರಿಯ ಬಳಕೆಯನ್ನು ಸೂಚಿಸುತ್ತವೆ. ಹೊಳಪಿನ ಕೆಂಪುಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಗೀರುವಿನ್ಯಾಸವುಳ್ಳ ಒರಟು ಕೆಂಪುಪಾತ್ರೆಗಳು ಇಲ್ಲಿ ಕಂಡುಬಂದಿವೆ. ಈ ಜನ ಬೇಟೆ ಹಾಗೂ ಮೀನುಗಾರಿಕೆಯನ್ನು ಅವಲಂಬಿಸಿದ್ದರು.

ಸ್ತರಕ್ರಮ ಗೋಜಲಾಗಿರುವ ಕಾರಣ ಈ ನೆಲೆಗೆ ನಿಖರ ಕಾಲಮಾನವನ್ನು ನಿಗದಿಗೊಳಿಸಲಾಗಿಲ್ಲ. ತೌಲನಿಕ ಆಧಾರದ ಮೇಲೆ ಇದನ್ನು ಪ್ರ.ಶ.ಪೂ.2000ದ ಅವಧಿಗೆ ಸೇರಿಸಬಹುದು. (ಸಿ.ಕೆ.ಎಂ.)

**ಲಾ ತೆನೆ ಸಂಸ್ಕೃತಿ:** ಪೂರ್ವ ಫ್ರಾನ್ಸ್, ಸ್ವಿಟ್ಜರ್ಲೆಂಡ್, ಆಸ್ಟ್ರಿಯ, ನೈರುತ್ಯ ಜರ್ಮನಿ, ಚೆಕ್, ಸ್ಲೋವಾಕಿಯ ಮತ್ತು ಹಂಗರಿ – ಈ ನೆರೆಹೊರೆಯ ಪ್ರದೇಶಗಳಲ್ಲಿ ಪ್ರ.ಶ.ಪೂ.ಸು.450–100 ಅವಧಿಯಲ್ಲಿದ್ದ ಸುಧಾರಿತ ಕಬ್ಬಿಣ ಯುಗದ ಸಂಸ್ಕೃತಿ. ಈ ಸಂಸ್ಕೃತಿಯ ನೆಲೆಯನ್ನು ಸ್ವಿಟ್ಜರ್ಲೆಂಡಿನ ನೌಚ ತೆಲ್ ಸರೋವರದ ಉತ್ತರ ಬದಿಯ ಲಾ ತೆನೆಯಲ್ಲಿ ಹ್ಯಾಸ್ಲಿ ಕಾಪ್ 1857ರಲ್ಲಿ ಶೋಧಿಸಿದ. ಆದ್ದರಿಂದ ಇದನ್ನು ಲಾ ತೆನೆ ಸಂಸ್ಕೃತಿಯೆಂದು ಕರೆಯಲಾಗಿದೆ. ಇದು ಹ್ಯಾಲ್‌ಸ್ಟಾಟ್ ಸಂಸ್ಕೃತಿಯ ಉತ್ತರಾರ್ಧದ ಹಂತದಲ್ಲಿ ಆರಂಭವಾಯಿತು. ಇದರ ಹುಟ್ಟು, ಬೆಳವಣಿಗೆಯಲ್ಲಿ ಗ್ರೀಕ್ ಮತ್ತು ಎಟ್ರಸ್ಕನ್ ಸಂಸ್ಕೃತಿಗಳ ಪ್ರಭಾವ ಕಾಣುತ್ತದೆ. ಈ ಸಂಸ್ಕೃತಿಯ ಬಗೆಗೆ ಪುರಾತತ್ತ್ವ ಆಕರಗಳಲ್ಲದೆ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯಕ ಆಕರಗಳು ಲಭ್ಯವಿವೆ. ಲಾ ತೆನೆ ಸಂಸ್ಕೃತಿಯ ವಿಶಿಷ್ಟ ಕಲಾತ್ಮಕ ಮತ್ತು ಸಾಂಸ್ಕೃತಿಕ ಅಂಶಗಳು ಪಶ್ಚಿಮ ಯುರೋಪಿನ ಕೆಲ್ಟಿಕ್ ಪ್ರದೇಶದಲ್ಲೂ ಉಳಿದು ಬಂದಿರುವುದರಿಂದ ಇವೂ ಸಹಾಯಕಾರಿಯಾಗಿವೆ. ಪ್ರ.ಶ.ಪೂ.5ನೆಯ ಶತಮಾನದಿಂದ ಗ್ರೀಕ್ ಮತ್ತು ರೋಮನ್ ಬರೆಹಗಾರರು ಪುರಾತತ್ತ್ವ ಆಕರಗಳಿಂದ ಲಾ ತೆನೆ ಸಂಸ್ಕೃತಿಯೊಡನೆ ಗುರುತಿಸಲ್ಪಟ್ಟ ಜನ ಸಮುದಾಯಗಳನ್ನು ಕೆಲ್ಟೋಯಿ (ಕೆಲ್ಟ್ಸ್) ಮತ್ತು ಗಲ್ಲಿ (ಗೌಲ್ಸ್) ಎಂದು ವರ್ಣಿಸಿದ್ದಾರೆ. ಹಿರೋಡಾಟಸ್ ಲಾ ತೆನೆ ಸಂಸ್ಕೃತಿಯ ಹೃದಯ ಭಾಗವಾದ ಡ್ಯಾನ್ಯೂಬ್ ನದಿ ಮೂಲ ಪ್ರದೇಶದಲ್ಲಿ ಕೆಲ್ಟೋಯಿ ಜನರನ್ನು ಗುರುತಿಸಿದ್ದಾನೆ. ಆದರೆ ಇದನ್ನು ತಜ್ಞರು ಪೂರ್ಣವಾಗಿ ಒಪ್ಪಿಕೊಂಡಿಲ್ಲ. ಈ ಸಂಸ್ಕೃತಿ ಆಲ್ಪ್ಸ್ ಪ್ರದೇಶದ ಉತ್ತರಕ್ಕೆ ಹ್ಯಾಲ್‌ಸ್ಟಾಟ್ ಸಂಸ್ಕೃತಿಯ ವಾಯವ್ಯಕ್ಕೆ ಮರ್ನೆ ಮತ್ತು ಮೊಸೆಲ್ಲಿ, ಬವರಿಯ ಮತ್ತು ಆಸ್ಟ್ರಿಯ ನಡುವಿನಲ್ಲಿ ಉಗಮವಾಯಿತೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಈ ಸಂಸ್ಕೃತಿಯಲ್ಲಿ ಅನುಕ್ರಮವಾಗಿ ಆದಿ (ಪ್ರ.ಶ.ಪೂ.6ನೆಯ ಶತಮಾನ), ಮಧ್ಯ (ಪ್ರ.ಶ.ಪೂ.450–100) ಮತ್ತು ಅಂತ್ಯ (ಪ್ರ.ಶ.ಪೂ. 1ನೆಯ ಶತಮಾನ) ಎಂದು ಮೂರು ಹಂತಗಳನ್ನು ಗುರುತಿಸಲಾಗಿದೆ. ರೋಮನರ ಆಕ್ರಮಣದಿಂದ ಈ ಸಂಸ್ಕೃತಿ ಕೊನೆಗೊಂಡಿತು. ಈ ಸಂಸ್ಕೃತಿಯ ವಿಶಿಷ್ಟ ಲಕ್ಷಣವೆಂದರೆ ಕಂಚು, ಕಬ್ಬಿಣ ಮತ್ತು ಚಿನ್ನದ ಪಾತ್ರೆ, ಶಿರಸ್ತ್ರಾಣ, ಗುರಾಣಿ, ಕುದುರೆಜೀನು ಮತ್ತು ಶ್ರೀಮಂತ ವರ್ಗದ ಚಿನ್ನದ ಆಭರಣಗಳ ಮೇಲೆ ಬಿಡಿಸಿರುವ ನಾನಾ ಪ್ರಕಾರದ ಕುಸುರಿ ಅಲಂಕರಣಗಳು. ಈ ಜನಸಮುದಾಯದ ಶವಕುಣಿಗಳಲ್ಲಿ ದೊರೆತ ವಸ್ತುಗಳ ಆಧಾರದ ಮೇಲೆ ಇವರ ವ್ಯಾಪಾರ ಮತ್ತು ವ್ಯವಹಾರ ಚಟುವಟಿಕೆಗಳು ಬಹಳ ದೂರದವರೆಗೆ ಪ್ರಸರಿಸಿತ್ತು ಎಂಬುದು ಸುಸ್ಪಷ್ಟ. ಫ್ರಾನ್ಸ್‌ನ ವಿಕ್ಸಿನಲ್ಲಿಯ ಒಂದು ಶವಕುಣಿಯಲ್ಲಿ ಶ್ರೀಮಂತ ಸ್ತ್ರೀಯ ಶವದೊಡನೆ ಗ್ರೀಸ್‌ನಲ್ಲಿ ತಯಾರಾದ ಕಂಚಿನ ಹಂಡೆಯಿತ್ತು (ಪ್ರ.ಶ.ಪೂ.6ನೆಯ ಶತಮಾನ). ಈ ಸಂಸ್ಕೃತಿಯ ಪ್ರದೇಶದಿಂದ ಮೆಡಿಟರೇನಿಯನ್ ತೀರದ ಸಮುದಾಯಗಳಿಗೆ ಉಪ್ಪು, ತಾಮ್ರ, ತುಪ್ಪಳ ಮತ್ತು ಚಿನ್ನ ರಫ್ತಾಗುತ್ತಿತ್ತು. ಇವರು ಬಯಲು ಪ್ರದೇಶದಲ್ಲಿ ವಾಸಿಸುತ್ತಿದ್ದರು. ಇವರ ಮುಖ್ಯಸ್ಥರು ಗುಡ್ಡದ ಮೇಲೆ ಕೋಟೆಯಿಂದ ಆವರ್ತವಾದ ನೆಲೆಗಳಲ್ಲಿ ವಾಸಿಸುತ್ತಿದ್ದರು. ಈ ಸಂಸ್ಕೃತಿಯ ಮಧ್ಯ ಹಂತದಿಂದ ನಗರ ನಿರ್ಮಾಣ ಪ್ರಾರಂಭವಾಯಿತು. ಇವರ ಮನೆಗಳ ನಿರ್ಮಿತಿಗಳಲ್ಲಿ ಹೆಚ್ಚಾಗಿ ಬಡಗಿ ಕೆಲಸ ಕಾಣುತ್ತದೆ. ಇವರು ತಮ್ಮ ಕಟ್ಟಳೆಗೆ ಅನುಗುಣವಾಗಿ ಸಿದ್ಧಮಾಡಿದ ಆಳದ ಗುಂಡಿಗಳಲ್ಲಿ ಹರಕೆಯ ವಸ್ತುಗಳನ್ನು ಮತ್ತು ಬಲಿಕೊಟ್ಟ ಮಾನವ ರುಂಡಗಳನ್ನು ಹಾಕುತ್ತಿದ್ದರು. ಶಸ್ತ್ರಗಳು, ರಥಗಳು, ಕತ್ತಿ, ಭಲ್ಲೆ ಮೊನೆ, ಗುರಾಣಿ, ಕೇಶಬಿಲ್ಲೆ ಮೊದಲಾದ 2500 ವಸ್ತುಗಳನ್ನು ಸಂಗ್ರಹಿಸಲಾಗಿದೆ. (ಎ.ಎಸ್.;ಎನ್.ಎಲ್.)

**ಲಾರೆನ್ಸ್, ತಾಮಸ್ ಎಡ್ವರ್ಡ್:** 1888–1935. ಲಾರೆನ್ಸ್ ಆಫ್ ಅರೇಬಿಯ ಎಂದು ಪ್ರಸಿದ್ಧನಾಗಿದ್ದ ಬ್ರಿಟಿಷ್ ಯೋಧ ಹಾಗೂ ಬರೆಹಗಾರ. ಒಂದನೆಯ ಮಹಾಯುದ್ಧ ಕಾಲದ ಸಾಹಸಿ ವ್ಯಕ್ತಿಗಳಲ್ಲೊಬ್ಬ. ಈತ ವೇಲ್ಸ್‌ನ ಟ್ರೆಮಡಾಕ್‌ನಲ್ಲಿ ಜನಿಸಿದ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಚರಿತ್ರೆ ಹಾಗೂ ಪುರಾತತ್ತ್ವ ವಿಷಯಗಳನ್ನು ವ್ಯಾಸಂಗಮಾಡಿದ. ದೇಶಾಟನೆ ಮಾಡಿ ವಿಷಯ ಸಂಗ್ರಹಿಸುವುದರಲ್ಲಿ ಈತ ಚತುರನಾಗಿದ್ದ. ಸಿರಿಯ ದೇಶವನ್ನು ಕಾಲುನಡಿಗೆಯಲ್ಲಿ ಸುತ್ತಿದ. ಆ ಸಂದರ್ಭದಲ್ಲಿ ಈತ ಅರೇಬಿಕ್ ಭಾಷೆಯನ್ನು ಕಲಿತು, ಆ ಜನರ ಸ್ನೇಹಸಂಪಾದನೆ ಮಾಡಿದ.

ಒಂದನೆಯ ಮಹಾಯುದ್ಧ ಆರಂಭವಾಗುವ ವೇಳೆಯಲ್ಲಿ ಈತ ಬ್ರಿಟಿಷ್ ಪುರಾತತ್ತ್ವಜ್ಞನಾಗಿ ಕೆಲಸ ಮಾಡುತ್ತಿದ್ದ. ಇವನ ಜಾಣ್ಮೆ, ಚಾಣಾಕ್ಷತನ, ಪರಿಶ್ರಮಗಳನ್ನು ಗಮನಿಸಿ ಬ್ರಿಟಿಷ್ ಸರ್ಕಾರ ಇವನನ್ನು ಬ್ರಿಟಿಷ್ ಮಿಲಿಟರಿ ಬೇಹುಗಾರಿಕೆ ಪಡೆಯ ಮುಖ್ಯಸ್ಥನನ್ನಾಗಿ ನೇಮಿಸಿ ಈಜಿಪ್ಟ್‌ಗೆ ಕಳುಹಿಸಿತು. ಅನಂತರ ಈತ ಕರ್ನಲ್ ಹುದ್ದೆಗೇರಿದ. ತುರ್ಕಿಯ ವಿರುದ್ಧ ದಂಗೆ ಏಳುವಂತೆ ಅರಬ್ಬರನ್ನು ಪ್ರಚೋದಿಸಿದವನೂ ಅವರಿಗೆ ನೆರವು ನೀಡಿದವನೂ ಈತನೇ. ಗೆರಿಲ್ಲಾ ಯುದ್ಧತಂತ್ರದ ನೇತಾರನಾಗಿ ಈತ ಸಾಹಸಕೃತ್ಯಗಳನ್ನು ಕೈಗೊಂಡು ಯಶಸ್ವಿಯಾದ. ಇವನ ಬುದ್ಧಿವಂತಿಕೆ, ಮುತ್ಸದ್ದಿತನಗಳಿಂದಾಗಿ ಅರಬ್ಬರು ತುರ್ಕಿಯನ್ನು ಸೋಲಿಸಿ ಸಿರಿಯದ ರಾಜಧಾನಿ ಡಮಾಸ್ಕಸ್‌ಗೆ ಪ್ರವೇಶಿಸಿದರು. ಲಾರೆನ್ಸ್ ಅರಬ್ಬರ ಒಳಿತಿಗಾಗಿ, ಅವರ ವಿಮೋಚನೆಗಾಗಿ ಸದಾ ಹಂಬಲಿಸುತ್ತಿದ್ದ. ಅವರಿಗೆ ಸ್ವಾತಂತ್ರ್ಯ ನೀಡುವಂತೆ 1919ರಲ್ಲಿ ನಡೆದ ವರ್ಸೈಲೀಸ್ ಸಮ್ಮೇಳನದಲ್ಲಿ ಒತ್ತಾಯಪಡಿಸಿದ. 1921ರಲ್ಲಿ ಈತ ಬ್ರಿಟಿಷ್ ವಸಾಹತು ಕಚೇರಿಯ ಅರಬ್ಬೀವ್ಯವಹಾರಗಳ ಸಲಹೆಗಾರನಾಗಿ ನೇಮಕ ಹೊಂದಿದ. ಆದರೆ ತನ್ನ ಸರ್ಕಾರ ಅರಬ್ ನೆರವಿನ ವಿಷಯಗಳಲ್ಲಿ ಹಿಂದೇಟು ಹಾಕಿದ್ದರಿಂದ ಬೇಸರಗೊಂಡು ಆ ಹುದ್ದೆಗೆ ರಾಜೀನಾಮೆ ನೀಡಿದ. ಅನಂತರ ಜೆ.ಎಚ್.ರಾಸ್ ಎಂಬ ಹೊಸ ಹೆಸರನ್ನಿಟ್ಟುಕೊಂಡು ರಾಯಲ್ ಏರ್‌ಫೋರ್ಸ್‌ನಲ್ಲಿ (ಆರ್‌ಎಎಫ್) ಕೆಲಸಕ್ಕೆ ಸೇರಿದ. ಟಿ.ಇ.ಷಾ ಎಂದು ತನ್ನ ಹೆಸರನ್ನು ಬದಲಾಯಿಸಿಕೊಂಡು ಟ್ಯಾಂಕ್ ಪಡೆಗೆ ವರ್ಗಾವಣೆಗೊಂಡ. 1925ರಲ್ಲಿ ಪುನಃ ರಾಯಲ್ ಏರ್‌ಫೋರ್ಸ್‌ಗೆ ವಾಪಸಾದ. ಟಿ.ಇ.ಷಾ ಎಂಬ ಹೆಸರನ್ನು ಕಾನೂನು ಬದ್ಧಗೊಳಿಸಿಕೊಂಡ. ಈತ ಭಾರತದಲ್ಲೂ ಕೆಲಕಾಲ ಇದ್ದನಂತೆ. ಭಾರತದಲ್ಲಿದ್ದಾಗ ಪಠಾಣರೊಡನೆ ಓಡಾಡಿಕೊಂಡು ಅವರ ಹಾಗೆಯೇ ಬಾಳಿ ಅವರಲ್ಲಿ ಅಂತಃಕಲಹವನ್ನು ಬಿತ್ತಿದನೆಂಬ ಆಪಾದನೆಗೊಳಗಾದಾಗ ಬ್ರಿಟಿಷ್ ಸರ್ಕಾರ ಇವನನ್ನು ಇಂಗ್ಲೆಂಡ್‌ಗೆ ವಾಪಸು ಕರೆಯಿಸಿಕೊಂಡಿತಂತೆ. ಈತ 1935 ಮೇ 19ರಂದು ಮೋಟಾರ್ ಸೈಕಲ್ ಅಪಘಾತಕ್ಕೆ ಈಡಾಗಿ ನಿಧನನಾದ.

ಲಾರೆನ್ಸ್ ತನಗೆ ಕೊಡಮಾಡಿದ ಪ್ರಶಸ್ತಿ, ಪದವಿಗಳನ್ನೆಲ್ಲ ನಿರಾಕರಿಸಿದ. ಆದರೂ ಅರೇಬಿಯನರು ಪ್ರೀತಿಯಿಂದ ಈತನನ್ನು ಅರೇಬಿಯದ ಅನಭಿಷಿಕ್ತ ದೊರೆ ಎಂದು ಕರೆದು ಗೌರವಿಸಿದರು. ಈತ ಅರೇಬಿಯದ ತನ್ನ ರೋಮಾಂಚಕಾರಿ ಅನುಭವಗಳನ್ನು ದಿ ಸೆವೆನ್ ಪಿಲ್ಲರ್ಸ್ ಆಫ್ ವಿಸ್‌ಡಮ್ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾನೆ (1926). ಈ ಪುಸ್ತಕದ ಸಂಗ್ರಹರೂಪ ರಿವೋಲ್ಟ್ ಇನ್ ದಿ ಡೆಸರ್ಟ್ ಎಂಬ ಹೆಸರಿನಲ್ಲಿ ಪ್ರಕಟವಾಗಿದೆ (1927).*

**ಲಾಲ್ ಬಹಾದ್ದೂರ್ ಶಾಸ್ತ್ರೀ:** 1904–66. ಸ್ವತಂತ್ರ ಭಾರತದ ಮೂರನೆಯ ಪ್ರಧಾನ ಮಂತ್ರಿ (1964–66) ಹಾಗೂ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರು. ಇವರು 1904 ಅಕ್ಟೋಬರ್ 2ರಂದು ವಾರಾಣಸಿಯ ಮೊಗಲ್ ಸರಾಯಿಯಲ್ಲಿ ಜನಿಸಿದರು. ತಂದೆ ಶಾರದಾ ಪ್ರಸಾದ್, ಶಾಲಾಶಿಕ್ಷಕ. ತಾಯಿ ರಾಮ್‌ದುಲಾರಿದೇವಿ. ಇವರ ಪೂರ್ಣ ಹೆಸರು ಲಾಲ್ ಬಹಾದ್ದೂರ್ ಶ್ರೀವಾಸ್ತವ. ಒಂದೂವರೆ ವರ್ಷದ ಬಾಲಕನಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ ಇವರು ಅತ್ಯಂತ ಆರ್ಥಿಕ ಸಂಕಷ್ಟ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಇವರು ಮೆಟ್ರಿಕ್ ಪರೀಕ್ಷೆ ಕಟ್ಟುವ ಹೊತ್ತಿಗೆ ಅಸಹಕಾರ ಚಳವಳಿ ಆರಂಭವಾಗಿತ್ತು. ವ್ಯಾಸಂಗವನ್ನು ಕೈಬಿಟ್ಟು ಇವರು ಅಸಹಕಾರ ಚಳವಳಿಯಲ್ಲಿ ದುಮುಕಿದರು. ಅನಂತರ ವಾರಾಣಸಿಯ ಕಾಶೀವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಶಾಸ್ತ್ರೀ ಪದವಿ ಪಡೆದರು. ಅಲ್ಲಿಂದ ಮುಂದೆ ಇವರು ಲಾಲ್ ಬಹಾದ್ದೂರ್ ಶಾಸ್ತ್ರೀಯೆಂದೇ ಪ್ರಸಿದ್ಧರಾದರು. ಇವರು ಲಾಲಾ ಲಜಪತರಾಯ್ ಸ್ಥಾಪಿಸಿದ ಜನತಾ ಸೇವಾ ಸಂಘದ ಕಾರ್ಯಕರ್ತರಾಗಿ, ಸಂಘದಿಂದ 75 ರೂಪಾಯಿ ಸಂಭಾವನೆ ಪಡೆದು ಸರಳ ಜೀವನ ನಡೆಸಲಾರಂಭಿಸಿದರು. ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳವಳಿಗಳಲ್ಲಿ ಭಾಗವಹಿಸಿ ಸೆರೆಮನೆ ಶಿಕ್ಷೆ ಅನುಭವಿಸಿದರು.

ಸ್ವಾತಂತ್ರ್ಯಾನಂತರ ಭಾರತದ ಸಕ್ರಿಯ ರಾಜಕಾರಣದಲ್ಲಿ ತೊಡಗಿದ ಇವರು 1951ರಲ್ಲಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ, ಮಹಾಚುನಾವಣೆಗಳ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದರು. 1952ರಲ್ಲಿ ರಾಜ್ಯಸಭೆಯ ಸದಸ್ಯರಾಗಿ ಕೇಂದ್ರ ಮಂತ್ರಿಮಂಡಲ ಪ್ರವೇಶಿಸಿ ರೈಲ್ವೆ ಮಂತ್ರಿಯಾದರು. 1956ರಲ್ಲಿ ತಮಿಳುನಾಡಿನ ತೂತುಕುಡಿಯಲ್ಲಿ ಭೀಕರ ರೈಲು ಅಪಘಾತವಾಗಿ ಸಾವುನೋವುಗಳು ಸಂಭವಿಸಿದ್ದರ ನೈತಿಕಹೊಣೆ ಹೊತ್ತು ಮಂತ್ರಿಪದವಿಗೆ ರಾಜೀನಾಮೆ ನೀಡಿದರು. ಅನಂತರ ಲೋಕಸಭೆಗೆ ಆಯ್ಕೆಯಾದ ಇವರು ಸಾರಿಗೆ ಸಚಿವರಾಗಿ, ಕೈಗಾರಿಕೆ ಹಾಗೂ ವಾಣಿಜ್ಯಸಚಿವರಾಗಿ ಕಾರ್ಯನಿರ್ವಹಿಸಿದರು. ಗೋವಿಂದವಲ್ಲಭ ಪಂತರು ನಿಧನರಾದ ಅನಂತರ ಕೇಂದ್ರ ಸರ್ಕಾರದ ಗೃಹಸಚಿವರಾಗಿಯೂ ಕಾರ್ಯನಿರ್ವಹಿಸಿದರು. ಇವರು ಸಚಿವರಾಗಿದ್ದ ಸಮಯದಲ್ಲಿ ಅಸ್ಸಾಂನಲ್ಲಿ ಉದ್ಭವಿಸಿದ ಭಾಷಾಸಮಸ್ಯೆ, ಪಂಜಾಬಿನಲ್ಲಿ ಪ್ರತ್ಯೇಕ ಪಂಜಾಬಿ ಸುಭಾ ರಚಿಸುವ ಒತ್ತಾಯ ಮುಂತಾದ ಸಮಸ್ಯೆಗಳನ್ನು ಯಶಸ್ವಿಯಾಗಿ ಬಗೆಹರಿಸಿದರು. ಮುಂದೆ ಕಾಮರಾಜರ ಯೋಜನೆಯನ್ನು ಅಂಗೀಕರಿಸಿ ಮಂತ್ರಿಪದವಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ಸನ್ನು ಬಲಪಡಿಸುವ ಸಂಘಟನಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1964ರಲ್ಲಿ ಪ್ರಧಾನಿ ಜವಹರಲಾಲ್ ನೆಹರೂ ಅವರು ತೀವ್ರ ಅಸ್ವಸ್ಥರಾದಾಗ ಇವರು ಖಾತೆರಹಿತ ಸಚಿವರಾಗಿ ಕಾರ್ಯನಿರ್ವಹಿಸಿದರು. ನೆಹರೂ ನಿಧನದ ತರುವಾಯ 1964 ಜೂನ್ 9ರಂದು ಇವರು ಭಾರತದ ಮೂರನೆಯ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಇವರು ಪ್ರಧಾನಿಯಾದ ಅನಂತರ ನೆಹರೂ ನೀತಿಗಳನ್ನೇ ಬಹುಮಟ್ಟಿಗೆ ಮುಂದುವರಿಸಿದರು. ಆರ್ಥಿಕ ಸ್ವಾವಲಂಬನೆಗೆ ಹೆಚ್ಚು ಒತ್ತು ನೀಡಿದರು. ಇವರಿಗೆ ಸಮಾಜ ವಾದದ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ನಂಬಿಕೆಯಿತ್ತು. 1964 ಅಕ್ಟೋಬರ್‌ನಲ್ಲಿ ಕೈರೋದಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಎರಡನೆಯ ಸಮ್ಮೇಳನದಲ್ಲಿ ಭಾಗವಹಿಸಿದ ಇವರು ವಿಶ್ವಶಾಂತಿಯ ಮಹತ್ತ್ವವನ್ನು ಎತ್ತಿ ಹಿಡಿದು, ವಸಾಹತುಗಳ ವಿಮೋಚನೆಯಾಗಬೇಕೆಂದು ಪ್ರತಿಪಾದಿಸಿದರು. ಜನಾಂಗೀಯ ಭೇದದ ವಿರುದ್ಧ ದನಿ ಎತ್ತಿ, ಹಿಂದುಳಿದ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಯಲ್ಲಿ ಅಂತಾರಾಷ್ಟ್ರೀಯ ಸಹಕಾರದ ಮಹತ್ತ್ವವನ್ನು ಎತ್ತಿ ಹಿಡಿದರು. ಇವರು ಸೋವಿಯತ್ ರಷ್ಯ, ಕೆನಡ ಹಾಗೂ ಬ್ರಿಟನ್‌ಗಳಿಗೆ ಭೇಟಿ ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ವರ್ಚಸ್ಸನ್ನು ಹೆಚ್ಚಿಸಿದರು.



ಪ್ರಧಾನಿಯಾಗಿದ್ದಾಗ (ಜೂನ್ 1964–ಜನವರಿ 66) ಕಚ್ಛ್‌ನಲ್ಲಿ ಗಡಿ ವಿವಾದ ತಲೆದೋರಿ ಪಾಕಿಸ್ತಾನ ಕಾಶ್ಮೀರದ ಮೇಲೆ ಆಕ್ರಮಣ ಮಾಡಿದ ಸಂದಿಗ್ಧ ಪರಿಸ್ಥಿತಿಯನ್ನು ಇವರು ಯಶಸ್ವಿಯಾಗಿ ಎದುರಿಸಿದರು. ಭದ್ರತಾ ಮಂಡಳಿಯ ಮಧ್ಯಸ್ತಿಕೆಯಿಂದ 33 ದಿನಗಳ ಯುದ್ಧ ಕೊನೆಗೊಂಡಿತು. ಈ ಐತಿಹಾಸಿಕ ಭಾರತ–ಪಾಕ್‌ಯುದ್ಧದಲ್ಲಿ ಪಾಕಿಸ್ತಾನವನ್ನು ಮಣಿಸಿದ ಇವರು ಭಾರತದ ಕಣ್ಮಣಿಯಾದರು. ಇಳಿಮುಖವಾಗಿದ್ದ ಭಾರತೀಯರ ಮನೋಸ್ಥೈರ್ಯವನ್ನು ಮುಗಿಲು ಮುಟ್ಟಿಸಿದ್ದು ಇವರ ಅನುಪಮ ಕಾಣಿಕೆ. ಎರಡು ರಾಷ್ಟ್ರಗಳ ನಡುವಿನ ಸಮಸ್ಯೆಗಳನ್ನು ಬಗೆಹರಿಸಲು ರಷ್ಯದ ತಾಷ್ಕೆಂಟ್‌ನಲ್ಲಿ ಒಪ್ಪಂದ ಏರ್ಪಟ್ಟಿತು. ಅನಂತರ ಇದು ತಾಷ್ಕೆಂಟ್ ಒಪ್ಪಂದದಲ್ಲಿ (1966 ಜನವರಿ 3–10) ರಷ್ಯದ ಅಧ್ಯಕ್ಷ ಕೊಸಿಗಿನ್‌ರ ನೇತೃತ್ವದಲ್ಲಿ ದೀರ್ಘ ಚರ್ಚೆ ನಡೆದು ಇವರು ಹಾಗೂ ಪಾಕಿಸ್ತಾನದ ಅಧ್ಯಕ್ಷ ಜನರಲ್ ಮೊಹಮ್ಮದ್ ಅಯೂಬ್ ಖಾನ್ ಈ ಒಪ್ಪಂದಕ್ಕೆ ಸಹಿ ಹಾಕಿದರು. ಭಾರತ ಹಾಗೂ ಪಾಕಿಸ್ತಾನ ಸೈನ್ಯಗಳು 1965 ಆಗಸ್ಟ್ 5ರ ಹಿಂದೆ ಇದ್ದ ಸ್ಥಳಗಳಿಗೆ ಹಿಂದಿರುಗುವುದು (ಭಾರತ ವಶಪಡಿಸಿಕೊಂಡಿದ್ದ ಪಾಕಿಸ್ತಾನದ ಹಾಜಿಪೀರ್ ಹಾಗೂ ತಿತ್‌ವಾಲ್ ಪ್ರದೇಶಗಳನ್ನು ಬಿಟ್ಟುಕೊಡುವುದು, ಪಾಕಿಸ್ತಾನ ವಶಪಡಿಸಿಕೊಂಡಿದ್ದ ಭಾರತದ ಛಾಂಬ್ ಪ್ರದೇಶ ಬಿಟ್ಟುಕೊಡುವುದು ಈ ಒಪ್ಪಂದದ ತಿರುಳು). ತಾಷ್ಕೆಂಟ್ ಒಪ್ಪಂದದ ಅನಂತರದ ಮುಕ್ತಾಯ ಸಮಾರಂಭದ ಸತ್ಕಾರ ಸ್ವೀಕರಿಸಿದ ಇವರು ಹೃದಯಾಘಾತಕ್ಕೆ ತುತ್ತಾಗಿ ಹಠಾತ್ ನಿಧನ ಹೊಂದಿದರು (1966 ಜನವರಿ 10). ಈ ಸಂದರ್ಭದಲ್ಲಿ ಪಾಕಿಸ್ತಾನದ ಜನರಲ್ ಮೊಹಮ್ಮದ್ ಅಯೂಬ್ ಭಾರತ–ಪಾಕಿಸ್ತಾನದ ಮಧ್ಯೆ ಮೈತ್ರಿಗಾಗಿ ತಮ್ಮ ಬದುಕನ್ನೇ ಬಲಿದಾನ ನೀಡಿದ ಶಾಂತಿ ಪ್ರಿಯ ವ್ಯಕ್ತಿ ಎಂದು ಉದ್ಗರಿಸಿದರು.

ಭಾರತೀಯ ರೈತರ ಹಾಗೂ ಭಾರತೀಯ ಯೋಧರ ಮಹತ್ತ್ವವನ್ನು ಮನಗಂಡಿದ್ದ ಇವರು ಅವರು ದೇಶಕ್ಕೆ ಜೈ ಕಿಸಾನ್, ಜೈ ಜವಾನ್ ಎಂಬ ಘೋಷಣೆಯನ್ನು ನೀಡಿದರು. ಜನಸಾಮಾನ್ಯರ ಸಂವೇದನೆಗಳಿಗೆ ಸ್ಪಂದಿಸಬಲ್ಲ ಜನನಾಯಕರಾಗಿ ಜನರ ಭಾಷೆಯನ್ನು ಬಲ್ಲವರಾಗಿದ್ದರು. ಮಹಾತ್ಮಾಗಾಂಧಿ ಅವರ ರಾಜಕೀಯ ವಿಚಾರಧಾರೆಯಿಂದ ಆಳವಾಗಿ ಪ್ರಭಾವಿತರಾಗಿದ್ದ ಸರಳ, ಪ್ರಾಮಾಣಿಕ ನಾಯಕ. ಪರಿಶ್ರಮ ಪ್ರಾರ್ಥನೆಗೆ ಸಮಾನ ಎಂದು ನಂಬಿದ್ದವರು. ಬಾಪೂ ಅವರ ಹಾದಿಯಲ್ಲೇ ಅತ್ಯುತ್ತಮವೆನಿಸಿದ ಭಾರತೀಯ ಪರಂಪರೆಯ ಮೌಲ್ಯಗಳನ್ನು ನೆರೆನಂಬಿದ್ದವರು. ಇವರು ದೇಶಕ್ಕೆ ಸಲ್ಲಿಸಿದ ನಿಸ್ವಾರ್ಥ ಸೇವೆಗಾಗಿ ಇವರಿಗೆ ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿನೀಡಿ ಗೌರವಿಸಲಾಯಿತು (1966). (ಬಿ.ಪಿ.ಐ.)

**ಲಾಲ್, ಬಿ.ಬಿ.:** 1921– . ವಿಶೇಷವಾಗಿ ಸಿಂಧೂ–ಸರಸ್ವತಿ ಸಂಸ್ಕೃತಿ ಕುರಿತು ಅಧ್ಯಯನ ಮಾಡಿದ ಅಂತಾರಾಷ್ಟ್ರೀಯ ಪ್ರಸಿದ್ಧ ಪುರಾತತ್ತ್ವಜ್ಞ. ರಾಮಾಯಣ–ಮಹಾಭಾರತ ಮಹಾಕಾವ್ಯಗಳ ಚಾರಿತ್ರಿಕತೆಯನ್ನು ಪರಿಶೀಲಿಸುವುದೂ ಇವರ ಆಸಕ್ತಿಯ ವಿಷಯವಾಗಿತ್ತು. ಇವರ ಜನ್ಮಸ್ಥಳ ಝಾನ್ಸಿ. ಅಲಹಾಬಾದ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾ ನಿರ್ದೇಶಕರಾಗಿದ್ದ ಸರ್ ಮಾರ್ಟಿಮರ್ ವೀಲರ್ 1944ರಲ್ಲಿ ನಡೆಸಿದ ಇತಿಹಾಸ ಪ್ರಸಿದ್ಧ ತಕ್ಷಶಿಲೆಯ ಉತ್ಖನನದಲ್ಲಿ ಪುರಾತತ್ತ್ವ ಅನ್ವೇಷಣೆ ಮತ್ತು ಉತ್ಖನನದಲ್ಲಿ ಉತ್ತಮ ತರಬೇತಿ ಪಡೆದವರಲ್ಲಿ ಇವರು ಒಬ್ಬರು. ಅನಂತರ ವೀಲರ್ ಅವರ ಹರಪ್ಪ, ಅರಿಕಮೇಡು, ಬ್ರಹ್ಮಗಿರಿ ಉತ್ಖನನಗಳಲ್ಲಿ ಇವರು ಸಕ್ರಿಯವಾಗಿ ಭಾಗವಹಿಸಿದರು. 27ನೆಯ ವಯಸ್ಸಿನಲ್ಲಿ ಒರಿಸ್ಸದ ಶಿಶುಪಾಲಗಡದಲ್ಲಿ ಸ್ವತಂತ್ರ ಉತ್ಖನನ ನಡೆಸಿ ಅತ್ಯುತ್ತಮ ವರದಿಯನ್ನು ಪ್ರಕಟಿಸಿದರು (1948). 1950–52ರಲ್ಲಿ ಇವರು ಹಸ್ತಿನಾಪುರದಲ್ಲಿ ನಡೆಸಿದ ಉತ್ಖನನ ಕತ್ತಲೆಯುಗವೆಂದು ಕರೆಯಲಾಗುತ್ತಿದ್ದ ಸಿಂಧೂ–ಸರಸ್ವತಿ ಸಂಸ್ಕೃತಿ ಹಾಗೂ ಆದಿಚಾರಿತ್ರಿಕ ಕಾಲದ ನಡುವಿನ ಅವಧಿಯ ಮೇಲೆ ಬೆಳಕು ಚೆಲ್ಲಿತು. 1958ರಲ್ಲಿ ಇವರು ಪಶ್ಚಿಮ ಬಂಗಾಲದ ಬೀರ್‌ಭಾನ್‌ಪುರದಲ್ಲಿ ನಡೆಸಿದ ಉತ್ಖನನದಲ್ಲಿ ಸೂಕ್ಷ್ಮಶಿಲಾಯುಗ ಅವಶೇಷಗಳು ಸ್ತರಕ್ರಮದಲ್ಲಿ ಸಿಕ್ಕವು. 1959ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ದೇಶದ ನಾನಾ ಭಾಗಗಳಿಂದ ಬರುವ ವಿದ್ಯಾರ್ಥಿಗಳಿಗೆ ಪುರಾತತ್ತ್ವ ಕ್ಷೇತ್ರದಲ್ಲಿ ಸಮಗ್ರ ತರಬೇತಿಯನ್ನು ಕೊಡಲು ಸ್ನಾತಕೋತ್ತರ ಪದವಿಯ ಸ್ಕೂಲ್ ಆಫ್ ಆರ್ಕಿಯಾಲಜಿ ಸ್ಥಾಪಿಸುವಲ್ಲಿ ಇವರದು ಪ್ರಮುಖ ಪಾತ್ರ. 1965ರ ವರೆಗೆ ಇವರು ಈ ಸಂಸ್ಥೆಯ ಪ್ರಥಮ ನಿರ್ದೇಶಕರೂ ಆಗಿದ್ದರು. ನೈಲ್ ನದಿಗೆ ಆಸ್ವಾನ್ ಬಳಿ ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗುತ್ತಿದ್ದ ಪ್ರದೇಶದಲ್ಲಿ ಪುರಾತತ್ತ್ವ ಅನ್ವೇಷಣೆ ಮತ್ತು ಉತ್ಖನನವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುನೆಸ್ಕೊ ಆಶ್ರಯದಲ್ಲಿ ನಡೆಸುವ ಕಾರ್ಯದಲ್ಲಿ ಭಾರತದ ಈ ಇಲಾಖೆ ಭಾಗವಹಿಸಿತು (1961). ಸುಬಯ–ಟ್ಯೂಮಸ್ ಪ್ರದೇಶದಲ್ಲಿ ಉತ್ಖನನವನ್ನು ನಡೆಸಿತು. ಇದರ ನೇತೃತ್ವವನ್ನು ಇವರು ವಹಿಸಿ ಇಲಾಖೆಗೆ ಖ್ಯಾತಿ ಬರುವಂತೆ ಮಾಡಿದರು. 1968ರಲ್ಲಿ ಇಲಾಖೆಯ ಮಹಾ ನಿರ್ದೇಶಕರಾದರು. 1972ರ ವರೆಗೂ ಈ ಹುದ್ದೆಯಲ್ಲಿದ್ದರು. ಸ್ವಲ್ಪ ಸಮಯ ಗ್ವಾಲಿಯರ್‌ನಲ್ಲಿ ಜಿವಾಜಿ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತ ಇತಿಹಾಸ, ಸಂಸ್ಕೃತ ಮತ್ತು ಪುರಾತತ್ತ್ವದಲ್ಲಿ ಪ್ರಾಧ್ಯಾಪಕರಾಗಿ ಕೆಲಸಮಾಡಿದರು. ಈ ಸಂದರ್ಭದಲ್ಲಿ ಆರ್ಕಿಯಾಲಜಿ ಆಫ್ ದಿ ರಾಮಾಯಣ ಎಂಬ ರಾಷ್ಟ್ರೀಯ ಯೋಜನೆಯನ್ನು ಕೈಗೊಂಡು, ರಾಮಾಯಣ ಕಾಲದ ಅವಶೇಷಗಳನ್ನು ಪತ್ತೆಮಾಡುವ ಉದ್ದೇಶದಿಂದ ಅಯೋಧ್ಯ, ಶೃಂಗ ವೇರಪುರ, ನಂದಿಗ್ರಾಮ, ಚಿತ್ರಕೂಟ ಮುಂತಾದ ನೆಲೆಗಳಲ್ಲಿ ಉತ್ಖನನ ಮಾಡಿದರು. ರಾಮಾಯಣ ಐತಿಹಾಸಿಕ ಘಟನೆ ಎಂಬುದು ಇವರ ದೃಢ ನಂಬಿಕೆ. 1979ರಲ್ಲಿ ಹರಪ್ಪ ಸಂಸ್ಕೃತಿಯ ನೆಲೆಯಾದ ಕಾಲಿಬಂಗನ್‌ನಲ್ಲಿ ಇವರು ನಡೆಸಿದ ಉತ್ಖನನದಲ್ಲಿ ಪ್ರಪಂಚದಲ್ಲಿಯೇ ಅತಿ ಪ್ರಾಚೀನ ಎಂದೆನಿಸಿಕೊಂಡಿರುವ ಉಳುಮೆ ಜಾಗ (ಪ್ಲೌಡ್ ಫೀಲ್ಡ್) ಬೆಳಕಿಗೆ ಬಂದಿತು. 1977–84ರ ವರೆಗೆ ಸಿಮ್ಲದಲ್ಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನಲ್ಲಿ ಮೊದಲು ಫೆಲೊ ಆಗಿ ಅನಂತರ ಈ ಸಂಸ್ಥೆಯ ನಿರ್ದೇಶಕರೂ ಆದರು. 2001 ಇವರಿಗೆ ಸಂಸ್ಥೆಯ ಗೌರವ ಡಾಕ್ಟೊರೇಟ್ ಪದವಿಯನ್ನು ಕೊಡಮಾಡಿತು.

ವೈದಿಕ ಸಂಸ್ಕೃತಿ ಹಾಗೂ ರಾಮಾಯಣ–ಮಹಾಭಾರತದ ಚಾರಿತ್ರಿಕತೆಯ ಬಗ್ಗೆ ಇವರು ನಡೆಸಿದ ಸಂಶೋಧನೆಗಾಗಿ ಬಂಗಾಲದ ಏಷಿಯಾಟಿಕ್ ಸೊಸೈಟಿ ಇವರಿಗೆ ಎಸ್.ಸಿ.ಚಕ್ರಬರ್ತಿ ಪದಕ ನೀಡಿ ಗೌರವಿಸಿತು (1975). 1979ರಲ್ಲಿ ನವ ನಾಲಂದ ಮಹಾವಿಹಾರ ಇವರಿಗೆ ವಿದ್ಯಾವಾರಿಧಿ ಎಂಬ ಬಿರುದನ್ನು ನೀಡಿತು. ಮಿಥಿಲಾ ವಿಶ್ವವಿದ್ಯಾಲಯದಿಂದ ಮಹಾಮಹೋಪಾಧ್ಯಾಯ ಎಂಬ ಗೌರವ (1982), ಇಂಡಿಯನ್ ಆರ್ಕಿಯಲಾಜಿಕಲ್ ಸೊಸೈಟಿಯ ವಿ.ಎಸ್.ವಾಕಣಕರ್ ಪ್ರಶಸ್ತಿ (1991), ಬೊಂಬಾಯಿಯ ಏಷಿಯಾಟಿಕ್ ಸೊಸೈಟಿಯ

ಗೌರವ ಫೆಲೋಶಿಪ್, ರಷ್ಯದ ಅಕಾಡೆಮಿ ಆಫ್ ಸೈನ್ಸ್‌ನ ಡಿ.ಲಿಟ್. ಪದವಿ ಇವು ಇವರಿಗೆ ಸಂದ ಇತರ ಗೌರವ–ಪ್ರಶಸ್ತಿಗಳು. ಇವರು ರಚಿಸಿದ ಹಲವಾರು ಗ್ರಂಥಗಳಲ್ಲಿ ದಿ ಅರ್ಲಿಯೆಸ್ಟ್ ಸಿವಿಲೈಜೇಷನ್ ಇನ್ ಸೌತ್ ಏಷ್ಯ (1981, ಸಿಂಧೂ–ಸರಸ್ವತಿ ಸಂಸ್ಕೃತಿ) ಪ್ರಸಿದ್ಧವಾದುದು. ಸರಸ್ವತಿ ಫ್ಲೋಸ್ ಆನ್ (2002) ಇವರ ಇನ್ನೊಂದು ಮುಖ್ಯಕೃತಿ. ಸಿಂಧೂ–ಸರಸ್ವತಿ ಸಂಸ್ಕೃತಿಯನ್ನು ಕಟ್ಟಿದ ಜನರ ಬಗ್ಗೆ ಬಿರುಸಿನ ವಾದ–ವಿವಾದಗಳಿದ್ದು ಇವರು ಇಂದಿಗೂ ಈ ಮಹತ್ತ್ವಪೂರ್ಣ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. (ಎ.ಎಸ್.)

**ಲಾಲಾ ಲಜಪತ ರಾಯ್:** 1865–1928. ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಮಾಜಸುಧಾರಕರು. ಇವರು 1865 ಜನವರಿ 28ರಂದು ಪಂಜಾಬಿನ ಫಿರೋಜ್‌ಪುರ ಜಿಲ್ಲೆಯ ಧುಡಿಕೆ ಎಂಬಲ್ಲಿ ಜನಿಸಿದರು. ತಂದೆ ಮುನ್ಷಿ ರಾಧಾಕೃಷ್ಣಆಜಾದ್, ತಾಯಿ ಗುಲಾಬ್‌ದೇವಿ. ಇವರು ಕಾನೂನು ಪದವಿ ಪಡೆದು ಹಿಸ್ಸಾರ್ ಮತ್ತು ಲಾಹೋರ್‌ನಲ್ಲಿ ವಕೀಲ ವೃತ್ತಿ ಆರಂಭಿಸಿದರು. ಆರ್ಯ ಸಮಾಜದಿಂದ ಪ್ರಭಾವಿತರಾದ ಇವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಲಾಹೋರಿನ ಡಿ.ಎ.ವಿ.ಕಾಲೇಜಿನ ಸ್ಥಾಪನೆಯಲ್ಲಿ ಇವರು ಪ್ರಮುಖ ಪಾತ್ರವಹಿಸಿದರು. ಪಾಶ್ಚಾತ್ಯ ರಾಜಕೀಯ ತತ್ತ್ವಗಳು ಹಾಗೂ ಭಾರತದ ಪರಂಪರೆಯ ಇತಿಹಾಸದ ಬಗ್ಗೆ ಪಾಂಡಿತ್ಯ ಪಡೆದರು. 1888ರಲ್ಲಿ ರಾಜಕೀಯ ಕ್ಷೇತ್ರ ಪ್ರವೇಶಿಸಿದರು. ಶ್ರೀಕೃಷ್ಣ, ಶಿವಾಜಿ, ಸ್ವಾಮಿ ದಯಾನಂದ ಸರಸ್ವತಿ, ಜೋಸೆಫ್ ಮ್ಯಾಜಿನಿ ಮತ್ತು ಜೋಸೆಫ್ ಗ್ಯಾರಿಬಾಲ್ಡಿಯವರ ಜೀವನ ಚರಿತ್ರೆಗಳು ಇವರ ಜೀವನದಗತಿಯನ್ನೇ ಪರಿವರ್ತಿಸಿದುವು. ರಾಜಕೀಯದ ಜೊತೆಗೆ ಸಮಾಜಸೇವೆಯಲ್ಲಿ ತಮ್ಮನ್ನು ಸಮರ್ಪಿಸಿ ಕೊಂಡರು. 1907ರಲ್ಲಿ ಕಾಂಗ್ರೆಸ್ಸಿನ ಧೀಮಂತ ನಾಯಕರಾಗಿ ಜನಪ್ರಿಯತೆ ಗಳಿಸಿದರು. ಗೋಪಾಲಕೃಷ್ಣ ಗೋಖಲೆಯವರ ಜೊತೆ ಇಂಗ್ಲೆಂಡಿಗೆ ಭೇಟಿ ನೀಡಿ, ಆಂಗ್ಲ ಸರ್ಕಾರದ ದಬ್ಬಾಳಿಕೆಯ ಬಗ್ಗೆ ಇಂಗ್ಲೆಂಡಿನಲ್ಲಿ ಜನಾಭಿಪ್ರಾಯವನ್ನು ರೂಪಿಸಿದರು.

ಬಾಲಗಂಗಾಧರ ಟಿಳಕರು ಆರಂಭಿಸಿದ ಹೋಮ್‌ರೂಲ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಟಿಳಕರೊಂದಿಗೆ ಇವರನ್ನು ಮಾಂಡಲೆ ಜೈಲಿಗೆ ಕಳುಹಿಸಲಾಯಿತು. ಇವರು ಜೈಲಿನಲ್ಲಿ ಸ್ಟೋರಿ ಆಫ್ ಮೈ ಡೆಪೋರ್ಟೇಷನ್ ಎಂಬ ಗ್ರಂಥ ಬರೆದರು. 1919ರಿಂದ 1920ರವರೆಗೆ ವಿದೇಶ ಪ್ರವಾಸ ಕೈಗೊಂಡರು. ಇವರು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಆರ್ಯ ಸಮಾಜ, ಯಂಗ್ ಇಂಡಿಯ, ಇಂಗ್ಲೆಂಡ್, ಅನ್‌ಹ್ಯಾಪಿ ಇಂಡಿಯ ಎಂಬ ಗ್ರಂಥಗಳನ್ನು ರಚಿಸಿದರು. 1920ರಲ್ಲಿ ಕೋಲ್ಕೊತ್ತದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಶೇಷ ಅಧಿವೇಶನದ ಅಧ್ಯಕ್ಷರಾಗಿದ್ದರು. ಅಸಹಕಾರ ಚಳವಳಿಯಲ್ಲಿ ಇವರು ಬಹು ಮುಖ್ಯಪಾತ್ರ ವಹಿಸಿದ್ದರು. ಆದರೆ ಮಹಾತ್ಮಗಾಂಧಿಯವರು ಅಸಹಕಾರ ಚಳವಳಿ ಹಿಂತೆಗೆದುಕೊಂಡದ್ದನ್ನು ಟೀಕಿಸಿದರು. ಅನಂತರ ಇವರು ಮೋತಿಲಾಲ್‌ನೆಹರು ರೊಂದಿಗೆ ಸ್ವರಾಜ್ಯಪಕ್ಷವನ್ನು ಸ್ಥಾಪಿಸಿದರು.ಆದರೆ ಸ್ವಲ್ಪ ಅವಧಿಯಲ್ಲೇ ಸ್ವರಾಜ್ಯ ಪಕ್ಷದ ಕಾರ್ಯತಂತ್ರದಲ್ಲಿ ತಾತ್ತ್ವಿಕ ಭಿನ್ನಾಭಿಪ್ರಾಯ ತಲೆದೋರಿ, ಮದನ ಮೋಹನ ಮಾಳವೀಯರವರೊಂದಿಗೆ ಇಂಡಿಪೆಂಡೆಂಟ್ ಕಾಂಗ್ರೆಸ್ ಪಕ್ಷ ಸ್ಥಾಪಿಸಿದರು. ಸ್ವಾತಂತ್ರ್ಯ ಚಳವಳಿಯ ಲಾಲ್–ಬಾಲ್–ಪಾಲ್ ಎಂದೇ ಪ್ರಸಿದ್ಧರಾಗಿದ್ದ ಉಗ್ರಗಾಮಿ ನಾಯಕರಲ್ಲಿ ಇವರೂ ಒಬ್ಬರಾಗಿದ್ದರು (ಲಾಲಾ ಲಜಪತ್ ರಾಯ್, ಬಾಲಗಂಗಾಧರ ಟಿಳಕ್, ಬಿಪಿನ್ ಚಂದ್‌ಪಾಲ್).

ಇವರು ಹಿಂದು ಮಹಾಸಭೆಯ ಅಧ್ಯಕ್ಷರಾಗಿದ್ದುದರಿಂದ ಇವರ ಮೇಲೆ ಮುಸ್ಲಿಂ ವಿರೋಧಿ ಎಂಬ ಆರೋಪ ಬಂದಿತು. ಇವರು ಹಿಂದು ಮುಸ್ಲಿಂ ಐಕ್ಯವನ್ನು ಪ್ರತಿಪಾದಿಸುವ ಅನೇಕ ಲೇಖನಗಳನ್ನು ಬರೆದರು. ಇವರು ಭಾರತದ ಕಾರ್ಮಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. 1920ರಲ್ಲಿ ನಡೆದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಪ್ರಥಮ ಅಧಿವೇಶನದ ಅಧ್ಯಕ್ಷರಾಗಿದ್ದರು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮಹಾಧಿವೇಶನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇವರು ಸರ್ವೆಂಟ್ಸ್ ಆಫ್ ಪೀಪಲ್ ಎಂಬ ಜನಸೇವಕ ಸಂಘ ಸ್ಥಾಪಿಸಿದ್ದರು. ಸಾಮಾಜಿಕ ಅನಿಷ್ಟಗಳಾದ ಮೂಢನಂಬಿಕೆ, ಕಂದಾಚಾರ ಹಾಗೂ ಅಸ್ಪೃಶ್ಯತೆಯ ವಿರುದ್ಧ ತೀವ್ರ ಹೋರಾಟ ನಡೆಸಿದರು. ಸ್ವದೇಶಿ ತತ್ತ್ವದ ಪ್ರತಿಪಾದಕರಾದ ಇವರು ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಲಕ್ಷ್ಮೀ ಇನ್ಶೂರೆನ್ಸ್ ಕಂಪನಿಗಳನ್ನು ಸ್ಥಾಪಿಸಿದರು. ಪತ್ರಿಕೋದ್ಯಮಿಯಾಗಿ ಇವರು ದಿ ಪಂಜಾಬ್, ದಿ ವಂದೇ ಮಾತರಂ ಮತ್ತು ದಿ ಪೀಪಲ್ ಎಂಬ ಸಾಪ್ತಾಹಿಕಗಳನ್ನು ಪ್ರಕಟಿಸುತ್ತಿದ್ದರು. ಇವರನ್ನು ಪಂಜಾಬಿನ ಸಿಂಹ, ಪಂಜಾಬಿನ ಕೇಸರಿ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತಿತ್ತು. 1928 ಅಕ್ಟೋಬರ್ 20ರಂದು ಸೈಮನ್ ಆಯೋಗದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಇವರು ಪೊಲೀಸರ ಲಾಠಿ ಏಟಿನಿಂದ ತೀವ್ರವಾಗಿ ಗಾಯಗೊಂಡು 1928 ನವೆಂಬರ್ 17ರಂದು ನಿಧನಹೊಂದಿದರು. ಭಾರತದ ಸೌರವ್ಯೂಹದಿಂದ ಒಂದು ಮಹಾನ್ ತಾರೆ ಕಣ್ಮರೆಯಾಯಿತೆಂದು ಮಹಾತ್ಮ ಗಾಂಧೀಜಿಯವರು ಆಗ ಸಂತಾಪ ವ್ಯಕ್ತಪಡಿಸಿದ್ದರು. (ಬಿ.ಪಿ.ಐ.)

**ಲಾವೊತ್ಸೆ:** ಪ್ರ.ಶ.ಪೂ.ಸು.5ನೆಯ ಶತಮಾನದ ಚೀನ ದೇಶದ ತಾವೋ ಧರ್ಮದ ಸಂಸ್ಥಾಪಕ. ಈತ ಚೌ ಚಕ್ರವರ್ತಿಯ ಆಸ್ಥಾನದಲ್ಲಿ ವರದಿಗಾರನಾಗಿದ್ದ. ಪ್ರಸಿದ್ಧ ತತ್ತ್ವಜ್ಞಾನಿ ಕನ್‌ಫ್ಯೂಷಿಯಸ್‌ನ ಸಮಕಾಲೀನ.

ತಾವೋ ಧರ್ಮದ ತತ್ತ್ವಗಳನ್ನು ನಿರೂಪಿಸುವ ತಾವೋ ತೆ ಚಿಂಗ್ ಎಂಬ ತತ್ತ್ವಗ್ರಂಥ ಈತನ ಕೊಡುಗೆ. ಇದು ಪ್ರ.ಶ.ಪೂ.ಸು.200 ಅಥವಾ 100ರಲ್ಲಿ ಸಂಕಲಿತವಾಗಿ ಪರಿಷ್ಕಾರಗೊಂಡಿತೆಂಬ ಅಭಿಪ್ರಾಯವಿದೆ. ಈ ಗ್ರಂಥದಲ್ಲಿ 81 ಚಿಕ್ಕ ವಿಭಾಗಗಳಿವೆ; ಅರ್ಧಕ್ಕಿಂತ ಹೆಚ್ಚು ಭಾಗ ಪ್ರಾಸಬದ್ಧ ಕವಿತೆಯ ರೂಪದಲ್ಲಿದೆ. ಉಳಿದ ಭಾಗ ಗದ್ಯ ರೂಪದಲ್ಲಿದ್ದು ತಾವೋ ಧರ್ಮಬೋಧೆಯನ್ನೂ ಲೋಕೋಕ್ತಿಗಳನ್ನೂ ಒಳಗೊಂಡಿದೆ. ತಾವೋ ಎಂದರೆ ಮಾರ್ಗ ಎಂದರ್ಥ. ಆಚರಣೆಯ ಸರಿಯಾದ ಮಾರ್ಗ ಎಂದು ಅದರ ಸಾಂಕೇತಿಕ ಅರ್ಥ. ತಾವೋ ಎಂದರೆ ಅದೊಂದು ನಿತ್ಯವಾದ ಮಾರ್ಗ. ಅದನ್ನು ಯಾರೂ ನಿರ್ಮಿಸಿಲ್ಲ. ಅದರಲ್ಲಿ ಎಲ್ಲವೂ ಇದೆ, ಶೂನ್ಯವೂ ಇದೆ. ಎಲ್ಲದರ ಕಾರಣವೂ ಪರಿಣಾಮವೂ ಅದೇ ಆಗಿದೆ. ಒಳ್ಳೆಯ ಮನುಷ್ಯನ ನೈತಿಕ ಸ್ವಭಾವ ಮತ್ತು ಕೃತಿಗಳ ತತ್ತ್ವವೇ ಅದಾಗಿದೆ. ಲಾವೊತ್ಸೆಯ ಉಪದೇಶದ ತಿರುಳು ಈ ಗ್ರಂಥದ 63ನೆಯ ಪ್ರಕರಣದಲ್ಲಿ ಕಂಡುಬರುತ್ತದೆ. ಉದ್ದೇಶಪೂರ್ವಕವಾಗಿ ಯಾವುದೇ ಕೆಲಸ ಮಾಡದಿರುವುದು, ನಿರಾಯಾಸವಾಗಿ ಎಲ್ಲ ಕೆಲಸಗಳನ್ನೂ ಮಾಡುವುದು, ಸ್ವಾದದ ಅರಿವಿಲ್ಲದೇ ರುಚಿನೋಡುವುದು, ದೊಡ್ಡದನ್ನು ಸಣ್ಣದಾಗಿಯೂ ಸಣ್ಣದನ್ನು ದೊಡ್ಡದಾಗಿಯೂ ಪರಿಗಣಿಸುವುದು, ನೋವನ್ನು ದಯೆಯಿಂದ ತುಂಬಿಕೊಡುವುದು–ಇದು ತಾವೋ ಧರ್ಮದ ಮಾರ್ಗ ಎಂದು ಈ ಪ್ರಕರಣದಲ್ಲಿ ಹೇಳಿದೆ. ಈ ಧರ್ಮದ ಮೇಲೆ ಬೌದ್ಧಧರ್ಮದ ಪ್ರಭಾವ ಅಪಾರವಾಗಿದೆ.

ಲಾವೊತ್ಸೆಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇದ್ದಿತೋ ಇಲ್ಲವೋ ನಿರ್ದಿಷ್ಟವಾಗಿ ತಿಳಿಯದು. ಲಾವೊತ್ಸೆಯ ಮರಣಾನಂತರ 500 ವರ್ಷಗಳ ತನಕ ತಾವೋ ಧರ್ಮಕ್ಕೆ ನಿಶ್ಚಿತ ಸ್ವರೂಪ ಬಂದಿರಲಿಲ್ಲ. ಚೀನ ದೇಶದಲ್ಲಿ ಪವಿತ್ರರೆಂದು ಗಣಿಸಲ್ಪಟ್ಟ ತ್ರಿಮೂರ್ತಿಗಳಲ್ಲಿ ಈತನಿಗೆ ದ್ವಿತೀಯ ಸ್ಥಾನವನ್ನು ಕೊಡಲಾಗಿದೆ. (ಡಿ.ಎಚ್.ಕೆ.)

**ಲಿಂಕನ್, ಅಬ್ರಹಾಮ್:** 1809–65. ಅಮೆರಿಕ ಸಂಯುಕ್ತ ಸಂಸ್ಥಾನದ 16ನೆಯ ಅಧ್ಯಕ್ಷ (1861–65) ಹಾಗೂ ರಿಪಬ್ಲಿಕ್ ಪಕ್ಷದ ಪ್ರಥಮ ಅಧ್ಯಕ್ಷ, ಪ್ರಸಿದ್ಧ ಕಾನೂನು ತಜ್ಞ ಮತ್ತು ಬರೆಹಗಾರ. ಗುಲಾಮ ಗಿರಿಯ ವಿರುದ್ಧ ಹೋರಾಡಿದವನು. ಇವನು ಹಾರ್ಡಿನ್ ಕೌಂಟಿಯ ಕೆಂಟುಕಿಯಲ್ಲಿ 1809 ಫೆಬ್ರವರಿ 12ರಂದು ಜನಿಸಿದ. ತಂದೆ ಥಾಮಸ್, ತಾಯಿ ನಾನ್ಸಿ. ಇವರದು ಬಡಗಿ ಕುಟುಂಬ. ಕಡುಬಡತನದಲ್ಲಿ ವಿದ್ಯಾಭ್ಯಾಸ ಮಾಡಿದ ಇವನು ಪುಸ್ತಕಗಳಿಗಾಗಿ ಹತ್ತಾರು ಕಿಮೀ ದೂರ ನಡೆದು ಹೋಗಿ ಪಡೆದುಕೊಳ್ಳುತ್ತಿದ್ದ. ಇವನು ತನ್ನ 19ನೆಯ ವಯಸ್ಸಿನಲ್ಲಿ ವ್ಯಾಪಾರದಲ್ಲಿ ತೊಡಗಿ ದೇಶಪರ್ಯಟನೆ ಮಾಡಿದ. ಆ ಸಮಯದಲ್ಲಿ ಗುಲಾಮರ ಶೋಷಣೆ ಕಂಡು ಅದನ್ನು ನಿರ್ಮೂಲಗೊಳಿಸುವ ಛಲತೊಟ್ಟ. 1832ರಲ್ಲಿ ನಡೆದ ಬ್ಲಾಕ್ ಹಾಕ್ ಯುದ್ಧದಲ್ಲಿ ಭಾಗವಹಿಸಿದ. ಅನಂತರ ಸ್ವಲ್ಪಕಾಲ ಅಂಚೆ ಇಲಾಖೆಯಲ್ಲಿಯೂ ಸೇವೆ ಸಲ್ಲಿಸಿದ. 1834ರಲ್ಲಿ ನಡೆದ ಸಾಮಾನ್ಯ ವಿಧಾನಸಭೆ ಚುನಾವಣೆಯಲ್ಲಿ ಇಲಿನಾಯ್ಸ್ ಕ್ಷೇತ್ರದಿಂದ ಸ್ಪರ್ಧಿಸಿ, ಸತತವಾಗಿ ಮೂರು ಬಾರಿ ಆಯ್ಕೆಗೊಂಡ. ತನ್ನ ಆಡಳಿತಾವಧಿಯಲ್ಲಿಹೊಸ ಆಂದೋಲನವನ್ನುಂಟುಮಾಡಿದನಲ್ಲದೆ, ಆಧುನಿಕ ಅಮೆರಿಕ ನಿರ್ಮಾಣದ ನೀಲಿನಕ್ಷೆ ರೂಪಿಸಿದ. ಅನೇಕ ಅಭಿವೃದ್ಧಿಕಾರ್ಯವನ್ನು ಜಾರಿಗೊಳಿಸಿದ. ಬ್ಯಾಂಕ್ ಉದ್ಯಮದ ಬೆಳವಣಿಗೆ, ಕಾಗದನಾಣ್ಯಗಳಚಲಾವಣೆ, ಕೈಗಾರಿಕೆಗಳ ಸ್ಥಾಪನೆ, ಕಾಲುವೆಗಳು, ವಿಶ್ವವಿದ್ಯಾಲಯಗಳ ಸ್ಥಾಪನೆ, ರೈಲು ಹಾದಿ ಮತ್ತು ಸೇತುವೆಗಳ ನಿರ್ಮಾಣ, ಕಾರ್ಮಿಕ ಸಂಘಟನೆ–ಈ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಿದ. ಫೆಡರಲ್ ಆದಾಯ ತೆರಿಗೆ ನೀತಿ ನಿರ್ಬಂಧ ಗೊಳಿಸಿದ. ಇವನು 1842 ನವೆಂಬರ್ 4ರಂದು ಮೇರಿಟಾಡ್ ಎಂಬಾಕೆಯನ್ನು ವಿವಾಹವಾದ.



1846ರಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಗೆ ಕಾಂಗ್ರೆಸ್ ಸದಸ್ಯನಾಗಿ ಆಯ್ಕೆಗೊಂಡ. ಅನಂತರ ಸ್ವಲ್ಪ ಸಮಯ ವಕೀಲಿವೃತ್ತಿ ಕೈಗೊಂಡ. ಕಾನ್ಸಸ್ ನೆಬ್ರಾಸ್ಕ್ ಮಸೂದೆಯ ವಿರುದ್ಧ ಮತ್ತೆ ರಾಜಕೀಯ ಪ್ರವೇಶಿಸಿದ. ಹೊಸದಾಗಿ ರಚಿಸಲಾದ ರಾಜ್ಯಗಳಲ್ಲಿ ಗುಲಾಮಗಿರಿ ವ್ಯವಸ್ಥೆಯನ್ನು ನಿಷೇಧಿಸಲಾಗಿತ್ತು. ಆದರೆ ಕಾನ್ಸಸ್ ಮತ್ತು ನೆಬ್ರಾಸ್ಕ್ ಪ್ರಾಂತಗಳು ಈ ಮಸೂದೆ ಉಲ್ಲಂಘಿಸಿ ಗುಲಾಮಗಿರಿ ವ್ಯವಸ್ಥೆ ಬೇಕು, ಬೇಡ ಎಂಬುದನ್ನು ನಿರ್ಧರಿಸುವ ಹಕ್ಕನ್ನು ತಾವೇ ಪಡೆದುಕೊಂಡವು. ಈ ಮಸೂದೆಯ ವಿರುದ್ಧ ಇವನು ಹೋರಾಡಿ, ಕಾನ್ಸಸ್ ನೆಬ್ರಾಸ್ಕ್ ಮಸೂದೆಯ ಜನಕನಾದ ಸ್ಟೀಫನ್ ಎ. ಡಗ್ಲಾಸ್‌ನೊಡನೆ ಏಳು ಸಲ ಚರ್ಚಿಸಿ ಗುಲಾಮಗಿರಿ ವ್ಯವಸ್ಥೆಯನ್ನು ರದ್ದುಗೊಳಿಸಿದ. ಗುಲಾಮಗಿರಿ ತೊಡೆದು ಹಾಕಲು ಅನೇಕ ಕಾನೂನುಗಳನ್ನು ಜಾರಿಗೊಳಿಸಿದ. ಗುಲಾಮಗಿರಿ ತೊಲಗಿಸದೇ ರಾಷ್ಟ್ರದ ಪ್ರಗತಿ ಮತ್ತು ಸ್ವಾತಂತ್ರ್ಯ, ಸಮಾನತೆ ಸಾಧಿಸಲು ಸಾಧ್ಯವಿಲ್ಲವೆಂದು ಘೋಷಿಸಿದ. 1860ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕ್ ಪಕ್ಷದಿಂದ ಸ್ಪರ್ಧಿಸಿ ಅಮೆರಿಕದ 16ನೆಯ ಅಧ್ಯಕ್ಷನಾಗಿ ಆಯ್ಕೆಗೊಂಡ. ಇವನು ಅಧ್ಯಕ್ಷನಾಗಿ ರಾಷ್ಟ್ರದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದನಲ್ಲದೆ, ರಾಷ್ಟ್ರದಲ್ಲಿ ಶಾಂತಿಸ್ಥಾಪನೆ ಮಾಡಿದ. ಇವನು ಮತ್ತು ಕುಟುಂಬ ವರ್ಗದವರು 1865 ಏಪ್ರಿಲ್ 14ರಂದು ವಾಷಿಂಗ್‌ಟನ್ನಿನ ನಾಟಕ ಮಂದಿರದಲ್ಲಿ ನಾಟಕ ವೀಕ್ಷಿಸುತ್ತಿದ್ದಾಗ ಜಾನ್‌ವಿಲ್ಕ್ಸ್ ಬೂತ್ ಎಂಬುವನ ಗುಂಡೇಟಿಗೆ ಬಲಿಯಾಗಿ 1865 ಏಪ್ರಿಲ್ 15ರಂದು ನಿಧನಹೊಂದಿದ. (ಎಚ್.ಆರ್.ಡಿ.)

**ಲಿಚ್ಛವಿ ಮನೆತನ:** ಉತ್ತರ ಭಾರತದಲ್ಲಿ ಹಿಮಾಲಯ ಶ್ರೇಣಿಗಳ ತಪ್ಪಲಿನಲ್ಲಿ ವಾಸಿಸುತ್ತಿದ್ದ ಕೆಳಸಮುದಾಯದ ಒಂದು ಕ್ಷತ್ರಿಯ ವಂಶ. ಇದು ಅಂದಿನ ರಾಜಕೀಯದಲ್ಲಿ ಒಂದು ಗಣಪದವನ್ನು ಹೊಂದಿತ್ತು. ಎಂಟು ಅಥವಾ ಒಂಬತ್ತು ಬಣಗಳು ಸೇರಿದ್ದ ವೃಜಿ (ವಜ್ಜಿ) ಒಕ್ಕೂಟದಲ್ಲಿ ವಿದೇಹರು, ಲಿಚ್ಛವಿಗಳು, ಜ್ಞಾತೃಕರು ಹಾಗೂ ವಜ್ಜಿಗಳು ಬಹು ಪ್ರಮುಖರಾಗಿದ್ದರು. ವೈಶಾಲಿ ಲಿಚ್ಛವಿಗಳ ರಾಜಧಾನಿ ಆಗಿತ್ತಲ್ಲದೆ, ಪ್ರಬಲ ವಜ್ಜಿಗಳ ಒಕ್ಕೂಟದ ಕೇಂದ್ರವೂ ಆಗಿತ್ತು. ರಾಮಾಯಣದಲ್ಲಿ ಇದನ್ನು ವಿಶಾಲ ಎಂದು ಹೇಳಲಾಗಿದೆ. ಆಗ ಇದೊಂದು ಶ್ರೇಷ್ಠಪಟ್ಟಣ (ಉತ್ತಮಪುರ) ಆಗಿತ್ತು. ಇಂದಿನ ಬಸರ್ಹ ಊರೇ ವೈಶಾಲಿ ಎಂದು ಗುರುತಿಸಲಾಗುತ್ತಿದೆ. ಇದು ಮುಜಫರಪುರ ಜಿಲ್ಲೆಯಲ್ಲಿದೆ. ಜೈನಧರ್ಮದ ಪ್ರಸಾರಕ 24ನೆಯ ತೀರ್ಥಂಕರ ಮಹಾವೀರ ಹಾಗೂ ಬೌದ್ಧಧರ್ಮದ ಪ್ರವರ್ತಕ ಬುದ್ಧ ಮತ್ತು ಮೌರ್ಯ ಸಾಮ್ರಾಜ್ಯದ ಸಂಸ್ಥಾಪಕ ಚಂದ್ರಗುಪ್ತ ಮೌರ್ಯ ಇವರು ಲಿಚ್ಛವಿ ರಾಣಿಯರಲ್ಲಿ ಜನ್ಮ ಪಡೆದಿದ್ದರು ಎಂಬುದು ಒಂದು ಗಮನಾರ್ಹ ಅಂಶ. ಲಿಚ್ಛವಿಗಳದು ಒಂದು ಸೀಮಿತ ಸದಸ್ಯರ ಸಮುದಾಯದ ಸರ್ಕಾರ. ಇವರು ಆಗಾಗ ಸಭೆಗಳನ್ನು ಸೇರಿ ಆಡಳಿತವನ್ನು ಸದಸ್ಯರ ಮುಖಾಂತರ ನಡೆಸುತ್ತಿದ್ದರು. ಸದ್ಯ ತಿಳಿದಮಟ್ಟಿಗೆ ಲಿಚ್ಛವಿಗಳಲ್ಲಿ ಚೇಟಕ ರಾಜನೇ ಪ್ರಸಿದ್ಧನಾದವನು. ಇವನಿಗೆ ಹಲವು ಮಂದಿ ಕನ್ಯೆಯರಿದ್ದರು. ಅವರಲ್ಲಿ ಚೇಲ್ಲನ (ಚೇಳಿನಿ) ಎಂಬವಳನ್ನು ಮಗಧ ಸಾಮ್ರಾಜ್ಯದ ದೊರೆ ಬಿಂದುಸಾರ ಅಥವಾ ಶ್ರೇಣಿಕನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಬಿಂದುಸಾರನ ಮರಣಾನಂತರ ಆತನ ಪುತ್ರ ಅಜಾತಶತ್ರು ಪಟ್ಟಕ್ಕೆ ಬಂದ. ಇವನಿಗೂ ಚೇಟಕನಿಗೂ ತನ್ನ ಮಲತಮ್ಮಂದಿರಾದ ಹಲ್ಲ ಮತ್ತು ವೇಹಲ್ಲರ ಸಂಬಂಧದಲ್ಲಿ ಘನಘೋರ ಯುದ್ಧವಾಗಿ ಚೇಟಕ ಸೋತ. ಲಿಚ್ಛವಿ ಅಧಿಕಾರಿಗಳಲ್ಲಿ ಕೆಲವರು ಅಜಾತಶತ್ರುವಿನ ಪಕ್ಷಕ್ಕೆ ಹೋದರು. ಲಿಚ್ಛವಿಗಳಲ್ಲಿ ಒಡಕು ಉಂಟಾದದ್ದರಿಂದ ಲಿಚ್ಛವಿ ರಾಜ್ಯದ ಪ್ರದೇಶಗಳು–ಸೀಮಾರೇಖೆಗಳು–ಮಗಧ ಸಾಮ್ರಾಜ್ಯದ ಅಧೀನಕ್ಕೊಳಗಾದವು. ಅಲ್ಲಿಂದ ಮುಂದೆ ಸ್ವತಂತ್ರ ಗಣರಾಜ್ಯವಾಗಿದ್ದ ಲಿಚ್ಛವಿ ರಾಜ್ಯ ಸಾಮಂತ ಮನೆತನವಾಗಿ ಮುಂದುವರಿದು ಬಲಹೀನ ರಾಜ್ಯವಾಗಿ ಬಾಳಿತೆಂದು ತೋರುತ್ತದೆ. ಗುಪ್ತರು ಪ್ರಾಬಲ್ಯಕ್ಕೆ ಬರುವವರೆಗೂ, ಲಿಚ್ಛವಿ ರಾಜ್ಯದ ಹೆಸರು ಅಷ್ಟಾಗಿ ಕೇಳಿ ಬರುವುದಿಲ್ಲ. ಸಮುದ್ರಗುಪ್ತನ ತಾಯಿ ಲಿಚ್ಛವಿ ವಂಶದವಳೆಂದು ಲಿಚ್ಛವಿ ದೌಹಿತ್ರ ಎಂಬ ಅವನ ಬಿರುದಿನಿಂದ ಅಭಿವ್ಯಕ್ತವಾಗುತ್ತದೆ. ಇವನ ತಾಯಿ ಕುಮಾರದೇವಿ ಲಿಚ್ಛವಿ ರಾಜಕುಮಾರಿ. ಗುಪ್ತರ ಕೆಲವು ನಾಣ್ಯಗಳ ಮೇಲೆ ಮುಂಬದಿಯಲ್ಲಿಯ ಆಲೇಖ ಚಂದ್ರಗುಪ್ತ–ಶ್ರೀಕುಮಾರದೇವೀ ಎಂದಿದ್ದರೆ, ಹಿಂಬದಿಯಲ್ಲಿ ಸಿಂಹವಾಹನವೇರಿದ ದೇವಿಯನ್ನೂ (ದುರ್ಗಾ) ಲಿಚ್ಛವಯಃ ಎಂಬ ಆಲೇಖವನ್ನೂ ಬಿಡಿಸಲಾಗಿದೆ. ಪಾಟಲಿಪುತ್ರವನ್ನು ಕುಮಾರದೇವಿಗೆ ಮದುವೆಯ ಬಳುವಳಿಯಾಗಿ ಕೊಡಲಾಯಿತೆಂದು ಕೆಲವು ಇತಿಹಾಸಕಾರರು ಊಹಿಸುತ್ತಾರೆ. ಆದರೆ ಚೀನೀ ಪ್ರವಾಸಿ ಇತ್ಸಿಂಗನ ಪ್ರಕಾರ ಲಿಚ್ಛವಿಗಳ ರಾಜಧಾನಿ ವೈಶಾಲಿ ನಗರವೇ ಮದುವೆಯ ಬಳುವಳಿ ಆಗಿತ್ತೆಂದು ತಿಳಿದುಬರುತ್ತದೆ. ಗುಪ್ತರು ಲಿಚ್ಛವಿ ರಾಜ್ಯದ ಒಡೆಯರಾದರೆನ್ನುವುದರಲ್ಲಿ ಸಂದೇಹವಿಲ್ಲ. ಚೀನದ ಯಾತ್ರಿಕ ಯುವಾನ್‌ಚಾಂಗನ ದಾಖಲೆಗಳಿಂದ ಈ ಪ್ರದೇಶವನ್ನು ಲಿಚ್ಛವಿ ರಾಜ ಶಿವದೇವ ಎಂಬಾತ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಇವನ ಮಂತ್ರಿ ಅಂಶವರ್ಮನ್ ಠಾಕೂರ್ ಎಂಬಾತ ರಾಜನನ್ನು ಬದಿಗೊತ್ತಿ ತಾನೇ ಸು.40 ವರ್ಷ ರಾಜ್ಯವಾಳಿದನೆಂದೂ ತಿಳಿದುಬರುತ್ತದೆ. ಸು.650–879ರ ಮಧ್ಯದಲ್ಲಿ ಲಿಚ್ಛವಿಗಳು ನೇಪಾಲ ದೇಶವನ್ನೂ ಆಳಿದರೆಂದು ತಿಳಿದುಬರುತ್ತದೆ. ಇವರ ಶೃಂಖಲಾಬದ್ಧ ಇತಿಹಾಸ ಸರಿಯಾಗಿ ದೊರೆಯದು. (ಎಸ್.ಜಿ.ಎ.)

**ಲಿಪಿಗಳು:** ಲಿಪಿ ಭಾಷೆಯ ಬರೆಹ ರೂಪ (ಸ್ಕ್ರಿಪ್ಟ್). ಮನುಷ್ಯ ಆಡುವ ಮಾತು ಭಾಷೆಯಾದರೆ, ಆ ಭಾಷೆಯನ್ನು ಹಿಡಿದಿಡುವ ಸಾಧನವೇ ಲಿಪಿ. ಮಾನವ ಗುಂಪುಗುಂಪಾಗಿ ವಾಸಮಾಡುವಾಗ ಬೆಳೆಸಿಕೊಂಡ ಭಾಷೆ, ಬರೆಹ ಮನುಷ್ಯನ ನಾಗರಿಕತೆಯ ಮಾನದಂಡ. ಯಾವುದೇ ಭಾಷೆಯನ್ನು ಯಾವುದೇ ಲಿಪಿಯಲ್ಲಿ ಬರೆಯಬಹುದಾದರೂ ಇದಕ್ಕೆ ಒಂದು ಮಿತಿ ಇದೆ. ಎಷ್ಟೋ ಲಿಪಿಗಳು ತಮ್ಮ ಮೂಲ ಉಚ್ಚಾರವನ್ನು ಕಳೆದುಕೊಂಡು ಗೊಂದಲ ಲಿಪಿಗಳಾಗಿರುವುದುಂಟು. ಉದಾ: ಕೇಶಿರಾಜನ ಕಾಲದ ಱ, ಕುಳ, ಕ್ಷಳ ಗಳನ್ನು ಪರಿಭಾವಿಸಬಹುದು.

ಪ್ರಪಂಚಾದ್ಯಂತ ವರ್ಣಲಿಪಿಮಾಲೆ ಚಾಲ್ತಿಗೆ ಬರುವುದಕ್ಕಿಂತ ಮುಂಚೆ ಚಿತ್ರಲಿಪಿ, ಭಾವಲಿಪಿ, ಮಧ್ಯಮ ಲಿಪಿ (ಟ್ರಾನ್ಸಿಷನಲ್ ಸ್ಕ್ರಿಪ್ಟ್), ಧ್ವನಿ ರೂಪಕ ಲಿಪಿ ಮೊದಲಾದುವು ಬಳಕೆಯಲ್ಲಿದ್ದುವು. ಯಾವುದೇ ಒಂದು ಲಿಪಿಯ ಬದಲಾವಣೆಗೆ ಸಾವಿರಾರು ವರ್ಷಗಳು ಬೇಕಾಗುತ್ತವೆ. ಲ್ಯಾಟಿನ್ ಲಿಪಿಯಲ್ಲಿ ಸ್ವರ ಮತ್ತು ವ್ಯಂಜನಗಳಿಗೆ ಪ್ರತ್ಯೇಕ ಚಿಹ್ನೆಗಳಿದ್ದು ಪೂರ್ಣರೂಪದ ವ್ಯಂಜನಗಳನ್ನು ಹೊಂದಿದೆ. ಹೀಗಾಗಿ ಇದರ ಬರೆವಣಿಗೆ ಸುಲಭ. ಯಾವುದೇ ಭಾಷೆಯನ್ನು ಈ ಲಿಪಿಯಲ್ಲಿ ಬರೆಯಬಹುದು. ಹಾಗೆಯೇ ಭಾರತದ ವರ್ಣಮಾಲೆಯಲ್ಲಿ ವ್ಯಂಜನಗಳು ಸ್ವರಸಮೇತವಾಗಿದ್ದರೂ ಸ್ವರಗಳನ್ನು ವ್ಯಂಜನಗಳಿಂದ ಬೇರ್ಪಡಿಸಬಹುದಾಗಿದೆ.

ಪ್ರಪಂಚದಲ್ಲಿ ಅನೇಕ ಲಿಪಿಗಳನ್ನು ಗುರುತಿಸಬಹುದು: ಅವೆಂದರೆ–ಈಜಿಪ್ಟ್‌ನ ಚಿತ್ರಲಿಪಿ, ಧಾರ್ಮಿಕಲಿಪಿ, ಸಾಮಾನ್ಯಲಿಪಿ, ಮೆಸಪೊಟೇಮಿಯದ ಮೊನಚುಲಿಪಿ, ಕ್ರೀಟ್‌ಲಿಪಿ, ಹಿಟ್ಟೈಟರಲಿಪಿ, ಚೀನಲಿಪಿ, ಸಿಂಧೂಲಿಪಿ, ಮೆಕ್ಸಿಕೋದೇಶದ ಮಾಯಾಲಿಪಿ, ಈಸ್ಟರ್ ದ್ವೀಪಗಳ ಲಿಪಿ, ಜಪಾನಿನ ಲಿಪಿ, ವರ್ಣಲಿಪಿಗಳಲ್ಲಿ–ಬೈಬ್ಲೂಗಳ ತೋರಿಕೆ ಲಿಪಿ, ದಕ್ಷಿಣ ಸೆಮಿಟಿಯ ವರ್ಣಲಿಪಿ, ಹೀಬ್ರುಲಿಪಿ, ಫೊನೀಷಿಯ ಲಿಪಿ, ಪರ್ಷಿಯ ಲಿಪಿ, ಗ್ರೀಕ್‌ಲಿಪಿ, ಅರಾಮಿಯ ಕನಾನೈಟ್ ಲಿಪಿ, ಇಥಿಯೋಪಿಯ ಲಿಪಿ, ಲಿಬಿಯ ಲಿಪಿ, ಐಬೇರಿಯ ಲಿಪಿ, ಭಾರತದಲ್ಲಿ ಬಳಕೆಯಲ್ಲಿದ್ದ ಅಶೋಕನ ಕಾಲದ ಬ್ರಾಹ್ಮಿ ಲಿಪಿ, ಖರೋಷ್ಠಿ, ಅಶೋಕನ ಅನಂತರದ ಲಿಪಿಗಳು–ನಾಗರೀ–ದೇವನಾಗರೀ, ನಂದಿನಾಗರೀ ಲಿಪಿ, ಶಾರದ ಲಿಪಿ, ಬಂಗಾಲಿ ಲಿಪಿ, ಶಂಖಲಿಪಿ. ದಕ್ಷಿಣ ಭಾರತದಲ್ಲಿ ಆಳಿಕೆ ನಡೆಸಿದ ವಿವಿಧ ರಾಜಮನೆತನಗಳು ತಮ್ಮ ಆಡಳಿತಾವಧಿಯಲ್ಲಿ ಬಳಸುತ್ತಿದ್ದ ವಿವಿಧ ಲಿಪಿಗಳು: ಸಾತವಾಹನ, ಕದಂಬ, ಬಾದಾಮಿ ಚಳುಕ್ಯ, ಪಲ್ಲವ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಹೊಯ್ಸಳ, ಸೇವುಣ, ವಿಜಯನಗರ, ವಿಜಯನಗರೋತ್ತರ. ಇತರ ಲಿಪಿಗಳು: ವಟ್ಟೆಳುತ್ತು–ಗ್ರಂಥ, ತಮಿಳು, ಮಲಯಾಳ, ತುಳು, ತಿಗಳಾರಿ, ಅಮರಗನ್ನಡ, ತೆಲುಗು–ಪರ್ಷಿಯ, ಅರಾಮಿಯ, ಉರ್ದು–ಕಲಾತ್ಮಕ ಬರೆವಣಿಗೆ, ಮೋಡಿ ಲಿಪಿ. ಇವುಗಳ ಜೊತೆಗೆ ಇಂದಿನ ಜನತೆ ಬಳಸುತ್ತಿರುವ ಲಿಪಿ ಪ್ರಭೇದಗಳು: ಮುದ್ರಣ ಕಾಲದ ಬರೆವಣಿಗೆ–ಕಾಗದದ ಮೇಲಿನ ಬರೆವಣಿಗೆ, ಸಂಜ್ಞಾಲಿಪಿ, ಬ್ರೈಲ್‌ಲಿಪಿ, ಮಾರ್ಸ್‌ಕೋಡ್, ಶೀಘ್ರಲಿಪಿ ಇತ್ಯಾದಿ.

ಲಿಪಿಗಳ ಚರಿತ್ರೆಯಲ್ಲಿ ಅತಿ ಪ್ರಾಚೀನವಾದುದು ಸುಮೇರಿಯನ್ನರು ಬಳಸಿದ ಲಿಪಿ. ಈ ಲಿಪಿ ಮೊಳೆಯಾಕಾರದಲ್ಲಿದ್ದು ಪ್ರ.ಶ.ಪೂ. 4,000 ವರ್ಷಗಳ ಹಿಂದಿನ ಇವರ ಬರೆವಣಿಗೆಯ ಮುದ್ರೆಗಳು ದೊರೆಯುತ್ತವೆ. ಈ ಚಿತ್ರಗಳು ಭಾವ ಮತ್ತು ಧ್ವನಿ ನಿರೂಪಣೆಗೆ ಬದಲಾಗಿವೆ. ಪ್ರ.ಶ.ಪೂ.6ನೆಯ ಶತಮಾನದ ಕಾಲಕ್ಕೆ ಇದು ವರ್ಣಲಿಪಿಯಾಗಿ ಪರಿವರ್ತಿತ ವಾಯಿತು. ಈ ಲಿಪಿಯನ್ನು ಪರ್ಷಿಯ, ಅಸ್ಸೀರಿಯ, ಬ್ಯಾಬಿಲೋನಿಯ, ಎಲಮೈಟ್ ಕಸ್ಸೈಟ್, ಹಿಟ್ಟೈಟ್ ಮಿಟಾನಿ, ಹುರ್ರಿಯನ್, ಉರರ್ತು ಮುಂತಾದೆಡೆಗಳಲ್ಲಿ ವಾಸಿಸುತ್ತಿದ್ದ ಜನರು ಬಳಸಿದರು. ಹಮುರಬಿ ತನ್ನ ಆಜ್ಞೆಗಳನ್ನು (ಶಾಸನಗಳು) ಈ ಲಿಪಿಯಲ್ಲಿ ಬರೆಸಿದ್ದಾನೆ. ಈಜಿಪ್ಟಿನಲ್ಲಿ ಚಿತ್ರಲಿಪಿ ಬಳಕೆಯಲ್ಲಿತ್ತು. ಇದರ ಅನಂತರ ಭಾರತ, ಚೀನ ಮುಂತಾದ ದೇಶಗಳಲ್ಲಿ ಭಾವಲಿಪಿಗಳಂತಹ ಲಿಪಿಗಳು ಕಾಣಿಸಿಕೊಂಡವು. ಚೀನದ ಲಿಪಿಗಳು ಇಂದಿಗೂ ಅರೆವರ್ಣ, ಅರೆಭಾವ ಲಿಪಿಗಳಾಗಿ ಬಳಕೆಯಾಗುತ್ತಿವೆ.

ಲಿಪಿಗಳನ್ನು ನಾಲ್ಕು ರೀತಿಗಳಲ್ಲಿ ಬರೆಯುವ ಕ್ರಮವಿದೆ: 1. ಬಲದಿಂದ ಎಡಕ್ಕೆ: ಅರಾಮಿಯ, ಫೊನೀಷಿಯ, ಮಧ್ಯಪ್ರಾಚ್ಯದಲ್ಲಿರುವ ಎಲ್ಲಾ ಲಿಪಿಗಳು ಈ ವರ್ಗದವು. ಬ್ರಾಹ್ಮಿಲಿಪಿಯನ್ನು ಮೂಲದಲ್ಲಿ ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತೆಂಬ ಅಭಿಪ್ರಾಯವಿದೆ. ಅನಂತರದ ಕಾಲದಲ್ಲಿ ಎಡದಿಂದ ಬಲಕ್ಕೆ ಬರೆಯಲಾಗಿತ್ತು, ಯುರೋಪಿಯನ್ ಲಿಪಿಗೆ ಮೂಲವಾದ ಗ್ರೀಕ್ ಲಿಪಿಯನ್ನೂ ಎಡದಿಂದ ಬಲಕ್ಕೆ ಬರೆಯಲಾಗುತ್ತದೆ. 2. ಕೆಳಗಿನಿಂದ ಮೇಲಕ್ಕೆ ಬರೆದ ಶಾಸನಗಳು ಅತಿ ವಿರಳ. ಕೃಷ್ಣಾ ಜಿಲ್ಲೆಯ ದಿವಿ ತಾಲ್ಲೂಕು ಲಕ್ಷ್ಮೀಪುರದ ಶಾಸನ, ತಾಳಗುಂದದ ಶಾಂತಿವರ್ಮನ ಶಾಸನ. ಮೇಲಿನಿಂದ ಕೆಳಕ್ಕೆ: ಚೀನಲಿಪಿ ಮತ್ತು ಅದರಿಂದ ಹುಟ್ಟಿದ ಲಿಪಿಗಳು. ಪ್ರಸ್ತುತದಲ್ಲಿ ಕೆಳಗಿನಿಂದ ಮೇಲಕ್ಕೆ ಬರೆಯುವ ಲಿಪಿ ಬಳಕೆಯಲ್ಲಿಲ್ಲ. ಈಜಿಪ್ಟಿನ ಚಿತ್ರಲಿಪಿಯನ್ನು ಬಲದಿಂದ ಎಡಕ್ಕೂ ಮೇಲಿನಿಂದ ಕೆಳಕ್ಕೂ ಬರೆಯುವ ಕ್ರಮವಿತ್ತು.

**ಲಿಪಿಯ ಹುಟ್ಟು ಮತ್ತು ಬೆಳೆವಣಿಗೆ**




ಭಾರತದಲ್ಲಿ ಬರೆವಣಿಗೆಯ ಉಗಮವನ್ನು ಕುರಿತ ಕೆಲವು ಪ್ರತಿಪಾದನೆಗಳಿವೆ. ಅನೇಕ ಗ್ರೀಕ್ ವಿದ್ವಾಂಸರು, ಪ್ರವಾಸಿಗರು ಮೊದಲಾದವರಿಂದ ಭಾರತದ ಲಿಪಿ ಇತಿಹಾಸಕ್ಕೆ ಅನೇಕ ಕೊಡುಗೆಗಳಿವೆ. ಜೊತೆಗೆ ಬೌದ್ಧ, ಜೈನ ಧಾರ್ಮಿಕ ಗ್ರಂಥಗಳಲ್ಲೂ ಬರೆವಣಿಗೆಯ ಪ್ರಾಚೀನತೆಯನ್ನು ಗುರುತಿಸಬಹುದು. ಭಾರತದಲ್ಲಿ ಲಿಪಿಯ ಪ್ರಾಚೀನತೆ ಪ್ರ.ಶ.ಪೂ.ಸು. 2500ರಷ್ಟು ಹಿಂದಿನದು. ಹರಪ್ಪ ಸಂಸ್ಕೃತಿಯ ಅವಶೇಷಗಳಲ್ಲಿ ಬರೆವಣಿಗೆಯನ್ನೊಳಗೊಂಡ ಸಾವಿರಾರು ಸ್ಟಿಯಟೈಟಿನ ಮುದ್ರೆಗಳು, ಲಿಖಿತ ತಾಮ್ರದ ಬಿಲ್ಲೆಗಳು ದೊರಕಿವೆ. ಆದರೆ ಆ ಬರೆವಣಿಗೆಯ ಲಿಪಿಯನ್ನು ಓದಲು ಪೂರ್ಣವಾಗಿ ಸಾಧ್ಯವಾಗಿಲ್ಲ. ಪ್ರಯತ್ನಗಳು ನಿರಂತರವಾಗಿ ನಡೆದಿವೆ.

ಹೀಗಾಗಿ ಭಾರತದಲ್ಲಿ ಲಿಪಿ ಯಾವಾಗ ಹೇಗೆ ಪ್ರಾರಂಭವಾಯಿತೆಂಬುದು ಇನ್ನೂ ನಿಖರವಾಗಿ ತಿಳಿದಿಲ್ಲ. ಪಾಣಿನಿಯ ಅಷ್ಟಾಧ್ಯಾಯಿ ಗ್ರಂಥದ ಆಧಾರದಿಂದ, ಜರ್ಮನಿಯ ಮ್ಯಾಕ್ಸ್ ಮುಲ್ಲರ್ ಭಾರತದಲ್ಲಿ ಲಿಪಿಯ ಉಗಮ ಪ್ರ.ಶ.ಪೂ.4ನೆಯ ಶತಮಾನದಲ್ಲಾಯಿತು ಎಂದಿದ್ದಾನೆ. ಬರ್ನೆಲ್ ಎಂಬಾತ ಭಾರತದಲ್ಲಿ ಬರೆವಣಿಗೆ 4ನೆಯ ಶತಮಾನದಲ್ಲಿ ಫೊನೀಷಿಯನ್ ಲಿಪಿಯಿಂದ ಉಗಮವಾಗಿರಬೇಕೆಂದು ಊಹಿಸಿದ್ದಾನೆ. ಭಾರತದಲ್ಲಿ ಲಿಪಿ ಪ್ರ.ಶ.ಪೂ. 4ನೆಯ ಶತಮಾನ ಅಥವಾ ಅದಕ್ಕಿಂತಲೂ ಮುಂಚೆಯೆ ಇದ್ದಿತ್ತೆಂದು ಹಾಗೂ ಭಾರತೀಯರಿಗೆ ಲಿಪಿ ಪರಿಚಯ ಸೆಮಿಟಿಕ್ ಲಿಪಿಯಿಂದಾಯಿತೆಂದು ಜಾರ್ಜ್‌ಬ್ಯೂಲರ್ ಅಭಿಪ್ರಾಯಪಟ್ಟಿದ್ದಾನೆ.

ಭಾರತದಲ್ಲಿ ಲಿಪಿಯ ಪ್ರಾಚೀನತೆಯ ಬಗ್ಗೆ ತಿಳಿಯಲು ಸಾಹಿತ್ಯಾಧಾರಗಳು–(ಸ್ವದೇಶಿ ಮತ್ತು ವಿದೇಶಿ), ಶಾಸನಾಧಾರಗಳು (ಪುರಾತತ್ತ್ವಾಧಾರಗಳು) ಮುಖ್ಯವಾಗಿವೆ.

**ಸಾಹಿತ್ಯಾಧಾರಗಳು:** ವೇದಕಾಲದಲ್ಲಿ ಲೇಖನಕಲೆ ಪ್ರಚಲಿತವಾಗಿತ್ತೆಂಬು ದಕ್ಕೆ ಬಹಳಷ್ಟು ಪುರಾವೆಗಳಿವೆ. ಆರ್ಯರು ಕೇವಲ ಕಂಠಪಾಠವನ್ನು ಅವಲಂಬಿಸದೆ ಲಿಪಿಯ ಸಹಾಯವನ್ನು ಪಡೆದುಕೊಂಡಿದ್ದರು. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಲಿಪಿ ಮತ್ತು ಲಿಪಿಕಾರ ಎಂಬ ಮಾತುಗಳು ಮೊತ್ತಮೊದಲಬಾರಿಗೆ ಕಾಣಿಸಿಕೊಳ್ಳುತ್ತವೆ. ಕೌಟಿಲ್ಯನ ಕಾಲದ ಸಮಾಜದಲ್ಲಿ ಬರೆವಣಿಗೆಗಿದ್ದ ಪ್ರಾಶಸ್ತ್ಯದ ಮೇಲೆ ಅವನ ಅರ್ಥಶಾಸ್ತ್ರ ಬೆಳಕು ಚೆಲ್ಲುತ್ತದೆ. ಬೌದ್ಧಗ್ರಂಥಗಳಲ್ಲಿಯೂ ಲೇಖ, ಲೇಖನ ಎಂಬ ಪದಗಳ ಪ್ರಯೋಗ ವಿಶೇಷವಾಗಿದ್ದು, ಆ ಕಾಲದ ಗ್ರಂಥಗಳು ಲೇಖನ ಕಲೆಗಿದ್ದ ಪ್ರಾಮುಖ್ಯವನ್ನು ತಿಳಿಸುತ್ತವೆ. ಪ್ರ.ಶ.ಪೂ. 4ನೆಯ ಶತಮಾನದ ಭಾರತೀಯರು ಲಿಪಿಯನ್ನು ಚೆನ್ನಾಗಿ ತಿಳಿದಿದ್ದುದರ ಜೊತೆಗೆ ಅದನ್ನು ಬಳಸುತ್ತಿದ್ದರೆಂಬ ವಿಚಾರ ನರ್ಚಸ್ ಮತ್ತು ಕರ್ಟಸ್ ಎಂಬ ಗ್ರೀಕ್ ಚರಿತ್ರೆಕಾರರ ಬರೆವಣಿಗೆಗಳಿಂದ ತಿಳಿದುಬರುತ್ತದೆ.

ಶಾಸನ ಆಧಾರಗಳು: ಅಶೋಕನ ಶಾಸನಗಳಿಗಿಂತಲೂ ಹಿಂದಿನ ಕೆಲವು ಶಾಸನಗಳು, ಉದಾಹರಣೆಗೆ ಪ್ರ.ಶ.ಪೂ. 483 ಕಾಲದ್ದು ಎಂದು ಗುರುತಿಸಲಾದ ಬಾಡ್ಲಿಶಾಸನ (ಅಜ್ಮೀರ್ ಜಿಲ್ಲೆ, ರಾಜಸ್ತಾನ) ದೊರೆತಿರುವುದರಿಂದ ಭಾರತದಲ್ಲಿ ಬರೆವಣಿಗೆ ಪ್ರ.ಶ.ಪೂ.5ನೆಯ ಶತಮಾನದಷ್ಟು ಪುರಾತನದ್ದೆಂದು ಹೇಳಬಹುದು. ಪ್ರ.ಶ.ಪೂ.3ನೆಯ ಶತಮಾನದ ಅಶೋಕನ ಶಾಸನಗಳು ಬ್ರಾಹ್ಮಿ, ಖರೋಷ್ಠಿ ಎಂಬ ಎರಡು ಲಿಪಿಗಳಲ್ಲಿ ವಿವಿಧ ಸಾಮಗ್ರಿಗಳ ಮೇಲೆ ಕಾಣಿಸಿಕೊಂಡಿವೆ. ಈ ಶಾಸನಗಳಲ್ಲಿ ಕಂಡುಬರುವ ಬ್ರಾಹ್ಮಿ ಲಿಪಿಯನ್ನು ಪರಿಶೀಲಿಸಿದರೆ ಅದು ಹಿಂದಿನಿಂದಲೂ ಬೆಳೆದು ಬಂದು ಪರಿಪೂರ್ಣಾವಸ್ಥೆಯನ್ನು ಮುಟ್ಟಿತ್ತೆಂದು ತೋರುತ್ತದೆ.

**ಸಿಂಧೂ–ಸರಸ್ವತಿ ಲಿಪಿ:** ಸಿಂಧೂ–ಸರಸ್ವತಿ ಲಿಪಿಯನ್ನು ಓದಲು ಅನೇಕರು ಪ್ರಯತ್ನಪಟ್ಟಿದ್ದಾರೆ. ಆದರೆ ರೋಸೆಟ ಫಲಕದಂತೆ ದ್ವಿಭಾಷಾ ಶಾಸನಗಳು ದೊರಕದ ಕಾರಣ ಈ ಲಿಪಿಯನ್ನು ಸರಿಯಾಗಿ ಅರ್ಥೈಯಿಸಿ ಓದಲು ಇದುವರೆಗೆ ಸಾಧ್ಯವಾಗಿಲ್ಲ. ಲಿಪಿಯನ್ನು ಓದುವ ಪ್ರಯತ್ನಗಳು ಇನ್ನೂ ನಡೆದಿವೆ. ಈ ಎಲ್ಲ ಪ್ರಯತ್ನಗಳು ಯಶಸ್ವಿಯಾಗದೇ ಇದ್ದರೂ ಎಲ್ಲ ವಿದ್ವಾಂಸರ ಅವಿರತ ಪ್ರಯತ್ನಗಳಿಂದ ಸಿಂಧೂ ಲಿಪಿಯ ಬಗ್ಗೆ ಕೆಲವು ಅಂಶಗಳನ್ನು ತಕ್ಕಮಟ್ಟಿಗೆ ಅರಿಯಬಹುದಾಗಿದೆ. ಸಿಂಧೂ ಲಿಪಿಯನ್ನು ಓದುವ ಪ್ರಪ್ರಥಮ ಪ್ರಯತ್ನ ಸ್ಮಿತ್ ಮತ್ತು ಗಡ್ ಎಂಬ ವಿದ್ವಾಂಸರು ಪ್ರಾರಂಭಿಸಿದರು. ಅನಂತರದಲ್ಲಿ ಹಂಟರ್ ರಾಸ್, ಹೆರಾಸ್, ಫಿನ್ಸ್ (ಫಿನ್‌ಲೆಂಡ್ ವಿದ್ವಾಂಸರು), ರಷ್ಯದ ಅಲೆಕಸೀವ್, ಗುರೋವ್, ನೊರೊಜೋವ್, ಭಾರತದ ಐರಾವತಮ್ ಮಹದೇವನ್, ಫೇರ್‌ಸರ್ವಿಸ್ ಮತ್ತಿತರರು ಮುಂದುವರಿಸಿದ್ದು ಸಿಂಧೂ ಲಿಪಿಯನ್ನು ತಕ್ಕಮಟ್ಟಿಗೆ ಅರ್ಥಮಾಡಿಕೊಳ್ಳಬಹುದಾಗಿದೆ. ನಟವರ್‌ಝಾ 20 ವರ್ಷಗಳಿಂದ ಈ ಲಿಪಿಯನ್ನು ಅಧ್ಯಯನ ಮಾಡಿ ಮುದ್ರಿಕೆಗಳನ್ನು ಓದಿ ಈ ಲಿಪಿ ಆದಿ ಬ್ರಾಹ್ಮಿ ಎಂದು ಗುರುತಿಸಿದ್ದಾರೆ. ಇದು ಫೊನೀಷಿಯ ಲಿಪಿಗಿಂತ 1,000 ವರ್ಷಗಳಷ್ಟು ಹಳೆಯದು.

ಮುದ್ರಿಕೆ

ಒಂದೆರಡು ಸಾಲಿನ ಬರೆವಣಿಗೆಗಳ ಲಿಪಿಗಳು ಸಾಮಾನ್ಯವಾಗಿದ್ದು ಇವು ವಿವಿಧ ವಸ್ತುಗಳ ಮೇಲೆ, ಹೆಚ್ಚಾಗಿ ಮುದ್ರಿಕೆಗಳು ಮತ್ತು ತಾಮ್ರದ ಬಿಲ್ಲೆಗಳ ಮೇಲೆ ಅಧಿಕವಾಗಿವೆ. ಆದರೆ ಇದುವರೆಗೆ ಚಿತ್ರ ಸಹಿತ/ರಹಿತ ದುಂಡು ಹಾಗೂ ಚೌಕೋನ ಲಿಪಿ ಮುದ್ರಿಕೆ, ಬಿಲ್ಲೆಗಳನ್ನು ಬಿಟ್ಟರೆ ಮಧ್ಯಮ ಹಾಗೂ ದೊಡ್ಡ ಪ್ರಮಾಣದ ಹತ್ತಾರು ಸಾಲುಗಳ ಬರೆವಣಿಗೆ ಯುಳ್ಳ ಯಾವುದೇ ಫಲಕಗಳು ಸಿಗದಿರುವುದು ಒಗಟಾಗಿದೆ. ಮುದ್ರಿಕೆಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳ ಚಿತ್ರಗಳಿರುತ್ತವೆ. ಸರಳ ಹಾಗೂ ಅಚ್ಚುಕಟ್ಟಾಗಿ ಬರೆದಿರುವ ಮನುಷ್ಯ, ಮೀನು, ಬೆಟ್ಟ ಮತ್ತು ಮರದ ಆಕೃತಿಯಲ್ಲಿ ಸುಮಾರು ಐದು ಚಿಹ್ನೆಗಳಿರುವುದು ಗೋಚರಿಸಿದೆ. ಇಲ್ಲಿಯವರೆಗೆ 3000ಕ್ಕೂ ಅಧಿಕ ಮುದ್ರೆಗಳು ಲಭಿಸಿದ್ದು (ಈಗ 5000ಕ್ಕೂ ಹೆಚ್ಚು ಸಿಕ್ಕಿವೆ) ಇವುಗಳಲ್ಲಿ 1100ಕ್ಕೂ ಅಧಿಕ ಮುದ್ರೆಗಳಲ್ಲಿ ವಿವಿಧ ಪ್ರಾಣಿಗಳ ಚಿತ್ರಗಳನ್ನು ಗುರುತಿಸಲಾಗಿದೆ. ಸಾಮಾನ್ಯವಾಗಿ ಬರೆವಣಿಗೆಗಳಲ್ಲಿ ಕೆಲವು ಮೂಲ ಚಿಹ್ನೆಗಳಿದ್ದು ಅವುಗಳಿಗೆ ಸೇರಿಸಿದ ಆಂತರಿಕ ಮತ್ತು ಬಾಹ್ಯ ಗೆರೆಗಳು ಹಾಗೂ ಕೆಲವೊಮ್ಮೆ ಅವೆರಡೂ ಮಿಶ್ರವಾಗಿರುವುದು ಗೋಚರಿಸಿದೆ.

ಮೆರಿಗ್ಗಿ ಅವರು ಈ ಲಿಪಿ ಭಾವಸೂಚಕವೆಂದರೆ, ಹಂಬರ್ ಮತ್ತು ವ್ಯಾಂಗಡನ್ ಅವರು ಈ ಲಿಪಿಗೆ ಬ್ರಾಹ್ಮಿ ಲಿಪಿಯೊಂದಿಗೆ ಸಂಬಂಧವನ್ನು ಸೂಚಿಸುತ್ತಾರೆ. ಡಿರಿಂಜರ್ ಅವರು ಸಿಂಧೂ ಲಿಪಿ ಅಕ್ಷರವಲ್ಲ, ಉಚ್ಚಾರಾಂಶದ ಶಬ್ದಗಳೂ ಅಲ್ಲ, ಅವು ಸೂಚಕಗಳು ಎಂಬ ಅಭಿಪ್ರಾಯ ನೀಡಿದ್ದಾರೆ. ಇವು ಭಾಗಶಃ ಭಾವಸೂಚಕ ಮತ್ತು ಭಾಷಾಧ್ವನಿ ಸೂಚಕ ಎಂಬುದು ಇವರ ವಾದ. ಬ್ರಿಹ್ನೋಜಿ ಅವರು ಈ ಲಿಪಿಯನ್ನು ಹಿಟೈಟ್ ಲಿಪಿಯೊಂದಿಗೆ ಹೋಲಿಸುತ್ತಾರೆ. ಇವುಗಳು ದ್ರಾವಿಡ ಭಾಷಾ ಚಿಹ್ನೆಗಳೆಂದು ಫಾದರ್ ಹೆರಾಸ್, ಮಾರ್ಷಲ್ ಮೊದಲಾದ ವಿದ್ವಾಂಸರು ಗುರುತಿಸಿ ಎಡದಿಂದ ಬಲಕ್ಕೆ ಓದುವ ಪ್ರಯತ್ನ ಮಾಡಿದ್ದಾರೆ. ಎಲ್.ಎ.ವಾಡೆಲ್ಲರು ಈ ಲಿಪಿಯನ್ನು ಸುಮೇರಿಯನ್ನರು ಬಳಕೆಗೆ ತಂದರೆಂದು ತಿಳಿಸಿ ಅಲ್ಲಿಯ ಮುದ್ರೆಗಳಲ್ಲಿ ಆರ್ಯರ ರಾಜಧಾನಿಗಳ ಹೆಸರುಗಳನ್ನು ಗುರುತಿಸುವ ಪ್ರಯತ್ನ ನಡೆಸಿದ್ದಾರೆ. ಪ್ರಾಣನಾಥರು ವಾಡೆಲ್ಲರ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ. ಪ್ರಾಚೀನ ಲಿಪಿಗಳಲ್ಲಿಯ ಚಿತ್ರಗಳಲ್ಲೂ ಸಾಮ್ಯತೆಯಿರುವುದರಿಂದ ಯಾರಿಂದ ಯಾರು ಪ್ರಭಾವಿತರಾಗಿರಬಹುದೆಂದು ನಿರ್ಧರಿಸುವಲ್ಲಿ ತೊಡಕುಗಳಿವೆ. ಇದು ಆರ್ಯರ ಭಾಷೆಯಾಗಿದ್ದು ಈಜಿಪ್ಟ್ ಮತ್ತು ಸುಮೇರಿಯನ್ ಭಾಷೆಗಳೊಂದಿಗೆ ಇದಕ್ಕೆ ಸಂಬಂಧವಿತ್ತೆಂದೂ ಪ್ರಾಚೀನ ಈಜಿಪ್ಟ್‌ನ ಭಾಷೆ ಪ್ರಾಕೃತ–ಸಂಸ್ಕೃತವೆಂದೂ ಪ್ರಾಣನಾಥರು ಅಭಿಪ್ರಾಯಪಟ್ಟಿದ್ದಾರೆ.

ಮುದ್ರಿಕೆಗಳಲ್ಲಿ ಒಂಟಿಕೊಂಬಿನ ಪ್ರಾಣಿಯ ಮುಂದೆ ಧೂಪ ಉರಿಸುವ ಪಾತ್ರೆಯಿದ್ದು ಸಿಂಧೂ ನಾಗರಿಕತೆಯಲ್ಲಿ ಇದು ಒಂದೇ ರೀತಿಯ ಪ್ರಾಣಿಯನ್ನು ಹೊಂದಿರುವ ಚಿತ್ರಲಿಪಿಯ ಕಲೆಯಾಯಿತೆಂದು ಎಲಿಸಬೆತ್ ಅವರು ತಮ್ಮ ವಾದವನ್ನು ಮಂಡಿಸಿದ್ದಾರೆ. ಸಿಂಧೂ ಲಿಪಿಯ ಭಾಷೆ ಸಂಸ್ಕೃತವೆಂದು ಕೆಲವರು ಅಭಿಪ್ರಾಯಪಟ್ಟರೆ ಪ್ರಾಣನಾಥ ರೇ, ಕೃಷ್ಣರಾವ್,

ಫತೇಸಿಂಗ್, ಕರಮಕರ್, ಗಡ್ ಮತ್ತು ಪರಣವಿತನರು ಇದು ವೇದಕಾಲದ ಭಾಷೆ ಎಂದು ಕರೆದಿದ್ದಾರೆ. ಇವು ತಾಂತ್ರಿಕ ಪಂಥಗಳಿಗೆ ಸೇರಿದ ಚಿಹ್ನೆಗಳೆಂದು ಶಂಕರಾನಂದ, ಬರುವ, ಪ್ರಾಣನಾಥ ರೇ ವರ್ಗೀಕರಿಸಿದ್ದಾರೆ. ಪೂರ್ವ ದ್ವೀಪದ ಲಿಪಿಯೆಂದು ಹೆವಿಸಿ, ಹೈನ್ ಗೆಲ್‌ಡರ್ನ್ ಮತ್ತು ಬಿಲಮೋರಿಯಾ ಹೆಸರಿಸಿದರೆ ಈಜಿಪ್ಟಿನ ಲಿಪಿಯೆಂದು ಪೆಟ್ರಿಯವರು ಕರೆದಿದ್ದಾರೆ. ಹರಪ್ಪ ಅಥವಾ ಸಿಂಧೂ ನಾಗರಿಕತೆಯ ಜನರ ಮುಖ್ಯಸ್ಥರು ಋಗ್ವೇದ ಉಲ್ಲೇಖಿಸುವ ಅಸುರರು ಎಂದೂ ಇವರು ಪೂರ್ವ ಎಲಮೈಟ್ಸ್, ಈಜಿಪ್ಟ್ ಮತ್ತು ಸುಮೇರಿಯನ್ನರಿಂದ ಲಿಪಿಯನ್ನು ಪಡೆದರು ಎಂದೂ ವಾದಗಳಿವೆ. ಆದರೆ ಇವು ಆಧಾರಗಳಿಲ್ಲದ ಊಹೆಗಳಾಗಿದ್ದು ಕಾಲಾನುಕ್ರಮಣಿಕೆ ಮತ್ತು ಭಾಷಾ ರಚನೆಯ ಸಿದ್ಧಾಂತಗಳನ್ನು ಅನುಸರಿಸದ ಕಾಲ್ಪನಿಕವೆಂದು ಜೈಡ್ ವೀಲರ್ ಮತ್ತು ಮೆಟ್ರಾಕ್ಸ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಎಸ್.ಆರ್.ರಾವ್, ಕೃಷ್ಣರಾವ್ ಮತ್ತು ಫತೇಸಿಂಗ್ ಮೊದಲಾದವರು ಈ ಲಿಪಿಯನ್ನು ಓದುವ ಪ್ರಯತ್ನವನ್ನು ನಡೆಸಿ ಈ ಲಿಪಿಯ ಭಾಷೆ ಸಂಸ್ಕೃತ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಫಿನ್ಲೆಂಡ್ (ಫಿನಿಷ್) ವಿದ್ವಾಂಸರಾದ ಆಸ್ಕೊ ಪರ್ಪೊಲ, ಕೊಸ್‌ಕೆನ್ನಿಮಿ ಮತ್ತು ರಷ್ಯದ ನೊರೊಜೋವ್, ಗುರೋವ್, ವೋಲ್‌ಚೋಕ್ ಮತ್ತಿತರರು ಸಿಂಧೂ ಲಿಪಿಯಲ್ಲಿ ಆದಿ ದ್ರಾವಿಡ ಗುಂಪಿಗೆ ಸೇರಿದ ಭಾಷೆಯನ್ನು ಬಳಸಲಾಗಿದೆ ಎನ್ನುತ್ತಾರೆ. ಐರಾವತಮ್ ಮಹದೇವನ್ ಅವರು ಈ ಲಿಪಿ ಸ್ವತಂತ್ರವಾಗಿ ಬೆಳೆದುಬಂದಿದ್ದು ಈ ಮುದ್ರಿಕೆ ದ್ರಾವಿಡ ಭಾಷೆಯೆಂದು ಗುರುತಿಸಿದ್ದಾರೆ. ಪ್ರಸ್ತುತ ವಾದವನ್ನು ಪುಷ್ಟೀಕರಿಸುವಂತೆ ಮಧಿವಣನ್ ಮೊದಲಾದ ಕೆಲವು ವಿದ್ವಾಂಸರು ಈ ಲಿಪಿ ಪ್ರಾಚೀನ ತಮಿಳು ಎಂಬುದಾಗಿ ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ರಷ್ಯ ವಿದ್ವಾಂಸರು ಸಿಂಧೂ ಲಿಪಿಯ ಕೆಲವು ಬಿಡಿ ಸಂಕೇತಗಳು ಪದಗಳಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಂಯುಕ್ತಾಕ್ಷರಗಳ ಪದಗಳು ದ್ರಾವಿಡ ಭಾಷೆಗಳಲ್ಲಿ ಮಾತ್ರವೇ ಕಂಡುಬರುವುದೆಂದು ವಿವರಿಸಿದ್ದಾರೆ. ಮುಂದುವರಿದು ಈ ಕಿರುಶಾಸನಗಳಲ್ಲಿ ದೇವತೆ ಮತ್ತು ನಕ್ಷತ್ರ ಪುಂಜಗಳ ಹೆಸರಿರುವ ದೇವತೆ, ಮುದ್ರೆಯ ಮಾಲೀಕರ ಮತ್ತು ವಿವರ ನೀಡುವ ಧಾರ್ಮಿಕ ಹಾಗೂ ರಕ್ಷಣಾ ಮತ್ತು ದೇವಾಲಯ ಇಲ್ಲವೆ ಸಾಂದರ್ಭಿಕ ಶಾಸನಗಳೆಂದು ವರ್ಗೀಕರಿಸಲಾಗಿದೆ. ಲಾಲ್‌ರವರು ಮೇಲೆ ಉಲ್ಲೇಖಿಸಿದ ಈ ವಾದವನ್ನು ನಿರಾಕರಿಸಿದ್ದಾರೆ.

ವಾಲ್ಟರ್ ಫೇರ್‌ಸರ್ವಿಸ್ ಅವರು ಮಹಾರಾಷ್ಟ್ರ ಮತ್ತು ಕರ್ನಾಟಕದ ತಾಮ್ರಯುಗಕ್ಕೆ ಸೇರಿದ ನೆಲೆಗಳಲ್ಲಿ ದೊರೆತ ಮಣ್ಪಾತ್ರೆಗಳ ಮೇಲಿರುವ ಚಿಹ್ನೆಗಳು ಸಿಂಧೂ ಲಿಪಿಯಿಂದ ಪ್ರಭಾವಗೊಂಡು ಮೂಡಿರುವುದೆಂದೂ ಇವು ಪೂರ್ವ ದ್ರಾವಿಡ ಗುಂಪಿಗೆ ಸೇರಿದ ಲಿಪಿ ಎಂದೂ ಗುರುತಿಸಿದ್ದಾರೆ. ಇವರ ಅಭಿಪ್ರಾಯವನ್ನು ಸಾಂಕಳಿಯ ಅನುಮೋದಿಸಿದ್ದಾರೆ.

ಐರಾವತಮ್ ಮಹದೇವನ್ ಅವರು ಶಾಸನಗಳಲ್ಲಿ ಬಳಸಲಾಗಿರುವ ಕೆಲವು ಚಿಹ್ನೆಗಳನ್ನು ಆಧರಿಸಿ ಅವುಗಳಿಗೆ ಭಾವವನ್ನು ಸೂಚಿಸಿದ್ದಾರೆ. ಉನ್ನತ ಪ್ರದೇಶದಲ್ಲಿಯ ಕೋಟೆಯೊಳಗೆ ವಾಸಿಸುವ ಜನರು ಒಂದು ವರ್ಗಕ್ಕೆ ಸೇರಿದರೆ ಕೆಳ ಮಟ್ಟದ ಪ್ರದೇಶದಲ್ಲಿ ವಾಸಿಸುವ ಜನರು ಇನ್ನೊಂದು ವರ್ಗಕ್ಕೆ ಸೇರಿದವರೆಂದು ವಿಂಗಡಿಸುತ್ತಾರೆ. ಸಿಂಧೂ ನಾಗರಿಕತೆಯ ಇಳಿಮುಖದ ಅನಂತರ ಕೋಟೆಯೊಳಗಿನ ಜನರು ಕಾಲಾಂತರದಲ್ಲಿ ಆಂಧ್ರ, ಚೇರ, ಚೋಳ ಮತ್ತು ವೇಳಿರ್ ರಾಜ್ಯಗಳಿಗೂ ಕೆಳಪ್ರದೇಶದ ಜನರು ಕೊಚರ್ ಪ್ರದೇಶಕ್ಕೂ ಒಡೆಯರಾದರೆಂದು ತಿಳಿಸುತ್ತಾರೆ. ಇವರೇ ಮುಂದುವರೆದು ಸಿಂಧೂ ನಾಗರಿಕತೆಯ ಪುರೋಹಿತ ಆಳುವರಸರನ್ನು ಮಹಾಭಾರತದ ಕುರುಗಳೆಂದೂ ಕೆಳಪ್ರದೇಶದವರನ್ನು ಪಾಂಡವರೆಂದೂ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಗಣಕಯಂತ್ರಗಳ ಮೂಲಕ ಸಿಂಧೂ ಲಿಪಿಯ ಸಮಗ್ರ ಕೋಶವನ್ನು ರೂಪಿಸಿದ ಕೀರ್ತಿ ಇವರದು. ಇವರಂತೆಯೇ ಫಿನ್ಲೆಂಡಿನ ವಿದ್ವಾಂಸರು ಗಣಕಯಂತ್ರದ ಸಹಾಯವನ್ನು ಪಡೆದಿದ್ದಾರೆ.

ಕೃಷ್ಣರಾವ್ ಅವರು ಸಿಂಧೂ ಲಿಪಿಯ ಶಾಸನಗಳಲ್ಲಿಯ ಚಿಹ್ನೆಗಳಲ್ಲಿ ಶಬ್ದಗಳನ್ನು ಗುರುತಿಸಿ ಇವುಗಳನ್ನು ಸುಮೇರಿಯನ್ ಮತ್ತು ಈಜಿಪ್ಟಿನ ಚಿತ್ರಲಿಪಿಯೊಂದಿಗೆ ಹೋಲಿಸಿದ್ದಾರೆ. ಇವುಗಳನ್ನು ಚಿಹ್ನೆ ಸೂಚಕಗಳಿಗಿಂತ ಲಿಪಿಯೆಂದು ಗುರುತಿಸುತ್ತ, ಬಿರುದಾವಳಿ, ತೂಕ, ಅಳತೆ, ನಾಣ್ಯ, ಕೆಲವು ಬುಡಕಟ್ಟುಗಳ ಹೆಸರು, ವಿದೇಶಿ ಆಳರಸರು, ವ್ಯಾಪಾರಸ್ಥರು, ಮಾಂಡಳಿಕ, ರಾಜ ಇತ್ಯಾದಿ ಪದಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಪಶುಪತಿ ಮುದ್ರಿಕೆಯನ್ನು ಕೇಂದ್ರವಾಗಿಸಿಕೊಂಡು ಸಿಂಧೂ ಲಿಪಿಯನ್ನು ಓದುವ ಪ್ರಯತ್ನ ಮಾಡಿದ್ದಾರೆ. ಈ ಮುದ್ರಿಕೆಯಲ್ಲಿರುವ ಪ್ರಾಣಿಗಳ ಮತ್ತು ಕುಳಿತಿರುವ ವ್ಯಕ್ತಿಯ ಚಿತ್ರಗಳನ್ನು ಸಮೀಕರಿಸಿ ಇದು ಮಖನಸನ ಎಂದು ಓದಿದ್ದಾರೆ. ಮಖನಸನ ಎಂಬುದು ಇಂದ್ರನ ಬಿರುದು. ಅಸುರರನ್ನು ನಾಶಪಡಿಸುವವನು ಎಂಬುದು ಇದರ ಅರ್ಥ. ಕೃಷ್ಣರಾವ್ ಅವರ ಓದುವ ಪ್ರಯತ್ನದ ಬಗೆಗೆ ಲಾಲ್ ಅವರು ಸಹಮತ ಸೂಚಿಸಿಲ್ಲ.

ಬಿ.ವಿ. ಸುಬ್ಬರಾಯಪ್ಪನವರು ಸಿಂಧೂ ಲಿಪಿಯ ಚಿಹ್ನೆಗಳು ಅಂಕಗಳೆಂದೂ ಅವು ಇತರೆಡೆಯ ಲಿಪಿಗಳಂತೆ ಸೇರ್ಪಡೆಯಲ್ಲಿ ಹೆಚ್ಚಾಗುತ್ತ ಹೋಗುವ ಕ್ರಮಕ್ಕೆ ಸೇರಿದೆ ಎಂದೂ ವಿವರಿಸುತ್ತಾರೆ. ಚಿಹ್ನೆಗಳಲ್ಲಿ ಬರುವ ಗೆರೆಯನ್ನು ಅಂಕಗಳೆಂದೂ ಮುದ್ರೆಗಳಲ್ಲಿಯ ಪ್ರಾಣಿಯ ಚಿತ್ರ ತಾವು ಕಳುಹಿಸುವ (ವ್ಯಾಪಾರದ ಮೂಲಕ) ವಸ್ತುವಿನ ರೂಪವನ್ನು ತೋರುತ್ತದೆ ಎಂದೂ ಅಭಿಪ್ರಾಯಪಡುತ್ತಾರೆ. ನಟವರ್‌ಝಾ ಮತ್ತು ಎನ್.ಎಸ್. ರಾಜಾರಾಂ ಅವರು ಸಿಂಧೂ ಮುದ್ರಿಕೆಗಳಲ್ಲಿರುವ ಭಾಷೆ ವೇದಗಳ ಕಾಲದ ಸಂಸ್ಕೃತವೆಂದೂ ಮೂಲ ಸಿಂಧೂ ಲಿಪಿಯಲ್ಲಿ 52 ವರ್ಣಗಳಿದ್ದವೆಂದೂ ಅವುಗಳು ಓಕಾರ 1, ಸ್ವರಗಳು 3, ಯೋಗವಾಹಕಗಳು 2 (ಅಂ, ಅಃ), ಸ್ಪರ್ಶ (ಅಲ್ಪ ಮತ್ತು ಮಹಾ (15+15) = 30), ಅಂತಸ್ಥ (4+4) = 8), ಊಷ್ಮ ಎಂದು ವಿವರಿಸಿ ಹೀಗೆ ಕೆಲವು ಅಕ್ಷರಗಳು ಅಂಕಿಗಳಿಂದ ಬಂದಿವೆಯೆಂದೂ ಬರೆಯುವ ಪದ್ಧತಿ ಹಲಾಯುಧ ಎಂದೂ ವರ್ಣಿಸಿದ್ದಾರೆ.

ಕೆ.ವಿ. ರಮೇಶ ಅವರು ಸಿಂಧೂ ಮುದ್ರಿಕೆಗಳಲ್ಲಿ ಬಳಸಲಾಗಿರುವ ಬರೆವಣಿಗೆಯ ಅಕ್ಷರಗಳು ವೇದಗಳ ಉಚ್ಚಾರದ ಸಂಕೇತವೆಂದು ವಿವರಿಸಿದ್ದಾರೆ. ದಂಡ, ವಾಜ ಕಪಾಲ, ಏಕಪಾ, ಭಾರದ್ವಜ ಇತ್ಯಾದಿ ಉದಾಹರಣೆಗಳನ್ನು ನೀಡುತ್ತಾರೆ.

ಮುಂಬೈನಲ್ಲಿ ನಡೆದ (2006) ಸೊಸೈಟಿ ಆಫ್ ಸೌತ್ ಏಷ್ಯನ್ ಆರ್ಕಿಯಾಲಜಿಯ ಪ್ರಥಮ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಾರ್ಕ್ ಕೆನೊಯರ್ ಅವರು ಹರಪ್ಪ ನೆಲೆಯ ಉತ್ಖನನಗಳ ಆಧಾರಗಳಿಂದ ಹರಪ್ಪ ಸಂಸ್ಕೃತಿಗೆ ಸೇರಿದ ನೆಲೆಗಳಲ್ಲಿ ದೊರಕುವ ತಾಮ್ರದ ಬಿಲ್ಲೆಗಳು ಮುದ್ರಿಕೆಗಳಲ್ಲ, ಅವು ನಿರ್ದಿಷ್ಟ ತೂಕ ಹೊಂದಿರುವುದರಿಂದ ಅವುಗಳನ್ನು ನಾಣ್ಯಗಳಂತೆ ಬಳಸಿರುವರೆಂಬ ವಾದವನ್ನು ಮಂಡಿಸಿದ್ದಾರೆ. ಈ ವಾದವನ್ನು ಒಪ್ಪುವುದಾದರೆ, ಇವು ಭಾರತದಲ್ಲಿ ಆದಿಚಾರಿತ್ರಿಕ ಕಾಲದಲ್ಲಿ ಬಳಸಲಾಗುತ್ತಿದ್ದ ಟಂಕಿಸಿದ ನಾಣ್ಯಗಳಿಗೆ ಮೂಲಗಳಾಗುತ್ತವೆ ಎಂಬ ಅಭಿಪ್ರಾಯ ನೀಡಿದ್ದಾರೆ. (ಸಿ.ಎಸ್.ಎ.)

ಈ ಪ್ರಯತ್ನಗಳಲ್ಲಿ ವಿಶೇಷವಾಗಿ ಪರ್ಪೊಲ, ಐರಾವತನ್ ಮಹದೇವನ್, ಎಸ್.ಆರ್.ರಾವ್ ಮತ್ತು ಇತ್ತೀಚಿನ ದಿನಗಳಲ್ಲಿ ಕಲ್ಯಾಣರಾಮನ್ ಅವರ ಪ್ರಯತ್ನ ಪ್ರಚಾರದಲ್ಲಿವೆ. ಇವರು ಓದಿದ ಕ್ರಮಗಳನ್ನೂ ಇಲ್ಲಿ ಸಂಕ್ಷೇಪಿಸಲಾಗಿದೆ.

1960ರ ದಶಕದಲ್ಲಿ ಹರಪ್ಪ ನಾಗರಿಕತೆಯ ನೆಲೆಯಾದ ಲೋಥಲ್ ಎಂಬಲ್ಲಿ ಉತ್ಖನನ ಮಾಡಿ ಆ ನಾಗರಿಕತೆಯ ಹಡಗು ಕಟ್ಟೆಯನ್ನು ಬೆಳಕಿಗೆ ತಂದು ಪ್ರಪಂಚ ವಿಖ್ಯಾತರಾದ ಎಸ್.ಆರ್.ರಾವ್ ಈ ಉತ್ಖನನದ ವರದಿಯನ್ನು ಸಿದ್ಧಪಡಿಸುವ ಕಾಲದಲ್ಲಿ ಸಹಜವಾಗಿ ಹರಪ್ಪ ಮುದ್ರಿಕೆಗಳ ಗಂಭೀರ ಅಧ್ಯಯನವನ್ನು ಆರಂಭಿಸಿದರು. ಈ ಸಂಸ್ಕೃತಿಯ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳ ಹಲವಾರು ಚೂರುಗಳ ಮೇಲಿನ ಗೀರಿದ ರೇಖೆಗಳನ್ನು ಗಮನಿಸಿ ಇವುಗಳ ವಿನ್ಯಾಸಕ್ಕನುಗುಣವಾಗಿ ವಿಂಗಡಿಸಿದಾಗ ಕೆಲವು ರೇಖೆಗಳು ಇದೇ ನೆಲೆಯ ಪ್ರೌಢ ಹಂತದ ಹರಪ್ಪ ಮುದ್ರಿಕೆಗಳಲ್ಲಿಯ ಕೆಲವು ಸಂಕೇತಗಳಿಗೆ ಅತ್ಯಂತ ನಿಕಟವಾಗಿ ಹೋಲುತ್ತಿದ್ದವು. ಇದು ಇವರ ಕುತೂಹಲ ಕೆರಳಿಸಿ ಗಂಭೀರವಾಗಿ ಹರಪ್ಪ ಲಿಪಿ ಅಧ್ಯಯನದಲ್ಲಿ ತೊಡಗುವಂತೆ ಪ್ರೇರೇಪಿಸಿತು. ಇವರು ಹರಪ್ಪ ಮುದ್ರಿಕೆಗಳಲ್ಲಿಯ ಲಿಪಿಯಲ್ಲಿಯ ಎಲ್ಲ ಸಂಕೇತವನ್ನು ಸಂಗ್ರಹಿಸಿ ವಿಂಗಡಿಸಲು ಪ್ರಯತ್ನಿಸಿದರು. ಈ ದಿಸೆಯಲ್ಲಿ ಲಿಪಿಯ ಕೆಲವು ಲಕ್ಷಣಗಳು ವಿಶಿಷ್ಟವಾಗಿ ಕಂಡುಬಂದವು. (1) ಊರ್ಧ್ವಮುಖಿ ಅಕ್ಷರಗಳಿಗೆ ಚಿಹ್ನೆಗಳನ್ನು ಸೇರಿಸಿರುವ ಸಾಧ್ಯತೆ ಕಂಡುಬಂದಿತು. ಉದಾ: ಮನುಷ್ಯ ಬಿಲ್ಲು ಹಿಡಿದಿರುವ ಚಿತ್ರ. ಇದರಲ್ಲಿ ಮನುಷ್ಯ ಮೂಲ ಸಂಕೇತ. ಇದರ ಎಡಕೈಗೆ ಒಂದು ಊರ್ಧ್ವ ಗೆರೆಯನ್ನೂ ಆ ಗೆರೆಗೆ ಬಿಲ್ಲನ್ನು ಸಂಕೇತಿಸಿದ ಕಂಸಾಕಾರವನ್ನೂ ಸಂಯುಕ್ತ ಚಿಹ್ನೆಗಳಾಗಿ ಸೇರಿಸಿದೆ. ಸಮಯೋಚಿತವಾಗಿ ಮೂಲ ಅಕ್ಷರಗಳಿಗೆ ಸೇರಿಸಬಹುದಾದ ಇಂಥ ಬಿಡಿ ಉಪಚಿಹ್ನೆಗಳು ತರುವಾಯ ಕಾಲದ ಬ್ರಾಹ್ಮಿ ವರ್ಣಮಾಲೆಯಲ್ಲಿಯೂ ಇವೆ. ಉದಾ: ಕ ಅಕ್ಷರ ಸೂಚಿಸುವ ಶಿಲುಬೆಯಾಕಾರದ ಅಥವಾ ಸಂಕಲನ ಚಿಹ್ನೆಯಲ್ಲಿಯ ಊರ್ಧ್ವ ರೇಖೆಯ ತುದಿಯ ಬಲಬದಿಗೆ ಅಡ್ಡಗೆರೆಯನ್ನು ಸೇರಿಸಿದರೆ ಕ ದೀರ್ಘವಾಗುವುದು. ಈ ಕ್ರಮ ಹರಪ್ಪ ಚಿಹ್ನೆಗಳಲ್ಲೂ ಇರುವ ಸಾಧ್ಯತೆಯಿದ್ದಿರಬಹುದೆಂದು ಅನುಮಾನ ಬಂತು. ಹರಪ್ಪ ಲಿಪಿಯ ಮತ್ತು ಬ್ರಾಹ್ಮಿ ಕೆಲವು ಸಂಕೇತಗಳು ಒಂದೇ ತರಹವಿದ್ದುದರಿಂದ ಅನುಮಾನ ಇನ್ನೂ ಬಲವಾಯಿತು. ಆದ್ದರಿಂದ ಇವುಗಳ ನಡುವೆ ಅಗೋಚರ ಸಂಬಂಧವಿರುವ ಸಾಧ್ಯತೆಯ ಅರಿವಾಯಿತು.

ಈ ಉಪಚಿಹ್ನೆಗಳನ್ನು ಗಮನಿಸದೆ ಇವುಗಳ ಚಿಹ್ನೆಗಳನ್ನು ಸೇರಿಸಿದ ಅನಂತರ ಭಿನ್ನವಾಗಿ ಕಾಣುವ ಚಿಹ್ನೆಗಳನ್ನು ಲೆಕ್ಕ ಹಾಕಿದಲ್ಲಿ ಸಂಕೇತಗಳ ಸಂಖ್ಯೆ ದೊಡ್ಡದಾಗುವುದು. ಹೀಗೆ ಮಾಡಿದ್ದರಿಂದ ಈ ಲಿಪಿಯನ್ನು ಅಧ್ಯಯನ ಮಾಡಿದ ಲ್ಯಾಂಗ್‌ಡನ್ ಪ್ರಕಾರ 280 ಸಂಕೇತಗಳು, ಮಹದೇವನ್ ಪ್ರಕಾರ 417. ಆದರೆ ಎಸ್.ಆರ್.ರಾವ್ ಪ್ರಕಾರ ಉಪ ಚಿಹ್ನೆಗಳನ್ನು ತೆಗೆದು ಉಳಿಯುವ ಮೂಲ ಚಿಹ್ನೆಗಳು ಕೇವಲ 62. ಅಂದರೆ ಪ್ರೌಢ ಹಂತದ ಹರಪ್ಪ ಲಿಪಿ ಚಿತ್ರಲಿಪಿ, ಶಬ್ದ ಸೂಚಕ ಹಾಗೂ ಧ್ವನಿಸೂಚಕವಾಗಿದ್ದು ವರ್ಣಮಾಲೆಯಾಗುವ ಹಂತವನ್ನು ತಲುಪುವ ಸ್ಥಿತಿಯಲ್ಲಿತ್ತೆಂದು ಅನಿಸಿತು. ಪ್ರಾಯಶಃ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳ ಮೇಲೆ ಕಾಣುವ ಚಿತ್ರರಹಿತ ರೇಖಾ ಚಿಹ್ನೆಗಳು ಈ ವರ್ಣಮಾಲೆ ಹಂತವನ್ನು ಸೂಚಿಸುತ್ತಿರಬೇಕೆಂದು ಅವರ ನಿಲುವು. ಹರಪ್ಪ ಸಂಸ್ಕೃತಿ ಹಂತದ ಹಾಗೂ ಅನಂತರ ಹಂತದ ಮಣ್ಪಾತ್ರೆಗಳ ಮೇಲಿನ ಗೀಚುಗಳ ಮತ್ತು ಹರಪ್ಪ ಮುದ್ರಿಕೆಯ ಅಕ್ಷರಗಳ ವ್ಯವಸ್ಥಿತವಾದ ಪ್ರತ್ಯೇಕ ಪಟ್ಟಿಗಳನ್ನು (ಚಿತ್ರ) ಮಾಡಿ ನೋಡಿದಾಗ ಅವುಗಳಲ್ಲಿ ಹಲವಾರು ಸಂಕೇತಗಳು ಒಂದೇ ತರಹವಿರುವುದು ಸ್ಪಷ್ಟವಾಯಿತು. ಈ ಹೋಲಿಕೆಯನ್ನು ಮೇಲೆ ಹೇಳಿದೆಯಷ್ಟೆ. ಮಣ್ಪಾತ್ರೆಗಳ ಮೇಲಿನ ಗೀರು ರೇಖೆಗಳು ಅಂತ್ಯ ಹರಪ್ಪ ಮತ್ತು ಅನಂತರ ಕಾಲಕ್ಕೆ ಸೇರಿದವು. ಇನ್ನು ಹೋಲಿಕೆ ಇರುವ ಸಂಕೇತಗಳ ಉಚ್ಚಾರ ಮೌಲ್ಯವನ್ನು ಕಂಡುಹಿಡಿಯಬೇಕು. ಈ ದಿಸೆಯಲ್ಲಿ ಈ ಹಂತಕ್ಕೆ ಸಮಕಾಲೀನ

ವಾಗಿರುವ ನೆರೆಹೊರೆಯ ಸಂಸ್ಕೃತಿಗಳಲ್ಲಿ ಹೋಲಿಸಬಹುದಾದ ಅಕ್ಷರಗಳು, ಸಂಕೇತಗಳು ಮತ್ತು ಅವುಗಳ ಉಚ್ಚಾರಾಂಶ ಮೌಲ್ಯವನ್ನು ತಿಳಿಯಲ್ಪಡಬಹುದಾದ ಶಾಸನಗಳನ್ನು ಹುಡುಕಾಡಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಪಶ್ಚಿಮ ಸೆಮಿಟಿಕ್‌ನ ಕೆಲವು ಶಾಸನಗಳು ಉಪಯುಕ್ತವಾಗಿ ಕಂಡುಬಂದವು. ಇವು ಬೆಬ್ಲಾಸ್ ಪ್ರದೇಶದ ಅಹಿರಮ್‌ನಲ್ಲಿ ದೊರೆತ ಒಂದು ಮಣ್ಣಿನ ಶವಕರಂಡಿಕೆಯ ಮೇಲೆ 11ನೆಯ (ಡೆರಿಂಜರ್ ಪ್ರಕಾರ) ಅಥವಾ ಪ್ರ.ಶ.ಪೂ. 13ನೆಯ (ಗೆಲ್ಬ ಪ್ರಕಾರ) ಶತಮಾನದ ಶಾಸನವಿದ್ದು ಅದರಲ್ಲಿನ ಅಕ್ಷರಗಳು ಲೋಥಲ್, ರಂಗಪುರ ಮಣ್ಪಾತ್ರೆಗಳ ಮೇಲಿನ ಗೀಚು-ರೇಖಾಚಿತ್ರಗಳಿಗೆ ಹಾಗೂ ದೈಮಾಬಾದ್‌ನಲ್ಲಿ ದೊರೆತ ಅಂತ್ಯ ಹರಪ್ಪ ಸಂಸ್ಕೃತಿಯ ಮಣ್ಪಾತ್ರೆ ಮೇಲಿರುವ ಸಂಕೇತಗಳಿಗೆ ಬಹುಮಟ್ಟಿಗೆ ಪೂರ್ಣವಾಗಿ ಹೋಲುತ್ತಿದ್ದವು. ಈ ಸೆಮಿಟಿಕ್ ಲಿಪಿಯ ಹಿಂದಿನ ಹಂತಗಳ 'ಲ್ಲಿಯ ಸಂಕೇತಗಳು ಸ್ವಲ್ಪ ಭಿನ್ನವಾಗಿದ್ದವು. ಅಹಿರಮ್ ಶಾಸನದ ಲಿಪಿ ಸಂಕೇತಗಳಿಗೆ ಉಚ್ಚಾರಾಂಶ ಮೌಲ್ಯವನ್ನು ಗೊತ್ತುಪಡಿಸಲಾಗಿದೆ. ಆದ್ದರಿಂದ ರಾವ್ ಈ ಮೌಲ್ಯಗಳನ್ನು ಹೋಲಿಕೆಯಿರುವ ಹರಪ್ಪ ಸಂಕೇತಗಳಿಗೆ ಕೊಟ್ಟರು. ಹೀಗೆ ಸಾಧ್ಯವಾದಷ್ಟು ಮೌಲ್ಯಗಳನ್ನು ಕೊಟ್ಟ ಸಂಕೇತಗಳನ್ನು ಓದಿದಾಗ ತುಲನಾತ್ಮಕವಾಗಿ ಪರಿಶೀಲಿಸಿದಾಗ ಕೆಲವು ಸುಸಂಬದ್ಧ ಪದಗಳು ಹೊರಟವು. ಪ್ರಾಚೀನ ಸಾಹಿತ್ಯದಲ್ಲಿ ಈ ಪದಗಳನ್ನು ಹುಡುಕುವ ಪ್ರಯತ್ನದಲ್ಲಿ ಇವು ವೈದಿಕ ಸಾಹಿತ್ಯದಲ್ಲಿಯ ವ್ಯಕ್ತಿಗಳ ಹೆಸರುಗಳು ಇಲ್ಲವೆ ಬಿರುದುಗಳು ಎಂಬುದಾಗಿ ಕಂಡುಬಂತು. ಆದ್ದರಿಂದ ಈ ಲಿಪಿಯ ಭಾಷೆ ವೈದಿಕ ಸಾಹಿತ್ಯ ಸಂಸ್ಕೃತಿಗೆ ಸಮೀಪವಾಗಿದೆ ಎಂದಂತಾಯಿತು. ಹೀಗೆ ಲಿಪಿಯ ಭಾಷೆ ಸಂಸ್ಕೃತ ಎಂದು ನಿರ್ಧರಿಸಿದರು ಮತ್ತು ಸೆಮಿಟಿಕ್ ಸಮುದಾಯದವರು ತಮ್ಮ ಲಿಪಿಗೆ ಉಚ್ಚಾರ ಮೌಲ್ಯ ಕೊಡಲು ಅಂತ್ಯ ಹರಪ್ಪ ಲಿಪಿಯ ಉಚ್ಚಾರ ಮೌಲ್ಯಗಳನ್ನು ಅಳವಡಿಸಿಕೊಂಡರೆಂದು ರಾವ್ ಅವರು ವಾದಿಸಿದರು.

ಇವರು ಪಟ್ಟಿ ಮಾಡಿದ ಹರಪ್ಪ ಸಂಕೇತಗಳಲ್ಲಿ ಮೀನು ಮತ್ತು ಮನುಷ್ಯ ಸಂಕೇತಗಳು ಸೆಮಿಟಿಕ್ ಲಿಪಿಮಾಲೆಯಲ್ಲಿಲ್ಲ. ಆದ್ದರಿಂದ ಇವುಗಳ ಉಚ್ಚಾರಾಂಶ ಮೌಲ್ಯವನ್ನು ಕಂಡುಹಿಡಿಯಲು ರಾವ್ ಅವರು ರೀಬಸ್ ವಿಧಾನವನ್ನು ಅನುಸರಿಸಿದರು. ಹರಪ್ಪ ಲಿಪಿಯಲ್ಲಿ ಕಂಡುಬರುವ ಭಾಷೆ ವೈದಿಕ ಸಾಹಿತ್ಯ ಸಂಸ್ಕೃತಕ್ಕೆ ಸಮೀಪವಾದುದರಿಂದ ಮನುಷ್ಯ, ಮೀನು ಪದಗಳಿಗೆ ವೈದಿಕ ಭಾಷೆಯಲ್ಲಿರುವ ಪದಗಳನ್ನು ಸಂಗ್ರಹಿಸಿದರು. ಕ್ರಮವಾಗಿ ಮನುಷ್ಯನಿಗೆ ನೃ (ನರ) ಮತ್ತು ಮತ್ಸ್ಯ, ಮೀನ. ನೃ ನರದಲ್ಲಿ ನಕಾರಕ್ಕೆ ಆಗಲೇ ಸಂಕೇತ ವಿದ್ದುದರಿಂದ ಅದನ್ನು ಬಿಟ್ಟು ಋ ಕಾರ ಉಚ್ಚಾರವನ್ನು ಮನುಷ್ಯ ಚಿತ್ರಕ್ಕೆ ಕೊಡಲಾಯಿತು. ಆದರೆ ಮತ್ಸ್ಯ ಮತ್ತು ಮೀನ ಇವುಗಳನ್ನು ಪರಿಶೀಲಿಸಿದಾಗ ಮಕಾರಕ್ಕೂ ಪ್ರತ್ಯೇಕವಾಗಿ ಚಿಹ್ನೆಯಿದ್ದುದರಿಂದ ಈ ಸಂಕೇತಕ್ಕೆ ಮ ಉಚ್ಚಾರಾಂಶವನ್ನು ಕೊಡಲು ಬರುವುದಿಲ್ಲ. ಆದ್ದರಿಂದ ವೈದಿಕ ಸಾಹಿತ್ಯವನ್ನು ಪರಿಶೀಲಿಸಿದಾಗ ಮತ್ಸ್ಯ ಮತ್ತು ಮೀನಿಗೆ ಮತ್ತೆರಡು ಪದಗಳು ದೊರೆತವು. ಅವು ಝುಷ ಮತ್ತು ಶಕುಲ. ಇವುಗಳಲ್ಲಿ ಝು ಮತ್ತು ಶ ಈ ಉಚ್ಚಾರಾಂಶಗಳನ್ನು ಕೊಟ್ಟಾಗ ಅವುಗಳಲ್ಲಿ ಶ ಸರಿಹೋಯಿತು. ಹೀಗೆ ಇವರು ಪಟ್ಟಿಯ ಎಲ್ಲ ಸಂಕೇತಗಳಿಗೆ ಉಚ್ಚಾರಾಂಶಗಳನ್ನು ಕೊಟ್ಟು ಹರಪ್ಪ ಮುದ್ರಿಕೆಗಳನ್ನು ಓದಲು ಆರಂಭಿಸಿದರು.

ಆದರೆ ರಾವ್ ಅವರ ಲಿಪಿ ಓದುವ ಪ್ರಯತ್ನ ಈ ಕ್ಷೇತ್ರದ ವಿದ್ವಾಂಸರಿಗೆ ಒಪ್ಪಿಗೆಯಾಗಿಲ್ಲ. ಏಕೆಂದರೆ ಫಿನಿಷ್ ವಿದ್ವಾಂಸ ಆಸ್ಕೋ ಪರ್ಪೊಲ ಪ್ರಕಾರ ಮನುಷ್ಯನ ಚಿಹ್ನೆಯಲ್ಲಿ 49 ಪ್ರಕಾರಗಳು, ಮಹದೇವನ್ ಪ್ರಕಾರ 46 ಪ್ರಕಾರಗಳಿದ್ದು ಇವೆಲ್ಲಕ್ಕೂ ಒಂದೇ ಪ್ರಕಾರದ ಉಚ್ಚಾರಾಂಶಗಳನ್ನು ಕೊಡಲು ಬರುವುದಿಲ್ಲ. ಇದರಂತೆಯೇ ಮೀನು ಮತ್ತು ಜಾಡಿ ಚಿತ್ರಗಳು. ಎರಡನೆಯದಾಗಿ ಮನುಷ್ಯ ಮತ್ತು ಮೀನಿನ ಸಂಕೇತಗಳಿಗೆ ಉಚ್ಚಾರಾಂಶ ಮೌಲ್ಯವನ್ನು ನೀಡುವ ಕ್ರಮ ಒಂದು ಬುದ್ಧಿವಂತಿಕೆಯ ಪ್ರಯತ್ನವೇ ಹೊರತು ನಿರ್ದಿಷ್ಟ ಒಪ್ಪಿಕೊಳ್ಳುವ ವಿಧಾನವಲ್ಲ. ಮೂರನೆಯದಾಗಿ ರಂಗಪುರದ ಅಂತ್ಯ ಹರಪ್ಪದ ಕಾಲಮಾನ ಪ್ರ.ಶ.ಪೂ.ಸು.1700–1400. ಈ ಹಂತದಲ್ಲಿ ಮೆರುಗಿನ ಕೆಂಪು ವರ್ಣದ ಪಾತ್ರೆ ಸಂಸ್ಕೃತಿಯ ಅವಶೇಷಗಳಿದ್ದವು. ಈ ಹಂತದ ಜನಸಮುದಾಯಕ್ಕೂ ಸೆಮಿಟಿಕ್ ಜನಸಮುದಾಯಕ್ಕೂ ಸಂಪರ್ಕವಿರಲು ಸಾಧ್ಯವಿಲ್ಲ. ಆದ್ದರಿಂದ ಸೆಮಿಟಿಕ್ ಸಮುದಾಯ ಅಂತ್ಯ ಹರಪ್ಪ ಲಿಪಿಯ ಉಚ್ಚಾರಾಂಶವನ್ನು ತೆಗೆದುಕೊಳ್ಳುವ ಸಾಧ್ಯತೆ ಇಲ್ಲ. ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳ ಮೇಲಿನ ಗೀಟು ಸಂಕೇತ ಬಿಡಿಬಿಡಿಯಾಗಿ ಒಂದೊಂದೇ ಇವೆ. ಹರಪ್ಪ ಮುದ್ರಿಕೆಗಳಲ್ಲಿ ಕಂಡುಬರುವಂತೆ ನಾಲ್ಕೈದು ಸಂಕೇತಗಳುಳ್ಳ ಸಾಲುಗಳು ಇದ್ದದ್ದು ಕಂಡುಬಂದಿಲ್ಲ. ಆದರೆ ರಾವ್ ಅವರು ಲೋಥಲ್, ರಂಗಪುರ ಮತ್ತು ರೋಜಡಿಯಲ್ಲಿ ನಾಲ್ಕಾರು ಸಂಕೇತಗಳುಳ್ಳ ಒಂದೊಂದು ಸಾಲು ಇರುವ ಮಡಕೆ ಚೂರುಗಳು ದೊರೆತಿವೆ ಎಂದಿದ್ದಾರೆ. ಆದರೆ ರಂಗಪುರದಲ್ಲಿ ಇಂತಹ ಮಡಕೆ ಚೂರುಗಳು ಕಂಡುಬಂದಿಲ್ಲ. ರೋಜಡಿಯಲ್ಲಿ ಒಂದು ಸಾಲಿನ ಅಕ್ಷರಗಳುಳ್ಳ ಮಡಕೆ ಚೂರುಗಳು ದೊರೆತಿರುವುದು ನಿಜ; ಆದರೆ ಇದು ದೊರೆತ ಸಾಂಸ್ಕೃತಿಕ ಸಂದರ್ಭ ಗೊತ್ತಿಲ್ಲ. ಆದರೂ ಇದು ಪ್ರ.ಶ.ಪೂ.ಸು.2200–2000 ಕಾಲದ್ದೆಂದು ಕಾಣುತ್ತದೆ. ಸೆಮಿಟಿಕ್ ವರ್ಣಮಾಲೆ ಜನಸಮುದಾಯದಲ್ಲೇ ಹುಟ್ಟಿ ಬೆಳೆದಿದೆ. ಆದ್ದರಿಂದ ಇದು ಹರಪ್ಪ ಲಿಪಿಯ ಉಚ್ಚಾರಾಂಶ ಮೌಲ್ಯದ ಮೇಲೆ ಬೆಳೆದುಬಂದಿಲ್ಲ. ಸೆಮಿಟಿಕ್ ಮತ್ತು ಹರಪ್ಪ ನಡುವಿನ ಸಂಬಂಧ ಪ್ರ.ಶ.ಪೂ.ಸು.2500–2000 ಅವಧಿಯಲ್ಲಿ ಇತ್ತು; ಅನಂತರ ಇರಲಿಲ್ಲ.

(ಎಸ್.ಆರ್.ಆರ್.)

ಮೊಹೆಂಜೋದಾರೊವಿನ ಚಿತ್ರಲಿಪಿ ಮುದ್ರಿಕೆಯ ಪ್ರತಿಕೃತಿಯೊಂದು ಏಷ್ಯ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಅತಿ ಉನ್ನತ ಹುದ್ದೆಯಲ್ಲಿದ್ದ ಚೆನ್ನೈನ ಕಲ್ಯಾಣರಾಮನ್ ಅವರಲ್ಲಿ ಕುತೂಹಲ ಕೆರಳಿಸಿ, ಕ್ರಮೇಣ ಈ ನಾಗರಿಕತೆಯ ವ್ಯಾಪಕ ಮತ್ತು ಆಳವಾದ ಅಧ್ಯಯನಕ್ಕೆ ಇವರನ್ನು ತೊಡಗುವಂತೆ ಮಾಡಿತು. ಅವರು ತಮ್ಮ ಹುದ್ದೆಯನ್ನು ತೊರೆದು ಚೆನ್ನೈನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ ಸರಸ್ವತಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅಧ್ಯಯನ ಮುಂದುವರಿಸಿದರು. 2003ರಲ್ಲಿ ಈ ನಾಗರಿಕತೆ ಬಗೆಗೆ ಪ್ರಪಂಚದಲ್ಲೆಲ್ಲ ಲಭ್ಯವಿದ್ದ ಮಾಹಿತಿ ಸಂಗ್ರಹಿಸಿ ನೂರಾರು ಚಿತ್ರಗಳೊಡನೆ ದಿ ಇಂಡಸ್ ಸರಸ್ವತಿ ಸಿವಿಲೈಸೇಷನ್ ಎಂಬ ಭಾರತದ ಲಿಪಿಗಾರರ ಬೃಹತ್ ಗ್ರಂಥವನ್ನು 5 ಸಂಪುಟಗಳಲ್ಲಿ ಪ್ರಕಟಿಸಿದರು. ಈ ಮಧ್ಯೆ ಈ ನಾಗರಿಕತೆಯ ಲಿಪಿ ಅಧ್ಯಯನ ಮುಂದುವರೆಸಿದರು. ಲಿಪಿಯ ಬಗೆಗೆ 5 ಸಂಪುಟಗಳನ್ನು ಅಂತರ್ಜಾಲದಲ್ಲಿ ಮತ್ತು ಸಿ.ಡಿ. ಮೂಲಕ ಪ್ರಸಾರ ಮಾಡಿದರು.

ಲಿಪಿ ಬಗೆಗಿನ ಇವರ ಅಧ್ಯಯನದ ಸಾರಾಂಶ ಹೀಗಿದೆ; ಮುಖ್ಯವಾಗಿ ಅಧ್ಯಯನ ಪೂರ್ವಭಾವಿಯಾಗಿ 25ಕ್ಕೂ ಹೆಚ್ಚು ಪ್ರಾಚೀನ ಭಾರತ ಭಾಷೆಗಳ ಒಂದು ತುಲನಾತ್ಮಕ ಪದಕೋಶವನ್ನು 25 ವರ್ಷಗಳ ಸತತ ಪರಿಶ್ರಮದಿಂದ ಸಿದ್ಧಪಡಿಸಿದರು. ಇದರಲ್ಲಿ ಅರ್ಧ ಮಿಲಿಯದಷ್ಟು ಪದ ಸಂಗ್ರಹವಿದೆ. ಸಮಾನ ಉಚ್ಚಾರಣೆ ಮತ್ತು ಅರ್ಥವುಳ್ಳ 8000 ಪದಗಳನ್ನು ಗುರುತಿಸಿದರು. ಅನಂತರ ಮುದ್ರಿಕೆ, ಮುದ್ರೆ, ತಾಮ್ರದ ತಗಡು, ಗಡಿಗೆ, ಮಡಕೆಗಳ ಮೇಲೆ ಮತ್ತು ಧೋಲಾವೀರ ಉತ್ಖನನದಲ್ಲಿ ಕಂಡುಬಂದ ದೊಡ್ಡ ಫಲಕ ಸೇರಿದಂತೆ ಎಲ್ಲ ಚಿತ್ರ ಸಂಕೇತಗಳನ್ನು ಸಂಗ್ರಹಿಸಿ ಚಿಹ್ನೆ, ಚಿತ್ರಗಳ ವಿಶ್ಲೇಷಣಾತ್ಮಕ ಪಟ್ಟಿಗಳನ್ನು ಮಾಡಿದರು. ಇವನ್ನು ಪರಿಶೀಲಿಸಿದಾಗ ಹಲವಾರು ಚಿಹ್ನೆಗಳು ಪದೇ ಪದೇ ಕಂಡುಬಂದುವು. ಉದಾ: ಏಕಶೃಂಗಿ, ಅಗಲ ಬಾಯಿಯ ಗುಡಾಣ, ಮೀನು, ಅರೆಕಾಲಿನ ಚಕ್ರ, ಬಿಲ್ಲುಗಾರ, ಗೂಳಿ ಮುಂತಾದವು. ಆದ್ದರಿಂದ ಇಂಥ ಮುದ್ರಿಕೆಗಳಲ್ಲಿ ಒಡೆಯನ ಹೆಸರಿರಲು ಸಾಧ್ಯವಿಲ್ಲ. ಅನಂತರ ಈ ಚಿತ್ರಗಳಿಗೆ ಪ್ರಾಚೀನ ಭಾರತೀಯ ಭಾಷೆಗಳಲ್ಲಿ ರೂಢನಾಮ ಪದಗಳನ್ನು ಹುಡುಕುವ ಪ್ರಯತ್ನ ಮಾಡಿದರು. ಈ ಪ್ರಯತ್ನ ಇವರ ಒಂದು ಪ್ರಮೇಯವನ್ನು ಆಧರಿಸಿದೆ; ಇಂಥ ಚಿಹ್ನೆಗಳ ಭಾಷಾ ಪದಗಳು ಪ್ರಾಚೀನ ಭಾರತೀಯ ಭಾಷೆಗಳಲ್ಲಿ ಹೆಚ್ಚು ಕಡಿಮೆ ಅದೇ ಉಚ್ಚಾರಣೆ ಮತ್ತು ಅರ್ಥದೊಂದಿಗೆ ಉಳಿದು ಬಂದಿರಬೇಕು. ಚಿಹ್ನೆಗಳನ್ನು ಸಂಕೇತಿಸುವ ಪದಗಳ ಪಟ್ಟಿಯನ್ನು ಮಾಡಿದಾಗ ಅವೆಲ್ಲವೂ ಪರಸ್ಪರ ಸಂಬಂಧವುಳ್ಳದ್ದಾಗಿದ್ದು ಒಂದು ವಿಶಿಷ್ಟ ಕಸಬು, ಕಸಬುಗಾರರನ್ನು ಸೂಚಿಸುವಂತೆ ಕಂಡುಬಂದುವು. ಅವೆಂದರೆ ಲೋಹಕಾರ, ಕಮ್ಮಾರ, ಲೋಹವನ್ನು ಸಿದ್ಧಮಾಡುವ ಭಟ್ಟಿ, ಖನಿಜ, ಲೋಹ, ಮಿಶ್ರಲೋಹ ಮುಂತಾದ ಪದಗಳು ಒಂದು ನಿರ್ದಿಷ್ಟ ವೃತ್ತಿಗೆ ಮಾತ್ರ ಸಂಬಂಧಪಟ್ಟಂತೆ ಕಂಡಬಂದದ್ದು ಆಶ್ಚರ್ಯಕರ. ಹೀಗೆ ಪ್ರಾಚೀನ ಲಿಪಿಗಳಲ್ಲಿ ಸಮಾನ ಅರ್ಥ ಮತ್ತು ಉಚ್ಚಾರಣೆಯುಳ್ಳ ಪದಗಳ ಆಧಾರದ ಮೇಲೆ ಓದುವ ಪ್ರಯತ್ನದ ವಿಧಾನಕ್ಕೆ ರೀಬಸ್ ತಂತ್ರವನ್ನು ಬಳಸಿದ್ದರು. ಈ ತಂತ್ರದಿಂದ ಇವರು ಸಿಂಧೂ-ಸರಸ್ವತಿ ಲಿಪಿಯಲ್ಲಿ ವರ್ಣಮಾಲೆ ಕ್ರಮವಿಲ್ಲ. ಈ ಚಿತ್ರಗಳು ಪದಗಳನ್ನು ಸೂಚಿಸುತ್ತವೆ. ಇವುಗಳ ಉಚ್ಚಾರ ಚಿತ್ರ ಅಥವಾ ಸಂಕೇತ ಸೂಚಿಸುವುದು ಎಂಬ ನಿರ್ಣಯಕ್ಕೆ ಬಂದರು. ಉದಾ: ಹರಪ್ಪದ ಒಂದು ಮುದ್ರಿಕೆಯಲ್ಲಿ ಸುತ್ತಲೂ ಕಟ್ಟೆಯಿರುವ ಒಂದು ಮರದ ಚಿತ್ರವಿದೆ. ಪ್ರಾಚೀನ ಭಾಷೆಗಳಲ್ಲಿ ಸಮಾನ ಉಚ್ಚಾರಣೆ ಮತ್ತು ಅರ್ಥವುಳ್ಳ ಈ ಚಿತ್ರಕ್ಕೆ ಕುಟಿ ಎಂಬ ಪದವಿದೆ. ಇದರಂತೆ ಉಚ್ಚರಿಸಬಹುದಾದ ಇನ್ನೊಂದು ಪದ ಕುಠಿ. ಇದರ ಅರ್ಥ ಖನಿಜವನ್ನು ಕರಗಿಸುವ ಭಟ್ಟಿ. ಹೀಗೆ ಇವರು ಈ ಚಿತ್ರಲಿಪಿಗಳನ್ನು ಓದಲು ಪ್ರಯತ್ನಿಸಿದ್ದಾರೆ. ಮೆಸಪೊಟೇಮಿಯ ನಾಗರಿಕತೆಯ ದಾಖಲೆಗಳಲ್ಲಿ ಈ ನಾಗರಿಕತೆಯ ಜನ ಸಮುದಾಯಗಳು ವಿವಿಧ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಮೂರು ಪ್ರದೇಶಗಳ ಹೆಸರುಗಳಿವೆ. ಅವು ದಿಲ್‌ಮುನ್, ಮಗನ್ ಮತ್ತು ಮೆಲೂಹ. ಪುರಾತತ್ತ್ವಜ್ಞರು ದಿಲ್‌ಮುನ್ ಬಹುಶಃ ಪರ್ಷಿಯವೆಂದೂ ಮಗನ್ ಮಕ್ರಾನ್ ಪ್ರದೇಶವೆಂದೂ ಗುರುತಿಸಿದ್ದಾರೆ. ಮೆಲೂಹ ಬಹುಮಟ್ಟಿಗೆ ಹರಪ್ಪ ನಾಗರಿಕತೆಯ ಪ್ರದೇಶ. ಮೆಲೂಹದ ಜನರ ಭಾಷೆ ಮೆಲುಕ. ಕುತೂಹಲಕಾರಿ ವಿಷಯವೆಂದರೆ ವಾತ್ಸ್ಯಾಯನನ ಕಾಮಸೂತ್ರದಲ್ಲಿಯ ಭಾಷೆಗಳ ಪಟ್ಟಿಯಲ್ಲಿ ಒಂದು ಭಾಷೆಯ ಹೆಸರು ಮ್ಲೇಚ್ಛ, ಮ್ಲೇಚ್ಛ ಪದ ಮೆಲೂಹ, ಮೆಲುಕ ಇದರ ಸಂಸ್ಕೃತ ರೂಪವೆಂದು ಗುರುತಿಸಬಹುದು. ಮ್ಲೇಚ್ಛ ಭಾಷೆಯನ್ನು ಮಹಾಭಾರತದಲ್ಲಿ ಉಲ್ಲೇಖಿಸ ಲಾಗಿದೆ. ದುರ್ಯೋಧನನ ಕುತಂತ್ರದಿಂದ ಪಾಂಡವರು ಅರಗಿನ ಮನೆಯಲ್ಲಿದ್ದಾಗ ವಿದುರನು ಮ್ಲೇಚ್ಛ ಭಾಷೆಯನ್ನಾಡುತ್ತಿದ್ದ ಕನಕನೆಂಬುವನನ್ನು ಕಳುಹಿಸಿದನು. ಕನಕ ಇತರರಿಗೆ ತಿಳಿಯದಿದ್ದ ಮ್ಲೇಚ್ಛ ಭಾಷೆಯಲ್ಲಿ ಧರ್ಮರಾಯನಿಗೆ ಸಧ್ಯದಲ್ಲೆ ಅವರಿಗೆ ಕಾದಿರುವ ಪ್ರಾಣಾಪಾಯವನ್ನು ಸೂಚಿಸಿ ಅದರಿಂದ ಪಾರಾಗುವ ಬಗೆಯನ್ನು ತಿಳಿಸಿದನು. ಧರ್ಮರಾಯ, ವಿದುರ ಮತ್ತು ಕನಕನಿಗೆ ಮಾತ್ರ ಈ ಭಾಷೆ ತಿಳಿದಿತ್ತು. ಇದರಿಂದ ಆ ಸಮಯದಲ್ಲಿ ಈ ಭಾಷೆ ಗೊತ್ತಿದ್ದ ಒಂದು ಜನ ಸಮುದಾಯ ಇದ್ದಿತ್ತೆಂಬುದು ಗಮನಾರ್ಹ.

ಇಂಥ ಭಾಷೆಯಿದ್ದಲ್ಲಿ ಅದು ಯಾವ ಪ್ರದೇಶದಲ್ಲಿ ಮತ್ತು ಜನ ಸಮುದಾಯದಲ್ಲಿ ಇತ್ತೆಂದು ಪರಿಶೀಲಿಸಬೇಕಾಗುವುದು. ಹರಪ್ಪ ನಾಗರಿಕತೆಯ ಕೇಂದ್ರ ಪ್ರದೇಶ ಮೆಲೂಹ ಆಗಿದ್ದಿರಬಹುದೆಂಬ ಅಭಿಪ್ರಾಯವನ್ನು ಮೇಲೆ ಹೇಳಿದೆಯಷ್ಟೆ ಆದ್ದರಿಂದ ಇವರು ಆಡುತ್ತಿದ್ದ ಭಾಷೆ ಮೆಲೂಹವೆಂದೂ ಇದು ಸಂಸ್ಕೃತದಲ್ಲಿ ಮ್ಲೇಚ್ಛ ಭಾಷೆಯೆಂದೂ ಹೇಳಬಹುದು.

ಹರಪ್ಪ ನಾಗರಿಕತೆಯ ಲೋಹ ಕಸಬಿನ ಜನರು ಬಳಸುತ್ತಿದ್ದ ಭಾಷೆಯಾಗಿದ್ದು ಇದನ್ನು ಸಾಂಕೇತಿಕವಾಗಿ ತಮ್ಮ ವೃತ್ತಿಗೆ ಸಂಬಂಧಿಸಿದುದನ್ನು ಸೂಚಿಸುತ್ತಿದ್ದರೆಂದು ಕಾಣುತ್ತದೆ. ಉದಾ: ಕಟ್ಟಿಯ ಒಳಗಿನ ಮರ ಸಮಕಾಲೀನ ಸಾಮಾನ್ಯ ಜನರಿಗೆ ಕಟ್ಟೆಮರವಾಗಿ ಕಂಡಿತು. ಲೋಹಾರ ಜನಸಮುದಾಯದಲ್ಲಿ ಇದಕ್ಕೆ ಕುಲುಮೆ ಎಂಬ ಅರ್ಥವಿದೆ. ಈ ರೀತಿ ವ್ಯವಹಾರಕ್ಕೆ ಮೀಸಲಾದ ಸಾಂಕೇತಿಕ ಪದಗುಚ್ಛ ಭಾಷೆ ಇತ್ತೀಚಿನವರೆಗೂ ವರ್ತಕರಲ್ಲಿ ಬಳಕೆಯಲ್ಲಿತ್ತು. (ಕೆಆರ್.)

**ಮೈಸೂರು ಮಾರುಕಟ್ಟೆಯ ಮುಚ್ಚುಮಾತುಗಳು:** ಮಾರುವ ಒಂದು ವಸ್ತುವಿಗೆ ಬೇಡಿಕೆ ಇಲ್ಲದಿದ್ದಾಗ ಕಡಿಮೆ ಧಾರಣೆಗೆ ವ್ಯವಹರಿಸಬೇಕಾಗುತ್ತದೆ ಆಗ ಇಡೀ ಮಾರುಕಟ್ಟೆಯಲ್ಲಿ ಧಾರಣೆ ಕುಸಿದು ರೈತನ ಹಿತಕ್ಕೆ ಧಕ್ಕೆಯಾಗಬಹುದು. ಅಂಗಡಿಯ ಗುಮಾಸ್ತರು ಮತ್ತು ಸಿಬ್ಬಂದಿ ವರ್ಗದವರು ಖರೀದಿತ ವಸ್ತುವಿನ ಬೆಲೆಯನ್ನು ಮತ್ತೊಂದು ಅಂಗಡಿಗೆ ತಿಳಿಸಬಾರದೆಂಬ ಸದುದ್ದೇಶದಿಂದ ವ್ಯವಹಾರದ ಸೋರಿಕೆಯೂ ಆಗದಂತೆ ರಕ್ಷಿಸಲು ಖರೀದಿತ ಬೆಲೆ, ಮಾರುಕಟ್ಟೆ ಬೆಲೆ, ಮಾರುವ ಬೆಲೆ ಇವುಗಳನ್ನು ಅಂಗಡಿಯಲ್ಲೇ ಗುಪ್ತಭಾಷೆಯಲ್ಲಿ ವ್ಯವಹರಿಸಿ ಬಂದ ಗಿರಾಕಿಗೆ ತನ್ನ ಕನಿಷ್ಠಲಾಭವನ್ನು ಇಟ್ಟುಕೊಂಡು ವಿಕ್ರಯಿಸುವ ವ್ಯವಸ್ಥೆಯೂ ನಮ್ಮಲ್ಲಿತ್ತು. ಆಡಳಿತ ಬದಲಾದಂತೆ ವರ್ತಕರು ತಮ್ಮ ಭಾಷೆ–ವೇಷಗಳನ್ನೂ ಬದಲಾಯಿಸಿಕೊಂಡಿರುವುದನ್ನು ಕಾಣಬಹುದು. ಗುಪ್ತ ಭಾಷೆಯ ಸಂಕೇತಗಳು ಹೀಗಿದ್ದವು: ಶೂನ್ಯ ಒಂದು ಎರಡು ಮೂರು ನಾಲ್ಕು ಐದು ಆರು ಏಳು ಎಂಟು ಒಂಬತ್ತು ಹತ್ತು ನೂರು ಸಾವಿರ. ಇವುಗಳನ್ನು ಕ್ರಮವಾಗಿ ಸಬೇದ ಅಂಗುಡ್ ಜೋಡ್ ರಗ್ ಪೋಕ್ ಬುದ್ ಡಾಗ್ ಫೈಟ್ ಮಂಗ್ ಕೋನ್ ಸಲ್ಲಾ ಚಿಲ್ಲ ಬಡಚ. ಉದಾಹರಣೆಗೆ ರಾಗಿ ಬೆಲೆ ರೂ. 485 ಇದ್ದರೆ ಗುಪ್ತಭಾಷೆಯಲ್ಲಿ 400ಕ್ಕೆ ಪೋಕ್ ಚಿಲ್ಲ, 80ಕ್ಕೆ ಮಂಗ್ ಸಬೇದೆ, 5ಕ್ಕೆ ಬುದ್ ಕೂಡಿಸಿ ಹೇಳಿದಾಗ ಪೋಕ್‌ಚಿಲ್ಲಮಂಗ್‌ಸಬೇದೆ ಬುದ್ ಎಂದು ಹೇಳಲಾಗುತ್ತದೆ. ಉದಾ: ಅಕ್ಕಿ ಧಾರಣೆ ರೂ. 1260 ಇದ್ದರೆ ಗುಪ್ತಭಾಷೆಯಲ್ಲಿ 1000ಕ್ಕೆ ಅಂಗುಡ್ ಬಡಚ, 200ಕ್ಕೆ ಜೋಡ್ ಚಿಲ್ಲ, 60ಕ್ಕೆ ಡಾಗ್ ಸಬೇದೆ ಕೂಡಿಸಿ ಹೇಳಿದಾಗ ಅಂಗುಡ್ ಬಡಚ ಜೋಡ್ ಚಿಲ್ಲ ಡಾಗ್ ಸಬೇದೆ ಎಂದು ಹೇಳಲಾಗುತ್ತದೆ. ಸು.60–70 ವರ್ಷಗಳ ಹಿಂದೆ ಇಂಥ ಗುಪ್ತಭಾಷೆಯ ಪ್ರಯೋಗವಿತ್ತು. ಈಗಲೂ ಈ ಭಾಷೆ ಸಂತೇಪೇಟೆ ಮತ್ತು ನಿಯಂತ್ರಿತ ಮಾರುಕಟ್ಟೆಯಲ್ಲಿ ಕೊಂಚಮಟ್ಟಿಗೆ ಭಿನ್ನರೂಪದಲ್ಲಿ ಚಲಾವಣೆಯಲ್ಲಿದೆ. *

**ಖರೋಷ್ಠಿ ಲಿಪಿ:** ಭಾರತೀಯ ಶಾಸನಾಧ್ಯಯನದ ಸಂದರ್ಭದಲ್ಲಿ ಬ್ರಾಹ್ಮಿ ಲಿಪಿಯ ಜೊತೆ ಜೊತೆಗೆ ಹೆಸರಿಸಲಾಗುವ ಇನ್ನೊಂದು ಲಿಪಿ. ಈ ಎರಡೂ ಲಿಪಿಗಳು ಮೌರ್ಯ ಸಾಮ್ರಾಟ ಅಶೋಕನ ಧರ್ಮಲಿಪಿಗಳಲ್ಲಿ ಒಂದೇ ಕಾಲಕ್ಕೆ ಗೋಚರಿಸಿದವು. ಇವುಗಳಲ್ಲಿ ಬ್ರಾಹ್ಮಿಲಿಪಿ ಕಾಲಾಂತರದಲ್ಲಿ ನಾನಾ ರೀತಿಯಲ್ಲಿ ಬೆಳೆದು ನಾನಾ ಹೆಸರುಗಳನ್ನು ತಳೆದು ಭರತಖಂಡದ ವಿವಿಧ ಪ್ರದೇಶಗಳ ಪ್ರಾದೇಶಿಕ ಲಿಪಿಗಳ ರೂಪವನ್ನು ಪಡೆಯಿತು; ಅಲ್ಲದೆ ಭಾರತದ ಪ್ರಭಾವವಿರುವ ನೆರೆಹೊರೆಯ ದೇಶಗಳನ್ನು ಪ್ರವೇಶಿಸಿತು. ಇದಕ್ಕೆ ವ್ಯತಿರಿಕ್ತವಾಗಿ ಬ್ಯಾಕ್ಟ್ರಿಯನ್, ಆರ್ಯನ್, ಕಾಬೂಲಿಯನ್, ಕೆರೋಸ್ತಿ ಮೊದಲಾದ ಹೆಸರುಗಳಿಂದ ಕರೆಯಲ್ಪಟ್ಟ ಖರೋಷ್ಠಿ ಲಿಪಿ ಅಲ್ಪೋಪಯೋಗಿಯೂ ಅಲ್ಪಾಯುವೂ ಆಗಿ ಸು.5ನೆಯ ಶತಮಾನದ ಹೊತ್ತಿಗೆ ಭರತಖಂಡದಲ್ಲಿ ಇದರ ಉಪಯೋಗ ನಿಂತುಹೋಯಿತು. ಚೀನದ ಪ್ರಾಚೀನ ಗ್ರಂಥ ಫಾ–ವಾನ್–ಶೂಲಿ–ಯನ್ ಗ್ರಂಥದಲ್ಲಿ ಈ ಲಿಪಿಯ ಉಲ್ಲೇಖವಿದೆ. ಖರೋಷ್ಠ ಎಂಬುವನು ಈ ಲಿಪಿಯನ್ನು ಬಳಕೆಗೆ ತಂದುದರಿಂದ ಅವನ ಹೆಸರೇ ಈ ಲಿಪಿಗೆ ಬಂತೆಂದು ಒಂದು ಹೇಳಿಕೆ. ಇದು ಅರಮೇಯಿಕ್ ಭಾಷೆಯ ಖರೊಟ್ಠ ಪದ ಸಂಸ್ಕೃತದಲ್ಲಿ ಖರೋಷ್ಠವೆಂದಾಗಿದೆಯೆಂದು ಡಿರಿಂಜರನ ವಾದ. ಈ ಪದ ಪರ್ಷಿಯ ಭಾಷೆಯ ಖರಪೋಸ್ತ ಎಂಬ ಪದದಿಂದ ಬಂದಿರಬೇಕೆಂಬ ಪ್ರಿಜಲಸ್ಕಿಯವರ ಅಭಿಪ್ರಾಯವನ್ನು ಸಾಮಾನ್ಯವಾಗಿ ಒಪ್ಪಲಾಗಿದೆ. ಆಗ ಹೆಚ್ಚಾಗಿ ಕತ್ತೆ ಇಲ್ಲವೆ ಒಂಟೆ ಚರ್ಮವನ್ನು ಬರೆಯುವುದಕ್ಕೆ ಉಪಯೋಗಿಸುತ್ತಿದ್ದರಿಂದ ಕ್ರಮೇಣ ಹೀಗೆ ಹೆಸರು ಬಂದಿರಬೇಕೆಂದು ಸಾಮಾನ್ಯ ಅಭಿಪ್ರಾಯ. ಸಿಂಧೂ ಲಿಪಿಯಿಂದ ಈ ಲಿಪಿ ಉಗಮವಾಯಿತೆಂದು ಕೆಲವು ವಿದ್ವಾಂಸರು ಹೇಳಿದರೂ ಬಹುಮಟ್ಟಿಗೆ ಇದು ಅರಮೇಯಿಕ್ ಲಿಪಿಯಿಂದ ಉದ್ಭವಿಸಿದೆಯೆಂಬ ಅಭಿಪ್ರಾಯವನ್ನು ಒಪ್ಪಲಾಗಿದೆ. ಇದೊಂದು ಮುಖ್ಯವಾಗಿ ಶಾಸನಗಳಲ್ಲಿ ಮಾತ್ರ ಉಪಯೋಗಿಸಲಾಗುತ್ತಿದ್ದ ಲಿಪಿಯಾಗಿದ್ದು ವಾಯವ್ಯ ಭಾರತದಲ್ಲಿ ಬಳಕೆಯಲ್ಲಿತ್ತು. ಇದನ್ನು ಉರ್ದು ಲಿಪಿಯಂತೆ ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು. ಖರೋಷ್ಠಿ ಲಿಪಿಯಲ್ಲಿ ಬರೆದ ಬಹುತೇಕ ಶಾಸನಗಳು ಇಂದಿನ ಅಫ್ಘಾನಿಸ್ತಾನದ ಪೂರ್ವಭಾಗ ಮತ್ತು ಉತ್ತರ ಪಂಜಾಬ್ ಪ್ರದೇಶಗಳಲ್ಲಿ ದೊರೆತಿವೆ. ಇವುಗಳಲ್ಲಿ ಅತ್ಯಂತ ಹಳೆಯ ದಾಖಲೆಗಳು ತಕ್ಷಶಿಲೆ ಮತ್ತು ಪುಷ್ಕಲಾವತಿ ನಗರಗಳನ್ನು ಆಡಳಿತ ಕೇಂದ್ರಗಳನ್ನಾಗಿ ಹೊಂದಿದ್ದ, ಸಿಂಧೂ ನದಿಯ ಪೂರ್ವ ಮತ್ತು ಪಶ್ಚಿಮಗಳಲ್ಲಿರುವ ಜಿಲ್ಲೆಗಳಿಗೆ ಸೇರಿವೆ. ಮುಲ್ತಾನದ ಬಳಿಯಲ್ಲಿರುವ ಬಹಾವಲ್‌ಪುರ, ದಕ್ಷಿಣಕ್ಕೆ ಮಥುರ ಮತ್ತು ಆಗ್ನೇಯ ದಿಕ್ಕಿನಲ್ಲಿ ಕಾಂಗ್ರ ಎಂಬ ಸ್ಥಳಗಳಲ್ಲಿ ಬಿಡಿ ಶಾಸನಗಳು ದೊರೆತಿವೆ. ಬಾರ್ಹುತ್, ಉಜ್ಜಯಿನಿ ಮತ್ತು ಕರ್ನಾಟಕ (ಅಶೋಕನ ಬ್ರಹ್ಮಗಿರಿ ಶಾಸನ) ಗಳಲ್ಲಿ ಬಿಡಿ ಶಬ್ದಗಳು ಮತ್ತು ಅಕ್ಷರಗಳು ದೊರೆತಿವೆ. ಬ್ಯೂಲರ್ ಹೇಳುವಂತೆ ಖರೋಷ್ಠಿ ಲಿಪಿ ಪ್ರ.ಶ.ಪೂ.4ನೆಯ ಶತಮಾನದಿಂದ ಪ್ರ.ಶ.ಸು.3ನೆಯ ಶತಮಾನದವರೆಗೆ ಬಳಕೆಯಲ್ಲಿತ್ತು. ಪರ್ಷಿಯನ್ ನಾಣ್ಯಗಳ ಮೇಲೆ ಕಂಡುಬರುವ ಅಕ್ಷರಗಳೇ ಅತ್ಯಂತ ಹಳೆಯ ಅಕ್ಷರಗಳಾಗಿದ್ದು ಗಂಧಾರಶಿಲ್ಪಗಳು ಮತ್ತು ಕುಷಾಣರ ಶಾಸನಗಳಲ್ಲಿ ದೊರೆಯುವ ಅಕ್ಷರಗಳು ಈಚಿನ ಕಾಲದವು. 3ನೆಯ ಶತಮಾನದ ಅನಂತರವೂ ಖರೋಷ್ಠಿ ಲಿಪಿಯನ್ನು ಕೆಲ ಖಾಸಗಿ ದಾಖಲೆಗಳಲ್ಲಿ ಬಳಸಲಾಗುತ್ತಿತ್ತು. 5ನೆಯ ಶತಮಾನಕ್ಕೆ ಸೇರಿದ, ತಕ್ಷಶಿಲೆಯಲ್ಲಿ ದೊರೆತ ಎರಡು ಸಣ್ಣ ಶಾಸನಗಳೇ ಭಾರತದ ಉಪಖಂಡದಲ್ಲಿ ದೊರೆತ ತೀರ ಈಚಿನ ಖರೋಷ್ಠಿ ದಾಖಲೆಗಳಾಗಿವೆ. ಸರ್ಕಾರ್ ಅವರು ಹೇಳುವಂತೆ ಖರೋಷ್ಠಿ ಲಿಪಿ ಸಂಸ್ಕೃತ ಅಥವಾ ಪ್ರಾಕೃತ ಭಾಷೆಯನ್ನು ಬರೆಯುವುದಕ್ಕೆ ಯೋಗ್ಯವಾಗಿರಲಿಲ್ಲವಾದ್ದರಿಂದ ಭಾರತದ ಶಾಸನಗಳಿಂದ ಕಣ್ಮರೆಯಾಯಿತು.

ಖರೋಷ್ಠಿ ಲಿಪಿ ಉಪಖಂಡದಲ್ಲಿ ಮೊದಲಿಗೆ ವಾಯವ್ಯ ಪ್ರಾಂತದಲ್ಲಿ ಅಶೋಕನ (ಷಹಬಾಜ್‌ಗಡಿ ಮತ್ತು ಮಾನ್‌ಸೇಹ ಎಂಬ ಸ್ಥಳಗಳಲ್ಲಿ ದೊರೆತ) ಶಾಸನಗಳಲ್ಲಿ ಬಳಸಲ್ಪಟ್ಟಿದೆ. ಅಶೋಕನ ಅನಂತರದ ಕಾಲದಲ್ಲಿ ವಾಯವ್ಯ ಪ್ರದೇಶವನ್ನಾಳಿದ ಇಂಡೊ–ಗ್ರೀಕ್ ಮತ್ತು ಸಿಥೊಪಾರ್ಥಿಯನ್ ಅರಸರ ನಾಣ್ಯಗಳ ಮೇಲಿನ ಆಲೇಖಗಳನ್ನು ಬರೆಯುವುದಕ್ಕಾಗಿ ಈ ಲಿಪಿಯನ್ನು ಬಳಸಲಾಯಿತು. ಕುಷಾಣ ಅರಸರು ತಮ್ಮ ಶಾಸನಗಳಲ್ಲಿ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳೆರಡನ್ನೂ ಬಳಸಿದ್ದಾರೆ. ಮೌರ್ಯೋತ್ತರ ಕಾಲದಲ್ಲಿಯೂ ವಾಯವ್ಯ ಪ್ರದೇಶದಲ್ಲಿ ಬ್ರಾಹ್ಮಿಲಿಪಿಗಿಂತ ಖರೋಷ್ಠಿ ಲಿಪಿಯೇ ಹೆಚ್ಚು ಜನಪ್ರಿಯವಾಗಿತ್ತು. ಮಿನಾಂಡರನ ಶಾಸನಾವಧಿಗೆ ಸೇರಿದ ಬಜಾರ್‌ನ ಸ್ಮಾರಕ–ಕರಂಡ ಶಾಸನ ಮತ್ತು ಸ್ವಾಟ್ ಪ್ರದೇಶದಲ್ಲಿ ದೊರೆತ ಥಿಯೊಡೋರಸನ ಸ್ಮಾರಕ–ಕರಂಡಗಳ ಶಾಸನಗಳಿಂದ ಈ ವಿಷಯಕ್ಕೆ ಪುಷ್ಟಿ ದೊರೆಯುತ್ತದೆ. 6ನೆಯ ಶತಮಾನಕ್ಕಿಂತ ಮೊದಲೇ ವಾಯವ್ಯ ಪ್ರಾಂತದಲ್ಲಿ ಮಾತ್ರವಲ್ಲದೆ ಆಫ್ಘಾನಿಸ್ತಾನದಲ್ಲೂ ಖರೋಷ್ಠಿ ಲಿಪಿ ಹೇಳಹೆಸರಿಲ್ಲದಂತಾಯಿತು. ತಕ್ಷಶಿಲೆಯಲ್ಲಿ ದೊರೆತ, 5ನೆಯ ಶತಮಾನಕ್ಕೆ ಸೇರಿದ ಎರಡು ಸಣ್ಣ ಶಾಸನಗಳೇ ಭಾರತದಲ್ಲಿ ದೊರೆತ ಕೊನೆಯ ಖರೋಷ್ಠಿ ಶಾಸನಗಳಾಗಿವೆ.

ಶಾಸನಗಳನ್ನು ಬರೆಸುವಲ್ಲಿ ಪ್ರಯೋಗಿಸಲ್ಪಟ್ಟಿದ್ದರೂ ಖರೋಷ್ಠಿ ಲಿಪಿ ಸಾಮಾನ್ಯ ಜನರ ಲಿಪಿಯಾಗಿತ್ತು. ಕಾರಕೂನರು ಮತ್ತು ವ್ಯವಹಾರಸ್ಥರ ಬಳಕೆಗಾಗಿ ಇದು ರಚಿತವಾದಂತಿದೆ. ಅತ್ಯಂತ ಕೂಡುಬರೆವಣಿಗೆ ಸ್ವರೂಪದ ಅಕ್ಷರಗಳು, ದೈನಂದಿನ ಸಾಮಾನ್ಯ ವ್ಯವಹಾರಕ್ಕೆ ಅನಿವಾರ್ಯವಲ್ಲದ ದೀರ್ಘಸ್ವರಗಳ ಅಭಾವ, ಅಲ್ಪಪ್ರಾಣದ ದ್ವಿತ್ವಕ್ಷರಗಳಲ್ಲಿ ಒಂದೇ ವ್ಯಂಜನದ ಪ್ರಯೋಗ (ಕ್ಕ ದ ಬದಲಿಗೆ ಕ) ಮತ್ತು ಎಲ್ಲೆಡೆಗಳಲ್ಲಿ ಅನುಸ್ವಾರದ ಪ್ರಯೋಗ – ಈ ಎಲ್ಲ ಲಕ್ಷಣಗಳಿಂದ ಮೇಲಿನ ಹೇಳಿಕೆಗೆ ಪುಷ್ಟಿದೊರೆಯುತ್ತದೆ.

ಅರಮೇಯಿಕ್ ಲಿಪಿಯಿಂದ ಖರೋಷ್ಠಿ ಲಿಪಿ ಹುಟ್ಟಿತೆಂಬ ಬ್ಯೂಲರ್ ಸಿದ್ಧಾಂತವನ್ನು ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಆದರೆ ಆರ್. ಬಿ. ಪಾಂಡೆಯವರು ಬ್ಯೂಲರ್ ಸಿದ್ಧಾಂತವನ್ನು ಬಲವಾಗಿ ಖಂಡಿಸುತ್ತ ಖರೋಷ್ಠಿ ಲಿಪಿ ಭಾರತದ ವಾಯವ್ಯ ಪ್ರದೇಶದಲ್ಲಿ ಹುಟ್ಟಿತೆಂದೂ ಚೀನಿ ಸಾಂಪ್ರದಾಯಿಕ ದಾಖಲೆಗಳಿಂದ ತಿಳಿದುಬರುವಂತೆ ಖರೋಷ್ಠ ಎಂಬ ಭಾರತದ ವಿದ್ವಾಂಸ ಇದನ್ನು ರೂಪಿಸಿದನೆಂದೂ (ಅಕ್ಷರಗಳು ಕತ್ತೆಯ ತುಟಿಗಳನ್ನು ಹೋಲುವುದರಿಂದ ಅವನಿಗೆ ಆ ಅಡ್ಡಹೆಸರು ಬಂದಿತು) ಹೇಳಿದ್ದಾರೆ. ಜೊತೆಗೆ ಖರೋಷ್ಠಿ ಲಿಪಿ ಭಾರತದಲ್ಲಿಯೇ ಹುಟ್ಟಿ ಬೆಳೆದು ಅಳಿಯಿತೆಂದೂ ಈ ಲಿಪಿಯ ಆಗುಹೋಗುಗಳಲ್ಲಿ ಯಾವುದೇ ಪರಕೀಯ ಪ್ರಭಾವವಿಲ್ಲವೆಂದೂ ಹೇಳಿದ್ದಾರೆ. (ಬಿ.ಕೆ.ಎಂ.)

**ಬ್ರಾಹ್ಮಿಲಿಪಿ:** ಭಾರತದಲ್ಲಿ ಭಾಷೆಗಳ ಸಂಖ್ಯೆಯೂ ವಿಪುಲ, ಹಾಗೆಯೇ ಅವುಗಳನ್ನು ಬರೆಯುವ ರೀತಿಗಳೂ ಈ ಕಾಲದಲ್ಲಿ ಬಹಳ. ಆದರೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಂದೋ ಎರಡೋ ಲಿಪಿಗಳು ಎಲ್ಲ ಲಿಪಿಗಳಿಗೂ ಮೂಲ ಎಂದು ಕಂಡುಬರುತ್ತದೆ. ಅವೆಂದರೆ ಎಡದಿಂದ ಬಲಕ್ಕೆ ಬರೆಯುವ ಪದ್ಧತಿಯದು. ಉದಾ: ಕನ್ನಡ, ತೆಲುಗು, ತಮಿಳು, ಮರಾಠಿ, ಗುಜರಾತಿ, ಹಿಂದಿ, ಕಾಶ್ಮೀರಿ, ಪಂಜಾಬಿ, ಒರಿಯ ಹಾಗೂ ಬಂಗಾಲಿ ಇತ್ಯಾದಿ ಮತ್ತು ಇನ್ನೊಂದು ಬಲದಿಂದ ಎಡಕ್ಕೆ ಬರೆಯಲ್ಪಡುವ ಭಾಷೆಗಳು ಉದಾ: ಉರ್ದು, ಫಾರ್ಸಿ (ಪಾರ್ಸಿ, ಪರ್ಷಿಯನ್) ಹಾಗೂ ಅರಬ್ಬಿ ಇತ್ಯಾದಿ. ಎಡದಿಂದ ಬಲಕ್ಕೆ ಬರೆಯಲ್ಪಡುವ ಭಾಷೆಗಳು ಬ್ರಾಹ್ಮಿ ಲಿಪಿಗೆ ಸಂಬಂಧಿಸಿವೆ ಮತ್ತು ಬಲದಿಂದ ಎಡಕ್ಕೆ ಬರೆಯಲ್ಪಡುವ ಭಾಷೆಗಳ ಲಿಪಿ ಖರೋಷ್ಠಿ ಲಿಪಿಗೆ ಸಂಬಂಧಿಸಿವೆ. ಭಾರತದಲ್ಲಿ ದೊರೆತ ಅತ್ಯಂತ ಪುರಾತನ ಬರೆವಣಿಗೆ ಎಂದರೆ ಅಶೋಕನ ಶಾಸನಗಳು. ಇವು ಎರಡೂ ಬಗೆಯ ಲಿಪಿಗಳಲ್ಲಿ ಇವೆ. ಅಶೋಕನ ಕಾಲಕ್ಕೆ ಹಲವು ಭಾಷೆಗಳು ಅಸ್ತಿತ್ವದಲ್ಲಿ ಇದ್ದರೂ ಲಿಪಿಗಳು ಬಹಳ ಇರಲಿಲ್ಲ. ಬ್ರಾಹ್ಮಿಲಿಪಿಯೊಂದೇ ವಿಶೇಷವಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಮಧ್ಯಏಷ್ಯ, ಶ್ರೀಲಂಕ, ಆಗ್ನೇಯಏಷ್ಯ ರಾಷ್ಟ್ರಗಳಲ್ಲಿ ಪ್ರಚಲಿತವಾಗಿತ್ತು.

ಬ್ರಾಹ್ಮಿಲಿಪಿಯ ಉಗಮದ ಬಗ್ಗೆ ಎಂದರೆ ದೇಶ, ಕಾಲ ಹಾಗೂ ಜನಾಂಗ ಮತ್ತು ಅದರ ಭಾಷೆಗಳು ಪ್ರತಿಯೊಂದು ವಿಷಯದಲ್ಲೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ದೇಶದ ವ್ಯಾಪ್ತಿ ಮಧ್ಯ ಏಷ್ಯಖಂಡದಿಂದ ಮಧ್ಯ ಭಾರತದವರೆಗೆ ಇದೆ. ಗ್ರೀಕ್ ಭಾಷೆ, ಬರವಣಿಗೆಯೇ ಬ್ರಾಹ್ಮಿಯ ಮೂಲವೆಂದೂ ಪ್ರತಿಪಾದಿಸಲಾಗಿದೆ. ಗ್ರೀಕ್ ಹಾಗೂ ಬ್ರಾಹ್ಮಿ ಚಾಕ್ಷುಕ ರೂಪಗಳನ್ನು ತೌಲನಿಕ ತಕ್ಕಡಿಯಲ್ಲಿ ಇಟ್ಟಾಗ ಈ ವಾದ ಬಿದ್ದುಹೋಯಿತು.

ಲಿಪಿ ಎಂಬ ಶಬ್ದ ಭಾರತದ್ದೋ ಅಥವಾ ಬೇರೆ ದೇಶದ್ದೋ ಎಂಬಲ್ಲಿ ವಿದ್ವಾಂಸರು ಏಕಾಭಿಪ್ರಾಯವನ್ನು ಹೊಂದಿಲ್ಲ. ಲಿಪಿ ಮೊದಲೋ ಲೇಖ ಮೊದಲೋ ಎಂಬುದು ಇನ್ನೂ ಸಮಸ್ಯಾತ್ಮಕವಾಗಿದೆ. ಅಶೋಕನ ಶಾಸನಗಳಲ್ಲಿ ಈ ಎರಡು ಶಬ್ದಗಳು ಸಾಕಷ್ಟು ಬಳಕೆಗೊಂಡಿವೆ:

ನಿಖಿತಾ ಇಕಂ ಚ ಲಿಪಿಂ (ಸಾರನಾಥ)

ಏಸಕಟವಿಯಯೇ ಚ ಪಡೇನ ಲಿಖಿತಂ ಲಿಪಿಕರೇಣ (ಇದಿಷ್ಟೇ ಖರೋಷ್ಠಿ ಲಿಪಿಯಲ್ಲಿದೆ)

ಅಕ್ಷರಗಳು ಇಲ್ಲದೆ ಲಿಪಿ ಅಥವಾ ಲೇಖನ (ಲೇಖ) ಆಗಲು ಸಾಧ್ಯವಿಲ್ಲ. ಅಶೋಕನ ಶಾಸನಗಳಲ್ಲಿ ಧರ್ಮಲಿಪಿ ಎಂದಾಗ ಧರ್ಮಶಾಸನ ಎಂದೇ ಅರ್ಥವಾಗುತ್ತದೆ. ಮತ್ತೆ ಅದು ಚಾಕ್ಷುಷ ರೂಪಗಳನ್ನೂ ಸೂಚಿಸುತ್ತದೆ. ಬೇರೆಡೆಯಲ್ಲಿ ಒಂದು ಶಬ್ದಕ್ಕೆ ಹಲವು ಅರ್ಥಚ್ಛಾಯೆಗಳಿರುವುದು ಭಾಷೆಯ ಬೆಳವಣಿಗೆಯನ್ನು ನೂರಾರು–ಸಹಸ್ರಾರು–ವರ್ಷಗಳ ಅವಧಿಯಲ್ಲಿ ಆದ ವಿಕಾಸವನ್ನೂ ಸೂಚಿಸುತ್ತದೆ. ಲಿಖಿತಂ ಇದು ಬರೆಯಲ್ಪಟ್ಟಿದೆ ಎಂದರೆ ಲಿಪಿಕರೇಣ ಎಂಬುದು ಲಿಪಿಕಾರ ಎಂಬ ಅರ್ಥವನ್ನು ಸೂಚಿಸುತ್ತದೆ. ಮಾನ್ಸೇರಾದ ಶಾಸನದಲ್ಲಿ ಲಿಪಿ ದಿಪಿ ಆಗಿದೆಯೆಂಬುದನ್ನೂ ಲಿಪಿ, ದಿಪಿ, ಲಿವಿ, ದಿಬಿ ಆಗಿರುವುದನ್ನೂ ಗಮನಿಸಿದರೆ ಮತ್ತು ಕತಪಗಳು ಗದಬವ ಇತ್ಯಾದಿಯಾಗಿ ಭಾಷಾಶಾಸ್ತ್ರ–ವ್ಯಾಕರಣದ – ವರ್ಣವ್ಯತ್ಯಯ ನಿಯಮದಂತೆ ವ್ಯತ್ಯಯವಾಗುವುದನ್ನು ಮನಗಂಡರೆ ಇಂಡೊ–ಯುರೋಪಿನ ಭಾಷೆಗಳಲ್ಲಿ ಯಾವುದರಿಂದ ಯಾವುದಕ್ಕೆ ವ್ಯತ್ಯಯ ಹೊಂದಿತೆಂದು ಹೇಳಲು ಖಚಿತವಾಗಿ ಹೇಳಲಿಕ್ಕೆಬಾರದು. ಸೋದರ ಭಾಷೆಗಳಲ್ಲಿ ಯಾವುದು ಮೊದಲು ಯಾವುದು ಹಿಂದುಗಡೆ ಯದು ಎಂದು ಹೇಳುವಲ್ಲಿ ಬರೀ ಊಹೆಗಳನ್ನೇ ಅವಲಂಬಿಸ ಬೇಕಾಗುತ್ತದೆ. ಪ್ರಾಚೀನತೆ ಹೆಚ್ಚಿದಷ್ಟೂ ಇಂತಹ ವಿಷಯಗಳು ಹೆಚ್ಚುಹೆಚ್ಚು ಮಸಕಾಗಿರುತ್ತವೆ.

ಬ್ರಾಹ್ಮಿ ಲಿಪಿ

ಬ್ರಾಹ್ಮಿಲಿಪಿಯ ಉಗಮದ ವಿಷಯದಲ್ಲಿ ಇದು ಭಾರತದ ಸ್ವತಂತ್ರ ಲಿಪಿ ಎಂದು ಕೆಲವರೂ ಮತ್ತೆ ಇದು ಪರದೇಶದ ಲಿಪಿಯೊಂದರ ಆಧಾರದ ಮೇಲೆ ಹುಟ್ಟಿದ್ದೆಂದು ಕೆಲವರೂ ಭಿನ್ನಾಭಿಪ್ರಾಯವನ್ನು ತಳೆದಿದ್ದಾರೆ. ಭಾರತೀಯ ಸಾಧನ ಸಾಮಗ್ರಿಗಿಂತ ಇತರ ಭಾಷೆಯಲ್ಲಿ ದೊರೆತ ಸಾಧನ ಸಾಮಗ್ರಿ ಪ್ರಾಚೀನ ಎಂದು ನಿರ್ಧಾರ ಆಗುವವರೆಗೆ ಎಲ್ಲರ ಹೇಳಿಕೆಗಳೂ ಊಹಾಪೋಹಗಳೇ. ಭಾಷೆ ಹಾಗೂ ತದ್ಭಾಷೆಯ ಲಿಪಿ ಇವು ಪ್ರದೇಶ ಹಾಗೂ ಜನಾಂಗದ ಜನತೆಯನ್ನು ಆಧರಿಸಿ ಹೆಸರನ್ನು ಪಡೆದಿವೆ. ಇಂಗ್ಲಿಷ್, ರಷ್ಯನ್, ಸ್ಪ್ಯಾನಿಷ್, ಡಚ್, ಅರಬ್ಬಿ, ಪರ್ಷಿಯನ್, ಗುಜರ್, ಕರ್ಣಾಟ (>ಕರ್ನ್ನಾಡು> ಕನ್ನಡ) ವಂಗ, ತೆಲುಗು (<ತ್ರಿಕಲಿಂಗ> ತೆಲಂಗ್>ತೆಲಂಗಾಣ), ತಮಿಳು (<ದ್ರಮಿಡ ತಮಿಳಿನಲ್ಲಿ ದ ಕಾರ ಇಲ್ಲದುದರಿಂದ ಅದು ತ ಉಚ್ಚಾರವನ್ನೇ ತಳೆಯುತ್ತದೆ ಮತ್ತು ಜನತೆ ಯಲ್ಲಿ–ಸಮುದಾಯದ ಭಾಷೆಯಲ್ಲಿ ವಿಕೃತ ರೂಪವನ್ನೇ ಪಡೆಯುತ್ತದೆ) ಇತ್ಯಾದಿಗಳನ್ನು ಪರಿಶೀಲಿಸಿದರೆ ಸತ್ಯ ಹೊರಬೀಳುತ್ತದೆ. ಬ್ರಹ್ಮಾವರ್ತ ಅಥವಾ ಆರ್ಯಾವರ್ತ ಪ್ರದೇಶದ ಭಾಷೆ ಬ್ರಾಹ್ಮಿ; ಆಕೆಯೆ ಸರಸ್ವತಿ.

ಬ್ರಾಹ್ಮಿ ತು ಭಾರತೀ ಭಾಷಾ ಗೀರ್ವಾಗ್ವಾಣೀಶೀ ಸರಸ್ವತೀ ವ್ಯಾಹಾರ ಉಕ್ತಿರ್ಲಪಿತಂ ಭಾಷಿತಂ ವಚನಂ ವಚಃ ಎಂದು ಅಮರಕೋಶದಲ್ಲಿ ಹೇಳಿದೆ. ಈ ಎಲ್ಲವೂ ಒಂದೇ ವಿಷಯವನ್ನು ಸೂಚಿಸುವ ಶಬ್ದವಾದುದರಿಂದ ಬ್ರಾಹ್ಮಿ ಲಿಪಿತಂ ಇದು ಬ್ರಾಹ್ಮಿಲಿಪಿ ಆಯಿತು. ಇದು ಬ್ರಹ್ಮನಿಂದ ಹುಟ್ಟಿತೆಂದು ಕೆಲವರೂ ಆದಿತೀರ್ಥಂಕರ ತನ್ನ ಪುತ್ರಿಗೆ–ಬ್ರಾಹ್ಮಿಗೆ–ಹೇಳಿಕೊಟ್ಟ ಕಾರಣದಿಂದ ಬ್ರಾಹ್ಮಿ ಮೂಲಕ ಹೆಸರು ಬಂತೆಂದೂ ಮತ್ತೆ ಕೆಲವರೂ ನಿರೂಪಿಸಿದ್ದಾರೆ. ನಮಗೆ ಉಪಲಬ್ಧ ಇರುವುದು ಮಹಾವೀರರ ಭಾಷೆ ಅರ್ಧಮಾಗಧಿ ಭಾಷೆಯ ಮಾತುಗಳು. ಣಮೋ ಬಂಭೀವ ಲವೀವ ಎಂಬಲ್ಲಿಯ ರೂಪ ಬಂಭೀ ಇದನ್ನು ಬ್ರಾಹ್ಮಿ ಎಂಬುದಕ್ಕೆ ಯಾರು ಮಗುಚಿದರು ವೇದದಲ್ಲಿ –

ಅಮೀಬ್ರಹ್ಮೀರನೂಷತ್ ಬ್ರಹ್ಮೀರ್ಭ್ರೂತಸ್ಯಮಾತರಃ ಮಭ್ರೃಜ್ಯತೇದಿವಃ ಶಿಶುಮ್॥
–ಋಗ್ವೇದ/33.5 ಚತುರ್ಥಭಾಗ

ಬ್ರಹ್ಮ, ಬ್ರಾಹ್ಮಿ, ಬ್ರಾಹ್ಮಣ, ಬ್ರಹ್ಮಾವರ್ತ ಅಂತೆಯೇ ಲಿಪೀ, ಲಿಪಿತಂ, ಲಿಖಿತಂ (ಆರಂಭದ ಕಾಲದ ಖ ಹಾಗೂ ಪ ಅಕ್ಷರಗಳು ಪಲ್ಲಟಿತ ರೂಪಗಳು ê (ಖ) + (ಪ) ಇವನ್ನು ಗಮನಿಸಬೇಕು. ಲಪ್, ಲಬ್, ಲಿಪ್ (ಸಂಸ್ಕೃತ, ಪರ್ಷಿಯನ್ ಹಾಗೂ ಲ್ಯಾಟೀನ್) ಇವು ಒಂದು ಗುಂಪಿಗೆ ಸೇರಿದ ಭಾಷೆಗಳಲ್ಲಿಯ ಒಂದು ಶಬ್ದದ ಭಿನ್ನರೂಪಗಳು–ಫಾದರ್, ಪೀಟರ್ ಹಾಗೂ ಪಿತೃ ಇದ್ದಂತೆ. ಲಿಪಿ ಎಂಬುದರ ಮೂಲ ಲಿಖ ಇರಬಹುದು. ಇವೆಲ್ಲಕ್ಕೂ ಮೂಲ ರಿಖ್ ಎಂಬುದೂ ಖಚಿತವಿದೆ. ರೇಖೆ, ರೇಖ್ತಾ ಮತ್ತು ಕೆಲವೆಡೆ ತಾಮ್ರಫಲಕ ಶಾಸನಕ್ಕೆ ಜಯರೇಖೆ ಎಂದು ಹೇಳುತ್ತಾರೆ. ಬರೆವಣಿಗೆ ಆರಂಭದಲ್ಲಿ ರೇಖಾ ಮೂಲಕವೇ ಇದ್ದಿತು, ಒಂದರ್ಥ ಅಕ್ಷರಗಳು ವೃತ್ತದ ರೂಪ ಧರಿಸಿರಬಹುದು.

ಇನ್ನು ಅಶೋಕನ ಶಾಸನಗಳ ಪ್ರದೇಶಗಳನ್ನೂ ಭಾಷೆಗಳನ್ನೂ ಗಮನಿಸುವುದು ಸೂಕ್ತ. ಆತ ತಾನು ಅನುಸರಿಸುವ ಧರ್ಮದ ತತ್ತ್ವಗಳನ್ನು ಎಲ್ಲರೂ ತಿಳಿಯಬೇಕು. ಹಾಗೂ ಪಾಲಿಸಿ ಸತ್ಪ್ರಜೆಗಳಾಗಬೇಕೆಂದು ಬಯಸಿದ್ದ. ಅಂತೆಯೆ ತಾನು ಹಾಕಿಸಿದ ಶಾಸನಗಳನ್ನು ಧರ್ಮಲಿಪಿ ಎಂದು ಕರೆದಿದ್ದಾನೆ. ಹಿಮಾಲಯಬೆಟ್ಟ ಶ್ರೇಣಿಗಳ ಆಚೆ ವಾಯವ್ಯದಲ್ಲಿ –ಆಫ್ಘಾನಿಸ್ತಾನ, ಕಂದಹಾರ– ಮುಂತಾದ ಎಡೆಗಳಲ್ಲಿ– ಅರಮೇಯಿಕ್ ಹಾಗೂ ಗ್ರೀಕ್ ಭಾಷೆಗಳಲ್ಲಿ ಶಾಸನಗಳನ್ನು ಹಾಕಿಸಿದ್ದಾನೆ. ಇಲ್ಲಿ ಅರೇಬಿಕ್, ಗ್ರೀಕ್ ಹಾಗೂ ಖರೋಷ್ಠಿಲಿಪಿಗಳಲ್ಲಿ ಶಾಸನಗಳನ್ನು ಬರೆಯಲಾಗಿದೆ. ಆರ್ಯಾವರ್ತ್ತ ತದಂತರ್ಗ್ಗತ ಬ್ರಹ್ಮಾವರ್ತ ಮೊದಲು ಮಾಡಿಕೊಂಡು ಭಾರತದ ತುಂಬ ಹಾಗೂ ಅವನ ರಾಜ್ಯದ ಹೊರಗಿನ ತಾಮ್ರಪರ್ಣಿ ಪ್ರದೇಶದವರೆಗೂ ಬ್ರಾಹ್ಮಿಲಿಪಿಯ ಬಳಕೆಯ ಇದ್ದುದು ಸ್ಪಷ್ಟವಿದೆ. ಲಿಪಿಕರೇಣ ಎಂಬ ಒಂದು ಶಬ್ದ ಬ್ರಹ್ಮಗಿರಿ ಸಂಕೀರ್ಣ ಪ್ರದೇಶದಲ್ಲಿ ಇರುವುದನ್ನು ಬಿಟ್ಟರೆ ಈ ಅಖಂಡ ಪ್ರದೇಶದಲ್ಲಿ ಬ್ರಾಹ್ಮಿಲಿಪಿಯೆ ಬಳಕೆಯಲ್ಲಿ ಇದ್ದಿತು. ಕಾಗುಣಿತಗಳು ಬ್ರಾಹ್ಮಿಯಲ್ಲಿ ಇರುವಂತೆ ಗ್ರೀಕ್ ಇತ್ಯಾದಿ ಭಾಷೆಗಳಲ್ಲಿ ಇಲ್ಲ. ಅಶೋಕನ ಶಾಸನಗಳಲ್ಲಿ ದೊರೆತ ಅಕ್ಷರಗಳ ವಿವರ ಹೀಗಿದೆ:

ಸ್ವರಗಳು: ಅ ಆ ಇ ಉ ಏ ಓ = 06
ವರ್ಗೀಯ ವ್ಯಂಜನಗಳು: ಕ ವರ್ಗ, ಚ ವರ್ಗ,
ಟವರ್ಗ, ತವರ್ಗ, ಪವರ್ಗ = 25
ಅವರ್ಗೀಯ ವ್ಯಂಜನಗಳು: ಯ ರ ಲ ವ ಶ ಷ ಸ ಹ = 08
ಯೋಗವಾಹ: ಒಂದು: ಬಿಂದು = 01
ಒಟ್ಟು ಅಕ್ಷರಗಳು = 40.

ಪ್ರಾಕೃತದಲ್ಲಿ ನ ಅಕ್ಷರವೇ ಇಲ್ಲ. ನ ಕಾರದಿಂದ ಯಾವ ಶಬ್ದವೂ ಹುಟ್ಟುವುದಿಲ್ಲ (ನೋಡಿ: ಪಾಇಅಸದ್ದ ಮಹಾಣ್ಣವೋ: ಪ್ರಾಕೃತ ನಿಘಂಟು).

ತೇತ್ತೀಸ ವೆಂಜಣಾಹಂ
ಸತ್ತಾವೀಸಾ ಸರಾತಹಾಭಣಿಯಾ
ಚತ್ತಾರಿಯ ಜೋಗವಹಾ
ಚಉಸಟ್ಟೀ ಮೂಲವಣ್ಣಾ ಓ ॥
ನೇಮಿಚಂದ್ರ, ಗೊಮ್ಮಟಸಾರ (1–352).

| | | |
|---|---|---|
| ಇವನ ಪ್ರಕಾರ : ಸ್ವರಗಳು = | | 27 |
| ವ್ಯಂಜನಗಳು = | (25+8) | 33 |
| ಯೋಗವಾಹಗಳು = | | 4 |
| ಒಟ್ಟು : | | 64 |

ಪ್ರಾಕೃತ ಭಾಷೆಗೆ 64 ಅಕ್ಷರಗಳ ಆವಶ್ಯಕತೆ ಇಲ್ಲ. ಇವೆಲ್ಲವೂ ಅದರಲ್ಲಿ ಬಳಕೆಗೊಂಡಿಲ್ಲ. 64ರ ವಿವರಣೆ ಸಂಸ್ಕೃತ ಭಾಷೆಯಲ್ಲಿ ಇದ್ದಂತೆ ಹೇಳಿದರೂ ಪ್ಲುತಸ್ವರಕ್ಕೆ ಎಲ್ಲಿಯೂ ಚಾಕ್ಷುಷ ರೂಪವೇ ಇಲ್ಲ ಮತ್ತೆ ಸ್ವರಗಳಲ್ಲಿ ಅಇಉಋ ಲೃ = 5 ಸ್ವರಗಳಿಗೆ ಚಾಕ್ಷುಷ ರೂಪಗಳಿವೆ. ಪ್ರಾಕೃತ ವಿವರಣೆ ಆ ಈ ಊ ೠ ಲೄ ಏ ಐ ಓ ಔ = 9ಕ್ಕೂ ಹ್ರಸ್ವ ರೂಪಗಳಿವೆಯೆಂಬುದೂ ಸರಿಯಲ್ಲ ಮತ್ತೆ ಪ್ಲುತಕ್ಕೆ ಚಾಕ್ಷುಷ ರೂಪಗಳಿವೆಯೆಂದು ಹೇಳಿರುವುದಕ್ಕೂ ಸರಿಯಾದ ವಿವರಣೆಯಲ್ಲ. ಪ್ಲುತ ಎಳೆದ ದೀರ್ಘಸ್ವರವೇ ಒಂದು ಮಾತ್ರೆಯನ್ನು ಭರಿಸಿಕೊಡುವ ಸಂಗೀತದ ಛಂದೋರೂಪ. ಲಿಪಿಯ ಪರಿಧಿಯಲ್ಲಿ ಇದು ಬರದು.

ಬೌದ್ಧ ಸಾಹಿತ್ಯದಲ್ಲೂ ಲಿಪಿ ಹಾಗೂ ಬರೆಯುವ ಸಾಧನಗಳ ಬಗ್ಗೆ ಪ್ರಸ್ತಾಪವಿದ್ದರೂ ಬುದ್ಧ ಅಥವಾ ಬುದ್ಧರು (24) ಲಿಪಿಯನ್ನು ಸೃಷ್ಟಿಸಿದರೆಂದು ಎಲ್ಲಿಯೂ ಹೇಳಿಲ್ಲ (ಚುಲ್ಲವಗ್ಗ, ಲಲಿತವಿಸ್ತರ ಇತ್ಯಾದಿಗಳನ್ನು ಗಮನಿಸಿ). ಬುದ್ಧನಿಗೆ ಬಾಲ್ಯದಲ್ಲಿ ಗಂಧದ ಹಲಗೆಯ ಮೇಲೆ ಚಿನ್ನದ ಲೇಖನಿಯಿಂದ ಬರೆಯಲು ಕಲಿಸಿದುದಾಗಿ ತಿಳಿದುಬಂದಿದೆ. ಇದರಲ್ಲಿ ಒಂದಷ್ಟು ಅತಿಶಯತೆ ಇರಬಹುದು. ಆದರೆ ಓದು–ಬರೆಹ–ಸಾಕಷ್ಟು ಬೆಳೆದಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಅಶೋಕನ ಶಾಸನಗಳ ಲಿಪಿಯನ್ನು ನೋಡಿದರೆ ಬ್ರಾಹ್ಮಿಲಿಪಿಯ ಅಕ್ಷರಗಳ ವಲನದಲ್ಲಿ ಏಕರೂಪತೆಯೇ ಕಂಡುಬರುತ್ತದೆ; ಅರ್ಥಾತ್ ಈ ಲಿಪಿಯಲ್ಲಿ ಉತ್ತರ ಭಾರತಕ್ಕೂ ದಕ್ಷಿಣ ಭಾರತಕ್ಕೂ ವಿಶೇಷ ಭೇದವಿದ್ದುದು ಕಂಡುಬರುವುದಿಲ್ಲ. ಕಾಲಕ್ರಮದಲ್ಲಿ ವಿಕಾಸ ಹೊಂದುತ್ತ ನಾಗರೀ ಹಾಗೂ ದ್ರಾವಿಡ ಲಿಪಿಗಳಿಗೆ ಜನ್ಮಕೊಟ್ಟಿತು. ಉತ್ತರದ ನಾಗರಿಲಿಪಿ ಮುಂದೆ ಉತ್ತರ ಭಾರತದ ಎಲ್ಲ ಲಿಪಿಗಳಿಗೂ ಮೂಲವಾಯಿತು. ದಕ್ಷಿಣ ಭಾರತದಲ್ಲಿ ಆರಂಭದಲ್ಲಿ ಕನ್ನಡ–ತೆಲುಗು ಲಿಪಿ ಹಾಗೂ ತಮಿಳು (ದ್ರಾವಿಡ) ಲಿಪಿಗಳಿಗೆ ತದಂತರ್ಗತ ಗ್ರಂಥಲಿಪಿ ಹಾಗೂ ವಟ್ಟೆಳುತ್ತು ಮುಂತಾದ ಹಲವು ಬರೆಹದ ಪದ್ಧತಿಗಳಿಗೆ ಮೂಲವಾಗಿ ರಾರಾಜಿಸಿತು. ರೇಖಾಮೂಲಕ ಇದನ್ನು ಕೆಳಗಿನಂತೆ ತೋರಿಸಬಹುದು:




ಭಾಷಾವಾರು ವಿವರಿಸುವುದು ಒಂದು ಪದ್ಧತಿ. ಆದರೆ ರಾಜಮನೆತನಗಳ ದಾಖಲೆಗಳನ್ನು ಆಧರಿಸಿಕೊಂಡು ಇದೇ ಬರೆವಣಿಗೆಯ ಲಿಪಿಯನ್ನು ಮೌರ್ಯ, ಕುಷಾಣ, ಕ್ಷತ್ರಪ, ಸಾತವಾಹನ, ಗುಪ್ತ, ಇಕ್ಷ್ವಾಕು, ಕದಂಬ, ಶಾಲಂಕಾಯನ, ವಿಷ್ಣುಕುಂಡಿನ್, ಪಲ್ಲವ, ಪಾಂಡ್ಯ, ಚೋಳ, ಬಾದಾಮಿ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣಚಾಳುಕ್ಯ, ಕಳಚುರಿ, ಪರಮಾರ, ಪ್ರತಿಹಾರ, ಗಂಗ–ಪೂರ್ವಗಂಗ, ಯಾದವ, ಸೇನ ಗಡವಾಲ, ಕಾಕತೀಯ, ಹೊಯ್ಸಳ, ವಿಜಯನಗರ, ರೆಡ್ಡಿ, ಮೈಸೂರು ಹಾಗೂ ನಾಯಕರುಗಳ ಕಾಲದ ಶಾಸನಗಳನ್ನು ಆಯಾ ಮನೆತನದ ಲಿಪಿಗಳೆಂದು ವಿವರಿಸುತ್ತಾರೆ. ಪ್ರಾದೇಶಿಕ ಭೇದಗಳನ್ನು ಆಧರಿಸಿ ಕೂಡ ಲಿಪಿಗಳನ್ನು ವಿವರಿಸಬಹುದು.

ಬ್ರಾಹ್ಮಿಲಿಪಿ ಭಾರತದ ತುಂಬ ಬೆಳೆದು ನಿಂತಂತೇ ಭಾರತದಾಚೆಗೆ ಕೂಡ ಬೆಳೆದು ನಿಂತಿದೆ. ಇದಕ್ಕೆ ಕಾರಣ ಅಶೋಕನ ಧರ್ಮಪ್ರಸಾರ ಮತ್ತು ಅನಂತರದಲ್ಲಿ ಭಾರತದ ಆಚೆಗೂ ತಮ್ಮ ಆಡಳಿತವನ್ನು ಪಸರಿಸಿದ ರಾಜಮನೆತನಗಳ ವಿಜಿಗೀಷುತನ ಇವರ ಹಿಂದೆಯೆ ವ್ಯಾಪಾರಿ ಮನೋಭಾವದ ವ್ಯಾಪಾರಿಗಳ ಸಾಹಸ ಸೇರಿ ಅವರ ಭಾಷೆಗಳೂ ಅವರು ಹೋದಲ್ಲಿ ನೆಲೆನಿಂತವು. ಅಶೋಕನು ತಾಮ್ರಪರ್ಣಿ (ತಾಂಬಪಣ್ಣಿ / ಶ್ರೀಲಂಕ) ದೇಶಕ್ಕೆ ಧರ್ಮಪ್ರಚಾರಕ್ಕೆಂದು ಬೌದ್ಧಭಿಕ್ಷುಗಳನ್ನೂ ತನ್ನ ಮಕ್ಕಳನ್ನೂ ಕಳಿಸಿದ್ದ. ಆಗ ಪಾಲಿ, ಪ್ರಾಕೃತ ಭಾಷೆ ಅಲ್ಲಿ ಹರಡಿತು. ಗುಪ್ತರ ಕಾಲಕ್ಕೆ ಸಂಸ್ಕೃತ ಭಾಷೆ ಹರಡಿತು. ಅರ್ಧಮಾಗಧಿ, ಪಾಲಿ ಇವೆಲ್ಲ ಪ್ರಾಕೃತಗಳೆ. ಸಂಸ್ಕೃತ, ಪ್ರಾಕೃತ ಇವು ಒಂದು ಭಾಷೆಯ ಶುದ್ಧ ಹಾಗೂ ಆಡು ರೂಪಗಳು–ಅಪಭ್ರಂಶಿತ ರೂಪಗಳು. ವಿದ್ವಾಂಸರು ಈ ಬೆಳೆವಣಿಗೆಯನ್ನು ಪೂರ್ವ, ಪಶ್ಚಿಮ ಹಾಗೂ ಇವುಗಳ ಜೊತೆಗೆ ದಕ್ಷಿಣ ಹಾಗೂ ಮಧ್ಯ ಏಷ್ಯ ಎಂಬ ಇನ್ನೆರಡು ಭಾಗಗಳನ್ನು ಸೇರಿಸಿ ಅಭ್ಯಾಸಗೈದಿದ್ದಾರೆ. ಇವುಗಳ ಹರವು ಬಹಳ ವಿಸ್ತಾರವಾಗಿದೆ: ತುರ್ಕಿಸ್ತಾನ, ಪಶ್ಚಿಮ ಚೀನ, ಖೋಟಾನಿಯ ಶಕರಲಿಪಿ, ಟಿಬೆಟ್, ಬರ್ಮ, ಭೂತಾನ್, ಸಿಕ್ಕಿಂ, ನೇಪಾಲ, ಲಡಾಖ್, ಖಾಲಿಸ್ತಾನ್, ಸಿಂಹಳಿಲಿಪಿ (ಶ್ರೀಲಂಕ), ಮಾಲ್ದೀವಿ, ಚಾಮ್ (ಅನ್ನಾಂ), ಕಾಂಬೋಡಿಯ, ಥೈಲೆಂಡ್, ಖ್ಮರ್, ಇರ್‍ವಾಡಿ (ತಲ್ಯೆಂಗರ) ಮೋನ್ ಭಾಷೆ, ಪ್ರೋಮ್‍ದ (ಪ್ಯುಭಾಷೆ) ಬರೆವಣಿಗೆ, ಲಾವೋಲಿಪಿ, ಖಮ್ತಿಲಿಪಿ (ಅಸ್ಸಾಮಿನ ಪೂರ್ವದಲ್ಲಿರುವ ಚೀನದ ಒಂದು ಭಾಷೆ); ಇಂಡೊನೇಷ್ಯ ಪ್ರದೇಶದಲ್ಲಿ ಜಾವಲಿಪಿ, ಸುಮಾತ್ರಲಿಪಿ, ಬೋರ್ನಿಯೊಲಿಪಿ, ಬತಕರ್‍ಲಿಪಿ, ಲಂಪಾಂಗಲಿಪಿ, ರೆಡ್‍ಜಾಂಗರಲಿಪಿ, ವಾಗಿಯರಲಿಪಿ, ಫಿಲಿಪೀನ್ ದ್ವೀಪಗಳ ಲಿಪಿಗಳು (ತಗ್‍ಲಾಗ್, ತಗ್‍ಬನಾ ಹಾಗೂ ಮನ್ಯ್ಯಾನ್‍ಲಿಪಿ) ಬ್ರಾಹ್ಮಿಲಿಪಿಯಿಂದ ಇಲ್ಲವೇ ಇದರ ಪ್ರಭಾವದಿಂದ ಬೆಳೆದು ನಿಂತಿವೆ. (ಎಸ್.ಜಿ.ಎ.)

**ತಮಿಳು ಬ್ರಾಹ್ಮಿಲಿಪಿ:** ದಕ್ಷಿಣ ಭಾರತದಲ್ಲಿ ಬಳಕೆಯಲ್ಲಿದ್ದ ಹಲವು ಲಿಪಿಗಳಲ್ಲಿ ತಮಿಳು ಬ್ರಾಹ್ಮಿ ಲಿಪಿ ಒಂದು. ತಮಿಳುನಾಡಿನಲ್ಲಿ ಪ್ರಚಲಿತ ಶಕೆಯ ಆರಂಭ ಕಾಲದಲ್ಲಿ ಈ ಲಿಪಿಯನ್ನು ಬಳಸಲಾಗುತ್ತಿತ್ತು. ತಮಿಳು ಬ್ರಾಹ್ಮಿ ಲಿಪಿ ಅಶೋಕನ ಕಾಲದಿಂದ ಬಳಸಲಾಗುತ್ತಿದ್ದ ಬ್ರಾಹ್ಮಿ ಲಿಪಿಯಾಗಿದ್ದು ತಮಿಳು ಭಾಷೆಯ ಉಚ್ಚಾರಣೆಗೆ ಅನುಗುಣವಾಗಿ ಲಿಪಿಯಲ್ಲಿ ಸ್ವಲ್ಪಮಟ್ಟಿಗೆ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಲಾಯಿತು. ಇದರಿಂದಾಗಿ ಈ ಲಿಪಿಯನ್ನು ತಮಿಳು ಬ್ರಾಹ್ಮಿ ಲಿಪಿಯೆಂದು ಐರಾವತಮ್ ಮಹದೇವನ್‍ರವರು ಹೆಸರಿಸಿದರು. ಇದಕ್ಕೆ ಪೂರ್ವದಲ್ಲಿ ಲಿಪಿಗೆ ದ್ರಾವಿಡಿ ಹಾಗೂ ದಮಿಳಿ ಎಂದು ಕರೆಯಲಾಗುತ್ತಿತ್ತು. ತಮಿಳು ಬ್ರಾಹ್ಮಿ ವರ್ಣಮಾಲೆಯಲ್ಲಿ ವರ್ಗ ಪ್ರಥಮಾಕ್ಷರಗಳನ್ನು ಮಾತ್ರ ಬಳಸಲಾಗಿದೆ. ವರ್ಗ ಪ್ರಥಮಾಕ್ಷರಗಳ ಜೊತೆಗೆ ವರ್ಗದ ಅನುನಾಸಿಕಾಕ್ಷರಗಳು ಉಳಿದುಕೊಂಡಿವೆ ಮತ್ತು ವ್ಯಂಜನಗಳಲ್ಲಿ ಕೆಲವೊಮ್ಮೆ ತ, ಧ ವನ್ನು ಬಳಸಲಾಗಿದೆ. ವರ್ಗ ತೃತೀಯಗಳು ಇಲ್ಲ. ಮಹಾ ಪ್ರಾಣಾಕ್ಷರಗಳಲ್ಲಿ ಥ ಕಾರ, ಧ ಕಾರವನ್ನು ಮಾತ್ರ ಬಳಸಿದ್ದು ಉಳಿದವುಗಳನ್ನು ಬಳಸಿಲ್ಲ. ಶ, ಷ ಗಳ ಬಳಕೆಯಿಲ್ಲ ಹಾಗೂ ಸ ಕಾರವನ್ನು ಅಪರೂಪವಾಗಿ ಬಳಸಲಾಗಿದೆ. ಋ ಕಾರ ಲೃ, ಔ ಕಾರಗಳನ್ನು ಬಳಸಿಲ್ಲ. ತಮಿಳು ಬ್ರಾಹ್ಮಿ ಲಿಪಿಯ ಮೂಲ ಕುರಿತಂತೆ ವಿದ್ವಾಂಸರು ತಮ್ಮ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಸಿ. ಶಿವರಾಮಮೂರ್ತಿಯವರು ಭಟ್ಟಿಪ್ರೋಲು ಶಾಸನದ ಬ್ರಾಹ್ಮಿಲಿಪಿ ತಮಿಳು ಬ್ರಾಹ್ಮಿಯ ಮೂಲವೆಂದು ಅಭಿಪ್ರಾಯಪಟ್ಟಿದ್ದಾರೆ. ಭಟ್ಟಿಪ್ರೋಲುವಿನ ಕರಂಡಕದ ಲಿಪಿಯಲ್ಲಿಯ ಕೆಲವು ಅಕ್ಷರಗಳ ಸಾಮ್ಯವನ್ನು ತಮಿಳು ಬ್ರಾಹ್ಮಿಯಲ್ಲಿ ಗುರುತಿಸಲಾಗಿದೆ. ಆದ್ದರಿಂದ ಭಟ್ಟಿಪ್ರೋಲು ಲಿಪಿಯಿಂದ ಇದು ಬಂದಿರಬಹುದು ಎನ್ನಲಾಗುತ್ತದೆ. ಕರಂಡಕದ ಮೇಲೆ ಶಾಸನಗಳನ್ನು ಕೊರೆಯಲಾಗಿದ್ದು, ಲಭ್ಯಸ್ಥಳದಲ್ಲಿ ಅಕ್ಷರಗಳನ್ನು ಮೂಡಿಸುವ ಅನಿವಾರ್ಯತೆ ಇರುವುದರಿಂದ ಕೆಲವು ಅಕ್ಷರಗಳು ಉದ್ದವಾಗಿವೆ.

ಆದರೆ ಭಟ್ಟಿಪ್ರೋಲು ಶಾಸನದ ಲಿಪಿ ವಿಶಿಷ್ಟವಾಗಿದೆ. ತಮಿಳು ಬ್ರಾಹ್ಮಿಯನ್ನು ಹೋಲುವಂತಿದ್ದರೂ ಅದರಿಂದ ತಮಿಳು ಬ್ರಾಹ್ಮಿ ಉದಯಿಸಿಲ್ಲವೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಬ್ರಾಹ್ಮಿಯನ್ನು ಬಳಸುತ್ತಿದ್ದ ಜೈನಪಂಡಿತರು ಹಾಗೂ ಮುನಿಗಳು ಪ್ರ.ಶ.ಪೂ. 2–1ನೆಯ ಶತಮಾನದಲ್ಲಿ ದಕ್ಷಿಣಕ್ಕೆ ಬಂದಾಗ ಅವರು ಈ ಲಿಪಿಯನ್ನು ಇಲ್ಲಿಗೆ ತಂದರು ಮತ್ತು ತಮ್ಮ ವಾಸಸ್ಥಳವಾದ ಕಲ್ಲುಹಾಸಿಗೆಗಳ ಬಳಿ, ಗವಿ ಮತ್ತು ಕಲ್ಲಾಸರೆಗಳಲ್ಲಿ ಬಳಸಿದರು. ಈ ಲಿಪಿ ಪ್ರ.ಶ.3ನೆಯ ಶತಮಾನದವರೆಗೆ ಬಳಕೆಯಲ್ಲಿತ್ತು. ತಮಿಳು ಬ್ರಾಹ್ಮಿಲಿಪಿ ಸಿಂಧೂಲಿಪಿಯಿಂದ ಉದಯಿಸಿತೆಂದು ನಾಗಸ್ವಾಮಿಯವರು ಅಭಿಪ್ರಾಯ ಪಟ್ಟಿದ್ದಾರೆ. ತಮಿಳು ಬ್ರಾಹ್ಮಿಲಿಪಿ ಬ್ರಾಹ್ಮಿಗಿಂತಲೂ ಪ್ರಾಚೀನವೆಂದೂ ಅಶೋಕ ದಕ್ಷಿಣದಿಂದ ಅಂದರೆ ತಮಿಳು ಬ್ರಾಹ್ಮಿಯಿಂದಲೇ ಬ್ರಾಹ್ಮಿಲಿಪಿಯನ್ನು ಪಡೆದನೆಂಬ ವಾದವನ್ನು ಕಣ್ಣಯ್ಯನ್ ಮಂಡಿಸುತ್ತಾರೆ. ಬಿ.ಆರ್. ಗೋಯಲ್ ಅವರು ಜೈನರು ಮತ್ತು ವ್ಯಾಪಾರಿಗಳು ಈ ಲಿಪಿ ದಕ್ಷಿಣ ಪ್ರಾಂತದಲ್ಲಿ ಬಳಕೆಯಾಗುವುದರಲ್ಲಿ ಕಾರಣೀಭೂತರೆಂದರೆ, ಕೆ.ವಿ. ಸುಬ್ರಮಣಿ ಅಯ್ಯರ್ ಅವರು ಈ ಲಿಪಿ ಅಶೋಕನಿಗಿಂತ ಪೂರ್ವದ ಲಿಪಿಯೆಂದು ವಾದಿಸುತ್ತಾರೆ. ಅರಿಕಮೇಡು ಮತ್ತು ಸಿತ್ತನವಾಸಲ್‍ಗಳಲ್ಲಿ ಈ ಲಿಪಿಯಿರುವ ಗುಹೆಗಳ ಸಮೀಪ ದೊರಕಿರುವ ಮಣ್ಪಾತ್ರೆಗಳ ಚೂರುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಕಾಲನಿರ್ಣಯಿಸಿದ್ದಾರೆ. ಆದರೆ ಎ.ಎಚ್. ದಾನಿಯವರು ಎಲ್ಲ ಲಿಪಿಗಳ ಕಾಲಮಾನ ಪ್ರಶ. ಮೊದಲ ಶತಮಾನವೆಂದು ನಿರ್ಧರಿಸಿದ್ದಾರೆ. ಟಿ.ವಿ. ಮಹಾಲಿಂಗಂ ಅವರು ಈ ಲಿಪಿ ಶಾಸನಗಳಲ್ಲಿ ಪ್ರ.ಶ.ಪೂ.3ರಿಂದ ಪ್ರಶ. 3–4ನೆಯ ಶತಮಾನದವರೆಗೆ ಬಳಕೆಯಲ್ಲಿ ಇತ್ತೆನ್ನುತ್ತಾರೆ. ಐರಾವತಮ್ ಮಹದೇವನ್ ರವರು ಈ ಲಿಪಿಯಲ್ಲಿ ಅರಿಕಮೇಡುವಿನ ಸಮಕಾಲೀನ ಮತ್ತು ಅರಿಕಮೇಡುವಿನ ಉತ್ತರ ಕಾಲ ಎಂಬ ಎರಡು ಕಾಲಘಟ್ಟಗಳನ್ನು (ಪ್ರ.ಶ.ಪೂ.3ನೆಯ – ಪ್ರ.ಶ.6ನೆಯ ಶತಮಾನದ ಕಾಲಮಾನ) ಗುರುತಿಸಿದ್ದಾರೆ. ಕೊರ್ಕೈ ಉತ್ಖನನದಲ್ಲಿ ಈ ಲಿಪಿಯುಳ್ಳ ಕೆಲವು ಮಣ್ಪಾತ್ರೆಗಳು ದೊರಕಿದ್ದು ಅವುಗಳು ಪ್ರ.ಶ.ಪೂ. 8ನೆಯ ಶತಮಾನಕ್ಕೆ ಸೇರುತ್ತವೆ ಎಂಬುದು ಷಣ್ಮುಗಂ ಅವರ ಅಭಿಪ್ರಾಯ.

ಜೈನ ಮತ್ತು ಬೌದ್ಧರು ತಮ್ಮ ಜನನಿಬಿಡ ಸ್ಥಳಗಳಿಂದ ದೂರದ ಗುಹಾ ಸ್ಥಳಗಳಲ್ಲಿ ತಮ್ಮ ಅಧ್ಯಯನ, ಧ್ಯಾನಗಳಿಗೋಸ್ಕರ ಇರುತ್ತಿದ್ದು ಆ ಸ್ಥಳಗಳಲ್ಲಿ ತಮ್ಮ ಗುರು ಅಥವಾ ಅವರ ಹೆಸರಿನಲ್ಲಿಯೇ ಕಿರು ಶಾಸನಗಳನ್ನು ಕೆತ್ತಿಸುತ್ತಿದ್ದರು. ಇಂತಹ ಶಾಸನಗಳು ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರ.ಶ.5ನೆಯ ಶತಮಾನದವರೆಗೆ ಲಭ್ಯವಿದೆ. ಈ ಶಾಸನಗಳು ಅಶೋಕನ ಶಾಸನಗಳಿಗಿಂತ ಪ್ರಾಚೀನವೆಂದರೂ ಅವು ಅಶೋಕನ ಕಾಲದ ಬ್ರಾಹ್ಮಿಯಿಂದಲೇ ಉಗಮವಾಗಿದೆ ಎಂಬುದನ್ನು ಬಹುತೇಕರು ಒಪ್ಪಿರುತ್ತಾರೆ. ಈ ಶಾಸನಗಳ ಭಾಷೆ ಪ್ರಾಕೃತ ವೆಂದು ಕೆಲವರು ಪರಿಗಣಿಸಿದರೆ ಮತ್ತೆ ಕೆಲವರು ತಮಿಳು ಎಂದಿರುತ್ತಾರೆ. ಜೈನಮುನಿಗಳು ತಮಿಳುನಾಡಿಗೆ ಹೋದಾಗ ರೇಖೆಯಾಕಾರದ ಲಿಪಿ ಅಲ್ಲಿ ಬಳಕೆಯಲ್ಲಿತ್ತು ಎಂದು ಇದುವೇ ದಮಿಳಿ ಮತ್ತು ಪೊಲಿಂದಿ ಎಂದು ಕೆ.ವಿ.ರಮೇಶ ಅವರು ಅಭಿಪ್ರಾಯ ಪಡುತ್ತಾರೆ. ತಮ್ಮ ವಾದವನ್ನು ಮುಂದುವರೆಸಿ ಈ ಲಿಪಿಗಳು ಅಶೋಕನಿಗಿಂತ ಪೂರ್ವದ ಲಿಪಿಯೆಂದು ಮುಂದೆ ಭಟ್ಟಿಪ್ರೋಲು, ಅಲ್ಲಿಂದ ಮಹಾಸ್ಥಾನದಿಂದ ಪಿಪ್ರಹ್ವಕ್ಕೆ ಹೋಯಿತೆಂದು ಅದನ್ನೇ ಅಶೋಕ ಬಳಸಿದ ಎನ್ನುತ್ತಾರೆ. ಆದರೆ ಜೈನರು ಅಶೋಕನ ಮೊಮ್ಮಗನ ಕಾಲದಲ್ಲಿ ದಕ್ಷಿಣಕ್ಕೆ ಬಂದಿದ್ದು ಆ ಸಮಯಕ್ಕಾಗಲೇ ಅಶೋಕನ ಶಾಸನಗಳು ಕರ್ನಾಟಕದಲ್ಲಿದ್ದವು. ಪಿಪ್ರಹ್ವ ಕರಂಡಕ ನಕಲಿ ಎಂಬ ವಾದ ಪ್ರಸ್ತುತ ಪ್ರಚಲಿತವಿರುವುದರಿಂದ ಈ ಅಭಿಪ್ರಾಯವನ್ನು ಮರುಪರಿಶೀಲಿಸಬೇಕಿದೆ.

ಸ್ಥಳೀಯ ವಸ್ತುಗಳಿಂದ ಅನನುಭವಿಗಳು ತಮಗೆ ಸರಿಕಂಡಂತೆ ಶಾಸನಗಳನ್ನು ಬರೆದಿರುವುದರಿಂದ ತಮಿಳು ಬ್ರಾಹ್ಮಿಲಿಪಿಗಳಲ್ಲಿ ಏಕತಾನತೆ ಇಲ್ಲ ಎನ್ನಲಾಗುತ್ತದೆ. ಇದೇ ಕಾರಣದಿಂದಾಗಿ ಅಶೋಕನ ಬ್ರಾಹ್ಮಿಲಿಪಿಯಿಂದ ಇವು ಭಿನ್ನವಾಗಿವೆ. ತಮಿಳುನಾಡಿನಲ್ಲಿ ತಮಿಳು ಬ್ರಾಹ್ಮಿಲಿಪಿಯ ಹಲವಾರು ಕಿರು ಶಾಸನಗಳು ಗುಹಾಸರೆಗಳಲ್ಲಿ ದೊರಕಿವೆ. ಅದರಂತೆಯೇ ಮಣ್ಪಾತ್ರೆಗಳ ಚೂರುಗಳ ಮೇಲೆಯೂ ಕಂಡುಬಂದಿದೆ. ಇಂಥ ಮಣ್ಪಾತ್ರೆಗಳು

ಆದಿ ಇತಿಹಾಸ ಕಾಲಕ್ಕೆ ಸೇರಿದವುಗಳಾಗಿವೆ. ಅಶೋಕನ ಬ್ರಾಹ್ಮಿಲಿಪಿಯ ಶಾಸನಗಳು ಪ್ರಾಕೃತ ಭಾಷೆಯಲ್ಲಿದ್ದರೆ, ತಮಿಳು ಬ್ರಾಹ್ಮಿಯ ಶಾಸನಗಳು ಸ್ಥಳೀಯ ತಮಿಳು ಭಾಷೆಯಲ್ಲಿವೆ. ತಮಿಳು ಬ್ರಾಹ್ಮಿ ಶಾಸನಗಳು ತಮಿಳು ಭಾಷೆಯಲ್ಲಿದ್ದರೂ ಅವುಗಳಲ್ಲಿ ಪ್ರಾಚೀನ ಕನ್ನಡವನ್ನು ಬಳಸಲಾಗಿದೆ ಎಂಬುದಕ್ಕೆ ಐರಾವತಮ್ ಮಹದೇವನ್‌ರವರು ಕೆಲವು ಉದಾಹರಣೆಗಳನ್ನು ಇತ್ತೀಚೆಗೆ ನೀಡಿದ್ದಾರೆ. ಎರುಮಿನಾಟು (ಎರುಮೈನಾಟು= ಮಹಿಷಮಂಡಲ, ಮೈಸೂರು); ಕವುಟಿ ಎಂಬುದು ವ್ಯಕ್ತಿನಾಮ, ಇದು ಗಾವುಡಿ, ಗೌಡಿಗೆ ಸಮಾನವಾದದು; ಪೋಸಿಲ್ (ತೆಂಕು–ಸಿರು–ಪೊಸಿಲ್= ತೆನ್–ಸಿರು–ವಾಯಿಲ್ ಎಂದು ಅನಂತರ ಕಾಲದ ತಮಿಳು ಶಾಸನಗಳು ಉಲ್ಲೇಖಿಸುತ್ತವೆ) ಇದು ಹೊಸಿಲು ಅಥವಾ ಹೊಸ್ತಿಲು ಎಂಬುದಾಗಿದೆ. ತಾಯಿಯರು ಎಂಬುದು ಪ್ರಾಚೀನ ಕನ್ನಡ ಭಾಷೆಯಾಗಿದ್ದು ಈ ಶಬ್ದವು ನೆಕನೂರ್‌ಪಟ್ಟಿಯ ಶಾಸನದಲ್ಲಿದೆ ಎಂದು ತಿಳಿಸಿದ್ದಾರೆ. ವ್ಯಕ್ತಿನಾಮದೊಂದಿಗೆ ಆಯಾ ಮತ್ತು ಪೊಳಾಲ ಎಂದಿದ್ದು ಅಣ್ಣಿ, ಅಪ್ಪ, ಮತ್ತು ಅಯ್ಯನ್ ಎಂಬ ಗೌರವದ ಜೋಡಣೆಯಾಗಿದೆ. ವ್ಯಾಕರಣ ರೀತಿಯಲ್ಲಿಯೂ ಕನ್ನಡದ ಬಳಕೆಯನ್ನು ಅವರು ಗುರುತಿಸಿದ್ದಾರೆ. ಅದರಂತೆ ಆ ಕಾರವು ತಮಿಳಿನಲ್ಲಿ ಇಲ್ಲ. ಇದನ್ನು ಕನ್ನಡದಿಂದ ಪಡೆದಿರಬಹುದು. ಉ ಕಾರದ ಜೋಡಣೆ ಪ್ರಾಚೀನ ತಮಿಳು ಭಾಷೆಯಲ್ಲಿ ಕಂಡುಬರುವುದಿಲ್ಲ. ಇವು ಪ್ರಾಚೀನ ಕನ್ನಡದ ಪ್ರಭಾವದಿಂದ ಆಗಿದೆ (ಉದಾ: ಊರು). ಈ ಜೋಡಣೆ 8ನೆಯ ಶತಮಾನದಿಂದ ಕಾಣಸಿಗುತ್ತವೆ ಎನ್ನುತ್ತಾರೆ.

ತಮಿಳು ಬ್ರಾಹ್ಮಿಲಿಪಿಯ ಶಾಸನಗಳು ಅಧಿಕವಾಗಿ ತಮಿಳುನಾಡಿನ ಮದುರೈ, ರಾಮನಾಥಪುರಂ, ತಿರುನೆಲ್ವೇಲಿ, ತಿರುಚ್ಚಿ ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲಿ ಕಾಣಸಿಗುತ್ತವೆ. ಪ್ರ.ಶ. 5ನೆಯ ಶತಮಾನದ ತರುವಾಯ ಗ್ರಂಥ, ವಟ್ಟೆಳುತ್ತು ಮತ್ತು ತಮಿಳು ಲಿಪಿಗಳ ಬಳಕೆ ಹೆಚ್ಚಿದಂತೆಲ್ಲ ತಮಿಳು ಬ್ರಾಹ್ಮಿಲಿಪಿಯ ಬಳಕೆ ಕಡಿಮೆಯಾಗುತ್ತ ಕ್ರಮೇಣ ಬಿಟ್ಟುಹೋಯಿತು. (ಸಿ.ಎಸ್.ವಿ.)

**ಸಿದ್ಧಮಾತೃಕಾ ಲಿಪಿ:** 6 ರಿಂದ 9ನೆಯ ಶತಮಾನಗಳ ಅವಧಿಯಲ್ಲಿ ಗುಪ್ತಕಾಲೀನ ಅಥವಾ ಅನಂತರದ ಬ್ರಾಹ್ಮಿಲಿಪಿಯಿಂದ ಉದ್ಭವಿಸಿ ನಾಗರೀ, ಶಾರದಾ ಮುಂತಾದ ಉತ್ತರಭಾರತದ ಪ್ರಾದೇಶಿಕ ಲಿಪಿಗಳ ಉಗಮಕ್ಕೆ ಕಾರಣವಾದ ಒಂದು ವಿಶಿಷ್ಟ ಲಿಪಿ. ಇದನ್ನು ಕುಟಿಲ ಮತ್ತು ಕೀಲಶೀರ್ಷಕ ಎಂಬ ವಿಶೇಷಣಗಳಿಂದಲೂ ಕರೆದಿದೆ. ವಿಕ್ರಮ ಸಂವತ್ಸರದ 1049ರ ದೇವಲ್ ಪ್ರಶಸ್ತಿ ಎಂಬ ಶಾಸನದಲ್ಲಿ ಕುಟಿಲಾಕ್ಷರಾಣಿ ಎಂಬ ಪದಗುಚ್ಛ ಕಂಡುಬಂದಿದೆ. ವಿಕ್ರಮಾಂಕದೇವಚರಿತದಲ್ಲೂ ಕುಟಿಲಾಕ್ಷರಗಳ ಉಲ್ಲೇಖವಿದೆ. ಆದರೆ ಈ ಉಲ್ಲೇಖಗಳು ಸಿದ್ಧಮಾತೃಕಾ ಲಿಪಿಗೆ ಸಂಬಂಧಿಸಿದಂತೆ ಕಾಣುವುದಿಲ್ಲ. ಈ ಲಿಪಿಯ ಅಕ್ಷರಗಳ ಶಿರೋಭಾಗಗಳಲ್ಲಿ ತ್ರಿಕೋನಾತ್ಮಕ ಗುರುತುಗಳಿದ್ದು ಅವು ಕಬ್ಬಿಣದ ಮೊಳೆಯ ಮೇಲ್ಭಾಗವನ್ನು ಹೋಲುವುದರಿಂದ ಕೀಲಶೀರ್ಷಕವೆಂಬ ಹೆಸರು ಬಂದಿತು. ಕಾಶ್ಮೀರ ಮತ್ತು ವಾರಾಣಸಿ ಪ್ರದೇಶಗಳಲ್ಲಿ ಸಿದ್ಧಮಾತೃಕಾ ಲಿಪಿಯನ್ನು ಬಳಸಲಾಗುತ್ತಿತ್ತೆಂದು ಆಲ್ಬೆರೂನಿಯ ವೃತ್ತಾಂತದಲ್ಲಿ ಹೇಳಿದೆ. ಈ ಅಕ್ಷರಗಳು ಬಲಬದಿಯಿಂದ ಎಡಬದಿಗೆ ವಾಲಿಕೊಂಡಿರುತ್ತವೆ ಮತ್ತು ಕೆಳಭಾಗಗಳಲ್ಲಿ ಲಘುಕೋನಗಳನ್ನುಂಟುಮಾಡುತ್ತವೆ. ಅಕ್ಷರಗಳ ನೇರ ಅಥವಾ ಓರೆ ರೇಖೆಗಳು ತಮ್ಮ ಮೇಲ್ಭಾಗದಲ್ಲಿ ಚಿಕ್ಕ ಬೆಣೆಯಾಕೃತಿಗಳನ್ನು ತಪ್ಪದೇ ಹೊಂದಿವೆ. ಮತ್ತು ಅವುಗಳ ಕೆಳ ತುದಿಯಲ್ಲಿ ಅಂಥವೇ ಅಥವಾ ಕೊಳವೆಯಾಕಾರದ ಅಲಂಕರಣಗಳಿರುತ್ತವೆ. ಕಾಗುಣಿತದ ಏ ಮುಂತಾದ ಅಕ್ಷರಗಳಲ್ಲಿ ಬರುವ ಶಿರೋಮಾತ್ರೆಗಳು ಅಲಂಕಾರಗೊಳ್ಳುವ ಪ್ರವೃತ್ತಿ ಕಂಡುಬರುತ್ತವೆ. ಇವಿಷ್ಟು ಸಿದ್ಧಮಾತೃಕಾ ಲಿಪಿಯ ಮುಖ್ಯ ಲಕ್ಷಣಗಳು.

ಗುಪ್ತಕಾಲೀನ ಬ್ರಾಹ್ಮಿ ಲಿಪಿಯನ್ನು ಉತ್ತರ, ದಕ್ಷಿಣ, ಮಧ್ಯಭಾರತದ ಲಿಪಿ ಎಂದು ವಿಭಿನ್ನ ದೃಷ್ಟಿಕೋನಗಳಿಂದ ವರ್ಗೀಕರಿಸಲಾಗಿದೆ. ಖ್ಯಾತ ಲಿಪಿಶಾಸ್ತ್ರಜ್ಞರಾದ ಬ್ಯೂಲರ್ ಈ ಲಿಪಿಯನ್ನು ಪೂರ್ವ ಮತ್ತು ಪಶ್ಚಿಮ ಎಂಬ ಎರಡು ಪ್ರಕಾರಗಳಲ್ಲಿ ಗುರುತಿಸಿದ್ದಾನೆ. ಇವನ ಅಭಿಪ್ರಾಯದಲ್ಲಿ ಬಿಲ್ಸಡ್ ಪ್ರಶಸ್ತಿ ಮತ್ತು ಮೆಹರೋಲಿಯ ಸ್ತಂಭ ಶಾಸನಗಳಲ್ಲಿ ಕಂಡುಬರುವ ಅಕ್ಷರಗಳು ಗುಪ್ತಲಿಪಿಯ ಪಶ್ಚಿಮದ ಮಾದರಿಗೆ ಸೇರಿದ್ದಾಗಿವೆ. ಪಶ್ಚಿಮ ಮಾದರಿಯ ಲಿಪಿಯಲ್ಲಿಯೂ ಬ್ಯೂಲರ್ ಮತ್ತೆ ಎರಡು ರೂಪಗಳನ್ನು ಗುರುತಿಸಿದ್ದಾನೆ. ಅವೆಂದರೆ ಕೂಡುಬರೆವಣಿಗೆಯ ವೃತ್ತಾಕಾರದ ಅಕ್ಷರಗಳು ಮತ್ತು ಕೋನಗಳುಳ್ಳ ಮಾದರಿ ಅಕ್ಷರಗಳು. ವಿಶಿಷ್ಟವಾದ ದಪ್ಪ ಶಿರೋರೇಖೆಗಳು ಮತ್ತು ಕೊಕ್ಕೆಯಾಕಾರದ ರ ಅಕ್ಷರಗಳಿಂದ ಕೂಡಿದ ಈ ಎರಡನೆಯ ರೂಪದ ಅಕ್ಷರಗಳು ಈ ಮೊದಲು ಉಲ್ಲೇಖಿಸಲಾದ ಬಿಲ್ಸಡ್ ಮತ್ತು ಮೆಹರೋಲಿ ಶಾಸನಗಳಲ್ಲಿ ಕಂಡುಬರುತ್ತವೆ. ಕೂಡುಬರೆವಣಿಗೆಯ ಅಕ್ಷರಗಳು 1465 ರ ಇಂದೋರ್ ಶಾಸನ ಮತ್ತು ತೋರಮಾನನ ಕುರುಶಾಸನ (15ನೆಯ ಶತಮಾನ) ಗಳಲ್ಲಿ ದೊರೆತಿವೆ. ಗುಪ್ತಲಿಪಿಯ ಈ ಪಶ್ಚಿಮ ಮಾದರಿಯಿಂದಲೇ ಸಿದ್ಧಮಾತೃಕಾ ಲಿಪಿಯ ಉಗಮವಾಗಿದೆ. ಈ ನಮೂನೆಯ ಎರಡೂ ಉಪಪ್ರಕಾರಗಳ ಲಕ್ಷಣಗಳು ಸಿದ್ಧಮಾತೃಕಾ ಲಿಪಿಯಲ್ಲಿ ಕಂಡುಬರುತ್ತವೆ. 6ನೆಯ ಶತಮಾನಕ್ಕೆ ಸೇರಿದ ಬೋಧಗಯ ಶಾಸನ ಮತ್ತು ಲಾಖಾಮಂಡಲ ಪ್ರಶಸ್ತಿಗಳಲ್ಲಿ ಸಿದ್ಧಮಾತೃಕಾ ಲಿಪಿಯ ಬೆಳವಣಿಗೆಯ ಮೊದಲ ಹೆಜ್ಜೆಯನ್ನು ಗುರುತಿಸಬಹುದಾಗಿದೆ. ಈ ಶಾಸನಗಳ ಅಕ್ಷರಗಳಲ್ಲಿ ವೃತ್ತಾಕಾರದ ಮತ್ತು ಕೋನಗಳಿಂದೊಡಗೂಡಿದ ಈ ಎರಡೂ ವಿಧದ ಅಕ್ಷರಗಳಿವೆ. ಟ, ಣ, ತ, ಲ ಮತ್ತು ವ ಅಕ್ಷರಗಳಲ್ಲಿ ವೃತ್ತಾಕಾರವೂ ಏ, ಗ, ಜ, ಪ ಮುಂತಾದ ಅಕ್ಷರಗಳಲ್ಲಿ ಕೋನ ರೂಪಗಳೂ ಕಂಡುಬರುತ್ತವೆ. ಇಲ್ಲಿ ಬರುವ ಮ, ಪ ಮತ್ತು ಸ ಅಕ್ಷರಗಳು ಎದ್ದು ಕಾಣುವಂತಿದ್ದು ಈ ಲಿಪಿಗೊಂದು ವಿಶಿಷ್ಟ ರೂಪವನ್ನೊದಗಿಸಿವೆ. ಇಲ್ಲಿ ಬರುವ ರ ಅಕ್ಷರ ಕೊಕ್ಕೆಯ ಆಕಾರದ್ದಾಗಿದೆ. ಸಿದ್ಧಮಾತೃಕಾ ಲಿಪಿಯ ಬೆಳವಣಿಗೆಯ ಮುಂದಿನ ಹಂತವನ್ನು ಹರ್ಷವರ್ಧನನ ಬನ್ಸಖೇಡ ತಾಮ್ರಪತ್ರ ಮತ್ತು ಆದಿತ್ಯಸೇನನ ಅಫ್ಸಡ್ ಪ್ರಶಸ್ತಿಯಂಥ 7 ನೆಯ ಶತಮಾನದ ಶಾಸನಗಳಲ್ಲಿ ಕಾಣಬಹುದಾಗಿದೆ. ಉದ್ದನೆಯ ಗೆರೆಗಳ ಕೆಳಭಾಗಗಳಲ್ಲಿ ಬರುವ ಬಾಲದಾಕೃತಿಗಳು ಬಲಕ್ಕೆ ಹೊರಳುವಿಕೆಯನ್ನು ಠೀ, ಶೀ, ಮೊದಲಾದ ಅಕ್ಷರಗಳ ಈ ಮಾತ್ರ ಚಿಹ್ನೆಗಳಲ್ಲಿ ಕಾಣಬಹುದಾಗಿದೆ. ತ್ರಿಕೋನಾಕೃತಿಯ ಶೀರ್ಷಚಿಹ್ನೆಯೂ ಎಲ್ಲ ಅಕ್ಷರಗಳಲ್ಲೂ ಕಂಡುಬರುತ್ತಿದ್ದು ರ ಮತ್ತು ಸ ಅಕ್ಷರಗಳಲ್ಲಿ ಎದ್ದು ಕಾಣುತ್ತವೆ. ತೋ, ಗೇ ಮುಂತಾದ ಅಕ್ಷರಗಳಲ್ಲಿ ಶಿರೋಮಾತ್ರೆಗಳ ಆಲಂಕಾರಿಕ ನಡೆಯೂ ಸ್ಪಷ್ಟವಾಗಿ ಗೋಚರಿಸುತ್ತದೆ. 8ನೆಯ ಶತಮಾನದಿಂದ ಪ್ರಾರಂಭಿಸಿ ಸಿದ್ಧಮಾತೃಕಾಲಿಪಿಯ ಬೆಳವಣಿಗೆ ತನ್ನ ಉತ್ತರಾಧಿಕಾರಿಯಾದ ನಾಗರೀ ಲಿಪಿಯತ್ತ ಸಾಗತೊಡಗಿದ್ದನ್ನು ಮುಲ್ತೈ ತಾಮ್ರ ಪತ್ರ, ಗ್ವಾಲಿಯರದ ಶಾಸನ ಮುಂತಾದುವುಗಳಲ್ಲಿ ಗುರುತಿಸಬಹುದು. ಗ್ವಾಲಿಯರದ ಶಾಸನದ ಅಕ್ಷರಗಳು ನಾಗರೀ ಲಿಪಿಗೆ ಹತ್ತಿರದಲ್ಲಿದ್ದು ಓದಲು ಸುಲಭವೆನಿಸಿವೆ. ತ್ರಿಕೋನಾತ್ಮಕ ಶೀರ್ಷಚಿಹ್ನೆಗಳು ಅಡ್ಡಕ್ಕೆ ಚಾಚಿಕೊಂಡು ಆಯತಾಕೃತಿಯನ್ನು ಪಡೆದಿವೆ. ಈ ಶಾಸನದ ಕೆಲವು ಅಕ್ಷರಗಳನ್ನಾದರೂ ಪ್ರತ್ಯೇಕವಾಗಿ ಗುರುತಿಸಿ ಅವು ನಾಗರೀ ಅಕ್ಷರಗಳೆಂದು ಹೇಳಬಹುದಾಗಿದೆ. ಪೇಹೊಅ ಶಾಸನದಲ್ಲಿ (900) ಸಿದ್ಧಮಾತೃಕಾ ಲಿಪಿ ನಾಗರೀ ಲಿಪಿಯಾಗಿ ಪರಿವರ್ತನೆ ಹೊಂದುವುದನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಹೀಗೆ 6–9ನೆಯ ಶತಮಾನಗಳ ಕಾಲಾವಧಿಯಲ್ಲಿ ವಿವಿಧ ಹಂತಗಳಲ್ಲಿ ಬೆಳೆದು ನಾಗರೀ ಮತ್ತು ಉತ್ತರಭಾರತದ ಇತರ ಪ್ರಾದೇಶಿಕ ಲಿಪಿಗಳ ಉಗಮಕ್ಕೆ ಕಾರಣವಾದ ಈ ಲಿಪಿ ಉತ್ತರ ಭಾರತದಲ್ಲಿ ಲಿಪಿಗಳ ವಿಕಾಸದಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ಲಿಪಿಯನ್ನು ಮಧ್ಯಪ್ರದೇಶ, ಉತ್ತರಪ್ರದೇಶ, ಹಿಮಾಚಲ ಪ್ರದೇಶ, ಹರಿಯಾಣ, ಬಿಹಾರ, ಒರಿಸ್ಸ, ಕಾಶ್ಮೀರ, ನೇಪಾಲ ಪ್ರದೇಶಗಳಲ್ಲೆಲ್ಲ ಬಳಸಲಾಗಿದೆ. ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳ ಕೆಲಭಾಗಗಳಲ್ಲೂ ಈ ಲಿಪಿ ನುಸುಳಿಬಂದಂತಿದೆ. ತಮಿಳುನಾಡಿನ ಅತಿ–ರಣಚಂಡೇಶ್ವರ ದೇವಾಲಯದ ಶಾಸನದಲ್ಲೂ ಇದರ ಬಳಕೆ ಗೋಚರಿಸುತ್ತದೆ. ಇಷ್ಟು ಮಾತ್ರವಲ್ಲದೆ ಟಿಬೆಟ್, ಅಫ್ಘಾನಿಸ್ತಾನ, ಬರ್ಮ, ಜಪಾನ್ ಮುಂತಾದ ಹೊರದೇಶಗಳಲ್ಲೂ ಲಿಪಿಯ ಬಳಕೆಯ ನಿದರ್ಶನಗಳಿವೆ. (ಬಿ.ಕೆ.ಎಂ.)



ತಿಗಳಾರಿ ಲಿಪಿ

**ವಟ್ಟೆಳುತ್ತು ಲಿಪಿ:** ದಕ್ಷಿಣ ಭಾರತದಲ್ಲಿ ಬ್ರಾಹ್ಮಿಲಿಪಿಯೊಂದಿಗೆ ಬಳಕೆಯಲ್ಲಿದ್ದ ಲಿಪಿಗಳಲ್ಲಿ ವಟ್ಟೆಳುತ್ತು ಒಂದು. ಈ ಲಿಪಿಯೊಂದಿಗೆ ಗ್ರಂಥ ಲಿಪಿ ಮತ್ತು ತಮಿಳು ಲಿಪಿ ತಮಿಳುನಾಡಿನಲ್ಲಿ ಬಳಕೆಯಲ್ಲಿತ್ತು. ಈ ಲಿಪಿಯಲ್ಲಿ ತಮಿಳು ಭಾಷೆಗೆ ಅನುಗುಣವಾಗಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿರುವುದು ಕಂಡುಬಂದಿದೆ. ಬ್ರಾಹ್ಮಿ ಮೂಲದಿಂದ ವಿಕಸನ ಹೊಂದಿದ ಗ್ರಂಥ ಮತ್ತು ವಟ್ಟೆಳುತ್ತು ಲಿಪಿಗಳು ಇಂದು ಬಳಕೆಯಲ್ಲಿ ಇಲ್ಲ. ತಮಿಳು ಲಿಪಿ ವ್ಯಾಪಕವಾಗಿ ಬೆಳೆದು ಬಂದಿತು.

ವಟ್ಟೆಳುತ್ತು ಎಂಬ ಪದ ತಮಿಳು ಭಾಷೆಯದ್ದಾಗಿದೆ. ವಟ್ಟಂ ಎಂದರೆ ಸೊನ್ನೆ–ಶೂನ್ಯ ಅಥವಾ ವೃತ್ತ; ಎಳುತ್ತು ಎಂದರೆ ಲಿಪಿ, ಬರೆಹ ಎಂಬ ಅರ್ಥ ತಮಿಳು ಭಾಷೆಯಲ್ಲಿದೆ. ಈ ಎರಡೂ ಪದಗಳ ಸಂಯುಕ್ತ ರೂಪವೇ (ವಟ್ಟಂ+ಎಳುತ್ತು) ವಟ್ಟೆಳುತ್ತು. ಇದು ವೃತ್ತಾಕಾರದ ಲಿಪಿಯೆಂಬುದನ್ನು ತಿರುನೆಲ್ವೇಲಿ ಜಿಲ್ಲೆಯ ಕುತ್ತಾಲಂನ ಪರಾಕ್ರಮ ಪಾಂಡ್ಯನ ಕಾಲದ ಕುತ್ತಾಲನಾಥಸ್ವಾಮಿ ದೇವಾಲಯದಲ್ಲಿರುವ ಶಾಸನ ವಟ್ಟಂ ಎಂದು ಉಲ್ಲೇಖಿಸಿದೆ. ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ದೇವಾಲಯದ ಗೋಡೆಗಳಲ್ಲಿಯ ಶಾಸನಗಳನ್ನು ಯಥಾವತ್ತಾಗಿ ಪ್ರತಿ ಮಾಡಬೇಕೆಂದು ಚೋಳರಾಜ ಸೂಚಿಸಿದ್ದ. ಅದರಂತೆ ಲಿಪಿಕಾರರು ಶಾಸನಗಳು ವಟಂನಲ್ಲಿದ್ದು ಅವುಗಳನ್ನು ತಮಿಳು ಲಿಪಿಗೆ ಪ್ರತಿ ಮಾಡಲಾಯಿತೆಂದು ದಾಖಲಿಸಿದ್ದಾರೆ. ವಟ್ಟೆಳುತ್ತು ಲಿಪಿಯನ್ನು ತೆಕ್ಕನ್ ಮಲೆಯಾಳಂ ಮತ್ತು ನಾನಾಮೋನ ಎಂದೂ ಕರೆಯಲಾಗುತ್ತದೆ. ದಕ್ಷಿಣ ತಮಿಳುನಾಡಿನ ಪಾಂಡ್ಯದೇಶ, ಕೊಂಗು ಮತ್ತು ಕೇರಳದ ಕೆಲವು ಪ್ರಾಂತಗಳ ಶಾಸನಗಳಲ್ಲಿ ಇದನ್ನು ಬಳಸಿದ್ದಾರೆ. ದಕ್ಷಿಣ ಭಾರತದ ಇತರೆಡೆಗಳಲ್ಲಿಯೂ ಇದನ್ನು ಬಳಸಲಾಗಿದೆ.

ಖರೋಷ್ಠಿ ಲಿಪಿಯಿಂದ ವಟ್ಟೆಳುತ್ತು ಲಿಪಿ ಉಗಮವಾಯಿತೆಂದು ಹರಪ್ರಸಾದ ಶಾಸ್ತ್ರೀ ಅಭಿಪ್ರಾಯ ಪಡುತ್ತಾರೆ. ಬರ್ನೆಲ್ ಫೊನೀಷಿಯನ್ ಮೂಲದ ಲಿಪಿ ಎಂದಿರುವನು. ಇವರ ವಾದಗಳಿಗೆ ಆಧಾರವಿಲ್ಲ. ಬ್ರಾಹ್ಮಿ ಮೂಲದಿಂದ ಉಗಮವಾದ ಲಿಪಿಯೆಂದು ಬ್ಯೂಲರ್‌ನ ಅಭಿಪ್ರಾಯ. ಇದು ಮೋಡಿ ಮಾದರಿಯ ಬರೆವಣಿಗೆಯೆಂದೂ ತಮಿಳು ಭಾಷೆಯೊಂದಿಗೆ ಬೆರತಿದ್ದರಿಂದ ವ್ಯಾಪಾರಸ್ಥರು ಮತ್ತು ಕೆಲವು ವರ್ಗದ ಜನರು ಇದನ್ನು ಬಳಸುತ್ತಿದ್ದರೆಂದೂ ಹೇಳಿದ್ದಾನೆ. ಸಿ.ಶಿವರಾಮಮೂರ್ತಿಯವರು ಈ ಲಿಪಿ ಬ್ರಾಹ್ಮಿಲಿಪಿಯ ರೂಪಾಂತರವೆಂದು ತಿಳಿಸುತ್ತ ಬ್ರಾಹ್ಮಿಯ ಅಂಕುಡೊಂಕು ರೂಪವೆಂದು ಪರಿಗಣಿಸಿದ್ದಾರೆ. ಕಾಲ್ಡ್‌ವೆಲ್ ಸಹ ಬ್ರಾಹ್ಮಿ ಮೂಲವನ್ನು ಪ್ರತಿಪಾದಿಸಿದ್ದಾನೆ. ಎಂ.ಜಿ.ಎಸ್.ನಾರಾಯಣನ್ ಅವರು ವಟ್ಟೆಳುತ್ತು ಪದ ವಡಮುಳಿ (ಉತ್ತರದ ಭಾಷೆ) ಎಂದರೆ ವಡಗ ಉತ್ತರ ಮತ್ತು ವಡಗ ಎಳುತ್ತು ಎಂದೂ ಉತ್ತರದ ಲಿಪಿಯಾದ ಅಶೋಕನ ಬ್ರಾಹ್ಮಿಯಿಂದ ಉಗಮ ಹೊಂದಿದೆ ಎಂದೂ ಅಭಿಪ್ರಾಯಪಡುತ್ತಾರೆ. ವಟ್ಟೆಳುತ್ತು ಶಾಸನಗಳಲ್ಲಿ ಸಂಸ್ಕೃತ ಶಬ್ದಗಳನ್ನು ಮತ್ತು ರಾಜರ ಹೆಸರುಗಳನ್ನು ಗ್ರಂಥಲಿಪಿಯ ಮೂಲಕ ವ್ಯಕ್ತಪಡಿಸಿದೆ. ವಟ್ಟೆಳುತ್ತು ಶಾಸನಗಳಲ್ಲಿ ಸಂಸ್ಕೃತ ಪದಗಳ ಬಳಕೆ ಅಧಿಕವಾದಂತೆ ವಟ್ಟೆಳುತ್ತು ಲಿಪಿ ಬಳಕೆ ಕಡಿಮೆಯಾಗಿ ಆ ಸ್ಥಾನದಲ್ಲಿ ಗ್ರಂಥಲಿಪಿಯನ್ನು ಬಳಸಲಾಯಿತೆನ್ನುತ್ತಾರೆ. ಸಂಸ್ಕೃತ ಪದಗಳನ್ನು ಕಡಿಮೆ ಬಳಸುವ ಸಿರಿಯನ್ ಕ್ರೈಸ್ತರು, ಮಾಪಿಳ್ಳ ಮುಸಲ್ಮಾನರು ಮತ್ತು ಇತರ ಜನರು 19ನೆಯ ಶತಮಾನದವರಗೆ ಈ ಲಿಪಿಯನ್ನು ವ್ಯಾಪಕವಾಗಿ ಬಳಸುತ್ತಿದ್ದರು ಎಂದು ಅಭಿಪ್ರಾಯಪಡುತ್ತಾರೆ.

ವಟ್ಟೆಳುತ್ತು ತಮಿಳು ಲಿಪಿಗಿಂತ ಭಿನ್ನವಾಗಿದ್ದು ಈ ಎರಡೂ ಲಿಪಿಗಳು ಬ್ರಾಹ್ಮಿಯಿಂದ ಪ್ರತ್ಯೇಕವಾಗಿ ವಿಕಸನ ಹೊಂದಿವೆ. ಇದನ್ನು ಮಲೆನಾಡಿನಲ್ಲಿ ಅಧಿಕವಾಗಿ ಬಳಸಿದ್ದರಿಂದ ಆ ಪ್ರಾಂತದಲ್ಲಿಯೇ ಇದು ವಿಕಸನ ಹೊಂದಿರಬೇಕೆಂಬ ಅಭಿಪ್ರಾಯವಿದೆ. ವಟ್ಟೆಳುತ್ತು ಮತ್ತು ಗ್ರಂಥ ಲಿಪಿಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ವಟ್ಟೆಳುತ್ತು ಶಾಸನಗಳಲ್ಲಿ ತೇದಿಯನ್ನು ಒಳಗೊಂಡ ಶಾಸನಗಳು ತೀರಾ ಕಡಿಮೆ. ಕಾಗುಣಿತವನ್ನು ಬಳಸುವಲ್ಲಿ ಮತ್ತು ಹೊಸ ಚಿಹ್ನೆಗಳನ್ನು ಸೇರಿಸುವಲ್ಲಿ ವಿಭಿನ್ನ ರೀತಿಗಳಿವೆ. ಚೋಳರು ಪಾಂಡ್ಯರನ್ನು ಗೆದ್ದು ಆ ಪ್ರದೇಶವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡ ಅನಂತರ ಆ ರಾಜ್ಯದಲ್ಲಿ ಈ ಲಿಪಿಯ ಬಳಕೆ ಗಣನೀಯವಾಗಿ ಕಡಿಮೆಯಾಯಿತು. ಇದರ ಬದಲಿಗೆ ಗ್ರಂಥ ಲಿಪಿ ತಮಿಳು ಬಳಕೆಗೆ ಬಂದಿತು. ಈ ಪ್ರಾಂತದಲ್ಲಿ ತಮಿಳು ಭಾಷೆಯನ್ನು ಬರೆಯಲು ಎರಡೂ ಲಿಪಿಗಳನ್ನು ಬಳಸಲಾಯಿತು. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ತಮಟಕಲ್ಲಿನಲ್ಲಿ 6ನೆಯ ಶತಮಾನಕ್ಕೆ ಸೇರಬಹುದಾದ ವಟ್ಟೆಳುತ್ತುವಿನ ಒಂದು ಶಾಸನವಿದೆ. ಪ್ರಸ್ತುತ ಈ ಲಿಪಿ ಬಳಕೆಯಲ್ಲಿಲ್ಲ. ಕೇರಳದಲ್ಲಿ ಈ ಲಿಪಿಯನ್ನು ಮಲೆಯಾಳಂಗೆ ವ್ಯಾಪಕವಾಗಿ ಕೆಲವು ಕಾಲ ಬಳಸಲಾಯಿತು. ಮುಂದೆ ಇದರ ಬದಲಾಗಿ ಆರ್ಯ ಎಳೆತ್ತು ಅಥವಾ ಗ್ರಂಥ ಲಿಪಿ ಬಳಕೆಗೆ ಬಂತು.

ಈ ಲಿಪಿಯ ಬೆಳೆವಣಿಗೆಯನ್ನು ನಾಲ್ಕು ಕಾಲಘಟ್ಟಗಳಲ್ಲಿ ಗುರುತಿಸಲಾಗಿದೆ: ಆದ್ಯ ಲಿಪಿ – (ಸು.440–550); ಪ್ರಾರಂಭಿಕ ಲಿಪಿ – (ಸು.550–950); ಮಧ್ಯಕಾಲದ ಲಿಪಿ – (ಸು.950–1350). ಈ ಮಾದರಿ ಅಧಿಕವಾಗಿ ಚೋಳ ಮತ್ತು ಪಾಂಡ್ಯ ದೇಶದಲ್ಲಿ ಕಾಣಸಿಗುತ್ತವೆ ಮತ್ತು ಕೇರಳದಲ್ಲಿ ಇದರ ಬಳಕೆಯನ್ನು ಮುಂದುವರೆಸಲಾಯಿತು; ಮಧ್ಯಕಾಲೋತ್ತರ ಲಿಪಿ–(ಸು.1350–1800). ಇದು ಕೇರಳದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿತ್ತು.

(ಸಿ.ಎಸ್.ವಿ.)

**ಶಂಖ ಲಿಪಿ:** ಭಾರತೀಯ ಶಾಸನಾಧ್ಯಯನಶಾಸ್ತ್ರಕ್ಕೆ ಇತ್ತೀಚೆಗೆ ಸೇರಿಕೊಂಡ ಒಂದು ವಿಶಿಷ್ಟ ಲಿಪಿ. ಈ ಗೂಢಲಿಪಿ 1 ರಿಂದ 8 ನೆಯ ಶತಮಾನದವರೆಗೆ ಬಳಕೆಯಲ್ಲಿತ್ತು. ಶಂಖದ ಆಕಾರದಲ್ಲಿರುವುದರಿಂದ ಈ ಹೆಸರು ಬಂದಿದೆ. ಈ ಲಿಪಿಯ ಅಸ್ತಿತ್ವವನ್ನು ಬಹಳ ಹಿಂದೆಯೇ ಗುರುತಿಸಲಾಗಿದ್ದರೂ ಇದರ ಬಗ್ಗೆ ಅಧ್ಯಯನ ನಡೆಸಿ, ಇದರ ರಹಸ್ಯವನ್ನು ಭೇದಿಸಿ ಇದನ್ನೋದಲು ಸಾಧ್ಯವಾದದ್ದು ಮಾತ್ರ ಇತ್ತೀಚಿನ ದಿನಗಳಲ್ಲಿ. ಇದನ್ನು ಕುರಿತು ಕ್ಷೇತ್ರಕಾರ್ಯ ಮತ್ತು ಸಂಶೋಧನೆಗಳು ನಡೆಯುತ್ತಿದ್ದು ಇದರ ಸಮಗ್ರ ಮತ್ತು ಸ್ಪಷ್ಟ ಸ್ವರೂಪವನ್ನು ಅರಿಯುವುದಕ್ಕೆ ಇನ್ನೂ ಕೆಲಕಾಲ ಬೇಕು. 1836ರಲ್ಲಿ ಪ್ರಸಿದ್ಧ ಭಾರತೀಯಶಾಸ್ತ್ರ ವಿದ್ವಾಂಸನಾದ ಜೇಮ್ಸ್‌ಪ್ರಿನ್ಸೆಪ್ ಉತ್ತರ ಪ್ರದೇಶದ ಬಾರ್ಹುತ್ ಎಂಬಲ್ಲಿ ದೊರೆತ ಹಿತ್ತಾಳೆಯ ತ್ರಿಶೂಲವೊಂದರ ಮೇಲೆ ಶಂಖದಾಕೃತಿಯನ್ನು ಹೋಲುವ ಲಿಪಿಯ ಶಾಸನವೊಂದನ್ನು ಗುರುತಿಸಿ ಶಂಖಲಿಪಿಯೆಂಬ ಹೆಸರನ್ನು ಹುಟ್ಟುಹಾಕಿದ. ಮುಂದಿನ ವರ್ಷದಲ್ಲಿ ಇಂಥವೇ ಇನ್ನೂ ಎರಡು ಶಾಸನಗಳು ಅವನ ಗಮನಕ್ಕೆ ಬಂದವು. ಆದರೆ ಈ ಶಾಸನಗಳ ಅಕ್ಷರಗಳ ನಿಜಸ್ವರೂಪವನ್ನು ಗುರುತಿಸಲು ಅವನಿಂದ ಸಾಧ್ಯವಾಗಲಿಲ್ಲ. ಮುಂದೆ ಎಂ. ಕಿಟ್ಟೊ ಬೆಗ್ಲರ್ ಮತ್ತು ಕನ್ನಿಂಗ್ ಹ್ಯಾಮ್ ಎಂಬ ವಿದ್ವಾಂಸರು ಹೊಸ ಶಾಸನಗಳನ್ನು ಗುರುತಿಸಿ ಸಂಶೋಧನೆಗಳಿಂದ ಈ ಅಕ್ಷರಗಳು ಒಂದು ವಿಶಿಷ್ಟ ರೂಪವನ್ನು ಹೊಂದಿದ್ದು ಬರೆವಣಿಗೆಯ ಒಂದು ನಿರ್ದಿಷ್ಟ ಶೈಲಿಗೆ ಸೇರಿವೆಯೆಂದು ಸಾಧಿಸಿದರು. ಮುಂದಿನ ದಿನಗಳಲ್ಲಿ ಬ್ರ್ಯಾಂಡಸ್, ಕೆರ್ನ್, ಪ್ರಿನ್ಸೆಪ್, ಮೊಗೆಲ್, ಜಯಸ್ವಾಲ್ ಮೊದಲಾದ ಅನೇಕ ಪಂಡಿತರು ಈ ಲಿಪಿಯ ರಹಸ್ಯವನ್ನು ಭೇದಿಸಲು ಯತ್ನಿಸಿದರು. ಕೊನೆಗೂ 1983ರ ಮಾರ್ಚ್ ತಿಂಗಳಿನಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಬಿ.ಎನ್. ಮುಖರ್ಜಿ ಎಂಬ ವಿದ್ವಾಂಸರು ಈ ಲಿಪಿಯನ್ನೋದುವುದರಲ್ಲಿ ಯಶಸ್ವಿಯಾದರು. ಲಖನೌದ ಸರ್ಕಾರಿ ಸಂಗ್ರಹಾಲಯದಲ್ಲಿರುವ ಕಲ್ಲಿನ ಕುದುರೆಯ ಮೈಮೇಲಿನ ಶಂಖಲಿಪಿಯ ಬರೆಹವನ್ನು ಶ್ರೀ ಮಹೇಂದ್ರಾದಿತ್ಯ ಎಂದು ಓದುವ ಮೂಲಕ ಭಾರತೀಯ ಲಿಪಿಶಾಸ್ತ್ರದಲ್ಲೊಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ಕಾಶ್ಮೀರದಿಂದ (ಅಖನೂರ್) ಕರ್ನಾಟಕದವರೆಗೆ (ಸಂಡೂರ್) ಮತ್ತು ಬಂಗಾಲದಿಂದ (ಸುಸೂನಿಯ) ಗುಜರಾತ್ (ಜುನಾಗಡ) ವರೆಗಿನ ಭಾರತದ ಉಪಖಂಡದ ವಿವಿಧ ಸ್ಥಳಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಂಖ ಲಿಪಿಯಲ್ಲಿ ಬರೆದ ಶಾಸನಗಳು ದೊರೆತಿವೆ. ಭಾರತದ ಬಹುಭಾಗಗಳಲ್ಲಿ ಇಂಥ ಶಾಸನಗಳು ದೊರೆತಿರುವುದರಿಂದ ಈ ಲಿಪಿಯನ್ನು ಅಖಿಲಭಾರತೀಯ ಲಿಪಿಯೆಂದು ಕರೆಯಬಹುದು. ಇಂಡೊನೇಷ್ಯದ ಜಾವ ಮತ್ತು ಬೋರ್ನಿಯೊಗಳಲ್ಲೂ ಈ ಲಿಪಿಯ ಶಾಸನಗಳು ದೊರೆತಿವೆ. ಕಲ್ಲು, ಗುಹೆಯೊಳಗಿನ ಬಂಡೆಗಳು, ಗೋಡೆಗಳು, ಕಂಬಗಳು, ಪಾವಟಿಗೆಗಳು, ವಿಗ್ರಹಗಳಲ್ಲಿ, ಮುದ್ರಿಕೆಗಳ ಮೇಲೆ ಹೀಗೆ ನಾನಾ ಸ್ಥಳಗಳಲ್ಲಿ ಶಂಖಲಿಪಿಯ ಶಾಸನಗಳು ಕಂಡುಬಂದಿವೆ. ಕೆಲ ಶಾಸನಗಳಲ್ಲಿ ಅಕ್ಷರಗಳು ದೊಡ್ಡವಾಗಿದ್ದು ಒಮ್ಮೊಮ್ಮೆ ಬೃಹದಾಕಾರವನ್ನು ಹೊಂದಿರುತ್ತವೆ. ಅಕ್ಷರಗಳ ಅಲಂಕಾರ ಮತ್ತು ಗೆರೆಗಳ ಎಳೆತ, ಶಾಸನಗಳನ್ನು ಬರೆಯುವಲ್ಲಿ ವಹಿಸಿದ ಕಾಳಜಿ ಮತ್ತು ಅಕ್ಷರಗಳ ಆಕಾರ, ಈ ವಿಷಯಗಳಲ್ಲಿ ಈ ಶಾಸನಗಳು ಹೆಚ್ಚಿನ ವೈವಿಧ್ಯವನ್ನು ತೋರುತ್ತವೆ. ಉಚ್ಚಮಟ್ಟದ ಲಿಪ್ಯಲಂಕರಣದಿಂದ ಕೂಡಿದ ಇದೊಂದು ವಿಶಿಷ್ಟ ಲಿಪಿಯೆನಿಸಿದೆ. ಈ ಅಲಂಕೃತಾಕ್ಷರಗಳು ಬ್ರಾಹ್ಮಿ ಅಕ್ಷರಗಳನ್ನಾಧರಿಸಿವೆ. ಬ್ರಾಹ್ಮಿ ಲಿಪಿಯಂತೆ ಶಂಖಲಿಪಿಯನ್ನು ಎಡದಿಂದ ಬಲಕ್ಕೆ ಓದಲಾಗುತ್ತಿತ್ತು. ಶಂಖಲಿಪಿಯ ಅಕ್ಷರಗಳು ಯಾವಾಗಲೂ ಬ್ರಾಹ್ಮಿ ಲಿಪಿಯ ಸ್ವರ ಅಥವಾ ವ್ಯಂಜನಗಳನ್ನೇ ಆಧರಿಸಿದ್ದವೆಂದು ಹೇಳುವಂತಿಲ್ಲ. ಒಮ್ಮೊಮ್ಮೆ ಅವು ವಿಚಿತ್ರ ಆಕಾರಗಳನ್ನು ತಳೆದಿರುತ್ತಿದ್ದವು. ಅಕ್ಷರಗಳನ್ನು ಕೂಡುಬರೆವಣಿಗೆಯ (ಕರ್ಸಿವ್ ಸ್ಟೈಲ್) ರೀತಿಯಲ್ಲಿ ಬರೆಯಲಾಗುತ್ತಿತ್ತು. ಬಹುತೇಕ ಅಕ್ಷರಗಳು ಅನಗತ್ಯವಾದಂಥ ಗೆರೆಗಳಿಂದ ಒಂದಕ್ಕೊಂದು ಸೇರಿರುತ್ತಿದ್ದವು. ಕೂಡು ಬರೆವಣಿಗೆಯಿಂದಾಗಿ ಬಲಗಡೆ ವಾಲಿಕೊಂಡು ಓರೆಯಾಗಿರುತ್ತಿದ್ದವು. ಒಮ್ಮೊಮ್ಮೆ ಅವು ಎಡಗಡೆಗೂ ವಾಲಿರುತ್ತಿದ್ದವು. ವ್ಯಂಜನಗಳಿಗೆ ಜೋಡಿಸಿದ ಕಾಗುಣಿತ (ಮಾತ್ರಾ) ಚಿಹ್ನೆಗಳನ್ನು, ಸಾಮಾನ್ಯವಾಗಿ ಉದ್ದಕ್ಕೆ ಎಳೆದು ಅವುಗಳಿಂದ ಆಲಂಕಾರಿಕ ಸೆಳವುಗಳನ್ನು ರಚಿಸಲಾಗುತ್ತಿತ್ತು. ಹೀಗೆ ಉದ್ದಕ್ಕೆ ಎಳೆದ ಮಾತ್ರಾ ಚಿಹ್ನೆಗಳಿಗೆ ಕೆಲವೊಮ್ಮೆ ಹೆಚ್ಚಿನ ಗೆರೆಗಳನ್ನು ಜೋಡಿಸಲಾಗುತ್ತಿತ್ತು. ಅಕ್ಷರಗಳ ಮೂಲ ಸ್ವರೂಪಗಳಿಗೆ ಸಂಬಂಧಿಸಿದ ಗೆರೆಗಳನ್ನೂ ಚಿತ್ತಾರಗಳನ್ನೂ ಕೆಲವೊಮ್ಮೆ ಅಕ್ಷರಗಳ ಬಳಿಯಲ್ಲಿಯೇ ರಚಿಸಲಾಗುತ್ತಿತ್ತು. ಹೀಗೆ ವಿವಿಧ ಅಲಂಕಾರಗಳಿಂದ ಕೂಡಿ ಶಂಖಲಿಪಿ ಲಿಪ್ಯಲಂಕರಣದ ಸುಂದರ ಮಾದರಿಯಾಗಿ ರೂಪಗೊಂಡರೂ ಅದೇ ಕಾರಣಕ್ಕಾಗಿ ಓದಲು ಕಠಿಣವೆನಿಸಿದೆ.

ಶಂಖಲಿಪಿಯ ಶಾಸನಗಳೂ ಯಾವಾಗಲೂ ಸಂಕ್ಷಿಪ್ತವಾಗಿದ್ದು ಒಂಬತ್ತಕ್ಕಿಂತ ಹೆಚ್ಚು ಅಕ್ಷರಗಳಿರುವುದು ಕಂಡುಬಂದಿಲ್ಲ. ಇದಕ್ಕೆ ಅಪವಾದವೆನ್ನುವಂತೆ ಪಶ್ಚಿಮ ಬಂಗಾಲದ ಸೂನಿಯ ಎಂಬಲ್ಲಿ ದೊರೆತ ಶಾಸನವೊಂದರಲ್ಲಿ ಹದಿನೈದು ಅಕ್ಷರಗಳಿವೆ. ಈವರೆಗೆ ಓದಲಾದ ಶಾಸನಗಳಿಂದ ಶಂಖಲಿಪಿಯ ಶಾಸನಗಳಲ್ಲಿ ಬಳಸಲಾದ ಭಾಷೆಗಳಲ್ಲಿ ಸಂಸ್ಕೃತವೂ ಸೇರಿತ್ತೆಂದು ತಿಳಿದುಬಂದಿದೆ. ಕೆಲವು ಶಾಸನಗಳಲ್ಲಿ ಪ್ರಾಕೃತ ಮತ್ತು ಮಿಶ್ರ ಭಾಷೆಗಳ ಬಳಕೆಯೂ ಸೂಚಿತವಾಗಿದೆ. ಈ ಶಾಸನಗಳು ವ್ಯಕ್ತಿಗಳ ಹೆಸರು ಅಥವಾ ಬಿರುದುಗಳನ್ನು ಹೊಂದಿವೆ. ಕೆಲವು ಸಲ ಇವುಗಳಲ್ಲಿ ವಸ್ತುಗಳ ಸಂಕ್ಷಿಪ್ತ ವರ್ಣನೆಯೂ ಕಂಡುಬರುತ್ತದೆ. ಈ ಶಾಸನಗಳನ್ನು ರಚಿಸಿದವರು ಮತ್ತು ಕೆತ್ತಿದವರು ಇಬ್ಬರೂ ಸೇರಿಕೊಂಡು ಉದ್ದೇಶ ಪೂರ್ವಕವಾಗಿ ಅವುಗಳನ್ನೋದುವುದು ಕಠಿಣವಾಗುವಂತೆ ಮಾಡಿದರೆಂದು ನಿಸ್ಸಂದೇಹವಾಗಿ ಹೇಳಬಹುದು. ಇದಕ್ಕೇನಾದರೂ ಕಾರಣವಿದ್ದಿರಲೇಬೇಕು. ಈ ಶಾಸನಗಳನ್ನು ಬರೆದ ಸ್ಥಳಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಈ ಲಿಪಿಗೆ ಧಾರ್ಮಿಕ ಸಂಬಂಧವಿದ್ದಿರಬಹುದೆಂದು ತೋರುತ್ತದೆ. ಇದೇ ಕಾರಣಕ್ಕಾಗಿ ಈ ಶಾಸನಗಳಿಗೊಂದು ಪಾವಿತ್ರ್ಯವನ್ನು ಕಲ್ಪಿಸುವುದಕ್ಕಾಗಿ ಈ ಲಿಪಿಗೊಂದು ರಹಸ್ಯಾತ್ಮಕ ರೂಪವನ್ನು ಕೊಡಲಾಗಿರಬಹುದು. ಹೀಗೆ ಶಂಖಲಿಪಿಯನ್ನು ಬ್ರಾಹ್ಮಿಲಿಪಿಯ ವೈಶಿಷ್ಟ್ಯವನ್ನು ಎತ್ತಿ ತೋರಿಸುವಂತೆ ಅದನ್ನು ಅವಮೂರ್ಧಾಲಿಪಿ ಅಥವಾ ವ್ಯತ್ಯಸ್ತಾಲಿಪಿಯೆಂದು ಕರೆಯಬೇಕೆಂಬುದು ಮುಖರ್ಜಿಯವರ ಸಲಹೆಯಾಗಿದೆ. ಈ ಹೆಸರುಗಳು ಬೌದ್ಧರ ಧರ್ಮಗ್ರಂಥಗಳಲ್ಲಿ ಕಂಡುಬಂದಿವೆ.

(ಬಿ.ಕೆ.ಎಂ.)

**ಶಾರದ ಲಿಪಿ:** ವಾಯವ್ಯ ಭಾರತದ ಪ್ರಾಚೀನ ಲಿಪಿಗಳಲ್ಲೊಂದು. ವಾಯವ್ಯ ಪಾಕಿಸ್ತಾನ, ಜಮ್ಮು–ಕಾಶ್ಮೀರ, ಲಡಾಕ್, ಹಿಮಾಚಲಪ್ರದೇಶ ಮತ್ತು ದೆಹಲಿಯನ್ನೊಳಗೊಂಡ ಪ್ರದೇಶದಲ್ಲಿ ಈ ಲಿಪಿ ಬಳಕೆಯಲ್ಲಿತ್ತು. ಕಾಶ್ಮೀರದಲ್ಲಿ ಸು.9ನೆಯ ಶತಮಾನದ ನಾಣ್ಯ, ಮಣ್ಪಾತ್ರೆ ಹಾಗೂ ಶಾಸನಗಳ ಮೇಲೆ ಪ್ರಪ್ರಥಮವಾಗಿ ಕಾಣಿಸಿಕೊಳ್ಳುವ ಈ ಲಿಪಿ ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ 13ನೆಯ ಶತಮಾನದವರೆಗೆ ಪ್ರಚಲಿತವಿತ್ತು. ಕಾಶ್ಮೀರದಲ್ಲಿ ಹಳೆಯ ತಲೆಮಾರಿನ ಪುರೋಹಿತ ವರ್ಗದಲ್ಲಿ ಇಂದಿಗೂ ಈ ಲಿಪಿ ಬಳಕೆಯಲ್ಲಿದೆ. ಈ ಲಿಪಿಯ ವ್ಯಾಪ್ತಿ ಪ್ರದೇಶ ದೊಡ್ಡದಿದ್ದರೂ ಈವರೆಗೆ ದೊರೆತಿರುವ ಶಾಸನಗಳ ಸಂಖ್ಯೆ ಕಡಿಮೆ. ಈ ಲಿಪಿಯಲ್ಲಿರುವ ಹಸ್ತಪ್ರತಿಗಳೂ ಕೆಲವೊಂದಿವೆ. ಇವು 12–16ನೆಯ ಶತಮಾನದ ಅವಧಿಯವು. ಪಾಕಿಸ್ತಾನದ ಬಖ್‌ಶಾಲಿಯಲ್ಲಿ ಸಿಕ್ಕ ಸು.12ನೆಯ ಶತಮಾನದ ಹಸ್ತಪ್ರತಿ ಗಣಿತಶಾಸ್ತ್ರಕ್ಕೆ ಸಂಬಂಧಿಸಿದ ಒಂದು ಅಮೂಲ್ಯ ಕೃತಿ. 14ನೆಯ ಶತಮಾನದ ಮುನಿಮತಮಣಿಮಾಲ ಕಾಶ್ಮೀರದ ಪ್ರಾಚೀನ ಹಸ್ತಪ್ರತಿಗಳಲ್ಲೊಂದು. ಶಾಕುಂತಲ,

ಕಥಾಸರಿತ್ಸಾಗರ, ಮಹಾಭಾರತದ ಆದಿ ಮತ್ತು ಸಭಾಪರ್ವದ ಭಾಗಗಳನ್ನೊಳಗೊಂಡ ಹಸ್ತಪ್ರತಿಗಳು 16ನೆಯ ಶತಮಾನದವು. ಶಾಸನ ಹಾಗೂ ಹಸ್ತಪ್ರತಿಯ ಆಧಾರದ ಮೇಲೆ ಈ ಲಿಪಿಯ ಬೆಳೆವಣಿಗೆಯಲ್ಲಿ 3 ಹಂತಗಳನ್ನು ಗುರುತಿಸಬಹುದು: 9–10ನೆಯ ಶತಮಾನ, 11–13ನೆಯ ಶತಮಾನ ಮತ್ತು 14ನೆಯ ಶತಮಾನದ ಅನಂತರದ ಲಿಪಿ. (ಬಿ.ಕೆ.ಕೆ.)

**ಮೋಡಿ ಲಿಪಿ ಮತ್ತು ದಾಖಲೆಗಳು:** ಮರಾಠಿ ಮೋಡಿ ಲಿಪಿ: ಇದು ವಕ್ರವಾದ ನಂದಿನಾಗರೀಲಿಪಿ. ಇದನ್ನು ಅರಬ್ಬಿ ವರ್ಣಮಾಲೆಯಿಂದ ರಚಿಸಲಾಗಿದೆ. ಈ ಲಿಪಿಯನ್ನು ಮೊಟ್ಟಮೊದಲು ದೇವಗಿರಿ ಯಾದವರ ಮಂತ್ರಿಯಾಗಿದ್ದ ಹೇಮಾದ್ರಿಪಂತರು ರಚಿಸಿದರು (ಸು.1260). ಮುಂದೆ ಮರಾಠ ದೊರೆ ಛತ್ರಪತಿ ಶಿವಾಜಿಯ ಕಾಲದಲ್ಲಿ ಕಾರಕೂನ ಸೇವೆಯಲ್ಲಿದ್ದ ಚಂದ್ರಸೇನಿಯ ಕಾಯಸ್ಥ ಪ್ರಭುಗಳು ಇದನ್ನು ಬಳಸಲು ಪ್ರಾರಂಭಿಸಿದ್ದರಿಂದ ಈ ಲಿಪಿಗೆ ಪ್ರಾದೇಶಿಕ ಸ್ವರೂಪ ದೊರೆಯಿತು. ಹೀಗಾಗಿ ಮರಾಠ, ಪೇಶ್ವೆ ಹಾಗೂ ಆಗಿನ ಕಾಲದ ಸಂಸ್ಥಾನಿಕರ ಸರಕಾರಿ ಕಾಗದ ಪತ್ರಗಳು, ಹಣಕಾಸಿನ ಲೆಕ್ಕಪತ್ರಗಳು ಹಾಗೂ ಇತರ ಪತ್ರವ್ಯವಹಾರ ಮೋಡಿ ಲಿಪಿಯಲ್ಲೇ ಇವೆ. ಇದು ಒಂದು ತರಹದ ಬರೆವಣಿಗೆ; ಭಾಷೆ ಅಲ್ಲ. ಹೆಚ್ಚಾಗಿ ಬಳಸಿದ ಭಾಷೆ ಮರಾಠಿ, ಆದರೆ ಅರೇಬಿಕ್, ಪರ್ಷಿಯನ್ ಮಿಶ್ರಿತ. ತಿಂಗಳು, ತಿಥಿ, ವರ್ಷಗಳ ಬಳಕೆ ಮುಸ್ಲಿಂ ಪದ್ಧತಿಯಂತೆ. ಉದಾ: ಅರಬ್ಬಿ, ಫಸಲಿ ಮತ್ತು ಹಿಜರಿ. ಇದರಲ್ಲಿ ಸ್ವರಗಳು 12, ವ್ಯಂಜನಗಳು 36, ಒತ್ತಕ್ಷರಗಳು ಅಪರೂಪ.

ಮೋಡಿ ಲಿಪಿ ದೇವನಾಗರಿ ಲಿಪಿಯಿಂದ ಭಿನ್ನವಾಗಿದ್ದರೂ ಅದರಲ್ಲಿ ಕೆಲವು ದೇವನಾಗರಿ ಅಕ್ಷರಗಳು ಇವೆ. ಈ ಲಿಪಿಯಲ್ಲಿಯ ಕೆಲವು ಅಕ್ಷರಗಳು ಗುಜರಾತಿ ಅಕ್ಷರಗಳನ್ನು ಹೋಲುತ್ತವೆ. ಈ ಲಿಪಿಯನ್ನು ಬರೆಯಲು ಪ್ರಾರಂಭ ಮಾಡುವುದಕ್ಕೆ ಮೊದಲು ಕಾಗದದ ಮೇಲೆ ಒಂದು ಅಡ್ಡ ಗೆರೆಯನ್ನು ಎಳೆಯಲೇ ಬೇಕಾಗುತ್ತದೆ. ಗೆರೆಯಿಂದ ಕೆಳಗೆ ಈ ಲಿಪಿಯನ್ನು ಬರೆಯಲಾಗುತ್ತದೆ. ಮೋಡಿ ಅಕ್ಷರಗಳನ್ನು ಬಹಳ ಬೇಗ ಬೇಗನೆ ಕೈ ಎತ್ತದೆ ಬರೆಯಬೇಕಾದ್ದರಿಂದ ಇದರಲ್ಲಿ ಒತ್ತಕ್ಷರಗಳು ಹೆಚ್ಚು ಇರುವುದಿಲ್ಲ.

ಮೋಡಿ ಮತ್ತು ಕನ್ನಡದಲ್ಲಿ ವ್ಯಂಜನಗಳು ಸಮಾನವಾಗಿವೆ. ಕ ದಿಂದ ಹಿಡಿದು ಜ್ಞ ದ ವರೆಗೆ ಎಲ್ಲ ವ್ಯಂಜನಗಳಿವೆ. ಆದರೆ ಸ್ವರಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿದೆ. ಮೋಡಿಯಲ್ಲಿ ಇ, ಈ, ಉ, ಊ, ಎ, ಏ, ಮತ್ತು ಒ, ಓ – ಈ ಹ್ರಸ್ವ ಮತ್ತು ದೀರ್ಘ ಸ್ವರಗಳಿಗೆ ಒಂದೊಂದೇ ಅಕ್ಷರಗಳಿವೆ.

ಉತ್ತರ ಕರ್ನಾಟಕದ ಇತಿಹಾಸ ರಕ್ಷಣೆಯ ಭಾಗವಾಗಿ ಮೋಡಿ ದಾಖಲೆಗಳ ರಕ್ಷಣೆ ಮತ್ತು ಅಭ್ಯಾಸ ತುಂಬ ಅವಶ್ಯ. ಉತ್ತರ ಕರ್ನಾಟಕದ ಮತ್ತು ದಕ್ಷಿಣ ಮಹಾರಾಷ್ಟ್ರಗಳ ಮಧ್ಯಯುಗೀನ ಇತಿಹಾಸದಿಂದ ಅರ್ವಾಚೀನ ಇತಿಹಾಸದ ವರೆಗಿನ ಆರ್ಥಿಕ, ಸಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಅಧ್ಯಯನಕ್ಕೆ ಇವೂ ಮುಖ್ಯ. ಇವುಗಳ ಸಂಶೋಧನೆ ಆಗಬೇಕಾಗಿದೆ. ಉದಾಹರಣೆಗೆ ಪುಣೆ, ದಿಲ್ಲಿ, ಮುಂಬೈ, ಕೊಲ್ಲಾಪುರ ಪತ್ರಾಗಾರಗಳಲ್ಲಿರುವ ತಾಳೆ ಕಟ್ಟುಗಳು, ಯಾದಿಗಳು, ಸನ್ನದು ಪತ್ರಗಳು, ಜಮಾಬಂದಿ ಕಡತಗಳು, ಕೈಫಿಯತ್ತುಗಳು, ಸಂಶೋಧಕರ ಗಮನಕ್ಕೆ ಬರದೆ ಹಾಗೆಯೇ ಉಳಿದುಕೊಂಡಿವೆ. ಇವು ಮುಖ್ಯವಾಗಿ ದಖನ್ ಪ್ರದೇಶ ಮತ್ತು ಉತ್ತರ ಕರ್ನಾಟಕದ ಇತಿಹಾಸವನ್ನು ಗಣನೀಯ ಪ್ರಮಾಣದಲ್ಲಿ ತಿಳಿಸಬಲ್ಲವು.

ಮೋಡಿ ಲಿಪಿಯ ಅಧ್ಯಯನದಿಂದ ಮಧ್ಯಕಾಲೀನ ಚಾರಿತ್ರಿಕ ದಾಖಲೆಗಳನ್ನು, ನ್ಯಾಯಾಲಯ ತೀರ್ಪುಗಳನ್ನು, ಭೂ ದಾಖಲೆಗಳನ್ನು, ಧಾರ್ಮಿಕ ಸಂಸ್ಥೆಗಳ ಕಡತಗಳನ್ನು ಅವಲೋಕಿಸಿ ಅದರಲ್ಲಿಯ ಚಾರಿತ್ರಿಕ ಮಹತ್ತ್ವದ ಸಂಗತಿಗಳನ್ನು ಶೋಧಿಸಲು ಸಾಧ್ಯವಾಗುತ್ತದೆ.

ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಮೋಡಿ ಲಿಪಿಗೆ ಸಂಬಂಧಿಸಿದ ಪರಿಣಿತ ಸಂಶೋಧಕರು ವಿರಳ. ಈ ನಿಟ್ಟಿನಲ್ಲಿ ಮೋಡಿ ಲಿಪಿ ಬಲ್ಲ ತಜ್ಞರನ್ನು ತಯಾರು ಮಾಡಬೇಕಾಗಿದೆ. ಇದರಿಂದ ನಶಿಸುತ್ತಿರುವ ಮತ್ತು ಅವಜ್ಞೆಗೆ ಗುರಿಯಾದ ಐತಿಹಾಸಿಕ ದಾಖಲೆಗಳನ್ನು ಅಧ್ಯಯನ ಮಾಡಲು ಅನುಕೂಲವಾಗುತ್ತದೆ. (ಎಂ.ವೈ.ಎಸ್.)

**ತಿಗಳಾರಿ ಲಿಪಿ ಮತ್ತು ಸಾಹಿತ್ಯ:** ಈ ಲಿಪಿ ಪುರಾತನವಾಗಿದ್ದು ಪಶ್ಚಿಮ ಕರಾವಳಿ, ಮಲೆನಾಡು, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಹು ಕಾಲದಿಂದಲೂ ಹಸ್ತಪ್ರತಿಗಳಲ್ಲಿರುವ ಕೃತಿಗಳಲ್ಲಿ ಉಳಿದುಕೊಂಡು ಬಂದಿರುವ ಲಿಪಿ. ಈ ಲಿಪಿಯನ್ನು ಬಹುಪಾಲು ಬಳಸುವವರು ವೈದಿಕರು. ವೇದ, ಪುರಾಣ, ಉಪನಿಷತ್ತು, ಜ್ಯೋತಿಷ ಹಾಗೂ ವಿಪುಲ ಜ್ಞಾನಸಂಪತ್ತು ಜನ ಸಾಮಾನ್ಯರ ಕೈಯಲ್ಲಿ ಸಿಕ್ಕು ನಶಿಸಿ ಹೋಗಬಾರದೆಂದು, ಅವುಗಳಿಗೆ ಪರಂಪರೆಯ ಮಹತ್ತ್ವ ನೀಡಿ ಗುಪ್ತ ಲಿಪಿಯಂತಿರುವ ತಿಗಳಾರಿ ಲಿಪಿಯಲ್ಲಿ ತಾಳೆಯೋಲೆಗಳಲ್ಲಿ ಬರೆದಿಡಲಾಯಿತು. ದ್ರಾವಿಡ ಭಾಷಾ ಪರಿವಾರದಲ್ಲಿ ಬೆಳೆದು ಬಂದ ತಿಗಳಾರಿ ಲಿಪಿ ಹಸ್ತಪ್ರತಿ ಕುರಿತು ವೈಜ್ಞಾನಿಕ ಅಧ್ಯಯನ ಹೆಚ್ಚಾಗಿ ನಡೆದಿಲ್ಲ.

ಭಾರತದಲ್ಲಿ ಇಂತಹ ಜ್ಞಾನ ಭಂಡಾರಗಳನ್ನು ಕಂಡುದನ್ನು 1623ರಲ್ಲಿ ಇಟಲಿ ಪ್ರವಾಸಿ ಪಿಯತ್ರೊ ಡೆಲ್ಲಾವೆಲ್ಲ ಮತ್ತು ಜಾನ್ ಫ್ರಾಯರ್ ನಿರೂಪಿಸಿದ್ದಾರೆ.

ಶಾಸನಗಳಲ್ಲಿ ತಿಗಳಾರಿ ಲಿಪಿಯ ಬಗ್ಗೆ ನಾಗರಕಂಗಡ ತಿಗುಳಾರ್ಯ್ಯವನೋದಿಸುವ ಬಾಲಶಿಕ್ಷೆ ಉಪಾಧ್ಯರ ಜೀವಿತಕ್ಕೆ ಎಂಬ ಉಲ್ಲೇಖ ಕಂಡುಬರುತ್ತದೆ. ಕಿಟ್ಟೆಲ್ ನಿಘಂಟಿನಲ್ಲಿ ಉಪದ್ಯರನ್ನು ಸಂಸ್ಕೃತಬಲ್ಲ ಬ್ರಾಹ್ಮಣ ಎಂದು ಹೇಳಿದೆ.

ಹಸ್ತಪ್ರತಿಗಳು (ತಿಗಳಾರಿ): ನಾಗರೀ ಲಿಪಿ ಪರಿಜ್ಞಾನವಿಲ್ಲದಿರುವ ಪಂಡಿತರು ಕೇರಳದಲ್ಲಿರುವ ವೇದ, ಆಗಮ, ಜ್ಯೋತಿಷ, ಉಪನಿಷತ್ತು, ತಂತ್ರಶಾಸ್ತ್ರ, ಆಯುರ್ವೇದ ಮುಂತಾದವುಗಳನ್ನು ತಮ್ಮದೇ ಆದ ತಿಗಳಾರಿ ಲಿಪಿಯಲ್ಲಿ ತಾಳೆಯೋಲೆ ಹಸ್ತಪ್ರತಿಗಳಲ್ಲಿ ಸಂಗ್ರಹಿಸಿದರು. ಇಂತಹ ಹಸ್ತಪ್ರತಿಗಳೇ ಕೆಳದಿ ಗುಂಡಾಜೋಯಿಸರ ಸರ್ವೇಕ್ಷಣಾಧ್ಯಯನದಲ್ಲಿಯೂ ಕಂಡುಬಂದಿವೆ. ಕೆಳದಿ ಸಂಶೋಧನಾಲಯದಿಂದ ತಿಗಳಾರಿ ಹಸ್ತಪ್ರತಿಗಳ ಎರಡು ಸೂಚಿಗಳು ಪ್ರಕಟವಾಗಿವೆ. ಅಪ್ರಕಟಿತ ಕೃತಿಗಳು ತಿಗಳಾರಿ ಹಸ್ತಪ್ರತಿಗಳಲ್ಲಿ ಉಪಲಬ್ಧವಿವೆ. ಇತಿಹಾಸ ಕುರಿತಂತೆ, ಇತಿಹಾಸೋತ್ತಮ, ಕಾವೇರಿ ಮಹಾತ್ಮೆ, ಕೆಳದಿ ರಾಣಿಚನ್ನಮ್ಮಾಜಿಯ ನಿರೂಪ ಶಿಲ್ಪಶಾಸ್ತ್ರ, ಅಹಿಚ್ಛತ್ರ ಬ್ರಾಹ್ಮಣ ಗಮನ ಕಥಾ ಮುಂತಾದವು ಗಮನಾರ್ಹ. ವೇದ ಆಗಮಗಳಲ್ಲಿ, ಆಗಮ ತಂತ್ರ ಪ್ರಯೋಗ (ಪ್ರಾಚೀನ ಕಾಲದ ರಥೋತ್ಸವ ಇತ್ಯಾದಿ), ಆಯುರ್ವೇದ, ವಿಶ್ವಪತಿ, ವೆಂಕಟೇಶೀಯ ಪ್ರಯೋಗ, ಶತಶ್ಲೋಕೀ, ಸೌಂದರ್ಯ ಲಹರಿ, ಸ್ಮೃತಿ ಚಂದ್ರಿಕಾ, ಜ್ಯೋತಿಷದ ಗ್ರಹಲಾಘವ ಧರ್ಮ ಪ್ರವೃತ್ತಿ ಮತ್ತು ಜಯದೇವ ಕವಿಯ ಗೀತಗೋವಿಂದ ಕೃತಿ, ಕೆಳದಿ ಇತಿಹಾಸದ ವೀರಭದ್ರನಾಯಕನ ನಿರೂಪಗಳೂ ತಿಗಳಾರಿ ಲಿಪಿಗಳಲ್ಲಿ ಇವೆ. ನಶಿಸಿ ಹೋಗುವ ಮುನ್ನ ತಿಗಳಾರಿ ಲಿಪಿಯ ಹಸ್ತಪ್ರತಿಗಳನ್ನು ಸಂರಕ್ಷಿಸುವುದು ತುರ್ತು ಅಗತ್ಯವಾಗಿದೆ. (ಕೆ.ಜಿ.ಜಿ.)

**ಅರಮೇಯಿಕ್ ಲಿಪಿ:** ಪ್ರಾಚೀನ ಸಿರಿಯದ ಜನ ಬಳಸುತ್ತಿದ್ದ ಈ ಲಿಪಿ ಉತ್ತರ ಸೆಮಿಟಿಕ್ ವರ್ಗಕ್ಕೆ ಸೇರಿದೆ. ಈ ಲಿಪಿಯ ಅತ್ಯಂತ ಪ್ರಾಚೀನ ಶಾಸನ ಟೆಲ್–ಹಲಾಫ್‌ನಲ್ಲಿ ದೊರಕಿದ್ದು ಪ್ರ.ಶ.ಪೂ.9ನೆಯ ಶತಮಾನಕ್ಕೆ ಸೇರಿದುದಾಗಿದೆ. ಇದು ಪಶ್ಚಿಮ ಏಷ್ಯದಲ್ಲಿ, ಅದರಲ್ಲೂ ಪರ್ಷಿಯ ರಾಜ್ಯದಲ್ಲಿ ವಿಶೇಷವಾಗಿ ಬಳಕೆಯಲ್ಲಿತ್ತು. ಈ ಲಿಪಿ ಹೀಬ್ರು, ಸಿರಿಯಕ್, ಮಂಡೇನ್, ಮನಿಷೇನ್, ಖರೋಷ್ಠಿ, ಪಹ್ಲವಿ, ಅವೆಸ್ತ ಮುಂತಾದ ಲಿಪಿಗಳ ವಿಕಾಸಕ್ಕೆ ಕಾರಣವಾಯಿತು. ಭಾರತದಲ್ಲಿ ಪ್ರಚಾರದಲ್ಲಿದ್ದ ಖರೋಷ್ಠಿ ಮತ್ತು ಬ್ರಾಹ್ಮಿ ಲಿಪಿಗಳ ಉತ್ಪತ್ತಿಗೂ ಅರಮೇಯಿಕ್ ಲಿಪಿಯೇ ಕಾರಣವೆಂದು ಕೆಲ ವಿದ್ವಾಂಸರ ವಾದ. ಆಫ್ಘಾನಿಸ್ತಾನದಲ್ಲಿ ಈ ಲಿಪಿಯಲ್ಲಿ ಬರೆದ ಅಶೋಕನ ಶಾಸನಗಳಿವೆ. (ಎ.ವಿ.ಎನ್.)

**ಲೀನಿಯರ್ ಎ ಮತ್ತು ಬಿ ಲಿಪಿಗಳು:** ಲೀನಿಯರ್ ಎ –ಆರ್ಥರ್ ಎವಾನ್ಸ್‌ರವರು ಪ್ರಾಚೀನ ಕ್ರೀಟ್‌ನಲ್ಲಿ ಬಳಕೆಯಲ್ಲಿದ್ದ ಲೀನಿಯರ್ ಎ ಮತ್ತು ಲೀನಿಯರ್ ಬಿ ಎಂಬ ಎರಡು ಲಿಪಿಗಳನ್ನು ಶೋಧಿಸಿದ. ಇವಲ್ಲದೆ ಹೈರೋಗ್ಲಿಫ್ (ಚಿತ್ರಲಿಪಿ) ಕೂಡ ಬಳಸಲಾಗುತ್ತಿತ್ತು. ಲೀನಿಯರ್ (ರೇಖಾರೂಪ) ಬಿ ಲಿಪಿಯನ್ನು ಮೈಕೆಲ್ ವೆಂಟ್ರಿಸ್ 1952ರಲ್ಲಿ ಓದುವುದರಲ್ಲಿ ಯಶಸ್ವಿಯಾದ. ಈ ಲಿಪಿಯನ್ನು ಮೈಸಿನಿಯ ಗ್ರೀಕ್ ಭಾಷೆಯಲ್ಲಿ ಬರೆಯಲು ಉಪಯೋಗಿಸಲಾಗುತ್ತಿತ್ತು. ಲೀನಿಯರ್ ಎ ಲಿಪಿಯನ್ನು ಓದುವ ಪ್ರಯತ್ನ ತೃಪ್ತಿಕರವಾಗಿಲ್ಲ. ಲೀನಿಯರ್ ಬಿ ಲಿಪಿಯ ಮೌಲ್ಯಗಳನ್ನು ಉಪಯೋಗಿಸಿಕೊಂಡು ಎ ಲಿಪಿಯನ್ನು ಸ್ವಲ್ಪಮಟ್ಟಿಗೆ ಓದಲು ಪ್ರಯತ್ನಿಸಿದ್ದಾರೆ. ಈ ಎರಡು ಲಿಪಿಗಳ ಹಲವಾರು ಚಿಹ್ನೆಗಳು ಒಂದೇ ರೀತಿ ಇವೆ. ಆದ್ದರಿಂದ ಇಂಥ ಚಿಹ್ನೆಗಳಿಗೆ ಬಿ ಚಿಹ್ನೆಗಳ ಮೌಲ್ಯವನ್ನು ಕೊಟ್ಟು ಓದಿದಾಗ ಬರುವ ಪದಗಳು ಇದುವರೆಗೂ ಗೊತ್ತಿರುವ ಯಾವ ಭಾಷೆಯಲ್ಲೂ ಇಲ್ಲ. ಇದರ ಭಾಷೆಯನ್ನು ಮಿನೋವನ್ ಅಥವಾ ಎಟಿಯೊಕ್ರೀಟ್‌ನ್ ಎಂದು ಕರೆಯಲಾಗಿದ್ದು ಇದು ಮೈಸಿನಿಯ ಗ್ರೀಕರು ಪ್ರ.ಶ.ಪೂ.1450ರಲ್ಲಿ ನಡೆಸಿದ ಧಾಳಿಗಳ ಪೂರ್ವದಲ್ಲಿ ಕ್ರೀಟ್‌ನಲ್ಲಿ ಬಳಕೆಯಲ್ಲಿದ್ದಿರಬೇಕೆಂಬ ಅಭಿಪ್ರಾಯವಿದೆ. ಆದರೆ ಮಿನೋವನ್ ಭಾಷೆ ಬಹಳ ಹಿಂದೆ ಅಜ್ಞಾತವಾದುದರಿಂದ ಇದರ ಭಾಷೆ ಮಿನೋವನ್ ಎಂದು ಹೇಳುವುದು ಸಾಧ್ಯವಾಗುವುದಿಲ್ಲ. 1997ರಲ್ಲಿ ಗರೆತ್ ಅಲುನ್ ಓವೆನ್ಸ್ ಲೀನಿಯರ್ ಎ ಬಹುಮಟ್ಟಿಗೆ ಲುವಿಯನ್ ಓವೆನ್ಸ್ ಭಾಷೆಯ ಹಿಂದಿನ ಒಂದು ಕೊಂಬೆಯಾಗಿರಬಹುದೆಂದು ಅನುಮಾನ ಪಡುತ್ತಾರೆ. ಇವರು ಲೀನಿಯರ್ ಬಿ ಯನ್ನು ಉಪಯೋಗಿಸಿಕೊಂಡು ಗ್ರೀಕ್ ಮೌಲ್ಯವಿಲ್ಲದ ಇಂಡೋ–ಯುರೋಪಿನ್ ಭಾಷೆಯ ಕೆಲವು ಪದಗಳನ್ನು ಇವರು ಕಂಡುಕೊಂಡರು. 2001ರಲ್ಲಿ ಜಾನ್‌ಬೆಸ್ಟ್ ಈ ಲಿಪಿಯನ್ನು ಬಿಡಿಸಲು ಪ್ರಯತ್ನಿಸಿದರು. ಇವರ ಪ್ರಕಾರ ಫೊನಿಷಿಯನ್ ಭಾಷೆಯ ಪ್ರಾಚೀನ ಭಾಷೆಯಂತಿದೆ. ಇವರು ಓದಿದ ಕೆಲವು ಪದಗಳಲ್ಲಿ ಕೂ–ರೊ ಪದವು ಬಹುಮಟ್ಟಿಗೆ ಪೂರ್ಣವೆಂಬ ಅರ್ಥವನ್ನು ಕೊಡುತ್ತದೆ. ಈ ಪ್ರಯತ್ನ ಇತ್ತೀಚಿನವರೆಗಿನ ಶೋಧನೆಯ ಹಂತವನ್ನು ಸೂಚಿಸುತ್ತದೆ.

**ಲೀನಿಯರ್–ಬಿ:** ಈ ಲಿಪಿ ಗ್ರೀಕ್ ಲಿಪಿಯ ಒಂದು ಆದಿ ರೂಪ. ಇದನ್ನು ಮೈಸಿನಿಯ ನಾಗರಿಕತೆಯ ಜನ ಉಪಯೋಗಿಸುತ್ತಿದ್ದರು. ಈ ನಾಗರಿಕತೆಯ ಜೊತೆಯಲ್ಲಿ ಇದು ಅಳಿದುಹೋಯಿತು. ಲಿಪಿಯುಳ್ಳ ಮುದ್ರಿಕೆಗಳು ನಾಸ್ಸೊಸ್, ಸೈಡೊನಿಯ, ಪೈಲಾಸ್, ಥೀಬ್ಸ್ ಮತ್ತು ಮೈಸಿನಿಯ ಮುಂತಾದ ಸ್ಥಳಗಳಲ್ಲಿ ದೊರೆತಿವೆ. ಇದು ಇದುವರೆಗೂ ಓದಲಾಗದ ಲೀನಿಯರ್ ಎ ಮತ್ತು ಅನಂತರ ಕಾಲದ ಸೈಪ್ರಿಯಟ್‌ನ ಮಾತ್ರಾಕ್ಷ ಮಾಲಿಕೆಗೂ ಸಂಬಂಧಿಸಿದೆ. ಲೀನಿಯರ್ ಬಿನಲ್ಲಿ 200 ಸಂಕೇತಗಳಿದ್ದು ಇವುಗಳನ್ನು ಕೆಲವು ಉಚ್ಚಾರಾಂಶವುಳ್ಳ ವರ್ಗವೆಂದು ಮತ್ತೆ ಕೆಲವು ಪದ ಚಿಹ್ನೆ ವರ್ಗವೆಂದು ವಿಂಗಡಿಸಲಾಗಿದೆ. ಇವು 59 ಅಕ್ಷರ ಸಂಕೇತಗಳು ಮತ್ತು ಸೆಮೆಟೋಗ್ರಾಫಿಕ್ ಚಿಹ್ನೆಗಳನ್ನು ಒಳಗೊಂಡಿವೆ. ಈ ಚಿಹ್ನೆಗಳು ವಸ್ತು ಇಲ್ಲವೆ ಸರಕುಗಳನ್ನು ಸೂಚಿಸುತ್ತವೆ. ಇವಕ್ಕೆ ಉಚ್ಚಾರಾಂಶ ಇಲ್ಲ. ವಾಕ್ಯದಲ್ಲಿ ಪದಗಳನ್ನು ಸೂಚಿಸುವ ಸಂಕೇತವಾಗಿ ಬಳಸಲಾಗಿಲ್ಲ. ಕೇವಲ ಆಡಳಿತಾತ್ಮಕ ವಿಷಯಗಳಿಗೆ ಮಾತ್ರ ಈ ಲಿಪಿಯನ್ನು ಉಪಯೋಗಿಸಲಾಗುತ್ತಿತ್ತು. ಈ ಮುದ್ರಿಕೆಗಳನ್ನು ಪ್ರಧಾನ ಅರಮನೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲವೇ ವೃತ್ತಿಪರ ವ್ಯಕ್ತಿಗಳು ಬಳಸುತ್ತಿದ್ದರು. ಹೀಗಾಗಿ ಇದು ಕ್ರಮೇಣ ಅಳಿದುಹೋಯಿತು. **ಆಲಂಕಾರಿಕ ಲಿಪಿ ಶೈಲಿಗಳು: ನೋಡಿ–ಆದಿಲ್‌ಶಾಹಿ ವಂಶ.** (ಎ.ಎಸ್.;ಎಸ್.ಎಲ್.)

**ಲಿವಿ, ಟೈಟಸ್ ಲಿವಿಯಸ್:** ಪ್ರ.ಶ.ಪೂ.59 – ಪ್ರ.ಶ.17. ರೋಮ್ ಸಾಮ್ರಾಜ್ಯದ ಪ್ರಸಿದ್ಧ ಇತಿಹಾಸಕಾರ. ವೆನಿಸ್ ನಗರಕ್ಕೆ 35ಕಿಮೀ ದೂರದಲ್ಲಿರುವ ಪಟವಿಯಮ್‍ನಲ್ಲಿ ಜನಿಸಿದ. ಈತ ರಚಿಸಿದ ರೋಮಿನ ಇತಿಹಾಸ ಎಂಬ ಉದ್ಗ್ರಂಥ ಪ್ರಸಿದ್ಧವಾಗಿದೆ. ಈತನ 142 ಗ್ರಂಥಗಳಲ್ಲಿ ಕೇವಲ 35 ಮಾತ್ರ ಉಪಲಬ್ಧವಾಗಿವೆ. ಉಳಿದ ಗ್ರಂಥಗಳ ಅಪೂರ್ಣ ಹಸ್ತಪ್ರತಿಗಳು ದೊರೆತಿವೆ. ಸರಳ ಶೈಲಿ, ಸ್ವತಂತ್ರ ಅಭಿಪ್ರಾಯ ಪ್ರತಿಪಾದನೆ ಈತನ ವೈಶಿಷ್ಟ್ಯ. ಈತ ಬಹುಕಾಲ ರೋಮಿನಲ್ಲಿದ್ದ. ಅಗಸ್ಟಸ್‍ನ ಆತ್ಮೀಯ ಸ್ನೇಹಿತನಾಗಿದ್ದ. ಈತನ ಮಗನೂ ಇತಿಹಾಸಕಾರ. ಈತ ಮಗನಿಗೆ ಬರೆದ ಪತ್ರಗಳು ಪತ್ರ ಸಾಹಿತ್ಯದಲ್ಲೊಂದು ಮೈಲಿಗಲ್ಲು. ಈತನ ಶೈಲಿ, ಐತಿಹಾಸಿಕ ದೃಷ್ಟಿಗಳು ಭವಿಷ್ಯದ ಇತಿಹಾಸಕಾರರಿಗೆ ಮಾರ್ಗದರ್ಶನ ನೀಡಿದವು. ಈತ ರಚಿಸಿರುವ ಇತಿಹಾಸದ ಗ್ರಂಥಗಳು ಸು. 18ನೆಯ ಶತಮಾನದ ತನಕ ಕಲಿಸಲ್ಪಡುತ್ತಿದ್ದವು.

(ಕೆ.ಎಸ್.)

**ಲೀಕಿ, ಲೂಯಿ:** 1903–72. ಬ್ರಿಟಿಷ್ ಪುರಾತತ್ತ್ವಜ್ಞ, ಮಾನವಶಾಸ್ತ್ರಜ್ಞ ಹಾಗೂ ಪಳೆಯುಳಿಕೆ ಶಾಸ್ತ್ರಜ್ಞ. 1903 ಆಗಸ್ಟ್ 7ರಂದು ಕೀನ್ಯದ ನೈರೋಬಿ ಹತ್ತಿರದಲ್ಲಿರುವ ಕಬೆಟೆ ಎಂಬಲ್ಲಿ ಜನಿಸಿದ. ಇವನ ತಂದೆ ಹ್ಯಾರಿ ಮತ್ತು ತಾಯಿ ಮೇರಿ ಲೀಕಿ. ಇಬ್ಬರೂ ಬ್ರಿಟಿಷ್ ಧರ್ಮಪ್ರಚಾರಕರಾಗಿದ್ದರು. ಕಿಕುಯು ಆದಿವಾಸಿ ಮಕ್ಕಳೊಂದಿಗೆ ಬೆಳೆದ ಇವನು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದ. ಮಾನವಶಾಸ್ತ್ರವನ್ನು ಮುಖ್ಯ ವಿಷಯವನ್ನಾಗಿ ಓದಿ 1926ರಲ್ಲಿ ಪದವೀಧರನಾದ. ಅನಂತರ ಮೊದಲು ಆರ್ಕಿಯಲಾಜಿಕಲ್ ಮಿಷನ್ ಟು ತಾಂಜನೀಯ ಸಂಸ್ಥೆಯಲ್ಲಿ ಆಫ್ರಿಕ ಅಧ್ಯಯನದ ತಜ್ಞನಾಗಿ ಕೆಲಸಕ್ಕೆ ಸೇರಿದ.

ಈತ 1926–37ರ ವರೆಗೆ ಪೂರ್ವ ಆಫ್ರಿಕದಲ್ಲಿ ಅನೇಕ ಬಾರಿ ಸಂಶೋಧನ ಕಾರ್ಯವನ್ನು ಕೈಗೊಂಡ. 1945–61ರ ವರೆಗೆ ನೈರೋಬಿಯ ಕ್ರೊಯಾಂಡನ್ ಮ್ಯೂಸಿಯಮ್‍ನ ಕ್ಯುರೇಟರ್ ಆಗಿ ಕಾರ್ಯ ನಿರ್ವಹಿಸಿದ. ಕೀನ್ಯ ನ್ಯಾಷನಲ್ ಪಾರ್ಕ್ ಮತ್ತು ಅಭಯಾರಣ್ಯಗಳಿಗೆ ಟ್ರಸ್ಟಿಯಾಗಿ ಸೇವೆ ಸಲ್ಲಿಸಿದ. 1931ರಲ್ಲಿ ಈತ ತಾಂಜನೀಯ ದಲ್ಲಿರುವ ಓಲ್ಡುವಾಯ್ ಗಾರ್ಜ್‍ನಲ್ಲಿ ಪ್ರಾರಂಭಿಸಿದ ಭೂಶೋಧನೆ ಪ್ರಸಿದ್ಧವಾಯಿತು. 1936ರಲ್ಲಿ ಈತ ವೈಟ್ ಆಫ್ರಿಕ ಎಂಬ ಶೀರ್ಷಿಕೆಯಲ್ಲಿ ಆತ್ಮಚರಿತ್ರೆಯನ್ನೂ ಅನಂತರ ಕಿಕುಯು ಕಲ್ಚರ್ ಎಂಬ ಪುಸ್ತಕವನ್ನೂ ಬರೆದ. ಇದೇ ವೇಳೆಗೆ ಈತನಿಗೆ ಮೇರಿಯೊಂದಿಗೆ ಮದುವೆಯಾಯಿತು. ಅನಂತರ ಕೀನ್ಯ ಸರ್ಕಾರದ ಸಿವಿಲಿಯನ್ ಇಂಟಲಿಜನ್ಸ್ ಆಫೀಸರಾದ (1939). ಅನಂತರ ಆಫ್ರಿಕದ ಇಂಟಲಿಜನ್ಸ್ ಡಿಪಾರ್ಟ್‍ಮೆಂಟ್‍ಗೆ ವರ್ಗವಾದ. 1947ರಲ್ಲಿ ರುಸಿಂಗ್ ದ್ವೀಪದಲ್ಲಿ ಭೂಶೋಧನೆಯನ್ನು ಪ್ರಾರಂಭಿಸಿದ ಈತ 1949ರಲ್ಲಿ ಮೊದಲ ಪ್ರೊಕನ್‍ಸುಲ್‍ನ ಮುಖವನ್ನು ಹೊಂದಿದ ತಲೆಬುರುಡೆ ಅವಶೇಷವನ್ನು ಹೊರತೆಗೆದ. ಇದು ಮಂಗ ಮತ್ತು ಗೊರಿಲ್ಲ ನಡುವಿನ ತಪ್ಪಿದ ಕೊಂಡಿ ಎಂದು ಬಹಿರಂಗಪಡಿಸಿದ. ಲೀಕಿ ಮತ್ತು ಮೇರಿ ಕೂಡಿ ಮತ್ತೊಮ್ಮೆ ಓಲ್ಡುವಾಯ್ ನಿವೇಶನಕ್ಕೆ ಹೋಗಿ ಉಪಕರಣಗಳನ್ನು ಸಂಗ್ರಹಿಸಿದರು. ಒಂದು ಹೊಸ ಅಸ್ಥಿಪಂಜರವನ್ನು ಭೂಶೋಧನೆಯಲ್ಲಿ ಹೊರತೆಗೆದು ಇದನ್ನು ಜಿಂಜ್ ಎಂದು ಹೆಸರಿಸಿ ನಾಲ್ಕನೆಯ ಪಾನ್ ಆಫ್ರಿಕನ್ ಕಾಂಗ್ರೆಸ್‍ನಲ್ಲಿ ಪ್ರದರ್ಶನಕ್ಕೆ ಇಡಲಾಯಿತು (1959). ಈ ಶೋಧನೆಯಿಂದ ಬಹಳಷ್ಟು ಸಂಶೋಧಕರು ಚಕಿತರಾದರು. ಈ ಸಂಶೋಧನೆ ಲೀಕಿ ಮತ್ತು ಮೇರಿಗೆ ಪ್ರಪಂಚ ಖ್ಯಾತಿಯನ್ನು ತಂದುಕೊಟ್ಟಿತು. ಈ ಅಸ್ಥಿಪಂಜರ 1,750,000 ವರ್ಷಗಳಷ್ಟು ಹಳೆಯದೆಂಬ ಅಭಿಪ್ರಾಯವಿದೆ. ಅನಂತರ ಈತ ಜಿಂಜಾಂತ್ರೊಪಸ್ ಆಧುನಿಕ ಮಾನವನ ನೇರ ವಂಶಜನಲ್ಲವೆಂಬುದನ್ನು ಅರಿತು ಇದನ್ನು ಹೋಮೊ ಹೆಬಿಲಿಸ್ ಎಂದು ಹೆಸರಿಸಿದ. ಹೋಮೊ ಹೆಬಿಲಿಸ್ ಹಾಗೂ ಜಿಂಜಾಂ ಥ್ರೊಪಸ್ ಪೂರ್ವ ಆಫ್ರಿಕದ ಸಮಕಾಲಿಕ ಜೀವಿಗಳಾಗಿದ್ದು ಆಧುನಿಕ ಹೋಮಿನಿಡ್ ಎಂದು ತೋರ್ಪಡಿಸಿದ. ಆದರೆ ಪಳೆಯುಳಿಕೆಗಳ ಮೇಲಿನ ಈತನ ವಿಚಾರಗಳನ್ನು ಮತ್ತು ವಿಭಜನೆಗಳನ್ನು ಬಹಳಷ್ಟು ಸಂಶೋಧಕರು ಒಪ್ಪಿಕೊಂಡಿರಲಿಲ್ಲ; ಅನೇಕ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು.

ಆಡಮ್ ಆನ್ಸೆಸ್ಟರ್ಸ್ (1934), ಸ್ಟೋನ್ ಏಜ್ ಆಫ್ರಿಕ (1936), ಓಲ್ಡುವಾಯ್ ಗಾರ್ಜ್ (1952), ಮವ್‍ಮವ್ ಅಂಡ್ ದಿ ಕಿಕುಯು (1952), ಅನ್‍ವೆಯ್ಲಿಂಗ್ ಮ್ಯಾನ್ಸ್ ಆರಿಜನ್ (1969), ಅನಿಮಲ್ಸ್ ಆಫ್ ಈಸ್ಟ್ ಆಫ್ರಿಕ (1969)–ಇವು ಇವನ ಮುಖ್ಯ ಕೃತಿಗಳು. ಈತ 1972ರಲ್ಲಿ ನಿಧನನಾದ.

(ಬಿ.ಆರ್.ವಿ.)

**ಲೀಗ್ ಆಫ್ ನೇಷನ್ಸ್:** 1919–47. ಪ್ರಪಂಚದ ಪ್ರಥಮ ಅಂತಾರಾಷ್ಟ್ರೀಯ ಸಂಸ್ಥೆ (ರಾಷ್ಟ್ರಸಂಘ). ಒಂದನೆಯ ಮಹಾಯುದ್ಧದ ಅನಂತರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಸ್ಥಾಪನೆಗಾಗಿ 1920 ಜನವರಿ 10ರಂದು ಅಸ್ತಿತ್ವಕ್ಕೆ ಬಂತು. ಒಂದನೆಯ ಮಹಾಯುದ್ಧದ ಕ್ರೂರ ಪರಿಣಾಮ ಮತ್ತು ಶಾಂತಿಯ ಕೂಗು ಇದರ ಉದಯಕ್ಕೆ ಕಾರಣವಾಯಿತು. ಅಂತಾರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಸ್ಥಾಪಿಸುವುದಕ್ಕಾಗಿ ಅಮೆರಿಕದ ಅಧ್ಯಕ್ಷ ವುಡ್ರೊವಿಲ್ಸನ್ 14 ಅಂಶಗಳನ್ನು ವರ್ಸೇಲ್ಸ್ ಒಪ್ಪಂದದ (1919) ಮುಂದಿಟ್ಟ. ಆಗ ಜನರಲ್ ಅಸೋಸಿಯೇಷನ್ ಆಫ್ ನೇಷನ್ಸ್ ಎಂಬ ಸಮಿತಿ ಸ್ಥಾಪಿಸಿ ಆ ಮೂಲಕ ವಿಶ್ವಶಾಂತಿ ಕಾಪಾಡುವುದೆಂದು ನಿರ್ಧರಿಸಲಾಯಿತು. ಆ ಪ್ರಕಾರ 1920 ಜನವರಿ 10 ರಂದು ಅಧಿಕೃತವಾಗಿ ಲೀಗ್ ಆಫ್ ನೇಷನ್ಸ್ ಅಸ್ತಿತ್ವಕ್ಕೆ ಬಂತು. ಇದರ ಕಾರ್ಯಾಲಯ ಸ್ವಿಟ್ಜರ್‍ಲೆಂಡಿನ ಜಿನೀವದಲ್ಲಿತ್ತು. ಇದರ ಆರಂಭದ ಸದಸ್ಯರ ಸಂಖ್ಯೆ 42 ಅನಂತರ 1935ರ ವೇಳೆಗೆ 62 ಆಯಿತು. ಈ ಸಂಸ್ಥೆಯ ಧ್ಯೇಯೋದ್ದೇಶಗಳು: ಪ್ರಪಂಚದಲ್ಲಿ ಶಾಂತಿ ಸ್ಥಾಪಿಸಿ, ಪರಸ್ಪರ ಸಹಕಾರ ಹಾಗೂ ಸಹಬಾಳ್ವೆ ವೃದ್ಧಿಸುವುದು, ನಿಶ್ಶಸ್ತ್ರೀಕರಣಕ್ಕೆ ಒತ್ತು ನೀಡಿ ರಾಷ್ಟ್ರಗಳ ನಡುವೆ ರಹಸ್ಯ ಒಪ್ಪಂದ ಮತ್ತು ಭವಿಷ್ಯದಲ್ಲಿ ಯುದ್ಧ ತಡೆಯುವುದು, ಅಂತಾರಾಷ್ಟ್ರೀಯ ವಿವಾದಗಳನ್ನು ಶಾಂತಿ ಸಂಧಾನದ ಮೂಲಕ ಬಗೆಹರಿಸುವುದು, ವಸಾಹತು ರಾಷ್ಟ್ರಗಳ ಹಿತಾಸಕ್ತಿ ಕಾಪಾಡಿ, ಶ್ರೇಯೋಭಿವೃದ್ಧಿಗೆ ಶ್ರಮಿಸುವುದು, ಸದಸ್ಯ ರಾಷ್ಟ್ರಗಳ ಸ್ವಾತಂತ್ರ್ಯ, ಸಮಾನತೆ ಹಾಗೂ ಪ್ರಪಂಚದ ಜೊತೆಗೆ ಉತ್ತಮ ಜೀವನಾವಕಾಶ ಒದಗಿಸಿಕೊಡುವುದು.

ಅಂಗ ಸಂಸ್ಥೆಗಳು: ಇದು ತನ್ನ ಕಾರ್ಯನಿರ್ವಹಣೆಗಾಗಿ ನಾಲ್ಕು ಪ್ರಮುಖ ಸಮಿತಿಗಳನ್ನು ಹೊಂದಿತ್ತು:

ಮಹಾಸಭೆ: ಪ್ರಪಂಚ ಸಂಸತ್ತಿನಂತಿದ್ದು, ಲೀಗ್‍ನ ಎಲ್ಲ ಸದಸ್ಯರನ್ನೊಳಗೊಂಡಿತ್ತು. ಮೊದಲಸಭೆ 1920 ನವೆಂಬರ್ 15ರಂದು ಜಿನೀವದಲ್ಲಿ ಜರುಗಿತು. ಈ ಸಭೆಯಲ್ಲಿ ತಲಾ ಮೂವರು ಪ್ರತಿನಿಧಿಗಳಂತೆ 42 ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದವು. ಈ ಸಮಿತಿ ವರ್ಷಕ್ಕೊಮ್ಮೆ ಸಭೆ ಸೇರಿ ಉಪಸಮಿತಿಗಳಿಗೆ ಸದಸ್ಯರನ್ನು ಆಯ್ಕೆ ಮಾಡುತ್ತಿತ್ತು.

ಭದ್ರತಾ ಮಂಡಳಿ: ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ, ಜಪಾನ್–ಇವು ಖಾಯಂ ಪ್ರತಿನಿಧಿಗಳು. ಉಳಿದ ರಾಷ್ಟ್ರಗಳು ಸಾಮಾನ್ಯ ಸದಸ್ಯ ರಾಷ್ಟ್ರಗಳಾಗಿದ್ದವು. ಯುದ್ಧ ತಡೆಗಟ್ಟುವುದು, ವಿಶ್ವಶಾಂತಿ, ಭದ್ರತೆ, ರಾಷ್ಟ್ರಗಳ ನಡುವಣ ವಿವಾದ ಬಗೆಹರಿಸುವುದು, ಮಹಾಸಭೆಯ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದು ಭದ್ರತಾ ಮಂಡಳಿಯ ಪ್ರಧಾನ ಕಾರ್ಯಗಳು.

ಕಾರ್ಯಾಲಯ: ಇದರ ಪ್ರಧಾನ ಕಾರ್ಯಾಲಯ ಸ್ವಿಟ್ಜರ್‍ಲೆಂಡಿನ ಜಿನೀವದಲ್ಲಿತ್ತು. ಲೀಗ್‍ನ ದೈನಂದಿನ ಕಾರ್ಯ ಕಲಾಪಗಳನ್ನು ನಡೆಸುವುದು ಲೆಕ್ಕಪತ್ರಗಳನ್ನಿಡುವುದು ಈ ಕಾರ್ಯಾಲಯದ ಮುಖ್ಯ ಕಾರ್ಯ. ಕಾರ್ಯದರ್ಶಿ ಇದರ ಮುಖ್ಯಾಧಿಕಾರಿ, ಬಹುಮತದ ಆಧಾರದ ಮೇಲೆ ಸಾರ್ವತ್ರಿಕ ಸಭೆಯಲ್ಲಿ ಇವನನ್ನು ಭದ್ರತಾಮಂಡಳಿ ನೇಮಕ ಮಾಡುತ್ತಿತ್ತು. ಸರ್ ಎರಿಕ್ ಡ್ರುಮಾಂಡ್ ಇದರ ಪ್ರಥಮ ಕಾರ್ಯದರ್ಶಿಯಾಗಿದ್ದ.

ಅಂತಾರಾಷ್ಟ್ರೀಯ ನ್ಯಾಯಾಲಯ: 1922 ಫೆಬ್ರವರಿ 13ರಂದು ಹಾಲೆಂಡಿನ ಹೇಗ್ ನಗರದಲ್ಲಿ ಇದನ್ನು ಸ್ಥಾಪಿಸಲಾಯಿತು. ಇದು ಭದ್ರತಾ ಸಮಿತಿಯ ಶಿಫಾರಸಿನ ಮೇರೆಗೆ ಮಹಾಸಭೆಯಿಂದ ಆಯ್ಕೆ ಮಾಡಿದ 9 ಮಂದಿ ನ್ಯಾಯಾಧೀಶರು ಹಾಗೂ ನಾಲ್ಕು ಉಪನ್ಯಾಯಾಧೀಶರನ್ನು ಹೊಂದಿತ್ತು. ಅವರ ಕಾಲಾವಧಿ 9 ವರ್ಷಗಳು. ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ನ್ಯಾಯಾಂಗ ವಿಚಾರಣೆಯಿಂದ ತೀರ್ಮಾನಿಸುವುದು, ಮಹಾಸಭೆ ಅಥವಾ ಭದ್ರತಾ ಮಂಡಳಿ ಉಲ್ಲೇಖಿಸುವ ವಿಚಾರಗಳ ಮೇಲೆ ತೀರ್ಮಾನಕೊಡುವ ಅಧಿಕಾರವಿತ್ತು. ಇವುಗಳಲ್ಲದೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಒ) ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‍ಒ), ಅಂತಾರಾಷ್ಟ್ರೀಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಮಿತಿ (ಯುನೆಸ್ಕೋ) ಎಂಬ ಅಂಗ ಸಂಸ್ಥೆಗಳನ್ನು ಒಳಗೊಂಡಿತ್ತು.

ರಾಜಕೀಯ ಸಾಧನೆಗಳು: 40 ರಾಜಕೀಯ ವಿವಾದಗಳನ್ನು ಇದು ಪರಿಶೀಲಿಸಿತು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಸ್ವೀಡನ್ ಮತ್ತು ಫಿನ್‍ಲೆಂಡ್‍ಗಳ ನಡುವಿನ ವಿವಾದ, ಎಲ್ಲ ಜಿಲ್ಲೆಯ ವಿಷಯವಾಗಿ ಲಿಥುವೇನಿಯ ಹಾಗೂ ಪೋಲೆಂಡ್ ನಡುವಿನ ವಿವಾದ, ಬೆಲ್ಜಿಯಂ ಹಾಗೂ ಜರ್ಮನಿ ನಡುವಿನ ವಿವಾದಗಳು ಸೇರಿದಂತೆ ಹಲವು ಸಮಸ್ಯೆಗಳನ್ನು ಇದು ಬಗೆಹರಿಸಿ ಶಾಂತಿ ನೆಲೆಸುವಂತೆ ಮಾಡಿತು.

ರಾಜಕೀಯ ಸಾಧನೆಗಳು: ಒಂದನೆಯ ಮಹಾಯುದ್ಧದ ಅನಂತರ ಹಲವು ರಾಷ್ಟ್ರಗಳು ಆರ್ಥಿಕವಾಗಿ ದಿವಾಳಿಯಾದಾಗ ಅವುಗಳ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ನೀಡಲು ಮತ್ತು ಅಭಿವೃದ್ಧಿ ಸೂಚಿಸಲು 1927ರಲ್ಲಿ ಪ್ರಪಂಚ ಮಟ್ಟದಲ್ಲಿ ಹಣಕಾಸು ಮತ್ತು ಆರ್ಥಿಕ ಸಮ್ಮೇಳನಗಳನ್ನು ನಡೆಸಿತು. ಸುಂಕ, ರಫ್ತು, ವ್ಯಾಪಾರ, ನಕಲಿನಾಣ್ಯಗಳ ತಡೆಯುವಿಕೆಯ ಬಗೆಗೆ ಇದು ಪ್ರಪಂಚದ ರಾಷ್ಟ್ರಗಳಿಗೆ ಕೆಲವು ನಿಯಮವನ್ನು ರೂಪಿಸಿಕೊಟ್ಟಿತು. 1920ರಲ್ಲಿ ಅಂತಾರಾಷ್ಟ್ರೀಯ ಸಂಪರ್ಕ ಮತ್ತು ಪ್ರಯಾಣ ಸಂಸ್ಥೆಯನ್ನು ಸ್ಥಾಪಿಸಿ ನದಿಗಳಲ್ಲಿ ಸಾಗಾಟ, ಸಮುದ್ರಗಳ ಸಿಗ್ನಲ್, ತೀರಪ್ರದೇಶಗಳಲ್ಲಿ ಲೈಟ್‍ಹೌಸ್ ಕಟ್ಟುವುದು ಮತ್ತು ರಸ್ತೆಸಾರಿಗೆ ಬಗ್ಗೆ ಕೆಲವು ಸಲಹೆಗಳನ್ನು ನೀಡಿತು. ನಿರಾಶ್ರಿತರು ಯುದ್ಧಖೈದಿಗಳು ಮತ್ತು ಕಾರ್ಮಿಕರ ಸ್ಥಿತಿಗತಿಗಳನ್ನು ವೃದ್ಧಿಸಲು ಶ್ರಮಿಸಿತು. ಆಸ್ಟ್ರಿಯವನ್ನು ಹಸಿವು ಹಾಗೂ ದಾರಿದ್ರ್ಯದಿಂದ ಪಾರುಮಾಡಲು ಅಲ್ಲಿ ಹೊಸ ಕೈಗಾರಿಕೆ ಮತ್ತು ಕೃಷಿಗೆ ಉತ್ತೇಜನ ನೀಡಲಾಯಿತು. 1923ರಲ್ಲಿ ಜಿನೀವದಲ್ಲಿ ಸ್ಲೇವರಿ ಕನ್ವೆನ್‍ಷನ್ ಕಾನ್ಫರೆನ್ಸ್ ಕರೆದು ಶಾಶ್ವತ ಗುಲಾಮಗಿರಿ ಆಯೋಗ ರಚಿಸಿ ಪ್ರಪಂಚದಲ್ಲಿ ಗುಲಾಮಗಿರಿಯನ್ನು ತೊಡೆದು ಹಾಕಲು ಪ್ರಯತ್ನಿಸಿತು. ವಿಶ್ವ ಆರೋಗ್ಯ ಸಂಸ್ಥೆಯಿಂದ ಹಲವಾರು ಮಾರಕ ರೋಗಗಳ ನಿವಾರಣೆಗೆ ಶ್ರಮಿಸಿತು. ಮಹಿಳೆ ಹಾಗೂ ಮಕ್ಕಳ ಕಲ್ಯಾಣ, ಮಕ್ಕಳ ಮಾರಾಟ, ನಿಷೇಧ ಮಾದಕದ್ರವ್ಯ ಬಳಕೆ ನಿಯಂತ್ರಣ, ಸೆರೆಮನೆಗಳ ಸುಧಾರಣೆ, ಬಲಾತ್ಕಾರದ ಸೇವೆ ಮತ್ತು ಅಶ್ಲೀಲ ಸಾಹಿತ್ಯ ನಿಷೇಧ ಮೊದಲಾದ ವಿಚಾರಗಳಲ್ಲಿ ಗಮನಾರ್ಹ ಸಾಧನೆ ಮಾಡಿತು.

ಲೀಗ್‍ನ ವಿಫಲತೆ: ಈ ಸಂಸ್ಥೆ ಅನೇಕ ವಿಚಾರಗಳಲ್ಲಿ ಯಶಸ್ವಿಯಾದರೂ ಅಂತಾರಾಷ್ಟ್ರೀಯ ಮಟ್ಟದ ವಿವಾದ ಬಗೆಹರಿಸುವುದರಲ್ಲಿ ಶಾಂತಿ, ಸಹಕಾರ, ಭದ್ರತೆ, ನಿಶ್ಶಸ್ತ್ರೀಕರಣದಂತಹ ತನ್ನ ಮುಖ್ಯ ಗುರಿ ಸಾಧಿಸುವಲ್ಲಿ ಅದು ವಿಫಲಗೊಂಡಿತು. ಹೀಗಾಗಲು

ಹಲವಾರು ಕಾರಣಗಳಿದ್ದವು. ತಪ್ಪು ಪ್ರಣಾಳಿಕೆ, ಮಹಾಸಭೆ ಮತ್ತು ಮಹಾಮಂಡಳಿಗಳ ನಡುವಿನ ಅಧಿಕಾರ ಅನಿರ್ದಿಷ್ಟತೆ, ಅಮೆರಿಕ, ರಷ್ಯದಂತಹ ಪ್ರಬಲ ರಾಷ್ಟ್ರಗಳು ತಡವಾಗಿ ಸದಸ್ಯತ್ವ ಪಡೆದುಕೊಂಡಿದ್ದುದು, ಬಹುಪಾಲು ರಾಷ್ಟ್ರಗಳು ಸದಸ್ಯತ್ವ ಪಡೆದುಕೊಳ್ಳದೇ ಹೋದುದು. ಇಂಥ ಅನೇಕ ಕಾರಣಗಳನ್ನು ನೀಡಬಹುದು. ಅಲ್ಲದೆ, ನಿಯಮ ಮೀರಿದ ರಾಷ್ಟ್ರಗಳಿಗೆ ಶಿಕ್ಷಿಸುವ ಅಧಿಕಾರ ಲೀಗ್‌ಗೆ ಇರಲಿಲ್ಲ. ಜರ್ಮನಿ, ಇಟಲಿಯಂತಹ ದೇಶಗಳಲ್ಲಿ ಅಂಧ ರಾಷ್ಟ್ರೀಯತೆ ಬೆಳೆದು ರಾಷ್ಟ್ರಸಂಘದಿಂದ ಹೊರಬಂದವು. ಅದಕ್ಕೆ ತನ್ನದೆ ಆದ ಸೈನ್ಯ ಬಲ ಹಾಗೂ ಜನಬೆಂಬಲವಿರಲಿಲ್ಲ. ಹಲವಾರು ರಾಷ್ಟ್ರಗಳು ಅದಕ್ಕೆ ವಿರುದ್ಧವಾಗಿ ವರ್ತಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದರ ಜೊತೆಗೆ ಇನ್ನು ಹಲವಾರು ಕಾರಣಗಳಿಂದ ಲೀಗ್ ವಿಫಲಗೊಂಡಿತು. ಆದರೆ ಇದರ ಆಶಯಗಳು ಎರಡನೆಯ ಮಹಾಯುದ್ಧದ ಅನಂತರ ಸ್ಥಾಪಿತವಾದ ವಿಶ್ವಸಂಸ್ಥೆಯಲ್ಲಿ ಮುಂದುವರಿದವು. ಲೀಗ್‌ನ ಸಮಗ್ರ ವ್ಯವಸ್ಥೆಯನ್ನು 1945–47ರ ಅವಧಿಯಲ್ಲಿ ವಿಶ್ವಸಂಸ್ಥೆಗೆ ವರ್ಗಾಯಿಸಲಾಯಿತು. 1947 ಏಪ್ರಿಲ್ 18ರಂದು ಲೀಗ್ ಅಧಿಕೃತವಾಗಿ ಸ್ಥಗಿತಗೊಂಡಿತು. (ಆರ್‌ಕೆ.)

**ಲೀನಿಯರ್ ಎ ಮತ್ತು ಬಿ: ನೋಡಿ–ಲಿಪಿಗಳು**

**ಲುಂಬಿನಿ:** ನೇಪಾಲ ದೇಶದ ಕಪಿಲವಸ್ತು ಜಿಲ್ಲೆಯಲ್ಲಿ ಭಾರತ–ನೇಪಾಲ ಗಡಿಯಲ್ಲಿರುವ ಸುನೌಲಿ ಗ್ರಾಮದಿಂದ 27 ಕಿಮೀ ದೂರದಲ್ಲಿರುವ ಬುದ್ಧನ ಜನ್ಮಸ್ಥಳ. ಇದನ್ನು 1890ರಲ್ಲಿ ಶೋಧಿಸಲಾಯಿತು. ಬುದ್ಧನ ಮಹಾಪರಿನಿರ್ವಾಣದ 300 ವರ್ಷಗಳ ಅನಂತರ ಅಶೋಕ ತನ್ನ ರಾಜ್ಯಾಭಿಷೇಕದ 20ನೆಯ ವರ್ಷದಲ್ಲಿ (ಪ್ರ.ಶ.ಪೂ. 249) ಈ ಸ್ಥಳಕ್ಕೆ ಭೇಟಿ ನೀಡಿ ಇಲ್ಲಿ ಒಂದು ಕಂಬವನ್ನು ನೆಟ್ಟು ಅದರ ಮೇಲೆ ಈ ನೆಲೆ ಬುದ್ಧನ ಪವಿತ್ರ ಜನ್ಮಸ್ಥಳವಾದ್ದರಿಂದ ತೆರಿಗೆಯನ್ನು 1/6 ಭಾಗದಿಂದ 1/8 ಭಾಗಕ್ಕೆ ಇಳಿಸಿದ ವಿಷಯವನ್ನು ಬರೆಯಿಸಿದ್ದಾನೆ. ಈ ಕಂಬ ರುಮಿಂದ್ಯೆ ಸ್ತಂಭಶಾಸನವೆಂದು ಪ್ರಸಿದ್ಧವಾಗಿದೆ. ರುಮಿಂದ್ಯೆ ಈಗಿನ ರುಪಂಧೆಯಿಯ ಪೂರ್ವದ ಹೆಸರು. 1312ರಲ್ಲಿ ಕರ್ನಲಿ ಪ್ರದೇಶದ ಖಾಷದೊರೆ ರಿಪುಮಲ್ಲ ಈ ನೆಲೆಗೆ ಭೇಟಿ ನೀಡಿ ಅಶೋಕನ ಸ್ತಂಭಶಾಸನದ ಮೇಲೆ ತನ್ನ ಯಾತ್ರೆಯ ವಿಷಯವನ್ನು ಕೆತ್ತಿಸಿದ್ದಾನೆ. 1899ರಲ್ಲಿ ಬಾಬು ಪೂರ್ಣಚಂದ್ರ ಮುಖರ್ಜಿ ಇಲ್ಲಿ ಉತ್ಖನನ ನಡೆಸಿದರು. ಈ ಉತ್ಖನನದಲ್ಲಿ ಸಿದ್ಧಾರ್ಥನ ಜನ್ಮಶಿಲ್ಪ ಫಲಕ ದೊರೆತಿರುವುದು ಮಹತ್ತ್ವದ ವಿಚಾರ. 1933–39ರವರೆಗೆ ಇಲ್ಲಿಯ ಕೈಷರ್ ಶಂಷ್ಯೆರ್‌ನಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ದೇಬಲ ಮಿತ್ರ ಉತ್ಖನನ ನಡೆಸಿದರು. ತರುವಾಯ ನೇಪಾಲದ ಪುರಾತತ್ತ್ವಜ್ಞರೂ ಇಲ್ಲಿ ಉತ್ಖನನ ಮತ್ತು ಸಂರಕ್ಷಣೆ ಕಾರ್ಯ ನಡೆಸಿದರು.

ಚೀನಿ ಬೌದ್ಧ ಯಾತ್ರಿಕರಾದ ಫಾಹಿಯಾನ್ ಮತ್ತು ಯುವಾನ್‌ಚಾಂಗ್ ಅನುಕ್ರಮವಾಗಿ 403 ಮತ್ತು 636ರಲ್ಲಿ ಈ ಸ್ಥಳಕ್ಕೆ ಭೇಟಿಕೊಟ್ಟಿದ್ದರು. 1962ರಲ್ಲಿ ದೇಬಲ ಮಿತ್ರ ಮತ್ತು ಇತರರು ಇಲ್ಲಿ ಮತ್ತೆ ನಡೆಸಿದ ಉತ್ಖನನದಲ್ಲಿ ಹಲವಾರು ಸ್ತೂಪ, ವಿಹಾರಗಳು ಮತ್ತು ಸಿದ್ಧಾರ್ಥನಿಗೆ ಜನ್ಮಕೊಡುವ ಮುನ್ನ ಇವನ ತಾಯಿ ಸ್ನಾನ ಮಾಡಿದಳೆಂದು ಹೇಳಲಾಗುವ ಪುಷ್ಕರಣಿ ಬೆಳಕಿಗೆ ಬಂದಿವೆ. ಇದಕ್ಕೆ ಹೊಂದಿಕೊಂಡಂತೆ ಇರುವ ತಿಲವರ್ ಕೋಟ್ ಎಂಬಲ್ಲಿರುವ ಶಾಕ್ಯ ಅರಮನೆಯ ಪೂರ್ವದ ಮಹಾದ್ವಾರವನ್ನು ಮುಖರ್ಜಿ ಅವರು ಉತ್ಖನನ ಮಾಡಿದ್ದರು. ಈ ಮಹಾದ್ವಾರದ ಮೂಲಕವೇ ರಾಜಕುಮಾರ ಸಿದ್ಧಾರ್ಥ ಅರಮನೆಯನ್ನು ತೊರೆದುಹೋದದ್ದು. 1967–72ರಲ್ಲಿ ತಾರನಂದ ಮಿಶ್ರ ನಡೆಸಿದ ಉತ್ಖನನದಲ್ಲಿ ಈ ಅರಮನೆಯ ಪಶ್ಚಿಮ ಮಹಾದ್ವಾರ, ರಕ್ಷಣಾಗೋಡೆ, ಕಾವಲುಗಾರರ ಕೊಠಡಿಗಳನ್ನು ಹೊರತೆಗೆಯಲಾಯಿತು. ಇದೇ ಸಮಯದಲ್ಲಿ ತಿಲವರಕೋಟ್‌ನ ಉತ್ತರಕ್ಕೆ 500 ಮೀ ದೂರದಲ್ಲಿರುವ ಧಮನಿಹವದಲ್ಲಿ ರಾಜ ಶುದ್ಧೋದನ ಮತ್ತು ರಾಣಿ ಮಾಯಾದೇವಿಯ ಸ್ಮಾರಕ ಸ್ತೂಪಗಳನ್ನು ಗುರುತಿಸಲಾಯಿತು. ದೇಬಲ ಮಿತ್ರರ ಉತ್ಖನನದಲ್ಲಿ ಕುಡಾನ್‌ನ ವಿಹಾರವನ್ನು ಶೋಧಿಸಲಾಯಿತು.

ಅರಮನೆಗೆ ಬರಲು ನಿರಾಕರಿಸಿದ ಬುದ್ಧನನ್ನು ಶುದ್ಧೋದನ ಇದಿರುಗೊಂಡದ್ದು ಇಲ್ಲಿಯೇ. ಬುದ್ಧ ಈ ವಿಹಾರದಲ್ಲಿ ಒಂದು ವರ್ಷವಿದ್ದ. ಈ ನೆಲೆಯ ಹತ್ತಿರದ ನಿಗ್ಲೀವ (ನಿಗಾಲಿ ಸಾಗರ ಶಾಸನ), ಕನಕಮುನಿ (ಕೊನಾಕಮನ) ಸ್ತೂಪಗಳನ್ನು ಅಶೋಕ ವಿಸ್ತರಿಸಿದ. ಬುದ್ಧ ಹುಟ್ಟಿದ ಸ್ಥಳದಲ್ಲಿ ಕ್ರಕುಚಂದನ ಶಿಲಾಶಾಸನ ಸ್ತಂಭವನ್ನು ನೆಡಿಸಿದ. ಬುದ್ಧನ ಜನ್ಮಸ್ಥಳಕ್ಕೆ ಸಂಬಂಧಿಸಿದ ಇನ್ನೆರಡು ಸ್ಥಳಗಳು ದೇನರಹ ಮತ್ತು ರಾಮಗ್ರಾಮ್. ಇವೆರಡು ಗೋಳಿಯರ ಆಡಳಿತಕ್ಕೆ ಒಳಪಟ್ಟಿತ್ತು. ಇದು ಮಾಯಾದೇವಿಯ ತವರುಮನೆ ಪ್ರದೇಶ. ರಾಮ್‌ಗ್ರಾಮನಲ್ಲಿಯ (ನವಲಪರಸಿ ಜಿಲ್ಲೆ) ಸ್ತೂಪವನ್ನು ಶುಕ್ರಸಾಗರ ಶ್ರೇಷ್ಠ ಉತ್ಖನನ ಮಾಡಿದರು. ರುಮಿಂದೈನಲ್ಲಿ ಪಕ್ಷಿಧಾಮವೊಂದನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ವಿಶ್ವಬೌದ್ಧರ ಸಂಯುಕ್ತ ಸಂಘ ಇದನ್ನು ವಿಶ್ವಶಾಂತಿಯ ಚಿಲುಮೆ ಎಂದು ಬಣ್ಣಿಸಿದೆ. ಇಲ್ಲಿಗೆ ಹಿಂದು ಮತ್ತು ಬೌದ್ಧಧರ್ಮೀಯರು ಪ್ರಪಂಚದ ಎಲ್ಲ ಭಾಗಗಳಿಂದ ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಈ ಸ್ಥಳ ವಿಶ್ವ ಪರಂಪರೆಯ ಪಟ್ಟಿಗೆ ಸೇರಿದೆ. (ಎ.ಎಸ್.;ಎನ್.ಎಲ್.)

**ಲೆನಿನ್, ಐ. ವಿ.:** 1870–1924. ರಷ್ಯ ಕ್ರಾಂತಿಯ ನೇತಾರ, ರಾಜಕೀಯ ಮುತ್ಸದ್ದಿ, ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕ, ಕಾರ್ಲ್‌ಮಾರ್ಕ್ಸ್‌ನ ಸಮಾಜವಾದಿ ತತ್ತ್ವದ ಅನುಯಾಯಿ. ಇವನು 1870 ಏಪ್ರಿಲ್ 22ರಂದು ರಷ್ಯದ ವೋಲ್ಗಾನದಿ ತೀರದಲ್ಲಿನ ಸಿಮ್‌ಬ್ರಿಸ್ಕ್ ಪ್ರಾಂತದ (ಉಲಿಯನೋವಸ್ಕಿ) ಹಳ್ಳಿಯಲ್ಲಿ ಜನಿಸಿದ. ಈತನ ಮೊದಲ ಹೆಸರು ವ್ಲಾದಿಮಿರ್ ಇಲ್ಯಿಚ್ ಉಲ್ಯನೋವ್. ತಂದೆ ಇಲ್ಯನಿಕೋಲಯವಿಚ್ ಉಲ್ಯನೋವ್ ವೃತ್ತಿಯಲ್ಲಿ ಶಾಲಾತನಿಖಾಧಿಕಾರಿ, ತಾಯಿ ಮರಿಯ ಅಲೆಕ್ಸಾಂಡ್ರೋವ್‌ನ ಬ್ಲಾಂಕ್. ಈಕೆ ಶಿಕ್ಷಕಿ. ಓದು, ಕ್ರೀಡೆ, ಈಜು ಮುಂತಾದ ಚಟುವಟಿಕೆಗಳಲ್ಲಿ ಪ್ರತಿಭಾವಂತನಾದ ಲೆನಿನ್ ಬಾಲ್ಯದಲ್ಲೆ ಲೆರ್ಮನ್‌ಟಾಫ್, ಗೊಗೋಲ್, ತುರ್ಗೇನೆಫ್, ಟಾಲ್‌ಸ್ಟಾಯ್‌ರವರ ಕೃತಿಗಳು ಮತ್ತು ಬೆಲೀನ್‌ಸ್ಕಿ, ಕೆರೆನ್‌ಸ್ಕಿ ಮೊದಲಾದವರ ಬರೆಹಗಳಿಂದ ಪ್ರಭಾವಿತನಾದ. ಕಜನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವಾಗ ವಿದ್ಯಾರ್ಥಿಗಳ ಹಕ್ಕುಗಳಿಗಾಗಿ ನಡೆದ ಮುಷ್ಕರದಲ್ಲಿ ಭಾಗವಹಿಸಿ ವಿಶ್ವವಿದ್ಯಾಲಯದಿಂದ ಹೊರದೂಡಲ್ಪಟ್ಟ (1887). ಅನಂತರ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯದಿಂದ ನ್ಯಾಯಶಾಸ್ತ್ರ ಪದವಿ ಪಡೆದ (1891)



ಇವನು ನಡೆಜ್ಡಕ್ರುಪ್ಸ್‌ಕಾಯ ಎಂಬಾಕೆಯೊಡನೆ 1898 ಜುಲೈ 22ರಂದು ವಿವಾಹವಾದ. ಕಾರ್ಲ್ ಮಾರ್ಕ್ಸ್‌ನ ಕಮ್ಯುನಿಸ್ಟ್ ತತ್ತ್ವಗಳನ್ನು ಅಳವಡಿಸಿಕೊಂಡು ಕಾರ್ಮಿಕರ ಜೊತೆಗೂಡಿ ಕ್ರಾಂತಿಕಾರಿಯಾದ. ತನ್ನ ಇಷ್ಕಾ (ಕಿಡಿ) ಪತ್ರಿಕೆ ಮೂಲಕ ಕಾರ್ಮಿಕರನ್ನು ಜಾಗೃತಗೊಳಿಸಿ ಹೋರಾಟದ ಕಣಕ್ಕಿಳಿಸಿದ. ಅಪಾರ ಬೆಂಬಲಿಗರೊಂದಿಗೆ ರೈಲು ದರೋಡೆ, ಕಚೇರಿ ಖಜಾನೆ ಲೂಟಿ ಮೊದಲಾದ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ. ಅನೇಕ ಮಾರ್ಕ್ಸ್‌ವಾದಿ ಸಂಘಗಳನ್ನು ಒಗ್ಗೂಡಿಸಿ ಸೇಂಟ್‌ಪೀಟರ್ಸ್‌ಬರ್ಗ್‌ನಲ್ಲಿ ಕಾರ್ಮಿಕ ವಿಮೋಚನ ಸಂಘರ್ಷ ಸಮಿತಿ ಎಂಬ ಸಂಘ ಸ್ಥಾಪಿಸಿ (1915) ಸಮಾಜವಾದಿ ಪ್ರಜಾಪ್ರಭುತ್ವ ಪಕ್ಷದ ನಾಯಕನಾದ. ಇವನು ಸರ್ಕಾರವನ್ನು ನಿಷ್ಕ್ರಿಯಗೊಳಿಸಲು ಕ್ರಾಂತಿಕಾರಿ ಚಟುವಟಿಕೆಗಳನ್ನು ನಡೆಸಿ ಸೆರೆವಾಸವಲ್ಲದೆ ಗಡಿಪಾರು ಶಿಕ್ಷೆಯನ್ನೂ ಅನುಭವಿಸಿದ. ನಿರಾಶ್ರಿತನಾಗಿ ಸ್ವಿಟ್ಜರ್‌ಲೆಂಡಿನಲ್ಲಿದ್ದಾಗ ಜರ್ಮನಿಯ ಸಹಾಯದಿಂದ ಕ್ರಾಂತಿಕಾರಿ ಸಾಹಿತ್ಯವನ್ನು ರಷ್ಯಕ್ಕೆ ರವಾನಿಸುತ್ತಿದ್ದ. ಸೈಬೀರಿಯದಲ್ಲಿನ ಲೇನಾನದಿ ತೀರದ ಲೇನಾ ಎಂಬಲ್ಲಿ ಲೆನಿನ್ ಎಂಬ ಹೆಸರಿನಲ್ಲಿ ಪತ್ರಿಕೆ ಪ್ರಕಟಿಸುತ್ತಿದ್ದುದರಿಂದ ಮುಂದೆ ಅದೇ ಹೆಸರಿನಿಂದ ಪ್ರಸಿದ್ಧನಾದ (1901). 1917ರ ಕ್ರಾಂತಿಯ ವೇಳೆಗೆ ಕ್ರಾಂತಿಯ ನಾಯಕತ್ವವಹಿಸಿದ. ಇದೇ ಸಮಯದಲ್ಲಿ ಕೆರೆನ್‌ಸ್ಕಿ ನಾಯಕತ್ವದ ಬೋಲ್‌ಸ್ವೊವೋ (ಬಹುಸಂಖ್ಯಾತ ಪಕ್ಷ) ಗುಂಪು ಕ್ರಾಂತಿಯನ್ನಾರಂಭಿಸಿದಾಗ ಇವನು ಸೋಷಿಯಲ್ ಡೆಮೊಕ್ರಾಟಿಕ್ ಪಾರ್ಟಿ (ಮೆನ್‌ಷಿನ್‌ಸ್ತೊವೋ ಅಲ್ಪಸಂಖ್ಯಾತ ಪಕ್ಷ) ಗುಂಪನ್ನು ಬಲಪಡಿಸಿ ಕಮ್ಯುನಿಸ್ಟ್‌ರ ಪರ ಪ್ರಚಾರ ಮಾಡಿ, ರೈತರು ಹಾಗೂ ಕಾರ್ಮಿಕರ ಬೆಂಬಲ ಪಡೆದು ಜಾರ್ ದೊರೆಗಳ ದಬ್ಬಾಳಿಕೆ ಸರ್ಕಾರವನ್ನು ಕೊನೆಗೊಳಿಸಿದ. ಕ್ರಾಂತಿಯ ಅನಂತರ ತಾತ್ಕಾಲಿಕ ಸರ್ಕಾರ ಸ್ಥಾಪಿಸಿ ರಷ್ಯದ ಪ್ರಥಮ ಅಧ್ಯಕ್ಷನಾದ(1917–24).

ಇವನು ತನ್ನ ಆಡಳಿತಾವಧಿಯಲ್ಲಿ ಕಾರ್ಲ್‌ಮಾರ್ಕ್ಸ್‌ನ ತತ್ತ್ವವನ್ನು ರಷ್ಯದಲ್ಲಿ ಜಾರಿಗೆ ತಂದು ಎಲ್ಲ ಬ್ಯಾಂಕ್‌ಗಳು, ಕಾರ್ಖಾನೆಗಳು, ರೈಲ್ವೆ ಹಾಗೂ ಭೂಮಿಯ ಒಡೆತನವನ್ನು ರಾಷ್ಟ್ರೀಕರಣಗೊಳಿಸಿದ. ಪ್ರಜೆಗಳೆಲ್ಲರೂ ಸಾರ್ವತ್ರಿಕವಾಗಿ ಕೆಲಸ ನಿರ್ವಹಿಸುವುದರ ಮೂಲಕ ಉತ್ಪಾದನೆ ಹಾಗೂ ಹಂಚಿಕೆಯಲ್ಲಿ ಸಮಾನತೆಯನ್ನು ಜಾರಿಗೆ ತಂದ. ಶಿಕ್ಷಣ ರಾಷ್ಟ್ರೀಕರಣಗೊಳಿಸಿ ಬೋಧನಾ ಪದ್ಧತಿಯಲ್ಲಿ ಕಮ್ಯುನಿಸ್ಟ್ ಆದರ್ಶಗಳನ್ನು ಅಳವಡಿಸಿದ. ಕ್ರೈಸ್ತಧರ್ಮದ ವಿಶೇಷ ಸ್ಥಾನಮಾನ ರದ್ದುಪಡಿಸಿದ. ಒಂದನೆಯ ಮಹಾಯುದ್ಧದಿಂದ ರಷ್ಯ ಅಪಾರ ಆರ್ಥಿಕ ನಷ್ಟಕ್ಕೊಳಗಾಯಿತು. 1918ರಲ್ಲಿ ಜರ್ಮನ್ನರನ್ನು ರಷ್ಯದಿಂದ ಹೊರದೂಡುವಲ್ಲಿ ಸ್ವಲ್ಪಮಟ್ಟಿನ ಯಶಸ್ಸು ಸಾಧಿಸಿದ. ಜರ್ಮನಿಯೊಂದಿಗೆ ಬ್ರೆಸ್ಟ್ ಲಿಟೊವ್‌ಸ್ಕ್ ಒಪ್ಪಂದದ ಮೂಲಕ ರಷ್ಯವನ್ನು ಒಂದನೆಯ ಮಹಾಯುದ್ಧದಿಂದ ಹೊರತಂದ. ಇವನ ಕ್ರಾಂತಿಕಾರಕ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಬಂಡವಾಳಗಾರರು, ಜಮಿನ್ದಾರರು ವಿರೋಧಿಸಿದರು. 1921ರಲ್ಲಿ ಭೀಕರ ಕ್ಷಾಮ ಉಂಟಾದಾಗ ಮುಷ್ಕರಗಳು ಕಾಣಿಸಿಕೊಂಡವು. ಒಂದನೆಯ ಮಹಾಯುದ್ಧದಲ್ಲಿ ರಷ್ಯ ಸೈನ್ಯವನ್ನು ಹಿಂತೆಗೆದುಕೊಂಡಿದ್ದು ಹಾಗೂ ಜಾರ್ ದೊರೆಗಳ ವಿದೇಶಿ ಸಾಲಕ್ಕೆ ಇವನು ಜವಾಬ್ದಾರನಾಗದೆ ಇದ್ದುದನ್ನು ನೆಪಮಾಡಿಕೊಂಡು ಇಂಗ್ಲೆಂಡ್ ಮತ್ತು ಫ್ರಾನ್ಸ್ ಮತ್ತಿತರ ಯುರೋಪಿನ ರಾಷ್ಟ್ರಗಳು ರಷ್ಯದ ಮೇಲೆ ಧಾಳಿ ಮಾಡಿದವು. ಇವನು ತನ್ನ ಕೆಂಪುದಳ ಮತ್ತು ಚೆಕಾ ಎಂಬ ಗುಪ್ತ ಪೊಲೀಸ್ ಪಡೆಯ ಸಹಾಯದಿಂದ ಹಾಗೂ ಸ್ಟಾಲಿನ್ ಮುಖಂಡತ್ವದಲ್ಲಿ 1920ರ ವೇಳೆಗೆ ಎಲ್ಲ ಅಪಾಯಗಳನ್ನು ಬಗೆಹರಿಸಿದ. ದೇಶದಲ್ಲಿ ವೈದ್ಯಕೀಯ ಸೌಲಭ್ಯ ಹಾಗೂ ಮೂಲಭೂತ ಆವಶ್ಯಕತೆಗಳನ್ನು ಬಲಪಡಿಸಿ ಪ್ರಜೆಗಳ ಪ್ರೀತಿಗೆ ಪಾತ್ರನಾದ. ಸಮಾಜವಾದ, ಬಂಡವಾಳವಾದ ಹಾಗೂ ಖಾಸಗಿ ಉದ್ಯಮಗಳ ತಳಹದಿಯ ಮೇಲೆ ಹೊಸ ಆರ್ಥಿಕ ನೀತಿಯನ್ನು ಜಾರಿಗೆ

ತಂದ(1921). ಲೆನಿನ್ ಅಭಿಪ್ರಾಯ ಪಟ್ಟಂತೆ ಎರಡು ಹೆಜ್ಜೆ ಮುಂದೆ ಹೋಗಲು ಒಂದು ಹೆಜ್ಜೆ ಹಿಂದೆ ಇಡುವುದು ಎಂಬ ತತ್ತ್ವವನ್ನು ಇದು ಆಧರಿಸಿತ್ತು ಹಾಗೂ ಈ ಹೊಸನೀತಿಯ ಮೂಲಕ ದುಡಿಯುವ ವರ್ಗ ಹಾಗೂ ರೈತರ ನಡುವೆ ಆರ್ಥಿಕ ಮತ್ತು ರಾಜಕೀಯ ಸಾಮರಸ್ಯ ತಂದ. ರೈತರಿಗೆ ಬಾಡಿಗೆ ಆಧಾರದಲ್ಲಿ ಜಮೀನು, ಶ್ರಮಕ್ಕೆ ತಕ್ಕ ಕೂಲಿ, ತಾವು ಬೆಳೆದ ಬೆಳೆಗಳನ್ನು ಲಾಭಕ್ಕೆ ಖಾಸಗಿ ವ್ಯಾಪಾರಿಗಳಿಗೆ ಮಾರುವ ಅವಕಾಶ ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಿದ. ರೈತರಿಗೆ ಖಾಸಗಿ ವಲಯದಲ್ಲಿ ಸಣ್ಣ ಪ್ರಮಾಣದ ಉದ್ಯಮ ಹಾಗೂ ವ್ಯಾಪಾರಕ್ಕೆ ಉತ್ತೇಜನ ನೀಡಿದ. ನಾಣ್ಯ ಸುಧಾರಣೆ ಮಾಡಿ ಪಡಿತರ ಪದ್ಧತಿ ರದ್ದುಗೊಳಿಸಿದ. ಬೃಹತ್ ಕೈಗಾರಿಕೆ, ಸಾರಿಗೆ ಸಂಪರ್ಕ, ವಿದೇಶಿ ವ್ಯಾಪಾರ ಹಾಗೂ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ ಖಾಸಗಿ ಬಂಡವಾಳದಿಂದ ಮುಕ್ತಗೊಳಿಸಿದ. ಕೃಷಿಬ್ಯಾಂಕ್ ಸ್ಥಾಪಿಸಿ ರೈತರಿಗೆ ಬೇಕಾದ ಯಂತ್ರೋಪಕರಣಗಳು ಹಾಗೂ ಸಾಲಸೌಲಭ್ಯ ನೀಡುವ ವ್ಯವಸ್ಥೆ ಮಾಡಿದ. ಗ್ರಾಹಕರ ಸಹಕಾರ ಸಂಘ ಸ್ಥಾಪಿಸಿ ವ್ಯಾಪಾರ ಅಭಿವೃದ್ಧಿಪಡಿಸುವುದರ ಮೂಲಕ ಉತ್ಪಾದನೆಯನ್ನು ತೀವ್ರಗೊಳಿಸಿ ದೇಶ ಸದೃಢವಾಗುವಂತೆ ಮಾಡಿದ. 1923ರಲ್ಲಿ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ ಬೋಲ್ಷೆವಿಕ್ ಗುಂಪನ್ನು ಕಮ್ಯುನಿಸ್ಟ್ ಪಾರ್ಟಿ ಆಫ್ ದಿ ಸೋವಿಯತ್ ಯೂನಿಯನ್ (ಸಿ.ಪಿ.ಎಸ್.ಯು.) ಎಂದು ಪುನರ್ ನಾಮಕರಣ ಮಾಡಿದ. ತನ್ನ ಕೊನೆಗಾಲದವರೆಗೆ ದುಡಿಯುವ ವರ್ಗ ಹಾಗೂ ಕಾರ್ಮಿಕರ ಹಿತಕ್ಕಾಗಿ ಶ್ರಮಿಸಿದ. ನೂತನ ರಾಷ್ಟ್ರನಿರ್ಮಾಣಕ್ಕಾಗಿ ಅಪಾರವಾಗಿ ದುಡಿದ ಈತ 1924 ಜನವರಿ 21ರಂದು ನಿಧನನಾದ. ಇವನ ಗೌರವಾರ್ಥ ಪೆಟ್ರೊಗ್ರಾಡ್ ನಗರವನ್ನು ಲೆನಿನ್‌ಗ್ರಾಡ್ ಎಂದು ಮರುನಾಮಕರಣ ಮಾಡಲಾಯಿತು. (ಆರ್‌ಕೆ.)

**ಲೋಥಲ್:** ಗುಜರಾತ್ ರಾಜ್ಯದ ಅಹಮದಾಬಾದ್ ಜಿಲ್ಲೆಯ ಧೋಕ್ಲಾ ತಾಲ್ಲೂಕಿನಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಸಾಬರಮತಿ ಮತ್ತು ಭೊಗಾವೊ ನದಿಯ ಮಧ್ಯದಲ್ಲಿರುವ ಈ ನೆಲೆ ಖಂಬತ್ ಕೊಲ್ಲಿಯಿಂದ 10ಕಿಮೀ ದೂರವಿದೆ. 1954ರಲ್ಲಿ ಎಸ್.ಆರ್. ರಾವ್ ಅವರು ಇದನ್ನು ಬೆಳಕಿಗೆ ತಂದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ವತಿಯಿಂದ 1954–55 ರಿಂದ 1962–63ರ ವರೆಗೆ ಅವರು ಇಲ್ಲಿ ಉತ್ಖನನ ಮಾಡಿದರು. ಸ್ವತಂತ್ರ ಭಾರತದಲ್ಲಿ ಉತ್ಖನನಕ್ಕೊಳಗಾದ ಹರಪ್ಪ ಸಂಸ್ಕೃತಿಯ ಪ್ರಪ್ರಥಮ ನೆಲೆಯಿದು. ಉತ್ಖನನದಲ್ಲಿ ದೊರೆತ ಅವಶೇಷಗಳಿಂದ ಇದು ವ್ಯಾಪಾರ ಕೇಂದ್ರ ಮತ್ತು ಬಂದರು ಆಗಿತ್ತೆಂಬುದು ಖಚಿತಪಟ್ಟಿತು. ಹತ್ತಿ, ದಂತ ಮತ್ತು ಅರೆಪ್ರಶಸ್ತ ಶಿಲೆಗಳು ಈ ನಗರದ ಮೂಲಕ ಹರಪ್ಪ ಸಂಸ್ಕೃತಿಯ ನೆಲೆಗಳಿಗೆ ಸಮುದ್ರಮಾರ್ಗದ ಮುಖಾಂತರ ರಫ್ತಾಗುತ್ತಿದ್ದವು.

ಇಲ್ಲಿರುವ ಪ್ರಾಚೀನ ದಿಬ್ಬದ ಎತ್ತರ 7ಮೀ. ಉತ್ಖನನದಲ್ಲಿ ಹರಪ್ಪ ಸಂಸ್ಕೃತಿಯ ಪ್ರೌಢ (ಹಂತ ಎ) ಮತ್ತು ಅವನತಿ (ಹಂತ ಬಿ) ಹಂತಗಳ ಅವಶೇಷಗಳು ದೊರೆತವು. ಎ ಹಂತದಲ್ಲಿ ನಾಲ್ಕು ಕಟ್ಟಡ ನಿರ್ಮಾಣ ಹಂತಗಳಿವೆ.

ಹರಪ್ಪ ಪೂರ್ವ ಕಾಲದಲ್ಲಿ ಇಲ್ಲಿ ಸ್ಥಳೀಯ ಜನಾಂಗದವರು ವಾಸಿಸುತ್ತಿದ್ದರು. ಇವರು ಉಪಯೋಗಿಸುತ್ತಿದ್ದ ತಾಮ್ರೋಪಕರಣಗಳು, ಕ್ಯಾಲ್ಸೆಡನಿಯ ತೆಳು ಚಕ್ಕೆಗಳು, ಅಭ್ರಕಯುಕ್ತ ಮಣ್ಪಾತ್ರೆಗಳು ಮತ್ತು ಕಪ್ಪು-ಕೆಂಪು ದ್ವಿವರ್ಣ ಮಣ್ಪಾತ್ರೆಗಳು ದೊರಕಿವೆ. ಅಭ್ರಕಯುಕ್ತ ಪಾತ್ರೆಗಳೆಂದರೆ ಅರೆಗೋಲಾಕಾರದ ಮಡಕೆಗಳು ಮತ್ತು ಮೊಳೆಯಾಕಾರದ ಹಿಡಿಕೆಯುಳ್ಳ ಪಾತ್ರೆಗಳು. ಇವುಗಳ ಮೇಲಿರುವ ಸುಂದರ ಚಿತ್ರಗಳಲ್ಲಿ ಗಿಡ, ರೇಖೆ, ವೃತ್ತ ಮುಂತಾದುವು ವಿಶೇಷವಾಗಿವೆ. ಒಂದು ಚಿತ್ರದಲ್ಲಿ ಹೂಜಿಯಿಂದ ಕಾಗೆ ನೀರು ಕುಡಿಯುತ್ತಿರುವುದು, ಅದರ ಪಕ್ಕದಲ್ಲಿ ಜಿಂಕೆ ನಿಂತಿರುವುದನ್ನು ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಬಾಯಲ್ಲಿ ಮೀನನ್ನು ಹಿಡಿದಿರುವ ಹಕ್ಕಿಗಳ ಗುಂಪು, ನರಿ ಮತ್ತು ಅದರ ಮುಂದೆ ಬಿದ್ದಿರುವ ಮೀನು ಇವೆ. ಸಸ್ಯಗಳು, ಹಕ್ಕಿಗಳ ಚಿತ್ರಗಳಿರುವುದು ಈ ಪ್ರಾಂತೀಯ ಶೈಲಿಯ ವೈಶಿಷ್ಟ್ಯ. ಆದರೆ ಈ ಎಲ್ಲ ಅವಶೇಷಗಳು ಸ್ಪಷ್ಟ ಸ್ತರದಲ್ಲಿ ದೊರೆತುವಲ್ಲ. ಇವುಗಳೊಂದಿಗೆ ಹರಪ್ಪ ಸಂಸ್ಕೃತಿಯ ಮಣ್ಪಾತ್ರೆಗಳು ಬೆರೆತಿವೆ.

ಪಾಕಿಸ್ತಾನದ ಸಿಂಧ್ ಪ್ರದೇಶದಿಂದ ಹರಪ್ಪ ಸಂಸ್ಕೃತಿಯ ಜನರು ವ್ಯಾಪಾರಕ್ಕಾಗಿ ಸೌರಾಷ್ಟ್ರದ ಕಾಥೆವಾಡದ ಕರಾವಳಿ ಪ್ರದೇಶದ ಮುಖಾಂತರ ಲೋಥಲ್‌ಗೆ ಬಂದಿರುವ ಸಾಧ್ಯತೆ ಇದೆ. ಎ ಹಂತದ ಪ್ರಾರಂಭದಲ್ಲಿ (ಕಟ್ಟಡ ನಿರ್ಮಾಣ ಹಂತ-1) ವಸತಿ ನೆರೆ ಹಾವಳಿಗೊಳಗಾದ ಕುರುಹುಗಳಿವೆ. ಈ ಘಟನೆಯ ಅನಂತರ ಜನರು 1.2–3.6 ಮೀ ಎತ್ತರದ ಹಸಿಇಟ್ಟಿಗೆಯ ಕಟ್ಟೆಗಳ ಮೇಲೆ ಮನೆಗಳನ್ನೂ ಕಟ್ಟಡಗಳನ್ನೂ ಕಟ್ಟತೊಡಗಿದರು (ಕಟ್ಟಡ ನಿರ್ಮಾಣ ಹಂತ-2). ಈ ಸಮಯದಲ್ಲಿ ಮಾದರಿ ವಿನ್ಯಾಸಕ್ಕೆ ಅನುಗುಣವಾಗಿ ನಗರವನ್ನು ಪುನರ್‌ನಿರ್ಮಿಸಲಾಯಿತು. ಅಲ್ಲದೆ ನಗರ ಮತ್ತಷ್ಟು ವಿಸ್ತಾರಗೊಂಡಿತು. ನಗರದಲ್ಲಿ 2 ಭಾಗಗಳಾದವು: ಎತ್ತರ ಸ್ಥಳದಲ್ಲಿ ಆಡಳಿತ ವರ್ಗದ ಮನೆ ಹಾಗೂ ಕಟ್ಟಡಗಳೂ (ಮೇಲ್‌ನಗರ) ತಗ್ಗಿನ ಸ್ಥಳದಲ್ಲಿ ಸಾರ್ವಜನಿಕರ ವಾಸಗೃಹಗಳೂ (ಕೆಳನಗರ) ನಿರ್ಮಾಣವಾದವು. ಓಣಿಗಳು ಹಾಗೂ ಮುಖ್ಯರಸ್ತೆಗಳು ಚದುರಂಗ ವಿನ್ಯಾಸದಲ್ಲಿದ್ದವು. ಮನೆ ಮತ್ತು ಇತರ ಕಟ್ಟಡಗಳನ್ನು ಹಸಿಇಟ್ಟಿಗೆಯಿಂದಲೂ ಸ್ನಾನದ ಮನೆ ಹಾಗೂ ಚರಂಡಿಯನ್ನು ಸುಟ್ಟ ಇಟ್ಟಿಗೆಯಿಂದಲೂ ಕಟ್ಟಲಾಗಿತ್ತು. ಇಂಗುಜಾಡಿ ಹಾಗೂ ಇಂಗುಗುಂಡಿ ಸಹಿತವಾದ ಚರಂಡಿ ವ್ಯವಸ್ಥೆಯಿತ್ತು.

ಕೆಳನಗರದಲ್ಲಿ ಮಣಿಗಾರರು, ಚಿನಿವಾರರು, ಶಂಖಾಭರಣ ತಯಾರಕರು, ಕಂಚುಗಾರರು ಮುಂತಾದ ಕರಕುಶಲಗಾರರ ಮತ್ತು ಸಣ್ಣ ವ್ಯಾಪಾರಿಗಳ ಮನೆಗಳಿದ್ದುವು. ಇವರ ಕಾರ್ಯಾಗಾರಗಳ ಅವಶೇಷಗಳು ಕಂಡುಬಂದಿವೆ. ಇಟ್ಟಿಗೆಯ ಕುಲುಮೆ, ಬಡಿಗಲ್ಲು, ಸುಟ್ಟಮಣ್ಣಿನ ಮೂಸೆ ಮತ್ತು ತಾಮ್ರದ ವಸ್ತುಗಳು ತಾಮ್ರ ಕಾರ್ಯಾಗಾರದ ಅವಶೇಷಗಳಾಗಿವೆ. ಕಾರ್ನೆಲಿಯನ್ ಕಲ್ಲಿನ ಪೂರ್ಣಮಣಿಗಳು, ತಯಾರಿಕೆಯ ಹಂತದಲ್ಲಿರುವ ಮಣಿಗಳು, ಕಲ್ಲಿನ ಚೂರುಗಳು ಮತ್ತು ಕಲ್ಲನ್ನು ಕಾಯಿಸುವ ವೃತ್ತಾಕಾರದ ಕುಲುಮೆ ಮಣಿಕಾರ್ಯಾಗಾರದ ಅವಶೇಷಗಳಾಗಿವೆ. ಕಂಚಿನ ಬೈರಿಗೆ, ತಾಮ್ರದ ಸೂಜಿ, ವೃತ್ತಾಕಾರದ ಗರಗಸ, ಸುಟ್ಟ ಜೇಡಿಮಣ್ಣಿನ ಗುಂಡು (ಪ್ಲಂಬ್ ಬಾಬ್), 27 ವಿಭಾಗವುಳ್ಳ, 12.8 ಸಂಮೀ ಉದದ್ದ ದಂತದ ಅಳತೆಪಟ್ಟಿ ಮತ್ತು ಕೋನಮಾಪಕಗಳು ಇವರ ತಾಂತ್ರಿಕ ಕೌಶಲಕ್ಕೆ ನಿದರ್ಶನಗಳಾಗಿವೆ.

ಹಡಗು ಕಟ್ಟೆ

ಸುರಕ್ಷಾ ಗೋಡೆ ನಗರವನ್ನು ಪೂರ್ಣವಾಗಿ ಸುತ್ತುವರೆದಿತ್ತು. ಉತ್ತರ-ದಕ್ಷಿಣಕ್ಕೆ 300 ಮೀ ಮತ್ತು ಪೂರ್ವ-ಪಶ್ಚಿಮಕ್ಕೆ 400 ಮೀ ಇದ್ದ ಈ ಮಣ್ಣಿನ ಗೋಡೆಯನ್ನು ಉತ್ತರ ಭಾಗದಲ್ಲಿ ಸುಟ್ಟಇಟ್ಟಿಗೆಗಳಿಂದ ಬಲಪಡಿಸಲಾಗಿತ್ತು. ಕಟ್ಟಡ ನಿರ್ಮಾಣದ 3ನೆಯ ಹಂತದಲ್ಲಿ ನಗರ ದಕ್ಷಿಣ ಗೋಡೆಯಿಂದಾಚೆ ಬೆಳೆಯಿತು; ಆಗ ನಗರದ ಪರಿಧಿ ಸು. 2 ಕಿಮೀ ಇತ್ತು. ಇಷ್ಟಾದರೂ ನಗರದ ಮೂಲ ವಿನ್ಯಾಸ ಬದಲಾಗಲಿಲ್ಲ. ಮೇಲ್‌ನಗರ ವಿಷಮ ಚತುರಸ್ರಾಕಾರವಾಗಿದ್ದು (ಟ್ರಪೀಜ್ಹಾಯಿಡ್) ಪೂರ್ವ-ಪಶ್ಚಿಮಕ್ಕೆ 117 ಮೀ, ಉತ್ತರದಲ್ಲಿ 136 ಮೀ, ದಕ್ಷಿಣದಲ್ಲಿ 111 ಮೀ ಇತ್ತು. ಇದರ ಕೇಂದ್ರಭಾಗದಲ್ಲಿ 26X30 ಮೀ ವಿಸ್ತೀರ್ಣದ, 3.5 ಮೀ ಎತ್ತರದ ಕಟ್ಟೆಯ ಅವಶೇಷಗಳಿದ್ದುವು. ನಗರದ ಪ್ರಮುಖರ ವಾಸಗೃಹಗಳಿದ್ದಿರಬಹುದಾದ ಈ ಕಟ್ಟೆಯ ಮೇಲೆ ಮೂರು ಓಣಿ, ಮೂರು ರಸ್ತೆಗಳು, ಸುಟ್ಟ ಇಟ್ಟಿಗೆಯಿಂದ ಮಾಡಿದ ಒಂದು ಬಾವಿ ಹಾಗೂ ಸ್ನಾನದ ಮನೆಗಳಿಗೆ ಜೋಡಿಸಲಾದ ಚರಂಡಿಗಳು ಇದ್ದವು. ಬಚ್ಚಲು ಹಾಗೂ ಚರಂಡಿಸಹಿತವಾದ ಒಂದೇ ವಿಸ್ತೀರ್ಣದ 12 ಪುಟ್ಟಮನೆಗಳ ಸಾಲು ಇಲ್ಲಿ ಕಂಡುಬಂದ ಇತರ ಕಟ್ಟಡಗಳಾಗಿವೆ. ಮೇಲ್‌ನಗರದ ಮುಖ್ಯ ಒಳಚರಂಡಿಯನ್ನು ಬಂದರು ಕಟ್ಟೆಗೆ (ಡಾಕ್) ಜೋಡಿಸಲಾಗಿತ್ತು.

ಇಲ್ಲಿನ ಮತ್ತೆರಡು ಮುಖ್ಯ ಕಟ್ಟಡಗಳೆಂದರೆ– ಬಂದರು ಕಟ್ಟೆ ಮತ್ತು ಉಗ್ರಾಣ. ಬಂದರು ಕಟ್ಟೆ 214X36 ಮೀ ವಿಸ್ತೀರ್ಣದ ಸುಟ್ಟಇಟ್ಟಿಗೆಯಿಂದ ನಿರ್ಮಿಸಿದ ವಿಷಮ ಚತುರಸ್ರಾಕಾರದ ಕಟ್ಟಡ. ಇದು ವಿಶಾಲ ಕೊಳದಂತೆ ಕಾಣುತ್ತದೆ. ಕೊಲ್ಲಿಯ ಭರತದ ಸಮಯದಲ್ಲಿ ದೋಣಿ ಹಾಗೂ ಹಡಗುಗಳು ಈ ಕಟ್ಟೆಯ ಉತ್ತರ ಗೋಡೆಯಲ್ಲಿದ್ದ 12 ಮೀ ಅಗಲದ ತೆರೆದ ಭಾಗದ ಮೂಲಕ ಇದರೊಳಗೆ ಬರುತ್ತಿದ್ದವು. ಕಟ್ಟೆಯ ದಕ್ಷಿಣ ಗೋಡೆಯಲ್ಲಿ ಹೆಚ್ಚುವರಿ ನೀರು ಹೋಗಲು ಕಿರಿದಾದ ಮಾರ್ಗವಿತ್ತು; ಜೊತೆಗೆ ನೀರನ್ನು ನಿಯಂತ್ರಿಸಲು ಈ ಗೋಡೆಯಲ್ಲಿ ತೂಬುಗಳನ್ನು ಮಾಡಲಾಗಿದ್ದು ಇವಕ್ಕೆ ಮರದ ಬಾಗಿಲನ್ನು ಅಳವಡಿಸಿದ್ದಂತೆ ಕಾಣುತ್ತದೆ. ಈ ನಿರ್ಮಿತಿ ಹಡಗುಗಳು ನಿಲ್ಲುವ ಕಟ್ಟೆಯಾಗಿತ್ತು ಎಂಬುದು ಉತ್ಖನನಕಾರ ಎಸ್. ಆರ್. ರಾವ್ ಅವರ ಅಭಿಪ್ರಾಯ. ಇದು ಆಪತ್ಕಾಲದಲ್ಲಿ ನೀರು ಸಂಗ್ರಹ ಮಾಡಲು ಕಟ್ಟಿರುವ ಕೊಳ ಎಂಬುದು ಕೆಲವು ವಿದ್ವಾಂಸರ ಮತ. ಪುರಾತತ್ತ್ವ ಕ್ಷೇತ್ರದಲ್ಲಿ ಅತ್ಯಂತ ವಿವಾದಾಸ್ಪದ ಅವಶೇಷಗಳಲ್ಲಿ ಇದು ಒಂದಾಗಿದೆ.

ನಗರದ ಪೂರ್ವ ಕೋಟೆಗೋಡೆ ಇತರ ಭಾಗಗಳ ಗೋಡೆಗಳಿಗಿಂತ ಅಗಲವಾಗಿದ್ದು ಇದನ್ನು ಬಂದರು ಕಟ್ಟೆಗೆ ಸಮಾನಾಂತರವಾಗಿ ಕಟ್ಟಲಾಗಿದೆ. ಹಡಗುಗಳಿಗೆ ಸರಕನ್ನು ತುಂಬಿಸಲು ಹಾಗೂ ಇಳಿಸಲು ಇದನ್ನು ಕಟ್ಟೆಯಂತೆ ಬಳಸಲಾಗಿರಬೇಕು. ಇದರ ನೈರುತ್ಯ ಭಾಗದಲ್ಲಿ 4ಮೀ ಎತ್ತರದ ಕಟ್ಟೆಯ ಮೇಲೆ 1930 ಚ.ಮೀ ವಿಸ್ತೀರ್ಣದ ಉಗ್ರಾಣವನ್ನು ನಿರ್ಮಿಸಲಾಗಿತ್ತು. ಉಗ್ರಾಣದಲ್ಲಿ 3.6X3.6 ಮೀ ವಿಸ್ತೀರ್ಣದ, 1 ಮೀ ಎತ್ತರದ 64 ಜಗಲಿಗಳಿದ್ದವು. ಜಗಲಿಗಳ ಮಧ್ಯೆ ಗಾಳಿಯಾಡಲು 1 ಮೀ ಅಗಲದ ಹಾದಿಗಳಿದ್ದವು. ಈ ಜಗಲಿಗಳ ಮೇಲೆ ಸರಕುಗಳನ್ನು ಪೇರಿಸಿಡಲಾಗುತ್ತಿತ್ತು. ಇಲ್ಲಿ ಸಿಕ್ಕ 65 ಮುದ್ರಾಂಕನಗಳ

ಒಂದು ಮುಖದಲ್ಲಿ ಮುದ್ರೆಯ ಅಚ್ಚೊತ್ತು, ಮತ್ತೊಂದು ಮುಖದ ಮೇಲೆ ಬೊಂಬು-ಹುರಿ, ಬಟ್ಟೆಯ ಅಚ್ಚೊತ್ತು ಮೂಡಿದ್ದವು. ಸರಕುಗಳನ್ನು ಬಿದಿರಿನ ಚಾಪೆ ಮತ್ತು ಬಟ್ಟೆಯಲ್ಲಿ ಸುತ್ತಿ, ಹಗ್ಗದಿಂದ ಕಟ್ಟಲಾಗುತ್ತಿತ್ತು. ಈ ಗಂಟಿನ ಮೇಲೆ ಜೇಡಿಮಣ್ಣಿನ ಮುದ್ದೆಯನ್ನು ಮೆತ್ತಿ, ಅದರ ಮೇಲೆ ಮುದ್ರೆಯ ಅಚ್ಚೊತ್ತು ಮೂಡಿಸಲಾಗುತ್ತಿತ್ತು. ಅನಂತರ ಸರಕುಗಳನ್ನು ಸಾಗಿಸಲಾಗುತ್ತಿತ್ತು. ಕಟ್ಟಡ ನಿರ್ಮಾಣದ 3ನೆಯ ಹಂತದಲ್ಲಿ ಉಗ್ರಾಣ ಬೆಂಕಿಗೆ ಆಹುತಿಯಾಯಿತು. ಅನಂತರ ಇದನ್ನು ಮತ್ತೆ ಕಟ್ಟಲಿಲ್ಲ.

ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಲೋಥಲ್‌ನ ವ್ಯಾಪಾರಿಗಳು ಮುಖ್ಯ ಪಾತ್ರ ವಹಿಸಿದ್ದಿರಬಹುದು. ಕೋಲಾರ ಚಿನ್ನದ ಗಣಿಯಿಂದ ಚಿನ್ನ, ಮಧ್ಯಭಾರತ-ದಖನ್ ಪ್ರದೇಶದಿಂದ ಅಮೂಲ್ಯ ಕಲ್ಲುಗಳು, ಪಶ್ಚಿಮ ಕರಾವಳಿ ಪ್ರದೇಶದಿಂದ ಶಂಖಗಳನ್ನು ಸಿಂಧೂ ಬಯಲಿನ ನೆಲೆಗಳಿಗೆ ಕಳುಹಿಸಲಾಗುತ್ತಿತ್ತು. ಈ ವಿನಿಮಯದ ವ್ಯಾಪಾರದಲ್ಲಿ ಅಲ್ಲಿಂದ ತಾಮ್ರದ ಗಟ್ಟಿ, ನೀಳ ಚಕ್ಕೆಗಳನ್ನು ಮಾಡಲು ಚರ್ಟ್ ಕಲ್ಲು ಮತ್ತಿತರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ದಖನ್ನಿನ ದಕ್ಷಿಣ ಭಾಗದಲ್ಲಿ ಹರಪ್ಪ ಸಂಸ್ಕೃತಿಗೆ ಸಮಕಾಲೀನವಾದ ನವಶಿಲಾ-ತಾಮ್ರಯುಗ ಸಂಸ್ಕೃತಿಗಳ ಅವಶೇಷಗಳು ಕಂಡುಬಂದಿವೆ. ಇಲ್ಲಿ ದೊರಕಿರುವ ಸ್ಟಿಯಟೈಟ್‌ನ ಸೂಕ್ಷ್ಮ ಚಪ್ಪಟೆ ಮಣಿಗಳು, ಚರ್ಟ್ ಕಲ್ಲಿನ ನೀಳ ಚಕ್ಕೆಗಳು, ತಾಮ್ರದ ಕೊಡಲಿ ಇವೆಲ್ಲವನ್ನು ಲೋಥಲ್‌ನಿಂದ ಈ ಪ್ರದೇಶಕ್ಕೆ ಸಾಗಿಸಲಾಗಿರಬಹುದು.

ಪ್ರೌಢ ಹರಪ್ಪ ಹಂತದ ಅಂತ್ಯ ಕಾಲದಲ್ಲಿ (ಕಟ್ಟಡ ನಿರ್ಮಾಣದ 4ನೆಯ ಹಂತ) ಬಂದರು ಕಟ್ಟೆಯ ಕೆಲಭಾಗ ಪ್ರವಾಹಕ್ಕೆ ತುತ್ತಾಗಿ ನಾಶವಾಯಿತು. ಇದರ ಪ್ರವೇಶದ್ವಾರ ಕಟ್ಟಿಕೊಂಡದ್ದರಿಂದ ಹೊಸ ಕಿರುದ್ವಾರವನ್ನು ನಿರ್ಮಿಸಲಾಯಿತು. ಕೆಲಕಾಲದ ಅನಂತರ ಬಂದ ಮಹಾಪೂರದಲ್ಲಿ ನಗರ ಸಂಪೂರ್ಣವಾಗಿ ನಾಶವಾಯಿತು.

ಬಿ ಹಂತದಲ್ಲಿ (ಅವನತಿ ಕಾಲ) ಜನರು ಮತ್ತೆ ತಮ್ಮ ಊರಿಗೆ ಮರಳಿದರು. ಆದರೆ ಹಿಂದಿನ ವೈಭವ ಈಗ ಇರಲಿಲ್ಲ. ಊರು ಅಸ್ತವ್ಯಸ್ತವಾಗಿತ್ತು. ವಿದೇಶಿ ವ್ಯಾಪಾರ ನಿಂತುಹೋಯಿತು. ಇದರ ದ್ಯೋತಕವಾಗಿ ಸಿಂಧೂ ಬಯಲಿನ ಚರ್ಟ್ ಕಲ್ಲಿನ ಚಕ್ಕೆಗಳ ಬದಲು ಸ್ಥಳೀಯ ಕಲ್ಲುಗಳಲ್ಲಿ ಮಾಡಿದ ಚಕ್ಕೆಗಳು ಕಂಡುಬರುತ್ತವೆ. ಮಣ್ಪಾತ್ರೆಗಳಲ್ಲೂ ಬದಲಾವಣೆ ಕಂಡುಬರುತ್ತದೆ. ಸಮೀಪದಲ್ಲಿದ್ದ ರಂಗಪುರದ ಕೊನೆಯ (2ಬಿ) ಹಂತದಲ್ಲಿ ಸ್ಥಳೀಯ ಸಂಸ್ಕೃತಿಗಳು ಪ್ರಬಲವಾದವು, ಆದರೆ ಲೋಥಲ್ ಕ್ರಮೇಣವಾಗಿ ನಿರ್ಜನವಾಯಿತು.

ಎ ಉಪಹಂತದ ಪ್ರಮುಖ ಮಣ್ಪಾತ್ರೆಗಳೆಂದರೆ ಗಟ್ಟಿಮುಟ್ಟಾದ ಕೆಂಪುಪಾತ್ರೆಗಳು (ಸ್ಟರ್ಡಿ ರೆಡ್ ವೇರ್) ಈ ಪಾತ್ರೆಗಳ ಮೇಲೆ ಕಪ್ಪುಬಣ್ಣದಲ್ಲಿ ಸುಂದರವಾದ ಪ್ರಾಣಿ, ಸಸ್ಯ ಮತ್ತಿತರ ಚಿತ್ರಗಳನ್ನು ಬಿಡಿಸಲಾಗಿದೆ. ವಿಶಿಷ್ಟವಾದ ಆಕಾರಗಳೆಂದರೆ ರಂಧ್ರಗಳುಳ್ಳ ಹೂಜಿ,

ಪುನರ್ರಚಿತ ನಗರ

ಪಾನಪಾತ್ರೆಗಳು, ಕಿರಿದಾದ ಕಂಠದ ಹೂಜಿ, ಎಸ್ ಆಕಾರದ ದೊಡ್ಡ ಜಾಡಿ. ಬಿ ಉಪಹಂತದಲ್ಲಿ ಪಾನಪಾತ್ರೆಗಳ ಬಳಕೆ ಕ್ಷೀಣಿಸಿತು. ಇತರ ಪಾತ್ರೆಗಳ ಆಕಾರಗಳಲ್ಲಿ ಗಮನಾರ್ಹ ಬದಲಾವಣೆಗಳಾದವು. ಕಿರು ಕಂಠದ ಹೂಜಿ ಉದ್ದ ಕಂಠದ ಅಂಡಾಕಾರದ ಹೂಜಿಯಾಗಿ ಪರಿವರ್ತನೆಗೊಂಡಿತು. ಚಿತ್ರಗಳು ಸರಳವಾಗಿದ್ದು ನೈಜತೆ ಕಳೆದುಕೊಂಡವು. ಗೆರೆ, ತರಂಗ, ಸಾಲುಗಳು ಹೆಚ್ಚಾಗಿ ಕಂಡುಬರುತ್ತವೆ.

ಈ ನೆಲೆಯಲ್ಲಿ ಸ್ಟಿಯಟೈಟ್‌ನ ಹಲವಾರು ಮುದ್ರೆಗಳು ಸಿಕ್ಕಿವೆ. ಇವುಗಳ ಮೇಲೆ ಗೂಳಿ, ಆನೆ ಮತ್ತು ಏಕಶೃಂಗಿಯ ಚಿತ್ರಗಳನ್ನು ಕೊರೆಯಲಾಗಿದೆ. ಕೇವಲ ಲಿಪಿಚಿಹ್ನೆಗಳಿರುವ ಮುದ್ರೆಗಳೂ ಸಿಕ್ಕಿವೆ. ತಾಮ್ರ ಮತ್ತು ಸುಡಾವೆಮಣ್ಣಿನಲ್ಲಿ ಮಾಡಿರುವ ಮುದ್ರೆಗಳು ಬಹಳ ಕಡಿಮೆ. ಸುಡಾವೆಮಣ್ಣು, ಚಿನ್ನ, ಶಂಖ, ಅರೆಪ್ರಶಸ್ತ ಕಲ್ಲು ಮತ್ತು ದಂತದಲ್ಲಿ ಮಾಡಿರುವ ಮಣಿಗಳು, ಆಭರಣಗಳು ಸಿಕ್ಕಿವೆ. ಮಕ್ಕಳ ಆಟದ ಸಾಮಾನುಗಳಲ್ಲಿ ಮಣ್ಣಿನ ಪ್ರಾಣಿ ಗೊಂಬೆಗಳು, ಎತ್ತಿನಗಾಡಿ, ಆಟದ ಕಾಯಿಗಳು, ಹಕ್ಕಿಗಳು ದೊರಕಿವೆ. ಕೂತಿರುವ ನಾಯಿ, ಎತ್ತು, ಮೊಲ ಮತ್ತು ಹಕ್ಕಿ ರೂಪದ ಮೊಳೆಯ ತಲೆ ಮುಂತಾದ ಕಂಚಿನ ಗೊಂಬೆಗಳು ಸಿಕ್ಕಿವೆ. ಬತ್ತ ಮತ್ತು ಸಜ್ಜೆಯ ಕಾಳುಗಳು, ಬೀಸುವಕಲ್ಲು ಇಲ್ಲಿ ದೊರಕಿದೆ. ಕೊನೆಯದು ಹರಪ್ಪ ಸಂಸ್ಕೃತಿಯದೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಹರಪ್ಪ ಸಂಸ್ಕೃತಿಯ ಜನ ಅನೇಕ ಧಾರ್ಮಿಕ ವಿಧಿವಿಧಾನಗಳನ್ನು ಅನುಸರಿಸುತ್ತಿದ್ದಿರಬೇಕು. ವಿಧಿಕರ್ಮಗಳಲ್ಲಿ ಸ್ನಾನ ಮುಖ್ಯವಾಗಿತ್ತು. ಲೋಥಲ್‌ನಲ್ಲಿ ಸಾಲಾಗಿರುವ ಸ್ನಾನದ ಕಟ್ಟಡಗಳಲ್ಲಿ ಇದನ್ನು ಕಾಣಬಹುದು. ಮಾತೃದೇವತೆಯನ್ನು ಪೂಜಿಸುವ ಕಟ್ಟಳೆ ಹರಪ್ಪ ಮತ್ತು ಮೊಹೆಂಜೋದಾರೊವಿನಲ್ಲಿ ಜನಪ್ರಿಯವಾಗಿತ್ತು. ಆದರೆ ಲೋಥಲ್ ಮತ್ತು ಕಾಲಿಬಂಗನ್‌ನಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಿದ್ದಂತೆ ತೋರುವುದಿಲ್ಲ. ಲೋಥಲ್‌ನ ಕೆಳನಗರದ ಹಲವಾರು ಮನೆಗಳಲ್ಲಿ ಬೂದಿ ತುಂಬಿರುವ ಆಯತಾಕಾರದ ಅಥವಾ ವೃತ್ತಾಕಾರದ ಗುಂಡಿಗಳಿದ್ದವು. ಇದು ಅಗ್ನಿ ಆರಾಧಕರ ಕುಂಡಗಳಿರಬಹುದೆಂದು ಅನುಮಾನ. ಈ ಗುಂಡಿಗಳಲ್ಲಿ ಹಲವಾರು ವೃತ್ತಾಕಾರದ, ತ್ರಿಭುಜಾಕಾರದ ಮತ್ತು ಅಂಡಾಕಾರದ ಸುಟ್ಟಮಣ್ಣಿನ ಬಿಲ್ಲೆಗಳು ಇದ್ದವು. ಕಾಲಿಬಂಗನ್‌ನಲ್ಲೂ ಅಗ್ನಿ ಆರಾಧನೆ ಇದ್ದುದಕ್ಕೆ ಅವಶೇಷಗಳು ದೊರಕಿವೆ.

ಲೋಥಲ್‌ನಲ್ಲಿ ನಗರದ ವಾಯವ್ಯದಲ್ಲಿ ಕೋಟೆಗೋಡೆಯ ಹೊರಗೆ ಸ್ಮಶಾನವಿತ್ತು. ಉತ್ತರ-ದಕ್ಷಿಣಾಭಿಮುಖವಾಗಿದ್ದ ಇಪ್ಪತ್ತು ಗೋರಿಗಳಲ್ಲಿ ಶವವನ್ನು ನೇರಭಂಗಿಯಲ್ಲಿ ಇಡಲಾಗಿತ್ತು. ಒಂದು ಗೋರಿಯಲ್ಲಿ ಅಸ್ಥಿಅವಶೇಷಗಳೊಡನೆ ಮಣ್ಪಾತ್ರೆಗಳು, ಮೇಕೆಯ ಮೂಳೆಗಳು, ಮತ್ತೊಂದು ಗೋರಿಯಲ್ಲಿ ದನದ ದವಡೆಯ ಮೂಳೆ ಇದ್ದವು. ಇನ್ನೊಂದು ಗೋರಿಯಲ್ಲಿ ಜೋಡಿ ಅಸ್ಥಿಪಂಜರಗಳಿದ್ದವು.

ಪ್ರೌಢ ಹಂತದ (ಎ) ಕಾಲಮಾನ ಪ್ರ.ಶ.ಪೂ.2450 ರಿಂದ 1900; ಅವನತಿ ಹಂತದ (ಬಿ) ಕಾಲಮಾನ ಪ್ರ.ಶ.ಪೂ.1900 ರಿಂದ 1600 ಎಂದು ಎಸ್.ಆರ್.ರಾವ್ ಅಂದಾಜು ಮಾಡಿದ್ದಾರೆ. (ಯು.ಎಸ್.)

**ಲೋದಿವಂಶ:** ಭಾರತವನ್ನಾಳಿದ ಮುಸ್ಲಿಮರ ರಾಜವಂಶಗಳಲ್ಲಿ ಒಂದು. ಬಹಲೂಲ್ ಲೋದಿ (1451-89) ಈ ವಂಶದ ಮೊದಲ ದೊರೆ. ಈತ ಷಾಹೂ ಖೇಲ್ ಎಂಬ ಆಫ್ಘನ್ ಬುಡಕಟ್ಟಿಗೆ ಸೇರಿದವ. ಈ ಜನತೆಯ ಮೂಲ ಕುರಿತು ಕೆಲವರು ಯಹೂದಿ ದೊರೆ ತಾಲೂತ್ (ಸೌಲ್) ಜೊತೆ ಸಂಬಂಧ ಕಲ್ಪಿಸುತ್ತಾರೆ. ಇದಕ್ಕೆ ಐತಿಹಾಸಿಕ ಸಾಕ್ಷಿಗಳು ಸಾಲವು. ತುರ್ಕಿ ಮೂಲಕ್ಕೆ ಸಂಬಂಧಿಸಿದ ಖಿಲ್ಜಿಗಳು ಆಫ್ಘನ್ ಭೂಭಾಗಕ್ಕೆ ಎಂದರೆ ಘಜನಿನ್, ಬಲ್ಖ, ತುಖರಿಸ್ತಾನ, ಬಸ್ತ ಮತ್ತು ಘಜಗ್ನೀನ್ ಸ್ಥಳಗಳಿಗೆ ವಲಸೆ ಬಂದು ಕಾಲಾನುಕಾಲದಲ್ಲಿ ಘಿ(ಖಿ)ಲ್ಜೈರು ಎಂದು ಕರೆಸಿಕೊಂಡರು. ಇವರನ್ನೇ ಲೋದಿ ಸಹಿತವಾಗಿ ಅನೇಕ ಆಫ್ಘನ್ ಬುಡಕಟ್ಟುಗಳಿಗೆ ಮೂಲಪುರುಷರೆಂದು ನಂಬಲಾಗುತ್ತದೆ. ಭಾರತದಲ್ಲಿ ಸು. 970ರಲ್ಲಿ ಲಮ್‌ಘಾನ್ ಹಾಗೂ ಮುಲ್ತಾನ್ ಸುತ್ತಮುತ್ತ ಲೋದಿಗಳು ತಮ್ಮ ವಸಾಹತುಗಳನ್ನು ಹೊಂದಿದ್ದರೆಂದು ತಿಳಿದುಬರುತ್ತದೆ. ತುರ್ಕಿ ರಾಜರ ಆಳಿಕೆಯಲ್ಲಿ ಬಲ್ಬನ್ ದೊರೆಯ ಹತ್ತಿರ ಕೆಲವು ಜನ ಲೋದಿಗಳು ಕೆಲಸಕ್ಕೆ ಇದ್ದರೆಂದು ತಿಳಿದುಬರುತ್ತದೆ. ಅನಂತರ 1341ರಲ್ಲಿ ಮಲಿಕ್ ಷಾಹೂ ಮುಲ್ತಾನದಲ್ಲಿ ಧಾಳಿ ನಡೆಸಿ ಅದರ ರಾಜ್ಯಪಾಲನನ್ನು ಸೋಲಿಸಿ ರಾಜ್ಯ ಸ್ಥಾಪಿಸಬೇಕೆನ್ನುವಷ್ಟರಲ್ಲಿ ಮೊಹಮ್ಮದ್ ತುಗಲಕ್ ತುರ್ತುಕಾರ್ಯಾಚರಣೆ ಗಿಳಿದು ಅವನ ಆಸೆಗಳಿಗೆ ತಣ್ಣೀರು ಎರಚಿದ. ಷಾಹೂ ವಂಶಸ್ಥರು ವ್ಯಾಪಾರ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಲ್ಲಿಕ್ ಷಾಹೂ ಮೊಮ್ಮಗನೊಬ್ಬ ಮುಲ್ತಾನಿನಲ್ಲಿ ವಾಸಿಸುತ್ತಿದ್ದವನು, ಫಿರೋಜ್ ಆಳಿಕೆಯಲ್ಲಿ ಅಲ್ಲಿನ ರಾಜ್ಯಪಾಲನಾದ ಮಲಿಕ್ ಮರ್ದಾನ್ ದೌಲತ್ ಎಂಬವನಲ್ಲಿ ಸೇವೆಗೆ ಸೇರಿದ. ಇವನ ಹೆಸರು ಬಹರಾಮ್. ಈತನ ಹಿರಿಯ ಮಗ ಮಲಿಕ್ ಸುಲ್ತಾನ್ ಲೋದಿಯ ಖಿಜರ್‌ಖಾನನ ಸೇವೆಯಲ್ಲಿ ಸೇರಿ ಅವನ ಕಡುದುಷ್ಟ ವೈರಿ ಮಲ್ಲು ಇಕ್ಬಾಲ್‌ಖಾನ್ ಎಂಬವನನ್ನು ಯುದ್ಧದಲ್ಲಿ ಕೊಂದು ಅವನ ಪ್ರೀತಿವಿಶ್ವಾಸಗಳನ್ನು ಗಳಿಸಿಕೊಂಡ. ಆತ ಅವನಿಗೆ ಇಸ್ಲಾಮ್ ಖಾನ್ ಎಂಬ ಬಿರುದು ದಯಪಾಲಿಸಿ ಅನಂತರ ಸ್ವಲ್ಪ ಸಮಯದಲ್ಲೇ ಸರ್‌ಹಿಂದ್ ಪ್ರಾಂತದ ರಾಜ್ಯಪಾಲನನ್ನಾಗಿ ನೇಮಿಸಿದ. ಆ ಪದವಿ ಮುಂದಿನ ರಾಜ್ಯಭಾರಕ್ಕೆ ನಾಂದಿಯಾಯಿತು. ಮುಬಾರಕ್‌ಷಾನ ಆಳಿಕೆಯ ಕಾಲದಲ್ಲಿ ಇಸ್ಲಾಮ್ ಖಾನ್ ಶೂರ ಕಾರ್ಯಗಳನ್ನು ಎಸಗಿ ಖೋಕಾರರನ್ನೂ ಮೊಗಲರನ್ನೂ ಯುದ್ಧಗಳಲ್ಲಿ ಸೋಲಿಸಿದ ಅನಂತರ ಮೊಹಮ್ಮದ್‌ಷಾನ ಕಾಲದಲ್ಲಿ ಮರಣವನ್ನಪ್ಪಿದ. ಇಸ್ಲಾಮ್‌ಖಾನ್ ಸಾಯುವ ಮುನ್ನ ತನ್ನ ಸೋದರನ ಮಗನೂ ಅಳಿಯನೂ ಆದ ಬಹಲೂಲ್ ತನ್ನ ಸ್ಥಾನಕ್ಕೆ ಬರಬೇಕೆಂದು ಸೂಚಿಸಿ ಸರ್‌ಹಿಂದ್ ಪ್ರಾಂತಕ್ಕೆ ಅವನನ್ನು ಅಧಿಕಾರಿಯನ್ನಾಗಿ ಮಾಡಿದ.

ಬಹಲೂಲ ಯುವಕನಾಗಿದ್ದು ಕುದುರೆ ವ್ಯಾಪಾರ ಮಾಡುತ್ತಿದ್ದ. ಮೊಹಮ್ಮದ್‌ಷಾನಿಗೆ ಉತ್ತಮ ಕುದುರೆಗಳನ್ನು ಮಾರುವ ಒಂದು ಸಂದರ್ಭದಲ್ಲಿ ಅವನ ಜೀವನದ ದಾರಿಯಲ್ಲಿ ಒಂದು ಹೊಸ ತಿರುವು ಬಂದಿತು. ಕುದುರೆಗಳ ಬೆಲೆಯನ್ನು ಬಂಡಾಯಕೋರ ಪ್ರಾಂತವೊಂದರಿಂದ ಕಂದಾಯ ಇತ್ಯಾದಿ ಆದಾಯಗಳನ್ನು ವಸೂಲಿಮಾಡಿ ತೀರಿಸಿಕೊಳ್ಳಬೇಕೆಂದು ಬಹಲೂಲನಿಗೆ ತಿಳಿಸಲಾಯಿತು. ರಾಜನ ಆಜ್ಞೆ ಪಡೆದ ಬಹಲೂಲ್ ಆ ಪ್ರಾಂತದ ಮೇಲೆ ಧಾಳಿಮಾಡಿ ಅಲ್ಲಿನ ಜನರ ಆಸ್ತಿಪಾಸ್ತಿ ಸಂಪತ್ತೆಲ್ಲವನ್ನೂ ಕೊಳ್ಳೆಹೊಡೆದ. ಇದನ್ನು ಕಂಡು ಸಂತೋಷಪಟ್ಟ ಮೊಹಮ್ಮದ್‌ಷಾ ಬಹಲೂಲನಿಗೆ ಆ ಪ್ರಾಂತದ (ಫರಗಣ)

ಅಮೀರ್ ಪದವಿ ಇತ್ತ. ಇಸ್ಲಾಮ್‍ಖಾನ್ ಮರಣ ಹೊಂದಿದ ಕೂಡಲೆ ಬಹಲೂಲ ಸರ್‌ಹಿಂದ್ ವಿಭಾಗದಲ್ಲಿ ತನ್ನ ಅಸ್ತಿತ್ವವನ್ನು ಸ್ಥಿರಗೊಳಿಸಿ ಶೀಘ್ರವಾಗಿ ತನ್ನ ಪ್ರಭಾವವನ್ನು ಅಂದಿನ ಅಲ್ಲಿಯ ರಾಜಕೀಯದಲ್ಲಿ ನೆಲೆಗೊಳಿಸಿದ. ಪಂಜಾಬ್ ಪ್ರಾಂತದ ಮೇಲೆ ಕೂಡ ಅದರ ಮುಖ್ಯ ಭಾಗದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದ. ನಿಶ್ಶಕ್ತನಾದ ಮೊಹಮ್ಮದ್‍ಷಾನು ಬಹಲೂಲನನ್ನು ನಿಯಂತ್ರಿಸಲಾಗದೆ ಯುದ್ಧದಲ್ಲಿ ಗೆದ್ದ ಆ ಭಾಗವನ್ನು ಅವನಿಗೇ ಒಪ್ಪಿಸಿದ.

ದೆಹಲಿ ಸುಲ್ತಾನೀರಾಜ್ಯ ಗುಲಾಮಿ, ಖಿಲ್ಜಿ, ತುಗಲಕ್, ಸಯ್ಯಿದ್ ಹಾಗೂ ಲೋದಿ ಎಂಬ ಐದು ಮನೆತನಗಳ ಆಳಿಕೆಯ ಹೆಸರಿನಿಂದ ಗುರುತಿಸಲ್ಪಟ್ಟರೂ ಈ ರಾಜಮನೆತನಗಳು ತುರ್ಕಿಮೂಲದ ಮನೆತನಗಳಾದುದರಿಂದ, ತುರ್ಕಿರಾಜ್ಯ ಎಂದೂ ಗುರುತಿಸಲಾಗುತ್ತದೆ. ಈ ಮನೆತನಗಳಲ್ಲಿ ಮದುವೆ ನೆಂಟಸ್ತಿಕೆ – ಶರೀರಸಂಬಂಧಗಳ ಮೂಲಕ–ಒಂದರ ಚರಿತ್ರೆಯೊಂದಿಗೆ ಇನ್ನೊಂದರ ಹಾಗೆಯೆ ಮಗದೊಂದರ ಚರಿತ್ರೆ ಮತ್ತೆ ನೌಕರಿ ಸೇವಾ ಸಂಬಂಧಗಳು ಕೂಡಿಕೊಂಡು ಒಂದು ರೀತಿಯಲ್ಲಿ ನಾಲ್ಕೂ ರಾಜಮನೆತನಗಳ ಚರಿತ್ರೆಗಳು ಒಂದರಲ್ಲೊಂದು ಹಾಸುಹೊಕ್ಕಿವೆ – ಒಳಗೊಳಗೇ ಹೆಣೆದುಕೊಂಡಿವೆ. ಅಧಿಕಾರಕ್ಕಾಗಿ, ದಾಯಾದಿಗಳ ಮತ್ಸರಕ್ಕಾಗಿ, ಧರ್ಮದ ಬೆಳೆವಣಿಗೆಗಾಗಿ ಮತ್ತೆ ಸಂಪತ್ತಿನ ಲೂಟಿಗಾಗಿ ಆಗಾಗ ಯುದ್ಧ – ತುಮುಲ – ದ್ವಂದ್ವಗಳು ನಡೆದವು.

ಇಬ್ರಾಹಿಮ್‍ಲೋದಿಯ ಕಾಲಕ್ಕೆ ಮೊಗಲ್ ವಂಶದ ಬಾಬರ್ 1526ರಲ್ಲಿ ದಂಡೆತ್ತಿಬಂದು ಮೊದಲನೆಯ ಪಾಣಿಪತ್ ಕದನದ ಮೂಲಕ ದೆಹಲಿಯನ್ನು ಆಕ್ರಮಿಸಿದ. ಲೋದಿವಂಶದ ಮೂವರು ರಾಜರ ಆಳಿಕೆಯ ವಿವರಗಳು ಮತ್ತು ವಂಶಾವಳಿ ಹೀಗಿವೆ:

**ಲೋದಿವಂಶ**

ಇವರ ವಂಶಾವಳಿ ಸ್ಥೂಲವಾಗಿ ಹೀಗಿದೆ:




**ಬಹಲೋದಿ:** 1451–89. ಈತ ಫರಗಣ ಭೂ ಪ್ರದೇಶವನ್ನು ಸರ್‌ಹಿಂದ್ ಪ್ರಾಂತದೊಂದಿಗೆ ಮಂಡಲಾಧಿಪತಿಯಾಗಿ ಆಳಲು ಉಪಕ್ರಮಿಸಿ ಪಂಜಾಬ್ ಪ್ರಾಂತವೆಲ್ಲಕ್ಕೂ ಅಧಿಪತಿಯಾದ. ಮಾಳವದ ಧಾಳಿಯನ್ನು ಎದುರಿಸುವಲ್ಲಿ ಮೊಹಮ್ಮದ್‍ಷಾನಿಗೆ ಅವನ ಕೋರಿಕೆಯಂತೆ ಸಹಾಯ ಮಾಡಿದ. ಅನಂತರದಲ್ಲಿ ದೆಹಲಿ ಗೆದ್ದುಕೊಳ್ಳಲು ಎರಡು ಸಲ ಪ್ರಯತ್ನಿಸಿದ ಬಹಲೂಲನ ಎರಡೂ ಪ್ರಯತ್ನಗಳು ವಿಫಲವಾದವು. ಮೂರನೆಯ ಬಾರಿ ತೊಂದರೆ ಇಲ್ಲದೆ ಆಕ್ರಮಿಸಿಕೊಂಡ. ಸಯ್ಯಿದ್ ವಂಶದ ದೊರೆ ಆಲಂ ನಿಶ್ಶಕ್ತನೂ ಸುಖಾಪೇಕ್ಷಿಯೂ ಆಗಿದ್ದುದರಿಂದ ಅವನ ಮಂತ್ರಿ ಹಮೀದ್‍ಖಾನ್ ಒಡ್ಡಿದ ಸಂಚಿನಲ್ಲಿ ಯಶಸ್ವಿ ಆದುದು ಇದಕ್ಕೆ ಕಾರಣ. ಆ ಸಂದರ್ಭದಲ್ಲಿ ದೆಹಲಿ ಮೇಲೆ ದಂಡೆತ್ತಿ ಬಂದ ಇನ್ನೊಬ್ಬ ಅಮೀರ್ ನಾಗೌರ್‌ಮಂಡಲಕ್ಕೊಡೆಯನಾದ ಖಯ್ಯಾಖಾನ್ ದೆಹಲಿ ಬಹಲೂಲನ ವಶವಾದದ್ದನ್ನು ತಿಳಿದು ಆಶಾಭಂಗನಾಗಿ ಹೋದ. ಬಹಲೂಲ ಹಮೀದ್‍ಖಾನನ್ನು ವಜೀರ್‌ಸ್ಥಾನದಿಂದ ತೆಗೆದುಹಾಕಿದ. ದ್ರೋಹವೆಸಗಿದವನ ಜೀವನ ದ್ರೋಹದಲ್ಲೇ ಕೊನೆಗೊಂಡಿತು. 1451 ಏಪ್ರಿಲ್ 19ರಂದು ಬಹಲೂಲ್‍ಷಾ ಘಾಜೀ ಎಂಬ ಹೆಸರಿನಿಂದ ಸಿಂಹಾಸನವನ್ನು ಏರಿದ.

ದೆಹಲಿಯನ್ನು ಆಕ್ರಮಿಸಿಕೊಳ್ಳುವುದರಿಂದ ಬಹಲೂಲನ ರಾಜ್ಯದ ಗಡಿಗೆರೆಗಳು ವಿಸ್ತರಿಸಿಕೊಳ್ಳದಿದ್ದರೂ ಆಡಳಿತಾತ್ಮಕ ಜವಾಬ್ದಾರಿಗಳು ಹೆಚ್ಚಿದವು. ಅದೂ ವಿವಿಧ ದೆಸೆಗಳಲ್ಲಿ ಸಾಮ್ರಾಜ್ಯದ ಅಧಿಕಾರ ಒಪ್ಪದೆ ಸೆಟೆದುನಿಂತ ದೆಹಲಿಯ ಸುತ್ತುಮುತ್ತಲಿನ ಸಾಮಂತ ಮನೆತನಗಳನ್ನು ಮೊದಲು ಸದೆಬಡಿದು ಅಧೀನಕ್ಕೆ ತರಬೇಕಾಗಿತ್ತು. ಸಯ್ಯಿದ್ ಮನೆತನದ ಅಧೀನದಲ್ಲಿದ್ದ ಜೋನಪುರ ಮಂಡಲವನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಳ್ಳುವವರೆಗೆ ದೆಹಲಿ ಸಿಂಹಾಸನ ಭದ್ರವಾಗುತ್ತಿರಲಿಲ್ಲ. ಅದಕ್ಕಾಗಿ ಜೋನ್‌ಪುರದೊಂದಿಗೆ ಯುದ್ಧವನ್ನೇ ಹಮ್ಮಿಕೊಳ್ಳಬೇಕಾಗಿತ್ತು. ಆಫ್ಘನ್ ಶ್ರೀಮಂತ ಸೇವಕರನ್ನು ಆಡಳಿತದಲ್ಲಿ ಹೊಸರೀತಿಯಲ್ಲಿ ಹೊಂದಿಸಿಕೊಂಡು ಹೊಸರೂಪವನ್ನು ಕೊಟ್ಟು ಸುಭದ್ರಗೊಳಿಸಬೇಕಾಗಿತ್ತು.

ಬಹಲೂಲನ ಆಳಿಕೆಯ ಕಾಲದ ಅತಿ ಮಹತ್ತ್ವದ ಸಾಧನೆಯೆಂದರೆ ಜೋನ್‌ಪುರ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡುದುದು. ಅದು ಅವನ ವಂಶದ ರಾಜ್ಯ ಬುನಾದಿಯನ್ನು ಭದ್ರಪಡಿಸಿತು. ಜೋನ್‌ಪುರದ ಷರ್ಕಿಗಳು ದೆಹಲಿ ರಾಜ್ಯಕ್ಕೆ, ಸಯ್ಯಿದ್ ಸಿಂಹಾಸನಕ್ಕೆ ತಾವೇ ಅಧಿಕಾರಿಗಳೆಂದು ಭಾವಿಸಿದ್ದರು. ಅವರನ್ನು ಸೋಲಿಸುವುದು ಬಹಳ ಮುಖ್ಯವಾಗಿತ್ತು. ಸಯ್ಯಿದ್ ಮನೆತನದೊಂದಿಗೆ ಅವರಿಗಿದ್ದ ನೆಂಟಸ್ತನವೇ ಆ ಬಗೆಯ ಭಾವನೆಗೆ ಕಾರಣವಾಗಿತ್ತು. ಆ ಷರ್ಕಿಗಳಿಗೆ ತಾವೇ ದೆಹಲಿ ಸಿಂಹಾಸನಕ್ಕೆ ಅಧಿಕಾರಿಗಳು ಎಂಬ ಭಾವನೆ ಬೇರೂರಿತ್ತು. ಅಂತೆಯೇ ಆ ಮನೆತನದ ಮಹಮೂದನಿಗೆ ಬಹಲೂಲ್ ಭದ್ರವಾಗಿ ತಳವೂರುವುದಕ್ಕಿಂತ ಮುಂಚೆ ಅವನನ್ನು ಸದೆಬಡಿಯಬೇಕೆಂಬ ಆಸೆ. ಅಂತೆಯೇ ಅವನು ಬಹಲೂಲನ ಆಳಿಕೆಯ ಮೊದಲ ವರ್ಷದಲ್ಲೇ ದೆಹಲಿ ಕೋಟೆಯನ್ನು ಮುತ್ತಿದ. ಅದನ್ನು ಅವನು ಗೆಲ್ಲಬಹುದಾಗಿತ್ತು. ಆದರೆ ಅವನ ಸೇನಾನಾಯಕ ದರ್ಯಾಖಾನ್ ಲೋದಿ ಪಕ್ಷಾಂತರ ಮಾಡಿದ. ಮಹಮೂದ್ ನಿರಾಶನಾಗಿ ಜೋನ್‌ಪುರಕ್ಕೆ ಹಿಂತಿರುಗಿದ. ಆದರೆ ದಾರಿಯಲ್ಲೇ ಮುಲ್ತಾನಕ್ಕೆ ಹೋಗುತ್ತಿದ್ದ ಬಹಲೂಲ್ ಹಿಂತಿರುಗಿ ಬಂದು ಅವನನ್ನು ಎದುರಿಸಿದ. ದೆಹಲಿಯಿಂದ 27 ಕಿಮೀ ಅಂತರದಲ್ಲಿದ್ದ ನರೇಲಾದಲ್ಲಿ ಇಬ್ಬರಿಗೂ ಯುದ್ಧವಾಯಿತು. ಆ ಯುದ್ಧದಲ್ಲಿ ಮಹಮೂದ್ ಸೋತರೂ ಏತಾವ್ ಹಾಗೂ ಷಮ್‌ಸಾಬಾದ್ ಎಂಬ ಎರಡು ಸ್ಥಳಗಳಲ್ಲಿ ಪ್ರತೀಕಾರರೂಪದ ಯುದ್ಧಗಳನ್ನು ಮಾಡಿದ. ಯುದ್ಧಕಾರ್ಯ ಮುಂದುವರಿಸುತ್ತಿದ್ದಾಗಲೇ ಒಮ್ಮಿಂದೊಮ್ಮೆಗೆ 1457ರಲ್ಲಿ ನಿಧನ ಹೊಂದಿದ. ಆತನ ಪುತ್ರ ಮೊಹಮ್ಮದ್‍ಷಾ ಒಪ್ಪಂದವೊಂದನ್ನು ಮಾಡಿಕೊಳ್ಳಲು ಕೈ ಚಾಚಿದರೂ ಬಹಲೂಲ್ ಅದಕ್ಕೆ ಒಪ್ಪದೆ ಸೆರೆಯಲ್ಲಿ ಸಿಕ್ಕಿಹಾಕಿಕೊಂಡ ತನ್ನ ಭಾವಮೈದುನ ಕುತುಬ್‍ಖಾನನನ್ನು ಬಿಡುವಂತೆ ಒತ್ತಾಯಿಸುತ್ತಾ ಅವನ ಸೋದರ ಜಲಾಲ್‍ಖಾನನನ್ನು ಸೆರೆಹಿಡಿದ. ಇತ್ತ ಜೋನ್‌ಪುರದಲ್ಲಿ ಅವನ ದಾಯಾದಿ ಹುಸೇನ್ ಜ್ಞಾತಿಯುದ್ಧ ಹೂಡಿದ. ಸೋದರರ ಯುದ್ಧದಲ್ಲಿ ಮೊಹಮ್ಮದ್‍ಷಾ ಮಡಿದ. ಷರ್ಕಿಯ ಹುಸೇನ್ ಲೋದಿ ಬಹಲೂಲನನ್ನು ಸೋಲಿಸಿ ದೆಹಲಿಯನ್ನು ಆಕ್ರಮಿಸಿಕೊಳ್ಳಬೇಕೆಂದು ಹಲವು ಪ್ರಯತ್ನಗಳನ್ನು ಮಾಡಿದ. ಆದರೆ ಪ್ರತಿಯೊಂದು ಪ್ರಯತ್ನದಲ್ಲೂ ಅವನಿಗೆ ಸೋಲುಂಟಾಗಿ ಬಹಲೂಲನ ಕೈಮೇಲಾಯಿತು. ಅವನು ಜೋನ್‌ಪುರ ಸಂಸ್ಥಾನವನ್ನು ಷರ್ಕಿಗಳಿಂದ ಕಿತ್ತುಕೊಂಡ. ಹುಸೇನ್ ಆಶ್ರಯ ಬಯಸಿ ಬಿಹಾರಕ್ಕೆ ಓಡಿಹೋದ. ಮತ್ತೆ ಬಹಲೂಲನ ಉತ್ತರಾಧಿಕಾರಿಯ ಕಾಲದಲ್ಲಿ ಅಲ್ಲಿಂದಲೂ ಅವನು ಬಂಗಾಲಕ್ಕೆ ಓಡಿಸಲ್ಪಟ್ಟ. ಬಹಲೂಲನ ಆಳಿಕೆಯಲ್ಲಿ ಇದು ಮಹತ್ತ್ವದ ಘಟನೆ. ಆರಂಭದಲ್ಲಿ ಅವನು ಮಾಲವದ ಮಹಮೂದ್ ಖಲ್ಜಿಗೆ ಸಹಾಯವಮಾಡುವಂತೆ ಯಾಚಿಸಿದ. ಸಹಾಯ ಮಾಡುತ್ತೇನೆ ಎಂದ ಆತ ಸಹಾಯಮಾಡುವುದಕ್ಕಿಂತ ಮುಂಚೆಯೆ ಸಾವಿಗೆ ತುತ್ತಾದ. ಏಕಾಕಿಯಾದ ಬಹ್‌ಲೂಲನಿಗೆ ಅವನ ಧೈರ್ಯವೇ ಏನೆಲ್ಲ ಗೆಲುವನ್ನು ತಂದಿತ್ತಿತ್ತು.

ದೋಆಬ್ ಪ್ರಾಂತ, ಮೇವಾರ್ ಮುಂತಾದ ದೆಹಲಿಯ ಅಕ್ಕಪಕ್ಕದ ರಾಜ್ಯಗಳಲ್ಲಿ – ಮಂಡಲಗಳಲ್ಲಿ ಶಾಂತಿಯನ್ನು ನೆಲೆಗೊಳಿಸುವುದು ಬಹುಮುಖ್ಯ ಕೆಲಸವಾಗಿತ್ತು. ಆದುದರಿಂದ ಮೇವಾರ್, ಸಂಭಲ್, ಕೋಲ್, ಸಾಕೇತ್, ಏತವ, ರಾಪ್ರಿ, ಭೋನ್‌ಗಾಂವ್ ಹಾಗೂ ಗ್ವಾಲಿಯರ್ ಮುಂತಾದ ರಾಜ್ಯಗಳ ಮೇಲೆ ಬಹಲೂಲ್ ಅನೇಕ ಸಲ ದಂಡಯಾತ್ರೆಗಳನ್ನು ಕೈಗೊಂಡ; ಈ ಪ್ರದೇಶಗಳ ರಾಜರು ಇವನಿಗೆ ಶರಣಾದರು. ಆದರೂ ಮುಲ್ತಾನವನ್ನು ಆಳುತ್ತಿದ್ದ ಲಂಕರನ್ನು ಸೋಲಿಸಿ ಅವರನ್ನು ತನ್ನ ಆಡಳಿತಾಧಿಕಾರದಲ್ಲಿ ತರಲು ಬಹಲೂಲನಿಗೆ ಆಗಲಿಲ್ಲ. ಅಂತೆಯೆ ಬಹಲೂಲನ ಆಲಣಪುರ ಮೇಲಿನ ದಂಡಯಾತ್ರೆ ಯಶಸ್ವಿ ಆಗಲಿಲ್ಲ. ಚಂದೇರಿಯ ಷೇರ್‌ಖಾನ್ ಬೆಂಬತ್ತಿದಾಗ ಶೀಘ್ರವಾಗಿ ದೆಹಲಿಗೆ ಬಂದು ಸೇರಿಕೊಳ್ಳಬೇಕಾಯಿತು. ಈ ಎಲ್ಲ ಎಡರು ತೊಡರುಗಳ ಮಧ್ಯದಲ್ಲಿ ಈತ ಲೋದಿವಂಶಕ್ಕೆ ಒಂದು ಉತ್ತಮ ಬುನಾದಿ ಹಾಕಿದ; ಗಡಿ ಗೆರೆಗಳನ್ನು ಹಿಗ್ಗಿಸಿದ; ಬಹಳ ಕಾಲ ಕಳೆಗುಂದಿದ ದೆಹಲಿ ರಾಜ್ಯಕ್ಕೆ ಹೊಸಕಳೆ ತಂದುಕೊಟ್ಟ. ರಾಜ್ಯ, ಆಡಳಿತ ಮತ್ತು ಭಂಡಾರವನ್ನು ಕೇವಲತಾನೇ ಭೋಗಿಸದೆ ಆತ ತನ್ನ ಬಂಧುಗಳಲ್ಲಿ, ಸೇವೆಯಲ್ಲಿದ್ದ ನಿಷ್ಠಾವಂತ ಶ್ರೀಮಂತರಲ್ಲಿ ಮತ್ತು ಮಕ್ಕಳಲ್ಲಿ ಹಂಚಿದ. ಲೋದಿರಾಜ್ಯ ಸುಖಮಯವಾಗಿ ಮುಂದುವರಿಯಬೇಕೆಂಬ ದೂರದೃಷ್ಟಿಯಿಂದ ಎಲ್ಲ ಶ್ರೇಷ್ಠ ಜನರನ್ನೂ ತನ್ನ ಸಮಾನರೆಂದೇ ಭಾವಿಸಿ ಅವರೊಂದಿಗೆ ತನ್ನ ರತ್ನಗಂಬಳಿಯನ್ನೂ ಹಂಚಿಕೊಂಡ. ಹೀಗೆ ರಾಜ್ಯದ ಅಸ್ತಿತ್ವಕ್ಕೆ ಆಫ್ಘನ್ನರ ಒಂದು ಸಂಯೋಜಿತ ಶಕ್ತಿಯನ್ನು ಒದಗಿಸಿ ಸಾಕೇತ್ ಫರಗಣದ ಜಲಾಲಿನಗರದ ಬಳಿಯ ಮಲಾವಲೀ ಎಂಬ ಸ್ಥಳದಲ್ಲಿ 1489 ಜುಲೈ ತಿಂಗಳಿನ ಮಧ್ಯದಲ್ಲಿ ಮರಣ ಹೊಂದಿದ.

**ಸಿಂಕದರ್ ಷಾ:** 1489–1517. ಬಹಲೂಲ್ ಸಾಯುವುದಕ್ಕಿಂತ ಮುಂಚೆ ತನ್ನ ಮಗ ನಿಜಾಮ್‌ಖಾನ್ ಉತ್ತರಾಧಿಕಾರಿ ಆಗಬೇಕೆಂದು ಸೂಚಿಸಿದ್ದ. ಆದರೆ ಕೆಲವು ಸರದಾರರು, ಶ್ರೀಮಂತರ ಪ್ರಾಂತಾಧಿಕಾರಿಗಳು, ದಂಡನಾಯಕರು ಅದಕ್ಕೆ ಪ್ರತಿಯಾಗಿ ಅವನ ಇನ್ನೊಬ್ಬ ಪುತ್ರ ಬಾರ್‌ಬಕ್ ಇಲ್ಲವೇ ಮೊಮ್ಮಗ ಆಜಮ್ ಹುಮಾಯೂನ್ ಪಟ್ಟಕ್ಕೆ ಬರಬೇಕೆಂದು ಬಯಸಿದರು. ಆದರೆ ಅವರ ಈ ಆಸೆ ಈಡೇರಲಿಲ್ಲ. ಬಹಲೂಲ್ ಮರಣ ಹೊಂದಿದ ಎರಡು ದಿನಗಳಲ್ಲಿ ನಿಜಾಮ್‌ಖಾನನ ತಾಯಿ ತನ್ನ ಮಗನ ಪಕ್ಷ ವಹಿಸಿ ಅವನೇ ಸಿಂಹಾಸನಕ್ಕೆ ವಾರಸುದಾರ ಎಂದು ಮಧ್ಯಸ್ತಿಕೆ ವಹಿಸಿ ವಿರೋಧಿಗಳ ಆಸೆಗೆ ಅಡ್ಡಬಂದಳು. ಬಹಲೂಲನ ಶವ ದಫನ್ ಮಾಡುವುದಕ್ಕೆ ಜಲಾಲಿಗೆ ಒಯ್ದರು. ನಿಜಾಮ್‌ಖಾನ್ ಅಲ್ಲಿಗೆ ಬಂದು 1489 ಜುಲೈ 15ರಂದು ಸಿಕಂದರ್‌ಷಾ ಎಂಬ ಹೆಸರಿನೊಂದಿಗೆ ಕಿರೀಟ ಧರಿಸಿದ. ತನ್ನ ತಂದೆ ಆರಂಭಿಸಿದ ಕಾರ್ಯವನ್ನು ಮುಂದುವರಿಸಿ ಅವನ ಮಕ್ಕಳಲ್ಲೇ ಯೋಗ್ಯನೆಂದು ಸಾಧಿಸಿ ತೋರಿಸಿದ. ಈ ಸಂದರ್ಭದಲ್ಲಿ ಆಲಮ್‌ಖಾನ್ ಎಂಬ ಸಹೋದರನನ್ನು ಒಲಿಸಿಕೊಂಡ. ತನ್ನ ಸಾರ್ವಭೌಮತ್ವ ಒಪ್ಪದ ಚಿಕ್ಕಪ್ಪ ಇಷಾಖಾನ್, ಅಣ್ಣನ ಮಗ ಆಜಮ್ ಹುಮಾಯೂನ್ ಹಾಗೂ ಇನ್ನೊಬ್ಬ ಸೋದರ ಬಾರ್‌ಬಕ್ ಮೊದಲಾದವರನ್ನು ದಂಡಿಸಿದ. ರಕ್ತಸಂಬಂಧಿ ಎಂದು ಜೋನ್‌ಪುರದಲ್ಲಿದ್ದ ಬಾರ್‌ಬಕ್‌ನನ್ನು ಪುನಃ ಅಲ್ಲಿಗೆ ಪ್ರಾಂತಾಧಿಪತಿಯನ್ನಾಗಿ ನೇಮಿಸಿದ. ಆದರೆ ಜಮೀನ್ದಾರರು ಅವರ ಬೆನ್ನಹಿಂದೆ ಇದ್ದ ಹುಸೇನ್ ಷರ್ಕಿ ಜುಗ ಎಂಬ ಬಚಗೋಟಿ ಬುಡಕಟ್ಟಿನ ನಾಯಕನೊಂದಿಗೆ ಸೇರಿ ದಂಗೆ ಎದ್ದರು. ಸಿಕಂದರ್ ಈ ದಂಗೆಯನ್ನು ಅಡಗಿಸಿ ಜುಗನನ್ನು ಸೆರೆಹಿಡಿಯಬೇಕೆಂದು ಇಚ್ಛೆಪಟ್ಟ. ಹುಸೇನ್‌ಷರ್ಕಿ ಜುಗನಿಗೆ ಆಶ್ರಯಕೊಟ್ಟವನು ಯುದ್ಧದಲ್ಲಿ ಸೋತು ಓಡಿಹೋದ. ಹೊಂದಾಣಿಕೆ ಮಾಡಿಕೊಳ್ಳದಿದ್ದರಿಂದ ಅವನು ಆಜನ್ಮ ಪರ್ಯಂತ ಬಂಗಾಲದಲ್ಲಿ ಅಲಾಉದ್ದೀನ್ ಹುಸೇನ್‌ಷಾ ದೊರೆಯ ಪಿಂಚಣಿದಾರನಾಗಿ ಬಾಳು ಸವೆಸಬೇಕಾಯಿತು. ಮತ್ತೆ ಬಂಗಾಲದ ಅಲಾಉದ್ದೀನ್‌ಷಾ ಸಂಧಿ ಮಾಡಿಕೊಂಡು ಸಿಕಂದರನಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸಿದ.

ಸಿಕಂದರ್ ತನ್ನ ಇತಿಮಿತಿಗಳನ್ನು ಬಲ್ಲವನಾಗಿ ಇತರ ಮುಸ್ಲಿಮ್ ರಾಜರೊಂದಿಗೆ ಉದಾರನೀತಿಯನ್ನು ಅನುಸರಿಸಿದ. ಯಾವುದೇ ಹೆಜ್ಜೆಯನ್ನು ಅವನು ಹಲವುಸಲ ಯೋಚಿಸಿ ಇಡುತ್ತಿದ್ದ. ಅಂತೆಯೇ ಮಾಳವಪ್ರಾಂತದಲ್ಲಿ ಬಂದ ಅವಕಾಶಗಳನ್ನು ದಿಢೀರ್ ಎಂದು ಸ್ವೀಕರಿಸದೆ ನಿಧಾನವಾಗಿ ಅದನ್ನು ಆಕ್ರಮಿಸಿಕೊಂಡ, ಅದಕ್ಕೆ ಅವನನ್ನು ಯಾರೂ ಆಕ್ಷೇಪಿಸಲಿಲ್ಲ. ಚಂದೇರಿ ಕೋಟೆ ನಿರಾತಂಕವಾಗಿ ಅವನ ಕೈವಶವಾಯಿತು. ಆದರೆ ಸಿಕಂದರ್ ಇಷ್ಟು ಉದಾರಿಯಾಗಿ ರಾಜಪೂತರ ಬಗೆಗೆ ವರ್ತಿಸಲಿಲ್ಲ. ಅವರನ್ನು ನಾಶಮಾಡಬೇಕೆಂದು, ಅವರ ಶಕ್ತಿಯನ್ನು ಕಡಿಮೆ ಮಾಡಬೇಕೆಂದು ನಿರ್ಧರಿಸಿದ. ರಜಪೂತರ ಆಡಳಿತಕ್ಕೊಳಪಟ್ಟ ಗ್ವಾಲಿಯರ್ ಸಂಸ್ಥಾನ ಹಾಗೂ ಉತ್ಗೀರ್ ಮತ್ತು ನರವರ್ ಸಂಸ್ಥಾನಗಳನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ವಾಘೇಲ್ ಸಂಸ್ಥಾನದ ಮೇಲೂ ಹಲವು ಧಾಳಿಗಳನ್ನು ಮಾಡಿದ. ಮಾಳವರಾಜ್ಯದ ಆಡಳಿತ ನೋಡಿಕೊಳ್ಳಲು ತನ್ನ ಅಮೀರರನ್ನು ನೇಮಿಸಿದ. ಹಳೆಯ ಹಾಳಾದ ದೆಹಲಿಗಿಂತ ತನ್ನ ರಾಜ್ಯದಲ್ಲಿ ಮಧ್ಯ ಸ್ಥಳವಾಗುವಂತಹ, ರಾಜಕೀಯ ಚಟುವಟಿಕೆಗಳಿಗಾಗಿ ಅನುಕೂಲವಾಗುವಂತಹ ಸ್ಥಳವನ್ನು ರಾಜಧಾನಿಗಾಗಿ ಆರಿಸಿದ. ಅಂತೆಯೇ ಸಂಭಲ್‌ಗೆ ತನ್ನ ವಾಸಸ್ಥಳವನ್ನು 1499ರಲ್ಲಿ ಬದಲಾಯಿಸಿದ. ರಜಪೂತರ ರಾಜ್ಯಗಳ ಮೇಲೆ ಧಾಳಿ ನಡೆಸುವುದಕ್ಕೆ ಇದರಿಂದ ಸ್ವಲ್ಪಮಟ್ಟಿಗೆ ಉಪಯುಕ್ತವಾಯಿತು. ಆದರೂ ಅದಕ್ಕೂ ಹೆಚ್ಚು ಉತ್ತಮವೆಂದು 1504ರಲ್ಲಿ ಆಗ್ರ ನಗರವನ್ನು ಸ್ಥಾಪಿಸಿ ಅಲ್ಲಿಗೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದ. ಹೀಗೆ ಮಾಡುವಾಗಲೂ ಗಂಡಾಂತರಗಳನ್ನು ಎದುರಿಸಬೇಕಾಯಿತು. ಏಕೆಂದರೆ ಆಗ್ರ ಮೊದಲು ಔಧ್ (ಅಯೋಧ್ಯಾ) ರಾಜ್ಯದ ಸಾಮಂತನಾದ ಬಯಾನದ ಅಮೀರನಿಗೆ ಸಂಬಂಧಿಸಿತ್ತು. ಬಯಾನದ ಅಮೀರ ಸುಲ್ತಾನ್‌ಷರಫ್ ತನ್ನ ಸಂಸ್ಥಾನವನ್ನು ಜಲೇಸರ್, ಛಂದ್ವಾರ್, ಮರೇಡ್ರಾ ಹಾಗೂ ಸಾಕೇತ್ ವಿಭಾಗಕ್ಕೆ ಬದಲಿಸಿಕೊಳ್ಳಲು, ಆಗ್ರವನ್ನು ಸಿಕಂದರನಿಗೆ ಕೊಡಲು ಒಪ್ಪಿದ್ದ. ನವನಗರ ನಿರ್ಮಾಣವಾದ ಮೇಲೆ ಸುಲ್ತಾನ್‌ಷರಫ್ ಒಪ್ಪಿಗೆಯನ್ನು ಮುರಿದು ವಿರೋಧಿಸಿ ನಿಂತ. ಆಗ ಸಿಕಂದರ್ ಅವನನ್ನೂ ಅವನ ಸಾಮಂತ ಹಯಬತ್‌ಖಾನ್ ಜಿಲ್ವಾನೀ ಇಬ್ಬರನ್ನೂ ಆಗ್ರದಿಂದ ಹೊರ ಹಾಕಿ ಆಗ್ರವನ್ನು ತನ್ನ ರಾಜಧಾನಿಯಾಗಿ ಭದ್ರಪಡಿಸಿದ.

ಸಿಕಂದರ್ ತನ್ನ ತಂದೆಯ ಕಾಲಕ್ಕಿಂತ ಆಡಳಿತವನ್ನು ಚೆನ್ನಾಗಿ ಸುಧಾರಿಸಿದ. ಆಫ್ಘನ್ ರಾಜರುಗಳಿಗೆ – ಸಾಮಂತರಿಗೆ – ವಿಶ್ವಾಸ ಹಾಗೂ ಮೇಲಧಿಕಾರಸ್ಥಾನದ ಗೌರವಘನತೆಗಳ ಬಗೆಗೂ ಬಾಗಿ ನಡೆಯುವುದರ ಬಗೆಗೂ ಒಂದು ಬಗೆಯ ಕಲಿಕೆಗೊಳಪಡಿಸಿದ. ದಾಯಾದಿಗಳಲ್ಲಿ ಹಂಚಿಹೋಗಿದ್ದ ರಾಜ್ಯವನ್ನು ಜೋನ್‌ಪುರ ಗೆಲ್ಲುವುದರ ಮೂಲಕ ಒಂದುಗೂಡಿಸಿದ, ಪುನರೈಕ್ಯ ಸಾಧಿಸಿದ. ಸಾಮಂತರು ಆಯವ್ಯಯ ಪಟ್ಟಿ ಸಲ್ಲಿಸುವಂತೆ ಆಜ್ಞೆ ಜಾರಿ ಮಾಡಿದ. ಹೀಗೆ ಮಾಡುವಲ್ಲಿ ಯಾರೊಂದಿಗೂ ಮುಖಾಮುಖಿ ಜಗಳಕ್ಕೆ ಎಡೆಕೊಡಲಿಲ್ಲ. ಹಿರಿಯ ಜನರನ್ನು ಆದರಿಸಿ ಕಿರಿಯ ಅಧಿಕಾರಿಗಳನ್ನು ಪ್ರೀತಿಸಿದ. ರಾಜ್ಯದ ಒಳಹೊರ ರಾಜಕೀಯ ಚಟುವಟಿಕೆಗಳನ್ನು ತಿಳಿಸುವುದಕ್ಕೆ ಒಂದು ಇಲಾಖೆಯನ್ನೇ ತೆರೆದು ಗುಪ್ತವಾರ್ತಾಮಾಹಿತಿಯ ಪದ್ಧತಿಯಲ್ಲಿ ಸುಸಂಬದ್ಧತೆಯನ್ನು ತಂದ. ಪ್ರತಿನಿತ್ಯ ರಾಜನಿಗೆ ಸಮಾಚಾರವನ್ನು ತಿಳಿಸುವ, ಅಂದಂದಿನ ಧಾರಣೆಗಳ ಏರಿಳಿತ ತಿಳಿಸುವ ಮತ್ತು ಅಧಿಕಾರಿಗಳ ಚಲನವಲನಗಳನ್ನು ತಿಳಿಸುವ ಸಭೆಗಳು ಆಗುತ್ತಿದ್ದವು. ಏನಾದರೂ ತಪ್ಪು ಮಾರ್ಗದಲ್ಲಿ ಹೋಗುತ್ತಿದ್ದರೆ ರಾಜ ಕೂಡಲೆ ಕಾರ್ಯಪ್ರವೃತ್ತನಾಗಿ ಅದನ್ನು ಸರಿಪಡಿಸುತ್ತಿದ್ದ. ಆತ ನ್ಯಾಯ ಪದ್ಧತಿಯಲ್ಲಿ ಯಾವುದೇ ತಾರತಮ್ಯವನ್ನು ಮಾಡಲಿಲ್ಲ, ಸ್ಥಾನ ಮಾನಗಳಿಗೆ ಲಕ್ಷ್ಯಗೊಟ್ಟು ಪಕ್ಷಪಾತ ಮಾಡಲಿಲ್ಲ. ನ್ಯಾಯನಿರ್ಣಯಕ್ಕಾಗಿ ರಾಜ ವಿಶೇಷ ಅಧಿಕಾರಿಯನ್ನು ನೇಮಿಸಿದ್ದ. ನ್ಯಾಯ ಮಾರ್ಗ ತಪ್ಪಬಾರದೆಂದು ತಾನೇ ಆಗೀಗ ಆ ಸಭೆಗಳಲ್ಲಿ ಪಾಲುಗೊಳ್ಳುತ್ತಿದ್ದ. ಸಿಕಂದರನ ಆಳಿಕೆಯ ಕಾಲ ಶಾಂತಿ ಹಾಗೂ ಅಭಿವೃದ್ಧಿಯ ಯುಗ ಎನ್ನಿಸಿತ್ತು. ಮಳೆ ಬೆಳೆಗಳಿಂದಲೂ ಸಮೃದ್ಧಿಯಿಂದ ಕೂಡಿತ್ತು. ಸಾಹಿತ್ಯ, ಸಂಗೀತ, ಕಲೆ, ಶಾಸ್ತ್ರಗಳೆಲ್ಲ ಪುನರುಜ್ಜೀವನ ಪಡೆದವು. ಸಂಸ್ಕೃತ ಕೃತಿಗಳು ಪರ್ಷಿಯನ್ ಭಾಷೆಗೆ ಅನುವಾದಗೊಂಡವು. ಸುಲ್ತಾನ ಸ್ವತಃ ಕವಿಯಾಗಿದ್ದುದಲ್ಲದೆ ಅನೇಕ ಕವಿಗಳಿಗೆ ಆಶ್ರಯವನ್ನಿತ್ತು ಬೆಳೆಸಿದ. ದೂರದೂರದಿಂದ ವಿದ್ವಾಂಸರು ಆಶ್ರಯ ಬಯಸಿ ಅವನ ಆಸ್ಥಾನಕ್ಕೆ ಬಂದರು. ಹಿಂದು ಮುಸಲ್ಮಾನರಲ್ಲಿ ಹೊಂದಾಣಿಕೆಗೆ, ಮಧುರ ಬಾಂಧವ್ಯಕ್ಕೆ ಜೀವ ಬಂತು. ಮದನ್–ಆಷ್–ಷಿಫಾ–ಯಿ–ಷಿಕಂದರ್ ಹಾಗೂ ಲಹಜಾತ್–ಇ–ಸಿಕಂದರ್‌ಷಾಹಿ ಪ್ರಸಿದ್ಧ ಕೃತಿಗಳಾಗಿವೆ. ಗುಲ್‌ರುಖ್ ಎಂಬ ಕಾವ್ಯನಾಮದಿಂದ ಕಾವ್ಯ ಬರೆಯುತ್ತಿದ್ದ ಈತ 1517 ನವೆಂಬರ್ 21ರಂದು ನಿಧನ ಹೊಂದಿದ.

**ಇಬ್ರಾಹಿಮ್ ಲೋದಿ:** 1517–26. ತಂದೆಯ ಮರಣಾನಂತರ ಯಾವುದೇ ಆತಂಕಗಳನ್ನು ಎದುರಿಸದೆ ಇಬ್ರಾಹಿಮ್ ಸಿಂಹಾಸನ ಅಲಂಕರಿಸಿದ. ಆರಂಭದಲ್ಲಿ ಇಬ್ರಾಹಿಮ್ ತಾನೂ ತನ್ನ ತಮ್ಮ ಜಲಾಲ್‌ಖಾನ್ ಇಬ್ಬರೂ ಆಡಳಿತವನ್ನು ನಡೆಸುವುದಾಗಿ ಘೋಷಿಸಿ ಸೋದರನನ್ನು ಜೋನ್‌ಪುರದ ಸಿಂಹಾಸನದಲ್ಲಿ ಕೂಡಿಸಿದ. ಅವನು ಅಲ್ಲಿ ಭದ್ರವಾಗುವ ಮೊದಲೇ ಕೆಲ ಜಾಣ ಅಮೀರರ ಸಲಹೆಯ ಮೇರೆಗೆ ತನ್ನ ತಪ್ಪನ್ನು ಸರಿಪಡಿಸಿಕೊಳ್ಳಲು ಸೋದರನಲ್ಲಿಗೆ ಕೆಲವು ಜನ ಅಧಿಕಾರಿಗಳ–ಶ್ರೀಮಂತ ನವಾಬರ ಆಯೋಗ ಕಳಿಸಿ ತನ್ನ ಸಾರ್ವಭೌಮತ್ವ ಅಂಗೀಕರಿಸುವಂತೆ ಸೂಚಿಸಿದ. ಜಲಾಲ್ ಅದಕ್ಕೆ ಒಪ್ಪಲಿಲ್ಲ. ರಾಜನ ಆಡಳಿತ ವಿಧಾನಕ್ಕೆ ಹೆದರಿದ ಜಲಾಲ್ ಜೋನ್‌ಪುರ ಬಿಟ್ಟು ತನ್ನ ಮೊದಲ ಮಂಡಲ ಕಾಲ್ಪಿಗೆ ಹೋದನು. ಅನಂತರ ಆಜಮ್ ಹುಮಾಯೂನ್ ಸರ್ವಾನೀ ಎಂಬ ಅಮೀರನ ಸಹಾಯದಿಂದ ಔಧ್ ಪ್ರಾಂತವನ್ನು ಗೆದ್ದ. ಇದನ್ನು ಕಂಡು ಇಬ್ರಾಹಿಮ್ ಆಜಮ್ ಹುಮಾಯೂನನನ್ನು ತನ್ನ ಕಡೆಗೆ ಒಲಿಸಿಕೊಂಡ. ಆಗ ಜಲಾಲ್ ಕಾಲ್ಪಿ ಹಾಗೂ ಔದ್ ಬಿಟ್ಟು ರಾಜಧಾನಿ ಆಗ್ರಕ್ಕೆ ಹೋದ. ಅಲ್ಲಿ ಇಬ್ರಾಹಿಮನ ಸೇನಾಪತಿ ಮಲೀಕ್ ಆದಮ್ ಅವನಿಗೆ ಕೇವಲ ಕಾಲ್ಪಿ ಸಂಸ್ಥಾನದಿಂದ ಸಂತುಷ್ಟನಾಗುವಂತೆ ಒಪ್ಪಿಸಿದ. ಆದರೆ ದಂಡೆತ್ತಿಹೋದ ಇಬ್ರಾಹಿಮ್ ಹಿಂದಿರುಗಿದಕೂಡಲೇ ಈ ಏರ್ಪಾಡನ್ನು ಒಪ್ಪಲಿಲ್ಲ. ಜಲಾಲ್ ಗ್ವಾಲಿಯರಿಗೆ ಓಡಿಹೋದ, ಅಲ್ಲಿ ನಿಲ್ಲದೆ ಮುಂದಕ್ಕೆ ಮಾಳವಕ್ಕೆ ಹೋದ. ಆದರೆ ಅಲ್ಲಿ ಅವನಿಗೆ ತಿರಸ್ಕಾರ ಕಾಯ್ದಿತ್ತು. ಅಂತೆಯೇ ಅಲ್ಲಿಯೂ ನಿಲ್ಲದೆ ಗೊಂಡರ ಅರಣ್ಯಕ್ಕೆ ಓಡಿಹೋದ. ಆ ಗೊಂಡರು ಅವನನ್ನು ಹಿಡಿದು ರಾಜನಿಗೆ ಒಪ್ಪಿಸಿದರು. ಅವನನ್ನು ಇತರ ಸೋದರರನ್ನು ಇಬ್ರಾಹಿಮ್ ಬಂದಿಯಾಗಿಸಿಟ್ಟು ಹಾನ್ಸಿ ಸ್ಥಳಕ್ಕೆ ಕಳಿಸಿದ. ಆದರೆ ಅವನು ಆ ಸ್ಥಳ ಮುಟ್ಟುವ ದಾರಿಯಲ್ಲೇ ಕೊಲ್ಲಲ್ಪಟ್ಟ.

ಜಲಾಲ್ ಸ್ವಲ್ಪ ಕಾಲ ಆಶ್ರಯಪಡೆದಿದ್ದ ಗ್ವಾಲಿಯರ್ ಸಂಸ್ಥಾನ ಇಬ್ರಾಹಿಮನ ದೃಷ್ಟಿಗೆ ಬಿದ್ದು, ಅದನ್ನು ಗೆಲ್ಲುವುದಕ್ಕೆ ಅದೊಂದು ನೆಪವಾಯಿತು. ಗ್ವಾಲಿಯರ್ ಗೆಲ್ಲಬೇಕೆಂಬ ಸಿಕಂದರನ ಆಸೆ ಅವನ ಮಗನ ಮುಖಾಂತರ ಈಡೇರಿತು. ಅದೇ ಸಂದರ್ಭದಲ್ಲಿ ಮೇವಾರದ ರಾಣಾಸಿಂಗನನ್ನು ಗೆಲ್ಲಲಾಗದೆ, ದಂಡೆತ್ತಿಹೋದ ಅವನ ಸೇನೆ ಸೋತು ಹಿಂದಿರುಗಿತು.

ಜಲಾಲ್‌ಖಾನನ ಪ್ರತಿಭಟನೆ ಇಬ್ರಾಹಿಮನ ಮೇಲೆ ವಿಶೇಷ ಪರಿಣಾಮ ಬೀರಿತು. ಅವನು ತನ್ನ ತಂದೆಯ ದೊಡ್ಡಮನಸ್ಸನ್ನು ಮರೆತು ಆಸ್ಥಾನದ ಎಲ್ಲರನ್ನೂ ಸಂಶಯದಿಂದ ನೋಡತೊಡಗಿದ. ತನ್ನಲ್ಲೂ ಅವರಲ್ಲೂ ವಿಶೇಷವಾಗಿ ಶ್ರೀಮಂತ ನವಾಬರಲ್ಲಿ ಐಕ್ಯ ಸಂಬಂಧ ಮರೆತು ಆಳುವ, ಆಳಿಸಿಕೊಳ್ಳುವ ಅರಸ ಹಾಗೂ ಸೇವಕರ ಅಂತರ ನಿರ್ಮಿಸಿಕೊಂಡ. ತನ್ಮೂಲಕ ಒಂದು ಬಗೆಯ ಅಸಂತೃಪ್ತತೆಯ ವಾತಾವರಣ ಸೃಷ್ಟಿಯಾಯಿತು. ತುರ್ಕಿಯರ ಹಾಗೂ ಆಫ್ಘನರ ಆಧಿಪತ್ಯದ ಜ್ವಾಲೆಯೂ ಒಳಗೊಳಗೆ ಹೆಚ್ಚತೊಡಗಿತು. ಜಲಾಲ್‌ಖಾನನನ್ನು ಸೋಲಿಸುವಲ್ಲಿ ಸಹಾಯಮಾಡಿದ ಅನಂತರ ಇವನ ಕಡೆಗೆ ಒಲಿದ ಆಜಮ್ ಹುಮಾಯೂನ್ ಸರ್ವಾನೀ ಮತ್ತು ತಂದೆ ಸಿಕಂದರ್‌ಷಾನ ಕಾಲದಿಂದಲೂ ಮಂತ್ರಿಯಾಗಿದ್ದ ಮಿಯಾನ್ ಭುವನನ್ನು ಜೈಲಿನಲ್ಲಿಟ್ಟ. ಅವನ ಸ್ವೇಚ್ಛಾಚಾರ, ದಬ್ಬಾಳಿಕೆಗಳು ಪ್ರತಿಭಟನೆಗೆ ಕಾರಣವಾದುವು. ಇದನ್ನು ಆಜಮ್ ಹುಮಾಯೂನ್ ಸರ್ವಾನೀಯ ಪುತ್ರ ಇಸ್ಲಾಮ್‌ಖಾನ್ ಪ್ರತಿಭಟಿಸಿ ನಿಂತ. ಇಬ್ಬರು ಲೋದಿ ರಾಜರು, ಇಬ್ರಾಹಿಮನ ಚಿಕ್ಕಪ್ಪ ಹಾಗೂ ಒಬ್ಬ ಸೋದರ ಬೆಂಬಲಿಸಿ ನಿಂತರು. ಕೆಲವರು ಮಧ್ಯಸ್ಥಿಕೆ ವಹಿಸಿ ರಾಜನಿಗೆ ಒಪ್ಪಂದ ಮಾಡಿಕೊಳ್ಳಲು ಹೇಳಿದರು. ಆದರೆ ರಾಜ ಯಾವುದಕ್ಕೂ ಒಪ್ಪದೆ ಪ್ರತಿಭಟನಾಕಾರರನ್ನು ದೇಶದ್ರೋಹಿಗಳೆಂದು ಘೋಷಿಸಿ ತನ್ನ ಅಧೀನ ಅಧಿಕಾರಿಗಳಾದ ರಾಜ್ಯಪಾಲರಾದ ದರ್ಯಾಖಾನ್ ಲೋಹಾನಿ (ಬಿಹಾರ್), ನಾಸಿರಖಾನ್ ಲೋಹಾನಿ (ಘಜಿಪುರ) ಮತ್ತು ಷೇಕ್‌ಮಹಮ್ಮೂದ್ ಥರ್ಮೂಲಿ ಇವರಿಗೆ ಯುದ್ಧಮಾಡಲು ಆಜ್ಞಾಪಿಸಿದ. ಘನಘೋರ ಯುದ್ಧ ನಡೆದು ರಕ್ತದ ಕಾಲುವೆ ಹರಿಯಿತು. 10,000 ಆಫ್ಘನ್ ಯೋಧರು ಮಡಿದರೆಂದು ಒಂದು ವರದಿ ಹೇಳುತ್ತದೆ. ಯುದ್ಧದಲ್ಲಿ ಪ್ರತಿಭಟನಾ ಕಾರರು ಸೋತು ಇಸ್ಲಾಮ್‌ಖಾನ್ ಕೊಲ್ಲಲ್ಪಟ್ಟ.

ಪ್ರತಿಭಟನೆಯ ಪರಿಣಾಮವನ್ನು ಲೆಕ್ಕಿಸದೆ ಗೆಲುವಿನ ಮತ್ತಿನಲ್ಲಿ ಇಬ್ರಾಹಿಮ್ ಇನ್ನಷ್ಟು ನಿಷ್ಕರುಣಾ ದೃಷ್ಟಿಯಿಂದ ನಡೆದುಕೊಂಡು ಮಿಯಾನ್ ಭುವನನ್ನು ಕೊಲ್ಲಿಸಿದ. ಕೈದಿಯಾಗಿದ್ದ ಆಜಮ್ ಹುಮಾಯೂನ್ ಬಂದೀಖಾನೆಯಲ್ಲಿ ಮರಣವನ್ನಪ್ಪುವಂತೆ ನೋಡಿಕೊಂಡ. ಇನ್ನೊಬ್ಬ ಅಜ್ಜ ಮಿಯಾನ್‌ಹುಸೈನ್ ಫರ್ಮೂಲೀ ಎಂಬವವನ್ನು ಚಂದೇರಿಯಲ್ಲಿ ಕೊಲ್ಲಿಸಿದ. ಈ ಕಾರ್ಯಗಳು ಅವನ ಅಧಿಕಾರಿಗಳಲ್ಲಿ, ಶ್ರೀಮಂತ ಪ್ರಜೆಗಳಲ್ಲಿ ರೋಷ ಹುಟ್ಟಿಸಿತು. ರಾಜ್ಯದ ಪೂರ್ವಭಾಗದಲ್ಲಿ ಇದ್ದ ಕೆಲ ಮುಖ್ಯ ಲೋದಿ ಹಾಗೂ ಫರ್ಮೂಲಿ ಅಮೀರರಲ್ಲಿ ಎಚ್ಚರಿಕೆಯುಂಟಾಗಿ ಅವರು ತಮ್ಮತಮ್ಮಕ್ಕೆ ರಕ್ಷಣೆಗಾಗಿ ಹೊಂದಿಕೊಳ್ಳುವಂತೆ ಮಾಡಿದವು. ಅವರು ತಮ್ಮತಮ್ಮಕ್ಕೆ ಸಂಘಟಿತರಾದರು. ಇಬ್ರಾಹಿಮ್ ಅನತಿಕಾಲದಲ್ಲೇ ಅಧಿಕಾರದಿಂದ ಇಳಿಸಬೇಕೆಂದಿದ್ದ ದರ್ಯಾಖಾನ್ ಲೋಹಾನಿ ನಿಷ್ಠೆ ತೊಡೆದು ಅನಿರೀಕ್ಷಿತ ಸಾವಿಗೆ ತುತ್ತಾಗಲು ಅವನ ಪುತ್ರ ಬಹಾರ್‌ಖಾನ್ ನೇತೃತ್ವ ವಹಿಸಿ ಹಲವು ಅಮೀರರ ಸಹಾಯದಿಂದ ಸುಲ್ತಾನ್‌ಮಹಮ್ಮದ್ ಎಂಬ ಹೆಸರು ಧರಿಸಿ ಸ್ವಾತಂತ್ರ್ಯ ಘೋಷಿಸಿದ. ಅವನು ಬಿಹಾರದಿಂದ ರಾಜಸ್ಥಾನದ ಸಂಭಲದವರೆಗಿನ ಭೂಭಾಗವನ್ನು ಆಕ್ರಮಿಸಿಕೊಂಡ. ಅವನು ಸು. 2 ವರ್ಷ ತನ್ನ ಹೆಸರಿನಲ್ಲಿ ಖುತ್ಬಾ ಓದಿಸಿದ. ಅವನಂತೆಯೇ ಘಾಜಿಪುರದ ನಾಶಿರ್‌ಖಾನ್ ಲೋಹಾನಿ, ಆಜಮ್ ಹುಮಾಯೂನ್ ಸರ್ವಾನೀಯ ಇನ್ನೊಬ್ಬ ಮಗ ಫತೇಖಾನ್ ಮತ್ತು ಷೇರ್‌ಖಾನ್‌ಸೂರ್ (ತರುವಾಯದಲ್ಲಿ ಸುಲ್ತಾನ್ ಷೇರ್‌ಷಾ) ಸ್ವಾತಂತ್ರ್ಯವನ್ನು ಘೋಷಿಸಿದರು.

ಇಬ್ರಾಹಿಮ್ ಲೋದಿಯ ಸೇನೆ ರಾಜ್ಯದ ಪೂರ್ವ ಪ್ರಾಂತಗಳಲ್ಲಿ ಯುದ್ಧಮಾಡುತ್ತಿರಲು ಪಂಜಾಬ್ ಪ್ರಾಂತದ ಒಡೆಯ ದೌಲತ್‌ಖಾನ್ ಲೋದಿ ಬಾಬರ್‌ನೊಂದಿಗೆ ಸಂಧಾನ, ಸಮಾಲೋಚನೆಗಳನ್ನು ಆರಂಭಿಸಿದ. ಇಬ್ರಾಹಿಮ್ ಕಳಿಸಿದ ಕರೆಯ ಆಜ್ಞೆಗಳನ್ನು ಉಲ್ಲಂಘಿಸಿ ಮತ್ತೆ ರಾಜನನ್ನು ಭೇಟಿಯಾಗಲು ಹೋದ ಅವನ ಪುತ್ರ ದಿಲಾವರ್‌ಖಾನ್ ಲೋದಿ ಬಂಧನ ಭಯದಿಂದ ಲಾಹೋರಿಗೆ ಹಿಂತಿರುಗಿ ಓಡಿಬಂದ. ಆಘಾತವನ್ನುಂಟು ಮಾಡುವ ಇಬ್ರಾಹಿಮ್‌ನ ಹಿಂಸೆಗಳನ್ನು ಮಗನಿಂದ ಕೇಳಿದ ಅವನು ಇಬ್ರಾಹಿಮ್‌ನೊಂದಿಗೆ ನಿಷ್ಠೆಯಿಂದ ಇರಲು ಸಾಧ್ಯವಿಲ್ಲವೆಂದು ಬಗೆದು, ಬಿಹಾರ ಮುಂತಾದ ಪ್ರಾಂತಾಧಿಪತಿಗಳ ಹಾಗೆ ಪ್ರತಿಭಟಿಸಲು ತಾಕತ್ತು ಇಲ್ಲವೆಂದು ಅರಿತುಕೊಂಡು ಬಾಬರನಲ್ಲಿ ಸಹಾಯ ಯಾಚಿಸಿದ. ಆ ಕಾರ್ಯಕ್ಕಾಗಿ ತನ್ನ ಮಗನನ್ನು ಕಾಬುಲ್‌ಗೆ ಕಳಿಸಿದ. ಬಾಬರನ ಜೊತೆ ಭೇಟಿ ಆದಮೇಲೆ ದಿಲಾವರ್‌ಖಾನ್ ಲೋದಿಯನ್ನು ಮುಂದೆ ಕೆಲಕಾಲದ ಮೇಲೆ ಬಾಬರ್ ಅವನಿಗೆ ಖಾನ್–ಇ–ಖಾನ್ (ಮುಖ್ಯ ಸೇನಾಪತಿ ಸ್ಥಾನ) ಸ್ಥಾನವಿತ್ತು ಸನ್ಮಾನಿಸಿದ. ಅವನು ಹುಮಾಯೂನನ ಕಾಲದಲ್ಲಿಯೂ ಆಸ್ಥಾನದಲ್ಲಿ ಮುಂದುವರಿದು ಸೇವೆಸಲ್ಲಿಸಿದ. ಇವನು ಕಾಬುಲಿಗೆ ಹೋದಾಗ ಇಬ್ರಾಹಿಮ್‌ನ ಚಿಕ್ಕಪ್ಪ ಸಮಯಕ್ಕಾಗಿ ಕಾಯುತ್ತಿದ್ದವನು ಗುಜರಾತದಿಂದ ಅಲ್ಲಿಗೆ ಬಂದಿದ್ದ. ಪಂಜಾಬ್ ಪ್ರಾಂತವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳಲು ಕಾತರ ಪಡುತ್ತಿದ್ದ ಬಾಬರ್ ಈ ದಾಯಾದಿಗಳ ಸಹಾಯ ಯಾಚನೆಗೆ ಕೂಡಲೆ ಒಪ್ಪಿಗೆಯನ್ನಿತ್ತು 1524ರಲ್ಲಿ ಲಾಹೋರಿನ ಮೇಲೆ ದಂಡೆತ್ತಿಬಂದ. ಅವನಿಗೂ ಇಬ್ರಾಹಿಮ್‌ನ ಸೇನಾಪತಿ ಬಹಾರ್‌ಖಾನ್ ಲೋದಿಗೂ ಯುದ್ಧವಾಯಿತು. ಇಬ್ರಾಹಿಮ್‌ನ ಸೇನೆ ಸೋತಿತು. ಗೆದ್ದ ಬಾಬರನನ್ನು ದೌಲತ್‌ಖಾನ್ ಲೋದಿ ಮುಲ್ತಾನದ ಕಡೆಗೆ ಓಡಿಹೋದವನು ದೀಪಾಲ್‌ಪುರದಲ್ಲಿ ಬಂದು ಭೇಟಿಯಾದ. ಬಾಬರ್ ದೌಲತ್‌ಖಾನನಿಗೆ ರಾಜ್ಯವನ್ನು ಪುನಃ ಕೊಡದೆ ಅಲ್ಲಿನ ಆಡಳಿತ ನೋಡಿಕೊಳ್ಳಲು ತನ್ನ ಅಧಿಕಾರಿಗಳನ್ನು ನೇಮಿಸಿದ. ಇದನ್ನು ಕಂಡ ದೌಲತ್‌ಖಾನ್ ಬಾಬರನ ಮೇಲೆ ಮುನಿಸುಗೊಂಡು ತನ್ನ ದಾಯಾದಿಯಾದ ಆಲಮ್‌ಖಾನನೊಂದಿಗೆ ಸೇರಿ ಸಂಚುಮಾಡಿದ. ಇಬ್ಬರೂ ಸೇರಿ ದೆಹಲಿಯ ಮೇಲೆ ಧಾಳಿಮಾಡಿದರು. ಈ ಸಂಚಿನ ಪ್ರಕಾರ ಬಾಬರನಿಗೆ ಪಂಜಾಬ್ ಪ್ರಾಂತವನ್ನು ಬಿಟ್ಟುಕೊಡಬೇಕಾಗಿತ್ತು. ಆಲಮ್‌ಖಾನ್ ದೌಲತ್‌ಖಾನನಿಗಿಂತ ಹೆಚ್ಚು ಶಕ್ತಿಶಾಲಿಯಾದ; 1525ರಲ್ಲಿ ಇಬ್ರಾಹಿಮ್ ಲೋದಿಯ ಮೇಲೆ ಧಾಳಿ ಮಾಡಿ ದೆಹಲಿ ಆಕ್ರಮಿಸಿದ; ಆದರೆ ಸಹಜವಾಗಿ, ಸರಳ ರೀತಿಯಲ್ಲೇ ಇಬ್ರಾಹಿಮ್‌ನಿಗೆ ಸೋತ. ಈ ಮಧ್ಯೆ ಈ ಎಲ್ಲ ಚಟುವಟಿಕೆಗಳನ್ನು ಗಮನಿಸುತ್ತಿದ್ದ ಬಾಬರ್, ಆಲಮ್‌ಖಾನ್ ಮತ್ತು ದೌಲತ್‌ಖಾನ ನಂಬಿಕೆಗೆ ಯೋಗ್ಯರಲ್ಲವೆಂದೂ ಯುದ್ಧಗಳಲ್ಲಿ ಅವರ ಮೇಲೆ ಭರವಸೆ ಇಡುವಂತಿಲ್ಲವೆಂದೂ ಬಗೆದು ಸ್ವತಃ ಧಾಳಿಮಾಡಲು ಹೊರಟ. ಮೊದಲು ಪಂಜಾಬ್ ಪ್ರಾಂತವನ್ನು ಗೆದ್ದು, ಆಫ್ಘನ್ ವೈರಿಗಳನ್ನು ಸದೆಬಡಿದು ದೆಹಲಿಯತ್ತ ದಂಡಯಾತ್ರೆ ಬೆಳೆಸಿದ. ದೆಹಲಿಯಿಂದ ಇಬ್ರಾಹಿಮ್‌ನೂ ತನ್ನ ಸೇನೆಯೊಂದಿಗೆ ಮೊಗಲರನ್ನು ಎದುರಿಸಲು ಮುಂದೆ ನಡೆದ. ಈ ಎರಡೂ ಸೇನೆಗಳು 1526 ಏಪ್ರಿಲ್ 20ರಂದು ಐತಿಹಾಸಿಕ ರಣಭೂಮಿಯಾದ ಪಾಣಿಪತ್ ಮೈದಾನದಲ್ಲಿ ಸಂಧಿಸಿದವು. ಎರಡರ ಮಧ್ಯೆ ಘೋರಯುದ್ಧವಾಯಿತು. ಆ ಯುದ್ಧದಲ್ಲಿ ಇಬ್ರಾಹಿಮ್‌ನ ಸೇನೆಯನ್ನು ಸೋಲಿಸಿ ಅವನನ್ನು ಕೊಲ್ಲಲಾಯಿತು. ದೆಹಲಿಯ ಮೇಲೆ ಮೊಗಲರ ಆಧಿಪತ್ಯಕ್ಕೆ ನಾಂದಿಯಾಯಿತು **(ನೋಡಿ–ಮೊಗಲರು)**. (ಎಸ್.ಜಿ.ಎ.)

**ಲೋಮಥಾಂಗ್:** ನೇಪಾಲ ದೇಶದ ಮಸ್ತಂಗ್ ಜಿಲ್ಲೆಯಲ್ಲಿರುವ, ಮಧ್ಯಯುಗೀನ ಕಾಲದ ಕೋಟೆಯಿಂದ ಆವೃತವಾದ ಒಂದು ನಗರ. ಖಠ್ಮಂಡುವಿನ ಉತ್ತರಕ್ಕೆ ಸು.125 ಕಿಮೀ ದೂರದಲ್ಲಿ ಅತಿ ಎತ್ತರದ ಶಿಖರಗಳಲ್ಲೊಂದಾದ ಅನ್ನಪೂರ್ಣ ಶಿಖರದ ಉತ್ತರಕ್ಕೆ 4300 ಮೀ ಎತ್ತರದಲ್ಲಿದೆ. ಒಬ್ಬ ಕುರುಬನು ಕೊಟ್ಟ ಮಾಹಿತಿಯ ಆಧಾರದ ಮೇಲೆ ಅಮೆರಿಕ, ಇಟಲಿ ಮತ್ತು ನೇಪಾಲದ ತಜ್ಞರು, ಪುರಾತತ್ತ್ವ ಶಾಸ್ತ್ರಜ್ಞರು ಮತ್ತು ಅನ್ವೇಷಕರ ಅಂತಾರಾಷ್ಟ್ರೀಯ ತಂಡ ಇಲ್ಲಿ 18 ಗುಹಾಲಯಗಳ ಒಂದು ಸಂಕೀರ್ಣವನ್ನು 2007ರ ಏಪ್ರಿಲ್ ತಿಂಗಳಲ್ಲಿ ಪತ್ತೆ ಹಚ್ಚಿತು. ಅತ್ಯಂತ ಕುತೂಹಲ ಸಂಗತಿ ಎಂದರೆ ಇಲ್ಲಿ ಸು.13, 14 ನೆಯ ಶತಮಾನದ ಕಾಲಕ್ಕೆ ಸೇರಬಹುದಾದ ಬುದ್ಧನ ಜೀವಿತಕ್ಕೆ ಸಂಬಂಧಿಸಿದ 55 ವರ್ಣಫಲಕಗಳಿವೆ. ಮತ್ತೂ ಆಶ್ಚರ್ಯಕರ ಸಂಗತಿಯೆಂದರೆ ಈ ಗುಹಾಲಯಗಳನ್ನು ಅತ್ಯಂತ ಕಡಿದಾದ ಬೆಟ್ಟದ ಊರ್ಧ್ವ ಬದಿಯಲ್ಲಿ ಕಡೆದಿರುವುದು. ಈ ಮಟ್ಟಕ್ಕೆ ಹೋಗುವುದು ದುಸ್ತರ. ಹೀಗಿರುವಲ್ಲಿ ಈ ಮಟ್ಟದಲ್ಲಿ ಗುಹಾಲಯಗಳನ್ನು ಕಂಡರಿಸಿ ಉಪಯೋಗಿಸುತ್ತಿದ್ದುದು ಅತಿ ದಿಟ್ಟತನದ ಕಾರ್ಯವೆಂದು ತಂಡದ ಬ್ರಾಟನ್ ಕೋ ಬರನ್ ಎಂಬ ಅಮೆರಿಕದ ಶೋಧಕರು ಹೇಳಿದ್ದಾರೆ. ಈ ತಂಡ ಹಿಮಾಚ್ಛಾದಿತ ಪರ್ವತವನ್ನೇರಲು ಉಪಯೋಗಿಸುವ ಗುದ್ದಲಿ ಮತ್ತು ಹಗ್ಗಗಳಿಂದ ಅಲ್ಲಲ್ಲಿ ಮೆಟ್ಟಿಲುಗಳನ್ನು ಮಾಡಿಕೊಂಡು ಈ ಗುಹಾಲಯ ತಲುಪಿ ಅಧ್ಯಯನ ಮಾಡಿದೆ. ಇಲ್ಲಿ ಚಿತ್ರಫಲಕಗಳಲ್ಲದೆ ಟಿಬೆಟ್ ಲಿಪಿಯಲ್ಲಿಯ ಗ್ರಂಥಗಳು ಮತ್ತು ಪ್ರ.ಶ. ಪೂರ್ವದ ಮಣ್ಪಾತ್ರೆಗಳು ದೊರೆತಿವೆ. ಇವು ಟಿಬೆಟ್ಟಿನ ಬೌದ್ಧಧರ್ಮದ ಪರಂಪರೆಯ ಚಿತ್ರಗಳನ್ನು ಮತ್ತು ನೇಪಾಲ ರಾಜ್ಯದ ಸುಪ್ರಸಿದ್ಧ ನೇವಾರಿ ಕಲಾವಿದರ ಚಿತ್ರಗಳನ್ನು ಮೀರಿಸುತ್ತವೆಯೆಂದು ವರ್ಣಚಿತ್ರ ಸಂರಕ್ಷಣ ತಜ್ಞರಾದ ಕೋಪನ್‌ರು ವರ್ಣಿಸಿದ್ದಾರೆ. ಗುಹಾಲಯಗಳ ಪ್ರದೇಶದಲ್ಲಿ ಅಲ್ಲಲ್ಲಿ ಸಾಂಸ್ಕೃತಿಕ ದಿಬ್ಬಗಳಿವೆ. 20 ವಸತಿ ಕೊಠಡಿಗಳಿವೆ. ಹಲವು ಅಂತಸ್ತುಗಳಿವೆ. ಇವುಗಳಿಗೆ ಹೋಗಲು ಮೆಟ್ಟಿಲುಗಳಿವೆ. ಈ ಗುಹಾಲಯಗಳಲ್ಲಿನ ಸ್ತೂಪ ಮತ್ತು ಶಿಷ್ಯವೃಂದ ಮತ್ತು ಸೇವಕರೊಡನೆ ಇರುವ ಬುದ್ಧನ ನಾನಾ ಪ್ರಕಾರದ ವರ್ಣಚಿತ್ರಗಳು ವಿಶಿಷ್ಟವಾದವು. ಈ ವರ್ಣಚಿತ್ರಗಳಲ್ಲಿ ಉಪ ಉಷ್ಣವಲಯ ಪ್ರದೇಶದ ತಾಳೆಮರ ಹಾಗೂ ಭಾರತೀಯ ಉಡುಪುಗಳು ಮತ್ತು ಪ್ರಾಣಿಗಳಿವೆ. ತಂಡದ ಲಿಗಿಫೀನಿಯವರ ಪ್ರಕಾರ, ಟಿಬೆಟಿನ ಬೌದ್ಧ ವಿಹಾರಗಳಲ್ಲಿಯ ವರ್ಣಚಿತ್ರಗಳಿಗಿಂತ ಮಸ್ತಾನಾಂಗ್ ಬೌದ್ಧ ಗುಹಾಲಯಗಳ ವರ್ಣಚಿತ್ರಗಳು ತೀರ ಭಿನ್ನವಾದವು. ಇವುಗಳಲ್ಲಿ ಪ್ರಾಚೀನ ಭಾರತದ ವರ್ಣಚಿತ್ರ ಪರಂಪರೆಯ ಪ್ರಭಾವವಿದೆ. ಈ ವರ್ಣಚಿತ್ರಗಳಲ್ಲಿಯ ಚಿರತೆ, ಹುಲಿ, ಮಂಗ ಮತ್ತು ಜಿಂಕೆ ಎಲ್ಲವೂ ಭಾರತೀಯ ಮಾದರಿಯವು. ಕೆಲವು ಶತಮಾನಗಳ ಹಿಂದಿನ ಅಜಂತಾದ ಗುಹಾ ವರ್ಣಚಿತ್ರ ಪರಂಪರೆಯನ್ನು ಇವು ನೆನಪಿಸುತ್ತವೆ. ಶೋಧನ ತಂಡ ಅಮೂಲ್ಯ ಪ್ರಾಚ್ಯಾವಶೇಷವನ್ನು ಕಳ್ಳ ಸಾಗಾಣಿಕೆಗಾರರಿಂದ ರಕ್ಷಿಸಲು, ಈ ಗುಹಾಲಯ ಸಂಕೀರ್ಣವನ್ನು, ಇವುಗಳಲ್ಲಿ ಚಿರತೆಯ ಪಾದದ ಗುರುತುಗಳಿದ್ದುದರಿಂದ ಇದನ್ನು ಹಿಮಾಚ್ಛಾದಿತ ಚಿರತೆ ಗುಹೆಯೆಂದು ಹೆಸರಿಸಿದ್ದಾರೆ. ಅಕ್ಕಪಕ್ಕದ ಗುಹಾಲಯಗಳಲ್ಲಿ ಟಿಬೆಟ್ಟಿನ ಬೌದ್ಧ ಗ್ರಂಥಗಳಿದ್ದುದರಿಂದ ಈ ಸಂಕೀರ್ಣ ನಳಂದ ವಿಶ್ವವಿದ್ಯಾಲಯದಂತೆ ಒಂದು ದೊಡ್ಡ ವಿದ್ಯಾಕೇಂದ್ರವಾಗಿದ್ದಿರಬೇಕೆಂದು ಫೀನಿಯವರು ಅಭಿಪ್ರಾಯಪಟ್ಟಿದ್ದಾರೆ. ಅದೃಷ್ಟವಶಾತ್ ಈ ಸಂಕೀರ್ಣ ಬಹಳ ದುಸ್ತರವಾದ ಪ್ರದೇಶದಲ್ಲಿರುವುದರಿಂದ ಇಲ್ಲಿಯ ಸಾಂಸ್ಕೃತಿಕ ಅವಶೇಷಗಳು ಹಾಳಾಗಲು ಅವಕಾಶವಾಗಿಲ್ಲ. (ಎ.ಎಸ್; ಎನ್.ಎಲ್.)

**ಲೋಹವಿಜ್ಞಾನ:** ಲೋಹಗಳನ್ನು ಅವುಗಳ ಅದಿರುಗಳಿಂದ ಬೇರ್ಪಡಿಸಿ ಮಾನವನ ಉಪಯೋಗಕ್ಕೆ ಬೇಕಾದಂತೆ ಸಂಸ್ಕರಿಸಿ ಮಾರ್ಪಡಿಸುವ ಕಲೆಗಾರಿಕೆ ಮತ್ತು ತಂತ್ರವಿದ್ಯೆ (ಮೆಟಲರ್ಜಿ). ವಾಸ್ತವವಾಗಿ ಪ್ರಯೋಗಶಾಲೆಯ ಆಸಕ್ತಿಗಿಂತ ವಾಣಿಜ್ಯೋದ್ದೇಶವೇ ಲೋಹವಿಜ್ಞಾನದ ವಿಕಾಸಕ್ಕೆ ಪ್ರಮುಖ ಕಾರಣ. ಇದು ಲೋಹಗಳ ರಾಸಾಯನಿಕ, ಭೌತಿಕ ಹಾಗೂ ಪರಮಾಣುವಿಕ ಗುಣಲಕ್ಷಣಗಳು ಮತ್ತು ಲೋಹಗಳ ಸಂಯೋಗದಿಂದ ಮಿಶ್ರಲೋಹಗಳನ್ನು ತಯಾರಿಸುವ ವಿಧಾನವನ್ನೂ ಒಳಗೊಂಡಿದೆ. ಇದಲ್ಲದೆ ದ್ಯುತಿ ಹಾಗೂ ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳು, ಎಕ್ಸ್‌ರೇಕಿರಣ ವಿವರ್ತನೆ ಇತ್ಯಾದಿಗಳನ್ನು ಬಳಸಿಕೊಂಡು ಲೋಹಗಳ ಹಾಗೂ ಮಿಶ್ರಲೋಹಗಳ ಸಂಯೋಜನೆ ಹಾಗೂ ಸ್ಫಟಿಕೀಯ ರಚನೆಯನ್ನು ಅಧ್ಯಯನ ಮಾಡುವ ಲೋಹರಚನ ವಿಜ್ಞಾನವೂ ಇದರ ಪ್ರಮುಖ ಅಂಗವಾಗಿದೆ.

ಇತಿಹಾಸ: ಮಾನವನಿಗೆ ಲೋಹಗಳ ಬಗೆಗಿನ ಜ್ಞಾನ ಪ್ರ.ಶ.ಪೂ.ಸು. 4000ದಷ್ಟು ಹಿಂದಿನಿಂದಲೂ ಇತ್ತೆಂದು ತಿಳಿದುಬಂದಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಅಂದಿನ ಕೆಲವು ತಾಮ್ರದ ಗಣಿಗಳನ್ನು ಗುರುತಿಸಲಾಗಿದೆ. ಅಂದು ಅದಿರಿನಿಂದ ತಾಮ್ರವನ್ನು ಪ್ರತ್ಯೇಕಿಸಿ ಈ ಲೋಹವನ್ನು ಆಯುಧಗಳಿಗೆ ಹಾಗೂ ಇನ್ನಿತರ ಉಪಯೋಗೀ ವಸ್ತುಗಳ ತಯಾರಿಕೆಗೆ ಬಳಸಲಾಗುತ್ತಿತ್ತೆಂದು ತಿಳಿಯಲಾಗಿದೆ.

ಪ್ರ.ಶ.ಪೂ.4000–1400ರ ಅವಧಿಯಲ್ಲಿ ಕಂಚಿನ ಆವಿಷ್ಕಾರವಾಯಿತು. ಹೊಸತಾಗಿ ದೊರೆತ ಇನ್ನೊಂದು ಲೋಹ ತವರವನ್ನು ತಾಮ್ರದೊಡನೆ ಬೆರೆಸಿದಾಗ ಉಂಟಾಗುವ ಈ ಮಿಶ್ರಲೋಹ ತಾಮ್ರಕ್ಕಿಂತ ಹೆಚ್ಚು ಗಟ್ಟಿ ಎಂಬ ಅಂಶ ಬೆಳಕಿಗೆ ಬಂತು. ಕಂಚಿನ ಹೊಳಪು ಮತ್ತು ನಾದಗಳ ಕಾರಣವಾಗಿ ಅದರ ಉಪಯೋಗ ಹೆಚ್ಚಾಯಿತು. ಪ್ರ.ಶ.ಪೂ.ಸು. 1500ರ ಆಸುಪಾಸಿನಲ್ಲಿ ಕಬ್ಬಿಣದ ಬಳಕೆಯೂ ಪ್ರಾರಂಭವಾಗಿ ಸುಮಾರಾಗಿ ನೈರುತ್ಯ ಯುರೋಪ್ ಹಾಗೂ ಏಷ್ಯ ದೇಶಗಳಲ್ಲಿ ಬಳಕೆಗೆ ಬಂತು. ಪ್ರ.ಶ.ಪೂ.1600–600ರ ಅವಧಿಯಲ್ಲಿ ತಾಮ್ರ ಮತ್ತು ಸತುವನ್ನು ಬೆರೆಸಿ ಹಿತ್ತಾಳೆ ಎಂಬ ಒಂದು ಮಿಶ್ರಲೋಹವನ್ನು ರಚಿಸಲಾಯಿತು. ಇದರ ಆಕರ್ಷಕ ಹೊಳಪಿನಿಂದ ಇದು ಬೇಗನೆ ಜನಪ್ರಿಯವಾಯಿತು. ರೋಮನ್ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ ಈ ಲೋಹವನ್ನು ರೋಮನ್ನರು ಯುದ್ಧಕವಚಗಳು, ನಾಣ್ಯಗಳು ಹಾಗೂ ಆಭರಣಗಳಿಗಾಗಿ ಉಪಯೋಗಿಸಿದರು. ಪ್ರ.ಶ.ಪೂ.

500ರ ಸುಮಾರಿಗೆ ಬೆಳ್ಳಿಯ ಗಣಿಗಾರಿಕೆ ಆರಂಭವಾಗಿ ಬೆಳ್ಳಿಯ ಅದಿರಿನೊಡನೆ ಸೇರಿಕೊಂಡಿದ್ದ ಸೀಸವನ್ನು ಬೇರ್ಪಡಿಸಿ ಬೆಳ್ಳಿಯನ್ನು ಪಡೆಯಲಾಯಿತು. ಲೋಹವನ್ನು ಮಾನವ ಬಳಸಲು ತೊಡಗಿದ ಆದಿಕಾಲದಲ್ಲಿಯೇ ಚಿನ್ನ ದೊರಕಿತ್ತಾದರೂ ಅದು ಮೆದು ಲೋಹವಾದ್ದರಿಂದ ಅದಕ್ಕೆ ಯುದ್ಧ ಹಾಗೂ ಕೃಷಿಸಂಬಂಧೀ ಉಪಯೋಗವಿರಲಿಲ್ಲ. ಹೀಗಾಗಿ ಅದು ಕೇವಲ ಆಲಂಕಾರಿಕ ಲೋಹವಾಗಿ ಉಳಿಯಿತು. ಆದರೆ ಬೆಳ್ಳಿಯನ್ನು ಸಂಸ್ಕರಿಸಲು ಕಲಿತಮೇಲೆ ಚಿನ್ನ ಹಾಗೂ ಬೆಳ್ಳಿಗಳ ಸಂಯೋಜನೆಯಿಂದ ಎಲೆಕ್ಟ್ರಮ್ ಎಂಬ ಇನ್ನೊಂದು ಮಿಶ್ರಲೋಹವನ್ನು ತಯಾರಿಸಲಾಯಿತು.

ಪ್ರಪಂಚದ ಹಲವೆಡೆ ನಾಗರಿಕತೆಗಳು ವಿಕಾಸವಾಗುತ್ತಿದ್ದಂತೆ ಲೋಹಗಳ ಹುಡುಕಾಟದಲ್ಲಿ ಭಾರತವೂ ಹಿಂದೆ ಬೀಳಲಿಲ್ಲ. ಪ್ರ.ಶ.ಪೂ.1200–1000ರ ಅವಧಿಯಲ್ಲಿ ಪ್ರಪಂಚದಲ್ಲೇ ಮೊದಲಬಾರಿಗೆ ಭಾರತದಲ್ಲಿ ಉಕ್ಕು ಉತ್ಪಾದಿಸಲ್ಪಟ್ಟಿತು. ಇದಕ್ಕೂ ಮೊದಲು ಸಿಂಧೂ–ಸರಸ್ವತಿ ಸಂಸ್ಕೃತಿಯ (ಪ್ರ.ಶ.ಪೂ.ಸು.2700–2000) ಜನಸಮುದಾಯ ತಾಮ್ರ ಅದಿರಿನ ಗಣಿಗಾರಿಕೆ, ಲೋಹ ತಯಾರಿಕೆ ಮತ್ತು ಕಮ್ಮಾರಿಕೆಯನ್ನು ಗಣನೀಯ ಪ್ರಮಾಣದಲ್ಲಿ ಬೆಳೆಸಿದುದಕ್ಕೆ ಗುಜರಾತಿನ ಗಣೇಶ್ವರ (**ನೋಡಿ**) ಮತ್ತು ಬಗಸ್ರ (**ನೋಡಿ**) ನೆಲೆಗಳ ಉತ್ಖನನದಲ್ಲಿ ಪ್ರಮಾಣಗಳು ದೊರೆಕಿವೆ. ಜೊತೆಗೆ ಬೆಳ್ಳಿ ಮುದ್ರಿಕೆಗಳನ್ನೂ ಚಿನ್ನದ ಆಭರಣಗಳನ್ನೂ ಬಳಸಲಾಗುತ್ತಿತ್ತು. ದೆಹಲಿಯ ಸಮೀಪ ಮಂಡಿಯಲ್ಲಿ ಈ ನಾಗರಿಕತೆಯ ಚಿನ್ನದ ಆಭರಣಗಳು ವಿಪುಲವಾಗಿ ದೊರೆತಿವೆ.

ಪ್ರ.ಶ.ಪೂ.ಸು.2700ರ ಹೊತ್ತಿಗೆ ಕಬ್ಬಿಣದ ತಂತ್ರಗಾರಿಕೆಯನ್ನು ಅಭಿವೃದ್ಧಿಪಡಿಸಿರುವುದು ಮಲ್ಹರ್ (ಉತ್ತರ ಪ್ರದೇಶ), ಕೊಮಾರನಹಳ್ಳಿ (**ನೋಡಿ**) ಉತ್ಖನನಗಳಿಂದ ನಿಖರವಾಗಿ ತಿಳಿದುಬಂದಿದೆ.

ನಾಗರಿಕತೆಯ ಪ್ರಗತಿಯಲ್ಲಿ ಲೋಹೋತ್ಪಾದನೆಗೆ 6000 ವರ್ಷಗಳ ಇತಿಹಾಸವಿದ್ದರೂ 19ನೆಯ ಶತಮಾನದ ತನಕವೂ ಲೋಹಗಾರಿಕೆಯನ್ನು ಒಂದು ಗ್ರಾಮ ಕೈಗಾರಿಕೆಯೆಂದೇ ಪರಿಗಣಿಸಲಾಗಿತ್ತು. ಆದರೆ ಕಳೆದ ಎರಡು ಶತಮಾನಗಳ ಅವಧಿಯಲ್ಲಿ ನಡೆದ ಹಲವಾರು ಸಂಶೋಧನೆಗಳ ಫಲವಾಗಿ ಇಂದು ಲೋಹವಿಜ್ಞಾನ ಒಂದು ಪ್ರತ್ಯೇಕ ಶಾಖೆಯಾಗಿಯೂ ಪದಾರ್ಥವಿಜ್ಞಾನದ ಭಾಗವಾಗಿಯೂ ಬೆಳೆದಿದೆ.

ಲೋಹದ ಅದಿರುಗಳಿಂದ ಲೋಹಗಳನ್ನು ಪೃಥಕ್ಕರಿಸಿ ಶುದ್ಧ ಲೋಹಗಳನ್ನು ಪಡೆಯುವ ಆಹರಣಲೋಹವಿಜ್ಞಾನದಲ್ಲಿ (ಎಕ್‌ಸ್ಟ್ರಾಕ್ಷನ್ ಮೆಟಲರ್ಜಿ) ರಾಸಾಯನಿಕ ಉಷ್ಣಗತಿವಿಜ್ಞಾನ, ಬಲಗತಿವಿಜ್ಞಾನ ಮತ್ತು ರಾಸಾಯನಿಕ ಎಂಜಿನಿಯರಿಂಗ್‌ಗಳ ಸಮರ್ಥ ಬಳಕೆಯಿಂದ ಲೋಹಗಳ ಬಗೆಗಿನ ಜ್ಞಾನ ವೃದ್ಧಿಯಾಗಿ ಹೊಸಹೊಸ ಲೋಹಗಳ ಆವಿಷ್ಕಾರವೂ ಸಾಧ್ಯವಾಗಿದೆ. ಭೌತಿಕ ಲೋಹವಿಜ್ಞಾನದಲ್ಲಿ ಲೋಹಗಳ ಸಮಗ್ರ ಸೂಕ್ಷ್ಮರಚನೆ ಹಾಗೂ ಪರಮಾಣುವಿಕ ರಚನೆಗಳ ನಡುವಿನ ಸಂಬಂಧಗಳ ಅಧ್ಯಯನದಿಂದ ಲೋಹಗಳಲ್ಲದೆ ಸಿರಾಮಿಕ್ಸ್, ಪಾಲಿಮರ್ಸ್ ಹಾಗೂ ಇನ್ನಿತರ ಸಂಯುಕ್ತ ಪದಾರ್ಥಗಳವರೆಗೂ ಈ ವಿಜ್ಞಾನಶಾಖೆ ಅಗಾಧವಾಗಿ ಬೆಳೆದಿದೆ.

20ನೆಯ ಶತಮಾನದ ಆರಂಭದಲ್ಲಿ ಅಲ್ಯುಮಿನಿಯಂನ ಬಳಕೆಯ ಬಗೆಗೆ ನಡೆದ ಹಲವಾರು ಸಂಶೋಧನೆಗಳು ಲೋಹರಚನಾವಿಜ್ಞಾನದಲ್ಲಿ ಕ್ರಾಂತಿ ಉಂಟುಮಾಡಿದುವು. 1906ರಲ್ಲಿ ಬರ್ಲಿನ್ ನಗರದಲ್ಲಿ ಆಲ್‌ಫ್ರೆಡ್ ವಿಲ್ಮ್ ಎಂಬಾತ ಅಲ್ಯುಮಿನಿಯಂ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಮೆಗ್ನಿಷಿಯಂ ಅಥವಾ ತಾಮ್ರ ಸೇರಿಸಿ ತೂಕದಲ್ಲಿ ಗಮನಾರ್ಹ ಹೆಚ್ಚಳವಿಲ್ಲದೆ ಡ್ಯುರಾಲ್ಯುಮಿನ್ ಎಂಬ ಒಂದು ಶಕ್ತಿಯುತ ಮಿಶ್ರಲೋಹ ತಯಾರಿಸಿದ. ಈ ಸಂಶೋಧನೆ ಮುಂದೆ ಹಲವಾರು ಉತ್ತಮ ಗುಣಮಟ್ಟದ ಶಕ್ತಿಯುತ ಮಿಶ್ರಲೋಹಗಳ ತಯಾರಿಕೆಗೆ ನಾಂದಿಯಾಯಿತು.

16ನೆಯ ಶತಮಾನದಲ್ಲಿ ಯುರೋಪಿನ ಇಬ್ಬರು ವಿಜ್ಞಾನಿಗಳು ಅಲ್ಲಿಯ ತನಕ ಗಳಿಸಿದ್ ಲೋಹವಿಜ್ಞಾನದ ವಿವರಗಳನ್ನು ಕ್ರೋಡೀಕರಿಸಿ ಎರಡು ಮಹತ್ತ್ವದ ಪುಸ್ತಕಗಳನ್ನು ಪ್ರಕಟಿಸಿದರು. ಇಟಲಿಯ ವಾನ್ನೋಸಿಯೋ ಬಿರಿಂಗುಸಿಯೋ (1480–1537) ಎಂಬಾತನ ಡಿ ಲಾ ಪೈರೋಟೆಕ್ನಿಯಾ (ಪ್ರಕಟಣೆ 1540) ಎಂಬ ಪುಸ್ತಕ ಹಾಗೂ ಜರ್ಮನಿಯ ಜಾರ್ಜಿಯಸ್ ಅಗ್ರಿಕೊಲಾ (1492–1566) ಎಂಬಾತನ ಡಿ ರಿ ಮೆಟಾಲಿಕಾ ಎಂಬ ಇನ್ನೊಂದು ಪುಸ್ತಕ ಲೋಹವಿಜ್ಞಾನದ ಮೊದಲ ಗ್ರಂಥಗಳಾಗಿ ದಾಖಲಾದುವು. (ಜಿ.ಆರ್.)

**ಲೋಹಾರ ಮನೆತನ:** ಮಧ್ಯಯುಗದಲ್ಲಿ ಕಾಶ್ಮೀರ ಪ್ರದೇಶವನ್ನು ಆಳಿದ ಪ್ರಮುಖ ರಾಜವಂಶ. ದರ್ವಾಭಿಸಾರ ಹಾಗೂ ಲೋಹಾರ ಇವು ಇವರ ರಾಜಧಾನಿಗಳು. ದರ್ವಾಭಿಸಾರ ಝೀಲಂ ನದಿ ತೀರದ ಉತ್ತರದಲ್ಲಿದ್ದರೆ, ಲೋಹಾರ ಪೂಂಚ್ ಪ್ರದೇಶದಲ್ಲಿದೆ; ಈ ಎರಡು ನಗರಗಳು ರಾಜಧಾನಿಗಳಾದುದರಿಂದ ಪ್ರಸಿದ್ಧವಾಗಿವೆ.

ಲೋಹರಿನ್ ಕಣಿವೆಯಿಂದ ಲೋಹಾರ ಎಂಬ ಹೆಸರು ಬಂದಿದೆ. ಲೋಹಾರ ವಂಶ ದಿಡ್ಡಾ ಮಹಾದೇವಿಯಿಂದ ಬಹಳ ಪ್ರಸಿದ್ಧಿಗೆ ಬಂದಿತು. ಇವಳು ಕಾಶ್ಮೀರವನ್ನು ಆಳುತ್ತಿದ್ದ ಕ್ಷೇಮಗುಪ್ತ (950–58) ದೊರೆಯನ್ನು ಮದುವೆ ಆಗಿದ್ದಳು. ಇವಳು ಕಾಶ್ಮೀರದ ಇನ್ನೊಂದು ಶಾಖೆಯ ದೊರೆಗಳಾದ ಷಾಹಿ ಮನೆತನದ ಭೀಮಷಾಹಿ ದೊರೆಯ ಮಗಳ ಮಗಳು. ತತ್ಕಾರಣ ಕಾಶ್ಮೀರದ ಒಂದಷ್ಟು ವಿಸ್ತಾರವಾದ ಭೂ ಭಾಗಕ್ಕೆ ಆಡಳಿತದ ಹೊಂದಾಣಿಕೆಯ ಒಂದು ಚುಕ್ಕಾಣಿ ದೊರೆತಂತಾಯಿತು–ಮೂರು ಮನೆತನಗಳ ವೈವಾಹಿಕ ಸಂಬಂಧದಿಂದ (ಆ ಮನೆತನಗಳೆಂದರೆ: ಪರ್ವಗುಪ್ತವಂಶ, ಲೋಹಾರವಂಶ ಹಾಗೂ ಷಾಹಿ (ಹಿಂದು ಷಾಹಿ ವಂಶ) ಕಾಶ್ಮೀರದ ರಾಜರ ಆಡಳಿತದ ಮೇಲೆ ಭೀಮಷಾಹಿಗೆ ಒಂದಷ್ಟು ಪ್ರಭಾವವನ್ನು ಬೀರಲು ಸಹಾಯವಾಯಿತು. ಇವನು ಮಾರ್ತಾಂಡ (ಬವನ) ಝರಿಗಳ ಹತ್ತಿರ ಬುಮ್ಜು ಎಂಬಲ್ಲಿ ಒಂದು ಭವ್ಯ ವಿಷ್ಣು ದೇವಾಲಯವನ್ನು ನಿರ್ಮಿಸಿ ಭೀಮಕೇಶವ ಎಂದು ಹೆಸರಿಟ್ಟ. ಮುಸ್ಲಿಮ್ ಆಡಳಿತ ಆರಂಭವಾದ ಮೇಲೆ ಅದನ್ನು ಮುಸಲ್ಮಾನರ ಮಹತ್ತ್ವದ ವ್ಯಕ್ತಿಯೊಬ್ಬನ ದರ್ಗ ಆಗಿ ಪರಿವರ್ತಿಸಲಾಗಿದೆ. ಈ ದೇವಾಲಯ ಹರ್ಷನ ಆಳಿಕೆಯಲ್ಲಿ (1080–1101) ವಿಶೇಷ ಬೆಲೆಯುಳ್ಳ ನಿಧಿನಿದಾನ ಮೌಲಿಕ ಸಂಪತ್ತನ್ನು ಹೊಂದಿತ್ತು. ದಿಡ್ಡಾದೇವಿ ಕಾಶ್ಮೀರದ ರಾಜಕೀಯದಲ್ಲಿ ತನ್ನ ವಿಶೇಷ ಬುದ್ಧಿವಂತಿಕೆಯಿಂದ ಮತ್ತು ವಿವಿಧ ನಂಟಸ್ತಿಕೆಗಳಿಂದ ಬಹಳ ಪ್ರಮುಖ ಪಾತ್ರವನ್ನು ವಹಿಸಿದಳು.

ಸಣ್ಣಖುಲ್ಲನಿಂದ ಲೋಹಾರವಂಶ ಸ್ಥಾಪಿತವಾಯಿತೆಂದು ತಿಳಿದುಬರುತ್ತದೆ. ಆರಂಭದ ಅರಸರು ಸಣ್ಣ ಮಾಂಡಲಿಕ ಮನೆತನದವರಾದುದರಿಂದ ಅಷ್ಟು ಪ್ರಸಿದ್ಧರಾಗಿದ್ದಿಲ್ಲ. ದಿಡ್ಡಾದೇವಿಯ ಪತಿ ಕ್ಷೇಮಗುಪ್ತ ಎಂಟು ವರ್ಷ ಅದಕ್ಷ ಆಡಳಿತ ನಡೆಸಿ ಮರಣವನ್ನಪ್ಪಿದ. ಅನಂತರ ಅವನ ಪುತ್ರ ಚಿಕ್ಕ ವಯಸ್ಸಿನಲ್ಲಿ ಪಟ್ಟಕ್ಕೆ ಬಂದ. ದಿಡ್ಡಾದೇವಿ ತನ್ನ ಮಗುವಿನ ರಕ್ಷಕಳಾಗಿ ರಾಜಪ್ರತಿನಿಧಿಯಾಗಿ ರಾಜ್ಯವನ್ನು ಆಳಿದಳು. ಆ ಸಂದರ್ಭದಲ್ಲಿ ತನ್ನ ಆಡಳಿತದ ವ್ಯವಸ್ಥೆಯಲ್ಲಿ ಅಡ್ಡ ಬಂದವರನ್ನೆಲ್ಲ ಕಿತ್ತೊಗೆದಳು. ಅನಂತರ ರಾಜ್ಯಾಡಳಿತವನ್ನು ಸಂಪೂರ್ಣ ತನ್ನ ಕೈಯಲ್ಲಿ ತೆಗೆದುಕೊಂಡು ಪ್ರಧಾನಮಂತ್ರಿಯಾದ ಫಲ್ಗುಣನನ್ನು ಅಧಿಕಾರದಿಂದ ಕಿತ್ತೊಗೆದಳು. ಯಶೋಧರನ ದಂಗೆಯನ್ನು ಅಡಗಿಸಿ, ಅವನ ಕಡೆಯ ಕೆಲವರನ್ನು ತನ್ನ ಪಕ್ಷಕ್ಕೆ ಸೆಳೆದುಕೊಂಡು, ಅವರಿಗೆ ಆಡಳಿತದಲ್ಲಿ ಕೆಲವು ಉನ್ನತ ಹುದ್ದೆಗಳನ್ನು ಕೊಟ್ಟಳು. ಅನಂತರ ಆರಂಭದಲ್ಲಿ ಅವನು ಷಾಹೀಥಕ್ಕನನ್ನು ಸೋಲಿಸಿ ತಲೆಬಾಗುವಂತೆ ಮಾಡಿ ಅಧೀನಕ್ಕೆ ತಂದ. ಆದರೆ ಸ್ವಲ್ಪ ಕಾಲದಲ್ಲೇ ಆ ಸ್ಥಾನದಿಂದ ತೆಗೆದು ಹಾಕಲ್ಪಟ್ಟ. ಇವನ ಪೂರ್ವ ಸ್ನೇಹಿತರೊಂದಿಗೆ ಸೇರಿ ಅವನೊಂದಿಗೆ ದಂಗೆಯೆದ್ದು ಅರಮನೆಯನ್ನು ಮುತ್ತಿದರು. ಆದರೆ ಇವಳು ಆ ದಂಗೆಯನ್ನು ನಂಬಿಗಸ್ಥ ಮಂತ್ರಿ ನರವಾಹನನ ಸಹಾಯದಿಂದ ತಹಬದಿಗೆ ತಂದಳು. ಕೆಲಸಮಯದಲ್ಲೇ ನರವಾಹನ ರಾಣಿಯ ವಿಶ್ವಾಸವನ್ನು ಕಳೆದುಕೊಂಡ. ತನ್ನ ಆತ್ಮಗೌರವ ಉಳಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಂಡ. ಈ ಸಮಯಕ್ಕೆ ಡಾಮರರೂ (ಉಂಬಳಿದಾರ ಭೂಮಾಲೀಕರು) ದಂಗೆಯೇಳಲು ಹವಣಿಸುತ್ತಿದ್ದರು. ಇದರ ಜೊತೆಗೆ ಸೇನಾಪತಿ ಠಕ್ಕನ ಸಾವಿನಿಂದಲೂ ರಾಣಿ ತೊಂದರೆಗೆ ಒಳಗಾಗಿದ್ದಳು. ಸಂದರ್ಭವನ್ನು ಎದುರಿಸಲು ಇವಳು ಫಲ್ಗುಣನನ್ನು ಹಿಂದಕ್ಕೆ ಕರೆದು ಪುನಃ ಸೇನಾಪತಿಯನ್ನಾಗಿ ನೇಮಿಸಿದಳು. ಇವನು ರಾಜಪುರಿಯನ್ನು (ರಾಜಾರಿ ಬೆಟ್ಟಪ್ರದೇಶವನ್ನು) ಗೆದ್ದುಕೊಟ್ಟ.

14 ವರ್ಷ ಆಳಿಕೆಯನ್ನು ನಡೆಸಿದ ರಾಜಕುಮಾರ ಅಭಿಮನ್ಯು 972ರಲ್ಲಿ ನಂದಿಗುಪ್ತ ತ್ರಿಭುವನ ಹಾಗೂ ಭೀಮಗುಪ್ತ ಎಂಬ ಮೂವರು ಮಕ್ಕಳನ್ನು ಬಿಟ್ಟು ನಿಧನನಾದ. ಈ ಘಟನೆ ರಾಣಿಗೆ ಸ್ವಲ್ಪ ಕಾಲ ಆಘಾತವನ್ನುಂಟುಮಾಡಿತು. ಧಾರ್ಮಿಕ ವಿಧಿವಿಧಾನಗಳನ್ನು ಪಾಲಿಸುವುದರಲ್ಲಿ ಸಮಯ ಕಳೆದುಹೋಯಿತು. ರಾಜಕೀಯದ ಹರಿತ ಕತ್ತಿಗೆ ನಂದಿಗುಪ್ತ, ತ್ರಿಭುವನ ಹಾಗೂ ಭೀಮಗುಪ್ತ ಒಬ್ಬರಾದ ಮೇಲೆ ಒಬ್ಬರು ಬಲಿಯಾದರು. ಸೇನಾಪತಿ ಫಲ್ಗುಣ ಕೂಡ ಸತ್ತ. 980ರಲ್ಲಿ ದಿಡ್ಡಾದೇವಿ ತಾನೇ ಸ್ವಯಂ ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರ ನಡೆಸಿದಳು. ಪರ್ಣೋತ್ಸ ದೇಶದ ಖಶರ ತುಂಗನನ್ನು ಇವಳು ತನ್ನ ಮಂತ್ರಿಯನ್ನಾಗಿ ನೇಮಿಸಿಕೊಂಡಳು. ಅವನು ಪೂರ್ವದಲ್ಲಿ (ಎಮ್ಮೆಗಳನ್ನು ಕಾಯುವ) ಕೆಳವರ್ಗಕ್ಕೆ ಸಂಬಂಧಪಟ್ಟವನಾದುದರಿಂದ ಜನತೆ ಅವನ ಅಸ್ತಿತ್ವವನ್ನು ಪ್ರಶ್ನಿಸಿ ವಿರೋಧಿಸಿತು. ಅಂತೆಯೆ ಅವರು ದಿಡ್ಡಾದೇವಿಯ ಸೋದರ ಉದಯರಾಜನ ಪುತ್ರನಾದ ವಿಗ್ರಹರಾಜನನ್ನು ಕಾಶ್ಮೀರ ರಾಜಕೀಯವನ್ನು ಪರಿಶೀಲಿಸಲು (ಸರಿಪಡಿಸಲು) ಕರೆತಂದರು. ಇತ್ತ ರಾಜಪುರಿಯ ಪೃಥ್ವೀಪಾಲನನ್ನು ಯುದ್ಧದಲ್ಲಿ ಸೋಲಿಸಿ ತುಂಗ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ವಯಸ್ಸಾಗಿ ಮುಪ್ಪನ್ನಡರಿದ ರಾಣಿ ವಿಗ್ರಹರಾಜನ ಸೋದರ ಸಂಗ್ರಾಮರಾಜನನ್ನು ತನ್ನ ತರುವಾಯ ಪಟ್ಟಕ್ಕೆ ಅಧಿಕಾರಿಯನ್ನಾಗಿ ನೇಮಿಸಿದಳು. ಆತ ಆಕೆಯ ಸೋದರಳಿಯ ಮತ್ತು ಲೋಹಾರ ವಂಶಜಾತ. ರಾಣಿ ನಿಧನಹೊಂದಿದಾಗ(1003) ಸಂಗ್ರಾಮರಾಜ ಸಿಂಹಾಸನವನ್ನು ಏರಿದ. ಆತ ಪಟ್ಟವನ್ನಲಂಕರಿಸುವುದರಿಂದ ಲೋಹಾರ ವಂಶ ಕಾಶ್ಮೀರದ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಿತು. ಸಂಗ್ರಾಮ ರಾಜ 1003ರಲ್ಲಿ ಪಟ್ಟಕ್ಕೆ ಬಂದು 1028ರ ತನಕ ರಾಜ್ಯವಾಳಿದ. ಈತ ಅದಕ್ಷ ರಾಜನಾಗಿದ್ದ. ಆರಂಭದಲ್ಲಿ ತುಂಗನು ರಾಜ್ಯದ ಕಡಿವಾಣ ಹಿಡಿದಿದ್ದ. ಆತ 1014ರಲ್ಲಿ ತ್ರಿಲೋಚನಪಾಲ ಷಾಹಿ ದೊರೆಯ ಸಹಾಯಕ್ಕೆ ಹೋದ ಮಹಮದ (ಘಜನಿ) ಈ ಇಬ್ಬರ ಸೈನ್ಯವನ್ನೂ ಧೂಳೀಪಟ ಮಾಡಿದ. 1021ರಲ್ಲಿ ಅವನು ಲೋಹ್ಕೋಟ ಕೋಟೆಯನ್ನು ಮುತ್ತಲು ಹಿಮಾಲಯದ ತಡಿಯವರೆಗೆ ಹೋಗಿ ಅಲ್ಲಿ ನಿಲ್ಲಲು ನೆಲೆಯಿಲ್ಲದೆ ಲಾಹೋರಕ್ಕೆ ಹಿಂತಿರುಗಿದ. ಅನಂತರ ಕಾಶ್ಮೀರದ ಇತಿಹಾಸದಲ್ಲಿ ಒಂದಷ್ಟು ಕಾಲ ದಬ್ಬಾಳಿಕೆ, ದುರಾಡಳಿತ ಮುಂದುವರಿಯಿತು.

(ಎಸ್.ಜಿ.ವಿ.)

**ಲ್ಯಾಟರೈಟ್ ಬೇಬಿ:** ತಮಿಳುನಾಡು ರಾಜ್ಯದ ವಿಳ್ಳುಪುರಂ ಜಿಲ್ಲೆಯ ಬೊಮ್ಮಯರ್‌ಪಾಳಯಂ ಒಡ್ಡೆದಲ್ಲಿಯ ಫೆರಿಕ್ರೀಟ್‌ನಲ್ಲಿ 2001 ಅಕ್ಟೋಬರ್ 14ರಂದು ಒಂದು ಅನುಮಾನಾಸ್ಪದ ಪ್ರಾಣಿವರ್ಗದ ಪಳೆಯುಳಿಕೆ ಕಂಡುಬಂತು. ಸಾಮಾನ್ಯವಾಗಿ

ಫೆರಿಕ್ರಿಟ್ ಶಿಲಾ ಪದರದಲ್ಲಿ ಯಾವುದೇ ಪ್ರಾಣಿಜನ್ಯ ಪಳೆಯುಳಿಕೆ ಇರುವುದಿಲ್ಲ. ಈ ಪಳೆಯುಳಿಕೆ ಪ್ರಾಣಿ ವರ್ಗದ್ದಾಗಿರಬಹುದೆ ಎಂಬುದನ್ನು ಗೊತ್ತುಮಾಡಲು ಕ್ಷ-ಕಿರಣ, 2ಡಿ ಸ್ಕ್ಯಾನ್, 3ಡಿ ಸ್ಕ್ಯಾನ್, ಫೋಟೋ ಮೈಕ್ರೋಸ್ಕೋಪ್ ಮತ್ತು ಸ್ಕ್ಯಾನಿಂಗ್ ಎಲಕ್ಟ್ರಾನ್ ಮೈಕ್ರೋಸ್ಕೋಪ್ (ಎಸ್.ಇ.ಎಮ್.) ಮುಂತಾದ ವೈದ್ಯಕೀಯ-ತಾಂತ್ರಿಕ ವಿಧಾನಗಳಿಂದ ಪರೀಕ್ಷಿಸಲಾಯಿತು. ಕ್ಷ-ಕಿರಣದಿಂದ ಮೊಟ್ಟಮೊದಲ ಬಾರಿಗೆ ಫೆರಿಕ್ರಿಟ್‍ನಲ್ಲಿ ಪಳೆಯುಳಿಕೆ ಯಿದ್ದುದನ್ನೂ 2ಡಿ ಸ್ಕ್ಯಾನಿಂಗ್‍ನಿಂದ ಈ ಪಳೆಯುಳಿಕೆ ಮಾನವ ತಲೆಬುರುಡೆ ಚಿಪ್ಪೆಂಬುದನ್ನೂ ಗುರುತಿಸಲಾಯಿತು. 3ಡಿ ಸ್ಕ್ಯಾನಿಂಗ್‍ನಿಂದ ಈ ಪಳೆಯುಳಿಕೆಯ ನೂರಾರು ಛಾಯಾಚಿತ್ರಗಳನ್ನು ತೆಗೆದು ಪರೀಕ್ಷಿಸಲಾಗಿ ಇದು ಒಂದು ಮಗುವಿನ ತಲೆ ಬುರುಡೆ ಎಂಬುದು ನಿಶ್ಚಯವಾಯಿತು. ಈ ಪಳೆಯುಳಿಕೆಯನ್ನು ಶೋಧಿಸಿದ ರಾಜೇಂದ್ರನ್‍ರವರು ಇದನ್ನು ಲ್ಯಾಟರೈಟ್ ಬೇಬಿ ಎಂದು ನಾಮಕರಣ ಮಾಡಿದ್ದಾರೆ. ಫೋಟೋ ಮೈಕ್ರೋಸ್ಕೋಪಿನಿಂದ ತಲೆಬುರುಡೆಯೊಳಗೆ ಕೊರಳಿನ ಭಾಗದ ಮೂರು ಮೂಳೆಗಳನ್ನು ಗುರುತಿಸಲಾಯಿತು. ತಲೆಬುರುಡೆಯ ಎಲುಬಿನ ರಚನೆ, ರಕ್ತನಾಡಿ, ಒಳಪೊರೆಯ ಜೀವಕೋಶಗಳ ಮುದ್ಗರದಾಕೃತಿಯ ಆರ್.ಬಿ.ಸಿ. ಗಳನ್ನು ಗುರುತಿಸಲಾಯಿತು. ತಲೆಬುರುಡೆಯೊಳಗೆ ಸೂಕ್ಷ್ಮ ಜೀವಾಧಾರಿ ರಚನೆ (ಜೀವಾಣು)ಗಳು ಇಲ್ಲದಿರುವುದು ಗಮನಾರ್ಹ. ಇವೆಲ್ಲದರ ಯಥಾರ್ಥತೆಯನ್ನು ತಿಳಿಯಲು ಇಂದಿನ ಗರ್ಭಾಶಯದ ಭ್ರೂಣದ ಮಾನವ ತಲೆಬುರುಡೆಯನ್ನು ಎಸ್.ಇ.ಎಮ್. ವಿಧಾನದಿಂದ ಪರೀಕ್ಷಿಸಲಾಯಿತು. ಇವೆಲ್ಲದರಿಂದ ಫೆರಿಕ್ರಿಟ್‍ನಲ್ಲಿ ಸಿಕ್ಕಿಕೊಂಡಿದ್ದ ಪಳೆಯುಳಿಕೆ ನಿಸ್ಸಂಶಯವಾಗಿ ಮಾನವ ಶಿಶುವಿನದೆಂದು ತಿಳಿಯಿತು. ಇದು ಉತ್ತಮ ರೀತಿಯಲ್ಲಿ ಸಂರಕ್ಷಿತವಾದ 5 ತಿಂಗಳ ಮಗುವಿನ ಒಂದು ಅಪರೂಪದ ಪಳೆಯುಳಿಕೆ. ಮಧ್ಯ ಹಿಮಯುಗ ಕಾಲದ ಫೆರಿಕ್ರಿಟ್‍ನಲ್ಲಿ ಇಂತಹ ಒಂದು ಮಾನವ ಶಿಶುವಿನ ಪಳೆಯುಳಿಕೆ ಅದರಲ್ಲೂ ಭಾರತದಲ್ಲಿ ದೊರೆತಿರುವುದು ಒಂದು ಅಪೂರ್ವ ಶೋಧನೆ. ಯಾವುದೇ ನೈಸರ್ಗಿಕ ಸಂಗ್ರಹ ಘನೀಕೃತವಾಗಿ ಫೆರಿಕ್ರಿಟ್ ಆದಾಗ ಅದರಲ್ಲಿ ದೈಹಿಕ ಅವಶೇಷಗಳು ಉಳಿಯುವುದಕ್ಕೆ ಸಾಧ್ಯವಿಲ್ಲವೆಂಬ ಭೂವಿಜ್ಞಾನಿಗಳ ಪೂರ್ವ ಸಿದ್ಧಾಂತವೂ ಸರಿಯಲ್ಲವೆಂದು ಈ ಶೋಧನೆ ತೋರಿಸಿಕೊಟ್ಟಿದೆ. ಔಷ್ಣದೀಪ್ತಿ ವಿಧಾನದಿಂದ ಈ ಪಳೆಯುಳಿಕೆಯ ಕಾಲಮಾನ 0.166±30 ಮಿಲಿಯನ್ ವರ್ಷಗಳೆಂದು ಮತ್ತು ಮಧ್ಯ ಹಿಮಯುಗ ಕಾಲವೆಂದು ಸಿದ್ಧವಾಗಿದೆ. ಈ ಪಳೆಯುಳಿಕೆ ಮಾನವ ವಿಕಾಸ ಇತಿಹಾಸದಲ್ಲಿ ಆಧುನಿಕ ಮಾನವನ ಆದಿ ಹಂತದ್ದೆಂದು (ಆರ್ಕೇಯಿಕ್ ಹೋಮೋ ಸೇಪಿಯನ್ಸ್) ತಜ್ಞರ ಅಭಿಪ್ರಾಯ. ಭಾರತದಲ್ಲಿ ಈ ರೀತಿಯ ಮಾನವ ಪಳೆಯುಳಿಕೆಯ ಶೋಧನೆಗಳಲ್ಲಿ ಇದು ಎರಡನೆಯದು. 1980ರ ದಶಕದಲ್ಲಿ ನರ್ಮದ ನದಿ ಪ್ರದೇಶದ ಹತ್ನೋರ (**ನೋಡಿ**) ಬಳಿ ಶೋಧಿಸಿದ ಮಾನವ ತಲೆಬುರುಡೆ ಮೊದಲನೆಯದು.

(ಪಿ.ಆರ್.)

# ವ

**ವಟಗಲ್ಲು:** ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿರುವ ಪುರಾತತ್ತ್ವ ನೆಲೆ. 1916ರಲ್ಲಿ ರಾಬರ್ಟ್ ಬ್ರೂಸ್‍ಫುಟ್ ಇದನ್ನು ಶೋಧಿಸಿದ. 1988-92ರವರೆಗೆ ಜಿಮ್ ಶೆಫರ್ ಮತ್ತು ಡಿ.ವಿ.ದೇವರಾಜು ಇವರ ನಿರ್ದೇಶನದಲ್ಲಿ ಕರ್ನಾಟಕ ರಾಜ್ಯ ಪುರಾತತ್ತ್ವ ಇಲಾಖೆ ಉತ್ಖನನ ನಡೆಸಿತು. ಒಟ್ಟು 5 ಸಾಂಸ್ಕೃತಿಕ ಹಂತಗಳನ್ನು ಬೆಳಕಿಗೆ ತರಲಾಗಿದೆ.

ಹಂತ I (ಪ್ರ.ಶ.ಪೂ.3000ಕ್ಕೂ ಪೂರ್ವಕಾಲ): ಸೂಕ್ಷ್ಮಶಿಲೋಪಕರಣಗಳನ್ನು ಉಪಯೋಗಿಸುತ್ತಿದ್ದ ಜನರೇ ವಟಗಲ್ಲಿನ ಪ್ರಥಮ ನಿವಾಸಿಗಳು. ಈ ಸ್ತರಗಳಿಂದ ಚರ್ಟ್ ಹಾಗೂ ಕ್ವಾರ್ಟ್ಸೈಟ್‍ನಿಂದ ತಯಾರಿಸಿದ ಅಲಗುಗಳು, ಅರ್ಧಚಂದ್ರೋಪಾದಿಯಂಥ ಉಪಕರಣಗಳೊಂದಿಗೆ ತ್ಯಾಜ್ಯಚಕ್ಕೆಗಳು ದೊರಕಿವೆ. ಈ ಉಪಕರಣಗಳೊಂದಿಗೆ ಬಸಾಲ್ಟ್ ಅಥವಾ ಡಾಲರೈಟ್ ಕಲ್ಲಿನಿಂದ ತಯಾರಿಸಿದ, ಮಧ್ಯ ಹಳೆಶಿಲಾಯುಗದ ಚಕ್ಕೆ-ಉಪಕರಣ ಶೈಲಿಯನ್ನು ಹೋಲುವ ಉಪಕರಣಗಳೂ ಕೆಲವು ದೊರಕಿವೆ. ಸೂಕ್ಷ್ಮಶಿಲೋಪಕರಣಗಳ ತಂತ್ರಜ್ಞಾನ ತರುವಾಯದಲ್ಲಿ (II ಎ) ಮುಂದುವರೆಯಿತು. ಇದೇ ಸಾಂಸ್ಕೃತಿಕ ಸನ್ನಿವೇಶವನ್ನು ಕುಪ್ಪಗಲ್ಲು, ಸಂಗನಕಲ್ಲು ಹಾಗೂ ಪಾಳವಾಯ್ ನೆಲೆಗಳಲ್ಲೂ ಕಾಣಬಹುದು.

ಹಂತ II ಎ (ಪ್ರಶ.ಪೂ.2700-2300): ಈ ಹಂತದ ಒಂದು ಮುಖ್ಯ ಲಕ್ಷಣವೆಂದರೆ ಅಧಿಕ ಸಂಖ್ಯೆಯಲ್ಲಿ ಕಂಡುಬಂದ ತಿಪ್ಪೆಗುಂಡಿಗಳು. ಶಿಲಾಕೊಡಲಿಗಳು ಕಂಡುಬಂದಿಲ್ಲ. ಆದರೆ ಆದಿಹಂತದ ಡಾಲರೈಟ್ ಚಕ್ಕೆಗಳು, ಶಿಲಾಕೊಡಲಿಗಳಿದ್ದುದನ್ನು ಸೂಚಿಸುತ್ತವೆ. ಡಾಲರೈಟ್‍ನಿಂದ ತಯಾರಿಸಿದ ಒಂದು ಮಣಿ ದೊರಕಿದೆ. ಎರಡು ಬೀಸುವಕಲ್ಲುಗಳು ಧಾನ್ಯಗಳ ಸೇವನೆಯನ್ನು ಪುಷ್ಟೀಕರಿಸುತ್ತವೆ. ಆದರೆ ಈ ಹಂತದಲ್ಲಿ ಸಸ್ಯಗಳ ಅವಶೇಷಗಳು ವಿರಳವಾಗಿವೆ. ಸಮುದ್ರ ಶಂಖದಿಂದ ತಯಾರಿಸಿದ ಎರಡು ಮಣಿಗಳು ಗಮನಾರ್ಹ. ಈ ಕಾಲದ ಸುಡಾವೆಮಣ್ಣಿನ ಒಂದು ಪ್ರಾಣಿ ಗೊಂಬೆ ಗಮನಾರ್ಹ. ಸುಟ್ಟುಹೋದ ಅಡಕೆಯೊಂದು ತಿಪ್ಪೆಗುಂಡಿಯಲ್ಲಿ ದೊರೆತಿದ್ದು ಇದು ದಕ್ಷಿಣ ಏಷ್ಯದಲ್ಲೇ ಪ್ರಥಮ ಶೋಧವಾಗಿದೆ. ಈ ಹಂತದ ಮಣ್ಣಾತ್ರೆಗಳು ಹೆಚ್ಚಾಗಿ ಕೈಯಿಂದ ತಯಾರಿಸಲಾಗಿವೆ. ಆದರೆ ಕೆಲವೊಂದನ್ನು ಮಂದಗತಿಯ ಚಕ್ರದಿಂದಲೂ ತಯಾರಿಸಿರಬಹುದು. ಕೆಂಪು ಹಾಗೂ ಬೂದುಬಣ್ಣದ ಪಾತ್ರೆಗಳು ಈ ಹಂತದಲ್ಲಿವೆ. ನಾಲ್ಕನೆಯ ಹಂತದವರೆಗೆ ಇವುಗಳ ಬಳಕೆ ಮುಂದುವರೆಯಿತು. ಒಟ್ಟು 6 ಮಾನವ ಗೋರಿಗಳನ್ನು ಬೆಳಕಿಗೆ ತರಲಾಗಿದೆ. ಇವುಗಳಲ್ಲಿ ಒಂದು ಅಸ್ಥಿ ಮಡಕೆ. ಇನ್ನುಳಿದ ಐದರಲ್ಲಿ ಶವವನ್ನು ಗುಂಡಿಯಲ್ಲಿ ಹೂಳಿ, ಮೇಲ್ಭಾಗವನ್ನು ಕಲ್ಲಿನಿಂದ ಮುಚ್ಚಲಾಗಿದೆ. ಶವವನ್ನು ಗುಂಡಿಯಲ್ಲಿ ನೇರವಾಗಿ ಮಲಗಿಸಿ, ಹೊಟ್ಟೆಯ ಮೇಲೆ ಕೈಗಳನ್ನು ಕತ್ತರಿಯಾಕಾರದಲ್ಲಿರಿಸಲಾಗಿದೆ. ಎರಡು ಶವಗಳ ತಲೆ ದಕ್ಷಿಣಾಭಿಮುಖವಾಗಿಯೂ ಇನ್ನೆರಡು ತಲೆ ಪೂರ್ವಾಭಿಮುಖವಾಗಿಯೂ ಹಾಗೂ ಮತ್ತೆರಡರ ತಲೆ ಉತ್ತರಾಭಿಮುಖವಾಗಿರುವಂತೆ ಇಡಲಾಗಿದೆ. ಶವಗಳೊಂದಿಗೆ ಬೇರೆ ಯಾವ ವಸ್ತುಗಳೂ ಇಲ್ಲ.

II ಬಿ ಹಂತ (ಪ್ರಶ.ಪೂ.2300-2000): ಈ ಹಂತದಲ್ಲೂ ಅಲ್ಲಲ್ಲಿ ತಿಪ್ಪೆಗುಂಡಿಗಳಿವೆ. ಚರ್ಟ್ ಹಾಗೂ ಕ್ಯಾಲ್ಸೆಡನಿಯ ಸೂಕ್ಷ್ಮಶಿಲೋಪಕರಣಗಳೊಂದಿಗೆ ಬೀಸುವಕಲ್ಲುಗಳು ಹಾಗೂ ಕಲ್ಲಿನ ಕೊಡಲಿಗಳು, ಸಮುದ್ರ ಶಂಖದ ಮಣಿಗಳು, ಸ್ಟಿಯಟೈಟ್‍ನಿಂದ ತಯಾರಿಸಿದ ಮಣಿಗಳು, ಸುಡಾವೆಮಣ್ಣಿನ ಹಾಗೂ ಕಲ್ಲಿನ ಮಣಿಗಳು ಹೇರಳವಾಗಿ ದೊರೆತಿವೆ. ಸ್ಟಿಯಟೈಟ್ ಮಣಿಗಳನ್ನು ಲೋಹದ ಅಲಗು ಅಥವಾ ಇನ್ನಿತರ ಉಪಕರಣದಿಂದ ಕೊರೆದು ಬಿಡಿಸಲಾಗಿದೆಯೆಂದು ಉತ್ಖನನಕಾರರು ಅನುಮಾನಿಸಿದ್ದಾರೆ; ಆದರೆ ಈ ಹಂತದಲ್ಲಿ ಯಾವುದೇ ಲೋಹದ ಉಪಕರಣಗಳು ದೊರೆತಿಲ್ಲ. ಕೆಂಪು ಹಾಗೂ ಬೂದುಬಣ್ಣದ ಮಣ್ಣಾತ್ರೆಗಳ ಕೆಲವು ನಮೂನೆಗಳು ಈ ಹಂತದಲ್ಲಿ ಮುಂದುವರೆಯಲಿಲ್ಲ. ಬದಲಾಗಿ ಕೆಲವು ಹೊಸ ಪಾತ್ರೆ ಪ್ರಕಾರಗಳು ಬಳಕೆಗೆ ಬಂದವು. ಜೋರ್ವೆ ಪ್ರಕಾರದ ಕೆಂಪು ಲೇಪನದ ಮೇಲೆ ಕಪ್ಪು ವರ್ಣಚಿತ್ರಗಳುಳ್ಳ ಹಾಗೂ ನಸುಹಳದಿ ಮೇಲ್ಮೈ ಪಾತ್ರೆಗಳ ಮೇಲೆ ಕೆಂಪು ವರ್ಣಚಿತ್ರಗಳುಳ್ಳ ಪಾತ್ರೆಗಳನ್ನು ಇಲ್ಲಿ ಹೆಸರಿಸಬಹುದು. ವೃತ್ತಾಕಾರದ ಬಿಲ್ಲೆಗಳು ವಿಪುಲ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತವೆ. ಸುಡಾವೆಮಣ್ಣಿನ ಮಾನವ ಹಾಗೂ ಪ್ರಾಣಿಗೊಂಬೆಗಳೂ ದೊರೆತಿವೆ. ಭಗ್ನಗೊಂಡ ಸ್ತ್ರೀ ಗೊಂಬೆಯ ಡಿಂಬಭಾಗದಲ್ಲಿ ಧರಿಸಿದ ಬಟ್ಟೆ ಹಾಗೂ ಅದನ್ನು ಬಂಧಿಸಿದ ನಡುಪಟ್ಟಿಯನ್ನು ಕಾಣಬಹುದು. ಇದರ ಕೇಶವಿನ್ಯಾಸ ತ್ರಿಕೋನಾಕಾರದ ಶೈಲಿಯಲ್ಲಿದೆ. ಈ ಹಂತದಲ್ಲಿಯ ಒಟ್ಟು 17 ಗೋರಿಗಳನ್ನು ಬೆಳಕಿಗೆ ತರಲಾಗಿದೆ. II ಎ ಹಂತದ ಶವಸಂಸ್ಕಾರ ಸಂಪ್ರದಾಯವೇ ಮುಂದುವರೆಯಿತು. ಕೆಲ ಶವಗುಂಡಿಗಳ ಮೇಲೆ ಕಲ್ಲುಗಳನ್ನು ಇಡಲಾಗಿದ್ದರೆ, ಕೆಲವೊಂದರ ಮೇಲೆ ಕಲ್ಲುಗಳನ್ನಿಟ್ಟಿಲ್ಲ. ಶವದ ತಲೆಯನ್ನು ಉತ್ತರ, ದಕ್ಷಿಣ ಹಾಗೂ ಪೂರ್ವದಿಶಾಭಿಮುಖವಾಗಿರುವಂತೆ ಇಡಲಾಗಿದೆ. ಒಂದು ಗೋರಿಯಲ್ಲಿ ಶವದೊಂದಿಗೆ ಚಿತ್ರಿತ ಮಣ್ಣಾತ್ರೆಯನ್ನಿಡಲಾಗಿತ್ತು. ಮಕ್ಕಳ ಶವಗಳನ್ನು ಮಡಕೆಗಳಲ್ಲಿಟ್ಟು ಶವದ ತಲೆ ಉತ್ತರಾಭಿಮುಖವಾಗಿದೆ. ಶವದೊಂದಿಗೆ ಒಂದು ಬಟ್ಟಲನ್ನು ಇಡಲಾಗಿದೆ.

ಹಂತ III (ಪ್ರ.ಶ.ಪೂ.2000 ಅನಂತರದ): ಈ ಹಂತದಲ್ಲಿ ತಿಪ್ಪೆಗುಂಡಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದುವು. ಈ ಗುಂಡಿಗಳ ಉಪಯೋಗ ತಿಳಿದಿಲ್ಲ. ಆದರೆ ಇವುಗಳು ಮಡಕೆ ಮೊದಲಾದ ತ್ಯಾಜ್ಯ ಅವಶೇಷಗಳಿಂದ ತುಂಬಿಕೊಂಡಿದ್ದವು. ಇವುಗಳಲ್ಲದೆ ದಮ್ಮಸು ಮಾಡಿದ ನೆಲದ ಭಾಗಗಳಿದ್ದುವು. ಇವು ವಸತಿ ಸ್ಥಾನದ ಅವಶೇಷಗಳಿರಬಹುದು. ನೆಲದ ಮೇಲೆ ಬ್ರಹ್ಮಗಿರಿ ತರಹದ ಕಪ್ಪು-ಕೆಂಪು ದ್ವಿವರ್ಣದ ಮಣ್ಣಾತ್ರೆಚೂರುಗಳು, ಅಗೇಟ್‍ಮಣಿಗಳು ಇದ್ದವು. ಈ ಹಂತದ ಅವಶೇಷಗಳು ವೈವಿಧ್ಯಮಯ. ಚಕ್ಕೆ ಎಬ್ಬಿಸಿ ತಯಾರಿಸಿದ ಕಲ್ಲಿನ ಉಪಕರಣಗಳು, ಬೀಸುವಕಲ್ಲುಗಳು, ಮಣಿಗಳು, ಸುಡಾವೆಮಣ್ಣಿನ ಗೊಂಬೆಗಳು ಇತ್ಯಾದಿ. ಆದರೆ ಕಲ್ಲಿನ ಕೊಡಲಿಗಳು ಕಡಿಮೆ. ಕಾರ್ನೀಲಿಯನ್, ಅಗೇಟ್, ಕ್ವಾರ್ಟ್ಜ್ ಹಾಗೂ ಸ್ಟಿಯಟೈಟ್ ಮಣಿಗಳು ವಿಪುಲವಾಗಿವೆ. ಸಮುದ್ರಶಂಖಗಳ ಮಣಿಗಳು ಕಡಿಮೆ. ತಾಮ್ರ/ ಕಂಚಿನ ಪದಕ, ಮುರಿಗೆ ತಂತಿ ಹಾಗೂ ಕಬ್ಬಿಣದ ತುಣುಕುಗಳೂ ಈ ಹಂತದಲ್ಲಿವೆ.

ಇಲ್ಲಿಯ ತಿಪ್ಪೆಗುಂಡಿಗಳಲ್ಲಿ ಸುಟ್ಟು ಕರಕಾದ ಕಡಲೆ ಹಾಗೂ ರಾಗಿ ಧಾನ್ಯಗಳಿದ್ದುವು. ಕೆಲವೊಂದು ಗುಂಡಿಗಳಲ್ಲಿ, ಕೆಳಗಿನ ಅರ್ಧಭಾಗವನ್ನು ಮಣ್ಣಿನಿಂದ ಹಾಗೂ ಮೇಲ್ಭಾಗವನ್ನು ಸೆಗಣಿಯಿಂದ ತಯಾರಿಸಿದ ಜಾಡಿಗಳನ್ನು ಬೆಳಕಿಗೆ ತರಲಾಗಿದೆ. ಬ್ರಹ್ಮಗಿರಿ ಪ್ರಕಾರದ ಕಪ್ಪು-ಕೆಂಪು ದ್ವಿವರ್ಣ ಮಣ್ಣಾತ್ರೆಗಳು, ಜೋರ್ವೆ ಮಾದರಿಯ ಅಲಂಕೃತ ಪಾತ್ರೆಗಳಲ್ಲದೆ ಚಕ್ರದಿಂದ ತಯಾರಿಸಿದ ಮಣ್ಣಾತ್ರೆಗಳೂ ಬಳಕೆಯಲ್ಲಿದ್ದುವು. ಮಣ್ಣಿನಿಂದ ತಯಾರಿಸಿದ ವೃತ್ತಾಕಾರದ ತಕಲಿಗಳೂ ಅಧಿಕ ಸಂಖ್ಯೆಯಲ್ಲಿ ದೊರಕಿವೆ. ವಿಭಿನ್ನ ಪ್ರಕಾರದ ಸುಡಾವೆಮಣ್ಣಿನ ಮಾನವ ಹಾಗೂ ಪ್ರಾಣಿಗಳ ಗೊಂಬೆಗಳೂ ದೊರಕಿವೆ. ಕೆಲ ಗೊಂಬೆಗಳು ಕೆಂಪು ಜೇಡಿ ಲೇಪನದಿಂದ ಕೂಡಿವೆ. ಒಂದು ಸ್ತ್ರೀ ಗೊಂಬೆಯ ಕೈಯಲ್ಲಿ ಪಾತ್ರೆಯಿದೆ. ಪುರುಷರ ಗೊಂಬೆಗಳ ಉಬ್ಬಿಕೊಂಡ ಪೃಷ್ಠಭಾಗ ಒಂದು ವಿಶೇಷ ಲಕ್ಷಣ. ಕಾಲ್ಪನಿಕ ಆಕಾರದ ಗೊಂಬೆಗಳಿವೆ. ಪ್ರಾಣಿಗಳಲ್ಲಿ ಹಿಣಿಲುಳ್ಳ ದನಗಳು, ನೀರೆಮ್ಮೆ, ಕುರಿ, ಮೇಕೆ, ಚಿಗರೆ, ಬೆಕ್ಕು (?), ಹಂದಿ, ಕರಡಿ, ನವಿಲು, ಗಿಳಿ, ನಾಯಿ, ಆಮೆ (?) ಇತ್ಯಾದಿಗಳಿವೆ. ಸುಡಾವೆಮಣ್ಣಿನ ಒಂದು ಫಲಕದ ಮೇಲೆ ಮನುಷ್ಯನ ಚಿತ್ರವಿದೆ; ಈ ಚಿತ್ರ ಬಂಡೆ ಚಿತ್ರದ ಶೈಲಿಯನ್ನು ಹೋಲುತ್ತದೆಯೆಂದು ಉತ್ಖನನಕಾರರ ಅಭಿಪ್ರಾಯ. ಈ ಹಂತದಲ್ಲಿ ಕೆಲವು ಗೋರಿಗಳು ಕಂಡುಬಂದಿವೆ. ಹಿಂದಿನ ಹಂತಗಳಿಂದ (II ಎ ಮತ್ತು II) ಬಂದ

ಶವಸಂಸ್ಕಾರ ಪದ್ಧತಿ ಮುಂದುವರೆದದ್ದನ್ನು ಈ ಗೋರಿಗಳಲ್ಲಿ ಕಾಣಬಹುದು. ಆದರೆ ಈ ಹಂತದ ಎಲ್ಲ ಶವಗಳ ತಲೆ ಉತ್ತರಾಭಿಮುಖವಾಗಿದೆ. ಮಕ್ಕಳ ಶವಗಳನ್ನು ಮಡಕೆಗಳಲ್ಲಿಡಲಾಗಿದೆ.

ಹಂತ IV (ಪ್ರ.ಶ.ಪೂ.1500 ಅನಂತರದ): ಈ ಹಂತದಲ್ಲಿ ತಿಪ್ಪೆಗುಂಡಿಗಳ ಸಂಖ್ಯೆ ಬಹಳಷ್ಟು ಕಡಿಮೆ. ಕಲ್ಲಿನ ಕೊಡಲಿಗಳು ವಿರಳವಾಗಿವೆ; ಬಹುಶಃ ಲೋಹದ ಉಪಕರಣಗಳ ಬಳಕೆ ವೃದ್ಧಿಯಾಗಿದ್ದ ಕಾರಣವಿದ್ದಿರಬೇಕು. ತಾಮ್ರ/ಕಂಚು ಹಾಗೂ ಕಬ್ಬಿಣದ ಅವಶೇಷಗಳು ಹೆಚ್ಚು. ಬೀಸುವ ಕಲ್ಲುಗಳು ಕಡಿಮೆ. ವೈಡೂರ್ಯ, ಡಾಲರೈಟ್ ಮತ್ತು ತಾಮ್ರ/ಕಂಚಿನ ಮಣಿಗಳು ಬಹಳಷ್ಟು ಇದ್ದುವು. ಸಮುದ್ರಶಂಖಗಳ ಮಣಿಗಳು ಇಲ್ಲದಿರುವುದು ಗಮನಾರ್ಹ. ಅಗೇಟ್ ಮತ್ತು ಸುಟ್ಟಮಣ್ಣಿನ ಮಣಿಗಳು ಇನ್ನುಳಿದವುಗಳಿಗಿಂತ ವಿಪುಲವಾಗಿವೆ. ಸ್ಟಿಯಟೈಟ್ ಶಂಖದ ಇನ್ನಿತರ ಅವಶೇಷಗಳೂ ಇದ್ದುವು. ಹಿಂದಿನ ಶವಸಂಸ್ಕಾರ ಸಂಪ್ರದಾಯದಂತೆ ಮಕ್ಕಳನ್ನು ಕುಂಭಗೋರಿಗಳಲ್ಲಿಯೂ ವಯಸ್ಕರನ್ನು ಗುಂಡಿಯಲ್ಲಿಯೂ ಹೂಳಿದ ಉದಾಹರಣೆಗಳಿವೆ. ಶವದ ತಲೆ ಉತ್ತರಾಭಿಮುಖವಾಗಿರುತ್ತಿತ್ತು; ಕೈಗಳೆರಡನ್ನು ಕಿಬ್ಬೊಟ್ಟೆಯ ಮೇಲೆ ಕತ್ತರಿಯಾಕಾರದಲ್ಲಿಡಲಾಗುತ್ತಿತ್ತು.

ಬೃಹತ್ ಶಿಲಾಸಂಸ್ಕೃತಿಯ ಒಂದು ಕಲ್ಲುವೃತ್ತಗೋರಿಯನ್ನು ಉತ್ಖನನಮಾಡಲಾಗಿದೆ. ಈ ಗೋರಿಯಲ್ಲಿ ಶವದೊಂದಿಗೆ ಕಬ್ಬಿಣದ ಮೊನೆ ಅಥವಾ ಚಾಕು, ಬಂಗಾರದ ಹೊದಿಕೆಯುಳ್ಳ ಬೆಳ್ಳಿಯ ತಂತಿ (ಉಂಗುರ ?), ಮಡಕೆಗಳು ಮುಂತಾದ ಅವಶೇಷಗಳಿದ್ದವು. ಈ ನೆಲೆಯ ಸಮೀಪದ ಒಂದು ಬಂಡೆಯ ಮೇಲೆ ಗೂಳಿಯ ಕುಟ್ಟುಚಿತ್ರವಿದೆ. (ಎಲ್.ಎಸ್.ಆರ್.)

**ವಡಗಾಂವ್–ಮಾಧವಪುರ:** ಬೆಳಗಾಂವಿ ನಗರದ ಹೊರವಲಯದಲ್ಲಿರುವ ಆದಿಚಾರಿತ್ರಿಕ ಕಾಲದ ವಸತಿನೆಲೆ. 1945ರಲ್ಲಿ ಶೋಧಗೊಂಡ ಈ ನೆಲೆಯ ವಿಸ್ತೀರ್ಣ ಸು.40 ಹೆ. ಕಾಶ್ಯಪ ಗೋತ್ರದ ಬ್ರಾಹ್ಮಣನೊರ್ವ ವಾಜಪೇಯ ಮತ್ತಿತರ 80 ಯಜ್ಞಗಳನ್ನು ನೆರವೇರಿಸಿದ್ದನ್ನು ಉಲ್ಲೇಖಿಸುವ, ಪ್ರ.ಶ.ಪೂ.1ನೆಯ ಶತಮಾನದ ಬ್ರಾಹ್ಮಿ ಲಿಪಿಯ ಕಂಬ ಶಾಸನ ಇಲ್ಲಿ ಸಿಕ್ಕಿದೆ. 1964ರಲ್ಲಿ ಅ.ಸುಂದರ ಅವರು ನಡೆಸಿದ ಸರ್ವೇಕ್ಷಣೆಯಲ್ಲಿ ಸಿರಿ ಸತಕಣಿಸ ಎಂಬ ಬರೆಹವಿರುವ ಸತುವಿನ ಒಂದು ನಾಣ್ಯ ಇಲ್ಲಿ ಸಿಕ್ಕಿತ್ತು. 1972–77ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಹಾಗೂ ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ ಹಾಗೂ ಕನ್ನಡ ಸಂಶೋಧನ ಸಂಸ್ಥೆ ವತಿಯಿಂದ ಇಲ್ಲಿ ಉತ್ಖನನ ನಡೆಯಿತು. ಆದಿ ಚಾರಿತ್ರಿಕ ಕಾಲವನ್ನು ಆದಿ (ಪ್ರಶ.ಪೂ.ಸು.3ನೆಯ ಶತಮಾನ), ಮಧ್ಯ (ಪ್ರಶ.ಪೂ.ಸು.2–ಪ್ರ.ಶ.1ನೆಯ ಶತಮಾನ) ಮತ್ತು ಅಂತ್ಯ ಹಂತಗಳಾಗಿ (ಸು.1–2ನೆಯ ಶತಮಾನ) ವಿಂಗಡಿಸಲಾಗಿದೆ. ಅಂತ್ಯ ಹಂತದ ಇಟ್ಟಿಗೆ ಕಟ್ಟಡಗಳಲ್ಲಿ ಮುಖ್ಯವಾದುವೆಂದರೆ, ಇಂಗುಗುಣಿಯಿದ್ದ ಒಂದು ವಿಶಾಲ ಕಟ್ಟಡ, ಉಜ್ಜಯನಿ ಚಿಹ್ನೆಯ 50 ತಾಮ್ರದ ನಾಣ್ಯಗಳು, ಮತ್ತು

ಮಣ್ಣಿನ ಗೊಂಬೆಗಳು

ದಂತದ ದಾಳ ಮತ್ತು ಆಟಿಕೆ ಕಾಯಿಗಳಿದ್ದ, ಪ್ರಾಯಶಃ ಸಾರ್ವಜನಿಕವಾದ ಕಟ್ಟಡವೊಂದರ ತಳಗಟ್ಟು ಮತ್ತು ಎರಡು ಕೋಣೆಗಳ ಮನೆಗಳು. ಕೆಲವು ಮನೆಗಳಲ್ಲಿ ಇಟ್ಟಿಗೆ ಬಾವಿಗಳಿದ್ದವು. ಉಳಿದೆರಡು ಹಂತಗಳಲ್ಲಿ ಇಟ್ಟಿಗೆ ಕಟ್ಟಡಗಳಿಲ್ಲ. ಮಧ್ಯ ಹಂತದಲ್ಲಿ ದಮ್ಮಸು ಮಾಡಿದ ಮಣ್ಣಿನ ನೆಲದ ಅವಶೇಷಗಳಿವೆ. ಕುದುರೆ, ಆನೆ, ಸಿಂಹ, ಗೂಳಿ, ಹಕ್ಕಿ ಮುಂತಾದ ಸ್ಥಳೀಯ ಹಾಗೂ ಗಾಂಧಾರ, ಅಮರಾವತಿ ಶೈಲಿಗಳಲ್ಲಿಯ ಸುಡಾವೆ ಮಣ್ಣಿನ ಗೊಂಬೆಗಳು, ಪೌರಾಣಿಕ ದೃಶ್ಯವನ್ನು ಬಿಂಬಿಸುವ ವರ್ತುಲಾಕಾರದ ಫಲಕಗಳು, ಆನೆ ಹಾಗೂ ಮಾವುತನ ಮುದ್ರಿತ ದೃಶ್ಯವುಳ್ಳ ಮಣ್ಪಾತ್ರೆ ಚೂರು, ಮುದ್ರಾಂಕಿತ ನಾಣ್ಯಗಳು, ಗೋತಮಿಪುತಸ ವಿಳಿವಾಯಕುರಸ, ವಾಸಿಠಿಪುತಸ ಮತ್ತು ಮಹಾರಥಿಸ ಎಂಬ ಬರೆಹವುಳ್ಳ ಸತುವಿನ ನಾಣ್ಯಗಳು, ಒಂದು ಕೃತಕ ರೋಮನ್ ನಾಣ್ಯ, ಕ್ಷತ್ರಪರ ಒಂಡೆರಡು ನಾಣ್ಯಗಳು, ಚಿನ್ನದ ಸಣ್ಣ ಪದಕ, ಅಶ್ವತ್ಥದ ಎಲೆಯಂತಹ ಕಿವಿಯ ಆಭರಣ, ಅರೆಪ್ರಶಸ್ತ ಕಲ್ಲಿನ ನಾನಾ ಪ್ರಕಾರದ ಮಣಿಗಳು, ಹೊಳಪಿನ ಕೆಂಬಣ್ಣದ ದಾನಿಯ ಭಾಗಗಳು, ಕಾವಿ ಬಣ್ಣದ ಲೇಪನದಡಿಯಲ್ಲಿ ಬಿಳಿಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ– ಇವು ಅಂತ್ಯ ಹಂತದ ಮುಖ್ಯ ಅವಶೇಷಗಳು. ಉಳಿದೆರಡು ಹಂತಗಳಲ್ಲಿ ಕೆಂಬಣ್ಣದ ಪಾತ್ರೆ ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳಿದ್ದವು.

ಈ ನೆಲೆಯ ಒಂದು ಅಪರೂಪದ ಶೋಧನೆಯೆಂದರೆ ಅಕ್ಕಪಕ್ಕಗಳಲ್ಲಿ ಕಟ್ಟಡಗಳಿರುವ ಸು.7ಮೀ ಅಗಲದ ದೊಡ್ಡ ಬೀದಿ. ಸು.150 ಮೀ ಉದ್ದದಷ್ಟು ಉತ್ಖನನದಲ್ಲಿ ಗೋಚರಿಸಿದೆ.

ಮಣ್ಪಾತ್ರೆಯ ಹಿಡಿಕೆಯ ಮೇಲಿನ ಚಿತ್ರ

ಇಲ್ಲಿಯ ಇಟ್ಟಿಗೆ ಕಟ್ಟಡ, ನಾಣ್ಯ, ಸುಡಾವೆ ಮಣ್ಣಿನ ಗೊಂಬೆಗಳ ವೈವಿಧ್ಯ, ಪ್ರಾದೇಶಿಕ ಪ್ರಭಾವಗಳು ಈ ನೆಲೆ ಸಮೃದ್ಧ ವ್ಯಾಪಾರ ಕೇಂದ್ರವಾಗಿದ್ದಿರಬಹುದೆಂದು ಸೂಚಿಸುತ್ತವೆ.

ಸ್ಮಾರಕ ಕಂಬ ಶಾಸನ: ಇಲ್ಲಿ ಬ್ರಾಹ್ಮಿ ಲಿಪಿಯ ಪ್ರಾಕೃತ ಭಾಷೆಯ ಶಾಸನವೊಂದು ದೊರೆತಿದೆ. ಇದರಲ್ಲಿರುವಂತೆ ಬಲಪಾರ್ಯನ ಸ್ನೇಹಿತ ಸಾಕೇತದಿಂದ ಬಂದಿದ್ದ ಸೋಮಯಶಸ್ ಕಠಶಾಖೆಯ (ಯಜುರ್ವೇದ) ಪಂಡಿತ ವಾಜಪೇಯ ಮೊದಲಾದ 80 ಯಜ್ಞಗಳನ್ನೂ ಅನೇಕ ಸತ್ಕರ್ಮಗಳನ್ನೂ ಮಾಡಿದ್ದ. ಇವನ ಮರಣದ ಅನಂತರ ಸಂಬಂಧಿಕರು ಮತ್ತು ಸ್ಥಳೀಯರಿಂದ ಸ್ಥಾಪಿತವಾದ ಸ್ಮಾರಕ ಕಂಬ ಇದಾಗಿದೆ. ಇದರಲ್ಲಿ 10082 ದಿವಸಗಳೆಂದು ಇದೆ. ಇದು ಪ್ರ.ಶ. 105 ನವೆಂಬರ್ 3 ಎಂದು ಶಾಸನತಜ್ಞರ ಅಭಿಪ್ರಾಯವಾಗಿದೆ. (ಎ.ಎಸ್.)

**ವರಮಿನ್:** ಇರಾನಿನ ರಾಜಧಾನಿ ಟೆಹರಾನಿನ ದಕ್ಷಿಣಕ್ಕಿರುವ ಪದ್ರಿಸ್ ಎಂದು ಕರೆಯಲಾಗುವ ಪುರಾತತ್ತ್ವ ನೆಲೆ. ಇಲ್ಲಿ ಉತ್ಖನನದಲ್ಲಿ 7,000 ವರ್ಷಗಳ ಹಿಂದಿನ ಕೈಗಾರಿಕಾ ನಗರವೆಂದು ಹೇಳಬಹುದಾದ ಜನವಾಸ್ತವ್ಯದ ನೆಲೆ ಬೆಳಕಿಗೆ ಬಂದಿದೆ. ದೊಡ್ಡ ಪ್ರಮಾಣದಲ್ಲಿ ಇಟ್ಟಿಗೆ ಭಟ್ಟಿಗಳು, ಗಡಿಗೆ ಮಡಕೆ ತಯಾರಿಕೆಯ ಚಕ್ರಗಳು, ನೂಲು ನೇಯುವ ತಕಲಿಗಳು ದೊರೆತಿದ್ದು, ಈ ನೆಲೆ ಕೈಗಾರಿಕಾ ಕೇಂದ್ರವಾಗಿತ್ತೆಂಬುದು ಸುಸ್ಪಷ್ಟ. (ಎ.ಎಸ್.;ಎನ್.ಎಲ್.)

**ವರಾಹಮಿಹಿರ:** ಸು.6ನೆಯ ಶತಮಾನ. ಭಾರತದ ಪ್ರಸಿದ್ಧ ಗಣಿತಶಾಸ್ತ್ರಜ್ಞ ಹಾಗೂ ಖಗೋಳ ವಿಜ್ಞಾನಿ. ಬೃಹತ್‌ಸಂಹಿತೆ ಎಂಬ ಶಾಸ್ತ್ರಗ್ರಂಥದ ಕರ್ತೃ. ಆರ್ಯಭಟನ ಸಮಕಾಲೀನ. ಉಜ್ಜಯನಿಯ ಅವಂತೀನಗರ ಇವನ ವಾಸಸ್ಥಾನವಾಗಿತ್ತು. ಇವನ ಪೂರ್ವಿಕರು ಸೂರ್ಯನ ಆರಾಧಕರು. ವೇದಾಧ್ಯಯನ ಇವನ ಆಸಕ್ತಿಯ ವಿಷಯವಾಗಿತ್ತು. ಈತ ರಾಜ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ. 5 ಮತ್ತು 6ನೆಯ ಶತಮಾನಗಳ ಸಂಧಿಕಾಲದಲ್ಲಿ ಆರ್ಯಭಟ, ಲಾಟದೇವ ಮೊದಲಾದವರಿಂದ ಪರಿಷ್ಕರಣೆಗೊಂಡು ರಚಿತವಾದ ಪೂರ್ವಿಕರ ಮತಗಳ ಸಿದ್ಧಾಂತಗಳನ್ನು ಐತಿಹಾಸಿಕ ದೃಷ್ಟಿಯಿಂದ ಅಧ್ಯಯನ ಮಾಡಿ, ಅವುಗಳನ್ನು ಕ್ರೋಢೀಕರಿಸಿ ತನ್ನದೇ ಆದ ದೃಷ್ಟಿಕೋನದಿಂದ ಅವುಗಳ ಮಹತ್ತ್ವವನ್ನು ಪ್ರತಿಪಾದಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ಈ ಕಾರ್ಯದಿಂದ ಹಿಂದಿನ ಜ್ಞಾನಕ್ಷೇತ್ರ ಯಾವುದೇ ರೀತಿಯಲ್ಲಿ ನಷ್ಟವಾಗದೆ ಉಳಿದುಬರಲು ಸಾಧ್ಯವಾಯಿತು. ಈ ಕಾರಣದಿಂದಲೇ ಇವನ ಕೃತಿಗಳಿಗೆ ಐತಿಹಾಸಿಕ ಮಹತ್ತ್ವವಿದೆ.

ಪಂಚಸಿದ್ಧಾಂತಿಕಾ, ಬೃಹಜ್ಜಾತಕ, ಯೋಗಯಾತ್ರಾ, ವಿವಾಹಪಟಲ ಮೊದಲಾದವು ಇವನ ಇತರ ಮುಖ್ಯ ಕೃತಿಗಳು. ಪಂಚಸಿದ್ಧಾಂತಿಕಾದಲ್ಲಿ 18 ಅಧ್ಯಾಯಗಳಿವೆ. ಗ್ರಹಗಳ ಸ್ಥಾನಗಳನ್ನು ನಿರ್ದೇಶಮಾಡಲು ಅನುಕೂಲವಾದ ಗ್ರಹಗಣಿತ, ಗ್ರಹಗಳ ವಿಚಾರ, ಸೌರ, ಪೈತಾಮಹ (ಬ್ರಾಹ್ಮ), ವಾಸಿಷ್ಠ, ರೋಮಕ, ಪೌಲಿಶಗಳೆಂಬ ಐದು ಸಿದ್ಧಾಂತಗಳನ್ನೂ ಖಗೋಳವಿಜ್ಞಾನದ ಗ್ರಂಥಗಳನ್ನು ವರ್ಣಿಸಿ ಅವುಗಳ ಸೂತ್ರಗಳ ಪ್ರಕಾರ ಕರಣಗಳನ್ನು (ಗಣಕ) ಈ ಕೃತಿಯು ತಿಳಿಸುವುದರಿಂದ ಪಂಚಸಿದ್ಧಾಂತಿಕಾ ಎಂಬ ಹೆಸರು ಅನ್ವರ್ಥವಾಗಿದೆ. ಬೃಹಜ್ಜಾತಕ ಹೆಸರೇ ಸೂಚಿಸುವಂತೆ ಜಾತಕವನ್ನೂ ಫಲಭಾಗವನ್ನೂ ತಿಳಿಸುವ 26 ಅಧ್ಯಾಯಗಳ ಬೃಹತ್ ಗ್ರಂಥ. ರಾಶಿಭೇದ, ಜನ್ಮವಿಧಿ, ಬಾಲಾರಿಷ್ಟ ಮುಂತಾದ ವಿಚಾರಗಳು ಇಲ್ಲಿ ಬರುತ್ತವೆ. ಪೂರ್ವಾಚಾರ್ಯರಿಂದ ರಚನೆಗೊಂಡ ಗ್ರಂಥಗಳನ್ನು ಸಂಗ್ರಹಿಸಿ ಇದನ್ನು ಬರೆಯಲಾಗಿದೆ. ನಷ್ಟಜಾತಕವೆಂಬ ಭಾಗದಲ್ಲಿ ಜಾತಕವಿಲ್ಲದಿರುವವರಿಗೆ ಫಲವನ್ನು ಹೇಳಿ, ಜಾತಕವನ್ನು ನಿರ್ಮಿಸುವ ಬಗೆಯನ್ನೂ ತಿಳಿಸಲಾಗಿದೆ. ಇದರ ಸಂಕ್ಷಿಪ್ತ ರೂಪವನ್ನು ಲಘುಜಾತಕ ಎಂಬ ಹೆಸರಿನಿಂದ ಇವನೇ ರಚಿಸಿದ್ದಾನೆ. ಯಾತ್ರೆಗಳಿಗೆ ಅನುಕೂಲವಾಗುವ ಶುಭಕಾಲನಿರ್ಣಯಾದಿಗಳನ್ನೊಳಗೊಂಡದ್ದು ಇವನ ಯೋಗಯಾತ್ರಾ ಕೃತಿ. ವಿವಾಹಾದಿಗಳಿಗೆ ಸಂಬಂಧಪಟ್ಟ ವಿಚಾರಗಳು ವಿವಾಹಪಟಲ ಎಂಬ ಜ್ಯೋತಿಷ್ಯಗ್ರಂಥದಲ್ಲಿದೆ.

ಬೃಹತ್‌ಸಂಹಿತೆಗೆ ವರಾಹಸಂಹಿತೆ ಎಂಬ ಹೆಸರೂ ಇದೆ. ಇದು ತಂತ್ರ, ಹೋರಾ, ಶಾಖಾ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಇವನ ಕೃತಿಗಳ ಅನೇಕ ಭಾಗಗಳಲ್ಲಿ ಗ್ರೀಕ್ ಪದಗಳ ಬಳಕೆಯನ್ನು ವಿದ್ವಾಂಸರು ಗುರುತಿಸಿ ಗ್ರೀಕ್ ಪ್ರಭಾವ ಇವನ ಮೇಲಾಗಿದೆ ಎಂದು ಹೇಳಿದ್ದಾರೆ. ಸ್ಕಂದಗಣಿತವನ್ನು ಅವಲಂಬಿಸಿದ ಗ್ರಹಗತಿಗಳನ್ನೂ ಲಗ್ನವನ್ನು ಕಂಡುಹಿಡಿಯುವ ಕ್ರಮಗಳನ್ನೂ ಈ ಕೃತಿ ವಿವರಿಸುತ್ತದೆ. 106 ಅಧ್ಯಾಯಗಳನ್ನೊಳಗೊಂಡು 4000 ಶ್ಲೋಕಗಳಿಂದ ರಚನೆಗೊಂಡಿರುವ ಈ ಕೃತಿ ವಿಷಯ ಹಾಗೂ ಸ್ವರೂಪದಲ್ಲಿ ವಿಶ್ವಕೋಶದ ಮಾದರಿಯನ್ನು ಹೊಂದಿದೆ. ಈ ಗ್ರಂಥವನ್ನು ಆಧರಿಸಿ ಭಾರತೀಯ ಭಾಷೆಗಳಲ್ಲಿ ಅನೇಕ ಕೃತಿಗಳು ರಚನೆಗೊಂಡಿವೆ. ಇದಕ್ಕೆ ಪ್ರಮುಖ ಉದಾಹರಣೆ ಕನ್ನಡದಲ್ಲಿ ಎರಡನೆಯ ಚಾವುಂಡರಾಯನ (ಸು.1025) ಲೋಕೋಪಕಾರ ಎಂಬ ಕೃತಿ. *

**ವಲ್ಲಭ ಭಾಯಿ ಪಟೇಲ್:** 1875–1950. ನಿಷ್ಣಾತ ನ್ಯಾಯವಾದಿ, ಸ್ವಾತಂತ್ರ್ಯ ಸಂಗ್ರಾಮದ ವೀರ ನಾಯಕರಲ್ಲೊಬ್ಬರು, ಚತುರ ರಾಜಕಾರಣಿ, ಸ್ವತಂತ್ರ ಭಾರತದ ಉಪಪ್ರಧಾನಿಯಾಗಿದ್ದವರು. ಸರ್ದಾರ್ ಎಂದು ಪ್ರಖ್ಯಾತರು. ತಂದೆ ಜಾವೇರ್ ಭಾಯಿ ಪಟೇಲ್; ತಾಯಿ ಲಾಡಬಾಯಿ. ಇವರು ತಾಯಿಯ ತವರಾದ ನಡಿಯಾದಲ್ಲಿ (ಗುಜರಾತ್) 1857 ಅಕ್ಟೋಬರ್ 31ರಂದು ಜನಿಸಿದರು. ತಂದೆ ಲೇವಾ ಪಾಟೀದಾರ ಮನೆತನದ ಸಾಮಾನ್ಯ ರೈತ. ಇವರು 1857ರ ಪ್ರಥಮ ಸ್ವಾತಂತ್ರ್ಯ ಸಮರದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿಯ ನೇತೃತ್ವದಲ್ಲಿ ಹೋರಾಡಿದ್ದರೆಂದೂ ಕೊನೆಯಲ್ಲಿ ಇಂದೋರಿನ ಮಲ್ಹಾರರಾವ್ ಹೋಳ್ಕರನಿಂದ ಸೆರೆಯಾಗಿ, ಚದುರಂಗದಾಟದ ಜಾಣ್ಮೆಯಿಂದ ಅವನ ಮನವೊಲಿಸಿಕೊಂಡು ಬಿಡುಗಡೆ ಹೊಂದಿದರೆಂದೂ ಅವನು ತನ್ನೊಂದಿಗೆ ಚದರಂಗವನ್ನಾಡಿ ಕೊಂಡಿರಬೇಕೆಂದು ಹೇಳಿದಾಗ ಅದಕ್ಕೊಪ್ಪದೆ ಮನೆಗೆ ಹಿಂದಿರುಗಿದ ರೆಂದೂ ಹೇಳಲಾಗಿದೆ. ಲಾಡಬಾಯಿ ಜಾವೇರ್ ಭಾಯಿಯ ಎರಡನೆಯ ಹೆಂಡತಿ. ಅವರ 5 ಗಂಡು 1 ಹೆಣ್ಣು ಮಕ್ಕಳ ಪೈಕಿ ವಲ್ಲಭ ಭಾಯಿ ನಾಲ್ಕನೆ ಯವರು. ಇವರ ಅಣ್ಣ ವಿಠಲಭಾಯಿ ಪಟೇಲ್. ವಲ್ಲಭ ಭಾಯಿ ಪಟೇಲರು ಬಾಲ್ಯದಲ್ಲಿ ತಂದೆಗೆ ಬೇಸಾಯ, ಗೋ ಪಾಲನೆಗಳಲ್ಲಿ ನೆರವಾಗುತ್ತಿದ್ದರು. ಇವರು ನೆಲವನ್ನು ನೇರವಾಗಿ ಆಳವಾಗಿ ಸಾಲು ಮಾಡಿ ಉಳುತ್ತಿದ್ದರು: ಗೋ ಪಾಲನೆಯಲ್ಲಿ ನುರಿತಿದ್ದರು. ಪಟೇಲರ ವಿದ್ಯಾಭ್ಯಾಸ ಆರಂಭವಾದದ್ದು ತಡ ವಾಗಿ. ಮಾಧ್ಯಮಿಕ ಶಾಲಾ ಶಿಕ್ಷಣವನ್ನು 19ನೆಯ ವಯಸ್ಸಿಗೆ ಮುಗಿಸಿ ನಡಿಯಾ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು (1897). ವಿದ್ಯಾರ್ಥಿ ಜೀವನದಲ್ಲಿ ಇವರು ಮುಂದಾಳುತನದ ಎದೆಗಾರಿಕೆಯನ್ನು ಹಲವು ಬಾರಿ ತೋರಿಸಿದ್ದರು. ಇವರು ಬರೋಡದಲ್ಲಿಯ ಪ್ರೌಢಶಾಲೆಯನ್ನು ಸೇರಿದ ಕೆಲವೇ ದಿನಗಳಲ್ಲಿ ಅಲ್ಲಿ ನಡೆಯುವ ಅನ್ಯಾಯವನ್ನು ಸಹಿಸದೆ ಆ ಶಾಲೆಯನ್ನೇ ಬಿಟ್ಟರು. ಇವರಿಗಿದ್ದ ಧೈರ್ಯ ಹಾಗೂ ಕಷ್ಟಸಹಿಷ್ಣು ಮನೋಧರ್ಮಗಳ ಮೇಲೆ ತಂದೆ ತಾಯಿಯರ ಪ್ರಭಾವವಿತ್ತು.



ಮನೆಯಲ್ಲಿನ ಬಡತನದಿಂದಾಗಿ ಇವರು ಉಚ್ಚಶಿಕ್ಷಣ ಪಡೆಯಲಾಗಲಿಲ್ಲ. ನೌಕರಿ ಸೇರಲಿಚ್ಛಿಸದ ಇವರು ಸ್ವತಂತ್ರವಾಗಿ ವಕೀಲಿ ಮಾಡುತ್ತಿದ್ದ ಅಣ್ಣನಂತೆಯೇ ತಾನೂ ವಕೀಲನಾಗಲಿಚ್ಛಿಸಿ ಸಾಮಾನ್ಯ ವಕೀಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ (1900) ಗೋಧ್ರಾದಲ್ಲಿ ವೃತ್ತಿ ಆರಂಭಿಸಿ ಯಶಸ್ಸು ಗಳಿಸಿದರು.

ಪಟೇಲರು 1910ರಲ್ಲಿ ಇಂಗ್ಲೆಂಡಿಗೆ ಹೋದರು. ಪ್ರಥಮ ಪರೀಕ್ಷೆಯಲ್ಲಿ ರೋಮನ್ ನ್ಯಾಯದಲ್ಲಿ ಪ್ರಥಮ ಸ್ಥಾನಗಳಿಸಿ ಮೂರು ವರ್ಷದ ಬ್ಯಾರಿಸ್ಟರ್ ಪದವಿಯನ್ನು ಎರಡು ವರ್ಷಗಳಲ್ಲೇ ಮುಗಿಸಿ ಭಾರತಕ್ಕೆ ಹಿಂದಿರುಗಿ ಅಹಮದಾಬಾದಿನಲ್ಲಿ ವೃತ್ತಿ ಆರಂಭಿಸಿದರು. ಯಶಸ್ಸು, ಧನ ಎರಡನ್ನೂ ಇವರು ಹೇರಳವಾಗಿ ಗಳಿಸಿದರು. ಇವರು ವಿದೇಶದಿಂದ ಹಿಂದಿರುಗುವಷ್ಟರಲ್ಲಿ ಸಹೋದರ ವಿಠಲ ಭಾಯಿಯವರು ಸಾರ್ವಜನಿಕ ಜೀವನದಲ್ಲಿ ಕಾಲಿಟ್ಟು ಮುಂಬಯಿ ವಿಧಾನ ಸಭೆಯ ಸದಸ್ಯರಾಗಿದ್ದರು. ಅಣ್ಣ ತಮ್ಮಂದಿರು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಪಟೇಲರು ಅಹಮದಾಬಾದಿಗೆ ಬಂದ ಎರಡು ವರ್ಷಗಳ ವೇಳೆಗೆ ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು.

1917–22ರಲ್ಲಿ ದೇಶದಲ್ಲಿ ಅನೇಕ ಆಂದೋಲನಗಳು ನಡೆದುವು. ಕ್ಷಾಮ ತಲೆದೋರಿದ್ದ ರಿಂದ ಭೂಕಂದಾಯ ವಿನಾಯತಿಗಾಗಿ ಖೇಡಾ ಜಿಲ್ಲೆಯಲ್ಲಿ ಸತ್ಯಾಗ್ರಹ ನಡೆಯಿತು. ಪಟೇಲರು ತಮ್ಮ ಸಮಯವನ್ನು ರಾಜಕೀಯ ಮತ್ತು ರಚನಾತ್ಮಕ ಕಾರ್ಯಗಳಿಗೆ ಮೀಸಲಾಗಿಟ್ಟು ಹಳ್ಳಿಹಳ್ಳಿಗಳಲ್ಲಿ ಸುತ್ತಿ ಪ್ರಚಾರ ಭಾಷಣಗಳನ್ನು ಮಾಡಿದರು. ವಿದೇಶಿ ಬಟ್ಟೆಗಳ ಮತ್ತು ಮದ್ಯದ ಅಂಗಡಿಗಳ ಮುಂದೆ ಮುಷ್ಕರಗಳನ್ನು ನಡೆಸಿದರು. 1921ರಲ್ಲಿ ಖಾದಿಯನ್ನು ತೊಟ್ಟರು. ಅನಂತರ ಕೊನೆಯವರೆಗೂ ಖಾದಿಯೇ ಇವರ ಉಡುಪಾಯಿತು.

1924–28ರಲ್ಲಿ ಪಟೇಲರು ಅಹಮದಾಬಾದ್ ನಗರಸಭೆಯ ಚುನಾಯಿತ ಅಧ್ಯಕ್ಷರಾದರು. ಅಹಮದಾಬಾದಿನ ರಕ್ಷಣೆಗಾಗಿ ಹಗಲುರಾತ್ರಿ ದುಡಿದರು. ಬಾರ್ಡೋಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಮಹಿಳೆಯರನ್ನು ಹುರಿದುಂಬಿಸಿ, ಅವರೂ ಚಳವಳಿಯಲ್ಲಿ ಭಾಗವಹಿಸು ವಂತೆ ಮಾಡಿದರು. ಬಾರ್ಡೋಲಿಯಲ್ಲಿ ಪ್ರತಿ ಸರ್ಕಾರ ಏರ್ಪಟ್ಟಿತು. ಮುಂಬಯಿಯ ವಿಧಾನ ಸಭೆಗೆ ಕೆಲವು ಸದಸ್ಯರು ರಾಜೀನಾಮೆ ಕೊಟ್ಟರು. ದಿಲ್ಲಿಯ ವಿಧಾನಸಭೆಯ ಅಧ್ಯಕ್ಷರಾಗಿದ್ದ ವಿಠಲ ಭಾಯಿಯವರು ಬಾರ್ಡೋಲಿಯ ಸಮಸ್ಯೆ ತೃಪ್ತಿಕರವಾದ ರೀತಿಯಲ್ಲಿ ಇತ್ಯರ್ಥವಾಗದಿದ್ದಲ್ಲಿ ರಾಜೀನಾಮೆ ನೀಡಿ ಸತ್ಯಾಗ್ರಹದಲ್ಲಿ ಪಾಲುಗೊಳ್ಳುವುದಾಗಿ ಬೆದರಿಕೆ ಹಾಕಿದರು. ಕೊನೆಗೆ ಸರ್ಕಾರ ವಲ್ಲಭಭಾಯಿಯವರೊಂದಿಗೆ ಒಪ್ಪಂದಕ್ಕೆ ಬಂತು. ವಿಚಾರಣೆ ನಡೆದು ಕಂದಾಯದ ಏರಿಕೆಯನ್ನು ಮುಂದೂಡಲಾಯಿತು. ಜಪ್ತಾಗಿದ್ದ ಆಸ್ತಿಯನ್ನು ಜನರಿಗೆ ಹಿಂದಿರುಗಿಸಲಾಯಿತು. ಹೋಗಿದ್ದ ನೌಕರಿಗಳು ತಿರುಗಿ ದೊರೆತುವು. ಇದರಿಂದ 80,000 ರೈತರಿಗೆ ನೆಮ್ಮದಿ ಉಂಟಾಯಿತು. ದೇಶ ಕೃತಜ್ಞತೆಯಿಂದ ಪಟೇಲರಿಗೆ ಸರ್ದಾರ ಎಂಬ ಬಿರುದನ್ನಿತ್ತಿತು.

1939 ಮಾರ್ಚಿಯಲ್ಲಿ ಗಾಂಧೀಜಿ ಉಪ್ಪಿನ ಅನ್ಯಾಯದ ಕಾನೂನನ್ನು ಮುರಿಯಲು ನಿರ್ಧರಿಸಿದರು. 12ರಂದು ಇದಕ್ಕಾಗಿ ಇವರು ದಂಡಿಗೆ ಹೋಗಲು ನಿಶ್ಚಯಿಸಿದರು. ಅದರ ಪೂರ್ವಸನ್ನಾಹದ ಭಾರ ಸರ್ದಾರರ ಮೇಲೆ ಬಿತ್ತು. ಪಟೇಲರು ಹಳ್ಳಿ ಹಳ್ಳಿಗೆ ಹೋಗಿ ಭಾಷಣ ಮಾಡಿದರು. ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದಾಗ ಸರ್ಕಾರ ಇವರನ್ನು ದಸ್ತಗಿರಿ ಮಾಡಿ ಇವರಿಗೆ 3 ತಿಂಗಳ ಕಾರಾಗೃಹ ಶಿಕ್ಷೆ ಮತ್ತು 500 ರೂ. ಜುಲ್ಮಾನೆ ವಿಧಿಸಿತು. ಜೂನ್ 2ರಂದು ಇವರ ಬಿಡುಗಡೆಯಾಯಿತು. ಆ ವೇಳೆಗೆ ರಾಷ್ಟ್ರ ನೇತಾ ಮೋತಿಲಾಲ್ ನೆಹರು ಅವರನ್ನು ಸರ್ಕಾರ ಬಂಧಿಸಿತ್ತು. ಅವರು ತಮ್ಮ ಸ್ಥಾನದಲ್ಲಿ ಪಟೇಲರನ್ನು ನೇಮಿಸಿದರು. ಇಡೀ ಭಾರತಕ್ಕೆ ಪಟೇಲರು ಸತ್ಯಾಗ್ರಹ ಸಂಚಾಲಕರಾದರು. 1931 ಮಾರ್ಚಿ 26 ರಂದು ಕರಾಚಿಯಲ್ಲಿ ನಡೆದ 46ನೆಯ ಕಾಂಗ್ರೆಸ್ ಅಧಿವೇಶನಕ್ಕೆ ಇವರು ಅಧ್ಯಕ್ಷರಾಗಿದ್ದರು. ಗಾಂಧೀಜಿ ಮತ್ತು ಸರ್ದಾರರು 1932 ಜನವರಿಯಿಂದ 1933 ಮೇ ವರೆಗೆ ಯರವಾಡ ಜೈಲಿನಲ್ಲಿ ಬಂಧಿತರಾಗಿದ್ದರು.

1935ರ ಭಾರತ ಸರ್ಕಾರ ಅಧಿನಿಯಮ ಜಾರಿಯಲ್ಲಿ ಬಂದ ಮೇಲೆ ಕಾಂಗ್ರೆಸ್ ಪ್ರಾಂತೀಯ ಶಾಸನ ಸಭೆಗಳಿಗೆ ಸ್ಪರ್ಧಿಸಲು ನಿರ್ಧರಿಸಿತು. 1936ರಲ್ಲಿ ನಡೆದ ಚುನಾವಣೆಗಳಲ್ಲಿ ಭಾರತದ 11 ಪ್ರಾಂತಗಳ ಪೈಕಿ 7ರಲ್ಲಿ ಕಾಂಗ್ರೆಸ್ಸಿಗೆ ಬಹುಮತ ದೊರೆಯಿತು. ಆ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲಗಳು ಸ್ಥಾಪಿತವಾದುವು. ಕಾಂಗ್ರೆಸ್ ವಿಧಾನ ಸಭೆ ಉಪಸಮಿತಿಯ ಅಧ್ಯಕ್ಷರಾಗಿದ್ದ ಸರ್ದಾರರು ಈ ಮಂತ್ರಿ ಮಂಡಲಗಳ ಚಟುವಟಿಕೆಗಳಿಗೆ ಮಾರ್ಗದರ್ಶಕರೂ ನಿಯಂತ್ರಕರೂ ಆಗಿದ್ದರು.

ಬ್ರಿಟನ್ 1939 ಸೆಪ್ಟಂಬರ್ 3 ರಂದು ಜರ್ಮನಿಯ ಮೇಲೆ ಯುದ್ಧ ಘೋಷಿಸಿದಾಗ ಭಾರತವೂ ಯುದ್ಧದಲ್ಲಿ ಬ್ರಿಟನ್ನಿನ ಮಿತ್ರರಾಷ್ಟ್ರದಂತೆ ಭಾಗವಹಿಸುವುದಾಗಿ ಭಾರತದ ವೈಸ್‌ರಾಯ್ ಕೇಂದ್ರ ಪ್ರಾಂತ್ಯಗಳ ವಿಧಾನಸಭೆಗಳ ಸಲಹೆ ಕೇಳದೆಯೇ ಸಾರಿದರು. ಕಾಂಗ್ರೆಸ್ಸಿಗೆ ಇದು ಒಪ್ಪಿಗೆಯಾಗಲಿಲ್ಲ. ಮಂತ್ರಿಮಂಡಲಗಳು ರಾಜೀನಾಮೆಯಿತ್ತುವು. ಭಾರತ ಆ ಯುದ್ಧದಲ್ಲಿ ಭಾಗಿಯಾಗುವುದನ್ನು ಗಾಂಧಿಯವರು ವಿರೋಧಿಸಿ ವೈಯಕ್ತಿಕ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ನಾಯಕರು ಜೈಲಿಗೆ ಹೋಗತೊಡಗಿದರು. 1940 ನವೆಂಬರ್ 17ರಂದು ಸರ್ದಾರರು ದಸ್ತಗಿರಿಯಾಗಿ, 1941 ಆಗಸ್ಟ್ 20ರಂದು ಅಸ್ವಸ್ಥತೆಯ ಕಾರಣ ಬಿಡುಗಡೆ ಹೊಂದಿದರು. ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕೆಂಬ ಗೊತ್ತುವಳಿಯನ್ನು 1942 ಆಗಸ್ಟ್ 8 ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಂಗೀಕರಿಸಿದಾಗ, ಸರ್ಕಾರ ಸರ್ದಾರರನ್ನೂ ಸಮಿತಿಯ ಇತರ ಸದಸ್ಯರನ್ನೂ ಬಂಧಿಸಿ ಅಹಮದನಗರದ ಹಳೆಯ ಕಿಲ್ಲೆಯಲ್ಲಿ ಇಟ್ಟಿತು. ಪಟೇಲರು ಸು.3 ವರ್ಷಗಳ ಕಾಲ ಬಂಧನದಲ್ಲಿದ್ದರು.

ಯುದ್ಧಾಂತ್ಯದಲ್ಲಿ ಕಾಂಗ್ರೆಸ್ ನಾಯಕರ ಬಿಡುಗಡೆಯಾಗಿ, ಬ್ರಿಟಿಷ್ ಸರ್ಕಾರ ಭಾರತದ ಸ್ವಾತಂತ್ರ್ಯದ ಸಮಸ್ಯೆಗೆ ಶಾಂತಿಯುತ ಸಂವಿಧಾನಾತ್ಮಕ ಪರಿಹಾರವನ್ನು ಕಂಡು ಹಿಡಿಯಲು ನಿರ್ಧರಿಸಿದಾಗ ಸರ್ದಾರರು ಕಾಂಗ್ರೆಸ್ಸಿನ ಮುಖ್ಯ ವಕ್ತಾರರಲ್ಲೊಬ್ಬರಾಗಿದ್ದರು. 1946 ಸೆಪ್ಟೆಂಬರ್ 2ರಂದು ತಾತ್ಕಾಲಿಕ ಸರ್ಕಾರ ಸ್ಥಾಪಿತವಾದಾಗ ಇವರು ಪೋಲೀಸ್ ಇಲಾಖೆಯ ಮಂತ್ರಿ ಆದರು. ಸ್ವಾತಂತ್ರ್ಯ ಬಂದ ಮೇಲೆ ಉಪಪ್ರಧಾನಿಯಾಗಿ ಗೃಹ, ದೇಶೀಯ ಸಂಸ್ಥಾನ ಸಮಾಚಾರ ಮತ್ತು ನಿಸ್ತಂತು ವಿಸ್ತರಣ ಇಲಾಖೆಗಳನ್ನು ವಹಿಸಿಕೊಂಡರು. ಭಾರತ ಒಕ್ಕೂಟದಲ್ಲಿ ದೇಶೀಯ ಸಂಸ್ಥಾನಗಳ ವಿಲೀನದ ಜಟಿಲ ಸಮಸ್ಯೆಯನ್ನು ಇವರು ಎದುರಿಸ ಬೇಕಾಗಿ ಬಂತು. ಪಟೇಲರು ಚಾಣಾಕ್ಷತೆಯಿಂದ ಅದನ್ನು ಪರಿಹರಿಸಿ ಒಂದು ವರ್ಷಕ್ಕೂ ಕಡಿಮೆ ಅವಧಿಯಲ್ಲಿ 562 ಸಂಸ್ಥಾನಗಳನ್ನು 26 ಆಡಳಿತ ಗುಂಪುಗಳಿಗೆ ಇಳಿಸಿ, ಅವುಗಳ ಸು.8 ಕೋಟಿ ಪ್ರಜೆಗಳಿಗೆ ಪ್ರಜಾಪ್ರಭುತ್ವ ಲಭ್ಯವಾಗುವಂತೆ ಮಾಡಿದರು. ಇದು ಇವರ ಜೀವನದ ಅತ್ಯಂತ ಮಹತ್ತ್ವದ ಸಾಧನೆಯೆನ್ನಬಹುದು. ಭೀಕರವಾಗುತ್ತಿದ್ದ ಹೈದರಾಬಾದ್ ಸಂಸ್ಥಾನದ ಸಮಸ್ಯೆಯನ್ನು ಪೋಲೀಸ್ ಕಾರ್ಯಾಚರಣೆಯ ಮೂಲಕ

ಬಗೆಹರಿಸಿ ಅದನ್ನೂ ಭಾರತದಲ್ಲಿ ವಿಲೀನಗೊಳಿಸಿದ್ದು ಪಟೇಲರ ಧೈರ್ಯ ಸಾಹಸಗಳ ಪ್ರತೀಕವಾಗಿದೆ. ಸರ್ದಾರರು ಗೃಹ ಮಂತ್ರಿಯಾಗಿ, ಇತಿಹಾಸದಲ್ಲೇ ಹಿಂದೆಂದೂ ಕಂಡಿರದ ಕೋಮುವಾರು ಕಲಹ ಗಲಭೆಗಳಿಂದ ತತ್ತರಿಸಿ ಹೋಗಿದ್ದ ದೇಶದಲ್ಲಿ ಸುವ್ಯವಸ್ಥೆ ಮತ್ತು ಶಾಂತಿ ಹಿಂದಿರುಗುವುದಕ್ಕೆ ಕಾರಣರಾದರು. ಭಾರತದ ನವ ಪ್ರಜಾಪ್ರಭುತ್ವಕ್ಕೆ ಸುವ್ಯವಸ್ಥೆಯ ತಳಹದಿಯನ್ನೊದಗಿಸುವ ಉದ್ದೇಶದಿಂದ ಹೊಸ ಭಾರತೀಯ ಆಡಳಿತ ಸೇವೆಯನ್ನು ಅಸ್ತಿತ್ವಕ್ಕೆ ತಂದರು. ಇವರು 1950 ಡಿಸೆಂಬರ್ 15ರಂದು ಮುಂಬಯಿಯಲ್ಲಿ ನಿಧನರಾದರು.

ಸರ್ದಾರರನ್ನು ಉಕ್ಕಿನ ಮನುಷ್ಯ ಎನ್ನಲಾಗಿದೆ. ಡಂಭಾಚಾರ, ಬಾಯಿ ಬಡುಕತನಗಳಿಂದ ಇವರು ದೂರವಾಗಿದ್ದರು. ಇವರು ಖಂಡಿತವಾದಿ, ಸರಳ, ಸಾಚಾ ಸ್ವಭಾವದವರು. ಹೊರಚರ್ಯೆ ಗಡಸು ಮತ್ತು ಗಂಭೀರವಾಗಿದ್ದರೂ ಅಶಿಕ್ಷಿತರ ಹಾಗೂ ಬಡವರ ಬಗ್ಗೆ ಅಂತರಂಗದಲ್ಲಿ ಇವರಿಗೆ ಅಪಾರ ಕರುಣೆಯಿತ್ತು. ಯಾವುದಾದರೂ ಒಂದು ಕೆಲಸಕ್ಕೆ ಮನಸ್ಸು ಮಾಡಿದರೆ ಅದನ್ನು ಸಾಧಿಸಿಯೇ ತೀರಬೇಕೆಂಬ ಹಠ ಇವರದು. ಸರ್ದಾರರ ದಾರಿಯಲ್ಲಿ ಯಾರಾದರೂ ಅಡ್ಡ ಬಂದರೆ ಅವರಿಗೆ ದೇವರೇ ಗತಿ ಎಂದು ಗಾಂಧೀಜಿ ಹೇಳುತ್ತಿದ್ದರು.

ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ನಿಜವಾದ ಸಮಾಜವಾದವಿದೆ ಎಂಬುದು ಇವರ ಅಭಿಪ್ರಾಯ. ಬೃಹತ್ಪ್ರಮಾಣದ ಉತ್ಪಾದನೆಯಿಂದ ಪಾಶ್ಚಾತ್ಯ ದೇಶಗಳಲ್ಲಿ ತಲೆದೋರಿರುವ ಅವ್ಯವಸ್ಥೆಯ ವಿದ್ಯಮಾನಗಳನ್ನು ನಮ್ಮ ದೇಶದಲ್ಲಿ ನಾವು ಉಂಟುಮಾಡ ಬಯಸುವುದಿಲ್ಲ ಎಂದು ಅಹಮದಾಬಾದಿನಲ್ಲಿ 1935 ಜನವರಿ 3ರಂದು ಮಾಡಿದ ಭಾಷಣದಲ್ಲಿ ಇವರು ಹೇಳಿದ್ದರು. (ಜಿ.ಎಸ್.ಕೆ.)

**ವರ್ಜಿಲ್:** ಪ್ರ.ಶ.ಪೂ.70-19. ರೋಮ್‌ನ ರಾಷ್ಟ್ರೀಯ ಮಹಾಕಾವ್ಯ ಈನಿಯಡ್ ರಚಿಸಿದ ಮಹಾಕವಿ. ಉತ್ತರ ಇಟಲಿಯ ಆಂಡೀಸ್ ಎಂಬ ಗ್ರಾಮದಲ್ಲಿ ಪ್ರ.ಶ.ಪೂ. 70ರಲ್ಲಿ ಜನಿಸಿದ. ಪಬ್ಲಿಯಸ್ ವರ್ಜಿಲಿಯಸ್ ಮ್ಯಾರೋ ಇವನ ಪೂರ್ಣ ಹೆಸರು. ಇವನ ಪ್ರಾಥಮಿಕ ಶಿಕ್ಷಣ ಕ್ರೆಮೊನಾ ಹಾಗೂ ಮಿಲಾನ್ ನಗರಗಳಲ್ಲಿ ನಡೆಯಿತು. ಅನಂತರ ತತ್ತ್ವಶಾಸ್ತ್ರವನ್ನು ನೇಪಲ್ಸ್‌ನಲ್ಲಿಯೂ ಅಲಂಕಾರಶಾಸ್ತ್ರವನ್ನು ರೋಮ್‌ನಲ್ಲೂ ಅಭ್ಯಸಿಸಿದ. ನ್ಯಾಯವಾದಿಯಾಗಿರ ಬೇಕಾದವನು ನ್ಯಾಯಾಲಯದಲ್ಲಿ ನಿಂತು ಮಾತನಾಡಲು ಅತ್ಯಂತ ಹಿಂದೆಗೆಯುತ್ತಿದ್ದ ಕಾರಣ, ಕಾವ್ಯಮಾರ್ಗವನ್ನು ಆರಿಸಿಕೊಂಡ. ಇವನ ಆರಂಭಿಕ ಕವಿತೆಗಳು ಇವನನ್ನು ಖ್ಯಾತನನ್ನಾಗಿಸಿದರೂ ಇವನಿಗೆ ಕಲೆಯಲ್ಲಿದ್ದ ತೀವ್ರ ಆಸಕ್ತಿ ಮುಂದೆ ಈತ ಚಕ್ರವರ್ತಿ ಅಗಸ್ಟಸ್‌ನ ಆಂತರಿಕ ಸಲಹೆಗಾರನಾಗಿ ನೇಮಕಗೊಳ್ಳಲು ಕಾರಣವಾಯಿತು; ಅಲ್ಲದೆ ಇಟಲಿ ಹಾಗೂ ಅದರ ಇತಿಹಾಸವನ್ನು ಬರೆಯುವ ಅವಕಾಶವೂ ಲಭಿಸಿತು.

ಈನಿಯಡ್ ಕಾವ್ಯವನ್ನು ಬರೆದು ಮುಗಿಸುವುದಕ್ಕೆ ಮುಂಚೆಯೇ ಈತ ನಿಧನನಾದ (ಪ್ರ.ಶ.ಪೂ.19). ದುರದೃಷ್ಟದ ಸಂಗತಿಯೆಂದರೆ ತನ್ನ ಕಾವ್ಯದ ಮಹತ್ತ್ವದ ಅರಿವಿಲ್ಲದ ಈತ ಇದನ್ನು ನಾಶಗೊಳಿಸಬೇಕೆಂಬ ಸೂಚನೆ ಕೊಟ್ಟಿದ್ದ. ಆದರೆ ಚಕ್ರವರ್ತಿ ಅಗಸ್ಟಸ್ ಇದಕ್ಕೆ ಅವಕಾಶವೀಯದೆ ವರ್ಜಿಲನ ಇಬ್ಬರು ಸ್ನೇಹಿತರಿಗೆ ಈ ಮಹಾಕಾವ್ಯವನ್ನು ಪ್ರಕಟಣೆಗೆ ಸಿದ್ಧಗೊಳಿಸಲು ಆದೇಶಿಸಿದ. ಈತನ ಕವಿತ್ವದ ಮಹತ್ತ್ವವನ್ನು ಸಾಹಿತ್ಯ ಕ್ಷೇತ್ರಕ್ಕೆ ಮೊದಲು ಪರಿಚಯಿಸಿದ್ದು ಇವನ ಎಕಲೋಗಸ್ ಹಾಗೂ ಬ್ಯುಕಲಿಕ್ಸ್ ಕೃತಿಗಳು. ಪ್ರ.ಶ.ಪೂ.ಸು.42-35ರ ನಡುವೆ ಇವು ರಚಿತವಾದಂಥವು. ಇಲ್ಲಿನ ಮಹತ್ತ್ವದ 10 ಕವಿತೆಗಳು ಕುರಿ ಕಾಯುವವರ ಜೀವನಚಿತ್ರವನ್ನು ಕೊಡುವಂಥವು. ಇವು ಪ್ಯಾಸ್ಟೋರಲ್ಸ್ ಎಂದು ಖ್ಯಾತವಾಗಿವೆ. ಎಕಲೋಗಸ್‌ನಲ್ಲಿ ಈತ ಥಿಯೋಕ್ರಿಟಸ್‌ನ ಗ್ರೀಕ್ ಪ್ಯಾಸ್ಟೋರಲ್ ಕವಿತೆಗಳನ್ನು ಅನುಸರಿಸಿದ್ದಾನೆ. ಆದರೆ ಇವನ ಕೃತಿಗಳು ಇಟಾಲಿಯನ್ ಜೀವನಶೈಲಿಯನ್ನು ಪ್ರಕಟಿಸುತ್ತವೆ.

ಇವನು ತನ್ನ ಜಾರ್ಜಿಕಸ್ ಕೃತಿಯ ಕವಿತೆಗಳನ್ನು ಬರೆಯಲು ಏಳು ವರ್ಷ ತೆಗೆದು ಕೊಂಡ. ಇದು ಪ್ರ.ಶ.ಪೂ. 29ರಲ್ಲಿ ಪ್ರಕಟವಾಯಿತು. ಈ ಕವಿತೆಗಳು ರೈತರನ್ನು ಕುರಿತವು. ಬೆಳೆ, ವೈನ್, ಆಲಿವ್ ಮರಗಳು, ಪಶು ಹಾಗೂ ಕುದುರೆ ಸಾಕಣೆ, ಜೇನು ಕೃಷಿ ಮುಂತಾದುವನ್ನು ಕುರಿತ ಮಾಹಿತಿ ಇಲ್ಲಿದೆ. ಆದರೆ ಇವು ಕೇವಲ ಮಾಹಿತಿ ಸಂಗ್ರಹವಾಗದೆ ಇಟಲಿಯ ಗ್ರಾಮೀಣ ಬದುಕಿನ ಸುಂದರ ಚಿತ್ರಣಗಳಾಗಿವೆ. ಮಾನವನ ಬದುಕಿನ ವಿಭಿನ್ನ ಮುಖಗಳನ್ನೂ ಇವು ಪರಿಚಯಿಸುತ್ತವೆ.

ಇವನ ಮಹಾಕಾವ್ಯ ಈನಿಯಡ್. ಅದರ ಮೊದಲ ಆರು ಅಧ್ಯಾಯಗಳು ಹೋಮರ್‌ನ ಮಹಾಕಾವ್ಯಗಳಾದ ಒಡಿಸ್ಸಿಯಿಂದಲೂ ಅನಂತರದ ಆರು ಅಧ್ಯಾಯಗಳು ಇಲಿಯಡ್ ನಿಂದಲೂ ನೇರ ಪ್ರಭಾವಕ್ಕೆ ಒಳಗಾಗಿವೆ. ಪ್ರಾಚೀನ ರೋಮ್‌ನ ಆರಂಭ ಕಾಲದಿಂದ ಈತನ ಕಾಲದವರೆಗಿನ ಬದುಕಿನ ಚಿತ್ರಣ ಇಲ್ಲಿ ದೊರೆಯುತ್ತದೆ. ಗ್ರೀಕರ ಆಕ್ರಮಣದಿಂದ ರೋಮ್ ನಗರವನ್ನು ರಕ್ಷಿಸಿದ ವೀರ ಟ್ರೋಜನ್ ಅಥವಾ ಈನಿಯಸ್‌ನ ವರ್ಣನೆಯನ್ನು ಈ ಮಹಾಕಾವ್ಯ ನೀಡುತ್ತದೆ. ರೋಮನ್ನರ ದೃಷ್ಟಿಯಲ್ಲಿ ದೈವೀಕ ಶಕ್ತಿಗಳುಳ್ಳ ವೀರ ಅಗಸ್ಟಸ್ ಪ್ರ.ಶ.ಪೂ.40-30 ರವರೆಗಿನ ಅಂತರ್ಯುದ್ಧದಿಂದ ರೋಮನ್ನು ಉಳಿಸಿದ ಕಾರಣ ಅಗಸ್ಟಸ್‌ನಿಗೆ ವಿಶೇಷ ಸ್ಥಾನಮಾನವಿದೆ.

ಪ್ರಪಂಚದ ಮತ್ತೊಬ್ಬ ಮಹಾನ್ ಕವಿಯಾದ ಡಾಂಟೆ ತನ್ನ ದ ಡಿವೈನ್ ಕಾಮಿಡಿ (1321)ಯಲ್ಲಿ ಈನಿಯಡ್‌ನ 6ನೆಯ ಅಧ್ಯಾಯವನ್ನು ಬಳಸಿಕೊಂಡಿದ್ದಾನೆ. ಪುನರುತ್ಥಾನ ಕಾಲದಲ್ಲಿ ಇಂಗ್ಲೆಂಡ್, ಇಟಲಿ ಹಾಗೂ ಫ್ರಾನ್ಸ್ ಸಾಹಿತ್ಯ ಕ್ಷೇತ್ರದಲ್ಲಿ ಇವನ ಎಕಲೋಗಸ್ ಕೃತಿ ಅಲ್ಲಿನ ಪ್ಯಾಸ್ಟೋರಲ್ ಕವಿತೆಗಳ ಮೇಲೆ ಪ್ರಭಾವ ಬೀರಿದೆ. ಆಂಗ್ಲ ಕವಿಗಳಿಗೆ ಆ ಕಾಲಕ್ಕೆ ಈತ ಒಬ್ಬ ಆದರ್ಶ ಕವಿ. ಜಾನ್ ಮಿಲ್ಟನ್ ತನ್ನ ಪ್ಯಾರಡೈಸ್ ಲಾಸ್ಟ್ (1667)ನಲ್ಲಿ ಈತನನ್ನು ಅನುಕರಿಸಿದ್ದಾನೆ. 1660ರಲ್ಲಿ ಜಾನ್ ಡ್ರೈಡನ್ ಈನಿಯಡ್ ಕಾವ್ಯವನ್ನು ಇಂಗ್ಲಿಷ್‌ಗೆ ಅನುವಾದಿಸಿದ. 1800ರ ಅನಂತರದ ಕವಿಗಳಾದ ವರ್ಡ್ಸ್‌ವರ್ತ್, ಲಾರ್ಡ್ ಟೆನಿಸನ್ ಹಾಗೂ 1900ರ ಅನಂತರದ ಮಹಾನ್ ವಿಮರ್ಶಕ ಟಿ.ಎಸ್.ಎಲಿಯಟ್‌ನಂಥವರೂ ಇವನ ಕಾವ್ಯದ ಪ್ರಭಾವಕ್ಕೊಳಗಾಗಿದ್ದಾರೆ. (ಜಿ.ಎನ್.ಎಸ್‌ಆರ್‌ಐ.)

**ವಲ್ಕ ಮೋನಿಕ:** ಇಟಲಿಯ ಬ್ರೆಷಿಯ ಪ್ರಾಂತದ ಒಗ್ಲಿಯೊ ನದಿ ಕಣಿವೆಯಲ್ಲಿಯ ಶಿಲಾಚಿತ್ರಗಳು ಯುರೋಪ್ ಖಂಡದಲ್ಲಿಯ ಅತಿ ಮುಖ್ಯ ಪ್ರಾಗಿತಿಹಾಸ ಬಂಡೆ ರೇಖಾ ಚಿತ್ರಗಳಲ್ಲಿ ಒಂದು. ಇದನ್ನು ವಿಶ್ವಸಂಸ್ಥೆ 1979ರಲ್ಲಿ ವಿಶ್ವಪರಂಪರೆಯ ನೆಲೆಯೆಂದು ಘೋಷಿಸಿದೆ. ರೋಮನ್ ಸೈನ್ಯ ಆಲ್‌ಪೈನ್ ನದಿ ಬಯಲಿನಿಂದ ಪೋ ನದಿ ಬಯಲಿನ ತನಕ ಪೂರ್ಣವಾಗಿ ಆಕ್ರಮಿಸಿತು. ಈ ವಿಷಯವನ್ನು ಅಗಸ್ಟ್ ಚಕ್ರವರ್ತಿ ಫ್ರಾನ್ಸ್‌ನ ಲಾ ತುರುಬಿಯಲ್ಲಿ ಕಟ್ಟಿಸಿದ ಒಂದು ಸ್ಮಾರಕದ ಮೇಲೆ ಬರೆಯಲಾಗಿದೆ. ಈ ಶಾಸನದಲ್ಲಿ ರೋಮನ್ ಸೈನ್ಯ ಆಲ್‌ಪೈನ್ ಪ್ರದೇಶದಲ್ಲಿ ಗೆದ್ದ ಸಮುದಾಯಗಳನ್ನು ಕೊಡಲಾಗಿದೆ. ಈ ಸಮುದಾಯಗಳಲ್ಲಿ ಕಮುನ್ನಿ ಒಂದು. ಹೀಗೆ ಈ ಸಮುದಾಯದ ಐತಿಹಾಸಿಕತೆ ಸಿದ್ಧವಾಯಿತು. ಆದರೆ ಇವರು ಯಾರು, ಎಲ್ಲಿಂದ ಬಂದರು, ಮತ್ತು ಇವರ ಆರಂಭ ಜೀವನದ ಶೈಲಿಯ ಬಗ್ಗೆ ಹೆಚ್ಚಿಗೆ ತಿಳಿದುಬಂದಿಲ್ಲ. ಈ ಪ್ರಾಚೀನ ಕಾಲದ ಬಂಡೆ ಚಿತ್ರಕಲೆ ಈ ದಿಶೆಯಲ್ಲಿ ತುಂಬ ಮಹತ್ವದಾಗಿ ಕಂಡುಬರುತ್ತದೆ. ಆದರೆ ಈ ಚಿತ್ರಗಳ ಉದ್ದೇಶ, ಅರ್ಥ, ಉಪಯುಕ್ತತೆ ಹಾಗೂ ಇವು ಧಾರ್ಮಿಕವೇ ಇಲ್ಲವೇ ಕಾಲರೂಪಗಳೇ ಮೊದಲಾದ ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ ಇವುಗಳ ಒಟ್ಟು ಅಧ್ಯಯನದಿಂದ ಇಲ್ಲಿಯ ಹತ್ತಾರು ಸಾವಿರ ಚಿತ್ರಗಳಿಂದ ಈ ಜನ ಸಮುದಾಯದ 400 ತಲೆಮಾರಿನ ಸಾಂಸ್ಕೃತಿಕ ಬೆಳವಣಿಗೆಯನ್ನು ತಿಳಿಯಬಹುದಾಗಿದೆ.

ಬಳಪದಕಲ್ಲು (ಶಿಸ್ಟ್) ಮತ್ತು ಮರಳು ಕಲ್ಲು ಬಂಡೆಗಳ ಮೇಲೆ ಅಸಂಖ್ಯಾತ ರೇಖಾ ಚಿತ್ರಗಳಿವೆ. ಸು.1930ರಲ್ಲಿ ಗಿಯೊವನ್ನಿ ಮರ್ರೊ ಈ ಚಿತ್ರಗಳ ಛಾಯಚಿತ್ರಗಳನ್ನು ತೆಗೆದುಕೊಂಡಿದ್ದ. ಆದರೆ ಇವು ಬೆಳಕಿಗೆ ಬರಲಿಲ್ಲ. ಸ್ಥಳೀಯರು ಈ ಚಿತ್ರಗಳನ್ನು ಪಿತೋತಿ, ಎಂದರೆ ಬೊಂಬೆಗಳೆಂದು ಕರೆಯುತ್ತಿದ್ದರು. ಬ್ರೆಷಿಯ ಪ್ರಾಂತದ ಭೂಗೋಳತಜ್ಞ ಈ ಗೀರುಚಿತ್ರಗಳ ಬಗ್ಗೆ 1909ರಲ್ಲಿ ನೋಡಿ ಕಪೋದಿಪೊಂತೆ ನಗರ ಸಭಾ ಕಕ್ಷೆಯಲ್ಲಿ ಬರುವ ಪಿಯಾನಸ್ ದ ಲೇ ಗ್ರಪೆಯಲ್ಲಿಯ 2 ಬಂಡೆಗಳ ಮೇಲಿದ್ದ ಚಿತ್ರಗಳ ಬಗ್ಗೆ ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದ. ಕೆಲವು ವರ್ಷಗಳ ಅನಂತರ ಅಲ್‌ತಿಮ್ ಮತ್ತು ತ್ರೌತ್‌ಮನ್, ಬತ್ತಗ್ಲಿಯ, ಬೊನಫಿಸಿ, ಗ್ರಾಸಿಯೊಸಿ ಮತ್ತು ಮರ್ರೊ ಮೊದಲಾದ ಇಟಲಿ ಮತ್ತು ಜರ್ಮನಿ ವಿದ್ವಾಂಸರು ಈ ಬಂಡೆ ಚಿತ್ರಗಳನ್ನು ಅಧ್ಯಯನ ಮಾಡಿ ಸಿಂಬರ್ಗೊ, ನದ್ರೊ, ಪಸಪರ್ದೊ ಮತ್ತು ಸೆಲ್ಲೆರೊ ಮೊದಲಾದ ವಲ್ಕಮೋನಿಕದ ಮಧ್ಯಪ್ರದೇಶ ಭಾಗಗಳನ್ನು ಹುಡುಕಾಡಿದರು. ಹೀಗೆ ಇವರು ಶೋಧಿಸಿದ ಬಂಡೆಚಿತ್ರಗಳ ಬಗ್ಗೆ 1930ರ ದಶಕದಲ್ಲಿ ಇಟಲಿ, ಫ್ರಾನ್ಸ್, ಪೋರ್ಚುಗಲ್ ಮತ್ತು ಈಜಿಪ್ಟ್ ಮೊದಲಾದ ದೇಶಗಳಲ್ಲಿ ನಡೆದ ಅಧಿವೇಶನಗಳಲ್ಲಿ ವಿದ್ವತ್ ಪ್ರಬಂಧಗಳನ್ನು ಮಂಡಿಸಿದರು. 1939-40ರ ಎರಡನೆಯ ಮಹಾಯುದ್ಧದ ಅನಂತರ ಇವರು ಇತರ ಹೊಸಸಂಶೋಧಕರೊಡನೆ ಕೆಲಸವನ್ನು ಮುಂದುವರಿಸಿದರು. 1955ರಲ್ಲಿ ಲೊಂಬರ್ಡಿಯ ಪುರಾತತ್ತ್ವ ಮೇಲ್ವಿಚಾರಕ ಕಪೋದಿ ಪೊಂತೆಯಲ್ಲಿ ರಾಷ್ಟ್ರೀಯ ಉದ್ಯಾನವನವನ್ನು ನಿರ್ಮಿಸಿದರು. ಅನಂತರ ಸೆಂತ್ರೊ ಕಮ್ಯುನೆಲ್ ದಿ ಸ್ಟುಡಿ ಪ್ರಿಹಿಸ್ಟರಿ ಚ ಸಂಸ್ಥೆಯ ಅಮ್ಯುನಲ್ ಅನಾಟಿ ಅಧ್ಯಯನವನ್ನು ಮುಂದುವರಿಸಿದರು. ಕೆಲವು ವರ್ಷಗಳ ಅನಂತರ ಇಟಲಿ ಮತ್ತು ಹಲವಾರು ವಿದ್ವಾಂಸರು ಇವರೊಡನೆ ಸೇರಿಕೊಂಡರು. ಈ ಚಿತ್ರಗಳ ಮೇಲೆ ನೂರಾರು ಶಿರೋನಾಮೆಗಳಿದ್ದರೂ ಕೂಡ ಇವುಗಳನ್ನು ಸೃಷ್ಟಿಸಿದ ಕಮುನ್ನಿ ಜನಸಮುದಾಯದ ಇತರ ಸಾಂಸ್ಕೃತಿಕ ಅವಶೇಷಗಳ ಬಗ್ಗೆ ಏನು ಗೊತ್ತಿರಲಿಲ್ಲ. ಪುರಾತತ್ತ್ವಜ್ಞರು ಕಪೋದಿ ಪೊಂತೆಯಲ್ಲಿಯ ವಿಯದೆಲೆಸಂತೆ ಒಂದು ಶವ ಸಂಸ್ಕಾರ ನೆಲೆಯನ್ನು ಪೊಪೆ ದಿ ನದ್ರೊದಲ್ಲಿಯ ಒಂದು ಗವಿಯನ್ನು ಮತ್ತಿತರ ಉತ್ಖನನಗಳನ್ನು ಕೈಗೊಂಡಿದ್ದರು. 1983ರಲ್ಲಿ ಸಿಮ್‌ಬರ್ಗೊ ಸಿಂಟೊ ಮತ್ತು ಪಸ್‌ಪರ್ ದೊ ಪ್ರದೇಶದ ಬಂಡೆ ಚಿತ್ರಗಳ ಸಂಗ್ರಹ ಮಾಡಿದರು. 1988ರಿಂದ ಯುವ ಸಂಶೋಧಕರು ಈ ಪ್ರಕಾರದ ಬಂಡೆ ಚಿತ್ರಗಳ ಅಧ್ಯಯನಕ್ಕೂ ಮತ್ತು ವಲ್ಕಮೋನಿಕ ಬಂಡೆ ಚಿತ್ರಗಳ ನೆಲೆ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ತಂತ್ರಗಾರಿಕೆ: ಈ ಬಂಡೆ ಚಿತ್ರಗಳನ್ನು ರೂಪಿಸಲು ಎರಡು ತಂತ್ರಗಳನ್ನು ಬಳಸಿದಂತೆ ಕಾಣುತ್ತದೆ: ಕುಟ್ಟುವಿಕೆ ಮತ್ತು ಕೆರೆಯುವಿಕೆ. ಇದರಲ್ಲಿ ಮೊದಲನೆಯದನ್ನು ಹೆಚ್ಚಾಗಿ ಬಳಸಲಾಗಿದೆ. ಸೂಕ್ತವಾದ ಕಲ್ಲುಗುಂಡಿನಿಂದ ನೇರವಾಗಿ ಕುಟ್ಟಿ ಕುಟ್ಟಿ ಚಿತ್ರವನ್ನು ಮೂಡಿಸುವುದು ಅಥವಾ ಒಂದು ಕಲ್ಲನ್ನು ಕೈಯಲ್ಲಿ ಹಿಡಿದು ಇನ್ನೊಂದು ಕಲ್ಲಿನಿಂದ ಉಳಿಕಲ್ಲಿಗೆ ಕುಟ್ಟುವುದು. ಅತಿಹರಿತವಾದ ಮೊನೆಯುಳ್ಳ ಕಲ್ಲಿನಿಂದ ಅಥವಾ ಲೋಹದ ಮೊನಚಿನಿಂದ ಕೆರೆಯುವುದು. ಒಂದೊಂದು ವೇಳೆ ಚಿತ್ರ ತೆಗೆಯುವ ಭಾಗವನ್ನು ಸ್ವಲ್ಪ ಉಜ್ಜಿ ನಯಮಾಡಿ ಅನಂತರ ಚಿತ್ರಗಳನ್ನು ತೆಗೆಯುವುದು. ಈ ವಿಧಾನವನ್ನು ಪೊಲಿಸಾಯರ್ ಎಂದು ಕರೆಯಲಾಗಿದೆ. ಒಮ್ಮೊಮ್ಮೆ ಚಿತ್ರದ ಗೆರೆಗಳ ತಗ್ಗುಗಳಲ್ಲಿ ಕೆಮ್ಮಣ್ಣಿನ ಬಣ್ಣವನ್ನು ತುಂಬಿಡಲಾಗುತ್ತಿತ್ತು. ಗಂಡಸಿನ ಚಿತ್ರಕ್ಕೆ ದಪ್ಪವಾಗಿ ಬಣ್ಣಹಾಕಲಾಗುತ್ತಿತ್ತು, ಚಿತ್ರಗಳನ್ನು

ಪರಿಶೀಲಿಸಿದಾಗ ಅವು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಶೈಲಿಯಲ್ಲಿವೆ. ಆದ್ದರಿಂದ ಇಂತಹ ಚಿತ್ರಗಳನ್ನು ತಯಾರಿಸುವುದರಲ್ಲಿ ವಂಶಪಾರಂಪರಿಕ ತರಬೇತಿ ಕಾಣುತ್ತದೆ. ಈ ಪ್ರದೇಶದಲ್ಲಿ ಪ್ರ.ಶ.ಪೂ.ಸು.10,000 ವರ್ಷಗಳ ಹಿಂದೆ ಹಿಮಯುಗ ಕೊನೆಗೊಂಡು ಜಿಂಕೆ, ಆಡು. ಎಲ್ಕ್ (ಜಿಂಕೆ ಜಾತಿಯ ಒಂದು ಮೃಗ) ಮೊದಲಾದ ಪ್ರಾಣಿಗಳು ಕಾಣಿಸಿಕೊಂಡವು. ಇವುಗಳ ಬೇಟೆಗೋಸ್ಕರ ಆ ಕಾಲದ ಜನರು ಬಂದು ಇಲ್ಲಿ ನೆಲೆಸಿದರು. ಬಾಣ ನಾಟಿದ ಜಿಂಕೆಗಳ ಚಿತ್ರ ಮೊದಲಾದವು ಯೂನೆಬಿಬೊರಿಯೊ ಟರ್ಮನ್ ಬಂಡೆ ಚಿತ್ರಗಳಲ್ಲಿವೆ. ಇಂತಹ ಚಿತ್ರಗಳೇ ಈ ಪ್ರದೇಶದಲ್ಲಿ ಅತ್ಯಂತ ಪ್ರಾಚೀನವಾದವು. ಬ್ರೆನೋವಿನಲ್ಲಿ ಹೆಚ್ಚು ಕಡಿಮೆ ಈ ಕಾಲದ ಕಸಾಯಿಖಾನೆಯ ನೆಲೆಯನ್ನು ಶೋಧಿಸಲಾಗಿದೆ. ಸಮೀಪದ ಫೊಸೆ ಬಿನದ್ರೊವಿನ ಕಲ್ಲಾಸರೆಯಲ್ಲಿ ಹರಿತವಾದ ಫ್ಲಿಂಟ್ ಕಲ್ಲಿನ ಉಪಕರಣ ಇದನ್ನು ಪುಷ್ಟೀಕರಿಸುತ್ತದೆ. ಅನಂತರ ನವಶಿಲಾಯುಗ ಹಂತದಲ್ಲಿ ಇವರೊಡನೆ ಬೇರೆ ಜನಸಮುದಾಯ ಸೇರಿಕೊಂಡು ಒಟ್ಟಿಗೆ ಜೀವನ ನಡೆಸಿದಂತೆ ಕಾಣುತ್ತದೆ. ಇವರು ಕಮ್ಯುನಿ ಜನತೆಯ ಹಿಂದಿನ ತಲೆಮಾರಿನವರಾದುದರಿಂದ ಇವರನ್ನು ಕಮುನಿಯರೆಂದೆ ಗುರುತಿಸಲಾಗಿದೆ.

ಬ್ರನೊವಿನ್ ಉತ್ಖನನದಲ್ಲಿ ನವ ಶಿಲಾ ಸಂಸ್ಕೃತಿಯ ಅವಶೇಷಗಳು ದೊರಕಿವೆ. ಈ ಜನರಿಗೆ ಕೃಷಿ ಮತ್ತು ಪಶುಪಾಲನೆ ಮುಖ್ಯ ಕಸಬುಗಳಾಗಿದ್ದವು. ಉತ್ತರ ಇಟಲಿಯ ನವಶಿಲಾಯುಗದ ಸ್ಟೆರ್ ಮೌತ್ ಜಾರ್ ಸಂಸ್ಕೃತಿಯ ಜನರಲ್ಲಿ ಇವರ ಸಂಬಂಧವೂ ಕಾಣುತ್ತದೆ. ಇವರ ಕಾಲದಲ್ಲಿ ಕಪ್‌ನೈನ್ ಜಾಸ್‌ದೊಸ್ ಫಿಲಿಪ್ ಹೋಪಿ ದಿ ನದ್ರೊ ಸನ್ನಿವೇಶವನ್ನು ನಿರೂಪಿಸುವ ಎರಡು ಚಿತ್ರಗಳನ್ನು ರೂಪಿಸಿದಂತೆ ಕಾಣುತ್ತದೆ. ಇವು ಸಾಮಾನ್ಯವಾಗಿ ಧಾರ್ಮಿಕ, ಆರ್ಥಿಕ ವಿಷಯಗಳಿಗೆ ಸಂಬಂಧಿಸಿದೆ. ಉದಾ: ಕೃಷಿಗೆ ಸಂಬಂಧಿಸಿದ ಅಗ್ನಿಪೂಜೆ ಅಥವಾ ಸೂರ್ಯಪೂಜೆ, ನಾಯಿಗಳ ಗುಂಪು, ಹಾರುತ್ತಿರುವ ಮಿಡತೆ ಅಥವಾ ದುಂಬಿ ಮೊದಲಾದ ಚಿತ್ರಗಳು ಕೃಷಿ ಮತ್ತು ಪಶು ಸಂಗೋಪನೆಗೆ ಸಂಬಂಧಿಸಿದೆ ಎಂದು ಅರ್ಥೈಸಲಾಗಿದೆ. ಅನಂತರದ ಹಂತದಲ್ಲಿ ಪ್ರ.ಶ.ಪೂ.ಸು. 4–3ನೆಯ ಶತಮಾನದ ವಲ್ಕಮೋನಿಕ ಪ್ರದೇಶ ಚಿತ್ರಗಳಲ್ಲಿ ಅತಿ ಸ್ಪಷ್ಟವಾದ ಬದಲಾವಣೆ ಕಾಣಬಹುದು. ನಿಲಸಕಲ್ಲುಗಳು, ಅಸ್ಪಷ್ಟ ಮೂರ್ತಿಯುಳ್ಳ ನಿಲಸಕಲ್ಲುಗಳು ಮೊದಲಾದ ಪ್ರಕಾರಗಳು ಮೊದಲಬಾರಿಗೆ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಕೊಡಲಿ, ಕಠಾರಿ, ಭರ್ಜಿ, ಪದಕ ಮೊದಲಾದ ಲೋಹದ ವಸ್ತುಗಳು, ನೊಗಕ್ಕೆ ಹೂಡಿದ ಎತ್ತುಗಳು, ಪ್ರಾಣಿ, ಮನುಷ್ಯ ಮೊದಲಾದ ಚಿತ್ರಗಳು ಈ ಜನರ ದೈವಲೋಕ ಕಲ್ಪನೆ ಮತ್ತು ಲೋಹದ ಆಯುಧಗಳ ಬಳಕೆಗಳನ್ನು ಸೂಚಿಸುತ್ತವೆ. ಇದನ್ನು ಹೆಚ್ಚಾಗಿ ವಲ್ ದವೋಸ್ತಾ, ಅಲ್ಟೊಡಿಗೆ, ವ್ಯಾಲಿಸ್, ಸ್ವಿಜಿರೊ, ವಾಲ್ತನಿಲಿನ ಮೊದಲಾದ ಸ್ಥಳಗಳಲ್ಲಿ ಮೂರ್ತಿನಿಲಸುಗಲ್ಲು ಮತ್ತು ಶಾಸನವಿರುವ ಕಲ್ಲುಗಳಿಂದ ತಿಳಿಯಬಹುದಾಗಿದೆ.

ಮುಂದಿನ ಕಂಚಿನ ಯುಗದ ಹಂತದಲ್ಲಿ ಆಯುಧಗಳ ವೈವಿಧ್ಯ ಅತಿ ಹೆಚ್ಚಾಗುತ್ತದೆ. ಪ್ರತಿಯೊಂದು ಪ್ರಕಾರದ ಆಯುಧಗಳ ವಿವಿಧ ಮಾದರಿಗಳಿವೆ. ಕಂಚಿನ ಆಯುಧಗಳು ತಾಮ್ರದ ಆಯುಧಗಳಿಗಿಂತ ಹೆಚ್ಚು ಬಲವಾಗಿ ಗಟ್ಟಿಯಾಗಿರುತ್ತವೆ. ಕ್ರಮೇಣ ಲೋಹ ತಂತ್ರದ ಕೈಗಾರಿಕೆ ನೆಲೆಗಳನ್ನು ರಕ್ಷಿಸಬೇಕಾದುದರಿಂದ ಸೈನ್ಯ ವ್ಯವಸ್ಥೆಯನ್ನು ಬೆಳೆಸಿಕೊಳ್ಳಬೇಕಾಯಿತು. ಇದಕ್ಕೆ ಅನುಗುಣವಾಗಿ ಈ ಚಿತ್ರಗಳಲ್ಲಿ ಯೋಧರ ಚಿತ್ರಗಳು ಬರಬರುತ್ತಾ ಸಾಮಾನ್ಯವಾಗಿ ಕಾಣುತ್ತವೆ. ಕಂಚಿನ ಯುಗದ ಚಿತ್ರಗಳಲ್ಲಿ ಜಿಂಕೆ, ನಾಯಿ, ಎತ್ತು, ಗಾಡಿ, ನೆಲಉಳುವ ದೃಶ್ಯ ಚಿತ್ರಗಳು ಸಾಮಾನ್ಯ. ಇಂತಹ ಚಿತ್ರಗಳು ಗರ್ದ ಸರೋವರದ ಹತ್ತಿರ ಇವೆ.

ಕಬ್ಬಿಣ ಬಳಕೆಯ ಹಂತದಲ್ಲಿ ಎತ್ತುಗಳ ಬದಲಾಗಿ ಕುದುರೆ ಉಪಯೋಗ, ಅರೆ ಚಕ್ರ ಬಂಡಿಗಳು ಮೊದಲಾದ ಚಿತ್ರಗಳು ಕಾಣಿಸಿಕೊಳ್ಳುತ್ತವೆ. ಶಸ್ತ್ರ ಸಹಿತ ಕುದುರೆ ಸವಾರರು, ಯೋಧರ ಸಾಲುಗಳು ಮೊದಲಾದವುಗಳು ಮೇಲೆ ಹೇಳಿದ ಸ್ಥಳಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ. ಇವುಗಳ ಜೊತೆಗೆ ಕಲ್ಲುಗುಳಿಗಳು, ಮನುಷ್ಯ ಪಾದಗಳು, ಚಕ್ರವ್ಯೂಹ, ಕೋಟೆ ಚಿತ್ರಗಳು, ವಾಸದ ಮನೆಗಳು, ಸ್ವಸ್ತಿಕ (  ) ಮಾದರಿ, ಧಾರ್ಮಿಕ ಚಿಹ್ನೆಗಳು, ಖಡ್ಗಧಾರಿ ಯೋಧರು ಪದೇ ಪದೇ ಕಾಣಿಸಿಕೊಳ್ಳುತ್ತಾರೆ. (ಎ.ಎಸ್.;ಎಸ್.ಎಲ್.)

**ವಸಾಹತು ನೀತಿ:** ಒಂದು ದೇಶ ಇನ್ನೊಂದು ದೇಶವನ್ನು ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ವಶಪಡಿಸಿಕೊಂಡು ಶೋಷಿಸುವ ಒಂದು ವ್ಯವಸ್ಥೆ. ಆರ್ಥಿಕ ಲಾಭದೃಷ್ಟಿಯಿಂದ ವಲಸೆ ಬಂದ ಜನ ವಸಾಹತುಗಳನ್ನು ಸ್ಥಾಪಿಸುವ ಮೂಲಕ ವಸಾಹತುಶಾಹಿ ಆಡಳಿತ ವ್ಯವಸ್ಥೆಯನ್ನು ರೂಪಿಸಿ ಶೋಷಣೆಗೆ ಕಾರಣರಾದರು (ಉದಾ: ಪ್ರಾಚೀನಕಾಲದಲ್ಲಿ ಮೆಡಿಟರೇನಿಯನ್ ದ್ವೀಪಗಳಲ್ಲಿ ಗ್ರೀಕ್ ವಸಾಹತು ವ್ಯವಸ್ಥೆ ಸ್ಥಾಪನೆಯಾದ ಹಾಗೆ; ಆಧುನಿಕ ಕಾಲದಲ್ಲಿ ಅಮೆರಿಕ ಅಥವಾ ಆಸ್ಟ್ರೇಲಿಯ ಖಂಡದಲ್ಲಿ ವಸಾಹತು ವ್ಯವಸ್ಥೆ ಸ್ಥಾಪಿತವಾದ ಹಾಗೆ). ತರತಮದ ವಾಣಿಜ್ಯ ಒಪ್ಪಂದಗಳು, ನೈಸರ್ಗಿಕ ಸಂಪನ್ಮೂಲಗಳ ಏಕಸ್ವಾಮ್ಯತೆ ಹಾಗೂ ಆರ್ಥಿಕ ಸೋರಿಕೆಗಳೂ ಈ ವ್ಯವಸ್ಥೆಗೆ ಹಾದಿಮಾಡಿಕೊಟ್ಟವು. ಅಲ್ಲದೆ ಪ್ರಾದೇಶಿಕ ಹಾಗೂ ರಾಜಕೀಯ ಹಿಡಿತದ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಬೌದ್ಧಿಕ ನೆಲೆಯಲ್ಲಿಯೂ ವಸಾಹತುಕರಣವಾಗುತ್ತದೆ.

ಯುದ್ಧತಂತ್ರದಲ್ಲಾದ ಸುಧಾರಣೆ, ಸಿಡಿಮದ್ದಿನ ಬಳಕೆ, ಭೌತಿಕ ಹಾಗೂ ಸಾಂಸ್ಕೃತಿಕ ಮುನ್ನಡೆ ಮುಂತಾದ ಅಂಶಗಳನ್ನು ಬಳಸಿಕೊಂಡು ಪಶ್ಚಿಮ ದೇಶಗಳು ಆಫ್ರೊ–ಏಷ್ಯ ಭೂಭಾಗದಲ್ಲಿ ವಸಾಹತುಶಾಹಿ ವಿಸ್ತರಣೆಯ ಮೂಲಕ ಹಿಡಿತ ಸಾಧಿಸಿದವು. ಪೂರ್ವ ಮತ್ತು ಪಶ್ಚಿಮಗಳ ಮುಖಾಮುಖಿ ಕೆಲವು ಸಕಾರಾತ್ಮಕ ಫಲಿತಾಂಶಗಳಿಗೆ ಹಾದಿ ಮಾಡಿತು – ಉದಾ: ಆಧುನಿಕ ಶಿಕ್ಷಣದ ಪ್ರಸಾರ, ಪಾಶ್ಚಾತ್ಯ ಚಿಂತನೆ, ಆಧುನಿಕ ಸಾರಿಗೆ ವ್ಯವಸ್ಥೆ, ಸಂಪರ್ಕ ವ್ಯವಸ್ಥೆ, ವೈಜ್ಞಾನಿಕ ಜ್ಞಾನ–ಇವುಗಳಿಂದ ಸಾಂಸ್ಕೃತಿಕ ಮುನ್ನಡೆಯಾದುದಲ್ಲದೆ ರಾಜಕೀಯ ಪ್ರಜ್ಞೆಯ ಬಗೆಗಿನ ಅರಿವೂ ಮೂಡಿತು.

200 ವರ್ಷಗಳ ಬ್ರಿಟಿಷ್ ವಸಾಹತುಶಾಹಿ ಆಳಿಕೆಯಲ್ಲಿ (1757–1947) ಭಾರತ ಸಾಮಂತ ವ್ಯವಸ್ಥೆಯಿಂದ ಮುಕ್ತವಾಯಿತಲ್ಲದೆ ಕಾನೂನು ಮತ್ತು ನ್ಯಾಯವ್ಯವಸ್ಥೆ, ಪಾಶ್ಚಾತ್ಯ ಲೌಕಿಕ ಶಿಕ್ಷಣ, ರಾಜಕೀಯ ಚಿಂತನೆ, ವೈಜ್ಞಾನಿಕ ಅರಿವು, ವೈದ್ಯಕೀಯ ವ್ಯವಸ್ಥೆ, ಆಧುನಿಕ ಸಾರಿಗೆ ಸಂಪರ್ಕ ಇವುಗಳ ಲಾಭ ಪಡೆದಂತೆ ತೋರಿಬಂದಿತು. ಇವರ ಆಳಿಕೆಯ ಕಾಲಾವಧಿಯಲ್ಲಿ ಪಾರಂಪರಿಕ ಕರಕುಶಲ ಕಲೆಗಳು ಅವನತಿ ಕಂಡವು; ಆಂತರಿಕ ಮತ್ತು ಬಾಹ್ಯ ವ್ಯಾಪಾರ ಸಂಪರ್ಕಗಳು ಕುಸಿದವು; ವ್ಯಾಪಾರಿ ಹಾಗೂ ಕುಶಲಕರ್ಮಿ ವರ್ಗಗಳು ಸೊರಗಿದವು. ರೈತಾಪಿ ಜನವರ್ಗ ಕ್ಷೋಭೆಗೊಳಗಾಯಿತು ಹಾಗೂ ಪದೇ ಪದೇ ಬರಪರಿಸ್ಥಿತಿ ಉಂಟಾಯಿತು. ಹಸಿವಿನಿಂದ ದುರ್ಮರಣಗಳು ಹೆಚ್ಚಿದವು. ಪಾರಂಪರಿಕ ಪಟ್ಟಣ ಹಾಗೂ ಕೈಗಾರಿಕ ಕೇಂದ್ರಗಳು ನಶಿಸಿದವು. ಸ್ವೇಚ್ಛಾರೂಪದ ಭೂಕಂದಾಯ ವ್ಯವಸ್ಥೆ ಜಾರಿಗೆ ಬಂದಿತು. ಗ್ರಾಮೀಣ ಸಾಲಬಾಧೆ ಹೆಚ್ಚಾಯಿತು, ಎಲ್ಲಕ್ಕಿಂತ ಮಿಗಿಲಾಗಿ ಭಾರತದ ಸಂಪತ್ತು ಪಶ್ಚಿಮದ ಪಾಲಾಯಿತು.

18ನೆಯ ಶತಮಾನದ ಅಂತ್ಯದಲ್ಲಿ ಬಂಗಾಲದಲ್ಲಿ ರಾಬರ್ಟ್ ಕ್ಲೈವ್ ಹಾಗೂ ವಾರನ್ ಹೇಸ್ಟಿಂಗ್ಸ್‌ನ ಆಳಿಕೆಯಲ್ಲಿ ಬನಿಯ ಹಾಗೂ ಮಹಾಜನ ವರ್ಗದವರು ವಿಧಿಸಿದ ಅತಿಕಂದಾಯದಿಂದಾಗಿ ಕೃಷಿ ವ್ಯವಸ್ಥೆ ಸಂಪೂರ್ಣವಾಗಿ ನಾಶವಾಯಿತು. ಇದರ ಪರಿಣಾಮವಾಗಿ 1770ರ ದಶಕದಲ್ಲಿ ಬಂಗಾಲದ ಭೀಕರ ಬರಗಾಲ ಉಂಟಾಗಿ ಮೂರು ವರ್ಷಗಳೊಳಗೆ ಜನಸಂಖ್ಯೆಯ 3ನೆಯ 1 ಭಾಗ ನಿರ್ನಾಮವಾಯಿತು. 1793ರಲ್ಲಿ ಬ್ರಿಟಿಷರು ಶಾಶ್ವತ ಜಮೀನ್ದಾರಿ ವಸಾಹತುಗಳನ್ನು ಸ್ಥಾಪಿಸಿದರು. ಇದರಿಂದ ಜಮೀನ್ದಾರರು ನಿರಂಕುಶ ಅಧಿಕಾರ ಪಡೆದುದರಿಂದ ಜಮೀನು ಸುಲಭವಾಗಿ ಮಾರಾಟವಾಗುವ ಸರಕಾಯಿತು. ಜಮೀನ್ದಾರ ಹಾಗೂ ಸಾಮಾನ್ಯ ರೈತರ ನಡುವೆ ಮಧ್ಯವರ್ತಿಗಳು ಹುಟ್ಟಿಕೊಂಡರು. ಹೀಗೆ ರೈತವರ್ಗದವರು ಶೋಷಣೆಗೊಳಗಾದರು. ದಕ್ಷಿಣ ಹಾಗೂ ಪಶ್ಚಿಮ ಭಾರತದ ಪ್ರದೇಶಗಳನ್ನು ವಶಪಡಿಸಿಕೊಂಡಾಗ ರಿಕಾರ್ಡೊನ ಆರ್ಥಿಕ ಚಿಂತನೆಯನ್ನು ಗಮನದಲ್ಲಿಟ್ಟುಕೊಂಡು ರೈತವಾರಿ ಪದ್ಧತಿಯನ್ನು ಇಲ್ಲಿ ಜಾರಿಗೆ ತರಲಾಯಿತು. ಈ ಮೂಲಕ ಶೇ.50 ಆದಾಯ ರಾಜ್ಯಕ್ಕೆ ಸಲ್ಲುವುದು; ಕೃಷಿಕಾರರಿಗೆ ಲಾಭ ಹಾಗೂ ಕೃಷಿಕಾರ್ಮಿಕರಿಗೆ ಕೂಲಿ ದೊರೆಯುವಂತೆ ಮಾಡುವುದು ಮನ್ರೊನ ಆಶಯವಾಗಿತ್ತು. ಆದರೆ ಈ ವ್ಯವಸ್ಥೆ ದಕ್ಷಿಣ ಭಾರತದಲ್ಲಿ ಶ್ರೀಮಂತ ಜಮೀನ್ದಾರಿ ವರ್ಗವನ್ನು ಸೃಷ್ಟಿಸಿತು. ಭೂಬಾಡಿಗೆಯನ್ನು ಜಮೀನ್ದಾರರು ನಗದು ರೂಪದಲ್ಲಿ ಸಂಗ್ರಹಿಸಲು ಆರಂಭಿಸಿದಾಗ ಕೃಷಿಕಾರರು ಸುಗ್ಗಿಗೆ ಮುನ್ನವೇ ತಮ್ಮ ಬೆಳೆಯನ್ನು ಮಾರಬೇಕಾಯಿತು ಇಲ್ಲವೇ ಅಡವಿಡಬೇಕಾಯಿತು. ಇದರಿಂದಾಗಿ ರೈತಾಪಿ ವರ್ಗದಲ್ಲಿ ಸಾಲಬಾಧೆ ಹಾಗೂ ಬಡತನ ಹೆಚ್ಚಿತು.

ಬ್ರಿಟಿಷ ಆಳಿಕೆಯ ಕಾಲದಲ್ಲಿ ರೈತಾಪಿ ಜನರು ಜಮೀನ್ದಾರರ, ಸಾಲಗಾರರ, ಧಾನ್ಯ ವರ್ತಕರ ಮತ್ತು ರೆವಿನ್ಯೂ ಅಧಿಕಾರಿಗಳೆಲ್ಲರ ಶೋಷಣೆಗೆ ಒಳಗಾಗಿದ್ದರು. ಈ ರೀತಿ ದಮನಗಳನ್ನು ಸಹಿಸಿಕೊಂಡು ಭಾರತದ ರೈತಾಪಿ ಜನರು ನಿಷ್ಕ್ರಿಯವಾಗಿ ಕುಳಿತಿರಲಿಲ್ಲ. 18ನೆಯ ಶತಮಾನದ ಕೊನೆಯಿಂದ ಸು.100 ದಂಗೆಗಳಾಗಿವೆ: ಮೈಸೂರು ದಂಗೆ (1830–31), ಸಂತಾಲ್ ದಂಗೆ (1855), ಇಂಡಿಗೊ ಬೆಳೆಗಾರರ ಮುಷ್ಕರ, ಮಾಪಿಳ್ಳ ದಂಗೆ (19 ಮತ್ತು 20ನೆಯ ಶತಮಾನ), ತೆಲಂಗಾಣ ದಂಗೆ, ಶ್ರೀರಾಮ ರಾಜು ದಂಗೆ ಮುಂತಾದವು.

19ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಭಾರತದ ಮೊದಮೊದಲ ಬಂಡವಾಳಗಾರರು ಭಾರತವನ್ನು ಕೈಗಾರಿಕೀಕರಣಗೊಳಿಸಲು ಪ್ರಯತ್ನಗಳನ್ನು ಮಾಡಿದಾಗ, ಅವಕ್ಕೆ ಭಾರತದಲ್ಲಿನ ಬ್ರಿಟಿಷ್ ಸರ್ಕಾರ ನಾನಾ ರೀತಿಗಳಲ್ಲಿ ಅಡ್ಡಿಯುಂಟುಮಾಡಿತು. ಕೈಗಾರಿಕೀಕರಣ ಆರಂಭವಾಗಲು ಮತ್ತು ಬೆಳೆಯಲು ರಾಷ್ಟ್ರದಿಂದ ರಕ್ಷಣೆ ಆವಶ್ಯಕ. ಮ್ಯಾಂಚೆಸ್ಟರ್–ಲಂಕಾಷೈರ್ ಮಿಲ್ಸ್ ಕಾರ್ಖಾನೆಯ ಆರಂಭದ ವರ್ಷಗಳಲ್ಲಿ, ಬ್ರಿಟಿಷ್ ಸರ್ಕಾರ, ಈಸ್ಟ್ ಇಂಡಿಯ ಕಂಪನಿಯ ಮೂಲಕ ಲಾಭದಾಯಕವಾಗಿ ರಫ್ತಾಗುತ್ತಿದ್ದ ಭಾರತೀಯ ಜವಳಿ ಉದ್ಯಮದ ಮೇಲೆ ಭಾರಿ ತೆರಿಗೆಯನ್ನು ವಿಧಿಸಿ ಮ್ಯಾಂಚೆಸ್ಟರ್–ಲಂಕಾಷೈರ್ ಮಿಲ್ಲುಗಳಿಗೆ 18ನೆಯ ಶತಮಾನ ಮುಗಿಯುವವರೆಗೆ ರಕ್ಷಣೆ ನೀಡಿತು. ಆದರೆ ಆರಂಭದ ಭಾರತೀಯ ಕೈಗಾರಿಕೋದ್ಯಮಿಗಳು ರಾಷ್ಟ್ರದ ರಕ್ಷಣೆ ಹಾಗೂ ರಿಯಾಯಿತಿಗಳನ್ನು ನೀಡಬೇಕೆಂದು ಒತ್ತಾಯಿಸಿದಾಗ, ಬ್ರಿಟಿಷ್ ಸರ್ಕಾರ ತಟಸ್ಥ ನೀತಿಯ ಅಥವಾ ಮುಕ್ತ ವ್ಯಾಪಾರ ನೀತಿಗೆ ವಿರುದ್ಧವಾದುದೆಂಬ ಕಾರಣಕೊಟ್ಟು ಕ್ಷಿಪ್ರವಾಗಿ ತಿರಸ್ಕರಿಸಿತು.

ಆದರೆ ಈ ವಾದ ಅನುಕೂಲಸಿಂಧುವಾಗಿತ್ತು. ಉದಾ: ಬಹುತೇಕ ಬ್ರಿಟಿಷ್ ಉದ್ಯಮವಾದ ಪ್ಲಾಂಟೇಷನ್ ಉದ್ಯಮಕ್ಕೆ ರಿಯಾಯಿತಿ ನೀಡುವ ಪ್ರಶ್ನೆ ಬಂದಾಗ, ಬ್ರಿಟಿಷ್ ಸರ್ಕಾರ ಜಮೀನನ್ನು ವಾಸ್ತವವಾಗಿ ಉಚಿತವಾಗಿ ನೀಡಿದ್ದು ಮಾತ್ರವಲ್ಲದೆ, ಅನೇಕ ವರ್ಷಗಳ ಕಾಲ ಪ್ಲಾಂಟೇಷನ್ (ಬೆಳೆ)ಗಳಿಗೆ ತೆರಿಗೆ ರಿಯಾಯಿತಿಯನ್ನೂ ನೀಡಿತು. ಅಂತೆಯೇ, ನೂರಕ್ಕೆ ನೂರರಷ್ಟು ಬ್ರಿಟಿಷ್ ಉದ್ಯಮವಾದ ರೈಲ್ವೆ ಕ್ಷೇತ್ರದಲ್ಲಿ ಎಲ್ಲ ರೈಲ್ವೆ ಕಂಪನಿಗಳಿಗೂ ಅವುಗಳು ಭಾರಿ ಲಾಭ ಗಳಿಸುತ್ತಿದ್ದರೂ ಆರ್ಥಿಕ ವಿನಾಯಿತಿ ನೀಡಲಾಯಿತು. ದಾದಾಭಾಯಿ ನವರೋಜಿಯವರ ಪಾವರ್ಟಿ ಅಂಡ್ ಅನ್‌ಬ್ರಿಟಿಷ್‌ರೂಲ್ ಇನ್ ಇಂಡಿಯ, ವಿಲಿಯಂ

ಡಿಗ್ಬಿಯ ಪ್ರಾಸ್ಪರಸ್ ಬ್ರಿಟಿಷ್ ಇಂಡಿಯ ಮತ್ತು ರಮೇಶ್‌ದತ್ತರ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯ (2 ಸಂಪುಟಗಳು) ಎಂಬ ಮೂರು ಮುಖ್ಯ ಕೃತಿಗಳು ಪ್ರಕಟವಾದ ಅನಂತರ, ಆರ್ಥಿಕ ವ್ಯಯದ ಸಿದ್ಧಾಂತ ಹೆಚ್ಚು ಕಡಿಮೆ ಭಾರತದಲ್ಲಿಯ ರಾಷ್ಟ್ರೀಯತಾವಾದಿಗಳೆಲ್ಲರ ಅಂಗೀಕಾರ ಪಡೆಯಿತು. ಭಾರತದಿಂದ ಸಂಪತ್ತು ಹರಿದುಹೋಗುತ್ತಿದ್ದುದು, ಈಸ್ಟ್ ಇಂಡಿಯ ಕಂಪನಿಯ ಷೇರುದಾರರಿಗೆ ಲಾಭಾಂಶಗಳು, ಮನೆ ಖರ್ಚು, ಲಂಡನ್ನಿನಲ್ಲಿರುವ ಭಾರತದ ಕಛೇರಿಯ ಖರ್ಚುವೆಚ್ಚಗಳು, ವ್ಯಾಪಾರೀ ಲಾಭಗಳು, ರೈಲ್ವೆ ಕಂಪನಿಗಳಿಗೆ ರಿಯಾಯಿತಿಗಳು ಮತ್ತು ಬಡ್ಡಿ ಗ್ಯಾರಂಟಿ, ಬ್ರಿಟಿಷ್ ಅಧಿಕಾರಿಗಳಿಗೆ ವಿಶ್ರಾಂತಿವೇತನ, ಭಾರತಕ್ಕೆ ಒದಗಿಸಿದ ಸಿವಿಲ್ ಮತ್ತು ಮಿಲಿಟರಿ ಕೋಠಿಗಳ ವೆಚ್ಚ, ಭಾರತದ ಸಲುವಾಗಿ ಇಂಗ್ಲೆಂಡಿನಲ್ಲಿ ನೀಡಿದ ಸಿವಿಲ್ ಮತ್ತು ಮಿಲಿಟರಿ ಶುಲ್ಕಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಭಾರತದಲ್ಲಿ ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳಲ್ಲಿ ತೊಡಗಿಸಿದ ಖಾಸಗಿ ವಿದೇಶಿ ಬಂಡವಾಳವೇ ಭಾರತದಿಂದ ಸಂಪತ್ತು ಹರಿದುಹೋಗುವ ಆಕರವಾಯಿತು. ಆಡಂಸ್ಮಿತ್‌ನು ಆರಂಭದ ಬ್ರಿಟಿಷ್ ಪ್ರಭುಗಳನ್ನು ಭಾರತದ ಸುಲಿಗೆಕೋರರೆಂದು ಕರೆದಿದ್ದು ಈ ಕಾರಣದಿಂದಲೇ. 1857ರ ಸೆಪ್ಟೆಂಬರ್‌ನಲ್ಲಿ ಕಾರ್ಲ್‌ಮಾರ್ಕ್ಸ್‌ನು ನ್ಯೂಯಾರ್ಕ್ ಡೇಲಿ ಟ್ರಿಬ್ಯೂನ್ ಪತ್ರಿಕೆಯಲ್ಲಿ ಹೀಗೆ ಬರೆದ: (ಭಾರತ ಸರ್ಕಾರದ ನಿವೃತ್ತ ಬ್ರಿಟಿಷ್ ನೌಕರರಿಗೆ ನೀಡುವ) ಈ ನಿವೃತ್ತಿ ವೇತನಗಳು, ಲಾಭಾಂಶಗಳು ಮತ್ತು ಇಂಗ್ಲೆಂಡಿನಲ್ಲಿ ಪಡೆದಸಾಲದ ಮೇಲಿನ ಬಡ್ಡಿ – ಇವು ಭಾರತದಂಥ ಹದಿನೈದರಿಂದ ಇಪ್ಪತ್ತು ಮಿಲಿಯನ್ ಡಾಲರ್‌ಗಳಷ್ಟನ್ನು ತಿಂದುಹಾಕುತ್ತವೆ. ಪ್ರತಿವರ್ಷ ಸಿವಿಲ್ ಸೇವೆಗಳಿಂದ ನಿವೃತ್ತಿಯಾಗುವವರು ತಮ್ಮ ಸಂಬಳಗಳಿಂದ ಉಳಿತಾಯ ಮಾಡಿದ ಬೃಹತ್ ಮೊತ್ತವನ್ನು ತಮ್ಮೊಡನೆ ಒಯ್ಯುತ್ತಾರೆ; ಇದೂ ಭಾರತದ ಸಂಪತ್ತಿನ ಹೊರಹರಿವಿಗೆ ಸೇರುತ್ತದೆ.(ಎಸ್.ಜಿ.)

**ವಸಾಹತು ಕಲೆ ಮತ್ತು ವಾಸ್ತುಶಿಲ್ಪ:** ಬ್ರಿಟಿಷರು ತಮ್ಮ ಪ್ರಭಾವವನ್ನು ಭಾರತೀಯ ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ಅಚ್ಚಳಿಯದಂತೆ ಉಳಿಸಿ ಹೋಗಿದ್ದಾರೆ. 19ನೆಯ ಶತಮಾನದಲ್ಲಿ ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿಯೂ ಮಹತ್ತ್ವದ ಈ ಪ್ರಭಾವ ಕಂಡುಬಂದಿತು. ಇದಕ್ಕೆ ಕಾರಣ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ವಸಾಹತು ಆಡಳಿತದ ಮೂಲಕ ಪ್ರವೇಶವನ್ನು ಪಡೆದದ್ದು. ಕಲೆ ಮತ್ತು ವಾಸ್ತುಶಿಲ್ಪ, ಚಿತ್ರಕಲೆ ಮತ್ತು ಅಲಂಕಾರ, ಉದ್ಯಾನ ಕಲೆಗಳು ಪಾಶ್ಚಿಮಾತ್ಯ ಪ್ರಭಾವಕ್ಕೆ ಒಳಗಾಗಿ, ವಸಾಹತುಶಾಹಿ ಆಡಳಿತ ವ್ಯಾಪ್ತಿಯೊಳಗೆ ಒಳಪಟ್ಟ ಭೂಪ್ರದೇಶದಲ್ಲಿ ದೇಶಿಯ ಕಲಾಶೈಲಿ ಮಾರ್ಪಾಡುಗೊಂಡಿತು.

ಕರ್ನಾಟಕದಲ್ಲಿ ವಸಾಹತುಶಾಹಿ ಆಳಿಕೆಯ ಅವಧಿಯಲ್ಲಿ ಯುರೋಪಿನಲ್ಲಿ ಪ್ರಚಲಿತವಾಗಿದ್ದ ಕಲಾಶೈಲಿಗಳಾದ ಪುನರುಜ್ಜೀವನ ಶೈಲಿ, ಡೋರಿಕ್, ಗಾತಿಕ್, ಅಯೋನಿಕ್, ಕಾರಿಂತಿಯನ್, ಗ್ರೀಕೊರೋಮನ್ ಶೈಲಿಗಳಲ್ಲಿ ಸರ್ಕಾರಿ ಕಚೇರಿಗಳು, ಸಾರ್ವಜನಿಕ ಕಟ್ಟಡಗಳು, ಖಾಸಗಿ ಕಟ್ಟಡಗಳು, ಚರ್ಚ್‌ಗಳು ನಿರ್ಮಾಣಗೊಂಡವು. ಇದಕ್ಕೆ ಮುಖ್ಯ ಕಾರಣ ಕಟ್ಟಡಗಳ ವಿನ್ಯಾಸಕಾರರು ಐರೋಪ್ಯರಾಗಿದ್ದುದು. ಇವರು ನಕ್ಷೆ ಮತ್ತು ಕಟ್ಟಡ ವಿನ್ಯಾಸಗಳನ್ನು ಯುರೋಪಿಯನ್ ಶೈಲಿಯಲ್ಲಿ ತಯಾರಿಸುತ್ತಿದ್ದರು. ವಸಾಹತುಶಾಹಿ ಪ್ರಭುತ್ವದ ವಿಸ್ತರಣೆಯಲ್ಲಿ ಕಟ್ಟಡಗಳನ್ನು ಯುರೋಪಿಯನ್ ಶೈಲಿಗಳಲ್ಲಿ ವಿನ್ಯಾಸಗೊಳಿಸಿ ನಿರ್ಮಿಸುವುದು ವಸಾಹತುಶಾಹಿಯ ವಿಸ್ತರಣೆಯ ಸಂಕೇತವಾಗಿತ್ತು. 19ನೆಯ ಶತಮಾನದಲ್ಲಿ ಲೋಕೋಪಯೋಗಿ ಇಲಾಖೆ ಆರಂಭವಾದಾಗ ಹೆಚ್ಚಿನ ಸಂಖ್ಯೆಯಲ್ಲಿ ಯುರೋಪಿಯನ್ ಎಂಜಿನಿಯರ್‌ಗಳು ನೇಮಕಗೊಂಡರು. ಇವರು ಸ್ಥಳೀಯ ಕಲಾಶೈಲಿಯಲ್ಲಿ ಸ್ಥಳೀಯ ಹಾಗೂ ಇಂಡೊ ಮುಸ್ಲಿಂ ಶೈಲಿಗಳಲ್ಲಿ ಬದಲಾವಣೆಗಳನ್ನು ತಂದರು. ಇವರು ಯುರೋಪಿನ ಮಾದರಿಯ ನಗರ ಹಾಗೂ ಉದ್ಯಾನಗಳ ವಿನ್ಯಾಸವನ್ನು ರಚಿಸಿದ್ದರಿಂದಾಗಿ ಮೈಸೂರು ಹಾಗೂ ಬೆಂಗಳೂರುಗಳಲ್ಲಿ ಆಗ ನಿರ್ಮಾಣಗೊಂಡ ಕಟ್ಟಡಗಳಲ್ಲಿ ಯುರೋಪಿಯನ್ ಪ್ರಭಾವ ಕಾಣಬಹುದಾಗಿದೆ.

ಮೈಸೂರಿನಲ್ಲಿ 1805ರಿಂದ ಯುರೋಪಿಯನ್ ಕ್ಲಾಸಿಕಲ್ ಶೈಲಿಯಲ್ಲಿ ಮೈಸೂರಿನಲ್ಲಿ ನಿರ್ಮಿಸಿದ ಸರ್ಕಾರಿ ಭವನದ ವಿನ್ಯಾಸವನ್ನು ರೂಪಿಸಿ (1800) ಇದರ ನಿರ್ಮಾಣದ ಕೆಲಸ ಆರಂಭವಾಗಿ (1805 ಪೂರ್ಣಗೊಂಡು) ಗೌರ್ನಮೆಂಟ್ ಹೌಸ್ ಎಂದು ಕರೆಯಲ್ಪಟ್ಟಿತು. ಈ ಕಟ್ಟಡ ದೊಡ್ಡ ಭೋಜನಾಂಗಣವನ್ನು ಹೊಂದಿದ್ದು ಗ್ರೀಕ್‌ಶೈಲಿಯ ಪೋರ್ಟಿಕೋ ಹಾಗೂ ಅಯೋನಿಕ್ ಕಂಬಗಳನ್ನು ಹೊಂದಿದೆ. ಸರಳ ವಿನ್ಯಾಸದ ವೆಲ್ಲಿಂಗ್‌ಟನ್‌ಲಾಡ್ಜ್ ಎಂಬ ಎರಡು ಅಂತಸ್ತಿನ ಕಟ್ಟಡ ಸರ್ಕಾರಿ ಭವನ ನಿರ್ಮಾಣಕ್ಕೆ ಮೊದಲೇ ನಿರ್ಮಾಣಗೊಂಡಿತು. ಮೈಸೂರಿನ ರೆಸಿಡೆಂಟ್ ಆಗಿದ್ದ ಆರ್ಥರ್ ಕೂಲ್ ಎಂಬುವನು ಐರಿಸ್ ಕಂಟ್ರಿಹೌಸ್ ಮಾದರಿಯಲ್ಲಿ ಭವ್ಯವಾದ ಭವನವನ್ನು ಇಲವಾಲದಲ್ಲಿ ನಿರ್ಮಿಸಿದ (1806). ಇದನ್ನು ರೆಸಿಡೆನ್ಸಿ ಶೈಲಿ ಎಂದೂ ಸಹ ಕರೆಯಲಾಗುತ್ತದೆ. ರೆಸಿಡೆನ್ಸಿ ಶೈಲಿಯಲ್ಲಿ ಬೆಂಗಳೂರಿನಲ್ಲಿ ನಿರ್ಮಿಸಿದ ರೆಸಿಡೆನ್ಸಿ ಭವನ ಅಯೋನಿಕ್ ಕಂಬಗಳನ್ನೊಳಗೊಂಡ ಕಟ್ಟಡ ಅಮೆರಿಕದ ಶ್ವೇತ ಭವನವನ್ನು ಹೋಲುತ್ತದೆ (1831). ಕೆ.ಆರ್.ಆಸ್ಪತ್ರೆಯು ಗ್ರೀಕೊರೋಮನ್ ಪುನರುಜ್ಜೀವನ ಶೈಲಿಯಲ್ಲಿದ್ದು ವ್ಯಾಟಿಕನ್ ಮಾದರಿಯ ಗುಮ್ಮಟ, ಟಸ್ಕಿನ್ ಮತ್ತು ಕಾರಿಂತಿಯನ್ ಕಂಬಗಳನ್ನು ಒಳಗೊಂಡಿದೆ (1870). ವಿಕ್ಟೋರಿಯ ರಾಣಿಯ ಸ್ವರ್ಣ ಮಹೋತ್ಸವ ವರ್ಷದ ನೆನಪಿಗಾಗಿ ನಿರ್ಮಾಣಗೊಂಡ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎತ್ತರವಾದ ವಿಶಾಲವಾದ ವೇದಿಕೆಯ ಮೇಲೆ ನಿರ್ಮಾಣಗೊಂಡು, ಅಯೋನಿಕ್ ಮಾದರಿಯ ಕಂಬಗಳನ್ನೊಳಗೊಂಡಿದ್ದು ಯುರೋಪಿಯನ್ ಕ್ಲಾಸಿಕಲ್ ಶೈಲಿಯಲ್ಲಿದೆ (1887).

ಮೈಸೂರಿನ ಕರ್ಜನ್ ಉದ್ಯಾನದಲ್ಲಿರುವ ಗ್ರೀಕೊರೋಮನ್ ಶೈಲಿಯ ದಿವಾನ್ ರಂಗಾಚಾರ್ಲು ಸ್ಮಾರಕ ಭವನವನ್ನು ಗಾರೆ ಮತ್ತು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಈ ಭವನ ದೊಡ್ಡ ರೋಮನ್ ಕಂಬಗಳನ್ನು ಒಳಗೊಂಡಿದೆ. ಅಮೆರಿಕದ ವಸಾಹತು ಶೈಲಿಯಲ್ಲಿ ಮೈಸೂರು ಅರಮನೆಯ ಪಶ್ಚಿಮಕ್ಕೆ ನಿರ್ಮಾಣಗೊಂಡ ಜಿಲ್ಲಾಧಿಕಾರಿಗಳ ಕಚೇರಿ ಕಮಾನುಗಳನ್ನೂ ಗುಮ್ಮಟವನ್ನೂ ಒಳಗೊಂಡಿದೆ. ನಾಲ್ವಡಿ ಕೃಷ್ಣರಾಜಒಡೆಯರು ತಮ್ಮ ಅತಿಥಿಗಳಿಗಾಗಿ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಿರ್ಮಿಸಿದ ಲಲಿತಮಹಲ್ ಅರಮನೆಯನ್ನು ಎಫ್.ಡಬ್ಲು.ಫ್ರಿಚ್ಲೆ ಎಂಬ ವಾಸ್ತು ವಿನ್ಯಾಸಕಾರ ವಿನ್ಯಾಸಗೊಳಿಸಿದ. ಈ ಅರಮನೆ ಇಂಗ್ಲೆಂಡಿನ ಡ್ಯೂಡರ್ ಮ್ಯಾನನ್ ಸಂತಪಾಲ್ ಚರ್ಚ್‌ನ ಮಾದರಿಯಲ್ಲಿದೆ. ಲಲಿತಮಹಲ್ ಅರಮನೆಯ ಮೇಲೆ ಎತ್ತರವಾದ ಗುಮ್ಮಟಗಳಿವೆ. ಚಾಮುಂಡಿಬೆಟ್ಟದ ಮೇಲಿರುವ ರಾಜೇಂದ್ರವಿಲಾಸ ಅರಮನೆ ಇಂಗ್ಲಿಷ್ ಮತ್ತು ಹಿಂದುಶೈಲಿಯಲ್ಲಿದೆ. ಮೈಸೂರು ಅರಮನೆಯನ್ನು ಹೆನ್ರಿರ್ವಿನ್ ಎಂಬ ವಾಸ್ತುಶಿಲ್ಪಿ ವಿನ್ಯಾಸಗೊಳಿಸಿದ. ಇದು ಇಂಡೋಸಾರ್ಸೆನಿಕ್ ಶೈಲಿಯಲ್ಲಿರುವ ಸುಂದರ ಕಟ್ಟಡ.

ಅಮೃತಶಿಲೆಯ ಸ್ತ್ರೀಶಿಲ್ಪ, ವಿಕ್ಟೋರಿಯ ಮೆಮೋರಿಯಲ್ ಹಾಲ್

ಬೆಂಗಳೂರಿನಲ್ಲಿರುವ ದಂಡು ಪ್ರದೇಶವನ್ನು ಯುರೋಪಿಯನ್ ಮಾದರಿಯ ಪ್ರದೇಶವಾಗಿ ಅಭಿವೃದ್ಧಿಪಡಿಸಿ ಬ್ರಿಟಿಷ್ ಆಳಿಕೆಯ ಪ್ರತೀಕವಾಗಿ ಚರ್ಚ್‌ಗಳು, ಸಮಾಧಿಗಳು, ಯುರೋಪಿಯನ್ ಕ್ಲಾಸಿಕಲ್ ಮಾದರಿಯ ಕಟ್ಟಡಗಳನ್ನು ಕಟ್ಟಲಾಯಿತು. ಬ್ರಿಟಿಷರು ಎಲ್ಲೆಲ್ಲಿ ಹೋಗಿ ನೆಲೆಗೊಂಡರೋ ಅಲ್ಲಲ್ಲಿ ಈ ದಂಡು ಪ್ರದೇಶ (ಕಂಟೋನ್ಮೆಂಟ್)ಗಳು ಅಸ್ತಿತ್ವಕ್ಕೆ ಬಂದವು. ಬೆಂಗಳೂರಿನ ದಂಡು ಪ್ರದೇಶ 20ನೆಯ ಶತಮಾನದ ಆರಂಭದಲ್ಲಿ 10 ಸಾವಿರ ಜನಸಂಖ್ಯೆಯನ್ನು ಒಳಗೊಂಡಿತ್ತು. ಹಳೆಯ ಬೆಂಗಳೂರು ನಗರಕ್ಕಿಂತ ಈ ನಗರ ಭಿನ್ನವಾಗಿತ್ತು. ದಂಡು ಪ್ರದೇಶವನ್ನು ಪ್ರವೇಶಿಸಲು ಪ್ರವೇಶ ತೆರಿಗೆಯನ್ನು ತೆರಬೇಕಾಗಿತ್ತು. ದಂಡು ಪ್ರದೇಶ ಯುರೋಪಿಯನ್ ನಗರ ರೂಪದಲ್ಲಿ ಬೆಳವಣಿಗೆ ಹೊಂದಿತ್ತು. ಮುಖ್ಯವಾಗಿ ಮಂಕಿಟಾಪ್ ಬಂಗ್ಲೋಗಳು ಹೆಚ್ಚು ನಿರ್ಮಾಣಗೊಂಡವು. ಸಾರ್ವಜನಿಕ ಕಟ್ಟಡಗಳು, ಕಛೇರಿಗಳು, ಉದ್ಯಾನಗಳು, ಅಂಗಡಿಗಳು, ಶಾಲೆಗಳು ವಸಾಹತು ಶೈಲಿಯಲ್ಲಿ ನಿರ್ಮಾಣ ಗೊಂಡವು. ಈಗಿನ ರಾಜಭವನವನ್ನು ರೆಸಿಡೆನ್ಸಿ ಕಟ್ಟಡವೆಂದು ಕರೆಯಲಾಗುತ್ತಿತ್ತು. ಈ ಕಟ್ಟಡ ಬೆಂಗಳೂರಿನಲ್ಲಿ ನಿರ್ಮಾಣಗೊಂಡ ಮೊದಲ ಕಟ್ಟಡ. ಬೆಂಗಳೂರು ಕ್ಲಬ್ ಕೂಡ ರೆಸಿಡೆನ್ಸಿ ಶೈಲಿಯದು. ಲಾರ್ಡ್‌ಮೇಯೊ ಸ್ಮರಣಾರ್ಥ ನಿರ್ಮಾಣಗೊಂಡ ಮೇಯೋಹಾಲ್ ಇದನ್ನು ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಲಾಯಿತು. ಗ್ರೀಕ್ ಮಾದರಿಯ ಕಾರಂತೀಯನ್ ಕಂಬಗಳನ್ನು ಒಳಗೊಂಡಿದೆ. ಎಂ. ವಿಶ್ವೇಶ್ವರಯ್ಯನವರ ಅಧಿಕೃತ ನಿವಾಸವಾಗಿದ್ದ ಬಾಲಬ್ರೂಯಿ ವಿಶಾಲವಾದ ಕಟ್ಟಡವಾಗಿದ್ದು ಜಗಲಿಗಳ ಮೇಲೆ ನಿಂತ ಕಾರಿಂತಿಯನ್ ಮತ್ತು ಟಸ್ಕನ್ ಕಂಬಗಳನ್ನು ಹೊಂದಿದೆ. ರೆಸಿಡೆನ್ಸಿ ರಸ್ತೆಯಲ್ಲಿರುವ ಆರಂಭಿಕ ಕಟ್ಟಡವಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಕ್ರೆಸೆಂಟ್ ಭವನ ಕೂಡ ಬ್ರಿಟಿಷ್ ಶೈಲಿಯಲ್ಲಿವೆ. ಸಂಡೂರ್ ಮ್ಯಾಂಗನೀಸ್ ಕಛೇರಿ ಹಾಗೂ ಲೇಡಿ ಜಹಾಂಗೀರ್ ಕೊಠಾರಿ ಮೆಮೊರಿಯಲ್ ಹಾಲ್ ಕಟ್ಟಡಗಳು ಯುರೋಪಿಯನ್ ಕ್ಲಾಸಿಕಲ್ ಶೈಲಿಯ ಮಾದರಿ ಕಟ್ಟಡಗಳಾಗಿವೆ. ಕನ್ನಿಂಗ್‌ಹ್ಯಾಮ್ ಕ್ರೆಸೆಂಟ್ ಕಟ್ಟಡ ಯುರೋಪಿಯನ್ ಶೈಲಿಯಲ್ಲಿದೆ. ವೆಸ್ಟೆಂಡ್ ಹೋಟಲ್ ಕಟ್ಟಡ, ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಕಟ್ಟಡ ಗಾತಿಕ್ ಶೈಲಿಯಲ್ಲಿದ್ದು ಮೊನಚಾದ ಕಮಾನು, ಗಡಿಯಾರದ ಗೋಪುರವನ್ನೊಳಗೊಂಡಿದೆ. ಅಮೆರಿಕನ್ ರ್‍ಯಾಚ್‌ಹೌಸ್‌ನ ಮಾದರಿಯಲ್ಲಿರುವ ರಿಚ್‌ಮಂಡ್ ಹೌಸ್ ವಸಾಹತು ಶೈಲಿಯ ಕಟ್ಟಡ. ಮೈಸೂರಿನ ಅರಸರು ನಿರ್ಮಿಸಿದ ಬೆಂಗಳೂರು ಅರಮನೆ ಇಂಗ್ಲೆಂಡಿನ ವಿಂಡ್ಸರ್ ಕ್ಯಾಸಲ್ ಮಾದರಿಯ ಕಟ್ಟಡವಾಗಿದೆ. ಮೇಜರ್ ಸ್ಯಾಂಕಿ ವಿನ್ಯಾಸಗೊಳಿಸಿದ ಅಠಾರ ಕಛೇರಿ ಅಥವಾ ಈಗಿನ ಉಚ್ಚನ್ಯಾಯಾಲಯದ ಕಟ್ಟಡ ಎರಡು ಅಂತಸ್ತಿನ ಕಟ್ಟಡವಾಗಿದ್ದು ಗ್ರೀಕೊರೋಮನ್ ಶೈಲಿಯಲ್ಲಿ ವಿನ್ಯಾಸಗೊಂಡು ಅಯೋನಿಕ್ ಮಾದರಿಯ ಪೋರ್ಟಿಕೊ ಹಾಗೂ ಕಂಬ ಇತ್ಯಾದಿಗಳನ್ನು ಒಳಗೊಂಡ ಕಾವಿ ಬಣ್ಣದ ಕಟ್ಟಡ. ಭಾರತೀಯ ವಿಜ್ಞಾನ ಮಂದಿರ, ಮಹಾತ್ಮಗಾಂಧಿ ರಸ್ತೆಯ ಒರಿಯೆಂಟಲ್ ಕಟ್ಟಡಗಳು ಕ್ಲಾಸಿಕಲ್ ಶೈಲಿಯಲ್ಲಿವೆ. ಶೇಷಾದ್ರಿ ಅಯ್ಯರ್ ಸ್ಮಾರಕ ಭವನ, ಕೋಟೆಯಲ್ಲಿರುವ ಸರ್ಕಾರಿ ಪ್ರೌಢಶಾಲೆ, ಮಿಂಟೋ ಕಣ್ಣಾಸ್ಪತ್ರೆ, ಮೈಸೂರಿನಲ್ಲಿರುವ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಕಟ್ಟಡ ಇವು ಮಿಶ್ರ ಶೈಲಿಯಲ್ಲಿದೆ. 19ನೆಯ ಶತಮಾನದಲ್ಲಿ ವಸಾಹತುಶಾಹಿ ಆಡಳಿತದ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯ ಚರ್ಚ್‌ಗಳು ಹಾಗೂ ಪ್ರಾರ್ಥನ ಮಂದಿರಗಳು ಐರೋಪ್ಯ ಶೈಲಿಯಲ್ಲಿ

ನಿರ್ಮಾಣಗೊಂಡವು. ಶಿವಾಜಿನಗರದ ಸಂತ ಮೇರಿ ಚರ್ಚ್, ಸಂತ ಆಂಡ್ರೂ ಚರ್ಚ್, ಸಂತ ಜಾನ್ ಇವಾಂಜಲಿಕಲ್ ವೆಸ್ಲಿ ಚರ್ಚ್‌ಗಳು ಗಾತಿಕ್ ಶೈಲಿಯಲ್ಲಿವೆ. ರೋಮನ್ ಗೋಪುರ ಮತ್ತು ಕಮಾನುಗಳನ್ನು ಒಳಗೊಂಡ ಸಂತ ಪ್ಯಾಟ್ರಿಕ್ ಚರ್ಚ್ ಗ್ರೀಕೊರೋಮನ್ ಪುನರುಜ್ಜೀವನ ಶೈಲಿಯಲ್ಲಿವೆ. ಆಂಗ್ಲಿಕನ್ ಚರ್ಚ್‌ಗಳಲ್ಲಿ ಅತ್ಯಂತ ಪ್ರಾಚೀನವಾದ ಸಂತ ಮಾರ್ಕ್ ಕತೀಡ್ರಲ್ ಲಂಡನ್ನಿನ ಸಂತಪಾಲ್ ಕತೀಡ್ರಲ್ ಮಾದರಿಯ ವಿನ್ಯಾಸವನ್ನು ಹೊಂದಿರುವ ಕಟ್ಟಡ. ಇದು ಪುನರುಜ್ಜೀವನ ಶೈಲಿಯಲ್ಲಿದೆ. ಯುರೋಪಿಯನ್ ಪುನರುಜ್ಜೀವನ ಶೈಲಿಯಲ್ಲಿ

ಸೆಕತೀಡ್ರಲ್, ಹಳೆಗೋವ

ನಿರ್ಮಾಣವಾಗಿರುವ ಸೇಂಟ್‌ಪಾಲ್ ಜೇವಿಯ್ ಕತೀಡ್ರಲ್ ಗುಮ್ಮಟಗಳಲ್ಲದೆ, ಎರಡು ಗೋಪುರ ಹಾಗೂ ಟಸ್ಕನ್ ಕಂಬಗಳನ್ನೊಳಗೊಂಡಿದೆ. ಸ್ಕಾಟಿಷ್ ಸೈನಿಕರಿಗಾಗಿ ನಿರ್ಮಿಸಿದ್ದ ಸಂತ ಆಂಡ್ರೂಸ್ ಚರ್ಚ್ ಕಾವಿ ಬಣ್ಣದ ಗಾತಿಕ್‌ಶೈಲಿಯ ಗೋಪುರಗಡಿಯಾರದವನ್ನು ಹೊಂದಿದೆ. ಮೈಸೂರಿನ ಸೇಂಟ್ ಫಿಲೋಮಿನ ಚರ್ಚ್ 19ನೆ ಶತಮಾನದಲ್ಲಿ ನಿರ್ಮಾಣಗೊಂಡ ಸುಂದರ ಕಟ್ಟಡ. ನ್ಯೂಯಾರ್ಕಿನ ಸೇಂಟ್ ಪ್ಯಾಟ್ರಿಕ್ ಕತೀಡ್ರಲ್ ಹಾಗೂ ಜರ್ಮನಿಯ ಕೊಲ್‌ನಲ್ಲಿರುವ ಗಾಥಿಕ್ ಚರ್ಚಿನ ಮಾದರಿಯಲ್ಲಿದೆ. ಕಿರಿದಾಗುತ್ತಾ ಮೇಲಿರುವ ಎರಡು ಗೋಪುರಗಳು ಆಕರ್ಷಕವಾಗಿವೆ. ಮೂರ್ತಿಶಿಲ್ಪ: ಮೂರ್ತಿಶಿಲ್ಪಗಳ ಕೆತ್ತನೆಯಲ್ಲಿ ಸ್ವಲ್ಪಮಟ್ಟಿನ ಮಾರ್ಪಾಡುಗಳು ಉಂಟಾಗಿ ಯುರೋಪಿಯನ್ ಶೈಲಿಯ ಮೂರ್ತಿಗಳು ಬೆಂಗಳೂರಿನಲ್ಲಿ ಕೆತ್ತಲ್ಪಟ್ಟವು. ಕಬ್ಬನ್‌ಪಾರ್ಕ್‌ನಲ್ಲಿರುವ ಮಾರ್ಕ್‌ಕಬ್ಬನನ ಪ್ರತಿಮೆ ಹಾಗೂ ಏಳನೆಯ ಎಡ್ವರ್ಡನ ರಾಣಿ ವಿಕ್ಟೋರಿಯಳ ಪ್ರತಿಮೆ ಯುರೋಪಿಯನ್ ಶೈಲಿಯಲ್ಲಿವೆ. ಸೇಂಟ್ ಫ್ರಾನ್ಸಿಸ್ ಕತೀಡ್ರಲ್ ಚರ್ಚ್‌ನಲ್ಲಿರುವ ಹೋಲಿ ಮೇರಿ, ಸೇಂಟ್ ತೆರೆಸಾ, ಸೇಂಟ್ ಜೂಡ್, ಜೀಸಸ್ ಪ್ರತಿಮೆಗಳು ಪ್ರತಿಷ್ಠಾಪನೆ ಗೊಂಡಿವೆ.

ಚಿತ್ರಕಲೆ: 10ನೆಯ ಶತಮಾನದಲ್ಲಿ ಕೂಡ ಸಾಕಷ್ಟು ಬದಲಾವಣೆಗಳು ಕಂಡುಬಂದವು. ಮುಮ್ಮಡಿ ಕೃಷ್ಣರಾಜ ಒಡೆಯರು ಕಲಾಪ್ರೇಮಿಗಳಾಗಿದ್ದು ಅರಮನೆಯಲ್ಲಿ ಭಿತ್ತಿಚಿತ್ರಗಳನ್ನು ರಚಿಸಲು ಕಲಾವಿದರನ್ನು ನೇಮಕ ಮಾಡಿಕೊಂಡರು. ಇವರು ಪೋಷಿಸಿದ ಕಲಾವಿದರೆಂದರೆ ಗೆರಾಲ್ಡಿನ್, ಜರ್ಮನಿಯ ವಾಂಡ್ವಿನ್, ಸ್ಟರ್ಲಿಂಗ್ ರಾಬರ್ಟ್ ಕಾಟನ್, ವೆಕ್‌ಸ್ಟರ್ (ಇಂಗ್ಲೆಂಡ್). ಯುರೋಪಿಯನ್ ಕಲಾವಿದರು ತೈಲವರ್ಣ ಚಿತ್ರಕಲೆಗಳಲ್ಲಿ ನಿಪುಣರಾಗಿದ್ದರು. ರಾಜ ರವಿವರ್ಮ ತೈಲವರ್ಣ ಚಿತ್ರಗಳನ್ನು ಬಿಡಿಸುವುದರಲ್ಲಿ ಪ್ರಸಿದ್ಧರಾಗಿದ್ದರು. ಈ ಯುರೋಪಿಯನ್ ಕಲಾವಿದರ ಪ್ರಭಾವದಿಂದಾಗಿ ನೆರಳು ಮತ್ತು ಬೆಳಕಿನ ಸಂಯೋಜನೆಯನ್ನು ಭಾರತೀಯ ಕಲಾವಿದರನ್ನು ಬಳಸಿಕೊಂಡು ಬ್ರಿಟಿಷರಿಗೆ ಇಷ್ಟವಾಗುವಂತಹ ವಸ್ತು ವಿಷಯಗಳನ್ನು ಚಿತ್ರಿಸಲು ತಮ್ಮ ಶೈಲಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡರು. ಬೆಳಕಿನ ಸಂಯೋಜನೆ, ಪ್ರಾಮುಖ್ಯತೆ ಹಾಗೂ ನೈಜತೆಯನ್ನು ತಮ್ಮ ಚಿತ್ರಗಳಲ್ಲಿ ತರುವ ಪ್ರಯತ್ನ ಮಾಡಿದರು. 19ನೆಯ ಶತಮಾನದಲ್ಲಿ ಬೆಳೆವಣಿಗೆ ಹೊಂದಿದ ಇನ್ನೊಂದು ಕಲೆ ಎಂದರೆ ಭಾವಚಿತ್ರಕಲೆ. ಯುರೋಪಿಯನ್ ಚಿತ್ರಕಲೆಯಿಂದ ಉಂಟಾದ ಮತ್ತೊಂದು ಪ್ರಭಾವವೆಂದರೆ ತಾಂತ್ರಿಕತೆಯ ನೈಜತೆ, ಬೆಳಕಿನ ಛಾಯೆಯನ್ನು ಬಳಸುವುದು ರೂಢಿಗೆ ಬಂದಿತು. ಟಿಪ್ಪುಸುಲ್ತಾನನು ಕಾರ್ನ್‌ವಾಲಿಸ್‌ಗೆ ಸೋತು ತನ್ನ ಮಕ್ಕಳನ್ನು ಬ್ರಿಟಿಷ್‌ರಿಗೆ ಒಪ್ಪಿಸುತ್ತಿರುವ ದೃಶ್ಯ ಬ್ರಿಟಿಷ್ ಕಲಾವಿದರಿಂದ ಮೂಡಿಬಂದಿದ್ದು, ಕಲ್ಲಚ್ಚಿನಲ್ಲಿ ಮ್ಯಾಥ್ಯೂ ಬ್ರೌನ್ ಚಿತ್ರಗಳನ್ನು ರಚಿಸಿದ್ದಾನೆ. ಕ್ಯಾಪ್ಟನ್ ಅಲೆನ್ ಯುದ್ಧದ ಚಿತ್ರಣವನ್ನು ಚಿತ್ರಿಸಿ ಅದರಲ್ಲಿ ಅಲಸೂರು ಗೇಟ್‌ನ ಬಳಿ ಕರ್ನಲ್‌ಮೂರ್ ಹೌಸ್ ಸತ್ತುಬಿದ್ದಿರುವ ಚಿತ್ರ ಬಿಡಿಸಿದ್ದಾನೆ (1791). ಬೆಂಗಳೂರಿನ ಫ್ರಾನ್ಸಿಸ್ ಜೇವಿಯರ್ ಚರ್ಚ್‌ನಲ್ಲಿ ಗಾಜಿನ ಮೇಲೆ ಬಿಡಿಸಿರುವ ಚಿತ್ರಗಳು ಸುಂದರವಾಗಿದೆ. ಜಾನ್ ದಿ ಬ್ಯಾಪ್ಟಿಸ್ಟ್‌ಯೇಸುವಿಗೆಜ್ಞಾನಸ್ನಾನ ಮಾಡಿಸುತ್ತಿರುವ ಚಿತ್ರ ಸುಂದರವಾಗಿದೆ. (ಎನ್.ಎಂ.ಎಸ್.)

**ಚರ್ಚ್ ವಾಸ್ತು:** ಚರ್ಚ್ ಎಂದರೆ ಕ್ರೈಸ್ತ ಧರ್ಮೀಯರು ಸಾರ್ವಜನಿಕವಾಗಿ ಆರಾಧನೆಯನ್ನು ಸಲ್ಲಿಸುವ ಸ್ಥಳ. ಮೊದಲಲ್ಲಿ ಕ್ರಿಶ್ಚಿಯನರು ಅರಮನೆಯ ಕಟ್ಟಡಗಳಲ್ಲಿ, ಎರಡು ಕಂಬಸಾಲುಗಳುಳ್ಳ ಸಭಾಂಗಣವನ್ನು (ಬೆಸಲಿಕ) ಇಂಥ ಸ್ಥಳವಾಗಿ ಉಪಯೋಗಿಸುತ್ತಿದ್ದರು. ಅವರ ಗುರುವಾದ ಬಿಷಪ್‌ನ ಪೀಠವಿದ್ದ ಕಾರಣ ಕತೀಡ್ರಲ್ ಕೂಡ ಒಂದು ರೀತಿ ಚರ್ಚ್ ಅನಿಸಿಕೊಂಡಿತ್ತು. ಚರ್ಚ್ ಕಟ್ಟಡದ ಆರಂಭ ಹೇಗಾಯಿತೆಂದು ಖಚಿತವಾಗಿ ಹೇಳುವುದು ಕಷ್ಟ. ಮೂಲತಃ ಸಾಂಪ್ರದಾಯಿಕವಾದ ಚಾವಣಿಯಿರುವ ಮುಖಮಂಟಪ ಹಾಗೂ ಪಕ್ಕದ ಅಡ್ಡಸ್ನಾಯು ವಿನ್ಯಾಸದಲ್ಲಿರುವ ಇಕ್ಕೆಲದ ಹಜಾರಗಳನ್ನುಳ್ಳ ರೋಮನರ ಗೃಹಗಳಲ್ಲಿಯ ರೂಪವಿನ್ಯಾಸಗಳೇ ಅನಂತರದ ಚರ್ಚ್ ಕಟ್ಟಡಗಳ ಮೂಲವಾದುವೆನ್ನಬಹುದು. ಆರಂಭದಲ್ಲಿ ಕ್ರೈಸ್ತಧರ್ಮವನ್ನವಲಂಬಿಸಿದ ಜನ ಗುಟ್ಟಾಗಿ ಇಂಥ ಮನೆಗಳಲ್ಲಿ ಸೇರುತ್ತಿದ್ದರು.

ಕ್ರೈಸ್ತಧರ್ಮ ಬಹಿರಂಗವಾಗಿ ಪ್ರಬಲವಾದಾಗ ಸಿರಿಯದಲ್ಲಿ ಮೊದಲು ಎರಡು ಕಂಬಸಾಲುಗಳುಳ್ಳ ಸಭಾಂಗಣದಂಥ ಕಟ್ಟಡ ಅಸ್ತಿತ್ವಕ್ಕೆ ಬಂದು ಕ್ರಮೇಣ ಇದು ಇಟಲಿ ದೇಶಕ್ಕೂ ಕಾಲಿಟ್ಟಿತು. ಆರಂಭದ ಹಾಗೂ ಮಧ್ಯಯುಗೀನ ಚರ್ಚ್ ಕಟ್ಟಡಗಳಲ್ಲಿ ಒಳಬಾಗಿಲಿನಿಂದ ಪುರೋಹಿತರು ಅಥವಾ ಗಾಯಕರು ಕೂಡುವ ಸ್ಥಳದವರೆಗೆ ಒಂದು ಮಧ್ಯಾಂಗಣ, ಎರಡು ಅಥವಾ ನಾಲ್ಕು ಇಕ್ಕೆಲದ ಹಜಾರಗಳು, ಅರ್ಧವೃತ್ತಾಕಾರದ ಉಚ್ಚಸ್ಥಾನಗಳಲ್ಲದೆ ಕೆಲವೊಮ್ಮೆ ಶಿಲುಬೆಯಾಕಾರದ ಅಷ್ಟಭಾಗ, ದೇವಾಲಯದ ಮುಖಮಂಟಪದ ತೊಟ್ಟಿಯ ಬಳಿ ಅಂತ್ಯಗೊಳ್ಳುವ ಅರ್ಧವೃತ್ತಾಕಾರದ ಉಚ್ಚಸ್ಥಾನಗಳು ಇರುತ್ತಿದ್ದುವು. ಮೇಲೆ ಮರದ ಮಾಳಿಗೆಗಳಿರುತ್ತಿದ್ದವು. ಆದರೆ ಉಚ್ಚಸ್ಥಾನಗಳ ಮೇಲೆ ಮಾತ್ರ ಗುಮ್ಮಟಾಕಾರದ ಛಾವಣಿ ಇರುತ್ತಿತ್ತು. ಪ್ರ.ಶ.6ನೆಯ ಶತಮಾನದಲ್ಲಿ ಕಟ್ಟಲಾದ ರೋಮ್ ದೇಶದ ಕೆಸ್ಮೆಡಿನ್‌ನಲ್ಲಿನ ಸಂತ ಮೇರಿ ಮತ್ತು ಕ್ಲಾಸೆಯಲ್ಲಿಯ ಸಂತ ಅಪೋಲ್ಲನರ್ ಚರ್ಚ್‌ಗಳು ಅನೇಕ ಬಾರಿ ಜೀರ್ಣೋದ್ಧಾರಕ್ಕೊಳಗಾಗಿದ್ದರೂ ಇಂಥ ಮೂಲರೂಪವನ್ನು ಮಾತ್ರ ಉಳಿಸಿಕೊಂಡಿವೆ.

ಪ್ರಾಚೀನ ಸಂಪ್ರದಾಯಕ್ಕೂ ಗಾತಿಕ್ ಸಂಪ್ರದಾಯಕ್ಕೂ ನಡುವಣ ರೋಮನ್ ಪ್ರಭಾವಕ್ಕೊಳಗಾಗಿದ್ದ ಶೈಲಿ (ರೋಮನೆಸ್ಕ್) ಮುಂದಿನ ಘಟ್ಟ. ಆದರೆ ಈ ಶೈಲಿಯ ಮೂಲರೂಪವನ್ನೊಳಗೊಂಡ, ಮತ್ತಾವ ಬದಲಾವಣೆಗಳಾಗಲೀ ಸೇರ್ಪಡೆಗಳಾಗಲೀ ಇಲ್ಲದ ಚರ್ಚ್‌ಕಟ್ಟಡಗಳು ಇಲ್ಲವೆಂದೇ ಹೇಳಬೇಕು. ಅಲ್ಲದೆ ಯುರೋಪ್ ಖಂಡದಲ್ಲಿ ಈ ಶೈಲಿಯ ಕಟ್ಟಡಗಳ ಎಲ್ಲ ಭಾಗಗಳೂ ಒಂದೇ ತೆರನಾಗಿ, ಸಮರೂಪದಲ್ಲಿರಲಿಲ್ಲ. 500–1000 ವರೆಗಿನ ಐದು ಶತಮಾನಗಳಲ್ಲಿ ಅನಾಗರಿಕ, ರೋಮನ್ ಹಾಗೂ ಕ್ರೈಸ್ತ ಸಂಸ್ಕೃತಿಗಳ ಪರಸ್ಪರ ಒಂದುಗೂಡುವಿಕೆಯಲ್ಲಿ ಬದಲಾವಣೆಯಾಗದೆ ಉಳಿದುದು ಚರ್ಚ್ ಒಂದೇ. ಇಟಲಿ ದೇಶದ ಮಿಲಾನ್

ಫ್ರೆಂಚ್ ವಸಾಹತುಶಾಹಿ ಮಾದರಿ ಕಟ್ಟಡ

ನಗರದ ಸಂತ ಅಮ್ರಿಗೊ ಕಟ್ಟಡ ವಿನ್ಯಾಸದಲ್ಲಿ ಮೊದಲಿನ ಛಾವಣಿಯಿರುವ ಮುಖಮಂಟಪವನ್ನು ಉಳಿಸಿಕೊಳ್ಳಲಾಗಿದೆ. ಆದರೆ ಎರಡು ಕಂಬಸಾಲುಗಳ ಸಭಾಂಗಣದ ಇಕ್ಕೆಲಗಳಲ್ಲಿ ಮೊದಲಿದ್ದಂತೆ ಅಡ್ಡಸ್ನಾಯು ಹಜಾರಗಳು ಮಾತ್ರ ಇಲ್ಲ. ಆದರೆ ಗುಮ್ಮಟಾಕಾರದ ಛಾವಣಿಗಳಿಗೆ ಆಧಾರವಾಗಿ ಜೋಡಿಸಿರುವ ಕೂಡಂಚುಗಳನ್ನು (ಉಬ್ಬು) ನಾವು ಮೊದಲು ಈ ಕಟ್ಟಡದಲ್ಲಿ ಕಾಣುತ್ತೇವೆ. ಮಧ್ಯಯುಗದಲ್ಲಿ ಆರಂಭವಾದ ಸಭಾಂಗಣದ ಮೇಲಿನ ಮಾಳಿಗೆಗೆ ಉಬ್ಬುಗಳನ್ನು ಕೂಡಿಸುವ ಪದ್ಧತಿ ರೋಮ್, ಗ್ರೀಸ್ ಹಾಗೂ ಸಿರಿಯ ಮುಂತಾದ ಸಮೀಪ ಪ್ರಾಚ್ಯ ದೇಶಗಳಲ್ಲಿ ಹೆಚ್ಚು ಪ್ರಚಲಿತವಾಗದಿದ್ದರೂ ಇಂಥ ಶೈಲಿ ಮುಂದಿನ ಎರಡು ಶತಮಾನಗಳಲ್ಲಿ

ಯುರೋಪಿನಲ್ಲಿ ಔನ್ನತ್ಯವನ್ನು ಪಡೆಯಿತು. ಬಿಷಪ್‌ನ ಪೀಠವಿರುವ ಗಾತಿಕ್ ಆರಾಧನ ಮಂದಿರದ ಮಧ್ಯಾಂಗಣ ಎತ್ತರವಾಗಿದ್ದು ಗಾಂಭೀರ್ಯಯುಕ್ತವಾಗಿ ಕಾಣುತ್ತದೆ. ಇದರಲ್ಲಿಯೂ ಈ ಶತಮಾನಗಳಲ್ಲಿ ನಾಲ್ಕು ಘಟ್ಟಗಳನ್ನು ಗುರುತಿಸಬಹುದು. ಮರದ ಛಾವಣಿಯ ಉಪಯೋಗ ಆರಂಭದ ಬೆಸಲಿಕಗಳಲ್ಲಿ ಕಂಡುಬಂತು. ಪೀಪಾಯಿಗಳನ್ನು ಅಥವಾ ಕೂಡುಕ ಮಾನುಗಳನ್ನು ಇಟ್ಟಂಥ ಛಾವಣಿ ಅನಂತರದ್ದು. ಬೈಜಾಂಟೀಯನ್ ಶಿಲ್ಪಿಗಳು ಲೋಲಕಗಳ ಮೇಲೆ ಗುಮ್ಮಟಗಳನ್ನೆಬ್ಬಿಸುವ ಪದ್ಧತಿ ಯನ್ನಾರಂಭಿಸಿದರು. ಎಂಟು ಮೂಲೆಯ ಗೋಪುರಗಳ ಅಡ್ಡಕಮಾನುಗಳ ಮೇಲೆ ಗುಮ್ಮಟಗಳನ್ನು ಕಟ್ಟುವುದು ನಾಲ್ಕನೆಯ ಘಟ್ಟ.



ಕತೀಡ್ರಲ್‌ನಲ್ಲಿ ಕಾಷ್ಠಶಿಲ್ಪ ಕೆತ್ತನೆ, ಹಳೆ ಗೋವ

ಉತ್ತರ ಇಟಲಿಯಲ್ಲಿ ಇದೇ ಕಾಲದಲ್ಲಿ ಹಲವು ನವೀನ ವಾಸ್ತುರೀತಿಗಳನ್ನು ಬಳಕೆಗೆ ತರಲಾಯಿತು. ತೆರೆದ ಕಮಾನುದಾರಿಗಳು, ಕಲಾತ್ಮಕ ದ್ವಾರ ಮಂಟಪಗಳು, ಚಿತ್ರಕೊರೆತ ಹಾಗೂ ಕುಂದಣ ಶೈಲಿಗಳನ್ನು ಉಪಯೋಗಿಸಲಾಯಿತು. ಮೋಡನ ಆರಾಧನ ಮಂದಿರದಲ್ಲಿ ಇದನ್ನು ನಾವು ನೋಡಬಹುದು. ರೋಮನ್ ಚರ್ಚುಗಳಲ್ಲಿ ಕಮಾನುದಾರಿಗಳು ವಿಶಿಷ್ಟವಾದುವು. ಸರಳವಾದ ನಯವಿಲ್ಲದ ಬೆಸಲಿಕಗಳ ರಚನೆಯಲ್ಲಿಕಂಡುಬಂದ ಕಾಠಿಣ್ಯವನ್ನು ತಗ್ಗಿಸಲು ಇಟಲಿಯ ಶಿಲ್ಪಿಗಳು ಈ ಪದ್ಧತಿಯನ್ನು ಅನುಸರಿಸಿದರು. ಫ್ಲಾರೆನ್ಸಿನ ಜ್ಞಾನಸ್ನಾನಶಾಲೆಯಲ್ಲಿ ತೆರೆದ ಕಮಾನುಧಾರಿಗಳೂ ಕಲಾತ್ಮಕ ದ್ವಾರಗಳೂ ಈಗ ಇಲ್ಲ. ಅವುಗಳ ಸ್ಥಳದಲ್ಲಿ ಕೋನಾಕಾರದ, ರೇಖಾವಿನ್ಯಾಸಗಳ ಕೆತ್ತನೆಯ ಮುಂಭಾಗಗಳನ್ನು ಜೋಡಿಸಲಾಗಿದೆ. ಲೂಕ್ಕಾದ ಆರಾಧನ ಮಂದಿರವಾದ ಸ್ಯಾನ್ ಮಿಷೆಲ್‌ನಲ್ಲಿ ರೋಮನೆಸ್ಕ್ ಶೈಲಿಯ ಅಲಂಕಾರಿಕ ಅಂಗಗಳನ್ನು ಕಾಣಬಹುದು. ತೆರೆದ ಕಮಾನುದಾರಿಗಳನ್ನು ಉಪಯೋಗಿಸುವುದರ ಜೊತೆಗೆ ಕಂಬಗಳನ್ನು ಅಳವಡಿಸಲಾಗಿದ್ದು ಕಮಾನಿನ ಮೂಲೆಕಟ್ಟುಗಳಲ್ಲಿ ಮಧ್ಯಾಂಗಣದ ಸುತ್ತಲಿನ ಛಾವಣಿಯ ಹಾದಿಗಳಲ್ಲೂ ರೇಖೆಗಳನ್ನು, ಪ್ರಾಣಿಗಳನ್ನು, ಕಾಲ್ಪನಿಕ ಚಿತ್ರಗಳನ್ನು ಕೆತ್ತಲಾಗಿದೆ.

ಫ್ರಾನ್ಸಿನ ಉತ್ತರ ಭಾಗವನ್ನು ಆಕ್ರಮಿಸಿದ ನಾರ್ಮನ್ ಜನರ ಚರ್ಚ್ ಕಟ್ಟಡಗಳಲ್ಲಿ ಯಾವ ಸ್ವಂತಿಕೆಯೂ ಇಲ್ಲ. ದೀರ್ಘ ಚತುರಸ್ರದ ಗೋಪುರಗಳನ್ನುಳ್ಳ ಸ್ಥೂಲವಾದ ಕಟ್ಟಡಗಳನ್ನು ಮಾತ್ರ ಅವರು ಕಟ್ಟಿದರು. ಡರ್ಹಾಂದಲ್ಲಿಯ ಆರಾಧನ ಮಂದಿರ ಇದಕ್ಕೊಂದು ನಿದರ್ಶನ. ಆದರೆ ಜರ್ಮನಿಯಲ್ಲಿ ದ್ವಿಗುಣಿತ ಬೃಹದ್ವ್ಯಾಸದ ಮಂದಿರಗಳನ್ನು ಕಟ್ಟಲಾಯಿತು. ಬ್ಯಾಂಬರ್ಗ್‌ನಲ್ಲಿ ಇಂಥದೊಂದಿದೆ (1185–1274).

ಗಾತಿಕ್ ಶೈಲಿ ಮೊದಲು ಒರಟಾಗಿದ್ದು ಆರ್ಷೇಯವಾದ ಮೂರ್ತಿಶಿಲ್ಪಗಳನ್ನು ಹೊಂದಿದ್ದು ಕ್ರಮೇಣ ಹಗುರಾಗಿ ಆಡಂಬರಯುತವಾಗಿ ಅಲಂಕರಿಸಲ್ಪಟ್ಟು ಸಹಜತೆಯನ್ನು ಪಡೆಯಿತು. ಈ ಶೈಲಿ ಅತ್ಯುನ್ನತ ಮಟ್ಟಕ್ಕೇರಿದುದು ಆರಾಧನ ಮಂದಿರಗಳ ರಚನೆಯಲ್ಲಿ. 1150–1550ರ ನಡುವೆ ಅನೇಕ ನಗರಗಳಲ್ಲಿ ದೊಡ್ಡದಾದ ಭವ್ಯವಾದ ಇಂಥ ಕಟ್ಟಡಗಳು ತಲೆ ಎತ್ತಿದವು. ಕಲೆಯ ಪುನರುಜ್ಜೀವನದ ಲೌಕಿಕತೆಯನ್ನು ಈ ಶೈಲಿಯಲ್ಲಿ ಕಾಣಬಹುದಾಗಿದೆ. ಗಾತಿಕ್ ಶೈಲಿ ಹೆಚ್ಚಾಗಿ ಫ್ರೆಂಚರ ಕೊಡುಗೆ.

ಚರ್ಚ್ ಕಟ್ಟಡಗಳ ನಿರ್ಮಾಣ ಮತ್ತು ಪುನರ್ನಿರ್ಮಾಣಕಾರ್ಯ ಹದಿನೇಳನೆಯ ಶತಮಾನದಲ್ಲಿ ಬಹಳಮಟ್ಟಿಗೆ ಆಯಿತು. ಆದರೆ ಮಧ್ಯದ ಗುಮ್ಮಟವನ್ನುಳಿಸಿಕೊಂಡರೂ ಈ ಕಟ್ಟಡಗಳಲ್ಲಿ ಬೀದಿಯ ಕಡೆಗಿರುವ ಮುಂಭಾಗ ಮತ್ತು ಗೋಡೆಕಂಬಗಳ ಮುಖಮಂಟಪಗಳ ಮೇಲೆ ತ್ರಿಕೋನಾಕೃತಿಯ ರಚನೆ, ಅಲಂಕಾರ ಇತ್ಯಾದಿಗಳನ್ನು ಈ ಕಟ್ಟಡಗಳಲ್ಲಿ ಹೆಚ್ಚುಹೆಚ್ಚಾಗಿ ಆಗ ಅಳವಡಿಸಲಾಯಿತು. ಜೊತೆಗೆ ಈ ಕಟ್ಟಡಗಳು ನಿಡಿದಾದ ಮಧ್ಯಾಂಗಣ, ಮುಂಭಾಗದ ಜೋಡಣೆ, ಬೋದಿಗೆಗಳಿಂದ ಕೂಡಿದ ಕಂಬಸಾಲುಗಳ ಸೇರ್ಪಡೆಗಳಿಂದ ಆಕಾರ ಹಾಗೂ ವಿಸ್ತೀರ್ಣಗಳಲ್ಲಿ ಅಸಮರೂಪವನ್ನು ತಾಳಿದುವು. ಕ್ರಮೇಣ ಈ ಅಸಮರೂಪ ರಚನೆ ಒಂದು ಶೈಲಿಯಾಗಿ ಉಳಿಯಿತು.

**ಕರ್ನಾಟಕ:** ರೋಮನ್ ಕೆಥೊಲಿಕ್, ವೆಸ್ಲಿಯನ್ ಮತ್ತು ಲಂಡನ್ ಮಿಷನ್ ಚರ್ಚುಗಳೇ ತುಂಬ ಪ್ರಸಿದ್ಧವಾದ ಸಂಸ್ಥೆಗಳೆನಿಸಿಕೊಂಡಿವೆ. ರೋಮನ್ ಕೆಥೊಲಿಕ್ ಪಂಥಕ್ಕೆ ಸೇರಿದ ಬೆಂಗಳೂರಿನ ಸೇಂಟ್ ಮೇರಿ ಚರ್ಚ್ (1882) ಮತ್ತು ಸೇಂಟ್ ಜೋಸೆಫ್ ಚರ್ಚ್ (1882), ಆನೆಕಲ್ಲಿನಲ್ಲಿರುವ ವೆಸ್ಲಿಯನ್ ಪಂಥಕ್ಕೆ ಸೇರಿದ ದಿ ಸೇಕ್ರೆಡ್ (1895), ಲಂಡನ್ ಮಿಷನ್ ಪಂಥಕ್ಕೆ ಹಡ್ಸನ್ ಮೆಮೋರಿಯಲ್ ಚರ್ಚ್ ಸೇರಿದೆ. ಇವುಗಳೇ ಅಲ್ಲದೆ, ಕೋಲಾರದ ಚಿನ್ನದ ಗಣಿ ಪ್ರದೇಶಗಳಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದ ರೋಮನ್ ಕೆಥೊಲಿಕ್ ಪಂಥದವರು ಉಪಯೋಗಿಸುತ್ತಿರುವ ಬೆಂಗಳೂರು ಕೋಟೆಯಲ್ಲಿಯ ಸಣ್ಣ ಚರ್ಚನ್ನು ಕಲ್ಕತ್ತೆಯ ಧರ್ಮಾಧಿಕಾರಿ ಟರ್ನರ್ 1830ರಲ್ಲಿ ಜನತೆಗೆ ಅರ್ಪಿಸಿದರು. ಬೆಂಗಳೂರಿನಲ್ಲಿರುವ ಸೇಂಟ್ ಜೋಸೆಫ್ ಚರ್ಚು ಬೃಹದಾಕಾರದ ಚರ್ಚುಗಳಲ್ಲಿ ಒಂದಾಗಿದ್ದು ಶಿಲುಬೆಯ ಆಕಾರದ ವಿನ್ಯಾಸದಲ್ಲಿದೆ. ಮೊದಮೊದಲಿನ ಚರ್ಚುಗಳು ಸಾಮಾನ್ಯವಾಗಿ ಆರಂಭಕಾಲದ ಗಾತಿಕ್ ಶೈಲಿಯಲ್ಲಿ ರಚಿತವಾದವು. 13 ಮತ್ತು 15ನೆಯ ಶತಮಾನಗಳ ನಡುವಣ ಅವಧಿಯಲ್ಲಿ ಫ್ರಾನ್ಸ್ ಮತ್ತು ಉತ್ತರ ಯುರೋಪ್‌ಗಳಲ್ಲಿ ಈ ಶೈಲಿ ಪ್ರಚಲಿತವಾಗಿತ್ತು. ಈ ಬಗೆಯ ಚರ್ಚುಗಳು ವಿಶಾಲವಾದ ಕಮಾನುಗಳನ್ನೂ ಬದಿಯ ಒತ್ತುಗೋಡೆಗಳನ್ನೂ ಹೊಂದಿರುತ್ತವೆ. ಈ ಒತ್ತುಗೋಡೆಗಳು ನಾಲ್ಕು ಬೆರಳುಗಾತ್ರದ ಮೇಲು ಫಲಕಗಳನ್ನೂ ಒಂದರ ತರುವಾಯ ಒಂದರಂತೆ ಪರ್ಯಾಯವಾಗಿ ಬರುವ ಪ್ರಾಚೀನ ಮುಖವಾಡದ ಮುಂಭಾಗಗಳನ್ನೂ ಹೊಂದಿರುತ್ತವೆ. ಮಧ್ಯಾಂಗಣ ಸಾಕಷ್ಟು ವಿಶಾಲವಾಗಿರುತ್ತದೆ. ಬದಿಯ ಹಜಾರಗಳು ಕಿರಿದಾಗಿರುತ್ತವೆ. ಬೃಹದಾಕಾರದ ಕಮಾನು ಛಾವಣಿಗಳು ಮತ್ತು ಸ್ತಂಭಗಳು ಸ್ವಲ್ಪ ಎತ್ತರವೆಂದು ತೋರುವ ಛಾವಣಿಗೆ ಆಸರೆಯನ್ನೊದಗಿಸುತ್ತವೆ. ಉತ್ತರ ಗಾತಿಕ್ ಶೈಲಿಯ ಕಟ್ಟಡಗಳಲ್ಲಿ ಚರ್ಚಿನ ವೇದಿಕೆಯ ಹಿನ್ನೆಲೆಯಲ್ಲಿ ಕಲ್ಲಿನ ಕೆತ್ತನೆಯನ್ನುಳ್ಳ ಎತ್ತರವಾದ ಗೋಡೆ ಇರುತ್ತದೆ. ಈ ಕೆತ್ತನೆಯ ಲಂಬರೇಖೆಗಳು ಮುಖ್ಯ ಕಟ್ಟಡದ ರಚನೆಯೊಂದಿಗೆ ಸಮರಸವಾಗಿ ಹೊಂದಿಕೊಂಡಿರುತ್ತವೆ. ಹಾಗೂ ವೇದಿಕೆಯ ಮೇಜಿಗೆ ಆವರಣವನ್ನೊದಗಿಸುತ್ತದೆ. ಈಚಿನ ಚರ್ಚುಗಳನ್ನು ಮೂಲ ಗಾತಿಕ್ ಶೈಲಿಯಲ್ಲಿ ಕಟ್ಟಲಾಗಿದೆ. ಉದಾಹರಣೆಗೆ ಮೈಸೂರಿನಲ್ಲಿರುವ ಸೇಂಟ್ ಫಿಲೋಮಿನ ಚರ್ಚ್. ಇದು ಅಸ್ತಿತ್ವಕ್ಕೆ ಬರಲು 4ನೆಯ ಕೃಷ್ಣರಾಜ ಒಡೆಯರ್ ಅವರ ಆಪ್ತ ಕಾರ್ಯದರ್ಶಿಗಳಾಗಿದ್ದ ಸರ್ ತಂಬೂಚೆಟ್ಟಿ ಹಾಗೂ ಫಾದರ್ ಫ್ಲ್ಯೂಗ್ ಅವರ ಶ್ರದ್ಧೆ ಮತ್ತು ಉತ್ಸಾಹಗಳೇ ಕಾರಣ. ಫ್ಲ್ಯೂಗ್ ಬೆಂಗಳೂರಿಗೆ ಬಂದ ಮೊದಲ ಕ್ರೈಸ್ತ ಧರ್ಮಾಧಿಕಾರಿ. 1933ರಲ್ಲಿ ಅಂದಿನ ಮೈಸೂರು ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರ್ ಅವರು ಚರ್ಚಿನ ಶಂಕುಸ್ಥಾಪನೆ ಮಾಡಿದರು. ಇದು ಒಟ್ಟಾರೆ 49.50ಮೀ ಎತ್ತರವಿದ್ದು, ಜೋಡಿಗೋಪುರಗಳೂ ಅಷ್ಟೇ ಎತ್ತರವಾಗಿವೆ. 1938ರಲ್ಲಿ ಇದರ ನಿರ್ಮಾಣಕಾರ್ಯ ಪೂರ್ಣವಾಯಿತು. ಫ್ಲ್ಯೂಗ್ ಅವರು ಮೈಸೂರಿನ ಕ್ರೈಸ್ತಧರ್ಮಾಧಿಕಾರಿಯಾದಾಗ (1941) ಕಟ್ಟಡ ಪೂರ್ಣಗೊಂಡಿತು. ಇದು ಮೈಸೂರಿನ ಅತ್ಯಂತ ಕಲಾತ್ಮಕವಾದ ಚರ್ಚ್. ಇದರ ನೆಲಮನೆಯಲ್ಲಿರುವ ಸಮಾಧಿಗುಹೆಗಳು ಬಹು ಪ್ರಸಿದ್ಧವಾಗಿವೆ.

ಮಧ್ಯಯುಗೀನ ಕಾಲದ ಭಾರತದಲ್ಲಿ ಕ್ರೈಸ್ತ ವಾಸ್ತುಶಿಲ್ಪದ ಪ್ರಧಾನ ನೆಲೆ ಪೋರ್ಚುಗೀಸರ ಕಾಲದ ಹಳೆ ಗೋವ. ಇಲ್ಲಿಯ ಇಗರ್ಜಿ, ಬೆಸಲಿಕ, ಚಾಪೆಲಗಳ ಮುಖ್ಯ ವಾಸ್ತು ಮೂರ್ತಿ, ವರ್ಣಚಿತ್ರಗಳ ಪ್ರಕಾರ, ಲಕ್ಷಣಗಳು, ಶೈಲಿಯ ಬೆಳೆವಣಿಗೆಯನ್ನು ಇಲ್ಲಿಯ ಧಾರ್ಮಿಕ ನಿರ್ಮಿತಿಗಳಿಂದ ಸರಿಯಾಗಿ ತಿಳಿದುಕೊಳ್ಳಲು ಸಾಧ್ಯ.

ಸು. 1ನೆಯ ಶತಮಾನದಲ್ಲಿ ಸೇಂಟ್ ಥಾಮಸ್ ಕೇರಳಕ್ಕೆ ಬಂದಿದ್ದರೂ ಗೋವ ಪ್ರದೇಶದಲ್ಲಿ 1510 ರಿಂದ ನೆಲಸಿದ ಪೋರ್ಚ್‌ಗೀಸ್ ವಸಾಹತು ಪ್ರದೇಶದಲ್ಲೆಲ್ಲ ಕ್ರೈಸ್ತಧರ್ಮ ಬಲವಾಗಿ ಬೇರೂರಿ ಹರಡುವುದಕ್ಕೆ ಕಾರಣವಾಯಿತು. ಮುಖ್ಯವಾಗಿ ಹಳೆ ಗೋವ ಪ್ರದೇಶದಲ್ಲಿ ಕ್ರೈಸ್ತಧರ್ಮಕ್ಕೆ ಮತಾಂತರವಾದ ಸ್ಥಳೀಯರಲ್ಲಿ ಭಯ–ಭಕ್ತಿಯನ್ನುಂಟು ಮಾಡುವಂಥ ಭವ್ಯ ಹಾಗೂ ಅನುಪಮ ಇಗರ್ಜಿಗಳನ್ನು, ಕ್ರೈಸ್ತ ಸನ್ಯಾಸಿನಿಯರಿಗೆ ಧಾರ್ಮಿಕ ವಸತಿ ಗೃಹಗಳನ್ನೂ ಕಟ್ಟಲಾಯಿತು. ಇವುಗಳನ್ನು ಕಟ್ಟಿದ ವಾಸ್ತುಶಿಲ್ಪಿಗಳು ಸಮಕಾಲೀನ ಐರೋಪ್ಯ ಕ್ರೈಸ್ತ ವಾಸ್ತುಶೈಲಿಗಳಿಂದ ಗಾಢವಾಗಿ ಪ್ರಭಾವಿತರಾಗಿದ್ದರು. ಬೈಬಲ್ಲಿನ ಸುವಾರ್ತೆಗಳನ್ನು ಪರಿಣಾಮಕಾರಿಯಾಗಿ ಪ್ರಸರಿಸುವ ಉದ್ದೇಶವೂ ಇದರಲ್ಲಡಗಿತ್ತು. ಇಲ್ಲಿ ಸುಮಾರು 14 ವಿವಿಧ ಪ್ರಕಾರಗಳ ಇಗರ್ಜಿಗಳಿವೆ. ಮೂರರಲ್ಲಿ ಧಾರ್ಮಿಕ ಸಂಘ ವಸತಿಗೃಹವೂ ಇದೆ. ಇವುಗಳನ್ನು ಕತೀಡ್ರಲ್, ಚಾಪೆಲ್, ಬೆಸಲಿಕ ಮತ್ತು ಚರ್ಚ್‌ಗಳೆಂದು ವಿಂಗಡಿಸಬಹುದು.

ಸಂತ ಮೇರಿ ಮತ್ತು ಶಿಶು ಯೇಸು, ಹಳೆ ಗೋವ

ಇವು: ಸೇಂಟ್ ಕತ್ರೀಡಲ್ (ಸಾಮಾನ್ಯವಾಗಿ ಬಿಷಪ್‌ನ ಸಿಂಹಾಸನವಿರುವ ಮುಖ್ಯ ಇಗರ್ಜಿ), ಸೇಂಟ್ ಕೆಥೆರೈನ್ ಚಾಪೆಲ್ (ಸಂತ ಕೆಥೆರೈನ್ ಇವರ ಹೆಸರಿನಲ್ಲಿಯ ವೈಯಕ್ತಿಕ ಪೂಜಾ ಮಂದಿರ), ಸೇಂಟ್ ಫ್ರಾನ್ಸಿಸ್ ಜೇವಿಯರ್ ಚಾಪೆಲ್, ರಾಯಲ್ ಚಾಪೆಲ್ ಆಫ್ ಸೇಂಟ್ ಆಂಥೋಣಿ, ಚಾಪೆಲ್ ಆಫ್ ಅವರ್ ಲೇಡಿ ಆಫ್ ದಿ ಮೌಂಟ್ ಬೆಸಲಿಕ ಆಫ್ ಬಾಮ ಜೀಸಸ್ (ಆಯತಾಕಾರದ ವಿಶೇಷ ಸೌಲಭ್ಯಗಳುಳ್ಳ ಭವ್ಯ ಇಗರ್ಜಿ) ಮತ್ತು ಪ್ರೊಫೆಶನಲ್ ಹೌಸ್ (ಧಾರ್ಮಿಕ ಪಂಥದ ಮನೆ), ಚರ್ಚ್ ಆಫ್ ಸೇಂಟ್ ಫ್ರಾನ್ಸಿಸ್ ಆಫ್ ಅಸೀಸಿ, ಚರ್ಚ್ ಆಫ್ ಸೇಂಟ ಕಜೆತಾನ್, ಚರ್ಚ್ ಆಫ್ ಅವರ್ ಲೇಡಿ ಆಫ್ ರೋಸರಿ ಚರ್ಚ್ ಅಂಡ್ ಕಾನ್ವೆಂಟ್ ಆಫ್ ಸೇಂಟ್ ಮೋನಿಕ, ಚರ್ಚ್ ಆಫ್ ಕಾರ್ಮಲೈಟ್ಸ್, ಚರ್ಚ್ ಆಫ್ ಸೇಂಟ್ ಜಾನ್ ಆಫ್ ಗಾಡ್, ಚರ್ಚ್ ಆಫ್ ದಿ ಕ್ರಾಸ್ ಆಫ್ ಮಿರಾಕಲ್ಸ್ – ಇವುಗಳಲ್ಲಿ ಕ್ರೈಸ್ತ ಸನ್ಯಾಸಿಗಳ ವಸತಿ ಮತ್ತು

ಅಧ್ಯಯನ ಕೊಠಡಿಗಳಿವೆ. ಇವೆಲ್ಲವೂ 16–17ಶತಮಾನದವು. ಸ್ಥಳೀಯ ಜಂಬಿಟ್ಟಿಗೆ ಮತ್ತು ಸುಣ್ಣಗಾರೆಯಿಂದ ನಿರ್ಮಿತವಾಗಿವೆ. ಸಂತ ಫ್ರಾನ್ಸಿಸ್ ಆಫ್ ಅಸೀಸಿ, ಸಂತ ಕಜೆತಾನ್, ಬಾಮ್ ಜೀಸಸ್ ಬೆಸಲಿಕ, ಅವರ ಲೇಡಿ ಆಫ್ ರೋಸರಿ ಮತ್ತು ಅಗಸ್ಟಿನ್ ಚರ್ಚುಗಳು ಮತ್ತು ಸಂತ ಕೆಥಿರೈನ ಪೂಜಾಲಯ ಆಕರ್ಷಕ, ವೈವಿಧ್ಯಮಯ ಕ್ರೈಸ್ತ ಪಂಥದ ವರ್ಣಚಿತ್ರಗಳಿಗೆ, ವಾಸ್ತು ಶಿಲ್ಪದ ಭವ್ಯತೆಗೆ ಹೆಸರುವಾಸಿಯಾಗಿವೆ.

ಪೋರ್ಚುಗೀಸರು ಇಡಿ ಪ್ರಪಂಚದಲ್ಲೇ ಕ್ರೈಸ್ತಧರ್ಮವನ್ನು ಹರಡುವುದಕ್ಕೆ ದೇವರು ಅವರನ್ನು ನಿರ್ದೇಶಿಸಿದ್ದಾನೆಂಬ ಬಲವಾದ ಕುರುಡು ಭಾವನೆಯುಳ್ಳವರಾಗಿದ್ದರು. ಇವರು ಎಲ್ಲೆಲ್ಲಿ ಹೊಸ ಪ್ರದೇಶಗಳನ್ನು ವಶಪಡಿಸಿಕೊಂಡರೋ ಅಲ್ಲೆಲ್ಲ ಕ್ರೈಸ್ತ ಧರ್ಮವನ್ನು ಹರಡುತ್ತಾ

ರಿಪ್ಪನ್ ಕಟ್ಟಡ (ಈಗಿನ ನಗರಸಭೆ ಕಾರ್ಯಾಲಯ), ಚೆನ್ನೈ

ಸ್ಥಳಿಯರನ್ನು ಒತ್ತಾಯದಿಂದ ಸೇರುವಂತೆ ಮಾಡಿದರು. ಪ್ರಚಲಿತ ಶಕವರ್ಷದ ಆದಿಯಲ್ಲಿ ಕೇರಳಕ್ಕೆ ಸಂತ ಥಾಮಸ್ ಅನಂತರ ಸಿರಿಯನ್ ಕ್ರೈಸ್ತರು ಬಂದು ಮಲಬಾರ್‌ನಲ್ಲಿ ನೆಲಸಿದರೂ ಕೂಡ ಸ್ಥಳೀಯರ ಮೇಲೆ ವ್ಯಾಪಕವಾದ ಗಂಭೀರ ಪರಿಣಾಮವನ್ನುಂಟುಮಾಡಿರಲಿಲ್ಲ. ಆದರೆ ಪೋರ್ಚುಗೀಸರ ಈ ಎಲ್ಲ ಕ್ರಮಗಳಿಂದ ಈ ಪ್ರದೇಶದಲ್ಲೆಲ್ಲ ಕ್ರೈಸ್ತಧರ್ಮ ಬಲವಾಗಿ ಬೇರೂರುವಂತಾಯಿತು. ಪೋರ್ಚುಗೀಸರು ಆಡಳಿತಾತ್ಮಕವಾಗಿ ಗೋವದಲ್ಲಿ ಗಟ್ಟಿಯಾಗಿ ನೆಲಸಿದ ಮೇಲೆ 16ನೆಯ ಶತಮಾನದ ಮಧ್ಯದಿಂದ ಇಲ್ಲಿ ಹಲವಾರು ಸಾರ್ವಜನಿಕ ಮತ್ತು ಸ್ವಂತದ ಕಟ್ಟಡಗಳ ನಿರ್ಮಾಣಕ್ಕೆ ಕಾರಣರಾದರು.

ಅನಂತರ ಯುರೋಪಿನ ವಿವಿಧ ಪ್ರದೇಶಗಳಿಂದ ಕಾರ್ಮೆಲೈಟರು, ಅಗಸ್ಟಿಯನ್ನರು, ಡೊಮಿನಿಕನ್ನರು, ಜೆಸೂಯಿಟರು ಮೊದಲಾದವರು ಇಲ್ಲಿಗೆ ಬಂದ ಮೇಲೆ ಕ್ರೈಸ್ತಧರ್ಮವನ್ನು ಹರಡಲು ಪ್ರಾರಂಭಿಸಿ ಚರ್ಚು, ಪೂಜಾಲಯ, ಬೆಸಲಿಕ ವಿಹಾರಗಳನ್ನು ಇವರ ಮಾರ್ಗದರ್ಶನ ದಲ್ಲಿ ಕಟ್ಟಲಾಯಿತು. ಆದ್ದರಿಂದಲೆ ಯುರೋಪಿನ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರಚಲಿತವಿದ್ದ ವಾಸ್ತು–ಮೂರ್ತಿ–ವರ್ಣಚಿತ್ರ ಲಕ್ಷಣ–ಶೈಲಿಗಳು ಸಹಜವಾಗಿಯೇ ಇಲ್ಲಿ ಚರ್ಚು ಮೊದಲಾದವುಗಳ ನಿರ್ಮಾಣ ಹಂತದಲ್ಲಿ ಗಂಭೀರ ಪ್ರಭಾವವನ್ನು ಬೀರಿದವು. ಇಲ್ಲಿಯ ಬಹಳಷ್ಟು ನಿರ್ಮಿತಿಗಳು 17ನೆಯ ಶತಮಾನದ ಆದಿಭಾಗದವು. ಆಗ ಯುರೋಪಿನಲ್ಲಿ 14–16ನೆಯ ಶತಮಾನದ ಪ್ರಾಚೀನ ಗ್ರೀಕ್ ಮತ್ತು ರೋಮನ್ ಪರಂಪರೆಯ ಕಲೆ ಮತ್ತು ಸಾಹಿತ್ಯದ ಪುನರುಜ್ಜೀವನ ಕಾಲ ಮುಗಿಯುತ್ತಾ ಬಂದಿತ್ತು. ಬದಲಾಗಿ ಮುಂದೆ 2 ಶತಮಾನಗಳವರೆಗೆ ಪ್ರಚಲಿತವಿದ್ದ ವಿಪರೀತ ಅಲಂಕಾರವೇ ಕೆಲವು ಸಲ ವಿಕೃತವಾಗಿ ಕಂಡರೂ ಪ್ರಧಾನವಾಗಿದ್ದ ಒಂದು ಹೊಸ ಶೈಲಿ ಆರಂಭವಾಯಿತು. ಅದೇ ಬರೋಕ್ ಶೈಲಿ. ಇಟಲಿಯಲ್ಲಿ ಸು. 15ನೆಯ ಶತಮಾನದಲ್ಲಿ ಬುದ್ಧಿ ಪೂರ್ವಕವಾಗಿ ತೀವ್ರತೆಯಿಂದ ಹಳೆಯ ಗ್ರೀಕ್ ವಿಶೇಷವಾಗಿ ರೋಮನ್ ಕಾಲದ ಟಸ್ಕನ್, ಡೋರಿಕ್, ಐಯೋನಿಕ, ಕಾರಿಂತಿಯ ಹಾಗೂ ಮಿಶ್ರ ಪ್ರಕಾರಗಳ ಸ್ತಂಭ ವಾಸ್ತು ಶಿಲ್ಪ ಮಾದರಿಗಳನ್ನು ಕ್ರಮೇಣ ಮತ್ತೆ ಪುನರುಜ್ಜೀವನಗೊಳಿಸಲಾಯಿತಷ್ಟೆ. ಈ ಮಾದರಿಗಳ ರೂಪಣಗಳಲ್ಲಿ ಕೆಲವು ನಿಯಮ ವಿಧಾನಗಳಿವೆ. ಆದರೆ 17ನೆಯ ಶತಮಾನದಿಂದ ಇವು ಯಾವುದನ್ನು ಲೆಕ್ಕಿಸದೆ ಈ ಮಾದರಿಗಳನ್ನೂ ಒಂದು ತಮ್ಮದೆ ರೀತಿಯಲ್ಲಿ ಮಾರ್ಪಡಿಸಲಾಯಿತು. ನಿರ್ಮಾಣಗಳಲ್ಲಿ ಶಿಷ್ಟ ನಿಯಾಮವಳಿಗಳನ್ನು ಅನುಸರಿಸದೆ, ಇವುಗಳ ಮುಂಬದಿ ವಿಪರೀತ ಅಂಕುಡೊಂಕಿನ ಉಬ್ಬು ಉಬ್ಬುಗಳಿಂದ ಅಲಂಕರಿಸಲಾಗುತ್ತಿತ್ತು. ಉದ್ದಕ್ಕೂ ತಿರುವಿದ ಕಾಂಡವುಳ್ಳ ಕಂಬ, ಒಡೆದ ಬೋದಿಗೆ, ಮೇಲೆ ಸ್ವಲ್ಪ ಕರಿಸಾಕಾರದ ಒಡ್ಡೊಡ್ಡಾಗಿರುವ ಪೆಂಡಿಮೆಂಟ್, ದೊಡ್ಡ ದೊಡ್ಡ ಅಲೆಯಂತಿರುವ ಸುರುಳಿಗಳು, ಕಲ್ಪನೆಗೆ ಬಾರದ ಸ್ಥಳಗಳಲ್ಲಿ ಎಲ್ಲೆಲ್ಲೊ ಹಾರಾಡುತ್ತಿರುವ ವ್ಯಕ್ತಿಗಳು, ಒಳಾಂಗಣದಲ್ಲಿ ಸುವರ್ಣಲೇಪನದ ಅತಿ ಸೂಕ್ಷ್ಮ ವಿವರಗಳುಳ್ಳ ಉತ್ಪ್ರೇಕ್ಷಿತ ಅಲಂಕರಣ ಹಾಗೂ ಶಿಲ್ಪಗಳು; ಇವು ಬರೋಕ್ ಶೈಲಿಯ ಮುಖ್ಯ ಲಕ್ಷಣಗಳು. ಈ ಒಂದು ಶೈಲಿಯು ಇಟಲಿ ಪ್ರದೇಶವನ್ನು ಬಲವಾಗಿ ಆವರಿಸಿ ಅಲ್ಲಿಂದ ಮುಂದೆ ಯುರೋಪಿನ ವಿವಿಧ ಭಾಗಗಳಿಗೆ ಹರಡಿತು. ಹಳೆ ಗೋವಾದಲ್ಲಿ ಚರ್ಚುಗಳ ಶಿಲ್ಪಗಳು ಸಮಕಾಲಿನ ಇಟಲಿಯ ರೋಮ್‌ನಲ್ಲಿಯ ಪುನರುಜ್ಜೀವನ ಪರಂಪರೆಯನ್ನು ಸ್ವಲ್ಪಮಟ್ಟಿಗೆ ಅನುಸರಿಸಿದ ಚರ್ಚುಗಳನ್ನು ಮತ್ತು ಅವುಗಳ ಒಳಗಿನ ಬರೋಕ್ ಶೈಲಿಯನ್ನು ಮಾದರಿಗಳನ್ನಾಗಿಟ್ಟುಕೊಂಡು ಕಟ್ಟಿದರು. ಉದಾಹರಣೆಗೆ ಸಂತ ಕಜೆತಾನ್ ಚರ್ಚ್ ರೋಂನಲ್ಲಿಯ ಸಂತ ಪೀಟರ್ ಚರ್ಚನಂತಿದೆ. ಹಾಗೆಯೆ ಜೆಬಾಮ್ ಜೀಸಸ್ ಚರ್ಚಿನ ಮುಂಬದಿಯು ಐಯೋನಿಯನ್, ಡೋರಿಕ್ ಮತ್ತು ಕಾರಿಂತಿಯನ್ ಶಿಷ್ಟ ಸಂಪ್ರದಾಯದ ಮಾದರಿಗಳ ಅರ್ಧಗಂಬಗಳಿಂದ ಅಲಂಕೃತವಾಗಿದೆ. ಪುನರುಜ್ಜೀವನ ಪಪರಂಪರೆಯ ಲಕ್ಷಣಗಳುಳ್ಳ ಇನ್ನೊಂದು ಚರ್ಚ್ ಕಠೀಡ್ರಲ್. ಇದರ ಮುಂಬದಿ ಟಸ್ಕನ್ ಶೈಲಿಯಲ್ಲಿದೆ. ಇದರ ಪ್ರವೇಶದ್ವಾರದಲ್ಲಿಯ ಕಾರಂತಿಯನ್ ಮಾದರಿಯ ಕಂಬಗಳು ಪ್ರವೇಶದ್ವಾರಕ್ಕೆ ಹೋಗಲು ಮೆಟ್ಟಲು ಸಹಿತ ಎತ್ತರಿಸಿದ ವೇದಿಕೆ, ಸಭಾಂಗಣದ ಮಧ್ಯಭಾಗದ ಕಂಸಾಕೃತಿಯ ಛತ್ತು ಮೊದಲಾದವು ಈ ಪರಂಪರೆಯ ಮುಖ್ಯ ಲಕ್ಷಣಗಳು ಈ ಚರ್ಚ್‌ಗಳಲ್ಲಿ ನಿವೇದನಾ ಪೀಠ ಬರೋಕ ಶೈಲಿಯ ಅತಿಯಾದ ಅಲಂಕರಣ ಮತ್ತು ಚಿನ್ನದ ಲೇಪನದಿಂದ ಕೂಡಿದೆ. ಈ ರೀತಿ ಅಲಂಕರಣದಲ್ಲಿ ಹೊಸದಾಗಿ ಮತಾಂತರಗೊಂಡ ಕ್ರಿಶ್ಚಿಯನ್ನರಲ್ಲಿ ಭಯಭಕ್ತಿಯನ್ನುಂಟುಮಾಡುವ ಉದ್ದೇಶವು ಇತ್ತು.

ಈ ಧಾರ್ಮಿಕ ಕಟ್ಟಡಗಳಲ್ಲಿಯ ಜೀಸಸ್ ಕ್ರೈಸ್ಟ್ ಹಾಗೂ ಜೀವನದ ಪ್ರಮುಖ ಘಟನೆಗಳು ಹಾಗೂ ಹೂವು ಲತೆಗಳು ಘಟನೆಗಳು, ಬೈಬಲ್ಲಿನ ವ್ಯಕ್ತಿಗಳ ಕಥೆಗಳಿಗೆ ಸಂಬಂಧಿಸಿದ ವರ್ಣಚಿತ್ರಗಳನ್ನು ಮರದ ಫಲಕಗಳ ಮೇಲೆ ರೂಪಿಸಿ ಮಾಡಿ ಅವುಗಳನ್ನು ಸೂಕ್ತ ಭಾಗಗಳಲ್ಲಿ ಅಳವಡಿಸಲಾಗುತ್ತಿತ್ತು. ಇವುಗಳ ನಡುವೆ ಹೂಬಳ್ಳಿಗಳನ್ನು ವರ್ಣದಲ್ಲಿ ಬಿಡಿಸಲಾಗುತ್ತಿತ್ತು. ಇಂಥ ವರ್ಣಚಿತ್ರಗಳು ಸಂತ ಗ್ಸೇವಿಯರ್‌ನ ಸಮಾಧಿಯಿರುವ ಚಾಪೆಲ್‌ನಲ್ಲಿ ಕಠೀಡ್ರಲ್‌ನಲ್ಲಿಯ ನಿವೇದನಾ ವೇದಿಕೆಯ ಮೇಲಿನ ಕಮಾನುಗಳ ಹಾಗೂ ಶಿಲುಬೆಯಾಕಾರದ ವಿನ್ಯಾಸದ ತೋಳಿನ ಭಾಗದಲ್ಲಿ, ಸಂತ ಫ್ರಾನ್ಸಿಸ್ ಆಫ್ ಅಸ್ಸಿಸಿಯ ಸಂಭಾಗಣದ ಮಧ್ಯಭಾಗದ ಹಿಂಬದಿಯ ಪ್ರಧಾನ ನಿವೇದನಾ ವೇದಿಕೆ ಇಕ್ಕೆಲಗಳಲ್ಲಿ ಇವೆ. ಇವು ಇಟಲಿಯ ಬಟ್ಟೆಮೇಲಿನ ವರ್ಣಚಿತ್ರಕಲೆ ಪರಂಪರೆಯ ಒಂದು ಸಾಧಾರಣ ಅನುಕರಣೆಯಾಗಿ ಕಾಣುತ್ತವೆ. ಇಟಲಿಯ ಕಲಾವಿದರ ಮಾರ್ಗದರ್ಶನದ ಸ್ಥಳೀಯ ಕಲಾವಿದರ ಕೃತಿಗಳಾಗಿವೆ. ಆದರೆ ಹೂ ಲತಾ ಬಳ್ಳಿ ವರ್ಣಚಿತ್ರಗಳಲ್ಲಿ ಸ್ಥಳೀಯರು ತಮ್ಮ ಪಾರಂಪರಿಕ ಅನುಭವದಿಂದ ಶ್ರೇಷ್ಠತೆಯನ್ನು ತೋರಿಸಿದ್ದಾರೆ. ಗೋಡೆಗಳ ಮೇಲಿನ ಹೂವು ಮೊದಲಾದ ಚಿತ್ರ–ವಿಚಿತ್ರ ಅರಬ್ಬಿ ಕಲೆಯು ಭಾರತೀಯ–ಇಸ್ಲಾಂ ಪ್ರಭಾವವನ್ನು ಸೂಚಿಸುವಂತೆ ಕಾಣುತ್ತದೆ. ಆದರೆ ಪೋರ್ಚುಗಲ್ ಮತ್ತು ಸ್ಪೇನ್ ದೇಶಗಳಲ್ಲಿ ಗಾತಿಕ್ ಮತ್ತು ಇಸ್ಲಾಮಿಕ್ ಕಲೆಗಳ ಸಮ್ಮಿಳಿತದಿಂದುಂಟಾದ ಮುದೆಜಾರ್ ಕಲಾಶೈಲಿಯೂ ಇದಕ್ಕೆ ಸ್ಫೂರ್ತಿದಾಯಕವಾಗಿರಬಹುದು. ಕೆಲವು ಬಟ್ಟೆ ವರ್ಣಚಿತ್ರಗಳ ಪಾಶ್ಚಿಮಾತ್ಯ ದೇಶಗಳಲ್ಲಿ ಸಿದ್ಧವಾಗಿದ್ದು ಅವುಗಳನ್ನು ಇಲ್ಲಿಗೆ ತಂದು ಚರ್ಚುಗಳಲ್ಲಿ ಅಲಂಕರಿಸಿದಂತೆ ಕಾಣುತ್ತದೆ.

ಕೆಲವೊಂದು ಶಿಲಾಶಿಲ್ಪಗಳ ಹೊರತಾಗಿ ಸಾಮಾನ್ಯವಾಗಿ ಮೂರ್ತಿಗಳೆಲ್ಲವೂ ಕಾಷ್ಠದಿಂದ ಮಾಡಿದವು. ಇವುಗಳು ವರ್ಣಗಳಿಂದ ಸೂಕ್ತವಾಗಿ ಅಲಂಕರಿಸಲ್ಪಟ್ಟಿವೆ. ತಾಯಿ ಮೇರಿ, ಶಿಲುಬೆ ಮೇಲಿರುವ ಜೀಸಸ್ ಹಾಗೂ ಕ್ರೈಸ್ತಸಂತರ ಶಿಲ್ಪಗಳು ಇವು ನಿಜವಾಗಿ ಪಾಶ್ಚಿಮಾತ್ಯ ಕಲೆಯ ಅತ್ಯುತ್ತಮ ಅನುಕರಣೆಯೆಂದು ಹೇಳಬಹುದು.

ಈಸ್ಟ್ ಇಂಡಿಯ ಹೌಸ್ (ವರ್ಣಚಿತ್ರ)

ಸೆ ಕಠೀಡ್ರಲ್ ಅತ್ಯಂತ ದೊಡ್ಡ ಚರ್ಚ್. ಇದನ್ನು ವಿಶಾಲವಾದ ವೇದಿಕೆಯ ಮೇಲೆ ಕಟ್ಟಿರುವುದು ಒಂದು ವಿಶೇಷ. ಇದರಲ್ಲಿ ಮುಖ್ಯ ನಿವೇದನಾ ಪೀಠವಲ್ಲದೆ ಎಂಟು ಚಾಪೆಲ್ಲು ಗಳಿವೆ. ಇದರ ದಕ್ಷಿಣ ಬದಿಯಲ್ಲಿ ಎತ್ತರದ ಗಂಟೆ ಗೋಪುರವಿದೆ. ಇದರ ಗಂಭೀರ ಧ್ವನಿಯನ್ನಾದರಿಸಿ ಇದು ಸುವರ್ಣಗಂಟೆಯೆಂದು ಒಂದು ಪೋರ್ಚುಗೀಸ್ ಕವನದಲ್ಲಿ ವರ್ಣಿತವಾಗಿದೆ. ಇದರೊಳಗೆ ಗಾಯಕ ಮೇಳದವರ ಕಟ್ಟೆಯ ಅಕ್ಕಪಕ್ಕಗಳಲ್ಲಿ ಪ್ರತಿಮೆಗಳಿವೆ. ಇದರಲ್ಲಿ ಸಂತ ಕ್ರಿಸ್ಟೋಫರ್ ಮತ್ತು ಸಂದರ್ಭೋಚಿತವಾಗಿ ಧರಿಸುವ ವಸ್ತುಗಳುಳ್ಳ ಮೇಜಿನ ಹತ್ತಿರ ಸಂತ ಕೆಥರಿನ ವರ್ಣಚಿತ್ರಗಳಿವೆ. ಕ್ರಾಸ್ ಆಫ್ ಮಿರಾಕಲ್ಸ್ ಇದರ ಬೃಹತ್ ಪ್ರವೇಶದ್ವಾರ ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟ ಮರದ ಜಾಲರಿಗಳಿಂದ ಅಲಕೃಂತವಾಗಿದೆ.

1562ರಲ್ಲಿ ಡಾಮ್ ಸೆಬಾಸ್ಟಿಯೊ ಎಂಬ ಪೋರ್ಚುಗೀಸ್ ರಾಜನ ಅಣತಿಯಂತೆ ಇದನ್ನು ಕಟ್ಟಲಾಯಿತೆಂದು ತಿಳಿಯಲಾಗಿದೆ. ಇದರ ಮುಖ್ಯಭಾಗ 1619ರಲ್ಲಿ, ವೇದಿಕೆಗಳನ್ನು 1652ರಲಿ ಮುಗಿಸಲಾಯಿತು.

1521ರಲ್ಲಿ ಕಟ್ಟಲಾದ ಸಂತ ಫ್ರಾನ್ಸಿಸ್ ಆಫ್ ಅಸ್ಸಿಸಿ ಹೋಲಿ ಘೋಸ್ಟ್ ಚರ್ಚನ್ನು 1661ರಲ್ಲಿ ಮತ್ತೆ ಬಿಚ್ಚಿ ಕಟ್ಟಲಾಯಿತು. ಇದರ ಆಕರ್ಷಕ ಭಾಗವೆಂದರೆ ಮುಖ್ಯ ವೇದಿಕೆಯ ಬದಿಗಳಲ್ಲಿಯ ಯೇಸುಕ್ರಿಸ್ತನ ಶಿಷ್ಯರಲ್ಲಿ ಒಬ್ಬರಾದ ಸಂತ ಫ್ರಾನ್ಸಿಸ್ ಆಫ್ ಅಸ್ಸಿಸಿ ಇವರ ಜೀವನ ಚರಿತ್ರೆಗೆ ಸಂಬಂಧಿಸಿದ ಏಳು ವರ್ಣಚಿತ್ರಗಳು. 1510ರಲ್ಲಿ ಕಟ್ಟಲಾದ ಸಂತ ಕೆಥಿರನ ಚರ್ಚ್ ಐತಿಹಾಸಿಕ ಮಹತ್ವದ್ದು. ಬಿಜಾಪುರದ ಆದಿಲ್‌ಶಾಹಿಗಳಿಂದ ಗೋವವನ್ನು ವಶಪಡಿಸಿಕೊಂಡು ಸಂತ ಕೆಥಿರನ ದಿನದಂದು ಅಪೋನ್ಸೊದ ಆಲ್ಬುಕರ್ಕ್ ಪುರಪ್ರವೇಶಮಾಡಿ ತನ್ನ ಅಧೀನಕ್ಕೆ ತೆಗೆದುಕೊಂಡನು. ಇದರ ಸ್ಮರಣಾರ್ಥ ಅನಂತರ ಇಲ್ಲಿಯ ರಾಜ್ಯಪಾಲ ಜಾರ್ಜ್ ಕಬ್ರಲ್ ಆದಿಲ್‌ಶಾಹಿ ಅರಸರ ಕಾಲದ ಮಹಾದ್ವಾರದ ಬಳಿ ಈ ಚರ್ಚನ್ನು ಕಟ್ಟಿಸಿದನು.



ಡಚ್ ವಸಾಹತುಶಾಹಿ ಮಾದರಿ ಕಟ್ಟಡ

ಬಾಲ ಯೇಸುವಿಗೆ ಮೀಸಲಾದ ಬಾಮ್ (ಸದ್ಗುಣಿ) ಜೀಸಸ್ ಅತ್ಯಂತ ಎತ್ತರ ಹಾಗೂ ವಿಶಾಲವಾದುದು ಹಾಗೂ ತೀರ ಸರಳ. 1585ರಲ್ಲಿ ಜೆಸೂಯಿಟರಿಂದ ಕಟ್ಟಲಾದ ಪ್ರೊಫೆಸ್ಡ್ ಹೌಸ್ ಇದಕ್ಕೆ ಸೇರಿಕೊಂಡಿದೆ. ಚರ್ಚು ಶಿಲುಬೆಯಾಕಾರದ ವಿನ್ಯಾಸದಲ್ಲಿ ಮೂರು ಅಂತಸ್ತಿನಲ್ಲಿರುವಂತೆ ಕಾಣುವ ಮುಂಬದಿಯು ಪುನರುಜ್ಜೀವನ ಕಾಲದ ಅಯೋನಿಕ್, ಡೋರಿಕ್ ಮತ್ತು ಕಾರಿಂತಿಯನ್ ಅರ್ಧ ಸ್ತಂಭಗಳಿಂದ ಅಲಂಕೃತವಾಗಿದೆ. ಇದರೊಳಗೆ ಹಬ್ಬ-ಹರಿದಿನಗಳಲ್ಲಿ ಗಣ್ಯವ್ಯಕ್ತಿಗಳಿಗೋಸ್ಕರ ಮೀಸಲಿಟ್ಟ ಎರಡು ಬದಿಗಳಲ್ಲಿ ಗ್ಯಾಲರಿಗಳು ವೇದಿಕೆಗಳು ಬರೋಕ್ ಶೈಲಿಯಲ್ಲಿವೆ. ಎರಡು ಚಾಪೆಲ್, ಮುಖ್ಯ ನಿವೇದನಾ ವೇದಿಕೆ ಮತ್ತು ಒಂದು ಉಗ್ರಾಣವಿದೆ. ಹಿಂಬದಿಯಲ್ಲಿ ಗಂಟೆಗೋಪುರವಿದೆ. ಒಳಗೆ ವಾದ್ಯಗೋಷ್ಠಿ ವೇದಿಕೆಯ ಬಲಕ್ಕೆ ಸಂತ ಅಂಥೋಣಿ ವೇದಿಕೆ, ಎಡಗಡೆಗೆ ಸಂತ ಫ್ರಾನ್ಸಿಸ್ ಗ್ಸೇವಿಯರ್ ಮರದ ಸುಂದರ ಕೆತ್ತನೆಯಿದೆ. ಸಭಾಂಗಣದ ಮಧ್ಯಭಾಗದ ಉತ್ತರ ಬದಿಯ ಗೋಡೆಗೆ ಸೇರಿದಂತೆ ಈ ಭವ್ಯ ಚರ್ಚನ್ನು ಕಟ್ಟಿಸಲು ತನ್ನ ಸೊತ್ತನ್ನು ದಾನಮಾಡಿದ ಡಾಮ್‌ಜೆರೊನಿಮಾ ಮಸ್ಕರೆನ್ ಹೌಸ್ (ಮರಣ 1593) ಸಮಾಧಿಯಿದೆ. ಇದರ ಎದುರುಗಡೆ ದಕ್ಷಿಣದ ಗೋಡೆಗೆ ಸೇರಿಕೊಂಡಂತೆ ಮೇಲೆ ಛತ್ರಿ ಸಹಿತ ಉಪದೇಶ ವೇದಿಕೆಯಿದೆ. ಇದರ ಮೂರು ಬದಿಗಳಲ್ಲಿ ಜೀಸಸ್ ಕ್ರೈಸ್ಟ್, ನಾಲ್ಕು ಸುವಾರ್ತಾ ಬೋಧಕರು ಮತ್ತು ಚರ್ಚ್ ಸಂಪ್ರದಾಯದ ಆರಂಭ ಕಾಲದ ನಾಲ್ಕು ಪಾದ್ರಿಗಳ ಶಿಲ್ಪಗಳಿವೆ. ಸಭಾಂಗಣದ ಹಿಂಭಾಗದಲ್ಲಿ ಅಕ್ಕಪಕ್ಕದಲ್ಲಿಯ ಅವರ ಲೇಡಿ ಆಫ್ ಹೋಪ್ ಮತ್ತು ಸಂತ ಮೈಕೇಲ್ ಮೂರ್ತಿಗಳೊಡನೆ ಅತಿಯಾಗಿ ಸುವರ್ಣ ಲೇಪನದ ಪ್ರಧಾನ ವೇದಿಕೆಯ ಮೇಲೆ ಬಾಲ ಯೇಸುವಿನ ಮೂರ್ತಿಯಿದೆ. ಇದರ ಮೇಲೆ ಸೊಸೈಟಿ ಆಫ್ ಜೀಸಸ್ ಸ್ಥಾಪಕ ಸಂತ ಇಗ್ನೆಷಿಯಸ್ ಲಯೋಲ ಮೇಲೆ ಐಹೆಚ್‌ಎಸ್ (ಗ್ರೀಕ್ ಲಿಪಿಯಲ್ಲಿ ಜೀಸಸ್ ಹೆಸರಿನ ಮೊದಲನೆಯ ಮೂರು ಅಕ್ಷರಗಳು) ಪದ ನಾಮವಿರುವ ಪದಕವನ್ನು ನೋಡುತ್ತಿರುವಂತಿರುವ ಮೂರ್ತಿಯಿದೆ. ಈ ಪದಕದ ಮೇಲಕ್ಕೆ ಮೂರು ಪವಿತ್ರ ಮೂರ್ತಿಗಳಿವೆ. (ದೇವರು, ದೇವರ ಮಗ ಏಸು ಮತ್ತು ಪವಿತ್ರಾತ್ಮ) ಚರ್ಚಿನ ಹಿಂಭಾಗದ ಎಡಬದಿಗೆ ಸಂತ ಫ್ರಾನ್ಸಿಸ್ ಗ್ಸೇವಿಯರ್ ಚಾಪೆಲ್ ಇದೆ. ಪ್ರಧಾನ ವೇದಿಕೆಯ ಹಿಂಭಾಗದಲ್ಲಿರುವ ಕಬ್ಬಿಣದ ಪಿಠಾರಿಯಲ್ಲಿ 1953ರಲ್ಲಿ 12ನೆಯ ಪೋಪ್‌ಪಯಸ್ ಅನುಗ್ರಹಿಸಿ ಈ ಕ್ಷೇತ್ರಕ್ಕೆ ಕೊಟ್ಟ ಚಿನ್ನದ ಹೂವು ಇರುವುದು ಒಂದು ವಿಶೇಷ.

ಇಟಲಿಯ ಥಿಯಟೈನ ವರ್ಗ ಕ್ರೈಸ್ತಪಂಥದ ಬಿಕ್ಷುಗಳು ಮೂರನೆಯ ಪೋಪ್ ಅರ್ಬನ್ ಆಣತಿಯ ಮೇರೆಗೆ ಗೋಲ್ಕೊಂಡದಲ್ಲಿ ಕ್ರೈಸ್ತಪಂಥವನ್ನು ಹರಡಲು ಆಗದೆ ಗೋವದಲ್ಲಿ ನೆಲಸಿದಾಗ ಕಟ್ಟಿದ ಸಂತ ಕಜೆತಾನ್ ಗ್ರೀಕ್ ಶಿಲುಬೆಯಾಕಾರದ ವಿನ್ಯಾಸದಲ್ಲಿಯ ಈ ಚರ್ಚು ರೋಮ್ ನಗರದಲ್ಲಿಯ ಸಂತ ಪೀಟರ್ ಚರ್ಚಿನಂತಿದೆ. ಇದೊಂದು ಚೆಲುವಾದ ಕಟ್ಟಡ. ಇದಕ್ಕೆ ಎರಡೂ ಬದಿಗಳಲ್ಲಿ ಗಂಟೆ ಗೋಪುರವಿರುವುದು ವಿಶೇಷ. ಇದರ ಮುಂಬದಿಯಲ್ಲಿಯ ನಾಲ್ಕು ಗೂಡುಗಳಲ್ಲಿ ಯೇಸು ದೂತರ ವಿಗ್ರಹಗಳಿವೆ. ಇದರೊಳಗಿನ ವೇದಿಕೆಗಳಲ್ಲಿ ಸಂತ ಕಜೆತಾನ್ ಜೀವನಕ್ಕೆ ಸಂಬಂಧಿಸಿದ ದೃಶ್ಯಾವಳಿಗಳ ಇಟಲಿ ಸಂಪ್ರದಾಯದ ವರ್ಣ ಚಿತ್ರಗಳಿವೆ.

ಅವರ್ ಲೇಡಿ ಆಫ್ ರೋಸರಿ ಚರ್ಚನ್ನು 1544-49ರಲ್ಲಿ ಕಟ್ಟಲಾಯಿತು. ರಾಜ್ಯಪಾಲ ಅಫೋನ್ಸ್ ದ ಆಲ್ಬುಕರ್ಕ್ ತನ್ನ ದೇಶದ ಸೈನ್ಯ ಆದಿಲ್‌ಶಾಹಿ ಸೈನ್ಯದೊಡನೆ ಹೋರಾಡುತ್ತಿದುದನ್ನು ಇಲ್ಲಿಂದ ನೋಡುತ್ತಿದ್ದನಂತೆ; ತನ್ನ ಸೈನ್ಯಗೆದ್ದರೆ ಇಲ್ಲಿ ಚರ್ಚನ್ನು ಕಟ್ಟಿಸುವುದಾಗಿ ಹರಕೆ ಹೊತ್ತು ಕೊಂಡಿದ್ದನಂತೆ. ಇದರ ಇನ್ನೊಂದು ವಿಶೇಷವೆಂದರೆ ಇದರೊಳಗಿನ ಪ್ರಧಾನ ವೇದಿಕೆ ಬಲಬದಿಯಲ್ಲಿ ದೋನ ಕೆಥಿರಿನ ಇವಳ ಸ್ಮಾರಕ ಸಮಾಧಿಯೊಂದಿದೆ. ಸಂತ ಫ್ರಾನ್ಸಿಸ್ ಗ್ಸೇವಿಯರ್‌ನ ಪೌರೋಹಿತ್ಯದಲ್ಲಿ ದೋನ ಕಥರಿನ ಇವಳ ವಿವಾಹವು ರಾಜ್ಯಪಾಲ ಗ್ರೇಸಿಯ ದಸ ಇವರೊಡನೆ ನೆರವೇರಿತು.

ಇಲ್ಲಿಯ ಚರ್ಚುಗಳಲ್ಲಿ ಅತಿ ದೊಡ್ಡದೆಂದರೆ ಸಂತ ಅಗಸ್ಟೀನ ಚರ್ಚ್ ಇದರ ಗಂಟೆ ಗೋಪುರ ನಾಲ್ಕು ಅಂತಸ್ತುಗಳುಳ್ಳದ್ದಾಗಿ 46ಮೀ ಎತ್ತರವಿದೆ. ಇದನ್ನು ಅಗಸ್ಟಿನಿಯನ್ನರ ಪಂಥ ಕ್ರೈಸ್ತಭಿಕ್ಷುಗಳು 1602ರಲ್ಲಿ ಕಟ್ಟಿಸಿದರು. ಯಾವುದೇ ರಕ್ಷಣೆಯಿಲ್ಲದೆ ಇದು 1842ರಲ್ಲಿ ಬಿದ್ದು ಹೋಯಿತು. (ಎ.ಎಸ್.)

**ವಸ್ತು ಸಂಗ್ರಹಾಲಯಗಳು:** ಭಾರತೀಯರಿಗೆ ವಸ್ತು ಸಂಗ್ರಹಾಲಯಗಳ ಮಹತ್ತ್ವ, ಅವುಗಳ ಸದುಪಯೋಗ, ಉದ್ದೇಶದ ಬಗೆಗೆ ಅರಿವು ಮೂಡಿರುವುದು ಬ್ರಿಟಿಷರ ಪ್ರಥಮ ಪ್ರಯತ್ನಗಳಿಂದ. ಅಲ್ಲಿಯವರೆಗೆ ಇವುಗಳ ಉಪಯೋಗ ನಮಗೆ ತಿಳಿದಿಲ್ಲವೆಂದೇ ಹೇಳಬೇಕಾಗುತ್ತದೆ. ಪ್ರಾಚೀನ ಕಾಲದಲ್ಲಿ ನಮ್ಮ ದೇಶದಲ್ಲಿ ಬಳಸುತ್ತಿದ್ದ ವಸ್ತು ವಿಶೇಷತೆಗಳನ್ನು, ಕೋಟೆ-ಕೊತ್ತಲಗಳ ಅವಶೇಷಗಳನ್ನು, ಬಂದೂಕು ಮದ್ದುಗುಂಡುಗಳನ್ನು, ಖಡ್ಗ, ಬಿಲ್ಲು, ಬಾಣ, ಫಿರಂಗಿ, ಬಿಡಿ ಶಿಲ್ಪ, ನಾಣ್ಯ, ತಾಮ್ರಪಟ, ಶಿಲಾಶಾಸನ ಮೊದಲಾದ ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಿ ಪುರಾತತ್ತ್ವ ವಸ್ತು ಸಂಗ್ರಹಾಲಯದಲ್ಲಿಡುವುದು ಅತ್ಯಗತ್ಯವಾದ ವಿಷಯ. ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸುವುದು ಒಂದೆಡೆಯಾದರೆ, ವಸ್ತುಗಳನ್ನು ಸಂಗ್ರಹಿಸಿಡುವುದು ಎಷ್ಟು ಮುಖ್ಯವೋ ಅವುಗಳನ್ನು ಸಂರಕ್ಷಿಸುವುದು ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ವಸ್ತುಗಳನ್ನು ಅವು ಇರುವ ಮೂಲ ಸ್ವರೂಪದಲ್ಲಿ ಕಾಪಾಡಬೇಕು. ಕಸಕಡ್ಡಿ, ಧೂಳು, ಕ್ರಿಮಿಕೀಟಗಳ ಬಾಧೆಯಿಂದ ಅವುಗಳನ್ನು ಸಂರಕ್ಷಿಸಬೇಕಾಗುತ್ತದೆ. ವಿಶೇಷ ಪ್ರಯೋಗಾಲಯವನ್ನು ಸ್ಥಾಪನೆ ಮಾಡುವ ಮೂಲಕ ಅವುಗಳ ಸಂರಕ್ಷಣೆಯ ಕಾರ್ಯವನ್ನು ಮಾಡಬೇಕಾಗುತ್ತದೆ.

ಭಾರತೀಯರ ಮರೆತುಹೋದ ಸಂಸ್ಕೃತಿಯನ್ನು ನೆನಪಿಸುವ ಸಂಗ್ರಹವೇ ಪ್ರಾಚ್ಯ ವಸ್ತು ಸಂಗ್ರಹಾಲಯ. ಪುರಾತತ್ತ್ವ ವಸ್ತು ಸಂಗ್ರಹಾಲಯಗಳು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕನ್ನಡಿಗಳಿದ್ದಂತೆ. ಆ ಮೂಲಕ ನಮ್ಮ ಸಂಸ್ಕೃತಿಗೆ ಗಟ್ಟಿತನ ಬರುವುದಲ್ಲದೇ ಅದನ್ನು ಕುರಿತು ಅಧ್ಯಯನ ಮಾಡುವವರಿಗೆ ಮೂಲ ಆಕರವಿದ್ದಂತೆ. ಸ್ವಾತಂತ್ರ್ಯ ಪೂರ್ವದಲ್ಲಿ ಅಜಯಗರ್ ಎಂದೂ ಪ್ರಾಚೀನ ಸಾಹಿತ್ಯದಲ್ಲಿ ಚಿತ್ರಶಾಲೆ ಎಂದೂ ಕರೆಯುತ್ತಿದ್ದರು. ವಸ್ತು ಸಂಗ್ರಹಾಲಯ ಎಂಬುದರ ಇಂಗ್ಲಿಷ್ ಪದ ಮ್ಯೂಸಿಯಂ. ಇದರ ಮೂಲ ಗ್ರೀಕಿನ ಮ್ಯೂಸ್ ಎಂದರೆ ಕಲಾದೇವತೆ. ಆಕೆಯ ದೇವಾಲಯ ಮೂಸಿ ಆನ್, ಇದರಿಂದ ಮ್ಯೂಸಿಯಂ ಆಗಿದೆ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಪುರಾತತ್ತ್ವ ವಸ್ತು ಸಂಗ್ರಹಾಲಯಗಳಿವೆ. ವಿದೇಶಿಯರು ತಮ್ಮ ನಾಡಿನ ಕುರುಹುಗಳಾಗಿ ಪುರಾತತ್ತ್ವ ವಸ್ತುಗಳನ್ನು ತುಂಬಾ ಜತನದಿಂದ ಸಂರಕ್ಷಿಸುವ ಕೆಲಸದಲ್ಲಿ ನಿಪುಣರು. ಹಾಗಾಗಿ ವಿದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಪುರಾತತ್ತ್ವ ವಸ್ತು ಸಂಗ್ರಹಾಲಯಗಳನ್ನು ಕಾಣಬಹುದಾಗಿದೆ. ಭಾರತದಲ್ಲಿ ವಸ್ತು ಸಂಗ್ರಹಾಲಯಗಳು ಅಸ್ತಿತ್ವವನ್ನು ಪಡೆದುಕೊಂಡದ್ದು 18ನೆಯ ಶತಮಾನದ ಕೊನೆಯ ಭಾಗದಲ್ಲಿ. ಡ್ಯಾನಿಸ್‌ನ ನಾಥನಿಯಲ್ ಮತ್ತು ಬ್ರಿಟಿಷ್ ಅಧಿಕಾರಿ ಸರ್. ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಂ ಅವರಂಥ ಅಧಿಕಾರಿಗಳಿಂದ ವಸ್ತುಸಂಗ್ರಹಾಲಯಗಳು ಬೆಳೆವಣಿಗೆಯನ್ನು ಕಂಡವು. (ಕೆ.ಎಂ.ಎಸ್‌ಯು.)

**ಕರ್ನಾಟಕ:** ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಅಧೀನದಲ್ಲಿ ಹಲವಾರು ಸಂಗ್ರಹಾಲಯಗಳಿವೆ. ಭಾರತ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಧೀನದಲ್ಲಿ 7 ಸಂಗ್ರಹಾಲಯಗಳು ಮತ್ತು ಶಿಲ್ಪಕಲಾ ಸಂಗ್ರಹಾಲಯಗಳಿವೆ. ವಿಜ್ಞಾನ ಮತ್ತು ತಾಂತ್ರಿಕ ಸಂಶೋಧನ ಇಲಾಖೆಗೆ ಸೇರಿದ 3 ಸಂಗ್ರಹಾಲಯಗಳಿವೆ. 14 ವೈಯಕ್ತಿಕ ಸಂಗ್ರಹಾಲಯಗಳಿವೆ. ಇವಲ್ಲದೆ ಕರ್ನಾಟಕದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಸಂಗ್ರಹಾಲಯಗಳಿವೆ. 1960ರಲ್ಲಿ ಇವೆಲ್ಲವನ್ನೂ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯಕ್ಕೆ ವರ್ಗಾಯಿಸಲಾಯಿತು. ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯ 1866 ಕ್ಕೂ ಮುಂಚೆ ಬಾಡಿಗೆ ಕಟ್ಟಡದಲ್ಲಿತ್ತು. 1880ರಲ್ಲಿ ಬ್ರಿಟಿಷ್ ವಸಾಹತುಶಾಹಿ ಶೈಲಿಯ ನೂತನ ಕಟ್ಟಡದಲ್ಲಿ ಪ್ರಾರಂಭವಾಯಿತು. ಸ್ಮಾರಕವಾಗಿ ಸ್ಥಾಪನೆಗೊಂಡ ವೆಂಕಟಪ್ಪ ಆರ್ಟ್ ಗ್ಯಾಲರಿ

ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯದ ಪಕ್ಕದಲ್ಲೇ ಇದೆ. ಇದರಲ್ಲಿ ವೆಂಕಟಪ್ಪನವರು ರಚಿಸಿದ ಅನೇಕ ಕಲಾಕೃತಿಗಳು, ಬಳಸಿದ ಸಂಗೀತ ವಾದ್ಯಗಳು, ಉಪಯೋಗಿಸಿದ ಸಾಮಾಗ್ರಿಗಳಿವೆ.

ಚಿತ್ರದುರ್ಗದ ವಸ್ತುಸಂಗ್ರಹಾಲಯ ಪ್ರಸಿದ್ಧ ವಿದ್ವಾಂಸರಾದ ಹುಲ್ಲೂರು ಶ್ರೀನಿವಾಸ ಜೋಯಿಸರ ಪರಿಶ್ರಮದಿಂದ ಪ್ರಾರಂಭವಾಯಿತು. ಇದರಲ್ಲಿ ಚಂದ್ರವಳ್ಳಿ, ಬ್ರಹ್ಮಗಿರಿಯಲ್ಲಿ ದೊರೆತ ಪ್ರಾಚ್ಯ ಅವಶೇಷಗಳು ಮಾತ್ರ ಇದ್ದವು. 1947 ರಲ್ಲಿ ಇದು ರಾಜ್ಯ ಪ್ರಾಚ್ಯ ವಸ್ತು ಮತ್ತು ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಆಡಳಿತಕ್ಕೆ ಸೇರಿತು. ಇದರಲ್ಲಿ ಪಾಳೆಯಗಾರರ ಅನೇಕ ಆಯುಧೋಪಕರಣಗಳು, ಅನೇಕ ವಸ್ತು ವಿಶೇಷಗಳು ಇವೆ.



ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ, ಬೆಂಗಳೂರು

ಶಿವಮೊಗ್ಗದಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಈ ಪ್ರದೇಶದಲ್ಲಿ ಆಳಿದ ರಾಜರು, ಪಾಳೆಯಗಾರರು ಬಳಸುತ್ತಿದ್ದಂಥ ವಿವಿಧ ವಸ್ತುಗಳು, ಕೆಳದಿ ಅರಸರ ಕಾಲದ ವಿಗ್ರಹಗಳು, ನಾಣ್ಯಗಳು, ಆಯುಧಗಳು, ಫಿರಂಗಿಗಳು ಇದೆ. ಮಡಿಕೇರಿಯ ಜಿಲ್ಲಾ ವಸ್ತು ಸಂಗ್ರಹಾಲಯ 1971 ರಲ್ಲಿ ಪ್ರಾರಂಭವಾಯಿತು. ಈ ಪ್ರದೇಶದ ನಾಣ್ಯಗಳು, ಶಿಲಾಮೂರ್ತಿಗಳು, ರಾಜರ ಕಾಲದ ಹಸ್ತ ಪ್ರತಿಗಳು, ಕತ್ತಿ ಕಠಾರಿಗಳು, ಜೈನ ತೀರ್ಥಂಕರರ ವಿಗ್ರಹಗಳಿವೆ.

ಮಂಗಳೂರಿನ ಶ್ರೀಮಂತಿ ಬಾಯಿ ಮೀರಜ್‌ಕರ್ ವಸ್ತು ಸಂಗ್ರಹಾಲಯ 1906ರಲ್ಲಿ ಪ್ರಾರಂಭವಾಗಿ ಅನಂತರದಲ್ಲಿ ಸರ್ಕಾರಕ್ಕೆ ಸೇರಿತು. ಇದರಲ್ಲಿ ಲೋಹ ಮೂರ್ತಿಗಳು, ಶಿಲಾಮೂರ್ತಿಗಳು, ಪ್ರಾಚ್ಯ ವಸ್ತುಗಳು, ಆಯುಧಗಳು, ಟ್ಯಾಕ್ಸಿಡರ್ಮಿ (ಚರ್ಮಪ್ರಸಾಧನ) ಕಲಾವಸ್ತುಗಳು ಹೆಚ್ಚಾಗಿವೆ.

ಕಿತ್ತೂರು ರಾಣಿ ಚೆನ್ನಮ್ಮ ಸ್ಮಾರಕ ವಸ್ತು ಸಂಗ್ರಹಾಲಯ 1967ರಲ್ಲಿ ಕಿತ್ತೂರಿನಲ್ಲಿ ಪ್ರಾರಂಭವಾಯಿತು. ಇದರಲ್ಲಿ ಕಿತ್ತೂರು ದೇಸಾಯಿ ಮನೆತನದ ವಸ್ತುಗಳು ಮತ್ತು ಆ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಯುದ್ಧ ಸಾಮಗ್ರಿಗಳು, ವಿಗ್ರಹಗಳು, ನಾಣ್ಯಗಳು ಇವೆ.

ಗುಲ್ಬರ್ಗದ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಸನ್ನತಿ ಉತ್ಖನನ ಮತ್ತು ಅನ್ವೇಷಣೆಯಲ್ಲಿ ದೊರೆತ ಮಣ್ಣಿನ ಹಾಗೂ ಶಿಲ್ಪ ಅವಶೇಷಗಳಿವೆ. ನಾಣ್ಯಗಳು, ಶಿಲಾಮೂರ್ತಿಗಳು, ಆಯುಧ ಗಳು, ಮೈಸೂರು ಶೈಲಿಯ ವರ್ಣಚಿತ್ರಗಳು, ಆಧುನಿಕ ಚಿತ್ರಗಳು ಇಲ್ಲಿವೆ. ಶೈವ ಮತ್ತು ಜೈನ ಶಿಲಾಲೇಖಗಳು, ಪ್ರ.ಶ.ಪೂ 3ನೆಯ ಶತಮಾನಕ್ಕೂ ಹಿಂದಿನ ಅವಶೇಷಗಳು ಇಲ್ಲಿವೆ.

ಬೀದರ್ ಜಿಲ್ಲೆಯ ಬಸವಕಲ್ಯಾಣ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಶಿಲಾಲೇಖಗಳು, ಶಿಲಾಮೂರ್ತಿಗಳಿವೆ. ಬಾಗಲಕೋಟೆ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಸ್ತುಸಂಗ್ರ ಹಾಲಯಗಳನ್ನು ನಿರ್ಮಿಸುವ ಯೋಜನೆ ಅನುಷ್ಠಾನದಲ್ಲಿದೆ.

ಕೇಂದ್ರ ಪ್ರಾಚ್ಯ ಇಲಾಖೆಯ ವಸ್ತು ಸಂಗ್ರಹಾಲಯಗಳು ಹಳೇಬೀಡು, ಹಂಪಿ, ಬಿಜಾಪುರದಲ್ಲಿವೆ. ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಶ್ರೀರಂಗಪಟ್ಟಣ ಮೊದಲಾದೆಡೆಗಳ ಸಂಗ್ರಹಾಲಯಗಳು ಕೇವಲ ಸ್ಥಳೀಯ ಪ್ರಾಚ್ಯಾವಶೇಷಗಳ ಪ್ರದರ್ಶನಕ್ಕೆ ಸೀಮಿತವಾಗಿವೆ. ಶ್ರೀರಂಗಪಟ್ಟಣದಲ್ಲಿ 1959 ರಲ್ಲಿ ಟಿಪ್ಪುಸುಲ್ತಾನನ ಬೇಸಗೆ ಅರಮನೆಯಲ್ಲಿ (ದರಿಯಾ ದೌಲತ್) ವಸ್ತು ಸಂಗ್ರಹಾಲಯ ಪ್ರಾರಂಭವಾಯಿತು. ಇಲ್ಲಿ ಹೈದರ್ ಅಲಿ, ಟಿಪ್ಪು ಸುಲ್ತಾನ್ ಕಾಲದ ನಾಣ್ಯಗಳು, ತೈಲ, ಜಲವರ್ಣ ಹಾಗೂ ನಿಸರ್ಗ ಚಿತ್ರಗಳಿವೆ.

**ವಿಜ್ಞಾನ ವಸ್ತುಸಂಗ್ರಹಾಲಯ:** ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದಲ್ಲಿ (ಬೆಂಗಳೂರು) ವಿವಿಧ ಮಾದರಿಯ ಯಂತ್ರಗಳಿವೆ. ವಿಶ್ವೇಶ್ವರಯ್ಯನವರು ಸಾಧಿಸಿದ ಕೈಗಾರಿಕಾ ಪ್ರಗತಿಯ ಸಾಕ್ಷಿಚಿತ್ರಗಳ ಮಾದರಿಗಳಿವು. ವಿಶ್ವವಿದ್ಯಾಲಯಗಳಲ್ಲೂ ವಸ್ತು ಸಂಗ್ರಹಾಲಯಗಳಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎರಡು, ಕರ್ನಾಟಕ ವಿಶ್ವವಿದ್ಯಾಲ ಯದಲ್ಲಿ ನಾಲ್ಕು (ಧಾರವಾಡ), ಕನ್ನಡ ವಿಶ್ವವಿದ್ಯಾಲಯದಲ್ಲಿ (ಹಂಪಿ) ಒಂದು, ಕುವೆಂಪು ವಿಶ್ವವಿದ್ಯಾಲಯದಲ್ಲಿ (ಶಿವಮೊಗ್ಗ) ಒಂದು ಇದೆ. ಜಾನಪದ ವಸ್ತು ಸಂಗ್ರಹಾಲಯದಲ್ಲಿ (ಮೈಸೂರು ವಿಶ್ವವಿದ್ಯಾನಿಲಯ) ಸೂತ್ರದ ಬೊಂಬೆಗಳು, ತೊಗಲು ಬೊಂಬೆಗಳು, ವಾದ್ಯಗಳು, ಮರದ ಕೆತ್ತನೆಗಳು, ಆಯುಧಗಳು, ನಿತ್ಯ ಬಳಕೆಯ ವಸ್ತುಗಳು, ಕರ್ನಾಟಕದ ಖ್ಯಾತ ಸಾಹಿತಿಗಳು, ಕಲಾವಿದರು ಬಳಸುತ್ತಿದ್ದ ವಸ್ತುಗಳಿವೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯ ಸಂಗ್ರಹಾಲಯಗಳು ಭೂವಿಜ್ಞಾನ, ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನ ಹಾಗೂ ಪುರಾತತ್ತ್ವ ಮತ್ತು ಇತಿಹಾಸಕ್ಕೆ ಸಂಬಂಧಿಸಿದೆ.

ವೈಯಕ್ತಿಕ ವಸ್ತು ಸಂಗ್ರಹಾಲಯಗಳಲ್ಲಿ ಮೈಸೂರಿನ ಜಗನ್‌ಮೋಹನ ಅರಮನೆಯಲ್ಲಿ 1915ರಲ್ಲಿ ಜಯಚಾಮರಾಜೇಂದ್ರ ಚಿತ್ರಶಾಲೆ ಪ್ರಾರಂಭವಾಯಿತು. ಇದರಲ್ಲಿ ಭಾರತೀಯ ಚಿತ್ರಕಲೆ ಹಾಗೂ ಕುಶಲ ಕೈಗಾರಿಕಾ ಕಲಾಕೃತಿಗಳಿವೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮಹಾತ್ಮಗಾಂಧಿ ಸ್ಮಾರಕ ಕಾಲೇಜು ವಸ್ತು ಸಂಗ್ರಹಾಲಯ ಉಡುಪಿಯಲ್ಲಿದೆ. ಈ ಸಂಗ್ರಹಾಲಯದಲ್ಲಿ ಮರದ ವಿಗ್ರಹಗಳು, ಶಿಲ್ಪಮೂರ್ತಿಗಳು, ವರ್ಣಚಿತ್ರಗಳು, ಕಂಚಿನ ವಿಗ್ರಹಗಳಿವೆ. ಕಲ್ಯಾಣಪುರದಲ್ಲಿರುವ ಇಂಡಾಲಜಿಕಲ್ ವಸ್ತು ಸಂಗ್ರಹಾಲಯದಲ್ಲಿ ತಾಮ್ರಶಾಸನಗಳು, ವಿಗ್ರಹಗಳು, ಚಾರಿತ್ರಿಕ ದಾಖಲೆಗಳಿವೆ.

ಚಿತ್ತಾಪುರದ ಮಠದ ಸಂಗ್ರಹಾಲಯದಲ್ಲಿ ಲೋಹದ, ಕಲ್ಲಿನ, ಮರದ ಹಾಗೂ ದಂತದ ವಿಗ್ರಹಗಳು, ಸೂಕ್ಷ್ಮ ಕುಸುರಿನ ಕೆತ್ತನೆ ಕಲಾಕೃತಿಗಳು, ಗಾಜಿನ ಮೇಲೆ ರಚಿಸಿದ ಚಿತ್ರಗಳು, ಜನಪದ ವಸ್ತುಗಳು ಇವೆ.

ವಿಶ್ವೇಶ್ವರಯ್ಯನವರ ಹುಟ್ಟೂರಾದ ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ನ್ಯಾಷನಲ್ ಟ್ರಸ್ಟ್ ಸಂಗ್ರಹಾಲಯ 1972ರಲ್ಲಿ ಪ್ರಾರಂಭವಾಗಿದೆ. ಇದರಲ್ಲಿ ವಿಶ್ವೇಶ್ವರಯ್ಯ ಉಪಯೋಗಿಸುತ್ತಿದ್ದ ವಸ್ತುಗಳಿವೆ. ಶಿವಮೊಗ್ಗ ಜಿಲ್ಲೆಯ ಕೆಳದಿಯ ಸಂಗ್ರಹಾಲಯದಲ್ಲಿ ಕೆಳದಿ ನಾಯಕರ ತಾಮ್ರ ಶಾಸನಗಳು, ಓಲೆಗರಿ ಗ್ರಂಥಗಳು ಮತ್ತು ಶಿಲ್ಪಗಳಿವೆ. ಇದು ಈಗ ಕುವೆಂಪು ವಿಶ್ವವಿದ್ಯಾಲಯಕ್ಕೆ ಸೇರಿದೆ. ಧರ್ಮಸ್ಥಳದಲ್ಲಿ 1986 ರಲ್ಲಿ ಸ್ಥಾಪಿಸಿದ ಮಂಜೂಷ ವಸ್ತು ಸಂಗ್ರಹಾಲಯದಲ್ಲಿ ಅಳಿದು ಹೋಗುತ್ತಿರುವ ಸಂಸ್ಕೃತಿಯ ವಿವಿಧ ವಸ್ತುಗಳನ್ನು, ಪುರಾತತ್ತ್ವ ವಸ್ತುಗಳನ್ನು ಸಂಗ್ರಹಿಸಲಾಗಿದೆ. ನಂಜನಗೂಡು ತಾಲ್ಲೂಕಿನ ಸುತ್ತೂರು ಶ್ರೀ ಮಠದ ವಸ್ತುಸಂಗ್ರಹಾಲಯವನ್ನು ಪ್ರಸ್ತುತದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಮಣಿಪಾಲದಲ್ಲಿರುವ ಹಸ್ತಶಿಲ್ಪ ಒಂದು ವಿಶಿಷ್ಟ ಸಂಗ್ರಹಾಲಯ. ಗ್ರಾಮೀಣ ಗೃಹಶಿಲ್ಪ ವೈಭವವನ್ನು ಪ್ರದರ್ಶಿಸುವ ದೃಷ್ಟಿಯಿಂದ ಹಲವಾರು ಪುರಾತನ ಮನೆಗಳನ್ನು ಇಲ್ಲಿ ಪುನಾರಚಿಸಲಾಗಿದೆ. (ಎನ್.ಎಲ್.)

ಮೈಸೂರಿನಲ್ಲಿರುವ ಕೇಂದ್ರಸರ್ಕಾರದ ಸಂಸ್ಕೃತಿ ಇಲಾಖೆಯ ಪ್ರಾದೇಶಿಕ ಸಂರಕ್ಷಣಾ ಪ್ರಯೋಗಾಲಯ ಪ್ರದರ್ಶನ ವಸ್ತುಗಳ ಸಂರಕ್ಷಣಾ ಕಾರ್ಯ ಕೈಗೊಳ್ಳುವ ಒಂದು ಪ್ರಮುಖ ವಿಭಾಗವಾಗಿದೆ.

ಸಾಲಾರ್ ಜಂಗ್ ವಸ್ತುಸಂಗ್ರಹಾಲಯ, ಹೈದರಾಬಾದ್

**ಭಾರತ:** ಡೇವಿಡ್ ಮುರ್ರೆ ಹೇಳುವಂತೆ ಪುರಾತನ ಸ್ಮಾರಕಗಳನ್ನು ಅಥವಾ ವಿದ್ವಾಂಸರು ಹಾಗೂ ಜನಸಾಮಾನ್ಯರ ಮನ ಸೆಳೆಯುವ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಜೋಡಿಸಿ ಪ್ರದರ್ಶಿಸುವುದೇ ವಸ್ತು ಸಂಗ್ರಹಾಲಯ ಎಂಬುದು ಅರ್ಥಗರ್ಭಿತವಾದ ವ್ಯಾಖ್ಯಾನವಾಗಿದೆ.

ಭಾರತದಲ್ಲಿ 18ನೆಯ ಶತಮಾನದ ಕೊನೆಯಿಂದ ವಸ್ತು ಸಂಗ್ರಹಾಲಯಗಳ ಬಗ್ಗೆ ತೀವ್ರ ಗಮನ ಹರಿಸಲಾಯಿತು. ಭಾರತದಾದ್ಯಂತ ತ್ವರಿತಗತಿಯಲ್ಲಿ ವಸ್ತು ಸಂಗ್ರಹಾಲಯಗಳು ಪೂರ್ವ ಸಿದ್ಧತೆಯೊಂದಿಗೆ ಶಿಸ್ತುಬದ್ಧವಾಗಿ ಹುಟ್ಟಿಕೊಂಡವು. ವಸ್ತುಗಳ ಪ್ರದರ್ಶನದ ಕೊಠಡಿ, ಕೊಠಡಿಗೆ ಬಣ್ಣ, ಮಳೆಗಾಲದಲ್ಲಿ ತೇವಾಂಶ, ಬೇಸಗೆಕಾಲದಲ್ಲಿ ಉಷ್ಣತೆಯ ಬಗ್ಗೆ ಎಚ್ಚರಿಕೆ ಯನ್ನು ವಹಿಸುವುದು, ಸಾಕಷ್ಟು ಗಾಳಿ, ಬೆಳಕಿನ ವ್ಯವಸ್ಥೆ ಇವೇ ಮೊದಲಾದ ವ್ಯವಸ್ಥೆ ಮಾಡಿಕೊಂಡು ಸಾರ್ವಜನಿಕ ದುಷ್ಕೃತ್ಯಗಳ ಬಗ್ಗೆ ಸಂದರ್ಭಕ್ಕನುಸಾರವಾಗಿ ಸಾಕಷ್ಟು

ಮುಂಜಾಗ್ರತೆ ವಹಿಸಿ ಒಂದು ಶಿಸ್ತುಬದ್ಧ ಅಧ್ಯಯನದ ವಿಷಯವನ್ನಾಗಿ ಪರಿಗಣಿಸುವಂತೆ ಸುವ್ಯವಸ್ಥೆಯ ಅಡಿಯಲ್ಲಿ ವಸ್ತು ಸಂಗ್ರಹಾಲಯಗಳನ್ನು ನಿರ್ಮಿಸಲಾಗಿದೆ. ಭಾರತದಲ್ಲಿ ಮೊಟ್ಟ ಮೊದಲ ವಸ್ತು ಸಂಗ್ರಹಾಲಯ ಪ್ರಾರಂಭವಾದದ್ದು 1784ರಲ್ಲಿ, ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಸ್ಥಾಪನೆ ಮಾಡಿದ ಇಂಡಿಯನ್ ಮ್ಯೂಸಿಯಂ (ಕಲ್ಕತ್ತ). ಅನಂತರದಲ್ಲಿ ಸ್ಥಾಪನೆಗೊಂಡ ವಸ್ತು ಸಂಗ್ರಹಾಲಯಗಳು ಹೀಗಿವೆ: ಎಗ್ಮೋರ್ ವಸ್ತು ಸಂಗ್ರಹಾಲಯ, ಮದರಾಸು, 1854; ತಿರುವನಂತಪುರ ವಸ್ತು ಸಂಗ್ರಹಾಲಯ, 1857; ನಾಗಪುರ ವಸ್ತು ಸಂಗ್ರಹಾಲಯ, ನಾಗಪುರ, 1861; ಲಖನೌ ವಸ್ತು ಸಂಗ್ರಹಾಲಯ, ಲಖನೌ, 1863; ರಾಜ್ಯ ಸರಕಾರಿ ವಸ್ತು ಸಂಗ್ರಹಾಲಯ, ಬೆಂಗಳೂರು, 1866; ಮಥುರ ವಸ್ತು ಸಂಗ್ರಹಾಲಯ, ಮಥುರ, 1874; ಜೈಪುರ ವಸ್ತು ಸಂಗ್ರಹಾಲಯ, ಜೈಪುರ,

ನ್ಯಾಷನಲ್ ಮ್ಯೂಸಿಯಮ್, ನವದೆಹಲಿ

1875; ಉದಯಪುರ ವಸ್ತು ಸಂಗ್ರಹಾಲಯ, ಉದಯಪುರ, 1875; ವಿಜಯವಾಡ ವಸ್ತು ಸಂಗ್ರಹಾಲಯ, ಆಂಧ್ರ ಪ್ರದೇಶ, 1875; ರಾಜ್ ಕೋಟ್ ವಸ್ತು ಸಂಗ್ರಹಾಲಯ, ಗುಜರಾತ್, 1875; ವಿಕ್ಟೋರಿಯ ವಸ್ತು ಸಂಗ್ರಹಾಲಯ, ಕಲ್ಕತ್ತ, 1887.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಯುಕ್ತಾಸಕ್ತಿಯ ಫಲವಾಗಿ ಇಂದು ದೇಶಾದ್ಯಂತ ಹಲವಾರು ವಸ್ತು ಸಂಗ್ರಹಾಲಯಗಳು ಹುಟ್ಟಲು ಕಾರಣವಾಯಿತು. ರಾಷ್ಟ್ರೀಯ ವಸ್ತು ಸಂಗ್ರಹಾಲಯಗಳು ಅಸ್ತಿತ್ವದಲ್ಲಿವೆ. ಅವುಗಳೆಂದರೆ: 1814ರಲ್ಲಿ ಪ್ರಾರಂಭವಾದ ನ್ಯಾಷನಲ್ ಮ್ಯೂಸಿಯಂ, ಕಲ್ಕತ್ತ. 1949ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ವಸ್ತು ಸಂಗ್ರಹಾಲಯ, ನವದೆಹಲಿ. 1951ರಲ್ಲಿ ಪ್ರಾರಂಭವಾದ ಸಾಲಾರ್‌ಜಂಗ್ ವಸ್ತು ಸಂಗ್ರಹಾಲಯ, ಹೈದರಾಬಾದ್.

ರಾಜ್ಯ ವಸ್ತುಸಂಗ್ರಹಾಲಯಗಳು ಹೀಗಿವೆ: ರಾಜ್ಯ ವಸ್ತು ಸಂಗ್ರಹಾಲಯ, ಲಖನೌ, 1863; ಮಥುರ ವಸ್ತು ಸಂಗ್ರಹಾಲಯ, ಮಥುರ, 1863; ಸೆಂಟ್ರಲ್ ವಸ್ತು ಸಂಗ್ರಹಾಲಯ, ನಾಗಪುರ, 1863; ರಾಜ್ಯ ಸರಕಾರಿ ವಸ್ತು ಸಂಗ್ರಹಾಲಯ, ಬೆಂಗಳೂರು, 1866; ಬರೋಡ ವಸ್ತು ಸಂಗ್ರಹಾಲಯ, ಬರೋಡ, 1896; ಸರಕಾರಿ ವಸ್ತು ಸಂಗ್ರಹಾಲಯ, ಜೈಪುರ, 1876; ಲಲಿತ್‌ಪುರ್ ವಸ್ತು ಸಂಗ್ರಹಾಲಯ, ಲಲಿತ್‌ಪುರ್, 1875; ರಜಪೂತ ವಸ್ತು ಸಂಗ್ರಹಾಲಯ, ಅಜ್ಮೀರ್, 1908; ಬುಹರಿಸಿಂಗ್ ವಸ್ತು ಸಂಗ್ರಹಾಲಯ, ಚಂಬಾ, 1908; ಗ್ವಾಲಿಯರ್ ವಸ್ತು ಸಂಗ್ರಹಾಲಯ, ಗ್ವಾಲಿಯರ್, 1922; ಸೆಂಟ್ರಲ್ ವಸ್ತು ಸಂಗ್ರಹಾಲಯ, ಇಂದೂರ್, 1929; ಪಟಣ ವಸ್ತು ಸಂಗ್ರಹಾಲಯ, ಪಟಣ, 1917; ಹೈದರಾಬಾದ್ ವಸ್ತು ಸಂಗ್ರಹಾಲಯ, ಹೈದರಾಬಾದ್, 1930; ಒರಿಸ್ಸ ರಾಜ್ಯ ವಸ್ತು ಸಂಗ್ರಹಾಲಯ, ಭುವನೇಶ್ವರ್, 1932; ತ್ರಿಶೂರ್ ವಸ್ತುಸಂಗ್ರಹಾಲಯ, ತ್ರಿಶೂರ್, 1938; ರಾಜ್ಯ ವಸ್ತು ಸಂಗ್ರಹಾಲಯ, ದುಬೆಲ್ಲಾ, 1935; ರಾಜ್ಯ ವಸ್ತು ಸಂಗ್ರಹಾಲಯ, ಗುವಾಹಟಿ, 1940; ಸರಕಾರಿ ವಸ್ತು ಸಂಗ್ರಹಾಲಯ, ಪಾಟಿಯಾಲ, 1947; ಡೋಗ್ರ ವಸ್ತು ಸಂಗ್ರಹಾಲಯ, ಜಮ್ಮು, 1954.

ರಾಜ್ಯ ಮಟ್ಟದ ವಸ್ತು ಸಂಗ್ರಹಾಲಯಗಳು ಸಂಶೋಧಕರಿಗೆ, ವಿದ್ವಾಂಸರಿಗೆ, ಇತಿಹಾಸ ತಜ್ಞರಿಗೆ, ಪುರಾತತ್ತ್ವಜ್ಞರಿಗೆ, ವಿದೇಶಿ ಸಂಶೋಧಕರಿಗೆ ಮಹತ್ತ್ವದ ಮಾಹಿತಿಯನ್ನು ನೀಡುವ ಜ್ಞಾನಕೇಂದ್ರಗಳಾಗಿ ಹೊರಹೊಮ್ಮಿವೆ. ಭಾರತ ಚರಿತ್ರೆಯ ಅಧ್ಯಯನಕ್ಕೆ, ರಾಜಮಹಾರಾಜರ, ಸಾಮಂತ ಅರಸರ, ಪಾಳೆಯಗಾರರ, ದಂಡನಾಯಕರ, ವಿಶೇಷ ವಿಷಯವನ್ನು ಅರಿಯಲು, ಅಧ್ಯಯನ ಮಾಡಲು ವಸ್ತು ಸಂಗ್ರಹಾಲಯಗಳು ಪ್ರಮುಖವಾದ ಆಕರ ಸಾಮಾಗ್ರಿಗಳಿದ್ದಂತೆ.

ಭಾರತದಾದ್ಯಂತ ಭಾರತೀಯ ಪುರಾತತ್ತ್ವ ವಸ್ತು ಸಂಗ್ರಹಾಲಯಗಳಿವೆ: ಸಾರನಾಥ (1904), ನವದೆಹಲಿ (1909), ಖಜುರಾಹೊ (1910), ಬಿಜಾಪುರ (1912), ನಾಲಂದ (1917), ಸಾಂಚಿ (1919), ಫೋರ್ಟ್ ಮ್ಯೂಸಿಯಂ, ಮದರಾಸು (1948), ನಾಗಾರ್ಜುನಕೊಂಡ (1949), ಅಮರಾವತಿ (1951), ಕೊಂಡಾಪುರ (1952), ಹಂಪಿ (1953), ಬೋಧ್‌ಗಯ (1956), ಶ್ರೀರಂಗಪಟ್ಟಣ (1959), ಹಳೇಬೀಡು (1962) ಮುಂತಾದವು.

**ನಗರ ಸಭೆ ವ್ಯಾಪ್ತಿಯ ವಸ್ತು ಸಂಗ್ರಹಾಲಯಗಳು:** ವಿಕ್ಟೋರಿಯ ಮತ್ತು ಆಲ್ಬರ್ಟ್ ವಸ್ತು ಸಂಗ್ರಹಾಲಯ, 1850; ವಿಕ್ಟೋರಿಯ ಮೆಮೋರಿಯಲ್ ವಸ್ತು ಸಂಗ್ರಹಾಲಯ, ಕಲ್ಕತ್ತ, 1906; ಪ್ರಿನ್ಸ್ ಆಫ್ ವೇಲ್ಸ್ ವಸ್ತು ಸಂಗ್ರಹಾಲಯ, ಮುಂಬಯಿ, 1921; ಅಲಹಾಬಾದ್ ವಸ್ತು ಸಂಗ್ರಹಾಲಯ, ಅಲಹಾಬಾದ್, 1931.

**ವಿಶ್ವವಿದ್ಯಾಲಯ ಮಟ್ಟದ ವಸ್ತು ಸಂಗ್ರಹಾಲಯಗಳು:** ಅಸ್ತೋರ್ಸ್ ವಸ್ತು ಸಂಗ್ರಹಾಲಯ, ಕಲ್ಕತ್ತ ವಿಶ್ವವಿದ್ಯಾಲಯ, ಕಲ್ಕತ್ತ, 1937; ಡೆಕ್ಕನ್ ಕಾಲೇಜ್ ವಸ್ತು ಸಂಗ್ರಹಾಲಯ, ಪುಣೆ 1939; ಭಾರತ ಕಲಾಭವನ್ ವಸ್ತು ಸಂಗ್ರಹಾಲಯ, ಬನಾರಸ್ ಹಿಂದು ವಿಶ್ವವಿದ್ಯಾಲಯ ವಾರಾಣಸಿ, 1950; ಕೌಶಾಂಬಿ ವಸ್ತು ಸಂಗ್ರಹಾಲಯ, ಅಲಹಾಬಾದ್ ವಿಶ್ವವಿದ್ಯಾಲಯ, 1952; ಮಹಾರಾಜ ಸಯಾಜಿರಾವ್ ವಿಶ್ವವಿದ್ಯಾಲಯ ವಸ್ತು ಸಂಗ್ರಹಾಲಯ, ಬರೋಡ 1956.

ಭೂಪಾಲದ ಶಾಮ್ಲಹಿಲ್ಸ್‌ನಲ್ಲಿರುವ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ ಆದಿವಾಸಿ ಮತ್ತು ಜನಪದ ಸಂಸ್ಕೃತಿಗೆ ಸಂಬಂಧಿಸಿದ್ದಾಗಿದ್ದು ಇಲ್ಲಿ ಬಯಲು ಹಾಗೂ ಒಳಾಂಗಣ ಸಂಗ್ರಹಾಲಯಗಳಿವೆ. ಹಲವಾರು ಆದಿವಾಸಿ ಪಂಗಡಗಳ ಗುಡಿಸಲುಗಳನ್ನು ಈ ಜನರು ದೈನಂದಿನ ಜೀವನದಲ್ಲಿ ಬಳಸುವ ವಸ್ತು ಸಮೇತವಾಗಿ ಇಲ್ಲಿನ ಗುಡ್ಡ ಪರಿಸರದಲ್ಲಿ ನಿರ್ಮಿಸಲಾಗಿದೆ. ಈ ಸಂಗ್ರಹಾಲಯದ ಒಂದು ಶಾಖೆ ಮೈಸೂರಿನ ವೆಲ್ಲಿಂಗ್‌ಟನ್ ಭವನದಲ್ಲಿದೆ. ನಾಣ್ಯ ಪ್ರದರ್ಶನಕ್ಕೆ ಮೀಸಲಾದ ಮನಿಮ್ಯೂಸಿಯಂ ನಾಸಿಕ್‌ನ ಬಳಿಯಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಸರ್ಚ್ ಇನ್ ನ್ಯೂಮಿಸ್‌ಮಾಟಿಕ್ ಸ್ಟಡೀಸ್‌ನಲ್ಲಿದೆ.

**ಪ್ರಪಂಚ:** ಪ್ರಪಂಚದ ಎಲ್ಲಾ ದೇಶಗಳ ಮಹಾನಗರಗಳಲ್ಲಿಯೂ ವಸ್ತು ಸಂಗ್ರಹಾಲಯಗಳಿವೆ. ರೋಮ್‌ನಲ್ಲಿ ಮಧ್ಯಯುಗದಲ್ಲಿ ವಸ್ತು ಸಂಗ್ರಹಣೆಗೆ ಒತ್ತು ನೀಡಿದರು. ಇಂಗ್ಲೆಂಡ್‌ನಲ್ಲಿ ರಾಜಕುಮಾರ 1ನೆಯ ಚಾರ್ಲ್ಸ್‌ನಿಂದ (1600–49) ವಸ್ತು ಸಂಗ್ರಹ ಆರಂಭವಾಯಿತು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಆರ್‌ಮೋಲಿಯನ್ ಮ್ಯೂಸಿಯಮ್ ಅನ್ನು 1683ರಲ್ಲಿ ಸ್ಥಾಪಿಸಿತು. ಇದು ಇಂಗ್ಲೆಂಡ್‌ನ ಮೊದಲನೆಯ ಸಾರ್ವಜನಿಕ ವಸ್ತು ಸಂಗ್ರಹಾಲಯ. ಬ್ರಿಟಿಷ್ ಸರ್ಕಾರ ಬ್ರಿಟಿಷ್ ಮ್ಯೂಸಿಯಮ್ ಸ್ಥಾಪಿಸಿತು. ಅಮೆರಿಕದಲ್ಲಿ 1773ರಲ್ಲಿ ವಸ್ತು ಸಂಗ್ರಹಾಲಯ ಆರಂಭವಾಯಿತು. ಉತ್ತರ ಆಫ್ರಿಕದ ಲೆ–ಬಾರ್ಡೊ ನ್ಯಾಷನಲ್ ಮ್ಯೂಸಿಯಂನಲ್ಲಿ (1888) ಆಫ್ರಿಕದ ಸಾಂಸ್ಕೃತಿಕ ಕಲಾ ಸಂಪತ್ತನ್ನು ಹೊಂದಿದೆ. ಕೈರೋದ ಈಜಿಪ್ಷಿಯನ್ ಮ್ಯೂಸಿಯಮ್‌ನಲ್ಲಿ (1900) ಪಿರಮಿಡ್‌ನಲ್ಲಿ ದೊರೆತ ಈಜಿಪ್ಟ್ ಸಂಸ್ಕೃತಿಯ ಅಮೂಲ್ಯ ವಸ್ತುಗಳ ಅಪೂರ್ವ ಸಂಗ್ರಹಗಳಿವೆ. ನಿಯಾಮಯ ನ್ಯಾಷನಲ್ ಮ್ಯೂಸಿಯಮ್, ಘಾನ ನ್ಯಾಷನಲ್ ಮ್ಯೂಸಿಯಮ್, ಅಕ್ರಾ, ಅಬಿಜಾನ್‌ನ ನ್ಯಾಷನಲ್ ಮ್ಯೂಸಿಯಮ್ ಆಫ್ ದಿ ಐವರಿಕೋಸ್ಟ್–ಇವು ಆಫ್ರಿಕದ ಜನ ಸಂಸ್ಕೃತಿಯನ್ನು ಸ್ಥೂಲವಾಗಿ ಬಿಂಬಿಸುತ್ತವೆ. ಕಂಪಾಲದ




ಬ್ರಿಟಿಷ್ ಮ್ಯೂಸಿಯಮ್, ಲಂಡನ್

(ಪೂರ್ವ ಆಫ್ರಿಕ) ನ್ಯಾಷನಲ್ ಮ್ಯೂಸಿಯಮ್ ಆಫ್ ಉಗಾಂಡ (1908) ಆಫ್ರಿಕದ ಮೂಲ ನಿವಾಸಿಗಳ ಸಂಗೀತ ವಾದ್ಯಗಳಿಗೆ ಪ್ರಸಿದ್ಧವಾಗಿದೆ. ಕೀನ್ಯದ ನ್ಯಾಷನಲ್ ಮ್ಯೂಸಿಯಮ್ ವನ್ಯಜೀವಿ ಸಂಗ್ರಹವನ್ನು ಹೊಂದಿದೆ. ತಾಂಜಾನಿಯ ನ್ಯಾಷನಲ್ ಮ್ಯೂಸಿಯಮ್‌ನಲ್ಲಿ (1940) ಪುರಾತತ್ತ್ವ ವಸ್ತುಗಳಿವೆ. ದಕ್ಷಿಣ ಆಫ್ರಿಕದ ನ್ಯಾಷನಲ್ ಮ್ಯೂಸಿಯಮ್‌ನಲ್ಲಿ ಜುರಾಸಿಕ್ ಕಾಲದ ಬೃಹತ್ ಪ್ರಾಣಿಗಳ (ಡೈನೊಸಾರ್) ಅವಶೇಷಗಳಿವೆ. ಜಿಂಬಾಬ್ವೆಯಲ್ಲಿ ನಾಲ್ಕು ನ್ಯಾಷನಲ್ ಮ್ಯೂಸಿಯಮ್‌ಗಳಿವೆ.

ಇಸ್ರೇಲಿನ ಜೆಜಾಲೆಲ್ ನ್ಯಾಷನಲ್ ಆರ್ಟ್ ಮ್ಯೂಸಿಯಮ್ (1906), ಜೋರ್ಡಾನಿನ ನ್ಯಾಷನಲ್ ಆರ್ಕಿಯಲಾಜಿಕಲ್ ಮ್ಯೂಸಿಯಮ್ (1979)– ಇವು ಯಹೂದಿಗಳ ಕಲಾ ಸಂಗ್ರಹಾಲಯಗಳಾಗಿವೆ. ಯಾದ್‌ವಾಶಿಮ್ (1953) ಹಿಟ್ಲರ್‌ನ ಸಾಮೂಹಿಕ ಹತ್ಯೆಗೆ

(ಹಾಲೋಕಾಸ್ಟ್) ಬಲಿಯಾದವರ ಸ್ಮರಣೆಯ ಮೂರು ಮ್ಯೂಸಿಯಮ್‌ಗಳಲ್ಲಿ ದೊಡ್ಡದು. ಪಾಕಿಸ್ತಾನದ ಲಾಹೋರ್ ಮ್ಯೂಸಿಯಮ್ (1864) ಮತ್ತು ಕರಾಚಿಯ ನ್ಯಾಷನಲ್ ಮ್ಯೂಸಿಯಮ್ ಆಫ್ ಪಾಕಿಸ್ತಾನ್‌ನಲ್ಲಿ (1950) ಹರಪ್ಪ ಮತ್ತು ಮೊಹೆಂಜೋದಾರೊಗಳಲ್ಲಿ ದೊರೆತ ಸಿಂಧೂ–ಸರಸ್ವತಿ ಸಂಸ್ಕೃತಿಯ ಉತ್ಖನನದ ಅಪೂರ್ವ ವಸ್ತುಗಳಿವೆ.

ಚೀನದಲ್ಲಿ ಎರಡು ಪ್ರಮುಖ ವಸ್ತು ಸಂಗ್ರಹಾಲಯಗಳಿವೆ. ಬೀಜಿಂಗ್‌ನ ಪ್ಯಾಲೇಸ್ ಮ್ಯೂಸಿಯಮ್‌ನಲ್ಲಿ (1925) ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಸ್ತುಗಳಿವೆ. ಷಾಂಗೈ ಮ್ಯೂಸಿಯಮ್ ಆಫ್ ಆರ್ಟ್ ಅಂಡ್ ಹಿಸ್ಟರಿ (1952) ಚೀನದ ಇನ್ನೊಂದು ಮುಖ್ಯ ಮ್ಯೂಸಿಯಮ್. ಚೀನದ ಕಲೆ–ಇತಿಹಾಸದ ಚಿತ್ರಣ ಇಲ್ಲಿದೆ. ಫಿಲಿಪೀನ್ಸ್‌ನ ಮನಿಲದಲ್ಲಿ ಎರಡು ಪ್ರಮುಖ ವಸ್ತು ಸಂಗ್ರಹಾಲಯಗಳಿವೆ. ನ್ಯಾಷನಲ್ ಮ್ಯೂಸಿಯಮ್ ಆಫ್ ದಿ

ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯ, ಮುಂಬೈ

ಫಿಲಿಪೀನ್ಸ್ (1901) ಇಲ್ಲಿ ಇತಿಹಾಸ, ವಿಜ್ಞಾನ ಮತ್ತು ಪ್ರಾಕೃತಿಕ ವಸ್ತುಗಳಿವೆ. ಇಂಡೋನೇಷ್ಯದ ಜಕಾರ್ತದಲ್ಲಿ ನ್ಯಾಷನಲ್ ಮ್ಯೂಸಿಯಮ್ (1868) ಇದೆ. ಇದರಲ್ಲಿ ಇಲ್ಲಿಯ ಇತಿಹಾಸ, ಕಲೆ, ಸಂಸ್ಕೃತಿಯ ವಸ್ತುಗಳಿವೆ. ಜಪಾನಿನ ಟೋಕಿಯೊ ನ್ಯಾಷನಲ್ ಮ್ಯೂಸಿಯಮ್‌ನಲ್ಲಿ (1871) ಹಳೆಯ ವಸ್ತುಗಳ ಸಂಗ್ರಹಗಳಿವೆ. ಜಪಾನ್ ಫೋಕ್–ಕ್ರಾಫ್ಟ್ ಮ್ಯೂಸಿಯಮ್‌ನಲ್ಲಿ (1936) ಜಪಾನಿ ಜನಸಮುದಾಯದ ಸಾಂಸ್ಕೃತಿಕ ವಸ್ತುಗಳ ಸಂಗ್ರಹವಿದೆ. ಕೊರಿಯದ ಸಿಯೋಲ್‌ನ ನ್ಯಾಷನಲ್ ಮ್ಯೂಸಿಯಮ್ ಆಫ್ ಕೊರಿಯ (1915) ದೇಶದ ಸಮಗ್ರ ಇತಿಹಾಸ, ಕಲೆ, ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ನ್ಯಾಷನಲ್ ಫೋಕ್‌ಲೋರ್ ಮ್ಯೂಸಿಯಮ್ ಮತ್ತು ಕೊರಿಯನ್ ಫೋಕ್ ವಿಲೇಜ್ (1974)–ಇವು ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

ಆಸ್ಟ್ರೇಲಿಯದ ಸಿಡ್ನಿಯಲ್ಲಿರುವ ಆಸ್ಟ್ರೇಲಿಯನ್ ಮ್ಯೂಸಿಯಮ್ (1828) ಅತ್ಯಂತ ಹಳೆಯದು. ಇಲ್ಲಿಯ ಜನಜೀವನ, ಇತಿಹಾಸ, ಸಾಹಿತ್ಯ ಮತ್ತು ಕಲೆ ಪ್ರದರ್ಶಿತವಾಗಿದೆ. ಕ್ಯಾನ್‌ಬೆರದ ಆಸ್ಟ್ರೇಲಿಯನ್ ವಾರ್ ಮೆಮೋರಿಯಲ್‌ನಲ್ಲಿ (1979) ಪ್ರಾಚೀನ ಮತ್ತು ಆಧುನಿಕ ಯುದ್ಧೋಪಕರಣಗಳಿವೆ. ಇದು ಆಸ್ಟ್ರೇಲಿಯದ ಮಿಲಿಟರಿ ಇತಿಹಾಸಕ್ಕೆ ಸಂಬಂಧಿಸಿದ್ದು. ನ್ಯಾಷನಲ್ ಗ್ಯಾಲರಿ ಆಫ್ ವಿಕ್ಟೋರಿಯ(1861) ಪ್ರಾಕೃತಿಕ ವಸ್ತುಗಳಿಗೆ ಸಂಬಂಧಿಸಿದ ಸಂಗ್ರಹಾಲಯ. ಆಸ್ಟ್ರೇಲಿಯನ್ ನ್ಯಾಷನಲ್ ಗ್ಯಾಲರಿಯಲ್ಲಿ (1982) ಇಲ್ಲಿಯ ಮೂಲ ನಿವಾಸಿಗಳ ಬದುಕು–ಸಂಸ್ಕೃತಿಯ ಸಮಗ್ರ ಚಿತ್ರಣವಿದೆ. ನ್ಯೂಜಿಲೆಂಡ್‌ನ ಆಕ್ಲೆಂಡ್ ಇನ್‌ಸ್ಟಿಟ್ಯೂಟ್ ಅಂಡ್ ಮ್ಯೂಸಿಯಮ್ (1852), ಆಕ್ಲೆಂಡ್ ಸಿಟಿ ಆರ್ಟ್ ಗ್ಯಾಲರಿ (1888) ಇಲ್ಲಿಯ ಜನಜೀವನದ ಪೂರ್ಣ ವಿವರ ಪ್ರತಿಬಿಂಬಿಸುತ್ತವೆ. ವೆಲ್ಲಿಂಗ್‌ಟನ್‌ನ ನ್ಯಾಷನಲ್ ಹಿಸ್ಟರಿ ಮ್ಯೂಸಿಯಮ್ (1865) ನೈಸರ್ಗಿಕ ಮತ್ತು ಮಾನವ ವಸ್ತು ಇತಿಹಾಸಕ್ಕೆ ಸಂಬಂಧಿಸಿದೆ. ಕ್ರೈಸ್ಟ್ ಚರ್ಚ್‌ನ ರಾಬರ್ಟ್ ಮ್ಯಾಕ್‌ಡಗಾಲ್ ಆರ್ಟ್ ಗ್ಯಾಲರಿ (1932) ಇಲ್ಲಿಯ ಕಲಾ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ.

ಕೆನಡ ದೇಶದಲ್ಲಿ 1500 ವಸ್ತು ಸಂಗ್ರಹಾಲಯಗಳಿವೆ. ನ್ಯಾಷನಲ್ ಮ್ಯೂಸಿಯಮ್ ಆಫ್ ಮ್ಯಾನ್ (1957) ಮಾನವನ ಇತಿಹಾಸಕ್ಕೆ, ನ್ಯಾಷನಲ್ ಮ್ಯೂಸಿಯಮ್ ಆಫ್ ನ್ಯಾಚುರಲ್ ಸೈನ್ಸ್ (1957) ನೈಸರ್ಗಿಕ ಸಸ್ಯ, ಪ್ರಾಣಿ, ಖನಿಜಗಳಿಗೆ ಸಂಬಂಧಿಸಿದ ಅಪೂರ್ವ ಸಂಗ್ರಹಾಲಯ, ಕೆನಡದ ಕಲಾ ಗ್ಯಾಲರಿಗಳಲ್ಲಿ ಮಾಂಟ್ರಿಯಲ್ ಮ್ಯೂಸಿಯಮ್ ಆಫ್ ಆರ್ಟ್ಸ್ (1860), ಆರ್ಟ್ ಗ್ಯಾಲರಿ ಆಫ್ ಒಂಟಾರಿಯೊ (1900), ವಾಂಕೋವರ್ ಆರ್ಟ್ ಗ್ಯಾಲರಿ (1931), ರಾಯಲ್ ಒಂಟಾರಿಯೊ ಮ್ಯೂಸಿಯಮ್ (1912) ಮುಖ್ಯವಾದವು. ವಿಕ್ಟೋರಿಯದ ಬ್ರಿಟಿಷ್ ಕೊಲಂಬಿಯ ಪ್ರೊವಿನ್ಸಿಯಲ್ ಮ್ಯೂಸಿಯಮ್ (1886), ಗ್ಲೆನ್ ಬೊ ಮ್ಯೂಸಿಯಮ್‌ಗಳಲ್ಲಿ (1966) ಕೆನಡದ ದೇಶೀಯ ಸಂಸ್ಕೃತಿಯ ಪ್ರದರ್ಶನವಿದೆ.

ಅಮೆರಿಕದ ದಕ್ಷಿಣ ಮೆಕ್ಸಿಕೊದ ನ್ಯಾಷನಲ್ ಮ್ಯೂಸಿಯಮ್ ಆಫ್ ಆಂತ್ರೋಪಾಲಜಿ (1964) ಮಾನವಶಾಸ್ತ್ರಕ್ಕೆ ಸಂಬಂಧಿಸಿದ ಸಂಗ್ರಹಾಲಯ. ಚಿಲಿಯ ಆರ್ಕಿಯಾಲಜಿಕಲ್ ಮ್ಯೂಸಿಯಮ್ ಆಫ್ ಲಾ ಸೆರೆನ (1943), ಲೀಮಾದ ಆರ್ಕಿಯಾಲಜಿಕಲ್ ಮ್ಯೂಸಿಯಮ್‌ಗಳು ಪುರಾತತ್ತ್ವವಿಜ್ಞಾನಕ್ಕೆ ಸಂಬಂಧಿಸಿದ ಸಂಗ್ರಹಾಲಯ. ಕೊಲಂಬಿಯದ ಮ್ಯೂಸಿಯಮ್ ಆಫ್ ಗೋಲ್ಡ್ (1939) ಗಮನಾರ್ಹ. ಇಲ್ಲಿ ವಿವಿಧ ಜನ ಸಮುದಾಯಗಳಲ್ಲಿ ಪ್ರಚಲಿತವಿರುವ ಅಮೂಲ್ಯ ಚಿನ್ನಾಭರಣಗಳನ್ನು ಮಾತ್ರ ಸಂಗ್ರಹಿಸಲಾಗಿದೆ. ಅರ್ಜೆಂಟೀನದ ಬ್ಯೂನಸ್‌ಐರಿಸ್‌ನಲ್ಲಿರುವ ಅರ್ಜೆಂಟೈನ್ ಮ್ಯೂಸಿಯಮ್ ಆಫ್ ನ್ಯಾಚುರಲ್ ಸೈನ್ಸ್ (1823) ಉಷ್ಣ ಮತ್ತು ಶೀತವಲಯಗಳ ಸಸ್ಯ, ಪ್ರಾಣಿ, ಪಕ್ಷಿ, ಕೀಟ ಇವುಗಳ ಸಂಗ್ರಹಾಲಯವಾಗಿದೆ. ಬ್ರೆಜಿಲ್‌ನ ರಿಯೋ–ಡಿ–ಜನೈರೋದ ನ್ಯಾಷನಲ್ ಮ್ಯೂಸಿಯಮ್ ಆಫ್ ಬ್ರೆಜಿಲ್ (1818)ನಲ್ಲಿ ಈಜಿಪ್ಟ್‌ನ ಉತ್ಖನನದ ವಸ್ತುಗಳ ಸಂಗ್ರಹಗಳಿವೆ. ಮೆಕ್ಸಿಕೊದ ನ್ಯಾಷನಲ್ ಮ್ಯೂಸಿಯಮ್ ಆಫ್ ಹಿಸ್ಟರಿ (1825), ನ್ಯಾಷನಲ್ ಹಿಸ್ಟರಿ ಮ್ಯೂಸಿಯಮ್ ಆಫ್ ಅರ್ಜೆಂಟೀನ (1889), ನ್ಯಾಷನಲ್ ಹಿಸ್ಟರಿ ಮ್ಯೂಸಿಯಮ್ ಆಫ್ ಬ್ರೆಜಿಲ್ (1922)–ಇವು ಐತಿಹಾಸಿಕ ವಸ್ತುಗಳಿರುವ ಪ್ರಸಿದ್ಧ ವಸ್ತು ಸಂಗ್ರಹಾಲಯ. ಮೆಕ್ಸಿಕೊದ ಪ್ಯಾಲೇಸ್ ಆಫ್ ಫೈನ್ ಆರ್ಟ್ಸ್, ಲಲಿತ ಕಲೆಗಳಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯ. ರಷ್ಯದ ಸ್ಟೇಟ್ ಹಿಸ್ಟಾರಿಕಲ್ ಮ್ಯೂಸಿಯಮ್ (1873) ಜನರ ಸಂಸ್ಕೃತಿ, ಇತಿಹಾಸಗಳಿಗೆ ಮೀಸಲಾಗಿದೆ.

ವಿಜ್ಞಾನ–ತಂತ್ರಜ್ಞಾನ, ಸಾರಿಗೆ, ಸಮುದ್ರ ವಿಜ್ಞಾನ, ಖಗೋಳ ಮುಂತಾದ ವಿಷಯಗಳಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯಗಳಿವೆ: ಲಂಡನ್ನಿನ ಸೈನ್ಸ್ ಮ್ಯೂಸಿಯಮ್ (1853), ಮಾಸ್ಕೊದ ಪಾಲಿಟೆಕ್ನಿಕಲ್ ಮ್ಯೂಸಿಯಮ್ (1872), ಮ್ಯೂನಿಚ್‌ನ ಜೆಚಸ್ ಮ್ಯೂಸಿಯಮ್ (1903), ಇಟಲಿ, ಬ್ರಿಟನ್, ನ್ಯೂಜಿಲೆಂಡ್, ಆಕ್ಲೆಂಡ್, ಟೋಕಿಯೊ, ಫಿಲಿಪೀನ್ಸ್, ಪಾಕಿಸ್ತಾನ, ಸಿಂಗಪುರ ಮುಂತಾದೆಡೆ ಸಂಗ್ರಹಾಲಯಗಳಿವೆ. ನ್ಯೂಯಾರ್ಕ್, ಬಾಸ್ಟನ್, ಮಾಂಟ್‌ರೈಂಟ್, ಆಲ್ಜಿಯರ್ಸ್ ಮುಂತಾದ ಕಡೆಗಳಲ್ಲಿ ಮಕ್ಕಳಿಗಾಗಿ ಚಿಲ್ಡ್ರನ್ಸ್ ಮ್ಯೂಸಿಯಮ್‌ಗಳಿವೆ. (ಕೆ.ಎಂ.ಎಸ್‌ಯು.)

**ವಾಕಾಟಕರು:** ಸು.4–6ನೆಯಶತಮಾನ. ಸಾತವಾಹನ ಅಥವಾ ಆಂಧ್ರ ಭೃತ್ಯರ ಮಾಂಡಲಿಕರಾಗಿದ್ದು ಅನಂತರ ಸ್ವತಂತ್ರವಾದ ರಾಜಮನೆತನ. ಇವರ ಮೂಲಸ್ಥಳ, ಆಡಳಿತ ಅವಧಿ ಮೊದಲಾದ ವಿಷಯಗಳ ಬಗ್ಗೆ ನಿರ್ದಿಷ್ಟವಾಗಿ ತಿಳಿದಿಲ್ಲ. ಈ ರಾಜರ ಕೆಲವು ಹೆಸರುಗಳನ್ನು ಪುರಾಣಗಳಲ್ಲಿ ಪ್ರಸ್ತಾಪಿಸಲಾಗಿದೆ. ವಾಕಾಟಕ ಚರಿತ್ರೆ ಬಗ್ಗೆ ಶಾಸನಗಳಲ್ಲಿ ದೊರೆಯುವ ವಿವರಗಳು ಕಡಿಮೆ.

ಸಾತವಾಹನರ ಪತನಾನಂತರ ದಕ್ಷಿಣದಲ್ಲಿ ನಾಗಾರ್ಜುನಕೊಂಡದ ಕಾಕುತ್ಸ್ಥವಂಶದ ರಾಜರು, ಚುಟುಕುಲಾನಂದರು, ಆಭೀರರು ಸ್ವತಂತ್ರರಾದರು. ದಕ್ಷಿಣ ಕರಾವಳಿ ಪ್ರದೇಶದಲ್ಲಿ ಕದಂಬರು ಅಸ್ತಿತ್ವದಲ್ಲಿದ್ದಾಗ ಮಧ್ಯಪ್ರದೇಶದಲ್ಲಿ ವಾಕಾಟಕರು ತಲೆಯೆತ್ತಿದರು. ಇವರ ಶಾಸನಗಳು ಮಧ್ಯಪ್ರದೇಶ, ದಕ್ಷಿಣದಲ್ಲಿ ಅಜಂತ ಗುಹೆಗಳಲ್ಲಿ ದೊರೆತಿರುವುದರಿಂದ ವಿಂಧ್ಯಪರ್ವತದ ವಿದರ್ಭ ವಾಕಾಟಕರ ಮೂಲನಿವಾಸವಿದ್ದಿರಬಹುದು. ಆಂಧ್ರರಾಜ್ಯದ ಅಮರಾವತಿಯ ಒಂದು ಶಾಸನದಲ್ಲಿ (3ನೆಯ ಶತಮಾನ) ವಾಕಾಟಕ ಎಂಬ ಪ್ರವಾಸಿಯ ಹೆಸರು ಬಂದಿದೆ. ಇವರ ಮೂಲಪುರುಷ ವಿಂಧ್ಯಶಕ್ತಿ. ಇವರು ಸಾತವಾಹನರ ಮಾಂಡಲಿಕರಾದ್ದರಿಂದ ವಾಕಾಟಕರು ದಾಕ್ಷಿಣಾತ್ಯರೆಂದು ಹೇಳಬಹುದು.

ಇವರು ಗುಪ್ತ, ವಿಷ್ಣುಕುಂಡಿ ಮತ್ತು ಕದಂಬ ಅರಸರೊಡನೆ ವೈವಾಹಿಕ ಸಂಬಂಧ ಬೆಳೆಸಿದ್ದರು. ಗುಪ್ತ ಸಾಮ್ರಾಜ್ಯದ 2ನೆಯ ಚಂದ್ರಗುಪ್ತನ (375–414) ಮಗಳು ಪ್ರಭಾವತಿ ಗುಪ್ತ ಎಂಬುವಳನ್ನು ವಾಕಾಟಕ 2ನೆಯ ರುದ್ರಸೇನನಿಗೆ ವಿವಾಹ ಮಾಡಲಾಗಿತ್ತು. ಕದಂಬ ಕಾಕುತ್ಸ್ಥವರ್ಮನ ಮಗಳಾದ ಅಜಿತಭಟ್ಟಾರಿಕೆಯನ್ನು ಅವನ ಮಗನಾದ ಪ್ರವರಸೇನನಿಗೆ ಕೊಟ್ಟು ಲಗ್ನ ಮಾಡಲಾಗಿತ್ತು. ಈ ಸಮಕಾಲೀನ ಸಂಬಂಧಗಳಿಂದ ಮತ್ತು ವಾಕಾಟಕರ ಶಾಸನಗಳಿಂದ ಇವರ ಕಾಲವನ್ನು ತಿಳಿಯಬಹುದು. ಪೃಥ್ವೀಷೇಣನನ್ನು ಕುರಿತು ಸಮುದಿತಸ್ಯ ವರ್ಷಶತಮಭಿವರ್ಧಮಾನತೋಷದಣ್ಡ ಸಾಧನಸಂತಾನಪುತ್ರ ಪೌತ್ರಿಣಃ ಎಂದು ಹೇಳಿರುವುದರಿಂದ ಪೃಥ್ವೀಷೇಣ ಪಟ್ಟಕ್ಕೆ ಬರುವಾಗ ವಾಕಾಟಕರು ಉದಯ ಹೊಂದಿ ಒಂದು ನೂರು ವರ್ಷಗಳು ಸಂದಿದ್ದವೆಂದು ಹೇಳಿದೆ. ಇವನು ಚಂದ್ರಗುಪ್ತನ ಸಮಕಾಲೀನನಾಗಿದ್ದರಿಂದ ಇವರ ಮೂಲಪುರುಷನಾದ ವಿಂಧ್ಯಶಕ್ತಿ ಸು.255–275ರಲ್ಲಿರಬೇಕೆಂದು ಊಹಿಸಬಹುದು. ಪೃಥ್ವೀಷೇಣನ ತರುವಾಯ ವಾಕಾಟಕ ರಾಜ್ಯ ಚಿಕ್ಕ ಮನೆತನದ ಹರಿಷೇಣನ ವಶಕ್ಕೆ ಹೋಯಿತು. ಶಾಸನಗಳಿಂದ ವಾಕಾಟಕರಲ್ಲಿ ಎರಡು ಮನೆತನಗಳಿದ್ದವೆಂದು ಗೊತ್ತಾಗುತ್ತದೆ.

ಸು.550ರಲ್ಲಿ ವಾಕಾಟಕರನ್ನು ಸೋಲಿಸಿ ಚಳುಕ್ಯರು ಅವರ ರಾಜ್ಯವನ್ನು ಆಕ್ರಮಿಸಿದರು. ಚಿಕ್ಕ ಮನೆತನದ ರಾಜನಾದ ಹರಿಷೇಣ ಸಮಸ್ತ ವಾಕಾಟಕ ರಾಜ್ಯಕ್ಕೆ ಏಕಾಧಿಪತಿಯಾಗಿ ಆಳುತ್ತಿದ್ದ. ಇವನ ಮಗನ ಮಗಳನ್ನು (ಮೊಮ್ಮಗಳು) ವಿಷ್ಣುಕುಂಡಿ ಮನೆತನದ ಮಾಧವವರ್ಮ ಮದುವೆಯಾಗಿದ್ದ. ಹರಿಷೇಣನ ಮೊಮ್ಮಗನ ಕಾಲದಲ್ಲಿ ವಾಕಾಟಕ ಮನೆತನ ಅವನತಿ ಹೊಂದಿತು.

ರಾಜ್ಯವಿಸ್ತಾರ: ಮೂಲಪುರುಷನಾದ ವಿಂಧ್ಯಶಕ್ತಿ ವಿದಿಶಾ, ಪುರಿಕಾ (ವಿದರ್ಭ–ಅಶ್ಮಕ) ಪಟ್ಟಣಗಳಿಂದ ಆಳುತ್ತಿದ್ದ. ವಿದರ್ಭದೇಶ ಮೂಲರಾಜ್ಯವಾಗಿದ್ದರೂ ಮಾಳ್ವ ಕೂಡ ಇವನ ಆಡಳಿತಕ್ಕೆ ಒಳಪಟ್ಟಿತ್ತು. ಪರಾಕ್ರಮದಿಂದ ರಾಜ್ಯವನ್ನು ವಿಸ್ತರಿಸಿ ಸಾಮ್ರಾಜ್ಯಸೂಚಕವಾದ ನಾಲ್ಕು ಅಶ್ವಮೇಧಯಾಗಗಳನ್ನು ಮಾಡಿದ. ಇವನ ರಾಜ್ಯ ದಕ್ಷಿಣದಲ್ಲಿ ಕೋಸಲ, ಬಾಗೇಲಖಂಡ, ಮಾಳ್ವ ಗುಜರಾತ್, ಕಾಠೇವಾಡ, ದಕ್ಷಿಣ ಹಿಂದೂಸ್ತಾನದ ಉತ್ತರಭಾಗಗಳನ್ನು ಒಳಗೊಂಡಿತ್ತು. ಈ ವಿಸ್ತಾರವಾದ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ತನ್ನ ನಾಲ್ಕು ಜನ ಮಕ್ಕಳನ್ನು ತನ್ನ ಪ್ರತಿನಿಧಿಗಳೆಂದು ನೇಮಿಸಿದ. ಹಿರಿಯಮಗನಾದ ಗೌತಮೀಪುತ್ರ ಮರಣ ಹೊಂದಿದ್ದರಿಂದ ಎರಡನೆಯ ಮಗ ಸರ್ವಸೇನ ಬಾಸಿಮ್‌ಶಾಖೆಯನ್ನು ಸ್ಥಾಪಿಸಿ ಸ್ವತಂತ್ರನಾದ. 2ನೆಯ ಪ್ರವರಸೇನನ ಕಾಲದಲ್ಲಿ ರಾಜ್ಯ ಮತ್ತಷ್ಟು ವಿಸ್ತಾರವಾಯಿತಲ್ಲದೆ, ಪ್ರವರಪುರ

ಎಂಬ ಹೊಸರಾಜಧಾನಿಯನ್ನು (ಈಗಿನ ಪವನೂರು, ವಾರ್ಧಾಜಿಲ್ಲೆ) ಸ್ಥಾಪಿಸಿದ. ಶಾಸನಗಳ ಪ್ರಕಾರ ಆಗ ವಾಕಾಟಕ ರಾಜ್ಯ ಅಮರಾವತಿ, ವಾರ್ಧಾ, ಬೆತುಲ, ವಿಂಧವಾರ, ನಾಗಪುರ, ಭಂದರ ಮತ್ತು ಬಾಲಘಾಟ ಜಿಲ್ಲೆಗಳನ್ನೊಳಗೊಂಡಿತ್ತೆಂದು ತಿಳಿಯುತ್ತದೆ. ಬಾಸಿಮ್ ಶಾಖೆಯ ಅಧೀನ ದಕ್ಷಿಣ ವಿದರ್ಭ ಹೈದರಾಬಾದ್ ಮತ್ತು ದಕ್ಷಿಣ ಮಹಾರಾಷ್ಟ್ರದ ಪ್ರದೇಶಗಳು ಇದ್ದವು. ಹರಿಷೇಣನ ಕಾಲದಲ್ಲಿ ಎರಡು ಮನೆತನಗಳ ರಾಜ್ಯಗಳು ಒಂದೇ ಆಡಳಿತಕ್ಕೆ ಒಳಪಟ್ಟವು. ಅಜಂತ ಶಾಸನದ ಪ್ರಕಾರ ಇವನು ಕುಂತಲ, ಅವಂತಿ, ಲಾಟ, ಕೋಸಲ, ಕಳಿಂಗ, ಆಂಧ್ರ ರಾಜ್ಯಗಳನ್ನು ಜಯಿಸಿದನೆಂದು ಉಲ್ಲೇಖಿಸಲಾಗಿದೆ. ಹರಿಷೇಣನ ಕಾಲದಲ್ಲಿ ಔನ್ನತ್ಯಕ್ಕೇರಿದ ಸಾಮ್ರಾಜ್ಯ ಸ್ವಲ್ಪ ಸಮಯದಲ್ಲಿ ಪರರ ವಶವಾಯಿತು.

**ಭೂವರಾಹ, ರಾಮ್‌ಟೇಕ್**

**ಧರ್ಮ:** ಶುಂಗ, ಕಣ್ವ, ಸಾತವಾಹನರಂತೆ ವಾಕಾಟಕರು ಬ್ರಾಹ್ಮಣರು, ವಿಷ್ಣುವೃದ್ಧ ಗೋತ್ರದವರು. 2ನೆಯ ಚಂದ್ರಗುಪ್ತನೊಂದಿಗೆ ಸಂಬಂಧ ಬೆಳೆದಮೇಲೆ ಇವರು ವಿಷ್ಣುಭಕ್ತರಾದಂತೆ ತಿಳಿಯುತ್ತದೆ. ಶಾಸನಗಳಲ್ಲಿ ಮಹಾಭೈರವಭಕ್ತರೂ ಅತ್ಯಂತಮಾಹೇಶ್ವರರೂ ಎಂದು ವರ್ಣಿಸಲ್ಪಟ್ಟಿದ್ದಾರೆ. ಪ್ರಬಲರಾದ ರಾಜರು ಸಾಮ್ರಾಟ, ಮಹಾರಾಜ ಎಂಬ ಬಿರುದುಗಳನ್ನು ಧರಿಸುತ್ತಿದ್ದರು. ಯಜ್ಞಯಾಗಾದಿಗಳ ಮೂಲಕ ವೈದಿಕಧರ್ಮವನ್ನು ಪ್ರಚಾರಗೊಳಿಸಿದರು. ಪ್ರವರಸೇನನು ಬೃಹಸ್ಪತಿಸ್ತವ, ಅಶ್ವಮೇಧ, ಅಗ್ನಿಸ್ತೋಮ, ಅಪ್ತೋರ್ಯಾಮ, ಉಕ್ಥ್ಯ, ಷೋಡಶಿ, ಅತಿರಾತ್ರ ಮತ್ತು ವಾಜಪೇಯ ಯಾಗಗಳನ್ನು ಮಾಡಿದ್ದನೆಂದು ಶಾಸನಗಳಿಂದ ತಿಳಿಯುತ್ತದೆ. ಈತ ಕವಿಗಳಿಗೆ ಆಶ್ರಯ ಕೊಟ್ಟಿದ್ದಲ್ಲದೆ ತಾನೇ ಸೇತುಬಂಧಕಾವ್ಯವನ್ನು ಸಂಸ್ಕೃತದಲ್ಲಿ ರಚಿಸಿದ. ಕಾಳಿದಾಸ ಈ ಕಾವ್ಯವನ್ನು ಓದಿ ತಿದ್ದಿಕೊಟ್ಟನೆಂದು ಪ್ರತೀತಿ. ಚಂದ್ರಗುಪ್ತನ ಮಗಳಾದ ಪ್ರಭಾವತಿಗುಪ್ತಳನ್ನು ರುದ್ರಸೇನನಿಗೆ ವಿವಾಹಮಾಡಿಸಲು ಸಂಧಾನಕ್ಕೆಂದು ವಾಕಾಟಕ ಪೃಥ್ವಿಷೇಣನ ಆಸ್ಥಾನಕ್ಕೆ ಬಂದಿದ್ದನೆಂದು, ವಿಷಯ ಕುಂತಲೇಶ್ವರದೌತ್ಯ ಎಂಬ ಕಾವ್ಯದಿಂದ ತಿಳಿಯಬರುತ್ತದೆ. ಈ ಕುಂತಲೇಶ್ವರ ಕದಂಬ ಕಾಕುತ್ಸ್ಥವರ್ಮನಿರಬೇಕೆಂದು ಹೇಳಲಾಗುತ್ತದೆ. (ಆರ್.ಎಸ್.ಪಿ.)

**ವಾಸ್ತುಶಿಲ್ಪ:** ಅಜಂತದ ಗುಹಾಲಯಗಳ ಹಾಗೂ ಅಲ್ಲಿಯ ವರ್ಣಚಿತ್ರಗಳ ಸೃಷ್ಟಿಗೆ ನೇರವಾಗಿ ಮತ್ತು ಪರೋಕ್ಷವಾಗಿ ಪ್ರೋತ್ಸಾಹ ನೀಡಿದ ವಾಕಾಟಕರು ಪ್ರಸಿದ್ಧರಾದುದು ಈ ಉತ್ಕೃಷ್ಟ ಕಲಾಕೃತಿಗಳಿಂದ. ನಾಗಪುರ ವಿಶ್ವವಿದ್ಯಾಲಯದ ಮತ್ತು ಮಹಾರಾಷ್ಟ್ರ ರಾಜ್ಯಪ್ರಾಚ್ಯವಸ್ತು ಇಲಾಖೆಯ ಸಂಯುಕ್ತ ಪರಿಶ್ರಮದಿಂದ ಕಳೆದ ನಾಲ್ಕು ದಶಕಗಳಲ್ಲಿ ಅನೇಕ ವಾಕಾಟಕ ಸ್ಮಾರಕಗಳು ಶೋಧವಾಗಿವೆ.

ಶಿವ, ವಿಷ್ಣು ಹಾಗೂ ಬಹುಶಃ ದೇವಿಗೆ ಅಥವಾ ಶಕ್ತಿಗೆ ನಿರ್ಮಿಸಿದ ಇಟ್ಟಿಗೆಯ ದೇವಾಲಯಗಳು ಮಂಡಲ್, ಮನ್ಸರ್ (ನಾಗಪುರ ಜಿಲ್ಲೆ), ವಿವೇಕಾನಂದಪುರ (ಚಂದ ಜಿಲ್ಲೆ), ವಾಶಿಮ್ (ವಾಶಿಯನ್ ಜಿಲ್ಲೆ) ಹಾಗೂ ನಗ್ರ (ಬಂಧಾರ ಜಿಲ್ಲೆ) ಪ್ರದೇಶಗಳಲ್ಲಿವೆ. ಆದರೆ ಮಂಡಲ್‌ನ ಶಿವ ದೇವಾಲಯಗಳಲ್ಲಿ, ಎರಡನೆಯ ರುದ್ರಸೇನ ಮತ್ತು ಎರಡನೆಯ ಪೃಥ್ವೀಸೇನನ (475–90) ತಾಮ್ರಪಟಗಳ ಜೊತೆಗೆ ಹಳೆಯ ಮೂರ್ತಿಗಳ (4ನೆಯ ಶತಮಾನದ ಅನಂತರದವು) ನಿಕ್ಷೇಪ ಪತ್ತೆಯಾಯಿತು. ವರ್ಧಿ ಕೆರೆಯ ದಂಡೆಯ ಮೇಲೆ ಬೃಹತ್ ಶಿವಲಿಂಗ ಸಹಿತ ಗರ್ಭಗೃಹ ಹಾಗೂ ಇದರ ಮುಂಬದಿಯ ಮುಖಮಂಟಪವುಳ್ಳ ಒಂದು ಶೈವ ದೇವಾಲಯವಿದೆ. ನಗ್ರದ ದೇವಾಲಯ ಭೂಮಾರದ (ಮಧ್ಯಪ್ರದೇಶ) ಶಿಲಾ ದೇವಾಲಯದ ವಿನ್ಯಾಸದಂತಿದೆ. ಮೆಟ್ಟಿಲುಳ್ಳ ಜಗತಿಯ ಮೇಲೆ ಸಭಾಮಂಟಪ ಮತ್ತುಗರ್ಭಗೃಹವಿದೆ. ಇತ್ತೀಚೆಗೆ ಉತ್ಖನನದಲ್ಲಿ ಕಂಡುಬಂದ ಮನ್ಸರ್‌ನ (**ನೋಡಿ**) ದೇವಾಲಯ ಅತ್ಯಂತ ಉನ್ನತವಾದದ್ದು. ಇದು ವಾಕಾಟಕರ ಹಳೆಯ ರಾಜಧಾನಿ. ನಂದಿವರ್ಧನದ (ನಾಗರ್ಧನ್ ತಾಲ್ಲೂಕು, ರಾಮಟೇಕ್ ಜಿಲ್ಲೆ, ನಾಗಪುರ) ಹೊರವಲಯದಲ್ಲಿದೆ. ಅಧಿಷ್ಠಾನದ ಮೇಲಿದ್ದ ಯಾವುದೇ ಭಾಗಗಳು ಉಳಿದಿಲ್ಲವಾದರೂ ಇದರ ಸಂಕೀರ್ಣದ ಸಣ್ಣ ಸಣ್ಣ ಗುಡಿಗಳ ಶಿವಪಾರ್ವತಿಯರ ಮೂರ್ತಿಗಳು, ಕುಬ್ಜ ಗಣಗಳು ಐದನೆಯ ಶತಮಾನದ ಉತ್ತರಕಾಲೀನ ವಾಕಾಟಕ ಶಿಲ್ಪಿಗಳ ಸೌಂದರ್ಯ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತವೆ. ರಾಜ್ಯ ಇಲಾಖೆಯ ಸಂರಕ್ಷಣ ಕಾರ್ಯದಲ್ಲಿ 6 ಕಲ್ಲಿನ ದೇವಾಲಯಗಳನ್ನು ಶೋಧಿಸಿದ್ದು ಇವು ಸು.5ನೆಯ ಶತಮಾನದವು. ಇವುಗಳಲ್ಲಿ ಒಂದು ನೈಸರ್ಗಿಕ ಗುಹೆಯನ್ನು ಮಾರ್ಪಡಿಸಿದ ರಾಚನಿಕ ದೇವಾಲಯ. ಮುಖಮಂಟಪ ಮತ್ತು ಎರಡು ಬದಿಗಳಲ್ಲಿ ಗರ್ಭಗುಡಿಗಳಿರುವ ದೇವಾಲಯವೂ ಇದೆ. ಬಟಾಲದ ಸರೋವರದ ದಂಡೆಯ ಮೇಲಿನ ಬಂಡೆಗಲ್ಲನ್ನು ಕೊರೆದು ನಿರ್ಮಿಸಿದ ನರಸಿಂಹ ದೇವಾಲಯದಲ್ಲಿ ಅದನ್ನು ಕಟ್ಟಿಸಿ ದತ್ತಿ ಬಿಟ್ಟ ವಿಷಯವುಳ್ಳ ಶಾಸನವಿದೆ.

ಅಜಂತದ ಗುಹಾ ಬೌದ್ಧಾಲಯಗಳ ವೈವಿಧ್ಯಮಯ ವಾಸ್ತು ಮನಸೂರೆಗೊಳ್ಳುವಂತದ್ದು. ಮಹಾರಾಷ್ಟ್ರದ ಪೂರ್ವಭಾಗದ ಗುಹಾ ದೇವಾಲಯಗಳು ಸಾಮಾನ್ಯವಾಗಿ ಶೈವ, ಶಾಕ್ತ ಅಥವಾ ವೈಷ್ಣವ ಪಂಥಕ್ಕೆ ಸೇರಿದ್ದು ಇವು ಹೆಚ್ಚು ಸಂಪ್ರದಾಯಬದ್ಧವಾಗಿಲ್ಲ. ಸಾಲ್‌ಬಾರ್‌ಡಿಯ (ಅಮರಾವತಿ ಜಿಲ್ಲೆ) ಶಿವಲಿಂಗ ಹಳ್ಳದ ಪಕ್ಕದ ಕಲ್ಲಿನ ಗೂಡಿನಲ್ಲಿದೆ. ಇದರ ಮುಂಬದಿಯಲ್ಲಿ ಶಿವಲಿಂಗ, ಕುಮಾರ, ಗಣೇಶ ಹಾಗೂ ನರಸಿಂಹನ ಚಿತ್ರಗಳನ್ನು ಅಳವಡಿಸಲಾಗಿದೆ. ಶಂಖಲಿಪಿಯ ಪಟ್ಟಿ ಶಾಸನ ಸಿಕ್ಕದಿದ್ದಲ್ಲಿ ದೀಯುಲ್‌ವಾಡದ ಸಣ್ಣ ಗುಹಾಲಯಗಳು ಯಾವ ಧಾರ್ಮಿಕ ಪಂಥಕ್ಕೆ ಸೇರಿದವೆಂಬುದು ತಿಳಿಯುತ್ತಿರಲಿಲ್ಲ. ಆದರೆ ಈಗ ಪಾಶುಪತ ಮುನಿಗಳ ಗುಹೆಗಳೆಂದು ಅರ್ಥೈಸಲಾಗಿದೆ. ಇದರ ಜೊತೆಗೆ ಕಾಮರ್‌ಲೇಣಿ ಎಂದು ಪ್ರಸಿದ್ಧಿ ಪಡೆದಿರುವ ಉಸ್ಮಾನಾಬಾದ್‌ನ ಹತ್ತಿರದ ಗುಹಾ ದೇವಾಲಯಗಳು ಮತ್ತು ಮುಚ್ಚಿದ ಹಜಾರವುಳ್ಳ ಕಟ್ಟಡದ ದೇವಾಲಯವನ್ನು ಸೇರಿಸಬಹುದು. ಬಹಳ ವಿಸ್ತಾರವಾದ ಗುಹೆಯೆಂದರೆ ಪಾತುರಿನ ಶಿವಗೌರಿ. ಇಲ್ಲಿ ಜ್ಞಾನ ಮುದ್ರೆಯಲ್ಲಿರುವ ಪಾರ್ವತಿದೇವಿ ಮೂರ್ತಿಯನ್ನು ಸಂರಕ್ಷಿಸಲಾಗಿದೆ. ಶಿರಪೇಟಿಕೆ ಲಕ್ಷಣವುಳ್ಳ ಬ್ರಾಹ್ಮಿ ಲಿಪಿಯ ಪಟ್ಟಿಶಾಸನ, ದೇವಾಲಯದ ವಿನ್ಯಾಸ, ಅಷ್ಟಕೋನಾಕಾರದ ಕಂಬಗಳಿಂದ ಇದರ ಕಾಲವನ್ನು ಸು.5ನೆಯ ಶತಮಾನದವೆಂದು ಹೇಳಬಹುದು.

ವಾಸ್ತುಶೈಲಿಯ ದೃಷ್ಟಿಯಿಂದ ಸಾಲ್‌ಬಾರ್‌ಡಿಯ ಬೌದ್ಧಗುಹೆಗಳು ಅಜಂತ ಗುಹಾಲಯಗಳ ಲಕ್ಷಣಗಳನ್ನು ಹೋಲುವುದರಿಂದ ಇದರ ಕಾಲ ಪ್ರಶ.5ನೆಯ ಶತಮಾನದ ಕೊನೆಯ ಹಂತವಾಗಿರಬಹುದು. ವಿನ್‌ಝೂಸನ ಬಂಡಕ (ಚಂದ್ರಜಿಲ್ಲೆ) ಗುಹಾಲಯ ಅದ್ಭುತವಾದುದು. ಬಂಡೆ ಕೊರೆದು ನಿರ್ಮಿಸಲಾದ ಒಂದು ಹಾದಿಯ ಮೂಲಕ ಗುಹಾಲಯಕ್ಕೆ ಪ್ರವೇಶ. ಇದರಲ್ಲಿ ಮೂರು ಗುಡಿಗಳಿವೆ. ಮೂರು ಗರ್ಭಗುಡಿಗಳಲ್ಲೂ ಜ್ಞಾನ ಮುದ್ರೆಯಲ್ಲಿರುವ ಬುದ್ಧನ ಮೂರ್ತಿಗಳಿವೆ. ಯಾವುದೇ ಅರ್ಧ ಕಂಬಗಳಿಲ್ಲದ ಇಲ್ಲಿಯ ಓಣಿ, ಕೋಣೆ ಹಾಗೂ ಗರ್ಭಗುಡಿಯ ಶಾಸನದ ಆಧಾರದ ಮೇಲೆ ಸು.5ನೆಯ ಶತಮಾನದವೆಂದು ತಿಳಿಯಲಾಗಿದೆ.

ಭಾರತದ ಪಶ್ಚಿಮಭಾಗದ ಬೌದ್ಧ ವಾಸ್ತುಶೈಲಿಯ ಬೆಳವಣಿಗೆಯಲ್ಲಿ ಮತ್ತು ದಕ್ಷಿಣದಲ್ಲಿ ಬೌದ್ಧ ಸಮೂಹ ಬೆಳೆಯುವಲ್ಲಿ ಅಜಂತದ ಪಾತ್ರ ಗಣನೀಯವಾದದ್ದು. ತಂಗುದಾಣವಾಗಿದ್ದ ನಾಸಿಕ್‌ನ ಗುಹಾಲಯಗಳು (ನಂ.3 ಮತ್ತು 10) ಒಂದು ಹೊಸ ಅಲೆಯನ್ನೇ ಪ್ರಾರಂಭಿಸಿದವು. ಅನಂತರದ ಅವಧಿಯಲ್ಲಿ ಕಾನ್ಹೇರಿ, ಕುಡ, ಮಹದ್ ಮತ್ತು ಇತರ ಬೌದ್ಧ ಗುಹಾಲಯ ನೆಲೆಗಳನ್ನು ಬೌದ್ಧ ಭಿಕ್ಷುಗಳ ಮನೆ ಹಾಗೂ ಚೈತ್ಯಾಲಯಗಳಾಗಿ ಪರಿವರ್ತನೆ ಮಾಡಲಾಯಿತು.

**ಜೈನಗುಹೆ:** ಉಸ್ಮಾನಾಬಾದ್‌ನ ಧಾರಶಿವ ಗುಹೆ ಅತಿ ಪ್ರಾಚೀನ ಹಾಗೂ ಸುದೃಢ ಐತಿಹಾಸಿಕ ಪುರಾವೆಯುಳ್ಳ ಜೈನಾಲಯ. ಇಲ್ಲಿಯ ಆರು ಜೈನ ಗುಹೆಗಳಲ್ಲಿ 1 ಮತ್ತು 5ರಲ್ಲಿ ಯಾವುದೇ ಮೂರ್ತಿಯಿಲ್ಲ. ಉಳಿದ ಗುಹೆಗಳ ಗರ್ಭಗುಡಿಯಲ್ಲಿ ಪಾರ್ಶ್ವನಾಥನ ಮೂರ್ತಿಯನ್ನು ಕಾಣಬಹುದು. 11ನೆಯ ಶತಮಾನದ ಕನಕಮಾರನ ಕರಕಂದಚರಿ ಮತ್ತು ಹರಿಷೇಣನ ಬೃಹತ್ ಕಥಾಕೋಶದಲ್ಲಿಯ (ಸು.10ನೆಯ ಶತಮಾನ) ಒಂದು ಪಾರಂಪರಿಕ ಹೇಳಿಕೆಯಂತೆ ಪ್ರಾಚೀನ ಹಾಗೂ ಪವಿತ್ರವಾದ ಈ ಗುಹಾಲಯಗಳ ಸೃಷ್ಟಿಗೆ ಪೌರಾಣಿಕ ನಾಯಕ ಕರಕಂದ ಕಾರಣಕರ್ತೃ ಪೌರಾಣಿಕ ನಾಯಕ ಕರಕಂದ. ಇವನು ಮಹಾವೀರನ ಸಮಕಾಲೀನ. ಆದರೆ ಧವಳೀಕರ್‌ರವರು ಈ ಸಾಹಿತ್ಯಕ ಆಧಾರವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಮತ್ತು ಇಲ್ಲಿಯ ಕಲಾವಶೇಷಗಳನ್ನು ಅಧ್ಯಯನ ಮಾಡಿ ಈ ಗುಹಾಲಯಗಳು ಅಜಂತ ಗುಹೆಗಳ ಕೊನೆಯ ಹಂತದ್ದು ಮತ್ತು ಮೂಲತಃ ಬೌದ್ಧಧರ್ಮಕ್ಕೆ ಸೇರಿದುವೆಂದು ತೀರ್ಮಾನಿಸಿದ್ದಾರೆ.

**ಶಿಲ್ಪಗಳು:** ಕೆಲವು ಜೇಡಿಮಣ್ಣಿನ ಮೂರ್ತಿಗಳನ್ನು ಹೊರತುಪಡಿಸಿ, ವಾಕಾಟಕ ಕಾಲದ ಮೂರ್ತಿಗಳು ಬಹುಶಃ ಧಾರ್ಮಿಕ ವರ್ಗಕ್ಕೆ ಸೇರಿದವು. ಪ್ರಾದೇಶಿಕವಾಗಿ ಇವುಗಳನ್ನು ಪೂರ್ವ ಮತ್ತು ಪಶ್ಚಿಮ ಎಂದು ವಿಂಗಡಿಸಬಹುದು. ರಾಮಟೇಕ್‌ನಲ್ಲಿ ದೊರೆತ ವಾಕಾಟಕರ ಸ್ಮಾರಕಗಳು ಹಾಗೂ ನಾಗರ್ಧನ್, ಹೇಮಲಪುರಿ ಮತ್ತು ಮನ್ಸರ್‌ನಲ್ಲಿ ಸಿಕ್ಕ ಕಲ್ಲಿನ ಮತ್ತು ಕಂಚಿನ ಮೂರ್ತಿಗಳು ನಂದಿವರ್ಧನ ಸ್ಥಳವನ್ನು ಗುರುತಿಸುವಲ್ಲಿ ನೆರವಾಗಿವೆ. ರಾಮಟೇಕ್ ಮತ್ತು ಅದರ ಸುತ್ತಮುತ್ತಲಿನ ದೇವಾಲಯಗಳಲ್ಲಿಯ ಮೂರ್ತಿಗಳು ಹಾಗೂ ಕೇವಲ ನರಸಿಂಹ ದೇವಾಲಯದಲ್ಲಿಯ ಶಾಸನ ಈ ಕಾಲದ ವಾಸ್ತು ಮೂರ್ತಿ ಶಿಲ್ಪದ ಬಗ್ಗೆ ಮಾಹಿತಿ ಒದಗಿಸುತ್ತದೆ. ಈ ದೇವಸ್ಥಾನದಲ್ಲಿ ಕಾಣುವ ಕೇವಲ ಮತ್ತು ರುದ್ರನರಸಿಂಹನ ಆಕೃತಿ ಹಾಗೂ ತ್ರಿವಿಕ್ರಮ ಮತ್ತು ಜೊತೆಯ ಗಣಗಳ ಚಿತ್ರ, ಭೋಗರಾಮ ದೇವಸ್ಥಾನದ

ಅಲಂಕೃತ ಶಿಲ್ಪಗಳು ಪ್ರವರಸೇನನ ಕಾಲದ್ದಾಗಿದೆ. ಇವೆಲ್ಲ ದೊಡ್ಡಗಾತ್ರದ ಮೂರ್ತಿಗಳು. ಮಿತ ಅಲಂಕರಣ ಎದ್ದು ಕಾಣುತ್ತದೆ. ಆರಂಭದ ಶಿಲ್ಪಗಳಲ್ಲಿಯ ವಿಶಿಷ್ಟ ಲಕ್ಷಣವೆಂದರೆ ಮಾನವ ಶಿಲ್ಪಗಳನ್ನು ಕುಬ್ಜ ಶರೀರ ಹಾಗೂ ಸ್ಥೂಲ ದೇಹಿಯಾಗಿ ಕೆತ್ತಿರುವುದು. ಈ ಕಾಲದ ಶಿಲ್ಪಗಳಲ್ಲಿ ಆಯಾಯ ವ್ಯಕ್ತಿಗಳ ಸ್ಥಾನ–ಮಾನಗಳಿಗುಣವಾಗಿ ಎತ್ತರವನ್ನು ಒಂದು ಅಳತೆಗೋಲನ್ನಾಗಿ ಇನ್ನೂ ಮಾಡಿಕೊಂಡಿರಲಿಲ್ಲ. ಹೇಮಲಪುರಿಯ ಗಣಶಿಲ್ಪಗಳು, ಮನ್ಸರದ ಗಿಡ್ಡಾಕೃತಿಯ ಶಿವ, ಪಾರ್ವತಿ ಮೊದಲಾ ದವು ವಾಕಾಟಕ ಶಿಲ್ಪ ಪರಂಪರೆಯ ಕೊನೆಯ ಹಂತಕ್ಕೆ ಸೇರುತ್ತವೆ. ಶಿಲ್ಪಗಳ ನಯವಾದ ಸರಳಗತಿಯ ಬಾಹ್ಯಾಕಾರ, ಸೂಕ್ಷ್ಮ ಕೆತ್ತನೆಯ ಆಭರಣಗಳ ವಿವರಗಳು ಒಂದಕ್ಕೊಂದು ವೈದೃಶ್ಯವಾಗಿದೆ. ಈ ಶಿಲ್ಪಗಳಲ್ಲಿ ವಾಕಾಟಕ ಶಿಲ್ಪಕಲೆಯ ಉನ್ನತಿಯನ್ನು ಗುರುತಿಸಬಹುದು. ರಾಮಟೇಕ್ ಮತ್ತು ಘೋಘನಾರ್‌ನ (ಮಧ್ಯಪ್ರದೇಶದ ನಿಮಾಡ್‌ಜಿಲ್ಲೆ) ಕಂಚಿನ ಮೂರ್ತಿಗಳ ಬಗ್ಗೆ ವಿಶೇಷವಾಗಿ ಒಂದೆರಡು ವಿಷಯಗಳನ್ನು ಹೇಳಬೇಕು. ಆ ಮಾದರಿಯ ಬುದ್ಧಪಾಡ್‌ನ ಮತ್ತು ಇದೇ ಸಾಲಿಗೆ ಸೇರುವ ವಿಗ್ರಹಗಳು ಪ್ರಾದೇಶಿಕ ವಿಶಿಷ್ಟ ಶೈಲಿಯನ್ನು ಸೂಚಿಸಿದರೆ ಮೂರನೆಯ ಕಂಚಿನ ವಿಗ್ರಹದಲ್ಲಿ ಮಾನವನ ಮೈಮಾಟ ಮತ್ತು ಉಡುಪಿನ ಕೆತ್ತನೆಯಲ್ಲಿ ಸಾರನಾಥ ಮತ್ತು ಗಾಂಧಾರ ಶಿಲ್ಪಕಲೆಯ ಲಕ್ಷಣಗಳಲ್ಲಿ ಸಮ್ಮಿಳಿತಗೊಳಿಸಲಾಗಿದೆ. ಸಾತವಾಹನ ಶೈಲಿ ವಾಕಾಟಕರ ಕಾಲದ ಮಣ್ಗೊಂಬೆಗಳಲ್ಲೂ ಮುಂದುವರೆದಿರುವುದು ಕಾಣುತ್ತದೆ. ಇವುಗಳಲ್ಲಿ ಪ್ರಮುಖವಾದುದೆಂದರೆ ದುರ್ಗ, ಲಜ್ಜಾಗೌರಿ ಫಲಕಗಳು, ಆಟಿಗೆಗಳು, ಶಿರಪೇಟಿಕ ಲಿಪಿಯುಳ್ಳ ಮುದ್ರೆಗಳು ಹಾಗೂ ಕೆಲವು ಶಂಖದ ವಸ್ತುಗಳು.

**ವರ್ಣಚಿತ್ರಗಳು:** ಪಿತಲ್ಖೋರ ಮತ್ತು ಅಜಂತ ಪ್ರದೇಶದಲ್ಲಿ ವರ್ಣಚಿತ್ರಕಲೆಯ ಹಿಂದಿನ ಹಂತದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿದೆ. 1, 2, 9, 10, 16, 17 ಮತ್ತು 23ನೆಯ ಬೌದ್ಧ ಗುಹಾಲಯಗಳಲ್ಲಿ ಅತ್ಯಂತ ಚೆಲುವಾದ ಆಲಂಕಾರಿಕ ಮಾದರಿ ಚಿತ್ರಗಳನ್ನು ಕಾಣಬಹುದು. ಅದರಲ್ಲೂ ವಿಹಾರಗಳ ಬಾಗಿಲುವಾಡದ, ಗೋಡೆಯ ಮೇಲ್ಭಾವಣಿಯ ಮೇಲಿನ ಚಿತ್ರಗಳು ಅದ್ಭುತವಾಗಿದೆ. ಶಂಖ, ತಾವರೆ, ಮಿಥುನಗಳು ಹಾಗೂ ಪಾನಾಸಕ್ತರಾಗಿರುವ ವಿದೇಶಿಯರ ಚಿತ್ರಗಳು ವಿಹಾರಗಳ ಮೇಲ್ಭಾವಣಿಯಲ್ಲಿ ಕಾಣಬಹುದು. ಮೊದಲು ಸಾತವಾಹನರ ಕಾಲದಲ್ಲಿ ವಿಹಾರಗುಹೆಗಳಲ್ಲಿಯ ಚಿತ್ರಗಳಲ್ಲಿ ವಿವಿಧ ರೇಖಾಕೃತಿಗಳ ಚಿತ್ರಗಳನ್ನು ಬಿಟ್ಟರೆ ಯಾವುದೇ ಅಲಂಕಾರವಿರುತ್ತಿರಲಿಲ್ಲ. ಧ್ಯಾನ ಮಂದಿರದಲ್ಲಿ ಮಾತ್ರ ವಿವರಣೆಗಳಿಂದ ಕೂಡಿದ ಚಿತ್ರಗಳಿರುತ್ತಿದ್ದುವು. ವಾಕಾಟಕ ಕಾಲದ ವಿಹಾರದ ಗೋಡೆಗಳು ಭಕ್ತಿ ಪ್ರಧಾನವಾದ ವಿವರಣೆಯ ವರ್ಣಚಿತ್ರಗಳಿಂದ ಶೋಭಿಸುತ್ತಿತ್ತು. ಇವುಗಳಲ್ಲಿ ಕೆಲವೊಂದು ಅಂದರೆ ಸೌಂದರಾನಂದ, ಬುದ್ಧಚರಿತ, ಜಾತಕಗಳು ಹಾಗೂ ಅವದಾನಗಳ ಸನ್ನಿವೇಶಗಳು ಪ್ರಮುಖವಾದವು. ಇವುಗಳಿಗೆ ಪ್ರಪಂಚದ ವರ್ಣಚಿತ್ರ ಕಲಾಕ್ಷೇತ್ರದಲ್ಲಿ ಉತ್ತಮ ಸ್ಥಾನವಿದೆ. ಬುದ್ಧನ ಜೀವನ ವಿಶ್ವಾಂತರ ಜಾತಕ ಮತ್ತು ಸಿಂದಳ ಅವನದಾನ – ಇವುಗಳೂ ವಿಶೇಷ ಉಲ್ಲೇಖನಕ್ಕೆ ಅರ್ಹವಾಗಿವೆ. (ಜೆವಿ.ಕೆ.)

**ವಾಘೇಲರು:** ಅನಿಲವಾಡ ಚಾಳುಕ್ಯವಂಶದ ಒಂದು ಶಾಖೆ. ಇದರ ಮೂಲಪುರುಷ ಧವಳ. ಇವನ ಮಗ ಅರ್ಣೋರಾಜ. ಅವನಿಗೆ ಆನಾಕ ಎಂಬ ಹೆಸರೂ ಇತ್ತು. ಇವನು ಚಾಳುಕ್ಯ ಕುಮಾರಪಾಲನ ಸಾಮಂತನಾಗಿದ್ದ. ವ್ಯಾಘ್ರಪಲ್ಲಿ ಎಂಬ ಗ್ರಾಮವನ್ನು ದತ್ತಿಯಾಗಿ ಪಡೆದುದರಿಂದ ಆನಾಕನಿಗೂ ಅವನ ಉತ್ತರಾಧಿಕಾರಿಗಳಿಗೂ ವಾಘೇಲರು ಎಂಬ ಹೆಸರು ಬಂದಿತೆಂದು ಜೈನಗ್ರಂಥಗಳಿಂದ ತಿಳಿದುಬರುತ್ತದೆ. ಕುಮಾರಪಾಲನಿಂದ ಮೊದಲ್ಗೊಂಡು 2ನೆಯ ಭೀಮನವರೆಗೂ ಈತ ಅನಿಲವಾಡ ಚಾಳುಕ್ಯರ ಸಾಮಂತನಾಗಿದ್ದ. ಅಬಲನಾದ ಭೀಮ ವೈರಿಗಳನ್ನು ನಿಗ್ರಹಿಸಲಾಗದೆ ಹೋದಾಗ, ಆನಾಕ ಅವನ ಪಕ್ಷವಹಿಸಿ ಶತ್ರುಗಳನ್ನೆಲ್ಲ ಸಂಹರಿಸಿದ. ಆತ ಮೇದಪಾಟ, ಚಂದ್ರಾವತಿಪುರ ಮೊದಲಾದ ದೇಶಗಳ ಅರಸರುಗಳನ್ನೂ ವಧಿಸಿದನೆಂದು ಸುಕೃತ ಕೀರ್ತಿ ಕಲ್ಲೋಲಿನಿ ಎಂಬ ಗ್ರಂಥದಿಂದ ತಿಳಿಯುತ್ತದೆ. ಭೀಮನ ಸ್ಥಾನವನ್ನು ಭದ್ರಪಡಿಸುವ ಕಾಲದಲ್ಲೇ ಆನಾಕ ಮೃತನಾದ. ಆನಾಕನ ಮಗ ಲವಣಪ್ರಸಾದ; ಇವನ ಮಗ ವೀರಧವಳ. 2ನೆಯ ಭೀಮ ಪಟ್ಟಕ್ಕೆ ಬರುವವರೆಗೆ ಲವಣಪ್ರಸಾದನೂ ವೀರಧವಳನೂ ಸಾಮಂತರಾಗಿದ್ದರು. ಇವರಿಬ್ಬರ ನಿಷ್ಕಳಂಕ ಸ್ವಾಮಿನಿಷ್ಠೆಯಿಂದ ಸುಪ್ರೀತನಾದ ಭೀಮ ಇವರನ್ನು ಮಹಾಮಂಡಲೇಶ್ವರ ಪದವಿಗೇರಿಸಿದ. ಭೀಮನ ಪಟ್ಟವನ್ನು ಜಯಸಿಂಹ ನೆಂಬಾತ ಕಸಿದುಕೊಂಡಾಗ ಭೀಮನ ಪರಿಸ್ಥಿತಿ ಶೋಚನೀಯವಾಯಿತು. ಯಾದವರಾಜ ಭಿಲ್ಲಮನೂ ಅವನ ಮಗ ಜೈತುಗಿಯೂ ಪರಮಾರ ಸುಭಟವರ್ಮನೂ ಭೀಮನ ರಾಜ್ಯವನ್ನು ಅನೇಕ ಸಲ ಆಕ್ರಮಿಸಿದರು. ಭೀಮನ ಸಾಮಂತರೂ ಇವನನ್ನು ಕಿತ್ತೆಸೆಯಲು ಹವಣಿಸಿದರು. ಆಗ ಭೀಮ ಸ್ವಾಮಿನಿಷ್ಠ ಲವಣಪ್ರಸಾದನ ನೆರವನ್ನು ಬಯಸಿ, ಇವನನ್ನು ಸರ್ವೇಶ್ವರನಾಗಿ, ಎಂದರೆ ಉಪರಾಜಪ್ರತಿನಿಧಿಯಾಗಿ ನಿಯಮಿಸಿ ಗೂರ್ಜರ ರಾಜ್ಯವನ್ನು ಉಳಿಸಿಕೊಂಡ. ಭೀಮ ಹೆಸರಿಗೆ ಮಾತ್ರ ಅರಸನಾಗಿ ಉಳಿದುಕೊಂಡ. ಗುಜರಾತ್ ರಾಜ್ಯಕ್ಕೆ ನಿಜವಾಗಿ ಅರಸರಾಗಿದ್ದವರು ತಂದೆ ಮಕ್ಕಳಾದ–ಲವಣಪ್ರಸಾದ ಮತ್ತು ವೀರಧವಳ. ಇವರು ತಮ್ಮೊಡೆಯನ ವಿಶ್ವಾಸಕ್ಕೆ ದ್ರೋಹ ಬಗೆಯದೆ, ಗುಜರಾತ್ ಸಿಂಹಾಸನಕ್ಕೆ ವಿಧೇಯರಾಗಿಯೇ ಉಳಿದರು. ಲವಣಪ್ರಸಾದ ವೀರಧವಳನ ಶೌರ್ಯಪರಾಕ್ರಮದಿಂದಲೂ ಲವಣಪ್ರಸಾದನ ರಾಜನಿಷ್ಠೆಯಿಂದಲೂ ಮಂತ್ರಿ ವಸ್ತುಪಾಲನ ರಾಜನೈಪುಣ್ಯದಿಂದಲೂ ಗುಜರಾತ್ ಸಕಲ ಸಂಕಟಗಳನ್ನೂ ನಿವಾರಿಸಿಕೊಂಡಿತು. ವಸ್ತುಪಾಲನೂ ಅವನ ಸಹೋದರ ತೇಜಪಾಲನೂ ಹಿಂದೆ ಭೀಮನ ಸೇವೆಯಲ್ಲಿದ್ದರು; 1219ರಲ್ಲಿ ಲವಣಪ್ರಸಾದನ ಮಂತ್ರಿಗಳಾದರು.

ಭೀಮನ ಉಚ್ಚಾಟನೆಗೆ ಹವಣಿಸುತ್ತಿದ್ದ ಹಲವಾರು ಸಾಮಂತರೊಡನೆ ಲವಣಪ್ರಸಾದನೂ ವೀರಧವಳನೂ ಸಂಘರ್ಷಕ್ಕೆ ಬಂದಿದ್ದರು. ಆ ವೈರಿಗಳೊಡನೆ ವೀರಧವಳನ ಮಾವನೂ ಸೇರಿಕೊಂಡಿದ್ದ. ಅಳಿಯನಿಗೂ ಮಾವನಿಗೂ ಘನಘೋರ ಸಂಗ್ರಾಮ ನಡೆಯಿತು. ಪಂಚಗ್ರಾಮ ಯುದ್ಧವೆಂದು ಹೆಸರಾದ ಈ ಕಾಳಗದಲ್ಲಿ ವೀರಧವಳ ಗಾಯಗೊಂಡ. ಲವಣಪ್ರಸಾದನೂ ವೀರಧವಳನೂ ಮಂತ್ರಿ ವಸ್ತುಪಾಲನೊಡನೆ ವರ್ಧಮಾನಪುರ ಮತ್ತು ಗೋಹಿಲವತಿ ರಾಜರನ್ನು ಸದೆಬಡಿದರು. ಅಲ್ಲಿಂದ ವಾಮನಸ್ಥಲಿಗೆ ಮುನ್ನಡೆದು, ಅಲ್ಲಿ ವೀರಧವಳನ ಭಾವಂದಿರಾದ ಸಂಗನನ್ನೂ ಚಾಮುಂಡನನ್ನೂ ಸಂಧಿಸಿ, ಅವರನ್ನು ಕೊಂದು, ಅಪಾರ ಧನಕನಕಾದಿ ಸಂಪತ್ತಿನೊಡನೆ ಮರಳಿದರು. ವೀರಧವಳನಿಗೆ ಭದ್ರೇಶ್ವರದ ಪ್ರತಿಹಾರ ಭೀಮಸೇನನೊಡನೆ ಯುದ್ಧ ಸಂಭವಿಸಿ ಭೀಮಸೇನ ಸೋತು ಪಲಾಯನಮಾಡಿದ. ಈ ಯುದ್ಧಗಳು ಸು.1221ರಲ್ಲಿ ನಡೆದವು. ಈ ನಡುವೆ ವೀರಧವಳ ಸ್ತಂಭವನ್ನು (ಕ್ಯಾಂಬೆ) ವಶಪಡಿಸಿಕೊಂಡು ಅಲ್ಲಿಗೆ ಮಂತ್ರಿ ವಸ್ತುಪಾಲನನ್ನು ಮಾಂಡಳಿಕನಾಗಿ ನಿಯಮಿಸಿದ.

ವಾಘೇಲರಿಗೆ ಮಾರ್ವಾರ ರಾಜರೊಡನೆಯೂ ಯುದ್ಧಪ್ರಾಪ್ತಿಯಾಗಿತ್ತು. ಲವಣಪ್ರಸಾದ ಅವರೊಡನೆ ಸಂಧಿಮಾಡಿಕೊಂಡ. ಯಾದವರೂ ಮಾರ್ವಾರರಾಜರೂ ಲವಣಪ್ರಸಾದ–ವೀರಧವಳರೊಡನೆ ಯುದ್ಧನಿರತರಾಗಿದ್ದಾಗ, ಚಾಹಮಾನ ಶಂಖನು ಸ್ತಂಭವನ್ನು ಆಕ್ರಮಿಸಿ ವಸ್ತುಪಾಲನೊಡನೆ ಭೀಕರವಾಗಿ ಕಾದಾಡಿ ಮೃತನಾದ. ಲವಣಪ್ರಸಾದನೂ ವೀರಧವಳನೂ ಮಾರ್ವಾರಾಜರನ್ನು ಮರ್ದಿಸುತ್ತಿದ್ದ ಕಾಲಕ್ಕೆ ಸೇವುಣ ಸಿಂಘಣ ಗುಜರಾತ್ ಮೇಲೆ ದಂಡೆತ್ತಿ ಬಂದ. ವೀರಧವಳ ಮಹಮ್ಮದೀಯರೊಡನೆ ಯುದ್ಧದಲ್ಲಿದ್ದಾಗ ಸಿಂಹಣ ತಪತೀನದಿಯವರೆಗೂ ವಿಜೃಂಭಿಸಿಕೊಂಡು ಬಂದು ವಾಘೇಲರ ಪತನಕ್ಕೆ ಹವಣಿಸಿದ. ಮ್ಲೇಚ್ಛರ ಆಕ್ರಮಣಕಾಲದಲ್ಲಿ ಹಿಂದು ರಾಜರೆಲ್ಲರೂ ಒಗ್ಗಟ್ಟಾಗಿ ವೀರಧವಳನ ಬೆಂಬಲಕ್ಕೆ ನಿಂತಿದ್ದರೂ ಮೇದಪಾಟ ಜಯತಲ (ಜೈತ್ರಸಿಂಹ 1213–52) ಮಾತ್ರ ಗರ್ವದಿಂದ ಬೀಗಿ ತಟಸ್ಥನಾಗಿ ನಿಂತ. ಮಹಮ್ಮದೀಯರು ಅವನ ರಾಜ್ಯವನ್ನು ಸೂರೆಮಾಡಿದರು. ಆದರೆ ಆ ಕಾಲಕ್ಕೆ ವೀರಧವಳನೂ ದಂಡೆತ್ತಿ ಬಂದುದರಿಂದ ಮಹಮ್ಮದೀಯರು ಪಲಾಯನಮಾಡಿದರು. ವೀರಧವಳ 1229ರಲ್ಲಿ ಅಮೀರ್–ಇ–ಸಿಕಾರ ಎಂಬವನೊಡನೆಯೂ ಕಾದಾಡಿದ. 1232ರಲ್ಲಿ ಲವಣಪ್ರಸಾದ ವೀರಧವಳನಿಗೆ ಸಿಂಹಾಸನವನ್ನು ಬಿಟ್ಟುಕೊಟ್ಟ. ವಾಘೇಲರ ಮಂತ್ರಿಗಳಾದ ವಸ್ತುಪಾಲ–ತೇಜಪಾಲರು ಪ್ರಾಗ್ವಾಟ ವಂಶಜರು. ಗೂರ್ಜರ ರಾಜ್ಯ ನಿರ್ಮಾಣಕ್ಕೆ ಇವರೇ ಶಿಲ್ಪಿಗಳು. ಇವರು ಮಂತ್ರಿಗಳಾಗಿ ನಿಯುಕ್ತರಾದಾಗ ಗುಜರಾತಿನ ಸ್ಥಿತಿ ಶೋಚನೀಯವಾಗಿತ್ತು. ರಾಜ್ಯದ ಒಳಗೂ ಹೊರಗೂ ವೈರಿಗಳಿದ್ದರು. ವಿದೇಶಿಯರ ಗೃಧ್ರದೃಷ್ಟಿಗೂ ಗುಜರಾತ್ ಗುರಿಯಾಗಿತ್ತು. ಆದರೆ ಇವರಿಬ್ಬರು ಮಂತ್ರಿ ಸಹೋದರರು ರಾಜ್ಯವನ್ನು ಅಪಾಯದಿಂದ ಪಾರುಮಾಡಿ ಸುಭದ್ರ ಪ್ರಭುತ್ವವನ್ನು ನೆಲೆಗೊಳಿಸಿದರು. ವೀರಧವಳ ಸು. 1238ರಲ್ಲಿ ಮೃತನಾದ. ಇವನಿಗೆ ಪ್ರತಾಪಮಲ್ಲ, ವೀಸಲದೇವ ಎಂಬ ಇಬ್ಬರು ಮಕ್ಕಳಿದ್ದರು. ವೀರಧವಳ ಮೃತನಾದಾಗ ಉತ್ತರಾಧಿಕಾರಕ್ಕಾಗಿ ಅಣ್ಣ ಪ್ರತಾಪಮಲ್ಲ ತಮ್ಮ ವೀಸಲದೇವನಿಗೂ ವಿವಾದವುಂಟಾಯಿತು. 1243ರಲ್ಲಿ ಈ ಅಂತಃ ಕಲಹಗಳೆಲ್ಲ ಕೊನೆಗೊಂಡು ವೀಸಲ ಮಹಾಮಂಡಲೇಶ್ವರನಾದ. ಮಾಳವರಾಜ, ಸೇವುಣರಾಜರಾದ ಸಿಂಘಣ ಮತ್ತು ಕೃಷ್ಣ, ಪರಮಾರ ಜೈತುಗಿ ಮತ್ತು ಮೇವಾಡ ಹಾಗೂ ಕರ್ನಾಟಕ ರಾಜರು ಚಾಳುಕ್ಯರಾಜ್ಯವನ್ನು ಆಕ್ರಮಿಸಿದಾಗ, ಮಹಾಮಂಡಲೇಶ್ವರ ವೀಸಲದೇವ ಅವರೆಲ್ಲರನ್ನೂ ಹೊಡೆದಟ್ಟಿ ಸಮರ್ಥ ಯೋಧನೆಂದು ಪ್ರಖ್ಯಾತನಾದ. 1246ರಲ್ಲಿ ವೀಸಲ ಮಹಾರಾಜಾಧಿರಾಜ ಪದವಿಗೇರಿದ.

ವೀಸಲ ಯುದ್ಧವೀರನಷ್ಟೇ ಅಲ್ಲ, ಸಾಹಿತ್ಯ ಪೋಷಕನಾಗಿಯೂ ಪ್ರಸಿದ್ಧನಾಗಿದ್ದಾನೆ. ಸೋಮೇಶ್ವರ, ಅರಿಸಿಂಹ, ಅಮರಚಂದ್ರಸೂರಿ ಮೊದಲಾದ ಅನೇಕ ಕವಿಗಳು ಇವನ ಆಸ್ಥಾನದಲ್ಲಿದ್ದವರು. ವೀಸಲದೇವನ ರಾಣಿ ನಾಗಲದೇವಿ. ಆಕೆ ವಿದಗ್ಧೆಯೆಂದೂ ಸಂಗೀತಕಲಾಪ್ರವೀಣೆಯೆಂದೂ ಸ್ತುತ್ಯಳಾಗಿದ್ದಾಳೆ. ವೀಸಲದೇವ 1261ರಲ್ಲಿ ನಿಧನನಾದ. ಅಂದಿನಿಂದ ವಾಘೇಲರಾಜ್ಯ ಕಳೆಗುಂದಿತು. ವೀಸಲನ ಉತ್ತರಾಧಿಕಾರಿಯಾಗಿ ಪ್ರತಾಪಮಲ್ಲನ ಪುತ್ರನಾದ ಅರ್ಜುನದೇವ ಪಟ್ಟಕ್ಕೆ ಬಂದು, 1274ರ ವರೆಗೆ ಪಟ್ಟಾರೂಢನಾಗಿದ್ದ. ಇವನಿಗೆ ರಾಮದೇವ, ಸಾರಂಗದೇವ ಎಂಬ ಮಕ್ಕಳಿದ್ದರು. ಇವರಿಬ್ಬರೂ ರಾಜ್ಯಭಾರದಲ್ಲಿ ತಂದೆಗೆ ನೆರವಾಗಿದ್ದರು. ರಾಮದೇವ ತಂದೆಗಿಂತ ಮೊದಲೇ ಮೃತನಾದನೆಂದು ತೋರುತ್ತದೆ. ಅರ್ಜುನದೇವನ ತರುವಾಯ 1274ರಲ್ಲಿ ಸಾರಂಗದೇವ ಉತ್ತರಾಧಿಕಾರಿಯಾಗಿ ಬಂದ. ಸಾರಂಗದೇವನಿಗೆ ಮಾಳವಧರಾಧೂಮಕೇತು, ಗುರ್ಜರ ಧರಣೀ ಸಮುದ್ಧರಣ, ಸಪ್ತಮ ಚಕ್ರವರ್ತಿ, ಭುಜಬಲಮಲ್ಲ ಮಹಾರಾಜ ಎಂಬ ಬಿರುದುಗಳಿದ್ದವು. ಈತ ವಾಘೇಲರ ಗತವೈಭವವನ್ನು ಪುನಃ ಸ್ಥಾಪಿಸಿದ. ಚಂದ್ರಾವತಿ ಪ್ರದೇಶವೂ ಇವನ ಪ್ರಭುತ್ವಕ್ಕೊಳಪಟ್ಟಿತ್ತು. ಇವನ ರಾಜ್ಯ ಪಶ್ಚಿಮದಲ್ಲಿ ಕಾಥೆವಾಡದಿಂದ ಪೂರ್ವದಲ್ಲಿ ಮಾಳವದವರೆಗೂ ವ್ಯಾಪಿಸಿತ್ತು. ಖೈರಾ, ಕಚ್ಛ, ಅನಿಹಿಲಪಾಟಕ ದೇಶಗಳೂ ಇವನ ರಾಜ್ಯಕ್ಕೆ ಸೇರಿದ್ದುವು. ಸು.1285ರಲ್ಲಿ ವಾಘೇಲ ರಾಜ್ಯವನ್ನು ಆಕ್ರಮಿಸಿದ ಮಹಮ್ಮದೀಯರನ್ನು ಇವನು ಗೂಹಿಲ ಸಮರಸಿಂಹನ ನೆರವಿನಿಂದ ಜಯಿಸಿದ. ಆದರೆ ಕೆಲಕಾಲದ ಅನಂತರ ಇವನಿಗೂ ಸಮರಸಿಂಹನಿಗೂ ವಿರಸವುಂಟಾಯಿತು. ಆಗ ಇವನು ಪರಮಾರ ಪ್ರತಾಪಸಿಂಹನನ್ನು ಕೂಡಿಕೊಂಡು, ಸಮರಸಿಂಹನನ್ನು ಎದುರಿಸಿದ. ಮಾಳವರಾಜ್ಯದ 2ನೆಯ ಅರ್ಜುನದೇವನನ್ನೂ ಸೋಲಿಸಿದ್ದ.

ಸೇವುಣರಾಜ ರಾಮಚಂದ್ರ ವಾಘೇಲರ ರಾಜ್ಯವನ್ನು ಆಕ್ರಮಿಸಿದಾಗ ಅವನನ್ನೂ ಹಿಂದಕ್ಕಟ್ಟಿದ. ಸಾರಂಗದೇವನ ತರುವಾಯ 1296ರಲ್ಲಿ ರಾಮದೇವನ ಮಗನೂ ವಾಘೇಲರ ಕೊನೆಯ ರಾಜನೂ ಆದ ಕರ್ಣದೇವ ಪಟ್ಟಕ್ಕೆ ಬಂದ. 1299ರಲ್ಲಿ ಅಲಾವುದ್ದೀನ್ ಖಿಲ್ಜಿಯ ದಳಪತಿಗಳಾದ ಉಲುಘ್‌ಖಾನನೂ ನಜರತ್‌ಖಾನನೂ ಸಮಗ್ರ ಗೂರ್ಜರ ಪ್ರದೇಶವನ್ನು ಕರ್ಣದೇವನಿಂದ ಗೆದ್ದುಕೊಂಡರು. ಕರ್ಣ ಬಾಗ್ಲನಕ್ಕೆ ಪಲಾಯನಮಾಡಿ ಅಲ್ಲಿ ಕೆಲಕಾಲ ಅರಸನಾಗಿದ್ದ. ಆದರೆ ಸು. 1306ರಲ್ಲಿ ಗುಜರಾತಿನ ಅಧಿಪತಿಯಾದ ಅಲಾಫ್‌ಖಾನನು ಬಾಗ್ಲಾನವನ್ನು ಆಕ್ರಮಿಸಿದ. ಕರ್ಣನು ಅಲಾಫಖಾನನೊಡನೆ ಪ್ರಾಣದ ಹಂಗುತೊರೆದು ಕಾದಾಡಿದರೂ ನಿಷ್ಫಲವಾಗಿ ಕೊನೆಗೆ ದೇವಗಿರಿಗೆ ಪಲಾಯನ ಮಾಡಿದ. ಇಂಥ ದುರ್ಘಟನೆಗಳಿಂದ ಜರ್ಜರಿತನಾದ ಕರ್ಣ ಅನಾಮಿಕನಂತೆ ಎಲ್ಲಿಯೋ ನಿಧನಹೊಂದಿದ. (ಬಿ.ಆರ್.ಜ.)

**ವಾತ್ಸ್ಯಾಯನ:** ಸು.400. ಪ್ರಪಂಚದ ಮೊದಲನೆಯ ಕಾಮಶಾಸ್ತ್ರ ಗ್ರಂಥ ರಚಿಸಿದವ. ಮಲ್ಲನಾಗ ವಾತ್ಸ್ಯಾಯನ ಎಂದೂ ಇವನನ್ನು ಕರೆಯಲಾಗಿದೆ. ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಕಾಮ ನಾಲ್ಕು ಪುರುಷಾರ್ಥಗಳಲ್ಲೊಂದು (ಧರ್ಮ, ಅರ್ಥ ಕಾಮ ಹಾಗೂ ಮೋಕ್ಷ). ಅರ್ಥವನ್ನು ಕುರಿತಂತೆ ಕೌಟಿಲ್ಯ ಗ್ರಂಥ ರಚಿಸಿದಂತೆ ಕಾಮವನ್ನು ಕುರಿತು ಈತ ಶಾಸ್ತ್ರಗ್ರಂಥ ರಚಿಸಿದ್ದಾನೆಂದು ಹೇಳಲಾಗಿದೆ. ಈತನ ಕಾಲದ ಬಗ್ಗೆ, ಇತರ ವಿವರಗಳ ಬಗ್ಗೆ ಖಚಿತ ಮಾಹಿತಿಗಳು ಲಭ್ಯವಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರದ ಪ್ರಭಾವ ಇವನ ಕೃತಿಯಲ್ಲಿ ತೋರಿರುವುದರಿಂದ ಕೌಟಿಲ್ಯನ ತರುವಾಯದವನೆಂದೂ ಕಾಳಿದಾಸ, ಶ್ರೀಹರ್ಷ, ಮಯೂರ, ದಂಡಿ, ಮಾಘ, ಭವಭೂತಿ ಮೊದಲಾದವರು ಈತನ ಪ್ರಭಾವಕ್ಕೊಳಗಾಗಿರುವುದರಿಂದ ಕಾಳಿದಾಸನಿಗಿಂತ ಹಿಂದಿನವನಿರಬೇಕೆಂದೂ ತರ್ಕಿಸಲಾಗಿದೆ. ವರಾಹ ಮಿಹಿರನ ಬೃಹತ್ ಸಂಹಿತೆ ಗ್ರಂಥದಲ್ಲಿ (6ನೆಯ ಶತಮಾನ) ಹಲವಾರು ಕಾಮಶಾಸ್ತ್ರ ಸಂಗತಿಗಳನ್ನು ಉಲ್ಲೇಖಿಸಲಾಗಿದೆ. ಈ ಕಾರಣಗಳಿಂದ ಈತ ಸು.4ನೆಯ ಶತಮಾನದವನಿರಬೇಕೆಂದು ಹೇಳಲಾಗಿದೆ.

ಈತನ ಕಾಮಸೂತ್ರದಲ್ಲಿ ಆನಂದಾನುಭವವೇ ಮೋಕ್ಷ ಸಾಧನವಾಗಿದ್ದು, ಇದಕ್ಕೆ ದೈಹಿಕಾನುಭೂತಿಯ ಅನುಭವಬೇಕೆಂದು ಪ್ರತಿಪಾದಿಸಿದ್ದಾನೆ. ಯುವ ವಧುವರರ ವೈವಾಹಿಕ ಬದುಕು ಸಫಲವಾಗಬೇಕೆಂಬ ಸಾಮಾಜಿಕ ಕಳಕಳಿ ಹಾಗೂ ಪ್ರಜ್ಞೆಗಳಿಂದ ಕಾಮಕಲೆಯ ಶಾಸ್ತ್ರೀಯ ಶಿಕ್ಷಣ ಅವರಿಗೆ ಅಗತ್ಯವೆಂದು ಈತ ಬಹು ಹಿಂದೆಯೇ ಪ್ರತಿಪಾದಿಸಿದ. ಸ್ತ್ರೀ ಪುರುಷರ ಮನೋ ದೈಹಿಕ ಸಮಸ್ಯೆಗಳನ್ನು ಮೊದಲು ವಿಶ್ಲೇಷಿಸಿದವನೂ ಈತನೇ. ಈತನ ಪ್ರಭಾವ ಹಲವಾರು ಸಂಸ್ಕೃತ ಕವಿಗಳ ಮೇಲಾಯಿತು. ಭವಭೂತಿ ತನ್ನ ಮಾಲತೀಮಾಧವ ನಾಟಕಕ್ಕೆ ವಾತ್ಸ್ಯಾಯನನ ಕಾಮಸೂತ್ರ ಪ್ರಭಾವ ಬೀರಿದೆ ಎಂದು ಹೇಳಿಕೊಂಡಿದ್ದಾನೆ. ಲೈಂಗಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಾಮಾಜಿಕ ಜವಾಬ್ದಾರಿಗೆ ಮೇಲ್ಪಂಕ್ತಿ ಹಾಕಿಕೊಟ್ಟವನೆಂಬ ಕಾರಣಕ್ಕೆ ಈತ ಮಹತ್ತ್ವ ಪಡೆದಿದ್ದಾನೆ. ಈ ಕೃತಿ ಪ್ರಪಂಚದ ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ. (ಜಿ.ಎನ್.ಎಸ್‌ಆರ್‌ಐ.)

**ವಾಷಿಂಗ್‌ಟನ್, ಜಾರ್ಜ್:** 1732–99. ಅಮೆರಿಕ ಸಂಯುಕ್ತ ಸಂಸ್ಥಾನಗಳ ಪ್ರಥಮ ಅಧ್ಯಕ್ಷ (1789–97) ಹಾಗೂ ಅಮೆರಿಕದ ರಾಷ್ಟ್ರಪಿತ. ಇವನು 1732 ಫೆಬ್ರವರಿ 22ರಂದು ವರ್ಜೀನಿಯದ ಬ್ರಿಜಸ್‌ಕ್ರೀಕ್‌ನಲ್ಲಿ ಜನಿಸಿದ. ತಂದೆ ಆಗಸ್ಟಿನ್ ವಾಷಿಂಗ್‌ಟನ್, ತಾಯಿ ಮೇರಿಬಾಲ್ ವಾಷಿಂಗ್‌ಟನ್. 4 ವರ್ಷದ ಬಾಲಕನಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ ಇವನು ತಾಯಿಯ ಪೋಷಣೆಯಲ್ಲಿ ಬೆಳೆದ. ಪ್ಲಾಂಟೇಷನ್ ಕಾರ್ಯಗಳು, ಬೇಟೆ, ಮೀನುಗಾರಿಕೆಯಲ್ಲಿ ಇವನಿಗೆ ಅಪಾರ ಆಸಕ್ತಿ ಇತ್ತು. ಬಡತನದ ಬೇಗೆಯಿಂದಾಗಿ ಇವನು ನಿಯತವಾಗಿ ಶಾಲೆಗೆ ಹೋಗಿ ಕಲಿಯಲಾಗಲಿಲ್ಲ. ಬಾಲ್ಯದಲ್ಲಿ ಇವನಿಗೆ ತಾಯಿಯೇ ಗುರುವಾಗಿದ್ದು ಆಕೆಯಿಂದಲೇ ನೈತಿಕ, ಧಾರ್ಮಿಕ ವಿಚಾರಗಳನ್ನು ಕಲಿತ. ಅನಂತರ ಭೂಮಾಪನ ವೃತ್ತಿಯಲ್ಲಿ ತರಬೇತಿ ಪಡೆದು ಭೂಮಾಪನಾಧಿಕಾರಿಯಾಗಿ ಕಾರ್ಯ ಆರಂಭಿಸಿದ (1749). ಅನಂತರ ತನ್ನ 21ನೆಯ ವಯಸ್ಸಿನಲ್ಲಿ ವರ್ಜೀನಿಯದ ಸೈನ್ಯ ಪ್ರವೇಶಿಸಿದ. 1755ರಲ್ಲಿ ನಡೆದ ಯುದ್ಧದಲ್ಲಿ ಫ್ರಾನ್ಸ್ ವಿರುದ್ಧ ಹೋರಾಡಿದ. ಅನಂತರ ವರ್ಜೀನಿಯ ಸೈನ್ಯದ ಮುಖಂಡನಾಗಿ ಆಯ್ಕೆಗೊಂಡ (1755–58). ಇವನು ಮಾರ್ಥಾಡಾಂಡ್ರಿಜ್ ಕಸ್ಟಿಸ್ ಎಂಬ ಶ್ರೀಮಂತ ವಿಧವೆಯನ್ನು (1759 ಜನವರಿ 6) ವಿವಾಹವಾದ. ಹಲವು ವರ್ಷಗಳ ಕಾಲ ವರ್ಜೀನಿಯದ ಪ್ರಾಂತೀಯ ಸಭೆಯ ಸದಸ್ಯನಾಗಿಯೂ ಕಾರ್ಯನಿರ್ವಹಿಸಿದ.

ಅನಂತರ ಇವನು ಮೊದಲನೆಯ ಕಾಂಟಿನೆಂಟಲ್ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ನೇಮಕವಾದ (1774). ಅಮೆರಿಕದ ಸ್ವಾತಂತ್ರ್ಯ ಹೋರಾಟ ಆರಂಭವಾಗುತ್ತಿದ್ದಂತೆ ಇವನು ಸಂಯುಕ್ತ ಸೈನ್ಯದ ಮುಖ್ಯ ದಂಡನಾಯಕನಾದ. ಸ್ವಾತಂತ್ರ್ಯ ಯುದ್ಧದ ನೇತೃತ್ವ ವಹಿಸಿದ. ಅನೇಕ ಸಮಸ್ಯೆಗಳ ನಡುವೆಯೂ ಅಮೆರಿಕ ಸೈನ್ಯವನ್ನು ಸಂಘಟಿಸಿ, ಬಲಿಷ್ಠ ಹಾಗೂ ನುರಿತ ಇಂಗ್ಲೆಂಡ್ ಸೈನ್ಯದೊಂದಿಗೆ ಹೋರಾಡಿ ಬ್ರಿಟಿಷರನ್ನು ಸೋಲಿಸಿ ಬೋಸ್ಟನ್‌ನಿಂದ ಕಾಲ್ತೆಗೆಯುವಂತೆ ಮಾಡಿದ. ಅನಂತರ 1776 ಜನವರಿ 4ರಂದು ಸ್ವಾತಂತ್ರ್ಯ ಘೋಷಿಸಲಾಯಿತು. ಈ ಮಧ್ಯೆ ಬ್ರಿಟಿಷರು ಸವನ್ನ, ಚಾರ್ಲ್ಸ್‌ಟೌನ್ ಮತ್ತು ವರ್ಜೀನಿಯದ ಯಾರ್ಕ್‌ಟೌನ್‌ಗಳನ್ನು ಗೆದ್ದರು. ನ್ಯೂಯಾರ್ಕ್‌ನಿಂದ ಹೊರಟ ಬ್ರಿಟಿಷ್ ಸೇನೆ ದಕ್ಷಿಣಕ್ಕೆ ಮುಂದುವರಿಯಿತು. ಅಷ್ಟರಲ್ಲೇ ಫ್ರೆಂಚ್ ಸೈನ್ಯದ ಸಹಾಯ ದೊರಕಿದ್ದು ಅಮೆರಿಕನ್ನರಿಗೆ ವರವಾಯಿತು. ಚೆಸಪೀಕ್‌ನಲ್ಲಿ ಬೀಡುಬಿಟ್ಟ ಫ್ರೆಂಚ್ ನೌಕೆಗಳು ಇವರಿಗೆ ಸಹಕಾರ ನೀಡಿದುವು. ಫ್ರೆಂಚರ ಬೆಂಬಲದಿಂದ ಇವನು ಕಾರ್ನ್‌ವಾಲೀಸ್ ನೇತೃತ್ವದ ಬ್ರಿಟಿಷ್ ಸೈನ್ಯ ಸೋತು ಶರಣಾಗುವಂತೆ ಮಾಡಿದ (1781 ಸೆಪ್ಟಂಬರ್ 28). ಇಂಗ್ಲಿಷರ ಅಧೀನದಲ್ಲಿದ್ದ ಅಮೆರಿಕ ಸ್ವತಂತ್ರವಾಯಿತು.

ಹೊಸ ರಾಷ್ಟ್ರ ಉದಯದ ಸಂದರ್ಭದಲ್ಲಿ ನೂರಾರು ಸಮಸ್ಯೆಗಳನ್ನು ನಿವಾರಿಸಿ ಹೊಸ ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು. 1787 ಮೇ 25ರಂದು ಫಿಲಡೆಲ್ಫಿಯದಲ್ಲಿ ರಾಷ್ಟ್ರೀಯ ಅಧಿವೇಶನ ಏರ್ಪಟ್ಟು, ಸಂವಿಧಾನದ ಮರು ಪರಿಶೀಲನ ಸಮಿತಿಯ ಅಧ್ಯಕ್ಷನಾಗಿ ಆಯ್ಕೆಗೊಂಡ. ಇವನ ನೇತೃತ್ವದಲ್ಲಿ ರಚಿಸಿದ ಹೊಸ ಸಂವಿಧಾನವನ್ನು ಅಮೆರಿಕದ ಎಲ್ಲ ರಾಜ್ಯಗಳು ಅನುಸರಿಸುವಂತೆ ಒತ್ತಾಯಿಸಿದ. ಇವನು ಅಮೆರಿಕ ಸಂಯುಕ್ತ ಸಂಸ್ಥಾನದ ಮೊದಲ ಅಧ್ಯಕ್ಷನಾಗಿ ಆಯ್ಕೆಗೊಂಡು, ಎರಡು ಅವಧಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಬೃಹತ್ ರಾಷ್ಟ್ರವಾಗಿ ಬೆಳೆಯಲು ಭದ್ರ ಬುನಾದಿ ಹಾಕಿದ (1789–97). ಇವನು ಅಧಿಕಾರಕ್ಕೆ ಬಂದ ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನ ಒಂದು ಸ್ಪಷ್ಟ ರೂಪ ಪಡೆದುಕೊಂಡಿತು. ಇವನು ಅಧ್ಯಕ್ಷನಾದ ಅವಧಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಕೇವಲ 11 ರಾಜ್ಯಗಳಿಂದ ಕೂಡಿತ್ತು. ಅನಂತರ ಇವನು 5 ಹೊಸ ರಾಜ್ಯಗಳನ್ನು ರಚಿಸಿ ದೇಶವನ್ನು ವಿಸ್ತರಿಸಿದ. ಇವನ ಕಾಲದಲ್ಲಿ ಅಮೆರಿಕದ ರಾಷ್ಟ್ರಧ್ವಜವನ್ನು ಅಂಗೀಕರಿಸಲಾ ಯಿತು (1795). ಇವನ ಕಾಲದ ಪ್ರಮುಖ ಘಟನೆಗಳಿವು: 1789ರಲ್ಲಿ ನಡೆದ ಫ್ರೆಂಚ್ ಕ್ರಾಂತಿ, 1790ರಲ್ಲಿ ನಡೆದ ದೇಶದ ಪ್ರಥಮ ಜನಗಣತಿ (ಜನಸಂಖ್ಯೆ 39,29,214), ಕೈಗಾರಿಕಾ ಕ್ರಾಂತಿ (1790), ದಿ ಬಿಲ್ ಆಫ್ ರೈಟ್ಸ್ ಜಾರಿ (1791), ದ ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್ ಸ್ಥಾಪನೆ (1792), ಎಡ್ವರ್ಡ್‌ಜನ್ನರ್ ಎಂಬ ವಿಜ್ಞಾನಿ ಸಿಡುಬುರೋಗಕ್ಕೆ ಲಸಿಕೆ ಕಂಡುಹಿಡಿದದ್ದು (1796)–ಹೀಗೆ ಅನೇಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಯಿತು. 1797ರಲ್ಲಿ ಮೂರನೆಯ ಬಾರಿ ಮತ್ತೆ ಅಧ್ಯಕ್ಷನಾಗಿ ಮುಂದುವರಿಯಬೇಕೆಂದು ಒತ್ತಾಯ ಬಂದರೂ ಇವನು ನಿರಾಕರಿಸಿದ. ಇವನು ಅನುಸರಿಸಿದ ಈ ನೀತಿ ಮುಂದಿನ ಅಧ್ಯಕ್ಷರಿಗೆ ಮಾದರಿಯಾಯಿತು. ಅಧ್ಯಕ್ಷ ಪದವಿಯಿಂದ ನಿವೃತ್ತಿ ಹೊಂದಿದ ಅನಂತರ ಇವನು ತನಗೆ ಪ್ರಿಯವಾದ ಪ್ಲಾಂಟರ್ ವೃತ್ತಿಗೆ ಹಿಂತಿರುಗಿದ. ವರ್ಜೀನಿಯದ ಮೌಂಟ್ ವರ್ನನ್‌ನಲ್ಲಿ 1799 ಡಿಸೆಂಬರ್ 14ರಂದು ನಿಧನಹೊಂದಿದ. (ಬಿ.ಪಿ.ಐ.)



**ವಾಸುದೇವ ಶರಣ ಅಗ್ರವಾಲ:** 1904–66. ಹಿಂದಿಯ ಪ್ರಸಿದ್ಧ ಲೇಖಕರು ಹಾಗೂ ಪುರಾತತ್ತ್ವ ಸಂಶೋಧಕರು. ಉತ್ತರಪ್ರದೇಶದ ಮೀರತ್ ಜಿಲ್ಲೆಯ ಗಾಜಿಯಾಬಾದ್ ತಹಸೀಲಿನ ಖೇಡಾ ಎಂಬ ಹಳ್ಳಿಯಲ್ಲಿ 1904ರಲ್ಲಿ ಜನಿಸಿದರು. ತಂದೆ ಗೋಪಿನಾಥ್, ತಾಯಿ ಸುಖದೇ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಖೇಡಾದ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. 1916ರಲ್ಲಿ ಪಂಡಿತ ಜಗನ್ನಾಥರ ಪರಿಚಯವಾಗಿ ಅವರಲ್ಲಿ ಸಂಸ್ಕೃತ, ಅದರಲ್ಲೂ ವಿಶೇಷವಾಗಿ ಪಾಣಿನಿಯ ಅಷ್ಟಾಧ್ಯಾಯಿಯನ್ನು ಅಭ್ಯಸಿಸಿದರು. ಇವರು ಕಾಶಿ ಮತ್ತು ಲಖನೌದಲ್ಲಿ ಉಚ್ಚ ಶಿಕ್ಷಣವನ್ನು ಪಡೆದರು. ಕಾಶೀ ಹಿಂದು ವಿಶ್ವವಿದ್ಯಾಲಯದ ಬಿ.ಎ. ಪದವಿಯನ್ನು (1927), ಲಖನೌದಲ್ಲಿ ಎಂ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದರು (1929). ಅನಂತರ ಎಲ್‌ಎಲ್.ಬಿ ಪದವಿ ಪಡೆದರು.

ಇವರು ಪಾಣಿನಿ ಹ್ಯಾಸ್ ಎ ಸೋರ್ಸ್ ಆಫ್ ಇಂಡಿಯನ್ ಹಿಸ್ಟರಿ ಎಂಬ ಸಂಶೋಧನ ಪ್ರಬಂಧವನ್ನು ರಾಧಾಕುಮುದ ಮುಖರ್ಜಿಯವರ ಮಾರ್ಗದರ್ಶನದಲ್ಲಿ ಬರೆದರು (1941). ಈ ಪ್ರಬಂಧ ಇಂಗ್ಲಿಷಿನಲ್ಲಿ ಇಂಡಿಯ ನೋನ್ ಟು ಪಾಣಿನಿ ಎಂಬ ಹೆಸರಿನಲ್ಲಿ ಅಚ್ಚಾಗಿದೆ. ಈ ಪ್ರಬಂಧದ ಪೂರ್ವಭಾಗಕ್ಕೆ (1941) ಪಿಎಚ್.ಡಿ. ಪದವಿಯೂ ಇದರ ಉತ್ತರಭಾಗಕ್ಕೆ (1946) ಡಿ.ಲಿಟ್. ಪದವಿಯೂ ಲಭಿಸಿವೆ.

ಇವರು ಮಥುರದ ಪುರಾತತ್ತ್ವ ಸಂಗ್ರಹಾಲಯದ ಅಧ್ಯಕ್ಷರೂ (1931–39) ಲಖನೌ ರಾಜ್ಯ ಸಂಗ್ರಹಾಲಯದ ಅಧ್ಯಕ್ಷರೂ(1940–46) ದೆಹಲಿಯ ಸೆಂಟ್ರಲ್ ಏಷ್ಯನ್ ಆಕ್ವಿವಿಟೀಸ್ ಮ್ಯೂಸಿಯಮ್‌ನ ಸಹಾಯಕ ಅಧ್ಯಕ್ಷರೂ(1946) ಅನಂತರ ಅಧ್ಯಕ್ಷರೂ ಆಗಿ(1947) ಕಾರ್ಯನಿರ್ವಹಿಸಿದರು. ಅನಂತರ ಇವರು ಕಾಶೀ ಹಿಂದು ವಿಶ್ವವಿದ್ಯಾಲಯದ ಅಧೀನದಲ್ಲಿರುವ ಭಾರತಿ ಮಹಾವಿದ್ಯಾಲಯದಲ್ಲಿ ಸ್ಥಾಪತ್ಯ ವಿಭಾಗದ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿ ಕಾರ್ಯನಿರ್ವಹಿಸಿದರು (1951–66). ಪಾಣಿನಿ ಕಾಲೀನ್ ಭಾರತ ವರ್ಷ ಇವರ ಮೇರು ಕೃತಿ. ಈ ಕೃತಿಯಲ್ಲಿ ಪಾಣಿನೀಕೃತ ಅಷ್ಟಾಧ್ಯಾಯಿಯ ಸಾಂಸ್ಕೃತಿಕ ಅಧ್ಯಯನ ಮಾಡಲಾಗಿದೆ. ಪಾಣಿನಿಕಾಲೀನ ಭೂಗೋಳ, ಸಾಮಾಜಿಕ ಜೀವನ, ಆರ್ಥಿಕಸ್ಥಿತಿ, ಶಿಕ್ಷಣ

ಮತ್ತು ಸಾಹಿತ್ಯ, ಧರ್ಮ ಮತ್ತು ದರ್ಶನ, ರಾಜ್ಯತಂತ್ರ ಮತ್ತು ಶಾಸನಗಳನ್ನು ಕುರಿತ ವಿಸ್ತೃತ ವಿವೇಚನೆಯಿದೆ. ಹರ್ಷಚರಿತ್–ಏಕ್ ಸಾಂಸ್ಕೃತಿಕ ಅಧ್ಯಯನ್ ಇವರ ಮತ್ತೊಂದು ಕೃತಿ. ಇದು ಡೀಡ್ಸ್ ಆಫ್ ಹರ್ಷ ಎಂಬ ಶೀರ್ಷಿಕೆಯಲ್ಲಿ ಇಂಗ್ಲಿಷಿಗೆ ಅನುವಾದವಾಗಿದೆ. ಕಾದಂಬರಿ–ಏಕ್ ಸಾಂಸ್ಕೃತಿಕ್ ಅಧ್ಯಯನ್ ಇವರ ಇನ್ನೊಂದು ಗ್ರಂಥ. ಭಾರತ–ಸಾವಿತ್ರೀ ಮೂರು ಖಂಡಗಳಲ್ಲಿ ಅಚ್ಚಾದ ಒಂದು ಬೃಹತ್ ಕೃತಿ. ಮಹಾಭಾರತದ ಸಾಂಸ್ಕೃತಿಕ ಅಧ್ಯಯನಕ್ಕೆ ಈ ಕೃತಿ ಉಪಯುಕ್ತವಾದುದ್ದು. ಉರು–ಜ್ಯೋತಿಯಲ್ಲಿ ವೈದಿಕ ಸಾಹಿತ್ಯವನ್ನು ಕುರಿತ ಚಿಂತನೆಯಿದೆ(1937). ಪದ್ಮಾವತ್‌ಮೂಲ್ ಔರ್ ಸಂಜೀವನೀ ವ್ಯಾಖ್ಯಾ ಇವರ ಒಂದು ಮಹತ್ತ್ವಪೂರ್ಣ ಕೃತಿ. ಉರು–ಜ್ಯೋತಿ (1937); ಪೃಥಿವೀ ಪುತ್ರ (1949); ಕಲಾ ಔರ್ ಸಂಸ್ಕೃತಿ (1952); ಕಲ್ಪವೃಕ್ಷ (1960); ಭಾರತ್ ಕೀ ಮೌಲಿಕ್ ಏಕತಾ (1954); ವೇದ–ವಿದ್ಯಾ (1959); ವೇದ–ರಶ್ಮಿ (1964) ಮತ್ತು ವಾಗ್ಧಾರಾ (1966)– ಇವು ಇವರ ನಿಬಂಧ ಸಂಕಲನಗಳು.

ಇವರ ಪದ್ಮಾವತ್–ಮೂಲ್ ಔರ್ ಸಂಜೀವನೀ ವ್ಯಾಖ್ಯಾ ಗ್ರಂಥವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಹಿಂದಿಯ ಶ್ರೇಷ್ಠ ಕೃತಿಯೆಂದು ಪುರಸ್ಕರಿಸಿದೆ (1956). ಇವರ ಮಾರ್ಕಂಡೇಯ ಪುರಾಣ್–ಏಕ್ ಸಾಂಸ್ಕೃತಿಕ್ ಅಧ್ಯಯನ್ ಗ್ರಂಥವನ್ನು ಉತ್ತರ ಪ್ರದೇಶ ಸರ್ಕಾರ ಪುರಸ್ಕರಿಸಿದೆ (1962). ಇವರ ಹರ್ಷ ಚರಿತ್–ಏಕ್ ಸಾಂಸ್ಕೃತಿಕ್ ಅಧ್ಯಯನ್ ಗ್ರಂಥಕ್ಕೆ ಪ್ರಯಾಗದ ಹಿಂದಿ ಸಾಹಿತ್ಯ ಸಮ್ಮೇಳನ ಮಂಗಲಾ ಪ್ರಸಾದ್ ಪಾರಿತೋಷಿಕ ನೀಡಿ ಗೌರವಿಸಿದೆ(1953). ಇವರು 1966 ಜುಲೈ 27ರಂದು ನಿಧನರಾದರು. (ವಿ.ಡಿ.ಎಚ್.)

**ವಾಸ್ತುಶಿಲ್ಪ (ದೇವಾಲಯ):** ಅರವತ್ತನಾಲ್ಕು ಕಲೆಗಳಲ್ಲಿ ಒಂದಾದ ಶಿಲ್ಪಕಲೆಯ ಒಂದು ಭಾಗವಾಗಿರುವುದೇ ವಾಸ್ತುಶಿಲ್ಪಕಲೆ. ದೇವತಾ ಇಲ್ಲವೆ ಮಹಾತ್ಮರ ಸಂಕೇತ ಇಲ್ಲವೆ ಮೂರ್ತಿಗಳಿಗೋಸ್ಕರ ಮಾಡಿದ ಹಾಗೂ ಮನುಷ್ಯರು ವಾಸಿಸುವ ಸ್ಥಳ ಅಥವಾ ವಸತಿಯೇ ವಾಸ್ತು ಎನಿಸುತ್ತದೆ. ವಸ್ತುವಿನಿಂದ ರಚನೆಗೊಂಡ, ವಾಸ್ತುಯೋಗ್ಯವಾದ ವಾಸ್ತುವಿನ (ನಿವೇಶನದ) ಮೇಲೆ ರಚಿಸಲಾದ ಎಲ್ಲ ರಚನೆಗಳನ್ನೂ ವಾಸ್ತುರಚನೆ ಎನ್ನಬಹುದು. ವ್ಯಾಪಕವಾಗಿ ಹೇಳುವುದಾದರೆ ಮನುಷ್ಯರ ಜೀವನಭರಣಕ್ಕೆ ಅವಶ್ಯವಾದ ಯಾವುದೇ ರಚನೆ ಕೂಡ ವಾಸ್ತು ರಚನೆಯಾಗುತ್ತದೆ. ಹೀಗೆ ಮನೆ, ಕೆರೆ, ಸೇತುವೆ, ಕೋಟೆ, ದೇವಾಲಯ– ಎಲ್ಲ ರಚನೆಗಳೂ ವಾಸ್ತುಶಿಲ್ಪ ಎನಿಸುತ್ತದೆ. ವಿಶೇಷವಾಗಿ ಪ್ರಾಸಾದ, ಭವನ, ಹರ್ಮ್ಯ, ಸೌಧ, ನಿಕೇತನ, ವಿಮಾನ, ಮಂದಿರ ಮುಂತಾದುವು ದೇವಾಲಯದ ಪರ್ಯಾಯ ಪದಗಳು. ಇವುಗಳಲ್ಲೆಲ್ಲಾ ವಿಮಾನ, ಪ್ರಾಸಾದ – ಈ ಪದಗಳನ್ನು ಹೆಚ್ಚಾಗಿ ಬಳಸುವುದುಂಟು. ಆದರೆ ಹೆಚ್ಚು ಬಳಕೆಯಲ್ಲಿರುವಂತೆ, ಸಾಮಾನ್ಯವಾಗಿ ಪ್ರಾಸಾದ ಎಂಬ ಪದ ಉತ್ತರ ಭಾರತದ ದೇವಾಲಯಗಳಿಗೂ ವಿಮಾನ ಎಂಬ ಪದ ದಕ್ಷಿಣ ಭಾರತದ ದೇವಾಲಯಗಳಿಗೂ ಅನ್ವಯಿಸುತ್ತದೆ. ಪರ್ವತ, ನದೀತೀರ, ಉದ್ಯಾನವನ ಮುಂತಾದೆಡೆಗಳಲ್ಲಿ ದೇವತೆಗಳು ವಿಹರಿಸುವರೆಂಬ ನಂಬಿಕೆಯಿಂದ ಈ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸುವುದು ಸಾಮಾನ್ಯ. ಅಲ್ಲದೆ ಊರಿನ ಪೂರ್ವ ಅಥವಾ ಪಶ್ಚಿಮದಲ್ಲಿ ವಿಷ್ಣುವಿನ, ಈಶಾನ್ಯದಲ್ಲಿ ಶಿವ, ಉತ್ತರದಲ್ಲಿ ಸ್ಕಂಧ, ನೈರುತ್ಯದಲ್ಲಿ ಗಣಪತಿಯ ದೇವಾಲಯವನ್ನು ನಿರ್ಮಿಸಬೇಕೆಂದು ವಾಸ್ತು ಗ್ರಂಥಗಳಲ್ಲಿ ಹೇಳಿದೆ. ದೇವಾಲಯಗಳನ್ನು ಮರ, ಇಟ್ಟಿಗೆ ಅಥವಾ ಕಲ್ಲಿನಿಂದ ಕಟ್ಟಬಹುದು. ಆದರೆ ಕಲ್ಲಿನ ದೇವಾಲಯಗಳು ಶ್ರೇಷ್ಠವೆಂಬ ನಂಬಿಕೆ ಇದೆ; ಅಲ್ಲದೆ ಅವು ಶಾಶ್ವತವಾಗಿಯೂ ಉಳಿಯುವಂತಹುವು. ಆದ್ದರಿಂದ ಕಾಲಾನುಕ್ರಮದಲ್ಲಿ ಮರ, ಇಟ್ಟಿಗೆಗಳಿಗಿಂತ ಕಲ್ಲಿನ ದೇವಾಲಯ ರಚನೆಗೇ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಯಿತು. ಇದರಿಂದಾದ ಅಂಥ ದೇವಾಲಯಗಳು ಇಂದಿಗೂ ಉಳಿದುಬಂದು, ಪ್ರಾಚೀನ ಕಲಾಪರಂಪರೆಯ ಬಗ್ಗೆ ಅರಿವು ನೀಡಲು ಸಾಧ್ಯವಾಯಿತು.

ದೇವಾಲಯವನ್ನು ನಿರ್ಮಿಸಲು ಆರಂಭಿಸುವ ಮೊದಲು ಮಾಡಬೇಕಾದ 12 ಕಾರ್ಯಗಳಿವೆ. ಅವು ಹೀಗಿವೆ: ಕಾರ್ಯಾರಂಭ, ದೇಶನಿರ್ಣಯ, ಭೂಪರೀಕ್ಷಾ, ಪ್ರವೇಶಾರ್ಥ ದೇವಬಲಿ, ಭೂಪರಿಗ್ರಹ, ಭೂಮಿ ಸಮಕಾರ್ಯ, ಶಂಕುಸ್ಥಾಪನಾ (ದಿಕ್ಪರಿಚ್ಛೇದ), ಪದ ನಿರ್ಣಯ (ವಾಸ್ತುಮಂಡಲ), ಸೂತ್ರವಿನ್ಯಾಸ, ದೇವತಾಬಲಿ, ಗೃಹವೀಥ್ಯಾದಿಭೇದ, ಗರ್ಭನ್ಯಾಸ ಎಂಬ ಕ್ರಮಾನುಗತ ಕಾರ್ಯಗಳು. ಇವುಗಳಲ್ಲಿ ದೇಶನಿರ್ಣಯ ಭೂಪರೀಕ್ಷಾ ಗಮನಿಸಬಹುದು. ದೇವಾಲಯದ ನಿವೇಶನ ಚೌಕ ಅಥವಾ ಆಯತಾಕಾರವಾಗಿರಬೇಕು; ಚೂಪಾದ ಸಾಮಗ್ರಿ ಅಥವಾ ಮೂಳೆಗಳಿಲ್ಲದ ಭೂಮಿಯಾಗಿರಬೇಕು; ವಿವಿಧ ಬಣ್ಣ, ರುಚಿ, ಸುಗಂಧದಿಂದ ಕೂಡಿದ್ದು ಬೀಜೋತ್ಪತ್ತಿಯುತವಾಗಿರಬೇಕು; ಸ್ನಿಗ್ಧ ಭೂಮಿಯಾಗಿರಬೇಕು; ಪಶ್ಚಿಮ ಅಥವಾ ದಕ್ಷಿಣದಲ್ಲಿ ಎತ್ತರವಾಗಿರಬೇಕು. ಈ ರೀತಿಯಾಗಿರುವ ಭೂಮಿಯನ್ನು ಆರಿಸಿಕೊಂಡ ಅನಂತರ ಭೂಮಿಯನ್ನು ಹಳ್ಳತೋಡಿ ಮಣ್ಣು ಅಥವಾ ನೀರು ತುಂಬುವುದರ ಮೂಲಕ ಪರೀಕ್ಷಿಸಬೇಕು. ಆ ಹಳ್ಳದಲ್ಲಿ ಅವು ಹೆಚ್ಚಾಗಿ ತುಂಬಿದಂತಿದ್ದರೆ ಅಥವಾ ತುಂಬಿ ಹರಿದರೆ ಅದು ಉತ್ತಮ ನಿವೇಶನ ಎನಿಸುವುದು. ಇಂತಹ ನಿವೇಶನದಲ್ಲಿ ಮೇಲೆ ಹೇಳಿದ ಕ್ರಮದಲ್ಲಿ ನಿರ್ಮಾಣ ಪೂರ್ವ ಆಚರಣೆಗಳನ್ನು, ವಿಧಿಗಳನ್ನು ಪೂರೈಸಬೇಕು. ದೇವಾಲಯ ನಿರ್ಮಾಣದಲ್ಲಿ ಅನುಸರಿಸಬೇಕಾದ ಅಳತೆ–ಪ್ರಮಾಣವನ್ನು ಈ ಹಂತದಲ್ಲೇ ಗುರುತಿಸಿಕೊಳ್ಳಬೇಕಾಗುತ್ತದೆ. (ಸೂತ್ರವಿನ್ಯಾಸ). ಇದರಲ್ಲಿ ಪ್ರಮಾಣಸೂತ್ರ, ಪರ್ಯಂತಸೂತ್ರ ಎಂದು ಎರಡು ಸೂತ್ರಗಳಿವೆ. ದೇವಾಲಯದ ಅಳತೆ ಪ್ರಮಾಣವನ್ನು ನಿಗದಿಪಡಿಸುವುದು ಪ್ರಮಾಣ ಸೂತ್ರ (ಮಾನಸೂತ್ರ). ಇದರ ಆಧಾರದ ಮೇಲೆ ಉಳಿದೆಲ್ಲ ಭಾಗದ ಅಳತೆಗಳೂ ನಿರ್ಣಯವಾಗುತ್ತವೆ. ಈ ಪ್ರಮಾಣ ಸೂತ್ರ ಪರಿಧಿಯಿಂದ ಹೊರಗೆ ಸುತ್ತಲೂ ಇರುವುದೇ ಪರ್ಯಂತಸೂತ್ರ. ಅಂದರೆ ಇದು ಕಟ್ಟಡದ ಪರಿಮಿತಿ ಮತ್ತು ಹೊರಚಾಚುವಿಕೆಯನ್ನು ನಿರ್ಣಯಿಸುತ್ತದೆನ್ನಬಹುದು. ಗರ್ಭನ್ಯಾಸದ ಸ್ಥಳ, ದೇವತೆಗಳ ಸ್ಥಳ–ಇವುಗಳನ್ನು ನಿರ್ಣಯಿಸುವುದು – ವಿನ್ಯಾಸಸೂತ್ರ. ಈ ಸೂತ್ರಗಳು ದೇವಾಲಯ ನಿರ್ಮಾಣದಲ್ಲಿ ಮುಖ್ಯಪಾತ್ರವನ್ನು ವಹಿಸುತ್ತವೆ.

ದೇವಾಲಯ ನಿರ್ಮಾಣದ ಬಗ್ಗೆ ಮಾರ್ಗದರ್ಶನ ಮಾಡುವ, ವಿಧಿ–ನಿಷೇಧಗಳನ್ನು ಹೇಳುವ ಅನೇಕ ಗ್ರಂಥಗಳಿವೆ. ಗೃಹ್ಯಸೂತ್ರ, ಬೃಹತ್‌ಸಂಹಿತಾ, ಮತ್ಸ್ಯಪುರಾಣ ಮುಂತಾದ ಕೃತಿಗಳಲ್ಲಿ ವಾಸ್ತುಶಿಲ್ಪದ ವಿಷಯಗಳು ಪ್ರಾಸಂಗಿಕವಾಗಿ ಬಂದಿದೆ. ಸು.7–8ನೆಯ ಶತಮಾನದಿಂದ ಆಗಮಗಳು ರಚನೆಗೊಂಡು, ದೇವಾಲಯ ನಿರ್ಮಾಣದ ರೂಪು–ರೇಷೆಗಳನ್ನು ಒಳಗೊಂಡಿವೆ. ಇವು ದೇವಾಲಯ ರಚನೆಯನ್ನು ಅರ್ಥೈಸುವಲ್ಲಿಯೂ ಮಹತ್ತರ ಪಾತ್ರವನ್ನು ವಹಿಸುತ್ತವೆ. ಇವುಗಳಲ್ಲಿ ಮುಖ್ಯವಾದುವೆಂದರೆ ಸುಪ್ರಭೇದಾಗಮ, ಕಾಮಿಕಾಗಮ, ಕಾರಣಾಗಮ, ಕರವಾಗಮ, ಅಜಿತಾಗಮ ಮುಂತಾದವು. ಶಿಲ್ಪಶಾಸ್ತ್ರಕ್ಕೆ ಮೀಸಲಾದ ಕೆಲವು ಗ್ರಂಥಗಳೂ ಇವೆ. ಇವುಗಳಲ್ಲಿ ಭುವನಪ್ರದೀಪನ ಅಪರಾಜಿತಪೃಚ್ಛಾ, ಭೋಜನ ಸಮರಾಂಗಣ ಸೂತ್ರಧಾರ, ಮಂಡನನ ರೂಪಮಂಡನ ಮುಂತಾದವು ಉತ್ತರ ಭಾರತದ ದೇವಾಲಯಗಳ ರೂಪರೇಷೆಯನ್ನು ತಿಳಿಸುತ್ತವೆ; ಅಂತೆಯೇ ಮಯಮತ, ಮಾನಸಾರ, ತಂತ್ರಸಮುಚ್ಚಯ, ಶಿಲ್ಪರತ್ನ ಮುಂತಾದ ಗ್ರಂಥಗಳು ದಕ್ಷಿಣ ಭಾರತ ದೇವಾಲಯಗಳ ರಚನಾಕ್ರಮವನ್ನು ತಿಳಿಸುತ್ತವೆ.

ಕಾಲಾನುಕ್ರಮದಲ್ಲಿ ಉತ್ತರಭಾರತ ಮತ್ತು ದಕ್ಷಿಣ ಭಾರತದ ದೇವಾಲಯಗಳು ಭಿನ್ನ ಭಿನ್ನ ರಚನಾ ಸ್ವರೂಪವನ್ನು ಪಡೆದದ್ದನ್ನು ಕಾಣುತ್ತೇವೆ. ಈ ಎರಡೂ ಪ್ರದೇಶಗಳ ದೇವಾಲಯಗಳನ್ನು ಗಮನಿಸಿದರೆ, ಅವುಗಳಲ್ಲಿರುವ ವಿಶಿಷ್ಟ ವ್ಯತ್ಯಾಸಗಳು ಗಮನಕ್ಕೆ ಬರುತ್ತವೆ. ಅವುಗಳಲ್ಲಿ ಕೆಲವು ಮುಖ್ಯವಾದುವೆಂದರೆ: ಉತ್ತರ ಭಾರತದ ದೇವಾಲಯಗಳಲ್ಲಿ ತಳವಿನ್ಯಾಸ ಮತ್ತು ಅದರ ಮೇಲಿನ ಭಾಗಗಳು ಚೌಕಾಕಾರವಾಗಿರುತ್ತವೆ; ದೇವಾಲಯದ ರಚನೆ ಬುಡದಿಂದ ತುದಿಯವರೆಗೆ ಲಂಬ ವಿನ್ಯಾಸದಲ್ಲಿರುತ್ತದೆ. ಊರ್ಧ್ವಮುಖವಾಗಿ ದೇವಾಲಯದ ಭಾಗಗಳನ್ನು ಪೀಠ, ಜಂಘಾ, ಶೃಂಗ, ಆಮಲಕ, ಕಲಶ ಎಂದು ಗುರುತಿಸಲಾಗುತ್ತದೆ. ಶಿಖರ ಎಂಬ ಶಬ್ದ ಪೂರ್ಣ ಗರ್ಭಗುಡಿಯ ಮೇಲ್ಕಟ್ಟಡಕ್ಕೆ ಅನ್ವಯಿಸುತ್ತದೆ. ಶಿಖರದಲ್ಲಿ ಶುಕನಾಸೀ ಇರಬೇಕು. ಇದಕ್ಕೆ ಬದಲಾಗಿ ದಕ್ಷಿಣ ಭಾರತದ ದೇವಾಲಯಗಳಲ್ಲಿ ತಳವಿನ್ಯಾಸ ವಿವಿಧ ಆಕಾರಗಳಲ್ಲಿರುತ್ತವೆ, ದೇವಾಲಯ ರಚನೆ ಸಮತಲವಿನ್ಯಾಸದಲ್ಲಿರುತ್ತದೆ. ಊರ್ಧ್ವಮುಖವಾಗಿ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ ಎಂಬ ಆರು ಭಾಗಗಳಿರುತ್ತವೆ. ಶಿಖರ ಒಂದು ಭಾಗ ಮಾತ್ರ ಪೂರ್ಣಮೇಲ್ಕಟ್ಟಡವಲ್ಲ, ಸುಕನಾಸಿ ಕಡ್ಡಾಯವಲ್ಲ.

ಇಂತಹ ಇನ್ನೂ ಹಲವು ವ್ಯತ್ಯಾಸಗಳೂ ಹಲವು ಪ್ರಭೇದಗಳೂ ಕ್ರಮೇಣ ಮೂಡಿಬಂದ ಫಲವಾಗಿ ಔತ್ತರೇಯ ಮತ್ತು ದಾಕ್ಷಿಣಾತ್ಯ ಎಂಬ ಎರಡು ಸಂಪ್ರದಾಯಗಳು ರೂಪುಗೊಂಡವು. ಅಲ್ಲದೆ ಈ ಎರಡರ ಸಂಸರ್ಗದಿಂದ ವೇಸರವೆಂಬ ಶೈಲಿಯೂ ಒಡಮೂಡಿತೆಂದು ಗುರುತಿಸಲಾಗಿದೆ. ದಾಕ್ಷಿಣಾತ್ಯ ದೇವಾಲಯಗಳ ರಚನಾ ವಿನ್ಯಾಸದ ಆಧಾರದ ಮೇಲೆ ಮತ್ತೊಂದು ವರ್ಗೀಕರಣವೂ ಇದೆ. ಇದರಂತೆ ಬುಡದಿಂದ ತುದಿಯವರೆಗೂ ಚೌಕೋನವಾಗಿರುವುದು ನಾಗರ (ಗರ್ಭಗೃಹದ ಮೇಲಿನ ಕಟ್ಟಡ), ಗ್ರೀವದಿಂದ ಮೇಲಕ್ಕೆ ಆರು ಅಥವಾ ಎಂಟು ಮುಖಗಳಿರುವುದು ದ್ರಾವಿಡ. ಅದೇ ವೃತ್ತಾಕಾರವಾಗಿರುವುದು – ವೇಸರ. ಗ್ರೀವದಿಂದ ಮೇಲೆ ವೃತ್ತಾಯತ, ಅರ್ಧವೃತ್ತ, ಗಜಪೃಷ್ಠ, ದ್ವ್ಯಾಶ್ರವೃತ್ತ ರೀತಿಯಲ್ಲಿರುವ ದೇವಾಲಯಗಳೂ ವೇಸರವೇ. ಹೀಗೆ ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳನ್ನು ನಾಗರ–ದ್ರಾವಿಡ–ವೇಸರ ಮಾದರಿಗಳೆಂದು ಪುನರ್ವರ್ಗೀಕರಣ ಮಾಡಲಾಗಿದೆ. ಇದರಲ್ಲಿ ದೇವಾಲಯದ ತಳವಿನ್ಯಾಸವನ್ನು ಗಣನೆಗೆ ತೆಗೆದುಕೊಂಡಿದ್ದರೂ ಈ ವರ್ಗೀಕರಣಕ್ಕೆ ಮೇಲ್ಕಟ್ಟಡ ಅಥವಾ ಶಿಖರದ ವಿನ್ಯಾಸವೇ ಪ್ರಧಾನ ಎಂಬುದನ್ನು ಇಲ್ಲಿ ಗಮನಿಸಬಹುದು. ಈ ರೀತಿಯ ದೇವಾಲಯಗಳನ್ನು ಷಡ್ವರ್ಗ ದೇವಾಲಯಗಳೆಂದು ಗುರುತಿಸಬಹುದು. ಮೇಲ್ಕಟ್ಟಡ ಅಥವಾ ಶಿಖರದ ವಿವಿಧ ಮಾದರಿಗಳ ಹಿನ್ನೆಲೆಯಲ್ಲಿ ಮೂಡಿಬಂದ ಇತರ ಪ್ರಭೇದಗಳೆಂದರೆ ರೇಖಾನಾಗರ–ಲತಿನ, ವಿಮಾನನಾಗರ, ಕಳಿಂಗ, ವರಾಟ, ಭೂಮಿಜ, ಕದಂಬನಾಗರ ಫಾಂಸನ, ಲಾಟ ಮುಂತಾದುವು. ಇವು ಉತ್ತರಭಾರತ ಅಥವಾ ಮಧ್ಯಭಾರತಗಳಲ್ಲಿ ಕಂಡುಬರುವ ದೇವಾಲಯ ಮಾದರಿ (ಔತ್ತರೇಯ) ಗಳಾಗಿದ್ದರೂ ಕೆಲವು ಪ್ರಭೇದಗಳು ಕರ್ನಾಟಕದಲ್ಲೂ ಕಂಡುಬರುತ್ತವೆ. ಈ ಶಿಖರ ಪ್ರಭೇದವನ್ನು ಮಾತ್ರವಲ್ಲದೆ, ದೇವಾಲಯಗಳು ನಿಶ್ಚಿತ ಅಂಗ–ಭಾಗ ವಿನ್ಯಾಸ, ಪ್ರಾದೇಶಿಕ ಲಕ್ಷಣಗಳನ್ನೂ ಮೈಗೂಡಿಸಿಕೊಂಡವು. ರಾಷ್ಟ್ರಕೂಟ, ಗಂಗ, ನೊಳಂಬ, ವಿಜಯನಗರದ ಅರಸರ ಕಾಲದಲ್ಲಿ ಷಡ್ವರ್ಗ ದೇವಾಲಯಗಳು ಪ್ರಮುಖವಾಗಿ ನಿರ್ಮಾಣಗೊಂಡವು. ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ವಿವಿಧ ಮಾದರಿಯ ದೇವಾಲಯಗಳೂ ರಚನೆಗೊಂಡು ದೇವಾಲಯ ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದವು. (ಎ.ಕೆ.ಎಸ್.)

ಭಾರತದ ಉದ್ದಗಲಕ್ಕೂ ಇರುವ ಸಾವಿರಾರು ಮಹತ್ತ್ವದ ಐತಿಹಾಸಿಕ ನಿರ್ಮಿತಿಗಳಲ್ಲಿ ಧಾರ್ಮಿಕ ಸ್ಮಾರಕಗಳೇ ಅತ್ಯಧಿಕ. ಇವು ಬೌದ್ಧ ಸ್ತೂಪ / ಚೈತ್ಯ, ವಿಹಾರ, ಜೈನ ಬಸದಿ / ಜಿನಾಲಯ / ಅರ್ಹದಾಲಯ ಮತ್ತು ದೇವಾಲಯ. ಇವಲ್ಲದೆ ಇಂಡೊ–ಇಸ್ಲಾಂ

ಮತ್ತು ಐರೋಪ್ಯ ವಸಾಹತುಶಾಹಿಯ ಕ್ರೈಸ್ತಪಂಥದ ವಿವಿಧ ಪ್ರಕಾರದ ಚರ್ಚ್/ಬೆಸಲಿಕ/ ಚಾಪೆಲ್ ಹಾಗೂ ಕ್ರೈಸ್ತ ಸನ್ಯಾಸಿನಿಯರ ಅಧ್ಯಯನ–ವಸತಿ ಶಾಲೆಗಳು (ಕಾನ್ವೆಂಟ್) ಅಲ್ಲಲ್ಲಿ ಇವೆ. ಪ್ರಸ್ತುತ ಬೌದ್ಧ–ಜೈನ–ಹಿಂದು (ಶೈವ, ವೈಷ್ಣವ–ಶಾಕ್ತ ಇತ್ಯಾದಿ) ಧಾರ್ಮಿಕ ನಿರ್ಮಿತಿಗಳ ಸಂಕೇತ, ಸ್ವರೂಪ ಮತ್ತು ಮಾದರಿಗಳನ್ನು ಇಲ್ಲಿ ಸಮೀಕ್ಷಿಸಿದೆ.

ಸ್ತೂಪ ಎಂಬುದು ಸಂಸ್ಕೃತ ಶಬ್ದ. ಇದರ ಅರ್ಥ ಘನ ಗೋಲಾಕೃತಿ. ಋಗ್ವೇದದಲ್ಲಿ ಇದರ ಉಲ್ಲೇಖವಿದೆ. ಪ್ರಾಯಶಃ ಆ ಕಾಲದಿಂದಲೆ ಗಣ್ಯ ವ್ಯಕ್ತಿಗಳ ಸ್ಮರಣಾರ್ಥ ನಾಲ್ಕು ರಸ್ತೆಗಳು ಸಂಧಿಸುವ ಸಾರ್ವಜನಿಕ ಸ್ಥಳಗಳಲ್ಲಿ ಬೃಹತ್ ಸ್ತೂಪಗಳನ್ನು ನಿರ್ಮಿಸುವ ಸಂಪ್ರದಾಯವಿದ್ದಿತ್ತು. ಬೌದ್ಧಗ್ರಂಥ ಮಹಾಪರಿನಿಬ್ಬಣ ಸುತ್ತ (ಮಹಾನಿರ್ವಾಣ ಸೂತ್ರ) ತಿಳಿಸುವಂತೆ ಒಂದು ಸಲ ಬುದ್ಧನ ನೆಚ್ಚಿನ ಶಿಷ್ಯ ಆನಂದ ತನ್ನ ಗುರುವನ್ನು ಅವರ ಮಹಾಪರಿನಿರ್ವಾಣದ ಮೇಲೆ ಅವರ ಸ್ಮರಣಾರ್ಥ ಯಾವ ರೀತಿಯಲ್ಲಿ ನಿರ್ಮಿತಿಯನ್ನು ಮಾಡಿಸಬೇಕೆಂದು ಕೇಳಿದನಂತೆ. ಬುದ್ಧನು ಪರಂಪರೆಯಲ್ಲಿದ್ದಂತೆ ಸ್ತೂಪ ನಿರ್ಮಾಣ ಮಾಡಬಹುದೆಂದು ತಿಳಿಸಿದನಂತೆ. ಗುರುವಿನ ಆಣತಿಯಂತೆ ಮೊದಲು ಎಂಟು ಸ್ಥಳಗಳಲ್ಲಿ ಬುದ್ಧನ ಪವಿತ್ರ ಅಸ್ಥಿಯನ್ನೊಳಗೊಂಡ ಸ್ತೂಪಗಳನ್ನು ಪ್ರಚಲಿತ ಪರಂಪರೆಯಂತೆ ನಿರ್ಮಾಣ ಮಾಡಿದ್ದಿರಬೇಕು. ಆದರೆ ಇಂಥ ಸ್ತೂಪಗಳಲ್ಲಿ ಇತಿಹಾಸ ತಿಳಿಯದ, ಸ್ಥಳ ಪರಿಚಯವಿಲ್ಲದ ಬೌದ್ಧ ಅನುಯಾಯಿಗಳಿಗೆ ಬೌದ್ಧ ಸ್ತೂಪಗಳನ್ನು ಗುರುತಿಸುವುದು ಹೇಗೆ? ಇಂಥ ಸ್ತೂಪಗಳಿಗೂ ಕೆಲವು ವಿಶಿಷ್ಟ ಬೌದ್ಧಧರ್ಮದ ಲಕ್ಷಣಗಳನ್ನು ತೋರಿಸಿದಲ್ಲಿ ಅವುಗಳ ಮಹತ್ವ ಹೆಚ್ಚುತ್ತದೆ. ಈ ವಿಷಯದಲ್ಲಿ ಬೌದ್ಧ ಗುರುಗಳ ಮಾರ್ಗದರ್ಶನದಲ್ಲಿ ಕೇವಲ ಸ್ಮಾರಕವಾಗಿರುವ ಪ್ರಚಲಿತ ಸ್ತೂಪ ವಾಸ್ತುಶಿಲ್ಪದಲ್ಲಿಲ್ಲದ ಕೆಲವೊಂದು ಭಾಗಗಳನ್ನು ಸೇರಿಸಲಾಯಿತು. ಸ್ತೂಪ ಬಹು ದೂರದಿಂದಲೂ ಎದ್ದು ಕಾಣುವಂತೆ ಮಾಡಲು ಮೊದಲು ಸ್ತೂಪಕ್ಕಿಂತಲೂ ಹಿರಿದಾದ ವ್ಯಾಸದ ಎತ್ತರದ ವೇದಿಕೆ ನಿರ್ಮಿಸಿ ಇದರ ಮೇಲೆ ಸುತ್ತಲೂ ಪವಿತ್ರ ಸ್ತೂಪಕ್ಕೆ ಪ್ರದಕ್ಷಿಣೆ ಹಾಕಲು ಸ್ಥಳ (ಪ್ರದಕ್ಷಿಣಪಥ)ವಿರುವಂತೆ ಸ್ತೂಪ ನಿರ್ಮಾಣ ಇದರ ಮೇಲಿನ ಭಾಗವನ್ನು ಚಪ್ಪಟೆ ಮಾಡಿ ಅದರ ಮೇಲೆ ಚೌಕೋನ ವಿನ್ಯಾಸದಲ್ಲಿ ಬೇಲಿ (ಹರ್ಮಿಕ)ಯಿರುತ್ತದೆ. ಈ ಚೌಕದ ಮಧ್ಯದಲ್ಲಿ ದಂಡ (ಯಷ್ಟಿ) ಇರುತ್ತದೆ. ದಂಡದ ತುದಿಯಲ್ಲಿ ಬೌದ್ಧಧರ್ಮದ ಮುಖ್ಯ ಘಟಕಗಳಾದ ಬುದ್ಧ, ಧರ್ಮ ಮತ್ತು ಸಂಘ ಇವುಗಳನ್ನು ಸಂಕೇತಿಸುವ ಒಂದರ ಮೇಲೆ ಒಂದರಂತೆ ಕಿರಿದಾಗುತ್ತ ಹೋಗುವ ಮೂರು ಛತ್ರಿಗಳಿರುತ್ತವೆ. ಪ್ರದಕ್ಷಿಣಾ ಪಥಕ್ಕೆ ಮೇಲೇರಿ ಹೋಗಲು ಪ್ರಧಾನ ದಿಕ್ಕುಗಳಿಗೆದುರಾಗಿ ವೇದಿಕೆಯ ಬದಿಗಳು ಮುಂಚಾಚಿದ್ದು ಈ ಕಟ್ಟೆಯ ಅಕ್ಕಪಕ್ಕಗಳಲ್ಲಿ ಮೆಟ್ಟಿಲುಗಳಿರುತ್ತವೆ. ಈ ಕಟ್ಟೆಯ ಮುಂಬದಿಯ ಅಂಚಿನುದ್ದಕ್ಕೂ ಸಮಾನಾಂತರದಲ್ಲಿ ಭಗವಾನ್ ಬುದ್ಧನ ಜನನ, ಪ್ರಾಪಂಚಿಕ ಜೀವನ ಪರಿತ್ಯಾಗ (ಅಭಿನಿಷ್ಕ್ರಮಣ), ಜ್ಞಾನೋದಯ, ಮೃಗವನ (ಸಾರನಾಥ)ದಲ್ಲಿ ಪ್ರಥಮ ಬೋಧನೆ ಮತ್ತು ಮಹಾಪರಿನಿರ್ವಾಣ–ಐದು ಘಟನೆಗಳನ್ನು ಸೂಚಿಸುವ ಐದು ಕಂಬಗಳಿರುತ್ತವೆ. ಹೀಗೆ ಒಂದು ಸಾಮಾನ್ಯ ಸ್ತೂಪ ಪ್ರಕಾರವನ್ನು ಬೌದ್ಧ ಸ್ತೂಪವಾಗಿ ಕಾಲಕ್ರಮೇಣ ಪರಿವರ್ತಿಸಲಾಯಿತು. ಅನಂತರ ಸ್ತೂಪದ ಸುತ್ತಲೂ ಶುದ್ಧವಾಗಿಡಲು ಸ್ವಲ್ಪ ಸ್ಥಳವನ್ನು ಬಿಟ್ಟು ಬೇಲಿಯನ್ನು ಹಾಕಿಸಿ ಇದರಲ್ಲಿ ವೇದಿಕೆಯ ಕಟ್ಟೆಗಳೆದುರಿಗೆ ನಾಲ್ಕು ದಿಕ್ಕುಗಳಲ್ಲಿ ಬೃಹತ್ ತೋರಣಗಳನ್ನು ನಿರ್ಮಿಸಲಾಗುತ್ತಿತ್ತು. ಸಾಂಚಿಯಲ್ಲಿ ಬುದ್ಧನ ಪವಿತ್ರ ಅಸ್ಥಿ ಅವಶೇಷಗಳುಳ್ಳ ಇಂಥ ಒಂದು ಮಹಾಸ್ತೂಪವಿದೆ. ಬೌದ್ಧಸ್ತೂಪಕ್ಕೆ ಇನ್ನೊಂದು ಹೆಸರು ಚೈತ್ಯ. ಚಿತೆಯಿಂದ ಸಂಗ್ರಹಿಸಿದ ಬುದ್ಧನ ಅಸ್ಥಿ ಚೂರುಗಳು ಸಾಂಚಿಯಲ್ಲಿರುವುದೂ ಸೇರಿ ಮೊದಲಿನ ಎಂಟು ಸ್ತೂಪಗಳಲ್ಲಿ ಅಡಕವಾಗಿವೆ. ಸಾಮಾನ್ಯವಾಗಿ ಚೈತ್ಯ / ಸ್ತೂಪ ದೊಡ್ಡ ಪ್ರಮಾಣದವು. ಆದ್ದರಿಂದ ಇವುಗಳನ್ನು ಬಯಲು ಪ್ರದೇಶದಲ್ಲಿ ನಿರ್ಮಿಸಲಾಗುತ್ತಿತ್ತು. ಒಂದೊಂದು ವೇಳೆ ಒಂದು ವಿಶಾಲವಾದ ಸಭಾಂಗಣ (ಆಲಯ)ದ ಹಿಂಭಾಗದಲ್ಲಿ ಸುತ್ತಲು ಪ್ರದಕ್ಷಿಣೆ ಹಾಕಲು ಅನುಕೂಲವಾಗುವಂತೆ ಸ್ತೂಪವನ್ನು ನಿರ್ಮಿಸಿ ಮುಂಭಾಗದಲ್ಲಿ ಬೌದ್ಧ ಮತಾನುಯಾಯಿಗಳು ಸಭೆ ಸೇರಲು ಅನುಕೂಲ ಮಾಡಲಾಗುತ್ತಿತ್ತು. ಇಂಥ ಆಲಯಗಳನ್ನು ಸ್ತೂಪಾಲಯ ಇಲ್ಲವೆ ಚೈತ್ಯಾಲಯವೆಂದು ಹೇಳಲಾಗುತ್ತದೆ. ಇಂಥ ಸ್ತೂಪ/ಸ್ತೂಪಾಲಯಗಳ ಹತ್ತಿರದಲ್ಲಿಯೇ ವಿಶೇಷವಾಗಿ ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಬೌದ್ಧ ಭಿಕ್ಷುಗಳ ಅಧ್ಯಯನ–ವಸತಿ, ಉಪನ್ಯಾಸಕ್ಕೋಸ್ಕರ ಮಧ್ಯೆ ಸಭಾಂಗಣ, ಸುತ್ತಲೂ ಕೊಠಡಿಗಳಿರುವಂತೆ ವಿಹಾರಗಳನ್ನು ನಿರ್ಮಾಣ ಮಾಡಲಾಗುತ್ತಿತ್ತು. ಇಂಥ ಸ್ತೂಪಾಲಯ ವಿಹಾರಗಳು ಅಜಂತ, ಎಲ್ಲೋರ ಮೊದಲಾದ ಕಡೆಗಳಲ್ಲಿವೆ.

ಜೈನರು ಮೊದಮೊದಲು ಬೌದ್ಧ ಸ್ತೂಪಗಳಂತೆ ತೀರ್ಥಂಕರರ ಹೆಸರಿನಲ್ಲಿ ಸ್ತೂಪಗಳನ್ನು ನಿರ್ಮಿಸುತ್ತಿದ್ದರು. ಮಥುರದಲ್ಲಿ ಕಂಕಾಳಿ ಟೀಲದ ಉತ್ಖನನದಲ್ಲಿ ಸು.2100 ವರ್ಷಗಳ ಹಿಂದಿನ ಇಂಥ ಜೈನ ಸ್ತೂಪಾವಶೇಷಗಳು ಕಂಡುಬಂದಿವೆ. ಒರಿಸ್ಸದಲ್ಲಿಯ ಉದಯಗಿರಿ–ಖಂಡಗಿರಿಯಲ್ಲಿಯೂ ಇಂಥ ಸ್ತೂಪದ ಭಾಗಗಳನ್ನು ಉತ್ಖನನದಲ್ಲಿ ಗುರುತಿಸಲಾಗಿದೆ. ಆದರೆ ಈ ಪ್ರಕಾರವನ್ನು ಬಿಟ್ಟು ಪ್ರಚಲಿತ ಭಿನ್ನ ಮಾದರಿಯನ್ನು ಆರಿಸಿಕೊಳ್ಳಲಾಯಿತು. ಅದು ಒಂದು ಚೌಕೋನ ಗೃಹ. ಇದರಲ್ಲಿ ತೀರ್ಥಂಕರ / ಬುದ್ಧ / ಶಿವಲಿಂಗ / ವಿಷ್ಣು / ದೇವಿಯ ಮೂರ್ತಿ ಇರುತ್ತದೆ. ಶುರುವಿನಲ್ಲಿ ಒಂದು ಧಾರ್ಮಿಕ ಮಂದಿರವೆಂದರೆ ಇಷ್ಟೆ ಇರುತ್ತಿತ್ತು. ಉದಾ: ಗುಪ್ತರ ಕಾಲದವರೆಗೂ ಉಳಿದುಬಂದಿದ್ದ ಈ ಮಾದರಿಯನ್ನು ನೋಡಬಹುದು. ಧಾರ್ಮಿಕ ಕಾರ್ಯಾಚರಣೆ ಮತ್ತು ಆಧ್ಯಾತ್ಮಿಕ ಪರಿಕಲ್ಪನೆಗಳಿಗನುಗುಣವಾಗಿ ಈ ಮಾದರಿಗೆ ಹಲವಾರು ವಾಸ್ತು ಘಟಕಗಳನ್ನು ಸೇರಿಸಲಾಯಿತು. ಧಾರ್ಮಿಕ ಸಂಕೇತವುಳ್ಳ ಚೌಕನ ಗೃಹಕ್ಕೆ ಗರ್ಭಗೃಹವೆಂದು ಕರೆಯಲಾಯಿತು. ಇದರ ಮುಂದೆ ತೆರೆದ ಸ್ತಂಭ ಮಂಟಪ, (ಮುಖ ಮಂಟಪ. ಉದಾ: ಸಾಂಚಿಯಲ್ಲಿಯ 17), ಇದರ ಬದಲು ಆಯಾಯ ಮತಾನುಯಾಯಿಗಳು ಸೇರಿ ಧಾರ್ಮಿಕ ಕಾರ್ಯಗಳನ್ನು ನಡೆಸಲು ವಿಶಾಲ ಸ್ತಂಭ ಮಂಟಪ ಇದರ ಮುಖಮಂಟಪ. ಇದರ ಮುಂದೆ ಒಂದು ಧ್ವಜಸ್ತಂಭವಿರಬಹುದು. ಗರ್ಭಗುಡಿಯಲ್ಲಿ ಧಾರ್ಮಿಕ ಪ್ರತಿಮೆಗನುಗುಣವಾಗಿ ಈ ಪ್ರಕಾರದ ನಿರ್ಮಿತಿಗಳನ್ನು ಜಿನಾಲಯ, ಬೌದ್ಧಾಲಯ, ಶೈವಾಲಯ, ವೈಷ್ಣವಾಲಯ, ದೇವಿ ಆಲಯವೆಂದು ಇವುಗಳ ಮುಂದೆ ಕ್ರಮವಾಗಿ ಮಾನಸ್ತಂಭ, ಅಪರೂಪವಾಗಿ ತುದಿಯಲ್ಲಿ ಕುಳಿತ ನಾಲ್ಕು ಸಿಂಹಗಳಿರುವ ಬೌದ್ಧ ಸ್ತಂಭ (ಉದಾ:ಕಾರ್ಲದ ಚೈತ್ಯಾಲಯ), ನಂದಿ ಸ್ತಂಭ, ಗರುಡ ಸ್ತಂಭ, ಸಿಂಹ ಸ್ತಂಭವಿರುತ್ತದೆ. ಅನಂತರದ ಕಾಲದಲ್ಲಿ ಇಂಥ ಧಾರ್ಮಿಕಾಲಯಗಳನ್ನು ಧಾರ್ಮಿಕ ಚಟುವಟಿಕೆಗಳಿಗೋಸ್ಕರ ನಾನಾ ರೀತಿಯಲ್ಲಿ ವಿಸ್ತರಿಸಲಾಯಿತು. ಧಾರ್ಮಿಕ ಸಂಕೇತವುಳ್ಳ ಗೃಹ (ಗರ್ಭಗೃಹ)ದ ಮೇಲೆ ಚತುಷ್ಕೋಣಾಕೃತಿಯ ಎತ್ತರದ ಕಟ್ಟಡವನ್ನು ಕಟ್ಟುತ್ತಿದ್ದರು. ಆಯಾಯ ಪ್ರದೇಶದ ಪರಂಪರೆಗನುಗುಣವಾಗಿ ಈ ಕಟ್ಟಡ ವಿವಿಧ ಮಾದರಿಗಳಲ್ಲಿರುತ್ತವೆ. ಈ ಮಾದರಿಗಳಲ್ಲಿ ಪ್ರಮುಖವಾದುದು: ದಕ್ಷಿಣ ಭಾರತದಲ್ಲಿಯ ದ್ರಾವಿಡ ವಿಮಾನ ಮತ್ತು ಉತ್ತರ ಭಾರತದಲ್ಲಿಯ ರೇಖಾನಾಗರ ಪ್ರಾಸಾದ ಇವಲ್ಲದೆ ಕೆಲವು ಪ್ರಾದೇಶಿಕ ಮಾದರಿಗಳು, ಒರಿಸ್ಸ ಪ್ರದೇಶದ ಪೀಢಾ ಅಥವಾ ಘಾಂಸನ (ಇದನ್ನು ಕರ್ನಾಟಕದಲ್ಲಿ ಕದಂಬ ನಾಗರವೆಂದು ಹೇಳಲಾಗುತ್ತದೆ), ಭೂಮಿಜ (ನಾಗರ ಪ್ರಾಸಾದದ ಇನ್ನೊಂದು ಪ್ರಕಾರ ಗುಜರಾತ್–ಮಾಳವ ಪ್ರದೇಶದಲ್ಲಿ ವಿಶೇಷವಾಗಿವೆ) ಇತ್ಯಾದಿ.

ವೈದಿಕ, ಪೌರಾಣಿಕ ಧಾರ್ಮಿಕ ನಿರ್ಮಿತಿಗಳನ್ನು ದೇವಾಲಯವೆಂದು ಹೇಳಲಾಗುತ್ತದೆ. ಗರ್ಭಗೃಹದಲ್ಲಿ ದೇವರ ಅವತಾರ ಸ್ವರೂಪಿಗಳೆಂದು ವರ್ಣಿಸಲಾದ ಶ್ರೀರಾಮ, ಶ್ರೀಕೃಷ್ಣನ್ನು ಬಿಟ್ಟರೆ ಉಳಿದೆಲ್ಲ ಮೂರ್ತಿಗಳು ಧ್ಯಾನದ ಮೂಲಕ ಸಾಕ್ಷಾತ್ಕರಿಸಿಕೊಂಡು ಸೂಕ್ಷ್ಮವಾದ ಒಂದೊಂದು ಆಧ್ಯಾತ್ಮಿಕ ತತ್ತ್ವದ ಸ್ಥೂಲ ಪರಿಕಲ್ಪನೆಗಳು ಶಿವಲಿಂಗ, ವಿಷ್ಣು, ಗಣೇಶ, ಸರಸ್ವತಿ, ಮಹಿಷಾಸುರ ಮರ್ದಿನಿ ಇತ್ಯಾದಿ ಪ್ರತಿಷ್ಠಾಪಿಸಲಾಗಿರುತ್ತದೆ. ಸಭಾಂಗಣ ಮತ್ತು ಮುಖ ಮಂಟಪದ, ಗೋಡೆಗಳ ಹೊರಮೈ, ಕಂಬಗಳು, ಬಾಗಿಲು ಚೌಕಟ್ಟು, ಚಾವಣಿ, ಶಿಖರ ಹೂಬಳ್ಳಿ, ವಿವಿಧ ರೇಖಾಚಿತ್ರ, ಪ್ರಾಣಿಗಳು, ಮಾನವರು, ದೇವತೆಗಳು, ಪೌರಾಣಿಕ ಕಥೆಗಳು, ಜನಪ್ರಿಯ, ಇತರ ಧಾರ್ಮಿಕ ಸಾಹಿತ್ಯ ಕೃತಿಗಳಲ್ಲಿಯ ಕಥಾ ಸನ್ನಿವೇಶ ಮೊದಲಾದವುಗಳಿಂದಲೂ ಹೆಚ್ಚಾಗಿ ಅಲಂಕೃತವಾಗಿರುತ್ತವೆ. ಆದ್ದರಿಂದ ಇಂಥ ಧಾರ್ಮಿಕ ನಿರ್ಮಿತಿಗಳನ್ನು ಮುಖ್ಯ ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿರುತ್ತದೆ: ಗರ್ಭಗೃಹ ಮತ್ತು ಇದರ ಮುಂದಿನ ಎಲ್ಲ ಭಾಗಗಳು ಸೇರಿ ಪ್ರಾಸಾದ (= ಅರಮನೆ). (ಎಂ.ಎಸ್.ಕೆ.)

ದೇವಾಲಯದ ಪರಿಕಲ್ಪನೆಯಲ್ಲೂ ಒಂದು ತಾತ್ತ್ವಿಕ ಅರ್ಥವಿದೆ. ದೇವಾಲಯ ಪರಮಾತ್ಮ (ದೇವ)ನಿಗೆ ತನ್ನ ವಿಶ್ವಸೃಷ್ಟಿಯ ಮನೆ (ಆಲಯ). ಇಂಥ ಆಲಯದಲ್ಲಿ ವಿಶ್ವದ ತನ್ನ ಎಲ್ಲ ಪರಿವಾರದೊಡನೆ ಪರಮಾತ್ಮ ಇರುತ್ತಾನೆ. ಆದ್ದರಿಂದ ವಿಶ್ವದಲ್ಲಿ ಕಾಣಸಿಗುವ ಯಾವುದನ್ನೂ ಇದರಲ್ಲಿ ತೋರಿಸಬಹುದು. ಆತ್ಮಸಹಿತ ಮನುಷ್ಯ ಶರೀರವೂ ಒಂದು ದೇವಾಲಯ; ಆತ್ಮ ದೇವರು (ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸನಾತನಃ). ಮನುಷ್ಯ ಕಾಲು ಚಾಚಿ ಕುಳಿತಾಗ, ಪಾದಗಳು ಗೋಪುರಸಹಿತ ಮಹಾದ್ವಾರ, ತೊಡೆಯಭಾಗ ಪ್ರಾಸಾದ, ಹೃದಯವೇ ಗರ್ಭಗೃಹ, ತಲೆಯೇ ಶಿಖರ.

ಈ ಎಲ್ಲ ಬೆಳವಣಿಗೆಗಳು ಏಕಕಾಲದಲ್ಲಿ ಆಗಲಿಲ್ಲ. ಕ್ರಮೇಣ ಇಂಥ ಹಲವಾರು ಮಾದರಿಗಳೂ ಹೊಸ ಹೊಸ ವಾಸ್ತು ಪರಿಕಲ್ಪನೆಗಳೂ ಗ್ರಂಥಸ್ಥವಾದುವು. ಇದೇ ಗ್ರಂಥಗಳೇ ವಾಸ್ತು/ಮೂರ್ತಿಶಿಲ್ಪ ಗ್ರಂಥಗಳು. ಮಾನಸಾರ, ಮಯಮತ, ಈಶಾನ ಶಿವ ಗುರು ದೇವ ಪದ್ಧತಿ, ಕಾಶ್ಯಪ ಶಿಲ್ಪ, ಉತ್ತರ ಭಾರತದ ಸಮರಾಂಗಣ ಸೂತ್ರಧಾರ, ಅಪರಾಜಿತ ಪೃಚ್ಛ ಇತ್ಯಾದಿ. ಹೆಚ್ಚಾಗಿ ಪೌರಾಣಿಕ ಶೈವ, ವೈಷ್ಣವ ಮೊದಲಾದ ಧಾರ್ಮಿಕ ಸಂಪ್ರದಾಯಗಳಿಗೆ ಸೇರಿದ ಗ್ರಂಥಗಳೆ ಹೆಚ್ಚು. ಈ ಪ್ರಕಾರದ ಜೈನ, ಬೌದ್ಧ ವಾಸ್ತುಶಿಲ್ಪ ಗ್ರಂಥಗಳೂ ಇವೆ. ಆದರೆ ಇವು ಸಂಖ್ಯೆಯಲ್ಲಿ ಕಡಿಮೆ. ಇಲ್ಲಿ ಸದ್ಯಕ್ಕೆ ದೇವಾಲಯ ವಾಸ್ತು, ಮೂರ್ತಿ ಶಿಲ್ಪಗಳ ಮಾದರಿಗಳನ್ನು ಇತರ ಲೌಕಿಕ ವಾಸ್ತುವಿಷಯಗಳನ್ನು ವಿವರಿಸುವ ಎರಡು ಗ್ರಂಥಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ ಮತ್ತು ಉದಾಹರಣಾರ್ಥವಾಗಿ ಕರ್ನಾಟಕದಲ್ಲಿ ಚೋಳ ಕಾಲದ ದೇವಾಲಯಗಳು ಮತ್ತು ವಾಸ್ತುಶಾಸ್ತ್ರಗಳಲ್ಲಿಯ ವಿವರಣೆಗಳ ಒಂದು ಸಮನ್ವಯ ಪ್ರಯತ್ನವನ್ನು ವಿವರಿಸಲಾಗಿದೆ. ಇದರ ಅನಂತರ ದ್ರಾವಿಡ, ನಾಗರ ಮೊದಲಾದ ಪ್ರಮುಖ ಧಾರ್ಮಿಕ ಮಾದರಿಗಳನ್ನು, ಸಾಮಾನ್ಯವಾಗಿ ಧಾರ್ಮಿಕ ಆಲಯದ ನಿರ್ಮಾಣ ವಿಧಾನ ಮತ್ತು ಭಾಗಗಳು. ರೂಢಿಯಲ್ಲಿ ಧಾರ್ಮಿಕ ಮಾದರಿಗಳನ್ನು ಶೈಲಿಯೆಂದು ಹೇಳಲಾಗುತ್ತದೆ. ಆದ್ದರಿಂದ ಇಲ್ಲಿ ದ್ರಾವಿಡ ಶೈಲಿ, ನಾಗರ ಶೈಲಿ ಎಂದು ವಿವರಿಸಲಾಗಿದೆ.

**ಸಮರಾಂಗಣ ಸೂತ್ರಧಾರ:** ವಾಸ್ತುಶಾಸ್ತ್ರಗ್ರಂಥ. ಚತುರ್ವೇದಗಳಿಗೆ ಉಪವೇದಗಳಿವೆ. ಅವುಗಳಲ್ಲಿ ಅಥರ್ವಣವೇದಕ್ಕೆ ಉಪವೇದ ಸ್ಥಾಪತ್ಯವೇದ ಅಂದರೆ ವಾಸ್ತು ಮತ್ತು ಶಿಲ್ಪಶಾಸ್ತ್ರಗಳು. ಶಿಲ್ಪಶಾಸ್ತ್ರ ಅತ್ಯಂತ ಪ್ರಾಚೀನ ಪರಂಪರೆಯುಳ್ಳದ್ದು ಎಂದು ಮತ್ಸ್ಯಪುರಾಣದಲ್ಲಿ ಹೇಳಿದೆಯಲ್ಲದೆ ಈ ಶಾಸ್ತ್ರವನ್ನು ಅನುವರ್ತಿಸಿದ ಭೃಗು, ಅತ್ರಿ, ವಸಿಷ್ಠ ಮುಂತಾದ 18 ವಾಸ್ತುಶಾಸ್ತ್ರಕಾರರ ಹೆಸರನ್ನು ಅದರಲ್ಲಿ ತಿಳಿಸಿದೆ. ಮುಂದಿನ ಕಾಲಗಳಲ್ಲಿ ವಾಸ್ತುಶಾಸ್ತ್ರ,

ಶಿಲ್ಪಶಾಸ್ತ್ರ ಮತ್ತು ಚಿತ್ರಶಾಸ್ತ್ರಗಳು ಮಾತ್ರ ಪರಿಣಾಮಕಾರಿಯಾಗಿ ಪ್ರಾಧಾನ್ಯತೆಯನ್ನು ಪಡೆದವು. ಸಮರಾಂಗಣ ಸೂತ್ರಧಾರ ವಾಸ್ತುಶಾಸ್ತ್ರವಾದರೂ ಸ್ಥಾಪತ್ಯಶಾಸ್ತ್ರ ಎಂಬ ಹೆಸರನ್ನು ಹೊಂದಿದೆ.

ವಾಸ್ತುಶಾಸ್ತ್ರ ಶಿಲ್ಪಶಾಸ್ತ್ರದ ಒಂದು ಭಾಗ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಸಮರಾಂಗಣ ಸೂತ್ರಧಾರದ ಪ್ರಕಾರ ಶಿಲ್ಪ ಮತ್ತು ಚಿತ್ರಶಾಸ್ತ್ರಗಳು ವಾಸ್ತುಶಾಸ್ತ್ರದ ಅಂಗವಾಗಿವೆ. ಈ ಗ್ರಂಥವನ್ನು 10ನೆಯ ಶತಮಾನದಲ್ಲಿದ್ದ ಧಾರಾಪಟ್ಟಣಕ್ಕೆ ರಾಜನಾದ ಭೋಜ ರಚಿಸಿದ. ಭಾರತದಲ್ಲಿ ಗೃಹನಿರ್ಮಾಣಕ್ಕಿಂತ ಪ್ರಾಸಾದ ನಿರ್ಮಾಣ ಶ್ರೇಷ್ಠವಾದದ್ದು. ಇಲ್ಲಿ ಪ್ರಾಸಾದ ಎಂದರೆ ದೇವಾಲಯ ಎಂದರ್ಥ. ದೇವಾಲಯ ನಿರ್ಮಾಣದಲ್ಲಿ ಅತ್ಯಂತ ಮುಖ್ಯಭಾಗವೆಂದರೆ ಮುಖ್ಯಮೂರ್ತಿಯ ಪ್ರತಿಷ್ಠೆ; ಹಾಗೆಯೇ ವಿಮಾನ ಇತ್ಯಾದಿ ಭಾಗಗಳಲ್ಲಿ ಮೂರ್ತಿಪ್ರತಿಷ್ಠೆ. ಆದ್ದರಿಂದ ಪ್ರಾಸಾದ ನಿರ್ಮಾಣಕ್ಕಿಂತ ಮೂರ್ತಿ ಮುಖ್ಯ ಎಂದಿಟ್ಟುಕೊಂಡರೆ, ಮೂರ್ತಿ ನಿರ್ಮಾಣಕ್ಕಿಂತ ಅದರ ಪೂರ್ವಭಾವಿಯಾದ ಚಿತ್ರ ನಿರ್ಮಾಣವೂ ಅಷ್ಟೇ ಮುಖ್ಯ. ಆದ್ದರಿಂದ ಸಮರಾಂಗಣ ಸೂತ್ರಧಾರದಲ್ಲಿ ಈ ಮೂರು ವಿಷಯಗಳನ್ನು ಚರ್ಚಿಸಲು ಮೂರು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ:

1. ವಾಸ್ತು–ಮನೆಗಳು, ರಾಜಗೃಹಗಳು ಮತ್ತು ದೇವಾಲಯಗಳ ನಿರ್ಮಾಣ (ಭವನ); 2. ಶಿಲ್ಪ – ಪ್ರತಿಮಾ ನಿರ್ಮಾಣ (ಭಾಸ್ಕರೀಯಂ); 3. ಚಿತ್ರ – ಬರೆಯಲ್ಪಡುವ ಚಿತ್ರಗಳು (ಆಲೇಖ್ಯಂ). ಅದಲ್ಲದೇ, ವಾಸ್ತುವಿನ ಎಂಟು ಭಾಗಗಳಾದ ಪುರ, ದುರ್ಗ, ಭವನ, ಪ್ರಾಸಾದ, ಪ್ರತಿಮಾ, ಚಿತ್ರ, ಯಂತ್ರ, ಶಯನಾಸನ ಮುಂತಾದವನ್ನೂ ವಿವರಿಸಲಾಗಿದೆ.

ಭಾರತೀಯ ಪರಂಪರೆಯಲ್ಲಿ ಅನೇಕ ವಾಸ್ತುಗ್ರಂಥಗಳು ಇರುವುದಾದರೂ ಸಮರಾಂಗಣ ಸೂತ್ರಧಾರವೇ ಎಲ್ಲ ಅಷ್ಟಾಂಗ ವಿಷಯಗಳನ್ನು ಒಳಗೊಂಡಿರುವ ಪರಿಪೂರ್ಣ ವಾಸ್ತುಗ್ರಂಥ. ಏಕೆಂದರೆ ಮಾನಸಾರ ಮತ್ತು ಮಯಮತದಲ್ಲಿ ಭವನ ನಿರ್ಮಾಣ ಮತ್ತು ಪ್ರತಿಮೆಗಳ ವರ್ಣನೆಯಿದ್ದು ಚಿತ್ರಗಳ ಬಗ್ಗೆ ವಿವರಗಳಿಲ್ಲ. ಶಿಲ್ಪರತ್ನದಲ್ಲಿ ಭವನ – ಪ್ರತಿಮಾ ನಿರ್ಮಾಣ ಮತ್ತು ಚಿತ್ರಗಳ ಬಗೆಗೆ ಇದ್ದರೂ ಇತರ ಯಂತ್ರ–ಶಯನಾಸನಗಳ ಬಗೆಗೆ ಇಲ್ಲ. ಆದ್ದರಿಂದ ಸ್ಥಾಪತ್ಯ ಶಾಸ್ತ್ರ ಎಂದು ಕರೆಸಿಕೊಳ್ಳುವ ಸಮರಾಂಗಣ ಸೂತ್ರಧಾರವೇ ಅತ್ಯಂತ ಪರಿಪೂರ್ಣ ವಾಸ್ತುಗ್ರಂಥ.

ಸಮರಾಂಗಣ ಸೂತ್ರಧಾರದ ಸಮಕಾಲೀನ ಗ್ರಂಥವಾದ ಅಪರಾಜಿತ ಪೃಚ್ಛವೂ ವಾಸ್ತುಶಾಸ್ತ್ರದ ಎಲ್ಲ ಅಂಶಗಳನ್ನೂ ಅಂದರೆ ವಾಸ್ತು, ಶಿಲ್ಪ, ಗೀತ, ತಾಲ, ವಾದಕರ ವರ್ಣನೆಯನ್ನು ಹೊಂದಿದೆ.

ಮಂಗಲಾಚರಣೆ, ಭೂಮಿ ಮತ್ತು ಪೃಥು ಚಕ್ರವರ್ತಿಯ ವಿಚಾರ ಹಾಗೂ ಶಾಸ್ತ್ರಕ್ಕೆ ಮುಖ್ಯನಾದ ವಿಶ್ವಕರ್ಮನ ವಿಚಾರವನ್ನು ಮೊದಲನೆಯ ಭಾಗದ (ದೇವಾಲಯ ನಿರ್ಮಾಣ) ಮೊದಲನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಬ್ರಹ್ಮನ ಅಭಿಮತವನ್ನು ವಿಶ್ವಕರ್ಮನು ತನ್ನ ಮಕ್ಕಳಿಗೆ ಹೇಳಿದ್ದನ್ನು ಹೇಳಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಈ ವಾಸ್ತುಶಾಸ್ತ್ರದ ಬಗ್ಗೆ ತಿಳಿಯಲಪೇಕ್ಷಿಸಿದವರು ವಿಶ್ವಕರ್ಮನ ಮಗನಾದ ಜಯನನ್ನು ವಾಸ್ತುಶಾಸ್ತ್ರದ ಎಂಟು ಅಂಗಗಳ ಬಗ್ಗೆ ಪ್ರಶ್ನಿಸಿದ್ದನ್ನು ಹೇಳಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಈ ವಾಸ್ತು ಶಾಸ್ತ್ರದ ಉತ್ಪತ್ತಿ ಹೇಗಾಯಿತೆಂದು ಹೇಳಲಾಗಿದೆ. ಅದಕ್ಕೆ ಮುಂಚೆ ಪ್ರಪಂಚದ ಉತ್ಪತ್ತಿ ಮತ್ತು ಪ್ರಾಣಿಗಳ ಉತ್ಪತ್ತಿಯನ್ನು ಹೇಳಲಾಗಿದೆ. ಐದನೆಯ ಅಧ್ಯಾಯದಲ್ಲಿ ಭೂಮಿಯ ಪರಿಮಾಣ, ಏಳು ದ್ವೀಪಗಳು, ಅದರಲ್ಲಿ ಭಾರತದ ವರ್ಣನೆ, ಸೂರ್ಯಚಂದ್ರರ ಬಗೆಗೆ ವಿವರಣೆ ನೀಡಲಾಗಿದೆ. ಆರನೆಯ ಅಧ್ಯಾಯದಲ್ಲಿ ಮಿಥುನಸೃಷ್ಟಿಯ ನಂತರ ಕೃತಯುಗದಲ್ಲಿ ಮೊದಲ ಬಾರಿಗೆ ಮನೆಗಳನ್ನು ಹೊಂದಲು ಅವರಿಂದ ಮಾಡಲ್ಪಟ್ಟ ಮೊದಲ ಪ್ರಯತ್ನಗಳನ್ನು ವರ್ಣಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಪೃಥುಮಹಾರಾಜ ರಾಜ್ಯಾಭಿಷೇಕವನ್ನು ಮಾಡಿಕೊಂಡು ರಾಜನಾದದ್ದನ್ನು ಹೇಳಿ, ರಾಜ್ಯದ ವ್ಯವಸ್ಥೆಗೋಸ್ಕರ ಬ್ರಾಹ್ಮಣಾದಿ ವರ್ಣಗಳ ವ್ಯವಸ್ಥೆಯನ್ನು ಮಾಡಿ, ಸಮಾಜಕ್ಕಾಗಿ ಮತ್ತು ಎಲ್ಲರ ಸಂತೋಷಕ್ಕಾಗಿ ಗ್ರಾಮಗಳನ್ನು ಅವರ ವಾಸ್ತವ್ಯಕ್ಕಾಗಿ ಏರ್ಪಡಿಸಿದ್ದನ್ನು ಹೇಳಲಾಗಿದೆ. ಎಂಟನೆಯ ಅಧ್ಯಾಯದಲ್ಲಿ ಸ್ಥಪತಿಯ ಲಕ್ಷಣ, ಕೇವಲ ಓದಿದವನ ಮತ್ತು ಕೇವಲ ಕೆಲಸಮಾಡಿ ಗೊತ್ತಿರುವವನ ನಿಂದೆಯಿದೆ. ಅಂದರೆ ಓದುವುದರ ಜೊತೆಗೆ ಸ್ವತಃ ತಾನು ಕೆಲಸ ಮಾಡುವ ಅನುಭವ ಹೊಂದಿರುವವನು ಶ್ರೇಷ್ಠ ಎಂದು ಭೋಜನ ಅಭಿಪ್ರಾಯ. ಸ್ಥಪತಿಯ ನಡತೆ, ಯೋಗ್ಯತೆ ಮುಂತಾದವುಗಳ ಬಗೆಗೆ ವಿಚಾರ ಮಾಡಲಾಗಿದೆ. ಒಂಬತ್ತನೆಯ ಅಧ್ಯಾಯದಲ್ಲಿ ವಾಸ್ತುಶಾಸ್ತ್ರದ ಅಷ್ಟಾಂಗಗಳ ವಿವರಣೆ, ಯಜ್ಞಶಾಲೆಯ ನಿರ್ಮಾಣ, ರಾಜಶಿಬಿರ, ದುರ್ಗಗಳು ಮುಂತಾದ ವಿಷಯಗಳ ಬಗೆಗೆ ಹೇಳಲಾಗಿದೆ. ಹತ್ತನೆಯ ಅಧ್ಯಾಯದಲ್ಲಿ ಭೂಮಿಯ ಪರೀಕ್ಷೆ, ಮಣ್ಣಿನ ಪರೀಕ್ಷೆ ಅವುಗಳಲ್ಲಿ ಯಾವ ಭೂಮಿ ಮನೆಕಟ್ಟಲು ಪ್ರಶಸ್ತ, ಯಾವುದು ವರ್ಜ್ಯ ಮುಂತಾದ ವಿಷಯಗಳನ್ನು ವಿವರಿಸಲಾಗಿದೆ. ಹನ್ನೊಂದನೆಯ ಅಧ್ಯಾಯದಲ್ಲಿ ಅಳತೆಗಳ ಬಗೆಗೆ ಅಂದರೆ ಹಸ್ತಮಾನಗಳ ಬಗೆಗೆ ಹೇಳಲಾಗಿದೆ. ಹನ್ನೆರಡನೆಯ ಅಧ್ಯಾಯದಲ್ಲಿ ಆಯಾದಿಗಳ ಬಗೆಗೆ ವಿಚಾರಮಾಡಲಾಗಿದೆ. ಹದಿಮೂರನೆಯ ಅಧ್ಯಾಯದಲ್ಲಿ ಸ್ಥಪತಿಗಳು (ಶಿಲ್ಪಿಗಳು) ಮಾಡುವ ಇಂದ್ರಧ್ವಜ ಸ್ಥಾಪನ, ಶಾಂತಿಹೋಮಗಳು, ಶುಭಾಶುಭಗಳ ಪರೀಕ್ಷೆ ಮುಂತಾದ ವಿಚಾರಗಳನ್ನು ಚರ್ಚಿಸಲಾಗಿದೆ. ಹದಿನಾಲ್ಕನೆಯ ಅಧ್ಯಾಯದಲ್ಲಿ ವಾಸ್ತುಪದವನ್ನು, ವಿನ್ಯಾಸ ಕ್ರಮವನ್ನು ಹೇಳಲಾಗಿದೆ. ಹದಿನೈದನೆಯ ಅಧ್ಯಾಯದಲ್ಲಿ ನಾಡಿಗಳ ಬಗೆಗೆ ಹೇಳಲಾಗಿದೆ. ಹದಿನಾರರಿಂದ ಇಪ್ಪತ್ತನೆಯ ಅಧ್ಯಾಯದವರೆಗೆ ವಾಸ್ತುವಿನಲ್ಲಿ ಉಂಟಾಗುವ ದೋಷ, ಪುರುಷಾಂಗದೇವತೆ, ಮಾತೃಕೆಯರ ಪ್ರತಿಷ್ಠೆ, ಬಲಿದಾನ ಮತ್ತು ಶಿಲಾನ್ಯಾಸದ ವರೆಗೆ ಹೇಳಲಾಗಿದೆ. ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ಕೀಲಕಸೂತ್ರಪಾತಗಳನ್ನು ಹೇಳಲಾಗಿದೆ. ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಮುಖ್ಯವಾದ ಅಂಶಗಳು ಹೇಳಲ್ಪಡುತ್ತವೆ. ಈ ಅಧ್ಯಾಯದಲ್ಲಿ ನಗರ, ಪುರ, ಹಳ್ಳಿಗಳ ಸ್ವರೂಪದ ಬಗೆಗೆ ಹೇಳಲಾಗಿದೆ. ಮನೆ, ಮೆಟ್ಟಿಲು, ಸೌಧ, ಕಿಟಕಿ, ಗಾಳಿಗೆ ಮಾಡಿರುವ ಕಿಂಡಿಗಳ ಸ್ವರೂಪ, ಬಹು ಕೊಠಡಿಗಳುಳ್ಳ ಮನೆಗಳ ಸ್ವರೂಪ, ಬಾವಿಗಳು, ಅರಮನೆ, ಕಕ್ಷೆ, ಪ್ರತೋಲಿ, ಶೌಚಾಲಯದ ವ್ಯವಸ್ಥೆ, ಗೋಪುರಗಳು, ಜಲೋದ್ಯಾನ, ಸಂಜೆ ತಿರುಗಾಡಲು ಇರುವ ಉಪವನ ಹೀಗೆ ಅನೇಕ ವಿಷಯಗಳ ಬಗೆಗೆ ತಿಳಿಸುತ್ತದೆ. ಇಪ್ಪತ್ಮೂರನೆಯ ಅಧ್ಯಾಯದಲ್ಲಿ ಉತ್ತಮ, ಮಧ್ಯಮ, ಅಧಮ ಪುರಗಳ ಲಕ್ಷಣ, ಅವುಗಳಲ್ಲಿ ರಸ್ತೆಯ ವ್ಯವಸ್ಥೆ, ಪುರದ್ವಾರಗಳ ಪ್ರಮಾಣ, ನೀರಿನ ವ್ಯವಸ್ಥೆ, ಆ ಊರಿನಲ್ಲಿರುವ ನಗರ ರಕ್ಷಕ ದೇವತೆಗಳ ದೇವಾಲಯಗಳು ಇತ್ಯಾದಿ ವಿಷಯಗಳ ಬಗೆಗೆ ಪೂರ್ಣವಿವರಗಳನ್ನು ನೀಡುತ್ತವೆ. ಇಪ್ಪತ್ನಾಲ್ಕನೆಯ ಅಧ್ಯಾಯದಲ್ಲಿ ಒಂದು ಕೊಠಡಿಯಿಂದ ಆರು ಕೊಠಡಿಗಳ ತನಕ ಇರುವ ಮನೆಗಳ ಸ್ವರೂಪವನ್ನು ವಿವರಿಸಲಾಗಿದೆ. ಮನೆಗಳಿಗೆ ಬೇಕಾದ ಮರಗಳು, ಅವುಗಳನ್ನು ಸಂಗ್ರಹಿಸುವ ವಿಧಾನ, ಬಾಗಿಲು, ಕಂಬಗಳು, ತೊಲೆಗಳು–ಇವುಗಳ ನಿರ್ಮಾಣ, ಈ ಮನೆಗಳ ಭಾಗಗಳಲ್ಲಿ ಬರುವ ದೋಷಗಳು, ಅವುಗಳ ನಿವಾರಣೆಗಳನ್ನು ಹೇಳಲಾಗಿದೆ. ಕಡೆಯದಾದ ಮೂವತ್ತಾರನೆಯ ಅಧ್ಯಾಯದಲ್ಲಿ ಮನೆಗಳಲ್ಲಿ ಉಂಟಾಗುವ ಒಡಕುಗಳಿಗೆ ಶಾಂತಿವಿಧಾನವನ್ನು ಹೇಳಲಾಗಿದೆ. ಹೀಗೆ ಇಲ್ಲಿ ಹೇಳಿರುವ ಅನೇಕ ವಿಷಯಗಳು ಭಾರತದ ದೇವಾಲಯಗಳು, ಪಟ್ಟಣಗಳು ಮತ್ತು ಮನೆಗಳಿಗೆ ಹೊಂದಿಕೆಯಾಗುತ್ತವೆ. (ಎಸ್.ಪಿ.ಐ.)

ಮಧ್ಯಯುಗೀನ ಕಾಲದಲ್ಲಿ ಈ ಪ್ರಕಾರದ ವಾಸ್ತು ಗ್ರಂಥಗಳನ್ನು ಬಹುಮಟ್ಟಿಗೆ ದೇವಾಲಯ ನಿರ್ಮಾಣದಲ್ಲಿ ಅನುಸರಿಸಿರುವುದನ್ನು ಇತ್ತೀಚಿನ ಚೋಳ ದೇವಾಲಯಗಳ ವಾಸ್ತು ಅಧ್ಯಯನದಲ್ಲಿ ನಿಚ್ಚಳವಾಗಿ ಕಂಡು ಬಂದಿದೆ.

**ಚೋಳರ ವಾಸ್ತುಶಿಲ್ಪ: ಶಾಸ್ತ್ರಗ್ರಂಥಗಳು:** ಪಲ್ಲವರ ತರುವಾಯ ತಮಿಳುನಾಡಿನಲ್ಲಿ ಸು.850ರಲ್ಲಿ ಆಧಿಪತ್ಯವನ್ನು ಪ್ರಾರಂಭಿಸಿದ ಚೋಳರು ತಮ್ಮ ರಾಜ್ಯಾದ್ಯಂತ ದೇವಾಲಯ ನಿರ್ಮಾಣ ಕಾರ್ಯ ಆರಂಭಿಸಿ ನೂರಾರು ದೇವಾಲಯಗಳನ್ನು ನಿರ್ಮಿಸಿದರು. ಈ ಕಾಲಕ್ಕೆ ದೇವಾಲಯ ನಿರ್ಮಾಣಕ್ಕೆ ಅನುಕೂಲವಾಗುವಂತಹ ಹಲವು ವಾಸ್ತುಗ್ರಂಥಗಳು ಶಿಲ್ಪಿಗಳಿಗೆ ಪರಿಚಿತವಾಗಿದ್ದವು. ದೇವಾಲಯ ವಾಸ್ತುಶಿಲ್ಪ ಶಾಸ್ತ್ರ ದೇವಾಲಯ ನಿರ್ಮಾಣದ ಶಾಸ್ತ್ರಬದ್ಧ ನಿರೂಪಣೆ, ದೇವಾಲಯದ ವಿವಿಧ ಭಾಗಗಳ ಪ್ರಮಾಣ, ಅಲಂಕರಣ ಇವುಗಳ ವಿನ್ಯಾಸ–ಹೀಗೆ ದೇವಾಲಯ ನಿರ್ಮಾಣ ಕಾರ್ಯಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿವೆ. ಚೋಳರ ಕಾಲಕ್ಕೆ ಗೃಹ್ಯಸೂತ್ರ, ಶುಲ್ವಸೂತ್ರ ಮೊದಲಾದ ಸೂತ್ರ ಗ್ರಂಥಗಳು, ವಿಷ್ಣುಧರ್ಮೋತ್ತರ ಪುರಾಣ, ಮತ್ಸ್ಯಪುರಾಣ, ಅಗ್ನಿಪುರಾಣ ಮುಂತಾದ ಪುರಾಣ ಗ್ರಂಥಗಳು; ಕಾಮಿಕಾಗಮ, ಕಾರಣಾಗಮ, ಅಜಿತಾಗಮ, ರೌರವಾಗಮ, ಸುಪ್ರಭೇದಾಗಮ ಇತ್ಯಾದಿ ಆಗಮಗಳು; ಬೃಹತ್ ಸಂಹಿತೆ, ಕಾಶ್ಯಪಶಿಲ್ಪ, ಮಯಮತ ಮೊದಲಾದ ಗ್ರಂಥಗಳಲ್ಲಿ ವಾಸ್ತುಶಾಸ್ತ್ರವನ್ನು ಕುರಿತು ಸಾಕಷ್ಟು ವಿವರಣೆಗಳು ಲಭ್ಯವಿದ್ದವು. ಚೋಳ ಶಿಲ್ಪಿಗಳು ಈ ರೀತಿಯ ವಾಸ್ತು ಗ್ರಂಥಗಳನ್ನು ಅರಿತು ಇವುಗಳ ಮಾರ್ಗದರ್ಶನದಲ್ಲಿ ದೇವಾಲಯ ನಿರ್ಮಾಣ ಕಾರ್ಯದಲ್ಲಿ ನಿಷ್ಣಾತರಾಗಿದ್ದರು ಎಂಬುದು ಇವರ ದೇವಾಲಯ ವಾಸ್ತುನಿರ್ಮಾಣದ ಪ್ರಗತಿಯನ್ನು ಕೂಲಂಕಷವಾಗಿ ಗಮನಿಸಿದಾಗ ತಿಳಿದುಬರುತ್ತದೆ.

**ಚೋಳ ದೇವಾಲಯದ ಲಕ್ಷಣಗಳು:** ವಾಸ್ತುಗ್ರಂಥಗಳಲ್ಲಿ ದೇವಾಲಯವನ್ನು ಪ್ರಾಸಾದ, ವಿಮಾನ, ಭವನ, ಆಲಯ ಎಂದು ಹಲವು ರೀತಿಯಾಗಿ ಕರೆಯಲಾಗಿದೆ. ದೇವಾಲಯಗಳನ್ನು ತಳದಿಂದ ಶಿಖರದ ಕಲಶದವರೆಗೆ ಷಡ್ವರ್ಗವಾಗಿ ವಿಂಗಡಿಸಲಾಗಿದೆ. ಅವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ. ಹೀಗಾಗಿ ಶಾಸ್ತ್ರಗಳು ಉಪಾನಾದಿ ಸ್ತೂಪಿ ಪರ್ಯಂತಂ ವಿಮಾನಃ ಎಂದಿವೆ. ಷಡ್ವರ್ಗ ಕ್ರಮದಲ್ಲಿ ಅಧಿಷ್ಠಾನ ದೇವಾಲಯದ ಮೊದಲ ಭಾಗ. ದೇವಾಲಯಕ್ಕೆ ಹೆಚ್ಚಿನ ಎತ್ತರ ಬೇಕಾದಲ್ಲಿ ಅಧಿಷ್ಠಾನದ ಕೆಳಭಾಗದಲ್ಲಿ ಉಪಪೀಠವನ್ನು ಸೇರಿಸಬಹುದು.

ಚೋಳರ ದೇವಾಲಯಗಳಲ್ಲಿ ಕಾಣುವ ಪ್ರಮುಖ ಅಧಿಷ್ಠಾನ ವಿಧಾನಗಳೆಂದರೆ – ಪಾದಬಂಧ, ಪ್ರತಿಬಂಧ, ಮಂಚಬಂಧ, ಪ್ರತಿಕ್ರಮ ಬಂಧ, ಶ್ರೀಬಂಧ, ಕಪೋತಬಂಧ, ಪದ್ಮಕ ಅಧಿಷ್ಠಾನ, ಪದ್ಮಬಂಧ ಪದ್ಮಪುಷ್ಕಳ ಇತ್ಯಾದಿ. ಚೋಳರ ಬಹುಪಾಲು ದೇವಾಲಯಗಳು ಪಾದಬಂಧ ಅಧಿಷ್ಠಾನವನ್ನು ಹೊಂದಿದ್ದು 1000ದ ಅನಂತರ ನಿರ್ಮಾಣವಾದ ದೇವಾಲಯಗಳ ಪಾದಬಂಧ ಅಧಿಷ್ಠಾನದಲ್ಲಿ ಎರಡು ಗಳಗಳಿರುತ್ತವೆ. ಸು.1000 ಕ್ಕಿಂತ ಮುಂಚೆ ನಿರ್ಮಾಣವಾದ ದೇವಾಲಯಗಳಲ್ಲಿ ಪಾದಬಂಧ ಅಧಿಷ್ಠಾನಗಳಲ್ಲಿ ಒಂದೇ ಗಳವನ್ನು ಉಪಯೋಗಿಸಿರುವುದು ಗಮನಿಸಬೇಕಾದ ಅಂಶ. ಪಾದಬಂಧ ಅಧಿಷ್ಠಾನವು ಮುತ್ತುರಾಯರ ಕಾಲದಿಂದಲೂ ಪ್ರಯೋಗದಲ್ಲಿದ್ದು ತಂಜಾವೂರಿನ ಚೋಳರ ಕಾಲದಲ್ಲಿ ಹೆಚ್ಚು ಜನಪ್ರಿಯವಾದ ಅಧಿಷ್ಠಾನ ವಿಧಾನವಾಗಿತ್ತು. ವೀರಲೂರು ಭೂಮೀಶ್ವರ ದೇವಾಲಯ, ಪಾನನ್‌ಗುಡಿಯ ಅಗಸ್ತ್ಯೇಶ್ವರ ದೇವಾಲಯ, ನೃತ್ತಮಲೈನ ವಿಜಯಾಲಯ ಚೋಳೇಶ್ವರ ದೇವಾಲಯ, ನೇಮಂನ ಐರಾವತೇಶ್ವರ ದೇವಾಲಯಗಳಲ್ಲಿ ಪಾದಬಂಧ ಅಧಿಷ್ಠಾನವನ್ನು

ಬಳಸಲಾಗಿದೆ. ನೃತ್ತಮಲ್ಯೈನಲ್ಲಿರುವ ವಿಜಯಾಲಯಚೋಳೇಶ್ವರ ದೇವಾಲಯ ಮತ್ತು ನೇಮಂನ ಐರಾವತೇಶ್ವರ ದೇವಾಲಯಗಳ ಅಧಿಷ್ಠಾನದ ಗಳ ಭಾಗದಲ್ಲಿ ಗಳ ಪಾದಗಳಿದ್ದು ಅವು ವಿವಿಧ ವಿನ್ಯಾಸದಿಂದ ಅಲಂಕೃತವಾಗಿವೆ.

ಚೋಳ ದೇವಾಲಯಗಳಲ್ಲಿ ಮೊದಲಿನಿಂದಲೂ ಬಳಕೆಯಲ್ಲಿದ್ದ ಇನ್ನೊಂದು ಅಧಿಷ್ಠಾನ ಪ್ರತಿಬಂಧ ಅಧಿಷ್ಠಾನ. ಸೆಂದಲ್ಯೈ ಸುಂದರೇಶ್ವರ ದೇವಸ್ಥಾನ, ಕಿರನೂರಿನ ಉತ್ತಮ ದಾನೀಶ್ವರ ದೇವಸ್ಥಾನ, ಇರುಕ್ಕುವೇಲಿನ ಚೆಟ್ಟಿಯ ಪಟ್ಟಿಯ ಜೈನ ದೇವಾಲಯಗಳಲ್ಲಿ ಪ್ರತಿಬಂಧ ಅಧಿಷ್ಠಾನವನ್ನು ಬಳಸಲಾಗಿದೆ. ಆದಿತ್ಯ ಚೋಳನ ಕಾಲದಲ್ಲಿ ನಿರ್ಮಾಣವಾದ ತಿರುಕ್ಕಾತ್ತುರ್ರೈನಲ್ಲಿರುವ ಬಡವನೇಶ್ವರ ದೇವಾಲಯದಲ್ಲಿ ಪದ್ಮಕ ಅಧಿಷ್ಠಾನದ ಪ್ರಯೋಗವನ್ನು ಕಾಣಬಹುದು. ತಿರುಕರಟ್ಟಿ ಪುಲ್ಲಿಯಲ್ಲಿರುವ ಅಗ್ನೀಶ್ವರ ದೇವಾಲಯ ಶ್ರೀನಿವಾಸ ನಲ್ಲೂರಿನ ಕೊರಂಗನಾಥ ದೇವಾಲಯ ಮತ್ತು ಆಲೂರಿನ ಪಂಚನಾದೀಶ್ವರ ದೇವಾಲಯದ ಅಧಿಷ್ಠಾನ ವಕ್ರಬಂಧ ಅಧಿಷ್ಠಾನವಾಗಿದೆ.

ಚೋಳರ ಹಲವು ದೇವಾಲಯಗಳಲ್ಲಿ ಬಳಸಲಾಗಿರುವ ಮತ್ತೊಂದು ಬಗೆಯ ಅಧಿಷ್ಠಾನವೇ ಪದ್ಮಬಂಧ ಅಧಿಷ್ಠಾನ. ಕಿಲಯನೂರಿನ ಅಗಸ್ತ್ಯೇಶ್ವರ, ತಿರುವಾರೂರಿನ ತ್ಯಾಗರಾಜಸ್ವಾಮಿ, ತಿರುನಾರ್ರೈಯೂರಿನ ಸಿದ್ಧಾಂಥನಾಥ, ಆಲ್ಲೂರಿನ ಪಂಚನಾದೀಶ್ವರ, ತಿರುವಾರೂರಿನ ವಾಲ್ಮೀಕಿನಾಥ ದೇವಾಲಯಗಳಲ್ಲಿ ಪದ್ಮಬಂಧ ಅಧಿಷ್ಠಾನವಿದೆ. ಈ ರೀತಿಯ ಅಧಿಷ್ಠಾನದಲ್ಲಿ ಪ್ರಮುಖ ಅಂಗಗಳನ್ನು ಪದ್ಮ ದಳಗಳಿಂದ ಅಲಂಕರಿಸಿರಲಾಗಿರುತ್ತದೆ.

ಚೋಳರ ದೇವಾಲಯದ ಅಧಿಷ್ಠಾನದಲ್ಲಿ ಕಪೋತದ ಬಳಕೆ ವಿರಳ. ಕೆಲವು ದೇವಾಲಯಗಳಲ್ಲಿ ಮಾತ್ರ ಕಪೋತಬಂಧ ಅಧಿಷ್ಠಾನವಿದೆ. ಕರ್ನಾಟಕದ ದೇವಾಲಯದ ಅಧಿಷ್ಠಾನದಲ್ಲಿ ಕಪೋತದ ಬಳಕೆ ಅಧಿಕವಾಗಿದ್ದು, ತಮಿಳುನಾಡಿನ ದೇವಾಲಯಗಳಲ್ಲಿ ಕಪೋತಕ್ಕೆ ಬದಲಾಗಿ ಪಟ್ಟಿಕೆಯನ್ನು ಬಳಸಿರುವುದು ಹೆಚ್ಚಾಗಿ ಕಂಡುಬರುತ್ತದೆ. ಅಧಿಷ್ಠಾನದಲ್ಲಿ ಕಪೋತವನ್ನೂ ಬಳಸಿದಾಗ ಅದು ಕಪೋತ ಬಂಧ ಅಧಿಷ್ಠಾನವಾಗುವುದು. ಪುಲ್ಲಮಂಗ್ಯೆನ ಬ್ರಹ್ಮಪುರೀಶ್ವರ ದೇವಾಲಯ, ಸೋಮೂರಿನ ಶಿಥಿಲವಾದ ದೇವಸ್ಥಾನ, ತಿರುಚ್ಚೆನಮ್ ಪುಂಡಿಯ ಚೆದ್ಯೆಯಾರ್ ಕೋವಿಲ್‌ನಲ್ಲಿ ಕಪೋತಬಂಧ ಅಧಿಷ್ಠಾನವನ್ನು ಕಾಣಬಹುದು.

ಚೋಳರ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿದ್ದ ಅಧಿಷ್ಠಾನ ಪ್ರಕಾರವೇ ಪುಷ್ಪಬಂಧ ಅಧಿಷ್ಠಾನ. ಸೆಂಬಿಯನ್ ಮಹಾದೇವಿಯ ಕೈಲಾಸನಾಥ, ತಿರುವಾರೂರಿನ ಅಚಲೇಶ್ವರ, ತಿರುನಾಗೇಶ್ವರಂನ ನಾಗೇಶ್ವರ, ತಿರುವಾದು ತುರ್ರೈನ ಗೋಮುಕ್ತೇಶ್ವರ ದೇವಾಲಯಗಳಲ್ಲಿ ಪುಷ್ಪಬಂಧ ಅಧಿಷ್ಠಾನವನ್ನು ಬಳಸಲಾಗಿದೆ. ಆದು ತುರ್ರೈನಲ್ಲಿರುವ ಆಪಾತ್ ಸಹಾಯೇಶ್ವರ, ತಿರುರಾಮೇಶ್ವರಂನ ರಾಮೇಶ್ವರ ಮತ್ತು ತಿರುವಾರೂರಿನ ವಾಲ್ಮೀಕಿನಾಥ ದೇವಾಲಯಗಳಲ್ಲಿ ಸುಂದರಾಬ್ಜ ಅಧಿಷ್ಠಾನವನ್ನು ಗಮನಿಸಬಹುದು. ಈ ಬಗೆಯ ಅಧಿಷ್ಠಾನಗಳಲ್ಲಿ ಎತ್ತರವಾದ, ವಿಶಾಲವಾದ ಮಹಾಪದ್ಮ ಜಗತಿಯನ್ನು ಗಮನಿಸಬಹುದು. ಅತ್ಯಂತ ಸುಂದರವಾದ ಮತ್ತು ಆಕರ್ಷಣೀಯವಾದ ಅಧಿಷ್ಠಾನ ಬಗೆಯೇ ಶ್ರೀಬಂಧ ಅಧಿಷ್ಠಾನ. ಈ ಬಗೆಯ ಅಧಿಷ್ಠಾನದಲ್ಲಿ ಪದ್ಮ ದಳಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ. ವೃದ್ಧಾಚಲಂನ ವೃದ್ಧಗಿರೀಶ್ವರ, ಕುಟ್ಟಾಲಂನ ಉಕ್ತವೇದೀಶ್ವರ, ತಿರುಪುರಾಂಬಿಯಂನ ಸಾಕ್ಷೀಶ್ವರ, ಮಾದಗಾದಿ ಪಟ್ಟುವಿನ ಶಿವ ದೇವಾಲಯಗಳಲ್ಲಿ ಶ್ರೀಬಂಧ ಅಧಿಷ್ಠಾನವಿದೆ.

ಅಧಿಷ್ಠಾನದಲ್ಲಿ ಪುಷ್ಕಳವಾದ ಮಹಾಪದ್ಮಗಳು ಇದ್ದಲ್ಲಿ ಇದನ್ನು ಪದ್ಮಪುಷ್ಕಳ ಅಧಿಷ್ಠಾನವೆಂದು ಗುರುತಿಸಲಾಗಿದೆ. ಸು. 8–10ನೆಯ ಶತಮಾನದವರೆಗೆ ಕೋನಾಡನ್ನು ಆಳಿದ ಇರುಕ್ಕುವೇಲರು ಅಥವಾ ಇಳಗೋವೇಲರು ಹಲವಾರು ದೇವಾಲಯಗಳನ್ನು ಕಟ್ಟಿದರು. ಅವರ ದೇವಾಲಯಗಳಲ್ಲಿ ಪದ್ಮಪುಷ್ಕಳ ಅಧಿಷ್ಠಾನವನ್ನು ಬಳಸಲಾಗಿದೆ. ಕಿಲ್ಯೆಯೂರಿನ ಅಗಸ್ತ್ಯೇಶ್ವರ, ತಿರುವೈಯ್ಯಾರಿನ ಪಂಚನಂದೀಶ್ವರ ಮತ್ತು ತಿರುಚ್ಚಂದುರ್ರೈನ ಚಂದ್ರಶೇಖರ ದೇವಾಲಯಗಳಲ್ಲಿ ಪದ್ಮಪುಷ್ಕಳ ಅಧಿಷ್ಠಾನವನ್ನು ಗಮನಿಸಬಹುದು.

ತಂಜಾವೂರಿನ ಚೋಳರ ದೇವಾಲಯಗಳಲ್ಲಿ ಅಧಿಷ್ಠಾನದ ಕೆಳಭಾಗದಲ್ಲಿ ಉಪಪೀಠಗಳನ್ನು ಬಳಸಿರುವುದನ್ನು ಗಮನಿಸಬಹುದು. ಈ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳ ಗಾತ್ರ ಮತ್ತು ಎತ್ತರ ಹೆಚ್ಚಾಗಿದ್ದು ಇವು ಬೃಹತ್ತಾದ ದೇವಾಲಯಗಳಾಗಿವೆ. ಹೀಗಾಗಿ ಈ ರೀತಿಯ ದೇವಾಲಯಗಳಲ್ಲಿ ಹೆಚ್ಚಿನ ಎತ್ತರ ಮತ್ತು ಶೋಭೆಗಾಗಿ ಉಪಪೀಠಗಳನ್ನು ಬಳಸಲಾಗಿದೆ. ದಾದಾಪುರಂನ ಶಿವದೇವಾಲಯದಲ್ಲಿ ಷಡಂಗಗಳನ್ನು ಹೊಂದಿರುವ ವೇದಿಭದ್ರ ಉಪಪೀಠವನ್ನು ಬಳಸಲಾಗಿದೆ. ತಂಜಾವೂರಿನ ಬೃಹದೀಶ್ವರ ದೇವಸ್ಥಾನದಲ್ಲಿ ಕಪೋತಾಸನ ಉಪಪೀಠವನ್ನು ಬಳಸಲಾಗಿದೆ. ಗಂಗೈಕೊಂಡ ಚೋಳಪುರಂನಲ್ಲಿ ವೇದಿಭದ್ರ ಉಪಪೀಠದಲ್ಲಿ ಪ್ರಯೋಗವಿದೆ. ತ್ರಿಭುವನಂನ ಕಂಪಹರೇಶ್ವರ ದೇವಾಲಯದಲ್ಲಿ ಕಪೋತಭದ್ರ ಉಪಪೀಠದ ಮೇಲೆ ಕಪೋತ ಬಂಧ ಅಧಿಷ್ಠಾನವಿದೆ. ಹೀಗೆ ಚೋಳರ ದೇವಾಲಯದಲ್ಲಿ ವಾಸ್ತುಗ್ರಂಥಗಳಲ್ಲಿ ಹೇಳಿರುವ ಹಲವು ಬಗೆಯ ಅಧಿಷ್ಠಾನ ವಿಧಗಳನ್ನು ಶಾಸ್ತ್ರಬದ್ಧವಾಗಿ ನಿರ್ಮಿಸಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ದೇವಾಲಯದ ಷಡ್ವರ್ಗ ಕ್ರಮದಲ್ಲಿ ಎರಡನೆಯ ಭಾಗವೇ ಭಿತ್ತಿ. ಇದು ಅಧಿಷ್ಠಾನದ ಮೇಲ್ಭಾಗದಲ್ಲಿ ಮತ್ತು ಪ್ರಸ್ತರದ ಕೆಳಭಾಗದಲ್ಲಿರುವ ಅಂಗ ಅಥವಾ ಅಧಿಷ್ಠಾನ ಮತ್ತು ಪ್ರಸ್ತರದ ನಡುವೇ ಇರುವ ಭಾಗ. ಭಿತ್ತಿ ದೇವಾಲಯದ ರಚನೆಗಾಗಿಯೇ ನಿರ್ಮಿಸಲ್ಪಟ್ಟಿದ್ದರೂ ಇದು ಅನೇಕ ರೀತಿಯ ಅಲಂಕೃತ ರಚನೆಗಳಿಂದ ಕೂಡಿರುತ್ತದೆ. ಇಂತಹ ರಚನೆಗಳೇ ಭಿತ್ತಿಪಾದ, ಕೋಷ್ಠ, ಕುಂಭ ಪಂಜರ, ಜಾಲವಾತಾಯನ ಮತ್ತು ತೋರಣಗಳು. ದೇವಾಲಯದ ಭಿತ್ತಿಯನ್ನು ಈ ರೀತಿಯ ರಚನೆಗಳಿಂದ ಅಲಂಕರಿಸಬೇಕೆಂದು ಶಾಸ್ತ್ರಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ.

800 ರಿಂದ 900 ರವರೆಗಿನ ಚೋಳ ದೇವಾಲಯದ ಭಿತ್ತಿ ಭಿತ್ತಿಪಾದಗಳಿಂದ ಅಲಂಕೃತಗೊಂಡು ಸರಳವಾಗಿ ಸುಂದರವಾಗಿವೆ. ಕಿಲಯಾ ಪಟ್ಟುವಿನ ಶಿವ ದೇವಾಲಯ, ವೀರಊರಿನ ಭೂಮೀಶ್ವರ ದೇವಾಲಯ, ನೃತ್ತಮಲ್ಯೆನ ವಿಜಯಾಲಯ ಚೋಳೇಶ್ವರ ದೇವಾಲಯ, ಸೇಂದಲ್ಯೆನ ಸುಂದರೇಶ್ವರ ದೇವಾಲಯದ ಭಿತ್ತಿಗಳು ಭಿತ್ತಿಪಾದಗಳಿಂದ ಅಲಂಕೃತಗೊಂಡಿವೆ. ತಿರುವೇಡಿಕುಡಿ ವೇದಪುರೀಶ್ವರ ದೇವಾಲಯ, ಕುಂಭಕೋಣಂನ ನಾಗೇಶ್ವರ ಸ್ವಾಮಿ ದೇವಾಲಯದಲ್ಲಿ ದೇವ ಕೋಷ್ಠಗಳನ್ನು ಗಮನಿಸಬಹುದು. ಶಾಸ್ತ್ರಗಳು ಯಾವ ದಿಕ್ಕಿನಲ್ಲಿ ಯಾವ ದೇವ, ದೇವಿಯ ಮೂರ್ತಿಯನ್ನು ಸ್ಥಾಪಿಸಬೇಕೆಂಬುದನ್ನು ಸ್ಪಷ್ಟಪಡಿಸಿರುವುದರಿಂದ ಚೋಳ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹದ ಉತ್ತರ ಭಿತ್ತಿಯ ದೇವಕೋಷ್ಠದಲ್ಲಿ ಬ್ರಹ್ಮನನ್ನೂ, ದಕ್ಷಿಣದಲ್ಲಿ ದಕ್ಷಿಣಾಮೂರ್ತಿಯನ್ನೂ, ಪಶ್ಚಿಮದಲ್ಲಿ ಲಿಂಗೋದ್ಭವ ಮೂರ್ತಿಯನ್ನೂ ಒಮ್ಮೊಮ್ಮೆ ಲಿಂಗೋದ್ಭವ ಮೂರ್ತಿಯ ಬದಲಾಗಿ ವಿಷ್ಣುವನ್ನೂ ಕಾಣಬಹುದು. ದೇವಾಲಯದ ಅರ್ಧ ಮಂಟಪದ ದಕ್ಷಿಣದ ಗೋಡೆಯ ದೇವಕೋಷ್ಠದಲ್ಲಿ ಗಣೇಶನನ್ನೂ, ಉತ್ತರದ ದೇವಕೋಷ್ಠದಲ್ಲಿ ದುರ್ಗೆಯನ್ನೂ ರಚಿಸಿರುವುದು ಕಂಡುಬರುತ್ತದೆ. ಈ ರೀತಿಯ ದೇವಕೋಷ್ಠಗಳನ್ನು ರಚಿಸುವುದು ಚೋಳರ ದೇವಾಲಯಗಳ ಒಂದು ಪ್ರತೀತಿಯೇ ಆಗಿದೆ. ಮಾಗರಳ್ ಶಿವದೇವಾಲಯ, ಕಾಂಚಿಪುರಂನ ಜ್ವರಾಹರೇಶ್ವರ ದೇವಾಲಯಗಳಲ್ಲಿ ಭಿತ್ತಿಯ ಮಧ್ಯಭಾಗದಲ್ಲಿ ಭಿತ್ತಿಪಾದಗಳ ನಡುವೆ ಕುಂಭ ಪಂಜರಗಳನ್ನು ರಚಿಸಿರುವುದನ್ನು ಗಮನಿಸಬಹುದು. ಕಾಂಚೀಪುರದ ಜ್ವರಾಹರೇಶ್ವರ ದೇವಾಲಯದಲ್ಲಿ ಭಿತ್ತಿಯ ಮಧ್ಯಭಾಗದಲ್ಲಿ ಜಾಲವಾತಾಯನವನ್ನು ನಿರ್ಮಿಸಿರುವುದನ್ನು ಕಾಣಬಹುದು. ಹೀಗೆ ಭಿತ್ತಿಯ ಬೆಳವಣಿಗೆಯನ್ನು ಕೂಲಂಕಷವಾಗಿ ಗಮನಿಸಿದಾಗ ಭಿತ್ತಿಪಾದಗಳು, ಕುಂಭ ಪಂಜರಗಳೂ ಜಾಲವಾತಾಯನಗಳೂ ದೇವಕೋಷ್ಠಗಳೂ ಅಲ್ಲದೆ ಉಬ್ಬು ಶಿಲ್ಪಗಳಿಂದ ಸಂಪೂರ್ಣವಾಗಿ ಶಾಸ್ತ್ರೋಕ್ತವಾಗಿ ರಚನೆಯಾಗಿರುವುದು ತಿಳಿದುಬರುತ್ತದೆ. ಇದಲ್ಲದೆ ಚೋಳರ ಬಹುಪಾಲು ದೇವಾಲಯಗಳ ಭಿತ್ತಿಗಳು ಭದ್ರ, ಉಪಭದ್ರ ಮತ್ತು ಸುಭದ್ರ ಎಂಬ ಮುಂಚಾಚುಗಳಿಂದಲೂ ಕರ್ಣ ಮತ್ತು ಪ್ರತಿಕರ್ಣ ಎಂಬ ಮುಂಚಾಚುಗಳಿಂದಲೂ ರಚನೆಯಾಗಿರುವುದು ಗೋಚರಿಸುತ್ತದೆ. ಇನ್ನು ಕೆಲವು ಬೃಹದಾಕಾರದ ದೇವಾಲಯಗಳಲ್ಲಿ ಭಿತ್ತಿಯ ಎತ್ತರವನ್ನು ಹೆಚ್ಚಿಸಲು ಎರಡು ಭಿತ್ತಿಗಳನ್ನು ನಿರ್ಮಿಸುತ್ತಿದ್ದರು. ಕೆಳಭಿತ್ತಿಯ ಮೇಲೆ ಕಪೋತವನ್ನು ನಿರ್ಮಿಸಿ, ಅದರ ಮೇಲೆ ಭಿತ್ತಿಯನ್ನು ನಿರ್ಮಿಸುತ್ತಿದ್ದರು. ಇದನ್ನು ಶಾಸ್ತ್ರಗ್ರಂಥಗಳು ಊರ್ಧ್ವಜಂಘಾ ಮತ್ತು ಅಧೋಜಂಘಾ ಎಂದು ಹೆಸರಿಸಿವೆ. ಇಂತಹ ನಿರ್ಮಾಣವನ್ನು ತಂಜಾವೂರಿನ ಬೃಹದೇಶ್ವರ ದೇವಾಲಯ ಮತ್ತು ಗಂಗೈಕೊಂಡ ಚೋಳಪುರಂನ ದೇವಾಲಯಗಳಲ್ಲಿ ಕಾಣಬಹುದು. ಭಿತ್ತಿಯ ಮೇಲೆ ಇರುವ ಭಾಗವೇ ಪ್ರಸ್ತರ. ಷಡ್ವರ್ಗ ಕ್ರಮದಲ್ಲಿ ಇದು ಮೂರನೆಯ ಭಾಗ. ಪ್ರಸ್ತರದಲ್ಲಿ ಉತ್ತರ, ವಾಜನ, ವಲಭೀ, ಕಪೋತ, ಆಲಿಂಗ, ಅಂತರಿತ ಮತ್ತು ಪ್ರತಿ ಎಂಬ ಅಂಗಗಳು ಇರುತ್ತವೆ. ಚೋಳ ದೇವಾಲಯಗಳಲ್ಲಿ ಸಾಮಾನ್ಯವಾಗಿ ಉತ್ತರ ಭಾಗವು ಅಲಂಕರಣವನ್ನು ಹೊಂದಿರುವುದಿಲ್ಲ. ವಾಜನ ಸಿಂಹಗಳು, ಕುಬ್ಜರು, ಯಕ್ಷರು, ನೃತ್ಯಗಾರ್ತಿಯರ ಶಿಲ್ಪಗಳಿಂದ ರಚಿತವಾಗಿರುತ್ತದೆ. ಕಪೋತವು ಕೂಡುಗಳಿಂದ ಅಲಂಕೃತವಾಗಿರುತ್ತದೆ. ಕೂಡುಗಳ ಗಾಢದಲ್ಲಿ ದೇವದೇವತೆಯರ ಗಂಧರ್ವರ ಶಿಲ್ಪಗಳಿರುತ್ತವೆ. ಕೂಡುಗಳ ಮೇಲ್ಭಾಗದ ಸಿಂಹ ಮುಖವನ್ನು ಒಂದೇ ಕಲ್ಲಿನಿಂದ ಮಾಡಿರದೆ, ಕೀರ್ತಿ ಮುಖದ ಭಾಗವನ್ನು ರಚಿಸಲಿಕ್ಕಾಗಿಯೇ ಬೇರೆಯ ಕಲ್ಲನ್ನು ಬಳಸಿ. ಕಪೋತದ ಕೂಡುವಿನ ಭಾಗಕ್ಕೆ ಸರಿಯಾಗಿ ಜೋಡಿಸಿರುವುದು ಗಮನಿಸಬೇಕಾದ ಅಂಶವಾಗಿದೆ. ವಲಭಿ ಮತ್ತು ವಾಜನಗಳು ಸಾಮಾನ್ಯವಾಗಿ ಮಕರ ಮತ್ತು ವ್ಯಾಳಗಳಿಂದ ಅಲಂಕರಿಸಲ್ಪಡುತ್ತದೆ. ವಾಜನದ ಕೊನೆಗಳಲ್ಲಿ ಮಕರ ಮುಖವನ್ನು ರಚಿಸಲಾಗುವುದು. ಪ್ರತಿ ಭಾಗ ಊರ್ಧ್ವ ಪದ್ಮಗಳಿಂದ ಅಲಂಕರಿಸಲ್ಪಟ್ಟಿದ್ದು ಅದರ ಮೇಲೆ ತಲಗಳು ಇರುತ್ತವೆ. ಚೋಳರ ಕಾಲದಲ್ಲಿ ಒಂದು ತಲದಿಂದ ಹಲವು ತಲಗಳ, ದೇವಾಲಯಗಳನ್ನು ನಿರ್ಮಿಸಿರುವುದು ಮಹತ್ತ್ವದ ಸಾಧನೆ. ಸಾಮಾನ್ಯವಾಗಿ ಚೋಳ ದೇವಾಲಯದ ಶಿಖರಗಳು ಎತ್ತರವಾಗಿದ್ದು ಹೆಚ್ಚು ತಲಗಳನ್ನು ಹೊಂದಿರುತ್ತಿದ್ದವು. ಎರಡರಿಂದ ನಾಲ್ಕು ತಲಗಳಿರುವ ದೇವಾಲಯಗಳನ್ನು ಜಾತಿವಿಮಾನವೆಂದೂ ಐದರಿಂದ ಹನ್ನೆರಡು ತಲಗಳ ದೇವಾಲಯವನ್ನು ಮುಖ್ಯವಿಮಾನವೆಂದೂ ದೇವಾಲಯದ ಪ್ರಸ್ತರಕ್ಕೆ ಹೊಂದಿಕೊಂಡಂತೆ ಗ್ರೀವ, ಶಿಖರ ಮತ್ತು ಸ್ತೂಪಿಗಳು ಇದ್ದರೆ ಅಲ್ಪ ವಿಮಾನವೆಂದೂ ಕರೆಯುವರು. ನೃತ್ತಮಲ್ಯೆನ ವಿಜಯಾಲಯ, ಚೋಳೇಶ್ವರ ದೇವಾಲಯ, ವೇಡಿಕುಡಿಯ ವೈದ್ಯಪುರೀಶ್ವರ ದೇವಾಲಯಗಳು ಜಾತಿ ವಿಮಾನಗಳಾದರೆ, ತ್ರಿಭುವನಂನ ಕಂಪಹರೇಶ್ವರ, ದಾರಾಸುರಂನ ಐರಾವತೇಶ್ವರ, ತಂಜಾವೂರಿನ ಬೃಹದೀಶ್ವರ ದೇವಾಲಯಗಳು ಮುಖ್ಯ ವಿಮಾನಗಳಾಗಿವೆ. ಕಾಳಿಯ ಪಟ್ಟಿಯ ಶಿವ ದೇವಾಲಯ, ನಂಗವರಂನ ಸುಂದರೇಶ್ವರ ದೇವಾಲಯ, ಪೆರನ್‌ಗುಡಿಯ ಅಗಸ್ತ್ಯೇಶ್ವರ ವಿಮಾನಗಳು ಅಲ್ಪ ವಿಮಾನಗಳಾಗಿವೆ.

ದೇವಾಲಯದ ತಲಗಳ ಸಂಖ್ಯೆ, ಶಾಲಾ, ಕೂಟ ಮತ್ತು ಪಂಜರಗಳ ಸಂಖ್ಯೆಗಳ, ಶಿಖರ ಮತ್ತು ಸ್ತೂಪಿಯ ಆಕಾರವನ್ನು ಆಧರಿಸಿ ವಾಸ್ತುಶಾಸ್ತ್ರ ವಿಮಾನಗಳನ್ನು ವಿವಿಧ ಬಗೆಗಳಾಗಿ ವಿಂಗಡಿಸಿವೆ. ಕಿಲತ್ತಾನ್ಯೆಯಮ್‌ನ ಉತ್ತಮನಾಥಸ್ವಾಮಿ ದೇವಾಲಯ ಮತ್ತು

ತಿರುನಾಮಊರಿನ ತಿರುತೋಂಡೀಶ್ವರ ದೇವಾಲಯಗಳು ಶ್ರೀಕರ ವಿಮಾನವನ್ನು ಹೊಂದಿವೆ. ಕಟ್ಟು ಮಾನರ್‌ಗುಡಿ ಅಂನತೇಶ್ವರ ದೇವಾಲಯ ಇವು ಶ್ರೀ ವಿಶಾಲ ವಿಮಾನವನ್ನು ಹೊಂದಿದೆ. ವೀರಲೂರಿನ ಭೂಮೀಶ್ವರ ದೇವಾಲಯ ವೈಜಯಂತ ವಿಮಾನವನ್ನು ಹೊಂದಿದೆ. ನಂಗವರಂನ ಸುಂದರೇಶ್ವರ ದೇವಾಲಯದ ಆವರಣದಲ್ಲಿಯ ಗಣೇಶ ದೇವಾಲಯವು ಗಜಪೃಷ್ಠಾಕಾರದಲ್ಲಿದೆ. ತಿರುವಾರಿಯೂರಿನ ಆದಿಪುರೀಶ್ವರ ದೇವಾಲಯ ಗಜಪೃಷ್ಠಾಕಾರದ ಶಿಖರವನ್ನು ಹೊಂದಿದ್ದು ಮುಂಭಾಗದಲ್ಲಿ ವಿಶಾಲವಾದ ಕೀರ್ತಿಮುಖವನ್ನು ಹೊಂದಿದೆ. ಕೋಲಾರದ ಕೋಲಾರಮ್ಮನ ದೇವಾಲಯ ಸುಮಂಗಲಮ್ ರೀತಿಯ ಶಿಖರವನ್ನು ಹೊಂದಿದೆ. ಕುಲಂಪಾಂಡಲ್‌ನ ಗಂಗೈಕೊಂಡ ಚೋಳೀಶ್ವರ ದೇವಾಲಯ ಮಂದರಮ್ ರೀತಿಯ ವಿಮಾನವನ್ನು ಹೊಂದಿದೆ. ತಿರುಚ್ಚೆಂದಿರೈನ ಚಂದ್ರಶೇಖರ ದೇವಾಲಯ ದ್ವಿತಲ ಸ್ವಸ್ತಿಕ ವಿಮಾನವನ್ನು ಹೊಂದಿದೆ. ಕುಡುಂಬಊರಿನ ಮೂವರ್ ಕೋವಿಲ್‌ನ ತ್ರಿಭೂತೀಶ್ವರ ದೇವಾಲಯ ತ್ರಿತಲ ಸ್ವಸ್ತಿಕ ವಿಮಾನವನ್ನು ಹೊಂದಿದೆ. ಈ ರೀತಿ ಚೋಳದೇವಾಲಯಗಳನ್ನು ಶಾಸ್ತ್ರಗಳ ಹೇಳಿಕೆಯಂತೆ ನಿರ್ಮಿಸಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಚೋಳ ದೇವಾಲಯಗಳ ಕಂಬಗಳು ಎತ್ತರವಾಗಿದ್ದು ಕಗ್ಗಲ್ಲಿನಿಂದ ಕಂಡರಿಸಿದ ಕಂಬಗಳಾಗಿವೆ. ಈ ಕಂಬಗಳ ಗಾತ್ರ ಮತ್ತು ಎತ್ತರ ಹೆಚ್ಚಾಗಿದ್ದು ಬೃಹತ್ ದೇವಾಲಯಗಳನ್ನು ಭರಿಸುವುದಕ್ಕೆ ಸಾಧ್ಯವಾಗುವಂತೆ ನಿರ್ಮಿಸಲಾಗಿದೆ. ಈ ಕಾಲದಲ್ಲಿ ಚಿತ್ರ ಖಂಡ ರೀತಿಯ ಸ್ತಂಭಗಳನ್ನು ಹೆಚ್ಚು ಬಳಸಲಾಯಿತು. ಚಿದಂಬರಂನ ಸಾವಿರಕಾಲು ಮಂಟಪದಲ್ಲಿ, ದಾರಾಸುರಂನ ಐರಾವತೇಶ್ವರ ದೇವಾಲಯದ ಮಂಟಪದಲ್ಲಿ ಚಿತ್ರಖಂಡ ರೀತಿಯ ಅತೀ ಸುಂದರವಾದ ಅಲಂಕರಣವುಳ್ಳ ಕಂಬಗಳನ್ನು ಗಮನಿಸಬಹುದು. ದಾರಾಸುರಂನ ಐರಾವತೇಶ್ವರ ದೇವಾಲಯದ ಮುಖಮಂಟಪದಲ್ಲಿನ ಮುಂಭಾಗದ ಕಂಬಗಳು ವ್ಯಾಳಪಾದ ಕಂಬಗಳಾಗಿವೆ. ಚಿದಂಬರಂನ ನಟರಾಜ ದೇವಾಲಯದ ನೃತ್ಯ ಸಭೆ ಕೋಷ್ಠಸ್ತಂಭಗಳಿಂದ ಕೂಡಿದೆ. ಕಂಚಿಯ ಜ್ವರಾಹರೇಶ್ವರ ದೇವಾಲಯದ ಮುಖಮಂಟಪದಲ್ಲಿ ಇಂದ್ರಕಾಂತ ಕಂಬಗಳಿವೆ. ಕಣ್ಣಾನೂರಿನ ಭೋಜೇಶ್ವರ ದೇವಾಲಯದ ಮುಖಮಂಟಪದಲ್ಲಿ ಉಪಸ್ತಂಭಗಳನ್ನು ಹೊಂದಿರುವ ಕಂಬಗಳಿವೆ. ಈ ರೀತಿಯಾಗಿ ಚೋಳ ದೇವಾಲಯದ ಕಂಬಗಳ ವಿಧಗಳು ಮತ್ತು ಮಾದರಿಗಳು ವಿಜಯನಗರ ಮತ್ತು ನಾಯಕರ ಕಾಲದಲ್ಲೂ ವ್ಯಾಪಕವಾಗಿ ಬಳಸಲ್ಪಟ್ಟವು.

ಚೋಳ ದೇವಾಲಯಗಳು ಪ್ರಾಕಾರಗಳು, ಗೋಪುರಗಳು, ಪರಿವಾರ ಆಲಯಗಳು, ದೇವಾಲಯದ ಸಮುಚ್ಚಯದಲ್ಲಿ ಇರಬೇಕಾದ ಬಲಿಪೀಠ, ಸೋಪಾನ, ಧ್ವಜಸ್ತಂಭ, ದೀಪಸ್ತಂಭ ಮೊದಲಾದ ವಾಸ್ತುಶಿಲ್ಪದ ಎಲ್ಲ ಅಂಗಗಳನ್ನು ಹೊಂದಿ ಸಂಪೂರ್ಣವಾಗಿ ಶಾಸ್ತ್ರಗ್ರಂಥಗಳ ಹೇಳಿಕೆಯಂತೆಯೇ ಇರುವುದನ್ನು ಗ್ರಹಿಸಬಹುದಾಗಿದೆ. ಜೊತೆಗೆ ಚೋಳಶಿಲ್ಪಿಗಳು ಈ ವಾಸ್ತುಗ್ರಂಥಗಳನ್ನು ಸರಿಯಾಗಿ ಅರ್ಥೈಸಿಕೊಂಡು, ಇದಕ್ಕೆ ಅನುಗುಣವಾಗಿ ಈ ವಾಸ್ತುಗ್ರಂಥಗಳು ಮತ್ತು ದೇವಾಲಯ ನಿರ್ಮಾಣ ಸಮನ್ವಯವಾಗುವಂತೆ ರಚಿಸಿರುವುದು ಗಮನಾರ್ಹ ಅಂಶವಾಗಿದೆ. (ಎ.ವಿ.)

**ದ್ರಾವಿಡ ಮಾದರಿ:** ಭಾರತೀಯ ದೇವಾಲಯ ವಾಸ್ತು ಪ್ರಕಾರದಲ್ಲಿ ಮುಖ್ಯವಾದ ಮೂರು ಶೈಲಿಗಳೆಂದರೆ ದ್ರಾವಿಡ, ನಾಗರ, ವೇಸರ. ದ್ರಾವಿಡ ಶೈಲಿ ದಕ್ಷಿಣ ಭಾರತದ ಪ್ರಮುಖ ವಾಸ್ತು ಶೈಲಿ. ಈ ಶೈಲಿಯನ್ನು ದಾಕ್ಷಿಣಾತ್ಯ ಶೈಲಿ ಎಂದೂ ಕರೆಯಲಾಗುತ್ತದೆ. ವಾಸ್ತು ಶಾಸ್ತ್ರಗಳ ಪ್ರಕಾರ ಹಾಗೂ ಈ ಶೈಲಿಯ ವಾಸ್ತು ರೂಪಗಳು ಕಂಡು ಬರುವ ಭೌಗೋಳಿಕ ಪ್ರಾಂತದ ಪ್ರಕಾರ ನೋಡಿದರೆ ದ್ರಾವಿಡ ದೇಶ ಅಥವಾ ದಕ್ಷಿಣ ಭಾರತವೆಂದರೆ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಗೋವ ರಾಜ್ಯಗಳು. ಈ ಪ್ರದೇಶಗಳಲ್ಲಿ ಜನಪ್ರಿಯವಾಗಿ ಬೆಳೆದ ವಾಸ್ತುರೂಪವೇ ದ್ರಾವಿಡ ಶೈಲಿ ಎನಿಸಿದೆ. ದ್ರಾವಿಡ ಶೈಲಿಯ ವಾಸ್ತು ಲಕ್ಷಣಗಳಿಗೆ ಬರುವುದಾದರೆ ವಾಸ್ತು ಶಾಸ್ತ್ರಗಳು ಹೆಚ್ಚೂ ಕಡಿಮೆ ಒಂದೇ ರೀತಿಯ, ಅಸ್ಪಷ್ಟವಾದ ವ್ಯಾಖ್ಯೆಯನ್ನು ನೀಡುತ್ತವೆ. ಈ ವ್ಯಾಖ್ಯೆಗಳು ಅಗಾಧ ಸಂಖ್ಯೆಯಲ್ಲಿ ನಿರ್ಮಿತವಾಗಿರುವ ದ್ರಾವಿಡ ದೇವಾಲಯಗಳ ನಿಜ ಸ್ವರೂಪಕ್ಕೆ ಸ್ವಲ್ಪವೂ ಹೊಂದದಿರುವುದು ವಿಸ್ಮಯಕರವೇ ಆಗಿದೆ. ಯಾವುದೇ ದೇವಾಲಯವನ್ನು ಇಂತಹ ಶೈಲಿಗೆ ಸೇರಿದೆ ಎಂದು ನಿರ್ಧರಿಸುವುದಕ್ಕೆ ಮುಖ್ಯ ಆಧಾರವೆಂದರೆ ಆ ದೇವಾಲಯದ ಗರ್ಭಗೃಹದ ಮೇಲಿನ ಕಟ್ಟಡ. ಈ ಕಟ್ಟಡವನ್ನು ದ್ರಾವಿಡ ಶೈಲಿಯಲ್ಲಿ ಪ್ರಾಸಾದ, ವಿಮಾನ, ಕೂಟ, ಶೃಂಗ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಅದೇ ಹೆಸರುಗಳನ್ನು ಇಲ್ಲೂ ಬಳಸಲಾಗಿದೆ. ಬಹುತೇಕ ಶಾಸ್ತ್ರಗ್ರಂಥಗಳು ಯಾವ ದೇವಾಲಯ (ಪ್ರಾಸಾದ) ಕಂಠದಿಂದ ಮೇಲಕ್ಕೆ ಅಷ್ಟಮುಖಿಯಾಗಿರುವುದೋ ಅದೇ ದ್ರಾವಿಡವೆಂದು ಮಾತ್ರ ಹೇಳುತ್ತದೆ. ಇನ್ನು ಕೆಲವು ಗ್ರಂಥಗಳು ದ್ರಾವಿಡ ಆರು ಅಥವಾ ಎಂಟು ಮುಖದ ಕಟ್ಟಡವಾಗಿರಬೇಕು ಎನ್ನುತ್ತವೆ. ಇನ್ನು ಕೆಲವು ಯಾವ ಕಟ್ಟಡ ತಳದಲ್ಲಿ ಚತುರಸ್ರವಾಗಿದ್ದು, ಗ್ರೀವದಿಂದ ಮೇಲಕ್ಕೆ ಅಷ್ಟಮುಖದ್ದಾಗಿರುವುದೋ ಅದು ದ್ರಾವಿಡ ಎನ್ನುತ್ತವೆ. ಶಾಸ್ತ್ರಗಳು ಹೇಳುವ ಈ ಯಾವ ನಿಯಮಗಳೂ ಸ್ಪಷ್ಟವಾಗಿಲ್ಲ. ಎಲ್ಲ ವಿವರಣೆಗಳೂ ಯಾವುದೋ ಕೇಳಿಲ್ಲದ ಒಂದು ಮೂಲದ ಅಸ್ಪಷ್ಟ, ಅಪೂರ್ಣ ವಿವರಣೆಯ ಪುನರುಚ್ಚಾರಣೆಯೆಂದು ತೋರುತ್ತದೆ. ಹೀಗಾಗಿ ದ್ರಾವಿಡ ಶೈಲಿಯ ಜೀವಂತ ಮಾದರಿಗಳ ಬೆಳಕಿನಲ್ಲಿ ಮತ್ತು ಶಾಸ್ತ್ರಗಳಲ್ಲಿ ಕಾಣುವ ಇತರ ಭಾಗಗಳ ವಿವರಣೆಯನ್ನು ಕೂಡಿಸಿ ದ್ರಾವಿಡ ದೇವಾಲಯ ಶೈಲಿಯ ನಿಜ ಸ್ವರೂಪವನ್ನು ಅರಿಯಬೇಕಾಗಿದೆ.

ಈಶ್ವರ ದೇವಾಲಯ, ಅರಸೀಕೆರೆ

ಕಾಮಿಕಾಗಮ ದ್ರಾವಿಡ ವಾಸ್ತು ಪ್ರಕಾರದ ವಿವರಣೆಯನ್ನು ಸ್ವಲ್ಪಮಟ್ಟಿಗೆ ಸ್ಪಷ್ಟವಾಗಿ ನೀಡುವ ಗ್ರಂಥವಾಗಿದೆ. ಇದರ ಪ್ರಕಾರ ದ್ರಾವಿಡ ವಾಸ್ತು ಷಡ್ವರ್ಗ ಗುಂಪಿಗೆ ಸೇರಿದ ಕಟ್ಟಡ. ಷಡ್ವರ್ಗಗಳಾವುವೆಂದರೆ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ. ಇವಿಷ್ಟೂ ಕೂಡಿ ದ್ರಾವಿಡ ವಿಮಾನವೆನಿಸುತ್ತದೆ. ಉಪಾನಾತ್ ಸ್ತೂಪಿ ಪರ್ಯಂತ ತಂ ವಿಮಾನಃ ಎಂದೂ ಶಾಸ್ತ್ರಗಳಲ್ಲಿ ಹೇಳಿದೆ. ವಿಮಾನ ಎಂದರೆ, ಉಪಾನದಿಂದ (ಅಧಿಷ್ಠಾನದ ಅತ್ಯಂತ ಕೆಳಗಿನ ಭಾಗ) ಹಿಡಿದು ಸ್ತೂಪಿಯವರೆಗಿನ ಭಾಗ ಎಂದರ್ಥವಾಗುತ್ತದೆ. ಅಧಿಷ್ಠಾನ ಮಾದರಿಯಲ್ಲಿ, ಪಾದ ಬಂಧ, ಕಪೋತ ಬಂಧ, ಪದ್ಮ ಬಂಧ ಎಂದೆಲ್ಲ ವಿವಿಧ ಪ್ರಕಾರಗಳಿವೆ. ಅಧಿಷ್ಠಾನದ ಅತ್ಯಂತ ಕೆಳಗಿನ ಭಾಗ ಉಪಾನ. ಇದು ಕಟ್ಟಡದ ಎಲ್ಲೆಡೆ ಕಾಣಬರುತ್ತದೆ. ಆದರೆ ಸ್ತೂಪಿ ಕಾಣಬರುವುದು ಗರ್ಭಗೃಹದ ಮೇಲಿನ ಪ್ರಾಸಾದದ ತುದಿಯಲ್ಲಿ ಮಾತ್ರ. ಆದ್ದರಿಂದ ಈ ಹೇಳಿಕೆ ಗರ್ಭಗೃಹದ ಭಾಗಕ್ಕೆ ಮಾತ್ರ ಅನ್ವಯವಾಗುತ್ತದೆ ಎಂದು ತಿಳಿಯಬೇಕು. ಗರ್ಭಗೃಹದ ಮೇಲಿನ ಕೇವಲ ಪ್ರಾಸಾದಕ್ಕೂ ವಿಮಾನವೆನ್ನಲಾಗುತ್ತದೆ. ವಿಮಾನದ ಆಕಾರ ಗರ್ಭಗೃಹದ ಆಕಾರವನ್ನು ಹೋಲುತ್ತದೆ. ಗರ್ಭಗೃಹ ಚತುರಸ್ರ, ಆಯತ, ವೃತ್ತ, ವೃತ್ತಾಯತ ಮತ್ತು ಗಜಪೃಷ್ಠಾಕಾರಗಳಲ್ಲಿ ಕಂಡು ಬಂದಿವೆ. ದೇವಾಲಯವನ್ನು ಎತ್ತರವಾದ, ದಿಂಡುಗಳಿಂದ ಅಲಂಕೃತವಾದ ಅಧಿಷ್ಠಾನದ ಮೇಲೆ ನಿರ್ಮಿಸಲಾಗುತ್ತದೆ. ಈ ದಿಂಡುಗಳಿಗೆ ಪ್ರೋತ್ಸಾಹ ಹೆಸರುಗಳುಂಟು. ಅವುಗಳೆಂದರೆ, ಕೆಳಗಿನಿಂದ ಉಪಾನ, ಜಗತಿ, ಕುಮುದ, ಕಪೋತ / ಪಟ್ಟಿಕಾ ಹಾಗೂ ಪ್ರತಿ, ಅಧಿಷ್ಠಾನದ ಮೇಲೆ ಭಿತ್ತಿಯನ್ನು (ಗೋಡೆ) ನಿರ್ಮಿಸಲಾಗುತ್ತದೆ. ಭಿತ್ತಿಯಲ್ಲಿ ಅನೇಕ ಹಿಂಚಾಚು ಮುಂಚಾಚುಗಳಿರುತ್ತವೆ. ಮಧ್ಯದ ಪ್ರಧಾನ ಮುಂಚಾಚುಗಳನ್ನು ಸುಭದ್ರ, ಭದ್ರಗಳೆಂದೂ ಮೂಲೆಗಳ ಮುಂಚಾಚುಗಳನ್ನು ಕರ್ಣಗಳೆಂದೂ ಮಧ್ಯದ ಸಣ್ಣ ಸಣ್ಣ ಮುಂಚಾಚುಗಳನ್ನು ಪ್ರತಿಕರ್ಣಗಳೆಂದೂ ಕರೆಯಲಾಗಿದೆ. ಈ ಎಲ್ಲ ಹಿಂಚಾಚು–ಮುಂಚಾಚುಗಳೂ ವಿಮಾನದ ತುದಿಯವರೆಗೂ ಅದೇ ರೀತಿ ಉಳಿಸುವ ಪದ್ಧತಿಯೇನೂ ಇಲ್ಲ. ಭಿತ್ತಿಯ ಮೇಲೆ ಕಪೋತ, ಚಾವಣಿ ಕಾಣಬರುತ್ತದೆ. ಚಾವಣಿಯ ಮೇಲೆ ಇರುವುದೇ ಹಾರ (ಕೈಪಿಡಿ ಗೋಡೆ); ಇದು ಐಚ್ಛಿಕ. ಹಾರ ಎಂದರೆ ಮಾಲೆ. ಕೂಟ, ಶಾಲ ಮತ್ತು ಪಂಜರ ಮಾದರಿಯ ಚಿಕಣಿ ಮಂಟಪಗಳ ಮಾಲೆ ಅಥವಾ ಸರಪಳಿ. ಇದು ಕಪೋತ, ಚಾವಣಿ ಮತ್ತು ಹಾರ. ಇವಿಷ್ಟು ಕೂಡಿ ಪ್ರಸ್ತರವೆನಿಸುತ್ತದೆ. ಚಾವಣಿಯ ಮೇಲ್ಮಧ್ಯದಲ್ಲಿ, ಗರ್ಭಗೃಹದ ಭಾಗದ ಮೇಲೆ ಎತ್ತರವಾದ ವೇದಿಯನ್ನು ನಿರ್ಮಿಸಲಾಗುತ್ತದೆ. ವೇದಿಯ ಮೇಲೆ ಗ್ರೀವ (ಕಂಠ ಅಥವಾ ಕತ್ತು), ಗ್ರೀವದ ಮೇಲೆ ಶಿಖರ, ಶಿಖರದ ಮೇಲೆ ಸ್ತೂಪಿ ಇವಿಷ್ಟೂ ಕೂಡಿ ವಿಮಾನ ಅಥವಾ ಕೂಟವೆನಿಸುತ್ತದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ ಇವಿಷ್ಟೂ ಕೂಡಿ ಒಂದು ತಲವೆನಿಸುತ್ತದೆ. ಈ ಮೂರು ಅಂಗಗಳು ದೇವಾಲಯದ ಎಲ್ಲ ಭಾಗಗಳಿಗೂ ಅನ್ವಯವಾಗುತ್ತವೆ. ಆದರೆ ಗರ್ಭಗೃಹದ ಮೇಲೆ ಕೂಟವನ್ನು (ವಿಮಾನ) ನಿರ್ಮಿಸಬೇಕು ಎಂಬುದು ಶಾಸ್ತ್ರನಿಯಮ; ಗರ್ಭಗೃಹದ ಮೇಲೆ ಬೇಕಷ್ಟು ತಲಗಳಲ್ಲಿ ಕೂಟವನ್ನು ನಿರ್ಮಿಸಬಹುದು. ಮೇಲಿನ ಪ್ರತಿಯೊಂದು ತಲವೂ ಭಿತ್ತಿ, ಪ್ರಸ್ತರಗಳನ್ನು ಹೊಂದಿರಬೇಕು. ಹದಿನಾಲ್ಕು ತಲಗಳವರೆಗಿನ ವಿಮಾನಗಳನ್ನು ಶಾಸ್ತ್ರಗಳು ಉಲ್ಲೇಖಿಸುತ್ತವೆ. ಕಟ್ಟಡದ ಭದ್ರತೆಗಾಗಿ ತಲಗಳು ಮೇಲೆ ಹೋದಂತೆಲ್ಲಾ ಕ್ರಮವಾಗಿ ಚಿಕ್ಕದಾಗಿ ಸುತ್ತ ಬರುತ್ತದೆ. ಅದರಿಂದಾಗಿ ವಿಮಾನದ ಆಕಾರ ಕೂಟ–ಶೃಂಗದಂತೆ ಅಥವಾ ಪರ್ವತ ಶಿಖರದಂತೆ ಅಥವಾ ಪಿರಮಿಡ್ಡಿನಾಕಾರದಲ್ಲಿ ಕಾಣುತ್ತದೆ ಜೊತೆಗೇ ಪ್ರತಿಯೊಂದು ತಲವೂ ಅದರ ಕೆಳಗಿನ ತಲಕ್ಕಿಂತ ಸ್ವಲ್ಪ ಚಿಕ್ಕದಾಗಿರುವುದರಿಂದ ವಿಮಾನದ ಮೆಟ್ಟಲು ಪಿರಮಿಡ್ಡಿನಾಕಾರವಾಗಿರುತ್ತದೆ. ನಿರ್ದಿಷ್ಟ

ಎತ್ತರವನ್ನು ತಲುಪಿದ ಅನಂತರ ವಿಮಾನದ ಮೇಲೆ ವೇದಿ ಮತ್ತು ಗ್ರೀವವನ್ನು ನಿರ್ಮಿಸಿ ಅದರ ಮೇಲೆ ಶಿಖರವನ್ನು ಕೂಡಿಸಲಾಗುತ್ತದೆ. ಶಿಖರದ ಮೇಲೆ ಸ್ತೂಪಿ ಇರುತ್ತದೆ. ಈ ರೀತಿಯ ವಿಮಾನ ದ್ರಾವಿಡ ವಿಮಾನವೆಂದೂ ಮೆಟ್ಟಲು ಪಿರಮಿಡ್ಡಿನಾಕಾರದ (ಸ್ಟೆಪ್ಡ್ ಪಿರಮಿಡ್) ವಿಮಾನವೆಂದೂ ಕರೆಯಲಾಗುತ್ತದೆ. ಪ್ರಾಸಾದವನ್ನು ಹಂತ–ಹಂತವಾಗಿ ಕಟ್ಟುವುದರಿಂದ ಅಡ್ಡರೇಖೆಗಳ ಅಥವಾ ಅಡ್ಡ ಪಂಕ್ತಿಗಳ ಪ್ರಾಧಾನ್ಯತೆ ಈ ಪ್ರಾಸಾದದಲ್ಲಿ ಕಾಣಬರುತ್ತದೆ. ನಾಗರ ಪ್ರಾಸಾದದಲ್ಲಿ ಲಂಬ ರೇಖೆಗಳು ಪ್ರಧಾನವಾದರೆ, ದ್ರಾವಿಡ ಪ್ರಾಸಾದದಲ್ಲಿ ಅಡ್ಡರೇಖೆಗಳು ಪ್ರಧಾನವಾಗಿ ಕಾಣುತ್ತವೆ.




**ತ್ರಿತಲ ಷಡ್ವರ್ಗ ದೇವಾಲಯ (ಜಾತಿವಿಮಾನ ರಚನೆ)**

ವಿಮಾನವನ್ನು ಘನವಾಗಿ ಅಥವಾ ಟೊಳ್ಳಾಗಿ ನಿರ್ಮಿಸಿರುವ ಪ್ರಸಂಗಗಳೂ ಇವೆ. ಟೊಳ್ಳಾದ ವಿಮಾನದಲ್ಲಿ ಎರಡು ವಿಧ. ಮೇಲ್ತುದಿಯಿಂದ ಕೆಳಗಿನವರೆಗಿನ ಟೊಳ್ಳಾಗಿರುವುದು (ಇದು ಅಪರೂಪ–ತಂಜಾವೂರಿನ ಬೃಹದೀಶ್ವರ) ಮತ್ತು ಪ್ರತಿಹಂತಗಳೂ ಒಳಗೆ ಟೊಳ್ಳಾಗಿರುವುದು (ಕಂಚಿಯ ವೈಕುಂತಪೆರುಮಾಳ್). ಸಾಮಾನ್ಯವಾಗಿ ಘನ ವಿಮಾನಗಳೇ ಹೆಚ್ಚು. ವಿಮಾನದ ಮುಂಭಾಗದಲ್ಲಿ ಸುಕನಾಸಿಯನ್ನು ಕಟ್ಟುವ ಪದ್ಧತಿ ದ್ರಾವಿಡ ವಾಸ್ತುವಿನಲ್ಲಿಯೂ ಇದೆ. ಇದು ನಾಗರ ಶೈಲಿಯ ಪ್ರಭಾವವೆಂದು ಕೆಲವರ ಅಭಿಮತ. ಸುಕನಾಸಿ, ವಿಮಾನದ ಮುಂಭಾಗದ ಕೆಳಾರ್ಧದಲ್ಲಿ ಕಾಣುವ ಒಂದು ಮುಂಚಾಚು. ಇದರ ಮುಖಭಾಗ ಕಮಾನಿನಾಕರದ ಮಹಾನಾಸಿಯಂತಿರುತ್ತದೆ. ಬೆನ್ನಿನ ಭಾಗ ಕಮಾನಿನಾಕಾರ. ಪಾರ್ಶ್ವಭಾಗಗಳು ವಿಮಾನದ ಮೇಲ್ಮೈಯಂತಿರುತ್ತದೆ. ವಿಮಾನದ ತುದಿಯಲ್ಲಿ ವೇದಿಯಿರುತ್ತದೆ. ಗರ್ಭಗೃಹದ ಆಕಾರಕ್ಕೆ ಅನುಗುಣವಾಗಿ ಈ ವೇದಿ ಇರುತ್ತದೆ. ವೇದಿಯ ಮೇಲೆ ಗ್ರೀವ. ಇದು ನಾಲ್ಕು, ಆರು, ಎಂಟು ಮುಖವುಳ್ಳದ್ದಾಗಿರಬಹುದು ಅಥವಾ ವೃತ್ತ, ವೃತ್ತಾಯತ, ಆಯತ, ಗಜಪೃಷ್ಠಾಕಾರದ್ದಾಗಿರಬಹುದು. ಗ್ರೀವದ ಮೇಲಿರುವುದೇ ಶಿಖರ. ಗ್ರೀವದ ಆಕಾರಕ್ಕೆ ಅನುಗುಣವಾಗಿ ಶಿಖರದ ತಳಾಕೃತಿಯೂ ಇರುತ್ತದೆ. ಆದರೆ ಶಿಖರದ ನೆತ್ತಿ ಮಾತ್ರ ಸುತ್ತಲಿಗೂ ಇಳಿಜಾರಾಗಿರುತ್ತದೆ. ಶಿಖರದ ನಾಲ್ಕೂ ದಿಕ್ಕುಗಳಲ್ಲಿ ಅಥವಾ ಪ್ರತಿಯೊಂದು ಮುಖದಲ್ಲಿ ಮಹಾನಾಸಿಗಳೆಂಬ ಕಮಾನಿನಾಕಾರದ ಕೂಡುಗಳ ಅಲಂಕರಣವಿರುತ್ತದೆ. ಶಿಖರ ಸಾಮಾನ್ಯವಾಗಿ ಆಕೃತಿಗೆ ಹೊಂದುವಂತಹ, ಪರಿಮಾಣ ಬದ್ಧವಾದ ಎತ್ತರವನ್ನು ಹೊಂದಿರುತ್ತದೆ. ಶಿಖರವನ್ನು ಏಕಶಿಲೆಯಿಂದ ಅಥವಾ ಬಹುಶಿಲೆಗಳಿಂದ ನಿರ್ಮಿಸಬಹುದು. ಶಿಖರದ ಮೇಲೆ ಸ್ತೂಪಿ ಇರುತ್ತದೆ. ವೃತ್ತ, ಚೌಕ, ಷಟ್, ಅಷ್ಟ ಮುಖದ ಶಿಖರವಾದರೆ ಒಂದು ಸ್ತೂಪಿ, ಆಯತ, ವೃತ್ತಾಯತ, ಗಜಪೃಷ್ಠಾಕಾರದ್ದಾದರೆ ಬಹುಸ್ತೂಪಿಗಳು ಇರುತ್ತವೆ. ವಿಮಾನದ ಗ್ರೀವ ಮತ್ತು ಶಿಖರದ ಆಕೃತಿ, ತಲದ ಸಂಖ್ಯೆಗಳು, ಅಲಂಕರಣೆ ಇತ್ಯಾದಿಗಳಿಗನುಗುಣವಾಗಿ ವಿಮಾನಗಳಿಗೆ ಬಹುವಿಧವಾದ ಹೆಸರುಗಳಿವೆ.

ದ್ರಾವಿಡ ದೇವಾಲಯದ ತಳವಿನ್ಯಾಸಕ್ಕೆ ಬರುವುದಾದರೆ, ಗರ್ಭಗೃಹ ದೇವಾಲಯದ ಕೇಂದ್ರಭಾಗ. ಇದು ಚೌಕ, ಆಯತ, ವೃತ್ತಾಯತ, ವೃತ್ತ, ಗಜಪೃಷ್ಠ, ಅಷ್ಟಾಸ್ರಗಳದ್ದಾಗಿರಬಹುದು. ಗರ್ಭಗೃಹಕ್ಕೆ ಸಾಮಾನ್ಯವಾಗಿ ಒಂದೇ ದ್ವಾರ. ತಳವಿನ್ಯಾಸ ಆಯತಾಕಾರವಾಗಿದ್ದಲ್ಲಿ ಮುಂದುಗಡೆ ಒಂದು ಅಥವಾ ಮೂರು ಬಾಗಿಲುಗಳಿರುತ್ತವೆ. ಚತುರ್ಮುಖ ಗುಡಿಗಳಲ್ಲಿ ಮಾತ್ರ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದು ಬಾಗಿಲುಗಳಿರುತ್ತವೆ. ಅಪರೂಪವಾಗಿ ಗರ್ಭಗೃಹಕ್ಕೆ ಜಾಲಂಧ್ರವನ್ನು ಜೋಡಿಸಲಾಗಿರುತ್ತದೆ. ಗರ್ಭಗೃಹದ ಮುಂಭಾಗದಲ್ಲಿ ಒಂದು ಸಣ್ಣ ಕೊಠಡಿ ಇಡುವುದು ವಾಡಿಕೆ. ಇದನ್ನು ಅಂತರಾಳ ಅಥವಾ ಶುಕನಾಡಿ ಎನ್ನಲಾಗುತ್ತದೆ. ಇದಕ್ಕೂ ಮುಂದುಗಡೆ ಒಂದೇ ದ್ವಾರ. ಇದರ ವಿಸ್ತೀರ್ಣ ಸಾಮಾನ್ಯವಾಗಿ ಗರ್ಭಗೃಹದಷ್ಟೇ ಜಾಲಂಧ್ರಗಳಿರಬಹುದು. ಅಂತರಾಳದ ಬದಲಾಗಿ ಅಂತರಾಳಕ್ಕೆ ಅಥವಾ ಅದರೊಂದಿಗೆ ಮುಂಭಾಗದಲ್ಲಿ ತೆರನಾಗಿರುವ ಅರ್ಧಮಂಟಪವಿರಬಹುದು. ಇದೂ ವಿಸ್ತೀರ್ಣದಲ್ಲಿ, ವಿನ್ಯಾಸದಲ್ಲಿ ಸಾಮಾನ್ಯವಾಗಿ ಸುಕನಾಸಿಯದಂತೆಯೇ ಇರುತ್ತದೆ. ಗರ್ಭಗೃಹ, ಸುಕನಾಸಿಗಳನ್ನು ಆವರಿಸಿದಂತೆ ಪ್ರದಕ್ಷಿಣ ಪಥವನ್ನು ನಿರ್ಮಿಸುವ ವಾಡಿಕೆಯೂ ಉಂಟು. ಒಳ ಪ್ರದಕ್ಷಿಣ ಪಥವಿದ್ದರೆ ಅದನ್ನು ಸಾಂಧರ ದೇವಾಲಯವೆಂದೂ ಇಲ್ಲದಿದ್ದರೆ ನಿರಂಧರ ದೇವಾಲಯವೆಂದೂ ಕರೆಯಲಾಗುತ್ತದೆ. ದ್ರಾವಿಡ ವಾಸ್ತು ಶೈಲಿಯ ಒಂದು ವಿಶೇಷತೆ ಎಂದರೆ ಗರ್ಭಗೃಹಗಳ ಸಂಖ್ಯೆ ಒಂದೇ ಇರಬೇಕೆಂಬ ನಿಯಮವಿಲ್ಲ. 1–5ವರೆಗೆ ಗರ್ಭಗೃಹಗಳು ಇರುವುದು ಕಂಡು ಬಂದಿದೆ. ಪ್ರತಿಯೊಂದು ಗರ್ಭಗೃಹದ ಮೇಲೂ ಒಂದೊಂದು ಕೂಟಗಳು ಇರಬೇಕಾದುದು ನಿಯಮ. ಬಹುಗರ್ಭಗೃಹ ದೇವಾಲಯಗಳಲ್ಲಿ ಕೆಲವು ನಿರಂಧರವೂ ಇನ್ನು ಕೆಲವು ಸಾಂಧರವೂ ಆಗಿರುವ ನಿದರ್ಶನಗಳಿವೆ. ಹೆಚ್ಚು ಗರ್ಭಗೃಹಗಳಿದ್ದಲ್ಲಿ ಅವುಗಳನ್ನು ಅನುಕೂಲಕ್ಕೆ ತಕ್ಕಂತೆ ವಾಸ್ತು ವಿನ್ಯಾಸದಲ್ಲಿ ಕೂಡಿಸುತ್ತಿದ್ದರು.

ಗರ್ಭಗೃಹ, ಸುಕನಾಸಿ ಅರ್ಧ ಮಂಟಪಕ್ಕೆ ತೆರೆದಂತೆ ನವರಂಗವಿರುತ್ತದೆ. ಸಾಮಾನ್ಯವಾಗಿ ಇದು ನಾಲ್ಕು ಕಂಬದ ಹಜಾರ. ಸುತ್ತಲೂ ಗೋಡೆಯಿಂದ ಆವೃತ ವಾಗಿರುತ್ತದೆ. ಇದನ್ನು ಗೂಢಮಂಟಪವೆಂದೂ ಕರೆಯಲಾಗುತ್ತದೆ. ನವರಂಗಕ್ಕೆ ಮುಂಭಾಗ ದಲ್ಲಿ ಪಾರ್ಶ್ವಗಳಲ್ಲಿ ಅಥವಾ ಒಂದೇ ಒಂದು ಪಾರ್ಶ್ವದಲ್ಲಿ ದ್ವಾರಗಳಿರುವುದೂ ಉಂಟು. ಈ ದ್ವಾರಗಳ ಮುಂದುಗಡೆ ಮುಖ ಮಂಟಪನಿರ್ಮಾಣ ಐಚ್ಛಿಕ. ದೇವಾಲಯ ಮಾನಸೂತ್ರದ ನೇರದಲ್ಲಿ, ನವರಂಗದ ಮುಂಭಾಗದಲ್ಲಿ ಪ್ರತ್ಯೇಕವಾಗಿ ವಾಹನಮಂಟಪವನ್ನು ನಿರ್ಮಿಸಬಹುದು. ಸಾಮಾನ್ಯವಾಗಿ ಶಿವನ ವಾಹನ ನಂದಿಗೆ ಈ ರೀತಿ ಪ್ರತ್ಯೇಕವಾದ ಮಂಟಪಗಳು ನಿರ್ಮಿತವಾಗಿರುವುದು ಸಾಮಾನ್ಯ. ನಂದಿಮಂಟಪದ ಸ್ಥಳದಲ್ಲಿ ಕೆಲವೆಡೆ ಧ್ವಜಸ್ತಂಭಗಳು, ಜೈನ ಬಸದಿಯಾದರೆ ಮಾನಸ್ತಂಭ ಕಾಣುತ್ತವೆ. ಬಲಿಪೀಠಗಳು ಶಾಸ್ತ್ರೋಕ್ತ ರೀತಿಯಲ್ಲಿ ಧ್ವಜ ಸ್ತಂಭದ ಮುಂದೆ ಮತ್ತು ಇತರಕಡೆಗಳಲ್ಲಿ ಕಾಣಬರುತ್ತವೆ. ದೇವಾಲಯದ ಸುತ್ತಲೂ ಪ್ರಾಂಗಣ, ಪ್ರಾಂಗಣದ ಸುತ್ತಲೂ ಕಂಬದ ಸಾಲಿನಲ್ಲಿ ಕೈಸಾಲೆ, ಕೈಸಾಲೆಯ ಹಿಂಬದಿಯಲ್ಲಿ ಸಾಲು ಕೊಠಡಿಗಳು / ಗುಡಿಗಳು ಇರುವುದು ಸಾಮಾನ್ಯ. ಪ್ರಾಂಗಣಕ್ಕೆ ಪ್ರವೇಶ ನಿರ್ದಿಷ್ಟ ದಿಕ್ಕಿನಲ್ಲಿ ಅಥವಾ ವಿವಿಧ ದಿಕ್ಕುಗಳಲ್ಲಿ ನಿರ್ಮಿಸಿರುವ ಪ್ರವೇಶ ದ್ವಾರದ ಮೂಲಕ. ಈ ಪ್ರವೇಶದ್ವಾರಗಳಿಗೆ ದ್ವಾರ ಮಂಟಪಗಳೂ ಇಲ್ಲದಿಲ್ಲ. ದೇವಾಲಯದ ಪ್ರಾಕಾರದ ಒಳಗೆ ನಿರ್ದಿಷ್ಟ ಸ್ಥಳಗಳಲ್ಲಿ ಪರಿವಾರ ದೇವತಾಗೃಹಗಳನ್ನೂ ಕಾಣಬಹುದು. ನೀರಿನ ಸೌಕರ್ಯಕ್ಕಾಗಿ ಬಾವಿ, ಕೊಳ, ಕಲ್ಯಾಣಿಗಳನ್ನೂ ಪ್ರಾಂಗಣದ ಒಳಗೆ ನಿರ್ಮಿಸುತ್ತಿದ್ದರು. ಈ ಎಲ್ಲ ವಾಸ್ತು ಭಾಗಗಳೂ ಎಲ್ಲ ದೇವಾಲಯಗಳಲ್ಲೂ ಇರಬೇಕೆಂಬ ನಿಯಮವೇನೂ ಇಲ್ಲ. ಇರಬೇಕಾಗಿರುವ ಭಾಗಗಳನ್ನು, ಅವುಗಳ ವಿವರಗಳನ್ನು ವಾಸ್ತುಶಾಸ್ತ್ರಗಳು ಹೇಳುತ್ತವೆ. ದೇವಾಲಯವನ್ನು ನಿರ್ಮಿಸುವ ಶಿಲ್ಪಿಯ ಆಯ್ಕೆಗೆ ತಕ್ಕಂತೆ, ದೇವಾಲಯ ನಿರ್ಮಾತೃವಿನ ಅನುಕೂಲ, ಅಭಿರುಚಿಗೆ ತಕ್ಕಂತೆ ದೇವಾಲಯವನ್ನು ನಿರ್ಮಿಸಬಹುದೆಂಬ ಸೂಚನೆಯನ್ನು ವಾಸ್ತುಶಾಸ್ತ್ರಗ್ರಂಥಗಳೇ ನೀಡಿದೆ. ಹೀಗಾಗಿ ವಿವಿಧ ಕಾಲಗಳಲ್ಲಿ, ವಿವಿಧ ಭಾಗಗಳಲ್ಲಿ, ವಿವಿಧ ಗಾತ್ರದ, ವಿಸ್ತೀರ್ಣದ ರೀತಿಯ, ಗುಣಮಟ್ಟದ ವಿವಿಧಾನುಕೂಲವುಳ್ಳ ನೂರಾರು ದೇಗುಲಗಳು ನಿರ್ಮಿತವಾಗಿರುವುದನ್ನು ಕಾಣಬಹುದು.

ಈ ದೇವಾಲಯ ವಾಸ್ತು ಲಕ್ಷಣಗಳು ದ್ರಾವಿಡ ವಾಸ್ತುವಿನ ಇತಿಹಾಸ ಕಾಲದ (ಸು.500–1700) ಮೊದಲಾರ್ಧದಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳು. ಮಧ್ಯಕಾಲೀನ ಯುಗದಲ್ಲಿ (ಸು.1000–1500) ದೇವಾಲಯ ವಾಸ್ತು ವಿನ್ಯಾಸದಲ್ಲಿ ಅನೇಕ ಬದಲಾವಣೆಗಳಾದವು. ಭಕ್ತಿಪಂಥದ ಪ್ರಭಾವದಿಂದಾಗಿ ಹಾಗೂ ಸಾಮಾಜಿಕ ಮನೋವೃತ್ತಿಯ ಫಲವಾಗಿ ದೇವಾಲಯ ಹಿಂದಿನಂತೆ ಕೇವಲ ಧಾರ್ಮಿಕ ಚಟುವಟಿಕೆಗಳಿಗೆ ಮೀಸಲಾಗಿರದೆ ಸಮಾಜೋ–ಧಾರ್ಮಿಕ ಕಾರ್ಯಕ್ರಮಗಳ ಕೇಂದ್ರಗಳಾದವು. ಭಕ್ತಿ ಪಂಥದ ಪ್ರಭಾವದಿಂದ ದೇವರ ಸೇವೆಯ ಒಂದು ಪ್ರಮುಖ ಭಾಗವಾಗಿ ಸಾಂಸ್ಕೃತಿಕ ಮನೋರಂಜನಾ ಕಾರ್ಯಕ್ರಮಗಳು ದೇವರ ಮುಂದೆ, ದೇವಾಲಯದ ಹಜಾರದಲ್ಲಿ ನಡೆಯಲು ಪ್ರಾರಂಭವಾದವು. ಅದಕ್ಕಾಗಿ ಮೂಲ ದೇವರ ಪ್ರತಿರೂಪವನ್ನು ಕಂಚಿನಲ್ಲಿ (ಪಂಚಲೋಹ) ತಯಾರಿಸಿ

ಅದನ್ನು ದೇವಾಲಯದ ಹಜಾರದಲ್ಲಿಟ್ಟು, ಅದರ ಸಮ್ಮುಖದಲ್ಲಿ ಸಾಂಸ್ಕೃತಿಕ ಮನರಂಜನೆಯ ಕಾರ್ಯಕ್ರಮಗಳು, ಮೂಲ ಮೂರ್ತಿಗೆ ನೆರವೇರಿಸಲಾಗದ ಹಲವಾರು ಸೇವೆಗಳು, ಭೋಗಗಳು ನಡೆಸಲು ಪ್ರಾರಂಭಿಸಿದರು. ಈ ಸಾಂಸ್ಕೃತಿಕ – ಧಾರ್ಮಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ದೇವಾಲಯದ ಆವರಣದಲ್ಲಿ ನೆರೆಯುತ್ತಿದ್ದರು. ಈ ಕಾರ್ಯಕ್ರಮಗಳಿಗೆ ಅನುವಾಗಲು ದೇವಾಲಯದ ತಳವಿನ್ಯಾಸದಲ್ಲಿ ಆವಶ್ಯಕ ಬದಲಾವಣೆಗಳಾದವು. ಅವುಗಳೆಂದರೆ ನವರಂಗವನ್ನು ವಿಶಾಲಗೊಳಿಸಿದ ಸುತ್ತಲೂ ತೆರವಾಗಿಡುವುದು (ಸಭಾಮಂಟಪ) ಅಥವಾ ನವರಂಗದ ಮುಂದೆ ಇನ್ನೊಂದು ಸುತ್ತಲೂ ತೆರನಾದ ರಂಗಮಂಟಪವನ್ನು ನಿರ್ಮಿಸುವುದು, ದೇವಾಲಯದ ಮಾನಸೂತ್ರದ ಬಲ ಭಾಗಕ್ಕೆ, ದೇವಾಲಯದ ಮುಂಭಾಗದಲ್ಲಿ, ವಿಶಾಲವಾದ, ಸುತ್ತಲೂ ತೆರನಾದ ಕಲ್ಯಾಣ ಮಂಟಪವನ್ನು ನಿರ್ಮಿಸುವುದು, ಪ್ರತ್ಯೇಕ ವಾಹನ ಮಂಟಪ, ವಸಂತ ಮಂಟಪ ಯಾತ್ರಾರ್ಥಿಗಳ ವಸತಿಗೆ ಉದ್ದುದ್ದವಾದ ಕೈಸಾಲೆಗಳು, ಆಯಿರ ಮಂಟಪಗಳು (ಸಾವಿರ), ವಿವಿಧೋಪಯೋಗಿ ಕೊಠಡಿಗಳು, ಉಗ್ರಾಣಗಳು, ಯಾಗಶಾಲೆ, ಪಾಕಶಾಲೆ ದೇವಿಯವರಿಗೆ ಪ್ರತ್ಯೇಕ ಗುಡಿ ಮುಂತಾದವುಗಳು ನಿರ್ಮಾಣಗೊಂಡು ದೇವಾಲಯ ಒಂದು ವಿಶೇಷ ವಾಸ್ತು ಸಂಕೀರ್ಣವಾಗಿ ಬದಲಾಯಿತು.

ದ್ರಾವಿಡ ದೇವಾಲಯದ ರಂಗಮಂಟಪಗಳು ವಿಶಾಲವಾದ ಸುತ್ತಲೂ ತೆರನಾದ ಮಂಟಪಗಳು. ರಂಗ ಮಂಟಪ ಅನೇಕ ಕಂಬಗಳ ಹಜಾರ. ಹಜಾರದ ಮಧ್ಯ ಅಂಕಣದಲ್ಲಿ ನೆಲದಿಂದ ಸ್ವಲ್ಪ ಎತ್ತರಿಸಿದ ರಂಗ ಸ್ಥಳವಿರುತ್ತದೆ. ಗರ್ಭಗೃಹದ ದ್ವಾರಕ್ಕೆ ಎದುರಾಗಿ ಈ ಸ್ಥಳ ಇರುತ್ತದೆ. ಇಲ್ಲಿ ರಂಗ ಕಾರ್ಯಕ್ರಮಗಳು ದೇವರ ಸೇವೆಯ ಅಂಗವಾಗಿ ಜರುಗುತ್ತಿದ್ದವು. ಸುತ್ತಲಿನ ನೆಲದ ಮೇಲೆ ಸಭಿಕರು ಕುಳಿತುಕೊಳ್ಳುತ್ತಿದ್ದರು. ರಂಗ ಮಂಟಪದ ಸುತ್ತಲೂ ಅದರ ಹೊರ ಅಂಚಿನ ನೇರದಲ್ಲಿ ರಕ್ಷಾಸನಗಳನ್ನು ನಿರ್ಮಿಸುತ್ತಿದ್ದರು. ರಕ್ಷಾಸನವೆಂದರೆ (ನವರಂಗದ) ರಕ್ಷೆಯಲ್ಲಿ (ಹೊರ ಅಂಚು) ಕೂರುವ ಆಸನ ವ್ಯವಸ್ಥೆ. ಇದು ಕಲ್ಲು ಚಪ್ಪಡಿಗಳಿಂದ ಮಾಡಿದ ಸಾಲುಪೀಠ. ಇದಕ್ಕೆ ಹಿಂಭಾಗದಲ್ಲಿ ಒರಗು ಚಪ್ಪಡಿಯೂ ಇರುತ್ತದೆ. ರಂಗಮಂಟಪಗಳು ಸುತ್ತಲೂ ತೆರನಾಗಿರುವುದರಿಂದ ಇಲ್ಲಿ ಗಾಳಿ ಬೆಳಕಿನ ವ್ಯವಸ್ಥೆ ಉತ್ತಮವಾಗಿರುತ್ತದೆ. ರಂಗಮಂಟಪ ಸಾಂಸ್ಕೃತಿಕ ಮನರಂಜನೆಗಾಗಿ ನಿರ್ಮಿತ ವಾಗಿರುವುದರಿಂದ ಇದರ ಒಳ ಅಲಂಕರಣಕ್ಕೂ ಪ್ರಾಶಸ್ತ್ಯ. ಸುಂದರವಾಗಿ ಕಡೆದು ನಿರ್ಮಿಸಿದ, ಸಾಲಂಕೃತ ಕಂಬಗಳು, ಆಳವಾಗಿ ನಿರ್ಮಿತವಾದ, ಕೆತ್ತನೆಗಳಿಂದ ಕೂಡಿದ ಚಾವಣಿಯ ಅನೇಕಾನೇಕ ಅಂಕಣಗಳು, ಶಾಲಭಂಜಿಕೆಯರ ಶಿಲ್ಪಗಳು ಇತ್ಯಾದಿ ರಂಗಮಂಟಪವನ್ನು ಕಲಾತ್ಮಕ ವಾಸ್ತುಕೃತಿಗಳನ್ನಾಗಿ ಮಾಡಿವೆ.

ಕಲ್ಯಾಣಮಂಟಪ ದೇವರ ಕಲ್ಯಾಣೋತ್ಸವ ಹಾಗೂ ಇನ್ನಿತರ ಸೇವೆಗಳಿಗಾಗಿ ನಿರ್ಮಿಸಿದ ಕಲಾತ್ಮಕ ವಿಶಾಲ ಮಂಟಪ. ಇದು ಸುತ್ತಲೂ ತೆರನಾಗಿರುತ್ತದೆ. ಮಂಟಪ ಅನೇಕ ಸಾಲಂಕೃತ ಕಂಬಗಳಿಂದ ಆಕರ್ಷಕ ಚಾವಣಿಯ ಅಂಕಣಗಳಿಂದ ಶೋಭಿತವಾಗಿರುತ್ತದೆ. ಮಂಟಪದ ಮಧ್ಯ ಅಂಕಣಕ್ಕೆ ನಿರ್ಮಾಣದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕಾಣುತ್ತದೆ. ಈ ಸ್ಥಳ ಸಾಧಾರಣವೆಂದರೆ ಅಲಂಕೃತ ವಿಧಿಯೊಂದನ್ನು ಹೊಂದಿರುತ್ತದೆ. ವಿಶೇಷವಾದಲ್ಲಿ ಅದ್ಭುತವಾದ ಕೆತ್ತನೆಗಳಿಂದ ಕೂಡಿದ ಒಂದು ಪ್ರತ್ಯೇಕ ಮಂಟಪವೇ ಆಗಿರುತ್ತದೆ. ಈ ಮಂಟಪದಲ್ಲಿ ದೇವರ ಉತ್ಸವ ಮೂರ್ತಿಗಳನ್ನು ಕೂಡಿಸಿ ವಿಶೇಷ ಪೂಜೆ, ಸೇವೆಗಳನ್ನು ವಿಶೇಷ ಹಬ್ಬ, ಹರಿದಿನಗಳಲ್ಲಿ ನೆರವೇರಿಸುತ್ತಿದ್ದರು.

ಆಯಿರ ಕಂಬ ಮಂಟಪಗಳು ಅಂದರೆ ಸಾವಿರ ಕಂಬ ಮಂಟಪಗಳು. ಸಾವಿರ ಸಂಖ್ಯೆಯವರೆಗೆ ಕಂಬಗಳನ್ನು ಹೊಂದಿರಬಹುದಾದ ವಿಶಾಲವಾದ ಮಂಟಪಗಳಿವು. ಸಾಧಾರಣದಿಂದ ಅತಿ ಕಲಾತ್ಮಕವಾದ ಕೆತ್ತನೆಗಳನ್ನು ಹೊಂದಿರುವ ಕಂಬಗಳನ್ನು ಸಾಲುಸಾಲಾಗಿ ನಿಲ್ಲಿಸಿ ಈ ಮಂಟಪಗಳನ್ನು ಕಟ್ಟಿರುತ್ತಾರೆ. ಈ ಮಾದರಿಯ ಬಹುವಿಶಾಲ ಮಂಟಪಗಳನ್ನು ಹೆಚ್ಚಾಗಿ ತಮಿಳುನಾಡಿನ ಮದುರೈ, ಶ್ರೀರಂಗಂ ಇತ್ಯಾದಿ ಸ್ಥಳಗಳಲ್ಲಿ ಕಾಣಬಹುದು. ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳಿಗೆ ಮತ್ತು ಯಾತ್ರಾರ್ಥಿಗಳ ವಸತಿಗೆ ಈ ಮಂಟಪಗಳು ಉಪಯೋಗವಾಗುತ್ತಿದ್ದವು. ಉದ್ದುದ್ದವಾದ ಕೈಸಾಲೆಗಳು ದೇವಾಲಯದ ಸುತ್ತಲೂ ಹಾಗೂ ದೇವಾಲಯದ ಬೇರೆ ಬೇರೆ ಆವರಣಗಳಲ್ಲಿ ಕಾಣಬರುತ್ತವೆ. ದೇವಾಲಯದ ವಾಸ್ತುವೈಭವಕ್ಕೆ, ವಿಜೃಂಭಣೆಗೆ, ಯಾತ್ರಾರ್ಥಿಗಳ ಅನುಕೂಲಕ್ಕೆ, ಭಕ್ತಾದಿಗಳಿಂದ ನಿರ್ಮಿತವಾದ ಈ ಕೈಸಾಲೆಗಳು ದೇವಾಲಯದ ಆವರಣದಲ್ಲೇ ನಡೆಯುವ ದೇವರ ದೈನಂದಿನ ಉತ್ಸವಗಳಿಗೆ ಅನುಕೂಲಕರವಾಗಿವೆ. ವಿಶಾಲವಾದ ಕೈಸಾಲೆಗೆ ಸುಪ್ರಸಿದ್ಧವಾಗಿರುವುದು ರಾಮೇಶ್ವರದ ಈಶ್ವರ ದೇವಾಲಯ. ಅಗಾಧವಾದ, ಏಕರೀತಿಯ ಸಾಲಂಕೃತ ಕಂಬಗಳನ್ನು ಎರಡೂ ಪಾರ್ಶ್ವಗಳಲ್ಲಿ ಹೊಂದಿರುವ ದೇವಾಲಯದ ಸುತ್ತಲೂ ನಿರ್ಮಿತವಾಗಿರುವ ಈ ಕೈಸಾಲೆಯ ಒಟ್ಟು ಉದ್ದ ಸು.3 ಕಿಮೀ.

ದೇವಿಯವರ ದೇವಾಲಯ ಅಥವಾ ಗುಡಿ ನಿರ್ಮಾಣಕ್ಕೆ ವಿಜಯನಗರ ಕಾಲದಲ್ಲಿ ಒಂದು ಹೊಸ ವಾಸ್ತು ಆಯಾಮ ದೊರಕಿತು. ಹಿಂದು ಪೂಜಾವಿಧಿಗಳು ಹೆಚ್ಚು-ಹೆಚ್ಚು ಬೆಳೆದಂತೆ ದೇವಾಲಯದ ಸ್ವರೂಪವೂ ಬದಲಾಗಿರುವುದು ಸ್ಪಷ್ಟವಾಗಿದೆ. ಅಂತಹ ಒಂದು ಹೊಸ ಬೆಳವಣಿಗೆಯೆಂದರೆ ದೇವಾಲಯದ ಮುಖ್ಯದೇವರ ಸಹಧರ್ಮಿಣಿಗೆ ಒಂದು ಪ್ರತ್ಯೇಕವಾದ ಆಲಯ ನಿರ್ಮಾಣ. ಈ ಗುಡಿಯನ್ನು ಮೂಲಗುಡಿಗಿಂತ ಚಿಕ್ಕದಾಗಿ, ಮೂಲಗುಡಿಯ ಎಡಭಾಗದಲ್ಲಿ ಸ್ವಲ್ಪ ಹಿಂದಕ್ಕೆ ನಿರ್ಮಿಸಲಾಗಿರುತ್ತದೆ. ಇವು ನಿರಂಧರ ದೇವಾಲಯಗಳು. ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪ – ಇವುಗಳನ್ನು ಇಲ್ಲಿ ಕಾಣಬಹುದು. ಶಾಸ್ತ್ರ ನಿಯಮದ ಪ್ರಕಾರ ಅಮ್ಮನವರ ಗುಡಿಯ ಗರ್ಭಗೃಹ ಆಯತಾಕಾರವಾಗಿರಬೇಕು. ಬಹಳಷ್ಟು ಕಡೆ ಈ ನಿಯಮವನ್ನು ಪಾಲಿಸಲಾಗಿದೆ.

ಹದಿನಾರನೆಯ ಶತಮಾನದ ಅನಂತರ ದ್ರಾವಿಡ ವಾಸ್ತು ವಿನ್ಯಾಸದಲ್ಲಿ ವಿಶೇಷ ಬದಲಾವಣೆ, ಬೆಳವಣಿಗೆ ಕಂಡುಬರುತ್ತದೆ. ಕಾರಣ ದಕ್ಷಿಣ ಭಾರತದ ಮೇಲಿನ ಮುಸ್ಲಿಂ ಧಾಳಿಗಳು. ಮುಸ್ಲಿಂ ಧಾಳಿಗಳಿಂದ ಬೆದರಿದ ಹಿಂದು ಸಮಾಜ ಅದರ ದೇವಾಲಯ




**ಷಡ್ವರ್ಗ ದೇವಾಲಯ (ಏಕತಲ ಅಲ್ಪವಿಮಾನ)**

ಹಾಗೂ ನಗರಗಳ ರಕ್ಷಣೆಯ ಕಡೆಗೆ ಹೆಚ್ಚಿನ ಒತ್ತು ನೀಡಿತು. ಇದರಿಂದಾಗಿ ದೇವಾಲಯದ ಸುತ್ತಲೂ ಎತ್ತರವಾದ ರಕ್ಷಣಾಗೋಡೆಯ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ದೇವಾಲಯದ ಸುತ್ತಲೂ ಅಂದಿನ ವಾಸದ ನೆಲೆಗಳು ಕೇಂದ್ರೀಕೃತಗೊಂಡಿದ್ದುದರಿಂದ, ಅವುಗಳಿಗೂ ರಕ್ಷಣೆ ಆವಶ್ಯಕವಾಯಿತು. ಸಮಾಜೋ-ಧಾರ್ಮಿಕ ಕಾರ್ಯಕ್ರಮಗಳಿಗಾಗಿ ದೇವಾಲಯದ ವಿವಿಧ ವಾಸ್ತು ನಿರ್ಮಾಣಗಳು ಹೆಚ್ಚಿದವು. ದೇವಾಲಯದ ಪ್ರಾಚೀನತೆ, ಮಹತ್ತ್ವ ಹೆಚ್ಚಿದಂತೆ ಅದರ ಪೋಷಣೆ, ಪೋಷಕರು, ಜನಪ್ರವಾಹ ಹೆಚ್ಚಾಯಿತು. ಈ ಎಲ್ಲ ಒತ್ತಡಗಳನ್ನು ತಡೆಯವುದಕ್ಕೆ ಸ್ಥಳಾವಕಾಶ ಮೂಲ ದೇಗುಲದ ಆವರಣದಲ್ಲಿರಲಿಲ್ಲ. ಧಾರ್ಮಿಕ ನಂಬಿಕೆಗಳಿಂದಾಗಿ ಮೂಲ ದೇವಾಲಯವನ್ನು ಸ್ಥಳಾಂತರಿಸುವ ಸಾಧ್ಯತೆಯೂ ಇರಲಿಲ್ಲ. ಹೀಗಾಗಿ ದೇವಾಲಯದ ಹೊರ ಆವರಣದಲ್ಲಿ ವಿಸ್ತರಣಾ ಕಾರ್ಯಗಳು ಪ್ರಾರಂಭವಾದವು. ದೇವಾಲಯದ ಆವರಣದ ಆಚೆ, ಹೊಸ ಹೊಸ ಧಾರ್ಮಿಕ ವಾಸ್ತು ಭಾಗಗಳು, ಜೊತೆಗೆ ವಸತಿಗಳು, ರಸ್ತೆಗಳು, ಓಣಿಗಳು, ಶಾಲೆಗಳು, ಧರ್ಮಛತ್ರಗಳು, ಅಂಗಡಿ ಮುಂಗಟ್ಟುಗಳು, ನೀರಿನ ನೆಲೆಗಳು ಇತ್ಯಾದಿಗಳು ನಿರ್ಮಾಣಗೊಂಡವು. ಇವುಗಳೆಲ್ಲವನ್ನೂ ಆವರಿಸಿ ರಕ್ಷಣೆಗಾಗಿ ಎತ್ತರವಾದ ಗೋಡೆ, ಮಹಾದ್ವಾರಗಳು ನಿರ್ಮಾಣದವು. ಜನಸಂಖ್ಯೆ, ಜನನಿಬಿಡತೆ ಹೆಚ್ಚಾದಂತೆ ಒಂದರ ಹೊರಗೊಂದರಂತೆ ಈ ರೀತಿಯ ಸಮಾಜೋ-ಧಾರ್ಮಿಕ ನೆಲೆಗಳ ಆವರಣಗಳು ರಚನೆಯಾದುವು. ಕೇಂದ್ರಭಾಗದಲ್ಲಿ ಆ ಯಾತ್ರಾ ಸ್ಥಳದ ಮೂಲ ಮುಖ್ಯ ದೇವಾಲಯ, ಅದರ ಸುತ್ತಲೂ ಚೌಕ ಅಥವಾ ಆಯತಾಕಾರದಲ್ಲಿ ಒಂದರ ಹೊರಗೊಂದು ಅನೇಕ ಆವರಣಗಳು, ಎರಡು ಆವರಣಗೋಡೆಗಳ ನಡುವಣ ಪ್ರದೇಶದಲ್ಲಿ ಕಿಕ್ಕಿರಿದ ಮನೆ ಮಠ, ದೇವಾಲಯ, ಅಗ್ರಹಾರ, ಶಾಲೆ, ಮಾರುಕಟ್ಟೆ

– ಹೀಗೆ ಸಕಲ ಸರ್ವಸ್ವವೂ ಬೆಳೆದವು. ಪ್ರತಿ ಆವರಣಕ್ಕೂ ನಾಲ್ಕೂ ದಿಕ್ಕುಗಳಲ್ಲಿ, ಒಂದೇ ನೇರದಲ್ಲಿ ನಿರ್ಮಿಸಿದ ದ್ವಾರಗಳು, ದ್ವಾರಗೋಪುರಗಳು ನಿರ್ಮಾಣಗೊಂಡವು. ವೈದಿಕ ಧರ್ಮದ ಪವಿತ್ರ ಕ್ಷೇತ್ರಗಳ ಸುತ್ತಲೂ ನಿರ್ಮಾಣವಾಗಿರುವ ಈ ರೀತಿಯ ಬೃಹತ್ ರಕ್ಷಣಾ ಆವರಣದೊಳಗಿನ ನಗರ ವ್ಯವಸ್ಥೆಗಳು, ದಕ್ಷಿಣ ಭಾರತದ ದೇವಾಲಯ ನಗರಿಗಳು ಎಂದೇ ಪ್ರಸಿದ್ಧವಾಗಿವೆ. ತಮಿಳುನಾಡಿನ ತಿರುವಣ್ಣಾಮಲೈ, ಮದುರೈ, ಶ್ರೀರಂಗಂ ಮುಂತಾದ ಸ್ಥಳಗಳಲ್ಲಿ ಈ ದೇವಾಲಯ ನಗರಿಗಳನ್ನು ಕಾಣಬಹುದು.

ದೇವಾಲಯ ನಗರಿಯ ಪ್ರತಿಯೊಂದು ಆವರಣಕ್ಕೂ ನಾಲ್ಕೂ ದಿಕ್ಕುಗಳಲ್ಲಿ ಪ್ರವೇಶದ್ವಾರ ಗಳಿರುವುದನ್ನೂ ಆಗಲೇ ಗಮನಿಸಲಾಗಿದೆ. ಈ ಪ್ರವೇಶ ದ್ವಾರಗಳ ಮೇಲೆ ಎತ್ತರವಾದ ಪ್ರಾಸಾದಗಳನ್ನು ನಿರ್ಮಿಸುತ್ತಿದ್ದರು. ದೇವಾಲಯ ಆವರಣ ಪ್ರವೇಶದ್ವಾರದ ಮೇಲಿನ ಈ ಪ್ರಾಸಾದಗಳಿಗೆ ಗೋಪುರಗಳೆಂದು ಕರೆಯಲಾಗುತ್ತದೆ. ಗೋಪುರ ನಿರ್ಮಾಣ ಪದ್ಧತಿ ಹನ್ನೊಂದನೆಯ ಶತಮಾನಕ್ಕಾಗಲೇ ಪ್ರಚಲಿತವಾಗಿತ್ತು. ಆದರೆ ಇದರ ಮಹತ್ತ್ವ ಹೆಚ್ಚಾದದ್ದು 14ನೆಯ ಶತಮಾನದಲ್ಲಿ. ವಿಜಯನಗರ ಕಾಲದಲ್ಲಿ ನಿರ್ಮಿತವಾದ ಹಂಪಿಯ ಎಲ್ಲ ಮುಖ್ಯ ದೇವಾಲಯ ಆವರಣ ದ್ವಾರದ ಮೇಲೂ ಈ ಗೋಪುರಗಳನ್ನು ಕಾಣಬಹುದು. ಎತ್ತರವಾದ ಗೋಪುರಗಳ ನಿರ್ಮಾಣಕ್ಕೆ ಕಾರಣಗಳು ಹಲವಾರು: ಅಲಂಕರಣಕ್ಕಾಗಿ, ವಾಸ್ತು ವೈಭವಕ್ಕಾಗಿ ಹಾಗೂ ಶತ್ರುಧಾಳಿಯನ್ನು ದೂರದಿಂದಲೇ ಗುರುತಿಸುವ ಕಾವಲು ಗೋಪುರವಾಗಿ ಈ ಗೋಪುರಗಳು ನಿರ್ಮಾಣವಾದವೆಂದು ಹೇಳಬಹುದು. ಇವೆಲ್ಲಕ್ಕಿಂತ ಮಿಗಿಲಾಗಿ ಮುಸ್ಲಿಂ ಧಾಳಿಯಿಂದ ತತ್ತರಿಸಿ ಪುನಶ್ಚೇತನಗೊಂಡಿದ್ದ ವಿಜಯನಗರ ಸಾಮ್ರಾಜ್ಯದ ಹಿರಿಮೆಯನ್ನು, ಸ್ಥೈರ್ಯವನ್ನು, ಜನಶಕ್ತಿ, ಹಿಂದುಧರ್ಮದ ಏಳಿಗೆ ಹಾಗೂ ಸಂಘಟನೆ ಯನ್ನೂ ಮುಸ್ಲಿಂ ಶತ್ರುಗಳಿಗೆ ಮನವರಿಕೆ ಮಾಡುವುದಕ್ಕಾಗಿ ಬೃಹದಾಕಾರವಾದ ಈ ಗೋಪುರಗಳು ವಿಜಯನಗರ ಕಾಲದ ದೇವಾಲಯಗಳ ಮುಂದೆ ವಿಜೃಂಭಿಸಿದವು. ವಿಜಯನಗರದರಸರ ಪೋಷಣೆಯಲ್ಲಿ ಈ ಗೋಪುರ ನಿರ್ಮಾಣಗಳು ಪ್ರಖ್ಯಾತ ವಾದುದರಿಂದ ಇವುಗಳಿಗೆ ರಾಯಗೋಪುರಗಳೆಂಬ ನಾಮಾಂಕಿತವೂ ಇದೆ. ಏಕೆಂದರೆ ವಿಜಯನಗರದ ಅರಸರ ಹೆಸರಿಗೆ ರಾಜ, ರಾಯ ಎಂಬ ಪ್ರತ್ಯಯಗಳು ಸಾಮಾನ್ಯ. ರಾಜರು, ರಾಯರು ನಿರ್ಮಿಸಿದ ಗೋಪುರಗಳು ರಾಯಗೋಪುರಗಳಾದವು. ಗೋಪುರಗಳು ವಾಸ್ತುರೂಪ, ರಚನೆ, ವಿಧಾನ, ಅಲಂಕರಣೆ ಮುಂತಾದವುಗಳಲ್ಲಿ ಗರ್ಭಗೃಹದ ಮೇಲಿನ ವಿಮಾನವನ್ನು ಹೋಲುತ್ತವೆ. ಆದರೆ ಗೋಪುರಗಳು ಸಾಮಾನ್ಯವಾಗಿ ಹೆಚ್ಚು ಎತ್ತರದ ನಿರ್ಮಿತಿಗಳಾದುದರಿಂದ ಇವುಗಳ ಕೆಳಗಿನ ತಲವನ್ನು ಕಲ್ಲಿನಿಂದ ನಿರ್ಮಿಸಿ, ಮೇಲಿನ ಪಿರಮಿಡ್ಡಿನಾಕಾರದ ಪ್ರಾಸಾದವನ್ನು ಕಲ್ಲಿಗಿಂತ ಹಗುರವಾದ ಇಟ್ಟಿಗೆ, ಗಾರೆ, ಮರ ಮುಂತಾದವುಗಳಿಂದ ನಿರ್ಮಿಸುತ್ತಿದ್ದರು. ಗೋಪುರದ ಒಳಭಾಗ ಪ್ರತಿ ಹಂತದಲ್ಲೂ ಟೊಳ್ಳಾಗಿರುತ್ತದೆ. ಹಂತದಿಂದ ಹಂತಕ್ಕೆ ಏರಲು ಒಳಭಾಗದಲ್ಲಿ ಏಣಿ ವ್ಯವಸ್ಥೆ ಇರುತ್ತದೆ. ಪ್ರತಿ ಹಂತಕ್ಕೂ ಹಿಂದೆ–ಮುಂದೆ ಮುಖಗಳಲ್ಲಿ ಚಿಕ್ಕ–ಚಿಕ್ಕ ದ್ವಾರಗಳಿರುತ್ತವೆ. ಗೋಪುರದ ಹೊರಮೈ ಗಾರೆಗಚ್ಚಿನಲ್ಲಿ ಮಾಡಿದ ವಾಸ್ತು ಮತ್ತು ಮೂರ್ತಿ ಅಲಂಕರಣೆ, ಮತ್ತು ಶಾಲದ ಎರಡೂ ತುದಿಗಳಲ್ಲಿ ಬೃಹತ್ ಕಮಾನಿನಾಕಾರದ ಕೆತ್ತನೆ ಮಾಡಲಾಗುತ್ತದೆ.

ದ್ರಾವಿಡ ದೇವಾಲಯ ವಾಸ್ತು ಶೈಲಿಯ ಸ್ಪಷ್ಟರೂಪ ಮೊತ್ತಮೊದಲಿಗೆ ಕಾಣುವುದು ಬಾದಾಮಿ ಚಳುಕ್ಯರ ಮತ್ತು ಪಲ್ಲವರ ದೇವಾಲಯಗಳಲ್ಲಿ. ದೇವಾಲಯ ವಾಸ್ತು ವಿನ್ಯಾಸದಲ್ಲಿ ಹಲವಾರು ಪ್ರಯೋಗಗಳು ನಡೆದು, 7ನೆಯ ಶತಮಾನದಲ್ಲಿ ಬಾದಾಮಿಯ ಮಾಲೆಗಿತ್ತಿ ಶಿವಾಲಯ, ಮಹಾಬಲಿಪುರಂನ ಧರ್ಮರಾಜರಥ ದೇವಾಲಯ ವಾಸ್ತುವಿನ ಷಡ್ವರ್ಗಗಳನ್ನು ಸ್ಪಷ್ಟವಾಗಿ ಹೊಂದಿರುವ ಲಕ್ಷಣಗಳು ಕಾಣಬರುತ್ತವೆ. ತದನಂತರ ಈ ಪ್ರಯೋಗಗಳು ತೀವ್ರವಾಗಿ ಮುಂದುವರೆದು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ (ಸು. 740) ಕಂಚಿಯ ವೈಕುಂಠಪೆರುಮಾಳ್ ದೇವಾಲಯಗಳಲ್ಲಿ (ಸು. 850) ಅಂದಿನ ಪ್ರಚಲಿತ ಪೂಜಾವಿಧಿಗಳಿಗೆ ಅನುಕೂಲವಾದ ಒಂದು ಸಂಪೂರ್ಣ ದೇವಾಲಯ ಮಾದರಿ ಕಾಣಬರುತ್ತದೆ. 10ನೆಯ ಶತಮಾನದಲ್ಲಿ ರಾಜಕೀಯವಾಗಿ ಪ್ರಬಲರಾದ ಚೋಳರ ಆಶ್ರಯದಲ್ಲಿ ಮೂಲ ದ್ರಾವಿಡ ದೇವಾಲಯದ ಕಲ್ಪನೆ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಅತ್ಯಂತ ಮಹತ್ವಾಕಾಂಕ್ಷಿ ವಾಸ್ತು ಕೃತಿಗಳೆನಿಸಿದ ತಂಜಾವೂರು ಮತ್ತು ಗಂಗೈಕೊಂಡ ಚೋಳಪುರಂನ ಬೃಹದೀಶ್ವರ ದೇವಾಲಯಗಳು, ಜೊತೆಗೆ ನೂರಾರು ವಿವಿಧ ಗಾತ್ರದ, ವಿಸ್ತೀರ್ಣದ ದೇವಾಲಯಗಳು ದಕ್ಷಿಣ ಭಾರತದಲ್ಲಿ ನಿರ್ಮಾಣವಾದವು. 14ನೆಯ ಶತಮಾನದ ಪ್ರಾರಂಭದಲ್ಲಿ ಮುಸ್ಲಿಂ ಧಾಳಿಗಳಿಂದ ದಕ್ಷಿಣ ಭಾರತದಲ್ಲಿ ದೇವಾಲಯ ನಿರ್ಮಾಣ ಕಾರ್ಯ ಸ್ವಲ್ಪ ಕುಂಠಿತವಾಯಿತು. ಆದರೆ ಅತಿ ಶೀಘ್ರದಲ್ಲಿ ಈ ನಿರ್ಮಾಣ ಕಾರ್ಯ ಪುನಶ್ಚೇತನಗೊಂಡು ಇನ್ನೂ ಹೆಚ್ಚು ವೈಭವದಿಂದ, ವಿಶಾಲವಾಗಿ, ಶ್ರೀಮಂತವಾಗಿ ಮುಂದುವರೆಯಿತು. ವಿಜಯನಗರೋತ್ತರ ಕಾಲದಲ್ಲಿ ಮುಸ್ಲಿಂ ಪ್ರಾಬಲ್ಯ ಕರ್ನಾಟಕದಲ್ಲಿ ಮುಂದುವರೆದರೂ ತಮಿಳುನಾಡಿನ ಮಧುರ ನಾಯಕರ ನೇತೃತ್ವದಲ್ಲಿ 18ನೆಯ ಶತಮಾನ ದವರೆಗೆ ದ್ರಾವಿಡ ವಾಸ್ತು ಅವಿರತವಾಗಿ ಮುಂದುವರೆದು ಅನೇಕ ಅಮೋಘ ವಾಸ್ತು ಕೃತಿಗಳು ನಿರ್ಮಾಣ ವಾದವು. ಬ್ರಿಟಿಷ್ ಆಡಳಿತದಲ್ಲಿ ದ್ರಾವಿಡ ದೇವಾಲಯ ನಿರ್ಮಾಣಗಳು ಸಂಪೂರ್ಣ ಕುಂಠಿತಗೊಂಡು, ಪ್ರಸ್ತುತ ಪರಿಸ್ಥಿತಿಯಲ್ಲಿ ದ್ರಾವಿಡ ದೇವಾಲಯ ವಾಸ್ತು ಕಲೆಯನ್ನು ಪುನರುಜ್ಜೀವನಗೊಳಿಸಬೇಕಾದ ಕಾಲ ಒದಗಿದೆ.

**ನಾಗರ ಮಾದರಿ:** ಭಾರತೀಯ ದೇವಾಲಯ ವಾಸ್ತುಶಾಸ್ತ್ರದ ಮೂರು ಪ್ರಮುಖ ಪ್ರಕಾರಗಳ ಪೈಕಿ ಒಂದು. ನಾಗರ ಮಾದರಿಗೆ ವಿವಿಧ ಹೆಸರುಗಳಿವೆ. ಅವು: ಔತ್ತರೇಯ (ಉತ್ತರ ಭಾರತ), ಇಂಡೊ–ಆರ್ಯನ್, ನಾಗರ ಮತ್ತು ರೇಖಾನಾಗರ. ಔತ್ತರೇಯ ಶೈಲಿಯೆಂದು ಕರೆದಿರುವುದಕ್ಕೆ ಕಾರಣ ಈ ಶೈಲಿ ಹೆಚ್ಚು ಬಳಕೆಯಾಗಿರುವುದು ಉತ್ತರ ಭಾರತ, ಒರಿಸ್ಸ ಮತ್ತು ಮಹಾರಾಷ್ಟ್ರ ಪ್ರಾಂತಗಳಲ್ಲಿ. ಇಂಡೊ–ಆರ್ಯನ್ ಎಂದು ಕರೆದಿರುವುದಕ್ಕೆ ಕಾರಣ ಇದು ಹುಟ್ಟಿದ್ದು ಆರ್ಯರ ಪ್ರಧಾನ ನೆಲೆಯಾದ ಉತ್ತರ ಭಾರತದಲ್ಲಿ ಮತ್ತು ಇದು ದ್ರಾವಿಡ ಶೈಲಿಯಿಂದ ಭಿನ್ನ ಎಂಬುದನ್ನು ಸೂಚಿಸುವುದಕ್ಕೆ. ನಾಗರ ಎಂಬ ಹೆಸರು ಈ ಶೈಲಿಗೆ ಬಂದಿರುವುದಕ್ಕೆ ಕಾರಣ ಸಂದಿಗ್ಧವಾದರೂ ಪ್ರಾಯಶಃ ಇದು ಪಟ್ಟಣದ (ನಗರ) ಶೈಲಿಯಾಗಿದ್ದು, ಸಮಕಾಲೀನ ಜಾನಪದ ಅಥವಾ ಗ್ರಾಮೀಣ ಶೈಲಿಯಿಂದ ಭಿನ್ನ ಎಂದು ಸೂಚಿಸುವುದಕ್ಕೆ ಇರಬಹುದು. ರೇಖಾನಾಗರ ಎಂಬ ಹೆಸರು ಈ ಶೈಲಿಗೆ ಬರುವುದಕ್ಕೆ ಕಾರಣ ಈ ಶೈಲಿಯ ದೇವಾಲಯಗಳ ಗರ್ಭಗೃಹಗಳ ಮೇಲಿನ ಶಿಖರದ ಆಕೃತಿಯೇ ಎಂದು ಹೇಳಬಹುದು. ಯಾವುದೇ ವಾಸ್ತು ಮಾದರಿಯನ್ನು ಇಂತಹ ಮಾದರಿಯದು ಎಂದು ಗುರುತಿಸುವಾಗ, ಈ ವಾಸ್ತುಕೃತಿಯ ಗರ್ಭಗೃಹದ ಮೇಲಿನ ಶಿಖರದ ಆಕೃತಿಯನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಹೀಗಾಗಿ ನಾಗರ ಮಾದರಿಯ ಶಿಖರದ ಆಕೃತಿಯನ್ನು ರೇಖಾನಾಗರ ಅಥವಾ ಆಂಗ್ಲಭಾಷೆಯಲ್ಲಿ ಕರ್ವಿಲೀನಿಯರ್ ಟವರ್ ಎಂದು ಕರೆಯಲಾಗಿದೆ. ಅಂದರೆ ಇದರ ಶಿಖರದ ಆಕೃತಿ ಬಾಗಿದ ರೇಖೆಗಳಿಂದ ಕೂಡಿದೆ ಎಂದರ್ಥ. ಶಿಖರದ ಹೊರಮೈಯಲ್ಲಿ ಸಮಾನಾಂತರದಲ್ಲಿ ಅನೇಕ ನೇರ ಹಾಗೂ ಲಂಬ ರೇಖಾಕೃತಿಗಳು ಒಳಬಾಗುತ್ತ ಹೋಗುವುದು ಪ್ರಧಾನವಾಗಿ ಕಂಡುಬರುತ್ತದೆ. ಈ ರೇಖಾಕೃತಿಗಳು ಶಿಖರದ ಹೊರಮೈಯ ನಿಬಿಡ ಹಿಂಚಾಚು –

ಮಧುಕೇಶ್ವರ ದೇವಾಲಯ (ಫಾಂಸನ), ಬನವಾಸಿ

ಮುಂಚಾಚುಗಳಿಂದ (ಮೂಲೆ ರೇಖೆಗಳನ್ನು ಹೊರತುಪಡಿಸಿ) ಉಂಟಾಗಿವೆ. ನೆಲದಿಂದ ಛತ್ತಿನವರೆಗೆ ಗರ್ಭಗುಡಿಯ ಹೊರಮೈ ರೇಖೆಗಳು ಸಮಾನಾಂತರವಾಗಿದ್ದು, ಕ್ರಮೇಣ ಎಲ್ಲವೂ ತುದಿಯಲ್ಲಿ ಒಂದು ಮಧ್ಯ ಬಿಂದುವಿನತ್ತ ಬಾಗುತ್ತವೆ. ಇದರಿಂದಾಗಿ ಗರ್ಭಗುಡಿ ಛತ್ತಿನ ಮೇಲಿನ ಶಿಖರದ ಹೊರ ಅಂಚು ಬಾಗಿದ ರೇಖಾಕೃತಿಯಾಗಿರುತ್ತದೆ. ಆದ್ದರಿಂದ ಈ ರೀತಿಯ ಪ್ರಾಸಾದಕ್ಕೆ ರೇಖಾನಾಗರ ಪ್ರಾಸಾದವೆಂದು ಹೆಸರು.

ವಾಸ್ತುಶಾಸ್ತ್ರದ ಗ್ರಂಥಗಳು ನಾಗರದ ಬಗ್ಗೆ ವಿವಿಧ ಮಾದರಿ ಪ್ರಾಸಾದಗಳಿಗೆ ವಿವರಣೆ ಗಳನ್ನು ನೀಡಿವೆ. ಅವುಗಳಲ್ಲಿ ಈಗಿರುವ ನಾಗರ ಮಾದರಿ ಪ್ರಾಸಾದಗಳಿಗೆ ಅನ್ವಯವಾಗು ವಂತಹ ಅಥವಾ ಸರಿಹೊಂದುವ ವಿವರಣೆ ದೊರಕುವುದು ಅಪರಾಜಿತ ಪೃಚ್ಛ ಮತ್ತು ಕಾಮಿಕಾಗಮ ಗ್ರಂಥಗಳಲ್ಲಿ ಮಾತ್ರ. ಅಪರಾಜಿತ ಪೃಚ್ಛದಲ್ಲಿ ಹೇಳಿರುವ ವರ್ಣನೆಯನ್ನು ಈ ರೀತಿ ಅರ್ಥೈಸಬಹುದು. ನಾಗರಜಾತಿ (ಪ್ರಾಸಾದ) ಅದರ ಊರ್ಧ್ವ ವಿನ್ಯಾಸದ ಹಿಂಬಣೆಗಳಲ್ಲಿ ಅನೇಕ ಚಿಕಣಿ ಶಿಖರಗಳನ್ನು ದೇಹಕ್ಕೆ ಅಂಟಿಕೊಂಡಂತೆ ಹೊಂದಿರಬೇಕು. ಗರ್ಭಗೃಹದ ಮೇಲ್ಭಾಗದಲ್ಲಿ ಬಾಗಿದ ಹೊರಮೈಯನ್ನೂ, ಶುಕನಾಸವನ್ನೂ ಹೊಂದಿರಬೇಕು. ಮೇಲ್ತುದಿಯಲ್ಲಿ ಆಮಲಸಾರಕ (ನೆಲ್ಲಿಕಾಯಿ ರೀತಿಯ ಶಿಲೆ) ಮತ್ತು ಕುಂಭಕಲಶವನ್ನೂ ಹೊಂದಿರಬೇಕು. ಕಾಮಿಕಾಗಮದ ವಿವರಣೆ ಹೀಗಿದೆ: ನಾಗರ ಪ್ರಾಸಾದದ ಆಕೃತಿ, ಅದರ ತಳವಿನ್ಯಾಸದ ಎಲ್ಲಾ ಅಂಗಗಳ ಆಕೃತಿಯ ಗತಿಗೆ ಅನುಗುಣವಾಗಿರಬೇಕು. ಊಹ–ಪ್ರತ್ಯೂಹ(?) (ಅಂದರೆ ಹಿಂದೆ–ಮುಂದೆ ಸರಿತ) ಗಳನ್ನು ಹೊಂದಿರಬೇಕು. ಚಿಕಣಿ ಶಿಖರಗಳ ಅಲಂಕರಣವಿರಬೇಕು; ಮೇಲ್ಗಡೆ ಆಮಲಸಾರಿಕ (ನೆಲ್ಲಿಕಾಯಿ ರೀತಿಯ ಶಿಲೆ) ಮತ್ತು ಶುಕನಾಸವಿರಬೇಕು. ಈ ವಿವರಣೆಗಳಿಗೆ ಅನುಗುಣವಾಗಿ ಈಗ ಕಾಣುವ ನಾಗರ ಮಾದರಿ ವಿಮಾನಗಳು ನಿರ್ಮಿತವಾಗಿವೆ ಎಂಬುದು ಗಮನಾರ್ಹ. ಈ ಶಾಸ್ತ್ರಗ್ರಂಥಗಳಿಂದ ಮೂಲತಃ ನಮಗೆ ತಿಳಿದುಬರುವುದೇನೆಂದರೆ, ನಾಗರ ಪ್ರಾಸಾದ (ವಿಮಾನ) ತಳವಿನ್ಯಾಸದಲ್ಲಿ ಅನೇಕ ಹಿಂದು–ಮುಂದಿನ ಸರಿತಗಳಿಂದ ಕೂಡಿದ ಚತುರಸ್ರವಾಗಿರುತ್ತದೆ. ಈ ಎಲ್ಲಾ ಹಿಂದು–ಮುಂದಿನ ಸರಿತಗಳೂ ಇದೇ ರೀತಿಯಲ್ಲಿ ಸಮಾನಾಂತರವಾಗಿ ನಿರ್ದಿಷ್ಟ ಎತ್ತರದವರೆಗೂ (ಛತ್ತಿನವರೆಗೆ) ಮೇಲೇರಿ ಕ್ರಮೇಣ ಒಳಬಾಗುತ್ತವೆ. ಹಿಂದೆ–ಮುಂದೆ

ಸರಿತಗಳು ಸಮಾನಾಂತರವಾಗಿ ಮೇಲೇರುವುದರಿಂದ ಮುನ್ ಸರಿತದ ದಿಂಡುಗಳು ಪ್ರಧಾನವಾಗಿ, ಮೇಲಿನಿಂದ ಕೆಳಗಿನವರೆಗೂ, ಭೂಮಿಗೆ ಲಂಬವಾಗಿ ಕಾಣುತ್ತವೆ. ಹಿನ್ ಸರಿತಗಳು, ಮುಂದಿನ ಸರಿತದ ನಡುವಣ ನೆರಳಿನಲ್ಲಿ ಕಳೆಗುಂದಿ, ಮುಂದಿನ ಸರಿತಗಳೇ ಪ್ರಧಾನ ಭಾಗವಾಗಿ ಮೇಲಿನಿಂದ ಕೆಳಗಿನವರೆಗೂ, ಬೃಹತ್ ರೇಖೆಗಳಂತೆ, ಪಟ್ಟಿಗಳಂತೆ ಕಾಣಿಸುತ್ತವೆ. ಇದರಿಂದಾಗಿ ಈ ಮಾದರಿಯ ಪ್ರಾಸಾದಕ್ಕೆ ರೇಖಾನಾಗರ ಪ್ರಾಸಾದ ಅಥವಾ ಬಾಗಿದ ಪ್ರಾಸಾದವೆಂದು ಹೆಸರು ಬಂದಿದೆ.

ಪ್ರಾಸಾದದ ನಿರ್ಮಾಣದಲ್ಲಿ, ಅಡ್ಡಡ್ಡಲಾಗಿ, ಕಲ್ಲಿನ ವರಸೆಗಳನ್ನು ಒಂದರ ಮೇಲೊಂದರಂತೆ ನೇರವಾಗಿ ಕೂಡಿಸಿ ಕಟ್ಟಲ್ಪಟ್ಟಿರುತ್ತದೆ. ಪ್ರಾಸಾದದ ಹೊರಮೂಲೆಗಳು ನೇರವಾಗಿರುತ್ತವೆ. ವರಸೆಗಳು ತೆಳುವಾಗಿರುತ್ತವೆ. ಇವುಗಳ ನಡುವಿನ ಭಾಗಗಳು ಕಿರಿದಾಗಿರುತ್ತವೆ. ವರಸೆಗಳನ್ನು ಕೂಡಿಸುವಾಗ ತಳಪಾಯದ ಹಿಂದೆ–ಮುಂದೆ ಸರಿತಗಳನ್ನು ಅದೇ ರೀತಿಯಲ್ಲಿ ಉಳಿಸಿಕೊಳ್ಳಲಾಗುತ್ತದೆ. ಇದರಿಂದ ಪ್ರಾಸಾದದ ಮೇಲ್ಮೈಯಲ್ಲಿ ಅಡ್ಡವರಸೆಗಳು ಎದ್ದು ಕಾಣುವುದೇ ಇಲ್ಲ; ಲಂಬ ರೇಖೆಗಳು, ಪಟ್ಟಿಗಳು ಎದ್ದು ಕಾಣುತ್ತವೆ. ಪ್ರಾಸಾದದ ಹೊರಮೈ ಅಲಂಕರಣಕ್ಕೆ ವಿವಿಧ ವಿನ್ಯಾಸಗಳಲ್ಲಿ ಕೂಡುಗಳ ಕೆತ್ತನೆಗಳು, ಬಳ್ಳಿ ಸುರುಳಿಗಳೂ, ಮಣಿಹಾರಗಳೂ, ಪ್ರಾಣಿಶಿಲ್ಪಗಳೂ, ನಿರ್ದಿಷ್ಟ ಅಂತರಗಳಲ್ಲಿ ಹಾಗೂ ಪ್ರಧಾನವಾದ ಮುಂಭಾಗದ ಮೂಲೆಗಳಲ್ಲಿ ಆಮಲಕಗಳನ್ನು ಇಡಲಾಗಿರುತ್ತದೆ. ಸರಿತದ ಮಧ್ಯಭಾಗಗಳಲ್ಲಿ ಹಿನ್ ಮತ್ತು ಮುನ್ ಸರಿತದ ಆಳವಾದ ತೋಡುಗಳಲ್ಲಿ ಚಿಕಣಿ ಶಿಖರದ ಮಾದರಿಗಳನ್ನು ಮೂಲ ಶಿಖರದ ಮೈಗೆ ಅಂಟಿಕೊಂಡಿರುವಂತೆ ಅಲಂಕರಿಸಲ್ಪಟ್ಟಿದೆ. ಈ ಚಿಕಣಿ ಶಿಖರಗಳ ಜೋಡಣೆಯಲ್ಲೇ ವಿವಿಧ ವಿನ್ಯಾಸಗಳನ್ನೂ, ಅಡ್ಡ–ಉದ್ದ ಪಂಕ್ತಿಗಳನ್ನೂ ಸಹ ಕಾಣಬಹುದು. ಶಿಲ್ಪಾಲಂಕರಣಗಳು ಸಾಮಾನ್ಯವಾಗಿ ಶಿಖರದ ಕೆಳಭಾಗದಲ್ಲಿ, ಅಂದರೆ ಗರ್ಭಗುಡಿಯ ಗೋಡೆಯ ಭಾಗದಲ್ಲಿ ಮಾತ್ರ ಕಾಣಬರುತ್ತವೆ. ಉಳಿದಂತೆ ಕೇವಲ ವಾಸ್ತು ಅಲಂಕರಣವೇ ಪ್ರಧಾನ.

ಈ ಮೇಲೆ ಹೇಳಿದ ಆಕೃತಿ ಮೂಲತಃ ಕಳಿಂಗ (ಒರಿಸ್ಸ) ಪ್ರಾಂತದಲ್ಲಿ ಹುಟ್ಟಿ ಬೆಳೆದ ನಾಗರ ಮಾದರಿಯ ಪ್ರಾಸಾದದ ಮೂಲ ಆಕಾರ. ಭೌಗೋಳಿಕವಾಗಿ ವಿಸ್ತರಿಸಿ ಹೋದಂತೆಲ್ಲಾ ಈ ಮಾದರಿಯಲ್ಲಿ ಅನೇಕ ಪ್ರಭೇದಗಳು, ರೂಪಾಂತರಗಳು ಉಂಟಾದವು. ಪ್ರಾಂತದಿಂದ ಪ್ರಾಂತಕ್ಕೆ ಈ ಬದಲಾವಣೆಗಳನ್ನು ಕಾಣಬಹುದು. ಉದಾಹರಣೆಗೆ, ಭುವನೇಶ್ವರದ ದೇವಾಲಯಗಳು ಮೇಲೆ ಹೇಳಿದ ಮಾದರಿಯದಾಗಿದ್ದು ಇವುಗಳ ಪ್ರಾಸಾದದ ಆಕೃತಿಯಲ್ಲಿ ಪ್ರಧಾನವಾದ ಭುಜಭಾಗ ಕಾಣಬರುತ್ತದೆ. ಖಜುರಾಹೊದಲ್ಲಿನ ಪ್ರಾಸಾದಗಳು, ಅಧಿಷ್ಠಾನದ ಭಾಗದಿಂದಲೇ ಕಿರಿದಾಗುತ್ತ ಹೋಗಿ ಶಂಕುವಿನಾಕೃತಿಯಲ್ಲಿರುತ್ತದೆ. ಪಶ್ಚಿಮ ಭಾರತದಲ್ಲಿ ಇವೆರಡರ ನಡುವಣ ಸಾಮರಸ್ಯದ ಆಕೃತಿ ಕಂಡುಬರುವುದಲ್ಲದೆ, ಚಿಕಣಿ ಶಿಖರಗಳ ಅಲಂಕರಣ ವಿಪರೀತವಾಗಿರುತ್ತದೆ.

ಇಂತಹ ಪ್ರಾಸಾದಗಳನ್ನು ಶೇಖರೀ ಮತ್ತು ಭೂಮಜ ಉಪಜಾತಿಯವುಗಳೆಂದು ಗುರುತಿಸಿರುವುದೂ ಉಂಟು. ನಾಗರ ಪ್ರಾಸಾದಗಳು ಒಳರಚನೆಯಲ್ಲಿ ಟೊಳ್ಳಾಗಿರಬಹುದು ಅಥವಾ ಘನವಾಗಿರಬಹುದು.

ಶಿಖರದ ತುದಿಯಲ್ಲಿ ಒಳ ಒತ್ತಿದ ಕಿರುದಾದ ಬೇಕಿ (ಗ್ರೀವ–ಕತ್ತು) ಯಿಂದ ಬೇರ್ಪಟ್ಟ ಆಮಲಸಾರಿಕ/ಆಮಲಶಿಲೆ/ಆಮಲಕವಿರುತ್ತದೆ. ಸಾಮಾನ್ಯವಾಗಿ ಇದು ಏಕಶಿಲೆಯದ್ದಾಗಿರುತ್ತದೆ. ದಪ್ಪವಾಗಿ, ಅಗಲವಾದ, ಸ್ವಲ್ಪ ವಿಸ್ತೃತ ವೃತ್ತಕಾರವಾದ ಶಿಲೆ ಇದು. ಇದರ ಪಾರ್ಶ್ವ ಮೇಲ್ಮೈಯಲ್ಲಿ ನೆಲ್ಲಿಕಾಯಿಯ ರೀತಿಯಲ್ಲಿ ಉಬ್ಬು ಪಟ್ಟಿಗಳಿರುತ್ತವೆ. ಮಟ್ಟವಾದ ಮೇಲ್ಭಾಗದಲ್ಲಿ ಮಗುಚಿದ ಕಮಲದ ರೀತಿಯ ತೆಳುಪೀಠದ ಮೇಲೆ ಕುಂಭಕಲಶವಿರುತ್ತದೆ. ಪ್ರಾಸಾದದ ಮುಂಭಾಗದಲ್ಲಿ ಶುಕನಾಸವನ್ನು ಕೂಡಿಸುವ ಸಂಪ್ರದಾಯ ಮೂಲತಃ ಔತ್ತರೇಯವಾದದ್ದು ಸುಕನಾಸಿ ಎಂದರೆ ಗಿಣಿ–ಕೊಕ್ಕು ಎಂದರ್ಥ. ಪ್ರಾಸಾದದ ನೇರವಾದ ಮುಖದಲ್ಲಿ ಗಿಣಿಯ ಕೊಕ್ಕಿನಂತೆ ಪ್ರಧಾನವಾಗಿ ಮುಂದಕ್ಕೆ ಚಾಚಿರುವ ಭಾಗ ಇದು. ಪಾರ್ಶ್ವಗಳಿಗಿಂತ ಇದರ ಮುಖಭಾಗಕ್ಕೇ ಹೆಚ್ಚು ಪ್ರಾಧಾನ್ಯ. ಈ ಭಾಗವನ್ನು ದೊಡ್ಡದಾದ ಕೂಡುವಿನಾಕಾರದಲ್ಲಿ (ಮಹಾನಾಸಿ) ಕಂಡರಿಸಿರುತ್ತಾರೆ.

ನಾಗರ ಶೈಲಿ ಮೂಲತಃ ಒರಿಸ್ಸ ಪ್ರಾಂತ್ಯದಲ್ಲಿ ಹುಟ್ಟಿ, ಭಾರತದ ಬೇರೆ–ಬೇರೆ ಭಾಗಗಳಿಗೆ ವಿಸ್ತರಿಸಿದ ವಾಸ್ತು ಮಾದರಿಯಾಗಿದೆ. ಆದ್ದರಿಂದ ಈ ಪ್ರಾಂತದಲ್ಲಿ ಪ್ರಚಲಿತವಾಗಿರುವ ನಾಗರ ಶೈಲಿಯ ದೇವಾಲಯದ ವಿವಿಧ ವಾಸ್ತು ಭಾಗಗಳ ನಾಮಾವಳಿಯನ್ನು ತಿಳಿಯುವುದು ಆವಶ್ಯಕ. ಈ ವಾಸ್ತುನಾಮಗಳು ಮೂಲತಃ ಸಂಸ್ಕೃತದ್ದಾದರೂ, ಪ್ರಾಂತದಿಂದ ಪ್ರಾಂತಕ್ಕೆ, ಭಾಷೆ ಬದಲಾದಂತೆ. ವಾಸ್ತು ನಾಮಗಳೂ ಬದಲಾಗಿರುವ ಸಂಭವ ಉಂಟು. ದೇವಾಲಯದ ಕೇಂದ್ರಭಾಗ ಗರ್ಭಗ್ರಹ. ಈ ಭಾಗವನ್ನು ದೇವುಲ್ ಅಥವಾ ಶ್ರೀಮಂದಿರ್ ಎನ್ನುತ್ತಾರೆ. ಗರ್ಭಗೃಹದ ಮೇಲಿನ ಉನ್ನತ ಪ್ರಾಸಾದ (ಶಿಖರ)ವನ್ನೂ ದೇವುಲ್ ಎಂಬ ಹೆಸರಿನಿಂದ ಕರೆಯುವ ವಾಡಿಕೆ ಉಂಟು. ಸಾಮಾನ್ಯವಾಗಿ ನಾಗರ ಮಾದರಿಯ ದೇವಾಲಯಗಳು ನಿರಂಧರವಾದರೂ, ಅಪರೂಪವಾಗಿ ಸಾಂಧಾರ ಮಾದರಿಗಳು (ಮುಚ್ಚಿದ ಪ್ರದಕ್ಷಿಣಾ ಪಥವನ್ನೊಳಗೊಂಡ) ಅಲ್ಲಲ್ಲಿ ಕಾಣುವುದೂ ಉಂಟು.

ದೇವುಲ್‌ನ ಮುಂದಿನ ಭಾಗವೇ ಹಜಾರ. ಇದನ್ನು ಜಗನ್ಮೋಹನ್ ಎಂದು ಕರೆಯುತ್ತಾರೆ. ಈ ಎರಡು ಭಾಗಗಳು ಈ ಮಾದರಿಯ ಪ್ರಾರಂಭ ಕಾಲದಲ್ಲಿ ಮುಖ್ಯವಾಗಿ ಇರುತ್ತಿದ್ದವು. ವಾಸ್ತುಶೈಲಿ ಬೆಳೆದಂತೆ ದೇವಾಲಯದ ಮಾನಸೂತ್ರದ ನೇರದಲ್ಲಿ ಇನ್ನೂ ಕೆಲವು ಹಜಾರಗಳು ಸೇರಿಕೊಂಡವು. ಅವೆಂದರೆ ಕ್ರಮವಾಗಿ ನಾಚ್ಮಂದಿರ್ (ನಾಟ್ಯಶಾಲೆ), ಭೋಗ್ ಮಂದಿರ್ (ಭೋಜನ ಶಾಲೆ). ಇವೆಲ್ಲವೂ ಒಂದಕ್ಕೊಂದು ಸೇರಿದಂತೆ ಕಟ್ಟಿದ ಹಜಾರಗಳು. ಪ್ರತಿಯೊಂದು ಹಜಾರಕ್ಕೂ ಎಲ್ಲಾ ದಿಕ್ಕಿನಲ್ಲೂ ಬಾಗಿಲುಗಳಿರುತ್ತವೆ. ದೇವಾಲಯವನ್ನು ಎತ್ತರವಾದ ಪಿಷ್ಟದ (ಅಧಿಷ್ಠಾನ) ಮೇಲೆ ಏರಿಸಿರುತ್ತಾರೆ. ದೇವಾಲಯದ ಏರುನೋಟದಲ್ಲಿ ವಿವಿಧ ಭಾಗಗಳಿಗೆ ವಿವಿಧ ಹೆಸರುಗಳಿವೆ. ಗರ್ಭಗೃಹದ ಭಾಗದ ಏರುನೋಟದಲ್ಲಿ ಕಾಣಬರುವ ವಾಸ್ತು ಅಂಗಗಳೆಂದರೆ ಕೆಳಗಿನಿಂದ ಕ್ರಮವಾಗಿ: ಪಿಷ್ಟ (ಪೀಠ/ಅಧಿಷ್ಠಾನ), ಬಾಡ (ಭಿತ್ತಿ), ಛಪ್ರ (ಪ್ರಾಸಾದ), ಗ್ರೀವ (ಕತ್ತು), ಆಮ್ಲ (ಆಮಲಕ) ಮತ್ತು ಕಲಶ. ಇವೆಲ್ಲವೂ ಕೂಡಿ ರೇಖಾ ದೇವುಲ್ (ರೇಖಾನಾಗರ) ಎನಿಸುತ್ತದೆ. ಮುಂಭಾಗದ ಹಜಾರಗಳ ಏರುನೋಟದ ವಾಸ್ತುಭಾಗಗಳ ಪದನಾಮದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಈ ಭಾಗಗಳೆಂದರೆ ಪಿಷ್ಟ (ಅಧಿಷ್ಠಾನ), ಬಾಡ (ಭಿತ್ತಿ), ಪೀಡ (ಭಿನ್ನ ಮಾದರಿಯ ಪ್ರಾಸಾದ), ಘಂಟಾ ಕಲಶ. ಇವಿಷ್ಟೂ ಸೇರಿ ಪೀಡ ದೇವುಲ್ ಎನಿಸುತ್ತದೆ. ಈ ರೀತಿಯ ಪೀಡ ಪ್ರಾಸಾದಗಳು ಪ್ರತಿಯೊಂದು ಹಜಾರದ ಮೇಲೂ ಕಂಡುಬರುತ್ತವೆ.




**ರೇಖಾನಾಗರ ಮಾದರಿ, ಪಟ್ಟದಕಲ್ಲು**

ತಳವಿನ್ಯಾಸದ ಹೊರ ಆಕೃತಿಯಲ್ಲಿ ಅನೇಕ ಹಿಂದು–ಮುಂದಿನ ಸರಿತಗಳು ಕಾಣುತ್ತವೆ. ಇವೆಲ್ಲವೂ ಯಾವಾಗಲೂ ಸಮಕೋನದಲ್ಲಿಯೇ ಇರುತ್ತವೆ. ಮುಂಚಾಚುಗಳಿಗೆ ಅವುಗಳ ಸ್ಥಾನ, ಗಾತ್ರ, ಆಕೃತಿಗಳನ್ನು ಅನುಸರಿಸಿ ವಿವಿಧ ಹೆಸರುಗಳುಂಟು. ದೇವುಲ್‌ನ ಮೂರೂ ಮುಖದ ಮಧ್ಯದ ಪ್ರಧಾನ ಮುಂಬಣಿಗೆಗಳಿಗೆ ರಾಹಪಗವೆನ್ನಲಾಗುತ್ತದೆ. ಇದರ ಪಾರ್ಶ್ವಗಳ ಅರ್ಧ ಹಾಗೂ ಮಧ್ಯದ ಪೂರ್ಣ ಮುಂಬಣಿಗೆಗಳಿಗೆ ಅನರ್ಥಪಗಗಳೆನ್ನುತ್ತಾರೆ. ಈ ಪಗಗಳು ಪ್ರಾಸಾದದ ಏರುನೋಟದಲ್ಲಿ ಅಡಿಯಿಂದ ಮುಡಿಯವರೆಗೂ ಅದೇ ಆಕಾರದಲ್ಲಿ ಇದ್ದು, ಏರುನೋಟದಲ್ಲಿ ಲಂಬ ರೇಖಾಕೃತಿಗಳು ಪ್ರಧಾನವಾಗಿ ಮೂಡುವಲ್ಲಿ ಸಹಕಾರಿಯಾಗುತ್ತವೆ. ಹಿಂಬಣಿಗೆಗಳಿಗೆ ಯಾವುದೇ ಪ್ರತ್ಯೇಕ ಹೆಸರುಗಳಿಲ್ಲ.

ದೇವುಲ್‌ನ ಮುಂಭಾಗದ ಹಜಾರಗಳ ಪ್ರಾಸಾದಗಳು ರೇಖಾನಾಗರ ರೀತಿಯ ಕಟ್ಟಡಗಳಲ್ಲ. ಬದಲಾಗಿ ಇವುಗಳು ಪಿರಮಿಡ್ಡಿನಾಕಾರದಲ್ಲಿ ಇಳಿಜಾರಾದ ಮೇಲ್ಮೈಯನ್ನು ಹೊಂದಿರುತ್ತವೆ. ಈ ರೀತಿಯ ಪ್ರಾಸಾದಗಳನ್ನು ಈ ಹಜಾರಗಳ ಮೇಲೆ ನಿರ್ಮಿಸಲು ಈ ಹಜಾರಗಳ ಚಾವಣಿಯ ವಿನ್ಯಾಸವೇ ಕಾರಣ. ಸಾಮಾನ್ಯವಾಗಿ ಈ ಚಾವಣಿಗಳನ್ನು ಆಳವಾದ ಗುಮ್ಮಟಾಕಾರದಲ್ಲಿ ನಿರ್ಮಿಸಿರುತ್ತಾರೆ. ಇದರಿಂದಾಗಿ ಮೇಲಿನ ಹೊರಮೈ ಉಬ್ಬಿರುತ್ತದೆ. ಈ ಉಬ್ಬನ್ನು ಪಿರುಮಿಡ್ಡಿನಾಕಾರದಲ್ಲಿ ರೂಪಿಸಿರುವುದರಿಂದ ಪ್ರತಿಯೊಂದು ಹಜಾರದ ಮೇಲೂ ಒಂದೊಂದು ಚಿಕ್ಕ ಪ್ರಾಸಾದ (ಪೀಡ ದೇವುಲ್) ಕಾಣಬರುತ್ತದೆ. ಪೀಡಪ್ರಾಸಾದಗಳಲ್ಲಿ ಒಂದರ ಮೇಲೊಂದರಂತೆ ಅನೇಕ ನಿರಾಲಂಕೃತ ಕಾರ್ನಿಸುಗಳು (ಅಡ್ಡ ಪಟ್ಟಿಕೆಗಳು) ಇರುತ್ತವೆ. ಮೇಲೆ ಹೋದಂತೆಲ್ಲಾ ಕ್ರಮೇಣ ಚಿಕ್ಕದಾಗುವುದರಿಂದ

ಪ್ರಾಸಾದಕ್ಕೆ ಪಿರಮಿಡ್ಡಿನ ಇಳಿಜಾರು ನೋಟ ಒದಗುತ್ತದೆ. ಪ್ರಾಸಾದದ ಮೇಲೆ ಗ್ರೀವ, ಅದರ ಮೇಲೆ (ಆಮಲಕದ ಬದಲಾಗಿ) ಘಂಟಾಕಲಶವಿರುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಈ ರೀತಿಯ ಪೀಡ ಪ್ರಾಸಾದ ಕರ್ನಾಟಕದ ಒಂದು ವಿಶೇಷ ವಿಮಾನ ಪ್ರಾಸಾದ ಮಾದರಿಗೆ ಮೂಲ ಪ್ರೇರಣೆಯೂ ಆಯಿತು. ಆ ವಿಮಾನ ಮಾದರಿಯೆಂದರೆ ಕದಂಬನಾಗರ ಮಾದರಿ. ಪೀಡ ಪ್ರಾಸಾದದ ಅಡಿಯ ಬಾಡ (ಭಿತ್ತಿ) ದಲ್ಲಿ ಕೂಡ ವಿವಿಧ ರೀತಿಯ ಪಗಗಳು ಕಾಣುತ್ತವೆ. ಆದರೆ ಇವ್ಯಾವುವೂ ಪೀಡ ಪ್ರಾಸಾದದ ಮೇಲ್ಮೈಯಲ್ಲಿ ಕಾಣಬರದಿರುವುದರಿಂದ, ಅಡ್ಡಡ್ಡಲಾಗಿ ಕೂರಿಸಿರುವ ಪಟ್ಟಿಕೆಗಳೇ ಹೆಚ್ಚು ಪ್ರಧಾನವಾಗಿ ಕಾಣುತ್ತವೆ.

ಕಾಡಸಿದ್ದೇಶ್ವರ ದೇವಾಲಯ

ನಾಗರ ಮಾದರಿಯ ದೇವಾಲಯಗಳನ್ನು ವಿಶಾಲವಾದ ಪ್ರಾಂಗಣದ ಮಧ್ಯಭಾಗದಲ್ಲಿ ನಿರ್ಮಿಸುತ್ತಿದ್ದರು. ಪ್ರಾಂಗಣದ ಸುತ್ತಲೂ ಎತ್ತರವಾದ ಪೌಳಿಗೋಡೆ, ಆವಶ್ಯಕವಾದ ದಿಕ್ಕುಗಳಲ್ಲಿ ಮಹಾದ್ವಾರಗಳು, ಪ್ರಾಕಾರದ ಒಳಗಡೆ ವಿವಿಧೋಪಯೋಗಿ ಹಜಾರಗಳು, ಕೈಸಾಲೆಗಳು, ಮಂಡಪಗಳು, ಮಂದಿರಗಳು ಇತ್ಯಾದಿ ನಿರ್ಮಾಣವಾಗಿರುವುದು ಬಹುತೇಕ ಕಡೆಗಳಲ್ಲಿ ಕಾಣಬರುತ್ತದೆ. ಪ್ರ.ಶ.ಸು.800ರಲ್ಲಿ ಪ್ರಾರಂಭವಾಗಿ ಸು.1300 ರವರೆಗೆ ಯಶಸ್ವಿಯಾಗಿ ಉತ್ತರ ಭಾರತದ ವಿವಿಧ ಭಾಗಗಳಲ್ಲಿ ನಾಗರ ಮಾದರಿ ದೇವಾಲಯಗಳು ನಿರ್ಮಾಣವಾಗುತ್ತಿದ್ದವು. ಭುವನೇಶ್ವರದ ಲಿಂಗರಾಜ (ಎತ್ತರ ಸು. 60 ಮೀ), ಪುರಿಯ ಜಗನ್ನಾಥ (ಎತ್ತರ ಸು. 60 ಮೀ), ಕೋಣಾರ್ಕದ ಸೂರ್ಯ (ಭಗ್ನಾವಸ್ಥೆಯಲ್ಲಿದೆ), ಖಜುರಾಹೊವಿನ ಕಂಡಾರಿಯ ಮಹಾದೇವ (ಎತ್ತರ ಸು. 60 ಮೀ) ಇತ್ಯಾದಿ ದೇವಾಲಯಗಳು ಈ ಮಾದರಿಯ ವಾಸ್ತುವಿನ್ಯಾಸದ ತಾಂತ್ರಿಕ ಕುಶಲತೆಗೆ, ಭವ್ಯತೆಗೆ, ಎಲ್ಲಕ್ಕಿಂತ ಮಿಗಿಲಾಗಿ ನಿರ್ಮಾಣ ತಂತ್ರಜ್ಞಾನಕ್ಕೆ ಮತ್ತು ಯಶಸ್ವೀ ಕಾರ್ಯಾಚರಣೆಗೆ ಉದಾಹರಣೆಗಳಾಗಿವೆ. ಗುಪ್ತರ ಕಾಲಾನಂತರ ಪ್ರವರ್ಧಮಾನಕ್ಕೆ ಬಂದ ಈ ವಾಸ್ತುಶೈಲಿ ಉತ್ತರ ಭಾರತದ ವಿವಿಧ ಪ್ರಾಂತಗಳಲ್ಲಿ ತಮ್ಮ-ತಮ್ಮ ಪ್ರಾಂತೀಯ ವೈವಿಧ್ಯ, ವೈಖರಿಗಳೊಂದಿಗೆ ಮೆರೆಯಿತು. ಈ ಪ್ರಾಂತೀಯ ಶೈಲಿಗಳು ಮೂಲತಃ ನಾಗರ ವಾಸ್ತುವಿನ ಲಕ್ಷಣಗಳನ್ನು ಹೊಂದಿದ್ದರೂ, ತಮ್ಮ-ತಮ್ಮ ಭೌಗೋಳಿಕ ಪ್ರಾಂತದ ರೂಢಿ, ಅಭಿರುಚಿಗಳಿಗನುಗುಣವಾಗಿ ಬೆಳೆದಿರುವುದು ಸ್ಥಳೀಯ ವಾಸ್ತುರೂಪಗಳಿಂದ ತಿಳಿದುಬರುತ್ತದೆ. ಈ ಪ್ರಾಂತೀಯ ಶೈಲಿಗಳ ಜೀವಿತಾವಧಿಗಳೂ ಸಹ ಸ್ಥಳೀಯ ರಾಜಕೀಯ ಒತ್ತಡ, ಏರುಪೇರುಗಳು, ಪೋಷಣೆ ಮುಂತಾದವುಗಳಿಗನುಗುಣವಾಗಿ ವ್ಯತ್ಯಾಸವಾಗುತ್ತದೆ. ಒರಿಸ್ಸದ ದೇವಾಲಯಗಳ ಕಾಲ ಸು.800-1250; ಮಧ್ಯಭಾರತದ ಖಜುರಾಹೊವಿನ ದೇವಾಲಯಗಳ ಕಾಲ ಸು.950-1050; ರಾಜಸ್ತಾನದ ದೇವಾಲಯಗಳ ಕಾಲಮಾನ ಸು.800-1100; ಗುಜರಾತಿನ ದೇವಾಲಯಗಳ ಕಾಲಮಾನ ಸು.940-1310. ಹೀಗೆ ದಖನಿನ ವಾಯವ್ಯ ಭಾಗದ ದೇವಾಲಯಗಳ ಕಾಲ ಸು.1000-1300. ಇವಲ್ಲದೆ ನಾಗರ ಮಾದರಿಯಿಂದ ಹುಟ್ಟಿ, ತನ್ನ ಸ್ವಂತಿಕೆಯಿಂದಾಗಿ ವಿಶೇಷ ರೂಪವನ್ನು ಪಡೆದಿರುವ ಒಂದು ದೇವಾಲಯ ಸಮೂಹವೂ ಉಂಟು. ಅದೇ ಮಧ್ಯಪ್ರದೇಶದ ಗ್ವಾಲಿಯರ್ ಕೋಟೆಯಲ್ಲಿರುವ 11ನೆಯ ಶತಮಾನದ ದೇವಾಲಯ ಸಮೂಹ.

ಗುಪ್ತರ ಕಾಲದಲ್ಲಿ ಪ್ರಾರಂಭವಾದ ಔತ್ತರೇಯ ದೇವಾಲಯ ವಾಸ್ತುಶೈಲಿ ಸು. 800ರ ಹೊತ್ತಿಗೆ ಸ್ಪಷ್ಟ ನಾಗರ ಶೈಲಿಯ ಲಕ್ಷಣಗಳನ್ನು ಮೈಗೂಡಿಸಿಕೊಂಡಿತು. ಅನಂತರದ ಶತಮಾನಗಳಲ್ಲಿ ಉತ್ತರ ಭಾರತಾದ್ಯಂತ ಹರಡಿ ವಿವಿಧ ಪ್ರಾಂತೀಯ ವಾಸ್ತುಶೈಲಿಗಳ ಉದಯಕ್ಕೆ ಕಾರಣವಾಯಿತು. 13ನೆಯ ಶತಮಾನದ ಸುಮಾರಿಗೆ ಮುಸ್ಲಿಂ ರಾಜ್ಯಾಡಳಿತದಿಂದಾಗಿ ಹಿಂದು ವಾಸ್ತುನಿರ್ಮಾಣಗಳು ಕ್ರಮೇಣ ನಶಿಸಿ, ಉತ್ತರ ಭಾರತದಲ್ಲಿ ದೇವಾಲಯ ನಿರ್ಮಾಣಕಾರ್ಯವೇ ಸ್ಥಗಿತಗೊಂಡಿತು. ಒರಿಸ್ಸ ದೇವಾಲಯ ವಾಸ್ತುಪರಂಪರೆ ದಖನಿನ ಕೆಲವು ಭಾಗಗಳಿಗೂ ಹರಡಿದ ವಿಷಯ ಬಹಳ ಕುತೂಹಲಕರವಾದದ್ದು. ಒರಿಸ್ಸದ ಭುವನೇಶ್ವರದಲ್ಲಿ ಪ್ರಾರಂಭವಾದ ಈ ವಾಸ್ತು ಕಲೆ, ಒರಿಸ್ಸದ ಗಂಜಾಂ, ಆಂಧ್ರದ ಮುಖಲಿಂಗಂಗಳ ಮೂಲಕ ಕರ್ನಾಟಕದ ಐಹೊಳೆ, ಪಟ್ಟದಕಲ್ಲು ನಗರಗಳಿಗೂ ವಿಸ್ತರಿಸಿತು. ಒರಿಸ್ಸ ವಾಸ್ತುಶೈಲಿ ಚಳುಕ್ಯರ ಕಾಲದಲ್ಲಿ ಅವರ ಸಾಮ್ರಾಜ್ಯದ ರಾಜಧಾನಿಗೆ ಹೇಗೆ ಪ್ರವೇಶಿಸಿತು ಎಂಬ ವಿಚಾರ ಇನ್ನೂ ಅಸ್ಪಷ್ಟ. ಈ ಎರಡೂ ಪ್ರಾಂತಗಳ ನಡುವಣ ಸಾಂಸ್ಕೃತಿಕ, ರಾಜಕೀಯ ಸಂಬಂಧಗಳಿಂದಾಗಿ ನಾಗರ ವಾಸ್ತು ಕಲೆ ಉತ್ತರ ಕರ್ನಾಟಕದ ನಗರಗಳಿಗೆ ತಲುಪಿರಬಹುದು. ಚಳುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯ ಕಳಿಂಗ-ಕೋಸಲದ ಮೇಲಿನ ದಂಡಯಾತ್ರೆಯೂ ಸಹ ಈ ಸಾಂಸ್ಕೃತಿಕ ವಿನಿಮಯದಲ್ಲಿ ಪಾತ್ರವಹಿಸಿರಬಹುದು. ಏನೇ ಆದರೂ ನಾಗರ ವಾಸ್ತುವಿನ ಪ್ರವೇಶ ಕರ್ನಾಟಕದಲ್ಲಿ ಒಂದು ಹೊಸ ವಾಸ್ತು ಮಾದರಿಯ ಉದಯಕ್ಕೆ ಕಾರಣವಾಯಿತು ಎಂಬುದು ಗಮನಾರ್ಹ. ಕನ್ನಡ ನೆಲದ ದ್ರಾವಿಡ ಶೈಲಿ, ಔತ್ತರೇಯ ನಾಗರ ಶೈಲಿಗಳ ವಾಸ್ತು ರೂಪಗಳ ಸಂಯೋಗದಿಂದಾಗಿ ವೇಸರವೆಂಬ ಹೊಸ ಮಿಶ್ರ ವಾಸ್ತುಶೈಲಿ ಕರ್ನಾಟಕದಲ್ಲಿ ರೂಪುಗೊಂಡಿತು.

**ವೇಸರ ಮಾದರಿ:** ಭಾರತೀಯ ದೇವಾಲಯ ವಾಸ್ತು ಶೈಲಿಯ ಮೂರು ಮುಖ್ಯ ಪ್ರಕಾರಗಳಲ್ಲೊಂದು. ವೇಸರ ಎಂಬ ಪದ ಸಂಸ್ಕೃತ ಮೂಲದಿಂದ ಬಂದಿದೆ. ವೇಸರವೆಂದರೆ ಹೇಸರಗತ್ತೆ. ಇದು ಮಿಶ್ರತಳಿ ಪ್ರಾಣಿ. ಆದ್ದರಿಂದ ವೇಸರ ಶೈಲಿ ಎಂದರೆ ಒಂದು ಮಿಶ್ರ ಶೈಲಿ ಎಂದಾಗುತ್ತದೆ. ನಾಗರ ಮತ್ತು ದ್ರಾವಿಡ ಈ ಎರಡೂ ಪ್ರಮುಖ ವಾಸ್ತುಶೈಲಿಗಳ ಮಿಶ್ರಣದಿಂದ ಹುಟ್ಟಿದ ವಾಸ್ತು ಶೈಲಿಯೇ ವೇಸರ ಶೈಲಿ ಎಂದು ಕಾಮಿಕಾಗಮದಿಂದ ತಿಳಿದು ಬರುತ್ತದೆ. ವಿಸ್ಮಯವೆಂದರೆ ಯಾವುದೇ ಔತ್ತರೇಯ ವಾಸ್ತು ಗ್ರಂಥಗಳು ವೇಸರ ಶೈಲಿಯನ್ನು ಹೆಸರಿಸುವುದಿಲ್ಲ. ವೇಸರ ಶೈಲಿಯ ಉಲ್ಲೇಖ ಕೇವಲ ದಾಕ್ಷಿಣಾತ್ಯ ವಾಸ್ತು ಗ್ರಂಥಗಳಲ್ಲಿ ಮಾತ್ರ ಕಾಣಬರುತ್ತದೆ. ಇದಕ್ಕೆ ಕಾರಣ ಸ್ಪಷ್ಟವಾಗಿಯೇ ಇದೆ. ನಾಗರ ಶೈಲಿ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಬಂದು, ಬಾದಾಮಿ ಚಳುಕ್ಯರ ಪೋಷಣೆಯಲ್ಲಿ ಪಟ್ಟದಕಲ್ಲಿನ ದೇಗುಲಗಳಲ್ಲಿ ತನ್ನ ಪ್ರಭಾವವನ್ನು ಸ್ಪಷ್ಟವಾಗಿ ಮೂಡಿಸಿತು. ಈ ಶೈಲಿಯ ವಾಸ್ತುರೂಪಗಳನ್ನು ದಾಕ್ಷಿಣಾತ್ಯ ದ್ರಾವಿಡ ವಾಸ್ತುರೂಪಗಳೊಂದಿಗೆ ಬೆರೆಸಿ ಪಟ್ಟದ ಕಲ್ಲಿನ ವಾಸ್ತುಶಿಲ್ಪಿಗಳು ಅನೇಕ ಪ್ರಯೋಗಗಳನ್ನು ಮಾಡಿದರು. ಆದರೆ ಅಂಥದೇ ಪ್ರಯೋಗ ಉತ್ತರಭಾರತದಲ್ಲಿ ಕಂಡುಬರುವುದಿಲ್ಲ. ಹೀಗಾಗಿ ದಕ್ಷಿಣ ಭಾರತದಲ್ಲಿ ಮಾತ್ರ, ಅದರಲ್ಲೂ ಕರ್ನಾಟಕದಲ್ಲಿ ನಾಗರ-ದ್ರಾವಿಡ ಶೈಲಿಗಳ ಮಿಶ್ರಣದಿಂದ ಒಂದು ಹೊಸ ವಾಸ್ತುರೂಪ ಸೃಷ್ಟಿಯಾಯಿತು. ಅದೇ ವೇಸರ ವಾಸ್ತುಶೈಲಿ. ಭೌಗೋಳಿಕವಾಗಿ ವೇಸರ ಶೈಲಿ ಕರ್ನಾಟಕದಲ್ಲಿ ಮತ್ತು ಅದಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಸ್ವಲ್ಪ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲೂ ಮುಖ್ಯವಾಗಿ ಕಲ್ಯಾಣ ಚಾಳುಕ್ಯರ ಮತ್ತು ಹೊಯ್ಸಳರ ದೇವಾಲಯಗಳಲ್ಲಿ ಈ ಶೈಲಿ ಬಳಕೆಯಾಗಿದೆ. ದ್ರಾವಿಡಶೈಲಿಯ ದೇವಾಲಯಗಳಿಗೆ ಯಾವ ರೀತಿಯಲ್ಲಿ ಶಾಸ್ತ್ರಗ್ರಂಥಗಳಲ್ಲಿ ಅಸ್ಪಷ್ಟ, ಅಪೂರ್ಣ ವ್ಯಾಖ್ಯೆಗಳು ವಿವರಗಳು ದೊರೆಯುತ್ತವೆಯೋ ಅದೇ ರೀತಿಯಲ್ಲಿ ವೇಸರ ಶೈಲಿಯ ಬಗ್ಗೆ ವ್ಯಾಖ್ಯೆಗಳು ಸಹ ಅಸ್ಪಷ್ಟ, ಅಪೂರ್ಣ. ಅವುಗಳ ಪ್ರಕಾರ; ದೇವಾಲಯದ ಗ್ರೀವ ಮತ್ತು ಶಿಖರ ವೃತ್ತಾಕಾರ ವಾಗಿದ್ದಲ್ಲಿ (ಅಜಿತಾಗಮ); ದೇವಾಲಯದ ಗ್ರೀವ ಶಿಖರಗಳು ವೃತ್ತ, ವೃತ್ತಾಯತ ಅಥವಾ ದ್ವಾಶ್ರವೃತ್ತ (ವಾರಣ/ಗಜ ಪೃಷ್ಠಾಕಾರ)ವಾಗಿದ್ದಲ್ಲಿ (ದೀಪ್ತಾಗಮ ಮತ್ತು ಮಯಮತ); ದೇವಾಲಯ ಅಡಿಯಿಂದ ಅಥವಾ ಗ್ರೀವದಿಂದ ಮೇಲಕ್ಕೆ ವೃತ್ತಾಕಾರವಾಗಿದ್ದಲ್ಲಿ (ಕಟಕ ಭೂಷಣ); ದೇವಾಲಯದ ಶಿರ (ಶಿಖರ) ವೃತ್ತಾಕಾರ ಅಥವಾ ಗಜಪೃಷ್ಠಾಕಾರವಾಗಿದ್ದಲ್ಲಿ (ಜಿನಸಂಹಿತೆ), ಅದು

ದೊಡ್ಡಬಸವಣ್ಣ ದೇವಾಲಯ (ವೇಸರ), ಡಂಬಳ

ವೇಸರವೆನಿಸುತ್ತದೆ. ಕಾಮಿಕಾಗಮ ಮಾತ್ರ ವೇಸರ ವಿಮಾನಕ್ಕೆ ಇನ್ನಷ್ಟು ಸ್ಪಷ್ಟವಾದ ವ್ಯಾಖ್ಯೆಯನ್ನು ನೀಡುತ್ತದೆ. ಅದರ ಪ್ರಕಾರ ವೇಸರ ಒಂದು ಸಂಕರ ಶೈಲಿ. ವಿಜಾತೀಯ ಪಿತೃಗಳಿಂದ ಜನಿಸಿದಂಥದ್ದು. ಅದು ದ್ರಾವಿಡ-ನಾಗರ ಶೈಲಿಗಳಿಂದ ಉಂಟಾದದ್ದು. ಅದರ ದೇಹ ವಿವಿಧಾಲಂಕಾರಗಳಿಂದ ಕೂಡಿರಬೇಕು ಮತ್ತು ಕಂಠ ಶಿಖರಗಳನ್ನು ಹೊಂದಿರಬೇಕು. ವೇಸರ ಎಂಬ ಪದಕ್ಕೆ ಇನ್ನೊಂದು ಅರ್ಥವೂ ಉಂಟು. ವ್ಯಾಸ್ರ>ವೇಸರ= ವಿಗತ ಅಸ್ರ

ಅಂದರೆ ಯಾವುದೇ ಮೂಲೆಗಳಿಲ್ಲದ ಆಕೃತಿ; ಅಂದರೆ ವೃತ್ತ, ವೃತ್ತಯತ (ಅಂಡಾಕಾರ) ಆಗುತ್ತದೆ. ಈ ಎಲ್ಲ ವ್ಯಾಖ್ಯೆಗಳಿಂದ ವೇಸರ ಶೈಲಿಯ ವಿಮಾನದ (ಗರ್ಭಗೃಹದ ಅಡಿಯಿಂದ ಮುಡಿಯವರೆಗಿನ ಭಾಗ) ಕೆಲವು ಲಕ್ಷಣಗಳು ಸ್ಪಷ್ಟವಾಗುತ್ತವೆ. ಅವುಗಳೆಂದರೆ ವೇಸರ



**ಎಲ್ಲಮ್ಮ ದೇವಾಲಯ (ವೇಸರ ಮಾದರಿ), ಬಾದಾಮಿ**

ವಿಮಾನಗಳು ವೃತ್ತ ಅಥವಾ ವೃತ್ತಾಯತ ಅಥವಾ ಅರ್ಧವೃತ್ತಕಾರವಾಗಿರಬೇಕು. ವಿಮಾನದಲ್ಲಿ ನಾಗರ ಮತ್ತು ದ್ರಾವಿಡ ಶೈಲಿಗಳ ಲಕ್ಷಣಗಳಿರಬೇಕು. ವಿಮಾನ ಹಂತ-ಹಂತವಾಗಿ ನಿರ್ಮಿತವಾಗಿರಬೇಕು. ವಿಶೇಷವಾದ ಅಲಂಕರಣೆಯನ್ನು ಹೊಂದಿರಬೇಕು. ಈ ಲಕ್ಷಣಗಳಿದ್ದಲ್ಲಿ ಅಂತಹ ವಿಮಾನ ವೇಸರ ಶೈಲಿಯದೆನಿಸಿಕೊಳ್ಳುತ್ತದೆ. ಈ ಲಕ್ಷಣ ಕಲ್ಯಾಣ ಚಾಳುಕ್ಯರ ಹಾಗೂ ಹೊಯ್ಸಳರ ಕೆಲವು ದೇವಾಲಯಗಳಲ್ಲಿ ಉದಾ: ಹಿರೇಸಿಂಗನ ಗುತ್ತಿ (ಬಾಗಲಕೋಟೆ ಜಿಲ್ಲೆ) ಕೊಣ್ಣೂರು ಮತ್ತು ಡಂಬಳ (ಗದಗಜಿಲ್ಲೆ) ಮುಂತಾದೆಡೆ ಕಂಡುಬರುತ್ತವೆ. ಆದರೆ ಡಂಬಳದ ದೊಡ್ಡಬಸಪ್ಪ ದೇವಾಲಯವನ್ನು ಬಿಟ್ಟರೆ ಉಳಿದ ಎಲ್ಲ ದೇವಾಲಯಗಳ ವಿಮಾನಗಳು ನಾಶವಾಗಿವೆ. ಹೊಯ್ಸಳರ ದೇವಾಲಯಗಳಲ್ಲಿ ಸಾಕಷ್ಟು ಸುಭದ್ರವಾಗಿ ಉಳಿದಿರುವ ದೇವಾಲಯಗಳು ಮತ್ತು ಅವುಗಳ ವಿಮಾನಗಳು ದೊರೆತಿರುವುದರಿಂದ ಹೊಯ್ಸಳ ಶೈಲಿ ವೇಸರ ವಾಸ್ತು ಪ್ರಧಾನವಾದ ಶೈಲಿಯೆಂದು ವಿದ್ವಾಂಸರು ಗುರುತಿಸುತ್ತಾರೆ. ಆದ್ದರಿಂದ ವೇಸರ ವಾಸ್ತು ಶೈಲಿಯ ಲಕ್ಷಣಗಳನ್ನು ಹೊಯ್ಸಳ ದೇವಾಲಯಗಳ ಮೂಲಕ ತಿಳಿಯಬಹುದಾಗಿದೆ.

ಹೊಯ್ಸಳರು ದೇವಾಲಯ ವಾಸ್ತುವಿನ್ಯಾಸದಲ್ಲಿ ಮತ್ತು ಅಲಂಕರಣೆಯಲ್ಲಿ ಪ್ರಯೋಗಗಳನ್ನು ಮಾಡಿರುವುದು ತಿಳಿದ ಸಂಗತಿಯೇ ಆಗಿದೆ. ಈ ಹೊಸತನದ ಒಂದು ಮುಖ ನಕ್ಷತ್ರಾಕಾರದ ತಳವಿನ್ಯಾಸದ ಬಳಕೆ. ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಯ್ಸಳರು ಗರ್ಭಗೃಹದ ರಚನೆಯಲ್ಲಿ ಮಾತ್ರ ಬಳಸಿದರು. ಕಾರಣ ಆ ಭಾಗದಲ್ಲಿ ಅವರಿಗೆ ವೇಸರ ವಿಮಾನದ ರಚನೆಯಾಗಬೇಕಾಗಿತ್ತು. ನಕ್ಷತ್ರಾಕಾರದ ತಳವಿನ್ಯಾಸದಿಂದ ಗರ್ಭಗೃಹಭಾಗಕ್ಕೆ ವೃತ್ತಾಕಾರ ಅಥವಾ ಅಧಿಕವೃತ್ತಾಕಾರದ ವಲಯ ಸೃಷ್ಟಿಯಾಯಿತು. ನಕ್ಷತ್ರಾಕಾರದ ಎಲ್ಲ ಮೂಲೆಗಳನ್ನು ಕೂಡಿಸಿದಂತೆ ಗೆರೆಯನ್ನು ಎಳೆದರೆ ಅದು ವೃತ್ತ ರೀತಿಯಲ್ಲಿ ಇರುತ್ತದೆ. ಹೀಗಾಗಿ ದೂರದಿಂದ ಅಥವಾ ಮೇಲಿನಿಂದ ಕಟ್ಟಡವನ್ನು ನೋಡಿದಾಗ ಈ ವೃತ್ತಾಕಾರದ ಭಾವನೆ ಮೂಡುತ್ತದೆ. ಹೀಗಾಗಿ ಶಾಸ್ತ್ರವಿದಿತವಾದ ವೃತ್ತಾಕಾರ ಅಥವಾ ಗಜಪೃಷ್ಠಾಕಾರ ಗರ್ಭಗೃಹದ ಭಾಗಕ್ಕೆ ಒದಗಿದಂತಾಯಿತು. ಶಾಸ್ತ್ರನಿಯಮದ ಪ್ರಕಾರ ವಿಮಾನ ನಾಗರ-ದ್ರಾವಿಡ ವಾಸ್ತು ಶೈಲಿಗಳ




**ದೊಡ್ಡಬಸವಣ್ಣ ದೇವಾಲಯ ತಳವಿನ್ಯಾಸ**

ವಿಮಾನದ ಲಕ್ಷಣಗಳನ್ನು ಹೊಂದಿರಬೇಕು. ನಾಗರ ವಿಮಾನದ ಪ್ರಮುಖ ಲಕ್ಷಣಗಳೆಂದರೆ ಅದು ಬಾಗಿದ ರೇಖಾಕೃತಿಯನ್ನು ಹೊಂದಿರಬೇಕು, ಮೇಲ್ಮೈಯಲ್ಲಿ ಲಂಬ ಪಟ್ಟಿಗಳ ಮತ್ತು ಲಂಬ ತೋಡುಗಳ ಪ್ರಾಧ್ಯಾನ್ಯ ಕಾಣಬೇಕು, ತಳವಿನ್ಯಾಸದ ಎಲ್ಲ ಹಿಂದೆ-ಮುಂದೆ ಸರಿತಗಳು ಅದೇ ರೀತಿಯಲ್ಲಿ ಪ್ರಾಸಾದದ ಮೇಲ್ತುದಿಯವರೆಗೂ ಉಳಿದಿರಬೇಕು. ಪ್ರಾಸಾದದ ತುದಿಯಲ್ಲಿ ಆಮಲಕಶಿಲೆ ಇರಬೇಕು. ಈ ಲಕ್ಷಣಗಳು ಹೊಯ್ಸಳರ ವೇಸರ ವಿಮಾನಗಳಲ್ಲಿ ಬಹಳ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿವೆ. ಹೊಯ್ಸಳರ ವೇಸರ ಶೈಲಿಯ ದೇವಾಲಯಗಳ ನಕ್ಷತ್ರಾಕಾರದ ತಳವಿನ್ಯಾಸದಿಂದಾಗಿ, ಕಟ್ಟಡದ ಹೊರವಲಯದಲ್ಲಿ ಪ್ರಧಾನವಾದ ಅನೇಕ ಮುಂಚಾಚುಗಳು ಮತ್ತು ಅವುಗಳ ನಡುವೆ ಕಾಣಬರುತ್ತವೆ. ಈ ಎಲ್ಲ ಮುಂಚಾಚುಗಳು ಮತ್ತು ತೋಡುಗಳು ಅದೇ ರೀತಿಯಲ್ಲಿ ಪ್ರಾಸಾದದ ಮೇಲ್ತುದಿಯವರೆಗೂ ಮುಂದುವರೆಯುತ್ತವೆ. ಹೀಗಾಗಿ ನಾಗರ ಪ್ರಾಸಾದದ ಲಂಬ ರೇಖೆಗಳ (ಲಂಬ ಪಟ್ಟಿಗಳ) ಪ್ರಾಧಾನ್ಯತೆ ಇಲ್ಲೂ ಕಾಣುತ್ತದೆ. ಜೊತೆಗೆ ಆಳತೋಡುಗಳ ಹಿನ್ನಲೆಯಲ್ಲಿ ಅವುಗಳ ಪ್ರಾಧಾನ್ಯ ಇಮ್ಮಡಿಸುತ್ತದೆ. ಅಡಿಯಿಂದ ಮುಡಿಯವರೆಗೆ ಕಾಣುವ ಈ ಪ್ರಧಾನ ಲಂಬ ಮುಂಬಣೆಗಳು, ಕಪೋತದ (ಅದಿತಲದ) ಅನಂತರ ಕ್ರಮೇಣವಾಗಿ ಕೇಂದ್ರದತ್ತ ಬಾಗಿ, ವಿಮಾನಕ್ಕೆ ಎಲ್ಲ ಕಡೆಯಿಂದಲೂ ಓರೆಯಾಗಿ ಕಾಣುವ (ಶಂಖುವಿನಾಕಾರದ/ಅಂಡಾಕಾರದ) ಬಾಗಿದ ರೇಖೆಯ ನೋಟವನ್ನು ಒದಗಿಸುತ್ತದೆ. ಹೀಗಾಗಿ ರೇಖಾನಾಗರ ಪ್ರಾಸಾದದ ಬಾಗಿದ ರೇಖಾಕೃತಿ, ಪ್ರಧಾನ ಲಂಬಪಟ್ಟಿಗಳು, ತೋಡುಗಳು ಮುಂತಾದವು ಒಂದುಗೂಡಿ, ನಾಗರ ವಿಮಾನದ ಲಕ್ಷಣಗಳು ಇಲ್ಲಿ ಕಂಡುಬರುತ್ತವೆ.

ದ್ರಾವಿಡ ಶೈಲಿಯ ಲಕ್ಷಣಗಳು ಸಹ ಹೊಯ್ಸಳರ ವೇಸರ ವಿಮಾನಗಳಲ್ಲಿ ಅಷ್ಟೇ ಸ್ಪಷ್ಟವಾಗಿ ಮೂಡಿಬಂದಿವೆ. ದ್ರಾವಿಡ ಶೈಲಿಯ ವಿಮಾನಗಳು ತಳವಿನ್ಯಾಸದಲ್ಲಿ ಚೌಕ, ಆಯುತ, ವೃತ್ತಾಯತ ಅಥವಾ ಗಜಪೃಷ್ಠಾಕಾರವಾಗಿರಬಹುದು. ಯಾವುದೇ ಆಕಾರವಿದ್ದರೂ ಅದು ಅದೇ ರೀತಿಯಲ್ಲಿ, ಹಂತ-ಹಂತವಾಗಿ ಚಿಕ್ಕದಾಗುತ್ತಾ ಮೇಲೇರುತ್ತದೆ. ಪ್ರತಿ ಹಂತವೂ ಅಥವಾ ತಲವೂ ಹೊರವಿನ್ಯಾಸದಲ್ಲಿ ಅದರ ಕೆಳಹಂತದ ಸಂಕ್ಷಿಪ್ತ ಪ್ರತಿರೂಪವಾಗಿರುತ್ತದೆ. ಈ ವಿನ್ಯಾಸದಿಂದಾಗಿ ವಿಮಾನಕ್ಕೆ ಮೆಟ್ಟಲು ಅಥವಾ ಪಿರಮಿಡ್ಡಿನಾಕಾರ ಉಂಟಾಗುತ್ತದೆ ಮತ್ತು ಪ್ರಾಸಾದದ ಹೊರಮೈ ತಲಪ್ರಧಾನವಾಗಿರುತ್ತದೆ. ಅದಿತಲದಲ್ಲಿ ಅಂದರೆ ಕೆಳಗಿನ ತಲದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರಗಳು ಇರುತ್ತವೆ. ಉಳಿದಂತೆ ಮೇಲಿನ ತಲಗಳಲ್ಲಿ ಭಿತ್ತಿ, ಪ್ರಸ್ತರಗಳು ಮಾತ್ರ ಇರುತ್ತವೆ. ಇವು ದ್ರಾವಿಡ ವಿಮಾನ ಪ್ರಾಸಾದದ ಮುಖ್ಯ ಲಕ್ಷಣಗಳು. ವೇಸರ ವಿಮಾನದ ತಳಗಳನ್ನು ನಿರ್ಮಿಸುವಾಗ, ನಕ್ಷತ್ರಾಕಾರದ ತಳವಿನ್ಯಾಸದಲ್ಲೇ ಅವು ರೂಪಿತವಾಗಿರುತ್ತವೆ. ಈ ತಳಗಳು ಕಡಿಮೆ ಅಗಲ, ಎತ್ತರದ

**ಕೇಶವ ದೇವಾಲಯ, ಸೋಮನಾಥಪುರ**

ಕಿರಿದಾದ ತಲಗಳು, ಈ ತಲಗಳಲ್ಲಿ ಭಿತ್ತಿಗಿಂತ ಪ್ರಸ್ತರವೇ ಪ್ರಧಾನ. ಹೀಗಾಗಿ ಭಿತ್ತಿಗಳು ಕೆಳತಳದ ಪ್ರಸ್ತರದ ಹಿಂದೆ ಮರೆಯಾಗುತ್ತವೆ. ಪ್ರಸ್ತರದ ಓರೆಯಾಗಿ, ಕಿರಿದಾದ ಮೇಲ್ತುದಿಯಿಂದಾಗಿ, ಪ್ರತಿತಲದ ಮೇಲ್ಭಾಗವೂ ಮೇಲಿನ ತಲದ ಪ್ರಧಾನ ಪ್ರಸ್ತರದ ಅಡಿಯಲ್ಲಿ ಸಮ್ಮಿಳಿತವಾಗುತ್ತದೆ. ಪ್ರತಿಯೊಂದು ತಲವೂ ಅರ್ಪಿತ ರೀತಿಯದ್ದಾಗಿರುತ್ತದೆ. ಅಂದರೆ ತಲಗಳ ನಡುವಣ ಭಿತ್ತಿಭಾಗ ಒಂದಕ್ಕೊಂದು ಸೇರಿಕೊಂಡಿದ್ದು, ತಲಗಳು ಬಹಳ ಕಡಿದಾಗಿರುತ್ತವೆ. ನಕ್ಷಾತ್ರಾಕಾರದ ಹಿಂದೆ-ಮುಂದೆ ಚಾಚುಗಳಿಂದಾಗಿ ತಲಗಳ ಪ್ರಧಾನ ಅಡ್ಡರೇಖೆಗಳು ಕ್ಷೀಣವಾಗಿ ಕಾಣುತ್ತವೆ. ಹೀಗೆ ದ್ರಾವಿಡ ವಾಸ್ತುಶೈಲಿಯ ಮುಖ್ಯ ಲಕ್ಷಣಗಳನ್ನು ಹೊಯ್ಸಳರ ವೇಸರ ವಿಮಾನಗಳಲ್ಲಿ ಕಾಣಬಹುದು.

ಪ್ರಾಸಾದದ ಮೇಲ್ತುದಿಯಲ್ಲಿ ದ್ರಾವಿಡ ಮಾದರಿಯ ಎತ್ತರವಾದ ಶಿಖರವಾಗಲೀ ಅಗಲವಾದ ಆಮಲಕಶಿಲೆಯಾಗಲೀ ಇರುವುದಿಲ್ಲ. ಬದಲಾಗಿ ಕುಳ್ಳಾದ ಗ್ರೀವದ ಮೇಲೆ, ಪ್ರಾಸಾದದ ನೆತ್ತಿಯ ಅಳತೆ, ಆಕೃತಿಗೆ ಸಮನಾದ ಮಗುಚಿದ ಕಮಲದಾಕೃತಿಯ ಶಿಖರವಿರುತ್ತದೆ. ಈ ಶಿಖರ ಏಕಶಿಲೆಯದ್ದಾಗಿರಬಹುದು ಅಥವಾ ಬಹುಶಿಲೆಯದಾಗಿರ ಬಹುದು. ಇದರ ಹೊರ ಅಲಂಕರಣ ಪ್ರಾಸಾದದ ಹೊರ ಆಕೃತಿಗೆ ಹೊಂದಿಕೊಳ್ಳು ವಂತಿರುತ್ತದೆ. ಲಂಬ ಹಿಂದೆ-ಮುಂದೆ ಸರಿತಗಳು, ಸೂಕ್ಷ್ಮ ಉಬ್ಬು-ತಗ್ಗುಗಳು, ಏಣುಗಳು, ಗಾಡಿಗಳು, ಅಡ್ಡಡ್ಡವಾದ ಸಮಾನಾಂತರದ ಏಣುಗಳು ಮುಂತಾದವುಗಳಿಂದ ಶೋಭಿತವಾದ ಈ ಅಧೋಪದ್ಮ ಶಿಖರದ ಮೇಲ್ಭಾಗ, ಅಂಡದ ತುದಿಯಂತಿರುತ್ತದೆ. ಮೇಲ್ಗಡೆ ಸ್ತೂಪಿಯನ್ನು ಕೂಡಿಸಿರುತ್ತಾರೆ. ದ್ರಾವಿಡ ಶೈಲಿಯ ವಿವಿಧ ತಲಗಳು, ನಾಗರ ಶೈಲಿಯ ಪ್ರಧಾನ ಲಂಬ ಹಿಂದೆ-ಮುಂದೆ ಚಾಚುಗಳು, ನಕ್ಷತ್ರಕಾರದ ವಿನ್ಯಾಸ, ಛತ್ರಿಯಾಕಾರದ ಅಧೋಪದ್ಮ ಶಿಖರ ಇವೆಲ್ಲದರ ಲಕ್ಷಣಗಳು ಸೂಕ್ತ ಪ್ರಮಾಣದಲ್ಲಿ ಸಮ್ಮಿಳಿತಗೊಂಡು, ಇಡೀ ವಿಮಾನ ಅರ್ಧಮಡಿಚಿದ

ರಾಜ ಛತ್ರದ ನೋಟವನ್ನು ನೆನಪಿಗೆ ತರುತ್ತದೆ. ವಿಮಾನದ ಹೊರಾಕೃತಿಯಲ್ಲಿ ಬಾಗಿದ ರೇಖಾಕೃತಿಗಿಂತ ಕೂಟದ (ಗಿರಿಶಿಖರ) ಆಕೃತಿಯೇ ಪ್ರಧಾನವಾಗಿರುತ್ತದೆ. ಹೊಯ್ಸಳರು ರಚಿಸಿದ ಈ ರೀತಿಯ ವೇಸರ ವಿಮಾನದಲ್ಲಿ ರೇಖಾನಾಗರ ಪ್ರಾಸಾದದ ಪ್ರಧಾನ ಲಂಬಪಟ್ಟಿಗಳಿವೆ; ಹಿಂದೆ–ಮುಂದೆ ಸತವುಳ್ಳ ವಿಮಾನ ದೇಹವಿದೆ; ದ್ರಾವಿಡ ವಿಮಾನದ ರೀತಿಯಲ್ಲಿ ತಲನಿರೂಪಣೆ ಇದೆ; ಶಾಸ್ತ್ರೋಕ್ತ ರೀತಿಯ ವೃತ್ತ ಪ್ರಾಸಾದ, ಗ್ರೀವ, ಶಿಖರಗಳಿವೆ; ಆನೆಯ ಹಿಂಭಾಗದ ರೀತಿಯ ತಳವಿನ್ಯಾಸ, ಏರುನೋಟವಿದೆ; ಶಿಖರ ರಚನೆಯಲ್ಲಿ ನಾಗರದ ಆಮಲಕ ಮತ್ತು ದ್ರಾವಿಡ ಶಿಖರದ ಸೂಕ್ತ ಸಮ್ಮಿಳಿತವಿದೆ; ವೈವಿಧ್ಯಮಯ ಅಲಂಕರಣ ವಿಮಾನ ದೇಹದ ಪೂರ್ಣ ಆವರಿಸಿದೆ. ಹೀಗೆ ಹೊಯ್ಸಳರ ವೇಸರ ವಿಮಾನಗಳು ವೇಸರ ಎಂಬ ಹೆಸರಿಗೆ ಮತ್ತು ವ್ಯಾಖ್ಯೆಗೆ ಎಲ್ಲ ರೀತಿಯಲ್ಲೂ ಯುಕ್ತ ಉದಾಹರಣೆಗಳಾಗಿವೆ.

ಹೊಯ್ಸಳರು ರೂಪಿಸಿದ ವೇಸರ ಶೈಲಿಯ ವಿಮಾನಗಳು ಅವುಗಳ ಸಂಪೂರ್ಣ ರೂಪದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಉಳಿದಿಲ್ಲ. ನಕ್ಷತ್ರಾಕಾರದ ಗರ್ಭಗೃಹಗಳು ಅನೇಕ ಸಂಖ್ಯೆಯಲ್ಲಿ ಕಂಡುಬರುತ್ತವೆಯಾದರೂ ಆ ಪೈಕಿ ಅನೇಕವುಗಳ ಪ್ರಾಸಾದಗಳು ಕಣ್ಮರೆಯಾಗಿವೆ. ಉಳಿದಿರುವ ಪ್ರಾಸಾದಗಳೂ ಹೆಚ್ಚಿನ ಸಂಖ್ಯೆಯ ತಲಗಳನ್ನೇನೂ ಹೊಂದಿಲ್ಲ. ಅತಿ ಹೆಚ್ಚು ತಲಗಳನ್ನು ಅರಸೀಕೆರೆಯ ಈಶ್ವರ ದೇವಾಲಯದಲ್ಲಿ (ಐದು), ಸೋಮನಾಥ ಪುರದ ಕೇಶವ ದೇವಾಲಯದಲ್ಲಿ (ನಾಲ್ಕು) ಕಾಣಬಹುದಾಗಿದೆ. ಟೊಳ್ಳಾಗಿರುವ ಯಾವುದೇ ವೇಸರವಿಮಾನ ಕಂಡುಬಂದಿಲ್ಲ.

ಹೊಯ್ಸಳರ ವೇಸರ ವಿಮಾನಗಳಿಗೆ ಮುಂಭಾಗದಲ್ಲಿ ಶುಕನಾಸವನ್ನೂ ನಿರ್ಮಿಸುತ್ತಿದ್ದರು. ಈ ಶುಕನಾಸಗಳು ಸಾಮಾನ್ಯವಾಗಿ ಪ್ರಾಸಾದದ ಗ್ರೀವದ ಮಟ್ಟದವರೆಗೂ ಎತ್ತರವಾಗಿವೆ. ಶುಕನಾಸದ ಸುತ್ತಲಿನ ಅಲಂಕರಣ ಪ್ರಾಸಾದದ ತಲಗಳ ಅಲಂಕರಣೆಯನ್ನೇ ಹೋಲುತ್ತದೆ. ಬೆನ್ನಿನ ಭಾಗ ಕಮಾನಿನಾಕಾರವಾಗಿದ್ದು ಮುಂಭಾಗದಲ್ಲಿ ಶಿಲ್ಪಗಳಿಂದ ಕೂಡಿದ ಮಹಾನಾಸಿಯಿರುತ್ತದೆ (**ಹೆಚ್ಚಿನ ವಿವರಗಳಿಗೆ ನೋಡಿ: ಹೊಯ್ಸಳ ವಂಶ – ವಾಸ್ತುಶಿಲ್ಪ**).

**ಕದಂಬ ನಾಗರ ಮಾದರಿ:** ಕದಂಬ ನಾಗರವೆಂಬ ವಿಮಾನ ವಾಸ್ತುರೂಪ ಭಾರತೀಯ ವಾಸ್ತುಶಾಸ್ತ್ರ ಗ್ರಂಥಗಳಲ್ಲಿ ಕಂಡುಬರುವುದಿಲ್ಲ. ವಿದ್ವಾಂಸರು ಮಾತ್ರ ಕರ್ನಾಟಕದ ಒಂದು ವಿಶೇಷ ವಾಸ್ತು ರೂಪವನ್ನು ಗುರುತಿಸಲು ಕದಂಬ ನಾಗರವೆಂಬ ಪದವನ್ನು ಬಳಸಿದ್ದಾರೆ. ಈ ಶೈಲಿಯ ವಿಮಾನಗಳು ದ್ರಾವಿಡಶೈಲಿಯ ದೇವಾಲಯಗಳ ಗರ್ಭಗೃಹದ ಮೇಲೆ ಕಂಡುಬರುತ್ತವೆ. ಚತುರಸ್ರ ಪಿರಮಿಡ್ಡಿನಾಕಾರದ ಈ ವಿಮಾನ ಅನೇಕ ಭೂ ಸಮಾನಾಂತರ ಕಾರ್ನಿಸುಗಳನ್ನು ಹೊಂದಿರುತ್ತದೆ. ಒಂದೇ ದಪ್ಪದ ಅನೇಕ ಕಾರ್ನಿಸುಗಳನ್ನು ಅಲ್ಪ ಅಂತರಗಳಲ್ಲಿ ಒಂದರ ಮೇಲೊಂದರಂತೆ ಪಿರಮಿಡ್ಡಿನಾಕಾರದಲ್ಲಿ ಕೂಡಿಸಲಾಗಿದೆ. ಅದರ ಮೇಲೆ ದ್ರಾವಿಡ ರೀತಿಯಲ್ಲಿ ವೇದಿ, ಗ್ರೀವ, ಶಿಖರ ಸ್ತೂಪಿಗಳನ್ನಿಡಲಾಗಿದೆ. ಶಿಖರ ಯಾವಾಗಲೂ ಚೌಕಾಕಾರವಾಗಿರುತ್ತದೆ. ಮೇಲ್ಭಾಗ ಕೆಳಮುಖವಾದ ದೊಡ್ಡ ಪದ್ಮದಂತಿರುತ್ತದೆ. ಶಿಖರದ ನಾಲ್ಕು ಮುಖಗಳಲ್ಲಿ ಒಂದೊಂದು ಮೂಗಿನಂತೆ ಮುಂಚಾಚಿದ ಮಹಾನಾಸಿ ಯಿರುತ್ತದೆ. ಶಿಖರ ಏಕ ಶಿಲೆಯದ್ದಾಗಿರಬಹುದು ಅಥವಾ ಬಹುಶಿಲೆಯದ್ದಾಗಿರ ಬಹುದು. ಭಿತ್ತಿಯ ಹೊರಮುಖದಲ್ಲಿ ಭದ್ರಗಳಿದ್ದಲ್ಲಿ ಅವು ಸಹ ವಿಮಾನದ ಭಾಗದಲ್ಲಿ ಮುಂದುವರೆಯ ಬಹುದು. ವಿಮಾನದ ಮುಂಭಾಗದಲ್ಲಿ ಶುಕನಾಸವನ್ನು ನಿರ್ಮಿಸಲಾಗಿದೆ. ಸುಕನಾಸಿ ಎತ್ತರದಲ್ಲಿ ಸಾಮಾನ್ಯವಾಗಿ ವಿಮಾನದ ಗ್ರೀವದವರೆಗೂ ಇರುತ್ತದೆ. ಶುಕನಾಸ ಸಹ ವಿಮಾನದ ಮೇಲ್ಭೈನಲ್ಲಿರುವ ಲಕ್ಷಣಗಳನ್ನೇ ಹೊಂದಿರುತ್ತದೆ. ಬೆನ್ನಿನ ಭಾಗ ಇಳಿಜಾರಾಗಿದ್ದು, ಮುಂಭಾಗದಲ್ಲಿ ಮಹಾನಾಸಿ ಇರುತ್ತದೆ. ಇಡೀ ವಿಮಾನಕ್ಕೆ ಇರುವ ಒಂದೇ ಆಲಂಕಾರಿಕ ಕೆತ್ತನೆಯೆಂದರೆ ದಂತಪಂಕ್ತಿಯ ರೀತಿಯ ಕೆತ್ತನೆ. ಪ್ರತಿಯೊಂದು ಕಾರ್ನೀಸಿನ ಮೇಲ್ಭಾಗವೂ ಇಳಿಜಾರಾಗಿದ್ದು, ಅಲ್ಲಿ ಸಾಲಾಗಿ ನಿರ್ದಿಷ್ಟ ಅಂತರಗಳಲ್ಲಿ ಚೌಕಟ್ಟಾದ ಗುಬುಟುಗಳನ್ನು ಕೆತ್ತಲಾಗಿದೆ. ಇವನ್ನು ಬಿಟ್ಟರೆ ಉಳಿದಂತೆ ಆಲಂಕಾರಿಕ ಕೆತ್ತನೆಗಳು ಅಪರೂಪ. ಪಿರಮಿಡ್ಡಿನಾಕಾರದ ಆಕೃತಿ, ಅನೇಕ ಭೂ ಸಮಾನಾಂತರ ಕಾರ್ನಿಸುಗಳು, ದಂತಪಂಕ್ತಿಯ ರೀತಿಯ ಅಲಂಕರಣೆ, ವೇದಿ, ಗ್ರೀವ, ಶಿಖರ ಮತ್ತು ಸ್ತೂಪಿ ಇವುಗಳಿಂದ ಕೂಡಿದ ಈ ವಿಮಾನ ಬಹಳ ಸರಳ, ಸಾಧಾರಣ ರೂಪವನ್ನು ಹೊಂದಿರುತ್ತದೆ.

ಈ ರೀತಿಯ ವಿಮಾನಗಳು ಬಹುವಾಗಿ ಕರ್ನಾಟಕದಲ್ಲಿ ಮಳೆ ಹೆಚ್ಚು ಸುರಿಯುವ ಮಲೆನಾಡಿನ ಪ್ರಾಂತಗಳಲ್ಲಿ ಕಾಣಬರುತ್ತವೆ. ನಿರ್ಮಾಣ ರೀತಿಯೂ ವಿಪರೀತ ಮಳೆ ಬೀಳುವ ಪ್ರದೇಶಗಳಿಗೆ ಸೂಕ್ತವಾಗಿದೆ ಎನಿಸುತ್ತದೆ. ಇದರ ನಿರ್ಮಾಣದಲ್ಲಿ ಹೆಚ್ಚಿನ ಕೆತ್ತನೆ ಕೆಲಸ, ಶ್ರಮ ಮತ್ತು ತಂತ್ರಜ್ಞಾನ ಕಂಡುಬರುವುದಿಲ್ಲ. ವಿಮಾನಗಳು ಕುಳ್ಳಾಗಿರುತ್ತವೆ. ಹೀಗಾಗಿ ಆರ್ಥಿಕ ಮುಗ್ಗಟ್ಟು, ಕಡಿಮೆ ತಂತ್ರಜ್ಞಾನ ಸೌಲಭ್ಯ ಇರುವ ಗುಡ್ಡಗಾಡು, ಹಳ್ಳಿಗಾಡು ಪ್ರದೇಶಗಳಲ್ಲಿ ಸಾಧಾರಣವಾದ ಈ ವಿಮಾನವನ್ನು ನಿರ್ಮಿಸುತ್ತಿದ್ದರೆನ್ನಬಹುದು. ಕದಂಬರು ಮತ್ತು ಅವರ ವಂಶಜರು ಮಲೆನಾಡಿನ ಪ್ರದೇಶದಲ್ಲೇ ಹೆಚ್ಚು ಕಾಲ ಆಡಳಿತ ನಡೆಸಿದವರು. ಅವರ ರಾಜ್ಯವೂ ಚಿಕ್ಕದು, ರಾಜಕೀಯ ಅಂತಸ್ತು ಚಿಕ್ಕದು. ಹೀಗಾಗಿ ಅವರ ದೇವಾಲಯ ನಿರ್ಮಾಣಗಳು ಅವರ ಭೌಗೋಳಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನವಲಂಬಿಸಿತ್ತು. ಅವರ ದೇವಾಲಯಗಳನ್ನು ಅಭ್ಯಾಸ ಮಾಡಿದ ಗ್ರೇವ್ಲಿ ಮತ್ತು ರಾಮಚಂದ್ರನ್ ಅವರು ಈ ನಮೂನೆಯ ವಿಮಾನಗಳಿಗೆ ಕದಂಬ ನಾಗರವೆಂದು ಹೆಸರಿಸಿದರು. ಅದೇ ಹೆಸರು ಮುಂದಕ್ಕೂ ಬಳಕೆಯಾಯಿತು.

ಕದಂಬ ನಾಗರವೆಂಬ ಹೆಸರು ಈ ವಾಸ್ತು ನಮೂನೆಗೆ ನೀಡಲು ಇನ್ನೊಂದು ಮುಖ್ಯ ಕಾರಣವೂ ಇದೆ. ನಾಗರವೆಂಬುದು ಮೂಲತಃ ಕಳಿಂಗ ದೇಶದ ವಾಸ್ತುಶೈಲಿ. ಕಳಿಂಗದ ಭುವನೇಶ್ವರದ ದೇವಾಲಯಗಳಲ್ಲಿ ಬೃಹದಾಕಾರದ ರೇಖಾ ನಾಗರ ಶೈಲಿಯ ವಿಮಾನಗಳನ್ನು ಕಾಣಬಹುದು. ನಾಗರ ವಿಮಾನಗಳ ಜೊತೆಗೆ ಭುವನೇಶ್ವರ ದೇವಾಲಯಗಳಲ್ಲಿ ಪೀಡ ವಿಮಾನಗಳನ್ನೂ (ಪ್ರಾಸಾದ) ಕಾಣಬಹುದು. ಇದನ್ನು ಪೀಡ ದೇವುಲ್ ಎಂದು ಕರೆಯಲಾಗುತ್ತದೆ. ಪೀಡ ಪ್ರಾಸಾದಗಳು ನಾಗರ ಶೈಲಿಯ ದೇವಾಲಯದ ಮುಂಭಾಗದ ಹಜಾರಗಳ ಮೇಲ್ಭಾಗದಲ್ಲಿ ಕಾಣಬರುತ್ತವೆ. ಪೀಡ ಪ್ರಾಸಾದಗಳು ರೇಖಾ ನಾಗರ ಶೈಲಿಯ ಪ್ರಾಸಾದಗಳಿಗಿಂತ ಸಂಪೂರ್ಣ ವಿಭಿನ್ನ. ರೇಖಾನಾಗರ ಪ್ರಾಸಾದಕ್ಕೆ ಭಾಗಿದ ರೇಖಾಕೃತಿಯ ಹೊರವಲಯವಿದ್ದರೆ, ಪೀಡ ಪ್ರಾಸಾದಕ್ಕೆ ಪಿರಮಿಡ್ಡಿನಾಕಾರದ ಹೊರವಲಯವಿರುತ್ತದೆ. ಹೀಗಾಗಿ ಇವೆರಡರ ನಡುವಣ ವ್ಯತ್ಯಾಸವನ್ನು ಸುಲಭವಾಗಿ ಗುರುತಿಸಲು ವಿದ್ವಾಂಸರು ಪೀಡ ಪ್ರಾಸಾದಕ್ಕೆ ಕಳಿಂಗನಾಗರ ಎಂಬ ವಿಶಿಷ್ಟವಾದ ಹೆಸರನ್ನು ನೀಡಿದ್ದಾರೆ. ಆದರೆ ಕಳಿಂಗನಾಗರವೆಂದು ಕರೆಯಲಾದ ಈ ವಿಮಾನ ರೀತಿಯನ್ನು ಔತ್ತರೇಯ ಶಾಸ್ತ್ರಗ್ರಂಥಗಳಲ್ಲಿ ಫಂಸಣ ವಿಮಾನವೆಂದು ಹೇಳಲಾಗಿದೆ. ಪೀಡ ಪ್ರಾಸಾದ, ಫಾಂಸನ, ಕಳಿಂಗನಾಗರ ಈ ಎಲ್ಲವೂ ಒಂದೇ ನಮೂನೆಯ ವಿಮಾನ ರೂಪದ ವಿವಿಧ ಹೆಸರುಗಳು. ಕದಂಬ ನಾಗರ ವಿಮಾನಗಳಿಗೂ ಕಳಿಂಗದ ಪೀಡ ಪ್ರಾಸಾದಗಳಿಗೂ ರೂಪದಲ್ಲಿ ಬಹಳ ಸಾಮ್ಯವಿದೆ. ಹಾಗೆಯೇ ಅಲಂಕರಣೆಯಲ್ಲಿ ದ್ರಾವಿಡ ವಿಮಾನದ ಪ್ರಭಾವವೂ ಇದೆ. ಆದ್ದರಿಂದ ಕರ್ನಾಟಕದ ವಿಮಾನ ಮಾದರಿಗಳನ್ನು ವಿದ್ವಾಂಸರು ಕದಂಬನಾಗರ ವಿಮಾನವೆಂದು ಹೆಸರಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಕಳಿಂಗ ನಾಗರ ಮಾದರಿಯ ವಿಮಾನಗಳು ಆಂಧ್ರ ಮತ್ತು ಕರ್ನಾಟಕದಲ್ಲಿ ಹೆಚ್ಚಿಗೆ ಕಂಡುಬರುತ್ತವೆ. ಕರ್ನಾಟಕದಲ್ಲಿ ಕದಂಬರು, ಕಲ್ಯಾಣ ಚಾಳುಕ್ಯರು, ಹೊಯ್ಸಳರು, ವಿಜಯನಗರದರಸರು ಇವರ ಪೋಷಣೆಯಲ್ಲಿ ನಿರ್ಮಿತವಾದ ಹಲವಾರು ದೇಗುಲಗಳಲ್ಲಿ ಕದಂಬನಾಗರ ಮಾದರಿಯ ವಿಮಾನಗಳನ್ನು ಕಾಣಬಹುದು. ವಿದ್ವಾಂಸರು ಫಂಸಣ, ಕಳಿಂಗ ನಾಗರ ಮತ್ತು ಕದಂಬ ನಾಗರ ಎಂಬ ಹೆಸರುಗಳನ್ನು ಕರ್ನಾಟಕದ ಈ ರೀತಿಯ ವಿಮಾನಗಳನ್ನು ವಿವರಿಸುವಾಗ ಬಳಸಿದ್ದಾರೆ. (ಎಂ.ಎಸ್.ಕೆ.)

ಭೂಮಿಜ: ಭೂಮಿಜ ರೀತಿಯ ರಚನೆಯಲ್ಲಿ ತಳವಿನ್ಯಾಸ ಭಿನ್ನರೀತಿಯಲ್ಲಿರುತ್ತದೆ; ಪೀಠ, ಜಂಘಾ, ಛಾದ್ಯ, ಶೃಂಗ, ವೇದಿ, ಘಂಟಾ ಕಲಶ– ಈ ಭಾಗಗಳಿರುತ್ತವೆ; ಶಿಖರ (ಶೃಂಗ) ಕೆಳಗಿನಿಂದ ಮೇಲಕ್ಕೆ ಕಿರಿದಾಗುತ್ತಾ ಹೋಗುತ್ತದೆ; ಶಿಖರದ ಮಧ್ಯ ಭಾಗದಲ್ಲಿ ಲತಾಲಂಕರಣವಿರುವ ನೀಳಾವಾದ ಪಟ್ಟಿಕೆ ಇರುವುದು (ಲತಾಪಟ್ಟ); ಈ ಲತಾಪಟ್ಟಗಳ

ಸದಾಶಿವ ದೇವಾಲಯ, ನುಗ್ಗೇಹಳ್ಳಿ

ಮಧ್ಯೆ ಕೂಟದಂತೆ ತೋರುವ ಸಣ್ಣ ಸಣ್ಣ ಶೃಂಗಗಳು ಸಾಲಾಗಿರುವುವು (ಸ್ತಂಭಕೂಟ); ಇವು ಪ್ರತಿ ಹಂತಗಳಲ್ಲೂ ಇರುವುವಲ್ಲದೆ ಹಂತಹಂತವಾಗಿ ಕಿರಿದಾಗುತ್ತಾ ಹೋಗುವುವು; ಅಂತ್ಯದಲ್ಲಿ ಷಡ್ವರ್ಗ ಕ್ರಮದ ಗ್ರೀವ – ಶಿಖರ –ಸ್ತೂಪಿಯಂತೆ, ವೇದಿ, ಘಂಟಾ, ಕಲಶ ಇರುವುದು. ಇದು ಭೂಮಿಜ ಮಾದರಿಯ ರಚನೆ (ಉದಾ: ತುರುವೇಕೆರೆಯ ಮೂಲೆ ಶಂಕರ, ನುಗ್ಗೇಹಳ್ಳಿಯ ಸದಾಶಿವ ದೇವಾಲಯಗಳು).

ಲುಪಾ: ಹೆಚ್ಚು ಮಳೆ ಬೀಳುವಂತಹ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಲುಪಾ ಮಾದರಿಯ ದೇವಾಲಯಗಳಿವೆ. ಇವುಗಳಲ್ಲಿ ಅಧಿಷ್ಠಾನ ಮತ್ತು ಭಿತ್ತಿಮಾತ್ರವೇ ಇದ್ದು, ಅದರ ಮೇಲೆ ಪ್ರಸ್ತರವಿರುವುದಿಲ್ಲ; ಬದಲಿಗೆ ಇಳಿಜಾರಾದ ಚಾವಣಿಯು (ಲುಪಾ) ಭಿತ್ತಿಯವರೆಗೂ ಇರುವುದಲ್ಲದೆ, ಭಿತ್ತಿಯಿಂದ ಮುಂಚಾಚಿರುವುದು (ಈ ರೀತಿಯ ರಚನೆ ಮಳೆಯಿಂದ ದೇವಾಲಯವನ್ನು ರಕ್ಷಿಸುತ್ತದೆ). ಇದರ ಮೇಲ್ತುದಿಯಲ್ಲಿ ಸ್ತೂಪಿ ಇರುವುದು. ಒಟ್ಟಾರೆ ಇವುಗಳಲ್ಲಿ ನಾಲ್ಕು ಭಾಗಗಳಿದ್ದು ಚತುರ್ವರ್ಗ ರಚನೆ ಎನಿಸುತ್ತದೆ. ಇಂತಹುದನ್ನು

ಲುಪಾಕಾರ ದೇವಾಲಯ ಎಂದು ಗುರುತಿಸಲಾಗಿದೆ. ಇದರಲ್ಲೇ ಛತ್ರಾಕಾರವೆಂಬ ಇನ್ನೊಂದು ವಿಧವೂ ಇದೆ. ಹೀಗೆ ಅನೇಕ ಮಾದರಿಯ ದೇವಾಲಯಗಳನ್ನು ಕರ್ನಾಟಕದಲ್ಲಿ ಕಾಣಬಹುದಾಗಿದೆ. ಯಾವುದೇ ಮಾದರಿಯ ರಚನೆಯಾಗಿದ್ದರೂ ಯಾವುದೇ ಹೆಸರಿನಿಂದ ಆ ಭಾಗಗಳನ್ನು ಗುರುತಿಸಿದ್ದರೂ ಅದರಲ್ಲಿ ಅಧಿಷ್ಠಾನ ಮುಖ್ಯ ಆಧಾರವಾಗಿರುತ್ತದೆ. ಅನಂತರದಲ್ಲಿ ಮೇಲಿನ ಭಾರ ಹೊರಲು ಸ್ತಂಭಗಳೂ ರಕ್ಷಣೆಗಾಗಿ ಸುತ್ತ ಗೋಡೆಯೂ ಇರುತ್ತದೆ. ಮೇಲೆ ನಿರ್ಮಿಸುವ ಕಟ್ಟಡಕ್ಕೆ ಅನುವಾಗಲು ಪ್ರಸ್ತರ (ಛಾವಣಿ) ಅವಶ್ಯಕ. ಮೇಲ್ಕಟ್ಟಡದಲ್ಲಿ ಆಯಾ ಮಾದರಿಗೆ ಅನುಗುಣವಾದ ಅಂಗಗಳಿಂದ ಕೂಡಿದ ತಲಗಳಿರುತ್ತವೆ (ಏಕತಲ ಮತ್ತು ಲುಪಾ ಬಿಟ್ಟು). ಅವು ಕೆಳಗಿನಿಂದ ಮೇಲಕ್ಕೆ ಕಿರಿದಾಗುವಂತೆಯೇ ಇರುತ್ತವೆ. ಅಂತೇ ಅಗಲವಾದ ಶಿಖರಕ್ಕೆ ಅದರ ಕೆಳಗೆ ಗ್ರೀವದ ಅದೇ ಆಕಾರ, ಆಧಾರ ಇರಲೇಬೇಕು. ಇದರೊಂದಿಗೆ ಪೂಜಾ ಸ್ಥಾನವಾದ್ದರಿಂದ ಸ್ತೂಪಿಯು ಅನಿವಾರ್ಯ. ಹೀಗಾಗಿ ಯಾವುದೇ ದೇವಾಲಯದಲ್ಲಿ ಈ ಎಲ್ಲಾ ಭಾಗಗಳೂ ಇರುವುದಲ್ಲದೆ, ಇದೇ ರಚನಾಕ್ರಮದಲ್ಲಿರುತ್ತವೆ. ಒಂದು ರೀತಿಯಲ್ಲಿ ಷಡ್ವರ್ಗಕ್ರಮದ ರಚನೆ ಎಲ್ಲ ಮಾದರಿಯ (ಲುಪಾ ಬಿಟ್ಟು) ದೇವಾಲಯಗಳ ಮೂಲ ರಚನಾಕ್ರಮ ಎಂದು ಹೇಳಬಹುದು.




ಲೂಪಾಕಾರ ಮಾದರಿಯ ದೇವಾಲಯ

ತಿರ್ಯಙ್ಮುಖ ರಚನೆಗಳು ದೇವಾಲಯದ ಒಳಭಾಗದಲ್ಲಿ ಗರ್ಭಗೃಹ ಮೊದಲಾಗಿ ಮಂಟಪ ಮುಂತಾದುವುಗಳ ರಚನಾ ಕ್ರಮ. ಈ ಕ್ರಮದಲ್ಲಿರುವ ರಚನೆಗಳು ತಿರ್ಯಙ್ಮುಖ ರಚನೆ ಎನಿಸುತ್ತವೆ. ಗರ್ಭಗೃಹ, ಅರ್ಧಮಂಟಪ, ಅಂತರಾಳ, ನವರಂಗ, ಮುಖಮಂಟಪ ಇತರ ಮಂಟಪಗಳು ಮುಂತಾದವು ಈ ಕ್ರಮದ ರಚನೆಗೆ ಸೇರುತ್ತವೆ.

ದೇವಾಲಯದ ವಿವಿಧ ಭಾಗಗಳು: ದೇವಾಲಯದ ವಾಸ್ತು ರಚನೆಯಲ್ಲಿ ವಿವಿಧ ಭಗಗಳಿವೆ; ಗರ್ಭಗೃಹ, ಅರ್ಧಮಂಡಪ, ಸಭಾಮಂಡಪ ಮತ್ತು ಮುಖ ಮಂಡಪ

**ಗರ್ಭಗೃಹ:** ಮೂಲ ಬಿಂಬ ಪ್ರತಿಷ್ಠಾಪಿತವಾಗಿರುವ ಗರ್ಭಗೃಹ ಮೂಲ– ಮುಖ್ಯಭಾಗ. ಇದಕ್ಕೆ ದೇವತಾಮಂಟಪ, ಗರ್ಭಗೇಹ, ಪ್ರಾಸಾದ, ಮೂಲಪ್ರಾಸಾದ ಎಂಬ ಪರ್ಯಾಯ ಪದಗಳಿವೆ. ಒಳಗಿರುವ ಮೂಲಮೂರ್ತಿಯನ್ನನುಸರಿಸಿ ಗರ್ಭಗೃಹ ಬಹುಪಾಲು ಚೌಕಾಕಾರ ಅಥವಾ ಆಯತಾಕಾರವಾಗಿರುವುದು; ಗಜಪೃಷ್ಠಾಕಾರದಲ್ಲಿರುವುದೂ ಉಂಟು. ಬಹುಪಾಲು ದೇವಾಲಯಗಳು ಪೂರ್ವಕ್ಕೆ ಅಭಿಮುಖವಾಗಿರುವುದಾದರೂ ಪಶ್ಚಿಮ ಅಥವಾ ಉತ್ತರ ದಿಕ್ಕಿಗೆ ಅಭಿಮುಖವಾಗಿರುವುದೂ ಉಂಟು. ದೇವಾಲಯದ ಪ್ರವೇಶ ಯಾವ ದಿಕ್ಕಿಗೆ ಇದ್ದರೂ ಗರ್ಭಗೃಹ ಮುಖಮಾಡಿರುವ ದಿಕ್ಕು ಮುಖ್ಯವಾದುದು. ಗರ್ಭಗೃಹದಲ್ಲಿ ಚತುರ್ಮುಖ ಮೂರ್ತಿಗಳಿದ್ದಾಗ ನಾಲ್ಕೂ ದಿಕ್ಕುಗಳಲ್ಲಿ ದ್ವಾರವಿರುವುದು; ಅಂತಹ ದೇವಾಲಯಕ್ಕೆ ಸರ್ವತೋಭದ್ರ ದೇವಾಲಯ ಎಂದು ಹೆಸರು (ಉದಾ: ಎಲ್ಲೋರದ ಜೈನ ಗುಹಾದೇವಾಲಯ). ಹುಬ್ಬಳ್ಳಿ –ಧಾರವಾಡ ಮಧ್ಯದಲ್ಲಿರುವ ಉಣಕಲ್ಲಿನಲ್ಲಿಯ ಚಂದ್ರಮೌಳೇಶ್ವರ ಮತ್ತು ಗೇರುಸೊಪ್ಪೆಯಲ್ಲಿರುವ ಚತುರ್ಮುಖ ಬಸದಿ. ದೇವಾಲಯದಲ್ಲಿ ರುವ ಗರ್ಭಗೃಹಗಳ ಸಂಖ್ಯೆಯ ಆಧಾರದ ಮೇಲೆ, ಎರಡು ಗರ್ಭಗೃಹಗಳಿದ್ದರೆ ದ್ವಿಕೂಟ, ಮೂರು ಗರ್ಭಗೃಹಗಳಿದ್ದರೆ ತ್ರಿಕೂಟ ಇತ್ಯಾದಿಯಾಗಿ ಗುರುತಿಸಲಾಗಿದೆ. ಹೀಗಿದ್ದಾಗ ಎಲ್ಲ ಗರ್ಭಗೃಹಗಳಿಗೂ ಸೇರಿದಂತೆ ಒಂದೇ ಅಧಿಷ್ಠಾನ ವಿರುತ್ತದೆ; ಗರ್ಭಗೃಹದ ಭಿತ್ತಿಗೆ ಗೃಹ ಪಿಂಡಿ ಎಂದು ಹೆಸರು. ಮೇಲೆ ಇರುವ




ಏಕಕೂಟ ದೇವಾಲಯದ ತಳವಿನ್ಯಾಸ

ಕಟ್ಟಡದ ಭಾರವನ್ನು ತಡೆಯುವ ದೃಷ್ಟಿಯಿಂದ ಕೆಲವೊಮ್ಮೆ ಎರಡು ಭಿತ್ತಿಗಳಿರುತ್ತವೆ. ಹೀಗಿದ್ದಾಗ ಗರ್ಭಗೃಹದ ಸುತ್ತ ಇರುವ ಒಳಭಿತ್ತಿಗೆ ಅಂತರ್ಭಿತ್ತಿ ಎಂದೂ ಹೊರಭಾಗದ ಭಿತ್ತಿಗೆ ಬಹಿರ್ಭಿತ್ತಿ ಎಂದೂ ಹೆಸರು. ಈ ಎರಡೂ ಭಿತ್ತಿಗಳ ನಡುವೆ ಇರುವ ಸ್ಥಳವನ್ನು ಅಂಧಾರಿಕಾ ಎನ್ನಲಾಗುವುದು. ಭ್ರಮಂತಿ, ಅಂತರಾಲ, ಮಧ್ಯನಾಡೀ–ಇವು ಇದರ ಪರ್ಯಾಯ ಪದಗಳು. ಭಕ್ತರು ಪ್ರದಕ್ಷಿಣೆ ಹಾಕಲು ಉಪಯುಕ್ತವಾಗುವ ಈ ಸ್ಥಳಕ್ಕೆ ಪ್ರದಕ್ಷಿಣಾ ಪಥ ಎಂಬ ಹೆಸರೂ ಇದೆ. ಹೀಗೆ ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥ ವಿರುವ ದೇವಾಲಯಗಳಿಗೆ ಸಾಂಧಾರದೇಗುಲ ಎಂದು ಹೆಸರು; ಏಕಭಿತ್ತಿಯಿಂದ ನಿರ್ಮಿತ ವಾಗಿದ್ದು, ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥವಿಲ್ಲದ ದೇವಾಲಯಗಳನ್ನು ನಿರಂಧಾರದೇಗುಲ ಎಂದು ಹೇಳಲಾಗುವುದು. ಗರ್ಭಗೃಹ ಉಳಿದ ಎಲ್ಲ ಮಂಟಪಗಳಿಗಿಂತ ಸರಳ ರಚನೆಯನ್ನು ಹೊಂದಿರುವುದಾದರೂ ಪದ್ಮದಳಗಳಿಂದ ಕೂಡಿದ ಸುಂದರ ವಿತಾನ ಮತ್ತು ಸಾಲಂಕೃತ ದ್ವಾರಗಳಿರುತ್ತವೆ. ಗರ್ಭಗೃಹದಲ್ಲಿರುವ ದೇವರಿಗೆ ಸಂಬಂಧಿಸಿದ ಸ್ತ್ರೀ ದೇವತೆಗಾಗಿ ಪ್ರತ್ಯೇಕ ಆಲಯವಿರುವುದುಂಟು (ದೇವೀ ಮಂದಿರ). ಈ ಮಂದಿರ ಮೂಲ ದೇವಾಲಯದ ಎಡಭಾಗದಲ್ಲಿರುವುದು. ಇದರಲ್ಲಿ ಸಾಮಾನ್ಯವಾಗಿ ಒಂದು ಚಿಕ್ಕ ಗರ್ಭಗೃಹ ಮತ್ತು ಅದರ ಮುಂದೆ ಒಂದು ಮಂಟಪ ಇರುವುದು.

**ಜಲಪ್ರಣಾಲ:** ಗರ್ಭಗೃಹದ ವಿಗ್ರಹಕ್ಕೆ ಅಭಿಷೇಕ ಮಾಡಿದ ನೀರು ಹೊರಗೆ ಹೋಗಲು, ಅದರ ಭಿತ್ತಿಯಲ್ಲಿ ಒಂದು ರಂಧ್ರಯುಕ್ತ ಮಾರ್ಗ / ನಾಲ ಇರುವುದು. ಇದು ಗರ್ಭಗೃಹದ ಒಳಭಿತ್ತಿಯ ಕೆಳಅಂತ್ಯದಲ್ಲಿ ಅಂದರೆ, ನೆಲಮಟ್ಟದಲ್ಲಿರುತ್ತದೆ; ಹೊರಭಾಗದಲ್ಲಿ ಅಧಿಷ್ಠಾನದಲ್ಲಿ ಸ್ಥಾನವನ್ನು ಪಡೆದಿರುತ್ತದೆ. ಇದಕ್ಕೆ ವಾರಿಮಾರ್ಗ ಎಂದು ಹೆಸರು. ಅಂಬುಮಾರ್ಗ, ಸೋಮಸೂತ್ರ ಎಂದೂ ಹೇಳಬಹುದು. ಈ ನಾಲ ದೇವಾಲಯದ ಎಡಭಾಗದಲ್ಲಿ ಅಂದರೆ, ಉತ್ತರ ದಿಕ್ಕಿನಲ್ಲಿರಬೇಕು; ಪಶ್ಚಿಮಕ್ಕೆ ಮಾತ್ರ ಇಡದಿರುವುದು ಸಂಪ್ರದಾಯ. ಈ ವಾರಿಮಾರ್ಗ ಹೊರಭಾಗದಲ್ಲಿ (ಅಧಿಷ್ಠಾನದಲ್ಲಿ) ಒಂದು ನಾಳದೊಂದಿಗೆ ಕೂಡಿಕೊಂಡು ಮುಂಚಾಚಿದ್ದಾಗ




ಪ್ರಣಾಲಗಳು

ಅದನ್ನು ಜಲಪ್ರಣಾಲ, ಪ್ರಣಾಲ ಎಂದು ಕರೆಯಲಾಗುವುದು. ಪ್ರಣಾಲ ಸ್ವಲ್ಪ ಮುಂದೆ ಚಾಚಿ ಬಾಗಿದ್ದಾಗ, ಅದರಿಂದ ಕೆಳಗೆ ನೀರು ಬೀಳುವ ತುದಿಯಲ್ಲಿ ಪದ್ಮದಳಗಳ ಅಲಂಕಾರವೂ ತಳಭಾಗದಲ್ಲಿ ಮೊಗ್ಗಿನಂತಹ ಅಲಂಕಾರವೂ ಇರುವುದು. ಈ ಜಲಪ್ರಣಾಲವನ್ನು ಗೋವು, ಸಿಂಹ, ಗಜ, ವ್ಯಾಳ – ಮುಂತಾದ ಪ್ರಾಣಿಗಳ ಮುಖದಂತೆಯೂ ಅಲಂಕರಿಸಲಾಗಿರುತ್ತದೆ. ಈ ಅಲಂಕರಣದ ಆಧಾರದ ಮೇಲೆ ಅವುಗಳನ್ನು ಕ್ರಮವಾಗಿ ಗೋಮುಖ ಪ್ರಣಾಲ, ಸಿಂಹ ವಕ್ತ್ರ ಪ್ರಣಾಲ ಮುಂತಾಗಿ ಹೇಳಲಾಗುವುದು. ಅಭಿಷೇಕದ ನೀರನ್ನು ತುಳಿಯಬಾರದು. ಆದ್ದರಿಂದ ಶಿವನ ದೇವಾಲಯಗಳಲ್ಲಿ ಕೆಲವೆಡೆ, ಪ್ರಣಾಳದ ಕೆಳಗೆ ಈ ತೀರ್ಥವನ್ನು ಕುಡಿಯುತ್ತಿರುವ ಚಂಡನಾಥನ ಮೂರ್ತಿ ಇರುವುದು.

**ಅರ್ಧಮಂಟಪ:** ಗರ್ಭಗೃಹದ ಅಂಗವಾಗಿ ಅದರ ಮುಂದೆ ಇರುವುದೇ ಅರ್ಧಮಂಟಪ. ದೇವರ ಪೂಜೆಗೆ ಬೇಕಾದ ಸಾಮಗ್ರಿಗಳನ್ನು, ನೈವೇದ್ಯದ ಪದಾರ್ಥಗಳನ್ನು ಇಡಲು ಈ ಮಂಟಪವನ್ನು ಉಪಯೋಗಿಸಲಾಗುವುದು. ಉತ್ಸವದ ವಿಗ್ರಹಗಳೂ ಇಲ್ಲಿರುತ್ತವೆ. ಇದು ಗರ್ಭಗೃಹಕ್ಕಿಂತ ಚಿಕ್ಕದಾಗಿ ಅಥವಾ ಅದರಷ್ಟೇ ವಿಸ್ತಾರವಾಗಿರುವುದು. ಇದರ ಮುಂಭಾಗದಲ್ಲಿ ಎರಡು ಅಥವಾ ಸಮಸಂಖ್ಯೆಯ ಸ್ತಂಭಗಳಿರುತ್ತವೆ. ಈ ಕಂಬ ಮತ್ತು ವಿತಾನಗಳು ಸುಂದರವಾಗಿ ಅಲಂಕೃತಗೊಂಡಿರುತ್ತವೆ; ಕೆಲವೊಮ್ಮೆ ತೋರಣವೂ ಇರುವುದುಂಟು. ಒಂದಕ್ಕಿಂತ ಹೆಚ್ಚು ಗರ್ಭಗೃಹಗಳಿರುವ ದ್ವಿಕೂಟ, ತ್ರಿಕೂಟಾಚಲಗಳಲ್ಲಿ ಪ್ರತೀ ಗರ್ಭಗೃಹಕ್ಕೂ ಪ್ರತ್ಯೇಕ ಅರ್ಧಮಂಟಪ (ಅಥವಾ ಅಂತರಾಲ) ಇರುವುದು.

**ಅಂತರಾಲ:** ಗರ್ಭಗೃಹದ ಮುಂದೆ, ಅರ್ಧಮಂಟಪಕ್ಕೆ ಪರ್ಯಾಯವಾಗಿರುವ ಮಂಟಪವೇ–ಅಂತರಾಲ. ಕೆಲವೊಮ್ಮೆ ಇದರ ಮುಂದೆ ಅರ್ಧಮಂಟಪವೂ ಇರುವುದು (ಈ ಎರಡರ ರಚನೆಯಲ್ಲೂ ಭಿನ್ನತೆ ಇದೆ). ಮೇಲ್ಕಟ್ಟಡದ ಸುಕನಾಸಿ ಇದರ ಮೇಲೆ ಇರುವುದರಿಂದ ಇದಕ್ಕೆ ಸುಕನಾಸಿ ಎಂಬ ಹೆಸರೂ ಇದೆ. ಮೂಲದೇವರಿಗೆ ಸಂಬಂಧಿಸಿದ ವಿಗ್ರಹಗಳು ಅಂತರಾಲದಲ್ಲಿರುತ್ತವೆ. ಇದು ಚೌಕ ಅಥವಾ ಆಯತಾಕಾರವಾಗಿದ್ದು, ಸುತ್ತ ಭಿತ್ತಿ ಇರುವುದು. ಇದರಲ್ಲಿ ಮಧ್ಯ ಸ್ತಂಭಗಳು ಇರುವುದಿಲ್ಲ. ಈ ಅಂತರಾಳಕ್ಕೆ ದ್ವಾರವಿದ್ದಾಗ ಅದನ್ನು ಮುಚ್ಚಿದ ಅಂತರಾಳ ಎಂದೂ ದ್ವಾರವಿಲ್ಲದಿರುವುದನ್ನು ತೆರೆದ ಅಂತರಾಳ ಎಂದೂ ಹೇಳಲಾಗುವುದು.

ನವರಂಗ: ಅಂತರಾಳ ಅಥವಾ ಅರ್ಧಮಂಟಪದ ಮುಂದಿನ ಮಂಟಪವೇ ನವರಂಗ. ದೇವರಿಗಾಗಿ ಸಂಗೀತ ಮತ್ತು ನೃತ್ಯ ಸೇವೆಯನ್ನು ಸಲ್ಲಿಸುವ ಉದ್ದೇಶದಿಂದ ಈ ಮಂಟಪವನ್ನು ರಚಿಸಲಾಗಿರುತ್ತದೆ. ಇದಕ್ಕೆ ನೃತ್ಯ ಮಂಟಪ, ಮಹಾಮಂಟಪ, ಗೂಢಮಂಟಪ, ರಂಗಮಂಟಪ, ಭೋಗಮಂಟಪ ಮುಂತಾದವು ಇದರ ಪರ್ಯಾಯ ಪದಗಳಾದರೂ ಅನೇಕ ಸಂದರ್ಭಗಳಲ್ಲಿ ಇವು ಬೇರೊಂದು ಮಂಟಪವನ್ನೂ ವಿಶಿಷ್ಟವಾಸ್ತು ರಚನೆಯನ್ನೂ ಸೂಚಿಸುತ್ತವೆ. ನವರಂಗ ವಿಸ್ತಾರವಾದ ಮಂಟಪ. ಇದು ಚೌಕ ಅಥವಾ ಆಯತಾಕಾರವಾಗಿರುವುದು, ಕೆಲವೊಮ್ಮೆ ಇದಕ್ಕೆ ಪ್ರತ್ಯೇಕ ಅಧಿಷ್ಠಾನವಿರುವುದು, ಸುತ್ತ ಭಿತ್ತಿಯು ಇರುವುದಲ್ಲದೆ, ಕೆಲವೊಮ್ಮೆ ತೆರೆದ ಮಂಟಪವಾಗಿರುವುದು. ಈ ನವರಂಗದಲ್ಲಿ ಮಧ್ಯೆ ಮಾತ್ರವಲ್ಲದೆ ಅಕ್ಕಪಕ್ಕಗಳಲ್ಲೂ ದ್ವಾರಗಳಿದ್ದು, ಎರಡು–ಮೂರು ಕಡೆಗಳಿಂದ ಪ್ರವೇಶವಿರುವುದುಂಟು. ನವರಂಗದ ಒಳಗೆ ಮಧ್ಯಭಾಗದಲ್ಲಿ ವೇದಿಕೆ ಇರುವುದು; ವೇದಿಕೆಯ ಮಧ್ಯದಲ್ಲಿ ವರ್ತುಲಾಕಾರದ ರಚನೆ ಇರುವುದುಂಟು; ವೇದಿಕೆಯ ನಾಲ್ಕೂ ಮೂಲೆಗಳಲ್ಲಿ (ವೇದಿಕೆ ಇಲ್ಲದಾಗ, ಮಂಟಪದ ಮಧ್ಯದಲ್ಲಿ) ಪ್ರಧಾನವಾದ ನಾಲ್ಕು ಸ್ತಂಭಗಳಿರುತ್ತವೆ. ಈ ನಾಲ್ಕು ಸ್ತಂಭಗಳ ನೇರದಲ್ಲಿ ನವರಂಗದ ಸುತ್ತ (ಗೋಡೆಗೆ ಸೇರಿದಂತೆ ಅಥವಾ ಬಿಡಿಯಾಗಿ) ಹನ್ನೆರಡು ಸ್ತಂಭಗಳಿರುತ್ತವೆ. ಈ ಕಂಬಗಳಿಂದ ಒಟ್ಟು ಒಂಭತ್ತು ಅಂಕಣಗಳಾಗುವುದರಿಂದ ಇದಕ್ಕೆ ನವರಂಗ ಎಂದು ಹೆಸರು. ನವರಂಗದ ಒಳಭಿತ್ತಿಯಲ್ಲಿ ಕೆಲವೊಮ್ಮೆ ಕೋಷ್ಠಗಳಿರುತ್ತವೆ. ಈ ಕೋಷ್ಠಗಳು ಹೊರಭಿತ್ತಿಯಲ್ಲಿರುವ ಕೋಷ್ಠಗಳಂತೆ ಅಲಂಕೃತವಾಗಿರುವುದಲ್ಲದೆ, ಅದರಲ್ಲಿ ದೇವತಾ ಬಿಂಬಗಳೂ ಇರುತ್ತವೆ. ಕೆಲವು ದೇವಾಲಯಗಳ ನವರಂಗದಲ್ಲಿ ಸುತ್ತ ಕಕ್ಷಾಸನವೂ ಇರುವುದು. ದೇವಾಲಯದಲ್ಲೆಲ್ಲಾ ಹೆಚ್ಚು ಅಲಂಕೃತಗೊಂಡಿರುವ ಮಂಟಪವೆಂದರೆ–ನವರಂಗವೇ. ಈ ಮಂಟಪದಲ್ಲಿ ವಿವಿಧ ರೀತಿಯಲ್ಲಿ ಅಲಂಕೃತಗೊಂಡ ದ್ವಾರ, ವಿಶೇಷಾಲಂಕೃತ ಮಧ್ಯಸ್ತಂಭಗಳು, ವಿತಾನಾಲಂಕರಣವು ಇರುವುದು.

ಮುಖಮಂಟಪ ಮತ್ತು ಮುಖಚತುಷ್ಕಿ: ನವರಂಗದ ಮುಂದಿನಮಂಟಪ ಅಥವಾ ದೇವಾಲಯದ ಮುಂಭಾಗದ ಮಂಟಪ. ಮುಖಮಂಟಪವನ್ನು ಅಗ್ರಮಂಟಪ ಎಂದೂ ಹೇಳಬಹುದು. ಕೆಲವೊಮ್ಮೆ ಮುಖಮಂಟಪಕ್ಕೆ ಪ್ರತ್ಯೇಕ ಅಧಿಷ್ಠಾನವಿರುತ್ತದೆ; ನಾಲ್ಕಕ್ಕಿಂತ ಹೆಚ್ಚು ಸ್ತಂಭಗಳಿರುತ್ತವೆ; ಸಾಮಾನ್ಯವಾಗಿ ತೆರೆದ ಮಂಟಪದಂತಿರುವುದಾದರು ಕೆಲವೊಮ್ಮೆ ಸುತ್ತ ಭಿತ್ತಿ, ದ್ವಾರಗಳಿರುವುವು. ನವರಂಗದಂತೆಯೇ ಸಾಲಂಕೃತ ಸ್ತಂಭ, ವಿತಾನಗಳಿರುವುದುಂಟು. ಕುಳಿತುಕೊಳ್ಳಲು ಅನುವಾಗುವಂತೆ ಮುಖಮಂಟಪದ ಎರಡೂ ಬದಿಗಳಲ್ಲಿ ಕಲ್ಲಿನ ಆಸನಗಳಿರುವುವು. ಇದರಲ್ಲಿ ರಾಜಸೇನ, ವೇದಿ, ಆಸನಪಟ್ಟ, ಮತ್ತವಾರಣ – ಎಂಬ ಅಂಗಗಳಿದ್ದು, ಇದನ್ನು ಕಕ್ಷಾಸನ ಎಂದು ಹೇಳಲಾಗುವುದು. ಇದರ ಹೊರಮುಖದಲ್ಲಿ ಪುಷ್ಪಪಟ್ಟ, ರತ್ನಪಟ್ಟ, ಶಿಖರದ ಪ್ರತಿಕೃತಿ–ಮುಂತಾದ ಅಲಂಕರಣಗಳಿರುತ್ತವೆ. ಮುಖಚತುಷ್ಕಿಯು ಮುಖಮಂಟಪದ ಬದಲಿಗೆ ನವರಂಗದ ಮುಂದೆ ಇರುತ್ತದೆ. ಇದು ಚೌಕಾಕಾರವಾಗಿದ್ದು, ಒಂದು ಅಂಕಣದಷ್ಟು ಅಗಲವಿರುತ್ತದೆ; ನಾಲ್ಕು ಕಂಬಗಳು ಮಾತ್ರ ಇರುತ್ತವೆ; ಭಿತ್ತಿ ದ್ವಾರವಿಲ್ಲದೆ ತೆರೆದ ಮಂಟಪವಾಗಿರುತ್ತದೆ; ಸುತ್ತ ಕಕ್ಷಾಸನವೂ ಇರುವುದುಂಟು. ಈ ಚುತಷ್ಕಿಯು ನವರಂಗದ ಅಕ್ಕಪಕ್ಕಗಳಲ್ಲಿದ್ದರೆ ಅದಕ್ಕೆ ಪಾರ್ಶ್ವಚತುಷ್ಕಿ ಎಂದು ಹೆಸರು. ನವರಂಗ, ಮುಖಮಂಟಪಗಳ ಛಾವಣಿಯ ಮೇಲ್ಭಾಗದಲ್ಲಿ ಪದ್ಮಮಂಡಲ, ಪದ್ಮಛತ್ರ, ಘಂಟಸಂವರಣ ಮುಂತಾದ ರಚನೆಗಳಿರುವುದುಂಟು. ಕೆಲವೆಡೆ ಮಂಟಪಗಳ ಮೇಲೆ ಮುಂಭಾಗದಲ್ಲಿ ಸುತ್ತಲೂ ಕೈಪಿಡಿಗೋಡೆ (ಪ್ರಹಾರ) ಇರುವುದು. ಮೇಲ್ಕಟ್ಟಡದ ಮೊದಲ ತಲದ ಹಾರವೂ ಈ ಭಾಗದಲ್ಲಿರುವುದುಂಟು; ಕೆಲವೊಮ್ಮೆ ಪ್ರಭಾವಳಿಯಂತಹ ರಚನೆ ಇದ್ದು, ಅದರಲ್ಲಿ ಶಿಲ್ಪಗಳಿರುತ್ತವೆ.

ಇತರ ಮಂಟಪಗಳು: ಮೇಲೆ ಹೇಳಿದ ಎಲ್ಲ ಮಂಟಪಗಳೂ ಪ್ರಧಾನ ದೇವಾಲಯಕ್ಕೆ ಸೇರಿಕೊಂಡಿರುತ್ತವೆ. ಇನ್ನೂ ಕೆಲವು ಮಂಟಪಗಳು ದೇವಾಲಯದಿಂದ ಪ್ರತ್ಯೇಕವಾಗಿರುತ್ತವೆ; ಅಲ್ಲದೆ ಸಾಮಾನ್ಯವಾಗಿ ತೆರೆದ ಮಂಟಪಗಳಾಗಿರುತ್ತವೆ. ಅಲಂಕರಣವನ್ನು ರಕ್ಷಿಸುವುದರಿಂದ ಇದಕ್ಕೆ ಮಂಟಪ ಎಂದು ಹೆಸರು. ಮಂಟಪವು ಅಧಿಷ್ಠಾನ, ಪಾದ, ಪ್ರಸ್ತರಗಳಿಂದ ಕೂಡಿದ್ದು, ತ್ರಿವರ್ಗ ರಚನೆ ಎನಿಸುತ್ತವೆ; ಇವು ದೇವಾಲಯದಲ್ಲಿ ನಿಶ್ಚಿತ ಕಾರ್ಯೋದ್ದೇಶಗಳಿಗಾಗಿ ರಚಿಸಲ್ಪಟ್ಟಿದ್ದು, ಉದ್ದೇಶಕ್ಕೆ ತಕ್ಕಂತೆ ವಿಶಿಷ್ಟ ರಚನೆಯನ್ನೂ ಹೊಂದಿರುತ್ತವೆ; ಅಂತೇ ಬೇರೆ ಬೇರೆ ಹೆಸರಿನಿಂದ ಗುರುತಿಸಲ್ಪಡುತ್ತವೆ; ಶಿವಾಲಯಗಳಲ್ಲಿ ಶಿವನಿಗೆದುರಾಗಿ ನಂದಿಯನ್ನು ಸ್ಥಾಪಿಸಿರುವ ಮಂಟಪವೇ ನಂದಿಮಂಟಪ, ದೇವಾಲಯದ ಇತರ ಮಂಟಪಗಳಂತೆಯೇ ಈ ಮಂಟಪವೂ ಸಾಲಂಕೃತಗೊಂಡಿರುವುದು (ಉದಾ: ಹಳೇಬೀಡಿನ ಹೊಯ್ಸಳೇಶ್ವರ, ಇಕ್ಕೇರಿಯ ಅಘೋರೇಶ್ವರ ದೇವಾಲಯಗಳು). ದೇವರ ಕಲ್ಯಾಣೋತ್ಸವಕ್ಕೆಂದು ನಿರ್ಮಿತವಾಗಿರುವ ಮಂಟಪಕ್ಕೆ ಕಲ್ಯಾಣಮಂಟಪ ಎಂದು ಹೆಸರು. ಈ ಮಂಟಪ ಸಾಮಾನ್ಯವಾಗಿ ವಿಶಾಲವಾಗಿರುವುದು. ಇದರಲ್ಲಿ ಮಧ್ಯೆ ವೇದಿಕೆ ಇದ್ದು, ಸುತ್ತ ಸಾಲುಕಂಬಗಳಿರುವುವು; ಕಂಬ ಮತ್ತು ವಿತಾನಗಳು ವಿಶೇಷವಾಗಿರುವುವು (ಉದಾ: ಕೋಲಾರದ ಸೋಮೇಶ್ವರ ದೇವಾಲಯ). ರಂಗಮಂಟಪ ದೇವರ ರಂಗಭೋಗಸೇವೆಗಾಗಿ ನಿರ್ಮಿತವಾದ ಮಂಟಪವಾದರೂ ಕಲೆಯ ದೃಷ್ಟಿಯಿಂದ ಸಾಮಾಜಿಕ ನೆಲೆಯನ್ನೂ ಪಡೆದಿರುವುದು. ಬಹುಪಾಲು ಅಭಿನಯ ಪ್ರಧಾನ ಸೇವೆಗಾಗಿ ರಚನೆಯಾದ ಮಂಟಪ ಇದನ್ನು ನೃತ್ತ ಮಂಟಪವೆಂದು ಹೇಳಬಹುದು. ಇದು ಮುಖಮಂಟಪದ ಅನಂತರ, ಮುಖ್ಯ ದೇವಾಲಯದಿಂದ ಪ್ರತ್ಯೇಕವಾಗಿ ಇರುವುದು. ಹೆಚ್ಚು ಜನ ಸೇರಲು ಅನುಕೂಲವಾಗುವಂತೆ ವಿಶಾಲವಾಗಿರುವುದು. ಪ್ರೇಕ್ಷಕರಿಗಾಗಿ ಸುತ್ತ ಕಕ್ಷಾಸನವೂ ನೃತ್ಯಸೇವೆಗಾಗಿ ಮಧ್ಯೆ ವೃತ್ತಾಕಾರದ ವೇದಿಕೆಯೂ ಇರುವುದು. ಹೆಚ್ಚು ಜನ ಸೇರುವ ಸ್ಥಳವಾದ್ದರಿಂದ ಈ ಮಂಟಪ ಆಕರ್ಷಣೀಯವಾಗಿ ರಚಿತವಾಗಿರುತ್ತದೆ (ಉದಾ: ಅರಸೀಕೆರೆಯ ಶಿವಾಲಯ). ಇಷ್ಟೇ ಅಲ್ಲದೆ ದೇವಾಲಯಗಳಲ್ಲಿ ಯಾಗ–ಹೋಮಕ್ಕಾಗಿ ಯಾಗಮಂಟಪ/ ಯಾಗಶಾಲೆ ದೇವರ ನೈವೇದ್ಯ ತಯಾರಿಕೆ ಇತ್ಯಾದಿಗಳಿಗೆಂದು ಪಾಕಶಾಲೆ, ಉತ್ಸವ ವಾಹನಗಳನ್ನಿಡಲು ವಾಹನಮಂಟಪ, ದೇವರ ವಿರಾಮ/ಶಯನಕ್ಕೆಂದು ಶಯನ ಮಂಟಪ / ಪರ್ಯಂಕಮಂಟಪ, ದೇವರ ಅಭಿಷೇಕಕ್ಕೆಂದು ಸಪ್ನಮಂಟಪ, ದೇವರ ಪರ್ವ, ಉತ್ಸವಗಳಿಗೆಂದು ಉತ್ಸವ ಮಂಟಪ ಇತ್ಯಾದಿ ಮಂಟಪಗಳಿರುವುವು.

ಮಂಟಪಗಳ ಅಲಂಕಾರಿಕ ಭಾಗಗಳು: ಈ ಎಲ್ಲ ಮಂಟಪಗಳಲ್ಲಿ (ಒಳಗಿನದೂ ಸೇರಿ) ಸ್ತಂಭ, ವಿತಾನ, ದ್ವಾರ ಮತ್ತು ತೋರಣಗಳು ಇರುವುವಲ್ಲದೆ, ಮುಂದೆ ಸೋಪಾನ ರಚನೆಯೂ ಇರುವುದು. ಇವು ದೇವಾಲಯದ ಆವಶ್ಯಕ ಅಂಗಗಳಾದರೂ ನಿರ್ಮಾಪಕರ ಆಶಯ ಮತ್ತು ಶಿಲ್ಪಿಯ ಕೈಚಳಕಕ್ಕೆ ತಕ್ಕಂತೆ ವಿವಿಧ ರೀತಿಯಲ್ಲಿ ಅಲಂಕೃತಗೊಂಡಿದ್ದು, ದೇವಾಲಯದ ಗಮನಾರ್ಹ ಭಾಗಗಳೆನಿಸುತ್ತವೆ.

ಸ್ತಂಭ: ದೇವಾಲಯದಲ್ಲಿ ಅದರ ಭದ್ರತೆಗೆ ಸ್ತಂಭಗಳೇ ಆಧಾರ. ಹೀಗಾಗಿ ದೇವಾಲಯದಲ್ಲಿ ಹೆಚ್ಚು ಅವಶ್ಯವಾದ ಹಾಗೂ ಆಲಂಕಾರಿಕವಾದ ಭಾಗವೆಂದರೆ ಸ್ತಂಭವೇ. ತಲಿಪ, ಜಂಘಾ, ಚರಣ, ಸ್ಥಾಣು, ಸ್ಥೂಣ, ಪಾದ, ಆಂಘ್ರಿಕ–ಇವು ಸ್ತಂಭದ ಪರ್ಯಾಯ ಪದಗಳು. ಸ್ತಂಭದಲ್ಲಿ ಅನೇಕ ಅಂಗಗಳಿದ್ದು, ತಿಳುವಳಿಕೆಯ ಅನುಕೂಲಕ್ಕಾಗಿ ಅವುಗಳನ್ನು ಆಸನ–ಪಾದ, ದಂಡ, ದಂಡಾಗ್ರ, ಗ್ರೀವ, ಶಿರ ಎಂದು ಸ್ಥೂಲವಾಗಿ ಗುರುತಿಸಿಕೊಳ್ಳಬಹುದು.




ಸ್ತಂಭ ಮತ್ತು ಅದರ ಭಾಗಗಳು

ಕಂಬದ ಮೊದಲ ಅಂಗವಾದ ಪೀಠವು ಚೌಕಾಕಾರವಾಗಿರುವುದು. ಪೀಠವು ಪದ್ಮದಳಗಳಿಂದ ಆವೃತವಾಗಿದ್ದರೆ ಅದಕ್ಕೆ ಪದ್ಮಪೀಠ/ಪದ್ಮಾಸನ ಎಂದು ಹೆಸರು. ಇದರ ಮೇಲಿನ ಭಾಗವಾದ ಪಾದ/ಓಮ ಕೂಡಾ ಚೌಕಾಕಾರವಾಗಿ, ಪೆಟ್ಟಿಗೆಯಂತಿರುವುದು. ಇದರ ಮೇಲೆ ಶಿಲ್ಪಗಳನ್ನೂ ಕಂಡರಿಸಲಾಗಿರುತ್ತದೆ. ಕೆಲವೊಮ್ಮೆ ಈ ಪಾದದ ಬದಲಿಗೆ ಗಜ, ವ್ಯಾಲ, ಸಿಂಹ ಇತ್ಯಾದಿ

ಪ್ರಾಣಿರೂಪಗಳಿದ್ದು, ಅವು ಕಂಬಕ್ಕೆ ಆಧಾರವಾಗಿರುತ್ತವೆ. ಇಂತಹ ಸ್ತಂಭಗಳನ್ನು ಸಾಶ್ರಯಸ್ತಂಭಗಳು ಎನ್ನಲಾಗುವುದು. ಇಲ್ಲಿ ಬಿಡಿಸಿರುವ ಪ್ರಾಣಿರೂಪದ ಆಧಾರದ ಮೇಲೆ ಅವುಗಳನ್ನು ಸಿಂಹಪಾದ ಸ್ತಂಭ, ವ್ಯಾಲಪಾದ ಸ್ತಂಭ ಮುಂತಾಗಿ ಹೇಳಲಾಗುವುದು. ವಿಜಯನಗರ ಕಾಲದ ದೇವಾಲಯಗಳಲ್ಲಿ ಇಂತಹ ಸ್ತಂಭಗಳು ಸಾಮಾನ್ಯವಾಗಿರುತ್ತವೆ. ಪಾದದ ಮೇಲೆ ಲಂಬವಾಗಿರುವ ಕಾಂಡದಂತಹ ಭಾಗವೇ ದಂಡ. ಈ ಭಾಗ ನಾಲ್ಕು ಮುಖ, ಎಂಟು ಮುಖ ಇತ್ಯಾದಿಯಾಗಿ ಬೇರೆ ಬೇರೆ ಆಕಾರಗಳಲ್ಲಿರುತ್ತದೆ. ಈ ಆಕಾರದ ಆಧಾರದ ಮೇಲೆ ಕಂಬವನ್ನು ನಾಲ್ಕು ಮುಖವಿದ್ದರೆ ಬ್ರಹ್ಮಕಾಂತ, ಎಂಟು ಮುಖವಿದ್ದರೆ ವಿಷ್ಣುಕಾಂತ, ವೃತ್ತಾಕಾರವಾಗಿದ್ದರೆ ರುದ್ರಕಾಂತ ಇತ್ಯಾದಿಯಾಗಿ ಗುರುತಿಸಲಾಗುವುದು.



ಖಂಡ ಸ್ತಂಭ

ಈ ದಂಡ ಭಾಗದಲ್ಲಿ ದರ್ಪಣ, ಪದ್ಮಬಂಧ, ಮಾಲಾಸ್ಥಾನ, ಘಟಪಲ್ಲವ ಕೀರ್ತಿಮುಖಗಳ ಅಲಂಕರಣವಿರುವುದು (ಉದಾ: ಪಟ್ಟದಕಲ್ಲಿನ ದೇವಾಲಯಗಳು). ದಂಡದ ಅನಂತರದಲ್ಲಿರುವ ದಂಡಾಗ್ರ ಭಾಗದಲ್ಲಿ ಲಶುನ, ತಾಟಿಕಾ, ಘಟ, ಮಂಡಿ, ಫಲಕ – ಈ ಅಂಗಗಳಿರುವುವು. ಮಂಡಿಯಲ್ಲಿ ಹೀರಕ, ವೃತ್ತನೇತ್ರಗಳೆಂಬ ಪಟ್ಟಿಗಳಿವೆ. ಅಂತೇ ಪಾಲ್ಯಾಕಾರ್ಯ ನಾಗವಕ್ತ್ರ, ಪದ್ಮದಳ ಎಂದು ಮೂರು ವಿಧಗಳಿವೆ. ಫಲಕದ ಮೇಲೆ ಕೆಲವೊಮ್ಮೆ ಮದನಿಕಾ ವಿಗ್ರಹಗಳಿರುವುವು. ಮೇಲೆ ಹೇಳಿದ ದಂಡ ಮತ್ತು ದಂಡಾಗ್ರ ಭಾಗಗಳು ಒಂದೇ ಆಕಾರದಲ್ಲಿರಬಹುದು ಅಥವಾ ಬೇರೆ ಬೇರೆ ಆಕಾರದಲ್ಲಿರಬಹುದು; ವಿಭಿನ್ನ ರೂಪವನ್ನು ಹೊಂದಿದ್ದರೆ ಅದಕ್ಕೆ ಮಿಶ್ರಕ ಎಂದು ಹೆಸರು. ಅಂದರೆ, ದಂಡ ಭಾಗ ಎಂಟು ಮುಖದಲ್ಲಿದ್ದು, ದಂಡಾಗ್ರ ಭಾಗ ಬೇರೆ ಆಕಾರದಲ್ಲಿದ್ದರೆ ಅದಕ್ಕೆ ವಿಷ್ಣುಕಾಂತ ಮಿಶ್ರಕಸ್ತಂಭ ಎಂದು ಹೆಸರು. ಕಂಬದ ಎಲ್ಲ ಭಾಗಗಳೂ ವೃತ್ತಾಕಾರದಲ್ಲಿದ್ದರೆ ಅದು ಪೂರ್ಣರುದ್ರ ಕಾಂತಸ್ತಂಭ ಎನಿಸುವುದು. ಫಲಕದ ಮೇಲೆ ಇರುವ ಗ್ರೀವದಂತಹ ಭಾಗಕ್ಕೆ ವೀರಕಂಠ ಎಂದು ಹೆಸರು. ಮೇಲೆ ಬೋದಿಗೆಯನ್ನು ರಚಿಸಲು ಇದು ಅನುಕೂಲಕರವಾಗಿರುವುದು. ಪೋತಿಕಾ ಅಥವಾ ಬೋದಿಗೆ ಅಗಲವಾಗಿದ್ದು, ಕಂಬದಿಂದ ಹೊರಕ್ಕೆ ಚಾಚಿಕೊಂಡಿರುವುದು. ಬೋದಿಗೆ ಸ್ತಂಭದ ಎರಡು ಮುಖಗಳಲ್ಲಿರಬಹುದು ಅಥವಾ ನಾಲ್ಕು ಮುಖಗಳಲ್ಲಿರಬಹುದು. ಬೋದಿಗೆಗಳಲ್ಲಿ ತರಂಗಬೋದಿಗೆ, ಪತ್ರಬೋದಿಗೆ, ಚಿತ್ರಬೋದಿಗೆ ಮತ್ತು ಪುಷ್ಪಬೋದಿಗೆಗಳೆಂಬ ವಿಧಗಳಿವೆ. ಪತ್ರಗಳಂತೆ ಬಿಡಿಸಿರುವುದು ಪತ್ರಪೋತಿಕಾ ಎನಿಸಿದರೆ, ಬೋದಿಗೆಯ ಅಂಚುಗಳಲ್ಲಿ ಅಲೆಗಳಂತೆ ಬಿಡಿಸಿರುವುದು ತರಂಗಪೋತಿಕಾ ಎನಿಸುವುದು; ಅಂತೇ ವ್ಯಾಲ, ಅಪ್ಸರ ಶಿಲ್ಪಗಳಿಂದ ಅಲಂಕೃತಗೊಂಡಿರುವುದು–ಚಿತ್ರ ಪೋತಿಕಾ. ಕಂಬದಿಂದ ಎರಡೂ ಕಡೆಯಲ್ಲಿ ಹೊರಬಾಗಿರುವ ಬೋದಿಗೆಯ ಮೇಲ್ಭಾಗ ಕಮಲದಳಗಳಂತೆ ಇದ್ದು, ತುದಿಯಲ್ಲಿ ಕಮಲದ ಮೊಗ್ಗಿನ ಅಲಂಕರಣವಿರುವುದು. ಇಂತಹ ಬೋದಿಗೆಗೆ ಪುಷ್ಪಪೋತಿಕಾ ಎಂದು ಹೆಸರು. ಇದರೊಂದಿಗೆ ಸುರುಳಿ ಬೋದಿಗೆ, ಸೀಳು ಬೋದಿಗೆಗಳೆಂಬ ಪ್ರಕಾರಗಳನ್ನೂ ಗುರುತಿಸುವುದುಂಟು. ಒಂದು ಕಂಬದೊಂದಿಗೆ ಇನ್ನೊಂದು ಕಂಬವನ್ನು ಸೇರಿಸುವ ತೊಲೆಯನ್ನು ತುಲಾ ಎಂದು ಹೇಳಲಾಗಿದೆ. ಇದು ಮಂಟಪದ ಮೇಲ್ಕಟ್ಟನ್ನು ಅಂಕಣಗಳಾಗಿ ವಿಭಜಿಸುತ್ತದೆ.

ಸ್ತಂಭದಲ್ಲಿ ಹೀಗೆ ವಿವಿಧ ಅಂಗಭಾಗಗಳಿರುವುದು ಮಾತ್ರವಲ್ಲದೆ, ಬೇರೆಬೇರೆ ಪ್ರಕಾರದ ಸ್ತಂಭಗಳೂ ಇವೆ. ರಚನಾ ವಿನ್ಯಾಸದ ಆಧಾರದ ಮೇಲೆ ಕಂಬಗಳನ್ನು ರುಚಕ, ಪಾಲಿಕಾ, ಕೋಷ್ಠಸ್ತಂಭ, ಶ್ರೀಕಾರ, ಚಿತ್ರಖಂಡ, ಪದ್ಮಕಾಂತ, ಸಂಯೋಗಸ್ತಂಭ ಮುಂತಾದ ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತದೆ. ರುಚಕಸ್ತಂಭದಲ್ಲಿ ದಂಡ ಮತ್ತು ಬೋದಿಗೆಗಳು ಮಾತ್ರವೇ ಇರುವುವು; ದಂಡ ನಾಲ್ಕು ಮುಖದಲ್ಲಿರುವುದು; ಇದರ ಮೇಲೆ ಮುಖ್ಯವಾಗಿ ಮಾಲಾಸ್ಥಾನದ ಅಲಂಕರಣವಿರುವುದು (ಉದಾ: ಐಹೊಳೆಯ ಲಾಡ್‌ಖಾನ್ ದೇವಾಲಯ). ಪಾಲಿಗಳಿಂದ ಅಲಂಕರಿಸಲ್ಪಟ್ಟ ಸ್ತಂಭವನ್ನು ಪಾಲಿಕಾಸ್ತಂಭ ಎಂದು ಸ್ಥೂಲವಾಗಿ ಹೇಳಬಹುದು. ಪಾಲಿ ಎಂದರೆ ಕತ್ತಿಯ ಅಲಗಿನಂತೆ ಹರಿತವಾದ ಅಂಚು ಎಂದು ಅರ್ಥ. ಅಂದರೆ ಸ್ತಂಭದ ಒಂದು ಭಾಗದಲ್ಲಿ ಮೇಲಿನಿಂದ ಕೆಳಕ್ಕೆ ಕತ್ತಿಯ ಅಲಗಿನಂತೆ ಚೂಪಾದ ಏಣುಗಳ ಸುತ್ತಲೂ ಇದ್ದರೆ ಅದು ಪಾಲಿಕಾಸ್ತಂಭ ಎನಿಸುವುದು (ಉದಾ: ಬಾದಾಮಿಯ ಗುಹಾ ದೇವಾಲಯ). ಇನ್ನೊಂದು ಸ್ತಂಭ ಪ್ರಕಾರದಲ್ಲಿ ಸ್ತಂಭದ ಮೇಲೆ ಶಾಲಾ, ನಾಸಿಕೋಷ್ಠ ಮುಂತಾದ ಅಲಂಕರಣವಿರುವುದು. ಜೊತೆಗೆ ಇವುಗಳ ಅಕ್ಕಪಕ್ಕ ಸಣ್ಣ ಸ್ತಂಭಗಳೂ (ಕ್ಷುದ್ರಪಾದ) ಮೇಲೆ ಪ್ರಸ್ತರವೂ ಇರುವುದು. ಇವು ಕಂಬದ ಸುತ್ತಲೂ ಇದ್ದು, ಹಂತ ಹಂತವಾಗಿ ಮುಂದುವರಿದಿರುವುದು. ಈ ಮೂಲ ಕಂಬದಲ್ಲಿ ಸ್ತಂಭದ ಎಲ್ಲ ಅಂಗಗಳೂ ಇರುವುವು. ಇಂತಹ ಸ್ತಂಭವನ್ನು ಕೋಷ್ಠಸ್ತಂಭ ಎಂದು ಗುರುತಿಸಲಾಗಿದೆ (ಉದಾ: ಗದಗಿನ ಸರಸ್ವತೀ ದೇವಾಲಯ). ಹೊಯ್ಸಳರ ಕಾಲದ ದೇವಾಲಯಗಳಲ್ಲಿ ನಕ್ಷತ್ರಾಕಾರದ ಕಂಬಗಳಿರುತ್ತವೆ; ಅಲ್ಲದೆ ತಿರುಗಣಿ ಯಂತ್ರದಿಂದ ತಿರುಗಿಸಲ್ಪಟ್ಟ ಘಂಟೆಯಾಕಾರದ ಸ್ತಂಭಗಳೂ ಇದ್ದು, ಇವುಗಳನ್ನು ಶ್ರೀಕಾರಸ್ತಂಭಗಳು ಎನ್ನಲಾಗಿದೆ. ಚಿತ್ರಖಂಡ ಸ್ತಂಭ ಪ್ರಕಾರದಲ್ಲಿ ಸ್ತಂಭ ಚೌಕೋನವಾಗಿರುವುದು. ಇದರಲ್ಲಿ ಮಧ್ಯೆ ಮಧ್ಯೆ ಚೌರಸ ಫಲಕವೂ (ಚತುರಶ್ರ) ಅವುಗಳ ನಡುವೆ ನಾಲ್ಕು, ಎಂಟು ಅಥವಾ ಹದಿನಾರು ಮುಖದ ಲಂಬಭಾಗವಿರುವುದು (ಮಧ್ಯಪಟ್ಟ). ಇವು ಸ್ತಂಭದ ತುದಿಯವರೆಗೂ ಹೀಗೇ ಇದ್ದು, ದಂಡಾಗ್ರ ಭಾಗವಿರದೆ ಅಂತ್ಯದಲ್ಲಿ ಬೋದಿಗೆ ಇರುವುದು. ಇದೇ ಚತುರಶ್ರದ ಇಂದುಮಂಡಲದಲ್ಲಿ ಶಿಲ್ಪಗಳಿರುವುವು. ರೀತಿಯಾಗಿರುವ ಸ್ತಂಭದಲ್ಲಿ ಚತುರಶ್ರ ಮತ್ತು ಮಧ್ಯಪಟ್ಟಗಳ ತುದಿಗಳು ತಾವರೆಯ ಹೂ, ಮೊಗ್ಗುಗಳಂತೆ ಅಲಂಕೃತಗೊಂಡಿದ್ದರೆ ಅದಕ್ಕೆ ಪದ್ಮಕಾಂತಸ್ತಂಭ ಎಂದು ಹೆಸರು (ಉದಾ: ಹಂಪೆಯ ಹಜಾರರಾಮ ದೇವಾಲಯದ ಕಲ್ಯಾಣಮಂಟಪದ ಸ್ತಂಭ). ಪದ್ಮಕಾಂತ ದಂತಹುದೇ ಸ್ತಂಭವನ್ನು ಪೀಠವಿಲ್ಲದೆ ರಚಿಸಿದಾಗ ಅದು ಚಿತ್ರಸ್ಕಂಭಸ್ತಂಭ ಎನಿಸುವುದು. ಸಂಯೋಗಸ್ತಂಭ ಪ್ರಕಾರದಲ್ಲಿ ಒಂದೇ ಪೀಠದ ಮೇಲೆ ಪ್ರಧಾನಸ್ತಂಭದೊಂದಿಗೆ ಸುತ್ತ ಅಥವಾ ಅಕ್ಕಪಕ್ಕಗಳಲ್ಲಿ ಇತರ ಸಣ್ಣ ಸ್ತಂಭಗಳಿರುತ್ತವೆ (ಉಪಪಾದ). ಪಾದ ಭಾಗದಲ್ಲಿ ಪ್ರಾಣಿರೂಪಗಳನ್ನು ಬಿಡಿಸಲಾಗಿರುತ್ತದೆ. ದಂಡಾಗ್ರ ಭಾಗವಿರದೆ ಅಂತ್ಯದಲ್ಲಿ ಬೋದಿಗೆ ಇರುವುದು. ಒಂದು ಸ್ತಂಭ ಸಮೂಹದಂತೆ ಕಾಣುವ ಇಂತಹ ಸ್ತಂಭಕ್ಕೆ ಸಂಯೋಗಸ್ತಂಭ ಎಂದು ಹೆಸರು (ಉದಾ: ಹಂಪೆಯ ವಿಠಲ ದೇವಾಲಯದ ಕಲ್ಯಾಣಮಂಟಪದ ಕಂಬಗಳು) ಉಪಪಾದಗಳ ಸಂಖ್ಯೆಯ ಆಧಾರದ ಮೇಲೆ 4 ಕಂಬಗಳಿದ್ದರೆ ಅದನ್ನು ಬ್ರಹ್ಮಕಾಂತ ಸಂಯೋಗ ಸ್ತಂಭ ಮುಂತಾಗಿ ಹೇಳಲಾಗುವುದು. ಇದರೊಂದಿಗೆ ಏವಂಕಾಂತ ಎಂಬ ವಿಧವೂ ಇದೆ.

**ವಿತಾನ:** ಮಂಟಪದ ಮೇಲ್ಕಟ್ಟನ್ನು ವಿತಾನವೆಂದೂ ಅದರಲ್ಲಿನ ಅಲಂಕರಣವನ್ನು ವಿತಾನಾಲಂಕರಣವೆಂದೂ ಹೇಳಬಹುದು. ಮಂಟಪದಲ್ಲಿ ಕಂಬದಿಂದ ಕಂಬಕ್ಕೆ ಮೇಲೆ ಚಾಚಿರುವ ತುಲಾವು ವಿತಾನದ ಚೌಕಟ್ಟನ್ನು ನಿರ್ಮಿಸುತ್ತದೆ. ದೇವಾಲಯದ ಎಲ್ಲ ಮಂಟಪಗಳ ವಿತಾನವನ್ನು ವಿವಿಧ ರೀತಿಯಲ್ಲಿ ಅಲಂಕರಿಸಲಾಗಿರುತ್ತದೆ. ಕೆಲವೊಮ್ಮೆ ವಿತಾನದಲ್ಲಿ ಗರ್ಭಗೃಹದಲ್ಲಿರುವ ಮೂಲ ದೇವರ ಶಿಲ್ಪವನ್ನು ಅಥವಾ ಮೂಲದೇವರಿಗೆ ಸಂಬಂಧಿಸಿದ ಇತರ ಶಿಲ್ಪಗಳನ್ನು ಬಿಡಿಸಿರುವುದುಂಟು. ಹೆಚ್ಚಾಗಿ ದೇವಾಲಯಗಳಲ್ಲಿರುವ ವಿತಾನ


ಕುಂಭ ಲತಾ

ಪ್ರಕಾರವೆಂದರೆ ಸಮತಲ ವಿತಾನ. ಹೆಸರೇ ಸೂಚಿಸುವಂತೆ ಈ ರೀತಿಯ ವಿತಾನದಲ್ಲಿ ಭಾವಣಿ ಏಕಮಟ್ಟದಲ್ಲಿ ಅಲಂಕೃತಗೊಂಡಿರುತ್ತದೆ. ಇದನ್ನು ಅಷ್ಟಮುಖ/ ವರ್ತುಲಾಂಕಾರದಲ್ಲಿ ಬಿಡಿಸಿದ್ದು ಅದರ ಮೇಲೆ ಅಷ್ಟದಿಕ್ಪಾಲಕರು, ಪದ್ಮಮಂಡಲ–ಮುಂತಾದ ಶಿಲ್ಪಗಳೂ ಅಲಂಕರಣಗಳೂ–ಇರುವುವು. ಪದ್ಮದಳಗಳನ್ನು ವೃತ್ತಾಕಾರದಲ್ಲಿ ಜೋಡಿಸಿದಂತೆ ಬಿಡಿಸಿರುವ ವಿತಾನಕ್ಕೆ ಪದ್ಮಮಂಡಲ ಎಂದೂ ಪದ್ಮಮಂಡಲದ ಮಧ್ಯೆ ಇಳಿಬಿದ್ದಂತಿರುವ ಕಮಲದ ಮೊಗ್ಗಿಗೆ ಪದ್ಮಶಿಲಾ ಎಂದೂ ಹೆಸರು. ಮತ್ಸ್ಯಚಕ್ರ ಮತ್ತು ಸ್ವಸ್ತಿಕಾಲಂಕೃತ ವಿತಾನಗಳು ಐಹೊಳೆ ಮತ್ತು ಬಾದಾಮಿಯ ದೇವಾಲಯಗಳಲ್ಲಿವೆ. ನಕ್ಷತ್ರಾಕಾರದ ವಿತಾನ ಹೊಯ್ಸಳರ ಕಾಲದ ಕೆಲವು ದೇವಾಲಯಗಳಲ್ಲಿದೆ. ಇಷ್ಟೇ ಅಲ್ಲದೆ ವಿತಾನಲಂಕರಣದಲ್ಲಿ ಕ್ಷಿಪ್ತ, ಉತ್‌ಕ್ಷಿಪ್ತ, ಕ್ಷಿಪ್ತೋತ್ಕ್ಷಿಪ್ತ –ಎಂದು ಅನೇಕ ವಿಧಗಳಿದ್ದು, ಇವೂ ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಕಂಡುಬರುತ್ತವೆ.

**ದ್ವಾರ:** ದೇವಾಲಯದಲ್ಲಿ ಗರ್ಭಗೃಹ, ನವರಂಗ ಇತ್ಯಾದಿಗಳು ದ್ವಾರಯುಕ್ತವಾಗಿರುವುವು. ಬಾಗಿಲಿನ ಚೌಕಟ್ಟನ್ನು ದ್ವಾರಬಂಧ ಎಂದು ಹೇಳುವುದು ಸೂಕ್ತ. ದ್ವಾರದಲ್ಲಿ ಲಲಾಟ, ಉತ್ತರಾಂಗ, ಪೇದ್ಯಾ, ಉದುಂಬರ ಮತ್ತು ಚಂದ್ರಶಿಲಾ ಮುಂತಾದ ಅಂಗಗಳಿರುತ್ತವೆ. ದ್ವಾರಬಂಧದಲ್ಲಿ ಮೇಲ್ಭಾಗದಲ್ಲಿ ಅಡ್ಡಡ್ಡಲಾಗಿರುವ ಪಟ್ಟಿಕೆಗೆ ಲಲಾಟ ಎಂದು ಹೆಸರು, ಮಸೂರಕ, ಪತಂಗ ಎಂದೂ ಹೇಳಬಹುದು. ಇದರಲ್ಲಿ ಮಧ್ಯೆ ಸ್ವಲ್ಪ ಮುಂಚಾಚಿದ ಚೌಕ ಅಥವಾ ಆಯತಾಕಾರದ ಫಲಕವಿರುವುದು. ಇದಕ್ಕೆ ಲಲಾಟಫಲಕ ಎಂದು ಹೆಸರು; ಮಂಗಳಫಲಕ ಎಂದೂ ಹೇಳಲಾಗಿದೆ. ಈ ಫಲಕದ ಮೇಲೆ ಮೂಲದೇವರಿಗೆ ಸಂಬಂಧಿಸಿದ

ಶಿಲ್ಪ (ಲಲಾಟಬಿಂಬ) ವನ್ನು ಬಿಡಿಸಲಾಗಿರುತ್ತದೆ. ಅಂದರೆ ಶಿವಾಲಯಗಳಲ್ಲಿ ಲಿಂಗವನ್ನೂ ವೈಷ್ಣವದ ದೇವಾಲಯಗಳಲ್ಲಿ ಗರುಡನನ್ನೂ ಜೈನಬಸದಿಗಳಲ್ಲಿ ಜಿನನನ್ನೂ ಕೆತ್ತಲಾಗಿರುತ್ತದೆ. ದ್ವಾರಬಂಧದ ಮೇಲಿನ ಭಾಗಕ್ಕೆ ಉತ್ತರಾಂಗ ಎಂದು ಹೆಸರು. ಈ ಉತ್ತರಾಂಗದಲ್ಲಿ ಪ್ರಸ್ತರದ ಅಂಗಗಳು ಇರುವುವು; ಅದರ ಕೆಳಗೆ ಶಾಲಾ–ಕೂಟಗಳ ಹಾರವೂ ಇರುವುದುಂಟು; ಈ ಅಂಗದ ಮೇಲೆ ತೋರಣಗಳನ್ನೂ (ದ್ವಾರತೋರಣ ಎನ್ನುವುದು ಸೂಕ್ತ) ಅಷ್ಟಮಂಗಲ

ಸಾವಿರಕಂಬದ ದೇವಾಲಯದ ತೋರಣ, ವಾರಂಗಲ್

ಗಳನ್ನೂ ಬಿಡಿಸಲಾಗಿರುತ್ತದೆ. ದ್ವಾರಬಂಧದಲ್ಲಿ ಉಭಯ ಪಾರ್ಶ್ವಗಳಲ್ಲಿರುವ ಸಾಲಂಕೃತ ಲಂಬಪಟ್ಟಿಕೆಗಳಿಗೆ ದ್ವಾರಶಾಖಾ ಎಂದು ಹೆಸರು. ದ್ವಾರಬಂಧದಲ್ಲಿ ಒಂದರಿಂದ ಒಂಬತ್ತು ಶಾಖೆಗಳವರೆಗೂ ಇರುವುದುಂಟು (ಉದಾ: ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯ). ಈ ಶಾಖೆಗಳಲ್ಲಿನ ಅಲಂಕರಣದ ಮೇರೆಗೆ ಅವುಗಳನ್ನು ವಲ್ಲಿಶಾಖಾ, ಪುಷ್ಪಶಾಖಾ, ರೂಪಶಾಖಾ, ಸ್ತಂಭಶಾಖಾ ಮುಂತಾಗಿ ಬೇರೆ ಬೇರೆ ಹೆಸರಿನಿಂದ ಗುರುತಿಸಲಾಗುತ್ತದೆ. ಈ ಶಾಖೆಗಳಲ್ಲಿ ದ್ವಾರಬಂಧದ ಒಳಪಕ್ಕಗಳಲ್ಲಿ, ಆರಂಭದಲ್ಲಿ ಇರುವ ಶಾಖೆಯು ಅಂತರ್ಶಾಖಾ ಎನಿಸಿದರೆ, ಹೊರ ಅಂತ್ಯಗಳಲ್ಲಿ ಎರಡೂ ಪಾರ್ಶ್ವಗಳಲ್ಲಿರುವುದು ಬಹಿರ್ಶಾಖಾ ಎನಿಸುವುದು. ಈ ದ್ವಾರಶಾಖೆಗಳ ಕೆಳಭಾಗದಲ್ಲಿ ಸಮತಟ್ಟಾದ ಅಗಲವಾದ ಫಲಕದಂತಿರುವ ಅಂಗಕ್ಕೆ ಪೇದ್ಯಾ ಎಂದು ಹೆಸರು. ಈ ಜಾಗದಲ್ಲಿ ದ್ವಾರಪಾಲಕರು, ಶಂಖನಿಧಿ–ಪದ್ಮನಿಧಿ, ಕಲಶ, ಗಂಗೆ, ಯಮುನೆ ಇತ್ಯಾದಿ ಶಿಲ್ಪಗಳನ್ನು ಬಿಡಿಸಲಾಗಿರುವುದು; ಕೆಲವೊಮ್ಮೆ ದ್ವಾರಶಾಖೆಗೆ ಹೊಂದಿಕೊಂಡಿರುವಂತೆ ಒಂದೊಂದು ಶಾಖೆಯ ಕೆಳಗೆ ಒಂದೊಂದು ಶಿಲ್ಪವಿರುವುದು (ಉದಾ: ಬಾಗಳಿಯ ಕಲ್ಲೇಶ್ವರ ದೇವಾಲಯ). ಯಾವುದೇ ಶಿಲ್ಪ/ ಅಲಂಕರಣವಿಲ್ಲದ ಪೇದ್ಯಾಭಾಗ ಪೇದ್ಯಾಪಿಂಡ ಎನಿಸುವುದು. ದ್ವಾರದ ಹೊಸ್ತಿಲಿಗೆ ಉದುಂಬರ ದೇಹಲೀ, ದ್ವಾರಪಿಂಡೀ ಮುಂತಾದ ಹೆಸರುಗಳಿವೆ; ಈ ಭಾಗದಲ್ಲಿ ಸಾಮಾನ್ಯವಾಗಿ ಪದ್ಮಾಲಂಕಾರ ಇರುತ್ತದೆ. ಈ ಹೊಸ್ತಿಲಿನಿಂದ ಮುಂದೆ, ನೆಲದ ಮೇಲೆ ಎದ್ದುಕಾಣುವಂತೆ ಅರ್ಧಚಂದ್ರಾಕಾರದ ರಚನೆ ಇರುವುದು; ಇದನ್ನು ಚಂದ್ರಶಿಲಾ ಎಂದು ಕರೆಯಲಾಗುವುದು (ಉದಾ: ಡಂಬಳದ ದೊಡ್ಡಬಸಪ್ಪ ದೇವಾಲಯ). ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಅಂತರಾಳ ದ್ವಾರದ ಅಕ್ಕಪಕ್ಕಗಳಲ್ಲಿ ಜಾಲಂಧ್ರಗಳೂ ಇರುತ್ತವೆ (ದ್ವಾರಜಾಲಕ).

ದ್ವಾರಬಂಧ, ಕಾಶಿ ವಿಶ್ವೇಶ್ವರ ದೇವಾಲಯ, ಲಕ್ಕುಂಡಿ

ತೋರಣ: ಸ್ತಂಭಗಳ ಮೇಲೆ ಕಮಾನಿನ ಆಕಾರದಲ್ಲಿ ಚಾಚಿಕೊಂಡಿರುವ ರಚನೆಯನ್ನು ತೋರಣ ಎನ್ನಬಹುದು. ಅರ್ಧಮಂಟಪದ ಕಂಬಗಳ ಮೇಲೆ ಈ ತೋರಣಗಳಿರುವು ದುಂಟು; ಇದಕ್ಕೆ ಸ್ತಂಭತೋರಣ ಎಂದು ಹೆಸರು; ಅಂತೆಯೇ, ತೋರಣಕ್ಕೆ ಆಧಾರವಾಗಿರುವ ಸ್ತಂಭಗಳಿಗೆ ತೋರಣಾಂಘ್ರಿ ಅಥವಾ ತೋರಣಸ್ತಂಭ ಎಂದು ಹೆಸರು. ಸ್ತಂಭಗಳ ಮೇಲೆ ಬೋದಿಗೆಯ ಬದಲಿಗೆ ಈ ತೋರಣಗಳಿರುವುವು. ತೋರಣದಲ್ಲಿ ಮಕರ ತೋರಣ, ಪತ್ರತೋರಣ, ಚಿತ್ರತೋರಣ ಮುಂತಾದ ವಿಧಗಳಿವೆ. ಮಕರಗಳ ಬಾಯಿಂದ ಹೊರಹೊಮ್ಮಿ ದಂತಹ ತೋರಣಕ್ಕೆ ಮಕರತೋರಣ ಎಂದೂ ವ್ಯಾಲ, ಸಿಂಹ ಇತ್ಯಾದಿಗಳಿಂದ ಕೂಡಿ ಮಿಶ್ರಾಲಂಕಾರವಿದ್ದರೆ ಅದಕ್ಕೆ ಚಿತ್ರತೋರಣವೆಂದೂ ಅರ್ಧಚಂದ್ರಾಕಾರದಲ್ಲಿದ್ದು ಅದರಲ್ಲಿ ಎಲೆ, ಬಳ್ಳಿಗಳನ್ನು ಬಿಡಿಸಿದ್ದರೆ ಅದಕ್ಕೆ ಪತ್ರತೋರಣ ಎಂದೂ ಹೆಸರು (ಉದಾ: ಕುಕ್ಕನೂರಿನ ನವಲಿಂಗ ದೇವಾಲಯದಲ್ಲಿ ಸ್ತಂಭತೋರಣವಿದೆ).

ಸೋಪಾನ: ದೇವಾಲಯದ ನೆಲಮಟ್ಟವನ್ನು ತಲುಪಲೆಂದಿರುವ ಮೆಟ್ಟಿಲನ್ನು ಸೋಪಾನ ಎನ್ನಬಹುದು; ಅಂತೇ ಸಾಲು ಮೆಟ್ಟಿಲುಗಳಿದ್ದಲ್ಲಿ, ಸೋಪಾನ ಪಙ್ತಿ, ಸೋಪಾನ ಮಾರ್ಗ ಅಥವಾ ಸೋಪಾನ ಮಾಲಾ ಎನಿಸುವುದು. ಇವುಗಳಲ್ಲಿ ಮೊದಲನೆಯ ಮೆಟ್ಟಿಲಿಗೆ ಅಶ್ವಪಾದ ಎಂದೂ ಕೊನೆಯ ಮೆಟ್ಟಿಲಿನ ಮೇಲಿರುವ ಹಂತಕ್ಕೆ (ನೆಲ) ಫಲಕ ಎಂದೂ ಹೆಸರು. ಸೋಪಾನಗಳ ರಚನಾ ರೀತಿಯ ಆಧಾರದ ಮೇಲೆ ಅವುಗಳನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತದೆ: ಮೆಟ್ಟಿಲುಗಳ ಅಗಲ ಕೆಳಗಿನಿಂದ ಮೇಲಕ್ಕೆ ಹೋಗುತ್ತಾ ಕಿರಿದಾಗುವಂತಿದ್ದರೆ ಅದಕ್ಕೆ ಶಂಖಮಂಡಲ ಸೋಪಾನ ಎಂದು ಹೆಸರು; ಅಂತೆಯೇ ಬಳ್ಳಿಯಂತೆ ಸುತ್ತುವರಿದಂತಿರುವ ಮೆಟ್ಟಿಲುಗಳಿಗೆ ವಲ್ಲೀಮಂಡಲ ಸೋಪಾನ ಎಂದು ಹೆಸರು. ದ್ವಾರದ ಮೂರೂ ಪಾರ್ಶ್ವಗಳಲ್ಲಿ ಸೋಪಾನವಿದ್ದರೆ ಅದು ತ್ರಿಖಂಡಾಕಾರ ಸೋಪಾನ ಎನಿಸುವುದು. ಮೇಲೆ ಹತ್ತಿ ಹೋಗಲು ಅನುಕೂಲವಾಗುವಂತೆ ಮೆಟ್ಟಿಲುಗಳ ಅಕ್ಕಪಕ್ಕಗಳಲ್ಲಿ ಕಟಕಟೆ ಇರುವುದು. ಇದಕ್ಕೆ ಹಸ್ತಿಹಸ್ತ ಎಂದು ಹೆಸರು. ಇದು ಆನೆಯ ಸೊಂಡಿಲಿನಂತೆ ಚಾಚಿರುವುದು.

ವಿತಾನ, ಕೇಶವ ದೇವಾಲಯ, ಸೋಮನಾಥಪುರ

ಇದರ ಕೆಳಗೆ ಪಾರ್ಶ್ವಗಳಲ್ಲಿ ಒಂದು ಫಲಕದಂತಿರುವ ಅಂಗವನ್ನು ಪಕ್ಷಶಿಲಾ ಎಂದು ಕರೆಯಲಾಗುವುದು (ಉದಾ: ಬನ್ನೇರುಘಟ್ಟದ ಚಂಪಕಧಾಮ ದೇವಾಲಯ). ಹೀಗೆ ಸೋಪಾನಗಳು ಮಂಟಪದೊಂದಿಗಿರುವ ಈ ಎಲ್ಲ ಅಂಗ–ಭಾಗಗಳೂ ದೇವಾಲಯದ ಹಿರಿಮೆಯನ್ನು ಹೆಚ್ಚಿಸುತ್ತವೆನ್ನಬಹುದು.

ಹೊರ ಆವರಣದ ರಚನೆಗಳು: ದೇವಾಲಯದ ತಿರ್ಯಙ್ಮುಖ ಕ್ರಮದ ರಚನೆಯಲ್ಲಿ ಮಂಟಪಗಳ ಅನಂತರದ ಮತ್ತು ಪ್ರಾಕಾರದೊಳಗಿನ ರಚನೆಗಳು ಈ ಹೊರ ಆವರಣಕ್ಕೆ ಸೇರುತ್ತವೆ. ಬಲಿಪೀಠ, ಧ್ವಜಸ್ತಂಭ, ಪುಷ್ಕರಿಣಿ, ಪರಿವಾರಾಲಯ, ಪ್ರಾಕಾರ – ದ್ವಾರಮಂಟಪ ಗಳು – ಇಂತಹ ರಚನೆಗಳಲ್ಲಿ ದೇವರಿಗೆ ನೈವೇದ್ಯವಾದ ಪದಾರ್ಥಗಳನ್ನು (ಬಲಿಹರಣ) ಪರಿವಾರ ದೇವತೆಗಳಿಗೆ ಇಡಲೆಂದು ಮಾಡಿರುವ ಪೀಠವೇ ಬಲಿಪೀಠ ಅಥವಾ ಬಲಿವಿಷ್ಟರ. ಜೈನಧರ್ಮದಲ್ಲಿ ಇದಕ್ಕೆ ಬಸದಿಕಲ್ಲು ಎಂದು ಹೆಸರು. ದೇವರಿಗೆ ಎದುರಾಗಿ ಗರ್ಭಗೃಹ (ಅಥವಾ ಕೊನೆಯ ಮಂಟಪ) ಮತ್ತು ಅದರ ಮುಂದಿನ ಧ್ವಜಸ್ತಂಭ – ಇವುಗಳ ಮಧ್ಯೆ ಬಲಿಪೀಠ ಇರುವುದು. ಬಲಿಹರಣವನ್ನು ಅಷ್ಟದಿಕ್ಪಾಲಕರಿಗೆ ನೀಡಲೆಂದು ಹೆಚ್ಚಿನ ಬಲಿಪೀಠಗಳೂ ಇರುತ್ತವೆ. ಇವುಗಳಲ್ಲಿ ಗರ್ಭಗೃಹದ ಮುಂದೆ ಇರುವುದು ಪ್ರಧಾನ ಬಲಿಪೀಠ ಎನಿಸುತ್ತದೆ. ಕೆಲವು ದೇವಾಲಯಗಳಲ್ಲಿ ಸುಂದರವಾದ ಬಲಿಪೀಠಗಳಿವೆ (ಉದಾ: ಹಲಸೂರಿನ (ಬೆಂಗಳೂರು) ಸೋಮೇಶ್ವರ ದೇವಾಲಯ).

ಧ್ವಜಸ್ತಂಭ: ಧ್ವಜವನ್ನು ಕಟ್ಟಲೆಂದು ನೆಟ್ಟಿರುವ ಕಂಬವೇ ಧ್ವಜಸ್ತಂಭ. ಬಲಿಪೀಠದಿಂದ ಮುಂದೆ ಅಥವಾ ಗರ್ಭಗೃಹ ಮತ್ತು ಬಲಿಪೀಠದ ನಡುವೆ ಧ್ವಜಸ್ತಂಭ ಇರುವುದು. ಚೌಕ, ವೃತ್ತ ಅಥವಾ ಆಯತಾಕಾರದ ಪೀಠದ ಮೇಲೆ ಸ್ತಂಭವಿರುವುದು. ಇದರ ತುದಿಯಲ್ಲಿ ಗರ್ಭಗೃಹದೆಡೆಗೆ ಮುಖಮಾಡಿರುವ ಮೂರು ಅಡ್ಡಪಟ್ಟಿಗಳಿರುತ್ತವೆ. ಬಾವುಟವನ್ನು ಕಟ್ಟಲು ಇವು ಅನುಕೂಲಕರವಾಗಿರುತ್ತವೆ. ಈ ಬಾವುಟ ಅಥವಾ ಧ್ವಜಕ್ಕೆ ಮಸೂರಕ ಎಂದು

ಹೆಸರು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಧ್ವಜವನ್ನು ಕಟ್ಟಲಾಗುವುದು. ಆದ್ದರಿಂದ ಧ್ವಜವಿರುವ ಸ್ತಂಭಕ್ಕೆ ಸಪತಾಕ ಎಂದೂ ಧ್ವಜವಿಲ್ಲದ ಸ್ತಂಭಕ್ಕೆ ನಿಷ್ಪತಾಕ ಎಂದೂ ಹೆಸರು. ಶೈವ ದೇವಾಲಯಗಳಲ್ಲಿ ಈ ಸ್ತಂಭದ ಪೀಠದಲ್ಲಿ ನಂದಿ, ಲಿಂಗ ಮುಂತಾದ ಶೈವ ಸಂಬಂಧೀ ಲಾಂಛನಗಳಿರುವುವು; ಅದೇ ವೈಷ್ಣವ ದೇವಾಲಯಗಳಲ್ಲಿ ಶಂಖ, ಚಕ್ರ, ಗರುಡಶಿಲ್ಪ ಮುಂತಾದ ವೈಷ್ಣವ ಲಾಂಛನಗಳಿರುವುವು. ಕೆಲವೊಮ್ಮೆ ಇದೇ ರೀತಿಯಾದ ಪ್ರತ್ಯೇಕ ಗರುಡಸ್ತಂಭವಿರುವುದು. ಇವುಗಳೊಂದಿಗೆ ದೇವಾಲಯದಲ್ಲಿ ದೀಪಸ್ತಂಭವೂ ಇರುವುದು. ವಿಶೇಷ ದಿನಗಳಲ್ಲಿ ದೀಪ ಹಚ್ಚಲು ದೀಪಸ್ತಂಭವನ್ನು ಬಳಸಲಾಗುವುದು. ಕೆಲವು ದೇವಾಲಯಗಳಲ್ಲಿ ಈ ಎಲ್ಲ ಸ್ತಂಭಗಳೂ ಒಂದೇ ಆಗಿರುವುದನ್ನು ಗಮನಿಸಬಹುದು. ಬಸದಿಗಳ ಸಂಕೀರ್ಣದಲ್ಲಿರುವ ಇಂತಹ ಸ್ತಂಭಗಳೆಂದರೆ–ಮಾನಸ್ತಂಭ ಮತ್ತು ಬ್ರಹ್ಮಸ್ತಂಭಗಳು (ಬ್ರಹ್ಮದೇವರ ಕಂಬ). ಮಾನಸ್ತಂಭ ಎತ್ತರವಾದ ಅಧಿಷ್ಠಾನದ ಮೇಲಿರುತ್ತದೆ. ಸ್ತಂಭದ ಅಂತ್ಯದಲ್ಲಿ ಪುಟ್ಟ ದೇವಾಲಯದಂತೆ ಕಾಣುವ ಮಂಟಪವಿದ್ದು,ಅದರ ಮೇಲೆ ಕಲಶವೂ ಇರುತ್ತದೆ. ಮಂಟಪದ ಸುತ್ತ ನಾಲ್ಕು ದಿಕ್ಕುಗಳಲ್ಲಿ ತೀರ್ಥಂಕರರ ಬಿಂಬವಿರುತ್ತದೆ. ಅದೇ ಬ್ರಹ್ಮಸ್ತಂಭ ಅಥವಾ ಬ್ರಹ್ಮದೇವರ ಕಂಬದಲ್ಲಿ ಮೇಲೆ ಹೇಳಿದಂತೆ ತೀರ್ಥಂಕರರ ಬದಲಿಗೆ, ಸ್ತಂಭದ ತುದಿಯಲ್ಲಿ ಒಂದು ಫಲಕದ ಮೇಲೆ ಬ್ರಹ್ಮಯಕ್ಷನ ಬಿಂಬವಿರುತ್ತದೆ (ಉದಾ: ಶ್ರವಣಬೆಳಗೊಳದ ಬೆಟ್ಟಗಳ ಮೇಲಿನ ಸ್ತಂಭಗಳು).

ಶಾಸನಸಹಿತ ಗರುಡಧ್ವಜ ಸ್ಥಂಭ

**ಪರಿವಾರಾಲಯಗಳು:** ಮೂಲ ದೇವರಿಗೆ ಸಂಬಂಧಪಟ್ಟ ಪರಿವಾರ ದೇವತೆ ಅಥವಾ ಆವರಣ ದೇವತೆಗಳಿಗಾಗಿ ಇರುವ ಸಣ್ಣ ಸಣ್ಣ ಗುಡಿಗಳು. ಇವುಗಳು ಪ್ರಾಕಾರದೊಳಗೆ ಪ್ರತ್ಯೇಕವಾಗಿದ್ದು ನಿಶ್ಚಿತ ಸ್ಥಾನಗಳಲ್ಲಿರುತ್ತವೆ. ಇವು ಎಂಟು, ಹದಿನಾರು ಅಥವಾ ಮೂವತ್ತೆರಡು ಇರುತ್ತವೆ. ಈ ಪರಿವಾರಾಲಯಗಳ ಮೇಲೆ ಶಾಲಾಶಿಖರ ಇರುವುದುಂಟು. ಇವೆಲ್ಲವುಗಳೊಂದಿಗೆ ಪೂಜಾವಿಧಿಗಳಿಗಾಗಿ ಪುಷ್ಕರಿಣಿ, ಉಪವನ, ಮಠ–ಛತ್ರಗಳು ಇದ್ದು ದೇವಾಲಯದ ವೈಶಾಲ್ಯತೆಯನ್ನು ಸೂಚಿಸುತ್ತವೆ.

**ಪ್ರಾಕಾರ–ಗೋಪುರ:** ಆಲಯದ ರಕ್ಷಣೆ ಮತ್ತು ಶೋಭೆಯ ದೃಷ್ಟಿಯಿಂದ ದೇವಾಲಯದ ಸುತ್ತ ಗೋಡೆಯಿರುವುದಕ್ಕೆ ಪ್ರಾಕಾರ ಎಂದು ಹೆಸರು. ಸಾಲ, ನಿಹಾರ, ಕೋಶ, ಆವರಣ– ಇವು ಪರ್ಯಾಯ ಪದಗಳು. ಪ್ರಾಕಾರ ಮೇಲೆ ಹೇಳಿದ ಎಲ್ಲ ವಾಸ್ತುರಚನೆ ಗಳನ್ನು ಒಳಗೊಂಡಿರುತ್ತದೆ. ಒಂದು ಪ್ರಾಕಾರವಿದ್ದರೆ, ಅದು ಏಕಸಾಲ ಎನಿಸುವುದು. ಒಂದಕ್ಕಿಂತ ಹೆಚ್ಚು ಪ್ರಾಕಾರಗಳಿದ್ದಾಗ (ಒಳಗಿನಿಂದ) ಮೊದಲನೆಯ ಪ್ರಾಕಾರವನ್ನು ಅಂತರ್ಮಂಡಲ ಎಂದೂ ಎರಡನೆಯ ಪ್ರಾಕಾರವನ್ನು ಅಂತರ್ನಿಹಾರ ಎಂದೂ ಹೇಳಲಾಗುವುದು. ಮೂರು, ನಾಲ್ಕು ಮತ್ತು ಐದನೆಯ ಅಥವಾ ಕೊನೆಯ ಪ್ರಾಕಾರಗಳಿಗೆ ಕ್ರಮವಾಗಿ ಮಧ್ಯಮಹಾರ, ಪ್ರಾಕಾರ ಮತ್ತು ಮಹಾಮರ್ಯಾದಾ ಎಂದು ಹೆಸರು. ದೇವಾಲಯದ ಭಿತ್ತಿಯಂತೆ ಪ್ರಾಕಾರದ ಭಿತ್ತಿಯ ಮೇಲೆ ಕೋಷ್ಠಗಳು, ಉಬ್ಬುಶಿಲ್ಪಗಳು ಇರುವುದುಂಟು. ಇದರ ಮೇಲ್ಭಾಗದಲ್ಲಿ ಸುತ್ತಲೂ ತೆನೆಯಂತಹ ಅಲಂಕರಣವಿರುವುದು (ಛತ್ರಶೀರ್ಷ). ಪ್ರಾಕಾರದ ಒಳಮುಖದಲ್ಲಿ ಅದಕ್ಕೆ ಹೊಂದಿಕೊಂಡಂತೆ ಸಾಲುಕಂಬಗಳಿಂದ ಕೂಡಿದ ರಚನೆಗೆ ಆವೃತ ಮಂಟಪ ಎಂದು ಹೆಸರು. ಇದರೊಂದಿಗೆ ಸಾಲಾಗಿ ಸಣ್ಣ ಸಣ್ಣ ಗುಡಿಗಳಿರುತ್ತವೆ. ಈ ಗುಡಿಗಳಿಗೆ ದೇವಕುಲಿಕಾ ಎಂದೂ ಅವುಗಳ ಸಾಲು ರಚನೆಗೆ ಮಾಲಿಕಾ ಎಂದೂ ಹೆಸರು. ಆವೃತ ಮಂಟಪದಲ್ಲಿ ಈ ರೀತಿ ಸಾಲು ಗುಡಿಗಳಿದ್ದಾಗ ಅದನ್ನು ಮಾಲಿಕಾ ರಚನೆ ಎಂದೂ ಗುಡಿಗಳಿಲ್ಲದಾಗ ಅದನ್ನು ಮಹಾವಾರ ಎಂದೂ ಹೇಳಲಾಗುವುದು. ಪ್ರಾಕಾರಕ್ಕೆ ಹೊಂದಿಕೊಂಡಂತೆ ಅದರ ಮಧ್ಯಭಾಗದಲ್ಲಿ ಗೋಪುರವಿರುವುದು. ಇದು ದೇವಾಲಯದ ಮುಖ್ಯದ್ವಾರವಾದ್ದರಿಂದ ಮಹಾದ್ವಾರ ಎಂದೂ ಹೇಳುವುದುಂಟು. ಗೋಪುರ ಗರ್ಭಗೃಹಕ್ಕೆ ಎದುರಾಗಿರುವ ದಿಕ್ಕಿನಲ್ಲಿ ಮಾತ್ರವೇ ಇರಬಹುದು ಅಥವಾ ನಾಲ್ಕು ದಿಕ್ಕಿನಲ್ಲೂ ಇರುಬಹುದು. ಗೋಪುರದ ಒಳಮುಖದಲ್ಲಿ ಪ್ರವೇಶದ ಆರಂಭದಲ್ಲಿ ಅಕ್ಕಪಕ್ಕಗಳಲ್ಲಿ ಮಂಟಪದಂತಹ ರಚನೆ ಇರುವುದು (ಪ್ರತೋಲಿ). ವಿಜಯನಗರ ಕಾಲದ ದೇವಾಲಯಗಳಲ್ಲಿ ಈ ಪ್ರತೋಲಿಯಲ್ಲಿ ದ್ವಾರದ ಎದುರು ಬದಿರು ಸ್ತಂಭದ ಮೇಲೆ ಭಕ್ತರ ಉಬ್ಬುಶಿಲ್ಪಗಳೂ ಕೊನೆಯ ಸ್ತಂಭದ ಮೇಲೆ ವಲ್ಲಿಯೊಂದಿಗಿರುವ ಗಂಗೆ–ಯಮುನೆಯರ ಉಬ್ಬುಶಿಲ್ಪಗಳೂ ಇರುತ್ತವೆ. ದೇವಾಲಯದ ಪ್ರತಿಯೊಂದು ಪ್ರಾಕಾರಕ್ಕೆ ಸೇರಿದಂತಿರುವ ಗೋಪುರವನ್ನು ಬೇರೆ ಬೇರೆ ಹೆಸರಿನಿಂದ ಗುರುತಿಸಲಾಗುವುದು (ಒಳಗಿನಿಂದ); ಮೊದಲನೆಯ ಪ್ರಾಕಾರದ ಗೋಪುರವನ್ನು ದ್ವಾರಶೋಭಾ ಎಂದೂ ಎರಡನೆಯ ಪ್ರಾಕಾರದ ಗೋಪುರವನ್ನು ದ್ವಾರಶಾಲಾ ಎಂದೂ ಗುರುತಿಸಲಾಗಿದೆ. ಮೂರು ಮತ್ತು ನಾಲ್ಕನೆಯ ಪ್ರಾಕಾರಗಳ ಗೋಪುರ ಕ್ರಮವಾಗಿ ದ್ವಾರಪ್ರಾಸಾದ, ದ್ವಾರಹರ್ಮ್ಯ ಎಂದೂ ಐದನೆಯ ಗೋಪುರ ಮಹಾಗೋಪುರ ಎಂದೂ ಗುರುತಿಸಲ್ಪಟ್ಟಿದೆ. ಗೋಪುರದಲ್ಲೂ ಮೇಲ್ಭಾಗದಲ್ಲಿ ತಲಗಳೂ ಶಾಲಾ–ಕೂಟಗಳ ಹಾರವೂ ಕೋಷ್ಠಗಳೂ ಇರುವುವು; ಇವುಗಳಲ್ಲಿ ಲೌಕಿಕ ಮತ್ತು ಪೌರಾಣಿಕ ಶಿಲ್ಪಗಳೂ ದೇವತಾ ಶಿಲ್ಪಗಳೂ ಇರುವುವು. ಈ ತಲಗಳ ಅಂತ್ಯದಲ್ಲಿ ಶಾಲಾಶಿಖರ ಇರುವುದು. ಈ ಶಿಖರದ ಪಕ್ಕಗಳಲ್ಲಿ ನಾಸಿಯೂ (ಪಾರ್ಶ್ವನಾಸೀ) ಮೇಲೆ ಸಾಲು ಕಲಶಗಳೂ ಇರುವುವು. ಗೋಪುರದಲ್ಲಿ ಒಂದರಿಂದ ಹದಿನಾರು ತಲಗಳಿರಬಹುದು. ಈ ತಲಗಳಿಲ್ಲದಿದ್ದಲ್ಲಿ (ಮಹಾದ್ವಾರದ ಮೇಲೆ) ಶಾಲಾ ಮಾತ್ರವೇ ಇರುವುದು; ಇಂತಹುದಕ್ಕೆ ದ್ವಾರಶಾಲಾ ಅಥವಾ ದ್ವಾರಶೋಭಾ ಎಂದು ಹೆಸರು.

ಹೀಗೆ ವಿವಿಧ ಭಾಗಗಳಿಂದ, ಅಂಗ–ಪ್ರತ್ಯಂಗಗಳಿಂದ, ವಿವಿಧ ಪ್ರಕಾರಗಳಿಂದ ಕೂಡಿದ ದೇವಾಲಯ ರೂಪುಗೊಳ್ಳುತ್ತದೆ. ಇಲ್ಲಿ ಶಿಲ್ಪಿಯ ನಿಪುಣತೆ, ಶ್ರದ್ಧೆ, ಆಸಕ್ತಿಗಳು ಮುಖ್ಯಪಾತ್ರ ವಹಿಸುತ್ತವೆ. ಈ ವಾಸ್ತುಶಿಲ್ಪ ನಿರ್ಮಾಣದಲ್ಲಿ ನಾಲ್ಕು ವೃತ್ತಿ ಪರಿಣಿತರು ಸೇವೆ ಸಲ್ಲಿಸಿರುತ್ತಾರೆ. ಅವರನ್ನು ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ, ತಕ್ಷಕ ಎಂದು ಗುರುತಿಸಬಹುದು. ಇಲ್ಲಿ ಸ್ಥಪತಿಯಕ ಸ್ಥಾನ ಮುಖ್ಯವಾದುದು. ದೇವಾಲಯ ರಚನೆಯ ಪೂರ್ಣ ಜವಾಬ್ದಾರಿ ಅವನದು; ಸೂತ್ರಗ್ರಾಹಿ ಅಳತೆ ಪ್ರಮಾಣವನ್ನು ನಿರ್ಧರಿಸುತ್ತಾನೆ; ತಕ್ಷಕ ಅಳತೆಗೆ ತಕ್ಕಂತೆ ಕಲ್ಲು, ಇಟ್ಟಿಗೆ ಮುಂತಾದುವನ್ನು ಚೂರು ಮಾಡಿದರೆ, ವರ್ಧಕಿ ಯು ಸಂಧಿಕರ್ಮದ ವಿವಿಧ ವಿಧಾನಗಳಿಂದ ಈ ಎಲ್ಲವನ್ನೂ ಹೊಂದಿಸಿ ಜೋಡಿಸುವನು. ಹೀಗೆ ಈ ಎಲ್ಲರ ಸಹಕಾರದಿಂದ ಮೈದಳೆದ ವಾಸ್ತುಕೃತಿಯೇ ದೇವಾಲಯ. (ಎ.ಕೆ.ಎಸ್.)

ಇದುವರೆಗೂ ಶೈವ, ವೈಷ್ಣವ, ಶಾಕ್ತ, ಜೈನ ಯಾವುದೇ ಆಗಿರಲಿ, ದೇವಾಲಯ ವಾಸ್ತುಶಿಲ್ಪದ ವಿವಿಧ ಭಾಗಗಳು, ಲಕ್ಷಣಗಳು ಇತ್ಯಾದಿ ವಿಷಯಗಳನ್ನು ಕೂಲಂಕಷವಾಗಿ ತಿಳಿಯಲು ಪ್ರಯತ್ನಿಸಲಾಗಿದೆ. ಇಂಥ ದೇವಾಲಯ ನಿರ್ಮಾಣದ ಪೂರ್ವದಲ್ಲಿ ಆಯ್ದ ನಿವೇಶನದಲ್ಲಿ ವಾಸ್ತು ಪುರುಷ ಪೂಜೆಯನ್ನು ಆಗಮೋಕ್ತ ಪ್ರಕಾರ ನಡೆಸಿ ತಳಪಾಯವನ್ನು ನಿರ್ಮಿಸ ಬೇಕಾಗುತ್ತದೆ. ಈ ದಿಶೆಯಲ್ಲಿ ಇತ್ತೀಚೆಗೆ ಪಟ್ಟದಕಲ್ಲಿನಲ್ಲಿಯ 8ನೆಯ ಶತಮಾನದ ಮಧ್ಯ–ಉತ್ತರ ಕಾಲೀನ ಜೈನ ಬಸದಿಯ ಸಂರಕ್ಷಣೆ ಕಾರ್ಯವನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ನಡೆಸುತ್ತಿದ್ದಾಗ, ಇದರ ವಾಸ್ತು ಪೂಜೆ ಮತ್ತು ತಳಪಾಯ ನಿರ್ಮಾಣದ ಬಗ್ಗೆ ಪ್ರತ್ಯಕ್ಷ ಪ್ರಮಾಣಗಳು ಪ್ರಥಮ ಬಾರಿಗೆ ಬೆಳಕಿಗೆ ಬಂದಿರುವುದು ಅಪರೂಪದ ಸಂಗತಿ ಮೊದಲನೆಯದು.

**ವಾಸ್ತು ಸಂಪ್ರದಾಯಗಳು:** ಮೊದಲನೆಯದು ತಳಪಾಯ ನಿರ್ಮಾಣ ವಿಧಾನ, ಎರಡನೆಯದು: ನಿರ್ಮಾಣ ಪೂರ್ವದಲ್ಲಿ ಅನುಸರಿಸಿದ ಪಾರಂಪರಿಕ ವಾಸ್ತು ಪೂಜಾ ಸಂಪ್ರದಾಯದ ಕುರುಹುಗಳು. ಮೂಲ ತಳಪಾಯದ ಗುಂಡಿಯನ್ನು ಎಂಟು ಸ್ತರಗಳಲ್ಲಿ ಜೇಡಿಮಣ್ಣು ಮತ್ತು ಕಲ್ಲು ಗುಂಡುಗಳಿಂದ ತುಂಬಲಾಗಿತ್ತು. ಮೇಲುಕಟ್ಟಡ ಮತ್ತು ಗರ್ಭಗೃಹದ ಭಾರವನ್ನು ಗಮನದಲ್ಲಿಟ್ಟುಕೊಂಡು ತಳಪಾಯ ಹಾಕಲಾಗಿತ್ತು. ಆದರೆ ಇದು ಸಂಪೂರ್ಣವಾಗಿ ಎಲ್ಲೆಡೆ ಸಮನಾಗಿರಲಿಲ್ಲ. ಮುಖಮಂಟಪದ ತಳಪಾಯವನ್ನು ಕಲ್ಲು ಬಂಡೆಚೂರುಗಳಿಂದ ತುಂಬಿ, ಅದರ ಮೇಲೆ ಜೇಡಿಮಣ್ಣು ಮತ್ತು ಕಲ್ಲು ಗುಂಡುಗಳಿಂದ ನಿರ್ಮಿಸಿ ದೃಢವಾದ, ಸಮತಟ್ಟಾದ ಮೇಲ್ಮೈ ಮಾಡಲಾಗಿತ್ತು. ಈ ರೀತಿ ತಳಪಾಯದ ನಿರ್ಮಾಣ ಈಶಾನ್ಯ ಶಿವಗುರುದೇವ ಪದ್ಧತಿಯ ಶಿಲ್ಪಶಾಸ್ತ್ರ ನಿರೂಪಿಸಿದಂತೆ ಇದೆ. ಈ ಶಾಸ್ತ್ರಕ್ಕೆ ಅನುಗುಣವಾಗಿ ತಳಪಾಯದ ಗುಂಡಿ, ಒಬ್ಬ ಮನುಷ್ಯ ಕೈಗಳನ್ನು ಎತ್ತಿ ನಿಂತಾಗ ಬರುವ ಎತ್ತರದಷ್ಟು ಆಳವಾಗಿದ್ದು ಬಂಡೆ ಅಥವಾ ನೀರಿನ ಮಟ್ಟಕ್ಕೆ ಸಮನಾಗಿತ್ತು. ತಳಪಾಯದ ಮೇಲೆ ಆಧಾರ ಕಂಬಗಳನ್ನಿಡುವ ಸ್ಥಳಗಳಲ್ಲಿ ಕಂಬಗಳು ಸರಿಯದಂತೆ ಗಟ್ಟಿಯಾಗಿ ನಿಲ್ಲಲು ಉಳಿಪೆಟ್ಟುಗಳಿಂದ ಕೆತ್ತಿದ ಗುರುತುಗಳಿದ್ದವು. ಗೋಡೆಗಳ ಮತ್ತು ಮುಖ್ಯದ್ವಾರಗಳ ಸ್ಥಾನಗಳನ್ನು ಗುರುತು ಮಾಡಲಾಗಿತ್ತು. ಇವೆಲ್ಲವನ್ನು ಒಟ್ಟುಗೂಡಿಸಿದಾಗ ಮುಂದೆ ನಿರ್ಮಿಸಲಿರುವ ಕಟ್ಟಡದ ಯಾವ ಯಾವ ಭಾಗಗಳು ಎಲ್ಲೆಲ್ಲಿ ಬರಬೇಕೆಂಬ ತಳಹದಿ ನಕ್ಷೆಯ ರೂಪುರೇಷೆಯನ್ನು ಗುರುತಿಸಲಾಗಿತ್ತು. ಚೌಕ ಕಲ್ಲುಗಳನ್ನು ಭದ್ರವಾಗಿ ಅಂಟಿಕೊಳ್ಳುವಂತೆ ಮಾಡಲು ಯಾವುದೇ ಗಾರೆ ಇರಲಿಲ್ಲ. ಆದರೆ ಹೀಗೆ ಜೋಡಿಸಿದ ಚೌಕಕಲ್ಲುಗಳ ಮೇಲೆ ವಿವಿಧ ಅಳತೆಗಳ ಕಬ್ಬಿಣದ ಕೊಂಡಿಹಿಡಿಕೆ ಮತ್ತು ಮೊಳೆಗಳು ಇದ್ದುವು. ಈ ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸುವಾಗ, ಮೇಲ್ಮೈನಲ್ಲಿದ್ದ ತಗ್ಗುಗಳಿಂದ ವಾಯುಬಂಧ ಕ್ರಮವನ್ನು ಅಳವಡಿಸಲಾಗಿತ್ತು. ಒಂದರ ಪಕ್ಕದಲ್ಲೊಂದು ಉದ್ದ–ಅಡ್ಡ ರೀತಿಯಲ್ಲಿ ಒರಟು ಮೇಲ್ಮೈಯ ಚೌಕಕಲ್ಲುಗಳನ್ನು ಜೋಡಿಸಲಾಗಿತ್ತು.

ಎರಡನೆಯದು: ಸಂಪ್ರದಾಯದ ಪ್ರಕಾರ ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸುವ ದಿನ ವಿಶಿಷ್ಟ ವಾಸ್ತು ಪೂಜೆ ಮಾಡಿ, ವಾಸ್ತು ಪುರುಷನನ್ನು ಸುಪ್ರೀತಗೊಳಿಸಿ ಕಟ್ಟಡದ ರಕ್ಷಣೆಗಾಗಿ ಪ್ರಾರ್ಥಿಸಲಾಗುತ್ತಿತ್ತು. ಈ ವಿಷಯವನ್ನು ಮತ್ಸ್ಯಪುರಾಣ, ವಿಷ್ಣುಧರ್ಮೋತ್ತರ ಪುರಾಣ, ಬೃಹತ್‌ಸಂಹಿತ, ಈಶಾನ ಶಿವಗುರುದೇವ ಪದ್ಧತಿ ಮುಂತಾದ ಗ್ರಂಥಗಳಲ್ಲಿ

ವಿವರಿಸಲಾಗಿದೆ. ಅರ್ಧಶಿಲೆ ಮತ್ತು ಗರ್ಭದಾನ ಎಂಬ ಎರಡು ವಿಶಿಷ್ಟ ಕ್ರಿಯೆಗಳನ್ನು ಅನುಸರಿಸಲಾಗುತ್ತಿತ್ತು. ಈ ಜೈನ ದೇವಾಲಯದಲ್ಲಿ ಗರ್ಭದಾನ ಪ್ರಕ್ರಿಯೆ ನಡೆಸಿರುವುದಕ್ಕೆ ಸಾಕ್ಷಿಗಳು ಸಿಕ್ಕಿವೆ. ಗರ್ಭಗೃಹದ ದ್ವಾರಬಂಧದ ಬಲಗಡೆಯ ಕಂಬದ ಕೆಳಗೆ ಈ ಕ್ರಿಯೆಯನ್ನು ಆಚರಿಸಲಾಗಿದೆ. ಈಶಾನ ಶಿವಗುರುದೇವ ಪದ್ಧತಿಯ ಪ್ರಕಾರ ಈ ಕಾರ್ಯವನ್ನು ನಿರ್ವಹಿಸಿರುವುದು ಖಚಿತವಾಗಿ ಕಂಡುಬಂತು. 65 ಸೆಂಮೀx65 ಸೆಂಮೀ ಅಳತೆಯ ಒಂದು ಕಲ್ಲು ಪಟ್ಟಿಗೆ ಗರ್ಭ ಪಾತ್ರದಲ್ಲಿ ಕಂಡುಬಂದಿದೆ. ಇದರ ಕೆಳಗೆ 20 ಸೆಂಮೀx20 ಸೆಂಮೀ ಅಳತೆಯ ಚೌಕಾಕಾರದ ಗುಳಿ 111ಸೆಂಮೀ ಆಳವಾಗಿದ್ದು 9 ಸಮಾನ ಅಳತೆಯ ವಿಭಾಗಗಳಿದ್ದವು. ಮಧ್ಯದ ಭಾಗದಲ್ಲಿ ಚಿನ್ನದ ತಗಡಿನ ಚೂರುಗಳು, ವೃತ್ತಾಕಾರದ ಸಣ್ಣ ತಾಮ್ರದ ಚೂರು (ಇದರಲ್ಲಿ 2 ತೂತುಗಳಿವೆ) ಮತ್ತು ಒಂದು ಚಿಕ್ಕ ವೃತ್ತಾಕಾರದ ಮುರಿದ ತಾಮ್ರದ ಚೂರು ಸಿಕ್ಕಿದೆ. ಮಿಕ್ಕ ಭಾಗಗಳಲ್ಲಿ ಏನೂ ಸಿಗದೆ ನವನಿಧಿಗಳ ಪ್ರತೀಕವಾದ ಪ್ರಾಯಶಃ ನವಧಾನ್ಯಗಳು ಇದ್ದಿರಬಹುದು. ಇದರ ಜೊತೆ ಅಂಡಾಕಾರದ ಗುಳಿಗಳು ಗರ್ಭಗೃಹದ ಪ್ರದೇಶದಲ್ಲಿ ಗರ್ಭಪಾತ್ರದ ಮೇಲೆ ಇದ್ದಿತು. ಗರ್ಭ ಪಾತ್ರದ ಈ ಭಾಗಗಳನ್ನು ಮುಚ್ಚಿದ್ದ ಮಣ್ಣಿನಲ್ಲಿ ಬೆಲೆಬಾಳುವ ಹರಳು, ಸಣ್ಣ ಲಾಳಿಕೆಯಾಕಾರದ ಚಿನ್ನದ ನಳಿಕೆ, ಸಣ್ಣ ಸರ್ಪಾಕೃತಿಯ ಚಿನ್ನದ ಕೊಕ್ಕೆ, ವೃತ್ತಾಕಾರದ ಎರಡು ತೂತಿನ ತಾಮ್ರದ ಸಂಪುಟ ಮತ್ತು ಕಿಲುಬುಗಟ್ಟಿದ ಎರಡು ತಾಮ್ರ ಮಿಶ್ರಿತ ನಾಣ್ಯಗಳು ದೊರೆತಿವೆ. ಒಂದು ಚಿನ್ನದ ತಗಡಿನ ಮೇಲೆ ಪೀಠದ ಮೇಲೆ ಕುಳಿತ ಮಾನವಾಕೃತಿ ಪ್ರಾಯಶಃ ವಾಸ್ತುಪುರುಷ ಇರಬಹುದು, ಮತ್ತೊಂದರಲ್ಲಿ ಒಂದು ಆಡು ಮತ್ತು ವರಾಹ ರೀತಿಯ ಪ್ರಾಣಿಗಳ ಆಕೃತಿಗಳಿವೆ. ಭೃಗುವಿನ ಯಜ್ಞದ ಅಗ್ನಿಯಿಂದ ಬಂದ ಆಡು ತಲೆಯ ಚಿನಾಸುರನ್ನು ಈ ಆಡಿನ ಆಕೃತಿ ಪ್ರತಿನಿಧಿಸುತ್ತದೆ. ಶಿವ ಈ ಪುರುಷನನ್ನು ವಾಸ್ತು ಪುರುಷನೆಂದು ಕರೆದು ಮಾನವ ಅಥವಾ ದೇವರಿಗೋಸ್ಕರ ನಿರ್ಮಿಸುವ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಮುಂಚೆ ಪೂಜಿಸಬೇಕೆಂದು ತಿಳಿಸಿದನೆಂದು ಪುರಾಣದಲ್ಲಿದೆ. ಭೂದೇವಿಯನ್ನು ಹಿರಣ್ಯಾಕ್ಷನ ಹಿಡಿತದಿಂದ ರಕ್ಷಿಸಿದ ವರಾಹ ಸ್ವರೂಪಿ ವಿಷ್ಣುವನ್ನು ಈ ವರಾಹ ಆಕೃತಿ ಪ್ರತಿನಿಧಿಸುತ್ತದೆ. ಲಾಳಿಕೆ ಆಕೃತಿಯ ನಳಿಕೆ ಮತ್ತು ಸರ್ಪಾ ಕೃತಿಯ ಚಿನ್ನದ ವಸ್ತುಗಳು ಬ್ರಹ್ಮಾಂಡಕ್ಕೆ ಆಧಾರವಾಗಿರುವ ಯೋಗನಾಳ ಅನಂತನನ್ನು ಪ್ರತಿನಿಧಿಸುವ ವಾಸ್ತುನಾಗನಾಗಿ ಕಟ್ಟಡ ನಿರ್ಮಾಣಗಳಿಗೆ ಆಧಾರವೆನ್ನಿಸಿದೆ. (ವಿ.ಎಸ್.ವಿ.)

**ವಾಸ್ಕೋ ಡ ಗಾಮ:** 1460–1524. ಪೋರ್ಚುಗಲ್‌ನ ಪ್ರಸಿದ್ಧ ನಾವಿಕ. ಭಾರತಕ್ಕೆ ಆಗಮಿಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರೆ ಮೊದಲಿಗರು. ಅವರಲ್ಲಿ ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿದ ಕೀರ್ತಿ ಪೋರ್ಚುಗೀಸ್ ನಾವಿಕನಾದ ಇವನಿಗೆ ಸಲ್ಲುತ್ತದೆ.

ಇವನು ಪೋರ್ಚುಗಲ್ಲಿನ ರಾಜಧಾನಿ ಲಿಸ್ಬನ್ ನಗರದಿಂದ ಪ್ರಯಾಣ ಕೈಗೊಂಡು ಬಾರ್ತಲೋಮಿಯ ಡಯಾಸನ ಮಾರ್ಗವನ್ನನುಸರಿಸಿ, ಆಫ್ರಿಕದ ಪಶ್ಚಿಮ ತೀರದ ಉದ್ದಕ್ಕೂ ಪ್ರಯಾಣ ಮಾಡಿ ಕೇಪ್ ಆಫ್ ಗುಡ್‌ಹೋಪ್ ಭೂಶಿರ ತಲುಪಿದ. ಅಲ್ಲಿಂದ ಮುಂದೆ ಪೂರ್ವ ತೀರದಲ್ಲಿ ಸಂಚಾರ ಮಾಡಿ ಅರಬ್ ವರ್ತಕರ ಸಹಾಯದಿಂದ ಅರಬ್ಬಿಸಮುದ್ರ ದಾಟಿ 1498 ಮೇ 17 ರಂದು ಕೇರಳದ ಕಲ್ಲಿಕೋಟೆ ತಲುಪಿದ. ಭಾರತಕ್ಕೆ ನೇರವಾದ ಜಲಮಾರ್ಗ ಸಂಶೋಧನೆ ಮಾಡಿದುದು ಮುಖ್ಯ ಐತಿಹಾಸಿಕ ಘಟನೆ. ಈ ಸಂಶೋಧನೆಯಿಂದ ಭಾರತ ಹಾಗೂ ಏಷ್ಯದ ಹಲವು ರಾಷ್ಟ್ರಗಳ ಇತಿಹಾಸದ ಮೇಲೆ ಮಹತ್ತ್ವದ ಪರಿಣಾಮಗಳುಂಟಾದುವು.

ಇವನು ಕಲ್ಲಿಕೋಟೆಯ ಹಿಂದು ದೊರೆ ಜಾಮೋರಿನ್ನನ ಸ್ನೇಹ ಸಂಪಾದಿಸಿ ಮಲಬಾರಿನ ಮಾರುಕಟ್ಟೆಗಳಲ್ಲಿ ದೊರೆಯುವ ಹಾಗೂ ಬೇಡಿಕೆ ಇದ್ದ ವಸ್ತುಗಳ ಸಮೀಕ್ಷೆ ನಡೆಸಿದ. ಇದರಿಂದ ಪೋರ್ಚುಗೀಸರಿಗೆ ಇಲ್ಲಿನ ಮಾರುಕಟ್ಟೆಗಳ ಸ್ಥಿತಿಗತಿಗಳ ಅರಿವಾಯಿತು. ಈತ ಒರಟನಾಗಿದ್ದ, ಇಲ್ಲಿನ ಜನಜೀವನದ ಬಗ್ಗೆ ತಿಳಿಯುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಇವನು ಇಲ್ಲಿ ಮೂರು ತಿಂಗಳ ಕಾಲವಿದ್ದರೂ ಇವನಿಗೆ ಹಿಂದುಧರ್ಮದ ಇರುವಿಕೆಯ ಪರಿವೆಯೇ ಇರಲಿಲ್ಲ ಎನ್ನಲಾಗಿದೆ. ಇವನು 1498 ಆಗಸ್ಟ್‌ನಲ್ಲಿ ತನ್ನ ತಾಯ್ನಾಡಿಗೆ ಮರಳಿದ.

ಅನಂತರ ಇವನು 2ನೆಯ ಬಾರಿಗೆ 1502 ರಲ್ಲಿ ಮತ್ತೆ ಭಾರತಕ್ಕೆ ಬಂದ. ಈ ಬಾರಿ ಇವನ ಅಧೀನದಲ್ಲಿ ದೊಡ್ಡ ನೌಕಾ ಪಡೆಯಿತ್ತು. ಅಮಾನುಷನೂ ದುರಾಸೆಯವನೂ ಆಗಿದ್ದ ಇವನು ಇಲ್ಲಿ ಅನೇಕ ಹಿಂಸಾತ್ಮಕ ಕೃತ್ಯಗಳನ್ನೆಸಗಿದ. ನಿಷ್ಕರುಣೆಯಾಗಿ ಯಾತ್ರಾರ್ಥಿಗಳ ಹಡಗುಗಳನ್ನು ಮುಳುಗಿಸುವ ಮತ್ತು ಅರಬ್ ವರ್ತಕರು ಭಾರತದೊಡನೆ ವ್ಯಾಪಾರ ನಡೆಸದಂತೆ ಭಯಾನಕವಾಗಿ ಬೆದರಿಸುವ ಕೃತ್ಯಗಳನ್ನೆಸಗಿದ. ಇವನು ಕೊಚ್ಚಿಯಲ್ಲಿ ವ್ಯಾಪಾರ ಕೋಠಿ ಸ್ಥಾಪಿಸಿದ. 1524ರಲ್ಲಿ ನಿಧನನಾದ. (ಎಚ್.ಆರ್.)

**ವಿಂಚಿ, ಲಿಯೊನಾರ್ಡೋ ಡ:** 1452–1519. ಇಟಲಿಯ ಸುಪ್ರಸಿದ್ಧ ಚಿತ್ರಕಾರ, ಶಿಲ್ಪಿ, ವಾಸ್ತುವಿಜ್ಞಾನಿ, ಕಲಾವಿಮರ್ಶಕ. ಪ್ರಪಂಚದ ಜ್ಞಾನದ ವಿವಿಧ ಶಾಖೆಗಳಲ್ಲಿ ಪ್ರವೇಶ ಹಾಗೂ ಪರಿಣತಿಯನ್ನು ಪಡೆದಿದ್ದ ತನ್ನ ಕಾಲದ ಮಹಾಮೇಧಾವಿ. 1452 ಏಪ್ರಿಲ್ 15ರಂದು ವಿಂಚಿ ಎಂಬ ಗ್ರಾಮದಲ್ಲಿ ಜನಿಸಿದ. ಈತನ ತಂದೆ ಪಿಯರೆ ಡ ವಿಂಚಿ



ಮೊನಾಲಿಸ ವರ್ಣಚಿತ್ರ

ಫ್ಲಾರೆನ್ಸಿನಲ್ಲಿ ವಕೀಲನಾಗಿದ್ದ. ಕ್ಯಾಥರೀನ್ ಇವನ ತಾಯಿ. ಬಾಲ್ಯವನ್ನು ಈತ ಹುಟ್ಟಿದೂರಿನಲ್ಲಿ ಕಳೆದ. 15ನೆಯ ವಯಸ್ಸಿನಲ್ಲಿ ಫ್ಲಾರೆನ್ಸಿಗೆ, ತನ್ನ ತಂದೆಯ ಬಳಿಗೆ ಬಂದ. ಅಲ್ಲಿ ವಿಖ್ಯಾತ ಶಿಲ್ಪಿ ಮತ್ತು ಚಿತ್ರಕಾರ ವೆರುಚಿಯೊ ಬಳಿ ವಿದ್ಯಾರ್ಥಿಯಾಗಿ ಸೇರಿದ. ಅವನ ಶಿಷ್ಯತ್ವದಲ್ಲಿ ಚಿತ್ರಕಲೆ, ವಾಸ್ತುಶಿಲ್ಪ, ಎಂಜಿನಿಯರಿಂಗ್ ಈ ವಿಷಯಗಳಲ್ಲಿ ಪರಿಣತಿ ಪಡೆದ. ಈತ ವಿದ್ಯಾರ್ಥಿಯಾಗಿದ್ದಾಗ, ವೆರೂಚಿಯೊ ರಚಿಸಿದ ಬ್ಯಾಪ್ಟಿಸಮ್ ಆಫ್ ಕ್ರೈಸ್ಟ್ ಎಂಬ ಕಲಾಕೃತಿಯಲ್ಲಿ ದೇವದೂತನ ಚಿತ್ರವನ್ನು ರಚಿಸಿದ. ಇದು ಇವನ ಪ್ರಥಮ ಚಿತ್ರ, ಈ ಚಿತ್ರ ಕಲಾವಿಮರ್ಶಕರ ಮೆಚ್ಚುಗೆ ಗಳಿಸಿತು. ಈತ ಫ್ಲಾರೆನ್ಸಿನ ಪೇಂಟರ್ಸ್ ಗಿಲ್ಡಿನ ಸದಸ್ಯನಾದ (1472). 1476ರ ತನಕ ವೆರೂಚಿಯೊನೊಡನೆ ಈತ ಕೆಲಸ ಮಾಡಿದನಾದರೂ ಚಿತ್ರಕಲೆಯಲ್ಲಿ ತನ್ನದೇ ಆದ ಸ್ವತಂತ್ರ ಶೈಲಿಯನ್ನು ರೂಢಿಸಿಕೊಂಡ. ಈ ಕಾಲದಲ್ಲಿ ಈತ ರಚಿಸಿದ ಅಡೊರೇಷನ್ ಆಫ್ ಮಾಗಿ ಎಂಬ ಅಪೂರ್ಣಚಿತ್ರ ಇವನ ಕಲೆಗಾರಿಕೆಯ ಸ್ವತಂತ್ರ ಪ್ರವೃತ್ತಿಯನ್ನು ಪ್ರತಿಬಿಂಬಿಸುವಂತಿದೆ.

ಅನಂತರ ಈತ ಮಿಲಾನಿಗೆ ಬಂದ. ಲೊಡ್ವಿಕೊ ದೊರೆಯ ಸೇವೆಯಲ್ಲಿ ಸ್ವತಂತ್ರ ಕಲಾವಿದನಾಗಿ ಸೇರಿದ(1492). ಮಿಲಾನಿನಲ್ಲಿದ್ದ ಆರಂಭದ ದಿನಗಳಲ್ಲಿ ದಿ ಮಡೋನ್ನ ಆಫ್ ದಿ ರಾಕ್ಸ್ ಎಂಬ ಚಿತ್ರವನ್ನು ನಿರ್ಮಿಸಿದ. ಈ ವರ್ಣಚಿತ್ರ ಇವನ ಸಮಗ್ರ ಶೈಲಿಯ ಅತ್ಯುತ್ತಮ ಉದಾಹರಣೆ. ಪ್ರಪಂಚದ ಅತ್ಯುತ್ತಮ ವರ್ಣಚಿತ್ರಗಳಲ್ಲೊಂದೆಂದು ಸುಪ್ರಸಿದ್ಧವಾಗಿರುವ ದಿ ಲಾಸ್ಟ್ ಸಪ್ಪರ್ ಎಂಬ ಚಿತ್ರವನ್ನು ರಚಿಸಿದ್ದೂ ಇದೇ ಸಮಯದಲ್ಲಿ. ಕ್ರಿಸ್ತನ ಶಿಷ್ಯರ ಮನಸ್ಸಿನ ಸಂಕೀರ್ಣ ಭಾವನೆಗಳನ್ನು ಈ ಚಿತ್ರ ಉಜ್ವಲವಾಗಿ ಹಿಡಿದಿಟ್ಟಿದೆ.

ಫ್ರೆಂಚರು ಮಿಲಾನನ್ನು ವಶಪಡಿಸಿಕೊಂಡಾಗ ಈತ ಮತ್ತೆ ಫ್ಲಾರೆನ್ಸಿಗೆ ಹಿಂದಿರುಗಿದ (1499). ಇಲ್ಲಿ ಈತ ರಚಿಸಿದ ಮೋನಾಲಿಸ (ಲಾ ಗಿಯೊಕೊಂಡ) ಭಾವಚಿತ್ರ ಪ್ರಪಂಚದ ಮಹೋನ್ನತ ಕಲಾಕೃತಿ ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಇದು ಲಾ ಗಿಯೊಕೊಂಡ ಎಂಬ ತರುಣಿಯೊಬ್ಬಳ ಪ್ರತಿಕೃತಿ. ಆಕೆ ವ್ಯಾಪಾರಿಯೊಬ್ಬನ ಹೆಂಡತಿ. ಆಕೆಯ ಮೋಹಕವಾದ ಮಾಂತ್ರಿಕ ನಸುನಗೆ ಈ ಭಾವಚಿತ್ರದ ವೈಶಿಷ್ಟ್ಯ. ಹಿನ್ನೆಲೆಗಿರುವ ನಿಸರ್ಗದ ನೋಟ ನಗುವಿನ ಚೆಲುವಿಕೆಯನ್ನು ದೀಪ್ತಗೊಳಿಸಿದೆ. ಈತ ದಿ ವರ್ಜಿನ್ ಅಂಡ್ ಚೈಲ್ಡ್ ವಿತ್ ಸೇಂಟ್ ಅನ್ನೆ–ಎಂಬ ಇನ್ನೊಂದು ಚಿತ್ರರಚನೆಯನ್ನು ಫ್ಲಾರೆನ್ಸಿನಲ್ಲಿ ಆರಂಭಿಸಿದನಾದರೂ ಹಲವಾರು ವರ್ಷಗಳ ಅನಂತರ ಅದನ್ನು ಫ್ರಾನ್ಸಿನಲ್ಲಿ ಪೂರ್ಣಗೊಳಿಸಿದಂತೆ ತಿಳಿದುಬರುತ್ತದೆ. 1506ರ ವೇಳೆಗೆ ಈತ ಪುನಃ ಮಿಲಾನಿಗೆ ಹಿಂದಿರುಗಿದ. ಈ ಬಾರಿ ಫ್ರಾನ್ಸಿನ 12ನೆಯ ಲೂಯಿ ದೊರೆಯ ಸೇವೆಯಲ್ಲಿ ಕಾರ್ಯನಿರತನಾದ ಆರುವರ್ಷಗಳ ಅನಂತರ ರೋಮಿನಲ್ಲಿ ಬ್ರಮಂಟೆ, ರಾಫೆಲ್, ಮೈಕೆಲೆಂಜೆಲೋ ಈ ಕಲಾವಿದರೊಡನೆ ಸೇರಿಕೊಂಡು 10ನೆಯ ಪೋಪ್ ಲಿಯೊಗಾಗಿ ಕೆಲಸಮಾಡಿದ. ಈ ನಾಲ್ವರು ಕಲಾವಿದರೂ ಸೇರಿ ಹೊಸ ಸೇಂಟ್ ಪೀಟರ್ ಚರ್ಚ್‌ನ ವಿನ್ಯಾಸವನ್ನು ರೂಪಿಸಿದರು. ಡ ವಿಂಚಿಯ ಕಾರ್ಯಕೌಶಲವನ್ನು ಮೆಚ್ಚಿಕೊಂಡ ಫ್ರಾನ್ಸಿನ ಅನೇಕ ರಾಜರು ಇವನನ್ನು ಫ್ರಾನ್ಸಿನಲ್ಲಿಯೇ ತಂಗಲು ಆಹ್ವಾನಿಸಿದರು. ಇಂಥ ಒಂದು ಆಹ್ವಾನವನ್ನು ಒಪ್ಪಿಕೊಂಡ ಈತ ಫ್ರಾನ್ಸಿನ ಅಂಬೋಯ್ಸೆ ಎಂಬಲ್ಲಿ ನೆಲಸಿದ(1516). ಇಲ್ಲಿ ಈತ ತನ್ನ ಬದುಕಿನ ಕಡೆಗಾಲವನ್ನು ಸುಖವಾಗಿ ಕಳೆದು 1519 ಮೇ 2ರಂದು ನಿಧನನಾದ.

ಈತ ಬಹುಮುಖ ಪ್ರತಿಭಾವಂತ. ಅನೇಕ ಬಗೆಯ ಆಧುನಿಕ ಯಂತ್ರಗಳ ಮಾದರಿಗಳನ್ನು ರಚಿಸಿದ್ದಾನೆ; ಬೃಹತ್ ಭವನಗಳ, ನಗರಗಳ ನಕ್ಷೆಗಳನ್ನು ತಯಾರಿಸಿದ್ದಾನೆ; ಭೂವಿಜ್ಞಾನಕ್ಕೆ ಸಂಬಂಧಿಸಿದ ನಕ್ಷೆಗಳನ್ನೂ ರೇಖಾಚಿತ್ರಗಳನ್ನೂ ರಚಿಸಿದ್ದಾನೆ. ಈತ ರಚಿಸಿ ಬಿಟ್ಟುಹೋಗಿರುವ ಈ ಬಗೆಯ ಟಿಪ್ಪಣಿಗಳು (ನೋಟ್‌ಬುಕ್) ಸು.7000 ಪುಟಗಳಾಗುತ್ತವೆ. ಈತ ಎರಡೂ ಕೈಗಳಲ್ಲಿ ಬರೆಯಬಲ್ಲವನಾಗಿದ್ದ (ಆ್ಯಂಬಿಡೆಕ್ಸ್‌ಟರ್); ಟಿಪ್ಪಣಿಗಳನ್ನು ಪುಸ್ತಕದಲ್ಲಿ ಎಡಗೈಯಲ್ಲಿ ಬಲದಿಂದ ಎಡಕ್ಕೆ ಬರೆದು ಅನಂತರ ಕನ್ನಡಿಯ ಸಹಾಯದಿಂದ ಓದುತ್ತಿದ್ದನಂತೆ. ಈತ ಒಳ್ಳೆಯ ಅಂಗಸಾಧಕನೂ ಸಂಗೀತಗಾರನೂ ಆಗಿದ್ದ. ಸುಂದರವಾದದ್ದೆಲ್ಲ–ಮಾನವೀಯ

ಸೌಂದರ್ಯಕೂಡ–ನಾಶವಾಗುತ್ತದೆ. ಅದು ಶಾಶ್ವತವಾಗಿ ಉಳಿಯುವುದು ಕಲೆಯಲ್ಲಿ ಮಾತ್ರ ಎಂದು ಕಲೆಯನ್ನು ಕುರಿತು ಈತ ಅಭಿಪ್ರಾಯಪಟ್ಟಿದ್ದಾನೆ. ಇವನ ಕಲಾಸೃಷ್ಟಿ ಈ ಹೇಳಿಕೆಯನ್ನು ಸಂಪೂರ್ಣವಾಗಿ ಸಮರ್ಥಿಸುತ್ತದೆ. (ಜಿ.ಎನ್.)

**ವಿಂಟರ್‌ನಿಟ್ಸ್, ಮೋರಿಕ್:** 1863–1937. ಭಾರತಕ್ಕೆ ಸಂಬಂಧಿಸಿದಂತೆ ಭಾಷಾವಿಜ್ಞಾನ, ಮಾನವಕುಲಶಾಸ್ತ್ರ, ಸಂಸ್ಕೃತ ಮತ್ತು ಭಾರತೀಯ ದರ್ಶನದಲ್ಲಿ ವಿಶೇಷ ಆಸಕ್ತಿ ತಳೆದು ಇವುಗಳ ಅಧ್ಯಯನ, ಸಂಶೋಧನೆಗಳಿಗಾಗಿ ಬದುಕನ್ನು ಮುಡಿಪಿಟ್ಟ ವಿದ್ವಾಂಸ. ಭಾರತೀಯ ವೈಚಾರಿಕ ಸಂಪತ್ತು ಮತ್ತು ದರ್ಶನವನ್ನು ಪ್ರಪಂಚಕ್ಕೆ ಪರಿಚಯ ಮಾಡಿಸಿಕೊಟ್ಟವನು. 1885ರಲ್ಲಿ ಈತ ಪಿಎಚ್.ಡಿ. ಪದವಿ ಪಡೆದು ಆಕ್ಸ್‌ಫರ್ಡಿಗೆ ಹೋಗಿ ಅಲ್ಲಿ ಮ್ಯಾಕ್ಸ್‌ಮುಲರ್‌ನಿಗೆ ಋಗ್ವೇದದ ಎರಡನೆಯ ಆವೃತ್ತಿಯನ್ನು ಸಿದ್ಧಪಡಿಸಲು ನೆರವಾದ. 1899ರಲ್ಲಿ ಈತ ಪ್ರಾಗ್ ವಿಶ್ವವಿದ್ಯಾಲಯದಲ್ಲಿ ಭಾರತೀಯ ಭಾಷಾಶಾಸ್ತ್ರ ಹಾಗೂ ಮಾನವಕುಲ ಶಾಸ್ತ್ರದ ಪ್ರಾಧ್ಯಾಪಕನಾದ. ರವೀಂದ್ರನಾಥ ಠಾಕೂರರ ಆಹ್ವಾನವನ್ನು ಸ್ವೀಕರಿಸಿ ಭಾರತಕ್ಕೆ ಬಂದು ಶಾಂತಿನಿಕೇತನದಲ್ಲಿ ಸಂದರ್ಶಕ ಪ್ರಾಧ್ಯಾಪಕನೆಂದು ಒಂದು ವರ್ಷ ಕೆಲಸ ಮಾಡಿದ (1922–23). ಮೊದಲಿನಿಂದಲೂ ಇವನಿಗೆ ಮಹಾಭಾರತದಲ್ಲಿ ವಿಶೇಷ ಒಲವಿತ್ತು. ಪುಣೆಯ ಭಂಡಾರ್ಕರ್ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಮಹಾಭಾರತದ ಸಂಶೋಧಿತ ಆವೃತ್ತಿಯ ರಚನೆ ಇವನ ಪ್ರೋತ್ಸಾಹದಿಂದಲೇ ಪ್ರಾರಂಭವಾಯಿತು. ಭಾರತೀಯ ವಾಙ್ಮಯ ಇತಿಹಾಸವನ್ನು ಇವನು ಮೂರು ಖಂಡಗಳಲ್ಲಿ ರಚಿಸಿದ್ದಾನೆ (1907–22). ಸಂಸ್ಕೃತ ಸಾಹಿತ್ಯದ ಬಗ್ಗೆ ಇವನು 450ಕ್ಕಿಂತ ಹೆಚ್ಚು ಲೇಖನಗಳನ್ನು ಬರೆದಿದ್ದಾನೆ. ಇವನು 1937ರಲ್ಲಿ ನಿಧನನಾದ. (ಎಮ್.ಬಿ.ಆರ್.)

**ವಿಕಾಸವಾದ:** ಪ್ರಪಂಚದ ಮತ್ತು ಜೀವಿಗಳ ಹುಟ್ಟು, ಬೆಳೆವಣಿಗೆ ಮತ್ತು ಅಂತಿಮ ಸ್ಥಿತಿಯನ್ನು ಕುರಿತ ವಾದ (ಎವಲೂಷನ್ ಥಿಯರಿ). ಇದರಲ್ಲಿ ಪ್ರಸಿದ್ಧವಾದುದು ಡಾರ್ವಿನ್ನನ (1809–82) ವಿಕಾಸವಾದ (ಆನ್ ದಿ ಆರಿಜನ್ ಆಫ್ ಸ್ಪೀಷಿಸ್ ಬೈ ಮೀನ್ಸ್ ಆಫ್ ನ್ಯಾಚುರಲ್ ಸೆಲೆಕ್ಷನ್, 1859). ಬಲಿಷ್ಠವಾದುವು ಮಾತ್ರ ಉಳಿಯುತ್ತವೆ; ಉಳಿದುದೆಲ್ಲವೂ ನಿರ್ನಾಮವಾಗುತ್ತವೆ ಎಂಬುದು ಇವನ ವಾದ. ತತ್ತ್ವಶಾಸ್ತ್ರದಲ್ಲೂ ಈ ಬಗ್ಗೆ ಅಧ್ಯಯನ ಮತ್ತು ಚಿಂತನೆ ಸಾಕಷ್ಟು ನಡೆದಿದೆ. ಭಾರತೀಯ ತತ್ತ್ವಶಾಸ್ತ್ರದಲ್ಲಿ ಸಾಂಖ್ಯದರ್ಶನ ಸ್ವಾರಸ್ಯಕರವಾದ ವಿಕಾಸವಾದವನ್ನು ಮುಂದಿಟ್ಟಿದೆ. ಬುದ್ಧಿ, ಮನಸ್ಸು, ಅಹಂಕಾರ, ಇಂದ್ರಿಯ ಮುಂತಾದ 24 ತತ್ತ್ವಗಳಾಗಿ ಜಡಪ್ರಕೃತಿ ವಿಕಾಸವನ್ನು ಹೊಂದುತ್ತದೆಂದು ಈ ದರ್ಶನ ಪ್ರತಿಪಾದಿಸುತ್ತದೆ. ಪ್ರಪಂಚದ ವಿಕಾಸ, ಚೇತನ ತತ್ತ್ವವಾದ ಪುರುಷನ ಭೋಗಕ್ಕಾಗಿದೆ ಎಂಬುದು ಈ ದರ್ಶನದ ತೀರ್ಮಾನವಾಗಿದೆ. ಅರವಿಂದರ ವಿಕಾಸವಾದದ ಪ್ರಕಾರ ಭೌತಿಕದ್ರವ್ಯ ಹಂತ ಹಂತವಾಗಿ ಜೀವ, ಮನಸ್ಸು ಮುಂತಾದ ತತ್ತ್ವಗಳಾಗಿ ವಿಕಾಸ ಹೊಂದಿ ಸಚ್ಚಿದಾನಂದ ತತ್ತ್ವವಾದ ಬ್ರಹ್ಮವಾಗುತ್ತದೆ. ಭೌತಿಕವಸ್ತುವಿನಲ್ಲಿ ಬ್ರಹ್ಮತತ್ತ್ವ, ಅವ್ಯಕ್ತವಾಗಿ ಅಡಗಿರುತ್ತದೆ; ಇದೇ ವಿಕಾಸದ ವಿವಿಧ ಹಂತಗಳಲ್ಲಿ ಅಸ್ಪಷ್ಟವಾಗಿ ವ್ಯಕ್ತವಾಗುತ್ತಾ ಹೋಗಿ ಅಂತಿಮವಾಗಿ ಸ್ಪಷ್ಟ ಬ್ರಹ್ಮತತ್ತ್ವವಾಗುತ್ತದೆ. ಹೀಗೆ ವಿಕಾಸವಾದದ ಪ್ರಕಾರ ಮೂಲದ್ರವ್ಯವಾದ ಭೌತಿಕ ವಸ್ತುವೂ ಸತ್ಯ; ಅದು ಏನಾಗಿ ವಿಕಾಸ ಹೊಂದುತ್ತದೋ ಅದೂ ಸತ್ಯ. ಭ್ರಮೆ, ಭ್ರಾಂತಿ, ಮಾಯೆ, ದುರ್ನಿರೂಪಗಳಿಗೆ ವಿಕಾಸವಾದಿಗಳಲ್ಲಿ ಮಾನ್ಯತೆ ಇಲ್ಲ.

ಸತ್ಯ ನಿಷ್ಕ್ರಿಯವಾದುದಲ್ಲ, ಕ್ರಿಯೆಯಿಂದ ತುಂಬಿ ತುಳುಕುತ್ತಿರುವಂಥದು ಎಂಬುದು ಈ ವಾದದ ಸಂದೇಶ. ಸತ್ಯ ಹೊಸ ಹೊಸ ರೂಪಗಳನ್ನು ಧರಿಸಿ ಹೆಚ್ಚು ಹೆಚ್ಚು ಶಕ್ತಿ ಸಾಮರ್ಥ್ಯಗಳಿಂದ ಶೋಭಿಸುತ್ತದೆ. ಇದು ಎಲ್ಲ ವಿಕಾಸವಾದಗಳ ಮೂಲ ಕಲ್ಪನೆ. ಅನಿಷ್ಟ ಸಮಸ್ಯೆಗೆ ಸರಿಯಾದ ಹಾಗೂ ಸಮರ್ಪಕವಾದ ಪರಿಹಾರ ದೊರಕುವುದು ಈ ವಾದದಲ್ಲಿ ಮಾತ್ರ ಎಂದು ಹೇಳಬಹುದು. ಪ್ರಕೃತಿಯಲ್ಲಿ ಅನಿಷ್ಟ ಏಕೆ ಇದೆ ಎಂಬುದು ಜ್ವಲಂತ ಪ್ರಶ್ನೆ. ಈ ಪ್ರಶ್ನೆಗೆ ಆಸ್ತಿಕರಿಂದ ತರ್ಕ ಸಮ್ಮತವಾದ ಉತ್ತರವಿಲ್ಲ. ಆದರೆ ಈ ವಾದ ಅನಿಷ್ಟವು ಜಗತ್ತಿನ ವಿಕಾಸದ ಒಂದು ಅನಿವಾರ್ಯ ಎಂದು ಬೋಧಿಸುತ್ತದೆ. ಜಗತ್ತಿನ ವಿಕಾಸ ಮುಂದುವರಿದಂತೆ, ವಿಕಾಸದ ವ್ಯವಸ್ಥೆಯಲ್ಲಿ ಅನಿಷ್ಟ ಆವಶ್ಯಕವಾಗಿ ಕಾಣಿಸಿಕೊಳ್ಳುತ್ತದೆ; ಆದರೆ ಅಂತಿಮವಾಗಿ ಅದು ಪರಿವರ್ತಿತವಾಗಿ ಪ್ರಪಂಚದ ಒಳಿತೇ ಆಗುತ್ತದೆ ಎಂಬುದು ಇದರ ಧೋರಣೆ. ಪಾಶ್ಚಾತ್ಯರಲ್ಲಿ ಅರಿಸ್ಟಾಟಲ್, ಲಾಯ್ಡ್ ಮೋರ್ಗನ್, ಹೆನ್ರಿ ಬರ್ಗ್‌ಸನ್, ಸ್ಯಾಮ್ಯುಯಲ್ ಅಲೆಕ್ಸಾಂಡರ್ ವಿಕಾಸವಾದದ ಪ್ರತಿಪಾದಕರಾಗಿದ್ದಾರೆ. ಭೌತಿಕ ದ್ರವ್ಯ ಜೀವತತ್ತ್ವವಾಗಿ, ಮನಸ್ಸಾಗಿ ವಿಕಾಸ ಹೊಂದುತ್ತದೆಂದು ಮೋರ್ಗನ್ ಮತ್ತು ಬರ್ಗ್‌ಸನ್ ಪ್ರತಿಪಾದಿಸಿದರೆ, ಅಲೆಕ್ಸಾಂಡರ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೈವತತ್ತ್ವವೇ ವಿಕಾಸದ ಅಂತಿಮ ಹಂತ ಎಂದು ಘೋಷಿಸುತ್ತಾನೆ. ವಿಕಾಸ ಎಂದೆಂದಿಗೂ ಮುಮ್ಮುಖವೇ ಹೊರತು ಹಿಮ್ಮುಖವಲ್ಲ. ಭೌತಿಕ ದ್ರವ್ಯವೂ ಸತ್ಯ; ಅದರಿಂದ ಹೊರಹೊಮ್ಮುವ ವಿಕಾಸದ ಘಟ್ಟಗಳೂ ಸತ್ಯ ಎಂಬುದು ವಾಸ್ತವವಾದ, ಪ್ರಾಚ್ಯ ಮತ್ತು ಪಾಶ್ಚಾತ್ಯ ವಿಕಾಸವಾದಗಳ ತಿರುಳು. (ವಿ.ಎನ್.ಎಸ್.)

**ವಿಕ್ಟೋರಿಯ:** 1819–1901. ಗ್ರೇಟ್ ಬ್ರಿಟನ್ನಿನ ಪ್ರಸಿದ್ಧರಾಣಿ (1831–1901) ಹಾಗೂ ಭಾರತದ ಚಕ್ರವರ್ತಿನಿ (1877–1901). ಲಂಡನ್ನಿನ ಕೆನ್‌ಸಿಂಗ್‌ಟನ್ ಎಂಬಲ್ಲಿ 1819 ಮೇ 24ರಂದು ಜನಿಸಿದಳು. ಇವಳ ತಂದೆ ಜಾರ್ಜ್‌ನ ನಾಲ್ಕನೆಯ ಮಗ ಎಡ್ವರ್ಡ್‌ಡ್ಯೂಕ್, ತಾಯಿ ಮರಿಯಲೂಸಿಯ. ಇವಳು ವರ್ಷದ ಮಗುವಾಗಿರುವಾಗಲೇ ಎಡ್ವರ್ಡ್‌ಡ್ಯೂಕ್ ನಿಧನಹೊಂದಿದ್ದರಿಂದ ತಾಯಿಯ ಪೋಷಣೆಯಲ್ಲಿ ಬೆಳೆದಳು. ಇವಳ ಚಿಕ್ಕಪ್ಪ ನಾಲ್ಕನೆಯ ವಿಲಿಯಂ ಸಹ ಮಕ್ಕಳಿಲ್ಲದೆ ನಿಧನಹೊಂದಿದ್ದರಿಂದ ಸಾಮ್ರಾಜ್ಯಕ್ಕೆ ಇವಳೇ ಉತ್ತರಾಧಿಕಾರಿಯಾದಳು. ಅನಂತರ 1838 ಜೂನ್ 28ರಂದು ವೆಸ್ಟ್‌ಮಿನ್ಸ್ಟರ್‌ನಲ್ಲಿ ಮಹಾರಾಣಿಯಾಗಿ ಸಿಂಹಾಸನವೇರಿದಳು. ತನ್ನ 63ವರ್ಷಗಳ ಸುದೀರ್ಘ ಆಳಿಕೆಯಲ್ಲಿ ಇಂಗ್ಲೆಂಡನ್ನು ಪ್ರಗತಿಪಥದತ್ತ ಕೊಂಡೊಯ್ದಳು.

ಇವಳ ಆಳಿಕೆಯ ಕಾಲವನ್ನು ಇಂಗ್ಲೆಂಡಿನ ಇತಿಹಾಸದಲ್ಲಿ ವಿಕ್ಟೋರಿಯ ಯುಗ ಎಂದು ಕರೆಯಲಾಗಿದೆ. ಇವಳು ಲಾರ್ಡ್‌ಮೆಲ್ಬರ್ನ್, ರಾಬರ್ಟ್‌ಪೀಲ್, ವಿಸ್ಕೌಂಟ್ ಮಿಸ್ ಕೌಂಟ್ ಪಾಲ್ಮರ್‌ಸ್ಟೋನ್, ಬೆಂಜಮಿನ್ ಡಿಸ್ರೇಲಿ, ವಿಲಿಯಂ ಗ್ಲ್ಯಾಡ್‌ಸ್ಟನ್‌ರಂಥ ದಕ್ಷ ಮಂತ್ರಿಗಳನ್ನು

ನೇಮಿಸಿಕೊಂಡಿದ್ದಳು. ಇವಳ ಆಳಿಕೆ ಕಾಲದಲ್ಲಿ ಅನೇಕ ಯುದ್ಧಗಳು ನಡೆದುವು. ಚೀನವನ್ನು ಇಂಗ್ಲೆಂಡ್ ಅಫೀಮು ಯುದ್ಧದಲ್ಲಿ ಸೋಲಿಸಿ ಹಾಂಗ್‌ಕಾಂಗ್ ಪ್ರದೇಶವನ್ನು ಪಡೆದುಕೊಂಡಿತು (1839–42). ರಷ್ಯವನ್ನು ಕ್ರಿಮಿಯ ಯುದ್ಧದಲ್ಲಿ (1853–56), ದಕ್ಷಿಣ ಆಫ್ರಿಕವನ್ನು ಬೋಯರ್ ಯುದ್ಧದಲ್ಲಿ ಸೋಲಿಸಿತು (1899–1902). ಡಿಸ್ರೇಲಿ ಎಂಬ ಪ್ರಧಾನ ಮಂತ್ರಿ ಜನಸಾಮಾನ್ಯರಿಗೆ ಉಪಯೋಗವಾಗುವ ಅನೇಕ ಕಾರ್ಯಗಳನ್ನು ಕೈಗೊಂಡು ಉನ್ನತಮಟ್ಟದ ವಿದೇಶಾಂಗ ನೀತಿಯನ್ನು ಅನುಸರಿಸಿದ. ಇದರಿಂದ ಇಂಗ್ಲೆಂಡ್ ಇಡೀ ಪ್ರಪಂಚದಲ್ಲಿ ಪ್ರತಿಷ್ಠೆ ಪಡೆಯಿತು. ವಿಕ್ಟೋರಿಯ ಆಳಿಕೆಯಲ್ಲಿಯೇ ಭಾರತ ಬ್ರಿಟಿಷ್ ಸಾಮ್ರಾಜ್ಯದ ಪ್ರಮುಖ ಅಂಗವಾಗಿ ಪರಿಣಮಿಸಿತು. ಪೂರ್ವದೇಶಗಳೊಂದಿಗೆ ವ್ಯಾಪಾರ ಸ್ವಾಮ್ಯಕ್ಕಾಗಿಯೂ ಸಾಮ್ರಾಜ್ಯದ ನಿರ್ವಹಣೆಗಾಗಿಯೂ ಸೂಯೆಜ್ ಕಾಲುವೆಯ ಮೇಲೆ ಹತೋಟಿ ಹೊಂದುವುದಕ್ಕಾಗಿಯೂ 1875ರಲ್ಲಿ ಈಜಿಪ್ಟಿನ ದೊರೆಯಿಂದ ಸೂಯೆಜ್ ಕಾಲುವೆಯ ಷೇರುಗಳನ್ನು ಕೊಂಡು ಕೊಳ್ಳಲಾಯಿತು. ರಷ್ಯದ ಬಗ್ಗೆ ಇಂಗ್ಲೆಂಡಿಗೆ ಭೀತಿ ಇದ್ದು, ಅದು ಪ್ರಬಲವಾಗುವುದು ಇದಕ್ಕೆ ಇಷ್ಟವಿರಲಿಲ್ಲ. ರಷ್ಯನ್ನರು ಆಫ್ಘಾನಿಸ್ತಾನದ ಮೂಲಕ ಭಾರತವನ್ನು ಆಕ್ರಮಿಸುವರೆಂಬ ಸಂಶಯದಿಂದ ಲಿಟ್ಟನ್ ಎಂಬಾತನನ್ನು ಭಾರತದ ಗವರ್ನರ್ ಜನರಲ್ಲಾಗಿ ಕಳುಹಿಸಲಾಯಿತು. ಈ ವಿಚಾರವೇ ಆಫ್ಘನ್ ಯುದ್ಧಕ್ಕೆ ಕಾರಣವಾಯಿತು. 1858ರಲ್ಲಿ ರಾಣಿ ಭಾರತದ ಆಡಳಿತವನ್ನು ಈಸ್ಟ್ ಇಂಡಿಯ ಕಂಪನಿಯಿಂದ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಳು.

ಇವಳು 1876ರಲ್ಲಿ ಭಾರತದ ಚಕ್ರವರ್ತಿನಿಯಾದಳು. ಇವಳ ಕಾಲದಲ್ಲೇ ಭಾರತದಲ್ಲಿ ವ್ಯಾಪಾರ ಮಂಡಳಿಯನ್ನು ಸ್ಥಾಪಿಸಲಾಯಿತು. ಈಜಿಪ್ಟ್, ಆಸ್ಟ್ರೇಲಿಯ, ಕೆನಡ ಮುಂತಾದ ದೇಶಗಳಲ್ಲಿ ಇಂಗ್ಲೆಂಡ್ ತನ್ನ ವಸಾಹತುಗಳನ್ನು ಸ್ಥಾಪಿಸಿತು. ತನ್ನ ಅಧೀನ ದೇಶಗಳಿಂದ ಕಚ್ಚಾಸಂಪನ್ಮೂಲಗಳನ್ನು ಇಂಗ್ಲೆಂಡಿಗೆ ಸಾಗಿಸಿ, ಸಿದ್ಧವಸ್ತುಗಳಾಗಿ ಪರಿವರ್ತಿಸಿ, ಪುನಃ ಅಧೀನ ದೇಶಗಳಿಗೆ ಮಾರಾಟಕ್ಕೆ ಕಳುಹಿಸುವ ವ್ಯವಸ್ಥೆ ರೂಪಿತವಾಯಿತು. ಈ ವೇಳೆಗೆ ಇಂಗ್ಲೆಂಡಿನ ಆರ್ಥಿಕ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳು ಆರಂಭವಾಗಿದ್ದುವು. ಕೃಷಿ ಪ್ರಧಾನವಾಗಿದ್ದ ಇಂಗ್ಲೆಂಡ್ ಕೈಗಾರಿಕ ರಾಷ್ಟ್ರವಾಗತೊಡಗಿತು. ಈ ಬದಲಾವಣೆಗಳನ್ನು ಕೈಗಾರಿಕ ಕ್ರಾಂತಿ ಎಂದು ಕರೆಯಲಾಯಿತು. ಯಾಂತ್ರೀಕರಣದಿಂದ ಆರ್ಥಿಕ ಸ್ಥಿತಿ ಉತ್ತಮಗೊಂಡಿತು. ಹೊಸ ಹೊಸ ಆವಿಷ್ಕಾರಗಳಿಂದ ಕೈಗಾರಿಕೆಗಳು ಅಭಿವೃದ್ಧಿಗೊಂಡವು. ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಯಿಂದ ಕೈಗಾರಿಕೆಗಷ್ಟೇ ಅಲ್ಲದೆ ಕೃಷಿಗೂ ಅನುಕೂಲವಾಯಿತು. ಉತ್ತಮ ರಸ್ತೆಗಳ ನಿರ್ಮಾಣದಿಂದ ಸರಕು ಸಾಗಾಣಿಕೆಗೆ ಅನುಕೂಲವಾಯಿತು. ಇವಳ ಕಾಲದಲ್ಲಿ ಇಂಗ್ಲೆಂಡ್ ಸರ್ವಾಂಗೀಣ ಪ್ರಗತಿ ಸಾಧಿಸಿದ್ದರಿಂದ ಇದನ್ನು ಪ್ರಪಂಚದ ಕಾರ್ಯಾಗಾರ ಎಂದು ಕರೆಯಲಾಯಿತು. ಇವಳ ಆಳಿಕೆಯ ಕಾಲದಲ್ಲಿ ಎರಡನೆಯ ಸಂಸತ್ತು ಸುಧಾರಣಾ ಅಧಿನಿಯಮ ಜಾರಿಗೆ ಬಂತು. ಕಸುಬುದಾರರಿಗೆ ಮತಚಲಾವಣೆಯ ಹಕ್ಕು ಪ್ರಾಪ್ತವಾಯಿತು. ರಹಸ್ಯ ಮತದಾನ ಅಧಿನಿಯಮ 1878ರಲ್ಲಿ ಜಾರಿಗೆ ಬಂತು. ಮೂರನೆಯ ಸಂಸತ್ತು ಸುಧಾರಣಾ ಅಧಿನಿಯಮದಂತೆ ರೈತರಿಗೆ ಮತದಾನದ ಹಕ್ಕು ದೊರೆಯಿತು (1884). ಪ್ರಾಪ್ತ ವಯಸ್ಕ ಪುರುಷರೆಲ್ಲರಿಗೂ ಮತ ಚಲಾಯಿಸುವ ಹಕ್ಕು ಜಾರಿಗೆ ಬಂತು. ಇವಳ ಕಾಲದಲ್ಲೇ ಕಾರ್ಮಿಕ ಪರಿಹಾರದ ಕಾಯಿದೆ, ಔದ್ಯೋಗಿಕ ಸಂಘಗಳ ಕಾಯಿದೆ, ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುವ ಕಾಯಿದೆ, ವೃದ್ಧಾಪ್ಯ ವೇತನ ಕಾಯಿದೆ ಮುಂತಾದವು ಜಾರಿಗೆ ಬಂದುವು. ಈಕೆ ರಾಜಕುಮಾರ ಆಲ್ಬರ್ಟ್ ಆಫ್ ಸ್ಯಾಕ್ಸ್‌ಕೊಬರ್ಗ್ ಗೋಥಾನನ್ನು ವಿವಾಹವಾಗಿದ್ದಳು (1840 ಫೆಬ್ರವರಿ). ಈ ದಂಪತಿಗಳಿಗೆ ನಾಲ್ಕು

ಗಂಡುಮಕ್ಕಳು, ಐದು ಹೆಣ್ಣು ಮಕ್ಕಳಿದ್ದರು. ಈಕೆ ತನ್ನ ಪತಿಯ ನಿಧನದ (1861) ಅನಂತರ ಯಾವುದೇ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲಿಲ್ಲ. ಇವಳು 1901 ಜನವರಿ 25ರಂದು ನಿಧನ ಹೊಂದಿದಳು. ಅನಂತರ ಹಿರಿಯ ಮಗ ಏಳನೆಯ ಎಡ್ವರ್ಡ್ ಇವಳ ಉತ್ತರಾಧಿಕಾರಿಯಾಗಿ ಅಧಿಕಾರಕ್ಕೆ ಬಂದ. *

**ವಿಜಯನಗರ ಸಾಮ್ರಾಜ್ಯ:** ದಕ್ಷಿಣ ಭಾರತದ ಇತಿಹಾಸದಲ್ಲಿ ಸು. 3 ಶತಮಾನಗಳಿಗೂ ಹೆಚ್ಚು ಕಾಲ (14–17ನೆಯ ಶತಮಾನ) ಆಳಿಕೆ ನಡೆಸಿ ಹಿಂದುಧರ್ಮ ಮತ್ತು ಸಂಸ್ಕೃತಿಯನ್ನು ಪೋಷಿಸಿದ ವಿಶಾಲಸಾಮ್ರಾಜ್ಯ. ಸಂಗಮವಂಶದ ಸಹೋದರರಾದ ಹರಿಹರ, ಬುಕ್ಕರು 1336ರಲ್ಲಿ ಈ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇವರ ಕಿರಿಯ ಸೋದರರಾದ ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಇವರಿಗೆ ಬೆಂಬಲ ನೀಡಿದರು. ಮಹಮದ್ ಬಿನ್ ತುಗಲಕ್‍ನ ಧಾಳಿಗಳಿಗೆ ದಕ್ಷಿಣದ ದೇವಗಿರಿಯ ಸೇವುಣ, ವಾರಂಗಲ್‍ನ ಕಾಕತೀಯ ಹಾಗೂ ಹೊಯ್ಸಳ ರಾಜ್ಯಗಳು ಒಳಗಾದವು. ದಖನ್ನಿನ ರಾಜಕೀಯ ಅನೈಕ್ಯತೆ ಮತ್ತು ಶೂನ್ಯವನ್ನು ಹೋಗಲಾಡಿಸಿದ ವಿಜಯನಗರ ಸಾಮ್ರಾಜ್ಯ ಹಿಂದುಧರ್ಮದ ರಕ್ಷಣಾ ಕೋಟೆಯಂತೆ ಕಾರ್ಯನಿರ್ವಹಿಸಿತು. ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಧರ್ಮಗಳನ್ನು ರಕ್ಷಿಸಿ ಪ್ರೋತ್ಸಾಹಿಸಿತು. ಆಡಳಿತ ಕ್ಷೇತ್ರಗಳಲ್ಲಿ ಹೊಸರೂಪತಂದಿತು. ವಿದೇಶಿಯರ ಧಾಳಿಗಳಿಂದ ನಾಡನ್ನು ರಕ್ಷಿಸಿದ್ದರಿಂದಲೇ ಈ ವಂಶಕ್ಕೆ ವಿಜಯನಗರದ ಅರಸರೆಂಬ ಹೆಸರಾಯಿತೆಂದು ಪ್ರತೀತಿ. ತುಂಗಾಭದ್ರ ನದಿ ದಂಡೆಯ ಹಂಪಿ ಇದರ ರಾಜಧಾನಿ. ಇಮ್ಮಡಿ ದೇವರಾಯ, ಕೃಷ್ಣದೇವರಾಯ, ರಾಮರಾಯ ಈ ಸಾಮ್ರಾಜ್ಯದ ಪ್ರಮುಖ ಅರಸರು. ವರಾಹ ಇವರ ರಾಜಲಾಂಛನ. ದಖನ್ನಿನ ಕಟ್ಟಕಡೆಯ ಬಲಿಷ್ಠ ಸಾಮ್ರಾಜ್ಯವಾಗಿ ಮೆರೆದ ಇದರ ಸಾಧನೆಗಳು ಅಪೂರ್ವ. ರಾಬರ್ಟ್‍ಸಿವೆಲ್ ಬರೆದ ದಿ ಫರ್ಗಾಟನ್ ಎಂಪೈರ್ (ಮರೆತುಹೋದ ಸಾಮ್ರಾಜ್ಯ) ಎಂಬ ಕೃತಿ ಈ ಸಾಮ್ರಾಜ್ಯದ ಹಿರಿಮೆಯನ್ನು ತಿಳಿಸುತ್ತದೆ.

**ವಿಜಯನಗರದ ಅರಸರ ಮೂಲ:** ಈ ವಂಶದ ಮೂಲವನ್ನು ಕುರಿತು ಅನೇಕ ಅಭಿಪ್ರಾಯಗಳಿವೆ.

**1. ತೆಲುಗು ಮೂಲ:** ಎನ್. ವೆಂಕಟರಮಣಯ್ಯ, ಕೆ.ಎ. ನೀಲಕಂಠಶಾಸ್ತ್ರಿ, ಸೂರ್ಯನಾರಾಯಣರಾವ್ ಇದರ ಪ್ರತಿಪಾದಕರು. ಇವರ ಪ್ರಕಾರ ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹರಿಹರ ಮತ್ತು ಬುಕ್ಕರು ಆಂಧ್ರದಿಂದ ಬಂದವರಾಗಿದ್ದು ಇವರು ವಾರಂಗಲ್ ಕಾಕತೀಯ ಅರಸ ಪ್ರತಾಪ ರುದ್ರನ ಆಸ್ಥಾನದಲ್ಲಿದ್ದು ಸೇನಾಧಿಕಾರಿಗಳಾಗಿದ್ದರು. ಮಹಮದ್ ಬಿನ್ ತುಗಲಕ್‍ನ ಧಾಳಿಗೆ ವಾರಂಗಲ್ ತುತ್ತಾದಾಗ ಹರಿಹರ ಮತ್ತು ಬುಕ್ಕರು ಅಲ್ಲಿಂದ ತಪ್ಪಿಸಿಕೊಂಡು ಕಂಪಿಲಿಗೆ ಬಂದರು. ಸುಲ್ತಾನ ಕಂಪಿಲಿಯನ್ನು ಆಕ್ರಮಿಸಿ ಇವರನ್ನು ಬಂಧಿಸಿ ದೆಹಲಿಗೆ ಕೊಂಡೊಯ್ದು ಅಲ್ಲಿ ಇಸ್ಲಾಂಧರ್ಮಕ್ಕೆ ಮತಾಂತರಿಸಿದ. ಅಲ್ಲಿ ಕೆಲವು ಕಾಲ ನಿಷ್ಠಾವಂತರಾಗಿ ಸೇವೆಮಾಡಿದ ಇವರಿಬ್ಬರನ್ನು ತುಗಲಕ್‍ನು ತನ್ನ ದಖನ್ ಕಂಪಿಲ ರಾಜ್ಯದ ಪ್ರಾಂತಾಧಿಕಾರಿಗಳಾಗಿ ನಿಯುಕ್ತಗೊಳಿಸಿದ. ಆಗ ಇವರು ವಿದ್ಯಾರಣ್ಯರ ದರ್ಶನ ಪಡೆದು, ಧರ್ಮ ರಕ್ಷಣೆಗಾಗಿ ಪುನಃ ಹಿಂದುಗಳಾಗಿ ಮರು ಮತಾಂತರ ಹೊಂದಿ ಸುಲ್ತಾನನ ವಿರುದ್ಧ ದಂಗೆ ಎದ್ದು ವಿದ್ಯಾರಣ್ಯರ ಸಹಾಯದಿಂದ ಸ್ವತಂತ್ರ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆನ್ನಲಾಗಿದೆ. ಆದರೆ ಈ ಸಿದ್ಧಾಂತಕ್ಕೆ ಕೆಲವು ಅಪವಾದಗಳಿವೆ. ಇದನ್ನು ವಿದ್ಯಾರಣ್ಯ ಕಾಲಗುಣ, ವಿದ್ಯಾರಣ್ಯ ವೃತ್ತಾಂತ, ರಾಜಕಲಾ ನಿರ್ಣಯ ಮೊದಲಾದ ಆಕರಗಳು, ಬರನಿ, ಇಬ್ನ ಬತೂತರ ದಾಖಲೆಗಳೂ ಮಾತ್ರ ಉಲ್ಲೇಖಿಸುತ್ತವೆ. ಆದರೆ ಇವು ಸಮಕಾಲೀನವಾಗದೆ ಅನಂತರ ರಚನೆಗೊಂಡವುಗಳಾಗಿವೆ. ಮುಸ್ಲಿಂ ದಾಖಲೆಗಳಲ್ಲಿ ತಾಳೆಯಾಗದ ಅಸಂಬದ್ಧ ತಾರ್ಕಿಕ ವಿಷಯಗಳಿವೆ. ಕಾಕತೀಯರ ಇತಿಹಾಸದಲ್ಲಿ ಹರಿಹರ ಮತ್ತು ಬುಕ್ಕರ ಹೆಸರೇ ಬರುವುದಿಲ್ಲ. ಜೊತೆಗೆ ಕಾಕತೀಯರಿಗೂ ಕಂಪಿಲ ರಾಜರಿಗೂ ದ್ವೇಷವಿರುವಾಗ ಹರಿಹರ ಮತ್ತು ಬುಕ್ಕರು ಕಂಪಿಲಿಗೆ ಬಂದದ್ದು, ಅತ್ಯಲ್ಪ ಅವಧಿಯಲ್ಲಿ ರಾಜ್ಯವನ್ನು ಕಟ್ಟಿದ್ದು ಕೇವಲ ಕಾಲ್ಪನಿಕ. ಹಾಗಾಗಿ ಮಿಥ್ಯಾಂಶಗಳಿಂದ ಕೂಡಿದ ಈ ವಾದದಲ್ಲಿ ಹೆಚ್ಚಿನ ಹುರುಳಿಲ್ಲ.

**2. ಕಂಪಿಲಿಮೂಲ:** ಇಬ್ನ ಬತೂತನ ಪ್ರಕಾರ ಸಂಗಮರು ವಿಜಯನಗರ ರಾಜ್ಯ ಸ್ಥಾಪಕರ ತಂದೆ. ಕಂಪಿಲಿರಾಯನ ಆಸ್ಥಾನದಲ್ಲಿದ್ದ ಸಂಗಮರ ಮಕ್ಕಳು ಹರಿಹರ ಮತ್ತು ಬುಕ್ಕನು ಮಹಮದ್ ಬಿನ್ ತುಗಲಕನು ಕಂಪಿಲಿಯನ್ನು ಆಕ್ರಮಿಸಿ ಕಂಪಿಲಿರಾಯನನ್ನು ಕೊಂದು ಮಕ್ಕಳಾದ ಹರಿಹರ ಮತ್ತು ಬುಕ್ಕರನ್ನು ಸೆರೆ ಹಿಡಿದು ದೆಹಲಿಗೆ ಒಯ್ದು ಅವರನ್ನು ಮುಸ್ಲಿಂರನ್ನಾಗಿ ಮತಾಂತರಿಸಿದ. ಹರಿಹರ ಮತ್ತು ಬುಕ್ಕರ ನಡತೆ ತುಗಲಕ್‍ನಿಗೆ ಮೆಚ್ಚುಗೆಯಾಗಿ ಇವರನ್ನು ಕಂಪಿಲಿಯ ಪ್ರಾಂತಾಧಿಕಾರಿಗಳಾಗಿ ನೇಮಿಸಿದ. ಹೀಗೆ ದಕ್ಷಿಣಕ್ಕೆ ಬಂದು ಹರಿಹರ ಮತ್ತು ಬುಕ್ಕರು ಸುಲ್ತಾನನ ವಿರುದ್ಧ ದಂಗೆ ಎದ್ದು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆನ್ನಲಾಗಿದೆ. ಆದರೆ ನಂಜುಂಡ ಕವಿ ತನ್ನ ಕುಮಾರರಾಮ ಸಾಂಗತ್ಯ ಕಾವ್ಯದಲ್ಲಿ ಇದನ್ನು ಟೀಕಿಸಿದ್ದಾನೆ. ಕಂಪಿಲಿರಾಯನ ಮಕ್ಕಳು ಮಹಮದಿಯರ ವಿರುದ್ಧ ಹೋರಾಡುತ್ತಲೇ ಮೃತರಾದರು. ಹೀಗಿರುವಾಗ ಇವರನ್ನು ಮತಾಂತರಿಸುವ ಪ್ರಮೇಯವೇ ಇರಲಿಲ್ಲ. ಹರಿಹರ ಮತ್ತು ಬುಕ್ಕ ಕಂಪಿಲಿರಾಯನ ಮಕ್ಕಳೇ ಅಲ್ಲ, ಇವರು ಸಂಗಮನ ಪುತ್ರರಾಗಿದ್ದರೆಂಬ ವಾದ ಕಾಲ್ಪನಿಕವೂ ಅತಾರ್ಕಿಕವೂ ಆಗಿದೆ.

**3. ಕನ್ನಡ ಮೂಲ:** ಈ ಸಿದ್ಧಾಂತ ಪ್ರವರ್ತಕರು ಪಿ.ಬಿ.ದೇಸಾಯಿ, ಫಾದರ್ ಹೆರಾಸ್, ಫೆರಿಸ್ತ ಹಾಗೂ ಬಿ.ಎ. ಸಾಲತೊರೆ. ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಮತ್ತು ಬುಕ್ಕರು ಸ್ಥಳೀಯರು ಹಾಗೂ ಕನ್ನಡಿಗರು. ಇವರು ಹೊಯ್ಸಳರೊಂದಿಗೆ ರಕ್ತ ಸಂಬಂಧ ಹೊಂದಿದ್ದರಲ್ಲದೆ, 3ನೆಯ ಬಲ್ಲಾಳನ ಸೋದರಳಿಯ ಬಾಳಪ್ಪ ದಂಡನಾಯಕನು ಹರಿಹರನ ಮಗಳನ್ನು ಲಗ್ನವಾಗಿದ್ದ. 3ನೆಯ ಬಲ್ಲಾಳ ಮಹಮದೀಯರ ಧಾಳಿಗಳಿಂದ ತತ್ತರಿಸಿ ತನ್ನ ರಾಜ್ಯವನ್ನು ರಕ್ಷಿಸಲು ಹರಿಹರನನ್ನು ಉತ್ತರ ಗಡಿಗಳ ರಕ್ಷಣೆಗೆ ರಾಜ್ಯಪಾಲನಾಗಿ ನೇಮಿಸಿದ್ದ. ಅಲ್ಲದೆ ತನ್ನ ಮಗ ವಿರೂಪಾಕ್ಷನ ಹೆಸರಿನಲ್ಲಿ ವಿಜಯ ವಿರೂಪಾಕ್ಷನಗರವನ್ನು ನಿರ್ಮಿಸಿ ಅದಕ್ಕೆ ಹರಿಹರನನ್ನು ನೇಮಿಸಿದ. ಅದೇ ಮುಂದೆ ವಿಜಯನಗರವಾಯಿತು. 1343ರಲ್ಲಿ 3ನೆಯ ಬಲ್ಲಾಳ ಕಾಲವಾದ. ಇವನ ಮಗ ವಿರೂಪಾಕ್ಷ ಅಸಮರ್ಥನಾದ್ದರಿಂದ ಹರಿಹರ ಮತ್ತು ಬುಕ್ಕರು ಹಿಂದು ಧರ್ಮದ ರಕ್ಷಣೆಗಾಗಿ ಶೃಂಗೇರಿ ಮಠಾಧಿಕಾರಿಗಳಾದ ವಿದ್ಯಾರಣ್ಯರ ಪ್ರೇರಣೆಯಿಂದ ವಿಜಯನಗರ ಸಾಮ್ರಾಜ್ಯವನ್ನು 1336 ಏಪ್ರಿಲ್ 18ರಂದು ಸ್ಥಾಪಿಸಿದರು. ವಿಜಯನಗರ ಆರಂಭದಲ್ಲಿ ವಿದ್ಯಾರಣ್ಯನಗರ ಎಂದಾಗಿದ್ದು ಇದನ್ನು ತುಂಗಭದ್ರ ನದಿಯ ದಕ್ಷಿಣ ದಂಡೆಯಲ್ಲಿ ಸ್ಥಾಪಿಸಲಾಗಿತ್ತು. ಅನೇಕ ಸಾಹಿತ್ಯಾಧಾರಗಳು ಈ ವಾದವನ್ನು ಬೆಂಬಲಿಸಿವೆ. ಫೆರಿಸ್ತ ವಿಜಯನಗರದ ಅರಸರನ್ನು ಕರ್ನಾಟಕದ ರಾಯರು ಎಂದಿದ್ದಾನೆ. ತೆಲುಗು ಕವಿಗಳಾದ ವಲ್ಲಭಾಚಾರ್ಯ, ಶ್ರೀನಾಥರು ಸಂಗರ ಅರಸ ಸಂಸ್ಥಾಪಕರನ್ನು ಕರ್ನಾಟಕ ಕ್ಷಿತಿನಾಥ ಎಂದು ವರ್ಣಿಸಿದ್ದಾರೆ. ಗಂಗಾದೇವಿ ಬುಕ್ಕನನ್ನು ಕರ್ನಾಟಕ ಕುಲಕೀರ್ತಿ ಎಂದು ಚಿತ್ರಿಸಿದ್ದಾಳೆ. ಪೆದ್ದನ್ನಕವಿ ಶ್ರೀಕೃಷ್ಣದೇವರಾಯನನ್ನು ಕನ್ನಡ ರಾಜ್ಯರಮಾರಮಣ ಎಂದು ಕರೆದಿದ್ದಾನೆ. ಕೃಷ್ಣದೇವರಾಯ ತನ್ನನ್ನು ಕನ್ನಡರಾಯ ಎಂದು ಕರೆದುಕೊಂಡಿದ್ದಾನೆ. ಕೃಷ್ಣದೇವರಾಯನ ಶ್ರೀ ಕರ್ನಾಟಕ ಮಹಿಷ ಎಂಬ ಬಿರುದು ಕನ್ನಡದ್ದೆ ಆಗಿದೆ. ವಿಜಯನಗರ ದರಸರ ನಾಣ್ಯಗಳಲ್ಲಿನ ವಿಜಯ ವಿರೂಪಾಕ್ಷ ಎಂಬ ಅಂಕಿತವೂ ಕನ್ನಡದಲ್ಲಿರುವುದಲ್ಲದೆ, ಆ ಅರಸರು ಹಾಗೆಂದು ಕನ್ನಡದಲ್ಲೇ ಹಸ್ತಾಕ್ಷರ ಹಾಕುತ್ತಿದ್ದರು. ಚಾಳುಕ್ಯರಂತೆ ಇವರದು ವರಾಹ ಲಾಂಛನವಾಗಿರುವುದಲ್ಲದೆ, ಇವರು ಕನ್ನಡ ದೈವಗಳಾದ ಬೇಲೂರಿನ ಚೆನ್ನಕೇಶವ ಹಾಗೂ ಹಂಪಿಯ ವಿರೂಪಾಕ್ಷನ ಆರಾಧಕರಾಗಿದ್ದರು. ವಿಜಯನಗರ ಕಾಲಕ್ಕೆ ಸೇರಿದ 500ಕ್ಕೂ ಹೆಚ್ಚಿನ ಶಾಸನಗಳಲ್ಲಿ ಬಹುತೇಕ ಕನ್ನಡ ಶಾಸನಗಳೇ ಆಗಿವೆ. ಆಂಧ್ರ ಮತ್ತು ತಮಿಳುನಾಡುಗಳಲ್ಲಿ ದೊರೆತ ಇವರ ಶಾಸನಗಳೂ ಕನ್ನಡದಲ್ಲಿವೆ. ಈ ಎಲ್ಲ ಪುರಾವೆಗಳಿಂದ ವಿಜಯನಗರದ ಸಂಸ್ಥಾಪಕರು ಕನ್ನಡಿಗರು ಎಂಬ ಅಭಿಪ್ರಾಯಕ್ಕೆ ಬರಬಹುದು. *

**ರಾಜಕೀಯ ಇತಿಹಾಸ:** ವಿಜಯನಗರ ಸಾಮ್ರಾಜ್ಯ ಮೂಲತಃ ಹರಿಹರ, ಬುಕ್ಕರಾಯ, ಕೆಂಪಣರಾಯ, ಮಾರಪ್ಪ ಮತ್ತು ಮುದ್ದಪ್ಪ ಎಂಬ ಐದು ಮಂದಿ ಸಂಗಮ ಸಹೋದರರಿಂದ ಸಂಘಟಿಸಲ್ಪಟ್ಟಿತ್ತಾದರೂ ವಾಸ್ತವಿಕವಾಗಿ ಹರಿಹರ ಮತ್ತು ಬುಕ್ಕ ಈ ರಾಜ್ಯದ ಸ್ಥಾಪಕರೆಂದು ಕರೆಯಲಾಗುತ್ತದೆ. ಈ ಸಾಮ್ರಾಜ್ಯವನ್ನು ಕಾಲಾನುಕ್ರಮದಲ್ಲಿ 4 ರಾಜವಂಶಗಳು ಆಳಿದವು:

1. ಸಂಗಮ ವಂಶ (1336–1485); 2. ಸಾಳುವ ವಂಶ (1485–1503); 3. ತುಳು ವಂಶ (1503–55); 4. ಅರವೀಡು ವಂಶ (1555–1646).

**ವಿಜಯನಗರದ ಅರಸರ ವಂಶಾವಳಿ**

**ಸಂಗಮ ವಂಶ**






ಹರಿಹರ (1336–56) ಸಂಗಮ ವಂಶದ ಮೊದಲ ದೊರೆ. ಇವನು ತನ್ನ ಸೋದರರ ನೆರವಿನಿಂದ ರಾಜ್ಯಕಟ್ಟಿದ. ಹೊಯ್ಸಳರ ಸಾಮಂತರಾಗಿ ಅವರ ಅನೇಕ ಸಣ್ಣ ಪುಟ್ಟ ಸಾಮಂತರನ್ನು ಸೋಲಿಸಿ ರಾಜ್ಯ ವಿಸ್ತರಿಸಿದ 1336ರಲ್ಲಿ ಬರಕೂರ ಮತ್ತು 1340ರಲ್ಲಿ ಬಾದಾಮಿ ಕೋಟೆಗಳನ್ನು ನಿರ್ಮಿಸಿದ. 1342ರಲ್ಲಿ ಮುಮ್ಮಡಿ ಬಲ್ಲಾಳ ಕೊಲೆಯಾದ. ಈ ಆರು ವರ್ಷಗಳಲ್ಲಿ ರಾಜ್ಯವನ್ನು ಬಲಪಡಿಸುವ ಕಾರ್ಯದಲ್ಲಿ ಹರಿಹರ ನಿರತನಾಗಿದ್ದ. 1346ರಲ್ಲಿ ಸೋದರರೊಡನೆ ಶೃಂಗೇರಿಗೆ ಹೋಗಿ ಅಲ್ಲಿನ ಗುರುಗಳಾದ ವಿದ್ಯಾತೀರ್ಥ ಶ್ರೀಪಾದಂಗಳಿಗೆ ಗೌರವ ಸಲ್ಲಿಸಿದ. ಬುಕ್ಕ ಯುವರಾಜ ಪದವಿಯಲ್ಲಿದ್ದು ರಾಜ್ಯದ ಮಧ್ಯಭಾಗವಾದ ದೋರಸಮುದ್ರದ ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದ. ಕಂಪಣನು ಉದಯಗಿರಿ ರಾಜ್ಯದಲ್ಲೂ ಮಾರಪ್ಪನು ಪಶ್ಚಿಮತೀರದ ಮಲೆರಾಜ್ಯದಲ್ಲೂ ಮುದ್ದಪ್ಪ ಮುಳಬಾಗಲಿನ ಸುತ್ತಲ ಪ್ರದೇಶದಲ್ಲಿಯೂ ಅಧಿಕಾರದಲ್ಲಿದ್ದರು. 1347ರಲ್ಲಿ ಗುಲ್ಬರ್ಗದಲ್ಲಿ ಬಹಮನಿ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಅಲಾಉದ್ದಿನ್ ಬಹಮನ್ ಷಾ ಎಂದು ಬಿರುದಾಂಕಿತನಾದ ಹಸನ್ ಅಥವಾ ಜಾಫರ್‌ಖಾನನು ಇದರ ಸಂಸ್ಥಾಪಕ. ಇದೊಂದು ವಿಶೇಷವಾದ ಘಟನೆ. ಈ ರಾಜ್ಯ ಅನಂತರದ ಶತಮಾನಗಳಲ್ಲಿ ನೆರೆಯ ವಿಜಯನಗರ ರಾಜ್ಯದೊಡನೆ ಸತತವಾಗಿ ಕದನಗಳಲ್ಲಿ ತೊಡಗಿತ್ತು. 1347ರ ಸುಮಾರಿಗೆ ಅಸ್ತಿತ್ವಕ್ಕೆ ಬಂದ ಬಹಮನಿ ರಾಜ್ಯದ ಸುಲ್ತಾನರು ವಿಜಯನಗರದ ಪ್ರತಿಸ್ಪರ್ಧಿಗಳಾಗಿದ್ದರು. ದಕ್ಷಿಣದಲ್ಲಿ ಮಧುರೆಯ ಸುಲ್ತಾನರು ಕಂಟಕಪ್ರಾಯರಾಗಿದ್ದರು. ಇವರನ್ನು ಹೊರತುಪಡಿಸಿ, ಇತರ ಮಾಂಡಲಿಕರು, ಸಾಮಂತರು ಹರಿಹರನ ಸಾರ್ವಭೌಮತ್ವವನ್ನು ಒಪ್ಪಿದರು. 1356ರಲ್ಲಿ ಹರಿಹರನ ಸೋದರನಾದ 1ನೆಯ ಬುಕ್ಕ (1356–77) ಪಟ್ಟಾಭಿಷಿಕ್ತನಾದ.

ಒಂದನೆಯ ಬುಕ್ಕರಾಯ(1356–77) ಆವರೆವಿಗೂ ಹಿರಿಯನಿಗೆ ಆಡಳಿತದಲ್ಲಿ ನೆರವಾಗಿ ರಾಜ್ಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಈತ ಸಿಂಹಾಸನಾರೂಢನಾದ ಅನಂತರ ಎರಡು ದಶಕಗಳ ಕಾಲ ಅಧಿಕಾರದಲ್ಲಿ ಮುಂದುವರಿದು ರಾಜ್ಯವನ್ನು ವಿಸ್ತರಿಸಿ ಬಲಪಡಿಸಿದ. ಬುಕ್ಕನು ದಕ್ಷ ಆಡಳಿತಗಾರನಾಗಿದ್ದ. ಇವನು ಸಿಂಹಳ ಹಾಗೂ ಚೀನದ ಮಿಂಗ್ ದೊರೆಗಳ ಬಳಿಗೆ ರಾಯಭಾರಿಗಳನ್ನು ಕಳುಹಿಸಿದ. ಪರಧರ್ಮಸಹಿಷ್ಣುವಾದ ಇವನು ಜೈನ ಮತ್ತು ವೈಷ್ಣವರ ಮಧ್ಯೆ ಜಗಳ ನಿಲ್ಲಿಸಿದ. ತಮಿಳುನಾಡಿನ ಚೆಂಗಲ್ಪೇಟ್ ಮತ್ತು ಆರ್ಕಾಟ್ ಜಿಲ್ಲೆಗಳನ್ನೊಳಗೊಂಡ ಭಾಗ ಆಗ ರಾಜಗಂಭೀರ ರಾಜ್ಯವೆನಿಸಿತ್ತು. ಅಲ್ಲಿ ಶಂಬುವರಾಯ ಮನೆತನದ ರಾಜಗಂಭೀರ ರಾಜನಾರಾಯಣನೂ ಸ್ವತಂತ್ರವಾಗಿ ಆಳಿ ವಿಜಯನಗರದ ಸಾರ್ವಭೌಮತ್ವವನ್ನು ಅಲ್ಲಗಳೆದಿದ್ದ. ಅವನ ವಿರುದ್ಧ ಈಗ ಸೈನ್ಯಾಚರಣೆ ನಡೆಸಲು ಬುಕ್ಕನು ತನ್ನ ಸೋದರನಾದ ಕಂಪಣನನ್ನು ನಿಯೋಜಿಸಿದ. ರಾಜಗಂಭೀರನ್‌ಮಲೈ ಎನಿಸಿದ್ದ ಈಗಿನ ಉತ್ತರ ಆರ್ಕಾಟ್ ಜಿಲ್ಲೆಯ ಪಡೈವೀಡನ್ನು ಕಂಪಣ ಮುತ್ತಿ ಶಂಬುವರಾಯನನ್ನು ಸೆರೆಹಿಡಿದ. ಶಂಬುವರಾಯ ಅನಂತರ ಬುಕ್ಕನ ಮಾಂಡಲಿಕತ್ವವನ್ನು ಒಪ್ಪಿದ. ಇಲ್ಲಿಂದ ಕಂಪಣ ದಕ್ಷಿಣದ ಕಡೆ ದಿಗ್ವಿಜಯ ಯಾತ್ರೆಗೆ ತೆರಳಿ ಮಧುರೆಯ ಸುಲ್ತಾನನ ಮೇಲೆರಗಿ ಅಲ್ಲಿನ ಸುಲ್ತಾನನೊಬ್ಬನನ್ನು ಕೊಂದ (1371). ಕಂಚಿಯ ರಾಜ ಸಿಂಹೇಶ್ವರಾಲಯದಲ್ಲಿ, ಶ್ರೀರಂಗದ ರಂಗನಾಥಾಲಯದಲ್ಲಿ ದೇವರ ವಿಗ್ರಹಗಳನ್ನು ಪುನಃ ಪ್ರತಿಷ್ಠಾಪಿಸಿದ. ಆದರೂ ಮಧುರೆಯ ಸುಲ್ತಾನನೆನಿಸಿಕೊಂಡ ಅಲಾಉದ್ದೀನ್ ಸಿಕಂದರ್ 1377ರ ವರೆಗೂ ಅಲ್ಲಲ್ಲಿ ತಲೆಮರೆಸಿಕೊಂಡಿದ್ದ. ಈ ದಿಗ್ವಿಜಯಗಳಲ್ಲಿ ಕಂಪಣನ ಸೇನಾನಿಗಳಾದ ಗೋಪಣ ಮತ್ತು ಸಾಳುವ ಮಂಗು ವಿಶಿಷ್ಟ ಪಾತ್ರವನ್ನು ವಹಿಸಿದ್ದರು. ಕಂಪಣನ ಪತ್ನಿಯಾದ ಗಂಗಾದೇವಿ ರಾಜಕುಮಾರನ ಸಾಧನೆಗಳನ್ನು ಮಧುರಾವಿಜಯಂ ಅಥವಾ ವೀರಕಂಪಣರಾಯ ಚರಿತೆ ಎಂಬ ಸಂಸ್ಕೃತ ಐತಿಹಾಸಿಕ ಕಾವ್ಯದಲ್ಲಿ ಚಿತ್ರಿಸಿದ್ದಾಳೆ.

ಬುಕ್ಕರಾಯನ ಕಾಲದಲ್ಲಿ ಬಹಮನಿ ರಾಜ್ಯದೊಡನೆ ಕದನಗಳು ಆರಂಭವಾಗಿ ತೀವ್ರಸ್ವರೂಪವನ್ನು ತಾಳಿದವು. ಭಿನ್ನಧರ್ಮಗಳಿಗೆ ಸೇರಿದ ಈ ರಾಜ್ಯಗಳ ನಡುವಣ ಕಲಹಗಳು ಕೇವಲ ಧಾರ್ಮಿಕವಾಗಿರದೆ ತುಂಗಭದ್ರಾ–ಕೃಷ್ಣಾನದಿಗಳ ನಡುವಣ ಫಲವತ್ತಾದ ಪ್ರದೇಶವನ್ನು ಆಕ್ರಮಿಸುವ ಹೋರಾಟವೂ ಆಗಿತ್ತು. ಎರಡು ಕಡೆಯವರೂ ರಾಯಚೂರು ದೋಆಬ್‌ನ ಕೆಲವು ಭಾಗಗಳನ್ನು ತಮ್ಮದಾಗಿ ಮಾಡಿಕೊಂಡಿದ್ದರೂ ಅಲ್ಲಿಯ ಎಲ್ಲ ಪ್ರದೇಶವನ್ನು ಆಕ್ರಮಿಸಬೇಕೆಂಬ ಆಸೆ ಅವರೀರ್ವರೂ ನಿರಂತರ ಕದನಗಳಲ್ಲಿ ತೊಡಗುವಂತೆ ಮಾಡಿತು. ಬುಕ್ಕನನ್ನು ಬಹಮನಿಯ ಮಹಮ್ಮದ್ ಷಾ ಕಾಡುಮೇಡುಗಳಲ್ಲಿ ಆರು ತಿಂಗಳುಗಳ ಕಾಲ ಬೆನ್ನಟ್ಟಿ ಆತ ರಾಮೇಶ್ವರದವರೆಗೂ ಅಲೆಯುವಂತೆ ಮಾಡಿದನೆಂಬುದು ಇಂಥ ಒಂದು ಹೇಳಿಕೆ. ವಾಸ್ತವವಾಗಿ ಬಹಮನಿ ಅರಸರಾಗಲೀ ವಿಜಯನಗರದ ಅರಸರಾಗಲೀ ಖಚಿತವಾದ ಅಂತಿಮವೆನಿಸಬಹುದಾದ ಜಯವನ್ನು ಪಡೆಯಲೇ ಇಲ್ಲ. ಅಂಥ ಘಟನೆ ನಡೆದುದು ಎರಡು ಶತಮಾನಗಳ ಅನಂತರ ನಡೆದ ರಕ್ಕಸಗಿತಂಗಡಗಿ ಕದನದಲ್ಲಿ ಮಾತ್ರ. ಈ ಹೋರಾಟ ಧಾರ್ಮಿಕವಾಗಿರಲಿಲ್ಲ ಎಂಬ ವಾದವನ್ನು ಒಪ್ಪಲಾಗದು. ವಾಸ್ತವವಾಗಿ ಮಹಮದೀಯ ಅರಸರು ಹಿಂದು ಧರ್ಮವನ್ನು ಅಲ್ಲಗಳೆದು ತಮ್ಮ ಮತವನ್ನು ಬಲವಂತವಾಗಿ ಪ್ರಜೆಗಳ ಮೇಲೆ ಹೇರುವ ಯತ್ನ ಮಾಡಿದ್ದರು. ಉತ್ತರಭಾರತದಲ್ಲಿ ಅವರ ಈ ಯತ್ನಗಳನ್ನು ತಡೆಗಟ್ಟಲು ಸರಿಸಮವಾದ ಬಲ ಯಾವ ರಾಜನಿಗೂ ಇರಲಿಲ್ಲ. ದಕ್ಷಿಣದಲ್ಲಿ, ತಡವಾಗಿಯಾದರೂ ತಮ್ಮ ಧರ್ಮಕ್ಕೆ ಚ್ಯುತಿಬಂದಿದೆ ಎಂಬುದನ್ನು ಮನಗಂಡ ಅರಸರು, ಸಾಮಂತರು, ಪ್ರಜೆಗಳು ದೃಢಮನಸ್ಸಿನಿಂದ ಒಗ್ಗಟ್ಟಾಗಿ ಅದನ್ನು ತಡೆಯುವ, ಧರ್ಮರಕ್ಷಣೆ ಮಾಡಿಕೊಳ್ಳುವ ಕಾರ್ಯದಲ್ಲಿ ತೊಡಗಿದರು. ಎಂತಲೇ ಈ ಕಾಲದಲ್ಲಿ ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪಗಳಲ್ಲಿ ಧರ್ಮಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡಲಾಯಿತು. ಬುಕ್ಕನು ಸಾಯಣಾಚಾರ್ಯ ಮತ್ತು ಮಾಧವಾಚಾರ್ಯರ ನೇತೃತ್ವದಲ್ಲಿ ವೇದಗಳಿಗೆ ಭಾಷ್ಯಗಳನ್ನು ಬರೆಸುವ ಯೋಜನೆಯನ್ನು 1360ರಲ್ಲಿ ಕಾರ್ಯಗತ ಮಾಡಿದುದು ಇಂಥ ಮನೋಭಾವದಿಂದಲೇ.

ಈ ದೃಷ್ಟಿಯಿಂದ ಬುಕ್ಕನು ಕಾಕತೀಯ ಪ್ರತಾಪರುದ್ರನ ಮೊಮ್ಮಗನಾದ ವಿನಾಯಕದೇವನೊಡನೆ ಸ್ನೇಹಸಂಬಂಧಗಳನ್ನು ಬೆಳೆಸಿದ. ಇಬ್ಬರೂ ಕೂಡಿ ದೆಹಲಿ ಸುಲ್ತಾನನಾಗಿದ್ದ ಫಿರೋಜನ ಆಸ್ಥಾನಕ್ಕೆ ಪ್ರತಿನಿಧಿಗಳನ್ನು ಕಳಿಸಿದರು. ಆದರೆ ಸ್ವತಃ ಸುಲ್ತಾನನೇ ಇಕ್ಕಟ್ಟಿನ

ಪರಿಸ್ಥಿತಿಯಲ್ಲಿ ಸಿಲುಕಿದ್ದ ಕಾರಣ ಈ ನಿಯೋಗ ಏನೂ ಸಾಧಿಸಲಿಲ್ಲ. ಮಹಮ್ಮದ್ ವಾರಂಗಲ್ಲನ್ನು ಮುತ್ತಿ ವಿನಾಯಕದೇವನನ್ನು ಕೊಂದ. ಇನ್ನೊಮ್ಮೆ ಗೋಲ್ಕೊಂಡವನ್ನು ಆಕ್ರಮಿಸಿದ. ಆಂಧ್ರದಲ್ಲಿನ ಪ್ರೋಲಯನಾಯಕ, ಕಾಪಯನಾಯಕ ಮೊದಲಾದ ನಾಯಕರು ಕೆಲಕಾಲ ಧೈರ್ಯದಿಂದ ಶತ್ರುವನ್ನು ಎದುರಿಸಿ ಸ್ವತಂತ್ರರಾದರು. ಆದರೆ ಕ್ರಮೇಣ ಆಂತರಿಕ ಕಲಹಗಳು ತಲೆಯೆತ್ತಿ ಅವರ ಬಲ ಕುಗ್ಗಿತು. ಓರಂಗಲ್ಲಿನ ಸುತ್ತಲು ವೇಲಮರು ಪ್ರಬಲರಾಗಿ ವಿಜಯನಗರದ ವಿರುದ್ಧ ಕಾದಿದರು. ಗೋದಾವರಿ, ಕೃಷ್ಣಾನದಿಗಳ ಪ್ರದೇಶದಲ್ಲಿ ರೆಡ್ಡಿ ವಂಶಸ್ಥರು ರಾಜಮಹೇಂದ್ರಿ ಮತ್ತು ಕೊಂಡವೀಡುಗಳನ್ನು ನೆಲೆವೀಡಾಗಿ ಮಾಡಿಕೊಂಡು ಆಳುತ್ತಿದ್ದರು. ಮಹಮದ್ ವಾರಂಗಲ್ಲಿನಲ್ಲಿ ಜಯಗಳಿಸಿದ ಅನಂತರ ಎರಡು ಬಾರಿ ಬುಕ್ಕನನ್ನು ರಣರಂಗದಲ್ಲಿ ಎದುರಿಸಿದ. ಸಮಾನಬಲದ ಈರ್ವರಲ್ಲಿ ಯಾರೊಬ್ಬರಿಗೂ ಜಯ ಲಭಿಸಲಿಲ್ಲ. ಬುಕ್ಕನ ಸೋದರನಾದ ಮಾದಪ್ಪನ ಮಂತ್ರಿ ಚಾವುಂಡನ ಮಗ ಮಾಧವನು ಕೊಂಕಣ ಪ್ರಾಂತದಲ್ಲಿ ದಂಡೆತ್ತಿ ಗೋವೆಯನ್ನು ವಶಪಡಿಸಿಕೊಂಡ. ಅಂದಿನಿಂದ ಸುಮಾರು ಒಂದು ಶತಮಾನದ ಕಾಲ ಗೋವೆ ವಿಜಯನಗರದ ಅಧೀನದಲ್ಲಿತ್ತು.

ರಾಜ್ಯವನ್ನು ಬಲಪಡಿಸಲು ಬುಕ್ಕ ಹಲವಾರು ಕ್ರಮಗಳನ್ನು ಕೈಗೊಂಡ. ರಾಜಧಾನಿಯಾದ ಹಂಪೆಯ ಸುತ್ತಲೂ ಕೋಟೆಯನ್ನು ಕಟ್ಟಿಸಿ ಪ್ರಜೆಗಳ ವಾಸಕ್ಕೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿದ. ವ್ಯವಸಾಯ, ವ್ಯಾಪಾರಗಳಿಗೆ ಉತ್ತೇಜನ ನೀಡಿದ. ಸಿಂಹಳದ ಅರಸರು, ಮಲಬಾರಿನ ನಾಯಕರು ಅರಸನ ಆಸ್ಥಾನಕ್ಕೆ ರಾಜಪ್ರತಿನಿಧಿಗಳನ್ನು ಕಳಿಸಿದರು. ಚೀನ ದೇಶದಲ್ಲಿ ಆಳುತ್ತಿದ್ದ ಮಿಂಗ್ ವಂಶದ ಅರಸನ ಆಸ್ಥಾನಕ್ಕೆ ಬುಕ್ಕ 1374ರಲ್ಲಿ ರಾಯಭಾರಿಗಳನ್ನು ಕಳಿಸಿದ. ಬುಕ್ಕನ ಮಕ್ಕಳಾದ ವಿರೂಪಾಕ್ಷ ಮತ್ತು ಭಾಸ್ಕರರು ಆರಗ ಮತ್ತು ಮುಳುವಾಯಿ (ಮುಳಬಾಗಿಲು) ಪ್ರಾಂತಾಧಿಕಾರಿಗಳಾದರು. ಸೋದರನಾದ ಕಂಪಣ್ಣ ತಮಿಳುದೇಶದಲ್ಲಿ ಅಧಿಕಾರ ವಹಿಸಿದ. ರಾಷ್ಟ್ರದ ಹಿತಕ್ಕಾಗಿ ಪ್ರಜೆಗಳು ತಮ್ಮ ತಮ್ಮ ಜಾತಿಮತಗಳಲ್ಲಿಯ ವೈಷಮ್ಯಗಳನ್ನು ತೊಡೆದು ಶಾಂತಿಯುತ ಸಹಜೀವನ ನಡೆಸುವುದು ಆವಶ್ಯಕವಾಗಿತ್ತು. ಎಂತಲೇ ಒಮ್ಮೆ ಶ್ರವಣಬೆಳಗೊಳದಲ್ಲಿ ಜೈನರಿಗೂ ಶ್ರೀವೈಷ್ಣವರಿಗೂ ಕಲಹವಾದಾಗ ಅರಸನು ಅವರನ್ನು ಸಮಾಧಾನಗೊಳಿಸಿ ಎಲ್ಲ ಧರ್ಮಗಳೂ ಒಂದೇ, ಯಾವುದನ್ನೂ ಯಾರೊಬ್ಬರೂ ತೆಗಳಬಾರದು ಎಂದು ಅವರಿಗೆ ಉಪದೇಶ ನೀಡಿ ಅವರನ್ನು ಸಾಂತ್ವನಗೊಳಿಸಿದ. ಇದು ಅಂದಿನ ಅರಸರ ಧಾರ್ಮಿಕ ನೀತಿಗೆ ಸಾಕ್ಷಿಯಾಗಿದೆ.

**ಇಮ್ಮಡಿ ಹರಿಹರ** (1377–1404): 1377ರಲ್ಲಿ ಇವನು ತಂದೆಯ ಉತ್ತರಾಧಿಕಾರಿಯಾಗಿ ಆಡಳಿತ ಸೂತ್ರ ವಹಿಸಿದ. 1374ರಲ್ಲಿ ಕಂಪಣ ನಿಧನನಾದ ಬಳಿಕ ತಮಿಳುನಾಡಿನಲ್ಲಿ ತುಂಡೀರ, ಚೋಳ ಮತ್ತು ಪಾಂಡ್ಯ ದೇಶಗಳ ಮಾಂಡಲಿಕರು ದಂಗೆ ಎದ್ದಿದ್ದರು. ಈ ಬಾರಿ ಹರಿಹರನ ಸೋದರನಾದ ವಿರೂಪಾಕ್ಷ ಅಲ್ಲಿಗೆ ಹೋಗಿ ದಂಗೆಗಳನ್ನು ಅಡಗಿಸಿ, ಅಂತಿಮವಾಗಿ ಮದುರೆಯ ಸುಲ್ತಾನನನ್ನು ಸೋಲಿಸಿ ಹೊರದೂಡಿ, ಸಿಂಹಳ ದ್ವೀಪದವರೆಗೂ ಹೋಗಿ ಅಲ್ಲಿಯ ಅರಸನಾದ ಭುವನೈಕಬಾಹುವಿನಿಂದ ಕಪ್ಪವನ್ನು ಪಡೆದ. 1391ರಲ್ಲಿ ಉತ್ತರದಲ್ಲಿ ಚೌಲ್, ದಭೋಲ್ ಮತ್ತು ಖಾರೇಪಟ್ಟಣಗಳು ವಿಜಯನಗರದ ವಶವಾದುವು. ಇದರ ಫಲವಾಗಿ ಸಾಮ್ರಾಜ್ಯ ಕೃಷ್ಣಾತೀರದವರೆಗೂ ವಿಸ್ತರಿಸಿದಂತಾಯಿತು. ಬಹಮನಿಯ ಫಿರೋಜ್ ಷಾ ಕದನ ಹೂಡಿದನಾದರೂ ಫಲಿತಾಂಶ ಶೂನ್ಯ. ಇದರಲ್ಲಿ ಗುಂಡ ದಂಡಾಧಿನಾಥ ವಿಶಿಷ್ಟವಾದ ಪಾತ್ರ ವಹಿಸಿದ. ಉದಯಗಿರಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಯುವರಾಜನಾದ ದೇವರಾಯನು ವೇಮನ ಹಾಗೂ ಅವರ ಸಹಾಯಕ್ಕೆ ಬಂದ ಬಹಮನಿ ಸುಲ್ತಾನನನ್ನು ಸೋಲಿಸಿ ಮೆಹಬೂಬ್‌ನಗರ ಜಿಲ್ಲೆಯ ಪನಗಲ್ ಕೋಟೆಯನ್ನು ವಶಪಡಿಸಿಕೊಂಡ. ಅರಸನು ರಾಜ್ಯದ ಆರ್ಥಿಕಾಭಿವೃದ್ಧಿಗಾಗಿ ಹಲವಾರು ನೀರಾವರಿ ಯೋಜನೆಗಳನ್ನು ಕೈಗೊಂಡು ನದಿಗಳಿಗೆ ಅಣೆಕಟ್ಟನ್ನು ಕಟ್ಟಿ, ಕಾಲುವೆಗಳನ್ನು ತೋಡಿಸಿದ. ಸಿಂಗಮಭಟ್ಟನೆಂಬಾತ ಅಂದಿನ ಖ್ಯಾತ ವಾಸ್ತುಶಿಲ್ಪಿ ಪೆನುಗೊಂಡೆಗೆ ನೀರನ್ನು ಒದಗಿಸಲು ಹೊನ್ನೆ ನದಿಯಿಂದ ಕಾಲುವೆಯೊಂದನ್ನು ಈತ ತೋಡಿಸಿದ. ಬುಕ್ಕ ಆರಂಭಿಸಿದ್ದ ವೇದಗಳಿಗೆ ಭಾಷ್ಯವನ್ನು ಬರೆಸುವ ಯೋಜನೆ ಹರಿಹರನ ಕಾಲದಲ್ಲಿ ಪೂರ್ಣಗೊಂಡಿತು. ಅರಸನು ವೈದಿಕಮಾರ್ಗಸ್ಥಾಪನಾಚಾರ್ಯ ಎನಿಸಿದ. ಕನ್ನಡ ಮತ್ತು ಸಂಸ್ಕೃತ ಭಾಷೆ ಸಾಹಿತ್ಯಗಳಿಗೆ ಈತ ವಿಶೇಷ ಪ್ರೋತ್ಸಾಹ ನೀಡಿ ಕರ್ನಾಟಕ ವಿದ್ಯಾವಿಲಾಸನೆನಿಸಿಕೊಂಡ. ಜೈನ ಹಾಗೂ ವೀರಶೈವ ಕೃತಿಗಳು ಆಗ ಬೆಳಕಿಗೆ ಬಂದುವು.

1404ರಲ್ಲಿ ಹರಿಹರ ಮಡಿದ. ಸಿಂಹಾಸನಕ್ಕಾಗಿ ಬುಕ್ಕ (II) ಮತ್ತು ವಿರೂಪಾಕ್ಷರ ನಡುವೆ ಸ್ಪರ್ಧೆ ಏರ್ಪಟ್ಟಿತು. ಬುಕ್ಕ ಜಯಶಾಲಿಯಾದರೂ ಬಹುಕಾಲ ಬಾಳಲಿಲ್ಲ. 1406ರಲ್ಲಿ ರಾಜ್ಯಸೂತ್ರಗಳನ್ನು ವಹಿಸಿದ.

ಒಂದನೆಯ ದೇವರಾಯ (1406–22) ಬಹಮನಿ ಸುಲ್ತಾನನಾದ ಫಿರೋಜನೊಡನೆ ಸತತವಾಗಿ ಕಾದಾಡಬೇಕಾಯಿತು. ಮುದಗಲ್ಲಿನ ಅಕ್ಕಸಾಲಿಗನೊಬ್ಬನ ಮಗಳಲ್ಲಿ ಈತ ಅನುರಕ್ತನಾದನೆಂದೂ ಆಕೆಯ ರಕ್ಷಣೆಗಾಗಿ ಫಿರೋಜ್ ವಿಜಯನಗರವನ್ನು ಮುತ್ತಿದನೆಂದೂ ಫಿರೋಜನ ಮಗ ದೇವರಾಯನ ಮಗಳನ್ನು ಮದುವೆಯಾದನೆಂದೂ ಫೆರಿಸ್ತನ ಹೇಳಿಕೆ. ಇದೊಂದು ಕಟ್ಟುಕತೆ. ಕೊಂಡವೀಡಿನ ರೆಡ್ಡಿಮನೆತನದ ಪೆದಕೋಮಟಿ ವೇಮನು ಉದಯಗಿರಿಯನ್ನು ಮುತ್ತಿದನಾದರೂ ದೇವರಾಯ ಅವನನ್ನು ಅಲ್ಲಿಂದ ಹೊರದೂಡಿದ. ಅನಂತರ ವೇಮನ ರಾಜಮಹೇಂದ್ರಿಯ ಕಾಟಯವೇಮನ ವಿರುದ್ಧ ದಂಡೆತ್ತಿದ. ಕಾಟಯನು ದೇವರಾಯನ ಮೈದುನ. ಎಂತಲೇ ದೇವರಾಯನು ಅವನ ನೆರವಿಗೆ ಧಾವಿಸಿದ. ಆದರೆ ಸ್ವಲ್ಪಕಾಲದ ಅನಂತರ ಬಹಮನಿ ಸುಲ್ತಾನನ ನೆರವಿನಿಂದ ಪೆದಕೋಮಟಿಯು ಕಾಟಯವೇಮನನ್ನು ಸೋಲಿಸಿ ಕೊಂದನಾದರೂ ಕಾಟಯನ ಮಂತ್ರಿಯಾದ ಅಲ್ಲಾಡ 1415ರ ಸುಮಾರಿನಲ್ಲಿ ಶತ್ರುವನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದ. ಇವುಗಳ ಪರಿಣಾಮವಾಗಿ ಒರಿಸ್ಸದಲ್ಲಿ ಆಳುತ್ತಿದ್ದ ಗಜಪತಿ ವಂಶದ ಭಾನುದೇವ ದೇವರಾಯನ ಶತ್ರುವಾದ. ತನ್ನ ದಕ್ಷಿಣ ದಿಗ್ವಿಜಯಗಳಿಗೆ ದೇವರಾಯನಿಂದ ಅಡಚಣೆಯುಂಟಾಗುವುದೆಂಬುದು ಇದಕ್ಕೆ ಕಾರಣ.

ದೇವರಾಯ ಸಹ ತನ್ನ ತಂದೆಯಂತೆ ನೀರಾವರಿ ಯೋಜನೆಗಳನ್ನು ಹಾಕಿಕೊಂಡು ತುಂಗಭದ್ರೆಯಿಂದ ರಾಜಧಾನಿಗೆ ಎತ್ತರವಾದ ಕಲ್ಲಿನ ಕಾಲುವೆಯನ್ನು ಕಟ್ಟಿಸಿದನಲ್ಲದೆ ಅಣೆಕಟ್ಟೊಂದನ್ನು ಸಹ ನಿರ್ಮಿಸಿದ. ಹರಿಹರದ ಸಮೀಪದ ಹರಿದ್ರಾ ನದಿಗೂ ಒಂದು ನೀರಾವರಿ ಕಟ್ಟೆಯನ್ನು ಕಟ್ಟಿಸಿದ. ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹ ನೀಡಿದ. ಶೃಂಗೇರಿಯ ಚಂದ್ರಶೇಖರಭಾರತಿ ಈತನ ಗುರುಗಳಾಗಿದ್ದರು. ಒಂದು ಸಂದರ್ಭದಲ್ಲಿ ಅರಸನ ಜೀವವನ್ನು ಉಳಿಸಿದ ಲಕ್ಷ್ಮೀಧರ ಖ್ಯಾತ ಅಮಾತ್ಯ ನಾಗಪ್ಪ ಆಪ್ತನಾಗಿದ್ದ ಸೇನಾನಿ. 1422ರಲ್ಲಿ ದೇವರಾಯ ನಿಧನನಾದ. 1424ರಲ್ಲಿ ಆತನ ಮೊಮ್ಮಗ ಇಮ್ಮಡಿ ದೇವರಾಯ ಪಟ್ಟಕ್ಕೆ (1424–26) ಬಂದ. ಇಮ್ಮಡಿ ದೇವರಾಯ ಪ್ರೌಢದೇವರಾಯ, ಪ್ರತಾಪದೇವರಾಯ, ಅಭಿನವ ವೀರದೇವ ರಾಯ ಈತನ ಇತರ ಹೆಸರುಗಳು. ಗಜಬೇಂಟೆಕಾರ ಎಂಬುದು ವಿಶಿಷ್ಟವಾದ ಬಿರುದು. ಈತನ ಕಾಲದಲ್ಲಿ ವೇಲಮರೊಡಗೂಡಿ ಭಾನುದೇವ ರಾಜಮಹೇಂದ್ರಿಯ ರೆಡ್ಡಿಯನ್ನು ಸೋಲಿಸಿ ಕೊಂಡವೀಡನ್ನೂ ಆಕ್ರಮಿಸಿದ. ದೇವರಾಯ ಎಚ್ಚೆತ್ತು ಭಾನುದೇವನನ್ನು ಎದುರಿಸಿ ಸೋಲಿಸಿ ಕೊಂಡವೀಡನ್ನು ಹಿಂದಕ್ಕೆ ಪಡೆದುಕೊಂಡ. ರಾಜಮಹೇಂದ್ರಿಯ ರೆಡ್ಡಿ ಮತ್ತೆ ಅರಸನಾದ. 1436ರಲ್ಲಿ ಭಾನುದೇವನ ಉತ್ತರಾಧಿಕಾರಿಯಾದ ಕಪಿಲೇಂದ್ರ ಇನ್ನೊಮ್ಮೆ ಧಾಳಿಮಾಡಿದನಾದರೂ ಹಿಮ್ಮೆಟ್ಟಬೇಕಾಯಿತು. ಸೇನಾನಿಯಾದ ಮಲ್ಲಪ್ಪ ಒಡೆಯ ಶತ್ರುವಿನೊಡನೆ ಶೌರ್ಯದಿಂದ ಕಾದಿದ. ಬಹಮನೀ ಸುಲ್ತಾನ ಅಹಮದ್ ಷಾ 1422–23ರಲ್ಲಿ ವಿಜಯನಗರದ ವಿರುದ್ಧ ದಂಡೆತ್ತಿದಾಗ ರಾಜ್ಯಾಡಳಿತದಲ್ಲಿ ಪಾತ್ರವಹಿಸಿದ್ದ ಯುವರಾಜನಾದ ದೇವರಾಯನಿಂದ ಸೋತ. ಶತ್ರುವಿನಿಂದ ದೂರವಿರಲೆಂಬಂತೆ ರಾಜಧಾನಿಯನ್ನು ಗುಲ್ಬರ್ಗದಿಂದ ಬಿದರೆಗೆ ಬದಲಿಸಿದ. 1435–36ರಲ್ಲಿ ಸುಲ್ತಾನ್ ಅಲಾಉದ್ದೀನ ಮುದಗಲ್ಲಿನ ಕೋಟೆಯನ್ನಾಕ್ರಮಿಸಲು ಯತ್ನಿಸಿದ. ಮುದಗಲ್ಲು ಅವನ ವಶವಾಯಿತೆಂದು ಫೆರಿಸ್ತ ತಿಳಿಸುತ್ತಾನಾದರೂ ಅದೇ ಕಾಲದ ಶಾಸನದಲ್ಲಿ ದೇವರಾಯನ ಅಧಿಕಾರಿಯಾದ ವರದಣ್ಣನಾಯಕ ಅಲ್ಲಿ ಆಳುತ್ತಿದ್ದನೆಂದೇ ಅಲಾಉದ್ದೀನನ ಯತ್ನ ಫಲಿಸಲಿಲ್ಲವೆನ್ನಲಾಗಿದೆ. ಲಕ್ಕಣ್ಣ ದಂಡನಾಯಕ ಸಿಂಹಳದ ಅರಸರ ವಿರುದ್ಧ ನೌಕಾಬಲವೊಂದನ್ನು ಒಯ್ದು, ಅಲ್ಲಿಯ ಅರಸನಿಂದ ಕಪ್ಪಕಾಣಿಕೆಗಳನ್ನು ಪಡೆದ. ಈತನ ಕಾಲದಲ್ಲಿ ರಾಜ್ಯ ವಿಸ್ತರಿಸಿ ಉತ್ತರದಲ್ಲಿ ಕೃಷ್ಣಾತೀರದವರೆಗೂ ಹಬ್ಬಿತು. (ಬಿ.ಆರ್.ಜಿ.)

ಕೇರಳ, ಸಿಂಹಳ, ಪುಲಿಕಾಡು, ಪೆಗು ಮತ್ತು ಬರ್ಮದ ಅರಸರು ಈತನಿಗೆ ಕಪ್ಪವನ್ನು ಸಲ್ಲಿಸಿದರೆಂದು ಈತನ ಕಾಲದಲ್ಲಿ ಪರ್ಷಿಯದಿಂದ ಬಂದ ರಾಯಭಾರಿಯಾದ ಅಬ್ದುಲ್ ರಜಾಕ್ (1443) ಬರೆದಿದ್ದಾನೆ. ಇಟಲಿಯಿಂದ ಬಂದ ನಿಕೊಲೊ ಡಿ ಕೊಂಟಿ (1420–21) ಇನ್ನೊಬ್ಬ ಯಾತ್ರಿಕ. ಈತ ವೆನಿಸ್ ನಗರದ ಗಣ್ಯಮನೆತನಕ್ಕೆ ಸೇರಿದ್ದ. ಡಮಾಸ್ಕಸ್‌ನಲ್ಲಿ ನೆಲೆಸಿದ ವರ್ತಕ. ಅರಬ್ಬೀ ಭಾಷೆ ಕಲಿತ ಈತ ಆರುನೂರು ವರ್ತಕರ ತಂಡದೊಡನೆ ಪ್ರವಾಸ ಹೊರಟು ಭಾರತಕ್ಕೂ ಬಂದಿದ್ದ. ಇಲ್ಲಿದ್ದಾಗ ವಿಜಯನಗರಕ್ಕೆ ಬಂದಿದ್ದ. ಆಗ ಆಳುತ್ತಿದ್ದ ಅರಸ ಇಮ್ಮಡಿ ದೇವರಾಯ. ಸು.1440ರಲ್ಲಿ ವೆನಿಸ್‌ಗೆ ಹಿಂದಿರುಗಿದ ಅನಂತರ ಇಟಲಿಯ ಪೋಪನ ಆದೇಶದ ಮೇರೆಗೆ ತನ್ನ ವಿವರಗಳನ್ನು ಪೋಪನ ಕಾರ್ಯದರ್ಶಿ ಪೊಡ್ಜಿಯೋ ಬ್ರಟ್ಟಿಯೋಲಿನಿ ಎಂಬಾತನಿಗೆ ಹೇಳಿದ. ಆತ ಇದನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದುಕೊಂಡ. ಆ ಬಳಿಕ ಅದು ಪೋರ್ಚುಗೀಸ್ ಭಾಷೆಗೆ, ದುಮೇಸಿಯೋ ಎಂಬವನಿಂದ ಇಟಾಲಿಯನ್ ಭಾಷೆಗೆ, ಕೊನೆಗೆ ಮೇಜರ್ ಎಂಬಾತನಿಂದ ಇಂಗ್ಲಿಷ್ ಭಾಷೆಗೆ ಭಾಷಾಂತರವಾಯಿತು. ಈತನ ಮಾತಿನಲ್ಲಿ ವಿಜಯನಗರ ಬಿಜೆನೆಗಾಲಿಯ ಎಂದಾಗಿದೆ. ನಗರದ ಸುತ್ತಳತೆ 96ಕಿಮೀ. ಸುತ್ತಕಟ್ಟಿರುವ ಕೋಟೆ ಪರ್ವತಗಳಷ್ಟು ಎತ್ತರವಾಗಿದೆ. ತೊಂಬತ್ತುಸಾವಿರ ಶಸ್ತ್ರಾಸ್ತ್ರಪ್ರವೀಣರು ಇಲ್ಲಿದ್ದಾರೆ. ಭಾರತದ ಎಲ್ಲ ರಾಜರಿಗಿಂತ ಬಲಾಢ್ಯನಾದ ಇಲ್ಲಿಯ ರಾಜನಿಗೆ 12,000 ಜನ ಹೆಂಡತಿಯರಿದ್ದಾರೆ. ಇವರಲ್ಲಿ 4,000 ಜನ ಅರಸ ಹೋದಲ್ಲೆಲ್ಲ ಕಾಲ್ನಡಿಗೆಯಲ್ಲಿ, ಇನ್ನು 4,000 ಜನ ಕುದುರೆಗಳ ಮೇಲೂ ಇತರರು ಪಲ್ಲಕ್ಕಿಗಳಲ್ಲೂ ಹೋಗುತ್ತಾರೆ. ಇವರಲ್ಲಿ ಎರಡು–ಮೂರು ಸಾವಿರ ಜನ ಅರಸ ಸತ್ತಾಗ ಆತ್ಮಸಂತೋಷದಿಂದ ಪ್ರಾಣತ್ಯಾಗ ಮಾಡುತ್ತಾರೆ. ರಾಜಧಾನಿಯಲ್ಲಿ ಮೂರು ದೊಡ್ಡ ಹಬ್ಬಗಳನ್ನು (ಬಹುಶಃ ಯುಗಾದಿ, ದೀಪಾವಳಿ ಮತ್ತು ನವರಾತ್ರಿ) ಆಚರಿಸುತ್ತಾರೆ. ಮದುವೆಗಳನ್ನು ಬಹಳ ವೈಭವದಿಂದ ಮಾಡುತ್ತಾರೆ ಎಂದೆಲ್ಲ ಬರೆದಿಟ್ಟಿದ್ದಾನೆ.

ಅಬ್ದುಲ್ ರಜಾಕ್ ಎಂಬಾತ ಇದೇ ಸುಮಾರಿನಲ್ಲಿ ಭಾರತದಲ್ಲಿ ಪ್ರವಾಸ ಮಾಡಿದ ಪರ್ಷಿಯ ದೇಶದ ಯಾತ್ರಿಕ. ಈತ 1441ರಲ್ಲಿ ಹಖ್‌ಷಾನ ರಾಯಭಾರಿಯಾಗಿ ವಿಜಯನಗರಕ್ಕೆ ಬಂದ. ಕಲ್ಲಿಕೋಟೆಯಲ್ಲಿ ಇಳಿದು ಅಲ್ಲಿನ ಜಾಮೊರಿನನ್ನು ಕಂಡು ಅನಂತರ ಮಂಗಳೂರು ಮಾರ್ಗವಾಗಿ ವಿಜಯನಗರಕ್ಕೆ ಬಂದ. ಈತ ಭಾರತದಲ್ಲಿ ಸುಮಾರು ಎರಡು ವರ್ಷ ಇದ್ದು 1443ರಲ್ಲಿ ಹೊನ್ನಾವರದಲ್ಲಿ ಹಡಗನ್ನು ಹತ್ತಿ ಓರ್ಮುಜ್‌ಗೆ ಹಿಂದಿರುಗಿದ. ಈತ ತನ್ನ ಪ್ರವಾಸಕಥನವನ್ನು ಮತ್ಲ ಅಸ್ ಸದೈನ್ ಎಂಬ ಗ್ರಂಥದಲ್ಲಿ ಬರೆದಿಟ್ಟಿದ್ದಾನೆ.

ವಿಜಯನಗರ ಬಹಳ ದೊಡ್ಡ ಜನಸಂಖ್ಯೆಯ ನಗರ. ರಾಜ್ಯ ಸೆರೆನ್ ದಿಬ್‌ದ (ಸಿಂಹಳ) ಗಡಿಯಿಂದ ಕಲ್ಬೆರ್ಗದ ಕೊಟ್ಟಕೊನೆಯವರೆಗೆ, ಬಂಗಾಲದಿಂದ ಮಲಬಾರ್ ಕೊನೆಯವರೆಗೆ ಸಾವಿರ ಫರೆಸಾಂಗ್‌ಗಳಷ್ಟು ವಿಸ್ತರಿಸಿದೆ. ಮುನ್ನೂರು ಬಂದರುಗಳಿವೆ. ಸೈನ್ಯದಲ್ಲಿ 11 ಲಕ್ಷ ಯೋಧರಿದ್ದಾರೆ. ಸಾವಿರಕ್ಕೂ ಹೆಚ್ಚಿನ ಪೆಡಂಭೂತಗಳಂತಹ ಆನೆಗಳಿವೆ. ಈ ರಾಯನಂತಹ ಶ್ರೇಷ್ಠ ದೊರೆ ಹಿಂದುಸ್ತಾನದಲ್ಲಿ ಎಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಬಿಜನಗರದಂತಹ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ; ಈ ನಗರವನ್ನು ಏಳು ದುರ್ಗಗಳೂ ಏಳುಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ. ಅಂಗಡಿಬೀದಿಗಳು ಬಹು ಉದ್ದವಾಗಿಯೂ ಅಗಲವಾಗಿಯೂ ಇವೆ. ಬೀದಿಗಳಲ್ಲೆಲ್ಲ ಗುಲಾಬಿ ಹೂವಿನ ವಾಸನೆ. ಈ ಜನಗಳು ಗುಲಾಬಿ ಹೂಗಳಿಲ್ಲದೆ ಬದುಕುವಂತೆಯೇ ಇಲ್ಲ. ರತ್ನಪಡಿ ವ್ಯಾಪಾರಿಗಳು ಅಂಗಡಿಬೀದಿಗಳಲ್ಲಿ ಬಹಿರಂಗವಾಗಿ ವಜ್ರವೈಡೂರ್ಯಗಳನ್ನು ಮುತ್ತುಗಳನ್ನೂ ಮಾರುತ್ತಾರೆ. ರಾಜನನ್ನು ಸ್ವತಃ ಕಂಡ ರಜಾಕ್ ಆತನ ವರ್ಣನೆಯನ್ನು ಮಾಡಿದ್ದಾನೆ. ಆಗ ಅರಮನೆಯಲ್ಲಿ ಅರಸನ ಹತ್ಯೆಗಾಗಿ ನಡೆಯಿತೆನ್ನಲಾದ ಘಟನೆಯ ವಿವರಗಳನ್ನೂ ನೀಡಿದ್ದಾನೆ. ಮಹಾನವಮಿಯ ದಿನ ರಾಜನ ದರ್ಬಾರಿನ ವರ್ಣನೆಯೂ ಇದೆ. (ಜಿ.ಆರ್.ಆರ್.;ಸಿ.ಕೆ.ಎನ್.)

ದೇವರಾಯನ ಅನಂತರ ಆಳಿದ ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷರು ದಕ್ಷರಾಗಿರಲಿಲ್ಲ. ಅರಮನೆಯಲ್ಲಿ ಸೋದರಸಂಬಂಧಿಗಳಲ್ಲಿ ವೈಮನಸ್ಯಗಳೂ ಕಲಹಗಳೂ ಕಾಣಿಸಿಕೊಂಡವು. ಗಜಪತಿ ಕಪಿಲೇಂದ್ರನು ರಾಜಮಹೇಂದ್ರಿಯ ರೆಡ್ಡಿಯನ್ನೂ ಸೋಲಿಸಿ ಕೊಂಡವೀಡು, ಪೆನುಕೊಂಡೆ ಕೋಟೆಗಳನ್ನು ವಶಪಡಿಸಿಕೊಂಡ (1454). 1463ರಲ್ಲಿ ಕಪಿಲೇಂದ್ರನ ಹಮ್ಮೀರನು ಕಾವೇರಿನದಿಯವರೆಗೂ ದಂಡೆತ್ತಿ ಹೋಗಿ ಉದಯಗಿರಿ, ಚಂದ್ರಗಿರಿ ಮುಂತಾದ ನಗರಗಳನ್ನು ಆಕ್ರಮಿಸಿದ. ಬಹಮನಿಯ ಮಹಮದ್‌ನ (III) ಪ್ರಧಾನಿಯಾಗಿದ್ದ ಮಹ್ಮೂದ್ ಗಾವಾನನು ಪಶ್ಚಿಮಕರಾವಳಿಯ ಮೇಲೆ ಧಾಳಿ ಮಾಡಿ ಕೊಂಕಣ, ಗೋವೆಗಳನ್ನು ಆಕ್ರಮಿಸಿದ. ಬೆಳಗಾಂವಿ ಸಹ ಆತನ ವಶವಾಯಿತು. ಇಷ್ಟರಲ್ಲಿ ವಿರೂಪಾಕ್ಷನ ಅಧಿಕಾರಿ ವರ್ಗದಲ್ಲಿದ್ದ ಚಂದ್ರಗಿರಿಯ ಮಹಾಮಂಡಲೇಶ್ವರನಾಗಿದ್ದ ಸಾಳುವ ವಂಶದ ನರಸಿಂಹ ರಾಜ್ಯಕ್ಕೆ ಒದಗಿದ್ದ ಕುತ್ತನ್ನು ಪರಿಹರಿಸಲು ದಂಡನಾಯಕನಾಗಿದ್ದ ತುಳುವಂಶದ ನರಸನಾಯಕನೊಡಗೂಡಿ ಶತ್ರುಗಳನ್ನು ಹಿಮ್ಮೆಟ್ಟಿಸುವುದರಲ್ಲಿ ನಿರತನಾದ. ಅಂತಃಪುರದ ಕಲಹಗಳ ಪರಿಣಾಮವಾಗಿ ವಿರೂಪಾಕ್ಷ 1485ರಲ್ಲಿ ಕೊಲೆಯಾದಾಗ ಚಂದ್ರಗಿರಿಯಿಂದ ರಾಜಧಾನಿಗೆ ಧಾವಿಸಿದ ನರಸಿಂಹ ಅಲ್ಲಿಯ ಪರಿಸ್ಥಿತಿಗಳನ್ನು ಹತೋಟಿಗೆ ತಂದು ಅಂತಿಮವಾಗಿ ತಾನೇ ಸಿಂಹಾಸನಾರೂಢನಾದ (1485). ಕೇವಲ ಆರು ವರ್ಷಗಳ ಕಾಲ ಆಳಿದ ನರಸಿಂಹ ಶಾಂತಿ ವಾತಾವರಣವನ್ನು ಕಲ್ಪಿಸಿದ. ಆದರೂ ಕಪಿಲೇಂದ್ರನ ಮಗ ಪುರುಷೋತ್ತಮ ಗಜಪತಿ ಮತ್ತೊಮ್ಮೆ ದಂಡೆತ್ತಿ ಗುಂಟೂರುವರೆಗಿನ ಪೂರ್ವತೀರಪ್ರದೇಶಗಳನ್ನೂ ಉದಯಗಿರಿ ಕೋಟೆಯನ್ನೂ ಆಕ್ರಮಿಸಿದ. ದೈಹಿಕವಾಗಿ ಬಲಗುಂದುತ್ತಿದ್ದ ನರಸಿಂಹ ಶತ್ರುಗಳನ್ನು ಹಿಮ್ಮೆಟ್ಟಿಸುವ ಜವಾಬ್ದಾರಿಯನ್ನು ತನ್ನ ಸೇನಾನಿಯಾದ ನರಸನಾಯಕನಿಗೆ ಒಪ್ಪಿಸಿದ. 1491ರಲ್ಲಿ ನರಸಿಂಹ ಸತ್ತ ಬಳಿಕ ನರಸನಾಯಕ ಆತನ ಅಪ್ರಾಪ್ತವಯಸ್ಕರಾದ ಮಕ್ಕಳ ಪ್ರತಿನಿಧಿಯಾಗಿ ಆಡಳಿತಸೂತ್ರವನ್ನು ವಹಿಸಿದ. ನರಸಿಂಹನ ಹಿರಿಯ ಮಗ ತಿಮ್ಮನನ್ನು ಸಿಂಹಾಸನದ ಮೇಲೆ ಕೂರಿಸಿದ. ಆದರೆ ಆತ ಕುತಂತ್ರಗಳಿಗೆ ಬಲಿಯಾಗಿ ಕೊಲೆಯಾದ. ಅನಂತರದ ಸರದಿ ಎರಡನೆಯ ಮಗನಾದ ಎರಡನೆಯ ನರಸಿಂಹನದು. ಅನಿರೀಕ್ಷಿತವಾಗಿ ಈತ ನರಸನಾಯಕನನ್ನು ವಿರೋಧಿಸಿದ. ಪರಿಣಾಮವಾಗಿ ಈತನನ್ನು ಪೆನುಗೊಂಡೆಗೆ ಸಾಗಿಸಿ ಅಲ್ಲಿ ಸೆರೆಮನೆಯಲ್ಲಿಡಲಾಯಿತು.

ಸರ್ವಾಧಿಕಾರಿಯಾದ ನರಸನಾಯಕ ದಕ್ಷಿಣ ಹಾಗೂ ಪಶ್ಚಿಮ ದಿಶೆಗಳಲ್ಲಿನ ದಂಗೆಕೋರರನ್ನು ಅಡಗಿಸಿದ. ಈ ವೇಳೆಗಾಗಲೇ ಬಹಮನಿಯಲ್ಲಿ ಆಂತರಿಕ ಕಲಹಗಳುಂಟಾಗಿದ್ದವು. ಅವುಗಳ ಪ್ರಯೋಜನ ಪಡೆದು ರಾಯಚೂರು, ಮುದಗಲ್ಲು ಕೋಟೆಗಳನ್ನು ಆಕ್ರಮಿಸಿದ. ಗಜಪತಿ ಪ್ರತಾಪರುದ್ರನನ್ನು ಸೋಲಿಸಿ ಹಿಂದಕ್ಕೆ ಓಡಿಸಿದ. ಇವನಿಗೆ ರಾಜ್ಯವನ್ನು ಬಲವಂತವಾಗಿ ಕಸಿದುಕೊಂಡನೆಂಬ ಅಪಖ್ಯಾತಿ ಬಂದರೂ ವಾಸ್ತವಿಕವಾಗಿ ಈತ ರಾಜ್ಯಕ್ಕೆ ಒಳಿತನ್ನು ಮಾಡಿದ. ಮೊದಲಿನ ಸ್ಥೈರ್ಯ ಈಗ ಮತ್ತೊಮ್ಮೆ ಕಾಣಿಸಿಕೊಂಡಿತು. ಖ್ಯಾತಿ ಹೆಚ್ಚಿತು.

ನರಸನಾಯಕ 1503ರಲ್ಲಿ ಮಡಿದ. ಇವನ ಮಗ ವೀರನರಸಿಂಹ ತಂದೆಯ ಅಧಿಕಾರಗಳನ್ನು ಪಡೆದ. ಸಾಳುವ ಇಮ್ಮಡಿ ನರಸಿಂಹ ಸ್ವತಃ ಆಳಬಲ್ಲವನಾಗಿದ್ದರೂ ವೀರನರಸಿಂಹ ಅವನನ್ನು ಹಿಂದಕ್ಕೆ ಸರಿಸಿ 1505ರಲ್ಲಿ ಆತನನ್ನು ಕೊಲ್ಲಿಸಿದ. ಅಂದಿನಿಂದ ತುಳುವ ಮನೆತನದ ಆಳಿಕೆ ಆರಂಭವಾಯಿತು. ತುಳುವಸಂತತಿ(1503–55) 1505–09ರ ವರೆಗೆ ವೀರನರಸಿಂಹ ಆಳಿದ. ರಾಜ್ಯದಲ್ಲಿ ಮತ್ತೊಮ್ಮೆ ಕಾಣಿಸಿಕೊಂಡ ಅನಿಶ್ಚಿತ ಘಟನೆಗಳು ಶೈಥಿಲ್ಯಕ್ಕೆ ಎಡೆಗೊಟ್ಟುವು. ಬಹಮನಿಯ ಯೂಸುಫ್ ಆದಿಲ್‌ಖಾನನು ರಾಯಚೂರು, ಮುದಗಲ್ಲುಗಳನ್ನು ಪುನಃ ಪಡೆದುಕೊಂಡನಾದರೂ ವೀರನರಸಿಂಹ ಅವನ್ನು ಮತ್ತೊಮ್ಮೆ ಸಾಧಿಸಿಕೊಂಡ. ಪೋರ್ಚುಗೀಸರ ಸ್ನೇಹ ಸಂಪಾದಿಸಿ ಉತ್ತಮವಾದ ಅಶ್ವಗಳನ್ನು ಅವರಿಂದ ಖರೀದಿಸಿದ. ಸೈನಿಕರಿಗೆ ಯುದ್ಧಕಲೆಯಲ್ಲಿ ಹೆಚ್ಚಿನ ತರಬೇತಿ ನೀಡಿಸಿದ.

**ಕೃಷ್ಣದೇವರಾಯ (1509–29)**: 1509ರಲ್ಲಿ ವೀರನರಸಿಂಹ ಮರಣ ಹೊಂದಿದ. ಆತನ ಮಲಸೋದರ ಕೃಷ್ಣದೇವರಾಯ ಪಟ್ಟಕ್ಕೆ ಬಂದ. ವಿಜಯನಗರದ ಅರಸರಲ್ಲಿ ಅತಿಶ್ರೇಷ್ಠನೂ ಭಾರತದ ಇತಿಹಾಸದಲ್ಲಿಯೇ ಪ್ರಖ್ಯಾತನೂ ಆದ ಈತ ಕೇವಲ 20 ವರ್ಷಗಳ ಕಾಲ ಆಳಿದರೂ ಆ ಅಲ್ಪಕಾಲದಲ್ಲಿಯೇ ಸಾಮ್ರಾಜ್ಯದ ಕೀರ್ತಿ ದೇಶಾದ್ಯಂತ ಹರಡಲು ಕಾರಣನಾದ. ಈ ಅರಸನ ಕಾಲದಲ್ಲಿ ಅನೇಕರು ಪ್ರವಾಸಿಗಳಾಗಿ ವಿಜಯನಗರಕ್ಕೂ ಬಂದಿದ್ದರು. ಅವರಲ್ಲಿ ಪೋರ್ಚುಗೀಸರಾದ ಬಾರ್ಬೋಸ ಮತ್ತು ಡೊಮಿಂಗೊ ಪೇಯಿಸ್ ಪ್ರಮುಖರು. ಇವರ ಬರೆಹಗಳು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಉಪಯುಕ್ತವಾಗಿವೆ. ಅನಂತರ ಬಂದ ನ್ಯೂನಿಜನೂ ಪೋರ್ಚುಗೀಸನೇ. (ಬಿ.ಆರ್.ಜಿ.)

ಕೃಷ್ಣದೇವರಾಯ ಒರಿಸ್ಸದ ವಿಜಯವನ್ನು ಸೂಚಿಸಲೆಂಬಂತೆ ಮಹಾನವಮಿ ದಿಬ್ಬವನ್ನು ಕಟ್ಟಿಸಿದ. ಅನಂತರ ನವರಾತ್ರಿಯ ಉತ್ಸವಗಳೂ ವಿಶೇಷ ಸಮಾರಂಭಗಳೂ ಇಲ್ಲಿಯೇ ನೆರವೇರುತ್ತಿದ್ದುವು. ಅರಸನು ರಾಜ್ಯದ ತೀರ್ಥಕ್ಷೇತ್ರಗಳಿಗೆ ಅಪರಿಮಿತವಾದ ದಾನಗಳನ್ನು ಮಾಡಿದ. ರಾಜಧಾನಿಯಲ್ಲೂ ಹೊರಗಡೆಯೂ ನೂತನ ದೇವಾಲಯಗಳನ್ನು ಕಟ್ಟಿಸಿದ. ಗೋಪುರಗಳನ್ನು ದೇವಾಲಯದ ದ್ವಾರದಲ್ಲಿ, ಹೆಚ್ಚು ಕಲಾತ್ಮಕವಾಗಿ ಭವ್ಯವಾಗಿ, ಉನ್ನತವಾಗಿ ಕಟ್ಟಿಸಿದ. ಇಂತಹ ಗೋಪುರಗಳು ಅನಂತರ ರಾಯಗೋಪುರಗಳೆಂದೇ ಹೆಸರಾದುವು. ಕಲೆ, ಸಾಹಿತ್ಯಗಳಿಗೂ ಈತ ಹೆಚ್ಚಿನ ಪ್ರೋತ್ಸಾಹ ನೀಡಿದ **(ನೋಡಿ–ಕೃಷ್ಣದೇವರಾಯ)**. (ಬಿ.ಆರ್.ಜಿ.)

ಕೃಷ್ಣದೇವರಾಯನ ಮಲಸೋದರ ಅಚ್ಯುತರಾಯ. ಈತ 1529ರಲ್ಲಿ ಸಿಂಹಾಸನವನ್ನೇರಿದನಾದರೂ ದಾಯಾದಿಗಳ ವಿರೋಧವನ್ನು ಎದುರಿಸಬೇಕಾಯಿತು. ಕೃಷ್ಣದೇವರಾಯನ ಇನ್ನೊಬ್ಬ ಮಗನಿಗೆ ಆಗಿನ್ನೂ ಒಂದೂವರೆ ವರ್ಷ. ಆ ಮಗುವಿನ ಪರವಾಗಿ ಸೋದರಮಾವನಾದ ಹುಚ್ಚ ತಿರುಮಲ, ಅಳಿಯನಾದ ರಾಮರಾಯ ಈತನ ಪ್ರತಿಸ್ಪರ್ಧಿಗಳು. ಇವರ ಅಂತಃಕಲಹಗಳ ಸಮಯದಲ್ಲಿ ಬಿಜಾಪುರದ ಇಸ್ಮಾಯಿಲ್ ಎರಡು ಬಾರಿ ರಾಜಧಾನಿಯನ್ನು ಮುತ್ತಿದ. ಮೊದಲ ಬಾರಿ ರಾಯಚೂರು, ಮುದಗಲ್ಲು ಕೋಟೆಗಳು ಅವನ ವಶವಾದುವು. ಆದರೆ ಕೊನೆಗೊಮ್ಮೆ ಅಚ್ಯುತರಾಯ ಅವನನ್ನು ಯಶಸ್ವಿಯಾಗಿ ಸೋಲಿಸಿದ. ಮತ್ತೊಮ್ಮೆ ಅಲ್ಲಲ್ಲಿ ದಂಗೆಗಳು ಕಾಣಿಸಿಕೊಂಡವು. ಕೃಷ್ಣದೇವರಾಯನ ಶಕ್ತಿ ಸಾಮರ್ಥ್ಯಗಳು ಈತನಿಗಿರಲಿಲ್ಲ. ಹೇಗೋ 1542ರವರೆಗೆ ಆಳಿದ. ಆನಂದನಿಧಿ ಎಂಬ ದತ್ತಿಯನ್ನು ಸ್ಥಾಪಿಸಿ ದಾನಧರ್ಮಗಳನ್ನು ಮಾಡಿದ ಯಶಸ್ಸು ಈತನದು.

ಅಚ್ಯುತರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದ ಇನ್ನೊಬ್ಬ ಪೋರ್ಚುಗೀಸ್ ಯಾತ್ರಿಕ ನ್ಯೂನಿಜ್. ಈತ ವಿಜಯನಗರಕ್ಕೆ ಬಂದುದು ಸು. 1536–37ರಲ್ಲಿ. ವಿಜಯನಗರದ ಪೂರ್ವೇತಿಹಾಸವನ್ನು ತಿಳಿಸಿರುವುದು ಈತನ ಬರವಣಿಗೆಯ ವೈಶಿಷ್ಟ್ಯ.

ವಿಜಯನಗರದ ಅರಸರ ಹೆಸರುಗಳನ್ನು, ಇತರ ವಿವರಗಳನ್ನು ಕೊಡುವಲ್ಲಿ ನ್ಯೂನಿಜ್ ಎಡವಿದ್ದಾನೆ. ಆದರೆ ಸಮಕಾಲೀನ ಮತ್ತು ಅದಕ್ಕೆ ಹಿಂದಿನ ಘಟನೆಗಳನ್ನು ಕುರಿತು ಬರೆಯುವಲ್ಲಿ ಈತ ಹೆಚ್ಚು ನಂಬಿಕೆಗೆ ಅರ್ಹನಾಗಿದ್ದಾನೆ. ಸಾಳುವ ನರಸಿಂಹನನ್ನು ನರಸಿಂಗುವಾ ಎಂದು ಕರೆದು ಬಿಸ್ನಾಗ್ರ ರಾಜ್ಯವನ್ನು ನರಸಿಂಗುವಾ ರಾಜ್ಯವೆಂದಿದ್ದಾನೆ. ಕೃಷ್ಣದೇವರಾಯನ ದಂಡಯಾತ್ರೆಗಳ ವಿವರಗಳನ್ನು ನೀಡಿದ್ದಾನೆ. ಅಚ್ಯುತರಾಯ ಅನೀತಿ ಮತ್ತು ದಬ್ಬಾಳಿಕೆಗಳಿಗೆ ಕೈಹಾಕಿದನು. ಪ್ರಾಮಾಣಿಕತೆ ಎನ್ನುವುದೇ ಇರಲಿಲ್ಲ. ಈತನ ನಡತೆಯ ಬಗ್ಗೆ ಯಾರಿಗೂ ಗೌರವವಿಲ್ಲ. ತನ್ನ ರಾಜ್ಯಭಾರದ ವಿಚಾರದಲ್ಲಿ ಈತನಿಗೆ ಕಿಂಚಿತ್ತೂ ಆಸಕ್ತಿಯಿಲ್ಲ ಎಂದೂ ಹೇಳಿದ್ದಾನೆ. ಜೊತೆಗೆ ರಾಜ್ಯದಲ್ಲಿ ಪ್ರಜೆಗಳ ಆಚಾರ ವ್ಯವಹಾರಗಳು, ಸಾಮಾಜಿಕ ಪದ್ಧತಿಗಳು ಇಂತಹ ಇತರ ವಿಷಯಗಳನ್ನು ಸಹ ತನ್ನ ಬರೆಹದಲ್ಲಿ ಈತ ಕಾಣಿಸಿದ್ದಾನೆ. (ಸಿ.ಕೆ.ಎನ್.)

ಅಚ್ಯುತರಾಯನ ಮರಣಾನಂತರ ಮತ್ತೊಮ್ಮೆ ಕಲಹಗಳುಂಟಾದುವು. ಅಂತಿಮವಾಗಿ ಅಳಿಯ ರಾಮರಾಯ ಅಚ್ಯುತರಾಯನ ಮೇಲುಗೈ ಪಡೆದ. ಈ ಬಾರಿ ರಾಮರಾಯ ಅಚ್ಯುತನ ಸೋದರನಾದ ರಂಗನ ಮಗ ಸದಾಶಿವನ ಹಕ್ಕನ್ನು ಎತ್ತಿಹಿಡಿದ. ಆದರೆ ಸದಾಶಿವರಾಯನನ್ನು ತನ್ನ ಕೈಗೊಂಬೆಯಾಗಿ ಮಾಡಿಕೊಂಡು ಅವನ ಹೆಸರಿನಲ್ಲಿ ತಾನೇ ಸರ್ವಾಧಿಕಾರಿಯಾದ. ಪ್ರಾಪ್ತವಯಸ್ಕನಾದ ಸದಾಶಿವ 1550ರ ಸುಮಾರಿನಲ್ಲಿ ಸ್ವತಃ ಆಳಲು ಯತ್ನಿಸಿದಾಗ ಆತನನ್ನು ಸೆರೆಯಲ್ಲಿಟ್ಟು ತನ್ನ ಸೋದರರಾದ ತಿರುಮಲ ಮತ್ತು ವೆಂಕಟಾದ್ರಿಗಳನ್ನು ಮಂತ್ರಿ, ಸೇನಾಪತಿ ಪದವಿಗಳಲ್ಲಿ ನೇಮಿಸಿ ಅವರ ನೆರವಿನಿಂದ ರಾಜ್ಯವನ್ನು ಆಳಿದ. ಆದರೆ ಸದಾಶಿವರಾಯನ ಹೆಸರನ್ನು ಬಳಸಲು ಮರೆಯಲಿಲ್ಲ.

ರಾಮರಾಯ ದಕ್ಷ ಸೇನಾನಿ, ನುರಿತ ರಾಜನೀತಿಜ್ಞ. ಅಧಿಕಾರ ವಹಿಸಿದ ಕೂಡಲೇ ಆಯಕಟ್ಟಿನ ಸ್ಥಾನಗಳಲ್ಲಿ ನಿಷ್ಠಾವಂತರನ್ನು ಸಂಬಂಧಿಕರನ್ನು ನೇಮಿಸಿ, ಸೈನ್ಯವನ್ನು ಬಲಗೊಳಿಸಿ, ಅವರಲ್ಲಿ ಪರಿಣತರಾದ ಮಹಮದೀಯರಿಗೆ ಉನ್ನತ ಸ್ಥಾನಗಳನ್ನಿತ್ತು, ಆಡಳಿತವನ್ನು ಬಿಗಿಗೊಳಿಸಿದ. ಪ್ರಜೆಗಳ ವಿಶ್ವಾಸ ಗಳಿಸಲು ಭಾರವಾಗಿದ್ದ ನಾವಿದರ ಮೇಲಿನ ತೆರಿಗೆ ಮುಂತಾದ ಕರಗಳನ್ನು ಮಾನ್ಯ ಮಾಡಿದ. ಆ ವೇಳೆಗೆ ಐದು ಭಾಗಗಳಾಗಿ ಒಡೆದಿದ್ದ ಬಹಮನಿ ರಾಜ್ಯದ ಐವರು ಸುಲ್ತಾನರು ಪರಸ್ಪರ ಕಲಹಗಳಲ್ಲಿ ತೊಡಗುವಂತೆ ಮಾಡಿ, ಅವರ ರಾಜಕೀಯದಲ್ಲಿ ಪ್ರವೇಶಿಸಿ, ಅವರಿಗೆ ಸಹಾಯ ಮಾಡುವಂತೆ ತೋರಿಸಿಕೊಂಡು, ಅವರ ಬಲವನ್ನು ಕುಗ್ಗಿಸಿದ. ಅಂತೆಯೇ ರಾಜ್ಯವನ್ನೂ ವಿಸ್ತರಿಸಿದ. ಕೃಷ್ಣದೇವರಾಯನ ಅನಂತರ ಮತ್ತೊಮ್ಮೆ ಶತ್ರುಗಳ ವಶವಾಗಿದ್ದ ಕೋಟೆಗಳನ್ನು ವಶಪಡಿಸಿಕೊಂಡುದಲ್ಲದೆ, ಕಲ್ಯಾಣ, ಕೋವಿಲ್ಕೊಂಡ, ಘಂಪುರ, ಯಾದಗೀರ್ ಮುಂತಾದ ಇತರ ಕೋಟೆಗಳನ್ನೂ ಆಕ್ರಮಿಸಿದ. ಇವನ ಈ ಆಕ್ರಮಣನೀತಿ ಹೊಸದಾಗಿತ್ತು. ಸಾಮಾನ್ಯವಾಗಿ ರಕ್ಷಣಾನೀತಿಯನ್ನು ಈವರೆಗೆ ಅವಲಂಬಿಸಿದ್ದ ರಾಜ್ಯ ಈಗ ಇಂತಹ ನೀತಿಯನ್ನು ಪಾಲಿಸಿದುದರ ಪರಿಣಾಮವಾಗಿ

ವಿಜಯನಗರದ ಬಲ ಹೆಚ್ಚಿತಾದರೂ ಅದು ಶತ್ರುಗಳ ಕಣ್ಣು ತೆರೆಸಿತು. ಆಗ ಐವರು ಸುಲ್ತಾನರು ತಮ್ಮ ನೈಜಪರಿಸ್ಥಿತಿಯನ್ನು ಅರಿತು ಒಟ್ಟುಗೂಡಲು ಸನ್ನದ್ಧರಾದರು. ಅಹಮದ್ ನಗರದ ಹುಸೈನ್ ನಿಜಾಂ ಷಾ ತನ್ನ ಮಗಳಾದ ಚಾಂದಬೀಬಿಯನ್ನು ಬಿಜಾಪುರದ ಅಲಿ ಆದಿಲ್ ಷಾನಿಗೆ ಮದುವೆ ಮಾಡಿಕೊಟ್ಟು, ಆತನ ಸೋದರಿಯನ್ನು ರಾಜಕುಮಾರ ಮುರ್ತಾಜನಿಗೆ ತಂದುಕೊಂಡ. ಈ ಐವರಲ್ಲಿ ಬೀರಾರಿನ ಸುಲ್ತಾನನನ್ನು ಹೊರತುಪಡಿಸಿ ಇತರರು ತಮ್ಮ ಸೈನ್ಯಗಳನ್ನು ಒಟ್ಟುಗೂಡಿಸಿ ರಾಮರಾಯನ ವಿರುದ್ಧ ದಂಡೆತ್ತಿದರು. ಬಿಜಾಪುರದ ಸುಲ್ತಾನನಾದ ಅಲಿಯನ್ನು ರಾಮರಾಯ ತನ್ನ ಸ್ವಂತ ಮಗನಂತೆಯೇ ಕಾಣುತ್ತಿದ್ದ. ಎಂತಲೇ ಆರಂಭದಲ್ಲಿ ಈ ಸುಲ್ತಾನ ಇತರರನ್ನು ಸೇರಲು ಒಪ್ಪಲಿಲ್ಲ. ಆದರೆ ಕೊನೆಯ ಘಳಿಗೆಯಲ್ಲಿ ತನ್ನ ನಿರ್ಧಾರವನ್ನು ಬದಲಾಯಿಸಿದ. ಕೃಷ್ಣಾನದಿಯ ಉತ್ತರತೀರದ ತಾಳೀಕೋಟೆ ಸಮೀಪದ ರಕ್ಕಸಗಿ–ತಂಗಡಗಿ ಎಂಬ ಎರಡು ಗ್ರಾಮಗಳ ನಡುವಣ ಬಯಲಿನಲ್ಲಿ ಶತ್ರು ಸೈನ್ಯ ಸೇರಿತು. 1565 ಜನವರಿ 23 ರಂದು ನಡೆದ ತೀವ್ರವಾದ ಕದನದಲ್ಲಿ ರಾಮರಾಯನ ಸೇನಾಧಿಪತಿಗಳಾದ ಗಿಲಾನಿ ಎಂಬ ಇಬ್ಬರು ಮಹಮದೀಯರು ಒಮ್ಮೆಲೇ ಪಕ್ಷಾಂತರ ಮಾಡಿ ಶತ್ರುವನ್ನು ಸೇರಿದರು. ಇದು ಕದನದ ಸ್ವರೂಪವನ್ನೇ ಬದಲಾಯಿಸಿತು. ಮಿತ್ರರೇ ಆಗಿದ್ದವರ ಆಕಸ್ಮಿಕ ಧಾಳಿ ಸೈನ್ಯದಲ್ಲಿ ಕೋಲಾಹಲವನ್ನುಂಟುಮಾಡಿತು. ಈ ವೇಳೆಗೆ ಆಕಸ್ಮಿಕವಾಗಿ ರಾಮರಾಯ ಶತ್ರುವಿನ ಕೈಸೆರೆಯಾದ. ಹುಸೈನ್ ನಿಜಾಮ್ ಷಾ ಆತನ ಶಿರಚ್ಛೇಧನ ಮಾಡಿಸಿ ಪ್ರದರ್ಶಿಸಿದ. ಸೈನ್ಯದಲ್ಲಿ ಹಾಹಾಕಾರವೆದ್ದಿತು. ವಿಜಯನಗರದ ಸೈನ್ಯ ಹಿಮ್ಮೆಟ್ಟಿತು. ತಿರುಮಲ ತೀವ್ರಗತಿಯಲ್ಲಿ ರಾಜಧಾನಿಗೆ ಹಿಂತಿರುಗಿ ಅರಮನೆಯಲ್ಲಿದ್ದ ಸ್ತ್ರೀಯರನ್ನು, ಸಂಬಂಧಿಕರನ್ನು ಮತ್ತು ಸಾಧ್ಯವಿದ್ದಷ್ಟು ಸಂಪತ್ತನ್ನು ಸು. 1550 ಆನೆಗಳ ಮೇಲೆ ಹೇರಿಸಿ ಚಂದ್ರಗಿರಿಗೆ ಸಾಗಿಸಿದ. ರಾಜನೆನಿಸಿದ್ದ ಸದಾಶಿವನನ್ನು ಒಯ್ಯಲಾಯಿತು. ಇವರ ಬೆನ್ನಟ್ಟಿಬಂದ ಶತ್ರುಸೈನ್ಯ ರಾಜಧಾನಿಯಲ್ಲಿ ಐದು ತಿಂಗಳುಗಳ ಕಾಲ ನೆಲೆಸಿ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿ, ದೇವಾಲಯಗಳನ್ನು ಅರಮನೆಗಳನ್ನು ವಿಗ್ರಹಗಳನ್ನು ಭೇದಿಸಿತು. ಬೆಂಕಿಯಿಂದ, ಕತ್ತಿಗಳಿಂದ, ಹಾರೆಗುದ್ದಲಿಗಳಿಂದ ಒಂದೊಂದು ದಿನವೂ ಅವರು ವಿನಾಶಕಾರ್ಯವನ್ನು ಮುಂದುವರಿಸಿಕೊಂಡು ಬಂತು. ಪ್ರಪಂಚದ ಇತಿಹಾಸದಲ್ಲಿ ಅಂಥದೊಂದು ಕರಾಳ ಕೃತ್ಯ ಬೇರಲ್ಲೂ ನಡೆದಂತಿಲ್ಲ ಎಂಬುದು ಇತಿಹಾಸ್ಞರ ಅಭಿಪ್ರಾಯ. (ಬಿ.ಆರ್.ಜಿ)

ಈ ಕದನವನ್ನು ತಪ್ಪು ತಿಳಿವಳಿಕೆಯಿಂದ ತಾಳಿಕೋಟೆಯುದ್ಧ ಎಂದು ಕರೆಯಲಾಗಿತ್ತು. ಸುಲ್ತಾನರ ಸಂಘಟಿತ ಸೇನೆ ಮೂರು ಲಕ್ಷ ಪ್ರಮಾಣದ್ದು. ಇದು ಬಿಜಾಪುರದಿಂದ 1564 ಡಿಸೆಂಬರ್ 25ರಂದು ವಿಜಯನಗರದತ್ತ ಸಾಗಿತು. ದಾರಿಯಲ್ಲಿ ತಾಳಿಕೋಟೆಯಲ್ಲಿ ಶಿಬಿರ ಹೂಡಿ ವಿಶ್ರಮಿಸಿತು. ಅಲ್ಲಿಂದ ದಕ್ಷಿಣಕ್ಕೆ ಸು. 40ಕಿಮೀ ದೂರದಲ್ಲಿರುವ ಕೃಷ್ಣಾನದಿಯನ್ನು ದಾಟಿ ವಿಜಯನಗರ ಪ್ರದೇಶವನ್ನು ಪ್ರವೇಶಿಸುವ ಉದ್ದೇಶ ಅದಕ್ಕಿತ್ತು. ಆದರೆ ಆರು ಲಕ್ಷ ಸೈನ್ಯಬಲದ ವಿಜಯನಗರದ ಸೈನ್ಯ ರಾಮರಾಯನ ನೇತೃತ್ವದಲ್ಲಿ ನದಿಯ ದಕ್ಷಿಣ ತೀರದುದ್ದಕ್ಕೂ ಗೋಡೆಯನ್ನೆಬ್ಬಿಸಿ ಕಾವಲು ಭಟರನ್ನು ಇರಿಸಿ ಸೈನ್ಯದ ಮುಖ್ಯ ಭಾಗ ಹೊಳೆಯನ್ನು ದಾಟಿ ಉತ್ತರದಲ್ಲಿದ್ದ ಶತ್ರು ಸೈನ್ಯವನ್ನೆದುರಿಸಿತು. ಇದು ನಡೆದುದು ರಕ್ಕಸಗಿ–ತಂಗಡಗಿ ಎಂಬ ಎರಡು ಊರುಗಳ ನೆರೆಯಲ್ಲಿ. ರಾಮರಾಯನ ಬಖೈರ್ ಎಂಬ ಗ್ರಂಥದಲ್ಲಿ ಇದನ್ನು ರಾಕ್ಷಸತಂಗಡಿ ಎಂದು ನಿರ್ದೇಶಿಸಿದೆ. ಭಾರತದ ಇತಿಹಾಸದಲ್ಲಿ ರುದ್ರಭಯಾನಕವಾದ ಈ ಯುದ್ಧ ಇತಿಹಾಸದ ದಿಕ್ಕನ್ನೇ ಬದಲಿಸಿತು. (ಪಿ.ಬಿ.ಡಿ.)

ಈ ಕದನದೊಂದಿಗೆ ವಿಜಯನಗರ ಕಣ್ಮರೆಯಾಯಿತು. ಹಂಪೆ ಕೊಂಪೆಯಾಯಿತು. ದಕ್ಷಿಣಭಾರತದಲ್ಲೆಲ್ಲ ಪಾಳೆಯಗಾರರು, ನಾಯಕರು ತಲೆ ಎತ್ತಿ ಮತ್ತೊಮ್ಮೆ ಪ್ರಬಲರಾದರು. ಆದರೆ ಚಂದ್ರಗಿರಿಗೆ ಓಡಿಹೋದ ತಿರುಮಲ ಮತ್ತೊಮ್ಮೆ ರಾಜ್ಯ ಕಟ್ಟಲು ಯತ್ನಿಸಿದ. ಈತ ಆರವೀಡು ಮನೆತನಕ್ಕೆ ಸೇರಿದಾತ. ಕರ್ನೂಲು ಜಿಲ್ಲೆಯ ಆರವೀಡು ಎಂಬ ಗ್ರಾಮದಿಂದ ಬಂದ ಇವರು ತಮ್ಮ ಹೆಸರನ್ನೇ ವಂಶಕ್ಕೂ ಬಳಸಿದರು. ತಿರುಮಲನ ಸೋದರನಾದ ರಾಮರಾಯನು ಕೃಷ್ಣದೇವರಾಯನ ಅಳಿಯ. ಅಳಿಯ ರಾಮರಾಯನೆಂದೇ ಪ್ರಸಿದ್ಧನಾದ. ಸದಾಶಿವನನ್ನು ಚಂದ್ರಗಿರಿಯ ಸೆರೆಮನೆಯಲ್ಲಿಟ್ಟು ತಿರುಮಲ ತನ್ನ ಹೆಸರಿನಲ್ಲೇ ಆಳತೊಡಗಿದ. ಎರಡು ವರ್ಷಗಳ ಬಳಿಕ ರಾಜಧಾನಿಯನ್ನು ಪೆನುಗೊಂಡೆಗೆ ಬದಲಾಯಿಸಿದ. ವಿಜಯನಗರಕ್ಕೆ ಹಿಂದಿರುಗುವ ಯೋಜನೆಯನ್ನೂ ಬಿಟ್ಟುಬಿಟ್ಟ. 1570ರಲ್ಲಿ ಸದಾಶಿವನನ್ನು ಕೊಲ್ಲಿಸಿದ. ಭಾಷೆಯ ಆಧಾರದ ಮೇಲೆ ಅಳಿದುಳಿದ ರಾಜ್ಯವನ್ನು ಆಡಳಿತಕ್ಕಾಗಿ ವಿಂಗಡಿಸಿ, ತೆಲುಗಿನ ಪ್ರದೇಶಕ್ಕೆ ಹಿರಿಯ ಮಗ ಶ್ರೀರಂಗನನ್ನೂ ಕನ್ನಡ ಪ್ರದೇಶಕ್ಕೆ ಎರಡನೆಯ ಮಗನಾದ ರಾಮರಾಯನನ್ನೂ ತಮಿಳು ಪ್ರದೇಶಕ್ಕೆ ವೆಂಕಟಪತಿಯನ್ನೂ ನೇಮಿಸಿದ. ರಾಮರಾಯ ಶ್ರೀರಂಗಪಟ್ಟಣದಿಂದ ಆಳತೊಡಗಿದ. ಆದರೆ ಈ ವ್ಯವಸ್ಥೆ ಆಂತರಿಕ ಕಲಹಗಳಿಗೆ ಇಂಬುಗೊಟ್ಟು, ಶತ್ರುಗಳು ಧಾಳಿಮಾಡಲು ಪ್ರೋತ್ಸಾಹಿಸಿತು.

1578ರಲ್ಲಿ ತಿರುಮಲನ ಮಗ ಶ್ರೀರಂಗ (II) ಪಟ್ಟಕ್ಕೆ ಬಂದು ಸು.8 ವರ್ಷಗಳ ಕಾಲ ಆಳಿದ. ಅನಂತರ 1586ರಿಂದ ವೆಂಕಟಪತಿ ಆಳತೊಡಗಿದ. ತಿರುಮಲ ಅಲಿ ಆದಿಲ್ ಷಾನ ಧಾಳಿಯನ್ನು ಎದುರಿಸಲು ಗೋಲ್ಕೊಂಡೆಯ ಕುತುಬ್ ಷಾನ ಸಹಾಯ ಪಡೆದನು. ಆದರೂ ಎರಡನೆಯ ಬಾರಿ ಆದಿಲ್ ಷಾ ತಿರುಮಲನ ರಾಜ್ಯವನ್ನು ಮುತ್ತಿ ಅರಸನನ್ನು ಸೋಲಿಸಿದ. ಪೆನುಗೊಂಡೆಯ ಉತ್ತರಭಾಗ ಶತ್ರುವಶವಾಯಿತು. ಬಂಧಿಯಾಗಿದ್ದ ಶ್ರೀರಂಗ ಅಪಾರವಾದ ಧನವನ್ನು ದಂಡವಾಗಿ ಕೊಟ್ಟು ಪೆನುಗೊಂಡೆಗೆ ಹಿಂತಿರುಗಿದ. ಅನಂತರ ಇನ್ನೊಮ್ಮೆ ಆದಿಲ್ ಷಾ ದಂಡೆತ್ತಿ ಬಂದಾಗ ಮಾತ್ರ ಶ್ರೀರಂಗನ ಬಂಧುವಾದ ಜಗದೇವರಾಯ ಆತನನ್ನು ಸೋಲಿಸಿದ. ಆದರೆ ಅವನಿಗೆ ಬಾರಾಮಹಲಿನಿಂದ ಪಶ್ಚಿಮಘಟ್ಟಗಳವರೆಗೆ ವಿಸ್ತಾರವಾದ ಪ್ರದೇಶವನ್ನು ಬಹುಮಾನವಾಗಿ ಕೊಡಬೇಕಾಯಿತು. ಗೋಲ್ಕೊಂಡದ ಸುಲ್ತಾನ, ಶ್ರೀರಂಗನಿಂದ ಪೆನುಕೊಂಡ, ಬೆಲ್ಲಂಕೊಂಡ, ಕೊಂಡವೀಡು, ಉದಯಗಿರಿಗಳನ್ನು ಕಸಿದುಕೊಂಡ. ಆಂತರಿಕ ದಂಗೆಗಳು ರಾಜ್ಯದ ಬಲವನ್ನು ಇನ್ನಷ್ಟು ಕುಗ್ಗಿಸಿದುವು. ವೆಂಕಟಪತಿಯೂ ಗೋಲ್ಕಂಡ ಮತ್ತು ಬಿಜಾಪುರದ ಶಾಹಿಗಳನ್ನು ಎದುರಿಸ ಬೇಕಾಯಿತು. ಉತ್ತರ ಭಾರತದಲ್ಲಿ ಆಗ ಆಳುತ್ತಿದ್ದ ಮುಗಲ್ ಮನೆತನದ ಅಕ್ಬರ್ 1600 ರಲ್ಲಿ ಅಹಮದ್ ನಗರವನ್ನು ಜಯಿಸಿ, ಅನಂತರ ಎರಡು ಬಾರಿ ವೆಂಕಟಪತಿಯ ರಾಜ್ಯಕ್ಕೆ ರಾಯಭಾರಿಗಳನ್ನು ಕಳಿಸಿದ. ಆದರೆ ಇದು ಮುಂದಿನ ಆಕ್ರಮಣಗಳಿಗೆ ನಾಂದಿಯಾಗ ಬಹುದೆಂದು ಭಾವಿಸಿದ. ವೆಂಕಟಪತಿ ಅಕ್ಬರನೊಡನೆ ಹೆಚ್ಚಿನ ಸಂಬಂಧಗಳನ್ನು ಇಟ್ಟುಕೊಳ್ಳಲಿಲ್ಲ. ಶ್ರೀರಂಗಪಟ್ಟಣದಲ್ಲಿದ್ದ ರಾಮರಾಯನ ಮಗ ತಿರುಮಲ ವೆಂಕಟಪತಿಯನ್ನು ಗೌರವದಿಂದ ಕಾಣಲಿಲ್ಲ. ಮೈಸೂರಿನ ರಾಜಒಡೆಯ ಈ ಸಂದರ್ಭವನ್ನುಪಯೋಗಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ. ವೆಂಕಟಪತಿ ರಾಜಒಡೆಯನನ್ನು ಕ್ಷಮಿಸಿದುದೇ ಅಲ್ಲದೆ, ಈಗ ಶ್ರೀರಂಗಪಟ್ಟಣ ಹಾಗೂ ಉಮ್ಮತ್ತೂರುಗಳನ್ನು ಆತನಿಗೆ ಬಿಟ್ಟುಕೊಟ್ಟ. ಸಾಹಿತ್ಯ ಕಲೆಗಳಿಗೆ ವೆಂಕಟಪತಿ ಪ್ರೋತ್ಸಾಹ ನೀಡಿದ. ಸುಮಾರು ಮೂರು ದಶಕಗಳ ಕಾಲ ಆಳಿದ ಈತ ರಾಜ್ಯದ ಗತವೈಭವವನ್ನು ಪುನರುಜ್ಜೀವನಗೊಳಿಸಿದನಾದರೂ ಇದು ಬಹುಕಾಲ ಬಾಳಲಿಲ್ಲ.

ವೆಂಕಟಪತಿಯ ಅನಂತರ ಅಧಿಕಾರಕ್ಕಾಗಿ ಅಂತಃಕಲಹಗಳು ಏರ್ಪಟ್ಟವು. ಆತನಿಗೆ ಗಂಡುಮಕ್ಕಳಿಲ್ಲದ ಕಾರಣ ರಾಜ್ಯ ಆತನ ಸೋದರನಾದ ರಾಮರಾಯನ ಮಗ ಮುಮ್ಮಡಿ ಶ್ರೀರಂಗನ ವಶವಾಯಿತು. ಆದರೆ ಜಗರಾಯನೆಂಬ ವೆಂಕಟಪತಿಯ ಭಾವಮೈದುನನು ವೆಂಕಟಪತಿಯ ಮಗನೆಂದು ಹೇಳಲಾದ ಚಿಕ್ಕರಾಯನ ಪರವಾಗಿ ನಿರಾಧಾರವಾದ ಹಕ್ಕನ್ನು ಸ್ಥಾಪಿಸಲು ಯತ್ನಿಸಿದ. ಪೆಲುಗೋಡಿನ ಎಚ್ಚಮನಾಯಕನೂ ತಂಜಾವೂರು ಹಾಗೂ ಇತರ ಪಾಳೆಯಪಟ್ಟುಗಳ ನಾಯಕರೂ ಚೋಪೂರು ಎಂಬಲ್ಲಿ ನಡೆದ ಕದನದಲ್ಲಿ ಜಗರಾಯನನ್ನೂ ಮದುರೆ, ಜಿಂಜಿ ಮುಂತಾದ ಸ್ಥಳಗಳ ನಾಯಕರನ್ನೂ ಸೋಲಿಸಿದರು. ಆ ಬಳಿಕ ರಾಜ್ಯದಲ್ಲಿ 12–13 ವರ್ಷಗಳ ಬಾಲಕನಾದ ರಾಮದೇವ ಅರಸನಾದ. ಈತ 1617–32 ರವರೆಗೆ ಆಳಿದ. ಅನಂತರ ಅಳಿಯ ರಾಮರಾಯನ ಮೊಮ್ಮಗ ಇಮ್ಮಡಿ ವೆಂಕಟಪತಿ ಯುವರಾಜನಾದ. ಆದರೂ ಇವರಾರೂ ರಾಜ್ಯದ ಶಕ್ತಿಯನ್ನು ವರ್ಧಿಸಲಿಲ್ಲ. ಬಿಜಾಪುರ, ಗೋಲ್ಕೊಂಡಗಳ ಸುಲ್ತಾನರು ಹಲಕೆಲವು ಕೋಟೆಗಳನ್ನು ಗೆದ್ದುಕೊಂಡರು. ಅಂತಿಮವಾಗಿ ಕೊನೆಯ ಅರಸನಾದ ಮುಮ್ಮಡಿ ಶ್ರೀರಂಗ ಮೊದಲು ಬಿದನೂರಿಗೂ ಅನಂತರ ಮೈಸೂರಿಗೂ ಹೋಗಿ ಅಲ್ಲಿ ಹಿಂದೆ ತಮ್ಮ ಸಾಮಂತರಾಗಿದ್ದು ತರುವಾಯ ಪ್ರಬಲರಾಗಿದ್ದವರ ಆಶ್ರಯಪಡೆದ (1646). ಅಧಿಕಾರವನ್ನು ಮರಳಿ ಪಡೆಯಲು ಆಗಿಂದಾಗ್ಗೆ ಯತ್ನಿಸಿ ವಿಫಲನಾಗಿ 1681ರಲ್ಲಿ ಮರಣಹೊಂದಿದ. (ಬಿ.ಆರ್.ಜಿ.;ಎ.ವಿ.ವಿ.)

**ಆಡಳಿತ ವ್ಯವಸ್ಥೆ:** ವಿಜಯನಗರ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವವಿತ್ತು. ಕೇಂದ್ರೀಯ ಆಡಳಿತ ರಾಜನಲ್ಲಿ ಕೇಂದ್ರೀಕೃತವಾಗಿತ್ತು. ಪಟ್ಟಾಭಿಷೇಕ ಮಹೋತ್ಸವ ಮಹತ್ತ್ವದ್ದಾಗಿದ್ದು ರಾಜನಿಗೆ ರಾಜ್ಯವಾಳಲು ನ್ಯಾಯವಾದ ಹಕ್ಕನ್ನು ನೀಡುತ್ತಿತ್ತು. ಇದಕ್ಕೆ ಅಧೀನ ರಾಜರು ಮತ್ತು ಜನಸಾಮಾನ್ಯರ ಮುಖಂಡರು ಹಾಜರಿದ್ದು ಆ ಸಮಯದಲ್ಲಿ ಕಪ್ಪಕಾಣಿಕೆಗಳನ್ನು ಒಪ್ಪಿಸಿ ತಮ್ಮ ನಿಷ್ಠೆಯನ್ನು ತೋರ್ಪಡಿಸುತ್ತಿದ್ದರು.

ವಿಜಯನಗರ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವವಿದ್ದರೂ ನಿರಂಕುಶಪ್ರಭುತ್ವ ಇರಲಿಲ್ಲ. ರಾಜನ ಕರ್ತವ್ಯ ಧರ್ಮವನ್ನು ರಕ್ಷಿಸುವುದಾಗಿತ್ತು. ರಾಜತ್ವ ಧರ್ಮದ ಆಳಿಕೆಗೆ ಒಳಪಟ್ಟಿತ್ತು. ಸ್ವಧರ್ಮವನ್ನು ಪಾಲಿಸಲು ರಾಜ ಸಮಯಾಚಾರ್ಯರೆಂಬ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದ. ಸಂಪ್ರದಾಯ ಮತ್ತು ಸಾರ್ವಜನಿಕ ಅಭಿಪ್ರಾಯ ಅಲ್ಲದೆ ವ್ಯವಸ್ಥೆಗೊಂಡಿದ್ದ ಸಂಘಗಳು ಮತ್ತು ಶ್ರೇಣಿಗಳು ಮತ್ತು ಮಂತ್ರಿಮಂಡಲವೂ ರಾಜನ ನಿರಂಕುಶಪ್ರಭುತ್ವಕ್ಕೆ ತಡೆಯಾಗಿತ್ತು. ತೆರಿಗೆಗಳನ್ನು ಸಂಪ್ರದಾಯಬದ್ಧವಾಗಿ ವಿಧಿಸಲಾಗುತ್ತಿತ್ತು. ಕೇಂದ್ರಸರ್ಕಾರ ಅವುಗಳ ಮೇಲ್ವಿಚಾರಣೆ ಹೊಂದಿದ್ದು ಆವಶ್ಯಕವಾದರೆ ಸಾಮರಸ್ಯ ಸ್ಥಾಪಿಸಲು ಮಧ್ಯ ಪ್ರವೇಶಿಸುತ್ತಿತ್ತು. ರಾಜನ ಮಂತ್ರಿಮಂಡಲ ಅವನು ನೇಮಿಸಿದ ಮಂತ್ರಿಗಳು ಮತ್ತು ಶ್ರೀಮಂತರನ್ನೊಳಗೊಂಡಿತ್ತು. ರಾಜ್ಯ ವ್ಯವಹಾರದಲ್ಲಿ ರಾಜ ಮಂತ್ರಿಮಂಡಲದ ಸಲಹೆಗಳನ್ನು ತೆಗೆದುಕೊಳ್ಳುತ್ತಿದ್ದ.

ರಾಜರು ರಾಜ್ಯದಲ್ಲಿ ಮಠಗಳಿಗೆ ದ್ರವ್ಯಸಹಾಯ ಮಾಡಿ ಅವನ್ನು ಉಳಿಸಿಕೊಂಡು ಬರುತ್ತಿದ್ದರು. ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಲು ಕಾಡುಗಳನ್ನು ಕಡಿದು, ಹೊಸ ಹಳ್ಳಿಗಳನ್ನು ಸ್ಥಾಪಿಸುತ್ತಿದ್ದರು. ದೇಶದ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಶಾಂತಿ ಮತ್ತು ನ್ಯಾಯಪಾಲನೆ ರಾಜನ ಕರ್ತವ್ಯವಾಗಿತ್ತು. ರಾಜನೇ ಶ್ರೇಷ್ಠ ನ್ಯಾಯಾಧೀಶನಾಗಿದ್ದ. ವಿದ್ಯೆ ಮತ್ತು ಸಂಸ್ಕೃತಿಯ ಪೋಷಣೆಯಲ್ಲಿ ರಾಜ ಅಧ್ವರ್ಯುವಾಗಿರುತ್ತಿದ್ದ.

ರಾಜ ಸಾಮಾನ್ಯವಾಗಿ ತನ್ನ ಉತ್ತರಾಧಿಕಾರಿಯನ್ನು ನಿರ್ಧರಿಸಿ, ಆತನಿಗೆ ಯುವರಾಜ ಎಂದು ಪಟ್ಟಕಟ್ಟುತ್ತಿದ್ದ. ರಾಜನ ಹಿರಿಯ ಮಗನೇ ಹಕ್ಕುದಾರನಾಗಿರುತ್ತಿದ್ದರೂ ಕೆಲವು ವೇಳೆ ಇದು ಸಂದರ್ಭವಶಾತ್ ಬದಲಾಗುತ್ತಿತ್ತು. ಉತ್ತರಾಧಿಕಾರಿಯ ಆಯ್ಕೆ ಬಹುಮಟ್ಟಿಗೆ ಮಂತ್ರಿಗಳು ಮತ್ತು ಶ್ರೀಮಂತರ ಸಮ್ಮುಖದಲ್ಲಿ ನಡೆಯುತ್ತಿತ್ತು. ರಾಜನು ಯುವರಾಜ

ಮತ್ತು ಇತರ ರಾಜಕುಮಾರರನ್ನು ಪ್ರಾಂತಾಧಿಕಾರಿಗಳನ್ನಾಗಿ ನೇಮಿಸುತ್ತಿದ್ದ. ಇದರಿಂದ ಉತ್ತರಾಧಿಕಾರಿಗೆ ಆಡಳಿತದಲ್ಲಿ ತರಬೇತು ಸಿಗುತ್ತಿತ್ತು. ಉತ್ತರಾಧಿಕಾರಿ ಚಿಕ್ಕವನಾಗಿದ್ದರೆ, ಅವನು ವಯಸ್ಸಿಗೆ ಬರುವವರೆಗೆ ದೇಶವನ್ನಾಳಲು ರಾಜಪ್ರತಿನಿಧಿಯನ್ನು ನೇಮಿಸುತ್ತಿದ್ದರು. ವಿಜಯನಗರದ ಚರಿತ್ರೆಯಲ್ಲಿ ರಾಜಪ್ರತಿನಿಧಿ ಆ ಪದವಿಯನ್ನು ದುರುಪಯೋಗಪಡಿಸಿಕೊಂಡ ದೃಷ್ಟಾಂತಗಳೂ ಇವೆ.

ಬೃಹತ್ ಸೈನ್ಯವನ್ನು ರಾಜ ಸ್ವಂತವಾಗಿ ಇಟ್ಟುಕೊಳ್ಳುತ್ತಿದ್ದುದಲ್ಲದೆ, ಅದಕ್ಕೆ ಉತ್ತಮ ತರಬೇತಿ ಮತ್ತು ಸಲಕರಣೆಗಳನ್ನು ಒದಗಿಸಿ ಶಿಸ್ತಿನಲ್ಲಿ ಇಟ್ಟು, ಒಳಹೊರ ಶತ್ರುಗಳ ನಿಗ್ರಹಕ್ಕಾಗಿ ಬಳಸುತ್ತಿದ್ದ. ಹಲವಾರು ದಂಡನಾಯಕರು ವಿವಿಧ ವಿಭಾಗಗಳ ಮತ್ತು ತುಕಡಿಗಳ ನೇತೃತ್ವವನ್ನು ವಹಿಸುತ್ತಿದ್ದರು. ಅಲ್ಲದೆ ಪ್ರಾಂತಾಧಿಕಾರಿಗಳೂ ಸಾಮಂತರೂ ಅವಶ್ಯವಿದ್ದಾಗ ರಾಜನಿಗೆ ಸೈನ್ಯವನ್ನು ಒದಗಿಸಿ ತಾವೂ ಯುದ್ಧಗಳಲ್ಲಿ ಪಾಲ್ಗೊಳ್ಳಬೇಕಾಗಿದ್ದಿತು.

ಆಡಳಿತದ ಅನುಕೂಲಕ್ಕಾಗಿ ವಿಜಯನಗರ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಇವನ್ನು ರಾಜ್ಯ, ಮಂಡಲ ಮತ್ತು ನಾಡುಗಳೆಂದು ಕರೆಯಲಾಗುತ್ತಿತ್ತು. ರಾಜ್ಯಗಳ ಸಂಖ್ಯೆ ಕಾಲಾನುಗುಣವಾಗಿ ಬದಲಾಗುತ್ತಿತ್ತು. ಆಡಳಿತ ದೃಷ್ಟಿಯಿಂದ ಹೊಸ ರಾಜ್ಯಗಳು ಸ್ಥಾಪನೆಯಾಗುತ್ತಿದ್ದವು. ಉದಾಹರಣೆಗೆ ತುಳುನಾಡಿಯಲ್ಲಿ ಎರಡು ರಾಜ್ಯಗಳಿದ್ದವು. ಉತ್ತರ ತುಳು ರಾಜ್ಯಕ್ಕೆ ಬಾರಕೂರು ರಾಜಧಾನಿಯಾಗಿತ್ತು; ದಕ್ಷಿಣ ತುಳು ರಾಜ್ಯಕ್ಕೆ ಮಂಗಳೂರು ರಾಜಧಾನಿಯಾಗಿತ್ತು. ಇವಲ್ಲದೆ ಉದಯಗಿರಿ ರಾಜ್ಯ, ಪೆನುಕೊಂಡೆ ರಾಜ್ಯ, ಮುಳವಾಯಿ ರಾಜ್ಯ ಮತ್ತು ರಾಜಗಂಭೀರ ರಾಜ್ಯಗಳಿದ್ದವು. ರಾಜಗಂಭೀರ ರಾಜ್ಯದ ದಕ್ಷಿಣಕ್ಕೆ ತಿರುವಡಿಗೈ ರಾಜ್ಯ ಮತ್ತು ಮದುರಾ ರಾಜ್ಯಗಳಿದ್ದವು. ಪ್ರತಿ ಪ್ರಾಂತಕ್ಕೂ ಒಬ್ಬ ಪ್ರಾಂತಾಧಿಕಾರಿಯಿದ್ದ. ಅವರು ಸಾಮಾನ್ಯವಾಗಿ ರಾಜಮನೆತನಕ್ಕೆ ಸೇರಿದವರಾಗಿದ್ದರು. ಸಂಗಮ ವಂಶದ ರಾಜಕುಮಾರರು ಪ್ರಾಂತಾಧಿಕಾರಿಗಳಾಗಿ ನೇಮಕರಾದ ಅನಂತರ ಒಡೆಯ ಅಥವಾ ಒಡೆಯರ್ ಎಂಬ ಬಿರುದನ್ನು ಧರಿಸುತ್ತಿದ್ದರು. ಹೀಗೆ ರಾಜಮನೆತನದಿಂದ ನೇಮಕಗೊಂಡ ಪ್ರಾಂತಾಧಿಕಾರಿಗಳನ್ನು ಮಹಾಮಂಡಲೇಶ್ವರರೆಂದೂ ಕರೆಯುತ್ತಿದ್ದರು. ಎರಡನೆಯ ದೇವರಾಯನ ಕಾಲದಿಂದ ಪ್ರಾಂತಾಧಿಕಾರಿಗಳ ನೇಮಕದ ರೀತಿಯಲ್ಲಿ ಸ್ವಲ್ಪ ಬದಲಾವಣೆ ಯಾಯಿತು. ರಾಜಮನೆತನದವರಲ್ಲದೆ ಸಾಮಂತರಾಜರ ಮನೆತನಗಳಿಗೆ ಮತ್ತು ಶ್ರೀಮಂತ ಮನೆತನಗಳಿಗೆ ಸೇರಿದವರೂ ನೇಮಕಗೊಳ್ಳುತ್ತಿದ್ದರು. ಇದಕ್ಕೆ ಹಲವು ಕಾರಣಗಳಿದ್ದವು. ರಾಜಮನೆತನದಲ್ಲಿ ಶಕ್ತಿಸಾಮರ್ಥ್ಯವುಳ್ಳವರು ಸಾಕಷ್ಟು ಸಿಗುತ್ತಿರಲಿಲ್ಲ. ಅಲ್ಲದೆ ಸಾಮ್ರಾಜ್ಯ ವಿಸ್ತರಿಸಿದಂತೆ ಹೆಚ್ಚು ಪ್ರಾಂತಗಳಾಗಿ ಹೆಚ್ಚಿನ ಪ್ರಾಂತಾಧಿಕಾರಿಗಳ ಆವಶ್ಯಕತೆ ಇತ್ತು. ಹೀಗೆ ನೇಮಕಗೊಂಡ ಪ್ರಾಂತಾಧಿಕಾರಿಗಳು ದಳಪತಿಯಾಗಿಯೂ ಮತ್ತು ಮಂತ್ರಿಯಾಗಿಯೂ ಇರುತ್ತಿದ್ದರು. ಇವರನ್ನು ದಂಡನಾಯಕರೆಂದು ಕರೆಯುತ್ತಿದ್ದರು. ಇವರಿಗೆ ಸಾಕಷ್ಟು ಸ್ವಾಯತ್ತೆ ಇದ್ದಿತು. ಇವರು ತಮ್ಮದೇ ಆದ ನ್ಯಾಯಾಸ್ಥಾನಗಳನ್ನು ಹೊಂದಿದ್ದು ಸೈನ್ಯವನ್ನಿಟ್ಟುಕೊಂಡಿದ್ದರು. ಇವರ ಮುಖ್ಯ ಕರ್ತವ್ಯ ಶತ್ರುಗಳಿಂದ ಪ್ರಾಂತ ರಕ್ಷಣೆ. ಇವರು ಪ್ರಾಂತದ ಕಂದಾಯ ವಸೂಲಿಯ ಅಧಿಕಾರಿಯಾಗಿಯೂ ಶ್ರೇಷ್ಠ ನ್ಯಾಯಾಧೀಶರಾಗಿಯೂ ಇದ್ದರು. ಪ್ರಾಂತದಲ್ಲಿ ಶಾಂತಿಪರಿಪಾಲನೆಯೂ ಇವರ ಕರ್ತವ್ಯವಾಗಿತ್ತು. ಇವರು ಹೊಸ ತೆರಿಗೆಗಳನ್ನು ವಿಧಿಸಬಹುದಾಗಿತ್ತು; ಹಳೆಯ ತೆರಿಗೆಗಳನ್ನು ರದ್ದುಮಾಡಬಹುದಾಗಿತ್ತು. ಪ್ರಾಂತ್ಯಗಳಲ್ಲಿ ಆಡಳಿತ ಹದಗೆಟ್ಟರೆ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸುತ್ತಿತ್ತು.

ಅರಸರು ತಮ್ಮ ಆಕ್ರಮಣಕಾಲದಲ್ಲಿ ಅನೇಕ ರಾಜ್ಯಗಳನ್ನು ಗೆದ್ದರೂ ಹಲವಾರು ಸಂದರ್ಭಗಳಲ್ಲಿ ಆಯಾ ರಾಜರಿಗೆ ಅವರ ರಾಜ್ಯಗಳನ್ನು ಹಿಂದಿರುಗಿಸುತ್ತಿದ್ದರು. ಇವರು ವಿಜಯನಗರದ ಸಾಮ್ರಾಟನಿಗೆ ಪೊಗದಿ ಕೊಡುವ ಸಾಮಂತರಾಗಿದ್ದರು. ಇದಕ್ಕೆ ನಾಯಂಕರ ಪದ್ಧತಿ ಎಂಬ ಹೆಸರಿತ್ತು. ಈ ನಾಯಕರು ವಿಜಯನಗರ ಸಾಮ್ರಾಟನಿಗೆ ಪಟ್ಟಾಭಿಷೇಕ ಸಮಯದಲ್ಲಿ, ರಾಜಕುಮಾರ ಅಥವಾ ರಾಜಕುಮಾರಿ ಹುಟ್ಟಿದ ಸಂದರ್ಭದಲ್ಲಿ, ರಾಜನ ವರ್ಧಂತಿಯಲ್ಲಿ ಮತ್ತು ಮಹಾನವಮಿ ಉತ್ಸವದಲ್ಲಿ ಆಸ್ಥಾನದಲ್ಲಿ ಹಾಜರಿದ್ದು ಕಾಣಿಕೆಗಳನ್ನು ಸಲ್ಲಿಸಬೇಕಾಗಿತ್ತು. ನೂತನ ವರ್ಷದ ದಿನ ರಾಜನಿಗೆ ಬಹುಮಾನಗಳನ್ನು ನೀಡಬೇಕಾಗಿತ್ತು. ಸಾಮಂತರು ಕರ್ತವ್ಯಪರಿಪಾಲನೆ ಮಾಡದಿದ್ದರೆ ಶಿಕ್ಷೆಗೆ ಗುರಿಯಾಗುತ್ತಿದ್ದರು. ಪ್ರಾಂತಾಧಿಕಾರಿಗಳು ವರ್ಗಾಯಿಸಲ್ಪಡುತ್ತಿದ್ದರಾದರೆ ಸಾಮಾನ್ಯವಾಗಿ ನಾಯಕರನ್ನು ವರ್ಗ ಮಾಡುತ್ತಿರಲಿಲ್ಲ. ಪ್ರಾರಂಭದಲ್ಲಿ ನಾಯಕತನ ವೈಯಕ್ತಿಕವಾಗಿತ್ತು. ಆದರೆ ಕ್ರಮೇಣ ಕೇಂದ್ರ ಸರ್ಕಾರದ ದುರ್ಬಲತೆಯಿಂದ ವಂಶಪಾರಂಪರ್ಯವಾಯಿತು. ನಾಯಕರು ರಾಜಾಸ್ಥಾನದಲ್ಲಿ ಇಬ್ಬರು ಅಧಿಕಾರಿಗಳನ್ನು ಇಟ್ಟುಕೊಳ್ಳುತ್ತಿದ್ದರು. ಅದರಲ್ಲಿ ಒಬ್ಬ ಅಧಿಕಾರಿ ರಾಜಧಾನಿಯಲ್ಲಿದ್ದ ನಾಯಕನ ಸೈನ್ಯದ ಹೊಣೆಗಾರಿಕೆ ಹೊತ್ತಿದ್ದ. ಮತ್ತೊಬ್ಬ ಅಧಿಕಾರಿ ಸ್ಥಾನಪತಿ ಎಂದು ಕರೆಯಲ್ಪಟ್ಟು ರಾಜಧಾನಿಯಲ್ಲಿ ತನ್ನ ನಾಯಕನ ಹಿತಪರಿಪಾಲನೆ ಮಾಡುತ್ತಿದ್ದ. ಕೇಂದ್ರ ಸರ್ಕಾರದಲ್ಲಿ ಸಾಮಂತಾಧಿಕಾರಿಗಳು ಮತ್ತು ಮಹಾನಾಯಕಾಚಾರ್ಯರೆಂಬ ಅಧಿಕಾರಿಗಳು ಸಾಮಂತ ರಾಜರ ಇಲಾಖೆಯ ಮೇಲ್ವಿಚಾರಣೆ ಹೊಂದಿದ್ದರು.

ವಿಜಯನಗರ ಕಾಲದಲ್ಲಿ ಅನೇಕ ಬಗೆಯ ಸ್ಥಳೀಯ ಸಂಸ್ಥೆಗಳಿದ್ದುವು. ಆ ಕಾಲದಲ್ಲಿ ಗ್ರಾಮಸಭೆಗಳು, ಮಹಾಜನಸಭೆಗಳು, ಮಹಾನಾಡು ಮತ್ತು ನಾಡುಸಭೆಗಳು, ಪೌರಸಭೆಗಳು ಮತ್ತು ಅನೇಕ ಶ್ರೇಣಿಗಳ ವ್ಯವಸ್ಥೆಯಿದ್ದುವು. ಗ್ರಾಮಸಭೆಗೆ ಊರು, ಒಕ್ಕಲು, ಪ್ರಜೆ, ಹಲರು, ಜಗತ್ತು ಮುಂತಾದ ಹೆಸರುಗಳಿದ್ದವು. ಅಗ್ರಹಾರಗಳಲ್ಲಿ ಮಹಾಜನರ ಸಭೆ ಇದ್ದಿತ್ತು. ನಾಡು ವಿಭಾಗದಲ್ಲಿ ನಾಡುಸಭೆ ಇತ್ತು. ಈ ಸಭೆಗಳು ಭೂಮಿಯನ್ನು ಸಾರ್ವಜನಿಕ ಉಪಯೋಗಕ್ಕೆ ಅಥವಾ ದಾನಧರ್ಮಕ್ಕೆ ಪಡೆಯುತ್ತಿತ್ತು ಮತ್ತು ಕ್ರಯಮಾಡುತ್ತಿತ್ತು. ಈ ಸ್ಥಳೀಯ ಸಂಸ್ಥೆಗಳು ಸಾಮಾನ್ಯ ಪ್ರಜೆಯ ಸೌಕರ್ಯಗಳಿಗೆ ಗಮನವೀಯುತ್ತಿದ್ದವು; ಜನರ ಏಳಿಗೆಗಾಗಿ ಕೆಲಸ ಮಾಡುತ್ತಿದ್ದವು. ಇವು ಆಧುನಿಕ ಸರ್ಕಾರಗಳು ಮಾಡುವ ಕಾರ್ಯನಿರ್ವಾಹಕ ಶಾಖೆ. ಶಾಸನರಚನೆ ಮತ್ತು ನ್ಯಾಯನಿರ್ವಹಣೆ ಕೆಲಸಗಳನ್ನು ಮಾಡುತ್ತಿದ್ದವು. ತೆರಿಗೆಗಳನ್ನು ವಸೂಲು ಮಾಡುವ, ಮಾಫಿ ಮಾಡುವ ಮತ್ತು ಹೊಸ ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ಪಡೆದಿದ್ದುವು. ಹಲವು ಸಂದರ್ಭಗಳಲ್ಲಿ ನ್ಯಾಯವಿತರಣೆ ಮಾಡುತ್ತಿತ್ತು. ಇವುಗಳ ವ್ಯಾಪ್ತಿಗೊಳಪಟ್ಟ ದೇವಸ್ಥಾನಗಳ ಹತೋಟಿ ಹೊಂದಿದ್ದವು. ಅಲ್ಲದೆ ಅನೇಕ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು. ಜನರ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಜೀವನಕ್ಕೆ ಸಂಬಂಧಿಸಿದಂತೆ ಕಾನೂನು ಮಾಡಿ ಹತೋಟಿ ಹೊಂದಿದ್ದವು. ಇವು ಪೌರಕರ್ತವ್ಯಗಳನ್ನು ನೆರವೇರಿಸಿ ಸಾಮಾನ್ಯ ಆಡಳಿತಕ್ಕೆ ಸಹಾಯ ಮಾಡುತ್ತಿದ್ದವು. ನಗರ ಅಥವಾ ಪೌರಸಭೆಯಲ್ಲಿ ಶ್ರೇಣಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಈ ಎಲ್ಲ ಸ್ಥಳೀಯ ಸಂಸ್ಥೆಗಳ ಚಟುವಟಿಕೆಗಳ ಅಧ್ಯಯನದಿಂದ ಇವು ಸ್ವಾಯತ್ತತೆಯನ್ನು ಹೊಂದಿದ್ದವೆಂದು ನಿಸ್ಸಂಶಯವಾಗಿ ಹೇಳಬಹುದು. ಗ್ರಾಮಸಭೆಗಳಲ್ಲಿ ಗ್ರಾಮದ ಗೌಡರು ಅಥವಾ ಒಕ್ಕಲು ಅಥವಾ ಸಮಸ್ತ ಪ್ರಜೆಗಳೂ ಸದಸ್ಯರಾಗಿದ್ದರು. ಗೌಡಿಕೆ ಅಥವಾ ಗ್ರಾಮದ ಮುಖಂಡತ್ವವು ಬಹಳ ಆಕರ್ಷಣೀಯವಾದ ಹುದ್ದೆಯಾಗಿದ್ದಿತು. ಗ್ರಾಮದ ಮುಖಂಡ ಗ್ರಾಮಸಭೆಯ ಮುಖ್ಯ ಅಧಿಕಾರಿಯಾಗಿದ್ದ. ಅಗ್ರಹಾರಗಳಲ್ಲಿದ್ದ ಮಹಾಜನ ಸಭೆಯಲ್ಲಿ ವೃತ್ತಿಕಾರರು ಸದಸ್ಯರಾಗಿದ್ದರು. ಅವರ ಮುಖಂಡರನ್ನು ಬುದ್ಧಿವಂತರು, ಗ್ರಾಮ ಹೆಬ್ಬಾರುವ, ಪ್ರಭು, ಒಡೆಯ, ಮೂಲಿಗ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ನಾಡಿನ ಸಭೆಯಲ್ಲಿ ನಾಡಿಗೆ ಸೇರಿದ ಗ್ರಾಮಗಳ ಮುಖಂಡರು, ನಾಡಿನ ಜನರ ಪ್ರತಿನಿಧಿಗಳು ಮತ್ತು ಹಲವು ಸಂದರ್ಭಗಳಲ್ಲಿ ವ್ಯಾಪಾರ ಶ್ರೇಣಿಗಳ ಪ್ರತಿನಿಧಿಗಳು ಇದ್ದರು. ಶ್ರೇಣಿಗಳು ಪೌರಕರ್ತವ್ಯಗಳನ್ನು ಮಾಡುತ್ತಿದ್ದವು. ಶ್ರೇಣಿಯ ಅಧ್ಯಕ್ಷನನ್ನು ಪಟ್ಟಣಸ್ವಾಮಿ ಎಂದು ಕರೆಯುತ್ತಿದ್ದರು. ಅನೇಕ ವೇಳೆ ಪಟ್ಟಣಸ್ವಾಮಿ ಪೌರಸಭಾಧ್ಯಕ್ಷನಾಗುತ್ತಿದ್ದ. ಈ ಸ್ಥಳೀಯ ಸಂಸ್ಥೆಗಳಲ್ಲಿ ತೀರ್ಮಾನಗಳನ್ನು ಒಮ್ಮತದಿಂದ ತೆಗೆದುಕೊಳ್ಳುತ್ತಿದ್ದರು. ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ಇತ್ತು. (ಎ.ವಿ.ವಿ.)

**ಆರ್ಥಿಕ ಸಾಮಾಜಿಕ ಸ್ಥಿತಿ:** ಧರ್ಮರಕ್ಷಣೆಗಾಗಿ ನಿರಂತರವಾಗಿ ಕದನಗಳಲ್ಲಿ ಭಾಗವಹಿಸ ಬೇಕಾಗಿದ್ದುದರಿಂದ ಸಾಮ್ರಾಜ್ಯಕ್ಕೆ ವಿಶೇಷವಾಗಿ ಧನ ಬೇಕಾಗಿತ್ತು. ಅರಸರಿಗೆ ಯುದ್ಧಕ್ಕೆ ಬೇಕಾದ ಕುದುರೆಗಳ ಆವಶ್ಯಕತೆ ಹೆಚ್ಚಾಗಿದ್ದು ಆ ಕಾರಣದಿಂದಲೇ ಅರಸರು ಪೋರ್ಚುಗೀಸ ರೊಡನೆ ಹಾರ್ದಿಕ ಸಂಬಂಧಗಳನ್ನಿಟ್ಟುಕೊಂಡು ಅವರಿಂದ ಕುದುರೆಗಳನ್ನು ಪಡೆಯುತ್ತಿದ್ದರು. ಈ ಅಶ್ವಪಡೆಗೆ ವಿಶೇಷವಾದ ಧನ ವ್ಯಯವಾಗುತ್ತಿತ್ತು. ಧನಸಂಗ್ರಹಕ್ಕಾಗಿ ಉತ್ಪನ್ನಮೂಲಗಳನ್ನು ರೂಪಿಸಿಕೊಳ್ಳಬೇಕಾಗಿತ್ತು. ಆದುದರಿಂದಲೇ ಅರಸರೂ ಅಧಿಕಾರಿಗಳೂ ರಾಜ್ಯದ ಆರ್ಥಿಕಾ ಭಿವೃದ್ಧಿಗಾಗಿ ಶ್ರಮಿಸಿದರು. ಬೀಳು ಬಿದ್ದಿದ್ದ ಸಾವಿರಾರು ಎಕರೆ ಭೂಮಿಯನ್ನು ಸಾಗುವಳಿಗೆ ತರಲಾಯಿತು. ಕಾಡುಗಳನ್ನು ಕಡಿದು ಹೆಚ್ಚಿನ ಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಲಾ ಯಿತು. ಅದಕ್ಕೆಂದೇ ಆ ಹೊಸ ಪ್ರದೇಶಗಳಲ್ಲಿ ನೆಲಸಿದವರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿ ತೆರಿಗೆಗಳಲ್ಲಿ ರಿಯಾಯಿತಿಗಳನ್ನು ತೋರಿಸಲಾಗಿತ್ತು. ಅನೇಕ ಗ್ರಾಮಗಳನ್ನು ನಗರಗಳಾಗಿ ಪರಿವರ್ತಿಸಿ ಅಲ್ಲಿ ವ್ಯವಸಾಯೋತ್ಪನ್ನಗಳನ್ನು ಮಾರಲು ಸಂತೆಗಳನ್ನು ಏರ್ಪಡಿಸಲಾಯಿತು.

ರಾಜ್ಯದಲ್ಲಿ ಹೆಚ್ಚಿನ ಮಟ್ಟಿಗೆ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ರತ್ನದ, ವಜ್ರದ ಗಣಿಗಳಿದ್ದುವು. ರಾಜ್ಯದಲ್ಲಿ ಹಲವಾರು ದೊಡ್ಡ ಸಣ್ಣ ರೇವುಗಳಿದ್ದುವು. ರಾಜ್ಯವು ಮಲಯ, ಬರ್ಮಾ(ಮಯನ್ಮಾರ್), ಚೀನ, ಅರೇಬಿಯ, ಪರ್ಷಿಯ(ಇರಾನ್), ದಕ್ಷಿಣ ಆಫ್ರಿಕ, ಅಬಿಸೀನಿಯ ಮತ್ತು ಪೋರ್ಚುಗಲ್ ದೇಶಗಳೊಡನೆ ವ್ಯಾಪಾರ ಸಂಬಂಧ ಹೊಂದಿತ್ತು. ಬಟ್ಟೆ, ಅಕ್ಕಿ, ಕಬ್ಬಿಣದ ಅದಿರು, ಮರ, ಸಂಬಾರ ಪದಾರ್ಥಗಳು, ಸಕ್ಕರೆ– ಇವು ರಫ್ತು ಸಾಮಗ್ರಿಗಳು. ಹೀಗೆ ಭೂಮಿಯಿಂದ ಬರುವ ವಿಪುಲ ಆದಾಯ, ದೇಶಾಂತರಗಳ ವ್ಯಾಪಾರೋದ್ಯಮ ಸಾಧನೆಗಳಿಂದ ಹರಿದುಬರುವ ಧನಪ್ರವಾಹದಿಂದ ಸಾಮ್ರಾಜ್ಯ ಸಮೃದ್ಧವೂ ಧನಾಢ್ಯವೂ ಆಗಿತ್ತು. ಇಷ್ಟೆಲ್ಲ ಆದರೂ ವಿವಿಧ ರೀತಿಯ ತೆರಿಗೆಗಳಿಂದ ಜನರು ಕೆಲವೊಮ್ಮೆ ಸಹನಶಕ್ತಿಯನ್ನೇ ಕಳೆದುಕೊಂಡಂತೆ ತೋರುತ್ತದೆ. ನಾವಿದರೆಲ್ಲ ಒಟ್ಟುಗೂಡಿ ಸದಾಶಿವರಾಯನಿಗೆ ನಾವಿದವಾರಿಯನ್ನು ತೆಗೆಯಬೇಕೆಂದು ಪ್ರಾರ್ಥನೆ ಮಾಡುವ ಅಂಶ ಶಾಸನಗಳಿಂದ ತಿಳಿದುಬಂದಿದೆ. ಅಂತೆಯೇ ರಾಜ್ಯಾದ್ಯಂತ ಮದುವೆಯ ಸುಂಕವನ್ನು ಕೃಷ್ಣದೇವರಾಯ ಮನ್ನಾ ಮಾಡಿದ ವಿಷಯವೂ ವ್ಯಕ್ತವಾಗಿದೆ.

ಪ್ರಾಚೀನ ಕಾಲದಿಂದಲೂ ನಡೆದುಬಂದ ವರ್ಣಾಶ್ರಮಗಳನ್ನು ನಡೆಸಿಕೊಂಡು ಬರುವುದು ತಮ್ಮ ಕರ್ತವ್ಯವೆಂದು ಅರಸರು ಭಾವಿಸಿದ್ದರು. ಪರಕೀಯರಿಂದ ದೇಶಕ್ಕೆ ಉಂಟಾಗಿದ್ದ ಕುತ್ತಿನಿಂದ ಪಾರಾಗಲು ಪ್ರಜೆಗಳೆಲ್ಲರೂ ಒಟ್ಟಾಗಿ ಧರ್ಮದಿಂದ ಬಾಳಬೇಕೆಂದು ಅರಸರೂ ಅವರಂತೆಯೇ ಪ್ರಜೆಗಳೂ ತಿಳಿದಿದ್ದರು. ಬ್ರಾಹ್ಮಣರಲ್ಲಿ ಕೆಲವರು ದೇವಾಲಯಗಳಲ್ಲಿ ಪೂಜಾದಿ ಕಾರ್ಯಗಳನ್ನು ಮಾಡುತ್ತಿದ್ದರು. ಇನ್ನು ಕೆಲವರು ರಾಜಕೀಯದಲ್ಲಿ ಪ್ರಮುಖ ಸ್ಥಾನ ಪಡೆದಿದ್ದರು. ಅಧಿಕಾರ ವರ್ಗಗಳಲ್ಲಿದ್ದವರು ಈ ಕಾಲದಲ್ಲಿ ಕಾಣಿಸಿಕೊಂಡಿದ್ದಾರೆ. ಇವರು ವಿಶೇಷವಾದ ಪಾಂಡಿತ್ಯ ಪಡೆದಿದ್ದರು. ಆದರೆ ಇವರೂ ಹೆಚ್ಚಿನ ಗೌರವಕ್ಕೆ ಪಾತ್ರರಾಗಿದ್ದಾರೆಂದು ಹೇಳಲಾಗುವುದಿಲ್ಲ.

ಅಂದಿನ ಸಮಾಜದಲ್ಲಿ ವಿಶಿಷ್ಟವಾಗಿ ಕಂಡುಬರುವವರು ವಿಪ್ರವಿನೋದಿ, ಪಾಂಚಾಳ, ಕೈಕೊಳ, ಡೊಂಬ, ನಾವಿದ ಮುಂತಾದ ಕುಶಲಕರ್ಮಿ ಹಾಗೂ ಇತರ ಕಸಬುಗಳವರು. ಇವರೆಲ್ಲ ಆಗ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ತಮ್ಮದೇ ಆದ ಸಂಘಗಳನ್ನು ರಚಿಸಿಕೊಂಡಿದ್ದರು. ಇದು ಅಂದಿನ ಸಮಾಜ ಜಾಗೃತವಾಗಿತ್ತೆನ್ನಲು ಒಂದು ಉದಾಹರಣೆಯಾಗಿದೆ. ವಿಜಯನಗರ ಸಾಮ್ರಾಜ್ಯ ಸಮಗ್ರ ದಕ್ಷಿಣ ಭಾರತಕ್ಕೂ ವಿಸ್ತರಿಸಿದ್ದರಿಂದ ಭಿನ್ನಭಾಷೆಗಳಿಗೆ ಸೇರಿದ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದುದೂ ಸಾಮಾಜಿಕ ಸಂಘರ್ಷಗಳಿಗೆ ಒಂದು ಕಾರಣವಾಗಿತ್ತು.

ಸಾಂಘಿಕ ಜೀವನ ಜಾಗೃತವಾಗಿದ್ದ ಕಾರಣ ಪ್ರಜೆಗಳು ಸರ್ಕಾರದ ನೆರವಿಗಾಗಿ ಕಾಯದೆ ತಮ್ಮ ತಮ್ಮ ಆವಶ್ಯಕತೆಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಅನೂಚಾನವಾಗಿ ನಡೆದುಬಂದಿದ್ದ ನಗರಗಳ ಹಾಗೂ ಗ್ರಾಮೀಣ ಸ್ವಯಂ ಆಡಳಿತ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ಹೆಚ್ಚು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿದ್ದುವು.

**ಸ್ತ್ರೀಯರ ಸ್ಥಾನಮಾನ:** ಸಮಾಜದಲ್ಲಿ ಸ್ತ್ರೀ ಬಹು ಗಣ್ಯಸ್ಥಾನ ಪಡೆದಿದ್ದಳೆಂಬುದು ನಿಜವಾದರೂ ಬಹುಪಾಲು ಸಾಂಸಾರಿಕ ಸ್ತ್ರೀಯರು ವಿಶೇಷವಾಗಿ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರಲಿಲ್ಲವೆಂದೇ ಹೇಳಬೇಕು. ಯಾತ್ರಿಕ ಪೇಯಿಸ್ ಇಂತಹ ಸಾಂಸಾರಿಕ ಸ್ತ್ರೀಯರನ್ನು ತಾನು ಹೊರಗೆ ಕಂಡಿದ್ದೇ ಇಲ್ಲವೆಂದಿದ್ದಾನೆ. ಆದರೆ ಅರಸರ ಅಂತಃಪುರದಲ್ಲಿ ಅನೇಕ ಸ್ತ್ರೀಯರಿದ್ದರು. ರಾಣೀವಾಸದವರ ಸೇವೆಗೆಂದೇ ನೂರಾರು ದಾಸಿಯರು ನಿಯಮಿತ ರಾಗಿದ್ದರು. ಇಂತಹವರು ನ್ಯಾಯವಿಧಾನ, ರಕ್ಷಣಾ ವಿಧಾನ, ಗಣಿತ, ಲೇಖನಕಲೆ, ಕಾವ್ಯ, ಸಂಗೀತ, ನೃತ್ಯ, ವಾದನ ಇತ್ಯಾದಿಗಳಲ್ಲಿ ಪರಿಣತರಾಗಿದ್ದರು. ಕೃಷ್ಣದೇವರಾಯನ ಆಸ್ಥಾನದಲ್ಲಿ 400 ಜನ ಇಂತಹ ಸ್ತ್ರೀಸೇವಕಿಯರಿದ್ದರು. ಹೊನ್ನಮ್ಮ ಎಂಬಾಕೆ ಪ್ರೌಢದೇವ ರಾಯನ ಆಸ್ಥಾನದಲ್ಲಿ ವರದಿಗಾರಳಾಗಿದ್ದಳು. ತಿರುಮಲಾಂಬೆ ಅಚ್ಯುತರಾಯನ ಕಾಲದಲ್ಲಿ ಬಹುಶಃ ಇಂತಹುದೇ ಪದವಿಯನ್ನಲಂಕರಿಸಿದ್ದಳು. ಗ್ರಾಮಗಳಲ್ಲಿ ಸ್ತ್ರೀಯರು ಬೇಸಾಯದಲ್ಲಿ ಸಹಕರಿಸಿ ಬತ್ತದ ಮಡಿಗಳನ್ನು ಕಾಯುವ, ಹಕ್ಕಿಬೆದರಿಸುವ ಕೆಲಸಗಳಲ್ಲಿ ನಿರತರಾಗಿದ್ದರು. ಕನಕದಾಸರ ಪದವೊಂದರಲ್ಲಿ ಸ್ತ್ರೀವ್ಯಾಪಾರಿಗಳ ವರ್ಣನೆಯಿದೆ. ನಟ ತಿಮ್ಮಯ್ಯನ ಮಗಳಾದ ಪಾತ್ರಿ ಎಂಬುವಳು ನಟಿಯಾಗಿ ತಾಯಿಕುಂದ ನಾಟಕದಲ್ಲಿ ಪಾತ್ರವಹಿಸಿದ್ದಳೆಂದು ಶಾಸನವೊಂದರಿಂದ ತಿಳಿದುಬಂದಿದೆ. ದೇವಾಲಯಗಳಲ್ಲಿ ಹಲವಾರು ಸ್ತ್ರೀಯರು ವಿಭಿನ್ನಕಾರ್ಯಗಳಲ್ಲಿ ತೊಡಗಿದ್ದರು. ವೇಶ್ಯಾವೃತ್ತಿ ಹಾಗೂ ದೇವದಾಸೀ ಪದ್ಧತಿ ಈ ಕಾಲದಲ್ಲಿ ಹೆಚ್ಚಿತ್ತು. ಅನೇಕ ವೇಶ್ಯೆಯರು ವೈಭವೋಪೇತ ಜೀವನ ನಡೆಸುತ್ತಿದ್ದರೆಂದೂ ಶ್ರೀಮಂತರಾಗಿದ್ದರೆಂದೂ ಬಾರ್ಬೋಸ ತಿಳಿಸಿದ್ದಾನೆ. ಅಬ್ದುಲ್‍ರಜಾಕ್ ಪ್ರಕಾರ ವೇಶ್ಯಾವೃತ್ತಿ ಸರ್ಕಾರದಿಂದ ಅಧಿಕೃತಮಾನ್ಯತೆ ಪಡೆದಿದ್ದು ಅವರ ಮೇಲೆ ತೆರಿಗೆ ಹಾಕಲಾಗುತ್ತಿತ್ತು ಹಾಗೂ ಆ ತೆರಿಗೆಯನ್ನು ನಗರ ರಕ್ಷಕನ ವೇತನವಾಗಿ ನೀಡಲಾಗುತ್ತಿತ್ತೆಂದು ಉಲ್ಲೇಖಿಸಿದ್ದಾನೆ. ದೇವಾಲಯಗಳಲ್ಲಿ ನಡೆಯುವ ಉತ್ಸವಗಳಲ್ಲಿ, ಶ್ರೀಮಂತರ ಮದುವೆಗಳಲ್ಲಿ ಹಾಗೂ ಇತರ ಸಂದರ್ಭಗಳಲ್ಲಿ ಈ ಸ್ತ್ರೀಯರು ವಿಶೇಷವಾಗಿ ಭಾಗವಹಿಸುತ್ತಿದ್ದರು.

ಜನ ಉತ್ಸವಪ್ರಿಯರಾಗಿದ್ದು. ಹಬ್ಬಹುಣ್ಣಿಮೆಗಳಲ್ಲಿ, ಆಟಪಾಟಗಳಲ್ಲಿ ತೊಡಗಿ ಸಮುದಾಯಕ್ಕೆ ಸಂತಸವನ್ನೀಯುತ್ತಿದ್ದರು. ಅರಸರೂ ಇದನ್ನು ಪ್ರೋತ್ಸಾಹಿಸಿದರು. ಈ ಕಾಲದಲ್ಲಿ ಬಹಳ ಪ್ರಾಶಸ್ತ್ಯ ಪಡೆದ ಹಬ್ಬ ನವರಾತ್ರಿ. ಕೃಷ್ಣದೇವರಾಯನ ಕಾಲದಲ್ಲಿ ಅರಮನೆಯಲ್ಲಿ ಆಚರಿಸಲಾದ ಈ ಹಬ್ಬದ ವೈಭವವನ್ನು ಪೇಯಿಸ್ ವರ್ಣಿಸಿದ್ದಾನೆ. ಈತನ ಹೇಳಿಕೆಗಳನ್ನು ಕವಿ ರತ್ನಾಕರವರ್ಣಿಯ ಭರತೇಶವೈಭವದಲ್ಲಿಯ ನವರಾತ್ರಿಸಂಧಿಯಲ್ಲಿ ಬಣ್ಣಿಸಲಾದ ವಿವರಗಳೊಡನೆ ಹೋಲಿಸಬಹುದು. ಈ ಕಾಲದಲ್ಲಿ ಸಂಗೀತಕ್ಕೆ ಅಮಿತವಾದ ಪ್ರೋತ್ಸಾಹ ದೊರೆತಿತ್ತು. ಹಲವಾರು ಸಂಗೀತ ಗ್ರಂಥಗಳು ರಚಿತವಾದುವು. ಭಕ್ಷ್ಯಭೋಜ್ಯಗಳನ್ನು ತಯಾರಿಸುವುದರಲ್ಲಿ ಉತ್ತಮ ಅಭಿರುಚಿಯನ್ನು ಅಂದಿನ ಜನ ವ್ಯಕ್ತಗೊಳಿಸುತ್ತಿದ್ದರು. ಮಂಗರಸನ (ಸು.1508) ಸೂಪಶಾಸ್ತ್ರ ಈ ಕಾಲದ ಒಂದು ಗ್ರಂಥ.

**ಲಲಿತಕಲೆ-ಸಾಹಿತ್ಯ:** ವಿಜಯನಗರದ ಅರಸರ ಆಳಿಕೆ ಕರ್ನಾಟಕ ಸಂಸ್ಕೃತಿಯ ಉಚ್ಛ್ರಾಯಕಾಲ; ಕಲೆ ಸಾಹಿತ್ಯಗಳು ಪುನರುಜ್ಜೀವನಗೊಂಡ ಕಾಲ. ಅರಸರು ಎಲ್ಲ ರೀತಿಯ ಕಲೆಗಳಿಗೂ ಅಮಿತ ಪ್ರೋತ್ಸಾಹ ನೀಡಿದರು. ಈ ಕಾಲದಲ್ಲಿ ಕಲೆಗೆ ಹೊಸ ತಿರುವು, ಹೊಸ ಉತ್ಸಾಹ ಮೂಡಿತು. ರಾಜಮನೆತನಗಳ ಪ್ರೋತ್ಸಾಹವಷ್ಟಕ್ಕೇ ಸೀಮಿತವಾಗದೆ ಜನಸಾಮಾನ್ಯರಲ್ಲೂ ಕಲಾಪ್ರಜ್ಞೆ ಮೂಡಿ ಪ್ರೌಢವಾದ ವಿದ್ವತ್ಕಲೆ ಮತ್ತು ಜನಪದ ಕಲೆಗಳ ಸಮ್ಮಿಳನವಾಗಿ ಪಂಡಿತಪಾಮರರಿಬ್ಬರನ್ನೂ ರಂಜಿಸಬಲ್ಲ ನೂತನ ವಿಸ್ತಾರವನ್ನು ಕಲೆಗಳು ಕಂಡುಕೊಂಡವು.

ವಿಜಯನಗರ ಕಾಲದ ಚಿತ್ರಕಲೆ ಈಗ ಉಳಿದು ಬಂದಿರುವುದು ಬಹಳ ಕಡಿಮೆಯೆ. ಆದರೆ ಆ ಕಾಲದಲ್ಲಿ ಚಿತ್ರಕಲೆಗೆ ವಿಜಯನಗರದ ಅರಸರು ಅದರಲ್ಲಿಯೂ ಕೃಷ್ಣದೇವರಾಯ, ಅಚ್ಯುತರಾಯರು ಕೊಟ್ಟ ಪ್ರೋತ್ಸಾಹ, ಚಿತ್ರಕಾರರಲ್ಲಿ ಆಗ ಇದ್ದ ಉತ್ಸಾಹಗಳನ್ನು ಹೊರದೇಶದ ಪ್ರವಾಸಿಗಳು ಬರೆದಿಟ್ಟಿರುವ ವರ್ಣನೆಯಿಂದ ತಿಳಿಯಲವಕಾಶವಿದೆ. ಇವರ ಕಾಲದ ಚಿತ್ರಗಳು ಹಂಪೆಯ ವಿರೂಪಾಕ್ಷ ದೇವಾಲಯ, ಆನೆಗೊಂದಿಯ ಒಂದು ಮಂಟಪ. ಲೇಪಾಕ್ಷಿ, ಸೋಂಡಲ್ಲೆ ತಾಡಪ್ರತಿಗಳ ದೇವಾಲಯಗಳಲ್ಲಿ, ಕಂಚಿ ವರದರಾಜ ದೇವಾಲಯ, ತಂಜಾವೂರಿನ ಬೃಹದೀಶ್ವರ ದೇವಾಲಯಗಳಲ್ಲಿ, ಚಂದ್ರಗಿರಿಯಲ್ಲಿ ಉಳಿದಿವೆ. ಆ ಕಾಲದ ಸಾಹಿತ್ಯದಲ್ಲಿ ಬರುವ ವರ್ಣನೆಗಳಿಂದ ಆ ರಾಜ್ಯದಲ್ಲಿದ್ದ ಶ್ರೀಮಂತರು ತಮ್ಮ ಮನೆಗಳನ್ನು ವರ್ಣಚಿತ್ರಗಳಿಂದ ಅಲಂಕರಿಸುತ್ತಿದ್ದ ಪದ್ಧತಿ ಇದ್ದಂತೆ ತೋರುತ್ತದೆ. ಇವು ಪೌರಾಣಿಕ ವಸ್ತುಗಳನ್ನಾಧರಿಸಿದ್ದುವು; ಸಮುದ್ರಮಥನ, ಕಾಮಸಂಹಾರಮೂರ್ತಿ, ಗಿರಿಜಾಕಲ್ಯಾಣ, ನಳದಮಯಂತಿ, ಪ್ರಾಣಿಪಕ್ಷಿಗಳ ಆಕೃತಿಗಳು ಇತ್ಯಾದಿ. ಇವಲ್ಲದೆ ಜನಸಾಮಾನ್ಯರೂ ತಮ್ಮ ಮನೆಗಳ ಮುಂದೆ, ಗೋಡೆಗಳ ತಳಭಾಗದಲ್ಲಿ ಗಿಡ ಗಿಣಿಗಳ ಆಕೃತಿಗಳು, ರಂಗವಲ್ಲಿಯ ಬಗೆಬಗೆಯ ಆಕಾರಗಳನ್ನು ಬಿಡಿಸುವುದರಲ್ಲಿ ಆಸಕ್ತಿ ತೋರುತ್ತಿದ್ದುದು ಕಂಡುಬರುತ್ತದೆ.

ಕೃಷ್ಣದೇವರಾಯನ ಆಳಿಕೆಯಲ್ಲಿ ಅವನ ಅರಮನೆಯನ್ನು ಸಂದರ್ಶಿಸಿದ್ದ ಪೋರ್ಚುಗೀಸ್ ಪ್ರವಾಸಿ ಡೊಮಿಂಗೊ ಪೇಯಿಸ್ ಅರಮನೆಯ ವಿವಿಧ ಭಾಗಗಳಲ್ಲಿ ಕಂಡುಬಂದ ಚಿತ್ರಗಳ ಬಗೆಗೆ, ಅಲ್ಲಿ ಚಿತ್ರಿಸುತ್ತಿದ್ದ ಚಿತ್ರಕಾರರ ಉತ್ಸಾಹದ ಬಗೆಗೆ ವಿಸ್ತಾರವಾಗಿ ವರ್ಣಿಸಿದ್ದಾನೆ. ಇಮ್ಮಡಿ ವೆಂಕಟನ ಕಾಲದಲ್ಲಿ ಸಂದರ್ಶಿಸಿದ್ದ ಜೆರಿಕ್ ಚಂದ್ರಗಿರಿಯಲ್ಲಿ ಅನೇಕ ಚಿತ್ರಗಾರರಿದ್ದುದಾಗಿ ತಿಳಿಸಿದ್ದಾನೆ. ಯುರೋಪಿನಿಂದ ಬಂದ ಪ್ರವಾಸಿಗಳು ರಾಜನಿಗೆ ಚಿತ್ರಗಳನ್ನು ಕಾಣಿಕೆ ಕೊಡುತ್ತಿದ್ದುದಾಗಿಯೂ ಅವುಗಳ ಮಟ್ಟಕ್ಕೆ ದೇಶೀಯ ಚಿತ್ರಗಳು ಬರುತ್ತಿರಲಿಲ್ಲವೆಂದೂ ಅವನ ಅಭಿಪ್ರಾಯ.

ಈಗ ಉಳಿದುಬಂದಿರುವ ಚಿತ್ರಗಳಲ್ಲಿ ಬಹುಶಃ ಆನೆಗೊಂದಿಯ ಹುಚ್ಚುಮಲ್ಲಪ್ಪನ ಮಠ ಎಂದು ಈಗ ಕರೆಯಲ್ಪಡುವ ಒಂದು ದೊಡ್ಡಮಂಟಪ ಗಮನಾರ್ಹ. ಇದರ ಚಾವಣಿಯಲ್ಲಿಯ ಚಿತ್ರಗಳೆಲ್ಲ ಬಹುಮಟ್ಟಿಗೆ ನಾಶವಾಗಿದ್ದು ಚಿತ್ರಗಳಿದ್ದ ಕುರುಹುಗಳು ಮಾತ್ರ ಈಗ ಉಳಿದಿವೆ. ಹಂಪೆಯ ವಿರೂಪಾಕ್ಷ ದೇವಾಲಯದ ಮುಂದಿನ ವಿಶಾಲವಾದ ಭವ್ಯವಾದ ರಂಗಮಂಟಪದ ಚಾವಣಿ. ತೊಲೆಗಳ ಮೇಲಿನ ಚಿತ್ರಗಳು ಅನಂತರದ ಕಾಲದ್ದು. ಈ ಮಂಟಪವನ್ನು 1509-10ರಲ್ಲಿ ಕೃಷ್ಣದೇವರಾಯ ತನ್ನ ಕಿರೀಟಧಾರಣ ಮಹೋತ್ಸವದ ಸಂದರ್ಭದಲ್ಲಿ ಕಟ್ಟಿಸಿದ, ಆಗಲೇ ಈ ಚಿತ್ರಗಳನ್ನೂ ರಚಿಸಿರಬೇಕು. ಈ ಪೈಕಿ ಒಂದು ಸಾಲಿನಲ್ಲಿ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಬ್ರಹ್ಮಸರಸ್ವತಿಯರ ಚಿತ್ರಗಳೂ ಎರಡನೆಯದರಲ್ಲಿ ಎಡಬಲಗಳಲ್ಲಿ ಬ್ರಹ್ಮ, ವಿಷ್ಣು, ತುಂಬುರು ನಾರದರು, ಪರಿವಾರದೇವತೆಗಳೂ ನಿಂತಿರುವಂತೆ ವಿಸ್ತಾರವಾಗಿ ಚಿತ್ರಿಸಿರುವ ಗಿರಿಜಾ ಕಲ್ಯಾಣ, ಮತ್ತೊಂದು ಅಷ್ಟದಿಕ್ಪಾಲಕರ ಸಾಲು, ಹಾಗೆಯೇ ಇನ್ನೊಂದರಲ್ಲಿ ಶಿವನ ತಪೋಭಂಗ, ತ್ರಿಪುರದಹನಗಳೂ ಕೊನೆಯ ಸಾಲಿನಲ್ಲಿ ವಿಷ್ಣುವಿನ ದಶಾವತಾರಗಳೂ ಚಿತ್ರಿತವಾಗಿವೆ. ಮುಂಭಾಗದ ತೊಲೆಯೊಂದರ ಮೇಲಿನ ಪಲ್ಲಕ್ಕಿಯೊಂದರಲ್ಲಿ ಕುಳಿತ ಸಂನ್ಯಾಸಿಯೊಬ್ಬನ ಮೆರವಣಿಗೆಯನ್ನು ವಿದ್ಯಾರಣ್ಯರೆಂದೋ ವ್ಯಾಸರಾಯರೆಂದೋ ಗುರುತಿಸಲಾಗುತ್ತಿದೆ. ಆದರೆ ಇವಕ್ಕೆ ಅನಂತರದ ಕಾಲದಲ್ಲಿ ಪುನಃ ಬಣ್ಣ ಹಾಕಿರುವುದರಿಂದ ಅವುಗಳ ಮೂಲಸ್ವರೂಪದ ಸ್ಪಷ್ಟ ಅರಿವು ಸಾಧ್ಯವಾಗದು. ಈ ದೃಷ್ಟಿಯಿಂದ ಅಚ್ಯುತರಾಯನ ಕಾಲದಲ್ಲಿ ಲೇಪಾಕ್ಷಿಯಲ್ಲಿ ನಿರ್ಮಿತವಾದ ವೀರಭದ್ರ ದೇವಾಲಯದ ವ್ಯಾಪಕವಾದ ಚಿತ್ರಸಮೂಹ ಅಮೂಲ್ಯವಾದುದು. ಈ ತ್ರಿಕೂಟಾಚಲದ ಮಧ್ಯದ ನಾಟ್ಯಮಂಟಪ, ಅರ್ಧಮಂಟಪಗಳ ಚಾವಣಿಗಳು, ಗೋಡೆಗಳು, ಸುತ್ತಲೂ ಇರುವ ಕೈಸಾಲೆಯ ಚಾವಣಿಗಳ ಮೇಲೆಲ್ಲ ಚಿತ್ರಗಳು ತುಂಬಿವೆ. ಕೈಸಾಲೆಯ ಚಿತ್ರಗಳು ಖಿಲವಾಗಿದ್ದರೂ ದೇವಾಲಯದ ಒಳಗಿನ ಚಿತ್ರಗಳು ಉಳಿದು ಬಂದಿದ್ದು ಇಲ್ಲಿಯ ಹಲವು ಚಿತ್ರಗಳು ಕಲೆಗಾರನ ಕುಶಲತೆಯನ್ನು ಪ್ರದರ್ಶಿಸುತ್ತವೆ. ನಾಟ್ಯಮಂಟಪದಲ್ಲಿ ಗಿರಿಜಾಕಲ್ಯಾಣ, ದಕ್ಷಿಣಾಮೂರ್ತಿ, ಶ್ರೀರಾಮಪಟ್ಟಾಭಿಷೇಕ, ವಟಪತ್ರಶಾಯಿ, ಕಿರಾತಾರ್ಜುನೀಯ, ಶಿವಪಾರ್ವತಿಯರ ಪಗಡೆಯಾಟ ಇತ್ಯಾದಿ ಚಿತ್ರಗಳಿದ್ದು ಮಧ್ಯದಲ್ಲಿ ಬೃಹದಾಕಾರದಲ್ಲಿ ಚಿತ್ರಿತವಾದ ವೀರಭದ್ರನ ಮೂರ್ತಿಯ ಮುಂದೆ ಆ ದೇವಾಲಯವನ್ನು ಕಟ್ಟಿಸಿದ ವಿರಪಣ್ಣ, ವೀರಪ್ಪ ಮತ್ತು ಅವರ ಪರಿವಾರದವರು ಪ್ರಸಾದ ಸ್ವೀಕರಿಸುತ್ತಿರುವುದನ್ನು ವಿಸ್ತಾರವಾಗಿ ಚಿತ್ರಿಸಲಾಗಿದೆ. ಅರ್ಧಮಂಟಪದಲ್ಲಿ ಹಲವು ಬಗೆಯ ಶಿವಲೀಲಾಮೂರ್ತಿಗಳಿದ್ದು ಕೆಲವು ಅವುಗಳ ರಚನಾಕೌಶಲ್ಯಕ್ಕೆ ಹೆಸರಾಗಿವೆ. ಇವುಗಳಲ್ಲಿ ಅಪಸ್ಮಾರ ಮೇಲೆ ನರ್ತಿಸುತ್ತಿರುವ ಶಿವನ ಭವ್ಯ, ನಾಟ್ಯಭಂಗಿ ಅದ್ಭುತವಾದ ಚಿತ್ರ. ಶಿವನ ಸುಂದರವಾದ ಭಂಗಿ, ನೀಳಕಾಯದ ಸೊಬಗು, ಚಲನೆಯ ಸಾಮರಸ್ಯ, ಅತ್ಯಂತ ಅನುರೂಪವಾದ ನಿಲುವು, ಪ್ರಶಾಂತ ಮುಖ ಮುದ್ರೆಗಳು ನುರಿತ ಚಿತ್ರಗಾರನೊಬ್ಬನ ಕೃತಿ ಇದೆಂದು ವ್ಯಕ್ತಪಡಿಸುತ್ತವೆ. ಇಲ್ಲಿಯ ಮತ್ತೊಂದು ಅತಿ ಸುಂದರ ಚಿತ್ರವೆಂದರೆ ಗಂಗಾಧರ ಶಿವನು ಗೌರಿಯನ್ನು ಸಾಂತ್ವನಗೊಳಿಸುತ್ತಿರುವುದು. ಅತ್ಯಂತ ನವುರಾದ ಭಾವನೆಯನ್ನು ಅಷ್ಟೇ ನವುರಾಗಿ ಬಿಡಿಸಿರುವ ಇಲ್ಲಿಯ ಕಲೆ ಅಮೋಘವಾದುದು. ಜಟೆಯಲ್ಲಿ ಅಡಗಿಸಿಟ್ಟುಕೊಂಡಿದ್ದ ತನ್ನ ಹೊಸ ಹೆಣ್ಣು ಗಂಗೆಯು ಭಗೀರಥನ ಬೇಡಿಕೆಗೆ ಓಗೊಟ್ಟು ದುಮ್ಮಿಕ್ಕಿದುದನ್ನು ಕಂಡ ಪಾರ್ವತಿಯ ಅಸಹನೆ, ಶಿವನ ಪೇಚು, ಆದರೂ ಮುಖದಿರುಹಿದ ಆ ಕೋಪದ ಮುಂದೆ ಶಾಂತ ಭಾವದಿಂದ ಗಲ್ಲಕ್ಕೆ ಕೈಚಾಚಿ ರಮಿಸಲೆತ್ನಿಸುತ್ತಿರುವ ಆ ಭಂಗಿ-ಎಲ್ಲವೂ ಸೂಕ್ಷ್ಮ, ಪಾದದಿಂದ ಕಟಿಯವರೆಗೆ ಹಿಂದಕ್ಕೆ ಚಾಚಿಕೊಂಡಂತಿದ್ದು ಅಲ್ಲಿಂದ ಮೇಲೆ ನೇರ ನಿಲುವಿರುವುದು ಇಲ್ಲಿ ನಿಂತಿರುವ ಸಾಲು ಚಿತ್ರಗಳ ವೈಶಿಷ್ಟ್ಯ. ವಿಜಯನಗರದ ಕಡೆಯ ಕಾಲಕ್ಕೆ ಸೇರಬಹುದಾದ ಬೃಹದೀಶ್ವರ ದೇವಾಲಯದ ಚಿತ್ರಗಳಲ್ಲಿ ಒರಟುತನ, ಅಸಹಜತೆ ಕಂಡುಬಂದು ಚಿತ್ರಕಲೆ ಅವನತಿ ಹೊಂದುತ್ತಿದ್ದುದನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ವಿಜಯನಗರದ ಉಚ್ಛ್ರಾಯಕಾಲದ ಚಿತ್ರಗಳು ಅತ್ಯಂತ ನವುರಾದ ಸುಂದರವಾದ ಭಾವಭಂಗಿಗಳನ್ನು ಸೆರೆಹಿಡಿಯುವಲ್ಲಿ, ಆಯಾ ಸಂದರ್ಭಕ್ಕೆ ತಕ್ಕಂತೆ ಮನದ ಇಂಗಿತವನ್ನು ಹೊಮ್ಮಿಸುವಲ್ಲಿ, ಅನುರೂಪವಾದ ವರ್ಣಸಂಯೋಜನೆಯಲ್ಲಿ, ಗೆರೆಗಳಲ್ಲಿ ನಿಶ್ಚಿತವಾದ ಆಕೃತಿಗಳನ್ನು ಮೂಡಿಸುವಲ್ಲಿ, ಬಾಗುಬಳುಕುಗಳನ್ನು ತರುವಲ್ಲಿ ಆ ಕಾಲದ ಚಿತ್ರಕಾರರು ನಿಷ್ಣಾತರಾಗಿದ್ದರೆಂಬುದನ್ನು ತೋರಿಸುತ್ತವೆ.

ಸಂಗೀತ, ನೃತ್ಯಕಲೆಗಳಿಗೆ ವಿಜಯನಗರದ ಅರಸರು ಕೊಟ್ಟ ಪ್ರೋತ್ಸಾಹದಿಂದ ಅವು ಹಲವು ಬಗೆಯಲ್ಲಿ ಅಭಿವೃದ್ಧಿಹೊಂದಿದವು. ದಾಕ್ಷಿಣಾತ್ಯ ಸಂಗೀತ ಪದ್ಧತಿಗೆ ಕರ್ಣಾಟಕ ಸಂಗೀತ ಎಂಬ ಹೆಸರು ಚಾಳುಕ್ಯ ಸೋಮೇಶ್ವರನ ಕಾಲದಲ್ಲಿಯೇ ಬಂದಿತೆಂದು ಹೇಳಲಾಗಿದ್ದರೂ ಅದು ಪ್ರಚಲಿತವಾದದ್ದು ವಿಜಯನಗರದ ಕಾಲದಲ್ಲಿಯೇ. ಈ ಕಾಲದಲ್ಲಿ ಲಕ್ಷ್ಯವಿಭಾಗಗಳು ಬಹುವಾಗಿ ಅಭಿವೃದ್ಧಿ ಹೊಂದಿದವು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪ್ರಚೋದಕರಾಗಿದ್ದ ಪ್ರಸಿದ್ಧ ವಿದ್ಯಾರಣ್ಯರು ಸಂಗೀತ ತಜ್ಞರಾಗಿದ್ದು ಸಂಗೀತಸಾರವೆಂಬ ಲಕ್ಷಣಗ್ರಂಥವನ್ನು ರಚಿಸಿದ್ದುದಾಗಿ ತಿಳಿದುಬರುತ್ತದೆ. ಈ ಮೂಲಗ್ರಂಥ ದೊರೆತಿಲ್ಲವಾದರೂ ತಂಜಾವೂರಿನ ರಾಜ ರಘುನಾಥ ನಾಯಕನ ಹೆಸರಿನಲ್ಲಿ ರಚಿತವಾದ ಗೋವಿಂದ ದೀಕ್ಷಿತನ ಸಂಗೀತಸುಧಾ ಎಂಬ ಲಕ್ಷಣಗ್ರಂಥದಲ್ಲಿ ವಿದ್ಯಾರಣ್ಯರ ಸಂಗೀತಸಾರವನ್ನು ಅನುಸರಿಸಿ ಈ ಗ್ರಂಥವನ್ನು ರಚಿಸಿದುದಾಗಿ ಕೃತಿಕಾರ ಹೇಳಿಕೊಂಡಿದ್ದಾನೆ. ಅದರಲ್ಲಿ ರಾಗ ಅಥವಾ ಆಲಾಪದ ಬಗೆಗೆ ವಿವರಗಳನ್ನು ಕೊಡುತ್ತ ತಾನು ಅವನ್ನು ವಿದ್ಯಾರಣ್ಯರ ಸಂಗೀತಸಾರದಲ್ಲಿಯ ರಾಗಾಧ್ಯಾನದಿಂದ ನೇರವಾಗಿ ಎತ್ತಿಕೊಂಡುದಾಗಿ ತಿಳಿಸಿದ್ದಾನೆ ಮತ್ತು 15 ಮೇಳಗಳಿಂದ ಕೂಡಿದ ಅವರ ಮೇಳಪದ್ಧತಿಯೇ ಬಹು ಪ್ರಾಚೀನವೆಂದೂ ತಿಳಿಸಿದ್ದಾನೆ. ಇಮ್ಮಡಿ ಪ್ರೌಢದೇವರಾಯನ ಅಸ್ಥಾನದಲ್ಲಿದ್ದ ಅಭಿನವಭರತಾಚಾರ್ಯ, ರಾಯವಾಗ್ಗೇಯಕಾರ ಮುಂತಾದ ಬಿರುದುಗಳನ್ನು ಹೊಂದಿದ್ದ ಕಲ್ಲಪ್ಪ ದೇಶಿಕ ಅಥವಾ ಚತುರ ಕಲ್ಲಿನಾಥನು ಶಾರ್ಙ್ಗದೇವನ ಸಂಗೀತರತ್ನಾಕರಕ್ಕೆ ಕಲಾನಿಧಿ ಎಂಬ ವಿದ್ವತ್ಪೂರ್ಣವಾದ ವ್ಯಾಖ್ಯಾನವನ್ನು ರಚಿಸಿದ. ಅದರಲ್ಲಿ ಅಲ್ಲಿಯವರೆಗೆ ಸಂಗೀತಶಾಸ್ತ್ರದ ಬಗೆಗೆ ಬೆಳೆದು ಬಂದಿದ್ದ ಸಾಹಿತ್ಯವನ್ನು ಕೂಲಂಕಷವಾಗಿ ವಿಚಾರ ಮಾಡಿದ್ದಾನೆ. ಇದು ಸಂಗೀತಶಾಸ್ತ್ರದ ವಿಕಾಸಕ್ಕೆ ಮುಂದೆ ಮಾರ್ಗ ದರ್ಶಕವಾಯಿತು. ಅವನ ಈ ಗ್ರಂಥ ಸಂಗೀತದ ಬಗೆಗೆ ಒಂದು ಕಿರುವಿಶ್ವಕೋಶವೆನ್ನಬಹುದು. ಅದು ಮುಂದಿನ ಲಕ್ಷಣಕಾರರ ಮೇಲೂ ತನ್ನ ಪ್ರಭಾವ ಬೀರಿತು. ಅಲ್ಲದೆ ಕಲ್ಲಿನಾಥಮತವೆಂಬ ಒಂದು ವಿಶಿಷ್ಟ ಸಂಪ್ರದಾಯವೇ ಪ್ರಚಲಿತವಾಯಿತು. ಗಾಂಧರ್ವಗುಣ ಗಂಭೀರನಾಗಿದ್ದ ಪ್ರೌಢದೇವರಾಯನಿಂದ ಈತನಿಗೆ ಅಪಾರ ಪ್ರೋತ್ಸಾಹ ದೊರೆಯಿತೆಂದು ತಿಳಿಯುತ್ತದೆ.

ಕಲ್ಲಿನಾಥನಿಂದೀಚೆಗೆ ಸಂಗೀತಶಾಸ್ತ್ರ ವಿಪುಲವಾಗಿ ಬೆಳೆದುದಲ್ಲದೆ ಸಂಗೀತ ಕಲೆಯೂ ಅಪಾರವಾಗಿ ಬೆಳೆದು ಮನೆಮನೆಯಲ್ಲಿಯೂ ಅದು ಒಂದು ಆವಶ್ಯಕ ಕಲೆಯಾಗಿ ಪರಿಗಣಿಸಲ್ಪಟ್ಟಿತು. ಕೃಷ್ಣದೇವರಾಯ ಸಂಗೀತದಲ್ಲಿ ಕುಶಲಿಯಾಗಿದ್ದ. ಸಂಗೀತದಲ್ಲಿ ಆತನನ್ನು ಮೀರಿಸುವವರೇ ಇರಲಿಲ್ಲವೆಂದು ಶಾಸನವೊಂದು ತಿಳಿಸುತ್ತದೆ.

1500–50ರ ವರೆಗೆ ಹಲವರು ಸಂಗೀತದ ಬಗೆಗೆ ಉದ್ಗ್ರಂಥಗಳನ್ನು ಬರೆದರು. ಈ ಕಾಲದ ಲಕ್ಷಣಗ್ರಂಥಗಳೆಂದರೆ ದೇವಣಭಟ್ಟನ ಸಂಗೀತ ಮುಕ್ತಾವಳಿ, ಲಕ್ಷ್ಮಣಭಟ್ಟ ಅಥವಾ ಲಕ್ಷ್ಮೀಧರ ರಚಿಸಿದ ಸಂಗೀತಸೂರ್ಯೋದಯ, ಗೋಪೇಂದ್ರ ತಿಪ್ಪಭೂಪಾಲನ ತಾಳದೀಪಿಕೆ, ಕಾಮದೇವಿ ಬರೆದ ಸಂಗೀತ ಮತ್ತು ನಾಟ್ಯವನ್ನು ವಿವರಿಸುವ ಸಂಗೀತಯುಗದರ್ಪಣ ಮತ್ತು ಸಂಗೀತವಿದ್ಯಾವಿನೋದ ಮುಂತಾದುವು. ಇದೇ ಕಾಲದಲ್ಲಿದ್ದ ಕರ್ನಾಟಕದವನೇ ಆಗಿದ್ದ ಪುಂಡರೀಕವಿಠಲನು ಉತ್ತರದ ಮುಸ್ಲಿಂ ದೊರೆಗಳ ಆಶ್ರಯದಲ್ಲಿದ್ದು ಸದ್ರಾಗಚಂದ್ರೋದಯ, ರಾಗಮಂಜರಿ, ರಾಗಮಾಲಾ ಮತ್ತು ನರ್ತನ ನಿರ್ಣಯ ಎಂಬ ನಾಲ್ಕು ಶಾಸ್ತ್ರಗ್ರಂಥಗಳನ್ನು ರಚಿಸಿದ.

ಕೃಷ್ಣದೇವರಾಯನ ಅಳಿಯ ರಾಮರಾಯನಿಗಂತೂ ಸಂಗೀತದಲ್ಲಿ ಅಪಾರ ಆಸಕ್ತಿ. ಆತನ ಇಚ್ಛೆಯ ಮೇರೆಗೆ ರಾಮಾಮಾತ್ಯನು ಸ್ವರಮೇಳ ಕಲಾನಿಧಿ ಎಂಬ ಗ್ರಂಥವನ್ನು ರಚಿಸಿದನು. ಈ ರಾಮಾಮಾತ್ಯ ತಾನು ಕಲ್ಲಿನಾಥನ ಮೊಮ್ಮಗನೆಂದು ಹೇಳಿಕೊಂಡಿದ್ದಾನೆ. ವಿಜಯನಗರದ ಕಡೆಯ ಕಾಲದಲ್ಲಿ ಕರ್ನಾಟಕದಿಂದ ತಂಜಾವೂರಿಗೆ ಹೋಗಿ ಅಲ್ಲಿ ರಘುನಾಥ ಭೂಪಾಲನ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತನ ಕೃತಿ ಸಂಗೀತಸುಧಾ ಮತ್ತು ಅವನ ಮಗ ವೆಂಕಟಮುಖಿಯ ಚತುರ್ದಂಡಿಪ್ರಕಾಶಿಕಾ ಸಂಗೀತಶಾಸ್ತ್ರದಲ್ಲಿ ಮೈಲಿಗಲ್ಲುಗಳಾಗಿವೆ.

ವಿಜಯನಗರದ ಕಾಲದಲ್ಲಿ ಸಂಗೀತ ಸಾಮಾಜಿಕ, ಧಾರ್ಮಿಕ, ತಾತ್ತ್ವಿಕ ರಂಗಗಳಲ್ಲಿ ಜನಮನವನ್ನು ಉನ್ನತಮಟ್ಟಕ್ಕೊಯ್ಯುವ ಸಾಧನವಾಯಿತು. ಆಸ್ಥಾನದಲ್ಲಿ ಪ್ರೌಢಾವಸ್ಥೆಯನ್ನು ಪಡೆದ ಸಂಗೀತ ಆಸ್ಥಾನದ ಹೊರಗೂ ಭಕ್ತಿಪಂಥದ ಸಾಧುಸಂತರ ಮೂಲಕ ಹೊಸದಿಕ್ಕುಗಳನ್ನು ಹಿಡಿದು ಬೆಳೆಯಿತು. ಸಾಮಾನ್ಯ ಜನತೆಯನ್ನು ಸಂಗೀತ ಮಾಧ್ಯಮದಿಂದ ಭಕ್ತಿಮಾರ್ಗದಲ್ಲೊಯ್ಯುವ ಈ ಹೊಸ ಪಂಥ ದಾಸಪಂಥ ಎನ್ನಿಸಿಕೊಂಡಿತು. ಈ ಪಂಥ ಶ್ರೀಪಾದರಾಯರು, ನರಹರಿತೀರ್ಥರು ಮತ್ತು ವ್ಯಾಸರಾಯರಿಂದ ಪ್ರಚಾರಕ್ಕೆ ಬಂದಿತು. ವ್ಯಾಸರಾಯರ ನೇತೃತ್ವದಲ್ಲಿ ಅವರ ಹಲವಾರು ಶಿಷ್ಯರು ಅಸಂಖ್ಯಾತ ಕೃತಿಗಳನ್ನು ರಚಿಸಿದರು; ಸಂಗೀತಕಲೆಗೆ ಒಂದು ಜೀವಂತಸ್ವರೂಪವನ್ನು ಕೊಟ್ಟರು. ಇವರಲ್ಲಿ ಪುರಂದರದಾಸರು ಮತ್ತು ಕನಕದಾಸರು ಪ್ರಮುಖರು. ಪುರಂದರದಾಸರು ಈಗ ಪ್ರಚಾರದಲ್ಲಿರುವ ಸಂಗೀತಕಲೆಗೆ ಆದ್ಯಪ್ರವರ್ತಕರಾಗಿ ಕರ್ಣಾಟಕ ಸಂಗೀತ ಪಿತಾಮಹರೆನ್ನಿಸಿಕೊಂಡಿದ್ದಾರೆ. ಇವರು ಲಕ್ಷಾವಧಿ ಕೀರ್ತನೆಗಳನ್ನು ರಚಿಸಿದ್ದರೆನ್ನಲಾಗಿದೆ. ಅನೇಕ ಜನಪದ ಮಟ್ಟುಗಳಿಗೆ ಶಾಸ್ತ್ರೀಯವಾದ ಸಂಗೀತರಾಗಗಳ ಸ್ವರೂಪ ಕೊಟ್ಟುದೂ ಸಾಮಾನ್ಯ ಜನತೆಗೆ ಸುಲಭವಾಗಿ ಗ್ರಹಿಸಬಲ್ಲಂತೆ ಸಾಹಿತ್ಯವಿದ್ದುದೂ ಮತ್ತು ಭಕ್ತಿಮಾರ್ಗದ ಮೂಲಕ ಭಗವತಾರಾಧನೆಯೆಂಬ ಸಂದೇಶಕ್ಕೆ ವಾಹಕವಾದದ್ದೂ ಕೀರ್ತನೆಗಳು ಜನಪ್ರಿಯವಾಗಲು ಕಾರಣವಾದುವು. ಹರಿದಾಸರಂತೆ ಶಿವಶರಣರೂ ಶಿವಭಕ್ತಿಯನ್ನು ಸಾರುವಲ್ಲಿ ಸಂಗೀತಕ್ಕೆ ಪ್ರಾಮುಖ್ಯವನ್ನು ಕೊಟ್ಟರು. ಸಂಗೀತ ಪ್ರಪಂಚಕ್ಕೆ ಹೆಚ್ಚಿನ ಕೊಡುಗೆಯನ್ನು ಕೊಟ್ಟ ಶಿವಶರಣರಲ್ಲಿ ನಿಜಗುಣಶಿವಯೋಗಿ ಪ್ರಮುಖ. ಈತನ ವಿವೇಕಚಿಂತಾಮಣಿಯಲ್ಲಿ ಸಂಗೀತಕಲೆಯನ್ನು ಕುರಿತ ಒಂದು ಭಾಗವಿದೆ. ಶ್ರುತಿ, ಸ್ವರ, ಅಲಂಕಾರ, ರಾಗ ಮತ್ತು ವಾದ್ಯಗಳನ್ನು ಇವನು ವಿವರಿಸಿದ್ದಾನೆ. ತ್ರಿಪದಿ ಸಾಂಗತ್ಯ ಮುಂತಾದ ಹಾಡುಗಳಲ್ಲಿ ಷಟ್ಸ್ಥಲಗಳನ್ನು ವಿವರಿಸಿರುವುದಲ್ಲದೆ ರಾಗತಾಳಗಳಿಂದ ಕೂಡಿದ ಸಂಗೀತಕೃತಿಗಳನ್ನು ಕೈವಲ್ಯಪದ್ಧತಿಯ ಹಾಡುಗಳು ಎಂಬ ಹೆಸರಿನಲ್ಲಿ ಈತ ರಚಿಸಿದ್ದಾನೆ.

ವಿಜಯನಗರದ ಕಾಲದ ಕಡೆಯ ದಿನಗಳಲ್ಲಿದ್ದ ರತ್ನಾಕರವರ್ಣಿ ಭರತೇಶ ವೈಭವದಲ್ಲಿ ಸಂಗೀತ ಮತ್ತು ನೃತ್ಯಗಳ ವಿಷಯವಾಗಿ ಅಲ್ಲಲ್ಲಿ ತಿಳಿಸುವ ಚಿತ್ರವತ್ತಾದ ವರ್ಣನೆಗಳು ಸ್ವಾರಸ್ಯಕರವೂ ಕುತೂಹಲಕರವೂ ಆಗಿವೆ. ಭರತನ ಆಸ್ಥಾನದ ಸಂಗೀತಮೇಳಗಳನ್ನು ವಿವರಿಸುತ್ತ ನಾನಾ ರಾಗಭೇದಗಳನ್ನೂ ಗಾಯಕದೋಷಗಳನ್ನೂ ತಿಳಿಸಿರುತ್ತಾನೆ. ಧ್ವನಿ, ಲಯ, ಮೇಳ, ಜತಿ, ಜಾತಿ, ಕಟ್ಟಣಿ, ಗಮಕ, ಆಲಾಪಗಳನ್ನು ಹೆಸರಿಸಿ ವಿವರಿಸಿರುವುದಲ್ಲದೆ ವೀಣೆ, ಚೆಂಗು, ಉಪಾಂಗ, ರಿಂಚೆಯ, ಚಿನುಚಿಂಪೆ, ತುಡುಮು, ದಂಡಿಗೆ, ಸ್ವರಮಂಡಲ, ಕಿನ್ನರಿ ಮುಂತಾದ ವಾದ್ಯಗಳನ್ನೂ ಹೆಸರಿಸಿದ್ದಾನೆ.

ನೃತ್ಯದ ಬಗೆಗೆ ಹೇಳುವುದಾದರೆ ವಿಜಯನಗರದ ಆಸ್ಥಾನದಲ್ಲಿ ಇದಕ್ಕೆ ಅತಿ ಹೆಚ್ಚಿನ ಮನ್ನಣೆ ದೊರೆತಿತ್ತು. ಅಂತಃಪುರ ಸ್ತ್ರೀಯರು ನಿತ್ಯವೂ ನೃತ್ಯವನ್ನು ಅಭ್ಯಾಸ ಮಾಡುತ್ತಿದ್ದುದನ್ನು ಡೊಮಿಂಗೊ ಪೇಯಿಸ್ ವರ್ಣಿಸಿದ್ದಾನೆ. ಕೃಷ್ಣದೇವರಾಯನ ಅರಮನೆಯಲ್ಲಿ ನೃತ್ಯ ಸಭಾಗೃಹವೊಂದಿತ್ತು. ವಿಸ್ತಾರವಾದ ಆ ಸಭಾಗೃಹದಲ್ಲಿ ಅವುಗಳ ಕಂಬಗಳ ಹಾಗೂ ಗೋಡೆಗಳ ಮೇಲೆಲ್ಲಾ ನಾಟ್ಯಭಂಗಿಗಳನ್ನು ಚಿತ್ರಿಸಿದ್ದು ಅವು ಒಂದೊಂದೂ ನಾಟ್ಯದ ಅಂತಃಸ್ಥಿತಿಯನ್ನು ಸೂಚಿಸುವಂತಿದ್ದು ನಾಟ್ಯ ಕಲಿಯುವವರಿಗೆ ಮುಕ್ತಾಯದ ಹಂತದಲ್ಲಿ ಹೇಗೆ ನಿಲ್ಲಿಸಬೇಕೆಂಬುದರ ಕಲ್ಪನೆಯನ್ನು ಮಾಡಿಕೊಡುತ್ತಿದ್ದುವೆಂದೂ ನರ್ತಕಿಯರು ತಮ್ಮ ದೇಹಸೌಷ್ಠವವನ್ನು ಕಾಪಾಡಿಕೊಳ್ಳಲು ಮೈಚಾಚಿ ಕೈಕಾಲು ಸಡಿಲಿಸಿಕೊಳ್ಳುವ ಬಗೆಯನ್ನು ಕೂಡ ಮತ್ತೊಂದೆಡೆ ತೋರಿಸಿಕೊಡಲಾಗುತ್ತಿತ್ತೆಂದೂ ಪೆಯಿಸ್ ತಿಳಿಸಿದ್ದಾನೆ. ಆದರೆ ಈಗ ಆ ನಾಟ್ಯಮಂದಿರವಾಗಲೀ ನೃತ್ಯಭಂಗಿಗಳ ಚಿತ್ರ, ಶಿಲ್ಪಗಳಾಗಲೀ ಉಳಿದುಬಂದಿಲ್ಲ.

ದೇವಾಲಯಗಳಲ್ಲಿ ದೇವರ ಪೂಜಾಸಮಯದಲ್ಲಿ ಉತ್ಸವದ ಕಾಲಗಳಲ್ಲಿ ನೃತ್ಯ ಸೇವೆ ಒಂದು ಅಗತ್ಯವಾದ ಅಂಗವಾಗಿ ಈ ಕಾಲದಲ್ಲಿ ವಿಶೇಷವಾಗಿ ಬೆಳೆಯಿತು. ಅದಕ್ಕಾಗಿ ವಿಶಾಲವಾದ ನೃತ್ಯಮಂಟಪಗಳ ನಿರ್ಮಾಣವಾಗಿತ್ತು. ಇಂಥ ನಾಟ್ಯಸೇವೆಗಾಗಿಯೇ ದೇವದಾಸಿಯರಿರುತ್ತಿದ್ದರು. ಇವರಲ್ಲದೆ ವೇಶ್ಯೆಯರೂ ನಾಟ್ಯಕಲೆಯಲ್ಲಿ ಪರಿಣತಿಯನ್ನು ಪಡೆದು ದೇವಾಲಯಗಳಲ್ಲಿ ವಿಶೇಷ ಉತ್ಸವಾದಿಗಳಲ್ಲಿ ತಮ್ಮ ನೃತ್ಯ ವೈಖರಿಯನ್ನು ಪ್ರದರ್ಶಿಸುತ್ತಿದ್ದರು. ಇದಲ್ಲದೆ ಸಮಾಜದ ಗಣ್ಯ ವರ್ಗದ, ಶ್ರೀಮಂತ ವರ್ಗದ ಮನರಂಜನೆಗಾಗಿಯೂ ಇವರು ನಾಟ್ಯಪ್ರದರ್ಶನಗಳನ್ನು ನಡೆಸುತ್ತಿದ್ದರು. ನಾಟ್ಯಕಲೆಯಲ್ಲಿ ನಿಷ್ಣಾತರಾಗಿದ್ದ ವೇಶ್ಯೆಯರಿಗೆ ಸಮಾಜದಲ್ಲಿ ಗೌರವ ಸ್ಥಾನವಿತ್ತು. ರಾಜರಂತೆ ಅವರ ಸಾಮಂತರು, ಅಧಿಕಾರಿಗಳು, ಇತರ ಪ್ರತಿಷ್ಠಿತರು ಇವರಿಗೆ ಹೇರಳವಾಗಿ ಪ್ರೋತ್ಸಾಹ ಕೊಟ್ಟಿದ್ದರಿಂದ ಈ ಕಲೆಗಳು ಅವರಲ್ಲಿ ಮನೆಮಾಡಿಕೊಂಡುವು. ಇಂಥ ವೇಶ್ಯಾವಾಟಿಕೆಗಳ ವರ್ಣನೆಗಳು ಆ ಕಾಲದ ಕಾವ್ಯಗಳಲ್ಲಿ ಕಂಡುಬರುತ್ತವೆ. ಆದರೆ ಆ ಕಾಲದ ನಾಟ್ಯದ ಪೂರ್ಣಸ್ವರೂಪ, ಅವರು ಪಡೆದಿದ್ದ ಪರಿಣತಿಯ ರೀತಿಯನ್ನು ಈಗ ಅರಿಯುವುದು ಪೂರ್ಣವಾಗಿ ಆಗದಿದ್ದರು ದೇವಾಲಯಗಳ ಗೋಡೆಗೋಪುರಗಳ ಮೇಲಿರುವ ನೃತ್ಯಭಂಗಿಗಳು ಆ ಕಾಲದ ನಾಟ್ಯವಿದ್ಯೆಯ ತಜ್ಞತೆಯನ್ನು ಸೂಚಿಸುತ್ತವೆ. ಚಿದಂಬರ ಗೋಪುರದ ಮೇಲೆ ವಿಜಯನಗರದ ಕಾಲದ ಇಂಥ ನೂರೆಂಟು ನೃತ್ಯಭಂಗಿಗಳನ್ನು ನೋಡಬಹುದು. ಇವುಗಳೊಂದಿಗೆ ಜನಪದ ನೃತ್ಯ, ಜನಪದ ಮೇಳ ಮಹಾನವಮಿ ದಿಬ್ಬ, ಹಜಾರ ರಾಮಸ್ವಾಮಿ ದೇವಾಲಯ ಮೊದಲಾದುವುಗಳ ಮೇಲಿರುವ ಕೋಲಾಟ, ಯಕ್ಷಗಾನ ಮೇಳ ಮುಂತಾದ ಸುಂದರ ಶಿಲ್ಪಗಳಿಂದ ಇದನ್ನರಿಯಬಹುದು. (ಕೆವಿ.)

**ಸಾಹಿತ್ಯ:** ವಿಜಯನಗರ ಕಾಲದಲ್ಲಿ ಪಂಡಿತರಿಗೆ ಕವಿಗಳಿಗೆ ರಾಜಾಶ್ರಯ, ಮನ್ನಣೆ. ಪ್ರೋತ್ಸಾಹ ದೊರೆತುದರ ಫಲವಾಗಿ ಸಾಹಿತ್ಯಕೃಷಿ ವಿಪುಲವಾಗಿ ನಡೆಯಿತು. ಈ ಕಾಲದಲ್ಲಿ ಕನ್ನಡ, ಸಂಸ್ಕೃತ ಹಾಗೂ ತೆಲುಗು ಭಾಷೆಗಳ ಕೃತಿಗಳು ರಚಿತವಾದುವು. ಸ್ವತಂತ್ರ ಕೃತಿಗಳ ರಚನೆ ಸಂಖ್ಯಾದೃಷ್ಟಿಯಿಂದ ಕಡಿಮೆ ಎಂದು ಹೇಳಬಹುದಾದರೂ ವ್ಯಾಖ್ಯಾನಗ್ರಂಥಗಳು ಗಣನೀಯ ಸಂಖ್ಯೆಯಲ್ಲಿವೆ. ಮೌಲ್ಯದ ದೃಷ್ಟಿಯಿಂದ ಹೆಚ್ಚಿನ ಪುರಸ್ಕಾರ ಸಲ್ಲದೆ ಇದ್ದರೂ ಸಾಹಿತ್ಯ ಬೆಳೆವಣಿಗೆಯ ದೃಷ್ಟಿಯಿಂದ ಗಮನಾರ್ಹ ಸಾಧನೆ.

ಕನ್ನಡ ಸಾಹಿತ್ಯ: ನಂಜುಂಡನ (ಸು.1525) ಕುಮಾರ ರಾಮ ಸಾಂಗತ್ಯ ಮಹತ್ತ್ವದ ಐತಿಹಾಸಿಕ ಕೃತಿ. ರತ್ನಾಕರವರ್ಣಿ (ಸು.1557) ಈ ಕಾಲದ ಪ್ರಸಿದ್ಧ ಕವಿ. ಈತನ ಭರತೇಶ ವೈಭವ ಒಂದು ದೀರ್ಘಕಾವ್ಯ. ಭಾಸ್ಕರ (ಸು.1424) ರಚಿಸಿರುವ ಜೀವಾಧರ ಚರಿತೆ ಗಮನಾರ್ಹ ಕೃತಿ. ಈ ಕಾಲದ ವೀರಶೈವ ಪುರಾಣ ಸಾಹಿತ್ಯವನ್ನು ಅರವತ್ತುಮೂರು ಪುರಾತನರ, ಬಸವಾದಿ ಸಮಕಾಲೀನರಾದ ಶರಣರ ಮತ್ತು ವೀರಶೈವ ಧರ್ಮಕ್ಕೆ ಸಂಬಂಧಿಸಿದ ವಿವಿಧ ಕಥೆಗಳ ಸಾರಸಂಗ್ರಹಗಳೆಂದು ವರ್ಗೀಕರಿಸಬಹುದು. ಬಸವಣ್ಣನವರ ಜೀವನವನ್ನು ಕುರಿತಂತೆ ರಚಿತವಾದ ಗ್ರಂಥಗಳಲ್ಲಿ ಭೀಮಕವಿಯ (ಸು.1369) ಬಸವಪುರಾಣ ಬಹುಮುಖ್ಯವಾದದ್ದು. ವಿಜಯನಗರದ ರಾಜಮನೆತನಕ್ಕೆ ಸೇರಿದ ದೇಪರಾಜ (ಸು.1410) ಸೊಬಗಿನ ಸೋನೆ ಮೊದಲಾದ ಕೃತಿಗಳು ಪ್ರಮುಖವಾದವು. ಲಕ್ಕಣ್ಣದಂಡೇಶನ (ಸು.1428)

ಶಿವತತ್ತ್ವಚಿಂತಾಮಣಿ, ಚಾಮರಸನ (ಸು.1430) ಪ್ರಭುಲಿಂಗಲೀಲೆ, ಚೆನ್ನಬಸವಾಂಕನ (ಸು.1550) ಮಹಾದೇವಿಯಕ್ಕಪುರಾಣ. ಈ ಕಾಲದ ಮಹತ್ತ್ವದ ಕವಿಗಳಲ್ಲಿ ಕುಮಾರ ವ್ಯಾಸನದು (ಸು.1430) ದೊಡ್ಡ ಹೆಸರು. ಕರ್ಣಾಟ ಭಾರತ ಕಥಾಮಂಜರಿ ಎಂಬುದು ಈತನ ಮಹಾಕಾವ್ಯ. ಇದು ಭಾಮಿನೀ ಷಟ್ಪದಿಯಲ್ಲಿದೆ. ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರುಗಳಲ್ಲಿ ಪ್ರಸಿದ್ಧವಾಗಿದೆ. ಮಹಾಭಾರತದ ಕೊನೆಯ ಎಂಟು ಪರ್ವಗಳ ಕಥೆಯನ್ನು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ತಿಮ್ಮಣ್ಣ ಎಂಬ ಕವಿ ಕರ್ಣಾಟ ಕೃಷ್ಣರಾಯ ಭಾರತ ಕಥಾಮಂಜರಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾನೆ. ಲಕ್ಷ್ಮೀಶನ ಜೈಮಿನಿ ಭಾರತ, ಗುಬ್ಬಿಮಲ್ಲಣಾರ್ಯನ ಭಾವಚಿಂತಾರತ್ನ, ಲಿಂಗಮಂತ್ರಿಯ ಕಬ್ಬಿಗರ ಕನ್ನಡಿ, ವಿರೂಪಾಕ್ಷನ ಚನ್ನಬಸವ ಪುರಾಣ, ನರಹರಿಯ ತೊರವೆ ರಾಮಾಯಣ, ಭಟ್ಟಾಕಳಂಕದೇವನ ಕರ್ಣಾಟಕ ಶಬ್ದಾನುಶಾಸನ – ಇವುಗಳನ್ನು ಹೆಸರಿಸಬಹುದು.

ಈ ಕಾಲದ ಹರಿದಾಸರಲ್ಲಿ ಕನಕದಾಸರದು ದೊಡ್ಡ ಹೆಸರು. ಇವರು ಕೀರ್ತನೆಗಳ ಜೊತೆಗೆ ನಳಚರಿತ್ರೆ, ಮೋಹನತರಂಗಿಣಿ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರಲ್ಲದೆ ಶ್ರೀಪಾದರಾಯರು (ಸು.1500), ವ್ಯಾಸರಾಯರು (ಸು.1520) ಮತ್ತು ಪುರಂದರದಾಸರು (ಸು.1540) ಮುಂತಾದವರು ಹರಿಸರ್ವೋತ್ತಮತ್ವವನ್ನೂ ಎತ್ತಿ ಹಿಡಿದಿದ್ದಾರೆ.

**ಸಂಸ್ಕೃತ ಸಾಹಿತ್ಯ:** ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಕಾಲದ ಉತ್ತಮ ಕೃತಿ ಎಂದರೆ ವೇದಾರ್ಥ ಪ್ರಕಾಶ. ವೇದಗಳಿಗೆ ವ್ಯಾಖ್ಯಾನ ಬರೆಯುವ ಕಾರ್ಯವನ್ನು ಸಾಯಣಾಚಾರ್ಯರಿಗೆ ವಹಿಸಲಾಯಿತು. ಹಾಗೆಯೇ ಇವರು ಆರ್ಯವೇದ ಸುಧಾನಿಧಿ, ಪ್ರಾಯಶ್ಚಿತ್ತ ಸುಧಾನಿಧಿ, ಯಜ್ಞತಂತ್ರ ಸುಧಾನಿಧಿ, ಸುಭಾಷಿತ ಸುಧಾನಿಧಿ ಗ್ರಂಥಗಳನ್ನು ರಚಿಸಿದ್ದಾರೆ. ಯಾದವರ ವೇದಾರ್ಥ ಪ್ರಕಾಶ ವಿದ್ಯಾರಣ್ಯರ ವಿದ್ಯಾರಣತ ಕಾಲಗುಣ, ಸರ್ವದರ್ಶನಸಂಗ್ರಹ, ಶಂಕರವಿಜಯಂ, ರಾಜಕಲಾನಿರ್ಣಯಂ, ಪರಶರ ಮಾಧವೀಯ, ಗಂಗಾಂಬಿಕೆಯ ಮಧುರವಿಜಯಂ, ಪ್ರೌಢದೇವರಾಯನ ಬಾದರಾಯನ ಬ್ರಹ್ಮಸೂತ್ರ ವೃತ್ತಿ, ಮಹಾನಾಟಕ ಸುಧಾನಿಧಿ, ಒಂದನೆಯ ಡಿಂಡಿಮನ ಸಾಳ್ವಾಭ್ಯುದಯಂ, ಎರಡನೆಯ ಡಿಂಡಿಮನ ಅಚ್ಚುತಾಭ್ಯುದಯಂ, ತಿರುಮೂಂಬಿಯ ವರದಾಂಬಿಕ ಪರಿಣಯ, ಕಾಮಾಕ್ಷಿಯ ಅಭಿನಯ ರಾಮಭ್ಯುದಯಂ, ವ್ಯಾಸರಾಯರ ತರ್ಕ ತಾಂಡವ, ನ್ಯಾಯಾಮೃತ, ಲಕ್ಷ್ಮೀನಾರಾಯಣ ಸಂಗೀತ ಸೂರ್ಯೋದಯ, ವಾದಿರಾಜರ ರಿಕ್ಮಿಣಿವಿಜಯ, ವೇದಾಂತ ದೇಶಿಕರ ಯಾದವಾಭ್ಯುದಯ, ಕೃಷ್ಣದೇವರಾಯನ ಜಾಂಬುವತಿ ಕಲ್ಯಾಣ, ರಸಮಂಜರಿ, ಉಷಾಪರಿಣಯ, ಸಕಲ ಕಥಾಸಂಗ್ರಹ, ಜ್ಞಾನಚಿಂತಾಮಣಿ ಮುಂತಾದವು.

**ತೆಲುಗು ಸಾಹಿತ್ಯ:** ಅಲ್ಲಾಸಾನಿಪೆದ್ದನ್ನನ ಮನುಚರಿತಂ, ನಂದಿತಿಮ್ಮಣ್ಣನ ಪಾರಿಜಾತ ಪಹರಣಮು, ದೂರ್ಜಟಿಯ ಕೃಷ್ಣರಾಜವಿಜಯ, ಕಾಳಹಸ್ತಿಶತಕ, ಮಾದಯ್ಯಗಾರಿ ಮಲ್ಲಣ್ಣನ ಕಲಾಪೂರ್ಣ ಉದಯಂ, ಅಯ್ಯಾಲಿ ರಾಜುರಾಮಭದ್ರನ ರಾಧ ಮಾಧವ, ತೆನಾಲಿ ರಾಮಕೃಷ್ಣನ ಪಾಂಡುರಂಗಮಹಾತ್ಮೆ, ಹರಿಭಕ್ತಸಾರ ಮುಂತಾದವು. ತಿಕ್ಕನ, ಶ್ರೀನಾಥ, ಪೋತನ, ಪೆದ್ದನ ಪ್ರಮುಖ ಕವಿಗಳು ಕೃಷ್ಣದೇವರಾಯನ ಆಮುಕ್ತಮಾಲ್ಯದಾ ತೆಲುಗು ಪಂಚಮಹಾಕಾವ್ಯಗಳಲ್ಲಿ ಒಂದೆನಿಸಿದೆ. ಇದರಲ್ಲಿ ಗೋದಾದೇವಿ ಮತ್ತು ಶ್ರೀರಂಗನಾಥರಿಗೆ ಸಂಬಂಧಿಸಿದ ಕಥಾವರ್ಣನೆಯಿದೆ.

ಕೃಷ್ಣದೇವರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂದು ಪ್ರಸಿದ್ಧರಾಗಿದ್ದ ಎಂಟು ಜನ ಕವಿಗಳಿದ್ದ ವಿಷಯ ಪ್ರಸಿದ್ಧವಾದುದು. ಈ ಕವಿಗಳ ಹೆಸರಿನ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

**ತಮಿಳು ಸಾಹಿತ್ಯ:** ಕೃಷ್ಣದೇವರಾಯನ ಆಸ್ಥಾನದಲ್ಲಿ ಹರಿದಾಸರು ಇರಸಮಯವಿಳಕ್ಕಂ ಗ್ರಂಥ ರಚಿಸಿದ್ದರು ಮಂಡಲ ಪುರುಷ, ಜ್ಞಾನ ಪ್ರಕಾಶ, ತತ್ತ್ವ ಪ್ರಕಾಶ, ಅರುಣಗಿರಿನಾಥ, ಸ್ವರೂಪನಂದ, ಕಚ್ಚಿಯಪ್ಪ ಶಿವಾಚಾರ್ಯರು ಪ್ರಮುಖ ತಮಿಳು ಕವಿಗಳಾಗಿದ್ದರು. ಕುಮಾರ ಸರಸ್ವತಿ ಕೃಷ್ಣದೇವರಾಯ ಹಾಗೂ ಜಗನ್‌ಮೋಹಿನಿಯ ವಿವಾಹ ಕುರಿತು ಕೃತಿ ರಚಿಸಿದ.*

**ಹಂಪಿ ಉತ್ಖನನ:** ಕಾಲಕಾಲಕ್ಕೆ ವಿವಿಧ ಉದ್ದೇಶಗಳಿಂದ ಈ ಪ್ರದೇಶಗಳಿಗೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಬರೆದಿರುವ ಪ್ರವಾಸಕಥನಗಳಲ್ಲಿ ಹಾಗೂ ಸ್ಥಳೀಯ ಮಹಾರಾಜರ ಆಸ್ಥಾನದಲ್ಲಿದ್ದ ಕವಿಗಳು, ಇತಿಹಾಸಕಾರರು ರಚಿಸಿರುವ ಕೃತಿಗಳಲ್ಲಿ ಆ ಕಾಲದ ಒಂದು ಚಿತ್ರಣ ದೊರೆಯುತ್ತದೆ. ಆದರೂ ಸಾಹಿತ್ಯೋಕ್ತ ವಿವರಗಳಿಗೆ ಪೂರಕವಾಗಿ, ಅವುಗಳನ್ನು ಸಮರ್ಥಿಸುವಂತಹ ಪುರಾತತ್ತ್ವ ಅವಶೇಷಗಳು, ಜನ ಸಾಮಾನ್ಯರ ಜೀವನ ವಿಧಾನವನ್ನು ಅರ್ಥಯಿಸಲು ಸಾಧ್ಯವಾಗುವಂತಹ ಆಕರ ಸಾಮಾಗ್ರಿಗಳು ಹೆಚ್ಚಾಗಿ ದೊರೆತಿರಲಿಲ್ಲ. ಭಾರತದಾದ್ಯಂತ ಕೆಲವು ಮುಖ್ಯ ಮಧ್ಯಯುಗೀನ ನಗರ ನಿವೇಶನಗಳಲ್ಲಿ ಉತ್ಖನನ ಕೈಗೊಳ್ಳುವ ಉದ್ದೇಶದಿಂದ 1975–76ರಲ್ಲಿ ಪ್ರಸಿದ್ಧ ರಾಜಧಾನಿಗಳಾದ ಫತೇಪುರ್ ಸಿಕ್ರಿ (ಉತ್ತರ ಪ್ರದೇಶ), ಚಂಪನೇರ್ (ಗುಜರಾತ್) ಮತ್ತು ಕರ್ನಾಟಕದ ವಿಜಯನಗರ ರಾಜಧಾನಿಯ ಭಗ್ನಾವಶೇಷಗಳಿದ್ದ ಹಂಪಿ ನಿವೇಶನಗಳನ್ನು ರಾಷ್ಟ್ರೀಯ ಯೋಜನೆಗಳನ್ವಯ ವಿಸ್ತೃತ ಅಥವಾ ಪೂರ್ಣರೂಪದ ಉತ್ಖನನಗಳಿಗಾಗಿ ಆಯ್ಕೆ ಮಾಡಲಾಯಿತು. ಈ ಯೋಜನೆಯ ಅಂಗವಾಗಿ ಹಂಪಿಯಲ್ಲಿ ಉತ್ಖನನವನ್ನು ಪ್ರಾರಂಭಿಸಲಾಯಿತು (1976). ಈ ರಾಜಧಾನಿ ನಗರದ ಸಂಪೂರ್ಣ ವಿನ್ಯಾಸವನ್ನು ಬೆಳಕಿಗೆ ತಂದು ಅರ್ಥಯಿಸುವುದು ಮತ್ತು ಅಂದಿನ ಜೀವನ ವಿಧಾನದ ಬಗೆಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ ಮಧ್ಯಯುಗದ ಇತಿಹಾಸವನ್ನು ಪುನಾರಚಿಸುವುದು ಹಂಪಿ ರಾಷ್ಟ್ರೀಯ ಉತ್ಖನನ ಯೋಜನೆಯ ಮುಖ್ಯ ಉದ್ದೇಶವಾಗಿತ್ತು.

ಇಲ್ಲಿ ಕಳೆದ ಮೂರು ದಶಕಗಳಿಂದ ನಿರಂತರ ಉತ್ಖನನ ಕೈಗೊಳ್ಳಲಾಗಿದೆ. ಉತ್ಖನನದ ಜೊತೆ ಜೊತೆಗೆ ಇಡೀ ರಾಜಧಾನಿ ಪ್ರದೇಶದಲ್ಲಿ ಚದುರಿದಂತೆ ಹರಡಿರುವ ಕಟ್ಟಡಾವಶೇಷ, ವಾಸ್ತುಭಾಗ ಮುಂತಾದ ಎಲ್ಲ ಮಾನವಕೃತ ಪಾರಂಪರಿಕ ಅವಶೇಷಗಳ ಸಂಪೂರ್ಣ ವ್ಯವಸ್ಥಿತ ದಾಖಲಾತಿ ನಡೆದಿದೆ. ಇದೇ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಹಂಪಿ ಪುನರುತ್ಥಾನ ಯೋಜನೆಯನ್ನು ಆರಂಭಿಸಿ ಉತ್ಖನನ, ಸಂರಕ್ಷಣೆ ಮತ್ತು ಇತರ ಸಂಶೋಧನಾತ್ಮಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಈಚೆಗೆ ವಿಶ್ವ ಪರಂಪರೆಯಲ್ಲಿ ಸೇರ್ಪಡೆಯಾಗಿರುವ ವಿಜಯನಗರದ ಇತಿಹಾಸ, ಶಾಸನಸಾಹಿತ್ಯ, ವಾಸ್ತುಶಿಲ್ಪ, ಕಲೆ, ಚಿತ್ರಕಲೆ ಮುಂತಾದ ವಿಷಯಗಳನ್ನು ಕುರಿತಂತೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತಿಯ ವಿದ್ವಾಂಸರಿಂದ ವ್ಯವಸ್ಥಿತವಾದ ವ್ಯಾಪಕ ಸಂಶೋಧನ ಕಾರ್ಯ ನಡೆದಿದೆ.

ಮಾಸಳಯ್ಯ ಗುಡ್ಡದ ಪ್ರಾಗೈತಿಹಾಸಿಕ ನಿವೇಶನವೂ ಸೇರಿದಂತೆ ವಿಠಲ ದೇವಾಲಯದ ಪರಿಸರದಲ್ಲಿ ರಾಜಾಂಗಣ, ರಾಜಸಭಾಂಗಣ, ಟಂಕಸಾಲೆಯ ಆವರಣ, ರಾಮಚಂದ್ರ ದೇವಾಲಯದ ಪಶ್ಚಿಮ ಭಾಗ ಹಾಗೂ ಪೂರ್ವಕ್ಕಿರುವ ಬಜಾರ್, ಗುಹಾಂತರ್ದೇವಾಲಯದ ಬಳಿ ವೀರಹರಿಹರರಾಯನ ಅರಮನೆ, ಅಷ್ಟಕೋನಾಕಾರದ ಕಟ್ಟಡದ ಪರಿಸರ, ವಿರೂಪಾಕ್ಷ, ಕೃಷ್ಣ, ಅಚ್ಯುತರಾಯ ಮತ್ತು ಪಾನ್‌ಸುಪಾರಿ ಬಜಾರುಗಳು ಮುಂತಾದ ಕಡೆ ಕೇಂದ್ರ ಪುರಾತತ್ವ ಇಲಾಖೆ ಉತ್ಖನನ ಕೈಗೊಂಡಿದೆ. ರಾಜ್ಯ ಪುರಾತತ್ತ್ವ ಇಲಾಖೆ ರಾಮಚಂದ್ರ ದೇವಾಲಯದ ಈಶಾನ್ಯ, ಉತ್ತರ ಮತ್ತು ವಾಯವ್ಯ ದಿಕ್ಕುಗಳಲ್ಲಿ ಕೇಂದ್ರೀಕೃತ ಉತ್ಖನನವನ್ನು ನಡೆಸಿ ಉಳಿದಂತೆ ವಿರೂಪಾಕ್ಷ, ಬಜಾರು, ಸಿಂಗಾರದ ಹೆಬ್ಬಾಗಿಲು ಮತ್ತಿತರ ಕಡೆಗಳಲ್ಲಿಯೂ ಕೆಲಸಮಾಡಿದ್ದಾರೆ.

ಈ ಉತ್ಖನನಗಳಿಂದ ಅರಮನೆ ಮತ್ತಿತರ ವಾಸಗೃಹ ಸಮುಚ್ಚಯಗಳು; ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಉಪಯೋಗದ ವಿವಿಧ ಗಾತ್ರದ ವೇದಿಕೆಗಳು; ಆಡಳಿತ ಸಂಬಂಧಿ ಕಾರ್ಯಾಲಯ, ಉಗ್ರಾಣ, ಪ್ರವೇಶದ್ವಾರದ ಬಳಿಯ ಭದ್ರತಾವ್ಯವಸ್ಥೆ ಮತ್ತು ತಂಗುದಾಣದ ಸ್ವರೂಪದ ಕಟ್ಟಡಾವಶೇಷಗಳು; ಸಣ್ಣ ದೊಡ್ಡಗಾತ್ರದ ಗುಡಿ, ಮಂದಿರ, ಬಜಾರುಗಳು; ಜಲಪೂರೈಕೆಯ ವ್ಯವಸ್ಥೆಗೆ ಸಂಬಂಧಪಟ್ಟ ವಿವಿಧ ಗಾತ್ರ, ಆಕಾರ, ಅಲಂಕಾರದ ತೊಟ್ಟಿ, ಕಲ್ಯಾಣಿಗಳು; ಕಲ್ಲು, ಗಾರೆ, ಸುಟ್ಟಮಣ್ಣುಗಳಿಂದ ರೂಪಿಸಿದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಜಾಲಗಳೂ ಬೆಳಕಿಗೆ ಬಂದಿವೆ. ಈ ಕಟ್ಟಡಗಳ ನಿರ್ಮಾಣ, ಅಲಂಕರಣಗಳಿಗೆ ಸಂಬಂಧಿಸಿದ, ಜನರ ದೈನಂದಿನ ಬಳಕೆಯ ವಸ್ತು, ಶಾಸನ, ನಾಣ್ಯ ಮುಂತಾದ ಅಸಂಖ್ಯಾತ ಪ್ರಾಚ್ಯವಸ್ತುಗಳು ದೊರೆತಿವೆ. ಇವೆಲ್ಲದರ ವಿಶ್ಲೇಷಣಾತ್ಮಕ ಮತ್ತು ತುಲನಾತ್ಮಕ ಅಧ್ಯಯನದಿಂದ ವಿಜಯನಗರದ ಇತಿಹಾಸ, ಕಲೆ, ಸಂಸ್ಕೃತಿ, ಧರ್ಮ, ಜನಜೀವನ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ಬಗೆಗೆ ಹೊಸ ಬೆಳಕು ಚೆಲ್ಲಲು, ಸಾಧಾರಣವಾಗಿ ಅರ್ಥೈಸಲು ಸಾಧ್ಯವಾಗುತ್ತದೆ. ಜೊತೆಗೆ ಈ ರಾಜಧಾನಿ ನಗರದ ಉಗಮ, ಬೆಳವಣಿಗೆ, ಅವನತಿ ಮುಂತಾದ ಮುಖ್ಯ ಹಂತ, ಉಪಹಂತಗಳನ್ನು ನಿರ್ಣಾಯಕವಾಗಿ ನಿರ್ಧರಿಸಲು ಸಾಹಿತ್ಯಕ ಆಕರಗಳಲ್ಲಿ ದೊರಕುವ ವಿವರಗಳಿಗೆ ಸಾಕಷ್ಟು ಪೂರಕ ಪುರಾತತ್ತ್ವ ಸಾಮಗ್ರಿ ಒದಗಿಸಿದೆ.

**ರಾಜಾಂಗಣ:** ಮೊದಲಿಗೆ ಮಹಾನವಮಿ ದಿಬ್ಬ, ಭೂಮ್ಯಂತರ್ಗತ ಕೊಠಡಿ, ಅರಮನೆಯ ಅಧಿಷ್ಠಾನ, ಅಲಂಕೃತ ವೇದಿಕೆ, ಸಾರ್ವಜನಿಕರ ಸ್ನಾನದಕೊಳ ಎಂದು ಗುರುತಿಸಲಾದ ಆಯತಾಕಾರದ ವಿಶಾಲ ಕೊಳ ಮತ್ತು ರಾಜಸಭಾಂಗಣದ ಅವಶೇಷಗಳಿಂದ ಕೂಡಿದ ರಾಜಾಂಗಣ ಎಂಬ ನಿರ್ದಿಷ್ಟ ಹಾಗೂ ಪರಿಮಿತ ಪ್ರದೇಶವನ್ನು ಆಯ್ದುಕೊಳ್ಳಲಾಯಿತು. ಆನೆಗೊಂದಿಯಿಂದ ಆಡಳಿತ ನಡೆಸುತ್ತಿದ್ದ ಸಂಗಮವಂಶದ ಮೊದಲ ಅರಸರು ಹಂಪಿ ಪರಿಸರದಲ್ಲಿ ಕೋಟೆ, ಕಾವಲು ಬುರುಜು, ಬತೇರಿ, ಮಹಾದ್ವಾರಾದಿ ರಕ್ಷಣಾತ್ಮಕ ಕಟ್ಟಡಗಳನ್ನು ನಿರ್ಮಿಸಿ, ಅಭೇದ್ಯವಾಗಿಸಿಕೊಂಡ ಅನಂತರ ತಮ್ಮ ವಾಸಕ್ಕಾಗಿ ಅರಮನೆ, ಆಡಳಿತ ವಿಭಾಗ, ನೂತನ ಸಾಮ್ರಾಜ್ಯದ ಉನ್ನತಿ ಘನತೆಗಳನ್ನು ಸಮರ್ಥವಾಗಿ ಪ್ರತಿನಿಧಿಸಬಲ್ಲ ಧಾರ್ಮಿಕ ಹಾಗೂ ಸಾರ್ವಜನಿಕ ಕಟ್ಟಡಗಳನ್ನು ಕಟ್ಟತೊಡಗಿದರು. ನದೀದಡದಿಂದ ಸಾಕಷ್ಟು ದೂರದಲ್ಲಿ, ಸ್ವಾಭಾವಿಕ ರಕ್ಷಣೆ ನೀಡುವಂತಹ, ಪ್ರಸ್ತುತ ಉಪಯೋಗಕ್ಕೆ ಮಾತ್ರವಲ್ಲದೆ ಮುಂದಿನ ಕಾಲಗಳಲ್ಲಿ ಆಹಾರ ಮತ್ತು ನೀರಿನ ಪೂರೈಕೆ ಬಗೆಗಿನ ಸ್ವಾವಲಂಬನೆ, ಅವಶ್ಯಕತೆ ಒದಗಿದಾಗ ನಾಲ್ಕೂ ನಿಟ್ಟಿನಲ್ಲಿ ವಿಸ್ತರಣೆಗೆ ಸೂಕ್ತ ಸ್ಥಳಾವಕಾಶವಿರುವಂತಹ, ಸಮತಟ್ಟಾದ, ವಿಶಾಲ ಪ್ರದೇಶದಲ್ಲಿ ಕೇಂದ್ರೀಕೃತವಾಗಿ ನಿರ್ಮಾಣಗಳನ್ನು ಆರಂಭಿಸಿದರು. ಸಹಜವಾಗಿ ರಾಮಚಂದ್ರ ದೇವಾಲಯವಿರುವ ಪರಿಸರ ಈ ಅವಶ್ಯಕತೆಗಳನ್ನು ಪೂರೈಸುವಂತಹದಾಗಿತ್ತು.

ಈ ನಿವೇಶನಕ್ಕೆ ಹೊಂದುವ ರೀತಿಯಲ್ಲಿ ಪ್ರಚಲಿತ ಉತ್ಖನನ ವಿಧಾನಗಳಿಗಿಂತ ಸ್ವಲ್ಪ ಭಿನ್ನವಾದ ವಿಧಾನವನ್ನು ಇಲ್ಲಿ ಅನುಸರಿಸಬೇಕಾಯಿತು. ಇಲ್ಲಿನ ದಿಬ್ಬಗಳು, ಭಗ್ನ ಕಟ್ಟಡಗಳ ವಾಸ್ತುಭಾಗಗಳು, ಗೋಡೆಗೆ ಉಪಯೋಗಿಸಿದ್ದ ಒರಟು ಬಂಡೆಗಲ್ಲುಗಳು, ಇಟ್ಟಿಗೆ, ಚೆದುರಿದ ಗಾರೆಯ ಖಂಡಗಳು ಹಾಗೂ ಮಣ್ಣಿನಿಂದ ತುಂಬಿದ್ದು ಅವುಗಳ ಮೇಲೆ ಕುರುಚಲು

ಗಿಡಗಳ ಪೊದರುಗಳು ಬೆಳೆದು ಕಾಡಿನಂತೆ ಕಂಡುಬರುತ್ತಿತ್ತು. ಇಂತಹ ಪ್ರದೇಶದಲ್ಲಿ ಸಾಂಪ್ರದಾಯಿಕ ರೀತಿಯ ಅಂಕಿ, ಅಕ್ಷರಗಳಿಂದ ಗುರುತಿಸಲಾಗುವ ಗೂಟಗಳನ್ನುಪಯೋಗಿಸಿ, ಚಚ್ಚೌಕದ ವರ್ಗಗಳಾಗಿ ವಿಂಗಡಿಸಿ ಉತ್ಖನನ ನಡೆಸುವುದು ಸೂಕ್ತವಲ್ಲ. ಅಲ್ಲದೆ ಈ ಪ್ರದೇಶಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಚೆದುರಿ ಬಿದ್ದಿರುವ ವಾಸ್ತುಶಿಲ್ಪಗಳು ಮೂಲತಃ ಆ ಪ್ರದೇಶದಲ್ಲಿದ್ದ ಕಟ್ಟಡದ ಭಾಗವಾಗಿದ್ದು, ವಿವೇಚನೆಯಿಲ್ಲದೆ ಅವನ್ನು ತೆಗೆದುಹಾಕಿದರೆ, ಉತ್ಖನನಾಂತರ ದೊರೆಯಬಹುದಾದ ಅವಶೇಷಗಳ ತಲವಿನ್ಯಾಸ ಮುಂತಾದ ರೂಪುರೇಷೆಗಳು ಬದಲಾಗುವ ಸಂಭವವಿತ್ತು. ಇಡೀ ನಿವೇಶನದಲ್ಲಿ ಚೆದುರಿದ್ದ ಇಂತಹ ಪ್ರತಿ ಶಿಲಾಖಂಡವನ್ನು ಛಾಯಾಚಿತ್ರ ಮತ್ತು ಸೂಕ್ತ ನಕ್ಷೆಗಳ ಮೂಲಕ ದಾಖಲಿಸಿದ್ದರೂ ಆ ವಾಸ್ತು ಭಾಗವನ್ನು ತೆಗೆಯುವಾಗ ಅಪೂರ್ವ ಸಂಯಮ ವಹಿಸಬೇಕಾಗುತ್ತಿತ್ತು. ಅಲ್ಲದೆ ಇಂತಹ ನಿವೇಶನಗಳಲ್ಲಿ ಕೆಲಸಮಾಡುವಾಗ ಆ ನಿವೇಶನದ ಪ್ರಾಕೃತಿಕ ಲಕ್ಷಣ, ಇಲ್ಲಿಯ ಕಟ್ಟಡ ನಿರ್ಮಾಣ ಪದ್ಧತಿ, ಉಪಯೋಗಿಸಲಾದ ಸಾಮಗ್ರಿ ಮತ್ತು ಆ ಕಟ್ಟಡಗಳು ಭಗ್ನವಾದ ಸಂದರ್ಭ ಹಾಗೂ ರೀತಿ ಇವೆಲ್ಲವುಗಳ ಬಗೆಗಿನ ಆಳವಾದ ಅರಿವು ಅತ್ಯಾವಶ್ಯಕ. ಇದರಿಂದ ಉತ್ಖನನಾಂತರ ದೊರೆಯುವ ಕಟ್ಟಡದ ಅವಶೇಷಗಳ ಪೂರ್ಣಮಾಹಿತಿಯೊಂದಿಗೆ ಚೆದುರಿ ಬಿದ್ದಿದ್ದ ವಾಸ್ತುಭಾಗಗಳ ಸ್ಥಾನವನ್ನು ನಿರ್ದಿಷ್ಟವಾಗಿ ನಿರ್ಧರಿಸಿ, ಅವುಗಳನ್ನು ಪುನಃಜೋಡಿಸಿ, ಸಂರಕ್ಷಿಸಲೂ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಉಳಿದ ಸಾಂಪ್ರದಾಯಿಕ ವಿಧಾನಗಳಂತಲ್ಲದೆ ಹಂಪಿಯಲ್ಲಿನ ಉತ್ಖನನದಲ್ಲಿ ಮೊದಲು ಭೂಮೇಲ್ಮೈಯಲ್ಲಿ ಕಾಣುವ ಚೆದುರಿದ ವಾಸ್ತುಭಾಗಗಳು, ಉತ್ಖನನಾಂತರ ಬೆಳಕಿಗೆ ಬರುವ ಕಟ್ಟಡಗಳಲ್ಲಿ ಆ ವಾಸ್ತುಭಾಗಗಳ ನಿರ್ದಿಷ್ಟ ಸ್ಥಾನ, ಅವುಗಳ ಸಮರ್ಥ, ಆಧಾರಪೂರ್ವಕ ಪುನರ್ಜೋಡಣೆಯಿಂದ ಲಭ್ಯವಾಗುವ ಮೂಲಕಟ್ಟಡದ ತಲ ಹಾಗೂ ಊರ್ಧ್ವ ವಿನ್ಯಾಸಗಳ ಪೂರ್ಣ ಕಲ್ಪನೆ, ಅಧ್ಯಯನ ಇವುಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕಾಯಿತು.

ಈ ಹಿನ್ನೆಲೆಯಲ್ಲಿ ರಾಜಾಂಗಣದಲ್ಲಿ ನಡೆಸಲಾಗಿರುವ ಉತ್ಖನನದಿಂದ ಈ ಪ್ರದೇಶದಲ್ಲಿರುವ ಬಹುಶಃ ಎಲ್ಲ ಭಗ್ನಾವಶೇಷಗಳನ್ನು ಸಮರ್ಥವಾಗಿ ಪ್ರಕಾಶಪಡಿಸಿ, ಆಧಾರಪೂರ್ವಕವಾಗಿ ಪುನರ್ಜೋಡಣೆ ಮಾಡಿ ಸಂರಕ್ಷಿಸಲಾಗಿದೆಯಲ್ಲದೆ, ಆ ಕಟ್ಟಡಗಳು ಉಪಯೋಗವಾಗುತ್ತಿದ್ದ ರೀತಿಯನ್ನೂ ಆಂತರಿಕ ಹಾಗೂ ಬಾಹ್ಯಸಾಕ್ಷ್ಯಾಧಾರಗಳಿಂದ ಊಹಿಸಲಾಗಿದೆ. 40ಕ್ಕೂ ಹೆಚ್ಚಿನ ಕಟ್ಟಡಗಳ ಅವಶೇಷಗಳಿಂದ ಕೂಡಿರುವ ರಾಜಾಂಗಣದ ಸಂಪೂರ್ಣ ತಲವಿನ್ಯಾಸ ಈಗ ಸ್ಪಷ್ಟವಾಗಿದೆ. ಇದರಲ್ಲಿ ಮೂರು ಮುಖ್ಯ ಕಟ್ಟಡ ಸಮೂಹಗಳನ್ನು ಅರಮನೆ ಸಮುಚ್ಚಯ, ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದ ಸ್ಥಳ ಮತ್ತು ಅಂಗರಕ್ಷಕರು ಹಾಗೂ ಪರಿಚಾರಕರ ವಾಸಗೃಹಗಳು, ಆಡಳಿತಾತ್ಮಕ ವ್ಯವಹಾರಗಳ ವಿಭಾಗ ಹಾಗೂ ಉಗ್ರಾಣ ಎಂದು ಗುರುತಿಸಲಾಗಿದೆ.

59,000 ಚ.ಮೀ ವಿಸ್ತಾರವಾದ ಸ್ಥಳವನ್ನು ಆವರಿಸಿರುವ ಈ ರಾಜಾಂಗಣವನ್ನು ಪ್ರವೇಶಿಸಲು ಉತ್ತರದಲ್ಲಿ ಎರಡು ಹಾಗೂ ಪಶ್ಚಿಮದಲ್ಲಿ ಒಂದು ದ್ವಾರಗಳಿವೆ. ಉತ್ತರ ದ್ವಾರಗಳಲ್ಲಿ ಮಹಾನವಮಿ ದಿಬ್ಬದ ಬಳಿ ಇರುವ ಅಲಂಕೃತ ಕಟಾಂಜನಸಹಿತವಾದ ಸೋಪಾನ ದ್ವಾರ ಮಹಾನವಮಿ ದಿಬ್ಬದಲ್ಲಿ ಸಮಾರಂಭಗಳು ನಡೆಯುತ್ತಿದ್ದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗವಾಗುತ್ತಿತ್ತು. ಈ ಮಾರ್ಗದ ಹೊಸ್ತಿಲಿನಲ್ಲಿ ಭಾರಿಗಾತ್ರದ ಬಾಗಿಲು ಅಳವಡಿಸಲು ಕಬ್ಬಿಣದ ಉಂಗುರಗಳನ್ನು ಜಡಿದ ಕುಳಿಗಳಿವೆ. ಇಲ್ಲಿ ಅಳವಡಿಸಿದ್ದ ಬಾಗಿಲುಗಳಲ್ಲಿ ಒಂದು ಇದೇ ಪರಿಸರದಲ್ಲಿದ್ದರೆ ಇನ್ನೊಂದರ ಭಾಗಗಳು ಉತ್ಖನನದಲ್ಲಿ ದೊರಕಿವೆ. 18 ಸಣ್ಣ ಚೌಕಗಳಾಗಿ ವಿಭಜಿಸಿ, ಕಮಲದ ಚಿತ್ರಣಗಳಿಂದ, ಮರದಬಾಗಿಲಿನಂತೆ ಅಲಂಕರಿಸಿದ್ದ ಇವುಗಳನ್ನು ಕೂರಿಸಿದ್ದ ಪ್ರವೇಶದ್ವಾರ ಸಹಜವಾಗಿ ಅತಿಮುಖ್ಯವಾಗಿತ್ತು. ಇದರಿಂದ ರಾಜಭವನಗಳಿಗೆ ಅಳವಡಿಸಲಾಗಿದ್ದ ಮರದ ದ್ವಾರಬಂಧಗಳ ಸೌಂದರ್ಯವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಾಗುತ್ತದೆ. ಈ ದ್ವಾರದಿಂದಾಚೆಗೆ ಪೂರ್ವಪಶ್ಚಿಮವಾಗಿ ಎರಡೂ ಪಾರ್ಶ್ವಗಳಿಗೆ ಉಪಮಾರ್ಗವಿದೆ. ಪಶ್ಚಿಮದ ಮಾರ್ಗದಿಂದ ಬಹುಶಃ ರಾಜಪರಿವಾರದವರು, ಅಂತಃಪುರ ದವರು ದಿಬ್ಬವನ್ನು ಪ್ರವೇಶಿಸುತ್ತಿದ್ದರು. ಹಾಗೆಯೇ ಪೂರ್ವಮಾರ್ಗದಿಂದ ರಾಜಪರಿವಾರದೊಂದಿಗೆ ಕುಳಿತು ಉತ್ಸವ ಸಮಾರಂಭವನ್ನು ವೀಕ್ಷಿಸಲು ಅರ್ಹತೆಯಿದ್ದಂತಹ ಪುರಪ್ರಮುಖರು, ಇತರ ವಿಶೇಷಾಹ್ವಾನಿತರು ಪ್ರವೇಶಿಸುತ್ತಿದ್ದರು. ಇವರ ಉಪಯೋಗಕ್ಕಾಗಿ ಪಶ್ಚಿಮ ಮಾರ್ಗದಲ್ಲಿ ಸಣ್ಣ ಪರದೆಗೋಡೆಯಿಂದ ಮರೆಮಾಡಿದ ಶೌಚಾಲಯ ನಿರ್ಮಿಸಿರುವುದು ಇಲ್ಲಿನ ವೈಶಿಷ್ಟ್ಯ. ಅರಮನೆ ಸಮುಚ್ಚಯ: ರಾಜಾಂಗಣದ ವಾಯವ್ಯ ಭಾಗದಲ್ಲಿ ರಾಜಸಭಾಂಗಣದ ಬಳಿ ಇರುವ ಇನ್ನೊಂದು ದ್ವಾರ ಇಲ್ಲಿಯ ಮುಖ್ಯ ಪ್ರವೇಶದ್ವಾರವಾಗಿದೆ. ರಾಮಚಂದ್ರ ದೇವಾಲಯದ ಕಡೆಯಿಂದ ಬರುವಾಗಿನ

ಕಲ್ಲಿನ ತುಲಾಭಾರ

ಇತರ ದ್ವಾರಗಳ ಸಾಲು ಹಾಗೂ ಅಕ್ಷದಲ್ಲಿಯೇ ನಿರ್ಮಿತವಾಗಿರುವ ಈ ದ್ವಾರ ಅಂಕುಡೊಂಕಾಗಿ ರಚಿತವಾಗಿದ್ದು, ಕಾವಲು ಪಡೆಯವರಿಗಾಗಿ ಚೌಕಿ ಮತ್ತು ಸುರಕ್ಷಿತ ಬಾಗಿಲುಗಳನ್ನು ಹೊಂದಿತ್ತು. ಈ ದ್ವಾರದಿಂದ ರಾಜಾಂಗಣವನ್ನು ಪ್ರವೇಶಿಸಿದರೆ ನಯಗೊಳಿಸಿದ ಗಾರೆಯ ನೆಲವುಳ್ಳ ವಿಶಾಲ ಅಂಗಳವಿದೆ. ಇದರಾಚೆಗಿರುವ ಕಿರುಮಾರ್ಗ ಒಂದರ ಪೂರ್ವಕ್ಕೆ,



ಉತ್ಖನನ, ಹಂಪಿ

ಬಹುಶಃ ರಾಜನನ್ನು ಸಂದರ್ಶಿಸಲು ಬಂದವರು, ಅತಿಥಿಗಳು ಮುಂತಾದವರಿಗೆ ವೀಕ್ಷಕರ ಕೊಠಡಿಯಂತೆ ಉಪಯೋಗವಾಗುತ್ತಿದ್ದ ಕಂಬಸಾಲಿನ ಹಜಾರವಿದೆ. ಈ ಹಜಾರದ ಪಶ್ಚಿಮಕ್ಕೆ ಇರುವ ಕಟ್ಟಡ ಸಮೂಹ ಅರಮನೆ ಸಮುಚ್ಚಯ. ಮೇಲೆ ಹೇಳಿದ ಕಿರುಮಾರ್ಗದಿಂದಲೇ ಈ ಕಟ್ಟಡ ಸಮೂಹವನ್ನು ಪ್ರವೇಶಿಸಬಹುದಾಗಿದ್ದು, ಈ ಮಾರ್ಗದ ದಕ್ಷಿಣ ತುದಿಯಲ್ಲಿ ಇನ್ನೊಂದು ಅಲಂಕೃತ ಹಜಾರವಿದೆ. ಈ ಹಜಾರದ ಒಳಗೋಡೆಗಳಿಗೆ ನಯಗೊಳಿಸಿದ ಅಮೃತಶಿಲೆ ಹಾಗೂ ಹಸುರು ಮಿಶ್ರಿತ ಬಿಳಿ ಶಿಲೆಗಳ ಹೊದಿಕೆಯಿದ್ದು, ನೆಲಕ್ಕೂ ನುಣುಪಾದ ಬಳಪದ ಕಲ್ಲಿನ ಫಲಕಗಳನ್ನು ಹಾಸಲಾಗಿದೆ. ಇದರ ನೈರುತ್ಯ ಭಾಗದಲ್ಲಿ ಆಯತಾಕಾರದ ಪೀಠವಿದ್ದು, ದಕ್ಷಿಣದಲ್ಲಿ ಭೂಮ್ಯಂತರ್ಗತ ಕೊಠಡಿಯನ್ನು ಪ್ರವೇಶಿಸಲು ಬಾಗಿಲಿದೆ. ಅರಮನೆ ಸಮುಚ್ಚಯದಲ್ಲಿ ಈ ಹಜಾರದ ಸ್ಥಳ ಮತ್ತು ಅಲಂಕಾರಗಳಿಂದಾಗಿ



ಪಿಂಗಾಣಿ ಪಾತ್ರೆಗಳು, ಹಂಪಿ

ಬಹುಶಃ ಅರಸರು ಇದನ್ನು ಗಣ್ಯವ್ಯಕ್ತಿಗಳಿಗೆ ಸಂದರ್ಶನ ನೀಡಲು ಬಳಸುತ್ತಿದ್ದರೆಂದು ಊಹಿಸಬಹುದು.

ಈ ಹಜಾರದಿಂದಾಚೆಗೆ, ಭೂಮ್ಯಂತರ್ಗತ ಕೊಠಡಿಯ ದಕ್ಷಿಣಕ್ಕೆ, ಸಣ್ಣ ಅಂಗಳವಿದ್ದು ಇದರ ಮೂಲಕ ವಿವಿಧ ಗಾತ್ರದ ಒಂಬತ್ತಕ್ಕೂ ಹೆಚ್ಚಿನ ಕೊಠಡಿಗಳಿರುವ ಆಯತಾಕಾರದ ದೊಡ್ಡ ಕಟ್ಟಡದೊಳಕ್ಕೆ ಹೋಗಬಹುದು. ಈ ಕಟ್ಟಡದ ಪೂರ್ವಭಾಗದಲ್ಲಿರುವ ಆಯತಾಕಾರದ ಕೊಠಡಿಗೆ ಹೊರಗಿನಿಂದ ಇನ್ನೊಂದು ಬಾಗಿಲಿದ್ದು, ಬಹುಶಃ ಇದೊಂದು ಸಣ್ಣ ಪೂಜಾಗೃಹವಾಗಿದ್ದು, ಉಳಿದ ಕೊಠಡಿಗಳು ವಾಸಕ್ಕಾಗಿ ಉಪಯೋಗಿಸಲ್ಪಡುತ್ತಿದ್ದವು. ಮೇಲೆ ಹೇಳಿದ ಕಟ್ಟಡಗಳಲ್ಲದೆ ಕೆಲವು ನಿರ್ದಿಷ್ಟ ವ್ಯವಹಾರಗಳಿಗೆ ಬಳಸಲಾಗುತ್ತಿದ್ದ ವಿವಿಧಗಾತ್ರದ ಇತರ ಆರು ಕಟ್ಟಡಗಳೂ ಅರಮನೆ ಸಮುಚ್ಚಯದಲ್ಲಿವೆ. ಇವುಗಳಲ್ಲಿ ಉತ್ತರದ ತುದಿಯಲ್ಲಿರುವ ವೀಕ್ಷಕರ ಕೊಠಡಿಯ ಎದುರಿನ ಕಟ್ಟಡ ಗಮನಾರ್ಹವಾದದ್ದು. ಈ ಕಟ್ಟಡದ ವಾಯವ್ಯ ಮೂಲೆಗೆ ರಾಜಸಭಾಂಗಣದ ಮೇಲುಪ್ಪರಿಗೆಗೆ ಹೋಗಲು ಮೆಟ್ಟಿಲುಗಳಿವೆ. ಮೊದಲ ಮೆಟ್ಟಿಲಿನಲ್ಲಿ ಕಡಿಮೆ ಆಳದ ತೊಟ್ಟಿಯಿದ್ದು ಇದಕ್ಕೆ ನೀರು ಹರಿಯುವಂತೆ ಏರ್ಪಾಡಿದೆ. ಇದರಿಂದ ರಾಜನು ಸಭಾಸದರಿಗೆ ಸಂದರ್ಶನ ನೀಡುವುದಕ್ಕಾಗಿ ಸಭಾಂಗಣವನ್ನು ಪ್ರವೇಶಿಸುವ

ಮುನ್ನ ಮತ್ತು ಆನಂತರ ಕಾಲುತೊಳೆಯಲು ಅನುಕೂಲವಾಗುವಂತೆ ಸ್ವಯಂಚಾಲಿತ ನೀರು ಪೂರೈಕೆ ವ್ಯವಸ್ಥೆ ಇದ್ದುದು ತಿಳಿಯುತ್ತದೆ. ಜೊತೆಗೆ ಈ ಕಟ್ಟಡದ ಒಳಭಾಗದಲ್ಲಿ ಸಣ್ಣ ಶೌಚಾಲಯವಿದ್ದ ಕುರುಹುಗಳೂ ದೊರೆತಿವೆ.



ಸಭಾಂಗಣ ವೇದಿಕೆ, ಹಂಪಿ

ಅರಮನೆ ಸಮುಚ್ಚಯದಲ್ಲಿಯ ಇತರ ಕಟ್ಟಡಗಳಲ್ಲಿ ಆಯತಾಕಾರದ ಕಂಬಸಾಲಿನ ಎರಡು ಹಜಾರಗಳು ಹಾಗೂ ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಲಾಗಿರುವ ಚೌಕಾಕಾರದ ಒಂದು ಕಟ್ಟಡ ಮುಖ್ಯವಾದವು. ಚೌಕಾಕಾರದ ಕಟ್ಟಡದ ಮುಂಭಾಗದಲ್ಲಿ ಆನೆಯ ಉಬ್ಬುಚಿತ್ರವಿರುವ ಕಟಾಂಜನ ಸಹಿತ ಸೋಪಾನವೂ ಹಿಂಭಾಗದಲ್ಲಿ ಸಾಮಾನ್ಯ ರೀತಿಯ ಮೆಟ್ಟಿಲುಗಳೂ ಇದ್ದು ಈ ಕಟ್ಟಡವನ್ನು ಬಹುಶಃ ವಾಸಕ್ಕಾಗಿ ಅಲ್ಲದೆ ಬೇರಾವುದೋ ಕಾರ್ಯಕ್ಕಾಗಿ ಕಟ್ಟಿದ್ದಂತೆ ಕಾಣುತ್ತದೆ.

ರಾಜಾಂಗಣದ ಕೇಂದ್ರವಾದ ಈ ಪ್ರದೇಶದಲ್ಲಿ ಚೀನದಿಂದ ಆಮದಾದ ಪಿಂಗಾಣಿ ಪಾತ್ರೆ, ಮನೆಯಲ್ಲಿ ಪೂಜಿಸುವುದಕ್ಕಾಗಿದ್ದ ಸಣ್ಣಗಾತ್ರದ ಶಿಲ್ಪ, ದೇವತಾಮೂರ್ತಿಗಳಿರುವ ಶಿಲಾಫಲಕ ಹಾಗೂ ಸ್ಫಟಿಕದ ಅನೇಕ ಶಿವಲಿಂಗಗಳು ದೊರಕಿವೆ. ಇವುಗಳಲ್ಲಿ ಮಾನವ, ಪಶು, ಪಕ್ಷಿ, ಲತೆಗಳಿಂದ ಅಲಂಕೃತವಾದ; ಕೆಲವೊಮ್ಮೆ ಚೀನೀ ಲಿಪಿಯಿಂದ ಕೂಡಿದ ಪಿಂಗಾಣಿ ಪಾತ್ರೆಗಳ ಭಾಗಗಳು ಹೆಚ್ಚಿನ ಸಂಖ್ಯೆಯಲ್ಲಿರುವುದು ಗಮನಾರ್ಹ ಅಂಶ.

**ಧಾರ್ಮಿಕ ಚಟುವಟಿಕೆಗಳ ಪ್ರದೇಶ:** ಅರಮನೆ ಸಮುಚ್ಚಯದ ಪೂರ್ವಕ್ಕಿರುವ ಈ ಪ್ರದೇಶ ಇಡೀ ರಾಜಾಂಗಣದ ಹೃದಯ ಸ್ಥಾನದಲ್ಲಿದೆ. ವಿಶಾಲವಾದ ಚಾವಣಿರಹಿತ ಚತುಶ್ಶಾಲೆ (ಅಂಗಳ)ಯಂತಿರುವ ಈ ಪ್ರದೇಶದ ಮಧ್ಯದಲ್ಲಿ ಆಯತಾಕಾರದ ಹೋಮಕುಂಡವಿದ್ದು ಇದಕ್ಕೆ ಹೊಂದಿಕೊಂಡಂತೆ ಉತ್ತರದಲ್ಲಿ ಅವಭೃತಸ್ನಾನಾರ್ಥವಾಗಿ ಇದ್ದ ಒಂದು ಕಲ್ಲಿನ ತೊಟ್ಟಿಯಿದೆ. ಅಂಗಳದ ಒಳಭಾಗಕ್ಕೆ ಹೊಂದಿಕೊಂಡಂತೆ ಉತ್ತರ ಹಾಗೂ ಈಶಾನ್ಯ ದಿಸೆಗಳಲ್ಲಿ ಪ್ರತಿಷ್ಠಿತ ಆಮಂತ್ರಿತರು ಕುಳಿತು ಧಾರ್ಮಿಕ ಕ್ರಿಯೆಗಳನ್ನು ವೀಕ್ಷಿಸಲು ಅನುವಾಗುವಂತೆ ಸ್ವಲ್ಪ ಎತ್ತರದ ಕಕ್ಷಾಸನದಂತಹ ವೇದಿಕೆಯಿದೆ. ಇದರಾಚೆಗೆ ಒಂದೊಂದು ಸಣ್ಣ ಪೂಜಾಮಂದಿರಗಳಿದ್ದು, ದಕ್ಷಿಣದಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಲಾಗಿರುವ



ಸಭಾಂಗಣ, ಹಂಪಿ

ಅರಮನೆ ಸಮುಚ್ಚಯದ ವಿಸ್ತೃತಭಾಗವಾಗಿರಬಹುದಾದ ಎರಡು ಕಟ್ಟಡಗಳಿವೆ. ಪೂರ್ವದಿಕ್ಕಿನಲ್ಲಿರುವ ಪರದೆ ಗೋಡೆಯೊಂದು ಈ ಪ್ರದೇಶವನ್ನು ಮಹಾನವಮಿದಿಬ್ಬದಿಂದ ಪ್ರತ್ಯೇಕಿಸುತ್ತದೆ. ಅರಮನೆ ಸಮುಚ್ಚಯದಿಂದ ಧಾರ್ಮಿಕ ಕ್ರಿಯೆಗಳನ್ನು ಮುಗಿಸಿಕೊಂಡು ಮಹಾನವಮಿ ದಿಬ್ಬಕ್ಕೆ ನೇರವಾಗಿ ಹೋಗಿಬರಲು ಒಂದು ಸಣ್ಣ ಪ್ರವೇಶದ್ವಾರವೂ ಇದೆ.

ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದ ಈ ಪ್ರದೇಶ ಮತ್ತು ಮಹಾನವಮಿದಿಬ್ಬ ಇವೆರಡರ ನಡುವಣ ಸ್ಥಳದಲ್ಲಿ ವಿವಿಧ ಗಾತ್ರದ ನಾಲ್ಕು ಕೊಳಗಳಿವೆ. ಇವು ರಾಜಾಂಗಣದಲ್ಲಿ ಕಟ್ಟಡ ನಿರ್ಮಾಣದ ಮೊದಲ ಹಂತದಲ್ಲಿಯೇ ನಿರ್ಮಿತವಾಗಿದ್ದು, ಅನತಿಕಾಲದಲ್ಲಿಯೇ ಅನುಪಯೋಗವಾದುದರಿಂದ, ಉದ್ದೇಶಪೂರ್ವಕವಾಗಿ ಮುಚ್ಚಿದಂತೆ ಕಂಡುಬರುತ್ತದೆ. ಆದರೆಬಹುಶಃ ಇದೇ ಕಾಲದಲ್ಲಿ ಕಟ್ಟಲಾದ ಟಿ– ಆಕಾರದ ಕೊಳ ಹಾಗೂ ಅದಕ್ಕೆ ಹೊಂದಿ ಕೊಂಡಂತೆ ಇರುವ ಒಂದೇಕಲ್ಲಿನ ತೊಟ್ಟಿ ಇವು ದೀರ್ಘಕಾಲ ಬಳಕೆಯಲ್ಲಿದ್ದಂತೆ ಕಾಣುತ್ತವೆ. ಹೆಚ್ಚು ಆಳವಿಲ್ಲದ, ಪಶ್ಚಿಮದಲ್ಲಿ ಮಾತ್ರ ಸೋಪಾನವಿರುವ ಈ ಟಿ–ಆಕಾರದ ಕೊಳವನ್ನು ಸುಂದರವಾಗಿ ಕಟ್ಟಲಾಗಿದೆ. ಇಕ್ಕೆಲಗಳಲ್ಲಿ ಪ್ರಸಾಧನಗೃಹಗಳಿರುವ ಇದು ಈಜುಕೊಳವಾಗಿರಬಹುದು ಅಥವಾ ವಿಜಯದಶಮಿ ಆಚರಣೆಯ ಸಂದರ್ಭದಲ್ಲಿ ವಸಂತೋತ್ಸವದಂತಹ ಸಮಾರಂಭಗಳಲ್ಲಿ ರಂಗುರಂಗಿನ ಓಕುಳಿಯಾಡಲು ಬಳಸಿರಬಹುದು.

ಅಂಗರಕ್ಷಕರು ಹಾಗೂ ಪರಿಚಾರಕರ ವಾಸಗೃಹಗಳು : ಅರಮನೆ ಸಮುಚ್ಚಯದ ದಕ್ಷಿಣಭಾಗದಲ್ಲಿ ದಕ್ಷಿಣೋತ್ತರವಾಗಿ ನಿರ್ಮಿತವಾಗಿರುವ ವಿವಿಧ ಗಾತ್ರದ ಹದಿಮೂರು ಆಯತಾಕಾರದ ಕಂಬಸಾಲಿನ ಹಜಾರಗಳಿವೆ. ಮೊದಲ ಹತ್ತು ಹಜಾರಗಳಲ್ಲಿ ಬಹುಶಃ ಅಂಗರಕ್ಷಕರು ಮತ್ತು ಪರಿಚಾರಕರು ವಾಸಿಸುತ್ತಿದ್ದರು ಎಂದು ಈ ಮೊದಲು ಭಾವಿಸಲಾಗಿತ್ತು. ಇತ್ತೀಚೆಗೆ ಇವು ಆಡಳಿತ ವಿಭಾಗವಾಗಿತ್ತೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವಿಜಯನಗರ ಸಾಮ್ರಾಜ್ಯ ವಿಸ್ತಾರಗೊಂಡು, ಸ್ಥಿರವಾದ ಮೇಲೆ ಇಡೀ ಸಾಮ್ರಾಜ್ಯದ ಆಡಳಿತ ಸುಸಂಗತವಾಗಿ ನಡೆಯಲು ಪ್ರತ್ಯೇಕ ವಿಭಾಗದ ಆವಶ್ಯಕತೆ ಸಹಜವಾಗಿತ್ತು. ಅರಮನೆ ಪ್ರದೇಶಕ್ಕೆ ಹೊಂದಿ ಕೊಂಡಂತೆ ಸೂಕ್ತ ಭದ್ರತಾವ್ಯವಸ್ಥೆಯಿಂದ ಕೂಡಿದ ಈ ಕಂಬಸಾಲಿನ ಹಜಾರಗಳು ಬಹುಶಃ ಆಡಳಿತ ವಿಭಾಗವಾಗಿತ್ತು. ಇದರ ಹಿಂದಿರುವ ಗಾತ್ರದಲ್ಲಿ ಕಿರಿದಾದ,



ಕಲ್ಯಾಣಿ, ಹಂಪಿ

ಕಡೆಯ ಎರಡು ಹಜಾರಗಳಲ್ಲಿ ಕಾರ್ಯಾಲಯದ ಲೆಕ್ಕಪತ್ರ ದಾಖಲೆಗಳ ಸಂಗ್ರಹಾಲಯ ಅಥವಾ ಉಗ್ರಾಣವನ್ನು ನೆಲೆಗೊಳಿಸಲಾಗಿತ್ತು. ಈ ಕಂಬಸಾಲಿನ ಹಜಾರಗಳ ಬಳಿಯಲ್ಲಿಯ ನೀರಿನ ಏರ್ಪಾಡುಗಳು, ಜನವಸತಿ ಇರುವೆಡೆಗಳಲ್ಲಿ ಸಾಧಾರಣವಾಗಿ ದೊರೆಯುವ ಪ್ರಾಚ್ಯವಸ್ತುಗಳ ಅಭಾವ ಮತ್ತು ಆ ಕಾಲದಲ್ಲಿ ಕಡತಗಳ ಮೇಲೆ ದಾಖಲೆಗಳನ್ನು ಬರೆಯಲು ಉಪಯೋಗಿಸುತ್ತಿದ್ದ ಬಳಪದಕಲ್ಲಿನ ತೆಳ್ಳನೆಯ ಬಳಪದಂತಹ ಲೇಖನ ಸಾಮಗ್ರಿಗಳು ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ದೊರಕಿರುವುದನ್ನು ಪರಿಗಣಿಸಿ ಈ ನಿರ್ಧಾರಕ್ಕೆ ಬರಲಾಗಿದೆ. ಹಾಗಿದ್ದರೂ ವಿದೇಶಿ ಪ್ರವಾಸಿಗರ ಉಲ್ಲೇಖದಲ್ಲಿ ಈ ಕಟ್ಟಡಗಳ ಬಗೆಗೆ ಯಾವುದೇ ಪ್ರಸ್ತಾಪ ಇಲ್ಲದಿರುವುದು ಮತ್ತು ಅರಮನೆಗೆ ಅತ್ಯಂತ ಸಮೀಪದಲ್ಲಿ ಇಂತಹ ಆಡಳಿತ ವಿಭಾಗಗಳು ಇದ್ದುದಕ್ಕೆ ಬೇರೆ ಯಾವ ಮಧ್ಯಯುಗೀನ ನಿವೇಶನಗಳಲ್ಲಿಯೂ ಉದಾಹರಣೆಗಳು ಇಲ್ಲದಿರುವುದು ಗಮನಾರ್ಹ.

ಈ ಹಜಾರಗಳ ದಕ್ಷಿಣಕ್ಕಿರುವ ಮುಕ್ತಪ್ರದೇಶದಲ್ಲಿ ಸಮಾನಾಂತರಗಳಲ್ಲಿ ಸಣ್ಣದೊಡ್ಡ ಕುಳಿಗಳಿದ್ದು ಅವುಗಳಲ್ಲಿ ಪುಷ್ಪಲತೆ, ಫಲಭರಿತ ವೃಕ್ಷಗಳನ್ನು ಬೆಳೆಸಲಾಗಿತ್ತು. ವಿಜಯನಗರದ ಅರಸರು ಪುಷ್ಪಪ್ರಿಯರು. ಬಣ್ಣ ಬಣ್ಣದ ಗುಲಾಬಿ ಮತ್ತು ನಾನಾಬಗೆಯ ಮಲ್ಲಿಗೆ ಅವರಿಗೆ ಅತ್ಯಂತ ಪ್ರಿಯವೆಂಬುದು ಶಾಸನ ಹಾಗೂ ಸಾಹಿತ್ಯಕೃತಿಗಳಿಂದ ತಿಳಿದುಬರುವ ವಾಸ್ತವಾಂಶ. ಈ ಅಂಶಗಳನ್ನು ಆಧರಿಸಿ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿತವಾದ ಹೂಗಿಡ ಬಳ್ಳಿಗಳ ಸಾಂಪ್ರದಾಯಿಕ ಉದ್ಯಾನವನ್ನು ಇಲ್ಲಿ ಬೆಳೆಸಲಾಗಿದೆ. ಈ ಉದ್ಯಾನದ ಪೂರ್ವಕ್ಕೆ ದೊಡ್ಡ ಆಯತಾಕಾರದ ಕೊಳವಿದ್ದು, ಇದನ್ನು ಸಾರ್ವಜನಿಕರ ಸ್ನಾನದ ಕೊಳ ಎಂದು ಗುರುತಿಸಲಾಗಿತ್ತು. ಆದರೆ ಇದನ್ನು ಈಗ ರಾಜಾಂಗಣದೊಳಗೆ ವಾಸಿಸುತ್ತಿದ್ದ ಆಡಳಿತ ವಿಭಾಗದ ಸಿಬ್ಬಂದಿ, ಅಂಗರಕ್ಷಕರು, ಪರಿಚಾರಕರು ಮೊದಲಾದವರ ದೈನಂದಿನ ಆವಶ್ಯಕತೆಗಳ ಪೂರೈಕೆಗಾಗಿ ನಿರ್ಮಿಸಲಾಗಿತ್ತೆಂದು ಸಾಧಾರವಾಗಿ ಹೇಳಬಹುದು. ಈ ಕೊಳಕ್ಕೆ ಹೊಂದಿಕೊಂಡಂತೆ ಪಶ್ಚಿಮದಲ್ಲಿ ಒಂದು ಸಣ್ಣ ಮಂದಿರವಿದೆ.

**ಅಲಂಕೃತ ಪುಷ್ಕರಿಣಿ:** ಮಹಾನವಮಿ ದಿಬ್ಬದ ನೈರುತ್ಯಭಾಗದಲ್ಲಿ ಬೆಳಕಿಗೆ ಬಂದಿರುವ ಅಲಂಕೃತ ಕಲ್ಯಾಣಿ ಹಂಪಿಯಲ್ಲಿ ಇದುವರೆಗಿನ ಉತ್ಖನನದಲ್ಲಿ ಸಂಶೋಧಿಸಲಾಗಿರುವ ಕಟ್ಟಡಗಳಲ್ಲೆಲ್ಲ ಉತ್ಕೃಷ್ಟವೂ ಈ ಶೈಲಿಯ ಏಕೈಕ ಉದಾಹರಣೆಯೂ ಆಗಿದೆ. 22x22 ಮೀ ಚಚ್ಚೌಕಾಕಾರದ ಈ ಕಲ್ಯಾಣಿ 7ಮೀ ಆಳವಾಗಿದ್ದು, ಸಮಾನಾಕಾರದ ಪದರಗಲ್ಲಿನ ಫಲಕಗಳಿಂದ ಕಟ್ಟಲ್ಪಟ್ಟಿದೆ. ಇದರ ತಲವಿನ್ಯಾಸ ಸ್ವಲ್ಪ ನೈರುತ್ಯ-ಈಶಾನ್ಯ ದಿಕ್ಕಿಗೆ ವಾಲಿದೆ. ಕ್ರಮೇಣ ಕಿರಿದಾಗುತ್ತಾ ಹೋಗುವ, ಮೆಟ್ಟಿಲು ರಚನೆಯಿಂದ ಕೂಡಿರುವ ಕಲ್ಯಾಣಿ ಐದು ಹಂತಗಳಲ್ಲಿದ್ದು ಪ್ರತಿಹಂತದ ಮೇಲ್ಭಾಗ 1.05 ಮೀ ಅಗಲವಾಗಿದೆ. ಉಪಯೋಗಿಸಿರುವ ಫಲಕಗಳ ಕೆಳಭಾಗ ಸ್ವಲ್ಪ ಮುಂಚಾಚಿದ್ದು ಸರಳ ವಿನ್ಯಾಸಗಳಿಂದ ಕೂಡಿದೆ. ಊರ್ಧ್ವ ವಿನ್ಯಾಸದ ಐದು ಹಂತಗಳು ತಲವಿನ್ಯಾಸದಲ್ಲಿ ನಾಲ್ಕು ವಿವಿಧ ಪ್ರಮಾಣದ (19.80 ಮೀ ನಿಂದ 9.20 ಮೀ ವರೆಗೆ) ಚೌಕಗಳನ್ನಾಗಿ ವಿಭಜಿಸುತ್ತವೆ. ಒಂದೊಂದು ಚೌಕದಲ್ಲಿಯೂ ಅಲಂಕೃತ-ಸೋಪಾನಗಳಿವೆ. ಮೊದಲಿನೆರಡು ಹಂತಗಳ ನಡುವೆ ನಾಲ್ಕೂ ಕಡೆ ಪಿರಮಿಡ್ ಆಕಾರದ ಒಂಬತ್ತು ಮೆಟ್ಟಿಲುಗಳ ಸೋಪಾನವಿದೆ. ನಾಲ್ಕು ಹಾಗೂ ಐದನೆಯ ಹಂತಗಳ ನಡುವೆ ಐದು ಮೆಟ್ಟಿಲುಗಳ ಸೋಪಾನವಿದೆ. ಚೌಕಗಳ ಬಾಹುಗಳ ಮಧ್ಯದಲ್ಲಿ ಇರುವ ಸೋಪಾನವನ್ನು ಮುಂಚಾಚಿಸಿ, ಅದರ ಹೊರ ಮೇಲ್ಮೈಯನ್ನು ಹೆಚ್ಚು ಹೆಚ್ಚು ಭಾಗಗಳಾಗಿ ಜೋಡಿಸಿರುವುದರಿಂದ ಇಡೀ ಕಲ್ಯಾಣಿ ಒಂದು ಸುಂದರ ರೇಖಾಕೃತಿಯ ವಿನ್ಯಾಸದಂತೆ ಕಂಗೊಳಿಸುತ್ತದೆ. ಹೀಗೆ ಮುಂಚಾಚಿದ ಮೆಟ್ಟಿಲುಗಳು ನಿರಂತರ ಉಪಯೋಗದಲ್ಲಿದ್ದು ಸವೆದಿರುವಂತೆ ಕಂಡುಬರುತ್ತವೆ. ಕಲ್ಯಾಣಿಯ ಮಧ್ಯದ ಕುಳಿ 2.45 ಮೀ ಆಳವಿದ್ದು, ಗೋಡೆಗಳ ಮಧ್ಯದಲ್ಲಿ ಪಿರಮಿಡ್ ಆಕಾರದಲ್ಲಿ, ಒಂದರ ಕೆಳಗೆ ಒಂದು ಕ್ರಮೇಣ ಅಗಲವಾಗುತ್ತಾ ಹೋಗಿ, ತಳದಲ್ಲಿ ಇಡೀ ಬಾಹುವನ್ನು ಆವರಿಸುವ ಹನ್ನೊಂದು ಮೆಟ್ಟಿಲುಗಳ ಸೋಪಾನಗಳಿವೆ. ಒಟ್ಟಾರೆ ಹಂತಗಳಲ್ಲಿ 25 ಮತ್ತು ನಾಲ್ಕುದಿಕ್ಕಿನ ಪಿರಮಿಡ್ಆಕಾರಗಳಲ್ಲಿ 100 ಮೆಟ್ಟಿಲುಗಳಿವೆ. ನೀರಿನ ಮಟ್ಟ ಕಡಿಮೆಯಾಗಿದ್ದಾಗ ಹತ್ತಿ ಇಳಿಯಲು ಅನುಕೂಲವಾಗುವ ಈ ಮೆಟ್ಟಿಲುಗಳು 25 ಸೆಂಮೀ ಅಗಲವಾಗಿದ್ದು 45 ಸೆಂಮೀ ಉದ್ದವಾಗಿದೆ. ಮಧ್ಯದ ಚೌಕಾಕಾರದ ಕುಳಿಯ ತಲದಲ್ಲಿ ಗ್ರಾನೈಟ್ ಶಿಲೆಯ ಆಯತಾಕಾರದ ಫಲಕಗಳ ನೆಲಗಟ್ಟನ್ನು ಒದಗಿಸಲಾಗಿದೆ. ಅದರ ಕೆಳಗೆ ನೆಲದೊಳಗಿಂದ ಚಿಮ್ಮುವ ಒರತೆಯನ್ನು ಶೋಧಿಸಿ ತಿಳಿನೀರು ಸಂಗ್ರಹವಾಗುವಂತೆ ಮಾಡಲು ಮರಳಿನ ಪದರವನ್ನು ರಚಿಸಲಾಗಿದೆ.

ಈ ಕಲ್ಯಾಣಿಯ ವಿನ್ಯಾಸ ಹಾಗೂ ನಿರ್ಮಾಣ ಕಾರ್ಯ ಪೂರ್ವನಿಯೋಜಿತವಾಗಿದೆ. ಯೋಜಿತ ತಲವಿನ್ಯಾಸದಲ್ಲಿ ನೆಲದೊಳಗೆ ಹಂತಹಂತವಾಗಿ ಕಿರಿದಾಗುತ್ತಾ ಹೋಗುವ ಕೊಳವನ್ನು ಅಗೆದು, ಮೊದಲೇ ಸಿದ್ಧಪಡಿಸಿಕೊಂಡಿರುವ ಪದರಗಲ್ಲಿನ ವಾಸ್ತುಭಾಗಗಳನ್ನು ಹಾಗೂ ಫಲಕಗಳನ್ನು ಕೊಳದ ಒಳಭಾಗಕ್ಕೆ ಸರಿಹೊಂದುವಂತೆ ಜೋಡಿಸಲಾಗಿದೆ. ಪ್ರತಿ ವಾಸ್ತುಭಾಗದ ಮೇಲೆ ವಾಸ್ತುಶಿಲ್ಪಿಯ ಚಿಹ್ನೆ ಅಥವಾ ಸ್ಥಳ ನಿರ್ದೇಶನದ ಗುರುತುಗಳಿದ್ದು ಇದರಿಂದ ಪ್ರತಿಯೊಂದು ವಾಸ್ತುಭಾಗ ಕಲ್ಯಾಣಿಯ ಇಂತಹುದೇ ದಿಕ್ಕಿನ ಇಂತಹುದೇ ಸಾಲಿನ, ಇಂತಹ ಸಂಖ್ಯೆಯ ಫಲಕದ ಅನಂತರ ಜೋಡಿಸಬೇಕಾದುದು ಎಂದು ನಿರ್ದಿಷ್ಟವಾಗಿ ಸೂಚಿತವಾಗಿದೆ. ಇಂತಹ ಚಿಹ್ನೆಗಳಲ್ಲಿ, ಉ,ದ,ತು,ಪ ಅಕ್ಷರಗಳು ಕ್ರಮವಾಗಿ ಉತ್ತರ, ದಕ್ಷಿಣ, ಪೂರ್ವ (ತೂರ್ಪು) ಮತ್ತು ಪಶ್ಚಿಮ ದಿಕ್ಕುಗಳನ್ನು ಸೂಚಿಸಿದರೆ, ಮೆಟ್ಟಿಲುಗಳ ಕ್ರಮವನ್ನು ಸೂಚಿಸಲು ವರ್ಗೀಯ, ಅವರ್ಗೀಯ ಹಾಗೂ ಸಂಯುಕ್ತಾಕ್ಷರಗಳನ್ನು ಬಳಸಿದೆ. ಸರಳರೇಖೆ, ವಿವಿಧ ರೀತಿಯ ವೃತ್ತ, ಅರ್ಧವೃತ್ತ, ತ್ರಿಭುಜ, ಸ್ವಸ್ತಿಕ ಮುಂತಾದ ಚಿಹ್ನೆಗಳು ಮತ್ತು ಪ್ರತಿಹಂತದ ಬಾಹುಗಳ ಉದ್ದ ಮತ್ತು ನಡುಮಧ್ಯದ ಅಳತೆಗಳನ್ನು ನಿರ್ದೇಶಿಸಲು ತ್ರಿಶೂಲ ಗುರುತುಗಳನ್ನು ಉಪಯೋಗಿಸಲಾಗಿದೆ. ಈ ಸ್ಥಳ ನಿರ್ದೇಶನ ಚಿಹ್ನೆಗಳು 14-15ನೆಯ ಶ.ದ ತೆಲುಗು-ಕನ್ನಡ ಲಿಪಿಯಲ್ಲಿವೆ. ಬಳಪದ ಕಲ್ಲಿನಲ್ಲಿ ರೂಪಿಸಿ ಕಲಾತ್ಮಕವಾಗಿ ಸಿಂಗರಿಸಿದ ತ್ರಿಭಂಗದಲ್ಲಿರುವ ವೇಣುಗೋಪಾಲ, ಪದ್ಮಾಸನಸ್ಥ ಚತುರ್ಭುಜದೇವತೆ, ಯಕ್ಷ, ಯಕ್ಷಿಯರು, ವಿವಿಧ ಭಂಗಿಗಳಲ್ಲಿರುವ ನರ್ತಕ ನರ್ತಕಿಯರು ಮುಂತಾದ ಮಧ್ಯಮಗಾತ್ರದ ಮನಮೋಹಕ ಭಗ್ನ ಶಿಲ್ಪಗಳು ಈ ಕಲ್ಯಾಣಿಯಲ್ಲಿ ದೊರಕಿವೆ. ಶೈಲೀಯವಾಗಿ ಇವು ಕಲ್ಯಾಣ ಚಾಳುಕ್ಯ-ಹೊಯ್ಸಳ ಕಾಲದವು. ಧಾರ್ಮಿಕಕ್ರಿಯೆಗಳಲ್ಲಿ ಉಪಯೋಗಿಸುವಂತಹ ಸೂರ್ಯ, ಚಂದ್ರ, ಶಿವಲಿಂಗ ಮುಂತಾದ ಬಿಳಿಬಣ್ಣದ ಚಿತ್ರಣವಿರುವ ಕಪ್ಪುಕೊಡಗಳು, ಬಹುನಳಿಕೆ ಅಥವಾ ಸ್ತನ, ಜನನಾಂಗಗಳಂತಹ ಉಬ್ಬುಗಳುಳ್ಳ ಕಪ್ಪುಬಣ್ಣದ ಕಿರುಕುಡಿಕೆಗಳೂ ದೊರಕಿವೆ. ಕಲ್ಯಾಣಿಗೆ ಹೊಂದಿಕೊಂಡಂತೆ ದಕ್ಷಿಣಭಾಗದಲ್ಲಿ ಒಂದು ಸಣ್ಣದೇವಾಲಯವಿರುವ ವೇದಿಕೆಯಿದೆ. ಇದರ ವಿಶಿಷ್ಟ ವಿನ್ಯಾಸ, ಅನುಪಮ ಅಲಂಕಾರ ಹಾಗೂ ಪಾರ್ಶ್ವದಲ್ಲಿರುವ ಮಂದಿರ ಇವುಗಳಿಂದ ಈ ಕಲ್ಯಾಣಿ ರಾಜಾಂಗಣದಲ್ಲಿ ವಾಸಿಸುತ್ತಿದ್ದ ರಾಜಮನೆತನದವರ ಧಾರ್ಮಿಕ ಉಪಯೋಗಕ್ಕಾಗಿ ನಿರ್ಮಾಣವಾಗಿತ್ತೆಂದು ಭಾವಿಸಬಹುದು.

ಮೊಟ್ಟ ಮೊದಲ ಆವರಣದ ಪ್ರಾಕಾರ: ದಕ್ಷಿಣದಲ್ಲಿ ಉದ್ಯಾನ, ಪಶ್ಚಿಮದಲ್ಲಿ ಆಡಳಿತ ವಿಭಾಗ ಮತ್ತು ಅರಮನೆ ಸಮುಚ್ಚಯಗಳನ್ನು ಆವರಿಸಿರುವ ಪ್ರಾಕಾರ ಗೋಡೆ ರಾಜಾಂಗಣದ ಮತ್ತೊಂದು ಗಮನಾರ್ಹ ನಿರ್ಮಿತಿ. ಈ ಗೋಡೆ ರಾಜಾಂಗಣ ಪ್ರದೇಶವನ್ನು ವಿಸ್ತರಿಸುವ ಮೊದಲು ಕಿರಿದಾಗಿದ್ದ ಆವರಣವನ್ನು ಸುತ್ತುವರೆದಿತ್ತು. ವಿವಿಧ ಕಾರಣಗಳಿಂದಾಗಿ ರಾಜಾಂಗಣವನ್ನು ವಿಶಾಲಗೊಳಿಸಬೇಕಾದಾಗ ಆವಶ್ಯಕತೆ ಇರುವಲ್ಲಿ ಈ ಗೋಡೆಯನ್ನು ಉಳಿಸಿಕೊಂಡು, ಉಳಿದೆಡೆ ತೆಗೆದುಹಾಕಲಾಯಿತು. ಹೀಗಾಗಿ, ಪೂರ್ವದಿಕ್ಕಿನಲ್ಲಿ ಈ ಗೋಡೆಯನ್ನು ನೆಲಸಮ ಮಾಡಿದ್ದರೂ ಕೆಲವು ಕಟ್ಟಡಗಳ ಅಧಿಷ್ಠಾನ ಹಾಗೂ ನೆಲಗಟ್ಟಿನ ಕೆಳಗೆ ಇದರ ಅವಶೇಷಗಳು ಕಂಡುಬಂದಿವೆ. ಪೂರ್ವತುದಿ ಹಾಗೂ ಆಗ್ನೇಯ ಮೂಲೆಯಲ್ಲಿ ಈ ಗೋಡೆಯನ್ನು ಸಾರ್ವಜನಿಕರ ಸ್ನಾನದ ಕೊಳಕ್ಕೆ ಹೊಂದಿಕೊಂಡಂತೆ ಕಟ್ಟಲಾದ ದೇವಾಲಯಕ್ಕೆ ಆಸರೆಗೋಡೆಯಾಗಿ ಬಳಸಲಾಗಿದೆ.

ಪಶ್ಚಿಮದ ಪ್ರವೇಶದ್ವಾರ: ರಾಜಾಂಗಣವನ್ನು ಪ್ರವೇಶಿಸಲು ಉತ್ತರದಲ್ಲಿರುವ ಎರಡು ಮುಖ್ಯದ್ವಾರಗಳಲ್ಲದೆ ಪಶ್ಚಿಮದ ಪ್ರಾಕಾರದಲ್ಲಿ ಒಂದು ಸಣ್ಣ ದಿಡ್ಡಿಬಾಗಿಲಿದೆ. ರಾಜಪರಿವಾರ, ಪರಿಚಾರಕರು ಮೊದಲಾದ ಕೆಲವೇ ಮಂದಿ ಸಂಚರಿಸಲು ಈ ಬಾಗಿಲನ್ನು ಉಪಯೋಗಿಸುತ್ತಿದ್ದರು. ರಾಜಾಂಗಣ ಮತ್ತು ಟಂಕಸಾಲೆಯ ಆವರಣದ ಗೋಡೆಗಳ ನಡುವೆ ಇರುವ ಮಾರ್ಗದ ಮೂಲಕ ರಾಜಮನೆತನದವರು ನೇರವಾಗಿ ರಾಮಚಂದ್ರ ದೇವಾಲಯಕ್ಕೆ ಹೋಗಿ ಬರಬಹುದು.



ಹಜಾರರಾಮ ದೇವಾಲಯಕ್ಕೆ ಅರಮನೆಯವರ ಖಾಸಗಿ ಹಾದಿ, ಹಂಪಿ

ಇತರ ಕೆಲವು ಸಾಮಾನ್ಯ ಪರಿಶೀಲನೆಗಳು: ಹಂಪಿ ಪ್ರದೇಶದಲ್ಲಿರುವ ಸಾಮಾಜಿಕ ಉಪಯೋಗದ ಕಟ್ಟಡಗಳನ್ನು ಕಟ್ಟಲು ಒಂದೇ ವಿಧವಾದ ಪದ್ಧತಿಯನ್ನು ಅನುಸರಿಸಿರುವುದು ಕಂಡುಬರುತ್ತದೆ. ವಾಸ್ತು ಚಟುವಟಿಕೆ ಪ್ರಾರಂಭವಾಗುವ ಮೊದಲು ಈ ಸ್ಥಳ ಹಳ್ಳದಿನ್ನೆಗಳಿಂದ ಕೂಡಿದ್ದು, ಬಂಡೆಗಲ್ಲು ಮತ್ತು ಮಣ್ಣನ್ನು ಪದರ ಪದರವಾಗಿ ತುಂಬಿ ಅದನ್ನು ಸಮತಟ್ಟಾಗಿಸಿದೆ. ಹಳ್ಳ ಹೆಚ್ಚಾಗಿದ್ದ ಕಡೆ ಕೆಲವೊಮ್ಮೆ ಆಸರೆಗೋಡೆಗಳನ್ನೊದಗಿಸಿ, ಕೆಲವೆಡೆ ಪೇಟಿಕಾವಿಧಾನದಿಂದ ಸಮತೆಯನ್ನು ಸಾಧಿಸಲಾಗಿದೆ. ಕೃತಕವಾಗಿ ಸಮತಟ್ಟಾಗಿಸಿರುವ ನೆಲದ ಮೇಲೆ, ಯಾವುದೇ ರೀತಿಯ ಬುನಾದಿ ಹಾಕದೆ ಗ್ರಾನೈಟ್ ಶಿಲೆಯ ನಯಗೊಳಿಸಿದ ಹಾಗೂ ಅಲಂಕೃತ ವಾಸ್ತುಭಾಗಗಳನ್ನು ಜೋಡಿಸಿ ಅಧಿಷ್ಠಾನವನ್ನು ಕಟ್ಟಲಾಗಿದೆ. ಗೋಡೆಯನ್ನು ನಯಗೊಳಿಸಿದ ಕಲ್ಲು, ಒರಟು ಬಂಡೆಗಲ್ಲು, ಇಟ್ಟಿಗೆ ಅಥವಾ ಕೇವಲ ಮಣ್ಣಿನಿಂದ ಕಟ್ಟಲಾಗಿದ್ದು 45 ಸೆಂಮೀ ಗಿಂತ ಹೆಚ್ಚು ದಪ್ಪವಾಗಿದೆ. ಈ ಗೋಡೆಗಳ ಒಳ, ಹೊರ ಮೈಗಳಿಗೆ 2.5 ಸೆಂಮೀಗೂ ದಪ್ಪಗಾರೆಯ ಹೊದಿಕೆ ನೀಡಿ ಕೆಲವೊಮ್ಮೆ ನುಣುಪಾಗಿ ಹೊಳೆಯುವಂತೆ ನಯಗೊಳಿಸಿದೆ. ಕೆಲಮುಖ್ಯ ಕಟ್ಟಡಗಳಲ್ಲಿ ಗೋಡೆಯ ಒಳ ಮೈಯಿನ ಕೆಳಭಾಗವನ್ನು ಗಚ್ಚುಗಾರೆಯ ಸುಂದರ ಶಿಲ್ಪಗಳಿರುವ ಗೂಡುಗಳಿಂದ ಸಿಂಗರಿಸಲಾಗಿದೆ. ರಾಜಾಂಗಣದ ಒಂದು ಕಟ್ಟಡದಲ್ಲಿ ಮಾತ್ರ ಅಮೃತ ಶಿಲೆ ಮತ್ತು ಹಸುರುಮಿಶ್ರಿತ ಬಿಳಿ ಬಣ್ಣದ ಸುಣ್ಣಕಲ್ಲಿನ ಶಿಲಾಫಲಕಗಳ ಹೊದಿಕೆ ನೀಡಿರುವುದು ಬಹುಶಃ ಈ ಕಟ್ಟಡದ ಪ್ರಾಮುಖ್ಯವನ್ನು ಸೂಚಿಸುತ್ತದೆ.

ಜಲಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ: ವಿಜಯನಗರ ಕಾಲದ ಜನರ ವಾಸ್ತು ನೈಪುಣ್ಯ ಹಾಗೂ ಸಾಧನೆಗಳು ಅವರು ಸಮರ್ಥವಾಗಿ ಯೋಜಿಸಿ ಬಳಸುತ್ತಿದ್ದ ಜಲಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಗಳಲ್ಲಿ ಎದ್ದು ಕಾಣುತ್ತವೆ. ಹಂಪಿಯಲ್ಲಿ ನಡೆದಿರುವ ಉತ್ಖನನದಲ್ಲಿ ರಾಜಾಂಗಣ ಪ್ರದೇಶದಲ್ಲಿ ಬೆಳಕಿಗೆ ಬಂದಿರುವ ಅವಶೇಷಗಳು ಈ ವ್ಯವಸ್ಥೆಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ.

ಕಮಲಾಪುರದ ಬಳಿಯಿರುವ ದೊಡ್ಡಕೆರೆಯಿಂದ ಕಿರುಗಾಲುವೆಯ ಮೂಲಕ ತರಲಾಗುತ್ತಿದ್ದ ನೀರನ್ನು ರಾಜಾಂಗಣದ ಪೂರ್ವ ಪ್ರಾಕಾರದ ಬಳಿ ಆರಂಭವಾಗುವ ಮುಖ್ಯ ಶಿಲಾಜಲವಾಹಕಕ್ಕೆ ಬಿಡಲಾಗುತ್ತಿತ್ತು. ಈ ಮುಖ್ಯ ಜಲವಾಹಕ ಇತರ ಸರಬರಾಜು ಜಾಲದ ಮೂಲಕ ಇಡೀ ರಾಜಾಂಗಣದೊಳಗೆಲ್ಲಾ ನೀರು ಹರಿಸುತ್ತಿತ್ತು. ಮುಖ್ಯ ಜಲವಾಹಕಕ್ಕೆ ದಕ್ಷಿಣದಿಂದ ಸೇರಿಸಲಾದ ಕಲ್ಲು ಹಾಗೂ ಸುಣ್ಣಕಾಂಕ್ರೀಟಿನ ಜಲವಾಹಕದ ಮೂಲಕ ಸಾರ್ವಜನಿಕರ ಸ್ನಾನದ ಕೊಳ, ಅನಂತರ ಇನ್ನೊಂದು ಕಲ್ಲಿನ ಕಿರುಕಾಲುವೆಯ ಮೂಲಕ ಅಲಂಕೃತ ಕಲ್ಯಾಣಿಯೂ ತುಂಬುತ್ತಿದ್ದವು. ಕಲ್ಯಾಣಿಯಿಂದ ಮುಂದೆ ಕವಲೊಡೆಯುವ ಈ ಮುಖ್ಯ ಕಿರುಕಾಲುವೆಯ ಒಂದು ಶಾಖೆ ಉತ್ತರಕ್ಕೂ ಇನ್ನೊಂದು ಶಾಖೆ ಪಶ್ಚಿಮಕ್ಕೂ ಮುಂದುವರೆಯುತ್ತವೆ. ಈ ಎರಡು ಶಾಖೆಗಳು ರಾಜಾಂಗಣದಲ್ಲಿರುವ ವಿವಿಧ ಗಾತ್ರದ ಸು.19 ಕೊಳಗಳನ್ನು ತುಂಬಿಸುತ್ತವೆ. ಇಲ್ಲಿಯ ಎಲ್ಲ ಕೊಳಗಳು ತುಂಬಿದ ನಂತರ ನೀರು ಪೋಲಾಗದೆ ನೆಲದೊಳಗಣ ಜಲವಾಹಕಗಳ ಮೂಲಕ ಇತರ ಆವರಣಗಳಿಗೆ ಹೋಗುತ್ತದೆ.

ಸಾಮಾನ್ಯವಾಗಿ ಈ ಕಾಲುವೆಗಳೆಲ್ಲ ಪ್ರಾಕಾರದ ಒಳಬದಿಯ ಮಗ್ಗುಲಲ್ಲಿ, ಇಲ್ಲವೆ ನೆಲದೊಳಗೆ ಹಾದುಹೋಗುವುದಲ್ಲದೆ ಕಲ್ಲುಚಪ್ಪಡಿಗಳಿಂದ ಮುಚ್ಚಲ್ಪಟ್ಟು ಸುಣ್ಣ ಕಾಂಕ್ರೀಟ್ ಹಾಕಿ ನೀರು ಸೋರದಂತೆ ಭದ್ರಪಡಿಸಲಾಗಿರುತ್ತದೆ. ಮುಖ್ಯ ಜಲವಾಹಕ ಕವಲೊಡೆಯುವ ಜಾಗದಲ್ಲಿ ತುರ್ತು ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುವಂತೆ ಆಳವಾದ ಬಾವಿಯೊಂದನ್ನು ತೋಡಿದೆ. ಈ ಬಾವಿಯಿಂದ ನೀರು ಸೇದಿ ಜಲವಾಹಕಗಳು ಸಂಧಿಸುವಲ್ಲಿ ಸುರಿದರೆ ಎಲ್ಲ ಕಡೆಗೂ ನೀರು ಸರಬರಾಜಾಗುತ್ತಿದ್ದು, ರಾಜಾಂಗಣದೊಳಗಣ ಜಲಾಶಯಗಳೆಲ್ಲ ಒಂದರನಂತರ ಒಂದು ತುಂಬುತ್ತಿತ್ತು. ಹೀಗೆ ಹೊರಗಿನಿಂದ ಬರುವ ನೀರು ಯಾವುದೇ ಅಡಚಣೆಯಿಂದ ನಿಂತುಹೋದರೆ ತಾತ್ಕಾಲಿಕವಾಗಿ ಆಂತರಿಕವಾಗಿಯೇ ಜಲಪೂರೈಕೆ ಯಾಗುವ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಏರಿಳಿತಗಳ ಆಧಾರದ ಮೇಲೆ ಭೂಮಿಯ ವರ್ಗೀಕರಣ ಮಾಡಿ ಇಳಿಜಾರು ಮತ್ತು ಗುರುತ್ವಾಕರ್ಷಣ ಶಕ್ತಿಗಳ ಸಮತೋಲನ ಸಾಧಿಸಿ ಈ ವ್ಯವಸ್ಥೆಯನ್ನು ಯೋಜಿಸಲಾಗಿತ್ತು.

ಇಂತಹ ಅಪೂರ್ವ ವ್ಯವಸ್ಥೆಗೆ ತಕ್ಕಂತೆ ರಾಜಾಂಗಣದಲ್ಲಿ ಸಂಗ್ರಹವಾಗುವ ಮಳೆ ಹಾಗೂ ಉಪಯೋಗಿಸಿದ ಕೊಳಚೆನೀರನ್ನು ಈ ಪ್ರದೇಶದಿಂದ ಆಚೆಗೆ ಸಾಗಿಸಲು ನೆಲದೊಳಗೆ ಅಸಂಖ್ಯಾತ ಕಿರುಗಾಲುವೆ, ಕೊಳವೆಗಳ ವ್ಯವಸ್ಥಿತ ಜಾಲವನ್ನು ರಚಿಸಲಾಗಿದೆ. ಕಿರುಗಾಲುವೆ ಗಳಿಂದ ಸಂಗ್ರಹಿಸಿದ ತ್ಯಾಜ್ಯಜಲ ದೊಡ್ಡಕಾಲುವೆಯ ಮೂಲಕ ಹೊರಹೋಗುತ್ತಿದ್ದು ಇಂತಹ ದೊಡ್ಡ ಚರಂಡಿಯೊಂದು ರಾಜಾಂಗಣದ ದಕ್ಷಿಣ ಪ್ರಾಕಾರ ಮತ್ತು ಉದ್ಯಾನವನ್ನು ಸುತ್ತುವರೆದಿರುವ ಗೋಡೆಯ ನಡುವೆ ಪೂರ್ವಪಶ್ಚಿಮವಾಗಿ ಹರಿಯುತ್ತದೆ. ಇಂತಹುದೇ ಸಣ್ಣ ಕಾಲುವೆಗಳ ಮೂಲಕ ಉತ್ತರಭಾಗದ ಕೊಳಚೆ ನೀರು ರಾಜಾಂಗಣದಾಚೆಗೆ ಸಾಗಿಸಲ್ಪಡುತ್ತದೆ. ಭೂಮಿಯೊಳಗೆ ವಿವಿಧ ಮಟ್ಟಗಳಲ್ಲಿ ಹರಿಯುವ ಈ ಕಾಲುವೆಗಳನ್ನು ಮಣ್ಣಿನ ಕೊಳವೆ, ಕಲ್ಲಿನ ಫಲಕಗಳನ್ನುಪಯೋಗಿಸಿ ಅಥವಾ ಕೇವಲ ಸುಣ್ಣಕಲ್ಲಿನ ಜಲ್ಲಿಗಾರೆ ಯಿಂದಲೇ ನಿರ್ಮಿಸಲಾಗಿದ್ದು ಅಲ್ಲಲ್ಲಿ ಪರೀಕ್ಷಣಾ ಕೊಠಡಿಗಳನ್ನೂ ಒದಗಿಸಿದೆ.

**ಸಿದ್ಧಾಸನದಲ್ಲಿ ಕುಳಿತ ಬುದ್ಧ ಶಿಲ್ಪಫಲಕ, ಹಂಪಿ**

ಹೆಚ್ಚುಕಡಿಮೆ ಇಂತಹುದೇ ತಂತ್ರಜ್ಞಾನವನ್ನು ಜಾಣ್ಮೆಯಿಂದ ಬಳಸಿ, ಭೂಮಿಯ ಒಳಗೆ ಮತ್ತು ಮೇಲೆ ಬೇರೆ ಬೇರೆ ಆಳ, ಎತ್ತರಗಳಲ್ಲಿ ಜಲವಾಹಕಗಳನ್ನು ಸಂಯೋಜಿಸಿ ಎಲ್ಲ ಆವರಣ, ದೇವಾಲಯ, ಬಜಾರುಗಳಿಗೆ ಸುಸಜ್ಜಿತವೂ ಸಮರ್ಪಕವೂ ಆದ ಜಲಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಅಳವಡಿಸಿದ್ದುದು ಅಂದಿನ ಜಲತಂತ್ರ ನಿಪುಣರ ತಂತ್ರಜ್ಞತೆ, ಸಾಧನೆಗಳಿಗೆ ಸಾಕ್ಷಿಯಾಗಿದೆ. ಉತ್ಖನನ ನಡೆದಿರುವ ಪ್ರತಿಯೊಂದು ನಿವೇಶನದಲ್ಲಿ ಈ ವ್ಯವಸ್ಥೆಗೆ ಸಂಬಂಧಿಸಿದ ಅವಶೇಷಗಳು ಕಂಡುಬಂದಿದ್ದರೂ ರಾಜಾಂಗಣ ಪ್ರದೇಶ ಮತ್ತು ಗುಹಾಂತರ್ದೇವಾಲಯದ ಬಳಿಯಲ್ಲಿ ಬೆಳಕಿಗೆ ಬಂದಿರುವಷ್ಟು ಜಟಿಲ ಹಾಗೂ ಸೂಕ್ಷ್ಮ ವಿವರಗಳು ಉಳಿದೆಡೆ ಕಂಡುಬಂದಿಲ್ಲ.

**ರಾಜಸಭಾಂಗಣ:** ರಾಜಾಂಗಣದ ವಾಯವ್ಯ ಮೂಲೆಯಲ್ಲಿರುವ ರಾಜಸಭಾಂಗಣದ ಪಶ್ಚಿಮ ಭಾಗದಲ್ಲಿ ಕೈಗೊಂಡ ಉತ್ಖನನದ ಫಲವಾಗಿ ಬುದ್ಧನ ಜೀವನದ ಪ್ರಮುಖ ಘಟನೆ ಗಳನ್ನು ಚಿತ್ರಿಸಿರುವ ಐದು ಸುಣ್ಣಕಲ್ಲಿನ ಆಯತಾಕಾರದ ಫಲಕಗಳು ಬೆಳಕಿಗೆ ಬಂದಿವೆ. ರಾಜಾಂಗಣದಲ್ಲಿನ ಭೂಮ್ಯಂತರ್ಗತ ಕೊಠಡಿಯ ಮುಂದಿರುವ ಹಜಾರದ ಅಲಂಕರಣಕ್ಕಾಗಿ ಈ ಫಲಕ ಹಾಗೂ ಹಸುರುಮಿಶ್ರಿತ ಬಿಳಿಬಣ್ಣದ ಕಲ್ಲುಗಳನ್ನು ತಂದು ಉದ್ದೇಶಪೂರ್ವಕವಾಗಿ ಶೇಖರಿಸಿಡಲಾಗಿತ್ತು. ಈ ಫಲಕಗಳ ಶಿಲ್ಪಿತ ಭಾಗಗಳ ಕೆಳಗೆ 2ನೆಯ ಶತಮಾನದ ಬ್ರಾಹ್ಮಿಲಿಪಿ ಯಲ್ಲಿರುವ ಪ್ರಾಕೃತ ಶಾಸನವಿದೆ. ಈ ಫಲಕಗಳ ಶಿಲ್ಪ ಅಮರಾವತಿಯ ಶಿಲ್ಪದೊಂದಿಗೆ ಹೆಚ್ಚಿನ ಸಾಮ್ಯ ಹೊಂದಿದ್ದು 2ನೆಯ ಶತಮಾನಕ್ಕೆ ಸೇರುತ್ತವೆ. ಈ ಹೋಲಿಕೆಯ ಆಧಾರದ ಮೇಲೆ ಸ್ತೂಪಕ್ಕೆ ಸಂಬಂಧಿಸಿದ ಈ ಫಲಕಗಳನ್ನು ಗುಲ್ಬರ್ಗದ ಪರಿಸರ ಅಥವಾ ಆಂಧ್ರಪ್ರದೇಶದಿಂದ ತಂದಿರಬಹುದೆಂದು ಊಹಿಸಲಾಗಿದೆ.

ಹಂಪಿಯ ಇತರ ಸ್ಥಳಗಳಲ್ಲಿ ನಡೆದಿರುವ ಉತ್ಖನನದಲ್ಲಿ ರಾಜಾಂಗಣ ಪ್ರದೇಶದಲ್ಲಿ ಅನುಸರಿಸಲಾಗಿರುವ ಉತ್ಖನನ ವಿಧಾನಕ್ಕಿಂತ ಬೇರೆಯಾದ ವಿಧಾನವನ್ನು ಅನುಸರಿಸಿದೆ. ಈ ವಿಧಾನದಲ್ಲಿ ಪ್ರತಿಯೊಂದು ದಿಬ್ಬದಲ್ಲಿ ಹುದುಗಿರಬಹುದಾದ ಕಟ್ಟಡಗಳ ಅವಶೇಷಗಳನ್ನು ಪ್ರತ್ಯೇಕವಾಗಿ ಹೊರತರುವ ಉದ್ದೇಶವಿದ್ದು ಸಹಜವಾಗಿ ಒಂದು ದಿಬ್ಬದಲ್ಲಿನ ಕಟ್ಟಡಕ್ಕೂ ಅದರ ಸಮೀಪದಲ್ಲಿರುವ ಇತರ ಕಟ್ಟಡಾವಶೇಷಗಳಿಗೂ ಇರುವ, ಇದ್ದ ಪರಸ್ಪರ ಸಂಬಂಧ ಸ್ಪಷ್ಟವಾಗದು. ಜೊತೆಗೆ, ಆ ಸ್ಥಳದಲ್ಲಿ ಬಳಕೆಯಲ್ಲಿದ್ದ ಜಲಪೂರೈಕೆ ವಿಧಾನ, ಒಳಚರಂಡಿ ವ್ಯವಸ್ಥೆ ಮುಂತಾದ ವಾಸ್ತುಚಟುವಟಿಕೆಗಳ ಒಂದು ಸಮಗ್ರ ಚಿತ್ರಣವೂ ದೊರಕುವುದಿಲ್ಲ. ಹೀಗಾಗಿ ಟಂಕಸಾಲೆಯ ಪ್ರದೇಶ, ಹರಿಹರರಾಯನ ಅರಮನೆ, ರಾಜಪ್ರಮುಖ ಗಣ್ಯವ್ಯಕ್ತಿಗಳ ಭವನಗಳು ಮುಂತಾದ ಸ್ಥಳಗಳಲ್ಲಿನ ಅವಶೇಷಗಳನ್ನು ಪ್ರತ್ಯೇಕ ಸ್ವತಂತ್ರ ಕಟ್ಟಡಗಳನ್ನಾಗಿಯೇ ಅಭ್ಯಾಸ ಮಾಡಬೇಕಾಯಿತು.

**2ನೆಯ ಶತಮಾನದ ಪ್ರಾಣಿಶಿಲ್ಪಗಳು, ಹಂಪಿ**

**ಟಂಕಸಾಲೆಯ ಆವರಣ:** ಎತ್ತರವಾದ ಪ್ರಾಕಾರದಿಂದ ಆವೃತವಾಗಿದ್ದು, ವಿಶಾಲವಾದ ಟಂಕಸಾಲೆಯ ಆವರಣದಲ್ಲಿ (190x149 ಮೀ) ಮೂರು ಮುಖ್ಯ ಕಟ್ಟಡಗಳು ಬೆಳಕಿಗೆ ಬಂದಿವೆ. ಈ ಆವರಣದ ಮಧ್ಯದಲ್ಲಿದ್ದ ಸು.2.5ಮೀ ಎತ್ತರದ ದಿಬ್ಬದಲ್ಲಿ ವಿಶಾಲ ಪ್ರಾಸಾದ ವೊಂದರ ಅಧಿಷ್ಠಾನ ಹಾಗೂ ಗೋಡೆಯ ಭಾಗಗಳು ದೊರಕಿವೆ. ಇದೇ ಆವರಣದ ದಕ್ಷಿಣ ಭಾಗದಲ್ಲಿದ್ದ ದಿಬ್ಬಗಳಲ್ಲಿ ರಾಜ್ಯ ಪುರಾತತ್ತ್ವ ಇಲಾಖೆ ನಡೆಸಿದ ಉತ್ಖನನದಲ್ಲಿ ಎರಡು ಸಣ್ಣ ಭವನಗಳನ್ನು ಹೊರತೆಗೆಯಲಾಗಿದೆ.

ಆವರಣದ ಮಧ್ಯೆ ಪೂರ್ವಾಭಿಮುಖವಾದ ಬೃಹತ್ ಪ್ರಾಸಾದ ಕ್ರಮೇಣ ಕಿರಿದಾಗುವ ನಾಲ್ಕು ಹಂತಗಳಲ್ಲಿದೆ. ಕೆಳಗಿನ ಹಂತ ಮೊದಲಿದ್ದ ಕಟ್ಟಡಕ್ಕೆ ಅನಂತರ ಸೇರಿದ–ಯು ಆಕಾರದ ಅಂಗಳ ಹಾಗೂ ಅದರ ಸುತ್ತಲೂ ಇರುವ ವರಾಂಡದಂತಹ ಭಾಗವಾಗಿದ್ದರೆ, ಮೇಲಿನ ನಾಲ್ಕನೆಯ ಹಂತದಲ್ಲಿ ನಾಲ್ಕು ಕೊಠಡಿಗಳಷ್ಟೇ ಇವೆ. ಪ್ರತಿ ಎರಡು ಹಂತಗಳನ್ನು ಸೇರಿಸುವಂತೆ ಮಧ್ಯದಲ್ಲಿ ವ್ಯಾಳಕಟಾಂಜನವಿರುವ ಸೋಪಾನವಿದೆ. ಎರಡನೆಯ ಹಂತದಲ್ಲಿರುವ ಹಜಾರಕ್ಕೆ ಹೊಂದಿಕೊಂಡಂತೆ ಮೂರು ಕಡೆ ವೇದಿಕೆಗಳಿದ್ದು ಪೂರ್ವದಲ್ಲಿ ಬಾಗಿಲಿರುವ ಕಡೆ ಎರಡು ಅಲಂಕೃತ ಸ್ತಂಭಪೀಠಗಳಿವೆ. ಎರಡನೆಯ ಹಂತದ ಮಧ್ಯದಲ್ಲಿರುವ ಸೋಪಾನದ ಮೂಲಕ ಮೇಲೆ ಹೋದರೆ ಮತ್ತೊಂದು ವರಾಂಡವಿದೆ. ಅದರ ಮೇಲಿನ ಹಂತದಲ್ಲಿ ಖಾಲಿ ಸ್ಥಳವಿದ್ದು ಅದರ ಮುಂದೆ ಪ್ರದಕ್ಷಿಣಾಪಥದಂತಹ ದಾರಿಯಿಂದ ಸುತ್ತುವರೆಯಲ್ಪಟ್ಟ, ಪೂರ್ವಾಭಿಮುಖವಾದ ಕೊಠಡಿಯಿದೆ. ಈ ದಾರಿಗೆ ತೆರೆದುಕೊಳ್ಳುವಂತೆ

**ಉತ್ಖನನದಲ್ಲಿ ದೊರೆತ ಕಟ್ಟಡ, ಹಂಪಿ**

ಮೂರು ಆಯತಾಕಾರದ ಕೊಠಡಿಗಳಿವೆ. ಮುಖ್ಯ ಕೊಠಡಿಯ ವಾಯವ್ಯ ಮೂಲೆಯಿಂದ ಮೇಲಿನ ಮಹಡಿಗೆ ಹೋಗಲು ಮೆಟ್ಟಿಲುಗಳಿವೆ. ಈ ಕೊಠಡಿಗಳ ಬಾಗಿಲುವಾಡಗಳ ಬಳಿ ಗಾರೆಯಿಂದ ನಯಗೊಳಿಸಿರುವ ಕಲ್ಲಿನ ಸ್ತಂಭಪೀಠಗಳು ಮತ್ತು ಕುಳಿಗಳಿರುವ ತಿರುಗಣೆಗಳಿವೆ.

ಈ ಕಟ್ಟಡದ ಕೆಳಹಂತದಲ್ಲಿರುವ ಅಂಗಳ, ಹಜಾರದ ಗೋಡೆಗಳು ಸಣ್ಣಗಾತ್ರದ ಇಟ್ಟಿಗೆಯವಾಗಿದ್ದು ನಯವಾದ ಗಾರೆಯ ಪದರದಿಂದ ಕೂಡಿವೆ. ಒಳಗೋಡೆಗಳ ಮೇಲೆ ಕೆಳಭಾಗದಲ್ಲಿ ಗೂಡುಗಳಿದ್ದು, ಅವುಗಳ ಬುಡದಲ್ಲಿ ವೃತ್ತ ಹಾಗೂ ಅರೆವೃತ್ತಾಕಾರದ ಪೀಠಗಳ ಮೇಲೆ ನಿಂತ ಗಾರೆಯ ಸುಂದರ ಮೂರ್ತಿಗಳಿಂದ ಒಳ ಗೋಡೆಯನ್ನು ಅಲಂಕರಿಸಲಾಗಿತ್ತು. ಇಂತಹ ಮೂರ್ತಿಗಳ ಪಾದ, ಕಾಲು ಮತ್ತು ಅಪರೂಪವಾಗಿ ಕೆಲವಡೆ ಕೈಗಳು ಮಾತ್ರ ಉಳಿದಿವೆ. ಈ ಗೋಡೆಯ ಹೊರಭಾಗದಲ್ಲಿ ಗುರುತಿಸಲಾಗಿರುವ ಸು. 43 ಕುಳಿಗಳು ಹಾಗೂ ಸ್ತಂಭಪೀಠಗಳಿಂದ ಈ ವೇದಿಕೆಯ ಸುತ್ತ ಒಂದು ಕಂಬಸಾಲಿನ ಹಜಾರವಿತ್ತೆಂದು ಊಹಿಸಬಹುದು. ಇಡೀ ಕಟ್ಟಡ ವಿಶಾಲವಾದ (55X55ಮೀ) ಗಾರೆಯ ನೆಲಗಟ್ಟಿನ ಮೇಲೆ ನಿರ್ಮಿತವಾಗಿದ್ದು ಸುತ್ತಲೂ (ಪೂರ್ವದಲ್ಲಿ ಬಿಟ್ಟು) ಒರಟುಬಂಡೆಗಲ್ಲುಗಳಿಂದ ಕಟ್ಟಿದ್ದ ಪ್ರಾಕಾರವಿತ್ತು. ಈ ಭವ್ಯ ಪ್ರಾಸಾದದ ಆಗ್ನೇಯಕ್ಕೆ ಮಹಾದ್ವಾರ ಮಂಟಪ ಮತ್ತು ಕಲ್ಲಿನಲ್ಲಿ ಕೊರೆದ ತೊಟ್ಟಿಗಳು ದೊರಕಿವೆ.

ಇದೇ ಆವರಣದ ದಕ್ಷಿಣ ಭಾಗದಲ್ಲಿ ಎರಡು ಆಯತಾಕಾರದ ಭವನಗಳ ಅವಶೇಷಗಳು ಬೆಳಕಿಗೆ ಬಂದಿವೆ. ಈ ಭವನಗಳಲ್ಲಿ ಎರಡು ಹಂತಗಳಿದ್ದು, ಮೊದಲನೆಯದರಲ್ಲಿ ವಿಶಾಲ ಹಜಾರ, ಮೇಲಣ ಎರಡನೆಯ ಹಂತದಲ್ಲಿ ಅನೇಕ ಕೊಠಡಿಗಳಿವೆ. ಪೂರ್ವಾಭಿಮುಖವಾಗಿರುವ ಭವನದಲ್ಲಿ ಉತ್ತರ ದಕ್ಷಿಣಗಳಲ್ಲಿ ಒಂದೊಂದು ಕೊಠಡಿಗಳಿದ್ದು ಮುಂದಿರುವ ಅಂಗಳಕ್ಕೆ ತೆರೆದುಕೊಳ್ಳುವಂತೆ ಉತ್ತರ ದಕ್ಷಿಣಗಳಲ್ಲಿ ಕ್ರಮವಾಗಿ ಎರಡೆರಡು ಹಾಗೂ ಪಶ್ಚಿಮದಲ್ಲಿ ಒಂದು ಆಯತಾಕಾರದ ಕೊಠಡಿಗಳಿವೆ. ಈ ಭವನದ ಈಶಾನ್ಯಕ್ಕೆ ಕಲ್ಲುಕಟ್ಟಿದ ಬಾವಿಯೊಂದಿದೆ.

ಉತ್ತರಾಭಿಮುಖವಾದ ಭವನದಲ್ಲಿ ಎರಡನೆಯ ಹಂತವನ್ನು ತಲುಪಲು ಉತ್ತರ ದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಮೂಲಕ ಮೇಲೆ ಹೋದರೆ ಪೂರ್ವಪಶ್ಚಿಮಗಳಲ್ಲಿ ಕೊಠಡಿಗಳಿರುವ ವಿಶಾಲ ಹಜಾರವೂ ಹಜಾರದಿಂದಾಚೆಗೆ ಉತ್ತರಕ್ಕೆ ಮತ್ತಷ್ಟು ಕೊಠಡಿಗಳೂ ಇವೆ. ದಕ್ಷಿಣದಲ್ಲಿ ಬಹಳಷ್ಟು ಜೀರ್ಣವಾಗಿರುವ ದ್ವಾರಬಂಧವಿದ್ದು ಅದರ ಮೂಲಕ ಹಜಾರವನ್ನು ಪ್ರವೇಶಿಸಬಹುದು. ಇದಕ್ಕೆ ಹೊಂದಿಕೊಂಡಂತೆ ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೊಠಡಿಗಳಿವೆ. ಎರಡೂ ಭವನಗಳ ಗೋಡೆಗಳನ್ನು ಒರಟು ಬಂಡೆಗಲ್ಲು ಹಾಗೂ ಮಣ್ಣಿನಿಂದ ಕಟ್ಟಲಾಗಿದ್ದು, ಒಳಹೊರಮೈಗಳಲ್ಲಿ ಮಣ್ಣಿನ ದಪ್ಪ ಪದರವಿದ್ದು ಅನಂತರ ಗಾರೆಯಿಂದ ನಯಗೊಳಿಸಲಾಗಿದೆ. ಎಲ್ಲ ಕೊಠಡಿ ಹಜಾರಗಳ ನೆಲವನ್ನು ಗಾರೆಯಿಂದ ಮಾಡಿ ಹೊಳೆಯುವಂತೆ ನುಣುಪಾಗಿಸಿದೆ. ಬಾಗಿಲವಾಡದ ಬಳಿ ಕಂಡುಬಂದಿರುವ ಆಳವಾದ ಕುಳಿಯಿರುವ ಕಲ್ಲಿನಪೀಠಗಳು ಈ ಎಲ್ಲ ಕೊಠಡಿಗಳಿಗೆ ಭಾರವಾದ ಮರದ ಬಾಗಿಲುಗಳನ್ನು ಜೋಡಿಸಲಾಗಿದ್ದುದನ್ನು ಸೂಚಿಸುತ್ತವೆ.

ಉತ್ಖನನದಿಂದ ಈ ಆವರಣದೊಳಗೆ ಟಂಕಸಾಲೆ ಇದ್ದುದನ್ನು ಸಮರ್ಥಿಸುವ ಯಾವುದೇ ಸಾಕ್ಷ್ಯಾಧಾರಗಳು ದೊರೆಯದಿದ್ದು ಟಂಕಸಾಲೆಯ ಆವರಣ ಎನ್ನುವುದು ಕೇವಲ ಗತಾನುಗತಿಕವಾಗಿ ಬಂದ ಪ್ರತೀತಿಯೆಂದು ತಿಳಿದುಬರುತ್ತದೆ. ಈಚೆಗೆ ಕೆಲವು ವಿದ್ವಾಂಸರು ಈ ಪ್ರಾಸಾದ ಸಮುಚ್ಚಯವನ್ನು ಕೃಷ್ಣದೇವರಾಯನ ಅರಮನೆ ಎಂದು ಗುರುತಿಸಿದ್ದಾರೆ. ಈ ಅರಮನೆಯ ಗಾತ್ರ, ಅಲಂಕರಣ, ವಿಶಿಷ್ಟ ಭದ್ರತಾವ್ಯವಸ್ಥೆ, ಮುಖ್ಯಪ್ರಾಸಾದದ ಜೊತೆಗಿನ ರಾಣಿಯರ ಎರಡು ಭವನಗಳು ಮತ್ತು ಸ್ವಲ್ಪಮಟ್ಟಿಗೆ ವಿದೇಶಿ ಪ್ರವಾಸಿಗರ ವರ್ಣನೆಗಳು ಹೀಗೆ ಗುರುತಿಸಲು ಕಾರಣಗಳು.



ಅರಮನೆ ಅವಶೇಷ (?), ಹಂಪಿ

**ರಾಜಪ್ರಮುಖರ ಭವನಗಳು:** ದಂಡನಾಯಕನ ಆವರಣದ ಉತ್ತರಕ್ಕೆ ಹಾಗೂ ಪ್ರಸನ್ನ ವಿರೂಪಾಕ್ಷ ದೇವಾಲಯದ ಈಶಾನ್ಯಕ್ಕೆ ಸ್ವಲ್ಪ ದೂರದಲ್ಲಿ ಬೃಹದಾಕಾರದ ಗ್ರಾನೈಟ್ ಬಂಡೆಗಳಿಂದ ಸುತ್ತುವರೆಯಲ್ಪಟ್ಟ, ಸ್ವಾಭಾವಿಕವಾಗಿಯೇ ಸುರಕ್ಷಿತವಾದ ಸಮತಟ್ಟಾದ ಪ್ರದೇಶದಲ್ಲಿ ಅನೇಕ ದಿಬ್ಬಗಳಿದ್ದುವು. ರಾಜ್ಯ ಪುರಾತತ್ತ್ವ ಇಲಾಖೆ ಈ ಪ್ರದೇಶದಲ್ಲಿ ಉತ್ಖನನ ಕೈಗೊಂಡು ವಿವಿಧಗಾತ್ರ, ವಿಸ್ತಾರ ಮತ್ತು ಅಲಂಕರಣವಿರುವ 16ಕ್ಕೂ ಹೆಚ್ಚಿನ ಕಟ್ಟಡಾವಶೇಷಗಳನ್ನು ಬೆಳಕಿಗೆ ತಂದಿದ್ದಾರೆ. ಪರಸ್ಪರ ಸಾಮ್ಯವಿರುವ ಈ ಕಟ್ಟಡ ಸಮೂಹವಿರುವ ನೆಲೆ, ಇತರ ಆವರಣಗಳೊಡನೆ ಇದರ ಸಂಬಂಧ ಹಾಗೂ ಕೆಲವು ವೈಶಿಷ್ಟ್ಯಗಳ ಆಧಾರದ ಮೇಲೆ ಈ ಭವನದಲ್ಲಿ ರಾಜವಂಶೀಯರು ಅಥವಾ ಅಧಿಕಾರದಲ್ಲಿದ್ದ ರಾಜಸಂಬಂಧಿ ಗಣ್ಯವ್ಯಕ್ತಿಗಳು ವಾಸಿಸುತ್ತಿದ್ದರೆಂದು ಊಹಿಸಿ ಇವುಗಳನ್ನು ಗಣ್ಯವ್ಯಕ್ತಿಗಳ ಅಥವಾ ರಾಜಪ್ರಮುಖರ ಭವನಗಳೆಂದು ಗುರುತಿಸಲಾಗಿದೆ. ಉತ್ಖನನ ಮುಂದುವರೆದಂತೆ, ಈ ಕಟ್ಟಡಾವಶೇಷಗಳು ಬೆಳಕಿಗೆ ಬಂದಂತೆಲ್ಲ ಇವುಗಳಿಗೆ 1–16ರ ವರೆಗಿನ ಕ್ರಮ ಸಂಖ್ಯೆಯನ್ನು ನೀಡಲಾಗಿದ್ದು, ಒಂದು ಕ್ರಮ ಸಂಖ್ಯೆಯನ್ನು ಸೂಚಿಸುವ ಮುಖ್ಯ ಕಟ್ಟಡಕ್ಕೆ ಹೊಂದಿಕೊಂಡಂತೆ ಇರುವ ಇತರ ಕಟ್ಟಡಗಳನ್ನು 4ಎ, 4ಬಿ ಮುಂತಾಗಿ ಗುರುತಿಸಲಾಗಿದೆ. ಇವುಗಳಲ್ಲದೆ ಟಿ1, ಟಿ2 ಎಂದು ಸೂಚಿತವಾದ ಎರಡು ಸಣ್ಣ ಗುಂಡಿಗಳೂ ಇವೆ. 2–11ರ ವರೆಗಿನ ಒಂಬತ್ತು ಕಟ್ಟಡಗಳು ಮತ್ತು ಅದಕ್ಕೆ ಹೊಂದಿಕೊಂಡು ಉಪಕಟ್ಟಡಗಳು ಎತ್ತರವಾದ ಪ್ರಾಕಾರದೊಳಗೆ ಒತ್ತೊತ್ತಾಗಿ ಅಡಕವಾಗಿವೆ. ಕೆಲವು ಮುಖ್ಯ ಕಟ್ಟಡಗಳಿಗೆ ಪ್ರತ್ಯೇಕ ಪ್ರಾಕಾರಗಳೂ ಇವೆ. ಬಹುಶಃ ಮೊದಲು ಭವನ–4 ಮತ್ತು ಅದರ ಉಪಕಟ್ಟಡಗಳನ್ನು ಸುತ್ತುವರೆದ ಪ್ರಾಕಾರವನ್ನು ಮಾತ್ರ ಈ ಸ್ಥಳದಲ್ಲಿ ಕಟ್ಟಿದ್ದರು. ಉಳಿದ ಕಟ್ಟಡಗಳು ಒಂದೊಂದಾಗಿ ಬೇರೆ ಬೇರೆ ಅವಧಿಯಲ್ಲಿ ನಿರ್ಮಿತವಾದಂತೆ ಕಾಣುತ್ತವೆ. ಇದೇ ವಿನ್ಯಾಸದ ವಿವಿಧ ಗಾತ್ರದ ಪ್ರತ್ಯೇಕ ಕಟ್ಟಡಗಳಲ್ಲಿ ಈ ಗುಂಪಿನ ಪೂರ್ವಕ್ಕಿರುವ ಭವನ 11–1 ದಕ್ಷಿಣಕ್ಕಿರುವ ಭವನ–2, ಉತ್ತರದಲ್ಲಿ ಪೂರ್ವಪಶ್ಚಿಮವಾಗಿ ಹರಡಿರುವ ಭವನ 12–16 ಮುಖ್ಯವಾದವು. ಈ ಸಮೂಹಕ್ಕೆ ಸ್ವಾಭಾವಿಕ ರಕ್ಷಣೆ ಒದಗಿಸಿರುವ ಸುತ್ತಲಿನ ಬೃಹತ್ ಬಂಡೆಗಳನ್ನೇ ಕೆಲವೆಡೆ ಕತ್ತರಿಸಿ ಕಟ್ಟಡ ನಿರ್ಮಾಣಕ್ಕೆ ಬೇಕಾದ ಕಲ್ಲು ಸಂಗ್ರಹಿಸಿದೆ. ಉಪಯೋಗಿಸದೆ ಬಿಟ್ಟ ಅಳತೆ ಕಲ್ಲುಗಳು, ಸಾಲುಸಾಲಾಗಿ ಉಳಿ ಗುರುತಿರುವ ಶಿಲಾಬಂಡೆಗಳು ಇನ್ನೂ ಹಾಗೆಯೇ ಉಳಿದಿವೆ. ಈ ಕಟ್ಟಡ ಸಮೂಹದಲ್ಲಿ ಕೆಳಕಾಣಿಸಿದವು ಮುಖ್ಯವಾದವು:

ರಾಜಪ್ರಮುಖರ ಭವನ–1: ಈ ಕಟ್ಟಡ ಸಮೂಹದ ಪೂರ್ವ ಅಂಚಿನಲ್ಲಿರುವ ಭವನ ಅತ್ಯಂತ ದೊಡ್ಡದೂ, ಕಲಾತ್ಮಕವೂ ಆಗಿದೆ. ಎರಡು ಉನ್ನತ ಪ್ರಾಕಾರಗಳಿಂದ ಆವೃತವಾಗಿದ್ದು, ಉತ್ತರಾಭಿಮುಖವಾದ ಈ ಸಮುಚ್ಚಯದ ಮಧ್ಯದಲ್ಲಿ ಒಂದು ಮುಖ್ಯಭವನ, ಅದಕ್ಕೆ ಹೊಂದಿಕೊಂಡಂತೆ ಪೂರ್ವಪಶ್ಚಿಮಗಳಲ್ಲಿ ಒಂದೊಂದು ಕಂಬಸಾಲಿನ ಹಜಾರಗಳು; ಕಲ್ಲುಕಟ್ಟಿದ ಒಂದು ಬಾವಿ ಮತ್ತು ಒಂದು ಏಕಶಿಲಾನಿರ್ಮಿತ ತೊಟ್ಟಿಗಳಿವೆ. ಮುಖ್ಯ ಭವನವು ನಯಗೊಳಿಸಿದ ಕಲ್ಲು ಉಪಯೋಗಿಸಿ ಕಟ್ಟಿದ ಎರಡು ಹಂತದ ಅಲಂಕೃತ ಅಧಿಷ್ಠಾನಗಳ ಮೇಲೆ ನಿರ್ಮಿತವಾಗಿದೆ. ಇದರ ಒಳಭಾಗವು ಕ್ರಮೇಣ ಕಿರಿದಾಗುವ ಮೂರು ಹಂತಗಳಲ್ಲಿದ್ದು ಪ್ರತಿ ಹಂತವೂ ಅಲಂಕೃತ ಅಧಿಷ್ಠಾನವನ್ನು ಹೊಂದಿದೆ. ಕಿರಿದಾದ ಮೇಲಿನ (ಮೂರನೆಯ) ಹಂತ ಭವನದ ದಕ್ಷಿಣಭಾಗದಲ್ಲಿದೆ. ಪ್ರತಿಹಂತವನ್ನು ತಲುಪಲು ಮಧ್ಯದಲ್ಲಿ ವ್ಯಾಳ ಕಟಾಂಜನವುಳ್ಳ ಸೋಪಾನಗಳಿವೆ. ಕೆಳಗಿನೆರಡು ಹಂತಗಳು ಕ್ರಮವಾಗಿ ಕಂಬಸಾಲಿನ ಹಜಾರ ಮತ್ತು ವರಾಂಡದ ರೂಪದಲ್ಲಿದ್ದು, ಮೇಲಿನ ತಲದ ಮಧ್ಯದಲ್ಲಿ ಒಂದು ಕೊಠಡಿ, ಅದರ ಸುತ್ತಲೂ ಇರುವ ಪ್ರದಕ್ಷಿಣಾಪಥದಂತಹ ದಾರಿಗೆ ತೆರೆದುಕೊಳ್ಳುವಂತೆ ಪೂರ್ವ, ಪಶ್ಚಿಮ ಹಾಗೂ ದಕ್ಷಿಣದಲ್ಲಿ ಒಂದೊಂದು ಹೀಗೆ ನಾಲ್ಕು ಕೊಠಡಿಗಳಿವೆ. ಸುತ್ತಣ ದಾರಿಯಿಂದಲೇ ಉಳಿದ ಕೊಠಡಿಗಳಿಗೆ ಹೋಗಲು ಬಾಗಿಲುಗಳಿವೆ. ಈ ಭವನದ ಆಗ್ನೇಯ ಭಾಗದಲ್ಲಿ ಶೌಚಾಲಯವೊಂದನ್ನು ಜೋಡಿಸಲಾಗಿದೆ.

ಈ ಭವನದ ವಾಯವ್ಯಕ್ಕೆ ಸ್ವಲ್ಪದೂರದಲ್ಲಿ, ಸಣ್ಣ ವೈಷ್ಣವಗುಡಿ ಮತ್ತು ಕೆಲವು ಕೊಠಡಿಗಳು ಬೆಳಕಿಗೆ ಬಂದಿವೆ. ಗರ್ಭಗೃಹ, ಮುಖ ಮಂಟಪಗಳಿರುವ, ಈ ಸರಳ ಪೂರ್ವಾಭಿಮುಖ ಗುಡಿಯ ಪರಿಸರದಲ್ಲಿ ಉತ್ತರಕ್ಕೆ ಒಂದು ಚೌಕಬಾವಿ, ಪಶ್ಚಿಮಕ್ಕೆ ಆಯತಾಕಾರದ ಮೂರು ಮತ್ತು ಚೌಕಾಕಾರದ ಒಂದು ಕೊಠಡಿಯಿದೆ. ಈ ಗುಡಿಯಲ್ಲಿ ಸುಂದರವಾದ ಸಣ್ಣ ವೇಣುಗೋಪಾಲ (8.7 ಸೆಂಮೀ ಎತ್ತರ), ಆಳ್ವಾರ್ (3.7 ಸೆಂಮೀ ಎತ್ತರ) ಹಾಗೂ ಕಲಶವನ್ನು ಅಲಂಕರಿಸಿದ್ದ, ಪತ್ರಲತಾವಿನ್ಯಾಸವನ್ನು ಕೊರೆದಿರುವ ಚಿನ್ನದ ತಗಡಿನ ಚೂರುಗಳು ದೊರಕಿವೆ.

ರಾಜಪ್ರಮುಖರ ಭವನ–2: ಪ್ರಸನ್ನ ವಿರೂಪಾಕ್ಷ ದೇವಾಲಯದ ಈಶಾನ್ಯದಲ್ಲಿ, ಅಷ್ಟೇನು ಎತ್ತರವಲ್ಲದ ಪ್ರಾಕಾರದೊಳಗಿನ ಪೂರ್ವಾಭಿಮುಖವಾದ ಈ ಭವನ ಸಮೂಹದ ದಕ್ಷಿಣ ತುದಿಯಲ್ಲಿದೆ. ಪ್ರಾಕಾರದ ಮಧ್ಯ ಭಾಗದಲ್ಲೊಂದು ಮುಖ್ಯಕಟ್ಟಡ, ಅದರ ಸುತ್ತ ನಯಗೊಳಿಸಿದ ಗಾರೆಯ ದಾರಿ ಹಾಗೂ ಒಂದು ಮೊಗಸಾಲೆಯಿದ್ದು, ಉತ್ತರ, ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಕಾವಲುಗಾರರ ಕೊಠಡಿ ಸಾಲುಗಳಿವೆ. ಮುಖ್ಯಕಟ್ಟಡವನ್ನು ಎರಡು ಅಲಂಕೃತ ಅಧಿಷ್ಠಾನಗಳ ಮೇಲೆ ಕಟ್ಟಲಾಗಿದ್ದು, ಒಳಭಾಗವು ಕಿರು ಅಧಿಷ್ಠಾನವಿರುವ ನಾಲ್ಕು ಹಂತಗಳಲ್ಲಿದೆ. ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗಲು ಸೋಪಾನಗಳಿವೆ. ಮೊದಲನೆಯ ಹಂತದಿಂದ ಎರಡನೆಯ ಹಂತಕ್ಕೆ ಹೋಗಲು ಸೋಪಾನವು ಮಧ್ಯದಲ್ಲಿದ್ದರೆ ಉಳಿದೆಡೆ ಪಾರ್ಶ್ವಗಳಲ್ಲಿವೆ. ಮೊದಲ ಮೂರು ಹಂತಗಳು ವಿಶಿಷ್ಟ ರೀತಿಯ ಲ್ಯಾಟಿನ್ ಅಕ್ಷರ ಯು ಆಕಾರದ ಹಜಾರವನ್ನು ಹೊಂದಿದ್ದರೆ ನಾಲ್ಕನೆಯ ಹಂತದ ಮಧ್ಯದಲ್ಲಿ ಪ್ರದಕ್ಷಿಣಾಪಥದಿಂದಾವೃತವಾದ ಕೊಠಡಿಯಿದೆ.

3–14ರ ವರೆಗಿನ ಭವನಗಳು ವಿವಿಧ ಗಾತ್ರ, ಆಕಾರದವಾಗಿದ್ದು ಹೆಚ್ಚು ಕಡಿಮೆ ಚೌಕಾಕಾರದ ಎತ್ತರವಾದ ಒಂದೇ ಪ್ರಾಕಾರದ ಒಳಗೆ ನಿರ್ಮಿತವಾಗಿವೆ. ಮೂರು–ನಾಲ್ಕು ಭವನಗಳಿಗೇ ಪ್ರತ್ಯೇಕ ಪ್ರಾಕಾರವೂ ಇದ್ದು ಪರಸ್ಪರ ನೇರಸಂಪರ್ಕವುಳ್ಳದ್ದಾಗಿವೆ. ರಾಜಾಂಗಣ

ಪ್ರದೇಶವನ್ನು ಹೊರತುಪಡಿಸಿದರೆ ಒಂದಕ್ಕೊಂದು ತೀರ ಹತ್ತಿರದಲ್ಲಿ ಯಾವುದೇ ನಿರ್ದಿಷ್ಟ ದಿಕ್ಕಿಗೆ ಅಭಿಮುಖವಾಗಿರದ ಇದರಂತಹ ಕಟ್ಟಡ ಸಮೂಹ ಇನ್ನೊಂದಿಲ್ಲ. ವ್ಯಾಯಾಮಶಾಲೆಯ ಪಶ್ಚಿಮ ಗೋಡೆ ಹಾಗೂ ಪ್ರಾಕಾರದ ನಡುವಣ ಜಾಗದಲ್ಲಿ ಒಂದು ವಿಶಿಷ್ಟ ರೀತಿಯ ಶೌಚಾಲಯವಿದೆ. ಇದು ಹಂಪಿಯಲ್ಲಿ ಬೆಳಕಿಗೆ ಬಂದಿರುವ ಎಲ್ಲ ಶೌಚಾಲಯಗಳಿಗಿಂತ ಉತ್ತಮರೀತಿಯಲ್ಲಿ ನಿರ್ಮಿತವಾಗಿದ್ದು ಅಷ್ಟೇ ಉತ್ತಮಸ್ಥಿತಿಯಲ್ಲಿ ಉಳಿದಿರುವ ಒಂದೇ ಉದಾಹರಣೆಯಾಗಿದೆ. ಇದರ ನಿರ್ಮಿತಿಯಲ್ಲಿನ ವೈಶಿಷ್ಟ್ಯಗಳಿಂದ ವಿಜಯನಗರದ ಕಾಲದಲ್ಲಿ ಒಳಚರಂಡಿ ಮತ್ತು ನೈರ್ಮಲ್ಯ ವ್ಯವಸ್ಥೆ ಮುಂತಾದ ಸಾರ್ವಜನಿಕ ಆರೋಗ್ಯ ತತ್ತ್ವಗಳಿಗೆ ಇದ್ದ ಪ್ರಾಶಸ್ತ್ಯ ತಿಳಿಯುತ್ತದೆ.

ರಾಮಚಂದ್ರ ದೇವಾಲಯದ ಈಶಾನ್ಯಕ್ಕಿರುವ ಆವರಣ: ಈ ನಿವೇಶನದಲ್ಲಿನ ದಿಬ್ಬದಲ್ಲಿ ಒಂದು ವಿಶಾಲ ಆವರಣದೊಳಗಿನ ಕಟ್ಟಡಾವಶೇಷಗಳು ಬೆಳಕಿಗೆ ಬಂದಿವೆ (ಈಚೆಗೆ ಪ್ರವಾಸಿಗಳ ಅನುಕೂಲಕ್ಕಾಗಿ ಇಲ್ಲಿ ಕೆಲವು ವರ್ಷಗಳ ಹಿಂದೆ ಕಟ್ಟಲಾದ ಫಲಾಹಾರ ಮಂದಿರದಿಂದಾಗಿ ಕೆಲವು ಮುಖ್ಯ ಮಾಹಿತಿಗಳು ನಾಶವಾಗಿವೆ). ಈ ಆವರಣದಿಂದ ರಾಮಚಂದ್ರ ದೇವಾಲಯಕ್ಕೆ ಹೋಗಲು, ದಕ್ಷಿಣಭಾಗದಲ್ಲಿ, ದಕ್ಷಿಣೋತ್ತರವಾದ ಒಂದು ದೊಡ್ಡ ಅಲಂಕೃತ ಪ್ರವೇಶದ್ವಾರವಿದೆ. ಇದರ ಎರಡೂ ಬದಿಗೆ ವೇದಿಕೆಯ ಮೇಲೆ ಕಂಬಗಳನ್ನಾಧರಿಸಿದ ಕಟ್ಟಡಗಳಿವೆ. ಪಶ್ಚಿಮದ ವೇದಿಕೆಯು ಉತ್ತರ ದಿಕ್ಕಿನಲ್ಲಿ ವಿಸ್ತಾರವಾಗಿದ್ದು, ಈ ವಿಸ್ತೃತ ಭಾಗದಲ್ಲಿ ಐದು ಕೊಠಡಿಗಳಿವೆ. ಇವುಗಳಲ್ಲಿ ತುಸು ಎತ್ತರದಲ್ಲಿರುವ ಮಧ್ಯದ ಕೊಠಡಿ ಪ್ರತಿಮೆಯನ್ನಿಡಲು ಪ್ರನಾಳಸಹಿತವಾದ ಪೀಠವಿರುವ ಗುಡಿಯಾಗಿದೆ. ಈ ಗುಡಿಯ ಎದುರಿನ ವೇದಿಕೆಯ ಮೇಲೆ ಶಿಲ್ಪಗಳಿರುವ ದೀಪಸ್ತಂಭವೂ ದೊರಕಿದೆ. ಪ್ರವೇಶದ್ವಾರದ ಒಳಬದಿಗಳಲ್ಲಿ ನಿಲ್ಲಿಸಿದ ದುಂಡನೆಯ ಕಲ್ಲಿನ ಕಂಬಗಳಲ್ಲಿರುವ ಸಮಾನಾಂತರಗಳಲ್ಲಿ ಕೊರೆದ ರಂಧ್ರಗಳಲ್ಲಿ ಮರ ಅಥವಾ ಲೋಹದ ಕೋಲುಗಳನ್ನು ತೂರಿಸಿ ತನ್ಮೂಲಕ ಜನ ಹಾಗೂ ಪ್ರಾಣಿ / ವಾಹನಗಳ ಸಂಚಾರವನ್ನು ನಿಯಂತ್ರಿಸುತ್ತಿದ್ದರು. ದೂರದಿಂದ ಆನೆ, ಕುದುರೆಗಳನ್ನು ಏರಿಬಂದ ಆಗಂತುಕರನ್ನು ಬಹುಶಃ ಇಲ್ಲಿಂದ ಮುಂದಕ್ಕೆ ಸೂಕ್ತ ತಪಾಸಣೆ ಇಲ್ಲದೆ ಬಿಡುತ್ತಿರಲಿಲ್ಲ. ಈ ದ್ವಾರದ ಬಳಿ ಗಣೇಶನ ಚಿತ್ರಣವಿರುವ, ಒಂದೇ ಕಲ್ಲಿನಲ್ಲಿ ರೂಪಿಸಿದ, ದೊಡ್ಡ ನೀರಿನ ತೊಟ್ಟಿಯಿದ್ದು ಇದು ದೂರದಿಂದ ಬಂದ ಪ್ರಾಣಿಗಳಿಗೆ ನೀರುಣಿಸುವುದಕ್ಕಾಗಿ ಮಾಡಿದ ಏರ್ಪಾಡೆಂದು ತೋರುತ್ತದೆ. ಅದರಂತೆ ಪೂರ್ವದ ವೇದಿಕೆಯ ಬಳಿ ಇರುವ ದೊಡ್ಡ ನೀರಿನ ತೊಟ್ಟಿ ಮತ್ತು ಏಳು ಸಣ್ಣ ದೊಡ್ಡ ಕೊಠಡಿಗಳೂ ಸಹ ದೂರ ಪ್ರಯಾಣಿಕರ ಅನುಕೂಲಕ್ಕಾಗಿ ಇರಬೇಕು. ರಾಜಧಾನಿಯ ವೈಭವ ಉತ್ತುಂಗದಲ್ಲಿದ್ದಾಗ, ಮಹಾನವಮಿ ಮುಂತಾದ ವಿಶೇಷ ಸಮಾರಂಭಗಳ ಕಾಲದಲ್ಲಿ ದೂರದಿಂದ ಇಲ್ಲಿಗೆ ಆಗಮಿಸುತ್ತಿದ್ದ ಪ್ರವಾಸಿ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಬಹುಶಃ ಪ್ರತಿಯೊಂದು ಮುಖ್ಯ ಪ್ರವೇಶದ್ವಾರಗಳಲ್ಲಿ ಜನರ ತಪಾಸಣೆ, ಸಂಚಾರ ನಿಯಂತ್ರಣ ಮತ್ತು ನೀರು, ವಿಶ್ರಾಂತಿ ಮುಂತಾದ ತುರ್ತು ಸೌಲಭ್ಯಗಳಿಗೆ ಸೂಕ್ತವಾದ ಏರ್ಪಾಡುಗಳಿದ್ದುವೆಂದು ಈ ವಿವರಗಳಿಂದ ತಿಳಿದುಬರುತ್ತದೆ.

ಈ ದ್ವಾರದ ವಾಯವ್ಯದಲ್ಲಿ ಕ್ರಮವಾಗಿ ಜೋಡಿಸಿದಂತಿದ್ದ ಆನೆಯ ಅಸ್ಥಿಪಂಜರ ಮತ್ತು ಮಾನವ ಅಸ್ಥಿಪಂಜರಗಳು ಬೆಳಕಿಗೆ ಬಂದಿವೆ. ಇವು ಬಹುಶಃ ರಕ್ಕಸಗಿ ತಂಗಡಿಗಿ ಯುದ್ಧಾನಂತರ ರಾಜಧಾನಿಯನ್ನು ಹಾಳುಗೆಡವಲು ಬಂದ ಆಕ್ರಮಣಕಾರರನ್ನು ತಡೆಯಲು ಹೋಗಿ ಮಡಿದ ಸ್ಥಳೀಯ ಯೋಧರಿಗೆ ಸಂಬಂಧಿಸಿದ್ದಾಗಿರಬಹುದು.

**ಅರಮನೆಗಳ ಸಾಮಾನ್ಯ ಲಕ್ಷಣಗಳು:** ರಾಜಧಾನಿಯ ಕೇಂದ್ರಭಾಗದಲ್ಲಿಯ ಉತ್ಖನನದಲ್ಲಿ ಬೆಳಕಿಗೆ ಬಂದಿರುವ ಮತ್ತು ಇತರ ಆವರಣಗಳಲ್ಲಿ ಅಧಿಷ್ಠಾನದವರೆಗೆ ಸುಸ್ಥಿತಿಯಲ್ಲಿ ಉಳಿದಿರುವ ವಿಜಯನಗರ ಕಾಲದ ಸು.30 ಅರಮನೆ ಕಟ್ಟಡಗಳಿವೆ. ಇವುಗಳ ಗಾತ್ರ, ವೈಭವ, ಅಲಂಕರಣಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿದ್ದರೂ ಎಲ್ಲಕ್ಕೂ ಸಾಮಾನ್ಯವಾದ ಕೆಲವು ವಿಶಿಷ್ಟ ಲಕ್ಷಣಗಳಿವೆ. ಪ್ರತಿ ಅರಮನೆ ಸಮುಚ್ಚಯದ ಸುತ್ತಲೂ ಕಲ್ಲಿನಿಂದ ಕಟ್ಟಿದ ಎತ್ತರವಾದ, ಕ್ರಮೇಣ ಸಪೂರವಾಗುತ್ತಾ ಹೋಗುವ ಪ್ರಾಕಾರವಿದ್ದು ಇದಕ್ಕೆ ಭದ್ರತಾ ಕೊಠಡಿಗಳಿರುವ ಪ್ರವೇಶದ್ವಾರ, ಪರಿಚಾರಕರು, ಅಂಗರಕ್ಷಕರು ಮತ್ತಿತರರ ಸಂಚಾರಕ್ಕಾಗಿ ಒಂದೆರಡು ಕಿರುಬಾಗಿಲುಗಳಿವೆ. ಕೆಲವು ಮುಖ್ಯ ಭವನಗಳಿಗೆ ಪ್ರತ್ಯೇಕ ಪ್ರಾಕಾರವಿದ್ದು ಉಳಿದ ಕಟ್ಟಡಗಳೊಂದಿಗೆ ಇಡೀ ಸಮುಚ್ಚಯವನ್ನು ಆವರಿಸಿದಂತೆ ಇನ್ನೊಂದು ಪ್ರಾಕಾರವೂ ಇದೆ. ಮುಖ್ಯ ಭವನ ಕಡ್ಡಾಯವಾಗಿ ಪೂರ್ವ ಇಲ್ಲವೇ ಉತ್ತರಾಭಿಮುಖವಾಗಿವೆ. ದೊಡ್ಡ ಅರಮನೆಗಳ ಪಾರ್ಶ್ವಗಳಲ್ಲಿ ಕಂಬಸಾಲಿನ ಮೊಗಸಾಲೆಯಂತಹ ವಿಸ್ತರಣಗಳಿದ್ದು ಒಟ್ಟು ಕಟ್ಟಡಕ್ಕೆ ಮುಂಚಾಚು– ಹಿಂಚಾಚುಗಳಿಂದ ಕೂಡಿದ ಆಕರ್ಷಕ ಲಯಬದ್ಧ ತಲವಿನ್ಯಾಸ ಒದಗಿಸಿದೆ. ಪ್ರತಿಯೊಂದು ಅರಮನೆ ಪರಿಸರದ ಇತರ ಕಟ್ಟಡಗಳಿಗಿಂತ ಉನ್ನತವಾಗಿರುವಂತೆ ನಯಗೊಳಿಸಿದ ಕಲ್ಲಿನ ವಾಸ್ತುಭಾಗಗಳಿರುವ ಸಾಕಷ್ಟು ಎತ್ತರದ ಅಧಿಷ್ಠಾನದಿಂದ ಕೂಡಿದೆ. ಇದರಲ್ಲಿ ವಾಸಿಸುವವರ ಘನತೆ ಗೌರವಗಳಿಗೊಪ್ಪುವಂತೆ ಅಧಿಷ್ಠಾನ ಒಂದು, ಎರಡು ಅಥವಾ ಮೂರು ಹಂತಗಳಲ್ಲಿದ್ದು, ಇದರ ವಾಸ್ತುಭಾಗಗಳು ಹೂಬಳ್ಳಿಗಳು, ರಜ್ಜುಬಂಧ, ಕೀರ್ತಿಮುಖ, ಪಶುಪಕ್ಷಿಗಳ ಸಾಲು, ಅಪರೂಪಕ್ಕೆ ಕೆಲವೊಮ್ಮೆ ನರ್ತಕರ ಕಿರುಶಿಲ್ಪಗಳಿಂದ ಅಲಂಕೃತವಾಗಿರುತ್ತವೆ. ಕೆಲವು ಕಟ್ಟಡಗಳಲ್ಲಿ ಹಲವಾರು ಪದರಗಳಲ್ಲಿರುವ ಗಾರೆ, ಸುಣ್ಣಗಳ ಲೇಪನವೂ ಕಂಡುಬಂದಿವೆ. ಒಳ ಹಾಗೂ ಹೊರಾಂಗಣಗಳಲ್ಲಿ ಸುಣ್ಣ ಕಾಂಕ್ರೀಟಿನ ದಪ್ಪ ಪದರವನ್ನು ಹಾಕಿ, ಗಾರೆಯಿಂದ ನಯಮಾಡಿದ್ದು, ಒಳಗಿನ ನೆಲವನ್ನು ವಿಶೇಷವಾಗಿ ತಯಾರಿಸಿದ ಗಾರೆಯಿಂದ ಮೆರುಗು ಬರುವಂತೆ ಗಿಲಾವುಮಾಡಿದೆ. ಗಾರೆ ಮತ್ತು ಸುಣ್ಣದ ಹಲವಾರು ಪದರಗಳಿದ್ದು ಅರಮನೆಯನ್ನು ಕಾಲಕಾಲಕ್ಕೆ ನವೀಕರಿಸಿ ಸುಸ್ಥಿತಿಯಲ್ಲಿಟ್ಟುಕೊಂಡಿದ್ದರು. ಕೆಲವು ಮುಖ್ಯ ಕೊಠಡಿಗಳಲ್ಲಿ ಮೆರುಗು ನೀಡಿದ ಕಲ್ಲಿನ ಚಪ್ಪಡಿಗಳನ್ನು ಹಾಕಿದೆ. ಅಧಿಷ್ಠಾನದ ಮೇಲಿನ ಮುಖ್ಯ ಭಾರವಾಹಕ ಗೋಡೆಗಳನ್ನು ಮಣ್ಣು ಮತ್ತು ಕಲ್ಲುಗಳಿಂದ ಕಟ್ಟಿ, ಗಾರೆಯಿಂದ ನಯಮಾಡಿದ್ದು 1–1.25 ಮೀ ದಪ್ಪವಾಗಿದ್ದರೆ, ಒಳಾಂಗಣವನ್ನು ವಿಭಜಿಸುವ ಗೋಡೆಗಳು 40–45 ಸೆಂಮೀ ದಪ್ಪವಾಗಿವೆ. ದೇವಕೋಷ್ಠ, ಬಾಗಿಲುವಾಡ, ಅಲಂಕಾರದ ಮಾಡು, ಗೂಡು, ಕಿಟಕಿಗಳಿರುವಲ್ಲಿ ಮಾತ್ರ ಇಟ್ಟಿಗೆಗಳನ್ನುಪಯೋಗಿಸಿದೆ. ಮೇಲ್ಕಟ್ಟಡವನ್ನು ಮರದ ಬೇರೆ ಬೇರೆ ಎತ್ತರ, ಆಕಾರಗಳ ಕಂಬ, ತೊಲೆ, ಜಂತಿಗಳಿಂದ ರೂಪಿಸಿದ್ದು ಕಬ್ಬಿಣದ ವಿವಿಧ ಗಾತ್ರ, ಆಕಾರದ ಮೊಳೆ, ಕೀಲು, ಉಯ್ಯಾಲೆ ಕೀಲು, ಅಲಂಕೃತ ಹಿಡಿಕೆಗಳನ್ನು ಉಪಯೋಗಿಸಿದೆ.

ಚಾವಣಿಯನ್ನು ಚಾಪೆಯ ಮೇಲೆ ಹಾಕಿದ ದಪ್ಪ ಸುಣ್ಣ ಕಾಂಕ್ರೀಟಿನ ಪದರಗಳಿಂದ ತಯಾರಿಸಿದ್ದು ಕೆಲವೊಮ್ಮೆ ಇಟ್ಟಿಗೆ, ಹೆಂಚುಗಳನ್ನು ಉಪಯೋಗಿಸಿ ನೀರಿಳಿಯದಂತೆ ಮಾಡಿದೆ. ಮೇಲ್ಭಾಗದಲ್ಲಿ ನಿವಾಸಿಗಳ ಅಂತಸ್ತಿಗೆ ತಕ್ಕಂತೆ ಚಿನ್ನ (ಬಹುಶಃ ಚಿನ್ನದ ಲೇಪ ಮಾಡಿದ ತಾಮ್ರ), ದಂತ ಮತ್ತು ಗಾರೆಯ ಸ್ತೂಪಿ ಸಹಿತವಾದ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಕಲಶಗಳಿದ್ದವು. ಕನಿಷ್ಠ ಆರು ಅರಮನೆಗಳ ಬಳಿ ಇಂತಹ ಕಲಶದ ಭಾಗಗಳು ದೊರಕಿವೆ. ಭವನದ ಮುಖ್ಯಭಾಗಗಳ ವಿತಾನದಲ್ಲಿ ಗಾರೆಯನ್ನು ಕೊರೆದು ಮೂಡಿಸಿ ಬಣ್ಣ ಹಾಕಿದ ರೇಖಾ ಬಂಧ, ಪತ್ರಲತೆ, ಪಕ್ಷಿ, ಅಪರೂಪಕ್ಕೆ ಒಂದೆರಡು ಕಡೆ ಗಗನವಿಹಾರಿ ಗಂಧರ್ವರ ತೆಳು ಉಬ್ಬುಶಿಲ್ಪಗಳಿಂದ ಅಲಂಕರಿಸಿದಂತೆ ಕಾಣುತ್ತದೆ.

ಅರಮನೆಯ ಒಳಾಂಗಣವನ್ನು ಕ್ರಮೇಣ ಏರುತ್ತಾ ಹೋಗುವ ಎರಡರಿಂದ ನಾಲ್ಕು ಹಂತಗಳಾಗಿ ರೂಪಿಸಿದ್ದು ಪ್ರತಿಹಂತವನ್ನು ತಲುಪಲು ಮಧ್ಯದಲ್ಲಿ ಅಥವಾ ಪಾರ್ಶ್ವಗಳಲ್ಲಿ ಆನೆ, ಸಿಂಹ ಅಥವ ವ್ಯಾಳ ಕಟಾಂಜನದ ಪಾವಟಿಗೆಗಳಿರುತ್ತವೆ. ಅತ್ಯಂತ ಎತ್ತರದಲ್ಲಿರುವ, ಅಂತಿಮ ಹಂತ ಭವನದ ಒಂದು ತುದಿಗಿದ್ದು (ಬಹುತೇಕ ಪಶ್ಚಿಮ ಅಥವಾ ಉತ್ತರ) ಇದರಲ್ಲಿ ಒಂದು ಅಥವಾ ಹೆಚ್ಚು ಆಯತ ಇಲ್ಲವೇ ಚೌಕೋನಾಕೃತಿಯ ಕೊಠಡಿಗಳಿರುತ್ತವೆ. ಹೆಚ್ಚು ಕೊಠಡಿಗಳಿರುವಲ್ಲಿ ಮಧ್ಯದ ಕೊಠಡಿಯ ಸುತ್ತ ಪ್ರದಕ್ಷಿಣಾಪಥದಂತಹ ದಾರಿಗೆ ತೆರೆದುಕೊಳ್ಳುವಂತೆ ಉಳಿದವನ್ನು ಸಂಯೋಜಿಸಿರುತ್ತದೆ. ಮಧ್ಯದ ಕೇಂದ್ರ ಕೊಠಡಿ ಇಡೀ ಭವನದ ಮುಖ್ಯ ಭಾಗ. ಇದರ ಬಾಗಿಲುವಾಡ ಮತ್ತು ಒಳಾಂಗಣದಲ್ಲಿ ಗಾರೆಯನ್ನು ಕೊರೆದು ಮಾಡಿದ ಗಮನಾರ್ಹ ಅಲಂಕರಣಗಳಿದ್ದು, ಹಿಂಬದಿಯ ಗೋಡೆಗೆ ಹೊಂದಿಕೊಂಡಂತೆ ಆಸನವನ್ನಿಡಲು ಸ್ವಲ್ಪ ಎತ್ತರದ ಅಲಂಕೃತ ವೇದಿಕೆಯಿರುತ್ತದೆ. ಸುತ್ತಣ ಕೊಠಡಿಗಳಲ್ಲೊಂದರಲ್ಲಿ ಎರಡನೆಯ, ಮೂರನೆಯ ಅಂತಸ್ತುಗಳಿಗೆ ಹೋಗಲು ಪಾವಟಿಗೆಗಳಿರುತ್ತವೆ. ಇನ್ನೊಂದು ಬದಿಯ ಕಿರುಕೋಣೆಯಲ್ಲಿ ಶೌಚಾಲಯದ ವ್ಯವಸ್ಥೆಯಿರುತ್ತದೆ. ಮೂರನೆಯ ಹಂತದ ಪಾರ್ಶ್ವಗಳಲ್ಲಿಯೂ ಕೆಲವೆಡೆ ಕೊಠಡಿಗಳಿವೆ. ಮೊದಲನೆಯ ಹಾಗೂ ಎರಡನೆಯ ಹಂತಗಳ ವಿಜಯನಗರದ ಪ್ರಾದೇಶಿಕ ಶೈಲಿಯ ಅರಮನೆಗಳ ವಿಶಿಷ್ಟ ಲಕ್ಷಣವಾಗಿರುವ ಅಕ್ಷರ ಯು ವಿನ್ಯಾಸದ ಕಂಬಸಾಲಿನ ಮೊಗಸಾಲೆ ಯಂತಹ ಸಭಾಗೃಹವಾಗಿರುತ್ತದೆ. ತುಳುವಂಶದ ಅರಸರ ಕಾಲದಲ್ಲಿ ಕಟ್ಟಿಸಿದ ಅರಮನೆಗಳಲ್ಲಿ ಈ ಸಭಾಗೃಹದ ಎರಡೂ ಬದಿಗಳ ಗೋಡೆಗಳಲ್ಲಿ ಕೀರ್ತಿಮುಖ ಪ್ರಭಾವಳಿ ಇರುವ ದೇವಕೋಷ್ಠಗಳಿದ್ದು ಇವುಗಳಲ್ಲಿ ದೇವಾಲಯಗಳ ಶಿಖರ, ಗೋಪುರಗಳ ಮೇಲಿರುವಂತಹ ಪದ್ಮಪೀಠಗಳ ಮೇಲೆ ನಿಂತ ಮಧ್ಯಮಗಾತ್ರದ ಸುಂದರವಾದ ಗಾರೆಯ ಶಿಲ್ಪಗಳನ್ನು ರೂಪಿಸಿದೆ. ಕೃಷ್ಣದೇವರಾಯನ ಅರಮನೆ, ಅಷ್ಟಕೋನಾಕಾರದ ಕೊಳದ ಬಳಿ ಇರುವ ಪ್ರತಿಮಾಗೃಹವೆಂದು ಊಹಿಸಲಾದ ಕಟ್ಟಡ ಮತ್ತು ಗುಹಾಂತರ್ದೇವಾಲಯದ ಬಳಿಯಲ್ಲಿ ಬೆಳಕಿಗೆ ಬಂದಿರುವ ಭವನದಲ್ಲಿ ಇಂತಹ ಶಿಲ್ಪಗಳ ಅವಶೇಷಗಳು ದೊರಕಿವೆ. ಈ ಶಿಲ್ಪಗಳಿಗೆ ವರ್ಣಾಲಂಕಾರ ಮಾಡಿದ್ದರಲ್ಲದೆ, ಬಹುಶಃ ಗಾಜು, ಅರೆಪ್ರಶಸ್ತ ಶಿಲೆಗಳ ಮಣಿಗಳಿರುವ ಆಭರಣಗಳನ್ನೂ ರೂಪಿಸಿದ್ದರೆಂದು ಕಾಣುತ್ತದೆ. ಕೆಲವು ವಿದೇಶಿಯರ ಪ್ರವಾಸ ಕಥನಗಳಲ್ಲಿ ಇಂತಹ ಶಿಲ್ಪಗಳಿದ್ದ ಅರಮನೆಗಳ ಉಲ್ಲೇಖವಿದೆ.

ಅರಮನೆಗಳ ಮೇಲ್ಕಟ್ಟಡವನ್ನು ಪುನಾರಚಿಸಲು ಸಹಾಯಕವಾದ ವಿಶಿಷ್ಟ ಪುರಾತತ್ತ್ವ ಪುರಾವೆಗಳು ದೊರೆತಿಲ್ಲ. ಆದರೂ ಬೆಳಕಿಗೆ ಬಂದಿರುವ ಅಲ್ಪಾಧಾರಗಳು ಮತ್ತು ವಿಜಯನಗರೋತ್ತರ ಕಾಲೀನ ಕಟ್ಟಡಗಳ ಅವಲೋಕನದಿಂದ ಕೆಲವು ವಿವರಗಳನ್ನು ಸ್ಥೂಲವಾಗಿ ಕಲ್ಪಿಸಿಕೊಳ್ಳಬಹುದು. ಚಾವಣಿಯ ಪರಿಧಿಯುದ್ದಕ್ಕೂ ಆ ಕಾಲದ ದೇವಾಲಯಗಳಲ್ಲಿರುವಂತೆ ನೀಳವಾಗಿ ಮುಂಚಾಚಿದ್ದ ಮರದ ಕಪೋತವಿದ್ದು ಅದರ ತಳಭಾಗದಲ್ಲಿ ವಿಶೇಷಾಲಂಕರಣವಿರುತ್ತಿತ್ತು. ಮೇಲೆ ಇಟ್ಟಿಗೆ–ಗಾರೆಯ ವರ್ಣಾಲಂಕೃತ ಶಿಲ್ಪಗಳಿದ್ದ, ಕೀರ್ತಿಮುಖ–ದೇವಕೋಷ್ಠಗಳ ಸಾಲಿತ್ತು. ಮೇಲಂತಸ್ತಿನ ಕೊಠಡಿಗಳ ಮೇಲೆ ಕಲಶಸಹಿತವಾದ ಕದಂಬನಾಗರ ಶೈಲಿಯ ಶಿಖರಸಮೂಹ ಅಥವಾ ಗುಮ್ಮಟವನ್ನು ಸುತ್ತುವರೆದಂತಿದ್ದ ಶಿಖರಗಳಿದ್ದವು. ಬಹಮನಿ ವಾಸ್ತು ಅಲಂಕರಣಶೈಲಿಯ ಪ್ರಭಾವದಿಂದಾಗಿ ಕೊರೆದು ಮೂಡಿಸಿ, ಬಣ್ಣ ತುಂಬಿದ ಗಾರೆಯ ವಿವಿಧ ವಿನ್ಯಾಸದ ಅಲಂಕರಣ ಒಳ–ಹೊರಾಂಗಣಗಳಲ್ಲಿ ಎದ್ದು ಕಾಣುವಂತಿದ್ದಿರಬೇಕು. ಕೆಲವೊಮ್ಮೆ ಮಣಿ, ಕನ್ನಡಿಯ ಚೂರುಗಳನ್ನೂ ಉಪಯೋಗಿಸಲಾಗಿದೆ. ಕಪೋತ, ಕಲಶಗಳಿಗೆ ಹೊದಿಸಿದ್ದ ಚಿನ್ನದ ತಗಡಿನ ಚೂರುಗಳು ಲಭ್ಯವಾಗಿರುವುದು ಗಮನಾರ್ಹ. ಆದರೆ ಈ ಸ್ಥಳಗಳಲ್ಲಿ ಕೂರಿಸಿದ್ದರೆಂದು ಪ್ರವಾಸಿಗಳು ಉಲ್ಲೇಖಿಸಿರುವ ವಿನ್ಯಾಸಗಳನ್ನು ಕೊರೆದ ದಂತದ ಫಲಕಗಳ ಅವಶೇಷಗಳು ದೊರಕಿಲ್ಲ.

ಇಡೀ ಸಮುಚ್ಚಯಕ್ಕೆ, ವಿಶೇಷವಾಗಿ ಪ್ರತಿ ಅರಮನೆಗೆ ಸಂಬಂಧಿಸಿದಂತೆ ನೀರಿನ ಸರಬರಾಜಿಗೆ ಮತ್ತು ಶೌಚಾಲಯ ಹಾಗೂ ಮಲಿನನೀರನ್ನು ಹೊರಹಾಕುವ ಜಾಲಕವ್ಯವಸ್ಥೆ ಯಿತ್ತು. ನೀರಿನ ಸಂಗ್ರಹಣೆಗಾಗಿ ಒಂದೇ ಕಲ್ಲಿನಿಂದ ಮಾಡಿದ ತೊಟ್ಟಿ, ಆವಶ್ಯಕ ಭಾಗಗಳಲ್ಲಿ ವಿವಿಧ ಗಾತ್ರದ ಒಂದೆರಡು ಕಲ್ಯಾಣಿಗಳಿದ್ದವು. ಇದಲ್ಲದೆ ಶುದ್ಧ ಕುಡಿಯುವ ನೀರಿಗಾಗಿಯೇ ಇದ್ದ ಪ್ರತ್ಯೇಕ ಬಾವಿಯೂ ಇತ್ತು. ವೀರಹರಿಹರರಾಯನ ಅರಮನೆಯ ಮುಂಭಾಗದಲ್ಲಿ ಕಂಡುಬಂದಿರುವಂತೆ ಬಹುಶಃ ಎಲ್ಲ ಅರಮನೆಗಳಲ್ಲಿ ಹೂದೋಟವೂ ಇತ್ತು. ಈ ಅರಮನೆಗಳ ಪರಿಸರದಲ್ಲಿ ರಾಣೀವಾಸದವರಿಗಾಗಿ ಪ್ರತ್ಯೇಕ ಭವನಗಳಿದ್ದವು. ಕೆಲವೆಡೆ ಪಾಕಶಾಲೆ, ಭೋಜನಶಾಲೆ, ಸಭಾಭವನ, ಪರಿಚಾರಕರ ವಸತಿಗೃಹ, ರಾಜಪ್ರಮುಖರ ಭವನ ಒಂದರಲ್ಲಿ ದೊರಕಿರುವಂತಹ ವ್ಯಾಯಾಮಶಾಲೆಗಳೂ ಇದ್ದವು. ಇನ್ನುಳಿದಂತೆ ಅರಮನೆಯನ್ನು ಆವರಿಸಿದಂತಿರುವ ಸರಳ ರೀತಿಯ ಪ್ರಾಕಾರ ಮತ್ತು ಸುತ್ತಲ ಇತರ ಕಟ್ಟಡಗಳೆಲ್ಲವನ್ನು ಸುತ್ತುವರೆದ ಪ್ರಾಕಾರಕ್ಕೆ, ವಿಶೇಷ ರೀತಿಯ ಮಹಾದ್ವಾರವಿತ್ತು. ಈ ಮಹಾದ್ವಾರದ ಎರಡೂ ಬದಿಗೆ ಅಲಂಕೃತವಾದ ಎತ್ತರದ ಅಧಿಷ್ಠಾನದ ವೇದಿಕೆ, ಅದರ ಮೇಲೆ ಮೂರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ಕೊಠಡಿಗಳಿದ್ದು ಅವುಗಳಲ್ಲಿ ವಿಶಾಲವಾದದ್ದು ಭದ್ರತಾವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿಯದ್ದಾಗಿರಬೇಕು. ಅರಮನೆಗೆ ಬರುವವರನ್ನು ಅಲ್ಲಿಯೇ ತಡೆದು ಸೂಕ್ತ ತಪಾಸಣೆಯ ಅನಂತರ ಅವರನ್ನು ಒಳಗೆ ಬಿಡುವ ವ್ಯವಸ್ಥೆಯಿದ್ದಿತು. ಕೆಲವು ಅರಮನೆ ಸಮುಚ್ಚಯಗಳಲ್ಲಿ ಅಂಬಾರಿಯಲ್ಲಿ ಕುಳಿತು ಬಂದವರು ಇಳಿದು ಬರಲು ವಿಶೇಷ ವೇದಿಕೆಯೂ ಕಂಡುಬಂದಿದೆ. ಹೀಗೆ ಪ್ರತಿ ಅರಮನೆಯೂ ಸ್ವಯಂಪೂರ್ಣ, ಸುಸಜ್ಜಿತ, ಸುರಕ್ಷಿತ ಕಟ್ಟಡ ಸಮುಚ್ಚಯವಾಗಿತ್ತು.

ಬಹುಶಃ ರಾಜಧಾನಿಯಲ್ಲಿನ ಪ್ರತಿಯೊಂದು ಆವರಣವೂ ತನ್ನ ವೈಭವದ ಕಾಲದಲ್ಲೂ, ಇಂದಿಗೂ ಸಾಕಷ್ಟು ಉತ್ತಮ ಸ್ಥಿತಿಯಲ್ಲಿ ಉಳಿದಿರುವ ಕಮಲ ಭವನ ಸಮುಚ್ಚಯವಿರುವ ಆವರಣವನ್ನೇ ಬಹುಮಟ್ಟಿಗೆ ಹೋಲುತ್ತಿತ್ತು ಎನ್ನಬಹುದು.

ಅರಮನೆ ಇರುವ ವಿಶಿಷ್ಟ ಭೌಗೋಳಿಕ ನೆಲೆ, ಅದರ ಗಾತ್ರ, ಅಲಂಕರಣ ವಿಧಾನ, ಪರಿಸರದ ಇತರ ಕಟ್ಟಡಗಳೊಡನೆ ಅದರ ಸಂಪರ್ಕ-ಸಂಬಂಧಗಳು, ಅದಕ್ಕಿರುವ ಭದ್ರತಾವ್ಯವಸ್ಥೆ; ಅದರಲ್ಲಿ ಬೆಳಕಿಗೆ ಬಂದಿರುವ ಪ್ರಾಚ್ಯವಸ್ತುವಿಶೇಷಗಳು, ಅದರ ಬಗೆಗಿನ ಪ್ರತ್ಯಕ್ಷ ಹಾಗೂ ಪರೋಕ್ಷ ಶಾಸನೋಲ್ಲೇಖ, ಅಂದಿನ ಸಮಕಾಲೀನ ಸಾಹಿತ್ಯಕೃತಿಗಳು, ವಿದೇಶಿ ಪ್ರವಾಸಕಥನ ಹಾಗೂ ಮೌಖಿಕ ಪರಂಪರೆಗಳಿಂದ ಪಡೆದುಕೊಳ್ಳಬಹುದಾದ ವಿವರ- ಇವುಗಳ ಒಂದು ಸೂಕ್ಷ್ಮ ಹಾಗೂ ತೌಲನಿಕ ಪರಾಮರ್ಶೆಯಿಂದ ಅದರ ನಿರ್ದಿಷ್ಟ ಕಾಲ, ನಿವಾಸಿಗಳು ಮತ್ತು ಬಳಕೆಯ ವಿಧಾನ ಇವುಗಳನ್ನು ಸ್ಥೂಲವಾಗಿ ನಿರ್ಧರಿಸಬೇಕಾಗುತ್ತದೆ. ವೀರಹರಿಹರ ರಾಯನ ಅರಮನೆಯೊಂದರ ಹೊರತಾಗಿ ಬೇರೆ ಯಾವ ಭವನವನ್ನೂ ಗುರುತಿಸಲು ಸಹಾಯಕವಾಗುವ ಪ್ರತ್ಯಕ್ಷ ಶಾಸನಾಧಾರಗಳಿಲ್ಲ. ಅಲ್ಲದೆ ಕಾಲಕಾಲಕ್ಕೆ, ಅಂದಿನ ಆವಶ್ಯಕತೆಗನುಗುಣವಾಗಿ ಕೆಲವು ಮಾರ್ಪಾಡುಗಳೊಂದಿಗೆ ಒಂದೇ ಅರಮನೆಯನ್ನು ಹಲವು ರಾಜರು ಬಳಸಿರುವ ಸಾಧ್ಯತೆಗಳು ಇವೆ. ಅರಮನೆಯ ಪ್ರಾಂಗಣ, ಕೊಠಡಿಗಳನ್ನು ಬೇರೆ ಬೇರೆ ಕಾಲ, ಸಂದರ್ಭಗಳಲ್ಲಿ ವಿವಿಧ ರೀತಿಯಲ್ಲಿ ಉಪಯೋಗಿಸಿರಬಹುದು. ಉದಾ: ಅರಮನೆಯ ಹಜಾರ, ಕೊಠಡಿಗಳನ್ನು ಗಣ್ಯ ಅತಿಥಿಗಳನ್ನು ಸ್ವಾಗತಿಸಲು, ತುರ್ತು ಆಪ್ತಾಲೋಚನೆ, ವ್ಯವಹಾರಗಳನ್ನು ನಡೆಸಲು, ಧಾರ್ಮಿಕ ಕಾರ್ಯಕ್ರಮಗಳಿಗಾಗಿ, ಮನೋರಂಜನೆ ಮುಂತಾದವುಗಳಿಗಾಗಿ ಸೂಕ್ತವಾಗಿ ಬಳಸಿರಬಹುದು.

ಉತ್ಖನನದಲ್ಲಿ ಬಹುತೇಕ ಅರಮನೆ ಹಾಗೂ ಇತರ ಸಾಮಾಜಿಕ ಉಪಯೋಗದ ಕಟ್ಟಡಗಳಲ್ಲಿ ದೊರೆತ ಅರೆಸುಟ್ಟ ಮರದ ಕಂಬ, ತೊಲೆ, ಇದ್ದಿಲು ಮತ್ತು ಬೂದಿಯ ಗುಡ್ಡೆಗಳು; ಸುಟ್ಟುಕರಕಾದ ಗಾರೆಯ ಶಿಲ್ಪಗಳು; ಶಾಖದಿಂದ ಚಕ್ಕೆ ಎದ್ದು ಬಿರಿದು, ಮುರಿದ ಕಲ್ಲಿನ ಕಂಬ ಮುಂತಾದವು ಈ ಕಟ್ಟಡಗಳೆಲ್ಲ ಭಾರಿ ಅಗ್ನಿಅನಾಹುತಕ್ಕೀಡಾಗಿ ನಾಶವಾದವೆಂದು ಸೂಚಿಸುತ್ತವೆ. ರಕ್ಕಸಗಿ ತಂಗಡಗಿ ಬಳಿ ನಡೆದ ನಿರ್ಣಾಯಕ ಯುದ್ಧದಲ್ಲಿ ವಿಜಯನಗರ ಹೀನಾಯವಾಗಿ ಸೋತನಂತರ ರಾಜಧಾನಿ ಪ್ರದೇಶವನ್ನು ಆಕ್ರಮಿಸಿದ ವಿಜೇತಸೈನಿಕರು ಹಲವು ತಿಂಗಳವರೆಗೆ ಇಲ್ಲಿ ನೆಲೆಸಿ ಉದ್ದೇಶಪೂರ್ವಕವಾಗಿ ಕ್ರಮಬದ್ಧ ವಿಧ್ವಂಸಕ ಕೃತ್ಯಗಳನ್ನು ನಡೆಸಿದರು (1565 ಜನವರಿ). ಇದರ ಅಂಗವಾಗಿ ಪುನಃ ಉಪಯೋಗಿಸಬಹುದಾದ ಕಟ್ಟಡ ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು, ಉಳಿದವುಗಳಿಗೆ ಬೆಂಕಿಹಚ್ಚಿ ಹಾಳುಗೆಡವಲಾಯಿತು. ಅಲ್ಲಲ್ಲಿ ದೊರಕಿರುವ ಆನೆ, ಕುದುರೆ ಮುಂತಾದ ಪ್ರಾಣಿಗಳ ಹಾಗೂ ಮಾನವ ಅಸ್ಥಿಪಂಜರಗಳ ಸಮೂಹ ಮತ್ತು ಮೇಲೆ ಹೇಳಿದ ಅವಶೇಷಗಳು ಈ ವಿಧ್ವಂಸಕ ಕೃತ್ಯಗಳಿಗೆ ಸಾಕ್ಷಿಗಳಾಗಿವೆ.

ಈ ಅರಮನೆಗಳ ವಿನ್ಯಾಸವಿಶೇಷಗಳ ವಿಶ್ಲೇಷಣೆಯಿಂದ ವಿಜಯನಗರಕಾಲದಲ್ಲಿ ಎರಡು ರೀತಿಯ ವಾಸಭವನಗಳು ಬೆಳವಣಿಗೆ ಹೊಂದಿ ಬಳಕೆಯಲ್ಲಿದ್ದುದು ತಿಳಿಯುತ್ತದೆ. ಮೊದಲನೆಯ ಮಾದರಿ ಪ್ರಾದೇಶಿಕವಾದ, ಹಂತಹಂತವಾಗಿ ಮೇಲೇರುವ ಮರ-ಇಟ್ಟಿಗೆ-ಮಣ್ಣು/ಗಾರೆಯ ಮೇಲ್ಕಟ್ಟಡ ಹೊಂದಿದ್ದ ಕಂಬ-ತೊಲೆ ರೀತಿಯದು. ಇದು ಬಹುಶಃ ಗುಡ್ನಾಪುರದ ಉತ್ಖನನದಲ್ಲಿ ರವಿವರ್ಮನ ಅರಮನೆಯ ಅವಶೇಷಗಳಲ್ಲಿ ಕಂಡುಬಂದಿರು ವಂತೆ, ದಕ್ಷಿಣಭಾರತದ ಮಟ್ಟಿಗಾದರೂ ಅತ್ಯಂತಪ್ರಾಚೀನ ಪರಂಪರೆಯಿರುವ ಪ್ರಾದೇಶಿಕ ವಿನ್ಯಾಸ. ಮುಂದೆ ವಿಜಯನಗರೋತ್ತರ ಕಾಲದಲ್ಲಿಯೂ ಇಂದಿಗೂ ಉಳಿದಿರುವುದು. ಎರಡನೆ ಮಾದರಿ ಇಸ್ಲಾಮ್ ಶೈಲಿಯ ಕಂಬ-ಕಮಾನು-ಗುಮ್ಮಟ ರೀತಿಯದು. ರಾಜಧಾನಿ ಯಲ್ಲಿ ಪ್ರಾರಂಭದಲ್ಲಿ ಮೊದಲ ಮಾದರಿಯ ಕಟ್ಟಡಗಳು ಪ್ರಧಾನವಾಗಿ ಕಂಡುಬರುತ್ತವೆ. ಆದರೂ ತುಳುವಂಶದ ಅರಸರ ವೈಭವದ ಕಾಲದ್ದೆನ್ನಬಹುದಾದ ಕಮಲಭವನ, ರಾಣಿಯರ ಸ್ನಾನಗೃಹ, ಅಷ್ಟಕೋನಾಕೃತಿಯ ಜಲಮಂದಿರ ಮುಂತಾದವು ಸೂಚಿಸುವಂತೆ ಕಂಬ-ಕಮಾನು ಮಾದರಿಯವು ಮೇಲುಗೈ ಪಡೆದವು. ಅನಂತರ ಪೆನುಗೊಂಡೆ, ಚಂದ್ರಗಿರಿ, ವೆಲ್ಲೂರು ಮುಂತಾದೆಡೆಗಳಲ್ಲಿ ನಶ್ವರ ಸ್ವರೂಪದ ಮೊದಲ ಮಾದರಿಯ ಕಟ್ಟಡಗಳು ಪೂರ್ತಿಕಡಿಮೆಯಾಗಿ ಸಾಕಷ್ಟು ಸ್ಥಿರವಾದ ವೈವಿಧ್ಯಮಯ ವಿನ್ಯಾಸ, ಅಲಂಕರಣ ವೈಭವಗಳಿಗೆ ವಿಪುಲಾವಕಾಶ ಒದಗಿಸುವ ಎರಡನೆಯ ಮಾದರಿ ಪ್ರಧಾನವಾಯಿತು. ಹಂಪಿಯ ಸಾಮಾಜಿಕ ಕಟ್ಟಡಗಳು ನಾಶವಾದ ಸಂದರ್ಭ, ರೀತಿ, ಅವಧಿಗಳು ಸಹಜವಾಗಿಯೇ ಈ ಬದಲಾದ ಆಯ್ಕೆಗೆ ಮುಖ್ಯ ಪ್ರೇರಣೆಯಾಯಿತು.

**ಜೈನದೇವಾಲಯ ಸಮುಚ್ಚಯ:** ಗಜಶಾಲೆಯ ಹಿಂಭಾಗದಲ್ಲಿರುವ ಮುಖ್ಯರಸ್ತೆ ಶಾಸನಗಳಲ್ಲಿ ಕ್ರಮುಕಪರ್ಣಾಪಣ ವೀಧಿ ಅಥವಾ ಪರ್ಣಪೂಗೀಫಲಾಪಣ ವೀಧಿ (ಪಾನ್ ಸುಪಾರಿ ಬಜಾರ್) ಎಂದು ಉಲ್ಲೇಖಿಸಲ್ಪಟ್ಟಿದೆ. ಇಲ್ಲಿಯ ಜೈನದೇವಾಲಯದ ಬಳಿ ಅರ್ಧ ಮುಚ್ಚಿಹೋಗಿದ್ದ ನಾಲ್ಕು ದೇವಾಲಯಗಳನ್ನು ಬೆಳಕಿಗೆ ತರಲಾಗಿದೆ. ಈ ನಾಲ್ಕರಲ್ಲಿ ಎರಡು ಜೈನಸಂಪ್ರದಾಯಕ್ಕೂ ಉಳಿದವುಗಳಲ್ಲಿ ಒಂದೊಂದು ಶೈವ ಹಾಗೂ ವೈಷ್ಣವ ಸಂಪ್ರದಾಯಗಳಿಗೂ ಸೇರಿದವು. ಜೀರ್ಣಾವಸ್ಥೆಯಲ್ಲಿರುವ ನಾಲ್ಕೂ ದೇವಾಲಯಗಳ ತಲವಿನ್ಯಾಸ ಪೂರ್ಣರೂಪದಲ್ಲಿ ದೊರೆತಿದೆ.


ಪಾರ್ಶ್ವನಾಥ ಶಿಲ್ಪ, ಪಾನ್ ಸುಪಾರಿ ಬೀದಿ, ಹಂಪಿ

ಈ ದೇವಾಲಯಗಳ ನಡುವೆ ಹಾದು ಸಿಂಗಾರದ ಹೆಬ್ಬಾಗಿಲು ಹಾಗೂ ರಾಮಚಂದ್ರ ದೇವಾಲಯಗ ಳನ್ನು ಸೇರಿಸುವಂತೆ ರಚಿತವಾಗಿರ ಬಹುದಾದ ಬಜಾರಿನ ಬಗೆಗೆ ಹೆಚ್ಚಿನ ಮಾಹಿತಿ ದೊರೆಯಲಿಲ್ಲ. ಇದರಿಂದ ಇನ್ನೊಂದು ವಾದಕ್ಕೆ ಪುಷ್ಟಿ ದೊರೆಯು ತ್ತದೆ. ಜೈನದೇವಾಲಯ ಸಮುಚ್ಚಯ ಅಂತಃಪುರಕ್ಕೆ ಸಮೀಪದಲ್ಲಿರುವುದ ರಿಂದ ಅನಪೇಕ್ಷಿತ ಜನಜಂಗುಳಿ, ಗಲಭೆಯನ್ನು ತಪ್ಪಿಸಲು ಸಿಂಗಾರದ ಹೆಬ್ಬಾಗಿಲಿನಿಂದ ಆರಂಭವಾಗುವ ಮುಖ್ಯರಸ್ತೆ, ಜೈನದೇವಾಲಯದ ಹತ್ತಿರದ ನಾಲ್ಕನೆಯ ದೇವಾಲಯ ವಾದ ವಿಷ್ಣುದೇವಾಲಯದ ಬಳಿ ಕವ ಲೊಡೆದು, ಅವುಗಳಲ್ಲಿ ಎಡಗಡೆಯ ರಸ್ತೆ ಜೈನದೇವಾಲಯಗಳು, ಮಾಧವರಾಯನ ಗುಡಿ ಹಾಗೂ ಅದರ ಪಶ್ಚಿಮಕ್ಕಿರುವ ಕಟ್ಟಡಗಳ ಅವಶೇಷಗಳನ್ನು ಸುತ್ತುವರೆದು ಪೂರ್ವದಿಕ್ಕಿ ನಿಂದ ರಾಮಚಂದ್ರದೇವಾಲಯವನ್ನು ಸೇರುವಂತೆಯೂ ಬಲಭಾಗದ ರಸ್ತೆ ಗಜಶಾಲೆ, ಅಂಗರಕ್ಷಕರ ವಾಸಗೃಹ, ಅಂತಃಪುರ ಮುಂತಾದ ಕಟ್ಟಡಗಳನ್ನು ಬಳಸಿಕೊಂಡು ಉತ್ತರದಿಕ್ಕಿ ನಿಂದ ಅದೇ ದೇವಾಲಯವನ್ನು ಸೇರುವಂತೆಯೂ ವಿನ್ಯಾಸಗೊಂಡಿರಬೇಕು. ಸಹಜವಾಗಿ ಬಲಭಾಗದ ರಸ್ತೆ ಪ್ರತಿಷ್ಠಿತರು ಹಾಗೂ ಪರಿಚಾರಕರಿಗಾಗಿ ಇದ್ದು ಸಾರ್ವಜನಿಕರಿಗೆ ಮುಕ್ತವಾಗಿರಲಿಲ್ಲ.

ಇದಲ್ಲದೆ ಪಾನ್‌ಸುಪಾರಿ ಬಜಾರಿನ ಹೆಸರು ಅರ್ಥಪೂರ್ಣವಾಗುವಂತೆ ಇಲ್ಲಿಯ ಉತ್ಖನನದಲ್ಲಿ ಬೇಯಿಸಿದ ಗೋಟು ಅಡಕೆಯ ಹೋಳುಗಳು ಸಾಕಷ್ಟು ಪ್ರಮಾಣದಲ್ಲಿ ದೊರಕಿದವು. ಪಾನ್‌ಸುಪಾರಿ ಬಜಾರಿನ ಇನ್ನೊಂದು ತುದಿಯಲ್ಲಿ, ರಾಮಚಂದ್ರ ದೇವಾಲಯದ ಈಶಾನ್ಯದಲ್ಲಿರುವ ಸಿಂಗಾರದ ಹೆಬ್ಬಾಗಿಲು ವಿಜಯನಗರದ ಮುಖ್ಯ ಅಲಂಕೃತ ಪ್ರವೇಶದ್ವಾರ ಗಳಲ್ಲಿ ಒಂದು. ಹೆಬ್ಬಾಗಿಲಿನ ಬಳಿ, ಕೋಟೆಗೋಡೆಯ ಒಳಭಾಗಕ್ಕೆ ಹೊಂದಿಕೊಂಡಂತೆ ರಾಜಮಾರ್ಗಕ್ಕೆ ಅಭಿಮುಖವಾದ ವಿಸ್ತಾರವಾದ ಒಂದು ಕಟ್ಟಡಾವಶೇಷ ಬೆಳಕಿಗೆ ಬಂದಿದೆ. ಎತ್ತರವಾದ ಸರಳ ಅಧಿಷ್ಠಾನದ ಮೇಲೆ ಕಟ್ಟಿದ ಈ ವಿಶಾಲವಾದ ಆಯತಾಕಾರದ ಹಜಾರದಂತಹ ಕಟ್ಟಡದ ನಯವಾದ ಗಾರೆಯ ನೆಲಹಾಸು ಮೂರು ಹಂತಗಳಲ್ಲಿದೆ. ತೀರ ಕೆಳಗಣ ಹಂತವು ಪೂರ್ವದಲ್ಲಿದ್ದು ಎತ್ತರದ ಹಂತವು ಪಶ್ಚಿಮಕ್ಕಿದೆ. ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗಲು ಹಜಾರದ ಎರಡೂ ಬದಿಗೆ ಮೆಟ್ಟಿಲುಗಳಿವೆ. ಅಲ್ಲಲ್ಲಿ ಸಮಾನಾಂತರಗಳಲ್ಲಿ ಕಂಬಪೀಠಗಳಿವೆ. ಈ ಕಟ್ಟಡದ ಆಗ್ನೇಯಕ್ಕೆ ಮೂರು ಕೊಠಡಿಗಳ ಅವಶೇಷಗಳಿವೆ. ಮುಖ್ಯ ರಾಜಮಾರ್ಗದಲ್ಲಿರುವ ಈ ಹೆಬ್ಬಾಗಿಲಿನಿಂದ ರಾಜಧಾನಿಯನ್ನು ಪ್ರವೇಶಿಸುವ ಜನ ಹಾಗೂ ಸರಕುಗಳನ್ನು ಭದ್ರತೆ ಮತ್ತು ಕರಸಂಗ್ರಹಣೆ ಮಾಡುವ ದೃಷ್ಟಿಯಿಂದ ತಪಾಸಣೆ ನಡೆಸಲು ನಿಯುಕ್ತನಾಗಿದ್ದ ಅಧಿಕಾರಿಯ ವಸತಿ ಹಾಗೂ ಅವನ ಆಡಳಿತ ಕಾರ್ಯಾಲಯವಾಗಿ ಬಹುಶಃ ಇಂತಹ ಒಂದು ಏರ್ಪಾಡನ್ನು ಮಾಡಿದ್ದರೆಂದು ಊಹಿಸಲು ಈ ಅವಶೇಷಗಳು ಮುಖ್ಯ ಆಧಾರವಾಗುತ್ತವೆ.

ಜೊತೆಗೆ ಮಣ್ಣಿನಲ್ಲಿ ಮುಚ್ಚಿಹೋಗಿದ್ದ ಹೆಬ್ಬಾಗಿಲು, ಅದರ ದಕ್ಷಿಣಕ್ಕಿರುವ ಹನುಮಂತ ಗುಡಿ, ಪೂರ್ವಕ್ಕಿರುವ ಗಣೇಶಗುಡಿ ಮತ್ತು ವಾಯವ್ಯಕ್ಕಿರುವ ಇನ್ನೊಂದು ಸಣ್ಣ ದೇವಾಲಯ ಇವುಗಳ ಅಲಂಕೃತ ಅಧಿಷ್ಠಾನ ಮತ್ತು ಗೋಡೆಗಳ ಭಾಗಗಳನ್ನು ಅನಾವರಣಗೊಳಿಸಿದೆ. ಜೀರ್ಣಾವಸ್ಥೆಯಲ್ಲಿದ್ದ ಈ ಅವಶೇಷಗಳನ್ನು ಸಂರಕ್ಷಣೆ ಮಾಡಲಾಗಿದೆ.

ಬಜಾರುಗಳು: ವಿಶಿಷ್ಟರೀತಿಯಲ್ಲಿ ಯೋಜಿಸಿ,ರೂಪಿಸಿದ ಇಲ್ಲಿಯ ವಿಶಾಲ ರಾಜಮಾರ್ಗ ಮತ್ತು ದೇವಾಲಯಗಳ ಮುಂದಣ ಬಜಾರುಗಳು ಈ ರಾಜಧಾನಿಯ ನಗರವಿನ್ಯಾಸ ಪ್ರಸಿದ್ಧಿಗೆ ಬರಲು ಕಾರಣವಾದ ಕೆಲವು ವಿಶೇಷಲಕ್ಷಣಗಳಲ್ಲಿ ಒಂದು. ಇಲ್ಲಿಗೆ ಆಗಮಿಸಿದ್ದ ವಿದೇಶೀ ಪ್ರವಾಸಿಗರು ಸಹ ಅಂದಿನ ಪ್ರಮುಖ ಬಜಾರುಗಳ ವೈಭವದ ಚಿತ್ರಣವನ್ನು ನೀಡಿದ್ದಾರೆ. ಈ ಬಜಾರುಗಳಲ್ಲಿ ವಿವಿಧ ಉದ್ಯೋಗ, ಕುಶಲ ಕರ್ಮಗಳಿಗೆ ಸಂಬಂಧಿಸಿದಂತೆ ನಾನಾವರ್ಗದ ವರ್ತಕರು ಅತ್ಯುತ್ತಮ ಸರಕುಗಳಿರುವ ತಮ್ಮ ಅಂಗಡಿ, ಮಳಿಗೆಗಳನ್ನು ಹೊಂದಿದ್ದರಲ್ಲದೆ, ವಜ್ರಾಭರಣಗಳ ವ್ಯಾಪಾರಿಗಳು ಮುತ್ತು, ರತ್ನ, ವೈಡೂರ್ಯಗಳನ್ನು ಮುಕ್ತವಾಗಿ ವ್ಯಾಪಾರ ಮಾಡುತ್ತಿದ್ದರು.

ಹಂಪಿಯ ಪ್ರಸಿದ್ಧ ಬಜಾರುಗಳಾದ ವಿರೂಪಾಕ್ಷ ಬಜಾರ್, ವಿಠಲಬಜಾರ್, ಕೃಷ್ಣಬಜಾರ್, ಪೆದ್ದಂಗಡಿವೀಧಿ ಮತ್ತು ಪಾನ್‌ಸುಪಾರಿಬಜಾರ್‌ಗಳು ಎರಡೂ ಬದಿಯ ಹಲವಂತಸ್ತಿನ ಮಂಡಪಗಳೂ ಸೇರಿದಂತೆ ಬಹಳಷ್ಟು ಶಿಥಿಲವಾಗಿ, ಮಣ್ಣಿನೊಳಗೆ ಮುಚ್ಚಿಹೋಗಿದ್ದವು. ಈ ಮಾರ್ಗಗಳ ವಿನ್ಯಾಸ, ನಿರ್ಮಾಣಪದ್ಧತಿ ಮೊದಲಾದ ಅಂಶಗಳ ಬಗೆಗೆ ಹೆಚ್ಚಿನ ಮಾಹಿತಿ ದೊರಕಿಸಿಕೊಳ್ಳುವುದರ ಸಲುವಾಗಿ ಮತ್ತು ಕೆಲವಾದರೂ ಪ್ರಾಚೀನ ಮಾರ್ಗಗಳನ್ನು ಮೊದಲಿನಸ್ಥಿತಿಯಲ್ಲಿಟ್ಟು ಸಂರಕ್ಷಿಸುವ ಸಲುವಾಗಿ ಈ ಮುಖ್ಯ ಬಜಾರುಗಳಲ್ಲಿ ಉತ್ಖನನ ನಡೆಸಲಾಯಿತು.

ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಸು.1.7ಮೀ ಎತ್ತರದವರೆಗೆ ಶೇಖರವಾಗಿದ್ದ ಮಣ್ಣು ಮತ್ತಿತರ ವಸ್ತುಗಳನ್ನು ತೆಗೆದುಹಾಕಿದಾಗ, ಮುಚ್ಚಿಹೋಗಿದ್ದ ಮಂಟಪಗಳ ಅಧಿಷ್ಠಾನ, ಮೆಟ್ಟಿಲು ಮತ್ತಿತರ ಭಾಗಗಳು ಬೆಳಕಿಗೆ ಬಂದವು. ಮಂಟಪಗಳ ನಡುವಣ ಸ್ಥಳದಲ್ಲಿ ನಡೆದ ಉತ್ಖನನದಿಂದ ಈ ರಸ್ತೆಗಳನ್ನು ಕಣಶಿಲೆಯ ಚಪ್ಪಡಿಗಳನ್ನು–ಕೆಲವೊಮ್ಮೆ ನಯಗೊಳಿಸಿದ್ದು–ಹಾಸಿ ಸಿದ್ಧಪಡಿಸಿರುವುದು ಕಂಡುಬಂದಿದೆ.

ವಿಠಲ, ತಿರುವೆಂಗಳನಾಥ (ಅಚ್ಯುತ), ಪೆದ್ದಂಗಡಿವೀಧಿ ಹಾಗೂ ಕೃಷ್ಣಬಜಾರುಗಳಲ್ಲಿ ಬೆಳಕಿಗೆ ಬಂದಿರುವ ಇಂತಹ ಹಾಸುಗಲ್ಲು ರಸ್ತೆಗಳು ಪಾನ್‌ಸುಪಾರಿ ಬಜಾರಿನಲ್ಲಿ ಕಂಡುಬಂದಿಲ್ಲ. ಆದರೆ ಸಾಕಷ್ಟು ಪ್ರಮಾಣದಲ್ಲಿ ದೊರೆತಿರುವ ಬೇಯಿಸಿದ ಗೋಟಡಕೆಯ ಹೋಳುಗಳು ಈ ರಸ್ತೆಯ ಹೆಸರು ಅನ್ವರ್ಥವಾಗುವಂತೆ (ಕ್ರಮುಕಪರ್ಣಾಪಣ ವೀಧಿ) ಇಲ್ಲಿ ನಡೆಯುತ್ತಿದ್ದ ಅಡಕೆ–ವೀಳೆಯದೆಲೆಯ ವ್ಯಾಪಾರವನ್ನು ಸಮರ್ಥಿಸುತ್ತವೆ.

ಜೊತೆಗೆ 350 ತಾಮ್ರದ ನಾಣ್ಯಗಳ ಸಮೂಹ ಹಾಗೂ ವಿಠಲ ಬಜಾರದಲ್ಲಿ ದೊರೆತ ಬೋಗುಣಿಯಾಕಾರದ ಮುಚ್ಚಳದಿಂದ ಕೂಡಿದ ತಾಮ್ರದ ಪಾತ್ರೆಯೊಂದರಲ್ಲಿ ಭದ್ರಪಡಿಸಲಾಗಿದ್ದ, 218 ರಾಶಿಪಣಗಳ (ಸಣ್ಣ ಗಾತ್ರದ ಚಿನ್ನದ ನಾಣ್ಯ) ಸಮೂಹವಿದ್ದು ಇವು ಈ ಪ್ರಸಿದ್ಧ ಬಜಾರುಗಳಲ್ಲಿ ದಿನಂಪ್ರತಿ ನಡೆಯುತ್ತಿದ್ದ ವ್ಯಾಪಾರ ವಹಿವಾಟುಗಳ ಒಂದು ಪರಿಚಯ ನೀಡುತ್ತವೆ.

**ಪ್ರಾಚ್ಯವಸ್ತುಗಳು:** ಈ ಉತ್ಖನನಗಳಲ್ಲಿ ದೊರೆತ ಪ್ರಾಚ್ಯವಸ್ತುಗಳ ಅಧ್ಯಯನದಿಂದ ವಿಜಯನಗರಕಾಲೀನ ಪ್ರತಿಷ್ಠಿತರ ಹಾಗೂ ಜನಸಾಮಾನ್ಯರ ಶೌರ್ಯ, ಔದಾರ್ಯ, ಧಾರ್ಮಿಕ ಆಚರಣೆಗಳು, ಸೌಂದರ್ಯ ಪ್ರಿಯತೆ ಹಾಗೂ ವಿಲಾಸಮಯ ಜೀವನವಿಧಾನಗಳನ್ನು ಸಾಧಾರವಾಗಿ ಪುನಾರಚಿಸಲು ಸಾಧ್ಯವಾಗುತ್ತದೆ. ಇಂತಹ ಪ್ರಾಚ್ಯ ವಸ್ತುಗಳಲ್ಲಿ ಕಲ್ಲಿನ ಪೂರ್ಣ ಹಾಗೂ ಉಬ್ಬು ಶಿಲ್ಪ, ಸುಟ್ಟ ಮಣ್ಣಿನ ಮತ್ತು ಗಾರೆಯ ಕಲಾವಸ್ತು, ಚಿನ್ನ ಮತ್ತು ತಾಮ್ರದ ನಾಣ್ಯ, ಲೋಹದ ಗೃಹೋಪಯೋಗಿ ಸಲಕರಣೆ, ಶಸ್ತ್ರಾಸ್ತ್ರ, ನಾನಾ ರೀತಿಯ ಆಭರಣ ಮತ್ತು ಮಣ್ಪಾತ್ರೆಗಳು ಸೇರಿವೆ.


ಗಾರೆ ಶಿಲ್ಪಗಳು, ಹಂಪಿ

ಶಾಸನಗಳು: ಉತ್ಖನನದಲ್ಲಿ ಪ್ರಸಕ್ತ ಶಕಾರಂಭ ಕಾಲದಿಂದ ಕೃಷ್ಣದೇವರಾಯನ ಕಾಲದವರೆಗಿನ ಶಾಸನಗಳು ದೊರಕಿವೆ. ಮಹಾನವಮಿದಿಬ್ಬದ ಪಶ್ಚಿಮ ಭಾಗದಲ್ಲಿ ದೊರಕಿದ, 2ನೆಯ ಶತಮಾನದ ಬ್ರಾಹ್ಮಿಲಿಪಿ ಮತ್ತು ಪ್ರಾಕೃತಭಾಷೆಯಲ್ಲಿರುವ, ಸುಣ್ಣದಕಲ್ಲಿನ ಒಂದು ತೃಟಿತ ಫಲಕದ ಮೇಲೆ ಬರೆದ ಶಾಸನ (ಉ)ತ್ತರನ ಮಗ ಮಾಡಿದ ದಾನವನ್ನು ಉಲ್ಲೇಖಿಸುತ್ತದೆ. ರಾಜಸಭಾಂಗಣದ ಪಶ್ಚಿಮದಲ್ಲಿ ಜೋಡಿಸಿದ್ದ ಬುದ್ಧನ ಜೀವನದ ಘಟನೆಗಳ ಚಿತ್ರಣವಿರುವ ಎರಡು ಫಲಕಗಳಲ್ಲಿ, ಚಿತ್ರಣದ ಕೆಳಗೆ ಇದೇ ಕಾಲದ ಬ್ರಾಹ್ಮಿಶಾಸನಗಳು ಕಂಡುಬಂದಿವೆ. ಇವುಗಳ ಜೊತೆಗೆ ಹಂಪಿಯಲ್ಲಿ ಶೋಧಿತವಾದ ನಯವಾದ ಗಾರೆಯಲ್ಲಿ ರೂಪಿಸಿದ ಗಾಂಧಾರ ಶೈಲಿಯ ಬುದ್ಧನ ತಲೆಯ ಗೊಂಬೆಗಳಿಂದ ಹಂಪಿ ಪ್ರದೇಶದಲ್ಲಿ ಪ್ರಸಕ್ತಶಕಾರಂಭದ ವರ್ಷಗಳಲ್ಲಿಯೇ ಸಾಕಷ್ಟು ಜನಸಾಂದ್ರತೆ ಇದ್ದು ನೆರೆಯ ಪ್ರದೇಶಗಳಲ್ಲಿದ್ದಂತೆ ಇಲ್ಲಿಯೂ ಬೌದ್ಧಧರ್ಮ ಪ್ರಚಲಿತವಿತ್ತೆಂದು ತಿಳಿಯುತ್ತದೆ. ಮಹಾನವಮಿದಿಬ್ಬದ ಪಶ್ಚಿಮ ಭಾಗದಲ್ಲಿ ಬೆಳಕಿಗೆ ಬಂದಿರುವ,


ಉತ್ಖನನದಲ್ಲಿ ದೊರೆತ ಆಭರಣಗಳು, ಹಂಪಿ

ಬಳಪದಕಲ್ಲಿನ ಫಲಕದ ಮೇಲೆ ಬರೆದ ಕನ್ನಡಲಿಪಿ, ಭಾಷೆಯ ಶಾಸನದಲ್ಲಿ ಚಾಳುಕ್ಯ ವಿಕ್ರಮಶಕೆಯ ಮೊದಲವರ್ಷ, ನಳಸಂವತ್ಸರದ ಭಾದ್ರಪದ ಬಹುಲ ತ್ರಯೋದಶಿ ಭಾನುವಾರದಂದು (1076) ಕಲ್ಯಾಣಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಮಹಾಪ್ರಧಾನ, ದಂಡನಾಯಕ ಸೋಮೇಶ್ವರಭಟ್ಟೋಪಾಧ್ಯಾಯನು ವೇದಪಾರಂಗತ ವಿದ್ವಾಂಸರಿಬ್ಬರಿಗೆ 80 ಲೊಕ್ಕಿ ಗದ್ಯಾಣಗಳನ್ನು ದಾನಮಾಡಿದ್ದನ್ನು ದಾಖಲಿಸಿದೆ. 13ನೆಯ ಶತಮಾನದ ಇನ್ನೊಂದು ಕನ್ನಡ ಲಿಪಿಯ ಶಾಸನ ತೀರ ತೃಟಿತವಾಗಿದೆ. ಈ ಶಾಸನಗಳ ಲಿಪಿಯನ್ನು ಹೋಲುವ ಕಿರುಶಾಸನ / ಸ್ಥಪತಿ ಚಿಹ್ನೆಗಳು ಮಹಾನವಮಿ ದಿಬ್ಬದ ಪಶ್ಚಿಮ ಮುಖಕ್ಕೆ ಹೊದಿಸಿರುವ ಹಸುರುಕಲ್ಲಿನ ಅಲಂಕೃತ ವಾಸ್ತುಭಾಗಗಳ ಮೇಲೂ ಕಂಡುಬಂದಿವೆ. ಇದರಿಂದ ಮಹಾನವಮಿ ದಿಬ್ಬದ ಪರಿಸರದಲ್ಲಿ ಧಾರ್ಮಿಕ ವಾಸ್ತು ಚಟುವಟಿಕೆಗಳು ಕಲ್ಯಾಣಚಾಳುಕ್ಯ–ಹೊಯ್ಸಳ ಕಾಲದಲ್ಲಿಯೇ ಮೊದಲಾಗಿತ್ತೆಂದು ಸೂಚಿತವಾಗುತ್ತದೆ.

ರಾಮಚಂದ್ರ ದೇವಾಲಯದ ಪ್ರಾಕಾರದ ಪಶ್ಚಿಮಕ್ಕಿರುವ ಆವರಣದಲ್ಲಿ ಸಂಗಮರ ಕಾಲದ ಅರಮನೆ ಅವಶೇಷಗಳು ಬೆಳಕಿಗೆ ಬಂದಿವೆ. ಇದರ ಪ್ರಾಕಾರದ ಪರಿಧಿಯೊಳಗೆ ಎರಡು ಶಾಸನಗಳು ದೊರಕಿವೆ. ಇವು ರಾಮಚಂದ್ರ ದೇವಾಲಯದ ಪಶ್ಚಿಮ ಪ್ರಾಕಾರದಾಚೆಗೆ ಸ್ವಲ್ಪ ನೈರುತ್ಯಕ್ಕೆ ಇರುವ ಸಣ್ಣ ಗುಡಿಗಳಲ್ಲಿವೆ. ಮೊದಲನೆಯ ಶಾಸನ ಭುವನೇಶ್ವರಿ ಶಿಲ್ಪದ ಅಲಂಕೃತ ಪೀಠದ ಮುಮ್ಮುಖದಲ್ಲಿದ್ದು ಶ್ರೀ ಹರಿಹರರಾಯನ ಮನೆಯ ಭಾಗದಿ ತಿಪ್ಪ ಒಡೆಯ ಮಾಡಿಸಿದ ಪ್ರತಿಷ್ಠೆ ಎನ್ನುವ 16ನೆಯ ಶತಮಾನದ ಮೊದಲ ದಶಕದ ಕನ್ನಡ ಲಿಪಿಯಲ್ಲಿದೆ. ಇದರಿಂದ ಪ್ರಸ್ತುತ ಭುವನೇಶ್ವರಿ ಶಿಲ್ಪ, ಅದು ಪ್ರತಿಷ್ಠಾಪಿತವಾದ ಗುಡಿ ಎರಡೂ ಬಹುಶಃ ಕೃಷ್ಣದೇವರಾಯನ ಕಾಲದಲ್ಲಿ ತಿಪ್ಪ ಒಡೆಯನೆಂಬಾತ ಮಾಡಿಸಿದನೆಂದು ಸಿದ್ಧವಾಗುತ್ತದೆ. ಅಲ್ಲದೆ ಈ ಗುಡಿ ಇರುವ ಸ್ಥಳ ವೀರ ಹರಿಹರರಾಯನ ಮನೆಯಿದ್ದ ಜಾಗವೆಂದೂ ತಿಳಿಯುತ್ತದೆ. ಇಲ್ಲಿ ದೊರಕಿದ ಎರಡನೆಯ ಶಾಸನ ಮೊದಲು ಹೇಳಿದ ಗುಡಿಯ ಪಕ್ಕದಲ್ಲಿರುವ ಮಂಟಪದ ಕಂಬವೊಂದರ ಮೇಲೆ ಬರೆಯಲಾಗಿದ್ದು ಶ.ವ. 1439 (=1517)ರಲ್ಲಿ ಹಿರಿಯ ಅರಮನೆಯ ಕಮ್ಮಾರ ಪಂಪೋಜನ ಮಗ ತಿಮ್ಮೋಜ ಕಟ್ಟಿಸಿದ ಶಿಲಾಮಂಡಪವನ್ನು ದಾಖಲಿಸಿದೆ. ಇದರಿಂದ ಈ ಆವರಣದೊಳಗಿರುವ ಭವನ ವೀರ ಹರಿಹರರಾಯನ ಅರಮನೆಯಾಗಿತ್ತೆಂದೂ ಅದನ್ನು ಕೃಷ್ಣದೇವರಾಯನ ಕಾಲದಲ್ಲಿ, ಬಹುಶಃ ಗೌರವಪೂರ್ವಕವಾಗಿ ಹಿರಿಯ ಅರಮನೆ ಎಂದು ಕರೆಯುತ್ತಿದ್ದರೆಂದೂ ತಿಳಿಯುತ್ತದೆ. ಉತ್ಖನನದಲ್ಲಿ ಬೆಳಕಿಗೆ ಬಂದ ಅರಮನೆ ಮುಂತಾದ ಸಾಮಾಜಿಕ ಉಪಯೋಗದ ಕಟ್ಟಡಗಳನ್ನು ಕುರಿತು ಪ್ರತ್ಯಕ್ಷ ಉಲ್ಲೇಖವಿರುವ ಶಾಸನಗಳಿಗಾಗಿ ಇವು ಅತ್ಯಂತ ಮಹತ್ತ್ವದವು. ಅಲ್ಲದೆ ಇದುವರೆಗೆ ಹಂಪಿಯಲ್ಲಿ ಅರಮನೆ ಒಂದನ್ನು ನಿರ್ಣಾಯಕವಾಗಿ ಗುರುತಿಸಲು ಸಹಕರಿಸಿದ ಏಕೈಕ ಪುರಾತತ್ತ್ವದ ಉದಾಹರಣೆಯಾಗಿದೆ.

ಉತ್ಖನನದಲ್ಲಿ ದೊರೆತಿರುವ ಶಿಲಾವಸ್ತುಗಳಲ್ಲಿ ಅಸಂಖ್ಯಾತ ಅಲಂಕೃತ ವಾಸ್ತುಭಾಗಗಳು ಮತ್ತು ಶಿಲ್ಪಗಳು ಮುಖ್ಯವಾದವು. ಶಿಲ್ಪಗಳು ಬೌದ್ಧ, ಹಿಂದು ಹಾಗೂ ಜೈನ ಸಂಪ್ರದಾಯಗಳಿಗೆ ಸೇರಿದವು. ಬೌದ್ಧ ಶಿಲ್ಪಗಳಲ್ಲಿ ನಯವಾದ ಗಾರೆಯಲ್ಲಿ ರೂಪಿಸಿದ ಗಾಂಧಾರ ಶೈಲಿಯ ಬುದ್ಧನ ಶಿರೋಭಾಗಗಳು, ಬುದ್ಧನ ಜೀವನದ ಮುಖ್ಯ ಘಟನೆ, ಜಾತಕ ಕಥೆ ಮತ್ತು

ಭಕ್ತದಂಪತಿಗಳ ಉಬ್ಬುಶಿಲ್ಪಗಳಿರುವ ಶಾಸನ ಸಹಿತವಾದ ಐದು ಆಯತಾಕಾರದ ಸುಣ್ಣಕಲ್ಲಿನ ಫಲಕಗಳು ಮುಖ್ಯವಾದವು. ಉಳಿದಂತೆ ವಿಷ್ಣು, ಲಕ್ಷ್ಮಿ, ಶಿವ, ವೀರಭದ್ರ, ಮಯೂರಾರೂಢ ಕಾರ್ತಿಕೇಯ, ಷಣ್ಮುಖ, ಗಣೇಶ; ಆದಿನಾಥ, ಪಾರ್ಶ್ವನಾಥ, ಯಕ್ಷ, ಯಕ್ಷಿಯರ ವಿಗ್ರಹಗಳು ಹೆಸರಿಸಬಹುದಾದಂತಹವು. ಜೊತೆಗೆ ಶಿಲಾಬಾಲಿಕೆ, ವರ್ತಕ, ರಾಜಪುರುಷ ಮುಂತಾದ ಶಿಲ್ಪಗಳು; ಅನೇಕ ಸಾಮಾಜಿಕ ಧಾರ್ಮಿಕ ಕಥಾನಕಗಳನ್ನು ಪ್ರತಿಬಿಂಬಿಸುವ ಕಿರುಗಾತ್ರದ ತ್ರಿಕೋನಾಕಾರದ ಶಿಲಾಫಲಕಗಳು ಸಹ ದೊರಕಿವೆ. ಮನೆಗಳಲ್ಲಿ ಪೂಜೆಗೆ ಉಪಯೋಗಿಸಿದ್ದಿರಬಹುದಾದ ವೇಣುಗೋಪಾಲ, ಶಕ್ತಿಗಣೇಶ, ವೀರಭದ್ರ, ಭದ್ರಕಾಳಿ, ಶಿವಲಿಂಗ ಹಾಗೂ ನಂದಿವಿಗ್ರಹ, ಕರಂಡಕಗಳು ಮುಂತಾದ ಕಿರುಗಾತ್ರದ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಶೈಲಿಯ ಆಧಾರದ ಮೇಲೆ ಕೆಲವು ಶಿಲ್ಪಗಳು ಕಲ್ಯಾಣಚಾಳುಕ್ಯ – ಹೊಯ್ಸಳ ಕಾಲಕ್ಕೂ ಉಳಿದವು ಆರಂಭಿಕ ವಿಜಯನಗರ ಕಾಲಕ್ಕೂ ಸೇರುತ್ತವೆ.

ಶಿಲೆಯನ್ನು ಬಿಟ್ಟರೆ ಸುಡಾವೆ ಮಣ್ಣು ಮತ್ತು ಗಾರೆ ಮಧ್ಯಯುಗದಲ್ಲಿ ಹೆಚ್ಚು ಪ್ರಚಲಿತವಿದ್ದ ಶಿಲ್ಪಕಲೆಯ ಅಭಿವ್ಯಕ್ತಿ ಮಾಧ್ಯಮಗಳು. ಈ ಕಾಲದ ದೇವಾಲಯಗಳ ಶಿಖರ ಮತ್ತು ಗೋಪುರಗಳಲ್ಲಿ ಕಂಡುಬರುವ ಪೂರ್ತಿ ಹಾಗೂ ಅರೆದುಂಡುರೂಪದ ಅಲಂಕೃತ ಕೀರ್ತಿಮುಖ, ಲತಾ ವಿನ್ಯಾಸ, ಹೂಗಳು, ರೇಖಾಬಂಧ, ಸ್ತ್ರೀಪುರುಷಮೂರ್ತಿಗಳ ಶಿರೋಭಾಗ ಮತ್ತು ಪ್ರಾಣಿಗಳ ಆಕೃತಿಗಳು ಗಾರೆಯ ವಸ್ತುಗಳಲ್ಲಿ ಗಮನಾರ್ಹ. ಇವುಗಳನ್ನು ಅರಮನೆಯ ಸಭಾಂಗಣ, ವಿತಾನ, ಕಮಾನುಗಳ ಅಂಚು, ಬಾಗಿಲುವಾಡ ಮತ್ತಿತರ ಸ್ಥಳಗಳನ್ನು ಅಲಂಕರಿಸಲು ಉಪಯೋಗಿಸಲಾಗುತ್ತಿತ್ತು. ಬಹುಸಂಖ್ಯೆಯಲ್ಲಿ ದೊರೆತಿರುವ ಸುಟ್ಟಮಣ್ಣಿನ ಕಲಾವಸ್ತುಗಳಲ್ಲಿ ಆಟಿಕೆ, ಮುಖವಾಡ ಮುಂತಾದ ರೀತಿಯಲ್ಲಿ ಉಪಯೋಗವಾಗುತ್ತಿದ್ದ ಮತ್ತು ಜನಸಾಮಾನ್ಯರು ಪೂಜೆಗಾಗಿ ಉಪಯೋಗಿಸುತ್ತಿದ್ದ ದೇವತಾಚಿತ್ರಗಳನ್ನುಳ್ಳ ಫಲಕಗಳು ಮುಖ್ಯವಾದವು. ಇವುಗಳಲ್ಲದೆ ಸುಟ್ಟಮಣ್ಣಿನ ತರಕಾರಿ, ಫಲಪುಷ್ಪಗಳ ಮಾದರಿ, ನಾನಾ ರೀತಿಯ ಹೆಂಚು, ಕೋತಿ, ಬಸವ ಮುಂತಾದ ಪ್ರಾಣಿಗಳು, ಹಲವು ಆಕಾರ ಹಾಗೂ ಗಾತ್ರದ ಮಣಿಗಳೂ ಉತ್ಖನನದಲ್ಲಿ ಬೆಳಕಿಗೆ ಬಂದಿವೆ.

ಗುಹಾಂತರ ದೇವಾಲಯದ ಪರಿಸರದಲ್ಲಿ ನಡೆದ ಉತ್ಖನನದಲ್ಲಿ ದೊರಕಿರುವ ಮಣ್ಣಿನ ಎರಡು ಮುದ್ರೆಗಳು ಗಮನಾರ್ಹವಾದವು. ನಯವಾದ ಮಣ್ಣಿನಿಂದ ರೂಪಿಸಿ ಹದವಾಗಿ ಸುಟ್ಟ 1.70 ಸೆಂಮೀ ಗರಿಷ್ಠ ವ್ಯಾಸ ಮತ್ತು 1.6 ಸೆಂಮೀ ಎತ್ತರವಿರುವ ಶಂಕುವಿನಾಕಾರದ ಈ ಮುದ್ರೆಗಳು ವಿಧ್ವಂಸಕ ಕೃತ್ಯದ ಫಲವಾಗಿ ಅಗ್ನಿ ಅನಾಹುತದಿಂದ ಮತ್ತಷ್ಟು ಸುಟ್ಟು ಕಪ್ಪಾಗಿದೆ. ಈ ಮುದ್ರೆಗಳ ವೃತ್ತಾಕಾರದ ಮೇಲ್ಮೈಯನ್ನು ಆ ಕಾಲದ ನಾಣ್ಯಗಳ ಮೇಲಿರುವಂತೆ ಮೂರು ಸಾಲುಗಳಾಗಿ ವಿಭಜಿಸಿದೆ. ಮೇಲಿನ ಸಾಲಿನಲ್ಲಿ ತುದಿಯನ್ನು ನೆಲಕ್ಕೂರಿದ ಹಿಡಿಯುಳ್ಳ ಖಡ್ಗ, ಅದರ ಎಡಬಲಗಳಲ್ಲಿ ಬಹಳಷ್ಟು ಸವೆದು ಹೋಗಿರುವ ಬಾಲಚಂದ್ರ ಮತ್ತು ಸೂರ್ಯರ ಗುರುತುಗಳಿವೆ. ಕೆಳಗಿನ ಎರಡು ಸಾಲುಗಳಲ್ಲಿ ಸಾಕಷ್ಟು ಸವಕಲಾಗಿರುವ ನಂದಿನಾಗರಿ ಲಿಪಿಯ (ಶ್ರೀ) ವಿರೂ(ಪಾ)ಕ್ಷ ಎಂಬ ಬರೆಹವಿದೆ. ಶ್ರೀ ವಿರೂಪಾಕ್ಷ ಎನ್ನುವುದು ವಿಜಯನಗರ ಕಾಲದ ರಾಜರ ತಾಮ್ರ ಹಾಗೂ ಶಿಲಾಶಾಸನಗಳ ಕೆಳಗೆ ಬರೆಯಲಾಗುತ್ತಿದ್ದ ಅಧಿಕೃತ ರಾಜಾಂಕಿತ. ಈ ಬರೆಹವನ್ನು ರಾಜಲಾಂಛನಗಳ ಜೊತೆಯಲ್ಲಿ ಬಳಸಿ ಬಹುಶಃ ದೈನಂದಿನ ವ್ಯವಹಾರ ಪತ್ರಾದಿಗಳಲ್ಲಿಯೂ ಉಪಯೋಗಿಸುತ್ತಿದ್ದರೆಂದು ಇದರಿಂದ ತಿಳಿಯುತ್ತದೆ. ಈ ಮುದ್ರೆಗಳನ್ನು ಮರ ಅಥವಾ ಲೋಹದ ಹಿಡಿಕೆಗೆ ಸಿಕ್ಕಿಸಿ, ಮುಖ್ಯದ್ವಾರಗಳಲ್ಲಿ ಆಗಂತುಕರನ್ನು ತಪಾಸಿಸಿದ ಅನಂತರ ಅಧಿಕೃತ ರಹದಾರಿ ನೀಡಿ ಒಳಗೆ ಬಿಡಲು ವಿಶೇಷವಾಗಿ ಬಳಸುತ್ತಿದ್ದರೆಂದು ಕಾಣುತ್ತದೆ.

ಉತ್ಖನನದಲ್ಲಿ ಮೇಲೆ ಹೇಳಿದ ನಾಣ್ಯಗಳೇ ಅಲ್ಲದೆ ವಿವಿಧ ರೀತಿಯ ಸ್ವರ್ಣಾಭರಣಗಳೂ ದೊರಕಿದ್ದು, ಅವುಗಳಲ್ಲಿ ಲಕ್ಷ್ಮಿಯ ಚಿತ್ರಣವಿರುವ ಮಂಗಲಸೂತ್ರ, ಕಿರುಕಲಶ, ಕರ್ಣಾಭರಣಗಳು, ಬಳೆ, ರತ್ನಖಚಿತ ಉಂಗುರ, ಬಹುಶಃ ಪೂಜೆಗೊಳಗಾಗಿದ್ದ ಆಮೆಯ (ಕೂರ್ಮಾವತಾರ?) ಉಬ್ಬುಚಿತ್ರವಿರುವ ಫಲಕ ಮತ್ತು ಮೇಲುಡುಪಿನ ಒಂದು ಗುಂಡಿ ಮುಖ್ಯವಾದುವು. ಪದಕ, ಕಂಕಣ, ಕೇಯೂರ, ಕರ್ಣಾಭರಣಗಳು, ಅಪರೂಪದ ಕಲಾತ್ಮಕ ಕುಸುರಿ ಕೆಲಸದ ಎರಡೂ ಬದಿಗಳಲ್ಲಿ ಲಕ್ಷ್ಮಿಯ ಚಿತ್ರಣವಿರುವ ಕರ್ಣಪದಕಗಳು, ಪ್ರಶಸ್ತ ಶಿಲೆಯ ಮಣಿಗಳನ್ನು ಕೂರಿಸಿದ ಭ್ರಮರರೂಪದ ವಕ್ಷಹಾರದ ಪದಕ ಮತ್ತು ಮೋಹನಮಾಲೆ ರೀತಿಯ ಸ್ತನಹಾರಗಳ ನಿಧಿ ಇತ್ತೀಚೆಗೆ ದೊರಕಿದೆ. ಲೋಹದ ಇತರ ವಸ್ತುಗಳಾದ ಧಾರ್ಮಿಕ ಉಪಯೋಗದ ಹಿತ್ತಾಳೆಯ ಮುದ್ರೆ, ತಾಮ್ರದ ಪಾತ್ರೆ, ಉಂಗುರ, ಕಲಶ, ಪಾನಪಾತ್ರೆ, ಪೂಜಾಸಲಕರಣೆ; ಕಬ್ಬಿಣದ ಯುದ್ಧೋಪಯೋಗಿ ಶಸ್ತ್ರಾಸ್ತ್ರಗಳಾದ ಖಡ್ಗ, ಬಾಣದ ಮೊನೆಗಳು, ಕಬ್ಬಿಣದ ಸಣ್ಣಸಣ್ಣ ಉಂಗುರಗಳನ್ನು ತೆಳುಪಟ್ಟಿಕೆಗಳಿಗೆ ಬೆಸೆದು ತಯಾರಿಸಿದ ಯುದ್ಧ ಕವಚ, ಚತುಷ್ಕೋನದ ಮುಳ್ಳು, ಮಧ್ಯಮ ಗಾತ್ರದ ಫಿರಂಗಿ; ಗೃಹೋಪಯೋಗಿ ಸಲಕರಣೆಗಳಾದ ಕುಡುಗೋಲು, ಸುತ್ತಿಗೆ; ಭಾವಣಿ, ತೊಲೆ, ಉಯ್ಯಾಲೆ, ಬಾಗಿಲು ಮುಂತಾದ ಕಡೆ ಉಪಯೋಗಿಸಿದ್ದ ಹಲವು ಗಾತ್ರ, ಆಕಾರಗಳ ಕೀಲು, ಅಲಂಕಾರದ ಹಿಡಿಕೆ ಮತ್ತು ಮೊಳೆಗಳು ಸಹ ದೊರಕಿವೆ.

ಉತ್ಖನನದಲ್ಲಿ ಬೆಳಕಿಗೆ ಬಂದಿರುವ ಅನೇಕ ರೀತಿಯ ಬಂಧ, ವರ್ಣ ಹಾಗೂ ಗಾತ್ರಗಳಲ್ಲಿರುವ ಮಧ್ಯಯುಗೀನ ಮಣ್ಪಾತ್ರೆಗಳು ವಿಜಯನಗರ ಕಾಲದಲ್ಲಿ ಬಳಕೆಯಲ್ಲಿದ್ದ ಗೃಹೋಪಯೋಗಿ ಸಲಕರಣೆಗಳ ಬಗೆಗೆ ಹೆಚ್ಚಿನ ಮಾಹಿತಿ ನೀಡುವುದಲ್ಲದೆ ಅಂದು ಪ್ರಚಲಿತವಿದ್ದ ಕೆಲವು ವಿಶಿಷ್ಟ ಸಾಮಾಜಿಕ, ಧಾರ್ಮಿಕ ಪದ್ಧತಿಗಳ ಬಗೆಗೂ ಬೆಳಕು ಚೆಲ್ಲುತ್ತವೆ. ಹೊಳಪುಳ್ಳ ಕಪ್ಪು ಹಾಗೂ ಕೆಂಪುಬಣ್ಣದ ವಿವಿಧ ಗಾತ್ರದ ಮಡಕೆ, ವಿಶಿಷ್ಟ ರಚನೆಗಳ ಬೋಗುಣಿ, ಅಲಂಕೃತ ಹಿಡಿಯಿರುವ ಮುಚ್ಚಳ, ಪಾನ ಪಾತ್ರೆಗಳು ಮೊದಲಾದವು ಮಣ್ಪಾತ್ರೆಗಳ ಕೆಲವು ಮಾದರಿಗಳು. ಇವುಗಳೊಂದಿಗೆ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ದೊರಕಿರುವ, ವಿಶಿಷ್ಟ ಧಾರ್ಮಿಕ ಕ್ರಿಯೆಗಳಲ್ಲಿ ಬಳಕೆಯಾಗುತ್ತಿದ್ದಂತಹ ಶಿವಲಿಂಗ, ಸೂರ್ಯ, ಚಂದ್ರ ಮುಂತಾದ ಬಿಳಿಯಬಣ್ಣದ ಚಿತ್ರಗಳಿಂದ ಅಲಂಕೃತವಾದ ಕಪ್ಪುಬಣ್ಣದ ಕೊಡಗಳು, ಪ್ರಾಣಿಗಳ ಮುಖದಂತೆ ರೂಪಿಸಿದ ದೇವದ್ರೋಣಿಗಳು ಮತ್ತು ಬಹುನಳಿಕೆಯುಳ್ಳ ಕಿರು ಗಾತ್ರದ ಕುಡಿಕೆಗಳು ಗಮನಾರ್ಹ.

ರಾಜಧಾನಿಯ ಪ್ರತಿಷ್ಠಿತರು ಭೋಜನಕೂಟದ ಸಂದರ್ಭಗಳಲ್ಲಿ ಬಳಸುತ್ತಿದ್ದ ಚೀನದಿಂದ ಆಮದಾದ ಪಿಂಗಾಣಿಯ ಬೋಗುಣಿ ಮತ್ತಿತರ ಪಾತ್ರೆಗಳು ಸಾಕಷ್ಟು ಸಂಖ್ಯೆಯಲ್ಲಿ ದೊರಕಿವೆ. ಮಾನವ, ಪಶು ಪಕ್ಷಿಗಳ ಚಿತ್ರಗಳು; ಲತಾವಿನ್ಯಾಸ, ವಿಶೇಷ ರೀತಿಯ ಸರೋವರ, ಬೆಟ್ಟ, ಅರಮನೆ ಮುಂತಾದ ನೀಲಿ ಬಣ್ಣದ ಚಿತ್ರಗಳಿಂದ ಕಲಾತ್ಮಕವಾಗಿ ಸಿಂಗರಿಸಲಾದ ಈ ಬಿಳಿಯ ಪಿಂಗಾಣಿ ಪಾತ್ರೆಗಳಲ್ಲಿ ಸಮೃದ್ಧಿ, ಏಳಿಗೆ, ಧೀಶಕ್ತಿ, ದೀರ್ಘಾಯುಷ್ಯ ಮುಂತಾದವನ್ನು ಸಂಕೇತಿಸುವ ಚೀನೀಲಿಪಿ ಚಿಹ್ನೆಗಳಿವೆ.

ಶಂಖ, ಕಪ್ಪೆಚಿಪ್ಪುಗಳಿಂದ ಮಾಡಿದ ಉಂಗುರ, ಬಳೆ, ದಂತದ ಕಲಶ, ಮುಚ್ಚಳ, ಬಾಚಣಿಗೆ, ಪಗಡೆಯ ದಾಳ, ಗಾಜು ಮತ್ತು ಅರೆಪ್ರಶಸ್ತಶಿಲೆಗಳ ಹಾಗೂ ಚಿನ್ನದ ವಿವಿಧ ರೀತಿಯ ಮಣಿಗಳು ಸಹ ಉತ್ಖನನದಲ್ಲಿ ದೊರೆತಿದ್ದು, ಆಯಾ ಮಾಧ್ಯಮಗಳಲ್ಲಿ ಕಲಾವಿದರ ನೈಪುಣ್ಯವನ್ನು ಪ್ರದರ್ಶಿಸುವುದರ ಜೊತೆಗೆ ರಾಜಧಾನಿಯ ನಿವಾಸಿಗಳ ಕಲಾಪ್ರಿಯತೆ ಹಾಗೂ ಸೌಂದರ್ಯ ಪ್ರಜ್ಞೆಗೂ ಸಾಕ್ಷಿಯಾಗಿವೆ. (ಎಂ.ವಿ.ವಿ.)

**ಕಲೆ ಮತ್ತು ವಾಸ್ತುಶಿಲ್ಪ:** ವಿಜಯನಗರವನ್ನು ಆಳಿದ ಅರಸರು ಶಿಲ್ಪ, ವಾಸ್ತು, ವರ್ಣಚಿತ್ರ ಮುಂತಾದ ಕಲಾಪ್ರಕಾರಗಳಿಗೆ ಅಮಿತ ಪ್ರೋತ್ಸಾಹ ನೀಡಿದರು. ವಿಜಯನಗರ ವಾಸ್ತುಶೈಲಿಯ ಅಧ್ಯಯನಕ್ಕೆ ಇವರ ಕಾಲದಲ್ಲಿ ರೂಪುಗೊಂಡ ವಿರೂಪಾಕ್ಷ, ವಿಠ್ಠಲ, ರಾಮಚಂದ್ರ, ಅಚ್ಯುತರಾಯ (ತಿರುವೇಂಗಳನಾಥ) ಬಾಲಕೃಷ್ಣ ಮುಂತಾದ ದೇವಾಲಯಗಳು ಅಮೂಲ್ಯ ಸಾಮಗ್ರಿ ಒದಗಿಸುತ್ತವೆ. ಸ್ಥಳೀಯವಾಗಿ ವಿಪುಲವಾಗಿ ದೊರೆಯುವ ಕಣಶಿಲೆಯನ್ನೇ (ಗ್ರಾನೈಟ್) ಮುಖ್ಯ ನಿರ್ಮಾಣ ಸಾಮಗ್ರಿಯಾಗಿ ಬಳಸಿಕೊಂಡಿರುವ ವಿಜಯನಗರ ವಾಸ್ತುಶೈಲಿ ದಕ್ಷಿಣಭಾರತದಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ ಪ್ರಚಲಿತವಿದ್ದ ದ್ರಾವಿಡ ಶೈಲಿಯಿಂದ ಪ್ರಭಾವಿತವೆನ್ನಬಹುದು. ವರ್ಣಚಿತ್ರಕಲೆ ವಿಜಯನಗರ ಕಾಲದಲ್ಲಿ ಹೆಚ್ಚಿನ ಪ್ರೋತ್ಸಾಹ ಪಡೆದು ಬೆಳೆದ ಇನ್ನೊಂದು ಕಲಾಪ್ರಕಾರ.

ಸಂಗಮ ಸೋದರರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಂದರ್ಭದಲ್ಲಿ ಮುಂದೆ ವಿಜಯನಗರ ವಾಸ್ತುಶೈಲಿ ರೂಪುಗೊಳ್ಳಲು ಕಾರಣವಾದ ತಾವು ಹಾಗೂ ತಮ್ಮ ವಂಶದವರು ಕಟ್ಟುವ ದೇವಾಲಯಗಳಿಗೆ ನಿರ್ಮಾಣ ವಸ್ತು ಸಾಮಗ್ರಿಯ ಆಯ್ಕೆಯ ಸಂದಿಗ್ಧತೆ ಎದುರಾಗಿತ್ತು. ವಿಜಯನಗರದರಸರಿಗೂ ಮೊದಲು ಕರ್ನಾಟಕದ ಬಹುಭಾಗವನ್ನಾಳಿದ ಹೊಯ್ಸಳರು ಕಲ್ಯಾಣ ಚಾಳುಕ್ಯ ಕಾಲದ ವಾಸ್ತುಶೈಲಿಯನ್ನು ಪರಿಷ್ಕರಿಸಿ ತಮ್ಮದೇ ವಿಶಿಷ್ಟ ಚಿಹ್ನೆಯಾಗಿ ವಾಸ್ತುಶೈಲಿಯನ್ನು ರೂಪಿಸಿದ್ದರು. ಹೀಗೆ ರೂಪಿಸಲು, ಅವರು ಬಳಸಿದ ಮಾಧ್ಯಮ ಬಳಪದಕಲ್ಲಿನ ವಿಶಿಷ್ಟ ಗುಣಲಕ್ಷಣಗಳೂ ಕಾರಣವಾಗಿದ್ದವು, ಆದರೆ ಸಂಗಮರು ಆ ಕಾಲದ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಗಳ ಅನಿವಾರ್ಯತೆಯ ಒತ್ತಡಕ್ಕೆ ಸಿಲುಕಿ ಕಣಶಿಲೆಯ ಮಾಧ್ಯಮವನ್ನಾಶ್ರಯಿಸಿದರು.

14ನೆಯ ಶತಮಾನಾರಂಭದ ವೇಳೆಗೆ ಹೆಚ್ಚಾಗಿ ಬಳಕೆಯಲ್ಲಿದ್ದ ಶಿಲಾಮಾಧ್ಯಮ ಬಳಪದ ಕಲ್ಲು ಮತ್ತು ಅದೇ ಜಾತಿಯ ಸುಣ್ಣಕಲ್ಲಿನ ಅಂಶವಿರುವ ಶಿಸ್ಟ್ ಕಲ್ಲುಗಳು. ಇವುಗಳ ನಿಕ್ಷೇಪ ಹೆಚ್ಚಾಗಿದ್ದುದು ದಕ್ಷಿಣ ಕರ್ನಾಟಕದ ಒಳನಾಡಿನ ಜಿಲ್ಲೆಗಳಲ್ಲಿ ಮತ್ತು ಉತ್ತರದಲ್ಲಿ ಗುಲ್ಬರ್ಗ ಜಿಲ್ಲೆಯ ಭೀಮ ನದಿಬಯಲಿನಲ್ಲಿ. ಹೊಯ್ಸಳರ ಪ್ರಭುತ್ವದ ಕೇಂದ್ರಪ್ರದೇಶ ದಕ್ಷಿಣ ಒಳನಾಡು ಹಾಗೂ ದಟ್ಟಕಾಡಿನ ಮಲೆನಾಡಿನಿಂದಾವೃತವಾಗಿತ್ತು. ಗುಲ್ಬರ್ಗ ಪರಿಸರ ಬಹಮನಿ ಸುಲ್ತಾನರ ಆಡಳಿತದಲ್ಲಿತ್ತು. ಹೀಗಾಗಿ ದೇವಾಲಯ ಕಟ್ಟಲು ಶತ್ರುಪಾಳೆಯದ ನಡುವಿನಿಂದ ಕಲ್ಲು ತರಬೇಕಾದ ಪರಿಸ್ಥಿತಿ ಒದಗಿತ್ತು. ಇವುಗಳ ಜೊತೆಗೆ ಹೊಸ ರಾಜ್ಯದ ರಕ್ಷಣೆಗೆ ಬೇಕಾದ ಶಸ್ತ್ರಾಸ್ತ್ರ, ಸೇನೆ, ಸುಭದ್ರ ಪೌರ ಹಾಗೂ ರಕ್ಷಣಾವಾಸ್ತುವಿನ ರಚನೆ, ಗಡಿನಾಡಿನ ಭದ್ರತೆ, ಆಕ್ರಮಣಕಾರರು ಪದೇ ಪದೇ ಒಡ್ಡುತ್ತಿದ್ದ ಆತಂಕದ ಕ್ಷಣಗಳನ್ನು ಎದುರಿಸಬೇಕಾದ ಆರ್ಥಿಕ ಒತ್ತಡಗಳಿಂದ ತೀರ ದೂರದಿಂದ ನಿರ್ಮಾಣ ಸಾಮಗ್ರಿಯನ್ನು ತರಿಸುವುದಾಗಲೀ ಆ ಮಾಧ್ಯಮದಲ್ಲಿ ಪರಿಣತರಾದ ಕಲಾವಿದರನ್ನು ಪೋಷಿಸುವುದಾಗಲೀ ಸಾಧ್ಯವಿರಲಿಲ್ಲ. ಆದುದರಿಂದ ಸ್ವಾಭಾವಿಕವಾದ ಸ್ಥಳೀಯ ಹಾಗೂ ವಿಪುಲವಾಗಿ ದೊರೆಯುವ ಕಣಶಿಲೆಯ ವಿಶಿಷ್ಟ ಗುಣಲಕ್ಷಣಗಳಿಂದ ಆಕರ್ಷಿತರಾಗಿ, ಅದನ್ನೇ ಅಗತ್ಯಕ್ಕೆ ತಕ್ಕಂತೆ ಸೂಕ್ತವಾಗಿ ಮಾರ್ಪಡಿಸಿ ಬಳಸಿಕೊಂಡರು. ಇದರಿಂದ ವಿಜಯನಗರ ವಾಸ್ತುಶೈಲಿ ವೈವಿಧ್ಯಮಯವಾಗಿ ರೂಪುಗೊಳ್ಳಲೂ ಸಹಕಾರಿಯಾಯಿತು.

ಕಣಶಿಲೆಯನ್ನು ವಾಸ್ತುನಿರ್ಮಾಣಕ್ಕೆ ಮೂಲಸಾಮಗ್ರಿಯಾಗಿ ಬಳಸಬೇಕೆಂದು ನಿರ್ಧರಿಸಿದ ಅನಂತರ ವಿಜಯನಗರದ ಕಲಾಪೋಷಕರು ಹಾಗೂ ಕಲಾವಿದರು ಈ ಮಾಧ್ಯಮದಲ್ಲಿ ಸೂಕ್ತ ಮಾದರಿಗಳನ್ನು ತಮಿಳು ಪ್ರದೇಶಗಳಲ್ಲಿ ಹುಡುಕಬೇಕಾಯಿತು.

ಏಕೆಂದರೆ ಈ ಶಿಲೆಯಲ್ಲಿ ವಾಸ್ತುನಿರ್ಮಾಣ ಪರಂಪರೆ ಸಾಕಷ್ಟು ಬೆಳೆದು ಹರಳುಗಟ್ಟಿದ್ದುದು ಅಲ್ಲಿಯೇ. ರಾಜಧಾನಿಯಲ್ಲಿ ಕಣಶಿಲೆಯಲ್ಲಿ ಕಟ್ಟಿದ ದೇವಾಲಯಗಳು ಆ ಕಾಲಕ್ಕಾಗಲೇ ಇದ್ದರೂ ಅವೆಲ್ಲ ಸಣ್ಣ ಹಾಗೂ ಮಧ್ಯಮ ಗಾತ್ರದವು. ಕುಮಾರ ಕಂಪಣನು ಸಂಬುವರಾಯನ ಆಡಳಿತವಿದ್ದ ಚೆಂಗಲ್‌ಪೇಟ್, ಉತ್ತರ ಹಾಗೂ ದಕ್ಷಿಣ ಆರ್ಕಾಟ್ ಜಿಲ್ಲೆಗಳನ್ನು ಮತ್ತು ಮದುರೆಯನ್ನು ಆಕ್ರಮಿಸಿ ಗೆದ್ದ ಮೇಲೆ ಆ ಸ್ಥಳಗಳಲ್ಲಿನ ಚೋಳ, ಪಾಂಡ್ಯರ ಕಾಲದ ಕಣಶಿಲೆಯ ದೇವಾಲಯಗಳ ಪರಿಚಯ, ಸಂಪರ್ಕ ಹೆಚ್ಚಾದುವು.

ವಿಜಯನಗರದ ಆರಂಭದ ವೇಳೆಗೆ ರಾಮಾನುಜಾಚಾರ್ಯರು ಸ್ಥಾಪಿಸಿದ ಶ್ರೀವೈಷ್ಣವ ಧರ್ಮ ಕರ್ನಾಟಕದಲ್ಲಿ ಪ್ರಸಿದ್ಧವಾಗಿದ್ದು, ದೇವಾಲಯಗಳಲ್ಲಿ ವೈಖಾನಸಾಗಮೋಕ್ತವಾದ ಆಡಂಬರದ ಧಾರ್ಮಿಕಾಚರಣೆಗಳು ಹೆಚ್ಚಾಗಿದ್ದುವು. ಈ ಉತ್ಸವ ಪ್ರಕ್ರಿಯೆಗಳು ಸಾಂಗವಾಗಿ ನೆರವೇರಲು ಅವಶ್ಯವಾದ ಬೇರೆ ಬೇರೆ ರೀತಿಯ ಮಂಟಪಗಳನ್ನು ಅಳವಡಿಸಿಕೊಂಡು ದೇವಾಲಯಗಳೂ ಹಿರಿದಾಗಿದ್ದವು. ಆದರೆ ಅಕ್ಷಸೂತ್ರದಲ್ಲಿ ಮಧ್ಯಮಗಾತ್ರದ ಕೆಲವೇ ಮಂಟಪಾದಿ ಅಂಗಗಳನ್ನು ಹೊಂದಿದ್ದ ಹೊಯ್ಸಳ ಕಾಲದ, ಅದಕ್ಕೂ ಹಿಂದಿನ ದೇವಾಲಯಗಳು ಈ ಹೊಸ ಪುರೋಹಿತಶಾಹಿ ಧಾರ್ಮಿಕ ಆವಶ್ಯಕತೆಗಳನ್ನು ಪೂರೈಸುವಂತಹವಾಗಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಇಂತಹ ಆಡಂಬರದ ಆಚರಣೆಗಳಿಗೆ ಅನುಗುಣವಾಗಿಯೇ ಕಟ್ಟಿದ್ದ ತಮಿಳು ಪ್ರದೇಶದ ದೇವಾಲಯಗಳು ವಿಜಯನಗರದ ಸ್ಥಪತಿಗಳಿಗೆ ಸಿದ್ಧಮಾದರಿಗಳಾಗಿ, ರಾಜಧಾನಿ ಹಂಪಿ ಹಾಗೂ ಇತರೆಡೆ ಸುಂದರ ದೇವಾಲಯಗಳನ್ನು ಕಟ್ಟಲು ಸ್ಫೂರ್ತಿಯೊದಗಿಸಿದವು.

1346ರ ವೇಳೆಗೆ ಸಂಗಮರು ವಿಜಯನಗರ ಸಿಂಹಾಸನದಲ್ಲಿ ಭದ್ರವಾಗಿ ನೆಲೆಗೊಂಡಿದ್ದರೂ ಅವರ ಆಳ್ವಿಕೆಯ ಮೊದಲ ವರ್ಷಗಳಲ್ಲಿ ಹೆಚ್ಚಾಗಿ ದೇವಾಲಯಗಳು ನಿರ್ಮಾಣವಾಗಲಿಲ್ಲ. ಅವರ ಮೊದಲ ಆದ್ಯತೆ ವಾಸಸ್ಥಾನ, ಪೌರವಾಸ್ತು, ರಕ್ಷಣಾವಾಸ್ತುಗಳ ಕಡೆಗಿದ್ದುದೂ ಇದಕ್ಕೆ ಕಾರಣವಾಗಿರಬೇಕು. ಹಾಗಿದ್ದರೂ ಶಾಸನಗಳಲ್ಲಿ ಕೆಲವು ಹಿಂದಿನ ದೇವಾಲಯಗಳ ಜೀರ್ಣೋದ್ಧಾರ, ಪೂಜಾ ಕೈಂಕರ್ಯಗಳನ್ನು ನೆಲೆಗೊಳಿಸಿದುದು ಮತ್ತು ಕೆಲವನ್ನು ಹೊಸದಾಗಿ ಕಟ್ಟಿಸಿದುದರ ಬಗೆಗೆ ಉಲ್ಲೇಖಗಳಿವೆ. ರಾಜಧಾನಿಯಲ್ಲಿ ಇಮ್ಮಡಿ ಹರಿಹರ ಹಾಗೂ ಇಮ್ಮಡಿ ದೇವರಾಯರ ಕಾಲದ ಶಾಸನಗಳಲ್ಲಿ ಜೈನ ದೇವಾಲಯಗಳನ್ನು ನಿರ್ಮಿಸಿದುದರ ವಿವರಗಳಿವೆ. ಇಮ್ಮಡಿ ಹರಿಹರನ ದಂಡನಾಯಕನಾಗಿದ್ದ ಇರುಗಪ್ಪ 1385ರಲ್ಲಿ 17ನೆಯ ತೀರ್ಥಂಕರ ಕುಂಥುನಾಥನ ಪ್ರತಿಷ್ಠಾಪನೆಗಾಗಿ ಜೈನ ಬಸದಿಯನ್ನು ಕಟ್ಟಿಸಿದ. ಕರ್ನಾಟಕದಲ್ಲಿ ಈ ತೀರ್ಥಂಕರನಿಗೆ ಕಟ್ಟಿದ ಪ್ರತ್ಯೇಕ ಬಸದಿ ಇದೊಂದೇ. ಇಮ್ಮಡಿದೇವರಾಯನ ಆದೇಶದ ಮೇರೆಗೆ 1426ರಲ್ಲಿ, 23ನೆಯ ತೀರ್ಥಂಕರ ಪಾರ್ಶ್ವನಾಥನಿಗಾಗಿ ಪಾನ್‌ಸುಪಾರಿ ಬಜಾರಿನಲ್ಲಿ ದೇವಾಲಯವನ್ನು ಕಟ್ಟಲಾಯಿತು. ಇದು ಈಗ ಸಾಕಷ್ಟು ಜೀರ್ಣಸ್ಥಿತಿಯಲ್ಲಿದೆ. ಮುಂದೆ ತುಳುವ ವಂಶದ ಅರಸರ ಕಾಲದಲ್ಲಿ ರಾಜಧಾನಿಯಾದ್ಯಂತ ಪರಿಧಿಯ ಹೊಸ ಹೊಸ ಉಪನಗರಗಳಲ್ಲಿಯೂ ಅನೇಕ ಭವ್ಯ ಮಂದಿರಗಳನ್ನು ನಿರ್ಮಿಸಲಾಯಿತು. ಜೊತೆಗೆ ಆ ಕಾಲಕ್ಕಾಗಲೇ ಇದ್ದ ಸರಳ ದೇವಾಲಯಗಳಿಗೆ ಹೊಸ ಹೊಸ ಮಂಟಪಗಳನ್ನು ಸೇರಿಸಿ ವಿಸ್ತರಿಸಲಾಯಿತು. ವಿರೂಪಾಕ್ಷ, ಪ್ರಸನ್ನ ವಿರೂಪಾಕ್ಷ, ವಿಠ್ಠಲ, ಬಾಲಕೃಷ್ಣ (ಹಜಾರ), ರಾಮಚಂದ್ರ, ಅಚ್ಯುತರಾಯ, ಗಣೇಶ, ಚಂದ್ರಶೇಖರ, ಮಾಲ್ಯವಂತರಘುನಾಥ, ಉದ್ದಾನ ವೀರಭದ್ರ ಅನಂತಶಯನ ಮುಂತಾದ ಮುಖ್ಯ ಭವ್ಯ ದೇವಾಲಯಗಳು, ಇವುಗಳ ಪರಿಸರದಲ್ಲಿ ಕಟ್ಟಿರುವ ಇನ್ನಿತರ ಮಂದಿರಗಳು, ಉಪಮಂದಿರಗಳು ವಿಜಯನಗರ ವಾಸ್ತು ಮತ್ತು ಶಿಲ್ಪ ಶೈಲಿಗಳನ್ನು ಸವಿವರವಾಗಿ ಪರಿಚಯ ಮಾಡಿಕೊಡುತ್ತವೆ. ವಿಜಯನಗರ ವಾಸ್ತುಶೈಲಿಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಆ ಕಾಲದಲ್ಲಿ ನಿರ್ಮಿತವಾದ ಧಾರ್ಮಿಕ ಕಟ್ಟಡಗಳ ಜೊತೆಗೆ ಪೌರ ಅಥವಾ ನಾಗರಿಕವಾಸ್ತು ಹಾಗೂ ರಕ್ಷಣಾವಾಸ್ತುವಿನ ಪರಿಶೀಲನೆಯೂ ಅವಶ್ಯಕವಾಗುತ್ತದೆ. ಈ ಅಂಶವನ್ನು ಪ್ರಸ್ತುತ ಲೇಖನದಲ್ಲಿ ಸಂಗ್ರಹವಾಗಿ ನಿರೂಪಿಸಲಾಗಿದೆ.

**ಧಾರ್ಮಿಕವಾಸ್ತು–ಮುಖ್ಯ ಲಕ್ಷಣಗಳು: ತಲ ವಿನ್ಯಾಸ:** ವಿಜಯನಗರದ ಕಾಲಕ್ಕಾಗಲೇ ವಿಶೇಷವಾಗಿ ಬೆಳೆದಿದ್ದ ವೈಖಾನಸಾಗಮೋಕ್ತವಾದ ನಿತ್ಯ ನೈಮಿತ್ತಿಕ ಉತ್ಸವಾಚರಣೆಗಳು, ಅಂಗರಂಗಭೋಗಗಳನ್ನು ಸಾಂಗವಾಗಿ ನೆರವೇರಿಸಲು ಅನುವಾಗುವಂತೆ ವಿವಿಧ ರೀತಿಯ ಮಂಟಪಗಳನ್ನು ಅಳವಡಿಸಿಕೊಂಡು ದೇವಾಲಯದ ತಲವಿನ್ಯಾಸ ಬಹಳ ದೊಡ್ಡದಾಯಿತು. ಹೀಗೆ ಬೆಳೆದ ವಿನ್ಯಾಸದಲ್ಲಿ ಪೂರ್ವ ಪಶ್ಚಿಮವಾದ ಅಕ್ಷಸೂತ್ರದಲ್ಲಿ ಸಾಂಧಾರ ಗರ್ಭಗೃಹ, ಅಂತರಾಳ, ಅರ್ಧಮಂಟಪ, ಮೂರು ಕಡೆಯಿಂದ ಪ್ರವೇಶವಿರುವ ಸಭಾಮಂಟಪ ಅಥವಾ ನವರಂಗ, ಮುಖಮಂಟಪ, ಕಲ್ಯಾಣಮಂಟಪ, ಪರಿವಾರ ಹಾಗೂ ಪರಿಚಾರಕ ದೇವತೆಗಳಿಗಾಗಿ ಕಿರುಮಂದಿರಗಳು, ಇವೆಲ್ಲವನ್ನು ಆವರಿಸಿದಂತೆ ಉನ್ನತ ಗೋಪುರಗಳಿಂದ ಕೂಡಿದ ಪ್ರವೇಶದ್ವಾರಗಳಿರುವ ಎತ್ತರದ ಪ್ರಾಕಾರವಿರುತ್ತದೆ. ಒಳಪರಿಧಿಯಲ್ಲಿ ವಿಶಾಲವಾದ ಕಂಬಸಾಲಿನ ಮಂಟಪವುಳ್ಳ ಪ್ರಾಕಾರಕ್ಕೆ ಪೂರ್ವದಲ್ಲಿ ಮುಖ್ಯದ್ವಾರ, ಜೊತೆಗೆ ಉಳಿದೆರಡು ದಿಕ್ಕುಗಳಲ್ಲೂ ದ್ವಾರಗಳಿರುತ್ತವೆ. ಮೇಲೆ ಹೇಳಿದ ಭಾಗಗಳಲ್ಲದೆ ಮುಖ್ಯಕಟ್ಟಡದ ಅಕ್ಷಸೂತ್ರಕ್ಕೆ ಹೊಂದಿಕೊಂಡಂತೆ ಬಲಿಪೀಠ, ಧ್ವಜಸ್ತಂಭ, ದೀಪಸ್ತಂಭಗಳೂ ಆಚೀಚೆಗೆ ಉಯ್ಯಾಲೆಮಂಟಪ, ವಸಂತಮಂಟಪ, ವಾಹನಮಂಟಪ, ರಂಗಮಂಟಪ, ಕನ್ನಡಿಮಂಟಪ, ಸಂಗೀತಮಂಟಪ ಮುಂತಾದವೂ ಇರಬಹುದು. ಮೊದಲು ಕಟ್ಟುವಾಗಿನ ವಿನ್ಯಾಸದಲ್ಲಿ ಇಲ್ಲದಿದ್ದ ಮಂಟಪಗಳೂ ಕೆಲ ಸಮಯದ ಅನಂತರ ಆವಶ್ಯಕವೆನಿಸಿ ಸೇರ್ಪಡೆಗೊಳ್ಳಬಹುದು. ಉದಾಹರಣೆಗೆ ರಾಮಚಂದ್ರ ದೇವಾಲಯದ ಪ್ರಾಕಾರದೊಳಗೆ 1521ರಲ್ಲಿ ಅಧಿಕಾರಿಯೊಬ್ಬ ಉತ್ಸವ ಮಂಟಪವನ್ನು ಕಟ್ಟಿಸಿದ. ಹೀಗೆ ಪರಿವಾರ ದೇವತೆಗಳಿಗೂ ಪ್ರಾಕಾರದೊಳಗೇ ಸ್ಥಾನಕಲ್ಪಿಸಿ, ದೇವಾಲಯದ ತಲವಿನ್ಯಾಸವನ್ನು ವಿಸ್ತರಿಸುವ ಪದ್ಧತಿ ಪಲ್ಲವ–ಚಳುಕ್ಯರ ಕಾಲಕ್ಕೇ ಪ್ರಾರಂಭವಾಗಿತ್ತು.

**ಗರ್ಭಗೃಹ ಮತ್ತು ನವರಂಗ:** ಬಹುತೇಕ ವಿಜಯನಗರ ಕಾಲದ ಎಲ್ಲ ದೇವಾಲಯಗಳ ಗರ್ಭಗೃಹ, ಚೌಕಾಕಾರದಿಂದ ಕೂಡಿವೆ. ಶಯನಾಸನದಲ್ಲಿರುವ ವಿಷ್ಣುವಿನ ರಂಗನಾಥ, ಶೇಷಶಾಯಿ ಶಿಲ್ಪಗಳನ್ನು ಪ್ರತಿಷ್ಠಾಪಿಸಿದ್ದರೆ, ಸಹಜವಾಗಿ ಪೀಠ, ಗರ್ಭಗೃಹಗಳು ಆಯತಾಕಾರದಲ್ಲಿದ್ದು ಅದಕ್ಕನುಗುಣವಾಗಿ ಮೇಲಣ ಶಿಖರವೂ ಶಾಲ ರೀತಿಯದ್ದಾಗಿರುತ್ತದೆ. ಹೊಸಪೇಟೆಯ ಬಳಿಯಲ್ಲಿರುವ ಕೃಷ್ಣದೇವರಾಯನ ಕಾಲದ ಅನಂತಶಯನ ಗುಡಿ ಇಂತಹ ಶಾಲಶಿಖರವುಳ್ಳ ದೇವಾಲಯ.

ಸಹಸ್ರ ಲಿಂಗ, ಹಂಪಿ

ಗರ್ಭಗೃಹದ ಮುಂದೆ ಅಂತರಾಳ, ನವರಂಗಮಂಟಪವಿರುತ್ತವೆ. ನಾಲ್ಕು ಕಂಬ, ಹನ್ನೆರಡು ಅರೆಗಂಬಗಳಿಂದ ರಚಿತವಾದ ಒಂಬತ್ತು ಅಂಕಣಗಳ ನವರಂಗದ ಮಧ್ಯದಂಕಣದ ನೆಲಹಾಸು ಉಳಿದವುಗಳಿಗಿಂತ ಸ್ವಲ್ಪ ಮೇಲ್ಮಟ್ಟದಲ್ಲಿದ್ದು ವೇದಿಕೆಯಂತೆ ಉಪಯೋಗವಾಗುತ್ತದೆ. ದೊಡ್ಡ ದೇವಾಲಯಗಳಲ್ಲಿ ಗರ್ಭಗೃಹದ ಸುತ್ತ ಇರುವ ಪ್ರದಕ್ಷಿಣಾಪಥ ಒಂದು ಗಮನಾರ್ಹ ಭಾಗ. ಹಂಪಿಯಲ್ಲಿ ಇಂತಹ ಪಥವಿರುವುದು ಕೇವಲ ವಿಠ್ಠಲ, ಬಾಲಕೃಷ್ಣ ಮತ್ತು ತಿರುವೆಂಗಳನಾಥ ದೇವಾಲಯಗಳಲ್ಲಿ. ಪ್ರದಕ್ಷಿಣಾಪಥ ಬಾದಾಮಿಚಲುಕ್ಯ ಕಾಲದ ಮೇಗುತಿ ಗುಡಿ (ಪ್ರ.ಶ.364)ಯಿಂದಲೇ ಪ್ರಾರಂಭವಾದ, ಸಾಂಧಾರ ರೀತಿಯ ದೇವಾಲಯಗಳ ಲಕ್ಷಣ. ಇದು ಸಾಧಾರಣವಾಗಿ ಗರ್ಭಗೃಹ ಅಥವಾ ಅದರ ಮುಂದಿನ ಅಂತರಾಳದ ನೆಲಮಟ್ಟದಲ್ಲಿಯೇ ಇರುತ್ತದೆ. ಈ ಪ್ರದಕ್ಷಿಣಾಪಥ ಗರ್ಭಗೃಹದ ನೆಲಕ್ಕಿಂತ ತೀರ ಕೆಳಮಟ್ಟದಲ್ಲಿರುವುದು ಸು.14ನೆಯ ಶತಮಾನದ ಪ್ರಾರಂಭದಲ್ಲಿ ಕಟ್ಟಿದ ಕುರುಗೋಡಿನ (ಬಳ್ಳಾರಿ ಜಿಲ್ಲೆ) ಹಿಂದುಳಿ ಸಂಗಮೇಶ್ವರ ಗುಡಿಯಿಂದ ಆರಂಭವಾಗಿ ವಿಜಯನಗರ ಕಾಲದುದ್ದಕ್ಕೂ ಕಂಡುಬರುವ ವಿಶೇಷ ಲಕ್ಷಣ. ಬಾಲಕೃಷ್ಣ ಮತ್ತು ವಿಠ್ಠಲ ದೇವಾಲಯಗಳಲ್ಲಿ ಸಾಕಷ್ಟು ವಿಶಾಲವಾದ, ಯಾವುದೇ ಜಾಲಂಧ್ರ ವ್ಯವಸ್ಥೆಯಿಲ್ಲದ, ತೀರಕೆಳಮಟ್ಟದಲ್ಲಿರುವ ಈ ದಾರಿಗೆ ಹೋಗಲು ಕೆಲವಾದರೂ ಮೆಟ್ಟಿಲುಗಳನ್ನು ಇಳಿಯಬೇಕು. ಗರ್ಭಗೃಹದ ಹೊರಗೋಡೆಗಿಂತ

ನಾಗಲಿಂಗೇಶ್ವರ ದೇವಾಲಯ, ಲೇಪಾಕ್ಷಿ

ಭಿನ್ನ ರೀತಿಯ ಅಲಂಕರಣ ವಿನ್ಯಾಸದ ಅಧಿಷ್ಠಾನವಿರುವ ಒಳಗೋಡೆ, ಅದರ ಪರಿಧಿಯುದ್ದಕ್ಕೂ ಸಣ್ಣ ಕಾಲುವೆಯಂತಹ ಕುಳಿ ತೋಡಿರುವುದು ಒಳಗೋಡೆಯ ಭಿತ್ತಿಭಾಗದಲ್ಲಿ ಶಿಲ್ಪಸಹಿತವಾದ ವಿಶೇಷ ಅಲಂಕರಣವಿರುವ ಕೋಷ್ಠ, ಪಂಜರ, ತೋರಣಗಳನ್ನು ರೂಪಿಸಿರುವುದು, ಸಾಕಷ್ಟು

ಎತ್ತರದಲ್ಲಿ ಪೂರ್ತಿ ಆವೃತವಾದ ವಿತಾನ–ಈ ಪ್ರದಕ್ಷಿಣಾಪಥಗಳ ಇನ್ನಿತರ ಕುತೂಹಲಕಾರಿ ಅಂಶಗಳು. ಬಹುಶಃ ದೇವಾಲಯಗಳು ಧಾರ್ಮಿಕ ಉಪಯೋಗದಲ್ಲಿದ್ದಾಗ ದೊಂದಿ, ದೀವಟಿಗೆಗಳನ್ನು ಉಪಯೋಗಿಸಿರಬೇಕು.

ಅಧಿಷ್ಠಾನ: ದೇವಾಲಯದ ಔನ್ನತ್ಯವನ್ನು ಹೆಚ್ಚಿಸಲು ಎತ್ತರದ ಅಲಂಕೃತ ವೇದಿಕೆಯಾಗಿ ಅಧಿಷ್ಠಾನವನ್ನು ರೂಪಿಸುವುದು ಮೊದಲಿನಿಂದ ರೂಢಿಯಾಗಿದೆ. ವಿಜಯನಗರಪೂರ್ವ ಕಾಲದಿಂದಲೂ ಸಾಂಪ್ರದಾಯಿಕವಾಗದ ರೂಢಿಗತವಾಗಿ ಪ್ರಚಲಿತವಿದ್ದ ಐದು ಅಧಿಷ್ಠಾನ ಭಾಗಗಳನ್ನೇ ಹಿಗ್ಗಿಸಿ, ಕುಗ್ಗಿಸಿ, ಬೇರೆ ಬೇರೆ ರೀತಿಯಲ್ಲಿ ಮಿಶ್ರಮಾಡಿ, ಚಿತ್ರ ವಿಚಿತ್ರ ಆದರೂ ಆಕರ್ಷಕ ಅಲಂಕಾರಗಳಿಂದ ಹೊಸ ಹೊಸ ಅಧಿಷ್ಠಾನ ವಿನ್ಯಾಸಗಳನ್ನು ರಚಿಸಿ ವಿಜಯನಗರ ಕಾಲದಲ್ಲಿಯೂ ಬಳಸಲಾಗಿದೆ. ರಾಮಚಂದ್ರ ಹಾಗೂ ವಿಠ್ಠಲ ದೇವಾಲಯಗಳಲ್ಲಿ ಕಾಣುವ ರತ್ನಖಚಿತ ಕಂಕಣದಂತೆ ರೂಪಿತವಾದ ಕುಮುದ ಅಥವಾ ಕುಂಭ ಭಾಗ; ವಿಠ್ಠಲ ದೇವಾಲಯದ ವೇದಿಕೆಯಲ್ಲಿ ಕಂಡುಬರುವ ಕುದುರೆ, ಕುದುರೆ ವ್ಯಾಪಾರಿ, ಆನೆಗಳ ಕಿರು ಶಿಲ್ಪಗಳ ಪಂಕ್ತಿ, ಕೋಲಾಟ ಮತ್ತಿತರ ಜಾನಪದ ಅಂಶಗಳ ಚಿತ್ರಣವಿರುವ ಸಾಲುಗಳು, ಇಡೀ ಅಧಿಷ್ಠಾನದ ಎತ್ತರಕ್ಕೆ ಹೊಂದುವಂತೆ ಅಲ್ಲಲ್ಲಿ ಅಳವಡಿಸಿದ ಶಿಲ್ಪಸಹಿತವಾದ ದೇವಕೋಷ್ಠಗಳು ಮುಂತಾದವು ವಿಜಯನಗರ ದೇವಾಲಯಗಳ ಅಧಿಷ್ಠಾನದ ವಿಶೇಷಾಂಶ ಗಳು. ಜೊತೆಗೆ ಸಾಮಾನ್ಯವಾಗಿ ಬಳಕೆಯಾಗಿರುವ ವಿನ್ಯಾಸಗಳೆಂದರೆ ಬಹುಪಟ್ಟ ಕುಮುದ ಹಾಗೂ ಮೋಹಕ ಬಾಗು ಹೊಂದಿರುವ ಕಪೋತ.

ದೇವಾಲಯವನ್ನು ಎತ್ತರದ ಅಧಿಷ್ಠಾನದ ಮೇಲೆ ಕಟ್ಟಿರುವ, ನೆಲಮಟ್ಟದಿಂದ ಮೇಲಿರುವ ಎಲ್ಲ ಮುಖಮಂಟಪ ಹಾಗೂ ನವರಂಗದ ಬದಿಗಳಲ್ಲಿ, ಬಾಗಿಲುಗಳಿಗೆ ಮೆಟ್ಟಿಲುಗಳಿವೆ. ಈ ಸೋಪಾನ ಪಂಕ್ತಿಯ ಎರಡೂ ಪಕ್ಕಗಳಲ್ಲಿ ಸುಂದರವಾಗಿ ಅಲಂಕರಿಸಿದ ಆನೆ, ಸುರುಳ್‌ಯಾಳಿಗಳ ದೊಡ್ಡ, ಪೂರ್ಣ ಶಿಲ್ಪಗಳಿರುತ್ತವೆ. ಇಂತಹ ಕಟಾಂಜನಗಳ ಉತ್ತಮ ಉದಾಹರಣೆಗಳು ಬಾಲಕೃಷ್ಣ, ವಿಠ್ಠಲ ಹಾಗೂ ವಿರೂಪಾಕ್ಷ ದೇವಾಲಯಗಳಲ್ಲಿವೆ.

ಭಿತ್ತಿ: ಮಧ್ಯಮ ಗಾತ್ರದ ದೇವಾಲಯಗಳು ಹಾಗೂ ಜೈನ ದೇವಾಲಯಗಳ ಭಿತ್ತಿಯ ಹೊರಮೈಯಲ್ಲಿ ಯಾವುದೇ ಅಲಂಕರಣವಿರದು. ಆದರೆ ಬೃಹದ್ದೇವಾಲಯಗಳ ಭಿತ್ತಿಭಾಗ ವನ್ನು ವಾಸ್ತುವಿನ್ಯಾಸ, ಶಿಲ್ಪಗಳಿಂದ ಅಲಂಕರಿಸಲಾಗಿರುತ್ತದೆ. ಬಿಡಿ, ಪೂರ್ಣ ಶಿಲ್ಪಗಳನ್ನು ಕಡೆಯುವಷ್ಟು ಆಳವಾದ ದೇವಕೋಷ್ಠಗಳು, ಅರೆಗಂಬ, ಮೂಲೆ ಅರೆಗಂಬ, ವಿವಿಧ ರೀತಿಯ ತೋರಣಗಳಿಂದ ಕೂಡಿದ ಪಂಜರಗಳು ಹಾಗೂ ದ್ರಾವಿಡ ವಾಸ್ತುಶೈಲಿಯ ವಿಶಿಷ್ಟ ಅಲಂಕರಣಾಂಶವಾದ ಕುಂಭಪಂಜರ ಮುಂತಾದವು ವಿಜಯನಗರ ಕಾಲದ ದೇವಾಲಯದ ಭಿತ್ತಿಯಲ್ಲಿ ಕಾಣದೊರೆಯುತ್ತವೆ. ಸರಳ ಇಲ್ಲವೇ ಉಬ್ಬುಗೆರೆಗಳ ನೆಲ್ಲಿಕಾಯಿ ಯಂತಹ ವಿನ್ಯಾಸದ ಕುಂಭದ ಬಾಯಿಂದ ಮೇಲೇಳುವ ಅರೆಗಂಬದ ತುದಿಯಲ್ಲಿ ಪುಷ್ಪಗುಚ್ಛ ಹಾಗೂ ಬಳ್ಳಿಗಳ ಕೆತ್ತನೆ ಕುಂಭಪಂಜರದ ವೈಶಿಷ್ಟ್ಯ. ಭಾರತೀಯ ಕಲಾಪರಂಪರೆಯಲ್ಲಿ ಘಟ, ಘಟಪಲ್ಲವ, ಕುಂಭಪಂಜರ ಇವೆಲ್ಲ ಮೂಲತಃ ಸಂಪತ್‌ಸಮೃದ್ಧಿ, ಫಲವಂತಿಕೆಗಳನ್ನು ಸಂಕೇತಿಸುವ ಪೂರ್ಣಕಲಶದ ವಿವಿಧ ರೂಪಗಳೇ ಆದರೂ ವಿಜಯನಗರ ಕಾಲಕ್ಕಾಗಲೇ ಇದು ಅಲಂಕರಣ ವಿನ್ಯಾಸದ ಮಾದರಿಗಳಲ್ಲಿ ಒಂದಾಗಿ ಬೆಳೆದಿತ್ತು. ಈ ರೀತಿಯ ಶೈಲೀಯ ಅಲಂಕರಣ ಸಾಮಗ್ರಿಗಳಲ್ಲದೆ, ಕೆಲವೊಮ್ಮೆ ಭಿತ್ತಿಯ ಹೊರಮೈಯಲ್ಲಿ ಮಧ್ಯಮ ಗಾತ್ರದ ನಿರೂಪಣಾ ಶಿಲ್ಪಗಳೂ ಕಂಡುಬರುತ್ತವೆ. ಪುರಾಣ, ಇತಿಹಾಸ ಕಾವ್ಯ ಹಾಗೂ ಜಾನಪದ ಕಥಾನಕಗಳನ್ನು ವಸ್ತುವಾಗಿರಿಸಿಕೊಂಡ ಈ ಶಿಲ್ಪಗಳನ್ನು ಭಾಗವತ ಸಂಪ್ರದಾಯ, ಕೃಷ್ಣ ಲೀಲೆಗಳಿಗೆ ಹೆಚ್ಚು ಒತ್ತು ನೀಡಲಾಗಿರುವುದು ಗಮನಾರ್ಹ ಅಂಶ. ರಾಮಚಂದ್ರ ದೇವಾಲಯದ ರಾಮಾಯಣ ಕಥಾನಕಗಳನ್ನು ನಿರೂಪಿಸುವ ಶಿಲ್ಪ ಪಟ್ಟಿಕೆಗಳು, ವಿರೂಪಾಕ್ಷ ದೇವಾಲಯದಲ್ಲಿ ಕಂಡುಬರುವ ಶಿವನ ಪಂಚವಿಂಶತಿ ಲೀಲೆಗಳ, 63 ಪುರಾತನರಲ್ಲಿ ಆಯ್ದ ಕೆಲವು ಮತ್ತು ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದ ಶಿಲ್ಪಗಳು ಪ್ರಸಿದ್ಧವಾದವು.

ಕಂಬಗಳು: ಹಂಪಿಯ ದೇವಾಲಯಗಳಲ್ಲಿ ಮುಖ್ಯವಾಗಿ ಎರಡು ರೀತಿಯ ಕಂಬಗಳು ಪ್ರಧಾನವಾಗಿ ಕಾಣುತ್ತವೆ. ಕಡಲೆಕಾಳು ಗಣೇಶ ಮುಂತಾದ ಮಂಟಪಸಹಿತವಾದ ಸರಳ ವಿನ್ಯಾಸದ ದೇವಾಲಯಗಳಲ್ಲಿರುವ ಎತ್ತರದ ತೆಳ್ಳನೆಯ, ಚೌಕಾಕಾರದ ಬುಡ ಮತ್ತು 8 ಇಲ್ಲವೇ 16 ಭುಜಗಳ ಬಹುಭುಜಾಕೃತಿಯ ಕಂಬಗಳದು ಒಂದು ರೀತಿ. ಇವುಗಳ ಮೂಲೆಗಳಲ್ಲಿ ನಾಗಬಂಧವಿರುವುದೊಂದು ವಿಶೇಷ. ಅಲ್ಲದೆ ಇಂತಹ ಕಂಬದಲ್ಲಿ ಕನಿಷ್ಠ ಮೂರು ಕಡೆ ಚೌಕಾಕೃತಿಯ ಭಾಗಗಳಿದ್ದು, ಅವುಗಳ ನಾಲ್ಕೂ ಮುಖಗಳಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ವಸ್ತುವನ್ನೊಳಗೊಂಡ ಕಿರುಶಿಲ್ಪಗಳನ್ನು ಬಿಡಿಸಲಾಗಿರುತ್ತದೆ. ಬಹುಜನ ಪ್ರಿಯವಾದ ವಸ್ತುಗಳಲ್ಲಿ ಕೃಷ್ಣನ ಕಾಳಿಂಗಮರ್ದನ, ಗೋಪಿಕಾ ವಸ್ತ್ರಾಪಹರಣ, ಬಾಲಕೃಷ್ಣ ಮುಂತಾದವು. ವಿಷ್ಣುವಿನ ದಶಾವತಾರ, ಹನುಮ–ಗರುಡರು, ಶಿವಲಿಂಗ, ಬೇಡರ ಕಣ್ಣಪ್ಪ, ಮತ್ಸ್ಯೇಂದ್ರನಾಥ (ಮೀನು) ಮತ್ತಿತರ ನಾಥಪಂಥಿ ಮುನಿಗಳು, ಗೊರವರು, ನಾನಾಭಂಗಿಗಳಲ್ಲಿ ಕುಳಿತ ಸಿಂಹ, ನರ್ತಕ–ನರ್ತಕಿಯರು, ವಾದ್ಯಗಾರರು, ಕೋಲಾಟ, ದೊಂಬರಾಟಗಳು ಮುಖ್ಯವಾದವು.

ಎರಡನೆಯ ಮಾದರಿಯ ಪರಿಷ್ಕೃತ ರೀತಿಯ ಕಂಬಗಳು ಭವ್ಯಗಾತ್ರದ, ವಿಶೇಷವಾಗಿ ಅಲಂಕರಿಸಿದ ದೇವಾಲಯಗಳಲ್ಲಿ ಕಂಡುಬರುತ್ತವೆ. ಕಲ್ಪನೆ, ವಿನ್ಯಾಸ, ನಿರ್ವಹಣೆಗಳ ದೃಷ್ಟಿಯಿಂದ ಅದ್ಭುತವಾದ ಈ ಕಂಬಗಳು ಸಂಕೀರ್ಣ ರೀತಿಯವಾಗಿವೆ. ದೊಡ್ಡ ಒಂದೇ ಕಲ್ಲಿನಿಂದ ಮಾಡಿದ ಇಂತಹ ಕಂಬಗಳಲ್ಲಿ ಎರಡು ಭಾಗಗಳನ್ನು ಗುರುತಿಸಬಹುದು. ಮೊದಲನೆ ಯದರಲ್ಲಿ ಸಾಧಾರಣವಾಗಿ ಕಂಡುಬರುವ ಇತರ ವಿವರಗಳ ಜೊತೆಗೆ ಪ್ರಧಾನವಾಗಿರುವ ಪೂರ್ಣಪ್ರಮಾಣದ, ಹಿಂಗಾಲುಗಳ ಮೇಲೆ ನಿಂತ ಯಾಳಿ, ಸವಾರನಿರುವ ಕುದುರೆ, ವಿವಿಧ ವಾದ್ಯನುಡಿಸುವ ವಾದ್ಯಗಾರರು ಮುಂತಾದ ಆಕರ್ಷಕ ಶಿಲ್ಪಗಳಿರುತ್ತವೆ. ಎರಡನೆಯ ಭಾಗದಲ್ಲಿ ಬಿಡಿಬಿಡಿಯಾದ ಕಿರುಗಂಬಗಳ ಗುಂಪುಗಳನ್ನು ಮಾಡಲಾಗಿದೆ. ಇಂತಹ ಪ್ರತಿ ಗುಂಪಿನಲ್ಲಿ 4ರಿಂದ 8 ಕಂಬಗಳಿದ್ದು, ಅವು ತೆಳ್ಳಗೆ ನೀಳವಾಗಿರುವುದರಿಂದ ಮೆಲ್ಲಗೆ ತಟ್ಟಿದಾಗ ಸಂಗೀತದ ಸ್ವರಗಳನ್ನು, ಶೃತಿಮಾಡಿಟ್ಟ ವೀಣೆ, ಮೃದಂಗಗಳ ನಾದವನ್ನು ಹೊಮ್ಮಿಸುತ್ತವೆ. ಆದುದರಿಂದ ಈ ಕಂಬಗಳನ್ನು ಸಂಗೀತದ ಕಂಬಗಳೆಂದೂ, ಮಂಟಪಗಳನ್ನು ಸಂಗೀತ ಮಂಟಪಗಳೆಂದೂ ಕರೆಯುವುದುಂಟು. ಇಂತಹ ಕಂಬಗಳಿರುವ ವಿಠ್ಠಲ ದೇವಾಲಯದ ಮಂಟಪ ವಿಶ್ವಪ್ರಸಿದ್ಧವಾದ್ದು. ಈ ಸಂಕೀರ್ಣ ಕಂಬಗಳ ಮೇಲೆ, ಇಂತಹುದೇ ದೊಡ್ಡ ಕಲ್ಲಿನ, ನಾಲ್ಕು ಬಾಹುಗಳ ಬೋದಿಗೆಯಿದ್ದು ಅದೂ ಸಹ ಬಹು ಅಲಂಕೃತವಾಗಿ ರುತ್ತದೆ. ಈ ರೀತಿಯ ಸಂಕೀರ್ಣ ಕಂಬಗಳು ವಿಜಯನಗರ ಶೈಲಿಯ ವೈಶಿಷ್ಟ್ಯವಾಗಿದ್ದು ಮುಂದೆ ನಾಯಕರ ಕಾಲದಲ್ಲಿ ಇನ್ನಷ್ಟು ವೈವಿಧ್ಯಮಯವಾಗಿ ಬೆಳೆದವು.

**ಕಪೋತ ಮತ್ತು ವಿತಾನ:** ಎರಡು ಸಲ ಕಮನೀಯವಾಗಿ ಬಾಗುವ, ವಿಶೇಷ ಅಲಂಕರಣದ ಕಪೋತ ಈ ಕಾಲದ ದೊಡ್ಡ ದೇವಾಲಯಗಳಲ್ಲಿನ ಇನ್ನೊಂದು ಲಕ್ಷಣ. ಛಾವಣಿಯಿಂದ ಸಾಕಷ್ಟು ಮುಂಚಾಚಿದ ಈ ಕಪೋತದ ಹೊರ ಮೈಯಲ್ಲಿ ಸಣ್ಣ ಫಲಕಗಳ ವಿನ್ಯಾಸವಿರುತ್ತದೆ. ಒಳಭಾಗದಲ್ಲಿ ಪ್ರಾಚೀನ ಕಾಲದ ಮರದ ಛಾವಣಿಯ ತೊಲೆ, ಪಟ್ಟಿ, ಅಡ್ಡ ಪಟ್ಟಿಕೆಗಳ ಜಾಲದ ವಿನ್ಯಾಸವನ್ನು ಶಿಲ್ಪಿಗಳು ಕಲ್ಲಿನಲ್ಲಿ ಕುಶಲತೆಯಿಂದ ಕಡೆದು ಅಳವಡಿಸಿದ್ದಾರೆ.

ವಿಜಯನಗರ ಶೈಲಿಯ ವಿತಾನಗಳು ಅಲಂಕಾರ ಪ್ರಧಾನವಾಗಿಲ್ಲದೆ ವಿಸ್ಮಯಕಾರಿ ಗಾತ್ರ, ವೈಶಾಲ್ಯದಿಂದಲೇ ಗಮನ ಸೆಳೆಯುವಂತಹವು. ವಿಶಾಲತೆ ಹೆಚ್ಚಾಗಿರುವುದರಿಂದ ಕದಳೀಕರಣ ತಂತ್ರದಿಂದ ಗುಮ್ಮಟ, ಭುವನೇಶ್ವರಿಗಳನ್ನು ರೂಪಿಸುವುದು ಕಷ್ಟಸಾಧ್ಯವಾದುದ ರಿಂದ ಇವು ಬಹುತೇಕ ಸಮತಲವಾಗಿರುತ್ತವೆ. ನವರಂಗ ಮತ್ತು ಮುಖಮಂಟಪದಲ್ಲಿನ ಸ್ಥಳಾವಕಾಶಕ್ಕೆ ತಕ್ಕಂತೆ ಉಬ್ಬು ಶಿಲ್ಪರೂಪದ ಅರಳಿದ ಕಮಲ, ಲತಾವಿನ್ಯಾಸ, ಹಂಸಾವಳಿ ಮತ್ತು ಕೋಲಾಟವಾಡುತ್ತಿರುವ ಕನ್ನಿಕೆಯರ ಚಿತ್ರಣಗಳು ಹೆಚ್ಚಾಗಿರುತ್ತವೆ. ವಿರೂಪಾಕ್ಷ ದೇವಾಲಯದ ಮುಖಮಂಟಪದ ಮಧ್ಯದಂಕಣದಲ್ಲಿನ ವಿತಾನ ಅತ್ಯಂತ ವಿಶಾಲವಾದ್ದರಿಂದ ಅದರಲ್ಲಿ ಪುರಾಣ, ಇತಿಹಾಸಕಾವ್ಯ ಹಾಗೂ ಇತಿಹಾಸದ ಘಟನೆಗಳ ರಮ್ಯ ವರ್ಣಚಿತ್ರಗಳಿವೆ. ಇಂತಹ ವರ್ಣಚಿತ್ರಗಳಿಗೆ ಪ್ರಸಿದ್ಧವಾದ ಇನ್ನೊಂದು ಮುಖಮಂಟಪ ಲೇಪಾಕ್ಷಿಯ ವೀರಭದ್ರ ದೇವಾಲಯ. ವಿಜಯನಗರಕಾಲದ ಕಟ್ಟಡಗಳಲ್ಲಿ ಅತ್ಯಂತ ಕಲಾತ್ಮಕವಾಗಿ ರೂಪಿತ ವಾದ್ದು ಶೃಂಗೇರಿಯ ವಿದ್ಯಾಶಂಕರ ದೇವಾಲಯದ ರಾಶಿಮಂಟಪದ ವಿತಾನ.

**ಅಚ್ಯುತರಾಯ ದೇವಾಲಯದ ತಿರುವೆಂಗಡನಾಥ, ಹಂಪಿ**

**ಶಿಖರ ಮತ್ತು ಗೋಪುರಗಳು:** ಗರ್ಭಗೃಹದ ಮೇಲಿನ ಶಿಖರ ಮತ್ತು ಮುಖ್ಯ ಪ್ರವೇಶದ್ವಾರದ ಗೋಪುರ–ಇವು ವಿಜಯನಗರ ಶೈಲಿಯ ದೇವಾಲಯದ ಊರ್ಧ್ವವಿನ್ಯಾಸದ ಗಮನಾರ್ಹ ಅಂಶಗಳು. ದ್ರಾವಿಡ ಮಾದರಿಯ ಶಿಖರಕ್ಕಿಂತ ದ್ವಾರಗೋಪುರ ಗಾತ್ರ, ಉನ್ನತಿ, ಭವ್ಯತೆಗಳಲ್ಲಿ ದೊಡ್ಡದು. ಚೌಕ, ಅಷ್ಟಭುಜ ಅಥವಾ ವೃತ್ತಾಕಾರದ ಗ್ರೀವ, ಸ್ತೂಪಿ, ಕಲಶಗಳಿಂದ ಕೂಡಿದ ಶಿಖರ ವಿಜಯನಗರ ಪೂರ್ವ ದೇವಾಲಯಗಳ ಊರ್ಧ್ವವಿನ್ಯಾಸದ ಪ್ರಮುಖ ಭಾಗವಾಗಿತ್ತು. ಆದರೆ ಮುಂದೆ ಕಲಶ, ಸ್ತೂಪಿಗಳ ಜೊತೆಗೆ ಆಡಂಬರಯುತವಾದ ಶಾಲ, ಕೂಟ, ಪಂಜರಗಳೂ ಪ್ರಧಾನವಾದವು. ರಾಮಚಂದ್ರ ಹಾಗೂ ವಿಠ್ಠಲ ದೇವಾಲಯಗಳ ಶಿಖರಗಳು ಆಕರ್ಷಕ ವಿನ್ಯಾಸದ ಉತ್ತಮ ಉದಾಹರಣೆಗಳು.

ವಿಜಯನಗರ ಕಾಲದ ಪ್ರಮುಖ ದೇವಾಲಯಗಳು ಮುಖ್ಯ ಮಂದಿರ, ದೇವೀಮಂದಿರ ಮತ್ತಿತರ ನಾನಾ ರೀತಿಯ ಮಂಟಪಗಳನ್ನು ಆವರಿಸಿದಂತಿರುವ ಎತ್ತರದ ಪ್ರಾಕಾರದಿಂದ ಸುತ್ತುವರೆದಿರುತ್ತವೆ. ವಿರೂಪಾಕ್ಷ, ವಿಠ್ಠಲ, ಕೃಷ್ಣ, ತಿರುವೇಂಗಳನಾಥ, ಪಟ್ಟಾಭಿರಾಮ

ದೇವಾಲಯಗಳ ಪ್ರಾಕಾರ, ಅವುಗಳ ಒಳಪರಿಧಿಗೆ ಹೊಂದಿಕೊಂಡಂತಿರುವ ಕಂಬಸಾಲಿನ ಮಂಟಪಗಳು ಪ್ರಸಿದ್ಧವಾದವು. ಪ್ರಾಕಾರದ ಗೋಡೆಯ ಒಳ, ಹೊರ ಮೈಯನ್ನು ಬಗೆಬಗೆಯ ಶಿಲ್ಪಗಳಿಂದ ಅಲಂಕರಿಸಿರುತ್ತದೆ. ರಾಮಚಂದ್ರ ದೇವಾಲಯದ ಗೋಡೆಯ ಹೊರಮೈಯಲ್ಲಿ ಆನೆ, ಕುದುರೆ, ಪದಾತಿ, ನೃತ್ಯ, ಕೋಲಾಟ, ಹೋಳಿಹಬ್ಬ, ಬೇಟೆ ಮುಂತಾದ ಉತ್ಕೃಷ್ಟ ಶಿಲ್ಪಗಳಿವೆ. ಜೊತೆಗೆ ರಾಮಾಯಣದ ಕಥಾನಕಗಳನ್ನು ನಿರೂಪಿಸುವ ಚಿತ್ರಣಗಳಿವೆ.

ಈ ಪ್ರಾಕಾರಗಳ ಮುಖ್ಯ ಪ್ರವೇಶದ್ವಾರದ ಮೇಲೇರುವ ಗಗನಚುಂಬಿ ಗೋಪುರಗಳು ಬಹುದೂರದಿಂದಲೇ ಗಮನ ಸೆಳೆಯುವ ವಾಸ್ತು ಅಂಗ. ಕಲ್ಲಿನಿಂದ ಕಟ್ಟಿದ ಪ್ರವೇಶದ್ವಾರಗಳು ಸಾಕಷ್ಟು ಅಗಲ ಎತ್ತರವಿದ್ದು ಭವ್ಯವಾಗಿರುತ್ತವೆ. ದ್ವಾರದ ಇಕ್ಕೆಲಗಳಲ್ಲಿ ಗಂಗಾಯಮುನಾ ನದೀ ದೇವಿಯರು ಇಲ್ಲವೇ ಲತೆಯನ್ನು ಹಿಡಿದು ಅದರಂತೆಯೇ ಬಳುಕುವ ದೇಹಸೌಷ್ಠವವುಳ್ಳ ಸುಂದರ ಲತಾಂಗಿಯರ ಶಿಲ್ಪಗಳಿರುವುದು ವಿಜಯನಗರ ಕಾಲದ ಪ್ರವೇಶದ್ವಾರಗಳ ವಿಶಿಷ್ಟಲಕ್ಷಣ. ಪ್ರವೇಶದ್ವಾರದ ಮೇಲಣ ಅಂತಸ್ತುಗಳನ್ನು, ಭಾರ ಕಡಿಮೆಮಾಡುವ ಉದ್ದೇಶ ದಿಂದ ಚೆನ್ನಾಗಿ ಸುಟ್ಟ ವಿಶಿಷ್ಟ ಗಾತ್ರದ ಇಟ್ಟಿಗೆಗಳು, ಗಾರೆ ಮತ್ತು ಮರದ ಕಂಬ, ತೊಲೆಗಳಿಂದ ರೂಪಿಸಿದೆ. ವಿಜಯನಗರಪೂರ್ವ ಕಾಲದಲ್ಲಿ ಅಪರೂಪವಾಗಿ ಕಾಣುವ ಗೋಪುರಗಳು ಗರ್ಭಗೃಹದ ಮೇಲಿನ ಶಿಖರದ ಔನ್ನತ್ಯ, ಸೌಂದರ್ಯ, ಗಾಂಭೀರ್ಯಗಳನ್ನು ಎತ್ತಿ ಕಾಣಿಸುವುದಕ್ಕಾಗಿ ಕಿರಿದಾಗಿದ್ದರೆ, ವಿಜಯನಗರ ಹಾಗೂ ತದನಂತರ ಕಾಲದಲ್ಲಿ ಎತ್ತರ ಗಾತ್ರ, ಸೌಂದರ್ಯ ಗಾಂಭೀರ್ಯಗಳಲ್ಲಿ ಮಹೋನ್ನತವಾಗಿದ್ದು ಇಡೀ ಪರಿಸರದಲ್ಲಿನ ಭೂಚಿಹ್ನೆಯಾಗಿ ಮೆರೆಯುತ್ತವೆ. ಆದುದರಿಂದಲೇ ಇವುಗಳನ್ನು ಅನ್ವರ್ಥವಾಗಿ ರಾಯಗೋಪು ರಗಳೆಂದು ಕರೆಯುವುದು. ಎತ್ತರ ಹೆಚ್ಚಾದಂತೆ ಕ್ರಮೇಣ ಕಿರಿದಾಗುವ ಅಂತಸ್ತುಗಳ ಸಂಖ್ಯೆ ಕನಿಷ್ಠ ಮೂರರಿಂದ ಗರಿಷ್ಠ ಒಂಬತ್ತರವರೆಗೆ ಇರುತ್ತವೆ. ತುದಿಯಲ್ಲಿ ಎರಡೂ ಬದಿಗೆ ಕೀರ್ತಿಮುಖಗಳುಳ್ಳ ದೊಡ್ಡ ಶಾಲ ಶಿಖರವಿದ್ದು ಮೇಲೆ 3 ರಿಂದ 5 ಕಲಶಗಳಿರುತ್ತವೆ. ರಾಜಧಾನಿಯ ಗೋಪುರಗಳಲ್ಲೆಲ್ಲ ಸಹಜವಾಗಿ ವಿಜಯನಗರದ ಅಧಿಷ್ಠಾತೃದೇವತೆ ಪಂಪಾವತಿ ವಿರೂಪಾಕ್ಷನ ದೇವಾಲಯದ ಮುಖ್ಯ ಪ್ರವೇಶದ್ವಾರದ ಗೋಪುರ ಅತ್ಯುನ್ನತವಾದ್ದು (52.6 ಮೀ ಎತ್ತರ). ಉಳಿದಂತೆ ವಿಠ್ಠಲ, ಬಾಲಕೃಷ್ಣ ತಿರುವೇಂಗಳನಾಥ, ಪಟ್ಟಾಭಿರಾಮ ದೇವಾಲಯ ಗಳ ಗೋಪರಗಳು ಭಾಗಶಃ ಜೀರ್ಣವಾಗಿವೆ. ಎಲ್ಲ ಅಂತಸ್ತುಗಳ ಹೊರಮೈಯನ್ನು ಸುಂದರ ವಾದ ಗಾರೆಯ ಶಿಲ್ಪಗಳಿರುವ ಶಾಲ, ಕೂಟ ಅಥವಾ ಕೋಷ್ಠ ಹಾಗೂ ಪಂಜರಗಳಿಂದ ಅಲಂಕರಿಸಲಾಗಿದೆ.

ಹಂಪಿಯ ದೇವಾಲಯಗಳಲ್ಲಿ ವಿರೂಪಾಕ್ಷ, ರಾಮಚಂದ್ರ ಹಾಗೂ ವಿಠ್ಠಲ ದೇವಾಲಯ ಗಳು ಅತ್ಯುತ್ತಮವಾದವೆಂದು ಪರಿಗಣಿತವಾಗಿವೆ. ಇವುಗಳಲ್ಲಿ ವಿರೂಪಾಕ್ಷ ದೇವಾಲಯ ಅತ್ಯಂತ ಪ್ರಾಚೀನವಾಗಿದ್ದು ಕನಿಷ್ಠ ಬಾದಾಮಿ ಚಳುಕ್ಯ ಕಾಲದವರೆಗೆ ಇದರ ಇತಿಹಾಸವನ್ನು

**ವಿರುಪಾಕ್ಷ ದೇವಾಲಯದ ಗೋಪುರ, ಹಂಪಿ**

ಒಯ್ಯಬಹುದು. ಸಂಗಮರ ಕಾಲದ ಮೂಲದೇವಾಲಯದಲ್ಲಿ ಬಹುಶಃ ಕೇವಲ ಗರ್ಭಗೃಹ, ಅಂತರಾಳ, ನವರಂಗಗಳಿದ್ದವು. ಕೃಷ್ಣದೇವರಾಯನ ಕಾಲಕ್ಕೆ (1513ರ ವೇಳೆಗೆ) ರಂಗಮಂಟಪ, ಪ್ರಾಕಾರ, ಗೋಪುರಗಳೆಲ್ಲ ಸೇರಿ, ಪೂರ್ವದ್ವಾರದ ಮುಖ್ಯ ಗೋಪುರವೂ ಜೀರ್ಣೋದ್ಧಾರ ಗೊಂಡು ಈಗಿರುವಂತೆ ರೂಪಿತವಾಯಿತು. ರಂಗಮಂಟಪದ ಚಾವಣಿಯ ಕೆಳಗಣ ಗಾರೆಯ ಶಿಲ್ಪಗಳು ಅಚ್ಯುತದೇವರಾಯನ ಕಾಲದ್ದಾದರೆ, ಚಾವಣಿಯಲ್ಲಿನ ವರ್ಣಚಿತ್ರಗಳು 18ನೆಯ ಶತಮಾನದಲ್ಲಿ ಪುನಾರಚಿತಗೊಂಡಂತೆ ಕಾಣುತ್ತವೆ.

ರಾಮಚಂದ್ರ(ಹಜಾರರಾಮ) ದೇವಾಲಯ ಸಂಗಮರ ಕಾಲದ ಕಟ್ಟಡವೇ. ಪೂರ್ವಾಭಿ ಮುಖವಾದ ಈ ಮಂದಿರದ ಅಧಿಷ್ಠಾನದ ಮೇಲೆ ಮೊದಲನೆಯ ದೇವರಾಯನ ಉಲ್ಲೇಖ ವಿರುವ ಶಾಸನವಿದ್ದು ಅವನ ಕಾಲದಲ್ಲೇ ಇದು ನಿರ್ಮಾಣವಾಗಿರಬೇಕು. ಕೃಷ್ಣದೇವರಾಯನ ಕಾಲದಲ್ಲಿ ಉತ್ಸವಮಂಟಪವನ್ನು ಸೇರಿಸಿ ಈ ಮಂದಿರವನ್ನು ವಿಸ್ತರಿಸಲಾಯಿತು. ಮುಖ್ಯ

**ಕೃಷ್ಣ ದೇವಾಲಯ, ಹಂಪಿ**

ದೇವಾಲಯದ ಗೋಡೆಯ ಹೊರಮೈಯಲ್ಲಿನ ರಾಮಾಯಣ ಕಥಾನಕವನ್ನು ನಿರೂಪಿಸುವ ಶಿಲ್ಪಗಳಿಗಾಗಿ ಇದು ಪ್ರಸಿದ್ಧವಾಗಿದೆ. ಮೊದಲಿನೆರಡು ದೇವಾಲಯಗಳಂತೆ ವಿಠ್ಠಲದೇವಾಲಯ ಮೂಲತಃ ಸಂಗಮ ಕಾಲದ್ದೇ. ಸರಳವಿನ್ಯಾಸದ ಮೂಲದೇವಾಲಯ ಕೃಷ್ಣದೇವರಾಯನ ಕಾಲದಲ್ಲಿ ಹಲವು ಹತ್ತು ಮಂಟಪಗಳನ್ನು ತನ್ನ ಪರಿಧಿಯಲ್ಲಿ ಸೇರಿಸಿಕೊಂಡು ವಿಸ್ತಾರವಾ ಯಿತು. ಮೊದಲಿಗೆ ಕೃಷ್ಣದೇವರಾಯನ ಪತ್ನಿಯರಾದ ತಿರುಮಲಾದೇವಿ, ಚಿನ್ನಾದೇವಿಯರು ಪ್ರವೇಶದ್ವಾರಗಳ ಮೇಲೆ ಗೋಪುರ ಕಟ್ಟಿಸಿದರು (1513). ಅನಂತರ ರಾಜನೇ ಸ್ವತಃ 1516ರಲ್ಲಿ ಈ ಸಮುಚ್ಚಯ ದಲ್ಲಿ ನೂರುಕಂಬದ ಮಂಟಪವನ್ನು ಕಟ್ಟಿಸಿದ. ಅಚ್ಯುತರಾಯನ ಕಾಲದಲ್ಲಿ ಸಂಗೀತಸ್ತಂಭಗಳಿಂದಾಗಿ ಪ್ರಪಂಚ ಪ್ರಸಿದ್ಧವಾದ ಮುಖಮಂಟಪದ ಸೇರ್ಪಡೆ ಯಾಯಿತು. ಸದಾಶಿವರಾಯ ಇನ್ನಷ್ಟು ಮಂಟಪಗಳನ್ನು ಜೋಡಿಸಿದ. ಹೀಗೆ ಈ ದೇವಾಲಯ ಕ್ರಮೇಣ ಅಲಂಕೃತ ವಿಜಯನಗರ ವಾಸ್ತುಶೈಲಿಯ ಅತ್ಯುತ್ತಮ ಕಲಾಕುಸುಮವಾಗಿ ಅರಳಿ ತನ್ನ ಔಚಿತ್ಯಪೂರ್ಣ ತಲವಿನ್ಯಾಸ, ಭವ್ಯ ಊರ್ಧ್ವವಿನ್ಯಾಸ ಮತ್ತು ಅದ್ಭುತ ಸೌಂದರ್ಯದ ಭಾವಪೂರ್ಣ ಶಿಲ್ಪಗಳಿಂದಾಗಿ ಪ್ರಪಂಚ ಪ್ರಸಿದ್ಧವಾಗಿದೆ.

**ಬಜಾರುಗಳು:** ವಿಜಯನಗರದ ಧಾರ್ಮಿಕ ವಾಸ್ತುವಿನ ಮುಖ್ಯ ಲಕ್ಷಣಗಳಲ್ಲಿ ಪ್ರಮುಖ ದೇವಾಲಯಗಳ ಮುಂದಣ ವಿಶಾಲ ತೇರುಬೀದಿ ಅಥವಾ ಬಜಾರುಗಳು ಒಂದು. ಹಂಪಿಯ ವಿರೂಪಾಕ್ಷ, ಬಾಲಕೃಷ್ಣ ತಿರುವೇಂಗಳನಾಥ (ಅಚ್ಯುತರಾಯ) ಮತ್ತು ವಿಠ್ಠಲ–ಈ ನಾಲ್ಕು ದೇವಾಲಯಗಳ ಮುಂದೆ ಇಂತಹ ಬಜಾರುಗಳ ಅವಶೇಷಗಳಿವೆ. ಜೊತೆಗೆ ಇಮ್ಮಡಿದೇವ ರಾಯನ ಒಂದು ಶಾಸನದಲ್ಲಿ ಪರ್ಣಪೂಗೀಫಲಾಪಣ ವೀಧಿ ಅಥವಾ ಕ್ರಮುಕಪರ್ಣಾಪಣ ವೀಧಿ (ಪಾನ್‌ಸುಪಾರಿ ಬಜಾರ್) ಎಂಬ ಐದನೆಯ ಬಜಾರಿನ ಉಲ್ಲೇಖವಿದೆ. ವಿಜಯನಗರದ ಕೇಂದ್ರಸ್ಥಾನವಾದ ರಾಮಚಂದ್ರದೇವಾಲಯದಿಂದ ಈಶಾನ್ಯಕ್ಕೆ ಸಿಂಗಾರದ ಹೆಬ್ಬಾಗಿಲಿನವರೆಗಿನ ಬೀದಿಯೇ ಪಾನ್ಸುಪಾರಿ ಬಜಾರು. ರಾಜವಾಸ ಗೃಹಗಳು, ಮತ್ತಿತರ ಮುಖ್ಯ ವಸತಿ ಪ್ರದೇಶ ದಲ್ಲಿದ್ದುದರಿಂದ ಈ ಬಜಾರಿಗೆ ತನ್ನದೇ ಆದ ವಿಶಿಷ್ಟ ಸ್ಥಾನಮಾನವಿದೆ. ಈ ಬಜಾರುಗಳಲ್ಲಿ ವಿರೂಪಾಕ್ಷ ದೇವಾಲಯದ ಮುಂದೆ ಪೂರ್ವಪಶ್ಚಿಮವಾಗಿ ಹರಡಿದ್ದು ಇಂದಿಗೂ ಕ್ರಿಯಾಶೀಲವಾಗಿರುವ ಬಜಾರು ಅತಿ ದೊಡ್ಡದು. 27.5ಮೀ ಅಗಲ, ಸು.750 ಮೀ ಉದ್ದವಾದ ಈ ಬಜಾರಿನ ಎರಡೂ ಪಕ್ಕಗಳಲ್ಲಿ ದೊಡ್ಡ ದೊಡ್ಡ ಕಲ್ಲಿನ ಎರಡಂತಸ್ತಿನ ಮಂಟಪಗಳಿದ್ದು ಅದರಲ್ಲಿ ನಾನಾ ವಸ್ತುಗಳನ್ನು ಮಾರುವ ಮಳಿಗೆಗಳಿದ್ದವು. ಕೆಲವು ಅಂಗಡಿಗಳ ಅವಶೇಷ ಈಗಲೂ ಇದೆ. ಈಗ ಹೊಸಕಟ್ಟಡಗಳಿಗೆ ಜಾಗ ಮಾಡಿಕೊಟ್ಟಿವೆ. ಈ ಬೀದಿಯ ಪೂರ್ವ ತುದಿಯ ಬೆಟ್ಟದ ಬುಡದಲ್ಲಿ ಬಂಡೆಯ ಮೇಲೆ ಕಟ್ಟಿದ ಕಲ್ಲಂಬಗಳ ಎದುರು ಬಸವಣ್ಣ ಮಂಟಪವಿದೆ. ದೇವಾಲಯದ ಉತ್ಸವದಿನಗಳಲ್ಲಿ ಉತ್ಸವಮೂರ್ತಿಯ ತೇರನ್ನು ಈ ಮಂಟಪದವರೆಗೆ ತರಲಾಗುತ್ತದೆ.

ವಿಜಯನಗರದ ವೈಭವದ ಕಾಲದಲ್ಲಿ ಈ ಬಜಾರುಗಳಲ್ಲೆಲ್ಲ ನಿರಂತರ ವ್ಯಾಪಾರ ನಡೆಯುತ್ತಿದ್ದು ಸದಾ ಜನನಿಬಿಡವಾಗಿರುತ್ತಿದ್ದವು. ಕನಕದಾಸರ ಮೋಹನ ತರಂಗಿಣಿಯಲ್ಲಿ ಇಂತಹ ಬಜಾರಿನಲ್ಲಿದ್ದ ಬೆಳ್ಳೆಲೆ, ದವಸ, ಲೋಹ, ಬಳೆ, ಬಟ್ಟೆ ಮುಂತಾದ ವಸ್ತುಗಳನ್ನು ಮಾರುತ್ತಿದ್ದ ಅಂಗಡಿಗಳ ಉಲ್ಲೇಖವಿದೆ. ಆ ದಿನಗಳಲ್ಲಿ ರಾಜಧಾನಿಗೆ ಬಂದಿದ್ದ ವಿದೇಶೀ ಪ್ರವಾಸಿಗರೂ ಬಜಾರುಗಳ ಚಿತ್ರಣ ನೀಡಿದ್ದಾರೆ. ಅಬ್ದುಲ್ ರಜಾಕ್ 'ಈ ಬಜಾರುಗಳ ಅತ್ಯಂತ ವಿಶಾಲವಾಗಿದ್ದು ಎಲ್ಲೆಡೆ ಗುಲಾಬಿ ಹೂ, ಕೆಂಪು, ಪಚ್ಚೆ, ವಜ್ರಗಳನ್ನು ಮುಕ್ತವಾಗಿ ಮಾರುತ್ತಾರೆ' ಎಂದಿದ್ದಾನೆ. ಅದರಂತೆಯೇ ಡೊ ಮಿಂಗೊ ಪೇಯಿಸನು 'ಶ್ರೀಮಂತ

ಮನೆಗಳುಳ್ಳ ಅಗಲವಾದ ಹಾಗೂ ಸುಂದರವಾದ ಬೀದಿ ಇದೆ. ಇಲ್ಲಿ ಅನೇಕ ಗಣ್ಯ ವರ್ತಕರು ವಾಸಿಸುತ್ತಾರೆ. ವಜ್ರ, ವೈಡೂರ್ಯಗಳೂ ಮುತ್ತು, ಮಾಣಿಕ್ಯಗಳೂ ವಿಧ ವಿಧದ ಬಟ್ಟೆಬರೆಗಳೂ ಒಟ್ಟಿನಲ್ಲಿ ಭೂಮಿಯ ಮೇಲೆ ಕೊಳ್ಳಬಯಸುವ ಎಲ್ಲವೂ ಇಲ್ಲಿ ಸಿಗುತ್ತವೆ. ಅಲ್ಲದೆ ಇಲ್ಲಿ ಪ್ರತಿ ಸಂಜೆ ಸಂತೆ ಸೇರುತ್ತದೆ. ಈ ಸಂತೆಯಲ್ಲಿ ಕುದುರೆಗಳನ್ನು, ತಟ್ಟು, ಕಿತ್ತಳೆ, ದ್ರಾಕ್ಷಿ, ಮಾದಳ ಮುಂತಾದ ಹಣ್ಣುಗಳನ್ನು ಮಾರುತ್ತಾರೆ' ಎನ್ನುತ್ತಾನೆ.

ವಿರುಪಾಕ್ಷ ಬಜ್ಹಾರ್, ಹಂಪಿ

ಬಹಳಷ್ಟು ಭಗ್ನವಾಗಿದ್ದ ಇಂತಹ ಬಜಾರುಗಳನ್ನು ಇತ್ತೀಚೆಗೆ ಪುರಾತತ್ತ್ವ ಇಲಾಖೆಯವರು ವೈಜ್ಞಾನಿಕ ಉತ್ಖನನ ನಡೆಸಿ ಭಗ್ನ ಭಾಗಗಳನ್ನು ಪುನಃ ಜೋಡಿಸಿ ಸಂರಕ್ಷಿಸುತ್ತಿದ್ದಾರೆ.

**ನಾಗರಿಕ ಅಥವಾ ಸಾಮಾಜಿಕ ವಾಸ್ತು:** ಅಸಂಖ್ಯಾತ ದೇವಾಲಯಗಳ ಜೊತೆ ಜೊತೆಗೆ ಅಷ್ಟೇ ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ವೈವಿಧ್ಯಮಯ ಸಾಮಾಜಿಕ ವಾಸ್ತುನಿರ್ಮಿತಿಗಳು ಇರುವ ಕರ್ನಾಟಕದ ಕೆಲವೇ ನಿವೇಶನಗಳಲ್ಲಿ ಹಂಪಿಯೂ ಒಂದು. ಬಹುತೇಕ 15–16ನೆಯ ಶತಮಾನಗಳಲ್ಲಿ ನಿರ್ಮಿತವಾದ ಈ ಕಟ್ಟಡಗಳ ವಿವಿಧ ಉದ್ದೇಶ, ಆಕಾರ, ಗಾತ್ರದ ಮಂಟಪ, ಗಜಾಶ್ವಶಾಲೆ, ಆಡಳಿತ ವ್ಯವಹಾರಗಳ ಕಟ್ಟಡ, ಸಾಮ್ರಾಟರು, ರಾಜಪ್ರಮುಖರು, ಮತ್ತಿತರ–ಗಣ್ಯರ ಅರಮನೆಗಳು, ವಿಲಾಸ ಭವನಗಳು, ಸಾರ್ವಜನಿಕ ಸ್ನಾನದ ಕೊಳಗಳು ಮತ್ತು ಜಲಪೂರೈಕೆಯ ವ್ಯವಸ್ಥೆಗೆ ಸಂಬಂಧಿಸಿದ ಕಟ್ಟಡಗಳ ರೂಪದಲ್ಲಿವೆ. ಇವುಗಳಲ್ಲಿ ಕೆಲವು ಕಟ್ಟಡಗಳು ಹಿಂದು ಹಾಗೂ ಇಸ್ಲಾಮಿಕ್ ಶೈಲಿಗಳ ವಿಶಿಷ್ಟ ಲಕ್ಷಣಗಳ ಹದವರಿತ ಅಳವಡಿಕೆಯಿಂದ ರೂಪುಗೊಂಡಿವೆ. ದೇವಾಲಯ, ಮಂಟಪಗಳು ಹಿಂದು ವಾಸ್ತುಶೈಲಿಯ ಕಂಬ ತೊಲೆಗಳನ್ನಾಧರಿಸಿದ್ದರೆ, ಸಾಮಾಜಿಕ ಹಾಗೂ ಸ್ವಲ್ಪಮಟ್ಟಿಗೆ ರಕ್ಷಣಾ ವಾಸ್ತುವಿನ ಕಟ್ಟಡಗಳು ಇಸ್ಲಾಂ ಶೈಲಿಯ ಕಮಾನು ಗುಮ್ಮಟಗಳನ್ನು ಹೊಂದಿದ್ದರೂ ಅಲಂಕರಣ ವಿನ್ಯಾಸಗಳಲ್ಲಿ ಮಾತ್ರ ಹಿಂದು ಶೈಲಿಯನ್ನೇ ಅನುಸರಿಸಿವೆ. ಅಧಿಷ್ಠಾನದವರೆಗೆ ಕಲ್ಕಟ್ಟಡವಿದ್ದರೂ ಮೇಲ್ಕಟ್ಟಡಕ್ಕೆ ಕಲ್ಲು, ಇಟ್ಟಿಗೆ, ಸುಣ್ಣ, ಗಾರೆ ಮಿಶ್ರಣಗಳನ್ನು ಯಥೇಚ್ಛವಾಗಿ ಬಳಸಿದೆ.

ಕಮಲಮಹಲ್, ಹಂಪಿ

ರಾಣಿಯರ ಅಂತಃಪುರದ ಆವರಣದಲ್ಲಿರುವ ಕಮಲಭವನ ಇಂಡೊ–ಇಸ್ಲಾಮಿಕ್ ಶೈಲಿಯ ಒಂದು ಉತ್ತಮ ಉದಾಹರಣೆ. ಈ ಕಟ್ಟಡದ ಕೆಳ ಅಂತಸ್ತನ್ನು ಕಮಾನುಗಳಿಂದ ರೂಪಿಸಲಾಗಿದ್ದು ಕೊರೆದಗಾರೆಯ ಸೂಕ್ಷ್ಮ ಅಲಂಕರಣಗಳಿರುವ, ಹಿಂಚಾಚು ಮುಂಚಾಚುಗಳಿಂದ ಕೂಡಿದ ವಿಶಾಲ ಮಂಟಪದಂತಿದ್ದರೆ, ಮೇಲಣ ಅಂತಸ್ತಿನಲ್ಲಿ ಹಲವು ಕೊಠಡಿಗಳಿದ್ದು ಛಾವಣಿಯ ಮೇಲೆ ಕದಂಬನಾಗರ ರೀತಿಯ ಶಿಖರಸಮೂಹವಿದೆ. ಮೋಹಕ ಬಾಗೂ ಇರುವ ಕಮಾನುಗಳು, ಹೊರಪರಿಧಿಯಲ್ಲಿ ಕೊರೆದಗಾರೆಯ ಅಲಂಕರಣ, ಹೊರಕ್ಕೆ ಮುಂಚಾಚಿದ ಗೂಡುಗಳಂತಹ ವೇದಿಕೆ(ಬಾಲ್ಕನಿ) ಈ ಕಟ್ಟಡಗಳ ವಿಶೇಷ ಲಕ್ಷಣಗಳಾಗಿದ್ದು ರಾಣಿಯರ ಸ್ನಾನಗೃಹ ಈ ಮಾದರಿಯ ಗಮನಾರ್ಹ ನಿರ್ಮಿತಿ. ವಿವಿಧ ಅವರಣಗಳ ಮೂಲೆಗಳಲ್ಲಿರುವ ಕಾವಲು ಗೋಪುರ, ಅಷ್ಟಕೋನಾಕಾರದ ಸ್ನಾನದಕೊಳ, ಗಜಶಾಲೆ, ಕಾವಲುಗಾರರ ಚೌಕಿ, ಮತ್ತಿತರ ಕಟ್ಟಡಗಳಲ್ಲಿಯೂ ಈ ಶೈಲಿಯ ಕೆಲವು ಅಂಶಗಳನ್ನು ಕಾಣಬಹುದು. ಮೇಲ್ಕಟ್ಟಡವೆಲ್ಲ ನಾಶವಾಗಿ, ಅಧಿಷ್ಠಾನದವರೆಗೆ ಮಾತ್ರ ಉಳಿದಿರುವ ಹಲವು ಅರಮನೆಗಳ ಅವಶೇಷಗಳು, ರಾಜಸಭಾಂಗಣ, ಮಹಾನವಮಿ ದಿಬ್ಬ, ಅಂತಃಪುರದ ಆವರಣದ ಇನ್ನಿತರ ಕೆಲವು ಕಟ್ಟಡಗಳು ಸಾಮಾಜಿಕ ವಾಸ್ತುವಿನ ಕೆಲವು ಉತ್ತಮ ಮಾದರಿಗಳು.

ಅಂತಃಪುರದ ಆವರಣದಲ್ಲಿ ಸಾಕಷ್ಟು ಸುಸ್ಥಿತಿಯಲ್ಲಿರುವ ಕಾವಲು ಬತೇರಿಗಳು ಅವುಗಳ ಗಾತ್ರ ಮತ್ತು ವಿನ್ಯಾಸಗಳಿಗಾಗಿ ಗಮನಾರ್ಹವಾದವು. ಉತ್ತರದ ಬತೇರಿ ಚೌಕಾಕೃತಿಯಲ್ಲಿದ್ದರೆ ದಕ್ಷಿಣ ತುದಿಯದು ಅಷ್ಟಕೋನಾಕಾರದ್ದು. ಎರಡರಲ್ಲಿಯೂ ಮೇಲಣ ಕೊಠಡಿಗೆ ಮೂರೂ ಕಡೆ ಮೂರು ಕಮಾನುಗಳಿರುವ ಮುಂಚಾಚಿದ ಬಾಲ್ಕನಿ ಹಾಗೂ ಛಾವಣಿಯ ಮೇಲೆ ಕದಂಬನಾಗರ ಶೈಲಿಯ ಶಿಖರಗಳಿವೆ. ಅಷ್ಟಕೋನಾಕಾರದ ಬತೇರಿಯಲ್ಲಿ ಇಂತಹ ಕಮಾನುಗಳ ಎರಡು ಸಾಲಿದ್ದು, ಕೆಳಗಣ ಸಾಲಿನ ಕಮಾನುಗಳು ಅರ್ಧ ಮುಚ್ಚಿದವು. ಗೋಡೆಯ ಒಳಪರಿಧಿಗೆ ಹೊಂದಿಕೊಂಡಂತೆ ಮೇಲಣ ಕೋಣೆಗೆ ಹೋಗಲು ಮೆಟ್ಟಿಲುಗಳಿದ್ದು, ಮೇಲಣ ಕೊಠಡಿಯ ಕಮಾನುಗಳಿಂದ ಬಹುದೂರದವರೆಗಿನ ರಮ್ಯ ನೋಟ ದೊರೆಯುತ್ತದೆ. ಕಮಲಭವನ ಕಲ್ಲಿನ ಅಲಂಕೃತ ಅಧಿಷ್ಠಾನದ ಮೇಲೆ ಕಟ್ಟಿರುವ ಎರಡಂತಸ್ತಿನ ಭವ್ಯ, ಸುಂದರ ಕಟ್ಟಡ ಈ ಭವನದ ಕೆಲ ಅಂತಸ್ತು ಕಮಾನುಗಂಬಗಳನ್ನಾಧಿರಿಸಿದ, ಗುಮ್ಮಟಗಳ ರೀತಿಯಲ್ಲಿ ವಿನ್ಯಾಸ ಮಾಡಿದ ಮುಕ್ತ ಮಂಟಪ. ಇದರ ಕಮಾನು ತುದಿಗಳನ್ನು ಅಲಂಕಾರಮಯವಾಗಿಸಿ, ಪರಿಧಿಯಲ್ಲಿ ಕೊರೆದಗಾರೆಯ ಸೂಕ್ಷ್ಮಕಲೆಗಾರಿಕೆಯ ಹೂಬಳ್ಳಿಗಳ ಹಾಗೂ ವೃತ್ತ ಫಲಕಗಳಿಂದ ಅಲಂಕರಿಸಿದ್ದು ರಾಜಧಾನಿಯಲ್ಲಿ ಇಂಡೊ–ಇಸ್ಲಾಮಿಕ್ ಶೈಲಿಯ

ಗಜಶಾಲೆ, ಹಂಪಿ

ಅಲಂಕರಣದ ಉತ್ತಮ ಉದಾಹರಣೆಯಾಗಿದೆ. ಗೋಡೆಗಳಿಂದಾವೃತವಾದ ಮೇಲಂತಸ್ತಿನಲ್ಲಿ ವಿವಿಧಗಾತ್ರದ ಅನೇಕ ಕೊಠಡಿಗಳಿದ್ದು, ಕಮಾನು ಕಿಟಕಿಗಳಿಂದ ಕೂಡಿದೆ. ಮೊದಲು ಈ ಕಿಟಕಿಗಳಿಗೆ ಮರದ ಬಾಗಿಲುಗಳನ್ನು ಅಳವಡಿಸಿ, ರೇಷ್ಮೆಯ ಪರದೆ ಹಾಕಿದ್ದರೆಂದು ತೋರುತ್ತದೆ. ಕಮಾನುಗಂಬ, ಕಮಾನು, ಒಳಛಾವಣಿಗಳು ಇಸ್ಲಾಮಿಕ್ ಶೈಲಿಯಲ್ಲಿದ್ದರೆ, ಮೇಲಣ ಕದಂಬನಾಗರ ಶಿಖರ ಪೂರ್ತಿ ಹಿಂದು ಶೈಲಿಯದಾಗಿದೆ. ಈ ಕಟ್ಟಡ ಅಂತಃಪುರದ ಸ್ತ್ರೀಯರಿಗೆ ಸಾಹಿತ್ಯ, ಸಂಗೀತ, ಚಿತ್ರಕಲೆ ಮುಂತಾದ ಲಲಿತ ಕಲೆಗಳಲ್ಲಿ ತರಬೇತಿ ನೀಡಲು ಹಾಗೂ ರಾಣಿವಾಸದವರ ಮನರಂಜನೆಗಾಗಿ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲು ಬಳಕೆಯಾಗುತ್ತಿತ್ತು.

ಅಂತಃಪುರ ಆವರಣದ ಪೂರ್ವಕ್ಕೆ ಇರುವ ಗಜಶಾಲೆ ಇಸ್ಲಾಂ ಶೈಲಿಯ ವಿವರಗಳನ್ನು ಹೆಚ್ಚಾಗಿ ಬಿಂಬಿಸುವ, ಸಾಕಷ್ಟು ಸುಸ್ಥಿತಿಯಲ್ಲಿರುವ ಆಯತಾಕಾರದ ಕಟ್ಟಡ, ಇದರಲ್ಲಿ ಚೌಕಾಕಾರದ ಹನ್ನೊಂದು ಕೊಠಡಿಗಳಿದ್ದು, ಅವುಗಳ ಮೇಲೆ ವಿವಿಧಾಕಾರದ ಸುಂದರ ಗುಮ್ಮಟಗಳಿವೆ, ಮಧ್ಯದ ಕೊಠಡಿಯಲ್ಲಿ ಮೇಲಕ್ಕೆ ಹೋಗಲು ಮೆಟ್ಟಿಲುಗಳಿದ್ದು, ಇದರ ಮಾಳಿಗೆಗೆ ಹಿಂದು ಶೈಲಿಯ ಭಗ್ನವಾದ ಗೋಪುರ ಭಾಗಗಳಿವೆ. ದಖನಿನ ಇಸ್ಲಾಂ ಶೈಲಿಯ ಗುಮ್ಮಟಗಳ ಗಾಢಪ್ರಭಾವಕ್ಕೊಳಗಾದ. ಸಿಲಿಂಡರಿನಾಕಾರ, ನೆಲ್ಲಿಕಾಯಿಯ ಪಟ್ಟಿಕೆಗಳಿಂದ ಕೂಡಿರುವ, ಮೆಟ್ಟಲು ಮೆಟ್ಟಿಲಾದ ರಚನೆಯಿರುವ ವಿವಿಧ ರೀತಿಯ ಗುಮ್ಮಟಗಳು ಈ ಕಟ್ಟಡದ ಮುಖ್ಯ ಆಕರ್ಷಣೆ. ಪಶ್ಚಿಮದಲ್ಲಿ ದೊಡ್ಡ ಕಮಾನುದ್ವಾರ. ಅದರ ಇಕ್ಕೆಲುಗಳಲ್ಲಿ ಸಣ್ಣಕಮಾನು ಕಿಟಕಿಗಳಿರುವ ಪ್ರತಿಕೊಠಡಿ ನಾಲ್ಕೈದು ಆನೆಗಳು ಹಿಡಿಸುವಷ್ಟು ವಿಶಾಲವಾಗಿವೆ. ಇದರ ಒಳಛಾವಣಿಯಲ್ಲಿ ಆನೆಯನ್ನು ಕಟ್ಟಲು ಬಳಸುತ್ತಿದ್ದ ಕಬ್ಬಿಣದ ದಪ್ಪ ಉಂಗುರಗಳನ್ನು ಇಂದಿಗೂ ಕಾಣಬಹುದು. ಇಮ್ಮಡಿದೇವರಾಯನ ಕಾಲದಲ್ಲಿ ರಾಜಧಾನಿಗೆ ಬಂದಿದ್ದ ಅಬ್ದುಲ್ ರಜಾಕ್ ಆನೆಗಳನ್ನು ವರ್ಣಿಸುತ್ತ ಪ್ರತಿ ಆನೆಯೂ ಎತ್ತರವಾದ ಸಶಕ್ತ ಗೋಡೆಯ ಕೊಠಡಿಯಲ್ಲಿದ್ದು, ಮರದ ಭದ್ರಬಾಗಿಲಿನಿಂದ ಮುಚ್ಚಿದೆ. ಆನೆಗಳ ಕುತ್ತಿಗೆ, ಹಿಂಭಾಗಗಳಿಗೆ ಕಟ್ಟಿದ ಸರಪಳಿಗಳನ್ನು ಚಾವಣಿಯ ತೊಲೆಗಳಿಗೆ ಭದ್ರವಾಗಿ ಬಿಗಿದಿದೆ. ಬೇರೆಡೆ ಕಟ್ಟಿದರೆ ಆನೆಗಳು ಸುಲಭವಾಗಿ ಬಿಡಿಸಿಕೊಳ್ಳಬಹುದು. ಹಾಗೆಯೇ ಮುಂಗಾಲುಗಳಿಗೂ ಸರಪಳಿ ಕಟ್ಟಿದೆ' ಎಂದಿದ್ದಾನೆ. ಗಜಶಾಲೆಯ ದಕ್ಷಿಣಕ್ಕಿರುವ ದಕ್ಷಿಣಾಭಿಮುಖವಾದ ಆಯತಾಕಾರದ ಕಾವಲುಗಾರರ ವಾಸಗೃಹ. ಇಲ್ಲಿನ ಇಂಡೊ–ಇಸ್ಲಾಮಿಕ್ ಶೈಲಿಯ ಇನ್ನೊಂದು ಮುಖ್ಯ ಕಟ್ಟಡ.

ಎತ್ತರವಾದ ವೇದಿಕೆಯ ಮೇಲೆ ಕಟ್ಟಿದ ಈ ವಾಸಗೃಹದ ಮುಂಭಾಗ ಹನ್ನೊಂದು ಕಮಾನುಗಳಿಂದ ರಚಿತವಾಗಿದ್ದು, ಮಧ್ಯದ ಕಮಾನಿನಲ್ಲಿ ಕಟ್ಟಡದೊಳಕ್ಕೆ ಹಾಗೂ ಪಕ್ಕಗಳಿಗೆ ಹೋಗಲು ಮೆಟ್ಟಿಲುಗಳಿವೆ. ನಾಲ್ಕೂ ಕಡೆಗೆ ದೊಡ್ಡ ಹಜಾರವಿದ್ದು ಮಧ್ಯೆ ಮುಕ್ತ ಅಂಗಳವಿದೆ. ಕಮಾನುಗಂಬ ಗಳನ್ನು ಆಧರಿಸಿದ ಛಾವಣಿ ಈ ಕಟ್ಟಡದ ಇನ್ನೊಂದು ವಿಶೇಷ. ಲಾಂಗ್‌ಹರ್ಸ್ಟ್ ಊಹಿಸಿರುವಂತೆ ಬಹುಶಃ ಈ ಕಟ್ಟಡದ ಕಂಬಗಳ ನಡುವೆ ತೆಳುಗೋಡೆ ಕಟ್ಟಿ ರೂಪಿಸಿದ ಕೊಠಡಿಗಳಲ್ಲಿ ಕರ್ತವ್ಯನಿರತರಾದ ಪಹರೆದಳದವರು ಉಳಿದುಕೊಳ್ಳುತ್ತಿದ್ದರು.

ರಾಣಿಯರ ಸ್ನಾನಗೃಹ, ಹಂಪಿ

ರಾಣಿಯರ ಸ್ನಾನಗೃಹ ಅಥವಾ ಜಲಕ್ರೀಡಾಸೌಧ ಇನ್ನೊಂದು ಮುಖ್ಯ ಕಟ್ಟಡ. ಚೌಕಾಕಾರದ ಈ ಸೌಧ ಹೊರಗಿನಿಂದ ಅತ್ಯಂತ ಸರಳವಾಗಿ ಕಂಡರೂ ಒಳಾಂಗಣದಲ್ಲಿ ಸುಂದರ ಅಲಂಕರಣಗಳಿಂದ ಕೂಡಿದೆ. ಮಧ್ಯದಲ್ಲಿ ಚೌಕಾಕಾರದ ನೀರಿನ ತೊಟ್ಟಿ, ನಾಲ್ಕೂ ಬದಿಗೆ 24 ಕಮಾನಿನ ಛಾವಣಿಯ ಪ್ರಾಂಗಣ, ಹೊರಪರಿಧಿಯಲ್ಲಿ ಆಳವಾದ ಕಂದಕಗಳಿರುವ ಈ ಕಟ್ಟಡದ ಹೊರಗೋಡೆಯಲ್ಲಿ ಸಣ್ಣ ಕಮಾನುಗಳ ಕಿಟಕಿಗಳನ್ನು ರೂಪಿಸಿದೆ. ಪ್ರಾಂಗಣದ ಕಮಾನುಗಳ ಪರಿಧಿಯಲ್ಲಿ ಮತ್ತು ಮೇಲೆ ಸುಂದರವಾದ ಕೊರೆದಗಾರೆಯ ಅಲಂಕರಣವಿದ್ದು, ಒಳಛಾವಣಿಯ ವೃತ್ತ, ಚೌಕ, ಅಷ್ಟಭುಜ, ಆಯತಾಕಾರದ ಫಲಕಗಳಿಂದ ಕೂಡಿದೆ. ಪುಷ್ಪಫಲಕ, ಕಮಲದಮೊಗ್ಗು, ಅರಳಿದ ಹೂದಳ, ಗಿಣಿಗಳ ಸಾಲು, ತ್ರಿದಳಪುಷ್ಪ, ಹೂಬಳ್ಳಿಗಳು, ಸರಪಳಿಗಳು ಮುಂತಾದ ಅನೇಕ ವಿನ್ಯಾಸಗಳನ್ನು ಇಲ್ಲಿ ಕಾಣಬಹುದು. ಕಾಲುವೆ ಮತ್ತು ಕೊಳಕ್ಕೆ ಮುಂಚಾಚಿರುವ ಕಮಾನಿನ ಅಟ್ಟಣಿಗೆಗಳು ಒಳಾಂಗಣದ ಇನ್ನೊಂದು ಗಮನಾರ್ಹ ಅಂಶ. ಈ ಕಟ್ಟಡದ ಪೂರ್ವದ ಗೋಡೆಯಲ್ಲಿರುವ ಸಣ್ಣ ಕಲ್ಲಿನ ಕಾಲುವೆಯಿಂದ ಕೊಳಕ್ಕೆ ನೀರು ತುಂಬಿಸಲಾಗುತ್ತಿತ್ತು. ಕಾಲಕಾಲಕ್ಕೆ ಮಲಿನ ನೀರನ್ನು ಹೊರಹಾಕಲು ಕೊಳದ ತಳದಲ್ಲಿ ವಿಶೇಷವಾಗಿ ರೂಪಿಸಿದ ತೂಬುರಂಧ್ರಗಳಿವೆ.

ವಿಜಯನಗರ ಸಾಮ್ರಾಜ್ಯದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ವಾಸ್ತುನಿರ್ಮಿತಿ ಮಹಾನವಮಿದಿಬ್ಬ. ಕೃಷ್ಣದೇವರಾಯನ ದಿಗ್ವಿಜಯಗಳ ಸಂಕೇತವಾಗಿ 1513ರ ವೇಳೆಗೆ ಈ ಕಟ್ಟಡ ಈಗಿರುವಂತೆ ನಿರ್ಮಾಣವಾಯಿತೆಂದು ಕಾಣುತ್ತದೆ. ಅತ್ಯಂತ ಎತ್ತರವಾದ ಹಾಗೂ ಭವ್ಯವಾದ ಈ ಕಟ್ಟಡ ಮರದ ಕಂಬಗಳನ್ನಾಧರಿಸಿದ ಮೇಲಂತಸ್ತುಗಳು 1565ರ ನಿರ್ಣಾಯಕ ಯುದ್ಧಾನಂತರ ನಾಶವಾಗಿ ಈಗ ಆಯತಾಕಾರದ ಕಲ್ಲಟ್ಟಡದ ವೇದಿಕೆಯ ಭಾಗ ಮಾತ್ರ ಗಟ್ಟಿಮುಟ್ಟಾಗಿ ಉಳಿದಿದೆ. ಈ ವೇದಿಕೆಯ ನಾಲ್ಕೂ ಹೊರಮುಖದಲ್ಲಿ ನಾನಾರೀತಿಯ ಸಾಮಾಜಿಕ ಜನಜೀವನದ ಚಿತ್ರಣಗಳನ್ನು ಬಿಡಿಸಿದೆ. ಈ ಚಿತ್ರಣಗಳು ತತ್‌ಸಮಕಾಲೀನ ಸಾಹಿತ್ಯ ಹಾಗೂ ವಿದೇಶಿ ಪ್ರವಾಸಕಥನಗಳಲ್ಲಿಯೂ ಪ್ರತಿಫಲಿಸಿವೆ. ಈ ವೇದಿಕೆಯ ಮೇಲಿಂದ ರಾಜನು ತನ್ನ ಕುಟುಂಬವರ್ಗ ಹಾಗೂ ಇತರ ರಾಜಪ್ರಮುಖರೊಡನೆ ಕುಳಿತು ನವರಾತ್ರಿಯ ಸಂಭ್ರಮದ ಉತ್ಸವಾದಿಗಳನ್ನು ವೀಕ್ಷಿಸುತ್ತಿದ್ದ.

ಇಲ್ಲಿನ ಶಿಲ್ಪಫಲಕಗಳಲ್ಲಿ ಸಾಧಾರಣವಾಗಿ ಕಾಣದೊರೆಯುವ ವಸ್ತು ಬೇಟೆ, ಆನೆ, ಹುಲಿ, ಜಿಂಕೆ, ಕಾಡುಹಂದಿ ಮತ್ತಿತರ ಪ್ರಾಣಿಗಳನ್ನು ಬೇಟೆಯಾಡುವುದು ಆ ಕಾಲದ ಜನಪ್ರಿಯ ಹವ್ಯಾಸಗಳಲ್ಲೊಂದು. ತನ್ನ ಆನೆಬೇಟೆಗಾಗಿ ಪ್ರಸಿದ್ಧನಾದ ಇಮ್ಮಡಿದೇವರಾಯ ಗಜಬೇಂಟೆಗಾರನೆಂದೇ ಹೆಸರಾಗಿದ್ದ. ಅಂದಿನ ಸಾಹಿತ್ಯ, ಶಾಸನ, ವಿದೇಶಿ ಪ್ರವಾಸಿಗರ ಆಕರಗಳಲ್ಲಿ ಬೇಟೆಯ ಪ್ರಸ್ತಾಪ ಪದೇ ಪದೇ ಬರುತ್ತದೆ. ತುಳುವ ವಂಶೀಯರ ಕಾಲದಲ್ಲಿ ರಾಜಧಾನಿಗೆ ಭೇಟಿ ನೀಡಿದ ಬಾರ್ಬೋಸ ಈ ರಾಜ್ಯದ ಜನರು ಹಾರಾಡುವ ಪಕ್ಷಿಗಳು ಮತ್ತು ಕಾಡು ಪ್ರಾಣಿಗಳೆರಡರ ಬೇಟೆಯಲ್ಲೂ ನಿಷ್ಣಾತರು. ಕೆಲವು ಸಣ್ಣ ಪ್ರಾಣಿಗಳು, ತೀರ ಉತ್ತಮವಾದವುಗಳೂ ಬೇಟೆಯಾಡಲ್ಪಡುತ್ತವೆ ಎಂದಿದ್ದಾನೆ. ಈ ಶಿಲ್ಪಪಟಿಕೆಗಳಲ್ಲಿನ ಇನ್ನೊಂದು ಮುಖ್ಯವಸ್ತು ಮಲ್ಲಯುದ್ಧ ಮತ್ತು ಮುಷ್ಟಿಯುದ್ಧ. ಮಹಾನವಮಿಯ ಹಬ್ಬದ ದಿನಗಳಲ್ಲಿ ರಾಜಧಾನಿಯಲ್ಲಿ ಅನೇಕ ವಿವಿಧ ಜಟ್ಟಿಕಾಳಗಗಳ ಸ್ಪರ್ಧೆ ನಡೆಯುತ್ತಿದ್ದು ಪೇಯಿಸ್ ಅವುಗಳ ಮನೋಜ್ಞ ಚಿತ್ರಣ ನೀಡಿದ್ದಾನೆ. ಇವಲ್ಲದೆ ಭರತನಾಟ್ಯ ಮತ್ತು ಗ್ರಾಮೀಣ ನೃತ್ಯಕಲಾಪ್ರಕಾರವಾದ ಕೋಲಾಟದ ಚಿತ್ರಣಗಳೂ ಸಾಕ್ಷಿವೆ. ಕೋಲಾಟ ವಿಜಯನಗರದ ಕಾಲದಲ್ಲಿಯೂ ಇಂದಿಗೂ ಬಹು ಜನಪ್ರಿಯವಾದ ಜನಪದನೃತ್ಯ. ಶಿವಮೊಗ್ಗ ಜಿಲ್ಲೆಯ ಇಕ್ಕೇರಿಯಲ್ಲಿ 1623ರಲ್ಲಿ ಕೋಲಾಟದ ಸೊಬಗನ್ನು ವೀಕ್ಷಿಸಿದ್ದ ಪಿಯತ್ರೊ ಡೆಲ್ಲಾವೆಲ್ಲ ಈ ಆಟದ ಸುಂದರವರ್ಣನೆ ನೀಡಿದ್ದಾನೆ: ಅವರಲ್ಲಿ ಪ್ರತಿಯೊಬ್ಬರೂ ಎರಡೂ ಕೈಗಳಲ್ಲಿ ಒಂದು ಮೊಳ ಅಥವಾ ಅದಕ್ಕಿಂತ ಸ್ವಲ್ಪ ದೊಡ್ಡದಾದ ದುಂಡನೆಯ ಕೋಲುಗಳನ್ನು ಹಿಡಿದು ನಿಯಮಿತ ಕಾಲದಲ್ಲಿ ಲಯಕ್ಕೆ ತಕ್ಕಂತೆ, ಉಳಿದ ಸಂಗೀತ ವಾದ್ಯಗಳ ಹಿಮ್ಮೇಳಕ್ಕೆ ಹೊಂದಿಕೊಂಡಂತೆ ಘಟ್ಟಿಸುತ್ತಾರೆ. ಅವರಲ್ಲಿಯೇ ಒಬ್ಬ ಪರಿಣತ ಗಾಯಕ ಹಾಡಿನ ಒಂದೊಂದು ಚರಣವನ್ನು ನುಡಿದ ಮೇಲೆ ಎಲ್ಲರೂ ಅದನ್ನು ಲಯಕ್ಕೆ ತಕ್ಕಂತೆ ಏಳೆಂಟು ಸಲ ಕೋಲೆ, ಕೋಲೆ, ಕೋಲೆ ಎಂದು ಹಾಡುತ್ತಾರೆ. ಇದರರ್ಥ ಏನೆಂದು ನನಗೆ ತಿಳಿದಿಲ್ಲವಾದರೂ ಇದೊಂದು ಹರ್ಷೋದ್ಗಾರವಿರಬೇಕೆನಿಸುತ್ತದೆ. ಹೀಗೆ ಹಾಡುತ್ತಾ ಎಂಟು ಹತ್ತು ಜನರ ಗುಂಪು ಬೀದಿಯುದ್ದಕ್ಕೂ ಸಾಗುತ್ತದೆ ಎಂದಿದ್ದಾನೆ. ಈ ಭಿತ್ತಿ ಶಿಲ್ಪಗಳ ಜೊತೆಗೆ ದೊಂಬರಾಟ, ಕುದುರೆ ವ್ಯಾಪಾರಿಗಳು, ಆನೆ, ಒಂಟೆಗಳ ಸಾಲು, ಬೇರೆ ಬೇರೆ ರೀತಿಯ ನೃತ್ಯ, ಸಂಗೀತ, ಹೋಳಿ ಹಬ್ಬ ಅಥವಾ ಓಕುಳಿಯಾಟದ ಚಿತ್ರಣಗಳೂ ಅಲ್ಲಲ್ಲಿ ಕಾಣದೊರೆಯುತ್ತವೆ.

ರಾಜಧಾನಿಯ ಸಾಮಾಜಿಕ ಕಟ್ಟಡಗಳಲ್ಲಿ ಅತ್ಯಂತ ಭವ್ಯ ಹಾಗೂ ಬೃಹದ್ಗಾತ್ರದ್ದು 100 ಕಂಬಗಳ ರಾಜಸಭಾಂಗಣ. ರಾಜಾಂಗಣ ಪ್ರದೇಶದ ಈಶಾನ್ಯಕ್ಕೆ ಹಾಗೂ ರಾಮಚಂದ್ರ ದೇವಾಲಯದ ದಕ್ಷಿಣಕ್ಕಿರುವ ಈ ಕಟ್ಟಡ 14ನೆಯ ಶತಮಾನಾರಂಭದಲ್ಲಿ ಕಟ್ಟಿದ ಹಂಪಿಯ ಮೊದಮೊದಲ ಕಟ್ಟಡಗಳಲ್ಲಿ ಒಂದು. ಎತ್ತರದ ವೇದಿಕೆಯ ಚೌಕಾಕಾರದ ಈ ಕಟ್ಟಡ ರಾಜರ ದರ್ಬಾರ್ ನಡೆಸಲು ಬಳಸಲಾಗುತ್ತಿತ್ತು. ಹತ್ತು ಸಾಲಿನ, ತಲಾ ಹತ್ತು ಮರದ ಕಂಬಗಳನ್ನು ಆಧರಿಸಿದ್ದ ಮರದ ಮೇಲ್ಕಟ್ಟಡ ಪೂರ್ತಿ ನಾಶವಾಗಿದೆ. ಸಭಾಂಗಣದ ನೆಲದ ಮೇಲಿರುವ ಕುಳಿಸಹಿತವಾದ ಕಲ್ಲಿನ ಕಂಬಪೀಠಗಳು ಮತ್ತು ಅಧಿಷ್ಠಾನ ಮಾತ್ರ ಉಳಿದಿವೆ. ಈ ಸಭಾಂಗಣದ ದಕ್ಷಿಣತುದಿಗೆ ಎತ್ತರವಾದ ಮೆಟ್ಟಿಲುಗಳಿರುವ ವೇದಿಕೆ ಹಾಗೂ ಪಶ್ಚಿಮದಲ್ಲಿ ರಾಣೀವಾಸದವರು ಸಭೆಯ ಕಲಾಪಗಳನ್ನು ವೀಕ್ಷಿಸಲು ಏರ್ಪಾಡಿದ್ದ ಕೊಠಡಿಗಳಿವೆ. ವೇದಿಕೆಯ ಮೇಲೆ ಸಿಂಹಾಸನಾರೂಢನಾಗಿ ರಾಜ ಕುಳಿತುಕೊಳ್ಳುತ್ತಿದ್ದ. ಅಬ್ದುಲ್ ರಜಾಕ್‌ನ ಹೇಳಿಕೆಯಂತೆ ರಾಜಸಭಾಂಗಣ ರಾಜಧಾನಿಯ ಉಳಿದೆಲ್ಲ ಕಟ್ಟಡಗಳಿಗಿಂತ ಉನ್ನತವೂ ಭವ್ಯವೂ ಆಗಿತ್ತು. ಈ ವೇದಿಕೆಗೆ ಎದುರಾಗಿ ಪೂರ್ವಕ್ಕೆ 12.6ಮೀ ಉದ್ದ, 1.2ಮೀ ಅಗಲವಾದ ಒಂದೇಕಲ್ಲಿನ ದೋಣಿಯಿದೆ. ದರ್ಬಾರಿಗಾಗಿ ಬಂದಿದ್ದ ರಾಜ ಮತ್ತು ಅಧಿಕಾರಿಗಳ ಕುದುರೆಗಳಿಗೆ ನೀರುಣಿಸಲು ಈ ದೋಣಿ ಉಪಯೋಗವಾಗುತ್ತಿತ್ತು.

ರಕ್ಷಣಾವಾಸ್ತು: ವಿಜಯನಗರ ರಾಜಧಾನಿಯ ವಿನ್ಯಾಸ ಮಧ್ಯಯುಗದ ರಕ್ಷಣಾವಾಸ್ತುವಿನ ಅಧ್ಯಯನಕ್ಕೆ ಮಹತ್ವದ ಪುರಾತತ್ತ್ವೀಯ ಆಕರ ಸಾಮಗ್ರಿಯನ್ನೊದಗಿಸುತ್ತದೆ. ಎತ್ತರವಾದ ಕಣಶಿಲೆಯ ಚಿತ್ರ ವಿಚಿತ್ರ ರೂಪದ ಬಂಡೆಗಳಿಂದ ಕೂಡಿದ ಹಂಪಿಯ ಪರಿಸರ ಸ್ವಾಭಾವಿಕವಾಗಿಯೇ ದುರ್ಗಮವಾಗಿದ್ದು, ಅಲ್ಲಲ್ಲಿ ಹಾವಿನಂತೆ ಹರಿಯುವ ಕೋಟೆಗೋಡೆಗಳ ಸಾಲು ಈ ನಗರವನ್ನು ಇನ್ನಷ್ಟು ಅಭೇದ್ಯವಾಗಿಸಿದೆ. ವಿವಿಧ ರೀತಿಯ ಆವರಣಗಳು, ಅವನ್ನೆಲ್ಲ ಸುತ್ತುವರೆದ ಎತ್ತರವಾದ ಕೋಟೆಗೋಡೆ, ಮುಖ್ಯಸ್ಥಳಗಳಲ್ಲಿ ಭದ್ರತಾದೃಷ್ಟಿಯಿಂದ ಸುರಕ್ಷಿತವಾಗಿರುವಂತೆ ರೂಪಿಸಿದ ಭವ್ಯ ಪ್ರವೇಶದ್ವಾರಗಳು ಇಲ್ಲಿನ ರಕ್ಷಣಾವಾಸ್ತುವಿನ ಮುಖ್ಯಾಂಗಗಳು. ಏಳುಸುತ್ತಿನ ಕೋಟೆಯ ಬಗೆಗೆ ವಿಶೇಷವಾಗಿ ಪ್ರಸ್ತಾಪಗಳಿದ್ದರೂ ಒಂದನ್ನೊಂದು ಸುತ್ತುವರೆದ ಕನಿಷ್ಠ ಐದುಗೋಡೆಗಳ ಅವಶೇಷಗಳು ಇಂದಿಗೂ ಕಾಣದೊರೆಯುತ್ತವೆ. ಗೋಡೆಗಳನ್ನು ಬೃಹದ್ಗಾತ್ರದ ಕಣಶಿಲೆಯ ಬೆಣೆಯಾಕಾರದ ಖಂಡಗಳಿಂದ ಕಟ್ಟಿದ್ದು, ನಡುವೆ ಕಲ್ಲುಂಡು, ಚಕ್ಕೆ ಹಾಗೂ ಮಣ್ಣು ತುಂಬಿದೆ. ಗಾರೆ ಮುಂತಾದ ಯಾವ ಬಂಧಕಸಾಮಗ್ರಿಯನ್ನು ಉಪಯೋಗಿಸಿಲ್ಲ. ಬುಡದಲ್ಲಿ ಅಗಲವಾಗಿದ್ದು ಕ್ರಮೇಣ ಚೂಪಾಗುತ್ತ ಸಾಗುವ ಗೋಡೆ ಗರಿಷ್ಠ 8ಮೀ ಎತ್ತರವಿದ್ದು, ಹೊರಪರಿಧಿಯಲ್ಲಿ ಕೆಲವು ಆಯಕಟ್ಟಿನ ಸ್ಥಳಗಳಲ್ಲಿ ನೀರು ತುಂಬಿದ ಕಂದಕಗಳನ್ನು ಹೊಂದಿದೆ. ಸಿಂಗಾರದ ಹೆಬ್ಬಾಗಿಲು, ಉದಯಗಿರಿ ಬಾಗಿಲು, ಪೆನುಗೊಂಡೆಯ ಬಾಗಿಲು, ಭೀಮನ ಅಗಸೆ, ಗುಮ್ಮಟದ ಬಾಗಿಲು ಮುಂತಾದ ಮುಖ್ಯ ಪ್ರವೇಶದ್ವಾರಗಳಲ್ಲದೆ ಅರೆಶಂಕರ ಬಾಗಿಲು, ಹೊಡೆಯ ಬಾಗಿಲು, ಸೋಮವಾರದ ಬಾಗಿಲು, ಬೇಟೆಗಾರರ ಬಾಗಿಲು ಮುಂತಾದ ಚಿಕ್ಕ ಪ್ರವೇಶದ್ವಾರಗಳ ಹೆಸರುಗಳು ಶಾಸನಗಳಲ್ಲಿ ದೊರೆಯುತ್ತವೆ.

ಕೋಟೆಯ ಹೊರಪರಿಧಿಗೆ ಹೊಂದಿಕೊಂಡಂತೆ, ಆಯಕಟ್ಟಿನ ಸ್ಥಳಗಳಲ್ಲಿ ದೂರದಿಂದ ನಗರಕ್ಕೆ ಬರುವ ಜನ, ಶತ್ರು ಸೈನಿಕರ ವರ್ತನೆಗಳನ್ನು ಗಮನಿಸಲು, ನಿಗಾವಹಿಸಲು ನೆರವಾಗುವಂತಹ ಚೌಕಾಕಾರದ ಕೊತ್ತಳಗಳನ್ನು (ಬುರುಜು) ಕಟ್ಟಿದೆ. ಸಮಕಾಲೀನ ಶಾಸನಗಳಲ್ಲಿ ಪ್ರತಾಪ ಕೊತ್ತಳ, ಮದನ ಕೊತ್ತಳ, ಆನೆಗೊಂದಿ ಕೊತ್ತಳ, ಮಾತಂಗ ದೇವರ ಕೊತ್ತಳ ಮುಂತಾದ ಬುರುಜುಗಳ ಉಲ್ಲೇಖವಿದೆ.

ರಾಜಧಾನಿಯ ರಕ್ಷಣಾವಾಸ್ತುವನ್ನು ವಿದೇಶಿ ಪ್ರವಾಸಿಗಳೂ ವರ್ಣಿಸಿದ್ದಾರೆ, ಅಬ್ದುಲ್ ರಜಾಕ್ ಮತ್ತು ಡೊಮಿಂಗೊ ಪೇಯಿಸ್‌ರ ಬರೆಹಗಳಲ್ಲಿ ಕೋಟೆಯ ಬಗೆಗೆ ಮಾಹಿತಿಯಿದೆ. ನಗರದ ಮುಖ್ಯಬಾಗಿಲಿಗೆ ಬಂದರೆ ಅಲ್ಲಿಂದ ಮುಂದೆ ಇನ್ನೊಂದು ಗೋಡೆ ನಗರದ

ಎಲ್ಲ ಆವರಣಗಳನ್ನು ಸುತ್ತುವರೆದಿರುವುದು ಕಂಡುಬರುತ್ತದೆ, ಈ ಕಲ್ಲಿನ ಗೋಡೆ ಬಲಿಷ್ಠ ಹಾಗೂ ಬೃಹದ್ಗಾತ್ರದ್ದಾದರೂ ಕೆಲವೆಡೆ ಶಿಥಿಲವಾಗಿದೆ. ಇಂತಹ ಗೋಡೆಯೊಳಗೆ ಅರಮನೆಗಳನ್ನು ಕಟ್ಟಲು ಮರೆತಿಲ್ಲ. ತಗ್ಗಾದ ಜಾಗದಲ್ಲಿ ಗೋಡೆಯಿರುವ ಕಡೆ ನೀರಿರುವ ಕಂದಕವೂ ಇದೆ. ಇದಲ್ಲದೆ, ಇದಕ್ಕಿಂತ ಪ್ರತ್ಯೇಕವಾದ ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ ಏರ್ಪಾಡಿನಲ್ಲಿ ಕೆಲವು ಚೂಪುತುದಿಯ, ಮನುಷ್ಯನ ಎದೆಮಟ್ಟದ ಎತ್ತರದ ಕಂಬಗಳನ್ನು ನೆಟ್ಟಿದೆ. ಇವು ಕೋಟೆಯಿಂದ ಒಂದೂವರೆ ಭಲ್ಲೆಯಷ್ಟು ದೂರದಲ್ಲಿದ್ದು, ಅವುಗಳ ನಡುವಣ ಅಂತರವೂ ಅಷ್ಟೆ ಇದೆ. ಇಂತಹ ಕಲ್ಲುಗಳನ್ನು ಮುಖ್ಯ ಪ್ರವೇಶದ್ವಾರಗಳಲ್ಲಿ ನಿಲ್ಲಿಸಿ ಕುದುರೆ, ಆನೆಗಳ ಮೇಲೆ ಬಂದವರನ್ನು ತಪಾಸಣೆ ಮಾಡುತ್ತಿದ್ದರು.


ಲಕ್ಷ್ಮೀನರಸಿಂಹ, ಹಂಪಿ

**ಶಿಲ್ಪಕಲೆ:** ಸು.300 ವರ್ಷಗಳಿಗೂ ದೀರ್ಘಕಾಲ ವಿಜಯನಗರದ ಅರಸರು ದೇವಾಲಯ ನಿರ್ಮಾಣ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದರು. ಅರಸರು, ಅವರ ಮಂತ್ರಿಗಳು, ಸೇನಾಪತಿಗಳು ಮಾತ್ರವಲ್ಲದೆ, ವಿವಿಧ ಪಂಥಗಳಿಗೆ ಸೇರಿದ ಸಾಮಾನ್ಯ ಭಕ್ತ ಜನತೆ ಕೂಡ ತಂತಮ್ಮ ನಂಬುಗೆಯ ದೈವದ ಆಲಯಗಳನ್ನು ನಿರ್ಮಿಸಿ ಪ್ರೋತ್ಸಾಹಿಸಿತು. ಸಾಮ್ರಾಜ್ಯದ ರಾಜಧಾನಿ ಯಾದ ಹಂಪಿ, ಆಂಧ್ರದ ಲೇಪಾಕ್ಷಿ, ಪುಷ್ಪಗಿರಿ, ಶ್ರೀಶೈಲ, ತಾಡಪತ್ರಿ, ತಿರುಪತಿ, ಭಟ್ಟಿಪ್ರೋಲು ಮತ್ತು ಪೆನುಕೊಂಡೆಗಳಲ್ಲಿ, ತಮಿಳುನಾಡಿನ ಕುಂಭಕೋಣಂ, ಕಂಚಿ, ಚಿದಂಬರಂ, ಶ್ರೀರಂಗಗಳು ಈ ಯುಗದ ಶ್ರೇಷ್ಠ ಕಲಾ ಕೇಂದ್ರಗಳಾಗಿ ಹೊರಹೊಮ್ಮಿದವು. ತತ್ಫಲವಾಗಿ ಅದ್ಭುತ ವಾಸ್ತು ಸೌಂದರ್ಯದ ನೂರಾರು ದೇವಾಲಯಗಳು ನಿರ್ಮಾಣವಾದದ್ದಲ್ಲದೆ, ಆಗಲೇ ಅಸ್ತಿತ್ವದಲ್ಲಿದ್ದ ಹಲವಾರು ದೇವಾಲಯಗಳು ಪುನರುತ್ಥಾನಗೊಂಡವು.

ವಾಸ್ತು ಶಿಲ್ಪದಂತೆಯೇ ಶಿಲ್ಪಕಲೆಯಲ್ಲಿಯೂ ವಿಜಯನಗರದ ಕಲಾವಿದರು ಹಾಗೂ ಶಿಲ್ಪಿಗಳು ತಮ್ಮ ಬೃಹದ್ಭವ್ಯತೆಯನ್ನು ಮೆರೆದಿದ್ದಾರೆ. ಅದರೊಂದಿಗೆ ಕಂಬಗಳು ಮತ್ತು ಗೋಡೆಗಳ ಮೇಲೆ ನಾಗರಿಕ ಕುಸುರಿಯಷ್ಟು ನಯವಾದ ಕೆಲಸವನ್ನೂ ಮಾಡಿದ್ದಾರೆ. ಹಂಪಿಯಲ್ಲಿಯ ಧಾರ್ಮಿಕ ಮತ್ತು ನಾಗರಿಕ ಶಿಲ್ಪಗಳನ್ನು ಧಾರ್ಮಿಕ ಶಿಲ್ಪಗಳು ಮತ್ತು ಲೌಕಿಕ ಕಟ್ಟಡಗಳು ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದಾಗಿದೆ. ಕಟ್ಟಡಗಳು ಧಾರ್ಮಿಕ ಮತ್ತು ಲೌಕಿಕ ಎರಡೂ ಮಾದರಿಯಲ್ಲಿದ್ದು ಕಲ್ಲು ಮತ್ತು ಗಾರೆಗಳೆರಡನ್ನೂ ಒಳಗೊಂಡಿವೆ. ಗೋಡೆ ಹಾಗೂ ಕಂಬಗಳ ಮೇಲೆ ಮತ್ತು ಗೋಪುರದ ಮೇಲೆ ಶೈವ, ವೈಷ್ಣವ ಮತ್ತು ಜೈನ ಪಂಥಕ್ಕೆ ಸೇರಿದ ಶಿಲ್ಪಗಳು ಕಾಣಸಿಗುತ್ತವೆ. ಬೃಹದಾಕಾರ ವಿಜಯನಗರ

ಬಡವಿಲಿಂಗ, ಹಂಪಿ

ಕಾಲದ ಶಿಲ್ಪಗಳ ವಿಶಿಷ್ಟ ಲಕ್ಷಣವಾಗಿದ್ದರೂ ಇವು ತಮ್ಮ ಭವ್ಯತೆಯಿಂದಲೂ ಗಮನ ಸೆಳೆಯುತ್ತವೆ. ಹಂಪಿಯಲ್ಲಿ ಗ್ರಾನೈಟನ್ನು ಬಳಸಿ ಬೃಹದಾಕಾರ ಗಣೇಶ, ಉದ್ದಾನ ವೀರಭದ್ರ, ನಂದಿ, ಹನುಮಂತ, ನರಸಿಂಹ ಹಾಗೂ ಶಿವಲಿಂಗಗಳನ್ನು ಕೆತ್ತಲಾಗಿದೆ. ಉಗ್ರನರಸಿಂಹ ಎಂದು ಕರೆಯಲಾಗುವ ಲಕ್ಷ್ಮೀನರಸಿಂಹನ ವಿಗ್ರಹವನ್ನು 1528ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಕೆತ್ತಲಾಯಿತು. ದುರಾದೃಷ್ಟವಶಾತ್ 1565ರ ಧಾಳಿಯಲ್ಲಿ 6.7ಮೀ ಎತ್ತರದ ಈ ವಿಗ್ರಹವನ್ನು ವಿರೂಪಗೊಳಿಸಲಾಯಿತಲ್ಲದೆ, ಲಕ್ಷ್ಮಿಯ ವಿಗ್ರಹವನ್ನು ಸಂಪೂರ್ಣವಾಗಿ ನಾಶಗೊಳಿಸಲಾಯಿತು. ಆದರೂ ವಿಶಾಲ ವಕ್ಷಸ್ಥಳ, ದೊಡ್ಡ ಕಣ್ಣುಗಳಿಂದ ಕೂಡಿದ ಈ ನರಸಿಂಹ ಶಿಲ್ಪ ತನ್ನ ಸೌಂದರ್ಯವನ್ನು ಹೊರಸೂಸುತ್ತಲೇ ಇದೆ. ನರಸಿಂಹನ ತಲೆಯ ಮೇಲೆ ಪ್ರಭಾವಳಿಯಂತೆ ಏಳು ಹೆಡೆಯ ಆದಿಶೇಷ ಇದ್ದಾನೆ. ಹಂಪಿಯ ತುಂಗಭದ್ರಾ ದಂಡೆಯ ಮೇಲಿನ ಗುಂಡುಕಲ್ಲೊಂದರ ಮೇಲೆ ಕೆತ್ತಲಾಗಿರುವ ಇದರ ಪ್ರತಿರೂಪವೊಂದು ಈ ಶಿಲ್ಪದ ಅಂದಿನ ಭವ್ಯತೆಯನ್ನು ಊಹಿಸಲು ಸಹಾಯಮಾಡುತ್ತದೆ.

ಇನ್ನುಳಿದ ಬೃಹತ್ ಶಿಲ್ಪಗಳಲ್ಲಿ, ಕಡಲೆಕಾಳು ಗಣೇಶ ಮತ್ತು ಸಾಸಿವೆಕಾಳು ಗಣೇಶ ವಿಗ್ರಹಗಳು ನಿಜಕ್ಕೂ ಗಮನಾರ್ಹ. ತುಸು ಚಿಕ್ಕದಾದ ಸಾಸಿವೆಕಾಳು ಗಣೇಶ ಸಾಕಷ್ಟು ಉತ್ತಮ ಸ್ಥಿತಿಯಲ್ಲಿದೆ. ಹಾವು ಸುತ್ತಿದ ಡೊಳ್ಳು ಹೊಟ್ಟೆ, ಕೈಯಲ್ಲಿ ಪಾಶ, ಪರಶು, ಮೋದಕಗಳನ್ನು ಮತ್ತು ಮುರಿದ ದಂತವನ್ನು ಹಿಡಿದಿದ್ದಾನೆ. ಯಜ್ಞೋಪವೀತ, ಆಭರಣಗಳು ಮತ್ತು ಕಿರೀಟದ ಅಲಂಕಾರಗಳು ಸೂಕ್ಷ್ಮವಾಗಿದ್ದು ಗಮನ ಸೆಳೆಯುತ್ತವೆ.

ಲೇಪಾಕ್ಷಿಯಲ್ಲಿಯ ನಂದಿ ಸಮಕಾಲೀನವಾಗಿ ಕೆತ್ತಲಾದ ವಿಗ್ರಹಗಳಲ್ಲೆಲ್ಲಾ ಅತ್ಯಂತ ದೊಡ್ಡದು. ನೆಲದ ಮೇಲೆ ಒರಗಿರುವ ನಂದಿ ಇನ್ನೂ ಯೌವನಾವಸ್ಥೆಯಲ್ಲಿದ್ದು, ಸಣ್ಣ ತಲೆ, ಕಿರಿದಾದ ಮೂಗಿನ ಹೊಳ್ಳೆ, ಸಣ್ಣ ಕೊಂಬುಗಳಿಂದ ಕೂಡಿದೆ. ಸು.5.40 ಮೀ ಎತ್ತರ ಹಾಗೂ 9 ಮೀ ಉದ್ದದ ಈ ನಂದಿಯನ್ನು ಕೆಂಪು ಮರಳುಕಲ್ಲಿನಲ್ಲಿ ಕೆತ್ತಲಾಗಿದೆ. ಲೇಪಾಕ್ಷಿಯ ವೀರಭದ್ರ ದೇವಾಲಯದಲ್ಲಿಯ ನಾಗಲಿಂಗ ಇನ್ನೊಂದು ಗಮನಾರ್ಹ ಶಿಲ್ಪ. ಈ ಕಾಲದ ಕಂಬಗಳ ಮೇಲಿನ ಉಬ್ಬು ಶಿಲ್ಪಗಳು ಮತ್ತು ಗೋಪುರಗಳಲ್ಲಿಯ ಗಾರೆ ಶಿಲ್ಪಗಳು ವಿಶಿಷ್ಟವಾಗಿವೆ. ದೇವತೆಗಳ ಮೂರ್ತಿಶಿಲ್ಪಗಳು ಅಂದಿನ ಜನ ಸಾಮಾನ್ಯರ ಜೀವನದ ಅನೇಕ ಅಂಶಗಳನ್ನು ಪ್ರತಿಫಲಿಸುತ್ತವೆ.

ಗಣೇಶ, ಹಂಪಿ

ವಿಜಯನಗರದ ಕಂಬಗಳು ಸಾಮಾನ್ಯವಾಗಿ ಚತುರ್ಮುಖವಾಗಿದ್ದು ಮುಖಭಾಗದಲ್ಲಿ ಸಾಮಾನ್ಯವಾಗಿ 30 ಸೆಂಮೀ ಎತ್ತರದ ದೇವ, ದೇವತೆಗಳ, ಪೌರಾಣಿಕ ಕಥೆಗಳ ಸಣ್ಣ ಕೆತ್ತನೆಗಳನ್ನು ಹೊಂದಿರುತ್ತವೆ. ಇವುಗಳಲ್ಲಿ ಬಹಳಷ್ಟು ಶೈವ-ವೈಷ್ಣವ ಪರಂಪರೆಯಿಂದ ಪ್ರೇರಿತವಾಗಿದ್ದು, ಇಲ್ಲಿ ಸಾಮಾನ್ಯವಾಗಿ ವಿಷ್ಣುವಿನ ದಶಾವತಾರ, ಬೆಣ್ಣೆ ಕದಿಯುತ್ತಿರುವ ಕೃಷ್ಣ, ಕಾಳಿಂಗ ಮರ್ದನ, ವೇಣುಗೋಪಾಲ, ಗೋಪಿಕಾ ವಸ್ತ್ರಾಪಹರಣ, ಗಣೇಶ, ಹನುಮಾನ್, ಗರುಡ, ನಂದಿ, ರಾಮ, ನಾಗಲಿಂಗ, ಭೈರವ, ಶಿವ ಮತ್ತು ಪಾರ್ವತಿ, ಆಳ್ವಾರರು ಹಾಗೂ ಶ್ರೀ ವೈಷ್ಣವತ್ವದ ಸಂಕೇತಗಳಾದ ತಿರುನಾವು, ಶಂಖ, ಚಕ್ರ, ಪೌರಾಣಿಕ ಪ್ರಾಣಿಗಳಾದ ಅರೆಸಿಂಹ-ಅರೆಮಾನವ, ಕಿನ್ನರರು, ಕಿನ್ನರಿಯರ ಕೆತ್ತನೆಗಳು ಬಹಳಷ್ಟು ಇವೆ. ಬಹುತೇಕ ಎಲ್ಲ ಶಿವಾಲಯಗಳಲ್ಲಿ ಬೇಡರ ಕಣ್ಣಪ್ಪನ ಶಿಲ್ಪವಿದೆ. ನಂಜನಗೂಡಿನ ದೇವಾಲಯದಲ್ಲಿ, ಕಣ್ಣಪ್ಪ, ಸಿರಿಯಳ, ಅರಿವಳ್ಳಂದರ್ ಮುಂತಾದ ಎಲ್ಲ 63 ಶಿವಪುರಾಣದ ಕೆತ್ತನೆಗಳು ಕಾಣಸಿಗು ತ್ತವೆ. ಕಂಬಗಳ ಮೇಲಿನ ಕೆತ್ತನೆಗಳಲ್ಲಿ ಹಿರಣ್ಯಕಶ್ಯಪುವನ್ನು ಕೊಲ್ಲುತ್ತಿರುವ ನರಸಿಂಹ ಶಿಲ್ಪ ಉಲ್ಲೇಖಾರ್ಹ. ಇಂಥ ಒಂದು ಶಿಲ್ಪವನ್ನು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಕಾಣಬಹುದು. ಬಹುತೇಕ ಈ ಶಿಲ್ಪಗಳ ಉದ್ದೇಶ ಅಲಂಕಾರವಾಗಿದ್ದರೂ ಇವು ಕಂಬಗಳ ಬೇರೆ ಭಾಗಗಳ ಮೇಲೂ ಕಾಣಸಿಗುತ್ತವೆ. ಉದಾ: ಹಂಪಿಯ ವಿಠ್ಠಲ ದೇವಾಲಯ ಹಾಗೂ ಕಲ್ಯಾಣ ಮಂಟಪಗಳ ಕಂಬಗಳಲ್ಲಿ ರಾಮಾಯಣದ ದೃಶ್ಯಗಳನ್ನು, ಶ್ರೀ ರಂಗಂನ ಮಂಟಪದ ಕಂಬಗಳ ಮೇಲೆ ಪ್ರಹ್ಲಾದ ಮತ್ತು ನರಸಿಂಹ ಕಥೆಯ ದೃಶ್ಯಾವಳಿಗಳನ್ನು ಕಾಣಬಹುದು. ಹಂಪಿಯ ಅಚ್ಯುತರಾಯ ದೇವಾಲಯದ ಕಂಬಗಳ ಮೇಲಿನ ಗಜೇಂದ್ರ ಮೋಕ್ಷದ ಕೆತ್ತನೆಗಳು ಈ ಶಿಲ್ಪಗಳ ಸೂಕ್ಷ್ಮ ಕೆತ್ತನೆಗೆ ಉದಾಹರಣೆಯಾಗಿವೆ. ಇದಲ್ಲದೆ ಕಂಬಗಳ ಮೇಲೆ ಸಂಗೀತ-ನೃತ್ಯಗಾರರು, ಸಿಂಹ ಮುಂತಾದವು ಸಾಮಾನ್ಯವಾಗಿ ಕಂಡುಬರುತ್ತವೆ. ಈ ಯುಗದ ಕಂಭಗಳು ಉದ್ದ ಸಾಲಿನಲ್ಲಿ ನಿರ್ಮಾಣವಾಗಿದ್ದು, ಸವಾರರನ್ನು ಹೊಂದಿದ ಬೃಹತ್ ಯಾಳಿ ಅಥವಾ ಕುದುರೆಯೊಂದಿಗೆ ನಿರ್ಮಿತವಾಗಿದ್ದು ಗಮನ ಸೆಳೆಯುತ್ತವೆ.

ವಿಜಯನಗರದ ಶಿಲ್ಪಿಗಳು ರಾಮಾಯಣ, ಮಹಾಭಾರತ, ಭಾಗವತ ಮತ್ತು ಶಿವ ಭಕ್ತ ಸಿರಿಯಾಳನ ಕಥೆಗಳನ್ನು ಕಂಡರಿಸಿದ್ದಾರೆ. ಹಂಪಿಯ ಹಜಾರ ರಾಮ ದೇವಾಲಯ, ವಿಠ್ಠಲ ದೇವಾಲಯದ ಸಮೀಪದ ಹಳೆಯ ವಿಷ್ಣು ದೇವಾಲಯ, ಪೆನುಗೊಂಡೆಯ ದೇವಾಲಯ, ತಾಡಪತ್ರಿಯ ಚಿಂತಾಲ ವೆಂಕಟರಮಣ, ಕಾಂಚಿಯ ವರದರಾಜ ಸ್ವಾಮಿ

ಮತ್ತು ಲೇಪಾಕ್ಷಿಯ ವೀರಭದ್ರ ದೇವಾಲಯಗಳು ಅವುಗಳಲ್ಲಿಯ ಶಿಲ್ಪ ಕೆತ್ತನೆಗಳಿಗೆ ಹೆಸರುವಾಸಿಯಾಗಿವೆ. ಬಹುತೇಕ ಚಿತ್ರಪಟ್ಟಿಕೆಗಳು ದೇವಾಲಯದ ಹೊರಗೋಡೆಗಳ ಇಲ್ಲವೆ ಪ್ರಾಕಾರದ ಗೋಡೆಗಳ ಮೇಲೆ ಕೆತ್ತಲ್ಪಟ್ಟಿವೆ. ಹಜಾರ ರಾಮ ದೇವಾಲಯದಲ್ಲಿಯ ರಾಮಾಯಣದ ಶಿಲ್ಪಗಳು ಎದ್ದು ಕಾಣುತ್ತವೆಯಾದರೂ ಸ್ವಲ್ಪ ಮಟ್ಟಿಗೆ ಅವುಗಳಲ್ಲಿ ಪೆಡಸುತನ ಕಾಣುತ್ತದೆ. ಆದರೆ ಹಳೆಯ ವಿಷ್ಣು ದೇವಾಲಯದಲ್ಲಿಯ ಕೆತ್ತನೆಗಳು ಸೂಕ್ಷ್ಮವಾಗಿವೆ. ವೆಂಕಟರಮಣ ದೇವಾಲಯದಲ್ಲಿಯ ಶಿಲ್ಪಗಳು ಚಾತುರ್ಯದಿಂದ ಕೆತ್ತಲಾದವುಗಳು. ಇಲ್ಲಿ ಕೆತ್ತಲಾಗಿರುವ ಶಿಲ್ಪಗಳ ಪೈಕಿ, ರಾಮ ಏಳು ಮರಗಳನ್ನು ಕತ್ತರಿಸುವುದು, ರಾವಣನಿಗೆ ಉಪದೇಶಮಾಡುವ ಕಾಲನೇಮಿ ಮತ್ತು ರಾವಣನ ಆಸ್ಥಾನದಲ್ಲಿ ತನ್ನ ಬಾಲದ ಸುರುಳಿಯ ಮೇಲೆ ರಾವಣನಿಗಿಂತ ಎತ್ತರದಲ್ಲಿ ಕುಳಿತುಕೊಳ್ಳುವ ಹನುಮಂತನ ದೃಶ್ಯಗಳಿದ್ದು–ಇವು ವಾಲ್ಮೀಕಿ ರಾಮಾಯಣದಲ್ಲಿ ಕಂಡುಬರುವುದಿಲ್ಲ. ಇವು ಸ್ಥಳೀಯ ಪರಂಪರೆಯ ಕಥೆಗಳನ್ನಾಧರಿಸಿದ್ದು, ರಾಮ ಏಳು ಮರಗಳನ್ನು ಕತ್ತರಿಸುವ ಕಥೆ ಕನ್ನಡದ ಆನಂದ ರಾಮಾಯಣದಿಂದಲೂ ರಾವಣನಿಗೆ ಕಾಲನೇಮಿ ಸಲಹೆ ನೀಡುವುದು ತೆಲುಗಿನ ರಂಗನಾಥ ರಾಮಾಯಣದಿಂದಲೂ ಪಡೆದವುಗಳಾಗಿವೆ.

ಅನೇಕ ತೆಲುಗು ಕೃತಿಗಳಿಗೆ ಪ್ರೇರಣೆಯಾಗಿರುವ ಕೃಷ್ಣನ ಕಥೆ ಇಲ್ಲಿ ಶಿಲ್ಪಿಗಳ ಕೈಚಳಕದಲ್ಲಿ ಒಡಮೂಡಿದೆ. ಮುಖ್ಯವಾಗಿ ಬೆಣ್ಣೆ ಕದಿಯುವ ಕೃಷ್ಣ, ಕಾಳಿಂಗ ಮರ್ಧನ, ಬಕಾಸುರ ವಧಾ, ಗೋಪಿಕಾ ವಸ್ತ್ರಾಪಹರಣ, ಗೋವರ್ಧನಗಿರಿಧಾರಿ ಮತ್ತು ಮದನಗೋಪಾಲ ಶಿಲ್ಪಗಳು ಕಾಣಸಿಗುತ್ತವೆ.

ಲೇಪಾಕ್ಷಿಯಲ್ಲಿನ ವೀರಭದ್ರ ದೇವಾಲಯದಲ್ಲಿ 63 ಶೈವ ಪುರಾಣಗಳಲ್ಲೊಂದಾದ ಸಿರಿಯಾಳನ ಕತೆಯ ಶಿಲ್ಪ ಸರಣಿಯನ್ನು ಹೊಂದಿದೆ. ಈ ಕಾಲದ ಶಿಲ್ಪಗಳಲ್ಲಿ ದಾಸ ವಿಷ್ಣು, ಅಷ್ಟಭುಜ ವಿಷ್ಣು, ನಟರಾಜನ ಭಂಗಿಯಲ್ಲಿ ದೈತ್ಯನ ಮೇಲೆ ನರ್ತನ ಮಾಡುತ್ತಿರುವ ವಿಷ್ಣುವಿನ ಶಿಲ್ಪಗಳು ಕಂಚಿಯ ವರದರಾಜಸ್ವಾಮಿ ದೇವಾಲಯದಲ್ಲಿ ಕಂಡುಬಂದಿದ್ದು, ಮೂರ್ತಿ ಶಿಲ್ಪಕಲೆಯಲ್ಲಿಯೇ ವಿಶಿಷ್ಟವಾಗಿವೆ. ದೇವನ ಸೇವೆಗೆ ಸದಾ ಸಿದ್ಧಭಂಗಿಯಲ್ಲಿರುವ ತಿರುಕಂಚಿ ನಂಬಿಯ ಶಿಲ್ಪ ಇಲ್ಲಿಯ ಇನ್ನೊಂದು ಪ್ರಮುಖ ಶಿಲ್ಪ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಚಿತ್ರಪಟ್ಟಿಕೆಯಲ್ಲಿನ ಶಿಲ್ಪ ಸರಣಿಯಲ್ಲಿ ಸಂಧ್ಯಾತಾಂಡವ ನೃತ್ಯವನ್ನಾಡುತ್ತಿರುವ ಶಿವ, ಅದನ್ನು ವೀಕ್ಷಿಸುತ್ತಿರುವ ಬ್ರಹ್ಮ, ವಿಷ್ಣು, ನಂದಿ, ಪಾರ್ವತಿ ಶಿಲ್ಪಗಳಿವೆ. ಪುಷ್ಪಗಿರಿಯಲ್ಲಿರುವ ಶಿವನ ಶಿಲ್ಪದಲ್ಲಿ ಕಿವಿಯಲ್ಲಿ ಕುಂಡಲಗಳು ಮತ್ತು ಕಾಲಲ್ಲಿ ಕಿಂಕಿಣಿ ಎದ್ದು ಕಾಣುವಂತಿವೆ. ಹಂಪಿಯ ವಿರೂಪಾಕ್ಷ ದೇವಾಲಯದ ನವರಂಗದ ಹೊರಾಂಗಣ ಗೋಡೆಯ ಮೇಲೆ ಮರದ ಕೆಳಗೆ ಕುಳಿತಿರುವ ದಕ್ಷಿಣಾಮೂರ್ತಿ ಶಿಲ್ಪವನ್ನು, ಮೂರು ಕಣ್ಣುಗಳೊಂದಿಗೆ ಕೆದರಿದ ಜಡೆಯೊಂದಿಗೆ ಆಸೀನನಾಗಿರುವಂತೆ ರೂಪಿಸಲಾಗಿದೆ. ಮೇಲಿನ ಎರಡು ಕೈಗಳಲ್ಲಿ ಸರ್ಪ ಮತ್ತು ಅಗ್ನಿಗಳಿದ್ದು, ಕೆಳಗಿನ ಕೈಗಳಲ್ಲಿ ಒಂದು ಅಭಯ ಮುದ್ರೆಯಲ್ಲಿದ್ದರೆ, ಇನ್ನೊಂದನ್ನು ಮಂಡಿಯ ಮೇಲಿಟ್ಟಿದ್ದಾನೆ. ಇದೊಂದು ಅಪೂರ್ವ ಕೆತ್ತನೆಯಾಗಿದೆ. ಇನ್ನೊಂದು ದಕ್ಷಿಣಾಮೂರ್ತಿ ಶಿಲ್ಪವನ್ನು ಶೃಂಗೇರಿಯ ವಿದ್ಯಾಶಂಕರ ದೇವಾಲಯದಲ್ಲಿ ಕಾಣಬಹುದು.

**ವೀರಭದ್ರ ದೇವಾಲಯದಲ್ಲಿರುವ ವರ್ಣಚಿತ್ರ, ಲೇಪಾಕ್ಷಿ**

ಪುಷ್ಪಗಿರಿಯ ಸಂತೆಮಲ್ಲೇಶ್ವರ ದೇವಾಲಯದ ಭಗವದ್ಗೀತೆಯನ್ನು ಬೋಧಿಸುತ್ತಿರುವ ಕೃಷ್ಣನ ಶಿಲ್ಪ ಮನಮೋಹಕವಾಗಿದೆ. ಅರ್ಜುನ ಅಂಜಲಿ ಹಸ್ತನಾಗಿದ್ದಾನೆ. ಇದು ದಕ್ಷಿಣ ಭಾರತದಲ್ಲೇ ಒಂದು ಅಪರೂಪದ ಶಿಲ್ಪ.

ಲೇಪಾಕ್ಷಿಯ ವೀರಭದ್ರ ದೇವಾಲಯದ ಕಲ್ಯಾಣ ಮಂಟಪ ಮತ್ತು ನಾಟ್ಯ ಮಂಟಪಗಳಲ್ಲಿಯ ಶಿಲ್ಪಗಳ ಉಲ್ಲೇಖವಿಲ್ಲದೆ, ವಿಜಯನಗರದ ಶಿಲ್ಪದ ವರ್ಣನೆ ಅಪೂರ್ಣವಾಗುತ್ತದೆ. ಇಲ್ಲಿಯ ಅಷ್ಟದಿಕ್ಪಾಲಕರು, ಕಲ್ಯಾಣಸುಂದರ ಮೂರ್ತಿ, ಗಜಾಸುರಸಂಹಾರಿ, ಭಿಕ್ಷಾಟನ ಮೂರ್ತಿ ಮತ್ತು ಅಪ್ಸರೆ ರಂಭೆಯರ ಶಿಲ್ಪಗಳು ಗಮನಸೆಳೆಯುತ್ತವೆ.

ವಿಜಯನಗರ ಕಾಲದ ಶಿಲ್ಪದ ಇನ್ನೊಂದು ಮಾದರಿಯೆಂದರೆ ಲೋಹ ಮತ್ತು ಕಲ್ಲಿನಲ್ಲಿ ಕೆತ್ತಲಾದ ರಾಜ, ರಾಣಿ ಅಧಿಕಾರಿಗಳು ಮತ್ತು ಭಕ್ತರ ಶಿಲ್ಪಗಳು. ತಿರುಪರುತ್ತಿಕುನ್ರಂನ ಬಸದಿಯ ಸಂಗೀತ ಮಂಟಪದಲ್ಲಿ ಕೆತ್ತಲಾಗಿರುವ ಎರಡನೆಯ ಹರಿಹರ ಮತ್ತು ಎರಡನೆಯ ಬುಕ್ಕನ ದಂಡನಾಯಕನಾಗಿದ್ದ ಇರುಗಪ್ಪನ ಶಿಲ್ಪ ಈ ಮಾದರಿಯ ಆರಂಭದ ಶಿಲ್ಪಗಳು ಒಂದು. ಈ ಮಾದರಿಯ ಇತರ ಉದಾಹರಣೆಗಳೆಂದರೆ ಹಂಪಿ ಮತ್ತು ಚಿದಂಬರಂನಲ್ಲಿರುವ ಕೃಷ್ಣದೇವರಾಯನ ಕಲ್ಲಿನ ಶಿಲ್ಪ, ತಿರುಪತಿಯಲ್ಲಿರುವ ಕೃಷ್ಣದೇವರಾಯ ಮತ್ತು ಆತನ ಇಬ್ಬರು

**ಸಾಸುವೆಕಾಳು ಗಣೇಶ, ಹಂಪಿ**

ಪತ್ನಿಯರ ಮತ್ತು ಎರಡನೆಯ ವೆಂಕಟ ಮತ್ತು ತಿರುಮಲರ ಪತ್ನಿಯೊಡಗೂಡಿದ ಲೋಹದ ಶಿಲ್ಪಗಳು. ಹಂಪಿಯ ಅಚ್ಯುತರಾಯ ದೇವಾಲಯದಲ್ಲಿ ಅಚ್ಯುತರಾಯನ ಪ್ರತಿಕೃತಿ ಶಿಲ್ಪವನ್ನು ಕಾಣಬಹುದು. ಈ ಕಾಲದಲ್ಲಿ ಆಳ್ವಾರ್‌ರ ಶಿಲ್ಪಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಹಂಪಿಯಲ್ಲಿ ಕಾಣಸಿಗುವ ತೊಂಡರಡಿಪೋಡಿ ಆಳ್ವಾರ್ ಇಂಥ ಒಂದು ಶಿಲ್ಪ.

ಹಂಪಿಯ ಸ್ಮಾರಕಗಳಲ್ಲಿ ಲೌಕಿಕ ಶಿಲ್ಪಗಳು ಸಾಕಷ್ಟು ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಮಹಾನವಮಿ ದಿಬ್ಬದ ಸಾಲುಪಟ್ಟಿಕೆಗಳ ಮೇಲಿನ ಶಿಲ್ಪಗಳು ಅಂದಿನ ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ. ಬೇಟೆಯ ದೃಶ್ಯಗಳು, ಜಟ್ಟಿಗಳು, ಮುಷ್ಟಿ ಯುದ್ಧಪಟುಗಳು, ಸಂಗೀತಗಾರರು, ನೃತ್ಯಗಾರರು, ಕೋಲಾಟಗಾರರು ಹಾಗೂ ಒನಕೆಯಿಂದ ಧಾನ್ಯ ಕುಟ್ಟುತ್ತಿರುವ ಮಹಿಳೆಯರ ಸಣ್ಣ ಸಣ್ಣ ಶಿಲ್ಪಗಳಿವೆ. ಹೋಳಿಹಬ್ಬದ ಚಿತ್ರಪಟ್ಟಿಕೆ ಇಲ್ಲಿ ವಿಶಿಷ್ಟವಾಗಿದೆ. ಹೆಂಗಳೆಯರು ತಮ್ಮ ಸ್ನೇಹಿತರ ಮೇಲೆ ಬಣ್ಣವನ್ನು ಎರಚುತ್ತಿರುವ ದೃಶ್ಯವನ್ನು ಅದು ಹೊಂದಿದೆ. ಎರಡನೆಯ ದೇವರಾಯನ ಕಾಲಕ್ಕೆ ವಿಜಯನಗರಕ್ಕೆ ಭೇಟಿ ನೀಡಿದ್ದ ನಿಕೋಲೋ ಕಾಂಟಿ ಈ ಹೋಳಿ ಹಬ್ಬವನ್ನು ಬಹು ಸುಂದರವಾಗಿ ವರ್ಣಿಸಿದ್ದಾನೆ. ಹಜಾರ ರಾಮ ದೇವಾಲಯದ ಪ್ರಾಕಾರದ ಗೋಡೆಯ ಮೇಲೆ, ಆನೆಗಳು, ಕುದುರೆಗಳು, ಸೈನಿಕರ ಶಿಲ್ಪಗಳನ್ನು ಕೆತ್ತಲಾಗಿದೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಮೇಲೆ ಗಂಢಭೇರುಂಡ, ಭಿಕ್ಷಾಟನ ಶಿವ ಪಾರ್ವತಿ ಪರಿಣಯ, ಮೃಗವ್ಯಾಧ, ಗಜೇಂದ್ರ ಮೋಕ್ಷ, ಕಿರಾತಾರ್ಜುನೀಯ ಮತ್ತು ದುರ್ಗಾ ಶಿಲ್ಪಗಳನ್ನು ಕಾಣಬಹುದು.

**ಚಿತ್ರಕಲೆ:** ಚಿತ್ರಕಲೆ ವಿಜಯನಗರದ ಕಾಲದಲ್ಲಿ ಸಮೃದ್ಧಿಯಾಗಿ ಬೆಳೆದಿತ್ತು. ಹಂಪಿ, ಲೇಪಾಕ್ಷಿ, ಕಂಚಿ, ತಂಜಾವೂರು, ಸೋಮಪಲೇಮ್, ಆನೆಗೊಂದಿ, ಕನಕಗಿರಿ ಮತ್ತು ತಿರುಪರುತ್ತಿಕುನ್ರಂಗಳು ಈ ಕಾಲದ ಪ್ರಸಿದ್ಧ ಚಿತ್ರಕಲಾ ಕೇಂದ್ರಗಳು. ಇವುಗಳ ಪೈಕಿ ಹಂಪಿ, ಲೇಪಾಕ್ಷಿ ಮತ್ತು ತಿರುಪರುತ್ತಿಕುನ್ರಂಗಳಲ್ಲಿ ಸಾಕಷ್ಟು ಸಂಖ್ಯೆಯ ಚಿತ್ರಗಳಿದ್ದು, ಸಂರಕ್ಷಿತವಾಗಿವೆ. ಇವು ವಿಜಯನಗರದ ಆರಂಭದ, ಮಧ್ಯಯುಗೀನ ಮತ್ತು ಅನಂತರದ ಕಾಲ ಘಟ್ಟಗಳನ್ನೂ ಪ್ರತಿನಿಧಿಸುತ್ತವೆ. ತಿರುಪರುತ್ತಿಕುನ್ರಂ ಅನ್ನು ಬಿಟ್ಟರೆ ಉಳಿದವು ಶೈವ ಮತ್ತು ವೈಷ್ಣವ ಪಂಥಗಳಿಗೆ ಸೇರಿದವು. ತಿರುಪರುತ್ತಿಕುನ್ರಂನಲ್ಲಿರುವ ಚಿತ್ರಗಳು ಜೈನ ಪಂಥದವಾಗಿದ್ದು ಆದಿನಾಥ, ನೇಮಿನಾಥ ಮತ್ತು ಮಹಾವೀರರ ಕಥೆಗಳನ್ನು ಹೇಳುತ್ತವೆ.

ಇಲ್ಲಿಯವರೆಗೆ ತಿಳಿದಿರುವ ವಿಜಯನಗರದ ಕಾಲದ ವರ್ಣಚಿತ್ರಗಳಲ್ಲಿ ಹಂಪಿ ಮತ್ತು ಲೇಪಾಕ್ಷಿಗಳು ಪ್ರಸಿದ್ಧವಾಗಿವೆ. ಹಂಪಿಯಲ್ಲಿ ವಿರೂಪಾಕ್ಷ ದೇವಾಲಯದ ರಂಗ ಮಂಟಪದಲ್ಲಿ ವರ್ಣಚಿತ್ರಗಳಿವೆ. ಈ ರಂಗಮಂಟಪ 1510ರಲ್ಲಿ ಕೃಷ್ಣದೇವರಾಯನಿಂದ ನಿರ್ಮಾಣವಾದದ್ದಾದರೂ ಅಲ್ಲಿನ ಚಿತ್ರಕಲೆ ಆ ಕಾಲದ್ದಲ್ಲ. ಅವುಗಳ ಶೈಲಿ ಮತ್ತು ಅಲಂಕಾರಗಳನ್ನು ಗಮನಿಸಿದಾಗ ಅವು ಲೇಪಾಕ್ಷಿಗಿಂತ ಅನಂತರದ ಕಾಲದ್ದೆಂದು ಹೇಳಬಹುದು. ಲೇಪಾಕ್ಷಿಯ ವೀರಭದ್ರ ದೇವಾಲಯದಲ್ಲಿನ ವರ್ಣಚಿತ್ರಗಳು ಅಚ್ಯುತರಾಯನ (1529–46) ಕಾಲಕ್ಕೆ ಸೇರಿದವು. ಲೇಪಾಕ್ಷಿಯಲ್ಲಿ ವರ್ಣಚಿತ್ರಗಳು ಗೋಡೆ ಮತ್ತು ಚಾವಣಿಯಲ್ಲಿವೆ. ಇಲ್ಲಿ ಜೇಡಿಮಣ್ಣು, ನಿಂಬೆರಸ, ಮದ್ಯಸಾರ ಮತ್ತು ಕೆಂಪುಮಣ್ಣಿನ ಮಿಶ್ರಣದಿಂದ ಗೋಡೆಯ ಹೊರಮೈಯನ್ನು ನುಣುಪುಗೊಳಿಸಲಾಗಿದೆ. ಇದು ಒಣಗಿದ ನಂತರ ಚಿತ್ರಗಳನ್ನು ಬೂದು

ಮತ್ತು ಕಪ್ಪು ಬಣ್ಣದಲ್ಲಿ ರಚಿಸಿ, ಅನಂತರದಲ್ಲಿ ಉಳಿದ ಬಣ್ಣಗಳನ್ನು ತುಂಬಲಾಗಿದೆ. ಚಿತ್ರಗಳನ್ನು ಆರಂಭದಲ್ಲಿ ಗೆರೆಗಳ ಮೂಲಕ ಮಾನವರ ರೇಖಾಚಿತ್ರಗಳನ್ನು ರಚಿಸಲಾಗಿದೆ. ಪ್ರಾಣಿಗಳನ್ನು ಸಾಂಪ್ರದಾಯಿಕ ಮಾದರಿಯಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರಾಣಿಗಳ ಕಣ್ಣುಗಳು ಮಾನವರ ಕಣ್ಣುಗಳೊಂದಿಗೆ ಹೋಲಿಕೆಯಿರುವುದು. ಹುಬ್ಬು ಮತ್ತು ಕಣ್ಣಿನ ಸುತ್ತ ಗೆರೆಗಳಿರುವುದು. ಲೇಪಾಕ್ಷಿಯ ಕಲಾವಿದರು ಕಪ್ಪು, ಕೆಂಪು, ಹಸುರು, ಹಳದಿ, ಬೂದು ಬಣ್ಣಗಳನ್ನು ಬಹಳವಾಗಿ ಬಳಸಿದ್ದಾರೆ. ಆದರೆ ನೀಲಿ ಬಣ್ಣ ಯಾವ ಚಿತ್ರದಲ್ಲಿಯೂ ಕಾಣುವುದಿಲ್ಲ. ಇಲ್ಲಿಯ ಸಾಲು ಪಟ್ಟಿಗೆಗಳಲ್ಲಿಯ ಚಿತ್ರಗಳು ಪುರಾಣ, ಮಹಾಕಾವ್ಯಗಳ ಕಥೆಗಳನ್ನಾಧರಿಸಿವೆ. ನೂರಾರು ದೇವ-ದೇವತೆಗಳು ಮನುಷ್ಯ ಮತ್ತು ಪ್ರಾಣಿಗಳ ಚಿತ್ರಗಳು ಇಲ್ಲಿವೆ. ಮುಖ್ಯವಾಗಿ ಶಿವ-ಪಾರ್ವತಿಯರ ವಿವಾಹ, ಕಿರಾತಾರ್ಜುನೀಯ, ಲಿಂಗೋದ್ಭವ ಮೂರ್ತಿ, ಮನುಚೋಳನ ಕಥೆ, ದಕ್ಷಿಣಾಮೂರ್ತಿ, ಭಿಕ್ಷಾಟನ ಮೂರ್ತಿ, ಅರ್ಧನಾರೀಶ್ವರ, ಗಂಗಾಧರ, ನಟರಾಜ ಮತ್ತು ವಿಷ್ಣುವಿನ ದಶಾವತಾರಗಳನ್ನು ಲೇಪಾಕ್ಷಿಯಲ್ಲಿ ಕಾಣಬಹುದು.

ಇಲ್ಲಿಯ ಗಮನಾರ್ಹ ಚಿತ್ರವೆಂದರೆ ಖಡ್ಗಧಾರಿ ವೀರಭದ್ರ. ಇದರ ಆಕಾರ ಭವ್ಯವಾಗಿದ್ದು ಸು.7.50x4.20ಮೀ ವಿಸ್ತಾರವಾಗಿದೆ. ಬಹುಶಃ ಇದು ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡ ವರ್ಣಚಿತ್ರವೆನ್ನಬಹುದು. ಚಿತ್ರ ಪಟ್ಟಿಕೆಯಲ್ಲಿ ವಿರುಪಣ್ಣ ಮತ್ತು ಆತನ ಪತ್ನಿಯ ಚಿತ್ರಗಳೂ ಇವೆ. ಈ ವಿರುಪಣ್ಣ ಅಚ್ಯುತರಾಯನ ಅಧಿಕಾರಿ ಮತ್ತು ಈ ದೇವಾಲಯವನ್ನು ಕಟ್ಟಿಸಿದವನು.

ಹಂಪಿಯಲ್ಲಿ ವಿರೂಪಾಕ್ಷ ದೇವಾಲಯದ ಮುಖಮಂಟಪದ ಚಾವಣಿಯಲ್ಲಿ ಮತ್ತು ಅದರ ಆಧಾರಕ್ಕೆ ನೀಡಿರುವ ತೊಲೆಗಳ ಮೇಲೆ ವರ್ಣಚಿತ್ರಗಳನ್ನು ಕಾಣಬಹುದಾಗಿದೆ. ಇದರ ನಿರ್ಮಾಣದ ಕಾಲ 16ನೆಯ ಶತಮಾನದ ಉತ್ತರಾರ್ಧಭಾಗ. ಇಲ್ಲಿಯೂ ಪುರಾಣ ಮತ್ತು ಶೈವ ಕಥೆಗಳನ್ನಾಧರಿಸಿದ ವರ್ಣಚಿತ್ರಗಳನ್ನು ಕಾಣಬಹುದು. ಕೆಲಮಟ್ಟಿಗೆ ಸಮಕಾಲೀನ ಸಾಮಾಜಿಕ ಜೀವನವೂ ಇಲ್ಲಿ ಪ್ರತಿಫಲಿತವಾಗಿದೆ. ಇಲ್ಲಿಯ ವರ್ಣಚಿತ್ರಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದ್ದು ಚಾವಣಿಯಲ್ಲಿಯ ಮೊದಲನೆ ಗುಂಪಿನಲ್ಲಿ ಶೈವ ಪುರಾಣದ ಚಿತ್ರಗಳು ಮತ್ತು ತೊಲೆಗಳ ಮೇಲಿನ ಎರಡನೆಯ ಗುಂಪಿನಲ್ಲಿ ಪ್ರಾಣಿ-ಪಕ್ಷಿಗಳು, ಸಂಗೀತಗಾರರು, ಭಕ್ತರು ಮತ್ತು ದೇವತೆಗಳ ಚಿತ್ರಗಳೂ ಇವೆ. ಇಲ್ಲಿ ಒಟ್ಟು 67 ಸಣ್ಣ ಪಟ್ಟಿಕೆಗಳಿವೆ. ತ್ರಿಪುರ ಸಂಹಾರ ಮೂರ್ತಿ, ಮನ್ಮಥ ವಿಜಯ ಚಿತ್ರಗಳು ಬಹು ಆಕರ್ಷಣೀಯವಾಗಿವೆ. ತ್ರಿಪುರ ಸಂಹಾರಮೂರ್ತಿ ಚಿತ್ರ ಒಂದು ಅದ್ಭುತ ಕೃತಿ. ಸಂನ್ಯಾಸಿಯೊಬ್ಬರು ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಸಾಗುತ್ತಿರುವ ಇನ್ನೊಂದು ಚಿತ್ರವಿದ್ದು, ಆ ಸಂನ್ಯಾಸಿಯನ್ನು ಶ್ರೀ ವಿದ್ಯಾರಣ್ಯರೆಂದು (ಕೆಲವರು ಮಧ್ವಸಂಪ್ರದಾಯದ ಸಮಕಾಲೀನ ವ್ಯಾಸರಾಯರೆಂದು) ಗುರುತಿಸಲಾಗಿದೆ. (ಆರ್‌ಎಸ್.ಎಸ್.)

**ಶಾಸನಗಳು:** ಈ ಸಾಮ್ರಾಜ್ಯ ಸಮಗ್ರ ದಕ್ಷಿಣ ಭಾರತದ ವ್ಯಾಪ್ತಿಯನ್ನು ಪಡೆದಿದ್ದುದರಿಂದ ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಶಾಸನಗಳು ದೊರೆತಿವೆ. ಈ ಶಾಸನಗಳು ಸು.14ನೆಯ ಶತಮಾನದ ಮಧ್ಯಕಾಲದಿಂದ 17ನೆಯ ಶತಮಾನದವರೆಗಿನ ಸುದೀರ್ಘ ಅವಧಿಯ ಕಾಲಕ್ಕೆ ಸೇರಿದವುಗಳಾಗಿವೆ. ಸು.9,000 ಶಾಸನಗಳು ಈವರೆಗೆ ಗಮನಕ್ಕೆ ಬಂದಿವೆ. ಅವುಗಳಲ್ಲಿ ಸ್ವಲ್ಪ ಭಾಗ ಪ್ರಕಟವಾಗಿವೆ. ಶಾಸನ ಬರೆಯಲು ಬಳಸಿದುದು ಗಟ್ಟಿಯಾದ ಗ್ರಾನೈಟ್ ಶಿಲೆ. ಇದರಲ್ಲಿ ಸಣ್ಣ ಪ್ರಮಾಣದ ಅಕ್ಷರಗಳನ್ನು ಕೆತ್ತುವುದು ಸುಲಭವಾಗಿರಲಿಲ್ಲ. ಅಲ್ಲದೆ ಆ ಸಾಮ್ರಾಜ್ಯ ಅಸ್ತಿತ್ವದಲ್ಲಿದ್ದ ಸುಮಾರು ಮೂರು ಶತಮಾನಗಳ ಕಾಲ ದಕ್ಷಿಣ ಭಾರತದಲ್ಲಿ ಕ್ಷುಬ್ಧ ವಾತಾವರಣವಿದ್ದು ಯಾವಾಗಲೂ ನೆರೆಯ ಶತ್ರುಗಳೊಡನೆ ಕದನದಲ್ಲಿ ತೊಡಗಿರಬೇಕಾದ ಪರಿಸ್ಥಿತಿಯಿತ್ತು. ಹೀಗಾಗಿ ಜನತೆ ರಾಜ್ಯದ ರಕ್ಷಣೆಗಾಗಿ ಸದಾ ನಿರತವಾಗಿದ್ದು ಶಾಂತಿ ತೃಪ್ತಿಗಳು ಅಪರೂಪವಾಗಿದ್ದಾಗ ಶಾಸನಗಳನ್ನು ಸ್ಪಷ್ಟವಾಗಿ, ನಾಜೂಕಾಗಿ ಬರೆಯುವ, ಬರೆಸುವ ವ್ಯವಧಾನವಿರಲಿಲ್ಲವೆನ್ನಬಹುದು. ಅಲ್ಲದೆ ಅಸಂಖ್ಯಾತ ಶಾಸನಗಳನ್ನು ಬರೆದಿಡಬೇಕಾದಾಗ ಪ್ರತಿಯೊಂದಕ್ಕೂ ಉತ್ತಮವಾದ ಶಿಲೆಯನ್ನು ಆರಿಸಿ ತರುವುದೂ ಸುಲಭವಾಗಿರಲಿಲ್ಲ. ಈ ಕಾರಣಗಳಿಂದ ಶಾಸನಗಳ ಅಕ್ಷರಗಳು ಸುಂದರವಾಗಿರದೆ ದಪ್ಪವಾಗಿ, ಮನಬಂದಂತೆ ಕೆತ್ತಿದವುಗಳಾಗಿದ್ದವು. ಈ ದೃಷ್ಟಿಯಿಂದ ಒಂದು ವಿಧದಲ್ಲಿ ಶಾಸನಕಲೆಯಲ್ಲಿ ಪ್ರತಿಭೆ ಇಳಿಮುಖವಾಗಿತ್ತು. ಭಾಷೆಯ ವಿಷಯದಲ್ಲೂ ಇವೇ ಮಾತುಗಳನ್ನು ಹೇಳಬಹುದು. ಈ ಕಾಲದ ಶಾಸನಗಳಲ್ಲಿ ಸಾಹಿತ್ಯಕ ಅಂಶ ಬಹಳ ಕಡಿಮೆ. ಅರಸರು ತಮ್ಮ ಆಸ್ಥಾನ ಕವಿಗಳಿಂದ ಬರೆಸಿದ ಶಾಸನಗಳನ್ನು ಹೊರತುಪಡಿಸಿದರೆ, ಇತರ ಶಾಸನಗಳು ವಿಷಯಕ್ಕೆ ನೇರವಾಗಿ ಸಂಬಂಧಿಸಿದ್ದವಾಗಿದ್ದವು. ಸಮಕಾಲೀನ ಸಾಹಿತ್ಯದಲ್ಲಿದ್ದಂತೆ ಶಾಸನಗಳಲ್ಲೂ ಸಂಖ್ಯೆ ಅಪಾರವಾದರೂ ಪ್ರೌಢಿಮೆ ಲಾಲಿತ್ಯಗಳಲ್ಲಿ ಹಿಂದಿನ ಶತಮಾನಗಳಲ್ಲಿ ಬೆಳಕು ಕಂಡ ಶಾಸನಸಾಹಿತ್ಯಕ್ಕೆ ಇವು ಸಾಟಿಯಲ್ಲವೆಂಬುದು ಕಟುಸತ್ಯ. ಲೌಕಿಕದ ತುದಿಯನ್ನು ಮುಟ್ಟಿತೆಂಬಂತೆ ಅದರಲ್ಲಿ ಬರುವ ಶಾಪಭಾಗಗಳಲ್ಲಿ ಅನೇಕವೇಳೆ ಅಶ್ಲೀಲ, ಅವಾಚ್ಯ ಶಬ್ದಗಳ ಪ್ರಯೋಗವನ್ನು ಕಾಣಬಹುದು.

ಈ ಅರಸರ ನೂರಾರು ತಾಮ್ರಶಾಸನಗಳು ಲಭಿಸಿವೆ. ಇವುಗಳ ಭಾಷೆ ಸಂಸ್ಕೃತ. ಲಿಪಿ ನಂದಿನಾಗರೀ. ಈ ತಾಮ್ರಶಾಸನಗಳು ಸಾಮಾನ್ಯವಾಗಿ ಹಿರಿಯ ಆಕಾರ-ಗಾತ್ರಗಳದ್ದಾಗಿದ್ದು, ಅನೇಕ ಶಾಸನಗಳಲ್ಲಿ ಅರಸರ ವಂಶಾವಳಿಗಳನ್ನು ನೀಡಿದೆ. ಈ ವಿಷಯಕ್ಕೆ ಸಂಬಂಧಿಸಿದ ಭಾಗದ ಶಾಸನಪಾಠಗಳು ಬಹುಮಟ್ಟಿಗೆ ಒಂದೇ ಪಡಿಯಚ್ಚಿನವು. ಪ್ರತಿಯೊಬ್ಬ ಅರಸನ ಗಣನೀಯವೆನ್ನಬಹುದಾದ ಸಾಧನೆಗಳ ಉಲ್ಲೇಖಗಳನ್ನು ಇವುಗಳಲ್ಲಿ ಕಾಣುತ್ತೇವೆ. ಅರಸರು ಬದಲಾದಂತೆಲ್ಲ ಹಿಂದಿನ ಅರಸರಿಗೆ ಸಂಬಂಧಿಸಿದ ಅದೇ ಶಾಸನಪಾಠಗಳನ್ನಿರಿಸಿ ಕೊಂಡು ಅನಂತರದ ಅರಸರಿಗೆ ಸಂಬಂಧಿಸಿದ ಹೊಸ ವಿವರಗಳನ್ನು ಕಾಣಬಹುದು. ಬಹುಮಟ್ಟಿಗೆ ಇವು ಅರಮನೆಯ ಶಾಸನಾಧಿಕಾರಿಯಿಂದ ರಚಿತವಾದ ಕಾರಣ ಆತ ಮೂಲತಃ ಹಿಂದಣ ದಾಖಲೆಯನ್ನು ಆಧರಿಸಿ ಕರಡುಪ್ರತಿಗಳನ್ನು ತಯಾರಿಸಿರುತ್ತಾನೆ. ಅನಂತರದ ಅಧಿಕಾರಿಗಳೂ ಅದೇ ದಾಖಲೆಯನ್ನು ಬಳಸಿ ಅದಕ್ಕೆ ಹೊಸ ವಿಷಯಗಳನ್ನು ಸೇರಿಸುತ್ತ ಹೋಗುವುದರಿಂದ ಈ ಶಾಸನಗಳು ಒಂದೇ ರೂಪದಲ್ಲಿರುವುದು ಸಹಜ. ಅಲ್ಲದೆ ಈ ಶಾಸನಗಳನ್ನು ರಚಿಸಿದ ಕವಿಗಳಲ್ಲಿ ಕೆಲವರು ವಂಶಪಾರಂಪರ್ಯವಾಗಿ ಆಸ್ಥಾನ ಕವಿಗಳಾಗಿದ್ದು, ತಮ್ಮ ಹಿರಿಯರು ಬರೆದಿಟ್ಟಿದ್ದುದರ ಮುಂದಿನ ಭಾಗಗಳನ್ನು ಇವರು ರಚಿಸಿದ್ದಾರೆಂಬುದು ಸ್ಪಷ್ಟ. ತಾಮ್ರಶಾಸನಗಳ ಕೊನೆಯ ಭಾಗದಲ್ಲಿ ವೃತ್ತಿಗಳನ್ನು ಪಡೆದವರ ಹೆಸರುಗಳೂ ದತ್ತಿ ಬಿಟ್ಟ ಗ್ರಾಮ ಅಥವಾ ಭೂಮಿಯ ಮೇರೆಗಳೂ ಅನೇಕ ಸಂದರ್ಭಗಳಲ್ಲಿ ಕನ್ನಡ ಭಾಷೆಯಲ್ಲಿರುತ್ತವೆ. ಪ್ರಾದೇಶಿಕ ಭಾಷೆಗಳ ವೈಲಕ್ಷಣ್ಯಗಳನ್ನೂ ಜನಪದ ನುಡಿಯನ್ನೂ ಈ ಶಾಸನಗಳಲ್ಲಿ ಕಾಣಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳ ಭಾಷೆ ಒಳನಾಡಿನ ಸಮಕಾಲೀನ ಭಾಷೆಗಿಂತ ಭಿನ್ನವಾಗಿದ್ದು ತನ್ನ ಪ್ರಾದೇಶಿಕ ವೈಶಿಷ್ಟ್ಯತೆಯನ್ನುಳಿಸಿಕೊಂಡು ಬಂದಿದೆ.

ಅಂದಿನ ಆರ್ಥಿಕ-ಸಾಮಾಜಿಕ ಸ್ಥಿತಿಗೆ ಅನುಗುಣವಾಗಿ ಹಳ್ಳಿ ಮತ್ತು ಪಟ್ಟಣಗಳನ್ನು ಪರಿವರ್ತಿಸಿದಾಗ, ಬೀಡು ಬಿಟ್ಟಿದ್ದ ಭೂಮಿಗಳನ್ನು ಸಾಗುವಳಿಗೆ ತಂದಾಗ, ಅಧಿಕಾರಿಗಳ ಶೋಷಣೆಯ ವಿರುದ್ಧ ಜನತೆ ಅರಸನಲ್ಲಿ ಅಥವಾ ಸಾಮಂತನಲ್ಲಿ ನೀಡಿದ ದೂರುಗಳು ಹಾಗೂ ಅವುಗಳ ಪರಿಣಾಮವಾಗಿ ಜನತೆಗೆ ನೀಡಿದ ಆಶ್ವಾಸನೆಗಳು ಇವೇ ಮುಂತಾದ ವಿಷಯಗಳನ್ನು ಈ ಕಾಲದ ಶಾಸನಗಳಲ್ಲಿ ಕಾಣಬಹುದಾಗಿದೆ. ಧರ್ಮರಕ್ಷಣೆಗಾಗಿಯೇ ಸಾಮ್ರಾಜ್ಯ ಮೈವೆತ್ತಿತ್ತು ಎಂಬುದನ್ನು ಗಮನಿಸಿದಾಗ ಬುಕ್ಕ, ಇಮ್ಮಡಿ ದೇವರಾಯ, ಕೃಷ್ಣದೇವರಾಯ ಮುಂತಾದ ಪ್ರಮುಖ ಅರಸರು ದೇವಾಲಯಗಳಿಗೆ ವಿಶೇಷವಾಗಿ ನೀಡಿದ ಅಪಾರ ದತ್ತಿಗಳ ಹಿನ್ನೆಲೆ ಅರ್ಥವಾಗುತ್ತದೆ. (ಬಿ.ಆರ್.ಜಿ.)

**ಕನ್ನಡ ಶಾಸನಗಳು:** ಒಂದು ಸ್ಥೂಲ ಎಣಿಕೆಯ ಪ್ರಕಾರ ಇದುವರೆಗೆ ಈ ಸಾಮ್ರಾಜ್ಯಕ್ಕೆ ಸೇರಿದ ಸು.3500ಕ್ಕೂ ಹೆಚ್ಚು ಶಾಸನಗಳು ಪ್ರಕಟಗೊಂಡಿವೆ. ಇದುವರೆಗೆ ಪ್ರಕಟವಾದ ಶಾಸನಗಳನ್ನು ಸ್ಥೂಲವಾಗಿ ಸು.2000 ಕನ್ನಡ, 600 ತೆಲುಗು, 500 ತಮಿಳು ಮತ್ತು 400 ಸಂಸ್ಕೃತ ಶಾಸನಗಳೆಂದು ವಿಂಗಡಿಸಬಹುದು. ವಿಜಯನಗರ ಸಾಮ್ರಾಜ್ಯದ ಸಮಗ್ರ ಇತಿಹಾಸವನ್ನರಿಯಲು ಈ ಶಾಸನಗಳೇ ಮುಖ್ಯ ಆಧಾರಗಳಾಗಿವೆ.

ವಿಜಯನಗರದ ಕಾಲಕ್ಕಾಗಲೇ ಸವಿಸ್ತಾರವಾಗಿ, ಸಾಹಿತ್ಯಕವಾಗಿ ಶಾಸನಗಳನ್ನು ರಚಿಸುವ ಪದ್ಧತಿ ರೂಢಿಯಲ್ಲಿದ್ದಿತು. ಇದಕ್ಕೂ ಹಿಂದಿನ ಕಾಲದ ಚಾಳುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ಉತ್ತಮ ಸಾಹಿತ್ಯಕ ರಚನೆಗಳೆಂದೆನಿಸಿಕೊಳ್ಳಬಹುದಾದ ಅಸಂಖ್ಯ ಶಾಸನಗಳು ನಿರ್ಮಿತವಾದವು. ಹೆಚ್ಚು ಕಡಿಮೆ ಅದೇ ಪದ್ಧತಿಯನ್ನೇ ವಿಜಯನಗರದ ಆಳರಸರೂ ಅನುಸರಿಸಿದರು.

ವಿಜಯನಗರ ಸಾಮ್ರಾಜ್ಯದ ಆರಂಭ ಕಾಲದಲ್ಲಿ ಶಿಲಾಶಾಸನಗಳ ಸಂಖ್ಯೆಯೇ ಹೆಚ್ಚು, ಉದಾ: ಸಾಮ್ರಾಜ್ಯದ ಸ್ಥಾಪಕನಾದ ಒಂದನೆಯ ಹರಿಹರನ ಕಾಲದ ತಾಮ್ರಶಾಸನಗಳೇ ಇಲ್ಲ. ಮುಂದೆ ಎರಡನೆಯ ಹರಿಹರನ ಕಾಲದಿಂದ ಮತ್ತು ವಿಶೇಷವಾಗಿ ಕೃಷ್ಣದೇವರಾಯನ ಕಾಲದಿಂದ ತಾಮ್ರಶಾಸನಗಳ ಸಂಖ್ಯೆ ಹೆಚ್ಚಾಯಿತು. ಇವುಗಳ ರಚನೆಗಾಗಿಯೇ ಆಸ್ಥಾನ ಕವಿಗಳು ನೇಮಿಸಲ್ಪಟ್ಟರು. ಸಭಾಪತಿ ಎಂಬುವನು ಈ ಕಾಲದ ಪ್ರಸಿದ್ಧ ಶಾಸನ ರಚನಾಕಾರನಾಗಿದ್ದನು. ವಿಜಯನಗರದ ತಾಮ್ರಶಾಸನಗಳೆಲ್ಲ ಹೆಚ್ಚಾಗಿ ಇವನಿಂದಲೇ ಬರೆಯಲ್ಪಟ್ಟಿವೆ. ಈ ಕಾಲದಲ್ಲಿ ಅತಿ ದೀರ್ಘವಾದ ತಾಮ್ರಶಾಸನಗಳು ರಚಿಸಲ್ಪಟ್ಟವು. ಆರವೀಡು ಮನೆತನದ ಒಂದು ತಾಮ್ರಶಾಸನವಂತೂ ಏಳು ದೊಡ್ಡ ಆಕಾರದ ತಾಮ್ರದ ಹಲಗೆಗಳ ಮೇಲೆ 293 ಸಾಲುಗಳಷ್ಟು ದೀರ್ಘವಾಗಿ ಬರೆಯಲ್ಪಟ್ಟಿದೆ. ಸಭಾಪತಿಯ ಮಗ ಇದನ್ನು ರಚಿಸಿದ. ಕವಿ ಶಾಸನಸ್ವಯಂಭು ಎಂಬ ಬಿರುದನ್ನು ಅವನು ಹೊಂದಿದ್ದ. ಅನೇಕ ವೇಳೆ ಇಂಥ ಸುದೀರ್ಘ ವರ್ಣನೆಗಳಲ್ಲಿ ಮಹತ್ತ್ವವಿಲ್ಲದ ವಿಷಯಗಳೆನಿಸಿದರೂ ಅನೇಕ ಐತಿಹಾಸಿಕ, ಸಾಂಸ್ಕೃತಿಕ ವಿವರಗಳು ಅವುಗಳಲ್ಲಿ ದೊರೆಯುತ್ತವೆ.

ವಿಜಯನಗರ ಸ್ಥಾಪನೆ 1336ರಲ್ಲಿ ಆಯಿತೆಂಬುದು ಸಾಮಾನ್ಯ ಗ್ರಹಿಕೆಯಾಗಿದೆ. ಆದರೆ ಅದು 1346ರಲ್ಲಿ ಆಯಿತೆಂಬ ಒಂದು ಅಭಿಪ್ರಾಯವೂ ಇದೆ. ಆದರೆ 1339ರ ಹೊತ್ತಿಗಾಗಲೇ ಈ ಅರಸರು ರಾಜ್ಯವಾಳುತ್ತಿದ್ದರೆಂಬುದು ಶಾಸನಗಳಿಂದ ಸ್ಥಿರವಾಗುತ್ತದೆ. ಈ ಸಾಮ್ರಾಜ್ಯದ ಮೊದಲನೆಯ ಅರಸನಾದ ಒಂದನೆಯ ಹರಿಹರ 1339ರಲ್ಲಿ ಮಹಾರಾಜಾಧಿರಾಜನೆಂಬ ಬಿರುದನ್ನು ಹೊಂದಿ ರಾಜ್ಯಭಾರ ಮಾಡುತ್ತಿದ್ದನೆಂಬ ಸಂಗತಿ ಹಾಸನ ಜಿಲ್ಲೆಯ ಆನೆಕೆರೆ ಎಂಬಲ್ಲಿಯ ಒಂದು ಶಾಸನ ತಿಳಿಸುತ್ತದೆ. ಇದೇ ಅರಸನ 1340ರ ಒಂದು ಶಾಸನ ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ದೊರೆತಿದೆ. ಮೊದಲ ಅರಸರಾದ ಒಂದನೆಯ ಹರಿಹರ ಮತ್ತು ಒಂದನೆಯ ಬುಕ್ಕ ಇವರ ಆಳಿಕೆಯ ಕಾಲಾವಧಿಯನ್ನು ಖಚಿತವಾಗಿ ನಿರ್ಣಯಿಸುವುದು ದುಸ್ತರವೆನಿಸುತ್ತದೆ. ಇವರಿಬ್ಬರ ಶಾಸನಗಳಲ್ಲಿ ನಮೂದಿತವಾದ

ತೇದಿಗಳನ್ನು ಪರಿಶೀಲಿಸಿದರೆ ಇಬ್ಬರೂ ಒಂದೇ ಕಾಲಕ್ಕೆ ಆಳುತ್ತಿದ್ದರೇನೋ ಎಂದು ಭಾಸವಾಗುತ್ತದೆ. ಸಾಮ್ರಾಜ್ಯ ಸ್ಥಾಪನೆಗಾಗಿ ಇಬ್ಬರೂ ಒಟ್ಟಾಗಿ ದುಡಿದವರೇ. ಹಿರಿಯನಾದ ಹರಿಹರ ಪಟ್ಟಕ್ಕೆ ಬಂದಾಗ ತಮ್ಮನಾದ ಬುಕ್ಕನ ಮಹತ್ತ್ವವೇನೂ ಕಡಿಮೆಯಾಗಲಿಲ್ಲ. ಅವನು ಯುವರಾಜನಾಗಿ ಮತ್ತು ಬೇರೆ ಬೇರೆ ಅಧಿಕಾರ ಸ್ಥಾನಗಳನ್ನು ಹೊಂದಿ ರಾಜ್ಯಭಾರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ. ಹೀಗಾಗಿ ಕೆಲವು ಶಾಸನಗಳು ಅವನು ಸ್ವತಂತ್ರ ರಾಜನಾಗಿದ್ದಂತೆ ಬಿಂಬಿಸುತ್ತವೆ. ಸ್ವಲ್ಪ ಕಾಲ ಇಬ್ಬರೂ ಕೂಡಿಯೇ ಆಳುತ್ತಿದ್ದರು. ಹರಿಹರನ ಅನಂತರ ಸ್ವತಂತ್ರ ಅರಸನಾಗಿ ಆಳತೊಡಗಿದನು ಎಂಬ ಅಂಶ ಅವರಿಬ್ಬರ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಮೈಸೂರು ಜಿಲ್ಲೆಯ ಹೆಬಸೂರಿನ 2ನೆಯ ಹರಿಹರನ ಶಾಸನವೊಂದರ ಆಧಾರದ ಮೇಲೆ ಅವನ ತಂದೆ ಒಂದನೆಯ ಬುಕ್ಕನ ಮರಣದ ಕಾಲವನ್ನು ನಿರ್ಧರಿಸಲು ಶಕ್ಯವಾಗುತ್ತದೆ. ಈ ಶಾಸನದಲ್ಲಿ ಕಾಲ 1377 ಫೆಬ್ರವರಿ 24 ಮಂಗಳವಾರ ಎಂದು ನಮೂದಿತವಾಗಿದ್ದು ಅಂದು ಹರಿಹರ ಶಿವಸಾಯುಜ್ಯವನ್ನು ಪಡೆದ ತನ್ನ ತಂದೆ ಬುಕ್ಕರಾಯರಿಗೆ ಪಾಪಕ್ಷಯದ ಮೂಲಕ ಪರಮೇಶ್ವರ ಪ್ರಸಾದಸಿದ್ಧಿಯಾಗಲೆಂದು ಕೆಲವು ಗ್ರಾಮಗಳನ್ನು ದಾನವಾಗಿ ಮಾಡಿದ ವಿಷಯವಿದೆ. ಈ ದಿನಾಂಕವೇ ಬುಕ್ಕನ ನಿಧನದ ದಿನಾಂಕವೆಂದು ಹಿಂದಿನ ವಿದ್ವಾಂಸರು ಊಹಿಸಿದ್ದರು. ಆದರೆ ಈ ದಿನಾಂಕಕ್ಕಿಂತ ಮುಂಚೆ ಕೆಲವೇ ದಿನಗಳ ಹಿಂದೆ ಇವನು ಮೃತನಾಗಿದ್ದಿರಬಹುದೆಂದು ಊಹಿಸಲು ಅವಕಾಶವಿದೆ. ಎರಡನೆಯ ಹರಿಹರ ಈ ಸಾಮ್ರಾಜ್ಯದ ಬಲಿಷ್ಠ ಅರಸ. ತನ್ನ ತಂದೆ ಮತ್ತು ಕಕ್ಕ ಸ್ಥಾಪಿಸಿದ ಸಾಮ್ರಾಜ್ಯದ ಗುರಿಗಳನ್ನು ಸಾಧಿಸುವಲ್ಲಿ ಬಹಳಷ್ಟು ಶ್ರಮಿಸಿದ. ಸಾಮ್ರಾಜ್ಯ ವಿಸ್ತಾರದೊಂದಿಗೆ ಶಾಂತಿ ಸುವ್ಯವಸ್ಥೆಗಳು ನೆಲಸುವಂತೆ ಮಾಡಿದುದು ಇವನ ಹೆಗ್ಗಳಿಕೆ. 27 ವರ್ಷಗಳ ಇವನ ಆಳಿಕೆಯ ಅವಧಿಯಲ್ಲಿ ಇವನ 212 ಶಾಸನಗಳು ದೊರೆತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಇವನ ಎರಡು ಶಾಸನಗಳು ಇವನ ನಿಧನದ ದಿನಾಂಕವನ್ನು ಖಚಿತವಾಗಿ ಹೇಳುತ್ತವೆ. ಶ್ರವಣಬೆಳಗೊಳದಲ್ಲಿಯ ಚಿಕ್ಕ ಶಾಸನವೊಂದು ಈ ರೀತಿಯಾಗಿ ಹೇಳುತ್ತದೆ. ತಾರಣ ಸಂವತ್ಸರದ ಭಾದ್ರಪದ ಬಹುಳ ದಶಮಿಯೂ ಸೋಮವಾರದಲ್ಲಿ ಹರಿಹರರಾಯರು ಸ್ವ(ರ್ಗ)ಸ್ಥನಾದನು. ಇದೇ ಮಾತನ್ನು ಶಿವಮೊಗ್ಗ ಜಿಲ್ಲೆಯ ಮುಕ್ತಿಹರಿಹರಪುರದ ಶಾಸನವೊಂದು ಸಂಸ್ಕೃತದಲ್ಲಿ ಹೀಗೆ ಹೇಳಿದೆ. ತಾರಣವರ್ಷೇ ವರ್ಷೇ ಮಾಸಿ ನಭಸ್ಯೇಕಾದಶೀಂದುಶುಭವಾರೇ ನಿರ್ವಾಣಂ ಪ್ರಾಪ್ತ ಹರಿಹರಾಧೀಶ್ವರಃ. ಎರಡನೆಯ ದೇವರಾಯನ ಮರಣದ ದಿನವನ್ನು ಶಿವಮೊಗ್ಗ ಜಿಲ್ಲೆಯ ಕೊಡಕಣಿ ಎಂಬಲ್ಲಿಯ ಒಂದು ಶಾಸನ ಹೀಗೆ ನಿಖರವಾಗಿ ಶಕವರ್ಷ 1370ನೆಯ ವಿಭವ ಸಂವತ್ಸರದ ಮಾಘ ಬ 11 ಮಂಗಳವಾರದಲು... ದೇವರಾಯ ಮಹಾರಾಯರು ಅಸ್ತಮಾನಕ್ಕೆ ಸಂದ ಎಂದು ತಿಳಿಸುತ್ತದೆ. ಈ ದುಃಖದ ಸಂಗತಿಯನ್ನು ತಿಳಿದು ಪೃಥ್ವಿಸೆಟ್ಟಿ ಮತ್ತು ಸಿರುಮಸೆಟ್ಟಿ ಎಂಬಿಬ್ಬರು ಹಿರಿಯ ವ್ಯಾಪಾರಿಗಳು ಜೀವತೆತ್ತರೆಂಬ ವಿಷಯವೂ ಈ ಶಾಸನದಲ್ಲಿದೆ. ಇಂಥ ಖಚಿತ ವಿವರಗಳು ಸಿಗುವುದು ಶಾಸನ ಸಾಹಿತ್ಯದಲ್ಲಿಯೇ ತೀರ ವಿರಳ.

ಎಷ್ಟೋ ಸಲ ಆಳರಸರ ವಂಶಾವಳಿ ಅಥವಾ ಉತ್ತರಾಧಿಕಾರತ್ವದ ಬಗ್ಗೆಯೂ ಗೊಂದಲಗಳಿವೆ. ಈ ಸಾಮ್ರಾಜ್ಯದ ಮಧ್ಯಕಾಲದಲ್ಲಿಯಂತೂ ಉತ್ತರಾಧಿಕಾರತ್ವ ಕ್ರಮಾನುಗತವಾಗಿ ನಿರ್ಧರಿಸಲ್ಪಡದೆ ಒಳಸಂಚುಗಳು, ಆಕ್ರಮಣಗಳು, ಕೊಲೆಗಳು ಮುಂತಾದವುಗಳಿಂದಲೇ ನಿರ್ಧರಿಸಲ್ಪಟ್ಟವೆಂದು ಬಹುತೇಕ ಇತಿಹಾಸ ಗ್ರಂಥಗಳಲ್ಲಿ ಓದುತ್ತೇವೆ. ಆದರೆ ಶಾಸನಗಳು ಈ ಸಂಗತಿಯನ್ನು ಪುಷ್ಟೀಕರಿಸುವುದಿಲ್ಲ. ಉದಾಹರಣೆಗೆ ಪ್ರಖ್ಯಾತ ಅರಸನಾದ ಕೃಷ್ಣದೇವರಾಯನ ಅಣ್ಣನಾದ ವೀರನರಸಿಂಹ ತನ್ನ ತರುವಾಯ ಇವನು ಪಟ್ಟಕ್ಕೆ ಬರಬಾರದೆಂದು ಕೃಷ್ಣದೇವರಾಯನ ಕಣ್ಣುಗಳನ್ನು ಕೀಳಿಸಲು ಯತ್ನಿಸಿದನೆಂಬ ಕಥೆ ಜನಜನಿತವಾಗಿಯೂ ಪಠ್ಯಪುಸ್ತಕಗಳಲ್ಲಿಯೂ ನಮೂದಿತವಾಗಿದೆ. ಆದರೆ ಶಾಸನಗಳು ಬೇರೆ ಕಥೆಯನ್ನೇ ಹೇಳುತ್ತವೆ. ವೀರನರಸಿಂಹ ಮಡಿದ ಅನಂತರ ಇವನು ವಿಧ್ಯುಕ್ತವಾಗಿ ಪಟ್ಟಕ್ಕೆ ಬಂದನೆಂದು ಸ್ಪಷ್ಟವಾಗಿ ಹೇಳುತ್ತದೆ (ತಸ್ಮಿನ್ ಗುಣೇನ ವಿಖ್ಯಾತೇ ಕ್ಷಿತೇರಿಂದ್ರೇ ದಿವಂಗತೇ ತತೋಪ್ಯವಾರ್ಯವೀರಶ್ರೀಃ ಕೃಷ್ಣರಾಯಮಹೀಪತಿಃ ಬಿಭರ್ತಿ ಮಣಿಕೇಯೂರನಿರ್ವಿಶೇಷಂ ಮಹೀಂ ಭುಜೇ). ಕೃಷ್ಣದೇವರಾಯ ತನ್ನ ಮಗನನ್ನು ಚಿಕ್ಕವಯಸ್ಸಿನಲ್ಲಿಯೇ ಪಟ್ಟಕ್ಕೆ ಕುಳ್ಳಿರಿಸಿದನೆಂದೂ ಆದರೆ ಆ ಮಗುವನ್ನು ವಿಷ ಹಾಕಿ ಕೊಲ್ಲಿಸಲಾಯಿತು ಎಂಬ ಹೇಳಿಕೆಯೂ ಒಂದಿದೆ. ಆದರೆ ಇಂಥ ಹೇಳಿಕೆಗೆ ಶಾಸನಗಳಲ್ಲಿ ಆಧಾರವಿಲ್ಲ. ಕೃಷ್ಣದೇವರಾಯನ ಅಳಿಯನಾದ ರಾಮರಾಯನಂತೂ ಮಾವನ ಮರಣಾನಂತರ ಎಲ್ಲ ಅಧಿಕಾರಗಳನ್ನು ತನ್ನ ಕೈಯಲ್ಲಿಟ್ಟುಕೊಂಡು ಮುಂದಿನ ವಾರಸುದಾರರಾದ ಅಚ್ಯುತರಾಯ ಮತ್ತು ಸದಾಶಿವರಾಯರನ್ನು ಬದಿಗೊತ್ತಿ ಸೆರೆಯಲ್ಲಿಟ್ಟು ತಾನೇ ಆಳತೊಡಗಿದನೆಂದು ಎಲ್ಲ ಇತಿಹಾಸಕಾರರ ಅಭಿಪ್ರಾಯ. ಆದರೆ ಈ ವಾರಸುದಾರರಿಬ್ಬರೂ ರಾಮರಾಯನ ಕೈದಿಗಳಾಗಿ ಕೈಗೊಂಬೆಗಳಾಗಿದ್ದರೆ ಇವರು ಅನುಕ್ರಮವಾಗಿ 13 ವರ್ಷ ಮತ್ತು 34 ವರ್ಷಗಳ ಕಾಲ ಹೇಗೆ ರಾಜ್ಯವಾಳುತ್ತಿದ್ದರು ವಿಶೇಷವೆಂದರೆ ಕನ್ನಡದಲ್ಲಿಯೇ ಅಚ್ಯುತರಾಯನಿಗೆ ಸಂಬಂಧಿಸಿದ 239 ಶಾಸನಗಳು ಮತ್ತು ಸದಾಶಿವರಾಯನಿಗೆ ಸಂಬಂಧಿಸಿದ 324 ಶಾಸನಗಳು ದೊರೆತಿದ್ದು ಇವರು ಸುಖದಿಂದ ರಾಜ್ಯಭಾರ ಮಾಡುತ್ತ ದಾನಧರ್ಮಾದಿ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ತತ್ಪರರಾಗಿದ್ದರೆಂದು ಹೇಳುತ್ತವೆ. ಇವರು ನಿಜವಾಗಿಯೂ ಬಂಧನದಲ್ಲಿದ್ದರೆ ರಾಮರಾಯನೇ ಇಷ್ಟೆಲ್ಲ ಶಾಸನಗಳನ್ನು ಮೋಸದಿಂದ ಸೃಷ್ಟಿಸಿದನೆಂಬ ಅಸಂಭಾವ್ಯ ಊಹೆಯನ್ನು ಮಾಡಬೇಕಾಗುತ್ತದೆ.

ತತ್ಕಾಲೀನ ಧರ್ಮಸಮನ್ವಯ ದೃಷ್ಟಿಯಿಂದ ಒಂದನೆಯ ಬುಕ್ಕನ ಕಲ್ಯ ಮತ್ತು ಶ್ರವಣಬೆಳಗೊಳದ ಶಾಸನಗಳು ಗಮನಾರ್ಹವಾಗಿದೆ. ಜೈನರು ಮತ್ತು ಶ್ರೀವೈಷ್ಣವರ ನಡುವೆ ಕೆಲವು ವಿಶೇಷ ಸೌಕರ್ಯಗಳನ್ನು ಬಳಸಿಕೊಳ್ಳುವ ಬಗ್ಗೆ ವಿವಾದ ಉಂಟಾಗಿ ಅದು ವಿಕೋಪಕ್ಕೆ ಹೋಗಿ ಗಂಭೀರ ಪರಿಸ್ಥಿತಿ ಉಂಟಾದಾಗ ಬುಕ್ಕ ಸಮಾಧಾನದಿಂದ, ಚಾತುರ್ಯದಿಂದ ಎರಡೂ ಗುಂಪುಗಳ ನಡುವೆ ಸಮನ್ವಯವನ್ನು ಸಾಧಿಸಿ ಧರ್ಮರಕ್ಷಣೆ ಎಲ್ಲರ ಕರ್ತವ್ಯವೆಂಬುದನ್ನು ಬಿಂಬಿಸುತ್ತಾನೆ. ಪರಧರ್ಮ ಪೋಷಣೆಯ ಅತ್ಯುತ್ತಮ ಉದಾಹರಣೆಯೊಂದು ಉಡುಪಿ ಜಿಲ್ಲೆಯ ಕೋಟೇಶ್ವರದಲ್ಲಿ ದೊರೆತಿವೆ. ಇಲ್ಲಿಯ ಪ್ರಸಿದ್ಧ ಕೋಟೇಶ್ವರ ದೇವಾಲಯದಲ್ಲಿ ಕಾರ್ತಿಕ ಮಾಸದ 30 ದಿನಗಳೂ ಪಂಚಾಮೃತಾಭಿಷೇಕ, ದೀಪಾರಾಧನೆ, ನೈವೇದ್ಯ, ಫಲಪೂಜೆ, ವೃಂದಾವನಪೂಜೆಗಳನ್ನು ಸಾಂಗವಾಗಿ ನಡೆಸುವಂತೆ ಸದಾಶಿವರಾಯನ ಅಧಿಕಾರಿಯೊಬ್ಬ ಏರ್ಪಾಡು ಮಾಡುತ್ತಾನೆ. ಇದು ವ್ಯವಸ್ಥಿತವಾಗಿ ನಡೆದಿರುವಂತೆಯೇ ಕೆಲವರ್ಷಗಳ ಅನಂತರ ದೇವರ ತುಡಿಯ ಹಬ್ಬದಲ್ಲಿ ತುಳು ರಾಜ್ಯದ ಜನರೆಲ್ಲ ಕೂಡಿದಾಗ ಕಾರಣಾಂತರದಿಂದ ತಮ್ಮೊಳಗೆ ತಾವು ಕಡಿದಾಡಿ ಬ್ರಾಹ್ಮಣರು ಶೂದ್ರರ ಹೆಣಗಳು ದೇವಸ್ಥಾನದೊಳಗೆ ಬಿದ್ದು ಗೋಹತ್ಯವಾಗಿ ದೇವಾಲಯ ಅಪವಿತ್ರವಾಗಿ ಪೂಜೆ ಪುನಸ್ಕಾರಗಳು ನಿಂತು ಹೋಗಿ ದೇವಾಲಯದ ಬಾಗಿಲು ಆರು ತಿಂಗಳುಗಳವರೆಗೆ ಮುಚ್ಚಿ ಹೋಯಿತು. ಆಗ ಆ ಪ್ರಾಂತದ ಅಧಿಕಾರಿಯಾದ ಯೆಕಧಾಳಖಾನ (ಏಕ್–ದಿಲ್–ಖಾನ್) ಎಂಬವನು ಸಾರ್ವಜನಿಕರಿಂದ 35 ವರಹಗಳನ್ನು ಸಂಗ್ರಹಿಸಿ ದೇವಸ್ಥಾನದ ಪ್ರಾಯಶ್ಚಿತ್ತ ಮತ್ತು ಶುದ್ಧೀಕರಣಕ್ಕಾಗಿ ಪೂಜೆ ಪುನಸ್ಕಾರಗಳು ಆಚಂದ್ರಾರ್ಕಸ್ಥಾಯಿಯಾಗಿ ನಡೆಯಲೆಂದು ದಾನವಾಗಿ ಕೊಟ್ಟ. ಈ ಧರ್ಮಕಾರ್ಯವನ್ನು ಇವನು ಸದಾಶಿವ ಮಹಾರಾಯರಿಗೆ ಐಶ್ವರ್ಯಾಭಿವೃದ್ಧಿಯಾಗಬೇಕೆಂದು ಕೊಟ್ಟನೆಂಬುದು ಗಮನಾರ್ಹ. ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರೆಂದು ಹೆಸರಾದ ವಿದ್ಯಾರಣ್ಯರಿಗೆ ಶಂಕರಾರಣ್ಯ ಎಂಬ ಶಿಷ್ಯರಿದ್ದರೆಂಬ ಹೊಸ ವಿಷಯವನ್ನು ಉಡುಪಿ ಜಿಲ್ಲೆಯ ಚಾಂತಾವು ಎಂಬಲ್ಲಿಯ ಶಾಸನ ತಿಳಿಸುತ್ತದೆ.

ಜನಕಲ್ಯಾಣಕ್ಕಾಗಿ ವಿಜಯನಗರ ಅರಸರು, ಅವರ ಅಧಿಕಾರಿಗಳು ಕೈಕೊಂಡ ಕೆರೆಕಟ್ಟೆಗಳ ಕಟ್ಟುವಿಕೆ, ನೀರಾವರಿ ಕಾಲುವೆಗಳ ರಚನೆ ಇತ್ಯಾದಿಗಳ ಬಗ್ಗೆ ವಿಪುಲವಾದ ಮಾಹಿತಿ ಶಾಸನಗಳಲ್ಲಿ ದೊರೆಯುತ್ತಿದ್ದು ಅಂದಿನ ಸಾಮಾಜಿಕ ಸ್ಥಿತಿಗತಿ, ಕೃಷಿ, ವ್ಯಾಪಾರ ಇವುಗಳ ಬಗ್ಗೆ ತಿಳಿಯಲು ಅವು ಸಹಾಯಕವಾಗಿವೆ. ಕೋಲಾರ ಜಿಲ್ಲೆಯ ಕಲ್ಲೂಡಿ ಎಂಬಲ್ಲಿಯ 1389ನೆಯ ವರ್ಷದ ಶಿಲಾಶಾಸನವೊಂದು ಇಂಥ ಚಟುವಟಿಕೆಗಳಿಗೆ ಅತ್ಯುತ್ತಮ ಉದಾಹರಣೆ. ನೀರು ಯಾರಿಗೆ ಬೇಡ ನೀರಿಲ್ಲದ ಪೆನುಗೊಂಡೆಯ ಜನರಿಗಾಗಿ ಎರಡನೆಯ ಬುಕ್ಕ ಎಲ್ಲಾ ಪ್ರಜೆಗಳು ಸುಖದಲ್ಲಿ ಇರಬೇಕಾಗಿ ಜೀವಿಗಳಿಗೆಲ್ಲಾ ಉದಕವೇ ಪ್ರಾಣವಾಗಿ ಇರುವುದನ್ನು ಮನಗಂಡು ಹೆನ್ನಾ ಎಂಬ ನದಿಯಿಂದ ಪೆನುಗೊಂಡೆಗೆ ಕಾಲುವೆ ಮೂಲಕ ನೀರನ್ನು ಪೂರೈಸುವ ಏರ್ಪಾಡು ಮಾಡುತ್ತಾನೆ. ದಶವಿದ್ಯಾಚಕ್ರವರ್ತಿ ಜಲಸೂತ್ರದ ಸಿಂಗಾಯಭಟ್ಟನೆಂಬ ನಿಷ್ಣಾತ ಅಭಿಯಂತ ಈ ಕಾರ್ಯವನ್ನು ಪೂರೈಸುತ್ತಾನೆ. ಈ ಶಾಸನದಲ್ಲಿ ಬರುವ ನೀರನ್ನೇ ದೇವತೆಯಾಗಿ ಬಿಂಬಿಸಿದ ಶ್ಲೋಕವೊಂದು ರೋಚಕವಾಗಿದೆ.

ಸ್ಥಾನಿಕ ಜನರೇ ನದಿಗೆ ಆಣೆಕಟ್ಟನ್ನು ಕಟ್ಟಿ ನೀರಾವರಿಗಾಗಿ ಕಾಲುವೆ ಹರಿಸಿದ ಉತ್ತಮ ಉದಾಹರಣೆ ಇನ್ನೊಂದು ಶಾಸನದಲ್ಲಿದೆ. ಹರಿಹರದ ಬಳಿ ಇರುವ ಹರಿದ್ರಾ ನದಿಗೆ ಅಲ್ಲಿಯ ನಿವಾಸಿಗಳೇ ಆಣೆಕಟ್ಟನ್ನು ಕಟ್ಟಿ ತಮ್ಮ ತಮ್ಮ ಕೈಯ ಧನವನ್ನು ಇಕ್ಕಿ ದೇವರ ಭೂಮಿಯೊಳಗೆ ಹರಿಹರಕ್ಕೆ ಕಾಲುವೆಯ ತಂದರು. ಇದರ ಪ್ರಯೋಜನವನ್ನು ಪಡೆಯುವ ಭೂಮಿಯ ಮೂರು ಪಾಲು ಹರಿಹರೇಶ್ವರ ದೇವಾಲಯಕ್ಕೂ ಒಂದು ಪಾಲು ಕಾಲುವೆಯ ತಂದ ಮಹಾಜನರಿಗೂ ಸಲ್ಲಬೇಕೆಂದು ಅರಸನು ತೀರ್ಮಾನಿಸಿದ. ಕಾಲುವೆ ನಿರ್ವಹಣೆಯ ವೆಚ್ಚವನ್ನೂ ಇದೇ ಅನುಪಾತದಲ್ಲಿ ಭರಿಸಬೇಕೆಂದು ನಿರ್ಧರಿಸಲಾಯಿತು. ಕಾಲಾಂತರದಲ್ಲಿ ಎರಡನೆಯ ದೇವರಾಯನ ಕಾಲಕ್ಕೆ ಈ ಆಣೆಕಟ್ಟಿನ ಒಡ್ಡು ಒಡೆಯಿತು. ಶಾಸನದ ಭಾಷೆಯಲ್ಲಿ ಹೇಳುವುದಾದರೆ ಅಂತು ಸುಖಿಮಿರ್ದು ಪಲಕಾಲಾಂತರದಿಂ ಸೇತು ಭಂಗವಾಗಲು ವಿಪ್ರರ್ ತಂತಮ್ಮ ಜೀವನೋಪಾಯಂ ತಪ್ಪಿದುದೆಂದು ಚಿಂತಿಸುತ್ತಿರಲು ದೇವರಾಯನ ಅಧಿಕಾರಿಯಾದ ಬುಳ್ಳರಾಜನು 'ಸದ್ಧರ್ಮ ರಕ್ಷಕ'ನಾದ ಚಾಮನೃಪಾಲನೆಂಬ ಉದಾರ ಶ್ರೀಮಂತನನ್ನು ಕಂಡು ಹರಿದ್ರಾ ಸೇತುಭಂಗವಾದುದರಿಂದ ಶ್ರೀ ಹರಿಹರದೇವರ ಅಂಗರಂಗ ವೈಭವ ಆ ಕ್ಷೇತ್ರ ನಿವಾಸಿಗಳ ಬ್ರಾಹ್ಮಣರುಗಳ ಸ್ವಾಸ್ಥ್ಯ ತಪ್ಪಿತು. ಅದನ್ನು ಪುನಃಪ್ರತಿಷ್ಠೆಯ ಮಾಡುವುದಕ್ಕೆ ಧರ್ಮ ಸಹಾಯಿಗಳು ನೀವಲ್ಲದೆ ಇನ್ನಾರು ಮಾಡಬಲ್ಲರು ಎಂದು ಭಿನ್ನವಿಸಿ ಅವನ ಧನ ಸಹಾಯದಿಂದ ಬಹುತಟಾಕ ಸದ್ಧರ್ಮಕ್ಕಿದು ಕಲಶವೆಂಬಂತೆ ಸೇತುಜೀರ್ಣೋದ್ಧಾರವನ್ನು ಮಾಡಿದ. ವಿಜಯನಗರದ ಅರಸರು ಕೃಷಿ ಮತ್ತು ನೀರಾವರಿಯ ಸಲುವಾಗಿ ವಹಿಸಿದ ಆಸ್ಥೆಗೆ ಸಾಕ್ಷಿಯಾಗಿ ಅವರು ಕಟ್ಟಿಸಿದ ಕೆರೆ ಕಾಲುವೆಗಳು ಇನ್ನೂ ನೋಡಲು ಸಿಗುತ್ತವೆ. ಹಿಂದಕ್ಕೆ ಪ್ರ.ಶ. 2ನೆಯ ಶತಮಾನದಲ್ಲಿ ಇಂದಿನ ಗಿರನಾರ ಪ್ರದೇಶದ ಸುದರ್ಶನ ಎಂಬ ವಿಶಾಲವಾದ ನೀರಾವರಿ ಕೆರೆಯ ಕಟ್ಟೆಯೊಡೆದು ಹಾಹಾಕಾರವುಂಟಾದಾಗ ಅಂದಿನ ಅರಸನಾದ ಕ್ಷತ್ರಪ ರುದ್ರದಾಮ ಜನರಿಗೆ ಹೆಚ್ಚಿನ ಕರವನ್ನು ವಿಧಿಸದೆ ತನ್ನ ಸ್ವಂತ ಖರ್ಚಿನಿಂದ ಒಡೆದ ಒಡ್ಡನ್ನು ಮತ್ತೆ ಕಟ್ಟಿಸಿದ ಘಟನೆ ನೆನಪಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿಯೂ ನಾನಾ ವಿಧದ ತೆರಿಗೆಗಳನ್ನು ವಸೂಲು ಮಾಡಲಾಗುತ್ತಿದ್ದಿತು ಎಂಬುದು ಆ ಕಾಲದ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇಂಥ ತೆರಿಗೆಗಳಲ್ಲಿ ಸಾಮಾನ್ಯ ಜನತೆಗೆ

ಹೊರೆಯಾಗಿದ್ದ ತೆರಿಗೆಗಳೆಂದರೆ ಮದುವೆಯ ಸುಂಕ ಮತ್ತು ನಾವಿದತೆರೆ ಅಂದರೆ ನಾಪಿತ ಅಥವಾ ಕ್ಷೌರಿಕರ ಮೇಲೆ ಹಾಕುವ ಸುಂಕ. ಈ ಹೊರೆಯನ್ನು ತಪ್ಪಿಸಲು ಜನತೆ ಅರಸನೆಡೆಗೆ ಗುಂಪಾಗಿ ಹೋಗಿ ಈ ಸುಂಕಗಳಿಂದ ವಿನಾಯಿತಿ ಪಡೆದುಕೊಂಡ ಸಂಗತಿ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಈ ವಿನಾಯಿತಿಯ ವಿಷಯ ಸಾಮ್ರಾಜ್ಯದಲ್ಲೆಲ್ಲ ತಿಳಿಯಲಿ ಎಂಬ ದೃಷ್ಟಿಯಿಂದ ಆಯಾ ಪ್ರದೇಶಗಳಲ್ಲಿ ಶಾಸನಗಳನ್ನು ಬರೆಯಿಸಿ ಪ್ರಚುರಗೊಳಿಸಲಾಯಿತು. ಆ ಶಾಸನಗಳೇ ಈ ಕಥೆಯನ್ನು ಹೇಳುತ್ತವೆ.

ನಾಡಿಗಾಗಿ ಹೋರಾಡಿ ಮಡಿದ ವೀರರೊಬ್ಬನ ನೆನಪಿಗಾಗಿ ಗುಡಿಕಟ್ಟಿಸಿದ ಸಂಗತಿಯನ್ನು ಬಳ್ಳಾರಿ ಜಿಲ್ಲೆಯ ರಾಮಗಡದಲ್ಲಿಯ ಶಾಸನವೊಂದು ತಿಳಿಸುತ್ತದೆ. ಕೊಟ್ಟ ಮಾತನ್ನು ಉಳಿಸುವುದಕ್ಕಾಗಿ ದಿಲ್ಲಿಯ ಸುಲ್ತಾನ ಮಹಮ್ಮದ್ ತುಗಲಕ್‌ನ ಸೈನ್ಯದೊಂದಿಗೆ ಹೋರಾಡಿ ಮಡಿದ ಈ ವೀರ ಕುಮಾರರಾಮನ ನೆನಪಿಗಾಗಿ, ಅವನೊಡನೆ ಮಡಿದ ವೀರರಿಗೆ ವೀರಸ್ವರ್ಗವಾಗಬೇಕೆಂದು ಹಲವಾರು ಉತ್ಸಾಹಿಗಳು ರಾಮನಾಥದೇವರ ಗುಡಿಯನ್ನು ಕಟ್ಟಿಸಿದರೆಂಬ ವಿಷಯ ಇದರಲ್ಲಿದೆ.

ಕರ್ನಾಟಕ ಇತಿಹಾಸದ ಆರಂಭ ಕಾಲದಲ್ಲಿ ಗಂಗ, ಕದಂಬರು ಕನ್ನಡವನ್ನು ಶಾಸನಗಳಲ್ಲಿ ಬಳಸಲು ಆರಂಭಿಸಿದರಿಂದ ಶಾಸನಗಳೊಂದಿಗೆ ಕನ್ನಡ ಭಾಷೆಯೂ ಸಾಹಿತ್ಯಕವಾಗಿ ಬೆಳೆಯಲಾರಂಭಿಸಿತು. ಕಲ್ಯಾಣ ಚಾಳುಕ್ಯ, ಹೊಯ್ಸಳ, ಸೇವುಣರ ಕಾಲದಲ್ಲಿ ಈ ಪ್ರವೃತ್ತಿ ಪರಾಕಾಷ್ಠೆಯನ್ನು ಮುಟ್ಟಿತು. ಶಾಸನಗಳು ಕೇವಲ ಘಟನೆಗಳನ್ನು ವಿವರಿಸುವ ದಾಖಲೆಗಳಾಗಿ ಉಳಿಯದೆ ಅತ್ಯುತ್ತಮ ಕಾವ್ಯದ ರೂಪವನ್ನು ತಳೆದವು. ಅನೇಕ ಶಾಸನಕವಿಗಳು ಬೆಳಕಿಗೆ ಬಂದರು. ಕೆಲವು ಶಾಸನಗಳಂತೂ ಸಮಕಾಲೀನ ಕವಿಗಳಿಗೆ ಸರಿಸಮಾನವಾಗಿ ನಿಲ್ಲುವ ರಚನೆಗಳಾಗಿವೆ. ಒಬ್ಬ ಶಾಸನಕವಿಯಂತೂ ಶಾಸನಮನುಸಿರ್ವ ನೆವದಿಂ ಶಾಸನಗಬ್ಬಮಂ ಪೇಳ್ವೆಂ ಪೊಸಗನ್ನಡದಿಂ ಎಂದು ಸಾರಿದ್ದಾನೆ. ವಿಜಯನಗರ ಕಾಲದಲ್ಲಿ ಈ ಪ್ರವೃತ್ತಿಗೆ ಸ್ವಲ್ಪ ಹಿನ್ನೆಡೆಯುಂಟಾದರೂ ಉತ್ತಮ ಸಾಹಿತ್ಯಕ ಗುಣಗಳುಳ್ಳ ಎಷ್ಟೋ ಶಾಸನಗಳನ್ನು ಕಾಣಬಹುದು. ಮೇಲೆ ಉಲ್ಲೇಖಿಸಿದ ಹರಿಹರದ ಎರಡು ಶಾಸನಗಳು ಇದಕ್ಕೆ ಉತ್ತಮ ಉದಾಹರಣೆಗಳು. ಇಂಥ ಜೊತೆಗೆ ಅನೇಕ ಉದಾಹರಣೆಗಳಿವೆ. ಸಾಹಿತ್ಯವಲ್ಲದೆ ಅಲಂಕಾರ, ಛಂದಸ್ಸು, ಶಬ್ದಶಾಸ್ತ್ರ ಇವೂ ಅಲ್ಲದೇ ವಾಸ್ತುಶಾಸ್ತ್ರ, ಶಿಲ್ಪಶಾಸ್ತ್ರ ಇವುಗಳನ್ನು ಅಭ್ಯಸಿಸಲೂ ಈ ಶಾಸನಗಳು ವಿಪುಲ ಸಾಮಾಗ್ರಿಯನ್ನು ಒದಗಿಸುತ್ತವೆ. ಶಬ್ದಕೋಶಗಳಲ್ಲಿ ಸಿಗದಿರುವ ಅನೇಕ ಹೊಸ ಶಬ್ದಗಳು ಶಾಸನಗಳಲ್ಲಿ ಸಿಗುತ್ತವೆ. ದೇವಾಲಯ ನಿರ್ಮಾಣ, ಅದರ ವಿವಿಧ ಅಂಗಗಳು, ಅವುಗಳ ಸ್ವರೂಪ ಮುಂತಾದ ಅನೇಕ ವಿಧದ ಮಾಹಿತಿಯೂ ಶಾಸನಗಳಿಂದ ದೊರೆಯುತ್ತದೆ. ಉದಾಹರಣೆಗೆ ಸುಕನಾಸಿ ಎಂಬ ಪದ. ಇದು ಪ್ರಾಚೀನ ದೇವಾಲಯಗಳ ಕೆಳಭಾಗ ಶಿಖರದ ಮುಂಚಾಚಿದ ಭಾಗ ಎಂದೆಲ್ಲ ವಿವರಿಸಲಾಗುತ್ತದೆ. ಆದರೆ ಈ ಶಬ್ದದ ಅರ್ಥವನ್ನಾಗಲೀ ವ್ಯುತ್ಪತ್ತಿಯನ್ನಾಗಲೀ ಯಾರೂ ವಿವರಿಸಿಲ್ಲ. ವಿಜಯನಗರದ ಶಾಸನಗಳಲ್ಲಿ ದೇವಾಲಯಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ಸುಖನಿವಾಸ ಎಂಬ ಶಬ್ದವೊಂದು ಬರುತ್ತದೆ. ಶಬ್ದಾರ್ಥ ಮತ್ತು ಅಲ್ಲಿ ಬರುವ ವರ್ಣನೆಯನ್ನು ಅವಲಂಬಿಸಿ ಇದು ಗರ್ಭಗೃಹದ ಮುಂದಿನ ಅರ್ಧಮಂಟಪ ಅಥವಾ ಅಂತರಾಳವನ್ನು ಸೂಚಿಸುತ್ತದೆ ಎಂದು ಹೇಳಲು ಅವಕಾಶವಿದೆ. ಇದೇ ಸುಕನಾಸಿಯ ಮೂಲರೂಪ ಎಂದು ಹೇಳಬಹುದು. ಹೀಗೆ ವಿಜಯನಗರದ ಶಾಸನಗಳು ಸಮಕಾಲೀನ ಸಮಗ್ರ ಚರಿತ್ರೆಯನ್ನು ಅರಿಯಲು ಅತಿ ಮಹತ್ವದ ಆಕರಗಳಾಗಿವೆ. (ಎಸ್.ಆರ್.)

ಸಂಗಮ ಅರಸರ ಕಾಲದ ಜಲ ನಿರ್ವಹಣೆ: ತಮಿಳುನಾಡಿನಲ್ಲಿ ಸಂಗಮ ಅರಸರ ಕಾಲಾವಧಿಯ 400ಕ್ಕೂ ಅಧಿಕ ಶಾಸನಗಳು ಕನ್ನಡ, ತಮಿಳು, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಕಾಣಸಿಗುತ್ತವೆ. ಇವುಗಳಲ್ಲಿ 32 ಶಾಸನಗಳು ಅಂದಿನ ನೀರಾವರಿ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡುತ್ತವೆ.

ಸಂಗಮ ಅರಸರ ಆಡಳಿತಾವಧಿಯಲ್ಲಿ ಸ್ಥಳೀಯ ನಾಯಕರು, ಅಧಿಕಾರಿಗಳು, ಮಠಾಧಿಪತಿಗಳು, ದೇವಾಲಯದ ಸ್ಥಾಪಕರು, ಊರಮಹಾಜನರು ಹಲವಾರು ನೀರಾವರಿ ಕಾಮಗಾರಿಗಳನ್ನು ನಿರ್ಮಿಸಿದ್ದಾರೆ. ಕಾಮಗಾರಿಗಳ ನಿರ್ಮಾಣಕ್ಕೆ ನೀಡಿದ್ದಕ್ಕಿಂತ ಹೆಚ್ಚು ಆದ್ಯತೆಯನ್ನು ಇವರು ಜಲ ನಿರ್ವಹಣೆಗೆ ನೀಡಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಆಯಾ ಗ್ರಾಮಗಳ ಮಹಾಜನರು, ದೇವಾಲಯದ ಸ್ಥಾಪಕರು ಮತ್ತು ಸಾಮಾನ್ಯರು ಕೆರೆ ಸಮಿತಿ ಜಲನಿರ್ವಹಣೆ ಕಾಮಗಾರಿಯನ್ನು ವಹಿಸಿಕೊಂಡಿದ್ದರು.

ನೀರಾವರಿ ಕಾಮಗಾರಿಗಳಲ್ಲಿ ಅತಿ ಹೆಚ್ಚಿನ ಆದ್ಯತೆಯನ್ನು ಕೆರೆಗಳಿಗೆ ನೀಡಲಾಗಿದೆ. ಮೀನು ಸಾಕಾಣಿಕೆಗೆ ಕೆರೆಗಳನ್ನು ಗುತ್ತಿಗೆಗೆ ನೀಡಿ ಅದರಿಂದ ಬರುವ ಹಣವನ್ನು ಕೆರೆ ನಿರ್ವಹಣೆಗೆ ವಿನಿಯೋಗಿಸಲಾಗುತ್ತಿತ್ತು. ಈ ವಿಷಯದ ಬಗ್ಗೆ ನಾಲ್ಕು ಶಾಸನಗಳು ಬೆಳಕು ಚೆಲ್ಲುತ್ತವೆ. ಇಮ್ಮಡಿ ದೇವರಾಯನ 1445ರ ಶಾಸನ ರಾಜನ ಕಾರ್ಯಕರ್ತ ತಿಮ್ಮಪ್ಪನಾಯಕ, ಪಡೈವೀಡುವಿನ ಸ್ಥಾನಪತಿ, ಮಾಹೇಶ್ವರರು ಮತ್ತು ಊರವರೆಲ್ಲರೂ ಸೇರಿ ತಿರುಮಲೈನ ತಿರುನಾಮತ್ತುಕಾಣಿಯಲ್ಲಿರುವ ನಾಲ್ಕು ಕೆರೆಗಳ ಮೀನು ಸಾಕಾಣಿಕೆಯನ್ನು ಗುತ್ತಿಗೆಗೆ ನೀಡುವುದರಿಂದ ಬಂದ ವರಮಾನವನ್ನು ಪ್ರತಿವರ್ಷ ಕೆರೆಗಳ ಹೂಳೆತ್ತಲು ಪ್ರತ್ಯೇಕವಾಗಿ ಮೀಸಲಿರಿಸಲು ನಿರ್ಧರಿಸಿದ್ದನ್ನು ಉಲ್ಲೇಖಿಸುತ್ತದೆ. ಮೀನು ಮಾರಾಟದಿಂದಲ್ಲದೆ, ಖಾಸಗಿ ವ್ಯಕ್ತಿಗಳು, ದೇವಾಲಯದ ಅಧಿಕಾರಿಗಳೂ ಜಲ ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿದ್ದರು. 1396ರ ತಿರುವಣ್ಣೈನಲ್ಲೂರಿನ ಶಾಸನ ವಿರೂಪಾಕ್ಷನ ಮಂತ್ರಿ ವಿರುಪಣ್ಣ ಕೆರೆಯನ್ನು ದುರಸ್ತಿಗೊಳಿಸಿದ್ದನ್ನು ತಿಳಿಸುತ್ತದೆ. 1427ರ ಇಮ್ಮಡಿ ದೇವರಾಯನ ಶಾಸನ ಪುಲ್ಲಲೂರಿನಲ್ಲಿ ಮಳೆಯಿಂದಾಗಿ ನೀರಿನ ಕಾಲುವೆ ಹಾನಿಗೊಳಗಾದಾಗ ದೇವಸ್ಥಾನದ ಸ್ಥಾನಪತಿ ಭಾಸ್ಕರದೇವ ಅದನ್ನು ದುರಸ್ತಿಗೊಳಿಸಿದ್ದನ್ನು ತಿಳಿಸುತ್ತದೆ.

ನೀರಾವರಿ ಮೂಲಗಳು ಜನರ ಜೀವನಾಡಿಗಳಾಗಿರುತ್ತಿದ್ದುದರಿಂದ ವ್ಯಕ್ತಿಗತ ಹಾಗೂ ಸಾಂಸ್ಥಿಕ ರೂಪದಲ್ಲಲ್ಲದೆ ಉಚಿತ ಸೇವೆಯ ಮೂಲಕ ಅವುಗಳ ನಿರ್ವಹಣೆಯನ್ನು ಮಾಡಬೇಕಾಗಿತ್ತು. ವಾಲಿಕಂಡಪುರಂನ 1379ರ ಶಾಸನ ಈ ದೃಷ್ಟಿಯಿಂದ ವಿಶಿಷ್ಟ ಮಾಹಿತಿ ನೀಡುತ್ತದೆ. ನಾಡಿನ ನಾಲ್ಕು ಜಾತಿಗಳಿಗೆ ಸೇರಿದ ಜನರು ಉಚಿತವಾಗಿ ಕೆರೆಯಲ್ಲಿ ಹೂಳನ್ನು ತೆಗೆಯುವಂತೆ ನಿರ್ಬಂಧಿಸಲಾಯಿತು. ಕುಟುಂಬಗಳ ಗಾತ್ರ ಮತ್ತು ಸ್ವರೂಪಕ್ಕನುಸಾರವಾಗಿ ಬಿಟ್ಟಿಸೇವೆಯ ಪ್ರಮಾಣವನ್ನು ನಿರ್ಧರಿಸಲಾಗಿತ್ತು. ಹೂಳು ತೆಗೆಯಲು ಬಿಟ್ಟಿ ಸೇವೆಯನ್ನು ಒದಗಿಸಿದವರು ಒಂದು ಕುಳಿ (ಗುಂಡಿ) ಹೂಳಿಗೆ ಒಂದು ಪಣಂ ಅನ್ನು ನಾಡವರ್‌ಗೆ ಸಂದಾಯ ಮಾಡಬೇಕಾಗಿತ್ತು.

ತಮಿಳುನಾಡಿನಲ್ಲಿ ದೇವದಾನ ಗ್ರಾಮಗಳು ದೇವಾಲಯಗಳ ಆಸ್ತಿಯಾಗಿರುತ್ತಿದ್ದವು. ಅವುಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ದೇವಾಲಯಗಳ ಕರ್ತವ್ಯವಾಗಿತ್ತು. ಕೆರೆಗಳ ಕೆಲವು ಉತ್ಪನ್ನಗಳು, ದೇವದಾನ ಗ್ರಾಮಗಳ ಉತ್ಪನ್ನಗಳು ದೇವಾಲಯಕ್ಕೆ ಸೇರುತ್ತಿದ್ದುದರಿಂದ ಕೆರೆಗಳು ಬೀಳು ಬಿದ್ದರೆ, ದೇವಾಲಯಗಳೂ ತೆರಿಗೆ ನೀಡಲು ಸಾಧ್ಯವಾಗದಷ್ಟು ದಿವಾಳಿಯಾಗುತ್ತಿದ್ದವು. ಅಂಥ ಸಂದರ್ಭದಲ್ಲಿ ದೇವಾಲಯಗಳು ತಮ್ಮ ವರಮಾನ ಮತ್ತು ಪ್ರಜಾಹಿತವನ್ನು ಪರಿಗಣಿಸಿ ದೇವಾಲಯಕ್ಕೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಕೆರೆಗಳನ್ನು ದುರಸ್ತಿಪಡಿಸಿದ್ದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇಮ್ಮಡಿ ವಿರೂಪಾಕ್ಷನ ಶಾಸನ, ಕೆರೆ ಬಿರುಕು ಬಿಟ್ಟಿದ್ದರಿಂದ ತೆರಿಗೆ ನೀಡಲು ದೇವಾಲಯಕ್ಕೆ ಯಾವುದೇ ಮೂಲ ಇಲ್ಲದಿದ್ದರಿಂದ ದೇವಾಲಯದ ಮೂರು ಬೀದಿಗಳಲ್ಲಿದ್ದ ಮನೆಗಳನ್ನು ಮಾರಾಟ ಮಾಡಿದ್ದನ್ನು ತಿಳಿಸುತ್ತದೆ. ಅದೇ ಅರಸನ ಮತ್ತೊಂದು ಶಾಸನವೂ ಶಡೈಯೇರಿ ಎಂಬ ಕೆರೆ ಬಿರುಕು ಬಿಟ್ಟಿದ್ದರಿಂದ ಇಡೀ ಗ್ರಾಮದ ಭೂಮಿ ಸಾಗುವಳಿಯಿಲ್ಲದೆ ಪಾಳು ಬಿದ್ದಾಗ, ದೇವಾಲಯಕ್ಕೆ ಸೇರಿದ ಭೂಮಿಯನ್ನು ಇಳೈ ಪೆರುಮಾಳ ಎಂಬ ವ್ಯಕ್ತಿಗೆ 50 ಪಣಗಳಿಗೆ ಮಾರಾಟ ಮಾಡಿ ಬಂದ ಹಣದಿಂದ ಕೆರೆ ದುರಸ್ತಿ ಮಾಡಿಸಿದ್ದನ್ನು ದಾಖಲಿಸುತ್ತದೆ.

ಜಲಸಂಪನ್ಮೂಲಗಳ ನಿರ್ವಹಣೆಗಾಗಿ ಜನರನ್ನು ನೇಮಿಸಿ ಅವರಿಗೆ ನೀರಾವರಿ ಸೌಲಭ್ಯದೊಂದಿಗೆ ಭೂ ದತ್ತಿ ನೀಡಲಾಗುತ್ತಿತ್ತು. ಮಠ ಅಥವಾ ದೇವಾಲಯಕ್ಕೆ ವಿಶೇಷ ಉತ್ಸವ ಹಬ್ಬಗಳ ಆಚರಣೆಗಾಗಿ ದತ್ತಿ ನೀಡುವಾಗಲೂ ನೀರಾವರಿ ಸೌಲಭ್ಯಗಳೊಂದಿಗೆ ನೀಡಲಾಗುತ್ತಿತ್ತು.

ಅತಿವೃಷ್ಟಿಯಿಂದ ನದಿಗಳಲ್ಲಿ ಪ್ರವಾಹ ಉಂಟಾಗಿ ಅಥವಾ ಅನಾವೃಷ್ಟಿಯಿಂದ ಸಾಗುವಳಿಯಿಲ್ಲದೆ ಜಮೀನು ಪಾಳು ಬಿದ್ದಾಗ ಅಂಥ ಭೂಮಿಯನ್ನು ಕೃಷಿಯೋಗ್ಯವನ್ನಾಗಿಸಲು ರೈತರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಹಲವಾರು ತೆರಿಗೆ ವಿನಾಯಿತಿಗಳನ್ನು ಘೋಷಿಸಲಾಗುತ್ತಿತ್ತು. ಇಮ್ಮಡಿ ಬುಕ್ಕರಾಯನ 1402ರ ಶಾಸನದಲ್ಲಿ ಈ ವಿನಾಯಿತಿಗಳನ್ನು ಸವಿವರವಾಗಿ ದಾಖಲಿಸಲಾಗಿದೆ.

ಮಹಾಸಭೆಗಳು ತಮ್ಮ ಸಮಿತಿಗಳ ಮುಖಾಂತರ ಜಲನಿರ್ವಹಣಾ ಕಾರ್ಯವನ್ನು ಕೈಗೊಳ್ಳುತ್ತಿದ್ದವು. ಕಾವೇರಿ ಪಾಕಂನ 1459ರ ಶಾಸನದಲ್ಲಿ ಮಹಾಸಭಾದ ಉಲ್ಲೇಖವಿದ್ದು, ಅದರಲ್ಲಿ ಸುದ್ದಿ ಸಮಿತಿ ಮತ್ತು ಏರಿವಾರಿಯಂ (ಕೆರೆ ಸಮಿತಿ) ಇದ್ದುದನ್ನು ದಾಖಲಿಸುತ್ತದೆ.

ಜಲ ನಿರ್ವಹಣೆಗಾಗಿ ಪಾಡೈಕ್ಕಾವಲ್ (ಬಹುಶಃ ಕೆರೆಯನ್ನು ದುರಸ್ತಿಪಡಿಸುವುದಕ್ಕಾಗಿ ಸಂಗ್ರಹಿಸುವ ತೆರಿಗೆ ವಾಶಲ್ ಕುಳಿಪಣಂ (ಹೂಳೆತ್ತಲು ಸಂಗ್ರಹಿಸುವ ತೆರಿಗೆ), ಏರಿಪಾಶಿ– ಮೀನುಗಾರಿಕೆಗಾಗಿ ಕೆರೆಗಳನ್ನು ಗುತ್ತಿಗೆಗೆ ನೀಡಿ ಅದರಿಂದ ಸಂಗ್ರಹಿಸುವ ಹಣ ಮುಂತಾದ ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಸಂಗಮ ಕಾಲದಲ್ಲಿ ತಮಿಳು ನಾಡಿನಲ್ಲಿ ಜಲ ನಿರ್ವಹಣಾ ವ್ಯವಸ್ಥೆ ಹೆಚ್ಚು ಸಮರ್ಪಕವಾಗಿದ್ದುದು ಕಂಡುಬರುತ್ತದೆ. (ಡಿ.ಎಸ್‌ಆರ್.)

**ನಾಣ್ಯಗಳು:** ವಿಜಯನಗರ ಕಾಲದಲ್ಲಿ ನಾಣ್ಯಪದ್ಧತಿ ವಿಶೇಷವಾಗಿ ಸುಧಾರಿತವಾಯಿತು. ಇಮ್ಮಡಿ ದೇವರಾಯನ ಕಾಲದಲ್ಲಿ ಜಾರಿಗೆ ಬಂದ ಆಡಳಿತ ಸುಧಾರಣೆಗಳಲ್ಲಿ ಮುಖ್ಯವಾದದ್ದು ನಾಣ್ಯಗಳಿಗೆ ಸಂಬಂಧಿಸಿದುದು. ತೆರಿಗೆಗಳನ್ನು ಧಾನ್ಯರೂಪದ ಬದಲು ಚಿನ್ನದ ನಾಣ್ಯಗಳಲ್ಲಿ ಕೊಡಬೇಕೆಂದು ಇವನು ಮಾಡಿದ ಆಜ್ಞೆಯ ಫಲವಾಗಿ ಹೊಸ ನಮೂನೆಯ ನಾಣ್ಯಗಳು ಬಳಕೆಗೆ ಬಂದವು. ಚಿನ್ನದ ನಾಣ್ಯಗಳ ತೂಕ ಮತ್ತು ಶುದ್ಧತೆಯನ್ನು ಪರೀಕ್ಷಿಸಲು ಒಂದು ಶಾಖೆಯೇ ಇತ್ತು. ಚಿನ್ನದ ನಾಣ್ಯಗಳೇ ವಿಜಯನಗರ ಕಾಲದಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದರೂ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳೂ ಅಚ್ಚಾಗುತ್ತಿದ್ದುವು. ವರಹ (ಗದ್ಯಾಣ, ಪೊನ್, ಪಗೋಡ), ಪಣ, ಹಾಗ ಎಂಬುವು ಚಿನ್ನದ ನಾಣ್ಯಗಳು. ತಾರ ಎನ್ನುವುದು ಬೆಳ್ಳಿಯ ನಾಣ್ಯ. ಪಣ, ಚಿತಲ್ ಮತ್ತು ಕಾಸು ತಾಮ್ರದ ನಾಣ್ಯಗಳು. ವರಹ ಸು.52 ಗ್ರೇನ್ ತೂಕದ್ದು. ಸು.250 ಗ್ರೇನ್ ತೂಕದಿಂದ ಪ್ರಾರಂಭವಾಗಿ 15 ಗ್ರೇನ್ ತೂಕದವರೆಗಿನ ತಾಮ್ರದ ನಾಣ್ಯಗಳು ಬೆಳಕಿಗೆ ಬಂದಿವೆ. ಶಾಸನಗಳಲ್ಲಿ ದೊರಕುವ ಮಾಹಿತಿಗಳಿಂದ ಮತ್ತು ಸಮಕಾಲೀನ ವಿದೇಶಿ ಇತಿಹಾಸಕಾರರ ಬರೆವಣಿಗೆಯಿಂದ ವಿಜಯನಗರ ಕಾಲದಲ್ಲಿದ್ದ ನಾಣ್ಯಗಳ ಕೋಷ್ಟಕವನ್ನು ಈ ರೀತಿ ತೋರಿಸಬಹುದು:

1 ದೊಡ್ಡ ವರಹ = 2 ವರಹ, 1 ವರಹ = 2 ಪ್ರತಾಪ, 1 ಪ್ರತಾಪ = 2 ಕಾಟಿ, 1 ಪಣ = 1/10 ವರಹ, 1 ಚಿನ್ನ = 1/8 ವರಹ, 1 ಪಣ = 4 ಹಾಗ, 1 ಹಾಗ = 2 ಬೇಳೆ.

ಹನುಮಂತ, ಗರುಡ, ವೆಂಕಟೇಶ್ವರ, ಬಾಲಕೃಷ್ಣ, ಲಕ್ಷ್ಮೀನಾರಾಯಣ, ಶ್ರೀರಾಮ, ಶಂಖ–ಚಕ್ರ, ದುರ್ಗಿ, ಗಂಡಭೇರುಂಡ, ವರಾಹ, ಆನೆ, ಉಮಾಮಹೇಶ್ವರ, ನಂದಿ ಮುಂತಾದವುಗಳು ವಿಜಯನಗರದ ನಾಣ್ಯಗಳ ಮುಮ್ಮುಖದಲ್ಲಿರುತ್ತವೆ. ಹಿಮ್ಮುಖದಲ್ಲಿ ಸಾಮಾನ್ಯವಾಗಿ ಬರೆಹವಿರುತ್ತದೆ. ಈ ಬರೆಹ ಕನ್ನಡ, ನಾಗರೀ ಅಥವಾ ತೆಲುಗು ಲಿಪಿಯಲ್ಲಿರುತ್ತದೆ. ವಿಜಯನಗರದ ಸ್ಥಾಪಕರು ಕನ್ನಡ ಲಿಪಿಯನ್ನೇ ತಮ್ಮ ನಾಣ್ಯಗಳಲ್ಲಿ ಬಳಸಿದ್ದರು ಎಂಬುದು ಗಮನಿಸಬೇಕಾದ ಅಂಶ. ಅನಂತರದ ರಾಜರು ನಾಗರೀ ಮತ್ತು ಕನ್ನಡ ಲಿಪಿಯ ಬರೆಹಗಳನ್ನು ಅಚ್ಚುಹಾಕಿಸಿದರು. ಆದರೆ ಕೊನೆಯ ರಾಜರ ಬರೆಹಗಳು ತೆಲುಗಿನಲ್ಲಿವೆ. ಸಾಮಾನ್ಯವಾಗಿ ಬರೆಹಗಳು ರಾಜನ ಹೆಸರು ಮತ್ತು ಅವರ ಬಿರುದುಗಳನ್ನು ತಿಳಿಸುತ್ತವೆ.

ತಾಂತ್ರಿಕ ದೃಷ್ಟಿಯಿಂದ ವಿಜಯನಗರ ನಾಣ್ಯಗಳು ಗಮನಾರ್ಹವಾದವು. ಸರಿಯಾದ ಅಚ್ಚುಗಳನ್ನುಮಾಡಿ ಅವುಗಳಿಂದ ನಾಣ್ಯಗಳನ್ನು ತಯಾರಿಸುತ್ತಿದ್ದರು. ತೂಕ ಮತ್ತು ಆಕಾರಗಳಲ್ಲಿ ಖಚಿತತೆ ಕಾಣಬರುತ್ತದೆ. ಅವುಗಳ ಮೇಲಿನ ಚಿತ್ರಗಳು ಕಲಾತ್ಮಕ, ಬರೆವಣಿಗೆ ಸ್ಫುಟ.

ಒಂದನೆಯ ಹರಿಹರನ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನ ನಾಣ್ಯಗಳಲ್ಲಿ ಹನುಮಂತ ಅಥವಾ ಗರುಡನ ಚಿತ್ರವುಳ್ಳ ಮುಮ್ಮುಖ ಮತ್ತು ಶ್ರೀ ವೀರ ಹರಿಹರ ಎಂಬ ಕನ್ನಡ ಬರೆವಣಿಗೆ ಕಾಣಬರುತ್ತದೆ. ಒಂದನೆಯ ಬುಕ್ಕನ ಚಿನ್ನ ಮತ್ತು ತಾಮ್ರದ ನಾಣ್ಯಗಳ ಮುಮ್ಮುಖದಲ್ಲಿ ಹನುಮಂತನ ಚಿತ್ರ, ಒಮ್ಮುಖದಲ್ಲಿ ಶ್ರೀ ವೀರಬುಕ್ಕರಾಯ ಎಂಬ ಬರೆಹ ಕನ್ನಡ ಅಥವಾ ನಾಗರೀಲಿಪಿಯಲ್ಲಿ ಕಾಣಬರುತ್ತದೆ. ಇಮ್ಮಡಿ ಹರಿಹರ ವೀರ ಎನ್ನುವ ಬಿರುದಿಗೆ ಬದಲಾಗಿ ಪ್ರತಾಪ ಎನ್ನುವ ಪದವನ್ನು ತನ್ನ ನಾಣ್ಯಗಳ ಮೇಲೆ ಅಚ್ಚುಹಾಕಿಸಿದ. ಇವನ ನಾಣ್ಯಗಳ ಮೇಲೆ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಲಕ್ಷ್ಮೀನರಸಿಂಹ, ಸರಸ್ವತಿ, ಬ್ರಹ್ಮ ಮತ್ತು ನಂದಿಯ ಚಿತ್ರಗಳಿರುತ್ತವೆ. ತಾಂತ್ರಿಕ ದೃಷ್ಟಿಯಿಂದಲೂ ಇಮ್ಮಡಿ ಹರಿಹರನ ನಾಣ್ಯಗಳು ಉತ್ತಮವಾದವು. ಇವನ ಅನಂತರ ಬಂದ ಅನೇಕ ರಾಜರು ಇವನ ನಾಣ್ಯಗಳನ್ನೇ ವಿಶೇಷವಾಗಿ ಅನುಕರಿಸಿದರು. ಇವನ ಒಂದೆರಡು ಮುಖ್ಯ ನಮೂನೆಗಳನ್ನು ಗಮನಿಸಬಹುದು. ಮುಮ್ಮುಖದಲ್ಲಿ ಶಿವನೊಡನೆ ಕುಳಿತಿರುವ ಪಾರ್ವತಿ, ಇಬ್ಬರೂ ಕಿರೀಟಧಾರಿಗಳಾಗಿದ್ದಾರೆ; ಶಿವನು ಡಮರು ಮತ್ತು ತ್ರಿಶೂಲಧಾರಿಯಾಗಿದ್ದಾನೆ; ಶಿವನ ತಲೆಯ ಮೇಲೆ ಸೂರ್ಯ ಮತ್ತು ಚಂದ್ರರು ಇದ್ದಾರೆ. ಹಿಮ್ಮುಖದಲ್ಲಿ ಶ್ರೀ ಪ್ರತಾಪ ಹರಿಹರ ಎಂಬ ಮೂರು ಸಾಲುಗಳ ನಾಗರೀ ಬರೆವಣಿಗೆ ಇದೆ. ಮತ್ತೊಂದು ಚಿನ್ನದ ನಾಣ್ಯದಲ್ಲಿ ಮುಮ್ಮುಖದಲ್ಲಿ ಪದ್ಮಾಸನದಲ್ಲಿರುವ ಬ್ರಹ್ಮ ಮತ್ತು ಸರಸ್ವತಿ; ಬ್ರಹ್ಮನ ಒಂದು ಕೈ ಅಭಯ ಮುದ್ರೆಯಲ್ಲಿಯೂ ಇತರ ಕೈಗಳಲ್ಲಿ ಪುಸ್ತಕ ಇತ್ಯಾದಿಗಳಿವೆ. ಸರಸ್ವತಿ ವೀಣೆಯನ್ನು ಹಿಡಿದಿದ್ದಾಳೆ. ಹಿಮ್ಮುಖದಲ್ಲಿ ನಾಗರೀಲಿಪಿಯ ಶ್ರೀ ಪ್ರತಾಪ ಹರಿಹರ ಎಂಬ ಬರೆಹ ಇದೆ. ಇನ್ನೊಂದರಲ್ಲಿ ಲಕ್ಷ್ಮಿ ಮತ್ತು ನಾರಾಯಣ ಕುಳಿತಿದ್ದಾರೆ. ನಾರಾಯಣನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಮತ್ತೊಂದು ಕೈಯಲ್ಲಿ ಲಕ್ಷ್ಮಿಯನ್ನು ಬಳಸಿದ್ದಾನೆ. ಇನ್ನೊಂದು ಕೈ ಅಭಯಮುದ್ರೆಯಲ್ಲಿದೆ. ಇವನ ತಾಮ್ರದ ನಾಣ್ಯದ ಮುಮ್ಮುಖದಲ್ಲಿ ಚುಕ್ಕೆಗಳಿಂದ ಮಾಡಿದ ವೃತ್ತಾಕಾರದಲ್ಲಿ ಎಡಕ್ಕೆ ಹೋಗುತ್ತಿರುವ, ಘಂಟೆಗಳಿಂದ ಅಲಂಕೃತವಾದ ನಂದಿಯ ಚಿತ್ರ; ಅದರ ಮುಂದೆ ಖಡ್ಗ; ಮೇಲೆ ಚಂದ್ರ ಇವೆ. ಹಿಮ್ಮುಖದಲ್ಲಿ ಪ್ರತಾಪ ಹರಿಹರ ಎಂಬ ಎರಡು ಸಾಲುಗಳ ನಾಗರೀ ಬರೆವಣಿಗೆಯಿದೆ.

ಎರಡನೆಯ ಬುಕ್ಕನ ತಾಮ್ರನಾಣ್ಯ ನಂದಿ ನಮೂನೆಗೆ ಸೇರಿದ್ದು, ಇಮ್ಮಡಿ ಹರಿಹರನ ನಾಣ್ಯದಂತೆಯೇ ಇದೆ. ಒಂದನೆಯ ಮತ್ತು ಎರಡನೆಯ ದೇವರಾಯರ ನಾಣ್ಯಗಳನ್ನು ಬೇರ್ಪಡಿಸುವುದು ಕಷ್ಟ. ಎರಡನೆಯ ದೇವರಾಯ ವೀರಶೈವಧರ್ಮಕ್ಕೆ ಪ್ರೋತ್ಸಾಹ ಕೊಟ್ಟನೆಂತಲೂ ಮತ್ತು ಅವನು ಆನೆಗಳ ಬೇಟೆಯಲ್ಲಿ ವಿಶೇಷ ಆಸಕ್ತಿವಹಿಸಿದ್ದನೆಂದೂ ಊಹಿಸಿ ಆನೆಯ ಚಿತ್ರವನ್ನು ಹೊಂದಿರುವ ನಾಣ್ಯಗಳು ಎರಡನೆಯ ದೇವರಾಯನಿಗೆ ಸೇರಿದ್ದೆಂದು ವಿದ್ವಾಂಸರ ಭಾವನೆ. ಒಂದನೆಯ ದೇವರಾಯನ ಐದು ವಿಧವಾದ ಚಿನ್ನದ ನಾಣ್ಯಗಳು ಬೆಳಕಿಗೆ ಬಂದಿವೆ. ಇವುಗಳ ಮುಮ್ಮುಖದಲ್ಲಿ ಲಕ್ಷ್ಮೀನಾರಾಯಣ, ಉಮಾಮಹೇಶ್ವರ ದೇವತೆಗಳೂ ಹಿಮ್ಮುಖದಲ್ಲಿ ಶ್ರೀಪ್ರತಾಪದೇವರಾಯ ಎಂಬ ನಾಗರೀ ಬರೆಹವೂ ಕಾಣಬರುತ್ತದೆ. ಇವನ ತಾಮ್ರದ ನಾಣ್ಯಗಳ ಮೇಲೆ ನಂದಿಯ ಚಿತ್ರ ಮತ್ತು ಹಿಮ್ಮುಖದಲ್ಲಿ ಶ್ರೀ ದೇವರಾಯ ಎಂಬ ಕನ್ನಡ ಅಥವಾ ನಾಗರೀ ಬರೆಹವಿದೆ.

ಕೆಲವು ನಾಣ್ಯಗಳ ಹಿಮ್ಮುಖದಲ್ಲಿ ರಾಯ ಗಜಗಂಡಭೇರುಂಡ, ಶ್ರೀದೇವರಾಯ, ಗಜವೇಂಟೆಕಾರ ಎಂಬ ಬರೆವಣಿಗೆಯಿದೆ. ಎರಡನೆಯ ದೇವರಾಯನ ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಆನೆ, ಹಿಮ್ಮುಖದಲ್ಲಿ ವಿಜಯರಾಯ ಎಂಬ ಕನ್ನಡ ಬರೆಹವಿದೆ. ಮಲ್ಲಿಕಾರ್ಜುನನ ತಾಮ್ರದ ನಾಣ್ಯದ ಮೇಲೂ ಆನೆ ಮತ್ತು ಮಲ್ಲಿಕಾರ್ಜುನರಾಯ ಎಂಬ ಕನ್ನಡ ಬರೆಹವಿದೆ.

ಕೃಷ್ಣದೇವರಾಯ ಹಳೆಯ ನಾಣ್ಯ ನಮೂನೆಗಳನ್ನು ಮುಂದುವರಿಸಿದುದಲ್ಲದೆ ಹೊಸ ನಮೂನೆಗಳನ್ನು ಬಳಕೆಗೆ ತಂದ. ಸು.117 ಗ್ರೇನ್ ತೂಕದ ಚಿನ್ನದ ನಾಣ್ಯಗಳು ಗಮನಾರ್ಹವಾದವು. ಈ ನಾಣ್ಯಗಳ ಮೇಲೆ ಅಲಂಕೃತನಾದ ತಿರುಪತಿ ವೆಂಕಟೇಶ್ವರನ ಚಿತ್ರವಿದೆ. ಈ ನಾಣ್ಯಗಳನ್ನು ಕೃಷ್ಣದೇವರಾಯ ತನ್ನ ಒರಿಸ್ಸ ವಿಜಯದ ಜ್ಞಾಪಕಾರ್ಥವಾಗಿ, ತಿರುಪತಿಯ ವೆಂಕಟೇಶ್ವರನಿಗೆ ಕನಕಾಭಿಷೇಕ ಮಾಡಿಸಿದ ಸಮಯದಲ್ಲಿ ಅಚ್ಚು ಹಾಕಿಸಿರಬಹುದೆಂದು ಊಹೆ. ಇವನ ವರಹ ಮೌಲ್ಯದ ಚಿನ್ನದ ನಾಣ್ಯಗಳ ಮೇಲೆ ಬಾಲಕೃಷ್ಣನ ಚಿತ್ರವಿದೆ. ಹಿಮ್ಮುಖದಲ್ಲಿ ಶ್ರೀ ಪ್ರತಾಪ ಕೃಷ್ಣರಾಯ ಎಂಬ ಮೂರು ಸಾಲುಗಳ ಬರೆಹವಿದೆ. ಇವನ ಉಮಾಮಹೇಶ್ವರ ನಮೂನೆಯ ನಾಣ್ಯಗಳು ಹಿಂದಿನ ನಾಣ್ಯಗಳಂತೆಯೇ ಇವೆ. ಇವನ ತಾಮ್ರದ ನಾಣ್ಯಗಳಲ್ಲಿ ಗರುಡ ಮತ್ತು ನಂದಿ ನಮೂನೆಗಳು ಮುಖ್ಯವಾದುವು. ಇವು 247 ಗ್ರೇನ್‌ನಿಂದ 15 ಗ್ರೇನ್ ತೂಕದವರೆಗೂ ದೊರೆಯುತ್ತವೆ.

ಅಚ್ಯುತರಾಯನ ನಾಣ್ಯಗಳಲ್ಲಿ ಮುಖ್ಯವಾದುದು ಗಂಡಭೇರುಂಡ ನಮೂನೆಯ ಚಿನ್ನದ ನಾಣ್ಯ. ಇದರ ಮುಮ್ಮುಖದಲ್ಲಿ ಅಲಂಕೃತ ಗಂಡಭೇರುಂಡ; ಅದರ ಎರಡು ಕೊಕ್ಕುಗಳಲ್ಲಿ ಆನೆಯನ್ನು ಹಿಡಿದಿರುವ ಚಿತ್ರವಿದೆ. ಹಿಮ್ಮುಖದಲ್ಲಿ ಶ್ರೀ ಪ್ರತಾಪಾಚ್ಯುತರಾಯ ಎಂಬ ಬರೆಹವಿದೆ. ಸದಾಶಿವರಾಯನ ನಾಣ್ಯಗಳಲ್ಲಿ ಲಕ್ಷ್ಮೀನಾರಾಯಣ, ಉಮಾಮಹೇಶ್ವರ ಮತ್ತು ಗರುಡ ನಮೂನೆ ಮುಖ್ಯವಾದವು. ಇವುಗಳ ಹಿಂಭಾಗದಲ್ಲಿ ತಿರುಮಲರಾಯುಲು ಎಂಬ ಬರೆಹವಿದೆ. ಇವೇ ರಾಮಟಂಕಿ ನಾಣ್ಯಗಳಿಗೆ ನಾಂದಿಯಾದವು. ಇವನ ತಾಮ್ರದ ನಾಣ್ಯಗಳಲ್ಲಿ ಗರುಡನ ಚಿತ್ರವಿದೆ. ರಾಮರಾಯ ವೆಂಕಟಾದ್ರಿ ಎಂಬ ಬರೆಹವುಳ್ಳ ತಾಮ್ರದ ನಾಣ್ಯಗಳು ವೆಂಕಟಾದ್ರಿಯದೆಂದು ಹೇಳಬಹುದು.

ಇಮ್ಮಡಿ ಶ್ರೀ ಅವನ ವಶವಾಯಿತೆಂದು ಫೆರಿಸ್ತ ತಿಳಿಸುತ್ತಾನಾದರೂ ಅದೇ ಕಾಲದ ಶಾಸನದಲ್ಲಿ ದೇವರಾಯನ ಅಧಿಕಾರಿಯಾದ ವರದಣ್ಣನಾಯಕನು ಅಲ್ಲಿ ಆಳುತ್ತಿದ್ದನೆಂದೇ ಅಲಾಉದ್ದೀನನ ಯತ್ನ ಫಲಿಸಲಿಲ್ಲವೆನ್ನಲಾಗಿದೆ. ಲಕ್ಕಣ್ಣ ದಂಡನಾಯಕ ಸಿಂಹಳದ ಅರಸರ ವಿರುದ್ಧ ನೌಕಾಬಲವೊಂದನ್ನು ಒಯ್ದು, ಅಲ್ಲಿಯ ಅರಸನಿಂದ ಕಪ್ಪಕಾಣಿಕೆಗಳನ್ನು ಪಡೆದ. ಈತನ ಕಾಲದಲ್ಲಿ ರಾಜ್ಯ ವಿಸ್ತರಿಸಿ ಉತ್ತರದಲ್ಲಿ ಕೃಷ್ಣಾತೀರದವರೆಗೂ ಹಬ್ಬಿತು. (ಬಿ.ಆರ್.ಜಿ.)

**ಗುರುವಂಶ ಕಾವ್ಯ:** 18ನೆಯ ಶತಮಾನದ ಗುರುವಂಶ ಕಾವ್ಯದಲ್ಲಿ ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ಪ್ರಸ್ತಾಪವಾಗಿವೆ. 5ನೆಯ ಸರ್ಗದಲ್ಲಿ ಕಂಪನೃಪ, ಬುಕ್ಕ ರಾಜ್ಯವಾಳುತ್ತಿದ್ದಾಗ ಧನುರ್ವಿದ್ಯೆಯಲ್ಲಿ ಪಾರಂಗತನಾದ ವೀರರುದ್ರನೃಪ, ಬುಕ್ಕ ಹಾಗೂ ರಾಮನಾಥ ಸೋತರು (ಶ್ಲೋಕ 53–55). ಹರಿಹರ–ಬುಕ್ಕರು ಬಂಧಿತರಾದರು. ಅನಂತರ ಹೊಯ್ಸಳ ಬಲ್ಲಾಳನೊಂದಿಗೆ ನಡೆದ ಮೊದಲ ಯುದ್ಧದಲ್ಲಿ ಹರಿಹರ ಸೋತ. ಹರಿಹರನ ಸ್ವಪ್ನದಲ್ಲಿ ಬಂದ ರೇವಣಸಿದ್ಧ ಯೋಗಿ ನಿನ್ನ ರಾಜ್ಯ ಮರಳಿ ಸಿಗುವುದೆಂದು ಆಶೀರ್ವದಿಸಿದ (ಶ್ಲೋಕ 59). ಆರನೆಯ ಸರ್ಗದಲ್ಲಿ ಮೊದಲೆರಡು ಶ್ಲೋಕಗಳಲ್ಲಿ ಹರಿಹರನಿಗೆ ಕನಸಿನಲ್ಲಿ ಬಂದು ವಿದ್ಯಾರಣ್ಯರ ಆಶೀರ್ವಾದದಿಂದ ನೀನು ಅನೇಕ ವರ್ಷಗಳ ಕಾಲ ರಾಜ್ಯಭಾರ ಮಾಡುವೆ ಎಂದು ಆಶೀರ್ವಾದ ಮಾಡಿರುವುದಾಗಿ ವಿವರಿಸಿದೆ. ಆತ ಸ್ವಪ್ನ ವೃತ್ತಾಂತವನ್ನು ಅತ್ಯಂತ ಸಂತೋಷದಿಂದ ತನ್ನವರಿಗೆಲ್ಲ ಹೇಳಿ ಅಲ್ಲಿ ವಿದ್ಯಾರಣ್ಯರ ಆಶೀರ್ವಾದ ಪಡೆದು ಚಂದ್ರಮೌಳೇಶ್ವರನನ್ನು ಆರಾಧಿಸಿ ರಾಜ್ಯವನ್ನು ಪಡೆದ (ಶ್ಲೋಕ 3). ಅನಂತರ 3ನೆಯ ವೀರಬಲ್ಲಾಳನನ್ನು ಎರಡನೆಯ ಯುದ್ಧದಲ್ಲಿ ಸೋಲಿಸಿ ಸ್ವರ್ಣಸಿಂಹಾಸನವನ್ನೇರಿದ (ಶ್ಲೋಕ 4–5). ಶ.ವ. 1258ನೆಯ ಧಾತು ಸಂವತ್ಸರದ ವೈಶಾಖ ಶುಕ್ಲ ಮಹಾನಕ್ಷತ್ರ ಸಪ್ತಮೀ ದಿನದಂದು ಶುಭಲಗ್ನದಲ್ಲಿ ಶ್ರೀ ವಿಜಯನಗರ ರಾಜ್ಯ ನಿರ್ಮಾಣವಾಯಿತು. ಅನಂತರದ 32 ಶ್ಲೋಕಗಳಲ್ಲಿ ವಿರೂಪಾಕ್ಷ ದೇವಾಲಯ ನಿರ್ಮಾಣ, ನಗರ ನಿರ್ಮಾಣ, ರಾಜ್ಯಭಾರಕ್ರಮ ಇತ್ಯಾದಿಗಳ ವರ್ಣನೆ ಇದೆ. ಈ ಎಲ್ಲ ಸುಖ–ಭೋಗಗಳು ವಿದ್ಯಾರಣ್ಯರಿಂದಲೇ ಬಂದಿರುವುದೆಂದು ಹೇಳಿ ವಿದ್ಯಾರಣ್ಯರಿಗೆ ವಿಜಯನಗರ ಸಾಮ್ರಾಜ್ಯವನ್ನು ಹಾಗೂ ತನಗೆ ಬಂದಿದ್ದ ಬಿರುದುಗಳನ್ನು ಸಮರ್ಪಿಸಿದ್ದಾಗಿ (ಶ್ಲೋಕ 42)ರಲ್ಲಿ ವರ್ಣಿಸಲಾಗಿದೆ. ವಿದ್ಯಾರಣ್ಯರು ಹರಿಹರನನ್ನು ಸಿಂಹಾಸನದಲ್ಲಿ ಕೂಡಿಸಿ ತೀರ್ಥಯಾತ್ರೆಗೆ ಹೊರಟುಹೋಗುತ್ತಾರೆ (ಶ್ಲೋಕ 46). ಬುಕ್ಕನಿಗೆ ಬಂದಿದ್ದ ವೈದ್ಯರಿಂದಲೂ ಗುಣಪಡಿಸಲಾಗದ ರೋಗವನ್ನು ವಿದ್ಯಾತೀರ್ಥ ಸ್ವಾಮಿಗಳು ಗುಣಪಡಿಸಿದರು (ಶ್ಲೋಕ 51). ಬುಕ್ಕನು ಶೃಂಗೇರಿಯಲ್ಲಿ ವಿದ್ಯಾಶಂಕರ ದೇವಾಲಯವನ್ನು, ಶಿಲ್ಪಿಗಳನ್ನು, ವಾಸ್ತುಶಾಸ್ತ್ರಜ್ಞರನ್ನು ಕರೆಸಿ ಸುಂದರವಾಗಿ ನಿರ್ಮಿಸಿದ (ಶ್ಲೋಕ 60). ಸರ್ಗ 7ರಲ್ಲಿ ಬುಕ್ಕನಿಂದ ನಿರ್ಮಿತವಾದ ಆಲಯದಲ್ಲಿ ವಿದ್ಯಾಶಂಕರ ಲಿಂಗವನ್ನು ಭಾರತೀಕೃಷ್ಣ ತೀರ್ಥರು ಪ್ರತಿಷ್ಠಾಪಿಸಿದ ವಿಷಯವನ್ನು ಹೇಳಿದೆ. ಬುಕ್ಕನ ಮರಣಾನಂತರ ವಿದ್ಯಾರಣ್ಯರು 2ನೆಯ ಹರಿಹರನಿಗೆ ಪಟ್ಟಾಭಿಷೇಕ ಮಾಡಿದರು. 8ನೆಯ ಸರ್ಗದ ಪ್ರಾರಂಭದ 18 ಶ್ಲೋಕಗಳಲ್ಲಿ 2ನೆಯ ಹರಿಹರನು ಶೃಂಗೇರಿ ಜಗದ್ಗುರುಗಳಿಗೆ ಪಲ್ಲಕ್ಕಿ, ಶ್ವೇತಛತ್ರಾದಿ ರಾಜ ಚಿಹ್ನೆಗಳನ್ನು, ಉಡುಗೊರೆಗಳನ್ನು ದಾನ ಮಾಡಿದ ವಿವರಗಳಿವೆ. ತನ್ನ ಪೂರ್ವಜರು ನೀಡಿದ ದಾನದತ್ತಿಗಳನ್ನು ಪುಷ್ಟೀಕರಿಸಿದ (ಶ್ಲೋಕ 24): ನಾಲ್ಕು ದಿಕ್ಕುಗಳ ರಕ್ಷಣೆಗಾಗಿ ಭೈರವ, ದುರ್ಗಾಂಬ, ಹನುಮಂತ ಹಾಗೂ ಕಾಳಿಕಾಂಬಿಕಾ ದೇವಾಲಯಗಳನ್ನು ನಿರ್ಮಿಸಿದ (ಶ್ಲೋಕ 26). ವಿದ್ಯಾರಣ್ಯರಿಂದ ಅಧ್ಯಾತ್ಮ ವಿದ್ಯೆಯನ್ನು ಕಲಿತುಕೊಂಡ (ಶ್ಲೋಕ 34). (ಜಿ.ವಿ.ಕೆ.)

**ವಿಜಯಲಕ್ಷ್ಮಿ ಪಂಡಿತ್:** 1900–90. ಸ್ವಾತಂತ್ರ್ಯ ಹೋರಾಟಗಾರ್ತಿ, ರಾಜಕಾರಣಿ, ಭಾರತದ ಪ್ರಥಮ ಮಹಿಳಾಮಂತ್ರಿ, ರಾಯಭಾರ ಕುಶಲೆ, ವಿಶ್ವ ಸಂಸ್ಥೆಯ ಮಾಜಿ ಅಧ್ಯಕ್ಷೆ. 1900 ಆಗಸ್ಟ್ 18 ರಂದು ಅಲಹಾಬಾದಿನ ಆನಂದ ಭವನದಲ್ಲಿ ಮೋತೀಲಾಲ್ ನೆಹರು ಮತ್ತು ಸ್ವರೂಪ ರಾಣಿಯರ ಮೂರು ಮಕ್ಕಳಲ್ಲಿ ಎರಡನೆಯವರಾಗಿ ಜನಿಸಿದರು. ಅಣ್ಣ

ಜವಾಹರಲಾಲ್ ನೆಹರು, ತಂಗಿ ಕೃಷ್ಣಾ ಹಠೀಸಿಂಗ್. ಹುಟ್ಟು ಹೆಸರು ಸ್ವರೂಪ. ಶ್ರೀಮಂತ ಮನೆತನದಲ್ಲಿ ಹುಟ್ಟಿದ ಇವರು ತಮ್ಮ ಸೋದರ ಸೋದರಿಯರಂತೆ ಇಂಗ್ಲಿಷ್ ಶಿಕ್ಷಕಿಯೊಬ್ಬರ ಮೇಲ್ವಿಚಾರಣೆಯಲ್ಲಿ ಬೆಳೆದರು; ಆ ಕಾಲದ ಶ್ರೀಮಂತ ಮನೆತನದ ಪದ್ಧತಿಗೆ ಅನುಗುಣವಾಗಿ ಮನೆಯಲ್ಲೇ ಶಿಕ್ಷಣ ಪಡೆದರು. ಇವರ ತವರಿನಲ್ಲಿ ಎಲ್ಲ ಹಬ್ಬ ಉತ್ಸವಗಳನ್ನೂ ಆಚರಿಸಲಾಗುತ್ತಿತ್ತು. ಇವರಿಗೆ ಹಿಂದು, ಮುಸ್ಲಿಂ, ಕ್ರೈಸ್ತ ಮೊದಲಾದ ಎಲ್ಲ ಧರ್ಮಗಳಲ್ಲೂ ಆದರ ಗೌರವಗಳು ಸಹಜವಾಗಿಯೇ ಉಂಟಾದುವು. ತಮ್ಮ ಶಿಕ್ಷಕಿಯೊಂದಿಗೆ ಇವರು ಕ್ರೈಸ್ತಮಂದಿರಕ್ಕೂ ಹೋಗುತ್ತಿದ್ದರು. ಗೀತೆ, ರಾಮಾಯಣ, 1857ರ ಬಂಡಾಯದಲ್ಲಿ ಪ್ರಮುಖ ಪಾತ್ರವಹಿಸಿದ್ದ ಝಾನ್ಸಿರಾಣಿ ಲಕ್ಷ್ಮೀಬಾಯಿಯ ಜೀವನಚರಿತ್ರೆ ಇವು ಇವರ ಮೇಲೆ ಪ್ರಭಾವ ಬೀರಿದುವು. 1919ರಲ್ಲಿ ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಇವರೂ ಅಸಹಕಾರ ಚಳವಳಿಯನ್ನು ಪ್ರವೇಶಿಸಿದರು.

ಕಾಥೇವಾಡದ ಬ್ಯಾರಿಸ್ಟರ್ ರಣಜಿತ್‌ಸೀತಾರಾಮಪಂಡಿತರೊಂದಿಗೆ, ಅಲಹಾಬಾದ್‌ನ ಸಾಹಿತ್ಯದ ಮೂಲಕ ಉಂಟಾದ ಪರಿಚಯ ವಿವಾಹದಲ್ಲಿ ಕೊನೆಗೊಂಡಿತು (1921). ಇವರಿಗೆ ಚಂದ್ರಲೇಖಾ, ನಯನತಾರಾ ಮತ್ತು ರೀಟಾ ಎಂಬ ಮೂವರು ಪುತ್ರಿಯರು.

1929ರಲ್ಲಿ ಜವಾಹರಲಾಲರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಅಂದಿನಿಂದ ವಿಜಯಲಕ್ಷ್ಮಿಯವರು ರಾಷ್ಟ್ರೀಯ ಚಳವಳಿಯಲ್ಲಿ ಪೂರ್ಣವಾಗಿ ತೊಡಗಿಸಿ ಕೊಂಡರು. 1932 ಜನವರಿ 29ರಂದು ಸರ್ಕಾರ ಇವರನ್ನು ಬಂಧಿಸಿ ಒಂದು ವರ್ಷದ ಕಠಿಣ ಶಿಕ್ಷೆ ಮತ್ತು 500 ರೂ ಜುಲ್ಮಾನೆ ವಿಧಿಸಿತು. 1936ರಲ್ಲಿ ಇವರು ಅಲಹಾಬಾದಿನ ಪೌರಸಭಾ ಮಂಡಲಿಗೆ ಚುನಾಯಿತರಾದರು. ಆ ವರ್ಷ ವಿವಿಧ ಪ್ರಾಂತ್ಯಗಳ ವಿಧಾನಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಉತ್ತರ ಪ್ರದೇಶವೂ ಸೇರಿದಂತೆ ಹಲವು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಬಹುಮತ ಪಡೆದು, ಕಾಂಗ್ರೆಸ್ ಮಂತ್ರಿಮಂಡಲಗಳು ಅಧಿಕಾರಕ್ಕೆ ಬಂದುವು. ಇವರು ಬಿಲ್ಹೋರ್ (ಕಾನ್‌ಪುರ) ಚುನಾವಣಾಕ್ಷೇತ್ರದಿಂದ ಆಯ್ಕೆಗೊಂಡು 1937–1939ರ ವರೆಗೆ ಗೋವಿಂದ ವಲ್ಲಭ ಪಂತರ ಮಂತ್ರಿಮಂಡಲದಲ್ಲಿ ಸ್ಥಳೀಯ ಆಡಳಿತ ಮತ್ತು ಸಾರ್ವಜನಿಕ ಆರೋಗ್ಯ ಮಂತ್ರಿಯಾಗುವುದರ ಮೂಲಕ ಭಾರತದ ಪ್ರಥಮ ಮಹಿಳಾ ಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಗಾಂಧೀಜಿಯವರು ಪ್ರಾರಂಭಿಸಿದ ವೈಯಕ್ತಿಕ ಸತ್ಯಾಗ್ರಹದಲ್ಲಿ ಇವರೂ ಭಾಗವಹಿಸಿ ನಾಲ್ಕು ತಿಂಗಳ ಶಿಕ್ಷೆ ಅನುಭವಿಸಿದರು (1940). 1942ರ ಆಂದೋಲನ ದಲ್ಲಿ ಮತ್ತೆ ಸರ್ಕಾರ ಇವರನ್ನು ಬಂಧಿಸಿತು. ಒಂಬತ್ತು ತಿಂಗಳುಗಳ ಅನಂತರ ಅಸ್ವಸ್ಥತೆಯ ಕಾರಣದಿಂದ ಅವರು ಬಿಡುಗಡೆ ಹೊಂದಿದರು. 1940–42ರಲ್ಲಿ ಅವರು ಅಖಿಲಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷೆಯಾಗಿದ್ದರು. 1943ರಲ್ಲಿ ಬಂಗಾಲದಲ್ಲಿ ಕ್ಷಾಮ ತಲೆದೋರಿದಾಗ ಅವರು ಅಸ್ವಸ್ಥರಿದ್ದರೂ ಪೀಡಿತರಿಗೆ ಪರಿಹಾರ ನೀಡಲು ಸ್ವತಃ ಶ್ರಮಿಸಿದರು. 1944 ಜನವರಿ 14ರಂದು ಪತಿ ರಣಜಿತ್ ಪಂಡಿತರು ತೀರಿಕೊಂಡರು.

1946ರಲ್ಲಿ ಉತ್ತರ ಪ್ರದೇಶದ ವಿಧಾನಸಭೆಗೆ ಚುನಾಯಿತರಾಗಿ 1946–47ರಲ್ಲಿ ಮಂತ್ರಿಮಂಡಲದಲ್ಲಿ ಇದ್ದರು. ಇವರು ಅಂತಾರಾಷ್ಟ್ರೀಯ ಮಹಿಳಾ ಸಂಘದ ಉಪಾಧ್ಯಕ್ಷೆಯಾಗಿಯೂ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸೇರಿದ್ದ ವಿಶ್ವಸಂಸ್ಥೆಯ ಪ್ರಥಮ ಸಭೆಯಲ್ಲಿಯೂ ಭಾಗವಹಿಸಿದ್ದರು. 1946–50 ಮತ್ತು 1963ರಲ್ಲಿ ಇವರು ವಿಶ್ವಸಂಸ್ಥೆಯಲ್ಲಿ ಭಾರತದ ಆಯೋಗಗಳ ನೇತೃತ್ವ ವಹಿಸಿದ್ದರು. 1941–52ರವರೆಗೂ ಸೋವಿಯತ್ ರಷ್ಯ, ಅಮೆರಿಕ ಮತ್ತು ಮೆಕ್ಸಿಕೊ ದೇಶಗಳಲ್ಲಿ ಭಾರತದ ರಾಯಭಾರಿಯಾಗಿದ್ದರು. 1952–54ರಲ್ಲಿ ಸಂಸತ್ತು ಸದಸ್ಯೆಯಾಗಿಯೂ 1955–61ರಲ್ಲಿ ಇಂಗ್ಲೆಂಡ್‌ನಲ್ಲಿ ಭಾರತದ ಹೈಕಮಿಷನರ್ ಆಗಿಯೂ ಐರ್ಲೆಂಡಿನಲ್ಲಿ ಭಾರತದ ರಾಯಭಾರಿಯಾಗಿಯೂ ಸೇವೆ ಸಲ್ಲಿಸಿದ್ದರು. 1958–61 ಹಾಗೂ 1964–67ರಲ್ಲಿ ಲೋಕಸಭೆಯ ಸದಸ್ಯೆಯಾಗಿದ್ದರು. 1962–64ರಲ್ಲಿ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದರು. ಇವರು 1977ರಲ್ಲಿ ನಡೆದ ಲೋಕಸಭೆ ಚುನಾವಣೆಗಳಲ್ಲಿ ತಮ್ಮ ಸೋದರಸೊಸೆ ಇಂದಿರಾಗಾಂಧಿಯವರ ಸರ್ಕಾರದ ವಿರುದ್ಧ ಜನತಾ ಪಕ್ಷದ ಪರವಾಗಿ ಪ್ರಚಾರ ನಡೆಸಿದರು. ತಮ್ಮ ಅಣ್ಣ ಜವಾಹರಲಾಲ್ ನೆಹರು ಅವರಲ್ಲಿ ಇವರಿಗೆ ಬಹಳ ಅಭಿಮಾನ. ಇವರು ಮಂತ್ರಿಯಾಗಿದ್ದಾಗ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದರು. ಇವರು ಕೆಲವು ಪುಸ್ತಕಗಳನ್ನು ಪ್ರಕಟಿಸಿದ್ದರು. ಇವರು ತಮ್ಮ ಜೀವಮಾನದಲ್ಲಿ 21 ಭಾರತೀಯ ಹಾಗೂ ವಿದೇಶೀ ವಿಶ್ವವಿದ್ಯಾಲಯಗಳ ಗೌರವ ಡಾಕ್ಟೊರೇಟ್ ಪದವಿ ಹಾಗೂ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. (ಜಿ.ಎನ್.ಕೆ.)

**ವಿಜ್ಞಾನೇಶ್ವರ:** ಸು. 11–12ನೆಯ ಶತಮಾನದಲ್ಲಿದ್ದ ಪ್ರಸಿದ್ಧ ಧರ್ಮಶಾಸ್ತ್ರಕಾರ. ಯಾಜ್ಞವಲ್ಕ್ಯಸ್ಮೃತಿಯ ಮೇಲೆ ಮಿತಾಕ್ಷರಾ ಎಂಬ ವ್ಯಾಖ್ಯಾನವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಇವನು ಕಲ್ಯಾಣ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ (1076–1127) ಆಸ್ಥಾನವನ್ನ ಲಂಕರಿಸಿದ್ದು ಚಕ್ರವರ್ತಿಯಿಂದ ಪ್ರೇರಿತನಾಗಿ ಮಿತಾಕ್ಷರಾ ಗ್ರಂಥವನ್ನು ಬರೆದಿರುವನೆಂಬುದು ವಿದ್ವಾಂಸರ ಅಭಿಪ್ರಾಯ. ಇವನು ತನ್ನನ್ನು ಗ್ರಂಥದಲ್ಲಿ ವಿಜ್ಞಾನಯೋಗಿನ್ ಎಂದು ಕರೆದುಕೊಂಡಿದ್ದಾನೆ. ಗ್ರಂಥದ ಸಮಾಪ್ತಿ ವಚನಗಳಿಂದ ತಿಳಿದುಬರುವಂತೆ ಪದ್ಮನಾಭಭಟ್ಟ ಇವನ ತಂದೆ, ಉತ್ತಮ ಇವನ ಗುರು.

ವ್ಯಾಕರಣಶಾಸ್ತ್ರದಲ್ಲಿ ಪತಂಜಲಿಯ ಮಹಾಭಾಷ್ಯದಂತೆ ಅಥವಾ ಅಲಂಕಾರಶಾಸ್ತ್ರದಲ್ಲಿ ಮಮ್ಮಟನ ಕಾವ್ಯಪ್ರಕಾಶದಂತೆ ಧರ್ಮಶಾಸ್ತ್ರ ಇತಿಹಾಸದಲ್ಲಿ ಮಿತಾಕ್ಷರಾ ಗ್ರಂಥದ ಸ್ಥಾನ ಅತಿ ವಿಶಿಷ್ಟವಾದುದು. ಈ ಗ್ರಂಥ ತನ್ನ ಕಾಲಕ್ಕಿಂತ ಸುಮಾರು ಎರಡು ಸಾವಿರ ವರ್ಷ ಹಿಂದಿನ ಧರ್ಮಶಾಸ್ತ್ರವಿಚಾರದ ಸಾರವನ್ನು ನಮ್ಮ ಮುಂದಿಡುವುದು ಮಾತ್ರವಲ್ಲದೆ, ನೂತನ ವ್ಯಾಖ್ಯಾನ ಪ್ರವಾಹಗಳಿಗೆ ಆದಿಮೂಲದಂತಿದೆ. ಇದು ಅನಂತರ ಬೆಳೆದುಬಂದ ನಿಬಂಧಗಳಿಗೆ ಪೂರ್ವಗಾಮಿಯಾಗಿದ್ದು, ಗ್ರಂಥದ ಪ್ರತಿ ಪಂಕ್ತಿಯಲ್ಲೂ ಎದ್ದು ಕಾಣುವ ಪಾಂಡಿತ್ಯ, ವಿವೇಕಯುಕ್ತ ನಿರ್ಣಯ, ಪದವಿನ್ಯಾಸದಲ್ಲಿ ಸಂಕ್ಷಿಪ್ತತೆ ಮುಂತಾದ ಗುಣಗಳಲ್ಲಿ ಶ್ರೇಷ್ಠವೆನಿಸಿದೆ. ಹೆಸರೇ ಸೂಚಿಸುವಂತೆ, ಮಿತಾಕ್ಷರಾ ವಿಷಯ ನಿರೂಪಣೆಯಲ್ಲಿ ಸಂಕ್ಷಿಪ್ತ ಹಾಗೂ ಪ್ರಸಕ್ತ ವಿಷಯಕ್ಕೆ ಎಷ್ಟೋ ಅಷ್ಟು ಎನ್ನುವಂತಿದ್ದರೂ ಕೆಲವು ಕಡೆ ಸುದೀರ್ಘವಾದ ವ್ಯಾಖ್ಯಾನಗಳಿರುವುದೂ ಉಂಟು. ತನ್ನ ಗ್ರಂಥ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಹೇಳಿದ ನಿಯಮಗಳ ಕ್ರೋಢೀಕೃತ ಕೋಶವಾಗಬೇಕೆಂಬುದು ಲೇಖಕನ ಉದ್ದೇಶವಿದ್ದಿರಬೇಕು.

ವಿದ್ವಾಂಸರು ಲೆಕ್ಕ ಹಾಕಿರುವಂತೆ, ಮಿತಾಕ್ಷರಾದಲ್ಲಿ ಉಲ್ಲೇಖಿತವಾಗಿರುವ ಸ್ಮೃತಿಗಳ, ಸ್ಮೃತಿಕಾರರ ಒಟ್ಟು ಸಂಖ್ಯೆ 89. ಅಲ್ಲದೆ ವೇದ, ಉಪನಿಷತ್, ನಿರುಕ್ತ, ಯೋಗಸೂತ್ರ, ಭರತ (ನಾಟ್ಯಶಾಸ್ತ್ರ), ಪಾಣಿನಿಯ ವ್ಯಾಕರಣ, ಸುಶ್ರುತ ಸಂಹಿತೆ, ಸ್ಕಂದಪುರಾಣ, ವಿಷ್ಣುಪುರಾಣ, ಅಮರ ಮತ್ತು ಗುರು (ಪ್ರಭಾಕರ)–ಈ ಆಕರಗಳೂ ಉಲ್ಲೇಖಿತವಾಗಿವೆ. ವಿಜ್ಞಾನೇಶ್ವರನಿಗಿಂತ ಹಿಂದಿನ ಸ್ಮೃತಿ ವ್ಯಾಖ್ಯಾನಕಾರರಾದ ಮತ್ತು ಸಾರಸಂಗ್ರಹಕಾರರಾದ ಅಸಹಾಯ, ವಿಶ್ವರೂಪ, ಮೇಧಾತಿಥಿ, ಶ್ರೀಕರ, ಭಾರುಚಿ ಮತ್ತು ಭೋಜದೇವ ಇವರನ್ನು ಹೆಸರಿಸುತ್ತದೆ.

ಮಿತಾಕ್ಷರಾ ಕೇವಲ ಯಾಜ್ಞವಲ್ಕ್ಯ ಸ್ಮೃತಿಯ ಮೇಲಿನ ವ್ಯಾಖ್ಯಾನವಾಗಿರದೆ, ಸ್ಮೃತಿ ವಿಷಯಗಳ ಸಾರಸಂಗ್ರಹವಾಗಿದ್ದು, ಹೆಚ್ಚು ಕಡಿಮೆ ಒಂದು ಸ್ವತಂತ್ರ ಗ್ರಂಥದಂತಿದೆ. ಎಲ್ಲ ಪ್ರಮುಖ ಸ್ಮೃತಿಕಾರರ ಅಭಿಪ್ರಾಯಗಳನ್ನೂ ಕೂಲಂಕಷವಾಗಿ ಚರ್ಚಿಸಿ, ಎಲ್ಲ ವಿಷಯಗಳಲ್ಲೂ ಕಡೆಗೆ ತನ್ನದೇ ಆದ ನಿರ್ಧಾರಕ್ಕೆ ಬರುವುದು ಈ ಕೃತಿಯ ವೈಶಿಷ್ಟ್ಯ. ಹಲವಾರು ಧರ್ಮಶಾಸ್ತ್ರಗಳಲ್ಲಿನ ಉದ್ಧೃತ ಭಾಗಗಳನ್ನು ಒಂದೆಡೆಗೆ ತಂದು ಚರ್ಚಿಸುವಾಗ, ಅವುಗಳಲ್ಲಿ ಕಂಡುಬರುವ ವಿರೋಧೋಕ್ತಿಗಳನ್ನು ಮೀಮಾಂಸಾಶಾಸ್ತ್ರದ ಅರ್ಥವಿವರಣೆಯ ನಿಯಮಗಳನ್ನು ಅನುಸರಿಸಿ ತಿದ್ದಿತೇಲಿಸಿ, ವಿವಿಧ ಸೂಕ್ತಿಗಳಿಗೆ ನಿಷ್ಪಕ್ಷವಾದ ವ್ಯಾಪ್ತಿಯನ್ನು ನಿರ್ದೇಶಿಸಿ (ವಿಷಯ ವ್ಯವಸ್ಥಾ) ಒಂದು ಸರಿಯಾದ ಕ್ರಮವನ್ನುಂಟುಮಾಡುತ್ತದೆ. ಅಲ್ಲದೆ, ಅಸಂಬದ್ಧವೆಂದು ತೋರುವ ಸ್ಮೃತ್ಯಾದೇಶಗಳಲ್ಲಿಯೂ ಸಿದ್ಧಾಂತ ಸಮನ್ವಯವನ್ನು ಸಾಧಿಸುತ್ತದೆ. ಮತ್ತೊಂದು ಗಮನಾರ್ಹವಾದ ಅಂಶವೆಂದರೆ, ಆಧುನಿಕ ಭಾರತದ ನ್ಯಾಯವ್ಯವಸ್ಥೆಯಲ್ಲಿ ಮಿತಾಕ್ಷರಾ ವಹಿಸಿರುವ ಪ್ರಮುಖಪಾತ್ರ. ಬಂಗಾಲ ಮತ್ತು ಮಹಾರಾಷ್ಟ್ರ ವಿನಾ ಭಾರತದ ಉಳಿದ ಪ್ರದೇಶಗಳಲ್ಲೆಲ್ಲ (ಉದಾ: ದತ್ತು ಸ್ವೀಕಾರ, ಪಿತ್ರಾರ್ಜಿತ ಆಸ್ತಿ, ಸ್ಥಿರಾಸ್ತಿಯ ಪಂಚಿಕೆ ಇತ್ಯಾದಿ) ಹಿಂದು ನ್ಯಾಯಶಾಸ್ತ್ರದ ಹಲವಾರು ವಿಷಯಗಳಿಗೆ ಸಂಬಂಧಪಟ್ಟಂತೆ ಮಿತಾಕ್ಷರಾ ಇಂದಿಗೂ ಪ್ರಮಾಣಗ್ರಂಥವಾಗಿದೆ.

11–12ನೆಯ ಶತಮಾನಗಳ ಕರ್ನಾಟಕದ ಜನಜೀವನವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಮಿತಾಕ್ಷರಾ ಒಂದು ಪ್ರಧಾನವಾದ ಆಕರಗ್ರಂಥ. ಹಲವಾರು ಸಂದರ್ಭಗಳಲ್ಲಿ ವ್ಯಾಖ್ಯಾನ ಮಾಡುವಾಗ ಮೂಲದಲ್ಲಿಲ್ಲದ, ಆದರೆ ತನ್ನ ಸಮಕಾಲೀನ ಸಮಾಜದಲ್ಲಿ ಕಂಡುಬರುವ, ವಿಷಯ–ವಿವರಗಳನ್ನು ವಿಜ್ಞಾನೇಶ್ವರ ಒದಗಿಸಿದ್ದಾನೆ. ಮರತೂರು ಶಾಸನದಲ್ಲಿ ಈತನ ಬಗ್ಗೆ ಪ್ರಸ್ತಾಪಿಸಲಾಗಿದೆ. (ಜಿ.ಎಸ್.)

**ವಿದುರಾಶ್ವತ್ಥ:** ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿರುವ ಪುರಾಣ ಪ್ರಸಿದ್ಧ ಯಾತ್ರಾಸ್ಥಳ. ಗೌರಿಬಿದನೂರಿನ ಉತ್ತರಕ್ಕೆ ಸು.6 ಕಿಮೀ ದೂರದಲ್ಲಿ ದೊಡ್ಡ ಕುರುಗೋಡು ಬಳಿ ಮಹಾಭಾರತದ ವಿದುರನೇ ನೆಟ್ಟು ಬೆಳೆಸಿದ್ದೆಂದು ಹೇಳುವ ವಿಶಾಲವಾದ ಒಂದು ಅಶ್ವತ್ಥವೃಕ್ಷವುಂಟು. ಈ ವೃಕ್ಷವನ್ನು ಜನ ಪೂಜಿಸುವುದುಂಟು. ಈ ವೃಕ್ಷ ಉತ್ತರ ಪಿನಾಕಿನಿ ನದಿಯ ಎಡದಂಡೆಯ ಮೇಲಿದೆ. ಇದರ ಬುಡದಲ್ಲಿ ನೂರಾರು ವಿವಿಧಾಕೃತಿಯ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಿದ್ದಾರೆ. ಈ ವೃಕ್ಷದ ಪ್ರಾಕಾರಕ್ಕೆ ಹೊಂದಿಕೊಂಡಂತೆ ಈಶ್ವರ, ನವಗ್ರಹಗಳು, ನಾರಾಯಣ, ಶ್ರೀರಾಮರ ಇತ್ತೀಚಿನ ಕಾಲದ ಸಣ್ಣ ದೇವಸ್ಥಾನಗಳಿವೆ. ಈ ದೇವಸ್ಥಾನದ ಹಿಂಭಾಗ ಪಶ್ಚಿಮಕ್ಕೆ ಒಂದು ವಿಶಾಲವಾದ ಮರಗಳ ತೋಪಿದೆ. ಪ್ರತಿವರ್ಷ ಚೈತ್ರಮಾಸದ ಹುಣ್ಣಿಮೆಯ ದಿನ ದೊಡ್ಡ ಜಾತ್ರೆ ನೆರೆಯುತ್ತದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಇಲ್ಲಿ ನಡೆದ ಒಂದು ಘಟನೆ ಉಲ್ಲೇಖಾರ್ಹವಾಗಿದೆ. 1938ರಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರಮುಖರು ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬರಲು ಶ್ರಮಿಸುತ್ತಿದ್ದರು. ಸತ್ಯಾಗ್ರಹಿಗಳು ಸರ್ಕಾರದ ನಿಷೇಧಾಜ್ಞೆಗಳನ್ನು

ಉಲ್ಲಂಘಿಸುತ್ತಿದ್ದರು. ಆ ವರ್ಷದ ಏಪ್ರಿಲ್ 22ರಂದು ವಿದುರಾಶ್ವತ್ಥದಲ್ಲಿ ಜಾತ್ರೆ ನಡೆಯುತ್ತಿದ್ದಾಗ ಪೊಲೀಸರು ನೆರೆದಿದ್ದ ಗುಂಪಿನ ಮೇಲೆ ಗುಂಡುಹಾರಿಸಿ ಅನೇಕ ಕಾಂಗ್ರೆಸ್ ನಾಯಕರನ್ನು ಬಂಧಿಸಿದರು. ಮಾರನೆಯ ದಿನವೂ ಜನಸಮುದಾಯ ಸರ್ಕಾರದ ನಿಷೇಧಾಜ್ಞೆಗಳನ್ನು ಉಲ್ಲಂಘಿಸಿತು ಮತ್ತು ಹಲವಾರು ಜನ ಬಂಧಿಸಲ್ಪಟ್ಟರು. 25ರಂದು ಸು.7,000 ಜನ ವಿದುರಾಶ್ವತ್ಥದ ಬಹಿರಂಗ ಸಭೆಯಲ್ಲಿ ಹಾಜರಿದ್ದು, ಧ್ವಜವಂದನೆ ಕಾರ್ಯಕ್ರಮವನ್ನು ಆಚರಿಸಿದರು. ಪೊಲೀಸಿನವರು ಗುಂಪನ್ನು ಚದುರಿಸಲು ಗುಂಡು ಹಾರಿಸಿದಾಗ ಸ್ಥಳದಲ್ಲೇ ಹತ್ತು ಮಂದಿ ಮೃತಪಟ್ಟರು. ಈ ಘಟನೆಯ ಸ್ಮರಣಾರ್ಥವಾಗಿ ಸ್ವಾತಂತ್ರ್ಯಾನಂತರ 1959ರಲ್ಲಿ ಸರ್ವೋದಯ ಮೆಮೋರಿಯಲ್ ಪ್ರೌಢಶಾಲೆಯನ್ನು ಸ್ಥಾಪಿಸಲಾಗಿದೆ. 1962ರಲ್ಲಿ ದೇವಸ್ಥಾನದಲ್ಲಿರುವ ತೋಪಿನಲ್ಲಿ ಮರಣಹೊಂದಿದ ಸತ್ಯಾಗ್ರಹಿಗಳ ನೆನಪಿಗಾಗಿ ಸ್ಮಾರಕಸ್ತಂಭವೊಂದನ್ನು ನಿಲ್ಲಿಸಲಾಗಿದೆ. (ಬಿ.ಎಸ್.ಎಸ್.)

**ವಿದ್ಯಾರಣ್ಯ: ನೋಡಿ–ವಿಜಯನಗರ ಸಾಮ್ರಾಜ್ಯ**

**ವಿನೋಬಾ ಭಾವೆ:** 1895–1982. ಭೂದಾನ ಚಳವಳಿಯ ಆದ್ಯ ಪ್ರವರ್ತಕ. ನಿಷ್ಠ ಗಾಂಧಿವಾದಿ. ಗಾಂಧಿಯೋತ್ತರ ಭಾರತದಲ್ಲಿ ಸರ್ವೋದಯ ಚಳವಳಿಗೆ ಹೊಸ ಆಯಾಮವನ್ನಿತ್ತವರು. ಗಾಂಧೀಜಿಯವರ ಅಸಂಖ್ಯಾತ ಅನುಯಾಯಿಗಳಲ್ಲಿ ಸಂತ ಎನಿಸಿಕೊಂಡವರು. ಇವರ ಪೂರ್ಣ ಹೆಸರು ವಿನಾಯಕ ನರಹರಿ ಭಾವೆ. ಮಹಾರಾಷ್ಟ್ರದ ಕೊಲಾಬ ಜಿಲ್ಲೆಯ ಗಗೋಡೆ ಗ್ರಾಮದಲ್ಲಿ 1895 ಸೆಪ್ಟೆಂಬರ್ 11ರಂದು ಜನಿಸಿದರು. ತಂದೆ ನರಹರಿ ಶಂಭುರಾವ್ ಭಾವೆ; ತಾಯಿ ರುಕ್ಮಿಣೀದೇವಿ. ತಂದೆ ಆಗಿನ ಬರೋಡ ರಾಜ್ಯದಲ್ಲಿ ಜವಳಿ ಉದ್ಯಮ ಸಂಸ್ಥೆಯಲ್ಲಿ ತಂತ್ರಜ್ಞರಾಗಿದ್ದರು.

ಇವರು ಗಾಂಧೀಜಿಯವರನ್ನು ಮೊದಲು 1916 ಜೂನ್ 7ರಂದು ಅಹಮದಾಬಾದಿಗೆ ಹತ್ತಿರವಿದ್ದ ಕೊಚರಬ್ ಸತ್ಯಾಗ್ರಹ ಆಶ್ರಮದಲ್ಲಿ ಭೇಟಿಯಾದರು. ಅನಂತರ ಗಾಂಧೀಜಿಯವರ ಅಪ್ಪಣೆ ಪಡೆದು ಸತ್ಯಾಗ್ರಹ ಆಶ್ರಮ ವಾಸಿಯಾದರು. ರಾಷ್ಟ್ರಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡರು. ಸಾಬರಮತಿ ಆಶ್ರಮದಲ್ಲಿನ ಇವರ ಬದುಕು ಮಹಾನ್ ಕರ್ಮಯೋಗಿಯ ಬದುಕೇ ಆಗಿತ್ತು. ಇವರ ಓದು, ಬರೆಹ, ದೈಹಿಕ ಪರಿಶ್ರಮಗಳ ಕೆಲಸಗಳನ್ನು ನೋಡಿ ಆಶ್ರಮವಾಸಿಗಳು ಬೆಕ್ಕಸಬೆರಗಾಗಿದ್ದರು. ಇವರ ಕಾಯಕನಿಷ್ಠೆ, ಆಚಾರ ವಿಚಾರಗಳು ಗಾಂಧೀಜಿಯವರಿಗೆ ಬಹಳ ಪ್ರಿಯವಾಗಿದ್ದುವು. ದುರ್ಬಲ ಶರೀರದವರಾದರೂ ದಿನಕ್ಕೆ ಎಂಟುಗಂಟೆ ಚರಕದಲ್ಲಿ ನೂಲುತ್ತಿದ್ದರು. ಚರಕಗಳು ಆಗ ಹೆಚ್ಚು ಸುಧಾರಣೆಗೊಂಡಿರಲಿಲ್ಲ. ನೂಲುವುದು ತ್ರಾಸದಾಯ ಕವಾಗಿತ್ತು. ಶ್ರಮವಹಿಸಿ ಕೆಲಸ ಮಾಡುವ ಸಂಕಲ್ಪ ಶಕ್ತಿ–ಇಚ್ಛಾಶಕ್ತಿಗಳು ಇವರಿಗಿದ್ದುವು. ಇವರು ಅಧ್ಯಯನಶೀಲರೂ ಆಗಿದ್ದರು. ಅರ್ಥಶಾಸ್ತ್ರ, ಗಣಿತ, ಖಗೋಳವಿಜ್ಞಾನ, ಭೂಗೋಳ ಶಾಸ್ತ್ರ, ಭಾಷಾವಿಜ್ಞಾನದಂತಹ ವಿಷಯಗಳಲ್ಲಿ ಆಳವಾದ ಜ್ಞಾನ ಹೊಂದಿದ್ದರು. ಶಬ್ದಕೋಶದ ಆಸಕ್ತಿಯಿಂದಾಗಿ ಕೋಶಾನಂದರೇ ಆಗಿದ್ದರು.



ಇವರು ಗಾಂಧೀಜಿಯವರ ವಿಚಾರಗಳನ್ನು ಪ್ರಚಾರಮಾಡಿದರು. ಕೇರಳದ ವೈಕೋಮ್ ದೇವಾಲಯಕ್ಕೆ ಹರಿಜನರ ಪ್ರವೇಶದ ಜವಾಬ್ದಾರಿಯನ್ನು ಗಾಂಧೀಜಿ ಇವರಿಗೆ ವಹಿಸಿದ್ದರು (1924). ವಾರ್ಧಾದಲ್ಲಿ ಜರುಗಿದ ನಾಗರಿಕ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದರು (1930). ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಸಂದರ್ಭದಲ್ಲಿ ಇವರನ್ನು ಪ್ರಥಮ ಸತ್ಯಾಗ್ರಹಿಯನ್ನಾಗಿ ಮಾಡಿ ನೆಹರು ಅವರನ್ನು ಎರಡನೆಯ ಸತ್ಯಾಗ್ರಹಿಯನ್ನಾಗಿ ಮಾಡಿದ್ದು ಆಗ ಗಮನಾರ್ಹ ಸುದ್ದಿಯಾಯಿತು. ಗಾಂಧೀಜಿಯವರ ಹತ್ಯೆಯ ಅನಂತರ ರಚನಾತ್ಮಕ ಕಾರ್ಯಕರ್ತರ ದೃಷ್ಟಿ ಇವರೆಡೆಗೆ ಹೊರಳಿತು (1948). ದೇಶದ ವಿವಿಧ ಕಡೆಗಳಿಂದ ಬಂದ ಕಾರ್ಯಕರ್ತರು ಸೇವಾಗ್ರಾಮದಲ್ಲಿ ಸಭೆ ಸೇರಿ, ಸರ್ವೋದಯ ಸಮಾಜ, ಸರ್ವಸೇವಾ ಸಂಘಗಳ ಸ್ಥಾಪನೆ, ವರ್ಷಕ್ಕೊಮ್ಮೆ ಸರ್ವೋದಯ ಸಮ್ಮೇಳನ ನಡೆಸುವ ತೀರ್ಮಾನ ಕೈಗೊಂಡರು (1948).

ಕೋಮು ಸೌಹಾರ್ದ ಮೂಡಿಸುವಲ್ಲಿ ಇವರು ಬಹುವಾಗಿ ಶ್ರಮಿಸಿದರು. ರಾಷ್ಟ್ರ ವಿಭಜನೆಯ ಪರಿಣಾಮವಾಗಿ, ಪಾಕಿಸ್ತಾನದಿಂದ ನಿರಾಶ್ರಿತರ ಪುನರ್ವಸತಿಯಂತಹ ಗುರುತರ ಕಾರ್ಯದಲ್ಲಿ ಪ್ರಧಾನಮಂತ್ರಿ ನೆಹರು ಅವರಿಗೆ ಬಹುವಾಗಿ ನೆರವಾದರು. ವಿವಿಧೆಡೆ ಶಾಂತಿ ಯಾತ್ರೆ ಕೈಗೊಂಡರು. ವೈಯಕ್ತಿಕ ಸತ್ಯಾಗ್ರಹ, ಕ್ವಿಟ್ ಇಂಡಿಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಇವರು ಅನೇಕ ವರ್ಷಗಳ ಜೈಲುವಾಸ ಅನುಭವಿಸಿದರು. ಜೈಲಿನಿಂದ ಬಿಡುಗಡೆಯಾದ ಅನಂತರ ಪವನಾರ್ ಆಶ್ರಮದ ಸುತ್ತುಮುತ್ತಲ ಗ್ರಾಮಗಳಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು.

ಇವರು ಕೈಗೊಂಡ ಭೂದಾನ ಚಳವಳಿ ರಾಷ್ಟ್ರದ ಭೂ ಸಮಸ್ಯೆಯನ್ನು ಶಾಂತಿಯುತವಾಗಿ ಅಹಿಂಸಾಮಾರ್ಗದಿಂದ ಬಗೆಹರಿಸಲು ಒಂದು ವಿನೂತನ ಮತ್ತು ಮಹತ್ತ್ವದ ಕಾರ್ಯಕ್ರಮವಾಯಿತು. ಇದು ಭಾರತ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ. ಇವರು ಗ್ರಾಮೀಣ ಪ್ರದೇಶಗಳಲ್ಲಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ್ದಾಗ ಹೈದರಾಬಾದ್ ಬಳಿಯ ಶಿವರಾಮಪಲ್ಲಿಯಲ್ಲಿ ನಡೆಯುತ್ತಿದ್ದ ಎರಡನೆಯ ಅಖಿಲಭಾರತ ಸರ್ವೋದಯ ಸಮ್ಮೇಳನದಲ್ಲಿ 482 ಕಿಮೀ ದೂರ ಪಾದಯಾತ್ರೆ ನಡೆಸಿ ಭಾಗವಹಿಸಿದ್ದರು. ಅನಂತರ ತೆಲಂಗಾಣದ ಹಿಂಸಾಗ್ರಸ್ತ ಪ್ರದೇಶಗಳಿಗೆ ಪಾದಯಾತ್ರೆ ನಡೆಸಿದರು. 1951 ಏಪ್ರಿಲ್ 15ರಂದು ಪೋಚಮ್‌ಪಲ್ಲಿ ತಲುಪಿ ಅಲ್ಲಿ 40 ಬಡ ಹರಿಜನ ಕುಟುಂಬದವರಿಗೆ 100 ಎಕರೆ ಭೂಮಿಯನ್ನು ದಾನ ಕೊಡಿಸಿದರು. ಇದು ಭೂದಾನ ಚಳವಳಿಗೆ ನಾಂದಿಯಾಯಿತು. ವಿಭಜಿತ ಪೂರ್ವಭಾರತದ ಪೂರ್ವ ಪಾಕಿಸ್ತಾನವೂ ಸೇರಿದಂತೆ ಭಾರತದ ಅನೇಕ ಭಾಗಗಳನ್ನು (13 ವರ್ಷ 1 ತಿಂಗಳು 3 ದಿನ) ಕಾಲ್ನಡಿಗೆಯಲ್ಲೇ ಸಂಚರಿಸಿ ಒಟ್ಟು 40 ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಸಂಗ್ರಹಿಸಿದರು. ಇದನ್ನು ಗ್ರಾಮೀಣ ಭೂರಹಿತರಿಗೆ ಉತ್ಪಾದನೆಯ ಸಾಧನವನ್ನಾಗಿ ವಿತರಿಸಿದರು.

ಇವರನ್ನು ಪ್ರಥಮ ಪಂಚವಾರ್ಷಿಕ ಯೋಜನೆ ಬಗ್ಗೆ ಚರ್ಚಿಸಲು ಪ್ರಧಾನಿ ನೆಹರು ದೆಹಲಿಗೆ ಆಹ್ವಾನಿಸಿದಾಗ ವಿಮಾನ ಬಳಸದೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಿದರು. ಪವನಾರ್‌ನಿಂದ ದೆಹಲಿಗೆ 645 ಕಿಮೀ. ಈ ಪಾದಯಾತ್ರೆಯ ಸಂದರ್ಭದಲ್ಲಿ ಮಹಾರಾಷ್ಟ್ರ, ಮಧ್ಯಪ್ರದೇಶ ಹಾಗೂ ಉತ್ತರಪ್ರದೇಶ ರಾಜ್ಯಗಳಲ್ಲಿ 7,000 ಎಕರೆ ಭೂಮಿ ದಾನ ರೂಪವಾಗಿ ದೊರೆಯಿತು.

ಇವರು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಗಾಗಿ ಮ್ಯಾಗ್ಸೇಸೆ ಪ್ರಶಸ್ತಿ ದೊರೆಯಿತು(1950). ಇವರಿಗೆ ಭಾರತದ ಅತ್ಯುನ್ನತ ಭಾರತರತ್ನ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಯಿತು (1983). ಬಿಹಾರ ರಾಜ್ಯದಲ್ಲಿ ವೈದ್ಯನಾಥ ದೇವಾಲಯಕ್ಕೆ ಹರಿಜನರೊಂದಿಗೆ ಪ್ರವೇಶಿಸುವ ಕಾರ್ಯ, ಚಂಬಲ್ ಡಕಾಯಿತರು ನೆಲಸಿದ್ದ ಪ್ರದೇಶಗಳಲ್ಲಿ ಸಂಚಾರ ಮಾಡಿದ್ದು ಮುಂತಾದವು ಇವರ ಮಹತ್ತ್ವದ ಕಾರ್ಯಗಳಾಗಿವೆ. ಭೂದಾನ, ಗ್ರಾಮದಾನ ಚಳವಳಿಯಿಂದ ಇವರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಗುರುತಿಸಲಾಗಿದೆ. ಇವರ ದೃಷ್ಟಿಯಲ್ಲಿ ಭೂದಾನ, ಗ್ರಾಮದಾನ ಸಾಧನಗಳು ಮಾತ್ರ. ಅಂತಿಮ ಗುರಿ ಶೋಷಣೆರಹಿತ ಸ್ವಾವಲಂಬಿ ಗ್ರಾಮ ಸ್ವರಾಜ್ಯದ ನಿರ್ಮಾಣ. ಭಾರತ ಸರ್ವೋದಯ ಗ್ರಾಮ ಗಣರಾಜ್ಯಗಳ ಒಕ್ಕೂಟವಾಗಬೇಕು ಎಂದು ಬಯಸಿದರು. ಜೈಜಗತ್ ಎಂಬ ಘೋಷಣೆ ನೀಡಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಭಾವನೆ, ಆರ್ಥಿಕ ಮತ್ತು ರಾಜಕೀಯ ವಿಕೇಂದ್ರೀಕರಣದ ಆಧಾರ ಸ್ತಂಭಗಳ ಮೇಲೆ ಸರ್ವೋದಯ ಗಣರಾಷ್ಟ್ರಗಳ ಸಮುದಾಯಒಕ್ಕೂಟದ ಜಾಗತಿಕ ಸರ್ಕಾರ ರೂಪುಗೊಳ್ಳಬೇಕು ಎಂದು ಕರೆಯಿತ್ತರು.

ಇವರು ತಮ್ಮ ಕೊನೆಯ ದಿನಗಳನ್ನು ಪವನಾರ್ ಆಶ್ರಮದಲ್ಲಿ ಕಳೆದರು. ಇಂದಿರಾಗಾಂಧಿ ಸರ್ಕಾರ ಘೋಷಿಸಿದ ತುರ್ತುಪರಿಸ್ಥಿತಿಯನ್ನು ಅನುಶಾಸನ ಪರ್ವ ಎಂದು ಬಣ್ಣಿಸಿದ ಕಾರಣದಿಂದಾಗಿ ಸರ್ಕಾರಿ ಸಂತ ಎಂಬ ಟೀಕೆಗೆ ಗುರಿಯಾದರು. ಇವರು ಸಲ್ಲೇಖನ ವ್ರತ ಕೈಗೊಂಡು 1982 ನವೆಂಬರ್ 15ರಂದು ನಿಧನರಾದರು. (ಎಮ್.ಜಿ.ಬಿ.)

**ವಿಯಟ್ನಾಮ್:** ಆಗ್ನೇಯ ಏಷ್ಯದಲ್ಲಿರುವ ಒಂದು ಸರ್ವತಂತ್ರ ಸ್ವತಂತ್ರ ದೇಶ. ಸಂಕ್ರಾಂತಿ ವೃತ್ತದ ಉಷ್ಣವಲಯದಲ್ಲಿರುವ ಈ ದೇಶ ಸಮಾಜವಾದಿ ಗಣರಾಜ್ಯ. ಇದರ ಪಶ್ಚಿಮದಲ್ಲಿ ಲಾವೋಸ್ ಮತ್ತು ಕಾಂಬೋಡಿಯ, ಉತ್ತರದಲ್ಲಿ ಚೀನ, ಪೂರ್ವದಲ್ಲಿ ದಕ್ಷಿಣ ಚೀನ ಸಮುದ್ರ ಇವೆ. ಹಾನಾಯ್ ರಾಜಧಾನಿ. ನಾಣ್ಯ: ಡಾಂಗ್. ಹೋಚಿಮಿನ್ ಸಿಟಿ, ಹೈಫಾಂಗ್, ಹ್ಯೂ ಇತರ ನಗರಗಳು. ಧರ್ಮಗಳು: ತಾವೊಮಾರ್ಗ, ಬೌದ್ಧಧರ್ಮ, ಕನ್‌ಫ್ಯೂಷಿಯನ್, ಕ್ರೈಸ್ತಧರ್ಮ, ಇಸ್ಲಾಮ್.

ವಿಯಟ್ನಾಮ್ ಇತಿಹಾಸದುದ್ದಕ್ಕೂ ಪರದೇಶಾಕ್ರಮಣಗಳಿಗೆ ಒಳಗಾಗಿ ದೌರ್ಜನ್ಯ ಎದುರಿಸಿದೆ. ಮೂಲತಃ ಇಲ್ಲಿಯ ನಿವಾಸಿಗಳು ವಿಯಟ್ನಾಮ್ ದೇಶದ ಉತ್ತರಭಾಗದಲ್ಲಿ ವಾಸವಾಗಿದ್ದರು. ಚೀನ ಈ ನಾಡನ್ನು ಪ್ರಶ.ಪೂ.100ರಲ್ಲಿ ಆಕ್ರಮಿಸಿಕೊಂಡು 900 ರವರೆಗೂ ಆಳಿಕೆ ನಡೆಸಿತು. 900ರಲ್ಲಿ ವಿಯಟ್ನಾಮ್ ಪ್ರತ್ಯೇಕ ದೇಶವಾಯಿತು. ಅನಂತರದ 900 ವರ್ಷಗಳಲ್ಲಿ ತನ್ನ ಗಡಿಪ್ರದೇಶವನ್ನು ವಿಸ್ತರಿಸುತ್ತಾ ಇಂದಿನ ಭೂಪ್ರದೇಶವನ್ನು ಪಡೆಯಿತು. 1800ರ ಕೊನೆಯ ದಿನಗಳಲ್ಲಿ ಇದು ಫ್ರಾನ್ಸಿನ ಆಕ್ರಮಣಕ್ಕೆ ಒಳಗಾಯಿತು. ಅಂದಿನಿಂದ ಪ್ರಪಂಚದ ಎರಡನೆಯ ಮಹಾಯುದ್ಧದವರೆಗೂ ಇಲ್ಲಿ ಫ್ರಾನ್ಸ್ ಆಳಿತು. ಈ ಯುದ್ಧದಲ್ಲಿ ಜಪಾನ್ ವಿಯಟ್ನಾಮನ್ನು ವಶಪಡಿಸಿಕೊಂಡಿತು. ಯುದ್ಧದಲ್ಲಿ ಜಪಾನ್ ಸೋತು ಶರಣಾಯಿತು. ಫ್ರಾನ್ಸ್ ಮತ್ತೆ ಈ ದೇಶವನ್ನು ಆಳತೊಡಗಿತು. ಹೋ ಚಿ ಮಿನ್ ನೇತೃತ್ವದಲ್ಲಿ ಕ್ರಾಂತಿ ರೂಪುಗೊಂಡಿತು. ವಿಯಟ್ನಾಮ್‌ನ ಉತ್ತರ ಭಾಗವನ್ನು ಕ್ರಾಂತಿಕಾರರು ವಶಕ್ಕೆ ಪಡೆದುಕೊಂಡರು. ಫ್ರಾನ್ಸ್‌ನ ಆಡಳಿತದ ವಿರುದ್ಧ 1946–54 ರವರೆಗೂ ಹೋರಾಟ ನಡೆಯಿತು.

ಅಂತಿಮವಾಗಿ ಫ್ರಾನ್ಸ್ ಪರಾಭವಗೊಂಡಿತು. 1954ರ ಜಿನೀವ ಶಾಂತಿ ಒಪ್ಪಂದದ ಮೇರೆಗೆ ವಿಯಟ್ನಾಮ್ ದೇಶವನ್ನು ಉತ್ತರ ಹಾಗೂ ದಕ್ಷಿಣ ವಿಯಟ್ನಾಮ್ ಎಂಬ ಎರಡು ಭಾಗಗಳಾಗಿ ವಿಂಗಡಿಸಲಾಯಿತು. ಉತ್ತರ ಭಾಗ ಕಮ್ಯೂನಿಸ್ಟ್ ನಾಯಕರ ಕೈವಶವಾದರೆ, ದಕ್ಷಿಣ ಭಾಗದಲ್ಲಿ ಕಮ್ಯೂನಿಸ್ಟೇತರ ಸರ್ಕಾರ ಬಂತು. 1957ರಲ್ಲಿ ದಕ್ಷಿಣ ವಿಯಟ್ನಾಮ್ ಜನರು ದಕ್ಷಿಣ ಪ್ರಾಂತ್ಯದ ಸರ್ಕಾರದ ವಿರುದ್ಧ ಕ್ರಾಂತಿ ಸಮರ ಸಾರಿದರು. ಉತ್ತರ ವಿಯಟ್ನಾಮ್ ಬೆಂಬಲ ಸೂಚಿಸಿತು. ಉತ್ತರ ಹಾಗೂ ದಕ್ಷಿಣ ವಿಯಟ್ನಾಮ್‌ಗಳ ನಡುವೆ ಯುದ್ಧ ನಡೆಯಿತು. ಚೀನ ಮತ್ತು ಸೋವಿಯತ್ ದೇಶಗಳು ಉತ್ತರ ವಿಯಟ್ನಾಮಿಗೆ ಬೆಂಬಲ ನೀಡಿದವು. ದಕ್ಷಿಣ ವಿಯಟ್ನಾಮ್ ಸಹಾಯಕ್ಕೆ ಅಮೆರಿಕದ ಪಡೆಗಳು ಬಂದವು. ಕೊನೆಗೆ 1973ರಲ್ಲಿ ಕದನ ವಿರಾಮವನ್ನು ಘೋಷಿಸಲಾಯಿತು. ಅಮೆರಿಕ ತನ್ನ ಸೇನೆಯನ್ನು ಹಿಂದಕ್ಕೆ ಕರೆದುಕೊಂಡಿತು. 1976ರಲ್ಲಿ ಉತ್ತರ ವಿಯಟ್ನಾಮ್ ದಕ್ಷಿಣ ವಿಯಟ್ನಾಮನ್ನು ಸೋಲಿಸಿತು. 1976 ಜುಲೈ 2ರಂದು ಎರಡೂ ಭಾಗಗಳು ಒಂದಾಗಿ ಅಖಂಡ ವಿಯಟ್ನಾಮ್ ಗಣರಾಜ್ಯ ಪುನಃ ಸ್ಥಾಪನೆಯಾಯಿತು.

ಇಂದಿಗೂ ವಿಯಟ್ನಾಮ್ ಸರ್ಕಾರ ಕಮ್ಯೂನಿಸ್ಟ್ ಪಕ್ಷದ ಆಡಳಿತಕ್ಕೆ ಒಳಪಟ್ಟಿದೆ. ಈ ಪಕ್ಷದಲ್ಲಿ ಹದಿನೈದು ಪಾಲಿಟ್ ಬ್ಯೂರೋ ಸದಸ್ಯರಿದ್ದಾರೆ. ಇವರು ಸರ್ಕಾರದ ಎಲ್ಲ ರೀತಿಯ ಕರಡು ನಿಯಮಗಳನ್ನು ರಚಿಸುತ್ತಾರೆ. ವಿಯಟ್ನಾಮ್ ಸರ್ಕಾರದಲ್ಲಿ ಪಾಲಿಟ್‌ಬ್ಯೂರೊ ಅತ್ಯಂತ ಬಲಿಷ್ಠ. ವಿಯಟ್ನಾಮ್ ಶಾಸನ ಸಭೆಗೆ ಐದು ವರ್ಷಗಳ ಅವಧಿಗೆ ಸದಸ್ಯರು ಚುನಾಯಿತರಾಗುತ್ತಾರೆ. ಇದರ ಅಧಿವೇಶನ ವರ್ಷಕ್ಕೆ ಮೂರು ಬಾರಿ ನಡೆಯುತ್ತದೆ. ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ರಚಿಸಿದ ನಿಯಮಾವಳಿಗಳನ್ನು ಚರ್ಚಿಸಿ ಅಂಗೀಕಾರ ನೀಡುತ್ತದೆ. ಚುನಾಯಿತ ಸದಸ್ಯರುಗಳಲ್ಲಿ ಒಬ್ಬ ರಾಷ್ಟ್ರಪತಿಯಾಗಿ ಆಯ್ಕೆಯಾಗುತ್ತಾನೆ. ರಾಷ್ಟ್ರಪತಿಯ ಅಧಿಕಾರಾವಧಿ ಐದು ವರ್ಷ. ಸಭೆಯ ಅನುಮೋದನೆಯ ಮೇರೆಗೆ ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಸರ್ಕಾರದ ಇತರ ಅಧಿಕಾರಿಗಳು ನೇಮಕವಾಗುತ್ತಾರೆ. (ಎ.ಜಿ.)

**ವಿಯನ್ನ ಕಾಂಗ್ರೆಸ್:** 1814–15. ಯುರೋಪಿನ ಇತಿಹಾಸದಲ್ಲಿಯೇ ಅತಿ ದೊಡ್ಡ ಅಂತಾರಾಷ್ಟ್ರೀಯ ಮತ್ತು ರಾಜತಾಂತ್ರಿಕ ಸಮ್ಮೇಳನ. ನೆಪೋಲಿಯನ್ನನ ಪತನಾನಂತರ ಯುರೋಪಿನ ರೂಪುರೇಷೆಗಳನ್ನು ರಚಿಸಲು ನಡೆದ ಯುರೋಪಿನ ರಾಜಕಾರಣಿಗಳ ಸಮಾಲೋಚನಾಸಭೆ 1814 ಸೆಪ್ಟೆಂಬರ್–1815 ಜೂನ್ ತನಕ ನಡೆಯಿತು. ಅದರ ನೇತೃತ್ವವನ್ನು ಆಸ್ಟ್ರಿಯದ ಛಾನ್ಸೆಲರ್ ಮೆಟರ್ನಿಕ್ ವಹಿಸಿದ್ದ. ತುರ್ಕಿ ಬಿಟ್ಟು ಉಳಿದೆಲ್ಲ ರಾಷ್ಟ್ರಗಳು ಈ ಸಮ್ಮೇಳನದಲ್ಲಿ ಪಾಲ್ಗೊಂಡವು.

ಫ್ರಾನ್ಸ್ ದೇಶದಲ್ಲಿ ಬೋರ್ಬನ್ ಮನೆತನದ ಆಳಿಕೆಯನ್ನು ಪುನಃ ಸ್ಥಾಪಿಸಲಾಯಿತು. 18ನೆಯ ಲೂಯಿ ಫ್ರಾನ್ಸ್ ದೇಶದ ರಾಜನಾದ. ನೆಪೋಲಿಯನ್ ಪದಚ್ಯುತಗೊಳಿಸಿದ್ದ ರಾಜರನ್ನು ಪುನಃ ಅವರವರ ರಾಜ್ಯಗಳಲ್ಲಿ ನೆಲೆಗೊಳಿಸಬೇಕೆಂಬ ತತ್ತ್ವವನ್ನು ಅಂಗೀಕರಿಸಲಾಯಿತು. ಪೀಡ್‌ಮಾಂಟ್ ದೇಶಕ್ಕೆ ಜಿನೀವವನ್ನು ಸೇರಿಸಿ ಪೀಡ್‌ಮಾಂಟ್ ರಾಜನನ್ನು ಅಧಿಕಾರಕ್ಕೆ ತರಲಾಯಿತು. ಅದುವರೆಗೆ ಆಸ್ಟ್ರಿಯಕ್ಕೆ ಸೇರಿದ ಬೆಲ್ಜಿಯಂ ದೇಶವನ್ನು ಹಾಲೆಂಡಿಗೆ ಸೇರಿಸಿ ಆರೆಂಜ್ ಮನೆತನವನ್ನು ಹಾಲೆಂಡ್‌ನಲ್ಲಿ ಪುನಃ ಸ್ಥಾಪಿಸಲಾಯಿತು. ರಷ್ಯಕ್ಕೆ ವಾರ್ಸ ಪ್ರಾಂತದ ಬಹುಭಾಗ, ಫಿನ್ಲೆಂಡ್ ಮತ್ತು ಬೆಸರೇಬಿಯ ಪ್ರದೇಶಗಳನ್ನು ಕೊಡಲಾಯಿತು. ವಾರ್ಸದ ಪೋಸೆನ್ ಪ್ರಾಂತ ಸಾಕ್ಸೆನಿಯ ಮೂರನೆಯ ಎರಡು ಭಾಗ, ರೈನ್ ನದಿಯ ಪೂರ್ವದ ಕಡೆಯ ಪ್ರದೇಶ ಮತ್ತು ಪೊಮೆರೇನಿಯಗಳನ್ನು ಪ್ರಷ್ಯ ಪಡೆಯಿತು. ಆಸ್ಟ್ರಿಯ ಹಲವು ಪೋಲಿಷ್ ಪ್ರದೇಶಗಳನ್ನೂ ಉತ್ತರ ಇಟಲಿಯ ಲೊಂಬಾರ್ಡಿ ಮತ್ತು ವೆನಿಷಿಯ ಏಡ್ರಿಯಾಟಿಕ್ ಸಮುದ್ರದ ಪರ್ವತತೀರಪ್ರದೇಶ ಮತ್ತು ಟಿರೋಲ್ ಮತ್ತು ಸಾಲ್ಸ್‌ಬರ್ಗ್‌ಗಳನ್ನು ಪಡೆಯಿತು. ಇಂಗ್ಲೆಂಡ್ ಉತ್ತರ ಸಮುದ್ರದಲ್ಲಿ ಹೆಲಿಗೊಲೆಂಡ್, ಮೆಡಿಟರೇನಿಯನ್ ಸಮುದ್ರದಲ್ಲಿ ಮಾಲ್ಟ ಮತ್ತು ಅಯೋನಿಯನ್ ದ್ವೀಪಗಳು, ದಕ್ಷಿಣ ಆಫ್ರಿಕದಲ್ಲಿ ಕೇಪ್ ಕಾಲೋನಿ, ಸಿಲೋನ್, ಟೊಬ್ಯಾಗೊ, ಟ್ರಿನಿಡಾಡ್‌ಗಳನ್ನು ವಶಪಡಿಸಿಕೊಂಡಿತು. ಪಾರ್ಮ ಪ್ರದೇಶವನ್ನು ನೆಪೋಲಿಯನ್ನನ ಪತ್ನಿ ಮೇರಿ ಲೂಯಿಗೆ ಕೊಡಲಾಯಿತು. ಮೊಡೆನಾ ಮತ್ತು ಟಸ್ಕನಿ ರಾಜರನ್ನು ಅವರವರ ಸ್ಥಾನದಲ್ಲಿ ಸ್ಥಿರಗೊಳಿಸಲಾಯಿತು. ಇಟಲಿಯನ್ನು ಆಸ್ಟ್ರಿಯದ ಕೋರಿಕೆಯಂತೆ ಅನೇಕ ಸ್ವತಂತ್ರ ರಾಜ್ಯಗಳಾಗಿ ವಿಂಗಡಿಸಲಾಯಿತು. ಡೆನ್‌ಮಾರ್ಕಿನಿಂದ ನಾರ್ವೆಯನ್ನು ಬೇರ್ಪಡಿಸಿ ಸ್ವೀಡನ್‌ಗೆ ಸೇರಿಸಲಾಯಿತು.

ವಿಯನ್ನ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರೆಂದರೆ ಆಸ್ಟ್ರಿಯದ ಛಾನ್ಸಲರ್ ಪ್ರಿನ್ಸ್ ಮೆಟರ್ನಿಕ್, ಫ್ರಾನ್ಸಿನ ಟ್ಯಾಲಿರ್‍ಯಾಂಡ್, ಇಂಗ್ಲೆಂಡಿನ ವಿದೇಶಾಂಗ ಮಂತ್ರಿ ಲಾರ್ಡ್‌ಕ್ಯಾಸಲ್‌ರಿಗ್, ರಷ್ಯದ ಒಂದನೆಯ ಝಾರ್ ಅಲೆಗ್ಸಾಂಡರ್, ಆಸ್ಟ್ರಿಯದ ಒಂದನೆಯ ಫ್ರಾನ್ಸಿಸ್, ಪ್ರಷ್ಯದ ಮೂರನೆಯ ಫ್ರೆಡರಿಕ್ ವಿಲಿಯಂ. ಇವರಲ್ಲದೆ ಬವೇರಿಯ, ವಿರ್ಟಂಬರ್ಗ್, ಡೆನ್ಮಾರ್ಕ್ ಮತ್ತಿತರ ಸಣ್ಣಪುಟ್ಟ ಅರಸರೂ ರಾಜಕಾರಣ ನಿಪುಣರೂ ಪ್ರತಿಭಾನ್ವಿತರೂ ಭಾಗವಹಿಸಿದ್ದರು. ಈ ಕಾಂಗ್ರೆಸ್‌ನಲ್ಲಿ ಯಾವ ಪ್ರಜಾಪ್ರಭುತ್ವ ತತ್ತ್ವವನ್ನೂ ಅನುಸರಿಸಲಿಲ್ಲ. ಪ್ರಜೆಗಳ ಅಭಿಲಾಷೆಯನ್ನು ಕೇಳದೆ ಪ್ರದೇಶಗಳನ್ನು ತಮಗೆ ತೋಚಿದಂತೆ ಹಂಚಿದರು. ಈ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ್ದವರ ಪ್ರಧಾನ ಉದ್ದೇಶ ಶಕ್ತಿಸಮತೋಲನದ ಸ್ಥಾಪನೆ. ಈ ಕಾರಣದಿಂದಾಗಿ ಈ ಕಾಂಗ್ರೆಸ್ಸಿನ ಕೆಲಸ ಶಾಶ್ವತವಾಗಿ ಉಳಿಯಲಿಲ್ಲ. (ಎ.ಎ.ಎ.)

**ವಿಲಿಯಮ್ಸ್ ಜೇಮ್ಸ್ ಡ್ಯುರಾಂಟ್:** 1885–1981. ಅಮೆರಿಕದ ಸುಪ್ರಸಿದ್ಧ ತತ್ತ್ವಚಿಂತಕ ಮತ್ತು ಇತಿಹಾಸಜ್ಞ. ಇವನು ತನ್ನ ಹೆಂಡತಿ ಏರಿಯಲ್ ಡ್ಯುರಾಂಟ್‌ಳೊಡನೆ ಬರೆದ 11 ಸಂಪುಟಗಳ ದಿ ಸ್ಟೋರಿ ಆಫ್ ಸಿವಿಲೈಜೇಷನ್ ಎಂಬ ಬೃಹತ್ ಗ್ರಂಥದಿಂದ ಪ್ರಪಂಚಪ್ರಸಿದ್ಧ. ಈತ 1885 ನವೆಂಬರ್ 5ರಂದು ಮೆಸಾಚುಸೆಟ್ಸ್‌ನ ಉತ್ತರ ಅಡ್ಮ್ಸ್‌ನಲ್ಲಿ ಜನಿಸಿದ. ಇವನ ತಂದೆ ಜೋಸೆಫ್ ಡ್ಯುರಾಂಟ್, ತಾಯಿ ಮೇರಿ ಅಲ್ಲರ್ಡ್. ನ್ಯೂಜೆರ್ಸಿ ಸಿಟಿ ಸೇಂಟ್ ಪೀಟರ್ಸ್ ಪ್ರಿಪರೇಟರಿ ಸ್ಕೂಲ್‌ನಲ್ಲಿ ಅನಂತರ ನ್ಯೂ ಜೆರ್ಸಿ ಪೀಟರ್ಸ್ ಕಾಲೇಜಿನಲ್ಲಿ ಇವನ ವಿದ್ಯಾಭ್ಯಾಸವಾಯಿತು. 1917ರಲ್ಲಿ ತತ್ತ್ವಶಾಸ್ತ್ರದಲ್ಲಿ ಡಾಕ್ಟೊರೇಟ್ ಪದವಿ ಪಡೆದ.

1905ರಿಂದ ಇವನೊಬ್ಬ ಸಮಾಜವಾದಿ. ನ್ಯೂಯಾರ್ಕ್ ಈವನಿಂಗ್ ಜರ್ನಲ್ಲಿಗೆ 10 ವರ್ಷ ವರದಿಗಾರನಾಗಿ ಕೆಲಸ ಮಾಡಿದ. ಅನಂತರ ನ್ಯೂಜೆರ್ಸಿಯ ಸೌತ್ ಆರೆಂಜಿನಲ್ಲಿಯ ಸೇಟನ್ ಹಾಲ್ ವಿಶ್ವವಿದ್ಯಾಲಯದಲ್ಲಿ ಲ್ಯಾಟಿನ್, ಫ್ರೆಂಚ್, ಇಂಗ್ಲಿಷ್ ಮತ್ತು ರೇಖಾ ಗಣಿತವನ್ನು ಬೋಧಿಸುತ್ತಿದ್ದ. ಜೊತೆಗೆ ಗ್ರಂಥಪಾಲಕನೂ ಆಗಿದ್ದ. 1911ರಿಂದ ಫೇರರ್ ಮಾಡರ್ನ್ ಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದಾಗ ಯುರೋಪ್ ಖಂಡವನ್ನು ಪ್ರವಾಸ ಮಾಡುವ ಅವಕಾಶ ದೊರೆಯಿತು. ಈ ಶಾಲೆಯಲ್ಲಿದ್ದಾಗ ಕಿರಿಯ ಸಹೋದ್ಯೋಗಿ ಚಾಯಾ ಇಡಾ ಕೌಫ್ಮನ್ ಎಂಬಾಕೆಯನ್ನು ಮದುವೆಯಾದ. ಅನಂತರ ಇವಳಿಗೆ ಏರಿಯಲ್ ಎಂದು ಹೆಸರಿಟ್ಟ. 1913 ಇವನ ಜೀವನದಲ್ಲಿ ಒಂದು ಮಹತ್ತ್ವದ ಘಟ್ಟ. ಶಿಕ್ಷಕ ವೃತ್ತಿಯನ್ನು ಬಿಟ್ಟು ಪ್ರೆಸ್ಬೀರಿಯನ್ ಚರ್ಚ್‌ನಲ್ಲಿ ಉಪನ್ಯಾಸಗಳನ್ನು ಕೊಡಲು ಆರಂಭಿಸಿದ. ಮುಖ್ಯವಾಗಿ ಈ ಉಪನ್ಯಾಸಗಳ ವಿಷಯಗಳೇ ಮುಂದೆ ಇವನ ದಿ ಸ್ಟೋರಿ ಆಫ್ ಸಿವಿಲೈಜೇಷನ್ ಗ್ರಂಥಕ್ಕೆ ನಾಂದಿಯಾಯಿತು. ಸೈಮನ್ ಅಂಡ್ ಶೌಸ್ಟರ್ ಇವನ ಗ್ರಂಥವನ್ನು ಪ್ರಕಟಿಸಿದ. ಇದು ವಿಶೇಷ ಜನ ಮನ್ನಣೆ ಪಡೆದುದಲ್ಲದೆ ಪ್ರಕಟಣೆ ಸಂಸ್ಥೆ ಹೆಸರುವಾಸಿಯಾಯಿತು. ಇದರಿಂದ ಇವನ ಆರ್ಥಿಕ ಪರಿಸ್ಥಿತಿ ಬಹಳಷ್ಟು ಸುಧಾರಿಸಿದುದಲ್ಲದೆ ದಂಪತಿಗಳಿಗೆ ಹಲವಾರು ಬಾರಿ ಪ್ರಪಂಚಪರ್ಯಟನ ಮಾಡಲು ಸಾಧ್ಯವಾಯಿತು; 4 ದಶಕಗಳ ಕಾಲ ದಿ ಸ್ಟೋರಿ ಆಫ್ ಸಿವಿಲೈಜೇಷನ್ ಗ್ರಂಥವನ್ನು ರಚಿಸಲು ಅನುಕೂಲವಾಯಿತು.

ಮಾನವ ಜನಾಂಗದ ಇತಿಹಾಸ ಅಥವಾ ನಾಗರಿಕತೆಯನ್ನು ಸಮಗ್ರ ದೃಷ್ಟಿಯಿಂದ ನೋಡಬೇಕೇ ಹೊರತು ಖಂಡ ದೃಷ್ಟಿಯಿಂದಲ್ಲ; ರಾಷ್ಟ್ರ ಇಲ್ಲವೇ ಪ್ರಾಂತಕ್ಕೆ, ರಾಜಕೀಯಕ್ಕೆ ಸೀಮಿತಗೊಳಿಸಬಾರದು ಎಂಬುದು ಇವನ ದೃಷ್ಟಿಕೋನ. ಎಲ್ಲ ದೇಶಗಳಲ್ಲಿಯೂ ನೈತಿಕ ಚೌಕಟ್ಟಿನಲ್ಲಿ ಸು.2500 ವರ್ಷಗಳ ಅವಧಿಯಲ್ಲಿ ಜನ ಸಾಮಾನ್ಯರ ನಿತ್ಯ ಜೀವನ ಬೆಳೆದು ಬಂದ ಬಗೆ, ಇದರಲ್ಲಿ ಕಾಣುವ ದುರ್ಬಲ ವರ್ಗದವರ ಮೇಲಿನ ಪ್ರಬಲವರ್ಗದವರ ದಬ್ಬಾಳಿಕೆ, ಸಾಮಾನ್ಯ ವರ್ಗದವರ ಮೇಲಿನ ಬುದ್ಧಿಜೀವಿ ವರ್ಗದವರ ಪ್ರಭುತ್ವ ಮೊದಲಾದ ವಾಸ್ತವಿಕ ಸಂಗತಿಗಳ ನಿರೂಪಣೆಯನ್ನು ಉದ್ದೇಶವಾಗಿಟ್ಟುಕೊಂಡು ರಚಿಸಿದ ಇವನ ದಿ ಸ್ಟೋರಿ ಆಫ್ ಸಿವಿಲೈಜೇಷನ್ ಅತ್ಯಂತ ಯಶಸ್ವಿಯಾಯಿತು. ಈ ಗ್ರಂಥ ಮಾಲಿಕೆಯ ಒಂದನೆಯ ಸಂಪುಟ ಅವರ್ ಓರಿಯೆಂಟಲ್ ಹೆರಿಟೇಜ್. ಇದರಲ್ಲಿ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯತೆ ಬಗ್ಗೆ ವಿವರಣೆಗಳಿವೆ. ರೂಸೊ ಅಂಡ್ ರೆವಲ್ಯೂಷನ್ ಎಂಬ ಶೀರ್ಷಿಕೆಯ 10ನೆಯ ಸಂಪುಟಕ್ಕೆ ಪುಲಿಟ್ಜರ್ ಪಾರಿತೋಷಕ ಬಂತು. ಅನಂತರ ಈ ಗ್ರಂಥಮಾಲಿಕೆಗೆ ಅತ್ಯಂತ ಪ್ರತಿಷ್ಠಿತ ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರೆಸಿಡೆನ್ಷಿಯಲ್ ಮೆಡಲ್ ಆಫ್ ಫ್ರೀಡಮ್ ಪದಕವನ್ನು ಅಂದಿನ ಪ್ರೆಸಿಡೆಂಟ್ ಫೋರ್ಡ್ ನೀಡಿದರು. 10ನೆಯ ಸಂಪುಟದ ಅನಂತರ ಹೊರಬಂದ ದಿ ಲೆಸನ್ಸ್ ಆಫ್ ಹಿಸ್ಟರಿ ಹಿಂದಿನ ಸಂಪುಟಗಳ ಸಾರಾಂಶ ಮತ್ತು ಅಧ್ಯಯನದ ಫಲಿತಾಂಶಗಳನ್ನೊಳಗೊಂಡ ಕೃತಿ. ಈ ನಿರೂಪಣೆಯನ್ನು 20ನೆಯ ಶತಮಾನದವರೆಗೂ ಕೊಂಡೊಯ್ಯಬೇಕೆಂಬುದು ಇವನ ಇಚ್ಛೆಯಾಗಿತ್ತು. 1975ರಲ್ಲಿ ದಿ ಏಜ್ ಆಫ್ ನೆಪೋಲಿಯನ್ ಎಂಬ 11ನೆಯ ಸಂಪುಟ ಪ್ರಕಟವಾಯಿತು. ಮರಣಾನಂತರ ದಿ ಗ್ರೇಟೆಸ್ಟ್ ಮೈಂಡ್ಸ್ ಆಫ್ ಆಲ್ ಟೈಮ್ಸ್ (2002) ಮತ್ತು ದಿ ಹೀರೋಸ್ ಆಫ್ ಹಿಸ್ಟರಿ (2002) ಎಂಬ ಕೃತಿಗಳು ಪ್ರಕಟವಾದುವು. ಏರಿಯಲ್ ಮತ್ತು ಡ್ಯುರಾಂಟ್ ದಂಪತಿಗಳು ತಮ್ಮ ರಸಿಕ ಜೀವನದ ಬಗ್ಗೆ ದಿ ಡ್ಯುಯಲ್ ಆಟೊಬಯಾಗ್ರಫಿಯಲ್ಲಿ ವರ್ಣಿಸಿದ್ದಾರೆ. ಇವರು 1981ರಲ್ಲಿ (ಹೆಂಡತಿ ಅಕ್ಟೋಬರ್‌ನಲ್ಲಿ ಮತ್ತು ಗಂಡ ನವೆಂಬರ್‌ನಲ್ಲಿ) ನಿಧನರಾದರು. (ವಿ.ಎಸ್.)

**ವಿಲ್ಕ್ಸ್, ಮಾರ್ಕ್ ಕರ್ನಲ್:** 1760–1831. ಯೋಧ, ಚರಿತ್ರಕಾರ; ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟ್ (1803–08). ಇಂಗ್ಲೆಂಡಿನ ಐಲ್ ಆಫ್ ಮ್ಯಾನ್‌ನಲ್ಲಿ ಜನಿಸಿದ ಈತ ಚರ್ಚಿನ ಸೇವೆಯನ್ನು ಮಾಡುವ ಉದ್ದೇಶದಿಂದ ಉನ್ನತಮಟ್ಟದ ಶಾಸ್ತ್ರೀಯ

ಶಿಕ್ಷಣ ಪಡೆದ. 1783ರಲ್ಲಿ ಈಸ್ಟ್ ಇಂಡಿಯ ಕಂಪನಿಯ ಸೈನ್ಯ ಸೇರುವ ಉದ್ದೇಶದಿಂದ ಮದರಾಸಿಗೆ ಬಂದು ಮದರಾಸಿನ ಸೈನ್ಯ ಮಂಡಳಿಯ ಉಪಕಾರ್ಯದರ್ಶಿಯಾದ. ಅನಂತರ ಮದರಾಸಿನ ಗವರ್ನರ್ ಜಾನ್ ಹಾಲೆಂಡ್‌ನ ಏಡ್–ಡಿ–ಕ್ಯಾಂಪ್ ಆದ. ಟಿಪ್ಪುವಿನ ವಿರುದ್ಧ 1790–92ರವರೆಗೆ ನಡೆದ ಯುದ್ಧದ ವೇಳೆಯಲ್ಲಿ ಕರ್ನಲ್ ಜೇಮ್ಸ್ ಸ್ಟ್ಯೂವರ್ಟನಿಗೆ ಎ.ಡಿ.ಸಿ. ಮತ್ತು ಮಿಲಿಟರಿ ಕಾರ್ಯದರ್ಶಿಯಾಗಿದ್ದ. 1792ರ ಒಪ್ಪಂದದ ಅನಂತರ ವಿಲ್ಕ್ಸ್ ಅಸಿಸ್ಟೆಂಟ್ ಜನರಲ್ ಆಗಿಯೂ ಅನಂತರ ಜನರಲ್ ಸ್ಟ್ಯೂವರ್ಟನಿಗೆ ಕಾರ್ಯದರ್ಶಿಯಾಗಿಯೂ ಕೆಲಸಮಾಡಿದ. ಅನಾರೋಗ್ಯದ ಕಾರಣ 1794ರಲ್ಲಿ ಯುರೋಪಿಗೆ ಹೋಗಿ ಅಲ್ಲಿ 1799ರವರೆಗಿದ್ದು ಪುನಃ ಭಾರತಕ್ಕೆ ಹಿಂದಿರುಗಿ ಮದರಾಸಿನ ಗವರ್ನರ್ ಆಗಿದ್ದ ಎಡ್ವರ್ಡ್ ಕ್ಲೈವನಿಗೆ ಮಿಲಿಟರಿ ಮತ್ತು ಆಪ್ತಕಾರ್ಯದರ್ಶಿಯಾಗಿದ್ದು ಫೋರ್ಟ್ ಸೇಂಟ್ ಜಾರ್ಜ್‌ನ ಟೌನ್ ಮೇಜರ್ ಕೂಡ ಆಗಿದ್ದ. 1803–08ರಲ್ಲಿ ಮೈಸೂರಿನಲ್ಲಿ ರೆಸಿಡೆಂಟ್ ಆಗಿದ್ದ. 1808ರಲ್ಲಿ ಭಾರತದಿಂದ ಹಿಂದಿರುಗಿದ. 1813–16ರವರೆಗೆ ಸೇಂಟ್ ಹೆಲೀನ ದ್ವೀಪದಲ್ಲಿ ಗವರ್ನರ್ ಆಗಿ ಕೆಲಸಮಾಡಿ ನೆಪೋಲಿಯನ್ ಬೋನಪಾರ್ಟ್ ಅಲ್ಲಿ ಖೈದಿಯಾಗಿದ್ದ ಸಮಯದಲ್ಲಿ ನಿವೃತ್ತನಾದ. 1818ರಲ್ಲಿ ಕೆಲಸದಿಂದಲೂ ನಿವೃತ್ತನಾದ.

ಈತ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಹಿಸ್ಟಾರಿಕಲ್ ಸ್ಕೆಚಸ್ ಆಫ್ ಸೌತ್ ಇಂಡಿಯ ಇನ್ ಎನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್. ಇದು ಎರಡು ಸಂಪುಟಗಳಲ್ಲಿದೆ. ಮೊದಲನೆಯದು 1810ರಲ್ಲೂ ಎರಡನೆಯದು 1817ರಲ್ಲೂ ಪ್ರಕಟವಾದವು. 3ನೆಯ ಮೈಸೂರು ಯುದ್ಧದಲ್ಲಿ ಭಾಗವಹಿಸಿದ್ದ ಕಾಲದಲ್ಲಿ ಮತ್ತು ಅನಂತರ ಈ ಸಂಸ್ಥಾನದಲ್ಲಿ ರೆಸಿಡೆಂಟ್ ಆಗಿದ್ದ ಸಂದರ್ಭದಲ್ಲಿ ತಾನು ಗಳಿಸಿದ ಅನುಭವ ಮತ್ತು ವಿಷಯಜ್ಞಾನದ ಮೇಲೆ ರಚಿತವಾದ ಈ ಇತಿಹಾಸ ಗ್ರಂಥ ಈ ದೇಶದ ಇತಿಹಾಸ ರಚನೆಗೆ ಅದರಲ್ಲೂ 1799ರವರೆಗೆ ಒಡೆಯರು ಮತ್ತು ಹೈದರ್, ಟಿಪ್ಪು ಕಾಲದ ಇತಿಹಾಸದ ಬಗ್ಗೆ ಇಂದಿಗೂ ಮೂಲ ಆಕರವಾಗಿದೆ. ಬ್ರಿಟಿಷ್ ದೃಷ್ಟಿಕೋನವಷ್ಟೇ ಇಲ್ಲಿದೆಯೆಂಬ ಅಪವಾದವೊಂದನ್ನು ಬಿಟ್ಟರೆ ಹೆಚ್ಚಿನ ಸಮಕಾಲೀನ ಆಧಾರಗಳ ಉಪಯೋಗ, ಉತ್ತಮಶೈಲಿ ಮತ್ತು ವಿಷಯನಿರೂಪಣೆ ಇವುಗಳಿಂದ ಇದೊಂದು ಉತ್ಕೃಷ್ಟ ಗ್ರಂಥವಾಗಿದೆ. ಮೈಸೂರು ಇತಿಹಾಸ ರಚನೆಯ ಜೊತೆಗೆ ಈತ ಮೈಸೂರು ಸಂಸ್ಥಾನದ ಆಂತರಿಕ ಆಡಳಿತವನ್ನು ಕುರಿತು ಒಂದು ವರದಿಯನ್ನೂ ತಯಾರಿಸಿದ್ದಾನೆ. ಸಂಸ್ಥಾನದ ಆದಾಯ ಮೂಲಗಳು ಮತ್ತು ಆಯವ್ಯಯಕ್ಕೆ ಸಂಬಂಧಿಸಿದಂತೆ ಇವನ ವರದಿ ಅತ್ಯಂತ ಉಪಯುಕ್ತ ದಾಖಲೆಯಾಗಿದೆ. ಹಲವು ಕಾಲ ಇವನು ಇಂಗ್ಲೆಂಡಿನ ಏಷ್ಯಾಟಿಕ್ ಸೊಸೈಟಿಯ ಉಪಾಧ್ಯಕ್ಷನೂ ಆಗಿದ್ದ. ಆಗ ಅರಿಸ್ಟಾಟಲನ ಸಿದ್ಧಾಂತವನ್ನವಲಂಬಿಸಿ ಟ್ಯೂಸ್ ಪ್ರದೇಶದ ನಾಸಿರುದ್ದೀನ್ ಎಂಬ ವಿದ್ವಾಂಸನಿಂದ ರಚಿತವಾದ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಅಖ್ಲಿಕ್–ಇ–ನಾಸಿರಿ ಎಂಬ ಗ್ರಂಥದ ವಿಮರ್ಶನಾಕೃತಿಯನ್ನೂ ಬರೆದ.

ಆಡಳಿತ, ಇತಿಹಾಸ, ತತ್ತ್ವ ವಿಮರ್ಶೆಯ ಬಗ್ಗೆ ಗ್ರಂಥಗಳನ್ನು ಬರೆದಿರುವ ಈತನನ್ನು ಜ್ಞಾನಿ, ಮೇಧಾವಿ, ದಯಾವಂತ, ಧೃಡತೆಯಿಂದಿರುವ ಆಡಳಿತಗಾರ ಎಂದು ನೆಪೋಲಿಯನ್ ಬಣ್ಣಿಸಿದ್ದಾನೆ. ಈತ 1831ರಲ್ಲಿ ನಿಧನನಾದ. (ಬಿ.ಎಸ್.ಎ.;ವಿ.ಕೆ.)

**ವಿಲ್ಬರ್ ಫೋರ್ಸ್, ವಿಲಿಯಮ್:** 1759–1833. ಬ್ರಿಟಿಷ್ ಮೂಲದ ಈತ ಲೋಕೋಪಕಾರಿ, ಗುಲಾಮಗಿರಿ ಪದ್ಧತಿಯ ವಿರುದ್ಧ ಹೋರಾಡಿದವನು. ಇವನು ಹಲ್ ಪಟ್ಟಣದಲ್ಲಿ 1759ರಲ್ಲಿ ಜನಿಸಿದ. ಕೇಂಬ್ರಿಜ್‌ನಲ್ಲಿ ಪ್ರೌಢವ್ಯಾಸಂಗ ಮಾಡಿದ. ಪ್ರಾಟೆಸ್ಟಂಟ್ ಪಂಥದ ಐಝಾಕ್ ವಿಲಿಯಮ್ ಇವನ ಗುರು. ವಿಲಿಯಮ್ ಕರ್ಮಾಚರಣೆ ಸಂಸ್ಕಾರಗಳಿಗಿಂತಲೂ ಶ್ರದ್ಧೆ ಭಕ್ತಿಗಳೇ ಮುಕ್ತಿಗೆ ಮಾರ್ಗ ಎಂಬ ತತ್ತ್ವದಲ್ಲಿ ದೃಢ ನಂಬಿಕೆ ಇಟ್ಟಿದ್ದ. ವಿಲಿಯಮ್‌ನ ಬೋಧನೆಯಿಂದ ಇವನು ಕೂಡ ಈ ಪ್ರಾಟೆಸ್ಟಂಟ್ ಪಂಥಕ್ಕೆ ಸೇರಿದ.

ಇವನು ತನ್ನ 21ನೆಯ ವಯಸ್ಸಿನಲ್ಲಿ ಪಾರ್ಲಿಮೆಂಟಿಗೆ ಚುನಾಯಿತನಾದ. ಆಗಿನ ಮುತ್ಸದ್ದಿಗಳ ಪರಮ ಮಿತ್ರನಾದ. ಗುಲಾಮಗಿರಿಯನ್ನು ತಡೆಯಲು ತನ್ನ ಜೀವನವನ್ನೇ ಮುಡುಪಿಟ್ಟ. 1787 ರಲ್ಲಿ ಪಿಟ್ ಮೊದಲಾದ ಗಣ್ಯವ್ಯಕ್ತಿಗಳ ಬೆಂಬಲದಿಂದ ಗುಲಾಮಗಿರಿಯನ್ನು ತಡೆಯುವ ಆಂದೋಲನವನ್ನು ಮುಂದುವರಿಸಿದ. 1823ರಲ್ಲಿ ಗುಲಾಮಗಿರಿಯನ್ನು ಅಂತ್ಯಗೊಳಿಸಲು ಒಂದು ಸಂಸ್ಥೆಯನ್ನು ಸ್ಥಾಪಿಸಿದ. 20 ವರ್ಷಗಳವರೆಗೆ ಗುಲಾಮಗಿರಿಯನ್ನು ತಡೆಯಲು ಆಂದೋಲನ ನಡೆಯಿತು. 1833ರ ಸುಮಾರಿಗೆ ಗುಲಾಮಗಿರಿ ತಡೆಯಲು ರಾಜಮುದ್ರೆ ಬಿದ್ದಿತು. ಇವನು ಗುಲಾಮಗಿರಿಯ ರದ್ಧತಿ ಬಿಲ್ಲಿನ ಎರಡನೆಯ ವಾಚನದ ವರದಿಯನ್ನು ಮರಣಶಯ್ಯೆಯಲ್ಲಿ ಕೇಳುವಂತಾಯಿತು.

ಕ್ಲಾಪ್‌ಹ್ಯಾಮ್ ಪಂಥದ ಧುರೀಣತ್ವ ವಹಿಸಿ, ಈ ಧರ್ಮ ಪ್ರಸಾರ ಮಾಡಲು ಕ್ರಿಶ್ಚಿಯನ್ ಅಬ್ಸರ್ವರ್ ಎಂಬ ಪತ್ರಿಕೆಯನ್ನು ಆರಂಭಿಸಿದ. ಮಾನವ ಕಲ್ಯಾಣಕ್ಕಾಗಿ ತನ್ನ ಆಸ್ತಿಯ ಬಹುಭಾಗವನ್ನು ವ್ಯಯಿಸಿದ ಈತ 1833ರಲ್ಲಿ ನಿಧನನಾದ. (ಆರ್.ಆರ್.ಎ.)

**ವಿವೇಕಾನಂದ:** 1863–1902. ಭಾರತೀಯ ಸಂಸ್ಕೃತಿಯ ಪುನರುತ್ಥಾನದ ಹರಿಕಾರ, ವಾಗ್ಮಿ, ಶ್ರೇಷ್ಠ ಸನ್ಯಾಸಿ. ಇವರ ಪೂರ್ವಾಶ್ರಮದ ಹೆಸರು ನರೇಂದ್ರನಾಥ ದತ್ತ. ಇವರು ಕಲ್ಕತ್ತಾದಲ್ಲಿ 1863 ಜನವರಿ 12ರಂದು ಜನಿಸಿದರು. ಇವರ ತಂದೆ ವಿಶ್ವನಾಥದತ್ತ ಹೈಕೋರ್ಟಿನ ಅಟಾರ್ನಿಯಾಗಿದ್ದರು. ಪಾರ್ಸಿ, ಇಂಗ್ಲಿಷ್ ಸಾಹಿತ್ಯಗಳಲ್ಲಿಯೂ ಸಂಗೀತದಲ್ಲಿಯೂ ಅಭಿರುಚಿಯುಳ್ಳವರಾಗಿದ್ದರು. ತಾಯಿ ಭುವನೇಶ್ವರೀದೇವಿ, ದೈವಭಕ್ತೆ, ವೀರನಾರಿ. ನರೇಂದ್ರರಿಗೆ 21 ವರ್ಷ ವಯಸ್ಸಾಗಿದ್ದಾಗ ತಂದೆ ನಿಧನರಾದರು. ಸಂಸಾರವು ಸಾಲಗಳಿಗೆ ಗುರಿಯಾಗಿ ಬಹಳ ಕ್ಲೇಶ ಅನುಭವಿಸುವಂತಾಯಿತು.

ಬಾಲ್ಯದಲ್ಲಿ ಆಟಪಾಠಗಳಲ್ಲಿ, ಗರಡಿ ಸಾಧನೆಗಳಲ್ಲಿ ಇವರು ನಿಸ್ಸೀಮರಾಗಿದ್ದರು. ಸೊಗಸಾದ ಗಾಯಕರು. ನಿರ್ಭಯ ಪ್ರವೃತ್ತಿ, ಎಲ್ಲವನ್ನೂ ಪ್ರಶ್ನಿಸುವ ಮನೋಧರ್ಮ, ಬಹಿರಂಗದಲ್ಲಿ ಒರಟಾಗಿ ಕಂಡರೂ ಅಂತರಂಗ ಅತಿ ಕೋಮಲ, ಬಡವರಿಗೆ ಕೈಗೆ ಸಿಕ್ಕಿದ್ದನ್ನು ದಾನ



ಮಾಡಿಬಿಡುವ ಉದಾರಿ. ಕಾಲೇಜಿನ ದಿನಗಳಲ್ಲಿ ಹಿಂದುಧರ್ಮದ ಸುಧಾರಣೆಗೆ ಸ್ಥಾಪಿತವಾಗಿದ್ದ ಬ್ರಹ್ಮ ಸಮಾಜ ಸೇರಿ ಗಾನಗೋಷ್ಠಿಯ ಮುಂದಾಳುವಾಗಿದ್ದರು. ತರಗತಿಯಲ್ಲಿ ವರ್ಡ್ಸ್‌ವರ್ತ್ ಕವಿಯ ಅನುಭವ ಗೀತೆಗಳನ್ನು ಹೆಚ್ಚು ಚೆನ್ನಾಗಿ ಗ್ರಹಿಸಬೇಕಾದರೆ ದಕ್ಷಿಣೇಶ್ವರದ ರಾಮಕೃಷ್ಣರನ್ನು ನೋಡಿ ಬರಬೇಕೆಂದು ಇವರ ಗುರು ಹೇಸ್ಟಿಯವರು ಸೂಚನೆ ಕೊಟ್ಟ ದಿನದಿಂದ ರಾಮಕೃಷ್ಣರ ಭೇಟಿಗೆ ಕಾತುರರಾಗಿದ್ದರು. ಒಮ್ಮೆ ಕಲ್ಕತ್ತದ ಸುರೇಂದ್ರನಾಥರ ಮನೆಯಲ್ಲಿ ಭಜನೆಯಲ್ಲಿ ಭಾಗವಹಿಸಲು ಇವರು ಹೋಗಿದ್ದಾಗ ಅಲ್ಲಿಗೆ ಅತಿಥಿಯಾಗಿ ಬಂದಿದ್ದ ರಾಮಕೃಷ್ಣ ಪರಮಹಂಸರ ಭೇಟಿ ಇವರಿಗಾಯಿತು. ಇವರ ಹಾಡನ್ನು ಕೇಳಿ ಆನಂದಿಸಿದ ರಾಮಕೃಷ್ಣರು ಇವರ ಪೂರ್ವಾಪರ ಗಳನ್ನು ವಿವರವಾಗಿ ತಿಳಿದುಕೊಂಡು ದಕ್ಷಿಣೇಶ್ವರಕ್ಕೆ ಇವರಿಗೆ ಆಹ್ವಾನವಿತ್ತರು. ರಾಮಕೃಷ್ಣರ ಭಕ್ತರೂ ಬಂಧುವೂ ಆದ ರಾಮಚಂದ್ರದತ್ತರೊಂದಿಗೆ ರಾಮಕೃಷ್ಣರಿರುವಲ್ಲಿಗೆ ನಡೆದೇಬಿಟ್ಟರು. ಎಲ್ಲವನ್ನೂ ಪ್ರಶ್ನಿಸುವ ಮನೋಧರ್ಮದ ಇವರು ದೇವರ ಅಸ್ತಿತ್ವವೇ ಮೊದಲಾದ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನಿಸಿದಾಗ ರಾಮಕೃಷ್ಣರ ಸರಳತೆ, ತನ್ಮಯತೆ ಇವರನ್ನು ಮುಗ್ಧರನ್ನಾಗಿಸಿತು. ಮತ್ತೊಂದು ಬಾರಿ ಕಾಲುನಡಿಗೆಯಿಂದ ರಾಮಕೃಷ್ಣರ ಸಂದರ್ಶನಕ್ಕೆ ಹೋದಾಗ ಅವರ ಸ್ಪರ್ಶ ಮಾತ್ರದಿಂದ ಆದ ಅಲೌಕಿಕ ಅನುಭವ ಇವರನ್ನು ರಾಮಕೃಷ್ಣರ ಆಪ್ತವರ್ಗಕ್ಕೆ ಸೇರಿಸಿತು. ಇವರೇ ಹೇಳಿಕೊಂಡಿರುವಂತೆ ಆರು ವರ್ಷಗಳ ಕಾಲ ರಾಮಕೃಷ್ಣರೊಂದಿಗೆ ವಿಚಾರಮಥನ ಮಾಡಿದ ಮೇಲೆ ಆಧ್ಯಾತ್ಮಿಕ ಮಾರ್ಗದ ಪ್ರತಿಯೊಂದು ಹೆಜ್ಜೆಯೂ ಇವರಿಗೆ ಸ್ಪಷ್ಟವಾಯಿತು.

ವಿದ್ಯಾಭ್ಯಾಸ ಮುಗಿದ ಅನಂತರ ಆಧ್ಯಾತ್ಮ ಸಾಧನೆಯಲ್ಲಿ ಬಲವಾದ ಅಭೀಪ್ಸೆಯಿದ್ದರೂ ತಂದೆಯ ಮರಣ ಕುಟುಂಬಕ್ಕೆ ತಂದ ಸಂಕಷ್ಟಗಳಿಂದ ನೌಕರಿ ಸೇರಬೇಕಾದ ಪರಿಸ್ಥಿತಿಯೊದಗಿತು. ತನಗೊದಗಿದ ಸತ್ತ್ವ ಪರೀಕ್ಷೆಯ ಕಠಿಣ ಪರಿಸ್ಥಿತಿಯಲ್ಲಿ, ವಿಗ್ರಹಾರಾಧನೆಯಲ್ಲಿ ನಂಬಿಕೆ ಇಲ್ಲದಿದ್ದರೂ ಗುರುಗಳ ಸಲಹೆಯಂತೆ ಗುರುಗಳ ಆರಾಧ್ಯದೈವವಾದ ಭವತಾರಿಣಿಯ ಪ್ರಾರ್ಥನೆ ಮಾಡಬೇಕಾಯಿತು. ಆಗಲೂ ಸಂಸಾರದ ಕಷ್ಟ ನೀಗಬೇಕೆಂದು ಬೇಡದೆ ಜ್ಞಾನ–ಭಕ್ತಿ–ವೈರಾಗ್ಯಗಳನ್ನು ಬೇಡಿಕೊಳ್ಳುತ್ತಾರೆ. ಇಂತಹ ಪ್ರಸಂಗಗಳು ವಿವೇಕಾನಂದರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತವೆ.

1886ರಲ್ಲಿ ರಾಮಕೃಷ್ಣರು ನಿಧನರಾದ ಅನಂತರ ಇವರು ಹಾಗೂ ಇವರ ಸಹಪಾಠಿಗಳು ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿ ಗುರುಗಳ ಉಪದೇಶದಂತೆ ಆತ್ಮೋದ್ಧಾರವನ್ನೂ ಲೋಕಕಲ್ಯಾಣವನ್ನೂ ಸಾಧಿಸುವ ಸಂಕಲ್ಪ ಮಾಡಿದರು. ರಾಮಕೃಷ್ಣರ ಚಿತಾಭಸ್ಮ ಪಾತ್ರೆ ಹಾಗೂ ಗುರುಗಳ ಚಿತ್ರಪಟ ಇಷ್ಟೇ ಆಸ್ತಿಯನ್ನು ಹಿಡಿದು, ಧ್ಯಾನ, ಅಧ್ಯಯನ, ಭಜನೆ, ಭಿಕ್ಷೆ, ಕಠಿಣ ವ್ರತಗಳಲ್ಲಿ ನಿರತರಾಗಿ ತೀರ್ಥಯಾತ್ರೆ, ತಪಸ್ಸುಗಳಲ್ಲಿ ನಿರತರಾದರು. 1890ರಿಂದ ಸುಮಾರು ಎರಡು ವರ್ಷಗಳವರೆಗೆ ಇಡೀ ಭಾರತ ದೇಶದ ಸಂಚಾರ ಕೈಗೊಂಡು ಅಸಾಧಾರಣ ಪ್ರತಿಭೆ ಮತ್ತು ವ್ಯಕ್ತಿತ್ವಗಳಿಂದ ಪಂಡಿತ ವರ್ಗದವರೊಂದಿಗೆ, ಸಾಮಾನ್ಯರೊಂದಿಗೆ, ಪ್ರತಿಭಾವಂತರೊಂದಿಗೆ ವಿಚಾರ ವಿನಿಮಯ ಮಾಡುತ್ತಾ ತಮ್ಮ ಪ್ರಭಾವವನ್ನು ಅವರ ಮೇಲೆ ಬೀರುತ್ತಾ ಬದುಕಿದರು. ಇವರಿಗೆ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಪ್ರಕಾಂಡ ಪಾಂಡಿತ್ಯವಿತ್ತು. ಹೀಗೆ ಲೋಕ ಸಂಚಾರ ಕೈಗೊಂಡಾಗ ಏರ್ಪಟ್ಟ ಲೋಕಮಾನ್ಯ ತಿಲಕರ ಭೇಟಿ ಹಾಗೂ ಖೇತ್ರಿಮಹಾರಾಜರು ಇವರ ಶಿಷ್ಯರಾದದ್ದು ಇವರ ಜೀವನಕ್ಕೇ ಒಂದು ಹೊಸ ತಿರುವು ನೀಡಿತು. ಬೇರೆ ಬೇರೆ ಹೆಸರುಗಳನ್ನು ಹೇಳಿಕೊಂಡು ಓಡಾಡುತ್ತಿದ್ದ ಇವರಿಗೆ ವಿವೇಕಾನಂದ ಎಂಬ ಹೆಸರನ್ನಿಟ್ಟವರು ಹಾಗೂ ಇವರು ಅಮೆರಿಕಕ್ಕೆ ಪ್ರವಾಸ ಕೈಗೊಳ್ಳುವಂತೆ ಪ್ರಚೋದಿಸಿದವರು ಈ ರಾಜರೇ. ಇವರ ಪ್ರತಿಭೆ ಮೈಸೂರು ಮಹಾರಾಜರಾಗಿದ್ದ 10ನೆಯ ಚಾಮರಾಜ ಒಡೆಯರನ್ನು ಮಂತ್ರಮುಗ್ಧರನ್ನಾಗಿಸಿ ಇವರ ವಿದೇಶ ಪ್ರವಾಸಕ್ಕೆ ಅವರು ನೆರವು ನೀಡುವಂತಾಯಿತು.

1898ರಲ್ಲಿ ಶಿಕಾಗೊ ನಗರದಲ್ಲಿ ನಡೆದ ಪ್ರಪಂಚಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಜಪಾನ್ ಮಾರ್ಗವಾಗಿ ಪ್ರಯಾಣ ಕೈಗೊಂಡರು (1893). ಇವರು ದೇಶೋದ್ಧಾರ, ವೇದಾಂತ ಪ್ರಚಾರ ಇವುಗಳಿಗೆ ಜೀವನವನ್ನು ಮುಡುಪಾಗಿಡಬೇಕೆಂಬ ಸಂಕಲ್ಪ ಮಾಡಿದರು. ಸಮ್ಮೇಳನದಲ್ಲಿ ಸಭೆಯನ್ನುದ್ದೇಶಿಸಿ ಆಡಿದ ಇವರ ಮಾತುಗಳು, ಇವರ ವಿಶಿಷ್ಟವಾದ ಪ್ರತಿಭೆ, ಮೇಧಾಶಕ್ತಿ, ಪ್ರತಿಪಾದನಾ ಕೌಶಲ್ಯಗಳನ್ನು ಜಗತ್ತಿಗೇ ಪರಿಚಯಿಸಿದವು. ಅಲ್ಲಿ ಇವರಿಗೆ ದೊರೆತ ಯಶಸ್ಸು ಭಾರತೀಯರ ಹೆಮ್ಮೆಯ ವಿಷಯವಾಯಿತು. ಭಾರತದ ನವ ನಿರ್ಮಾಣದಲ್ಲಿ ಅಂದಿನಿಂದ ಇವರೊಬ್ಬ ಯುಗಪುರುಷರಾಗಿ ಪರಿಗಣಿತರಾದರು. ಇಲ್ಲಿಂದ ಮುಂದೆ ವಿಶ್ವದಾದ್ಯಂತ ಇವರ ಪ್ರವಚನಗಳು ಏರ್ಪಟ್ಟವು. ವಿಚಾರಗೋಷ್ಠಿಗಳೂ ಅಧ್ಯಯನ ಕೇಂದ್ರಗಳೂ ರೂಪ ತಾಳಿದವು. ನ್ಯೂಯಾರ್ಕಿನ ವೇದಾಂತ ಸೊಸೈಟಿ ರೂಪ ತಳೆದದ್ದು ಇವರ ಪ್ರಭಾವದಿಂದಲೇ. ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಸ್ಫೂರ್ತಿದಾಯಕ ಮಾತುಗಳು–ಇವು ಈ ಬಗೆಯ ಪ್ರವಚನ, ಉಪನ್ಯಾಸಗಳನ್ನೊಳಗೊಂಡ ಇವರ ಕೆಲವು ಮುಖ್ಯ ಕೃತಿಗಳಾಗಿವೆ. ವೇದಾಂತದ ತತ್ತ್ವಗಳನ್ನು ಆಧುನಿಕ ವಿಚಾರ ಧೋರಣೆಗೆ ಒಗ್ಗುವಂತೆ ಯುಕ್ತವಾಗಿ ಪ್ರತಿಪಾದಿಸಿದ್ದು ಇವರು ಸನಾತನ ಧರ್ಮಕ್ಕೆ ಮಾಡಿದ ಮಹತ್ತ್ವದ ಸೇವೆಯಾಗಿದೆ.

ನಿಜವಾದ ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಕೂಡಿದ ಸಾತ್ತ್ವಿಕ ಜೀವನ ನಡೆಸುವುದು, ಆಧ್ಯಾತ್ಮಿಕ ವಿಷಯದಲ್ಲಿ ಜನರಿಗೆ ಒಲವು ಮೂಡಿಸುವುದು, ಸಾಧನೆ ಕೈಗೊಳ್ಳುವವರಿಗೆ ಆಸನ, ಪ್ರಾಣಾಯಾಮ, ಧ್ಯಾನ ಮೊದಲಾದವನ್ನು ಬೋಧಿಸುವುದು ಇವರ ಮುಖ್ಯ ಕಾರ್ಯವಾಗಿತ್ತು. ಅಮೆರಿಕದ ಶಿಕ್ಷಿತ ವರ್ಗದಲ್ಲಿ ವಿಚಾರಕ್ರಾಂತಿಯುಂಟು ಮಾಡಿದ್ದು ಇವರ ಹೆಗ್ಗಳಿಕೆ. ಆದ್ದರಿಂದಲೇ ಭಾರತವನ್ನು ಬಿಟ್ಟರೆ ರಾಮಕೃಷ್ಣ ಮಠಗಳು, ಧ್ಯಾನಕೇಂದ್ರಗಳು ಹೆಚ್ಚು ಸಂಖ್ಯೆಯಲ್ಲಿರುವುದು ಅಮೆರಿಕದಲ್ಲಿಯೇ. ಇವರು ತಮ್ಮ ಆಪ್ತರಿಗೆ ಧಾರ್ಮಿಕ ವಿಷಯವಾಗಿ ಬರೆದಿರುವ ಅಸಂಖ್ಯಾತ ಪತ್ರಗಳು ಕೂಡ ಅಪೂರ್ವ ಸಾಹಿತ್ಯವಾಗಿದೆ. ಇವರಿಗೆ ಭಾರತ ಮತ್ತು ಭಾರತೀಯ ಧರ್ಮಗಳ ವಿಷಯದಲ್ಲಿದ್ದ ಅಸಾಧಾರಣ ಪ್ರೇಮ, ಅಭಿಮಾನಗಳು ಈ ಪತ್ರಗಳಿಂದ ತಿಳಿಯುತ್ತವೆ.

1895ರಲ್ಲಿ ವಿದೇಶದಲ್ಲಿ ವೇದಾಂತ ಪ್ರಚಾರ ಕೈಗೊಂಡ ಸಂದರ್ಭದಲ್ಲಿ ಮಾರ್ಗರೇಟ್ ನೊಬೆಲ್ ಎಂಬ ಆಂಗ್ಲ ಮಹಿಳೆ ಇವರನ್ನು ಸಂದರ್ಶಿಸಿ, ಶಿಷ್ಯೆಯಾಗಿ ಭಾರತಕ್ಕೆ ಬಂದು ಉತ್ತಮ ಸೇವೆ ಸಲ್ಲಿಸಿ ನಿವೇದಿತಾ ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಕೊಲಂಬೊನಿಂದ ಆಲ್ಮೋರದವರೆಗೆ ಎಂಬ ಗ್ರಂಥ ಉತ್ತರ ಭಾರತದ ಅನೇಕ ನಗರಗಳಿಗೆ ಇವರು ಭೇಟಿ ನೀಡಿ ವೇದಾಂತಕ್ಕಿಂತ ಹೆಚ್ಚಾಗಿ ದೇಶಾಭ್ಯುದಯಕ್ಕಾಗಿ ನೀಡಿದ ಸ್ಫೂರ್ತಿಯುತ ಭಾಷಣಗಳನ್ನು ಒಳಗೊಂಡಿದೆ. ಭಾರತದ ಯುವಜನಾಂಗದ ಮೇಲೆ ಸ್ವಾತಂತ್ರ್ಯ ಅಭಿಮಾನವನ್ನು ಮೂಡಿಸಿ, ಅವರಲ್ಲಿ ರಾಷ್ಟ್ರೀಯತೆಯ ಬಗ್ಗೆ ಅರಿವನ್ನು ಮೂಡಿಸುವಲ್ಲಿ ಸಫಲರಾದರು.

1897 ರಿಂದ ಹಲವು ವರ್ಷಗಳು ಅವಿಶ್ರಾಂತವಾಗಿ ದುಡಿದು ದೇಶದ ಹಲವಾರು ಕಡೆಗಳಲ್ಲಿ ಮೋಕ್ಷಕ್ಕೂ ಪ್ರಪಂಚದ ಹಿತಕ್ಕೂ ಶ್ರಮಿಸುವ ಪ್ರಮುಖ ಧ್ಯೇಯವುಳ್ಳ ರಾಮಕೃಷ್ಣ ಮಠ ಮತ್ತು ಮಿಷನ್‌ಗಳನ್ನು ವಿಧಿವತ್ತಾಗಿ ಸ್ಥಾಪಿಸಿದರು. ಅವಿಶ್ರಾಂತ ದುಡಿಮೆಯಿಂದ ಜರ್ಜರಿತರಾಗಿದ್ದ ಇವರು 1902 ಜುಲೈ 4ರಂದು ನಿಧನರಾದರು. (ಕೆ.ಎಸ್.)

**ವಿಶ್ವಪರಂಪರೆ ಸ್ಮಾರಕಗಳು:** ಪ್ರಪಂಚದ ಸಾಂಸ್ಕೃತಿಕ, ಪ್ರಾಕೃತಿಕ ಮತ್ತು ಐತಿಹಾಸಿಕ ಸ್ಮಾರಕಗಳ ರಕ್ಷಣಾ ಕಾರ್ಯಗಳ ವಿಧಿ ವಿಧಾನ. 1959ರಲ್ಲಿ ನೈಲ್‌ನದಿಗೆ ಆಸ್ವಾನ್ ಬಳಿ ಅಣೆಕಟ್ಟು ಕಟ್ಟುವ ಸಮಯದಲ್ಲಿ ಈಜಿಪ್ಟ್ ನಾಗರಿಕತೆಯ ಅಬುಸಿಂಬೆಲ್‌ನ ಬೃಹತ್ ದೇವಾಲಯಗಳನ್ನು ಸಂರಕ್ಷಿಸುವ ಸಂದರ್ಭ ಒದಗಿತು. ಆಗ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೊ) ಪ್ರಪಂಚದಾದ್ಯಂತ ಒಂದು ಚಳವಳಿಯನ್ನು ನಡೆಸಿತು. ತತ್ಪರಿಣಾಮವಾಗಿ 50 ದೇಶಗಳಿಂದ 40 ಮಿಲಿಯ ಡಾಲರ್‌ಗಳ ಜೊತೆ ಅಷ್ಟೇ ಹಣ ಸೇರಿಸಿ ಉತ್ಕೃಷ್ಟ ರೀತಿಯಲ್ಲಿ ಆ ದೇವಾಲಯವನ್ನು ಸುರಕ್ಷಿತ ಸ್ಥಳಕ್ಕೆ ಒಯ್ದು ಸಂರಕ್ಷಿಸಲಾಯಿತು. ಇದು ಪ್ರಪಂಚದಲ್ಲಿಯೇ ಒಂದು ಅದ್ಭುತ ಸಾಹಸವೆನ್ನಲಾಗಿದೆ. ತತ್ಪರಿಣಾಮವಾಗಿ ವಿಶ್ವಸಂಸ್ಥೆ ವಿಭಾಗ ಇಂಟರ್ ನ್ಯಾಷನಲ್ ಕೌನ್ಸಿಲ್ ಆನ್ ಮಾನ್ಯುಮೆಂಟ್ ಅಂಡ್ ಸೈಟ್ಸ್ ಎಂಬ ಒಂದು ಸಮಿತಿಯನ್ನು ರಚಿಸಿ ವಿಶ್ವದ ವಿವಿಧ ಪಾರಂಪರಿಕ ಸ್ಮಾರಕಗಳನ್ನು ರಕ್ಷಿಸುವ ಒಂದು ಒಡಂಬಡಿಕೆಯನ್ನು ಸಿದ್ಧಮಾಡಿತು. ಇಂತಹ ಸಾಂಸ್ಕೃತಿಕ ಸ್ಮಾರಕಗಳೊಡನೆ ಪ್ರಾಕೃತಿಕ ಅದ್ಭುತಗಳನ್ನೂ ರಕ್ಷಿಸಬೇಕೆಂಬ ಉದ್ದೇಶದಿಂದ ಅಮೆರಿಕ ವಿಶ್ವಪರಂಪರೆಯ ವಿಶ್ವಸ್ಥ ಮಂಡಲಿ ರಚಿಸಲು ಒಂದು ಸಮಾವೇಶವನ್ನು ಏರ್ಪಡಿಸಿತು (1965). ಈ ಸಮಾವೇಶದ ಉದ್ದೇಶ ಪ್ರಪಂಚದ ಅಪರೂಪದ ನೈಸರ್ಗಿಕ ದೃಶ್ಯಾವಳಿಗಳನ್ನು ಮತ್ತು ಐತಿಹಾಸಿಕ ಸ್ಮಾರಕಗಳನ್ನೂ ಇಂದಿನ ಮತ್ತು ಮುಂದಿನ ಜನತೆಗೋಸ್ಕರ ಸಂರಕ್ಷಿಸುವುದು. 1968 ರಲ್ಲಿ ಇದೇ ರೀತಿಯ ಪ್ರಸ್ತಾವನೆಗಳನ್ನು ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್ ಸಿದ್ಧಪಡಿಸಿ 1972 ರಲ್ಲಿ ಸ್ವೀಡನ್‌ನ ಸ್ಟಾಕ್ ಹೋಮ್‌ನಲ್ಲಿ ನಡೆದ ಹ್ಯೂಮನ್ ಎನ್‌ವಿರಾನ್‌ಮೆಂಟ್ ಎಂಬ ವಿಷಯದ ಮೇಲೆ ನಡೆದ ಸಮ್ಮೇಳನದಲ್ಲಿ ಭಾಗವಹಿಸಿದ್ದವರ ಒಪ್ಪಿಗೆಯಂತೆ ಅಂತಿಮ ಪ್ರಸ್ತಾವನೆ ಸಿದ್ಧಪಡಿಸಲಾಯಿತು. ಪ್ರಪಂಚದ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಗೆ ಸಂಬಂಧಿಸಿದಂತೆ ಒಡಂಬಡಿಕೆಯನ್ನು ಯುನೆಸ್ಕೊದ ಸಾಮಾನ್ಯ ಸಮ್ಮೇಳನದಲ್ಲಿ ಒಪ್ಪಿಕೊಳ್ಳಲಾಯಿತು (1972 ನವೆಂಬರ್ 16).

ಈ ಒಡಂಬಡಿಕೆ ಪ್ರಕಾರ ಒಂದು ದೇಶ ತನ್ನ ಎಲ್ಲ ಮಹತ್ತ್ವದ, ಅಪರೂಪದ ಸಾಂಸ್ಕೃತಿಕ ಮತ್ತು ನೈಸರ್ಗಿಕ ಆಸ್ತಿಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಅನಂತರ ಅತಿ ಮಹತ್ತ್ವದವುಗಳನ್ನು ಆರಿಸಿ ಅವುಗಳನ್ನು ವಿಶ್ವಪರಂಪರೆ ಪಟ್ಟಿಗೆ ಸೇರಿಸುವ ಒಂದು ಕಡತವನ್ನು ಸಿದ್ಧಮಾಡಬೇಕು. ಈ ಬಗೆಯ ದಾಖಲೆಯನ್ನು ಸಿದ್ಧ ಮಾಡುವುದರಲ್ಲಿ ವಿಶ್ವಪರಂಪರೆ ಕೇಂದ್ರದ ಸೂಚನೆ ಮತ್ತು ಸಲಹೆಗಳನ್ನು ಪಡೆಯಬೇಕು. ಈ ಹಂತದಲ್ಲಿ ಇಂಟರ್ ನ್ಯಾಷನಲ್ ಕೌನ್ಸಿಲ್ ಆನ್ ಮಾನ್ಯುಮೆಂಟ್ಸ್ ಮತ್ತು ಸೈಟ್ಸ್ ವರ್ಲ್ಡ್ ಕನ್ಸರ್ವೇಷನ್ ಯೂನಿಯನ್ ಈ ಎರಡು ವಿಭಾಗಗಳು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವಿಶ್ವಪರಂಪರೆ ಸಮಿತಿಗೆ ಸೂಕ್ತ ಸೂಚನೆ ನೀಡುತ್ತದೆ. ಈ ಸಮಿತಿ ವರ್ಷಕ್ಕೆ ಒಂದು ಸಲ ಸೇರುತ್ತದೆ. ವಿಶ್ವಪರಂಪರೆಯ ಸ್ಮಾರಕ ಎಂದು ಘೋಷಿಸಲು 10 ಸ್ಪಷ್ಟವಾದ ನಿಬಂಧನೆಗಳಿವೆ. 2004 ರವರೆಗೂ ಸಾಂಸ್ಕೃತಿಕ, ಐತಿಹಾಸಿಕ ಸ್ಮಾರಕಗಳಿಗೆ ಸಂಬಂಧಿಸಿದಂತೆ 6 ಮತ್ತು ನಿಸರ್ಗ ನಿರ್ಮಿತ ಅದ್ಭುತಗಳಿಗೆ 4 ನಿಬಂಧನೆಗಳಿದ್ದವು. 2005ರಲ್ಲಿ ಮತ್ತೆ ಪರಿಶೀಲಿಸಿ ಇದೇ ನಿಬಂಧನೆಗಳನ್ನು ಮುಂದುವರಸಲಾಯಿತು.

ಈಗ ಪ್ರಪಂಚದ 145 ದೇಶಗಳ 878 ವಿಶ್ವಪರಂಪರೆ ಸ್ಮಾರಕಗಳಿವೆ. ಇವುಗಳಲ್ಲಿ 678 ಸಾಂಸ್ಕೃತಿಕ, 174 ನೈಸರ್ಗಿಕ ಮತ್ತು 26 ಇವೆರಡರ ಮಿಶ್ರ ಪರಂಪರೆ ಸ್ಮಾರಕಗಳು. ಇವುಗಳನ್ನು ಭೌಗೋಳಿಕವಾಗಿ ಮತ್ತು ಆಡಳಿತಾತ್ಮಕವಾಗಿ 5 ವರ್ಗಗಳಾಗಿ ವಿಂಗಡಿಸಲಾಗಿದೆ. ಭಾರತದಲ್ಲಿ 27 ವಿಶ್ವಪರಂಪರೆ ಸ್ಮಾರಕಗಳಿವೆ.

ವಿಶ್ವಪರಂಪರೆ ಸಮಿತಿ ಒಂದು ವರ್ಷದಲ್ಲಿ ಹಲವಾರು ಬಾರಿ ಸೇರಿ ಇಂತಹ ವಿಶ್ವಪರಂಪರೆ ನೆಲೆಗಳ ಮೇಲ್ವಿಚಾರಣೆಯನ್ನು ಮತ್ತು ಬೇರೆ ಬೇರೆ ದೇಶಗಳು ಆಯ್ದ ಸ್ಮಾರಕಗಳ ನೇಮಕಾತಿ ದಾಖಲೆಗಳನ್ನು ಪರಿಶೀಲಿಸುತ್ತದೆ. ವಿಶ್ವಪರಂಪರೆ ಸಮಿತಿಯಲ್ಲಿ 21 ಸದಸ್ಯ ರಾಷ್ಟ್ರಗಳಿವೆ. (ಎ.ಎಸ್.;ಎನ್.ಎಲ್.)

**ವಿಶ್ವೇಶ್ವರಯ್ಯ, ಮೋಕ್ಷಗುಂಡಂ:** 1860–1962. ಹೆಸರಾಂತ ಎಂಜಿನಿಯರ್; ದಕ್ಷ ಆಡಳಿತಗಾರ ಮತ್ತು ನಿಷ್ಕಾಮಕರ್ಮಿ; ದೇಶಭಕ್ತ. ಶಿಸ್ತು ಮತ್ತು ದಕ್ಷತೆಗೆ ಮತ್ತೊಂದು ಹೆಸರಂತಿದ್ದ ಇವರು ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನಹಳ್ಳಿಯಲ್ಲಿ 1860 ಆಗಸ್ಟ್ 27ರಂದು ಜನಿಸಿದರು. ಪಂಡಿತ ಶ್ರೀನಿವಾಸಶಾಸ್ತ್ರೀ ಇವರ ತಂದೆ, ತಾಯಿ ವೆಂಕಟಲಕ್ಷ್ಮಮ್ಮ. ವಿಶ್ವೇಶ್ವರಯ್ಯನವರಿಗೆ 15 ವರ್ಷವಾಗಿದ್ದಾಗ ತಂದೆ ತೀರಿಕೊಂಡರು. ಇವರು ಚಿಕ್ಕಬಳ್ಳಾಪುರದ ಮಾಧ್ಯಮಿಕ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಮುಗಿಸಿದ ಮೇಲೆ ಸೋದರಮಾವ ಎಚ್.ರಾಮಯ್ಯನವರ ಜೊತೆ ಬೆಂಗಳೂರಿಗೆ ಬಂದು 1875ರಲ್ಲಿ ವೆಸ್ಲಿಯನ್ ಮಿಷನ್ ಪ್ರೌಢಶಾಲೆಗೆ ಸೇರಿದರು. ಇವರು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಅಂದಿನ ಮಹಾರಾಜರ

ಮಂತ್ರಿಗಳಾಗಿದ್ದ ಮುದ್ದಯ್ಯನವರ ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಇವರು 1881ರಲ್ಲಿ ಬಿ.ಎ.ಪರೀಕ್ಷೆಯನ್ನು ಉನ್ನತ ಶ್ರೇಣಿಯಲ್ಲಿ ಪಾಸುಮಾಡಿದರು. ಕಾಲೇಜಿನ ಪ್ರಾಂಶುಪಾಲರಾಗಿದ್ದ ಚಾರ್ಲ್ಸ್ ವಾಟರ್ಸ್ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ಇವರಿಗೆ ಪ್ರಾಂಶುಪಾಲರು ವೆಬ್‌ಸ್ಟರ್ ನಿಘಂಟನ್ನು ಬಹುಮಾನವಾಗಿ ಕೊಟ್ಟರು. ಎಂಜಿನಿಯರಿಂಗ್ ಓದಲು ಅವರೇ ಪ್ರೋತ್ಸಾಹಿಸಿ ಆಗಿನ ಮೈಸೂರು ರಾಜ್ಯದ ದಿವಾನರಾಗಿದ್ದ ರಂಗಾಚಾರ್ಲು ಅವರಿಗೆ ಪತ್ರ ಬರೆದು ಸರ್ಕಾರದ ವಿದ್ಯಾರ್ಥಿವೇತನ ದೊರಕುವಂತೆ ಮಾಡಿದರು. ಇವರು ಪುಣೆಯ ಸೈನ್ಸ್ ಕಾಲೇಜನ್ನು ಸೇರಿ ತಮ್ಮ 23ನೆಯ ವಯಸ್ಸಿನಲ್ಲಿ ಎಲ್.ಸಿ.ಇ. ಮತ್ತು ಇ.ಸಿ.ಇ.ಎಲ್. ಎಂಜಿನಿಯರಿಂಗ್ ಪರೀಕ್ಷೆಯನ್ನು ಪ್ರಥಮ ದರ್ಜೆಯಲ್ಲಿ ಪಾಸುಮಾಡಿ ಮುಂಬಯಿ ಪ್ರಾಂತಕ್ಕೇ ಪ್ರಥಮ ಸ್ಥಾನ ಗಳಿಸಿದರು (1883).

ಇವರು 1884 ಮಾರ್ಚ್‌ನಿಂದ ಮುಂಬಯಿ ಸರ್ಕಾರದಲ್ಲಿ ಅಸಿಸ್ಟೆಂಟ್ ಎಂಜಿನಿಯರ್ ಆಗಿ ತಮ್ಮ ವೃತ್ತಿ ಜೀವನವನ್ನಾರಂಭಿಸಿದರು. ಇವರು ಧೂಲಿಯ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆ ತಯಾರಿಸುತ್ತಿದ್ದಾಗ 1887 ಡಿಸೆಂಬರ್ 27ರಂದು ಮುಂಬಯಿಯಲ್ಲಿ ಮೈಸೂರು ಮಹಾರಾಜರನ್ನು ಕಂಡು ಮಾತುಕತೆ ನಡೆಸಿದರು. ಸೂರತ್ ಜಿಲ್ಲೆಯಲ್ಲಿ ಒಂದು ವರ್ಷ ಕೆಲಸ ಮಾಡಿದ ಮೇಲೆ 1889ರಲ್ಲಿ ಪುಣೆಗೆ ವರ್ಗವಾಗಿ ಬಂದರು. ಪಂಜ್ರಾ ನದಿಯಿಂದ ದತಾರಿ ಹಳ್ಳಿಗೆ 'ಸೈಫನ್' ಕೊಳವೆ ಹಾಕಿ ನೀರು ಒದಗಿಸುವ ಕೆಲಸಮಾಡಿ ಹೆಸರು ಗಳಿಸಿದರು. ಕೆಲಸಕ್ಕೆ ಸೇರಿದ 20 ತಿಂಗಳಲ್ಲೇ ತಮ್ಮ ದಕ್ಷತೆಯಿಂದಾಗಿ ಮೊದಲ ದರ್ಜೆಯ ಎಂಜಿನಿಯರ್ ಆದರು. ಸಿಂಧ್ ವಿಭಾಗಕ್ಕೆ ಸೇರಿದ ಸಕ್ಕೂರಿಗೆ ಕುಡಿಯುವ ನೀರನ್ನು ಸಿಂಧೂ ನದಿಯಿಂದ ಒದಗಿಸಬೇಕಾಗಿ ಬಂತು. ನದಿಯ ಬಗ್ಗಡ ನೀರನ್ನು

ಶುದ್ಧಮಾಡಲು ಆಗತಕ್ಕ ಅಪಾರ ವೆಚ್ಚವನ್ನು ತಗ್ಗಿಸುವ ಸಲುವಾಗಿ ನದಿ ದಡಗಳಲ್ಲಿ ದೊಡ್ಡ ಬಾವಿಗಳನ್ನು ತೋಡಿಸಿ ಅಲ್ಲಿಂದ ಶುದ್ಧ ನೀರನ್ನು ಪೂರೈಸಿದರು. ಇದರಿಂದಲೂ ಇವರಿಗೆ ಒಳ್ಳೆಯ ಹೆಸರು ಬಂತು. ಹಾಗೆಯೇ ಇವರು ತಪತಿ ನದಿಯಿಂದ ಸೂರತ್ತಿಗೆ ನೀರೊದಗಿಸುವ ಕಾರ್ಯವನ್ನು ಮಾಡಿ ಮುಗಿಸಿದರು.

ಈ ಸಮಯದಲ್ಲೇ ಇವರು ಸ್ವಯಂಚಾಲಿತ ತೂಬಿನ ಬಾಗಿಲುಗಳನ್ನು ನಿರ್ಮಿಸಿ ಪ್ರಥಮವಾಗಿ ಪುಣೆಯ ಸಮೀಪದಲ್ಲಿರುವ ಖಡಕ್‌ವಾಸ್ಲದ ಫೈಫ್ ಜಲಾಶಯದ ಕೋಡಿಯಲ್ಲಿ ಸ್ಥಾಪಿಸಿದರು. ಮುಂದೆ ಇದೇ ಮಾದರಿಯ ಕವಾಟಗಳನ್ನು ಗ್ವಾಲಿಯರ್‌ನ ಟಿಗ್ರಾ ಮತ್ತು ಮೈಸೂರು ಸಂಸ್ಥಾನದ ಕೃಷ್ಣರಾಜಸಾಗರ ಅಣೆಕಟ್ಟುಗಳಲ್ಲಿ ಉಪಯೋಗಿಸಲಾಯಿತು. 1904ರಲ್ಲಿ ಸಿಂಧ್ ಒಳಗೊಂಡ ಮುಂಬಯಿ ಪ್ರಾಂತಕ್ಕೆ ಸ್ಯಾನಿಟರಿ ಎಂಜಿನಿಯರಾಗಿ ನೇಮಿತರಾದರು. ಆ ಹುದ್ದೆಗೆ ಬಂದ ಭಾರತೀಯರಲ್ಲಿ ಇವರೇ ಮೊದಲಿಗರು. ಅದುವರೆಗೂ ಆ ಹುದ್ದೆ ಬ್ರಿಟಿಷರಿಗೆ ಮಾತ್ರ ಮೀಸಲಾಗಿತ್ತು. ಇದೇ ಕಾಲದಲ್ಲಿ ಲಂಡನ್ನಿನ ಸಿವಿಲ್ ಎಂಜಿನಿಯರ್ಸ್ ಸಂಸ್ಥೆಗೆ ಸದಸ್ಯರಾಗಿ ಆಯ್ಕೆಯಾದರು. ಸಿಮ್ಲಾದಲ್ಲಿ ನಡೆದ ಅಖಿಲ ಭಾರತ ನೀರಾವರಿ ಎಂಜಿನಿಯರುಗಳ ಸಮ್ಮೇಳನದಲ್ಲಿ ತಮ್ಮ ನಾಲ್ಕು ಪ್ರೌಢ ಪ್ರಬಂಧಗಳನ್ನು ಓದಿದರು. ಮುಂಬಯಿ ವಿಶ್ವವಿದ್ಯಾಲಯದ ನಿಯಮಾವಳಿ ರೂಪಿಸುವ ಮಂಡಳಿಗೆ ಸರ್ಕಾರ ಇವರನ್ನು ಸದಸ್ಯರನ್ನಾಗಿ ನೇಮಿಸಿತು. ಗೋಪಾಲಕೃಷ್ಣ ಗೋಖಲೆಯವರು ಪುಣೆಯ ಪುರಸಭಾ ಸದಸ್ಯರಾಗಿದ್ದ ಕಾಲದಲ್ಲಿ ಇವರು ಆ ನಗರದ ಒಳಚರಂಡಿ ವ್ಯವಸ್ಥೆಯನ್ನು ರೂಪಿಸಿಕೊಟ್ಟರು. 1906ರಲ್ಲಿ ಇವರು ಏಡನ್‌ಗೆ ಹೋಗಿ ಆ ನಗರಕ್ಕೆ ಕುಡಿಯುವ ನೀರಿನ ಮತ್ತು ಒಳಚರಂಡಿ ವ್ಯವಸ್ಥೆ ಕೆಲಸಗಳನ್ನು ಪೂರೈಸಿಕೊಟ್ಟು ಬಂದರು. ಸರ್ಕಾರ ಇವರ ಕಾರ್ಯದಕ್ಷತೆಗೆ ಮೆಚ್ಚಿ ಕೈಸರ್-ಇ-ಹಿಂದ್ ಪ್ರಶಸ್ತಿ ನೀಡಿ ಗೌರವಿಸಿತು. ಕೊಲ್ಲಾಪುರದ ಮಹಾರಾಜರ ಕೋರಿಕೆಯಂತೆ ಅಲ್ಲಿಯ ಕೆರೆ ದುರಸ್ತಿ ಮಾಡಿಸಿ ನೀರು ಸರಬರಾಜನ್ನು ವ್ಯವಸ್ಥೆಗೊಳಿಸಿದ ಕೀರ್ತಿ ಇವರದು.

ಇವರು ವಿದೇಶಗಳಿಗೆ ಪ್ರವಾಸ ಕೈಗೊಂಡರು. 1898ರಲ್ಲಿ ಜಪಾನಿಗೆ ಹೋಗಿ ಅಲ್ಲಿ ಅನೇಕ ಕಾರ್ಖಾನೆಗಳನ್ನು ನೋಡಿ ಬಂದರು. ಮುಂಬಯಿ ಸರ್ಕಾರದ ನೌಕರಿಯಿಂದ ನಿವೃತ್ತರಾಗುವ ಮೊದಲು ರಜೆ ಪಡೆದು ಯುರೋಪ್, ಅಮೆರಿಕ ಪ್ರವಾಸ ಮಾಡಿದರು. ಇಟಲಿಯ ಮಿಲಾನ್ ನಗರದ ಒಳಚರಂಡಿ ವ್ಯವಸ್ಥೆ ಅರಿಯಲು ಅಲ್ಲಿಯ ಚರಂಡಿಯ ಒಳಗೇ ಇಳಿದು ನಡೆದರಂತೆ. ಹಾಗೆಯೇ ಜರ್ಮನಿಯ ಡಸೆಲ್‌ಡಾರ್ಫ್, ಲಂಡನ್, ಪ್ಯಾರಿಸ್‌ನ ವ್ಯವಸ್ಥೆಗಳನ್ನು ಅಭ್ಯಸಿಸಿದರು. ಡೆನ್ಮಾರ್ಕ್, ಸ್ವೀಡನ್, ಹಾಲೆಂಡ್, ಕೆನಡ, ಲೆನಿನ್‌ಗ್ರಾಡ್ (ಸೇಂಟ್ ಪೀಟರ್ಸ್ ಬರ್ಗ್) ಮತ್ತು ಮಾಸ್ಕೊ ನಗರಗಳಿಗೆ ಭೇಟಿಕೊಟ್ಟು ಅಲ್ಲಿಯ ಪ್ರಗತಿಯನ್ನೆಲ್ಲ ಕಣ್ಣಾರೆ ಕಂಡುಬಂದರು. ಡೆಟ್ರಾಯಿಟ್‌ನ ಫೋರ್ಡ್ ಮೋಟರು ಕಂಪನಿಯ ಕೆಲಸಕಾರ್ಯಗಳನ್ನು ಅಭ್ಯಾಸಮಾಡಲು ಅಲ್ಲೇ 2 ತಿಂಗಳು ಉಳಿದರು. ನ್ಯೂಯಾರ್ಕ್ ನಗರಕ್ಕೆ ನೀರೊದಗಿಸುವ ಗ್ರೋಟನ್ ಅಣೆಕಟ್ಟನ್ನೂ ನೋಡಿ ಬಂದರು. ಪುಣೆ, ಹೈದರಾಬಾದು, ಧೂಲಿಯ, ಏಡನ್, ಇಂದೂರ್ ಮತ್ತು ಮೈಸೂರು ನಗರಗಳ ಒಳಚರಂಡಿ ವ್ಯವಸ್ಥೆ ಇವರ ಸೂಚನೆ ಮತ್ತು ಸಲಹೆಯ ಮೇಲೆಯೇ ರೂಪಿಸಲಾಯಿತು.

ಹೈದರಾಬಾದು ಮತ್ತು ಸುತ್ತಲ ಹಳ್ಳಿಗಳಿಗೆ ಸಮಸ್ಯೆಯಾಗಿ ಪರಿಣಮಿಸಿದ್ದ ಮೂಸಿ ಮತ್ತು ಇಯಾಸಿ ನದಿಗಳ ಪ್ರವಾಹವನ್ನು ನಿಯಂತ್ರಿಸಲು ಹೈದರಾಬಾದಿನ ನಿಜಾಮರು ಇವರನ್ನು ಕರೆಸಿಕೊಂಡರು. 1909 ಏಪ್ರಿಲ್ 4ರಂದು ಹೈದರಬಾದಿಗೆ ಹೋಗಿ ಸ್ಥಳಪರೀಕ್ಷೆ ನಡೆಸಿ 1909 ಅಕ್ಟೋಬರಿನಲ್ಲಿ ತಮ್ಮ ವರದಿ ಸಲ್ಲಿಸಿದರು. 1909 ನವೆಂಬರ್‌ನಲ್ಲಿ ಹೈದರಬಾದು ನಗರ ಮತ್ತು ಒಳಚರಂಡಿ ವ್ಯವಸ್ಥೆಯ ವರದಿ ಸಲ್ಲಿಸಿದರು. ಇವರ ಸಲಹೆಯಂತೆ ಮೂಸಿ ನದಿಗೆ ಅಡ್ಡಗಟ್ಟೆ ಹಾಕಿ ಉಸ್ಮಾನ್ ಸಾಗರವನ್ನೂ ಇಯಾಸಿ ನದಿಗೆ ಕಟ್ಟೆ ಕಟ್ಟಿ ಹಿಮಾಯತ್ ಸಾಗರವನ್ನೂ ಕಟ್ಟಲಾಯಿತು. ಇದರಿಂದ ಹೈದರಾಬಾದು ನಗರವನ್ನು ಪ್ರವಾಹಗಳಿಂದ ರಕ್ಷಿಸಿದುದಲ್ಲದೆ ಸುಂದರವಾಗಿಡಲು ಮತ್ತು ಸುತ್ತಲ ಪ್ರದೇಶದ ಜಲಾಭಾವ ನೀಗಲು ಕಾರಣವಾಯಿತು.

ಮುಂಬಯಿ ಸರ್ಕಾರಕ್ಕೆ 23 ವರ್ಷ ಸೇವೆ ಸಲ್ಲಿಸಿ 1907ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದರು. 1909 ನವೆಂಬರ್ 15ರಂದು ಮೈಸೂರು ರಾಜ್ಯದ ಪ್ರಧಾನ ಎಂಜಿನಿಯರ್ ಆಗಿ ಅಧಿಕಾರ ಸ್ವೀಕರಿಸಿದರು. ಮಾದರಿ ರಾಜ್ಯದ ನಿರ್ಮಾಣಕ್ಕಾಗಿ ಇವರು ರಾಜ್ಯದ ಪರಿಸ್ಥಿತಿಯನ್ನೆಲ್ಲ ಅಧ್ಯಯನ ಮಾಡಿ ಎಲ್ಲಿ ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡಬಹುದು, ಜಲಾಶಯಗಳನ್ನು ನಿರ್ಮಿಸಬಹುದು ಎಂಬುದನ್ನು ಪರಿಶೀಲಿಸಿದರು. ಜೊತೆಗೆ, ರೈಲ್ವೆ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ ಇವರು ಹೊಸ ರೈಲು ಮಾರ್ಗಗಳ ಒಂದು ಯೋಜನೆಯನ್ನು ಸರ್ಕಾರದ ಮುಂದಿಟ್ಟರು. ಇವರ ಶ್ರಮದಿಂದ ಬೀರೂರು-ಶಿವಮೊಗ್ಗ, ಮೈಸೂರು-ನಂಜನಗೂಡು, ಬೆಂಗಳೂರು-ಮೈಸೂರು ರೈಲ್ವೆಗಳ ಆಡಳಿತವನ್ನು ಮೈಸೂರು ಸರ್ಕಾರಕ್ಕೆ ವರ್ಗಾಯಿಸಲಾಯಿತು.

ಇವರು 1912ರಲ್ಲಿ ದಿವಾನ ಪದವಿಯನ್ನು ಒಪ್ಪಿಕೊಂಡರು. ಈ ಮೊದಲೇ 1911ರಲ್ಲಿ ಕೃಷ್ಣರಾಜಸಾಗರದ ನಿರ್ಮಾಣ ಪ್ರಾರಂಭವಾಗಿತ್ತು. ಈ ಕೆಲಸ 1931ರಲ್ಲಿ ಪೂರ್ಣವಾಯಿತು. ಇದೇ ವರ್ಷದಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. 1913ರಲ್ಲಿ ಮೈಸೂರು ಅರಸರಿಗೂ ಬ್ರಿಟಿಷರಿಗೂ ಹೊಸ ಒಪ್ಪಂದವಾಯಿತು. ದಿವಾನರಾಗಿದ್ದ ಇವರ ಸಮಯೋಚಿತ ಚತುರತೆಯಿಂದಾಗಿ ಮೈಸೂರು ಮಹಾರಾಜರಿಗೆ ರಾಜ್ಯದ ಒಳಾಡಳಿತದಲ್ಲಿ ಹೆಚ್ಚು ಸ್ವಾತಂತ್ರ್ಯ ಸಿಕ್ಕಿತು. 1914ರಲ್ಲಿ ಬೆಂಗಳೂರಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲ್ ಸ್ಥಾಪಿತವಾಯಿತು. ಮೈಸೂರಿನ ಶಿಕ್ಷಣಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದ ಇವರು 1916 ಜುಲೈ 22ರಂದು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಗೂ ಕಾರಣರಾದರು. ಇದೇ ಕಾಲದಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆಗಳನ್ನು ಪ್ರಾರಂಭಿಸಲಾಯಿತು. ಈ ಬಗೆಯಲ್ಲಿ ಇವರು ಮೈಸೂರು ರಾಜ್ಯದ ಮುಖ್ಯ ಎಂಜಿನಿಯರ್ ಮತ್ತು ದಿವಾನರಾಗಿದ್ದ ಕಾಲದಲ್ಲಿ ರಾಜ್ಯದ ಸರ್ವತೋಮುಖ ಬೆಳವಣಿಗೆಯಾಗಿ ಮಾದರಿ ಮೈಸೂರು ಎನಿಸಿಕೊಂಡಿತು. ಇವರು 1918 ಡಿಸೆಂಬರ್ 9ರಂದು ದಿವಾನ ಪದವಿಗೆ ರಾಜೀನಾಮೆ ನೀಡಿದರು. ಅನಂತರ ಭದ್ರಾವತಿ ಕಬ್ಬಿಣ ಕಾರ್ಖಾನೆಗೆ (ಇಂದು ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ) ಮಹಾರಾಜರ ಬೇಡಿಕೆಯಂತೆ 6 ವರ್ಷಕಾಲ ಕಾರ್ಯನಿರ್ವಾಹಕ ಸಮಿತಿ ಅಧ್ಯಕ್ಷರಾಗಿದ್ದು ಕಾರ್ಖಾನೆಯನ್ನು ಅಭಿವೃದ್ಧಿಪಡಿಸಿದರು. ಇದಕ್ಕಾಗಿ ಇವರಿಗೆ ಕೊಟ್ಟ ಸು. 2 ಲಕ್ಷ ಗೌರವಧನವನ್ನು ದಾನ ಮಾಡಿದರು. ಇದರಿಂದ 1943 ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ತಾಂತ್ರಿಕ ಶಾಲೆ ಅಸ್ತಿತ್ವಕ್ಕೆ ಬಂತು. ಇವರು 1949ರಲ್ಲಿ ಗ್ರಾಮ ಔದ್ಯೋಗೀಕರಣದ ಯೋಜನೆ ಸಿದ್ಧಪಡಿಸಿ ಅದನ್ನು ಭಾರತ ಸರ್ಕಾರಕ್ಕೆ ಒಪ್ಪಿಸಿದರು. ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಸ್ಥಾಪನೆಯಿಂದಲೂ ಆಡಳಿತ ಸಮಿತಿಯ ಸದಸ್ಯರಾಗಿದ್ದು ಆಮೇಲೆ ಅಧ್ಯಕ್ಷರೂ ಆಗಿದ್ದ ಇವರು 1947ರಲ್ಲಿ ತಾವಾಗಿಯೇ ನಿವೃತ್ತರಾದರು. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪನಿಯಲ್ಲಿ 1927ರಿಂದ 28 ವರ್ಷಕಾಲ ಕಂಪನಿಯ ನಿರ್ದೇಶಕರಾಗಿದ್ದರು. ತುಂಗಭದ್ರಾ ಜಲಾಶಯದ ನಿರ್ಮಾಣದಲ್ಲೂ ಇವರ ಅಮೂಲ್ಯ ಸಲಹೆ ಪಡೆಯಲಾಯಿತು. ದೇಶರಕ್ಷಣೆಯ ಭೂ-ಜಲ-ವಾಯುಪಡೆಗಳಿಗೆ ಅಗತ್ಯವಾದ ಶಸ್ತ್ರಾಸ್ತ್ರಗಳು ಇಲ್ಲಿಯೇ ತಯಾರಾಗಬೇಕು, ದೇಶ ಸರ್ವವಿಧದಲ್ಲೂ ಸ್ವಾವಲಂಬಿಯಾಗಬೇಕು ಎಂಬುದೇ ಇವರ ಬಯಕೆಯಾಗಿ ಭದ್ರಾವತಿ ಕಬ್ಬಿಣ ಕಾರ್ಖಾನೆ ಮತ್ತು ವಿಮಾನ ಕಾರ್ಖಾನೆ ಅಸ್ತಿತ್ವಕ್ಕೆ ಬಂದವು. ಒಟ್ಟಿನಲ್ಲಿ ಇವರ ಜೀವನ ಚರಿತ್ರೆಯೆಂದರೆ ಕರ್ನಾಟಕ ರಾಜ್ಯದ ಮತ್ತು ಭಾರತದ ಕೈಗಾರಿಕಾ ಪ್ರಗತಿಯ ಇತಿಹಾಸವನ್ನೋದಿದಂತೆ. ಇವರ ಸಲಹೆ, ಸಹಕಾರ ಮತ್ತು ಉತ್ತೇಜನದಿಂದ ಇಂದು ಅನೇಕ ಕೈಗಾರಿಕೆಗಳೂ ಕಾರ್ಖಾನೆಗಳೂ ಉಳಿದು ಬೆಳೆದು ಬಂದಿವೆ.

ಇವರು ಗಾಂಧೀಜಿ, ಗೋಖಲೆಯಂತಹ ಮಹನೀಯರ ಸ್ನೇಹ ಸಂಪಾದಿಸಿದ್ದರು. ಪ್ರಪಂಚಾದ್ಯಂತ ಇವರಿಗೆ ಅನೇಕ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟೊರೇಟ್ ಪದವಿ ಇತ್ತು ಸನ್ಮಾನಿಸಿದ್ದವು. ಅವುಗಳಲ್ಲಿ ಇವರ ಆಡಳಿತಾವಧಿಯಲ್ಲಿ ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯವೂ ಒಂದು. 1911ರಲ್ಲಿ ಸಿ.ಐ.ಇ. ಬಿರುದನ್ನೂ 1915ರಲ್ಲಿ ಕೆ.ಸಿ.ಐ.ಇ. ಬಿರುದನ್ನೂ ಕೊಟ್ಟು ಬ್ರಿಟಿಷ್ ಸರ್ಕಾರ ಇವರನ್ನು ಗೌರವಿಸಿತು. 1955ರಲ್ಲಿ ಬಂಗಾಲದ ರಾಯಲ್ ಏಷ್ಯಾಟಿಕ್ ಸೊಸೈಟಿ ದುರ್ಗಾ ಪ್ರಸಾದ್ ಖೈತಾನ್ ಸುವರ್ಣ ಪದಕವನ್ನು ಕೊಟ್ಟು ಗೌರವಿಸಿತು. ಅದೇ ವರ್ಷ ಭಾರತರತ್ನ ಪ್ರಶಸ್ತಿಯನ್ನು ನೀಡಿ ಭಾರತ ಸರ್ಕಾರ ಇವರನ್ನು ಗೌರವಿಸಿತು. 1960 ಸೆಪ್ಟೆಂಬರ್ 15ರಂದು ಭಾರತಾದ್ಯಂತ ಇವರ ಶತಮಾನೋತ್ಸವವನ್ನು ಆಚರಿಸಿ ಇವರಿಗೆ ಗೌರವ ಸಮರ್ಪಿಸಲಾಯಿತು.

ಅತ್ಯಂತ ದಕ್ಷ, ವಿಚಕ್ಷಣ, ತೀಕ್ಷ್ಣಮತಿಯಾದ ಇವರು ತಮ್ಮ ಇಡೀ ಜೀವಮಾನವನ್ನೇ ಶಿಸ್ತಿಗೆ ಒಳಪಡಿಸಿಕೊಂಡಿದ್ದರು. ಎಂದೂ ನೀತಿ-ನಿಯಮಗಳನ್ನು ತಪ್ಪುತ್ತಿರಲಿಲ್ಲ. ಇವರು 1962 ಏಪ್ರಿಲ್ 14ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಇವರ ಹುಟ್ಟೂರು ಮುದ್ದೇನಹಳ್ಳಿಯಲ್ಲಿ ನಡೆಯಿತು. ಈಗ ಮುದ್ದೇನಹಳ್ಳಿಯಲ್ಲಿ ಇವರ ಹೆಸರಿನಲ್ಲಿ ಶಾಲಾ-ಕಾಲೇಜು ಮತ್ತು ಗ್ರಂಥಭಂಡಾರಗಳನ್ನೂ ವಸ್ತುಸಂಗ್ರಹಾಲಯವನ್ನೂ ಆರಂಭಿಸಲಾಗಿದೆ.

ಇವರು ದಕ್ಷ ಆಡಳಿತಗಾರರೂ ಕಾರ್ಯಕರ್ತರೂ ಆಗಿದ್ದಂತೆಯೇ ಎಂಜಿನಿಯರಿಂಗ್ ವಿಷಯಗಳನ್ನು ಕುರಿತಂತೆ ಉತ್ತಮ ಬರೆಹಗಾರರೂ ಆಗಿದ್ದರು. ಇವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿವೆ. ಇವರ ಜೀವನ ಮತ್ತು ಸಾಧನೆಗಳನ್ನು ಕುರಿತಂತೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅನೇಕ ಗ್ರಂಥಗಳು ಪ್ರಕಟವಾಗಿವೆ. (ವಿ.ಎಸ್.ಎನ್.)

**ವಿಶ್ವಸಂಸ್ಥೆ:** 1945 ಅಕ್ಟೋಬರ್ 24 ರಂದು ಅಧಿಕೃತವಾಗಿ ಸ್ಥಾಪಿತವಾದ ಅಂತಾರಾಷ್ಟ್ರೀಯ ಸಂಸ್ಥೆ(ಯುನೈಟೆಡ್ ನೇಷನ್ಸ್ ಆರ್ಗನೈಸೇಷನ್ಸ್-ಯುಎನ್‌ಒ). ಒಂದನೆಯ ಮಹಾಯುದ್ಧದ ಅನಂತರ ಸ್ಥಾಪಿಸಲಾಗಿದ್ದ ಲೀಗ್ ಆಫ್ ನೇಷನ್ಸ್‌ನ(ರಾಷ್ಟ್ರ ಸಂಘ) ವಿಫಲತೆ ಹಾಗೂ ಎರಡನೆಯ ಮಹಾಯುದ್ಧದ ಘೋರ ಪರಿಣಾಮಗಳನ್ನರಿತು ಮುಂದೆ ಯುದ್ಧಗಳಾಗುವುದನ್ನು ತಡೆಯಲು ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಮತ್ತು ಸುಭದ್ರತೆ ಕಾಪಾಡಿ ಮನುಕುಲದ ಜೀವನಮಟ್ಟ ಸುಧಾರಿಸುವ ಧ್ಯೇಯದೊಂದಿಗೆ ಇದನ್ನು ಸ್ಥಾಪಿಸಲಾಯಿತು. ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್, ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್ ಹಾಗೂ ರಷ್ಯದ ಅಧ್ಯಕ್ಷ ಸ್ಟಾಲಿನ್ ಇದರ ಪ್ರಮುಖ ರೂವಾರಿಗಳು. ಇದರ ತಾತ್ಕಾಲಿಕ ಕೇಂದ್ರ ಕಚೇರಿ ಲೇಕ್‌ಸಕ್ಸಸ್ ಪ್ರದೇಶದಲ್ಲಿತ್ತು, ಅನಂತರ ಜಾನ್ ಡಿ.ರಾಕ್‌ಫೆಲ್ಲರ್ ಎಂಬ ಶ್ರೀಮಂತ ವಿಶಾಲ ನಿವೇಶನವನ್ನು ನ್ಯೂಯಾರ್ಕಿನ ಮ್ಯಾನ್‌ಹಟನ್‌ನಲ್ಲಿ ನೀಡಿದಾಗ ಕಚೇರಿಯನ್ನು ಇಲ್ಲಿಗೆ ವರ್ಗಾಯಿಸಲಾಯಿತು(1951). ಇಂಗ್ಲಿಷ್, ಅರೇಬಿಕ್, ಫ್ರೆಂಚ್, ಸ್ಪ್ಯಾನಿಷ್, ರಷ್ಯನ್ ಹಾಗೂ ಚೀನಿ ಇದರ ಅಧಿಕೃತ ಭಾಷೆಗಳು. ಪ್ರಸ್ತುತ 192 ಸದಸ್ಯ ರಾಷ್ಟ್ರಗಳಿವೆ.

ಸದಸ್ಯ ರಾಷ್ಟ್ರಗಳ ನಡುವೆ ಪರಸ್ಪರ ಸಮಾನತೆ, ಸೌಹಾರ್ದತೆ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಸಮಸ್ಯೆಗಳನ್ನು ಸಹಕಾರತತ್ತ್ವದ ಮೇಲೆ ಬಗೆಹರಿಸಿ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಧೋರಣೆಯನ್ನು ನಿಯಂತ್ರಿಸುವ ಧ್ಯೇಯೋದ್ದೇಶ ಗಳನ್ನು ಇದು ಹೊಂದಿದೆ. ಎಲ್ಲ ಜನಾಂಗಗಳ ಮೂಲಭೂತ ಹಕ್ಕುಗಳನ್ನು ಕಾಪಾಡಿ, ಸಾಮಾಜಿಕ ಪ್ರಗತಿ ಮತ್ತು ಜನತೆಯ ಜೀವನಮಟ್ಟವನ್ನು ಸುಧಾರಿಸುವ ಉದ್ದೇಶ ಇದರದು. ಇದು ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಹಾಗೂ ಸಾರ್ವಭೌಮತ್ವದ ಆಧಾರದ ಮೇಲೆ ತನ್ನ ಸದಸ್ಯ ರಾಷ್ಟ್ರಗಳ ಹಲವು ಕರ್ತವ್ಯಗಳನ್ನು ಪಾಲಿಸಬೇಕಾಗುತ್ತದೆ.

ಇದು ತನ್ನ ಬಹುಮುಖ್ಯ ಕಾರ್ಯಗಳನ್ನು ನಿರ್ವಹಿಸಲು ಆರು ಪ್ರಧಾನ ಸಮಿತಿ ಹಾಗೂ ಉಪಸಮಿತಿಗಳನ್ನು ಹೊಂದಿದೆ.

1. ಸಾಮಾನ್ಯ ಸಭೆ: ಇದು ಇದರ ಪ್ರಧಾನ ಕಾರ್ಯಾಲಯ. ಇದು ಪ್ರಪಂಚದ ಶಾಸಕಾಂಗದ ರೀತಿ ಕಾರ್ಯ ನಿರ್ವಹಿಸುತ್ತದೆ. ಯಾವುದೇ ಶಾಂತಿಪ್ರಿಯ ರಾಷ್ಟ್ರ ಇದರ ಸದಸ್ಯತ್ವ ಪಡೆಯಬಹುದು. ಪ್ರತಿಯೊಂದು ರಾಷ್ಟ್ರಕ್ಕೂ ಕೇವಲ ಒಂದು ಮತ ಚಲಾಯಿಸುವ ಹಕ್ಕಿರುತ್ತದೆ. ಭಾರತ 1945 ಅಕ್ಟೋಬರ್ 30ರಂದು ಇದರ ಸದಸ್ಯತ್ವ ಪಡೆಯಿತು. 1946 ಜನವರಿ 10ರಂದು ಇದರ ಪ್ರಥಮ ಸಾಮಾನ್ಯ ಸಭೆ ನಡೆಯಿತು.



ಕೇಂದ್ರ ಕಚೇರಿ, ನ್ಯೂಯಾರ್ಕ್

2. ಭದ್ರತಾ ಮಂಡಳಿ: ಇದು ಪ್ರಪಂಚದ ಕಾರ್ಯಾಂಗದ ರೀತಿ ಕಾರ್ಯ ನಿರ್ವಹಿಸುತ್ತದೆ. ವಿಶ್ವಶಾಂತಿ ಹಾಗೂ ಭದ್ರತೆ ಕಾಪಾಡುವ ಮೂಲಕ ಮೂರನೆಯ ಮಹಾಯುದ್ಧದ ಸಾಧ್ಯತೆಯನ್ನು ತಡೆಯುವ ಜವಾಬ್ದಾರಿಯನ್ನು ಇದು ಹೊಂದಿದೆ. 5 ಖಾಯಂ ಸದಸ್ಯ ರಾಷ್ಟ್ರಗಳು ಹಾಗೂ 10 ತಾತ್ಕಾಲಿಕ ಸದಸ್ಯ ರಾಷ್ಟ್ರಗಳನ್ನು ಇದು ಒಳಗೊಂಡಿದೆ. ಖಾಯಂ ಸದಸ್ಯ ರಾಷ್ಟ್ರಗಳ ಸದಸ್ಯರಿಗೆ ವಿಟೋ (ಪ್ರಶ್ನಾತೀತ ಪರಮಾಧಿಕಾರ) ಅಧಿಕಾರವಿದೆ.

3. ಆರ್ಥಿಕ ಮತ್ತು ಸಾಮಾಜಿಕ ಮಂಡಳಿ: ಇದು ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ ಹಾಗೂ ಪ್ರಗತಿ ಸಾಧಿಸಲು ಸರಿಯಾದ ಆರ್ಥಿಕ ಮತ್ತು ಸಾಮಾಜಿಕ ವಾತಾವರಣ ನಿರ್ಮಿಸುವ ಗುರಿ ಹೊಂದಿದೆ ಹಾಗೂ ಮಾನವ ಹಕ್ಕುಗಳು, ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸುತ್ತದೆ.

4. ಧರ್ಮದರ್ಶಿ ಮಂಡಳಿ: ಇದು ರಾಷ್ಟ್ರಸಂಘದ ಮ್ಯಾಂಡೇಟ್ ಪದ್ಧತಿಯ ಉತ್ತರಾಧಿಕಾರಿಯಾಗಿದೆ. ಯುದ್ಧದಲ್ಲಿ ನಿರಾಶ್ರಿತರಾದವರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಪ್ರಗತಿ ಸಾಧಿಸಲು ಯತ್ನಿಸುತ್ತದೆ.

5. ಅಂತಾರಾಷ್ಟ್ರೀಯ ನ್ಯಾಯಾಲಯ: ಇದರ ಪ್ರಧಾನ ಕಚೇರಿ ಹಾಲೆಂಡಿನ ಹೇಗ್ ನಗರದಲ್ಲಿದೆ. ಇದು ಅಂತಾರಾಷ್ಟ್ರೀಯ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತದೆ.

6. ಕಾರ್ಯಾಲಯ: ಕೇಂದ್ರ ಕಚೇರಿ ಅಮೆರಿಕದ ನ್ಯೂಯಾರ್ಕ್‌ನಲ್ಲಿದೆ. ಇದು ಸಂಸ್ಥೆಯ ಕಾರ್ಯಕಲಾಪಗಳನ್ನು ನಿರ್ವಹಿಸುತ್ತದೆ. ಕಾರ್ಯದರ್ಶಿ ಇದರ ಮುಖ್ಯಸ್ಥ. ಇದರ ಪ್ರಥಮ ಕಾರ್ಯದರ್ಶಿ ನಾರ್ವೆಯ ಟ್ರೈಗ್ವೆಲೀ (1945–53). ಅನಂತರ ಡ್ಯಾಗ್ ಹ್ಯಾಮರ್ ಶೀಲ್ಡ್ (1953–61), ಮಯನ್ಮಾರ್‌ನ (ಬರ್ಮ) ಉ.ಥಾಂಟ್ (1961–71), ಆಸ್ಟ್ರಿಯದ ಕರ್ಟ್‌ವಾಲ್ಡ್‌ಹೀಮ್ (1971–81), ಪೆರು ದೇಶದ ಪೆರೇಜ್‌ಡಿಕ್ಯೂಲರ್ (1982–91), ಈಜಿಪ್ಟಿನ ಭುಟ್ರೋಸ್ ಘಾಲಿ (1992–96), ಘಾನ ದೇಶದ ಕೋಫಿ ಅನ್ನನ್ (1997–2006) ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಈಗಿನ ಕಾರ್ಯದರ್ಶಿ ದಕ್ಷಿಣ ಕೊರಿಯದ ಬಾಂಕಿಮೂನ್ (2007).

ವಿಶ್ವಸಂಸ್ಥೆ ಹಲವು ಉಪಸಮಿತಿಗಳನ್ನು ಹೊಂದಿದೆ. ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ(ಎಫ್‌ಎಓ), ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೋ), ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಓ), ವಿಶ್ವಕಾರ್ಮಿಕ ಸಂಸ್ಥೆ(ಐಎಲ್‌ಓ), ವಿಶ್ವಹಣಕಾಸುನಿಧಿ(ಐಎಮ್‌ಎಫ್), ವಿಶ್ವನಾಗರಿಕ ವಿಮಾನಯಾನ ಸಾರಿಗೆ ಸಂಸ್ಥೆ (ಐಸಿಎಓ), ವಿಶ್ವಅಣುಶಕ್ತಿ ಸಂಸ್ಥೆ (ಐಎಇಎ), ವಿಶ್ವಬ್ಯಾಂಕ್ ಮುಂತಾದವು.

ವಿಶ್ವಸಂಸ್ಥೆ ಹಲವಾರು ರಾಜಕೀಯ ಸಮಸ್ಯೆಗಳನ್ನು ಬಗೆಹರಿಸುತ್ತಿದೆ. ಇರಾನ್, ಇಂಡೋನೇಷ್ಯ, ಬರ್ಲಿನ್, ಬ್ಲಾಕೇಡ್, ಕೊರಿಯ ಕದನ, ಸೂಯೆಜ್ ಕಾಲುವೆ ಸಮಸ್ಯೆ, ಕಾಂಗೋ ಹಗರಣ, ಪ್ಯಾಲಸ್ತೀನ್ ಸಮಸ್ಯೆ, ವಿಯಟ್ನಾಮ್ ಸಮಸ್ಯೆ, ನಮೀಬಿಯ ಹಾಗೂ ಅಂಗೋಲಗಳ ಸ್ವಾತಂತ್ರ್ಯಗಳಿಕೆ, ದಕ್ಷಿಣ ಆಫ್ರಿಕದ ವರ್ಣಭೇದ ಸಮಸ್ಯೆ ಮುಂತಾದವುಗಳನ್ನು ಬಗೆಹರಿಸಿದೆ. ಇಸ್ರೇಲ್, ಕಾಶ್ಮೀರ, ಇರಾಕ್ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಗಳು ನಡೆದಿವೆ. ತನ್ನ ಅಂಗಸಂಸ್ಥೆಗಳ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಾರಕ ರೋಗಗಳು, ಮಕ್ಕಳ ಯೋಗಕ್ಷೇಮ, ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಸ್ಕೃತಿ ಮತ್ತು ಪರಂಪರೆ ಸಂರಕ್ಷಣೆ, ಪರಿಸರ ಸಂರಕ್ಷಣೆ, ಆಹಾರ ಸಮಸ್ಯೆ, ಕೃಷಿ ಹಾಗೂ ಆರ್ಥಿಕಾಭಿವೃದ್ಧಿಯಂತಹ ಹತ್ತು ಹಲವು ಕಾರ್ಯಗಳನ್ನು ನಿರ್ವಹಿಸುತ್ತಿದೆ. (ಆರ್‌ಕೆ.)

**ವಿಷ್ಣುಕುಂಡಿ:** ಆಂಧ್ರಪ್ರದೇಶದಲ್ಲಿ ಸಾತವಾಹನರ ತರುವಾಯ ಅಧಿಕಾರಕ್ಕೆ ಬಂದ ಒಂದು ರಾಜವಂಶ. ಇವರು ಆಂಧ್ರದ ಕೆಲವು ಭಾಗಗಳಲ್ಲಿ ಸು.375–612ರ ವರೆಗೆ ಆಳಿಕೆ ನಡೆಸಿದರು. ಇವರ ವಂಶಾವಳಿ ಮತ್ತು ಕಾಲಾನುಕ್ರಮಣಿಗಳಲ್ಲಿ ಕೆಲವು ತೊಡಕುಗಳಿವೆ. ಈ ವಂಶದ ಪ್ರಾರಂಭಿಕ ಅರಸ ಇಂದ್ರವರ್ಮ (375–400) ಎಂದು ಭಾವಿಸಲಾಗಿದೆ.

ಈ ವಂಶಜರು ಇಂದಿನ ಕರ್ನೂಲ ಜಿಲ್ಲೆಯ ಶ್ರೀಶೈಲದ ಮೂಲ ನಿವಾಸಿಗಳು ಎಂದು ತಿಳಿದುಬರುತ್ತದೆ. ಇವರ ಶಾಸನಗಳಲ್ಲಿ ತಮ್ಮನ್ನು ಪುರಾಣದಲ್ಲಿ ಉಲ್ಲೇಖಿಸಿರುವ, ಶ್ರೀಪರ್ವತೀಯ ಆಂಧ್ರರು ಎಂದು ಕರೆದುಕೊಂಡಿದ್ದಾರೆ. ಶ್ರೀಪರ್ವತೀಯರು ಚುಟು ಸಾತಕರ್ಣಿಗಳೆಂದೂ ಶ್ರೀಪರ್ವತ ಶ್ರೀಶೈಲವೆಂದೂ ಗುರುತಿಸಲಾಗುತ್ತದೆ. ಇವರು ಬ್ರಹ್ಮಕ್ಷತ್ರ ಕುಲಕ್ಕೆ ಸೇರಿದವರಾಗಿದ್ದು ಇವರಿಗೆ ಶ್ರೀಪರ್ವತೀಯ ಮತ್ತು ಆಂಧ್ರಪತಿ ಎಂಬ ಬಿರುದುಗಳಿದ್ದವು.

ವಿಷ್ಣುಕುಂಡಿಗಳು ರಿಷಿಕ ರಾಜ್ಯದ ಆಧಿಪತ್ಯವನ್ನು ಹೊಂದಿದ್ದರು. ಈ ರಾಜ್ಯ ಇಂದಿನ ಆಂಧ್ರಪ್ರದೇಶದ ಮೆಹಬೂಬನಗರ ಮತ್ತು ನಲ್ಗೊಂಡ ಜಿಲ್ಲೆಗಳ ಪ್ರಾಂತವಾಗಿದ್ದು, ಇದು ಮೌರ್ಯ ಅರಸ ಅಶೋಕನ ರಾಜ್ಯದ ಭಾಗವಾಗಿತ್ತು. ಅನಂತರದಲ್ಲಿ ಕಳಿಂಗದ ಅರಸ ಖಾರವೇಲ ತನ್ನ ಪಟ್ಟಾಭಿಷೇಕದ ಎರಡನೆಯ ವರ್ಷದಲ್ಲಿ, ಬಹುಶಃ ಸಾತಕರ್ಣಿಗಳ ಅಧೀನದಲ್ಲಿದ್ದಾಗ, ಈ ಭಾಗದಲ್ಲಿ ದಂಡೆಯಾತ್ರೆ ಕೈಗೊಂಡ. ಗೌತಮೀಪುತ್ರ ಸಾತಕರ್ಣಿ ಈ ಭಾಗವನ್ನು 2ನೆಯ ಶತಮಾನದಲ್ಲಿ ಆಳುತ್ತಿದ್ದನೆಂದು ಅನಂತರ ಸಾತವಾಹನರ ಸಾಮಂತರಾಗಿಯೇ ಚುಟು ಮತ್ತು ಸಿವಲರು ಪ್ರಾರಂಭದಲ್ಲಿ ಈ ಪ್ರಾಂತದ ಅಧಿಪತಿಗಳಾಗಿ ಅನಂತರ ಸಾತವಾಹನರ ಉತ್ತರಾಧಿಕಾರಿಗಳಾದರೆಂದು ಅವರ ನಾಣ್ಯಗಳ ಆಧಾರಗಳಿಂದ ತರ್ಕಿಸಲಾಗಿದೆ.

ಇಂದ್ರವರ್ಮ ಮತ್ತು ಅವನ ಮಗ ಒಂದನೆಯ ಮಹೇಂದ್ರವರ್ಮರು ಈ ವಂಶದ ಮೊದಮೊದಲ ರಾಜರು. ಇವರಿಬ್ಬರೂ ರಾಜವರ್ಮ ಎಂಬ ವಿಶೇಷಣವನ್ನು ಹೊಂದಿದ್ದರು. ಇಂದ್ರವರ್ಮನ ಮೊಮ್ಮಗ ಗೋವಿಂದವರ್ಮನ ಪತ್ನಿ ಇಂದ್ರವರ್ಮನ ನೆನಪಿಗಾಗಿ ಒಂದು ಬೌದ್ಧ ಚೈತ್ಯಾಲಯವನ್ನು ರಾಜಧಾನಿ ಇಂದ್ರಪುರದಲ್ಲಿ ನಿರ್ಮಿಸಿದಳು. ಇಂದ್ರಪುರ ಇಂದಿನ ನಲ್ಗೊಂಡ ಜಿಲ್ಲೆಯ ರಾಮಣ್ಣಪೇಟೆ ತಾಲ್ಲೂಕಿನ ಇಂದ್ರಪಾಲಗುಟ್ಟ ಎಂದು ಗುರುತಿಸಲಾಗಿದೆ. ಒಂದನೆಯ ಮಾಧವವರ್ಮನ ಆಳಿಕೆಯ ಕಾಲದಲ್ಲಿ ವಾಕಾಟಕ ರಾಜ ಇಮ್ಮಡಿ ರುದ್ರಸೇನನ ಪತ್ನಿ ಪ್ರಭಾವತಿಗುಪ್ತಳು ತನ್ನ ಮಗ ಇಮ್ಮಡಿ ಪ್ರವರಸೇನನಿಗಾಗಿ ವಿಷ್ಣುಕುಂಡಿ ರಾಜ್ಯದ ಮೇಲೆ ಪ್ರಭಾವವನ್ನು ಬೀರಿದಳು. ಪ್ರವರಸೇನನ ಸಹಾಯದಿಂದ ಗೋವಿಂದವರ್ಮ ತನ್ನ ರಾಜ್ಯವನ್ನು ಪೂರ್ವಭಾಗದಲ್ಲಿ ವಿಸ್ತರಿಸಿದ. ವಾಕಾಟಕರ ವತ್ಸಗುಲ್ಮ ಉಪಶಾಖೆಗೆ ಸೇರಿದ ರಾಜ ಪೃಥ್ವಿಮೂಲ ತನ್ನ ಮಗಳು ಪರಮಮಹಾದೇವಿಯನ್ನು ಗೋವಿಂದವರ್ಮನಿಗೆ ವಿವಾಹ ಮಾಡಿಕೊಟ್ಟ. ಗೋವಿಂದವರ್ಮ ಪ್ರಬಲ ರಾಜನಾಗಿದ್ದು ಯುದ್ಧತಂತ್ರಗಳನ್ನು ರೂಪಿಸಬಲ್ಲ ಚತುರನಾಗಿದ್ದ. ಅವನು ಬೌದ್ಧ ಭಿಕ್ಷುಗಳಿಗೆ, ಬ್ರಾಹ್ಮಣ ಮತ್ತು ಇತರರಿಗೆ ಅನೇಕ ದಾನದತ್ತಿಗಳನ್ನು ನೀಡಿದ. ಅನೇಕ ಬೌದ್ಧ ಚೈತ್ಯಾಲಯ ಮತ್ತು ದೇವಾಲಯಗಳನ್ನು ನಿರ್ಮಿಸಿದ ಹಾಗೂ ಹಳೆಯ ಆಲಯಗಳನ್ನು ಜೀರ್ಣೋದ್ಧಾರ ಮಾಡಿದ. ಪ್ರಾರಂಭದಲ್ಲಿ ಈತ ಬೌದ್ಧಮತಕ್ಕೆ ಸೇರಿದ್ದು ಅನಂತರ ಶ್ರೀಶೈಲದ ಮಲ್ಲಿಕಾರ್ಜುನನ ಭಕ್ತನಾದ. ಇವನು ನಾಲ್ಕು ದಶಕಗಳ ಕಾಲ (422–462) ಆಳಿದ.

ಗೋವಿಂದವರ್ಮನ ತರುವಾಯ ಇಮ್ಮಡಿ ಮಹೇಂದ್ರವರ್ಮ ಸು.40 ವರ್ಷಗಳ ಕಾಲ ಅಂದರೆ 502ರ ವರೆಗೆ ಆಳಿದ. ಈ ವಂಶಕ್ಕೆ ಸಂಬಂಧಿಸಿದಂತೆ ದೊರಕಿರುವ ಏಕಮಾತ್ರ ಶಿಲಾಶಾಸನ ಇವನದು. ಇವನ ಸಮಕಾಲೀನನಾದ ವಾಕಾಟಕರ ವತ್ಸಗುಲ್ಮ ಉಪಶಾಖೆಯ ರಾಜ ದೇವಸೇನನು ಸುಖಲೋಲುಪನಾಗಿದ್ದು ರಾಜ್ಯವನ್ನು ಕಡೆಗಣಿಸಿದ ಸಂದರ್ಭವನ್ನು ಉಪಯೋಗಿಸಿಕೊಂಡು ಮಾಧವವರ್ಮ ತನ್ನ ರಾಜ್ಯವನ್ನು ಉತ್ತರ ಮತ್ತು ಆಂಧ್ರದ ಗೋದಾವರಿಯವರೆಗೆ ವಿಸ್ತರಿಸಿಕೊಂಡ. ಪೂರ್ವದಲ್ಲಿ ಸಾಲಂಕಾಯನರನ್ನು ಸದೆಬಡಿದು ವೆಂಗಿ ಪ್ರದೇಶದ ದಕ್ಷಿಣದಲ್ಲಿ ಗುಂಟೂರು, ನೆಲ್ಲೂರು ದೇಶಗಳನ್ನು ಜಯಿಸಿದ. ಗೆದ್ದ ಪ್ರಾಂತಗಳಲ್ಲಿ ಈತ ತನ್ನ ಮಕ್ಕಳನ್ನು ಪ್ರಾಂತಾಧಿಕಾರಿಯನ್ನಾಗಿ ನಿಯಮಿಸಿದ. ಪಲ್ಲವ ವಂಶದ ಒಂದನೆಯ ಸ್ಕಂದವರ್ಮ ಅಥವಾ ಅವನ ಮಗ ವೀರವರ್ಮ ನೊಂದಿಗೆ ಮಾಧವವರ್ಮ ನಿರ್ಣಾಯಕ ಯುದ್ಧ ಮಾಡಿದ. ಇದೇ ರಾಜ ಶ್ರೀಕಾಕುಳಂ ಪ್ರಾಂತದ ಪೀಠಾಪುರ ಮತ್ತು ಪೂರ್ವಗೋದಾವರಿ ಪ್ರಾಂತಗಳನ್ನು ಸಹ ತನ್ನದಾಗಿಸಿಕೊಂಡ. ಇವನು ವಾಕಾಟಕ ರಾಜ ಇಮ್ಮಡಿ ಪ್ರವರಸೇನನ ಮಗಳನ್ನು ಹಾಗೂ ಮಾನ್ಯಪುರದ

ರಾಷ್ಟ್ರಕೂಟ ರಾಜ ದೇವರಾಜನ ಮಗಳನ್ನು ಮದುವೆಯಾದ. ದೇವವರ್ಮ ಮತ್ತು ಮಂಚಣ್ಣಭಟ್ಟಾರಕ ಈ ರಾಜನ ಮಕ್ಕಳು. ಮಾಧವವರ್ಮ ರಾಜ್ಯ ವಿಸ್ತರಣೆಯೊಂದಿಗೆ ಹನ್ನೊಂದು ಅಶ್ವಮೇಧ, ಬಾಹುಸುವರ್ಣ ಮತ್ತು ಪೌಂಡರಿಕ ಎಂಬ ಯಾಗಗಳನ್ನು ಮಾಡಿದ.

ವಾಕಾಟಕ ಅರಸಿಯ ಮಗನಾದ ಒಂದನೆಯ ವಿಕ್ರಮಾದಿತ್ಯ ಇಮ್ಮಡಿ ಮಾಧವವರ್ಮನ ಉತ್ತರಾಧಿಕಾರಿಯಾಗಿ 25 ವರ್ಷಗಳ ಕಾಲ (502–27) ಆಳಿದ. ಇವನನ್ನು ಸುಗತನ ಭಕ್ತನೆಂದು ಕರೆಯಲಾಗಿದೆ. ಇವನು ಬೌದ್ಧ ಮತ್ತು ಹಿಂದು ಧರ್ಮಗಳನ್ನು ಪೋಷಿಸಿದ. ಈತನ ಸಾಹಿತ್ಯಕ ಪ್ರತಿಭೆ–ಸಾಮರ್ಥ್ಯಕ್ಕಾಗಿ ಇವನನ್ನೂ ಮಹಾಕವಿ ಎಂದು ವರ್ಣಿಸಲಾಗುತ್ತದೆ. ಇವನು ದುರ್ಬಲ ಆಡಳಿತಗಾರನಾಗಿದ್ದರಿಂದ ವಾಕಾಟಕರ ವತ್ಸಗುಲ್ಮ ಉಪಶಾಖೆಯ ಹರಿಸೇಣನಿಂದ ಸೋತ. ದೇವವರ್ಮನ ಮಗ ಮುಮ್ಮಡಿ ಮಾಧವವರ್ಮ ಮುಂದಿನ ರಾಜನಾದ. ಈತನಿಗೂ ವಾಕಾಟಕ ಹರಿಸೇಣನಿಗೂ ಉತ್ತಮ ಬಾಂಧವ್ಯವಿದ್ದು, ಅವನ ದಂಡಯಾತ್ರೆಗಳಲ್ಲಿ ಭಾಗಿಯಾದನು. ಇದರ ಪರಿಣಾಮವಾಗಿ ಇವನು ತ್ರಿಕೂಟ ಮಚಲಿಪಟ್ಟಣದ ಸುತ್ತಲಿನ ಮಲಯದ ಪ್ರಾಂತ ಅಧಿಪತಿಯಾದ. ಆನಂದರು ವಶಪಡಿಸಿಕೊಂಡಿದ್ದ ಕಂದಾಪುರ ಪ್ರಾಂತವನ್ನು (ಚೇಜರ್ಲ ಪ್ರಾಂತ) ಸಹ ತನ್ನದಾಗಿಸಿಕೊಂಡ.

ವಿಷ್ಣುಕುಂಡಿ ಮೂಲ ವಂಶದ ರಾಜ ವಿಕ್ರಮೇಂದ್ರವರ್ಮನ ಮಗ ಇಮ್ಮಡಿ ಇಂದ್ರಭಟ್ಟಾರ ಕವರ್ಮನು 527ರಲ್ಲಿ ಪಟ್ಟಕ್ಕೆ ಬಂದ. ದಾಯಾದಿಯ ಪ್ರಾಬಲ್ಯವನ್ನು ಇವನು ದಮನಗೊಳಿಸಿ ಬಂಡೆದ್ದ ಪೃಥ್ವಿಮೂಲನನ್ನು ಸದೆಬಡಿದ. ಗಜಸೈನ್ಯವನ್ನು ಸಜ್ಜುಗೊಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ನಾಯಕರಾದ ರಾಮಕಾಶ್ಯಪ, ಪಿತೃಭಕ್ತ, ಮತಾರ ಮತ್ತು ವಸಿಷ್ಠ ವಂಶದವರು ಪೃಥ್ವಿಮೂಲನೊಂದಿಗೆ ಷಡ್ಯಂತ್ರ ರಚಿಸಿ ಇಂದ್ರಭಟ್ಟಾರಕನನ್ನು ಪ್ರಾರಂಭದಲ್ಲಿ ಸೋಲಿಸಿದ. ಅನಂತರ ಇಂದ್ರಭಟ್ಟಾರಕ ಅವರನ್ನು ಸಂಪೂರ್ಣವಾಗಿ ನಾಶಗೊಳಿಸಿದ. ಆದರೆ ಮೌಖಾರಿಯ ಅರಸ ಈಶಾನವರ್ಮನಿಂದ ಈತ ಸೋಲುಕಂಡ. ಮೂಲವಂಶದ ರಾಜ್ಯವನ್ನು ಮೊದಲಿನಂತೆ ಪುನರುಜ್ಜೀವನಗೊಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ.

ಇವನೊಂದಿಗೆ ವಿಷ್ಣುಕುಂಡಿಗಳ ಪ್ರಾಬಲ್ಯ ಕುಂಠಿತವಾಗುತ್ತದೆ. ಇವನ ಉತ್ತರಾಧಿಕಾರಿ ಗಳಾದ ಇಮ್ಮಡಿ ವಿಕ್ರಮೇಂದ್ರವರ್ಮ ಮತ್ತು ಅಳಿಯ ನಾಲ್ವಡಿ ಮಾಧವವರ್ಮರು ತಮ್ಮ ರಾಜ್ಯದ ವೆಂಗಿ ಮೇಲಿನ ಪಲ್ಲವ ಅರಸ ಸಿಂಹವರ್ಮನ ಧಾಳಿಯನ್ನು ತಡೆಯಲಾಗಲಿಲ್ಲ. ಆದರೆ ಇಮ್ಮಡಿ ವಿಕ್ರಮೇಂದ್ರವರ್ಮ ಪಲ್ಲವರನ್ನು ಅಲ್ಲಿಂದ ಹಿಂತೆಗೆಯುವಂತೆ ಮಾಡಿದ. ಇವನ ಮಗಳನ್ನು ಮೂಲ ಪಲ್ಲವ ವಂಶದ ಅರಸ ಸಿಂಹವಿಷ್ಣುವಿಗೆ ವಿವಾಹ ಮಾಡಿಕೊಡಲಾಯಿತು. ಪಲ್ಲವ ಉಪಶಾಖೆಯ ನೆಲ್ಲೂರಿನ ಸಿಂಹವರ್ಮ ಮತ್ತು ಗುಂಟೂರು ಪ್ರದೇಶದ ವಿಷ್ಣುಗೋಪರನ್ನು ಈತ ಸದೆಬಡಿದ.

ಗೋವಿಂದವರ್ಮನ ಮಗ ಹಾಗೂ ವಿಕ್ರಮೇಂದ್ರವರ್ಮನ ಮಗ ಮತ್ತು ಸಹೋದರ ನಾಲ್ವಡಿ ಮಾಧವವರ್ಮ ಈ ವಂಶದ ಕೊನೆಯ ರಾಜ. ಇವನು ತನ್ನ ತಾತ ಇಮ್ಮಡಿ ಮಾಧವವರ್ಮನಂತೆ ಅಶ್ವಮೇಧ ಮತ್ತು ಇತರ ಯಾಗಗಳನ್ನು ನಡೆಸಿದ. ತನ್ನ ರಾಜಧಾನಿಯನ್ನು ತಿವರ ನಗರಕ್ಕೆ ವರ್ಗಾಯಿಸಿದ. ಇವನು ತನ್ನ ರಾಜ್ಯದ ಪೂರ್ವದ ಪ್ರದೇಶಕ್ಕೆ ದಂಡೆತ್ತಿ ಹೋದನು; ಅದು ಕಳಿಂಗ ಇರಬಹುದು. ಈ ದಂಡಯಾತ್ರೆಗಾಗಿ 612ರಲ್ಲಿ ಗೋದಾವರಿ ನದಿಯನ್ನು ದಾಟಿದ ಎನ್ನಲಾಗುತ್ತದೆ. ನಾಲ್ಕು ವರ್ಷಗಳ ತರುವಾಯ ಬಾದಾಮಿ ಚಳುಕ್ಯ ಅರಸ ಇಮ್ಮಡಿ ಪುಲಕೇಶಿ ವೆಂಗಿ ಪ್ರದೇಶವನ್ನು ಆಕ್ರಮಿಸಿದ ಪೃಥ್ವಿ ಯುವರಾಜನನ್ನು ಕೊಲ್ಲೇರು ಸರೋವರದ ಬಳಿ ಎದುರುಗೊಂಡ. ಈ ಆಕ್ರಮಣದಲ್ಲಿಯೇ ವಿಷ್ಣುಕುಂಡಿಯ ಅರಸ ಮಡಿದ. ಇದರೊಂದಿಗೆ ಈ ವಂಶ ಸಂಪೂರ್ಣವಾಗಿ ಕಣ್ಮರೆಯಾಯಿತು.

ಹಲವಾರು ಸ್ತೂಪ ಮತ್ತು ವಿಹಾರಗಳನ್ನು ರಾಜರು ಮತ್ತು ಅವರ ಕುಟುಂಬದವರು ನಿರ್ಮಿಸಿ, ದಾನ ದತ್ತಿಗಳನ್ನು ನೀಡಿದರೆಂದು ಇಕ್ಷ್ವಾಕು ಅರಸರ ಶಾಸನಗಳಿಂದ ತಿಳಿದುಬರುತ್ತದೆ. ಇದರ ಪರಿಣಾಮವಾಗಿ ಬೌದ್ಧ ಶಿಲ್ಪಕಲೆಗೆ ಪ್ರೋತ್ಸಾಹ – ಪೋಷಣೆ ದೊರೆತು ಅಮರಾವತಿ ಶೈಲಿಯ ಪ್ರಗತಿಗೆ ಕಾರಣವಾಯಿತು. ನಾಗಾರ್ಜುನಕೊಂಡ ಬೌದ್ಧರ ಪ್ರಸಿದ್ಧ ಮತ್ತು ಪ್ರಮುಖ ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿತು. (ಸಿ.ಎಸ್.ವಿ.)

**ವೀಲರ್, ಮಾರ್ಟಿಮರ್ ಸರ್:** 1890–1976. 20ನೆಯ ಶತಮಾನದ ಹೆಸರಾಂತ ಬ್ರಿಟಿಷ್ ಪುರಾತತ್ತ್ವಜ್ಞ. ಇವನು ಗ್ಲ್ಯಾಗೊ ಪಟ್ಟಣದಲ್ಲಿ 1890 ಸೆಪ್ಟೆಂಬರ್ 10 ರಂದು ಜನಿಸಿದ. ಬ್ರಾಡ್‌ಫೋರ್ಡ್ ಗ್ರಾಮರ್ ಶಾಲೆ ಮತ್ತು ಲಂಡನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ನಡೆಸಿದ. 1912ರಲ್ಲಿ ಎಂ.ಎ. ಪದವಿಯನ್ನು ಪಡೆದ ಅನಂತರ ಪುರಾತತ್ತ್ವಶಾಸ್ತ್ರದ ವಿದ್ಯಾರ್ಥಿ ವೇತನವನ್ನು ಪಡೆದು ಅಧ್ಯಯನವನ್ನು ಮುಂದುವರೆಸಿದ. 1913ರಿಂದ ರಾಯಲ್ ಕಮಿಷನ್ ಆನ್ ಹಿಸ್ಟಾರಿಕಲ್ ಮಾನ್ಯುಮೆಂಟ್ಸ್ (ಇಂಗ್ಲೆಂಡ್) ಈ ಸಂಸ್ಥೆಯಲ್ಲಿ ಕೆಲಸ ಮೊದಲು ಆರಂಭಿಸಿದ. 1919ರ ಅನಂತರ ಒಂದನೆಯ ಮಹಾಯುದ್ಧದ ಸಮಯದಲ್ಲಿ ರಾಯಲ್ ಆರ್ಟಿಲರಿ ಸೈನ್ಯದಲ್ಲಿ ಸೇವೆ ಸಲ್ಲಿಸಿದ.

1920–26ರಲ್ಲಿ ನ್ಯಾಷನಲ್ ಮ್ಯೂಸಿಯಂ ಆಫ್ ವೇಲ್ಸ್ ಇದರ ನಿರ್ದೇಶಕ, 1926–44ರಲ್ಲಿ ಲಂಡನ್ ಮ್ಯೂಸಿಯಂನಲ್ಲಿ ಮೇಲ್ವಿಚಾರಕ. ಈ ಅವಧಿಯಲ್ಲಿ ಬ್ರಿಟನ್ನಿನಲ್ಲಿ ಕೆಲವು ದೊಡ್ಡ ದೊಡ್ಡ ಉತ್ಖನನಗಳನ್ನು ನಡೆಸಿದ. ಈ ಉತ್ಖನನಗಳಲ್ಲಿ ಚೌಕೋನಗಳ ಜಾಲ ಮತ್ತು ಪದರ ವಿಧಾನ ಕ್ರಮ ಬಳಕೆಗೆ ತಂದ. ಈ ಕ್ರಮವನ್ನು ಕೆಥಲಿನ್ ಕೆನ್ಯಾನ್ ಸುಧಾರಿಸಿದ. ಆದ್ದರಿಂದ ಈ ಕ್ರಮವನ್ನು ವೀಲರ್ ಕೆನ್ಯಾನ್ ವಿಧಾನವೆಂದು ಹೆಸರಿಸಲಾಗಿದೆ. ಪುರಾತತ್ತ್ವಜ್ಞರಾದ ಅಗಸ್ಟಸ್ ಪಿಟ್ ರಿವರ್ಸ್‌ನ ಪ್ರಭಾವ ವೀಲರ್ ಮೇಲೆ ಗಾಢವಾಗಿತ್ತು. ಪುನಃ 1933–1944ರಲ್ಲಿ ಎರಡನೆಯ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿ ಸೈನ್ಯ ವೃತ್ತಿಯಿಂದ ನಿವೃತ್ತನಾದ.

1944–48ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾ ನಿರ್ದೇಶಕ ನಾಗಿದ್ದ. ಈ ಅವಧಿಯಲ್ಲಿ ಭಾರತದ ಪುರಾತತ್ತ್ವ ಕ್ಷೇತ್ರದ ಮೂರು ವಿಭಾಗದಲ್ಲಿ ಅನುಪಮ ಸೇವೆಯನ್ನು ಸಲ್ಲಿಸಿದ. ಮೊದಲನೆಯದಾಗಿ ಇವನು ಆಗ ದೇಶದಾದ್ಯಂತ ನಡೆಯುತ್ತಿದ್ದ ಪುರಾತತ್ತ್ವ ಅಧ್ಯಯನಗಳನ್ನೆಲ್ಲ ಸಮನ್ವಯ ಮಾಡಿ ಪ್ರಧಾನ ವಿಷಯ ಮತ್ತು ಸಮಸ್ಯೆಗಳನ್ನು

ಗುರುತಿಸಿ ಅವುಗಳಲ್ಲಿ ಇಡಿ ದೇಶಕ್ಕೆ ಅನ್ವಯವಾಗುವಂತೆ ಮೂರು ಪ್ರಧಾನ ವಿಷಯಗಳನ್ನು ಗುರುತಿಸಿ ಅವುಗಳಿಗೆ ಸಂಬಂಧಿಸಿದ ನೆಲೆಗಳ ಉತ್ಖನನ ಮತ್ತು ವರದಿ ಪ್ರಕಟಿಸಿದ. ಈ ನೆಲೆಗಳು ಸಿಂಧೂ ಬಯಲಿನ ನಾಗರಿಕತೆಯ ನೆಲೆಯಾದ ಹರಪ್ಪ, ರೋಮನ್ ದೇಶದ ವ್ಯಾಪಾರ ಕೇಂದ್ರವಾಗಿದ್ದ ಅರಿಕಮೇಡು ಮತ್ತು ಮುಖ್ಯವಾಗಿ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ಕಾಲಮಾನ ಮತ್ತು ಈ ಜನರ ವಿಶಿಷ್ಟ ಜೀವನ ಶೈಲಿ ತಿಳಿಯಲು ಸಹಾಯಕವಾಗಬಹುದಾದ ಬ್ರಹ್ಮಗಿರಿ (ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ)ಯಾಗಿವೆ. ಎರಡನೆಯದಾಗಿ ಉತ್ಖನನ ಮತ್ತು ಇತರ ಪುರಾತತ್ತ್ವ ವಿಷಯಗಳಲ್ಲಿ ಭಾರತೀಯ ಯುವ ಪದವೀಧರರಿಗೆ ಅಚ್ಚುಕಟ್ಟಾದ ತರಬೇತಿ ನೀಡಿದುದು. ಇವನ ಅನಂತರ ಭಾರತೀಯರೇ ಪುರಾತತ್ತ್ವ ಸಂಶೋಧನೆ, ಸಂರಕ್ಷಣೆ ಮೊದಲಾದ ಜವಾಬ್ದಾರಿಗಳನ್ನು ಕ್ರಮಬದ್ಧವಾಗಿ, ಪರಿಣಾಮಕಾರಿಯಾಗಿ ನಡೆಸುವಂತಾದರು ಮತ್ತು ಕಾಲಕಾಲದ ತರಬೇತಿ ವರ್ಗವೆ ಮುಂದೆ ಸ್ಕೂಲ್ ಆಫ್ ಆರ್ಕಿಯಾಲಜಿ (ಈಗ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿ) ಎಂದು ಬೆಳೆದಿದೆ. ಮೂರನೆಯದಾಗಿ ಉತ್ಖನನ ವಿಧಾನದಲ್ಲಿ ಪ್ರಪ್ರಥಮವಾಗಿ ಅತಿ ಅವಶ್ಯವಾದ ಪದರ ಶಾಸ್ತ್ರ ಕ್ರಮವನ್ನು ಅನುಸರಿಸುವಿಕೆ (ಸ್ಟ್ರಾಟಿಗ್ರಾಫಿಕ್ ಮೆಥಡ್).

ಪುರಾತತ್ತ್ವ ಸಂಶೋಧನೆ ದೃಷ್ಟಿಯಿಂದ ವೀಲರ್ ಹರಪ್ಪ ನೆಲೆಯ ಉತ್ಖನನದ ಫಲಿತಾಂಶದ ಹಿನ್ನೆಲೆಯಲ್ಲಿ ಈ ನಾಗರಿಕತೆಯನ್ನು ಆರ್ಯ ಜನಾಂಗದವರೆ ಧ್ವಂಸ ಮಾಡಿದರೆಂದು ತೀಕ್ಷ್ಣವಾಗಿ ಪ್ರತಿಪಾದನೆ ಮಾಡಿದ. ಈ ಪ್ರತಿಪಾದನೆ ಸು.40ವರ್ಷಗಳ ಕಾಲ ಇತಿಹಾಸ ಕ್ಷೇತ್ರದಲ್ಲಿ ಬಲವಾಗಿ ಬೇರೂರಿತ್ತು. ಅನಂತರದ ಸಂಶೋಧನೆಗಳಿಂದ ಇದು ತಪ್ಪಾಗಿ ಕಂಡು ಬಂದಿದೆ. ಈಗ ಈ ಪ್ರಮೇಯವನ್ನು ಕೈ ಬಿಡಲಾಗಿದೆ. ಹೀಗೆಯೆ ಬ್ರಹ್ಮಗಿರಿಯಲ್ಲಿ ಮೊದಲು ಈ ನೆಲೆಯಲ್ಲಿ ಆಗಿನ ಮೈಸೂರು ಸರ್ಕಾರದ ಪುರಾತತ್ತ್ವ ಇಲಾಖೆಯ ನಿರ್ದೇಶಕ ಎಂ.ಎಚ್.ಕೃಷ್ಣ ನಡೆಸಿದ ಉತ್ಖನನದ ಫಲಿತಾಂಶಗಳನ್ನು ಅನುಲಕ್ಷಿಸಿ ವೀಲರ್ ಇಲ್ಲಿ ಉತ್ಖನನವನ್ನು ಮುಂದುವರೆಸಿದ. ಈ ಉತ್ಖನನದ ಫಲಿತಾಂಶಗಳು ಹಿಂದೆ ಕೃಷ್ಣರವರ ಶೋಧನೆಗಳನ್ನೆ ದೃಢೀಕರಿಸಿದ್ದರೂ ಇದರ ಸೂಚನೆಯೂ ಇವನ ವರದಿಯಲ್ಲಿ ಇಲ್ಲದುದರಿಂದ ವೀಲರನ ಶೋಧನೆಗಳಷ್ಟೆ ಪುರಾತತ್ತ್ವವಿದರ ತಿಳುವಳಿಕೆಯಲ್ಲಿ ಇತ್ತೀಚಿನ ವರೆಗೂ ಇತ್ತು. ಇವನ ವ್ಯಕ್ತಿತ್ವ ಮತ್ತು ಪ್ರಶ್ನಾತೀತವೆಂಬಂತೆ ತಿಳಿಯಲಾಗಿದ್ದ ಇವನ ಪ್ರಮೇಯ ಗಳ ಪ್ರಭಾವ ಪುರಾತತ್ತ್ವವಿದರ ಮೇಲೆ ಕನಿಷ್ಠ ಎರಡು ದಶಕಗಳವರೆಗೆ ಗಾಢವಾಗಿತ್ತು. ಇವನ ಕಾಲದಲ್ಲಿ ವಾದಗ್ರಸ್ತವಾದ ಇಲ್ಲಿಯ ಸಂಸ್ಕೃತಿಗಳ ಅನಿಶ್ಚಿತ ಕಾಲಮಾನಗಳ ಬಗ್ಗೆ ಪ್ರಥಮವಾಗಿ ಕ್ರಮಬದ್ಧವಾಗಿ ಕಾಲಮಾನಗಳನ್ನು ನಿರ್ಧರಿಸಿದುದು ಒಂದು ಮಹತ್ತ್ವದ ಕೊಡುಗೆಯೆಂದೇ ಹೇಳಬೇಕು. ಇವನ ಉತ್ಖನನದ ಕ್ರಮ, ವಿಧಾನ ಮತ್ತು ಅತ್ಯಂತ ವ್ಯವಸ್ಥಿತವಾಗಿ ಸಂಗ್ರಹಿಸಿದ ವಸ್ತು ಅವಶೇಷಗಳು ಉತ್ಖನನಕಾರರಿಗೆ ಒಂದು ಉತ್ತಮ ಮಾದರಿಯಾಯಿತು.

1948ರಲ್ಲಿ ಇವನು ಲಂಡನ್ನಿಗೆ ಹಿಂದಿರುಗಿದ ಅನಂತರ ಇಲ್ಲಿಯ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿಯಲ್ಲಿ ಪ್ರಾಧ್ಯಾಪಕನಾಗಿ ನಿಯೋಜಿತನಾದ. 1949–50ರಲ್ಲಿ ಪಾಕಿಸ್ತಾನದಲ್ಲಿ ಪುರಾತತ್ತ್ವ ಇಲಾಖೆ ಮತ್ತು ರಾಷ್ಟ್ರೀಯ ಸಂಗ್ರಹಾಲಯವನ್ನು ಸ್ಥಾಪಿಸಲು ಸರ್ಕಾರಕ್ಕೆ ಸಲಹೆಗಾರನಾಗಿದ್ದ.

ಈತ ಫೈವ್ ಥೌಸಂಡ್ ಇಯರ್ಸ್ ಆಫ್ ಪಾಕಿಸ್ತಾನ್ (1950), ಆರ್ಕಿಯಾಲಜಿ ಫ್ರಂ ಅರ್ತ್ (1954), ರೋಮನ್ ಆರ್ಟ್ ಆಂಡ್ ಆರ್ಕಿಟೆಕ್ಚರ್ (1964), ಸಿವಿಲೈಜೇಷನ್ಸ್ ಆಫ್ ದಿ ಇಂಡಸ್ ವ್ಯಾಲಿ ಮೊದಲಾದ ಮೌಲಿಕ ಗ್ರಂಥಗಳನ್ನು ಬರೆದಿದ್ದಾನೆ. ಈತ ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಪುರಾತತ್ತ್ವ ನೆಲೆ–ಸ್ಮಾರಕಗಳ ಐತಿಹಾಸಿಕ ಮಹತ್ತ್ವದ ವಿಷಯಗಳು ಜನ ಸಾಮಾನ್ಯರಿಗೂ ತಲುಪುವಂತೆ ಮಾಡಲು ಪ್ರಾಣಿಗಳು,

ಸಸ್ಯಗಳು ಮತ್ತು ಲೋಹ ಸಂಪತ್ತು, ಭೂಗತ ನಿಕ್ಷೇಪ ಮತ್ತು ಕಾಲಮಾನ ಈ ಐದು ಮಾಲಿಕೆಗಳನ್ನು ರಚಿಸಿ ಪ್ರಸರಿಸಿದ. ಇವು ಎಷ್ಟು ಜನಪ್ರಿಯವಾಯಿತೆಂದರೆ 1954ರಲ್ಲಿ ಬ್ರಿಟಿಷ್ ಟಿ.ವಿ. ಇವನನ್ನು ಪರ್ಸನಾಲಿಟಿ ಆಫ್ ದಿ ಇಯರ್ ಎಂದು ಗುರುತಿಸಿತು.

ಇವನ ವಿಶಿಷ್ಟ ಸೇವೆಯನ್ನು ಗಮನಿಸಿ ಬ್ರಿಟಿಷ್ ಸರ್ಕಾರ ಇವನಿಗೆ ನೈಟ್ ಪದವಿ ನೀಡಿತು. ಇವನು 1914ರಲ್ಲಿ ತೆಸ್ಸ ವೆರ್‌ನೆಯನ್ನು ವಿವಾಹವಾದ. 1915 ಮಗ ಮೈಕಲ್ ಜನನ, 1936ರಲ್ಲಿ ಪತ್ನಿ ತೆಸ್ಸ ನಿಧನಳಾದಳು. 1945ರಲ್ಲಿ ಮಾರ್ಗರೇಟ್ ಎಂಬಾಕೆಯನ್ನು ಸಿಮ್ಲಾದಲ್ಲಿ ವಿವಾಹವಾದ. ಇವನು 1976 ಜುಲೈ 22ರಂದು ಲಂಡನ್‌ನಲ್ಲಿ ನಿಧನನಾದ. (ಎ.ಎಸ್.)

**ವೆಂಕಟರತ್ನಂ, ಎ.ವಿ.:** 1924–2008. ಹೆಸರಾಂತ ಇತಿಹಾಸಕಾರರು. ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ರೂವಾರಿಗಳಲ್ಲಿ ಪ್ರಮುಖರು. ಇವರದು ಹಳೆಯ ಮೈಸೂರಿನ ಗೌರವಾನ್ವಿತ ಅಂಬಳೆ ಮನೆತನ. ತಂದೆ ವೆಂಕಟಸುಬ್ಬಯ್ಯ, ತಾಯಿ ಸೀತಾಲಕ್ಷ್ಮಮ್ಮ. ಇವರು 1924 ಏಪ್ರಿಲ್ 17ರಂದು ಮೈಸೂರಿನಲ್ಲಿ ಜನಿಸಿದರು. ಮೈಸೂರಿನ ಬನುಮಯ್ಯ ಶಾಲೆಯಲ್ಲಿ ಪ್ರೌಢಶಿಕ್ಷಣ ಮತ್ತು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ (ಇತಿಹಾಸ) ಪದವಿ ಪಡೆದರು. ಅನಂತರ ಮೈಸೂರು ವಿಶ್ವವಿದ್ಯಾನಿಲಯದಿಂದ ಇತಿಹಾಸ ವಿಷಯದಲ್ಲಿ ಎಂ.ಎ. ಪದವಿ ಪಡೆದರು (1947). ವಿದ್ಯಾರ್ಥಿ ದೆಸೆಯಲ್ಲೆ ತಮ್ಮ ಮಾತುಗಾರಿಕೆ, ಪ್ರತಿಭೆಗಳಿಂದ ಗುರುವೃಂದದವರ ಮೆಚ್ಚುಗೆಗೆ ಪಾತ್ರರಾಗಿದ್ದರು. ಹೆಸರಾಂತ ವಿದ್ವಾಂಸರಾದ ಎಂ.ಎಚ್.ಕೃಷ್ಣ, ಕೆ.ಎನ್.ವಿ.ಶಾಸ್ತ್ರಿ, ಶ್ರೀಕಂಠಶಾಸ್ತ್ರಿ, ಬಿ.ಎನ್.ಕೃಷ್ಣಯ್ಯಂಗಾರ್ ಮೊದಲಾದವರು ಇವರ ಗುರುಗಳಾಗಿದ್ದರು. ಜಿ.ಎಸ್.ದೀಕ್ಷಿತ್ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು.

ಇವರು ಸ್ವಲ್ಪಕಾಲ ದಾವಣಗೆರೆ ಮತ್ತು ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸಮಾಡಿ, 1952ರಲ್ಲಿ ಅಧ್ಯಾಪಕರಾಗಿ ಮಹಾರಾಜ ಕಾಲೇಜನ್ನು ಸೇರಿದರು. 1959ರಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದ ಫುಲ್‌ಬ್ರೈಟ್ ಸಂಶೋಧಕರಾಗಿ ಅಮೆರಿಕಕ್ಕೆ ಹೆಚ್ಚಿನ ಸಂಶೋಧನೆಗಾಗಿ ತೆರಳಿದರು. ಯು.ಕೆ., ಫ್ರಾನ್ಸ್, ಇಟಲಿ, ಜಪಾನ್, ಹಾಂಗ್‌ಕಾಂಗ್, ಫಿಲಿಫೀನ್ಸ್ ಮುಂತಾದ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಪ್ರಬಂಧಗಳನ್ನು ಮಂಡಿಸಿದರು. ಅಮೆರಿಕದಿಂದ ಹಿಂತಿರುಗಿದ ಅನಂತರ ಸ್ನಾತಕೋತ್ತರ ಇತಿಹಾಸ ವಿಭಾಗಕ್ಕೆ ನೇಮಿಸಲ್ಪಟ್ಟರು. ತಮ್ಮ ಪ್ರತಿಭೆ, ನಿರಂತರ ಅಧ್ಯಯನ, ಶ್ರದ್ಧೆಗಳಿಂದ ಮೇಲೇರಿದ ಇವರು ನಿವೃತ್ತಿಯಾಗುವ ವರೆಗೆ (1979–87) ಇತಿಹಾಸ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು.

ರಾಷ್ಟ್ರೀಯ ಇತಿಹಾಸ ಪಂಥದ ದಿಗ್ಗಜರ ನೆರಳಿನಲ್ಲಿ ಬೆಳೆದ ಇವರು ಇತಿಹಾಸ ಲೇಖನ ಕಲೆಯಲ್ಲಿ ಕೊಂಚ ಸಂಪ್ರದಾಯವಾದಿಗಳಂತೆ ಕಾಣುತ್ತಿದ್ದರೂ ಸಂಶೋಧನೆಯ ಕ್ಷೇತ್ರದಲ್ಲಿ ಕಟುನಿಟ್ಟಿಗೆ ಹೆಸರಾಗಿದ್ದರು. ಇವರು ಐವತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದಿರುವರು. ವಿಜಯನಗರ ಕಾಲದಲ್ಲಿ ಸ್ಥಳೀಯ ಸರ್ಕಾರ ಮತ್ತು ಇತರ ಕೃತಿಗಳನ್ನು ಸಂಶೋಧನಾಲೋಕ ಮೆಚ್ಚಿಕೊಂಡಿತ್ತು. ಇವರು ರಚಿಸಿದ ಮುಖ್ಯ ಲೇಖನಗಳು ಹೀಗಿವೆ: ನಾಮಿನೇಟೆಡ್ ಪಾರ್ಲಿಮೆಂಟ್ (1960); ಸಾಮರ್‌ಸೆಟ್ ದಿ ಐಡಿಯಲಿಸ್ಟ್ (1961); ಚಾರ್ಲ್ಸ್ I ಇಯರ್ಸ್ ಆಫ್ ಪೀಸ್‌ಫುಲ್ ರೂಲ್ (1962); ವಿಲೇಜ್ ಅಡ್ಮಿನಿಸ್ಟ್ರೇಶನ್ ಅಂಡರ್ ದಿ ಹೊಯ್ಸಳಾಸ್ (1970); ಹೊಯ್ಸಳ ಡೈನಾಸ್ಟಿ (ಸಂ:ಬಿ.ಷೇಕ್‌ಅಲಿ), ಸಮ್ ಆಸ್ಪೆಕ್ಟ್ಸ್ ಆಫ್ ವಿಲೇಜ್ ಅಡ್ಮಿನಿಸ್ಟ್ರೇಶನ್ ಅಂಡರ್ ದಿ ಚಾಳುಕ್ಯಾಸ್ ಆಫ್ ಬಾದಾಮಿ (1978); ಡಾ.ಕೆ.ಎನ್.ವಿ.ಶಾಸ್ತ್ರೀಸ್ ಕಾಂಟ್ರಿಬ್ಯೂಶನ್ ಟು ಕರ್ನಾಟಕ ಹಿಸ್ಟ್ರಿ (1984);

ಯುರೋಪಿಯನ್ ಇಂಟಿಗ್ರೇಶನ್ ಇನ್ ಕೌಟಿಲ್ಯ (1960); ಜಾರ್ಜ್ III ಅಂಡ್ ದಿ ಅಮೆರಿಕನ್ ರೆವಲ್ಯುಶನ್ (1966); ಅಮೆರಿಕನ್ ಎಕ್ಸ್‌ಪೀರಿಯನ್ಸ್ ಟು ದಿ ಕಾಂಪ್ರೊಮೈಸ್ ಆಫ್ 1850, ಎ ಸರ್ವೆ: ಥೀಮ್ಸ್ ಅಂಡ್ ಪರ್‌ಸ್ಪೆಕ್ಟೀವ್ಸ್ ಇನ್ ಅಮೆರಿಕನ್ ಹಿಸ್ಟ್ರಿ (1978). ಟೋಕಿಯೊದ ಕ್ಯೋಟ್‌ನಲ್ಲಿ 1983ರಲ್ಲಿ ನಡೆದ XXXI ಇಂಟರ್ ನ್ಯಾಷನಲ್ ಕಾಂಗ್ರೆಸ್ ಆಫ್ ಹ್ಯೂಮನ್ ಸೈನ್ಸಸ್ ಇನ್ ಏಷ್ಯ ಅಂಡ್ ನಾರ್ತ್ ಅಮೆರಿಕ ವಿಚಾರ ಸಂಕಿರಣದಲ್ಲಿ ಜ್ಯುಡಿಶಿಯಲ್ ಫಂಕ್ಷನ್ಸ್ ಆಫ್ ದಿ ವಿಲೇಜ್ ಅಂಡ್ ನಾಡು ಅಸೆಂಬ್ಲಿಸ್ ಇನ್ ದಿ ವಿಜಯನಗರ ಎಂಪೈರ್; ಜ್ಯುಡಿಶಿಯಲ್ ಫಂಕ್ಷನ್ಸ್ ಆಫ್ ದಿ ಊರು, ಮಹಾಜನಾಸ್, ಅಂಡ್ ನಾಡು ಅಸೆಂಬ್ಲಿಸ್ ಇನ್ ದಿ ವಿಜಯನಗರ ಎಂಪೈರ್ ಎಂಬ ತಮ್ಮ ಪಾಂಡಿತ್ಯಪೂರ್ಣ ಲೇಖನಗಳನ್ನು ಪ್ರಸ್ತುತಪಡಿಸಿದರು. ದೆಹಲಿಯಲ್ಲಿ ಇವರು ಭಾಗವಹಿಸಿದ ಗ್ರೀನ್ ಬುಕ್ ಮತ್ತು ಕರ್ನಾಟಕ ರಾಜ್ಯದ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆಯ ಶತಮಾನೋತ್ಸವದ ರಾಷ್ಟ್ರೀಯ ವಿಚಾರ ಸಂಕಿರಣ (1985)ದಲ್ಲಿ ಕ್ರಮವಾಗಿ ಡೆಮಾಕ್ರೆಸಿ ಅಂಡ್ ಪಾರ್ಟಿ ಸಿಸ್ಟಮ್ಸ್ ವಿತ್ ರೆಫರೆನ್ಸ್ ಟು ದಿ ಗ್ರೀನ್ ಬುಕ್ ಮತ್ತು ದಿ ಇಂಪಾರ್ಟೆನ್ಸ್ ಆಫ್ ಇರಿಗೇಶನ್ ಇನ್ ವಿಜಯನಗರ ವಿತ್ ಸ್ಪೆಶಲ್ ರೆಫರೆನ್ಸ್ ಟು ಟ್ಯಾಂಕ್ಸ್, ವೆಲ್ಸ್ ಅಂಡ್ ಕೆನಾಲ್ಸ್ ಎಂಬ ವಿದ್ವತ್ಪತ್ರಿಕೆಗಳನ್ನು ಮಂಡಿಸಿದರು. ಖ್ಯಾತ ಇತಿಹಾಸಕಾರರಾಗಿದ್ದ ಇಂಗ್ಲೆಂಡಿನ ಬರ್ಟನ್‌ಸ್ಟೈನ್ ಮತ್ತು ಜಪಾನಿನ ನಬೊರೊಕರಾಶಿಮಾರೊಂದಿಗೆ ಇವರ ಒಡನಾಟವಿತ್ತು.

ಸಮಯ ಪರಿಪಾಲನೆಗೆ ಹೆಸರಾಗಿದ್ದ, ವಿದ್ವತ್ ಲೋಕದಲ್ಲಿ ಶಿಸ್ತಿನ ವ್ಯಕ್ತಿ ಎಂದು ಗುರುತಿಸಿಕೊಂಡಿದ್ದ ಇವರು 2008 ಜೂನ್ 17ರಂದು ನಿಧನರಾದರು. (ಎ.ಎಸ್.)

**ವೆಲ್ಲೆಸ್ಲಿ, ಲಾರ್ಡ್:** 1798–1805. ಭಾರತದ ಗವರ್ನರ್ ಜನರಲ್. ಇವನ ಪೂರ್ಣ ಹೆಸರು ರಿಚರ್ಡ್ ಕೋಲ್ ವೆಲ್ಲೆಸ್ಲಿ. ಇವನು ಅರ್ಲ್ ಆಫ್ ಮೋರ್ನಿಂಗ್‌ಟನ್ ಖಜಾನೆಯ ಮುಖ್ಯಸ್ಥನಾಗಿ ಬೋರ್ಡ್ ಆಫ್ ಕಂಟ್ರೋಲ್‌ನ ಕಮೀಷನರಾಗಿ ಸೇವೆಸಲ್ಲಿಸಿದ. ಇವನು ಭಾರತದ ಗವರ್ನರ್ ಜನರಲ್ ಆದಾಗ ಇವನ ವಯಸ್ಸು ಕೇವಲ 37 ವರ್ಷ. ಇವನು ಅಪಾರ ಉತ್ಸಾಹಿಯೂ ಪ್ರತಿಭಾವಂತನೂ ಆಗಿದ್ದು ಬ್ರಿಟಿಷ್ ವಸಾಹತು ಸಾಮ್ರಾಜ್ಯ ಸ್ಥಾಪನೆಗೆ ಬಹಳವಾಗಿ ಶ್ರಮಿಸಿದ. ಇವನು ಅಧಿಕಾರ ವಹಿಸಿಕೊಂಡಾಗ ಭಾರತೀಯ ಸಂಸ್ಥಾನಗಳು ಫ್ರೆಂಚರಿಂದ ಪ್ರಭಾವಿತರಾಗಿ ಬ್ರಿಟಿಷರ ಉನ್ನತಿಗೆ ಅಡ್ಡಿಯಾಗಿದ್ದರು. ಕಂಪನಿಯ ಕಡುವೈರಿ ಟಿಪ್ಪುಸುಲ್ತಾನ್ ಬ್ರಿಟಿಷರ ವಿರುದ್ಧ ಕತ್ತಿ ಮಸೆಯುತ್ತಿದ್ದ. ಇವನು ಅಯೋಧ್ಯೆ ಮತ್ತು ಹೈದರಾಬಾದ್ ರಾಜ್ಯಗಳ ಮೇಲೆ ಬ್ರಿಟಿಷರ ಅಧಿಕಾರವನ್ನು ಸ್ಥಾಪಿಸಿ ಮರಾಠರನ್ನು ಸದೆಬಡಿದ. ತಂಜಾವೂರು, ಸೂರತ್ ಮತ್ತು ಕರ್ನಾಟಕದ ಭಾಗಗಳು ಇವನ ಕಾಲದಲ್ಲಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟವು. ಭಾರತದಲ್ಲಿ ಇಂಗ್ಲಿಷರ ಪರಮಾಧಿಕಾರವನ್ನು ಸ್ಥಾಪಿಸಬೇಕೆಂಬುದು ಇವನ ಮಹದಾಸೆಯಾಗಿತ್ತು. ಈ ಆಸೆ ನನಸಾಗಬೇಕಾದರೆ ದೇಶೀಯ ರಾಜರುಗಳನ್ನು ತನ್ನ ಹಿಡಿತಕ್ಕೆ ಒಳಪಡುವಂತೆ ಮಾಡಬೇಕಾಗಿತ್ತು. ಈ ದೃಷ್ಟಿಯಿಂದ ಇವನು ಒಂದು ಹೊಸ ರಾಜಕೀಯ ಸೂತ್ರವನ್ನು ರೂಪಿಸಿದ. ಇದನ್ನು ಸಹಾಯಕ ಸೈನ್ಯ ಪದ್ಧತಿ (ಸೇನಾಸಹಾಯ ಮೈತ್ರಿ) ಎಂದು ಕರೆಯಲಾಗಿದೆ. ಇದರ ಮುಖ್ಯ ಉದ್ದೇಶವೇನೆಂದರೆ ಆಂತರಿಕ ಮತ್ತು ವಿದೇಶಿ ವ್ಯವಹಾರಗಳಲ್ಲಿ ದೇಶೀಯ ರಾಜರು ಬ್ರಿಟಿಷರಿಗೆ ಅಧೀನರಾಗಿರಬೇಕು, ಕಂಪನಿಯ ಸೈನ್ಯವನ್ನು ಸಂಬಳ ಕೊಟ್ಟು ಇಟ್ಟುಕೊಳ್ಳಬೇಕು ಹಾಗೂ ಯುರೋಪಿನ ಇತರ ರಾಷ್ಟ್ರಗಳಿಗೆ ಸಂಬಂಧಿಸಿದ ಅಧಿಕಾರಿಗಳನ್ನು ಉಚ್ಚಾಟನೆ ಮಾಡಬೇಕು. ಈ ಪದ್ಧತಿ ಅನೇಕ ದುರ್ಬಲ ರಾಜರುಗಳನ್ನು ಆಕರ್ಷಿಸಿತು, ಮೊದಲಿಗೆ 1798ರಲ್ಲಿ ಹೈದರಾಬಾದಿನ ನಿಜಾಮ ಈ ಪದ್ಧತಿ ಒಪ್ಪಿಕೊಂಡ.

1799ರಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ತಂಜಾವೂರು, 1801 ರಲ್ಲಿ ಔಧ್‌ನ ನವಾಬ ಮತ್ತು ಮರಾಠರ ಪೇಶ್ವೆ, 1803ರಲ್ಲಿ ಬಿರಾರ್‌ನ ರಾಜ ಭೋನ್ಸ್ಲೆ, 1804ರಲ್ಲಿ ಗ್ವಾಲಿಯರ್‌ನ ಸಿಂಧ್ಯಾ ಹಾಗೂ ಜಯಪುರ, ಮಾಚೇರಿ, ಬುಂಡಿ ಭರತ್‌ಪುರ್, ಬೀರಾರ್ ಮುಂತಾದ ರಾಜ್ಯಗಳು ಈ ವ್ಯವಸ್ಥೆಗೆ ಬಲಿಪಶುಗಳಾದರು. ಇದರಿಂದ ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆಯಾಯಿತು.

ಇವನು ಆಕ್ರಮಣಕಾರಿ ಹಾಗೂ ಸೇಡಿನ ಮನೋಭಾವವನ್ನು ಅನುಸರಿಸಿ, ಶಾಂತಿ ಮತ್ತು ತಟಸ್ಥ ನೀತಿಗಳನ್ನು ತಳ್ಳಿ ಹಾಕಿದ. ಇವನ ವಿದೇಶಾಂಗ ನೀತಿಯಲ್ಲಿ 4ನೆಯ ಆಂಗ್ಲೊ–ಮೈಸೂರು ಯುದ್ಧ (1799) ಹಾಗೂ ಮರಾಠರನ್ನು 1ನೆಯ ಮತ್ತು 2ನೆಯ ಆಂಗ್ಲೊ–ಮರಾಠ ಯುದ್ಧಗಳಲ್ಲಿ (1803–06) ಸೋಲಿಸಿದ್ದು ಪ್ರಮುಖ ಸಾಧನೆಯಾಗಿದೆ. ಇಂಗ್ಲಿಷರ ವಸಾಹತು ನೀತಿಗೆ ವಿರುದ್ಧವಾಗಿ ಇವರಿಗೆ ಸವಾಲಾಗಿದ್ದ ಮತ್ತು ತಮ್ಮ ಪ್ರತಿಸ್ಪರ್ಧಿಗಳಾದ ಫ್ರೆಂಚರೊಡನೆ ಉತ್ತಮ ಸಂಬಂಧವನ್ನು (ಫ್ರಾನ್ಸಿನ 16 ನೆಯ ಲೂಯಿ ಮತ್ತು ನೆಪೋಲಿಯನ್‌ರೊಂದಿಗೆ) ಹೊಂದಿದ್ದ ಟಿಪ್ಪುವನ್ನು ನಿರ್ನಾಮಗೊಳಿಸಲು ತೀರ್ಮಾನಿಸಿದ. ತನ್ನ ಸಹಾಯಕ ಸೈನ್ಯಪದ್ಧತಿಗೆ ವಿರೋಧ ವ್ಯಕ್ತಪಡಿಸಿದ ಟಿಪ್ಪುವಿನ ವಿರುದ್ಧ ಅಂತಿಮ ಹಾಗೂ ನಿರ್ಣಾಯಕ ಯುದ್ಧವನ್ನು ಘೋಷಿಸಿ 4 ನೆಯ ಆಂಗ್ಲೊ ಮೈಸೂರು ಯುದ್ಧದಲ್ಲಿ (1797–99) ಟಿಪ್ಪುಸುಲ್ತಾನನನ್ನು ಕೊನೆಗಾಣಿಸಿದನಲ್ಲದೆ ಮೈಸೂರು ಸಂಸ್ಥಾನವನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರ್ಪಡೆಗೊಳಿಸಿ, ಅಧಿಕಾರವನ್ನು ಕಳೆದುಕೊಂಡಿದ್ದ ಮೈಸೂರು ಒಡೆಯರಿಗೆ (ಮುಮ್ಮಡಿ ಕೃಷ್ಣ ರಾಜ ಒಡೆಯರು) ಪುನಃ ಅಧಿಕಾರವಹಿಸಿ ಕೊಟ್ಟ.

ಟಿಪ್ಪುವಿನ ಮರಣಾನಂತರ ದಕ್ಷಿಣ ಭಾರತ ಹಾಗೂ ಪಶ್ಚಿಮ ಕರಾವಳಿಯಲ್ಲಿ ಪ್ರಭಾವಿಗಳಾಗಿದ್ದ ಮತ್ತು ವಿವಿಧ ಭಾಗಗಳಲ್ಲಿ ಅಧಿಕಾರ ಸ್ಥಾಪಿಸಿದ ಮರಾಠ ನಾಯಕರನ್ನು ಮೊದಲನೆಯ ಆಂಗ್ಲೊ–ಮರಾಠ (1803) ಮತ್ತು ಎರಡನೆಯ ಆಂಗ್ಲೊ–ಮರಾಠ ಯುದ್ಧಗಳಲ್ಲಿ (1803–05) ಸೋಲಿಸಿ ಅವರನ್ನು ಸಹ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡ. ಇಂಗ್ಲಿಷರು ಇತರರಿಗಿಂತ ಭಾರತವನ್ನು ಚೆನ್ನಾಗಿ ಆಳಬಲ್ಲರೆಂದೂ ಆ ರೀತಿ ಆಳಲು ಅವರಿಗೆ ಸಂಪೂರ್ಣ ಹಕ್ಕಿದೆಯೆಂದೂ ಹೇಳಲಾರಂಭಿಸಿದ. ಭಾರತ ದೇಶವನ್ನು ಸಂಪತ್ಸಮೃದ್ಧ ದೇಶವನ್ನಾಗಿ ಪರಿವರ್ತಿಸಲು ಶಾಂತಿ ಸ್ಥಾಪನೆ ಆವಶ್ಯಕವೆಂದೂ ಇಂಗ್ಲಿಷರನ್ನು ಬಿಟ್ಟು ಮತ್ಯಾರೂ ಈ ದೇಶದಲ್ಲಿ ಶಾಂತಿ ಶಿಸ್ತನ್ನು ಸ್ಥಾಪಿಸಿ ಅವುಗಳನ್ನು ಪಾಲಿಸಿಕೊಂಡು ಬರಲಾರರೆಂದೂ ಈತ ನಂಬಿದ್ದ. ಆದುದರಿಂದ ಇವನು ದೆಹಲಿಯ ಚಕ್ರವರ್ತಿಯನ್ನು

ಭಾರತದ ಸಾರ್ವಭೌಮನೆಂದು ಅಂಗೀಕರಿಸಲಿಲ್ಲ. ಪ್ರತಿಯಾಗಿ ಈಸ್ಟ್ ಇಂಡಿಯ ಕಂಪನಿ ನಿಜವಾದ ಸಾರ್ವಭೌಮ ಪದವಿಯಲ್ಲಿದೆಯೆಂದು ಭಾವಿಸಿ, ಅದನ್ನೆ ಕೈಸರ್–ಎ–ಹಿಂದ್ ಎಂಬುದಾಗಿ ಘೋಷಿಸಿದ. ಇವನ ಸಾಧನೆ ಮೆಚ್ಚಿದ ಬ್ರಿಟಿಷ್ ಸರ್ಕಾರ ಮಾರ್ಕ್ವಿಸ್ ಆಫ್ ವೆಲ್ಲೆಸ್ಲಿ ಎಂಬ ಬಿರುದನ್ನು ನೀಡಿತು. ಇವನು ಬ್ರಿಟಿಷ್ ಸಾಮ್ರಾಜ್ಯವನ್ನು ಬಹುಬೇಗ ವಿಸ್ತರಿಸುತ್ತ ಬಂದುದರಿಂದ ಸರ್ಕಾರದ ವೆಚ್ಚ ಹೆಚ್ಚುವುದಕ್ಕೆ ಕಾರಣವಾಯಿತು. ಆದರೆ ಕಂಪನಿ ಸರ್ಕಾರಕ್ಕೆ ಬೇಕಾಗಿದ್ದುದು ದೊಡ್ಡ ಸಾಮ್ರಾಜ್ಯ ಸಂಪಾದನೆಯಲ್ಲ. ಲಾಭಕರ ವ್ಯಾಪಾರವಾಗಿತ್ತು. ಇವನು ಇಂಗ್ಲೆಂಡಿನಿಂದ ತಜ್ಞರನ್ನು ಬರಮಾಡಿಕೊಂಡು ಆಡಳಿತಾಧಿಕಾರಿಗಳಿಗೆ ತರಬೇತಿ ನೀಡಲು ಫೋರ್ಟ್‌ವಿಲಿಯಂ ಕಾಲೇಜನ್ನು ಸ್ಥಾಪಿಸಿದ ತನ್ನ ಸಹೋದರನನ್ನು ಉನ್ನತ ಹುದ್ದೆಗಳಿಗೆ ನೇಮಿಸಿ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದ. ಕೆಲವೊಮ್ಮೆ ಈತ ಜಗಳಗಂಟನಾಗಿ ವರ್ತಿಸುತ್ತಿದ್ದ. ಈ ಬಗೆಯ ಧೋರಣೆಗಳಿಂದ ಕಸಿವಿಸಿಗೊಂಡ ಇಂಗ್ಲೆಂಡ್ ಇವನನ್ನು ಭಾರತದಿಂದ ವಾಪಸ್ ಕರೆಸಿಕೊಂಡಿತು.

**ಸಹಾಯಕ ಸೈನ್ಯ ಪದ್ಧತಿ:** ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸಲು ಸ್ಥಳೀಯ ರಾಜರ ಆಸ್ಥಾನಗಳಲ್ಲಿ ಬ್ರಿಟಿಷರ ಪ್ರಭಾವವನ್ನು ಹೆಚ್ಚಿಸಲು ವೆಲ್ಲೆಸ್ಲಿ ಚಾಣಾಕ್ಷತೆಯನ್ನು ಪ್ರದರ್ಶಿಸಿದ. ವೆಲ್ಲೆಸ್ಲಿಯೇ ಈ ಪದ್ಧತಿಯ ಮೂಲ ಕರ್ತೃವಲ್ಲ. ಮೊದಲು ಫ್ರೆಂಚರ ಡೂಪ್ಲೆ ಈ ಹಿಂದೆಯೇ ಇದನ್ನು ಅಳವಡಿಸಿ ಕೊಂಡಿದ್ದ. ಡೂಪ್ಲೆ ಸ್ಥಳೀಯ ಅರಸ 'ರಿಂದ ಹಣ ಪಡೆದು ಅದಕ್ಕೆ ಪ್ರತಿಯಗಿ ಸೈನಿಕ ಸಹಾಯವನ್ನು ಒದಗಿಸುತ್ತಿದ್ದ. ವೆಲ್ಲೆಸ್ಲಿ ಸಹ ಈ ನೀತಿಯನ್ನು ಬಳಸಿ ಕೊಳ್ಳುವು ದರ ಮೂಲಕ ಅಸಂಘಟಿತ ಮತ್ತು ಅಸಮರ್ಥ ಸ್ಥಳೀಯ ರಾಜರನ್ನು ತನ್ನ ಬಲೆಗೆ ಬೀಳಿಸಿಕೊಂಡ. ವೆಲ್ಲೆಸ್ಲಿ ಈ ಪದ್ಧತಿಯನ್ನು ಹೆಚ್ಚು ನಿರ್ದಿಷ್ಟಗೊಳಿಸಿದ ಮತ್ತು ಹೊಸ ಹೊಸ ನಿಯಮಗಳನ್ನು ಸೃಷ್ಟಿಸಿ ಅವುಗಳನ್ನು ಸ್ಥಳೀಯ ರಾಜರ ಮೇಲೆ ಹೇರಿದ. ಹೀಗಾಗಿ ವೆಲ್ಲೆಸ್ಲಿಯನ್ನೇ ಈ ಪದ್ಧತಿಯ ಸಂಸ್ಥಾಪಕನೆಂದು ಗುರುತಿಸಲಾಗಿದೆ.

ಸಹಾಯಕ ಸೈನ್ಯ ಪದ್ಧತಿ ಇಂಗ್ಲಿಷರು ಮತ್ತು ಸ್ಥಳೀಯ ರಾಜರ ನಡುವೆ ಏರ್ಪಡುತ್ತಿದ್ದ ರಾಜಕೀಯ ಮತ್ತು ಸೈನಿಕ ಒಪ್ಪಂದವಾಗಿತ್ತು. ಈ ಒಪ್ಪಂದದ ಪ್ರಕಾರ ಸ್ಥಳೀಯ ರಾಜರು ಸಹಾಯಕ ಸೈನ್ಯ ಪದ್ಧತಿಯ ಒಪ್ಪಂದಕ್ಕೆ ಒಳಗಾದರೆ ಸೈನಿಕ ಸಹಾಯ ನೀಡುವ ಭರವಸೆ ನೀಡಲಾಗುತ್ತಿತ್ತು. ಪ್ರಥಮವಾಗಿ ಹೈದರಾಬಾದಿನ ನಿಜಾಮ, ಅನಂತರ ಇದೇ ರೀತಿ ವೆಲ್ಲೆಸ್ಲಿ ತನ್ನ ಈ ನೀತಿಯನ್ನು ವಿಸ್ತೃತಗೊಳಿಸಿ ಬಹುಮಟ್ಟಿಗೆ ಭಾರತದ ಪ್ರತಿಯೊಂದು ರಾಜ್ಯದೊಡ ನೆಯೂ ಕಟ್ಟುನಿಟ್ಟಾಗಿ ಜಾರಿಗೆ ತಂದನು.

ಸಹಾಯಕ ಸೈನ್ಯ ಪದ್ಧತಿಯ ಕರಾರುಗಳು: 1. ಸ್ಥಳೀಯ ರಾಜರು ಈ ಒಪ್ಪಂದಕ್ಕೆ ಒಳಗಾದರೆ ಇಂಗ್ಲಿಷರ ಪರಮಾಧಿಕಾರವನ್ನು ಒಪ್ಪಿಕೊಳ್ಳಬೇಕಾಗಿತ್ತು. ಇಂಗ್ಲಿಷ್ ಕಂಪನಿಯ ಅನುಮತಿಯಿಲ್ಲದೆ ಯಾವುದೇ ಸ್ಥಳೀಯ ರಾಜರೊಡನೆ ಯುದ್ಧ ಮಾಡುವಂತಿರಲಿಲ್ಲ ಅಥವಾ ಒಪ್ಪಂದ ಮಾಡಿಕೊಳ್ಳುವಂತಿರಲಿಲ್ಲ. ಎರಡು ರಾಜ್ಯಗಳ ನಡುವೆ ಭಿನ್ನಾಭಿಪ್ರಾಯ ವುಂಟಾದರೆ ಇಂಗ್ಲಿಷರ ಮಧ್ಯಸ್ಥಿಕೆಯ ತೀರ್ಮಾನವನ್ನು ಒಪ್ಪಿಕೊಳ್ಳಬೇಕಾಗಿತ್ತು. ಹೀಗೆ ಭಾರತೀಯ ರಾಜರು ತಮ್ಮ ವಿದೇಶಾಂಗ ವ್ಯವಹಾರಗಳನ್ನು ವಸಾಹತು ಕಂಪನಿಗೆ ವಹಿಸಿಕೊಡಬೇಕಾಯಿತು.

2. ಭಾರತೀಯ ಆಳರಸರ ಆಸ್ಥಾನದಲ್ಲಿ ಫ್ರೆಂಚರ ಪ್ರಭಾವವನ್ನು ತೊಡೆದುಹಾಕಲು ಈ ಒಪ್ಪಂದದಲ್ಲಿ ಹಲವು ಕ್ರಮಗಳನ್ನು ನಮೂದಿಸಿತ್ತು. ಸ್ಥಳೀಯ ರಾಜರು ಕಂಪನಿಯ ಅನುಮತಿಯಿಲ್ಲದೆ ಇಂಗ್ಲಿಷರನ್ನು ಬಿಟ್ಟು ಬೇರೆ ಯಾವ ಯುರೋಪಿಯನ್ನರನ್ನು ತಮ್ಮ ಆಸ್ಥಾನದಲ್ಲಾಗಲಿ ಅಥವಾ ನೌಕರಿಗಾಗಲಿ ನೇಮಿಸಿಕೊಳ್ಳುವಂತಿರಲಿಲ್ಲ.

3. ಸ್ಥಳೀಯ ರಾಜನು ಇಂಗ್ಲಿಷ್ ಸೈನ್ಯವನ್ನು ಇಟ್ಟುಕೊಂಡು ಪೋಷಿಸಬೇಕಿತ್ತು. ಅಥವಾ ಸೈನ್ಯದ ವೆಚ್ಚದ ಬಾಬ್ತಿಗಾಗಿ ತಮ್ಮ ರಾಜ್ಯದ ಒಂದು ಭಾಗದ ಪ್ರದೇಶವನ್ನು ಕಂಪನಿಗೆ ವಹಿಸಬೇಕಿತ್ತು. ಈ ಷರತ್ತು ಕಂಪನಿಯ ಗಡಿಯನ್ನು ವಿಸ್ತರಿಸಲು ಸಹಾಯಕವಾಯಿತು.

4. ಸ್ಥಳೀಯ ರಾಜರು ತಮ್ಮ ಆಸ್ಥಾನದಲ್ಲಿ ಒಬ್ಬ ಇಂಗ್ಲಿಷ್ ರೆಸಿಡೆಂಟನನ್ನು ನೇಮಿಸಿ ಕೊಳ್ಳಬೇಕಿತ್ತು. ಈ ಮೂಲಕ ಆ ರಾಜ್ಯದ ಆಡಳಿತ ಚಟುವಟಿಕೆಗಳ ಮೇಲೆ ಕಂಪನಿಯ ಅಧಿಕಾರಿಯೊಬ್ಬನು ಕಣ್ಣಿಡುವ ಅಥವಾ ನಿಯಂತ್ರಿಸುವ ಅಧಿಕಾರ ದೊರೆಕಿತು.

5. ಈ ಮೇಲಿನ ಷರತ್ತುಗಳಿಗೆ ಪ್ರತಿಯಾಗಿ ಕಂಪನಿ ಆ ರಾಜ್ಯಗಳ ಆಂತರಿಕ ಆಡಳಿತದಲ್ಲಿ ಪ್ರವೇಶಿಸುವುದಿಲ್ಲವೆಂಬ ಭರವಸೆ ನೀಡಿತು. ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ರಾಜ್ಯಗಳ ಮೇಲಿನ ವಿದೇಶಿ ಧಾಳಿಯನ್ನು ತಡೆಗಟ್ಟುವ ಹಾಗೂ ದೇಶೀಯ ದಂಗೆಯನ್ನು ಅಡಗಿಸುವ ಜವಾಬ್ದಾರಿಯು ಕಂಪನಿಯದಾಗಿತ್ತು. ಸಹಾಯಕ ಸೈನ್ಯ ಒಪ್ಪಂದ ದಿಂದ ಕಂಪನಿಗೆ ಆದ ಅನುಕೂಲಗಳು: 1. ಕಂಪನಿಯ ಆಳಿಕೆ ಈ ಒಪ್ಪಂದದ ಮೂಲಕ ಸ್ಥಳೀಯ ರಾಜ್ಯಗಳ ಮೇಲೆ ಸ್ಥಾಪಿಸಲ್ಪಟ್ಟಿತು. ಇದರಿಂದಾಗಿ ಕಂಪನಿಯ ಮೇಲೆ ಒಬ್ಬ ಅಥವಾ ಒಟ್ಟುಗೂಡಿದ ರಾಜರ ಗುಂಪು ಧಾಳಿ ಮಾಡಬಹುದೆಂಬ ಭೀತಿ ಇಲ್ಲವಾಯಿತು.

2. ಈ ಪದ್ಧತಿ ಮೂಲಕ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡ ಕಂಪನಿ ಭಾರತೀಯ ರಾಜ್ಯಗಳನ್ನು ನಿರಾಯುಧಗೊಳಿಸಿತು. ಇದರ ಪರಿಣಾಮವಾಗಿ ಭಾರತೀಯ ರಾಜ್ಯಗಳ ಸೇನಾಶಕ್ತಿ ಕುಂದಿ ಬ್ರಿಟಿಷರನ್ನು ಎದುರಿಸಲು ವಿಫಲವಾಯಿತು.

3. ಬ್ರಿಟಿಷ್ ಸರ್ಕಾರದ ಆದಾಯ ಅಪರಿಮಿತವಾಗಿ ಹೆಚ್ಚಿತು ಮತ್ತು ದೇಶೀಯ ರಾಜರ ಮೇಲೆ ಪರಮಾಧಿಕಾರವೂ ದೊರಕಿತು. ಅನ್ಯರ ವೆಚ್ಚದಲ್ಲಿ ತನ್ನ ಸಂಪನ್ಮೂಲಗಳನ್ನು ವೃದ್ಧಿಸಿಕೊಂಡ ಕಂಪನಿ ಪ್ರಬಲ ಸೈನ್ಯವನ್ನು ಕಟ್ಟಲು ಸಮರ್ಥವಾಯಿತು.

4. ದೇಶೀಯ ರಾಜರುಗಳ ನಡುವಿನ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಆ ರಾಜರು ಕಂಪನಿಯನ್ನೇ ಆಶ್ರಯಿಸಿ ಓಲೈಸುವಂತಾಯಿತು. ಆ ಮೂಲಕ ದೇಶೀಯ ರಾಜರ ಅಸ್ತಿತ್ವವೇ ಇಂಗ್ಲಿಷರ ಕೃಪೆಯನ್ನವಲಂಬಿಸಿತ್ತು.

5. ಈ ಒಪ್ಪಂದ ಕಂಪನಿಗೆ ವಿದೇಶಿ ಧಾಳಿಗಳ ಭಯವನ್ನು ಹೋಗಲಾಡಿಸಿತು. ಹಾಗೆಯೇ ಕಂಪನಿಯ ಸೈನ್ಯವು ರಾಜ್ಯಗಳಲ್ಲಿ ನೆಲೆಸುವ ಮೂಲಕ ಆಂತರಿಕ ದಂಗೆಗಳ ಅಪಾಯವನ್ನು ತೊಲಗಿಸಿತು.

6. ಈ ಒಪ್ಪಂದದ ಪ್ರಕಾರ ಬೇರೆ ಯಾವುದೇ ಯುರೋಪಿಯನ್ ಶಕ್ತಿ ದೇಶೀಯ ರಾಜ್ಯಗಳ ಆಂತರಿಕ ವಿಷಯದಲ್ಲಿ ತಲೆಹಾಕದಂತಾಯಿತು ಮತ್ತು ಆ ಮೂಲಕ ಬ್ರಿಟಿಷ್ ಶಕ್ತಿಯನ್ನು ಎದುರಿಸುವ ಅವಕಾಶ ಇಲ್ಲದಂತಾಯಿತು.

7. ಬ್ರಿಟಿಷರು ತಮ್ಮ ಸಾಮ್ರಾಜ್ಯದ ಪ್ರದೇಶದಲ್ಲಿ ಯಾವ ಯುದ್ಧವನ್ನೂ ಮಾಡುವಂತಿರಲಿಲ್ಲ. ಹೀಗಾಗಿ ಯುದ್ಧಾನಂತರದ ದುಷ್ಪರಿಣಾಮಗಳಿಂದ ಬ್ರಿಟಿಷ್ ಸಾಮ್ರಾಜ್ಯ ತಪ್ಪಿಸಿಕೊಂಡಿತು.

8. ಈ ಒಪ್ಪಂದದ ಪ್ರಕಾರ ಇಂಗ್ಲಿಷರನ್ನು ಹೊರತುಪಡಿಸಿ ಯಾವ ಯುರೋಪಿಯನ್ ವ್ಯಕ್ತಿಗಳನ್ನೂ ರಾಜ್ಯಗಳ ನೌಕರಿಗೆ ನೇಮಿಸಿಕೊಳ್ಳುವಂತಿರಲಿಲ್ಲ. ಇದರೊಂದಿಗೆ ಫ್ರೆಂಚರು ದೇಶೀಯ ರಾಜ್ಯಗಳಲ್ಲಿ ನೌಕರಿ ಗಿಟ್ಟಿಸುವ ಮತ್ತು ಪಿತೂರಿ ನಡೆಸುವ ಅಪಾಯಗಳು ತಪ್ಪಿದವು.

9. ಬ್ರಿಟಿಷ್ ರೆಸಿಡೆಂಟರು ದೇಶಿಯ ರಾಜರ ಆಸ್ಥಾನದಲ್ಲೇ ವಾಸಿಸುವಂತಾಗಿ ಅವರು ಆ ರಾಜ್ಯಗಳ ಆಂತರಿಕ ವ್ಯವಹಾರದಲ್ಲೂ ಹತೋಟಿ ಪಡೆದರು. ಈ ಮೂಲಕ ದೇಶೀಯ ರಾಜರು ಇಂಗ್ಲಿಷರಿಗೆ ವಿರುದ್ಧವಾದ ಯಾವ ಚಟುವಟಿಕೆಯಲ್ಲೂ ತೊಡಗದಂತಾಯಿತು.

10. ಸಹಾಯಕ ಸೈನ್ಯದ ಪಡೆಗಳನ್ನು ಪೋಷಿಸುವುದು ಅಪಾರ ವೆಚ್ಚವಾದುದರಿಂದ ದೇಶೀಯ ರಾಜರು ಬಹಳ ಕಷ್ಟಕ್ಕೀಡಾದರು ಹಾಗೂ ಬಾಕಿ ಉಳಿಸಿಕೊಂಡರು. ಬಾಕಿಯನ್ನು ತೀರಿಸಲಾಗದ ರಾಜರು ಅದಕ್ಕೆ ಪ್ರತಿಯಾಗಿ ಕೆಲವು ಪ್ರದೇಶಗಳನ್ನು ಕಂಪನಿಗೆ ವಹಿಸಿಕೊಟ್ಟರು.

ಮೈಸೂರು ಸಂಸ್ಥಾನದ ಟಿಪ್ಪುಸುಲ್ತಾನ ಈ ಪದ್ಧತಿಗೆ ಒಪ್ಪಿಗೆಯನ್ನು ಸೂಚಿಸಲು ನಿರಾಕರಿಸಿದ. ಇದು ನಾಲ್ಕನೆಯ ಆಂಗ್ಲೊ–ಮೈಸೂರು ಯುದ್ಧಕ್ಕೆ ನಾಂದಿಯಾಯಿತು.

ಮೇಲಿನ ಅಂಶಗಳನ್ನು ಗಮನಿಸಿದಾಗ ಸಹಾಯಕ ಸೈನ್ಯ ಪದ್ಧತಿ ಭಾರತದಲ್ಲಿ ಬ್ರಿಟಿಷರು ಸಾರ್ವಭೌಮತ್ವ ಸ್ಥಾಪಿಸಲು ಸಹಾಯಕವಾಯಿತೆಂದು ತಿಳಿಯಬಹುದು. (ಎನ್‌ಆರ್.)

**ವೈಕಿಂಗರು:** 7–11ನೆಯ ಶತಮಾನಗಳಲ್ಲಿ ಯುರೋಪಿನ ಉತ್ತರ ಪ್ರದೇಶಗಳಲ್ಲಿದ್ದ ಕಡಲುಗಳ್ಳರು. ವೈಕಿಂಗ್ ಎಂಬ ಪದಕ್ಕೆ ಮೊದಲು ಯೋಧ ಅಥವಾ ಸೈನಿಕ ಎಂಬರ್ಥವಿದ್ದು, ಮುಂದೆ ಕಡಲುಯೋಧ ಎಂಬ ವಿಶೇಷಾರ್ಥ ಬಳಕೆಗೆ ಬಂತು. ವೈಕಿಂಗ್ ಕಾಲವೆಂಬುದು 7–11ನೆಯ ಶತಮಾನಗಳಲ್ಲಿ ಸತತವಾಗಿ ಸ್ಕ್ಯಾಂಡಿನೇವಿಯನ್ನರು ನಡೆಸಿದ ಧಾಳಿಯನ್ನು ಸೂಚಿಸುತ್ತದೆ. ವೈಕಿಂಗರು ಆರಂಭದಲ್ಲಿ ಅಕ್ರಮವಾಗಿ ಧಾಳಿ ನಡೆಸುತ್ತಿದ್ದರು. ಸಮುದ್ರದಲ್ಲಿ ಸಂಚಾರ ಹೊರಟು ದಾರಿಯಲ್ಲಿ ಕಂಡ ದ್ವೀಪದಲ್ಲಿಳಿದು, ಭೂಭಾಗಕ್ಕೆ ನುಗ್ಗಿ, ಲೂಟಿ ಮಾಡಿ, ಅಲ್ಲಿಯ ಜನರೊಡನೆ ಕಲೆತು ಆ ಪ್ರದೇಶದಲ್ಲಿ ನೆಲಸುತ್ತಿದ್ದರು. ಈ ರೀತಿ ಮೊದಲು ಐರ್ಲೆಂಡ್ ಅನಂತರ ಸ್ಕಾಟ್ಲೆಂಡ್ ಪ್ರದೇಶಗಳಿಗೂ ಜರ್ಮನಿ, ಫ್ರಾನ್ಸ್, ಇಟಲಿ, ಸ್ಪೇನ್, ಆಫ್ರಿಕ ಮೊದಲಾದ ಭಾಗಗಳಿಗೂ ನುಗ್ಗಿ ಕ್ರೈಸ್ತ ಮಂದಿರಗಳನ್ನು ಲೂಟಿಮಾಡಿ ಅಲ್ಲಲ್ಲಿ ನೆಲಸಿದರು. 8ನೆಯ ಶತಮಾನದ ಅಂತ್ಯದಲ್ಲಿ ಇವರು ಇಂಗ್ಲಿಷ್ ಕರಾವಳಿ ಪ್ರಾಂತಕ್ಕೆ ನುಗ್ಗಿದರು. 838 ರಿಂದ ಇವರ ಧಾಳಿ ಬಲವಾಯಿತು. 865ರಲ್ಲಿ ಈ ಧಾಳಿಕೋರರ ದೊಡ್ಡ ಸೇನೆಯೊಂದು ಇಂಗ್ಲೆಂಡಿಗೆ ನುಗ್ಗಿ ಅನೇಕ ಪ್ರದೇಶಗಳನ್ನು ಆಕ್ರಮಿಸಿತು. ಆಲ್‌ಫ್ರೆಡ್ ದೊರೆ ಈ ಪಡೆಯ ಒಂದು ಭಾಗವನ್ನು ಸೋಲಿಸಿದ. ಕನ್ಯೂಟ್ ದೊರೆ ವೈಕಿಂಗ್‌ರ ಅದ್ಭುತ ಶಕ್ತಿಯನ್ನು ನಾರ್ಡಿಕ್ ಜನರ ಚಕ್ರಾಧಿಪತ್ಯ ಕಟ್ಟಲು ಉಪಯೋಗಿಸುವಂತೆ ಪ್ರೇರೇಪಿಸಿದ್ದರಿಂದ 10ನೆಯ ಶತಮಾನದ ವೇಳೆಗೆ ಇವರ ಧಾಳಿಯ ಪ್ರಾಬಲ್ಯ ಕುಗ್ಗಿತು.

ವೈಕಿಂಗರು ಕೇವಲ ಕಡಲುಗಳ್ಳರಲ್ಲ; ಧೈರ್ಯಶಾಲಿಗಳು ಮತ್ತು ಬುದ್ಧಿವಂತರು. ಯುದ್ಧ, ಸಮುದ್ರ ಸಂಚಾರ ಮತ್ತು ವ್ಯಾಪಾರ ಇವುಗಳಲ್ಲಿ ಕ್ರಿಶ್ಚಿಯನ್ ಪಂಗಡದವರನ್ನು ಮೀರಿಸಿದ್ದರು. ಅವರು ಉಪಯೋಗಿಸುತ್ತಿದ್ದ ಹಡಗುಗಳು ವಿಶಿಷ್ಟ ರೀತಿಯವೆಂದು ಈಗಲೂ ಪ್ರಸಿದ್ಧಿ. (ಎಚ್.ಆರ್.ಆರ್.ಐ.)

**ವೈದಿಕ ಜನಾಂಗದ ನೆಲೆಗಳು:** ಇಂಡೊ–ಆರ್ಯರ ಮೂಲನಿವಾಸದ ಬಗ್ಗೆ ಯಾವುದೇ ನಿಖರವಾದ ತೀರ್ಮಾನಕ್ಕೆ ಬರುವುದು ಕಷ್ಟವಾದರೂ ಉತ್ತರ ಭಾರತದಲ್ಲಿ ಅವರ ಪ್ರಾರಂಭಿಕ ನೆಲೆಗಳ ಬಗ್ಗೆ ಮತ್ತು ಇಡೀ ಪ್ರದೇಶದ ಮೇಲೆ ನಿಧಾನವಾಗಿ ವಿಸ್ತರಿಸಿದ್ದರ ಬಗ್ಗೆ ಹೇಳಲು ಹೆಚ್ಚು ಆಧಾರಗಳಿವೆ. ವೈದಿಕ ಸಾಹಿತ್ಯ ಮತ್ತು ಅಪಾರವಾದ ಭೌಗೋಳಿಕ ವಿಷಯಗಳನ್ನು ಹೊಂದಿರುವ ಋಗ್ವೇದದ ಪ್ರಾರಂಭಿಕ ಮಂತ್ರಕಗಳು ನಮ್ಮ ನೆರವಿಗೆ ಬರುತ್ತವೆ. ಈ ಶ್ಲೋಕಗಳಲ್ಲಿ ಪ್ರಧಾನವಾಗಿ ಅಥವಾ ಪದೇ ಪದೇ ಕಾಣಬರುವ ಭೌಗೋಳಿಕ ಹೆಸರುಗಳು ಅದರ ಕರ್ತೃಗಳಿಗೆ ತಿಳಿದಿದ್ದ ಮತ್ತು ಆರ್ಯರ ಪ್ರಾರಂಭ ಕಾಲದ ಚಟುವಟಿಕೆಗಳ ಸ್ಥಳಗಳನ್ನು ಸೂಚಿಸುತ್ತವೆ ಎಂದು ಹೇಳುವುದು ಹೆಚ್ಚು ಸಮಂಜಸ. ಅಷ್ಟು ಪ್ರಮುಖವಲ್ಲದ ಮತ್ತು ಹೆಚ್ಚಾಗಿ ಕಾಣಬರದ ಹೆಸರುಗಳು ಆರ್ಯರ ಹೊರ ನೆಲೆಗಳಾಗಿರಬಹುದು ಇಲ್ಲವೇ ಆರ್ಯೇತರರು ವಾಸಿಸುತ್ತಿದ್ದ ಗಡಿ ಪ್ರದೇಶಗಳಾಗಿರಬಹುದು. ಆದರೂ ಋಗ್ವೇದ ಒಂದು ಭೌಗೋಳಿಕ ಸಂಹಿತೆಯಲ್ಲ ಮತ್ತು ಅದರ ವಿವಿಧ ಪಾಠಗಳು ನಮಗೆ ಸಂಪೂರ್ಣವಾಗಿ ತಿಳಿದುಬಂದಿಲ್ಲ ಎಂಬುದು ಗಮನಿಸಬೇಕಾದ ಅಂಶ.

ವೈದಿಕ ಸಮುದಾಯದ ಋಗ್ವೇದದ ಕಾಲದಲ್ಲಿ ನೆಲೆಗಳ ವಿಸ್ತಾರವನ್ನು ಖಚಿತವಾಗಿ ನಿರ್ಧರಿಸಬೇಕಾದರೆ ವೇದದ ಮಂತ್ರಗಳಲ್ಲಿ ಉಕ್ತವಾಗಿರುವ ಪರ್ವತಗಳು, ನದಿಗಳು, ಸ್ಥಳಗಳು, ದೇಶಗಳು, ಜನಾಂಗಗಳು ಮತ್ತು ರಾಜ್ಯಗಳ ಬಗ್ಗೆ ಇರುವ ಪರಾಮರ್ಶೆಗಳನ್ನು ಗಮನಿಸಬೇಕು.

ಪರ್ವತಗಳಲ್ಲಿ ಹಿಮಾಲಯವೊಂದೇ ಋಗ್ವೇದದಲ್ಲಿ ನೇರವಾಗಿ ಉಕ್ತವಾಗಿದೆ. ಅದರ ಒಂದು ಶಿಖರವಾದ ಮೂಜವಂತವು ಸೋಂರಸದ ಮೂಲಸ್ಥಾನವೆಂದು ಉಲ್ಲೇಖ ಗೊಂಡಿದೆ. ಈ ಶೃಂಗ ಪ್ರಾಯಶಃ ಕಾಶ್ಮೀರ ಕಣಿವೆಗೆ ನೈರುತ್ಯದಲ್ಲಿತ್ತು ಎಂದು ಜಿಮ್ಮರ್ ಅಭಿಪ್ರಾಯ ಪಡುತ್ತಾನೆ.

ನದಿಗಳು ಪಾರಂಪರ್ಯವಾಗಿ ಹಿಂದುಗಳ ಜೀವನದಲ್ಲಿ ಮುಖ್ಯ ಪಾತ್ರವಹಿಸಿವೆ. ಋಗ್ವೇದದ ಕಾಲದಲ್ಲಿಯೂ ಪ್ರಾಯಶಃ ಅವು ಮಾನವನಿಗೆ ಅಪಾರವಾದ ಕೊಡುಗೆಗಳನ್ನು ನೀಡಿರುವ ಕಾರಣ ಅವುಗಳನ್ನು ದೇವತೆಗಳೆಂದು ಗೌರವಿಸಲಾಯಿತು. ವೈದಿಕ ಗ್ರಂಥಗಳಲ್ಲಿ ಉಕ್ತವಾಗಿರುವ ಮೂವತ್ತೊಂದು ನದಿಗಳಲ್ಲಿ, ಇಪ್ಪತ್ತೈದು ಹೆಸರುಗಳು ಕೇವಲ ಋಗ್ವೇದದ ಮಂತ್ರಗಳಲ್ಲೇ ಕಾಣಬರುತ್ತವೆ. ಪ್ರಖ್ಯಾತವಾದ ನದಿಸ್ತುತಿಯಲ್ಲಿ ಸಿಂಧೂ ನದಿಜಾಲಕ್ಕೆ ಸೇರಿದಂತಹ ಅನೇಕ ನದಿಗಳನ್ನು ಋಗ್ವೇದ ಹೆಸರಿಸುತ್ತದೆ.

ಸಿಂಧೂ ನದಿಜಾಲದ ಹೊರಗೆ ಇರುವ ನದಿಗಳಲ್ಲಿ ಗಂಗಾ, ಯಮುನಾ, ಸರಸ್ವತಿ ಮತ್ತು ಸರಯೂ ನದಿಗಳನ್ನು ಹೆಸಸಲಾಗಿದೆ. ಋಗ್ವೇದದ ಕಾಲದಲ್ಲಿ ಗಂಗಾನದಿ ಹೆಸರುವಾಸಿ ಯಾದ ಅಥವಾ ಪ್ರಮುಖವಾದ ನದಿಯಾಗಿ ಕಾಣಬರುವುದಿಲ್ಲ. ಪ್ರಸಿದ್ಧ ದಾಶರಾಜ್ಞದಲ್ಲಿ ಯಮುನಾ ನದಿಯ ದಂಡೆಯ ಮೇಲೆ ಸುದಾಸರು ಮತ್ತು ತೃತ್ಸುಗಳ ಮಹಾವಿಜಯವನ್ನು ಹೇಳುವಾಗ ಋಗ್ವೇದ ಮೂರು ಬಾರಿ ಯಮುನಾ ನದಿಯನ್ನು ಉಲ್ಲೇಖಿಸುತ್ತದೆ. ಋಗ್ವೇದದಲ್ಲಿ ಬಹಳ ಹೆಚ್ಚಾಗಿ ಉಕ್ತವಾದ ನದಿ ಎಂದರೆ, ಅತ್ಯಂತ ಶ್ರೇಷ್ಠವಾದ, ಸರಸ್ವತಿ ನದಿ. ಇದು ವೇದದ ಕಾಲದ ಪವಿತ್ರ ನದಿಯಾಗಿತ್ತೆಂದು ತೋರುತ್ತದೆ. ನದಿಸ್ತುತಿಯಲ್ಲಿ ಉಕ್ತವಾಗಿರುವ ನದಿಗಳಲ್ಲಿ ಸರಸ್ವತಿಯು, ಯಮುನಾ ಮತ್ತು ಶತುದ್ರೀ ನದಿಗಳ ಮಧ್ಯೆ ಬರುತ್ತದೆ. ಇದನ್ನು ಸಾಮಾನ್ಯವಾಗಿ ಭಟ್ ನಾಯಿರ್ ಮರುಭೂಮಿಯಲ್ಲಿ ಅದೃಶ್ಯವಾಗಿರುವ ಇಂದಿನ ಸರ್‌ಸುತಿ ಯೊಂದಿಗೆ ಸಮೀಕರಿಲಾಗಿದೆ. ರಾತ್, ಜಿಮ್ಮರ್, ಗ್ರಿಫಿತ್ ಮತ್ತು ಲುಡ್ವಿಗ್ ಎಂಬ ವಿದ್ವಾಂಸರು ಋಗ್ವೇದದ ಅನೇಕ ಶ್ಲೋಕಗಳಲ್ಲಿ ಉಕ್ತವಾದ ಸಿಂಧೂನದಿಯು ಸರಸ್ವತಿ ನದಿಯೆಂದು ಅಭಿಪ್ರಾಯಪಡುತ್ತಾರೆ. ಸರಸ್ವತಿ ನದಿ ವೇದದ ಕಾಲದಲ್ಲಿ ವಿಶಾಲವಾಗಿ ಇದ್ದಿತ್ತೆಂದು ಇತ್ತೀಚಿನ ವೈಜ್ಞಾನಿಕ ಇನ್‌ಸ್ಯಾಟ್ ಚಿತ್ರಗಳಿಂದ ತಿಳಿದು ಬಂದಿದೆ. ಋಗ್ವೇದದಲ್ಲಿ (VI, 61.2, 8; VII, 95.2) ಅದು ಸಮುದ್ರಕ್ಕೆ ಹೋಗುತ್ತಿತ್ತು ಎಂದು ಹೇಳಿರುವಂತೆ, ನಿಜವಾಗಿಯೂ ಸಮುದ್ರಕ್ಕೇ ಸೇರುತ್ತಿತ್ತು ಎಂಬ ಅಂಶ ಗಮನಾರ್ಹ. ಸರಸ್ವತಿ ನದಿ ವೈದಿಕ ನದಿಗಳಲ್ಲೆಲ್ಲಾ ಪ್ರಪ್ರಥಮವಾಗಿದ್ದು ಅದರ ತಟಗಳು ವೈದಿಕ ಯಜ್ಞಯಾಗಗಳ ಬೆಳವಣಿಗೆಯನ್ನು ವೀಕ್ಷಿಸಿದವು.

ಸರಸ್ವತಿ ನದಿಯೊಂದಿಗೆ ಮುಖ್ಯವಾದ ನದಿಯಾಗಿ ಉಕ್ತವಾಗಿರುವ ದೃಷದ್ವತಿ ನದಿಯನ್ನು ಕೆಲವರು ಘಗ್ಗರ್ ನದಿಯೊಂದಿಗೆ, ಮತ್ತೆ ಕೆಲವರು ಇಂದಿನ ಚಿತ್ತಾಂಗ್ ನದಿಯೊಂದಿಗೆ ಸಮೀಕರಿಸಿದ್ದಾರೆ. ಸರಸ್ವತಿ ಮತ್ತು ದೃಷದ್ವತಿ ನದಿಗಳ ಮಧ್ಯೆ, ಥಾನೇಶ್ವರ್ ಮೂಲಕ ಹರಿಯುವ, ಸರಸ್ವತೀ ನದಿಯ ಉಪನದಿಯಾಗಿ ಆಪಯಾ ನದಿ ಇತ್ತು. ಗೋಮತಿಯನ್ನು ಕೆಲವು ವಿದ್ವಾಂಸರು, ವಾರಾಣಸಿಗೆ ಪೂರ್ವದಲ್ಲಿ ಗಂಗೆಯನ್ನು ಕೂಡುವ ಗೋಮತೀ ನದಿಯೊಂದಿಗೆ ಸಮೀಕರಿಸಿದ್ದಾರೆ. ಈ ಸಮೀಕರಣವನ್ನು ಅನಂತರದ ಸಂಹಿತೆಗಳು ಮತ್ತು ಬ್ರಾಹ್ಮಣಗಳಿಗೆ ಸಂಬಂಧಿಸಿದಂತೆ ಮಾತ್ರ ಒಪ್ಪಬಹುದು. ನದೀಸ್ತುತಿಯಲ್ಲಿ ಉಕ್ತವಾಗಿರುವ ಋಗ್ವೇದದ ಗೋಮತಿಯನ್ನು ಏನೇ ಆದರೂ ಕುಭಾ ಮತ್ತು ಕ್ರುಮುಗಳ ಮಧ್ಯೆ ಇರಿಸಬಹುದು. ಆದ್ದರಿಂದ ಸಿಂಧೂ ನದಿಯ ಪಶ್ಚಿಮ ಉಪನದಿಯಾದ ಗೋಮಲ್ ನದಿಯೊಂದಿಗೆ ಇದರ ಸಮೀಕರಣ ಹೆಚ್ಚು ಸಮಂಜಸವಾಗಿ ಕಾಣಿಸುತ್ತದೆ. ಇಂದಿನ ಔಧ್ ಪ್ರಾಂತ್ಯದ ಸರ್ಜುನದಿಯ ಜಿಮ್ಮರ್ ಮತ್ತಿತರ ಸೂಚಿಸುವಂತೆ ಸರಯೂ ನದಿ. ಇದರ ಪೂರ್ವದಂಡೆಯ ಮೇಲೆಯೇ ತುರ್ವಶ–ಯದುಗಳು ಚಿತ್ರರಥ ಮತ್ತು ಅರ್ಣರನ್ನು ಸೋಲಿಸಿದ್ದು. ಕ್ರಮು (ಕುರ್ರಮ್) ಎಂದು ಸೂಚಿಸುವ ಲುಡ್ವಿಗ್ ಅವರ ಹಾಗೂ ಶುತುದ್ರೀ (ಸಟ್ಲೆಜ್) ಮತ್ತು ವಿಪಾಶ್ (ಬಿ ಯಾಸ್) ನದಿಗಳ ಸಮೂಹ ಪಾತ್ರವೆಂದು ಸೂಚಿಸುವ ಸೇಂಟ್ ಮಾರ್ಟಿನ್ ಅವರ ಸಮೀಕರಣಗಳನ್ನು ಒಪ್ಪುವುದು ಕಷ್ಟ.

ಶುತುದ್ರಿ, ವಿಪಾಶ್, ಪರುಷ್ಣಿ, ಅಸಿಕ್ನಿ ಮತ್ತು ವಿತಸ್ತಾ – ಪಂಜಾಬಿಗೆ ಈ ಹೆಸರು ಬರಲು ಈ ಐದು ನದಿಗಳು ಕಾರಣವಾಗಿದ್ದು ಅವೆಲ್ಲವೂ ಒಟ್ಟಿಗೆ ಸೇರಿ ಸಿಂಧೂನದಿಯನ್ನು ಸೇರುತ್ತವೆ. ನದೀಸ್ತುತಿಯು ವಿಪಾಶ್ ನದಿಯನ್ನು ಬಿಟ್ಟು ಅಸಿಕ್ನಿ ಮತ್ತು ವಿತಸ್ತಾ ನದಿಗಳ ಮಧ್ಯೆ ಮರದ್ವೃಧಾ ನದಿಯನ್ನು ಹೇಳುತ್ತದೆ. ಶುತುದ್ರಿ ನದಿಯು, ಇಂದಿನ ಸಟ್ಲೆಜ್ ನದಿಗೆ ಸಮೀಕರಿಸಲಾದ, ಪಂಜಾಬಿನ ಅತ್ಯಂತ ಪೂರ್ವ ದಿಕ್ಕಿನ ನದಿ. ಇದರ ಹೆಸರಿಗೆ ತಕ್ಕಂತೆ, ಈ ನದಿ ಐತಿಹಾಸಿಕ ಯುಗದಲ್ಲಿಯೂ ತನ್ನ ಪಾತ್ರವನ್ನು ಗಮನೀಯವಾಗಿ ಬದಲಾಯಿಸಿದೆ. ವಿಪಾಶ್ (ನಿರಂಕುಶ) ಈಗಿನ ಬಿಯಾಸ್ ನದಿಯಾಗಿದ್ದು ಇದು ಸಹ ತನ್ನ ಪಾತ್ರವನ್ನು ಬದಲಾಯಿಸಿದೆ. ಋಗ್ವೇದದ ಎರಡು ಮಂತ್ರಗಳನ್ನುಳಿದ ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ಈ ನದಿಯನ್ನು ಹೆಸರಿಸದಿರುವುದು, ಜೊತೆಗೆ ನದೀಸ್ತುತಿ ಸ್ತೋತ್ರದಲ್ಲಿ ಇದರ ಹೆಸರಿಲ್ಲದಿರುವುದು, ಇದು ಅಂದು ಅಮುಖ್ಯವಾದ ನದಿಯಾಗಿತ್ತೆಂದು ಕಾಣುತ್ತದೆ.

ಇಂದಿನ ರಾವೀ ನದಿಯಾದ ಪರುಷ್ಣಿ ನದಿ ಒಂದು ಪ್ರಮುಖ ನದಿಯಾಗಿತ್ತು. ಇದು ದಾಶರಾಜ್ಞ (ಹತ್ತು ರಾಜರ ಸಮರ) ಯುದ್ಧ ಸಮಯದಲ್ಲಿ ಮೇಲೆ ಉಕ್ಕಿ ಸುದಾಸರ ಶತ್ರುಗಳನ್ನು ಮುಳುಗಿಸಿ ಯುದ್ಧ ನಿರ್ಣಯದಲ್ಲಿ ಮುಖ್ಯ ಪಾತ್ರವಹಿಸಿತ್ತು. ಈಗ ಪ್ರಸಿದ್ಧವಾದ ಪ್ರ.ಶ.ಪೂ. 2700–2000 ಅವಧಿಯ ಸಿಂಧೂ–ಸರಸ್ವತಿ ನಾಗರಿಕತೆಯ ನೆಲೆಗಳಲ್ಲಿ ಒಂದಾದ ಹರಪ್ಪಾ? ಈ ನದಿ ದಂಡೆಯ ಮೇಲಿತ್ತು. ಅಸಿಕ್ನಿನದಿ, ಅನಂತರದ ಕಾಲದಲ್ಲಿ ಚಂದ್ರಭಾಗಾ ಎಂದು ಕರೆಯಲ್ಪಟ್ಟು, ಪಂಜಾಬಿನ ಇಂದಿನ ಚೀನಾಬ್ ನದಿಯಾಗಿದೆ. ಕೊನೆಯದಾಗಿ ಬರುವ ವಿತಸ್ತಾ ನದಿಯು, ಪಂಚ ನದಿಗಳಲ್ಲಿ ಅತ್ಯಂತ ಪಶ್ಚಿಮಕ್ಕೆ ಇರುವ ಇಂದಿನ ಜೀಲಂ ನದಿಯಾಗಿದೆ. ನದೀಸ್ತುತಿಯಲ್ಲಿ ಉಕ್ತವಾಗಿರುವ ಮರುದ್ವೃಧಾ ನದಿ, ಪರುಷ್ಣೀ (ರಾವಿ) ನದಿಗೆ ಸಂಗಮವಾಗುವವರೆಗಿನ, ಅಸಿಕ್ನೀ (ಚೇನಾಬ್) ಮತ್ತು ವಿತಸ್ತಾ (ಜೀಲಂ) ನದಿಗಳು ಕೂಡಿ ಹರಿದವು ಎಂಬ ರಾತ್ ಮತ್ತು ಜಿಮ್ಮರ್ ಅವರ ಅಭಿಪ್ರಾಯವನ್ನು ಚಕ್ಲಧರ್ ಅವರು ಅನುಮೋದಿಸಿದ್ದಾರೆ. ಆದರೆ ಸ್ಟೈನ್ ಅವರು ಚೀನಾಬ್ ನದಿಯನ್ನು ಅದರ ಉತ್ತರ ದಂಡೆಯಲ್ಲಿರುವ ಕಪ್‌ತ್ವಾರ್ ಬಳಿ ಸೇರುವ, ಉತ್ತರದಿಂದ ದಕ್ಷಿಣಕ್ಕೆ ಹರಿಯುವ, ಸಣ್ಣ ಕಾಶ್ಮೀರೀ ಝರಿಯಾದ, ಮರುವರ್ದ್ವನ್ ಎಂಬುದರೊಡನೆ ಸಮೀಕರಿಸಿ, ಮರುದ್ವೃಧಾ ನದಿಯನ್ನು ಕಾಶ್ಮೀರದಲ್ಲಿ ಸರಿಯಾಗಿ ಗುರುತಿಸಿದ್ದಾರೆ. ಯಾಸ್ಕನು ನದೀಸ್ತುತಿಯಲ್ಲಿ ವಿತಸ್ತಾ ನದಿಯ ಅನಂತರ ಉಕ್ತವಾಗಿರುವ ಆರ್ಜಿಕೀಯಾ ಮತ್ತು ಸುಷೋಮ ನದಿಗಳನ್ನು ಕ್ರಮವಾಗಿ ವಿಪಾಶಾ ಮತ್ತು ಸಿಂಧೂ ಎಂದು ಗುರುತಿಸುತ್ತಾನೆ.

ಸಿಂಧೂ ನದಿಯ ಪಶ್ಚಿಮಕ್ಕಿರುವ ನದಿಗಳಲ್ಲೊಂದಾದ ರಸಾ ನದಿಯನ್ನು ವೈದಿಕ ನಾಡಿಗೆ ಅತ್ಯಂತ ವಾಯುವ್ಯದಲ್ಲಿ ಹರಿಯುವ ಜಕ್ಸಾರ್ಟಿಸ್ ಎಂಬ ಝರಿಯೊಂದಿಗೆ ಸಮೀಕರಿಸಲಾಗಿದೆ. ಕುಭಾ ಎಂಬುದು ಸ್ವಾತ್ (ಸುವಾಸ್ತು) ಮತ್ತು ಗೌರಿ ನದಿಗಳ ಸಂಯುಕ್ತ ಹರಿವನ್ನು ಪ್ರಾಂಗ್ ಬಳಿ ಸೇರಿಸಿಕೊಳ್ಳುವ ಮತ್ತು ಅಟೋಕ್‌ಗೆ ಸ್ವಲ್ಪ ಮೇಲೆ ಸಿಂಧೂ ನದಿಯನ್ನು ಸೇರುವ ಇಂದಿನ ಕಾಬುಲ್ ನದಿ. ಕ್ರುಮು ಅಥವಾ ಕುರ್ರಮ್ ಮತ್ತು ಗೋಮತಿ ಅಥವಾ ಗೋಮಲ್ ನದಿಗಳು, ಇನ್ನೂ ದಕ್ಷಿಣಕ್ಕೆ ಸಿಂಧೂ ನದಿಯನ್ನು ಕೂಡುವ ಉಪನದಿಗಳು. ಸುಸರ್ತು ಮತ್ತು ಶ್ವೇತ್ಯಾ ನದಿಗಳು ಕುಭಾ ನದಿಯ ಮೇಲಿನ ಸಿಂಧೂ ಉಪನದಿಗಳೆಂದು ತೋರುತ್ತದೆ. ಮೆಹತ್ನೂ, ಕ್ರುಮು ಮತ್ತು ಗೋಮತಿ ನದಿಗಳು ಕುಭಾ ನದಿಯ ಕೆಳಗಿನ ಉಪನದಿಗಳು. ಸುವಾಸ್ತು, ಮೇಲೆ ಹೇಳಿರುವಂತೆ, ಸಿಂಧೂ ಉಪನದಿ ಕುಭಾಗೆ ಉಪ ನದಿಯಾದ ಸ್ವಾತ್‌ನದಿ. ಸುವಾಸ್ತು ಎಂಬ ಹೆಸರು 'ಯೋಗ್ಯ ವಾಸಸ್ಥಾನ' ಎಂಬ ಅರ್ಥವನ್ನು ನೀಡುವುದರಿಂದ ಪ್ರಾಯಶಃ ಅದರ ದಂಡೆಗಳ ಮೇಲೆ ವೈದಿಕ ಜನರ ನೆಲೆಯಿತ್ತು ಎಂಬುದನ್ನು ಸೂಚಿಸುತ್ತದೆ. ಅಭ್ಯಾವರ್ತಿನ್ ಛಾಯಮಾನನು ವೃಚೀವಂತರನ್ನು ಸೋಲಿಸಿದ ಸ್ಥಳವಾದ ಹರಿಯೂಪಿಯಾವನ್ನು ಒಂದು ನದಿ ಅಥವಾ ಪ್ರದೇಶ ಎಂದು ಪರಿಗಣಿಸಲಾಗಿದೆ. ಹರಿಯೂಪಿಯಾ ಸ್ಥಳ ನಾಮವಾಗಿದ್ದಲ್ಲಿ ಅದು ಇಂದಿನ ಹರಪ್ಪಾ ಎಂದು ಸೂಚಿಸಲಾಗಿದೆ. ಇವಲ್ಲದೆ ಇನ್ನೂ ಅನೇಕ ಸಣ್ಣ ನದಿಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ, ಋಗ್ವೇದದಲ್ಲಿ ಉಕ್ತವಾಗಿರುವ ರೀತಿಯಲ್ಲಿ 'ಸಪ್ತ ಸಿಂಧವಃ' ಎಂಬ ಪದದ ಅರ್ಥವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಋಗ್ವೇದದ ಪ್ರಕಾರ ಈ ಪದ ಖಚಿತವಾಗಿ ಒಂದು ದೇಶವನ್ನು ನಿರೂಪಿಸುತ್ತದೆ, ಆದರೆ ಇತರ ಕಡೆಗಳಲ್ಲಿ ಏಳು ನದಿಗಳನ್ನು ಸೂಚಿಸುತ್ತದೆ. ಮ್ಯಾಕ್ಸ್ ಮುಲರ್ ಅವರ ಪ್ರಕಾರ ಏಳು ನದಿಗಳು ಎಂದರೆ ಸಿಂಧೂ ಮತ್ತು ಸರಸ್ವತೀ ನದಿಗಳನ್ನೊಳಗೊಂಡಂತೆ ಪಂಜಾಬಿನ ಐದು ನದಿಗಳು. ಲುಡ್ವಿಗ್, ಲಾಸನ್ ಮತ್ತು ವಿಟ್ನಿ ಅವರು ಸರಸ್ವತಿಗೆ ಬದಲಾಗಿ ಕುಭಾ ನದಿಯನ್ನು ಪರಿಗಣಿಸಿ, ಆಕ್ಸಸ್ ನದಿ ಕೂಡ ಮೂಲತಃ ಏಳು ನದಿಗಳಲ್ಲಿ ಸೇರಿತ್ತು ಎಂದು ಆಲೋಚಿಸುತ್ತಾರೆ. ಸಿಂಧೂ ನದಿಯ ಪೂರ್ವಕ್ಕಿರುವ ಕುಭಾ (ಕಾಬುಲ್), ಗೋಮತಿ (ಗುಮಲ್), ಕ್ರುಮು (ಕುರ್ರಮ್), ಸುವಾಸ್ತು (ಸ್ವಾತ್) ಇತ್ಯಾದಿ ನದಿಗಳು ಋಗ್ವೇದದಲ್ಲಿ ಉಕ್ತವಾಗಿರುವುದನ್ನು ಪರಿಗಣಿಸಿದಾಗ, ಆಕ್ಸಸ್ ನದಿಯನ್ನು ಋಗ್ವೇದದ ಜನರು ತಿಳಿದಿದ್ದರು ಎಂದು ತೋರುತ್ತದೆ. ಸಪ್ತನದಿಗಳು ಎಂದರೆ ಸಿಂಧೂನದಿ, ಪಂಜಾಬಿನ ಐದು ನದಿಗಳು ಮತ್ತು ಸರಸ್ವತೀ ಎಂಬ ಅಂಶ ಏನೇ ಆದರೂ ಸಮಂಜಸವಾದ ನಿಲುವು ಎನ್ನಬಹುದು.

ಆದ್ದರಿಂದ ಆಫ್ಘಾನಿಸ್ತಾನ, ಪಂಜಾಬ್, ಸಿಂಧ್ ಮತ್ತು ರಾಜಪುಟಾಣದ ಭಾಗಗಳು, ವಾಯವ್ಯ ಪ್ರಾಂತ್ಯಗಳು, ಕಾಶ್ಮೀರ ಮತ್ತು ಸರಯೂ ನದಿಯವರೆಗಿನ ಪೂರ್ವ ಭಾರತ ಇವು ಮಂತ್ರಗಳಲ್ಲಿ ಪ್ರತಿಬಿಂಬಿತವಾಗಿರುವಂತೆ, ಅವರ ದೇಶದ ವ್ಯಾಪ್ತಿಯಾಗಿ ಎಂದು ತೀರ್ಮಾನಿಸಬಹುದು. ಈ ತೀರ್ಮಾನ ಮತ್ತೊಂದು ವಿಚಾರದಿಂದಲೂ ಖಚಿತವಾಗುತ್ತದೆ. ಋಗ್ವೇದದಲ್ಲಿ ಸಿಂಹಕ್ಕೆ ಪ್ರಥಮ ಸ್ಥಾನವಿದ್ದು, ಹುಲಿಯ ಬಗ್ಗೆ ಏನನ್ನೂ ಹೇಳದಿರುವುದನ್ನು ನೋಡಿದಾಗ, ವೈದಿಕ ಜನಾಂಗ ಬಂಗಾಲದ ಜೌಗು ಅರಣ್ಯ ಪ್ರದೇಶದವರೆಗೂ ಮುನ್ನುಗ್ಗಿರಲಿಲ್ಲವೆಂದು ಊಹಿಸಬಹುದು.

ಋಗ್ವೇದದ ಹೆಚ್ಚು ಭಾಗಗಳು ಭಾರತದ ಯಾವ ಭಾಗದಲ್ಲಿ ರಚಿತಗೊಂಡವು ಎಂಬ ವಿಷಯದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಮ್ಯಾಕ್ಸ್ ಮುಲರ್, ವೆಬರ್, ಮೂಯಿರ್, ಮತ್ತಿತರರು ಋಗ್ವೇದದ ಮುಖ್ಯ ಕಾರ್ಯ ಸ್ಥಾನವನ್ನು ಪಂಜಾಬ್ ಎಂದು ಹೇಳುತ್ತಾರೆ. ಆದರೆ ಇದು ಇಂದಿನ ಅಂಬಾಲಾಕ್ಕೆ ದಕ್ಷಿಣದಲ್ಲಿ ಸರಸ್ವತೀ ನದಿಯ ಸುತ್ತಮುತ್ತಲಿನ ಪ್ರದೇಶವಾಗಿತ್ತು ಎಂದು ಹಾಪ್‌ಕಿನ್ಸ್ ಮತ್ತು ಕೀತ್ ಅವರು ಇತ್ತೀಚೆಗೆ ಅಭಿಪ್ರಾಯ ಪಟ್ಟಿದ್ದಾರೆ. ಇಷ್ಟಾದರೂ ಬ್ರನ್‌ಹೋಫರ್, ಹರ್ಟೆಲ್, ಹ್ಯೂಸಿಂಗ್ ಮತ್ತಿತರರು ಋಗ್ವೇದದ ರಂಗಭೂಮಿ ಪಂಜಾಬ್ ಅಲ್ಲ, ಆದರೆ ಅದು ಆಫ್ಘಾನಿಸ್ತಾನ ಮತ್ತು ಇರಾನ್ ಎಂದು ವಾದಿಸುತ್ತಾರೆ.

ಋಗ್ವೇದದಲ್ಲಿಯ ನದಿಗಳ ಹೆಸರುಗಳು ಸೂಚಿಸುವಂತೆ ವೈದಿಕ ಜನಾಂಗದವರು ಸಂಪೂರ್ಣವಾಗಿ ಪಂಜಾಬನ್ನು ತಿಳಿದಿದ್ದರು ಹಾಗೂ ಅಲ್ಲಿಯ ಅತ್ಯುತ್ತಮ ಪ್ರದೇಶಗಳನ್ನು ಹೊಂದಿದ್ದರು. ಆದ್ದರಿಂದ ಋಗ್ವೇದದ ಬಹಳಷ್ಟು ಮಂತ್ರಗಳು ಇರಾನಿನಲ್ಲಾಗಲೀ ಅಂಬಾಲಾ ಜಿಲ್ಲೆಯಲ್ಲಾಗಲೀ ರಚಿತವಾದವು ಎಂದು ಊಹಿಸುವ ಆವಶ್ಯಕತೆ ಕಾಣುವುದಿಲ್ಲ.

ವೈದಿಕ ಜನಾಂಗದವರು ಋಗ್ವೇದದ ಕಾಲದಲ್ಲಿ ಸಮುದ್ರದವರೆಗೂ ತಲುಪಿದ್ದರು ಮತ್ತು ಸಮುದ್ರಯಾನದ ಜ್ಞಾನ ಅವರಿಗಿತ್ತು ಎಂಬವುದು ಜಿಜ್ಞಾಸೆಯ ವಿಷಯ. ಕೀತ್ ಮತ್ತು ಅನೇಕ ಐರೋಪ್ಯ ವಿದ್ವಾಂಸರು ಋಗ್ವೇದದ ಕಾಲದಲ್ಲಿ ಸಮುದ್ರ ಮತ್ತು ಸಮುದ್ರಯಾನ ತಿಳಿದಿತ್ತು ಎಂಬುದಕ್ಕೆ ಸ್ಪಷ್ಟವಾದ ಆಧಾರಗಳಿಲ್ಲ ಎಂದು ಹೇಳುತ್ತಾರೆ. ಮ್ಯಾಕ್ಸ್ ಮುಲರ್, ಲಾಸನ್, ಜಿಮ್ಮರ್ ಮತ್ತು ವೇದಪದ ಸೂಚಿಯ ಕರ್ತೃಗಳು, ತದ್ವಿರುದ್ಧವಾಗಿ, ಸಮುದ್ರವು ಋಗ್ವೇದ ಜನಾಂಗಕ್ಕೆ ತಿಳಿದಿತ್ತು ಎಂದು ವಾದಿಸುತ್ತಾರೆ. ಸರಸ್ವತಿ ನದಿ ಸಮುದ್ರವನ್ನು ಸೇರುತ್ತದೆ ಎಂದು ಹೇಳಲಾಗಿದೆ. ಆದರೆ ಮತ್ತೆ ಕೆಲವು ಮಂತ್ರಗಳು ಪಶ್ಚಿಮ ಮತ್ತು ಪೂರ್ವ ಸಮುದ್ರಗಳನ್ನು ಸ್ಪಷ್ಟವಾಗಿ ಹೇಳುವಂತೆ ತೋರುತ್ತದೆ. ಸಮುದ್ರದ ಅಮೂಲ್ಯ ಸಂಪತ್ತುಗಳಿಗೆ ಪರಾಮರ್ಶೆಗಳು ಮತ್ತು ಭುಜ್ಯುವಿನ ಕಥೆ ಸಮುದ್ರಯಾನದ ಪ್ರಸ್ತಾಪ ಎಂದು ತೋರುತ್ತದೆ. ಋಗ್ವೇದದ ಮುಖಾಂತರ ಅವರಿಗಿದ್ದ ಉನ್ನತವಾದ ಅಲೆಗಳ ಜ್ಞಾನವನ್ನು ಊಹಿಸಬಹುದು. ಈ ಎಲ್ಲ ಪರಾಮರ್ಶೆಗಳು ಋಗ್ವೇದದ ಜನಾಂಗದವರು ಸಮುದ್ರವನ್ನು ತಿಳಿದಿದ್ದುದು ಮಾತ್ರವಲ್ಲದೆ, ಸಮುದ್ರ ಯಾತ್ರಿಗಳಾಗಿದ್ದು ಹೊರಪ್ರಪಂಚದ ಜೊತೆಗೆ ಸಮುದ್ರ ವ್ಯಾಪಾರವನ್ನೂ ಹೊಂದಿದ್ದರು ಎನ್ನುವುದು ನಿಸ್ಸಂದೇಹವಾಗಿದೆ.

**ಜನಾಂಗಗಳು:** ವೈದಿಕ ಜನಗಳಿಗೆ ತಿಳಿದಿದ್ದ ಇಡೀ ಭೂಪ್ರದೇಶವನ್ನು, ಸಾಮಾನ್ಯವಾಗಿ ವಿವಿಧ ರಾಜರು ಆಳುತ್ತಿದ್ದ, ಜನಾಂಗೀಯ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಋಗ್ವೇದದ ಮಂತ್ರಗಳಲ್ಲಿ ದಾಶರಾಜ್ಞ ಅಥವಾ ಹತ್ತು ರಾಜರ ಯುದ್ಧಗಳು ಎಂಬುದು ಬಹಳ ಮುಖ್ಯವಾದ ಚಾರಿತ್ರಿಕ ಘಟನೆಯಾಗಿದೆ. ಈ ಪ್ರಖ್ಯಾತ ಯುದ್ಧದಲ್ಲಿ ಬಹಳಷ್ಟು ಮುಖ್ಯ ಕುಲಗಳು ಮತ್ತು ವ್ಯಕ್ತಿಗಳು ಭಾಗವಹಿಸಿದ್ದರಿಂದ ಈ ಕದನವನ್ನು ಇಲ್ಲಿ ನಿರೂಪಿಸುವುದು ಸೂಕ್ತ. ಬ್ರಹ್ಮಾವರ್ತವೆಂದು ಅನಂತರ ಹೆಸರಾದ ರಾಜ್ಯದಲ್ಲಿ ತೃತ್ಸು ವಂಶದಲ್ಲಿ ಸುದಾಸನೆಂಬ ಭರತ ರಾಜನಿದ್ದ. ಭರತರ ಕುಶಿಕ ವಂಶದಲ್ಲಿ ಹುಟ್ಟಿದ ವಿಶ್ವಾಮಿತ್ರನು ಸುದಾಸನಿಗೆ ಗುರುವಾಗಿದ್ದ. ಆತನನ್ನು ವಿಪಾಶಾ ಮತ್ತು ಶುತುದ್ರೀಗಳ ಮೇಲಿನ ಯಶಸ್ವೀ ದಂಡಯಾತ್ರೆಗೆ ಕರೆದೊಯ್ದ. ಆದರೆ ಅನಂತರದಲ್ಲಿ ಸುದಾಸ ಪ್ರಾಯಶಃ ಹೆಚ್ಚು ವೇದ ಜ್ಞಾನವನ್ನು ಹೊಂದಿದ್ದ ವಸಿಷ್ಠನನ್ನು ತನ್ನ ಗುರುವನ್ನಾಗಿ ಮಾಡಿಕೊಂಡು ವಿಶ್ವಾಮಿತ್ರನನ್ನು ಹೊರಗಟ್ಟಿದ. ಅಲ್ಲಿಂದ ಮೊದಲಾಗಿ ಈ ಎರಡೂ ಗುರುಗಳ ನಡುವೆ ಬದ್ಧದ್ವೇಷ ಪ್ರಾರಂಭವಾಯಿತು. ದ್ವೇಷ ಸಾಧನೆಗಾಗಿ ವಿಶ್ವಾಮಿತ್ರನು ಪೂರು, ಯದು, ತುರ್ವಶ, ಅನು ಮತ್ತು ದ್ರುಹ್ಯು ಎಂಬ ಐದು ಪ್ರಸಿದ್ಧ ಜನಾಂಗಗಳು ಮತ್ತು ಅಲಿನ, ಪಕ್ಥ, ಭಲಾನಸ್, ಶಿವ ಮತ್ತು ವಿಷಾಣಿನ್ ಎಂಬ ಐದು ಇತರ ಸಣ್ಣ ಜನಾಂಗಗಳಿಂದ ಕೂಡಿದ ಹತ್ತು ಅರಸರ ಬಣಗಳ ಸಂಘಟನೆಯನ್ನು ಭರತರ ವಿರುದ್ಧವಾಗಿ ನುಗ್ಗಿಸಿದ. ಪರುಷ್ಣೀ ನದಿಯ ದಂಡೆಯಲ್ಲಿ ನಡೆದ ಭೀಕರ ನಿರ್ಣಾಯಕ ಯುದ್ಧದಲ್ಲಿ ಭರತರು ಶತ್ರು ಸಮೂಹವನ್ನು ಸಂಪೂರ್ಣವಾಗಿ ಸೋಲಿಸಿದರು. ಶತ್ರುಗಳಲ್ಲಿ ಅನು ಮತ್ತು ದ್ರುಹ್ಯು ರಾಜರು ನದಿಯಲ್ಲಿ ಮುಳುಗಿದರು. ಪೂರುಗಳ ರಾಜ ಪುರುಕುತ್ಸ ಮರಣ ಹೊಂದಿದ. ಸುದಾಸ ಮೂರು ವೈದಿಕೇತರ ಜನಾಂಗಗಳ ವಿರುದ್ಧ ಮತ್ತೊಂದು ಯುದ್ಧ ಮಾಡಬೇಕಾಯಿತು. ಅದರಲ್ಲಿ ಭೇದನೆಂಬ ರಾಜನ ನೇತೃತ್ವದಲ್ಲಿ ಅಜರು, ಶಿಗ್ರುಗಳು ಮತ್ತು ಯಕ್ಷುಗಳು ಒಂದಾಗಿ ಸೇರಿದ್ದರು. ಆದರೆ ಈ ಶತ್ರು ರಾಜರೂ ಅದೇ ಗತಿಯನ್ನು ಹೊಂದಬೇಕಾಯಿತು. ಅವರು ಸಂಪೂರ್ಣವಾಗಿ ಸೋತು ಯಮುನಾ ನದಿಯ ಬಳಿಯಲ್ಲಿ ಕೊಲ್ಲಲ್ಪಟ್ಟರು.

ಭರತ ಖಂಡಕ್ಕೆ ಈ ಹೆಸರನ್ನು ತಂದುಕೊಟ್ಟ ಭರತರು ಋಗ್ವೇದದ ಜನಾಂಗಗಳಲ್ಲೇ ಬಹಳ ಮುಖ್ಯರಾದವರು. ಋಗ್ವೇದದ ಕಾಲದಲ್ಲಿ ಅವರು ಸರಸ್ವತೀ ಮತ್ತು ಯಮುನಾ ನದಿಗಳ ಮಧ್ಯಭೂಮಿಯಲ್ಲಿ ನೆಲೆಸಿದ್ದರು. ಭರತರು ಪೂರುಗಳ ಶತ್ರುಗಳಾಗಿದ್ದರು ಮತ್ತು ಸುದಾಸರು ಹಾಗೂ ತೃತ್ಸುಗಳಿಗೆ ಸಂಬಂಧಿಸಿದಂತೆ, ಇವರು ಋಗ್ವೇದದಲ್ಲಿ ಬಹಳ ಪ್ರಮುಖರಾಗಿ ಕಾಣಿಸಿಕೊಳ್ಳುತ್ತಾರೆ. ಇವರ ರಾಜಕುವರರು ಸರಸ್ವತೀ, ದೃಷದ್ವತೀ ಮತ್ತು ಆಪಯಾ (ಅನಂತರದ ಕುರುಕ್ಷೇತ್ರ) ತೀರಗಳಲ್ಲಿ ಯಜ್ಞಗಳನ್ನು ಮಾಡಿದರು. ಪಶ್ಚಿಮದಲ್ಲಿ ವೈದಿಕ ಜನಾಂಗ ಮತ್ತು ಪೂರ್ವದಲ್ಲಿ ವೈದಿಕೇತರ ವಿರುದ್ಧ ನಡೆದ ಋಗ್ವೇದ ಕಾಲದ ವಿಜಯೀ ಯುದ್ಧಗಳಲ್ಲಿ ಅವರು ತೋರಿದ ಸೈನಿಕ ಶೌರ್ಯ ಅವರ ಪಂಥ ಮತ್ತು ಧಾರ್ಮಿಕ ಆಚಾರಗಳ ಶ್ರೇಷ್ಠತೆಗೆ ಅನುಗುಣವಾಗಿತ್ತು. ಈ ಅಂಶಗಳು ಅನಂತರದ ಕಾಲದಲ್ಲಿ ವಿಶೇಷ ಮಹತ್ತ್ವ ಮತ್ತು ಪ್ರಾಬಲ್ಯವನ್ನು ಗಳಿಸಿದಂತೆ ತೋರುತ್ತದೆ. ವಿಶ್ವಾಮಿತ್ರನನ್ನು ಭರತರ್ಷಭ ಮತ್ತು ಕೌಶಿಕ ಎಂದು ಕರೆದು, ಈ ಭರತರ ಕುಶಿಕ ವಂಶಕ್ಕೆ ಸೇರಿದವನೆಂದು ಉಲ್ಲೇಖಿಸಿದೆ.

ತೃತ್ಸುಗಳಿಗೂ ಭರತರಿಗೂ ಇದ್ದ ಸಂಬಂಧ ಖಚಿತವಾಗಿ ತಿಳಿದಿಲ್ಲ. ತೃತ್ಸುಗಳು, ಪರುಷ್ಣೀಗಳ ಪೂರ್ವ ಪ್ರಾಂತ್ಯವನ್ನು ಆಕ್ರಮಿಸಿಕೊಂಡಿದ್ದರು. ಇವರಿಬ್ಬರಿಗೂ ಪೂರುಗಳು ಶತ್ರುಗಳಾಗಿದ್ದರು. ಭರತರು ಮತ್ತು ತೃತ್ಸುಗಳನ್ನು ಒಂದೇ ಎಂದು ಲುಡ್ವಿಗ್ ಗುರುತಿಸಿರುವುದು ಸರಿಯೆಂದು ತೋರುತ್ತದೆ. ಓಲ್ಡನ್‌ಬರ್ಗ್ ಅವರು ತೃತ್ಸುಗಳನ್ನು ಭರತರ ಪುರೋಹಿತರೆಂದು ಭಾವಿಸಿ ಇವರನ್ನು ವಸಿಷ್ಠರುಗಳೊಂದಿಗೆ ಸಮೀಕರಿಸುತ್ತಾರೆ. ಆದರೆ ತೃತ್ಸುಗಳು ಭರತರ ರಾಜವಂಶದವರಾಗಿದ್ದರು ಎಂಬ ಗೆಲ್ಡ್‌ನರ್ ಅವರ ಹೇಳಿಕೆ ಹೆಚ್ಚು ಸಮಂಜಸವಾದ ಅಭಿಪ್ರಾಯವೆಂದು ತೋರುತ್ತದೆ. ತೃತ್ಸು ಮತ್ತು ಭರತರನ್ನು ಶತ್ರುಗಳೆಂದು ನಿರೂಪಿಸುವ ಜಿಮ್ಮರ್ ಅವರ ಅಭಿಪ್ರಾಯ ಸ್ವಲ್ಪವೂ ಸರಿಯಾಗಿ ಕಾಣುವುದಿಲ್ಲ. ತೃತ್ಸುಗಳು ಮತ್ತು ಅವರ ನೆಂಟರಾದ ಭರತರು ಪರುಷ್ಣೀ ಮತ್ತು ಯಮುನಾ ನದಿಗಳ ದಂಡೆಗಳ ಮೇಲೆ ವಿವಿಧ ಜನಾಂಗಗಳೊಂದಿಗೆ ಯುದ್ಧ ನಿರತರಾಗಿದ್ದರಷ್ಟೆ. ಆದರೂ ಋಗ್ವೇದಾನಂತರದ ಕಾಲದಲ್ಲಿ, ಅವರು ತಮ್ಮ ಹಿಂದಿನ ಶತ್ರುಗಳಾಗಿದ್ದ ಪೂರುಗಳೊಡನೆ ಒಂದುಗೂಡಿ ಅನಂತರದ ಕುರು ಜನಾಂಗವಾದರು. ಋಗ್ವೇದವು ಸೃಂಜಯರನ್ನು ತೃತ್ಸುಗಳ ಮಿತ್ರರೆಂದು ಹೇಳುತ್ತದೆ. ತೃತ್ಸುಗಳಿಗೆ ಅವರನ್ನು ಆಳಲು ವಂಶಪಾರಂಪರ್ಯವಾಗಿ ರಾಜರುಗಳಿದ್ದರು. ಇವರಲ್ಲಿ ಒಬ್ಬನಾದ ಅತಿಥಿಗ್ವ ಎಂಬ ಕುಲನಾಮವನ್ನು ಹೊಂದಿದ್ದ ದಿವೋದಾಸ ಒಬ್ಬ ಮಹಾನ್ ಜಯಶಾಲಿ. ಈತ ಒಂದು ಕಡೆ ಪೂರು, ಯದು ಮತ್ತು ತುರ್ವಶ ಮತ್ತೊಂದು ಕಡೆ ಶಂಬರ, ದಾಸರಾಜ, ಪಣಿಗಳು ಮೊದಲಾದವರ ವಿರುದ್ಧ ಯಶಸ್ವಿಯಾಗಿ ಕಾದಾಡಿದ್ದ. ಪಿಜವನನ ಮಗನಾದ ಸುದಾಸನು ದಿವೋದಾಸನ ವಂಶಜ. ದಾಶರಾಜ್ಞದಲ್ಲಿ ಮತ್ತು ಭೇದ ಎಂಬ ರಾಜನ ವಿರುದ್ಧ ನಡೆದ ಯುದ್ಧದಲ್ಲಿ ಈತನ ಸಾಹಸ ಕಾರ್ಯಗಳನ್ನು ವಿವರಿಸಲಾಗಿದೆ. ಈತ ಒಬ್ಬ ಪ್ರಸಿದ್ಧ ಯೋಧನಷ್ಟೇ ಅಲ್ಲದೆ ಒಬ್ಬ ಮಹಾ ವಿದ್ವಾಂಸನೂ ಮಂತ್ರಗಳ ಕರ್ತೃವೂ ಆಗಿದ್ದ.

ಪೂರುಗಳು ಋಗ್ವೇದದಲ್ಲಿ ಅನುಗಳು, ದ್ರುಹ್ಯುಗಳು, ತುರ್ವಶರು ಮತ್ತು ಯದುಗಳ ಜೊತೆಗೆ ಉಲ್ಲೇಖಿಸಲ್ಪಟ್ಟಿದ್ದಾರೆ. 'ದಾಶರಾಜ್ಞ' ದಲ್ಲಿ ಸೋಲನ್ನು ಅನುಭವಿಸಿದರೂ ಪೂರುಗಳು ಋಗ್ವೇದದ ಕಾಲದಲ್ಲಿ ಒಂದು ಮುಖ್ಯವಾದ ಜನಾಂಗವಾಗಿದ್ದರು. ಅವರು ತೃತ್ಸುಗಳು ಹಾಗೂ ಭರತರೊಂದಿಗೆ ನಿಕಟ ಸಂಬಂಧ ಹೊಂದಿದ್ದು ಸರಸ್ವತೀ ನದಿಯ ಎರಡೂ ದಂಡೆಗಳ ಮೇಲೆ ವಾಸಿಸುತ್ತಿದ್ದರು. ವಿಪರೀತ ದೊಡ್ಡದೆನಿಸುವ ಪೂರು ರಾಜರ ಪಟ್ಟಿಯಿಂದ ಆ ಜನಾಂಗದ ಮಹತ್ತ್ವ ಸೂಚಿತವಾಗುತ್ತದೆ. ಅವರ ವಿವಿಧ ಹೆಸರುಗಳು ಈ ಮುಂದಿನ ವಂಶಾವಳಿಗಳನ್ನು ಸೂಚಿಸುತ್ತವೆ. ದುರ್ಗಹ–ಗಿರಿಕ್ಷಿತ್–ಪುರುಕುತ್ಸ–ತ್ರಸದಸ್ಯು. ಪುರುಕುತ್ಸನು ಸುದಾಸನ ಕಾಲದವನು, ದಾಸರನ್ನು ಗೆದ್ದವನು ಎಂದು ಹೇಳಲ್ಪಟ್ಟಿದೆ. ಪುರುಕುತ್ಸನ ಒಬ್ಬ ಮಗ ತ್ರಸದಸ್ಯು ಎಂಬುವನು, ತಂದೆಯ ಕಷ್ಟದ ಸಮಯದಲ್ಲಿ, ಅಂದರೆ ಪ್ರಾಯಶಃ ಆತನ ಸಾವು ಅಥವಾ ದಾಶರಾಜ್ಞ ಯುದ್ಧದಲ್ಲಿ ಕೈಸೆರೆಯಾದ ಸಮಯದಲ್ಲಿ ಜನಿಸಿದನೆಂದು ಹೇಳಲಾಗಿದೆ. ಋಗ್ವೇದದ ಕೆಲವು ಮಂತ್ರಕಗಳಲ್ಲಿ ಸುದಾಸರು ಅಥವಾ ದಿವೋದಾಸರು ಮತ್ತು ಪುರುಕುತ್ಸ ಅಥವಾ ತ್ರಸದಸ್ಯು ಮೈತ್ರಿ ಭಾವದಿಂದ ಉಕ್ತವಾಗಿರುವುದು, ತೃತ್ಸುಗಳು, ಭರತರು ಮತ್ತು ಪೂರುಗಳು ಸೇರಿ ಕುರುಜನಾಂಗವಾಗಿರುವುದನ್ನು ಸೂಚಿಸುತ್ತದೆ. ಕುರುಜನಾಂಗವನ್ನು ಋಗ್ವೇದದಲ್ಲಿ ನೇರವಾಗಿ ಹೇಳಿಲ್ಲ. ಆದರೆ ತ್ರಾಸದಸ್ಯವ ಎಂಬ ಪಿತೃ ಗೋತ್ರವನ್ನು ಹೊಂದಿದ್ದ ಪೂರು ರಾಜ ಕುರುಶ್ರವಣ ಎಂಬ ಹೆಸರು, ಈ ಮೂರೂ ವೈರಿ ಜನಾಂಗಗಳು ಉತ್ತರ ವೈದಿಕ ಕಾಲದಲ್ಲಿ ಕುರು ಎಂಬ ಹೆಸರಿನಲ್ಲಿ ಒಂದುಗೂಡಿದವು ಎಂದು ಸೂಚಿಸುತ್ತದೆ.

ಕುರುಗಳೊಂದಿಗೆ ಕ್ರಿವಿಗಳು ಸಹ ಒಂದುಗೂಡಿದ್ದರು. ಅಷ್ಟು ಪ್ರಮುಖವಲ್ಲದ ಈ ಜನಾಂಗ ಪ್ರಾಯಶಃ ಸಿಂಧೂ ಮತ್ತು ಅಸಿಕ್ನೀ (ಚೀನಾಬ್) ನದಿಗಳ ಪ್ರದೇಶದಲ್ಲಿ ವಾಸಿಸುತ್ತಿದ್ದು ಅನಂತರ ಯಮುನೆಯನ್ನು ದಾಟಿ ಪೂರ್ವದ (ಅನಂತರದ ಪಂಚಾಲ) ದೇಶಕ್ಕೆ ಬಂದರು. ಅನಂತರದ ಸಾಹಿತ್ಯದಲ್ಲಿ, ಪಾಂಚಾಲರ ಪ್ರಾಬಲ್ಯದ ಮುಂದೆ ಕ್ರಿವಿಗಳು ಅಮುಖ್ಯವಾಗಿ ಕಾಣಬರುವುದು, ಪ್ರಾಯಶಃ ಅನಂತರದ ಕುರುಪಂಚಾಲರ ಬಾಂಧವ್ಯ ಭರತ ಮತ್ತು ಇತರ ಜನಾಂಗಗಳನ್ನಲ್ಲದೆ, ಕ್ರಿವಿಗಳನ್ನು ಸಹ ಒಳಗೊಂಡಿದ್ದರಿಂದ ಇರಬಹುದೆಂದು ತೋರುತ್ತದೆ. ಶತಪಥ ಬ್ರಾಹ್ಮಣವು ಕ್ರಿವಿ ಎಂಬುದು ಪಂಚಾಲರ ಪ್ರಾಚೀನ ನಾಮ ಎಂದು ಸ್ಪಷ್ಟವಾಗಿ ಹೇಳುತ್ತದೆ.

ತೃತ್ಸುಗಳೊಂದಿಗೆ ನಿಕಟ ಸ್ನೇಹವನ್ನು ಹೊಂದಿದ್ದವರೆಂದರೆ ಅವರ ನೆರೆವಾಸಿಗಳಾಗಿದ್ದ ಪ್ರಾಯಶಃ ಪಂಚಾಲದ ಸೃಂಜಯರೆಂಬ ಜನಾಂಗ. ಹಿಲ್‌ಬ್ರಾಂಟ್ ಅವರು ಸೃಂಜಯರನ್ನು ಸಿಂಧೂವಿನ ಪಶ್ಚಿಮದವರೆಂದರೆ, ಜಿಮ್ಮರ್ ಅವರು ಮೇಲಣ ಸಿಂಧೂದವರೆನ್ನುತ್ತಾರೆ. ಸೃಂಜಯರ ಮಿತ್ರರಾದ ತೃತ್ಸುಗಳು ಮಧ್ಯದೇಶದವರಾಗಿದ್ದರಿಂದ, ವೇದ ಪದಸೂಚಿಯ ಕರ್ತೃಗಳು, ಸರಿಯಾಗಿ ಸೂಚಿಸಿರುವಂತೆ, ಸೃಂಜಯರು ಸಿಂಧೂನದಿಯಿಂದ ಹೆಚ್ಚು ಪೂರ್ವಕ್ಕೆ ಇದ್ದಿರಬಹುದೆಂದು ಭಾವಿಸಬಹುದು. ಸೃಂಜಯರ ರಾಜನಾದ ದೈವವಾತನು ತುರ್ವಶ ಮತ್ತು ವೃಚೀವಂತರ ಮೇಲೆ ಜಯಶಾಲಿಯಾಗಿದ್ದನೆಂದು ಪ್ರಖ್ಯಾತನಾಗಿದ್ದಾನೆ. ದೈವವಾತನ ಯಜ್ಞಾಗ್ನಿಯನ್ನು ಹೇಳಿ, ಸಾಹದೇವ್ಯ ಸೋಮಕವನ್ನು ಸಹ ಈ ಸಂಬಂಧದಲ್ಲಿ ಹೇಳಿದೆ. ಸೃಂಜಯನಾದ ಪ್ರಸ್ತೋಕನನ್ನು ದಿವೋದಾಸನೊಂದಿಗೆ ಶ್ಲಾಘಿಸಲಾಗಿದೆ. ಸೃಂಜಯ ಮತ್ತು ಭರತರಿಬ್ಬರಿಗೂ ತುರ್ವಶರು ಶತ್ರುಗಳಾಗಿದ್ದರು.

ಪೂರುಗಳ ಮಿತ್ರರಾಗಿ ಅನುಗಳು, ದ್ರುಹ್ಯುಗಳು, ಯದುಗಳು ಮತ್ತು ತುರ್ವಶರು, ಭರತರ ವಿರುದ್ಧ ಒಂದುಗೂಡಿದ್ದರು. ಜಿಮ್ಮರ್ ಅವರ ಪ್ರಕಾರ ಈ ಐದು ಜನಗಳ ಕೂಟವೇ ಋಗ್ವೇದದ "ಪಂಚ ಜನಗಳು" (ಪಂಚ ಜನಾಃ). ಋಗ್ವೇದ ಮತ್ತು ಉತ್ತರ ವೈದಿಕ ಸಾಹಿತ್ಯಗಳಲ್ಲಿ 'ಐದು ಜನಗಳು' ಎಂಬ ಉಕ್ತಿ ಅನೇಕ ಹೆಸರುಗಳಿಂದ ಕಾಣಬರುತ್ತದೆ. ಐವರು ಎಂಬುದು ಯಾರನ್ನು ಸೂಚಿಸುತ್ತದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ.

ಸುದ್ರು ಜನಾಂಗದ ವೈರಿಗಳ ಪೈಕಿ ದ್ರುಹ್ಯುಗಳು, ತುರ್ವಶರು ಮತ್ತು ಅನುಗಳು, ಅಸಿಕ್ನೀ ಮತ್ತು ಪರುಷ್ಣೀ ನದಿಗಳ ನಡುವೆ ಇದ್ದರು. ಋಗ್ವೇದದಲ್ಲಿ ಸಾಮಾನ್ಯವಾಗಿ ಯದು ಮತ್ತು ತುರ್ವಶರ ಹೆಸರುಗಳು ಒಟ್ಟಿಗೆ ಕಾಣಬರುತ್ತವೆ. ಈ ಎರಡು ಮಿತ್ರ ಜನಾಂಗಗಳು ದಕ್ಷಿಣ ಪಂಜಾಬಿನಲ್ಲಿ ಮತ್ತು ಪ್ರಾಯಶಃ ಇನ್ನೂ ದಕ್ಷಿಣಕ್ಕೆ ವಾಸಿಸುತ್ತಿದ್ದವು. ತುರ್ವಶ ಎಂಬುದು ಯದುರಾಜನ ಹೆಸರೆಂದು ಹಾಪ್‌ಕಿನ್ಸ್ ಹೇಳುತ್ತಾರೆ. ಆದರೆ ಇದಕ್ಕೆ ನಿರ್ಣಾಯಕ ಸಾಕ್ಷಿ ಇಲ್ಲ. ಜಿಮ್ಮರ್ ಅವರು ತುರ್ವಶರನ್ನು ವೃಚೀವಂತರೊಂದಿಗೆ ಸಮೀಕರಿಸುತ್ತಾರೆ. ಆದರೆ ಮಂತ್ರಗಳು ಇವರನ್ನು ಕೇವಲ ಮಿತ್ರರೆಂದು ಮಾತ್ರ ಹೇಳುತ್ತವೆ. ಉತ್ತರ ವೈದಿಕ ಸಾಹಿತ್ಯದಲ್ಲಿ ತುರ್ವಶರ ಹೆಸರು ಕಾಣಬರುವುದಿಲ್ಲ. ಪ್ರಾಯಶಃ ಅವರು ಪಂಚಾಲರೊಂದಿಗೆ ಒಂದುಗೂಡಿದ್ದೇ ಇದಕ್ಕೆ ಕಾರಣವಿರಬಹುದು.

ಮತ್ಸ್ಯರು, ಪೌರಾಣಿಕ ಯುಗದಲ್ಲಿ, ಮಥುರಾದ ಶೂರಸೇನರ ಪಶ್ಚಿಮಕ್ಕೆ ವಾಸಿಸುತ್ತಿದ್ದರು; ಅಂದರೆ ಇಂದಿನ ಅಳ್ವಾರ್, ಭರತಪುರ ಮತ್ತು ಜೈಪುರ ಪ್ರದೇಶಗಳು. ಇವು ಋಗ್ವೇದದ ಕಾಲದ ಅವರ ವಾಸಸ್ಥಾನವೂ ಆಗಿದ್ದಿರಬಹುದು.

ಅಜರು, ಶಿಗ್ರುಗಳು ಮತ್ತು ಯಕ್ಷುಗಳು ಪ್ರಾಯಶಃ ಪೂರ್ವಕ್ಕೆ ವಾಸಿಸುತ್ತಿದ್ದ ಜನಾಂಗಗಳು. ಅವರನ್ನು ಸಾಮಾನ್ಯವಾಗಿ ಆರ್ಯೇತರರೆಂದು ಪರಿಗಣಿಸಲಾಗುತ್ತದೆ. ಆದರೆ ಇವರ ಬಗ್ಗೆ ಸ್ಪಷ್ಟ ಮಾಹಿತಿಗಳಿಲ್ಲ. ಪಕ್ಥರು, ಭಲಾನಸರು, ವಿಷಾಣಿಗಳು, ಅಲಿನರು ಮತ್ತು ಶಿವರು – ಈ ಐವರು ಗಡಿಪ್ರಾಂತ್ಯದ ಜನಾಂಗಗಳು. ಪಕ್ಥರು, ಕ್ರುಮು ನದಿಯ ಉದ್ಗಮ ಸ್ಥಾನವಾದ ಬೆಟ್ಟಗಳಲ್ಲಿ ವಾಸಿಸುತ್ತಿದ್ದರು. ಜಿಮ್ಮರ್ ಅವರು ಇವರನ್ನು ಇಂದಿನ ಪಖ್ತೂನರೆಂದು ಹೇಳಿ, ಅವರು ಪೂರ್ವ ಆಫ್ಘಾನಿಸ್ಥಾನದವರೆಂದು ಹೇಳುತ್ತಾರೆ. ಪಕ್ಥರ ದಕ್ಷಿಣಕ್ಕೆ ಭಲಾನಸರು ವಾಸಿಸುತ್ತಿದ್ದರು. ಅವರ ಮೂಲಸ್ಥಾನವನ್ನು ಪೂರ್ವ ಕಾಬುಲಿ ಸ್ಥಾನವೆಂದು ಜಿಮ್ಮರ್ ಅವರು ಹೇಳಿದ್ದಾರೆ. ವಿಷಾಣಿಗಳನ್ನು ಪ್ರಾಯಶಃ ಹಾಗೆ ಕರೆದದ್ದು, ಅವರ ಶಿರಸ್ತ್ರಾಣಗಳು ಕೊಂಬಿನಾಕಾರವಾಗಿದ್ದವು ಅಥವಾ ಕೊಂಬುಗಳಿಂದ ಅಲಂಕೃತವಾಗಿದ್ದವು ಎಂದಿರಬಹುದು. ಅವರು, ಅವರ ಮಿತ್ರರಂತೆ ವಾಯವ್ಯದವರಾಗಿದ್ದು ಕ್ರುಮು ಮತ್ತು ಗೋಮತಿಗಳ ನಡುವಿನ ಕೆಳಭಾಗದ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದರು. ಅಲಿನರ ಪ್ರದೇಶವನ್ನು ಕಾಫಿರಿಸ್ತಾನದ ಈಶಾನ್ಯವೆಂದು ಹೇಳಲಾಗಿದೆ. ಅವರು ಪಕ್ಥರ ಮಿತ್ರರಾಗಿದ್ದರು ಮತ್ತು ಖಂಡಿತವಾಗಿಯೂ ಸುದಾಸರ ಶತ್ರುಗಳಾಗಿದ್ದರೇ ಹೊರತು, ರಾತ್ ಅವರು ಹೇಳಿರುವಂತೆ, ಮಿತ್ರರಾಗಿರಲಿಲ್ಲ. ಶಿವರು ವೈದಿಕ ಯುಗದಲ್ಲಿ ಸಿಂಧೂ ಮತ್ತು ವಿತಸ್ತಾ ನದಿಗಳ ನಡುವೆ ವಾಸಿಸುತ್ತಿದ್ದರು.

ದಾಶರಾಜ್ಞ ಸಮರದಲ್ಲಿ ನೇರವಾಗಿ ಉಕ್ತವಾಗದ ಹಾಗೂ ಸುದಾಸರು ಹೂಡಿದ ಯಾವುದೇ ಯುದ್ಧದಲ್ಲಿ ಕಾಣಬರದ ಕೆಲವು ಜನಾಂಗಗಳಿದ್ದುವು.

ಯಮುನಾ ಮತ್ತು ವಿಂಧ್ಯಗಳ ನಡುವೆ ಪ್ರಾಯಶಃ ವಾಸಿಸುತ್ತಿದ್ದ ಚೇದಿಗಳು ಕಶು ಎಂಬ ಪ್ರಬಲ ರಾಜನನ್ನು ಹೊಂದಿದ್ದರು. ಒಂದು ದಾನಸ್ತುತಿಯಲ್ಲಿ ಈತ ತನ್ನ ಪುರೋಹಿತನಿಗೆ ಹತ್ತು ರಾಜರನ್ನು ಗುಲಾಮರನ್ನಾಗಿ ಕಾಣಿಕೆ ನೀಡಿದನೆಂದು ಹೇಳಿದೆ. ಪುರಾಣಗಳು ಚೇದಿಗಳನ್ನು ಯದುಗಳ ಒಂದು ಶಾಖೆ ಎಂದು ಹೇಳುತ್ತವೆ.

ಉಶೀನರರನ್ನು ಐತರೇಯ ಬ್ರಾಹ್ಮಣವು, ವಶರು ಮತ್ತು ಕುರುಪಂಚಾಲರೊಂದಿಗೆ, ಮಧ್ಯದೇಶದಲ್ಲಿ ವಾಸಿಸುತ್ತಿದ್ದರೆಂದು ಹೇಳುತ್ತದೆ. ಋಗ್ವೇದದ ಕಾಲದಲ್ಲಿ ಉಶೀನರರು ಇನ್ನೂ ಈಶಾನ್ಯದಲ್ಲಿ ನೆಲೆಸಿದ್ದರೆಂಬ ಜಿಮ್ಮರರ ವಾದಕ್ಕೆ ಆಧಾರವಿಲ್ಲ. ಈ ಕಾಲದಲ್ಲಿಯೂ ಅವರು ಮಧ್ಯ ದೇಶದಲ್ಲಿಯೇ ನೆಲೆಸಿದ್ದರು ಎಂದು ಊಹಿಸುವುದು ಹೆಚ್ಚು ಸೂಕ್ತ.

ಮುಂಚೂಣಿ ಪ್ರದೇಶ ವಾಸಿಗಳಲ್ಲಿ ಒಬ್ಬರಾದ ಗಂಧಾರಿಗಳು ಭಾರತದ ಅತ್ಯಂತ ವಾಯವ್ಯದ ಭಾಗಗಳಲ್ಲಿ ನೆಲೆಸಿದ್ದವರು. ಋಗ್ವೇದದಲ್ಲಿ ಗಂಧಾರದ ಉತ್ತಮ ಗುಣಮಟ್ಟದ ಕುರಿ ತುಪ್ಪಟದ ಉಲ್ಲೇಖವಿದೆ. ಜಿಮ್ಮರ್ ಅವರ ಪ್ರಕಾರ ವೈದಿಕ ಕಾಲದಲ್ಲಿ ಅವರು, ಕುಭಾನದಿಯು ಸಿಂಧೂನದಿಯನ್ನು ಸೇರುವವರೆಗೆ ಅದರ ದಕ್ಷಿಣ ದಂಡೆಯ ಮೇಲೆ ಮತ್ತು ಅಲ್ಲಿಂದ ಕೆಳಕ್ಕೆ ಸಿಂಧೂ ನದಿಯ ಪೂರ್ವ ಭಾಗದಲ್ಲಿ ನೆಲೆಸಿದ್ದರು.

ಋಗ್ವೇದದ ಮಂತ್ರಗಳಲ್ಲಿ ಬರುವ ಪೃಥುಪ್ರಶ್ವಃ (ಅಂದರೆ ಅಗಲವಾದ ಎದೆ ಮೂಳೆ ಅಥವಾ ಕೊಡಲಿಯನ್ನುಳ್ಳವರು) ಎಂಬ ಪದ ಲುಡ್ವಿಗ್ ಮತ್ತು ವೆಬರ್ ಅವರ ಪ್ರಕಾರ, ಪೃಥುಗಳಿಗೆ ಮತ್ತು ಪರ್ಶುಗಳಿಗೆ, ಅಂದರೆ ಪಾರ್ಥಿಯನ್ನರಿಗೆ ಮತ್ತು ಪರ್ಷಿಯನ್ನರಿಗೆ ಅನ್ವಯಿಸುತ್ತದೆ. ಈ ಮಂತ್ರಗಳ ಅರ್ಥ ಮತ್ತು ಭಾವದಿಂದ 'ಪರ್ಶು' ಎಂಬ ಪದಕ್ಕೆ 'ಎದೆಮೂಳೆ' ಎಂದೇ ಅರ್ಥೈಸಬೇಕಾಗುತ್ತದೆ. ಋಗ್ವೇದದ ಒಂದು ಮಂತ್ರದಲ್ಲಿ ಯದುವನ್ನು ಪರ್ಶುಗಳೊಡನೆ ವಿಶೇಷ ಸಂಬಂಧವನ್ನು ಹೇಳಲಾಗಿದೆ. ಆದರೂ ಇದರಿಂದ ಪರ್ಶುಗಳನ್ನು ಪರ್ಷಿಯನ್ನರು ಎಂದು ಖಚಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಪಾರಾವತರು ಋಗ್ವೇದದ ಅನೇಕ ಮಂತ್ರಗಳಲ್ಲಿ ಉಕ್ತರಾಗಿದ್ದಾರೆ. ಋಗ್ವೇದದಲ್ಲಿ ಸರಸ್ವತೀ ನದಿಯ ಸಂಬಂಧದಲ್ಲಿ ಹೇಳಿರುವ ಅಂಶದಿಂದ ಹಾಗೂ ಪಂಚವಿಂಶ ಬ್ರಾಹ್ಮಣದ ಆಧಾರದ ಮೇಲೆ ಇವರನ್ನು ಯಮುನಾ ನದಿ ದಂಡೆಯ ಮೇಲಿನ ವಾಸಿಗಳೆಂದು ಸರಿಯಾಗಿ ಗುರುತಿಸಲಾಗಿದೆ. ಹಿಲ್‌ಬ್ರಾಂಟ್ ಮತ್ತು ಗೆಲ್ಡ್‌ನರ್ ಅವರು ಪಾರಾವತರನ್ನು ಗೆಡ್ರೋಷಿಯದ ಉತ್ತರಗಡಿಯವರೆಂದು ಗುರುತಿಸಿರುವುದು ಸರಿ ಎನಿಸುವುದಿಲ್ಲ.

ಋಗ್ವೇದದಲ್ಲಿ ಕೀಕಟರು ಪ್ರಮಗಂಡನ ನೇತೃತ್ವದಲ್ಲಿಯೂ ಗಾಯಕರಿಗೆ ಶತ್ರುವಾಗಿಯೂ ಕಾಣಿಸಿಕೊಳ್ಳುತ್ತಾರೆ. ಜಿಮ್ಮರರು ಯಾಸ್ಕನ ಹೇಳಿಕೆಯ ಆಧಾರದ ಮೇಲೆ ಇವರನ್ನು ವೈದಿಕೇತರರೆಂದು ಪರಿಗಣಿಸಿ, ಅನಂತರದ ಕಾಲದ ಮಗಧ ದೇಶವಾಸಿಗಳೆಂದು ತಿಳಿಯುತ್ತಾರೆ. ವೆಬರ್ ಅವರು ಇವರ ವಾಸಸ್ಥಾನವನ್ನು ಒಪ್ಪಿದರೂ ಇವರನ್ನು ವೈದಿಕ ಸಮುದಾಯದವರೆಂದು ಪರಿಗಣಿಸಿ, ಇತರ ವೈದಿಕ ಜನಾಂಗಗಳಿಗಿಂತ ಸ್ವಲ್ಪ ಭಿನ್ನವಾಗಿದ್ದಿರಬಹುದೆಂದು ಹೇಳುತ್ತಾರೆ.

ಪಣಿಗಳನ್ನು ದಾಸರೆಂದೂ ದಸ್ಯುಗಳೆಂದೂ ಮತ್ತು ಆರ್ಯರ ಶತ್ರುಗಳೆಂದೂ ಅನೇಕ ಕಡೆ ಹೇಳಿದೆ. ಪಣಿಗಳು ಸಂಪದ್ಭರಿತರೂ ಶ್ರೀಮಂತರೂ ಆಗಿದ್ದರು. ಇವರು ಎಂದೂ ದೇವರನ್ನು ಪೂಜಿಸುತ್ತಿರಲಿಲ್ಲ ಮತ್ತು ಪುರೋಹಿತರಿಗೆ ದಾನ ನೀಡುತ್ತಿರಲಿಲ್ಲ. ಇವರನ್ನು ಸ್ವಾರ್ಥಿಗಳು, ಯಜ್ಞ ಮಾಡದವರು (ತ್ಯಾಗ ಮಾಡದವರು), ಹಗೆಮಾತಿನವರು, ತೋಳಗಳಂತೆ ದುರಾಸೆ ಉಳ್ಳವರು, ಲೋಭಿಗಳು, ಕಟುಮಾತಿನವರು, ದಸ್ಯುಗಳು, ಕೀಳುವರ್ಗದ ದಾಸರು ಎಂದು ವರ್ಣಿಸಿದೆ. ಇವರು ಗೋಸಂಪತ್ತನ್ನು ಹೊಂದಿದ್ದವರು ಮತ್ತು ಕುಖ್ಯಾತ ಗೋಗ್ರಹಣ ಕಾರರು. ಕೆಲವು ಮಂತ್ರಗಳಲ್ಲಿ ಇವರು ಸ್ವರ್ಗದ ಮಳೆಯನ್ನೂ ಗೋವುಗಳನ್ನೂ ತಡೆಹಿಡಿದ ರಾಕ್ಷಸರಾಗಿ ಕಾಣಬರುತ್ತಾರೆ. ಪಣಿಗಳ ಗೋವುಗಳನ್ನು ಅಪಹರಿಸುವಾಗ, ಇಂದ್ರನಿಂದ ಇರಿಯಲ್ಪಟ್ಟವನೆಂಬುವನು, ಪ್ರಾಯಶಃ ಇವರನ್ನು ರಕ್ಷಿಸುವ ದೇವರೆಂದು ತೋರುತ್ತದೆ. ಬೃಬು ಇವರ ಒಬ್ಬ ರಾಜನಾಗಿ ಉಕ್ತವಾಗಿದ್ದಾನೆ. ಪಣಿಗಳನ್ನು ಸರಿಯಾಗಿ ಗುರುತಿಸುವ ಪ್ರಶ್ನೆ ಇನ್ನೂ ವಿವಾದಾಸ್ಪದವಾಗಿಯೇ ಉಳಿದಿದೆ. ಪಣಿಕ್ ಅಥವಾ ವಣಿಕ್, ಪಣ್ಯ ಮತ್ತು ಸಂಸ್ಕೃತದ ವಿಪಣಿ ಪದಗಳು ಋಗ್ವೇದದ ಕಾಲದಲ್ಲಿ ಪಣಿಗಳು ಅತ್ಯಂತ ಉತ್ತಮ ದರ್ಜೆಯ ವ್ಯಾಪಾರಿಗಳಾಗಿದ್ದರೆಂದು ಸೂಚಿಸುತ್ತವೆ. ಪಣಿಗಳನ್ನು ಅನಾಗರಿಕ, ಅನಾರ್ಯ ಜನಾಂಗವೆಂದೂ (ಬೆಕನಾಟ ಎಂಬ ಪದದ ಅರ್ಥದ ಆಧಾರದ ಮೇಲೆ ಇವರನ್ನು) ಬ್ಯಾಬಿಲೋನಿಯನ್ನರೆಂದೂ ಪರ್ನಿಯರೆಂದೂ ದಹೆ ಮತ್ತಿತರ ಇರಾನಿಯನ್ ಜನಾಂಗದವರೆಂದೂ ವೈದಿಕ ಯಾತ್ರಿ – ವರ್ತಕರೆಂದೂ ವಿಧವಿಧವಾಗಿ ಗುರುತಿಸಲಾಗಿದೆ. ಇವರು ವೈದಿಕ ಸಂಸ್ಕೃತಿಯನ್ನು ಪಶ್ಚಿಮ ದೇಶಗಳಲ್ಲಿ ಹರಡಿದ ಆರ್ಯನ್ ಸಮುದ್ರ ವ್ಯಾಪಾರಿಗಳೂ ಆಗಿದ್ದಿರಬಹುದು.

'ದಸ್' (ವ್ಯರ್ಥ ಅಥವಾ ಹಾಳುಮಾಡು) ಎಂಬ ಧಾತುವಿನಿಂದ ಬಂದ ಪದ ದಸ್ಯು. ದಾಸರನ್ನು ವೈದಿಕ ಜನರ ಶತ್ರುಗಳೆಂದೂ ಕೆಲವು ಸಂಬಂಧಗಳಲ್ಲಿ ರಾಕ್ಷಸೀ ಪ್ರವೃತ್ತಿಯವರೆಂದು ವರ್ಣಿಸಲಾಗಿದೆ. ಆದರೆ ಎಷ್ಟೋ ಮಂತ್ರಗಳು ಇವರನ್ನು ವೈದಿಕ ಮಾನವ–ಶತ್ರುಗಳು ಎಂದು ಹೇಳಿವೆ. ಅವರು ಕೋಟೆಗಳಿಂದ ಆವೃತವಾದ (ಆಯಸೀ ಪುರಃ) ಊರುಗಳಲ್ಲಿ ವಾಸಿಸುತ್ತಿದ್ದರು ಮತ್ತು ಅನೇಕ ಗುಂಪುಗಳಾಗಿ (ವಿಶಃ) ವಿಂಗಡಿತವಾಗಿದ್ದರು. ದಾಸವರ್ಣವನ್ನು ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಲಾಗಿದೆ. ದಾಸರು ಕಪ್ಪು ಚರ್ಮದವರಾಗಿದ್ದರು (ಕೃಷ್ಣತ್ವಚಃ), ಮೂಗಿಲ್ಲದವರು ಅಥವಾ ಚಪ್ಪಟೆ ಮೂಗಿನವರು (ಅನಾಸ) ಮತ್ತು ಕೆಟ್ಟ ನಾಲಿಗೆಯವರು (ಮೃಧ್ರವಾಚಃ) ಮುಂತಾದ ವಿಶೇಷಣಗಳು ಸಾಮಾನ್ಯವಾಗಿ ದಸ್ಯುಗಳನ್ನು ಕುರಿತದ್ದಾಗಿದೆ. ಋಗ್ವೇದದಲ್ಲಿ ದಸ್ಯು ಪದದಷ್ಟು ಹೀನ ಅರ್ಥ ದಸ ಪದಕ್ಕೆ ಇಲ್ಲ. ದಾಸ ಎಂಬ ಪದ ಉತ್ತರ ವೈದಿಕ ಸಾಹಿತ್ಯದಲ್ಲಿ ಗುಲಾಮ ಎಂಬ ಪದಕ್ಕೆ ಸಮವಾಗಿ ಕಾಣಬರುವುದರಿಂದ, ಮೂಲತಃ ಈ ಹೆಸರು ಯುದ್ಧ ಖೈದಿಗಳಿಗೆ ಅನ್ವಯವಾಗುತ್ತಿತ್ತೆಂದು ಅರ್ಥೈಸಬಹುದು. ಹಿಲ್‌ಬ್ರಾಂಟ್ ಮತ್ತಿತರರು ಋಗ್ವೇದ ಜನಾಂಗದ ವಾಸಸ್ಥಾನವಾದ ಸರಸ್ವತೀಯನ್ನು ಅರಕೋಸಿಯದಲ್ಲಿ ಗುರುತಿಸುವುದರಿಂದ, ದಾಸರನ್ನು ಇರಾನಿನ ದಹೆಗಳೊಂದಿಗೆ ಸಮೀಕರಿಸಲಾಗುತ್ತದೆ.

ದಾಸರು ಸಾಕಷ್ಟು ಐಶ್ವರ್ಯವನ್ನು ಹೊಂದಿದವರಾಗಿದ್ದರು. ಇಲಿಬಿಶ, ಧುನಿ, ಚುಮುರಿ, ಶಂಬರ, ವರ್ಚಿನ್, ಪಿಪ್ರು ಇತ್ಯಾದಿ ದಾಸರಾಜರನ್ನು ಬೇರೆಬೇರೆಯಾಗಿ ಹೆಸರಿಸಲಾಗಿದೆ. ಇವರಲ್ಲಿ ಕೆಲವರು ಅನಂತರದಲ್ಲಿ ರಾಕ್ಷಸೀ ಪ್ರವೃತ್ತಿಗೆ ಹೆಸರಾದವರು ಮತ್ತು ಇಂದ್ರ ಮತ್ತಿತರ ದೇವತೆಗಳ ಶತ್ರುಗಳಾಗಿ ಪರಿಗಣಿತರಾದವರು. ಕಿರಾತರು, ಕೀಕಟರು, ಚಾಂಡಾಲರು,

ಪರ್ಣಾಕರು, ಸಿಮ್ಯುಗಳು ಇತ್ಯಾದಿ ಹೆಚ್ಚಾಗಿ ಗಂಗಾನದಿಯ ಬಯಲಿನಲ್ಲಿ ವಾಸವಾಗಿದ್ದ ಮತ್ತು ಭರತರು ಪೂರ್ವ ಮತ್ತು ಆಗ್ನೇಯದಿಕ್ಕಿಗೆ ಮುಂದುವರೆಯುವುದನ್ನು ತಡೆಗಟ್ಟಲು ಹೋರಾಡಿದ, ದಾಸ ಜನಾಂಗಗಳು.

ಅನೇಕ ಮಂತ್ರಗಳಲ್ಲಿ ದಸ್ಯು ಎಂಬ ಪದವನ್ನು ಅಗೋಚರ ಶತ್ರುಗಳು ಎಂಬ ಅರ್ಥದಲ್ಲಿ ಉಪಯೋಗಿಸಿದ್ದರೂ ಬಹಳಷ್ಟು ಮಂತ್ರಗಳಲ್ಲಿ ಈ ಪದವನ್ನು ಮಾನವ ಶತ್ರುಗಳಿಗೇ ಅನ್ವಯಿಸಲಾಗಿದೆ. ವೈದಿಕ ಜನಾಂಗದವರಿಗೂ ದಸ್ಯುಗಳಿಗೂ ಇದ್ದ ಮುಖ್ಯ ವ್ಯತ್ಯಾಸ ಧಾರ್ಮಿಕವಾದದ್ದೆಂದು ತೋರುತ್ತದೆ. ದಸ್ಯುಗಳು ಕರ್ಮವಿಲ್ಲದವರು (ಅ–ಕರ್ಮನ್), ದೇವರಿಗೆ ಅಸಡ್ಡೆ ತೋರುವವರು (ಅ–ದೇವಯು), ಭಕ್ತಿ ಇಲ್ಲದವರು (ಅ–ಬ್ರಹ್ಮನ್), ಯಜ್ಞ ಮಾಡದವರು (ಅ–ಯಜ್ವನ್), ನೀತಿ–ನಿಯಮ ಇಲ್ಲದವರು (ಅ–ಅವ್ರತ), ವಿಚಿತ್ರ ಕಟ್ಟಳೆಗಳನ್ನು ಪಾಲಿಸುವವರು (ಅನ್ಯವ್ರತ), ದೇವರನ್ನು ದೂಷಿಸುವವರು (ದೇವ –ಪೀಯು) ಇತ್ಯಾದಿಗಳಾಗಿದ್ದರು. ದಾಸರಿಗೂ ಈ ಕೆಲವು ವಿಶೇಷಣಗಳನ್ನು ಅನ್ವಯಿಸಲಾಗಿದೆ. ಯಾವುದೇ ಜನಾಂಗವಲ್ಲವಾದ ಕಾರಣ, ದಸ್ಯುಗಳಿಗೆ ಹೋಲಿಸಿದಾಗ ಅವರ ವಿಭಿನ್ನತೆ ಕಡಿಮೆ ಕಾಣುತ್ತದೆ. ಜಿಮ್ಮರ್ ಮತ್ತು ಮೆಯರ್ ಅವರ ಆಲೋಚನೆಯಂತೆ ದಸ್ಯು (ದಾಸ) ಎಂಬ ಪದದ ಅರ್ಥ ಮೂಲತಃ 'ಶತ್ರು'. ಅದನ್ನು ಇರಾನಿಯನ್ನರು 'ಶತ್ರುದೇಶ' ಎಂಬ ಅರ್ಥದಲ್ಲಿ ಉಪಯೋಗಿಸಿದರು. ಆದರೆ ಭಾರತೀಯರು 'ಶತ್ರು' ಎಂಬ ಅದರ ಮೂಲ ಅರ್ಥದಲ್ಲಿ ರಾಕ್ಷಸೀ ಶತ್ರುಗಳನ್ನು ಸೇರಿದಂತೆ ವ್ಯಾಪಕವಾಗಿ ಬಳಸಿದರು. ಋಗ್ವೇದ ಕರ್ತೃಗಳಿಗೆ ದಾಸರು ಮತ್ತು ದಸ್ಯುಗಳ ನಡುವೆ ಇದ್ದ ವ್ಯತ್ಯಾಸ ಕಡಿಮೆ ಎಂಬ ಅಂಶ, ಇವರಿಬ್ಬರಿಗೂ ಸಮಾನವಾದ ವಿಶೇಷಣಗಳನ್ನು ನೀಡಿರುವುದರಿಂದ ಮತ್ತು ಕೆಲವು ವ್ಯಕ್ತಿಗಳನ್ನು ದಸ್ಯು ಮತ್ತು ದಾಸ ಎಂಬೆರಡೂ ಹೆಸರುಗಳಿಂದ ಕರೆದಿರುವುದರಿಂದ ಸ್ಪಷ್ಟವಾಗುತ್ತದೆ.

ಅಸುರರನ್ನು ಸಾಮಾನ್ಯವಾಗಿ ವೈದಿಕ ಜನಗಳ ಮತ್ತು ಅವರ ದೇವರುಗಳ ಶತ್ರುಗಳೆಂದು ನಿರ್ದೇಶಿಸಿದ್ದರೂ ಕೆಲವು ಮಂತ್ರಗಳು ಒಳ್ಳೆಯ ಅರ್ಥದಲ್ಲಿ ಅವರನ್ನು ಸಂಬೋಧಿಸಿವೆ. ಈ ಕಾರಣಕ್ಕೆ ಒಂದು ಸಂಭವನೀಯ ವಿವರಣೆಯನ್ನು ಆಗಲೇ ಒಂದು ಕಡೆ ಸೂಚಿಸಲಾಗಿದೆ. ಭಂಡಾರಕರ್ ಅವರು ನೀಡುವ ಮತ್ತೊಂದು ವಿವರಣೆ ಎಂದರೆ ಅಸುರ ಎಂಬ ಅಭಿದಾನವನ್ನು ಹೊಂದಿರುವ ಮಂತ್ರಗಳನ್ನು ವೈದಿಕ ಧರ್ಮಕ್ಕೆ ಸೇರಿದ್ದ ಅಸುರ ಜನಾಂಗದ ಋಷಿಗಳು ರಚಿಸಿದರು ಮತ್ತು ನಿಂದಕಮಂತ್ರಗಳನ್ನು ಅಸುರ ವಿರೋಧಿಗಳಾಗಿದ್ದ ವೈದಿಕ ಋಷಿಗಳು ರಚಿಸಿದರು. ಉತ್ತರ ಋಗ್ವೇದ ಕಾಲದಲ್ಲಿ ಆರ್ಯರ ಮತ್ತು ಅಸುರರ ಮಧ್ಯೆ ಹಗೆತನ ಹೆಚ್ಚಾಯಿತು.

ಅಸುರರನ್ನು ಯಾವುದೇ ಪ್ರಾಚೀನ ಜನಾಂಗದೊಂದಿಗೆ ಸಮೀಕರಿಸುವುದು ನಿಜವಾಗಿಯೂ ಪ್ರಯಾಸಕರ. ಸ್ಟೆನ್ ಕನೋವ್ ಅವರು ಅಸುರರನ್ನು ಅಮಾನುಷರೆಂದು ಪರಿಗಣಿಸುತ್ತಾರೆ. ಬ್ಯಾನರ್ಜಿಶಾಸ್ತ್ರಿ ಅವರು ವೈದಿಕ ಜನಾಂಗದವರಿಗಿಂತ ಮೊದಲು ಭಾರತಕ್ಕೆ ಬಂದು, ಸಿಂಧೂಕಣಿವೆಯ ನಾಗರಿಕತೆಯ ಕರ್ತೃಗಳಾದ, ಅಸ್ಸೀರಿಯದಿಂದ ವಲಸೆ ಬಂದ ಅಸುರ ಪಂಥದ ಅನುಯಾಯಿಗಳೆಂದು ಪರಿಗಣಿಸುತತಾರೆ. ಭಂಡಾರಕರ್ ಅವರು ಅಸುರರನ್ನು 'ಅಸುರ್'ಗಳು ಅಥವಾ ಅಸ್ಸೀರಿಯನ್ನರು ಎಂದು ಪರಿಗಣಿಸಿ ಶತಪಥ ಬ್ರಾಹ್ಮಣವು ಮಗಧ ಅಥವಾ ದಕ್ಷಿಣ ಬಿಹಾರದ ಅಸುರ ನೆಲೆಗಳನ್ನು ಕುರಿತು ಹೇಳುತ್ತದೆ ಎಂದು ಸೂಚಿಸಿದ್ದಾರೆ.

ರಾಕ್ಷಸ ಎಂಬ ಪದ ಯಾವುದೇ ನಿಖರವಾದ ಜನಾಂಗವನ್ನು ಸೂಚಿಸುವುದಿಲ್ಲ. ವೇದ ಪದಸೂಚಿಯ ಕರ್ತೃಗಳ ಪ್ರಕಾರ ಈ ಪದ ಸಾಮಾನ್ಯವಾಗಿ ಪೂರ್ವ ವೈದಿಕ ಸಾಹಿತ್ಯದಲ್ಲಿ ರಾಕ್ಷಸರನ್ನು ಕುರಿತದ್ದಾಗಿದೆ ಹಾಗೂ ಹೋಲಿಕೆಗೆ ಮಾತ್ರ ಮಾನವ ವೈರಿಗಳಿಗೆ ಅನ್ವಯಿಸುತ್ತದೆ. ಹಾಗೆಯೇ ಪಿಶಾಚರು ಅನಂತರದ ಸಾಹಿತ್ಯದಲ್ಲಿ ಒಂದು ಜನಾಂಗವಾದರೂ ವೈದಿಕ ಸಾಹಿತ್ಯದಲ್ಲಿ ಒಂದು ಜನಾಂಗವಾಗಿರಲಿಲ್ಲ.

ಒಟ್ಟಿನಲ್ಲಿ ಸ್ಥೂಲವಾಗಿ ಹೇಳುವುದಾದರೆ ಅತ್ಯಂತ ವಾಯವ್ಯ ಭಾಗವನ್ನು ಗಂಧಾರಿಗಳು, ಪಕ್ಥರು, ಅಲಿನರು, ಭಲಾನಸರು ಹಾಗೂ ವಿಷಾಣಿಗಳು ಆಕ್ರಮಿಸಿದ್ದರು; ಇವರಲ್ಲಿ ಕೆಲವರು ಪ್ರಾಯಶಃ ವೈದಿಕೇತರ ಲಕ್ಷಣಗಳನ್ನು ಹೊಂದಿದ್ದರು. ಸಿಂಧ್ ಮತ್ತು ಪಂಜಾಬಿನಲ್ಲಿ ಶಿವರು, ಪರ್ಶುಗಳು, ಕೇಕಯರು, ವೃಚೀವಂತರು, ಯದುಗಳು, ಅನುಗಳು, ತುರ್ವಶರು ಮತ್ತು ದ್ರುಹ್ಯುಗಳು ನೆಲೆಸಿದ್ದರು. ಇನ್ನೂ ಪೂರ್ವಕ್ಕೆ ಮಧ್ಯದೇಶದತ್ತ ತೃತ್ಸುಗಳ, ಭರತರ, ಪೂರುಗಳ ಹಾಗೂ ಸೃಂಜಯರ ನೆಲೆಗಳಿದ್ದವು; ಅತ್ಯಂತ ಪೂರ್ವದ ಭಾಗ ಕೀಕಟರ ವಶದಲ್ಲಿತ್ತು. ಪಂಜಾಬಿನ ದಕ್ಷಿಣಕ್ಕಿರುವ ಮಾಳವ ಮತ್ತು ರಾಜಸ್ತಾನಗಳಲ್ಲಿ ಮತ್ಸ್ಯರು ಮತ್ತು ಚೇದಿಗಳು ನೆಲೆಸಿದ್ದರು. ಋಗ್ವೇದದ ಕಾಲದಲ್ಲಿ ವೈದಿಕ ಸಮುದಾಯಗಳ ನೆಲೆಗಳು, ಮೊದಲೇ ಹೇಳಿರುವ ಸಮಕಾಲೀನ ಭೌಗೋಳಿಕ ಜ್ಞಾನದ ಪರಿಮಿತಿಯೊಂದಿಗೆ ಬಹುಮಟ್ಟಿಗೆ ಸರಿಹೊಂದುತ್ತಿದ್ದವು ಎಂದು ತೀರ್ಮಾನಿಸಬಹುದು.

ವೇದೋತ್ತರ ಕಾಲೀನ ಸಾಹಿತ್ಯದಲ್ಲಿ ಭೌಗೋಳಿಕ ಹೆಸರುಗಳು: ಹಿಂದಿನ ಎರಡು ವಿಭಾಗಗಳಲ್ಲಿನ ಅಧ್ಯಯನದ ವಿಧಾನವನ್ನು ಅನುಸರಿಸಿ, ಉತ್ತರ ವೈದಿಕ ಸಾಹಿತ್ಯದ ಭೌಗೋಳಿಕ ಆಧಾರಗಳನ್ನು ಬಳಸಿಕೊಂಡು, ಋಗ್ವೇದಾನಂತರದ ಕಾಲದ ಆರ್ಯರ ನೆಲೆಗಳ ಬಗ್ಗೆ ನಾವು ಒಂದು ಸ್ಥೂಲ ಚಿತ್ರಣವನ್ನು ಹೊಂದಬಹುದು.

'ಸಮುದ್ರ' ಎಂಬ ಪದ ಉತ್ತರ ವೈದಿಕ ಸಾಹಿತ್ಯದಲ್ಲಿ ಬಹುಮಟ್ಟಿಗೆ ಸಮುದ್ರವನ್ನು ಸೂಚಿಸುತ್ತದೆ. ಶತಪಥ ಬ್ರಾಹ್ಮಣದಲ್ಲಿ ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ಉಲ್ಲೇಖದಿಂದ ಪ್ರಾಯಶಃ ಅರೇಬಿಯನ್ ಸಮುದ್ರ ಮತ್ತು ಹಿಂದೂ ಮಹಾಸಾಗರ ಆ ಕಾಲದ ಜನರಿಗೆ ತಿಳಿದಿತ್ತು ಎಂದು ಸೂಚಿತವಾಗುತ್ತದೆ.

ತ್ರಿಕಕುದ್ ಎಂಬುದು (ಮೂರು ಶಿಖರಗಳನ್ನುಳ್ಳ) ಹಿಮಾಲಯದ ಒಂದು ಪರ್ವತದ ಹೆಸರಾಗಿದ್ದು, ಇಂದಿನ ತ್ರಿಕೋತ ಎಂದು ಗುರುತಿಸಲ್ಪಟ್ಟಿದೆ. ತೈತ್ತಿರೀಯ ಆರಣ್ಯಕದಲ್ಲಿ ಕಂಡು ಬರುವ ಕ್ರೌಂಚ ಎಂಬುದು, ಕೈಲಾಸ ಪರ್ವತದಲ್ಲಿ ಮಾನಸ ಸರೋವರವಿರುವ ಜಾಗದೊಂದಿಗೆ ಗುರುತಿಸಲ್ಪಟ್ಟಿದೆ. ಮೈನಾಕವನ್ನು ಇದೇ ಕೃತಿಯಲ್ಲಿ ಹಿಮಾಲಯದ ಒಂದು ಪರ್ವತವೆಂದು ಹೇಳಿದೆ. ವಿಂಧ್ಯ ಪರ್ವತವು ಕೌಷೀತಕಿ ಉಪನಿಷತ್ತಿನಲ್ಲಿ, ನೇರವಾಗಿ ಅಲ್ಲದಿದ್ದರೂ 'ದಕ್ಷಿಣ ಪರ್ವತ' ವೆಂದು ಖಚಿತವಾಗಿ ಉಲ್ಲೇಖಿಸಲಾಗಿದೆ.

ನದಿಗಳ ವಿಷಯಕ್ಕೆ ಬಂದರೆ, ವಿಶೇಷವಾಗಿ ಎದ್ದು ಕಾಣುವ ಅಂಶವೆಂದರೆ ಸರಸ್ವತೀ ನದಿ ಅದೃಶ್ಯವಾಗಿರುವುದು. ಈ ನದಿಯು ಮರುಭೂಮಿಯಲ್ಲಿ ವಿನಶನ (ಪಾಟಿಯಾಲ ಜಿಲ್ಲೆ) ಎಂಬಲ್ಲಿ ಅದೃಶ್ಯವಾಗಿ ಅಲ್ಲಿಂದ 44 ದಿನಗಳ ಪ್ರಯಾಣದ ದೂರದಲ್ಲಿದ್ದ ಪ್ಲಕ್ಷಪ್ರಾಸ್ರವಣ ಎಂಬಲ್ಲಿ ಮತ್ತೆ ಪ್ರತ್ಯಕ್ಷವಾಯಿತು.

ಸಹಜವಾಗಿಯೇ ಇನ್ನೂ ಪೂರ್ವಕ್ಕೆ ಇರುವ ನದಿಗಳು ಈ ಕಾಲದಲ್ಲಿ ಹೆಚ್ಚು ಪ್ರಧಾನವಾಗಿ ಉಕ್ತವಾಗಿವೆ. ಉತ್ತರ ವೈದಿಕ ಸಾಹಿತ್ಯದಲ್ಲಿ ಮಾತ್ರ ಕಾಣಬರುವ ರೇವಾ ಇಂದಿನ ನರ್ಮದಾ ನದಿ. ವೆಬರ್ ಅವರು ಶತಪಥ ಬ್ರಾಹ್ಮಣದ ರೇವೋತ್ತರರು ಎಂದು ಪದದಲ್ಲಿ ಇದನ್ನು ಗುರುತಿಸುತ್ತಾರೆ. ಆದರೆ ಈ ಅಭಿಪ್ರಾಯ ಸಂದೇಹಸ್ಪದ. ಶತಪಥ ಬ್ರಾಹ್ಮಣದಲ್ಲಿ ಸದಾನೀರಾವನ್ನು ಕೋಸಲರ ಮತ್ತು ವಿದೇಹರ ನಡುವಣ ಗಡಿ ಎಂದು ಹೇಳಲಾಗಿದೆ. ಕೆಲವು ನಿಘಂಟುಕಾರರು ಅದನ್ನು ಕರತೊಯಾದೊಂದಿಗೆ ಗುರುತಿಸಿದ್ದರೆ, ವೇದಪದ ಸೂಚಿಯ ಪ್ರಕಾರ ಅದು ಇನ್ನೂ ಹೆಚ್ಚು ಪೂರ್ವಕ್ಕೆ ಇದೆ. ವೆಬರ್ ಮತ್ತು ಎಗ್ಲಿಂಗ್ ಅವರು ಇದನ್ನು ಗಂಡಕದೊಂದಿಗೆ ಮತ್ತು ಪಾರ್ಗಿಟರ್ ಅವರು ರಾಪ್ತಿಯೊಂದಿಗೆ ಗುರುತಿಸುತ್ತಾರೆ. ಮಹಾಭಾರತ ಸದಾನೀರಾವನ್ನು ಗಂಡಕ್ ಮತ್ತು ಸರಯೂ ನದಿಗಳ ಮಧ್ಯೆ ಇದೆ ಎಂದು ಹೇಳುತ್ತದೆ. ಸದಾನೀರಾ ಹಾಗೂ ಗಂಡಕ್ ನದಿಗಳು ಬೇರೆ ಬೇರೆ ಎಂದು ಹೇಳಿದರೂ ವೈದಿಕಪದಸೂಚಿ ಇವೆರಡೂ ಒಂದೇ ಎಂದು ಹೇಳುವುದು ಪ್ರಾಯಶಃ ಸರಿ.

ಅನಂತರದ ವೈದಿಕ ಸಾಹಿತ್ಯ ನಿಖರವಾಗಿ ಗುರುತಿಸಬಹುದಾದ ವಿವಿಧ ಸ್ಥಳ ನಾಮಗಳನ್ನು ಉಲ್ಲೇಖಿಸುತ್ತದೆ. ಶತಪಥ ಬ್ರಾಹ್ಮಣದಲ್ಲಿ ಉಕ್ತವಾಗಿರುವಂತೆ ಕ್ರೈವ್ಯ ಪಂಚಾಲ ರಾಜ ಅಶ್ವಮೇಧ ಯಾಗವನ್ನು ಮಾಡಿದ ಪಂಚಾಲದ ಪರಿಚಕ್ರಾ ನಗರವನ್ನು, ವೆಬರ್ ಅವರು ಕಾಂಪೀಲದ ಬಳಿ ಇದ್ದ ಅನಂತರದ ಏಕಚಕ್ರಾ ನಗರವೆಂದು ಗುರುತಿಸುತ್ತಾರೆ. ಜನಮೇಜಯ ಪರೀಕ್ಷಿತನ ಪ್ರಸಿದ್ಧ ಅಶ್ವಮೇಧ ಯಾಗದ ಕುದುರೆಯನ್ನು ಕಟ್ಟಿದ್ದ ಅವರ ರಾಜಧಾನಿಗೆ ಅಸಂದೀವತ್ ಎಂಬ ಹೆಸರಿತ್ತು. ಇದು ನಿಸ್ಸಂದೇಹವಾಗಿ ಕುರುಕ್ಷೇತ್ರದಲ್ಲಿತ್ತು. ಇದು ಪ್ರಾಯಶಃ ಪರೀಕ್ಷಿತನ ವಂಶಜ ನಿಚಕ್ಷುವಿನ ರಾಜಧಾನಿ ನಾಗಸಾಹ್ವಯ (ಹಸ್ತಿನಾಪುರ) ಆಗಿತ್ತು. ಗಂಗಾನದಿ ಇದನ್ನು ಕೊಚ್ಚಿಕೊಂಡು ಹೋದುದರಿಂದ ರಾಜಧಾನಿಯನ್ನು ಅನಂತರ ಕೌಶಾಂಬಿಗೆ ಬದಲಾಯಿಸಲಾಯಿತು. ಶತಪಥ ಬ್ರಾಹ್ಮಣದಲ್ಲಿರುವ ಕಾಂಪೀಲ ನಗರವನ್ನು ಬುದೌನ್ ಮತ್ತು ಫರೂಖಾಬಾದ್ ನಡುವೆ, ಪ್ರಾಚೀನ ಗಂಗಾ ನದಿಯ ದಂಡೆಯಲ್ಲಿರುವ ಇಂದಿನ ಕಂಪಿಲ ನಗರವೆಂದು ಗುರುತಿಸಲಾಗಿದೆ. ವಿಶೇಷವಾದ ಪಾವಿತ್ರ್ಯವನ್ನು ಹೊಂದಿರುವಂತೆ ಉಕ್ತವಾಗಿರುವ ನೈಮಿಷಾರಣ್ಯವು ಔಧ್ ಮತ್ತು ರೋಹಿಲ್‌ಖಂಡ್ ರೈಲುದಾರಿಯ ನಿಮ್ಸಾರ್ ನಿಲ್ದಾಣದ ಹತ್ತಿರವಿರುವ ನಿಮ್ಸಾರ್ ಎಂದು ಗುರುತಿಸಲಾಗಿದೆ. ತೈತ್ತಿರೀಯ ಆರಣ್ಯವು ಮನಸ್ಸನ್ನು ಕುರುಕ್ಷೇತ್ರದ ಉತ್ತರ (ಗುಡ್ಡೆ) ಎಂದು ಹೇಳುತ್ತದೆ. ಪವಿತ್ರ ಕುಂಡ ಕುರುಕ್ಷೇತ್ರಕ್ಕೆ ಉತ್ತರ ರೂಪದಲ್ಲಿರುವುದರಿಂದ ಇದನ್ನು ಅನಂತರದ ಮರು ಸ್ಥಳ (ಮರು ಭೂಮಿ) ಎಂದು ಗುರುತಿಸಬಹುದು. ಶತಪಥ ಬ್ರಾಹ್ಮಣದಲ್ಲಿ ಉಕ್ತವಾಗಿರುವ ಕೌಶಾಂಬೆಯ ಎಂಬ ಪದದಿಂದ, ವತ್ಸರಾಜ ಉದಯನನ ಜೀವನದಲ್ಲಿ ಮಹತ್ತ್ವದ ಪಾತ್ರ ವಹಿಸಿದ್ದ, ಕೌಶಾಂಬಿನಗರದ ಇರುವಿಕೆಯನ್ನು ಊಹಿಸಬಹುದು. ಈ ನಗರವನ್ನು ಯಮುನಾ ನದಿಯ ಮೇಲಿರುವ ಈಗಿನ ಕೋಸಮ್ ಎಂದು ಗುರುತಿಸಲಾಗಿದೆ.

ಉತ್ತರ ವೈದಿಕ ಸಾಹಿತ್ಯ ಮೂರು ಪ್ರಾಂತ್ಯವನ್ನು ಸ್ಥೂಲವಾಗಿ ಹೆಸರಿಸುತ್ತದೆ. ಅವುಗಳೆಂದರೆ ಬ್ರಹ್ಮಾವರ್ತ ಅಥವಾ ಆರ್ಯಾವರ್ತ, ಮಧ್ಯದೇಶ ಮತ್ತು ದಕ್ಷಿಣಾಪಥ. ಒಂದು ರೀತಿಯಲ್ಲಿ ಅಥರ್ವವೇದ ಸೂಚಿಸುವಂತೆ ಐತರೇಯ ಬ್ರಾಹ್ಮಣದಲ್ಲಿ ಐದು ರೀತಿ ವಿಂಗಡಣೆಯನ್ನು, ಅವುಗಳ ನಿವಾಸಿಗಳ ಸಂಖ್ಯೆಗಳೊಂದಿಗೆ ಮೊದಲ ಬಾರಿಗೆ ನಾವು ಕಾಣುತ್ತೇವೆ. ಐತರೇಯ ಬ್ರಾಹ್ಮಣವು ಇಡೀ ದೇಶವನ್ನು ಐದು ಭಾಗಗಳಾಗಿ ವಿಂಗಡಿಸುತ್ತದೆ. 1. ಧ್ರುವಾ ಮಧ್ಯಮಾ ಪ್ರತಿಷ್ಠಾ ದಿಕ್ ಅಥವಾ ಮಧ್ಯದೇಶ, 2. ಪ್ರಾಚೀದಿಕ್ ಅಥವಾ ಪೂರ್ವದ ಭಾಗ, 3. ದಕ್ಷಿಣಾ ದಿಕ್ ಅಥವಾ ದಕ್ಷಿಣ ಭಾಗ 4. ಪ್ರತೀಚೀದಿಕ್ ಅಥವಾ ಪಶ್ಚಿಮಭಾಗ ಮತ್ತು 5. ಉದೀಚೀ ದಿಕ್ ಅಥವಾ ಉತ್ತರ ಭಾಗ. ಈ ಭಾಗಗಳ ವಿಸ್ತಾರ ಮತ್ತು ಎಲ್ಲೆಗಳನ್ನು ಯಾವುದೇ ನಿಖರತೆಯಿಂದ ಹೇಳಲು ಸಾಧ್ಯವಿಲ್ಲ.

2. ಜನಾಂಗಗಳು: ಋಗ್ವೇದದಲ್ಲಿ ಉಲ್ಲೇಖವಾಗಿರುವ ವಿವಿಧ ಜನಾಂಗಗಳ ಸ್ಥಾನಮಾನ, ಸ್ವರೂಪ ಮತ್ತು ಹೆಸರು ಪ್ರಸ್ತುತ ಕಾಲದಲ್ಲಿ ಸಾಕಷ್ಟು ಬದಲಾವಣೆ ಹೊಂದಿದವು. ಎಷ್ಟೋ ಹಳೆಯ ಜನಾಂಗಗಳು ಅದೃಶ್ಯವಾಗುತ್ತವೆ, ಮಹತ್ತ್ವವನ್ನು ಕಳೆದುಕೊಳ್ಳುತ್ತವೆ, ಬೇರೆಯವರೊಂದಿಗೆ ಬೆರೆಯುತ್ತವೆ ಅಥವಾ ಹೊಸ ಹೆಸರಿನೊಂದಿಗೆ ಕಾಣಬರುತ್ತವೆ ಹಾಗೂ ಹೊಸ ಜನಾಂಗಗಳು ಪ್ರಸಿದ್ಧಿಗೆ ಬರುತ್ತವೆ. ಪಂಜಾಬಿನ ಐದು ಪ್ರಮುಖ ಜನಾಂಗಗಳಾದ ಪೂರು, ಅನು, ದ್ರುಹ್ಯು, ಯದು ಮತ್ತು ತುರ್ವಶರು ಸಂಪೂರ್ಣವಾಗಿ ಹಿಂದೆ ಸರಿಯುತ್ತಾರೆ. ಈ ಮೊದಲು ಹೇಳಿರುವಂತೆ ಪೂರುಗಳು ಭರತರೊಂದಿಗೆ ಸೇರಿ ಕುರುಗಳೊಂದಿಗೆ ಒಂದಾಗುತ್ತಾರೆ. ಈ ಎರಡೂ ಜನಾಂಗಗಳ ಪ್ರದೇಶಗಳನ್ನು ಆಕ್ರಮಿಸಿಕೊಂಡು ಮತ್ತು ಅವರ ಮಿತ್ರರಾದ ಪಂಚಾಲರೊಂದಿಗೆ ಕೂಡಿ, ಕುರುಗಳು ಎಲ್ಲರನ್ನೂ ಮೀರಿಸಿದ ಸಮಕಾಲೀನ ಜನಾಂಗವಾಗಿ ಕಾಣುತ್ತಾರೆ. ಭರತರು ಒಂದು ಜನಾಂಗವಾಗಿ ಅದೃಶ್ಯರಾಗುತ್ತಾರೆ. ಆದರೆ ಆ ವಂಶದ ರಾಜರ ಖ್ಯಾತಿ, ಈ ಕಾಲದ ದೌಷಂತಿಗಳಲ್ಲಿ ಮಾತ್ರ ಇನ್ನೂ ಕಾಣಬರುತ್ತದೆ. ಭರತ ದೌಷಂತಿ ಮತ್ತು ಸಾತ್ರಾಜಿತರು ಅಶ್ವಮೇಧಯಾಗ ಮಾಡಿದ ಖ್ಯಾತ ರಾಜರಾಗಿ ಉಲ್ಲೇಖಿತರಾಗಿದ್ದಾರೆ. ಭರತ ರಾಜರು ಕಾಶಿಗಳ ಮತ್ತು ಸಾತ್ವಂತರ ಮೇಲೆ ವಿಜಯ ಸಾಧಿಸಿದವರೆಂದೂ ಗಂಗಾ ಯಮುನಾ ನದಿಗಳ ತೀರಗಳಲ್ಲಿ ಯಜ್ಞಯಾಗಗಳನ್ನು ಮಾಡಿದವರೆಂದೂ ಉಕ್ತವಾಗಿದ್ದಾರೆ.

ಪಂಚಾಲರು, ವಶರು ಮತ್ತು ಉಶೀನರರೊಂದಿಗೆ ಕೂಡಿ ಕುರುಗಳು ಮಧ್ಯದೇಶವನ್ನು ಆಕ್ರಮಿಸಿಕೊಂಡಿದ್ದರು. ಋಗ್ವೇದದಲ್ಲಿ ಕುರುಗಳು ಒಂದು ಜನಾಂಗವಾಗಿ ಕಾಣಬರುವುದಿಲ್ಲ; ಆದರೆ ಕುರು ಎಂಬ ಹೆಸರು ಕುರುಶ್ರವಣ ಎಂಬ ರಾಜನ ಹೆಸರಿನ ಭಾಗವಾಗಿ ಅಲ್ಲಿ ಹೇಳಲ್ಪಟ್ಟಿದೆ. ಕುರುರಾಜ ಪರೀಕ್ಷಿತನ ರಾಜ್ಯಭಾರ ಕಾಲದಲ್ಲಿ ಕುರುರಾಜ್ಯ ಪ್ರವರ್ಧಮಾನಕ್ಕೆ ಬಂದಿತ್ತೆಂದು ಅಥರ್ವವೇದ ತಿಳಿಸುತ್ತದೆ. ಪ್ರಾಯಶಃ ಅನಂತರ ಕಾಲದಲ್ಲಿ ಹಸ್ತಿನಾಪುರವಾದ ಆಸಂದೀವತದಲ್ಲಿ ಅಶ್ವಮೇಧ ಯಾಗವನ್ನು ಮಾಡಿದ ಆತನ ವಂಶಜ ಜನಮೇಜಯನನ್ನು ಉಲ್ಲೇಖಿಸುತ್ತದೆ. ಕುರು ರಾಜ್ಯ ಬಹುಶಃ ಈಗಿನ ಥಾನೇಸರ್, ದೆಹಲಿ ಮತ್ತು ಮೇಲಣ ಗಂಗಾ ದೋ-ಆಬ್ ಪ್ರದೇಶಕ್ಕೆ ಸಮನಾಗಿತ್ತೆಂದು ತೋರುತ್ತದೆ.

ಪಂಚಾಲರು ಸಹ ಅವರ ಜೋಡಿ ಹೆಸರು ಸೂಚಿಸುವಂತೆ ಕುರುಗಳ ನಿಕಟವರ್ತಿಗಳಾಗಿದ್ದ ಒಂದು ಸಂಘಟಿತ ಜನಾಂಗವಾಗಿದ್ದರು. ಈ ಹೆಸರು ಋಗ್ವೇದದಲ್ಲಿ ಕಾಣಬರುವುದಿಲ್ಲ. ಆದರೆ ಶತಪಥ ಬ್ರಾಹ್ಮಣವು ಋಗ್ವೇದದಲ್ಲಿ ಕಾಣಬರುವ ಕ್ರಿವಿ ಎಂಬುದೇ ಪಂಚಾಲರ ಪ್ರಾಚೀನ ಹೆಸರಾಗಿತ್ತು ಎಂದು ಹೇಳುತ್ತದೆ. ವೆಬರ್ ಮತ್ತು ಗೆಲ್ಡ್‌ನರ್ ಅವರು ಪಂಚಾಲರು ಋಗ್ವೇದದ ಐದು ಜನಾಂಗಗಳನ್ನು ಪ್ರತಿನಿಧಿಸುತ್ತಾರೆಂದು ಸೂಚಿಸುತ್ತಾರೆ. ಆದರೆ ವೇದಪದ ಸೂಚಿಯ ಕರ್ತೃಗಳ ಪ್ರಕಾರ ಈ ಅಭಿಪ್ರಾಯ ಸಾಧುವಲ್ಲ.

ಕುರುಗಳ ಜೊತೆ ಬಿಟ್ಟು ಪಂಚಾಲರೊಬ್ಬರ ಬಗ್ಗೆ ಹೆಚ್ಚಾಗಿ ಕೇಳಿಬರುವುದಿಲ್ಲ. ಅವರ ರಾಜರಾದ ಕ್ರೈವ್ಯ ಮತ್ತು ಶೋಣ ಸಾತ್ರಾಸಾಹರು ಅಶ್ವಮೇಧ ಯಾಗವನ್ನು ಮಾಡಿದವರೆಂದು ಹೇಳಲಾಗಿದೆ. ಮತ್ತೊಬ್ಬ ರಾಜ ದುರ್ಮುಖ ಇಡೀ ಪೃಥ್ವಿಯನ್ನೇ ಆಕ್ರಮಿಸಿಕೊಂಡಿದ್ದನೆಂದು ಹೇಳಿದೆ. ಅವರ ಒಬ್ಬ ರಾಜನಾದ ಪ್ರವಾಹಣ ಜೈವಲಿ ಉಪನಿಷತ್ತುಗಳಲ್ಲಿ ಒಬ್ಬ ತತ್ತ್ವಜ್ಞಾನಿ ರಾಜನಾಗಿ ಕಾಣಬರುತ್ತಾನೆ.

ಮಹಾಭಾರತ ಮತ್ತು ಪುರಾಣಗಳಲ್ಲಿ ಕಾಣಬರುವಂತೆ, ವೈದಿಕ ಗ್ರಂಥಗಳಿಗೆ ಉತ್ತರ ಪಂಚಾಲ ಮತ್ತು ದಕ್ಷಿಣ ಪಂಚಾಲ ತಿಳಿದಿರಲಿಲ್ಲ. ಪಂಚಾಲರು ವೇದೋತ್ತರ ಕಾಲದಲ್ಲಿ ತಮ್ಮ ರಾಜ್ಯವನ್ನು ಆಕ್ರಮಣಗಳ ಮೂಲಕ ವಿಸ್ತರಿಸಿಕೊಂಡಿದ್ದರು ಎಂಬುದು ಸ್ಪಷ್ಟವಾಗಿದೆ. ಪಂಚಾಲರ ರಾಜ್ಯ ಸುಮಾರಾಗಿ ಈಗಿನ ಬರೇಲಿ, ಬುದೌನ್, ಫರೂಖಾಬಾದ್ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರಾಂತಗಳಿಗೆ ಸಮನಾಗಿತ್ತು.

ಬ್ರಾಹ್ಮಣಗಳ ಕಾಲದಲ್ಲಿ ಕುರು ಪಂಚಾಲರು ಅತ್ಯಂತ ಉತ್ಕೃಷ್ಟ ಜನಾಂಗವಾಗಿದ್ದರು ಮತ್ತು ಒಂದು ಸಂಘಟಿತ ರಾಷ್ಟ್ರವಾಗಿ ಅವರು ಉಕ್ತರಾಗಿದ್ದಾರೆ. ಒಂದು ಕಾಲದಲ್ಲಿ ಕುರು ಪಂಚಾಲರು ಒಬ್ಬನೇ ರಾಜನನ್ನು ಹೊಂದಿದ್ದರೆಂದು ಹೇಳಲಾಗಿದೆ. ಕುರು-ಪಂಚಾಲರು ಮಾಡುತ್ತಿದ್ದ ಯಜ್ಞವಿಧಾನ ಅತ್ಯಂತ ಶ್ರೇಷ್ಠವಾದದ್ದೆಂದು ಹೇಳಲಾಗಿದೆ. ಆಕಾಲದ ಬ್ರಾಹ್ಮಣರು ಉಪನಿಷತ್ತುಗಳ ಕಾಲದಲ್ಲಿ ಖ್ಯಾತಿಯನ್ನೂ ಉನ್ನತ ಸ್ಥಾನವನ್ನೂ ಗಳಿಸಿದ್ದರು. ಕುರು-ಪಂಚಾಲರಾಜರು ಇತರರಿಗೆ ಆದರ್ಶರಾಗಿದ್ದು, ರಾಜಸೂಯ ಯಾಗಗಳನ್ನು ನೆರವೇರಿಸಿದ್ದರು. ಶರತ್ಕಾಲದಲ್ಲಿ ವಿಜಯಯಾತ್ರೆಗಳನ್ನು ಪ್ರಾರಂಭಿಸಿ ಬೇಸಿಗೆಯಲ್ಲಿ ಹಿಂತಿರುಗುತ್ತಿದ್ದರು. ಅವರು ಭಾಷೆಯನ್ನು ಶುದ್ಧವಾಗಿ ಮಾತನಾಡುತ್ತಿದ್ದರು. ಕುರು-ಪಂಚಾಲರಲ್ಲಿ ಸಂಹಿತೆಗಳು ಮತ್ತು ಬ್ರಾಹ್ಮಣಗಳು ಅವುಗಳ ಸ್ಪಷ್ಟ ರೂಪವನ್ನು ಪಡೆದಂತೆ ತೋರುತ್ತದೆ.

ಋಗ್ವೇದದ ಕಾಲದಲ್ಲಿ ಶೃಂಜಯರು, ತೃತ್ಸುಗಳ ನಿಕಟವರ್ತಿಗಳಾಗಿದ್ದರು. ಶತಪಥ ಬ್ರಾಹ್ಮಣವು (ಋಗ್ವೇದಾನಂತರದ ಕಾಲದಲ್ಲಿ ತೃತ್ಸು, ಭರತ ಮತ್ತು ಪೂರುಗಳ ಅನಂತರ ಬಂದ) ಕುರುಗಳು ಮತ್ತು ಶೃಂಜಯರು ಒಬ್ಬನೇ ಪುರೋಹಿತನನ್ನು ಹೇಳುವುದರಿಂದ ಈ ನಿಲುವು ದೃಢೀಕೃತವಾಗುತ್ತದೆ. ಶತಪಥ ಬ್ರಾಹ್ಮಣವು ಈ ಜನಾಂಗಕ್ಕೆ ಸಂಬಂಧಿಸಿದಂತೆ ಇನ್ನೊಂದು ಚಾರಿತ್ರಿಕ ಘಟನೆಯನ್ನು ಉಲ್ಲೇಖಿಸುತ್ತದೆ. ಯಜುರ್ವೇದ ಸಂಹಿತೆಗಳು ಶೃಂಜಯರು ಧರ್ಮಾಚರಣೆಯ ದೋಷದಿಂದಾಗಿ ಗುರುತರವಾದ ನಷ್ಟವನ್ನು ಅನುಭವಿಸಿದರೆಂದು ಹೇಳಿದರೂ ಅದು ಯಾವ ರೀತಿಯ ನಷ್ಟವೆಂದು ಸ್ಪಷ್ಟವಾಗಿ ಹೇಳುವುದಿಲ್ಲ.

ಋಗ್ವೇದದಲ್ಲಿ ಭರದ್ವಾಜನ ಜೊತೆಗೆ ಉಕ್ತವಾಗಿರುವವನೂ ಸುದಾಸನ ಸಮಕಾಲೀನನೂ ಆಗಿದ್ದ ವೀತಹವ್ಯ ಶೃಂಜಯರ ಒಬ್ಬ ರಾಜನಾಗಿದ್ದಿರಬಹುದು. ಅಥರ್ವವೇದದಲ್ಲಿ ಆತ ಜಮದಗ್ನಿ ಮತ್ತು ಅಸಿತರೊಂದಿಗೆ ಸಂಬಂಧ ಹೊಂದಿದ್ದಂತೆ ಕಾಣಿಸುತಾನೆ; ಆದರೆ ಈ ಐತಿಹ್ಯ ಪ್ರಾಯಶಃ ಹೆಚ್ಚು ಉಪಯುಕ್ತವಾಗಿಲ್ಲ. ವೀತಹವ್ಯರು ಬ್ರಾಹ್ಮಣನೊಬ್ಬನ ಹಸುವನ್ನು ತಿಂದುದರಿಂದ ನಾಶವಾದರೆಂದು ಹೇಳಲಾಗಿದೆ.

ವಶರು ಮತ್ತು ಉಶೀನರರು, ಮೇಲೆ ಹೇಳಿದಂತೆ, ಕುರು ಪಂಚಾಲರೊಂದಿಗೆ ಮಧ್ಯದೇಶದಲ್ಲಿ ವಾಸಿಸುತ್ತಿದ್ದರು. ವಶರು, ಉಶೀನರರು ಸಂಘಟಿತರಾಗಿದ್ದರೆಂದು ಹೇಳುವ ಗೋಪಥ ಬ್ರಾಹ್ಮಣ ಅವರನ್ನು ಔತ್ತರೇಯರೆಂದು ಪರಿಗಣಿಸುತ್ತದೆ. ವೆಬರ್ ಅವರ ಪ್ರಕಾರ ಉಶೀನರರು ಅನಂತರದ ಕಾಶಿಗಳ ಮತ್ತು ವಿದೇಹರ ಪೂರ್ವಜರಾಗಿದ್ದರು. ಕೌಷೀತಕಿ ಉಪನಿಷತ್ತು ವಶರನ್ನು ಸಹ ಮತ್ಸ್ಯರೊಂದಿಗೆ ಸೇರಿಸುತ್ತದೆ. ಅನಂತರದ ಕಾಲದಲ್ಲಿ ವತ್ಸರೆಂದು ಹೆಸರಾದ ವಶರ ರಾಜ್ಯ ಅವರ ರಾಜಧಾನಿ ಕೌಶಾಂಬಿಯ ಸುತ್ತಮುತ್ತಲಿನ ಪ್ರದೇಶಗಳನ್ನು ಒಳಗೊಂಡಿತ್ತು.

ಶಿಬಿಗಳು ಉಶೀನರರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ಐತರೇಯ ಬ್ರಾಹ್ಮಣವು ಶಿಬಿರಾಜ ಅಮಿತ್ರತಾಪನ ಎಂಬ ರಾಜನನ್ನು ಕುರಿತು ಹೇಳುತ್ತದೆ. ಅನುಕ್ರಮಣಿಯು ಋಗ್ವೇದದ ಉಶೀನರನಿಗೆ ಸೇರಿದುದೆಂದು ತಿಳಿಸುತ್ತದೆ. ಶೋರ್‌ಕೋಟ್ ಶಾಸನದಲ್ಲಿ ಶಿಬಿಪುರದೊಂದಿಗೆ ಸಮೀಕರಿಸಲಾಗಿರುವ ಶಿವಪುರವನ್ನು ಪತಂಜಲಿಯು ಉತ್ತರ ದೇಶದಲ್ಲಿ ಇದೆ ಎಂದು ಉಲ್ಲೇಖಿಸುತ್ತಾನೆ. ಪಂಜಾಬಿನ ಐರಾವತೀ ಮತ್ತು ಚಂದ್ರಭಾಗಾ ನದಿಗಳ ನಡುವಣ ಝುಂಗ್ ಸಮೀಪದ ಶೋರ್ ಕೋಟ್ ಭಾಗದಲ್ಲಿ ಶಿಬಿಗಳು ನೆಲೆಸಿದ್ದರು.

ಮತ್ಸ್ಯರು ಕೌಷೀತಕೀ ಉಪನಿಷತ್ತಿನಲ್ಲಿ ವಶರ ಜೊತೆಗೂಡಿಯೂ ಗೋಪಥ ಬ್ರಾಹ್ಮಣದಲ್ಲಿ ಶಾಲ್ವರೊಂದಿಗೂ ಕಾಣಬರುತ್ತಾರೆ. ಅವರ ರಾಜ ದ್ವೈತವನ ಸರೋವರದಲ್ಲಿ ಯಾಗವನ್ನು ಮಾಡಿದ್ದ ಧ್ವಸನ್ ದ್ವೈತವನನು ಶತಪಥ ಬ್ರಾಹ್ಮಣದಲ್ಲಿ ಅಶ್ವಮೇಧಿಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದ್ದಾನೆ. ಮನುಸ್ಮೃತಿಯ ಪ್ರಕಾರ ಮತ್ಸ್ಯರನ್ನು ಬ್ರಹ್ಮರ್ಷಿದೇಶದಲ್ಲಿ ಸೇರಿಸಲಾಗಿದೆ.

ಶಾಲ್ವರು ಶತಪಥ ಬ್ರಾಹ್ಮಣದಲ್ಲಿ ಹೆಸರಿಸಲ್ಪಟ್ಟಿದ್ದಾರೆ. ಮಂತ್ರಪಾಠ ಅವರ ಪ್ರದೇಶವನ್ನು ಯಮುನಾನದಿಯ ಬಳಿ ಸೂಚಿಸುತ್ತದೆ ಮತ್ತು ಅವರು ವೇದಕಾಲದಲ್ಲಿ ವಾಯವ್ಯ ಪ್ರಾಂತ್ಯದವರಾಗಿದ್ದಂತೆ ತೋರುವುದಿಲ್ಲ. ಮಹಾಭಾರತ ಶಾಲ್ವರನ್ನು ಕುರು-ಪಂಚಾಲರೊಂದಿಗೆ ಸಂಬಂಧಿಸುತ್ತದೆ ಮತ್ತು ಅವರು ಪ್ರಾಯಶಃ ಈಗಿನ ಅಳ್ವಾರ್ ಪ್ರಾಂತ್ಯವಾಸಿಗಳಾಗಿದ್ದರು.

ಇಕ್ಷ್ವಾಕು ಎಂಬ ಹೆಸರು ಒಂದು ಬಾರಿ ಮಾತ್ರ ಋಗ್ವೇದದಲ್ಲಿ ಉಕ್ತವಾಗಿದೆ. ಅಲ್ಲಿ ಅದು ಒಬ್ಬ ರಾಜಕುಮಾರನನ್ನು ನಿರ್ದೇಶಿಸುತ್ತದೆ. ಶತಪಥ ಬ್ರಾಹ್ಮಣ ಪುರುಕುತ್ಸನನ್ನು ಐಕ್ಷ್ವಾಕ ಎಂದು ಹೇಳುತ್ತದೆ. ಇದರಿಂದ ಕೆಲವು ವಿದ್ವಾಂಸರು ಇಕ್ಷ್ವಾಕು ಸಂತತಿಯನ್ನು, ವೇದದ ಕಾಲದಲ್ಲಿ ಸರಸ್ವತೀ ನದಿಯ ಬಳಿ ಇದ್ದ, ಮೂಲ ಕುರುವಂಶದ ರಾಜ ಸಂತತಿಯೆಂದು ಪರಿಗಣಿಸಿದರು; ಆದರೆ ಅಯೋಧ್ಯೆ ಮತ್ತು ಪಶ್ಚಿಮ ವಾಸಿಗಳೊಂದಿಗೆ ಇಕ್ಷ್ವಾಕುವನ್ನು ಸೇರಿಸಲಾಗಿದೆ.

ಕೋಸಲ ಮತ್ತು ವಿದೇಹ ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ಕಾಣಬರುವುದಿಲ್ಲ. ಶತಪಥ ಬ್ರಾಹ್ಮಣದಲ್ಲಿ ವೈದಿಕ ಸಂಸ್ಕೃತಿಯ ವಿಸ್ತರಣೆಗೆ ಸಂಬಂಧಿಸಿದ ಕಥೆಯಲ್ಲಿ ಅವು ಮೊದಲಿಗೆ ಉಕ್ತವಾಗಿದೆ. ವಿದೇಹ ರಾಜ ವಿದೇಘ ಮಾಥವನು ಆತನ ಪುರೋಹಿತ ಗೋತಮ ರಾಹೂಗಣನೊಂದಿಗೆ, ಯಜ್ಞದ ಪವಿತ್ರಾಗ್ನಿಯನ್ನು ತೆಗೆದುಕೊಂಡು ಸರಸ್ವತೀ ನದಿಯ ದಂಡೆಯಿಂದ, ಕೋಸಲದ (ಔಧ್) ಮೂಲಕ ಪೂರ್ವಾಭಿಮುಖವಾಗಿ ಸಾಗಿ, ಸದಾನೀರವನ್ನು ದಾಟಿ, ಮಾಥವ ಎಂಬ ಜನಾಂಗದ ಹೆಸರಿನ ಮೇಲೆ ಆಧಾರಿತವಾದ, ವಿದೇಹ (ತಿರ್‌ಹುತ್) ಎಂಬ ಹೆಸರಿನ ನೆಲೆಯನ್ನು ಸ್ಥಾಪಿಸಿದ ಎಂದು ಹೇಳಲಾಗಿದೆ. ವಿದೇಹರು ಅವರ ಸಂಸ್ಕೃತಿಯನ್ನು ಪಶ್ಚಿಮದಿಂದ ಪಡೆದರು; ಕೋಸಲವು ವಿದೇಹಕ್ಕೆ ಮುಂಚೆ ವೈದಿಕ ಸಂಸ್ಕೃತಿಯನ್ನು ಹೊಂದಿತ್ತು; ಸದಾನೀರದವರೆಗಿನ ರಾಜ್ಯವನ್ನು ಒಂದೇ ಕಾಲದಲ್ಲಿ ಆಕ್ರಮಿಸಿಕೊಳ್ಳಲಾಯಿತು ಮತ್ತು ಅವರ ಮುನ್ನಡೆಯನ್ನು ಸ್ವಲ್ಪ ಕಾಲದವರೆಗೆ ತಡೆಯಲಾಯಿತು, ಅನಂತರ ವಿದೇಹವನ್ನು ನದಿಯ ಆಚೆಗೆ ಸ್ಥಾಪಿಸಲಾಯಿತು ಎಂಬ ಎಲ್ಲ ಅಂಶಗಳನ್ನೂ ಈ ಕಥೆ ಸಂರಕ್ಷಿಸಿಕೊಂಡಿದೆ. ಉತ್ತರ ಕೋಸಲ ಮತ್ತು ದಕ್ಷಿಣ ಕೋಸಲ ಎಂದು ಅನಂತರದಲ್ಲಿ ಆದ ವಿಭಾಗ ವೈದಿಕ ಸಾಹಿತ್ಯದಲ್ಲಿ ಕಾಣಬರುವುದಿಲ್ಲ.

ಪರ-ಆಟ್ಣಾರ ಹೈರಣ್ಯನಾಭ ಎಂಬ ಕೋಸಲ ರಾಜ ಅಶ್ವಮೇಧ ಯಾಗವನ್ನು ಮಾಡಿದವನೆಂದು ಹೇಳಲಾಗಿದೆ. ಕೋಸಲರು, ವಿದೇಹರು ಮತ್ತು ಕಾಶಿಗಳೊಂದಿಗಿದ್ದ ನಿಕಟ ಸಂಬಂಧವು ಈ ಮೂವರೂ ಒಬ್ಬನೇ ಪುರೋಹಿತನನ್ನು ಹೊಂದಿದ್ದರು ಎಂಬ ಅಂಶದಿಂದ ವೇದ್ಯವಾಗುತ್ತದೆ. ಪ್ರಾಯಶಃ ಕೋಸಲ – ವಿದೇಹರು ಮಿತ್ರ ಜನಾಂಗಗಳಾಗಿದ್ದು, ಇವುಗಳ ಮತ್ತು ಕುರು-ಪಂಚಾಲರ ನಡುವೆ ಭೇದ ಭಾವ ಮತ್ತು ವೈರವಿದ್ದಿತೆಂದು ತೋರುತ್ತದೆ. ವೈದಿಕ ಧರ್ಮವು ಕುರು-ಪಂಚಾಲರಲ್ಲಿದ್ದಷ್ಟು ಪ್ರಬಲವಾಗಿ ಕೋಸಲದಲ್ಲಿರಲಿಲ್ಲ. ಉಪನಿಷತ್ ಸಿದ್ಧಾಂತಗಳ ಮುಖ್ಯ ಪ್ರವರ್ತಕನಾದ ತತ್ತ್ವಜ್ಞಾನಿ ರಾಜ ಜನಕನಿಂದಾಗಿ ವಿದೇಹರು ಅನಂತರದಲ್ಲಿ ಪ್ರಾಮುಖ್ಯ ಪಡೆದರು. ಕೇವಲ ವೈದಿಕ ಯುಗದ ಉತ್ತರ ಕಾಲದಲ್ಲಿ ಕಾಶಿಯ, ಕೋಸಲ ಮತ್ತು ವಿದೇಹ ರೊಂದಿಗೆ, ಪ್ರಾಮುಖ್ಯತೆ ಪಡೆಯಿತು. ಕಾಶಿ ಮತ್ತು ಕೋಸಲರು ಪರಸ್ಪರ ಸಾಮೀಪ್ಯದ ಕಾರಣದಿಂದಾಗಿ ಹೆಚ್ಚು ಆಪ್ತರಾಗಿದ್ದರು.

ವೆಬರ್ ಅವರ ಪ್ರಕಾರ ಇವರಿಬ್ಬರೂ ಸಂಘಟಿತರಾಗಿ ಉಶೀನರರಾಗಿದ್ದರು. ಈ ವಾದವನ್ನು ಒಪ್ಪುವುದಕ್ಕೆ ಆಗುವುದಿಲ್ಲ ಏಕೆಂದರೆ ಉಶೀನರರು ಮಧ್ಯದೇಶದಲ್ಲಿ ವಾಸಿಸುತ್ತಿದ್ದರು. ಕಾಶಿ ಮತ್ತು ಕೋಸಲಗಳು ಕೂಡ ಒಟ್ಟಿಗೆ ಕಾಣಬರುತ್ತವೆ. ಕಾಶೀ ರಾಜನಾದ ಧೃತರಾಷ್ಟ್ರನು, ಭರತರಾಜ ಶತಾನೀಕ ಸಾತ್ರಾಜಿತನಿಂದ ಸೋಲಿಸಲ್ಪಟ್ಟು, ಶತಪಥ ಬ್ರಾಹ್ಮಣದ ಕಾಲದವರೆಗೆ ಪವಿತ್ರಾಗ್ನಿಯ ಸೃಷ್ಟಿಯನ್ನು ತ್ಯಜಿಸಿದನೆಂದು ಒಂದು ಕಥೆಯಿದೆ. ಪೂರ್ವರಾಜ್ಯದ ಜನರು ಕುರು ಪಂಚಾಲರೊಂದಿಗೆ ಸ್ನೇಹಪೂರ್ವವಾದ ಸಂಬಂಧವನ್ನು ಹೊಂದಿರಲಿಲ್ಲ. ರಾಜಕೀಯ ಘರ್ಷಣೆ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳು ಈ ಎರಡೂ ಬಣಗಳ ವೈಷಮ್ಯಕ್ಕೆ ಪ್ರಾಯಶಃ ಕಾರಣಗಳಾಗಿದ್ದುವೆಂದು ಹೇಳಲಾಗಿದೆ.

ವೈದಿಕ ಸಂಸ್ಕೃತಿಯ ಪ್ರಾಚೀನ ಕೇಂದ್ರದಿಂದ ಬಹಳ ದೂರದಲ್ಲಿ ಮಗಧರಿದ್ದರು. ಅವರು ಕೇವಲ ಅನಂತರದ ವೈದಿಕ ಸಾಹಿತ್ಯದಲ್ಲಿ ಮಾತ್ರ ಕಾಣಬರುತ್ತಾರೆ. ಸಂಪೂರ್ಣವಾಗಿ ಅವರಿಗೆ ಕಡಿಮೆ ಪ್ರಾಶಸ್ತ್ಯ ನೀಡಲಾಗಿದೆ. ಮಗಧ ಹೆಚ್ಚೂ ಕಡಿಮೆ ಈಗಿನ ದಕ್ಷಿಣ ಬಿಹಾರಿಗೆ ಸಮವಾಗಿತ್ತು. ಮಗಧದ ಹೆಸರು ಮೊದಲ ಬಾರಿಗೆ ಅಥರ್ವವೇದದಲ್ಲಿ ಕಾಣಬರುತ್ತದೆ. ಇಲ್ಲಿ ಗಂಧಾರರು, ಮೂಜವಂತರು, ಅಂಗರು ಮತ್ತು ಮಗಧರಿಗೆ ಜ್ವರ ಪ್ರಾಪ್ತಿಯಾಗಲೆಂಬ ಆಶಯ ವ್ಯಕ್ತಪಡಿಸಲಾಗಿದೆ. ಇದರಲ್ಲಿ ಮೊದಲ ಎರಡು ಜನಾಂಗಗಳು ಔತ್ತರೇಯರು ಮತ್ತು ಕೊನೆಯ ಎರಡು ಪೌರಸ್ತ್ಯ ಜನಾಂಗಗಳು. ವ್ರಾತ್ಯ ಮಂತ್ರದಲ್ಲಿ ಮಾಗಧರು ವ್ರಾತ್ಯರೊಂದಿಗೆ ಸೇರಿಕೊಂಡಿದ್ದಾರೆ. ಯಜುರ್ವೇದ ಮಾಗಧರನ್ನು ಪುರುಷಮೇಧದ ಆಹುತಿಗಳ ಪಟ್ಟಿಯಲ್ಲಿ ಸೇರಿಸಿದೆ. ಅಥರ್ವವೇದ ಮತ್ತು ಯಜುರ್ವೇದದಲ್ಲಿ ಉಕ್ತವಾಗಿರುವ ಮಾಗಧರು, ವೈಶ್ಯ ಮತ್ತು ಕ್ಷತ್ರಿಯ ಜಾತಿಗಳ ಮಿಶ್ರ ತಳಿಯ ಒಂದು ಬಣವೆಂದು ಜಿಮ್ಮರ್ ಅಭಿಪ್ರಾಯಪಡುತ್ತಾರೆ. ಸೂತ್ರಗಳು ಮತ್ತು ಐತರೇಯ ಆರಣ್ಯಕ ಮಗಧವನ್ನು ಒಂದು ದೇಶ ಎಂದು ಹೇಳುವ ಅಂಶ ಯಜುರ್ವೇದ ಮತ್ತು ಅಥರ್ವವೇದ ಕಾಲದಲ್ಲಿ ಮಾಗಧ ಎಂಬ ಪದ ದೇಶದ ಒಂದು ನಿವಾಸಿಯನ್ನು ಸೂಚಿಸುತ್ತಿತ್ತೇ ವಿನಾ ಪ್ರತಿಲೋಮ ವಿವಾಹದಿಂದ ಜನಿಸಿದ ಒಬ್ಬ ಮಿಶ್ರಜಾತಿಯ ವ್ಯಕ್ತಿಯನ್ನಲ್ಲ. ವೇದಪದ ಸೂಚಿಯ ಕರ್ತೃಗಳು ಮಗಧವು ಚಾರಣ ಅಥವಾ ಸಂಗೀತಗಾರರ ವಾಸಸ್ಥಾನವಾಗಿತ್ತು. ಅಲ್ಲಿಂದ ಪಶ್ಚಿಮ ಪ್ರಾಂತ್ಯಗಳಿಗೆ ಕವಿಗಳು, ಚಾರಣರು ಬರುತ್ತಿದ್ದರೆಂದು ಪರಿಗಣಿಸಿ, ಮಾಗಧ ಎಂಬ ಪದಕ್ಕೆ ಗಾಯಕ ಎಂಬ ಅರ್ಥ ನೀಡಿದ್ದಾರೆ. ಮಗಧರು ಬಣಗಳ ಅಂತರ ವಿವಾಹದಿಂದಾಗಿ ಹುಟ್ಟಿದ ಒಂದು ಜಾತಿ ಎಂಬ ಕಥೆಯನ್ನು ಸೃಷ್ಟಿಸಿ, ಈ ಬಣವನ್ನು ಅನಂತರದ ಸ್ಮೃತಿ ಪಾಠಗಳು ಒಂದು ಪ್ರತ್ಯೇಕ ಜಾತಿಯಾಗಿ ಪರಿಗಣಿಸುತ್ತವೆ.

ಅಂಗರು ಮೇಲೆ ಹೇಳಿದಂತೆ, ಋಗ್ವೇದದಲ್ಲಿ ಅಜ್ಞಾತರಾಗಿದ್ದು ಅಥರ್ವವೇದದಲ್ಲಿ ಕಾಣಬರುತ್ತಾರೆ. ಅವರು ಪೂರ್ವ ಪ್ರಾಂತ್ಯದ ಜನರು ಎಂಬುದನ್ನು ಬಿಟ್ಟರೆ ಅವರ ಸ್ಥಾನದ ಬಗ್ಗೆ ಹೇಳಲು ವೇದ ಪಾಠಗಳಲ್ಲಿ ಯಾವ ಸೂಚನೆಯೂ ಇಲ್ಲ. ಆದರೆ ಅನಂತರದಲ್ಲಿ ಅವರ ನೆಲೆಗಳು ಸೋನ್ ಮತ್ತು ಗಂಗಾ ನದಿಗಳ ದಂಡೆಯಲ್ಲಿದ್ದುದರಿಂದ, ಅವರ ಮೂಲಸ್ಥಾನವು ಸಹ ಅದೇ ಆಗಿತ್ತೆಂದು ಗ್ರಹಿಸಬಹುದು. ಕೆಲವು ಕೃತಿಗಳಲ್ಲಿ ಅವರನ್ನು ಮಗಧರೊಂದಿಗೆ ಜೊತೆಗೂಡಿಸಲಾಗಿದೆ. ಅಂಗರು, ಮಗಧರು ಸಮುದ್ರದಾಚೆಯಿಂದ ಪೂರ್ವ ಪ್ರಾಂತ್ಯಗಳಿಗೆ ಬಂದು ನೆಲೆಸಿದ ವೈದಿಕ ಜನಾಂಗ ಎಂಬ ವಾರ್ಗಿಟರ್ ಅವರ ಅಭಿಪ್ರಾಯಕ್ಕೆ ವೈದಿಕ ಸಾಹಿತ್ಯದಲ್ಲಿ ಆಧಾರವಿಲ್ಲ. ಓಲ್ಡನ್ ಬರ್ಗ್ ಅವರು ಈ ಜನಾಂಗಗಳು ಪ್ರಾರಂಭ ಕಾಲದ ವೈದಿಕ ಸಮುದಾಯದ ವಲಸೆಗಾರರು ಎಂದು ಅಭಿಪ್ರಾಯಪಡುತ್ತಾರೆ. ಇಕ್ಷ್ವಾಕುಗಳು ಮತ್ತು ವಿದೇಹರು ಒಂದೇ ಮೂಲದವರಾಗಿದ್ದು ಋಗ್ವೇದದ ಕಾಲದಿಂದಲೂ ಈ ಪ್ರಾಂತದಲ್ಲಿ ನೆಲೆಸಿದ್ದರು ಎಂಬ ಪೌರಾಣಿಕ ಆಧಾರ, ಓಲ್ಡನ್ ಬರ್ಗ್‌ರ ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ.

ಅಥರ್ವವೇದದ ರಹಸ್ಯಾರ್ಥವನ್ನೊಳಗೊಂಡ ಮಂತ್ರಗಳಲ್ಲಿ ಮಾಗಧನನ್ನು ವ್ರಾತ್ಯನೊಂದಿಗೆ ಸೇರಿಸಲಾಗಿದೆ. ಇಲ್ಲಿ ಅವನನ್ನು ವಿಶ್ವಶಕ್ತಿಯ ಒಂದು ರೂಪ ಎಂದು ಸ್ತುತಿಸಲಾಗಿದೆ. ಯಜುರ್ವೇದವು ವ್ರಾತ್ಯರನ್ನು ಪುರುಷಮೇಧದ (ನರಹತ್ಯಾಯಜ್ಞ) ಆಹುತಿಗಳ ಪಟ್ಟಿಯಲ್ಲಿ ಸೇರಿಸುತ್ತದೆ. ವ್ರಾತ್ಯರನ್ನು ಜಾತಿಭ್ರಷ್ಟರೆಂದು ಪರಿಗಣಿಸಲಾಗಿತ್ತು ಮತ್ತು ಅಥರ್ವವೇದ, ಪಂಚವಿಂಶ ಬ್ರಾಹ್ಮಣ ಮತ್ತು ಸೂತ್ರಗಳು ಅವರನ್ನು ಬ್ರಾಹ್ಮಣ ಪಂಗಡದೊಳಕ್ಕೆ ಸೇರಿಸಿಕೊಳ್ಳಲು ಕೆಲವು ನಿರ್ದಿಷ್ಟ ವಿಧಿಗಳನ್ನು ವರ್ಣಿಸುತ್ತವೆ. ವ್ರಾತ್ಯರು ಒಂದು ಅಲೆಮಾರಿ (ವ್ರಾತ್ಯ) ಜನಾಂಗವಾಗಿದ್ದು, ವೇದಾಧ್ಯಯನವನ್ನಾಗಲೀ ಕೃಷಿಯನ್ನಾಗಲೀ ಅಥವಾ ವ್ಯಾಪಾರವನ್ನಾಗಲೀ ಮಾಡುತ್ತಿರಲಿಲ್ಲ. ಅವರು ವಿಚಿತ್ರ ರೀತಿಯ ಧನುರ್ಧಾರಿಗಳಾಗಿ, ಪೇಟಗಳನ್ನು ಧರಿಸಿ, ತಮ್ಮ ಮೇಕೆಗಳೊಂದಿಗೆ ಒರಟು ಬಂಡಿಗಳಲ್ಲಿ ಸಂಚರಿಸುತ್ತಿದ್ದ ವಿಚಾರ ಅವರ ಅಲೆಮಾರಿ ಜೀವನವನ್ನು ಪುಷ್ಟೀಕರಿಸುತ್ತದೆ.

ಧರ್ಮಸೂತ್ರಗಳು ವ್ರಾತ್ಯರನ್ನು ಹೊರ ಪ್ರಾಂತದವರು, ಮಿಶ್ರ ಜಾತಿಯವರು ಮತ್ತು ವಿಚಿತ್ರ ವೇಷಧಾರಿಗಳು, ವಿಚಿತ್ರ ಪ್ರವೃತ್ತಿಯವರು ಎಂದು ಹೇಳಿರುವುದನ್ನು ಆಧರಿಸಿ ರಾತ್, ವಿಟ್ನಿ, ಬ್ಲೂಮ್‌ಫೀಲ್ಡ್, ಚಂದ ಇತ್ಯಾದಿ ವಿದ್ವಾಂಸರು ವ್ರಾತ್ಯರನ್ನು ವೈದಿಕೇತರ ಜನಾಂಗದವರೆಂದು ಪರಿಗಣಿಸುತ್ತಾರೆ. ಪ್ರಾರಂಭ ಕಾಲದ ವೇದ ಪಾಠಗಳು ಈ ಅಂಶವನ್ನು ಸಮರ್ಥಿಸುವುದಿಲ್ಲ. ವ್ರಾತ್ಯರು ದೀಕ್ಷೆ ಪಡೆಯದಿದ್ದರೂ ದೀಕ್ಷೆ ಪಡೆದವರಂತೆ ಮಾತನಾಡುತ್ತಿದ್ದರು. ಅವರ ಮಾತು ವೈದಿಕ ಸಂಸ್ಕೃತವಾಗಿರುವುದಕ್ಕಿಂತ ಹೆಚ್ಚಾಗಿ ಪ್ರಾಕೃತವನ್ನು ಹೋಲುತ್ತಿತ್ತು. ಏಕೆಂದರೆ ಅವರು ದೃಢ ವ್ಯಂಜನಗಳನ್ನು ಮೃದುವಾಗಿ ಬಳಸುತ್ತಿದ್ದರು. ಸೂತ್ರಗಳು ಬ್ರಾಹ್ಮಣ ಶ್ರೇಣಿಯಲ್ಲಿ, ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಸಮವಾಗಿ ವ್ರಾತ್ಯರ ಅರ್ಹಂತರು ಮತ್ತು ಯೋಧರನ್ನು ಹೆಸರಿಸುತ್ತವೆ. ಈ ಅಂಶಗಳು ಮತ್ತು ಕೆಲವು ವಿಶೇಷ ವಿಧಿಗಳನ್ನು ಆಚರಿಸಿ ಬ್ರಾಹ್ಮಣ ಜಾತಿಯ ಸದಸ್ಯರಾಗಲು ಇದ್ದ ಅವಕಾಶಗಳೂ ಸೇರಿಕೊಂಡು, ವ್ರಾತ್ಯರು ವೈದಿಕೇತರರಾಗಿರಲಿಲ್ಲ, ಆದರೆ ಅವರು ಬ್ರಾಹ್ಮಣ ಸಂಸ್ಕೃತಿಯ ಹೊರವಲಯದಲ್ಲಿದ್ದ ವೈದಿಕ ಸಂಸ್ಕೃತಿಯವರಾಗಿದ್ದರೆಂದು ಸ್ಪಷ್ಟಪಡಿಸುತ್ತವೆ.

ವ್ರಾತ್ಯರ ಪ್ರಾಂತವನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಇವರ ಜೀವನ ಕ್ರಮ ಮತ್ತು ಅಭ್ಯಾಸಗಳು ಇವರು ಸರಸ್ವತೀ ನದಿಯಾಚೆಯ, ಪಶ್ಚಿಮದ ಅಲೆಮಾರಿ ಜನಾಂಗವೆಂದು ಸೂಚಿಸುತ್ತವೆ. ವ್ರಾತ್ಯರನ್ನು ಮಾಗಧರೊಂದಿಗೆ ಸಮೀಕರಿಸುವ ಕೆಲವು ಸೂಚನೆಗಳು ಸೂತ್ರಗಳಲ್ಲಿದ್ದು, ಕೆಲವು ವ್ರಾತ್ಯರು ಮಗಧ ವಾಸಿಗಳು ಎಂಬ ತೀರ್ಮಾನಕ್ಕೆ ಬರುವುದು ಅನಿವಾರ್ಯವೆನಿಸುತ್ತದೆ.

ಬಂಗಾಲ ಎಂಬ ಹೆಸರಿನ ಮೂಲ ರೂಪವಾದ ವಂಗ, ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ಕಾಣಬರುವುದಿಲ್ಲ. ಐತರೇಯ ಆರಣ್ಯಕವು ವಂಗರು, ವಗಧರು ಮತ್ತು ಚೇರರನ್ನು ಪಕ್ಷಿಗಳೆಂದು ಹೇಳುತ್ತದೆ. ಪ್ರಾಯಶಃ ಇದಕ್ಕೆ ಕಾರಣ ಅವರು ವೈದಿಕ ಸಮುದಾಯದವರಿಗೆ ಅರ್ಥವಾಗದ ಭಾಷೆಗಳನ್ನು ಮಾತನಾಡುತ್ತಿದ್ದುದು. ವಗಧ ಎಂಬ ಪದವು ಪ್ರಾಯಶಃ ತಪ್ಪಾಗಿ ಓದಲ್ಪಟ್ಟಿರುವ ಮಗಧ ಎಂಬ ಪದವಿರಬೇಕು. ಏಕೆಂದರೆ ಇವರಿಬ್ಬರು ನೆರೆಹೊರೆಯುವರಾಗಿದ್ದರು; ವಂಗರು, ವಂಗ ಅಥವಾ ಪೂರ್ವ ಬಂಗಾಲದ ನಿವಾಸಿಗಳಾಗಿದ್ದರು. ಬೌಧಾಯನ ಧರ್ಮಸೂತ್ರದಲ್ಲಿಯೂ ಈ ಹೆಸರು ಕಾಣಬರುತ್ತದೆ.

ಈ ಬಣಗಳು ಪಂಚಪ್ರಾಂತ್ಯಗಳ ಮೊದಲ ಎರಡು ಪ್ರಾಂತಗಳನ್ನು ವಶಪಡಿಸಿಕೊಂಡಿದ್ದರು. ಅವುಗಳೆಂದರೆ ಐತರೇಯ ಬ್ರಾಹ್ಮಣದಲ್ಲಿ ಹೇಳಿರುವ ಮಧ್ಯ ಮತ್ತು ಪೂರ್ವಪ್ರಾಂತ್ಯಗಳು. ದಕ್ಷಿಣದಿಕ್ ಅಥವಾ ದಕ್ಷಿಣ ಪ್ರಾಂತ್ಯಗಳಲ್ಲಿ, ಐತರೇಯ ಬ್ರಾಹ್ಮಣ ಸತ್ವಂತರರನ್ನು ಮಾತ್ರ ಹೆಸರಿಸಿದೆ. ಆದರೆ ಅವರಲ್ಲದೆ ಅಲ್ಲಿ ವಿದರ್ಭರು, ನಿಷಧರು ಮತ್ತು ಕುಂತಿಗಳು ಸಹ ಇದ್ದರು.

ಸತ್ವಂತರು ದಕ್ಷಿಣಕ್ಕೆ ಸೇರಿದ ಒಂದು ಜನಾಂಗವಾಗಿದ್ದು ಅವರು ಭೋಜರಾಜರ ಪ್ರಜೆಗಳಾಗಿದ್ದರು ಎಂದು ನಿರೂಪಿಸಲಾಗಿದೆ. ಈ ಜನಾಂಗ ಸತತವಾಗಿ ಭರತರ ನಿರಂತರ ಆಕ್ರಮಣಗಳಿಗೆ ತುತ್ತಾಗುತ್ತಿದ್ದಿತು ಮತ್ತು ಶತಪಥ ಬ್ರಾಹ್ಮಣ ಭರತ ರಾಜ ಸತ್ವಂತರನ್ನು ಸೋಲಿಸಿ ಅವರ ಅಶ್ವಮೇಧ ಯಾಗದ ಕುದುರೆಯನ್ನು ಅಪಹರಿಸಿಕೊಂಡು ಹೋದನೆಂದು ಹೇಳುತ್ತದೆ. ಸತ್ವಂತರು, ಭರತರಾಜ್ಯ ಅಂದರೆ ಗಂಗಾ, ಯಮುನಾ ನದಿಗಳ ಬಳಿಯ ಪ್ರಾಂತದಲ್ಲಿ ವಾಸಿಸುತಿದ್ದರೆಂದೂ ಸಹ ಶತಪಥ ಬ್ರಾಹ್ಮಣದಲ್ಲಿ ಹೇಳಿದೆ. ಅವರು ಐತರೇಯ ಬ್ರಾಹ್ಮಣ ಕಾಲಕ್ಕೆ ಇನ್ನೂ ದಕ್ಷಿಣಕ್ಕೆ ಸರಿದಿದ್ದರೆಂದು ತೋರುತ್ತದೆ. ಐತರೇಯ ಬ್ರಾಹ್ಮಣ ಅವರನ್ನು ಮಧ್ಯದೇಶದಿಂದಾಚೆಯ, ದಕ್ಷಿಣ ಪ್ರಾಂತ್ಯಗಳಿಗೆ, ಪ್ರಾಯಶಃ ಚಂಬಲ್ (ಚರ್ಮಣ್ವತೀ) ನದಿಯ ಆಚೆಯ ಪ್ರದೇಶಕ್ಕೆ ಸೇರಿಸುತ್ತದೆ. ಪುರಾಣಗಳು ಭೋಜರ ಮತ್ತು ಸತ್ವಂತರ ನಿಕಟ ಬಾಂಧವ್ಯವನ್ನು ಪುಷ್ಟೀಕರಿಸುವುದಲ್ಲದೆ ಅವರನ್ನು ಯದುವಂಶದ ಒಂದು ಶಾಖೆಯೆಂದು ಹೇಳುತ್ತವೆ.

ವಿದರ್ಭವು ಅದರ ರಾಜ ಭೀಮನ ಮುಖಾಂತರ ತಿಳಿದುಬರುತ್ತದೆ. ಐತರೇಯ ಬ್ರಾಹ್ಮಣದಲ್ಲಿ ಈತ ಪರ್ವತ ಮತ್ತು ನಾರದರಿಂದ ಸೋಮಕ್ಕೆ ಒಂದು ಬದಲಿ ವಸ್ತುವಿನ ಬಗ್ಗೆ ಸೂಚನೆಗಳನ್ನು ಪಡೆದನೆಂದು ಹೇಳಿದೆ. ವಿದರ್ಭ ರಾಜ್ಯವು ಹುಲಿಗಳನ್ನು ಕೊಲ್ಲುವ ಒಂದು ವಿಶೇಷ ಜಾತಿಯ ನಾಯಿಗಳಿಗೆ ಪ್ರಸಿದ್ಧವಾಗಿತ್ತೆಂದು ಹೇಳಲಾಗಿದೆ. ವಿದರ್ಭ ಎಲ್ಲರಿಗೂ ತಿಳಿದಿರುವಂತೆ ಇಂದಿನ ಪೂರ್ವ ಮಹಾರಾಷ್ಟ್ರ ಸಮವಾಗಿತ್ತು. ಲಾಸನ್ ಅವರು ವಿದರ್ಭವನ್ನು ವಾಯವ್ಯಕ್ಕಿರುವ ಸಾತ್ಪುರ ಬೆಟ್ಟಗಳೊಂದಿಗೆ ಸಮೀಕರಿಸುತ್ತಾರೆ. ಉಪನಿಷತ್ತುಗಳು ವೈದರ್ಭೀ ಕೌಂಡಿನ್ಯ ಮತ್ತು ಆಶ್ವಲಾಯನರಿಗೆ ಸಮಕಾಲೀನವಾಗಿದ್ದು ವಿದರ್ಭದೇಶದ ಭಾರ್ಗವ ಎಂಬ ಋಷಿಯನ್ನು ಹೆಸರಿಸುತ್ತವೆ. ವಿದರ್ಭದ ರಾಜಧಾನಿಯಾಗಿದ್ದ ಕೌಂಡಿನವನ್ನು ಅಮರಾವತಿಯ ಚಾಂದೂರು ತಾಲ್ಲೂಕಿನಲ್ಲಿ ವಾರ್ಧಾ ನದಿಯ ದಂಡೆಯ ಮೇಲಿರುವ ಇಂದಿನ ಕೌಂಡಿನ್ಯಪುರದೊಂದಿಗೆ ಸಮೀಕರಿಸಲಾಗಿದೆ.

ಶತಪಥ ಬ್ರಾಹ್ಮಣವು ನೈಷಿಧ ಎಂಬ ಪದವನ್ನು ದಕ್ಷಿಣದ ರಾಜ ನಡ ಎಂಬುವನ ಬಿರುದೆಂದು ಉಲ್ಲೇಖಿಸಿದೆ. ನೈಷಧ ಎಂಬುದು ಈ ಹೆಸರಿನ ಅನಂತರದ ರೂಪ. ನಿಷಧ ಪ್ರಾಂತ ನಿವಾಸಿಗಳಾದ ನಿಷಧರು, ಸಾಮಾನ್ಯವಾಗಿ ನಿಷಾಧರೆಂದು ಗ್ರಹಿಸಲ್ಪಟ್ಟಿರುವರಾದರೂ ಅವರಿಗಿಂತ ಬಹಳ ಭಿನ್ನವಾಗಿದ್ದರು. ನಿಷಾಧ ಎಂಬ ಪದ ಸಾಮಾನ್ಯವಾಗಿ ವೈದಿಕೇತರ ಜನಾಂಗಗಳನ್ನು ಉದ್ದೇಶಿಸುತ್ತಿತ್ತು. ಆದರೆ ನಿಷಧರು ಬಹುಮಟ್ಟಿಗೆ ವೈದಿಕ ಜನಾಂಗಕ್ಕೆ ಸೇರಿದವರಾಗಿದ್ದರು. ನಿಷಧ ರಾಜ ನಳ ಮಹಾಭಾರತ ಹಾಗೂ ಪುರಾಣಗಳಲ್ಲಿ ಬಹಳ ಪ್ರಮುಖ ವ್ಯಕ್ತಿಯಾಗಿದ್ದಾನೆ. ನಿಷಧ ರಾಜ್ಯವು ವಿದರ್ಭ ಪ್ರಾಂತ್ಯಕ್ಕೆ ಹೊಂದಿಕೊಂಡಂತೆ ಇದ್ದಿರಬಹುದಾದರೂ ಅದರ ಪ್ರದೇಶ ನಿಖರವಾಗಿ ತಿಳಿದಿಲ್ಲ.

ಪ್ರತೀಚ್ಯರು ಅಥವಾ ಪಾಶ್ಚಾತ್ಯರ ಸಾಲಿನಲ್ಲಿ ನೀಚ್ಯರು ಅಪಾಚ್ಯರು ಹಾಗೂ ಬಾಹ್ಲೀಕರು ಮತ್ತು ಅಂಬಷ್ಠರು ಕಂಡುಬರುತ್ತಾರೆ. ನೀಚ್ಯ ಎಂಬ ಪದ ಪಂಜಾಬ್ ಮತ್ತು ಸಿಂಧ್‌ನ ಕೆಲವು ಭಾಗಗಳ ಹೆಸರಾಗಿ ದೊರೆಯುತ್ತದೆ. ಅಪಾಚ್ಯರ ವಿಚಾರ ಏನೂ ತಿಳಿದಿಲ್ಲ. ಬಾಹ್ಲೀಕರು

ಪಶ್ಚಿಮ ಪಂಜಾಬಿನ ಜನರೆಂದು ಶತಪಥ ಬ್ರಾಹ್ಮಣದಲ್ಲಿ ಹೇಳಿದೆ. ಪ್ರಾಚ್ಯರು ಅಗ್ನಿಯನ್ನು ಶರ್ವ ಎಂದು ಕರೆದರೆ ಬದಲಾಗಿ ಇವರು ಅಗ್ನಿಯನ್ನು ಭವ ಎಂದು ಕರೆಯುತ್ತಾರೆಂದು ಹೇಳಿದೆ. ಅಲೆಗ್ಸಾಂಡರನ ಕಾಲದಲ್ಲಿ ಅಸಿಕ್ನೀನದಿಯ ಕೆಳಗಿನ ಪ್ರದೇಶದಲ್ಲಿ ನೆಲೆಸಿದ್ದ ಅರ್ರಿಯನ್ನನ ಅಬಸ್ತನೋಯ್‌ಗಳಿಗೆ ಸಮನಾದ ಅಂಬಷ್ಠರು ಐತರೇಯ ಬ್ರಾಹ್ಮಣದಲ್ಲಿ ಉಕ್ತರಾಗಿದ್ದಾರೆ. ಅವರ ದೊರೆ ಐಂದ್ರಮಹಾಭಿಷೇಕದೊಂದಿಗೆ ಪಟ್ಟಾಭಿಷಿಕ್ತನಾದನೆಂದು ಹೇಳಲಾಗಿದೆ. ವೈದಿಕ ಯುಗದಲ್ಲಿ ಪ್ರಾಯಶಃ ಅವರು ಪಂಜಾಬಿನ ನಿವಾಸಿಗಳಾಗಿದ್ದರು.

ಅಂತಿಮವಾಗಿ ಉದೀಚ್ಯರ ವಿಚಾರವಾಗಿ ಹೇಳುವುದಾದರೆ ಇವರಲ್ಲಿ ಉತ್ತರ ಕುರುಗಳು, ಉತ್ತರ ಮದ್ರರು, ಮೂಜವಂತರು, ಮಹಾವೃಷರು, ಗಂಧಾರರು, ಬಾಹ್ಲೀಕರು, ಕೇಶಿನರು, ಕೇಕಯರು ಮತ್ತು ಕಾಂಬೋಜರು ಸೇರಿದ್ದಾರೆ. ಉದೀಚ್ಯರ ಭಾಷೆ ಅದರ ಪರಿಶುದ್ಧತೆಗೆ ಹೆಸರುವಾಸಿಯಾಗಿತ್ತು; ಆದ್ದರಿಂದ ಬ್ರಾಹ್ಮಣರು ವಿದ್ಯಾಭ್ಯಾಸಕ್ಕಾಗಿ ಉತ್ತರದ ಕಡೆ ಕಾತರದಿಂದ ಹೋಗುತ್ತಿದ್ದರು. ಔತ್ತರೇಯರ ಭಾಷೆ ಕುರುಪಂಚಾಲರ ಭಾಷೆಯನ್ನು ಹೋಲುತ್ತಿತ್ತು. ಒಬ್ಬ ಔತ್ತರೇಯ ಬ್ರಾಹ್ಮಣನು ಕುರುಪಂಚಾಲ ಬ್ರಾಹ್ಮಣನ ಮೇಲೆ ವಾಗ್ವಾದದಲ್ಲಿ ಗೆದ್ದ ವಿಚಾರದಿಂದ ಔತ್ತರೇಯ ಬ್ರಾಹ್ಮಣರ ಹೆಚ್ಚುಗಾರಿಕೆ ಸೂಚಿತವಾಗಿದೆ. ಕಾಶ್ಮೀರದಲ್ಲಿ ಸಂಸ್ಕೃತ ಮೊದಲು ಬೆಳವಣಿಗೆ ಹೊಂದಿದ ವಿಷಯ ಹಾಗೂ ತಕ್ಷಶಿಲೆ ಪ್ರಖ್ಯಾತ ವಿದ್ಯಾಕೇಂದ್ರವಾಗಿತ್ತೆಂಬ ವಿಷಯ, ಉತ್ತರ ಪ್ರಾಂತ್ಯ ಅಧ್ಯಯನದಲ್ಲಿ ಗಳಿಸಿದ್ದ ಪ್ರಖ್ಯಾತಿಯನ್ನು ಮತ್ತಷ್ಟು ದೃಢೀಕರಿಸುತ್ತವೆ.

ಉತ್ತರ ಕುರುಗಳು ಹಾಗೂ ಉತ್ತರ ಮದ್ರರು ಹಿಮಾಲಯದಿಂದ ಆಚೆಗೆ ಇದ್ದರೆಂದು ಹೇಳಲಾಗಿದೆ. ಪುರಾಣಗಳಲ್ಲಿ ಮತ್ತು ಅನಂತರದ ಸಾಹಿತ್ಯಗಳಲ್ಲಿ ಉತ್ತರ ಕುರುಗಳು ಪೌರಾಣಿಕ ವ್ಯಕ್ತಿಗಳೆಂದು ಪರಿಗಣಿಸಲ್ಪಟ್ಟಿದ್ದರೂ ಐತರೇಯ ಬ್ರಾಹ್ಮಣದಲ್ಲಿ ಅವರು ಚಾರಿತ್ರಿಕ ವ್ಯಕ್ತಿಗಳಾಗಿ ಕಾಣಬರುತ್ತಾರೆ. ಜಾನಂತಪಿ ಅತ್ಯರಾತಿ ಎಂಬುವನು ದೇವಭೂಮಿಯೆಂದು ಕರೆಯಲ್ಪಟ್ಟ ಉತ್ತರ ಕುರುಗಳ ರಾಜ್ಯವನ್ನು ಆಕ್ರಮಿಸಲು ಕಾತುರನಾಗಿದ್ದನೆಂದು ಐತರೇಯ ಬ್ರಾಹ್ಮಣ ಹೇಳುತ್ತದೆ. ಜಿಮ್ಮರ್ ಅವರು ಉತ್ತರ ಕುರುಗಳನ್ನು ಕುರುಕ್ಷೇತ್ರದ ಉತ್ತರಕ್ಕೆ, ಕಾಶ್ಮೀರದಲ್ಲಿ ಗುರುತಿಸುತ್ತಾರೆ ಮತ್ತು ಪ್ರಾಯಶಃ ಅವರು ಕುರುಗಳ ಒಂದು ಶಾಖೆಯೆಂದು ಭಾವಿಸುತ್ತಾರೆ.

ಮದ್ರರು ಎರಡು ಪಂಗಡಗಳಾಗಿ ವಿಭಾಗವಾಗಿದ್ದರು: ಉತ್ತರ ಮದ್ರರು ಮತ್ತು ದಕ್ಷಿಣ ಮದ್ರರು ಅಥವಾ ಮೂಲ ಮದ್ರರು. ಉತ್ತರ ಮದ್ರರು ಮಾತ್ರ ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ಕಾಣಬರುತ್ತಾರೆ. ಈ ಹಿಂದೆ ಮೇಲೆ ತಿಳಿಸಿದಂತೆ ಅವರು ಹಿಮಾಲಯದಾಚೆ, ಅಂದರೆ ಪ್ರಾಯಶಃ ಕಾಶ್ಮೀರದಲ್ಲಿ ವಾಸಿಸುತ್ತಿದ್ದರು. ಮದ್ರಗಾರ ಶೌಂಗಾಯನಿಯನ್ನು ಪ್ರಾಚೀನ ವೈದಿಕ ಆಚಾರ್ಯನೆಂದು ಹೇಳಿರುವುದು, ಮದ್ರರು ವೇದಾಧ್ಯಯನದಲ್ಲಿ ಪಾರಂಗತರಾಗಿದ್ದರೆಂದು ನಿರೂಪಿಸುತ್ತದೆ. ಈ ಅಂಶ ಉತ್ತರ ಭಾರತದ ಋಷಿಗಳು ವೇದಾಧ್ಯಯನಕ್ಕಾಗಿ ಮದ್ರ ದೇಶಕ್ಕೆ ಹೋಗುತ್ತಿದ್ದರು ಎಂಬ ಶತಪಥ ಬ್ರಾಹ್ಮಣದ ಉಕ್ತಿಯಿಂದ ಖಚಿತವಾಗುತ್ತದೆ. ಬೃಹದಾರಣ್ಯಕ ಉಪನಿಷತ್ತು ಕಾಪ್ಯಪತಂಚಲವನ್ನು, ಮದ್ರರೊಂದಿಗೆ ವಾಸಿಸುತ್ತಿದ್ದನೆಂದು ಹೇಳುತ್ತದೆ. ದಕ್ಷಿಣ ಮದ್ರರ ರಾಜ್ಯ ಗುರು ಗೋವಿಂದಸಿಂಗನ ಕಾಲದವರೆಗೂ ಮದ್ರದೇಶವೆಂದೇ ಕರೆಯಲ್ಪಟ್ಟಿದ್ದ, ಮಧ್ಯ ಪಂಜಾಬಿನ ಸಿಯಾಲ್‌ಕೋಟ್ ಮತ್ತು ಅದರಂಚಿನ ಜಿಲ್ಲೆಗಳನ್ನು ಸುಮಾರಾಗಿ ಒಳಗೊಂಡಿತ್ತು. ಬೌದ್ಧ ಯುಗದಲ್ಲಿ ಮದ್ರರು ಚೀನಾಬ್ ಮತ್ತು ರಾವೀನದಿಗಳ ನಡುವಣ ಪ್ರದೇಶದ ವಾಸಿಗಳಾಗಿದ್ದರು.

ಅಥರ್ವವೇದದಲ್ಲಿ ಮೂಜವಂತರನ್ನು ಮಹಾವೃಷರು, ಗಂಧಾರಿಗಳು ಮತ್ತು ಬಾಹ್ಲೀಕರಂತೆ ದೂರ ದೇಶ ವಾಸಿಗಳೆಂದು ಹೇಳಿದೆ. ಯಜುರ್ವೇದ ಸಹ ಮೂಜವಂತರನ್ನು ದೂರದ ಜನಾಂಗವೆಂದು ಹೇಳುತ್ತದೆ. ಹಿಮಾಲಯದ ಮೂಜವಂತ ಪರ್ವತದ ಹೆಸರಿನಿಂದ ಇವರಿಗೆ ಈ ಹೆಸರು ಪ್ರಾಪ್ತಿಯಾಗಿರುವ ಸಾಧ್ಯತೆ ಇರುವುದರಿಂದ ಇವರು ಹಿಮಾಲಯದ ಗಿರಿ ಜನಾಂಗವಿರಬಹುದು.

ಮಹಾವೃಕ್ಷರು ಔತ್ತರೇಯರಂತೆ ಕಾಣಬರುತ್ತಾರೆ. ಅವರ ಸ್ಥಳವನ್ನು ಖಚಿತವಾಗಿ ಗೊತ್ತುಪಡಿಸಲು ಆಗದಿದ್ದರೂ ಅವರು ತಮ್ಮ ನೆರೆಹೊರೆಯವರೊಂದಿಗೆ ಹೆಸರಿಸಲ್ಪಟ್ಟಿದ್ದಾರೆ. ಛಾಂದೋಗ್ಯ ಉಪನಿಷತ್ತು ರಾಜ ರೈಕ್ವ-ಪರ್ಣನನ್ನು ಮಹಾವೃಕ್ಷ ದೇಶದವನೆಂದು ಮತ್ತು ಜೈಮಿನೀಯ ಉಪನಿಷತ್ ಬ್ರಾಹ್ಮಣವು ಹೃತ್‌ಸ್ವಾಶಯನನ್ನು ಮಹಾವೃಕ್ಷರ ರಾಜನೆಂದೂ ಹೇಳುತ್ತವೆ.

ಋಗ್ವೇದದಲ್ಲಿ ಉಕ್ತರಾಗಿರುವ ಗಂಧಾರರು ಅಥರ್ವ ವೇದದಲ್ಲೂ ಮತ್ತು ಶ್ರೌತಸೂತ್ರದಲ್ಲೂ ಉಕ್ತರಾಗಿದ್ದಾರೆ. ಅಥರ್ವವೇದದಲ್ಲಿ ಸ್ಪಷ್ಟವಾಗಿ ಅವರು ತುಚ್ಛ ಜನಾಂಗವಾಗಿ ಕಾಣಬರುತ್ತಾರೆ. ಆದರೆ ಅನಂತರ ಕಾಲದಲ್ಲಿ ಮಧ್ಯದೇಶದ ಜನರ ದೃಷ್ಟಿಕೋನ ಬದಲಾಯಿತಲ್ಲದೆ ಗಂಧಾರದೇಶ ವೇದ ವಿದ್ಯೆಗಳಲ್ಲಿ ಪರಿಣತರಾದ ವಿದ್ವಾಂಸರ ವಾಸ ಸ್ಥಾನವಾಯಿತು. ಐತರೇಯ ಬ್ರಾಹ್ಮಣವು ಸೋಮಪೂಜೆಯನ್ನು ಪ್ರಚುರಪಡಿಸಿದ ವೈದಿಕ ಆಚಾರ್ಯ ನಗ್ನಜಿತ್ ಎಂಬ ಗಂಧಾರ ರಾಜನನ್ನು ಹೆಸರಿಸುವುದರಿಂದ, ಗಂಧಾರವು ವೈದಿಕ ಜನಾಂಗದವರಿಂದ ಹೊರತಾಗಿರಲಿಲ್ಲವೆಂದು ತಿಳಿದುಬರುತ್ತದೆ. ಭಾರತೀಯ ಸಾಹಿತ್ಯದಲ್ಲಿ ಗಂಧಾರದ ಬಗ್ಗೆ ಇರುವ ಅನೇಕ ಪರಾಮರ್ಶೆಗಳಿಂದ ಗಂಧಾರದ ಎಲ್ಲೆ ವಿವಿಧ ಕಾಲಗಳಲ್ಲಿ ಬದಲಾಯಿಸುತ್ತಿತ್ತೆಂದು ತೋರುತ್ತದೆ.

ಬಾಹ್ಲೀಕರು ಮೇಲೆ ಹೇಳಿದ ಮೂರು ಜನಾಂಗಗಳೊಂದಿಗೆ ಸೇರಿಕೊಂಡು ಉತ್ತರದ ಜನಾಂಗವಾಗಿದ್ದರು; ಅವರ ಹೆಸರು ಸಹ ಅವರನ್ನು 'ಹೊರಗಿನವರೆಂದು' ಸೂಚಿಸುತ್ತದೆ. ರಾತ್ ಮತ್ತು ವೆಬರ್-ಈ ಜನಾಂಗವು ಇರಾನಿನಲ್ಲಿ ಇದ್ದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಬಾಹ್ಲೀಕ ಎಂಬ ಹೆಸರು ಕುರು ರಾಜಕುಮಾರನಿಗೆ ಇದ್ದುದರಿಂದ, ಇಲ್ಲಿ ಇರಾನಿಯನ್ನರ ಪ್ರಭಾವ ಇತ್ತೆಂದು ಊಹಿಸುವ ಆವಶ್ಯಕತೆ ಇಲ್ಲ.

ಕೇಶಿನ್ ಎಂಬುದು ಶತಪಥ ಬ್ರಾಹ್ಮಣದಲ್ಲಿ ಒಂದು ಜನಾಂಗವಾಗಿ ಕಂಡುಬರುತ್ತದೆ. ಇಲ್ಲಿ ಇವರ ರಾಜ, ಯಜ್ಞದ ಸಮಯದಲ್ಲಿ ದುಶ್ಶಕುನಗಳನ್ನು ಹೇಗೆ ನಿವಾರಿಸುವುದು ಎಂಬುದನ್ನು ಅಧ್ಯಯನ ಮಾಡುತ್ತಿದ್ದನೆಂದು ಹೇಳಿದೆ. ಪ್ರಾಯಶಃ ಇವರು ಪಂಚಾಲರ ಒಂದು ಶಾಖೆ ಇರಬಹುದು.

ಶತಪಥ ಬ್ರಾಹ್ಮಣ ಮತ್ತು ಛಾಂದೋಗ್ಯ ಉಪನಿಷತ್ ಅನೇಕ ಬ್ರಾಹ್ಮಣರಿಗೆ ಶಿಕ್ಷಣವನ್ನು ನೀಡಿದ, ವಿದ್ವಾಂಸನಾದ ಕೇಕಯರಾಜ ಅಶ್ವಪತಿಯನ್ನು ಹೆಸರಿಸುತ್ತವೆ. ಕೇಕಯರು ಅನಂತರದ ಕಾಲದಲ್ಲಿ ಸಿಂಧೂ ಮತ್ತು ವಿತಸ್ತಾ ನದಿಗಳ ನಡುವಣ ವಾಯವ್ಯ ಪ್ರಾಂತ್ಯದಲ್ಲಿ ನೆಲೆಸಿದ್ದರು ಮತ್ತು ಪ್ರಾಯಶಃ ವೈದಿಕ ಕಾಲದಲ್ಲಿ ಅದೇ ಸ್ಥಳದಲ್ಲಿ ನೆಲೆಸಿದ್ದರು. ಪೌರಾಣಿಕ ಪರಂಪರೆಯ ಪ್ರಕಾರ ಕೇಕಯರು ಅವುಗಳ ವಂಶಜರು. ಈ ಹೇಳಿಕೆಯಿಂದ ಕೇಕಯರು ವಾಸಿಸುತ್ತಿದ್ದ ಪ್ರದೇಶದಲ್ಲೇ ಋಗ್ವೇದದ ಅನುಗಳು ಇದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ.

ಸಾಮವೇದದ ವಂಶ ಬ್ರಾಹ್ಮಣದಲ್ಲಿ ಕಾಂಬೋಜ ಔಪಮನ್ಯವನ ವಿಚಾರವನ್ನು ಹೇಳುವಾಗ ಕಾಂಬೋಜರು ಮೊತ್ತಮೊದಲಿಗೆ ಉಕ್ತವಾಗಿದ್ದಾರೆ. ಋಗ್ವೇದದಲ್ಲಿ ಉಕ್ತವಾಗಿರುವ ಉಪಮನ್ಯು ಋಷಿ ಬಹುಶಃ ಈ ಕಾಂಬೋಜ ಉಪಾಧ್ಯಾಯನ ತಂದೆ ಇರಬೇಕು. ಕಾಂಬೋಜ ಔಪಮನ್ಯವನನ್ನು ಮದ್ರಗಾರನ ಶಿಷ್ಯನೆಂದು ಹೇಳಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ಜಿಮ್ಮರ್ ಅವರು ಕಾಂಬೋಜರು ಮತ್ತು ಮದ್ರರು ವಾಯವ್ಯ ಭಾರತದಲ್ಲಿ ನಿಕಟ ನೆರೆಹೊರೆಯವರಾಗಿದ್ದರು ಎಂದು ಭಾವಿಸುತ್ತಾರೆ. ಕಾಂಬೋಜರ ಭಾಷೆಯನ್ನು ಯಾಸ್ಕನು ವೈದಿಕ ಭಾಷೆಗಿಂತ ವಿಭಿನ್ನ ಎಂದು ಹೇಳುತ್ತಾನೆ. ಗ್ರಿಯರ್‌ಸನ್ ಅವರು ಈ ಹೇಳಿಕೆಯಿಂದ ಕಾಂಬೋಜರಿಗೆ ಇದ್ದ ಇರಾನಿಯನ್ ಸಂಬಂಧವನ್ನು ಕಾಣುತ್ತಾರೆ. ಆದರೆ ಕಾಂಬೋಜ ಉಪಾಧ್ಯಾಯರುಗಳು ವೇದಾಧ್ಯಯನದಲ್ಲಿ ಹೆಸರುವಾಸಿಯಾಗಿದ್ದರು ಎಂಬ ವಿಚಾರ, ಅವರು ವೈದಿಕ ಜನಾಂಗದವರಾಗಿದ್ದರು ಮತ್ತು ಕಾಂಬೋಜವು ವೈದಿಕ ಸಮುದಾಯದ ನೆಲೆಯಾಗಿತ್ತು ಎಂದು ಸೂಚಿಸುತ್ತದೆ. ಅನಂತರದ ಕಾಲದಲ್ಲಿ ಕಾಂಬೋಜರು ಸಿಂಧೂನದಿಯ ವಾಯವ್ಯದಲ್ಲಿ ನೆಲೆಸಿದ್ದರು ಮತ್ತು ಪ್ರಾಚೀನ ಪರ್ಷಿಯನ್ ಶಾಸನಗಳ ಕಂಬುಜೀಯರಾದರು.

ಕಾಂಬೋಜರ ನೆಲೆಯ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ರೈಸ್‌ಡೇವಿಸ್ ಅವರು ವಾಯವ್ಯ ಭಾರತದ ತುದಿಯಲ್ಲಿ ಅವರನ್ನು ಗುರುತಿಸಿದರೆ, ಎಸ್.ಕೆ.ಅಯ್ಯಂಗಾರ್ ಮತ್ತು ಪಿ.ಎನ್.ಬ್ಯಾನರ್ಜಿ ಅವರು ಸಿಂಧ್ ಬಳಿಯ ಒಂದು ದೇಶದಲ್ಲಿಯೂ ರಾಯ್ ಚೌಧರಿಯವರು ರಾವಲ್ಪಿಂಡಿ ಹಾಗೂ ಪೇಷಾವರ್ ಜಿಲ್ಲೆಗಳಲ್ಲಿಯೂ ಸ್ಮಿತ್ ಅವರು ಹಿಂದುಕುಷ್ ಅಥವಾ ಟಿಬೆಟ್‌ನ ಪರ್ವತ ಪ್ರದೇಶದಲ್ಲಿಯೂ ಎಲಿಯಟ್ ಅವರು ಟಿಬೆಟ್ ಅಥವಾ ಅದರ ಅಂಚಿನ ಸೀಮೆಗಳಲ್ಲಿಯೂ ಗುರುತಿಸುತ್ತಾರೆ. ಕಾಂಬೋಜರ ನೆಲೆಯನ್ನು ಗುರುತಿಸುವ ಇತ್ತೀಚಿನ ಪ್ರಯತ್ನವೆಂದರೆ ಜಯಚಂದ್ರ ಅವರದು. ಇವರ ಬಗ್ಗೆಯ ಎಲ್ಲ ವಿಚಾರಗಳನ್ನೂ ಹೊಸದಾಗಿ ಚರ್ಚಿಸಿ ಅವರು ಕಾಂಬೋಜವನ್ನು ಬದಾಕ್ಷಾನ್ ಮತ್ತು ಪಾಮಿರ್‌ಗಳಲ್ಲಿ ಗುರುತಿಸಿದ್ದಾರೆ; ಇದನ್ನು ಮೋತಿಚಂದ್ರ ಅವರು ಅನುಮೋದಿಸಿದ್ದಾರೆ.

ವೇದಪಾಠಗಳಲ್ಲಿ ಇನ್ನೂ ಅನೇಕಾನೇಕ, ಸಣ್ಣಪುಟ್ಟ ಜನಾಂಗಗಳು ಕಾಣಬರುತ್ತವೆ. ಆದರೆ ಅವುಗಳ ಬಗ್ಗೆ ಹೆಚ್ಚಾಗಿ ತಿಳಿದಿಲ್ಲ. ಅಂತಿಮವಾಗಿ ಅರ್ಧ-ವೈದಿಕ, ವೈದಿಕೇತರ ಮತ್ತು ಅನಾಗರಿಕ (ಬರ್ಬರ) ಜನಾಂಗಗಳ ವಿಷಯಕ್ಕೆ ಬರಬಹುದು. ಐತರೇಯ ಬ್ರಾಹ್ಮಣವು ಆಂಧ್ರರು, ಪುಂಡ್ರರು ಶಬರರು, ಪುಲಿಂದರು ಮತ್ತು ಮೂತಿಬರನ್ನು ದಸ್ಯುಗಳೆಂದೂ ಅಂದರೆ ವೈದಿಕ ಸಂಸ್ಕೃತಿಯ ನೆಲೆಯಿಂದ ಆಚೆಗೆ ವಾಸಿಸುತ್ತಿರುವ ಹೊರಜಾತಿಯವರೆಂದೂ ಹೇಳಿದೆ. ಈ ಜನಗಳು ವಿಶ್ವಾಮಿತ್ರನು ಶುನಃಶೇಪನನ್ನು ದತ್ತು ತೆಗೆದುಕೊಳ್ಳುವುದನ್ನು ವಿರೋಧಿಸಿ ಶಾಪ ಪಡೆದು ಆತನ ಹಿರಿಯ ಐವತ್ತು ಮಕ್ಕಳ ಸಂತತಿಯವರೆಂದು ಹೇಳಲಾಗಿದೆ. ಆದ್ದರಿಂದ ಅವರೆಲ್ಲರೂ ವೈದಿಕ ಬಳಗದಿಂದ ಹೊರಗಡೆ ಇದ್ದವರು. ಆಂಧ್ರರು, ಶಬರರು, ಪುಲಿಂದರು, ಮಹಾಭಾರತದಿಂದ, ದಖ್ಖಿನ್ನಿನ ಜನಾಂಗದವರೆಂದು ತಿಳಿದುಬರುತ್ತದೆ.

ಆಂಧ್ರರು ಮೂಲತಃ ಕೃಷ್ಣಾ ಮತ್ತು ಗೋದಾವರಿ ನದಿಗಳ ನಡುವಣ ವಾಸಿಗಳು. ಆಂಧ್ರರು ಪ್ರಸ್ತುತ ದಖ್ಖಿನ್ನಿನ ತೆಲುಗು ಮಾತನಾಡುವ ಜನಗಳು.

ಸೂತ್ರಗಳಲ್ಲು ಕಾಣಬರುವ ಪುಂಡ್ರರು ಮಹಾಭಾರತದಲ್ಲಿ ಇಂದಿನ ಬಂಗಾಲ ಮತ್ತು ಬಿಹಾರ್ ಪ್ರಾಂತ್ಯವಾಸಿಗಳೆಂದು ಹೇಳಿದೆ. ಅವರು ಉತ್ತರ ಬಂಗಾಲದಲ್ಲಿ ಇದ್ದು ಅವರ ರಾಜಧಾನಿಗೆ ಪುಂಡ್ರವರ್ಧನ ಎಂಬ ಹೆಸರನ್ನು ಇಟ್ಟಿದ್ದರು. ಪುಂಡ್ರರು ಪ್ರಾಯಶಃ ಬಂಗಾಲದ ಆದಿವಾಸಿ ಜನಾಂಗವಾದ ಪುರೋಗಳ ಪೂರ್ವಜರಿರಬೇಕು.

ಶಬರರ ಸರಿಯಾದ ವಸತಿ ಪ್ರದೇಶ ತಿಳಿದಿಲ್ಲ. ಅವರನ್ನು ಪ್ಲಿನಿಯ 'ಸುಅರಿ' ಮತ್ತು ಟಾಲೆಮಿಯ 'ಸಬರೆ'ಗಳೊಂದಿಗೆ ಸಮೀಕರಿಸಬಹುದು. ಅವರು ಪ್ರಾಯಶಃ ವಿಶಾಖಪಟ್ಟಣದ ಬೆಟ್ಟಗಳ ಸವರಲು ಅಥವಾ ಸೌರರು, ಗ್ವಾಲಿಯರ್ ಬಳಿಯ ಸವರಿಗಳು ಅಥವಾ ಒರಿಸ್ಸದ ತುದಿಯ ಅನಾಗರಿಕ ಜನಗಳ ಪೂರ್ವಜರಿರಬೇಕು.

ಪುಲಿಂದರ ಹೆಸರು ಶಾಂಖಾಯನ ಶ್ರೌತಸೂತ್ರದಲ್ಲಿ ಬರುವ ಸಮಾನಾಂತರ ಪಟ್ಟಿಯಲ್ಲಿ ಕಾಣಬರುವುದಿಲ್ಲ. ಅಶೋಕನ ಕಾಲದಲ್ಲಿ ಅವರು ಆಂಧ್ರರೊಂದಿಗೆ ಕಾಣಬರುತ್ತಾರೆ. ಮಹಾಭಾರತದ ಪ್ರಕಾರ ಇವರ ರಾಜಧಾನಿ ಭಿಲ್ಸ ಪ್ರಾಂತ್ಯದ ಆಗ್ನೇಯಕ್ಕೆ ಇತ್ತೆಂದು ತೋರುತ್ತದೆ.

ಮೂತಿಬರ ನೆಲೆಯನ್ನು ಇನ್ನೂ ಗುರುತಿಸುವುದಕ್ಕಾಗಿಲ್ಲ. ರೇ ಮತ್ತು ಚೌಧರಿ ಅವರು ಮೂಚಿಪರು ಎಂಬುದು ಮೂತಿಬರು ಎಂಬುದರ ರೂಪವಿರಬಹುದೆಂದು ಪರಿಗಣಿಸಿ ಮಾರ್ಕಂಡೇಯ ಪುರಾಣದ ಮೂಷಿಕರೆಂಬ ಹೆಸರಿನ ಜನರೊಂದಿಗೆ ಸಮೀಕರಿಸುತ್ತಾರೆ. ಅವರ ನೆಲೆಯನ್ನು ಇಂದಿನ ಹೈದರಾಬಾದ್ ಮೂಸಿ ನದಿಯ ಪ್ರದೇಶವೆಂದು ಗುರುತಿಸುತ್ತಾರೆ.

ಶತಪಥ ಬ್ರಾಹ್ಮಣದಲ್ಲಿ ಕಾಣುವ ಮ್ಲೇಚ್ಛ ಎಂಬ ಪದ ಅನಾಗರಿಕ ಎಂಬ ಅರ್ಥದಲ್ಲಿ ಉಪಯೋಗವಾಗಿದೆ. ಅವರು ಹೇರಯಃ ಎಂಬುದರ ಬದಲಾಗಿ 'ಹೇಲವೋ' ಎಂದು ಬಳಸುತ್ತಿದ್ದಾರೆಂದು ಹೇಳಿದೆ. ಆದ್ದರಿಂದ ಈ ಅನಾಗರಿಕ ಜನಾಂಗಗಳು ವೈದಿಕ ಪ್ರಾಕೃತ ರೂಪವನ್ನು ಮಾತನಾಡುವವರಿದ್ದಿರಬೇಕು.

ಅನಂತರದ ಸಂಹಿತೆಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಉಕ್ತವಾಗಿರುವ ನಿಷಾದ ಯಾವುದೇ ಒಂದು ನಿಶ್ಚಿತ ಜನಾಂಗದ ಹೆಸರಾಗಿರದೆ ವೈದಿಕವರ್ಗದ ಸ್ವಾಧೀನದಲ್ಲಿರದಿದ್ದ ಇತರ ಬಣಗಳ ಜಾತಿವಾಚಕ ಪದವಿರಬಹುದು. ನಿಷಾದರನ್ನು ಇತರ ನಾಲ್ಕು ವರ್ಣಗಳಿಂದ ಪ್ರತ್ಯೇಕಿಸಲಾಗಿದೆ. ವೆಬರ್ ಅವರು ನಿಷಾದರನ್ನು ಒಂದು ಕಡೆ ನೆಲೆಸಿದ್ದ ಆದಿವಾಸಿಗಳೆಂದು ಅಭಿಪ್ರಾಯ ಪಡುತ್ತಾರೆ. ಸ್ಮೃತಿಗಳು ನಿಷಾದರನ್ನು ಬ್ರಾಹ್ಮಣ ತಂದೆಗೆ ಮತ್ತು ಶೂದ್ರತಾಯಿಗೆ ಜನಿಸಿದವರೆಂದು ವಿವರಿಸುತ್ತವೆ. ಪುರಾಣಗಳು ನಿಷಾದರನ್ನು ವಿಂಧ್ಯ ಮತ್ತು ಸಾತ್ಪುರ ಬೆಟ್ಟಗಳಲ್ಲಿ ನೆಲೆಯನ್ನು ಹೊಂದಿದ್ದವರೆಂದು ಹೇಳುತ್ತವೆ. ಋಗ್ವೇದಾನಂತರದ ಕಾಲದಲ್ಲಿ ಅವರು ಪರ್ವತ ಪ್ರಾಂತಗಳಲ್ಲಿ ವಾಸಿಸುತ್ತಿದ್ದರೆಂದು ತೋರುತ್ತದೆ.

ಋಗ್ವೇದ ಸತತವಾಗಿ ಆದಿವಾಸಿಗಳ ಮೇಲೆ ನಡೆದ ಆಕ್ರಮಣವನ್ನು ಹೇಳುತ್ತದೆ. ಇವರನ್ನು ಕೃಷ್ಣತ್ವಚರೆಂದು (ಕಪ್ಪು – ಚರ್ಮ) ರೂಪಕೋಕ್ತಿಯಾಗಿ ಹೇಳಿದೆ. ಇಂದ್ರನಿಂದ ಸಂಹರಿಸಲ್ಪಟ್ಟ ಕುಯವಾಚ್ (ಕೆಟ್ಟ ಮಾತನಾಡುವ) ಎಂಬುವನು ಪ್ರಾಯಶಃ ಈ ಬರ್ಬರ ಜನಾಂಗವನ್ನು ಪ್ರತಿನಿಧಿಸಬಹುದು. ಮೃಧ್ರವಾಚ್ (ಹೀನೈಸುವ ಮಾತುಗಳಾಡುವ) ಎಂಬ ಪದವನ್ನು ಸಹ ಋಗ್ವೇದದಲ್ಲಿ ಬರ್ಬರರನ್ನು ಉದ್ದೇಶಿಸಲು ಬಳಸಲಾಗಿದೆ. ಬಲ್‌ಬೂಥ ಎಂಬ ದಾಸನು ಒಂದು ಪಕ್ಷ ಆದಿವಾಸಿ ತಾಯಿಗೆ ಹುಟ್ಟಿದವನು ಅಥವಾ ಆದಿವಾಸಿಯೇ ಆಗಿದ್ದಲ್ಲಿ ಆತನು ಗಾಯಕರಿಗೆ ದಾನ ನೀಡಿದ ಉಲ್ಲೇಖವು ವೈದಿಕವರ್ಗದವರ ಮತ್ತು ದಾಸರ ನಡುವೆ ಮೈತ್ರಿಯುತ ಸಂಬಂಧವೇರ್ಪಟ್ಟಿತ್ತೆಂಬ ಅಂಶವನ್ನು ಸೂಚಿಸುತ್ತದೆ.

ಇದುವರೆಗಿನ ಒಂದು ಅವಲೋಕನವು ಅನಂತರದ ಸಂಹಿತೆಗಳು, ಉಪನಿಷತ್ತುಗಳು ಮತ್ತು ಸೂತ್ರಗಳ ಕಾಲಗಳು, ಸಾಹಸ ಮತ್ತು ಸೀಮಾ ವಿಸ್ತರಣಗಳ ಹುಮ್ಮಸ್ಸಿನಿಂದ ಕೂಡಿದ್ದು, ಆರ್ಯರು ಉತ್ತರ, ದಕ್ಷಿಣ ಮತ್ತು ಪೂರ್ವದ ಎಲ್ಲಾ ಭಾಗಗಳಲ್ಲೂ ವೇಗದಲ್ಲಿ ಮುನ್ನಡೆಯನ್ನು ಸಾಧಿಸುತ್ತಾ ತಮ್ಮ ನೆಲೆಗಳನ್ನು ಸ್ಥಾಪಿಸುತ್ತಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗಂಗಾನದಿಯ ಬಯಲು ಸಂಪೂರ್ಣವಾಗಿ ಆರ್ಯರ ವಶವಾಗಿತ್ತು ಮತ್ತು ಸಾಹಸಪ್ರಿಯರಾದ ಭರತರು ಮತ್ತು ವಿದೇಘರು ಯಮುನಾ, ಸರಸ್ವತೀ ಮತ್ತು ಸದಾನೀರ ನದಿಗಳ ಪಾತ್ರಗಳಲ್ಲಿ ದಂಡಯಾತ್ರೆಗಳನ್ನು ನಡೆಸಿದರು. ಈ ಕಾಲದಲ್ಲಿ ಪೂರ್ವದಿಶೆಯಲ್ಲಿನ ಕೋಸಲ, ವಿದೇಹ, ಮಗಧ ಮತ್ತು ಅಂಗ ದೇಶಗಳು ಆರ್ಯರ ವಶಕ್ಕೆ ಬಂದವು. ಉತ್ತರದಲ್ಲಿ ಮತ್ತು ವಾಯವ್ಯದಲ್ಲಿ ಉತ್ತರ ಕುರುಗಳು, ಉತ್ತರ ಮದ್ರರು, ಬಾಹ್ಲೀಕರು, ಮಹಾವೃಷರು ಮತ್ತು ಮೂಜವಂತರು ಕಾಣುವುದರಿಂದ ಕಾಶ್ಮೀರ ಮತ್ತು ಹಿಮಾಲಯದ ಕಡೆ ಬೆಳೆವಣಿಗೆ ಇತ್ತು ಎಂದು ತಿಳಿದುಬರುತ್ತದೆ. ದಕ್ಷಿಣದಲ್ಲಿ ವಿಂಧ್ಯ ಪರ್ವತ ಮೊದಲ ಬಾರಿಗೆ ಕೌಷೀತಕಿ ಉಪನಿಷತ್ತಿನಲ್ಲಿ ಹೆಸರಿಸಲ್ಪಟ್ಟಿದೆ. ಕುಂತಿಗಳು ಮತ್ತು ವೀತಹವ್ಯರು ವಿಂಧ್ಯವನ್ನು ದಾಟಿ ಇನ್ನೂ ದಕ್ಷಿಣಕ್ಕೆ ನುಗ್ಗಿದಂತೆ ಕಾಣಬರುತ್ತಾರೆ. ನರ್ಮದಾ ಮತ್ತು ವಿದರ್ಭಗಳು ಕೂಡ ವೈದಿಕ ಜನಾಂಗೀಯ ದೇಶದೊಳಗೆ ಸೇರಿತೆನ್ನಬಹುದು.

ಪಂಚವಿಂಶ ಬ್ರಾಹ್ಮಣದಲ್ಲಿ ಉಕ್ತವಾಗಿರುವ ಸರಸ್ವತೀ ನದಿ ಅದೃಶ್ಯವಾಗಿರುವ ವಿಷಯ, ಆ ಕಾಲದ ಒಂದು ಭೌಗೋಳಿಕ ಹೆಗ್ಗುರುತಾಗಿದೆ. ಆ ಕಾಲದ ಜನಜೀವನದ ಮುಖ್ಯಕೇಂದ್ರ ಕುರುಪಂಚಾಲ ದೇಶದ ಕುರುಕ್ಷೇತ್ರವಾಗಿದ್ದು, ಇದು ದಕ್ಷಿಣದಲ್ಲಿ ಖಾಂಡವ, ಉತ್ತರದಲ್ಲಿ ತೂರ್‌ಘಗ್ನ ಮತ್ತು ಪಶ್ಚಿಮದಲ್ಲಿ ಪರೀಣಾಹ್‌ಗಳಿಂದ ಆವರಿಸಲ್ಪಟ್ಟಿತ್ತು. ಈ ಕಾಲದಲ್ಲಿ ನಾಗರಿಕತೆಯ ಪರಿಧಿ ಕ್ರಮೇಣವಾಗಿ ಪೂರ್ವಾಭಿಮುಖವಾಗಿ ಚಲಿಸುತ್ತಿತ್ತು. ಪಂಜಾಬ್ ಪ್ರಾಂತದ ಪೂರ್ವಕ್ಕೆ ಕೇಂದ್ರೀಕೃತವಾಗಿತ್ತು ಎಂಬುದು ಗಮನಿಸಬೇಕಾದ ಅಂಶ. ಪಂಜಾಬ್ ಮತ್ತು ಪಶ್ಚಿಮ ಪ್ರಾಂತಗಳ ಮಹತ್ವ ಇಳಿಮುಖವಾಗುತ್ತಿದ್ದುದಲ್ಲದೆ, ಪಶ್ಚಿಮದ ಬಣಗಳು ಶತಪಥ ಮತ್ತು ಐತರೇಯ ಬ್ರಾಹ್ಮಣಗಳಲ್ಲಿ ಅಸಮಾಧಾನದಿಂದ ಕಾಣಲ್ಪಟ್ಟಿವೆ. ಋಗ್ವೇದ ಕಾಲದ ಬಣಗಳಲ್ಲಿ ಬದಲಾವಣೆ ಮತ್ತು ಪುನರ್ವಿಂಗಡಣೆ ಕಾಣಬರುತ್ತವೆ; ಹೊಸ ಹೊಸ ಬಣಗಳು ಗೋಚರವಾಗುತ್ತವೆ. ಭರತರು ಅಗ್ರಸ್ಥಾನವನ್ನು ಹೊಂದಿರುವುದಿಲ್ಲ, ಆದರೆ ಕುರುಗಳೊಂದಿಗೆ ಬೆರತುಹೋಗುತ್ತಾರೆ. ಕುರುಗಳು ಅವರ ಮಿತ್ರರಾದ ಪಂಚಾಲರೊಂದಿಗೆ ಕೂಡಿ ಅತ್ಯಂತ ಶ್ರೇಷ್ಠ ಬಣವಾಗಿ ವಿರಾಜಿಸುತ್ತಾರೆ. ವಶರು ಮತ್ತು ಉಶೀನರರೊಂದಿಗೆ ಕೂಡಿ ಕುರುಪಂಚಾಲರು ಮಧ್ಯದೇಶವನ್ನು ಆಕ್ರಮಿಸಿಕೊಳ್ಳುತ್ತಾರೆ. ಉತ್ತರ ಕುರುಗಳು ಮತ್ತು ಉತ್ತರ ಮದ್ರರು ಹಿಮಾಲಯದಿಂದಾಚೆ ಉತ್ತರಕ್ಕೂ ಮತ್ತು ಸತ್ವತರು ದಕ್ಷಿಣಕ್ಕೂ ಇರುತ್ತಾರೆ. ಪೂರ್ವದಲ್ಲಿ ಕೋಸಲ, ವಿದೇಹ, ಮಗಧ ಮತ್ತು ಅಂಗರು ಪ್ರಾಮುಖ್ಯತೆಗೇರುತ್ತಾರೆ. ಸಂಪೂರ್ಣವಾಗಿ ಬ್ರಾಹ್ಮಣರೆನಿಸದ ಆಂಧ್ರರು, ಪುಂಡ್ರರು, ಮೂತಿಬರು, ಪುಲಿಂದರು ಮತ್ತು ಶಬರರು ಜಾತಿ ಬಾಹಿರರಾಗುತ್ತಾರೆ.

ಉಪನಿಷತ್ತಿನ ಕಾಲದವರೆಗಿನ ವೈದಿಕ ಸಂಸ್ಕೃತಿ ಪ್ರಭಾವದೊಳಗೆ ಸೇರಿದ್ದ ಭೂಪ್ರದೇಶ ಹೆಚ್ಚುಕಡಿಮೆ ನರ್ಮದಾ ನದಿಯ ಉತ್ತರಕ್ಕೆ ಮತ್ತು ಕೆಲವು ಕಡೆ ಅದರ ದಕ್ಷಿಣಕ್ಕೂ ಹರಡಿ ಸಂಪೂರ್ಣ ಭರತಖಂಡವನ್ನು ಆವರಿಸಿತ್ತು ಎಂದು ಹೇಳಬಹುದು. (ಎ.ಡಿ.ಪಿ.)

**ವೈದಿಕ ಯಜ್ಞ :** ವೈದಿಕ ಕರ್ಮವಿಧಿ ಮತ್ತು ಆಚರಣೆಗಳು ಪ್ರ.ಶ.ಪೂ.3000ದ ಹೊತ್ತಿಗಾಗಲೇ ಪ್ರಚಲಿತವಾಗಿದ್ದವು ಎಂಬುದಕ್ಕೆ ಹರಪ್ಪ, ಲೋಥಲ್ ಮತ್ತು ಕಾಲಿಬಂಗನ್‌ನಲ್ಲಿ ಕೆಲವು ಸಿಂಧೂ ಮೊಹರುಗಳು ಮತ್ತು ಯಜ್ಞ ಕುಂಡಗಳೆಂದು ಹೇಳಬಹುದಾದ ಅವಶೇಷಗಳು ಸಿಕ್ಕಿವೆ. ವೈದಿಕ ಕಾಲದಿಂದ ಆರಂಭವಾಗಿ ಅನಂತರದ ಶತಮಾನಗಳುದ್ದಕ್ಕೂ ನಿರಂತರವಾಗಿ ನಡೆದು ಬಂದ ವೈದಿಕ ಪರಂಪರೆಯನ್ನು ತಿಳಿದುಕೊಳ್ಳಲು ನೆರವಾಗಿವೆ. ಈ ನೆಲೆಗಳಲ್ಲಿ ಲೇಖವುಳ್ಳ ಇಟ್ಟಿಗೆಗಳು ಮತ್ತು ಯೂಪಗಳು ದೊರೆತಿವೆ. ವೈದಿಕ ಕರ್ಮವಿಧಿ ಮತ್ತು ಆಚರಣೆಯ ಅಧ್ಯಯನದಲ್ಲಿ ಪುರಾತತ್ತ್ವ ಶೋಧಗಳು ಮುಖ್ಯ ಪಾತ್ರ ವಹಿಸುತ್ತವೆ. ಇವು ಶಿಲಾಶಾಸನಗಳ ಪುರಾವೆಗಳಿಗೆ ಪೂರಕವಾಗಿದ್ದು ಇವನ್ನು ದೃಢಪಡಿಸುತ್ತವೆ.

ಉತ್ತರ ಪ್ರದೇಶದ ಜಗತ್‌ಗ್ರಾಮದಲ್ಲಿ ಕಂಡುಬಂದ ಅಶ್ವಮೇಧಯಾಗ ಸ್ಥಳ ಅದ್ವಿತೀಯ ವಾಗಿದೆ. 3ನೆಯ ಶತಮಾನದಲ್ಲಿ ಶೀಲವರ್ಮನ್ ಎಂಬ ರಾಜನೊಬ್ಬ ಅಶ್ವಮೇಧ ಯಾಗವನ್ನು ಕೈಗೊಂಡನೆಂಬುದು ಲೇಖವುಳ್ಳ ಇಟ್ಟಿಗೆಗಳಿಂದ ತಿಳಿಯುತ್ತದೆ. ಹರಡಿದ ರೆಕ್ಕೆಗಳ ಶ್ಯೇನದ (ಹದ್ದು) ಸುಂದರ ವಿನ್ಯಾಸವುಳ್ಳ ಇಟ್ಟಿಗೆ ವೇದಿಕೆಯಲ್ಲದೆ, ಬ್ರಾಹ್ಮಿ ಲಿಪಿಯಲ್ಲಿರುವ ಸಂಸ್ಕೃತ ಲೇಖವುಳ್ಳ ಇಟ್ಟಿಗೆಗಳೂ ದೊರೆತಿವೆ.

ಇಲ್ಲಿಯವರೆಗೆ ನಡೆಸಿದ ಶಾಸನಾಧ್ಯಯನದಲ್ಲೇ ಅತಿ ಅದ್ವಿತೀಯವಾದ ಸ್ಮಾರಕ ಶಾಸನವೊಂದು ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸೋಂದದಲ್ಲಿ ಸಿಕ್ಕಿದೆ. 17ನೆಯ ಶತಮಾನಕ್ಕೆ ಸೇರಿದ ಈ ಶಾಸನ ಸರಸ್ವತಿ ಎಂಬ ಮುಖ್ಯ ಪುರೋಹಿತ ನಡೆಸಿದ ಯಜ್ಞದ ಸಮಾಪ್ತಿಯನ್ನು ಸಾರುತ್ತದೆ. ಈ ದಾಖಲೆಯಲ್ಲಿ ಉಲ್ಲೇಖಿಸಿದ ಅವಧಿಯನ್ನು ಗಮನಿಸಿದರೆ ಅದು ಸೋಮಯಾಗವಿದ್ದಿರಬೇಕು ಎನಿಸುತ್ತದೆ. ಫಲಕದಲ್ಲಿ ಚಿತ್ರಿತವಾಗಿರುವ ನಾಲ್ಕು ಆಕೃತಿಗಳು ವೇದಿ ಮತ್ತು ಮೂರು ಪವಿತ್ರಾಗ್ನಿಗಳನ್ನು (ಗಾರ್ಹಪತ್ಯ, ದಕ್ಷಿಣ ಮತ್ತು ಆಹವನೀಯ) ಸೂಚಿಸುತ್ತವೆ.

ವಿವಿಧ ಕಾಲ ಮತ್ತು ಪ್ರದೇಶಗಳಿಗೆ ಸೇರಿದ ನಾಣ್ಯಸಂಬಂಧಿ ಪುರಾವೆಗಳು ಸಹ ಅಶ್ವಮೇಧದಂತಹ ವೈದಿಕ ಬಲಿಗಳಿಗೆ ಪುಷ್ಟಿ ನೀಡುತ್ತವೆ. ಅತಿ ಸ್ಥೂಲವೂ ದೀರ್ಘವೂ ಆದ ಅಶ್ವಮೇಧಯಾಗವನ್ನು ಸಮುದ್ರಗುಪ್ತ ಕೈಗೊಂಡಿದ್ದ. ಸಂಕೀರ್ಣ ಕರ್ಮವಿಧಿಗಳನ್ನು (ಚಿರೋತ್ಸನ್ನ ಅಶ್ವಮೇಧಾರ್ಥ) ಅದು ಒಳಗೊಂಡಿತ್ತು. ಅಶ್ವಮೇಧದ ವಿವರಗಳನ್ನುಳ್ಳ ನಾಣ್ಯಗಳನ್ನು ಸಹ ಮುದ್ರಿಸಲಾಗಿತ್ತು. ನಾಣ್ಯಶಾಸ್ತ್ರದ ಇತಿಹಾಸದಲ್ಲಿ ಇವಕ್ಕೆ ಅದ್ವಿತೀಯ ಸ್ಥಾನವಿದೆ. ಆಚರಣೆಯಲ್ಲಿ ಕಾಲ ಅತಿ ಕಟ್ಟುನಿಟ್ಟಾದ ಪಾತ್ರ ವಹಿಸುತ್ತದೆ. ಉದಾ: ಅಗ್ನಿಹೋತ್ರವನ್ನು ದಿನಕ್ಕೆರಡು ಬಾರಿ, ಮುಂಜಾವು ಮತ್ತು ಮುಸ್ಸಂಜೆಯ ಕಾಲದಲ್ಲಿ ಮಾಡಬೇಕು. ದರ್ಶಪೂರ್ಣಮಾಸವನ್ನು ಹುಣ್ಣಿಮೆ, ಅಮಾವಾಸ್ಯೆಯ ಅನಂತರ ಮಾಡಬೇಕು. ಚಾತುರ್ಮಾಸ ವರ್ಷದಲ್ಲಿ ಮೂರು ಬಾರಿ ಬರುತ್ತದೆ: ಆಗ್ನಾಯನ/ಆಜ್ಞಾಯನ ಮೂರು ಸುಗ್ಗಿಯ ಅನಂತರ ಬರುತ್ತದೆ. ಪ್ರಾಣಿಬಲಿ (ನಿರೂಢ ಪಶುಬಂಧ) ವರ್ಷಕ್ಕೆರಡು ಬಾರಿ, ಸೋಮಬಲಿ ವಸಂತಕಾಲದಲ್ಲಿ ಬರುತ್ತವೆ. ತೈತ್ತರೀಯ ಸಂಹಿತೆ ಇದರ ಹಿಂದಿನ ತರ್ಕವನ್ನು ವಿವರಿಸುತ್ತದೆ. ಯಜ್ಞ ಸಂಸ್ಕಾರಗಳನ್ನು ಅನುಕೂಲಕ್ಕಾಗಿ ಇಷ್ಟ, ಪಶು ಮತ್ತು ಸೋಮವೆಂಬ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ನೈಮಿತ್ತಿಕ ಕರ್ಮಗಳಲ್ಲಿ ಸಣ್ಣ–ಸಣ್ಣ ಇಷ್ಟಿಗಳಿಂದ ಹಿಡಿದು ಅಶ್ವಮೇಧಯಾಗದಂತಹ ಮಹಾಯಜ್ಞಗಳು ಬರುತ್ತವೆ. ಅಶ್ವಮೇಧ ಸತ್ರ ಮತ್ತು ಸೋಮಯಜ್ಞದ ವರ್ಗಕ್ಕೆ ಸೇರಿದೆ. ಇನ್ನಿತರ ಮುಖ್ಯ ಯಾಗಗಳೆಂದರೆ, ರಾಜಸೂಯ, ಬಹುಸುವರ್ಣ, ಏಕಷಷ್ಠಿರಾತ್ರ, ತ್ರಿರಾತ್ರ, ಗರ್ಗಾತಿರಾತ್ರ, ಗವಾಮಯನ, ಪೌಂಡರೀಕ, ಸರ್ವತೋಮುಖ ಇತ್ಯಾದಿ. ಇವಲ್ಲದೆ, ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶಿ, ವಾಜಪೇಯ, ಅತ್ಯೋತ್ರ ಮತ್ತಿತರ ಸೋಮಯಜ್ಞಗಳೂ ಬರುತ್ತವೆ. ಇವೆಲ್ಲ ಯಜ್ಞಗಳ ಉಲ್ಲೇಖವೂ ಶಾಸನಗಳಲ್ಲಿವೆ. ಇವುಗಳಲ್ಲಿ ಮುಖ್ಯವಾದ ಕೆಲಸವನ್ನು ಮಾತ್ರ ಇಲ್ಲಿ ವರ್ಣಿಸಲಾಗಿದೆ.

ಅಶ್ವಮೇಧ: ಅಶ್ವಮೇಧ ಅತಿ ಮುಖ್ಯವಾದ ವೈದಿಕ ಯಾಗವಾಗಿದೆ. ಆದಿಕಾಲದಿಂದ ಹಿಡಿದು ಮಧ್ಯಕಾಲದ ಕೊನೆಯವರೆಗೂ ಇದರ ಉಲ್ಲೇಖಗಳು ವಿವಿಧ ವಂಶಗಳಿಗೆ ಸೇರಿದ ದೂರದೂರ ಪ್ರದೇಶಗಳ ಶಿಲಾಲೇಖನಗಳಲ್ಲಿ ಕಂಡು ಬರುತ್ತವೆ. ಅಶ್ವಮೇಧಯಾಗದ ಪರಂಪರೆ ಪ್ರ.ಶ.ಪೂ ಸು. 2ನೆಯ ಶತಮಾನದಿಂದ ನಿರಂತರವಾಗಿ ನಡೆದುಕೊಂಡು ಬಂದಿದೆ ಎಂದು ಶಿಲಾಲೇಖಗಳು ಹೇಳುತ್ತವೆ. ಈ ಯಜ್ಞದಲ್ಲಿ ಒಂದು ವರ್ಷಗಳ ಕಾಲ ಒಂದು ಕುದುರೆಯನ್ನು ತನಗಿಷ್ಟ ಬಂದೆಡೆ ಅಲೆಯಲು ಬಿಟ್ಟುಬಿಡಲಾಗುತ್ತಿತ್ತು. ಅದನ್ನು ಕಟ್ಟಿಹಾಕಿದವ ರಾಜನ ಸೇನೆಯನ್ನು ಎದುರಿಸಬೇಕು. ಈ ಯಾಗದ ರೂಪುರೇಷೆಗಳು ಕಾಲಕಾಲಕ್ಕೆ ಬದಲಾಗಿದ್ದಂತೂ ಖಂಡಿತ.

ಇದರ ಮೊದಲ ಅತಿ ಮುಖ್ಯ ಶಿಲಾಲೇಖದ ಉಲ್ಲೇಖ ಸರ್ವತಾತನ ಘೋಸುಂಡಿ ಶಾಸನದಲ್ಲಿ ಕಂಡುಬರುತ್ತದೆ. ಪ್ರ.ಶ.ಪೂ. 1ನೆಯ ಶತಮಾನದ 2ನೆಯ ಭಾಗಕ್ಕೆ ಸೇರಿದ ಈ ಶಾಸನ ಅತಿ ಮುಂಚಿನ ಸಂಸ್ಕೃತ ಶಾಸನವೂ ಆಗಿದೆ. ಭಾಗವತನಾಗಿದ್ದ ರಾಜ ಸರ್ವತಾತ ಅಶ್ವಮೇಧಯಾಗವನ್ನು ಮಾಡಿದನೆಂದು ಈ ಶಾಸನ ಹೇಳುತ್ತದೆ. ಅಶ್ವವಾತಾಯನಿಯ ಮಗ ದೇವಮಿತ್ರ ಅಶ್ವಮೇಧಯಾಗವನ್ನು ಮಾಡಿದನೆಂಬುದು ಪ್ರ.ಶ.ಪೂ. 1ನೆಯ ಶತಮಾನಕ್ಕೆ ಸೇರಿದ ಮೂಸಾನಗರದ ಶಾಸನದಲ್ಲಿದೆ.

ಪ್ರ.ಶ.ಪೂ.1ನೆಯ ಶತಮಾನದ ಕೊನೆಯ ಭಾಗಕ್ಕೆ ಸೇರಿದ ನಾಣೇಘಾಟಿನ ಶಾಸನ ಅದ್ವಿತೀಯವಾದದ್ದು. ರಾಜನಾದ ಸಾತಕರ್ಣಿ ತನ್ನ ಪತ್ನಿ ನಾಗನಿಕೆಯೊಡನೆ ಮಾಡಿರಬಹುದಾದ ಎರಡನೆಯ ಅಶ್ವಮೇಧಯಾಗದ ಸವಿವರವಾದ ಉಲ್ಲೇಖ ಇದರಲ್ಲಿದೆ. ಈ ಸಂದರ್ಭದಲ್ಲಿ ನೀಡಿದ ದಕ್ಷಿಣೆ-ಕಾಣಿಕೆಗಳ ವಿವರಗಳು ತಲೆತಿರುಗಿಸುವಂತಿವೆ. ಚಿನ್ನ ಬೆಳ್ಳಿಯಿಂದ ಸಿಂಗರಿಸಲಾದ ಒಂದು ಕುದುರೆ, 14000 ಕಾರ್ಷಪಣಗಳು, ಒಂದು ಗ್ರಾಮ ಮತ್ತು ಒಂದು ಆನೆಯನ್ನು ದಕ್ಷಿಣೆಯಾಗಿ ನೀಡಲಾಗಿದೆ. ಇದಲ್ಲದೆ, ಆಜ್ಞಾಧೇಯ, ಭಗಾಲ ದಶರಾತ್ರ, ಗವಾಮಯನ, ಆಪ್ತೋರ್ಯಾಮ ಮತ್ತಿತರ ವೈದಿಕ ಯಜ್ಞಗಳನ್ನು ನಡೆಸಿದ ಉಲ್ಲೇಖವೂ ಇದರಲ್ಲಿದೆ. ಶಿಲಾಲೇಖದ ಕೆಲವು ಭಾಗಗಳು ಹಾಳಾಗಿರುವುದರಿಂದ ಈ ರಾಜದಂಪತಿಗಳು ನಡೆಸಿರಬಹುದಾದ ಮೊದಲ ಅಶ್ವಮೇಧಯಾಗದ ವಿವರಗಳು ನಷ್ಟವಾಗಿವೆ. ಎರಡನೆಯ ಯಜ್ಞದ ವಿವರಗಳು ಅರ್ಧಂಬರ್ಧ ಉಳಿದಿವೆ.

ಇಟ್ಟಿಗೆ ಮೇಲಿನ ಶಾಸನ, ಮೂಸಾನಗರ

ರಾಜಸೂಯ: ಸುಪ್ರಸಿದ್ಧ ಮಹಾಭಾರತ ಯುದ್ಧದ ಅನಂತರ ಯುಧಿಷ್ಠಿರ ಪಟ್ಟಕ್ಕೆ ಬಂದಾಗ ರಾಜಸೂಯಯಾಗ ಮಾಡಿದನೆಂಬ ಪ್ರತೀತಿ ಇದೆ. ಈ ಯಾಗವನ್ನು ಮಹಾಸಾಮ್ರಾಟರು ಕೈಗೊಳ್ಳುತ್ತಿದ್ದರು. ಮಾಲವಿಕಾಗ್ನಿಮಿತ್ರದಲ್ಲಿ ಕಾಳಿದಾಸ ರಾಜಸೂಯಯಾಗದ ಪ್ರಸ್ತಾಪ ಮಾಡುತ್ತಾನೆ. ಪುಷ್ಯಮಿತ್ರ ಪಟ್ಟಕ್ಕೆ ಬಂದಾಗ ನಡೆಸಿದ ಯಾಗದ ಉಲ್ಲೇಖ ಇದಿರಬಹುದು. ಆದರೆ, ಅಯೋಧ್ಯೆಯ ಶಾಸನದ ಪ್ರಕಾರ ಪುಷ್ಯಮಿತ್ರ ಎರಡು ಬಾರಿ ಅಶ್ವಮೇಧಯಾಗ ಕೈಗೊಂಡಿದ್ದನಷ್ಟೆ. ಬೌದ್ಧಧರ್ಮ ಉತ್ತುಂಗದಲ್ಲಿದ್ದಾಗ ಅಶೋಕ ಎಲ್ಲ ಬಗೆಯ ಪ್ರಾಣಿಹತ್ಯೆಯನ್ನು ನಿಷೇಧಿಸಿದ್ದ. ಆದರೆ ಅನಂತರ ಕಾಲದ ಶುಂಗ ಅರಸು ಮನೆತನದ ಪುಷ್ಯಮಿತ್ರ ಅಶ್ವಮೇಧವನ್ನು ಕೈಗೊಂಡು ಅದನ್ನು ಪುನರುತ್ಥಾನಗೊಳಿಸಿದ.

ರಾಜಸೂಯಯಾಗದ ಅತಿಮುಂಚಿನ ಉಲ್ಲೇಖ ಸಿಗುವುದು ನಾಣೇಘಾಟಿನ ನಾಗನಿಕೆಯ ಶಾಸನದಲ್ಲೇ. ಖಾರವೇಲನ ಹಾಥಿಗುಂಫ ಶಾಸನದಲ್ಲಿ ಆತ ಆರನೆಯ ವರ್ಷದಲ್ಲಿ (ಪ್ರಶ.ಪೂ. ಒಂದನೆಯ ಶತಮಾನ) ರಾಜಸೂಯಯಾಗ ಮಾಡಿ ಹೇರಳವಾದ ಧನಸಂಪತ್ತನ್ನು ಕಾಣಿಕೆ-ದಕ್ಷಿಣೆಯಾಗಿ ಹಲವು ವರ್ಗಗಳಿಗೆ ಸೇರಿದ ಪ್ರಜೆಗಳಿಗೆ ನೀಡಿದನೆಂದು ವಿವರಣೆಯಿದೆ. ವೈದಿಕ ಯಜ್ಞಗಳನ್ನು ನಡೆಸುವುದರಲ್ಲಿ ವಿಷ್ಣುಕುಂಡಿಗಳು ಹೆಸರುವಾಸಿಯಾದವರು. ಆರನೆಯ ಶತಮಾನದ ಇಮ್ಮಡಿ ವಿಕ್ರಮೇಂದ್ರವರ್ಮನ ದಾಖಲೆಯೊಂದರಲ್ಲಿ ಮಹಾರಾಜ ಮಹೇಂದ್ರವರ್ಮ ರಾಜಸೂಯಯಾಗ ಕೈಗೊಂಡ ನೆಂದಿದೆ. 7ನೆಯ ಶತಮಾನದ ಚಳುಕ್ಯ ಬುದ್ಧವರ್ಷದ ಸಂಜ್ಞನ ಶಾಸನ ಸುಪ್ರಸಿದ್ಧ ಇಮ್ಮಡಿ ಪುಲಕೇಶಿ ರಾಜಸೂಯಯಾಗ ಮಾಡಿದನೆಂದು ಹೇಳುತ್ತದೆ.

ಬಹುಸುವರ್ಣ: ರಾಮಾಯಣದಲ್ಲಿ (7-25.8) ಬಹುಸುವರ್ಣ ಯಾಗದ ಉಲ್ಲೇಖವಿದೆ. ಬಹುಸುವರ್ಣ ಅಹೀನಯಜ್ಞಗಳ ವರ್ಗಕ್ಕೆ ಸೇರಿದೆ; ಈ ಯಜ್ಞದ ಸಂದರ್ಭದಲ್ಲಿ ಧಾರಾಳವಾಗಿ ಚಿನ್ನವನ್ನು ಕಾಣಿಕೆಯಾಗಿ ನೀಡಲಾಗುವ ಕಾರಣದಿಂದ ಇದಕ್ಕೆ ಈ ಹೆಸರು ಬಂದಿದೆ ಎಂಬುದು ಮಹಾಭಾರತದಿಂದ ತಿಳಿಯುತ್ತದೆ. ಇದು ಅಶ್ವಮೇಧ, ರಾಜಸೂಯ ಯಾಗಗಳಷ್ಟೇ ಪ್ರಾಧಾನ್ಯವುಳ್ಳದ್ದು. ಇಕ್ಷ್ವಾಕು ರಾಜ ಎಹವಲ ಚಾಂತಮೂಲನ ನಾಗಾರ್ಜುನಕೊಂಡದ ಶಾಸನದಲ್ಲಿ, ತನ್ನ ಆಳಿಕೆಯ 16ನೆಯ ವರ್ಷದಲ್ಲಿ ಮಹಾರಾಜ ವಾಸಿಷ್ಠಿಪುತ್ರ ಚಾಂತಮೂಲ ಇತರ ಯಜ್ಞಗಳೊಂದಿಗೆ ರಾಜಸೂಯ ಯಾಗವನ್ನೂ ಕೈಗೊಂಡನೆಂಬ ಉಲ್ಲೇಖವಿದೆ. ಪಲ್ಲವರಲ್ಲಿ ಸಿಂಹವರ್ಮನಿಗೆ ಈ ಶ್ರೇಯ ಸಲ್ಲುತ್ತದೆ. ಇಂಡೋನೇಷ್ಯದಲ್ಲಿರುವ ಬೋರ್ನಿಯೋದ ರಾಜ ಮೂಲವರ್ಮ (ಪ್ರ.ಶ.4-5 ನೆಯ ಶತಮಾನ) ಈ ಯಾಗದ ಸ್ಮಾರಕಾರ್ಥವಾಗಿ ಯೂಪಸ್ತಂಭವನ್ನು ನಿಲ್ಲಿಸಿದ.

ಪೌಂಡರೀಕ: ಬಾಯಿಅಂಬಿಕ ವಂಶಕ್ಕೆ ಸೇರಿದ ದಾಮಮಿತ್ರ (ಪ್ರ.ಶ.ಪೂ.1ನೆಯ ಶತಮಾನ) ಪೌಂಡರೀಕ ಯಜ್ಞವನ್ನು ಕೈಗೊಂಡನೆಂದು ಝೂನ್ಸಿಯ ಏರಿಚ್ ಇಟ್ಟಿಗೆಯ ಶಾಸನ ಸಾರುತ್ತದೆ. ಈ ಯಜ್ಞಕ್ಕೆ ಸಂಬಂಧಿಸಿದ ಅತಿ ಮುಂಚಿನ ಪುರಾತತ್ತ್ವ ಪುರಾವೆ ಇದಾಗಿದೆ. ಇದೇ ರಾಜ ಅಶ್ವಮೇಧವನ್ನೂ ಮಾಡಿದನೆಂಬುದು ಮೂಸಾನಗರದ ಇಟ್ಟಿಗೆಯ ಶಾಸನದಲ್ಲಿದೆ.

ವೈದಿಕ ಧರ್ಮದ ಉನ್ನತಿಯ ಕಾಲದಲ್ಲಿ ಸೋಮಯಜ್ಞಗಳು ಹೆಚ್ಚು ಪ್ರಚಲಿತವಾಗಿದ್ದವು. ಅವುಗಳಲ್ಲಿ ಬರುವ ಏಳು ಯಜ್ಞಗಳಲ್ಲಿ ಅಗ್ನಿಷ್ಟೋಮ ಅತ್ಯಂತ ಜನಪ್ರಿಯವಾಗಿತ್ತು. ಅದರ ಕಡೆಯ ಹನ್ನೆರಡು ಮಂತ್ರಗಳನ್ನು ಅಗ್ನಿಷ್ಟೋಮಸಾಮನವೆಂದು ಕರೆಯಲಾಗುತ್ತಿದ್ದರಿಂದ ಈ ಯಜ್ಞಕ್ಕೆ ಆ ಹೆಸರು ಬಂದದ್ದು. ಸೋಮಯಜ್ಞ ನಡೆಸಲು 16 ಜನ ಪುರೋಹಿತರು ಮತ್ತು ಅತಿ ದುಬಾರಿಯಾದ ಸಿದ್ಧತೆಗಳ ಅಗತ್ಯವಿತ್ತು. ಹಾಗಾಗಿ ಇವುಗಳನ್ನು ರಾಜಮಹಾರಾಜರು, ಧನಿಕರು ಮತ್ತು ಪ್ರಜೆಗಳ ಬೆಂಬಲ, ರಾಜಾಶ್ರಯವಿರುವಂತಹವರು ಮಾತ್ರ ಕೈಗೊಳ್ಳುತ್ತಿದ್ದರು.

ರಾಜಸ್ತಾನದ ಜೈಪುರ ಜಿಲ್ಲೆಯ ಬರ್ನಾಲದ ಯೂಪಶಾಸನ ಕೃತವರ್ಷ 284 ಕ್ಕೆ (ಪ್ರ.ಶ.228) ಸೇರಿದೆ : ಅದು ಒಟ್ಟು ಏಳು ಯೂಪಸ್ತಂಭಗಳನ್ನು ಒಳಗೊಳ್ಳುತ್ತದೆ. ರಾಜ ಏಳು ಯಜ್ಞಗಳನ್ನು ಮಾಡಿದನೆಂಬ ಉಲ್ಲೇಖ ಅವುಗಳಲ್ಲಿದೆ. ಅವು ಸಪ್ತ-ಸೋಮ-ಸಂಸ್ಥ ಎಂದು ಕರೆಯಲಾಗುವ ಏಳು ಸೋಮಯಜ್ಞಗಳಾಗಿರಬಹುದು (ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ತ್ಯ, ಷೋಡಶಿ, ವಾಜಪೇಯ, ಅತಿರಾತ್ರ,ಆಪ್ತೋರ್ಯಾಮ-ಕಾತ್ಯಾಯನ ಶ್ರೌತಸೂತ್ರ). ಅಲಹಾಬಾದ್ ವಸ್ತು ಸಂಗ್ರಹಾಲಯದಲ್ಲಿರುವ 2ನೆಯ ಶತಮಾನದ ಯೂಪಶಾಸನ ಈ ಯಜ್ಞಗಳಿಗೆ ಸ್ಮಾರಕವಾಗಿದೆ.

ಹೀಗೆ ಯಜ್ಞಗಳ ಉಲ್ಲೇಖಗಳನ್ನೊಳಗೊಂಡ ಹಲವಾರು ಶಾಸನಗಳನ್ನು ಭಾರತಾದ್ಯಂತ ನಾವು ಕಾಣಬಹುದು. ಇವುಗಳಲ್ಲಿ ರಾಜ ತಾನು ಕೈಗೊಂಡ ಯಜ್ಞಗಳ ಉಲ್ಲೇಖವಿರುತ್ತದೆ ಅಥವಾ ಯಜ್ಞಗಳ ಸವಿವರವಾದ ವರ್ಣನೆಗಳಿರುತ್ತವೆ. ಹೆಚ್ಚಿನ ಪಕ್ಷ ಇವುಗಳನ್ನು ಕಲ್ಲಿನಯೂಪದ ಮೇಲೆ ಕೆತ್ತಲಾಗಿರುತ್ತದೆ. ವೈದಿಕ ಯಜ್ಞಗಳ ಕರ್ಮವಿಧಿಗಳ ಬಗ್ಗೆ ಅಗಾಧ ಸಾಹಿತ್ಯವನ್ನು ನಾವು ಬಳುವಳಿಯಾಗಿ ಪಡೆದಿದ್ದರೂ ಅವುಗಳ ಆಚರಣೆಗಳ ಬಗ್ಗೆ ಅತಿ ಸ್ಪಷ್ಟ ಚಿತ್ರಣ ನಮಗೆ ದೊರೆಯುವುದು ಶಾಸನ ಮತ್ತು ಪುರಾತತ್ತ್ವ ಪುರಾವೆಗಳಿಂದ ಮಾತ್ರ. (ಆರ್.ಟಿ.ಎಸ್.)

ಯೂಪಸ್ತಂಭ: ಯಜ್ಞಗಳ ಆಚರಣೆಯಲ್ಲಿ ಬಳಕೆಯಾಗುವ ಬಲಿಗಂಬ. ಶಾಸನವುಳ್ಳ ಹಲವು ಕಲ್ಲಿನ ಯೂಪಗಳು ಭಾರತ ಮತ್ತು ಹೊರದೇಶಗಳಲ್ಲಿ ದೊರೆತಿವೆ. ಇಲ್ಲಿಯವರೆಗೆ 19 ಯೂಪಶಾಸನಗಳು ದೊರೆತಿವೆ. ಇಲ್ಲಿಯವರೆಗೆ ಯೂಪಗಳು ರಾಜಸ್ತಾನ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊರೆತಿವೆ. ಇವಲ್ಲದೆ ಇನ್ನಿತರ ಯೂಪಗಳು ಇಂಡೋನೇಷ್ಯದ ಬೋರ್ನಿಯೊದಲ್ಲಿ ಮಾತ್ರ ದೊರೆತಿವೆ.

ವೈದಿಕ ಯಜ್ಞಗಳ ಪುನರುತ್ಥಾನವಾದಾಗ, ಸನಾತನ ವೈದಿಕ ಧರ್ಮದ ವಿಜಯವನ್ನು ಬಹುಕಾಲದವರೆಗೆ ಸಾರುವಂತಹ ಕಲ್ಲಿನ ಯೂಪಗಳನ್ನು ಸ್ಥಾಪಿಸುವುದಕ್ಕೆ ಉತ್ತೇಜನ ದೊರಕಿರಬೇಕು. ಪೂರ್ಣವಾಗಿ ರಚಿಸಲಾದ, ಹಾಳಾಗದೆ ಉಳಿದ ಯೂಪಗಳೆಲ್ಲವೂ ಚೂಪಾದ ತುದಿ ಹೊಂದಿದ್ದು, ಮೇಲ್ಭಾಗ ಬಾಗಿರುವುದನ್ನು ಇಲ್ಲಿ ಗಮನಿಸಬಹುದು.

ಸಮುದ್ರಗುಪ್ತನ ಅಶ್ವಮೇಧ ನಾಣ್ಯಗಳಲ್ಲಿ ಚಿತ್ರಿತವಾಗಿರುವ ಯೂಪಗಳನ್ನು ವಿವರವಾಗಿ ಅಧ್ಯಯನ ಮಾಡಬಹುದು. ಹಲವು ನಾಣ್ಯಗಳಲ್ಲಿ ಕುದುರೆಯ ಕೆಳಗೆ ದೊಡ್ಡದಾದ ಕಟ್ಟೆಯಿದೆ. ಇದು ವೇದಿ, ಅಂದರೆ ಬಲಿಪೀಠವಿರಬಹುದು. ಕೆಲವೇ ಕೆಲವು ನಾಣ್ಯಗಳಲ್ಲಿ ಒಂದು ಲಂಬರೇಖೆ ಯೂಪವನ್ನು ಸೂಚಿಸಬಹುದು. ಆದರೆ ಉಳಿದ ಹಲವು ನಾಣ್ಯಗಳಲ್ಲಿ ಯೂಪದ ತಳಗಟ್ಟಿನ ಅರ್ಧಭಾಗ ಮಾತ್ರ ವೇದಿಯ ಮೇಲಿದೆ.

ಶಾಸ್ತ್ರಗಳ ಪ್ರಕಾರ, ಯೂಪವನ್ನು ಪೂರ್ಣವಾಗಿ ವೇದಿಯ ಪರಿಧಿಯೊಳಗೆ ನಿಲ್ಲಿಸಿದರೆ ಯಜಮಾನ ದೇವಲೋಕವನ್ನು ಗೆಲ್ಲುತ್ತಾನೆ; ಅದನ್ನು ವೇದಿಯ ಹೊರಗೆ ಕಟ್ಟಿದರೆ ಎರಡೂ ಲೋಕಗಳನ್ನು ಗೆಲ್ಲುತ್ತಾನೆ. ಯೂಪದ ಅರ್ಧಭಾಗ ವೇದಿಯೊಳಗೆ, ಇನ್ನರ್ಧಭಾಗ ವೇದಿಯ ಹೊರಗೆ ಕೆತ್ತುವ ಮೂಲಕ ನಾಣ್ಯಕಾರರು ಎರಡನೆಯ ವಿಧಾನವನ್ನು ತೋರಿಸಲು ಪ್ರಯತ್ನಿಸಿರಬೇಕು. ಚಿತ್ರವನ್ನು ಚಂದವಾಗಿಸಬೇಕೆಂಬ ಕಲಾಕಾರನ ಇಚ್ಛೆಯ ಕಾರಣದಿಂದ ಈ ಎಲ್ಲ ನಾಣ್ಯಗಳಲ್ಲಿ ಯೂಪಕ್ಕೆ ಸೂಕ್ತವಾದ ಕಟ್ಟೆಯಿದೆ ಮತ್ತು ಅದರ ಮೇಲ್ತುದಿಯ ಪತಾಕೆಯನ್ನು ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಆದರೆ ಯೂಪವನ್ನು 27 ವಸ್ತ್ರಗಳಿಂದ ಸುತ್ತಬೇಕು ಎಂದು ಶತಪಥ ಬ್ರಾಹ್ಮಣ ಹೇಳುತ್ತದೆ. ಬಟ್ಟೆಗಳನ್ನು ಅದರ ಕಂಬಕ್ಕೆ ಸುತ್ತಬೇಕೆಂದು ಇದರಿಂದ ಅರ್ಥೈಸಬಹುದೇ ಹೊರತು ಪತಾಕೆಯಂತೆ ಹಾರಿಬಿಡಬೇಕೆಂದಲ್ಲ. ಯೂಪದ ಮೇಲ್ತುದಿಯ ಬಳಿ ಒಂದು ಪತಾಕೆ ಅಥವಾ ಬಟ್ಟೆಯ ಚೂರನ್ನು ಧ್ವಜದಂತೆ ಕಟ್ಟಿರುವ ಸಾಧ್ಯತೆ ಇದೆ. ಏಕೆಂದರೆ ದಶರಥರಾಜ ಅಶ್ವಮೇಧಯಾಗವನ್ನು ಮಾಡಿದಾಗ 21 ಯೂಪಗಳನ್ನು ನಿಲ್ಲಿಸಿ, ಅವನ್ನು ಒಂದೊಂದು ವಸ್ತ್ರದಿಂದ ಅಲಂಕರಿಸಿದ್ದ ಎಂದು ರಾಮಾಯಣದಲ್ಲಿ ಬರುತ್ತದೆ. ಯೂಪದ ಇತರ ವಿವರಗಳನ್ನು ಚಿತ್ರಿಸುವಾಗ ಗುಪ್ತರ ಕಾಲದ ನಾಣ್ಯಕಾರರು ಶಾಸ್ತ್ರಗ್ರಂಥಗಳಲ್ಲಿ ಹೇಳಿರುವುದನ್ನೇ ಪಾಲಿಸುತ್ತಾರೆ. ಯೂಪದ ಎತ್ತರ ಎಷ್ಟಿರಬೇಕೆಂಬುದರ ಬಗ್ಗೆ ಕಟ್ಟುನಿಟ್ಟಾದ ನಿಯಮವೇನೂ ಇಲ್ಲ. ಕುದುರೆಯ ಎತ್ತರವನ್ನು ಗಮನದಲ್ಲಿಟ್ಟುಕೊಂಡರೆ, ಯೂಪದ ಎತ್ತರ ಸು. 3ಮೀ ಇರಬೇಕೆನ್ನಬಹುದು. ಯೂಪದ ಕಂಬ ಎಂಟುಮೂಲೆಯದ್ದಾಗಿರಬೇಕು. ಆದರೆ ನಾಣ್ಯ ಸಣ್ಣದಾಗಿರುವುದರ ದೆಸೆಯಿಂದ ಈ ವಿವರಗಳನ್ನು ನಿಖರವಾಗಿ ಪಾಲಿಸುವುದು ಸಾಧ್ಯವಿಲ್ಲ. ಯೂಪದ ಕಂಬ ನೇರವಾಗಿರದೆ ಸ್ವಲ್ಪ ಬಾಗಿರಬೇಕು ಎಂದು ಗ್ರಂಥಗಳು ಹೇಳುತ್ತವೆ. ಎಲ್ಲ ಯೂಪಸ್ತಂಭಗಳ ಮಧ್ಯದಲ್ಲಿ ಒಂದು ನಡುಪಟ್ಟಿಯಂತಿರುವುದನ್ನು ನೋಡಬಹುದು. ಇದು ಸಾಮಾನ್ಯವಾಗಿ ಕಂಬಕ್ಕೆ ಎರಡು ಸುತ್ತು ಸುತ್ತಿರುತ್ತದೆ; ಇದರ ಎರಡು ತುದಿಗಳು ಯೂಪದ ಒಂದೇ ಬದಿಯಲ್ಲಿ ಅಥವಾ ವಿರುದ್ಧ ಬದಿಗಳಲ್ಲಿ

ಕೆಳಗೆ ಇಳಿಬಿಟ್ಟಿರುತ್ತದೆ. ಈ ನಡುಪಟ್ಟಿ ಅಥವಾ ರಸನವನ್ನು 5.4 ಮೀ ಉದ್ದದ ದರ್ಭೆಯಿಂದ ಮಾಡಬೇಕು ಎಂದಿದೆ. ಯೂಪದಿಂದ ಇಳಿಬಿಟ್ಟು ದೂರದವರೆಗೆ ಹರಡಿಕೊಂಡಿರುವಂತೆ ಅದಕ್ಕೇ ಅದನ್ನು ಚಿತ್ರಿಸಿರುವುದು. ಯೂಪಕಲಶ ಮುಚ್ಚುವಂತೆ ರಸನದ ಎರಡು ತುದಿಗಳನ್ನು ಗಂಟು ಹಾಕಬೇಕೆಂದು ಗ್ರಂಥಗಳು ಹೇಳುವುದನ್ನು ನಾಣ್ಯಕಾರರು ಪಾಲಿಸುವುದಿಲ್ಲ. ರಸನದ ಎರಡು ತುದಿಗಳನ್ನು ಬಿಡಿಯಾಗಿ ಇಳಿಬಿಟ್ಟಿರುವುದೇ ಹೆಚ್ಚು. 25 ಸೆಂಮೀ ಉದ್ದವಿದ್ದು ಮಧ್ಯದಲ್ಲಿ ಕಿರಿದಾಗಿರುವ ಮರದ ಉಂಗುರವನ್ನು ಯೂಪದ ತುದಿಯ ಬಳಿ ಹಾಕಲಾಗುತ್ತದೆ. ಇದನ್ನು ಚಷಾಲ ಎಂದು ಕರೆಯಲಾಗಿದೆ. ಹೆಚ್ಚಿನ ಅಶ್ವಮೇಧ ನಾಣ್ಯಗಳ ಮೇಲೆ ಇದನ್ನು ನಾವು ಕಾಣಬಹುದು; ಇದು ಚುಕ್ಕೆಯಂತಿರುವ ಎರಡು ಆಕೃತಿಗಳಂತೆ ಸ್ಪಷ್ಟವಾಗಿ ನಾಣ್ಯದ ಮೇಲೆ ಕಾಣುತ್ತದೆ. ಆದರೆ ಇವು ಎರಡು ಆಕೃತಿಗಳಲ್ಲ; ಬದಲಿಗೆ, ಕಿರುದಾದ ಮಧ್ಯಭಾಗವನ್ನು ನಾಣ್ಯಕಾರ ದೊಡ್ಡದಾಗಿ ಚಿತ್ರಿಸಿರುವುದರಿಂದ ಇದು ಪಕ್ಕಪಕ್ಕದಲ್ಲಿರುವ ಎರಡು ಚುಕ್ಕೆಗಳಂತೆ ಕಾಣುತ್ತದೆ.

ಸಮುದ್ರಗುಪ್ತನ ಅಶ್ವಮೇಧ ನಾಣ್ಯಗಳ ಮೇಲಿರುವ ಯೂಪಗಳು ಮಧ್ಯದಲ್ಲಿ ಬಾಗಿರುವುದನ್ನು ಗಮನಿಸಬಹುದು. ಆದರೆ ಈ ಲಕ್ಷಣ ಈವರೆಗೆ ಸಿಕ್ಕ ಯಾವುದೇ ಕಲ್ಲಿನ ಯೂಪ ಸ್ತಂಭದಲ್ಲಿ ಕಂಡುಬರುವುದಿಲ್ಲ. ಶಾಸ್ತ್ರಗಳ ಆದೇಶಕ್ಕಿಂತ ಹೆಚ್ಚಾಗಿ ಕಲಾತ್ಮಕ ಸೌಂದರ್ಯಕ್ಕೆ ಶಿಲ್ಪಿಗಳು ಗಮನ ಕೊಟ್ಟಿರುವುದೇ ಇದಕ್ಕೆ ಕಾರಣವಿರುಬಹುದು.

ಯೂಪಶಾಸನವನ್ನು 4 ಭಾಗಗಳಾಗಿ ವಿಂಗಡಿಸಬಹುದು: ಶಾಸನವುಳ್ಳ ಯೂಪಗಳು (ಭಾರತದಲ್ಲಿರುವವು), ಶಾಸನವಿರದ ಯೂಪಗಳು (ಭಾರತದಲ್ಲಿರುವವು), ಯಜ್ಞದ ಉಲ್ಲೇಖವಿರುವ ಶಾಸನವುಳ್ಳ ಯೂಪ (ಭಾರತದ ಹೊರಗಿರುವವು), ಯಜ್ಞದ ಉಲ್ಲೇಖವಿರದ ಶಾಸನವುಳ್ಳ ಯೂಪ (ಭಾರತದ ಹೊರಗಿರುವವು).



ಯೂಪಸ್ತಂಭ, ನಂದಸ

ಉತ್ತರ ಪ್ರದೇಶದ ಮಥುರೆಯ ಉಪನಗರವಾದ ಈಸಾಪುರದಲ್ಲಿ ಯಮುನಾ ನದಿಯೊಳಗೆ ಜಲಸಮಾಧಿಯಾಗಿದ್ದ ಎರಡು ಕಲ್ಲಿನ ಯೂಪಗಳನ್ನು ಈ ಶತಮಾನದ ಆರಂಭದಲ್ಲಿ ಅಗೆದು ತೆಗೆದಿದ್ದು ಒಂದು ವೈಚಿತ್ರ್ಯವೇ ಸರಿ. ಅನಂತರ ಅದನ್ನು ಮಥುರೆಯ ಕರ್ಜನ್ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಇದು ಈ ಬಗೆಯ ಯೂಪಗಳಲ್ಲಿ ಅತಿ ಮುಂಚಿನದಾಗಿದೆ. ಇದಕ್ಕೆ ಮುಂಚೆ ಹಳೆಯ ರಾಜಸ್ತಾನ ಸಂಸ್ಥಾನಕ್ಕೆ ಸೇರಿದ ಭರತಪುರದ ಬಯಾನದ ಬಳಿ ಬಿಜಯಗಢವೆಂಬ ಕೋಟೆಯೊಳಗೆ ಒಂದು ಯೂಪಸ್ತಂಭ ದೊರೆತಿತ್ತು. ಗುಪ್ತರ ಕಾಲದ ಸ್ತಂಭಶಾಸನಗಳಿಗೆ ಅತ್ಯಂತ ಸೂಕ್ತ ಉದಾಹರಣೆ ಈಸಾಪುರದ ಸ್ತಂಭವೇ ಆಗಿದೆ. ಶಥಪತ ಬ್ರಾಹ್ಮಣದಂತಹ ವೈದಿಕ ಗ್ರಂಥಗಳಲ್ಲಿರುವ ವರ್ಣನೆಯನ್ನು ಬಹುಮಟ್ಟಿಗೆ ಅಕ್ಷರಶಃ ಹೋಲುವ ಉಲ್ಲೇಖಗಳು ಇದರಲ್ಲಿವೆ. ಯೂಪಶಾಸನಗಳು ದಾಖಲಿಸುವ ರಾಜವಂಶಗಳಲ್ಲಿ ಕುಷಾಣ, ಮಾಳ್ವ, ಮೌಖರಿಯ ಜೊತೆಗೆ ಗುಪ್ತರ ಸಾಮಂತರಾಜನೊಬ್ಬನ ಉಲ್ಲೇಖವಿದೆ. ಇಲ್ಲಿ ದಾಖಲಿತವಾಗಿರುವ ಯಜ್ಞಗಳೆಂದರೆ, ದ್ವಾದಶರಾತ್ರ, ಸಪ್ತ-ಸೋಮ-ಸಂಸ್ಥ, ಏಕಷಷ್ಟಿಆತ್ರ, ತ್ರಿರಾತ್ರ, ಆಪ್ತೋರ್ಯಾಮ, ಪೌಂಡರೀಕ ಇತ್ಯಾದಿಗಳು. ಇಂಡೋನೇಷ್ಯದ ಯೂಪ ಸಮೂಹ ಮೂಲವರ್ಮನೆಂಬ ಒಬ್ಬನೇ ರಾಜನಿಗೆ ಸೇರಿದವು. ಇದರಲ್ಲಿ ಬಹು ಸುವರ್ಣಕ ಯಜ್ಞವನ್ನು ನಡೆಸಿದ ದಾಖಲೆಯಿದೆ. ಇದು ವಿಶೇಷ ಬಗೆಯ ಸೋಮಯಜ್ಞವಾದ ಬಹುಹಿರಣ್ಯಕ ಯಜ್ಞವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಭಾರತದಲ್ಲಿ ಈಸಾಪುರದ ಯೂಪವನ್ನು ಬಿಟ್ಟರೆ, ಉಳಿದ ಯಾವ ಯೂಪವೂ ನಮಗೆ ಇಡಿಯಾಗಿ ದೊರೆತಿಲ್ಲ. ಅಲ್ಲದೆ ಇವು ಗಾತ್ರದಲ್ಲಿ, ಶಿಲ್ಪಕಲಾ ವಿವರಗಳಲ್ಲಿ ಭಿನ್ನವಾದುದಾಗಿವೆ. ಭಾರತದ ಯೂಪಗಳಲ್ಲಿ ಕಂಡುಬರುವ ಒಂದು ಸಾಮಾನ್ಯ ಲಕ್ಷಣ ಏನೆಂದರೆ, ಇವು ಕೆಳಗೆ ಚೌಕವಾಗಿ, ಮೇಲೆ ಅಷ್ಟಕೋನಾಕೃತಿಯಲ್ಲಿ ಇವೆ. ಕೇವಲ ನಾಂದ್ಸದ ಸ್ತಂಭ ಇದಕ್ಕೆ ಅಪವಾದವಾಗಿದೆ. ಇದು ಮೇಲಿಂದ ಕೆಳಗಿನವರೆಗೂ ದುಂಡಾಗಿದೆ.

ಭಾರತದ ಹೊರಗೆ, ಬೋರ್ನಿಯೊ ದ್ವೀಪದ ಪೂರ್ವತೀರದಲ್ಲಿರುವ ಕುಟೆಯಿ ಎಂಬ ಸಂಸ್ಥಾನದಲ್ಲಿ 1897ರಲ್ಲಿ ನಾಲ್ಕು ಕಲ್ಲಿನ ಯೂಪಸ್ತಂಭಗಳು ದೊರೆತವು. ಈಗ ಅವು ಜಾವದ ಬಟಾರಿಯ ವಸ್ತು ಸಂಗ್ರಹಾಲಯದಲ್ಲಿವೆ. ಸಂಸ್ಕೃತದಲ್ಲಿರುವ ಅವು 4ನೆಯ ಶತಮಾನಕ್ಕೆ ಸೇರಿದವಾಗಿವೆ. ಅನಂತರ 1940ರಲ್ಲಿ ಇದೇ ಸ್ಥಳದಲ್ಲಿ ಮತ್ತೆ ಮೂರು ಶಾಸನಗಳು ದೊರೆತವು. ಇವೆಲ್ಲವೂ ರಾಜ ಮೂಲವರ್ಮನಿಗೆ ಸೇರಿದವು. ಈ ಯೂಪಗಳನ್ನು ಎನ್. ಕರ್ನ್ ಆಳವಾಗಿ ಅಧ್ಯಯನ ಮಾಡಿದ್ದಾರೆ. ವೊಗಲ್ ಕೂಡ ಈ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನ ನಡೆಸಿದರು. ದೂರಪ್ರಾಚ್ಯದ ವಸಾಹತೀಕರಣದಲ್ಲಿ ಭಾರತದ ಪಾಲು ಗಮನಾರ್ಹವಾಗಿತ್ತೆಂಬುದಕ್ಕೆ ಮೂಲವರ್ಮನ ಈ ಯೂಪಗಳು ಹಾಗೂ ಡಚ್ ಮತ್ತು ಫ್ರೆಂಚ್ ವಿದ್ವಾಂಸರು ಇಂಡೊ-ಚೀನ ಇತರೆಡೆಗಳಲ್ಲಿ ಶೋಧಿಸಿದ ಶಾಸನಗಳು ಪುಷ್ಟಿ ನೀಡುತ್ತವೆ. ಬಲಿಗಂಬಗಳ ಮೇಲೆ ಕೆತ್ತಲಾಗಿರುವ ಯೂಪಶಾಸನಗಳಿಗೆ ದ್ವಿಜರೇ ಕಾರಣರೆಂದು ವೊಗಲ್ ಅಭಿಪ್ರಾಯ ಪಡುತ್ತಾರೆ. ಮೇಲ್ಜಾತಿಗೆ ಸೇರಿದ ಬ್ರಾಹ್ಮಣರು ಬೋರ್ನಿಯೋ, ಜಾವ, ಸುಮಾತ್ರಗಳವರೆಗೆ ತಮ್ಮ ಪ್ರಾಚೀನ ನಾಗರಿಕತೆ, ಧರ್ಮವನ್ನು ಕೊಂಡೊಯ್ದರು. ಇವರಲ್ಲೊಬ್ಬ ಪುರೋಹಿತನಿಗೆ ರಾಜ ಮೂಲವರ್ಮ ಭೂದಾನ, ಸುವರ್ಣದ ಕಾಣಿಕೆಗಳನ್ನು ಕೊಟ್ಟಿದ್ದಕ್ಕೆ ದಾಖಲೆಯಿದೆ. 400ರಷ್ಟು ಮುಂಚೆಯೇ ವಿಪ್ರರು ದೂರಪ್ರಾಚ್ಯಕ್ಕೆ ವಲಸೆಹೋಗಿ ನೆಲಸಿದರು ಎಂಬುದರಲ್ಲಿ ಸಂದೇಹವಿಲ್ಲ.

ಯೂಪ ಶಾಸನಗಳ ವಿತರಣೆಯ ಚಿತ್ರಣವನ್ನು ಈ ಕೆಳಗಿನ ಪಟ್ಟಿ ನೀಡುತ್ತದೆ:

1. ಈಸಾಪುರ – ಮಥುರ, 24ನೆಯ ವರ್ಷ (ಪ್ರ. ಶ. 102)
2. ಕೋಸಂ – ಅಲಹಾಬಾದ್ (2ನೆಯ ಶತಮಾನ)
3–4. ನಾಂದ್ಸ – ಉದಯಪುರ, 282ನೆಯ ವರ್ಷ (226)
5. ಬರ್ನಾಲ – ಜೈಪುರ, 284ನೆಯ ವರ್ಷ (227)
6–8. ಬಾಡ್ವ – ಕೋಟ, 295ನೆಯ ವರ್ಷ (ಪ್ರ. ಶ. 238)
9. ಬಾಡ್ವ – ಕೋಟ (3ನೆಯ ಶತಮಾನ)
10. ನಗರ್ – ಜೈಪುರ, 321ನೆಯ ವರ್ಷ (264)
11. ಬರ್ನಾಲ – ಜೈಪುರ, 335ನೆಯ ವರ್ಷ (278)
12. ಬಿಜಯಗಢ – ಭರತಪುರ, 428ನೆಯ ವರ್ಷ (371)
13–19 ಕುಟೆಯಿ – ಬೋರ್ನಿಯೋ (400)

(ಆರ್.ಟಿ.ಎಸ್.)

**ವ್ಯಾಂಡಲರು:** 400ರಲ್ಲಿ ಪಶ್ಚಿಮ ರೋಮನ್ ಚಕ್ರಾಧಿಪತ್ಯವನ್ನು ಆಕ್ರಮಿಸಿದ ಅನಾಗರಿಕ ಜರ್ಮ್ಯಾನಿಕ್ ಸಮುದಾಯದವರು. ವ್ಯಾಂಡಲರೆಂದರೆ ಅಮೂಲ್ಯ ವಸ್ತುಗಳನ್ನು ಹಾಳುಮಾಡುವವರೆಂದರ್ಥ. ಇವರು ರೋಮನ್ ಚಕ್ರಾಧಿಪತ್ಯದ ವನ್ಯಪ್ರದೇಶದಲ್ಲಿ ವಾಸವಾಗಿದ್ದ ಟ್ಯೂಟಾನಿಕ್ ಗುಂಪಿಗೂ ಸೇರಿದ ಜನಸಮೂಹ. ರೋಮನ್ ಸಾಮ್ರಾಜ್ಯದ ಕೊನೆಯ 200 ವರ್ಷಗಳಲ್ಲಿ ಇವರು ಧಾಳಿಮಾಡಿದರು. ಚಕ್ರವರ್ತಿ ಆರೆಲಿಯಸ್ ಪ್ರಬಲನಾಗಿದ್ದರಿಂದ ಇವರನ್ನು ಡ್ಯಾನ್ಯೂಬ್ ನದಿಯಿಂದಾಚೆಗೆ ಓಡಿಸಿದ. 404ರಲ್ಲಿ ಇವರು ಇಟಲಿಯಿಂದ ನಿರ್ಗಮಿಸಿದರು. ರೋಮನ್ ಚಕ್ರವರ್ತಿ ಹಾನೋರಿಯಸ್ ತನ್ನ ರಾಜಧಾನಿಯನ್ನು ರಾವೆನ್ನಪಟ್ಟಣಕ್ಕೆ ವರ್ಗಾಯಿಸಿದ ಮರುವರ್ಷವೇ ರಡಗಾಸಿಯಸ್ ಎಂಬ ಕ್ರೂರಿಯೂ ದುಷ್ಟನೂ ಆದ ಇವರ ನಾಯಕ ತನ್ನ ಪಡೆಯೊಡನೆ ರೋಮಿಗೆ ಧಾಳಿಯಿಟ್ಟ. ರೋಮನರ ನಾಯಕ ಸ್ಟಿಲಿಕೋ ಎಂಬಾತ ಇವರನ್ನು ಸೋಲಿಸಿದ. ಈ ಸಮರದಲ್ಲಿ ಟ್ಯೂಟಾನಿಕ್ ಸೈನ್ಯದಲ್ಲಿ 30,000 ಯೋಧರು ಕೊಲೆಯಾದರು. ಗಾಥರ ನಾಯಕ ಅಲಾರಿಕ್ ಎಂಬವ ನೊಡನೆ ಪಿತೂರಿ ನಡೆಸುತ್ತಿರುವನೆಂದು ಹಾನೋರಿಯಸ್ ರಡಗಾಸಿಯಸ್‌ನನ್ನು ಕೊಂದು ಹಾಕಿದ. ಅಲಾರಿಕ ಕೋಪಗೊಂಡು ರೋಮ್ ಮೇಲೆ ಧಾಳಿ ಮಾಡಲು ನಿಶ್ಚಯಿಸಿದ. 408ರಲ್ಲಿ ಆಲ್ಪ್ಸ್ ಪರ್ವತ ದಾಟಿದ ಅನಂತರ ಮಾರ್ಗದ ಹಳ್ಳಿ ಮತ್ತು ಪಟ್ಟಣದ ಜನರನ್ನೆಲ್ಲ ಕೊಂದ. ಅಲಾರಿಕ ರೋಮಿಗೆ ಬಂದೊಡನೆಯೇ ಸ್ಟಿಲಿಕೋನ ಪತ್ನಿ ಸೆರಿನ ಅವನಿಗೆ ಸಹಾಯ ಮಾಡುವಳೆಂಬ ಉದ್ದೇಶದಿಂದ ಆಕೆಯನ್ನು ರೋಮನರು ಕೊಂದರು. ಅಲಾರಿಕ ರೋಮ್ ನಗರವನ್ನು ಸಂಪೂರ್ಣವಾಗಿ ಕೊಳ್ಳೆಹೊಡೆದ. ನಗರದಲ್ಲಿ ಚರ್ಚುಗಳನ್ನುಳಿದು ಆರು ದಿನ ಲೂಟಿ ನಡೆಯಿತು. ನಗರ 9 ತಿಂಗಳು ಶತ್ರುಗಳ ಅಧೀನದಲ್ಲಿತ್ತು. ಪ್ರತಿದಿನವೂ ಹಿಂಸೆ ಮತ್ತು ವ್ಯಭಿಚಾರ ನಡೆದುವು. ಎಡ್ವರ್ಡ್ ಗಿಬ್ಬನ್ ಎಂಬಾತ ರೋಮ್ ನಗರದ ನಾಶವನ್ನು ಬಹಳ ವ್ಯಥೆಯಿಂದ ತನ್ನ ಗ್ರಂಥದಲ್ಲಿ ವಿವರಿಸಿದ್ದಾನೆ. ಅನೈತಿಕ ಕಾರ್ಯಗಳಿಗೆಲ್ಲ ಸಮಯ ಒದಗಿತ್ತು. ಬಂಗಾರದ ಆಭರಣ, ಬೆಲೆಬಾಳುವ ಕಲಾ ವಸ್ತುಗಳು, ವಸ್ತ್ರಗಳು ಮೊದಲಾದ ಸಾಮಗ್ರಿ ಲೂಟಿಯಾದುವು. ಮುಂದೆ ಇವರು ಆಫ್ರಿಕ ಖಂಡದ ಕಡೆಗೆ ಹೊರಟರು. ದಾರಿಯಲ್ಲಿ ಸ್ಪೇನಿನ ಅನೇಕ ಪ್ರಾಂತಗಳನ್ನು ಗೆದ್ದರು. ಸ್ಪೇನಿನ ಒಂದು ಪ್ರಾಂತಕ್ಕೆ ಈಗಲೂ ವ್ಯಾಂಡಲೂಸಿಯ ಎಂಬ ಹೆಸರಿದೆ. 439ರಲ್ಲಿ ಜೆಸರಿಕ್ ಎಂಬಾತ ಆಫ್ರಿಕದಲ್ಲಿದ್ದ ರೋಮನ್ ಸಾಮ್ರಾಜ್ಯದ ಭಾಗಗಳನ್ನು ಸ್ವಾಧೀನಪಡಿಸಿಕೊಂಡ. ಕಾರ್ಥೆಜನ್ನು ಮುಖ್ಯ ಪಟ್ಟಣವಾಗಿಟ್ಟುಕೊಂಡು ಹೊಸ ರಾಜ್ಯ ಸ್ಥಾಪಿಸಿದ. 455ರಲ್ಲಿ ಇವರು ಕಾರ್ಥೆಜಿನಿಂದ ಹೊರಟು ಟೈಬರ್‌ನದಿ ದಾಟಿ, ಪೋಪ್ ಪ್ರಾರ್ಥಿಸಿದರೂ ಕೇಳದೆ ರೋಮ್ ನಗರವನ್ನು ಲೂಟಿಮಾಡಿದರು. 476ರಲ್ಲಿ ಓಡೇಸರ್ ಎಂಬಾತ ಪಶ್ಚಿಮ ರೋಮನ್ನು ಸಂಪೂರ್ಣವಾಗಿ ನಾಶಪಡಿಸಿ, ಪೂರ್ವ ರೋಮಿನ ಚಕ್ರವರ್ತಿಯ ಪ್ರತಿನಿಧಿಯಾಗಿ ಆಳಿಕೆ ಪ್ರಾರಂಭಿಸಿದ. 533 ಮತ್ತು 534ರಲ್ಲಿ ಬೈಜಾಂಟೀಯನ್ ಸಾಮ್ರಾಜ್ಯದ ಸೇನೆ ಉತ್ತರ ಆಫ್ರಿಕದ ವ್ಯಾಂಡಲರ ರಾಜ್ಯವನ್ನು ತನ್ನ ವಶ ಮಾಡಿಕೊಂಡಿತು.

*

**ವ್ಯಾಟಿಕನ್:** ಇಟಲಿ ದೇಶದ ರಾಜಧಾನಿಯಾದ ರೋಮ್ ನಗರದ ಒಡಲೊಳಗಿರುವ ಒಂದು ಚಿಕ್ಕ ರಾಷ್ಟ್ರ. ಕ್ರೈಸ್ತ ಕೆಥೊಲಿಕ್ ಸಾಮ್ರಾಜ್ಯದ ಈ ಪುಟ್ಟ ಸ್ವತಂತ್ರ ದೇಶದ ವಿಸ್ತೀರ್ಣ 44 ಹೆ. ಜನಸಂಖ್ಯೆ: 1,000. ಕ್ರೈಸ್ತ ಜಗದ್ಗುರುಗಳಿರುವ (ಪೋಪ್) ಈ ನಗರ ಪ್ರಪಂಚದ ಅತಿ ಚಿಕ್ಕ ರಾಷ್ಟ್ರವಾಗಿದೆ.

ಇದು ಕೆಥೊಲಿಕ್ ಕ್ರೈಸ್ತ ಗುರುಗಳ ಪ್ರಧಾನ ಮಠ ಹಾಗೂ ಕ್ರೈಸ್ತಧರ್ಮದ ಕೇಂದ್ರಾಡಳಿತ ನಗರ. ಈ ನಗರ ಐತಿಹಾಸಿಕ ಪ್ರಸಿದ್ಧಿ ಪಡೆದಿರುವ ಬಹು ಅಮೂಲ್ಯ ತೈಲಚಿತ್ರ ಹಾಗೂ



ವ್ಯಾಟಿಕನ್ ನಗರ

ಕಲಾಪ್ರೌಢಿಮೆಯ ಭಂಡಾರವಾಗಿದೆ. ಪ್ರಪಂಚದ ಅತ್ಯುನ್ನತ ಹಾಗೂ ಶ್ರೇಷ್ಠ ಚಿತ್ರಕಲಾಕಾರರಾದ ರಾಫೆಲ್, ಲಿಯೊನಾರ್ಡೋ ಡ ವಿಂಚಿ ಮತ್ತು ಮೈಕೆಲೆಂಜೆಲೊ ಬಿಡಿಸಿರುವ ಪ್ರಪಂಚವಿಖ್ಯಾತ ಚಿತ್ರಗಳು ಈ ನಗರದ ಚರ್ಚುಗಳಲ್ಲಿ ಹಾಗೂ ಪ್ರಮುಖ ಕಟ್ಟಡದ ಗೋಡೆಗಳನ್ನು ಅಲಂಕರಿಸಿವೆ. ಈ ನಗರದಲ್ಲಿ ಪ್ರಪಂಚದ ಬೃಹತ್ ಹಾಗೂ ಅಪೂರ್ವ ಪುಸ್ತಕಗಳ ಸಂಗ್ರಹವನ್ನು ಹೊಂದಿರುವ ಗ್ರಂಥಾಲಯವಿದೆ.

ಈ ನಗರ ಇಟಲಿಯ ರೋಮ್ ಪ್ರಾಂತದ ವಾಯವ್ಯ ದಿಕ್ಕಿನಲ್ಲಿ ವ್ಯಾಟಿಕನ್ ಬೆಟ್ಟದ ಪರಿಸರದ ಟೈಬರ್ ನದಿಯ ಪಶ್ಚಿಮ ದಂಡೆಯ ಮೇಲಿದೆ. ಈ ನಗರದ ಅಧಿಕೃತ ಹೆಸರು ವ್ಯಾಟಿಕನ್ ನಗರ ರಾಜ್ಯ. 1929ರ ಲ್ಯಾಟರನ್ ಒಪ್ಪಂದದ ಮೇರೆಗೆ ಈ ನಗರ ಇಟಲಿ ದೇಶದಿಂದ ಬೇರ್ಪಟ್ಟು ಸ್ವತಂತ್ರವಾಯಿತು. ಪೋಪ್ ಈ ದೇಶದ ಸರ್ವಶ್ರೇಷ್ಠ ಆಡಳಿತಾಧಿಕಾರಿ.

ಇತಿಹಾಸ: ಪ್ರಾಚೀನ ಯುರೋಪ್ ಖಂಡ ರೋಮನ್ ಸಾಮ್ರಾಜ್ಯದ ಆಡಳಿತಕ್ಕೆ ಸೇರಿತ್ತು. ವ್ಯಾಟಿಕನ್ ಬೆಟ್ಟ ಅಂದಿನ ರೋಮಿನ ರಾಜನಾಗಿದ್ದ ನೀರೋ ದೊರೆಯ ಉದ್ಯಾನವನವಾಗಿತ್ತೆನ್ನುವರು. ಈ ಬೆಟ್ಟದ ಮೇಲೆ ಸಂತ ಪೀಟರ್ ಎಂಬ ಯೇಸುಕ್ರಿಸ್ತನ ಅನುಯಾಯಿಯನ್ನು ಶಿಲುಬೆಗೇರಿಸಲಾಗಿತ್ತು. ಆತನ ಒಂದು ಸುಂದರ ಸಮಾಧಿ ಇಲ್ಲಿದೆ. ಆ ಸಂತನ ಸ್ಮರಣಾರ್ಥ ಇದನ್ನು ಪ್ರ.ಶ.100ರಲ್ಲಿ ನಿರ್ಮಿಸಲಾಯಿತು.

300ರಲ್ಲಿ ಕಾನ್‌ಸ್ಟಾಂಟೀನ್ ದಿ ಗ್ರೇಟ್ ಎಂಬ ರೋಮನ್ ಚಕ್ರಾಧಿಪತಿ, ಸಂತ ಪೀಟರ್‌ನ ಹೆಸರಿನಲ್ಲಿ ಚರ್ಚೊಂದನ್ನು ಸಮಾಧಿಯ ಸನಿಹ ಕಟ್ಟಿಸಿದ. ಅನಂತರದ ದಿನಗಳಲ್ಲಿ ವ್ಯಾಟಿಕನ್ ಅರಮನೆ ಮತ್ತು ಅನೇಕ ಇತರ ಕಟ್ಟಡಗಳನ್ನು ಚರ್ಚ್‌ನ ಸುತ್ತುಮುತ್ತಲೂ ನಿರ್ಮಿಸಲಾಯಿತು.

ಪೋಪರು ವಾಸ ಮಾಡುತ್ತಿದ್ದ ಲ್ಯಾಟರನ್ ಅರಮನೆ ರೋಮ್ ನಗರದಲ್ಲಿತ್ತು. 1309–76ರ ವರೆಗೂ ಪೋಪರು ಫ್ರಾನ್ಸ್ ದೇಶದ ಅವಿಗ್ನಾನ್ ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದರು. ಈ ಸಮಯದಲ್ಲೇ ರೋಮನ್ ನಗರದಲ್ಲಿದ್ದ ಲ್ಯಾಟರನ್ ಅರಮನೆ ಸುಟ್ಟುಹೋಯಿತು. ಈ ಕಾರಣದಿಂದಾಗಿ ಪೋಪರು ತಮ್ಮ ವಾಸಸ್ಥಳವನ್ನು ರೋಮ್‌ನಿಂದ ವ್ಯಾಟಿಕನ್ ನಗರಕ್ಕೆ ಸ್ಥಳಾಂತರಿಸಿದರು. ಸಂತಪೀಟರ್ ಚರ್ಚ್ ಪಕ್ಕದಲ್ಲಿಯೇ ಲ್ಯಾಟರನ್ ಅರಮನೆಯನ್ನು ಕಟ್ಟಲಾಯಿತು. 1500ರ ಪ್ರಾರಂಭದಲ್ಲಿ ಸಂತಪೀಟರ್‌ನ ಇಗರ್ಜಿಯನ್ನು ಹೊಸ ಮಾದರಿಯಲ್ಲಿ ನವೀಕರಿಸಲಾಯಿತು. ವ್ಯಾಟಿಕನ್ ನಗರ ಪ್ರಾಚೀನ ಕಟ್ಟಡಗಳಿಂದ ಮತ್ತು ಸುಂದರ, ಶಾಂತ ರಸ್ತೆಗಳಿಂದ ಕೂಡಿದೆ. ಲ್ಯಾಟರನ್ ಅರಮನೆ ಈ ನಗರದ ಅರ್ಧ ಸ್ಥಳವನ್ನು ಒಳಗೊಂಡಿದೆ. ಈ ಅರಮನೆಯಲ್ಲಿ ಸುಸಜ್ಜಿತ ಸಾವಿರಕ್ಕೂ ಹೆಚ್ಚು ಕೊಠಡಿಗಳಿವೆ. ಜೊತೆಗೆ ವಸ್ತುಸಂಗ್ರಹಾಲಯ, ಬಯಲು ನ್ಯಾಯವಿಚಾರಣಾ ಸಭಾಭವನ, ಪ್ರಾರ್ಥನಾ ಮಂದಿರ, ಆಡಳಿತ ಕಚೇರಿಗಳು, ಗ್ರಂಥಾಲಯ, ಅತಿಥಿ ಗೃಹಗಳು ಮುಂತಾದವುಗಳಿವೆ. (ಎ.ಡಿ.)

## ಶ

**ಶಂಕರಾಚಾರ್ಯ:** 789–820. ಅದ್ವೈತ ತತ್ತ್ವ ಪ್ರತಿಪಾದಕರಲ್ಲಿ ಅಗ್ರಗಣ್ಯರು. ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲೆ ಆಳವೂ ಮೌಲಿಕವೂ ಆದ ಭಾಷ್ಯಗಳನ್ನು ಬರೆದಿದ್ದಾರೆ. ಇವರ ಅದ್ವೈತ ತುಂಬ ವಿಚಾರಪರವೂ ಮತ್ತು ತರ್ಕನಿಷ್ಠವೂ ಆದ ಸಿದ್ಧಾಂತ. ಅದು ಒಂದು ಕಲಾಕೃತಿಯಂತೆ ಪರಿಪೂರ್ಣವಾಗಿದೆ. ತನ್ನ ಸಿದ್ಧಾಂತಕ್ಕೆ ಆಧಾರವಾದ ತತ್ತ್ವಗಳನ್ನು ಅದರ ಅಂತಿಮ ಗುರಿಯನ್ನೂ ಸ್ಪಷ್ಟಪಡಿಸಿ ಅದರ ಎಲ್ಲ ಅಂಶಗಳನ್ನು ಸಾಂಗತ್ಯವಾಗಿ ವಿಶ್ರಾಂತಗೊಳಿಸಿದೆ. ಭಾರತೀಯ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಮೆಚ್ಚುಗೆ ಪಡೆದಿದೆ.

ಇವರ ಜೀವನದ ವಿಚಾರವಾಗಿ ನಮಗೆ ತಿಳಿದಿರುವ ಅಂಶಗಳು ಅತ್ಯಲ್ಪ. ಇವರು ಯಾವ ಕಾಲದಲ್ಲಿ ಹುಟ್ಟಿ ಬೆಳೆದರು ಎಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇವರು 6ನೆಯ ಶತಮಾನದ ಮಧ್ಯ ಅಥವಾ ಅಂತಿಮ ಭಾಗದಲ್ಲಿದ್ದಿರಬಹುದೆಂದು ತೇಲಂಗರು, 980 ಅಥವಾ ಅದಕ್ಕೂ ಹಿಂದೆ ಇದ್ದಿರಬಹುದೆಂದು ಆರ್.ಜಿ.ಭಂಡಾರ್ಕರ್ ಅವರು ವಾದಿಸುತ್ತಾರೆ. 820ರಲ್ಲಿ ನಿರ್ವಾಣ ಹೊಂದಿದರೆಂದು ಮ್ಯಾಕ್ಸ್‌ಮುಲರ್ ಮತ್ತು ಮೆಕ್‌ಡೊನೆಲ್ ಅಭಿಪ್ರಾಯಪಡುತ್ತಾರೆ. 9ನೆಯ ಶತಮಾನದ ಆದಿಯಲ್ಲಿ ಇದ್ದರೆಂದು ಬೆರ್ರಿಡೇಲ್ ಕೀತ್ ತಿಳಿಸುತ್ತಾನೆ. ಪ್ರ.ಶ.ಪೂ.44ರಲ್ಲಿ ಚಿದಂಬರದಲ್ಲಿ ಜನಿಸಿ, ಪ್ರ.ಶ.ಪೂ.12ರಲ್ಲಿ ದೈವಾಧೀನರಾದರೆಂದು ಆನಂದಗಿರಿಯವರು ತಿಳಿಸುತ್ತಾರೆ. ಇವರ ಅಭಿಪ್ರಾಯಕ್ಕೆ ಹೆಚ್ಚು ಆಧಾರವಿಲ್ಲ. ಇವರು ಬದುಕಿ ಬಾಳಿದ ಅವಧಿ ಸು.32 ವರ್ಷಗಳೇ ಎಂಬ ವಿಚಾರದಲ್ಲಿ ಹೆಚ್ಚೂ ಕಡಿಮೆ ಎಲ್ಲರಲ್ಲಿ ಒಮ್ಮತವಿದೆ. ಇಷ್ಟು ಅವಧಿಯಲ್ಲಿ ಬಹುಶಃ ಅವರು ಸಾಧಿಸಿದ ಮಹಾಕಾರ್ಯಗಳು, ರಚಿಸಿದ ಮಹಾಗ್ರಂಥಗಳು ಅಸದೃಶ.

ಶಂಕರಾಚಾರ್ಯರ ಅನುಯಾಯಿಗಳು ಇವರ ಜೀವನ ಚರಿತ್ರೆಯನ್ನು ರಚಿಸಿದ್ದಾರೆ. ಅವುಗಳಲ್ಲಿ ಮಾಧವಾಚಾರ್ಯರ ಶಂಕರ ದಿಗ್ವಿಜಯ ಮತ್ತು ಆನಂದಗಿರಿಯ ಶಂಕರವಿಜಯ ಮುಖ್ಯವಾದವು. ಚಿದ್ವಿಲಾಸ ಮತ್ತು ಸದಾನಂದ ಇವರಿಬ್ಬರೂ ಶಂಕರಾಚಾರ್ಯರ ಜೀವನದ ಕೆಲವು ವಿವರಗಳನ್ನು ತಿಳಿಸಿದ್ದಾರೆ. ಸ್ಕಾಂದಪುರಾಣದಲ್ಲೂ ಕೆಲವು ವಿವರಗಳು ದೊರೆಯುತ್ತವೆ. ನಾರಾಯಣಾಚಾರ್ಯರು ತಮ್ಮ ಮಧ್ವವಿಜಯದಲ್ಲೂ ಮಣಿಮಂಜರಿಯಲ್ಲೂ ಶಂಕರಾಚಾರ್ಯರ ಜೀವನವನ್ನು ಕುರಿತು ಕೆಲವು ಅಂಶಗಳನ್ನು ತಿಳಿಸಿದ್ದಾರೆ. ಇವುಗಳಲ್ಲಿ ಬಹುಭಾಗ ಕೇವಲ ಕಾಲ್ಪನಿಕವಾದವು. ಚರಿತ್ರೆಯ ದೃಷ್ಟಿಯಲ್ಲಿ ಮುಖ್ಯವಾದುದಲ್ಲ.

ಶಂಕರಾಚಾರ್ಯರು ಮಲಬಾರಿನ ನಂಬೂದರಿ ಬ್ರಾಹ್ಮಣ ವರ್ಗಕ್ಕೆ ಸೇರಿದವರು. ಕಾಲಡಿಯ ಶಿವಗುರು ಮತ್ತು ಆರ್ಯಾಂಭಾಮಾದೇವಿ ಎಂಬ ದಂಪತಿಗಳ ಮಗನೆಂದು ಸಾಮಾನ್ಯವಾಗಿ ಎಲ್ಲರ ನಂಬಿಕೆ. ಶಂಕರಾಚಾರ್ಯರ ಮನೆತನದವರು ಶೈವರೆಂದೂ ಶಾಕ್ತೇಯರೆಂದೂ ಅಭಿಪ್ರಾಯಗಳಿವೆ. ಇವರು ಬಾಲ್ಯದಲ್ಲಿ ಗೌಡಪಾದರ ಶಿಷ್ಯರಾದ ಗೋವಿಂದರಲ್ಲಿ ವಿದ್ಯಾಭ್ಯಾಸ ಮಾಡಿದರು. ತಮ್ಮ ಗ್ರಂಥಗಳಲ್ಲಿ ಇವರು ಗೋವಿಂದರ ಶಿಷ್ಯರೆಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ತುಂಬ ಚಿಕ್ಕ ಹುಡುಗನಾಗಿದ್ದಾಗಲೇ ಎಲ್ಲ ವೇದಗಳನ್ನೂ ಬಾಯಿಪಾಠ ಮಾಡಿದ್ದರೆಂದು ತಿಳಿದುಬರುತ್ತದೆ. ಯೌವ್ವನದಲ್ಲೇ ಇವರಿಗೆ ಸನ್ಯಾಸದ ಹಂಬಲು ಹಿಡಿಯಿತು. ತಾಯಿಗಾದರೋ ಮಗನು ಮದುವೆಯಾಗಿ ಮಕ್ಕಳನ್ನು ಪಡೆದುದನ್ನು ನೋಡಿ ಆನಂದಿಸುವ ಹೆಬ್ಬಯಕೆ. ಮಗನ ದೃಢಸಂಕಲ್ಪವನ್ನೂ ನಿರಂತರ ಬೇಡಿಕೆಯನ್ನೂ ಆಧರಿಸಿ ಅವಸಾನ ಕಾಲದಲ್ಲಿ ತನ್ನ ಬಳಿಗೆ ಬರಬೇಕೆಂದು ಮಗನಿಂದ ಮಾತು ಪಡೆದು ತಾಯಿ ಮಗನಿಗೆ ಸನ್ಯಾಸ ಸ್ವೀಕಾರಕ್ಕೆ ಒಪ್ಪಿಗೆ ಕೊಟ್ಟರು.



ಇವರು ತಾವು ತಿಳಿದ ತತ್ತ್ವವನ್ನು ಬೋಧಿಸಲು ತಮ್ಮ ಜೀವಮಾನವನ್ನೇ ಮುಡಿಪಾಗಿಟ್ಟು ಕನ್ಯಾಕುಮಾರಿಯಿಂದ ಹಿಡಿದು ಕಾಶ್ಮೀರದವರೆಗೆ ಇಡೀ ಭಾರತವನ್ನೆಲ್ಲ ಸುತ್ತಿದರು. ಬೇರೆ ಬೇರೆ ಕಡೆಗಳಲ್ಲಿ ಸಂಧಿಸಿದ ಭಿನ್ನ ಮತದವರೊಡನೆ ವಾದ ನಡೆಸಿದರು. ಪ್ರಸಿದ್ಧ ಮೀಮಾಂಸಕಾರರಾದ ಕುಮಾರಿಲ ಭಟ್ಟರನ್ನೂ ಮಂಡನಮಿಶ್ರರನ್ನೂ ವಾದದಲ್ಲಿ ಗೆದ್ದು ಅವರನ್ನು ತಮ್ಮ ಅನುಯಾಯಿಗಳಾಗಿ ಮಾಡಿಕೊಂಡರೆಂದು ತಿಳಿದುಬರುತ್ತದೆ. ಒಂದು ಸಂಪ್ರದಾಯದ ಪ್ರಕಾರ ಶಂಕರಾಚಾರ್ಯರು ಕುಮಾರಿಲಭಟ್ಟರ ಶಿಷ್ಯರು. ವಿರಕ್ತರಾದ ಇವರು ಮಾನವ ಶ್ರೇಯಸ್ಸಿನಲ್ಲಿ ಆಸಕ್ತಿ ಪಡೆದಿದ್ದರು. ಕ್ಷೀಣದೆಶೆಯಲ್ಲಿದ್ದ, ಕುರುಡು ನಂಬಿಕೆಗಳಿಗೆ ಬಲಿಯಾಗಿದ್ದ ಅಸಹ್ಯಕರ ವರ್ತನೆಗಳಿಂದ ತುಂಬಿದ್ದ ಅಂದಿನ ಮತಗಳನ್ನು ಶುದ್ಧೀಕರಿಸಿ ಶುದ್ಧವಾದ ಹಲವು ಸಂಪ್ರದಾಯಗಳನ್ನು ಸ್ಥಾಪಿಸಲು ಹಗಲಿರುಳೂ ಶ್ರಮಿಸಿದರು. ಅದಕ್ಕಾಗಿ ದೇಶಾಟನೆಯನ್ನು ಕೈಗೊಂಡರು. ಕಾಮರೂಪದಲ್ಲಿ ಅಭಿನವಗುಪ್ತನೊಂದಿಗೆ ವಾದ ನಡೆಸಿ ಗೆದ್ದರೆಂದು ಐತಿಹ್ಯವಿದೆ. ಇದು ನಿಜವಾದರೆ ಇವರ ಜೀವನಕಾಲ ಇನ್ನೂ ಮುಂದೆ ಹೋಗ ಬೇಕಾಗುತ್ತದೆ. ಸನ್ಯಾಸಿಗಳಾದರೂ ತಾಯಿಯ ಅಂತ್ಯಕ್ರಿಯೆ ನಡೆಸಿ ಸಂಪ್ರದಾಯಶರಣರ ನಿಷ್ಠುರಕ್ಕೆ

ಪಾತ್ರರಾದರು. ಕಂಚಿಯಲ್ಲಿ ಕೆಲವು ಕಾಲವಿದ್ದು ಪುನಃ ಉತ್ತರ ದೇಶಗಳಿಗೆ ಹೋಗಿ ಕೇದಾರನಾಥದಲ್ಲಿ ತಮ್ಮ 32ನೆಯ ವಯಸ್ಸಿನಲ್ಲಿ ನಿರ್ವಾಣ ಹೊಂದಿದರು. ಇವರು ಪ್ರಸ್ಥಾನತ್ರಯಗಳೆಂದು ಪ್ರಸಿದ್ಧವಾದ ಮುಖ್ಯವಾದ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳ ಮೇಲೆ ಅತ್ಯುತ್ಕೃಷ್ಟವಾದ ಭಾಷ್ಯಗಳನ್ನು ಬರೆದಿದ್ದಾರೆ. ಅದ್ವೈತ ತತ್ತ್ವವನ್ನು ಸ್ಥಾಪಿಸುವುದೇ ಈ ಮೂರು ಭಾಷ್ಯಗಳ ಮುಖ್ಯೋದ್ದೇಶ. ಅತಿ ಗಹನವಾದ ತತ್ತ್ವವನ್ನು ಇವರು ತುಂಬ ಸರಳವಾದ ಶೈಲಿಯಲ್ಲಿ ಹೇಳಿದ್ದಾರೆ. ಅಲ್ಲಲ್ಲಿ ಕಾಣಬರುವ ನವುರಾದ ಹಾಸ್ಯ ಅವರ ಬರೆವಣಿಗೆಯನ್ನು ಮನೋಹರವಾಗಿ ಮಾಡಿದೆ. ಅವರದ್ದು ತಿಳಿಯಾದ, ಗಂಭೀರವಾದ, ಸಾರಪ್ರಕಾಶನ ಯೋಗ್ಯವಾದ, ಸುಂದರ ಶೈಲಿ. ಬ್ರಹ್ಮಸೂತ್ರ ಭಾಷ್ಯ ಆಚಾರ್ಯರ ಎಲ್ಲ ಗ್ರಂಥಗಳಿಗಿಂತಲೂ ಸುಂದರವಾದುದು, ಪ್ರೌಢವಾದುದು ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಶರೀರದಲ್ಲಿ ಸ್ಥಿತನಾದ ಆತ್ಮನ ವಿಚಾರವನ್ನು ಕುರಿತದ್ದಾದುದರಿಂದ ಬ್ರಹ್ಮಸೂತ್ರಗಳನ್ನು ಶಾರೀರಿಕ ಸೂತ್ರಗಳೆಂದೂ ಭಾಷ್ಯವನ್ನು ಶಾರೀರಕ ಭಾಷ್ಯವೆಂದೂ ಕರೆಯುತ್ತಾರೆ. ಗೀತಾ ಭಾಷ್ಯದಲ್ಲಿ ಅನುಕ್ರಮವಾಗಿ ಪ್ರತಿ ಪದದ ಅರ್ಥವೂ ತಾತ್ಪರ್ಯವೂ ಇವೆ. ಈ ಭಾಷ್ಯ ಜ್ಞಾನಪರವಾದುದು. ಏಕೆಂದರೆ ತತ್ತ್ವಜ್ಞಾನದಿಂದ ಮಾತ್ರ ಮೋಕ್ಷ ಪ್ರಾಪ್ತಿ ಎಂಬುದು ಆಚಾರ್ಯರ ಅಭಿಪ್ರಾಯ. ಉಪನಿಷದ್ ಭಾಷ್ಯಗಳು ಮೂಲಕೃತಿಯಷ್ಟೇ ಸರಳವಾಗಿದೆ. ಸಾಹಿತ್ಯದ ದೃಷ್ಟಿಯಿಂದ ಇವಕ್ಕೆ ಮಹತ್ತ್ವ ಉಂಟು. ಪ್ರೌಢವೂ ಶಾಸ್ತ್ರೀಯವೂ ನೇರವೂ ಆದ ಗದ್ಯದ ಉತ್ತಮ ಮಾದರಿಗಳು ಇಲ್ಲಿವೆ.

ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಸಾಮರಸ್ಯವಿದೆ. ಏಕಮುಖವಾದ ದೃಷ್ಟಿ ಇದೆ. ಒಂದೇ ತತ್ತ್ವದ ನಿರೂಪಣೆಯೂ ಇದೆ. ಆಚಾರ್ಯರ ಸಿದ್ಧಾಂತಗಳನ್ನು ಆಮೂಲಾಗ್ರವಾಗಿ ತಿಳಿಯಲು ಇವು ಅತ್ಯಂತ ಆವಶ್ಯಕ. ಶಂಕರರು ತತ್ತ್ವಜ್ಞರಲ್ಲದೆ ಕವಿಗಳೂ ಹೌದು. ಸ್ತೋತ್ರ ಸಾಹಿತ್ಯದಲ್ಲಿ ಇವರ ಹೆಸರು ಚಿರಸ್ಥಾಯಿಯಾಗಿದೆ. ಭಜಗೋವಿಂದಂ, ಭಜಗೋವಿಂದಂ, ಗೋವಿಂದಂ ಭಜ ಮೂಢಮತೇ, ಸಂಪ್ರಾಪ್ತೇ ಸನ್ನಿಹಿತೇ ಕಾಲೆ ನಹಿ ನಹಿ ರಕ್ಷತಿ ಡುಕ್ರಿಞ್ಕರಣೆ ಎನ್ನುವ ಸ್ತೋತ್ರವನ್ನು ಕೇಳದವರಿಲ್ಲ. ಈ ಸ್ತೋತ್ರಗಳಿಗೆ ಚರ್ಪಟ ಮಂಜರಿಕಾ, ಮೋಹಮುದ್ಗರ, ದ್ವಾದಶ ಮಂಜರೀ, ದ್ವಾದಶ ಪಂಜರಿಕಾ ಎಂಬ ಹೆಸರುಗಳಿವೆ. ಇವರ ಹೃದಯ ಉದಾರ ವಾದದ್ದು. ಶಿವ, ವಿಷ್ಣು, ಬ್ರಹ್ಮರಲ್ಲಿ ಇವರು ಒಂದೇ ರೀತಿಯಾಗಿ ಪ್ರೀತಿಯನ್ನು ತೋರಿಸಿರು ತ್ತಾರೆ. ಶಿವನದಾಗಲಿ, ವಿಷ್ಣುವಿನದಾಗಲಿ, ದೇವಿಯದಾಗಲಿ ಇವರ ಒಂದೊಂದು ಸ್ತೋತ್ರವನ್ನು ಓದಿದಾಗಲೂ ಇವರು ಆ ದೇವತೆಯ ಪರಮ ಭಕ್ತರು, ಆ ದೇವತೆಯೇ ಇವರ ಇಷ್ಟದೇವ ತೆಯೋ ಎಂಬಂತೆ ಬೋಧೆಯಾಗುತ್ತದೆ. ಗಂಗಾ, ಯಮುನಾ, ನರ್ಮದಾ ನದಿಗಳ ಸ್ತೋತ್ರಗಳು ನಾದಲೀಲೆಯ ಸೌಂದರ್ಯವನ್ನು ಸೂಸುತ್ತವೆ. ಇವರ ಸೌಂದರ್ಯಲಹರಿಯ ತತ್ತ್ವ ಎಷ್ಟು ಗಂಭೀರವೋ ಅದರ ಶೈಲಿಯೂ ಅಷ್ಟೇ ಮನೋಹರ. ಇವರ ಸ್ತೋತ್ರಗಳಲ್ಲಿ ಮುಖ್ಯವಾದವು: ಅನ್ನಪೂರ್ಣೇಶ್ವರೀ ಸ್ತೋತ್ರ, ನರಸಿಂಹ ಕರಾವಲಂಬನ ಸ್ತೋತ್ರ, ಆನಂದಲಹರಿ, ಶಿಖರಿಣೀ ವೃತ್ತದ 20 ಪದ್ಯಗಳನ್ನುಳ್ಳ ಆನಂದಲಹರಿಯ ಮೇಲೆ ಮೂವತ್ತು ವ್ಯಾಖ್ಯಾನಗಳು ಬಂದಿವೆ. ದೇವಿಯ ಸುಂದರ ಸ್ತುತಿಗಳನ್ನೊಳಗೊಂಡ ಈ ಪುಟ್ಟ ಸ್ತೋತ್ರಕಾವ್ಯ ಇಂದಿಗೂ ಜನಪ್ರಿಯವಾಗಿದೆ. ಆಥರ್ವಶಿಖಾ, ಆಥರ್ವ ಶಿರಸ್, ನೃಸಿಂಹತಾಪನೀಯ ಉಪನಿಷತ್ತುಗಳ ಮೇಲೆ ಇವರು ಭಾಷ್ಯಗಳನ್ನು ಬರೆದರೆಂದು ಹೇಳುವ ಒಂದು ವಾದವಿದೆ. ದಕ್ಷಿಣಾಮೂರ್ತಿ ಸ್ತೋತ್ರ, ಹರಿಮೀಡೆ ಸ್ತೋತ್ರ, ಸೋಹಮುದ್ಗರ, ದಶಶ್ಲೋಕೀ, ಅಪರೋಕ್ಷಾ ನುಭೂತಿ, ಆಪ್ತವಜ್ರಸೂಚಿ, ವಿಷ್ಣುಸಹಸ್ರನಾಮ, ಭಾಷ್ಯ, ಸನತ್‌ಸುಜಾತ–ಇವು ಇತರ ಕೆಲವು ಮುಖ್ಯ ಕೃತಿಗಳು.

ಇವಲ್ಲದೇ ವೇದಾಂತ ವಿಚಾರವನ್ನೊಳಗೊಂಡು ಪದ್ಯರೂಪದಲ್ಲಿ ರಚಿತವಾಗಿರುವ ಇವರ ಇಪ್ಪತ್ತೈದಕ್ಕೂ ಹೆಚ್ಚಿನ ಕೃತಿಗಳು ಪ್ರಕರಣ ಗ್ರಂಥಗಳೆಂದು ಪ್ರಸಿದ್ಧವಾಗಿವೆ. ಶಂಕರಾ ಚಾರ್ಯರು ಜ್ಞಾನಯೋಗವೇ ಪರಮಸಿದ್ಧಿಗೆ ಏಕೈಕ ಮಾರ್ಗವೆಂದು ಬೋಧಿಸಿರುವುದು ನಿಜ. ಆದರೆ ಇವರ ಸ್ತೋತ್ರಗಳನ್ನು ಓದುತ್ತಿದ್ದಾಗ ನಮಗೆ ಇವರು ಭಕ್ತಿಯೋಗಿಗಳೆಂದೆನ್ನಿಸುತ್ತದೆ. ಜ್ಞಾನಕ್ಕೂ ಭಕ್ತಿಗೂ ಕರ್ಮಕ್ಕೂ ವಿರೋಧವನ್ನು ಬಗೆಯದ ಉದಾರ ಹೃದಯ ಅವರದೆಂದು ಬೋಧೆಯಾಗುತ್ತದೆ. ಇವರು ಬಾಲ್ಯದಲ್ಲಿ ಸಂಸಾರವನ್ನು ತೊರೆದು ಸಂನ್ಯಾಸಿಗಳಾದರೂ ಇವರ ಹೃದಯ ಮಾತ್ರ ನಿರಂತರವಾಗಿ ಮಾನವನಿಗೆ ಶ್ರೇಯಸ್ಸನ್ನುಂಟುಮಾಡುವುದರಲ್ಲಿ ಲೀನವಾಗಿತ್ತು. ಹಗಲಿರುಳೂ ವರ್ಷದ ದಿನದಿನವೂ ಬಾಳಿದ ಹಲವು ವರ್ಷಗಳೂ ಭಾರತದಲ್ಲಿ ಜನರ ಮತೀಯ ಜೀವನವನ್ನು ಸ್ವಚ್ಛಗೊಳಿಸಲು, ಬಲಪಡಿಸಲು ಇವರು ಶ್ರಮಿಸಿದರು.

ಶಂಕರಾಚಾರ್ಯರು ತಮ್ಮ ಕಾಲದಲ್ಲಿ ಪ್ರಚಾರದಲ್ಲಿದ್ದ ಎಲ್ಲ ಮತಗಳಲ್ಲೂ ಆಸಕ್ತಿ ತೋರಿಸಿ ಅವುಗಳಲ್ಲಿ ಕಂಡುಬಂದ ಲೋಪದೋಷಗಳನ್ನು ನಿವಾರಿಸಿದರು. ಸಾಮಾನ್ಯ ಜನರು ಕ್ಷುದ್ರ ದೇವತಾರಾಧನೆಯಲ್ಲೂ ನರಬಲಿ ಮುಂತಾದ ಘೋರ ಕೃತ್ಯಗಳಲ್ಲೂ ಭಾಗವಹಿಸುವುದನ್ನು ತೀವ್ರವಾಗಿ ಖಂಡಿಸಿದರು. ಭಕ್ತಿ ಪಂಥದವರ ಭಾವಾತಿರೇಕವನ್ನೂ ಮೀಮಾಂಸಕರ ಬಾಹ್ಯಕರ್ಮಗಳನ್ನೂ ಶೈವರ ಮಲ್ಲಾರಿ ಮುಂತಾದ ದೇವತೆಗಳ ಪೂಜೆ ಯನ್ನೂ ಖಂಡಿಸಿದರು. ಭಗವದ್ಗೀತೆಯ ಭಾಷ್ಯದಲ್ಲಿ ಭಕ್ತಿ, ಕರ್ಮ, ಜ್ಞಾನ ಮಾರ್ಗಗಳನ್ನು ಒಂದಕ್ಕೊಂದು ಪುಷ್ಟಿಕೊಡುವ ರೀತಿಯಲ್ಲಿ ತೆರೆದಿಟ್ಟರು. ಇವರು ಷಣ್ಮತಸ್ಥಾಪನಾಚಾರ್ಯ ರೆಂದು ಪ್ರಸಿದ್ಧರಾಗಿದ್ದಾರೆ. ಇವರು ಒಪ್ಪಿದ ಮತಗಳಲ್ಲಿ ನಾಲ್ಕು ಈಗಲೂ ಪ್ರಚಾರದಲ್ಲಿವೆ. ಬೌದ್ಧಧರ್ಮಗಳಲ್ಲಿ ಕುದುರಿದ್ದ ಶಿಸ್ತನ್ನು ಇವರು ಮನಗಂಡು ಅದರ ಮಾದರಿಯಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಮುಖ್ಯವಾದದ್ದು ಶೃಂಗೇರಿಯ ಮಠ. ಉಳಿದವು ಪೂರ್ವದಲ್ಲಿ ಪುರಿ, ಪಶ್ಚಿಮದಲ್ಲಿ ದ್ವಾರಕ, ಉತ್ತರದಲ್ಲಿ ಬದರೀನಾಥ್, ಕಂಚಿಯ ಕಾಮಕೋಟಿಗಳಲ್ಲಿವೆ. (ಜಿ.ಎಚ್.)

**ಶರ್ಮ, ಆರ್.ಎಸ್.:** ಭಾರತದ ಪ್ರಸಿದ್ಧ ಇತಿಹಾಸಕಾರ. ರಾಮ್‌ಶರಣ್ ಶರ್ಮ 1919 ನವೆಂಬರ್ 26ರಂದು ಬಿಹಾರದ ಬೆಗುಸರಾಯ್‌ನಲ್ಲಿ ಜನಿಸಿದರು. ಬಡಕುಟುಂಬದಲ್ಲಿ ಬೆಳೆದ ಇವರು ತಮ್ಮ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಲಂಡನ್‌ನಲ್ಲಿ ಪಡೆದರು. 1959–73ರವರೆಗೆ ಪಾಟ್ನ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಅಧ್ಯಕ್ಷರಾಗಿಯೂ 1973–78ರ ಅವಧಿಯಲ್ಲಿ ದೆಹಲಿ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. 1972ರಲ್ಲಿ ಪ್ರಾರಂಭವಾದ ಭಾರತೀಯ ಇತಿಹಾಸ ಸಂಶೋಧನ ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿ ಆಯ್ಕೆಗೊಂಡು 1977ರ ವರೆಗೆ ಈ ಸ್ಥಾನದಲ್ಲಿದ್ದರು. 1973–78ರವರೆಗೆ ಯುನೆಸ್ಕೊದ ಇಂಟರ್‌ನ್ಯಾಷನಲ್ ಅಸೋಸಿಯೇಶನ್ ಫಾರ್ ಸ್ಟಡಿ ಆಫ್ ಸೆಂಟ್ರಲ್ ಏಷ್ಯದ ಅಧ್ಯಕ್ಷರಾಗಿದ್ದರು. ದೆಹಲಿ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಕಾರ್ಯಕ್ಷಮತೆಯನ್ನು ವಿಸ್ತರಿಸಿದ ಕೀರ್ತಿ ಇವರದು. ಪ್ರಾಚೀನ ಭಾರತೀಯ ಸಮಾಜದ ವಿವಿಧ ಮಜಲುಗಳನ್ನು ಸಾಹಿತ್ಯಕ ಹಾಗೂ ಪುರಾತತ್ತ್ವೀಯ ಆಧಾರಗಳೊಂದಿಗೆ ಸೈದ್ಧಾಂತಿಕ ನೆಲೆಯಲ್ಲಿ ಅರಿಯುವ ಪ್ರಯತ್ನ ಇವರ ಕೃತಿಗಳಲ್ಲಿ ಕಾಣುತ್ತದೆ. ಇವರ ಕೆಲವು ಕೃತಿಗಳು ಹಿಂದಿ, ಬಂಗಾಲಿಯಲ್ಲದೆ ಜಪಾನಿ, ಫ್ರೆಂಚ್, ಜರ್ಮನ್, ರಷ್ಯನ್ ಮುಂತಾದ 15 ಭಾಷೆಗಳಿಗೆ ಅನುವಾದಗೊಂಡಿವೆ. ಇವರ ಪ್ರಮುಖ ಕೃತಿಗಳಿವು: ಅರ್ಬನ್ ಡೀಕೆ ಇನ್ ಇಂಡಿಯ: 300–1000 (1987), ಲುಕಿಂಗ್ ಫಾರ್ ದಿ ಆರ್ಯನ್ಸ್ (1995), ಶೂದ್ರಾಸ್ ಇನ್ ಏನ್ಷಿಯಂಟ್ ಇಂಡಿಯ (2002), ಪರ್ಸ್‌ಪೆಕ್ಟಿವ್ಸ್ ಇನ್ ಸೋಷಿಯಲ್ ಅಂಡ್ ಎಕನಾಮಿಕ್ ಹಿಸ್ಟರಿ ಆಫ್ ಏನ್ಷಿಯಂಟ್ ಇಂಡಿಯ (2003), ಇಂಡಿಯನ್ ಫ್ಯೂಡಲಿಸಂ (2005), ಮೆಟೀರಿಯಲ್ ಕಲ್ಚರ್ ಅಂಡ್ ಸೋಷಿಯಲ್ ಫಾರ್ಮೇಷನ್ಸ್ ಇನ್ ಏನ್ಷಿಯಂಟ್ ಇಂಡಿಯ (2007). ಭಾರತೀಯ ಇತಿಹಾಸ ಸಂಶೋಧನೆಗೆ ಇವರ ಕೊಡುಗೆಗಳನ್ನು ಮನ್ನಿಸಿ ಭಾರತೀಯ ಇತಿಹಾಸ ಕಾಂಗ್ರೆಸ್ ಇವರಿಗೆ ವಿಶ್ವನಾಥ ಕಾಶಿನಾಥ ರಾಜವಾಡೆ ಪ್ರಶಸ್ತಿ ನೀಡಿ ಗೌರವಿಸಿದೆ. ಮುಂಬಯಿಯ ಏಷ್ಯಾಟಿಕ್ ಸೊಸೈಟಿ ಇವರಿಗೆ ಕ್ಯಾಂಪ್‌ಬೆಲ್ ಚಿನ್ನದ ಪದಕ ನೀಡಿ ಗೌರವಿಸಿದೆ. ಇವರ ಗೌರವಾರ್ಥ ದ್ವಿಜೇಂದ್ರ ನಾರಾಯಣ ಝಾ ಅವರು ಸೊಸೈಟಿ ಅಂಡ್ ಐಡಿಯಾಲಜಿ ಇನ್ ಇಂಡಿಯ: ಎಸ್ಸೇಸ್ ಇನ್ ಆನರ್ ಆಫ್ ಪ್ರೊ. ಆರ್.ಎಸ್.ಶರ್ಮ ಎಂಬ ಸಂಪಾದಿತ ಕೃತಿಯನ್ನು ಹೊರತಂದಿದ್ದಾರೆ (1996). (ವಿ.ಎಸ್.)

**ಶಾಂತಲದೇವಿ:** ಪ್ರಸಿದ್ಧ ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟಮಹಿಷಿ. ಇವಳ ಹುಟ್ಟೂರು ಬಲಿಪುರ (ಬಳ್ಳಿಗಾವೆ). ತಾಯಿ ಮಾಚಿಕಬ್ಬೆ, ತಂದೆ ಮಾರಸಿಂಗಯ್ಯ, ಮಾವ ಪೆರ್ಗಡೆ ಸಿಂಗಯ್ಯ, ಗುರು ಪ್ರಭಾಚಂದ್ರ ದೇವ. ಇಷ್ಟದೈವ ಜಿನನಾಥ. ಧರ್ಮೇಶ್ವರ ದೇವರ ವರದಿಂದ ಜನಿಸಿದವಳು. ವಿಷ್ಣುವರ್ಧನ ಪಟ್ಟಕ್ಕೆ ಬರುವುದಕ್ಕೆ 10–15 ವರ್ಷಗಳಿಗೆ ಹಿಂದೆಯೇ ಅವನು ಶಾಂತಲದೇವಿಯನ್ನು ವಿವಾಹವಾಗಿರಬೇಕು. 1108ರಲ್ಲಿ ವಿಷ್ಣುವರ್ಧನ ರಾಜ್ಯಸೂತ್ರ ಗಳನ್ನು ವಹಿಸಿಕೊಂಡ ಮೇಲೆ ಎರಡು ದಶಕಗಳಿಗೂ ಹೆಚ್ಚಾಗಿ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಈಕೆಯ ಪ್ರಭಾವಿತ್ತು.

ಹೊಯ್ಸಳ ರಾಜ್ಯ ಪ್ರಸಿದ್ಧಿಗೆ ಬರುತ್ತಿದ್ದ ಕಾಲದಲ್ಲಿ ಶಾಂತಲೆಗಿದ್ದ ಸ್ಥಾನಮಾನ, ಇವಳ ಗುಣ, ವ್ಯಕ್ತಿತ್ವಗಳನ್ನು ಅನೇಕ ಶಾಸನಗಳಲ್ಲಿ ದಾಖಲಿಸಲಾಗಿದೆ. ಪರಮಕಲ್ಯಾಣಾಭ್ಯುದಯ ಸತಸಹಸ್ರಫಳಭೋಗಭಾಗಿನೀ ದ್ವಿತೀಯಲಕ್ಷ್ಮೀ ಸಮಾನೆ, ಅಭಿನವರುಕ್ಮಿಣೀದೇವಿ, ಪತಿಹಿತಸತ್ಯ ಭಾಮೆ, ವಿವೇಕಯ್ಕಬೃಹಸ್ಪತಿ, ಸಂಗೀತವಿದ್ಯಾಸರಸ್ವತಿ, ಪ್ರತ್ಯುತ್ಪನ್ನವಾಚಸ್ಪತಿ, ಮುನಿಜನವಿನೇ ಯಜನವಿನೀತೆ, ಪತಿವ್ರತಾಪ್ರಭಾವ ಪ್ರಸಿದ್ಧಶೀಲೆ, ಸಕಳವಂದಿಜನಚಿಂತಾಮಣಿ, ಸಮ್ಯಕ್ತ್ವ ಚೂಡಾಮಣಿ, ಸವತಿಗಂಧವಾರಣೆ, ಚತುಸ್ಸಮಯಸಮುದ್ಧರಣಕಾರಣೆ, ನಿಜಕಳಾಭ್ಯುದಯ ದೀಪಿಕೆ, ಅಗಣ್ಯ ಲಾವಣ್ಯ ಸಂಪನ್ನೆ, ಗೀತವಾದ್ಯನೃತ್ಯಸೂತ್ರಧಾರೆ, ಜಿನಸಮಯಸಮುದಿತ ಪ್ರಾಕಾರೆ, ಆಹಾರಾಭಯಭೈಷಜ್ಯಶಾಸ್ತ್ರದಾನವಿನೋದೆ, ವಿಷ್ಣುವರ್ಧನ ಹೊಯ್ಸಳದೇವರ ಪಿರಿಯರಸಿ, ಪಟ್ಟಮಹಾದೇವಿ–ಇವು ಇವಳ ಕೆಲವು ವಿಶೇಷಣಗಳು. ನಗರಾಜನನ್ವೀಪಾದಾರ ವಿಂದವನ್ದನಾಭಿರುಚಿ ಇರುವಾಕೆ.

ಶಾಂತಲದೇವಿಗೆ ಕುಮಾರ ಬಲ್ಲಾಳನೆಂಬ ಮಗನೂ ಚಿಕ್ಕ ಹರಿಯಲೆ (ಹರಿಯಲಾದೇವಿ) ಎಂಬ ಮಗಳೂ ಇದ್ದರು. ಕುಮಾರ ಬಲ್ಲಾಳ ರಾಜ್ಯಭಾರದಲ್ಲಿ ತಂದೆಗೆ ನೆರವಾಗಿದ್ದು, ಶಾಂತಲೆಗೆ ಮುಂಚೆಯೇ ಮೃತನಾದ. ಹರಿಯಲೆ ಭರತೇಶ ದಂಡನಾಯಕನನ್ನು ಮದುವೆಯಾಗಿದ್ದಳು.

ಶಾಂತಲೆ ಧರ್ಮಶ್ರದ್ಧೆಯಿಂದ ಅನೇಕ ಪುಣ್ಯ ಕೆಲಸಗಳನ್ನು ಮಾಡಿದ್ದಾಳೆ. ಶ್ರವಣಬೆಳ ಗೊಳದ ಸವತಿಗಂಧವಾರಣ ಬಸದಿ ಇವಳ ಕೊಡುಗೆ. ಹಾಸನ ತಾಲ್ಲೂಕಿನಲ್ಲಿ ಶಾಂತಿಗ್ರಾಮ ವನ್ನು ಸ್ಥಾಪಿಸಿ ಅಲ್ಲಿನ ಜಿನಾಲಯಗಳನ್ನು ನಿರ್ಮಿಸಿದಳು. ಬೇಲೂರಿನಲ್ಲಿ ಚೆನ್ನಕೇಶವ ದೇವಾಲಯದ ಪಕ್ಕದಲ್ಲಿರುವ ಕಪ್ಪೆಚೆನ್ನಿಗರಾಯ ದೇವಾಲಯವನ್ನು ಈಕೆ ಕಟ್ಟಿಸಿದುದಾಗಿ ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಕೊನೆಯವರೆಗೂ ಜಿನಭಕ್ತೆ ಯಾಗಿಯೇ ಇದ್ದರೂ ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ನೀಡಿದಳು.

ಬೇಲೂರಿನ ಚೆನ್ನಕೇಶವ ದೇವಾಲಯದ ಮುಂದೆ ಒಂದೇ ಕಲ್ಲಿನಲ್ಲಿ ಕಂಡರಿಸಿರುವ ಅಂಜಲಿಮುದ್ರೆಯಲ್ಲಿರುವ ಸರ್ವಾಲಂಕೃತ ಗಂಡು-ಹೆಣ್ಣಿನ ವಿಗ್ರಹಗಳನ್ನು ವಿಷ್ಣುವರ್ಧನ-ಶಾಂತಲೆಯರೆಂದು ಆರ್.ನರಸಿಂಹಾಚಾರ್ಯರು ಗುರುತಿಸಿದ್ದಾರೆ. ಶಾಂತಲೆ ಪತಿಯೊಡನೆ ಒಡ್ಡೋಲಗದಲ್ಲಿ ಕುಳಿತಿರುವ ಭವ್ಯದೃಶ್ಯದ ಕಲಾಕೃತಿ ಕೇಶವ ದೇವಾಲಯದ ಮುಂಭಾಗದ ಗೋಡೆಯ ಮೇಲಿನ ಚಿತ್ತಾರದ ಜಾಲಂಧ್ರವೊಂದರ ಮೇಲಿದೆ. ಶಾಂತಲದೇವಿ 1131ರಲ್ಲಿ ಶಿವಗಂಗೆಯ ತೀರ್ಥದಲ್ಲಿ ಮುಡುಪಿ ಸ್ವರ್ಗಸ್ಥಳಾದಳೆಂದು ಪ್ರತೀತಿ. (ವಿ.ಜಿ.ಕೆ.)

**ಶಾಂತಾರಾಮ ಬಾಲಚಂದ್ರ ದೇವ್:** 1923-66. ಪ್ರಸಿದ್ಧ ಪುರಾತತ್ತ್ವವಿದ, ಶ್ರೇಷ್ಠ ವಿದ್ವಾಂಸ. ಮಹಾರಾಷ್ಟ್ರದ ಪುಣೆ ಜಿಲ್ಲೆಯ ತಳೆಗಾಂವ್‌ನಲ್ಲಿ 1923 ಜೂನ್ 9ರಂದು ಜನಿಸಿದರು. ಪುಣೆಯ ನ್ಯೂ ಇಂಗ್ಲಿಷ್ ಸ್ಕೂಲ್‌ನಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದ ಇವರು ಫರ್ಗ್ಯುಸನ್ ಕಾಲೇಜಿನಲ್ಲಿ ಪದವೀಧರರಾಗಿ ಮುಂಬೈ ವಿಶ್ವವಿದ್ಯಾಲಯದಿಂದ ಪಾಳಿ ಹಾಗೂ ಅರ್ಧಮಾಗಧಿಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಶಾಸನ ಮತ್ತು ಸಾಹಿತ್ಯಕ ಆಕರಗಳಲ್ಲಿ ನಿರೂಪಿತವಾದಂತೆ ಜೈನಧರ್ಮದಲ್ಲಿ ಸನ್ಯಾಸಾಶ್ರಮದ ಬಗೆಗೆ ಪ್ರೌಢ ಪ್ರಬಂಧ ರಚಿಸಿ ಡಾಕ್ಟೊರೇಟ್ ಗಳಿಸಿದರು (1952).

ಪುಣೆಯ ಡೆಕ್ಕನ್ ಕಾಲೇಜಿನ ಸ್ನಾತಕೋತ್ತರ ಸಂಶೋಧನ ಸಂಸ್ಥೆಯ ಪ್ರಾಚೀನ ಭಾರತ ಇತಿಹಾಸ ಹಾಗೂ ಸಂಸ್ಕೃತಿ ವಿಭಾಗದಲ್ಲಿ ಉಪನ್ಯಾಸಕರಾಗಿ (1954) ತಮ್ಮ ವೃತ್ತಿಜೀವನವನ್ನು ಆರಂಭಿಸಿ, ಅಲ್ಪ ಕಾಲದಲ್ಲಿಯೇ ರೀಡರ್ ಆಗಿ ನಿಯುಕ್ತರಾದರು. ಕೊಲಂಬೋ ಯೋಜನೆಯಲ್ಲಿ ಕೆಲಕಾಲ (1963-65) ಕೆಲಸಮಾಡಿ ಕಠ್ಮಂಡುವಿನ ಭಾರತ ಸಹಕಾರ ನಿಯೋಗದಲ್ಲಿ ಪ್ರಾಚೀನ ಭಾರತ ಸಂಸ್ಕೃತಿ ವಿಭಾಗದ ಉಪ ಪ್ರಾಧ್ಯಾಪಕರಾದರು. ನಾಗಪುರ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ, ಸಂಸ್ಕೃತಿ ಮತ್ತು ಪುರಾತತ್ತ್ವ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಪುನಃ ತಮ್ಮ ಮಾತೃಸಂಸ್ಥೆಯಾದ ಡೆಕ್ಕನ್ ಕಾಲೇಜಿಗೆ ಪ್ರಾಧ್ಯಾಪಕರಾಗಿ ಬಂದರು. ಅನಂತರ ಈ ಸಂಸ್ಥೆಯ ನಿರ್ದೇಶಕರಾಗಿ (1978) ವಿಶ್ರಾಂತ ರಾಗುವ ವರೆಗೆ (1985) ಕಾರ್ಯ ನಿರ್ವಹಿಸಿದರು. ಅನಂತರ ಅಲ್ಲಿಯೇ ಗೌರವ ಪ್ರಾಧ್ಯಾಪಕ ರಾದರು. ಇವರು ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತಿನ ಹಿರಿಯ ಸಂಶೋಧಕ ರಾಗಿ (1985-88), ದೆಹಲಿಯ ಬಿ.ಎಲ್. ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿಯ ನಿರ್ದೇಶಕರಾಗಿ (1989-1990) ಸೇವೆ ಸಲ್ಲಿಸಿದರು.

ಭಾರತದ ವಿವಿಧ ರಾಜ್ಯ ಹಾಗೂ ನೆರೆಯ ರಾಷ್ಟ್ರಗಳಲ್ಲಿನ ತಾಮ್ರ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಕಾಲದ ಮಹತ್ತ್ವದ ನೆಲೆಗಳಲ್ಲಿ ವಿಸ್ತೃತ ಉತ್ಖನನ ನಡೆಸಿದರು. ಇವರ ನೇತೃತ್ವದಲ್ಲಿ ಒರಿಸ್ಸ ರಾಜ್ಯದ ಶಿಶುಪಾಲಗಡ (1948), ಗುಜರಾತಿನ ಲಾಂಗ್‌ನಾಜ್ (1949), ಮಧ್ಯಪ್ರದೇಶದ ಮಾಹೇಶ್ವರ್-ನವ್ದತೋಲಿ (1952-53; 1957-59), ತ್ರಿಪುರಿ (1966), ರಾಜಸ್ಥಾನದ ಅಹಾರ್ (1961-62), ಮಹಾರಾಷ್ಟ್ರದ ನಾಸಿಕ್ (1950-51) ಹಾಗೂ ನೇಪಾಲದ ಪೈಸಿಯ ಮತ್ತು ಬಂಜಾರಾಹಿ (1964) ಹಾಗೂ ಕಠ್ಮಂಡು (1965) ಮೊದಲಾದ 21ಕ್ಕೂ ಹೆಚ್ಚು ನೆಲೆಗಳಲ್ಲಿ ನಡೆದಿರುವ ಉತ್ಖನನಗಳು ಅತ್ಯಂತ ಗಮನಾರ್ಹ. ಇವರು ಸ್ವತಂತ್ರವಾಗಿ ಮತ್ತು ಸಹೋದ್ಯೋಗಿಗಳೊಂದಿಗೆ 30ಕ್ಕೂ ಹೆಚ್ಚು ವಿದ್ವತ್‌ಪೂರ್ಣ ಗ್ರಂಥಗಳನ್ನು ರಚಿಸಿದ್ದಾರೆ. ಹೆಚ್ಚಿನವು ಉತ್ಖನನ ವರದಿಗಳ ರೂಪದಲ್ಲಿವೆ.

ಶಾಸನ ಮತ್ತು ಸಾಹಿತ್ಯಕ ಆಕರಗಳಲ್ಲಿ ನಿರೂಪಿತವಾದಂತೆ ಜೈನಧರ್ಮದಲ್ಲಿ ಸನ್ಯಾಸಾಶ್ರಮ (1956), ಜೈನಧರ್ಮದ ನ್ಯಾಯಶಾಸ್ತ್ರ (1960), ನೇಪಾಲದ ಕಾಷ್ಠ ಕಲೆ-ಒಂದು ಪರಿಚಯ (1968-69), ಮಾರ್ಕಂಡಿಯ ದೇವಾಲಯಗಳು (1973) ಇವರ ಇತರ ಗಮನಾರ್ಹ ಕೃತಿಗಳು. ಇವರ ಸಂಪಾದಕತ್ವದಲ್ಲಿ ಭಾರತೀಯ ಪುರಾತತ್ತ್ವ ಅಧ್ಯಯನಗಳು (ಎಚ್.ಡಿ. ಸಾಂಕಳಿಯ ಸಂಭಾವನ ಗ್ರಂಥ 1970), ಆರ್ಕಿಯಲಾಜಿಕಲ್ ಕಾಂಗ್ರೆಸ್ ವಿಚಾರಸಂಕಿರಣದ ಪ್ರಬಂಧಗಳು (1972), ಭಾರತೀಯ ಪುರಾತತ್ತ್ವದಲ್ಲಿನ ಈಚಿನ ಬೆಳವಣಿಗೆಗಳು (1985) ಮತ್ತು ಆರ್ಯರ ಸಮಸ್ಯೆ (1993)-ಇವು ಗಮನಾರ್ಹ.

ಪ್ರಾಕೃತ ಹಾಗೂ ಮರಾಠಿ ಭಾಷೆಗಳಲ್ಲಿ ಅಪಾರ ಪಾಂಡಿತ್ಯಗಳಿಸಿದ್ದ ಇವರು ಮಾತೃಭಾಷೆ ಮರಾಠಿಯಲ್ಲಿ ಮಹಾರಾಷ್ಟ್ರತೀಲ್ ಉತ್ಖನನ (ಮಹಾರಾಷ್ಟ್ರದಲ್ಲಿನ ಉತ್ಖನನಗಳು, 1962), ಜೈನ ಸಂಪ್ರದಾಯ ವ ಸಂಸ್ಕೃತಿ-ಕಹೀ ವಿಚಾರ್ (ಜೈನ ಸಂಪ್ರದಾಯ ಮತ್ತು ಸಂಸ್ಕೃತಿ: ಕೆಲವು ವಿಚಾರಗಳು, 1963). ಮಹಾರಾಷ್ಟ್ರ - ಏಕ್ ಪುರಾತತ್ತ್ವೀಯ ಸಮಾಲೋಚನ್ ಎಂಬ ಕೃತಿಗಳನ್ನು ರಚಿಸಿದ್ದಾರೆ. ಪ್ರಾಗಿತಿಹಾಸ, ಇತಿಹಾಸ ಪೂರ್ವಕಾಲ ಮತ್ತು ಆರಂಭ ಇತಿಹಾಸ ಕಾಲದ ವಿವಿಧ ಸಂಸ್ಕೃತಿಗಳನ್ನು ಕುರಿತ ಇವರ ಲೇಖನಗಳು ದೇಶ ವಿದೇಶಗಳ ವಿದ್ವತ್ಪರಿಷದ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರ ಮಾರ್ಗದರ್ಶನದಲ್ಲಿ 20ಕ್ಕೂ ಹೆಚ್ಚು ಪ್ರೌಢ ಪ್ರಬಂಧಗಳಿಗೆ ಡಾಕ್ಟೊರೇಟ್ ಪದವಿ ಲಭಿಸಿದೆ. ಇವರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಅನೇಕ ವಿದ್ವತ್ಗೋಷ್ಠಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದರು. ದೇಶ ವಿದೇಶಗಳಲ್ಲಿ ವಿಪುಲ ಪ್ರವಾಸ ಮಾಡಿದ್ದ ಇವರು 1996 ಅಕ್ಟೋಬರ್ 1ರಂದು ನಿಧನರಾದರು. (ಎಂ.ವಿ.ವಿ.)

**ಶಾಮಶಾಸ್ತ್ರೀ, ಆರ್.:** 1868-1944. ಪ್ರಸಿದ್ಧ ವಿದ್ವಾಂಸರು, ಸಂಶೋಧಕರು. 1868 ಜನವರಿ 12ರಂದು ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣದಲ್ಲಿ ಜನಿಸಿದರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಸ್ವಪ್ರಯತ್ನದಿಂದ ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಓದಿ 1891ರಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ವಿದ್ವತ್ಪರೀಕ್ಷೆ ಮಾಡಿದರು. ಆಗಿನ ದಿವಾನರಾಗಿದ್ದ ಕೆ. ಶೇಷಾದ್ರಿಅಯ್ಯರ್ ಅವರು ಇವರ ಪಾಂಡಿತ್ಯವನ್ನು ಮೆಚ್ಚಿ, ಸಂಸ್ಕೃತ ಗ್ರಂಥಗಳನ್ನು ಓದಿಸಿ ಕೇಳುವುದಕ್ಕೆಂದು ಇವರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡರು; ಇವರ ಇಂಗ್ಲಿಷ್ ವ್ಯಾಸಂಗಕ್ಕೂ ಅನುಕೂಲ ಮಾಡಿಕೊಟ್ಟರು. ಅವರ ಮನೆಯಲ್ಲಿದ್ದ ಸು. 10 ವರ್ಷಗಳ ಅವಧಿಯಲ್ಲಿ ಇವರು ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳ ಅಧ್ಯಯನದ ಜೊತೆಗೆ ಭೌತಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಯನ ಮಾಡಿ 1899ರಲ್ಲಿ ಮದರಾಸು ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಶೇಷಾದ್ರಿ ಅಯ್ಯರ್ ಅವರ ನೆರವಿನಿಂದಲೇ

1900ರಲ್ಲಿ ಮೈಸೂರಿನ ಪ್ರಾಚೀನ ಪುಸ್ತಕ ಭಂಡಾರದಲ್ಲಿ ಉದ್ಯೋಗಸ್ಥರಾದರು. ಆ ಪುಸ್ತಕ ಭಂಡಾರದ ಹಸ್ತಪ್ರತಿಗಳ ಗ್ರಂಥಸೂಚಿಯನ್ನು ತಯಾರಿಸುತ್ತಿದ್ದಾಗ, ಅಂದಿನವರೆಗೆ ನಾಮಮಾತ್ರ ಪ್ರಸಿದ್ಧವಾಗಿದ್ದು ಗ್ರಂಥಲಿಪಿಯಲ್ಲಿದ್ದ ಕೌಟಿಲ್ಯನ ಅರ್ಥಶಾಸ್ತ್ರ ಇವರಿಗೆ ದೊರೆಯಿತು. ಈ ಗ್ರಂಥದ ಮಹತ್ತ್ವವನ್ನರಿತ ಇವರು ಅದನ್ನು ಪರಿಷ್ಕರಿಸಿ 1909ರಲ್ಲಿ ಪ್ರಕಟಿಸಿ ಪ್ರಸಿದ್ಧರಾದರು. 1912ರ ವೇಳೆಗೆ ಈ ಗ್ರಂಥದ ಇಂಗ್ಲಿಷ್ ಭಾಷಾಂತರವನ್ನೂ ಪ್ರಕಟಿಸಿದರು. 1912-18ವರೆಗೆ ಇವರು ಬೆಂಗಳೂರಿನ ಚಾಮರಾಜ ಸಂಸ್ಕೃತ ಮಹಾ ಪಾಠಶಾಲೆಯ ಅಧ್ಯಕ್ಷರಾಗಿದ್ದರು. 1918ರಲ್ಲಿ ಮೈಸೂರು ಸರ್ಕಾರದ ಪ್ರಾಚೀನ ಪುಸ್ತಕ ಭಂಡಾರದ ಕ್ಯುರೇಟರ್ ಆದರು. 1922ರಲ್ಲಿ ಇವರು ಪ್ರಾಚ್ಯವಸ್ತು ಸಂಶೋಧನ ಇಲಾಖೆಯ ನಿರ್ದೇಶಕರಾಗಿ ನೇಮಕಗೊಂಡರು. ಕೆಲಕಾಲ ಇವರು ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರಾಗಿಯೂ ಕೆಲಸಮಾಡಿ 1928ರಲ್ಲಿ ನಿವೃತ್ತರಾದರು.

ಇವರು ಮೈಸೂರಿನ ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ಕಾರ್ಯಕಾರಿ ಸಮಿತಿ ಮತ್ತು ಸಂಸ್ಕೃತ ವಿದ್ವತ್ಪರೀಕ್ಷಾ ಮಹಾಸಭೆಯ ಸದಸ್ಯರಾಗಿಯೂ ಇದ್ದು ಸಂಸ್ಕೃತ ಭಾಷಾ ವ್ಯಾಸಂಗದ ಪುರೋಭಿವೃದ್ಧಿಗಾಗಿ ದುಡಿದರಲ್ಲದೆ, ಸಂಸ್ಕೃತ ಭಾಷೆಯ ಪ್ರಚಾರಕ್ಕಾಗಿ ಆರ್ಯಧರ್ಮೋಜ್ಜೀವಿನೀ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಜೊತೆಗೆ ಜ್ಯೋತಿಷ ಶಾಸ್ತ್ರದಲ್ಲೂ ಅಪಾರ ಪರಿಶ್ರಮವನ್ನು ಹೊಂದಿದ್ದ ಇವರು ಮಾಡಿರುವ ಸಾಹಿತ್ಯಸೇವೆ ಮೇಲ್ಮಟ್ಟದ್ದು; ಸಾರವತ್ತಾದದ್ದು. 1908ರಲ್ಲಿ ಗವಾಂ ಅಯನ ದಿ ವೇದಿಕ್ ಈರ ಎಂಬ ವೇದಗಳಲ್ಲಿ ಯುಗಗಳ ವಿಚಾರವನ್ನು ಕುರಿತ ಗ್ರಂಥವನ್ನೂ 1912ರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ಭಾಷಾಂತರವನ್ನೂ 1922-28ರ ವರೆಗೆ ಪ್ರಾಚ್ಯವಸ್ತು ಸಂಶೋಧನ ಇಲಾಖೆಯ ವರದಿಗಳಲ್ಲಿ ಅನೇಕ ಅಮೂಲ್ಯವಾದ ಲೇಖನಗಳನ್ನೂ 1926-28ರ ವರೆಗೆ ಮಹಾವೀರನ ಸೂರ್ಯ ಪ್ರಜ್ಞಪ್ತಿಯ ಇಂಗ್ಲಿಷ್ ಅನುವಾದವನ್ನೂ 1936ರಲ್ಲಿ ವೇದಾಂಗ ಜ್ಯೋತಿಷ ಎಂಬ ಗ್ರಂಥದ ಇಂಗ್ಲಿಷ್ ಅನುವಾದ ಮತ್ತು ಸಂಸ್ಕೃತ ವ್ಯಾಖ್ಯೆಯನ್ನೂ 1938ರಲ್ಲಿ ದ್ರಪ್ಸ, ದಿ ವೇದಿಕ್ ಸೈಕಲ್ ಆಫ್ ಎಕ್ಲಿಪ್ಸಸ್ ಎಂಬ ಗ್ರಂಥವನ್ನೂ 1940 ರಲ್ಲಿ ದಿ ಎಕ್ಲಿಪ್ಸ್ ಇನ್ ದಿ ವೇದಾಸ್, ದಿ ಬೈಬಲ್ ಮತ್ತು ಕುರಾನ್ ಎಂಬ ಗ್ರಂಥಗಳನ್ನೂ ಪ್ರಕಟಿಸಿದರು. 1939 ಮತ್ತು 1941ರಲ್ಲಿ ಇವರು ಪ್ರಕಟಿಸಿದ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಎಂಬ ಕನ್ನಡ ಶಾಸನಗಳ ಸಂಕಲನ ಮೈಸೂರು ಸರ್ಕಾರದ ಪ್ರಾಚ್ಯವಸ್ತು ಸಂಶೋಧನ ಇಲಾಖೆಗೆ ಇವರ ಅಮೂಲ್ಯ ಕೊಡುಗೆಯಾಗಿದೆ. ಇವೆಲ್ಲವುಗಳ ಜೊತೆಗೆ ಇವರು ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ವಿಮರ್ಶಾತ್ಮಕವಾದ ಅನೇಕ ಪ್ರೌಢಲೇಖನಗಳನ್ನು ಪ್ರಸಿದ್ಧ ಪಂಡಿತಪತ್ರಿಕೆಗಳಲ್ಲಿ ಪ್ರಕಟಿಸಿದ್ದರು.

ಇವರು ಪ್ರಾಚೀನ ಪುಸ್ತಕಭಂಡಾರದ ಕ್ಯುರೇಟರ್ ಆಗಿದ್ದಾಗ ಇವರ ನೇತೃತ್ವದಲ್ಲಿ ಸಂಶೋಧನೆಯಾಗಿ ಅನೇಕ ಸಂಸ್ಕೃತ ಗ್ರಂಥಗಳು ಪ್ರಕಟವಾದವು.

ಇವರು ಪ್ರಸಿದ್ಧ ಭಾರತೀಯ ವಿದ್ವನ್ಮಣಿಗಳಾದ ಬಿ.ಎನ್.ಸೀಲ್, ರಾಧಾಕುಮುದ ಮುಖರ್ಜಿ, ಮಹಾಮಹೋಪಾಧ್ಯಾಯ ಹರಪ್ರಸಾದಶಾಸ್ತ್ರಿ ಮತ್ತು ಎಫ್.ಡಬ್ಲ್ಯು.ಥಾಮಸ್, ವಿನ್‌ಸೆಂಟ್ ಎ.ಸ್ಮಿತ್, ಎ.ಎ.ಮ್ಯಾಕ್‌ಡೊನೆಲ್, ಆರ್.ಟೆಂಪಲ್, ಎಲ್.ಡಿ.ಬಾರ್ನೆಟ್, ಎ.ಟಿ.ರುಡೋಫ್ ಖಾರ್ನಿಲೇ ಮೊದಲಾದ ಪಾಶ್ಚಾತ್ಯವಿದ್ವಾಂಸರ ಮನ್ನಣೆಗೆ ಪಾತ್ರರಾಗಿದ್ದರು. ಇವರಿಗೆ ಸಂದ ಗೌರವಗಳ ಪಟ್ಟಿಯೂ ದೊಡ್ಡದೆ. ಅಮೆರಿಕದ ವಾಷಿಂಗ್ಟನ್ ವಿಶ್ವವಿದ್ಯಾಲಯಕ್ಕೆ ಸೇರಿದ ಓರಿಯಂಟಲ್ ಯೂನಿವರ್ಸಿಟಿ ಫಿಲಾಸಾಫಿಕಲ್ ಸ್ಕೂಲ್ ಎಂಬ ಸಂಸ್ಥೆ 1919ರಲ್ಲಿ ಇವರಿಗೆ ಪಿಎಚ್.ಡಿ. ಪದವಿಯನ್ನು ಕೊಟ್ಟು ಗೌರವಿಸಿತು. 1921ರಲ್ಲಿ ಬೊಂಬಾಯಿ ಶಾಖೆಯ ರಾಯಲ್ ಏಷ್ಯಾಟಿಕ್ ಸೊಸೈಟಿಯು ಕ್ಯಾಂಪ್‌ಬೆಲ್ ಸ್ಮಾರಕ ಚಿನ್ನದ ಪದಕವನ್ನು ಕೊಟ್ಟು ಗೌರವಿಸಿತು. ಕಲ್ಕತ್ತ ವಿಶ್ವವಿದ್ಯಾಲಯ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು

ನೀಡಿತು (1921). ಮೈಸೂರಿನ ಮಹಾರಾಜರು ಇವರಿಗೆ ಅರ್ಥಶಾಸ್ತ್ರ ವಿಶಾರದ ಎಂಬ ಪ್ರಶಸ್ತಿಯನ್ನೂ (1925) ಆಗಿನ ಬ್ರಿಟಿಷ್ ಸರ್ಕಾರ ಮಹಾಮಹೋಪಾಧ್ಯಾಯ ಎಂಬ ಪ್ರಶಸ್ತಿಯನ್ನೂ (1930) ಕಾಶಿಯಲ್ಲಿರುವ ಭಾರತಧರ್ಮ ಮಹಾಮಂಡಲಿ ವಿದ್ಯಾಲಂಕಾರ ಎಂಬ ಪ್ರಶಸ್ತಿಯನ್ನೂ ಪಂಡಿತರಾಜ ಎಂಬ ಪ್ರಶಸ್ತಿಯನ್ನೂ ಕೊಟ್ಟು ಗೌರವಿಸಿದರು (1935). ಇವರು 1944 ಜನವರಿ 23ರಂದು ನಿಧನಹೊಂದಿದರು. (ಕೆ.ವಿ.ಎಸ್.ಎಮ್.)

**ಶಾಸನಗಳು: ನೋಡಿ–ಭಾರತೀಯ ಶಾಸನಗಳು**

**ಶಿಲಾ ಚಿತ್ರಕಲೆ:** ಅಂತ್ಯ ಹಳೆಶಿಲಾಯುಗದಿಂದ ಇತಿಹಾಸ ಕಾಲದವರೆಗಿನ ಎಲ್ಲ ಸಾಂಸ್ಕೃತಿಕ ಹಂತಗಳ ವಿವಿಧ ಪ್ರಕಾರ ಶೈಲಿಗಳ ಗವಿವರ್ಣ, ಉಳಿಯಂಥ ಕಲ್ಲುಗಟ್ಟಿ ಇಲ್ಲವೆ ಲೋಹದ ಉಪಕರಣದಿಂದ ಹಾಗೂ ಕುಟ್ಟಿ ಮೂಡಿಸಿದ ರೇಖಾ, ಮನುಷ್ಯ, ಪ್ರಾಣಿ ಚಿತ್ರಗಳುಳ್ಳ ನೆಲೆಗಳು ಹೇರಳವಾಗಿ ಪ್ರಪಂಚದ ವಿವಿಧ ಭಾಗಗಳಲ್ಲಿ ಶೋಧನೆ ಹಾಗೂ ಅಧ್ಯಯನ ಆಗಿವೆ, ಆಗುತ್ತಲಿವೆ (**ನೋಡಿ–ಅಲ್ತಮೀರ, ಭೀಂಬೇಟ್ಕ, ಲ್ಯಾಸ್ಕೊ, ವಲ್ಕಮೋನಿಕ**). ಇವಲ್ಲದೆ ಹೆಚ್ಚಾಗಿ ಈಚಿನ ವರ್ಷಗಳಲ್ಲಿ ಆಗಾಗ್ಗೆ ಅಲ್ಲಲ್ಲಿ ಬಯಲು

ಕಠಾರಿಗಳು (ಕಂಚಿನಯುಗ), ವಲ್ಕಮೋನಿಕ

ಬಂಡೆಗಳ ಮೇಲೆ ಸಣ್ಣ ಸಣ್ಣ ಕಲ್ಗುಳಿಗಳು ಕಂಡುಬಂದಿವೆ. ಇವುಗಳನ್ನು ಕಪ್‌ಮಾರ್ಕ್ಸ್ ಎಂದು ಕರೆಯಲಾಗಿದೆ. ಇತ್ತೀಚೆಗೆ ಇವುಗಳನ್ನು ಕ್ಯುಪಲ್ಸ್ ಎಂದು ಕರೆಯಲಾಗುತ್ತಿದೆ. 2005–07ರಲ್ಲಿ ಧರಕಿ ಚಟ್ಟಾನ್‌ನಲ್ಲಿ ಒಂದು ಸಣ್ಣಗವಿಯಲ್ಲಿ ನಡೆಸಿದ ಉತ್ಖನನದಲ್ಲಿ ಇಂಥ ಕಲ್ಗುಳಿಗಳ ಸೃಷ್ಟಿ ಆದಿ ಹಳೆಶಿಲಾಯುಗ ಹಂತದಿಂದಲೇ ಆರಂಭವಾಯಿತೆಂದು ಕಂಡುಬಂದಿರುವುದು ಕುತೂಹಲಕಾರಿ ವಿಷಯ. ಈಚಿನ ವರ್ಷಗಳಲ್ಲಿ ಕರ್ನಾಟಕ, ಗೋವ, ಕೇರಳಗಳಲ್ಲಿ ಇಂಥ ಕಲ್ಗುಳಿಗಳು ಪತ್ತೆಯಾಗಿವೆ. ಒಂದೆಡೆಯಲ್ಲಿ ಸಾಲುಸಾಲಾಗಿ ಕಂಡುಬರುವ ಈ

ಸುರಳಿರೇಖೆ ಸಮೂಹ (ನವಶಿಲಾಯುಗ), ನ್ಯೂಗ್ರೇಂಜ್, ಐರ್ಲೆಂಡ್

ಕಲ್ಗುಳಿಗಳ ಆಳ ಮತ್ತು ವ್ಯಾಸ ಒಂದು ನಿರ್ದಿಷ್ಟ ಪ್ರಮಾಣದಲ್ಲಿರುವುದು ಗಮನಾರ್ಹ. ಇವುಗಳ ಹಿಂದೆ ಅಂದಿನ ಮಾನವರ ಪರಿಕಲ್ಪನೆಗಳೇನೇ ಇರಲಿ ಕಲ್ಲಿನಲ್ಲಿ ಪ್ರಮಾಣಬದ್ಧವಾಗಿ ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಂಡ ರೂಪವನ್ನು ಸೃಷ್ಟಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರೆಂಬುದು ಗಮನಾರ್ಹ. ಕಾರ್ಲೈಲ್ (1867–68) ಮತ್ತು ಕಾಕ್‌ಬರ್ನ್ (1889–90) ಮಿರ್ಜಾಪುರ ಜಿಲ್ಲೆಯ ಕೈಮೂರ್ ಪರ್ವತ ಸಾಲಿನಲ್ಲಿ ಆಕಸ್ಮಿಕವಾಗಿ ಪತ್ತೆಹಚ್ಚಿದ ಶಿಲಾಚಿತ್ರಗಳೆ ಭಾರತದಲ್ಲಿ ಪ್ರಥಮ ಶೋಧನೆಗಳು. ಅನಂತರ ಕೇರಳ, ಕರ್ನಾಟಕ ಮುಂತಾದೆಡೆಗಳಲ್ಲಿ ಅಲ್ಲೊಂದು ಇಲ್ಲೊಂದು ಇಂಥ ಚಿತ್ರಗಳು ಆಕಸ್ಮಿಕವಾಗಿ ಕೆಲವು ಬ್ರಿಟಿಷ್ ಅಧಿಕಾರಿಗಳಿಂದ ಬೆಳಕಿಗೆ ಬಂದವು. ಇಂಥ ಶಿಲಾಚಿತ್ರಗಳ ಪ್ರಾದೇಶಿಕ, ವ್ಯವಸ್ಥಿತ ಶೋಧನೆ ಮತ್ತು ಅಧ್ಯಯನವನ್ನು 1960 ದಶಕದಲ್ಲಿ ಉಜ್ಜಯನಿಯ ವಿಷ್ಣು ವಾಕಣಕರ್ ಆರಂಭಿಸಿದರು. ಇವರು ಭೀಂಬೇಟ್ಕ ಪ್ರದೇಶದಲ್ಲಿ ನೂರಾರು ಗವಿ ವರ್ಣಚಿತ್ರಗಳನ್ನು ಶೋಧಿಸಿ ಅವುಗಳ ಸಮಗ್ರ ಅಧ್ಯಯನ ಮಾಡಿದರು. ಅನಂತರದಲ್ಲಿ ಆಂಧ್ರಪ್ರದೇಶ, ಕರ್ನಾಟಕ, ಕೇರಳ, ಒರಿಸ್ಸ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲೂ ಶಿಲಾಚಿತ್ರಗಳ ವೈಜ್ಞಾನಿಕ ಶೋಧನೆಗಳು ಆರಂಭವಾದವು. ಇದುವರೆಗೆ ಜಮ್ಮು, ತಮಿಳುನಾಡು, ರಾಜಸ್ಥಾನ, ಬಿಹಾರ್ ರಾಜ್ಯಗಳಲ್ಲಿ ಸೂಕ್ಷ್ಮ ಶಿಲಾಯುಗದಿಂದ ವಿಜಯನಗರದ ಅಂತ್ಯದವರೆಗಿನ 5,500ಕ್ಕೂ ಹೆಚ್ಚು ಶಿಲಾಚಿತ್ರಗಳು ಶೋಧವಾಗಿವೆ. ಶಿಲಾಚಿತ್ರಗಳಲ್ಲಿ ಮೂರು ಮುಖ್ಯ ಪ್ರಕಾರಗಳಿವೆ: ವರ್ಣಚಿತ್ರಗಳು (ಪೇಂಟಿಂಗ್ಸ್), ಗೀರು ರೇಖಾಚಿತ್ರಗಳು (ಎನ್‌ಗ್ರೇವಿಂಗ್ಸ್) ಮತ್ತು ಕುಟ್ಟಿ ಮೂಡಿಸಿದ ಚಿತ್ರಗಳು (ಬ್ರುಯಿಸಿಂಗ್ಸ್). ಚಿತ್ರಗಳ ಕಥಾವಸ್ತು, ಶೈಲಿ, ಅಧ್ಯಾರೋಪನ (ಸೂಪರ್‌ಇಂಪೊಸಿಷನ್) ಹಾಗೂ ಸುತ್ತ ಮುತ್ತಲಿರುವ ಸಾಂಸ್ಕೃತಿಕ ಅವಶೇಷಗಳ ಆಧಾರದ ಮೇಲೆ ಶಿಲಾಚಿತ್ರಗಳ ಸಾಪೇಕ್ಷ ಕಾಲಮಾನವನ್ನು ನಿಗದಿ ಮಾಡಲಾಗುತ್ತದೆ. ಈ ಚಿತ್ರಗಳಿಂದ ಸಮಕಾಲೀನ ಜನಜೀವನ ಶೈಲಿ, ಧಾರ್ಮಿಕ ಸ್ಥಿತಿ ಹಾಗೂ ಪರಿಸರದ ಬಗ್ಗೆ ತಿಳಿಯಲು ಸಾಧ್ಯ.

ಶಿಲಾಚಿತ್ರ ಅಧ್ಯಯನಕ್ಕೆ ಮೀಸಲಾದ ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದ ಸಂಸ್ಥೆಗಳಿವೆ. ಭಾರತದಲ್ಲಿ ರಾಕ್ ಆರ್ಟ್ ಸೊಸೈಟಿ ಆಫ್ ಇಂಡಿಯ ಎಂಬ ಒಂದು ಸಂಸ್ಥೆ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದು ಇದು ಪುರಾಕಲ ಎಂಬ ಒಂದು ನಿಯತಕಾಲಿಕೆಯನ್ನು ಪ್ರಕಟಿಸುತ್ತಿದೆ. (ಎ.ಎಸ್.)

**ಆಂಧ್ರಪ್ರದೇಶ:** ಆಂಧ್ರಪ್ರದೇಶದಲ್ಲಿ ಇದುವರೆಗೆ ಪ್ರಾಗೈತಿಹಾಸಿಕ–ಇತಿಹಾಸ ಕಾಲದ ಬಂಡೆ ಚಿತ್ರಗಳಿರುವ 28 ನೆಲೆಗಳು ವರದಿಯಾಗಿವೆ. ಈ ಪ್ರದೇಶದಲ್ಲಿ ಬಂಡೆ ಚಿತ್ರಕಲೆಯ ಪರಂಪರೆಯನ್ನು ಸೂಕ್ಷ್ಮಶಿಲಾಯುಗದವರೆಗೆ ಕೊಂಡೊಯ್ಯಬಹುದು. ಈ ಪರಂಪರೆ ಇಲ್ಲಿ ಮಧ್ಯಕಾಲೀನ ಯುಗದವರೆಗೆ ಮುಂದುವರೆಯಿತು.

ಸುಣ್ಣಕಲ್ಲು, ಮರಳುಗಲ್ಲು ಮತ್ತು ಗ್ರಾನೈಟ್ ಶಿಲೆಯ ಗುಹೆ–ಕಲ್ಲಾಸರೆಗಳಲ್ಲಿ ಅಥವಾ ಬಂಡೆಗಳ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ಸೂಕ್ಷ್ಮಶಿಲಾಯುಗ ಮತ್ತು ಶಿಲಾಯುಗದ ಚಿತ್ರಗಳು ಕೆಂಪುಬಣ್ಣದ ವಿವಿಧ ಛಾಯೆಗಳಲ್ಲಿವೆ. ಬೃಹತ್ ಶಿಲಾಯುಗದ ಚಿತ್ರಗಳಲ್ಲಿ ಕೆಂಪಿನ ಜೊತೆ ಬಿಳಿಯ ಬಣ್ಣವನ್ನೂ ಬಳಸಲಾಗಿದೆ. ಕೇತಾವರಂ ಸಂಕೀರ್ಣದಲ್ಲಿ ಮಾತ್ರ ಕಪ್ಪುಬಣ್ಣದಲ್ಲಿ ಬಿಡಿಸಿದ ಕೆಲವೊಂದು ಚಿತ್ರಗಳಿದ್ದು ಇವು ತಾಮ್ರಶಿಲಾಯುಗ ಅಥವ ಕಬ್ಬಿಣಯುಗದ್ದೆಂದು ಅನುಮಾನಿಸಲಾಗಿದೆ. ಆಂಧ್ರಪ್ರದೇಶದಲ್ಲಿ ಬಹುವರ್ಣದ ಚಿತ್ರಗಳು ಇದುವರೆಗೆ ಕಂಡುಬಂದಿಲ್ಲ. ಸಾಂದರ್ಭಿಕ ಆಧಾರದ ಮೇಲೆ ಚಿತ್ರಗಳನ್ನು ಕಾಲಾನುಕ್ರಮದಲ್ಲಿ ವರ್ಗೀಕರಿಸಲಾಗಿದೆ. ಸು.200 ಚಿತ್ರಗಳನ್ನು ಸೂಕ್ಷ್ಮಶಿಲಾಯುಗದ್ದೆಂದು ಗುರುತಿಸಲಾಗಿದೆ. ಅಡೋನಿ, ಪುಲಿಚೆರ್ಲ, ಬೂದಗವಿ, ಚಿಂತಕುಂಟ, ದಾಪಲ್ಲೆ, ದೂಪದುಗಟ್ಟು, ಕೋಕಪೇಟ್, ರಾಮುಗುಂಡಂ, ಸಂಗನೊನಿಪಲ್ಲಿ ಮತ್ತು ಕೇತಾವರಂಗಳಲ್ಲಿ ಈ ಚಿತ್ರಗಳಿವೆ. ಇವುಗಳ ಪ್ರಮುಖ ವಿಷಯವೆಂದರೆ ಕಾಡುಪ್ರಾಣಿಗಳು. ಇದರಲ್ಲಿಯೂ ಒಂಟಿಯಾದ ಅಥವಾ ಗುಂಪಿನಲ್ಲಿರುವ ಜಿಂಕೆಯ ಚಿತ್ರಗಳೇ ಬಹಳವಾಗಿವೆ. ಶೈಲಿಯನ್ನು ತುಲನಾತ್ಮಕವಾಗಿ ಗಮನಿಸಿದರೆ ಸಂಗನೊನಿಪಲ್ಲಿಯಲ್ಲಿರುವ ಜಿಂಕೆಯ ಚಿತ್ರಗಳು ಎಲ್ಲದಕ್ಕಿಂತ ಪ್ರಾಚೀನವಾದುವು. ದಪ್ಪ ಕುಂಚದಲ್ಲಿ ಬಿಡಿಸಿದ ದೊಡ್ಡ ಗಾತ್ರದ ರೇಖಾಚಿತ್ರಗಳಿವು. ಈ ಕಾಲದ ಇತರ ಚಿತ್ರಗಳು ಆಮೆ, ಮೊಲ, ತೋಳ, ಕತ್ತೆಕಿರುಬ, ನಾಯಿ ಮೊದಲಾದ ಪ್ರಾಣಿಗಳದ್ದೂ ಮುಖವಾಡ ಧರಿಸಿರುವಂತೆ ತೋರುವ ಮನುಷ್ಯರದ್ದೂ ಇತರ ಮನುಷ್ಯಾಕೃತಿಗಳದ್ದೂ ಆಗಿವೆ. ಪುಲಿಚೆರ್ಲದಲ್ಲಿ ಜಿಂಕೆಯನ್ನೂ ಮುಖವಾಡ ಧರಿಸಿದ ವ್ಯಕ್ತಿಯನ್ನೂ ಮುಖಾಮುಖಿ ಯಾಗಿ ಚಿತ್ರಿಸಲಾಗಿದೆ. ಚಿಂತಕುಂಟದ ಒಂದು ಚಿತ್ರದಲ್ಲಿ ಮನುಷ್ಯನ ತಲೆದಿರಿಸು (ಪೇಟ) ಹೊರಹೊಮ್ಮುವ ಕಿರಣಗಳಂತೆ ಕಾಣುತ್ತದೆ. ಇವಲ್ಲದೆ ರೇಖಾಚಿತ್ರ ವಿನ್ಯಾಸಗಳೂ ಹಸ್ತಮುದ್ರೆಗಳೂ ಗಣನೀಯ ಸಂಖ್ಯೆಯಲ್ಲಿವೆ. ಈ ಕಾಲದ ಬೇರೆಡೆಯ ಚಿತ್ರಕಲೆಯಲ್ಲಿ ಬೇಟೆಯ–ಬಿಲ್ಲುಗಾರರ ದೃಶ್ಯಗಳು ಸರ್ವೇಸಾಮಾನ್ಯ. ಆದರೆ ಆಂಧ್ರಪ್ರದೇಶದಲ್ಲಿ ಇಂತಹ ಒಂದೇ ಒಂದು ದೃಶ್ಯವಾಗಲೀ ಬಿಲ್ಲು–ಬಾಣ ಹಿಡಿದ ಮನುಷ್ಯರ ಚಿತ್ರಗಳಾಗಲೀ ಇದುವರೆಗೂ ಕಣ್ಣಿಗೆ ಬೀಳದಿರುವುದು ಕುತೂಹಲಕಾರಿಯಾಗಿದೆ.

ನವಶಿಲಾಯುಗದ ಚಿತ್ರಗಳು ಬೂದಗವಿ, ವೇಲ್ಪುಮಡುಗು, ಚಿಂತಕುಂಟ, ನಾಯ್ದುಪಲ್ಲಿ, ದೂಪದುಗಟ್ಟು, ಬೂದಿಗಪಲ್ಲಿ, ಪಾಂಡವುಲಗಟ್ಟು ಮತ್ತು ಅಡೋನಿಗಳಲ್ಲಿವೆ. ಹಿಣಿಲುಳ್ಳ ಗೂಳಿಯ ಚಿತ್ರಗಳದು ವಿಶಿಷ್ಟ ಛಾಪು. ಬಿಡಿಬಿಡಿಯಾಗಿ ಅಥವಾ ಗುಂಪಿನಲ್ಲಿ ಅಥವಾ ಮನುಷ್ಯರೊಂದಿಗೆ ಇವನ್ನು ಚಿತ್ರಿಸಿದ್ದಾರೆ. ಶೈಲಿಯಲ್ಲಿ ಹೆಚ್ಚೇನೂ ವ್ಯತ್ಯಾಸ ಕಾಣಿಸುವುದಿಲ್ಲ. ಇವು ಬಲಿಷ್ಠ ಗೂಳಿಗಳು; ಇವುಗಳ ಹಿಣಿಲು ಪ್ರಧಾನವಾಗಿದ್ದು ನೀಳ ಕೊಂಬುಗಳು ತಿರುಚಿಕೊಂಡಿವೆ. ಶರೀರವನ್ನು ಕೆಂಪುಬಣ್ಣದಿಂದ ತೆಳುವಾಗಿ ತುಂಬಲಾಗಿದೆ. ಇದಕ್ಕೆ ಅಪವಾದವೆಂದರೆ ಬೂದಗವಿಯ ಗೂಳಿ ಚಿತ್ರಗಳು. ಇವು ಸಪೂರ ದೇಹದ, ಚಿಕ್ಕ ಹಿಣಿಲಿನ, ನೇರ ಕೊಂಬಿನ ಗೂಳಿಗಳು. ಇವುಗಳ ದೇಹದ ಭಾಗವನ್ನು ನೇರ ಮತ್ತು ಅಲೆಯಂತಹ ರೇಖೆಗಳಿಂದಲೂ ಜಾಲಂಧ್ರದ ವಿನ್ಯಾಸಗಳಿಂದಲೂ ತುಂಬಲಾಗಿದೆ. ಕೆಲವೊಂದು ಚಿತ್ರಗಳಲ್ಲಿ

ಗೂಳಿಗೆ 5 ಅಥವಾ 6 ಕಾಲುಗಳಿರುವುದು ವಿಶೇಷವಾಗಿದೆ. ಇಂದಿಗೂ ಈ ಪ್ರದೇಶದಲ್ಲಿ ಇಂತಹ ವಿಕೃತ ರೂಪದ ಗೂಳಿಗಳು ಅಪರೂಪಕ್ಕೆ ಕಾಣಸಿಗುತ್ತವೆ ಎಂಬುದನ್ನು ಗಮನಿಸ ಬಹುದು. ಚಿಂತಕುಂಟದಲ್ಲಿ ಗೂಳಿಗಳ ಜನನಾಂಗವನ್ನು ಎದ್ದು ಕಾಣುವಂತೆ ತೋರಿಸಲಾಗಿದೆ. ಇಲ್ಲಿ ಬಿಲ್ಲು-ಬಾಣ ಹಿಡಿದ ಮನುಷ್ಯರನ್ನು ಗೂಳಿಗಳ ಜೊತೆಗೆ ತೋರಿಸಲಾಗಿದೆ. ಚಿಂತಕುಂಟ ಮತ್ತು ದೂಪದುಗಟ್ಟುಗಳಲ್ಲಿರುವ ಗೂಳಿಯ ಚಿತ್ರಗಳಿಗೆ ಕರ್ನಾಟಕದಲ್ಲಾಗಲೀ ಮಧ್ಯ ಭಾರತದಲ್ಲಾಗಲೀ ಹೋಲಿಕೆ ಕಂಡುಬಂದಿಲ್ಲ.

ಇದೇ ಕಾಲಕ್ಕೆ ಸೇರುವ ಗೀರುಚಿತ್ರ ಅಥವಾ ಕೆತ್ತನೆಗಳು ಬೂದಗವಿ, ತೇನಗಲ್, ನಾಯ್ಡುಪಲ್ಲಿ ಮತ್ತು ವೇಲ್ಪುಮಡುಗುಗಳಲ್ಲಿವೆ. ಇವು ಹೆಚ್ಚಾಗಿ ಗೂಳಿಯ ರೇಖಾ ಕೆತ್ತನೆಗಳು. ತೇನಗಲ್ ಮತ್ತು ವೇಲ್ಪುಮಡುಗುಗಳಲ್ಲಿರುವ ಗೂಳಿಯ ಗೀರುಚಿತ್ರಗಳ ಶೈಲಿ ಕರ್ನಾಟಕದ ಪಿಕ್ಲಿಹಾಳು, ತೆಕ್ಕಲಕೋಟೆ ಮತ್ತು ಕುಪ್ಪಗಲ್ಲಿನಲ್ಲಿರುವ ಗೂಳಿ ಚಿತ್ರಗಳಿಗಿಂತ ಭಿನ್ನವಾಗಿದೆ.

ಸೂಕ್ಷ್ಮಶಿಲಾಯುಗದ ಗವಿವರ್ಣಚಿತ್ರ, ಕೇತವರಂ

ಈ ಎಲ್ಲ ನೆಲೆಗಳಲ್ಲಿ ಗೂಳಿಗಳನ್ನು ಒಂದನ್ನೊಂದು ಹಾಯುವಂತೆ ಎದುರುಬದುರಾಗಿ ಕೆತ್ತಲಾಗಿದೆ. ಆದರೆ ಕರ್ನಾಟಕದಲ್ಲಿರುವಂತೆ ಆಂಧ್ರದ ಗೂಳಿಗಳ ಕೊಂಬಿನ ಮೇಲ್ತುದಿಯಲ್ಲಿ ಮೂರು ಕವಲುಗಳಿಲ್ಲ.

ಚಿಂತಕುಂಟದಲ್ಲಿರುವ ಮತ್ತೊಂದು ಅಪರೂಪದ ಪ್ರಕಾರವೆಂದರೆ ಸಣ್ಣಸಣ್ಣ ಗುಳಿಗಳ ಸಮೂಹಗಳು. ಸೂಕ್ಷ್ಮ ಶಿಲಾಯುಗದ ಚಿತ್ರಗಳಿರುವ ಮರಳುಗಲ್ಲಿನ ಕಲ್ಲಾಸರೆಗಳ ಗೋಡೆಗಳ ಮೇಲೆ ಇಂತಹ ಗುಳಿಗಳನ್ನು ಕೊರೆಯಲಾಗಿದೆ. ಗುಳಿಗಳ ವ್ಯಾಸ 2-4 ಸೆಂಮೀ ಮತ್ತು ಆಳ 1-2 ಸೆಂಮೀ. ದಕ್ಷಿಣ ಭಾರತದ ಇತರ ನೆಲೆಗಳಲ್ಲಿ ಇಂತಹ ಗುಳಿಗಳು ಬಿಡಿ ಬಂಡೆಗಳ ಮೇಲೆ ಅಥವಾ ಕಲ್ಲಾಸರೆಗಳ ತಳಬಂಡೆಯ ಮೇಲೆ ಇವೆಯೇ ಹೊರತು ಗುಹೆ-ಕಲ್ಲಾಸರೆಗಳ ಗೋಡೆಗಳ ಮೇಲಿಲ್ಲ. ಅಲ್ಲದೆ, ಈ ಎಲ್ಲ ಕಡೆಗಳಲ್ಲಿ ಇವು ನವಶಿಲಾಯುಗದ ಅವಶೇಷಗಳ ಸಾಹಚರ್ಯದಲ್ಲಿ ಕಂಡುಬಂದಿವೆ.

ಬೃಹತ್ ಶಿಲಾಯುಗದ್ದೆಂದು ಹೇಳಬಹುದಾದ ಚಿತ್ರಕಲೆ ನಾಯ್ಡುಪಲ್ಲಿ, ಮೂಡುಮಾಲ, ರೇಗೊಂಡ, ಬೂದಿಗಪಲ್ಲಿ, ರಾಮಚಂದ್ರಪುರಂ, ಕೋಕಪೇಟ್, ಬೊಳ್ಳಾರುಂ, ದುರ್ಗಂ, ಎಡ್ತನೂರು, ವಾರ್ಗಲ್ ಮತ್ತು ತೇನಗಲ್‍ನಲ್ಲಿವೆ. ಗೀರು ಕೆತ್ತನೆಗಳೇ ಅಧಿಕವಾಗಿವೆ. ಹೆಚ್ಚಿನವು ಸಾಂಕೇತಿಕ ಚಿಹ್ನೆಗಳು. ಈ ಕಾಲಕ್ಕೆ ವಿಶಿಷ್ಟವಾದ ಚಿಹ್ನೆಯೆಂದರೆ ತ್ರಿಶೂಲ ಸಹಿತವಾದ ವೃತ್ತ. ಮೂಡುಮಾಲ, ಚಾಗತ್ತೂರ್, ನಾಯ್ಡುಪಲ್ಲಿ ಮತ್ತು ಬೂದಿಗಪಲ್ಲಿಯಲ್ಲಿ ಈ ಚಿಹ್ನೆ ಬೃಹತ್ ಶಿಲಾಯುಗದ ಗೋರಿಗಳ ಮೇಲೆ ಅಥವಾ ಗೋರಿಗಳ ಸಮೀಪದಲ್ಲಿರುವ ಕಲ್ಲಾಸರೆಗಳಲ್ಲಿ ಕಂಡುಬಂದಿವೆ. ನಾಯ್ಡುಪಲ್ಲಿಯಲ್ಲಿ 150ಕ್ಕೂ ಮಿಗಿಲಾದ ಸಂಖ್ಯೆಯಲ್ಲಿ, ನಾನಾ ಗಾತ್ರ-ಆಕಾರಗಳಲ್ಲಿ ಈ ಚಿಹ್ನೆಯನ್ನು ಕೊರೆದಿರುವರು. ಇದೇ ಕಲ್ಲಾಸರೆಯ ಒಂದು ಭಾಗದಲ್ಲಿ ಈ ಚಿಹ್ನೆಯ ಸುತ್ತಲೂ ಪುರುಷರ ಸಮೂಹ ನರ್ತಿಸುತ್ತಿರುವಂತೆ ಚಿತ್ರಿಸಲಾಗಿದೆ. ಮತ್ತೊಂದು ಕಡೆಯಲ್ಲಿ ಮನುಷ್ಯಾಕೃತಿಯನ್ನು ಹೋಲುವ ರೀತಿಯಲ್ಲಿ ಈ ಚಿಹ್ನೆಯನ್ನು ತೋರಿಸಿರುವರು. ಆದ್ದರಿಂದ ಇದಕ್ಕೆ ಯಾವುದೋ ಧಾರ್ಮಿಕ ಅರ್ಥವಿದ್ದಂತೆ ಕಾಣುತ್ತದೆ.

ಬಣ್ಣದಲ್ಲಿ ಬರೆದ ಅಕ್ಷರ ಅಥವಾ ಶಾಸನಗಳು, ವ್ಯಕ್ತಿ ಚಿತ್ರಗಳು, ಆನೆ-ಕುದುರೆಗಳ ಮೇಲೆ ಕುಳಿತ ಯೋಧರು, ಧಾರ್ಮಿಕ ಚಿಹ್ನೆಗಳು ಮೊದಲಾದವು ಚಾರಿತ್ರಿಕ ಕಾಲಕ್ಕೆ ಸೇರುತ್ತವೆ. ಇಂತಹ ಚಿತ್ರಗಳು ಕೇತಾವರಂ, ನಾಯ್ಡುಪಲ್ಲಿ, ಚಿಂತಕುಂಟ, ದಾಪಲ್ಲೆ, ಬೊಳ್ಳಾರುಂ, ದುರ್ಗಂ, ಎಡ್ತನೂರು, ರೇಗೊಂಡ ಮತ್ತು ರಾಮಚಂದ್ರಪುರಂಗಳಲ್ಲಿವೆ. ಕೇತಾವರಂನಲ್ಲಿ ಆಲಂಕಾರಿಕ ಬ್ರಾಹ್ಮಿ ಲಿಪಿಯಲ್ಲಿ ಕುಶ ಪಂಜರ ಗುಹ ಎಂದು ಬಣ್ಣದಲ್ಲಿ ಬರೆದಿದ್ದಾರೆ. ಇದರ ಜೊತೆಗೆ ಸ್ವಸ್ತಿಕ ಮೊದಲಾದ ಧಾರ್ಮಿಕ ಚಿಹ್ನೆಗಳಿವೆ. ಈ ಶಾಸನ ಆದಿ ಚಾರಿತ್ರಿಕ ಕಾಲದ್ದಾಗಿರಬಹುದು. ದಾಪಲ್ಲೆಯಲ್ಲಿ ಜೈನ ತೀರ್ಥಂಕರರ ಒಂದು ಗೀರು ಕೆತ್ತನೆ, ಕಮಲದ ಹೂವನ್ನು ಹಿಡಿದ ನಗ್ನ ಸ್ತ್ರೀಯ ಚಿತ್ರ ಮತ್ತು ಕನ್ನಡ ಅಕ್ಷರಗಳಲ್ಲಿ ಬಣ್ಣದಲ್ಲಿ ಬರೆದ ಶಾಸನಗಳಿವೆ. ಶಾಸನದ ಲಿಪಿ 10-12ನೆಯ ಶತಮಾನದ್ದು. ಚಿಂತಕುಂಟದಲ್ಲಿರುವ ಆನೆಯ ಚಿತ್ರಗಳು ಮತ್ತು ಧಾರ್ಮಿಕ ಚಿಹ್ನೆಗಳು ಮಧ್ಯಕಾಲೀನ ಯುಗದ್ದಾಗಿರಬಹುದು. (ಸಿ.ಎಸ್.ಪಿ.)

**ಕರ್ನಾಟಕ:** ಪ್ರಾಕ್ತನಶಾಸ್ತ್ರಜ್ಞರು ಈಗ ಸು.100 ವರ್ಷಗಳಿಂದಲೂ ಉತ್ತರ ಕರ್ನಾಟಕದಲ್ಲಿ ಕೆಲವು ಸ್ವಾರಸ್ಯಕರವಾದ ಪ್ರಾಗೈತಿಹಾಸಿಕ ವರ್ಣಚಿತ್ರಗಳನ್ನು ಶೋಧಿಸಿದ್ದಾರೆ. ಆದರೆ ಇವುಗಳ ಕೂಲಂಕಷ ಅಭ್ಯಾಸ ಇನ್ನೂ ಆಗಿಲ್ಲ.

ಕರ್ನಾಟಕದಲ್ಲಿ 1935ರಲ್ಲಿ ಲಿಯೋನಾರ್ಡ್‍ಮನ್ ಹಿರೆಬೆನಕಲ್ಲು ಗುಡ್ಡಗಳಲ್ಲಿ 3 ಸ್ವಾರಸ್ಯಕರ ಗವಿವರ್ಣಚಿತ್ರಗಳನ್ನು ಸುಮಾರು ಅದೇ ಸಮಯದಲ್ಲಿ ಭಿಲ್ಲಮರಾಯನ ಗುಡ್ಡಗಳಲ್ಲಿ ಕುಟ್ಟಿದ ಮತ್ತು ಗೀರು ಚಿತ್ರಗಳನ್ನು ಕಂಡುಹಿಡಿದ. ಇದಕ್ಕೂ ಮುಂಚೆ ಸಂಗನಕಲ್ಲಿನಲ್ಲಿಯ ಗೀರು ಮತ್ತು ಕುಟ್ಟು ಚಿತ್ರಗಳ ಛಾಯಾಚಿತ್ರಗಳನ್ನು ಹ್ಯೂಬರ್ಟ್ ನಾಕ್ಸ್ ತೆಗೆದಿದ್ದ.

ಲಿಯೋನಾರ್ಡ್‍ಮನ್ ಅವರ ಶೋಧನೆಯ ಅನಂತರ 1940ರ ದಶಕದಲ್ಲಿ ಮಸ್ಕಿ, ಕಲ್ಲೂರು (ರಾಯಚೂರು ತಾಲ್ಲೂಕು), ಬಲಚಕ್ರ (ಯಾದಗಿರ್ ತಾಲ್ಲೂಕು, ಗುಲ್ಬರ್ಗ ಜಿಲ್ಲೆ) ಮತ್ತು ಆತನೂರು ಎಂಬಲ್ಲಿ ಹಿಂದಿನ ಹೈದರಾಬಾದ್ ಸಂಸ್ಥಾನದ ಪುರಾತತ್ತ್ವ ಸರ್ವೇಕ್ಷಣ ಮತ್ತು ಭೂವಿಜ್ಞಾನ ವಿಭಾಗಗಳು ಕ್ರಮವಾಗಿ ಕುಟ್ಟಿದ ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಿ ತಮ್ಮ ಶಾಖೆಗಳ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿವೆ. ಆಗಿನ ಮುಂಬೈ ಸರ್ಕಾರದ ಕನ್ನಡ ಸಂಶೋಧನ ಸಂಸ್ಥೆ, ಕುಳ್ಳೊಳ್ಳಿಯಲ್ಲಿಯ (ಜಮಖಂಡಿ), ಅಲ್ಚಿನ್ ದಂಪತಿಗಳು ಪಿಕ್ಲಿಹಾಳದಲ್ಲಿ (ಲಿಂಗಸುಗೂರು)ತಾವು ಶೋಧಿಸಿದ ಪ್ರಾಚೀನ ನೆಲೆಯ ಉತ್ಖನನ ಕಾಲದಲ್ಲಿ ಇವೆರಡೂ ತರಹದ ಚಿತ್ರಗಳನ್ನು ಕಂಡುಹಿಡಿದು ಅಧ್ಯಯನ ಮಾಡಿದ್ದಾರೆ.

ಬಳ್ಳಾರಿ ಜಿಲ್ಲೆ ತೆಕ್ಕಲಕೋಟೆ (ಶಿರುಗುಪ್ಪ), ಸಂಗನಕಲ್ಲು, ಬೆಳಗಲ್ಲು ಮತ್ತು ಕುರುಗೋಡು (ಬಳ್ಳಾರಿ), ಅಪ್ಪಯ್ಯನಹಳ್ಳಿಗಳಲ್ಲಿ ಇಂತಹ ಚಿತ್ರಗಳನ್ನು ಎಂ.ಎಸ್. ನಾಗರಾಜರಾವ್, ರು.ಮ.ಷಡಕ್ಷರಯ್ಯ ಮೊದಲಾದವರು ಶೋಧಿಸಿದ್ದಾರೆ. ರಾಮದುರ್ಗ, ಬಾದಾಮಿ, ಹೊಸ ಮಹಾಕೂಟ, ಐಹೊಳೆ, ರಾಯಚೂರು ಜಿಲ್ಲೆಯ ಕೊಪ್ಪಳ, ಬಿಳಿಬಾವಿ, ಮಲ್ಲಾಪುರ, ಆನೆಗೊಂದಿ, ತಿಮ್ಮಲಾಪುರ, ನಾರಾಯಣಪುರ, ಬಂಡಿಹರ್ಲಾಪುರ (ಗಂಗಾವತಿ), ಮಾನ್ವಿ, ಬೈಲ್‍ಮರ್ಚೆಡ್ (ಮಾನ್ವಿ) ಮುಂತಾದೆಡೆಗಳಲ್ಲಿ ವರ್ಣಚಿತ್ರಗಳನ್ನು ಹಾಗೂ ತಾವರೆಗೆರೆ (ರಾಯಚೂರು), ಕುರುಗೋಡು, ಹಳಕುಂದಿ, ಹಂಪಿ (ಬಳ್ಳಾರಿ ಜಿಲ್ಲೆ), ಬ್ರಹ್ಮಗಿರಿ, ಜಟಿಂಗ ರಾಮೇಶ್ವರ, ಚಿತ್ರದುರ್ಗ, ಚಂದ್ರವಳ್ಳಿ (ಚಿತ್ರದುರ್ಗ ಜಿಲ್ಲೆ), ಬೋಳೆ (ಅಂಕೋಲ ಹತ್ತಿರ, ಉತ್ತರ ಕನ್ನಡ ಜಿಲ್ಲೆ)ಗಳಲ್ಲಿ ಹಾಗೂ ಹೊಳಲೂರು (ಶಿವಮೊಗ್ಗ ತಾಲ್ಲೂಕು)ನಲ್ಲಿ ವರ್ಣ, ಕುಟ್ಟಿದ ಹಾಗೂ ಗೀರುಚಿತ್ರಗಳನ್ನೂ ಶೋಧಿಸಲಾಯಿತು. ಎಚ್. ಶ್ರೀಶೈಲ ಆರಾಧ್ಯರು ಚಿತ್ರದುರ್ಗ-ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯಲ್ಲಿ ಮತ್ತೆ ಸು.25-30 ವರ್ಣಚಿತ್ರಗಳನ್ನು ಶೋಧಿಸಿದ್ದಾರೆ. ಲಕ್ಷ್ಮಣ್ ತೆಲಗಾವಿಯವರು ಈ ಪ್ರದೇಶದಲ್ಲಿ ಸಂಶೋಧನೆಯನ್ನು ಮುಂದುವರಿಸಿದ್ದು, ಹಲವಾರು ಮಹತ್ತ್ವದ ಚಿತ್ರಗಳನ್ನು ಶೋಧಿಸಿ ಅವುಗಳ ವಿಶೇಷ ಅಧ್ಯಯನವನ್ನು ಮಾಡುತ್ತಿದ್ದಾರೆ. ಕುಂದಾಪುರ ಹತ್ತಿರದ ಗಾವಳಿ (ಉಡುಪಿ ಜಿಲ್ಲೆ)ಯಲ್ಲಿ ಬಯಲುಬಂಡೆ ಹಾಗೂ ಗೀರುಚಿತ್ರಗಳನ್ನು ವಸಂತಶೆಟ್ಟಿಯವರು ಶೋಧಿಸಿದ್ದಾರೆ. ರಘುನಾಥಭಟ್ಟರು ಸೋಂದಾದಲ್ಲಿ ಶ್ರೀಸ್ವರ್ಣವಲ್ಲಿ ಮಠದ ಹತ್ತಿರ ಒಂದು ಅಪೂರ್ವ ಗೀರುಚಿತ್ರ ಸಂಕಲನವನ್ನು ಶೋಧಿಸಿದ್ದರು.

ಸಿದ್ಧನಕೊಳ್ಳದ ಚರ್ಟ್‍ಕಲ್ಲಿನ ಮೇಲೆ ಕೊರೆದ ಸೂಕ್ಷ್ಮ ಶಿಲಾಯುಗದ ರೇಖಾಕೃತಿ ಎಸ್.ವಿ.ಪಾಡಿಗಾರರ ಒಂದು ಮಹತ್ತ್ವದ ಶೋಧನೆ. ಬ್ರಹ್ಮಗಿರಿ, ಪಿಕ್ಲಿಹಾಳ, ಸಂಗನಕಲ್ಲು ಉತ್ಖನನಗಳಲ್ಲಿ ತಾಮ್ರ-ಶಿಲಾಯುಗ ಮತ್ತು ಬೃಹತ್ ಶಿಲಾ ಸಂಸ್ಕೃತಿಯ ಕೆಲವು ಸುಡಾವೆ ಮಣ್ಣಿನ ಗೊಂಬೆಗಳು, ವರ್ಣ ಇಲ್ಲವೆ ಕೊರೆದ ರೇಖಾಚಿತ್ರಗಳಿಂದ ಸುಂದರಗೊಳಿಸಿದ ಹಾಗೂ ಬೆರಳೊತ್ತಿನ ಮಾಲಿಕೆಗಳಿಂದ ಅಲಂಕೃತವಾದ ಮಣ್ಪಾತ್ರೆ ಚೂರುಗಳು, ಮುಚ್ಚಳದ ಹಿಡಿಕೆಗಳು, ತೇರದಾಳ, ಕುಡಚಿ, ಸತ್ತಿ, ಮಂಗಸೂಳಿ ಮೊದಲಾದ ನೆಲೆಗಳಲ್ಲಿ ವರ್ಣ ರೇಖಾಚಿತ್ರಗಳುಳ್ಳ ಮಣ್ಣಿನ ಪಾತ್ರೆಗಳು ಆಯಾಯ ಕಾಲದ ಜನರ ಸೌಂದರ್ಯ ಪ್ರಜ್ಞೆ, ಕಲ್ಪನಾ ಶಕ್ತಿ ಮತ್ತು ಕರಕುಶಲತೆಗೆ ಉತ್ತಮ ಸಾಕ್ಷಿಗಳಾಗಿವೆ.

ನೆಲೆಗಳು: ಈ ಚಿತ್ರಗಳಲ್ಲಿ ಎರಡು ವಿಧ: 1. ಗವಿಯೊಳಗೆ ಅಥವಾ ಕಲ್ಲಾಸರೆಯ ಒಳಬದಿಯಲ್ಲಿ ಕೆಮ್ಮಣ್ಣಿನ ಬಣ್ಣದಲ್ಲಿ ಬಿಡಿಸಿದ ಚಿತ್ರಗಳು ಮತ್ತು 2. ಬಯಲು ಬಂಡೆಯ ಮೇಲೆ ಕುಟ್ಟಿ ಅಥವಾ ಚೂಪಾದ ಸಾಧನದಿಂದ ಸ್ಪಷ್ಟ ಗೆರೆಗಳನ್ನು ಮೂಡಿಸಿ ಬಿಡಿಸಿದ ಚಿತ್ರಗಳು. ಉತ್ತರ ಕರ್ನಾಟಕದಲ್ಲಿ ಇದುವರೆಗೆ 40 ಸ್ಥಳಗಳಲ್ಲಿ ಸು.150 ವರ್ಣಚಿತ್ರ ಗವಿಗಳು ಮತ್ತು 20 ಸ್ಥಳಗಳಲ್ಲಿ 25 ಬಯಲುಬಂಡೆ ಚಿತ್ರನೆಲೆಗಳು ಶೋಧವಾಗಿವೆ. ಗವಿವರ್ಣ ಚಿತ್ರಗಳ ನೆಲೆಗಳಲ್ಲಿ ರಾಮದುರ್ಗ( ಬೆಳಗಾಂವಿ ಜಿಲ್ಲೆ) ಬಾದಾಮಿ, ಐಹೊಳೆ, ಕೊಪ್ಪಳ, ಪಿಕ್ಲಿಹಾಳ, ಹಿರೇಬೆನಕಲ್, ಆನೆಗೊಂದಿ, ಹಂಪಿ, ರಾಯಚೂರು, ಮಾನ್ವಿ, ಬ್ರಹ್ಮಗಿರಿ, ಚಿತ್ರದುರ್ಗ ಪ್ರದೇಶಗಳಲ್ಲಿ ಇವೆ. ಬಯಲುದಂಡೆ ಚಿತ್ರಗಳು ಭಿಲ್ಲಮರಾಯನಗುಡ್ಡ, ಪಿಕ್ಲಿಹಾಳ, ತಾವರೆಗೆರೆ, ಕುರುಗೋಡು, ಸಂಗನಕಲ್ಲು, ಬೆಳಗಲ್, ಹಳಕುಂದಿ, ಅಪ್ಪಯ್ಯನಹಳ್ಳಿ, ಬ್ರಹ್ಮಗಿರಿ, ಚಿತ್ರದುರ್ಗ ಮತ್ತು ಮಲೆನಾಡಿನ ಹೊಳಲೂರು, ಸೋಂದಾ, ಪಶ್ಚಿಮ ಕಡಲುತೀರದ ಅಂಕೋಲ, ಕುಂದಾಪುರ ಪ್ರದೇಶಗಳಲ್ಲಿವೆ.

ರಾಮದುರ್ಗ, ಬಾದಾಮಿ, ಐಹೊಳೆ ಪ್ರದೇಶವೆಲ್ಲ ಬೆಟ್ಟ ಸಾಲುಗಳಿಂದ ತುಂಬಿದೆ. ಇಲ್ಲಿಯ ಕಲಾದಗಿ ಶ್ರೇಣಿಯ ಬೆಟ್ಟಗಳು ಕಲ್ಲಿನ ಆಕರ್ಷಕ ನಸುಗೆಂಪು ಬಣ್ಣದ ಕಲ್ಲುಗುಡ್ಡಗಳ ಸಾಲುಗಳಲ್ಲಿ ಕಲ್ಲಾಸರೆಗಳಿವೆ. ರಾಯಚೂರು, ಬಳ್ಳಾರಿ, ಚಿತ್ರದುರ್ಗ ಪ್ರದೇಶವೂ ಗ್ರಾನೈಟ್ ಕಲ್ಲುಗುಡ್ಡಗಳಿಂದ, ಬೆಟ್ಟದ ಸಾಲುಗಳಿಂದ ತುಂಬಿಹೋಗಿವೆ. ಇವುಗಳಲ್ಲಿ ಅಸಂಖ್ಯಾತ

ಕಲ್ಲಾಸರೆಗಳು, ಗುಹೆಗಳಿವೆ. ಇಂತಹ ಕಲ್ಲಾಸರೆ ಗವಿಗಳಲ್ಲಿ ವಿರಳವಾಗಿ ವರ್ಣಚಿತ್ರಗಳಿವೆ. ಉತ್ತರಕನ್ನಡ ಜಿಲ್ಲೆಯ ಸಮುದ್ರತೀರ ಪ್ರದೇಶದವು ಜಂಬಿಟ್ಟಿಗೆ ಕಲ್ಲಿನ ಸ್ವಲ್ಪ ಸಮತಟ್ಟಾದ ಒಳ ಪ್ರದೇಶದಲ್ಲಿ ಇದೇ ಕಲ್ಲಿನ ಗುಡ್ಡಗಳ ಸಾಲುಗಳಿವೆ. ಈ ಎಲ್ಲ ಪ್ರದೇಶಗಳಲ್ಲೂ ದೊಡ್ಡ ನದಿ, ಉಪನದಿಗಳಿಂದ ನೀರಿನ ಸಮೃದ್ಧಿ ಫಲವತ್ತಾದ ಮಣ್ಣು, ದಟ್ಟವಾದ ಕಾಡು ಹಾಗೂ ವಿರಳ ಸಸ್ಯವರ್ಗ, ಉತ್ತಮ ವರ್ಗದ ಚೆನ್ನ ಕಬ್ಬಿಣದ ಅದುರಿನ ವಿಪುಲತೆ ಇದ್ದು, ಮನುಷ್ಯನ ವಸತಿಗೆ, ಜೀವನೋಪಾಯಕ್ಕೆ ಅನುಕೂಲಕರವಾಗಿತ್ತು. ಆದ್ದರಿಂದ ಲಕ್ಷಾಂತರ ವರ್ಷಗಳ ಹಿಂದಿನಿಂದಲೂ ಈ ಭಾಗಗಳಲ್ಲಿ ವಾಸ್ತವ್ಯದ ನಿತ್ಯ ಬಳಕೆಯ ವಸ್ತುಗಳ ಅವಶೇಷಗಳು ನೂರಾರು ಸ್ಥಳಗಳಲ್ಲಿ ಸಿಕ್ಕಿವೆ. ಇವು ವಿವಿಧ ಹಂತಗಳಾದ ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ, ಶಿಲಾ-ತಾಮ್ರಯುಗ (ಸು.2,000-200), ಕಬ್ಬಿಣಯುಗದ ಬೃಹತ್‌ಶಿಲಾಯುಗ, ಸಾಂಸ್ಕೃತಿಕ ಅವಶೇಷಗಳುಳ್ಳ ನೆಲೆಗಳು ಇವೆ. ಬಾದಾಮಿ, ಐಹೊಳೆ ಪ್ರದೇಶಗಳಲ್ಲಿ ಹೆಚ್ಚಾಗಿ ಹಳೆ ಶಿಲಾಯುಗದ, ಶಿಲಾ-ತಾಮ್ರ ಯುಗದ ಮತ್ತು ಬೃಹತ್‌ಶಿಲಾ ಸಂಸ್ಕೃತಿಯ ನೆಲೆಗಳು, ಸಮುದ್ರ ತೀರ ಪ್ರದೇಶ ಬಿಟ್ಟು ಘಟ್ಟ ಪ್ರದೇಶಗಳಲ್ಲಿ ಹೆಚ್ಚಾಗಿ ನವ ಶಿಲಾಯುಗ-ಬೃಹತ್‌ಶಿಲಾಯುಗ, ಇತಿಹಾಸ ಪ್ರಾರಂಭಕಾಲದ ನೆಲೆಗಳು ಶೋಧವಾಗಿವೆ. ಸಮುದ್ರ ತೀರ ಪ್ರದೇಶದಲ್ಲಿ, ಹೆಚ್ಚಾಗಿ ದಕ್ಷಿಣಕನ್ನಡ ಜಿಲ್ಲೆಯ ಭಾಗದಲ್ಲಿ ಬೃಹತ್‌ಶಿಲಾಯುಗದ ಹಾಗೂ ಇತಿಹಾಸ ಪ್ರಾರಂಭ ಕಾಲದ ನೆಲೆಗಳು ಈಗಾಗಲೇ ಬೆಳಕಿಗೆ ಬಂದಿವೆ. ಇತ್ತೀಚಿನ ವರ್ಷದಲ್ಲಿ 1981ರ ಮೇ-ಜೂನ್ ಸಮಯದಲ್ಲಿ, ಮಂಗಳೂರಿನ ಪೂರ್ವಕ್ಕೆ ನೇತ್ರಾವತಿ ನದಿ ಬಯಲಿನಲ್ಲಿಯ ಮಾಣಿ ಹಾಗೂ ಉಪ್ಪಿನಂಗಡಿ ಭಾಗಗಳಲ್ಲಿ ಒಂದು ಪ್ರಾಣಿಯ ಅಸ್ಥಿಯ ಪಡಿಯಚ್ಚಿನೊಡನೆ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಕಲ್ಲಿನ ಉಪಕರಣಗಳು ಸಿಕ್ಕಿವೆ. 1990ರ ಸುತ್ತಮುತ್ತ ಸೀತಾ ನದಿ ಬಯಲಿನ ನಾಲ್ಕು ನೆಲೆಗಳಲ್ಲಿ ಬಿಡಿಬಿಡಿಯಾಗಿ ನವ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಕೊಡಲಿಗಳು ಶೋಧವಾಗಿವೆ. ಇತಿಹಾಸಯುಗದಲ್ಲಿಯಂತೂ ಉತ್ತರ ಕರ್ನಾಟಕವು ದಕ್ಷಿಣ ಭಾರತ-ದಖ್ಖನ್ ಪ್ರಸ್ಥಭೂಮಿಯ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ವಿಷಯ ಸರ್ವವಿದಿತ. ಹೀಗೆ ಅನುಕೂಲಕರವಾದ ಭೌಗೋಳಿಕ ಪರಿಸರ ಮತ್ತು ವಿಶಿಷ್ಟ ಸಾಂಸ್ಕೃತಿಕ ಪರಂಪರೆಯುಳ್ಳ ಉತ್ತರ ಕರ್ನಾಟಕದಲ್ಲಿ ಪ್ರಾಚೀನ ಕಾಲದ ಜನಸಾಮಾನ್ಯರ ಒಂದು ವಿಶಿಷ್ಟ ಸಂಪ್ರದಾಯದ ಗವಿ ವರ್ಣ, ಬಯಲುದಂಡೆ ಚಿತ್ರಗಳು ಇರುವುದರಲ್ಲಿ ಹಾಗೂ ಅವರ ನಿತ್ಯ ಬಳಕೆಯ ವಸ್ತುಗಳಲ್ಲಿ ವೈವಿಧ್ಯಮಯ ಚಿತ್ರಗಳಿರುವುದು ಆಶ್ಚರ್ಯವೇನಿಲ್ಲ.


ನವ ಶಿಲಾ-ತಾಮ್ರಯುಗ ಸಂಸ್ಕೃತಿಕಾಲದ ಗೂಳಿ, ಬೆಳಗಲ್

ಸಾಮಾನ್ಯವಾಗಿ ಗವಿ ವರ್ಣ ಮತ್ತು ಬಯಲುದಂಡೆ ಚಿತ್ರಗಳು ಒಂದೆಡೆಯಲ್ಲಿಯೇ ಇರುವುದಿಲ್ಲ. ಆದರೆ ಕ್ವಚಿತ್ತಾಗಿ ಇವೆರಡೂ ಒಂದೆಡೆಯಲ್ಲಿವೆ. ಪಿಕ್ಲಿಹಾಳದ ನವ ಶಿಲಾಯುಗ-ಬೃಹತ್ ಶಿಲಾಯುಗ-ಇತಿಹಾಸ ಪ್ರಾರಂಭದ ಕಾಲದ ಸಂಸ್ಕೃತಿಗಳ ಅವಶೇಷಗಳುಳ್ಳ ಪ್ರಾಚೀನ ನಿವೇಶನದ ಸುತ್ತಮುತ್ತ ವರ್ಣಚಿತ್ರಗಳು ಹಾಗೂ ಕುಟ್ಟಿದ ಚಿತ್ರಗಳು ಇವೆ.ಕುರುಗೋಡಿನ ಒಂದೆಡೆಯಲ್ಲಿ ಒಂದು ವಿಧದ್ದು, ಇನ್ನೊಂದೆಡೆಯಲ್ಲಿ ಇನ್ನೊಂದು ವಿಧದ್ದು ಇವೆ. ಇವೆರಡು ಪ್ರಕಾರದ ಚಿತ್ರಗಳಲ್ಲಿ ಬಹಳ ಅಪರೂಪವಾಗಿ ಒಂದೊಂದರಲ್ಲಿ ಪರಸ್ಪರ ಸಾಮ್ಯವಿರುತ್ತದೆ. ಬೆಳಗಲ್ಲಿನ ಕುಟ್ಟಿದ, ಚಿತ್ರದುರ್ಗದ ಗೀರುಗೂಳಿಯ, ಅಂಜನಹಳ್ಳಿಯ (ಆನೆಗೊಂದಿ ಹತ್ತಿರ) ವರ್ಣದ ಗೂಳಿ ಚಿತ್ರಗಳಲ್ಲಿ ಬಹಳ ಸಾಮ್ಯವಿದೆ. ಇದರಂತೆಯೇ ಹಳಕುಂದಿಯ ಬಯಲು ಬಂಡೆ ಕುಟ್ಟಿದ ಜಿಂಕೆಯು ಮುಚಟ್ಲಚಿಂತಮಾನು ಗವಿ (ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ) ವರ್ಣದ ಜಿಂಕೆಗೆ ಶೈಲಿಯಲ್ಲಿ ಬಹಳ ಹೋಲುತ್ತದೆ. ಈ ತರಹದ ಹೋಲಿಕೆ ತೀರಾ ಸಮೀಪವಾಗಿದ್ದು, ಇವುಗಳನ್ನು ಸೃಷ್ಟಿಸಿದ ಜನರಲ್ಲಿ ಪರಸ್ಪರ ಸಾಂಸ್ಕೃತಿಕ ಸಂಪರ್ಕವಿದ್ದಿರಬೇಕೆಂದು ಇಲ್ಲವೆ ಇವೆರಡನ್ನೂ ಸೃಷ್ಟಿಸಿದವರು ಒಂದೇ ಜನವರ್ಗದವರಿರಬಹುದೆಂದು ತರ್ಕಿಸಬಹುದು. ಗವಿ ವರ್ಣಚಿತ್ರಗಳಾಗಲಿ, ಬಯಲುಬಂಡೆ ಚಿತ್ರಗಳಾಗಲಿ ಸಾಮಾನ್ಯವಾಗಿ ಸಣ್ಣ ಹಾಗೂ ಮಧ್ಯಮ ಪ್ರಮಾಣದಲ್ಲಿರುತ್ತವೆ. ಸು.10 ಸೆಂಮೀ-1.20ಮೀ ವರೆಗೆ ಇರುತ್ತವೆ. ಆದರೆ ಅಪರೂಪವಾಗಿ ವರ್ಣಚಿತ್ರಗಳಲ್ಲಿ ಬೃಹದಾಕಾರದ ಚಿತ್ರಗಳೂ ಇವೆ. ಹಿರೇಬೆನಕಲ್ಲಿನ 3ನೆಯ ಗವಿ ವರ್ಣಚಿತ್ರ ಮನುಷ್ಯಾಕೃತಿ ಸು.2 ಮೀ ಗಿಂತಲೂ ಸ್ವಲ್ಪ ಎತ್ತರವಿದೆ. ನಾರಾಯಣಪೇಟೆಯ (ಗಂಗಾವತಿ ತಾಲ್ಲೂಕು, ರಾಯಚೂರು ಜಿಲ್ಲೆ) ಮನುಷ್ಯಾಕೃತಿಯ ಅತ್ಯಂತ ದೊಡ್ಡದಿದ್ದು, ಸು.4 ಮೀ ಗಿಂತಲೂ ಎತ್ತರವಿದೆ. ಈ ವರ್ಣಚಿತ್ರ ಬಯಲುಬಂಡೆ ಚಿತ್ರಗಳ ಹತ್ತಿರ ಶಿಲಾ-ತಾಮ್ರಯುಗ ಹಂತದಲ್ಲಿಯೂ ನವ ಶಿಲಾಯುಗ ಸಂಸ್ಕೃತಿಯ ಬೃಹತ್‌ಶಿಲಾ ಸಂಸ್ಕೃತಿಯ ವಾಸ್ತವ್ಯದ ನೆಲೆಗಳಲ್ಲಿವೆ. ಉದಾ: ಪಿಕ್ಲಿಹಾಳ, ಕುರುಗೋಡು, ಚಿಕ್ಕರಾಮಪುರ, ಹಿರೇಬೆನಕಲ್ಲು, ಅಂಜನಹಳ್ಳಿ, ಬೆಳಗಲ್ಲು, ಚಿತ್ರದುರ್ಗ, ಗಾವಳಿ ಮೊದಲಾದವು.

ಗವಿವರ್ಣಚಿತ್ರಗಳು (ಪ್ರಾಗೈತಿಹಾಸಿಕ): ನೂರಾರು ಕಿಮೀಗಳುದ್ದಗಲಕ್ಕೂ ಹರಡಿದ ಬೆಟ್ಟಗಳ ನಾನಾ ಕಡೆಗಳಲ್ಲಿ ಈ ಚಿತ್ರಗಳು ಸಾಮಾನ್ಯ ಗವಿಯೊಳಗಿನ ಬಂಡೆಗಳ ಮೇಲೆ ಇರುತ್ತವೆ. ಸಹಜವಾಗಿಯೇ ಇಲ್ಲಿ ಬೆಳಕು ಕಡಿಮೆ. ಅಷ್ಟೇನೂ ಸುಲಭವಾಗಿ ಪ್ರವೇಶಿಸಲಾಗದಂತಹ ತೀರಾ ದುರ್ಗಮವಾದ ಗವಿಗಳಲ್ಲಿ ವರ್ಣಚಿತ್ರಗಳು ಇರುತ್ತವೆ. ಸಾಮಾನ್ಯವಾಗಿ ಪ್ರತ್ಯೇಕವಾಗಿ ಮನುಷ್ಯರ, ಪ್ರಾಣಿಗಳ ಮತ್ತು ವಿಚಿತ್ರವಾದ ರೇಖಾ ಚಿತ್ರಗಳು ಇರುತ್ತವೆ. ಜೊತೆಗೆ ಕೆಲವು ಗವಿಗಳಲ್ಲಿ ಸಮೂಹನೃತ್ಯ ಪ್ರಾಣಿಗಳ ಸಾಲುಗಳು, ಮನುಷ್ಯರ ಜೋಡಿಗಳು ಇರುತ್ತವೆ. ಮನುಷ್ಯರು ನಿಂತ ಭಂಗಿಯಲ್ಲಿರುವುದು ಸರ್ವೇ ಸಾಮಾನ್ಯ. ಪ್ರಾಣಿಗಳ ಹಾಗೂ ಮನುಷ್ಯರ ಚಿತ್ರಗಳನ್ನು ಕೇವಲ ಬಾಹ್ಯರೇಖೆಗಳಿಂದ ಮಾತ್ರ ತೋರಿಸಲಾಗಿರುತ್ತದೆ. ಕಣ್ಣು, ಕಿವಿ, ಮೂಗು, ಬಾಯಿ, ಅಪರೂಪವಾಗಿ ಕೈಬೆರಳು, ಹಸ್ತ, ಪಾದಗಳನ್ನು ಸಹ ಸೂಚಿಸಿರುತ್ತದೆ. ಈ ಬಾಹ್ಯರೇಖೆಗಳ ಒಳಭಾಗವನ್ನು ಹಲವೆಡೆಗಳಲ್ಲಿ ಬಣ್ಣದಿಂದ ತುಂಬಲಾಗಿರುತ್ತದೆ. ಇಂಥ ಚಿತ್ರಗಳಲ್ಲಿ ಪ್ರಾಣಿ, ಮನುಷ್ಯರ ನೆರಳು ಇದ್ದಂತೆ ಇವು ಇರುತ್ತವೆ. ಈ ಆಕೃತಿಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿರುವುದಿಲ್ಲ. ಕೇವಲ ಒಂದೆರಡು ಅಥವಾ ಕೆಲವು ಚಿತ್ರಗಳು ಇರಬಹುದು ಅಥವಾ ಹಲವಾರು ಚಿತ್ರಗಳೂ ಇರಬಹುದು. ಎಲ್ಲ ಚಿತ್ರಗಳೂ ಒಂದೇ ಕಾಲದವಲ್ಲ. ಆದ್ದರಿಂದ ವಿವಿಧ ಪ್ರಮಾಣದ ಆಕೃತಿಗಳ ನಿರೂಪಣೆಯಲ್ಲೂ ಸ್ವಲ್ಪ ಭಿನ್ನತೆ ಇರುತ್ತದೆ. ಕ್ರಮವಾಗಿ ಒಂದು ಕಡೆಯಿಂದ ವ್ಯವಸ್ಥಿತವಾಗಿ ಬರೆದು ಸ್ಥಳವನ್ನು ತುಂಬಿಸದೆ, ಒಬ್ಬೊಬ್ಬರು ಒಂದೊಂದು ಸಮಯದಲ್ಲಿ ಅವರಿಗೆ ಅನುಕೂಲವಾದ ಭಾಗದಲ್ಲಿ, ಚಿತ್ರಗಳನ್ನು ಬರೆದಂತೆ ಕಾಣುತ್ತದೆ. ಆದ್ದರಿಂದ ಚಿತ್ರಗಳು ಚೆಲ್ಲಾಪಿಲ್ಲಿಯಾಗಿವೆ. ಹೆಚ್ಚಾಗಿ ಕೆಮ್ಮಣ್ಣಿನ ಬಣ್ಣದಲ್ಲಿವೆ. ಬಣ್ಣದ ಛಾಯೆಯ ಕಾಲ ವೈಪರೀತ್ಯದಿಂದ ಹಾಗೂ ಇತರ ಕಾರಣಗಳಿಂದ ಒಂದೇ ಸಮನಾಗಿರುವುದಿಲ್ಲ. ಅಪರೂಪವಾಗಿ ಕಾಡಿಗೆ ಕಪ್ಪು ಹಾಗೂ ಮಿಶ್ರ ಹಳದಿ, ಮಸುಕು ಬಿಳಿಯ ದ್ವಿವರ್ಣಗಳಲ್ಲೂ ಚಿತ್ರಗಳಿವೆ. ಬಾದಾಮಿಯ 3ನೆಯ ಗವಿಯ ಚಿತ್ರಗಳೂ ದ್ವಿವರ್ಣದಲ್ಲಿವೆ. ಮಧ್ಯಯುಗೀನ ಕಾಲದ ಚಿತ್ರಗಳು ಸುಣ್ಣದಂತಹ ಬಿಳಿಯ ಬಣ್ಣದಲ್ಲಿವೆ. ಬ್ರಹ್ಮಗಿರಿ ಮತ್ತು ಚಿತ್ರದುರ್ಗಗಳ ಹಲವಾರು ಚಿತ್ರಗಳೂ ಬಿಳಿಯ ಬಣ್ಣದಲ್ಲಿವೆ.

ಚಿತ್ರಕಾರರು ಬರೆಯಲು ಒಂದೊಂದು ಕಡೆಯಲ್ಲಿ ಬಹಳ ಶ್ರದ್ಧೆ, ಶ್ರಮವನ್ನು ವಹಿಸಿದ್ದಾರೆಂದು ಸ್ಪಷ್ಟವಾಗಿ ಕಾಣುತ್ತದೆ. ಹಿರೇಬೆನಕಲ್ಲಿನ 6ನೆಯ ಗವಿ ಮತ್ತು ಕುರುಗೋಡಿನ 4ನೆಯ ಗವಿಗಳಲ್ಲಿ ಚಿತ್ರಕಾರ ಅಂಗಾತವಾಗಿ ಮಲಗಿಯೇ ಚಿತ್ರ ಬಿಡಿಸಿರಲು ಸಾಧ್ಯ. ನಾರಾಯಣಪುರದಲ್ಲಿಯಂತೂ ಮುಂದೆ ಬಾಗಿದ ಒಂದು ಎತ್ತರವಾದ ಬಹುದೊಡ್ಡ ಬಂಡೆಯ ಸಮತಲವಾದ ಒಳಮೈಮೇಲೆ ಸು.4 ಮೀ ಎತ್ತರದ ಒಂದು ಮನುಷ್ಯಾಕೃತಿಯನ್ನು ಬಿಡಿಸಲಾಗಿದೆ. ತಲೆಯ ಭಾಗ ನೆಲದಿಂದ ಸು.5 ಮೀ ಎತ್ತರದಲ್ಲಿದೆ. ಆ ಭಾಗವನ್ನು ಬಿಡಿಸಲು ಚಿತ್ರಕಾರ ಎಂತಹದಾದರೂ ಅಗಲವಾದ ಅಟ್ಟಣಿಗೆಯನ್ನು ಕಟ್ಟಿಕೊಂಡಿರಬೇಕು.

ನಿಸರ್ಗದಲ್ಲಿ ದೊರೆಯುವ ಕೆಮ್ಮಣ್ಣಿನ ಗಟ್ಟಿಯನ್ನು ಬಣ್ಣ ತಯಾರಿಸಿಕೊಳ್ಳಲು ಉಪಯೋಗಿಸಿದ್ದಿರಬೇಕು. ಇದರ ಜೊತೆಗೆ ರಕ್ತವನ್ನೊ ಅಥವಾ ವನಸ್ಪತಿಯ ರಸವನ್ನೊ ಸೇರಿಸಿರಬೇಕೆಂದೂ ಆದ್ದರಿಂದಲೇ ಮಳೆ ಗಾಳಿ ಹೊಡೆತಕ್ಕೆ ಕೆಲವೆಡೆಗಳಲ್ಲಿ ಇವು ಸಿಕ್ಕರೂ ಅಳಿಸಿ ಹೋಗದೆ ಉಳಿದಿವೆಯೆಂದೂ ಅಭಿಪ್ರಾಯವಿದೆ. ಆದರೆ ಬಣ್ಣವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ ಅನಂತರವೇ ನಿಜಸಂಗತಿ ತಿಳಿಯಬಹುದು.

ಒಂದು ಗಿಡದ ರೆಂಬೆಯ ತುದಿಯನ್ನು ಸರಿಯಾಗಿ ಜಜ್ಜಿ ತೊಗಟೆ ಹೋಗುವಂತೆ ಮಾಡಿ, ಕೂದಲಿನಂತಹ ನಾರುಗಳನ್ನು ಬಿಡಿಸಿ ಕುಚ್ಚಿನಂತೆ ಮಾಡಿ ಅದನ್ನು ಕುಂಚದಂತೆ ಬಣ್ಣದ ರೇಖೆಯನ್ನು ಎಳೆಯಲು ಉಪಯೋಗಿಸಿದ್ದಿರಬೇಕು. ಆದರೆ ಈಚಿನ ಕಾಲದ ಕೆಲವು ಬಿಳಿಬಣ್ಣದ ಚಿತ್ರಗಳಲ್ಲಿ ಬೆರಳಿನ ರೇಖೆಗಳೂ ಮೂಡಿಸುವುದರಿಂದ ಬೆರಳುಗಳಿಂದಲೂ ರೇಖೆಗಳನ್ನು ಎಳೆಯಲಾಗುತ್ತಿತ್ತೆಂದು ತಿಳಿಯಬಹುದು. ಕುರುಗೋಡಿನ 1ನೆಯ ಗವಿಯಲ್ಲಿಯ ಮತ್ತು ತಿಮ್ಮಲಾಪುರದ ಚಿತ್ರಗಳಲ್ಲಿ ಈ ಲಕ್ಷಣಗಳಿವೆ. ಹಿರೇಬೆನಕಲ್ಲಿನ 11ನೆಯ ಚಿತ್ರಗವಿಯಲ್ಲಿ ಜಿಂಕೆಗಳ ಸಾಲಿನಲ್ಲಿ ಪ್ರತಿಯೊಂದು ಜಿಂಕೆಯೂ ಒಂದೇ ಪ್ರಮಾಣ ಮತ್ತು ರೀತಿಯಲ್ಲಿದೆ. ಆದ್ದರಿಂದ ಚರ್ಮದಲ್ಲಿಯೋ ದಪ್ಪ ಎಲೆಯಲ್ಲಿಯೋ ಚಿತ್ರವನ್ನು ಕತ್ತರಿಸಿಕೊಂಡು ಅದನ್ನು ಬಂಡೆಯ ಮೇಲಿಟ್ಟು ಕತ್ತರಿಸಿದ ಭಾಗದಲ್ಲಿ ಬಣ್ಣವನ್ನು ತುಂಬುತ್ತಿದ್ದಿರಬೇಕು.

ಒರಟು ಬಂಡೆಯ ಮೇಲೆ ನೇರವಾಗಿ ಚಿತ್ರಗಳನ್ನು ಬಿಡಿಸಲಾಗಿದೆ. ಆದರೆ ಅಪರೂಪಕ್ಕೆ ಇತಿಹಾಸಯುಗದಲ್ಲಿ ಮಾತ್ರ ಮೊದಲು ಆರಿಸಿದ ಭಾಗದ ಬಂಡೆಯ ಮೇಲೆ ಸ್ವಲ್ಪ ಹಳದಿ ಮಿಶ್ರಿತ ಬಿಳಿಬಣ್ಣದ ಲೇಪನ ಮಾಡಿ ಅದರ ಮೇಲೆ ಕೆಮ್ಮಣ್ಣಿನ ಬಣ್ಣದಲ್ಲಿ ಚಿತ್ರಗಳನ್ನು ಬಿಡಿಸಿದ್ದು, ಬಾದಾಮಿಯಲ್ಲಿ ಮತ್ತು ಮಾನ್ವಿ( ರಾಯಚೂರು ಜಿಲ್ಲೆ) ಗಳಲ್ಲಿ ಮಾತ್ರ ಸಿಕ್ಕಿವೆ. ಇಲ್ಲಿ ಗಮನಿಸಬೇಕಾದ ಒಂದು ವಿಷಯವೆಂದರೆ, ಇವೆರಡೂ ಚಿತ್ರಗಳು ಸೌಂದರ್ಯ ದೃಷ್ಟಿಯುಳ್ಳ ಸಾಮಾನ್ಯ ವ್ಯಕ್ತಿಗಳಿಂದ ಒಂದು ಮಿತಿಯೊಳಗೆ ಸಿದ್ಧವಾದುವಲ್ಲ. ಈ ಕಲೆಯ ಪರಂಪರೆಯಲ್ಲಿ ಅಭ್ಯಾಸ, ಸಾಧನೆಗಳನ್ನು ನಡೆಸಿ, ಪರಿಣತಿಯನ್ನು ಪಡೆದು ಮತ್ತು ಸಾಮಾಜಿಕ ಇಲ್ಲವೆ ಧಾರ್ಮಿಕ ವಿಷಯವನ್ನು ವಸ್ತುವನ್ನಾಗಿಟ್ಟುಕೊಂಡು ಕ್ರಮಬದ್ಧವಾಗಿ ಬಿಡಿಸಿದ ಉತ್ತಮ ಚಿತ್ರಗಳು. ಪ್ರಾಗಿತಿಹಾಸ ಕಾಲದಿಂದ ಬಂದ ಗವಿ ವರ್ಣಚಿತ್ರ ಪರಂಪರೆಯ ಪ್ರಭಾವ ಶಿಷ್ಟ ಸಂಪ್ರದಾಯದ ಕಲಾವಿದನ ಮೇಲೆ ಬೀರಿದಂತೆ ಕಾಣುತ್ತದೆ.

ಉದ್ದೇಶ: ಈ ರೀತಿ ಗವಿಗಳಲ್ಲಿ, ಬಂಡೆಗಳಲ್ಲಿ ಚಿತ್ರಗಳನ್ನು ಬಿಡಿಸುವ ಉದ್ದೇಶವಾದರೂ ಏನು? ಪ್ರಾಗೈತಿಹಾಸಿಕ ಕಾಲದ ಜನರಲ್ಲಿ ಸೌಂದರ್ಯ ಪ್ರಜ್ಞೆಯುಳ್ಳ ಕೆಲವರು ನಿಸರ್ಗದಲ್ಲಿ ತಾವು ನೋಡಿದ ಪ್ರಾಣಿಗಳ ಗಾಂಭೀರ್ಯ, ಚೆಲುವುಗಳಿಂದ ಭಾವೋದ್ರೇಕಿತರಾಗಿ ಇಂತಹ

ಚಿತ್ರಗಳನ್ನು ಬಿಡಿಸಿದರೆ, ಹಾಗಿದ್ದಲ್ಲಿ ಇವು ಕಲೆಯು ಕಲೆಗೋಸ್ಕರ ಎಂಬ ನಾಣ್ಣುಡಿಯಂತಿವೆ. ಇದೇ ಉದ್ದೇಶವಾಗಿದ್ದಲ್ಲಿ ಕೇವಲ ಪ್ರಾಣಿಗಳೇ ಏಕೆ, ನಿಸರ್ಗದ ಹೂವು ಗಿಡಮರಗಳು, ಬೇರೆ ಬೇರೆ ಪ್ರಾಣಿಗಳು, ಪಕ್ಷಿಗಳು, ಅವುಗಳ ವಿವಿಧ ಭಂಗಿಗಳು, ನದಿ, ಬೆಟ್ಟ, ತಮ್ಮ ಜನ, ನೆಲೆ ಇವುಗಳ ಒಂದೊಂದು ಕಾಲದಲ್ಲಿ ಒಬ್ಬೊಬ್ಬರ ವಸ್ತುವಾಗಿರಬಹುದಿತ್ತು. ಇದರಿಂದ ಚಿತ್ರಗಳು ವರ್ಣಿಸಲಾರದಷ್ಟು ವೈವಿಧ್ಯಮಯವಾಗಿರುತ್ತಿದ್ದವು. ಈ ಕಲೆಯ ವಿಧಾನ, ತಂತ್ರ, ವರ್ಣಸಂಯೋಜನೆಗಳಲ್ಲೂ ವಿವಿಧ ಪ್ರಕಾರಗಳ ಪ್ರಗತಿಯಿರುತ್ತಿತ್ತು. ಆದರೆ ಈ ಚಿತ್ರಗಳಲ್ಲಿ ಹೆಚ್ಚಾಗಿ ಪ್ರಾಣಿಗಳು, ಅವುಗಳಲ್ಲೂ ಕೆಲವೇ ಪ್ರಾಣಿಗಳಿವೆ. ಮನುಷ್ಯನ ಚಿತ್ರಗಳಲ್ಲಿ ಸಮೂಹ ನೃತ್ಯ, ಮೈಮೇಲೆ ಚಿತ್ರ ಬರೆದುಕೊಂಡ ನಗ್ನವ್ಯಕ್ತಿ, ಆಯುಧಪಾಣಿಗಳು ಹೀಗೆ ಕೆಲವೇ ವಿಧದವು ಇವೆ ಮತ್ತು ಇವುಗಳ ಬಾಹ್ಯರೇಖೆ ಅಥವಾ ಛಾಯಚಿತ್ರಗಳು ಮಾತ್ರ ಇವೆ. ಬಹುಶಃ ಉದ್ದೇಶಪೂರ್ವಕವಾಗಿಯೇ ಚಿತ್ರಗಳನ್ನು ಈ ಕ್ರಮದಲ್ಲಿಯೇ ಬಿಡಿಸಲಾಗಿದೆ. ಇವುಗಳಲ್ಲಿ ಕೆಲವಂತೂ ಸುಲಭವಾಗಿ ಹೋಗಿ ನೋಡುವಂತಹ ಸ್ಥಳಗಳಲ್ಲಿಲ್ಲ. ಸ್ವಸಂತೋಷಕ್ಕೋಸ್ಕರ ಮಾತ್ರವಲ್ಲದೆ ತಮ್ಮ ಸಮಾಜದ ಜನರೂ ನೋಡಲೆಂದು ಮಾಡಿದ್ದರೆ ಎಲ್ಲರಿಗೂ ನೋಡಲು ಆಗುವಂತಹ ಸ್ಥಳಗಳಲ್ಲಿ ಇವು ಇರುತ್ತಿದ್ದವು. ಪ್ರಾಯಶಃ ಇಂತಹ ಬಹಳಷ್ಟು ಚಿತ್ರಗಳನ್ನು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಪ್ರಾಗೈತಿಹಾಸಿಕ ಮಾನವರು ತಮ್ಮ ತಮ್ಮ ಸಮಾಜದ ನಂಬಿಕೆಗಳಂತೆ ಮಾಂತ್ರಿಕ ಕಟ್ಟಳೆಗಳನ್ನು ನಡೆಸುವ ಕಾಲದಲ್ಲಿ ಅವುಗಳ ಅಂಗವಾಗಿ ರೂಪಿಸಿದ ಚಿತ್ರಗಳೆಂದು ತಜ್ಞರು ತರ್ಕಿಸಿದ್ದಾರೆ. ಒಬ್ಬ ಮನುಷ್ಯ ಅಥವಾ ಪ್ರಾಣಿಯ ಛಾಯೆಯನ್ನು ಚಿತ್ರರೂಪದಲ್ಲಿ ಬರೆದು ಮಂತ್ರಿಸಿದರೆ ಅವನು ಅಥವಾ ಅದು ತನ್ನ ವಶವಾಗುವುದೆಂದು ಅಥವಾ ಅವನು ಶತ್ರುವಾಗಿದ್ದರೆ ನಾಶವಾಗುವನೆಂಬ ನಂಬಿಕೆ ಬಹು ಪುರಾತನ ಕಾಲದಿಂದ ಉಳಿದುಬಂದಿದೆ. ತನ್ನ ಶತ್ರುವಿನ ನಾಶಕ್ಕಾಗಿ ಅವನ ಅಥವಾ ಅವಳ ಗೊಂಬೆಯನ್ನು ಮಾಡಿ ಅದಕ್ಕೆ ಮಂತ್ರ ಪೂರಿತ ಸೂಜಿಗಳನ್ನು ಚುಚ್ಚುವುದು ಮೊದಲಾದ ಮಾಟಮಂತ್ರಗಳ ಆಚರಣೆ ಇಂದೂ ವ್ಯವಹಾರದಲ್ಲಿದೆ. ಇದರಿಂದ ಆ ಶತ್ರು ಕಷ್ಟ, ನಷ್ಟ, ಸಂಕಟವನ್ನು ಅನುಭವಿಸಿ ಸಾಯುವ ಎಂಬ ಬಲವಾದ ನಂಬಿಕೆಯಿದೆ. ಪ್ರಪಂಚದಲ್ಲೆ ಪ್ರಾಚೀನ ಗ್ರಂಥವಾದ ಋಗ್ವೇದದ ಹತ್ತನೆಯ ಮಂಡಲದಲ್ಲಿ ಇಂತಹ ವಾಮಾಚಾರಗಳಿಗೆ ಸಂಬಂಧಪಟ್ಟ ಅಭಿಚಾರ ಮಂತ್ರಗಳಿವೆ. ಅಥರ್ವಣವೇದದಲ್ಲಿ ಇಂಥ ಮಂತ್ರಗಳು ಹೆಚ್ಚಾಗಿವೆ. ತಲೆ ತಲಾಂತರಗಳಿಂದ ಬೇರೂರಿ ಬೆಳೆದುಬಂದ ಇಂತಹ ನಂಬಿಕೆಗಳು ಈಗಲೂ ಕೆಲವಡೆಗಳಲ್ಲಿ ಇವೆ.

ಈ ಚಿತ್ರಗಳಲ್ಲಿ ನಗ್ನ ಮನುಷ್ಯನ ಮೈತುಂಬ ಚಿತ್ರಗಳನ್ನು ಬರೆದುಕೊಂಡು ಅಥವಾ ಮುಖವಾಡ ಹಾಕಿಕೊಂಡಿರುವುದನ್ನು ಹಾಗೂ ಮೇಲಕ್ಕೆತ್ತಿ ತೊಡೆಗಳನ್ನು ಅಗಲಿಸಿ ನಿಂತಿರುವ ಭಂಗಿಯನ್ನು ನೋಡಿದರೆ, ಅವನೊಬ್ಬ ಮಾಂತ್ರಿಕ ಮನುಷ್ಯನೆಂದೇ ತಿಳಿಯಬೇಕಾಗುತ್ತದೆ. ಈಗಲೂ ಆದಿವಾಸಿಗಳಲ್ಲಿ, ಗಿರಿಜನರಲ್ಲಿ ಅವರ ಧಾರ್ಮಿಕ ಆಚರಣೆಗಳನ್ನು ನಡೆಸುವವನು ವಿವಿಧ ವೇಷಗಳನ್ನು ಧರಿಸುವುದುಂಟು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಸಾಮಾನ್ಯ ಜನರಲ್ಲಿ ಭೂತಾರಾಧನೆ ಒಂದು ಪ್ರಧಾನ ಧಾರ್ಮಿಕ ವಿಧಿ. ಇದರ ಪೂಜಾರಿ ಪೂಜೆಯ ವೇಳೆಗೆ ವಿಶಿಷ್ಟ ವೇಷ ಭೂಷಣಗಳನ್ನು ಧರಿಸುವನು. ಇವನ ಮೈಮೇಲೆ ಆ ದೇವತೆ ಆವಾಹನೆಯಾಗಿ ತನ್ನ ಸಮಾಜದ ಜನರು ಕುಂದು ಕೊರತೆಗಳಿಗೆ ಸಮಾಧಾನವನ್ನು ಹೇಳುವುದು. ಇದಲ್ಲದೆ ಮಾಟ–ಮಂತ್ರ ಮಾಡುವ ಮಾಂತ್ರಿಕರೂ ಇದ್ದಾರೆ. ಇದರಂತೆಯೆ ಬೆನ್ನಿಗೆ ಬಾಣ ನಾಟಿರುವ ಜಿಂಕೆ, ಗಬ್ಬದ ಜಿಂಕೆ, ಪ್ರಾಣಿಗಳ ಮನುಷ್ಯರ ಛಾಯಚಿತ್ರಗಳು, ಸಂಭೋಗ ಕ್ರಿಯೆ, ಬಹುಶಃ ಬೇಟೆಗೆ ಹೋಗುವ ಮುನ್ನ ಸಾಮೂಹಿಕ ನೃತ್ಯ ಮೊದಲಾದ ಚಿತ್ರಗಳು ತನ್ನ ಆಹಾರವನ್ನು ಒದಗಿಸುವ ಜಿಂಕೆ, ಗೂಳಿ, ಕೋಣ ಹಾಗೂ ತನ್ನ ವಂಶಾಭಿವೃದ್ಧಿಗೋಸ್ಕರ, ಇಂತಹ ಪ್ರಾಣಿಗಳ ವೈರಿಯಾದ ಹುಲಿ, ಚಿರತೆ ಮೊದಲಾದ ಪ್ರಾಣಿಗಳ ನಾಶಕೋಸ್ಕರ ಮತ್ತು ಬೇಟೆಯಲ್ಲಿ ಇಂತಹ ಪ್ರಾಣಿಗಳು ವಶವಾಗುವುದಕ್ಕೋಸ್ಕರ ಇಂತಹ ಚಿತ್ರಗಳನ್ನು ಬರೆದು ಪುರಸ್ಸರವನ್ನಾಗಿ ಮಾಡುವುದೇ ಈ ಚಿತ್ರಗಳ ಸೃಷ್ಟಿಗೆ ಮುಖ್ಯ ಕಾರಣ. ಈ ಮಾಂತ್ರಿಕ ಕಟ್ಟಳೆಗಳನ್ನು ಸಾಮಾನ್ಯ ಜನರಿಂದ ದೂರವಾದ ಪ್ರದೇಶಗಳಲ್ಲಿ ಮಾಡುತ್ತಿದ್ದರೆಂದು ಕಾಣುತ್ತದೆ. ಈಗಲೂ ಮಾಟ–ಮಂತ್ರಗಳನ್ನು ಗುಪ್ತವಾಗಿ ಮಾಡುವರು. ಆ ಪ್ರಾಗೈತಿಹಾಸಿಕ ಜನರು ಈ ಉದ್ದೇಶಕ್ಕೆ ಚಿತ್ರಗಳನ್ನು ಬರೆದಿದ್ದರೂ ಅದು ಕೇವಲ ಬಾಹ್ಯ ರೂಪರೇಖೆಗಳ ಛಾಯಚಿತ್ರಗಳೇ ಆಗಿದ್ದರೂ ಆ ಪ್ರಾಣಿಗಳೊಡನೆ ಅವರಿಗೆ ನಿಕಟ ಸಂಬಂಧವಿದ್ದುದರಿಂದ, ಅವುಗಳ ಸ್ವರೂಪ, ನಡವಳಿಕೆ ಬಗೆಗೆ ಅವರು ಹೊಂದಿದ್ದ ಸೂಕ್ಷ್ಮ ಪರಿಚಯದಿಂದ ಹಾಗೂ ಅವರಲ್ಲಿ ಉದ್ಭವಿಸಿದ ಒಂದು ಬಗೆಯ ಅನಿರ್ವಚನೀಯ ಸ್ಫೂರ್ತಿಯಿಂದ ಬಿಡಿಸಿದ ಹಲವಾರು ಚಿತ್ರಗಳು ಶಕ್ತಿಶಾಲಿಯಾಗಿವೆ. ಅವುಗಳ ಸರಳ ಸಹಜ ಅವ್ಯಕ್ತ ಸೌಂದರ್ಯ ನಮ್ಮನ್ನು ಬೆರಗುಗೊಳಿಸುತ್ತದೆ.

**1. ಬಾದಾಮಿ–ಐಹೊಳೆ ಪ್ರದೇಶ:** ನವಶಿಲಾಯುಗಕ್ಕಿಂತಲೂ ಪೂರ್ವದ್ದು ಎನ್ನಬಹುದಾದ ಗವಿವರ್ಣಚಿತ್ರಗಳು ಬಾದಾಮಿ–ಗುಳೇದಗುಡ್ಡದ ಹಾದಿಯಲ್ಲಿ ಕುಟಕನಕೇರಿ ಹತ್ತಿರದ ಅರೆಗುಡ್ಡ ಮತ್ತು ಹಿರೇಗುಡ್ಡಗಳಲ್ಲಿ, ಬಾದಾಮಿಯ ಉತ್ತರಗುಡ್ಡದ ಉತ್ತರಕ್ಕಿರುವ ಬೆಟ್ಟಸಾಲಿನಲ್ಲಿರುವ ಒಂದು ಗವಿಯಲ್ಲಿ ಇವೆ. ಹಿರೇಗುಡ್ಡ ಮತ್ತು ಅರೆಗುಡ್ಡಗಳಲ್ಲಿಯ ಚಿತ್ರಗಳೆಲ್ಲವೂ ಕೆಮ್ಮಣ್ಣಿನ ರಂಗಿನವು. ಇಲ್ಲಿ ಕೆಲವು ಕಲ್ಲಾಸರೆಗಳಲ್ಲಿ ಮನುಷ್ಯನ ಚಿತ್ರಗಳೇ ಹೆಚ್ಚು. ಅತಿರೇಕವಾಗಿ ಉದ್ದುದ್ದವಾದ ಮುಂಡ, ಕಡ್ಡಿಯಂತಹ ಅಥವಾ ಉರುಟಾದ ಕೈಕಾಲುಗಳು, ಮುಖಕ್ಕೆ ಸಾಮಾನ್ಯವಾಗಿ ಮುಖವಾಡ ಹಾಕಿಕೊಂಡಂತೆ ಕಾಣುವುದೇ ಈ ಚಿತ್ರಗಳ ವೈಶಿಷ್ಟ್ಯ. ಮೈಮೇಲೆ ರೇಖಾಚಿತ್ರಗಳು ಇವೆ. ಬಹುಶಃ ಇವರ ಸಮಾಜದ ಧಾರ್ಮಿಕ ಕಟ್ಟಳೆಯಲ್ಲಿ ತೊಡಗಿದ ವ್ಯಕ್ತಿಗಳದ್ದೆಂದು ಕಾಣುತ್ತದೆ. ಇಲ್ಲವೆ ಬೇಟೆಯ ಕಾಲದಲ್ಲಿ ಪ್ರಾಣಿಗಳ ವಿಧದ್ದೆ ಮುಖವಾಡ ಹಾಕಿಕೊಳ್ಳುವ ಕ್ರಮವಿದ್ದಿರ ಬಹುದು. ಈ ಚಿತ್ರಗಳಲ್ಲಿ ಮುಖವಾಡ, ಮೈಬಾಗು ಮತ್ತು

ಉತ್ಪ್ರೇಕ್ಷಿತ ಮುಖವಾಡ ಸಹಿತ ಮಾನವಾಕೃತಿಗಳು, ಕುಟಕನಕೇರಿ

ಮುಂಡದ ಮೇಲಿನ ಚಿತ್ರಗಳು ತಕ್ಕಮಟ್ಟಿಗೆ ವೈವಿಧ್ಯಮಯವಾಗಿವೆ. ಈ ರೀತಿಯ ಚಿತ್ರಗಳು ಕರ್ನಾಟಕದ ಬೇರೆಡೆಯಲ್ಲಿ ಇಲ್ಲ. ದೈಹಿಕ ನೀಳತೆಯ ಶೈಲಿಯಲ್ಲಿ ಇವು ಭೀಂಬೇಟ್ಕದಲ್ಲಿಯ ಕೆಲವು ಗವಿಗಳಲ್ಲಿಯ ಬಾಣ ಇಲ್ಲವೆ ಗಾಳವನ್ನು ಕೈಯಲ್ಲಿ ಹಿಡಿದು ನಡೆಯುತ್ತಿರುವ ಮನುಷ್ಯ ಚಿತ್ರಗಳಿಗೆ ಬಹುಮಟ್ಟಿಗೆ ಹೋಲುತ್ತವೆ. ಭೀಂಬೇಟ್ಕದ ಚಿತ್ರಗಳು ಸೂಕ್ಷ್ಮಶಿಲಾಯುಗದ್ದೆಂದು ಸದ್ಯಕ್ಕೆ ನಿರ್ಣಯಿಸಲಾಗಿದೆ. ಈ ಚಿತ್ರಗಳಲ್ಲದೆ, ಮೈಮೇಲೆ ಪಟ್ಟಿಗಳುಳ್ಳ ಹಾಗೂ ಬಾಲ ಎತ್ತಿಕೊಂಡ ಕಾಡುಬೆಕ್ಕು ಅಥವಾ ಹುಲಿಯ ಚಿತ್ರ, ಮೀನಿನ ಬಲೆಯಂತೆ ಹೆಣೆದ ರೇಖಾಚಿತ್ರಗಳೂ ಅಲ್ಲಲ್ಲಿ ಇವೆ. ಇವುಗಳಲ್ಲಿ ಹೆಚ್ಚಾಗಿ ಬಾಹ್ಯರೂಪ ರೇಖಾಚಿತ್ರಗಳಿವೆ.

ಬಾದಾಮಿಯಿಂದ ಉತ್ತರಕ್ಕೆ ಸು.5ಕಿಮೀ ದೂರದಲ್ಲಿರುವ 'ಶಿಡ್ಲಫಡಿ' ದಿಡ್ಡಿ ಬಾಗಿಲಿನಂತೆ ಒಂದು ಭವ್ಯ ಕಮಾನು ಇದೆ. ಇದರಡಿಯ ಎರಡು ಬದಿಗಳಲ್ಲಿ ಮಬ್ಬು ಬಿಳಿಬಣ್ಣದ ಹಾವು, ಗುಬ್ಬಚ್ಚಿ, ಆನೆ, ಮನುಷ್ಯ ಮೊದಲಾದ ಚಿತ್ರಗಳಿವೆ. ಅಲ್ಲದೆ ಸು.5ನೆಯ ಶತಮಾನದ್ದೆಂದು ಹೇಳಬಹುದಾದ, ಬಿಡಿಸಲು ಸುಲಭವಲ್ಲದ ಬರವಣಿಗೆಯ ಒಂದೆರಡು ಸಾಲುಗಳಿವೆ. ಇವುಗಳಲ್ಲಿಯ ಅಕ್ಷರಗಳನ್ನು ತಜ್ಞರು ಶಂಖಲಿಪಿ ಎಂದು ಕರೆಯುತ್ತಾರೆ. ಕಮಾನಿನ ಎದುರು ಒಂದು ಬಯಲು ಬಂಡೆಯ ಮೇಲೆ ಎದುರು–ಬದುರು ನಿಂತ ಎರಡು ಕೋಣಗಳು, ದೂರದಲ್ಲಿ ನಿಂತಿರುವ ಆನೆಯ ತರಹದ ಚಿತ್ರಗಳಿವೆ. ಪ್ರಾಣಿಗಳ ಚಿತ್ರಗಳು ಅತ್ಯಂತ ನೈಜವಾಗಿವೆ. ಬಹುದೂರದಲ್ಲಿ ಆನೆ ನಿಂತಿದೆ ಎಂಬುದನ್ನು ಆ ಎರಡು ಕಾಡು ಕೋಣಗಳಿಗಿಂತ ಅತಿ ಸಣ್ಣ ಆಕಾರದಲ್ಲಿ ತೋರಿಸುವುದರ ಮೂಲಕ ಸೂಚಿಸಿದೆ.

ಬಾದಾಮಿಯ 1ನೆಯ ವರ್ಣಚಿತ್ರ ಗವಿಯಿಂದ ಶಿಡ್ಲಫಡಿಗೆ ಹೋಗುವ ದಾರಿಯಲ್ಲಿ ಸಿತಿದೋಣಿ ಹತ್ತಿರ ಬೃಹದಾಕಾರದ ಸು.5–6 ಮೀ ಎತ್ತರದ ಹಾಗೂ ಹೆಚ್ಚು ಕಡಿಮೆ ಅಷ್ಟೇ ಅಗಲದ ಒಂದು ಕಲ್ಲಾಸರೆ ಇದೆ. ನೆಲದಿಂದ ಸು.2 ಮೀ ಎತ್ತರದಿಂದ ಮೇಲೆ ಇಡೀ ಕಲ್ಲಾಸರೆ ಚಿತ್ರಗಳಿಂದ ತುಂಬಿಹೋಗಿದೆ. ಚಿತ್ರಗಳಲ್ಲಿ ಅಂತಹ ವೈವಿಧ್ಯತೆಯೇನೂ ಇಲ್ಲ. ಬಲೆಯಂತಹ ರೇಖಾಚಿತ್ರ ಒಳಗೆಲ್ಲ ಹಬ್ಬಿದೆ. ಇದರಲ್ಲಿ ಒಂದು ಬಲಿಷ್ಠ ಕೋಣ, ಒಂದು ಜಿಂಕೆಯಂತೆ ಕಾಣುವ ಅಸ್ಪಷ್ಟ ಚಿತ್ರಗಳಿವೆ. ಕೋಣವು (?) ಮಾದರಿಯಲ್ಲಿ ಅಲ್ತಮೀರ (ಸ್ಪೇನ್) ಗವಿಯ ಕೋಣಗಳಿಗೆ ಹೋಲುತ್ತದೆ. ಬಲೆಯಂತಹ ಚಿತ್ರದಡಿಯಲ್ಲಿ ಈ ಪ್ರಾಣಿಗಳನ್ನು ತೋರಿಸಿರುವುದರ ಉದ್ದೇಶವೇನು, ಬಲೆಹಾಕಿ ಈ ಪ್ರಾಣಿಗಳನ್ನು ಹಿಡಿಯುತ್ತಿದ್ದ ಕ್ರಮದ ಸಂಕೇತವೇ, ಬಲಿಷ್ಠ ಕಾಡುಕೋಣವನ್ನು ಬಲೆಹಾಕಿ ಹಿಡಿಯಲು ಸಾಧ್ಯವೇ ಅಥವಾ ಬಲೆಯಲ್ಲಿ ಸಿಕ್ಕ ಪ್ರಾಣಿಯಂತೆ ಅಂತಹ ಮಾಂತ್ರಿಕ ಚಿತ್ರಗಳಿಂದ ಅವು ಮಂತ್ರಮುಗ್ಧವಾಗಿ ಸುಲಭವಾಗಿ ಹಿಡಿತಕ್ಕೆ ಸಿಗಲು ಸಾಧ್ಯವೆಂಬುದರ ನಂಬಿಕೆಯ ಸಂಕೇತವೆ, ಹೆಚ್ಚಿನ ಸಂಶೋಧನೆಯಿಂದ ಇದರ ನಿಜವಾದ ಅರ್ಥವನ್ನು ಕಂಡುಹಿಡಿಯಲು ಸಾಧ್ಯವಾಗಬಹುದು.

ರಾಮದುರ್ಗದ ಪಶ್ಚಿಮಕ್ಕೆ 4 ಕಿಮೀ ದೂರದಲ್ಲಿ ಮೇಗುಂಡೇಶ್ವರ ದೇವಾಲಯದ ಬಳಿ ಖಾಜಿಗುಡ್ಡದಲ್ಲಿ ಜರುಗಿನ ದಾರಿ ಹತ್ತಿರದ ಕಲ್ಲಾಸರೆಗಳಲ್ಲಿ ನವಿಲು, ಜಿಂಕೆ, ಮೊಸಳೆ, ಗೂಳಿ ಮೊದಲಾದವುಗಳ ಚಿತ್ರಗಳಿವೆ. ಜಿಂಕೆ ಮೈಮೇಲೆ ಸಾಲುಚುಕ್ಕೆಗಳನ್ನು ನಿರ್ದೇಶಿಸುವ ಸಮಾನಾಂತರ ಅಡ್ಡಗೆರೆಗಳಿವೆ. ಇವುಗಳು ಇದ್ದ ಸ್ಥಳ ಮತ್ತು ಶೈಲಿ, ಪ್ರಧಾನವಾಗಿ ಪ್ರಾಣಿಗಳನ್ನು ಹಾಗೂ ಅವುಗಳನ್ನು ಬೇಟೆಯಾಡುವುದಕ್ಕೋಸ್ಕರ ಮುಖವಾಡ ಹಾಕಿಕೊಂಡ ಮನುಷ್ಯರನ್ನು ಚಿತ್ರಿಸುವ ಪದ್ಧತಿ, ಇವುಗಳ ಆಧಾರದ ಮೇಲೆ ಇವೆಲ್ಲ

ಚಿತ್ರಗಳು ಸೂಕ್ಷ್ಮ ಶಿಲಾಯುಗದ (ಪ್ರ.ಶ.ಪೂ. ಸು.10,000–5,000) ಹಾಗೂ ಪ್ರಾಯಶಃ ಇದಕ್ಕಿಂತಲೂ ಪೂರ್ವಕಾಲದ ಅತ್ಯಂತ ಹಳೆ ಶಿಲಾಯುಗದ್ದೆಂದು (ಪ್ರ.ಶ.ಪೂ.ಸು.40,000–10,000) ಊಹಿಸಬಹುದು.

**2. ರಾಯಚೂರು–ಬಳ್ಳಾರಿ ಪ್ರದೇಶ:** ಹಿರೇಬೆನಕಲ್ಲಿನ 12ನೆಯ ಗವಿಚಿತ್ರ ಈ ಪ್ರದೇಶದಲ್ಲೇ ವಿಶಿಷ್ಟವಾಗಿ ಹಲವಾರು ಕಿಮೀ ಉದ್ದ ಅಗಲದ ಬೆಟ್ಟದ ತುಟ್ಟತುದಿಯಲ್ಲಿ, ದುರ್ಗಮವಾದ ಭಾಗದಲ್ಲಿಯ ಒಂದು ಗವಿಯಲ್ಲಿ ಈ ಚಿತ್ರಗಳಿವೆ. ಬೆಟ್ಟದ ಈ ಭಾಗಕ್ಕೆ ದುರ್ಗದ ದಡಿ ಎಂದು ಸ್ಥಳೀಯ ಹೆಸರು. ಬೆಟ್ಟದ ಸುಮಾರು ಮಧ್ಯ ಅಂತರದಲ್ಲಿ ಒಂದು ಬಯಲು ಪ್ರದೇಶ. ಇಲ್ಲಿ ಬೃಹತ್‌ಶಿಲಾ ಸಂಸ್ಕೃತಿ ಜನರ ವಾಸ್ತವ್ಯವಿದ್ದ ಕುರುಹುಗಳು ವಿಪುಲವಾಗಿವೆ. ಬೂದಿಮಿಶ್ರಿತ ಮಣ್ಣಿನ ಕೆಂಪು, ಕೆಂಪು–ಕಪ್ಪು ದ್ವಿವರ್ಣದ ಮತ್ತು ಕಪ್ಪುಬಣ್ಣದ ಮಣ್ಪಾತ್ರೆಗಳ ಅವಶೇಷಗಳು ಹೇರಳವಾಗಿವೆ. ಇದಲ್ಲದೆ ಸುಟ್ಟಮಣ್ಣಿನ ಮಣಿಗಳು, ಬಳೆಚೂರುಗಳು ಮುಂತಾದ ಇತರ ಅವಶೇಷಗಳೂ ಇವೆ. ಇದರ ಸಮೀಪದಲ್ಲಿ ಸ್ವಲ್ಪ ಕೆಳಗೆ 6ನೆಯ ಮತ್ತು 11ನೆಯ ವರ್ಣಚಿತ್ರಗವಿಗಳಿವೆ. ಸ್ವಲ್ಪ ಕೆಳಗೆ 6ನೆಯ ವರ್ಣಚಿತ್ರ ಗವಿ, ಅಲ್ಲಿಂದ ಸ್ವಲ್ಪ ಮುಂದಕ್ಕೆ ಸುಮಾರು ಬೃಹತ್‌ಶಿಲಾ ಗೋರಿಗಳಿವೆ. ಸುತ್ತಮುತ್ತಲಿನ ಸಾಂಸ್ಕೃತಿಕ ಪರಿಸರದ ಹಿನ್ನಲೆಯಲ್ಲಿ 12ನೆಯ ಚಿತ್ರಗವಿಯಲ್ಲಿ ಸ್ವಾರಸ್ಯಕರವಾದ ಚಿತ್ರಗಳಿವೆ. ಒಟ್ಟಿನಲ್ಲಿ ಐದು ಕಡೆಗಳಲ್ಲಿ ಇವೆ. ಕುದುರೆ ಸವಾರರು, ಕುಣಿತದವರ ಗುಂಪು, ಜಿಗರೆಗಳ ಸಾಲು, ಎತ್ತು–ದನಗಳು, ನವಿಲು ಇವೇ ಮೊದಲಾದ ಚಿತ್ರಗಳಿವೆ.

ಇನ್ನೊಂದು ಬಂಡೆಯ ಮೇಲಿನ ಚಿತ್ರದಲ್ಲಿ 27 ಜನರು ಕೈ ಕೈ ಹಿಡಿದುಕೊಂಡು ಸಾಲಾಗಿ ನಿಂತಿದ್ದಾರೆ. ಬಲಕ್ಕಿರುವ ವ್ಯಕ್ತಿ ಹುಡುಗನೆಂದು ಹೇಳಬಹುದು. ಒಂದು ಬದಿಯಲ್ಲಿರುವವನು ಕೈಯಲ್ಲಿ ಏನನ್ನೋ ಹಿಡಿದಿದ್ದಾನೆ. ಮತ್ತೊಂದು ಬದಿಯಲ್ಲಿ ಅಸ್ಪಷ್ಟ ಚಿತ್ರವಿದ್ದು, ಪಾದಗಳ ಕೆಳಗೆ ಉದ್ದಕ್ಕೂ ಎರಡು ಗೆರೆಗಳಿವೆ. ಈ ಸಾಲಿನ ಮೇಲೆ ಒಂದೆರಡು ಅಸ್ಪಷ್ಟ ಚಿತ್ರಗಳಿವೆ. ಕೊನೆಯವನ ತಲೆಯ ಮೇಲೆ ಮೇಲ್ಮುಖವಾಗಿ ಓರೆಗೆರೆಗಳಿವೆ.

ಮುಂಚಾಚಿದ ಬಂಡೆಯ ಕೆಳಮೈಯ ಮೇಲೆ ಒಬ್ಬ ನಿಂತ ಮನುಷ್ಯನ ಚಿತ್ರವೂ ಅರ್ಧಚಂದ್ರಾಕೃತಿಯ ಗೆರೆಯ ಮೇಲೆ ನಿಂತ 12 ಮನುಷ್ಯರ ಚಿತ್ರವೂ ಮತ್ತೊಂದೆಡೆಯಲ್ಲಿ ಜೋಡಿ ಮನುಷ್ಯರ, ಒಬ್ಬ ಮನುಷ್ಯನು ಒಂದು ಗೂಳಿಯನ್ನು ಚಪ್ಪರಿಸುತ್ತಿರುವ ಚಿತ್ರಗಳೂ ಇವೆ. ಇದೇ ಭಾಗದ ಒಂದೆಡೆಯಲ್ಲಿ ಕುದುರೆ ಸವಾರರ ಚಿತ್ರಗಳಿವೆ.

ಗವಿಯ ಮೇಲಿನ ದೊಡ್ಡ ಬಂಡೆಯ ಕೆಳಮೈಯಲ್ಲಿ ಒಬ್ಬ ನಗ್ನ ಮನುಷ್ಯ, ಗಂಡುಗೊಡಲಿ ಹಿಡಿದ ಒಬ್ಬ ಕುದುರೆ ಸವಾರ, ಮೂರು ವ್ಯಕ್ತಿಗಳ ಸಾಲಿನಲ್ಲಿ ಬಲಗಡೆ ಕೊನೆಯವನ ಉದ್ದನೆ ತಲೆಗೂದಲು ಹಿಡಿದುಕೊಂಡು ಒಬ್ಬ ಎತ್ತರದ ಮನುಷ್ಯ, ಉದ್ದನೆ ಕೋಡುಳ್ಳ ಎತ್ತು, ಕೈ ಕೈ ಹಿಡಿದುಕೊಂಡ ಇಬ್ಬರು ವ್ಯಕ್ತಿಗಳ ಸಂಭೋಗ ಇವೇ ಮೊದಲಾದ ಚಿತ್ರಗಳಿವೆ. ವ್ಯಕ್ತಿಗಳ ಸಾಲಿನಲ್ಲಿ ಎಡಗಡೆಗೆ ಮನುಷ್ಯನ ತಲೆಗೂದಲು ನೆಟ್ಟಗೆ ನಿಂತಿದೆ. ಮತ್ತು ಬಲಗಡೆ ಮುಖಮಾಡಿದ ಹತ್ತು ಜಿಂಕೆಗಳ ಸಾಲು, ಉದ್ದನೆ ಕೋಡುಗಳುಳ್ಳ ಎತ್ತು, ಕುದುರೆಸವಾರರು, ಒಂದರಲ್ಲಿ ಏಳು ಮತ್ತೊಂದರಲ್ಲಿ ಆರು ನಿಂತ ವ್ಯಕ್ತಿಗಳ ಎರಡು ಸಾಲುಗಳು, ನಿಂತ ಮನುಷ್ಯ, ಕುದುರೆ ಸವಾರ, ಎಂಟು ಜಿಂಕೆಗಳ ಸಾಲು, ಕುಚ್ಚಿನಂಥ ಬಾಲವಿರುವ ಪ್ರಾಣಿ ಮತ್ತು ಎರಡು ಎತ್ತು(?)ಗಳಿವೆ. ಎರಡನೆಯ ಸಾಲಿನಲ್ಲಿ ಎಡಗಡೆಯಿಂದ ಮೂರನೆಯ ವ್ಯಕ್ತಿ ಪ್ರಾಯಶಃ ಹೆಂಗಸಿರಬೇಕು.

ಈ ಬಂಡೆಯ ಕೆಳಗಿರುವ ಬಂಡೆಯ ಮೇಲೆ ಮೇಲಿಂದ ಕೆಳಗಿನವರೆಗೆ ಹಲವಾರು ಚಿತ್ರಗಳಿವೆ. ಅಸ್ಪಷ್ಟ ಪ್ರಾಣಿ(?), ನವಿಲು, ಎತ್ತುಗಳು, ಒಂದು ಕುದುರೆಯ ಮೇಲೆ ನಿಂತ, ಇನ್ನೊಂದು ಕುದುರೆಯ ಮೇಲೆ ಕುಳಿತ ಇಬ್ಬರು ಸವಾರರು, ಕುದುರೆ ಸವಾರರ ಸಾಲು,



**ಕುದುರೆ ಸವಾರರು ಮತ್ತು ನೃತ್ಯಸಮೂಹ (ಬೃಹತ್ ಶಿಲಾಸಂಸ್ಕೃತಿ), ಹಿರೇಬೆನಕಲ್ಲು**

ಆಯುಧಪಾಣಿಯಾದ ಮನುಷ್ಯ, ಬಿಲ್ಲು ಹಿಡಿದ ಮನುಷ್ಯನ ಮುಂದೆ ಕುದುರೆ ಸವಾರ, ಮತ್ತೊಬ್ಬ ಕುದುರೆ ಸವಾರ, ಎತ್ತುಗಳು ಮತ್ತು ಒಬ್ಬ ಮನುಷ್ಯ: ಹೀಗೆ ಹಲವಾರು ಚಿತ್ರಗಳಿವೆ. ಜಿಂಕೆಗಳ ಬಾಲ ತುಂಬಾ ಕೂದಲಿನಿಂದ ಕೂಡಿದೆ. 1,4 ಮತ್ತು 6ನೆಯ ಗವಿ ಚಿತ್ರಗಳಲ್ಲಿ ಜಿಂಕೆಗಳ, ನವಿಲಿನ ಕುದುರೆ ಸವಾರರ ಮತ್ತು ಸಾಲು ಮನುಷ್ಯರ ಚಿತ್ರಗಳೂ ಇವೆ. ಆದರೆ ಮೇಲೆ ವಿವರಿಸಿದ 12ನೆಯ ಗವಿ ವರ್ಣಚಿತ್ರಗಳು ಕೆಲವೊಂದು ರೀತಿಯಲ್ಲಿ ವಿಶಿಷ್ಟವಾಗಿವೆ. ಕುದುರೆ ಸವಾರರನ್ನು ಮತ್ತು ಜಿಂಕೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಒಂದರ ಹಿಂದೆ ಒಂದರಂತೆ ನೇರ ಸಾಲಿನಲ್ಲಿ ಚಿತ್ರಿಸಿರುವುದು, ಸ್ತ್ರೀ ಪುರುಷ ಮತ್ತು ಲೈಂಗಿಕ ಕ್ರಿಯೆಯನ್ನು ದಿಟ್ಟವಾಗಿ ತೋರಿಸಿರುವುದು, ಕುದುರೆ ಸವಾರರಲ್ಲಿ ಕುದುರೆಗಳ ಲಗಾಮನ್ನು ತೋರಿಸಿರುವ ರೀತಿ ಮಾತ್ರ ವಿಚಿತ್ರವಾಗಿದೆ. ಕುದುರೆ ಬಾಯಲ್ಲಿಯ ಕಡಿವಾಣದಿಂದ ಲಗಾಮು ಕುತ್ತಿಗೆ ಕೆಳಗಿನಿಂದ ಮೇಲೆ ಹಾಯದೆ ತಲೆಯ ಮೇಲೆ ಹಾದು ಸವಾರನ ಕೈಯಲ್ಲಿದೆ. ಲಗಾಮು ಹಗ್ಗದ್ದಾಗಿರದೇ ಲೋಹದ ತಂತಿಯದಾಗಿರಬೇಕು. ಅಂತೂ ಈ ಕ್ರಮ ವಿಶಿಷ್ಟವಾಗಿದೆ. ಇದು ದಕ್ಷಿಣ ಸ್ವೀಡನ್ನಿನ ಕೀವಿಕ್ ಎಂಬಲ್ಲಿಯ ಕಂಚಿನ ಯುಗದ ಒಂದು ಕಲ್ಗೋರಿಯ ಮೇಲೆ ಮೂಡಿಸಿದ ಗಾಡಿ ಎಳೆಯುತ್ತಿರುವ ಕುದುರೆಗಳ ಲಗಾಮಿನ ರೀತಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಆದ್ದರಿಂದ ಈ ಕ್ರಮ ಬಹಳ ಪ್ರಾಚೀನವಾದದ್ದು ಎಂದು ಹೇಳಬಹುದು.

ಜಿಂಕೆಗಳ ಸಾಲಿನಲ್ಲಿ ಪ್ರತಿಯೊಂದು ಜಿಂಕೆಯ ಆಕಾರ, ದೇಹದ ಪ್ರಮಾಣಬದ್ಧತೆ ಒಂದೇ ರೀತಿಯಲ್ಲಿರುವುದು ಗಮನಾರ್ಹ, ಮೇಲೆ ಹೇಳಿದಂತೆ ಈಗಿನ ಹಾಗೆ ಒಂದು ತಗಡಿನಲ್ಲೊ ರಟ್ಟಿನಲ್ಲೊ ಬೇಕಾದ ಚಿತ್ರವನ್ನು ಕತ್ತರಿಸಿ, ಅದನ್ನು ಗೋಡೆಯ ಮೇಲಿಟ್ಟು ಕತ್ತರಿಸಿದ ಭಾಗವನ್ನಷ್ಟು ಬಣ್ಣದಿಂದ ಬಳಿದು ತೆಗೆದ ಚಿತ್ರದ ಹಾಗಿವೆ. ಈ ಕ್ರಮದಲ್ಲಿ ತೆಗೆದ ಎಲ್ಲ ಚಿತ್ರಗಳು ಒಂದೇ ಪ್ರಕಾರವಾಗಿರುತ್ತವೆ. ಮತ್ತು ಹೇಳಿದ ಸಾಲಿನಲ್ಲಿರುವ ಜಿಂಕೆಚಿತ್ರಗಳು ಮೇಲ್ನೋಟಕ್ಕೆ ಈ ರೀತಿ ಒಂದೇ ವಿಧ ಇವೆ. ಬಹುಸೂಕ್ಷ್ಮವಾಗಿ ಪರಿಶೀಲಿಸಿದಾಗ ಅಲ್ಲೊಂದು ಇಲ್ಲೊಂದು ಸ್ವಲ್ಪ ವ್ಯತ್ಯಾಸಗಳು ಕಾಣಬಹುದು.

ಇಪ್ಪತ್ತೇಳು ಜನರ ಸಾಲಿನ ಚಿತ್ರ ಹಾಗೂ ಹನ್ನೆರಡು ಜನರ ಸಾಲಿನ ಚಿತ್ರ ಶೈಲಿಯಲ್ಲಿ ಭಿನ್ನವಾಗಿವೆ. ಮೊದಲನೆಯದರಲ್ಲಿ ಚಿತ್ರಗಳು ಹೆಚ್ಚು ದೃಢಕಾಯದವರಂತೆ ಇವೆ. ವಿಶಾಲ ಭುಜ, ಅಗಲ ಎದೆ, ಪುಷ್ಟವಾದ ತೊಡೆ, ಕಾಲುಗಳ ಎತ್ತರ ಸು.27ಸೆಂಮೀ. ಹುಡುಗನ ಎತ್ತರ ಸು. 14 ಸೆಂಮೀ. ಹೆಚ್ಚು ಕಡಿಮೆ ನೇರವಾದ ಸಾಲು (1.52ಮೀ ಉದ್ದ). ಬಣ್ಣವು ಕೂಡ ಕಪ್ಪು ನೇರಳೆ. ಎರಡನೆಯದರಲ್ಲಿ ವ್ಯಕ್ತಿಗಳು ಎತ್ತರ, ನೀಳ, ಮುಂಡದ ಭಾಗ ತೆಳ್ಳಗೆ, ಕಾಲುಗಳು ಕಡ್ಡಿಯ ಹಾಗೆ, ತೊಡೆಯ ಭಾಗ ಮಾತ್ರ ಸ್ಥೂಲ. ಸಾಲು ಸ್ವಲ್ಪ ವೃತ್ತವಾಗಿದ್ದು, ಜನರು ವರ್ತುಲಾಕಾರದಲ್ಲಿ ನಿಂತಿದ್ದಾರೆ ಎಂಬುದನ್ನು ಸುಲಭವಾಗಿ ಚಾಣಾಕ್ಷತನದಿಂದ ತೋರಿಸಲಾಗಿದೆ.

ಕೆಂಪೊತ್ತಿದ್ದ ಬಣ್ಣ ಸಾಲಿನ ಜಿಂಕೆಗಳ ದೇಹ ಉದ್ದ ಹಾಗೂ ತೆಳ್ಳಗೆ, ಕಾಲುಗಳ ಕಡ್ಡಿಯಂತೆ, ಕೋಡುಗಳು ಕವಲೊಡೆದ ರಂಬೆಯಂತಿವೆ. ಬಾಲ; ಸಣ್ಣದಿದ್ದು ಮೇಲಕ್ಕೆತ್ತಿದೆ. ಕುತ್ತಿಗೆ ನೀಳ, ಸಣ್ಣ ಹಾಗೂ ನೆಟ್ಟಗಿದ್ದು, ತಲೆಯೆತ್ತಿ ನೋಡುತ್ತಿರುವ ಹಾಗಿದೆ. ಎತ್ತುಗಳ ಕೋಡುಗಳು ಉದ್ದವಾಗಿದ್ದು, ಒಂದೇ ರೀತಿಯಲ್ಲಿ ಮೇಲೆ ಬಾಗಿವೆ. ನಿಸರ್ಗದಲ್ಲಿ ಬೆಳೆದ ಒಳ್ಳೆ ಬಲಶಾಲಿ ತಳಿ ಎಂಬಂತೆ ಇವೆ. ಜಿಂಕೆಗಳು ಸಾಮಾನ್ಯವಾಗಿ ಗುಂಪು ಗುಂಪಾಗಿ ಓಡಾಡುತ್ತಿರುವಂತಿವೆ.

ಹಂಪಿಯಲ್ಲಿ ಆರು ಸ್ಥಳಗಳಲ್ಲಿ ಶೋಧವಾದ ವರ್ಣಚಿತ್ರ ಗವಿಗಳಲ್ಲಿ ಸ್ಥಳೀಯವಾಗಿ ಕರೆಯಲ್ಪಟ್ಟ ಬರಮ ದೇವರ ಗುಂಡಿನ ಚಿತ್ರಗಳು ಅತ್ಯಂತ ವಿಸ್ಮಯಕಾರಿಯೂ ರೋಚಕವೂ ಅರ್ಥಪೂರ್ಣವೂ ಆಗಿವೆ. ಇವುಗಳು ಬರೆಯಲ್ಪಟ್ಟ ಕಲ್ಲಾಸರೆ ಸ್ವಲ್ಪವೆ ಹಿಂಜರಿದ ಅರ್ಧಗೋಲಾಕೃತಿಯ ಚಿತ್ರಪಟದಂತಿದೆ. ಇದರ ಮೇಲೆ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ಕುಣಿತದಲ್ಲಿ ತೊಡಗಿದ ನಾಲ್ಕು ಸ್ವಲ್ಪ ದೊಡ್ಡ ದೊಡ್ಡ ಮನುಷ್ಯಾಕೃತಿಗಳಿವೆ. ವ್ಯಕ್ತಿಗಳು ಈ ಗೋಲಾಕೃತಿಯ ರಂಗಮಂಟಪದಲ್ಲಿದ್ದಂತೆ ಕಾಣುತ್ತವೆ. ತನ್ನ ಚಿತ್ರಗಳಿಗೆ ಸೂಕ್ತ ಆಸರೆಯನ್ನು ಅರಸುವುದರಲ್ಲಿ ಆ ಕಾಲವಿದನ ಪ್ರತಿಭೆಗೆ ಇದು ಒಂದು ಉತ್ತಮ ನಿದರ್ಶನ. ಎಡಗಡೆಯಿಂದ ಮೊದಲನೆಯ ಮೂರು ಬಲಬದಿ ನೋಟದಲ್ಲಿವೆ. ಕೊನೆಯದು ಮುಂಬದಿ ನೋಟದಲ್ಲಿದೆ. ಮೊದಲನೆಯ ಎರಡು ಚಿತ್ರಗಳಲ್ಲಿ ಸ್ಪಷ್ಟವಾಗಿ ಉಬ್ಬಿದ ಸ್ತನವು ಕಾಣಿಸುವುದರಿಂದ ಅವು ಸ್ತ್ರೀ ಆಕೃತಿಗಳು. ಮೂರನೆಯದು ಪುರುಷನ ಸಣ್ಣಾಕೃತಿ. ಬಹುಶಃ ಹುಡುಗನಿರಬೇಕು. ತಲೆಯ ಭಾಗವು ಅಳಿಸಿ ಹೋಗಿರಬಹುದು. ಈ ಮೂರೂ ಸ್ವಲ್ಪ ಕುಗ್ಗಿ ನಿಂತ ಭಂಗಿಯಲ್ಲಿವೆ. ಮುಂಡದ ಭಾಗ ಸ್ವಲ್ಪ ಮುಂದೆ ಬಾಗಿದೆ. ಕೈಗಳನ್ನು ನೆಟ್ಟಗೆ ಮುಂಚಾಚಿದೆ. ಬೆರಳುಗಳನ್ನು ಬಿಡಿಸಲಾಗಿದೆ. ಮುಖವನ್ನು ಬಲಕ್ಕೆ ಅಂದರೆ ಮುಂಬದಿಗೆ ತಿರುಗಿಸಿದೆ. ಮೊದಲನೆಯದಕ್ಕೆ ಬಾಲವಿದ್ದಂತಿದ್ದು, ಮೇಲಕ್ಕೆತ್ತಲ್ಪಟ್ಟಿದೆ. ತಲೆಯಿಂದ ಹಿಡಿದು ಕಾಲಿನವರೆಗೂ ಇಡೀ ಮೈಯಲ್ಲಿ ರೇಖಾಚಿತ್ರಗಳಿಂದ ತುಂಬಿಹೋಗಿದೆ. ಮುಖದ ಮೇಲೆ ಗುಣಾಕಾರ ಆಕೃತಿಯಿದ್ದು, ಪ್ರತಿಯೊಂದು ಕವಲಿನಲ್ಲಿಯೂ ಒಂದೊಂದು ಅರ್ಧ ಕಂಸವಿದೆ. ಕೈಗಳ ಮೇಲೆ ಉದ್ದಕ್ಕೂ ನೀಳ ರೇಖೆಗಳಿವೆ. ಮುಂದೆ ಎದೆ ಭಾಗದ ಮೇಲೆ ದ್ವಿರೇಖೆಯ ಗುಣಾಕಾರ ಆಕೃತಿಯಿದ್ದು, ರೇಖೆಗಳ ಮಧ್ಯದಲ್ಲಿ ಅಡ್ಡ ರೇಖೆಗಳಿವೆ. ಈ ರೀತಿಯ ಚಿತ್ರಿತ ದೇಹವುಳ್ಳ ಮನುಷ್ಯಾಕೃತಿಗಳು ಮಲ್ಲಾಪುರ ಮತ್ತು ಹಿರೇಬೆನಕಲ್ಲಿನ 3ನೆಯ ಗವಿಯಲ್ಲಿ ಇವೆ. ನಾಲ್ಕನೆಯ ವ್ಯಕ್ತಿಯ ಎರಡೂ ಕೈಗಳು ಆ ಕಡೆ ಈ ಕಡೆ ಮುಂಚಾಚಿವೆ. ಇದರ ತಲೆಯ ಭಾಗ ಅಷ್ಟಾಗಿ ಸ್ಪಷ್ಟವಾಗಿಲ್ಲ. ಎದೆಯ ಭಾಗ ತೀರ ಸಣ್ಣಗಿದ್ದು, ಹೊಟ್ಟೆಯ ಭಾಗ ಅತಿರೇಕವಾಗಿ ಉಬ್ಬಿದೆ. ಕಾಲುಗಳು ಅಗಲಿಸಿದ್ದು ಕೈಗಳಂತೆ ತೆಳ್ಳಗಿವೆ. ಇದು ಗರ್ಭಿಣಿ ಸ್ತ್ರೀ ಚಿತ್ರವಾಗಿರಬಹುದು.

ಈ ರೀತಿಯ ಸ್ತ್ರೀಯರ ನಗ್ನ(?) ಗುಪ್ತ ಕುಣಿತ ಮಲ್ಲಾಪುರದಲ್ಲಿಯೂ ಇದೆ. ಹಿರೇಬೆನಕಲ್ಲಿನ 3ನೆಯ ಗವಿ, ಮಲ್ಲಾಪುರ ಮತ್ತು ಹಂಪಿಯ ಈ ಚಿತ್ರಗಳು ಸು.10ಕಿಮೀ ಅಂತರದಲ್ಲಿವೆ. ಹಿರೇಬೆನಕಲ್ಲಿನ ಸಮೂಹ ಕುಣಿತದ ರೀತಿಯೇ ಬೇರೆ. ಮೇಲಿನ ಸ್ತ್ರೀ ಸಮೂಹದ ಕುಣಿತವೇ ಬೇರೆಯಾಗಿದ್ದು, ತುಂಬಾ ವಿಶಿಷ್ಟವಾಗಿದೆ.

ಪೂರ್ವ ಪಶ್ಚಿಮವಾಗಿ ಗಂಗಾವತಿಯಿಂದ ಬಿಳಿಬಾವಿ ಮತ್ತು ಉತ್ತರ–ದಕ್ಷಿಣವಾಗಿ ಇಂದುರ್ಗಿ–ಮುದಗಲ್ಲಿನಿಂದ ಬಳ್ಳಾರಿ–ಹೊಸಪೇಟೆ, ಆದರೆ ಕ್ರಮವಾಗಿ 50ಕಿಮೀ ಮತ್ತು 40 ಕಿಮೀ ಪ್ರದೇಶದಲ್ಲೆಲ್ಲಾ ಸಾಲುಸಾಲಾಗಿ ಬಂಡೆಗಳ ಗಿಡ್ಡಗಾಡುಗಳಿದ್ದು, ಹಿಂದೆ ಇಲ್ಲೆಲ್ಲ ಹುಲಿ, ಚಿರತೆ, ಕರಡಿ, ತೋಳ, ಮುಳ್ಳುಹಂದಿ, ಕಾಡೆಮ್ಮೆ, ಗೂಳಿ, ಜಿಂಕೆ ಹಾಗೂ ನವಿಲು ಮೊದಲಾದ ಪ್ರಾಣಿಪಕ್ಷಿಗಳಿದ್ದವು. ಈಗಲೂ ಚಿರತೆ, ತೋಳ, ಮುಳ್ಳಹಂದಿ ಮುಂತಾದವು ಅಲ್ಪ ಪ್ರಮಾಣದಲ್ಲಿವೆ. ಗಂಗಾವತಿಗೆ ಸು. 6 ಕಿಮೀ ಪಶ್ಚಿಮಕ್ಕೆ ದೂರದಲ್ಲಿರುವ ಹಿರೇಬೆನಕಲ್ಲು ಗುಡ್ಡದಲ್ಲಿ ಮೇಲೆ ಹೇಳಿದಂತೆ ಬೃಹತ್‌ಶಿಲಾ ಸಂಸ್ಕೃತಿಯ ಜನರ ವಾಸ್ತವ್ಯದ ನೆಲೆ ಮತ್ತು ಅವರು ನಿರ್ಮಿಸಿದ ನೂರಾರು ಕಲ್ಗೋರಿಗಳಿವೆ. ಈ ಪ್ರದೇಶದಲ್ಲೆಲ್ಲಾ ನವ ಶಿಲಾಯುಗ ಹಾಗೂ ಕಬ್ಬಿಣಯುಗದ ಬೃಹತ್‌ಶಿಲಾ ಸಂಸ್ಕೃತಿಯ ಜನರು ಇಲ್ಲಿ ನೆಲಸಿದ್ದರೆಂದು ಮಸ್ಕಿ, ಪಿಕ್ಲಿಹಾಳ, ಸಂಗನಕಲ್ಲುಗಳಲ್ಲಿಯ ಪ್ರಾಚೀನ ನಿವೇಶನಗಳಲ್ಲಿ ನಡೆಸಿದ ಪುರಾತತ್ತ್ವ ಉತ್ಖನನ ಗಳಿಂದ ತಿಳಿದಿದೆ. ಮತ್ತು ಎರಡನೆಯ ಹಂತದ ಜನರು ಹೆಚ್ಚಾಗಿ ಕುದುರೆ ಸವಾರರು ಆಗಿದ್ದರು. ಮೇಲೆ ವಿವರಿಸಿದ ಚಿತ್ರಗಳಲ್ಲಿ ಆಯುಧಪಾಣಿಗಳಾದ ಕುದುರೆ ಸವಾರರ ಚಿತ್ರಗಳು ಇವೆ. ಒಟ್ಟಿನಲ್ಲಿ, ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಿಸರಕ್ಕೆ ಹೊಂದಿದ ಹಾಗೆ ಮನುಷ್ಯರ, ಪ್ರಾಣಿಗಳ ವಿಶಿಷ್ಟ ಲಕ್ಷಣಗಳನ್ನು ಮತ್ತು ಚಲನವಲನಗಳನ್ನು ಸೂಕ್ಷ್ಮವಾಗಿ ನೋಡಿ ಗ್ರಹಿಸಿ, ಕೇವಲ ಛಾಯಾಕೃತಿಯ ಶೈಲಿಯಾಗಿದ್ದರೂ ರೇಖಾ ವಿನ್ಯಾಸದಲ್ಲಿ ಸ್ಪಷ್ಟವಾಗಿ, ಶಕ್ತಿಶಾಲಿಯಾಗಿ ನೋಡುವವನ ಮನಸ್ಸಿಗೆ ಆಯಾ ಪ್ರಾಣಿಗಳ ಸರಿಯಾದ ಕಲ್ಪನೆ ಬರುವ ಹಾಗೆ ಮಾಡಿರುವುದು ಮೆಚ್ಚತಕ್ಕದು. ಬಹುಶಃ ಈ ಚಿತ್ರಗಳನ್ನು ಇವೆರಡು ಸಂಸ್ಕೃತಿಗಳು ಒಂದರಲ್ಲೊಂದು ವ್ಯಾಪಿಸಿಕೊಂಡ ಮತ್ತು ಸ್ವಲ್ಪನಂತರ ಕಾಲದವರೆಗಿನ ಸಮಯದಲ್ಲಿ ಬಿಡಿಸಿರಬೇಕೆಂದು ತರ್ಕಿಸಬಹುದು. ಚಿತ್ರದಲ್ಲಿ ಕುದುರೆ ಸವಾರ ಲಗಾಮು ಹಿಡಿದ ರೀತಿ ಈ ಚಿತ್ರಗಳ ಪ್ರಾಚೀನತೆಯನ್ನು ಸೂಚಿಸುತ್ತದೆ.

ಸಾಲುಗೂಳಿಗಳು, ಕಜೂರು (ಗೋವ)

**ಬಯಲುಬಂಡೆ ಚಿತ್ರಗಳು:** ಬಯಲುಬಂಡೆ ಚಿತ್ರಗಳ ಕ್ರಮ ಸಹಜವಾಗಿ ಭಿನ್ನವಾಗಿದೆ. ದೊಡ್ಡ ದೊಡ್ಡ ಬಂಡೆಗಳ ರಾಶಿಯಂತಿರುವ ಬೆಟ್ಟಗಳ ಮಧ್ಯದ ಮತ್ತು ಮೇಲಿನ ಹಂತಗಳಲ್ಲಿ ಬಯಲಿನಲ್ಲಿರುವ ಅಲ್ಲೊಂದು ಇಲ್ಲೊಂದು ಬಂಡೆಯ ಸಮಾನ ಮೇಲ್ಮೈಯ ಮೇಲೆ ಬೇಕಾದ ಚಿತ್ರವನ್ನು ಮೂಡಿಸುವುದಕ್ಕೆ ಅನುಕೂಲಕರವಾದ ಕಲ್ಲಿನಿಂದ ಏಕಪ್ರಕಾರವಾಗಿ ಕುಟ್ಟಿ ಕುಟ್ಟಿ ಬಿಡಿಸುವುದು; ಇಲ್ಲವೆ ಉಳಿಯಂತಹ ಮೊನಚಾದ ಉಪಕರಣದಿಂದ ಗೆರೆಗಳನ್ನು ಮೂಡಿಸುವುದು. ಕೆಲವೊಂದು ನೆಲೆಗಳಲ್ಲಿ ಇವೆರಡೂ ವಿಧವಾದವು ಇವೆ. ಕುಟ್ಟಿದ/ಗೀರಿದ ಚಿತ್ರಗಳು ಹೆಚ್ಚಾಗಿ ಕಲ್ಲೂರು (ರಾಯಚೂರು ತಾಲ್ಲೂಕು), ಬೆಳಗಲ್ಲು ಮತ್ತು ಹಳಕುಂದಿ (ಬಳ್ಳಾರಿ ಜಿಲ್ಲೆ); ಗೀರು ರೇಖಾಚಿತ್ರಗಳು ಚಿತ್ರದುರ್ಗ, ಬ್ರಹ್ಮಗಿರಿ ಹಾಗೂ ಇವೆರಡೂ ಭಿಲ್ಲಮರಾಯನಗುಡ್ಡ (ಲಿಂಗಸುಗೂರು ತಾಲ್ಲೂಕು), ಹಳಕುಂದಿ ಮೊದಲಾದೆಡೆಗಳಲ್ಲಿವೆ. ಅಪರೂಪವಾಗಿ ಒಂದೇ ಚಿತ್ರದಲ್ಲಿ ಲೋಹದ ಉಪಕರಣದಿಂದ ರೇಖಿಸಿದ ಹಾಗೂ ಒಂದೇ ಸಮನೆ ಕುಟ್ಟಿದ ಚಿತ್ರಗಳೂ ಇವೆ. ಭಿಲ್ಲಮರಾಯನಗುಡ್ಡದಲ್ಲಿಯ ಇತಿಹಾಸ ಕಾಲದ ಹುಲಿಯ ಚಿತ್ರವು ಇದಕ್ಕೆ ಒಂದು ಉತ್ತಮ ನಿದರ್ಶನ. ಇದರಲ್ಲಿ ಕುಟ್ಟುವಿಕೆ ಮತ್ತು ಗೀರುವಿಕೆ ಇವೆರಡೂ ತಂತ್ರಗಳನ್ನು ಬಳಸಲಾಗಿದೆ. ಚಿತ್ರಗಳಲ್ಲಿ ಗೂಳಿಗಳೇ ಬಹಳ. ಕಾಡುಕೋಣ, ಜಿಂಕೆಗಳು ಕಡಿಮೆ. ಮನುಷ್ಯನ ಚಿತ್ರವು ತೀರ ಕಡಿಮೆ. ಇತ್ತೀಚಿನ ಕಾಲದ ಚಿತ್ರಗಳಲ್ಲಿ ರೇಖಾಚಿತ್ರಗಳು, ಮುಸಲ್ಮಾನ ಪಂಥದ ಪಂಜ, ಹನುಮಾನ್, ರೈಲುಬಂಡಿ ಮೊದಲಾದ ಚಿತ್ರಗಳೂ ಇರುತ್ತವೆ. ಶಂಖದ ಹುಳುವಿನ ಚಿತ್ರವೂ ಅಪ್ಪಯ್ಯನಹಳ್ಳಿ ಮತ್ತು ಚಿತ್ರದುರ್ಗಗಳಲ್ಲಿವೆ. ಒಂದೊಂದು ಬಂಡೆಯ ಮೇಲೆ ಸಾಮಾನ್ಯವಾಗಿ ಒಂದೇ ಚಿತ್ರವಿದೆ. ಹೀಗೆ ಅಕ್ಕಪಕ್ಕದ ಬಂಡೆಗಳ ಮೇಲೆ ಹಲವಾರು ಚಿತ್ರಗಳಿರುತ್ತವೆ.

ಕಜೂರು ಮತ್ತು ಉಸ್‌ಗಾಲಿಮೋಲ್(ರೇಪೆಮ ತಾಲ್ಲೂಕು, ಗೋವ) ಬಂಡೆಗಳ ಮೇಲೆ ಒಂದರ ಹಿಂದೆ ಒಂದರಂತೆ ಎರಡು ಸಾಲುಗಳಲ್ಲಿ ಒಟ್ಟು ಎಂಟು ಗೂಳಿಗಳ ಪಾರ್ಶ್ವದೃಶ್ಯವಿದೆ. ಇವು ಗುಂಪುಗುಂಪಾಗಿ ಮುಂದೆ ಹೋಗುತ್ತಿವೆಯೇನೋ ಎನ್ನುವಂತೆ ಭಾಸವಾಗುತ್ತದೆ. ಈ ನೆಲೆಯ ಸಮೀಪ ಬಲಿಷ್ಠವಾದ ಮತ್ತೊಂದು ಗೂಳಿ(?) ಚಿತ್ರವಿದೆ. ಇದರಲ್ಲಿ ಕೊಂಬುಗಳು ಮುಂದೆ ಬಾಗಿದ್ದು, ಸಿಟ್ಟಿನಿಂದ ಹಾಯಲು ಬರುತ್ತಿದೆಯೇನೋ ಎಂಬಂತಿದೆ. ಇದೊಂದು ಉತ್ತಮ ಕಲಾಕೃತಿ. ಇನ್ನೊಂದರಲ್ಲಿ ಕ್ಷಕಿರಣದ ಛಾಯಾಚಿತ್ರದಲ್ಲಿ ನೋಡಿದಂತೆ ಶರೀರದ ಒಳಭಾಗವನ್ನು ತೋರಿಸಲಾಗಿದೆ. ಇನ್ನೊಂದು ಮನುಷ್ಯಾಕೃತಿ. ಕಾಲುಗಳನ್ನು ಅಗಲಿಸಿ, ಕೈಗಳನ್ನು ಅಡ್ಡಲಾಗಿ ಸ್ವಲ್ಪ ಮೇಲಕ್ಕೆತ್ತಿ ನಿಂತ ವ್ಯಕ್ತಿ. ಮತ್ತೊಂದು ಚಕ್ರವ್ಯೂಹ. ಮಧ್ಯಪ್ರದೇಶದಲ್ಲಿಯ ತೀಕ್ಷ್ಣದಲ್ಲಿ ಇಂಥ ಕೋಟೆ ವಿನ್ಯಾಸದ ವರ್ಣಚಿತ್ರವಿದೆ. ಇದು ತಾಮ್ರ–ಶಿಲಾ ಸಂಸ್ಕೃತಿಗೆ ಸೇರಿದ್ದೆಂದು ತೋರುವುದು.



ಮಂಡಲಸಹಿತ ಗೂಳಿಗಳ ಸಾಲು, ಸೋಂದಾ

ಸೋಂದಾ (ಉತ್ತರ ಕನ್ನಡ ಜಿಲ್ಲೆ, ಸಿರಸಿ ತಾಲ್ಲೂಕು)ದಲ್ಲಿಯ ಚಿತ್ರಗಳು ಗೋವದಲ್ಲಿಯ ಗೂಳಿಚಿತ್ರಗಳನ್ನು ಹೋಲುತ್ತವೆ. ಆದರೆ ಮುಂದಿನ ಹಿಂದಿನ ಕಾಲುಗಳ ಬುಡದಿಂದ ರೇಖೆಗಳು ಕೆಳಮುಖವಾಗಿ ಮುಂದುವರೆದು ಎರಡು ಮಂಡಲಗಳಲ್ಲಿ ಕೊನೆಗೊಳ್ಳುವುದು ಕುತೂಹಲಕಾರಿಯಾಗಿದೆ.

ಅಂಕೋಲದ ಸು.1.5 ಕಿಮೀ ಆಗ್ನೇಯ ದಿಕ್ಕಿಗಿರುವ ಬೋಳೆಪ್ರದೇಶದಲ್ಲಿ ಕೆಲವು ಚಿತ್ರಗಳಿವೆ. ಇಲ್ಲಿ ಸಮತಟ್ಟಾದ ಜಂಬಿಟ್ಟಿಗೆಯ ಕಲ್ಲಿನ ಮೇಲೆ ಎರಡು ಎದುರುಬದುರಾಗಿ ನಿಂತಿರುವ ಗೂಳಿಗಳು ಅಥವಾ ಹಸುಗಳು, ಸೊಂಡಿಲನ್ನು ಎತ್ತಿದ ಆನೆ, ಹಾವು, ಜಿಂಕೆ, ಮೀನು ಮತ್ತು ನಾಲ್ಕು ಭಾಗಗಳುಳ್ಳ ಒಂದು ಆಯತಾಕೃತಿಗಳಿವೆ. ಈ ಚಿತ್ರಗಳ ಸಮೀಪದಲ್ಲಿಯೇ 1–2ನೆಯ ಶತಮಾನದ ಒಂದು ಇಟ್ಟಿಗೆಯ ಶಿವ ದೇವಾಲಯವಿತ್ತು. ಆದರೆ ಇದು ಪೂರ್ಣ ಹಾಳಾಗಿದೆ. ಇಲ್ಲಿಂದ ಸು.2–2.5 ಕಿಮೀ ದೂರದಲ್ಲಿರುವ ಬೆಲೆಕೆರೆಯಲ್ಲಿ ಸೂಕ್ಷ್ಮಶಿಲಾಯುಗದ ನೆಲೆ ಇದೆ. ತುಲನಾತ್ಮಕವಾಗಿ ಇದರ ಕಾಲಮಾನ ಪ್ರಶ.ಪೂ.ಸು.5000. ಪ್ರಾಯಶಃ ಈ ಚಿತ್ರಗಳು ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಕಾಲದ್ದವಾಗಿರಬಹುದೇನೋ.

ಮಂಡಲಸಹಿತ ಜೋಡಿಗೂಳಿಗಳು (ಬೃಹತ್‌ಶಿಲಾಸಂಸ್ಕೃತಿ), ಗಾವಳಿ

ಆದರೆ ರೇಖೆಗಳ ಲಕ್ಷಣಗಳನ್ನು ಪರಿಶೀಲಿಸಿದಾಗ ಈ ಚಿತ್ರಗಳು ಬಹುಮಟ್ಟಿಗೆ ಶಿಲಾ–ತಾಮ್ರಯುಗ–ಆದಿ ಬೃಹತ್‌ಶಿಲಾ ಸಂಸ್ಕೃತಿ ಕಾಲದವೆಂದು ತೋರುತ್ತದೆ.

ಸೋಂದಾದಲ್ಲಿರುವಂತೆ ಗಾವಳಿ (ಕುಂದಾಪುರ ತಾಲ್ಲೂಕು)ಯಲ್ಲಿಯೂ ಇಂಥ ಪಶುವಿನ ಕಾಲುಗಳಿಂದಿಳಿದ ರೇಖೆಗಳು ಎಂಟು ಗುಣಿಸಿನ ದ್ವಿಚತುರ್ಭುಜಾಕೃತಿಯನ್ನು ತಾಳುತ್ತವೆ. ಒಂದು ದೊಡ್ಡ ಗುಂಡುಕಲ್ಲಿನ ಮೇಲೆ ಎದುರು ಬದುರಾಗಿರುವ ಪಶುಗಳಿರುವ

ಈ ಚಿತ್ರವಿದೆ. ಇದರ ಕೋಡುಗಳ ನಡುವೆ ಯಾವುದೋ ಒಂದು ಅಕ್ಷರದ ಹಾಗೆ ಸಣ್ಣ ರೇಖಾಚಿತ್ರವಿದೆ; ಹರಪ್ಪ ಲಿಪಿಮಾಲೆಯ ಒಂದು ಅಕ್ಷರವನ್ನು ಇದು ನಿಕಟವಾಗಿ ಹೋಲುತ್ತದೆ. ಒಂದೇ ಪ್ರಾಣಿ ಚಿತ್ರದೊಂದಿಗೆ ಒಂದೇ ಅಕ್ಷರವಿರುವ ಹರಪ್ಪ ಮುದ್ರಿಕೆಗಳು ಹಲವಾರು ಇವೆ. ಈ ಸ್ಥಳದ ಇನ್ನೊಂದು ಬಂಡೆಯ ಮೇಲೆ ಮೊಹೆಂಜೋದಾರೊವಿನಲ್ಲಿ ದೊರೆತ ಒಂದು ಮುದ್ರಿಕೆ ಮೇಲಿನ ಚಿತ್ರದಲ್ಲಿರುವಂತೆ ಮೂಲೆಗಳಲ್ಲಿ ಗಂಟುಗಳುಳ್ಳ ಪರಸ್ಪರ ಛೇಧಿಸಿರುವ ಎರಡು ಚತುರ್ಭುಜಾಕೃತಿಗಳಿವೆ. ಇಲ್ಲಿ ಒಂದು ಕುತೂಹಲಕಾರಿ ಅಂಶವಿದೆ. ಇಂಥ ಚಿತ್ರವನ್ನು ಈಗಲೂ ಕೆಲವು ವೈದಿಕ ಧಾರ್ಮಿಕ ಕಾರ್ಯಗಳಲ್ಲಿ ರಂಗೋಲಿಯಲ್ಲಿ ಬಿಡಿಸಿ, ಸಾಂಕೇತಿಕವಾಗಿ ನವಗ್ರಹ ಮಂಡಲವೆಂದು ಪೂಜಿಸುತ್ತಾರೆ. ಆದ್ದರಿಂದ ಗಾವಳಿಯ ಚಿತ್ರ ಇಂಥ ಪಶುವನ್ನು ವಾಹನವಾಗುಳ್ಳ ಈಶನ(ವಾಹನ–ನಂದಿ) ಅಥವಾ ಯಮ(ವಾಹನ–ಕೋಣ) ದೇವತೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತದೆಯೇ ಅಥವಾ ಈ ಪ್ರಾಣಿಯನ್ನು ಇಂಥ ಮಂತ್ರ ಪುರಸ್ಸರ ಮಂಡಲದಲ್ಲಿ ಬಂಧಿಸಿ ಪೂಜಿಸುವ ಒಂದು ವೈದಿಕ ಯಜ್ಞದ ಕುರುಹು ಇರಬಹುದೆ ಎಂಬ ಪ್ರಶ್ನೆಯಿದೆ. ಗೋವದಿಂದ ಕುಂದಾಪುರದವರೆಗೆ ಕಂಡುಬರುವ ಈ ಚಿತ್ರಗಳು ವಿಶಿಷ್ಟವೂ ಕುತೂಹಲಕಾರಿಯೂ ಆಗಿವೆ.

ಹೊಳಲೂರಿನ ಚಿತ್ರದಲ್ಲಿ ಸು.12 ಪಶುಗಳಿವೆ. ಇಲ್ಲಿ ಹಿಂಬಾಗಿದ ಕೋಡುಗಳ ಪಶುಗಳೇ ಹೆಚ್ಚು. ಒಂದರಲ್ಲಿ ಶರೀರದ ಒಳಭಾಗವನ್ನು ತೋರಿಸಲಾಗಿದೆ. ಕೆಲವು ಎದುರು ಬದುರಾಗಿ ನಿಂತಿದ್ದರೆ, ಮತ್ತೆ ಕೆಲವು ಎಡ ಅಥವಾ ಬಲಕ್ಕೆ ಮುಖಮಾಡಿ ನಿಂತಿವೆ. ಈ ಪಶುಗಳ ಮೇಲೆ ಕೈಯಲ್ಲಿ ಕೋಲುಹಿಡಿದು ನಿಂತ ಮನುಷ್ಯನ ಸಣ್ಣ ಆಕೃತಿಯಿದೆ. ಬಂಡೆಯ




ತುಂಗಾ ನದಿ ಮಧ್ಯೆಯಿರುವ ಬಂಡೆ ಮೇಲಿನ ಗೂಳಿ ಚಿತ್ರಗಳು, ಹೊಳಲೂರು

ಇನ್ನೊಂದು ಬದಿಯಲ್ಲಿ ಆನೆಯ ಒಂದು ದೊಡ್ಡ ಚಿತ್ರ, ಮತ್ತೊಂದು ಬದಿಯಲ್ಲಿ ಜೋಡಿಹಾವು(?), ಆಮೆ(?), ಕಮಲ ಪುಷ್ಪದ ಚಿತ್ರಗಳಿವೆ. ಇವೆಲ್ಲವನ್ನೂ ಒಟ್ಟಾರೆ ನೋಡಿದಾಗ ಇದು ಒಬ್ಬನು ಕಾಡಿಗೆ ಪಶುಗಳನ್ನು ಮೇಯಿಸಲು ಕರೆದುಕೊಂಡು ಹೋಗುತ್ತಿರುವ ದೃಶ್ಯವಿರಬಹುದೆ ಎಂಬ ಅನುಮಾನ ಬರುತ್ತದೆ.

ಗೋವ ಮತ್ತು ಗಾವಳಿ ಚಿತ್ರಗಳ ಸು.1–3 ಕಿಮೀ ದೂರದಲ್ಲಿ ಕಬ್ಬಿಣಯುಗದ ಬೃಹತ್ ಶಿಲಾಸಂಸ್ಕೃತಿ ಕಲ್ಗೋರಿಗಳ ನೆಲೆಯಿದೆ. ಗಾವಳಿಯ ದಕ್ಷಿಣಕ್ಕೆ ಸೀತಾನದಿ ಬಯಲಿನ ನಾಲ್ಕು ಸ್ಥಳಗಳಲ್ಲಿ ನವಶಿಲಾಯುಗ ಸಂಸ್ಕೃತಿಯ ಕಲ್ಲಿನ ಕೊಡಲಿಗಳು ಸಿಕ್ಕಿವೆ.

ಬೆಳಗಾಂವಿ, ಬಿಜಾಪುರ, ರಾಯಚೂರು–ಬಳ್ಳಾರಿ–ಚಿತ್ರದುರ್ಗ ಪ್ರದೇಶಗಳು, ನವಿಲುತೀರ್ಥ(ಸವದತ್ತಿ), ಕುಳ್ಳೊಳ್ಳಿ (ಜಮಖಂಡಿ), ಭಿಲ್ಲಮರಾಯನಗುಡ್ಡ, ತಾವರಗೇರ, ಮಸ್ಕಿ (ಲಿಂಗಸುಗೂರು), ಕಲ್ಲೂರು (ರಾಯಚೂರು), ಕುಪ್ಪಗಲ್ಲು, ಹಳಕುಂದಿ(ಬಳ್ಳಾರಿ) ಮತ್ತು ಚಿತ್ರದುರ್ಗ ನೆಲೆಗಳು ಗಮನಾರ್ಹ. ಈ ಎಲ್ಲ ನೆಲೆಗಳಲ್ಲಿ ಗೂಳಿ, ಆಕಳು, ತಕ್ಕಮಟ್ಟಿಗೆ ಜಿಂಕೆಗಳ ಚಿತ್ರಗಳೇ ಹೆಚ್ಚು. ಮನುಷ್ಯಾಕೃತಿಗಳು ತೀರಾ ಕಡಿಮೆ. ರೇಖಾಮಂಡಲ ಚಿತ್ರಗಳು ಬಹಳ ಅಪರೂಪ. ಒಟ್ಟಾರೆ ಈ ಚಿತ್ರಗಳನ್ನು ಕಾಲಮಾನದಿಂದ ಮೂರು ವರ್ಗಗಳಾಗಿ ವಿಂಗಡಿಸಬಹುದು: ಪೂರ್ವಭಾವಿ ಇತಿಹಾಸಯುಗ (ತಾಮ್ರ–ಶಿಲಾ ಮತ್ತು ಬೃಹತ್‌ಶಿಲಾ), ಆದಿ ಇತಿಹಾಸ ಕಾಲ ಮತ್ತು ಆಧುನಿಕ ವರ್ಣಚಿತ್ರಗಳು. ಗೀರು, ಕುಟ್ಟು ಚಿತ್ರಗಳ ಕಾಲವನ್ನು ನಿಖರವಾಗಿ ಗುರುತಿಸಲಾಗಿಲ್ಲ. ಭಿಲ್ಲಮರಾಯನಗುಡ್ಡ, ಮಸ್ಕಿ, ಹಳಕುಂದಿ ಮತ್ತು ಚಿತ್ರದುರ್ಗದಲ್ಲಿ ಮಧ್ಯಕಾಲೀನ–ಆಧುನಿಕ ಕಾಲದ ಚಿತ್ರಗಳು ಹೆಚ್ಚಾಗಿವೆ. ಈ ಚಿತ್ರಗಳಿರುವ ನೆಲೆಗಳ ಸಮೀಪದಲ್ಲಿ ತಾಮ್ರ–ಶಿಲಾ, ಬೃಹತ್‌ಶಿಲಾ, ಆದಿ ಇತಿಹಾಸ, ಮಧ್ಯಯುಗೀನ ಕಾಲದ ವಸತಿ ನೆಲೆಗಳಿವೆ.

ರೇಖೆ ಮತ್ತು ಆಕೃತಿಗಳ ವಿನ್ಯಾಸ ದೃಷ್ಟಿಯಿಂದ ಈ ಚಿತ್ರಗಳಲ್ಲಿ ಕನಿಷ್ಠ ಮೂರು ಶೈಲಿಗಳನ್ನು ಗುರುತಿಸಬಹುದು: 1) ಕರಾವಳಿ ಮಲೆನಾಡು ಪ್ರದೇಶದ ಶೈಲಿ 2)ಬಯಲುಸೀಮೆ ಶೈಲಿ ಮತ್ತು 3) ವಿಶಿಷ್ಟವಾದ ಒಂದು ವಿನೂತನ ಶೈಲಿ (ಕುಳ್ಳೊಳ್ಳಿಯದು). ಬ್ರಹ್ಮಗಿರಿಯ ಒಂದು ಪ್ರತ್ಯೇಕ ಬೃಹತ್‌ಬಂಡೆಯ ಮೇಲಿರುವ ಆನೆ, ಚಿತ್ರದುರ್ಗದ ತಿಮ್ಮಣ್ಣನಾಯಕನ ಕೆರೆ ಹತ್ತಿರವಿರುವ ಕಾಡುಕೋಣ, ಎಮ್ಮೆ ಮತ್ತು ನವಿಲುತೀರ್ಥದ ಆರುಗಂಟಿನ ದ್ವಿರೇಖಾ ಚಿತ್ರಗಳು, ಕರಾವಳಿ–ಮಲೆನಾಡು ಪ್ರದೇಶದ ಶೈಲಿಯಲ್ಲಿವೆ. ಬಯಲು ಸೀಮೆ ಶೈಲಿಯ ಗೀರುಚಿತ್ರಗಳು ಭಿಲ್ಲಮರಾಯನಗುಡ್ಡ ಮತ್ತು ಹಳಕುಂದಿಯಲ್ಲಿ ವಿಪುಲವಾಗಿವೆ. ತಾವರಗೇರ, ಮಸ್ಕಿ, ಬೆಳಗಲ್ ಮತ್ತು ಕಲ್ಲೋರಿನ ಚಿತ್ರಗಳ ಸೊಗಸು ಮೆಚ್ಚುವಂಥದು.



ಜಿಂಕೆಗಳ ಸಮೂಹ (ಶಿಲಾ–ತಾಮ್ರಯುಗ ಸಂಸ್ಕೃತಿ), ಹಳಕುಂದಿ

ತಾಮ್ರೋಪಕರಣಗಳು ಆಕಸ್ಮಿಕವಾಗಿ ದೊರೆತ ಕಲ್ಲೂರಿನ ಅದೇ ಗುಡ್ಡದ ಒಂದು ದೊಡ್ಡ ಬಂಡೆಯ ಮೇಲೆ ಕೆಲವು ಕುಟ್ಟು ಚಿತ್ರಗಳಿವೆ. ಅವುಗಳಲ್ಲಿ ಒಂದರ ಹಿಂದೆ ಒಂದು ನಿಂತ ಎರಡು ಎಮ್ಮೆ(?)ಗಳ ದೊಡ್ಡ ಚಿತ್ರಗಳು ಗಮನ ಸೆಳೆಯುತ್ತವೆ. ಈ ಚಿತ್ರಗಳಿಂದಲೇ ಈ ಗುಡ್ಡಕ್ಕೆ ಎಮ್ಮೆಗುಡ್ಡವೆಂದು ಹೆಸರು ಬಂದಿದೆ. ಚಿತ್ರದ ಉದ್ದಗಲಕ್ಕೂ ಒಂದೇ ಸಮನಾಗಿ ತೆಳ್ಳಗೆ ನಿಬಿಡವಾಗಿ ಕುಟ್ಟುವುದರಿಂದ ಇಡೀ ಚಿತ್ರ ಕಪ್ಪುಕಲ್ಲಿನ ಹಿನ್ನಲೆಯಲ್ಲಿ ಒಡೆದೆದ್ದು ಕಾಣುತ್ತದೆ.

ಇವುಗಳ ಕೋಡುಗಳು ಅಂಡಾಕೃತಿಯಂತೆ ಒಂದೇ ರೀತಿಯಲ್ಲಿ ಒಳಬಾಗಿವೆ. ತಿಮ್ಮಣ್ಣನಾಯಕನ ಕೆರೆಯ ಬಳಿ ಇರುವ ಕಾಡುಕೋಣದ ಗೀರುಚಿತ್ರವೂ ಇದೇ ಶೈಲಿಯಲ್ಲಿದೆ. ನಿಸರ್ಗದಲ್ಲಿ ಸೊಂಪಾಗಿ ಬೆಳೆದು ಮೈತುಂಬಿಕೊಂಡ ಕೋಣದ ಬಲಿಷ್ಠತೆಯನ್ನು ಅದರ ಸೊಂಟದ ಭಾಗವನ್ನು ಸಪೂರ ಮಾಡಿ ಮತ್ತು ಎದೆಯ ಭಾಗವನ್ನು ವಿಶಾಲ ಮಾಡಿ ಮನಮುಟ್ಟುವಂತೆ ಬಿಂಬಿಸಲಾಗಿದೆ.

ಭಿಲ್ಲಮರಾಯನಗುಡ್ಡದ ಚಿತ್ರಗಳಲ್ಲಿಯ ಹುಲಿ ಮತ್ತೊಂದು ಕುತೂಹಲಕಾರಿ ಹಾಗೂ ಗಮನಾರ್ಹ ಚಿತ್ರ. ದೇಹದ ಮೇಲಿನ ಬಿಡಿ ಪಟ್ಟೆಗಳನ್ನು ಸೂಚಿಸಲು ಒಂದರ ಹಿಂದೆ ಒಂದರಂತೆ ದಪ್ಪ ರೇಖೆಗಳ ಕೋನಗಳಿವೆ. ಪಟ್ಟೆಗಳನ್ನು ಸೂಚಿಸಿದ ಕ್ರಮ ನೋಡಿದರೆ ಅದು ಒಂದು ಅಪರೂಪ ತಳಿಯ ಹುಲಿಯನ್ನು ಸೂಚಿಸುತ್ತದೆಯೇನೋ ಎಂಬ ಅನುಮಾನ. ಕಾಲುಗಳನ್ನು ಕುಟ್ಟುತಂತ್ರದಿಂದ ದೇಹದ ಉಳಿದ ಭಾಗವನ್ನು ಗೀರುತಂತ್ರದಿಂದ ಬಿಡಿಸಲಾಗಿದೆ. ಹೀಗೆ ಎರಡು ತಂತ್ರಗಳನ್ನು ಒಂದೇ ಚಿತ್ರದಲ್ಲಿ ಬಳಸಿರುವುದನ್ನು ಇದೊಂದೇ ಚಿತ್ರದಲ್ಲಿ ಕಾಣುತ್ತೇವೆ. ಇದು ಒಂದು ಅಪರೂಪದ ಚಿತ್ರ. ಚಿತ್ರದುರ್ಗದ ಸಮೀಪ ಚಂದ್ರವಳ್ಳಿಯಲ್ಲಿ ಇದೇ ತರಹದ ಮತ್ತು ಇದೇ ಗಾತ್ರದ ಹುಲಿಯ ಗೀರುಚಿತ್ರವಿದೆ.

ಹಳಕುಂದಿಯ ಜಿಂಕೆಗಳ ಸಮೂಹ ಚಿತ್ರ ನಿಜಕ್ಕೂ ವಿಶೇಷವಾದುದು. ಉದ್ದನೆ ಊರ್ಧ್ವ ಕೋಡುಗಳು, ನೀಳವಾದ ಮುಂಡ, ಬೆನ್ನಿನ ಮೇಲೆ ಮಧ್ಯಪಟ್ಟಿಯನ್ನು ಸೂಚಿಸುವ ಪ್ರತ್ಯೇಕ ಗೆರೆಯ ಮೂಲಕ ಈ ಪ್ರಾಣಿಯ ಮುಖ್ಯ ಹಾಗೂ ವಿಶಿಷ್ಟ ಲಕ್ಷಣಗಳನ್ನು ಎತ್ತಿ ತೋರಿಸಲಾಗಿದೆ. ಒಂದು ಗುಂಡುಕಲ್ಲಿನ ಮೇಲಿನ ಜಿಂಕೆ ಚಿತ್ರದಲ್ಲಿ ಅದರ ಬೆನ್ನಿನಲ್ಲಿ ಬಾಣ ಅಥವಾ ಈಟಿ ನಾಟಿರುವುದು ಸ್ಪಷ್ಟವಾಗಿದೆ. ಮಸ್ಕಿಯಲ್ಲಿಯ ಮನುಷ್ಯಾಕೃತಿಯ ಕುಟ್ಟುಚಿತ್ರಗಳಲ್ಲಿ ಆಸಕ್ತಿ ಕೆರಳಿಸುವಂಥ ಯಾವುದೇ ಲಕ್ಷಣಗಳಿಲ್ಲ. ಕುಳ್ಳೊಳ್ಳಿಯ ಎದುರು ಬದುರು ನಿಂತ ಗೂಳಿ ಜೋಡಿಯಲ್ಲಿ ಗೀರುರೇಖೆಗಳು ಸೂಕ್ಷ್ಮ ಹಾಗೂ ನೇರವಾಗಿವೆ. ಇದರಲ್ಲಿ ಸ್ಥೂಲಭಾವಕ್ಕಿಂತ ಒಂದು ರೀತಿಯ ಸೂಕ್ಷ್ಮಭಾವವೇ ಪ್ರಧಾನವಾಗಿದೆ. ಕುಪ್ಪಗಲ್ಲಿನಲ್ಲಿ ಈ ಮಾದರಿಯ ಜೋಡಿ ಗೂಳಿಯ ಕುಟ್ಟಚಿತ್ರವಿದೆ. ಇದು ಪ್ರಾಯಶಃ ಅರ್ವಾಚೀನ ಕಾಲದ್ದು. ಕುಳ್ಳೊಳ್ಳಿಯ ಚಿತ್ರದ ಕಾಲಮಾನವನ್ನು ನಿರ್ಧರಿಸುವುದು ಸುಲಭ ಸಾಧ್ಯವಲ್ಲ. ಈ ಚಿತ್ರದ ನೆಲೆಯಿಂದ ಸು.2–3 ಕಿಮೀ ದೂರದಲ್ಲಿ ನವ ಶಿಲಾ–ತಾಮ್ರಯುಗದ ನೆಲೆ ಇದೆ. ಪ್ರಾಯಶಃ ಕುಳ್ಳೊಳ್ಳಿ ಚಿತ್ರ ತಾಮ್ರ–ಶಿಲಾಯುಗದ ಕೊನೆಯ ಹಂತದ್ದಾಗಿರಬಹುದು.

ಗುಲ್ಬರ್ಗ–ರಾಯಚೂರು–ಬಳ್ಳಾರಿ–ಚಿತ್ರದುರ್ಗ ಪ್ರದೇಶದಲ್ಲಿ ಕುಟ್ಟಿದ, ಗೀರಿದ ಮತ್ತು ವರ್ಣ ಈ 3 ಪ್ರಕಾರಗಳ ಚಿತ್ರಗಳಿವೆ. ಬಾದಾಮಿ–ಐಹೊಳೆ ಪ್ರದೇಶದಲ್ಲಿ ವಿಶೇಷವಾಗಿ ಕಲ್ಲಾಸರೆ ವರ್ಣಚಿತ್ರಗಳೇ ಹೆಚ್ಚು. ಕರಾವಳಿ ಹಾಗೂ ಮಲೆನಾಡಿನ ಪ್ರದೇಶದಲ್ಲಿ ಕುಟ್ಟಿದ ಚಿತ್ರಗಳಾಗಲೀ ವರ್ಣಚಿತ್ರಗಳಾಗಲೀ ಬೆಳಕಿಗೆ ಬಂದಿಲ್ಲ. ಇದುವರೆಗೂ ಶೋಧವಾಗಿರುವುದೆಲ್ಲ ಗೀರು ರೇಖಾಚಿತ್ರಗಳೇ. ಈ ಪ್ರದೇಶದಲ್ಲಿ ಕಲ್ಲಾಸರೆಯ ಗವಿಗಳು ತೀರ ಕಡಿಮೆ. 'ಈ ವಿಷಯ ಬಾದಾಮಿ–ಐಹೊಳೆ ಪ್ರದೇಶಕ್ಕೂ ಅನ್ವಯಿಸುತ್ತದೆ. ಕುಳ್ಳೊಳ್ಳಿಯ ಮತ್ತು ಬಾದಾಮಿಯ

ಒಂದೊಂದು ಕೆರೆದ ಚಿತ್ರಗಳು ಸದ್ಯಕ್ಕೆ ಒಂದು ಅಪವಾದ. ಈ ರೀತಿಯ ಪ್ರಸರಣ ಸಾಂಸ್ಕೃತಿಕವಾಗಿ ಅರ್ಥಗರ್ಭಿತವಾಗಿದೆಯೇ ಅಥವಾ ಕೇವಲ ಆಕಸ್ಮಿಕವೇ ಎಂಬುದನ್ನು ಮುಂದಿನ ಶೋಧನೆಗಳು ಸಿದ್ಧಮಾಡಬೇಕಾಗಿದೆ. ಗುಲ್ಬರ್ಗ–ಚಿತ್ರದುರ್ಗ ಪ್ರದೇಶ ಇವೆಲ್ಲ ಚಿತ್ರ ಪ್ರಕಾರಗಳ ಸಂಗಮ ಪ್ರದೇಶವೆಂದು ಸದ್ಯಕ್ಕೆ ಹೇಳಬಹುದು. ಇಲ್ಲಿ ಇಂಥ ಸಾಂಸ್ಕೃತಿಕ ಸಂಗಮ ಪೂರ್ವಭಾವಿ ಇತಿಹಾಸ ಕಾಲದ ನವ ಶಿಲಾ–ತಾಮ್ರಯುಗ ಹಾಗೂ ಕಬ್ಬಿಣಯುಗದ ಬೃಹತ್‌ಶಿಲಾ ಸಂಸ್ಕೃತಿ ನೆಲೆಗಳ ಪ್ರಸರಣದಲ್ಲಿಯೂ ಕಂಡುಬಂದಿದೆ. ಈ ಚಿತ್ರಗಳು ಉತ್ತರ ಕರ್ನಾಟಕದ ಬಳ್ಳಾರಿ–ರಾಯಚೂರು–ಚಿತ್ರದುರ್ಗ ಪ್ರದೇಶಗಳಲ್ಲಿಯ ಭಿಲ್ಲಮರಾಯನಗುಡ್ಡ, ಚಂದ್ರವಳ್ಳಿ, ಜಟಿಂಗರಾಮೇಶ್ವರಗಳ ಚಿತ್ರಗಳಿಗಿಂತ ಸ್ವಲ್ಪಮಟ್ಟಿಗೆ ಭಿನ್ನವಾಗಿವೆ. ಕೆಲವೊಂದು ಚಿತ್ರಗಳನ್ನು ಬಿಟ್ಟರೆ ಸಾಮಾನ್ಯವಾಗಿ ರೇಖೆಗಳು ತೆಳ್ಳಗಿರುತ್ತವೆ. ಈ ವಿಶಿಷ್ಟ ಭಿನ್ನತೆಯನ್ನು ಗಮನಿಸಿದಾಗ ಕರಾವಳಿ–ಮಲೆನಾಡು ಪ್ರದೇಶದ ಚಿತ್ರಗಳು ರಾಯಚೂರು–ಬಳ್ಳಾರಿ–ಚಿತ್ರದುರ್ಗ ಪ್ರದೇಶದವುಗಳಿಗಿಂತ ಸ್ವಲ್ಪ ಪ್ರಾಚೀನದವೆಂದು ಹೇಳಬಹುದು. ಮಲೆನಾಡು–ಕರಾವಳಿ ಪ್ರದೇಶದ ಚಿತ್ರಗಳಲ್ಲಿಯ ಸಂಕೇತಗಳನ್ನು ಗಮನಿಸಿದಾಗ ಇವುಗಳಿಗೂ ಹರಪ್ಪ ಸಂಸ್ಕೃತಿಗೂ ಯಾವುದೋ ದೂರದ ಸಂಬಂಧವಿರಬಹುದೆಂಬ ಅನುಮಾನವಾಗುತ್ತದೆ.

**ಚಿತ್ರಗಳ ಪ್ರಕಾರಗಳು:** ಮೇಲೆ ಸಂಕ್ಷಿಪ್ತವಾಗಿ ವಿವರಿಸಿದ ಗವಿ ವರ್ಣಚಿತ್ರಗಳ ಹೊರತು ಉಳಿದವುಗಳಲ್ಲಿ ಬಯಲು ಬಂಡೆ ಚಿತ್ರಗಳೂ ಸೇರಿ ಹೆಚ್ಚಾಗಿ ತಾಮ್ರ–ಶಿಲಾಯುಗದ ಬೃಹತ್ ಶಿಲಾಯುಗ ಸಂಸ್ಕೃತಿಗಳಿಗೆ ಸಂಬಂಧಿಸಿದ್ದೆಂದು ನಿರ್ಣಯಿಸಬಹುದು. ಇಂಥ ಗವಿಗಳಲ್ಲಿ ಬಹಳಷ್ಟು ಮನುಷ್ಯರ, ಗೂಳಿ–ಆಕಳುಗಳ ಮತ್ತು ವಿವಿಧ ವರ್ಗಗಳ ಜಿಂಕೆಗಳ ಚಿತ್ರಗಳೇ ಇವೆ. ಸಾಲಾಗಿ ಕೈ ಕೈ ಹಿಡಿದುಕೊಂಡ ಜನರ ಸಮೂಹ ನೃತ್ಯ ದೃಶ್ಯಗಳೂ ಕೆಲವು ಇವೆ.

**ಪಶು–ಪ್ರಾಣಿಗಳು:** ಗೂಳಿ ಹಾಗೂ ಕಾಡುಕೋಣ, ಬಹುಮಟ್ಟಿಗೆ ಜಿಂಕೆ ಇವರ ಚಿತ್ರಕ್ಕೆ ಬಲು ಪ್ರಿಯವಾದ ವಸ್ತು. ಮೊದಲ ಎರಡು ಪ್ರಾಣಿಗಳು ನಿರ್ಭಯವಾಗಿ, ಸಹಜವಾಗಿ ನಿಂತಾಗ ಎದ್ದು ಕಾಣುವ ಶ್ರೀಮಂತ ಗಾಂಭೀರ್ಯ ಮತ್ತು ಮೂರನೆಯದರ ಮುಗ್ಧತೆಯನ್ನು ಆ ಸಾದಾ ಗೆರೆಗಳಲ್ಲಿಯೇ ಸೆರೆಹಿಡಿಯಲಾಗಿದೆ. ಅಂಜನಹಳ್ಳಿಯ ಗೂಳಿಯ ಛಾಯಾ ವರ್ಣಚಿತ್ರ, ಬೆಳಗಲ್ಲಿನ ಬಯಲುಬಂಡೆ ಕುಟ್ಟು ಛಾಯಾಚಿತ್ರ ಮತ್ತು ಚಿತ್ರದುರ್ಗದ ಕಾಡೆಮ್ಮೆಯ ರೇಖಾಚಿತ್ರ ಇದಕ್ಕೆ ಉತ್ತಮ ನಿದರ್ಶನ. ಗಾವಳಿಯಲ್ಲಿಯ ಗೂಳಿಯ ಚಿತ್ರಗಳಲ್ಲಿ ಒಂದೆರಡು ವಿಶೇಷ ಲಕ್ಷಣಗಳಿವೆ. ಬೇರೆಡೆಗಳಲ್ಲಿ ಮುಖ್ಯವಾಗಿ ಹಿರೇಬೆನಕಲ್ಲಿನ ಗೂಳಿಯ ಚಿತ್ರದಲ್ಲಿ ಶಿಶ್ನವನ್ನು ತೋರಿಸಲಾಗಿದೆ. ಇಲ್ಲಿ ಶಿಶ್ನವಲ್ಲದೆ ವೃಷಣವನ್ನೂ ತೋರಿಸಲಾಗಿದೆ. ಒಂದರ ಮೇಲೆ ಹಿಣಿಲಿನ ಮೇಲೂ ಮತ್ತೊಂದರ ಮುಸುಡಿಯ ಮೇಲೂ ಕೊಂಬಿನ ಹತ್ತಿರ ಹರಪ್ಪ ಲಿಪಿಯ ಹಾಗೂ ಬ್ರಾಹ್ಮಿಲಿಪಿ ಮಾಲೆಯ ಅಕ್ಷರಗಳಿಗೆ ಹೋಲುವ ಎರಡು ಸಂಕೇತ ಗಳಿವೆ. ಒಂದರ ಕಾಲುಗಳಿಗೆ ಸೇರಿದಂತೆ ರಂಗೋಲಿಯಂತಿರುವ ಒಂದು ಚತುರ್ಭುಜ ರೇಖಾಚಿತ್ರವಿದೆ.

ಬಯಲುಬಂಡೆ ಚಿತ್ರಗಳಲ್ಲಂತೂ ಗೂಳಿ–ಆಕಳಿನ ಚಿತ್ರಗಳೇ ಹೆಚ್ಚು. ಎದುರು–ಬದುರು ನಿಂತ ಪ್ರಾಣಿ ಜೋಡಿಗಳನ್ನು ಚಿತ್ರಿಸುವುದರಲ್ಲಿ ಪ್ರಾಚೀನ ಚಿತ್ರಕಾರನಿಗೆ ಏನೋ ಒಂದು ಬಗೆಯ ಆಸಕ್ತಿಯೆಂದು ಕಾಣುತ್ತದೆ. ಜಿಂಕೆಯ ಚಿತ್ರವೂ ಗಮನಾರ್ಹ ಪ್ರಮಾಣದಲ್ಲಿದೆ. ಕಾಡುಕೋಣ, ಎಮ್ಮೆ, ಹುಲಿಯ ಚಿತ್ರಗಳು ತೀರ ಅಪರೂಪ. ಹಳಕುಂದಿಯಲ್ಲಿ ಜಿಂಕೆಗಳ ಚಿತ್ರಗಳು ಬಹಳ ಇವೆ. ಹಿರೇಬೆನಕಲ್ಲಿನ 11ನೆಯ ಗವಿಯಲ್ಲಿರುವ ಜಿಂಕೆಗಳ ಸಾಲು ಗಮನಾರ್ಹ. ಮರ ಇಲ್ಲವೆ ಚರ್ಮದಲ್ಲಿ ಪ್ರಾಣಿಯ ಚಿತ್ರವನ್ನು ಕತ್ತರಿಸಿಕೊಂಡು ಅದನ್ನು ಬಂಡೆಯ ಮೇಲಿಟ್ಟು ಒಂದರ ಪಕ್ಕದಲ್ಲೊಂದರಂತೆ ಸಾಲು ಚಿತ್ರಗಳನ್ನು ತೆಗೆದಂತಿದೆ. ಕ್ರಮವಾಗಿ ಸಾಲಿನ ಜಿಂಕೆಗಳನ್ನು ಪ್ರಮಾಣದಲ್ಲಿಯೂ ಆಕಾರದಲ್ಲಿಯೂ ಅವುಗಳ ಭಂಗಿಯಲ್ಲಿಯೂ ಏಕ ಪ್ರಕಾರವಾಗಿ ಬಿಡಿಸಿರುವುದು ವಿಶೇಷವೇ ಸರಿ. ಆತನೂರಿನಲ್ಲಿ ಜಿಂಕೆಯೊಂದರ ಬೆನ್ನಿನ ಮೇಲೆ ಇರಿದ ಬಾಣವಿರುವ ಚಿತ್ರವಿದೆ. ಹಾಗೆಯೇ ಕುರುಗೋಡಿ ನಲ್ಲಿಯ ಗಬ್ಬದ ಜಿಂಕೆ ಗಮನಾರ್ಹ. ಇಂತಹ ಚಿತ್ರಗಳು ಮಾಂತ್ರಿಕ ಕಟ್ಟಳೆಗೆ ಸಂಬಂಧಿಸಿರುವ ವೆಂಬುದು ಸ್ಪಷ್ಟ. ಹಳಕುಂದಿಯಲ್ಲಿ ಜಿಂಕೆ ಸಮೂಹದ ಗೀರಿದ ರೇಖಾಚಿತ್ರಗಳಿವೆ. ಈ ಚಿತ್ರಗಳಲ್ಲಿರುವ ವೈಶಿಷ್ಟ್ಯವೆಂದರೆ, ಬೆನ್ನಿನ ಮೇಲೆ ಒಂದು ಪ್ರತ್ಯೇಕ ರೇಖೆಯಿದ್ದು, ಅದೇ ಬಾಲವಾಗಿ ಕೊನೆಗೊಳ್ಳುತ್ತದೆ. ಹೀಗೆ ತೋರಿಸಿರುವ ಉದ್ದೇಶವನ್ನು ತಿಳಿದುಕೊಳ್ಳಬೇಕಾಗಿದೆ. ಈ ಪ್ರಾಣಿಗಳಲ್ಲದೆ ಕ್ವಚಿತ್ತಾಗಿ ಆನೆ (ಕುರುಗೋಡು ಮತ್ತು ಅಂಜನಹಳ್ಳಿ), ಕೆಚ್ಚಲು ಸಹಿತವಾದ ಆಕಳು(ಹಿರೇಬೆನಕಲ್), ಮೊಸಳೆ(ಆತನೂರು, ಪಿಕ್ಲಿಹಾಳ ಮತ್ತು ಹಂಪಿ), ನವಿಲು (ಹಿರೇಬೆನಕಲ್ಲು ಮತ್ತು ಚಿಕ್ಕರಾಮಪುರ) ಕೆಲವೆಡೆಗಳಲ್ಲಿವೆ. ಮೊಸಳೆ ಚಿತ್ರದ ಬಗೆಗೆ ಒಂದು ಮಾತು. ಹಂಪಿಯಲ್ಲಿ ಮೊಸಳೆಯುಳ್ಳ ವರ್ಣಚಿತ್ರ ಗವಿ ತುಂಗಭದ್ರಾ ನದಿಯಂಚಿನಲ್ಲಿದೆ. ಆ ಭಾಗದಲ್ಲಿ ದೊಡ್ಡ ಮಡುವಿದ್ದು ಅಲ್ಲಿ ಮೊಸಳೆಗಳಿವೆಯೆಂದು ಪ್ರತೀತಿ. ಆದ್ದರಿಂದ ಮೊಸಳೆ ಚಿತ್ರವೂ ಅಲ್ಲಿಯ ಪ್ರಾಣಿಸಂಪದಕ್ಕೆ ಸಹಜವಾದದ್ದು. ಆದರೆ ಪಿಕ್ಲಿಹಾಳ, ಆತನೂರು ಪ್ರದೇಶಗಳಲ್ಲಿ ಈಗ ಮೊಸಳೆ ವಾಸಿಸುವಂತಹ ನೀರಿನ ಆಶ್ರಯವಿಲ್ಲ. ಹಿಂದೆ ಇದ್ದಿರಬಹುದೆಂದು ಊಹಿಸುವುದಕ್ಕೆ ಪುಷ್ಟೀಕರಿಸುವ ಚಿಹ್ನೆಗಳೇನೂ ಇಲ್ಲ. ಅಂದರೆ ಈ ಪ್ರಾಣಿ ಮೊಸಳೆ ಜಾತಿಗೆ ಸೇರಿದ ಉಡವಿರಬಹುದೆ? ಇವತ್ತಿಗೂ ಈ ಭಾಗದಲ್ಲಿ ಕಾಡುಜನರು ಉಡವನ್ನು ಬೇಟೆಯಾಡುತ್ತಾರೆ. ಅದರಿಂದ ತೆಗೆದ ಎಣ್ಣೆ ಬಹುಕಾಲದ ಕೀಲುನೋವನ್ನು ವಾಸಿಮಾಡುತ್ತದೆಂದು ಹೇಳುವುದುಂಟು. ಅಂತಹ ಎಣ್ಣೆಯನ್ನು ತಂದು ಪೇಟೆಗಳಿಗೆ ಮಾರುತ್ತಾರೆ. ಆದ್ದರಿಂದ ಇದು ಮೊಸಳೆಯ ಚಿತ್ರವಾಗಿರದೆ, ಉಡದ ಚಿತ್ರವಾಗಿರಬೇಕು. ಕುರುಗೋಡಿನ ಆನೆಯ ರೇಖಾಚಿತ್ರದಲ್ಲಿ ಹಿಂಬದಿಯ ಅರ್ಧಭಾಗ ಸ್ಪಷ್ಟವಿದೆ. ಆದರೂ ಈ ಪ್ರಾಣಿಯ ದೈಹಿಕ ದಾರ್ಢ್ಯತೆಯನ್ನು ಪೃಷ್ಠಭಾಗದಲ್ಲಿ ಬೆನ್ನನ್ನು ಕಮಾನಿನಂತೆ ಬಾಗಿಸುವುದರಿಂದ ಎತ್ತಿ ತೋರಿಸಲಾಗಿದೆ. ಆದರೆ ಇದರ ಬಾಲ ಸ್ವಲ್ಪ ಉದ್ದ ಮತ್ತು ಉದ್ದಕ್ಕೂ ಸಣ್ಣ ರೇಖೆಗಳಿವೆ. ಇದರ ಬಾಲದ ತುದಿಯಲ್ಲಿ ಕೂದಲಿನ ಸಣ್ಣ ಗೊಂಡೆಯಿರುತ್ತದೇ ವಿನಹ ಉದ್ದಕ್ಕೂ ಕೂದಲಿರುವುದಿಲ್ಲ. ಆದ್ದರಿಂದ ಈ ಬಾಲದ ವಿಶಿಷ್ಟ ಲಕ್ಷಣದ ಮರ್ಮವನ್ನು ತಿಳಿಯಬೇಕಾಗಿದೆ. ಬ್ರಹ್ಮಗಿರಿಯಲ್ಲಿ ಮೂಡಿಸಿರುವ ಆನೆಯ ರೇಖಾಚಿತ್ರ ಆ ಪ್ರಾಣಿಗೆ ತಕ್ಕಂತೆ ಭವ್ಯವಾಗಿದೆ. ಇಲ್ಲಿ ಚಿತ್ರಕಾರ ತನ್ನ ಚಿತ್ರವನ್ನು ಬಿಡಿಸುವುದಕ್ಕೋಸ್ಕರ ಬಯಲಿನಲ್ಲಿ ಪ್ರತ್ಯೇಕ ಒಂದು ದೊಡ್ಡ ಬಂಡೆಯನ್ನೇ ಆರಿಸಿರುವುದು ಅವನ ಚಿತ್ರಕಲೆ ನಿರೂಪಣೆಯಲ್ಲಿರುವ ಸೌಂದರ್ಯಪ್ರಜ್ಞೆಯನ್ನು ವ್ಯಕ್ತಪಡಿಸುತ್ತದೆ. ಇದರಂತೆಯೆ ಹೊಳಲೂರಿನ ಆನೆಯ ಚಿತ್ರ.

ಮನುಷ್ಯ ಚಿತ್ರಗಳು: ಮನುಷ್ಯರ ಬಿಂಬಗಳು ಹೆಚ್ಚಾಗಿ ಗವಿವರ್ಣ ಚಿತ್ರಗಳಲ್ಲಿವೆ. ಬಯಲುಬಂಡೆ ಗೀರು ಮತ್ತು ಕುಟ್ಟಿದ ಚಿತ್ರಗಳಲ್ಲಿ ಇವು ಬಹಳ ಕಡಿಮೆ. ಅಪರೂಪವಾಗಿ ಒಂದೆರಡು ಸ್ಥಳಗಳಲ್ಲಿವೆ. ಭಿಲ್ಲಮರಾಯನಗುಡ್ಡ, ಮಸ್ಕಿ ಮತ್ತು ಪಿಕ್ಲಿಹಾಳಗಳಲ್ಲಿ ಕೆಲವೇ ಚಿತ್ರಗಳಿವೆ. ಸರಳವಾಗಿ ನಿಂತ ಭಂಗಿ ಅಥವಾ ಅಪರೂಪವಾಗಿ ತೋಳುಗಳು ಅಡ್ಡವಿದ್ದು ಕೈಗಳನ್ನು ಮೇಲಕ್ಕೆತ್ತಿರುವುದು, ಇಲ್ಲವೆ ಕೈ ಕೈ ಹಿಡಿದ ಜನರ ಸಾಲು ವರ್ಣಚಿತ್ರಗಳು ವೈವಿಧ್ಯಮಯವಾಗಿವೆ. ಸಾಮಾನ್ಯವಾಗಿ ಇಂತಹ ಚಿತ್ರಗಳು ನಿಂತ ಭಂಗಿಯಲ್ಲೆ ಹೆಚ್ಚಾಗಿದ್ದರೂ ಇವು ಬೇರೆ ಬೇರೆ ರೀತಿಯವು. ಕೆಲವು ಏಕವ್ಯಕ್ತಿ ಚಿತ್ರಗಳು ಬೃಹದಾಕಾರವಾಗಿ, ತೊಡೆಗಳನ್ನು ಅಗಲಿಸಿ ಸೊಟ್ಟ ಮಾಡಿ ನಿಂತ ಭಂಗಿಯಲ್ಲಿವೆ. ಹಿರೇಬೆನಕಲ್ಲಿನ 3ನೆಯ ವರ್ಣಚಿತ್ರ ಗವಿಯಲ್ಲಿಯ ಚಿತ್ರದ ಸು.2ಮೀ ಎತ್ತರ. ಆದರೆ ಸಣ್ಣ ತಲೆ, ತೋಳುಗಳು ಅಡ್ಡವಾಗಿದ್ದು, ಕೈಗಳು ಮೇಲಕ್ಕೆತ್ತಲ್ಪಟ್ಟಿವೆ. ಹಸ್ತ, ಪಾದಗಳನ್ನು ಬಿಡಿಸಿಲ್ಲ. ನಗ್ನ ದೇಹ. ಶಿಶ್ನವನ್ನು ಸ್ಪಷ್ಟವಾಗಿ ಬಿಡಿಸಲಾಗಿದ್ದು, ಮೈ, ತೊಡೆ ಮೇಲೆಲ್ಲ ರೇಖಾಚಿತ್ರಗಳಿವೆ. ಇದರಂತೆಯೇ ಸಮೀಪದ ಮಲ್ಲಾಪುರದಲ್ಲಿಯೂ ಚಿಕ್ಕರಾಮಪುರದಲ್ಲಿಯೂ ಒಂದೊಂದು ಛಾಯಚಿತ್ರಗಳಿವೆ. ನಾರಾಯಣಪುರದಲ್ಲಿ ಅತಿ ದೊಡ್ಡ ಕಲ್ಲಾಸರೆಯ ಚಿತ್ರ ಅತ್ಯಂತ ದೊಡ್ಡದು. 4ಮೀಗಿಂತಲೂ ಎತ್ತರವಾದುದು. ಅದೇ ಭಂಗಿ, ಸಣ್ಣ ತಲೆ, ತಲೆಯ ಮೇಲಿನ ಸಮಾನಾಂತರ ಸಣ್ಣ ಸಣ್ಣ ಗೆರೆಗಳು ಪ್ರಾಯಶಃ ಕೂದಲನ್ನು ಸೂಚಿಸುತ್ತವೆ. ತಲೆ ಬಲ ಭಾಗಕ್ಕೆ ಸ್ವಲ್ಪ ಬಾಗಿದೆ. ಎಡಗೈ ಇಲ್ಲ. ಬಹುಶಃ ಅಳಿಸಿ ಹೋಗಿರಬೇಕು. ಮುಂಡದ ಉದ್ದಗಲಗಳು ಪ್ರಮಾಣಬದ್ಧವಾಗಿವೆ. ಪುಷ್ಟವಾದ ತೊಡೆಗಳು. ಯಥಾಪ್ರಕಾರ ಮೈ ತೊಡೆಗಳ ಮೇಲೆ ರೇಖಾಚಿತ್ರಗಳು. ಈ ಚಿತ್ರದ ಎದುರಿನಲ್ಲಿ ಅಡ್ಡವಾಗಿರುವ ಬೃಹತ್‌ಬಂಡೆಯ ಮೇಲೆ ಎರಡು ಕೈಗಳನ್ನು ಚಾಚಿ, ಕಾಲುಗಳನ್ನು ಅಗಲಿಸಿ ಕುಳಿತ ಒಂದು ವ್ಯಕ್ತಿಯ ಸಣ್ಣ ಚಿತ್ರವಿದೆ. ತಲೆಯ ಮೇಲೆ ಉದ್ದಕೂದಲು ಆ ಕಡೆ ಈ ಕಡೆ ಸೆಟೆದು ನಿಂತಿವೆ. ಹೊಟ್ಟೆ ಸ್ವಲ್ಪ ಉಬ್ಬಿದೆ. ಸೊಂಟ ಕೆಳಭಾಗ ತ್ರಿಕೋಣಾಕೃತಿ ಯಂತೆ ಕೆಳಚಾಚಿದೆ. ಇದು ಛಾಯಾಚಿತ್ರ. ತಲೆಯ ಕೂದಲು ಹಳ್ಳಿಗರ ಜಡೆಯಂತೆ ಸಟೆದಿರುವುದು. ಗರ್ಭಿಣಿಯಂತೆ ಉಬ್ಬುಹೊಟ್ಟೆ. ಪ್ರಾಯಶಃ ಯೋನಿಯನ್ನು ಸೂಚಿಸುವ ಸೊಂಟದ ಕೆಳಗಿನ ತ್ರಿಕೋಣಾಕಾರ ಈ ಚಿತ್ರ ಸ್ತ್ರೀಯದೆಂದು ಸೂಚಿಸುತ್ತದೆ. ಇಲ್ಲಿಯ ಹಾಗೂ ಹಿರೇಬೆನಕಲ್ಲಿನ ನಗ್ನಪುರುಷ ಚಿತ್ರಗಳು ಬಾಹ್ಯರೇಖೆ ಶೈಲಿಯಲ್ಲಿವೆ.

ಚಿಕ್ಕರಾಮಪುರದ ಒಂದು ಕಡಿದಾದ ಕಲ್ಲಾಸರೆಯಲ್ಲಿಯ ದೊಡ್ಡ ವರ್ಣಚಿತ್ರ ಸು.8–10 ಮೀ ಎತ್ತರದಲ್ಲಿ ಚಾವಣಿಯಂತೆ ಅಡ್ಡ ಚಾಚಿರುವ ಬಂಡೆಯ ಒಳಮೈ ಮೇಲೆ ಇದೆ. ನಾರಾಯಣಪುರದ ಚಿತ್ರದಂತೆ ಇದನ್ನು ವಿಶೇಷ ಪ್ರಯತ್ನದಿಂದಲೇ ಬಿಡಿಸಿರಬೇಕು. ಮೇಲೆ ವಿವರಿಸಿದ ಎರಡು ಚಿತ್ರಗಳಿಗಿಂತ ಈ ಚಿತ್ರವನ್ನು ಬಿಡಿಸಿದ ರೀತಿ ಭಿನ್ನವಾಗಿದೆ. ಈ ಸಂಪೂರ್ಣ ಛಾಯಾಚಿತ್ರ ಸು.2ಮೀ ಎತ್ತರವಿರಬಹುದು. ದುಂಡುತಲೆ, ಪ್ರಮಾಣಬದ್ಧ ದೇಹ; ನಿಂತ ಭಂಗಿಯಲ್ಲಿಯೂ ಒಂದು ವೈಶಿಷ್ಟ್ಯವಿದೆ. ತೊಡೆಗಳನ್ನು ಅಗಲಿಸಿಲ್ಲ. ಆದರೆ ಯಥಾಪ್ರಕಾರ ಕೈಗಳನ್ನು ಮೇಲಕ್ಕೆತ್ತಿ ನೆಟ್ಟಗೆ ನಿಂತ ಭಂಗಿಯಲ್ಲಿದೆ. ಆದ್ದರಿಂದ ಮೇಲಿನ ಎರಡು ಭಂಗಿಗಳಲ್ಲಿರುವ ಸಡಿಲತೆ ಇದರಲ್ಲಿಲ್ಲ.

ಹಂಪಿಯ 1ನೆಯ ಗವಿಯಲ್ಲಿ ಮಧ್ಯಮ ಪ್ರಮಾಣದ, ಕೈಗಳನ್ನು ಮೇಲಕ್ಕೆತ್ತಿರುವ ಮನುಷ್ಯನ ಚಿತ್ರವಿದೆ. ಮೈ ಮೇಲೆ ರೇಖಾಚಿತ್ರಗಳಿವೆ. ಈ ಆಕೃತಿ ಸ್ವಲ್ಪ ಕೃಶವಾಗಿದೆ. ಅಷ್ಟೇನೂ ಪ್ರಮಾಣಬದ್ಧವಾಗಿಲ್ಲ. ಹಿರೇಬೆನಕಲ್ಲಿನ 5ನೆಯ ವರ್ಣಗವಿ ಚಿತ್ರದಲ್ಲಿ ವಿಚಿತ್ರ ವೇಷದ ಮನುಷ್ಯನ ಒಂದು ಬಿಡಿ ಚಿತ್ರವಿದ್ದು, ಇದರಲ್ಲಿ ವ್ಯಕ್ತಿಯ ಕೈಬೆರಳುಗಳನ್ನು ತೋರಿಸುವ ಪ್ರಯತ್ನ ಗಮನಾರ್ಹ. ಬಾಗಿದ ಕೋಡುಳ್ಳ ಮುಖವಾಡ ಮತ್ತು ಬಾಲವನ್ನು ಧರಿಸಿದೆ. ಸಮೀಪದಲ್ಲಿ ಇದೇ ತರಹದ ಮನುಷ್ಯನ ಸಣ್ಣ ಚಿತ್ರವಿದೆ. ಇದರಲ್ಲಿ ಕೋಡುಗಳು ಬಾಗಿವೆ. ಮೊದಲನೆಯ ಚಿತ್ರದ ಮನುಷ್ಯನ ಬಲಿಷ್ಠತೆಯನ್ನು ಅಗಲವಾದ ಎದೆ ಮತ್ತು ಕಿರಿದಾದ ನಡುವಿನಿಂದ ಸೂಚಿಸಲಾಗಿದೆ. ಎರಡನೆಯದು ನೀಳವಾಗಿದೆ. ಇವೆರಡೂ ಚಿತ್ರಗಳು ಪಾರ್ಶ್ವಚಿತ್ರ (ಸಿಲುಎಟ್). ಇವುಗಳ ಬದಿಯಲ್ಲಿ ಮತ್ತೊಂದು ಅಪರೂಪದ ದ್ವಿರೇಖಾ ನಗ್ನಮನುಷ್ಯನ ಚಿತ್ರವಿದೆ.

ಒಂದು ಕಲ್ಲಾಸರೆ ಗವಿಯಲ್ಲಿ ಸಣ್ಣ ಪ್ರಮಾಣದ ಬಿಡಿ ಚಿತ್ರಗಳು ಹಲವಾರು ಇರಬಹುದು. ಹಿರೇಬೆನಕಲ್ಲಿನ 1,6 ಮತ್ತು 11ನೆಯ ವರ್ಣಚಿತ್ರ ಗವಿಗಳಲ್ಲಿ ಈ ರೀತಿ ಮನುಷ್ಯನ ಬಿಡಿ ಚಿತ್ರಗಳಿವೆ. 1ನೆಯದರಲ್ಲಿ ಒಂದು ಜೋಡಿ ಕುದುರೆ, ಸವಾರ, ಕೈಗಳನ್ನು ಮೇಲಕ್ಕೆತ್ತಿ ನಿಂತ

ಮನುಷ್ಯ; 6ನೆಯದರಲ್ಲಿ ಒಂದು ಹುಲಿಗೆ ಬಾಣ ಬಿಡಲು ಸಿದ್ಧವಾಗಿರುವ ಕುದುರೆ ಸವಾರ ಮತ್ತು 11ನೆಯದರಲ್ಲಿ ಸಂಭೋಗ ಕ್ರಿಯೆಯಲ್ಲಿ ತೊಡಗಿರುವ ಒಂದು ಜೋಡಿ. 1ನೆಯ ಗವಿಯ ಜೋಡಿನ ಒಂದು ವ್ಯಕ್ತಿಯ ಕೈಯಲ್ಲಿ ಉದ್ದನೆಯ ಕತ್ತಿಯಿದೆ ಮತ್ತೊಂದು ವ್ಯಕ್ತಿಯ ತಲೆಯ ಮೇಲೆ ಸೂರ್ಯನ ಕಿರಣಗಳಂತೆ ಸಣ್ಣ ರೇಖೆಗಳಿವೆ. ಪ್ರಾಯಶಃ ಸ್ತ್ರೀ ಇರಬೇಕು. ಅದ್ದರಿಂದ ಇದು ಗಂಡು ಹೆಣ್ಣಿನ ಜೋಡಿ(?). 11ನೆಯದರಲ್ಲಿ ಕೈಗಳನ್ನು ಮೇಲಕ್ಕೆತ್ತಿ ತೊಡೆಗಳನ್ನು ಅಗಲಿಸಿರುವ ಜೋಡಿಯ ಮರ್ಮಾಂಗಗಳಿರುವ ಸ್ಥಾನಗಳನ್ನು ಒಂದು ಗೆರೆಯಿಂದ ಸೇರಿಸಿದೆ. ಇದು ಸಂಭೋಗದ ಸ್ಥಿತಿಯನ್ನು ತೋರಿಸುವ ಒಂದು ರೀತಿ.

ಇದಲ್ಲದೆ ಕತ್ತಿ ಅಥವಾ ಈಟಿ, ಇಲ್ಲವೆ ಬಿಲ್ಲು ಬಾಣ ಹಿಡಿದಿರುವ ಮನುಷ್ಯರ ಅಥವಾ ಕುದುರೆ ಸವಾರರ ಬಿಡಿ ಚಿತ್ರಗಳು ಹಿರೇಬೆನಕಲ್ಲಿನ 1,6 ಮತ್ತು 11ನೆಯ ವರ್ಣಚಿತ್ರ ಗವಿಗಳಲ್ಲಿವೆ. ಒಂದು ಚಿತ್ರದಲ್ಲಿ ಈಟಿಯ ತುದಿಯ ಸುತ್ತಲೂ ಚೂಪಾದ ಮೊನೆಗಳಿವೆ. ಈ ತರಹದ ಆಯುಧವು ವಿಶಿಷ್ಟವಾದುದು. ಕುದುರೆ ಸವಾರರ ಚಿತ್ರಗಳಲ್ಲಿ ಲಗಾಮನ್ನು ತೋರಿಸಿದ ವೈಶಿಷ್ಟ್ಯವನ್ನು ಸ್ವಲ್ಪ ಹಿಂದೆಯೇ ವಿವೇಚಿಸಿದೆ.

ಜನಸಮೂಹದ ಚಿತ್ರಗಳು: ಸಾಮಾನ್ಯವಾಗಿ ಸಾಲಿನಲ್ಲಿ ಜನರು ಒಬ್ಬರ ಪಕ್ಕದಲ್ಲಿ ಒಬ್ಬರು ಕೈ ಕೈ ಹಿಡಿದುಕೊಂಡು ನಿಂತಿರುವ ಚಿತ್ರಗಳು ತೆಕ್ಕಲಕೋಟೆ, ಹಿರೇಬೆನಕಲ್ಲಿನ 1,4,6 ಮತ್ತು 11ನೆಯ ವರ್ಣಚಿತ್ರ ಗವಿಗಳಲ್ಲಿವೆ. 2 ಅಥವಾ 3 ಜನರ ಸಾಲಿನಿಂದ ಹಿಡಿದು 27 ಜನರ ಸಾಲುಗಳಿವೆ. ಹಿರೇಬೆನಕಲ್ಲಿನ 12ನೆಯ ವರ್ಣಚಿತ್ರ ಗವಿಯಲ್ಲಿ 27ಜನರ ಸಾಲುಗಳಿವೆ. ಈ ಸಾಲಿನ ಒಂದು ತುದಿಯಲ್ಲಿ ಒಬ್ಬ ಹುಡುಗನೂ ಇದ್ದಾನೆ. ಅಪರೂಪವಾಗಿ ಸಾಲಿನಲ್ಲಿ ಒಬ್ಬೊಬ್ಬ ಸ್ತ್ರೀಯರೂ ಇರುವುದುಂಟು. ಸಾಲಿನಲ್ಲಿ ತಲೆಯ ಮೇಲೆ ಕೂದಲಿನಂತೆ ಸಣ್ಣ ರೇಖೆಗಳಿರುವ ಚಿತ್ರವು ಹೆಂಗಸಿನದೆಂದು ಭಾವಿಸಬಹುದು. ಇಂಥ ಚಿತ್ರಗಳು ಹಬ್ಬ ಹರಿದಿನಗಳ ಸಾಲು ಕುಣಿತವನ್ನು ಸೂಚಿಸಬಹುದು. ಇಂತಹ ಸಾಲುಗಳು ಸಾಮಾನ್ಯವಾಗಿ ನೇರವಾಗಿರುತ್ತವೆ. ಆದರೆ ಹಿರೇಬೆನಕಲ್ಲಿನ 12ನೆಯ ವರ್ಣಚಿತ್ರ ಗವಿಯಲ್ಲಿ ನೇರಸಾಲು ಮಾತ್ರವಲ್ಲದೆ, ಅರ್ಧಚಂದಾಕೃತಿಯ ಸಾಲಿನ ಚಿತ್ರಗಳೂ ಇವೆ. ಬಹುಶಃ ಎರಡನೆಯದು ಜನರು ವೃತ್ತದ ಸಾಲಿನಲ್ಲಿರುವುದನ್ನು ಸೂಚಿಸುವ ಒಂದು ಚತುರ ಪ್ರಯತ್ನ. ಇಂತಹ ಸಾಲುಗಳಲ್ಲಿ ಚಿತ್ರಿಸಿದ ಮನುಷ್ಯ ರೂಪಗಳು ಎರಡು ವಿಧವಾಗಿವೆ. ತೆಕ್ಕಲಕೋಟೆ, ಹಿರೇಬೆನಕಲ್ಲಿನ 1,6 ಮತ್ತು 11ನೆಯ ಗವಿಗಳಲ್ಲಿಯ ವರ್ಣಚಿತ್ರ ಸಾಲು ಮನುಷ್ಯರ ಚಿತ್ರ ಸ್ವಲ್ಪ ಹೆಚ್ಚು ಕಡಿಮೆ ಒಂದು ರೀತಿಯಾಗಿದೆ.

**ರೇಖಾಚಿತ್ರಗಳು ಮತ್ತು ಮಂಡಲಗಳು:** ರೇಖಾಚಿತ್ರಗಳು ಕೆಲವೇ ಆಗಿದ್ದರೂ ವೈವಿಧ್ಯಮಯವಾಗಿವೆ. ಇವು ವರ್ಣಚಿತ್ರಗಳಲ್ಲಿಯೇ ಹೆಚ್ಚು, ಬಯಲುಬಂಡೆ ಚಿತ್ರಗಳಲ್ಲಿ ಅಪರೂಪ. ವೆಂಕಟಾಪುರ 1ನೆಯ ಕಲ್ಲಾಸರೆಯಲ್ಲಿ ಕೈಗಳನ್ನು ಮೇಲಕ್ಕೆತ್ತಿರುವ ಕಡ್ಡಿಯಂತಹ ಮನುಷ್ಯನ ಚಿತ್ರಗಳು ಮತ್ತು ಹುಲಿಯ ಚಿತ್ರಗಳಲ್ಲದೆ, ಕೆಲವು ವಿಶಿಷ್ಟ ಚಿಹ್ನೆಗಳಿವೆ. ಹರಪ್ಪ ನಾಗರಿಕತೆ ಲಿಪಿಮುದ್ರಿಕೆಗಳಲ್ಲಿ ಬಾರಿಬಾರಿಗೂ ಕಾಣಿಸಿಕೊಳ್ಳುವ ತುದಿಗಳಲ್ಲಿ ಆ ಕಡೆ ಈ ಕಡೆ ಒಂದೊಂದು ಬಾಹ್ಯ ಅಡ್ಡ ರೇಖೆಯುಳ್ಳ ರೋಮನ್ ಲಿಪಿಯ ಯು ಮತ್ತು ಅಶೋಕನ ಕಾಲದ ಬ್ರಾಹ್ಮಿಲಿಪಿಯ ಮ ಅಕ್ಷರವನ್ನು ಹೋಲುವ ಎರಡು ಅಕ್ಷರಗಳಂತಿವೆ. ಮ ಅಕ್ಷರದಂತಿರುವ ಚಿಹ್ನೆ ಮೂರು ನಾಲ್ಕು ಕಡೆಗಳಲ್ಲಿದೆ. ಈ ಎಲ್ಲ ಚಿಹ್ನೆಗಳು ಚೆಲ್ಲಾಪಿಲಿಯಾಗಿವೆ. ಗಾವಳಿ ಬಯಲು ಬಂಡೆ ಚಿತ್ರದ ಇಂತಹ ಸಂಕೇತದೊಡನೆ ಇರುವ ಗೂಳಿಯ ಚಿತ್ರವನ್ನು ಮೇಲೆ ವರ್ಣಿಸಲಾಗಿದೆ. ಹಿರೇಬೆನಕಲ್ಲಿನ 5ನೆಯ ವರ್ಣಚಿತ್ರ ಗವಿಯಲ್ಲಿ ಮುಖವಾಡ ಧರಿಸಿದ ಮನುಷ್ಯನ ಹತ್ತಿರ ಒಂದನ್ನೊಂದು ಭೇದಿಸಿದ ಎರಡು ವ್ಯಾಸಗಳುಳ್ಳ ಒಂದು ವೃತ್ತವಿದೆ. ಇಂತಹ ಚಿಹ್ನೆ ಒಂದನ್ನೊಂದು ಭೇದಿಸುವ ಮೂರು ವ್ಯಾಸಗಳುಳ್ಳ ಸ್ವಲ್ಪ ಅಂಡಾಕಾರದ ವೃತ್ತ ಹರಪ್ಪ ಲಿಪಿಯ ಅಕ್ಷರಗಳಲ್ಲಿ ಒಂದು. ಹಿರೇಬೆನಕಲ್ಲಿನ 6ನೆಯ ಗವಿಯಲ್ಲಿ ಮೂರು ಸಮಾನಾಂತರ ಅಡ್ಡ ರೇಖೆಗಳು ಭೇದಿಸಿದ ಒಂದು ಚಿತ್ರವಿದೆ. ಈ ರೇಖೆಗಳ ತುದಿಗಳನ್ನು ಏರಿಳಿತದ ಒಂದು ರೇಖೆಯಿಂದ ಸೇರಿಸಿದೆ. ಇದು ಒಂದು ರಂಗೋಲಿ ಚಿತ್ರದಂತಿದೆ. ನವಿಲುತೀರ್ಥದಲ್ಲಿ (ಬೆಳಗಾಂವಿ ಜಿಲ್ಲೆ, ಸವದತ್ತಿ ತಾಲ್ಲೂಕು) ನೆಟ್ಟಗೆ ನಿಲ್ಲಿಸಿದ ಒಂದು ದಪ್ಪ ಕಲ್ಲುಚಪ್ಪಡಿಯ ಮೇಲೆ ಇತಿಹಾಸ ಕಾಲದ ನಾಗಮಂಡಲದಂತಹ ಆಳವಾದ ಗೀರು ರೇಖಾಚಿತ್ರವಿದೆ. ಇದು ಒಂದರೊಳಗೆ ಇನ್ನೊಂದನ್ನು ಸೇರಿಸಿದ ಮೂರು ಗಂಟಿನ ಎರಡು ರೇಖಾ ಚಿತ್ರಗಳು. ನೋಡುವುದಕ್ಕೆ ಆರು ಗಂಟಿನ ಒಂದೇ ಚಿತ್ರದಂತೆ ಕಾಣುತ್ತದೆ. ಹೊಳಲೂರಿನಲ್ಲಿ ಎರಡು ಬಿಡಿ ಕಲ್ಲುಹಲಗೆಗಳ ಮೇಲೆ ಒಂದೊಂದರಂತೆ ನಾಲ್ಕು ಗಂಟಿನ ಒಂದೇ ರೇಖೆಯ ಚಿತ್ರವಿದೆ. ಇದು ಮೊಹೆಂಜೋದಾರೋವಿನ ಒಂದು ಮನೆಯಲ್ಲಿ ದೊರೆತ ತಾಮ್ರದ ತಗಡಿನ ಮೇಲೆ ಒಂದು ಬದಿಯಲ್ಲಿ ರೇಖಾಚಿತ್ರಕ್ಕೆ ಬಹಳ ಸಮೀಪವಾಗಿದೆ. ಹಂಪಿಯ 1ನೆಯ ಗವಿಯಲ್ಲಿ ಒಂದು ಬಾಣದ ತ್ರಿಕೋಣಾಕೃತಿಯ ಮೊನೆಯ ಒಂದು ಅಪರೂಪದ ಚಿತ್ರ. ಇದರ ಹಿಡಿಕೆಯ ಕಡೆ ಎರಡು ಮೂಲೆಗಳಲ್ಲಿ ಕೊಕ್ಕೆಗಳಿವೆ. ಈ ಮಾದರಿಯ ಕಬ್ಬಿಣದ ಬಾಣದ ಮೊನೆಗಳು ಹಳ್ಳೂರು ಮೊದಲಾದ ಬೃಹತ್ ಶಿಲಾ ಸಂಸ್ಕೃತಿಯ ಹಂತ/ ಕಲ್ಗೋರಿಗಳಲ್ಲಿ ದೊರೆತಿವೆ.

ಮಂಡಲ ಚಿತ್ರಗಳು: ಗವಿವರ್ಣ ಹಾಗೂ ಬಯಲುಬಂಡೆ ಚಿತ್ರಗಳಲ್ಲಿ ಅಪರೂಪವಾಗಿ ಅಲ್ಲಲ್ಲಿ ಕುತೂಹಲಕಾರಿಯಾದ ಒಗಟಿನ ರೇಖಾಕೃತಿಗಳಿವೆ. ಕೆಲವು ಇತರ ವರ್ಣಚಿತ್ರಗಳೊಂದಿಗೆ ಬಣ್ಣದವು ; ಮತ್ತೆ ಕೆಲವು ಬಂಡೆಯ ಮೇಲೆ ಗೀರುಚಿತ್ರಗಳು. ನವಿಲುತೀರ್ಥ, ಗಾವಳಿ, ಗುಡ್ನಾಪುರ, ಚಿತ್ರದುರ್ಗಗಳಲ್ಲಿ ಗೀರು ರೇಖಾಚಿತ್ರಗಳಿದ್ದರೆ, ಹಿರೇಬೆನಕಲ್ಲು, ಚಿಕ್ಕರಾಮಪುರಗಳಲ್ಲಿ ವರ್ಣಚಿತ್ರಗಳಿವೆ. ಇಂಥ ಚಿತ್ರಗಳ ಒಂದು ಪ್ರಕಾರ ಕರ್ನಾಟಕಕ್ಕೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಕೇತವನಮ್‍ನಲ್ಲಿಯ ಗವಿ ವರ್ಣಚಿತ್ರಗಳಲ್ಲಿ ಇದೆ. ಪರಂಪರಾನುಗತವಾಗಿ ಬಂದ ಪದವನ್ನು ಉಪಯೋಗಿಸುವುದಾದರೆ ಇವುಗಳನ್ನು ಮಂಡಲಗಳೆಂದು ಕರೆಯಬಹುದು. ಇವುಗಳಲ್ಲಿ ಮೂರು ವಿಧದ ಚಿತ್ರಗಳಿವೆ.

ಒಂದನೆಯದು ಆದಿ ಕೊನೆ ಇಲ್ಲದ ಒಂದೇ ರೇಖೆಯ ನಾಲ್ಕುಗಂಟಿನ ಚಿತ್ರ ಅಥವಾ ಎರಡು ರೇಖೆಗಳ ಆರು ಗಂಟಿನ ಚಿತ್ರ, ಎರಡನೆಯದು ಕ್ರಮವಾಗಿ ಪರಸ್ಪರ ಓರೆಯಾಗಿ ಭೇದಿಸುವ ಎರಡು ಸಮಾನ ಚತುರ್ಭುಜಗಳು.ಇವುಗಳ ಮೆಲ್ ಮೂಲೆಗಳಲ್ಲಿ ಗುಣಿಸುಗಳಿರುತ್ತವೆ. ಮೂರನೆಯದು ಮೂರು ಚುಕ್ಕೆಗಳ ಮೂರು ಸಮಾನಾಂತರ ಸಾಲುಗಳು. ಈ ಚುಕ್ಕೆಗಳು ಉದ್ದವಾಗಿಯೂ ಅಡ್ಡವಾಗಿಯೂ ಪರಸ್ಪರ ಭಿನ್ನವಾಗಿದ್ದರೂ ಒಂದೇ ಮೂಲದಿಂದ ಬಂದಿವೆಯೆಂದು ಹೇಳಬಹುದು. ಎರಡನೆಯದರಲ್ಲಿ ಎಂಟು ಮೂಲೆ ಗಂಟುಗಳಿದ್ದರೂ (ಈ ಪ್ರಕಾರದ ಚಿತ್ರದಲ್ಲಿ ಕೇಂದ್ರದಲ್ಲಿ ಒಂದು ಗಂಟು ಆಗುವುದು)ಮೂರನೆಯದರಲ್ಲಿ ಒಂಬತ್ತು ಚುಕ್ಕೆಗಳಿವೆ (ಕೇಂದ್ರದಲ್ಲಿಯೂ ಚುಕ್ಕೆ ಇರುವುದರಿಂದ). ಚುಕ್ಕೆ ಇಲ್ಲವೆ ಗಂಟುಗಳನ್ನು ಸೇರಿಸುವುದರಲ್ಲಿ ಮಾತ್ರ ವ್ಯತ್ಯಾಸ. ಈ ವ್ಯತ್ಯಾಸದಿಂದ ಭಿನ್ನ ಆಕೃತಿಗಳು ಉಂಟಾಗಿವೆ. ಈಗ ಮೊದಲನೆಯದರ ಬಗ್ಗೆ ವಿಚಾರ ಮಾಡೋಣ.

ನವಿಲುತೀರ್ಥದಲ್ಲಿಯ ಎರಡು ರೇಖೆಗಳ ಆರು ಗಂಟಿನ ಮಂಡಲವನ್ನು ವಿವೇಚಿಸುವ. ಈ ಪ್ರಕಾರ ಚಿತ್ರಕ್ಕೆ ಮೊಹೆಂಜೋದಾರೋವಿನ ಹರಪ್ಪ ನಾಗರಿಕತೆಯ (ಪ್ರ.ಶ.ಪೂ.ಸು.2500–1750) ಒಂದು ಬದಿಯಲ್ಲಿ ಒಂದು ಸಾಲು ಹರಪ್ಪ ಲಿಪಿಯ ಬರೆವಣಿಗೆಯುಳ್ಳ ನಾಣ್ಯದಂತಿರುವ ಒಂದು ತಾಮ್ರದ ತಗಡಿನ ಮತ್ತೊಂದು ಬದಿಯಲ್ಲಿ ಇಂಥ ಒಂದೇ ರೇಖೆಯ ನಾಲ್ಕು ಗಂಟಿನ ಮಂಡಲವು ಮೂಲವಾಗಿರುವ ಸಾಧ್ಯತೆ ಇದೆ ಎಂಬುದನ್ನು ನಾನು ಬೇರೆಡೆಗಳಲ್ಲಿ ಚರ್ಚಿಸಿದ್ದೇನೆ. 1991ರಿಂದೀಚಿನ ನನ್ನ ಅನ್ವೇಷಣೆಗಳಲ್ಲಿ ಸುಪ್ರಸಿದ್ಧ ಆದಿ ಕದಂಬರ ರಾಜಧಾನಿ ಬನವಾಸಿಯ ಸಮೀಪ ಗುಡ್ನಾಪುರದಲ್ಲಿ (ಉತ್ತರಕನ್ನಡ ಜಿಲ್ಲೆ, ಸಿರಸಿ ತಾಲ್ಲೂಕು); ಇತ್ತೀಚೆಗೆ ಹೊಳಲೂರು (ಶಿವಮೊಗ್ಗ ತಾಲ್ಲೂಕು) ಮತ್ತು ಕೆಳದಿ ರಾಜ್ಯದ ಮೂರನೆಯ ಮತ್ತು ಕೊನೆಯ ರಾಜಧಾನಿಯಾದ ಹಳೆನಗರದಲ್ಲಿ ಈ ವಂಶದ ಒಬ್ಬ ಅರಸನಿಂದ ಕಟ್ಟಿಸಲ್ಪಟ್ಟ ಒಂದು ದೇವಾಲಯದಲ್ಲಿ ಇದ್ದುದ್ದು ನಾಲ್ಕು ಗಂಟಿನದು. ಗುಡ್ನಾಪುರ–ಹೊಳಲೂರು–ಹಳೆನಗರಗಳ ಚಿತ್ರಗಳು ಸು.17ನೆಯ ಶತಮಾನ ದವು. ಕೇತವನಮ್‍ದಲ್ಲಿಯೂ ಇಂಥ ಮಂಡಲದ ವರ್ಣಚಿತ್ರ ಬಹುಮಟ್ಟಿಗೆ ತಾಮ್ರ–ಶಿಲಾಯುಗದ ಕೊನೆಯ ಹಂತ (ಪ್ರ.ಶ.ಪೂ 1500–1000) ಅಥವಾ ಬೃಹತ್‍ಶಿಲಾ ಸಂಸ್ಕೃತಿಯ ಆದಿ ಹಂತದ (ಪ್ರ.ಶ.ಪೂ. 1200–600) ಕಾಲದ್ದಿರಬಹುದು. ಉತ್ತರಕರ್ನಾಟಕ ಮತ್ತು ಮಲೆನಾಡಿನಲ್ಲಿ ಇಂದಿಗೂ ಇಂಥ ಮಂಡಲವನ್ನು ರಂಗೋಲಿಯಲ್ಲಿ ಹಾಕುತ್ತಾರೆ. ಒಟ್ಟಿನಲ್ಲಿ ಈ ಮಂಡಲ ಹರಪ್ಪ ಸಂಸ್ಕೃತಿಯಿಂದ ಇಂದಿನವರೆಗೂ ನಿರಂತರವಾಗಿ ನಮ್ಮ ಪರಂಪರೆಯಲ್ಲಿ ಉಳಿದು ಬಂದಿದೆ ಎನ್ನುವುದು ಗಮನಾರ್ಹ.

ಗುಡ್ನಾಪುರದ ಚಿತ್ರಕಲ್ಲನ್ನು ಸ್ಥಳೀಯ ಜನರು ಅಲ್ಲಿದ್ದ ಸೋದೆ ಅರಸರ ಕಾಲದ ವೀರಶೈವ ಮಠದ ಗಡಿಕಲ್ಲೆಂದು ಹೇಳುತ್ತಾರೆ. ವೀರಶೈವ ಮಠ ಇದ್ದಿತೆಂದು ಹೇಳಲಾದ ಸ್ಥಳ. ಈಗ ಒಂದು ಬಯಲು ಪ್ರದೇಶ. ಕಲ್ಲಿನ ಮೇಲೆ ಈ ಮಂಡಲ ಚಿತ್ರದ ಜೊತೆಗೆ ಬೇರೆ ಬೇರೆ ವಿಧದ ರೇಖಾಚಿತ್ರಗಳಿವೆ. ಮಂಡಲದ ಬಲಬದಿಗೆ ಶಂಖವೂ ಎಡಬದಿಗೆ ಚಕ್ರವೂ ಇವೆ. ಚಕ್ರದ ಎಡಬದಿಯಲ್ಲಿ ನಕ್ಷತ್ರದ ಸಂಕೇತವಿದೆ. ಮೇಲ್ಭಾಗದಲ್ಲಿ ಒಂಬತ್ತು ಚುಕ್ಕೆಗಳ ರೇಖಾಚಿತ್ರವಿದ್ದು, ಇದರ ಮೇಲುಭಾಗದ ಎರಡೂ ಬದಿಗಳಲ್ಲಿ ವಜ್ರ ರೇಖಾಚಿತ್ರಗಳಿವೆ. ವಜ್ರವೆಂದರೆ ಒಂದು ಪ್ರಕಾರದ ಆಯುಧ. ಕೈಯಲ್ಲಿ ಹಿಡಿಯಲು ಅನುಕೂಲವಾಗುವಂತಿರುವ ಲೋಹ ಸರಳಿನ ಎರಡು ತುದಿಗಳಲ್ಲಿ ಒಂದೊಂದು ತ್ರಿಶೂಲವಿರುತ್ತದೆ. ಓ ಪ್ರಕಾರದ ಆಯುಧ ಕಾರ್ತಿಕೇಯದೇವರ ಒಂದು ಕೈಯಲ್ಲಿ ತೋರಿಸುತ್ತದೆ. ಇವೆಲ್ಲ ಚಿಹ್ನೆಗಳ ಜೊತೆಗೆ ಇರುವುದರಿಂದ ನಾಲ್ಕು ಗಂಟಿನ ಮಂಡಲ ಸ್ವಲ್ಪ ಹೆಚ್ಚು ಅರ್ಥಗರ್ಭಿತವಾಗಿದೆ. ವಿಜಯನಗರ ಕಾಲದ ವೈಷ್ಣವ ದೇವಾಲಯಗಳಲ್ಲಿಯ ದ್ವಾರಬಂಧದ ಲಲಾಟ ಬಿಂಬದಲ್ಲಿ ಮತ್ತು ಆ ಕಾಲದ ಇಂಥ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳ ಮೇಲ್ಭಾಗಗಳಲ್ಲಿ ಒಂದೇ ಸಾಲಿನಲ್ಲಿ ಶಂಖ, ತಿರು(ತಮಿಳು ಶಬ್ದ–ಪವಿತ್ರ ಎಂದು ಅರ್ಥ) ನಾಮ ಮತ್ತು ಚಕ್ರವಿರುತ್ತವೆ. ಆದ್ದರಿಂದ ಇಂಥ ಪಟ್ಟಿಕೆ ವೆಂಕಟೇಶ್ವರ ಅಂದರೆ ವಿಷ್ಣುದೇವನನ್ನು ಸಂಕೇತಿಸುತ್ತದೆ. ಇದರಂತೆಯೇ ಗುಡ್ನಾಪುರದಲ್ಲಿ ಶಂಖ–ಚಕ್ರಗಳ ನಡುವೆ ಮಂಡಲವಿರುವುದರಿಂದ ಅದು ಬಹುಮಟ್ಟಿಗೆ ತಿರುನಾಮ ಸಮಾನವೆಂದು ತಿಳಿಯಬಹುದು.

ಈ ರೀತಿ ವೈಷ್ಣವ ದೇವಾಲಯಗಳಲ್ಲಿ ಪಟ್ಟಿಕೆಯನ್ನು ತೋರಿಸುವ ಪದ್ಧತಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸೋಂದೆ ಅರಸರ ಕಾಲದಲ್ಲಿ ಬಳಕೆಗೆ ಬಂದಿರಬೇಕು. ಹೊಳಲೂರಿನಲ್ಲಿ ಕೆಳದಿ ಅರಸರ ಕಾಲದ ಒಂದು ಈಶ್ವರ ದೇವಾಲಯದ (ಸು.17ನೆಯ ಶತಮಾನ) ಮುಂದೆ ಬಿಡಿಬಿಡಿಯಾಗಿ ನೆಡಲ್ಪಟ್ಟ ಎರಡು ಕಲ್ಲು ಹಲಗೆಗಳ ಮೇಲೆ ಇಂಥ ಒಂದೊಂದು ಮಂಡಲ ಚಿತ್ರಗಳಿವೆ. ಹಳೆನಗರದ ಇದೇ ಅರಸರ ಕಾಲದ ದೇವಾಲಯದ ಮುಂಭಾಗದ ಚಾವಣಿಯ ಒಳಮೈಯಲ್ಲಿ ಎರಡು ಪದ್ಮಗಳ ನಡುವೆ ಇಂಥ ಮಂಡಲ ಚಿತ್ರವಿದ್ದ ಶುಭ ಸಂಕೇತದ ಪಟ್ಟಿಕೆ ಇದೆ. ಇತ್ತೀಚೆಗೆ ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗ ಬೆಟ್ಟ ಮತ್ತು

ಪರಿಸರಗಳಲ್ಲಿ ಶೋಧಿಸಿದ ಚಿತ್ರಗಳಲ್ಲಿ ನಾಲ್ಕು ಗಂಟಿನ ರೇಖಾಚಿತ್ರವೂ ಇದೆ. ಇದು ಕಂಡುಬಂದಿರುವುದು ಒಂದು ವಿಶಾಲವಾದ ಬಂಡೆಯ ಮೇಲೆ. ಇದರ ಒಂದು ಬದಿಯಲ್ಲಿ ವೃತ್ತಾಕಾರದ ತಗ್ಗು ಮತ್ತು ಅದರಿಂದ ನೀರು ಹರಿದು ಬರಲು ಪ್ರನಾಳ ಇದ್ದು, ಮಂಡಲದ ಮತ್ತೊಂದು ಬದಿಯಲ್ಲಿ ಮುಂದೆ ನಡೆದು ಹೋದಂತೆ ಆಭಾಸವಾಗುವ ಮನುಷ್ಯನ 10 ಹೆಜ್ಜೆ ಗುರುತುಗಳಿವೆ. ಆದ್ದರಿಂದ ಇಲ್ಲಿಯೂ ಈ ಚಿತ್ರವು ಒಂದು ಧಾರ್ಮಿಕ ಅರ್ಥವುಳ್ಳದ್ದಾಗಿದೆ. ಆದರೆ ಈ ಮಂಡಲದಲ್ಲಿ ಒಂದು ವೈಶಿಷ್ಟ್ಯವುಂಟು. ಮೇಲ್ಭಾಗದಲ್ಲಿಯ ಕಮಾನಿನ ರೇಖೆಯ ಮಧ್ಯದಲ್ಲಿ ಸ್ವಲ್ಪ ಸ್ಥಳ ಬಿಟ್ಟಿರುವುದರಿಂದ ಎರಡು ತುದಿಗಳುಂಟಾಗಿ ಆ ತುದಿಗಳು ಸಣ್ಣ ವೃತ್ತದಂತೆ ಅಗಲವಾಗಿವೆ. ಆದ್ದರಿಂದ ಥಕ್ಕನೆ ನೋಡಿದಲ್ಲಿ ಹೆಣೆದುಕೊಂಡ ಜೋಡಿ ನಾಗದಂತಿದೆ. ಆದ್ದರಿಂದ ಇದು ಜೋಡಿ ನಾಗರದ ಸಂಕೇತವಾಗಿದ್ದು, ನಾಗಮಂಡಲವಾಗಿರಬಹುದೆ ಎಂಬ ಸಂಶಯವೂ ಮೂಡುತ್ತದೆ.

ಉತ್ತರ ಕರ್ನಾಟಕ ಮತ್ತು ಮಲೆನಾಡು ಪ್ರದೇಶದಲ್ಲಿ ಜನರು ಅಲ್ಲಲ್ಲಿ ಇಂದಿಗೂ ದೇವರಮಂಟಪದ ಮುಂದೆ, ಮನೆಯ ಮುಂದೆ ಇಂಥ ಮಂಡಲದ ರಂಗೋಲಿ ಹಾಕುವುದುಂಟು. ಉತ್ತರ ಕರ್ನಾಟಕದಲ್ಲಿ ಇಂಥ ಮಂಡಲಗಳು ಶಿಶುಗಳಾದ ಬಲರಾಮ ಮತ್ತು ಕೃಷ್ಣರನ್ನು ತೊಟ್ಟಿಲಿಗೆ ಹಾಕಿದ ಸಂಕೇತವೆಂದೂ ಮಲೆನಾಡಿನಲ್ಲಿ ಇದು ವಿಷ್ಣುವಿನ ಪಾದವೆಂದೂ ನಂಬಿಕೆ. ಭಾರತೀಯ ಪರಂಪರೆಯಲ್ಲಿ ಶಿವ-ನಾಗ; ವಿಷ್ಣು-ನಾಗ ಇವರ ಸಂಬಂಧ ನಿಕಟ. ಇವೆಲ್ಲವನ್ನೂ ಪರಿಶೀಲಿಸಿದಾಗ ಈ ಮಂಡಲ ಚಿತ್ರಕ್ಕೆ ಒಂದು ಧಾರ್ಮಿಕ ಅರ್ಥ ಮತ್ತು ಮಹತ್ತ್ವವಿದ್ದು, ಶೈವ-ವೈಷ್ಣವ-ನಾಗ ಸಂಪ್ರದಾಯಕ್ಕೆ ಸಂಬಂಧಿಸಿರಬಹುದು.

ದ್ವಿಚತುರ್ತಬಾಹು ಚಿತ್ರಕ್ಕೆ ಖಂಡಿತವಾಗಿಯೂ ಧಾರ್ಮಿಕ ಅರ್ಥವಿದೆ. ಗೃಹಪ್ರವೇಶ ಮುಂತಾದ ಕೆಲವು ವಿಶಿಷ್ಟ ಧಾರ್ಮಿಕ ಕಾರ್ಯಗಳಲ್ಲಿ ವೈದಿಕ ಪುರೋಹಿತರು ಇಂಥ ಮಂಡಲಗಳನ್ನು ರಂಗೋಲಿಯಲ್ಲಿ ಹಾಕಿ ಅವುಗಳಿಗೆ ಇಂಥ ಕಾರ್ಯಗಳನ್ನು ಕೈಗೊಂಡು ಯಜಮಾನನಿಂದ ಪೂಜೆ ಮಾಡಿಸುತ್ತಾರೆ. ಈ ಮಂಡಲದಲ್ಲಿರುವ ಒಂಬತ್ತು ಗಂಟುಗಳು ನವಗ್ರಹಗಳನ್ನು ಸೂಚಿಸುತ್ತವೆ. ಗಾವಳಿಯ ಒಂದು ಕೋಣದ ರೇಖಾಚಿತ್ರಕ್ಕೆ ಸೇರಿದಂತೆ ಇಂಥ ಮಂಡಲದ ಚಿತ್ರವಿದೆ. ಕೋಣ ಯಮದೇವತೆಯ ವಾಹನ. ಆದ್ದರಿಂದ ಗಾವಳಿ ಚಿತ್ರದ ಕಾಲದಲ್ಲೂ ಇಂಥ ಮಂಡಲ ನವಗ್ರಹಗಳನ್ನು ಸಂಕೇತಿಸುತ್ತಿತ್ತೆ ಎಂಬ ಪ್ರಶ್ನೆ ಏಳುತ್ತದೆ. ಏಕೆಂದರೆ ಈ ಚಿತ್ರವಿರುವ ಪರಿಸರದಲ್ಲಿಯೇ ಬೃಹತ್‌ಶಿಲಾ ಸಂಸ್ಕೃತಿಯ ಕಲ್ಗೋರಿಗಳ ನೆಲೆಯೂ ಇದೆ.

ಒಂಬತ್ತು ಚುಕ್ಕೆಗಳ ಮಂಡಲ ಗುಡ್ನಾಪುರದ ಕಲ್ಲಿನ ಮೇಲೆ ಇತರ ಧಾರ್ಮಿಕ ಸಂಕೇತಗಳೊಡನೆ ಇದ್ದು, ಇದರ ಎರಡೂ ಬದಿಗಳಲ್ಲಿ ವಜ್ರಾಯುಧ ರೇಖಾಚಿತ್ರಗಳಿರುವುದರಿಂದ, ಇದಕ್ಕೂ ಒಂದು ಧಾರ್ಮಿಕ ಅರ್ಥವಿದೆ ಎಂಬುದು ಸ್ಪಷ್ಟವಾಗುತ್ತದೆ.

ಚಿಕ್ಕರಾಮಪುರದ ಮೊದಲನೆಯ ಗವಿಯಲ್ಲಿ ಗೂಳಿ, ಜಿಂಕೆ, ನವಿಲು, ಈಟಿಯನ್ನು ಅಡ್ಡಲಾಗಿ ಮನುಷ್ಯ ಮೊದಲಾದ ಚಿತ್ರಗಳೊಂದಿಗೆ ಎರಡು ಚತುರ್ಬಾಹು ಮಂಡಲಗಳು, ಒಂದು ಒಂಬತ್ತು ಚುಕ್ಕೆಗಳ ಮಂಡಲ ಇವೆ. ಅದರಂತೆಯೇ ಹಿರೇಬೆನಕಲ್ಲಿನ ನಾಲ್ಕನೆಯ ಗುಹೆಗಳಲ್ಲಿ ಇಂಥ ಪ್ರಾಣಿ ಮನುಷ್ಯರ ಚಿತ್ರಗಳೊಂದಿಗೆ ಒಂಬತ್ತು ಚುಕ್ಕೆಯ ಚಿತ್ರವಿದೆ. ಇದರಲ್ಲಿಯ ರೇಖೆಗಳ ತುದಿಗಳನ್ನು ಸೇರಿಸುವ ತೋರಣ ಹಾಕಿದಂತೆ ಸುತ್ತಲೂ ಒಂದು ರೇಖೆಯಿದೆ. ಚಿಕ್ಕರಾಮಪುರದ ದ್ವಿಚತುರ್ತಬಾಹು ಮಂಡಲದಲ್ಲಿ ಮಧ್ಯದಲ್ಲಿ ಎರಡು ಕಂಸಗಳ ವಿರುದ್ಧ ದಿಕ್ಕಿನಲ್ಲಿ ಪರಸ್ಪರ ಛೇದಿಸಿದ ರೇಖಾ ಚಿತ್ರಗಳಿವೆ. ಇದು ಬಹುಶಃ ಕೇಂದ್ರ ದೇವತೆಯ ಪ್ರಚಲಿತ ಹೆಸರಿನ ಸಂಕೇತವಿರಬಹುದು.

ವರ್ಣಚಿತ್ರದಲ್ಲಿ ಬೃಹತ್ ಶಿಲಾವೃತ್ತಗೋರಿ, ಚಿಕ್ಕರಾಮಪುರ

ಇನ್ನೆರಡು ಬೇರೆ ಪ್ರಕಾರದ ಸರಳ ವರ್ಣಚಿತ್ರ ರೇಖಾ ಸಂಕೇತಗಳು ಹಿರೇಬೆನಕಲ್ಲಿನ ಸುಮಾರು 10 ಕಿಮೀ ಪಶ್ಚಿಮಕ್ಕೆ ಬಿಳಿಬಾವಿಯಲ್ಲಿವೆ. ಒಂದು ಗುಣಾಕಾರದ ಚಿಹ್ನೆಯಾಗಿದ್ದು, ಎರಡೂ ಬದಿಯ ರೇಖೆಗಳ ತುದಿಗಳನ್ನು ಬಾಗಿದ ರೇಖೆಗಳಿಂದ ಕೂಡಿಸಲ್ಪಟ್ಟಿದೆ. ಬಹುಮಟ್ಟಿಗೆ ಹರಪ್ಪಲಿಪಿಯ ಒಂದು ಅಕ್ಷರಕ್ಕೆ ಇದು ಸಮೀಪವಾಗಿದೆ. ಹರಪ್ಪ ಲಿಪಿಯಲ್ಲಿ ಇಂಥ ಚಿಹ್ನೆಯಲ್ಲಿ ಒಂದು ಬದಿಯ ಎರಡು ತುದಿಗಳು ಒಳಬಾಗಿರುತ್ತವೆ; ಕೂಡಿರುವುದಿಲ್ಲ. ಇದನ್ನು ಎಸ್.ಆರ್.ರಾವ್ ಅವರು ಮ ಎಂದು ಗುರುತಿಸಿದ್ದಾರೆ. ಮತ್ತೊಂದು ಒಂದೇ ಕೇಂದ್ರದ ಮೂರು ವೃತ್ತಗಳು; ಹೊರಬದಿಯ ರೇಖೆಗೆ ಬೆಳಕಿನ ಕಿರಣಗಳಂತೆ ಸಣ್ಣ ಸಣ್ಣ ಅಡ್ಡ ರೇಖೆಗಳು ಸುತ್ತಲೂ ಇವೆ. ಪ್ರಾಯಿಶಃ ಇದು ಸೂರ್ಯ ಮಂಡಲವನ್ನು ಹೆಚ್ಚು ನೈಜವಾಗಿ ಪ್ರತಿನಿಧಿಸಬಹುದು. ಈ ಪ್ರಕಾರದ ಮಂಡಲವೂ ಕೂಡಾ ಮೊಹೆಂಜೋದಾರೊದಲ್ಲಿ ದೊರೆತ ಹರಪ್ಪ ನಾಗರಿಕತೆಯ ತಾಮ್ರದ ಪಟ್ಟಿಕೆಗಳಲ್ಲಿ ಇರುವುದು ತುಂಬಾ ಸ್ವಾರಸ್ಯಕರ. ಮಂಡಲ ವರ್ಣಚಿತ್ರಗಳೆಲ್ಲವೂ ಬಹುಮಟ್ಟಿಗೆ ಬೃಹತ್‌ಶಿಲಾಯುಗ ಸಂಸ್ಕೃತಿಯ ಜನರಿಗೆ ಸೇರಿದವು. ಹಿರೇಬೆನಕಲ್ಲಿನಲ್ಲಿ ಇಂಥ ಗವಿ ವರ್ಣಚಿತ್ರದ ಸಮೀಪದಲ್ಲಿಯ ಈ ಸಂಸ್ಕೃತಿಯ ಜನವಾಸ್ತವ್ಯದ ನೆಲೆಗಳು ಮತ್ತು ನಾನೂರಕ್ಕೂ ಹೆಚ್ಚು ನಾಲ್ಕು ಪ್ರಕಾರದ ಕಲ್ಗೋರಿಗಳಿವೆ. ಹತ್ತಕ್ಕೂ ಹೆಚ್ಚು ಈ ಪ್ರದೇಶದಲ್ಲಿ ಗವಿ ವರ್ಣಚಿತ್ರಗಳೂ ಶೋಧವಾಗಿವೆ. ಚಿಕ್ಕರಾಮಪುರ ವ್ಯಾಪಕವಾದ ಈ ನೆಲೆಗಳ ಪರಿಸರದಲ್ಲಿಯೇ ಇದೆ.

ಇವುಗಳ ಧಾರ್ಮಿಕ ಒಗಟುಗಳನ್ನು ಬಿಡಿಸಲು ಸಾಧ್ಯವಾದರೆ ಮತ್ತು ಇವುಗಳಿಗೂ ಹರಪ್ಪ ಸಂಸ್ಕೃತಿಯ ಚಿಹ್ನೆಗಳಿಗೂ ಸಂಬಂಧವನ್ನು ಖಚಿತ ಪಡಿಸುವುದಾದರೆ, ಕರ್ನಾಟಕದಲ್ಲಿಯ ಇತಿಹಾಸ ಅಂದರೆ ಮೌರ್ಯ-ಸಾತವಾಹನ ಕಾಲಕ್ಕಿಂತಲೂ ಪೂರ್ವದ ಜನರ ಧಾರ್ಮಿಕ ವಿಚಾರ ತತ್ಸಂಬಂಧ ಈ ವರ್ಣಚಿತ್ರಗಳು ಸ್ವಲ್ಪಮಟ್ಟಿಗೆ ಅಥವಾ ಹರಪ್ಪ ಸಂಸ್ಕೃತಿ ಕೆಲವು ಧಾರ್ಮಿಕ ವಿಚಾರಗಳು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗಿ, ಇವೆಲ್ಲ ಸಂಸ್ಕೃತಿಗಳ ಅಧ್ಯಯನಗಳಲ್ಲಿ ಒಂದು ಹೊಸ ಅಧ್ಯಾಯವನ್ನೇ ಬರೆಯಲು ಸಾಧ್ಯವಾಗಬಹುದು.

ಹೋಲಿಕೆ ಮತ್ತು ಕಾಲಮಾನ: ಮೇಲೆ ಸೂಚಿಸಿದ ವರ್ಣಚಿತ್ರ ಗವಿಗಳಲ್ಲಿ ಮತ್ತು ಬಯಲುಬಂಡೆಯ ಚಿತ್ರಗಳ ಜೊತೆಗೆ ಕೆಲವೆಡೆಗಳಲ್ಲಿ ಇತಿಹಾಸ ಹಾಗೂ ಆಧುನಿಕ ಕಾಲದ ಚಿತ್ರಗಳೂ ಇವೆ. ಹೆಚ್ಚಾಗಿ ಬಯಲುಬಂಡೆ ಚಿತ್ರಗಳುಳ್ಳ ನೆಲೆಗಳಲ್ಲಿ ಈ ರೀತಿಯಿದೆ. ಏಕೆಂದರೆ, ಪ್ರಾಚೀನ ಕಾಲದ ಚಿತ್ರಗಳು ಸುಲಭವಾಗಿ ಕಣ್ಣಿಗೆ ಬಿದ್ದಾಗ ದನಕಾಯುವವರು ಕುತೂಹಲದಿಂದಲೂ ಸಮಯಸ್ಫೂರ್ತಿಯಿಂದಲೂ ಪಕ್ಕದ ಮತ್ತೊಂದು ಬಂಡೆಯ ಮೇಲೆ ತಮಗೆ ತೋಚಿದ (ಹನುಮಪ್ಪ, ರೈಲುಬಂಡಿ, ಹುಲಿ, ಗುಡಿ ಮೊದಲಾದ) ಚಿತ್ರಗಳನ್ನು ಬಿಡಿಸಿರಬೇಕು. ಇಂತಹ ಚಿತ್ರಗಳನ್ನು ಬಿಡಿಸುವ ಕ್ರಮ ಸುಲಭ. ಅನುಕೂಲಕರವಾದ ಒಂದು ಗಟ್ಟಿಕಲ್ಲನ್ನು ತೆಗೆದುಕೊಂಡು ಬಂಡೆಯ ಮೇಲೆ ಕುಟ್ಟಿ ಬೇಕಾದ ಚಿತ್ರವನ್ನು ತೆಗೆಯಬಹುದು. ಆದ್ದರಿಂದ ಒಂದು ಗವಿಯಲ್ಲಿ ಪ್ರಾಗೈತಿಹಾಸಿಕ ಚಿತ್ರಗಳೊಡನೆ ಆಧುನಿಕ ಕಾಲದ ಚಿತ್ರಗಳಿರುವುದು ಅಪರೂಪ.

ಗವಿವರ್ಣ ಮತ್ತು ಬಯಲುಬಂಡೆ ಚಿತ್ರಗಳನ್ನು ಕಾಲದುದ್ದಕ್ಕೂ ಬೇರೆ ಬೇರೆ ಜನಾಂಗದವರು ಸೃಷ್ಟಿಸಿದ್ದಾರೆ. ಒಂದೇ ಸ್ಥಳದಲ್ಲಿಯ ಚಿತ್ರಗಳು ಬೇರೆ ಬೇರೆ ಕಾಲದವೂ ಆಗಿವೆ. ಬಹಳಷ್ಟು ಚಿತ್ರಗಳ ಕಾಲಮಾನವನ್ನು ನಿರ್ಧರಿಸುವುದು ಈ ಚಿತ್ರಗಳ ಅಧ್ಯಯನಕ್ಕೆ ಸಂಬಂಧಿಸಿದ ಕ್ಲಿಷ್ಟ ಸಮಸ್ಯೆಗಳಲ್ಲಿ ಒಂದು. ಆದರೂ ಅವುಗಳ ನೆಲೆ, ಸ್ಥಿತಿ, ಚಿತ್ರಗಳ ವಸ್ತು, ನಿರೂಪಣಾ ಶೈಲಿ, ತಾಂತ್ರಿಕತೆ, ಸಮೀಪದ ಸಾಂಸ್ಕೃತಿಕ ನಿವೇಶನಗಳೊಡನೆ ಇದ್ದಿರಬಹುದಾದ ಸಂಬಂಧ, ಇತರೆಡೆಗಳಲ್ಲಿಯ ನಿರ್ದಿಷ್ಟ ಕಾಲಮಾನದ ವಸ್ತುಗಳೊಡನೆ ಹೋಲಿಕೆ-ಇವೇ ಮೊದಲಾದವುಗಳ ಅಧ್ಯಯನದಿಂದ ಸ್ಥೂಲವಾಗಿ ತಕ್ಕಮಟ್ಟಿಗೆ ಇವುಗಳ ಕಾಲಮಾನವನ್ನು ಸೂಚಿಸಬಹುದು.

ಬಾದಾಮಿ-ಪಟ್ಟದಕಲ್ಲು ಭಾಗದಲ್ಲಿಯ ಅರೆಗುಡ್ಡ-ಹಿರೇಗುಡ್ಡಗಳಲ್ಲಿಯ ಹಾಗೂ ಬಾದಾಮಿ ಸಮೀಪದ ಒಂದು ಗವಿಯ ಮತ್ತು ರಾಮದುರ್ಗ (ಬೆಳಗಾಂವಿ ಜಿಲ್ಲೆ) ಹತ್ತಿರದ ಕಲ್ಲಾಸರೆಯಲ್ಲಿಯ ವರ್ಣಚಿತ್ರಗಳು ಉತ್ತರ ಕರ್ನಾಟಕದಲ್ಲಿಯೇ ಅಲ್ಲ, ಇದುವರೆಗೆ ತಿಳಿದಮಟ್ಟಿಗೆ ದಕ್ಷಿಣ ಭಾರತದಲ್ಲೆ ಶೈಲಿಯಲ್ಲಿ ಹಾಗೂ ಚಿತ್ರಗಳ ವಸ್ತುವಿನಲ್ಲಿ ವಿಶಿಷ್ಟವಾಗಿವೆ. ಭೀಂಬೇಟ್ಕದಲ್ಲಿಯ ಹಳೆಶಿಲಾಯುಗದ ಕೊನೆಯ ಹಂತದ ಕಾಲದ ಚಿತ್ರಗಳಿಗೆ ಹೋಲುತ್ತವೆ. ಈ ಗವಿಗಳ, ಕಲ್ಲಾಸರೆಗಳ ಸಮೀಪದಲ್ಲಿ ನವ ಶಿಲಾಯುಗದ ನೆಲೆಗಳಾಗಲೀ, ಅನಂತರದ ಕಾಲದ ಜನವಾಸ್ತವ್ಯದ ನೆಲೆಗಳಾಗಲಿ ಸುತ್ತಮುತ್ತಲಿನ ಪ್ರಾದೇಶಿಕ ಅನ್ವೇಷಣೆಯಲ್ಲಿ ಬೆಳಕಿಗೆ ಬಂದಿಲ್ಲ. ಆದ್ದರಿಂದ ಇವು ಪ್ರಾಯಶಃ ನವ ಶಿಲಾಯುಗಕ್ಕಿಂತಲೂ ಪೂರ್ವದ್ದಾಗಿರಬಹುದೆಂದು ತೋರುತ್ತದೆ ಮತ್ತು ಈ ಪ್ರದೇಶ ಪ್ರಾಗೈತಿಹಾಸಿಕ ವರ್ಣಚಿತ್ರಗಳ ಮತ್ತೊಂದು ಕೇಂದ್ರವೆಂದು ಹೇಳಬಹುದು.

ಕಜೂರು ಮತ್ತು ಉಸ್‌ಗಾಲಿಮೋಲ್‌ನಲ್ಲಿಯ ಗೀರುಚಿತ್ರಗಳು ಕ್ರಮವಾಗಿ ಕುಶಾವತಿಹಳ್ಳದ ದಂಡೆಯ ಹತ್ತಿರ ಮತ್ತು ಅದರ ಪಾತ್ರದಲ್ಲಿವೆ. ಕಾಲಮಾನ ದೃಷ್ಟಿಯಿಂದ ಎರಡನೆಯದು ಗಮನಾರ್ಹ. ಇಲ್ಲಿಯ ಚಿತ್ರಗಳು ಹಳ್ಳದ ದಂಡೆ ಹತ್ತಿರ, ಅದರ ಪಾತ್ರದಲ್ಲಿಯ ಸಮತಲ ಜಂಬಿಟ್ಟಿಗೆ ಬಂಡೆಯ ಮೇಲಿವೆ. ಇವುಗಳ ಮೇಲುಹಳ್ಳದ ದಂಡೆ ನೈಸರ್ಗಿಕವಾಗಿ ನಿರ್ಮಾಣವಾಗಿತ್ತು. ಕ್ರಮೇಣ ಪ್ರವಾಹದ ಕೊರೆತದಿಂದ ದಂಡೆ ಸವೆಯುತ್ತಾ ಬಂದು ಈ ಚಿತ್ರಗಳು ಮತ್ತೆ ಕಾಣತೊಡಗಿದವು. ಚಿತ್ರಣದ ತಾಂತ್ರಿಕತೆಯನ್ನು ಗಮನಿಸಿ ಇವು ಕನಿಷ್ಠ ಪೂರ್ವಭಾವಿ ಇತಿಹಾಸ ಕಾಲದ ಮಧ್ಯ-ಅಂತ್ಯ ಕಾಲದ್ದೆಂದು (ಪ್ರಶ.ಪೂ.ಸು.1500-100) ಹೇಳಬಹುದು.

ಪಿಕ್ಲಿಹಾಳ, ಆತನೂರು ಮತ್ತು ಹಂಪಿ ಮೊದಲಾದೆಡೆಗಳಲ್ಲಿ ಪದೇ ಪದೇ ಮೊಸಳೆ (ಉಡ?) ಚಿತ್ರಣವಿದ್ದು, ಹರಪ್ಪ ಮುದ್ರಿಕೆಗಳಲ್ಲಿ ಈ ಪ್ರಾಣಿಯ ಚಿತ್ರವನ್ನು ಮೂಡಿಸಿದ ಪದ್ಧತಿಯನ್ನು ನೆನಪಿಗೆ ತರುತ್ತದೆ. ಹಿರೇಬೆನಕಲ್ಲಿನ 1ನೆಯ ಗವಿಯ ಒಬ್ಬ ಮನುಷ್ಯನ ಕೈಯಲ್ಲಿಯ ಮೊನೆಯುಳ್ಳ ಈಟಿ ಹಾಗೂ ಹಂಪಿಯ 1ನೆಯ ಗವಿಯ ಬಾಣದ ಮೊನೆಗಳು ಕ್ರಮವಾಗಿ ಯೆಲೇಶ್ವರಮ್ (ಗುಂಟೂರು ಜಿಲ್ಲೆ, ಆಂಧ್ರಪ್ರದೇಶ) ಹಾಗೂ ಕೊಮರನಹಳ್ಳಿಯ (ಹರಿಹರ ತಾಲ್ಲೂಕು) ಬೃಹತ್‌ಶಿಲಾ ಸಮಾಧಿಗಳಲ್ಲಿ ದೊರಕಿದ ಕಬ್ಬಿಣದ ಆಯುಧಗಳ ಪ್ರತಿರೂಪವೇ ಎನ್ನುವಂತಿವೆ. ಈ ಗವಿಯ ಕಲ್ಲಾಸರೆ ಚಿತ್ರಗಳ ಮತ್ತು ಬಯಲುಬಂಡೆ ಚಿತ್ರಗಳ ಬಳಿ ತಾಮ್ರ-ಶಿಲಾಯುಗ ಮತ್ತು ಬೃಹತ್‌ಶಿಲಾ ಸಂಸ್ಕೃತಿ ವಾಸ್ತವ್ಯದ ಕಲ್ಲು ಸಮಾಧಿಗಳ ನೆಲೆಗಳಿವೆ. ಆದ್ದರಿಂದ ಹಿರೇಬೆನಕಲ್ಲು- ಹಂಪಿ ಹಾಗೂ ಇದರ ಸುತ್ತಮುತ್ತಲಿನ

ಕುರುಗೋಡು ಪಿಕ್ಲಿಹಾಳ– ತಾವರಗೆರೆ–ಮಸ್ಕಿ ಮತ್ತು ಬೆಳಗಲ್ಲು –ಹಳಕುಂದಿ, ಕಲ್ಲೂರು, ಭಿಲ್ಲಮರಾಯನಗುಡ್ಡ ಪ್ರದೇಶಗಳ ಈ ಚಿತ್ರಗಳೆಲ್ಲವೂ ಬಹುಶಃ ಶಿಲಾ–ತಾಮ್ರಯುಗದ ಕೊನೆಯ ಹಂತ (ಪ್ರ.ಶ.ಪೂ.ಸು.1400–800) ಬೃಹತ್‌ಶಿಲಾಯುಗ ಸಂಸ್ಕೃತಿಯ ಆದಿ ಮಧ್ಯಭಾಗದ (ಪ್ರ.ಶ.ಪೂ.ಸು.1000–500) ಕಾಲದ್ದೆಂದು ನಿರ್ಣಯಿಸಲು ಅಡ್ಡಿಯಿಲ್ಲ.

ಗವಿ ವರ್ಣಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇವುಗಳ ಪ್ರಸಾರವ್ಯಾಪ್ತಿಯೂ ಹೆಚ್ಚು. ಆದರೂ ಹಿರೇಬೆನಕಲ್ಲು–ಹಂಪಿ ಪ್ರದೇಶದಲ್ಲಿ ಹೆಚ್ಚಾಗಿವೆ. ಆದ್ದರಿಂದ ಉತ್ತರ ಕರ್ನಾಟಕದಲ್ಲಿ ಈ ಭಾಗ ಈ ಚಿತ್ರಕಲೆಯ ಕೇಂದ್ರ ಸ್ಥಾನವೆಂದು ಹೇಳಬಹುದು. ಈ ಪ್ರದೇಶದಲ್ಲಿ ಬಯಲುಬಂಡೆ ಚಿತ್ರಗಳು ಇದುವರೆಗೆ ಕಣ್ಣಿಗೆ ಬಿದ್ದಿಲ್ಲ. ಕೆಲವು ಬಯಲುಬಂಡೆ ಮತ್ತು ಗವಿ ವರ್ಣಚಿತ್ರಗಳು ಶೈಲಿಯಲ್ಲಿ ಒಂದೇ ತೆರನಾಗಿದ್ದು, ಅವು ಸಮಕಾಲೀನವೆಂದು ಸೂಚಿಸುತ್ತವೆ.

ಬಯಲುಬಂಡೆ ಚಿತ್ರಗಳು ವರ್ಣಚಿತ್ರಗಳಷ್ಟು ವೈವಿಧ್ಯಮಯವಾಗಿಲ್ಲ. ಜೊತೆಗೆ ಇವೆರಡೂ ಪ್ರಕಾರದ ಚಿತ್ರಗಳ ಸಮೀಪದಲ್ಲಿ ತಾಮ್ರ–ಶಿಲಾಯುಗ ಮತ್ತು ಬೃಹತ್‌ಶಿಲಾ ಸಂಸ್ಕೃತಿಗಳ ನೆಲೆಗಳಿವೆ. ಮತ್ತು ಈ ಸಂಸ್ಕೃತಿಗಳ ಜನರೆ ಬಹುಮಟ್ಟಿಗೆ ಈ ಚಿತ್ರಗಳ ಕರ್ತೃಗಳೆಂದು ಮೇಲೆ ತರ್ಕಿಸಿದೆ. ಈಗಿನ ಗೌಳಿಗ ಗೊಲ್ಲರ ಹಾಗೆ ಕೇವಲ ಪಶುಪಾಲನೆ ವೃತ್ತಿಯ ಜನವರ್ಗಕ್ಕೆ ಹೆಚ್ಚಾಗಿ ಬಯಲುಬಂಡೆ ಚಿತ್ರಗಳು ಸೇರಿರಬೇಕೆಂದು ಕಾರಣಬದ್ಧವಾಗಿ ಊಹಿಸಬಹುದು. ವರ್ಣಚಿತ್ರಗಳು ಈ ಸಂಸ್ಕೃತಿಗಳ ಸಮಾಜದ ಬಹಳಷ್ಟು ಎಲ್ಲ ವರ್ಗಗಳಿಗೂ ಸಂಬಂಧಪಟ್ಟಿದ್ದಿರಬೇಕೆಂದು ಕಾಣುತ್ತದೆ.

ಬಾದಾಮಿಯ 3ನೆಯ ಗವಿವರ್ಣ ಚಿತ್ರ ವಸ್ತು, ಶೈಲಿ ಹಾಗೂ ತಾಂತ್ರಿಕತೆಯ ಮತ್ತು ಸಮೀಪದ ಮಧ್ಯಯುಗೀನ ಜನವಾಸ್ತವ್ಯದ ನೆಲೆಗಳ ಇರುವಿಕೆಯ ಆಧಾರದ ಮೇಲೆ ನಿಸ್ಸಂಶಯವಾಗಿ ಬಾದಾಮಿ ಚಳುಕ್ಯರ ಕಾಲದ್ದು. ಇದೇ ಆಧಾರದ ಮೇಲೆ ಬೈಲ್‌ಮರ್ಚೆಡ್ (ಮಾನ್ವಿ ತಾಲ್ಲೂಕು) ಮತ್ತು ಮಾನ್ವಿಯ ಚಿತ್ರಗಳು ವಿಜಯನಗರದ ಕಾಲದವೆಂದು ಹೇಳಬಹುದು. ಇತ್ತೀಚೆಗೆ ಬೆಳಕಿಗೆ ಬಂದ ಚಿತ್ರದುರ್ಗ, ಬ್ರಹ್ಮಗಿರಿ ಮತ್ತು ಅಪ್ಪಯ್ಯನಹಳ್ಳಿಯ ಕೆಲವು ಗವಿ ವರ್ಣಚಿತ್ರಗಳು ಮತ್ತು ಕೆಲವು ಬಯಲುಬಂಡೆಯ ಚಿತ್ರಗಳು ಸಂಗನಕಲ್ಲು, ಹಳಕುಂದಿ ಮತ್ತು ಭಿಲ್ಲಮರಾಯನಗುಡ್ಡಗಳಲ್ಲಿಯ ಹನುಮಾನ್, ಮುಸಲ್ಮಾನ್ ಪಂಥದ ಪಂಜ, ರೈಲುಬಂಡಿ, ಕತ್ತಿ ಡೋಲು ಹಿಡಿದ ಮನುಷ್ಯರು ಮೊದಲಾದ ಕೆಲವು ಬಯಲುಬಂಡೆ ಚಿತ್ರಗಳು ವಿಜಯನಗರ ಅಂತ್ಯ ಮತ್ತು ಸಮಕಾಲೀನ ಕಾಲದವೆಂದು ತಿಳಿಯಲಡ್ಡಿಯಿಲ್ಲ.(ಎ.ಎಸ್.)

**ಕೇರಳ:** ಉತ್ತರ ಕೇರಳದ ವೈನಾಡು ಜಿಲ್ಲೆಯ ಅಂಬಲವಾಯಲ್‌ನಲ್ಲಿರುವ ಎಡಕಲ್ಲಿನಲ್ಲಿ ಫಾಸೆಟ್ 1894ರಲ್ಲಿ ಇತಿಹಾಸ ಪೂರ್ವ ಕಾಲದ ಮೊತ್ತಮೊದಲ ಬಂಡೆಗಲ್ಲು ಗೀರುಚಿತ್ರಗಳನ್ನು ಪತ್ತೆಮಾಡಿದ. ಅನಂತರ ಕೊಲ್ಲಮ್ ಜಿಲ್ಲೆಯ ತೇನ್‌ಮಲೈ, ತಿರುವನಂತಪುರಂ ಜಿಲ್ಲೆಯ ಅನ್ಕೋಡ್ ಮತ್ತು ವೈನಾಡು ಜಿಲ್ಲೆಯ ತೋವರಿ, ಇಡಂಕಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿಯೂ ಇಂಥ ಚಿತ್ರಗಳು ದೊರೆತಿವೆ.

ಎಡಕಲ್ಲು: ಎಡಕಲ್ ಮಾಲೆ ಎಂಬ ಬೆಟ್ಟಶ್ರೇಣಿಯಲ್ಲಿ ಅತ್ಯಂತ ಎತ್ತರವಾಗಿರುವ ಬ್ಯಾಟರಿ ರಾಕ್‌ನ (500 ಮೀ) ನೆತ್ತಿಗೆ ಸಮೀಪದಲ್ಲಿ ಗೀರುಚಿತ್ರಗಳುಳ್ಳ ಗುಹೆಯಿದೆ. ಪ್ರಾಗೈತಿಹಾಸಿಕ ಗೀರುಚಿತ್ರಗಳಲ್ಲದೆ ಈ ಗುಹೆಯ ಗೋಡೆಗಳ ಮೇಲೆ 5 ಮಧ್ಯಕಾಲೀನ ಯುಗದ ಶಾಸನಗಳೂ ಇವೆ. ಪೊಲೀಸ್ ಅಧಿಕಾರಿಯಾಗಿದ್ದ ಎಫ್.ಫಾಸೆಟ್ 1894–96ರ ನಡುವೆ ಇಲ್ಲಿರುವ ಗೀರುಚಿತ್ರಗಳನ್ನು ಪರೀಕ್ಷಿಸಿದ. ದೊಡ್ಡ ಬಂಡೆಯೊಂದು ಸೀಳಿ ಇಬ್ಭಾಗವಾದಾಗ ಇವೆರಡರ ನಡುವೆ ಉಂಟಾದ ಕಂದರದ (ಗುಹೆ) ಗೋಡೆಗಳ ಮೇಲೆ ರೇಖಾಚಿತ್ರಗಳನ್ನು ಕೆತ್ತಲಾಗಿದೆ. ಕಂದರದ ಪ್ರವೇಶ ಭಾಗ 1.5–2 ಮೀ ಅಗಲ, 2–2.5 ಮೀ ಎತ್ತರವಿದೆ. ಕಂದರದ ಒಟ್ಟು ಉದ್ದ 32 ಮೀ ಮತ್ತು ಗರಿಷ್ಠ ಅಗಲ 6–7 ಮೀ. ಕಂದರದ ಅರ್ಧ ಭಾಗದ ಮೇಲೆ ಚಾವಣಿಯಂತೆ ದೊಡ್ಡ ಕಲ್ಲುಬಂಡೆಯಿದೆ. ಉಳಿದರ್ಧ ಭಾಗ ಆಕಾಶಕ್ಕೆ ತೆರೆದುಕೊಂಡಿದೆ. ಚಾವಣಿಯಿಂದ ಮುಚ್ಚಲ್ಪಟ್ಟ ಭಾಗದಲ್ಲಿ ಕಂದರದ ಎರಡೂ ಗೋಡೆಗಳ ಮೇಲೆ ವಿವಿಧ ಭಂಗಿ–ವೇಷಗಳಲ್ಲಿರುವ ಮನುಷ್ಯರ ಮತ್ತು ಜಿಂಕೆ–ನಾಯಿ ಮೊದಲಾದ ಪ್ರಾಣಿಗಳ ರೇಖಾಚಿತ್ರಗಳನ್ನೂ ಜ್ಯಾಮಿತೀಯ ವಿನ್ಯಾಸಗಳನ್ನೂ ಒತ್ತೊತ್ತಾಗಿ ಕೆತ್ತಿದೆ. ಇವು ಪ್ರಶ.ಪೂ.1000ದ ಆಸುಪಾಸಿನ ಸಮಯದಲ್ಲಿ (ಬೃಹತ್ ಶಿಲಾ–ಕಬ್ಬಿಣ ಯುಗ) ಕೆತ್ತಲಾದ ಚಿತ್ರಗಳಿರಬೇಕು. ಈ ಬೆಟ್ಟದ ಸುತ್ತಮುತ್ತಲಿನಲ್ಲಿ ಬೆಣಚುಕಲ್ಲಿನ ಉಪಕರಣಗಳು ಮತ್ತು ಬೃಹತ್ ಶಿಲಾಯುಗ ಸಮಾಧಿಗಳು ಕಂಡುಬಂದಿವೆ.

ತೋವರಿ: ಅಂಬಲ್‌ವಾಯಲ್ ತಾಲ್ಲೂಕಿನ ತೋವರಿ ಗುಡ್ಡಗಳ ಇಳಿಜಾರು ಭಾಗದಲ್ಲಿ ಚಿತ್ರಗಳಿವೆ. ಇಲ್ಲಿಯ ಬಂಡೆಗಲ್ಲಿನ ಮೇಲೆ ಕಂಡುಬಂದ ಗೀರು ಚಿತ್ರಗಳು ತ್ರಿಕೋನ, ಚೌಕ ಮತ್ತು ವರ್ತುಲಾಕಾರಗಳೇ ಮೊದಲಾದ ವಿವಿಧ ವಿನ್ಯಾಸಗಳಲ್ಲಿವೆ. ಇವುಗಳಲ್ಲಿ ಶಿಲಾಯುಗಗಳ ಜನರು ಬಳಸುತ್ತಿದ್ದ ಕೆಲವು ಉಪಕರಣಗಳನ್ನು ಹೋಲುತ್ತವೆ. ಇಲ್ಲಿ ಸಸ್ಯ ಮತ್ತು ಪ್ರಾಣಿ ವರ್ಗಗಳ ಚಿತ್ರಗಳಿಲ್ಲ. ಇವು ಎಡಕಲ್ಲು ಚಿತ್ರಗಳಷ್ಟು ಕಲಾತ್ಮಕವಾಗಿಲ್ಲ.

ತೇನ್‌ಮಲೈ: ಕೊಲ್ಲಮ್ ಜಿಲ್ಲೆಯ ಪೂರ್ವ ಭಾಗದಲ್ಲಿರುವ ಚೆಂತರುನಿ ಗುಡ್ಡಪ್ರದೇಶದಲ್ಲಿದೆ. ಸೂಕ್ಷ್ಮಶಿಲೋಪಕರಣಗಳು ಹಾಗೂ ಇತಿಹಾಸ–ಪೂರ್ವಕಾಲದ ಕೆಲವು ಕೊರೆದ ಗೀರು ಚಿತ್ರಗಳು ಇಲ್ಲಿ 1982ರಲ್ಲಿ ಕಂಡುಬಂದವು. 1984ರಲ್ಲಿ ಇಲ್ಲಿ ಉತ್ಖನನ ನಡೆಸಿದಾಗ ಸೂಕ್ಷ್ಮ ಶಿಲೋಪಕರಣಗಳೂ ಇದ್ದಿಲೂ ಲಭ್ಯವಾದವು. ಲಖನೌ ನಲ್ಲಿರುವ ಬೀರ್‌ಬಲ್ ಸಾಹ್ನಿ ಇನ್‌ಸ್ಟಿಟ್ಯೂಟ್ ಆಫ್ ಪೇಲಿಯೊ–ಬಾಟನಿಯಲ್ಲಿ ಇದ್ದಿಲಿನ ಕಾಲವನ್ನು ಪ್ರಶ.ಪೂಸು. 3000 ಎಂದು ನಿರ್ಣಯಿಸಲಾಗಿದೆ. ಇಂಗಾಲ–14 ರಿಂದ 5210±110 ಮತ್ತು 5120±120. ಈ ಚಿತ್ರಗಳು ಇವುಗಳನ್ನು ಸೂಕ್ಷ್ಮಶಿಲಾಯುಗದ ಸಂಸ್ಕೃತಿಗೆ ಸೇರಿದವು ಎಂದು ತಿಳಿಯಬಹುದಾಗಿದೆ.

ರೇಖಾ ರೂಪದಲ್ಲಿರುವ ಈ ಗೀರುಚಿತ್ರಗಳನ್ನು ಬಂಡೆಯ ಮೇಲೆ ಕೊರೆಯಲಾಗಿದೆ. ಸಸ್ಯ /ಪ್ರಾಣಿವರ್ಗಕ್ಕೆ ಸೇರಿದ ಚಿತ್ರಗಳು ಎಡಕಲ್ಲಿನಲ್ಲಿದ್ದಂತೆ ಇಲ್ಲಿಲ್ಲ. ಕೇರಳದಲ್ಲಿ ಸೂಕ್ಷ್ಮಶಿಲಾ ಉಪಕರಣಗಳು ಮತ್ತು ಕೆತ್ತನೆಚಿತ್ರಗಳು ಲಭ್ಯವಾಗಿರುವ ಏಕೈಕ ಸೂಕ್ಷ್ಮಶಿಲಾಯುಗದ ನೆಲೆಯಿದು.



**ಸೂಕ್ಷ್ಮಶಿಲಾಸಂಸ್ಕೃತಿಯ ಗೀರು ರೇಖಾಚಿತ್ರಗಳು, ತೇನ್‌ಮಲೈ–ಅಂಕೋಡ್**

ಅನ್‌ಕೋಡ್: ತಿರುವನಂತಪುರ ಜಿಲ್ಲೆಯ ನೆಯತಿಂಕರದಲ್ಲಿ ಪೆರುಂಕಡವಿಲದ ಸಮೀಪವಿರುವ ಪಾಂಡವನ್‌ಪರದಲ್ಲಿದೆ. ಮೂರು ದೊಡ್ಡ ಬಂಡೆಗಳ ಕೆಳಗೆ ಈ ನೆಲೆಯಿದೆ. ಮೂರು ಬಂಡೆಗಳು ಒಂದರಮೇಲೊಂದು ಒರಗಿದ್ದು, ಇವುಗಳ ಕೆಳಗಿನ ನೆಲೆಗೆ ತೆವಳಿಕೊಂಡು ಹೋಗಬಹುದಾದ ಒಂದು ಚಿಕ್ಕ ಪ್ರವೇಶದ್ವಾರವಿದೆ. ಗುಹೆಯ ಭಿತ್ತಿಗಳು ಹಾಗೂ ತಾರಸಿಯ ಮೇಲೆ ಚಿತ್ರಗಳಿವೆ. ಇಲ್ಲಿ ಚಿತ್ರಗಳಲ್ಲದೆ ಬೆಣಚುಕಲ್ಲು ಮತ್ತು ಚಕಮಕಿಕಲ್ಲುಗಳಿಂದ ತಯಾರಿಸಲಾದ ಸೂಕ್ಷ್ಮಶಿಲೋಪಕರಣಗಳೂ ದೊರೆತಿವೆ. ಬೆಣಚುಕಲ್ಲು ಸ್ಥಳೀಯವಾಗಿ ಲಭ್ಯವಾಗಿದ್ದು, ಚಕಮಕಿಕಲ್ಲು ಮಾತ್ರ ತಮಿಳುನಾಡಿನ ಪಶ್ಚಿಮ ಘಟ್ಟ ಪ್ರದೇಶದ ಪೂರ್ವಭಾಗದಲ್ಲಿ ಕಂಡುಬರುತ್ತದೆ. ಇತರ ಪ್ರದೇಶಗಳ ಕಚ್ಚಾಪದಾರ್ಥಗಳು ಇಲ್ಲಿ ಲಭ್ಯವಾಗಿರುವುದರಿಂದ, ಆ ಕಾಲದಲ್ಲಿ ಜನರು ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುತ್ತಿದ್ದುದು ಸ್ಪಷ್ಟವಾಗುತ್ತದೆ. ಇಲ್ಲಿನ ಕೊರೆದ ಚಿತ್ರಗಳು ಬಾಣದಮೊನೆಗಳು, ಎಲೆಗಳು, ಪುಷ್ಪಗಳು, ವಿವಿಧ ರೇಖಾ ವಿನ್ಯಾಸಗಳು, ಚಕ್ರ ಮೊದಲಾದ ಚಿತ್ರಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕೆಲವು ತುಂಬ ಎತ್ತರದಲ್ಲಿದ್ದು ಏಣಿಯಂಥ ಸಾಧನವನ್ನು ಬಳಸಬೇಕಾಗುವುದು. ಇಲ್ಲಿ ಚಕ್ರ ಮತ್ತು ಪುಷ್ಪಗಳ ಚಿತ್ರಗಳು ಹೆಚ್ಚು; ಮಾನವರ ಅಥವಾ ಪ್ರಾಣಿಗಳ ಚಿತ್ರಗಳು ಕಡಿಮೆ.

ಶಿಲಾಚಿತ್ರಗಳಿರುವ ಮೂರು ನಿವೇಶನಗಳು ಇಡಂಕಿ ಜಿಲ್ಲೆಯ ಅಂಜನಾಡಿನ ಮರಯೂರ್ ನಲ್ಲಿ ಕಂಡುಬಂದಿವೆ. ಪಶ್ಚಿಮ ಘಟ್ಟಗಳ ಮೇಲಿನ ಕೂಡಕ್ಕಲ್, ಪಲ್ಲನಾಡ್ ಮತ್ತು ಚೆಂಪಕ್ಕಡ್‌ಗಳಲ್ಲಿ ಇವು ದೊರೆತಿವೆ. ಈ ಪ್ರದೇಶ ಎಳುತಲ ಎಂದು ಹೆಸರಾಗಿದೆ. ಎಳುತಲ ಎಂದರೆ ಚಿತ್ರಗಳ ಗುಹೆ.

ಕೂಡಕ್ಕಲ್: ಸು.984 ಮೀ ಎತ್ತರದಲ್ಲಿರುವ ಈ ನೆಲೆಯ ಚಿತ್ರಗಳನ್ನು ಒಳಬಾಗಿದ ಅತಿ ಎತ್ತರದ ಒಂಟಿ ಗ್ರಾನೈಟ್ ಶಿಲೆಯ ಮೇಲೆ ಕೊರೆಯಲಾಗಿದೆ. ಒಳಬಾಗಿದ ನೆಲೆ ಸರ್ಪದ ಹೆಡೆಯನ್ನು ಹೋಲುತ್ತಿದ್ದು ಇದರ ಎತ್ತರ 12ಮೀ. ಇಲ್ಲಿ ಜಿಂಕೆ, ಜಾನುವಾರುಗಳು, ಕುದುರೆ, ಆನೆ (ಮಾವುತರು ಇರುವ ಮತ್ತು ಇಲ್ಲದ) ಮೊದಲಾದ ಚಿತ್ರಗಳಿವೆ. ಕೈಯನ್ನು ಎತ್ತಿ ಕುಳಿತ ಸಂತರಂಥವರ ಹಾಗೂ ಮತಾಚರಣೆಯ ಸಂಬಂಧವಿರುವ ನರ್ತಕರ ಚಿತ್ರಗಳೂ ಇಲ್ಲಿ ಕಂಡುಬಂದಿವೆ.

ಪಲ್ಲನಾಡ್: ಈ ನಿವೇಶನದಲ್ಲಿ ಸೂಕ್ಷ್ಮಶಿಲಾಯುಗಕ್ಕೆ ಸೇರಿದ ದೋಣಿ ಮೊದಲಾದ ಚಿತ್ರಗಳು ಕಂಡುಬಂದಿವೆ. ಇದು ಸಾಗರ ಪ್ರಯಾಣ ಚಟುವಟಿಕೆಗಳು ನಡೆಯುತ್ತಿದ್ದುದನ್ನು ಸೂಚಿಸುವ ಅತಿ ಪ್ರಾಚೀನವಾದ ನಿವೇಶನವಾಗಿದೆ. ಶಿಲಾಶ್ರಯದಲ್ಲಿ ಲಭ್ಯವಾದ ಚಿತ್ರಗಳಲ್ಲಿ ಮಾನವರು, ಆನೆಗಳು, ಪಕ್ಷಿಗಳು, ದೊಂಬರಾಟ ಮತ್ತು ಹೋರಾಟಗಳ ಚಿತ್ರಗಳು, ರೇಖಾ ವಿನ್ಯಾಸಗಳು, ಹಲ್ಲಿಗಳು, ಹಾವುಗಳು, ಮರಗಳು ಮೊದಲಾದವು ಮುಖ್ಯವಾಗಿವೆ. ವಿವಿಧ ಭಂಗಿಗಳ ಮಾನವರ ಚಿತ್ರಗಳು ಗೃಹಕಾರ್ಯ ಚಟುವಟಿಕೆಗಳನ್ನು ಮತಕ್ರಿಯಾವಿಧಿಗಳನ್ನು ಸೂಚಿಸುತ್ತವೆ. ಮರಯೂರಿನ ಇನ್ನಾವ ನಿವೇಶನದಲ್ಲಿಯೂ ಇಷ್ಟು ಸಂಖ್ಯೆಯ, ಅಸಮ ಪ್ರಮಾಣದ ಚಿತ್ರಗಳು ದೊರೆತಿಲ್ಲವೆನ್ನಬಹುದು. ಹೆಚ್ಚಿನ ಚಿತ್ರಗಳು ಬಿಳಿಯ ಬಣ್ಣದವಾಗಿದ್ದು ಛಾವಣಿಗಳ ಮೇಲೆ ಕಂಡುಬಂದಿದೆ.

ಚಂಪಕ್ಕಡ್: ವಿಸ್ತಾರದ ದೃಷ್ಟಿಯಿಂದ ಅತ್ಯಂತ ದೊಡ್ಡದಾದ ಚಂಪಕ್ಕಡ್ ಶಿಲಾಶ್ರಯದ ಭಿತ್ತಿಗಳಲ್ಲಿ ಅಧಿಕ ಸಂಖ್ಯೆಯ ಚಿತ್ರಗಳು ಕಂಡುಬಂದಿವೆ. ನಸುಗೆಂಪು, ಕಂದು, ಮಾಸಲು ಕಂದು ಛಾಯೆಯ ಹಳದಿ, ಬಿಳಿ ಮೊದಲಾದ ಬಣ್ಣಗಳನ್ನು ಬಳಸಲಾಗಿದೆ. ಜಿಂಕೆ, ಕುದುರೆ, ಜಾನುವಾರುಗಳೇ ಮೊದಲಾದ ಚಿತ್ರಗಳು ಪ್ರ.ಶ.ಪೂ.7000 ವರ್ಷ ಹಿಂದಿನ ಸೂಕ್ಷ್ಮಶಿಲಾಯುಗ ಮಾನವ ಚಿತ್ರಗಳು 3000 ವರ್ಷ ಹಿಂದಿನ ತಾಮ್ರ-ಶಿಲಾಯುಗಕ್ಕೂ ಶಸ್ತ್ರಧಾರಿ ಗಜಸೈನಿಕರ ಚಿತ್ರಗಳು ಪ್ರ.ಶ.ಪೂ.300ರಷ್ಟು ಹಿಂದಿನ ಪ್ರಾಚೀನ ಇತಿಹಾಸಕಾಲಕ್ಕೂ ಸೇರಿದವು ಎಂದು ಎಸ್.ಪಿ. ಥಂಪಿಯವರ ಅಭಿಪ್ರಾಯ. ಎಡಕಲ್ಲು ಮತ್ತು ಅನ್‌ಕೋಡ್‌ಗಳ ಶಿಲಾಶ್ರಯಗಳು ಸೂಕ್ಷ್ಮಶಿಲಾಯುಗ, ನವಶಿಲಾಯುಗ, ತಾಮ್ರಯುಗ, ಬೃಹತ್‌ಶಿಲಾಯುಗ ಹಾಗೂ ಪ್ರಾಚೀನ ಇತಿಹಾಸ ಕಾಲಗಳಿಗೆ ಸೇರಿದ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ.(ಆರ್.ಪಿ.)

**ತಮಿಳುನಾಡು:** ಗವಿ ಬಂಡೆ ಚಿತ್ರಗಳು ನೀಸಿಕ್ (ಬೆಣಚುಕಲ್ಲು ಮತ್ತು ಅಭ್ರಕದಿಂದಾದ) ಶೃಂಖಲೆಯ ಕಣಶಿಲೆಯ ಬಂಡೆಗಳ ಸಮೂಹದೊಳಗಿವೆ. ಇಡೀ ಪ್ರದೇಶಕ್ಕೆ ತಳಗಟ್ಟಾಗಿರುವ ಈ ಸಮುಚ್ಚಯದಲ್ಲಿ ಗ್ರಾನೈಟ್ ಸಹ ಒಂದು ಘಟಕವಾಗಿದೆ. ಧರ್ಮಪುರಿ, ಸೇಲಂ ಮತ್ತು ಉತ್ತರ ಆರ್ಕಾಟ್ ಜಿಲ್ಲೆಗಳಲ್ಲಿ ಇವು ಬಹಿರ್ಗತ ಬಂಡೆಗಳ (ಔಟ್‌ಕ್ರಾಪ್) ರೂಪದಲ್ಲಿವೆ. ಹೆಚ್ಚಿನ ಕಲ್ಲಾಸರೆಗಳು ಬೃಹತ್ ಗ್ರಾನೈಟ್ ಬಂಡೆಗಳೊಳಗಿವೆ.

ತಮಿಳುನಾಡಿನ ಶಿಲಾಚಿತ್ರಕಲೆಯನ್ನು ವರ್ಣಚಿತ್ರಗಳು ಮತ್ತು ಗೀರುಚಿತ್ರ ಹಾಗೂ ಕುಟ್ಟುಚಿತ್ರಗಳು ಎಂಬ ಎರಡು ಮುಖ್ಯ ಪ್ರಭೇದಗಳಾಗಿ ವಿಂಗಡಿಸಬಹುದು. ಮೊದಲನೆಯದರಲ್ಲಿ ಮೂರು ವರ್ಗಗಳಿವೆ: ನೈಸರ್ಗಿಕ ಗವಿಬಂಡೆಗಳ ಸೂರಿನ ಮೇಲಿರುವವು, ಬೃಹತ್ ಶಿಲಾಯುಗದ ಕಲ್ಮನೆಗಳ ಮೇಲಿರುವುವು ಮತ್ತು ಚಾರಿತ್ರಿಕ ಯುಗದ ಮಾನವ ನಿರ್ಮಿತ ಗವಿಗಳಲ್ಲಿರುವುವು. ಕೆಲವು ಚಿತ್ರಿತ ಗವಿಬಂಡೆಗಳು ನವಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಆದಿ ಚಾರಿತ್ರಿಕ ಕಾಲದ ವಸತಿಗಳ ಹತ್ತಿರದಲ್ಲಿವೆ. ಕುಟ್ಟುಚಿತ್ರದ ನಿದರ್ಶನಗಳು ಕರ್ನಾಟಕದಲ್ಲಿ ಬಹಳವಾಗಿ ಕಂಡುಬಂದರೂ ದಕ್ಷಿಣ ಭಾರತದ ಇತರೆಡೆಗಳಲ್ಲಿ ವಿರಳವಾಗಿವೆ.

ರಾಜ್ಯದ ದಕ್ಷಿಣ ಭಾಗದಲ್ಲಿರುವ ಕುರ್ರಲಪ್ಪುದೈ ಮತ್ತು ಪೊದಿಗೈಮಲೈನಲ್ಲಿ ಗೀರುರೇಖಾ ಚಿತ್ರಗಳು ಕಂಡುಬರುತ್ತವೆ. ಇಂಥದೇ ಚಿತ್ರಗಳುಳ್ಳ ಕೇರಳದ ಎಡಕಲ್ಲು ಪ್ರದೇಶ ಈ ನೆಲೆಗಳಿಗಿಂತ ಹೆಚ್ಚೇನೂ ದೂರದಲ್ಲಿರದಿರುವುದು ಸ್ವಾರಸ್ಯಕರವಾಗಿದೆ. ಪೊದಿಗೈಮಲೈಯ ಗೀರುಚಿತ್ರಗಳು ಧಾರ್ಮಿಕ ಚಿಹ್ನೆಗಳೆಂದು ತೋರುತ್ತವೆ; ಬನ್ನಿಕ್ಕಾರನ್ ಎಂಬ ಸ್ಥಳೀಯ ಆದಿವಾಸಿಗಳು ಇವನ್ನು ಇನ್ನೂ ಪೂಜಿಸುತ್ತಾರೆ. ವಿವಿಧ ಧಾರ್ಮಿಕ ನಂಬಿಕೆ ಮತ್ತು ವಿಧಿಗಳ ಬೆಳವಣಿಗೆಯಲ್ಲಿ ಪ್ರಕೃತಿ ಮಹತ್ತರ ಪಾತ್ರ ವಹಿಸಿದೆ. ಚಂದ್ರ, ನಕ್ಷತ್ರ, ಮಳೆ, ಬೆಂಕಿ ಮತ್ತು ನೀರಿನಂತಹ ಪ್ರಾಕೃತಿಕ ಅಂಶಗಳನ್ನು ಕ್ರಮೇಣವಾಗಿ ಸಂಕೇತವಾಗಿಸಿ ಬಂಡೆಗಳ ಮೇಲೆ ಮೂಡಿಸಲಾಗಿದೆ. ಕುರ್ರಲಪ್ಪುದೈನ ಶಿಲಾಕಲೆಯಲ್ಲಿ ಇಂತಹ ಚಿಹ್ನೆಗಳಿವೆ; ಎರಡು ಕಡೆಗಳಲ್ಲಿ ನಕ್ಷತ್ರ ಮತ್ತು ಸೂರ್ಯನ ಸಂಕೇತಗಳು, ಗುಡಿಸಲು ಅಥವಾ ಗ್ರಾಮ, ಬಿಡಿಸಿದ ಚಾಪೆ ಮತ್ತಿತರ



ನಿಗೂಢ ರೇಖಾ ಚಿತ್ರಗಳು, ಕುರ್ರಲಪ್ಪುದೈ-ಪೊಗದಿಮಲೈ (ತಮಿಳುನಾಡು)

ಸಂಕೇತಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ಹಲವು ಉತ್ಖನನಗಳಲ್ಲಿ ದೊರೆತ ಬೃಹತ್ ಶಿಲಾಯುಗದ ಮಣ್ಪಾತ್ರೆಗಳ ಮೇಲೂ ನಕ್ಷತ್ರ, ಚಂದ್ರ ಬಿಡಿಸಿದ ಚಾಪೆಯನ್ನು ಹೋಲುವ ವಿನ್ಯಾಸಗಳು ಸಾಮಾನ್ಯವಾಗಿ ಕಂಡುಬರುತ್ತವೆ.

ಹೆಚ್ಚಿನ ಚಿತ್ರಗಳು ಏಕವರ್ಣದವು. ಬಹುವರ್ಣದ ಚಿತ್ರಗಳು ಅತಿ ವಿರಳ. ಸಿರುಮಲೈ ಮತ್ತು ಸೇದವರೈನಲ್ಲಿ ಆಕೃತಿಯ ಹೊರರೇಖೆಗಳಿಗೆ ಕೆಂಪು ಕಾವಿಮಣ್ಣನ್ನು ಬಳಸಿ, ಒಳಗೆ ಬಿಳಿಬಣ್ಣವನ್ನು ತುಂಬಲಾಗಿದೆ. ಕೆಲವು ನೆಲೆಗಳಲ್ಲಿ ಬಿಳಿಚಿತ್ರಗಳಿಗೆ ಕಪ್ಪು ಹೊರರೇಖೆಯಿರುವಂತೆ ತೋರುತ್ತದೆ. ಆದರೆ ಆ ಕಪ್ಪಂಚಿಗೆ ಕಾರಣ ಪಾಚಿಯಷ್ಟೆ. ಹೆಚ್ಚು ಬಳಸಲಾದ ಎರಡನೆಯ ಬಣ್ಣ ಕೆಂಪು. ಬಿಳಿಬಣ್ಣಕ್ಕೆ ದಪ್ಪವಾದ ಸುಣ್ಣದ ದ್ರವ್ಯವನ್ನು ಬಳಸಲಾಗಿದೆ. ಅಂಟುಮಣ್ಣಿನಲ್ಲಿರುವ ಸುಣ್ಣದ ಉಂಡೆಗಳಿಂದ ಇದನ್ನು ತಯಾರಿಸಬೇಕು. ಕೆಂಪುಬಣ್ಣದಲ್ಲಿ ನಾಲ್ಕು ಪ್ರಭೇದಗಳಿವೆ: ಅಚ್ಚುಗೆಂಪು, ಕಂದುಗೆಂಪು, ಹೊಳಗೆಂಪು ಮತ್ತು ಗುಲಾಬಿ. ಧರ್ಮಪುರಿ, ನೀಲಗಿರಿ ಮತ್ತು ಕೊಯಮತ್ತೂರು ಜಿಲ್ಲೆಗಳ ಬಂಡೆಚಿತ್ರಗಳ ಪ್ರಧಾನ ಬಣ್ಣ ಬಿಳಿಯಾಗಿದ್ದರೆ, ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟಿನಲ್ಲಿ ಹೆಚ್ಚಾಗಿ ಕೆಂಪುಬಣ್ಣದ ಚಿತ್ರಗಳು ಕಂಡುಬರುತ್ತವೆ. ಮೈಯಿಲದುಂಪಾರೈ, ಸೇದವರೈ, ವೆಟ್ಟೈಕ್ಕಾರನ್ ಮಲೈ, ಪಡಿಯಂಡಲ್, ಸಿರುಮಲೈ,

ಕೆಂಪುವರ್ಣದ ಮನುಷ್ಯ ಪ್ರಾಣಿಗಳ ಛಾಯಾಕೃತಿಗಳು
ಉತ್ತರ-ದಕ್ಷಿಣ ಆರ್ಕಾಟ್ ಪ್ರದೇಶ

ಆಲಂಪಾಡಿ ಮತ್ತು ಒರಮನಗಂಟು ಗಳಲ್ಲಿ ಎರಡೂ ಬಣ್ಣಗಳಿವೆ. ಕೆಲವೆಡೆ ಒಂದೇ ಗವಿಬಂಡೆಯಲ್ಲಿ ಎರಡು ಬಣ್ಣಗಳ ಚಿತ್ರಗಳು ಅಕ್ಕಪಕ್ಕದಲ್ಲಿದ್ದರೆ, ಮತ್ತೆ ಕೆಲವೆಡೆ ಮೇಲೆ ಮತ್ತೊಂದು ಬಣ್ಣವಿದೆ. ಮೈಯಿಲದುಂಪಾರೈ, ಒರಮ ನಗುಂಟ, ಸೇದವರೈ ಮತ್ತಿತರೆಡೆಗಳಲ್ಲಿ ಕೆಂಪುಬಣ್ಣದ ಮೇಲೆ ಬಿಳಿಬಣ್ಣ ಹಚ್ಚಲಾಗಿದೆ.

ಮಧ್ಯಭಾರತಕ್ಕೆ ಹೋಲಿಸಿದರೆ ತಮಿಳುನಾಡಿನ ವರ್ಣಚಿತ್ರಗಳ ವಸ್ತುವಿನ ವ್ಯಾಪ್ತಿ ಕಿರಿದಾದದ್ದು, ಅವುಗಳಲ್ಲಿ ಕಂಡುಬರುವ ವಸ್ತುಗಳೆಂದರೆ ಕೆಲವೊಮ್ಮೆ ಶಸ್ತ್ರಧಾರಿಗಳಾದ ದನಕರು, ಕುದುರೆ, ಆನೆಸವಾರರು, ಹೋರಾಟದ ದೃಶ್ಯಗಳು, ಶಾಸ್ತ್ರವಿಧಿ ಮತ್ತು ಸಾಮಾಜಿಕ ಆಚರಣೆಗಳ ಚಿತ್ರಣ. ಸಂಕೇತ ಮತ್ತು ಚಿಹ್ನೆಗಳ ಚಿತ್ರಣವೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ.

ಕಡ್ಡಿಯಂತಿರುವ ಮಾನವಾಕೃತಿಗಳು ಬೃಹತ್ ಶಿಲಾಯುಗಕ್ಕೆ ಸೇರಿದ ಹಲವು ಕಲ್ಮನೆಗಳಲ್ಲಿ ಮತ್ತು ಕೆಲವು ಗವಿಬಂಡೆಗಳಲ್ಲಿ ಕಾಣಸಿಗುತ್ತವೆ. ಈ ಚಿತ್ರಗಳಲ್ಲಿ ಮೈ ಕೈಕಾಲುಗಳೆಲ್ಲ ಕಡ್ಡಿಯಂತಿರುತ್ತವೆ; ಕೆಲವೊಮ್ಮೆ ಕೈಯಲ್ಲಿ ಬಿಲ್ಲುಬಾಣ ಅಥವಾ ಕತ್ತಿ-ಗುರಾಣಿ ಅಥವಾ ಇತರ ಅಸ್ತ್ರಗಳು ಇರುತ್ತವೆ. ಉತ್ತರ ಭಾರತದಲ್ಲಿ ಈ ಆಕೃತಿಗಳು ಸೂಕ್ಷ್ಮಶಿಲಾಯುಗಕ್ಕೆ ಸೇರುತ್ತವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ತಮಿಳುನಾಡಿನಲ್ಲಿ ಇವು ಪ್ರಧಾನವಾಗಿ ಬೃಹತ್ ಶಿಲಾಯುಗದ ಸಂದರ್ಭದಲ್ಲಿ ಇವೆ. ಅವುಗಳಲ್ಲಿ ಕೆಲವು ಮುಂಚಿನ ಕಾಲಕ್ಕೆ ಸೇರಿದವಿದ್ದರೂ ಇರಬಹುದು. ರೇಖಾಚಿತ್ರ ರೂಪದ ಮಾನವಾಕೃತಿಯ ಚಿತ್ರಣ ತಮಿಳುನಾಡಿನ ಹಲವೆಡೆ ಕಂಡುಬರುತ್ತವೆ. ಇದರಲ್ಲಿ ಮೈಭಾಗವನ್ನು ಎರಡು ರೇಖೆಗಳಿಂದ ಅಥವಾ ತ್ರಿಕೋನಾಕಾರದಲ್ಲಿ ದಪ್ಪ ಕುಂಚದಿಂದ ಚಿತ್ರಿಸಲಾಗಿದೆ. ಸಿರುಮಲೈ, ಸಿಗುರ್ ಮತ್ತು ಕೊನವಕ್ಕರೈಗಳ ಚಿತ್ರಗಳು ಈ ಶೈಲಿಯಲ್ಲಿವೆ. ವೇಷಭೂಷ, ಕೈಯಲ್ಲಿರುವ ಅಸ್ತ್ರಗಳನ್ನು ಗಮನಿಸಿದರೆ ಹೆಚ್ಚಿನ ಚಿತ್ರಗಳು ಯೋಧರದ್ದಾಗಿವೆ. ಸಿರುಮಲೈನ ಕೆಲವು ಚಿತ್ರಗಳಲ್ಲಿ ಕತ್ತರಿಯಾಕಾರದ ಪಟ್ಟಿಗಳು ಎದೆಯ ಮೇಲಿವೆ. ಅನಂತರ ಬರುವ ಸನ್ನವೀರ ಯೋಧರ ಪಟ್ಟಿಯನ್ನು ಇದು ಹೋಲುತ್ತದೆ. ಎರಡು ತ್ರಿಕೋನಗಳನ್ನು ಹೊಂದಿರುವ ಆಕೃತಿಗಳು ಕೇವಲ ಛಾಯಾರೂಪದಲ್ಲಿ ಅಥವಾ ಹೊರಗೆರೆಗಳ ರೂಪದಲ್ಲಿರುವುದನ್ನು ಕಿಲ್ವೈ ಮತ್ತು ಅಳಗರ್ ಕೋವಿಲ್-ಸುಂದರರಾಜನ್ಪಟ್ಟಿಯಲ್ಲಿ ಕಾಣಬಹುದು. ಕೆಲವೆಡೆಯ ಚಿತ್ರಗಳಲ್ಲಿ ತಲೆ ಸಹಜರೂಪದಲ್ಲಿದ್ದರೆ ಮತ್ತೆ ಕೆಲವೆಡೆ ಮುಖವಾಡದಿಂದ ಮುಚ್ಚಿರುತ್ತದೆ. ಇದು ಬೇಟೆಯ ಸಮಯದಲ್ಲಿ ಮುಖ ಮರೆಮಾಡಿಕೊಳ್ಳಲು ಅಥವಾ ಶಾಸ್ತ್ರಾಚರಣೆಯ ನೃತ್ಯ, ಉತ್ಸವಗಳ ಸಂದರ್ಭದಲ್ಲಿ ಬಣದೇವತೆಯನ್ನು ಆವಾಹಿಸಿಕೊಳ್ಳಲು ಹೀಗಿರಬೇಕು. ಮುಖವಾಡದ ಬಳಕೆ ಹೆಚ್ಚಿನಂಶ ಭಾರತದಾದ್ಯಂತ ಕಂಡುಬರುತ್ತದೆ. ಚಿತ್ರರಚನೆಯ ಅಂತಿಮ ಹಂತದವರೆಗೂ ಇದು ಪ್ರಧಾನವಾಗಿದೆ.

ಕುದುರೆಸವಾರರ ಚಿತ್ರಣವನ್ನು ಹಲವು ಕಲ್ಮನೆಗಳಲ್ಲಿ, ಗವಿಬಂಡೆಗಳಲ್ಲಿ ಕಾಣಬಹುದಾಗಿದೆ. ಕೋಲು ಅಥವಾ ಈಟಿಗಳನ್ನು ಬಳಸಿ ಸೆಣಸುತ್ತಿರುವ ಇಬ್ಬರು ಕುದುರೆಸವಾರರ ಚಿತ್ರ ಮಲ್ಲಪ್ಪಾಡಿಯಲ್ಲಿದೆ. ಚೆನ್ನರಾಯನಪಳ್ಳಿಯಲ್ಲಿ ಕುದುರೆಸವಾರರ ಸಾಲು ಅಥವಾ ಕತ್ತಿಕಠಾರಿಧಾರಿಗಳಾದ ಬೇಟೆಗಾರರ ಸುಂದರ ಚಿತ್ರವಿದೆ. ಈರೋಡಿನ ಸಮಾಧಿಗಳಲ್ಲಿ ಕಡಿವಾಣ, ರಿಕಾಪುಗಳು ದೊರೆತಿರುವುದು ಬೃಹತ್ ಶಿಲಾಯುಗದ ಜನರು ಕುದುರೆಸವಾರಿ ಅರಿತಿದ್ದರೆಂಬುದ್ದನ್ನು ಈ ಪ್ರದೇಶದಲ್ಲಿ ಈಗಲೂ ಆನೆಗಳು ಸಂಚರಿಸುತ್ತವೆಂಬುದು ಕುತೂಹಲಕಾರಿಯಾಗಿದೆ. ವಿವಿಧ ಬಗೆಯ ತಲೆಯಡಿಗೆಗಳು ಈ ಚಿತ್ರಗಳಲ್ಲಿ ಚಿತ್ರಿತವಾಗಿವೆ. ಕೆಲವೊಮ್ಮೆ ತಲೆಯ ಮೇಲೆ ಮುಂಗುರುಳಿದೆ. ಇನ್ನು ಕೆಲವೆಡೆ ಪ್ರಭಾವಳಿಯಂತಹ ಅಲಂಕರಣವಿದೆ. ವೇಟ್ಟೈಕಾರನ್ ಮಲೈಯ ಕುದುರೆಸವಾರ ಎದ್ದುಕಾಣುವಂತಹ ಮುಂಡಾಸು ಧರಿಸಿರುವುದರಿಂದ ಈ ಚಿತ್ರ ಚಾರಿತ್ರಿಕ ಕಾಲದ್ದಾಗಿರಬಹುದು. ಹಲವು ಗವಿಬಂಡೆ ಮತ್ತು ಕಲ್ಮನೆಗಳಲ್ಲಿ ಬೇಟೆಯ ಚಿತ್ರಣ ಸಾಮಾನ್ಯವಾಗಿದೆ. ಕುದುರೆಯಷ್ಟೇ ಅಲ್ಲದೆ ಜಿಂಕೆ, ಹಂದಿ,

ಎತ್ತಿನಂತಹ ಸಾಕುಪ್ರಾಣಿಗಳು ಹೆಚ್ಚಾಗಿ ಕಂಡುಬರುತ್ತವೆ. ಜೊತೆಗೆ ಹಲ್ಲಿ, ಹುಲಿ, ಹಕ್ಕಿಗಳು, ಮೀನು, ಹಾವು ಮತ್ತು ಕುರಿಗಳೂ ಇವೆ. ಆಲಂಪಾಡಿಯಲ್ಲಿ ಪ್ರಾಣಿಯೊಂದರ ಕರುಳನ್ನು ಕ್ಷಕಿರಣ ತಂತ್ರದಲ್ಲಿ ಚಿತ್ರಿಸಿರುವುದು ಸ್ವಾರಸ್ಯಕರವಾಗಿದೆ. ಪ್ರಾಣಿಯ ದೇಹದೊಳಗಿನ ಅಂಗಗಳ ಪರಿಚಯ ಚಿತ್ರಕಾರನಿಗೆ ಬಹಳ ಚೆನ್ನಾಗಿರಬೇಕು. ಬೇಟೆ ಮತ್ತು ಸಂಗ್ರಹಣೆಯಾಧರಿತ ಸಮಾಜಗಳಲ್ಲಿ ಅಸ್ಥಿಪಂಜರ, ಕರುಳುಗಳ ಚಿತ್ರಣ ಅತಿ ಸಾಮಾನ್ಯವಾದುದು. ಉತ್ತರ ಭಾರತದಲ್ಲಿ ಇದೇ ತಂತ್ರದಲ್ಲಿ ಚಿತ್ರಿತವಾದ ಗರ್ಭಾವಸ್ಥೆ ಮತ್ತು ಕರುಳಿನ ಚಿತ್ರಗಳನ್ನು ಸೂಕ್ಷ್ಮಶಿಲಾಯುಗ ಮತ್ತು ತಾಮ್ರ–ಶಿಲಾಯುಗಕ್ಕೆ ಸೇರಿಸಲಾಗಿದೆ. ಸುಲಿದು ಹರಿದಿಟ್ಟ ಜಿಂಕೆಯ ತೊಗಲಿನ ಚಿತ್ರಣವನ್ನು ಸಹ ಒಂದೆಡೆ ಕಾಣಬಹುದು. ಪ್ರಾಣಿಯ ಮಾಂಸವನ್ನು ಬೆಂಕಿಯಲ್ಲಿ ಬೇಯಿಸುತ್ತಿರುವ ಒಂದು ಚಿತ್ರವಿದೆ. ಮೀನು ಹಿಡಿಯುವ, ಸಮುದ್ರಯಾನ ಮಾಡುತ್ತಿರುವಂತೆ ತೋರುವ ಚಟುವಟಿಕೆಗಳೂ ಕೆಲವೆಡೆ ಸೂಚಿತವಾಗಿವೆ.

ಧಾರ್ಮಿಕ ಸ್ವರೂಪವುಳ್ಳ ಅನೇಕ ಸಂಕೇತ–ಚಿಹ್ನೆಗಳನ್ನೂ ಜ್ಯಾಮಿತೀಯ ಮತ್ತಿತರ ವಿನ್ಯಾಸಗಳನ್ನೂ ಕಲ್ಮನೆ ಮತ್ತು ಗವಿಬಂಡೆಗಳಲ್ಲಿ ನಾವು ಕಾಣಬಹುದು. ಹಲವು ಸಂಕೇತಗಳು ಈ ಯುಗದ ಮೃಣ್ಪಾತ್ರೆಗಳ ಮೇಲಿರುವ ಚಿಹ್ನೆಗಳಂತೆಯೇ ಇವೆ. ಮಹಾರಾಜಕ್ಕಾಡೈನ ಗವಿಬಂಡೆಯಲ್ಲಿರುವ ಸಂಕೇತಗಳು ವಿದ್ವಾಂಸರನ್ನು ಚಕಿತಗೊಳಿಸಿವೆ. ಬೆಟ್ಟವೊಂದರ ಮೇಲಿರುವ ಈಶ್ವರಕುಂದು ಗವಿಬಂಡೆಯಲ್ಲಿ ಸೂರಿನ ಮೇಲೆ ಬಿಳಿಬಣ್ಣದ ಚಿತ್ರಗಳನ್ನು ರಚಿಸಲಾಗಿವೆ. ಪ್ರಕೃತಿ ಪ್ರಕೋಪಕ್ಕೂ ಜನರ ಕಪಿಚೇಷ್ಟೆಗೂ ಸಿಲುಕಿ ಹಲವು ಚಿತ್ರಗಳು ಅಳಿಸಿಹೋಗಿವೆ ಅಥವಾ ಮಬ್ಬಾಗಿಬಿಟ್ಟಿವೆ. ಹಲವು ವಿದ್ವಾಂಸರು ಇವುಗಳಲ್ಲಿ ಮೊಟ್ಟಮೊದಲಿನ ತಮಿಳು–ಬ್ರಾಹ್ಮಿ ಲಿಪಿಗಳನ್ನು ಗುರುತಿಸಿದ್ದಾರೆ. ಚಿತ್ರದೊಳಗಿನ ಮೂರು ಸಾಲುಗಳನ್ನು ಧಮ್ಮ, ತೋಪಾಕಿಕೋಡನ್ ಮತ್ತು ಯಾನ ಕಮಪ್ಪ ಎಂದು ಓದಿದ್ದಾರೆ. ತೋಪಾಕಿಕೋಡನ್ ಮತ್ತು ಯಾನ ಕಮಪ್ಪರೆಂಬ ಇಬ್ಬರು ವ್ಯಕ್ತಿಗಳು ಮಾಡಿದ ಕೊಡುಗೆ ಎಂದು ಇದರರ್ಥ. ಆದರೆ ಇವು ಬ್ರಾಹ್ಮಿ ಲಿಪಿಗಳಲ್ಲ, ಕೇವಲ ಸಂಕೇತಗಳಾಗಿರಬಹುದೆಂದು ಕೂಡ ಅನುಮಾನಿಸಲಾಗಿದೆ. ಏಕೆಂದರೆ ಇಂತಹದೇ ಸಂಕೇತಗಳನ್ನು ತಮಿಳುನಾಡಿನಲ್ಲಿ ಕಲ್ಮನೆ, ಗವಿಬಂಡೆಗಳಲ್ಲಿ ಕಾಣಬಹುದು.

ಕಲ್ಮನೆಗಳ ಮೇಲಿನ ಚಿತ್ರಗಳು ಗವಿಬಂಡೆಯ ಕಲೆಯನ್ನೇ ಹೋಲುತ್ತವೆ. ಇಲ್ಲಿ ಪ್ರಾಣಿ ಅಥವಾ ಹೋರಾಟಕ್ಕಿಂತ ಹೆಚ್ಚಾಗಿ ಮಾನವಾಕೃತಿಗಳ ಚಿತ್ರಣವಿದೆ. ಶಿಲಾಚಾವಣಿಯ ಒಳಭಾಗದಲ್ಲಿ ಚಿತ್ರ ರಚಿಸಿದ ಮೇಲೆ, ಅದರ ಪಶ್ಚಿಮ ಗೋಡೆಗೆ ಮೊದಲ ಆದ್ಯತೆ ದೊರೆತಿದೆ. ಅದೂ ತುಂಬಿಯಾದ ಮೇಲೆ ಉತ್ತರ, ದಕ್ಷಿಣ ಹಾಗೂ ಕೊನೆಯಲ್ಲಿ ಪೂರ್ವದ ಗೋಡೆಯನ್ನು ಆರಿಸಿಕೊಂಡಿದ್ದಾರೆ. ಈವರೆಗೆ ತಿಳಿದಂತೆ ಸಾಮಾನ್ಯವಾಗಿ ಚಿತ್ರಗಳು ಪಶ್ಚಿಮದ ಗೋಡೆಯ ಮೇಲೆ ಮಾತ್ರ ಇವೆ. ನರ್ತಕರ ಸಾಲು, ದನಕರುಗಳೊಂದಿಗಿರುವ ವ್ಯಕ್ತಿ, ಕುದುರೆಸವಾರ, ಯೋಧರು, ಹೊಲ ಉಳುವುದು ಇಲ್ಲಿಯ ಮುಖ್ಯ ದೃಶ್ಯಗಳು. ಬಿಲ್ಲುಬಾಣ ಹಿಡಿದಿರುವ ಯೋಧರ ಎರಡು ಗುಂಪುಗಳು ಪರಸ್ಪರ ಎದುರಿಗಿವೆ. ಈ ಪ್ರದೇಶದ ಚಾರಿತ್ರಿಕ ಕಾಲದ ವೀರಗಲ್ಲುಗಳಲ್ಲಿ ಇಂತಹದೇ ಚಿತ್ರಣ ಕಂಡುಬರುತ್ತದೆ. ಕೆಲವೆಡೆ ಬಿಲ್ಲುಬಾಣಗಳನ್ನು ಮೇಲ್ಮುಖವಾಗಿ ಎತ್ತಿ ಹಿಡಿದ ವ್ಯಕ್ತಿಯ ಚಿತ್ರವಿದೆ. ಕೆಲವು ಸಮಾಧಿಶಿಲೆಗಳಲ್ಲಿ ಈಟಿಯಂತಹ ಅಸ್ತ್ರವೊಂದನ್ನು ಕೈಯಲ್ಲಿ ಹಿಡಿದಿರುವುದನ್ನು ಚಿತ್ರಿಸಲಾಗಿದೆ. ಧರ್ಮಪುರಿ ಜಿಲ್ಲೆಯ ಸಮಾಧಿಶಿಲೆಯೊಂದರಲ್ಲಿ ಚೌಕಾಕಾರದ ತಳಗಟ್ಟನಿಂದ ಮೊಳಕೆಯೊಡೆಯುತ್ತಿರುವ ಗಿಡದ ಚಿತ್ರವಿದೆ. ಇದು ಅಚ್ಚೊತ್ತಿದ ನಾಣ್ಯಗಳ ಮೇಲಿನ ಕಟಕಟೆ ಮತ್ತು ಮರದ ನೆನಪು ತರುತ್ತದೆ. ನೃತ್ಯದ ದೃಶ್ಯಗಳನ್ನು ಚಿತ್ರಿಸುವಾಗ ಆಕೃತಿಗಳು ಯಾವಾಗಲೂ ಒಂದು ಸಾಲಿನಲ್ಲಿರುತ್ತವೆ. ನಾಲ್ಕು ನರ್ತಕರ ಸಾಲಿನೆದುರು ಒಂದು ಮನೆಯನ್ನು ಒಂದೆಡೆ ರಚಿಸಲಾಗಿದೆ.

ಕುರುವಿನಾಯನಪಳ್ಳಿ ಕಲ್ಮನೆಯಲ್ಲಿ ಸ್ವಾರಸ್ಯಕರವಾದ ಸಂಕೇತಗಳಿವೆ. ಐದು ಉದ್ದಗೆರೆಗಳು ಮತ್ತು ನಾಲ್ಕು ಅಡ್ಡಗೆರೆಗಳಿಂದ ರಚಿತವಾಗುವ ಹನ್ನೆರಡು ಚೌಕಗಳನ್ನು ಚಿತ್ರಿಸಲಾಗಿದೆ. ಉದ್ದಗೆರೆಗಳಲ್ಲಿ, ಮೂರು ಒಳಗೆರೆಗಳ ಕೊನೆಯಲ್ಲಿ ಬಾಣದ ಗುರುತಿವೆ. ಈ ಸಂಕೇತದ ಎರಡು ಬದಿಗಳಲ್ಲಿ ಎರಡೆರಡು ಮಾನವಾಕೃತಿಗಳಿವೆ. ಬಾಣದ ಗುರುತಿರುವ ಮಧ್ಯದ ಚೌಕ ಸ್ಥಳೀಯರು ಸನ್ನಿಯಾಸಿ ಕಲ್ ಎಂದು ಕರೆಯುವ ಸಂತಾನಕಲ್ಲಿನ ಮೇಲಿರುವ ಚಿಹ್ನೆಗಳನ್ನು ಹೋಲುತ್ತವೆ. ಈ ಚೌಕದ ಒಂದು ಬದಿಯಲ್ಲಿ ಪ್ರಾಣಿಯ ಚಿತ್ರವಿದೆ; ಸಂತಾನಫಲ ಹೆಚ್ಚಿಸಿಕೊಳ್ಳುವುದಕ್ಕಾಗಿ ಈ ಕಲ್ಲನ್ನು ದಾಟಬಹುದಾದ ಪ್ರಾಣಿಯ ಸಂಕೇತ ಅದಾಗಿರಬಹುದು. ನಕ್ಷತ್ರ, ಮಾನವ ಜನನಾಂಗಗಳು, ಹೂವಿನ ಚಿಹ್ನೆಗಳು, ಬಿಂದುವುಳ್ಳ ವೃತ್ತಗಳು ಇತ್ಯಾದಿ ಸಂಕೇತಗಳು ಇವುಗಳ ಮೇಲಿವೆ.

ಬೃಹತ್ ಶಿಲಾಯುಗದ ಸಮಾಧಿಗಳ ಹತ್ತಿರದಲ್ಲಿರುವ ಗವಿಬಂಡೆಗಳ ಚಿತ್ರಗಳು ಕಲ್ಮನೆ ಚಿತ್ರಗಳು ದರ್ಶಿಸುವ ಚಿಹ್ನೆ ವಸ್ತುಗಳನ್ನೇ ಹೊಂದಿವೆ. ಶಿಲಾಚಾವಣಿಯ ರಚನಕಾರರೂ ಬೃಹತ್ ಶಿಲಾಯುಗಕ್ಕೇ ಸೇರಿದವರೆಂದು ಇದರಿಂದ ಊಹಿಸಬಹುದು. ಅವುಗಳ ಭಾವದಲ್ಲಿರುವ ನಿಕಟವಾದ ಹೋಲಿಕೆಯೇ ಅವುಗಳ ಸಮಕಾಲೀನತೆಯನ್ನು ಸಾರುತ್ತದೆ. ಕರ್ನಾಟಕದಲ್ಲಿರುವ ಬಂಡೆಚಿತ್ರವೊಂದರಲ್ಲಿ ಸತ್ತ ವ್ಯಕ್ತಿಯನ್ನು ಬೃಹತ್ ಶಿಲಾಯುಗದ ಕಲ್ಲಿನ ವೃತ್ತದೊಳಗಿರಿಸುವುದನ್ನು ಚಿತ್ರಿಸಲಾಗಿದೆ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು. ಧರ್ಮಪುರಿಯ (ಪ್ರಾಯಶಃ ಉತ್ತರ ಆರ್ಕಾಟಿನ) ಅತಿ ಮುಂಚಿನ ಚಿತ್ರಗಳು ಕೆಂಪುಬಣ್ಣದವೆಂದು ತೋರುತ್ತವೆ. ಅದರ ಮೇಲೆಯೇ ಬಿಳಿಬಣ್ಣವನ್ನು ಹಚ್ಚಿರಬೇಕು. ಈ ಪ್ರದೇಶದಲ್ಲಿರುವ ಎಲ್ಲ ಕಲ್ಮನೆಗಳಲ್ಲೂ ಈ ಬಿಳಿಯ ಬಣ್ಣವನ್ನೇ ಬಳಸಲಾಗಿದೆ. ಕೆಂಪುಬಣ್ಣದ ಚಿತ್ರಗಳು ನವಶಿಲಾಯುಗಕ್ಕೆ ಸೇರಿದವಾಗಿರಬೇಕು. ಬೃಹತ್ ಶಿಲಾಯುಗಕ್ಕೆ ಸೇರಿದ ಸಮಾಧಿಗಳಲ್ಲಿ ಕೆಂಪುಬಣ್ಣ ಇಲ್ಲದಿರುವುದು ಈ ಚಿತ್ರಗಳು ಅವಕ್ಕಿಂತ ಹಳೆಯದೆಂಬುದನ್ನು ಸೂಚಿಸುತ್ತದೆ. ನವಶಿಲಾಯುಗದ ಮಣ್ಪಾತ್ರೆಗಳ ಮೇಲೆ ಅಲಂಕಾರಕ್ಕಾಗಿ ಕೆಂಪುಬಣ್ಣವನ್ನು ಬಳಸಿರುವ ಪುರಾವೆಗಳು ಧರ್ಮಪುರಿ ಜಿಲ್ಲೆಯಲ್ಲೇ ಇರುವ ಮುಲ್ಲಿಕಾಡು, ದಯಲ್‍ಮಲೈ ಮತ್ತು ತೊಗರಪಲ್ಲಿಗಳಲ್ಲಿ ದೊರೆತಿವೆ. ಕೆಂಪುಕಾವಿಯ ಅಲಂಕಾರವಿರುವ ಬೂದುಬಣ್ಣದ ಪಾತ್ರೆಗಳು 1 ಬಿ ಹಂತದ ಕಾಲದಲ್ಲಿದ್ದವೆಂದು ಪಯ್ಯಂಪಲ್ಲಿಯಲ್ಲಿ ನಡೆದ ಉತ್ಖನನಗಳು ಸ್ಪಷ್ಟಪಡಿಸಿವೆ. ನವಶಿಲಾಯುಗದ ಅಂತ್ಯಭಾಗಕ್ಕೆ ಸೇರುವ ಈ ಹಂತದ ಇಂಗಾಲ–14 ಕಾಲಮಾನ (ಪ್ರ.ಶ.ಪೂ.1390±200). ಗವಿಬಂಡೆಯಲ್ಲಿ ಯಾವುದೇ ವಸತಿ ಪದರವಿಲ್ಲದಿರುವುದರಿಂದ ಉತ್ಖನನಕ್ಕೆ ಆಸ್ಪದವಿಲ್ಲ. ಧರ್ಮಪುರಿ ಜಿಲ್ಲೆಯ ಮಲ್ಲಪ್ಪಾಡಿ, ಗುತ್ತೂರಮಲೈ, ಆದಿಯಮ್ಮನ್ ಕೊಟ್ಟೈಯಲ್ಲಿ ನಡೆದ ಉತ್ಖನನಗಳ ಪ್ರಕಾರ ಅತಿ ಮುಂಚಿನ ವಸತಿಗಳು ಬೃಹತ್ ಶಿಲಾ ಯುಗಕ್ಕೆ ಸೇರಿವೆ. ಮಲ್ಲಪ್ಪಾಡಿಯ ಗವಿಬಂಡೆಯ ಚಿತ್ರಗಳು ಬಿಳಿಯಬಣ್ಣದವಾಗಿರುವುದರಿಂದ ಉತ್ಖನನದ ಫಲಿತಾಂಶಗಳು ಮುಂಚಿನ ಊಹೆಗಳಿಗೆ ಪುಷ್ಟಿ ನೀಡಿದವು. ಉತ್ತರ ಆರ್ಕಾಟ್ ಜಿಲ್ಲೆಯ ತಿರುಮಲೈಯ ಚಿತ್ರವಿರುವ ಗವಿಬಂಡೆಯಲ್ಲಿ ಹೆರೆಚಕ್ಕೆ, ಶಿಲಾಗಟ್ಟಿ, ಚಕ್ಕೆ ಇತ್ಯಾದಿ ಶಿಲೋಪಕರಣಗಳು ದೊರೆತಿವೆ. ಈ ಉಪಕರಣಗಳಿಗೂ ಚಿತ್ರಗಳಿಗೂ ಸಂಬಂಧ ಕಲ್ಪಿಸುವುದು ಕಷ್ಟ.

ತಮಿಳುನಾಡಿನ ಚಿತ್ರಿತ ಗವಿಬಂಡೆಗಳ ಕಾಲಮಾನ ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಎಲ್ಲ ಕಡೆಗಳಲ್ಲೂ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಕುರುಹುಗಳು ನಿಚ್ಚಳವಾಗಿವೆ. ತಮಿಳುನಾಡಿನ ಬಂಡೆಕಲೆ ನವಶಿಲಾಯುಗದಿಂದ ಆರಂಭವಾಗಿ, ಆದಿಚಾರಿತ್ರಿಕ ಕಾಲ ಅಥವಾ ಅದಕ್ಕಿಂತ ಸ್ವಲ್ಪ ಅನಂತರ ಕೊನೆಗೊಳ್ಳುತ್ತದೆ ಎಂದು ಹೇಳಬಹುದು. (ಡಿ.)

**ಒರಿಸ್ಸ:** ಒರಿಸ್ಸದ ಸಂಬಲ್‍ಪುರ್ ಮತ್ತು ಸುಂದರ್‍ಗಡ್ ಜಿಲ್ಲೆಗಳಲ್ಲಿ ಪುರಾತನ ವರ್ಣಚಿತ್ರಗಳು ಮತ್ತು ಗೀರು ಕೆತ್ತನೆಗಳಿರುವ ಹಲವಾರು ಗುಹೆ–ಕಲ್ಲಾಸರೆಗಳಿವೆ. ಮುಖ್ಯವಾದುವೆಂದರೆ ಒಸಕೋಠಿ, ಬ್ರಾಹ್ಮಣಿ ಗುಫ, ವಿಕ್ರಮ್ ಖೋಲ್ ಮತ್ತು ಚೆಂಗಾ ಪಹಾಡ್. ಈ ನೆಲೆಗಳು ಸಣ್ಣ ಹಳ್ಳಗಳು ಹರಿಯುವ ಆಳವಾದ ಕಮರಿಗಳಲ್ಲಿ, ಬೆಟ್ಟ–ಗುಡ್ಡದ ಕಡಿದಾದ ಕಂದರಗಳಲ್ಲಿದ್ದು ಅರಣ್ಯದಿಂದ ಆವೃತವಾಗಿವೆ. ಮರಳುಗಲ್ಲಿನ ಸಂಚಯದಲ್ಲಿ ನೈಸರ್ಗಿಕವಾಗಿ ನಿರ್ಮಾಣಗೊಂಡ ಗುಹೆ–ಕಲ್ಲಾಸರೆಗಳಿವು. ಈ ಜಿಲ್ಲೆಗಳಲ್ಲಿ ಇಂತಹ ನೈಸರ್ಗಿಕ ನಿರ್ಮಿತಿಗಳು ಹೇರಳವಾಗಿದ್ದರೂ ಚಿತ್ರಗಳು ಇರುವುದು ಕೆಲವೊಂದರಲ್ಲಿ ಮಾತ್ರ. ಇಲ್ಲಿಯ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಚಿತ್ರಗಳು ಬಹುವರ್ಣದವು. ಬಿಳಿ ಮತ್ತು ಕೆಂಪುಬಣ್ಣಗಳ ಸಮಾನಾಂತರ ರೇಖೆಗಳಿಂದ ರಚಿಸಿದ ಚಿತ್ರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಕಪ್ಪುಬಣ್ಣವೂ ಅಲ್ಲಲ್ಲಿ ಬಳಕೆಯಾಗಿದೆ. ಹಳದಿ ಮತ್ತು ಕೆನೆಬಣ್ಣಗಳ ಚಿತ್ರಗಳಿದ್ದರೂ ಇವು ವಿರಳ.

ಈ ಪ್ರದೇಶದ ಅತಿ ಪ್ರಾಚೀನ ಚಿತ್ರಗಳು ಅಮೂರ್ತ ರೂಪದವು. ಉದಾ: ಜೇನುಗೂಡಿನ ಆಕಾರದ ಮತ್ತು ಸುರಳಿಯ ಜಟಿಲ ವಿನ್ಯಾಸಗಳು. ಪ್ರಾಣಿಗಳ ಕೆಲವೊಂದು ಚಿತ್ರಗಳಲ್ಲಿ ಮೈಭಾಗವನ್ನು ಇಂತಹ ವಿನ್ಯಾಸಗಳಿಂದ ತುಂಬಲಾಗಿದೆ. ಇಷ್ಟೇ ಪ್ರಾಚೀನವಾಗಿರುವ ಚಿತ್ರಗಳು ಬಿಲ್ಲುಗಾರರದ್ದು. ಚೆಂಗಾ ಪಹಾಡ್‍ನಲ್ಲಿರುವ ಮೂರು ಬಿಲ್ಲುಗಾರರ ಚಿತ್ರಗಳು ಮಧ್ಯ ಭಾರತದ ಸೂಕ್ಷ್ಮಶಿಲಾಯುಗ ಚಿತ್ರಶೈಲಿಗೆ ಸಮೀಪವಾಗಿವೆ. ಕಡ್ಡಿಯ ರೂಪದಲ್ಲಿರುವ ಈ ಮನುಷ್ಯರ ಪೈಕಿ ಒಬ್ಬನ ಕೈಯಲ್ಲಿ ಒಂದರ ಕೆಳಗೆ ಇನ್ನೊಂದು ಮೊನೆಯಿರುವ ಬಾಣವಿದೆ. ಆದರೆ ಈ ಚಿತ್ರಗಳು ಎಷ್ಟು ಪ್ರಾಚೀನವೆಂದು ತಿಳಿಯಲು ಯಾವುದೇ ಸಾಂದರ್ಭಿಕ ಆಧಾರಗಳಿಲ್ಲ.

ಒಸಕೋಠಿ ಮತ್ತು ಉಲಪ್‍ಗಡ್‍ಗಳಲ್ಲಿ ಗುಹೆಯ ವಿಶಾಲ ಭಿತ್ತಿಯ ಮೇಲೆ ಪೊರಕೆಯನ್ನು ಹೋಲುವ 20–50 ಸೆಂಮೀ ಉದ್ದದ ಚಿತ್ರಗಳಿವೆ. ಪೊರಕೆಯಂತಹ ಸರಕನ್ನು ಬಣ್ಣದಲ್ಲಿ ಅದ್ದಿ ಗೋಡೆಯ ಮೇಲೆ ಒತ್ತಿರುವರೇನೋ ಎಂಬಂತೆ ಈ ಚಿತ್ರಗಳು ಮೂಡಿವೆ. ಪ್ರತಿಯೊಂದು ರೇಖೆಯೂ ಪ್ರತ್ಯೇಕವಾಗಿದ್ದು ಸ್ಪಷ್ಟವಾಗಿದೆ. ಲಖಮಾರದಲ್ಲಿ ಪಕ್ಷಿಯ ಒಂದು ಸುಂದರ ಚಿತ್ರವಿದೆ. ಹಲ್ಲಿಯಂತಹ ಸರೀಸೃಪದ ಚಿತ್ರಗಳು ಹಲವಾರು ಕಡೆಗಳಲ್ಲಿವೆ. ಈ ಎಲ್ಲ ಚಿತ್ರಗಳನ್ನು ಯಾವುದೇ ನಿರ್ದಿಷ್ಟ ಕಾಲಾವಧಿಗೆ ಸೇರಿಸಲಾಗಿಲ್ಲ.

ಗೀರು ಕೆತ್ತನೆಗಳೂ ಅನೇಕ ಸಂಖ್ಯೆಯಲ್ಲಿವೆ. ಆಳವಾಗಿ ಕೊರೆದು ಮಾಡಿದಂತಹ ರೇಖಾಚಿತ್ರಗಳಿವು. ಹೆಚ್ಚಿನ ಸಂದರ್ಭದಲ್ಲಿ ಗೀರಿನ ತಗ್ಗಿನಲ್ಲಿಯೂ ಮಧ್ಯದ ಏರು ಭಾಗದಲ್ಲಿಯೂ ವೈದೃಶ್ಯವಿರುವಂತೆ ಬಣ್ಣವನ್ನು ಹಚ್ಚಲಾಗಿದೆ. ತ್ರಿಕೋನ, ಜಾಲಂದ್ರ ಮುಂತಾದ ಜ್ಯಾಮಿತೀಯ ವಿನ್ಯಾಸಗಳೇ ಈ ಪ್ರಕಾರದಲ್ಲಿ ಹೆಚ್ಚಾಗಿವೆ. ಅಪರೂಪಕ್ಕೆ ಪ್ರಾಣಿಗಳ ಛಾಯಾಕೃತಿಗಳು ಕಾಣಸಿಗುತ್ತವೆ. ಕೆಲವೊಮ್ಮೆ ಗೀರುಚಿತ್ರದ ಸುತ್ತಲೂ ಬಣ್ಣದಲ್ಲಿ ರೇಖೆಗಳನ್ನು ಮೂಡಿಸಿ ಚಿತ್ರದ ಗಾತ್ರವನ್ನು ಹಿಗ್ಗಿಸಲಾಗಿದೆ. ಉಲಪ್‍ಗಡ್‍ನಲ್ಲಿ ಹಸ್ತದ ಗೀರುಚಿತ್ರಗಳಿವೆ. ಇವುಗಳ ಪ್ರಾಚೀನತೆಯನ್ನು ನಿರ್ಧರಿಸಲಾಗಿಲ್ಲ.

ಚಾರಿತ್ರಿಕ ಕಾಲದ ಚಿತ್ರಗಳು ಚೆಂಗಾ ಪಹಾಡ್‍ನಲ್ಲಿವೆ. ಇಣಿಲುಳ್ಳ ಗೂಳಿ/ಎತ್ತು, ಮೇಕೆ, ಹಕ್ಕಿ, ಶಸ್ತ್ರಧಾರಿ ಮನುಷ್ಯರು, ರೇಖಾ ವಿನ್ಯಾಸಗಳು ಮುಂತಾದವುಗಳನ್ನು ಈ ಕಾಲಕ್ಕೆ ಸೇರಿಸಬಹುದಾಗಿದೆ. ಮನುಷ್ಯರ ಮುಂಡಭಾಗ ಡಮರುಗದ ಆಕಾರದಲ್ಲಿದೆ. ಕೆಲವರು ಖಡ್ಗವನ್ನು ಹಿಡಿದಿದ್ದರೆ ಇನ್ನು ಕೆಲವರು ಡೋಲನ್ನು ಹಿಡಿದಿರುವರು. ಇಂತಹ ಚಿತ್ರಗಳ ಅಡಿಯಲ್ಲಿ ತ್ರಿಕೋನಾಕಾರದ ವಿನ್ಯಾಸಗಳಿವೆ. (ವಿ.ಎಸ್.)

**ಉತ್ತರ ಭಾರತ:** ಉತ್ತರ ಭಾರತದ ಪ್ರಮುಖ ಬಂಡೆಗಲ್ಲು ಚಿತ್ರಗಳ ಪ್ರದೇಶಗಳಿವು: ಭೀಂಬೇಟ್ಕ ಮತ್ತು ವಿಂಧ್ಯ ಪ್ರದೇಶದ ಇತರ ಸಂಕೀರ್ಣಗಳು (ಮಧ್ಯಭಾರತ); ಮಧ್ಯಪ್ರದೇಶದ ಚಂಬಲ್ ಕಣಿವೆ ಮತ್ತು ಅರಾವಳಿ ಗುಡ್ಡಪ್ರದೇಶಗಳು ಮತ್ತು ಆಗ್ನೇಯ ರಾಜಸ್ತಾನ; ಉತ್ತರ ಪ್ರದೇಶದ ಮಿರ್ಜಾಪುರ (ವಿಂಧ್ಯ ಪರ್ವತ)ಶ್ರೇಣಿ; ಬಿಹಾರ ಮತ್ತು ಜಾರ್ಖಂಡ್‌ಗಳಲ್ಲಿರುವ ಕೈಮೂರ್ ಶ್ರೇಣಿಗಳು; ಶಿವಾಲಿಕ್‌ನ ಕುಮಾವ್ ಮತ್ತು ಗಡವಾಲ್ ಪ್ರದೇಶಗಳು; ಹಿಮಾಲಯ ಪ್ರದೇಶದ ಲಡಾಕ್ ಮತ್ತು ಸಿಂಧ್ ಕಣಿವೆ ಪ್ರದೇಶಗಳು. ಮೊದಲ 3 ಪ್ರದೇಶಗಳಲ್ಲಿ ವರ್ಣಚಿತ್ರಗಳು ಅಧಿಕವಾಗಿದ್ದು ಕೆಲವು ಮಾತ್ರ ಗೀರು ಚಿತ್ರಗಳಾಗಿವೆ. ಬಿಹಾರ, ಜಾರ್ಖಂಡ್, ಒರಿಸ್ಸ ಮತ್ತು ಛತ್ತಿಸ್‌ಗಡ್‌ಗಳಲ್ಲಿ ಇವೆರಡೂ ಪ್ರಕಾರಗಳು ಕಂಡುಬಂದಿವೆ. ಛತ್ತಿಸ್‌ಗಡ್‌ನ ಚಿತ್ರಕಲೆ ವಿಂಧ್ಯ ಪ್ರದೇಶ ಹಾಗೂ ಒರಿಸ್ಸದ ಚಿತ್ರಕಲೆಯ ವಿಶಿಷ್ಟ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಶಿವಾಲಿಕ್ ವಲಯದಲ್ಲಿ ವರ್ಣಚಿತ್ರಗಳೂ ಗೀರುಚಿತ್ರಗಳೂ ಕಂಡುಬಂದಿವೆ. ಆದರೆ ಲಡಾಕ್ ಮತ್ತು ಸಿಂಧ್ ಕಣಿವೆ ಪ್ರದೇಶಗಳಲ್ಲಿ ಹೆಚ್ಚಿನವು ಗೀರುಚಿತ್ರಗಳಾಗಿದ್ದು ಇವು ಸಾಮಾನ್ಯವಾಗಿ ಇತಿಹಾಸ-ಪೂರ್ವಕಾಲದ ಪ್ರಾಣಿಗಳು ಹಾಗೂ ಮನುಷ್ಯರ ಚಿತ್ರಗಳಾಗಿವೆ.

ವಿಂಗಡಣೆ: ಪ್ರಪಂಚದ ಮತ್ತು ವಿಶೇಷವಾಗಿ ಭಾರತದ ಬಂಡೆಗಲ್ಲು ಚಿತ್ರಗಳು ಅಮೂರ್ತ ಆಕಾರಗಳಿಂದ ಮೂರ್ತ ಆಕಾರಕ್ಕೆ ತೆರಳುವುದನ್ನು ಕಾಣಬಹುದು. ಬಂಡೆಗಲ್ಲು ಚಿತ್ರಕಲೆ ಪ್ರಾಂತೀಯ ಲಕ್ಷಣ, ಪ್ರವೃತ್ತಿ ಹಾಗೂ ಶೈಲಿಗಳಿಂದ ಕೂಡಿದೆ.

ವಿಕಸನ ಮತ್ತು ಪ್ರಾದೇಶಿಕ ಲಕ್ಷಣಗಳು: ಸರಳವಾದ ಪುಟ್ಟಪುಟ್ಟ ಗುಳಿಗಳು ಮತ್ತು ಕೊರೆದ ತೆಳುರೇಖೆಗಳ ರೂಪದಲ್ಲಿರುವ ಆದಿ ಹಳೆಶಿಲಾಯುಗದ ಚಿತ್ರಗಳು ವಿಂಧ್ಯ ಪ್ರದೇಶದ ಭೀಂಬೇಟ್ಕ ಹಾಗೂ ಚಂಬಲ್ ಕಣಿವೆ ಪ್ರದೇಶದಲ್ಲಿರುವ ದರಕಿ ಚಟ್ಟಾನ್‌ನಲ್ಲಿ ಕಂಡುಬಂದಿವೆ. ದರಕಿ ಚಟ್ಟಾನ್ ಎಂಬುದು ಒಂದು ಚಿಕ್ಕಗುಹೆಯಾಗಿದ್ದು, ಮಧ್ಯಪ್ರದೇಶದ ಮಾಂಡಸೋರ್ ಜಿಲ್ಲೆಯ ಭಾನ್‌ಪುರದ ಹತ್ತಿರ ಇದೆ. 2002-06 ರವರೆಗೆ ಗಿರಿರಾಜ್‌ಕುಮಾರ್ ಹಾಗೂ ಅವರ ತಂಡದವರು ಇಲ್ಲಿ ಉತ್ಖನನ ನಡೆಸಿದ್ದಾರೆ. ಇಲ್ಲಿ ಆದಿ ಹಳೆಶಿಲಾಯುಗದ 28 ಚಪ್ಪಡಿಗಲ್ಲಿನ ತುಂಡುಗಳೂ ಅವುಗಳನ್ನು ತಯಾರಿಸಲು ಬಳಸಲಾದ ಸುತ್ತಿಗೆಗಳೂ ಲಭ್ಯವಾಗಿವೆ. ವಿಶೇಷವಾದುದೆಂದರೆ ಆದಿ ಹಳೆಶಿಲಾಯುಗ ಉಪಕರಣಗಳುಳ್ಳ ಪದರಿನಡಿಯಲ್ಲಿ ಕಲ್ಗುಳಿಗಳು ಕಂಡುಬಂದಿರುವುದು. ಭಾರತೀಯ ಚಿತ್ರಕಲಾ ಸಂಪ್ರದಾಯ ಅಂತ್ಯ ಹಳೆಶಿಲಾಯುಗದ ಏಕರೇಖೆ ಹಾಗೂ ಬಹುರೇಖೆಗಳ ಮಾದರಿಗಳಿಂದ ಅಂಡಾಕಾರ, ವೃತ್ತಾಕಾರ ಮತ್ತು ಇವುಗಳ ಸಂಯೋಜನೆ ಯಿಂದ ಕೂಡಿದ ಹಲವು ಮೂಲಾಶಯಗಳನ್ನು ಪ್ರತಿನಿಧಿಸುವ ಚಿತ್ರಗಳವರೆಗೆ ಸಾಗಿಬಂದಿರುವುದು ಸ್ಪಷ್ಟವಾಗುತ್ತದೆ. ಸಾಲಿ ಅವರು ಮಹಾರಾಷ್ಟ್ರದ ಪಾಟ್ನೆಯಲ್ಲಿ ನಡೆಸಿದ ಉತ್ಖನನದಲ್ಲಿ ಅಂತ್ಯ ಹಳೆಶಿಲಾಯುಗದ ಉಷ್ಟ್ರಪಕ್ಷಿಯ ಮೊಟ್ಟೆಯ ಚಿಪ್ಪಿನ ಮೇಲೆ ಕೊರೆಯಲಾದ ಒಂದು ಬಗೆಯ ಸರಳ ಜ್ಯಾಮಿತೀಯ ವಿನ್ಯಾಸಗಳು ಪತ್ತೆಯಾಗಿವೆ. ಈ ಮೊಟ್ಟೆಚಿಪ್ಪುಗಳ ಕಾಲ ಇಂಗಾಲ 14 ಕಾಲನಿರ್ಣಯದನ್ವಯ 25,000±200 ವರ್ಷ.

ವಿನ್ಯಾಸಗಳನ್ನು ಸೃಷ್ಟಿಸಲು ಸಮರ್ಥನಾದ ಮೇಲೆ ಮಾನವನ ಸೃಜನಾತ್ಮಕ ಶಕ್ತಿ ವಿಸ್ತರಿಸತೊಡಗಿತು. ಅವನು ಸೂಕ್ಷ್ಮ ಸಂಕೀರ್ಣ ವಿನ್ಯಾಸಗಳನ್ನು ರಚಿಸತೊಡಗಿದ. ಇವು ಸಾಮಾನ್ಯವಾಗಿ ಭಾರತದ ಹಾಗೂ ವಿಶೇಷವಾಗಿ ಮಧ್ಯ ಭಾರತದಲ್ಲಿ ಬಂಡೆಗಳ ಮೇಲೆ ಬಿಡಿಸಿದ ಪ್ರಪ್ರಥಮ ಚಿತ್ರಗಳಾಗಿವೆ. ಇವುಗಳ ಮೇಲೆಯೇ ಅನಂತರದ ಕಾಲಗಳಲ್ಲಿ ಮತ್ತೆ ಮತ್ತೆ ಚಿತ್ರಗಳನ್ನು ಬಿಡಿಸಲಾಗಿದೆ. ಅನಂತರದಲ್ಲಿ ಕಾಡುಪ್ರಾಣಿಗಳು ಮತ್ತು ಮಾನವರ ಜೀವನದ ವಿವಿಧ ಮುಖಗಳನ್ನು ಚಿತ್ರಿಸುವ ಚಿತ್ರಗಳು ರಚನೆಯಾದವು. ನರ್ತನ ಮತ್ತು ಬೇಟೆಯ ದೃಶ್ಯಗಳು ಉತ್ತರ ಭಾರತದಲ್ಲಿ ವಿಶೇಷವಾಗಿ ಮಧ್ಯ ಭಾರತದಲ್ಲಿ ಕಂಡುಬಂದ ಪ್ರಾಚೀನ ಚಿತ್ರಗಳ ಮುಖ್ಯ ವಸ್ತುಗಳಾಗಿವೆ. ನರ್ತಿಸುವ ವ್ಯಕ್ತಿಯ ದೇಹ ಇಂಗ್ಲಿಷ್‌ನ ಎಸ್ ಅಕ್ಷರದಂತೆ ಬಳುಕಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ಚಿತ್ರಗಳ ಕಾಲವನ್ನು ಯುರೋಪಿನ ಗುಹಾಚಿತ್ರಗಳ ಕಾಲದಂತೆ ಅಂತ್ಯ ಹಳೆಶಿಲಾಯುಗವೆಂದು ನಿರ್ಧರಿಸಬಹುದು. ಆದರೆ ಇದನ್ನು ಸಮರ್ಥಿಸುವ ವೈಜ್ಞಾನಿಕ ಆಧಾರಗಳು ಇನ್ನೂ ಲಭ್ಯವಾಗಿಲ್ಲ.

ಈ ಹಂತದ ಅನಂತರ ಮಧ್ಯ ಭಾರತದಲ್ಲಿ ಮಾನವ ಚಟುವಟಿಕೆಗಳು ವೈವಿಧ್ಯ ರೂಪ ಪಡೆದವು. ನೃತ್ಯ, ಬೇಟೆ, ಸಂಗೀತ, ಹಾಡುಗಾರಿಕೆಗಳಷ್ಟೇ ಅಲ್ಲದೆ, ಜನನದಿಂದ ಮರಣದ ವರೆಗಿನ ಬಹುತೇಕ ಎಲ್ಲ ಚಟುವಟಿಕೆಗಳೂ ಕಲಾವಿದರಿಂದ ಚಿತ್ರಗಳ ರೂಪವನ್ನು ಪಡೆಯತೊಡಗಿದವು. ನಿಸರ್ಗ, ಕಾಡುಪ್ರಾಣಿಗಳು ಮತ್ತು ಅವುಗಳ ಗುಣಸ್ವಭಾವ, ಸೌಂದರ್ಯ, ಜೀವನದ ಸವಾಲುಗಳು-ಇವುಗಳನ್ನು ಎದುರಿಸಲು ಕಂಡುಕೊಂಡ ಮಾರ್ಗಗಳು ಹಾಗೂ ಅಭಿವೃದ್ಧಿಪಡಿಸಿಕೊಂಡ ಉಪಕರಣಗಳು, ನೋವು-ನಲಿವುಗಳೆಲ್ಲ ಚಿತ್ರಗಳಲ್ಲಿ ಅಭಿವ್ಯಕ್ತವಾಗತೊಡಗಿದವು. ಶೈಲಿ ಮತ್ತು ಚಿತ್ರ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಪ್ರಯೋಗಗಳನ್ನು ಮಾಡಿರುವುದು ಕಂಡುಬರುತ್ತದೆ. ಕಾಲಕ್ರಮೇಣ ವಿವಿಧ ರೇಖಾ ವಿನ್ಯಾಸಗಳನ್ನು ಬಳಸಿ ಕಾಡುಮೃಗಗಳ ಚಿತ್ರಗಳನ್ನು ರಚಿಸುವ ಪ್ರವೃತ್ತಿ ಶುರುವಾಯಿತು. ಬೇಟೆಯ ದೃಶ್ಯಗಳನ್ನು ಬಹಳ ವಿರಳವಾಗಿ ಚಿತ್ರಿಸಲಾಗಿದೆ. ಇವುಗಳಲ್ಲಿ ಚಿತ್ರಿತವಾದ ಈಟಿ, ಬಿಲ್ಲು, ಬಾಣ ಮುಂತಾದ ಆಯುಧಗಳು, ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಬೇಟೆ ಮತ್ತು ಆಹಾರ ಸಂಗ್ರಹಣೆಯ ಹಂತದಲ್ಲಿದ್ದುದನ್ನು ಸೂಚಿಸುತ್ತವೆ. ಬಿಹಾರ, ಜಾರ್ಖಂಡ್, ಒರಿಸ್ಸ, ಉತ್ತರ ಪ್ರದೇಶ ಮತ್ತು ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಕೂಡ ವಿವಿಧ ಕಾಡುಪ್ರಾಣಿಗಳ ಚಿತ್ರಗಳು ಬಂಡೆಗಲ್ಲುಗಳ ಮೇಲೆ ಕಂಡುಬಂದಿದ್ದರೂ ಇವುಗಳ ಸಂಖ್ಯೆ ಮಧ್ಯ ಭಾರತ, ಚಂಬಲ್ ಕಣಿವೆ ಹಾಗೂ ವಿಂಧ್ಯ ಪ್ರದೇಶಗಳಲ್ಲಿ ದೊರೆತ ಚಿತ್ರಗಳ ಸಂಖ್ಯೆಗಿಂತ ಕಡಿಮೆಯಾಗಿದೆ. ಮುಂದಿನ ಹಂತಗಳು ಸಾಮಾನ್ಯವಾಗಿ ರೇಖಾ ವಿನ್ಯಾಸದ ರೂಪದಲ್ಲಿರುವ ಪ್ರಾಣಿಗಳನ್ನು ಪ್ರತಿನಿಧಿಸುತ್ತವೆ.

ನವಶಿಲಾಯುಗ ಮತ್ತು ತಾಮ್ರ-ಶಿಲಾಯುಗ ಹಂತದಲ್ಲಿ ಡುಬ್ಬಗಳಿಲ್ಲದ ಜಾನುವಾರುಗಳ ಸಾಕಣೆ ಪ್ರಾರಂಭವಾಯಿತು. ಚಂಬಲ್ ಕಣಿವೆ ಪ್ರದೇಶದ ಬಂಡೆಗಲ್ಲು ಚಿತ್ರಗಳು ಇದಕ್ಕೆ ಸ್ಪಷ್ಟ ಸಾಕ್ಷ್ಯವನ್ನು ಒದಗಿಸುತ್ತವೆ. ಡುಬ್ಬಗಳಿರುವ ಪ್ರಾಣಿಗಳನ್ನು ಸಾಕಲು ಪ್ರಾರಂಭಿಸುತ್ತಿದ್ದಂತೆ ಬಂಡೆಗಲ್ಲು ಚಿತ್ರಗಳ ವಿನ್ಯಾಸ ಮತ್ತು ವಸ್ತುಗಳು ತ್ವರಿತಗತಿಯಲ್ಲಿ ಬದಲಾದವು. ಈ ಬದಲಾವಣೆಯನ್ನು ಭಾರತದಾದ್ಯಂತ ಗುರುತಿಸಬಹುದು. ರಾಜಸ್ತಾನ ಮತ್ತು ಮಾಳವ ಪ್ರದೇಶಗಳಲ್ಲಿ ನವ ಶಿಲಾಯುಗದ ಪುರಾತತ್ತ್ವ ಅವಶೇಷಗಳು ಇಲ್ಲವೆಂದೇ ಹೇಳಬಹುದು. ಆದರೆ ಈ ಪ್ರದೇಶದಲ್ಲಿ ನವಶಿಲಾಯುಗದ ಪ್ರಧಾನ ಚಿತ್ರವಸ್ತುವಾಗಿದ್ದ ಎತ್ತುಗಳ ಚಿತ್ರಗಳು ಕಂಡುಬರುತ್ತವೆ. ಒರಿಸ್ಸ, ಜಾರ್ಖಂಡ್, ಬಿಹಾರ ಮತ್ತು ಹಿಮಾಲಯ ಪರ್ವತ ಪ್ರದೇಶಗಳ ಬಂಡೆಗಲ್ಲು ಚಿತ್ರಗಳಲ್ಲಿ ಗೂಳಿಗಳು ಮುಖ್ಯವಸ್ತುವಾಗಿವೆ. ಬಿಹಾರ ಮತ್ತು ಜಾರ್ಖಂಡ್‌ಗಳಲ್ಲಿ ಸಿಂಧೂ ಲಿಪಿ ತರಹದ ಚಿಹ್ನೆಗಳಿವೆ. ಒರಿಸ್ಸದಲ್ಲಿ ಈ ಹಂತದ ಹೆಚ್ಚಿನ ಬಂಡೆಗಲ್ಲು ಚಿತ್ರಗಳು ಫಲಶಕ್ತಿ ಪಂಥದ ಕ್ರಿಯಾವಿಧಿಗಳನ್ನು ಪ್ರತಿನಿಧಿಸುತ್ತವೆ. ಆದಿಚಾರಿತ್ರಿಕ ಅವಧಿಯಲ್ಲಿ ಬೌದ್ಧಧರ್ಮ ಪ್ರಚಾರಕರ ಆಗಮನದಿಂದ ಉತ್ತರ ಭಾರತದ ಬಂಡೆಗಲ್ಲು ಚಿತ್ರಕಲಾ ಸಂಪ್ರದಾಯದಲ್ಲಿ ಬ್ರಾಹ್ಮಿ ಶಾಸನಗಳೂ ಬೌದ್ಧ ಆಶಯಗಳೂ ಸೇರಿದವು. ಬಿಹಾರ ಮತ್ತು ಜಾರ್ಖಂಡ್‌ಗಳಲ್ಲಿ ಖರೋಷ್ಠಿ ಶಾಸನಗಳೂ ಕಂಡುಬಂದಿವೆ. ಅನಂತರದ ಹಂತಗಳಲ್ಲಿ ವಿದ್ಯಾವಂತ ಸನ್ಯಾಸಿಗಳೂ ಸಾಧುಗಳೂ ದೂರದ ಈ ಬಂಡೆಗಲ್ಲು ಚಿತ್ರ ನಿವೇಶನಗಳಿಗೆ ಭೇಟಿ ನೀಡುವುದನ್ನು ಮುಂದುವರೆಸಿದರು. ಇವರಿಂದಾಗಿ ಈ ಚಿತ್ರಕಲಾ ಸಂಪ್ರದಾಯ ಇನ್ನಷ್ಟು ಮುನ್ನಡೆ ಸಾಧಿಸಿತು. ಹೀಗೆ ಭಾರತದ ಮುಖ್ಯವಾಗಿ ಉತ್ತರ ಭಾರತದ ಬಂಡೆಗಲ್ಲು ಚಿತ್ರಗಳು ಮಾನವಜನಾಂಗ ಬೌದ್ಧಿಕವಾಗಿ ಅಭಿವೃದ್ಧಿಗೊಂಡ ಹಾಗೂ ನಿರಂತರವಾಗಿ ಮುನ್ನಡೆ ಸಾಧಿಸಿದ ಐತಿಹಾಸಿಕ ದೃಶ್ಯ ಪರಂಪರೆಯನ್ನು ನಮ್ಮ ಮುಂದೆ ಇರಿಸುತ್ತವೆ. (ಜಿಆರ್‌ಕೆ.)

**ಶಿಲ್ಪಿಗಳು:** ಭಾರತದಲ್ಲಿ ಶಿಲ್ಪಿಯ ಹೆಸರು ಲಭಿಸುವ ಪ್ರಾಚೀನ ಉದಾಹರಣೆ ಎಂದರೆ ರಾಮಗಡ ಬೆಟ್ಟದ ಜೋಗಿಮರ ಗುಹೆಯಲ್ಲಿರುವ ಪ್ರ.ಶ.ಪೂ.2ನೆಯ ಶತಮಾನದ ಶಾಸನ. ಇದರಲ್ಲಿ ವಾರಾಣಸಿಯ ದೇವದಿನ್ನ ಎಂಬ ರೂಪದಕ್ಷ (ಲುಪದಖುನು) ಶುತನುಕಾ ಎಂಬ ದೇವದಾಸಿಯನ್ನು ಪ್ರೀತಿಸಿದ ವಿಷಯವನ್ನು ಉಲ್ಲೇಖಿಸಿದೆ. ಸಾಂಚಿಯಲ್ಲಿರುವ ತೋರಣವನ್ನು ವಿದಿಶದ ದಂತದ ಕೆಲಸಗಾರರು ಮಾಡಿದ್ದಾರೆ. ಶಿಲ್ಪಿ ಕುನಿಕನ ಶಿಷ್ಯ ಗೋಮಿತ್ರ ಮಧುರಾ ಬಳಿಯ ಪರ್ಖಮ್ ಯಕ್ಷಶಿಲ್ಪವನ್ನು ಕೆತ್ತಿದ. ಕುನಿಕನ ಇನ್ನೊಬ್ಬ ಶಿಷ್ಯ ನಕ. ಈತ ಜಿಂಗಾಕಿ ನಗರದ ಗಾಂಧಾರ ಶೈಲಿಯ ಯಕ್ಷಶಿಲ್ಪವನ್ನು ಕೆತ್ತಿದ. ಮಧುರೆಯ ದಿನ್ನ ಎಂಬ ಶಿಲ್ಪಿ ಕಾಸಿಯದಲ್ಲಿಯ ಬುದ್ಧನ ಪರಿನಿರ್ವಾಣ ಶಿಲ್ಪವನ್ನು ಕೆತ್ತಿರುವನು. ಪಲ್ಲವವಂಶದ ರಾಜ ಮಹೇಂದ್ರವರ್ಮ ಸ್ವತಃ ಶಿಲ್ಪಿ. ಲಲಿತಾಲಯ ಎಂಬ ಶಿಲ್ಪಿ ಮಹಾಬಲಿಪುರದ ಶೇಷಶಾಯಿ ಶಿಲ್ಪವನ್ನು ಕೆತ್ತಿರುವನು.

ಪರಮಾರ ದೊರೆ ಭೋಜ ಪ್ರತಿಷ್ಠಾಪಿಸಿದ ವಾಗ್ದೇವಿ ಪ್ರತಿಮೆಯನ್ನು ಶಿಲ್ಪಿ ಸಹಿರಸನ ಮಗ ಮನಥಲ ಎಂಬಾತ ಕೆತ್ತಿರುವನು. ಚಿತ್ರಕಾರ ಶ್ರಿಸಾತನ, ಆತನ ಮಗ ಚಿತನಕ, ಚಂದೇಲರ ಕಾಲದ ಶಿಲ್ಪಿಗಳಲ್ಲಿ ಪ್ರಸಿದ್ಧರು. ಮಹಾನ್ ಕಲಾಕಾರ ಶೂಲಪಾಣಿ. ಈತನ ತಂದೆ ಬೃಹಸ್ಪತಿ, ತಾತ ಮಾನದಾಗಿ ಹಾಗೂ ಮುತ್ತಾತ ಧರ್ಮ. ಇವನು ವರೇಂದ್ರ ಎಂಬ ಸ್ಥಳದ ಶಿಲ್ಪಿಗಳ ಗೋಷ್ಠಿಯ ಮುಖ್ಯಸ್ಥನಾಗಿದ್ದ. ಬಂಗಾಲದ ಶಿಲ್ಪಿಗಳಲ್ಲಿ ಸೂತ್ರಧಾರ ವಿಷ್ಣುಭದ್ರ, ಮಹೀಧರ, ಕರ್ಣಭದ್ರ, ಮಂಖದಾಸ ಮೊದಲಾದವರು ಪ್ರಸಿದ್ಧರಾದವರು. ಇಂದ್ರನೀಲ ಮಣಿಯ ಶಿಷ್ಯನಾದ ಸುಶಿಲ್ಪಿ ಅಮೃತ ಪಾಲಶೈಲಿಯಲ್ಲಿರುವ ಸೂರ್ಯವಿಗ್ರಹವನ್ನು ಕೆತ್ತಿರುವನು. ಕಾಶ್ಮೀರದ ಮೇರಿವರ್ಮನ ಅಪ್ಪಣೆಯಂತೆ ಕಮ್ಮಿಗುಗ್ಗನು ಮಹಿಷಮರ್ದಿನಿ, ಶಕ್ತಿ, ಗಣೇಶ ಮತ್ತು ನಂದಿಯ ಲೋಹ ವಿಗ್ರಹಗಳನ್ನು ತಯಾರಿಸಿದ ಶಿಲ್ಪಿ. ಅಬುವಿನ ದೇವಾಲಯದ ಶಿಲ್ಪಿಗಳ ಮುಖ್ಯಸ್ಥ ಶೋಭನದೇವ. ಗುಜರಾತಿನ ಚಿತ್ತೋರಗಡದಲ್ಲಿರುವ ಕುಂಬಸ್ವಾಮಿ ದೇವಾಲಯದಲ್ಲಿ ಶಿಲ್ಪಿ ಜಯಿತ ಮತ್ತು ಇವನ ಇಬ್ಬರು ಮಕ್ಕಳ ಪ್ರತಿಮೆಗಳಿವೆ.

ಗ್ರೀಸ್‌ನಲ್ಲಿ ಪ್ರ.ಶ.ಪೂ.500-300ರ ಅವಧಿಯಲ್ಲಿ ಶಿಲ್ಪಿಗಳಾದ ಪ್ರಾಕ್ಸಿಟಿಲಿಸ್, ಲಿಸಿಪ್ಪನ್, ಮಿರಾನ್, ಕ್ರಿಸಿಲಾಸ್, ಟಿಮೋಥಿಯಸ್ ಮತ್ತು ಬ್ರಯಾಕ್ಸಿಸ್ ಪ್ರಸಿದ್ಧರು. ಅಥೆನ್ಸ್ ನಗರದಲ್ಲಿ ಪ್ರಸಿದ್ಧ ಶಿಲ್ಪಿ ಲಿಯೋಕೇರಸ್ 330ರಲ್ಲಿ ಮಾಡಿದ ಡಿಮಿಟರ್ ದೇವತೆಯ ಶಿಲ್ಪ ಅದ್ಭುತವಾದುದು. ಫ್ಲಾರೆನ್ಸಿನಲ್ಲಿ ಶಿಲ್ಪಿ ಡೊನೆಟೆಲ್ಲೊ ಮಾಡಿರುವ ಪ್ರವಾದಿ ಜೆರೆಮಿಯನ ಅಮೃತ ಶಿಲಾ ವಿಗ್ರಹ, ಬುರ್ಗೋಸ್‌ನಲ್ಲಿ ಮ್ಯಾನ್ಯುಯಲ್ ಪೆರೇರಾ ಮಾಡಿರುವ ಸಂತ ಬ್ರೂನೋನ ಮರದಶಿಲ್ಪ, ಮೈಕೆಲೆಂಜೆಲೋ ಮಾಡಿರುವ ಡೇವಿಡ್‌ನ ಅಮೃತ ಶಿಲಾ ವಿಗ್ರಹ ಮುಂತಾದವುಗಳು. ಈ ಶಿಲ್ಪಿಗಳು ವ್ಯಕ್ತಿ ಚಿತ್ರಣದಲ್ಲಿ ಕಲ್ಪನೆಯನ್ನು ಬೆರೆಸಿ ಕಲಾಕೃತಿಗೆ ಕಳಶವಿಟ್ಟಿದ್ದಾರೆ. ಒಂದು ಕಾಲಕ್ಕೆ ಅಶ್ವಾರೂಢ ವೀರರ ಶಿಲ್ಪಗಳು ತುಂಬ ಜನಪ್ರಿಯವಾಗಿದ್ದವು. ಲಂಡನ್ನಿನ ಟ್ರಫಾಲ್ಗರ್ ಚೌಕದಲ್ಲಿರುವ ರಾಜ ಒಂದನೆಯ ಚಾರ್ಲ್ಸ್ ಅಶ್ವಾರೂಢನಾಗಿ ಕುಳಿತಿರುವ ಅಂದವಾದ ಶಿಲ್ಪವನ್ನು ಹ್ಯೂಬರ್ಟ್ ಲ ಸಾಯುವರ್ ಸು.1650ರಲ್ಲಿ ನಿರ್ಮಿಸಿರುವನು.

ಕರ್ನಾಟಕದಲ್ಲಿ ಶಿಲ್ಪ ಸಂಪತ್ತು ಅಧಿಕವಾಗಿದ್ದರೂ ಶಿಲ್ಪಿಗಳ ಬಗ್ಗೆ ತಿಳಿದಿರುವುದು ಅತಿ ಕಡಿಮೆ. ತಮ್ಮ ಹೆಸರಿಗಿಂತ ಕೃತಿ ಮುಖ್ಯ ಎನ್ನುವುದು ಇವರ ಭಾವನೆ. ಆದರೂ ವಿರಳವಾಗಿ ಶಿಲ್ಪಿಗಳು ತಮ್ಮ ತಮ್ಮ ಹೆಸರುಗಳನ್ನು ತಮ್ಮ ಕೃತಿಗಳಲ್ಲಿ ಕೆತ್ತಿದ ಉದಾಹರಣೆಗಳಿವೆ. ಶಿಲ್ಪಿಯನ್ನು ಆಕೃತೀಪತಿಃ ಶಿಲ್ಪಾಚಾರ್ಯಃ (ಆಕಾರದ ಒಡೆಯ) ಎಂದು ಕರೆಯಲಾಗಿದೆ. ಕರ್ನಾಟಕದಲ್ಲಿ ಶಿಲ್ಪಿಯ ಹೆಸರು ಲಭಿಸುವ ಪ್ರಾಚೀನ ಉದಾಹರಣೆ ಎಂದರೆ ಬನವಾಸಿಯ ನಾಗಶಿಲ್ಪದ ಶಾಸನದಲ್ಲಿ. ಸಾತವಾಹನ ಕಾಲದಿಂದ ಮೂರ್ತಿಶಿಲ್ಪ ಕಲೆ ಕಾಣಿಸತೊಡಗಿತು. ಚುಟುವಂಶದ ವಿಷ್ಣು ಚುಟುಕುಲಾನಂದ ಶಿವಸ್ಕಂದ ನಾಗಶ್ರೀ ಒಂದು ಕೆರೆ ಮತ್ತು ವಿಹಾರ ಹಾಗೂ ನಾಗಪ್ರತಿಮೆಯನ್ನು ಮಾಡಿಸಿದ ನಾಗಶಿಲ್ಪದ ಶಾಸನದಲ್ಲಿ ಶಿಲ್ಪಿಯ ಹೆಸರು ಇದೆ. ಜಯಂತಿಪುರದ (ಬನವಾಸಿ) ಶಿಲ್ಪಿ ದಮೋರಕನ ಶಿಷ್ಯ ನಾಟಕ ಎಂದಿದೆ. ಹೆಚ್ಚಾಗಿ 8ನೆಯ ಶತಮಾನದಿಂದ ಶಿಲ್ಪಿಗಳ ಹೆಸರುಗಳು ಅಲ್ಲಲ್ಲಿ ಕಾಣುತ್ತದೆ. ಬಾದಾಮಿ ಚಳುಕ್ಯರ 2ನೆಯ ವಿಕ್ರಮಾದಿತ್ಯನ ಮಹಾರಾಣಿ ಲೋಕಮಹಾದೇವಿ ತನ್ನ ಪತಿ ಇಮ್ಮಡಿ ವಿಕ್ರಮಾದಿತ್ಯ (733–44) ಕಂಚಿಯನ್ನು ಮೂರು ಬಾರಿ ಜಯಿಸಿದ ನೆನಪಿಗಾಗಿ ಕಟ್ಟಿಸಿದ ಪಟ್ಟದಕಲ್ಲಿನ ಲೋಕೇಶ್ವರ (ವಿರೂಪಾಕ್ಷ) ದೇವಾಲಯವನ್ನು ಶ್ರೀಗುಂಡನ್ ಅನಿವಾರಿತಾಚಾರಿ ಎಂಬ ಶಿಲ್ಪಿ ಪ್ರಧಾನ ಸೂತ್ರಧಾರಿಯಾಗಿ ನಿರ್ಮಾಣ ಮಾಡಿದನೆಂದು ತಿಳಿದುಬರುತ್ತದೆ. ಇವನಿಗೆ ಮಹಾರಾಜನು ಪೆರ್ಜೆರಿಪು ಎಂಬ ಪಟ್ಟವನ್ನು ಕಟ್ಟಿ ತ್ರಿಭುವನಚಾರಿ ಎಂಬ ಬಿರುದನ್ನು ಕೊಟ್ಟು ಗೌರವಿಸಿದ. ಇದೇ ದೇವಾಲಯದ ಇನ್ನೊಂದು ಭಾಗವನ್ನು ಪ್ರಧಾನ ಸೂತ್ರಧಾರಿಯಾಗಿ ಶ್ರೀ ಸರ್ವಸಿದ್ಧಿ ಆಚಾರಿ ರಚನೆ ಮಾಡಿದ. ಇವನು ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪ ಪಿತಾಮಹನೆಂದೂ ಪರಿಶುದ್ಧ ಸೂಕ್ಷ್ಮಭಾಷಿಯೆಂದೂ ವಾಸ್ತು, ಪ್ರಾಸಾದ, ಯೋಗಾಸನ, ಶಯನ (ಮಂಚ) ಮುಂತಾದ ವುಗಳ ನಿರ್ಮಾಣದಲ್ಲಿ ಮಣಿ ಮುಕುಟ ಚೂಡಾಮಣಿ ಎಂದೂ ತೆಂಕಣ ದೆಸೆಯಾ ಸೂತ್ರಧಾರಿ (ದೇವಾಲಯದ ದಕ್ಷಿಣ ಭಾಗದ) ಎಂದೂ ಶಾಸನ ಉಲ್ಲೇಖಿಸಿದೆ. ಇವನಿಗೂ ಮಹಾರಾಜ ಪೆರ್ಜೆರಿಪು ಎಂಬ ಬಿರುದನ್ನು ನೀಡಿ ಸನ್ಮಾನ ಮಾಡಿ ಗೌರವಿಸಿದ. ಸು.692ರಲ್ಲಿ ಕಟ್ಟಲ್ಪಟ್ಟ ಇಲ್ಲಿಯ ಪಾಪನಾಥ ದೇವಾಲಯದ ಪ್ರಧಾನ ವಾಸ್ತುಶಿಲ್ಪಿ ರೇವಡಿ ಓವಜ.

ಐಹೊಳೆಯಲ್ಲಿಯ ಹುಚ್ಚಪ್ಪ ಗುಡಿಯಲ್ಲಿಯ ಒಂದು ಶಾಸನದಲ್ಲಿ ಈ ದೇವಾಲಯವನ್ನು ಕಟ್ಟಿದ ನರಸೊಬ್ಬ ಒಬ್ಬ ಮಹಾಶಿಲ್ಪಿ. ಈತ ತಾನು ರಚಿಸಿದ ಶಾಸನದಲ್ಲಿ ಇಡೀ ಜಂಬೂದ್ವೀಪದಲ್ಲಿಯ ವಾಸ್ತು ಪ್ರಾಸಾದ ನಿರ್ಮಾಣದಲ್ಲಿ ತನಗೆ ಸಮಾನರು ಇಲ್ಲ ಎಂದು ಸ್ವಾಭಿಮಾನದಿಂದ ಹೇಳಿಕೊಂಡಿದ್ದಾನೆ. ಜೈನಗುಹೆಯ ಸಮೀಪದಲ್ಲಿರುವ ಒಂದು ಶಾಸನದಲ್ಲಿ ಮೂರ್ತಿಗಳನ್ನು ಮಾಡುವುದರಲ್ಲಿ ಸಿಂಹಸದೃಶನಾಗಿದ್ದನೆಂದೂ ವಿಮಾನ ನಿರ್ಮಾಣದಲ್ಲಿ ಆಸಕ್ತಿಯುಳ್ಳವನೂ ಶಾಸ್ತ್ರದಲ್ಲಿ ಪರಿಣತನೂ ಗುಣದಲ್ಲಿ ರವಿಯಂತೆ ಶೋಭಾಯಮಾನನೂ ರೂಪ ನಿರ್ಮಾಪಕನೂ ಪ್ರಮಾಣ ಬದ್ಧವಾಗಿ ನಿರ್ಮಿಸುವವನೂ ಆಗಿದ್ದನೆಂದು ವರ್ಣಿಸಿದೆ. ಇದೇ ಸ್ಥಳದ 7ನೆಯ ಶತಮಾನದಲ್ಲಿ ಭಾಗಶಃ ನಿರ್ಮಾಣವಾದ ಬೌದ್ಧಗುಹೆಯಲ್ಲಿ ಕೆಲಸ ಮಾಡಿದವನು ಬಿಜ್ಜೊಡಿ ಓವಜನ್.

12ನೆಯ ಶತಮಾನದಲ್ಲಿ ಮಲ್ಲೋಜ–ಮಾಣಿಯೋಜ ಪ್ರಸಿದ್ಧವಾದ ದೊಡ್ಡಗದ್ದವಳ್ಳಿಯ ಚತುಷ್ಕೂಟ ಮಹಾಲಕ್ಷ್ಮಿ ದೇವಾಲಯ (1113) ನಿರ್ಮಿಸಿದ ಶಿಲ್ಪಿ. ಇವನು ತಾನು ವಿಶ್ವಕರ್ಮ ನಿರ್ಮಿತ ಸುಭಾಷಿತ ಎಂದು ಹೇಳಿಕೊಂಡಿದ್ದಾನೆ. ಇವನ ಮಗ ಬಲಕೋಜ ತನ್ನ ತಂದೆ ನಾಗರ, ಆದಿನಾಗರ ಮತ್ತು ದ್ರಾವಿಡ ಪದ್ಧತಿಯ ಶಿಲ್ಪವನ್ನು ಸಮುದ್ಧರಣ ಮಾಡಿದ್ದಾಗಿ ಹೇಳಿಕೊಂಡಿದ್ದಾನೆ. ಬಳ್ಳಿಗಾವೆಯ ದಾಸೋಜ ಓಜಕುಲದವನು ಎಂದು ಇವನ ಮಗ ಚಾವಣನ ಬೇಲೂರಿನ ಶಾಸನದಲ್ಲಿದೆ. ದಾಸೋಜ ಎರಡು ದೇವತಾ ಮೂರ್ತಿಗಳನ್ನೂ ಬೇಲೂರಿನ ಚೆನ್ನಕೇಶವ ದೇವಾಲಯದ ನಾಲ್ಕು ಶಿಲಾಬಾಲಿಕೆಯರನ್ನೂ ಕೆತ್ತಿದ್ದಾನೆ. ಈ ಶಿಲ್ಪಗಳಲ್ಲಿ ಲಾಲಿತ್ಯ, ಹಾಸ್ಯ, ಒನಪು, ವೈಯ್ಯಾರ, ಬೆಡಗು, ಬಿನ್ನಾಣ, ಸುಕುಮಾರತೆಗಳನ್ನು ಕಾಣಿಸಿದ್ದಾನೆ. ಬೇಲೂರು ಶಾಸನದಲ್ಲಿ ಇವನಿಗೆ ರೂವಾರಿ ಗೊಂದಲ ಬಡಿವ ಎಂಬ ಬಿರುದು ಇದ್ದುದನ್ನು ತಿಳಿಸುತ್ತದೆ. ತನ್ನನ್ನು ಸರಸ್ವತಿ ಗಣದಾಸಿ ಎಂದು ಹೇಳಿಕೊಂಡಿದ್ದಾನೆ.

ಗದಗಿನ ಕಾಡೋಜನ ಮಗ ನಾಗೋಜ ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಕೆಲಸ ಮಾಡಿದ ಶಿಲ್ಪಿಗಳಲ್ಲಿ ಒಬ್ಬ. ಇವನು ಗದಗಿನ ಸ್ವಯಂಭು ತ್ರಿಕೂಟೇಶ್ವರ ದೇವಾಲಯದ ಶಿಲ್ಪಾಧಿಕಾರಿ. ಬೇಲೂರಿನ ಶಾಸನ ಒಂದರಲ್ಲಿ ಇವನಿಗೆ ವಿದ್ಯಾವಂತ, ಸುಜನ ಮನೋರಂಜನ, ಸರಸ್ವತಿ ಪದಾಂಭೋಜ, ರೂವಾರಿ ಜಗದ್ದಳೆ ಎಂಬ ಬಿರುದುಗಳಿವೆ. ಹೊಯ್ಸಳ ನಾರಸಿಂಹನ ಆಸ್ಥಾನ ರೂವಾರಿ ಕೇದಾರೋಜ. ಇವನು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಮುಖ್ಯ ಸ್ಥಪತಿ. ದೇವಾಲಯ ನಿರ್ಮಾಣದ ಪೂರ್ಣ ಜವಾಬ್ದಾರಿ ಈತನದೇ. ಇದೇ ದೇವಾಲಯದ ದಕ್ಷಿಣ ಬಾಗಿಲ ಮೇಲಿನ ಮಕರತೋರಣವನ್ನು ಮಲೆಪರ ಗಂಡ, ಬಿರುದ ರೂವಾರಿ ಗಿರಿವಜ್ರ ದಂಡ ಎಂಬ ಬಿರುದನ್ನು ಹೊಂದಿದ ಕಾಳಿದಾಸಿ ಎಂಬ ಶಿಲ್ಪಿ ಮಾಡಿರುವನು. ಇವನು ಕೇದಾರೋಜನ ಶಿಷ್ಯ. ಇದೇ ದೇವಾಲಯ ನಿರ್ಮಾಣದ ಶಿಲ್ಪಿಗಳಲ್ಲಿ ಒಬ್ಬ ಮಾಬ (1121–40) ಎಂಬುವನು ಹಳೇಬೀಡಿನ ಕೇದಾರೇಶ್ವರ, ನಗರೇಶ್ವರ ಸಮುದಾಯದ ಒಂದು ಗುಡಿಯಲ್ಲಿ ಮತ್ತು ಭದ್ರಾವತಿಯಲ್ಲಿ ಹೊಯ್ಸಳ 1ನೆಯ ನರಸಿಂಹ ಕಟ್ಟಿಸಿದ ನರಸಿಂಹ ದೇವಾಲಯದಲ್ಲಿ ಹತ್ತು ವಿಗ್ರಹಗಳನ್ನು ಕೆತ್ತಿದ್ದಾನೆ. ಇವನು ಒಟ್ಟು ನಾಲ್ಕು ದೇವಾಲಯಗಳಲ್ಲಿ ಕೆಲಸ ಮಾಡಿದ್ದಾನೆ.

12ನೆಯ ಶತಮಾನದಲ್ಲಿ ಹೊಯ್ಸಳ ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜನ ಮಗ ಬೊಪ್ಪ ನಾಗಮಂಗಲ ತಾಲ್ಲೂಕು ಕಂಬದಹಳ್ಳಿ ಗ್ರಾಮದಲ್ಲಿ ಶಾಂತಿನಾಥ ಮಂದಿರವನ್ನು ದ್ರೋಹಘರಟ್ಟಾಚಾರಿ (1130) ಎಂಬ ಶಿಲ್ಪಿಯ ಕೈಯಲ್ಲಿ ಮಾಡಿಸಿದ. ತಿಪ್ಪಣೋಜ ಅಥವಾ ತಿಪ್ಪೋಜ (1169) ದೇವಾಲಯಗಳ ನಿರ್ಮಾಣದ ವಾಸ್ತು ಶಿಲ್ಪಿ. ಇವನು ಬೆಳಗಾಂವಿ ಜಿಲ್ಲೆಯ ದೇಗಾಂವೆ ಗ್ರಾಮದಲ್ಲಿರುವ ಶ್ರೀ ಕಮಲ ನಾರಾಯಣ ಮತ್ತು ಶ್ರೀ ಮಹಾಲಕ್ಷ್ಮಿಯ ದೇವಾಲಯಗಳನ್ನು ನಿರ್ಮಿಸಿದ. ಇಲ್ಲಿಯ ಶಾಸನದಲ್ಲಿ ಇವನನ್ನು ಭರತನಾಟ್ಯ ಶಾಸ್ತ್ರದಲ್ಲಿ ಹಾಗೂ ಕಲೆಯಲ್ಲಿ ಪರಿಣತಿಯನ್ನು ಪಡೆದಿದ್ದನೆಂದು ಉಲ್ಲೇಖಿಸಿದೆ. ಇವನಿಗೆ ದೇಸಿಯ ಬಗೆಕಾರ, ಯಾಚಕೋದ್ಧಾರ, ಬಲ್ಲವರ ಬೆಲ್ಲ ಮುಂತಾದ ಬಿರುದುಗಳಿದ್ದವು.

ಸು.100 ವಿಗ್ರಹಗಳು, ಪಟ್ಟಿಕೆಗಳು, ದಿಂಡುಗಳು, ಏಳು ದೇವಾಲಯಗಳಲ್ಲಿ ರೂವಾರಿ ಮಲ್ಲಿತಮ್ಮ ಶಿಲ್ಪ ಕೆಲಸ ಮಾಡಿದ್ದಾನೆ. ಇವನ ಕೆಲಸ ಹಾಸನ ಜಿಲ್ಲೆಯ ಅಮೃತಾಪುರದ ಅಮೃತೇಶ್ವರ ದೇವಾಲಯದಲ್ಲಿ (1196) ಪ್ರಾರಂಭವಾಗುವುದು. ಇದೇ ಜಿಲ್ಲೆಯ ಹಾರ್ನಹಳ್ಳಿ ಕೇಶವ ದೇವಾಲಯ, ನುಗ್ಗೇಹಳ್ಳಿ ಲಕ್ಷ್ಮೀನರಸಿಂಹ, ಜಾವಗಲ್ಲಿನ ಲಕ್ಷ್ಮೀನರಸಿಂಹ, ಸಾಲಿಗ್ರಾಮದ ಲಕ್ಷ್ಮೀನರಸಿಂಹ, ಮೈಸೂರು ಜಿಲ್ಲೆಯ ಸೋಮನಾಥಪುರದ ಕೇಶವ ದೇವಾಲಯ, ಮಂಡ್ಯ ಜಿಲ್ಲೆಯ ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ಮುಂತಾದ ದೇವಾಲಯಗಳಲ್ಲಿ ಮೂರ್ತಿ, ಪಟ್ಟಿಕೆಗಳನ್ನು ಮಾಡಿದ್ದಾನೆ. ಇಷ್ಟೆಲ್ಲ ಕೆಲಸ ಮಾಡಿದ್ದರೂ ಇವನ ಬಗ್ಗೆ ಲಭ್ಯ ಮಾಹಿತಿ ಕಡಿಮೆ. ಇವನು ತನ್ನ ಆಶ್ರಯದಾತನಾದ ರಾಜನ ಹೆಸರನ್ನಾಗಲೀ ತನ್ನ ಬಿರುದುಗಳನ್ನಾಗಲೀ ತನ್ನ ಜನ್ಮದಾತನ ಹೆಸರನ್ನಾಗಲೀ ಎಲ್ಲಿಯೂ ಹೇಳಿಲ್ಲ. ಷೇಕ್ ಅಲಿ, ಕೆಲಸನ್ ಕೋಲಿಯರ್ ಮುಂತಾದ ವಿದ್ವಾಂಸರು ಇವನನ್ನು 13ನೆಯ ಶತಮಾನದಲ್ಲಿ ಕರ್ನಾಟಕ ಶಿಲ್ಪಕಲಾ ಸಾಮ್ರಾಜ್ಯವನ್ನಾಳಿದ ಮಹಾಶಿಲ್ಪಿ, ಭಾರತದಲ್ಲಿಯೇ ಇವನದು ಬೃಹದ್ಗಾತ್ರದ ಕೆಲಸ, ಇವನಷ್ಟು ಬೃಹದ್ಗಾತ್ರದಲ್ಲಿ ಕೆಲಸಮಾಡಿದ ಶಿಲ್ಪಿ ಭಾರತದಲ್ಲೆಲ್ಲಿಯೂ ಇಲ್ಲ, ಇವನು ತುಂಬ ಸಮರ್ಥನೂ ಅಸೀಮನೂ ಆದ ಶಿಲ್ಪಿ ಎಂದು ಹೊಗಳಿದ್ದಾರೆ. ಹೊನೋಜ (13ನೆಯ ಶತಮಾನ) ತುಮಕೂರು ಜಿಲ್ಲೆ ಅರಳುಗುಪ್ಪೆ ಗ್ರಾಮದ ಚೆನ್ನಕೇಶವ ದೇವಾಲಯದಲ್ಲಿ 36 ವಿಗ್ರಹಗಳನ್ನು ಮಾಡಿದ್ದಾನೆ. ನಂದಿಯ ಬೈಚೋಜ (1249) ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಗ್ರಾಮದವನು. ಇವನು ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದಲ್ಲಿ, ನಾಗಲಾಪುರದ ಕೇಶವ ದೇವಾಲಯಗಳಲ್ಲಿ (1250) ಅನೇಕ ವಿಗ್ರಹಗಳನ್ನು ಕೆತ್ತಿದ್ದಾನೆ. ಚನ್ನರಾಯಪಟ್ಟಣ ತಾಲ್ಲೂಕಿನ ಶಾಸನದಲ್ಲಿ ಇವನನ್ನು ಅರಿಬಿರುದ ರೂವಾರಿ ಗಿರಿವಜ್ರದಂಡ, ಬಿರುದಪ್ರಸಾದಿ ಮಸ್ತಕಶೂಲ ಎಂದು ಹೊಗಳಲಾಗಿದೆ.

ಶಾಸನ ಶಿಲ್ಪಿಗಳು: ಬೀರೋಜ (1286–1302), ಮುದ್ದಣಾಚಾರಿ (1386–96), ವೀರಣಾಚಾರ್ಯ (1426–63), ಮಲ್ಲಣ (1473–1506), 2ನೆಯ ವೀರಣಾಚಾರ್ಯ (1511–39), ಮಲ್ಲಣಾಚಾರ್ಯ (1512–15), 3ನೆಯ ವೀರಣಾಚಾರ್ಯ (1534–61), ಗಣಪಯಾಚಾರ್ಯ (1567–76), ವೀರಣಮಹಾಚಾರ್ಯ (1587–89) ಮತ್ತು ಕಾಮಯ (1645)–ಹಾಗೂ ಅನೇಕರು ಶಿಲಾ ಮತ್ತು ತಾಮ್ರ ಶಾಸನಗಳ ಕಂಡರಣೆಕಾರರು.(ಎಸ್.ಎಲ್.)

**ಶಿವಮಂಡಲ ದೀಕ್ಷೆ:** ಶಿವಮತ ಅನುಯಾಯಿಗಳು ಹೊಂದಬೇಕಾದ ದೀಕ್ಷೆ. ಶೈವಾಗಮಗಳಲ್ಲಿ ಶಿವಮಂಡಲ ದೀಕ್ಷೆಯ ಬಗ್ಗೆ ಕೆಲವು ನಿಬಂಧನೆಗಳನ್ನು ತಿಳಿಸಿದೆ. ಶುದ್ಧ ಶೈವರಲ್ಲಿ ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತಗಳೆಂಬ ಭೇದವನ್ನು ಕಲ್ಪಿಸಿದೆ. ಅವುಗಳಲ್ಲಿ ಪಂಚಶೈವರ ಉಲ್ಲೇಖವಿದ್ದು, ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ ಮತ್ತು ಅಂತರಶೈವರ ಪ್ರಸ್ತಾಪವಿದೆ. ಶುದ್ಧಶೈವ ಮತದಲ್ಲಿ ಎಲ್ಲ ವರ್ಣಾಶ್ರಮದವರೂ ಮತ ದೀಕ್ಷೆ ಪಡೆಯಬಹುದು.

ಆದಿಶೈವರು: ಇವರನ್ನು ಶಿವಬ್ರಾಹ್ಮಣರೆಂದು ಕರೆಯುತ್ತಾರೆ. ಇವರು ಭಾಗವತರು, ಚತುರ್ವೇದಾಧಿಕಾರಿಗಳು, ಶೈವಸಿದ್ಧಾಂತಪಾರಂಗತರು ಹಾಗೂ ಚಾತುರ್ವರ್ಣ್ಯಗಳಲ್ಲಿ ಮೊದಲನೆಯವರು. ಇವರನ್ನು ಶಿವ, ರುದ್ರಸಮಾನ, ಶುದ್ಧಾತ್ಮ ಶುದ್ಧಶೈವರೆಂದೂ ಕರೆಯುತ್ತಾರೆ. ಇವರು ಅನಾದಿ ಪುರುಷನಾದ ಸದಾಶಿವನಿಂದ ಪರಾರ್ಥಯಜನಕ್ಕಾಗಿ ಎಲ್ಲರಿಗಿಂತ ಮೊದಲು ಶಿವಮಂಡಲ ದೀಕ್ಷೆ ಹೊಂದಿದವರು. ಶಿವನಂತೆ ಭಸ್ಮ, ರುದ್ರಾಕ್ಷಿ ಮುಂತಾದ ಬಾಹ್ಯ ಚಿಹ್ನೆಗಳನ್ನು ಧರಿಸಿ ಪ್ರತಿನಿತ್ಯವೂ ಷಡಾಚಾರಪೂರ್ವಕ ಸೂರ್ಯಾರಾಧನೆಯನ್ನು ಮಾಡಿದ ಅನಂತರವೇ ತಮ್ಮ ಪರಾರ್ಥಯಜನವಾದ ಆಲಯದಲ್ಲಿ ಸದಾಶಿವನ ಆರಾಧನೆ ಮಾಡುವರು. ಇದರಿಂದಲೇ ನಿಷ್ಕಳರೂಪವಾದ ಲಿಂಗವನ್ನೂ ಸಕಳರೂಪವಾದ ವಿಗ್ರಹಗಳನ್ನೂ ಆಗಮಶಾಸ್ತ್ರ ರೀತ್ಯಾ ಪ್ರತಿಷ್ಠೆ ಮಾಡಿಸಿ, ಪೂಜಾ ಉತ್ಸವಗಳನ್ನು ಮಾಡಿಸಬೇಕೆಂದು ವಿಧಿಯು ಹೇಳುತ್ತದೆ. ಶಿವನ ಪುತ್ರರೆಂದೂ ಅರ್ಚಕರೆಂದೂ ಗುರುಗಳೆಂದೂ ಇವರನ್ನು ಗೌರವದಿಂದ ಕಾಣಲಾಗುತ್ತದೆ.

ಮಹಾಶೈವರು: ಇವರಿಗೆ ಶೈವ ವಿಪ್ರರು ಎನ್ನುವರು. ಇವರು ಶಿವ ಪಂಚಾಕ್ಷರೀ ಮಂತ್ರದಿಂದ ಉಪದಿಷ್ಟರಾದವರು. ಇವರು ಸ್ವಾರ್ಥಯಜನವನ್ನು ಮಾಡಬಹುದು. ಒಂದು ವೇಳೆ ಪರಾರ್ಥಯಜನಮಾಡಬೇಕಾದಲ್ಲಿ ಆದಿ ಶೈವರಿಂದ ಶಿವಮಂಡಲ ದೀಕ್ಷೆಯನ್ನು ಪಡೆದು ಅವರ ಅನುಮತಿಯನ್ನು ತೆಗೆದುಕೊಳ್ಳಬೇಕು.

ಅನುಶೈವರು: ದೀಕ್ಷಿತರಾದ ಕ್ಷತ್ರಿಯರು ಮತ್ತು ವೈಶ್ಯರು. ಇವರು ಆದಿಶೈವರಿಗೆ ಮತ್ತು ಶೈವವಿಪ್ರರಿಗೆ ಸಹಾಯಕರಾಗಿ ಆಲಯ ನಿರ್ಮಾಣ, ವಿಗ್ರಹ ಪ್ರತಿಷ್ಠೆ, ಪೂಜೆ, ಉತ್ಸವ ಮುಂತಾದವುಗಳನ್ನು ನಿರ್ವಹಿಸಬೇಕು. ಇವರೂ ಶಿವ ಪಂಚಾಕ್ಷರೀ ಮಂತ್ರದ ಉಪದೇಶವನ್ನು ಪಡೆದು, ಶೈವ ಮತದ ಚಿಹ್ನೆಗಳನ್ನು ಧರಿಸಿ, ಸ್ವಾರ್ಥಯಜನ ಮಾಡಬಹುದು. ಶಿವಮಂಡಲ ದೀಕ್ಷೆಯನ್ನು ಹೊಂದಿದಲ್ಲಿ ಮಾತ್ರ ಪರಾರ್ಥಯಜನವಾದ ಆಲಯದಲ್ಲಿ ವಿಧ್ಯುಕ್ತವಾದ ಸೇವೆಗಳನ್ನು ಮಾಡಲು ಅನುಮತಿ ಉಂಟು.

ಅಂತರಶೈವರು: ಇವರು ಪಂಚಾಕ್ಷರೀ ಮಂತ್ರದಿಂದ ಉಪದೇಶಿಸಲ್ಪಟ್ಟವರು; ಚತುರ್ಥ ವರ್ಣದವರು. ಇವರಿಗೆ ಪರಾರ್ಥಯಜನ ದೀಕ್ಷಾವಿಧಿ ಇರುವುದಿಲ್ಲ. ಋಷಿಗಳಂತೆ ಉಪಾಸನೆ, ಉಪವಾಸ ಮುಂತಾದವುಗಳಿರುವುದಿಲ್ಲ. ಇವರೂ ಶಿವಮಂಡಲ ದೀಕ್ಷೆಯನ್ನು ಪಡೆದು ಆಲಯದಲ್ಲಿ ವಿಧ್ಯುಕ್ತವಾದ ಸೇವೆ ನಡೆಸಲು ಅನುಮೋದನೆಯಿದೆ.

ಈ ಎಲ್ಲ ಶಿವಮತ ಅನುಯಾಯಿಗಳು ಶಿವಜ್ಞಾನದಿಂದ ಕೂಡಿ ಶಿವಧರ್ಮಪಾಲಕರಾಗಿ ಶಿವಶಾಸ್ತ್ರೋಕ್ತವಾದ ಆಚಾರಗಳ ನಿಷ್ಠರಾಗಿ ಶಿವನೇ ಪರತತ್ತ್ವ ಎಂದು ತಿಳಿದು ಭಸ್ಮ ರುದ್ರಾಕ್ಷಿ ಮುಂತಾದ ಬಾಹ್ಯ ಚಿಹ್ನೆಗಳಿಂದ ಭೂಷಿತರಾಗಿ ಪರಶಿವನ ವಿವಿಧ ಸೇವೆಯಲ್ಲಿ ನಿರತರಾಗಿರಬೇಕು.

ಶೈವ ಮತಾವಲಂಬಿಗಳಾದವರಲ್ಲಿ ಎರಡು ಪ್ರಕಾರದ ಉಪದೇಶಗಳಿದ್ದ ಸೂಚನೆ ದೊರೆಯುತ್ತದೆ. ಮೊದಲನೆಯದು ಪಂಚಾಕ್ಷರೀ ಮಂತ್ರದ ಉಪದೇಶ ಪಡೆಯುವುದು. ಈ ರೀತಿಯ ಉಪದೇಶ ಪಡೆದವರು ಶೈವ ಮತಾವಲಂಬಿಗಳಾಗಿದ್ದರೂ ಅಂತರ ಶೈವರನ್ನು ಹೊರತುಪಡಿಸಿ ಅವರಿಗೆ ಸ್ವಾರ್ಥಯಜನಕ್ಕೆ ಅವಕಾಶ ಇರುತ್ತದೆ. ಆದರೆ ಶಿವಮಂಡಲ ದೀಕ್ಷೆಯನ್ನು ವಿಧ್ಯುಕ್ತವಾಗಿ ಪಡೆದ ಮೇಲೆ ಮಾತ್ರ ಇವರಿಗೆ ವಿಶೇಷ ಸ್ಥಾನಮಾನಗಳು ಪ್ರಾಪ್ತಿಯಾಗುತ್ತವೆ. ಅನಾದಿಶೈವರಿಗೆ ಶಿವಮಂಡಲ ದೀಕ್ಷೆಯ ಅವಶ್ಯವಿಲ್ಲ. ಶಿವಮಂಡಲ ದೀಕ್ಷೆಯ ಬಗೆಗೆ ಸ್ಪಷ್ಟ ವಿವರಗಳು ದೊರೆಯುವುದಿಲ್ಲ. ಆದರೂ ಅದು ಸಾಕಷ್ಟು ವಿಧಿಗಳಿಂದ ಕೂಡಿತ್ತೆಂದು ಊಹಿಸಬಹುದು. ಸದ್ಯ ಲಭ್ಯವಿರುವ ಆಗಮೋಕ್ತ ಪುರಾವೆಯ ಆಧಾರದ ಮೇಲೆ ಈ ವಿಧಿಯನ್ನು ಸಂಕ್ಷಿಪ್ತವಾಗಿ ಸೂಚಿಸಬಹುದು; ಇದು ಐದು ಸಂಸ್ಕಾರಗಳನ್ನು ಒಳಗೊಂಡಿರುತ್ತದೆ:

1. ತಾಪ (ಎಂದರೆ ಬಾಹುಮೂಲದಲ್ಲಿ ಲಿಂಗಮುದ್ರೆ ಧರಿಸುವುದು)
2. ಪುಂಡ್ರ (ಭಸ್ಮ ರುದ್ರಾಕ್ಷಿಗಳನ್ನು ಧರಿಸುವುದು)
3. ನಾಮ (ಮಹಾಶೈವ, ಅನುಶೈವ, ಅಂತರಶೈವ, ಇತ್ಯಾದಿ ನಾಮಕರಣ ಮಾಡುವುದು)
4. ಮಂತ್ರ (ಶಿವಪಂಚಾಕ್ಷರೀ ಮಂತ್ರದ ಉಪದೇಶ)
5. ಹೋಮ (ಅಗ್ನಿಸಾಕ್ಷಿ ಪೂಜೆ)

ಇವುಗಳ ಮೂಲಕ ಸ್ವಾರ್ಥಯಜನ ದೀಕ್ಷೆ ಲಭ್ಯವಾಗುತ್ತದೆ. ಪರಾರ್ಥಯಜನದಲ್ಲಿ ಭಾಗವಹಿಸಲು ಅರ್ಹತೆ ಪಡೆಯಲಿಚ್ಛಿಸುವವರು ಮಂಡಲದಲ್ಲಿದ್ದು, ಆರಾಧನಾ ವಿಧಿಯಿಂದ ದೀಕ್ಷೆ ಪಡೆಯುತ್ತಾರೆ. ಚಾತುರ್ವರ್ಣ್ಯದವರು ಪುರುಷರಾಗಿದ್ದರೆ ಶಿವಮಂಡಲದಲ್ಲಿದ್ದು ಆರಾಧನೆ ನಿಯಮದ ದೀಕ್ಷಾಕ್ರಮ ನಡೆಯುವುದು. ಸ್ತ್ರೀಯರಾಗಿದ್ದರೆ ಗೌರಿಮಂಡಲದಲ್ಲಿದ್ದು, ಆರಾಧನಾ ವಿಧಿಯಿಂದ ದೀಕ್ಷಾಕ್ರಮ ನಡೆಯುತ್ತದೆ. ಆಗಮಗಳಲ್ಲಿ ಕೂಡ ಈ ಆಚರಣೆಗೆ ಸಂಬಂಧಿಸಿದ ಮಾಹಿತಿಗಳು ದೊರಕುತ್ತವೆ. (ಕೆ.ಎಂ.ಎಸ್.)

**ಶಿವಾಜಿ:** 1627–80. ಮರಾಠ ಸಾಮ್ರಾಜ್ಯ ಸ್ಥಾಪಕ. ಪುಣೆಯ ಜುನ್ನರದ ಬಳಿಯ ಶಿವನೇರುದುರ್ಗದಲ್ಲಿ 1627 ಏಪ್ರಿಲ್ 6ರಂದು ಜನಿಸಿದ. ತಂದೆ ಷಾಹಜಿಭೋಂಸ್ಲೆ, ತಾಯಿ ಜೀಜಾಬಾಯಿ. ಇವನ ತಂದೆ ಬಿಜಾಪುರದ ಸುಲ್ತಾನರಲ್ಲಿ ಸೇವೆ ಸಲ್ಲಿಸುತ್ತಿದ್ದ. ಆತನಿಗೆ ಕರ್ನಾಟಕದ ಹೊಸ ಜಹಗೀರು ದೊರೆತ ಅನಂತರ ಮಗ ಶಿವಾಜಿಯನ್ನೂ ಹೆಂಡತಿ ಜೀಜಾಬಾಯಿಯನ್ನೂ ದಾದಾಜಿಕೊಂಡದೇವನ ಸಮರ್ಥ ಪೋಷಣೆಯಲ್ಲಿ ಬಿಟ್ಟು ತನ್ನ ಎರಡನೆಯ ಹೆಂಡತಿ ತುಕಾಬಾಯಿ ಮೋಹಿತೆಯೊಡನೆ ಹೊಸ ಜಹಗೀರಿಗೆ ತೆರಳಿದ. ಸದ್ಗುಣಸಂಪನ್ನಳೂ ಅಸಾಧಾರಣ ಜ್ಞಾನಿಯೂ ಆಗಿದ್ದ ಜೀಜಾಬಾಯಿ ರಾಮಾಯಣ, ಮಹಾಭಾರತ ಮುಂತಾದ ಕಾವ್ಯ ಪುರಾಣಗಳ ವೀರಾಧಿವೀರರ ಕತೆಗಳನ್ನು ತನ್ನ ಮಗನಿಗೆ ಹೇಳುತ್ತ ಅವನಲ್ಲಿ ದೇಶರಕ್ಷಣೆಯ ಮನೋಭಾವವನ್ನು ಬೆಳೆಸಿದಳು. ಶಿವಾಜಿಯ ಜೀವನ ರೂಪುಗೊಳ್ಳುವಲ್ಲಿ ತಾಯಿ ಜೀಜಾಬಾಯಿಯ ಪಾತ್ರ ಅತಿ ಮುಖ್ಯವಾದುದು. ಇದರ ಜೊತೆಗೆ ಗುರು ದಾದಾಜಿಕೊಂಡದೇವನ ಸಮರ್ಥ ಮಾರ್ಗದರ್ಶನವೂ ದೊರಕಿತು. ಆಡಳಿತಜ್ಞಾನ ಹಾಗೂ ಯುದ್ಧವಿದ್ಯೆಯನ್ನು ಗುರುವಿನಿಂದ ಕಲಿತ ಶಿವಾಜಿಯ ಮೇಲೆ ಸಂತರಾದ ರಾಮದಾಸ ಮತ್ತು ತುಕಾರಾಮರ ವ್ಯಕ್ತಿತ್ವವೂ ಪ್ರಭಾವ ಬೀರಿತ್ತು.

ಇವನು ಹುಟ್ಟಿ ಬೆಳೆದುದು ಗುಡ್ಡಗಾಡಿನ ಮಾವಳಿ ಜನರೊಡನೆ. ಚಿಕ್ಕಂದಿನಿಂದಲೂ ಮಾವಳಿಗಳ ಸಂಪರ್ಕ ಪಡೆದದ್ದು ಮುಂದೆ ಅಮೂಲ್ಯ ವರವಾಗಿ ಪರಿಣಮಿಸಿತು. ಮಾವಳಿಗಳು ಅನಕ್ಷರಸ್ಥರಾದರೂ ಉತ್ತಮ ಸೈನಿಕರು, ಸಹಭಾಗಿಗಳು ಮತ್ತು ಗೆರಿಲ್ಲಾ ಯುದ್ಧದಲ್ಲಿ ನಿಷ್ಠಾವಂತ ವೀರರೂ ಆಗಿದ್ದರು.

ದಖನ್ ಸುಲ್ತಾನರ ದೌರ್ಬಲ್ಯ ಹಾಗೂ ಮೊಗಲ್ ಸಾಮ್ರಾಟ (ಔರಂಗಜೇಬ) ಉತ್ತರ ಭಾರತದ ದಂಗೆಗಳನ್ನು ಅಡಗಿಸುವಲ್ಲಿ ನಿರತನಾದುದು ಮರಾಠರ ಪ್ರಾಬಲ್ಯಕ್ಕೆ ಬಹುಮಟ್ಟಿಗೆ ಅನುಕೂಲಕರ ವಾತಾವರಣ ನಿರ್ಮಿಸಿದವು. ಬಿಜಾಪುರದ ಸುಲ್ತಾನ ಅನಾರೋಗ್ಯ ನಿಮಿತ್ತ ಹಾಸಿಗೆ ಹಿಡಿದಿದ್ದಾಗ ಶಿವಾಜಿ ತನ್ನ 16ನೆಯ ವಯಸ್ಸಿನಲ್ಲೇ 1646ರಲ್ಲಿ ಬಿಜಾಪುರದ ಅಧೀನದಲ್ಲಿದ್ದ ತೋರಣದುರ್ಗ, ರಾಯಗಡ, ಪ್ರತಾಪಗಡ ಮುಂತಾದವುಗಳನ್ನು ವಶಪಡಿಸಿಕೊಂಡ. 1647ರಲ್ಲಿ ದಾದಾಜಿಕೊಂಡದೇವ ನಿಧನನಾದ. 1649–55ರವರೆಗೆ ಇವನು ತನ್ನ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕಾಗಿ ಬಂದಿತ್ತು. ಏಕೆಂದರೆ ಬಿಜಾಪುರದ ಸುಲ್ತಾನ ಶಿವಾಜಿಯ ಚಟುವಟಿಕೆಗಳಿಂದ ಕ್ರೋಧಗೊಂಡು ಷಾಹಜಿಭೋಂಸ್ಲೆಯನ್ನು ಬಂಧನದಲ್ಲಿಟ್ಟ. ಅನಂತರ ಮಗನ ಸದ್ವರ್ತನೆಯ ಷರತ್ತಿನ ಮೇಲೆ ಬಿಡುಗಡೆಗೊಳಿಸಿದ. ಈ ಸಮಯದಲ್ಲಿ ಇವನು ತನ್ನ ಆಡಳಿತ ಕ್ರಮವನ್ನು ಸುಸಂಘಟಿತಗೊಳಿಸಿಕೊಂಡ. 1656ರಲ್ಲಿ ಅರೆಸ್ವತಂತ್ರ ಮರಾಠಿ ಚಂದ್ರರಾವ್ ಜಾವಲಿ ಎಂಬ ಸಣ್ಣ ಮರಾಠಿ ರಾಜ್ಯವನ್ನು

ನಿಯೋಗಿಯೊಬ್ಬನಿಂದ ಮೋರೆಯನ್ನು ಕೊಲ್ಲಿಸುವ ಮುಖಾಂತರ ಪಡೆದುಕೊಂಡ. 1657ರಲ್ಲಿ ಮೊದಲ ಬಾರಿಗೆ ಮೊಗಲರ ವಿರುದ್ಧ ಹೋರಾಟಕ್ಕಿಳಿದ. ಔರಂಗಜೇಬ ಬಿಜಾಪುರದ ಮುತ್ತಿಗೆಯಲ್ಲಿ ಮಗ್ನನಾಗಿರುವ ಅವಕಾಶ ಬಳಸಿ ಅವನ ಅಧೀನದಲ್ಲಿದ್ದ ಅಹಮದ್‌ನಗರ ಮತ್ತು ಜುನ್ನರ್ ಜಿಲ್ಲೆಗಳಿಗೆ ಮುತ್ತಿಗೆ ಹಾಕಿ ಸೂರತ್ ಬಂದರು ನಗರವನ್ನು ಲೂಟಿಮಾಡಿದ.

ಔರಂಗಜೇಬ ಸೈನ್ಯವೊಂದರ ನೆರವಿನಿಂದ ಇವನನ್ನು ಸೋಲಿಸಿದ ಬಳಿಕ ಔರಂಗ ಜೇಬನೊಂದಿಗೆ ಒಪ್ಪಂದ ಮಾಡಿಕೊಂಡ. ಆದರೆ ಅವನು ಉತ್ತರಕ್ಕೆ ನಿರ್ಗಮಿಸಿದ ತಕ್ಷಣ ಇವನು ತನ್ನ ಆಕ್ರಮಣಕಾರಿ ನೀತಿ ಮುಂದುವರಿಸಿ, ತನ್ನ ಗಮನವನ್ನು ಉತ್ತರ ಕೊಂಕಣದ ಕಡೆಗೆ ಕೇಂದ್ರೀಕರಿಸಿ ಕಲ್ಯಾಣಿ, ಭಿವಂಡಿ ಮತ್ತು ಮಾಹುಲಿಗಳನ್ನು ವಶಪಡಿಸಿಕೊಂಡು ಮಾಹದ್‌ವರೆಗೆ ತನ್ನ ಅಧಿಕಾರ ವಿಸ್ತರಿಸಿದ.

**ಬಿಜಾಪುರದ ಸುಲ್ತಾನನೊಂದಿಗೆ ಯುದ್ಧ:** ಮೊಗಲ್ ಧಾಳಿಯಿಂದ ತಾತ್ಕಾಲಿಕ ವಿಮುಕ್ತಿ ಪಡೆದ ಬಿಜಾಪುರದ ಸುಲ್ತಾನ ಇವನನ್ನು ಸದೆಬಡಿಯಲು ದೃಢ ಪ್ರಯತ್ನಮಾಡಿದ. ಇವನನ್ನು ಜೀವಂತವಾಗಿ ಅಥವಾ ಕೊಂದು ತರಲೆಂದು ತನ್ನ ಮಹಾದಂಡನಾಯಕನಾದ ಅಫ್ಜಲ್‌ಖಾನನ ನಾಯಕತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳುಹಿಸಿ 1659ರಲ್ಲಿ ಇವನ ರಾಜ್ಯದ ಮೇಲೆ ಧಾಳಿ ನಡೆಸಿ ಪ್ರತಾಪಗಡದ ಕೋಟೆಯಲ್ಲಿ ರಕ್ಷಣೆ ಪಡೆದ. ಆದರೆ ಶಿವಾಜಿ ತನ್ನ ಕೋಟೆಯಿಂದ ಹೊರಬರಲಿಲ್ಲವಾಗಿ ಮರಾಠ ಬ್ರಾಹ್ಮಣ ಕೃಷ್ಣಾಜಿಭಾಸ್ಕರನ ಮುಖಾಂತರ ಸಂಧಾನ ನಡೆಸಿದ. ಕೃಷ್ಣಾಜಿಭಾಸ್ಕರ ಇವನಿಗೆ ಅಫ್ಜಲ್‌ಖಾನನ ನಿಜವಾದ ಉದ್ದೇಶ ಕೊಲೆ ಅಥವಾ ಬಂಧನವೆಂಬುದನ್ನು ಸೂಕ್ಷ್ಮವಾಗಿ ವಿವರಿಸಿ ಶಿವಾಜಿಯನ್ನು ಎಚ್ಚರಿಸಿದ. ಇದರಿಂದ ಎಚ್ಚೆತ್ತ ಶಿವಾಜಿ ರಕ್ಷಣೆ ಹಾಗೂ ಧಾಳಿಗೆ ಸಿದ್ಧತೆಮಾಡಿಕೊಂಡು ಅಫ್ಜಲ್‌ಖಾನನನ್ನು ಭೇಟಿಯಾದ. ಉಪಾಯದಿಂದ ತಾನು ಬಚ್ಚಿಟ್ಟುಕೊಂಡಿದ್ದ ವ್ಯಾಘ್ರನಖ ಎಂಬ ಆಯುಧದಿಂದ ಅವನನ್ನು ಕೊಂದು ಬೆಟ್ಟ ಪ್ರದೇಶದಲ್ಲಿ ತಲೆಮರೆಸಿಕೊಂಡ. ಅನಂತರ ತನ್ನ ಸೈನ್ಯದ ಸಹಾಯದಿಂದ ಬಿಜಾಪುರದ ಸೈನ್ಯವನ್ನು ಸೋಲಿಸಿ ಅವರ ಠಾಣಗಳನ್ನು ಲೂಟಿಮಾಡಿದ. ಬಿಜಾಪುರ ಸುಲ್ತಾನನೊಂದಿಗೆ ಒಪ್ಪಂದ ಮಾಡಿಕೊಂಡು ಸ್ವತಂತ್ರ ರಾಜನಾದ.

**ಮೊಗಲರೊಂದಿಗೆ ಯುದ್ಧ:** 1660ರಲ್ಲಿ ಔರಂಗಜೇಬ ಷೈಸ್ತಾಖಾನನನ್ನು ದಖನಿನ ರಾಜ್ಯಪಾಲನನ್ನಾಗಿ ನೇಮಿಸಿ, ಶಿವಾಜಿಯ ಚಟುವಟಿಕೆಗಳನ್ನು ಹತ್ತಿಕ್ಕುವಂತೆ ಆಜ್ಞಾಪಿಸಿದ. ಅದರಂತೆ ಷೈಸ್ತಾಖಾನ ಪುಣೆಯನ್ನು ವಶಪಡಿಸಿಕೊಂಡು, ಚಾಕನ್‌ಕೋಟೆ ಹಿಡಿದು ಮರಾಠರನ್ನು ಕಲ್ಯಾಣಿ ಜಿಲ್ಲೆಯಿಂದ ಹೊರಗಟ್ಟಿದ. ಇದರಿಂದ ಎರಡು ವರ್ಷಗಳ ಕಾಲ ನಡೆಸಿದ ಹೋರಾಟ ನಿಷ್ಪ್ರಯೋಜಕವಾಯಿತು. ಶಿವಾಜಿ ವೇಷ ಮರೆಸಿಕೊಂಡು ಕೇವಲ ಕೆಲವೇ ಮಂದಿ ಸೈನಿಕರೊಂದಿಗೆ ಪುಣೆಯನ್ನು ತಲುಪಿ ಷೈಸ್ತಾಖಾನನ ಅರಮನೆ ಹೊಕ್ಕ. 1663 ಏಪ್ರಿಲ್ 15ರ ನಡುರಾತ್ರಿ ಧಾಳಿ ನಡೆಸಿದ. ಈ ಧಾಳಿಯಲ್ಲಿ ಷೈಸ್ತಾಖಾನನ ಮಗ ಅಬ್ದುಲ್‌ಫತೇಹ್ ಹತನಾದನಲ್ಲದೆ ಒಬ್ಬ ಸೇನಾಧಿಕಾರಿ, 40 ಜನ ಸೇವಕರು, 5 ಜನ ಅಂತಃಪುರದ ಸ್ತ್ರೀಯರು ನಿಧನರಾದರು. ಇದರಿಂದ ಶಿವಾಜಿಯ ಗೌರವ, ಪ್ರತಿಷ್ಠೆ, ಖ್ಯಾತಿ ಮುಗಿಲೆಗೇರಿತು. 1664 ಜನವರಿಯಲ್ಲಿ ಮೊಗಲರ ಸಂಪದ್ಭರಿತ ರೇವು ಪಟ್ಟಣವಾದ ಸೂರತ್‌ಗೆ ಮುತ್ತಿಗೆ ಹಾಕಿ ಅಪಾರ ಐಶ್ವರ್ಯ ಪಡೆದ.

**ಜಯಸಿಂಹ ಮತ್ತು ಪುರಂದರಗಡ ಒಪ್ಪಂದ:** ದಖನಿನಲ್ಲಿ ಬೆಳೆಯುತ್ತಿದ್ದ ಶಿವಾಜಿಯ ಪ್ರತಿಷ್ಠೆಯನ್ನು ಸಹಿಸದ ಔರಂಗಜೇಬ ಇವನನ್ನು ಹತ್ತಿಕ್ಕಲು 1665ರಲ್ಲಿ ದಿಲೇರ್‌ಖಾನ್ ಮತ್ತು ಅಂಬರದ ದೊರೆ ರಾಜ ಜೈಸಿಂಗರನ್ನು ಕಳುಹಿಸಿದ. ವಿವೇಕಶಾಲಿ ಹಾಗೂ ಚತುರ ಸೇನಾಧಿಪತಿಯಾದ ಜೈಸಿಂಗ್ ಬಿಜಾಪುರದ ಸುಲ್ತಾನನೊಡನೆ ಒಪ್ಪಂದ ಮಾಡಿಕೊಂಡು

ಪುರಂದರಗಡಕೋಟೆ ವಶಪಡಿಸಿಕೊಂಡ. ಶಿವಾಜಿ ತನ್ನ ರಕ್ಷಣೆಗಾಗಿ ಮಾಡಿದ ಪ್ರಯತ್ನವೆಲ್ಲ ವಿಫಲವಾಗಿ 1665 ಜೂನ್ 25ರಂದು ಪುರಂದರಗಡ ಒಪ್ಪಂದ ಮಾಡಿಕೊಂಡ. ಅದರಂತೆ ಮೊಗಲರಿಗೆ 23 ಕೋಟೆಗಳನ್ನು ಬಿಟ್ಟುಕೊಟ್ಟ, 12 ಕೋಟೆಗಳನ್ನು ಮಾತ್ರ ತನ್ನ ಅಧೀನದಲ್ಲಿಟ್ಟು ಕೊಂಡ. 5000 ಅಶ್ವಗಳೊಂದಿಗೆ ತನ್ನ ಕೆಲವು ಪ್ರಾಂತಗಳನ್ನು ಕಳೆದುಕೊಂಡಿದ್ದರಿಂದ ಆದ ನಷ್ಟ ಸರಿದೂಗಿಸಿಕೊಳ್ಳಲು ಚೌತ್ ಮತ್ತು ಸರ್ದೇಶ್‌ಮುಖಿ ತೆರಿಗೆ ವಸೂಲಿಮಾಡಲು ಅನುಮತಿ ಪಡೆದುಕೊಂಡ.

ಅನಂತರ ಜೈಸಿಂಗ್ ಉಪಾಯದಿಂದ ಶಿವಾಜಿಯನ್ನು ನಂಬಿಸಿ ಆಗ್ರಕ್ಕೆ ಬರುವಂತೆ ಮನ ಒಲಿಸಿದ. 1666 ಮಾರ್ಚ್ 16ರಂದು ತನ್ನ ಹಿರಿಯಮಗ ಸಂಭಾಜಿಯೊಂದಿಗೆ ಶಿವಾಜಿ ಆಗ್ರಕ್ಕೆ ತೆರಳಿದ. ಆದರೆ ಆಗ್ರದಲ್ಲಿ ಔರಂಗಜೇಬನಿಂದ ಅವಮಾನಕ್ಕೀಡಾದ್ದರಿಂದ ಕ್ರೋಧಗೊಂಡ. ಚಕ್ರವರ್ತಿಯ ನಂಬಿಕೆದ್ರೋಹವನ್ನು ಖಂಡಿಸಲಾಗಿ ಸೆರೆಮನೆಯಲ್ಲಿ ಬಂದಿಯಾದ. ಸ್ವಲ್ಪದಿನಗಳ ಅನಂತರ ಅಲ್ಲಿಂದ ತಪ್ಪಿಸಿಕೊಂಡು 1666 ನವೆಂಬರ್ 30ರಂದು ರಾಯಗಡ ತಲುಪಿದ. ಮತ್ತೆ ಮೊಗಲರ ಮೇಲೆ ಧಾಳಿ ಮಾಡಿ ಅಪಾರ ಸಂಪತ್ತನ್ನು ಪಡೆದ. ಔರಂಗಜೇಬ ವಾಯವ್ಯ ಪ್ರಾಂತದಲ್ಲಿ ಆಫ್ಘನ್ ಸಮುದಾಯದ ದಂಗೆಗಳನ್ನು ಅಡಗಿಸಲು ಮಗ್ನನಾಗಿದ್ದಾಗ ಶಿವಾಜಿ ಧಾಳಿ ನಡೆಸಿ ಜಯಪಡೆದ (1670-74). ಪಟ್ಟಾಭಿಷಿಕ್ತನಾದ ಮೇಲೆ ಛತ್ರಪತಿ ಎಂಬ ಬಿರುದು ಧರಿಸಿದ. 1677ರಲ್ಲಿ ಗೋಲ್ಕೊಂಡದ ಸುಲ್ತಾನನ ಸ್ನೇಹಗಳಿಸಿ, ದಕ್ಷಿಣ ಭಾರತದ ಸುಲ್ತಾನನ ಅಧೀನದಲ್ಲಿದ್ದ ಜಿಂಜೀ, ವೆಲ್ಲೂರು, ತಂಜಾವೂರು ಮತ್ತು ಕರ್ನಾಟಕದ ಕೆಲವು ಜಿಲ್ಲೆಗಳನ್ನೊಳಗೊಂಡಂತೆ 30 ಲಕ್ಷ ಹೊನ್ನುಗಳ ಆದಾಯ ಬರುವ ಹಾಗೂ 100 ಕೋಟೆಗಳನ್ನೊಳಗೊಂಡಂತೆ ಮೈಸೂರಿನ ಪ್ರಸ್ಥಭೂಮಿಯ ವಿಶಾಲ ಭೂಪ್ರದೇಶಗಳನ್ನು ಗೆದ್ದುಕೊಂಡ. ದಕ್ಷಿಣ ಭಾರತದ ಆಕ್ರಮಣಗಳು ಇವನನ್ನು ನಿಜವಾದ ಸಾಮ್ರಾಟನನ್ನಾಗಿ ಮಾಡಿದುವಲ್ಲದೆ, ಮುಸ್ಲಿಮ್ ಪ್ರಭುತ್ವವನ್ನು ನಿಗ್ರಹಿಸಿದವು.

ಶಿವಾಜಿ ನಿಧನ ಹೊಂದಿದಾಗ ಅವನ ರಾಜ್ಯ ಉತ್ತರದಲ್ಲಿ ಸೂರತ್ ಜಿಲ್ಲೆಯ ರಾಮನಗರ ದಿಂದ ದಕ್ಷಿಣದಲ್ಲಿ ಕಾರವಾರ ಅಥವಾ ಗಂಗಾವತಿ ನದಿಯವರೆಗೆ ಹಬ್ಬಿತ್ತು(ಪೋರ್ಚುಗೀಸ್ ವಸಾಹತುಗಳ ಹೊರತು). ಪೂರ್ವದ ಮೇರೆ ಉತ್ತರದಲ್ಲಿ ಬಗ್ಲಾನದಿಂದ ಹಿಡಿದು ದಕ್ಷಿಣಕ್ಕೆ ಅಂಕುಡೊಂಕಾಗಿ ನಾಸಿಕ್ ಮತ್ತು ಪುಣೆ ಜಿಲ್ಲೆಗಳ ಮುಖಾಂತರ ಮುಂದುವರಿದು ಸತಾರ, ಕೊಲ್ಲಾಪುರ ಜಿಲ್ಲೆಗಳ ಬಹು ಭಾಗಗಳನ್ನು ಸುತ್ತುವರಿದಿತ್ತು. ಕೊನೆಯ ಆಕ್ರಮಣದಲ್ಲಿ ಪಶ್ಚಿಮ ಕರ್ನಾಟಕದ ಬೆಳಗಾಂವಿಯಿಂದ ತುಂಗಭದ್ರಾ ನದಿಯವರೆಗಿನ ಪ್ರದೇಶ ಹಾಗೂ ಹಳೆಯ ಮೈಸೂರಿನ ಅನೇಕ ಭಾಗಗಳು, ಚಿತ್ತೂರು ಹಾಗೂ ಆರ್ಕಾಟ್ ಜಿಲ್ಲೆಗಳು ಸಹ ಇವನ ವಶವಾದವು. ಇವನ ರಾಜ್ಯದಲ್ಲಿ 140 ಕೋಟೆಗಳಿದ್ದು, 7 ಕೋಟಿ ರೂ. ಆದಾಯ ಬರುತ್ತಿತ್ತು.

ಆದರೆ ಈತ ಸಾಮ್ರಾಟ ಪದವಿಯನ್ನು ಅನುಭವಿಸಲು ಬಹುಕಾಲ ಜೀವಿಸಲಿಲ್ಲ. 1678ರಲ್ಲಿ ಇವನ ಪುತ್ರ ಸಂಭಾಜಿ ಹಾಗೂ ಸೊಸೆ ಯಶುಬಾಯಿ ದಖನಿನ ಮೊಗಲ್ ಗವರ್ನರ್ ದಿಲೀರ್‌ಖಾನನೊಡನೆ ಸೇರಿಕೊಂಡರಲ್ಲದೆ, ಈ ಮಧ್ಯೆ ಮೊಗಲರ ಕಿರುಕುಳ ಹೆಚ್ಚಾಯಿತು. ಈ ಎಲ್ಲ ಘಟನೆಗಳಿಂದ ಇವನ ಆರೋಗ್ಯ ಹದಗೆಡಲು ಕಾರಣವಾಗಿ 1680 ಏಪ್ರಿಲ್ 4ರಂದು ನಿಧನನಾದ.

ಇವನು ಅಪ್ರತಿಮ ವೀರಯೋಧ, ದೇಶಭಕ್ತ ಮತ್ತು ಯಶಸ್ವಿ ಸೇನಾನಿ ಮಾತ್ರವಲ್ಲದೆ ಜನತೆಗೆ ಜ್ಞಾನ ಬೋಧನೆ ನೀಡುವ ದೊರೆಯೂ ಆಗಿದ್ದ. ರಾಲಿನ್‌ಸನ್ ಹೇಳಿರುವಂತೆ ಶಿವಾಜಿ ನೆಪೋಲಿಯನ್ನನಂತೆ ಒಬ್ಬ ಪ್ರಸಿದ್ಧ ಆಡಳಿತ ದುರಂಧರನಾಗಿದ್ದನಲ್ಲದೆ ಸಮರ್ಥ ಸೇನಾನಾಯಕನೂ ಯಶಸ್ವಿ ಆಡಳಿತಗಾರನೂ ರಾಜತಾಂತ್ರಿಕ ನಿಪುಣನೂ ಆಗಿ ಕೀರ್ತಿ ಪಡೆಯಲು ಅತ್ಯಗತ್ಯವಾದ ಸದ್ಗುಣಗಳನ್ನು ಹೊಂದಿದವನಾಗಿದ್ದ. ಇವನು ತನ್ನ ಆಡಳಿತದಲ್ಲಿ ಅಷ್ಟ ಪ್ರಧಾನ್ ಎಂಬ ಎಂಟು ಜನರ ಮಂತ್ರಿಗಳ ಸಭೆಯ ಮೂಲಕ ದಕ್ಷ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದ.

*

**ಶಿಶುಪಾಲಗಡ:** **ನೋಡಿ-ಭುವನೇಶ್ವರ**

**ಶಿಸುಗಲಿಯ ಪಾಂಡ್ಯರು:** **ನೋಡಿ - ಕರ್ನಾಟಕದ ಕಿರು ಅರಸು ಮನೆತನ**

**ಶುಂಗ-ಕಣ್ವ ಕಲೆ:** ಶುಂಗ ಎಂಬ ರಾಜ ಮನೆತನ ಉತ್ತರ ಭಾರತದಲ್ಲಿ ಮೌರ್ಯರ ಅನಂತರ ಮಗಧವನ್ನು ಕೇಂದ್ರವನ್ನಾಗಿಟ್ಟುಕೊಂಡು ಆಳಿತು. ಪುಷ್ಯಮಿತ್ರ ಶುಂಗ ಇದರ ಸಂಸ್ಥಾಪಕನಾಗಿದ್ದು, ಪ್ರ.ಶ.ಪೂ. 186ರಲ್ಲಿ ಪಟ್ಟಕ್ಕೆ ಬಂದ. ತದನಂತರ 1 ನೆಯ ಶತಮಾನದ ಮಧ್ಯಭಾಗದಲ್ಲಿ ಕಣ್ವ ಮನೆತನ ಶುಂಗರ ಆಳಿಕೆಯನ್ನು ಕೊನೆಗೊಳಿಸುವವರೆಗೂ ಆಳಿತು. ಈ ವಂಶದ ಆಳಿಕೆ ಗಂಗಾ ಬಯಲು ಹಾಗೂ ಮಾಳವ ಪ್ರದೇಶಕ್ಕೆ ಸೀಮಿತವಾಗಿದ್ದಂತೆ ತೋರುತ್ತದೆ. ಈ ಪ್ರದೇಶದಲ್ಲಿ 2 ಮತ್ತು 1ನೆಯ ಶತಮಾನಗಳಲ್ಲಿ ದೊರೆಯುವ ಕಲಾವಸ್ತು ಗಳನ್ನು ಶುಂಗ ಕಲೆ ಎಂದು ಕರೆಯಲಾಗಿದೆ. ಶುಂಗ ಕಲಾವಸ್ತುಗಳನ್ನು ಮುಖ್ಯವಾಗಿ ಕಲ್ಲಿನ ಶಿಲ್ಪಗಳು ಮತ್ತು ಮಣ್ಮೂರ್ತಿಗಳು ಎಂದು ವಿಭಾಗಿಸಬಹುದು. ಇವಲ್ಲದೆ ತೀರ ಅಪರೂಪಕ್ಕೆ ತಾಮ್ರ ಹಾಗೂ ಜಾಸ್ಪರ್, ಸ್ಟಿಯಟೈಟ್ ಮತ್ತು ಸೋಪ್ ಸ್ಟೋನ್ ಮುಂತಾದ ವಸ್ತುಗಳ ಮೇಲೂ ಕಲಾಕೃತಿಗಳು ಕಂಡುಬರುತ್ತವೆ.

1) ಕಲ್ಲಿನ ಶಿಲ್ಪಗಳು: ಕಲ್ಲಿನ ಶಿಲ್ಪಗಳನ್ನು ಮತ್ತೆ ಸ್ಥೂಲವಾಗಿ ಎರಡು ಭಾಗಗಳಾಗಿ ಗುರುತಿಸಬಹುದು: (ಅ) ಸ್ಮಾರಕಗಳಲ್ಲಿಯ ಶಿಲ್ಪಗಳು ಮತ್ತು (ಆ) ಬಿಡಿ ಶಿಲ್ಪಗಳು. (ಅ) ಸ್ಮಾರಕಗಳ ಶಿಲ್ಪಗಳು ಬಹುತೇಕ ಎಲ್ಲವೂ ಬೌದ್ಧ ಸ್ತೂಪಗಳನ್ನು ಹಾಗೂ ವೇದಿಕೆಗಳನ್ನು ಅಲಂಕರಿಸುವಂಥವು. ಅಪರೂಪಕ್ಕೆ ಜೈನ ಸ್ತೂಪ ಮತ್ತು ಭಾಗವತ ದೇವಾಲಯಗಳ ಅವಶೇಷಗಳಲ್ಲೂ ಇವು ಸಿಕ್ಕಿವೆ. ಶುಂಗಕಾಲದ ಅರ್ಧಗೋಳಾಕೃತಿಯ ಸ್ಮಾರಕದ ಪರಿಪೂರ್ಣ ಮಾದರಿಗಳು ಸಿಗದಿದ್ದರೂ ಆ ಕಾಲದ ಶಿಲ್ಪಗಳಲ್ಲಿ ಸ್ತೂಪಗಳ ಚಿತ್ರಗಳು ಸಿಗುತ್ತವೆ. (ಶುಂಗ ಕಾಲದ ನಂತರ ಕಟ್ಟಿದ ಸಾಂಚಿಯ ಬೃಹತ್ ಸ್ತೂಪ ಬಹುತೇಕ ಸಂಪೂರ್ಣವಾಗಿ ಉಳಿದುಬಂದಿದೆ). ಇವುಗಳ ಪ್ರಕಾರ ಶುಂಗ ಸ್ತೂಪಗಳು ವೃತ್ತಾಕಾರದ ವೇದಿಕೆಯ ಮೇಲೆ ಅರ್ಧಗೋಳಾಕೃತಿಯ ಅಂಡವನ್ನು ಹೊಂದಿದ್ದು ಅಂಡದ ಸುತ್ತಲೂ ಪ್ರದಕ್ಷಿಣಾಪಥ ಇರುತ್ತದೆ. ಅಂಡದ ಮೇಲೆ ಹರ್ಮಿಕೆ ಹಾಗೂ ಛತ್ರಾವಳಿಗಳಿರುತ್ತವೆ. ಸ್ತೂಪದ ವೇದಿಕೆಯ ಸುತ್ತ ಅದಕ್ಕೆ ಪ್ರಾಕಾರದಂತೆ ಬೇಲಿ (ಪಾದ ವೇದಿ) ಇರುತ್ತವೆ. ಪಾದವೇದಿಕೆಗಳಿಗೆ ಲಂಬವಾಗಿ ನಿಲ್ಲಿಸಿದ ಸ್ತಂಭಗಳು, ಅಡ್ಡಲಾಗಿ ಅವುಗಳೊಂದಿಗೆ ತೂರಿಸಿದ ಮೂರು ಕಂಬಿ (ಸೂಚಿ)ಗಳೂ ಹಾಗೂ ಸ್ತಂಭಗಳ ಮೇಲ್ಭಾಗವನ್ನು ಮುಚ್ಚುವ ಉಷ್ಣೀಷಗಳೂ ಇರುತ್ತವೆ. ಸ್ತಂಭ ಮತ್ತು ಸೂಚಿಗಳು ಸೇರುವಲ್ಲಿ ವರ್ತುಳಾಕೃತಿಯ ಶಿಲ್ಪಫಲಕಗಳಿರು ತ್ತವೆ. ಇವುಗಳ ಮೇಲೆಲ್ಲಾ ಶಿಲ್ಪಗಳನ್ನು ಕೆತ್ತಲಾಗಿತ್ತು ಹಾಗೂ ಶುಂಗಕಾಲದ ಬಹುತೇಕ ಕಲ್ಲಿನ ಶಿಲ್ಪಗಳು ಈ ಭಾಗಗಳಿಗೇ ಸೇರಿವೆ. ಸ್ತೂಪಗಳ ಚಿತ್ರ ಗಳಲ್ಲಿ ತೋರಣ ಕಂಡುಬರುವುದಿಲ್ಲ. ಏಕೆಂದರೆ ಪ್ರಾರಂಭದಲ್ಲಿ ಸ್ತೂಪಗಳಿಗೆ ತೋರಣಗಳು ಇರಲಿಲ್ಲ ಆದರೆ ಕ್ರಮೇಣ ಶುಂಗಕಾಲದಲ್ಲಿ ತೋರಣ ವನ್ನು ಕಟ್ಟುವ ಪರಿಪಾಠ ಬೆಳೆದು ಬಂದು ಅನಂತರ ಅವುಗಳ ಮೇಲೂ ಶಿಲ್ಪಗಳು ಕಾಣಿಸಿಕೊಳ್ಳುತ್ತವೆ.

ದಂಪತಿ ಶಿಲ್ಪ

ಬೌದ್ಧ ಸ್ತೂಪಗಳಲ್ಲಿ ಸಾಂಚಿ ಸ್ತೂಪ ಸಂಖ್ಯೆ 2, ಬಾರ್ಹುತ್ ಸ್ತೂಪ, ಪಟಣ, ಬೋಧಗಯಾ (ಇಲ್ಲಿ ಮಾತ್ರ ಅವಶೇಷಗಳು ಬೋಧಿಮಂಡಲಕ್ಕೆ ಸೇರಿವೆ), ಸಾರನಾಥ್, ಕೌಶಾಂಬಿ, ಮಥುರಾ, ಅಮಿನ್, ಲಾಲ್‌ಸೊತ್ ಮುಂತಾದೆಡೆಗಳಲ್ಲಿ ಶಿಲ್ಪಗಳು ಸಿಗುತ್ತವೆ. ಇವುಗಳಲ್ಲಿ ಬಾರ್ಹುತ್ ಮತ್ತು ಬೋಧಗಯಾಗಳಲ್ಲಿ ವಿಪುಲ ಸಂಖ್ಯೆಯಲ್ಲಿ ಶಿಲ್ಪಗಳಿವೆ. ಆದರೆ ಈ ಕಾಲದ ಸ್ತೂಪಗಳಲ್ಲಿ ಇದುವರೆಗೂ ಬಹುಭಾಗ ಉಳಿದುಕೊಂಡು ಬಂದಿರುವು ದೆಂದರೆ ಸಾಂಚಿಯ ಸ್ತೂಪ ಸಂಖ್ಯೆ 2. ಇದಕ್ಕೆ ವೇದಿಕೆ, ಅರ್ಧಗೋಳಾಕಾರದ ಅಂಡ ಹಾಗೂ ಇದರ ಸುತ್ತ ಒಂದು ವೇದಿ ಇದೆ. ಹಾಗೂ ವೇದಿಕೆಯ ಸ್ತಂಭಗಳ ಮೇಲೆ ಶುಂಗ ಕಾಲದ ಶಿಲ್ಪಗಳಿವೆ. ಬಾರ್ಹುತ್ ಸ್ತೂಪ ಸಂಪೂರ್ಣವಾಗಿ ನಾಶವಾಗಿದ್ದರೂ ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಮ್ ಪ್ರಯತ್ನದಿಂದಾಗಿ ಅಳಿದುಳಿದ ಭಾಗಗಳನ್ನು ಕೋಲ್ಕತದ ಇಂಡಿಯನ್ ಮ್ಯೂಸಿಯಂನಲ್ಲಿ ಜೋಡಿಸಿಡಲಾಗಿದೆ. ಇವನ ಪ್ರಕಾರ ಅಲ್ಲಿಯ ಸ್ತೂಪಕ್ಕೆ ನಾಲ್ಕು ತೋರಣಗಳಿದ್ದವು. ಈ ಒಂದು ತೋರಣದ ಮೇಲೆ ಧನಭೂತಿ ಎಂಬ ರಾಜ ಶುಂಗರ ರಾಜ್ಯದಲ್ಲಿ ಇದನ್ನು ಕಟ್ಟಿಸಿದ್ದಾಗಿ ಶಾಸನವಿದೆ. ಈ ಕಾಲದ ಸ್ತೂಪಗಳ ಪರಿಪೂರ್ಣತೆ ಕಾಣಿಸಿಕೊಳ್ಳುವುದು ಸಾಂಚಿಯ ಮಹಾಸ್ತೂಪದಲ್ಲಿ. ಅದು ಶುಂಗ ಕಾಲದ ಅನಂತರ ರಚನೆಯಾಯಿತು. ಬೋಧಗಯಾದಲ್ಲಿ ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಮ್ ಉತ್ಖನನ ನಡೆಸಿ ಅಲ್ಲಿಯ ಬೋಧಿಮಂಡಲದ ಸುತ್ತಲಿನ ವೇದಿಕೆಯ ಅವಶೇಷಗಳನ್ನು ಸಂರಕ್ಷಿಸಿದ.

ಬಾರ್ಹುತ್‌ನ ಶುಂಗ ಶಿಲ್ಪಗಳು ವೇದಿಗಳ ಮೇಲೆ ಹಾಗೂ ತೋರಣಗಳ ಮೇಲೆ ಕೆತ್ತಲ್ಪಟ್ಟಿವೆ. ಕೆಲವು ಕಂಬಗಳ ಮೇಲೆ ಯಕ್ಷರು ಕೈ ಮುಗಿದು ನಿಂತಿದ್ದರೆ, ಉಳಿದ ಭಾಗಗಳಲ್ಲಿ ಆಯತಾಕೃತಿಯ ಹಾಗೂ ವರ್ತುಳಾಕೃತಿಯ ಚೌಕಟ್ಟುಗಳೊಳಗೆ ಬುದ್ಧನ ಜೀವನದ ಘಟನೆಗಳು ಹಾಗೂ ಜಾತಕ ಕಥೆಗಳನ್ನು ಕೆತ್ತಲಾಗಿದೆ. ಉಷ್ಣೀಷದ ಮೇಲೆ ಕಲ್ಪಲತೆಯೊಂದು ಸೂಚಿಶಾಸನಗಳನ್ನು ಬಳಸಿಕೊಂಡು ಹೋದಹಾಗೆ ಕೆತ್ತಲಾಗಿದೆ. ಅದರ ಮಧ್ಯದಲ್ಲಿ ಅಲ್ಲಲ್ಲಿ ಲೌಕಿಕ ದೃಶ್ಯಗಳು ಹಾಗೂ ಜಾತಕ ದೃಶ್ಯಗಳು ಚಿತ್ರಿತವಾಗಿವೆ. ಬಾರ್ಹುತ್‌ನ ದೃಶ್ಯಗಳಿಗೆಲ್ಲ ಸೂಕ್ತ ಸೂಚಿಶಾಸನಗಳನ್ನು ನೀಡಿ ಸಂದರ್ಭವನ್ನು ಸೂಚಿಸಲಾಗಿದೆ. ಇಲ್ಲಿ ಕೈ ಮುಗಿದು ನಿಂತಿರುವ ಶಿಲ್ಪಗಳಲ್ಲಿ ಮಣಿಭದ್ರ ಸೂಚಿಲೋಮ ಮುಂತಾದ ಯಕ್ಷರೂ ಸಿರಿಮಾ, ಚುಲುಕೋಕ, ಮಹಾಕೋಕ, ಚಂದಾ ಮುಂತಾದ ಯಕ್ಷಿಯರೂ ಪರ್ಷಿಯನ್ ಉಡುಗೆಯಲ್ಲಿ ರುವ ಸೂರ್ಯ ದೇವತೆಯೂ ಬುದ್ಧನ ಪೂಜೆ ಮಾಡಲು ಬಂದ ಅಜಾತಶತ್ರು, ಪ್ರಸೇನಜಿತ

ರಾಜರೂ ದೇವೇಂದ್ರ, ಏರಪಟ್ಟ ನಾಗರಾಜ ಮುಂತಾದ ದೇವತೆಗಳ ಶಿಲ್ಪಗಳೂ ಇವೆ. ಬುದ್ಧನ ಜೀವನ ದೃಶ್ಯಗಳಲ್ಲಿ ಎಲ್ಲೂ ಆತನ ಆಕೃತಿಯನ್ನು ತೋರಿಸಿಲ್ಲ. ಬದಲಾಗಿ ಆತನಿಗೆ ಸಂಬಂಧಿಸಿದ ಸಂಕೇತಗಳಾದ ಬೋಧಿವೃಕ್ಷ, ಸಿಂಹಾಸನ, ಧರ್ಮಚಕ್ರ, ಧ್ವಜಸ್ತಂಭ, ಸ್ತೂಪ, ಬುದ್ಧಪಾದ ಮುಂತಾದವುಗಳನ್ನು ನೋಡಬಹುದು. ಬುದ್ಧನ ಜೀವನದ ಘಟನೆಗಳನ್ನೂ ಇವುಗಳ ಮೂಲಕವೇ ಸಂಕೇತಿಸಲಾಗುತ್ತದೆ. ಗರ್ಭಾವತರಣದಲ್ಲಿ ಆನೆಯನ್ನೂ ಮಹಾಭಿನಿಷ್ಕ್ರಮಣದಲ್ಲಿ ಕುದುರೆಯನ್ನೂ ಜ್ಞಾನೋದಯಕ್ಕೆ ಬೋಧಿವೃಕ್ಷವನ್ನೂ ಬುದ್ಧನ ಪ್ರವಚನದ ದೃಶ್ಯಕ್ಕೆ ಧರ್ಮಚಕ್ರವನ್ನೂ ಮಹಾಪರಿನಿರ್ವಾಣಕ್ಕೆ ಸ್ತೂಪವನ್ನೂ ತೋರಿಸುತ್ತಾರೆ. ಅಂದರೆ ಶುಂಗಕಾಲದಲ್ಲಿ ಬುದ್ಧನು ದೇವತಾಪುರುಷನಾಗಿ ಅವನನ್ನು ಪೂಜಿಸುವ ಸಂಪ್ರದಾಯ ಬೆಳೆದುಬಂದರೂ ಅದು ಮಾನವಾಕೃತಿಯ ಪೂಜೆಯಾಗಿ ಮಾರ್ಪಟ್ಟಿರಲಿಲ್ಲ. ಬುದ್ಧನ ಜೀವನದ ಘಟನೆಗಳಲ್ಲಿ ಅನಾಥಪಿಂಡಕ ಬುದ್ಧನಿಗಾಗಿ ಜೇತವನವನ್ನು ಖರೀದಿಸುವ ದೃಶ್ಯ, ಸುಧರ್ಮ ದೇವಸಭಾ, ಬುದ್ಧನ ಅವಶೇಷಗಳನ್ನು ರಾಜರು ಒಯ್ಯುತ್ತಿರುವುದು ಮುಂತಾದವೂ ಮಹತ್ತ್ವಪೂರ್ಣವಾಗಿವೆ.


ಸ್ತೂಪಚಿತ್ರದ ಫಲಕ

ಸಾಂಚಿ ಸ್ತೂಪ ಸಂಖ್ಯೆ 2 ಹಾಗೂ ಬೋಧಗಯಾದ ಶಿಲ್ಪಗಳು ಇಷ್ಟೆಲ್ಲ ವೈವಿಧ್ಯತೆಯನ್ನು ತೋರಿಸುವುದಿಲ್ಲ ಹಾಗೂ ಇಲ್ಲಿ ಶಿಲ್ಪಗಳಿಗೆ ಶೀರ್ಷಿಕೆಗಳೂ ಇಲ್ಲ.

(ಆ) ಬಿಡಿ ಶಿಲ್ಪಗಳು ಯಕ್ಷ ಮತ್ತು ಯಕ್ಷಿಯರ ಮೂರ್ತಿಗಳ ರೂಪದಲ್ಲಿ ಪಟಣ, ದಿದಾರ್‌ಗಂಜ್, ಪವಾಯ, ಮಥುರಾ, ವಿದಿಶಾ, ಪಾರ್‌ಖಂ, ಗ್ವಾಲಿಯರ್ ಮುಂತಾದೆಡೆಗಳಲ್ಲಿ ಸಿಗುತ್ತವೆ. ಇವೆಲ್ಲವುಗಳನ್ನು ಶೈಲಿಯ ಆಧಾರದ ಮೇಲೆ ಪ್ರ.ಶ.ಪೂ.2 ಹಾಗೂ 1ನೆಯ ಶತಮಾನಕ್ಕೆ ಸೇರಿಸಲಾಗಿದೆ. ಅವುಗಳಲ್ಲಿ ದಿದಾರ್‌ಗಂಜ್ ಯಕ್ಷಿಯ ಶಿಲ್ಪ ಮೌರ್ಯ ಶಿಲ್ಪಗಳ ಶೈಲಿಯನ್ನು ಹೋಲುವುದರಿಂದ ಕೆಲವರು ಅದನ್ನು ಮೌರ್ಯ ಕಾಲಕ್ಕೆ ಸೇರಿಸುತ್ತಾರೆ.

ಶುಂಗ ಕಾಲದ ಕಲ್ಲಿನ ಶಿಲ್ಪಗಳ ಕಲಾವಂತಿಕೆ : ಭಾರತದಲ್ಲಿ ಕಲ್ಲಿನ ಕಲೆ ಮೌರ್ಯ ಕಾಲದಲ್ಲೇ ಕಾಣಿಸಿಕೊಳ್ಳುತ್ತದೆಯಾದರೂ ಅಪ್ಪಟ ದೇಸೀ ಶೈಲಿಯ ಆರಂಭವನ್ನು ಶುಂಗ ಕಾಲದಲ್ಲಿ ಕಾಣಬಹುದು. ಭಾರತೀಯ ಹಳ್ಳಿಗಳ ಜಾನಪದ ಕಲೆ ಈ ಕಾಲದಲ್ಲಿ ಕಲ್ಲಿನಲ್ಲಿ ಅಭಿವೃದ್ಧಿ ಕಂಡುಕೊಂಡು ಮುಂದೆ ಶಿಷ್ಟ ಮಾರ್ಗ ಶೈಲಿಯಾಗಿ ಬೆಳೆಯುತ್ತದೆ. ಹಾಗಾಗಿ ಶುಂಗ ಶಿಲ್ಪಗಳ ಮೇಲೆ ಕಾಷ್ಠಶಿಲ್ಪದ ಪ್ರಭಾವ ಗಾಢವಾಗಿದ್ದು ಮಾನವಾಕೃತಿಗಳು ಚಪ್ಪಟೆಯಾಗಿರುತ್ತವೆ. ಮುಖ ಚಪ್ಪಟೆಯಾಗಿದ್ದು ಕತ್ತು-ಪಾದ ತೋರಿಸುವ ಸಂದರ್ಭದಲ್ಲಿ ಅವುಗಳನ್ನು ಸಹಜವಾಗಿ ಉಬ್ಬಿದಂತೆ ಪಕ್ಕಕ್ಕೆ ಹೊರಳಿಸಿ ತೋರಿಸಲಾಗುತ್ತದೆ. ವೇಷಭೂಷಣ, ಕೇಶಕಲಾಪಗಳನ್ನು ಮಾತ್ರ ಅತಿ ಸೂಕ್ಷ್ಮವಾಗಿ ಚಿತ್ರಿಸಿರುವುದರಿಂದ ಸಮಕಾಲೀನ ಜೀವನಶೈಲಿಯ ಅಧ್ಯಯನಕ್ಕೆ ಇವು ಅನ್ವಯವಾಗಿವೆ. ಶುಂಗ ಕಥನ ಶಿಲ್ಪಗಳು ಕೂಡ ತಮ್ಮದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಕಥನಗಳು ಜಾತಕ ಕಥೆಗಳನ್ನು, ಬುದ್ಧನ ಜೀವನದ ಘಟನೆಗಳನ್ನು ಚಿತ್ರಿಸುತ್ತವೆ. ಹಾಗೆ ಚಿತ್ರಿಸುವಾಗ ವಿಭಿನ್ನ ಕಾಲದ ಕಥೆಗಳನ್ನು ಒಂದೇ ಚೌಕಟ್ಟಿನಲ್ಲಿ ಪಾತ್ರಧಾರಿಗಳನ್ನು ಪುನರಾವರ್ತಿಸುವ ಮೂಲಕ ಕಾಲದ ಆಯಾಮವನ್ನು ನೀಡಲಾಗಿದೆ. ಹೀಗಾಗಿ ಒಂದೇ ಪಾತ್ರ ಅನೇಕ ವ್ಯಕ್ತಿಗಳಂತೆ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುತ್ತದೆ. ಹಾಗೂ ಒಂದು ಚೌಕಟ್ಟಿನಲ್ಲಿ ಬರುವ ಮುಂದಿನ, ಹಿಂದಿನ ಆಕೃತಿಗಳನ್ನೆಲ್ಲ ಒಂದೇ ಗಾತ್ರದಲ್ಲಿ ತೋರಿಸುವುದರಿಂದ ದೂರ ಹತ್ತಿರಗಳ ವ್ಯತ್ಯಾಸವನ್ನು ಈ ದೃಶ್ಯಗಳಲ್ಲಿ ಕಾಣಲಾಗುವುದಿಲ್ಲ. ಈ ವೈಶಿಷ್ಟ್ಯಗಳನ್ನು ಗಮನದಲ್ಲಿರಿಸಿಕೊಳ್ಳದಿದ್ದಲ್ಲಿ ಈ ಕಥನ ಶಿಲ್ಪಗಳನ್ನು ಅರ್ಥಮಾಡಿಕೊಳ್ಳುವುದು ಸೂಕ್ತ ಮತ್ತು ಬಹುಶಃ ಇವು ಚಪ್ಪಟೆಯಾಗಿರುವುದರಿಂದ ಯಾವಾಗಲೂ ಮಾನವಾಕೃತಿಗಳೆಲ್ಲ ಎದುರು ಮುಖಮಾಡಿರುತ್ತವೆ, ಇಲ್ಲ ಪಾರ್ಶ್ವಮುಖ ಮಾಡಿರುತ್ತವೆ. ಇವುಗಳ ಹಾವಭಾವಗಳು ಕೂಡ ತಕ್ಕಷ್ಟು ಅಭಿವ್ಯಕ್ತವಾಗದೇ ಆಕೃತಿಗಳು ಜಡವಾಗಿ ಕಾಣಿಸುತ್ತವೆ.

ಬಾರ್ಹುತ್ ಶಿಲ್ಪಗಳ ಈ ಲಕ್ಷಣ ಬೋಧಗಯಾದ ಶಿಲ್ಪಗಳನ್ನು ಕೆತ್ತುವ ಕಾಲಕ್ಕೆ ಸಾಕಷ್ಟು ಬದಲಾಯಿತು. ಬೋಧಗಯಾದಲ್ಲಿ ಕಥನ ಶಿಲ್ಪಗಳು ಪಾತ್ರಗಳ ಪುನರಾವರ್ತನೆಯನ್ನು ತೋರಿಸುವುದಿಲ್ಲ. ಬದಲಾಗಿ ಒಂದು ಘಟನೆಯ ಮುಖ್ಯ ದೃಶ್ಯವನ್ನು ಮಾತ್ರ ನಾಟಕೀಯವಾಗಿ ಒಂದು ಚೌಕಟ್ಟಿನೊಳಗೆ ತೋರಿಸಲಾಗುತ್ತದೆ. ಇವು ಕೆಲವೊಮ್ಮೆ ಹಿಂದೆ ತೆರೆಯನ್ನೂ ಚಿತ್ರಿಸುವುದರಿಂದ ಕಥನಗಳ ರಂಗಪ್ರಯೋಗದ ಪ್ರಭಾವ ಇವುಗಳ ಮೇಲಾದಂತೆ ಕಾಣುತ್ತದೆ. ಬೋಧಗಯಾದಲ್ಲಿ ಮೊತ್ತಮೊದಲ ಬಾರಿಗೆ ನಮಗೆ ರಾಶಿ ಚಿಹ್ನೆಗಳು, ರಥದ ಮೇಲೆ ಉಷಾ ಪ್ರತ್ಯುಷಾ ಇವರ ಜೊತೆ ಇರುವ ಸೂರ್ಯನ ಶಿಲ್ಪಗಳು ಸಿಗುತ್ತವೆ. ಇಲ್ಲಿಯ ಶಿಲ್ಪಗಳು ಕೂಡ ದುಂಡಾಗಿದ್ದು ಶುಂಗ ಕಾಲದ ಕಲ್ಲಿನ ಕಲೆಯ ವಿಕಾಸವನ್ನು ನಿದರ್ಶಿಸುತ್ತವೆ.

ಶುಂಗ ಮಣ್ಮೂರ್ತಿಗಳು: ಮಣ್ಮೂರ್ತಿಗಳೆಂದರೆ ಮಣ್ಣಿನಲ್ಲಿ ತಯಾರಿಸಿ ಭಟ್ಟಿಯಲ್ಲಿ ಸುಟ್ಟ ಮೂರ್ತಿಗಳು. ಇವುಗಳನ್ನು ಬಹುಶಃ ಕುಂಬಾರರೇ ಮಾಡುತ್ತಿದ್ದರು. ಶುಂಗಪೂರ್ವ ಕಾಲದಿಂದಲೂ ಗಂಗಾಬಯಲಿನ ನೆಲೆಗಳಲ್ಲಿ ಮಣ್ಮೂರ್ತಿಗಳು ಸಿಗುತ್ತವೆಯಾದರೂ ಶುಂಗ ಮಣ್ಮೂರ್ತಿಗಳಿಗೆ ಅವುಗಳದೇ ಆದ ಒದು ವೈಶಿಷ್ಟ್ಯವಿದೆ. ಅವನ್ನು ಒಮ್ಮುಖದ ಅಚ್ಚುಗಳಲ್ಲಿ ಮಾಡಿರುತ್ತಾರೆ. ಇವು ಫಲಕಗಳಂತೆ ಇದ್ದು ಇವುಗಳ ಮುಂಭಾಗವು ಅಚ್ಚಿನ ಮುದ್ರೆಯನ್ನು ಹೊಂದಿದ್ದರೆ ಹಿಂಭಾಗ ಸಪಾಟಾಗಿರುತ್ತದೆ. ಇವುಗಳಲ್ಲಿ ತೀರ ದೊಡ್ಡ ಫಲಕಗಳು 15 ಸೆಂಮೀ ಉದ್ದ, 10 ಸೆಂಮೀ ಅಗಲವಾಗಿರುತ್ತವೆ. ಈ ಫಲಕಗಳ ಮೇಲ್ಭಾಗಗಳಲ್ಲಿ ಒಂದು ತೂತು ಇರುವುದು ಇವುಗಳನ್ನು ಗೋಡೆಗೆ ತೂಗುಹಾಕುತ್ತಿದ್ದರು ಎಂಬುದರ ಸೂಚನೆಯಾಗಿದೆ. ಶುಂಗ ಮಣ್ಮೂರ್ತಿಗಳನ್ನು ಸ್ಟೆಲ್ಲಾ ಕ್ರಾಮ್ರಿಶ್ ಟೈಂ ಬೌಂಡ್ ಮಾದರಿಗಳೆಂದು ಕರೆದಿದ್ದಾರೆ. ಅಂದರೆ ಇವು ಶುಂಗಕಾಲದ ಶಿಲ್ಪಶೈಲಿಯ ವಿಕಾಸವನ್ನು ಬಿಂಬಿಸುವುದರಿಂದ ಶೈಲಿಯ ಆಧಾರದ ಮೇಲೆ ಇವುಗಳ ಕಾಲಗಣನೆ ಮಾಡಬಹುದಾಗಿದೆ. ಹಾಗಾಗಿ ಪ್ರಾಕ್ತನ ನೆಲೆಗಳ ಸ್ತರಗಳನ್ನು ಕಾಲಗಣನೆ ಮಾಡಲಿಕ್ಕೂ ಇವುಗಳನ್ನು ಬಳಸಿಕೊಳ್ಳಲಾಗಿದೆ. ಇವುಗಳ ಇನ್ನೊಂದು ವೈಶಿಷ್ಟ್ಯ ಎಂದರೆ ಇವುಗಳು ಪ್ರಾಚೀನ ನಗರ ಸಂಸ್ಕೃತಿಗೆ ಸೇರಿವೆ. ನಗರಗಳಲ್ಲಿ ವ್ಯಾಪಕವಾಗಿ ಬೇಡಿಕೆ ಇದ್ದ ಪರಿಣಾಮವಾಗಿ ಇವುಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಬೇಕಾಗಿದ್ದರಿಂದ ಅಚ್ಚಿನ ತಂತ್ರಜ್ಞಾನದ ಬಳಕೆಯಾಗಿದೆ. ಇಂಥ ಮಣ್ಮೂರ್ತಿಗಳು ಸಿಕ್ಕ ಪ್ರಮುಖ ಸ್ಥಳಗಳೆಂದರೆ ಕೌಶಾಂಬಿ, ಅಹಿಚ್ಛತ್ರ, ಮಥುರ, ರಾಜಘಾಟ್, ಪಟಣ, ಬಕ್ಸರ್, ಚಂದ್ರಕೇತುಗಡ ಹಾಗೂ ತಾಮ್ರಲಿಪ್ತಿಗಳು.

ಶುಂಗ ಮಣ್ಮೂರ್ತಿಗಳು ಪ್ರಾಚೀನ ಮಣ್ಮೂರ್ತಿಗಳಲ್ಲೇ ಅತೀ ಸುಂದರವಾಗಿವೆ. ಇವು ಚಿಕ್ಕ ಕುಸುರಿ ಕೆಲಸದ ಮಾದರಿಗಳಂತೆ ಇದ್ದು ಸಮಕಾಲೀನ ಆಭರಣ, ವೇಷಭೂಷಣ, ಕೇಶಕಲಾಪಗಳನ್ನು ಅಧ್ಯಯನ ಮಾಡಲು ಮಾದರಿಗಳಂತಿವೆ. ಇವುಗಳು ಸಾಧಾರಣವಾಗಿ ದೇವತೆಗಳ ಮೂರ್ತಿಗಳನ್ನು ಚಿತ್ರಿಸುತ್ತವೆ. ಅವುಗಳಲ್ಲಿ ಅತಿಹೆಚ್ಚು ಶ್ರೀ ದೇವತೆಯವಾಗಿದ್ದು, ಆಕೆ ಸಾಧಾರಣವಾಗಿ ಸೊಂಟದ ಮೇಲೆ ಕೈಯಿಟ್ಟು ಕಮಲದ ಮೇಲೆ ನಿಂತಿರುತ್ತಾಳೆ. ಅವಳಿಗೆ ತಲೆಯ ಮೇಲೆ ಎರಡು ಮುಡಿಗಳಿದ್ದು ಅವುಗಳನ್ನು ಒಡವೆಗಳಿಂದ ಹಾಗೂ ವಿವಿಧ ಉಪಕರಣಗಳಿಂದ ಅಲಂಕರಿಸಲಾಗಿರುತ್ತದೆ. ಅವಳು ಬಾರಬಾಣ ಎಂಬ ಹೊಲಿದ ಮೇಲುಡುಪನ್ನು ಧರಿಸಿದ್ದು ಲಂಗದಂಥ ಕೆಳಉಡುಪನ್ನು ಧರಿಸಿರುತ್ತಾಳೆ. ಗುರುತಿಸಲಾಗದ ಅನೇಕ ದೇವಿಯರನ್ನು ಕೂಡ ನಾವು ಶುಂಗ ಮಣ್ಮೂರ್ತಿಗಳಲ್ಲಿ ನೋಡುತ್ತೇವೆ. ಇವು ತಾಳವೃಂತ, ಮೋರಹಸ್ತ ಎಂಬ ಬೀಸಣಿಕೆಗಳನ್ನು ಜೋಡಿ ಮೀನುಗಳನ್ನು ಹಿಡಿದ ಹಾಗೆ ತೋರಿಸಲಾಗಿದೆ. ರೆಕ್ಕೆಗಳಿರುವ ಒಂದು ಗಂಡು ದೇವತೆ ಕೂಡ ಕಾಣಸಿಗುತ್ತದೆ. ಅನೇಕ ಮಣ್ಮೂರ್ತಿಗಳು ದಂಪತಿ ಹಾಗೂ ಮಿಥುನ ಶಿಲ್ಪಗಳಾಗಿವೆ. ಶಾಕುಂತಲ (ಭೀತದಲ್ಲಿ ಸಿಕ್ಕಿದ್ದು), ಸೀತಾಪಹರಣ, ವಾಸವದತ್ತಾಪಹರಣ (ಕೌಶಾಂಬಿಯಲ್ಲಿ ಸಿಕ್ಕಿದ್ದು) ಮುಂತಾದ ಪುರಾಣ ಸನ್ನಿವೇಶಗಳ ಸುಂದರ ಚಿತ್ರಣಗಳು ಕೂಡ ಲಭ್ಯವಿದೆ. ಕೌಶಾಂಬಿಯಲ್ಲಿ ಆಟಿಕೆಯ ಮಣ್ಣಿನ ಬಂಡಿಗಳ ಸುಂದರ ವೈವಿಧ್ಯಪೂರ್ಣ ಮಾದರಿಗಳು ಸಿಕ್ಕಿವೆ.

ಈ ಕಾಲದಲ್ಲಿ ಇತರ ಪ್ರಕಾರದ ಮಣ್ಮೂರ್ತಿಗಳು ಕೂಡ ಸಿಗುತ್ತವೆ. ಬಕ್ಸರ್ ಮಣ್ಮೂರ್ತಿಗಳು ಶಿರೋಭಾಗವನ್ನು ಮಾತ್ರ ಹೊಂದಿದ್ದು ಸುಂದರ ಹಾಗೂ ವೈವಿಧ್ಯಪೂರ್ಣವಾದ ಕೇಶಾಲಂಕಾರ ಮತ್ತು ಶಿರೋಭೂಷಣಗಳನ್ನು ತೋರಿಸುತ್ತವೆ. ಇವುಗಳನ್ನು ಅಚ್ಚಿನಲ್ಲಿ ರೂಪಿಸಿ ಕೈಯಲ್ಲಿ ಅಲಂಕರಣಗಳನ್ನು ಮಾಡಲಾಗಿದೆ. ಪಟಣದ ಮೂರ್ತಿಗಳು ವಿವಿಧ ನೃತ್ಯಭಂಗಿಯಲ್ಲಿರುವ ಸ್ತ್ರೀಯರನ್ನು ತೋರಿಸುತ್ತಿದ್ದು ಅವುಗಳ ಮೇಲೆ ರೋಮನ್ ಮಣ್ಮೂರ್ತಿಕಲಾಶೈಲಿಯ ಪ್ರಭಾವವನ್ನು ಗುರುತಿಸಲಾಗಿದೆ.

ಶುಂಗ ಕಲೆಯ ಮಹತ್ತ್ವ : ಒಟ್ಟಾರೆಯಾಗಿ ಕಲ್ಲಿನ ಹಾಗೂ ಮಣ್ಣಿನ ಶಿಲ್ಪಗಳೆರಡರಲ್ಲೂ ಶುಂಗಶೈಲಿಯ ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದು. ಚಪ್ಪಟೆ ದೇಹಗಳು, ಅತಿಯಾದ ಹಾಗೂ ವಾಸ್ತವಿಕ ಅಲಂಕರಣಗಳು ಸಾಮಾನ್ಯ. ಇವು ಭಾರತೀಯ ದೇಸೀ ಶೈಲಿಯ ಅತ್ಯಂತ ಪ್ರಾಚೀನ ದೃಷ್ಟಾಂತಗಳಾಗಿವೆ. ಸಮಕಾಲೀನ ಸಂಸ್ಕೃತಿಯ ಅಧ್ಯಯನಕ್ಕೆ ಇವುಗಳಲ್ಲಿ ಅಪಾರ ಅವಕಾಶವಿದೆ. ಶ್ರೀ ಸೂರ್ಯ, ಯಕ್ಷ, ಯಕ್ಷಿಣಿ, ನಾಗ ಮುಂತಾದ ಭಾರತೀಯ

ದೇವತೆಗಳ ಮೂರ್ತಿಗಳ ಅತ್ಯಂತ ಪ್ರಾಚೀನ ಮಾದರಿಗಳು ಈ ಶಿಲ್ಪಗಳಲ್ಲೇ ಲಭ್ಯವಾಗಿವೆ. ಹಾಗೂ ಭಾರತೀಯ ಪುರಾಣ ಕಥೆಗಳ ಅತ್ಯಂತ ಪ್ರಾಚೀನ ದೃಶ್ಯರೂಪಗಳು ಇವುಗಳಲ್ಲಿ ಸಿಗುತ್ತವೆ. ಭಾರತೀಯ ಮತಪಂಥಗಳ ಇತಿಹಾಸಕ್ಕೆ, ಅದರಲ್ಲೂ ಬೌದ್ಧಧರ್ಮದ ಇತಿಹಾಸಕ್ಕೆ ಇದರಲ್ಲಿರುವ ದೃಶ್ಯರೂಪಕಗಳು ಅಗಾಧವಾದ ಮಾಹಿತಿ ನೀಡಬಲ್ಲವು. (ಆರ್.ಎಚ್.)

**ಶೃಂಗವೇರಪುರ:** ಉತ್ತರಪ್ರದೇಶ ರಾಜ್ಯದ ಸೋರಾವ್ ತಾಲ್ಲೂಕಿನಲ್ಲಿ ಅಲಹಾಬಾದ್‌ನಿಂದ ವಾಯವ್ಯಕ್ಕೆ 36 ಕಿಮೀ ದೂರದಲ್ಲಿ ಗಂಗಾನದಿಯ ಎಡದಂಡೆಯ ಮೇಲಿರುವ ಪುರಾತತ್ತ್ವ ನೆಲೆ. ರಾಮಾಯಣದ ಪ್ರಕಾರ ವಿಭಾಂಡಕ ಮುನಿ ಮತ್ತು ಆತನ ಮಗ ಋಷ್ಯಶೃಂಗರ ಆಶ್ರಮವಿದ್ದ ಸ್ಥಳ. ಸಂತತಿಹೀನನಾದ ಅಯೋಧ್ಯೆಯ ಅರಸ ದಶರಥ ಮಕ್ಕಳನ್ನು ಬಯಸಿ ಋಷ್ಯಶೃಂಗನನ್ನು ತನ್ನ ರಾಜಧಾನಿಗೆ ಕರೆಸಿಕೊಂಡ. ಆತನ ನೇತೃತ್ವದಲ್ಲಿ ಪುತ್ರಕಾಮೇಷ್ಟಿ ಯಾಗ ನಡೆದು ರಾಮ ಮತ್ತು ಅವನ ಸೋದರರು ಜನಿಸಿದರು. ಪಿತೃವಾಕ್ಯ ಪಾಲಿಸುವ ಸಲುವಾಗಿ ರಾಮ ವನವಾಸಕ್ಕೆ ಹೊರಟಾಗ ಪುನಃ ಈ ಸ್ಥಳದ ಉಲ್ಲೇಖ ಬರುತ್ತದೆ. ನಿಷಾದ ರಾಜನಾದ ಗುಹ ರಾಮ, ಲಕ್ಷ್ಮಣ, ಸೀತೆಯರನ್ನು ತನ್ನ ನಾವೆಯಲ್ಲಿ ಇಲ್ಲಿಯ ರಾಮಚೌರಾದ ಬಳಿ ಗಂಗಾನದಿಯನ್ನು ದಾಟಿಸಿದ. ಈ ಮೂವರು ಗಂಗೆಯ ದಡದಲ್ಲಿ ರಾತ್ರಿಯನ್ನು ಕಳೆದ ಇಂಗುದಿ ವೃಕ್ಷ ಇಲ್ಲಿದೆಯೆಂದು ಹೇಳಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಸಿಮ್ಲದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಅಡ್ವಾನ್ಸ್‌ಡ್ ಸ್ಟಡೀಸ್‌ನ ಸಹಯೋಗದೊಂದಿಗೆ ರಾಮಾಯಣ ನೆಲೆಗಳ ಪುರಾತತ್ತ್ವೀಯ ಅಧ್ಯಯನ ಯೋಜನೆಯ ಅಂಗವಾಗಿ ಶೃಂಗವೇರಪುರದಲ್ಲಿ 1975–86 ರವರೆಗೆ ಉತ್ಖನನ ನಡೆಸಿತು. ಈ ನೆಲೆ 1000x500ಮೀ ವಿಸ್ತೀರ್ಣವಿದ್ದು ಸು.15 ಮೀ ಎತ್ತರವಿದೆ.

ಕಾವಿಬಣ್ಣದ ಮಣ್ಪಾತ್ರೆಗಳನ್ನು ಉಪಯೋಗಿಸುತ್ತಿದ್ದ ಜನರು ಇಲ್ಲಿ ಪ್ರಪ್ರಥಮವಾಗಿ ನೆಲೆಸಿದರು (ಹಂತ 1). ಈ ಮಣ್ಪಾತ್ರೆಗಳಲ್ಲಿ ಎರಡು ಬಗೆಗಳಿವೆ: ಹದವಾಗಿ ಸುಟ್ಟ ನುಣುಪು ಪಾತ್ರೆಗಳು; ದೊರಕು ಮಣ್ಣಿನಿಂದ ಮಾಡಿದ ಸರಿಯಾಗಿ ಸುಡದ ಪಾತ್ರೆಗಳು. ತೆಳುಮಣ್ಣಿನ ಲೇಪ, ಕೊರೆದು ಹಾಗೂ ಅಂಟಿಸಿ ಮೂಡಿಸಿದ, ಕೆಲವೊಮ್ಮೆ ಚಿತ್ರಿಸಿದ ಅಲಂಕರಣ ಇವು ಎರಡು ರೀತಿಯ ಪಾತ್ರೆಗಳಿಗೂ ಸಾಮಾನ್ಯಾಂಶಗಳು. ಮಣ್ಣು ತಡಿಕೆಯ ಸರಳ ಮನೆಗಳಲ್ಲಿ ಈ ಜನರು ವಾಸಿಸುತ್ತಿದ್ದರು. ಔಷ್ಣದೀಪ್ತಿ ಕಾಲಮಾಪನದಂತೆ ಈ ವಸತಿಯ ಆರಂಭಕಾಲ ಪ್ರ.ಶ.ಪೂ. 1750.

ಕೆಲಕಾಲದ ಅನಂತರ (ಹಂತ 2) ಇಲ್ಲಿ ಕಪ್ಪು–ಕೆಂಪು ದ್ವಿವರ್ಣ, ಕಪ್ಪು ಲೇಪನವುಳ್ಳ ಹಾಗೂ ಹೊಳಪಿನ ಬೂದುಬಣ್ಣದ ಮಣ್ಪಾತ್ರೆಗಳನ್ನು ಉಪಯೋಗಿಸುವ ಜನರ ವಾಸ್ತವ್ಯ ಪ್ರಾರಂಭವಾಯಿತು. ಔಷ್ಣದೀಪ್ತಿ ಹಾಗೂ ಇಂಗಾಲ–14 ರ ಕಾಲಮಾನವನ್ನು ಆಧರಿಸಿ ಈ ಸಂಸ್ಕೃತಿಯ ಆರಂಭ ಪ್ರ.ಶ.ಪೂ. 1000 ಎಂದು ನಿರ್ಧರಿಸಲಾಗಿದೆ. ಈ ಸಂಸ್ಕೃತಿಯ ಅಂತ್ಯಭಾಗದಲ್ಲಿ ಚಿತ್ರಿತ ಬೂದುಬಣ್ಣದ ಮಣ್ಪಾತ್ರೆಗಳ ಚೂರುಗಳು ದೊರಕಿವೆ.

ಪ್ರ.ಶ.ಪೂ.7ನೆಯ ಶತಮಾನದ ವೇಳೆಗೆ ಔತ್ತರೇಯ ಕಪ್ಪು ಮೆರುಗಿನ ಮಣ್ಪಾತ್ರೆ ಇಲ್ಲಿ ಬಳಕೆಗೆ ಬಂದಿತು (ಹಂತ 3). ಈ ಹಂತದಲ್ಲಿ ವಸತಿಯ ವಿಸ್ತೀರ್ಣ ಹೆಚ್ಚಿತಲ್ಲದೆ ಅನೇಕ ಬೆಳವಣಿಗೆಗಳಾದುವು. ಸ್ವಲ್ಪ ಕಾಲದಲ್ಲಿಯೇ ನಾಣ್ಯ, ತೂಕದ ಬಟ್ಟುಗಳು ಬಳಕೆಗೆ ಬಂದವಲ್ಲದೆ ಸುಟ್ಟಇಟ್ಟಿಗೆಯ ಕಟ್ಟಡಗಳು ನಿರ್ಮಾಣವಾಗಲಾರಂಭಿಸಿದವು. ಬರವಣಿಗೆಯ ಪ್ರಾರಂಭಿಕ ಹಂತವೂ ಮೊದಲಿಟ್ಟಿತು. ಸರ್ವತೋಮುಖವಾದ ಬೆಳವಣಿಗೆಯನ್ನು ಕಂಡ ಈ ಸಂಸ್ಕೃತಿ ಪ್ರ.ಶ.ಪೂ. 2ನೆಯ ಶತಮಾನದವರೆಗೆ ಅಸ್ತಿತ್ವದಲ್ಲಿತ್ತು.

ಮುಂದಿನ ಹಂತದಲ್ಲಿ (ಹಂತ 4) ಕೆಂಪುಬಣ್ಣದ ಮಣ್ಪಾತ್ರೆಗಳು ಕಂಡುಬಂದವು. ಈ ಕಾಲದ ಕೆಳಸ್ತರಗಳಲ್ಲಿ ವೃಷಭದ ಚಿಹ್ನೆ ಇರುವ ನಾಣ್ಯ ಹಾಗೂ ಅಯೋಧ್ಯೆಯ ಅರಸರ ನಾಣ್ಯಗಳು ದೊರೆತವು. ಮೇಲ್ಪದರಗಳಲ್ಲಿ ಪ್ರ.ಶ.ಪೂ./ಪ್ರ.ಶ.1ನೆಯ ಶತಮಾನದ ಬ್ರಾಹ್ಮಿಲಿಪಿಯ ಬರೆಹವುಳ್ಳ ಸುಡಾವೆಮಣ್ಣಿನ ಮುದ್ರೆಗಳು ಮತ್ತು ವಿಮ ಕಡ್‌ಫೀಸಿಸ್‌ನ (ಪ್ರ.ಶ.50–78) ಒಂದೆರಡು ನಾಣ್ಯಗಳು ಸಿಕ್ಕವು. ಈ ಹಂತದ ಕೊನೆಗೆ ಜನವಸತಿ ಶೃಂಗವೇರಪುರದಾದ್ಯಂತ ಹರಡಿತು. ಪ್ರಶ.ಪೂ. 1ನೆಯ ಶತಮಾನದ ಕೊನೆಯ ದಶಕಗಳಲ್ಲಿ ಇಲ್ಲಿಯ ಪ್ರಸಿದ್ಧ ಜಲಾಶಯ ನಿರ್ಮಾಣವಾಯಿತು. ಈ ಜಲಾಶಯ ಹಾಳಾದ ಸಂದರ್ಭದಲ್ಲಿ ವಸತಿಯೂ ಬಹುಪಾಲು ನಶಿಸಿತು. ಮುಂದೆ ಗುಪ್ತ, ರಜಪೂತ, ಮೊಗಲ್ ದೊರೆಗಳು ಹಾಗೂ ಬ್ರಿಟಿಷ್ ಆಳಿಕೆಗೆ ಒಳಪಟ್ಟ ಈ ಸ್ಥಳದಲ್ಲಿ ಇಂದಿಗೂ ಜನವಸತಿಯಿದೆ.

ರಾಮಾಯಣ ನೆಲೆಗಳ ಪುರಾತತ್ತ್ವೀಯ ಅಧ್ಯಯನದ ದೃಷ್ಟಿಯಿಂದ 3ನೆಯ ಹಂತ (ಪ್ರ.ಶ.ಪೂ.7–2ನೆಯ ಶತಮಾನ) ಮುಖ್ಯವಾದುದು. ರಾಮಾಯಣದಲ್ಲಿ ಉಲ್ಲೇಖಿಸಲಾದ ಇತರ ನೆಲೆಗಳಲ್ಲಿರುವಂತೆ ಇಲ್ಲಿಯೂ ಔತ್ತರೇಯ ಮೆರುಗಿನ ಕಪ್ಪು ಪಾತ್ರೆಗಳಿವೆ. ಜೊತೆಗೆ ಸಮಕಾಲೀನವಾದ ಎಲ್ಲ ಸಾಂಸ್ಕೃತಿಕ ಅಂಶ, ಪ್ರಭಾವ, ಬೆಳವಣಿಗೆಗಳು ಇಲ್ಲಿಯೂ ಕಾಣಬರುತ್ತವೆ.

ನದಿಯ ದಡದಲ್ಲಿ ಇಟ್ಟಿಗೆಗಳನ್ನು ಉಪಯೋಗಿಸಿ ಕಟ್ಟಿರುವ ತಟಾಕ ಸಂಕೀರ್ಣ (ಹಂತ 4) ಗಮನಾರ್ಹ ಶೋಧವಾಗಿದೆ. ಈ ನೆಲೆ ಗಂಗಾನದಿಯ ದಡದಲ್ಲಿಯೇ ಇದ್ದರೂ ಇಂತಹ ತಟಾಕ ವ್ಯವಸ್ಥೆಯ ನಿರ್ಮಾಣದ ಆವಶ್ಯಕತೆ ಸುಲಭವಾಗಿ ಅರ್ಥವಾಗುವುದಿಲ್ಲ. ಬಹುಶಃ ಈ ಕಾಲಕ್ಕೆ ಆಗಿರಬಹುದಾದ ಜನಸಂಖ್ಯಾ ಹೆಚ್ಚಳ, ವಸತಿ ಪ್ರದೇಶದ ವಿಸ್ತಾರ, ಆಗಾಗ್ಗೆ ನದಿಯ ಪಾತ್ರದಲ್ಲಿ ಆಗುತ್ತಿದ್ದ ಬದಲಾವಣೆ, ಮಹಾಪೂರದ ಹಾವಳಿ, ಬರಗಾಲದ ಬವಣೆಯ ಭಯ, ಇವೆಲ್ಲದರ ಒಟ್ಟಾರೆ ಪರಿಣಾಮವಾಗಿ ಹಾಗೂ ಇವುಗಳ ಪರಿಹಾರಕ್ಕಾಗಿ ಈ ವ್ಯವಸ್ಥೆಯನ್ನು ಮಾಡಿಕೊಂಡಿದ್ದಿರಬೇಕು. ವಾಯವ್ಯ–ಆಗ್ನೇಯ ದಿಕ್ಕಿಗೆ ಹೊಂದಿಕೊಂಡಂತೆ ನಿರ್ಮಿಸಿದ ಈ ವ್ಯವಸ್ಥೆಯಲ್ಲಿ ಮೂರು ತಟಾಕಗಳು, ಅವುಗಳಿಗೆ ಶುದ್ಧ ನೀರು ಪೂರೈಸುವ ಸಲುವಾಗಿ ಮಾಡಿದ ನಾಲೆ ಅಥವಾ ಕಿರುಕಾಲುವೆ, ಒಳಹರಿವು, ಹೊರಹರಿವಿಗಾಗಿ ಮಾಡಿದ್ದ ಏರ್ಪಾಡುಗಳ ಒಂದು ಅಚ್ಚುಕಟ್ಟಾದ ಅದ್ಭುತ ಕಟ್ಟಡ ಸಮುಚ್ಚಯವಿದೆ. ಈ ತಟಾಕಗಳಲ್ಲಿ ಮೊದಲೆರಡು ಉದ್ದೇಶಪೂರ್ವಕವಾಗಿ ಮಾಡಿದ ಸ್ವಲ್ಪ ಬಾಗಿದ ಬಾಹುಗಳುಳ್ಳ ಆಯತಾಕಾರದವು. ಮೂರನೆಯದು ವೃತ್ತಾಕಾರದ್ದು. ಇವೆಲ್ಲವನ್ನೂ ಎರಡು ವಿಶೇಷ ಅಳತೆಯ, ಚೆನ್ನಾಗಿ ಸುಟ್ಟಇಟ್ಟಿಗೆಗಳಿಂದ ಕಟ್ಟಲಾಗಿದೆ. 64x48x12 ಸೆಂಮೀ ಅಳತೆಯ ಇಟ್ಟಿಗೆಗಳನ್ನು ತಟಾಕಗಳ ಒಳ, ಹೊರ ಹರಿವಿನ ಸಂಪರ್ಕಕಾಲುವೆ ಹಾಗೂ ನೆಲಹಾಸಿಗೆ ಉಪಯೋಗಿಸಿದ್ದರೆ ಮುಖ್ಯ ಭಾಗಗಳಿಗೆ 44–41.5 ಸೆಂಮೀ ಉದ್ದ, 28.5–27 ಸೆಂಮೀ ಅಗಲ ಹಾಗೂ 7–5.5 ಸೆಂಮೀ ದಪ್ಪದ ಇಟ್ಟಿಗೆ ( ಬಹುಶಃ 6:4:1 ರ ಅನುಪಾತದ, 42:29:7 ಅಳತೆ) ಗಳನ್ನು ಉಪಯೋಗಿಸಿದೆ.



ತಟಾಕದ ನಕ್ಷೆ

ಪ್ರವಾಹ ಕಾಲದಲ್ಲಿ ಗಂಗಾನದಿಯ ನೀರಿನಮಟ್ಟ ಹಲವು ಮೀ ನಷ್ಟು ಮೇಲೇರುತ್ತಿತ್ತು. ಇದನ್ನು ವಿಶೇಷವಾಗಿ ಗಮನಿಸಿದ್ದ ಆ ಕಾಲದ ಜಲತಂತ್ರನಿಪುಣರು ಹೆಚ್ಚುವರಿಯಾಗಿ ಹರಿದು ಹಾವಳಿ ಉಂಟುಮಾಡುತ್ತಿದ್ದ ನೀರನ್ನು ಜಾಣ್ಮೆಯಿಂದ ಸಂಗ್ರಹಿಸಿ ಉಪಯೋಗಿಸಿಕೊಳ್ಳಲು ಮಾಡಿದ ಯೋಜನೆ ಇದು. ಗಂಗೆಯ ಪಾತ್ರದಲ್ಲಿ ಉತ್ತರದಿಕ್ಕಿನಿಂದ ಮೇಲ್ಮಟ್ಟದಲ್ಲಿ ಹರಿಯುವ ಸ್ವಾಭಾವಿಕ ಕಾಲುವೆಯೊಂದು ಶೃಂಗವೇರಪುರದತ್ತ ಹರಿಯುತ್ತದೆ. ಈ ಕಾಲುವೆಗೆ ಒಂದು ಕಿರುಕಾಲುವೆಯನ್ನು ತೋಡಿ ನೀರಿನ ಪಾತ್ರ ಬದಲಿಸಿಕೊಂಡು ತಟಾಕ ಸಮುಚ್ಚಯದತ್ತ ಹರಿಸಲಾಗಿದೆ. ಯು–ಆಕಾರದಲ್ಲಿರುವ ಈ ಕಿರುಕಾಲುವೆ ಮೇಲೆ 11 ಮೀ ಅಗಲ ಕೆಳಗೆ 3 ಮೀ ಅಗಲವಿದ್ದು, ಆಯಾ ಸ್ಥಳದ ಆವಶ್ಯಕತೆಗೆ ತಕ್ಕಂತೆ 8–5 ಮೀ ಆಳವಾಗಿದೆ. ಈ ಕಿರುಕಾಲುವೆಯಿಂದ ಪ್ರವಾಹದ ನೀರು ಒಳಹರಿದು ಬರುವಾಗಲೇ ರಭಸ ಕಡಿಮೆಮಾಡಿ ಹೂಳು ಸಂಗ್ರಹಿಸಲು ವಿಶಿಷ್ಟ ರೀತಿಯಲ್ಲಿ ವಿನ್ಯಾಸ ಮಾಡಿದ ರಾಡಿ ಸೋಸುವ ಕೊಠಡಿಯನ್ನು ನಿರ್ಮಿಸಲಾಗಿದೆ. ಇದರಿಂದ ಶುದ್ಧ ನೀರು ಮಾತ್ರವೇ ಮೊದಲನೆಯ ಆಯತಾಕಾರದ (30x8 ಮೀ) ತಟಾಕಕ್ಕೆ ಹರಿಯುತ್ತದೆ. ಪ್ರತಿಯೊಂದು ಹಂತದಲ್ಲಿ ಒಳಹರಿವಿನ ವಾಹಕಗಳನ್ನು ಎತ್ತರದಲ್ಲಿ ಸೋಪಾನ ರೀತಿಯಲ್ಲಿ ಅಳವಡಿಸಿದ್ದು ಇದರಿಂದ ರಾಡಿ ಸಂಗ್ರಹ ಕಾರ್ಯವೂ ಸಹಜವಾಗಿ ನಡೆಯುತ್ತದೆ. ಇಂತಹುದೇ ವಿಶಿಷ್ಟ ಏರ್ಪಾಡಿನ ಮೂಲಕ ಇನ್ನಷ್ಟು ಶುದ್ಧೀಕರಿಸಿದ ನೀರು ಎರಡನೆಯ ತಟಾಕಕ್ಕೆ ಬರುತ್ತದೆ. ಈ ತಟಾಕ ಬಹುಶಃ ಆದಿ ಇತಿಹಾಸಕಾಲದಲ್ಲಿ ಕಟ್ಟಿದ ಅತಿದೊಡ್ಡ ಮಾನವನಿರ್ಮಿತ ತಟಾಕವಾಗಿದ್ದು (120x12.5 ಮೀ) ಇದರಲ್ಲಿ ಕನಿಷ್ಠ 6.5 ದಶಲಕ್ಷ ಲೀಟರ್ ಶುದ್ಧನೀರು ಸಂಗ್ರಹವಾಗುತ್ತಿತ್ತೆಂದು ಅಂದಾಜಿಸಲಾಗಿದೆ. ಈ ತಟಾಕ ತುಂಬಿದ ಅನಂತರ ನೀರು ತಾನೇ ತಾನಾಗಿ, ಉದ್ದನೆಯ ಜಲವಾಹಕದ ಮೂಲಕ ಇದರ ಆಗ್ನೇಯಕ್ಕೆ ಕಟ್ಟಿದ ವೃತ್ತಾಕಾರದ ಮೂರನೆಯ ತಟಾಕಕ್ಕೆ ಪ್ರವಹಿಸುತ್ತದೆ. ವೃತ್ತಾಕಾರದ ತಟಾಕ ವಿನ್ಯಾಸ ಹಾಗೂ ಉದ್ದೇಶಗಳಲ್ಲಿ ಮೊದಲೆರಡಕ್ಕಿಂತ ವಿಶಿಷ್ಟವಾದದ್ದು. ಇದರ ಕೆಳಹಂತದ ಹೂಳಿನಲ್ಲಿ ದೊರಕಿರುವ ತ್ರಿನೇತ್ರ ಶಿವ, ಪಾರ್ವತಿ, ಕುಬೇರ ಮುಂತಾದ ದೇವತೆಗಳ ಸುಡಾವೆಮಣ್ಣಿನ ಗೊಂಬೆಗಳು ಈ ತಟಾಕವನ್ನು ವಿಶಿಷ್ಟ ಧಾರ್ಮಿಕ ಕ್ರಿಯೆಗಳ ಆಚರಣೆಗಾಗಿ ಕಟ್ಟಲಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಮೂರೂ ತಟಾಕಗಳು ತುಂಬಿದ ಅನಂತರ ಹೊರ ಹರಿಯುವ ನೀರು ಹಾಗೂ ಉಪಯೋಗಿಸಿ ಮಲಿನವಾದ ತ್ಯಾಜ್ಯ ಜಲ ಇವನ್ನು ಪುನಃ ನದಿಗೆ ಹರಿದುಬಿಡಲು ರೂಪಿಸಿದ್ದ ಜಲವಾಹಕಗಳ ಕೆಲವು ಭಾಗಗಳನ್ನೂ

ಉತ್ಖನನದಲ್ಲಿ ಪತ್ತೆಹಚ್ಚಲಾಗಿದೆ. ಈ ತಟಾಕಗಳ ಭದ್ರತೆಗಾಗಿ ಜಲಾಶಯದ ಗೋಡೆಯಿಂದಾಚೆಗೆ ಇನ್ನೊಂದು ಹೆಚ್ಚುವರಿ ಒತ್ತುಗೋಡೆ ಕಟ್ಟಿರುವುದು, ಉಪಯೋಗಕ್ಕಾಗಿ ಅಲ್ಲಲ್ಲಿ ಕಟ್ಟಿರುವ ಸೋಪಾನ ಪಂಕ್ತಿಗಳು ಮತ್ತು ಬರಗಾಲದಲ್ಲಿನ ಉಪಯೋಗಕ್ಕಾಗಿ ತಟಾಕಗಳ ನೆಲಹಾಸಿನಲ್ಲಿ ಆಳವಾಗಿ ತೋಡಿದ್ದ ತುರ್ತು ಅಂತರ್ಜಲ ಸಂಗ್ರಾಹಕ ಬಾವಿಗಳು–ಇವು ಈ ಜಲಸಂಗ್ರಹಣ ವ್ಯವಸ್ಥೆಯ ಕೆಲವು ವಿಶಿಷ್ಟ ಅಂಶಗಳು. ಒಟ್ಟಿನಲ್ಲಿ 2000 ವರ್ಷಗಳಿಗೂ ಹಿಂದೆ ಶುದ್ಧ ಕುಡಿಯುವ ನೀರು ಸಂಗ್ರಹಿಸಲು ಹಾಗೂ ಧಾರ್ಮಿಕ ಆಚರಣೆಗಳಿಗೆ ಬಳಸಲು ಕಟ್ಟಲಾದ ಈ ತಟಾಕ ಸಮುಚ್ಚಯ ಆ ಕಾಲದ ಜಲತಂತ್ರಜ್ಞರ ನೈಪುಣ್ಯ, ಕೌಶಲಕ್ಕೆ ಸಾಕ್ಷಿಯಾದ ಅದ್ಭುತ ಕಾಮಗಾರಿಯಾಗಿದೆ. (ಎಂ.ವಿ.ವಿ.)

**ಶೃಂಗೇರಿ:** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಇದರ ದಕ್ಷಿಣಕ್ಕೆ 2 ಕಿಮೀ ದೂರದಲ್ಲಿ ತುಂಗಾ ನದಿಯ ಎಡದಂಡೆಯ ಮೇಲಿರುವ ವಿದ್ಯಾರಣ್ಯಪುರವನ್ನು 1386ರಲ್ಲಿ ವಿದ್ಯಾರಣ್ಯರು ನಿಧನರಾದಾಗ ಅವರ ನೆನಪಿಗಾಗಿ ವಿಜಯನಗರದ ದೊರೆ ಎರಡನೆಯ ಹರಿಹರ ದತ್ತಿಕೊಟ್ಟ ಕಾರಣ ಗ್ರಾಮಕ್ಕೆ ವಿದ್ಯಾರಣ್ಯಪುರ ವೆಂಬ ಹೆಸರು ಬಂತೆಂದು ತಿಳಿದುಬರುತ್ತದೆ. ಈ ಗ್ರಾಮದ ಒಂದು ಭಾಗವನ್ನು ವಸಿಷ್ಠಾಶ್ರಮ ವೆಂದೂ ಗುರುತಿಸುತ್ತಾರೆ. ಇಲ್ಲಿ ಗಣಪತಿ, ವಿದ್ಯಾಶಂಕರ ದೇವಾಲಯಗಳೂ ಇಕ್ಕೇರಿಯ ಶಿವಪ್ಪನಾಯಕ ಕಟ್ಟಿಸಿದುದೆಂದು ಹೇಳುವ ಕಲ್ಲಿನ ಕಟ್ಟಡದ ಸದಾಶಿವ ದೇವಾಲಯವೂ ಇವೆ. ಸಮೀಪದ ಹಳೆ ಶೃಂಗೇರಿ ಎಂದು ಕರೆಯುವ ಸ್ಥಳದಲ್ಲಿ ಚತುರ್ಮುಖವಿದ್ಯೇಶ್ವರ ಆಲಯವಿದೆ. ಪಶ್ಚಿಮವಾಹಿನಿ ಎಂಬ ಸ್ಥಳದಲ್ಲಿ ಗೋಪಿನಾಥ ದೇವಾಲಯವಿದೆ. ಶೃಂಗೇರಿಗೆ ಪಶ್ಚಿಮದಲ್ಲಿ 10 ಕಿಮೀ ದೂರದಲ್ಲಿರುವ ಗಂಧಗಟ್ಟ ಗ್ರಾಮಕ್ಕೆ ಸೇರಿದ ಅರ್ಧಿನಿಯಲ್ಲಿ ಸು. 7 ಅಡಿ ಎತ್ತರವಿದ್ದು 6 ಹಂತಗಳುಳ್ಳ ಎರಡು ದೊಡ್ಡ ಮಾಸ್ತಿಕಲ್ಲುಗಳಿವೆ. ಶೃಂಗೇರಿಯ ಪಶ್ಚಿಮಕ್ಕೆ 10 ಕಿಮೀ ದೂರದಲ್ಲಿರುವ ಋಷ್ಯ ಶೃಂಗಪುರದಲ್ಲಿ ದ್ರಾವಿಡ ಮಾದರಿಯ

ವಿದ್ಯಾಶಂಕರ ದೇವಾಲಯ

ಪ್ರಸಿದ್ಧ ಋಷ್ಯಶೃಂಗೇಶ್ವರ ದೇವಾಲಯವಿದೆ. ಈ ದೇವಾಲಯದ ನವರಂಗದಲ್ಲಿ ಪ್ರಾಣಿ ಮತ್ತು ಮನುಷ್ಯ ಮಿಶ್ರಿತವಾದ ವಿಚಿತ್ರ ಚಿತ್ರಗಳನ್ನು ಕೆತ್ತಲಾಗಿದೆ. ಸುಕನಾಸಿಯಲ್ಲಿ ಕಂಡು ಬರುವ ಗಣಪತಿ ವಿಗ್ರಹ ಒಂದು ಅಪೂರ್ವ ಕೃತಿಯಾಗಿದ್ದು ಇದಕ್ಕೆ ಎರಡು ಕೈಗಳಿದ್ದು ಸೊಂಡಿಲು ಬಲಕ್ಕೆ ತಿರುಗಿಕೊಂಡಿರುವುದು ವಿಶಿಷ್ಟವಾಗಿದೆ.

ಶೃಂಗೇರಿ ಪ್ರಸಿದ್ಧ ಧಾರ್ಮಿಕ ಯಾತ್ರಾಕ್ಷೇತ್ರ. ವಿಭಾಂಡಕ ಮಹರ್ಷಿಯ ಮಗನಾದ ಋಷ್ಯಶೃಂಗನ ಜನ್ಮಸ್ಥಳವಾದುದರಿಂದ ಇದಕ್ಕೆ ಶೃಂಗಗಿರಿ ಎಂಬ ಹೆಸರು ಬಂದಿತೆಂದೂ ಕ್ರಮೇಣ ಶೃಂಗೇರಿಯಾಯಿತೆಂದೂ ಪ್ರತೀತಿ. ಶಾಸನಗಳಲ್ಲಿ ಇದನ್ನು ಶೃಂಗಪುರ ಎಂದು ಉಲ್ಲೇಖಿಸಲಾಗಿದೆ. 8ನೆಯ ಶತಮಾನದಲ್ಲಿ ಶಂಕರಾಚಾರ್ಯರು ಹಿಂದುಧರ್ಮದ ಪುನರುತ್ಥಾನಕ್ಕಾಗಿ ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳಲ್ಲಿ ಶೃಂಗೇರಿ ಒಂದು. ಮಠದ ಜೊತೆಗೆ ಶಂಕರಾಚಾರ್ಯರು ಕಾಶ್ಮೀರದಿಂದ ತಂದ ಶಾರದೆಯ ವಿಗ್ರಹವನ್ನು ಇಲ್ಲಿ ಸ್ಥಾಪಿಸಿ ದೇವಾಲಯವನ್ನು ಕಟ್ಟಿಸಿದರು. ದೇವಸ್ಥಾನ ಮಠದ ಆವರಣದಲ್ಲೇ ಇದೆ.

ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ಕಾರಣರಾದ ವಿದ್ಯಾರಣ್ಯರು ಶೃಂಗೇರಿ ಪೀಠಾಧಿಪತಿಗಳಾಗಿದ್ದರು. ವಿಜಯನಗರ ಕಾಲದ ಅನೇಕ ಶಾಸನಗಳನ್ನು ಈ ಸುತ್ತಲಿನ ಪ್ರದೇಶಗಳಲ್ಲಿ ಕಾಣಬಹುದು. ಶೃಂಗೇರಿ ಪೀಠಾಧಿಪತಿಗಳನ್ನು ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಎಂಬುದಾಗಿ ಕರೆಯಲಾಗುತ್ತದೆ. ಒಂದನೆಯ ಹರಿಹರ, ಬುಕ್ಕ, ಎರಡನೆಯ ಹರಿಹರ, ವಿರೂಪಾಕ್ಷ ಮೊದಲಾದ ವಿಜಯನಗರದ ದೊರೆಗಳು ಶೃಂಗೇರಿಗೆ ಭೇಟಿ ಕೊಟ್ಟು, ಅನೇಕ ದತ್ತಿ ಉಂಬಳಿಗಳನ್ನೂ ನೀಡಿ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಇಲ್ಲಿಯ ಪೀಠಾಧಿಪತಿಗಳ ಹೆಸರಿನಲ್ಲಿ ಹಾಗೂ ತಮ್ಮ ಹೆಸರಿನಲ್ಲಿ ಅನೇಕ ಅಗ್ರಹಾರಗಳನ್ನು ಕಟ್ಟಿಸಿ, ಪೀಠಾಧಿಪತಿಗಳನ್ನು ತಮ್ಮ ರಾಜಧಾನಿಗೆ ಬರಮಾಡಿಕೊಂಡು ಅವರ ಆಶೀರ್ವಾದ, ಅನುಗ್ರಹಗಳನ್ನು ಪಡೆದರೆಂದು ತಿಳಿದುಬರುತ್ತದೆ. 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನಾನಂತರ ಕೆಳದಿಯ ನಾಯಕರು ಶೃಂಗೇರಿಗೆ ರಕ್ಷಣೆ ನೀಡಿದರು. ಸದಾಶಿವನಾಯಕನ ಕಾಲದಲ್ಲಿ ಕೆಳದಿ ರಾಜ್ಯಕ್ಕೂ ಶೃಂಗೇರಿ ಸಂಸ್ಥಾನಕ್ಕೂ ಸಂಪರ್ಕ ಆರಂಭವಾಯಿತು. ಶೃಂಗೇರಿಯ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಬಹಳ ಶ್ರಮಿಸಿದ ಮೊದಲನೆಯ ವೆಂಕಟಪ್ಪ ನಾಯಕ ಶ್ರೀಗಳಿಂದ ವೈದಿಕ–ಅದ್ವೈತ–ಸಿದ್ಧಾಂತಪ್ರತಿಷ್ಠಾಪಕ ಎಂಬ ಬಿರುದನ್ನು ಪಡೆದ.

ಮೈಸೂರಿನ ಕಂಠೀರವ ನರಸರಾಜ ಒಡೆಯರ್ ಮೊದಲಾದವರು ಶೃಂಗೇರಿ ಮಠದ ಬಗ್ಗೆ ಪೂಜ್ಯಭಾವನೆ ಹೊಂದಿದ್ದರು. ಮೈಸೂರಿನ ಒಡೆಯರು ಶ್ರೀಗಳಿಗೆ ಅನೇಕ ಅಮೂಲ್ಯ ಕಾಣಿಕೆಗಳನ್ನು ಕಳುಹಿಸಿ, ಶೃಂಗಪುರರತ್ನಸಿಂಹಾಸನದ ಮೇಲೆ ಕುಳಿತಿರುವ ಯೋಗ ಸಾಮ್ರಾಜ್ಯಾಧಿಪತಿಯೆಂಬುದಾಗಿ ಶ್ರೀಗಳನ್ನು ವರ್ಣಿಸಿದ್ದರು. ಶೃಂಗೇರಿ ಸಂಸ್ಥಾನಕ್ಕೂ ಮತ್ತು ಮರಾಠರಿಗೂ ಉತ್ತಮ ಸಂಬಂಧವಿದ್ದಿತೆಂದು ತಿಳಿದುಬರುತ್ತದೆ. ದೇವಾಲಯದ ಜೀರ್ಣೋದ್ಧಾರ ಮತ್ತು ಶಾರದಾವಿಗ್ರಹದ ಪ್ರತಿಷ್ಠಾಪನೆಗಾಗಿ ಅನೇಕ ಕಾಣಿಕೆಗಳನ್ನು ಟಿಪ್ಪುಸುಲ್ತಾನ್ ಕಳುಹಿಸಿದನೆಂದು ತಿಳಿದುಬರುತ್ತದೆ. 1791–98ರ ನಡುವೆ ಟಿಪ್ಪು ಬರೆಸಿದ 40ಕ್ಕೂ ಹೆಚ್ಚು ಪತ್ರಗಳು ಶ್ರೀಮಠದ ಬಗ್ಗೆ ಅವನಿಗಿದ್ದ ನಿಷ್ಠೆ, ಶ್ರದ್ಧೆ ಮತ್ತು ಪೂಜ್ಯಭಾವನೆಗಳ ಪ್ರತೀಕವಾಗಿವೆ. ಹೈದರಾಬಾದಿನ ನಿಜಾಮ್ ಉಲ್ ಮುಲ್ಕ್ ಎಂಬವನು ಶ್ರೀಗಳಿಗೆ ಅನೇಕ ಫರ್ಮಾನ, ಸನ್ನದುಗಳನ್ನು ಮತ್ತು ಕೆಲವು ವಿಶೇಷ ಸೌಲಭ್ಯಗಳನ್ನು ನೀಡಿದನೆಂದೂ ಅವನ ಈ ಕೊಡುಗೆಗಳನ್ನು ನಿಜಾಮ್ ಅಲಿಖಾನ್ ಊರ್ಜಿತಗೊಳಿಸಿದನೆಂದೂ ತಿಳಿದು ಬರುತ್ತದೆ. ಮೈಸೂರಿನ ಚಾಮರಾಜ ಒಡೆಯರೂ ಶೃಂಗೇರಿ ಸಂಸ್ಥಾನಕ್ಕೆ ಅನೇಕ ಅಮೂಲ್ಯ ಕಾಣಿಕೆಗಳನ್ನು ಕಳುಹಿಸಿಕೊಟ್ಟಿದ್ದರು. ಮಾರ್ಕ್ ಕಬ್ಬನನ ಘೋಷಣೆಯಿಂದ ಶೃಂಗೇರಿಪೀಠಕ್ಕೆ ಹಿಂದಿನ ವಿಶೇಷ ಸೌಲಭ್ಯಗಳೆಲ್ಲವೂ ಇದ್ದಿತೆಂದು ತಿಳಿದುಬರುತ್ತದೆ. (ಎಚ್.ಎಂ.ಎನ್.ಆರ್.)

**ವಿದ್ಯಾಶಂಕರ ದೇವಾಲಯ:** ತುಂಗಾನದಿಯ ಬಲದಂಡೆಯ ಮೇಲಿರುವ ಒಂದು ಸುಂದರ ದೇವಾಲಯ. ಇದನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ರಾಷ್ಟ್ರೀಯ ಮಹತ್ತ್ವದ ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ.

ಸಿಂಹಗಿರಿ, ಋಷ್ಯಶೃಂಗಗಿರಿ, ಶೃಂಗಗಿರಿ, ಶೃಂಗೇರಿ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುವ ಶೃಂಗೇರಿ 8–9ನೆಯ ಶತಮಾನದ ಮಹಾನ್ ದಾರ್ಶನಿಕ ಹಾಗೂ ಅದ್ವೈತ ಸಿದ್ಧಾಂತ ಪ್ರತಿಷ್ಠಾಪಕರಾದ ಶಂಕರಾಚಾರ್ಯರಿಂದ ಸ್ಥಾಪಿತವಾದ ಚತುರಾಮ್ನಾಯ ಪೀಠಗಳಲ್ಲಿ ಒಂದು. ಸ್ಥಳೀಯ ಐತಿಹ್ಯದಂತೆ ಇದು ರಾಮಾಯಣದಲ್ಲಿ ಉಲ್ಲೇಖಿತವಾಗಿರುವ ವಿಭಾಂಡಕ ಮುನಿ ಮತ್ತು ಆತನ ಮಗ ಋಷ್ಯಶೃಂಗರ ಆಶ್ರಮವಿದ್ದ ಸ್ಥಳವಾಗಿತ್ತು.

ಶೃಂಗೇರಿ ಮಠದ ಜಗದ್ಗುರುಗಳ ಪರಂಪರೆಯಲ್ಲಿ ವಿದ್ಯಾತೀರ್ಥರದು ದೊಡ್ಡ ಹೆಸರು. ಮೊದಲಿಗೆ ಅವರು ಕಾಂಚಿಯ ಪೀಠಾಧಿಪತಿಗಳಾಗಿದ್ದು, 13ನೆಯ ಶತಮಾನದ ಕೊನೆಯ ದಶಕಗಳಲ್ಲಿ ಬಹುಶಃ ಹೊಯ್ಸಳ ದೊರೆಗಳಿಂದ ಆಹ್ವಾನಿತರಾಗಿ, ಶೃಂಗೇರಿಗೆ ಬಂದು ನೆಲೆಸಿದರು. ಇವರು ತಮ್ಮ ಮುಖ್ಯ ಶಿಷ್ಯರಾದ ವಿದ್ಯಾರಣ್ಯರ ಮೂಲಕ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಅಗತ್ಯವಾದ ಶೃಂಗೇರಿ ಮಠದ ಧಾರ್ಮಿಕ ಬೆಂಬಲ, ಮಾನವ ಹಾಗೂ ಆರ್ಥಿಕ ಸಂಪನ್ಮೂಲಗಳನ್ನು ಹಕ್ಕ–ಬುಕ್ಕರಿಗೆ ಒದಗಿಸಿ ಕೊಟ್ಟಿರಬೇಕು. ಈ ಕಾರಣದಿಂದ ವಿದ್ಯಾರಣ್ಯ, ಸಾಯಣ, ಸಂಗಮವಂಶದ ಮೊದಲ ಮೂವರು ಅರಸರು ವಿದ್ಯಾತೀರ್ಥರ ವ್ಯಕ್ತಿತ್ವ ಸಾಧನೆಗಳನ್ನು ಅದರಲ್ಲಿಯೂ ಯೋಗದಲ್ಲಿ ಅವರ ಮಹತ್ತ್ವದ ಸಾಧನೆಗಳನ್ನು ವಿಶೇಷವಾಗಿ ಪ್ರಶಂಸಿಸಿದ್ದಾರೆ. ಸಾಮ್ರಾಜ್ಯ ಸ್ಥಾಪನೆಯಾಗಿ ಸ್ಥಿರವಾಗಿ ನೆಲೆಗೊಂಡ ಮೇಲೆ ಸಂಗಮ ವಂಶದ ರಾಜರು ಅನೇಕ ದಾನಗಳನ್ನು ನೀಡಿ ಶೃಂಗೇರಿ ಮಠದ ಅಭಿವೃದ್ಧಿಗೆ ಕಾರಣರಾದರು. 1346 ಮತ್ತು 1356ರ ಶಾಸನಗಳ ಪ್ರಕಾರ ವಿದ್ಯಾತೀರ್ಥಯತಿಗಳ ಗೌರವಾರ್ಥವಾಗಿ ವಿದ್ಯಾಶಂಕರ ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯದ ಮುಖ್ಯಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದ ವಿದ್ಯಾಶಂಕರ ಲಿಂಗ ಬಹುಶಃ ಶಿವ, ಶಂಕರಾಚಾರ್ಯ ಮತ್ತು ವಿದ್ಯಾಶಂಕರ ಯತೀಶ್ವರ–ಇವರೆಲ್ಲರನ್ನೂ ಸಂಕೇತಿಸುತ್ತದೆ.

ದಕ್ಷಿಣಭಾರತದ ಮೂರು ಮುಖ್ಯ ದೇವಾಲಯ ಶೈಲಿಗಳಾದ ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ಶೈಲಿಗಳ ವಿಶೇಷ ಲಕ್ಷಣಗಳ ಅಪೂರ್ವ ಸಮನ್ವಯದಿಂದ ನಿರ್ಮಾಣ ವಾಗಿರುವ ಈ ದೇವಾಲಯ ಭಾರತದ ಇನ್ನಾವುದೇ ದೇವಾಲಯವನ್ನು ಪೂರ್ಣವಾಗಿ ಹೋಲುವುದಿಲ್ಲ. ಇದರ ತಳವಿನ್ಯಾಸ, ಊರ್ಧ್ವವಿನ್ಯಾಸ ಹಾಗೂ ಶಿಲ್ಪಗಳ ವಿನ್ಯಾಸ ಮತ್ತು ನಿರ್ವಹಣೆ ಅನನ್ಯವಾದದ್ದು. ಎತ್ತರವಾದ ಉಪಪೀಠ ಮತ್ತು ಜಗತಿಯ ಮೇಲೆ ಕಟ್ಟಿದ ಈ ದೇವಾಲಯ ಪೂರ್ವಾಭಿಮುಖವಾಗಿದೆ. ನಕ್ಷತ್ರಾಕಾರದ ಎರಡು ಅರ್ಧವೃತ್ತಗಳ ನಡುವೆ ಹಿಂಚಾಚು ಮುಂಚಾಚುಗಳಿರುವ ಚೌಕವನ್ನು ಸೇರಿಸಿ ರೂಪಿಸಿದ ದೀರ್ಘವೃತ್ತಾಕಾರ ಅಥವಾ ವೃತ್ತಾಯತ ಆಕೃತಿಯ ಇದರ ತಳವಿನ್ಯಾಸ ಸಂಕೀರ್ಣ ಸ್ವರೂಪದ್ದು. ಪಶ್ಚಿಮದ ತುದಿಯಲ್ಲಿರುವ ಅರ್ಧವೃತ್ತದಲ್ಲಿ ಮುಖ್ಯ ಗರ್ಭಗೃಹ, ಅದರ ಪಕ್ಕಗಳಲ್ಲಿ ಒಂದೊಂದು ಮತ್ತು ಉತ್ತರ, ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಿಗೆ ಅಭಿಮುಖವಾಗಿ ಒಂದೊಂದು ಹೀಗೆ ಒಟ್ಟು ಆರು ಗರ್ಭಗೃಹಗಳಿದ್ದು ಎಲ್ಲವೂ ಪ್ರದಕ್ಷಿಣಾಪಥದಿಂದ ಆವೃತವಾಗಿವೆ. ಮುಖ್ಯ ಗರ್ಭಗೃಹದ ಮುಂದೆ ಕಿರಿದಾದ ಸುಕನಾಸಿ, ಅಂತರಾಳ ಮತ್ತು ಎತ್ತರವಾದ

ಕಂಬಗಳಿಂದ ಕೂಡಿದ ನವರಂಗ ಮಂಟಪಗಳಿವೆ. ಪಶ್ಚಿಮದ ಅರ್ಧವೃತ್ತದಲ್ಲಿ ಮೂರು ದಿಕ್ಕುಗಳ ಗರ್ಭಗೃಹಗಳಿಗೆ ಎದುರಾಗಿ ಮೂರು ಪ್ರವೇಶದ್ವಾರಗಳು ಮತ್ತು ಮಧ್ಯದ ಚೌಕ ಹಾಗೂ ಪೂರ್ವದ ಅರ್ಧವೃತ್ತದಲ್ಲಿ ಮಂಟಪವನ್ನು ಪ್ರವೇಶಿಸಲು ಬರುವಂತೆ ಮೂರು ಹೀಗೆ ಒಟ್ಟು ಆರು ಪ್ರವೇಶದ್ವಾರಗಳಿವೆ. ಪ್ರತಿದ್ವಾರದ ಮುಂದೆ ವ್ಯಾಳಕಟಾಂಜನಸಹಿತವಾದ ಸೋಪಾನಗಳಿವೆ. ಮುಖ್ಯದೇವಾಲಯದ ಎಲ್ಲ ಹಿಂಚಾಚು ಮುಂಚಾಚುಗಳು ಹಾಗೂ ದ್ವಾರದ ಮೆಟ್ಟಿಲುಗಳು ಹೊರಗಣ ಪ್ರದಕ್ಷಿಣಾಪಥದಂತೆ ಇರುವ ಅಗಲವಾದ ವೇದಿಕೆಯ ಭಾಗದಲ್ಲೂ ಕಂಡುಬರುತ್ತವೆ.

ಮುಖ್ಯ ಗರ್ಭಗೃಹದಲ್ಲಿ ವಿದ್ಯಾಶಂಕರಲಿಂಗ, ಅದರ ಎಡಬಲದ ಗರ್ಭಗೃಹಗಳಲ್ಲಿ ವಿದ್ಯಾಗಣಪತಿ, ಅಷ್ಟಭುಜದ ಮಹಿಷಮರ್ದಿನಿಯರು, ಇತರ ಗರ್ಭಗೃಹಗಳಲ್ಲಿ ಬ್ರಹ್ಮಸರಸ್ವತಿ (ದಕ್ಷಿಣ), ಶಿವಪಾರ್ವತಿ (ಉತ್ತರ) ಹಾಗೂ ಲಕ್ಷ್ಮೀನಾರಾಯಣ (ಪಶ್ಚಿಮ) ಶಿಲ್ಪಗಳಿವೆ. ನವರಂಗದಲ್ಲಿ ಹಿಂಗಾಲುಗಳ ಮೇಲೆ ನಿಂತಿರುವ ಸಿಂಹವನ್ನು ಸವಾರಿ ಮಾಡುತ್ತಿರುವ ಯೋಧರ ಸುಂದರ ಶಿಲ್ಪವಿರುವ ಎತ್ತರವಾದ ಹನ್ನೆರಡು ಕಂಬಗಳಿವೆ. ಸಿಂಹಗಳ ತೆರೆದ ಬಾಯೊಳಗೆ ಚಲಿಸುವ ಕಲ್ಲಿನ ಗೋಳಗಳನ್ನು ಅಪರಿಮಿತ ಕೌಶಲ್ಯದಿಂದ ಶಿಲ್ಪಿ ಅಳವಡಿಸಿದ್ದಾನೆ. ಈ ಕಂಬಗಳ ಮೇಲೆ ಶಾಸ್ತ್ರೋಕ್ತ ರೀತಿಯಲ್ಲಿ ರಾಶಿಚಕ್ರವನ್ನು ಪ್ರತಿನಿಧಿಸುವ ಹನ್ನೆರಡು ಆದಿತ್ಯರ ಶಿಲ್ಪಗಳು ಮತ್ತು ಮೇಷಾದಿ ರಾಶಿಗಳ ಚಿಹ್ನೆಗಳನ್ನು ಮೂಡಿಸಲಾಗಿದೆ. ಪ್ರತಿ ಸೌರಮಾಸದಲ್ಲಿ ಮಂಟಪದ ಬಾಗಿಲುಗಳಿಂದ ಹಾದು ಬರುವ ಉದಯ ಸೂರ್ಯನ ಕಿರಣಗಳು ಆಯಾ ರಾಶಿಯ ಚಿಹ್ನೆಯನ್ನು ಕೆತ್ತಿರುವ ಕಂಬದ ಮೇಲೆ ಬೀಳುತ್ತವೆ. ಅಲ್ಲದೆ ಮಕರ ಸಂಕ್ರಾಂತಿಯ ದಿನ ಪೂರ್ವದ್ವಾರದಿಂದ ಹಾದು ಬರುವ ಕಿರಣಗಳು ನೇರವಾಗಿ ಮುಖ್ಯ ಗರ್ಭಗೃಹದಲ್ಲಿರುವ ಶಿವಲಿಂಗದ ಮೇಲೆ ಬೀಳುವುದೆಂದು ಪ್ರತೀತಿ. ಇದಲ್ಲದೆ ನವರಂಗದ ಮಧ್ಯದಲ್ಲಿರುವ ನೆಲಹಾಸು ಫಲಕದ ಮೇಲೆ ಆಯಾ ಕಂಬಗಳ ನೇರಕ್ಕೆ ಬರುವಂತೆ ವಿಶಿಷ್ಟ ಜ್ಯಾಮಿತೀಯ ಚಿತ್ರಣವಿದ್ದು ಈ ಗೆರೆಗಳು ಸೂರ್ಯಕಿರಣಗಳು ಹಾಯುವ ಮಾರ್ಗವನ್ನು ಸೂಚಿಸುತ್ತವೆಂದೂ ಪ್ರತೀತಿಯಿದೆ. ಈ ವೈಶಿಷ್ಟ್ಯಗಳಿಂದಾಗಿ ಈ ನವರಂಗ ರಾಶಿಮಂಟಪವೆಂದೇ ಪ್ರಸಿದ್ಧವಾಗಿದೆ. ಈ ಕಂಬಗಳ ಮೇಲೆ ಎರಡು ಹಂತಗಳಲ್ಲಿ ಮುಂಚಾಚಿರುವ ಅಲಂಕೃತ ಬೋದಿಗೆಗಳಿದ್ದು ಮೇಲೆ ದೊಡ್ಡ ದೊಡ್ಡ ಚಪ್ಪಡಿಗಳಿಂದ ರೂಪಿಸಿದ ಸಮತಲ ವಿತಾನವಿದೆ. ವಿತಾನದ ಮಧ್ಯದಲ್ಲಿ ವಿಶಾಲವಾದ ಅರ್ಧ ವಿಕಸಿತ ಕಮಲದ ಚಿತ್ರಣವಿದೆ. ಅರಳಿದ ಐದು ದಳಗಳಿಂದ ಸುತ್ತುವರೆದ ಮೊಗ್ಗಿನ ಬಳಿ ನಾಲ್ಕು ಮೂಲೆಗಳಲ್ಲಿ ಮಕರಂದ ಹೀರುತ್ತಿರುವಂತಿರುವ ಗಿಣಿಗಳನ್ನು ಕೆತ್ತಲಾಗಿದೆ.

ಈ ದೇವಾಲಯದ ಊರ್ಧ್ವವಿನ್ಯಾಸವೂ ಸಾಕಷ್ಟು ಸಂಕೀರ್ಣ ರೀತಿಯದು. ವೇದಿಕೆ ಅಥವಾ ಉಪಪೀಠದಿಂದ ಶಿಖರದವರೆಗೆ ಅನೇಕ ಸಮಾನಾಂತರ ರೇಖೆಗಳಲ್ಲಿ ಸಾಗುವ ವಾಸ್ತುಭಾಗಗಳು ಮತ್ತು ನೀಟಾಗಿ ಮೇಲೆ ಸಾಗುವ ಊರ್ಧ್ವರೇಖೆಗಳು ದೇವಾಲಯದ ವಿನ್ಯಾಸಕ್ಕೆ ಅಸದೃಶ ಮೆರುಗು ನೀಡಿವೆ. ಚಾಳುಕ್ಯ, ಹೊಯ್ಸಳ ದೇವಾಲಯಗಳಂತೆ ಮುಖ್ಯ ದೇವಾಲಯದ ಸುತ್ತ ಅದರ ಎತ್ತರವನ್ನು ಹೆಚ್ಚಿಸಲು ಮತ್ತು ಗೋಡೆಯ ಮೇಲಿನ ಶಿಲ್ಪಗಳನ್ನು ಹತ್ತಿರದಿಂದ ನೋಡಲು ಅನುವಾಗುವ ಮುಕ್ತ ಪ್ರದಕ್ಷಿಣಾಪಥದಂತಿರುವ ಉಪಪೀಠವಿದೆ. ಮುಖ್ಯ ದೇವಾಲಯದ ಮುಂಚಾಚು ಹಿಂಚಾಚುಗಳನ್ನು ಅನುಸರಿಸಿ ದಂತಿರುವ ಉಪಪೀಠದಲ್ಲಿ ಉಪಾನ, ಜಗತಿ, ಕುಮುದ, ಕಿರಿದಾದ ಕಂಠ, ಕೂಡು ಅಲಂಕರಣವಿರುವ ಕಪೋತ ಹಾಗೂ ಪಟ್ಟಿಕೆಗಳಿವೆ. ದೇವಾಲಯದ ಆರು ಬಾಗಿಲುಗಳಿರುವ ಸ್ಥಳಗಳಲ್ಲಿ ಉಪಪೀಠದಲ್ಲಿಯೂ ಗಜಕಟಾಂಜನವಿರುವ ಆರಾರು ಸೋಪಾನಗಳಿವೆ. ಉಪಪೀಠದ ವಿನ್ಯಾಸವನ್ನು ಅನುಸರಿಸಿರುವ ಅಧಿಷ್ಠಾನದಲ್ಲಿ ಹೊಯ್ಸಳ ದೇವಾಲಯದ ಮಾದರಿಯಲ್ಲಿ ಶಿಲ್ಪಪಟ್ಟಿಕೆಗಳಿಂದ ಅಲಂಕೃತವಾದ ಉಪಾನ, ಜಗತಿ, ಕುಮುದ, ಕಂಠ, ಕಪೋತ ಹಾಗೂ ಪಟ್ಟಿಕೆಗಳೇ ಪುನರಾವರ್ತಿತವಾಗಿವೆ. ಕೆಳಗಿನಿಂದ ಪರಿಗಣಿಸಿದರೆ–ಮಧ್ಯೆಮಧ್ಯೆ ಹಾವಾಡಿಗ, ಹುಲಿ, ಸಿಂಹ, ಜಿಂಕೆ ಮುಂತಾದ ಚಿತ್ರಣಗಳಿಂದ ಕೂಡಿದ, ವಿವಿಧ ಭಂಗಿಗಳಲ್ಲಿರುವ ಕುದುರೆಗಳ ಸಾಲು; ಆನೆ ಸಿಂಹಗಳ ಯುದ್ಧ, ಟಗರು ಕಾಳಗ ಮುಂತಾದ ದೃಶ್ಯಗಳಿಂದ ಕೂಡಿದ ಆನೆಗಳ ಸಾಲು; ಮಣಿ ಮತ್ತು ರಜ್ಜು ಬಂಧದ ವಿನ್ಯಾಸವಿರುವ ಕಟಕ ವೃತ್ತಕುಮುದ; ಕಮಲದಳಗಳು ಮತ್ತು ಹುಲಿಯೊಡನೆ ಸೆಣಸುತ್ತಿರುವ ಸಳ, ಹಾವು–ಕೋತಿ, ವ್ಯಾಳಗಳು ಮುಂತಾದ ಶಿಲ್ಪಗಳ ಪಟ್ಟಿಕೆ; ಕೂಡುಗಳಲ್ಲಿ ವಿವಿಧ ಪಶುಪಕ್ಷಿಗಳು, ಯಕ್ಷ, ನಾಗಿಣಿ, ಯೋಗಾಸನದಲ್ಲಿರುವ ಋಷಿಗಳು ಮುಂತಾದ ಚಿತ್ರಣವಿರುವ ಕಪೋತ; ದಶರಥರಾಜ ಮಾಡಿದ ಪುತ್ರಕಾಮೇಷ್ಠಿಯಾಗ, ಕಿರಾತಾರ್ಜುನೀಯ ಮುಂತಾದ ಪೌರಾಣಿಕ ಪ್ರಸಂಗಗಳ ನಿರೂಪಣಾ ಫಲಕಗಳು; ಶಿಷ್ಯರಿಗೆ ಉಪದೇಶ ನೀಡುತ್ತಿರುವ ಶಂಕರಾಚಾರ್ಯರು; ಯೋಗಾಭ್ಯಾಸನಿರತರಾದ ಮುನಿಗಳು; ಕೆಳ ಅಂಚಿನಲ್ಲಿ ಮಣಿಗಳ (ಕಮಲದ ಮೊಗ್ಗು) ಅಲಂಕರಣವಿರುವ ಪಟ್ಟಿಕೆ, ಶ್ರೀಚಕ್ರ ಮುಂತಾದ ಜ್ಯಾಮಿತೀಯ ವಿನ್ಯಾಸಗಳು; ನರ್ತಕ, ನರ್ತಕಿಯರು, ವಿವಿಧ ಭಂಗಿಗಳಲ್ಲಿರುವ ಯಕ್ಷರು, ಕುಬ್ಜರು ಮುಂತಾದ ಅಲಂಕರಣಗಳಿವೆ. ಭಿತ್ತಿಭಾಗದಲ್ಲಿ ಎರಡು ಅರೆಗಂಬಗಳ ನಡುವೆ ಪ್ರತ್ಯೇಕ ತೋರಣಗಳಲ್ಲಿ ನಿಂತ ಅಥವಾ ಕುಳಿತ ದೇವತೆಗಳ ಶಿಲ್ಪಗಳಿವೆ. ಹೊಯ್ಸಳ ದೇವಾಲಯಗಳಲ್ಲಿರುವಂತೆ ಈ ಶಿಲ್ಪಗಳನ್ನೂ ಎತ್ತರವಾದ ಒಂದೇ ಕಲ್ಲಿನ ಗೋಡೆಯ ಭಾಗದಲ್ಲಿ ಒಂದಕ್ಕೊಂದು ಪರಸ್ಪರ ಕೋನದಲ್ಲಿರುವಂತೆ ಜೋಡಿಸಲಾಗಿದೆ. ಇಂದ್ರ, ಯಮ ಮೊದಲಾದ ದಿಕ್ಪಾಲಕರು, ವ್ಯಾಸಾದಿ ಋಷಿವರ್ಯರು, ಬ್ರಹ್ಮ, ಭೈರವರೂಪಗಳು, ಸಿಂಹವಾಹಿನೀದುರ್ಗಾ; ತ್ರೈಪುರುಷರು, ದಕ್ಷಿಣಾಮೂರ್ತಿ, ಸಾವಿತ್ರೀದೇವಿ; ಸಪ್ತ ಪ್ರಜಾಪತಿಗಳು, ದಶಾವತಾರ, ಅಂಧಕಾಸುರಾರಿ, ಕಾಲಾರಿ, ತ್ರಿಪುರಾರಿ, ಸೋಮಸ್ಕಂದ ಮೊದಲಾದ ಶಿವನರೂಪಗಳು; ಚಂದ್ರಮಂಡಲ, ಹಯಗ್ರೀವ, ರಾಜರಾಜೇಶ್ವರಿ ಮುಂತಾದ ವೈವಿಧ್ಯಮಯ ಪ್ರತಿಮಾಲಕ್ಷಣಗಳ ಒಟ್ಟು 61 ಶಿಲ್ಪಗಳಿವೆ. ಮುಖ್ಯವೆನಿಸಿದ ಕೆಲವು, ಎರಡು ಅರ್ಧವೃತ್ತಗಳ ನಡುವಣ ಚೌಕದ ಬಾಹುಗಳಿರು ವೆಡೆಯಲ್ಲಿ ಪ್ರತ್ಯೇಕ ದೇವಕೋಷ್ಠಗಳಲ್ಲಿ ಶಿಲ್ಪಿತವಾಗಿವೆ. ಪ್ರವೇಶದ್ವಾರವಿರುವ ಕಡೆಯಲ್ಲಿ ಶಿಲ್ಪಗಳಿಗೆ ಬದಲಾಗಿ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಮತ್ತು ಪಾರ್ಶ್ವಗಳಲ್ಲಿ ದ್ವಾರಪಾಲಕ ಶಿಲ್ಪಗಳಿಂದ ಕೂಡಿರುವ ದ್ವಾರಬಂಧಗಳಿವೆ. ದ್ವಾರಪಾಲಕ ಶಿಲ್ಪಗಳಲ್ಲಿ ಶೈವ, ಶಾಕ್ತ ಹಾಗೂ ವೈಷ್ಣವ ಸಂಪ್ರದಾಯಗಳ ಎರಡೆರಡು ಜೋಡಿಗಳಿರುವುದು ಗಮನಾರ್ಹ ಅಂಶ. ಈ ಶಿಲ್ಪಗಳಲ್ಲಿ ಹಯಗ್ರೀವ, ದಕ್ಷಿಣಾಮೂರ್ತಿ, ರಾಜರಾಜೇಶ್ವರಿ, ಸಾವಿತ್ರೀ ಮುಂತಾದ ವಿದ್ಯೋಪಾಸನೆಗೆ ಸಂಬಂಧಿಸಿದ ಶಿಲ್ಪಸಮೂಹಗಳಿಗೆ ನೀಡಿರುವ ಪ್ರಾಶಸ್ತ್ಯವೂ ಒಂದು ವಿಶೇಷಾಂಶವೇ. ಭಿತ್ತಿಯ ಮೇಲೆ ಅಲಂಕೃತ ಕಪೋತ ಮತ್ತು ಪ್ರಸ್ತರಗಳಿವೆ. ಕಪೋತದ ಮುಂಚಾಚಿನ ತುದಿಗಳಲ್ಲಿ ಮೊದಲಿಗೆ ಒಂದೇ ಕಲ್ಲಿನಲ್ಲಿ ಕೊರೆದ ಉಂಗುರಗಳ ಸರಪಳಿಯನ್ನು ತೂಗುಬಿಡಲಾಗಿದ್ದು ಈಗ ಒಂದೆರಡು ಕಡೆಮಾತ್ರ ಉಳಿದಿವೆ.

ಗರ್ಭಗೃಹದ ಮೇಲೆ ಮೂರು ಹಂತಗಳಲ್ಲಿ ಕ್ರಮೇಣ ಕಿರಿದಾಗುತ್ತ ಹೋಗುವ ವೇಸರ ರೀತಿಯ ತ್ರಿತಲ ಶಿಖರವಿದೆ. ಮೊದಲ ಎರಡು ತಲಗಳ ತಲಭಿತ್ತಿಯಲ್ಲಿಯೂ ಕೆಲವು ಶಿಲ್ಪಗಳನ್ನು ಕೆತ್ತಲಾಗಿದ್ದು, ಮುಂದೆ ಮುಂಚಾಚಿರುವ ಸುಕನಾಸಿ ಇದೆ. ಶಿಖರಭಾಗದಲ್ಲಿ ಕಿರಿದಾದ ಗ್ರೀವದ ಮೇಲೆ ಅರ್ಧಗೋಲಾಕಾರದ ಶಿಖರ ಮತ್ತು ಸ್ತೂಪಗಳಿವೆ. ತಳವಿನ್ಯಾಸದ ಎಲ್ಲ ಮುಂಚಾಚು ಹಿಂಚಾಚುಗಳು ಮತ್ತು ನಕ್ಷತ್ರಾಕೃತಿಯ ಕೋನಗಳು ಶಿಖರದಲ್ಲಿಯೂ ಮುಂದುವರೆದಿದ್ದು ಇಡೀ ಕಟ್ಟಡಕ್ಕೆ ಒಂದು ಅನ್ಯಾದೃಶ ಸೊಬಗನ್ನು ನೀಡಿವೆ.

ಗರ್ಭಗೃಹಗಳಲ್ಲಿನ ಶಿಲ್ಪಗಳಿಂದ ಸೂಚಿತವಾಗುವ ಸಕಲ–ನಿಷ್ಕಲ ಸ್ವರೂಪದ ಪರಬ್ರಹ್ಮ ತತ್ವ ಹಾಗೂ ತ್ರೈಪುರುಷತತ್ತ್ವ, ಆರುದ್ವಾರಗಳು ಧ್ವನಿಸುವ ಷಣ್ಮುಖ (ಕೌಮಾರ) ಉಪಾಸನೆ, ರಾಶಿಮಂಟಪ ಸಾಕಾರಗೊಳಿಸುವ ಸೂರ್ಯಾರಾಧನೆ, ಭಿತ್ತಿ ಹಾಗೂ ಅಧಿಷ್ಠಾನಗಳಲ್ಲಿ ಕಂಡು ಬರುವ ಶ್ರೀಚಕ್ರ ಚಿಹ್ನೆ ಮತ್ತು ಶ್ರೀವಿದ್ಯೋಪಾಸನೆಗೆ ಸಂಬಂಧಿಸಿದ ವಿಶಿಷ್ಟ ಶಿಲ್ಪಗಳು ಮೊದಲಾದ ತಾತ್ತ್ವಿಕ ಅಂಶಗಳು ಈ ದೇವಾಲಯದ ಸಾಂಕೇತಿಕತೆ ಮತ್ತು ನಿಗೂಢತೆಯನ್ನು ಹೆಚ್ಚಿಸುತ್ತವೆ.

ಒಂದು ರೀತಿಯಲ್ಲಿ ಈ ದೇವಾಲಯ ಹಳೆಯ ಶೃಂಗೇರಿಯಲ್ಲಿರುವ, ಆಧ್ಯಾತ್ಮಿಕ ಸಾಧನಾಮಾರ್ಗದಲ್ಲಿ ಗುರುವಿನ ಮಹತ್ತ್ವವನ್ನು ಎತ್ತಿಹಿಡಿಯುವ, ತ್ರೈಪುರುಷ ಸ್ವರೂಪದ ಚತುರ್ಮೂರ್ತಿ ವಿದ್ಯೇಶ್ವರ (ವಿದ್ಯಾಶಂಕರ) ಶಿಲ್ಪದ ವಿವರಪೂರ್ಣ, ವಿಸ್ತೃತ ವಾಸ್ತುರೂಪದ ಅವತರಣಿಕೆ ಎನ್ನಬಹುದು. ತುಳುವ ವಂಶದ ರಾಜರ ಕಾಲದಲ್ಲಿ (16ನೆಯ ಶತಮಾನದ ಮಧ್ಯದ ದಶಕಗಳು) ಶೃಂಗೇರಿ ಮಠದ ಪೀಠಾಧಿಪತಿಗಳಾಗಿದ್ದ ಸ್ವಾಮಿಗಳು ಈ ಮಠದ ಮಹತ್ತ್ವವನ್ನು ಪುನಃ ಸ್ಥಾಪಿಸುವ ಆಕಾಂಕ್ಷೆಯಿಂದ ಉದ್ದೇಶಪೂರ್ವಕವಾಗಿ ಈ ದೇವಾಲಯ ವನ್ನು ಕಟ್ಟಿಸಿದರೆಂದು, ಈ ದೇವಾಲಯದ ಶೈಲಿಯ ವಿವರಗಳ ವಿಶೇಷ ಅಧ್ಯಯನವನ್ನು ಆಧರಿಸಿ ಇತ್ತೀಚೆಗೆ ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. (ಎಂ.ವಿ.ವಿ.)

**ಶೆಂಬಿಯನ್ ಕಂಡಿಯೂರು:** ತಮಿಳುನಾಡು ರಾಜ್ಯದ ನಾಗಪಟ್ಟಿನಂ ಜಿಲ್ಲೆಯ ಮಯಿಲದುತುರೈ ತಾಲ್ಲೂಕಿನ ಸಣ್ಣ ಗ್ರಾಮ. ಇಲ್ಲಿಯ ವಿ.ಷಣ್ಮುಗನಾಥನ್ ಎಂಬ ಶಾಲಾ ಶಿಕ್ಷಕರೊಬ್ಬರು 2006ರಲ್ಲಿ ತಮ್ಮ ಮನೆಯ ಹಿತ್ತಲಲ್ಲಿ ಬಾಳೆ ಮತ್ತು ತೆಂಗಿನ ಸಸಿಗಳನ್ನು ನೆಡಲು ಗುಂಡಿಗಳನ್ನು ತೋಡುತ್ತಿರುವಾಗ ಅವರಿಗೆ ನವಶಿಲಾಯುಗ ಸಂಸ್ಕೃತಿಯ ಎರಡು ಕಲ್ಲಿನ ಕೊಡಲಿಗಳು ದೊರೆತವು. ಅವರು ಟ್ರಂಕಚಾರಿನಲ್ಲಿರುವ ತಮಿಳುನಾಡು ಸರ್ಕಾರದ ಪುರಾತತ್ತ್ವ ಇಲಾಖೆಯ ಡ್ಯಾನಿಷ್ ವಸ್ತುಸಂಗ್ರಹಾಲಯದ ಮೇಲ್ವಿಚಾರಕರಾದ



ಮುರುಕನ್ ಎಂದು ಓದಲಾಗಿರುವ ಲಿಪಿ

ಮುತ್ತುಸ್ವಾಮಿಯವರಿಗೆ ಈ ವಿಷಯವನ್ನು ತಿಳಿಸಿದರು. ಮುತ್ತುಸ್ವಾಮಿಯವರು ಅವುಗಳನ್ನು ಸಂಗ್ರಹಿಸಿ ತಮ್ಮ ಇಲಾಖೆಯ ಟಿ.ಎಸ್.ಶ್ರೀಧರ ಅವರಿಗೆ ತೋರಿಸಿದರು. ಅವರು ಅವುಗಳಲ್ಲಿ ಅಕ್ಷರಗಳಂತೆ ತೋರುವ ನಾಲ್ಕು ಗುರುತುಗಳನ್ನು ಗಮನಿಸಿದರು. ತಮ್ಮ ಇಲಾಖೆಯ ಶಾಸನ ತಜ್ಞರಿಗೆ ಪರಿಶೀಲಿಸಲು ಹೇಳಿದರು. ಮ್ಯಾಕ್ಸಿಯ ಗಾಂಧಿ ಮತ್ತು ಎಸ್.ರಾಜಗೋಪಾಲ್ ಅವರು ಹರಪ್ಪ ನಾಗರಿಕತೆಯ ಅಕ್ಷರಗಳಿಗೂ ಈ ಸಂಕೇತಗಳಿಗೂ ಹೋಲಿಕೆಯಿರುವುದನ್ನು

ಗುರುತಿಸಿದರು. ಕುತೂಹಲಕಾರಿಯಾದ ಈ ವಿಷಯದ ಬಗ್ಗೆ ಇನ್ನೂ ಖಚಿತವಾಗಿ ತಿಳಿಯಲು ತಮಿಳು ಬ್ರಾಹ್ಮಿಲಿಪಿ ಮತ್ತು ಹರಪ್ಪ ಲಿಪಿಗಳ ಅಧ್ಯಯನದಲ್ಲಿ ವಿಶೇಷ ಪರಿಣತಿ ಯಿರುವ ಐರಾವತಂ ಮಹಾದೇವನ್ ಅವರ ಹೆಚ್ಚಿನ ಪರಿಶೀಲನೆಗೆ ಆ ಕೊಡಲಿಯನ್ನು ಕೊಡಲಾಯಿತು. ಅವರು ಅದರ ಮೇಲಿನ ನಾಲ್ಕು ಸಂಕೇತಗಳು ಹರಪ್ಪ ಅಕ್ಷರಗಳಂತಿವೆ ಎಂದು ತಿಳಿಸಿದರು. ಅವರ ಕನ್ಕಾರ್ಡನ್ಸ್ ಗ್ರಂಥದಲ್ಲಿಯ ಈ ಹರಪ್ಪ ಸಂಕೇತಗಳಿಗೆ ಕೊಟ್ಟ ಸಂಖ್ಯೆಗಳನ್ನು ಇಲ್ಲಿ ಆಯಾಯ ಸಂಕೇತಗಳಿಗೆ ಎಡದಿಂದ ಬಲಕ್ಕೆ ಕ್ರಮವಾಗಿ ಕೊಡಲಾಯಿತು. ಅವರು ಮೊದಲನೆಯ ಎರಡು ಅಕ್ಷರಗಳನ್ನು ಮುರುಕ(ಗ) ಮತ್ತು ಅನ್ ಎಂದು ಎರಡನ್ನೂ ಒಟ್ಟಿಗೆ ಸೇರಿಸಿ ಮುರುಗನ್ ಎಂದು ಓದಿದ್ದಾರೆ. ಮುರುಗನ್ ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಉಲ್ಲೇಖಿಸಲ್ಪಟ್ಟ ಒಬ್ಬ ವೀರ ದೇವತೆ. ಕೊನೆಯ ಎರಡು ಸಂಕೇತಗಳನ್ನು ಓದಲಾಗಿಲ್ಲ. ಆ ನಾಗರಿಕತೆಯ ಜನರ ಮತ್ತು ಕೊಡಲಿ ಸಿಕ್ಕ ಪ್ರದೇಶದ ಜನರ ಭಾಷೆ ಒಂದೇ ಆಗಿರಬೇಕೆಂದು ಸೂಚಿಸಿದ್ದಾರೆ. ಈಚಿನ ವರ್ಷಗಳಲ್ಲಿ ಸಿಂಧೂ–ಸರಸ್ವತಿ ನಾಗರಿಕತೆಯ ಬಗ್ಗೆ ಇತ್ತೀಚಿನವರೆಗೂ

ಉತ್ಖನನದಲ್ಲಿ ದೊರೆತ ಮಣ್ಪಾತ್ರೆಗಳು

ನಡೆದ ಎಲ್ಲ ಸಂಶೋಧನೆಗಳನ್ನು ಅದರಲ್ಲೂ ವಿಶೇಷವಾಗಿ ಲಿಪಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಏಳು ಸಂಪುಟಗಳನ್ನು ಪ್ರಕಟಿಸಿದ ಮತ್ತು ಹರಪ್ಪ ಮುದ್ರಿಕೆಗಳನ್ನು ಓದಲು ಪ್ರಯತ್ನಿಸಿದ ಕಲ್ಯಾಣ ರಾಮನ್ ಅವರು ಮಹಾದೇವನ್ ಗುರುತಿಸಿರುವುದನ್ನು ಒಪ್ಪಿದ್ದರೂ ಅವರು ಓದಿರುವುದನ್ನು ಒಪ್ಪಿಲ್ಲ. ಅವರ ಪ್ರಕಾರ ಆ ನಾಲ್ಕು ಸಂಕೇತಗಳು ತಾಮ್ರ ಲೋಹಾರನನ್ನು ಪರಿಚಯಿಸುವ ಪಟ್ಟಿಕೆ. ಇದರೊಡನೆ ಅವರು ಗ್ರಾಮದ ಹೆಸರೂ (ಶೆಂಬಿಯನ್–ತಾಮ್ರ ಲೋಹಾರ, ಕಂಡಿಯೂರು–ಕುಲುಮೆಯ ಊರು) ಅರ್ಥಪೂರ್ಣ ವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನೊಬ್ಬ ವಿದ್ವಾಂಸರಾದ ಆಸ್ಕೊ ಪರ್ಪೋಲ ಅವರು ಕೊಡಲಿಯ ಮೇಲಿನ ಬರೆವಣಿಗೆಯ ಛಾಯಾಚಿತ್ರವನ್ನು ಪರಿಶೀಲಿಸಿ ಅದರ ಮೇಲಿನ ಸಂಕೇತಗಳು ಹರಪ್ಪ ಸಂಕೇತಗಳಿಗೆ ಹೋಲುತ್ತವೆಂದು ಹೇಳುವಷ್ಟು ಸ್ಪಷ್ಟವಾಗಿಲ್ಲ ವೆಂದು ತಿಳಿಸಿ ಮಹಾದೇವನ್ ಅವರು ಓದಿರುವುದರ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಕೊಡಲಿಯ ಕಾಲಮಾನ ಪ್ರ.ಶ.ಪೂ.ಸು.1500 ಎಂದು ಅಭಿಪ್ರಾಯ ಪಡಲಾಗಿದೆ. ಈ ಕೊಡಲಿ ದೊರೆತ ಸ್ಥಳದಲ್ಲಿ ಮಡಕೆ ಚೂರುಗಳೂ ಸಿಕ್ಕಿದ ಕಾರಣ ಅಲ್ಲಿ ಉತ್ಖನನ ಮಾಡಲಾಯಿತು. ಹೀಗೆ ಉತ್ಖನನ ಮಾಡಿದಾಗ ಅತ್ಯಂತ ಪ್ರಾಚೀನ ಹಂತದ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ. (ಎ.ಎಸ್.)

**ಶೆವರಾಯ್ ಬೆಟ್ಟಗಳು:** ತಮಿಳುನಾಡು ರಾಜ್ಯದ ಧರ್ಮಪುರಿ ಮತ್ತು ಸೇಲಮ್ ಜಿಲ್ಲೆಗಳಲ್ಲಿ ನೈರುತ್ಯ–ಈಶಾನ್ಯವಾಗಿ ಚಾಚಿರುವ ಪೂರ್ವ ಘಟ್ಟಗಳ ಒಂದು ಶ್ರೇಣಿ. ಸು. 27 ಕಿಮೀ ಉದ್ದ ಹಾಗೂ 19 ಕಿಮೀ ಅಗಲವಿರುವ ಈ ಶ್ರೇಣಿಯ ಒಟ್ಟು ವಿಸ್ತೀರ್ಣ ಸು.500 ಚ.ಕಿಮೀ. ಈ ಬೆಟ್ಟಗಳ ಸಮತಟ್ಟಾದ ನೆತ್ತಿಯಲ್ಲಿ 70ಕ್ಕೂ ಹೆಚ್ಚು ಹಳ್ಳಿಗಳಿವೆ. ವೆಲ್ಲಾಳ ಜಾತಿಯ ಮಲಯಾಳಿ ಗೌಂಡರು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ.

ಇಲ್ಲಿಯ ಪುರಾತತ್ತ್ವ ಅವಶೇಷಗಳು ಶೆವ್ರಾಯ್ ಬೆಟ್ಟಗಳಿಗೆ ಮಹತ್ತರ ಸ್ಥಾನ ಕಲ್ಪಿಸಿಕೊಟ್ಟಿವೆ. ಶೆವ್ರಾಯ್‌ನ ಉತ್ತರ ವಿಸ್ತರಣೆಯಾದ ವತ್ತಲ್‌ಮಲೈ ಬೆಟ್ಟದಲ್ಲಿ ನವಶಿಲಾಯುಗದ ಉಜ್ಜಿ ನಯಗೊಳಿಸಿದ ಉಪಕರಣಗಳ ನೂರಾರು ಸಮುಚ್ಚಯಗಳಿವೆ. ಉಪಕರಣಗಳನ್ನು ಹೆಚ್ಚಾಗಿ ಡಾಲರೈಟ್ ಶಿಲೆಯಿಂದ ಮಾಡಲಾಗಿದೆ. ಇವು ಕರ್ನಾಟಕದ ಪಿಕ್ಲಿಹಾಳ, ಕೊಡೆಕಲ್ಲು ಮತ್ತು ಸಂಗನಕಲ್ಲಿನ ಉಪಕರಣಗಳನ್ನು ಹೋಲುತ್ತವೆ. ಆದರೆ ನವಶಿಲಾಯುಗದ ಒಂದೇಒಂದು ವಸತಿನೆಲೆಯೂ ಶೆವ್ರಾಯ್ ಶ್ರೇಣಿಗಳಲ್ಲಿ ಕಂಡುಬರದಿರುವುದು ಸೋಜಿಗದ ಸಂಗತಿಯಾಗಿದೆ. ಬೆಣಚುಕಲ್ಲಿನಿಂದ ಮಾಡಿದ ಮೊನೆ, ಕೊರೆಯುಳಿ, ಕೊರಗ, ಹೆರೆಚಕ್ಕೆ, ಅಲಗು, ಶಂಕುವಿನಾಕಾರದ ಶಿಲಾತಿರುಳು ಮುಂತಾದ ಸೂಕ್ಷ್ಮಶಿಲೋಪಕರಣಗಳೂ ಇಲ್ಲಿ ಗಣನೀಯ ಸಂಖ್ಯೆಯಲ್ಲಿವೆ. ಅಂತ್ಯ ಹಳೆಶಿಲಾಯುಗದ ಲಕ್ಷಣಗಳನ್ನು ತೋರುವ ಈ ಉಪಕರಣಗಳು ನವಶಿಲಾಯುಗದ ಉಪಕರಣಗಳೊಟ್ಟಿಗೆ ಬೆರೆತಿವೆ. ಈ ಎರಡು ಸಂಪ್ರದಾಯಗಳು ಸಮಕಾಲೀನವಾಗಿದ್ದಂತೆ ತೋರುತ್ತದೆ. ತಮಿಳುನಾಡಿನ ವಾಯವ್ಯ ಭಾಗದಲ್ಲಿ ಅಂತ್ಯ ಹಳೆಶಿಲಾಯುಗದ ಅನಂತರ ಮಣ್ಪಾತ್ರೆರಹಿತ ನವಶಿಲಾಯುಗ ಸಂಸ್ಕೃತಿ ಬೆಳೆದಿದ್ದಿರಬಹುದೆಂದು ಈ ಆಧಾರದ ಮೇಲೆ ಹೇಳಬಹುದು. ಇಲ್ಲಿಯ ನವಶಿಲಾಯುಗ ಸಂಸ್ಕೃತಿಯ ಕಾಲಮಾನ ಪ್ರಶ.ಪೂ.ಸು.3000. (ಬಿ.ಎಸ್.)

**ಶೇಷಾದ್ರಿ, ಎಂ.:** 1914–72. ಕರ್ನಾಟಕದ ಹೆಸರಾಂತ ಪುರಾತತ್ತ್ವಜ್ಞ. ಇವರು ತುಮಕೂರು ಜಿಲ್ಲೆ ಮಾಯಸಂದ್ರದಲ್ಲಿ 1914 ಅಕ್ಟೋಬರ್ 10ರಂದು ಜನಿಸಿದರು. ಇವರು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಮಾಯಸಂದ್ರ, ಮೈಸೂರು ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಪಡೆದರು. ಅನಂತರ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ 1937ರಲ್ಲಿ ಪ್ರಥಮ ದರ್ಜೆಯಲ್ಲಿ ಇತಿಹಾಸದಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದರು. ಸ್ವಲ್ಪಕಾಲ ಪ್ರೌಢಶಾಲೆ ಉಪಾಧ್ಯಾಯರಾಗಿ ಕೆಲಸ ಮಾಡಿದರು. 1941ರಲ್ಲಿ ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇರಿಕೊಂಡರು. ಆಗ ಎಂ.ಎಚ್.ಕೃಷ್ಣ ಅವರು ಇತಿಹಾಸ ವಿಭಾಗದ ಪ್ರಾಧ್ಯಾಪಕರೂ ಮೈಸೂರು ಸಂಸ್ಥಾನದ ಪುರಾತತ್ತ್ವ ಇಲಾಖೆಯ ನಿರ್ದೇಶಕರೂ ಆಗಿದ್ದರು. ಇವರ ಪ್ರಭಾವದಿಂದ ಶೇಷಾದ್ರಿಯವರಿಗೆ ಪುರಾತತ್ತ್ವ ವಿಷಯದಲ್ಲಿ ಆಸಕ್ತಿ ಉಂಟಾಯಿತು. ಇವರು ಸ್ವಲ್ಪ ಸಮಯ ಆ ಇಲಾಖೆಯಲ್ಲಿ ತಾಂತ್ರಿಕ ಸಹಾಯಕರಾಗಿ ಕೆಲಸ ಮಾಡಿದರು. ಆಗ ಭಾರತದಲ್ಲಿ ಬ್ರಿಟಿಷ್ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರಾಗಿದ್ದ ಮಾರ್ಟಿಮರ್ ವೀಲರ್ ಅವರು ಪುರಾತತ್ತ್ವ ಶಾಸ್ತ್ರದಲ್ಲಿ ವೈಜ್ಞಾನಿಕ ತರಬೇತಿಯನ್ನು ಕೊಡಲು ಆರಿಸಿದ ಇತಿಹಾಸ ತತ್ಸಂಬಂಧ ಮೊದಲಾದ ವಿಷಯಗಳಲ್ಲಿಯ ಯುವ ಪದವೀಧರರಲ್ಲಿ ಶೇಷಾದ್ರಿಯವರೂ ಒಬ್ಬರು. ತಕ್ಷಶಿಲೆ, ಅರಿಕಮೇಡು, ಹರಪ್ಪ ಮತ್ತು ಬ್ರಹ್ಮಗಿರಿ ಉತ್ಖನನಗಳಲ್ಲಿ ಉತ್ತಮ ತರಬೇತಿ ಪಡೆದರು. ಬಿ.ಬಿ.ಲಾಲ್ ಅವರ ಶಿಶುಪಾಲಗಡ (ಒರಿಸ್ಸ) ಉತ್ಖನನದಲ್ಲಿಯೂ ಭಾಗವಹಿಸಿದ್ದರು. ಅನಂತರ ಲಂಡನ್ನಿನ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿಯಲ್ಲಿ ಜ಼ಾಯನರ್ ಮಾರ್ಗದರ್ಶನದಲ್ಲಿ ದಿ ಸ್ಟೋನ್ ಯೂಸಿಂಗ್ ಕಲ್ಚರ್ಸ್ ಆಫ್ ಪ್ರಿ ಅಂಡ್ ಪ್ರೋಟೋ ಹಿಸ್ಟಾರಿಕ್ ಮೈಸೂರ್ ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ 1951ರಲ್ಲಿ ಪಿಹೆಚ್.ಡಿ. ಪದವಿ ಪಡೆದರು. ವಸ್ತು ಸಂಗ್ರಹಾಲಯ ಶಾಸ್ತ್ರದಲ್ಲಿಯೂ ತರಬೇತಿ ಹೊಂದಿದರು.

1951ರಲ್ಲಿ ಹಿಂದಿರುಗಿ ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಮರುವರ್ಷ ಹೊಸದಾಗಿ ಆರಂಭವಾಗಿದ್ದ ಪ್ರಾಚೀನ ಭಾರತ ಇತಿಹಾಸ–ಸಂಸ್ಕೃತಿ ವಿಭಾಗಕ್ಕೆ ವರ್ಗಾಯಿಸಲ್ಪಟ್ಟರು. ಆಗ ಅಂತಾರಾಷ್ಟ್ರೀಯ ಖ್ಯಾತ ನೀಲಕಂಠಶಾಸ್ತ್ರೀ ಯವರು ಈ ವಿಭಾಗದ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿದ್ದರು. ಅನಂತರ ಮೈಸೂರು ಸಂಸ್ಥಾನ ಪುರಾತತ್ತ್ವ ಇಲಾಖೆಯ ನಿರ್ದೇಶಕರಾದರು. ಇದೇ ಸಮಯದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಪ್ರಾಗಿತಿಹಾಸ ವಿಭಾಗಕ್ಕೆ ಸಹಾಯಕ ಪುರಾತತ್ತ್ವ ಸರ್ವೇಕ್ಷಣಾಧಿಕಾರಿಯಾಗಿ ಆಯ್ಕೆಯಾಗಿದ್ದರು. ಆದರೆ ಕಾರಣಾಂತರದಿಂದ ಈ ಹುದ್ದೆಯನ್ನು ಒಪ್ಪಿಕೊಳ್ಳಲಿಲ್ಲ. ಕ್ರಮೇಣ ಇವರು ಭಾರತೀಯ ವಾಸ್ತು–ಮೂರ್ತಿ ಕಲೆ ಇತಿಹಾಸದ ಅಧ್ಯಯನದಲ್ಲಿ ತೊಡಗಿಸಿಕೊಂಡರು. ತಮ್ಮ ಸೇವಾವಧಿಯ ಕೊನೆಯ ಹಂತದಲ್ಲಿ ಕರ್ನಾಟಕ ಸರ್ಕಾರದ ಪುರಾತತ್ತ್ವ ಇಲಾಖೆಯ ಗೌರವ ನಿರ್ದೇಶಕರಾದರು. ಆ ಸಂದರ್ಭದಲ್ಲಿ ಇಲಾಖೆಯಲ್ಲಿ ಆರ್ಥಿಕ ಕೊರತೆ ಹಾಗೂ ಸಹಾಯಕ ಸಿಬ್ಬಂದಿ ವರ್ಗದ ಕೊರತೆ ಇದ್ದರೂ ಮಹತ್ತ್ವದ ಪುರಾತತ್ತ್ವ ನೆಲೆಗಳಾದ ತಿರುಮಕೂಡಲು ನರಸೀಪುರ, ಬನವಾಸಿ ಮತ್ತು ಜಡಿಗೇನಹಳ್ಳಿಯಲ್ಲಿ ವೈಜ್ಞಾನಿಕ ಉತ್ಖನನಗಳನ್ನು ನಡೆಸಿ ಮೊದಲನೆಯ ಮತ್ತು ಕೊನೆಯ ನೆಲೆಗಳ ಉತ್ಖನನಗಳ ಬಗೆಗೆ ವೈಜ್ಞಾನಿಕ ವರದಿಗಳನ್ನು ಪ್ರಕಟಿಸಿದರು. ಈ ನೆಲೆಗಳಲ್ಲಿ ಅಪರೂಪದ ಹಾಗೂ ಮಹತ್ತ್ವದ ಸಾಂಸ್ಕೃತಿಕ ಅಂಶಗಳು ಬೆಳಕಿಗೆ ಬಂದಿವೆ. ಇವು ಇವರ ಮಹತ್ತ್ವದ ಕೊಡುಗೆಗಳು. ಉದಾ: ಈಜಿಪ್ಟಿನ ಟುಟಂಕಮನ್ ಪಿರಮಿಡ್ಡಿನಲ್ಲಿ ದೊರೆತ ತಲೆಯಾನಿಕೆಗಳನ್ನು ಹೋಲುವಂಥ ತಿರುಮಕೂಡಲು ನರಸೀಪುರದ ನವಶಿಲಾಯುಗ ಹಂತದಲ್ಲಿ ಒಬ್ಬ ಬಾಲಕನ ಪೂರ್ಣ ಅಸ್ಥಿಪಂಜರದೊಡನೆ ಇಟ್ಟಿದ್ದ ಸುಡಾವೆ ಮಣ್ಣಿನ ತಲೆಯಾನಿಕೆ; ಬನವಾಸಿ ಉತ್ಖನನದಲ್ಲಿ ಪ್ರಥಮ ಬಾರಿಗೆ ದೊರೆತ 1–2ನೆಯ ಶತಮಾನದ ಗಜಪೃಷ್ಠ ವಿನ್ಯಾಸದ ಎರಡು ಧಾರ್ಮಿಕ ಇಟ್ಟಿಗೆ ನಿರ್ಮಿತಿಗಳು ಮತ್ತು ಜಡಿಗೇನಹಳ್ಳಿಯ ಬೃಹತ್ ಶಿಲಾಗೋರಿಗಳಲ್ಲಿ ಪ್ರಥಮ ಬಾರಿಗೆ ಮುಚ್ಚಳಸಹಿತವಾದ ಹಲವು ಕಾಲಿನ ಉದ್ದನೆಯ ಬಾನಿಯಾಕಾರದ ಶವ ಪೆಟ್ಟಿಗೆಗಳು ಮೊದಲಾದವು. ಇವರ ಮುಖ್ಯ ಗ್ರಂಥಗಳಿವು: ಹರಪ್ಪ ಸಂಸ್ಕೃತಿ, ಮೂರ್ತಿಶಿಲ್ಪದಲ್ಲಿ ಮಹಿಷಾಸುರ ಮರ್ದಿನಿ, ದಿ ಹಿಸ್ಟರಿ ಆಫ್ ಗ್ರೇಟ್ ಬ್ರಿಟನ್ ಹಾಗೂ ಪುರಾತತ್ತ್ವ ಇಲಾಖೆಯ 1947–56ರ ಅವಧಿಯ ವಾರ್ಷಿಕ ವರದಿಗಳು. ಅನೇಕ ಅತ್ಯುತ್ತಮ ಸಂಶೋಧನ ಲೇಖನಗಳನ್ನೂ ಪ್ರಕಟಿಸಿದ್ದಾರೆ. ಇವರು 1972 ಜುಲೈ 6ರಂದು ನಿಧನರಾದರು. (ಎ.ಎಸ್.;ಎನ್.ಎಲ್.)

**ಶೋರ್ತುಘೈ:** ಪೂರ್ವಬ್ಯಾಕ್ಟ್ರಿಯ ಅಥವಾ ಈಶಾನ್ಯ ಆಫ್ಘಾನಿಸ್ತಾನದಲ್ಲಿರುವ ಹರಪ್ಪ ಸಂಸ್ಕೃತಿಯ ಮುಖ್ಯನೆಲೆಗಳಲ್ಲೊಂದು. ಇದನ್ನು ತೆಪೆ 209 ಎಂದೂ ಕರೆಯುತ್ತಾರೆ. ಇದು ಅಮುದರ್ಯಾ ಹಾಗೂ ಕೊಕ್‍ಚಾ ನದಿಗಳಿಂದ ಕ್ರಮವಾಗಿ ಸು.5 ಕಿಮೀ ಹಾಗೂ 25ಕಿಮೀ ದೂರದಲ್ಲಿದೆ. ಸು.2.5ಕಿಮೀ ವಿಸ್ತಾರವಾದ ಈ ನೆಲೆ ಸು. 2.5–3 ಮೀ ದಪ್ಪದ ವಸತಿ ಪದರವನ್ನು ಹೊಂದಿದ್ದು, ಎ ಮತ್ತು ಬಿ ಎಂದು ಎರಡು ಮುಖ್ಯ ದಿಬ್ಬಗಳಲ್ಲಿ ವಿಭಜಿಸಲಾಗಿದೆ. ಹಂತ Iರಲ್ಲಿ ಎ ದಿಬ್ಬದ ಸ್ಥಳವನ್ನು ಆಂಶಿಕವಾಗಿ ಉಪಯೋಗಿಸಲಾಯಿತು; ಹಂತ II ಹಾಗೂಹಂತ IIIರಲ್ಲಿ ಎ ಮತ್ತು ಬಿ ದಿಬ್ಬಗಳ ಸ್ಥಳಗಳೆರಡರಲ್ಲೂ ಜನ ವಾಸಿಸುತ್ತಿದ್ದರು. ಕೊನೆಯ ಹಂತ IVರಲ್ಲಿ ಕೇವಲ ಬಿ ದಿಬ್ಬವನ್ನು ನಿವಾಸಕ್ಕಾಗಿ ಉಪಯೋಗಿಸಲಾಯಿತು.

ಪ್ರಥಮ ನಿವಾಸಿಗಳು (1ನೆಯ ಹಂತ) ಪ್ರೌಢ ಹರಪ್ಪ ಕಾಲದವರಾಗಿದ್ದರು. ಈ ಹಂತದ ಅವಧಿಯನ್ನು 3ನೆಯ ಸಹಸ್ರಾಬ್ದದ ಅಂತ್ಯಭಾಗವಾಗಿರಬಹುದೆಂದು ನಿರ್ಧರಿಸಲಾಗಿದೆ. ಇಲ್ಲಿಯ ಕಟ್ಟಡಗಳ ಅವಶೇಷಗಳು ಹರಪ್ಪ ಶೈಲಿಯಲ್ಲಿವೆ. 4:2:1ರ ಅನುಪಾತದಲ್ಲಿ ತಯಾರಿಸಿದ ಹಸಿ ಇಟ್ಟಿಗೆಗಳಿಂದ ಮನೆಗಳನ್ನು ಕಟ್ಟಲಾಗಿದೆ. ಕೆಲವೊಂದು ಕೋಣೆಗಳ ನೆಲಗಟ್ಟನ್ನು ಹಸಿ ಇಟ್ಟಿಗೆಗಳಿಂದ ತಯಾರಿಸಲಾಗಿದೆ. ಇಲ್ಲಿ ದೊರೆತ ಪ್ರಮುಖ ಅವಶೇಷಗಳು ಇಂತಿವೆ: ಖಡ್ಗಮೃಗ ಹಾಗೂ ಹರಪ್ಪ ಚಿತ್ರಲಿಪಿಯುಳ್ಳ ಚೌಕಾಕಾರದ ಸ್ಟಿಯಟೈಟ್ ಮುದ್ರೆ, ಗೀರುಚಿತ್ರವುಳ್ಳ ಮಣ್ಪಾತ್ರೆಗಳು; ಶಂಖದ ಬಳೆಗಳು; ಸುಟ್ಟಮಣ್ಣಿನ ಬಿಲ್ಲೆಗಳು, ಸೌಟುಗಳು, ಮಾದರಿಚಕ್ಕಡಿಯ ಭಾಗಗಳು, ಗೊಂಬೆಗಳ ತಲೆಗಳು, ತಾಮ್ರದ ಪಿನ್ನುಗಳು, ಕನ್ನಡಿಯ ಚೂರು, ತಾಮ್ರ ಕರಗಿಸುವ ಮೂಸೆಗಳು, ಬಂಗಾರದ ಮಣಿ ಹಾಗೂ ಅದರ ತುಣುಕುಗಳು, ಸೀಸದ ತುಣುಕುಗಳು ಇತ್ಯಾದಿ. ಪ್ರೌಢ ಹರಪ್ಪ ಕಾಲದ ವಿಶಿಷ್ಟ ವರ್ಣಮಯ ಹಾಗೂ ಸಾದಾ ಮಣ್ಪಾತ್ರೆಗಳು ದೊರಕಿವೆ. ಜಾಡಿ, ಬೀಕರ್, ತಟ್ಟೆ, ಬಾನಿ, ಕಾಲಿರುವ ತಟ್ಟೆ, ರಂಧ್ರಗಳುಳ್ಳ ಪಾತ್ರೆಗಳನ್ನು ಕಪ್ಪು ವರ್ಣಚಿತ್ರಗಳಾದ ಒಂದನ್ನೊಂದು ಛೇದಿಸುವ ವರ್ತುಲಗಳು, ಅಶ್ವತ್ಥ ಎಲೆಗಳು, ಮೀನುಗಳು, ನವಿಲುಗಳಿಂದ ಅಲಂಕರಿಸಲಾಗಿದೆ. ವ್ಯವಸಾಯ ಕಾಲುವೆ ನೀರಾವರಿ ಹಾಗೂ ಮಳೆಯನ್ನಾಧರಿಸಿತ್ತು. ಇಲ್ಲಿಯೂ ಕೃಷಿ ಮಾಡಿದ ಒಂದು ಹೊಲವನ್ನು ಬೆಳಕಿಗೆ ತರಲಾಗಿದೆ. ಆದರೆ ಈ ಹೊಲಕ್ಕೆ ಕಾಲುವೆಯಿಂದ ನೀರು ಹರಿಸುವುದು ಅಸಾಧ್ಯದ ಮಾತಾಗಿತ್ತು. ಆದ್ದರಿಂದ ಇದು ಮಳೆಯನ್ನಾಧರಿಸಿ ವ್ಯವಸಾಯ ಮಾಡಿದ ಹೊಲವೆಂದು ನಂಬಲಾಗಿದೆ. ಮುಚ್ಚಿಹೋದ ನೀರಾವರಿಯ ಕಾಲುವೆಗಳು ಬೆಳಕಿಗೆ ಬಂದಿವೆ. ಇಂಥ ಕಾಲುವೆಗಳಿಂದ ಸಿಕ್ಕ ಹರಪ್ಪ ಮಣ್ಪಾತ್ರೆಗಳ ಆಧಾರದ ಮೇಲೆ ಇವು ಹರಪ್ಪ ಕಾಲಾವಧಿಗೆ ಸಂಬಂಧಿಸಿವೆಯೆಂದು ಹೇಳಲಾಗಿದೆ. ಸು.25 ಕಿಮೀ ದೂರದಲ್ಲಿರುವ ಕೊಕ್‍ಚಾ ನದಿಯಿಂದ ಕಾಲುವೆಗಳನ್ನು ಭೌಗೋಳಿಕ ಉಬ್ಬು–ತಗ್ಗುಗಳಿಗನುಸಾರವಾಗಿ ತೋಡಿ, ನೀರನ್ನು ಹರಿಸಿರುವ ಕ್ರಮ ಅಂದಿನ ಜಲತಂತ್ರ ವಿಜ್ಞಾನದ ಉತ್ತಮ ಉದಾಹರಣೆಯಾಗಿದೆ. ಇಲ್ಲಿ ದೊರೆತ ಧಾನ್ಯಗಳು ಇಂತಿವೆ: ಜವೆ, ಗೋದಿ, ದ್ವಿದಳಧಾನ್ಯಗಳು (ಬೇಳೆಕಾಳುಗಳು), ನಾಗರಸೆ ಬೀಜ, ದ್ರಾಕ್ಷಿ, ಸಣ್ಣಕಾಳುಗಳು, ಬಟಾಣಿ, ಬಾದಾಮಿ, ಪಿಸ್ತಾಬೀಜ ಇತ್ಯಾದಿ.

ಭಾರತ ಹಾಗೂ ಪಾಕಿಸ್ತಾನದಲ್ಲಿ ಹರಡಿದ್ದ ಹರಪ್ಪ ಸಂಸ್ಕೃತಿಯ ಜನ ತಮ್ಮ ಸರಹದ್ದಿನಿಂದ ಬಹುದೂರ ಪ್ರದೇಶವಾದ ಈಶಾನ್ಯ ಆಫ್ಘಾನಿಸ್ತಾನದ ಈ ನೆಲೆಯಲ್ಲಿ ಬಿಡಾರವನ್ನು ಹೂಡಿರಲು ಅನೇಕ ಆಕರ್ಷಕ ಕಾರಣಗಳಿದ್ದಿರಬೇಕು. ಈ ಪ್ರದೇಶ ವಿಭಿನ್ನ ಖನಿಜಗಳ ಬೀಡಾಗಿದೆ. ಬದಕ್ಷನ್‍ನ ಉನ್ನತ ಗುಣಮಟ್ಟದ ವೈಡೂರ್ಯ (ಲ್ಯಾಪಿಸ್‍ಲ್ಯಾಸ್ಯೂಲಿ) ನಿಕ್ಷೇಪದ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸುವುದೊಂದೇ ಅಲ್ಲದೆ ಮಧ್ಯ ಏಷ್ಯದ ಇನ್ನಿತರ ಸ್ಥಾನಗಳೊಂದಿಗೆ ವ್ಯಾಪಾರಿಕ ಹಾಗೂ ಸಾಂಸ್ಕೃತಿಕ ಸಂಬಂಧವನ್ನು ಕಲ್ಪಿಸುವ ಕೇಂದ್ರವೂ ಇದು ಆಗಿತ್ತೆಂದು ತೋರಿಬರುತ್ತದೆ. ಇಲ್ಲಿ ದೊರೆಯುವ ಇತರ ಖನಿಜಗಳಾದ ಅಗೇಟ್, ಟರ್ಕ್ವಾಯಿಜ್, ಕಾರ್ನೇಲಿಯನ್ ಹಾಗೂ ಸ್ಟಿಯಟೈಟ್‍ನಿಂದ ತಯಾರಿಸಲ್ಪಟ್ಟ ವಸ್ತುಗಳು ಸಿಂಧೂ–ಸರಸ್ವತಿ ಬಯಲಿನ ಅವಶೇಷಗಳನ್ನು ಹೋಲುತ್ತವೆ. ಹೇರಳವಾಗಿ ದೊರೆತ ಕಾರ್ನೇಲಿಯನ್ ಚಕ್ಕೆಗಳು ಮತ್ತು ಅದರ ಕಚ್ಚಾಸಾಮಗ್ರಿ, ಕಾರ್ನೇಲಿಯನ್ ವಸ್ತುಗಳ ಉದ್ಯಮದ ಅಸ್ತಿತ್ವವನ್ನು ಪುಷ್ಟೀಕರಿಸುತ್ತವೆ. ವೈಡೂರ್ಯದೊಂದಿಗೆ ಫ್ಲಿಂಟಿನ ಸೂಕ್ಷ್ಮ ಅಲಗುಗಳು ಹಾಗೂ ಒಂದು ಬೈರಿಗೆ ದೊರೆತದ್ದು ಈ ಸಂದರ್ಭದಲ್ಲಿ ಮಹತ್ತ್ವಪೂರ್ಣವಾಗಿದೆ. (ಎಲ್.ಎಸ್.ಆರ್.)

**ಶ್ರವಣಬೆಳಗೊಳ:** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಒಂದು ಪಟ್ಟಣ ಹಾಗೂ ಜೈನರ ಪವಿತ್ರ ಯಾತ್ರಾಸ್ಥಳ. ಹಾಸನಕ್ಕೆ 51 ಕಿಮೀ ದೂರದಲ್ಲೂ ಚನ್ನರಾಯಪಟ್ಟಣಕ್ಕೆ 11 ಕಿಮೀ ದೂರದಲ್ಲೂ ಇದೆ. ಇಲ್ಲಿಯ ದೊಡ್ಡ ಬೆಟ್ಟದ ಮೇಲಿರುವ ಗೊಮ್ಮಟ ವಿಗ್ರಹ ಪ್ರಪಂಚಖ್ಯಾತವಾಗಿದೆ.

ಶಾಸನಗಳಲ್ಲಿ ಈ ಸ್ಥಳವನ್ನು ಕಟವಪ್ರ, ಕಟಪ್ರ, ಕಟಪ್ಪ, ಕಟ್ವಪ್ಪ, ಕಟ್ಬಿಪ್ಪ, ಕಟ್ಬಿಪ್ಪು, ವೆಳ್ಗೊಳ, ಬೆಳ್ಗೊಳ, ಧವಳಸರತೀರ್ಥ, ಶ್ವೇತ ಸರೋವರ ಮುಂತಾಗಿ ಕರೆಯಲಾಗಿದೆ. ಅತಿ ಪ್ರಾಚೀನವಾದ ಸು. 6–7ನೆಯ ಶತಮಾನದ ಸಂಸ್ಕೃತ ಶಾಸನದಲ್ಲಿ ಕಟವಪ್ರವೆಂದಿದೆ. ಕಟ್ಬಿಪ್ಪು ಎಂಬುದು ಕಪ್ಪಾದ ಗುಡ್ಡ, ಕರಿಗುಡ್ಡ ಎಂಬ ಅಲ್ಲಿಯ ಪ್ರಾಕೃತಿಕ ಸನ್ನಿವೇಶವನ್ನು ವಿವರಿಸುವಂತಹ ಹೆಸರಾಗಿರಬೇಕು. ಸಂಸ್ಕೃತದಲ್ಲಿ ವಪ್ರ ಎಂದರೆ ಗಿರಿ ಎಂದರ್ಥವಾಗುತ್ತದೆ. ಕಟ ಎಂದರೆ ಸಮಾಧಿ ಗುಹೆ, ಸಮಾಧಿ ಮಾಡತಕ್ಕ ಪ್ರದೇಶ. ಇಲ್ಲಿಯ 7ನೆಯ ಶತಮಾನದ 54 ಶಾಸನಗಳಲ್ಲಿ 41 ಸಲ್ಲೇಖನ, ಸನ್ನಸನ ವಿಧಿಗಳಿಂದ ದೇಹ ಮುಡಿಪಿದ ಸಂಗತಿಯನ್ನು ನಿರೂಪಿಸುವ ಜೈನಶಾಸನಗಳಿವೆ. ಇದನ್ನು ಗಮನಿಸಿ ಕಟವಪ್ರ ಎಂದರೆ ಸಮಾಧಿ ಮರಣ ಹೊಂದಲು ಯೋಗ್ಯವಾದ ಗುಡ್ಡ ಎಂದು ಅರ್ಥೈಸಬಹುದು. ಕಟವಪ್ರದ (ಸಮಾಧಿಗುಡ್ಡ) ಕನ್ನಡ ರೂಪಾಂತರ ಕಟ್ಬಿಪ್ಪು ಆಗಿರಬೇಕು. 7ನೆಯ ಶತಮಾನದ ಶಾಸನಗಳೆರಡರಲ್ಲಿ ಈ ಊರಿನ ಹೆಸರು ವೆಳ್ಗೊಳ, ಬೆಳ್ಗೊಳ ಎಂದು ಕರೆದಿದೆ. ಊರಿನ ಮಧ್ಯೆ ಇರುವ ಕೊಳದಿಂದ ಈ ಹೆಸರು (ಬೆಳಕೊಳ–ಬೆಳ್ಗೊಳ) ಬಂದಿರಬೇಕೆಂಬ ಊಹೆಗೆ ಇದು ಪುಷ್ಟಿ ನೀಡುತ್ತದೆ. ಇವುಗಳನ್ನು ಗಮನಿಸಿದಾಗ ಕಟ್ಬಿಪ್ಪು ಎಂಬುದು ಚಿಕ್ಕಬೆಟ್ಟಕ್ಕೂ ಬೆಳ್ಗೊಳ ಎಂಬುದು ಕೆಳಗಿನ ಊರಿಗೂ ಇದ್ದ ಹೆಸರುಗಳೆನ್ನಬಹುದು. ಶ್ರವಣ ಎಂದರೆ ಯತಿ. ಇಲ್ಲಿ ಹಲವಾರು ಜೈನಯತಿಗಳು ನೆಲಸಿದ್ದರು. ಸನ್ನಸನ ಇತ್ಯಾದಿ ವ್ರತಗಳಿಂದ ಮರಣ ಹೊಂದಿದರು. ಎಂತಲೇ ಇದು ಕಾಲಾನಂತರ ಶ್ರವಣಬೆಳ್ಗೊಳ ಎಂಬ ಹೆಸರನ್ನು ಪಡೆಯಿತು. ಇಲ್ಲಿ ಗೊಮ್ಮಟನ ಮೂರ್ತಿ ಇರುವುದರಿಂದ ಇದು ಗೊಮ್ಮಟಪುರವೆಂದೂ ಕರೆಯಲ್ಪಟ್ಟಿತು.

ಪ್ರಚಲಿತ ಐತಿಹ್ಯದಂತೆ ಪ್ರ.ಶ.ಪೂ.3ನೆಯ ಶತಮಾನದಲ್ಲಿ ಮೌರ್ಯ ಅರಸನಾದ ಚಂದ್ರಗುಪ್ತ ತನ್ನ ಗುರು ಭದ್ರಬಾಹುವಿನೊಂದಿಗೆ ಬಂದು ಇಲ್ಲಿ ನೆಲೆ ನಿಂತ. ಇಲ್ಲಿಯ ಅತಿ ಪ್ರಾಚೀನವಾದ 7ನೆಯ ಶತಮಾನದ ಶಾಸನದಲ್ಲಿ ಮಹಾವೀರನ ನಿರ್ವಾಣಾನಂತರ ಗೌತಮ ಗಣಧರ ಮೊದಲಾದವರು ಜೈನಗುರುಗಳಾಗಿದ್ದು ಅವರಲ್ಲೊಬ್ಬನಾದ ಭದ್ರಬಾಹುಸ್ವಾಮಿ ಉಜ್ಜಯಿನಿಯಲ್ಲಿದ್ದಾಗ ಹನ್ನೆರಡು ವರ್ಷಗಳ ಬರಗಾಲ ದೇಶವನ್ನು ಕ್ಷೋಭೆಗೆ ಒಳಪಡಿಸುತ್ತದೆ ಎಂಬ ಭವಿಷ್ಯವಾಣಿಯನ್ನು ಗಮನಿಸಿ ಸಂಪೂರ್ಣ ಸಂಘ ಉತ್ತರಾಪಥದಿಂದ ದಕ್ಷಿಣಾಪಥಕ್ಕೆ ವಲಸೆ ಬಂದಿತೆಂದೂ ಇಲ್ಲಿ ಪ್ರಭಾಚಂದ್ರನೆಂಬ ಆಚಾರ್ಯನು ತನ್ನ ಅವಸಾನ ಕಾಲವನ್ನರಿತು ಸಮಾಧಿ ಹೊಂದಬಯಸಿ, ಒಬ್ಬ ಶಿಷ್ಯನೊಡನೆ ಕಟವಪ್ರಗಿರಿಗೆ ಬಂದು ಇಲ್ಲಿ ಜೀವ ತೊರೆದನೆಂದೂ ಹೇಳಿದೆ. ಇಲ್ಲಿ ಹೆಸರಿಸಲಾದ ಭದ್ರಬಾಹು, ಪ್ರಭಾಚಂದ್ರ ಹಾಗೂ ಅವನ ಶಿಷ್ಯರನ್ನು ಗುರುತಿಸುವುದರಲ್ಲಿ ಭಿನ್ನಾಭಿಪ್ರಾಯಗಳಿವೆ. ವಾದವಿವಾದಗಳೇನಿದ್ದರೂ ಇತರ ಶಾಸನಾಧಾರಗಳನ್ನವಲಂಬಿಸಿ ಭದ್ರಬಾಹು ಶ್ರುತಕೇವಲಿ ಭದ್ರಬಾಹುವೆಂದೂ ಚಂದ್ರಗುಪ್ತನು ಮೌರ್ಯ ಚಂದ್ರಗುಪ್ತನೆಂದೂ ಮಾಡಿರುವ ಊಹೆ ಹೆಚ್ಚು ಮನನೀಯವಾಗಿ ಕಂಡುಬರುತ್ತದೆ.



ಇಂದ್ರಗಿರಿ

ಶ್ರವಣಬೆಳಗೊಳದ ಶಾಸನಗಳಿಂದ ತಿಳಿಯಲಾದ ಜೈನಯತಿಗಳಲ್ಲಿ ಪದ್ಮನಂದಿ, ಗೃಧ್ರಪಿಚ್ಛ, ಏಲಾಚಾರ್ಯ, ವಕ್ರಗ್ರೀವ ಎಂದೆಲ್ಲ ಕರೆಯಲಾದ ಕೊಂಡಕುಂದಾಚಾರ್ಯ ಪ್ರಮುಖನಾದವನು. ಈತ ಪ್ರವಚನಸಾರವೆಂಬ ಕೃತಿಯ ಕರ್ತೃ. ಅರಿಷ್ಟ ನೇಮಿದೇವ, ನಾಗಮತಿಗಂತಿ, ಅಕ್ಷಯಕೀರ್ತಿ ಮೊದಲಾದವರು ಕಳಂತೂರು, ನೆಡುಬೋರೆ, ಕಿತ್ತೂರು, ಅಗಟಿಇನಜ್ಞೂರು, ತಳಕಾಡು ಮುಂತಾದ ಸ್ಥಳಗಳಿಂದ ಹಲವಾರು ಜೈನಯತಿಗಳು ಇಲ್ಲಿಗೆ ಬಂದರು. ಇವರಲ್ಲದೆ ಸಾಮಾನ್ಯ ಪ್ರಜೆಗಳನ್ನೂ ನಾಡಿನ ಅರಸರನ್ನೂ ಈ ಸ್ಥಳ ಆಕರ್ಷಿಸಿತು. ಮೌರ್ಯ ಚಂದ್ರಗುಪ್ತನಿಂದ ಮೈಸೂರಿನ ಒಡೆಯರವರೆಗೂ ಕರ್ನಾಟಕ ಅರಸರೂ ಈ ಪುಣ್ಯಕ್ಷೇತ್ರದಿಂದ ಪ್ರಭಾವಿತರಾಗಿ ಇಲ್ಲಿ ಹಲವಾರು ದಾನಗಳನ್ನು ಮಾಡಿದರು; ದತ್ತಿಗಳನ್ನು ಬಿಟ್ಟರು. ಇಲ್ಲಿನ ಪುಣ್ಯಕಾರ್ಯಗಳಲ್ಲಿ ಪಾಲ್ಗೊಂಡರು. ಗಂಗವಂಶದ ಅರಸರ, ಪ್ರಮುಖವಾಗಿ ಇಮ್ಮಡಿ ಮಾರಸಿಂಹನ ಶಾಸನಗಳು ಇಲ್ಲಿವೆ. ಇಮ್ಮಡಿ ಮಾರಸಿಂಹನ ಪ್ರಶಸ್ತಿ ಇಲ್ಲಿನ ಶಾಸನವೊಂದರಲ್ಲಿದ್ದು ಆತನ ರಾಜಕೀಯ ಸಾಧನೆಗಳು ಅದರಿಂದ ತಿಳಿಯುತ್ತವೆ. ಆತನ ಹಾಗೂ ಆತನ ಅನಂತರ ಬಂದ ಇಮ್ಮಡಿ ರಾಚಮಲ್ಲನ ಮಂತ್ರಿ ಚಾವುಂಡರಾಯನ ವಿಷಯವಾಗಿಯೂ ಸಾಕಷ್ಟು ಸಂಗತಿ ತಿಳಿದುಬರುತ್ತದೆ. ಬ್ರಹ್ಮ ಕ್ಷತ್ರಕುಲೋತ್ಪನ್ನನಾದ ಈತ ಇಲ್ಲಿ ಬಾಹುಬಲಿ ಮೂರ್ತಿಯನ್ನು ಮಾಡಿಸಿದ. ಇವನ ಹೆಸರಿನಲ್ಲಿ ಬಸದಿಯೊಂದು ಚಿಕ್ಕಬೆಟ್ಟದಲ್ಲಿದೆ.

ಹೊಯ್ಸಳ ರಾಣಿ ಶಾಂತಲೆ ಇಲ್ಲಿಯ ಸವತಿಗಂಧವಾರಣ ಬಸದಿಯನ್ನು ಕಟ್ಟಿಸಿದಳು. ಜೊತೆಗೆ, ಹೊಯ್ಸಳರ ಅಧೀನಾಧಿಕಾರಿಗಳಾಗಿದ್ದ ಗಂಗರಾಜ, ದಂಡನಾಯಕ ಹುಳ್ಳರಸ, ಏಚರಾಜ, ಚಂದ್ರಮೌಳಿ ಮೊದಲಾದವರು ಇಲ್ಲಿ ಬಸದಿಗಳನ್ನು ಕಟ್ಟಿಸಿದರು. ವಿಶೇಷ

ದಾನ-ಧರ್ಮಾದಿಗಳನ್ನು ಮಾಡಿದರು. ಏಚನ ಪತ್ನಿ ಪೋಚಿಕಬ್ಬೆ ಮತ್ತು ಸೊಸೆ ಲಕ್ಷ್ಮಿ - ಇವರು ಬಹುಶಃ ಶಾಸನ ಬಸದಿಯನ್ನೂ ಶಿವಭಕ್ತನಾದ ಚಂದ್ರಮೌಳಿಯ ಪತ್ನಿಯೂ ಜಿನಭಕ್ತೆಯೂ ಆದ ಅಚಲದೇವಿ ಅಕ್ಕನ ಬಸದಿಯನ್ನೂ ಕಟ್ಟಿಸಿದರು. ಅಭಿನವಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯೆ ಬೆಳುಗೊಳದ ಮಂಗಾಯಿ ತ್ರಿಭುವನಚೂಡಾಮಣಿ ಚೈತ್ಯಾಲಯ ವೆಂಬ ಮಂಗಾಯಿ ಬಸದಿ ಜಿನಾಲಯವನ್ನು ಕಟ್ಟಿಸಿದಳು. ಗೊಮ್ಮಟೇಶ್ವರನ ಸುತ್ತಾಲಯದ 24 ತೀರ್ಥಂಕರರನ್ನೂ ಮಾಡಿಸಿದಾತ ವಡ್ಡ ವ್ಯವಹಾರಿಯಾಗಿದ್ದ ಮೊಸಳೆಯ ಬಸವಿಸೆಟ್ಟಿ.

ಇಲ್ಲಿನ ಚಿಕ್ಕಬೆಟ್ಟದಲ್ಲಿ ಹಲವಾರು ಬಸದಿಗಳೂ ಇತರ ಧಾರ್ಮಿಕ ಕಟ್ಟಡಗಳೂ ಇವೆ. ಇದೇ ಕಟವಪ್ರ ಅಥವಾ ಕಟ್ಬಪ್ಪು; ತೀರ್ಥಗಿರಿ ಅಥವಾ ಋಷಿಗಿರಿ. ಇಲ್ಲಿನ ಬಸದಿಗಳೆಲ್ಲ ಸಾಮಾನ್ಯವಾಗಿ ದ್ರಾವಿಡ ಹಾಗೂ ವೇಸರ ಮಾದರಿಯಲ್ಲಿವೆ. ಇದನ್ನು ಹೊಯ್ಸಳ ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜ ತನ್ನ ತಾಯಿ ಪೋಚವ್ವೆಗಾಗಿ ಕಟ್ಟಿಸಿದ. ಕತ್ತಲೆ ಬಸದಿ ದೊಡ್ಡದು, ಚಂದ್ರಗುಪ್ತ ಬಸದಿ ಚಿಕ್ಕದು. ಕಾಲಾನಂತರ ಬಹುಶಃ 12 ನೆಯ ಶತಮಾನದಲ್ಲಿ ಇದರ ಮುಂದೆ ಒಂದು ದ್ವಾರವನ್ನು ಸೇರಿಸಲಾಯಿತು. ಇದು ಕಲಾಕೌಶಲ್ಯದಿಂದ ತುಂಬಿದೆ. ದಾಸೋಜ ಇದರ ರೂವಾರಿ. ಚಾವುಂಡರಾಯನ (ನೇಮಿನಾಥ) ಬಸದಿ ವಾಸ್ತುಶೈಲಿ ಹಾಗೂ ಕಲಾಕೌಶಲ್ಯದ ದೃಷ್ಟಿಯಿಂದ ಒಂದು ಸುಂದರ ವಾಸ್ತುರಚನೆ. ಬಸದಿಯೊಳಗಡೆ ಈಗ ಇರುವ ನೇಮೀಶ್ವರನ ವಿಗ್ರಹಪೀಠದಲ್ಲಿ ಗಂಗರಾಜನ ಮಗನಾದ ಏಚಣ ಬೊಪ್ಪಣ ಚೈತ್ಯಾಲಯವೆಂಬ ಜಿನಾಲಯವನ್ನು ಕಟ್ಟಿಸಿದನೆಂದು ಹೇಳಿದೆ. ಶಾಸನಬಸದಿ ಚಂದ್ರಪ್ರಭ ಬಸದಿ, ಮಜ್ಜಿಗಣ್ಣನ ಬಸದಿ, ಎಡರುಕಟ್ಟೆ ಬಸದಿ ಮತ್ತು ಸವತಿಗಂಧವಾರಣ ಬಸದಿಗಳು ಇಲ್ಲಿಯ ಇತರ ಬಸದಿಗಳು. ಕತ್ತಲೆ ಬಸದಿಯ ದಕ್ಷಿಣಕ್ಕೆ ಪೂರ್ವಾಭಿಮುಖವಾಗಿ ನಾಲ್ಕು ಕಂಬಗಳ ಎರಡು ಮಂಟಪಗಳಿದ್ದು ಇದನ್ನು ಮಹಾನವಮಿ ಮಂಟಪ ಎಂದು ಕರೆಯಲಾಗಿದೆ. ಇದರಲ್ಲಿನ ಒಂದು ಕಂಬದ ಮೇಲಿರುವ ಶಾಸನದಲ್ಲಿ 1176 ರಲ್ಲಿ ಮರಣಹೊಂದಿದ ನಯಕೀರ್ತಿ ಎಂಬ ಗುರುವಿನ ಸ್ಮರಣಾರ್ಥವಾಗಿ ಆತನ ಶಿಷ್ಯನಾದ ನಾಗದೇವ ಮಂತ್ರಿ ಅದನ್ನು ಕಟ್ಟಿಸಿದನೆಂದಿದೆ. ಬೆಟ್ಟವನ್ನೇರಿ ಗೋಡೆಯನ್ನು ದಾಟಿ ಬಂದಾಗ ಕಾಣುವುದು ಕೂಗೆ ಬ್ರಹ್ಮದೇವರ ಕಂಬ. ಈ ಕಂಬದ ಮೇಲಿನ ಚೌಕಾಕಾರದ ಮಾಡಿನಲ್ಲಿ ಪೂರ್ವಾಭಿಮುಖವಾಗಿ ಕುಳಿತ ಬ್ರಹ್ಮದೇವರ ವಿಗ್ರಹವಿದೆ. ಕಂಬದ ಮೇಲಿನ ಶಾಸನದಲ್ಲಿ ಗಂಗರ ಇಮ್ಮಡಿ ಮಾರಸಿಂಹನ ಮರಣದ ಪ್ರಸ್ತಾಪವಿದೆ.



ಗೊಮ್ಮಟೇಶ್ವರ, ಶ್ರವಣಬೆಳಗೊಳ

ಮಹಾನವಮಿ ಮಂಟಪದ ಪಶ್ಚಿಮಕ್ಕೆ ಬಂಡೆಯಲ್ಲಿ ಭರತನದೆಂದು ಹೇಳಲಾಗುವ ಎತ್ತರದ ಅಸಂಪೂರ್ಣ ವಿಗ್ರಹವಿದೆ. ಗೋಡೆಯ ಹೊರಗಡೆ ಬ್ರಹ್ಮದೇವನ ಆಲಯವಿದೆ. ಭದ್ರಬಾಹು ವಾಸಿಸಿದ್ದನೆನ್ನಲಾದ ಗುಹೆ ಭದ್ರಬಾಹುಗುಹೆ. ಇಲ್ಲಿ ಆ ಆಚಾರ್ಯನ ಪಾದಗಳೆಂದು ನಂಬಲಾದ ಕೊರೆದ ಎರಡು ಪಾದಗಳಿವೆ. ಬ್ರಹ್ಮದೇವರ ಮಂಟಪದಲ್ಲಿ ಮಾನಸ್ತಂಭಕ್ಕೆ ಆನಿಸಿಕೊಂಡು ನಿಂತಿರುವ ಸ್ತ್ರೀವಿಗ್ರಹವೊಂದನ್ನು ಗುಳ್ಳಕಾಯಜ್ಜಿ ಎಂದು ಹೇಳಲಾಗುತ್ತದೆ. ಈ ವಿಗ್ರಹದ ಹಿಂಬದಿಯಲ್ಲಿರುವ ಮಾನಸ್ತಂಭ ಮತ್ತು ಅದರ ಮೇಲಿರುವ ಯಕ್ಷನನ್ನು 12ನೆಯ ಶತಮಾನದಲ್ಲಿದ್ದ ಸಚಿವ ಬಲದೇವ ಮಾಡಿಸಿದುದಕ್ಕೆ ಆ ಸ್ತಂಭದ ಮೇಲೆ ಶಾಸನವಿದೆ. (ಎಸ್.ಜಿ.ವಿ.)

1020 ಮೀ ಎತ್ತರದ ದೊಡ್ಡಬೆಟ್ಟಕ್ಕೆ ಇಂದ್ರಗಿರಿ, ವಿಂಧ್ಯಗಿರಿ ಎಂಬ ಹೆಸರುಗಳಿವೆ. ಬೆಟ್ಟ ಹತ್ತಲು ಸು.500 ಮೆಟ್ಟಲುಗಳಿವೆ. ಬೆಟ್ಟದ ಮೇಲೆ ಉತ್ತರಾಭಿಮುಖವಾಗಿ ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವ 17.70 ಮೀ ಎತ್ತರದ ಗೊಮ್ಮಟ ವಿಗ್ರಹ ಪ್ರಪಂಚದಲ್ಲಿಯೇ ಅತ್ಯಂತ ಎತ್ತರದ ಏಕಶಿಲೆಯ ಕಲಾಕೃತಿ. ಗಂಭೀರವಾದ ಪ್ರಶಾಂತವಾದ ಮುಖಮುದ್ರೆ, ತಲೆಯಲ್ಲೆಲ್ಲ ವ್ಯಾಪಿಸಿಕೊಂಡಿರುವ ಗುಂಗುರು ಕೂದಲು, ಪೌರುಷದ ಪ್ರತೀಕವೆಂಬಂತಿರುವ ಭುಜ, ವಿಶಾಲವಾದ ಎದೆ, ನವಿರಾದ ಹೆಬ್ಬೆರಳು, ಹೊರ ಮುಖವಾಗಿರುವಂತೆ ಎರಡು ಹಸ್ತಗಳು, ಸಣ್ಣ ನಡು, ಮೊಣಕಾಲು, ಪಾದ ಇವುಗಳಿಂದ ಇದು ಗಂಭೀರವಾದ ಶಿಲ್ಪಕೃತಿ ಎನಿಸಿದೆ. ತೊಡೆಗಳ ಕೆಳಭಾಗ ಹುತ್ತದಿಂದ ಆವೃತವಾಗಿದೆ. ಹುತ್ತದಿಂದ ಸರ್ಪಗಳು ಹೊರಬಂದಿವೆ. ಎರಡು ಕಾಲುಗಳನ್ನೂ ತೋಳುಗಳನ್ನೂ ಮಾಧವೀಲತೆ ಸುತ್ತಿಕೊಂಡಿದೆ. ಬೊಪ್ಪಣಕವಿಯ ಶಾಸನಸ್ಥವಾಗಿರುವ ಗೊಮ್ಮಟಸ್ತುತಿಯಲ್ಲಿ ಗೊಮ್ಮಟನ ಕಥೆ ಹೇಳಿದೆ. ಇದರಲ್ಲಿಯ ಕಥೆಯನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ದೊಡ್ಡಯ್ಯನ ಭುಜಬಲಿಶತಕ (ಸು.1550), ಪಂಚಬಾಣನ ಭುಜಬಲಿ ಚರಿತೆ (ಸು.1614), ಅನಂತಕವಿಯ ಗೊಮ್ಮಟೇಶ್ವರ ಚರಿತೆ (ಸು.1780), ದೇವಚಂದ್ರನ ರಾಜಾವಳೀ ಕಥೆ (ಸು.1838)-ಈ ಮೊದಲಾದ ಕಾವ್ಯಗಳಲ್ಲಿ ಹೇಳಲ್ಪಟ್ಟಿದೆ. ಈ ವಿಗ್ರಹ ಚಾವುಂಡರಾಯನಿಂದ ಸು.983ರಲ್ಲಿ ಮಾಡಿಸಲ್ಪಟ್ಟಿತು. ಗೊಮ್ಮಟ ವಿಗ್ರಹದ ಮುಂದೆ ಒಳ್ಳೆಯ ಕೆತ್ತನೆಯನ್ನೊಳಗೊಂಡ ಮಂಟಪವಿದೆ. ಇದನ್ನು ಸು.12ನೆಯ ಶತಮಾನದ ಆದಿ ಭಾಗದಲ್ಲಿ ಮಂತ್ರಿ ಬಲದೇವ ಕಟ್ಟಿಸಿದನೆಂದು ತೋರುತ್ತದೆ. ಬಸವಿಸೆಟ್ಟಿ 24 ತೀರ್ಥಂಕರರನ್ನು ಪ್ರತಿಷ್ಠಾಪಿಸಿ ಸುತ್ತಾಲಯದ ಗೋಡೆ ಕಟ್ಟಿಸಿದ (ಸು.1200). ಸುತ್ತಾಲಯವನ್ನು ಗಂಗರಾಜ ಕಟ್ಟಿಸಿದ.

ದೊಡ್ಡಬೆಟ್ಟದ ಇತರ ಕಟ್ಟಡಗಳಲ್ಲಿ ಸಿದ್ಧರ ಬಸದಿ ಇದರಲ್ಲಿಯ ಎರಡು ಚಿತ್ರಮಯ ಕಂಬಗಳಿದ್ದು ಒಂದೊಂದರಲ್ಲೂ ಕ್ರಮವಾಗಿ ಅರ್ಹದ್ದಾಸ (ಸು. 1398) ಮತ್ತು ಮಂಗರಾಜ (ಸು. 1432) ಎಂಬ ಸಂಸ್ಕೃತ ಕವಿಗಳ ಶಾಸನಗಳಿವೆ. ಏಕಶಿಲೆಯಲ್ಲಿ ಕೆತ್ತಿದ ಅಖಂಡ ಬಾಗಿಲು, ಇದರ ಮೇಲಿನ ಹಾಸುಗಲ್ಲಿನಲ್ಲಿ ಆಸೀನಳಾದ ಲಕ್ಷ್ಮಿಯ ವಿಗ್ರಹದ ಸುಂದರವಾದ ಕೆತ್ತನೆ ಇದೆ. ಇದರ ಬಲಗಡೆ ಮಲ್ಲಿಸೆಟ್ಟಿಯ ಮಗಳ ಸ್ಮರಣಾರ್ಥವಾಗಿ ಸ್ಥಾಪಿಸಿದ. ಸು.1300 ನೆಯ ವರ್ಷದ ಸೂಕ್ಷ್ಮ ಕೆತ್ತನೆಯನ್ನೊಳಗೊಂಡ ತ್ಯಾಗದ ಬ್ರಹ್ಮದೇವರ ಕಂಬ, 1173ರ ಚನ್ನಣ್ಣನ ಬಸದಿ ಮತ್ತು ಇದರ ಮಾನಸ್ತಂಭ ಸ್ಥಾಪಿಸಿರಬೇಕು. ಇದು ಚಂದ್ರನಾಥನ ಒದೆಗಲ್ ಇಲ್ಲಿವೆ. ತ್ರಿಕೂಟ ಬಸದಿ, ಮಂಟಪವನ್ನೊಳಗೊಂಡ ಚೌವೀಸ ತೀರ್ಥಂಕರ ಬಸದಿ ಗಮನಾರ್ಹ. 1648ರಲ್ಲಿ ಚಾರುಕೀರ್ತಿಪಂಡಿತ, ಧರ್ಮಚಂದ್ರ ಮತ್ತಿತರರು ಪ್ರತಿಷ್ಠಾಪಿಸಿದರು.

ಶ್ರವಣಬೆಳಗೊಳ ಪಟ್ಟಣ ಈ ಎರಡೂ ಬೆಟ್ಟಗಳ ನಡುವೆ ಇದೆ. ಇಲ್ಲಿ ಈ ಪಟ್ಟಣದ ಹೆಸರಿಗೆ ಕಾರಣವಾದ ಕೊಳ (ಕಲ್ಯಾಣಿ) ಇದೆ. ಮೈಸೂರಿನ ಚಿಕ್ಕದೇವರಾಜ ಒಡೆಯರು (1673-1704) ಇದನ್ನು ಜೀರ್ಣೋದ್ಧಾರ ಮಾಡಿಸಿದರು.

ಶ್ರವಣಬೆಳಗೊಳದಲ್ಲಿಯೇ ಹಿರಿದಾದದು ಭಂಡಾರಿ ಬಸದಿ. ಗರ್ಭಗುಡಿಯಲ್ಲಿ 24 ತೀರ್ಥಂಕರ ವಿಗ್ರಹಗಳಿರುವ ಕಾರಣ ಇದನ್ನು ಚತುರ್ವಿಂಶತಿ ತೀರ್ಥಂಕರ ಬಸದಿ ಎಂದೂ ಕರೆಯಲಾಗಿದೆ. ಬಸದಿಯ ಮುಂದೆ ಅಖಂಡ ಶಿಲೆಯ ಒಂದು ಮಾನಸ್ತಂಭವಿದೆ. ಈ ಬಸದಿಯನ್ನು ಕಟ್ಟಿಸಿದಾತ ಹೊಯ್ಸಳ ಒಂದನೆಯ ನರಸಿಂಹನ ಭಂಡಾರಿಯಾಗಿದ್ದ ಹುಳ್ಳರಸ. ಎಂತಲೇ ಇದಕ್ಕೆ ಭಂಡಾರಿ ಬಸದಿ ಎಂದು ಹೆಸರು. ಅಕ್ಕನ (ಪಾರ್ಶ್ವನಾಥ) ಬಸದಿ ಹೊಯ್ಸಳ ಶೈಲಿಯ ಕಟ್ಟಡ. ಇದನ್ನು 1181ರಲ್ಲಿ ಚಂದ್ರಮೌಳಿಯ ಪತ್ನಿ ಆಚಿಯಕ್ಕ ಕಟ್ಟಿಸಿದಳು. ಈ ಬಸದಿಯ ಪ್ರಾಕಾರದೊಳಗೆ ಪಶ್ಚಿಮಕ್ಕಿರುವುದು ಸಿದ್ಧಾಂತ ಬಸದಿ. ಇದರಲ್ಲಿಯ ಕತ್ತಲೆ ಕೋಣೆಯೊಂದರಲ್ಲಿ ಹಿಂದೆ ಜೈನಸಿದ್ಧಾಂತಕ್ಕೆ ಸಂಬಂಧಿಸಿದ ಗ್ರಂಥಗಳನ್ನಿಟ್ಟಿದ್ದರೆಂಬ ಕಾರಣದಿಂದ ಇದಕ್ಕೆ ಈ ಹೆಸರು ಬಂದಿದೆ. ಅಕ್ಕನ ಬಸದಿಯ ಮಹಾದ್ವಾರದ ಸಮೀಪದಲ್ಲಿ ದಾನಶಾಲೆ ಬಸದಿ ಇದೆ. ಇದರಲ್ಲಿ ಪಂಚಪರಮೇಷ್ಠಿಗಳ ವಿಗ್ರಹವಿದೆ.

ನಗರ ಜಿನಾಲಯ ಸಾಮಾನ್ಯವಾದ ಕಟ್ಟಡ. ಒಳಗೆ ಅರಿನಾಥನ ವಿಗ್ರಹವಿದೆ. ಇದನ್ನು 1195ರಲ್ಲಿ ಇಮ್ಮಡಿ ಬಲ್ಲಾಳನ ಪಟ್ಟಣಸ್ವಾಮಿಯಾದ ನಾಗದೇವಮಂತ್ರಿ ಕಟ್ಟಿಸಿದ. ನಗರಗಳು (ವರ್ತಕರು) ಇದಕ್ಕೆ ನೀಡಿದ ಬೆಂಬಲದಿಂದ ಇದನ್ನು ನಗರ ಜಿನಾಲಯವೆಂದು ಕರೆಯಲಾಗಿದೆ. ಮಂಗಾಯಿ ಬಸದಿಯೂ ಸಾಮಾನ್ಯವಾದ ಕಟ್ಟಡವೇ.

ಇಲ್ಲಿರುವ ಏಕೈಕ ಹಿಂದು ದೇವಾಲಯ ಕಾಳಮ್ಮನ ಗುಡಿ. ಇದರ ಗರ್ಭಗೃಹ ಮಾತ್ರ ಕಲ್ಲಿನ ಕಟ್ಟಡ. ಇದರ ಮೇಲೆ ಗಾರೆಯ ಗೋಪುರವಿದೆ. ಗುಡಿಯಲ್ಲಿ 0.70 ಮೀ ಎತ್ತರದ ಕಾಳಿಯ ವಿಗ್ರಹವಿದೆ.

ಗ್ರಾಮದ ಮಧ್ಯೆ ಜೈನಮಠವಿದೆ. ಚಾವುಂಡರಾಯ ಗೊಮ್ಮಟಮೂರ್ತಿ ಸ್ಥಾಪಿಸಿದಾಗ ಈ ಮಠವನ್ನು ನೆಲೆಗೊಳಿಸಿ ತನ್ನ ಗುರು ನೇಮಿಚಂದ್ರರನ್ನು ಮಠಾಧಿಪತಿಯಾಗಿ ನಿಯಮಿಸಿದ ನೆಂದು ಹೇಳಲಾಗಿದೆ. ಈ ಮಠದ ಆಚಾರ್ಯರಲ್ಲೊಬ್ಬರಾದ ಚಾರುಕೀರ್ತಿಪಂಡಿತಾಚಾರ್ಯರು ಹೊಯ್ಸಳ ಒಂದನೆಯ ಬಲ್ಲಾಳನ ರೋಗವೊಂದನ್ನು ಗುಣಪಡಿಸಿ ಬಲ್ಲಾಳರಾಯ ಜೀವರಕ್ಷಾಪಾಲ ಎಂಬ ಬಿರುದನ್ನು ಪಡೆದರೆಂದು ಹೇಳಿದೆ. ಮಠದಲ್ಲಿ ಒಂದೇ ಸಾಲಿನಲ್ಲಿ ಮೂರು ಗರ್ಭಗುಡಿಗಳಿದ್ದು ಅದರಲ್ಲಿನ ವಿಗ್ರಹಗಳು ನಿತ್ಯಪೂಜೆಗೆ ಒಳಪಟ್ಟಿವೆ. ಈ ವಿಗ್ರಹಗಳನ್ನು ಅನೇಕ ಭಕ್ತರು ದಾನ ಮಾಡಿರುವ ವಿಷಯ ಅವುಗಳಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಮಠದ ಗೋಡೆಗಳನ್ನು ಸುಂದರವಾದ ವರ್ಣಚಿತ್ರಗಳು ಅಲಂಕರಿಸಿವೆ. ಒಂದರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ದರ್ಬಾರಿನ ಚಿತ್ರಣವಿದೆ. ಪಂಚಪರಮೇಷ್ಠಿಗಳ, ನೇಮಿನಾಥನ, ಮಠದ ಆಚಾರ್ಯರ, ಪಾರ್ಶ್ವನಾಥನ ಸಮವಸರಣದ ಹಾಗೂ ಇತರ ಧಾರ್ಮಿಕ ವಿಷಯಗಳನ್ನೊಳಗೊಂಡ ಚಿತ್ರಗಳನ್ನು ಕಾಣಬಹುದು.

12 ವರ್ಷಕ್ಕೊಮ್ಮೆ ಶ್ರವಣಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕ ಪ್ರಸಿದ್ಧವಾದುದು. 1398ರಷ್ಟು ಹಿಂದೆಯೇ ಗೊಮ್ಮಟನಿಗೆ ಮಹಾಮಸ್ತಕಾಭಿಷೇಕ ನಡೆದ ವಿಷಯ ಶಾಸನದಿಂದ ತಿಳಿದುಬರುತ್ತದೆ. ಅಂದಿನಿಂದ ಇಂದಿನವರೆಗೆ ಇಂಥ ಅನೇಕ ಅಭಿಷೇಕಗಳು ಕಾಲಕಾಲಕ್ಕೆ ನಡೆದಿವೆ. (ಬಿ.ಆರ್.ಜಿ.)

**ಶ್ರಾವಸ್ತಿ:** ಪ್ರಾಚೀನ ಕೋಸಲದ ರಾಜಧಾನಿ. ಉತ್ತರ ಪ್ರದೇಶದ ಗೊಂಡಾ–ಬಹ್ರೈಚ್ ಜಿಲ್ಲೆಗಳಲ್ಲಿದೆ. ಪ್ರಸೇನಜಿತ್ ರಾಜನ ಆಳಿಕೆಯ ಕಾಲದಲ್ಲಿ ಬುದ್ಧ ಮತ್ತು ಮಹಾವೀರರು ಈ ಸ್ಥಳದೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಇಲ್ಲಿ ಪುರಾತನ ಅವಶೇಷಗಳಿರುವ ಎರಡು ಸ್ಥಳಗಳಿವೆ. ಬೌದ್ಧ ಕೇಂದ್ರವಾದ ಸಾಹೇತ್ ಮತ್ತು ಇದರ ಈಶಾನ್ಯದಲ್ಲಿದ್ದ ಕೋಟೆಯಿಂದಾವೃತವಾದ ನಗರವಾದ ಮಾಹೇತ್. ಇವು ಬಹುಶಃ ಪ್ರಾಚೀನ ರಾಪ್ತಿ ಮತ್ತು ಅಸಿರಾವತಿ ನದಿಪಾತ್ರದಲ್ಲಿವೆ. ಬುದ್ಧನ ಜೀವಿತಕಾಲದಲ್ಲಿ ಅವನ ಅನುಯಾಯಿ ಅನಂತಪಿಂಡಿಕ ಬುದ್ಧನಿಗಾಗಿ ಜೇತವನವಿಹಾರ ಎಂಬ ವಿಹಾರವನ್ನು ಇಲ್ಲಿ ಕಟ್ಟಿಸಿದ. ಇದರ ಮುಂಭಾಗದಲ್ಲಿ ಎರಡು ಸ್ತಂಭಗಳನ್ನು ಅಶೋಕ ನಿಲ್ಲಿಸಿದನೆಂದು ಹೇಳಲಾಗುತ್ತದೆ.

ಈ ನೆಲೆ ಕನ್ನಿಂಗ್‌ಹ್ಯಾಮ್ ಕಾಲದಿಂದಲೂ ಪುರಾತತ್ತ್ವಜ್ಞರನ್ನು ಆಕರ್ಷಿಸಿದೆ. ಜೆ.ಪಿ.ಎಚ್.ವೊಗಲ್, ಜಾನ್ ಮಾರ್ಷಲ್ ಮತ್ತು ದಯಾರಾಂ ಸಾಹ್ನಿಯವರು 1907–08 ಮತ್ತು 1910–11ರಲ್ಲಿ ನಡೆಸಿದ ಭೂಶೋಧನೆಯಿಂದ ಸಾಹೇತ್ ಸ್ಥಳದ ಸ್ತೂಪ, ವಿಹಾರಗಳು, ಬೌದ್ಧದೇವಾಲಯಗಳು ಹೊರಜಗತ್ತಿಗೆ ತಿಳಿಯಲ್ಪಟ್ಟವು. ಈ ಅವಶೇಷಗಳು ಕುಷಾಣರ ಕಾಲದಿಂದ ಗಾಹಡವಾಲದ ರಾಜ ಗೋವಿಂದಚಂದ್ರನ (12ನೆಯ ಶತಮಾನ) ಅವಧಿಗೆ ಸೇರಿದವಾಗಿವೆ.

ಮಾಹೇತ್ ನಗರ ರಾಪ್ತಿ (ಪ್ರಾಚೀನ ಅಸಿರಾವತಿ) ನದಿಯ ದಕ್ಷಿಣಕ್ಕೆ 1ಕಿಮೀ ದೂರದಲ್ಲಿದೆ. ಇದು 21 ಕಿಮೀ ವಿಸ್ತೀರ್ಣದ, 14ಮೀ ಎತ್ತರದ ಒಂದು ದಿಬ್ಬ. ಶೋಭನಾಥ ದೇವಾಲಯ ಈ ದಿಬ್ಬದ ಮೇಲಿದೆ. ಈ ಸ್ಥಳ ಸಂಭವನಾಥ ತೀರ್ಥಂಕರನ ಜನ್ಮಸ್ಥಳವೆಂದು ನಂಬಲಾಗಿದೆ. ಇದನ್ನು ಪಕ್ಕಿಕುಟಿ ಮತ್ತು ಕಚ್ಚಿಕುಟಿಗಳೆಂಬ ಬೌದ್ಧಸ್ತೂಪಗಳು ಸುತ್ತುವರೆದಿವೆ. ಎರಡನೆಯ ಸ್ತೂಪವನ್ನು ಪ್ರಾಯಶಃ ಗುಪ್ತರ ಕಾಲದಲ್ಲಿ ವೈಷ್ಣವ ದೇವಾಲಯವನ್ನಾಗಿ ಪರಿವರ್ತಿಸಲಾಯಿತು. ಅದಕ್ಕೆ ಸಾಕ್ಷಿಯಾಗಿ ಭಗ್ನಾವಶೇಷಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಕೆತ್ತನೆಯುಳ್ಳ ಫಲಕಗಳು ದೊರೆತಿವೆ.

1949ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಕೆ.ಕೆ.ಸಿನ್ಹರವರ ನೇತೃತ್ವದಲ್ಲಿ ಮಾಹೇತ್‌ನಲ್ಲಿ ನಡೆಸಿದ ಉತ್ಖನನದಲ್ಲಿ ಮೂರು ಅನುಕ್ರಮ ಹಂತಗಳನ್ನು ಗುರುತಿಸಲಾಗಿದೆ. ಮೊದಲನೆಯ ಹಂತದಲ್ಲಿ ಕಪ್ಪುಬಣ್ಣದ ಮಣ್ಪಾತ್ರೆಗಳು, ವರ್ಣಚಿತ್ರಿತ ಬೂದುಬಣ್ಣದ ಪಾತ್ರೆಗಳು, ಔತ್ತರೇಯ ಮೆರುಗಿನ ಕಪ್ಪುಪಾತ್ರೆಗಳು ದೊರೆತಿದ್ದು, ಇವು ಹಸ್ತಿನಾಪುರವನ್ನು ಹೊರತುಪಡಿಸಿ ಗಂಗಾನದಿಬಯಲಿನಲ್ಲಿ ಕಂಡುಬರುವ ಅವಶೇಷಗಳನ್ನು ಹೋಲುತ್ತವೆ. ಕಪ್ಪುಬಣ್ಣದ ಚಿತ್ರವುಳ್ಳ ಕೆಂಪುಪಾತ್ರೆಗಳು ಪ್ರ.ಶ.ಪೂ.6ನೆಯ ಶತಮಾನದ ಅಥೆನ್ಸ್ ಪ್ರದೇಶದ ಕುಂಡಗಳ ಮೇಲಿನ ಚಿತ್ರಗಳನ್ನು ಹೋಲುತ್ತವೆ. ಇವುಗಳ ಜೊತೆಗೆ ಗಾಜಿನ ಮಣಿಗಳು, ಅರೆಪ್ರಶಸ್ತ ಕಲ್ಲಿನ ಮಣಿಗಳು, ವೈಡೂರ್ಯದ ಸಿಲಿಂಡರ್ ಆಕಾರದ ಮಣಿಗಳು, ಸುಡಾವೆ ಮಣ್ಣಿನ ಪ್ರಾಣಿಗೊಂಬೆ ಹಾಗೂ ಬಿಲ್ಲೆಗಳು, ಸ್ವಸ್ತಿಕ್ ಮತ್ತು ಸೂರ್ಯನ ಚಿತ್ರಗಳುಳ್ಳ ಸುಡಾವೆ ಮಣ್ಣಿನ ಹೆಂಚುಗಳು ಮತ್ತು ದಂತದ ವಸ್ತುಗಳು ಕಂಡುಬಂದಿವೆ. ತಾಮ್ರದ ಬಳೆ, ಸರ, ಉಂಗುರ, ಕಿವಿಯೋಲೆಗಳಿದ್ದು, ಕಬ್ಬಿಣದ ವಸ್ತುಗಳು ವಿರಳವಾಗಿ ದೊರೆತಿವೆ.

ಎರಡನೆಯ ಹಂತದಲ್ಲಿ ಈ ಪಟ್ಟಣದ ಸುತ್ತಲೂ ಕಟ್ಟಿಸಿದ ಕೋಟೆಯಲ್ಲಿ ಮೂರು ನಿರ್ಮಾಣ ಹಂತಗಳನ್ನು ಗುರುತಿಸಲಾಗಿದೆ. ಆರಂಭದಲ್ಲಿ ಮಣ್ಣಿನ ರಕ್ಷಣಾಗೋಡೆ ಕಟ್ಟಿ ಅನಂತರ ಇದನ್ನು ಸುಟ್ಟ ಇಟ್ಟಿಗೆಗಳ ಗೋಡೆಯಿಂದ ಭದ್ರಪಡಿಸಲಾಯಿತು. ಮನೆಗಳನ್ನು ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಿದ್ದು, ಹತ್ತಿರದಲ್ಲಿಯೇ ವೃತ್ತಾಕಾರದ ಬಾವಿಗಳನ್ನು ನಿರ್ಮಿಸಲಾಗಿದೆ. ಇವುಗಳ ಜೊತೆ ಬರೆಹರಹಿತ ಹಾಗೂ ಮುದ್ರಾಂಕಿತ ತಾಮ್ರ ನಾಣ್ಯಗಳು, ಅಯೋಧ್ಯೆಯ ನಾಣ್ಯಗಳು, ಕಬ್ಬಿಣದ ಆಯುಧಗಳು, ಮೂಳೆಯ ಬಾಣದ ಮೊನೆಗಳು, ಕೆಂಪುಬಣ್ಣದ ಮಡಕೆ, ಕುಡಿಕೆ, ಬಟ್ಟಲು, ಕುಂಡಗಳು, ಊಟದ ತಟ್ಟೆ, ಪಾತ್ರೆಗಳು ದೊರೆತಿವೆ. ಅವುಗಳಲ್ಲಿ ಸುರುಳಿ ಹಾಗೂ ವೃತ್ತಾಕಾರದ ಚಿತ್ರಗಳಿವೆ. ಕೈಯಿಂದ ತಯಾರಿಸಿದ ಸುಡಾವೆ ಮಣ್ಣಿನಮನುಷ್ಯ, ಪ್ರಾಣಿ, ಚಕ್ರಗಳು, ದಂಪತಿ ಆಕೃತಿಗಳು ಇತರ ಆದಿ ಇತಿಹಾಸ ಕಾಲದ ಸುಡಾವೆ ಮಣ್ಣಿನ ಗೊಂಬೆಗಳನ್ನು ಹೋಲುತ್ತವೆ. ಸಿಂಬಿಯಾಕಾರದ ಗಾಜಿನ ಮಣಿಗಳು, ಪದ್ಮರಾಗ, ಸ್ಫಟಿಕದ ಮಣಿಗಳು ಸಾಮಾನ್ಯವಾಗಿ ಕಂಡುಬಂದಿವೆ.

ಮೂರನೆಯ ಹಂತದಲ್ಲಿ ಕೋಟೆ ಹಾಳುಬಿದ್ದಿತು. ಆದರೂ ಇಲ್ಲಿ ಕೆಂಪು, ಬೂದುಬಣ್ಣದ ಮಡಕೆಗಳು, ವಿದೇಶಿ ಲಕ್ಷಣಗಳುಳ್ಳ ಸಿಲಿಂಡರ್ ಆಕಾರದ ಟೊಳ್ಳು ಮನುಷ್ಯಾಕಾರದ ಗೊಂಬೆಗಳು, ಸುಡಾವೆ ಮಣ್ಣಿನ ಮಾನವಾಕೃತಿಗಳು ದೊರೆತಿವೆ. ಇವು ಅಹಿಚ್ಛತ್ರದ ಸಮಕಾಲೀನ ಗೊಂಬೆಗಳನ್ನು ಹೋಲುತ್ತವೆ. ನಾಣ್ಯಗಳು ಹಾಗೂ ಇತರ ಅವಶೇಷಗಳ ಆಧಾರದ ಮೇಲೆ ಈ ಮೂರು ಹಂತಗಳ ಕಾಲಮಾನ ಹೀಗಿದೆ: ಹಂತ 1: ಪ್ರ.ಶ.ಪೂ.600–200, ಹಂತ 2: ಪ್ರ.ಶ.ಪೂ.275–50, ಹಂತ 3: ಪ್ರ.ಶ. ಪ್ರಾರಂಭದ ಶತಮಾನಗಳು. 1997–99, 2000–2001ರಲ್ಲಿ ಮಾಹೇತ್ ದಿಬ್ಬದಲ್ಲಿ ಉತ್ಖನನ ಮುಂದುವರೆಯಿತು. 1ನೆಯ ಹಂತದಲ್ಲಿ (ಮೌರ್ಯಪೂರ್ವ–ಮೌರ್ಯ) ರಸ್ತೆಯ ಅವಶೇಷಗಳು, ಸುಟ್ಟ ಇಟ್ಟಿಗೆಯಿಂದ ನಿರ್ಮಿಸಿದ ಬಾವಿ, ಬಳೆಯಿಳಿಸಿದ ಬಾವಿ ಗಮನಾರ್ಹ. ಜಲ್ಲಿಕಲ್ಲು, ಇಟ್ಟಿಗೆ ಹಾಗೂ ಮಣ್ಪಾತ್ರೆ ಚೂರುಗಳನ್ನು ಸುಣ್ಣ, ಕಬ್ಬಿನ ಚರಟದೊಂದಿಗೆ ಬೆರೆಸಿ ರಸ್ತೆಯನ್ನು ನಿರ್ಮಿಸಲಾಗಿದೆ. 2ನೆಯ ಹಂತದಲ್ಲಿ (ಶುಂಗ–ಕುಷಾಣ) ದೊರೆತ ಪ್ರಧಾನ ಅವಶೇಷಗಳೆಂದರೆ ಇಟ್ಟಿಗೆ ಕಟ್ಟಡಗಳು. 3ನೆಯ ಹಂತದಲ್ಲಿ (ಗುಪ್ತ–ಗುಪ್ತೋತ್ತರ) ಸುಟ್ಟ ಇಟ್ಟಿಗೆಯಿಂದ ಕಟ್ಟಿದ ಅನೇಕ ವಸತಿ ಸಂಕೀರ್ಣಗಳು ದೊರೆತವು. ಇದೇ ಹಂತಕ್ಕೆ ಸೇರಿದ ಪಂಚಾಯತನ ಮಾದರಿಯ ಸುಟ್ಟ ಇಟ್ಟಿಗೆಯ ದೇವಾಲಯದ ತಳಪಾಯ ಹಾಗೂ ಪ್ರಾಕಾರ ಗೋಡೆ ಬೆಳಕಿಗೆ ಬಂದಿತು. 4 ಮೂಲೆಗಳಲ್ಲಿ ಪ್ರಾಕಾರಕ್ಕೆ ಹೊಂದಿದಂತೆ ಇರುವ ಇಟ್ಟಿಗೆಯ ಚೌಕಕಟ್ಟೆಗಳು ಪರಿವಾರ ದೇವತೆಯ ಗುಡಿಗಳಾಗಿರಬಹುದು. ದೇವಾಲಯದ ಉತ್ತರಕ್ಕೆ ಮತ್ತೊಂದು ದೇವಾಲಯದ ಅವಶೇಷ ದೊರೆಯಿತು. ಈ ದೇವಾಲಯಗಳ ಅವಶೇಷದ ಮೇಲೆ ಮಧ್ಯಯುಗೀನ ಕಾಲದಲ್ಲಿ ಇಟ್ಟಿಗೆ ವೇದಿಕೆಯನ್ನು ನಿರ್ಮಿಸಲಾಯಿತು. ಸುಡಾವೆಮಣ್ಣಿನ ಮುದ್ರೆ, ಮುದ್ರಾಂಕನಗಳು, ಮುದ್ರಾಂಕನವೊಂದರ ಮೇಲೆ ಸಮುದ್ರಯಾನ ದೃಶ್ಯ, ಮತ್ತೊಂದರಲ್ಲಿ ಲಲಿತಾಸನ ಭಂಗಿಯಲ್ಲಿರುವ, ಶಾಸನಸಹಿತವಾದ ದೇವತೆಯ ಚಿತ್ರ ಗಮನಾರ್ಹ. ಇನ್ನು ಕೆಲವು ಮುದ್ರಾಂಕನಗಳ ಮೇಲೆ ಉಜ್ಜಯಿನಿ ಚಿಹ್ನೆಯಿದೆ. (ಎನ್.ಎಸ್.ಎ.)

**ಶ್ರೀಕಂಠಶಾಸ್ತ್ರೀ, ಎಸ್.:** 1904–74. ಸುಪ್ರಸಿದ್ಧ ಇತಿಹಾಸ ವಿದ್ವಾಂಸರು. 1904 ನವೆಂಬರ್ 5 ರಂದು ನೆಲಮಂಗಲ ತಾಲ್ಲೂಕಿನ ಸೊಂಡೆಕೊಪ್ಪದಲ್ಲಿ ಜನಿಸಿದರು. ತಂದೆ ರಾಮಸ್ವಾಮಿಶಾಸ್ತ್ರಿಗಳು ಸರ್ಕಾರಿ ನೌಕರರಾಗಿದ್ದರಿಂದ ಇವರ ಶಿಕ್ಷಣ ಬೇರೆ ಬೇರೆ ಸ್ಥಳಗಳಲ್ಲಿ ನಡೆಯಿತು. ನಂಜನಗೂಡು, ಚಿಕ್ಕಬಳ್ಳಾಪುರ ಮತ್ತು ಕೋಲಾರಗಳಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದ ಇವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರೌಢ ವ್ಯಾಸಂಗವನ್ನು ನಡೆಸಿ ಎಂ.ಎ. ಪದವಿ ಪಡೆದರು. ಆ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಎಸ್.ಎಸ್. ಸುಬ್ಬರಾವ್, ಬಿ.ಎಂ. ಶ್ರೀಕಂಠಯ್ಯ, ಎಂ.ಎಚ್. ಕೃಷ್ಣ, ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮೇಧಾವಿಗಳ ಮಾರ್ಗದರ್ಶನದಲ್ಲಿ ತಮ್ಮ ಬದುಕು ಬರೆಹಗಳನ್ನು ಕುದುರಿಸಿಕೊಂಡರು. ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದಲ್ಲಿ ಟ್ಯೂಟರ್ ಆಗಿ (1930) ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು ಮುಂದೆ ಅಧ್ಯಾಪಕರಾಗಿ (1935), ಪ್ರಾಧ್ಯಾಪಕರಾಗಿ (1954), ಇಲಾಖೆಯ ಮುಖ್ಯಸ್ಥರಾಗಿ ಕೆಲಸ ಮಾಡಿ ನಿವೃತ್ತರಾದರು. ತಮ್ಮ ಜೀವನದ ಕೊನೆಯವರೆಗೂ ಸಂಶೋಧನೆ ಮತ್ತು ಬರೆವಣಿಗೆಯಲ್ಲಿ ತೊಡಗಿದ್ದರು.

ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಪಾಳಿ, ಅರ್ಧಮಾಗಧಿ ಮುಂತಾದ ಭಾರತೀಯ ಭಾಷೆಗಳಲ್ಲದೆ ಚೀನಿ, ಜಪಾನಿ, ಜರ್ಮನ್, ಫ್ರೆಂಚ್ ಮುಂತಾದ ವಿದೇಶಿ ಭಾಷೆಗಳಲ್ಲೂ ಪರಿಶ್ರಮವನ್ನು ಸಂಪಾದಿಸಿದ್ದರು ಭಾರತೀಯ ಇತಿಹಾಸ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ 400ಕ್ಕೂ ಮಿಕ್ಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ; ಹತ್ತಾರು ಗ್ರಂಥಗಳನ್ನು ರಚಿಸಿದ್ದಾರೆ. ವಿದ್ಯಾರ್ಥಿದೆಸೆಯಲ್ಲಿಯೇ ತಮ್ಮ ಬರೆವಣಿಗೆಯನ್ನು ಆರಂಭಿಸಿ(1924) ಬರೆದ ಸಂಶೋಧನ ಲೇಖನವೊಂದು ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಮಹಾರಾಜ ಕಾಲೇಜಿನ ಹಿಸ್ಟರಿ ಅಸೋಸಿಯೇಷನ್‌ನ ಆಶ್ರಯದಲ್ಲಿ ಶಿವಗಂಗೆಯ ಇತಿಹಾಸವನ್ನು ಕುರಿತು ಮಂಡಿಸಿದ ಸಂಶೋಧನ ಪ್ರಬಂಧ ಬಹುಜನರ ಗಮನ ಸೆಳೆಯಿತು. ಅನಂತರ ಇವರು ಬರೆದ ಗ್ರೀಕ್ ದಾಖಲೆಗಳಲ್ಲಿ ಎನ್ನಲಾದ ಕನ್ನಡ ಮಾತುಗಳ ಸಂಭಾವ್ಯತೆ, ಬಸವಣ್ಣನವರ ಕಾಲ ಹಾಗೂ ಅವರು ಮಾಡಿದರೆಂದು ಪ್ರತೀತಿಯಿರುವ ಪವಾಡಗಳ ಸತ್ಯಾಂಶ, ರಾಮಾನುಜರು ಎಲ್ಲೆಡೆ ಸಂಚರಿಸಿ ಬಿಟ್ಟಿದೇವ ಮತ್ತಿತರ ರಾಜರ ಮತಪರಿವರ್ತನೆ ಮಾಡಿದರೆಂಬ ವಾದದ ಸಂಭವನೀಯತೆ, ಚಾವುಂಡರಾಯನು ಶ್ರವಣಬೆಳಗೊಳದ ಗೊಮ್ಮಟ ವಿಗ್ರಹದ ಕರ್ತೃವೆಂಬ ವಾದಕ್ಕೆ ಕೆಲವು ಬಾಧಕ ಅಂಶಗಳು, ಗಂಗವಂಶದ ರಾಜರ ವಂಶಾವಳಿ ಹಾಗೂ ಸಾಧನೆ, ಪ್ರಾಗ್ಭಾರತೀಯ ಸಂಸ್ಕೃತಿ, ಹರಪ್ಪ ಮೊಹೆಂಜೊದಾರೊ ನಾಗರಿಕತೆ, ಸಿಂಧೂಲಿಪಿಯ ರೂಪರೇಷೆ ಮುಂತಾದ ಪ್ರಬಂಧಗಳು ಆಯಾ ವಿಷಯಗಳಲ್ಲಿ ಮೌಲಿಕ ಸಂಶೋಧನೆಗಳೆನಿಸಿವೆ. ಭಾರತೀಯ ಸಂಸ್ಕೃತಿ (1954), ರೋಮನ್ ಚಕ್ರಾಧಿಪತ್ಯದ ಚರಿತ್ರೆ (1949), ಪ್ರಪಂಚ ಚರಿತ್ರೆಯ ರೂಪರೇಷೆಗಳು (1957), ಪುರಾತತ್ತ್ವ ಶೋಧನೆ (1960), ಹೊಯ್ಸಳ ವಾಸ್ತುಶಿಲ್ಪ (1965)–ಇವು ಕನ್ನಡದಲ್ಲಿ ಬರೆದಿರುವ ಗಣ್ಯ ಗ್ರಂಥಗಳು. ಅರ್ಲಿ ಗಂಗಾಸ್ ಆಫ್ ತಲಕಾಡ್ (1952), ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ (1940) ಮುಂತಾದ ಪ್ರೌಢ ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿವೆ.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರೆತಿವೆ. ಮೈಸೂರಿನಲ್ಲಿ 1935ರಲ್ಲಿ ನಡೆದ ಪ್ರಾಚ್ಯ ಸಮ್ಮೇಳನದಲ್ಲಿ ಶಂಕರಭಗವತ್ಪಾದರ ಕಾಲನಿರ್ಣಯದ ಬಗೆಗೆ ಪ್ರಬಂಧ ಮಂಡಿಸಿದರು. ಬಳ್ಳಾರಿಯಲ್ಲಿ 1958ರಲ್ಲಿ ನಡೆದ 40ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಲಾಗೋಷ್ಠಿಗೆ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ 1970ರಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತು. ಮೈಸೂರಿನಲ್ಲಿ ಇವರಿಗೆ ಶ್ರೀಕಂಠಿಕಾ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು (1973).

ಕನ್ನಡದಲ್ಲಿ ಬರೆದು ಪ್ರಕಟಿಸಿದ್ದ 112 ಸಂಶೋಧನ ಲೇಖನಗಳನ್ನು ಸಂಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಶೋಧನ ಲೇಖನಗಳು (1975) ಎಂಬ ಸಂಪುಟವನ್ನು ಇವರ ನಿಧನಾಂತರ ಪ್ರಕಟಿಸಿತು. ಇವರು ಬೆಂಗಳೂರಿನಲ್ಲಿ 1974 ಮೇ 7ರಂದು ನಿಧನರಾದರು. (ಎಸ್.ಆರ್.ಆರ್.ಎ.)

**ಶ್ರೀತತ್ತ್ವನಿಧಿ:** ಅಪೂರ್ವವಿಷಯಗಳ ಕಣಜ ಹಾಗೂ ಹಿಂದುಧರ್ಮದ ಪುರಾಣಗಳಲ್ಲಿ ಬರುವ ದೇವ, ದೇವತೆಗಳ ಬಗೆಗಿನ ವಿಷಯವನ್ನು ಚಿತ್ರಸಹಿತವಾಗಿ ವರ್ಣಿಸುವ ಒಂದು ಅಪರೂಪದ ಗ್ರಂಥ. ಈ ಗ್ರಂಥ ದಕ್ಷಿಣ ಹಾಗೂ ಉತ್ತರ ಭಾರತದ ಶಿಲ್ಪಗಳ ಲಕ್ಷಣಗಳನ್ನು ಅಭ್ಯಸಿಸುವವರಿಗೆ ಒಂದು ಮುಖ್ಯ ಆಕರ.

ಈ ಗ್ರಂಥದ ರಚನಕಾರರು, ಮೈಸೂರು ಸಂಸ್ಥಾನದ ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಇವರು (1794–1868). ಸಾಹಿತ್ಯ, ಸಂಗೀತ ಮುಂತಾದ ಕಲಾಪ್ರಕಾರಗಳಿಗೆ ಪ್ರೋತ್ಸಾಹನೀಡಿದರು. ಸ್ವತಃ ತಾವೇ ಸಾಹಿತ್ಯ ಸೇವೆಯನ್ನೂ ಅನನ್ಯಸದೃಶವಾಗಿ ಮಾಡಿದ್ದಾರೆ.

ಇವರು ರಚಿಸಿದ ಗ್ರಂಥಗಳಲ್ಲಿ ಶ್ರೀ ತತ್ತ್ವನಿಧಿ ಮೇರುಸದೃಶವಾದ ಕೃತಿ. ಇದು ಅನೇಕ ಶಾಸ್ತ್ರಗಳು, ಆಗಮಗಳು, ಪುರಾಣಗಳು, ಸ್ಥಳಪುರಾಣಗಳು, ಮಂತ್ರಗ್ರಂಥಗಳು, ಜ್ಯೋತಿಷ್ಯ, ಉಪಾಗಮಗಳು, ರಾಮಾಯಣ ಮತ್ತು ಮಹಾಭಾರತ ಹೀಗೆ ಹತ್ತು ಹಲವಾರು ಗ್ರಂಥಗಳಿಂದ ಉದ್ಧರಿಸಿದ ಭಾಗಗಳಿಂದ ರಚಿತವಾಗಿದೆ. ಈ ವಿಷಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್‍ರವರೇ ಸ್ವತಃ ಶ್ರೀತತ್ತ್ವನಿಧಿಯ ಆರಂಭದಲ್ಲಿ ನುಡಿದಿದ್ದಾರೆ. ಈ ಶ್ರೀತತ್ತ್ವನಿಧಿಯ ವೈಶಿಷ್ಟ್ಯವೆಂದರೆ ಎಲ್ಲ ದೇವ ದೇವತೆಗಳ ವರ್ಣನೆಗಳನ್ನು ಸುಂದರವಾದ ವರ್ಣಚಿತ್ರಗಳಲ್ಲಿ ನಿರೂಪಿಸಿರುವುದು.

ಗ್ರಂಥದಲ್ಲಿ ಒಟ್ಟು ಒಂಬತ್ತು ಭಾಗಗಳಿವೆ. ಇವುಗಳಲ್ಲಿ ಯಾವುದೇ ಮೂರ್ತಿಯ ಶಿಲ್ಪಲಕ್ಷಣಗಳನ್ನು ನೀಡಿಲ್ಲವಾದರೂ ಧ್ಯಾನಶ್ಲೋಕಗಳಿಂದ ಆಯಾಯಾ ದೇವತೆಗಳು ಇರಬೇಕಾದ ಲಕ್ಷಣಗಳನ್ನು ಹೇಳಿದ್ದಾರೆ. ಅವುಗಳೆಂದರೆ:

1. ಶಕ್ತಿನಿಧಿ: ಈ ಭಾಗದಲ್ಲಿ ಚಾಮುಂಡಿ, ದುರ್ಗಾ, ಲಕ್ಷ್ಮೀ, ಸರಸ್ವತೀ, ಋತುದೇವತೆಗಳು, ಭೈರವರು ಯೋಗಿನೀ, ಮನುಗಳು, ಭೂಪಾಲಕರು, ಇಂದ್ರಾದಿ ಅಷ್ಟದೇವತೆಗಳು, ತಾರಾದೇವಿ, ಸೂರ್ಯ, ಶಿವ, ಕಾಮೇಶೀ, ಶ್ರೀಚಕ್ರವಿದ್ಯೆಯಲ್ಲಿ ಬರುವ ಯೋಗಿನಿ, ಬಾಲಾ ಮುಂತಾದವರ ಧ್ಯಾನಶ್ಲೋಕಗಳು, ಅಷ್ಟಲಕ್ಷ್ಮೀಯರು, ಡಾಕಿಣಿ, ಶಾಕಿನೀ ದೇವತೆಗಳು, ಸಪ್ತಮಾತೃಕೆಯರು, ಜಗದಂಬಾ, ಚಿತ್ರಿಣೀ, ಬಾಲಾಸರಸ್ವತೀ, ಸಿದ್ಧರು ಮುಂತಾದ ಅನೇಕ ದೇವತೆಗಳ ಸ್ವರೂಪವರ್ಣನೆಯನ್ನು ಮಾಡಲಾಗಿದೆ. ಈ ಧ್ಯಾನಶ್ಲೋಕಗಳಿಗೆ ಅನುಗುಣವಾಗಿ ಈ ಎಲ್ಲರನ್ನೂ ವರ್ಣಚಿತ್ರಗಳಲ್ಲಿ ನಿರೂಪಿಸಲಾಗಿದೆ.

2. ವಿಷ್ಣುನಿಧಿ: ಈ ಭಾಗದಲ್ಲಿ ಮಹಾವಿಷ್ಣುವಿನ ಮೂಲಸ್ವರೂಪ, ಮಹಾವೈಕುಂಠಮೂರ್ತಿ ಧ್ಯಾನ, ಲಕ್ಷ್ಮೀ, ನೀಳಾ ಮತ್ತು ಭೂದೇವಿಯರ ಧ್ಯಾನ, ವೀರನಾರಾಯಣ, ಅಶ್ವತ್ಥನಾರಾಯಣ, ಲಕ್ಷ್ಮೀನಾರಾಯಣ, ಸೂರ್ಯನಾರಾಯಣ, ವಿಧವಿಧವಾದ ಶ್ರೀರಾಮನ ಮೂರ್ತಿಗಳು, ವರಾಹ, ಕೃಷ್ಣರ ವಿವಿಧ ಮೂರ್ತಿಗಳ ಧ್ಯಾನಶ್ಲೋಕಗಳು, ನರಸಿಂಹ, ನವವಿಧವಾದ ನರಸಿಂಹ, ಸದಾಶಿವನರಸಿಂಹ, ಲಕ್ಷ್ಮೀನೃಸಿಂಹ, ಯೋಗನೃಸಿಂಹ ಮುಂತಾದ ನರಸಿಂಹನ ವಿವಿಧ ಮೂರ್ತಿಯ ಲಕ್ಷಣಗಳು, ಹಯಗ್ರೀವ, ಸುದರ್ಶನ, ಹಂಸಮೂರ್ತಿ, ದಧಿವಾಮನ, ಶಿಂಶುಮಾರ, ಬಾಲಮುಕುಂದ, ಅನಂತಪದ್ಮನಾಭ, ದತ್ತಾತ್ರೇಯ ಮೂರ್ತಿ ಮುಂತಾದ ಇತರ ಮುಖ್ಯ ರೂಪಗಳಾದ ವಿಷ್ಣುವಿನ ಮೂರ್ತಿಗಳ ಜೊತೆಗೆ, ಕೇಶವಾದಿ ಇಪ್ಪತ್ತನಾಲ್ಕು ಮೂರ್ತಿಗಳು, ದಶಾವತಾರಗಳು ಹಾಗೂ ಕೆಲವು ಮುಖ್ಯವಾದ ವೈಷ್ಣವಕ್ಷೇತ್ರಗಳಾದ ತಮಿಳುನಾಡಿನ ಶ್ರೀರಂಗಂ, ಶ್ರೀಮುಷ್ಣ ಕಾಂಚಿಪುರ, ಆಂಧ್ರಪ್ರದೇಶದ ತಿರುಪತಿ, ಕರ್ನಾಟಕದ ಮೇಲುಕೋಟೆಯ ಚೆಲುವನಾರಾಯಣನ ಮೂರ್ತಿಲಕ್ಷಣಗಳನ್ನು ಸಹ ಇಲ್ಲಿ ಹೇಳಲಾಗಿದೆ. ಅದಲ್ಲದೆ ಗರುಡ, ಆಂಜನೇಯ ಮತ್ತು ವಿಷ್ವಕ್ಸೇನ ಮುಂತಾದ ವೈಷ್ಣವ ಪರಿವಾರದೇವತೆಗಳ ಬಗೆಗೆ ಸಚಿತ್ರವಾಗಿ ವರ್ಣಿಸಲಾಗಿದೆ.

3. ಶಿವನಿಧಿಯಲ್ಲಿ: ಶಿವನ ಮೂಲಸ್ವರೂಪ, ಮಹೇಶ್ವರ, ಗೌರೀ, ಗಂಗಾ, ಅಘೋರಮೂರ್ತಿ, ಚಂದ್ರಶೇಖರ, ನೀಲಕಂಠ, ರುದ್ರ, ಉಮಾಮಹೇಶ್ವರ, ಸದಾಶಿವನ ವಿವಿಧ ಮುಖಗಳು, ಏಳುವಿಧವಾದ ಶಿವನ ತಾಂಡವ ಮೂರ್ತಿಗಳು, ರುದ್ರ ಹಾಗೂ ಭವಾಷ್ಟಕ ಮೂರ್ತಿಗಳು, ಶಿವನ 24 ಲೀಲೆಗಳನ್ನು ನಿರೂಪಿಸುವ ಮೂರ್ತಿಗಳು ಹಾಗೂ ಇತರ ಶಿವನ ವಿವಿಧ ಮೂರ್ತಿಗಳ ಸ್ವರೂಪವನ್ನು ವರ್ಣಿಸಲಾಗಿದೆ. ಇವಲ್ಲದೇ, ಶೈವ ಪರಿವಾರದೇವತೆಗಳಾದ ಗಣಪತಿಯ ವಿವಿಧ ಸ್ವರೂಪಗಳು, ಸುಬ್ರಹ್ಮಣ್ಯನ ವಿವಿಧ ರೂಪಗಳು, ವಿವಿಧ ಭೈರವರ ರೂಪಗಳು, ವೀರಭದ್ರ, ಶಾಸ್ತಾ (ಅಯ್ಯಪ್ಪ), ಚಂಡೇಶ ಹಾಗೂ ವಿವಿಧ ವಿದ್ಯೇಶರ ಮೂರ್ತಿಗಳ ಧ್ಯಾನದಲ್ಲಿ ಅವರ ಆಯುಧ ಮತ್ತು ಲಕ್ಷಣಗಳೊಂದಿಗೆ ವರ್ಣಿಸಲಾಗಿದೆ.

4. ಬ್ರಹ್ಮನಿಧಿಯಲ್ಲಿ – ಚತುರ್ಮುಖ ಬ್ರಹ್ಮನ ಮೂಲಸ್ವರೂಪ, ವಿದ್ಯಾಧಿದೇವತೆಯಾದ ಸರಸ್ವತಿ, ಲೋಕಪಾಲ, ಆದ್ಯ, ಪ್ರಜಾಪತಿ, ವಿಧಿ, ವಿಶ್ವಕರ್ಮರೆಂಬ ಪಂಚವಿಧ ಬ್ರಹ್ಮರನ್ನು ವರ್ಣಿಸುವ ಧ್ಯಾನಶ್ಲೋಕಗಳು, ಪುರಾಣಪ್ರಸಿದ್ಧವಾದ ಸಪ್ತಮಹರ್ಷಿಗಳು, ನಾಲ್ಕುವೇದಗಳ ಮೂರ್ತಿಸ್ವರೂಪ, ವೇದಾಂಗ, ಆಯುರ್ವೇದಾದಿ ಉಪವೇದಗಳೂ ಭರತಶಾಸ್ತ್ರ, ಪಾಶುಪತ ಮತ್ತು ಪಾಂಚರಾತ್ರ ಮೊದಲಾದವುಗಳ ಮೂರ್ತಿಸ್ವರೂಪಗಳು, ಅಷ್ಟದಿಗ್ಗಜಗಳು, ಹದಿನಾಲ್ಕು ಮನುಗಳು, ಏಳು ಚಿರಂಜೀವಿಗಳಾದ ಅಶ್ವತ್ಥಾಮ, ಬಲಿ, ವ್ಯಾಸ, ಹನುಮಾನ್, ವಿಭೀಷಣ, ಕೃಪ, ಪ್ರಹ್ಲಾದ, ಮಾರ್ಕಂಡೇಯರ ವರ್ಣನೆ ಹಾಗೂ ಇತರ ಋಷಿಗಳ ವರ್ಣನೆಯನ್ನು ವರ್ಣಚಿತ್ರಗಳ ಸ್ವರೂಪದಲ್ಲಿ ವರ್ಣಿಸಲಾಗಿದೆ.

ಇದಲ್ಲದೇ ಈ ಭಾಗದಲ್ಲಿ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಸ್ವರ, ರಾಗಗಳು ಮತ್ತು ತಾಳಗಳಿಗೆ ಮೂರ್ತಿಸ್ವರೂಪವನ್ನು ನೀಡಿ ವರ್ಣಚಿತ್ರಗಳಿಂದ ರಮಣೀಯವಾಗಿ ನಿರೂಪಿಸಲಾಗಿದೆ.

5. ಗ್ರಹನಿಧಿ–ಇದು ಜ್ಯೋತಿಶ್ಶಾಸ್ತ್ರದ ಸಂಗ್ರಹರೂಪದಲ್ಲಿದೆ. ಈ ಭಾಗದಲ್ಲಿ ಸೂರ್ಯ, ಚಂದ್ರ, ಗ್ರಹಗಳು, ನಕ್ಷತ್ರಗಳು, ಯುಗಗಳು, ಸಂವತ್ಸರಗಳು, ಋತುಗಳು, ಉತ್ತರಾಯಣ ಮತ್ತು ದಕ್ಷಿಣಾಯನ ಮುಂತಾದವುಗಳಿಗೆ ಅಧಿದೇವತೆಗಳನ್ನು ಕಲ್ಪಿಸಿ ಅವರ ಧ್ಯಾನಶ್ಲೋಕಗಳ ಮೂಲಕ ವರ್ಣನೆ ಮಾಡಲಾಗಿದೆ. ಇವಲ್ಲದೆ ಕಾಳರಾಹು, ಅಪಸ್ಮಾರ, ಮಹಾಕಾಲ, ಮೃತ್ಯುದೇವತೆ, ಕೃತ್ಯಾ (ಅಭಿಚಾರಕ್ಕೆ ಸಂಬಂಧಪಟ್ಟ ದೇವತೆ) ಇವರ ಚಿತ್ರಣವನ್ನೂ ನೀಡಲಾಗಿದೆ.

6. ವೈಷ್ಣವ ನಿಧಿ–ಈ ಭಾಗದಲ್ಲಿ ವೈಷ್ಣವರ ಮುಖ್ಯವಾದ ತೀರ್ಥಕ್ಷೇತ್ರಗಳ ವಿವರಗಳನ್ನು ಆಯಾಯಾ ಕ್ಷೇತ್ರದ ದೇವತೆಗಳ ಹೆಸರು ಮತ್ತು ಮೂರ್ತಿಲಕ್ಷಣ, ಅಲ್ಲಿನ ದೇವರ ಜೊತೆ ಇರುವ ದೇವಿಯರ ಹೆಸರು ಅಲ್ಲಿನ ವಿಮಾನದ ಹೆಸರು, ತೀರ್ಥದ ಹೆಸರು, ದೇವರು ಯಾವ ದಿಕ್ಕಿಗೆ ಅಭಿಮುಖವಾಗಿ ನಿಂತಿರುವರು ಎಂಬ ವಿವರಗಳನ್ನು ನೀಡಲಾಗಿದೆ. ಉದಾ: ಶ್ರೀರಂಗಂ ಕ್ಷೇತ್ರದಲ್ಲಿ ಶ್ರೀರಂಗನಾಥ ಅಧಿದೇವರು, ರಂಗನಾಯಕಿ ದೇವಿ, ತೀರ್ಥ ರುದ್ರಪುಷ್ಕರಿಣಿ, ವಿಮಾನ–ಪ್ರಣವವಿಮಾನ ಹೀಗೆ ಎಲ್ಲ 116 ಕ್ಷೇತ್ರಗಳ ವಿವರಣೆಯನ್ನು ಇಲ್ಲಿ ನೀಡಲಾಗಿದೆ. ಅದಲ್ಲದೆ ದೇವರು ಕುಳಿತಿರುವ, ನಿಂತಿರುವ ಅಥವಾ ಮಲಗಿರುವ ಮೂರ್ತಿಯೇ ಎಂಬ ವಿವರವನ್ನೂ ನೀಡಲಾಗಿದೆ.

ಶ್ರೀವೈಷ್ಣವಮತಕ್ಕೆ ಸಂಬಂಧಿಸಿದ 12 ಜನ ಆಳ್ವಾರ್‍ರುಗಳ, ಶ್ರೀರಾಮಾನುಜರೇ ಮೊದಲಾದ ಇತರ ಶ್ರೀವೈಷ್ಣವ ಆಚಾರ್ಯರ ರೇಖಾಚಿತ್ರಗಳನ್ನು ವಿವರಣೆಯೊಂದಿಗೆ ಕೊಡಲಾಗಿದೆ. ಮುಖ್ಯವಾದ ಕೆಲವು ಶ್ರೀವೈಷ್ಣವ ಗ್ರಂಥಗಳ ಹಾಗೂ ರಾಮಾನುಜರ ಅಷ್ಟೋತ್ತರದ ಪೂರ್ಣಪಾಠವನ್ನು ಈ ಭಾಗದಲ್ಲಿ ನೀಡಲಾಗಿದೆ.

7. ಶೈವನಿಧಿ–ಇದು ಮೇಲೆ ಹೇಳಿದ ವೈಷ್ಣವ ನಿಧಿಯ ಕ್ರಮದಲ್ಲಿಯೇ ಇದ್ದು, ಈ ಭಾಗದಲ್ಲಿ ಶೈವರ ಪವಿತ್ರಕ್ಷೇತ್ರಗಳ ವಿವರವನ್ನು ನೀಡಲಾಗಿದೆ. ಒಟ್ಟು 113 ಪ್ರಸಿದ್ಧಕ್ಷೇತ್ರಗಳ ವಿವರಣೆ ಇಲ್ಲಿ ಕಂಡು ಬರುತ್ತದೆ. ಇದಲ್ಲದೆ ವಿವಿಧ ಲಿಂಗಭೇದಗಳು, ಅರವತ್ತು ಮೂರು ಜನ ಶೈವಭಕ್ತರಾದ ಪುರಾತನರು ಎಂದು ಪ್ರಸಿದ್ಧರಾದವರ ಹೆಸರು, ವರ್ಣ, ಆಶ್ರಮಧರ್ಮ, ಅವರು ಹುಟ್ಟಿದ ಕ್ಷೇತ್ರಗಳ ಪೂರ್ಣವಿವರವನ್ನು ನೀಡಲಾಗಿದೆ. ರುದ್ರಾಕ್ಷಿ, ಬಿಲ್ವ ಮುಂತಾದ ಶೈವರ ಪ್ರಮುಖ ವಸ್ತುಗಳ ಮಾಹಾತ್ಮ್ಯವನ್ನು ನೀಡಲಾಗಿದೆ.

8. ಆಗಮನಿಧಿ–ಈ ಭಾಗದಲ್ಲಿ ಅತಿ ವಿಸ್ತಾರವಾದ ಸಂಸ್ಕೃತಸಾಹಿತ್ಯದ ಒಂದು ಮುಖ್ಯ ಪರಿಚಯವು ದೊರೆಯುತ್ತದೆ. ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಹದಿನೆಂಟು ಪುರಾಣಗಳು, ಸ್ಮೃತಿಗಳು, ವೈಷ್ಣವ ಹಾಗೂ ಶೈವಾಗಮಗಳ ವಿವರಗಳಿವೆ. ಪಂಚಾಯತನ ಪೂಜಾಕ್ರಮದ ರೇಖಾಚಿತ್ರಗಳು ಕಂಡುಬರುತ್ತವೆ.

9. ಕೌತುಕನಿಧಿ–ಈ ಭಾಗದಲ್ಲಿ ಭಾರತದ ಪ್ರಾಚೀನ ಆಟಗಳ ಬಗೆಗೆ ವಿವರವನ್ನು ನೀಡಲಾಗಿದೆ. ಇದು ಇತರ ನಿಧಿಗಳಿಗಿಂತ ವಿಭಿನ್ನವಾಗಿದ್ದು ಭಾರತೀಯ ಪ್ರಾಚೀನಗ್ರಂಥಗಳಿಂದ ಸಂಗ್ರಹ ಮಾಡದೇ ಸ್ವಂತ ರಚನೆಯಾಗಿದೆ. ಗಂಜೀಫಾ, ಪಗಡೆ, ಆನೆಕಟ್ಟಿನ ಆಟ, ಸಂಖ್ಯಾಲಿಪಿ ಮುಂತಾದ ಆಟಗಳಿವೆ. ದಶಾವತಾರ, ಜಗನ್ಮೋಹನ, ನವಗ್ರಹ, ಚಾಮುಂಡೇಶ್ವರಿ ಮುಂತಾದ ಗಂಜೀಫಾಗಳು ಇದರಲ್ಲಿ ದೊರಕುತ್ತವೆ.

ಈ ನವನಿಧಿಗಳನ್ನು ಮುಖ್ಯವಾಗಿ ನೃಸಿಂಹಪ್ರಾಸಾದ, ಷೋಡಶೀಕಲ್ಪ, ಚಂಡೀಕಲ್ಪ, ಲಲಿತೋಪಾಖ್ಯಾನ, ಶೈವಾಗಮಗಳು, ಪಾಂಚರಾತ್ರ, ವೈಷ್ಣವಾಗಮಗಳು, ಪ್ರತ್ಯಂಗಿರಾಕಲ್ಪ, ಪ್ರಪಂಚಸಾರಸಂಗ್ರಹ, ಪುರಾಣಗಳು, ಮಹಾಲಕ್ಷ್ಮೀರತ್ನಕೋಶ, ಭೈರವಕಲ್ಪ, ಸುದರ್ಶನ ಸಂಹಿತಾ, ಯತಿರಾಜಸಪ್ತತಿ, ಯಾದವಗಿರಿಮಾಹಾತ್ಮ್ಯ, ನಾರದ ಸಂಹಿತಾ, ನಕ್ಷತ್ರಚೂಡಾಮಣಿ, ಸೂರ್ಯಸಿದ್ಧಾಂತ, ಜ್ಯೋತಿಷ್ಯರತ್ನಾಕರ ಮುಂತಾದ ಗ್ರಂಥಗಳ ಆಧಾರದ ಮೇಲೆ ರಚಿಸಲಾಗಿದೆ. (ಎಸ್.ಪಿ.ಐ.)

**ಶ್ರೀರಂಗಪಟ್ಟಣ:** ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ, ಶ್ರೀರಂಗಪಟ್ಟಣದ ಹತ್ತಿರದ ಕರಿಘಟ್ಟ ಬೆಟ್ಟದ ಬುಡದಲ್ಲೇ ಲೋಕಪಾವನಿ ಬಾಬುರಾಯನಕೊಪ್ಪಲು ಬಳಿ ಕಾವೇರಿ ನದಿಯನ್ನು ಸೇರಿಕೊಳ್ಳುವುದು.

ಶ್ರೀರಂಗಪಟ್ಟಣದ ನೈರುತ್ಯಕ್ಕೆ ಇರುವ ಪಶ್ಚಿಮವಾಹಿನಿ ಒಂದು ಪುಣ್ಯಕ್ಷೇತ್ರ. ಇಲ್ಲಿ ಕಾವೇರಿ ನದಿಯ ಒಂದು ಕವಲು ಪಶ್ಚಿಮಾಭಿಮುಖವಾಗಿ ಹರಿಯುವುದರಿಂದ ಪಶ್ಚಿಮವಾಹಿನಿ ಎಂಬ ಹೆಸರು ಬಂದಿದೆ. ಇಲ್ಲಿ ಬಂಗಾರದೊಡ್ಡಿ ಅಣೆಕಟ್ಟು ಮತ್ತು ಅನೇಕ ಛತ್ರಗಳು ಇದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿರುತ್ತವೆ. ಶ್ರೀರಂಗಪಟ್ಟಣದ ನೈರುತ್ಯಕ್ಕೆ 5 ಕಿಮೀ ದೂರದಲ್ಲಿರುವ ಪಾಲಹಳ್ಳಿ ಕಾವೇರಿ ನದಿಯ ಬಲದಂಡೆಯ ಮೇಲಿದೆ. 1871ರವರೆಗೂ ಮೈಸೂರು ಅಷ್ಟಗ್ರಾಮ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಶ್ರೀರಂಗಪಟ್ಟಣ ಕಾವೇರಿ ನದಿಯಿಂದ ಸುತ್ತುವರಿದಿರುವ ದ್ವೀಪ ಮತ್ತು ಐತಿಹಾಸಿಕ ಪ್ರಸಿದ್ಧವಾದ ಒಂದು ಪುಣ್ಯಕ್ಷೇತ್ರ. ಸ್ಥಳಪುರಾಣದ ಪ್ರಕಾರ ಪೂರ್ವದಲ್ಲಿ ಗೌತಮಋಷಿ ಇಲ್ಲಿಯ ಆದಿರಂಗನನ್ನು ಪೂಜಿಸಿ ಇಲ್ಲಿ ವಾಸವಾಗಿದ್ದುದರಿಂದ ಇದಕ್ಕೆ ಗೌತಮ ಕ್ಷೇತ್ರವೆಂದು ಹೆಸರಿತ್ತೆಂದು ತಿಳಿದುಬರುವುದು. ವಾಸ್ತವವಾಗಿ, ಈ ಸ್ಥಳದ ಪ್ರಾಚೀನತೆ ಸೂಕ್ಷ್ಮ ಶಿಲಾಯುಗ ಹಂತಕ್ಕೆ (ಪ್ರ.ಶ.ಪೂ.ಸು.10,000–5,000) ಹೋಗುವುದು. 1987 ಆಗಸ್ಟ್ ತಿಂಗಳಲ್ಲಿ ಕುವೆಂಪು ವಿಶ್ವವಿದ್ಯಾಲಯದ ಸಿ.ಮಹದೇವ ಅವರು ತಮ್ಮ ಪುರಾತತ್ತ್ವ ಅನ್ವೇಷಣೆಯಲ್ಲಿ ಶ್ರೀರಂಗನಾಥ ದೇವಾಲಯದ ಆಗ್ನೇಯಕ್ಕೆ

ಸು.180 ಮೀ ದೂರದಲ್ಲಿ ಸೂಕ್ಷ್ಮಶಿಲಾ ಸಂಸ್ಕೃತಿಯ ಒಂದು ನೆಲೆಯನ್ನು ಶೋಧಿಸಿದರು. ಇಲ್ಲಿ ಹಿಂದೆ ಮನೆಗಳನ್ನು ಕಟ್ಟಲು ಅಡಿಪಾಯವನ್ನು ಅಗೆಯುತ್ತಿದ್ದಾಗ ಸು.1ಮೀ ಕೆಳಗೆ ಇಂಥ ಉಪಕರಣಗಳು ಕಂಡುಬಂದವು. ಈ ಉಪಕರಣಗಳನ್ನು ಅರ್ಧ ಚಂದ್ರಾಕೃತಿ, ಮೊನೆಗಳು, ಹೆರೆಚಕ್ಕೆಗಳೆಂದು ವಿಂಗಡಿಸಬಹುದು. ಈ ನೆಲೆಯಲ್ಲಿ ಇನ್ನೂ ಹೆಚ್ಚಿನ ವಿಷಯಗಳಿಗೆ ಉತ್ಖನನ ಮಾಡುವುದು ಸೂಕ್ತ.

ಗಂಗರ ಸಾಮಂತ ತಿರುಮಲಯ್ಯ 894ರಲ್ಲಿ ಇಲ್ಲಿಯ ರಂಗನಾಥಸ್ವಾಮಿ ದೇವಾಲಯವನ್ನು ಕಟ್ಟಿಸಿ ಇದಕ್ಕೆ ಶ್ರೀರಂಗಪುರವೆಂದು ಹೆಸರಿಟ್ಟನೆಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. 1117ರಲ್ಲಿ ವೈಷ್ಣವಧರ್ಮವನ್ನು ಅವಲಂಬಿಸಿದ ಅನಂತರ ಹೊಯ್ಸಳ ವಿಷ್ಣುವರ್ಧನ ರಾಮಾನುಜಾಚಾರ್ಯರಿಗೆ ಕಾವೇರಿ ತೀರದಲ್ಲಿ ಅಷ್ಟಗ್ರಾಮಗಳನ್ನು ಬಿಟ್ಟುಕೊಟ್ಟು



ಸಮಾಧಿ, ಗುಂಬಜ್

ಈ ಗ್ರಾಮಗಳ ಮೇಲ್ವಿಚಾರಣೆಗೆ ಹೆಬ್ಬಾರರು ಅಥವಾ ಪ್ರಭುಗಳೆಂಬ ಅಧಿಕಾರಿಗಳನ್ನು ನಿಯಮಿಸಿದ. 1120ರಲ್ಲಿ ವಿಷ್ಣುವರ್ಧನನ ತಮ್ಮನಾದ ಉದಯಾದಿತ್ಯ ಕಾಡಿನಿಂದ ಆವೃತವಾಗಿದ್ದ ಈ ಸ್ಥಳದಲ್ಲಿ ಊರನ್ನು ನಿರ್ಮಿಸಿದ. 15 ಮತ್ತು 16ನೆಯ ಶತಮಾನಗಳಲ್ಲಿ ವಿಜಯನಗರದ ಚಕ್ರವರ್ತಿಗಳು ಶ್ರೀರಂಗಪಟ್ಟಣವನ್ನು ಒಂದು ಪ್ರಾಂತ್ಯವನ್ನಾಗಿ ಮಾಡಿ ಪ್ರಾಂತ್ಯಾಧೀಶನನ್ನು ನಿಯಮಿಸಿದ್ದರು. ವಿಜಯನಗರದ ಪತನಾನಂತರ ಮೈಸೂರಿನ ರಾಜ ಒಡೆಯರು 1610ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರು.

ಮುಂದೆ 1761ರ ವೇಳೆಗೆ ಹೈದರನು ಪ್ರಾಬಲ್ಯಕ್ಕೆ ಬಂದು ಮೈಸೂರು ರಾಜರನ್ನು ಮೂಲೆಗೊತ್ತಿ ತಾನೇ ಆಡಳಿತ ನಡೆಸತೊಡಗಿದ. ಅನಂತರ ಇವನ ಮಗ ಟಿಪ್ಪು ಅಧಿಕಾರಕ್ಕೆ ಬಂದ. ಇವನ ಕಾಲದಲ್ಲಿ ಈ ಸ್ಥಳ ಸಾಕಷ್ಟು ಅಭಿವೃದ್ಧಿ ಹೊಂದಿತು. 1799ರಲ್ಲಿ ಟಿಪ್ಪುವಿನ ಮರಣಾನಂತರ ಬ್ರಿಟಿಷರು ಶ್ರೀರಂಗಪಟ್ಟಣವನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಇಲ್ಲಿರುವ ಶ್ರೀರಂಗನಾಥಸ್ವಾಮಿ ದೇವಾಲಯ ವಿಮಾನ ಮಾದರಿಯಲ್ಲಿದೆ. ದೇವಾಲಯದ ಹೆಚ್ಚು ಒಳಭಾಗ ಹೊಯ್ಸಳರ ಕಾಲದ್ದು. ಗರ್ಭಗೃಹದ ಮತ್ತು ಸುಕನಾಸಿಗಳ ಭಾವಣಿಗಳ ಮಧ್ಯದಲ್ಲಿ ಪದ್ಮಗಳನ್ನು ಬಿಡಿಸಿದೆ. ಹೊಯ್ಸಳ ಕಾಲದ ಶ್ರೀಕಾರ (ಗಂಟೆ) ಮಾದರಿಯ ಕಂಬಗಳು ನವರಂಗದಲ್ಲಿವೆ. ನವರಂಗ ದ್ವಾರದ ಬಳಿ ಎರಡು ದೊಡ್ಡ ದ್ವಾರಪಾಲಕ ವಿಗ್ರಹಗಳಿವೆ. ಮಹಾದ್ವಾರದ ಗೋಪುರ, ಮುಖಮಂಟಪ ಮತ್ತು ಗರ್ಭಗೃಹದ ಶಿಖರ ವಿಜಯನಗರ ಶೈಲಿಯಲ್ಲಿವೆ. ದೇವಾಲಯದಲ್ಲಿ ಹೊಯ್ಸಳ ಮತ್ತು ವಿಜಯನಗರ ಕಾಲಕ್ಕೆ ಸೇರಿದ ಕೆಲವು ದೇವತೆಗಳ ಋಷಿಗಳ ವಿಗ್ರಹಗಳು ಆಕರ್ಷಕವಾಗಿವೆ.

ಶ್ರೀರಂಗನಾಥನ ಮುಖ್ಯ ವಿಗ್ರಹ ಬಹು ಆಕರ್ಷಕವಾದದ್ದು. ಶ್ರೀರಂಗನಾಥ ಏಳು ಹೆಡೆಗಳ ಆದಿಶೇಷನ ಮೇಲೆ ಪವಡಿಸಿದ್ದಾನೆ. ಶ್ರೀರಂಗನಾಥನ ಪಾದದ ಬಳಿ ಲಕ್ಷ್ಮಿ ಮತ್ತು ಗೌತಮ ಮುನಿಯ ವಿಗ್ರಹಗಳು ಇವೆ. ಇಲ್ಲಿನ ಕೆಲವು ಬೆಳ್ಳಿ ಪದಾರ್ಥಗಳು ಟಿಪ್ಪುಸುಲ್ತಾನ್ ದೇವಾಲಯಕ್ಕೆ ದಾನ ಕೊಟ್ಟಿದ್ದೆಂದು ತಿಳಿದುಬರುತ್ತದೆ.

ಇಲ್ಲಿರುವ ಇತರ ದೇವಾಲಯಗಳಲ್ಲಿ ನರಸಿಂಹ ಮತ್ತು ಗಂಗಾಧರೇಶ್ವರ ದೇವಾಲಯಗಳು ಮುಖ್ಯವಾದವು. ನರಸಿಂಹ ದೇವಾಲಯವನ್ನು ಕಂಠೀರವ ನರಸರಾಜ ಒಡೆಯರ್ (1638–59) ಕಟ್ಟಿಸಿದ. ದೊಡ್ಡದಾದ ಗರ್ಭಗೃಹ, ವಿಶಾಲವಾದ ಸುಕನಾಸಿ ಮತ್ತು ಅನೇಕ ಕಂಬಗಳುಳ್ಳ ನವರಂಗವಿದೆ. ಹೊಯ್ಸಳರ ಕಾಲದ ಲಕ್ಷ್ಮೀನರಸಿಂಹ ವಿಗ್ರಹ ಬಹು ಅಚ್ಚುಕಟ್ಟಾಗಿ ಕೆತ್ತಿದೆ. ಈ ದೇವಾಲಯದೊಳಗಿನ ಅಂಬೆಗಾಲು ಕೃಷ್ಣ ಆಕರ್ಷಣೀಯ. ಇಲ್ಲಿ 1.05 ಮೀ ಎತ್ತರವಿರುವ 17ನೆಯ ಶತಮಾನದ ಕಂಠೀರವ ನರಸರಾಜ ಒಡೆಯರ ವಿಗ್ರಹವಿದೆ. ಸು.16ನೆಯ ಶತಮಾನದ ಗಂಗಾಧರೇಶ್ವರ ದೇವಾಲಯ ವಿಜಯನಗರ ಕಾಲದಲ್ಲಿ ಕಟ್ಟಿದ್ದು. ಈ ದೇವಾಲಯದ ನವರಂಗದಲ್ಲಿ 6 ಮುಖಗಳೂ 12 ಕೈಗಳೂ ಇರುವ ಸುಬ್ರಹ್ಮಣ್ಯ ವಿಗ್ರಹವಿದೆ. ಮಂಟಪದಲ್ಲಿ 18ನೆಯ ಶತಮಾನದ, ಅಂದವಾಗಿ ಬಿಡಿಸಿರುವ 15 ಶೈವ ಪುರಾತನರ ಮೂರ್ತಿಗಳಿವೆ. ದಳವಾಯಿ ನಂಜರಾಜ (18ನೆಯ ಶತಮಾನ) ಕೊಟ್ಟಿದ್ದೆನ್ನುವ ಒಂದು ತಾಮ್ರ ಶಾಸನದಲ್ಲಿ ಸುಂದರ ದಕ್ಷಿಣಾಮೂರ್ತಿಯ ಚಿತ್ರವಿದೆ. ರಂಗನಾಥಸ್ವಾಮಿ ದೇವಾಲಯದ ಮುಂಭಾಗದ ಬಳಿ ಮೂರನೆಯ ಕೃಷ್ಣರಾಜ ಒಡೆಯರ ಜನ್ಮಸ್ಥಳವನ್ನು ಸರ್ಕಾರ ರಕ್ಷಿಸಿದ್ದು ಅಲ್ಲೊಂದು ಮಂಟಪವನ್ನು ಕಟ್ಟಿಸಲಾಗಿದೆ.

ಶ್ರೀರಂಗಪಟ್ಟಣವನ್ನು ಸುತ್ತುವರಿದಿರುವ ಬಲಿಷ್ಠ ಕೋಟೆಯನ್ನು ಈಗಲೂ ಕಾಣಬಹುದು. ಟಿಪ್ಪುವಿನ ಅರಮನೆ ಎಂದು ಹೇಳುವ ಲಾಲ್‌ಮಹಲ್ ಸಂಪೂರ್ಣ ನಾಶವಾಗಿದೆ. ಖೈದಿಗಳನ್ನು ಕೂಡಿಡುತ್ತಿದ್ದ ಎರಡು ನೆಲಮಾಳಿಗೆ ಬಂದೀಖಾನೆಗಳಿವೆ. ಕೋಟೆಯ ಸುತ್ತ ಕಂದಕವಿದ್ದು ಅದರಲ್ಲಿ ಕಾವೇರಿ ನದಿಯ ನೀರು ತುಂಬುವಂತೆ ಮಾಡಲಾಗುತ್ತಿತ್ತು. ಕೋಟೆ ಒಳಗಡೆಯೇ ಇರುವ ಜುಮ್ಮಾ ಮಸೀದಿಯನ್ನು 1787ರಲ್ಲಿ ಟಿಪ್ಪು ಕಟ್ಟಿಸಿದ. ಇದರಲ್ಲಿ ಎರಡು ಎತ್ತರದ ಮಿನಾರುಗಳಿದ್ದು ಅವುಗಳ ಒಳಗಿನಿಂದ ಮೇಲಕ್ಕೆ ಹತ್ತಿ ಹೋಗಲು ಮೆಟ್ಟಿಲುಗಳಿವೆ.

ಇಲ್ಲಿರುವ ಗುಮ್ಮಟ ಸ್ಮಾರಕವನ್ನು (ಗುಂಬಜ್) ಹೈದರ್ ಅಲಿಯ ಅಪೇಕ್ಷೆಯಂತೆ ಟಿಪ್ಪು ಕಟ್ಟಿಸಿದನೆಂದು ಪ್ರತೀತಿ. ಇಲ್ಲಿ ಹೈದರ್, ಅವನ ಪತ್ನಿ ಫಕ್ರುನ್ನೀಸಾ ಬೇಗಮ್ ಹಾಗೂ ಟಿಪ್ಪುಸುಲ್ತಾನರ ಸಮಾಧಿಗಳಿವೆ. ಹೊರಗಡೆ ಟಿಪ್ಪುವಿನ ಪಟ್ಟದ ರಾಣಿಯ ಮತ್ತು ಇತರ ವೀರರ ಸಮಾಧಿಗಳಿವೆ. ಇಲ್ಲಿನ ಬೃಹದಾಕಾರದ ಗುಮ್ಮಟ ಅಲಂಕಾರರಹಿತವಾದದ್ದು. ಕೈಸಾಲೆಯಲ್ಲಿರುವ ಕರಿಯ ಕಂಬಗಳು ಅತಿನುಣುಪಾಗಿ ಬಹು ಆಕರ್ಷಣೀಯವಾಗಿದ್ದು ಬಾಗಿಲುಗಳು ದಂತದ ಕುಶಲ ಕೆತ್ತನೆ ಕೆಲಸಗಳಿಂದ ಕೂಡಿವೆ. (ಎಂ.ಎಚ್.)

ಉತ್ಖನನ: 1900–2000 ಅವಧಿಯಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಶ್ರೀರಂಗನಾಥಸ್ವಾಮಿ ದೇವಾಲಯದ 200 ಮೀ ಪೂರ್ವಕ್ಕಿದ್ದ 2.3 ಮೀ ಎತ್ತರದ ಒಂದು ದಿಬ್ಬವನ್ನು ಉತ್ಖನನ ಮಾಡಿತು. ಇದರಲ್ಲಿ ಇಟ್ಟಿಗೆ – ಗಾರೆಯ ಕಟ್ಟಡದ ಅವಶೇಷಗಳು ಅಲ್ಲಲ್ಲಿ ಕಾಣಿಸುತ್ತಿತ್ತು. ಹಿಂದೆ ಇದರ ಪಶ್ಚಿಮ ಭಾಗದಲ್ಲಿ ಕಂಬಗಳ ಕಟ್ಟಡದ ಒಂದು ಭಾಗವನ್ನು ಮಾತ್ರ ಕಾಣುವಂತೆ ಮಾಡಲಾಗಿತ್ತು. ಈ ಭಾಗ ಪೂರ್ಣವಾಗಿ ಕಾಣುವಂತೆ ಉತ್ಖನನ ಮಾಡಲಾಯಿತು.

ಪಶ್ಚಿಮ ಭಾಗದ ಕಟ್ಟಡದ ಪಶ್ಚಿಮ ಬದಿಯಲ್ಲಿ 9 ಮೆಟ್ಟಲುಗಳಿವೆ. ಎರಡು ಪಕ್ಕಗಳಲ್ಲಿ ಕೈಪಿಡಿಗಳಿದ್ದು ಮೇಲಿನ ಕೊನೆಯ ಮೆಟ್ಟಿಲು ಸು.1.80 ಮೀ ಎತ್ತರದಲ್ಲಿದೆ. ಕೈಪಿಡಿ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಕಂಬಗಳ ಸಾಲಿನಿಂದ ಕೂಡಿದೆ. ಸು.6.5 ಮೀ ಅಗಲದ ನೆಲದ ಮಟ್ಟದ ಮೆಟ್ಟಿಲಿನಿಂದ ಮೇಲಿನ ಮೆಟ್ಟಲುಗಳು ಸು.4 ಮೀ ಅಗಲದಷ್ಟು ಕಿರಿದಾಗುತ್ತಾ ಹೋಗುತ್ತದೆ. ಮೇಲೆ ವಿಶಾಲವಾದ ಅಂಗಳವಿದ್ದು ಇದರಿಂದ ದಕ್ಷಿಣದಲ್ಲಿ 6X5ಮೀ ವಿಸ್ತೀರ್ಣದ ಕೊಠಡಿಗೆ ಹೋಗಲು ಅವಕಾಶವಿದೆ. ಪೂರ್ವಬದಿಯಲ್ಲಿ 4 ಮೆಟ್ಟಿಲು ಇಳಿದು ಹೋದರೆ, 42.50X20.00ಮೀ ಉದ್ದ ಅಗಲದ ಸಭಾಸದನವಿದೆ. ಇದರ ಪೂರ್ವಬದಿಯಿಂದ 2 ಮೆಟ್ಟಿಲು ಇಳಿದು ಹೋದಲ್ಲಿ 16X4ಮೀ ಉದ್ದಗಲದ ಒಂದು ಆಯತಾಕಾರದ ಕೊಠಡಿಗೆ ಹೋಗಬಹುದು. ಇದರ ದಕ್ಷಿಣದ ಗೋಡೆಯಲ್ಲಿ ಪ್ರವೇಶದ್ವಾರವಿದೆ. ಸಭಾಸದನದ ಆಗ್ನೇಯ ದಿಕ್ಕಿನಲ್ಲಿ 1.50ಮೀ ಅಗಲದ ಮತ್ತು 2.15ಮೀ ಅಷ್ಟು ಎತ್ತರದ ಮೆಟ್ಟಿಲುಗಳಿಂದ ಮೇಲಿನ ಉಪ್ಪರಿಗೆಗೆ ಹೋಗಲು ಸಾಧ್ಯ. ಈ ಮೆಟ್ಟಿಲುಗಳು ಉತ್ತರಕ್ಕೆ 2.5ಮೀ ಅಗಲದ ಪೂರ್ವಪಶ್ಚಿಮ ಮುಖವಾಗಿರುವ ಗೋಡೆಯ ಅಧಿಷ್ಠಾನವಿದ್ದು ಇದರ ದಕ್ಷಿಣಕ್ಕಿರುವ 25X4ಮೀ ವಿಸ್ತಾರದ ಒಂದು ಆಯತಾಕಾರದ ಕೈಸಾಲೆಯಿದೆ. ಈ ಕೈಸಾಲೆ ಪಶ್ಚಿಮ ಬದಿಯಿಂದ ಒಂದು ಆಯತಾಕಾರದ ಪಡಸಾಲೆಗೆ ಹೋಗಲು ಪ್ರವೇಶವಿದೆ. ಪ್ರಾಯಶಃ ಇದು ರಕ್ಷಣದಳದವರ ಕೊಠಡಿ ಆಗಿತ್ತೆಂದು ಕಾಣುತ್ತದೆ. ಪಶ್ಚಿಮ ಬದಿಯಿಂದ ಸಭಾಸದನಕ್ಕೆ ಹೋಗುವ ಮೆಟ್ಟಿಲುಗಳ ಹತ್ತಿರದಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ, ಉತ್ತರ ಮತ್ತು ದಕ್ಷಿಣ ಬದಿಯಲ್ಲಿ ಮತ್ತೆ ಮೆಟ್ಟಿಲುಗಳಿವೆ. ಇವು ಸಭಾಸದನದ ಉದ್ದನೆ ಬದಿಗೆ ಸೇರಿಸಿ ಕಟ್ಟಲಾಗಿದೆ. (ಎ.ಎಸ್.)

ಶ್ರೀರಂಗಪಟ್ಟಣದ ಕೋಟೆ ಹೊರಗಡೆ ಕಾವೇರಿಯ ಉತ್ತರ ದಿಕ್ಕಿನ ಶಾಖೆಗೆ ಹೊಂದಿಕೊಂಡಂತೆ ಒಂದು ವಿಶಾಲ ತೋಟದ ಮಧ್ಯೆ ಇರುವ ಟಿಪ್ಪುಸುಲ್ತಾನ್ ಕಟ್ಟಿಸಿದ (1784) ದರಿಯಾದೌಲತ್ (ಬೇಸಗೆ ಅರಮನೆ) ಸುಂದರವಾದುದು. ಈ ಅರಮನೆ ಚಿತ್ರಕಲೆಯ ಆಗರ. ದರಿಯಾದೌಲತ್ ಎಂದರೆ ಸಮುದ್ರಸಂಪತ್ತು ಎಂದರ್ಥ. ಟಿಪ್ಪು ಸಮುದ್ರವರೆಗೆ ರಾಜ್ಯ ವಿಸ್ತರಿಸಿದ ನೆನಪಿಗೆ ಇದನ್ನು ನಿರ್ಮಿಸಿದಂತೆ ತೋರುತ್ತದೆ. ಇಲ್ಲಿ ಟಿಪ್ಪು ರಾಯಭಾರಿಗಳನ್ನೂ ಮುಖ್ಯ ಅತಿಥಿಗಳನ್ನೂ ಸಂದರ್ಶಿಸುತ್ತಿದ್ದ. (ಎಂ.ಎಚ್.;ಪಿ.ಆರ್.ಟಿ.)

ಇದು ಇಂಡೊ–ಇಸ್ಲಾಮಿಕ್ ಶೈಲಿಯಲ್ಲಿದೆ. ಈ ಅರಮನೆಯನ್ನು ಚಚ್ಚೌಕದ ಎತ್ತರದ ವೇದಿಕೆಯ ಮೇಲೆ ತೇಗದ ಮರವನ್ನೇ ಹೆಚ್ಚಾಗಿ ಬಳಸಿ ನಿರ್ಮಿಸಲಾಗಿದೆ. ಈ ಅರಮನೆಯ ನಾಲ್ಕು ದಿಕ್ಕಿನಲ್ಲಿ ತೆರೆದ ಹೊರಾಂಗಣವಿದ್ದು, ಮೇಲ್ಚಾವಣಿಗೆ ಆಧಾರವಾಗಿ ಅಲಂಕೃತ ಮರದ ಕಂಬಗಳನ್ನು ಸಾಲಾಗಿ ನಿಲ್ಲಿಸಲಾಗಿದೆ. ಪಶ್ಚಿಮ ಮತ್ತು ಪೂರ್ವದ ಕಡೆ ಗಾರೆ ಇಟ್ಟಿಗೆ ಗೋಡೆಗಳಿದ್ದು ಉಳಿದೆರೆಡು ಕಡೆಗಳ ಸಾಲಂಕೃತ ಕಂಬಗಳ ಮಧ್ಯೆ ವಿಶಾಲ ಅಂಗಣವಿದೆ. ಮೇಲಿನ ಮಹಡಿಯಲ್ಲಿ ಹೊರಚಾಚಿದ ಎರಡು ಮೊಗಸಾಲೆಯಿದ್ದು, ಅಲ್ಲಿಂದ ಕೆಳಗಿರುವ ಎರಡೂ ದಿಕ್ಕುಗಳಲ್ಲಿ ಸುಂದರ, ವಿಶಾಲ, ಪ್ರೇಕ್ಷಕ ಸಭಾಂಗಣವಿದೆ. ಕಟ್ಟಡದ ಪೂರ್ವ ಮತ್ತು ಪಶ್ಚಿಮ ಗೋಡೆಗಳ ಮಧ್ಯಭಾಗದಲ್ಲಿ ಕಣ್ಣಿಗೆ ಬೀಳದ ಮೆಟ್ಟಿಲುಗಳ ಸಾಲುಗಳು ಮೇಲಂತಸ್ತಿಗೆ ಕರೆದೊಯ್ಯುತ್ತವೆ. ಇದರ ಅಡ್ಡಗೋಡೆಗಳು ಸಭಾಂಗಣವನ್ನು

ನಾಲ್ಕು ಕೋಣೆಗಳಾಗಿ ವಿಂಗಡಿಸುತ್ತವೆ. ಈ ಕಟ್ಟಡದ ಪ್ರತಿಯೊಂದು ಭಾಗವನ್ನು ಅಂದರೆ ಗೋಡೆಗಳು, ಚಾವಣಿಗಳು, ಕಂಬಗಳು, ಮೊಗಸಾಲೆಗಳು, ಕಮಾನುಗಳು ಮತ್ತು ಅಡ್ಡಪಟ್ಟಿಕೆಗಳನ್ನು ಸುಂದರವಾಗಿ ವರ್ಣರಂಜಿತ ಕರಕುಶಲತೆಯಿಂದ ಚಿತ್ರಿಸಿರುವುದು ಕಟ್ಟಡದ ಮುಖ್ಯ ವೈಶಿಷ್ಟ್ಯವಾಗಿದೆ. ಒಳಗಿನ ಗೋಡೆಗಳು ಎಲೆ-ಬಳ್ಳಿಗಳಿಂದ ಮತ್ತು ಲತಾ ಚಿತ್ರಗಳಿಂದ ಅಲಂಕರಿಸಲ್ಪಟ್ಟರೆ, ಮರದ ಚಾವಣಿಗಳಿಗೆ ಬಟ್ಟೆಯ ಮೇಲೆ ಲತಾ ಬಳ್ಳಿಗಳ ವರ್ಣಚಿತ್ರ ಬರೆದು ಅಂಟಿಸಲಾಗಿದೆ. ನೆಲ ಅಂತಸ್ತಿನ ವಿಶಾಲ ಅಂಗಣದ ಚಾವಣಿಯನ್ನು ಅರಗಿನ ಅಚ್ಚುಗಳಿಂದ ಅಲಂಕೃತಗೊಳಿಸಲಾಗಿದೆ. ಮೇಲಂತಸ್ತಿನ ನಾಲ್ಕೂ ಮೂಲೆಯಲ್ಲಿರುವ ನಾಲ್ಕು ಸಣ್ಣ ಕೋಣೆಗಳ ಚಾವಣಿಯನ್ನು ನಯವಾದ ಗಾರೆ ಅಚ್ಚುಗಳ ಸುಂದರ ವಿಶಾಲ ಅರಳಿದ ಕಮಲದ ಆಕೃತಿಯಲ್ಲಿ ಅಲಂಕಾರ ಮಾಡಿದ್ದು ಅದರ ಮೇಲೆ ಕಲಾತ್ಮಕವಾಗಿ ವರ್ಣ ಲೇಪಿಸಿದ್ದು ಕಟ್ಟಡದ ಕಲಾಶ್ರೇಷ್ಠತೆ ಎತ್ತಿ ತೋರಿಸುತ್ತದೆ.

ವರ್ಣಚಿತ್ರಗಳು: ಈ ಅರಮನೆಯ ಪೂರ್ವ ಮತ್ತು ಪಶ್ಚಿಮ ಕಡೆಗೆ ಗೋಡೆಗಳು ಹೊಂದಿದ್ದು, ನಯವಾದ ಗೋಡೆಯ ಹೊರಮುಖದಲ್ಲಿ ಯುದ್ಧ ದೃಶ್ಯಗಳನ್ನು ಪಶ್ಚಿಮ ಗೋಡೆಯಲ್ಲಿ ಚಿತ್ರಿಸಿದ್ದು, ಪೂರ್ವದ ಗೋಡೆಯ ಮೇಲೆ ಅನೇಕ ರಾಜರು, ಪ್ರಧಾನ

ಶ್ರೀರಂಗನಾಥಸ್ವಾಮಿ ದೇವಾಲಯ

ನಾಯಕರು, ರಾಯಭಾರಿಗಳು, ರಾಣಿಯರು, ನವಾಬರು, ಮರಾಠರು, ಪೇಶ್ವೆಯರು, ಫಕೀರರು, ಸಂಗೀತಗಾರರು, ಪ್ರಾಣಿಗಳು ಹಾಗೂ ವಿವಿಧ ಸಸ್ಯವರ್ಗಗಳ ಚಿತ್ರಣ ಹಾಗೂ ವಿವಿಧ ರೀತಿಯ ಅರಮನೆ ಮತ್ತಿತರ ಕಟ್ಟಡಗಳ ವಾಸ್ತುಶಿಲ್ಪಗಳನ್ನು ಚಿತ್ರಿಸಿರುವುದು ವಿಶಿಷ್ಟವಾಗಿದೆ.

ಪಶ್ಚಿಮ ಗೋಡೆಯ ವರ್ಣಚಿತ್ರಗಳನ್ನು ನಾಲ್ಕು ವಿಭಾಗವಾಗಿ ಚಿತ್ರಿಸಿ, ಹೈದರ ಮತ್ತು ಟಿಪ್ಪು- ಇವರು ಕರ್ನಲ್ ಬೇಲಿಯ ನಾಯಕತ್ವದ ಆಂಗ್ಲ ಸೈನ್ಯವನ್ನು 1780ರಲ್ಲಿ ಕಾಂಚಿಪುರದ ಹತ್ತಿರದ ಪೊಲಿಲೂರ ಯುದ್ಧದಲ್ಲಿ ಸದೆಬಡೆದು ಜಯಸಾಧಿಸಿದ ದೃಶ್ಯಗಳನ್ನು ಚಿತ್ರಿಸಲಾಗಿದೆ. ಎಡಪಾರ್ಶ್ವದ ಅಂಕಣಗಳಲ್ಲಿ ಹೈದರ್ ಮತ್ತು ಟಿಪ್ಪು ನಾಯಕತ್ವದ ಸುಸಜ್ಜಿತ ಸೇನೆ ರಣರಂಗಕ್ಕೆ ಹೊರಟ ಮೆರವಣಿಗೆಯ ದೃಶ್ಯವನ್ನು ವಿಸ್ತೃತವಾಗಿ ಚಿತ್ರಿಸಿದೆ. ಬಲಪಾರ್ಶ್ವದಲ್ಲಿ ಆಂಗ್ಲ ಸೈನಿಕರೊಡನೆ ಕರ್ನಲ್ ಬೇಲಿ ಪಲ್ಲಕ್ಕಿಯಲ್ಲಿ ಆಸೀನನಾಗಿ ತನ್ನ ಸುತ್ತಲೂ ಚೌಕಾಕಾರದಲ್ಲಿ ಆಂಗ್ಲ ಸೈನಿಕರು ಕಾವಲು ಕಾಯ್ದು ರಕ್ಷಿಸುತ್ತಿದ್ದರೂ ಮೈಸೂರು ಸೈನ್ಯ ಇವರನ್ನು ಮುತ್ತಿಗೆ ಹಾಕಿರುವುದೂ ಅಲ್ಲದೇ ಆಂಗ್ಲರ ಮದ್ದು ಸಂಗ್ರಹವನ್ನು ಸ್ಫೋಟಿಸಿರುವುದು, ತನ್ನ ಸೋಲು ಖಚಿತವೆಂಬಂತೆ ದಿಗ್ಭ್ರಮೆಯಿಂದ ನೋಡುತ್ತಿರುವುದು-ಹೀಗೆ ಚಿತ್ರಿಸಲಾಗಿದೆ. ಇದೇ ದೃಶ್ಯಾವಳಿಯಲ್ಲಿ ಕರ್ನಲ್ ಲ್ಯಾಲಿ ನಾಯಕತ್ವದ ಫ್ರೆಂಚ್ ಸೈನ್ಯವಿದ್ದು ಲ್ಯಾಲಿ ದೂರದರ್ಶನ ಯಂತ್ರದ ಮೂಲಕ ಯುದ್ಧದ ಸ್ಥಿತಿಗತಿಗಳನ್ನು ವೀಕ್ಷಿಸುತ್ತಿರುವಂತೆ ಚಿತ್ರಿಸಿದೆ.

ಇದರ ಮೇಲ್ಪಂಕ್ತಿಯಲ್ಲಿ ಹೈದರಾಬಾದಿನ ನಿಜಾಮನೊಬ್ಬ ಕುದುರೆಯ ಮೇಲೆ ಸವಾರಿಮಾಡುವ, ಆನೆಗಳ ಸಾಲು ಆತನನ್ನು ಅನುಸರಿಸುತ್ತಿರುವ ದೃಶ್ಯವಿದೆ. ಆದರೆ ಹಿಂಬಾಲಿಸುತ್ತಿರುವ ಆನೆಗಳ ಮೇಲೆ ದ್ರವ್ಯರಾಶಿಗಳನ್ನು ಹೊತ್ತು ಮಾವುತನೊಬ್ಬನೇ ತಮ್ಮ ಮುಖಂಡನನ್ನು ಹಿಂಬಾಲಿಸುತ್ತಿರುವ ವರ್ಣಚಿತ್ರ ತರ್ಕದ ವಿಷಯವಾಗಿದೆ.

ಪೂರ್ವಗೋಡೆಯ ಉದ್ದಗಲಕ್ಕೂ ಏಳು ಸಾಲುಗಳಲ್ಲಿ ಸ್ವತಂತ್ರವಾಗಿ ಚಿತ್ರಿಸಿದ ಭಾವ ಚಿತ್ರಗಳಿದ್ದು, ಅದರಲ್ಲಿ ಅರಮನೆಯ ಕಟ್ಟಡದ ಪ್ರಾರ್ಥನಾ ಸ್ಥಳಗಳ, ಒಳ ಹಾಗೂ ಹೊರಭಾಗಗಳ ಚಿತ್ರಣವನ್ನು ವಿಭಿನ್ನ ರೀತಿಯಲ್ಲಿ ನಾನಾರೀತಿಯ ವಾಸ್ತುಶಿಲ್ಪದ ಕಟ್ಟಡಗಳನ್ನು ಜೊತೆಜೊತೆಗೆ ಸಮಕಾಲೀನ ರಾಜರ ವೈಭವವನ್ನು ಚಿತ್ರಿಸಿದೆ. ಕೆಲವು ಅರಮನೆಗಳ ಒಳಗೆ ಪ್ರಧಾನರು ಕುಳಿತಿದ್ದರೆ ಮತ್ತೆ ಕೆಲವು ಅರಮನೆಗಳಲ್ಲಿ ಅತಿಥಿಗಳನ್ನು ಸ್ವಾಗತಿಸುತ್ತಿರುವ, ಚರ್ಚಿಸುತ್ತಿರುವ ಹಾಗೂ ರಾಜ ಶಿಬಿಯಲ್ಲಿ ಕುಳಿತಿರುವ ಅರಸರ ದೃಶ್ಯಗಳಿವೆ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಾಜಮನೆತನದ ಗಣ್ಯವ್ಯಕ್ತಿಗಳಿಗೆ ಪ್ರಾಮುಖ್ಯತೆ ಕೊಡಲಾಗಿದೆ. ಆಸ್ಥಾನದ ಗಣ್ಯವ್ಯಕ್ತಿಗಳು ಅಲ್ಲಲ್ಲಿ ವಿವಿಧ ರೀತಿಯಲ್ಲಿ ವಿನೀತ ಭಾವದಿಂದ ತಮ್ಮ ದೊರೆಗಳನ್ನು ಗೌರವಿಸುತ್ತಿರುವುದು ಹಾಗೂ ಸೇವಕರು ಅನೇಕ ವೇಷಭೂಷಣಗಳಲ್ಲಿ ನಿಂತಿರುವುದನ್ನು ಚಿತ್ರಿಸಿದೆ. ಇಲ್ಲಿರುವ ಒಟ್ಟು 140ಕ್ಕಿಂತ ಹೆಚ್ಚು ಚಿತ್ರಗಳಲ್ಲಿ ಪ್ರಮುಖ ರಾಜರಾದ ಚಿತ್ರದುರ್ಗದ ಮದಕರಿನಾಯಕ, ಚಿತ್ತೂರಿನ (ಆಂಧ್ರ) ರಾಣಿ, ಆರ್ಕಾಟಿನ ನವಾಬ ಮಹಮ್ಮದ ಅಲಿ, ಕಾಠೇವಾಡಿನ ರಾಜ, ಸಾವಣೂರಿನ ನವಾಬ, ಬನಾರಸಿನ ಅರಸ, ಕರ್ನೂಲಿನ ನವಾಬ, ಕೊಡಗಿನ ಹಿಂದೂರಾಜ, ಅವಧದ ನವಾಬ, ಪುಣೆಯ ಎರಡನೆಯ ಬಾಜೀರಾಯ, ಮಾಗಡಿ ಕೆಂಪೇಗೌಡ, ತಂಜಾವೂರಿನ ರಾಜ, ಯುವರಾಜ ಟಿಪ್ಪು, ಆನೆಯ ಮೇಲೆ ಸವಾರಿ ಮಾಡುತ್ತಿರುವ ವಾಲಾಜ ಮೊದಲಾದವರನ್ನು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಒಂದು ಚಿತ್ರಣದಲ್ಲಿ ರಾಜಮನೆತನದ ಗಣ್ಯವ್ಯಕ್ತಿಗಳು ಸಂದೇಶವನ್ನು ಬರೆಯುತ್ತಿರುವುದು, ಪಾರಿವಾಳದ ಮುಖಾಂತರ ಪತ್ರ ರವಾನಿಸುತ್ತಿರುವುದು, ಬಂದ ಸಂದೇಶವನ್ನು ಓದುತ್ತಿರುವುದು - ಇಂಥ ದೃಶ್ಯಗಳನ್ನು ಚಿತ್ರಿಸಲಾಗಿದೆ.

ರಾಣಿಯೊಬ್ಬಳು ರತ್ನಗಂಬಳಿಯ ಮೇಲೆ ಕುಳಿತು ಹುಕ್ಕಾ ಸೇದುತ್ತಿರುವುದು, ರಾಣಿಯ ಸುತ್ತಲೂ ಸಖಿಯರು ಕುಳಿತಿದ್ದು, ಮುಂಭಾಗದಲ್ಲಿ ಸಂಗೀತಗಾರ್ತಿಯರು ಹಾಗೂ ಹಿಂಭಾಗದಲ್ಲಿ ಮೂವರು ಚಾಮರಧಾರಣೆಯರಿರುವ ಚಿತ್ರ ರಾಜಸ್ತಾನಿ ಶೈಲಿಯನ್ನು ಹೋಲುತ್ತದೆ. ಇನ್ನೊಂದು ಸನ್ನಿವೇಶದಲ್ಲಿ ಸಂಗೀತಗಾರರ ಗುಂಪೊಂದು ಸಾಲಾಗಿ ನಿಂತಿರುವುದು, ಅದರಲ್ಲಿ ಒಬ್ಬಳು ಹಾಡುತ್ತ, ಮತ್ತೊಬ್ಬಳು ನರ್ತಿಸುತ್ತ, ವಾದ್ಯ ವೃಂದದವರು ಹಿಂಬಾಲಿಸುತ್ತಿರುವುದನ್ನು ಚಿತ್ರಿಸಿರುವುದು ಕಲಾಕಾರನ ನೈಪುಣ್ಯತೆ ತೋರಿಸುತ್ತದೆ. ನೀಲಿ ಮತ್ತು ಕಪ್ಪು ಮಿಶ್ರಿತ ಬಣ್ಣದ ಅಲಂಕೃತ ಆನೆಯ ಮೇಲಿನ ಅಂಬಾರಿಯಲ್ಲಿ ರಾಜನು ಶಿಬಿಯಲ್ಲಿ ಕುಳಿತಿರುವ, ಅವನ ಕಂದುಬಣ್ಣದ ಕುದುರೆಯ ಸುತ್ತಲೂ ಶ್ವೇತವಸ್ತ್ರ ಧರಿಸಿದ ರಾಜಸೇವಕರು ಸುತ್ತುವರೆದಿರುವ ದೃಶ್ಯ ಮನಮೋಹಕವಾಗಿದೆ. ಈ ಅರಮನೆಯ ಭಿತ್ತಿ ಚಿತ್ರಗಳನ್ನು ಅನೇಕ ವರ್ಣ ಚಿತ್ರಕಾರರು ರಚಿಸಿದ್ದಾರೆ. ಮೊಟ್ಟಮೊದಲಿಗೆ ಶ್ರೀರಂಗಪಟ್ಟಣದ ಕಲಾಕಾರರು ಟಿಪ್ಪು ಸುಲ್ತಾನನ ಆಡಳಿತ ಕಾಲದಲ್ಲಿಯೇ ಪ್ರಾರಂಭಿಸಿ, ಟಿಪ್ಪುವಿನ ಮರಣಾನಂತರ ಯುರೋಪಿಯನ್ ಕಲಾವಿದರಿಂದ ಪುನರ್‌ರಚಿಸಿ, ಸಂರಕ್ಷಿಸಲ್ಪಟ್ಟಿರಬಹುದೆಂದು ತಿಳಿದುಬರುತ್ತದೆ. 1855ರಲ್ಲಿ ಲಾರ್ಡ್ ಡಾಲ್‌ಹೌಸಿ ಈ ಅರಮನೆಗೆ ಭೇಟಿ ನೀಡಿ ಇಲ್ಲಿಯ ವರ್ಣಚಿತ್ರಗಳನ್ನು ಸಂರಕ್ಷಿಸುವಂತೆ ಆದೇಶಿಸಿದ. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರವನ್ನು ಇಲ್ಲಿ ಸೇರ್ಪಡಿಸಿರಬಹುದೆಂದು ಅಭಿಪ್ರಾಯಪಡಲಾಗಿದೆ.

1959ರಲ್ಲಿ ದರಿಯಾದೌಲತ್ ಅರಮನೆಯನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಲಾಯಿತು. ಗಾಳಿ ಬಿಸಿಲಿನ ತಾಪಕ್ಕೆ ಅಳಿಸಿಹೋದ ಇವುಗಳ ಕೆಲವು ಭಾಗಗಳನ್ನೂ 1920ರಲ್ಲಿ ಮತ್ತೆ ಸರಿಪಡಿಸುವ ಕೆಲಸ ಆರಂಭವಾಯಿತು. ಈ ಭಿತ್ತಿಚಿತ್ರಗಳನ್ನು 1791ರ ಸುಮಾರಿನಲ್ಲಿ ಬಿಡಿಸಿರಬಹುದೆಂದು ತಿಳಿದುಬರುತ್ತದೆ.

ಇಲ್ಲಿಯ ಚಿತ್ರಗಳಲ್ಲಿಯ ವರ್ಣಗಳು ಈಗಲೂ ತಮ್ಮ ಹೊಳಪನ್ನು ಕಳೆದುಕೊಂಡಿಲ್ಲ. ಸಂಶೋಧಕ ಬೆಂಜಮಿನ್ ಹ್ಯಾರಿ ಅವರು ಪರೀಕ್ಷೆ ನಡೆಸಿ, ಈ ವರ್ಣಗಳನ್ನು ಹೇಗೆ ತಯಾರಿಸಲಾಯಿತು ಎಂಬುದರ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ.

ಇಲ್ಲಿಯ ಭಿತ್ತಿಚಿತ್ರಗಳನ್ನು ಕರ್ನಾಟಕದ ಚಿತ್ರಕಾರರು ರಚಿಸಿದ್ದಾರೆ. ಇವರ ಮೇಲೆ ಪಾಶ್ಚಾತ್ಯ ಚಿತ್ರಕಲೆಯ ಪ್ರಭಾವ ಬೀರಿರುವಂತೆ ಭಾಸವಾಗುತ್ತದೆ. (ಎನ್.ಎಸ್.ಎಸ್.)

**ಶ್ರೀಲಂಕ:** ಭಾರತದ ಆಗ್ನೇಯಕ್ಕೆ ಹಿಂದು ಮಹಾಸಾಗರದಲ್ಲಿರುವ ದಕ್ಷಿಣ ಏಷ್ಯದ ಅತಿದೊಡ್ಡ ಸ್ವತಂತ್ರ ದ್ವೀಪ ರಾಷ್ಟ್ರ. ಇದು ಪ್ರಜಾಸತ್ತಾತ್ಮಕ ಸಮಾಜವಾದಿ ಗಣರಾಜ್ಯ. ರಾಜಧಾನಿ ಕೊಲಂಬೊ. ಇದನ್ನು ಪಾಕ್ ಮತ್ತು ಮನ್ನಾರ್ ಜಲಸಂಧಿಗಳು ಬೇರ್ಪಡಿಸಿವೆ. ಇದರಲ್ಲಿ ನಾಲ್ಕನೇ ಮೂರು ಭಾಗದಷ್ಟು ಸಿಂಹಳೀಯರು, ಉಳಿದವರು ತಮಿಳು, ಮುಸ್ಲಿಂ ಸಮುದಾಯದವರು. ಆಡಳಿತ ಭಾಷೆ ಸಿಂಹಳಿ ಮತ್ತು ತಮಿಳು.

ಶ್ರೀಲಂಕದಲ್ಲಿ ಕಂಡು ಬರುವ ಶಿಲೆಗಳಿಗೂ ಭಾರತದ ದಖನ್ ಪ್ರಸ್ಥಭೂಮಿಯಲ್ಲಿ ಕಂಡುಬರುವ ಶಿಲೆಗಳಿಗೂ ಸಾಮ್ಯವಿರುವುದರಿಂದ ಬಹು ಹಿಂದೆ ಇದು ಪರ್ಯಾಯ ದ್ವೀಪದ ಅವಿಭಾಜ್ಯ ಅಂಗವಾಗಿದ್ದು ತದನಂತರ ಇದು ಭಾರತದಿಂದ ಬೇರ್ಪಟ್ಟಿರಬಹುದೆಂದು ಭೂಗರ್ಭಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ರಾಮೇಶ್ವರ ಮತ್ತು ಮನ್ನಾರ್ ದ್ವೀಪಗಳನ್ನು ಶ್ರೀಲಂಕದ ಶೇಷಭಾಗಗಳೆಂದು ಪರಿಗಣಿಸಿದರೆ ಇವು ಮೇಲಿನ ಅಭಿಪ್ರಾಯಕ್ಕೆ ಒತ್ತು ಕೊಡುವ ಅಂಶಗಳಾಗಿವೆ. ಇದರ ಪಶ್ಚಿಮದಲ್ಲಿ ಮಾಲ್ದೀವ್ಸ್ ದ್ವೀಪಗಳು, ಪೂರ್ವ ಹಾಗೂ ಈಶಾನ್ಯದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಇವೆ.

ಶ್ರೀಲಂಕದಲ್ಲಿ ಉತ್ತಮ ಸಾರಿಗೆ ಜಾಲವಿದ್ದು ಸು.1,500 ಕಿಮೀ ಬ್ರಾಡ್‌ಗೇಜ್ ರೈಲು ಮಾರ್ಗ ಹೊಂದಿದೆ. ಅಲ್ಲದೆ ಇಲ್ಲಿ 11,285 ಕಿಮೀ ರಾಷ್ಟ್ರೀಯ ಹೆದ್ದಾರಿಗಳಿದ್ದು ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಕೊಲೊಂಬೊ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಪ್ರಪಂಚದ ಇತರ ಭಾಗಗಳಿಗೆ ವಿಮಾನಯಾನ ಸೌಲಭ್ಯವಿದೆ. ಅನುರಾಧಾಪುರ, ಟ್ರಿಂಕಾಮಲೈ, ಪುತ್ತಲಮ್, ಚಿಲಾ, ಕುರುನೆಗಲ, ನೆಗೊಂಬೊ, ಕ್ಯಾಂಡಿ, ಮತಲೆ, ಬದುಲ್ಲ, ರತ್ನಪುರ, ಕಲುತರ, ಮೊರಟವು–ಇವು ಇಲ್ಲಿಯ ಮುಖ್ಯ ಪಟ್ಟಣಗಳೂ ಸುಂದರ ಸ್ಥಳಗಳೂ ಆಗಿವೆ. ತಲೈಮನ್ನಾರ್, ಜಾಫ್ನ, ಸುಂದರ ದ್ವೀಪಗಳೂ ಬಂದರುಗಳೂ ಆಗಿವೆ.



ಸಿಗಿರಿಯ ಬೆಟ್ಟ, ಶ್ರೀಲಂಕ

**ಪ್ರಾಗಿತಿಹಾಸ:** ಶ್ರೀಲಂಕದ ಪ್ರಾಗಿತಿಹಾಸ ಹಾಗೂ ಆದಿ ಇತಿಹಾಸವನ್ನು ಭಾರತೀಯ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಅವಶ್ಯ. ಕಾರಣ ಕಳೆದ 10 ಲಕ್ಷವರ್ಷಗಳಲ್ಲಿ ಹಿಮಯುಗದ ವೈಪರೀತ್ಯದಿಂದ ಸಮುದ್ರಮಟ್ಟ ಹಲವಾರು ಬಾರಿ ಇಳಿದಾಗ ಈ ದ್ವೀಪ ಭಾರತ ಉಪಖಂಡದೊಡನೆ ಭೂಸೇತುವೆಯಿಂದ ಕೂಡಿಕೊಂಡಿತ್ತು. ಈ ಸಂಪರ್ಕ ಕೊಂಡಿ ಕಡಿದದ್ದು ಸು.7000 ವರ್ಷಗಳ ಹಿಂದೆ. ಭೂಸೇತುವೆಯ ಮೂಲಕ 10ಲಕ್ಷ ವರ್ಷಗಳ ಹಿಂದೆಯೇ ಭಾರತದಿಂದ ಆದಿಮಾನವ ಶ್ರೀಲಂಕಕ್ಕೆ ಬಂದು ನೆಲೆಸಿರುವ ಸಾಧ್ಯತೆಯಿದ್ದರೂ ಸ್ಪಷ್ಟ ಕುರುಹುಗಳು ಇನ್ನೂ ಲಭ್ಯವಾಗಿಲ್ಲ. ಬುಂದಾಲ ಬಳಿ ಕಡಲತೀರದ ನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ದೊರೆತ ಸು.1,25,000 ವರ್ಷ ಹಳೆಯ ಉಪಕರಣಗಳು ಶ್ರೀಲಂಕದ ಅತ್ಯಂತ ಪ್ರಾಚೀನ ಅವಶೇಷಗಳಾಗಿವೆ. ಬೆಣಚುಕಲ್ಲು ಹಾಗೂ ಚರ್ಟ್ ಶಿಲೆಯ ಈ ಉಪಕರಣಗಳು ಮಧ್ಯ ಹಳೆಶಿಲಾಯುಗ ಸಂಪ್ರದಾಯದವು. ಶ್ರೀಲಂಕದ ಪ್ರಾಗಿತಿಹಾಸದ ಸ್ಪಷ್ಟ ಚಿತ್ರಣ ದೊರೆಯುವುದು ಸು.34,000 ವರ್ಷದಿಂದೀಚೆಗೆ. ಫಾಹಿಯಾನ್ ಲೇನ (ಕಾಲಮಾನ 34,000–5,400), ಬಟಡೊಂಬ–ಲೇನ (28,500–11,500), ಬೆಲಿ-ಲೇನ (27,000–3,500), ಅಲು–ಲೇನ (10,500) ಎಂಬ ನಾಲ್ಕು ಗುಹೆಗಳಲ್ಲಿ ಹಾಗೂ ಬೆಲನ್–ಬಂದಿ ಪಲಸ್ಸ (6,500) ಎಂಬ ಬಯಲು ನೆಲೆಯಲ್ಲಿ ನಡೆಸಿದ ಉತ್ಖನನಗಳು ಅಪೂರ್ವ ಮಾಹಿತಿ ನೀಡಿವೆ. 50ಕ್ಕೂ ಹೆಚ್ಚು ಇಂಗಾಲ–14 ಮತ್ತು ಔಷ್ಣದೀಪ್ತಿ ಕಾಲಮಾನಗಳನ್ನು ಇವುಗಳಿಂದ ಪಡೆಯಲಾಗಿದೆ. ಅಲ್ಲದೆ ವಿವಿಧ ಕಾಲಮಾನಗಳ ಮಾನವ ಪಳೆಯುಳಿಕೆಗಳನ್ನು ಈ ನೆಲೆಗಳಿಂದ ಸಂಗ್ರಹಿಸಲಾಗಿದೆ. ಫಾಹಿಯಾನ್ ಲೇನದಲ್ಲಿ ದೊರೆತಿರುವ ಸು.34,000 ವರ್ಷ ಹಳೆಯ ಆಧುನಿಕ ಮಾನವನ (ಹೋಮೋ ಸೇಪಿಯನ್ಸ್) ಪಳೆಯುಳಿಕೆಗಳು ದಕ್ಷಿಣ ಏಷ್ಯದಲ್ಲೇ ಈ ಜಾತಿಯ ಮಾನವನ ಅತ್ಯಂತ ಪ್ರಾಚೀನ ಅವಶೇಷಗಳಾಗಿವೆ. 28,500 ಹಾಗೂ 16,000 ವರ್ಷ ಪೂರ್ವದ ಮಾನವ ಪಳೆಯುಳಿಕೆಗಳು ಬಟಡೊಂಬ ಲೇನದಲ್ಲಿವೆ. ಬೆಲಿ–ಲೇನದ ಪಳೆಯುಳಿಕೆಗಳು 13,000 ವರ್ಷ ಹಳೆಯವು. ಫಾಹಿಯಾನ್ ಹಾಗೂ ಬೆಲನ್–ಬಂದಿ ಪಲಸ್ಸದಲ್ಲಿ 6900–6500ರ ಅವಧಿಯ ಪಳೆಯುಳಿಕೆಗಳಿವೆ. ಫಾಹಿಯಾನ್ ಲೇನದ ಅತಿ ಕಿರಿಯ ಪಳೆಯುಳಿಕೆಗಳು 4800 ವರ್ಷದವು. ಪಳೆಯುಳಿಕೆಗಳು ಮೊದಲು ಸಿಕ್ಕಿದ್ದು ಬಲನ್‌ಗೊಡ ಪ್ರದೇಶದಲ್ಲಾದ್ದರಿಂದ ಈ ಜನರನ್ನು ಬಲನ್‌ಗೊಡ ಮಾನವರೆಂದು ಗುರುತಿಸಲಾಗಿದೆ. ಸೂಕ್ಷ್ಮಶಿಲಾಯುಗದಲ್ಲಿದ್ದ ಇವರ ಸಂಸ್ಕೃತಿಗೂ ಅದೇ ಹೆಸರು. ಇವರು ಇಂದಿನ ವಡ್ಡಜನಾಂಗದ ಪೂರ್ವಜರು. ಈ ಜನಾಂಗದ ಆನುವಂಶೀಯ ಕೊಂಡಿಯನ್ನು ಬಟಡೊಂಬ–ಲೇನದ 16,000 ವರ್ಷ ಹಳೆಯ ಪಳೆಯುಳಿಕೆಯವರೆಗೆ ಕೊಂಡೊಯ್ಯಲಾಗಿದೆ. ಬಲನ್‌ಗೊಡ ಮಾನವ ಶ್ರೀಲಂಕದ ಉದ್ದಗಲಗಳಲ್ಲಿ ಹರಡಿದ ಇವನ ಉಪಕರಣಗಳು ಅರ್ಧಚಂದ್ರಾಕೃತಿ, ತ್ರಿಕೋಣ ಮುಂತಾದ ನಿರ್ದಿಷ್ಟ ಆಕೃತಿಯವು. ಹೆಚ್ಚಾಗಿ ಬೆಣಚಕಲ್ಲು ಹಾಗೂ ಚರ್ಟ್ ಶಿಲೆಯಿಂದ ತಯಾರಿಸಿದಂತಹವು. ಸಣ್ಣ ಪಂಗಡಗಳಲ್ಲಿ ವಾಸಿಸುತ್ತಿದ್ದ ಈ ಜನಾಂಗದವರು ಅಲೆಮಾರಿ ಬದುಕನ್ನು ನಡೆಸುತ್ತಿದ್ದರು ಎಂಬುದು ನೆಲೆಗಳ ವಿಸ್ತೀರ್ಣ ಹಾಗೂ ಸ್ವರೂಪದಿಂದ ವಿದಿತವಾಗುತ್ತದೆ. ಉತ್ಖನನದಲ್ಲಿ ದೊರೆತ ಕ್ಯಾನೇರಿಯಮ್, ದಿವಿಹಲಸು ಹಾಗೂ ಕಾಡು ಬಾಳೆಹಣ್ಣಿನ ಬೀಜಗಳು ಇವರ ಆಹಾರ ಸಂಗ್ರಹಣೆ ಚಟುವಟಿಕೆಯ ಸೂಚಕಗಳಾಗಿವೆ. ಶ್ರೀಲಂಕದ ಸೂಕ್ಷ್ಮಶಿಲಾಯುಗ ನೆಲೆಗಳು ಯುರೋಪಿನ ನೆಲೆಗಳಿಗಿಂತ ಸು.16,000 ವರ್ಷ ಪ್ರಾಚೀನವಾಗಿರುವುದು ಆಶ್ಚರ್ಯಕರ. ಆದರೆ ಆಫ್ರಿಕದಲ್ಲಿ ಶ್ರೀಲಂಕದ ಸೂಕ್ಷ್ಮ ಶಿಲೋಪಕರಣಗಳಿಗೆ ಸದೃಶವಾದ ಉಪಕರಣ ಸಂಪ್ರಾದಯ ಸು.27,000 ವರ್ಷ ಪೂರ್ವದ ನೆಲೆಗಳಲ್ಲಿ ಇತ್ತೀಚೆಗೆ ಪತ್ತೆಯಾಗಿರುವುದು ಗಮನಾರ್ಹ. ಯುರೋಪಿನಲ್ಲಿ ಈ ಸಂಸ್ಕೃತಿ ಪ್ರಾಯಶಃ ತಡವಾಗಿ ಬೆಳೆಯಿತು. ಶ್ರೀಲಂಕದಲ್ಲಿ ಸು.28,500 ವರ್ಷಗಳ ಈಚೆಗೆ ಸೂಕ್ಷ್ಮ ಶಿಲೋಪಕರಣಗಳೊಂದಿಗೆ ಮೂಳೆ ಹಾಗೂ ಜಿಂಕೆಕೊಂಬಿನಿಂದ ತಯಾರಿಸಿದ ಉಪಕರಣಗಳ, ವಿಶೇಷವಾಗಿ ಸಣ್ಣ ಮೂಳೆ ಮೊನೆಗಳ ಬಳಕೆ ಹೆಚ್ಚಿತು. ಅಲ್ಲದೆ ಕರಾವಳಿ ಹಾಗೂ ಒಳನಾಡು ಪ್ರದೇಶಗಳ ನಡುವಣ ಸಂಪರ್ಕ ಬಲವಾಯಿತು. ಇದಕ್ಕೆ ಆಧಾರ ಬಟಡೊಂಬ–ಲೇನದಂತಹ ಒಳನಾಡಿನ ನೆಲೆಗಳಲ್ಲಿ ಸಿಕ್ಕ ಶಂಖದ ಮಣಿಗಳು ಹಾಗೂ ಸಾಗರದ ಚಿಪ್ಪುಗಳು. ಜೊತೆಗೆ 27,000 ವರ್ಷಕ್ಕೂ ಮೊದಲೇ ಕರಾವಳಿಯಿಂದ ಉಪ್ಪನ್ನು ಆಮದು ಮಾಡಿಕೊಳ್ಳುತ್ತಿದ್ದುದಕ್ಕೆ ಸ್ಪಷ್ಟ ಕುರುಹುಗಳು ಬೆಲಿ–ಲೇನದಲ್ಲಿ ಶೋಧವಾಗಿವೆ. ಈ ಕಾಲದ ಶಿಲಾಚಿತ್ರಕಲೆ ಇದುವರೆಗೆ ಪತ್ತೆಯಾಗಿಲ್ಲ. ಶವವನ್ನು ಮನೆಯೊಳಗೆ ನೆಲದಡಿಯಲ್ಲಿ ಆಂಶಿಕವಾಗಿ ಹೂಳುತ್ತಿದ್ದರೆಂಬುದನ್ನು ಬಿಟ್ಟರೆ ಇನ್ನಾವುದೇ ಆಚರಣೆಗಳ ಭೌತಿಕ ಚಿಹ್ನೆಗಳು ಕಂಡುಬಂದಿಲ್ಲ. ರವನಲ್ಲ ಹಾಗೂ ಫಾಹಿಯಾನ್ ಗುಹೆಗಳಲ್ಲಿ ಶವದ ಮೂಳೆಗಳು ಕೆಂಬಣ್ಣದಿಂದ ಲೇಪಿತವಾಗಿವೆ. ಇಂತಹುದೇ ಶವಪದ್ಧತಿ ಅಂಡಮಾನ್ ದ್ವೀಪವಾಸಿಗಳಲ್ಲಿ ಪ್ರಚಲಿತವಿದೆ. ಆದರೆ ವಡ್ಡರು ಈ ಪೂರ್ವಿಕ ಸಂಪ್ರದಾಯವನ್ನು ಕೈಬಿಟ್ಟಿದ್ದಾರೆ.

ಸೂಕ್ಷ್ಮಶಿಲಾಯುಗದ ಬಲನ್‌ಗೊಡ ಸಂಸ್ಕೃತಿ ಆದಿಕಬ್ಬಿಣಯುಗ ಸಂಸ್ಕೃತಿಗೆ ಹೇಗೆ ತೆರಳಿಕೊಂಡಿತು ಎಂಬುದಕ್ಕೆ ಸ್ಪಷ್ಟ ಉತ್ತರವಿಲ್ಲ. ಈ ಸಂಕ್ರಮಣ ಅವಧಿಯ ವಸತಿಪದರ ಬಹುತೇಕ ನಶಿಸಿಹೋಗಿದೆ. ಕೆಗಲ್ಲೆ ಸಮೀಪದ ದೊರವಕ–ಕಂಡದಲ್ಲಿ ಮಾತ್ರ ಈ ಸಮಯದ ಅವಶೇಷಗಳು ಕಂಡುಬಂದಿವೆ. 6300 ವರ್ಷಗಳ ಹಿಂದೆಯೇ ಈ ನೆಲೆಯಲ್ಲಿ ಜನ ಮಣ್ಪಾತ್ರೆಯನ್ನು ಉಪಯೋಗಿಸುತ್ತಿದ್ದು ಧಾನ್ಯವನ್ನೂ ಬೆಳೆಯುತ್ತಿದ್ದರು. ಆದರೆ ಈ ನೆಲೆ ನವಶಿಲಾಯುಗದ್ದೆಂದು ದೃಢವಾಗಿ ಹೇಳಲು ಇಲ್ಲಿ ದಕ್ಷಿಣ ಭಾರತ ಸಂಪ್ರದಾಯದ ಉಜ್ಜಿ ನಯಗೊಳಿಸಿದ ಕೊಡಲಿಗಳಾಗಲೀ ಮಣ್ಪಾತ್ರೆ ಪ್ರಕಾರಗಳಾಗಲೀ ದವಸ ಧಾನ್ಯಗಳಾಗಲೀ ದೊರೆತಿಲ್ಲ. ಪ್ರ.ಶ.ಪೂ.1800–1500ರವರೆಗೆ ಸೂಕ್ಷ್ಮಶಿಲಾಯುಗ ಸಂಪ್ರದಾಯದ ನಿರ್ದಿಷ್ಟಾಕೃತಿಯ ಶಿಲೋಪಕರಣಗಳೇ ಶ್ರೀಲಂಕದಲ್ಲಿ ಬಳಕೆಯಲ್ಲಿದ್ದವೆಂಬುದು ಮಂತಾಯಿ ಹಾಗೂ ಬೆಲಿ–ಲೇನದಿಂದ ತಿಳಿದುಬಂದಿದೆ. ಮತೋಟ ನೆಲೆಯ ಸೂಕ್ಷ್ಮಶಿಲಾಯುಗದ ಪದರದಲ್ಲಿ ಸಿಕ್ಕಿರುವ ತಾಮ್ರ ಕಿಟ್ಟಗಳು ಪ್ರಾಯಶಃ ಶ್ರೀಲಂಕದಲ್ಲಿಯೂ ತಾಮ್ರ–ಶಿಲಾಯುಗ ಸಂಸ್ಕೃತಿ ಇದ್ದುದರ ಕುರುಹಾಗಿರಬಹುದು. ಪೂರ್ವ ಶ್ರೀಲಂಕದಲ್ಲಿರುವ ಸೆರುವಿಲ ಮಧ್ಯಪ್ರದೇಶದ (ಭಾರತ) ದಕ್ಷಿಣಕ್ಕಿರುವ ಏಕೈಕ ತಾಮ್ರದದುರಿನ ಗಣಿ ಎಂಬುದು ಇಲ್ಲಿ ಗಮನಾರ್ಹ. ಆದರೂ ಆದಿಕಬ್ಬಿಣಯುಗದ ಪೂರ್ವದ ಸ್ತರಗಳಲ್ಲಿ, ಭಾರತದಲ್ಲಿ ಕಂಡುಬರುವಂತಹ ನವಶಿಲಾಯುಗ–ತಾಮ್ರ–ಶಿಲಾಯುಗ ಅವಶೇಷಗಳನ್ನು ಶ್ರೀಲಂಕದಲ್ಲಿ ಇನ್ನೂ ಪತ್ತೆಮಾಡಬೇಕಾಗಿದೆ.



ರುವಣ್‌ವೆಲಿ ಸ್ತೂಪ, ಅನುರಾಧಪುರ

ದಕ್ಷಿಣಭಾರತದಲ್ಲಿ ಆದಿಕಬ್ಬಿಣಯುಗದ ಸಾಂಸ್ಕೃತಿಕ ಲಕ್ಷಣಗಳು ಸ್ಪಷ್ಟ ರೂಪು ಪಡೆದದ್ದು ಪ್ರ.ಶ.ಪೂ.1200ರ ಹೊತ್ತಿಗೆ. ಇದರ ಬೆನ್ನಿಗೇ ಶ್ರೀಲಂಕದಲ್ಲಿಯೂ ಈ ಸಂಸ್ಕೃತಿ ಹಬ್ಬಿತು. ಪ್ರ.ಶ.ಪೂ.ಸು.1000–800ರ ಅವಧಿಯ ಅನುರಾಧಪುರ ಮತ್ತು ಅಲಿಗಾಲ ಕಬ್ಬಿಣಯುಗದ ಪ್ರಪ್ರಥಮ ಕುರುಹುಗಳುಳ್ಳ ನೆಲೆಗಳು. ಪ್ರ.ಶ.ಪೂ.800ರಲ್ಲಿ 10 ಹೆ. ವಿಸ್ತೀರ್ಣವಿದ್ದ ಅನುರಾಧಪುರ ಪ್ರ.ಶ.ಪೂ.700–600ರ ಅವಧಿಯಲ್ಲಿ 50 ಹೆ.ನಷ್ಟು ದೊಡ್ಡ ಪಟ್ಟಣವಾಗಿ ಬೆಳೆಯಿತು. ಇವೆರಡನ್ನು ಬಿಟ್ಟು ಸಮಕಾಲೀನ ವಸತಿನೆಲೆಗಳು ಶ್ರೀಲಂಕದಲ್ಲಿ ಇನ್ನೆಲ್ಲಿಯೂ ಈವರೆಗೆ ಕಂಡುಬಂದಿಲ್ಲ. ಇಲ್ಲಿಯ ಬೃಹತ್‌ಶಿಲಾ–ಕಬ್ಬಿಣಯುಗದ ಸಮಾಧಿಗಳು ಸ್ವರೂಪ ಹಾಗೂ ನಿರ್ಮಿತಿಯಲ್ಲಿ ಭಾರತೀಯ ಸಮಾಧಿಗಳನ್ನು ಹೋಲುತ್ತವೆ. ಇಂತಹ ಒಂದು ನೆಲೆ

ಇಬ್ಬನ್‌ಕಟುವ. ಇದರ ಕಾಲಮಾನ ಪ್ರ.ಶ.ಪೂ.750–400. ಶ್ರೀಲಂಕದಲ್ಲಿಯೂ ಸಮಾಧಿ ನೆಲೆಗಳ ಆಸುಪಾಸಿನಲ್ಲಿ ವಸತಿನೆಲೆಗಳಿಲ್ಲ. ಇದಕ್ಕೆ ವಿರುದ್ಧವಾಗಿ ಅನುರಾಧಪುರದಲ್ಲಿ ವಸತಿನೆಲೆಯಿದ್ದು ಸುತ್ತಮುತ್ತಲ್ಲಿ ಸಮಾಧಿ ಸ್ಥಳವಿಲ್ಲ.



ಕೈಲಾಸ ಪರ್ವತವನ್ನು ಎತ್ತಿದ ದಶಕಂಠ ರಾವಣ

ಪ್ರ.ಶ.ಪೂ.ಸು.600–500ರಲ್ಲಿ ಪ್ರಪ್ರಥಮ ಬರೆಹ ಕಾಣಿಸಿಕೊಳ್ಳುವುದರೊಂದಿಗೆ ಶ್ರೀಲಂಕದ ಆದಿಚಾರಿತ್ರಿಕ ಕಾಲ ಪ್ರಾರಂಭಗೊಳ್ಳುತ್ತದೆ. ಬ್ರಾಹ್ಮಿಲಿಪಿಯಲ್ಲಿರುವ ಇಲ್ಲಿಯ ಆದಿ ಬರೆಹಗಳು ಭಾರತದ ಅಶೋಕನ ಶಾಸನಗಳಿಗಿಂತ ಸು.200 ವರ್ಷ ಹಳೆಯವು ಎಂಬುದು ಮಹತ್ತ್ವಪೂರ್ಣ. ಮಣ್ಪಾತ್ರೆಗಳ ಮೇಲಿರುವ ಈ ಬಿಡಿ ಬರೆಹಗಳ ಕಾಲಮಾನವನ್ನು ಇಂಗಾಲ–14 ಹಾಗೂ ಔಷ್ಣದೀಪ್ತಿ ತಂತ್ರಗಳಿಂದ ನಿಗದಿಗೊಳಿಸಲಾಗಿದೆ. ಇವು ವ್ಯಕ್ತಿನಾಮಗಳಾಗಿದ್ದು ಈ ಪೈಕಿ ಅನುರಾಧ ಎಂಬ ಹೆಸರು ಗಮನ ಸೆಳೆಯುತ್ತದೆ. ಇದೇ ಹೆಸರಿನ ವ್ಯಕ್ತಿ ರಾಜಕುಮಾರ ವಿಜಯನ ಮಂತ್ರಿಯಾಗಿದ್ದನೆಂದೂ ಪ್ರ.ಶ.ಪೂ.ಸು.500ರಲ್ಲಿ ಸಿಂಹಳವನ್ನು ಸ್ಥಾಪಿಸಿದನೆಂದೂ ಪ್ರಾಚೀನ ವಂಶಾವಳಿಗಳು ಉಲ್ಲೇಖಿಸುತ್ತವೆ. ಅನುರಾಧಪುರದ ಮಣ್ಪಾತ್ರೆ ಬರೆಹಗಳು ಪ್ರಾಕೃತ ಭಾಷೆಯಲ್ಲಿವೆ. ಪ್ರ.ಶ.ಪೂ.500ರ ಸುಮಾರಿನಲ್ಲಿ ಉತ್ತರ ಭಾರತದಿಂದ ಶ್ರೀಲಂಕ ಪ್ರದೇಶಕ್ಕೆ ವಲಸೆ ಬಂದಿರಬಹುದಾದ ಜನರೊಡನೆ ಈ ಭಾಷೆ ಬಂದಿರಬೇಕು. ಉತ್ತರಭಾರತದ ರಾಜಕುಮಾರ ವಿಜಯನ ಶ್ರೀಲಂಕ ಪಯಣದ ಐತಿಹ್ಯ ಇದನ್ನು ಪುಷ್ಟೀಕರಿಸುತ್ತದೆ. ಬರೆಹದ ಪ್ರಾರಂಭದೊಂದಿಗೇ ಅನುರಾಧಪುರದಲ್ಲಿ ಹೊಸ ಬಗೆಯ ಮಣ್ಪಾತ್ರೆಗಳೂ ಕೆಂಪು ಗಾಜಿನ ಮಣಿಗಳೂ ಮೂಳೆಯಿಂದ ಮಾಡಿದ ಲೇಖನಿಯಂತಹ ವಸ್ತುಗಳೂ ಕಾಣಿಸಿಕೊಳ್ಳುತ್ತವೆ. ಈ ಎಲ್ಲ ಲಕ್ಷಣಗಳೂ ನಗರೀಕರಣದ ಸೂಚನೆಗಳಾಗಿವೆ. ಪ್ರ.ಶ.ಪೂ.3ನೆಯ ಶತಮಾನದ ಹೊತ್ತಿಗೆ 100 ಹೆ.ನಷ್ಟು ಬೆಳೆದ ಅನುರಾಧಪುರ ಶ್ರೀಲಂಕದ ಅತಿದೊಡ್ಡ ನಗರಗಳಲ್ಲೊಂದೆನಿಸಿಕೊಂಡಿತು. ಈ ಸಮಯಕ್ಕಾಗಲೇ ಬೌದ್ಧಧರ್ಮ ಶ್ರೀಲಂಕದಲ್ಲಿ ಬಲವಾಗಿ ಬೇರೂರಿತ್ತು. ನೀರಾವರಿ ವ್ಯವಸಾಯವೂ ಸುವ್ಯವಸ್ಥಿತಗೊಂಡು ಆದಿಚಾರಿತ್ರಿಕ ಕಾಲದ ಜನಜೀವನದ ಆರ್ಥಿಕ ತಳಪಾಯವಾಯಿತು. ಆರ್ಥಿಕ ಸಮೃದ್ಧಿಯಿಂದಾಗಿ ನೂರಾರು ಹೊಸ ವಸತಿಗಳು ಈ ಅವಧಿಯಲ್ಲಿ ಹುಟ್ಟಿ ಬೆಳೆದವು. (ಎಸ್.ಯು.ಡಿ.)

**ಇತಿಹಾಸ:** 1972ರ ವರೆಗೆ ಈ ದ್ವೀಪವನ್ನು ಸಿಲೋನ್ ಎಂದು ಕರೆಯಲಾಗುತ್ತಿತ್ತು. ಈ ದ್ವೀಪದ ಮೂಲನಿವಾಸಿಗಳು ಬುಡಕಟ್ಟು ಸಮುದಾಯಕ್ಕೆ ಸೇರಿದ ಯಕ್ಷ ಹಾಗೂ ನಾಗ ಜನಾಂಗದವರು. ಉತ್ತರ ಭಾರತದಿಂದ ವಲಸೆ ಬಂದ ವಿಜಯ ಎಂಬುವನು ಇಲ್ಲಿ ಸಿಂಹಳೀಯ ಸಂಸ್ಕೃತಿಯನ್ನು ಪರಿಚಯಿಸಿದನೆಂಬುದು ಇಲ್ಲಿನ ದಂತಕಥೆಯೊಂದರಿಂದ ತಿಳಿದುಬರುತ್ತದೆ. ಪ್ರ.ಶ.ಪೂ. 4 ನೆಯ ಶತಮಾನದಲ್ಲಿ ವಲಸೆ ಬಂದ ಸಿಂಹಳೀಯರು ಉತ್ತರ ಭಾಗದ ದ್ವೀಪಪ್ರದೇಶದಲ್ಲಿ ನೆಲೆ ನಿಂತು ನೀರಾವರಿ ವ್ಯವಸ್ಥೆಯನ್ನು ಸುಧಾರಿಸಿದರು. ಪ್ರ.ಶ.ಪೂ. 200 – ಪ್ರ.ಶ. 993 ರ ತನಕ ಅನುರಾಧಾಪುರ ಸಿಂಹಳೀಯ ನಾಗರಿಕತೆಯ ಕೇಂದ್ರವಾಗಿತ್ತು. ಪ್ರ.ಶ.100–400 ಅವಧಿಯಲ್ಲಿ ಈ ದ್ವೀಪಕ್ಕೆ ದಕ್ಷಿಣ ಭಾರತದ ತಮಿಳು ಜನರು ಬಂದರು. ಈ ವೇಳೆಯಲ್ಲಿ ಸಿಂಹಳೀಯ ಮತ್ತು ತಮಿಳು ರಾಜರ ನಡುವೆ ದ್ವೀಪ ಹತೋಟಿಗಾಗಿ ಯುದ್ಧಗಳು ಸಂಭವಿಸಿದವು. 1500 ರ ವೇಳೆಗೆ ಇಲ್ಲಿಗೆ ಪೋರ್ಚುಗೀಸರು ವಲಸೆ ಬಂದರು. ಮೂರ್ ಸಮುದಾಯದ ಅರಬ್ ವರ್ತಕರೂ 700ರ ವೇಳೆಗೆ ಈ ದ್ವೀಪಕ್ಕೆ ಬರಲಾರಂಭಿಸಿದರು. 1500ರ ಅನಂತರ ಈ ದ್ವೀಪದ ಹತೋಟಿಗಾಗಿ ಯುರೋಪಿಯನ್ನರು ಪೈಪೋಟಿಗಿಳಿದರು. 1505 ರಲ್ಲಿ ಪೋರ್ಚುಗೀಸರು ಕೊಲಂಬೊ ನಗರಕ್ಕೆ ಆಗಮಿಸಿ. ಈ ದ್ವೀಪದ ಪ್ರಮುಖ ಬಂದರು ಹಾಗೂ ಕಡಲ ತೀರದ ಮೇಲೆ ಹತೋಟಿ ಸಾಧಿಸಿದರು. 1600 ರಲ್ಲಿ ಪೋರ್ಚುಗೀಸರ ಸ್ಥಾನವನ್ನು ಡಚ್ಚರು ಕಸಿದುಕೊಂಡರು. 1795–96 ರಲ್ಲಿ ಬ್ರಿಟಿಷರು ಡಚ್ಚರನ್ನು ಸೋಲಿಸಿ ಸಿಲೋನಿನ ಮೇಲೆ ಹಿಡಿತ ಸಾಧಿಸಿದರು. 1802 ರಲ್ಲಿ ಬ್ರಿಟಿಷರು ಸಿಲೋನನ್ನು ಸಾಮ್ರಾಜ್ಯದ ವಸಾಹತು ಮಾಡಿಕೊಂಡರು. 1815ರಲ್ಲಿ ಶ್ರೀಲಂಕದ ಕ್ಯಾಂಡಿ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಮೂಲಕ ಇಡೀ ದ್ವೀಪವನ್ನು ಏಕೀಕೃತ ಆಡಳಿತ ವ್ಯವಸ್ಥೆಗೆ ತಂದ ಕೀರ್ತಿ ಬ್ರಿಟಿಷರಿಗೆ ಸಲ್ಲುತ್ತದೆ. ಇವರ ಆಡಳಿತ ಕಾಲದಲ್ಲಿ ಕಾಫಿ, ರಬ್ಬರ್, ಟೀ ತೋಟಗಳು ಅಭಿವೃದ್ಧಿಗೊಂಡವು.

1900 ರ ವೇಳೆಗೆ ಇಲ್ಲಿ ಸ್ವಾಯತ್ತ ಆಡಳಿತ ರೂಪುಗೊಂಡಿತು. 1948 ಫೆಬ್ರವರಿ 4ರಂದು ಸ್ವಾತಂತ್ರ್ಯಗಳಿಸಿ ಡಿ.ಎಸ್. ಸೇನಾನಾಯಕೆ ಮೊದಲ ಪ್ರಧಾನ ಮಂತ್ರಿಯಾದರು.

1956 ರಲ್ಲಿ ಎಸ್. ಡಬ್ಲು. ಆರ್. ಡಿ. ಬಂಡಾರನಾಯಕೆ ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗಿ ಸಿಂಹಳೀ ಭಾಷೆಯನ್ನು ರಾಷ್ಟ್ರ ಭಾಷೆಯಾಗಿ ಅಂಗೀಕರಿಸಿದಾಗ ತಮಿಳರು ತೀವ್ರವಾಗಿ ವಿರೋಧಿಸಿದರು. ಮುಂದೆ ಭಾಷಾ ಸಮಸ್ಯೆಯು ಜನಾಂಗೀಯ ಸಮಸ್ಯೆಯಾಗಿ ಪರಿವರ್ತನೆಗೊಂಡು ಕೊನೆಗೆ 1959 ರಲ್ಲಿ ಬಂಡಾರ ನಾಯಕೆಯ ಹತ್ಯೆಯಾಯಿತು. 1960 ರಲ್ಲಿ ಬಂಡಾರನಾಯಕೆಯವರ ಪತ್ನಿ ಸಿರಿಮಾವೊ ಬಂಡಾರನಾಯಕೆ ಶ್ರೀಲಂಕದ ಮೊದಲ ಮಹಿಳಾ ಪ್ರಧಾನಿಯಾಗುವುದರ ಮೂಲಕ ಪ್ರಪಂಚದ ಮೊದಲ ಮಹಿಳಾ ಪ್ರಧಾನಿಯೆಂಬ ಹೆಗ್ಗಳಿಕೆಗೆ ಪಾತ್ರರಾದರು. 1972 ರಲ್ಲಿ ಈ ದೇಶದ ಹೆಸರನ್ನು ಸಿಲೋನ್ ಎಂಬುದರ ಬದಲಾಗಿ ಶ್ರೀಲಂಕ ಎಂದು ಮರು ನಾಮಕರಣ ಮಾಡಲಾಯಿತು.

1977 ರಲ್ಲಿ ಬಂಡಾರನಾಯಕೆ ಅಧಿಕಾರ ಕಳೆದುಕೊಂಡಾಗ ಜೆ. ಆರ್. ಜಯವರ್ಧನೆ ಪ್ರಧಾನ ಮಂತ್ರಿಯಾಗಿ ಅಧಿಕಾರಕ್ಕೆ ಬಂದರು. 1978 ರಲ್ಲಿ ಶ್ರೀಲಂಕದ ಸಂಸತ್ತು ದೇಶದ ಉನ್ನತ ಹುದ್ದೆಯನ್ನು ಪ್ರಧಾನ ಮಂತ್ರಿಯಿಂದ ಅಧ್ಯಕ್ಷ ಪದವಿಗೆ ನೀಡಿದಾಗ ಜಯವರ್ಧನೆ ಮೊದಲ ಅಧ್ಯಕ್ಷರಾದರು. 1982ರಲ್ಲಿ ಇವರು ಚುನಾಯಿತ ಅಧ್ಯಕ್ಷರಾಗಿ ಆಯ್ಕೆಗೊಂಡು 1988 ರಲ್ಲಿ ನಿವೃತ್ತಿ ಹೊಂದಿದರು. ಇವರ ಅನಂತರ ಅಧಿಕಾರಕ್ಕೆ ಬಂದ ರಣಸಿಂಘ ಪ್ರೇಮದಾಸ ರಾಜಕೀಯ ಅಸ್ಥಿರತೆಯನ್ನು ಎದುರಿಸಬೇಕಾಯಿತು. ಶ್ರೀಲಂಕ ಜನಾಂಗೀಯ ಸಮಸ್ಯೆ, ಪ್ರತ್ಯೇಕ ರಾಜ್ಯ ಬೇಡಿಕೆಯ ಹಿನ್ನೆಲೆಯಲ್ಲಿ ತಮಿಳು ಹೋರಾಟಗಾರರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿ, ಆಂತರಿಕ ಸಮಸ್ಯೆಯಿಂದ ಶ್ರೀಲಂಕ ಭಾರತದ ಶಾಂತಿ ಪಾಲನ ಪಡೆಯ ನೆರವನ್ನು ಯಾಚಿಸಬೇಕಾಯಿತು. ಹಲವು ಬಾರಿ ಶಾಂತಿ ಒಪ್ಪಂದ, ಯುದ್ಧ ನಿಲುಗಡೆಯಂತಹ ಪ್ರಯತ್ನಗಳು ನಡೆದರೂ ಘರ್ಷಣೆಗಳು ನಿಲ್ಲಲಿಲ್ಲ. 1993 ರಲ್ಲಿ ತಮಿಳು ಉಗ್ರರ (ಎಲ್‌ಟಿಟಿಇ) ಅಟ್ಟಹಾಸಕ್ಕೆ ಅಧ್ಯಕ್ಷ ಪ್ರೇಮದಾಸ, ಅನಂತರದಲ್ಲಿ ಭಾರತದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಪ್ರಾಣ ತೆರಬೇಕಾಯಿತು.

ಸಿಗಿರಿಯ ವರ್ಣಚಿತ್ರಗಳು

1994 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಶ್ರೀಲಂಕ ಫ್ರೀಡಂ ಪಾರ್ಟಿ ವಿಜಯಗಳಿಸಿ ಚಂದ್ರಿಕಾ ಬಂಡಾರನಾಯಕೆ ಕುಮಾರತುಂಗ ಅಧ್ಯಕ್ಷರಾದರು. 1999 ರ ತನಕ ತಾಯಿ ಪ್ರಧಾನ ಮಂತ್ರಿ, ಮಗಳು ಅಧ್ಯಕ್ಷೆಯಾಗಿ ಆಡಳಿತ ನಡೆಸಿದರು.

ಕೊಲಂಬೊ ಈ ದೇಶದ ಪ್ರಮುಖ ಬಂದರು ನಗರ. ಶ್ರೀಲಂಕದ ಪಶ್ಚಿಮ ತೀರದಲ್ಲಿರುವ ಈ ನಗರವನ್ನು ಸು. 1300ರಲ್ಲಿ ಸ್ಥಾಪಿಸಲಾಯಿತೆನ್ನುವರು. 1505 ರಲ್ಲಿ ಇಲ್ಲಿಗೆ ಬಂದ ಪೋರ್ಚುಗೀಸರು ಪ್ರಥಮ ಯುರೋಪಿಯನ್ನರು. 1656 – 1796

ರವರೆಗೆ ಡಚ್ಚರು ಈ ನಗರವನ್ನು ಆಕ್ರಮಿಸಿಕೊಂಡಿದ್ದರು. ಇವರ ಕಾಲದಲ್ಲಿ ಕಟ್ಟಿದ ಅನೇಕ ಕಟ್ಟಡಗಳು ಇಂದಿಗೂ ಇವೆ. ಇದರಲ್ಲಿ 1749 ರಲ್ಲಿ ನಿರ್ಮಿಸಿದ ವುಲ್ಫೆನ್‍ಡಾಲ್ ಚರ್ಚ್ ಪ್ರಸಿದ್ಧವಾದುದು ಕೊಲಂಬೊ ಹತ್ತಿರದ ಕಲನೀಯ ದೇಗುಲಕ್ಕೆ ಬುದ್ಧ ಭೇಟಿ ನೀಡಿದ್ದನೆನ್ನುವರು. ಇಂದು ಈ ನಗರ ಒಂದು ದೊಡ್ಡ ವಾಣಿಜ್ಯ ಕೇಂದ್ರ. ಶ್ರೀಲಂಕ ವಿಶ್ವವಿದ್ಯಾಲಯವಿರುವ ವಿದ್ಯಾಕೇಂದ್ರವೂ ಆಗಿದೆ. ಶ್ರೀಲಂಕ ದೇಶ ಭೌಗೋಲಿಕ ಸ್ಥಾನ ಹಾಗೂ ಸಂಪನ್ಮೂಲಗಳಿಂದಾಗಿ ದಕ್ಷಿಣ ಏಷ್ಯದ ಮುಖ್ಯ ರಾಷ್ಟ್ರಗಳಲ್ಲೊಂದಾಗಿದ್ದು ಹೆಚ್ಚು ಆರ್ಥಿಕ ಹಾಗೂ ರಾಜಕೀಯ ಪ್ರಾಬಲ್ಯ ಪಡೆಯಲು ಪ್ರಯತ್ನಿಸುತ್ತಿದೆ. ಇಲ್ಲಿ ನಡೆಯುತ್ತಿರುವ ಆಂತರಿಕ ಕಲಹಗಳ ನಿವಾರಣೆಯಿಂದ, ಮುಂದೆ ಈ ದೇಶವೂ ಆರ್ಥಿಕ ಪ್ರಾಬಲ್ಯ ಸಾಧಿಸುವ ಸಾಧ್ಯತೆ ಇದೆ. 2004 ಡಿಸೆಂಬರ್ 26 ರಂದು ಅಪ್ಪಳಿಸಿದ ಸುನಾಮಿ ಅಲೆಗಳಿಂದಾಗಿ ಕಷ್ಟ ನಷ್ಟಗಳಿಗೆ ಗುರಿಯಾದ ದೇಶಗಳಲ್ಲಿ ಶ್ರೀಲಂಕ ಸಹ ಸೇರಿದೆ. (ಸಿ.ಜಿ.ಎಸ್.)

**ಶೋಆ:** ಇಥಿಯೋಪಿಯದ ಒಂದು ಐತಿಹಾಸಿಕ ಸ್ಥಳ. ಐತಿಹ್ಯಗಳಲ್ಲಿ ಬರುವ ಇಸ್ಲಾಮಿಕ್ ಸಾಮ್ರಾಜ್ಯವೊಂದರ ಭಾಗವಾಗಿರಬಹುದಾದ ಮೂರು ದೊಡ್ಡ ಪಟ್ಟಣಗಳನ್ನು ಇಥಿಯೋಪಿಯದಲ್ಲಿ ಫ್ರೆಂಚ್ ಪುರಾತತ್ತ್ವಶಾಸ್ತ್ರಜ್ಞರು ಅನಾವರಣಗೊಳಿಸಿದ್ದಾರೆ. ಇಫಾತ್ ಪ್ರಾಂತ್ಯದಲ್ಲಿರುವ ಶೋಆ ರೊಬಿತ್ ಪಟ್ಟಣದಿಂದ 45 ಕಿಮೀ ಆಗ್ನೇಯದಲ್ಲಿ ಸು.11ಕಿಮೀ ಉದ್ದಕ್ಕೆ ಈ ನಿವೇಶನ ಹರಡಿಕೊಂಡಿದೆ. 10-16 ನೆಯ ಶತಮಾನಗಳ ನಡುವೆ ಕ್ರೈಸ್ತ ಪರ್ವತಪ್ರದೇಶ ಮತ್ತು ಕೆಂಪು ಸಮುದ್ರದ ತೀರದಲ್ಲಿದ್ದ ಮುಸಲ್ಮಾನ ಬಂದರುಗಳ ಮಧ್ಯದ ವ್ಯಾಪಾರ ಮಾರ್ಗದಲ್ಲಿ ಶೋಆ ಸಾಮ್ರಾಜ್ಯ ಇದ್ದಿತೆಂದು ನಂಬಲಾಗಿದ್ದರೂ ಭೂಪಟದಲ್ಲಿ ಅದರ ಸ್ಥಾನವೇನೆಂದು ಇದುವರೆಗೆ ಸ್ಪಷ್ಟವಾಗಿರಲಿಲ್ಲ. ರಿಫ್ಟ್ ಕಣಿವೆಯ ಕಡಿದಾದ ಇಳಿಜಾರಿನಲ್ಲಿ ಅಸ್ಬಾರಿ, ಮಸಲ್ ಮತ್ತು ನೋರಾ ಎಂಬ ಮೂರು ಪಟ್ಟಣಗಳನ್ನು ಶೋಧಿಸಲಾಗಿದೆ. ಶೇವಾ ಎಂದೂ ಬರೆಯಲಾಗುವ ಶೋಆ ಸಾಮ್ರಾಜ್ಯ 10ನೆಯ ಶತಮಾನದವರೆಗೂ ಸ್ವತಂತ್ರ ಪ್ರಭುತ್ವವಾಗಿತ್ತು. 13ನೆಯ ಶತಮಾನದ ಸುಮಾರಿಗೆ ಇಫಾತ್ ಸುಲ್ತಾನರು ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಇಂದು ಈ ಸ್ಥಳ ದಟ್ಟವಾದ ಪೊದೆಗಳಿಂದ ತುಂಬಿದ್ದರೂ ನೂರಾರು ವರ್ಷಗಳ ಹಿಂದೆ ಇಲ್ಲಿ ಮೆಟ್ಟಿಲು ಬೇಸಾಯ ಪದ್ಧತಿ ಅನುಸರಿಸುತ್ತಿದ್ದರೆಂಬುದಕ್ಕೆ ಕುರುಹುಗಳಿವೆ. ಎತ್ತರದ ಗೋಡೆಗಳುಳ್ಳ ಮಸೀದಿಗಳು, ಮನೆಗಳು, ವಿವಿಧ ಕಟ್ಟಡಗಳ ಅವಶೇಷಗಳು ಇಲ್ಲಿ ದೊರೆತಿವೆ. ಇಡೀ ಇಥಿಯೋಪಿಯದಲ್ಲೇ ಅತಿ ದೊಡ್ಡದಾದ ಮಸೀದಿಯ ಅವಶೇಷವನ್ನು ಅಸ್ಬಾರಿಯಲ್ಲಿ ಹೊರತೆಗೆಯಲಾಗಿದೆ. ಇದರ ಗೋಡೆಗಳ ಮೇಲೆ ಅರಬ್ಬಿ ಭಾಷೆಯ ಕೆತ್ತನೆ ಇದೆ. ನೂರಾರು ಗೋರಿಗಳಿರುವ ಹಲವು ಹೆಕ್ಟೇರುಗಳಷ್ಟು ದೊಡ್ಡ ಸ್ಮಶಾನವೂ ಇಲ್ಲಿದೆ. ಮಸಲ್‍ನ ಪ್ರಾಚೀನ ಸ್ಮಶಾನದಲ್ಲಿ ನಕ್ಷತ್ರಗಳ ಚಿತ್ರ, ಅರಬ್ಬಿ ಕೆತ್ತನೆಯನ್ನು ಹೊಂದಿದ ಗೋರಿಯೊಂದು ದೊರೆತಿದೆ. ಇದು ರಾಜನದಿರಬೇಕು. ರಸ್ತೆ ಬೀದಿಗಳ ಜಾಲದ ಅವಶೇಷ ನೋರಾದಲ್ಲಿ ದೊರೆತಿರುವುದರಿಂದ ಅದೊಂದು ಜನನಿಬಿಡವಾದ ಮುಖ್ಯ ನಗರವಾಗಿತ್ತೆಂದೆನಿಸುತ್ತದೆ. ಇಲ್ಲಿಯ ಮುಖ್ಯ ಮಸೀದಿಯ ಗೋಡೆ 5ಮೀಗಿಂತಲೂ ಎತ್ತರವಾಗಿದೆ. ಒಂದು ಬಗೆಯ ನೈಸರ್ಗಿಕ ಗಾಜಾದ ಅಬ್ಸೀಡಿಯನ್‍ನಿಂದ ಮಾಡಿದ ಅನೇಕ ಉಪಕರಣಗಳನ್ನೂ ಹೊರತೆಗೆಯಲಾಗಿದೆ. (ಎ.ಎಸ್.)

# ಷ

**ಷಿಂಟೋ:** ಜಪಾನ್ ದೇಶದ ಸ್ಥಳೀಯ ಧರ್ಮ. ಇದನ್ನು ಜಪಾನಿಭಾಷೆಯಲ್ಲಿ ದೈವಮಾರ್ಗ (ಕಾಮಿನೋಮಿಚಿ) ಎಂದು ಕರೆಯುತ್ತಾರೆ. ಷಿಂಟೋ ಎಂಬ ಹೆಸರು ಚೀನಿ ಮೂಲದ್ದೆಂದು ತಿಳಿದುಬರುತ್ತದೆ. ಚಕ್ರವರ್ತಿ ಯೋಮೆ ಎಂಬಾತನ ಪುಸ್ತಕದಲ್ಲಿ ನಿಹೋಂಗಿ ಪ್ರಕರಣದಲ್ಲಿ ಷಿಂಟೋಧರ್ಮದ ಪ್ರಸ್ತಾಪವಿದೆ. ಈ ಧರ್ಮದ ಬೆಳವಣಿಗೆಯಲ್ಲಿ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಎಂಬ ಎರಡು ಘಟ್ಟಗಳಿವೆ. ಪ್ರಾಕೃತಿಕ ಘಟ್ಟದಲ್ಲಿ ಪ್ರಕೃತಿ ಪೂಜೆಯೂ ಸಾಂಸ್ಕೃತಿಕ ಘಟ್ಟದಲ್ಲಿ ಆತ್ಮವಿಚಾರದ ತತ್ತ್ವ ನಿರೂಪಣೆಯೂ ಕಂಡುಬರುತ್ತದೆ. ಈ ಧರ್ಮದ ಮೇಲೆ ಬೌದ್ಧಧರ್ಮ ಮತ್ತು ಕನ್‍ಫ್ಯೂಷಿಯಸ್ ಧರ್ಮಗಳ ಪ್ರಭಾವ ಹೆಚ್ಚಾಗಿದೆ.

ಷಿಂಟೋಧರ್ಮದ ಮೂಲರೂಪದಲ್ಲಿ ಭೂತಾರಾಧನೆ, ಪ್ರಕೃತಿ ಆರಾಧನೆ, ಮಂತ್ರ ಮಾಟಗಳ ಪ್ರಾಮುಖ್ಯ ಹೆಚ್ಚಿದ್ದರೂ ಏಕದೇವತೋಪಾಸನೆಯೂ ಸ್ಥೂಲವಾಗಿ ಕಂಡುಬರುತ್ತದೆ. ಪ್ರಾಚೀನ ಜಪಾನೀಯರು ಸೂರ್ಯ, ಚಂದ್ರ, ಬಿರುಗಾಳಿ, ಗುಡುಗು, ಮಳೆ, ಬೆಂಕಿ ಮುಂತಾದವನ್ನು ಪೂಜಿಸುತ್ತಿದ್ದರು. ಅವರಿಗೆ ಭೂಮಿ, ಸಮುದ್ರ, ಬೆಟ್ಟ, ಭೂಕಂಪನ, ಅಗ್ನಿಪರ್ವತ, ಬಿಸಿನೀರಿನ ಬುಗ್ಗೆ, ಕಲ್ಲು, ಬಂಡೆ ಇತ್ಯಾದಿಗಳ ಅಧಿದೇವತೆಗಳೂ ಪೂಜನೀಯವಾಗಿದ್ದುವು. ಹಾವು, ಹುಲಿ, ತೋಳ, ಹಂದಿ, ಮೊಲ, ರೇಷ್ಮೆಹುಳು, ಮರಗಿಡಗಳು, ದ್ವಿದಳಧಾನ್ಯಗಳಿಗೂ ಅವರು ಪೂಜೆ ಸಲ್ಲಿಸುತ್ತಿದ್ದರು. ಮನುಷ್ಯರನ್ನು ಬದುಕಿದ್ದಾಗಲೂ ಸತ್ತಮೇಲೂ ದೇವತೆಗಳೆಂದು (ಕಮಿ) ಕರೆದು ಪೂಜಿಸಲಾಗುತ್ತಿತ್ತು. ಕೆಲವು ವ್ಯಕ್ತಿಗಳನ್ನು ಬದುಕಿದ್ದಾಗಲೇ ದೇವತೆಗಳೆಂದು ಪರಿಗಣಿಸಿ, ದೇವಸ್ಥಾನಗಳಲ್ಲಿ ಪೂಜಿಸಲಾಗುತ್ತಿತ್ತು. ಚಕ್ರವರ್ತಿಯು ಅರ್ಹಿತೋಗಮಿ ಅಥವಾ ಅಕಿಸ್ತುಕ ಎಂದರೆ ಪ್ರತ್ಯಕ್ಷದೇವತೆ (ಅಕಿತ್ಸುಕಮಿ) ಎಂದು ಪರಿಗಣಿಸಲ್ಪಟ್ಟಿದ್ದ. ವೀರಯೋಧರನ್ನೂ ಮಹಾಪುರುಷರನ್ನೂ ಮಾನವರೂಪದ ದೇವರೆಂದೇ ಭಾವಿಸಲಾಗುತ್ತಿತ್ತು. ಮನುಷ್ಯರೂ ಪ್ರಾಣಿಗಳೂ ಪರಸ್ಪರ ರೂಪಾಂತರ ಹೊಂದುವರೆಂಬ ನಂಬಿಕೆಯೂ ಈ ಧರ್ಮದಲ್ಲಿದೆ. ಕಾಮೋ-ಟಕೆಟ್ಸುನುಮಿ-ನೋ-ಮಿಕೋಟೋ ಎಂಬ ಪ್ರಾಚೀನ ಷಿಂಟೋ ಪುರೋಹಿತ ಪವಿತ್ರ ಕಾಗೆಯ ಅವತಾರವೆಂದು ಪೂಜಿಸಲ್ಪಡುತ್ತಿದ್ದ. ಚಕ್ರವರ್ತಿ ಜಿಮ್ಮುವಿನ ತಂದೆ ಪವಿತ್ರ ಮೊಸಳೆ ದೇವತೆಯ (ತೋಯೋತ ಮಾಹಿಮೆ) ಗರ್ಭದಲ್ಲಿ ಹಿಕೊ ಹೊಹೋದೆಮಿ ನೋ-ಮಿಕೋಟೊ ಎಂಬ ತಂದೆಯಿಂದ ಜನಿಸಿದನೆಂದು ಹೇಳಲಾಗಿದೆ.

ಷಿಂಟೋಧರ್ಮದ ಪ್ರಕಾರ ಅಮೆ-ನೋಮಿನ ಕನ್‍ಷಿ-ನೋಕಾಮಿ ಎಂಬ ಪ್ರಧಾನ ದೇವತೆ ಎಲ್ಲ ದೇವತೆಗಳಿಗೂ ಮುಖ್ಯಸ್ಥನೆಂದು ಹೇಳಲಾಗಿದೆ. ಇನ್ನೊಬ್ಬ ಪ್ರಧಾನ ದೇವತೆಯಾದ ಕುನಿಟೋಕೋ ತಚೀ-ನೋ-ಕಾಮೀ ಎಂಬ ದೇವತೆಯ ಗುಣಗಳೆಲ್ಲವೂ ಮೊದಲನೆಯ ದೇವತೆಯಲ್ಲಿಯೇ ಐಕ್ಯವಾದುವು.

ಪ್ರಾಚೀನ ಷಿಂಟೋಧರ್ಮ ಪ್ರಕೃತಿ ಪೂಜೆಯ ರೂಪದಲ್ಲಿ ಪುರಾಣಗ್ರಂಥಗಳಾದ ಕೋಜಕಿ (ಪುರಾತನ ಇತಿಹಾಸ), ನಿಹೋಂಗಿ (ಜಪಾನ್ ಚರಿತ್ರೆ), ಕೋಗುಷಿಗಳಲ್ಲಿ (ಪ್ರಾಚೀನ ಗ್ರಂಥಗಳು) ಕಂಡು ಬರುತ್ತದೆ. ಪುಂಡನಾದ ಸುಸಾನೋಓ ಎಂಬ ದೇವತೆಯ ಮೇಲೆ ಕೋಪಿಸಿಕೊಂಡು ಸೂರ್ಯದೇವತೆ ಗವಿಯೊಂದರಲ್ಲಿ ಅಡಗಿಕೊಂಡಿದ್ದಳೆಂದೂ ದೇವತೆಗಳ ಪ್ರಾರ್ಥನೆ ಮನ್ನಿಸಿ ಹೊರಕ್ಕೆ ಬಂದು, ಲೋಕ ಬೆಳಗಿಸಿ ಸುಸಾನೋಓನನ್ನು ಸ್ವರ್ಗದಿಂದ ಭೂಮಿಗೆ ಓಡಿಸಿದಳೆಂದೂ ಪುರಾಣ ಗ್ರಂಥದಲ್ಲಿ ವರ್ಣಿಸಲಾಗಿದೆ. ಜಪಾನೀಯರ ಪುರಾಣಗಳ ಪ್ರಕಾರ ಚಕ್ರವರ್ತಿಯಾದವನು ಸೂರ್ಯ ದೇವತೆಯ ವಂಶಸ್ಥನೆಂದೂ ಸಿಂಹಾಸನಕ್ಕೆ ದೈವದತ್ತವಾದ ಹಕ್ಕುಳ್ಳವನೆಂದೂ ಧರ್ಮದ ವಿಷಯದಲ್ಲೂ ಆಡಳಿತ ವಿಷಯದಲ್ಲೂ ಸರ್ವಾಧಿಕಾರ ಉಳ್ಳವನೆಂದೂ ವರ್ಣಿಸಲಾಗಿದೆ. ಈತನನ್ನು ನೈ ಸೈಯಿ ಚಿ (ಸರ್ವಾಧಿಕಾರಿ) ಎಂದು ಕರೆಯಲಾಗಿದೆ. ಷಿಂಟೋಧರ್ಮದ ಪ್ರಕಾರ ಚಕ್ರವರ್ತಿಯೇ ಪ್ರಜೆಗಳ ದೈವ. ಆತ ದೇವರ ಪ್ರತಿನಿಧಿ. ಇದೇ ಷಿಂಟೋಧರ್ಮದ ಮುಖ್ಯ ಲಕ್ಷಣ. ದೇವರು ಸ್ವರ್ಗದಲ್ಲಿರುವ ಆತ್ಮದೇವತೆ ಮತ್ತು ಭೂಮಿಯಲ್ಲಿರುವ ದೇವತೆ. ದೈವಿಕವಾದ ಮಾನವನ ಮನಸ್ಸೇ ದೇವನ ನಿಲಯ, ಮನುಷ್ಯನ ಮನಸ್ಸಿನ ಆಚೆ ಯಾವ ದೇವತೆಯೂ ಇಲ್ಲ ಇದು ಷಿಂಟೋ ಧರ್ಮದ ತತ್ತ್ವ. (ಎಚ್.ಜಿ.ಆರ್.)

**ಷೇಕ್ ಅಲಿ, ಬಿ.:** ಆಧುನಿಕ ಇತಿಹಾಸದ ಪ್ರಸಿದ್ಧ ವಿದ್ವಾಂಸ. ಇವರು ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಬೆಳಗೊಡು ಗ್ರಾಮದಲ್ಲಿ 1925ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಿನಲ್ಲಿ ಪೂರೈಸಿ ಹಾಸನದಲ್ಲಿ ಪ್ರೌಢಶಿಕ್ಷಣ ಮುಗಿಸಿದರು. ಇಂಟರ್ ಮೀಡಿಯಟ್ ಹಾಗೂ ಪದವಿ ಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ



ಪಡೆದರು. 1943ರಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಇತಿಹಾಸ ವಿಷಯದಲ್ಲಿ ಕ್ಯಾಂಡಿ ಚಿನ್ನದ ಪದಕದೊಂದಿಗೆ ಪಡೆದರು. ಎಂ.ಎಚ್.ಕೃಷ್ಣ ಅವರ ಸಲಹೆ ಮೇರೆಗೆ ಇತಿಹಾಸ ವಿಷಯದಲ್ಲಿ 1945ರಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು. ಅನಂತರ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದ ಷೇಕ್ ಅಬುರ್‍ರಷೀದ್ ಅವರ ಮಾರ್ಗದರ್ಶನದಲ್ಲಿ ದಿ ಫಾರಿನ್ ಪಾಲಿಸಿ ಆಫ್ ಟಿಪ್ಪುಸುಲ್ತಾನ್ ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ 1958ರಲ್ಲಿ ಪಿಎಚ್.ಡಿ ಪದವಿ ಗಳಿಸಿದರು. ಈ ಮಹಾಪ್ರಬಂಧ ಅನಂತರ ಫಾರಿನ್ ಪಾಲಿಸಿ ಆಫ್ ಟಿಪ್ಪುಸುಲ್ತಾನ್ ಎ ಸ್ಟಡಿ ಇನ್ ಡಿಪ್ಲೊಮಸಿ ಅಂಡ್ ಕನ್‍ಫ್ರಾಂಟೇಷನ್ ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಹಿಸ್ಟರಿ, ಇಟ್ಸ್ ಥಿಯರಿ ಅಂಡ್ ಮೆಥಡ್ ಎಂಬುದು ಇವರ ಮತ್ತೊಂದು ಕೃತಿ. ಬ್ರಿಟಿಷ್ ಕೌನ್ಸಿಲ್ ಶಿಷ್ಯವೇತನದಡಿಯಲ್ಲಿ ಲಂಡನ್ ಸ್ಕೂಲ್ ಆಫ್ ಓರಿಯಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್‍ನಲ್ಲಿ ಬ್ರಿಟಿಷ್ ರಿಲೇಷನ್ ವಿತ್ ಹೈದರ್ ಅಲಿ ಎಂಬ ಮಹಾಪ್ರಬಂಧ ರಚಿಸಿ ಮತ್ತೊಂದು ಪಿಎಚ್.ಡಿ. ಪದವಿ ಗಳಿಸಿದರು. ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗಕ್ಕೆ ಉಪನ್ಯಾಸಕರಾಗಿ ನೇಮಕಗೊಂಡರು. ಪುರಾತತ್ತ್ವ

ವಿಷಯದಲ್ಲಿಯೂ ತರಬೇತಿ ಹೊಂದಿ ಮೈಸೂರು ಭಾಗದಲ್ಲಿ ಪುರಾತತ್ತ್ವ ನೆಲೆಗಳ ಅನ್ವೇಷಣೆ ಕೈಗೊಂಡರು. 1968ರಲ್ಲಿ ಇತಿಹಾಸ ವಿಭಾಗದ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆದರು. ಸ್ನಾತಕೋತ್ತರ ಇತಿಹಾಸವಿಭಾಗ ಬೆಳವಣಿಗೆ ಹೊಂದುವಲ್ಲಿ ಇವರ ಪಾತ್ರ ಮಹತ್ತರವಾದುದು. 1980ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಂಸ್ಥಾಪಕ ಕುಲಪತಿಗಳಾದರು. ಅಷ್ಟೇ ಅಲ್ಲದೆ 1985ರಲ್ಲಿ ಗೋವ ವಿಶ್ವವಿದ್ಯಾನಿಲಯದ (ಪಣಜಿ) ಸಂಸ್ಥಾಪಕ ಕುಲಪತಿಗಳೂ ಆದರು. ಈ ಎರಡೂ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಬೆಳವಣಿಗೆ ಹಾಗೂ ಅಭಿವೃದ್ಧಿಗಳಲ್ಲಿ ಇವರ ಪಾತ್ರ ಹಿರಿದು.

ಹೊಯ್ಸಳ ಡೈನಸ್ಟಿ; ಕರ್ನಾಟಕ ಇತಿಹಾಸ (ಏಳು ಸಂಪುಟಗಳು); ಟಿಪ್ಪುಸುಲ್ತಾನ್ ಎ ಮಾರ್ಟೈರ್ (1992)-ಇವು ಇವರ ಮುಖ್ಯ ಸಂಪಾದಿತ ಕೃತಿಗಳು.

1966ರಲ್ಲಿ ಭಾರತೀಯ ಇತಿಹಾಸ ಕಾಂಗ್ರೆಸ್‌ಅನ್ನು ಸಂಘಟಿಸಿದರು. ಹಿಸ್ಟರಿ ಆಫ್ ವೆಸ್ಟರ್ನ್ ಗಂಗಾಸ್ (1976), ಔಟ್‌ಲೈನ್ ಆಫ್ ಇಸ್ಲಾಮಿಕ್ ಕಲ್ಚರ್(1981)- ಇವು ಇವರ ಇತರ ಮುಖ್ಯ ಕೃತಿಗಳು. ದಾರ್ಶನಿಕರಾದ ಜಾಕೀರ್ ಹುಸೇನ್, ಮೌಲಾನ ಅಬ್ದುಲ್ ಕಲಂ ಆಜಾದ್, ಕವಿ ಜಲಾಲುದ್ದೀನ್ ರೂಮಿ, ಷೇಕ್‌ಸಾಧಿಕ್, ಸೂಫಿ ತತ್ತ್ವಜ್ಞಾನಿ ಇಮಾಮ್ ಗಜ್ಜಾಲಿ ಮೊದಲಾದವರನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ. ಇತಿಹಾಸ ಕುರಿತು ಸು.300ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲ ಸಾಧನೆಗಳಿಗಾಗಿ ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ (2009). ನಿವೃತ್ತಿಯ ಅನಂತರ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರು ಮೈಸೂರಿನಲ್ಲಿ ಸುಲ್ತಾನ್ ಶಹೀದ್ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಶಿಕ್ಷಕರ ತರಬೇತಿ ಹಾಗೂ ಪದವಿ ಪೂರ್ವ ಶಿಕ್ಷಣ ಕಾಲೇಜುಗಳನ್ನು ನಡೆಸುತ್ತಿದ್ದಾರೆ. (ಸಿ.ಜಿ.ಎಸ್.)

**ಷೋವೆ:** ಫ್ರಾನ್ಸಿನ ಸುಪ್ರಸಿದ್ಧ ಪ್ರಾಗೈತಿಹಾಸಿಕ ಶಿಲಾಚಿತ್ರ ನೆಲೆಗಳಲ್ಲೊಂದು. 1994ರಲ್ಲಿ ಜೀನ್-ಮೇರಿ ಷೋವೆಯ ತಂಡ ಇದನ್ನು ಶೋಧಿಸಿತು. ಒಳಾಂತರ ಗುಹೆಯೊಳಗಿರುವ ನೈಸರ್ಗಿಕವಾದ ವಿಶಾಲ ಕೋಣೆಗಳು ಹಾಗೂ ಕೈಸಾಲೆಗಳ ಗೋಡೆಗಳ ಮೇಲೆ 300ಕ್ಕೂ ಹೆಚ್ಚು ಅಂತ್ಯ ಹಳೆಶಿಲಾಯುಗದ ವರ್ಣ ಮತ್ತು ಗೀರುಚಿತ್ರಗಳು, ರೇಖಾ ವಿನ್ಯಾಸಗಳು ಹಾಗೂ ಹಸ್ತಮುದ್ರೆಗಳಿವೆ. ತುಪ್ಪಳವಿರುವ ಅಪರೂಪದ ಖಡ್ಗಮೃಗ ಹಾಗೂ ಹಿಮಯುಗದ ಆನೆಯೂ ಸೇರಿದಂತೆ ವಿವಿಧ ಪ್ರಾಣಿಗಳ ಚಿತ್ರಗಳು ಇಲ್ಲಿವೆ. ಕುದುರೆ ಮತ್ತು ಸಿಂಹಗಳ ಅದ್ಭುತ ಚಿತ್ರಗಳಿಗೆ ಹೆಸರಾಗಿರುವ ಈ ನೆಲೆ ಯುರೋಪಿನ ವರ್ಣಚಿತ್ರಿತ ಗುಹೆಗಳಲ್ಲಿ ಅತ್ಯಂತ ಹಳೆಯದೆಂಬ ಕಾರಣದಿಂದಲೂ ಗಮನಾರ್ಹ. ಕೆಲವೊಂದು ಚಿತ್ರಗಳ ಇಂಗಾಲ-14 ಕಾಲಮಾನ ಸು.32,000 ವರ್ಷಗಳು. ಅಗ್ನಿಷ್ಟಿಕೆ, ಪಂಜಿನ ತುಣುಕುಗಳು, ಶಿಲೋಪಕರಣ ಮುಂತಾದ ಮಾನವ ಚಟುವಟಿಕೆಯ ಕುರುಹುಗಳು ಇಲ್ಲಿ ಸಂರಕ್ಷಿತವಾಗಿರುವುದೂ ವಿಶೇಷ. ಕರಡಿಗಳ ಅವಶೇಷಗಳೂ ಇಲ್ಲಿದ್ದು ಇವನ್ನು ಮಾನವ ಪ್ರಜ್ಞಾಪೂರ್ವಕವಾಗಿ ಜೋಡಿಸಿರುವುದನ್ನು ಕಾಣಬಹುದು. ಚಿತ್ರ ಸಂಖ್ಯೆ-ವೈವಿಧ್ಯತೆ, ಸ್ವಂತಿಕೆ, ಕಲಾಸೌಂದರ್ಯ, ಸಂರಕ್ಷಣಾ ಸ್ಥಿತಿ ಈ ಎಲ್ಲ ಅಂಶಗಳು ಷೋವೆಯನ್ನು ಯುರೋಪಿನ ಅಪ್ರತಿಮ ಶಿಲಾಚಿತ್ರನೆಲೆಗಳ ಸಾಲಿಗೆ ಸೇರಿಸಿವೆ. (ವಿ.ಎಸ್)

# ಸ

**ಸಂಗನಕಲ್ಲು:** ಬಳ್ಳಾರಿ ನಗರದಿಂದ 5ಕಿಮೀ ಈಶಾನ್ಯದಲ್ಲಿರುವ ಪುರಾತತ್ತ್ವ ನೆಲೆ. ಇದನ್ನು 1872ರಲ್ಲಿ ವಿಲಿಯಂ ಫ್ರೇಜ಼ರ್ ಪತ್ತೆಹಚ್ಚಿದ. ಗ್ರಾನೈಟ್ ಬಂಡೆಗಲ್ಲುಗಳಿಂದ ರಚಿತವಾದ ಸಣ್ಣರಸಮ್ಮ ಗುಡ್ಡದ ಮೇಲಿರುವ ಈ ನೆಲೆಯಲ್ಲಿ ಎಚ್.ಡಿ.ಸಾಂಕಳಿಯ ಮಾರ್ಗದರ್ಶನದಲ್ಲಿ ಬಿ.ಸುಬ್ಬರಾವ್ 1948ರಲ್ಲಿ ಉತ್ಖನನ ನಡೆಸಿ 3 ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದರು. ಇವು ಬೆಣಚುಕಲ್ಲಿನ ಉಪಕರಣಗಳು ಪ್ರಧಾನವಾಗಿರುವ ಸೂಕ್ಷ್ಮಶಿಲಾಯುಗ, 2 ಉಪಹಂತಗಳ ನವಶಿಲಾಯುಗ ಹಾಗೂ ನವಶಿಲಾಯುಗ-ಬೃಹತ್ ಶಿಲಾಯುಗ ಸಂಕ್ರಮಣ. ನವಶಿಲಾಯುಗ ಜನಜೀವನದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಲು ಜ಼ೆಡ್.ಡಿ.ಅನ್ಸಾರಿ ಮತ್ತು ಎಂ.ಎಸ್.ನಾಗರಾಜರಾವ್ ಇಲ್ಲಿ 1964-65ರಲ್ಲಿ ಉತ್ಖನನ ಕೈಗೊಂಡರು. ಆಗ ಮೇಲಿನ 3 ಹಂತಗಳಲ್ಲದೆ ಸೂಕ್ಷ್ಮಶಿಲಾಯುಗಕ್ಕೂ ಮುಂಚಿನ ಹಂತವನ್ನು



ಸಣ್ಣಸುತ್ತಿಗೆಗಳು ಮತ್ತು ಉಳಿಗಳು

ಸಾಂಕಳಿಯ ಅವರೇ ಗುರುತಿಸಿದರು. ಇದರಲ್ಲಿ ಸಿದ್ಧಶಿಲೆ (ಪ್ರಿಪೇರ್ಡ್ ಕೋರ್)- ದೊಡ್ಡ ಅಲಗು ಹಾಗೂ ಚಕ್ಕೆಗಳಿದ್ದವು. ನವಶಿಲಾಯುಗದ ಆರಂಭ ಹಂತದಲ್ಲಿ 3 ತಡಿಕೆ ಮನೆಯ ನೆಲಗಟ್ಟುಗಳು, ಮಸುಕಾದ ಬೂದುಬಣ್ಣದ ಮಣ್ಪಾತ್ರೆ, ಉಜ್ಜಿ ನಯಗೊಳಿಸಿದ ಕೊಡಲಿಗಳು, ಬೆಣಚುಕಲ್ಲು-ಚರ್ಟ್-ಕ್ಯಾಲ್ಸೆಡನಿಯ ಅಲಗು ಸಮುಚ್ಚಯಗಳು ಕಂಡುಬಂದವು. ನೆಲಗಟ್ಟುಗಳು ವೃತ್ತಾಕಾರವಾಗಿದ್ದು ಸುತ್ತಲೂ ಆಧಾರಗಂಬಗಳ ಗುಳಿಗಳಿದ್ದವು. ಗ್ರಾನೈಟ್ ಬಂಡೆಗಳ ನಡುವಿನ ಜಾಗವನ್ನೇ ಸಮತಟ್ಟಾಗಿಸಿಕೊಂಡು ತಡಿಕೆ ಮನೆಗಳನ್ನು ಜನ ನಿರ್ಮಿಸಿಕೊಂಡಿದ್ದರು. ನೆಲಗಟ್ಟುಗಳ ಮೇಲೆ ಬೂದಿ, ಇದ್ದಿಲು ತುಣುಕು, ಸುತ್ತಿಗೆ, ಕಲ್ಲು ಮುಂತಾದ ಅವಶೇಷಗಳಿದ್ದವು. ದಕ್ಷಿಣ ಭಾರತದಲ್ಲಿ ನವಶಿಲಾಯುಗದ ನೆಲೆಯೊಂದರಲ್ಲಿ ನೆಲಗಟ್ಟಿನ ಪೂರ್ಣ ವಿನ್ಯಾಸ ದೊರೆತದ್ದು ಇದೇ ಮೊದಲು. ಅನಂತರದ ಕಾಲದಲ್ಲಿ (2ನೆಯ ಉಪಹಂತ) ಕಂದು ಮತ್ತು ಕಪ್ಪು ದ್ವಿವರ್ಣ ಪಾತ್ರೆಗಳೂ ಉಜ್ಜಿದ ಬೂದು ಬಣ್ಣದ ಪಾತ್ರೆಗಳೂ ಬಳಕೆಗೆ ಬಂದವು. ಜೋರ್ವೆ ಮಾದರಿಯ ತಿಗುರಿಯ ಮೇಲೆ ಮಾಡಿದ, ನೇರಳೆ ಬಣ್ಣದ ಚಿತ್ರವುಳ್ಳ ಮಂದಗೆಂಪು ಬಣ್ಣದ ಪಾತ್ರೆಯ ಕೆಲವೊಂದು ಚೂರುಗಳು ಇಲ್ಲಿ ದೊರೆತಿರುವುದು ವಿಶಿಷ್ಟವಾಗಿದೆ. ಈ ನೆಲೆಯ ಮೇಲ್ಮೈಯಲ್ಲಿ ಸಿಕ್ಕ ಕೆಲವು ತಾಮ್ರದ ವಸ್ತುಗಳು ಪ್ರಾಯಶಃ ಈ ಹಂತದವಿರಬೇಕು. ಎರಡೂ ಉಪಹಂತಗಳಿಂದ ಸ್ಟಿಯಟೈಟ್, ಮಂದಗೆಂಪಿನ ಕಲ್ಲು ಹಾಗೂ ಶಂಖದ ಮಣಿಗಳು ಮೂಳೆಯ ಮೊನೆ ಹಾಗೂ ಉಳಿಗಳು, ಸುಡಾವೆ ಮಣ್ಣಿನ ಗೂಳಿ ಹಾಗೂ ಪಕ್ಷಿ ಗೊಂಬೆಗಳನ್ನು ಸಂಗ್ರಹಿಸಲಾಯಿತು. ಇಂಗಾಲ-14 ಕಾಲನಿರ್ಣಯದಂತೆ ನವಶಿಲಾಯುಗದ ಪ್ರಾರಂಭವನ್ನು ಪ್ರ.ಶ.ಪೂ.1600 ಎಂದು ಅಂದಾಜಿಸಲಾಗಿದೆ. ಕೊನೆಯ ಹಂತ ನವಶಿಲಾಯುಗ-ಬೃಹತ್ ಶಿಲಾಯುಗ ನಡುವಣ ಸ್ಥಿತ್ಯಂತರ ಅವಧಿ. ಇಲ್ಲಿ ಕೈಯಿಂದ ಮಾಡಿದ ನವಶಿಲಾಯುಗದ ಮಣ್ಪಾತ್ರೆಗಳೊಂದಿಗೆ ಬೃಹತ್ ಶಿಲಾಯುಗದ ಕಪ್ಪು-ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಹಾಗೂ ಕೆಂಪು ಪಾತ್ರೆಗಳು ಕಾಣಿಸಿಕೊಳ್ಳುತ್ತವೆ. (ವಿ.ಎಸ್.)

ಕರ್ನಾಟಕದ ಸಂಗನಕಲ್ಲು, ಹಳ್ಳೂರು, ಕುಡುತಿನಿ, ಕುರುಗೋಡು, ತೆಕ್ಕಲಕೋಟೆ ಮತ್ತು ಆಂಧ್ರಪ್ರದೇಶದ ಹಟ್ಟಿ ಬೆಳಗಲ್ಲು, ವೆಲ್ಪಮುಡುಗು (ಬೂದಿದಿಬ್ಬ ಸಹಿತ) ಪಾಳವಾಯ್ ನೆಲೆಗಳಿಂದ ಆಂತ್ರೊಸಾಲ್ ಮಾದರಿಗಳನ್ನು ಸಂಗ್ರಹಿಸಲಾಯಿತು. ಪ್ರಮುಖವಾದ ನೆಲೆಗಳಲ್ಲಿ ಪ್ರತಿಯೊಂದು ಪದರದ 40 ಲೀ ಮಣ್ಣಿನ ಪರೀಕ್ಷೆಯಿಂದ ಉಪಹಂತ II ಮತ್ತು III ನವಶಿಲಾಯುಗಕ್ಕೆ ಸಂಬಂಧಪಟ್ಟಿದೆಯೆಂದು ಖಚಿತವಾಯಿತು. ಇದ್ದಿಲು, ಕರಕಲಾದ ಬೀಜದ ತುಣುಕುಗಳು ಮತ್ತು ಜೀವಕೋಶ ಸಮೂಹದ ಕುರುಹುಗಳನ್ನು ವಿವಿಧ ಪದರಗಳಿಂದ ಸಂಗ್ರಹಿಸಲಾಯಿತು.

ಪ್ರಾರಂಭಿಕ ಫಲಿತಾಂಶಗಳು ಸ್ಪಷ್ಟವಾಗಿ ಪೌಷ್ಟಿಕ ನವಣೆ, ಹುಲ್ಲು ಹಾಗೂ ಧಾನ್ಯಗಳೆಂದು ತಿಳಿಸುತ್ತವೆ. ಇವು ಸರ್ವಸಾಮಾನ್ಯ ಧಾನ್ಯಗಳಾಗಿದ್ದು ಕಂದುಬಣ್ಣದ ತುದಿಯುಳ್ಳ ನವಣೆ ಮತ್ತು ಬ್ರಿಸ್ಟಲ್ ಫಾಕ್ಸ್‌ಟೈಲ್ ಮಿಲೆಟ್ಸ್ (ಸೆಟಾರಿಯ್ ವರ್ಟಿಸಿಲ್ಲಾಟಾ) ಎಂಬ ಎರಡು ಹುಲ್ಲಿನ ತಳಿಗಳಿಗೆ ಸೇರಿವೆ. ಕಾಡು ಬರುಗು ಇವತ್ತಿನವರೆಗೂ ಸಾಗುವಳಿ ಮಾಡುತ್ತಿರುವ ತಳಿಯಾಗಿದೆ. ದಖನ್ ಭಾಗಗಳಲ್ಲಿ ಸೆಟಾರಿಯ ತಳಿಗಳು ಮಾನವನ ಆಹಾರಕ್ಕೆ ಬಳಕೆಯಾಗುತ್ತಿರುವ ಸಾಗುವಳಿ ತಳಿಗಳಾಗಿವೆ. ಧಾನ್ಯಗಳಲ್ಲಿ ಪ್ರಮುಖವಾಗಿ ಹುರುಳಿ (ಮ್ಯಾಕ್ರೊಟೈಲೊಮ ಯುನಿಫ್ಲೋರಮ್) ಮತ್ತು ಹೆಸರು (ವಿಗ್ನ ರೇಡಿಯಾಟ ಬೆಳೆಯಲಾಗುತ್ತಿತ್ತು. ಸ್ಥಳೀಯ ತಳಿಯನ್ನು ಬಳಸುತ್ತಿದ್ದರೆಂಬುದಕ್ಕೆ ಕೆಲವೊಂದು ನೆಲೆಗಳಲ್ಲಿ ಆಧಾರಗಳಿವೆ. ಅವರೆ, ರಾಗಿ, ಸಜ್ಜೆ ಇವು ಆಫ್ರಿಕ ಮೂಲದವುಗಳಾಗಿದ್ದು ವಾಯವ್ಯ ಏಷ್ಯದಲ್ಲಿ ನವಣೆ (ಪೊಕ್ಸಿಕಮ್ ಸುಮಾತ್ರೆನ್ಸ್) ಎಂಬ ತಳಿಯನ್ನು ಕೃಷಿ ಮಾಡುತ್ತಿದ್ದರು. ಒರಿಸ್ಸದಲ್ಲಿ ಪ್ರಮುಖವಾಗಿ ತೊಗರಿ (ಕಜನಸ್ ಕಜನ್) ಮಧ್ಯಪ್ರದೇಶದ ಬಸ್ತರ್ ಪ್ರದೇಶದಲ್ಲಿ ಹಾಗೂ ಸಂಗನಕಲ್ಲಿನಲ್ಲೂ ಕಂಡುಬಂದಿದ್ದು 2ನೆಯ ಸಹಸ್ರಮಾನದ ಮಧ್ಯ ಭಾಗದಲ್ಲಿ ಬೆಳೆಯಲಾಗುತ್ತಿತ್ತು. ಇಂದು ದಕ್ಷಿಣ ಭಾರತದಲ್ಲಿ ಸಾಗುವಳಿಯಾಗುತ್ತಿರುವ ಪ್ರಮುಖ ಧಾನ್ಯಗಳಲ್ಲಿ ಇದು ಒಂದಾಗಿದೆ.

ಈ ಸಸ್ಯಗಳ ಮೂಲಗಳನ್ನು ನೈರುತ್ಯ ಏಷ್ಯ, ಪೂರ್ವ ಆಫ್ರಿಕ, ಪೂರ್ವ ಏಷ್ಯಗಳಲ್ಲಿ ಗುರುತಿಸಲಾಗಿದೆ. ಅದೇ ರೀತಿ ಸ್ಥಳೀಯ ಸಾಗುವಳಿಗೆ ಅಲ್ಪ ಪ್ರಮಾಣದ ದಾಖಲೆ ಇದೆ. ನೈರುತ್ಯ ಏಷ್ಯದ ಬೆಳೆಗಳಾದ ಗೋದಿ, ಜವೆ, ಬಟಾಣಿ, ಕೆಂಪು ತೊಗರಿ, ಕಡಲೆಕಾಳು

ಮತ್ತು ಕುರಿ, ಮೇಕೆಯ ಸಾಕಾಣಿಕೆಯೊಂದಿಗೆ ಈಗಿನ ಯುಗದ (ಹಾಲೊಸೀನ್) ಪ್ರಾರಂಭಿಕ ಅವಧಿಯಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಶ.ಪೂ.4ನೆಯ ಸಹಸ್ರಮಾನದ ಕೊನೆಗೆ ತಳಿವೈವಿಧ್ಯವನ್ನು ಆದಿ ಹರಪ್ಪ ಹಂತದ ಸಮುದಾಯದವರು ಅಳವಡಿಸಿಕೊಂಡಿದ್ದರು. ಇದು 3ನೆಯ ಸಹಸ್ರಮಾನದಲ್ಲಿ ಸಿಂಧೂ ಸಂಸ್ಕೃತಿಯ ನಗರೀಕರಣದ ಬೆಳೆವಣಿಗೆಯಲ್ಲಿ ಪ್ರಾಮುಖ್ಯತೆ ಪಡೆಯಿತು. ಪ್ರಶ.ಪೂ.3000–ಪ್ರಶ.ಪೂ.2000 ಮಧ್ಯ ಅವಧಿಯಲ್ಲಿ ಆಫ್ರಿಕದ ಹುಲ್ಲುಗಾವಲು ಪರಿಸರದ ಜೋಳ, ಸಜ್ಜೆ, ರಾಗಿ ತಳಿಗಳು ಗುಜರಾತ್ ಹಾಗೂ ಉತ್ತರ ದಖನ್‌ನ ಭಾಗಗಳಲ್ಲಿ ಕಾಣಿಸಿಕೊಂಡವು. ಸಿಂಧೂ–ಸರಸ್ವತಿ ಸಂಸ್ಕೃತಿಯ ಆರ್ಥಿಕಜೀವನ ಪ್ರಗತಿಯಾದಂತೆ ನೈರುತ್ಯ ಏಷ್ಯದ ಸಸ್ಯತಳಿಗಳನ್ನು ಈ ಪ್ರದೇಶದಲ್ಲಿ ಬೆಳೆಯಲಾಯಿತು. ಇವುಗಳಲ್ಲಿ ನವಣೆ, ಧಾನ್ಯಗಳನ್ನು 2ನೆಯ ಸಹಸ್ರಮಾನದಲ್ಲಿ ಬೆಳೆಯಲಾಗುತ್ತಿತ್ತು. ಸಿಂಧೂ ಬಯಲಿನ ಪೂರ್ವಭಾಗ ಹಾಗೂ ಅರೆ–ಶುಷ್ಕ ವಾತಾವರಣದ ದಖನ್ ಪ್ರಸ್ಥಭೂಮಿಯಲ್ಲಿಯೂ ಈ ಧಾನ್ಯಗಳ ಕೃಷಿ ಕಾಣಬರುತ್ತದೆ. ಹಾಗೆಯೇ ಕಣಿವೆ ಅಥವಾ ಈಶಾನ್ಯ ಪ್ರದೇಶಗಳಲ್ಲೂ ಇದೇ ಸಮಯದಲ್ಲಿ ಈ ತಳಿಗಳ ಧಾನ್ಯಗಳನ್ನು ಬೆಳೆಯಲಾಗುತ್ತಿತ್ತು.

3ನೆಯ ಸಹಸ್ರಮಾನದ ಪೂರ್ವದಲ್ಲಿ ವಿವಿಧ ತಳಿಗಳ ನವಣೆ ಮತ್ತು ಧಾನ್ಯಗಳ ಸಾಗುವಳಿ ಮಧ್ಯ–ಉತ್ತರ ಭಾರತದ ತಾಮ್ರಯುಗದ ಗ್ರಾಮೀಣ ಸಮುದಾಯಗಳಿಂದ ದಕ್ಷಿಣ ಭಾರತಕ್ಕೆ ಪರಿಚಯವಾಯಿತು. ಪ್ರಾಣಿ ಸಾಕಾಣಿಕೆ ಸಹ ದಕ್ಷಿಣ ಭಾರತದಲ್ಲಿ ಕಳೆದ 3–4 ಸಹಸ್ರಮಾನಗಳಿಂದ ಕಾಣಬರುತ್ತದೆ. ಧಾನ್ಯಗಳು ಮುಖ್ಯವಾಗಿ ಉಷ್ಣವಲಯದ/ಉಪ–ಉಷ್ಣವಲಯದ ಪ್ರಮುಖವಾದ ಹಾಗೂ ಖಚಿತ ಕುರುಹುಗಳಾಗಿವೆ. ಇವು ಸಾಮಾನ್ಯವಾಗಿ ಬೇಸಗೆ ಬೆಳೆಗಳಾಗಿವೆ. ಇವುಗಳಲ್ಲಿ ಹೆಚ್ಚಿನವು ದಕ್ಷಿಣ ಏಷ್ಯದ ಮೂಲದವುಗಳಾಗಿವೆ. ಹುರುಳಿ ನವಶಿಲಾಯುಗದ ನೆಲೆಗಳಲ್ಲಿ ಹರಡಿದ್ದ ಬಹುಮುಖ್ಯವಾದ ಧಾನ್ಯವೆಂದು ಹೇಳಬಹುದು. ಇದು ಸಂಗನಕಲ್ಲಿನಲ್ಲಿಯೂ ಕಂಡುಬಂದಿದೆ. ಇದರಂತೆ ಹೆಸರನ್ನು ಬೆಳೆಯಲಾಗುತ್ತಿತ್ತು. ಉದ್ದು (ವಿಗ್ನ ಮುಂಗೊ) ನವಶಿಲಾಯುಗದ ತಳಿ ಮಾದರಿಗಳಲ್ಲೊಂದು. ಭೌಗೋಳಿಕವಾಗಿ ಹರಡಿಕೊಂಡಿರುವ ಇವೆರಡು ಧಾನ್ಯತಳಿಗಳು ವ್ಯವಸ್ಥಿತವಾಗಿ ದಾಖಲಾಗದಿರುವುದು ಗಮನಾರ್ಹ. ಮೇಲಿನ ಎಲ್ಲ ತಳಿಗಳು ದಕ್ಷಿಣ ಏಷ್ಯದ ಮೂಲದವು. ಇವುಗಳ ಮೂಲ ತಳಿ (ವಿಗ್ನ ರೇಡಿಯಾಟ) ಪಶ್ಚಿಮ ಘಟ್ಟದಲ್ಲಿತ್ತೆಂಬುದು ಸ್ಪಷ್ಟ. (ಆರ್.ಕೆ.ಎಸ್.)

**ಸಂಗಂ ಯುಗ:** ಹಿಂದೆ ಕರೆಯುತ್ತಿದ್ದಂತೆ ಸಂಗಂ ಅಥವಾ ಚಂಗಂ ಮುಖ್ಯವಾಗಿ ದಕ್ಷಿಣ ಭಾರತದ ಕೇರಳವೂ ಸೇರಿದಂತೆ ತಮಿಳು ಭಾಷೆಯನ್ನಾಡುವ ಮಹಾಕವಿಗಳ ಒಂದು ಸಂಸ್ಥೆ. ಸಂಗಂ ಯುಗದಲ್ಲಿ 3 ಕಾಲಘಟ್ಟವನ್ನು ಗುರುತಿಸಲಾಗಿದೆ. ಇವರಿಂದ ರಚಿಸಲ್ಪಟ್ಟ ಅತ್ಯಂತ ಪ್ರಾಚೀನ ಕೃತಿಗಳಲ್ಲಿ ತೋಲ್‌ಕ್ಕಾಪ್ಪಿಯಂ ಗ್ರಂಥ 2ನೆಯ ಕಾಲಘಟ್ಟಕ್ಕೆ ಸೇರಿದ್ದು. ಮೊದಲನೆಯ ಕಾಲಘಟ್ಟದ ಯಾವುದೇ ಕೃತಿಗಳು ಉಳಿದು ಬಂದಿಲ್ಲ. ವಿದ್ವಾಂಸರ ಒಟ್ಟಾರೆ ಅಭಿಪ್ರಾಯದಂತೆ ಸಂಗಂ ಯುಗದ 3ನೆಯ ಘಟ್ಟ ಪ್ರಶ. ಮೊದಲ 3 ಶತಮಾನಗಳಿಗೆ ಸೇರಿದ್ದಾಗಿರಬಹುದು. ಇದುವರೆಗೆ ಲಭ್ಯವಾದ ಸಂಗಂ ಕಾಲದ ಕೃತಿಗಳು ಈ ಕಾಲಮಾನಕ್ಕೆ ಸೇರಿದವು.

ಸಂಗಂ ಕೃತಿಗಳನ್ನು ಸಾಮಾನ್ಯವಾಗಿ 2 ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಒಂದು ಅಹಂ (ಆಂತರಿಕ), ಎರಡು ಪುರಂ (ಬಾಹ್ಯ). ಅಹಂ ಗೀತಗಳೆಲ್ಲವೂ ವ್ಯಕ್ತಿನಿಷ್ಠ, ಪುರಂ ಗೀತೆಗಳು ವಸ್ತುನಿಷ್ಠ. ಲಭ್ಯವಿರುವ ಸು.2381 ಗೀತೆಗಳಲ್ಲಿ, 1862 ಅಹಂ ವರ್ಗದವು. ಈ ವರ್ಗದ ಪ್ರಮುಖ ಕೃತಿಗಳು ಅಹನಾನೂರು (400), ನತ್ತಿನೈ (400), ಕುರುಂತೊಕ್ಕೈ (401), ಐಂಕೂರುನೂರು (500), ಕರಿತೊಕ್ಕೈ (149), ಪರಿಪಾದಾಳ್ (8), ಪತ್ತುಪಾಟು (4), ಶೃಂಗಾರಮಯ ಅಹಂ ಗೀತೆಗಳಲ್ಲಿ ಅನೇಕ ಪ್ರತಿಮೆ ರೂಪಕಗಳಿವೆ. ಯಾವುದೇ ಪ್ರದೇಶದ ಅಥವಾ ಸ್ಥಳಕ್ಕೆ ಸೇರಬಹುದಾದ ನಾಯಕ ಮತ್ತು ನಾಯಕಿಯರು ವಿಶಿಷ್ಟ ವ್ಯಕ್ತಿಗಳಾಗಿರುವುದಿಲ್ಲ. ಅವರು ವಿವಿಧ ಪ್ರಕಾರದ ವ್ಯಕ್ತಿಗಳನ್ನು ಪ್ರತಿನಿಧಿಸುತ್ತಾರೆ. ಒಟ್ಟಾರೆ ಅಹಂ ಕೃತಿಗಳು ಆಂತರಿಕ ಅನುಭವಗಳಿಗೆ ಸಂಬಂಧಿಸಿದ್ದು. ಆದರೆ ಪುರಂ ಕೃತಿಗಳು ಸಮಾಜದಲ್ಲಿ ಕಾಣಬರುವ ನೈಜ ವ್ಯಕ್ತಿಗಳ ಚಟುವಟಿಕೆಗಳನ್ನು ಮತ್ತು ಘಟನೆಗಳನ್ನು ವರ್ಣಿಸುತ್ತವೆ. ಆದ್ದರಿಂದ ಈ ವರ್ಗದ ಕೃತಿಗಳಲ್ಲಿ ಐತಿಹಾಸಿಕ ವಿಷಯಗಳು ಅಡಕವಾಗಿರುತ್ತವೆ.

ಸಂಗಂ ಕಾಲದ ನಗರ, ಗ್ರಾಮಗಳ ಇತಿಹಾಸ ತಿಳಿಯಲು ಪುರಾತತ್ತ್ವ ಶೋಧನೆಗಳು ಸಹಾಯಕ್ಕೆ ಬರುತ್ತವೆ. ಸಂಗಂ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಕೆಲವು ಪ್ರಮುಖ ನೆಲೆಗಳಾದ (ಪೊದುಕೆ) ಪಾಂಡಿಚೇರಿ, ಕಾಂಚಿ, ಕಾವೇರಿಪಟ್ಟಣಂ, ಉರೈಯೂರ್, ಅಳಗರೈ, ಆದಿಚನ್ನಲೂರು, ಕೊರ್ಕೈ, ಪೇರೂರು ಮತ್ತು ಸೆಂಗವೆಂಡುಗಳಲ್ಲಿ ಉತ್ಖನನ ಮಾಡಲಾಗಿದೆ. ಇಲ್ಲೆಲ್ಲ ಇಟ್ಟಿಗೆ ಕಟ್ಟಡಗಳು ದೊರೆತಿವೆ. ಕಾವೇರಿಪಟ್ಟಣಂನಲ್ಲಿ ಇಳಿಗಟ್ಟೆಯೂ (ಇಟ್ಟಿಗೆ ಇಳಿಗಟ್ಟೆ) ವನಗಿರಿಯಲ್ಲಿ ಜಲಾಶಯವೂ ಕಂಡುಬಂದಿವೆ. ಪೆರಿಪ್ಲಸ್ ಆಫ್ ಎರಿತ್ರಿಯನ್ ಸಿ (60–100) ಬರೆವಣಿಗೆಯಲ್ಲಿ ಉಲ್ಲೇಖಿಸಿದ ಪೊದುಕೆಯಲ್ಲಿ (ಪಾಂಡಿಚೇರಿ ಸಮೀಪ ಅರಿಕಮೇಡು) ಸು.50ರಲ್ಲಿ ಕಟ್ಟಿದ ಒಂದು ದೊಡ್ಡ ಆಯಾತ–ನಿರ್ಯಾತ ಕೋಠಿಯನ್ನು ಗುರುತಿಸಲಾಗಿದೆ.

ಶಿಲಪ್ಪದಿಗಾರಂ ಮತ್ತು ಮಣಿಮೇಖಲೈ ಕೃತಿಗಳಲ್ಲಿ ಪೂಂಪುಹಾರ್ (ಕಾವೇರಿಪಟ್ಟಣಂ) ಬಂದರಿನಿಂದ ನೇಯ್ದು ಹತ್ತಿ ಮತ್ತು ರೇಷ್ಮೆ ಬಟ್ಟೆಗಳ ನಿರ್ಯಾತದ ವಿಷಯವಿದೆ. ಕರುಗರ್‌ವೀದಿ ಎಂದು ಕರೆಯಲಾದ ನೇಕಾರ ಬೀದಿಯನ್ನು ಪ್ರತ್ಯೇಕವಾಗಿ ವರ್ಣಿಸಲಾಗಿದೆ. ಬಟ್ಟೆ ತಯಾರಿಕೆಯ ತಂತ್ರದ ಬಗ್ಗೆ ವಿಶೇಷ ಉಲ್ಲೇಖಗಳಿವೆ. ಅಹನಾನೂರು, ನತ್ತಿನೈ ಕೃತಿಗಳಲ್ಲಿ ಹತ್ತಿ ಹಿಂಜುವ ಬಿಲ್ಲನ್ನು ಉಪಮಾನಕ್ಕೆ ಬಳಸಲಾಗಿದೆ. ಇದರಿಂದ ಬಟ್ಟೆ ನೇಯ್ಗೆಯಲ್ಲಿ ಉಪಕರಣವಾದ ಹತ್ತಿಹಿಂಜುವ ಬಿಲ್ಲು ಸು.1–6ನೆಯ ಶತಮಾನಕ್ಕಿಂತ ಹಿಂದೆ ದಕ್ಷಿಣ ಭಾರತದ ಬಳಕೆಯಲ್ಲಿತ್ತೆಂದು ತಿಳಿಯಲಾಗಿದೆ. ಭಾರತೀಯ ವಸ್ತ್ರಕ್ಕೆ ಹಾಕುವ ಬಣ್ಣಗಳ ಉಲ್ಲೇಖವಿದೆ. ಇವುಗಳಲ್ಲಿ ಸಸ್ಯಮೂಲದ ನೀಲಿ (ಇಂಡಿಗೊ) ಸಾಮಾನ್ಯವಾಗಿತ್ತು. ಈ ಬಣ್ಣದ ವಸ್ತ್ರವನ್ನು ನೀಲಿ ಕಚ್ಚೆ ಎಂದೂ ಪುರನಾನೂರು ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಉರೈಯೂರು ಮತ್ತು ಅರಿಕಮೇಡುವಿನಲ್ಲಿ 1–2ನೆಯ ಶತಮಾನದ ಇಟ್ಟಿಗೆಯ ತೊಟ್ಟಿಲುಗಳು ಹಲವಾರು ಇವೆ. ವಸ್ತ್ರ ಮತ್ತು ಇತರ ವ್ಯಾಪಾರಗಳ ಉಲ್ಲೇಖವಿದೆ. ಸಣ್ಣ ಸಣ್ಣ ಅಂಗಡಿ ಬೀದಿಗಳು. ಸಗಟು ಮತ್ತು ಚಿಲ್ಲರೆ ವ್ಯಾಪಾರದ ಬೀದಿಗಳ ವರ್ಣನೆಗಳು ದೊರೆಯುತ್ತವೆ. ಪ್ರಾಚೀನ ಪ್ರಪಂಚದಲ್ಲಿ ಸಂಗಂ ಕಾಲದ ಬಣ್ಣದ ಬಟ್ಟೆಯ ಗುಣಮಟ್ಟಗಳ ಉಲ್ಲೇಖವಿದೆ. 4ನೆಯ ಶತಮಾನದ ಲ್ಯಾಟಿನ್ ಭಾಷೆಯ ಬೈಬಲಿನಲ್ಲಿ ಭಾರತೀಯ ಬಟ್ಟೆಗಳಿಗೆ ಹಾಕಿದ ಬಣ್ಣಗಳಿಗಿಂತ ವಿವೇಕವೆ ಹೆಚ್ಚು ಕಾಲ ಬಾಳುತ್ತದೆ ಎಂಬ ಉಲ್ಲೇಖವಿದೆ.

ಚೋಳ, ಪಾಂಡ್ಯ, ಚೇರ ರಾಜರುಗಳ ಯುದ್ಧದಲ್ಲಿಯ ಸಾಹಸ ಕಾರ್ಯಗಳ ಬಗ್ಗೆ ಬಹಳಷ್ಟು ಮಾಹಿತಿ ದೊರೆಯುತ್ತವೆ. ಅಷ್ಟೇ ಅಲ್ಲದೆ ಇಳಂಪೆರುಂ ಶೆಣ್ಣಿ, ಪೆರುಂಪುಟ್ ಶೆಣ್ಣಿ, ಕರಿಕಾಕ್, ಕಿಳಿವಾಳನ್ ಮೊದಲಾದ ಅರಸುಗಳ ಹೆಸರುಗಳು ಹಾಗೂ ಏಳಿ ಮಲ್ಲೈ, ಪೋಶರ್ (ತುಳುಪ್ರದೇಶ) ರಾಜರಾದ ನನ್ನನ್ ಮೊದಲಾದವರ ಉಲ್ಲೇಖವಿದೆ. ಸಂಘಟಿಸಿದ ಪಾಂಡ್ಯ, ಚೇರ ಮತ್ತು ಇತರ 11 ತುಂಡು ಅರಸರುಗಳ ಸೈನ್ಯವನ್ನು ಕರಿಕಾಲ ಚೋಳ ಸೋಲಿಸಿದ ವಿಷಯವಿದೆ.

ವೈದಿಕ ಸಮಾಜದಲ್ಲಿದ್ದ ವರ್ಣಚತುಷ್ಟಯದಂತೆ ತೋಲ್‌ಕ್ಕಾಪ್ಪಿಯಂದಲ್ಲಿ ಅರಸರ್, ಅಂದನರ್, ವಣಿಗರ್ ಮತ್ತು ವೆಲ್ಲಾಳರೆಂಬ ನಾಲ್ಕು ಸಾಮಾಜಿಕ ವರ್ಗಗಳ ವಿಷಯವಿದೆ. ತನ್ನ ಬಾಳಗೆಳೆಯನನ್ನು ಆರಿಸಿಕೊಳ್ಳಲು ಸ್ತ್ರೀಯರಿಗೆ ಹೆಚ್ಚು ಸ್ವಾತಂತ್ರ್ಯವಿತ್ತು. ಅಹನಾನೂರಿನಲ್ಲಿ ಪರಸ್ಪರ ಪ್ರೀತಿಸುತ್ತಿರುವ ಯುವಕ–ಯುವತಿಯರು ಮನೆಯಿಂದ ಪಲಾಯನ ಮಾಡಿದ ಕಥೆಗಳು ಬಹಳ ಇವೆ. ಪ್ರೇಮಿಗಳು ಗುಪ್ತವಾಗಿ ಸೇರುವುದನ್ನು ಕಳವು ಎಂಬ ಪದದಿಂದ ಸೂಚಿಸಲಾಗಿದೆ. ಆ ಕಾಲದ ಜನರ ಆಹಾರ ಪದ್ಧತಿಯ ಬಗ್ಗೆ ಸಾಕಷ್ಟು ಉಲ್ಲೇಖಗಳಿವೆ. ಅಕ್ಕಿ, ರಾಗಿ, ಸಜ್ಜೆ, ಕಾಳುಗಳು, ಹಾಲು, ಮೊಸರು, ಮೀನು, ಮಾಂಸ ಮೊದಲಾದವುಗಳನ್ನು ಸೇವಿಸುತ್ತಿದ್ದರು. ಹೆಚ್ಚು ಹುಣಸೆಹಣ್ಣು ಮಿಶ್ರಿತ ವಿವಿಧ ಭಕ್ಷ್ಯ ಭೋಜ್ಯಗಳನ್ನು ತಯಾರಿಸುತ್ತಿದ್ದರು. ಜೇನುತುಪ್ಪ ಬೆರೆಸಿದ ಹಾಲಿನ ಸೇವನೆ ಬಗ್ಗೆ ಅನೇಕ ಪದ್ಯಗಳಲ್ಲಿ ಉಲ್ಲೇಖಗಳಿವೆ. (ಎಸ್.ಜಿ.ಎ.)

**ಸಂಗಂ ಕಾಲದ ಸಾಹಿತ್ಯದಲ್ಲಿ ಕನ್ನಡನಾಡು:** ಸಂಗಂ ಸಾಹಿತ್ಯವನ್ನು ಇಲ್ಲಿಯವರೆಗೂ ಬಹುತೇಕ ತಮಿಳರ ದೃಷ್ಟಿಕೋನದಿಂದ ಅಭ್ಯಸಿಸಲಾಗಿದೆ. ಆದರೆ ಇದನ್ನು ಸ್ವಲ್ಪ ವಿಸ್ತರಿಸಿ ನೋಡಿದರೆ ತಮಿಳಗಂ ಉತ್ತರಕ್ಕಿದ್ದ ಹಲವಾರು ರಾಜಸತ್ತೆಗಳ ಬಗ್ಗೆ ವಿವರಗಳನ್ನು ಪಡೆದುಕೊಳ್ಳಲು, ದಕ್ಷಿಣ ಭಾರತ ಇತಿಹಾಸದ ಆರಂಭ ಕಾಲದ ಬಗ್ಗೆ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುವುದು. ಕಳೆದ ನೂರು ವರ್ಷಗಳಲ್ಲಿ ವಡುಗ ಪದವನ್ನು ತಮಿಳು ಮತ್ತು ತಮಿಳೇತರ (ಪಾಶ್ಚಾತ್ಯ) ವಿದ್ವಾಂಸರು ಒಂದೇ ಬಗೆಯಲ್ಲಿ ಅರ್ಥೈಸಿ, ಅದು ವೇಂಕಟದ ಉತ್ತರಕ್ಕಿರುವ ಇಂದಿನ ಆಂಧ್ರಪ್ರದೇಶವನ್ನು ಸೂಚಿಸುವುದೆಂದು ಪ್ರತಿಪಾದಿಸುತ್ತಾ ಬಂದಿದ್ದಾರೆ. ಆದರೆ ತಮಿಳಗಂ ಉತ್ತರಕ್ಕಿದ್ದ ಭೂಪ್ರದೇಶವೆಲ್ಲವನ್ನೂ ಇದು ಒಳಗೊಂಡಿದೆ ಎಂಬುದು ಗಮನಾರ್ಹ.

ತಮಿಳು ಭಾಷಿಕರನ್ನು ಎರಡು ಗುಂಪುಗಳಡಿ ತೋಲ್ಕಾಪ್ಪಿಯಾರ್ ವರ್ಗೀಕರಿಸಿದ್ದು ಇವುಗಳಲ್ಲಿ 13 ನಾಡುಗಳನ್ನೊಳಗೊಂಡ ಸೆನ್‌ತಮಿಳ್ ಮತ್ತು ಇದನ್ನು ಸುತ್ತುವರಿದಿದ್ದ 12 ನಾಡುಗಳ ತಿಶೈಶ್ಶೊಳ್ ಅನ್ನು ಇವನು ಹೆಸರಿಸಿದ್ದಾನೆ. ವಾಸ್ತವವಾಗಿ ಸೆನ್‌ತಮಿಳ್ ಎಂಬುದು ವೈಗೈ ನದಿಯನ್ನು ಉತ್ತರದ ಗಡಿ ಮಾಡಿಕೊಂಡು ಮರುತರು (ದಕ್ಷಿಣ), ಕರವೂರು (ಪೂರ್ವ) ಮತ್ತು ಮರವೂರ್(ಪಶ್ಚಿಮ)ಗೆ ಸೀಮಿತಗೊಂಡ ಪ್ರದೇಶವಾಗಿತ್ತು. ವೈಗೈ ನದಿಯಿಂದ ಸರಿಸುಮಾರು ವೇಂಕಟಾದ್ರಿವರೆಗಿನ (ಅಂದಿನ ಚೋಳ ಮತ್ತು ಅವರ ಸಾಮಂತರ ಅಂಕಿತದಲ್ಲಿದ್ದ) ಪ್ರದೇಶ ತಿಶೈಶ್ಶೊಳ್‌ನಲ್ಲಿ ಸೇರಿಕೊಂಡಿತ್ತು. ತಮಿಳಗಂ ಉತ್ತರ ಭಾಗವನ್ನೆಲ್ಲ ಒಳಗೊಂಡ ಈ ತಿಶೈಶ್ಶೊಳ್ ಅದರ ಪಶ್ಚಿಮ ಮತ್ತು ವಾಯವ್ಯ (ಅಂದರೆ ಚೇರ ರಾಜ್ಯಕ್ಕೆ ಹೊಂದಿಕೊಂಡ ಉತ್ತರ ಮತ್ತು ಪೂರ್ವೋತ್ತರ) ಪ್ರದೇಶವನ್ನು ಯಾವ ಬಗೆಯಲ್ಲಿ ಪ್ರಸ್ತುತಗೊಳಿಸಿಕೊಂಡಿತ್ತೆಂಬುದನ್ನು ಅಂದಿನ ಕವಿಗಳಾಗಲೀ ಇಂದಿನ ಸಂಶೋಧಕರಾಗಲೀ ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ಇಲ್ಲಿ ಮೊದಲು ಗಮನಿಸಬೇಕಾದ ಒಂದು ಅಂಶವೆಂದರೆ ತಮಿಳಗಂ ನೆತ್ತಿಯ ಮೇಲಿನ ಪೂರ್ವಾರ್ಧ ಮತ್ತು ಪಶ್ಚಿಮಾರ್ಧದಲ್ಲಿದ್ದ ಅಂತರದ ಬಗ್ಗೆ. ವೈಗೈಯಿಂದ ಕಾವೇರಿ ಮೂಲಕ ವೇಂಕಟವನ್ನು ಮುಟ್ಟುವ ಪೂರ್ವಾರ್ಧ ಪ್ರದೇಶದಲ್ಲಿ ಸಂಗಂ ಕಾಲದಲ್ಲಿ ತಮಿಳಿನ ಏಕಸ್ವಾಮ್ಯವಿತ್ತು; ಉಳಿದರ್ಧ (ತಮಿಳಗಂನ ನೇರ ಉತ್ತರ ಮತ್ತು ವಾಯವ್ಯ ಭಾಗ ಅಂದರೆ ಸ್ಥೂಲವಾಗಿ ನೀಲಗಿರಿ ಬೆಟ್ಟಸಾಲಿನಿಂದ ಉತ್ತರಕ್ಕೆ) ಈ ಏಕಸ್ವಾಮ್ಯವನ್ನು ಪ್ರಶ್ನಿಸುವ ತಮಿಳೇತರ ಜನಾಂಗಗಳ ಪ್ರದೇಶವಾಗಿತ್ತು.

**ಸಂಗಂ ಕಾಲದ ರಾಜಮನೆತನಗಳು:** ತಮಿಳಗಂ ಹಂಚಿಕೊಂಡು ಸಂಗಂ ಕಾಲದಲ್ಲಿ ಆಳುತ್ತಿದ್ದ ಪ್ರಧಾನ ಅರಸು ಮನೆತನಗಳಲ್ಲಿ ಪಾಂಡ್ಯ, ಚೋಳ ಮತ್ತು ಚೇರರನ್ನು ಸುಲಭವಾಗಿ ಗುರುತಿಸಬಹುದು; ಆದರೆ ಉಪಪ್ರಧಾನ ಅಥವಾ ವೇಳಿರ್ ಎಂಬ ಸ್ವತಂತ್ರ ಅರಸು

ಮನೆತನಗಳನ್ನು ಗುರುತಿಸುವುದು ಇದರಷ್ಟು ಸುಲಭವಲ್ಲ. ಇದಕ್ಕೆ ಎರಡು ಕಾರಣಗಳುಂಟು: ಸಂಗಂ ಕಾಲಾವಧಿ (ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರ.ಶ.3ನೆಯ ಶತಮಾನದವರೆಗೆ) ಸುದೀರ್ಘವಾಗಿದ್ದುದು ಇದರಲ್ಲಿ ಒಂದಾದರೆ, ಅಂದಿನ ರಾಜಕೀಯದಲ್ಲಿ ಮೇಲಿಂದ ಮೇಲೆ ಸ್ಥಿತ್ಯಂತರಗಳಾಗುತ್ತಿದ್ದುದು ಮತ್ತೊಂದಾಗಿದೆ. ಕಳೆದ ಶತಮಾನದ ಆರಂಭದ ದಶಕಗಳಲ್ಲಿ ಮಾಡಿದ ಒಂದು ಅಂದಾಜಿನಂತೆ ಇದು ಮೂವರು ಕಿರೀಟಧಾರಿ ಅರಸರನ್ನೂ ನೂರಿಪ್ಪತ್ತು ಅಧಿರಾಜರನ್ನೂ ಒಳಗೊಂಡಿತ್ತು. ಆದರೆ ಇದೇ ಶತಮಾನದ ಕೊನೆಯ ದಶಕದಲ್ಲಿ ಮಾಡಿದ ಮತ್ತೊಂದು ಅಂದಾಜಿನಂತೆ ಈ ಸಂಖ್ಯೆ 175ಕ್ಕಿಂತ ಕಡಿಮೆ ಇರಲಿಲ್ಲ. ಇದರಲ್ಲಿ ಮೂವೇಂದಾರರು, ವೇಳಿರ್‌ಗಳು ಅಲ್ಲದೆ ಚಿರ್‍ರಸರ್, ವೇಂತರ್ ಕುರುನೀಲಮನ್ನಾರ್, ಕೋಮಕರ್, ಕುರುಂಪುಗಳ್, ಕೀಲರ್ ವರ್ಗಗಳು ಇದ್ದವು. ಸಂಗಂ ಕಾಲದ ಹಲವಾರು ಪ್ರಾದೇಶಿಕ ಜನಾಂಗಗಳನ್ನು ಪ್ರತಿನಿಧಿಸುತ್ತಿದ್ದ ಇವು ತಮಿಳಗಂ ಒಳಹೊರಗಿನ ಪ್ರದೇಶವನ್ನೆಲ್ಲ ವ್ಯಾಪಿಸಿಕೊಂಡಿದ್ದವು. ಈ ಕಾಲದ ಜನಾಂಗಗಳಲ್ಲಿ ಮಲವರ್, ಪರ್ವತವರ್, ವಡುಕರ್, ಕೋಸರ್, ಕೊಂಕರ್ ಎರುಮೈಊರವರ್, ಕೊಂಗರ್, ಕುಡುನಾಡವರ್, ಕೊಂಕಾಣರ್ ಅಥವಾ ಕರ್ಕನಾಡವರ್ ಮೊದಲಾದವುಗಳಿದ್ದವು. ಇಂದಿನ ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳನ್ನು ಬೆಸೆದಿದ್ದ ಇವರಲ್ಲಿ ಕೊಂಕಣ, ಕೊಡವ, ತುಳು ಮತ್ತು ಕನ್ನಡ ಜನಾಂಗಗಳ ಪಾತ್ರ ಮಹತ್ತ್ವದ್ದಾಗಿತ್ತೆಂದು ಕಂಡುಬರುತ್ತದೆ.

ವಡುಗರು: ವಡುಗರು ಮತ್ತು ವಡುಮೊೞಿಯಾಳರ್ ಎಂಬ ಪದಗಳನ್ನು ಸಂಗಂ ಕವಿಗಳು ಬಳಸಿದ್ದಾರೆ. ಆದರೆ ತಮಿಳಗಂ ಗಡಿಯಾಚೆ ಇದ್ದ ತಮಿಳೇತರರಾಗಿದ್ದ ಈ ವಡುಗರನ್ನು ಸ್ಪಷ್ಟವಾಗಿ ಗುರುತಿಸಿ ಅವರ ಬಗೆಗೆ ಅಹನಾನೂರಿನಲ್ಲಿ ಕನಿಷ್ಠ ಏಳು ಬಾರಿ, ಪುರನಾನೂರು, ಕುಱುಂತೊಕೈ ಮತ್ತು ನಟ್ಟಿನೈಗಳಲ್ಲಿ ಕನಿಷ್ಠ ಒಂದೊಂದು ಬಾರಿ ಪ್ರಸ್ತಾಪ ಮಾಡಿ, ವಡುಗರ ಬಗೆಗೆ ಕುತೂಹಲಕಾರಿ ಮಾಹಿತಿಯನ್ನು ಸಂಗಂ ಕವಿಗಳು ಒದಗಿಸಿದ್ದಾರೆ. ಕವಿ ಕುತವಾಯಿಲ್ ಕೀರತ್ತಣಾರ್ ಪ್ರಕಾರ ವಡುಗರ ಪ್ರದೇಶ ಬಹುದೂರದವರೆಗೆ ಚಾಚಿಕೊಂಡ ಉನ್ನತ ಗಿರಿಶಿಖರಗಳ ನಾಡಾಗಿತ್ತು; ಅಬ್ಬರ ಮಾಡುವ ಮದ್ದಳೆಗಳನ್ನು ಬಾರಿಸುತ್ತಾ ಉಗ್ರಭಯಂಕರ ಸೆಡೆನಾಯಿಗಳೊಡನೆ ಬೇಟೆಯಾಡುವ ಜನಾಂಗಗಳು ಇಲ್ಲಿಯ ನಿವಾಸಿಗಳಾಗಿದ್ದರು. ಅಲ್ಲದೆ ಅಪಾರ ಪ್ರಮಾಣದ ಬರಡು ಭೂಪಟ್ಟಿ ವಡುಗ ಮತ್ತು ತಮಿಳಗಂ ಅನ್ನು ಬೇರ್ಪಡಿಸಿತ್ತು. ಕವಿ ಮಾಮುಲನಾರ್ ಈ ಚಿತ್ರವನ್ನು ಇನ್ನಷ್ಟೂ ವಿಸ್ತರಿಸಿ ತಮಿಳಗಂ ವಾಯವ್ಯ ಮತ್ತು ಈಶಾನ್ಯ ಪ್ರದೇಶಗಳಲ್ಲಿದ್ದ ಎರಡು ವಡುಗ ವರ್ಗಗಳನ್ನು ಪರಿಚಯಿಸಿಕೊಟ್ಟಿರುವನು. ಮಂಜುಮುಚ್ಚಿ ಆಕಾಶವನ್ನು ಚುಂಬಿಸುತ್ತಿದ್ದ ಗಿರಿಶಿಖರಗಳಲ್ಲಿ ನೆಲಸಿದ್ದ ಮುರನ್ ವಿಗುವಡುಗರು ಬಿಲ್ಲವಿದ್ಯೆಯಲ್ಲಿ ಅತ್ಯಂತ ಪರಿಣತರಾಗಿದ್ದರೆಂದು ಒಂದು ಕವನದಲ್ಲಿ ತಿಳಿಸಿದ್ದಾನೆ. ತಮಿಳಗಂ ಸಮೃದ್ಧ ಪ್ರದೇಶದಿಂದ ದೂರ, ಬಹು–ಬರ್ಚಿಗಳ ವೀರನಾದ ಚೇರಕಟ್ಟೀಯನ್ ರಾಜ್ಯದ ಗಡಿಯಾಚೆಗಿದ್ದ (ಚೇರ ಅಥವಾ ಇಂದಿನ ಕೇರಳ ರಾಜ್ಯದ ಉತ್ತರಕ್ಕೆ) ವಡುಗರನ್ನು ಇನ್ನೊಂದು ಕವನದಲ್ಲಿ ಇವನು ಪ್ರಸ್ತಾಪಿಸುತ್ತಾ ಅವರು ತುಳಸೀ ಪುಷ್ಪಮಾಲೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರೆಂದು ತಮಿಳರಿಗೆ ಅರ್ಥವಾಗದ ಬೇರೊಂದು ಭಾಷೆ (ಮೊಳ ಪೇಯರ್‌ತೇಯಂ) ಯನ್ನಾಡುತ್ತಿದ್ದ ರೆಂದೂ ಹೇಳಿದ್ದಾನೆ. ಈ ಎರಡು ಉಲ್ಲೇಖಗಳೂ ನೀಲಗಿರಿಯಾಚೆಯ ಇಂದಿನ ಕನ್ನಡ ಪ್ರದೇಶದವರನ್ನು ಸೂಚಿಸುತ್ತಿದ್ದವೆಂದು ತೋರುತ್ತದೆ.

ಎರಡು ದಿಕ್ಕಿನಲ್ಲಿದ್ದ ವಡುಗ ಪಂಗಡಗಳು: ಮಾಮುಲನಾರ್ ಒಳಗೊಂಡು ಇನ್ನೂ ಕೆಲವು ಸಂಗಂ ಕವಿಗಳು ವೇಂಕಟದಾಚೆಗಿದ್ದ ವಡುಗರನ್ನು ಉಲ್ಲೇಖಿಸಿದ್ದಾರೆ. ವೇಂಕಟದಾಚೆಗಿದ್ದ ಪುಲ್ಲಿನಾಯಕನ ಪರಭಾಷಾ (ತಮಿಳೇತರ ಭಾಷಾ) ಪ್ರದೇಶವನ್ನು ಮತ್ತು ಯಥೇಚ್ಛವಾಗಿ ಮದ್ಯ ಸೇವಿಸಿ ಬಿಲ್ಲುಗಳಿಗೆ ಅಂಬುಗಳನ್ನು ಹೂಡಿ ಆರ್ಭಟಿಸುತ್ತಿದ್ದ ವಡುಗರನ್ನು ಮಾಮುಲನಾರ್ ಒಂದೆಡೆ ಉಲ್ಲೇಖಿಸಿದ್ದಾನೆ. ಬಹುಶಃ ಇವರನ್ನೆ ವಂಬ ವಡುಗರ್ ಎಂದು ಇಡೆಯನ್ ಶೇಂದನ್ ಕೊಟ್ರಣಾರ್ ಗುರುತಿಸಿರಬೇಕು. ಈ ಪ್ರದೇಶದ ಭದ್ರಕೋಟೆಯಾಗಿದ್ದ ಪಾಳಿಯನ್ನು ಚೋಳನು ನೆಲಸಮಮಾಡಿ ವಡುಗರ ತಲೆಗಳನ್ನು ತರಿದು ಹಾಕಿ, ದಂತವಿದ್ದ ಆನೆಗಳ ರುಂಡಗಳಿಂದ ಈ ಪ್ರದೇಶವನ್ನು ಹೊದಿಸಿದನೆಂದು ಇವನು ವರ್ಣಿಸಿದ್ದಾನೆ. ವಡುಗರ ಭದ್ರಕೋಟೆಯಾಗಿತ್ತೆನ್ನಲಾದ ಈ ಪಾಳಿಯ ಬಗೆಗೆ ಹೆಚ್ಚು ವಿವರಗಳನ್ನು ಸಂಗ್ರಹಿಸಬೇಕಾಗಿದೆ. ತಯಂ ಕಣ್ಣಾರ್ ಎಂಬ ಚೋಳನಾಡಿನ ಮತ್ತೊಬ್ಬ ಕವಿ ವೇಂಕಟದಾಚೆಯ ವಡುಗನಾಡನ್ನು ಮತ್ತು ಅಲ್ಲಿಯ ವಡುಗರನ್ನು ನೈಜ ನುಡಿಗಳಲ್ಲಿ ಪರಿಚಯಿಸಿಕೊಟ್ಟಿದ್ದಾನೆ. ಇವನು ಗಜಕಾಳಗದಲ್ಲಿ ಸಿದ್ಧಹಸ್ತನಾದ ತೊಂಡೈ ಅಧಿಪತಿ ವೇಂಗಡವನ್ನು ದಾಟಿ ತುರುಗಳನ್ನು ಅಪಹರಿಸಿದ ಘಟನೆಯೊಂದನ್ನು ವಿವರಿಸುತ್ತಾ ಅದು ನೀರಿಲ್ಲದ, ರಣ ಬಿಸಿಲಿನ ಪ್ರದೇಶವಾಗಿತ್ತೆಂದೂ ಅಲ್ಲಿಯ ನಿವಾಸಿಗಳು ಬೆಳ್ಳಕ್ಕಿಯ ಅನ್ನವನ್ನು ಕೊಬ್ಬಿನಲ್ಲಿ (ಮಾಂಸ) ಮಿಶ್ರಣಮಾಡಿ ತಿನ್ನುತ್ತಿದ್ದರೆಂದೂ ತಿಳಿಸಿದ್ದಾನೆ. ವೇಂಕಟಾದ್ರಿಯ ಉತ್ತರಕ್ಕಿರುವ ಆಂಧ್ರಪ್ರದೇಶದ ಪ್ರಕೃತಿ, ಅಲ್ಲಿನ ಜನರ ಬದುಕು ಇವುಗಳನ್ನು ಹೆಚ್ಚು ನೈಜವಾಗಿ ವಿವರಿಸಿದ್ದಾನೆ. ಇಂತಹ ನೀರಿಲ್ಲದ ಸುಡುಬಿಸಿಲಿನ ವಡುಗನಾಡಿನ ಮೇಲೆ ಧಾಳಿ ಮಾಡಲು ಹೋದ ನಾಯಕನನ್ನು ಸದಾ ತುಳುಕುವ ಕಾವೇರಿ ನದಿಯ ತಂಪು ನೆಲದಲ್ಲಿದ್ದ ಅವನ ಪ್ರಿಯತಮೆ ನೆನೆಪಿಸಿಕೊಂಡು ಪರಿತಪಿಸುವ ವರ್ಣನೆಯ ಸಂದರ್ಭದಲ್ಲಿ ಈ ಎರಡು ಪ್ರದೇಶಗಳ ಭೌಗೋಳಿಕ ಹಾಗೂ ಜನಾಂಗೀಯ ವೈವಿಧ್ಯತೆಯನ್ನೂ ಅವನು ಪರಿಚಯಿಸಿಕೊಟ್ಟಿರುವುದು ಗಮನಾರ್ಹ.

ಹೀಗೆ ವೇಂಕಟಾದ್ರಿ ಮತ್ತು ನೀಲಗಿರಿಗಳ ಉತ್ತರಕ್ಕಿದ್ದ ವಡುಗ ಜನಾಂಗಗಳನ್ನು ಪ್ರತ್ಯೇಕವಾಗಿ ಪರಿಚಯಿಸುವುದಲ್ಲದೆ ಅವರಲ್ಲಿದ್ದ ಕೆಲವು ಸಮಾನ ಗುಣಧರ್ಮಗಳನ್ನು ಸಂಗಂ ಕವಿಗಳು ಸರೆಹಿಡಿದಿದ್ದಾರೆ. ಕಾವಿರಿಪೂಂಪಟ್ಟಿಣತ್ ಕಾರಿಕಣ್ಣಣಾರ್ ಎಂಬ ಕವಿ ಯುದ್ಧವರಸೆಯನ್ನು ಬಿಟ್ಟು ಬೇರೇನನ್ನೂ ಕಲಿಯದ ಈ ವಡುಗರು ಭಯಾನಕ ಬೇಟೆ ನಾಯಿಗಳನ್ನು ಸಂಗಾತಿಗಳನ್ನಾಗಿ ಮಾಡಿಕೊಂಡ, ಸುದೀರ್ಘ ಹಾಗೂ ಸುಸ್ಪಷ್ಟ ನುಡಿಗಳ ಗಂಡುಗಲಿಗಳಾಗಿದ್ದರೆಂದು ತಿಳಿಸಿದ್ದಾನೆ. ನಡುಕ ಹುಟ್ಟಿಸುವ ಬೇಟೆನಾಯಿಗಳು ಇವರ ಪ್ರೀತಿಯ ಸಂಗಾತಿಗಳಾಗಿದ್ದವೆಂಬುದನ್ನು ಮದುರೈ ಇಳಂ ಗೌಸಿಕಣಾರ್ ಬಹಿರಂಗಪಡಿಸಿದ್ದಾನೆ. ದನಕರುಗಳ ಚರ್ಮವನ್ನು ಹೊದಿಸಿ ಕಟ್ಟಿದ ಗುಡಿಸಲುಗಳಲ್ಲಿ ಅಡಗಿಸಿಟ್ಟ ಸೆಡೆನಾಯಿಗಳನ್ನು ಬಾಣಬಿಡುವಂತೆ ಛೂ ಬಿಟ್ಟು ದಾರಿಹೋಕರನ್ನು (ತಮ್ಮ ನಾಡನ್ನು ಪ್ರವೇಶಿಸಿದ ಪರಕೀಯರನ್ನು) ಈ ವಡುಗರು ಪೀಡಿಸುತ್ತಿದ್ದರು ಎಂದು ಇವನು ತಿಳಿಸಿದ್ದಾನೆ.

ವಡುಗರಾದ ಎರುಮೈಊರವರು: ವಡುಗರು ಎಂಬ ಸಾಮಾನ್ಯ ಪದದಿಂದ ತಮಿಳಗಂ ಉತ್ತರ ದಿಕ್ಕಿನ ಜನಾಂಗಗಳನ್ನು ಸ್ಥೂಲವಾಗಿ ಗುರುತಿಸಿ ಅವರ ಪ್ರಾದೇಶಿಕ ಲಕ್ಷಣಗಳನ್ನು ಆಗೊಮ್ಮೆ ಈಗೊಮ್ಮೆ ಸೂಚಿಸಿದರೂ ಈ ಜನಾಂಗಗಳನ್ನಾಗಲೀ ಅವರ ಆಡುಭಾಷೆಗಳನ್ನಾಗಲೀ ಸಂಗಂ ಕವಿಗಳು ಸ್ಪಷ್ಟವಾಗಿ ಹೆಸರಿಸುವುದಿಲ್ಲ. ಇದಕ್ಕೆ ಒಂದೇ ಒಂದು ಅಪವಾದ ಕವಿ ನಕ್ಕೀರರ್. ಎರಮೈಊರವನು ವಡುಗನಾಗಿದ್ದನೆಂದು ಸ್ಪಷ್ಟವಾಗಿ ಹೇಳಿ, ತುರುಗೋಳ್ ಕಾಳಗದಲ್ಲಿ ನಿಷ್ಣಾತನಾದ ಈ ನಾಯಕನು ಕ್ಷೇತ್ರಗಳಲ್ಲಿ ತಂಗಿದ್ದ ದನಕರುಗಳನ್ನು ಸೆರೆಹಿಡಿದೆಳೆದು ತಂದು, ಅವುಗಳನ್ನು ತನ್ನ ಗ್ರಾಮದ ದೊಡ್ಡಿಯಲ್ಲಿ ಕೂಡಿಹಾಕಿದ ಒಂದು ಸಂದರ್ಭವನ್ನು ಇವನು ಚಿತ್ರಿಸಿದ್ದಾನೆ. ಇದು ತುರುಗೋಳ್ ಪ್ರಸಂಗದ ಸೂಚನೆಯಾಗಿದ್ದು ಇದರ ಉದ್ದೇಶ ಎದುರಾಳಿಯನ್ನು ಕದನಕ್ಕೆ ಆಹ್ವಾನಿಸುವುದಾ ಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಅತ್ಯಂತ ಬಲಶಾಲಿಯಾದ (ಪೋರ್ವೈಕ್ಕೋಪ್ಪೆರುವರ್‌ಕಿಳ್ಳಿ) ಒಬ್ಬ ವೀರನನ್ನು ಸಂಗಂ ಕಾಲದಲ್ಲಿ ಎರುಮೈಯೂಱನ್ (ಎಮ್ಮೆಯ ಬಲದವನು ಅಥವಾ ಕೋಣದ ಕಸುವಿನವನು) ಎಂದೇ ಗುರುತಿಸಲಾಗುತ್ತಿತ್ತೆಂಬುದು ಇಲ್ಲಿ ಗಮನಾರ್ಹ. ಎರುಮೈಯವರಿಂದ ಈ ನುಡಿ ಲೋಕರೂಢಿಯಾಯಿತೋ ಅಥವಾ ಅದಕ್ಕೆ ಬೇರೊಂದು ಕಾರಣವಿತ್ತೊ ಎಂಬುದು ಊಹೆಗೆ ಬಿಟ್ಟಿದ್ದು.

**ಸಂಗಮ್ ಕಾಲದ ರಾಜಕೀಯದಲ್ಲಿ ಎರುಮೈಯವರ ಸ್ಥಾನ:** ವಡುಗನಾಯಕರೆಂದು ಸ್ಪಷ್ಟವಾಗಿ ಗುರುತಿಸಿಕೊಂಡ ಏಕಮೇವ ರಾಜಮನೆತನದವರು ಇವರಾಗಿರುವುದರಿಂದ ಮತ್ತು ಇವರು ಕನ್ನಡನಾಡಿಗೆ ನೇರವಾಗಿ ಸಂಬಂಧಪಟ್ಟಿರುವುದರಿಂದ ಎರುಮೈನಾಯಕರ ಬಗೆಗೆ ದೊರಕುವ ಮಾಹಿತಿಗಳನ್ನೆಲ್ಲ ಸಂಗ್ರಹಿಸಿ, ಅವರ ರಾಜಕೀಯ ಅಂತಸ್ತನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ತಮಿಳಿನ ಎರುಮೈ ಪದದ ಕನ್ನಡ ಅರ್ಥ ಎಮ್ಮೆ. ಇದರಿಂದಾಗಿ ಎರುಮೈನಾಡು, ಎಮ್ಮೆಯಊರು, ಏರಮೈಊರು ಎಂಬ ಪದಗಳು ಎಮ್ಮೆಯನಾಡು ಎಂಬ ಅರ್ಥವನ್ನು ಸಹಜವಾಗಿ ಪಡೆದುಕೊಂಡಿವೆ. ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತವಿರುವ ಎಮ್ಮಿಗನೂರುಗಳಿಗೆ ಮತ್ತು ತಮಿಳುನಾಡಿನಲ್ಲಿರುವ ಎರುಮೈ ನಾಯಕನ್ ಪಟ್ಟಿ ಮೊದಲಾದವುಗಳಿಗೆ ಇವು ಸಮಾನ ಪದಗಳಾಗಿವೆ. ಸಂಗಂ ಕವಿಗಳು ಎರುಮೈನಾಟು ಎಂದು ಗುರುತಿಸಿದ ಪ್ರದೇಶ ಇಂದಿನ ಮೈಸೂರು ವಲಯವಾಗಿತ್ತೆಂದು ಸಂಶೋಧಕರೆಲ್ಲರೂ ಒಮ್ಮತದಿಂದ ಅಂಗೀಕರಿಸಿದ್ದಾರೆ. ಕಾರಣ ಇದರ ಬಗೆಗೆ ಯಾವ ವಿಧವಾದ ವಾದಕ್ಕೂ ಎಡೆ ಇಲ್ಲ. ಮೌರ್ಯರ ಕಾಲದಲ್ಲಿ ಇದನ್ನು ಮಹಿಷಮಂಡಲವೆಂದು ಕರೆಯಲಾಗುತ್ತಿತ್ತೆಂಬುದು ಇತಿಹಾಸದಲ್ಲಿ ಸ್ಪಷ್ಟವಾದ ವಿಚಾರ.

ಎರುಮೈ ಅರಸರು ತುರುಕಾಳಗದಲ್ಲಿ ನಿಷ್ಣಾತರಾಗಿದ್ದರೆಂಬುದನ್ನು ಈಗಾಗಲೇ ನಕ್ಕೀರರ್ ಕವಿತೆ ಸಾಬೀತುಪಡಿಸಿದೆ. ಆದರೆ ಅವರು ಈ ಬಗೆಯ ಚಿಕ್ಕಪುಟ್ಟ ಸಾಹಸ ಕೃತ್ಯಗಳಿಗೆ ಮಾತ್ರ ತಮ್ಮನ್ನು ತಾವು ಸೀಮಿತಗೊಳಿಸಿಕೊಳ್ಳದೆ, ಸಂಗಂ ಕಾಲದ ತಮಿಳು ರಾಜಕೀಯದಲ್ಲಿ ಅತ್ಯಂತ ಮಹತ್ತ್ವದ ಪಾತ್ರವನ್ನು ವಹಿಸಿ, ದೊಡ್ಡ ದೊಡ್ಡ ಯುದ್ಧಗಳನ್ನು ಮಾಡಿದ ಕಲಿಗಳಾಗಿದ್ದರೆಂಬುದರ ಬಗೆಗೆ ಸ್ಪಷ್ಟ ಸಾಕ್ಷ್ಯಾಧಾರಗಳು ದೊರೆಯುತ್ತವೆ.

ಇಂಥ ಒಂದು ಮಹಾಯುದ್ಧ ಮದುರೈ ಪಾಂಡ್ಯರಾಜನಾದ ನೆಡುಂಚೆಳಿಯನ್ ಮತ್ತು ತಮಿಳಗಂನ ಉಳಿದ ಏಳು ರಾಜ್ಯಶಕ್ತಿಗಳ ನಡುವೆ ಆದದ್ದನ್ನು ಕನಿಷ್ಠ ಹದಿಮೂರು ಪಾಂಡ್ಯ ಕವಿಗಳು ಉಲ್ಲೇಖಿಸಿ, ಈ ಯುದ್ಧದ ಯಶಸ್ವಿ ವೀರನಾದ ನೆಡುಂಚೆಳಿಯನ್ ಪ್ರತಾಪವನ್ನು ಕೊಂಡಾಡಿದ್ದಾರೆ. ಈ ಯುದ್ಧ ನಡೆದದ್ದು ಅಲಂಕಾಣಾಮ್ ಅಥವಾ ತಲೈಯಾಲಂಕಾಣತ್ತುವಿನಲ್ಲಿ. ಇದು ನಡೆದಾಗ ನೆಡುಂಚೆಳಿಯನ್ ಇನ್ನೂ ಬಾಲಕನಾಗಿದ್ದು ಹಾಲುಬಿಟ್ಟು ಬಾನ ಉಣ್ಣಲು ಆಗ ತಾನೆ ತೊಡಗಿದ್ದನೆಂದು ಕವಿ ಇಡೈಕುಣ್ರುಕೀಚಾರ್ ತಿಳಿಸಿದ್ದಾನೆ. ಲಘು ಮಾತಿನಿಂದ ಈ ಪೋರನನ್ನು ಜರಿಯುತ್ತಾ ದೊಡ್ಡ ದೊಡ್ಡ ರಥ, ಆನೆ, ಅಶ್ವ ಮತ್ತು ಕಾಲ್ದಳಗಳೊಡನೆ ಏರಿಬಂದ ಸಪ್ತಕೂಟದ ಅಪಾರ ದಳವನ್ನು ಕಂಡು, ನನ್ನ ಛತ್ರದಡಿಯ ಪ್ರಜೆಗಳು ಬೇಕಾದರೆ ನನ್ನನು ಮಹಾ ಕ್ರೂರಿಯೆಂದು ಬಗೆದು ನನ್ನ ವಂಶವನ್ನು ಮೂದಲಿಸಲಿ, ಕವಿಶ್ರೇಷ್ಠನಾದ ಮಾಂಗುಡಿ ಮರದನ್ ಕೂಡಾ ನನ್ನನ್ನು ಹೊಗಳಿ ಹಾಡುವುದನ್ನು ನಿಲ್ಲಿಸಲಿ, ನಾನು ಮಾತ್ರ ಅವರೆಲ್ಲರ ಸೊಲ್ಲನ್ನಡಗಿಸದೆ ಬಿಡೆನು ಎಂದು ಪ್ರತಿಜ್ಞೆ ಮಾಡುತ್ತಾ ಯುದ್ಧರಂಗಕ್ಕಿಳಿದದ್ದನ್ನು ಸ್ವತಃ ಕವಿ ನೆಡುಂಚೆಳಿಯನ್‌ನ ಒಂದು ಕವನದಿಂದ ಅರಿತುಕೊಳ್ಳಬಹುದು. ಇವನ ವಿರುದ್ಧ ಹರಿಹಾಯ್ದು ಬಂದವರಲ್ಲಿ ಸಂಗಂ ಕಾಲದ ಹೆಸರಾಂತ ಇಬ್ಬರು ಕಿರೀಟಧಾರಿ ಅರಸರು (ಚೇರ ಮತ್ತು ಚೋಳ), ಮಹಾಪರಾಕ್ರಮಿಗಳಾದ ಐವರು ಪೆರುವೇಳಿರ್‌ಗಳು ಇದ್ದರು.

ಈ ಯುದ್ಧದಲ್ಲಿ ತೊಡಗಿಸಿಕೊಂಡ ಏಳು ನಾಯಕರನ್ನು ಹಲವಾರು ಕವನಗಳಲ್ಲಿ ಉಲ್ಲೇಖಿಸಲಾಗಿದ್ದರೂ ಅವರಾರನ್ನೂ ಈ ಕವಿಗಳು ಹೆಸರಿಸುವುದಿಲ್ಲ. ಇವರೆಲ್ಲರನ್ನು ಗುರುತಿಸಿ ಹೆಸರಿಸಿದ ಕೀರ್ತಿ ಕವಿ ಮದುರೈ ನಕ್ಕೀರರ್‌ಗೆ ಮಾತ್ರ ಸಲ್ಲುವುದೆನ್ನಬಹುದು. ಚೇರ, ಚೋಳರಲ್ಲದೆ, ತಿದಿಯನ್, ಎಟುನಿ, ಎರುಮೈಊರನ್, ಇರಂಕೋವೇಣ್ಮಾನ್ ಮತ್ತು ಪೊರುವನ್ ಎಂಬ ಐವರು ನಾಯಕರುಗಳು ಈ ಒಕ್ಕೂಟದಲ್ಲಿ ಸೇರಿದ್ದರೆಂದು ಅವನು ಸ್ಪಷ್ಟಗೊಳಿಸಿದ್ದಾನೆ. ಅಂದಿನ ಆಳರಸರಾದ ಚೇರನನ್ನಾಗಲೀ ಚೋಳನನ್ನಾಗಲೀ ಈ ಕವಿ ಹೆಸರಿಸುವುದಿಲ್ಲ. ಆದರೆ ಉಳಿದವರನ್ನು ಅವರ ವ್ಯಕ್ತಿನಾಮದಿಂದಲೋ ಇಲ್ಲವೇ ವಂಶನಾಮ ದಿಂದಲೋ ಗುರುತಿಸಿ ಅವರ ಪ್ರಮುಖ ಗುಣಗಳನ್ನು ಪರಿಚಯಿಸಿಕೊಟ್ಟಿದ್ದಾನೆ. ತಿದಿಯನ್ ವೀರರಲ್ಲಿಯೇ ಅತ್ಯುಗ್ರನೆನಿಸಿದ್ದ. ಎಟುನಿ ಗಜಪಡೆಯನ್ನು ವಶಮಾಡಿಕೊಳ್ಳುವುದ ರಲ್ಲಿ ನಿಷ್ಣಾತನೂ ಕನಕಾಭರಣಪ್ರಿಯನೂ ಆಗಿದ್ದ; ಎರುಮೈಊರನ್ ನಾರಿನ ಜರಡಿಯಿಂದ ಪನ್ನಾಡೆ ಸೋಸಿ ಸಿದ್ಧಪಡಿಸಿದ; ಸಿಹಿಸೇಂದಿಯಸೇವನಾಸಕ್ತನಾಗಿದ್ದ ಇರಂಕೋವೇಣ್ಮಾನ್ ಜೇನುತುಪ್ಪದ ಕಂಪುಸೂಸುವ ಎದೆಯಮೇಲೆ ಚಂದನ ಲೇಪಿಸಿಕೊಳ್ಳುವ ಹವ್ಯಾಸಿಯಾಗಿದ್ದ; ಪೊರುವನ್ ಶ್ರೇಷ್ಠ ರಥಗಳನ್ನೇರಿ ಕಾಳಗ ಮಾಡಲು ಆತುರನಾಗಿದ್ದ ಎಂದು ನಕ್ಕೀರರ್ ತಿಳಿಸಿದ್ದಾನೆ.

ಈ ಐವರು ಪೆರುವೇಳಿರ್‌ಗಳಲ್ಲಿ ಯಾರು ತಮಿಳಗಂ ಪ್ರದೇಶದವರಾಗಿದ್ದರು ಮತ್ತು ಯಾರು ಅದರಾಚೆಯ ವಡುಗರಾಗಿದ್ದರು ಎಂಬುದನ್ನು ಇನ್ನೂ ದೃಢಪಡಿಸಿಕೊಳ್ಳಬೇಕಾಗಿದೆ. ಇವರಲ್ಲಿ ಕೆಲವರನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದ್ದರೂ ವಡುಗಪ್ರದೇಶಕ್ಕೆ ಅವರನ್ನು ಪ್ರಸುತ್ತಗೊಳಿಸಿರುವ ವಿವರಗಳಾವುವೂ ದೊರೆತಿಲ್ಲ. ಈ ಬಗೆಗೆ ದೊರಕಿರುವ ಕೆಲವು ವಿವರಗಳು ಇಂತಿವೆ:

ಈ ಐವರು ಪೆರುವೇಳಿರ್‌ಗಳಲ್ಲಿ ಎರುಮೈಊರವರು ಮೈಸೂರು ಪ್ರದೇಶದವರೆಂಬುದ ರಲ್ಲಿ ಅನುಮಾನವಿಲ್ಲ. ಆದರೆ ಇವರ ಕಾರ್ಯಕ್ಷೇತ್ರ ಅಥವಾ ಕದನಕ್ಷೇತ್ರವನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಸಂಗಂ ಕಾಲದ ವೇಳಿರ್‌ಗಳಿಗೆ ತಮ್ಮದೆಂಬ ಪ್ರಾದೇಶಿಕ ಕ್ಷೇತ್ರಗಳಿದ್ದಿರಲು ಸಾಧ್ಯ. ಆದರೆ ಅವರಿಗೆ ನಿಶ್ಚಿತವಾದ ಕದನಕಾರ್ಯದ ಗಡಿಗಳಿರಲಿಲ್ಲವೆಂದು ತಿಳಿದುಬರುತ್ತದೆ. ಏಕೆಂದರೆ ಒದಗಿ ಬಂದ ಅವಕಾಶಗಳನ್ನೆಲ್ಲ ಬಳಸಿಕೊಂಡು ತಮ್ಮ ರಾಜಕೀಯ ಹಾಗೂ ಸಾಮಾಜಿಕ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದು, ಅದಕ್ಕೆ ತಕ್ಕಂತೆ ತಮ್ಮ ರಾಜಕೀಯ ಮಿತ್ರತ್ವವನ್ನೂ ಶತ್ರುತ್ವವನ್ನೂ ಬದಲಿಸಿಕೊಳ್ಳುವುದು ಅವರ ಪ್ರವೃತ್ತಿಯಾಗಿತ್ತು.

ಒಂದು ಕಾಲದಲ್ಲಿ ಅಯಿರಿ ನದಿ ಎರುಮೈಊರವರ ರಾಜ್ಯದ ಗಡಿಯನ್ನು ಗುರುತಿಸುತ್ತಿ ತ್ತೆಂದು ತಿಳಿದುಬರುವುದು. ದಟ್ಟಕಾಡಿನ ಮಧ್ಯದಲ್ಲಿದ್ದ ಈ ಪ್ರದೇಶ ನವಿಲುಗಳ ತಾಣವಾಗಿ ತ್ತೆಂಬುದನ್ನು ಬಿಟ್ಟರೆ ಅಯಿರಿಯಾಱುವಿನ ಬಗೆಗೆ ಹೆಚ್ಚಿನ ವಿವರಗಳು ದೊರಕುವುದಿಲ್ಲ. ಈ ನದಿಗೂ ಆಯಿರೈ (ಚೇರನಾಡಿನ ಉತ್ತರಕ್ಕೆ ಪಳನಿಯ ಪಶ್ಚಿಮಕ್ಕೆ ಇರುವ ಐವಾರುಮಲೈ) ಬೆಟ್ಟಪ್ರದೇಶಕ್ಕೂ ಏನಾದರೂ ಸಂಬಂಧವಿದ್ದರೆ ಅದನ್ನು ಇಂದಿನ ದಿಂಡಿಗಲ್ ಜಿಲ್ಲೆಯ ವಾಯವ್ಯ ಭಾಗದಲ್ಲಿ ಗುರುತಿಸಬೇಕಾಗುವುದು. ಸಂಗಂ ಕಾಲದ ಈ ನದಿ ಎಲ್ಲೇ ಹರಿದಿರಲಿ, ದಿಂಡಿಗಲ್ ಪ್ರದೇಶದವರೆಗೂ ಎರುಮೈನಾಯಕರು ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಕೊಂಡಿದ್ದರೆಂಬುದಕ್ಕೆ ಬಲವಾದ ಸಾಂದರ್ಭಿಕ ಸಾಕ್ಷ್ಯಗಳು ನೆರವಿಗೆ ಬರುತ್ತವೆ. ಪಳನಿಯ ಸಮೀಪ ನತ್ತಂ ಮತ್ತು ದಿಂಡಿಗಲ್‌ಗಳ ನಡುವೆ, ಎರುಮೈನಾಯಕನ್ ಪಟ್ಟಿ ಎಂಬ ಗ್ರಾಮ ಇಂದಿಗೂ ಉಳಿದು ಬಂದಿರುವುದು ಇದಕ್ಕೊಂದು ನಿದರ್ಶನ. ಎರುಮೈ ರಾಜ್ಯ ದಿಂಡಿಗಲ್ ವರೆಗೂ ವಿಸ್ತರಿಸಿತ್ತೋ ಇಲ್ಲವೋ ತಿಳಿಯದು. ಆದರೆ ಅವರ ಕಾರ್ಯ(ಕದನ)ಕ್ಷೇತ್ರ ಅದನ್ನು ತಲುಪಿತ್ತೆಂಬುದರಲ್ಲಿ ಅನುಮಾನವಿಲ್ಲ. ಉಳಿದ ಅರಸರೊಡಗೂಡಿ ಇವನು ಪಾಂಡ್ಯನ ವಿರುದ್ಧ ಹೋರಾಡಿದ್ದು ತಲೈಯಾಲಂಕಾಣತ್ತುವಿನಲ್ಲಿ ಎಂಬುದು ಬೆಳಕಿಗೆ ಬಂದಿದೆ. ಇದು ತಂಜಾವೂರು ಜಿಲ್ಲೆಯ ನಿಟಾಮಂಗಳ ಎಂದು ಗುರುತಿಸಲಾಗಿರುವುದರಿಂದ ಎರುಮೈ ನಾಯಕರ ಕಾರ್ಯಕ್ಷೇತ್ರ ತಂಜಾವೂರು ಜಿಲ್ಲೆಯವರೆಗೂ ವಿಸ್ತರಿಸಿತ್ತೆನ್ನಲು ಯಾವ ಅಡ್ಡಿಯೂ ಇಲ್ಲ. ಸಂಗಂ ಕಾವ್ಯದಲ್ಲಿ ಬರುವ ಎಲ್ಲ ವೇಳಿರ್‌ಗಳ ಚರ್ಚೆ ಇಲ್ಲಿ ಅಪ್ರಸ್ತುತ, ಆದರೆ ಪಾಂಡ್ಯನನ್ನು ವಿರೋಧಿಸಿ ನಿಂತ ಎಟುನಿಯನ್ನು ಮಾತ್ರ ಹೀಗೆ ನಿರ್ಲಕ್ಷಿಸುವಂತಿಲ್ಲ. ಇವನು ಪ್ರಸಿದ್ಧ ನಾಯಕನೂ ಕವಯಿತ್ರಿ ಅವ್ವೆಯ್ಯಾರ್ ಪೋಷಕನಾದ ಅಂಚಿಯ ಪುತ್ರನೂ ಮಾತ್ರನಾ ಗಿರದೆ ಕನ್ನಡನಾಡಿಗೆ ಅಂಟಿಕೊಂಡ ಪ್ರದೇಶದವನಾಗಿದ್ದ. ಇವನ ಮತ್ತೊಂದು ಹೆಸರು ಅತಿಯಮಾಣ್ ಪೊಕುಟ್ಟೆಳಿಣಿ. ಸಂಗಂ ಕಾಲದ ಖ್ಯಾತ ಕವಯಿತ್ರಿಯಾದ ಅವ್ವೆಯ್ಯಾರ್ ಇವನನ್ನು ಕುರಿತು ಕವನಗಳನ್ನು ಬರೆದಿರುವಳು. ಅತಿಯಮಾನವರು ದಿಂಡಿಗಲ್ ಜಿಲ್ಲೆಯ ಕುದುರೆಮಲೈ ಪ್ರದೇಶದ ಮಳವರ ನಾಯಕರಾಗಿ, ತಕಡೂರನ್ನು (ಧರ್ಮಪುರಿಯನ್ನು) ಕೇಂದ್ರವನ್ನಾಗಿಸಿಕೊಂಡು. ಬಹುಕಾಲ ಆಳಿದ ವಿವರಗಳು ದೊರೆಯುತ್ತವೆ.

ಬಹುಭಾಷಾ ಪ್ರದೇಶವಾದ ತಕಡೂರು: ತಮಿಳುನಾಡಿನ ವಿಲುಪ್ಪುರಂ ಜಿಲ್ಲೆಯ ತಿರುಕ್ಕೋವಲೂರ್ ಬಳಿ ಜಂಬೈ ಎಂಬಲ್ಲಿ ಪ್ರ.ಶ.ಪೂ. 1ನೆಯ ಶತಮಾನದ ಒಂದು ತಮಿಳು ಬ್ರಾಹ್ಮಿ ಶಾಸನ ದೊರಕಿದ್ದು ಈ ಶಾಸನದ ಆಧಾರದ ಮೇಲೆ ಅಂಚಿ ಮತ್ತು ಅವನ ಪುತ್ರ ಎಟುನಿ ಅತಿಯಮಾನ ವಂಶಜರಾಗಿದ್ದರೆಂದೂ ಅವರ ಆಡಳಿತ ಕೇಂದ್ರ ತಕಡೂರು ಆಗಿತ್ತೆಂದೂ ತೀರ್ಮಾನಿಸಲಾಗಿದೆ. ಸತಿಯಪುತರೆಂದು ಹೆಸರಾಂತರಾದ ಇವರು ಸಂಗಂ ಕಾಲದ ಪ್ರಧಾನ ವೇಳಿರ್‌ಗಳಲ್ಲಿ ಒಬ್ಬರಾಗಿದ್ದರೆನ್ನುವುದರಲ್ಲಿ ಅನುಮಾನವಿಲ್ಲ.

ನೆಡುಂಚೆಳಿಯನ್ ಮತ್ತು ಸಪ್ತದಳಕೂಟದ ನಡುವೆ ಕಾಳಗ ಸಂಭವಿಸಿದಾಗ ತಕಡೂರಿನ (ಧರ್ಮಪುರಿ) ಸುತ್ತಮುತ್ತಲ ಪ್ರದೇಶ ತಮಿಳರ ಏಕಸ್ವಾಮ್ಯದಲ್ಲಿರದೆ ಬಹುಭಾಷಿಕರ ಪ್ರದೇಶವಾಗಿತ್ತೆಂದು ಸಂಗಂ ಕಾಲದ ಸುಪ್ರಸಿದ್ಧ ಕವಿಗಳಲ್ಲಿ ಒಬ್ಬನಾದ ಪರಣರ್ ತಿಳಿಸುವನು. ಇಂದಿನ ತಮಿಳುನಾಡಿನ ಗಡಿಜಿಲ್ಲೆಯಾದ ಧರ್ಮಪುರಿ ಕರ್ನಾಟಕದ ಗಡಿಜಿಲ್ಲೆಯಾದ ಚಾಮರಾಜನಗರಕ್ಕೆ ಹೊಂದಿಕೊಂಡಿದ್ದು, ಈ ಎರಡು ಪ್ರಾದೇಶಿಕ ಘಟಕಗಳನ್ನು ಕಾವೇರಿ ನದಿ ಬೆಸೆದಿರುವುದು ಇಲ್ಲಿ ಗಮನಾರ್ಹ. ಅಂದರೆ ಧರ್ಮಪುರಿಯಿಂದ ಪಶ್ಚಿಮದ ಅರಬ್ಬೀ ಸಮುದ್ರದವರೆಗೆ ಚಾಚಿರುವ (ಇಂದಿನ ಚಾಮರಾಜನಗರ, ಮಂಡ್ಯ–ಮೈಸೂರು, ಕೊಡಗು ಮತ್ತು ಅದರಿಂದಾಚೆಯ ಕೇರಳ ಮತ್ತು ದಕ್ಷಿಣ ಕನ್ನಡ) ಪ್ರದೇಶಗಳು ಆ ಕಾಲದಲ್ಲಿ ಬಹು ಭಾಷಾ ಜನಾಂಗಗಳ ವಾಸಸ್ಥಾನಗಳಾಗಿದ್ದವೆಂದೂ ಇಂತಹ ಜನಾಂಗಗಳ ನಾಯಕರು ಗಳಲ್ಲಿ ಎರುಮೈ ಮತ್ತು ಅತಿಯಮಾನರು ಹೆಸರಾಂತ ವೇಳಿರ್‌ಗಳಾಗಿದ್ದರೆಂದೂ ಭಾವಿಸ ಬಹುದು. ತಮಿಳು ರಾಜಕೀಯದೊಡನೆ ಗುರುತಿಸಿಕೊಂಡ ಈ ತಮಿಳೇತರ ಪ್ರದೇಶದ (ವಡುಗ) ನಾಯಕರು ತಮಿಳಿಗೆ ಕೊಟ್ಟ ಸ್ಥಾನವನ್ನು ತಮ್ಮ ತಾಯ್ನುಡಿಗೂ ಸುತ್ತಮುತ್ತಲಲ್ಲಿ ಪ್ರಸಾರದಲ್ಲಿದ್ದ ಜನಾಂಗ ನುಡಿಗಳಿಗೂ ಕೊಟ್ಟಿದ್ದರೆಂಬುದು ಇಲ್ಲಿ ಸ್ಪಷ್ಟ.

ಸಂಗಂ ಸಾಹಿತ್ಯಕ್ಕೆ ಎರುಮೈಯವರ ಕೊಡುಗೆ: ಚೇರ ಮತ್ತು ಚೋಳರಲ್ಲದೆ ಸತಿಯಪುತರಂಥವರಿಗೆ ಸಮಾನರೆನಿಸಿ, ಪಾಂಡ್ಯರ ವಿರುದ್ಧ ಹೋರಾಡಿದ ಎರುಮೈ ನಾಯಕರ ರಾಜಕೀಯ ಅಂತಸ್ತು ಸಂಗಂ ಕಾಲದ ಪೆರುವೇಳಿರ್‌ಗಳಲ್ಲಿ ಯಾರಿಗೂ ಕಡಿಮೆಯದಾಗಿರಲಿಲ್ಲ ವೆಂಬುದನ್ನು ಗಮನಿಸುವುದವಶ್ಯ. ಶ್ವೇತಛತ್ರ ಮತ್ತು ರಾಜಡಿಂಡಿಮದ ಗೌರವವನ್ನು ಪಡೆದಿದ್ದ ಇವರು ತಮ್ಮ ಕದನ ಕಲಾಪವನ್ನು ತಮಿಳಗಂ ಹೃದಯಭಾಗವಾದ ಕಾವೇರಿ ಮತ್ತು ವೈಗೈ ನದಿಯವರೆಗೂ ವಿಸ್ತರಿಸಿಕೊಂಡಿದ್ದರು ಮಾತ್ರವಲ್ಲ, ಸಂಗಂ ಕಾಲದ ಪ್ರಸಿದ್ಧ ರಾಜಮನೆ ತನಗಳಂತೆ ಇವರೂ ಸಂಗಂ ಕವಿಗಳನ್ನು ಪೋಷಿಸಿ ತಮ್ಮ ಜೇಷ್ಠತೆಯನ್ನು ಮೆರೆದಿದ್ದರು. ಈ ನೆಲದವರೇ ಆದ ಎರುಮೈವೆಟಯಾಣಾರ್ ಮತ್ತು ಅವನ ಪುತ್ರ (ಮಕಣಾರ್) ಕಟಲಣಾರ್ ಎಂಬ ಇಬ್ಬರು ಕವಿಗಳು ಎರುಮೈವೆಲಿ ಗ್ರಾಮದಲ್ಲಿ ಹುಟ್ಟಿದವರು. ಈ ತಂದೆ ಮಗ ರಚಿಸಿದ ನಾಲ್ಕು ಕವನಗಳು ಸಂಗಂ ಭಂಡಾರದಲ್ಲಿ ಪ್ರವೇಶ ಪಡೆದುಕೊಂಡಿವೆ. ಇವರಿಬ್ಬರ ಕಾವ್ಯಗಳ ಹಿಂತೆರೆಯಲ್ಲಿ ಕಂಡುಬರುವ ವಿಚಾರ, ಕಾನನದ ಸಂಪತ್ತು ಮತ್ತು ಬರಡುಭೂಮಿಯ ಬೇಗುದಿ, ಕಾವ್ಯರಂಗದಲ್ಲಿ ಕಾಣಿಸಿಕೊಂಡು ಕಣ್ಮರೆಯಾಗುವ ಪಾತ್ರಗಳು – ಕಾಡುಬೆಕ್ಕು, ಕಾಡುಕರಡಿ, ಹುತ್ತದ ಸುತ್ತ ಝೇಂಕರಿಸುವ ಮಿನುಗುಹುಳುಗಳು, ಮಳೆಗಾಲದ ಮಿಂಚು, ಕಮ್ಮಾರನ ತಿದಿ ಮತ್ತು ಅವನ ಬಡಿಗಲ್ಲು ಇವುಗಳನ್ನು ಪ್ರತಿಮಾತ್ಮಕವಾಗಿ ಬಳಸಲಾಗಿದೆ.

ಒಳನುಡಿ–ಹೊರನುಡಿ: ತಮಿಳು ಸಾಹಿತ್ಯಕ್ಕೆ ವಡುಗರು ಕೊಟ್ಟ ಪ್ರೋತ್ಸಾಹದ ಬಗೆಗೆ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಏಕೆಂದರೆ ಲಿಪಿಮೂಲಕ ಗುರುತಿಸಿಕೊಂಡಿದ್ದ ಸಾಹಿತ್ಯಕ ಹಾಗೂ ಸಂಪರ್ಕಮಾಧ್ಯಮದಲ್ಲಿ ಅಂದಿಲ್ಲಿ ತಮಿಳಿಗೆ ಏಕಸ್ವಾಮ್ಯವಿದ್ದು, ಆಸ್ಥಾನ ಭಾಷೆಯಾಗಿದ್ದ ತಮಿಳಿನಲ್ಲಿ ಸ್ಪಂದಿಸುವುದು ತಮಿಳು ರಾಜ್ಯಗಳೊಡನೆ ಸಂಪರ್ಕದಲ್ಲಿದ್ದ ಅಂದಿನ ವಡುಗರಿಗೆ ಅನಿವಾರ್ಯವಾಗಿತ್ತು. ವ್ಯಾವಹಾರಿಕ ಮತ್ತು ಸಾಹಿತ್ಯಕ ಭಾಷೆಗಳು ಕೈಕೈ ಹಿಡಿದು ಸಹಬಾಳ್ವೆ ಮಾಡಿರುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಸ್ಥಳೀಯ ವ್ಯವಹಾರ, ಆಂತರಿಕ ಆಡಳಿತ, ಕೌಟುಂಬಿಕ, ಗ್ರಾಮೀಣ ಮತ್ತು ಜನಪದೀಯ ಕಲಾಪ ಮುಂತಾದವು ಸಾಮಾನ್ಯವಾಗಿ ದೇಸೀ ಮಾಧ್ಯಮಗಳನ್ನು ಹೆಚ್ಚು ಅವಲಂಬಿಸಿದ್ದರೆ, ಸಾಹಿತ್ಯಕ ಹಾಗೂ ಅಂತರ–ಪ್ರಾದೇಶಿಕ ಸಂಪರ್ಕಕ್ಕೆ ಸಾಮಾನ್ಯವಾಗಿ ಮಾರ್ಗ ಮಾಧ್ಯಮ ಬಳಸಿಕೊಳ್ಳಲು ಹೆಚ್ಚು ಒಲವನ್ನು ತೋರಿಸಿರುವುದನ್ನು ನಾವು ಇತಿಹಾಸದ ಅನೇಕ ಘಟ್ಟಗಳಲ್ಲಿ ಕಾಣಬಹುದು. ಇದೊಂದು ಕಡ್ಡಾಯದ ನಿಯಮವಾಗಿರಲಿಲ್ಲ. ಸಹಜವಾಗಿ ಬೆಳೆದುಕೊಂಡ ಒಲವಾಗಿತ್ತು. ಕನ್ನಡದ ನೆಲದಲ್ಲಿ ರಾಜ್ಯ ಕಟ್ಟಿ ಸಾಮ್ರಾಟ ಹಂತಕ್ಕೇರಿದ ಕದಂಬ, ಬಾದಾಮಿ ಚಳುಕ್ಯ ಮತ್ತು ರಾಷ್ಟ್ರಕೂಟರು ಸಂಸ್ಕೃತಕ್ಕೆ ಕೊಟ್ಟ ಸ್ಥಾನವನ್ನು ಅರ್ಥಮಾಡಿಕೊಂಡರೆ ಇವರೆಲ್ಲರಿಗಿಂತ ಪೂರ್ವಕಾಲದಲ್ಲಿದ್ದ ಕನ್ನಡ ಪ್ರದೇಶದ ರಾಜಕೀಯ ಶಕ್ತಿಯಾದ ಎರುಮೈಯವರು ತಮಿಳಿಗೆ ಕೊಟ್ಟ ಸ್ಥಾನವನ್ನು ಹೆಚ್ಚು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಎರುಮೈಯವರು ಮತ್ತು ತಮಿಳುಬ್ರಾಹ್ಮಿ: ಪ್ರ.ಶ.ಪೂರ್ವಕಾಲದ ದಕ್ಷಿಣ ಭಾರತದಲ್ಲಿ ಲಿಪಿರಹಿತ ಜನಾಂಗಗಳಿಗೆ ತಮ್ಮ ಬದುಕಿನ ಬಗೆಯನ್ನೂ ಭಾವನೆಯನ್ನೂ ಮೌಖಿಕವಾಗಿ ಅಭಿವ್ಯಕ್ತಿಗೊಳಿಸಲು ಅವರವರ ತಾಯ್ನುಡಿಗಳಿದ್ದವು. ಆದರೆ ತಮ್ಮ ಸಾಧನೆಗಳನ್ನು ದಾಖಲಿಸಿ ಡಲು, ರಕ್ಷಿಸಲು ಮತ್ತು ಅವನ್ನು ಶಾಶ್ವತಗೊಳಿಸಲು ಅವರಿಗಿದ್ದ ಏಕಮೇವ ಮಾಧ್ಯಮವೆಂದರೆ ಪ್ರೌಢಾವಸ್ಥೆ ಮುಟ್ಟಿದ್ದ ತಮಿಳು. ಎರುಮೈಯವರು ಕೂಡ ಆಂತರಿಕ ವ್ಯವಹಾರಗಳನ್ನು ತಮ್ಮ ತಾಯ್ನುಡಿಯಲ್ಲಿ ನಡೆಸುತ್ತ ತಮಿಳನ್ನು ಸಂಪರ್ಕಭಾಷೆಯನ್ನಾಗಿ ಮಾಡಿಕೊಂಡ ಸಾಧ್ಯತೆಗಳುಂಟು. ತಮಿಳೇತರರಾದ ಇವರ ತಾಯ್ನುಡಿಯ ಸ್ಪಷ್ಟ ಸುಳಿ ದೊರಕುವುದಿಲ್ಲ. ಕಾರಣ ಅದು ಯಾವುದಾಗಿತ್ತು ಎಂಬುದನ್ನು ನಿರ್ಧರಿಸಲು ಹೆಚ್ಚಿನ ಮಾಹಿತಿಗಳಿಲ್ಲ. ಆದರೆ ತಮಿಳಗಂ ಕಾರ್ಯಕ್ಷೇತ್ರದಲ್ಲಿಯ ತಮ್ಮ ವ್ಯವಹಾರಕ್ಕೆ ಅವರು ತಮಿಳುಬ್ರಾಹ್ಮಿ ಬಳಸಿಕೊಂಡರೆಂಬುದಕ್ಕೆ ಅವರು ಕೊರೆಸಿದ ಶಾಸನವೊಂದು ಸಾಕ್ಷಿಯಾಗಿದೆ. ಪ್ರಾಗಿತಿಹಾಸ ಕಾಲದ ಕೊನೆಯ ಅಂಚಿನಲ್ಲಿ, ತಮಿಳಗಂ ಪ್ರದೇಶದ ಹೊರ ಅಂಚಿನಲ್ಲಿದ್ದ ಲಿಪಿರಹಿತ ವಡುಗ ಜನಾಂಗವೊಂದು ಮಾಡಿದ ಪ್ರಪ್ರಥಮ ಸಾಧನೆ ಇದೆನ್ನಬಹುದು. ಇದರಿಂದಾಗಿ

ಎರುಮೈಯರವರಿಗೆ ಲಿಖಿತ ಇತಿಹಾಸದಲ್ಲಿ ಶಾಶ್ವತ ಸ್ಥಾನ ದೊರಕಿದ್ದು ಮಾತ್ರವಲ್ಲದೆ, ಕನ್ನಡ ಪ್ರದೇಶದ ಅತಿಪೂರ್ವ ಕಾಲದ ರಾಜಮನೆತನದ ಬಗ್ಗೆ ತಿಳಿದುಕೊಳ್ಳಲು ಶಾಸನ ಆಧಾರವೂ ದೊರಕಿದಂತಾಗಿದೆ.

ಕನ್ನಡ ನಾಡಿನ ಇತಿಹಾಸದ ಮೈಲುಗಲ್ಲಾದ ಈ ತಮಿಳುಬ್ರಾಹ್ಮಿ ಶಾಸನದ ಪೂರ್ಣ ಪಾಠವನ್ನೂ ಅದರಿಂದ ಹೊರಹೊಮ್ಮುವ ಕನ್ನಡದ ಸೊಡರನ್ನೂ ಪರಿಚಯಿಸಿಕೊಳ್ಳಬೇಕಾದ ಅಗತ್ಯವಿದೆ. ಈ ಶಾಸನವಿರುವುದು ಪುದಕೋಟ್ಟೈ ಜಿಲ್ಲೆಯ ಸಿತ್ತನವಾಸಲ್‌ನ ಏಳಾಟಿಪಟ್ಟಂ ಗುಹೆಯಲ್ಲಿ. ಇದರ ಕಾಲ ಪ್ರ.ಶ.ಪೂ.1ನೆಯ ಶತಮಾನ. ಇದಕ್ಕೆ ಬಳಸಿದ ಭಾಷೆ ತಮಿಳು, ಲಿಪಿ ಬ್ರಾಹ್ಮಿ. ಈ ಶಾಸನದ ಕನ್ನಡ ರೂಪಾಂತರ ಇಂತಿದೆ:

ಎರುಮಿನಾಟ ಕುಮುಜೂರಿನಲ್ಲಿ ಜನಿಸಿದ (ಪಿಱಂತು) ಕುವಟಿ (ಕುವಟಿ ಎಂಬ ಹೆಸರಿನ ಅಥವಾ ಗವುಡಿ=ಗೌಡಿ). ತೆಙ್ಕು–ಶಿಱುಪೊಶಿಲ್‌ನ ಇಳಯರ್ ಮಾಡಿ(ಸಿ)ದ ಅತಿಟಣಮ್ (ಅಧಿಷ್ಠಾನ; ವೇದಿಕೆ). ಅಂದರೆ ಮೈಸೂರು ಪ್ರದೇಶದ ಕುಮುಳೂರಿನಲ್ಲಿ (ಕುಂಬಳೂರು=ಕುಂಬ್ಳೂರು) ಜನಿಸಿದ (ಜಿನಭಕ್ತೆಯಾದ) ಕುವಟಿ (ಗೌಡತಿ)ಯೊಬ್ಬಳ (ಸಮಾಧಿ ಆಚರಣೆಗೆ) ಒಂದು ಅಧಿಷ್ಠಾನವನ್ನು (ಶಿಲಾವೇದಿಕೆ ಅಥವಾ ಹಾಸಿಗೆ) ಗುಡ್ಡದ ಹೊಸ್ತಿಲ ಪ್ರದೇಶದವನಾದ ಇಳಯಾರ್ (ಎಂಬ ವೀರ ಅಥವಾ ನಾಯಕ) ಮಾಡಿ(ಸಿ) ಕೊಟ್ಟ ಎಂದು ಅರ್ಥ.

ಸಂಗಂ ತಮಿಳಿನ ಮೇಲೆ ಕನ್ನಡದ ಪ್ರಭಾವ: ಈ ಶಾಸನದ ಪಾಠವನ್ನು ಅರ್ಥೈಸುವಾಗ ಇದರೊಂದಿಗೆ ತಿರುಪ್ಪರಂಕುನ್ರಮ್ ಅದಕಲ್–ಅ ಮತ್ತು ನೆಡನೂರ್‌ಪತ್ತಿಯಲ್ಲಿ ದೊರೆತ ಮೂರು ತಮಿಳುಬ್ರಾಹ್ಮಿ ಶಾಸನಗಳನ್ನು ಹಿನ್ನೆಲೆಯನ್ನಾಗಿಸಿಕೊಂಡು, ಪ್ರ.ಶ.ಪೂ.1–ಪ್ರ.ಶ.4ನೆಯ ಶತಮಾನದ ಕಾಲಾವಧಿಯಲ್ಲಿ ತಮಿಳಿನ ಮೇಲೆ ಹಳೆಗನ್ನಡ ಬೀರಿದ ಪ್ರಭಾವವನ್ನು ತಮಿಳು ನಾಡಿನ ಶಾಸನತಜ್ಞರಾದ ಐರಾವತಂ ಮಹದೇವನ್ ಗುರುತಿಸಿದ್ದಾರೆ. ಅದು ಇಲ್ಲಿಯವರೆಗೂ ಯಾರೂ ಶಂಕಿಸಲಾರದಂತಹ ಅದ್ಭುತವೆಂಬುದನ್ನು ಅವರೇ ಸ್ಪಷ್ಟಪಡಿಸಿದ್ದಾರೆ. ಪ್ರ.ಶ.ಪೂ. ಕಾಲದ ಕೊನೆಯ 2–3 ಶತಮಾನಗಳಲ್ಲಿ ಕನ್ನಡ ಪದಕೋಶ, ವ್ಯಾಕರಣಪ್ರಯೋಗ, ಸಂಬೋಧಕ ಪ್ರಕ್ರಿಯೆ, ಎಷ್ಟರಮಟ್ಟಿಗೆ ಬೆಳೆದಿದ್ದವು ಮತ್ತು ಇವೆಲ್ಲವೂ (ಜೈನ ವಲಸೆಗಾರರ ಮೂಲಕ) ಸಮಕಾಲೀನ ತಮಿಳುಬ್ರಾಹ್ಮಿ ಮೇಲೆ ಯಾವ ಬಗೆಯಲ್ಲಿ ಪರಿಣಾಮ ಬೀರಿದ್ದವು ಎಂಬುದನ್ನು ಅವರು ಅನಾವರಣಗೊಳಿಸಿದ್ದಾರೆ. ಸಂಕ್ಷಿಪ್ತವಾಗಿ ಅವರ ವಾದ ಇಂತಿವೆ: 1. ಎರುಮಿನಾಟು ಎಂಬ ಕನ್ನಡ ಪದದ ತಮಿಳು ರೂಪಾಂತರ ಎರುಮೈನಾಟು. ಇವುಗಳಲ್ಲಿ ಎರುಮಿ ಎಂಬುದೇ (ತಮಿಳಿನ ಎರುಮೈ, ತುಳುವಿನ ಎರ್ಮೆ, ಗೋಂಡಿಯ ಎರ್ಮಿ) ಮೂಲ ನುಡಿಗಟ್ಟು. 2. ಕವುಟ ಎಂಬುದು ಒಬ್ಬ ವ್ಯಕ್ತಿಯ ಅಥವಾ ಮನೆತನದ ಹೆಸರು. ಇದು ಗವುಡಿ, ಗೌಡಿಗೆ ಸಮಾನ. 3. ಪೊಶಿಲ್ ಎಂದರೆ ದ್ವಾರ ಅಥವಾ ಬಾಗಿಲು. ತೆಙ್ಕ–ಶಿರು–ಪೊಶಿಲ್ ಎಂಬುದು ಒಂದು ಪ್ರದೇಶವನ್ನು ನಿರ್ದೇಶಿಸುವ ಪದ. ಪೊಶಿಲ್ ಎಂಬ ಪದ ತಮಿಳಿನಲ್ಲಿ ರುಜುವಾತನ್ನು ಪಡೆದಿರುವುದಿಲ್ಲ; ಇದು ಕನ್ನಡ ಮೂಲದ ಹೊಸಿಲುವಿನಿಂದ ಪಡೆದುಕೊಂಡಿದ್ದು, ಅನಂತರದ ತಮಿಳು ಶಾಸನಗಳಲ್ಲಿ ವಾಯಿಲ್ ರುಜುವಾತು ಪಡೆದುಕೊಳ್ಳುತ್ತಿದೆ (ಪೊಶಿಲ್ ಅಲ್ಲ). 4. ತಮಿಳುಬ್ರಾಹ್ಮಿ ಶಾಸನವೊಂದರಲ್ಲಿ ತಾಯಿಯರ್ (ಎಂಬ ಗೌರವಸೂಚಕ ಪದ) ಬಳಕೆಯಾಗಿರುವುದು. ಈ ಪದ ನಿಸ್ಸಂಶಯವಾಗಿಯೂ ಕನ್ನಡ ಮೂಲದ್ದು, ಹಳೆಗನ್ನಡ ದಾಖಲೆಗಳಲ್ಲಿ ಇದು ಕಾಣಿಸಿಕೊಳ್ಳದಿರಬಹುದು, ಆದರೆ ಅವಶ್ಯವಾಗಿ ಆ ಕಾಲದ ಆಡುನುಡಿಯಲ್ಲಿ ಅದು ಪ್ರಚಾರದಲ್ಲಿತ್ತೆಂಬುದರಲ್ಲಿ ಅನುಮಾನವಿಲ್ಲ. 5. ವ್ಯಕ್ತಿನಾಮ ಮತ್ತು ಗೌರವ ಸೂಚಕ ತಮಿಳು ಪದಗಳ ಮೇಲೆ ಆದ ಕನ್ನಡದ ಪ್ರಭಾವವನ್ನೂ ಗುರುತಿಸಬಹುದು. ಅಯ(ಶ್)ಶ (ಅಯಶ್ಯ), ಪೊಲಾಲ್‌ಬಿ (ಪೊಲಾಲ) ಮತ್ತು ಆದಿ ಪ್ರತ್ಯಯಗಳಾದ ಅಣ್ಣಿ ಅ(ಪ್)ಪ (ಅಪ್ಪ) ಮತ್ತು ಅ(ಯ)ಯಣ (ಅಯ್ಯಣ)ಗಳು ಹಳೆಗನ್ನಡದ ಧ್ವನ್ಯನುಕರಣದ ನಿಯಮಕ್ಕೆ ಹೆಚ್ಚು ಸಲೀಸಾಗಿ ಹೊಂದಿಕೊಳ್ಳುವುವೇ ಹೊರತು ತಮಿಳಿನದಕ್ಕಲ್ಲ. 6. ವ್ಯಾಕರಣ ಪ್ರಯೋಗಗಳಲ್ಲಿ (ದೀರ್ಘ) ಷಷ್ಠೀ ವಿಭಕ್ತಿಯ ಆದಿಪ್ರತ್ಯಯ ಅ(ಹ್ರಸ್ವ) ಪ್ರತ್ಯಯಕ್ಕಿಂತ ಪೂರ್ವಕಾಲದ್ದಾಗಿದ್ದು ಇದರ ಬಳಕೆಯನ್ನು ಹಳೆಗನ್ನಡದ ಶಾಸನಗಳಲ್ಲಿ ಮೊಟ್ಟಮೊದಲು ಕಾಣಬಹುದು; ತಮಿಳಿನಲ್ಲಿ ಇದಕ್ಕೆ ಸ್ಥಾನಾವಕಾಶವಿಲ್ಲ. ಇದರಂತೆ ಮೃದುಧ್ವನಿ ಮೇಳದಿಂದ ಅಂತ್ಯಗೊಳ್ಳುವ ಮಧುರಾದಿಪ್ರತ್ಯಯಕ್ಕೆ (ಉದಾ: ಊರು) ಪುರಾತನ ತಮಿಳಿನಲ್ಲಿ ಅವಕಾಶವಿಲ್ಲ; ಹಳೆಗನ್ನಡದಲ್ಲಿ ಇದಕ್ಕೆ ಬರವಿಲ್ಲ. 7. ಭಾಷೆ, ವ್ಯಾಕರಣ, ಪದಕೋಶ ಮತ್ತು ಪದಬಳಕೆಗೆ ಸಂಬಂಧಿಸಿದವುಗಳಲ್ಲದೆ, ತಮಿಳಗಂ ಮೇಲೆ ಕನ್ನಡನಾಡು ಬೀರಿದ ಪ್ರಭಾವವನ್ನು ಆರಂಭಕಾಲದ ಜೈನರ ಒಡನಾಟದಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಜೈನರು ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕದಿಂದ ತಮಿಳುನಾಡಿಗೆ ವಲಸೆ ಹೋಗಿ ಅಲ್ಲಿ ಕೆಲವು ಕೇಂದ್ರಗಳನ್ನು ಸ್ಥಾಪಿಸಿದರೆಂಬುದಕ್ಕೆ ತಮಿಳುನಾಡಿನ ಗುಹಾಲಯಗಳಲ್ಲಿರುವ ತಮಿಳು ಬ್ರಾಹ್ಮಿ ಶಾಸನಗಳೇ ಸಾಕ್ಷಿ ಒದಗಿಸುವುವು. 28 ಕೇಂದ್ರಗಳಲ್ಲಿ ಕೊರೆಸಿದ 84 ಜೈನ ಶಾಸನಗಳು ಇಲ್ಲಿಯವರೆಗೂ ದೊರಕಿದ್ದು ಇವುಗಳ ಪಾಠಗಳಲ್ಲಿ ಹಲವಾರು ಕನ್ನಡ (ಪ್ರಾಕೃತ, ಸಂಸ್ಕೃತ ಪದಗಳು ಕನ್ನಡ ಪ್ರದೇಶದ ಮೂಲಕ) ಪದಗಳು ತಮಿಳುನಾಡನ್ನು ತಲುಪಿದ್ದನ್ನು ತೋರಿಸಿ ಕೊಡುವವು. ಈ ಶಾಸನಗಳಲ್ಲಿ ಬರುವ ಹಳೆಗನ್ನಡದ ಪದಗಳಲ್ಲಿ ಕಣಿ (ಗಣಿ), ಅಮಣಣ್ (ಪ್ರಾ. ಸಮಣ–ತಮಿಳಿನಲ್ಲಿ ಶ ಲುಪ್ತಗೊಂಡಿರುವುದು), ಉಪಶನ್ (ಪ್ರಾ. ಉಪಝಾಯ (ಕ) ಉವಜ್ಝರ್=ಓಜರ್) ಆಶಾರಿಯರ್ (ಸಂ. ಆಚಾರ್ಯರು); ಕಂತಿ (ಕ. ಗಂತಿ, ಕಂತಿ ನಾಮಪದವಾದಾಗ ಕವುಂತಿ) ಗಮನಾರ್ಹ.

ಈ ಎಲ್ಲ ಆಧಾರಗಳ ಮೇಲೆ ಲಿಪಿರಹಿತವಾಗಿದ್ದರೂ ಸಂಗಂ ಕಾಲಕ್ಕಾಗಲೇ ಕನ್ನಡ ಬೆಳೆದ ಭಾಷೆಯಾಗಿತ್ತೆಂಬುದು ಮತ್ತು ಪ್ರಬುದ್ಧಾವಸ್ಥೆಯನ್ನು ಮುಟ್ಟಿದ್ದ ತಮಿಳಿನ ಮೇಲೆ ಪ್ರಭಾವ ಬೀರಬಲ್ಲ ಜಿಗುಟತನವನ್ನು ಅದು ಗಳಿಸಿಕೊಂಡಿತ್ತೆಂಬುದು ಸ್ಪಷ್ಟವಾಗುತ್ತದೆ.

ಐರಾವತಂ ಮಹಾದೇವನ್ ಗಮನಕ್ಕೆ ಬಾರದ ಒಂದೆರಡು ಪದಗಳನ್ನಿಲ್ಲಿ ಪ್ರಸ್ತಾಪಿಸಿ, ಅವುಗಳ ಮೂಲವನ್ನು ಶೋಧಿಸಲು ಪ್ರಯತ್ನಿಸಬಹುದು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿರುವ ನಾಡು ಎಂಬ ಆಡಳಿತ ಘಟಕಕ್ಕೆ ಮಧ್ಯಕಾಲದವರೆಗಿನ ತಮಿಳು, ಕನ್ನಡ, ತೆಲುಗು ಶಾಸನಗಳಲ್ಲಿ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ಇದರ ಬಗೆಗೆ ಇತ್ತೀಚೆಗೆ ಆಳವಾದ ಸಂಶೋಧನೆಯನ್ನೂ ಮಾಡಲಾಗಿದೆ. ಆದರೆ ಈ ಪದವನ್ನು ಸೃಷ್ಟಿಸಿ ಜಾರಿಗೆ ತಂದವರು ಯಾರು ಮತ್ತು ನಾಡು ಎಂಬ ಆಡಳಿತ ಘಟಕ ಮೊದಲು ಪ್ರಾರಂಭವಾದದ್ದು ಎಲ್ಲಿ ಎಂಬುದರ ಬಗೆಗೆ ಚರ್ಚೆ ನಡೆದಿದೆ. ಇತಿಹಾಸಕಾರರೆಲ್ಲರೂ ಈಗ ನಂಬಿರುವಂತೆ ಇದು ತಮಿಳುನಾಡಿನ ಆಡಳಿತ ಇತಿಹಾಸದಲ್ಲಿ ಹಾಸುಹೊಕ್ಕಾದ ಪದ. ನಾಟು, ನಾಟ್ಟು ಪದಗಳು ಸಂಗಂ ಸಾಹಿತ್ಯದಲ್ಲಿ ಬರುವುವಾದರೂ ಕಾಲದ ಬಗೆಗೆ ವಿವಾದವಿರುವ ಈ ಸಾಹಿತ್ಯಕ ಆಕರವನ್ನೇ ಆಧರಿಸಿ ಈ ಆಡಳಿತ ಘಟಕದ ಮೂಲವನ್ನು ನಿರ್ಧರಿಸುವುದು ಕಷ್ಟಸಾಧ್ಯ. ಆದರೆ ಮೊಟ್ಟಮೊದಲ ಬಾರಿಗೆ ನಾಟು ಪದವನ್ನು ದಾಖಲಿಸಿದವರು ಎರುಮಿನಾಟವರು ಎಂಬುದರಲ್ಲಿ ಅನುಮಾನವಿಲ್ಲ. ಈಗಾಗಲೇ ಕಂಡಂತೆ ಈ ಎರುಮಿನಾಟು ಎಂಬುದು ತಮಿಳಗಂ ಉತ್ತರಕ್ಕಿದ್ದ ಮೈಸೂರು ಪ್ರದೇಶ. ಅವರನ್ನು ಕುಡನಾಡ ಎರುಮೈಗಳೆಂದು ಸಂಗಂ ಕವಿ ಮಾಮುಲನಾರ್ ಒಂದೆಡೆ ತಿಳಿಸಿದ್ದಾನೆ. ಕುಡನಾಡನ್ನು ಕೊಡಗುನಾಡು ಎಂದು ಗುರುತಿಸಲಾಗಿದೆ. ಇದು ಏನೇ ಇರಲಿ, ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಪ್ರಥಮ ನಾಡು ಘಟಕ ಮೈಸೂರು ಪ್ರದೇಶದಲ್ಲಿ ಸ್ಥಾಪನೆಗೊಂಡಿತ್ತೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಇದಕ್ಕೆ ಬೆಂಬಲವನ್ನು ಆರಂಭಕಾಲದ ತಮಿಳು ಮತ್ತು ಕನ್ನಡ ಶಾಸನಗಳು ಒದಗಿಸುತ್ತವೆ. ಸಿತ್ತನವಾಸಲ್ ಶಾಸನದ ಎರುಮಿನಾಟಿನ ಉದಾಹರಣೆಯನ್ನು ಹೊರತುಪಡಿಸಿದರೆ, ಪ್ರ.ಶ.ಪೂ.2ನೆಯ ಶತಮಾನದಿಂದ ಪ್ರ.ಶ.6ನೆಯ ಶತಮಾನದವರೆಗಿನ 800ವರ್ಷ ಕಾಲಾವಧಿಯ ತಮಿಳುಬ್ರಾಹ್ಮಿ ಮತ್ತು ವಟ್ಟೆಳುತ್ತು ಶಾಸನಗಳಲ್ಲೆಲ್ಲಿಯೂ ನಾಟು, ನಾಟ್ಟು, ನಾಡು ಪದಗಳು ಕಾಣಿಸಿಕೊಳ್ಳುವುದಿಲ್ಲ ಎಂಬುದು ಗಮನಾರ್ಹ. ಅಂದರೆ ಸಂಗಂ ಕಾವ್ಯದಲ್ಲಿ ಬರುವ ಉಲ್ಲೇಖಗಳು ಅಂದಿನ ವಾಸ್ತವಿಕ ಆಡಳಿತ ಘಟಕಗಳನ್ನು ಪ್ರತಿನಿಧಿಸುತ್ತಿದ್ದರೆ ಅವುಗಳಲ್ಲಿ ಒಂದಾದರೂ ಐತಿಹಾಸಿಕ ದಾಖಲೆಗಳಲ್ಲಿ ಏಕೆ ಸ್ಥಾನ ಪಡೆದುಕೊಳ್ಳಲಿಲ್ಲ ಎಂಬ ಪ್ರಶ್ನೆ ಉದ್ಭವಿಸುವುದು. 6ನೆಯ ಶತಮಾನದ ವಟ್ಟೆಳುತ್ತು ಶಾಸನ ತಮಿಳುನಾಡಿನ ಪರಯನ್‌ಪತ್ತು ಗುಹಾಲಯದಲ್ಲಿದ್ದರೂ ಇದು ಪಾಣಾಟ ಜೈನ ಮುನಿಯ ಆರಾಧನಾ ನಿಶಿದಿಕೆಯಾಗಿರುವುದೆಂಬುದನ್ನು ನಿರ್ಲಕ್ಷಿಸುವಂತಿಲ್ಲ. ಎರುಮಿನಾಟಿನಂತೆ ಈ ಪಾಣಾಟವೂ (ಕಾವೇರಿ–ಕಬಿನಿ ಪ್ರದೇಶದ) ಪುನ್ನಾಟದ ಪರಿಸರದಲ್ಲಿ ತ್ತೆಂದು ಕಾಣುವುದು. ತಮಿಳುನಾಡಿನಲ್ಲಿ ದೊರೆಯುವ ಈ ಚಿತ್ರಕ್ಕೆ ಬದಲಾಗಿ ಪ್ರ.ಶ.ಪೂ.2ನೆಯ ಶತಕದಿಂದ ನಾಟು ಎಂಟು ಎಂಬ ಆಡಳಿತ (ರಾಜ್ಯ) ಘಟಕ ಕನ್ನಡ ಶಾಸನ ಸಹಾಯಕ್ಕೆ ಬರುತ್ತದೆ. ಮೈಸೂರು ಪರಿಸರದಲ್ಲಿಯೇ ಇರುವ ಈ ಶಾಸನ ನರಿದಾವಿ(ಳೆ)ನಾಡನ್ನು ಉಲ್ಲೇಖಿಸುವುದರಿಂದ ಈ ಪದಬಳಕೆ ಮತ್ತು ಈ ಪದ ಸೂಚಿಸುವ ಆಡಳಿತ ಘಟಕಗಳು ತಮಿಳರಿಗಿಂತ ಹೆಚ್ಚು ಆಳವಾಗಿ ಇಲ್ಲಿ ಬೇರುಬಿಟ್ಟಿದ್ದವೆನ್ನಬಹುದು. ವಲಸೆ ಹೋದ ಜೈನರು ತಮ್ಮ ತವರೂರಿನಲ್ಲಿದ್ದ ನಾಟು ಘಟಕಗಳನ್ನು ಸಿತ್ತನವಾಸಲ್‌ನಂತೆ ಉಳಿದೆಡೆ ತಮಿಳರಿಗೆ ಪರಿಚಯಿಸಿ ಕೊಟ್ಟಿರಲು ಸಾಧ್ಯ ಎಂಬ ಅನುಮಾನಕ್ಕೆ ಅವಕಾಶವಿದೆ. ಈ ಆಧಾರದ ಮೇಲೆ ಕನ್ನಡ ಪ್ರದೇಶದಲ್ಲಿ ಹೆಚ್ಚು ಬೇರುಬಿಟ್ಟಿದ್ದ ನಾಟು=ನಾಡು ಪದವನ್ನು ಕಾಲಾನಂತರದಲ್ಲಿ ತಮಿಳರು ಪಡೆದುಕೊಂಡರೆಂದೂ 6ನೆಯ ಶತಮಾನದ ಅನಂತರ ಇದನ್ನು ತಮ್ಮದನ್ನಾಗಿಸಿ ಕೊಂಡು ಹೆಚ್ಚು ಪ್ರಸಾರಕ್ಕೆ ಅವರು ತಂದರೆಂದೂ ವಾದಮಾಡಲು ಸಾಧ್ಯವಿದೆ. ಇದು ಏನೇ ಇರಲಿ, ತಮಿಳರ ಪ್ರದೇಶ ತಮಿಳಗಂ (ತಮಿಳುನಾಡು ಎಂದಲ್ಲ) ಎಂದೇ ಪ್ರಚಾರದಲ್ಲಿದ್ದ ಕಾಲದಲ್ಲಿ ನಾಡು ಪ್ರತ್ಯಯವನ್ನು ಹೊಂದಿದ ಕರು–ನಾಡು ಘಟಕವು ಅದರ ಉತ್ತರದಲ್ಲಿ ಅಸ್ತಿತ್ವದಲ್ಲಿದ್ದುದು ಇಲ್ಲಿ ಗಮನಾರ್ಹ.

ಸಿತ್ತನವಾಸಲ್ ತಮಿಳುಬ್ರಾಹ್ಮಿ ಶಾಸನದಲ್ಲಿ ಉಲ್ಲೇಖಗೊಂಡಿರುವ ಇಳಯರ್ ಪದದ ಬಗ್ಗೆಯೂ ಒಂದು ಅಡಿಟಿಪ್ಪಣಿ ಅವಶ್ಯವೆನಿಸುವುದು. ಮಹಾದೇವನ್ ಈ ಪದವನ್ನು ಯುದ್ಧವೀರರ ಬಿರುದು ಎಂದು ಅರ್ಥೈಸಿ, ಅವರನ್ನು ಇಳಾಮಕ್ಕಳ್ ಎಂದೂ ಕರೆಯಲಾಗುತ್ತಿತ್ತೆಂದು ತಿಳಿಸಿದ್ದಾರೆ. ಇದರಂತೆ ತೆಙ್ಕು–ಶಿರು–ಪೊಶಿಲ್ ಎಂಬುದು ಬೆಟ್ಟದ ಹೊಸಲಿನಲ್ಲಿದ್ದ ಒಂದು ಪುರಾತನ ಆಡಳಿತ ಘಟಕ ಎಂದು ಅವರು ಅರ್ಥೈಸಿದ್ದಾರೆ. ಆದರೆ ಈ ಯುದ್ಧವೀರರು ಯಾರು ಮತ್ತು ಆ ಬೆಟ್ಟ ಪರಿಸರ ಯಾವುದಾಗಿತ್ತು ಎಂಬ ಪ್ರಶ್ನೆಗಳನ್ನು ಅವರು ಎತ್ತಿಲ್ಲ. ಸಂಗಂ ಕಾವ್ಯದ ಆಧಾರದ ಮೇಲೆ ಈ ಪ್ರಶ್ನೆಗಳಿಗೆ ಉತ್ತರ ಕೊಡಬಹುದೆನಿಸುತ್ತದೆ. ಅಹನಾನೂರಿನ ಕವಿ ಕಲ್ಲಡನಾರ್ ಒಂದೆಡೆ ಇಳೆಯರ್‌ರನ್ನು ಅನಕ್ಷರಸ್ಥರು ಎಂಬ ಅರ್ಥದಲ್ಲಿ ಸಂಬೋಧಿಸಿದ್ದಾನೆ. ಇದನ್ನು ತಮಿಳು ಭಾಷೆಯನ್ನು ಅರಿಯದವರೆಂದು ಅರ್ಥೈಸಬಹುದು. ಗಿರಿಪ್ರದೇಶದಲ್ಲಿ ನೆಲಸಿದ್ದ ತಮಿಳೇತರ ವೀರ(ಇಳವರ್) ಮನೆತನದ ಜೈನನೊಬ್ಬ ಈ ಶಾಸನವನ್ನು ಕೊರೆಸಿದನೆಂದೂ ಅವನು ಮತ್ತಾರೂ ಆಗಿರದೆ ಘಟ್ಟದ ಆಚೀಚೆ ಚಾಚಿಕೊಂಡಿದ್ದ ಎರುಮಿನಾಟಿನವನಾಗಿದ್ದನೆಂದೂ ನಿರ್ಣಯಿಸಬಹುದಾಗಿದೆ. (ಎಸ್.ಎಸ್.)

**ಸಂಘೋಲ್:** ಪಂಜಾಬಿನ ರಾಜಧಾನಿ ಚಂಡೀಗಡದ ಹತ್ತಿರದ ಐತಿಹಾಸಿಕ ನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಜಗತ್ಪತಿ ಜೋಶಿ ಮತ್ತು ತಂಡ ಇಲ್ಲಿ ಹರಪ್ಪ ಪೂರ್ವ, ಪ್ರೌಢ ಹರಪ್ಪ ಅಂತ್ಯ ಹರಪ್ಪ ಮತ್ತು ಇತಿಹಾಸ ಕಾಲದ ಜನವಾಸ್ತವ್ಯವಿದ್ದ ಕುರುಹುಗಳಿದ್ದುದನ್ನು ಪತ್ತೆ ಹಚ್ಚಿದರು.

1969–73 ಮತ್ತು 1978–83 ಅವಧಿಯಲ್ಲಿ ಪಂಜಾಬ್ ರಾಜ್ಯ ಸರ್ಕಾರದ ಪುರಾತತ್ತ್ವ–ವಸ್ತುಸಂಗ್ರಹಾಲಯ ಇಲಾಖೆ ನಡೆಸಿದ ಉತ್ಖನನದಲ್ಲಿ ಮಥುರ ಶೈಲಿಯ ಬಿಳಿಚುಕ್ಕೆಯ ಕೆಂಪು ಮರಳುಕಲ್ಲಿನ 117 ಉತ್ಕೃಷ್ಟ ಮೂರ್ತಿಗಳು, ಸಾಮಾನ್ಯವಾಗಿ ಸ್ತೂಪದ ಸುತ್ತಲಿರುವ

ಸ್ತೂಪದ ಅಧಿಷ್ಠಾನ

58 ಉಷ್ಣೀಷ, ಸೂಚಿ ಬೇಲಿಯ ಭಾಗಗಳು ಮೊದಲಾದವು ಬೆಳಕಿಗೆ ಬಂದುವು. ಸ್ತೂಪದ ತಳಪಾಯ ಅರೆಕಾಲು ಚಕ್ರದಂತಿವೆ. ಬೂದುವರ್ಣದ ಶಿಲಾಕರಂಡಕ, ಹಲ್ಲು ಹಾಗೂ ಇತರ ಅಸ್ಥಿ ಅವಶೇಷಗಳು ದೊರೆತವು. ಇದರ ಮುಚ್ಚಳದ ಮೇಲೆ ಖರೋಷ್ಠಿ ಲಿಪಿಯಲ್ಲಿ ಉಪಾಸಕ ಅಯ ಭದ್ರಸ ಎಂದಿದೆ. ಸ್ತೂಪದ ಪ್ರದಕ್ಷಿಣ ಪಥಕ್ಕೆ ಹೋಗಲು ನಾಲ್ಕು ದಿಕ್ಕಿನಲ್ಲಿ ಅಧಿಷ್ಠಾನಕ್ಕೆ ಹೊಂದಿಕೊಂಡಂತೆ ಮೆಟ್ಟಿಲುಗಳಿವೆ. ಇದರ ಪೂರ್ವ ದಿಶೆಯಲ್ಲಿ ಮೂರು ಸಣ್ಣ ಸಣ್ಣ ಸ್ತೂಪಗಳಿದ್ದುವು. ಇದರ ಬಳಿಯಲ್ಲಿ ಗುಪ್ತಶೈಲಿಯ ಬಿಳಿ ಜೇಡಿಮಣ್ಣಿನ ಸುಂದರವಾದ ಬುದ್ಧನ ಮತ್ತು ಪುರುಷ ತಲೆಗಳು ದೊರೆತವು. ಇದರಿಂದ ಈ ನೆಲೆ ಒಂದು ಪ್ರಮುಖ ಬೌದ್ಧ ನೆಲೆಯಾಗಿತ್ತೆಂದು ತಿಳಿದುಬಂದಿತು. ಇದನ್ನು ಗಮನಿಸಿ 1985–90ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಉತ್ಖನನ ವಿಭಾಗ ಮತ್ತು ರಾಜ್ಯಸರ್ಕಾರದ ಪುರಾತತ್ತ್ವ ಇಲಾಖೆ ಉತ್ಖನನ ನಡೆಸಿದ್ದರಲ್ಲಿ ಪ್ರ.ಶ.ಪೂ.2ನೆಯ ಸಹಸ್ರಮಾನದಿಂದ ಆಧುನಿಕ ಕಾಲದವರೆಗಿನ ಆರು ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು. 1. ಅವು ಬಾರ ಸಂಸ್ಕೃತಿಯ ಕೆಲವೊಂದು ಅಂಶಗಳೊಂದಿಗೆ ಅಂತ್ಯ ಹರಪ್ಪ; 2. ಅಂತ್ಯ ಹರಪ್ಪದೊಡನೆ ಬೂದುವರ್ಣ ಮಣ್ಪಾತ್ರೆ ಸಂಸ್ಕೃತಿ; 3. ಆದಿ ಇತಿಹಾಸ ಕಾಲ; 4. ಕುಷಾಣ; 5. ಗುಪ್ತ ಮತ್ತು ಗುಪ್ತೋತ್ತರ ಮತ್ತು ಮಧ್ಯಯುಗೀನ ಕಾಲ.

ಒಂದನೆಯ ಹಂತದ ವಸತಿಗೃಹ ನಿರ್ಮಾಣದಲ್ಲಿ ಆರು ಉಪಹಂತಗಳನ್ನು ಗುರುತಿಸಲಾಗಿದೆ. ಮೊದಲು ಕೇವಲ ಮಣ್ಣಿನಿಂದ 2ನೆಯ ಉಪಹಂತದಿಂದ ಒಣ ಇಟ್ಟಿಗೆಯಿಂದಲೂ ಮನೆಗಳನ್ನು ಕಟ್ಟಲಾಗುತ್ತಿತ್ತು. ಇವುಗಳಲ್ಲಿ ದಮ್ಮಸು ಮಾಡಿದ ನೆಲ, ಕಣಜದ ಕಟ್ಟೆ, ಒಲೆ ಇದ್ದುವು. ಕೆಲವೊಂದು ಮನೆಗಳ ಕೊಠಡಿಗಳಲ್ಲಿ ಪ್ರಾಯಶಃ ಧಾರ್ಮಿಕ ವಿಧಿಗಳಿಗೆ ಸಂಬಂಧಿಸಿದ ಸುಡಾವೆ ಮಣ್ಣಿನ ಬಿಲ್ಲೆಗಳಿದ್ದುವು. ಬಾರ ಸಂಸ್ಕೃತಿಯ ವಿಶಿಷ್ಟ ಮಣ್ಪಾತ್ರೆಗಳೊಂದಿಗೆ ಫಯಾನ್ಸ್, ಸುಡಾವೆ ಮಣ್ಣಿನ ಬಿಲ್ಲೆ, ಪ್ರಾಣಿ ಗೊಂಬೆಗಳು, ಆಟದ ಚೆಂಡು, ಬಳೆ, ಮಣಿ, ಫಯಾನ್ಸಿನ ಉಂಗುರ, ಬಳೆ, ಎಲುಬಿನ ಲೇಖನಿ, ಶಂಖದ ಬಳೆ, ತಾಮ್ರ ವಸ್ತು ಮೊದಲಾದ ಹಲವಾರು ವಸ್ತುಗಳು ವಿಪುಲವಾಗಿ ದೊರೆತವು. ಕೆಲವೊಂದು ಮಣ್ಪಾತ್ರೆಗಳು ಹರಪ್ಪ ಬಳಿಯ ಸಿಮೆಟ್ರಿ–ಎಚ್ ನೆಲೆಯ ಮಣ್ಪಾತ್ರೆಗಳನ್ನು ಹೋಲುತ್ತವೆ.

2ನೆಯ ಹಂತದಲ್ಲಿ ಬಾರ ಸಂಸ್ಕೃತಿಯ ಮಣ್ಪಾತ್ರೆಗಳಲ್ಲದೆ, ಕಪ್ಪುವರ್ಣದ, ವರ್ಣರೇಖಾ ಚಿತ್ರಿತ ಬೂದುವರ್ಣದ ಮಣ್ಪಾತ್ರೆಗಳು, ಕೆಂಪುವರ್ಣದ ಪಾತ್ರೆಗಳು ಉಪಯೋಗದಲ್ಲಿದ್ದುವು. ಬೂದುವರ್ಣದ ಮಣ್ಪಾತ್ರೆ ಸಂಸ್ಕೃತಿ ಬಾರ ಹಾಗೂ ಅಂತ್ಯ ಹರಪ್ಪ ಸಂಸ್ಕೃತಿಯೊಡನೆ ವ್ಯಾಪಿಸಿಕೊಂಡಿರುವುದು ಸ್ಪಷ್ಟವಾಗಿತ್ತು. ಕಂಬದ ಕುಳಿಗಳನ್ನು ಬಿಟ್ಟರೆ ಮನೆಯ ಅವಶೇಷಗಳೇನೂ ಕಾಣಬರಲಿಲ್ಲ. ಸುಡಾವೆ ಮಣ್ಣಿನ ಪ್ರಾಣಿ ಗೊಂಬೆಗಳು, ಕಿವಿಯೋಲೆ, ತಾಮ್ರದ ವಸ್ತುಗಳು, ದಂತದ ಲೇಖನಿ ಮೊದಲಾದವು ಇತರ ಅವಶೇಷಗಳು.

ಆದಿ ಇತಿಹಾಸ ಕಾಲದ 3ನೆಯ ಹಂತದಲ್ಲಿ ಔತ್ತರೇಯ ಮೆರುಗಿನ ಕಪ್ಪುವರ್ಣದ ಮಣ್ಪಾತ್ರೆಗಳ ಉಪಯೋಗ ಕಡಿಮೆಯಾಯಿತು. ಕೆಂಪುವರ್ಣದ ಪಾತ್ರೆಗಳು ಹೆಚ್ಚು. ಸುಡಾವೆ ಮಣ್ಣಿನ ಗೊಂಬೆ, ಬಳೆ, ಮೃತ್ತಿಕ್ಕುವ ಹೊರಸು, ಎಲುಬಿನ ಲೇಖನಿ, ಕಾರ್ನೀಲಿಯನ್ ಸ್ಫಟಿಕ ಮಣಿಗಳು ಮೊದಲಾದವು ಈ ಹಂತದ ಗಮನಾರ್ಹ ಅವಶೇಷಗಳು.

ನಾಲ್ಕನೆಯ ಕುಷಾಣ ಹಂತ ಅತ್ಯಂತ ಸಮೃದ್ಧಿ ಮತ್ತು ಬೃಹತ್ ಬೆಳವಣಿಗೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ವಿವಿಧ ಕಟ್ಟಡಗಳ ನಿರ್ಮಾಣವಾಯಿತು. ಹಾಥಿವರ ಎಂದು ಕರೆಯಲಾದ ನೆಲೆಯ ಈಶಾನ್ಯ ಭಾಗದಲ್ಲಿ ಪ್ರಮುಖ ಕಟ್ಟಡಗಳಿದ್ದುವು. ಹಿಂದಿನ ಕಟ್ಟಡಗಳಿಗಿಂತ ಇವುಗಳಲ್ಲಿ ಹೊಸತನವೂ ಕಾಣುತ್ತದೆ, ಪೂರ್ವಯೋಜನೆಗನುಗುಣವಾಗಿ ನಗರ ವಿನ್ಯಾಸವನ್ನು ರೂಪಿಸಲಾಗಿದೆ. ಉತ್ಖನನದಲ್ಲಿ ಕಂಡುಬಂದಂತೆ ಹಾಥಿವರದ ಉತ್ತರ ಭಾಗದಲ್ಲಿ ಕೋಟೆಯಿಂದ (340x210ಮೀ) ಸುತ್ತವರೆಯಲ್ಪಟ್ಟ ವಿವಿಧ ಕಟ್ಟಡಗಳು ಮತ್ತು ಇದರ ಹೊರಬದಿಯಲ್ಲಿ ದಕ್ಷಿಣಭಾಗದಲ್ಲಿ ಸಾರ್ವಜನಿಕ ನಗರ ಮತ್ತು ಧಾರ್ಮಿಕ ಕಟ್ಟಡಗಳ ಸಂಕೀರ್ಣ, ಸಂರಕ್ಷಣೆ ಗೋಡೆ ನಿಜಕ್ಕೂ ಸಮೀಪದ ನದಿಯ ಪ್ರವಾಹದ ತಡೆಗೋಡೆಯಾಗಿದ್ದಿತು. ಧಾರ್ಮಿಕ ಸಂಕೀರ್ಣ ಭಾಗದಲ್ಲಿ ಬೌದ್ಧ ಸ್ತೂಪ, ವಿಹಾರ ಮತ್ತು ತತ್ಸಂಬಂಧ ಇತರ ಕಟ್ಟಡಗಳ ಅವಶೇಷಗಳಿದ್ದುವು. ಇವೆಲ್ಲವನ್ನೂ ನೋಡಿದಾಗ ಇಲ್ಲಿ ಏಕ ಸ್ವಾಮ್ಯದ ಆಡಳಿತ ವ್ಯವಸ್ಥೆ ಇದ್ದಂತೆ ಕಾಣುತ್ತದೆ. ಇದು ನಿಜವೆಂಬಂತೆ ಇಲ್ಲಿ ಆಲೇಖದೊಡನೆ ಮೊಹರು, ಮುದ್ರೆಗಳೂ ಇತರ ಸಾಮಾನ್ಯ ಅವಶೇಷಗಳೊಡನೆ ಸಿಕ್ಕಿವೆ. ಕೋಟೆಯೊಳಗೆ ಎತ್ತರ ಪ್ರದೇಶದಲ್ಲಿ ಪೂರ್ವ–ಪಶ್ಚಿಮಾಭಿಮುಖವಾಗಿ ಒಂದೇ ಮಧ್ಯರೇಖೆಯಲ್ಲಿ ಇಟ್ಟಿಗೆಯ ಎರಡು ವಿವಿಧ ಹಂತಗಳಲ್ಲಿ ವಿಸ್ತರಿಸಿದ ದೊಡ್ಡ ದೊಡ್ಡ ಆಡಳಿತ ಮತ್ತು ಸಭಾಸದನ. ಇವುಗಳ ಬದಿಯಲ್ಲಿ ಉತ್ತರ–ದಕ್ಷಿಣಾಭಿಮುಖವಾಗಿ ಒಂದು ಗೃಹಕೃತ್ಯಗಳಿಗೆ ಸಂಬಂಧಿಸದ (ಧಾರ್ಮಿಕ?) ಕಟ್ಟಡ. ಇವುಗಳ ದಕ್ಷಿಣದ ಬದಿಗೆ ವ್ಯವಸ್ಥಿತವಾಗಿ ಬೀದಿ–ಓಣಿಗಳಿಂದ ಕೂಡಿದ ನಗರ. ಇವುಗಳ ಭವ್ಯತೆ ಅಷ್ಟು ದೊಡ್ಡ ಪ್ರಮಾಣದಲ್ಲಿಲ್ಲದಿದ್ದರೂ ಪ್ರಾಚೀನ ತಕ್ಷಶಿಲಾ ನಗರವನ್ನೂ ನೆನಪಿಗೆ ತರುತ್ತದೆ. ಕೋಟೆಯೊಳಗಿನ ಕಟ್ಟಡಗಳಿಗೆ ಮರದ ಛಾವಣಿಯಿದ್ದಿತ್ತು. ಸಭಾಸದನದ ದಕ್ಷಿಣ ಬದಿಯಲ್ಲಿ ಪ್ರವೇಶದ್ವಾರವಿದ್ದು ಇಲ್ಲಿಂದ ಸದನದ ಒಳಗೆ ಕೊನೆಯಲ್ಲಿದ್ದ ಕಟ್ಟೆಯವರೆಗೂ ಇಟ್ಟಿಗೆಯ ಕಿರುದಾದ ಕಾಲುಹಾದಿಯಿದೆ. ಕಟ್ಟೆಯ ಸುತ್ತ ಮೂಲೆಗಳಲ್ಲಿದ್ದ ಮರದ ಕಂಬಗಳು ಮೇಲೆ ವಿತಾನವನ್ನೂ ಎತ್ತಿ ಹಿಡಿದಿದ್ದುವೆಂದು ಕಾಣುತ್ತದೆ. ಈ ಸದನದ ವಾಯವ್ಯಕ್ಕೆ ಹಲವಾರು ಕೊಠಡಿಗಳ ಕಟ್ಟಡವಿತ್ತು. ಇದರ ನೆಲವನ್ನು ಸುರಕಿ ಸುಣ್ಣ ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಈ ಕಟ್ಟಡದ ಉತ್ತರಕ್ಕೆ ಒಂದು ಕಟ್ಟೆಯ ಮೇಲೆ ವೃತ್ತ ವಿನ್ಯಾಸದ ಅಗ್ನಿ ಕುಂಡವಿತ್ತು. ಇಲ್ಲಿ ಪ್ರ.ಶ.ಪೂ.ಸು.1ನೆಯ ಶತಮಾನದ ಕುಣ್ಣಿಂದ ರಾಜ ಅಮೋಘಭೂತಿಯ 40 ನಾಣ್ಯದ ಅಚ್ಚುಗಳು ದೊರಕಿದುವು. ನಾಣ್ಯದ ಒಂದು ಬದಿಯ ಅಚ್ಚಿನಲ್ಲಿ ಬ್ರಾಹ್ಮಿ ಅಕ್ಷರದಲ್ಲಿ ರಾಜ್ಞೋ ಕುಣಿಂದಸ್ಯ ಅಮೋಘಭೂತಿಸ್ಯ ಎಂಬ ಆಲೇಖವಿದೆ. ಇನ್ನೊಂದು ಬದಿಯ ಅಚ್ಚಿನಲ್ಲಿ ತ್ರಿರತ್ನ, ಶ್ರೀವತ್ಸ, ಸ್ವಸ್ತಿಕ ಮತ್ತು ಏರುತಗ್ಗಿನ ಬೆಟ್ಟದ ಚಿತ್ರಗಳಿವೆ. ಬಹುಶಃ ಇದು ನಾಣ್ಯ ತಯಾರಿಕೆಯ ಭಟ್ಟಿಯಾಗಿತ್ತೆಂದು



ಯಕ್ಷಿಶಿಲ್ಪಗಳು

ಕಾಣುತ್ತದೆ. ಸಭಾಸದನ ಹತ್ತಿರದ ಕಟ್ಟಡವನ್ನು ಬಹುಶಃ ರಾಜ್ಯದ ಆಡಳಿತದ ಮುಖ್ಯ ಟಂಕಸಾಲೆ ಕಾಗದ ಪತ್ರಗಳ ಹಾಗೂ ಆಡಳಿತ ಕಛೇರಿಯಾಗಿದ್ದಿರಬಹುದೆಂದು ಅಭಿಪ್ರಾಯ ಪಡಲಾಗಿದೆ. ನಗರದ ಭಾಗದಲ್ಲಿ ಬೀದಿ ಮತ್ತು ಓಣಿಗಳ ನಡುವಿನಲ್ಲಿ ಎರಡು ಸಾಲುಗಳಲ್ಲಿ ಮನೆಗಳು ಮಧ್ಯದಲ್ಲಿ ಸಂದು ಬಿಡದೆ ಒಂದರ ಪಕ್ಕದೊಲ್ಲೊಂದರಂತೆ ಮತ್ತು ಮನೆಗಳ ಹಿಂಭಾಗಗಳು ಎದುರು–ಬದುರಾಗಿರುವಂತೆ ಇದ್ದುವು. ಇಂಥ ಎರಡು ಹಾಗೂ ನಾಲ್ಕು ಮನೆಗಳು ಸೇರಿದಂತೆ ಮುಂದೆ ಒಂದು ಸಾಮಾನ್ಯ ಅಂಗಳವಿರುತ್ತಿತ್ತು.

ಸಾಮಾನ್ಯವಾಗಿ ಮನೆ ಮುಖ್ಯ ಬೀದಿಗೆ ಎದುರಾಗಿರುತ್ತದೆ. ವಿಶಾಲ ಹಜಾರ ಅಥವಾ ಮೊಗಸಾಲೆ, ಇದರ ಹಿಂದೆ ಒಂದು ಕೊಠಡಿ, ಇಲ್ಲಿಂದ ಅಡುಗೆ ಮನೆ ಮತ್ತು ಬಚ್ಚಲು ಮನೆಗೆ ಇತರ ಮೂರು ವಾಸದ ಕೊಠಡಿಗಳಿಗೆ ಹೋಗಲು ಅವಕಾಶ ಇರುತ್ತದೆ. ಹಿಂಬದಿಯ ಓಣಿಯಿಂದ ಒಂದು ಪಕ್ಕದಲ್ಲಿನ ಪ್ರವೇಶ ದ್ವಾರದಿಂದ ಹಿಂಬದಿಯ ಸಣ್ಣ ಮೊಗಸಾಲೆಗೆ ಬಂದು ಅಲ್ಲಿಂದ ವಸತಿಕೊಠಡಿಗಳಿಗೆ ಬರಬಹುದು. ಅಡುಗೆ ಮನೆ ಮತ್ತು ಬಚ್ಚಲು ಮನೆಯ ಮುಚ್ಚಿದ ಸಣ್ಣ ಇಟ್ಟಿಗೆ ಚರಂಡಿ ಹಿಂಬದಿ ಓಣಿಯ ದೊಡ್ಡ ಚರಂಡಿಗೆ ಸೇರುತ್ತದೆ. ಎಲ್ಲ ಕೊಠಡಿಗಳ ನೆಲವನ್ನೂ ದಮ್ಮಸು ಮಾಡಿ ಗಟ್ಟಿ ಮಾಡಲಾಗಿದೆ. ಇಲ್ಲಿ ದೊರೆತ ಇತರ ಅವಶೇಷಗಳಲ್ಲಿ ಶುಂಗ ಶೈಲಿಯ ಸುಡಾವೆ ಮಣ್ಣಿನ ಗೊಂಬೆಗಳು ಗಮನಾರ್ಹ.

ಈಗಿನ ಗ್ರಾಮದ ಒಂದು ಭಾಗದ ಉತ್ಖನನದಲ್ಲಿ ಸು.18ಮೀ ದಪ್ಪದ ಪ್ರಾಕ್ತ್ಯಾವಶೇಷಗಳ ಹಾಳು ಮಣ್ಣು ಇದ್ದುದು ಕಂಡುಬಂತು. ಹೆಚ್ಚಾಗಿ ಕುಷಾಣ ಕಾಲದ ವಸತಿ ಅವಶೇಷಗಳೆ ಇದ್ದುವು, ಕಟ್ಟಡ ನಿರ್ಮಾಣದಲ್ಲಿ ಇಲ್ಲಿಯ ಐದು ಉಪಹಂತಗಳನ್ನು ಗುರುತಿಸಲಾಗಿದೆ. ಆದರೆ ಮನೆ ಓಣಿ–ರಸ್ತೆಗಳು ಒಂದು ಸರಿಯಾದ ವಿನ್ಯಾಸದಲ್ಲಿರದೆ ಅಡ್ಡಾದಿಡ್ಡಿಯಾಗಿದ್ದುವು. ಆದರೂ ಒಂದು ಮನೆ ಸಂಕೀರ್ಣವನ್ನು ಗುರುತಿಸಲು ಸಾಧ್ಯವಾಯಿತು. ಇದೊಂದು ಎರಡು ಮಹಡಿಯ ಕಟ್ಟಡ. ಇದರಲ್ಲಿಯ ಐದು ಕೊಠಡಿಗಳನ್ನು ಹೊರತೆಗೆಯಲಾಯಿತು. ಇದರ ಹಿಂಬದಿಯಲ್ಲಿ ಇನ್ನೊಂದು ಕಟ್ಟಡವನ್ನು ಬಯಲುಗೊಳಿಸಲಾಯಿತು. ಇದರಲ್ಲಿಯ ಇಟ್ಟಿಗೆ ನೆಲದ ಒಂದು ಮುಖ್ಯ ಕಟ್ಟೆಯ ಮೇಲೆ ಸುಡಾವೆ ಮಣ್ಣಿನ ವಸ್ತುಗಳು, ಮುದ್ರೆ, ಮುದ್ರಿಕೆ ಮೊದಲಾದವುಗಳನ್ನು ತಯಾರಿಕೆಯ ಗುರುತುಗಳಿದ್ದುವು, ಬಯಲು ಅಂಗಳದಲ್ಲಿ ಹಲವಾರು ವೃತ ಅಗ್ಗಿಷ್ಟಿಕೆಗಳಿದ್ದುವು. ಇಲ್ಲಿ ಅರೆ ಪ್ರಶಸ್ತ ಕಲ್ಲಿನ ಮಣಿಗಳು, ಸುಡಾವೆ ಮಣ್ಣಿನ ಪ್ರಾಣಿ, ಮನುಷ್ಯನ ಗೊಂಬೆಗಳು, ಮುದ್ರೆ ಮುದ್ರಿಕೆಗಳು ವಿಪುಲವಾಗಿದ್ದುವು. ಜೊತೆಗೆ ಸುಟ್ಟ ಬೋರೆ ಹಣ್ಣಿನ ಬೀಜಗಳು ಹಾಗೂ ಇತರ ಅವಶೇಷಗಳು ದೊರಕಿದುವು. ಬ್ರಾಹ್ಮಿ ಮತ್ತು ಖರೋಷ್ಠಿ ಆಲೇಖಗಳಿರುವ ಮುದ್ರೆಗಳು, ಕುಷಾಣರ ಚಿನ್ನದ ನಾಣ್ಯ ಮುಖ್ಯವಾದುವು. ಹಾಥಿವರದ ಆಗ್ನೇಯಕ್ಕೆ ಒಂದು ವಿಸ್ತಾರವಾದ ಇಟ್ಟಿಗೆ ಕಟ್ಟಡವಿದ್ದಿತ್ತು. ಬಹುಶಃ ಧಾರ್ಮಿಕ ಆಲಯವಾಗಿದ್ದಿರಬಹುದು, ಇದಲ್ಲದೆ ಎರಡು ಆಯತ ವಿನ್ಯಾಸದ ಕಟ್ಟೆಗಳಿದ್ದು, ಇವು ಬಹುಶಃ ಅಗ್ನಿ ಕುಂಡಗಳ ವೇದಿಕೆಗಳೆಂದು ತಿಳಿಯಲಾಗಿದೆ. ಕುಂಡಗಳಲ್ಲಿ ಬೂದಿಯೊಡನೆ ಸುಟ್ಟ ಕಾಳುಗಳಿದ್ದುವು ಕೆಲವು ನಿರ್ದಿಷ್ಟ ಧಾರ್ಮಿಕ ವಿಧಿಗಳನ್ನು ನಡೆಸಲಾಗುತ್ತಿದ್ದಿರಬೇಕೆಂದು ತಿಳಿಯಬಹುದಾಗಿದೆ. ಈ ಕಟ್ಟಡದ ಹೊರಬದಿಯಲ್ಲಿ ಒಂದು ಗುಂಡಿಯಲ್ಲಿ ಹೂತಿಟ್ಟ ಒಂದು ಪ್ರಾಣಿ (ಕುದುರೆ ಅಥವಾ ಗೂಳೀ?) ಅಸ್ಥಿ ಪಂಜರವಿತ್ತು. ಉತ್ತರ ದಿಶೆಯಲ್ಲಿ ಒಂದು ಇಳಿಜಾರಿನ ಕಟ್ಟೆಯ ಮೇಲೆ ನಿರ್ಮಿಸಿದ ಬಹು ಕೊಠಡಿಗಳ ಒಂದು ಕಟ್ಟಡವಿತ್ತು. ಇದರ ಮುಂಬದಿಯಲ್ಲಿ ಕುಣಿಂದ, ಇಂಡೊ–ಪಾರ್ಥಿಯನ್, ಕುಷಾಣರ ಹಲವಾರು ತಾಮ್ರದ ನಾಣ್ಯಗಳು, ಗೊಂಡೆಫರ್ನೆಸ್‌ನ 100 ನಾಣ್ಯಗಳಿದ್ದ ಒಂದು ಕುಡಿಕೆ, ಸುಡಾವೆ ಮಣ್ಣಿನ ಸರ್ಪ, ಚಿನ್ನದ ವಸ್ತುಗಳಲ್ಲದೆ ಹಿಡಿಕೆ ಮಣ್ಪಾತ್ರೆ, ಯಜ್ಞದಲ್ಲಿ ಬಳಸುವ ಸೌಟು, ಶಂಖ, ಹರಕೆ–ತೊಟ್ಟಿ, ಬಹುರಂಧ್ರದ ತಾಮ್ರದ ಕೊಡಗಳು ಮೊದಲಾದವು ದೊರೆತಿರುವುದು ಗಮನಾರ್ಹ.

ಹಾಥಿವರದಿಂದ ಅನತಿ ದೂರದಲ್ಲಿ ಬೌದ್ಧ ಸ್ತೂಪ ವಿಹಾರಗಳಿದ್ದುದು ಉತ್ಖನನದಲ್ಲಿ ಕುಷಾಣರ ಕಾಲದ ಒಂದು ಮಹಾಸ್ತೂಪ ಮತ್ತು ಹಲವಾರು ಮನೋಹರ ಶಿಲ್ಪಗಳು ದೊರೆತಿರುವುದನ್ನು ಈಗಾಗಲೆ ಮೇಲೆ ಗಮನಿಸಲಾಗಿದೆಯಷ್ಟೆ. ಇತ್ತೀಚಿನ ಉತ್ಖನನದಲ್ಲಿ ಧರ್ಮಚಕ್ರ ವಿನ್ಯಾಸದ ಒಂದು ಸಣ್ಣ ಸ್ತೂಪ, ವಿಹಾರದ 27 ಕೊಠಡಿಗಳು ಇನ್ನೊಂದು ಸಣ್ಣ ಸ್ತೂಪದ ಭಾಗಗಳು ಕಂಡುಬಂದಿವೆ.

5ನೆಯ ಗುಪ್ತ ಹಂತ: ಹಾಥಿವರದಲ್ಲಿ ಮುಂದಿನ ಹಂತದ ಜನವಾಸ್ತವ್ಯದ ಅವಶೇಷಗಳೂ ಸಿಕ್ಕಿವೆ. ಹಿಂದಿನ ಇಟ್ಟಿಗೆ ಕಟ್ಟಡಗಳ ಅವಶೇಷಗಳನ್ನು ಈ ಹಂತದ ಕಟ್ಟಡಗಳಲ್ಲಿ ಉಪಯೋಗಿಸ ಲಾಗಿದೆ ಮತ್ತು ಕುಷಾಣ ಹಂತದ ಅನಂತರ ಇಲ್ಲಿ ಸ್ವಲ್ಪ ಕಾಲ ಜನವಸತಿಯೂ ಇರಲಿಲ್ಲ. ಈ ಹಂತದ ಕಾಲದಲ್ಲಿ ಜನವಸತಿಯ ಆಗ್ನೇಯ ಭಾಗಕ್ಕೆ ವಿಸ್ತರಿಸಲಾಗಿತ್ತು. ಹೊಳಪಿನ ಕೆಂಪು ವರ್ಣದ ಪಾತ್ರೆಗಳು, ಅಚ್ಚೊತ್ತಿದ ಪಾತ್ರೆಗಳು, ಬಿಳಿ ವರ್ಣದ ಪಾತ್ರೆಗಳು, ಸಣ್ಣ ಸಣ್ಣ ಹರಕೆ ತೊಟ್ಟಿಗಳು ಮೊದಲಾದವು ಗಮನಾರ್ಹ ಅವಶೇಷಗಳು. ಈ ಹಂತ ಸು.6ನೆಯ ಶತಮಾನದಲ್ಲಿ ಕೊನೆಗೊಂಡಿತು.

6ನೆಯ ಹಂತದ ಮಣ್ಣಿನ ಬೃಹತ್ ಗೋಡೆಯಿರುವುದು ಗಮನಾರ್ಹ ಇದರ ತಳ ಸು.29ಮೀ ಅಗಲವಿತ್ತು. ಕ್ರಮೇಣ ಇದರ ಎತ್ತರವನ್ನು ಹೆಚ್ಚಿಸಿ ಸುತ್ತಲೂ ಕಂದಕವನ್ನು ತೋಡಲಾಯಿತು. ಸುಡಾವೆ ಮಣ್ಣಿನ ಸ್ತ್ರೀ ಗೊಂಬೆಗಳು, ಗುಪ್ತಲಿಪಿಯಲ್ಲಿ ಆಲೇಖವುಳ್ಳ ಮುದ್ರಿಕೆಗಳು ಮೊದಲಾದವು ದೊರೆಕಿವೆ. 7ನೆಯ ಹಂತದಲ್ಲಿ ಮಧ್ಯಯುಗೀನ ಕಾಲದ ಮೆರುಗಿನ ಕೆಂಪು ಮಣ್ಪಾತ್ರೆಗಳು ಮತ್ತು 8ನೆಯ ಹಂತದಲ್ಲಿ ಲಖೌರಿ ಇಟ್ಟಿಗೆ ಕಟ್ಟಡಗಳ ಅವಶೇಷಗಳು ಗಮನಿಸುವಂಥಾದ್ದು. (ಎಂ.)

**ಸಂತೆಬೆನ್ನೂರು:** ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಈಶಾನ್ಯಕ್ಕೆ 22 ಕಿಮೀ ದೂರದಲ್ಲಿರುವ ಐತಿಹಾಸಿಕ ಸ್ಥಳ. ಇಲ್ಲಿನ ಕೆರೆ ದಡದಲ್ಲಿರುವ 14ನೆಯ ಶತಮಾನದ ಒಂದು ಶಾಸನದ ಪ್ರಕಾರ ಈ ಊರಿಗೆ ಪೂರ್ವದಲ್ಲಿ ಬೆಂನೂರು ಎಂಬ ಹೆಸರಿತ್ತು. ಇಲ್ಲಿ ನಡೆಯುವ ದೊಡ್ಡ ಸಂತೆಯಿಂದಾಗಿ ಇದಕ್ಕೆ ಸಂತೆಬೆನ್ನೂರು ಎಂಬ ಹೆಸರು ಪ್ರಾಪ್ತವಾಯಿತು. ವಿಜಯನಗರ ಅರಸರ ಅಧೀನರಾಗಿದ್ದ ಬಸವಾಪಟ್ಟಣದಲ್ಲಿದ್ದ ಕೆಂಗಪ್ಪನಾಯಕನ ಪುತ್ರ ಹನುಮಪ್ಪನಾಯಕ 1565ರ ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ವಿಜಯನಗರ ಅರಸರ ಸೇನಾಧಿಪತಿಯಾಗಿ ಭಾಗವಹಿಸಿ, ಶೌರ್ಯದಿಂದ ಕಾದಾಡಿದುದಕ್ಕೆ ಇದನ್ನು ಅವರಿಂದ ಅಮರ ಮಾಗಣಿಯಾಗಿ ಪಡೆದುಕೊಂಡ. ಇವನು ಇಲ್ಲಿ ಕೋಟೆ, ಅರಮನೆ, ಹನುಮಂತ ದೇವಸ್ಥಾನ, ರಾಮಚಂದ್ರ ದೇವಸ್ಥಾನ, ಪುಷ್ಕರಣಿಗಳನ್ನು 16ನೆಯ ಶತಮಾನದ ಆದಿ ಭಾಗದಲ್ಲಿ ನಿರ್ಮಿಸಿದ. ಮೆಕೆಂಜಿ ಸಂಗ್ರಹಿಸಿದ ಕೈಫಿಯತ್ತಿನಂತೆ ಇಲ್ಲಿಯ ಶ್ರೀರಾಮತೀರ್ಥ (ಪುಷ್ಕರಣಿ) ನಿರ್ಮಾಣವನ್ನು ಶಾಲಿವಾಹನ ಶಕ 1480ನೆಯ ಶ್ರೀಕಾಳಾಯುಕ್ತಿ ಸಂವತ್ಸರದಲ್ಲಿ ಕೆಂಗಪ್ಪನಾಯಕ ಮಾಡಿಸಿದ. ಇವನನ್ನೇ ಕೆಂಗಾ ಹನುಮಪ್ಪನಾಯಕನೆಂದು ಕರೆಯಲಾಗುತ್ತಿತ್ತು.

ಇಲ್ಲಿರುವ ಪುಷ್ಕರಣಿ ಸುಂದರವೂ ನಯನಮನೋಹರವೂ ಆಗಿದೆ. ಇದನ್ನು ಸ್ಥಳೀಯರು ಹೊಂಡ ಎಂದು ಕರೆಯುವರು. ಇದು 70.5ಮೀ ಉದ್ದ, 73.5ಮೀ ಅಗಲ, 9 ಮೀ ಆಳವಿದ್ದು ಧ್ವಜಾಯದಲ್ಲಿ ನಿರ್ಮಿಸಲಾಗಿದೆ. ನಾಲ್ಕು ದಿಕ್ಕುಗಳಿಗೂ ಸೋಪಾನಗಳಿವೆ. ಪಶ್ಚಿಮ ದಿಕ್ಕಿಗೆ 44 ದೊಡ್ಡ ಸೋಪಾನಗಳಿದ್ದು, ಉಳಿದ ಭಾಗಗಳಲ್ಲಿ 54 ಚಿಕ್ಕ ಸೋಪಾನಗಳಿವೆ.



ಪುಷ್ಕರಣಿ

ಅಷ್ಟ ದಿಕ್ಪಾಲಕರ ಹೆಸರಿನಲ್ಲಿ 8 ಮಂಟಪಗಳನ್ನು ನಿರ್ಮಿಸಲಾಗಿದೆ. ಈ ಪುಷ್ಕರಣಿಯ ಮಧ್ಯದಲ್ಲಿ ವಸಂತ ಮಂಟಪವಿದೆ. ಹಿಂದೆ ಇದನ್ನು ವಸಂತಕಾಲದ ಉತ್ಸವಕ್ಕಾಗಿ ಬಳಸುತ್ತಿದ್ದರು. ಇದರಲ್ಲಿ ನೀರು ಚಿಮ್ಮುವ ವ್ಯವಸ್ಥೆ ಇದ್ದುದರಿಂದ ಇದಕ್ಕೆ ಸ್ಥಳೀಯರು ಕಾರಂಜಿಮಂಟಪ ಎಂದು ಕರೆಯಲಾಗುತ್ತಿತ್ತು. 9ಮೀ ಉದ್ದಗಲ, ಸು.15ಮೀ ಎತ್ತರ ಇರುವ ಈ ಮಂಟಪ 5 ಅಂತಸ್ತುಗಳಿಂದ ಕೂಡಿದೆ. ಈ ಭವ್ಯ ಕಟ್ಟಡ ಇಂಡೊ–ಅರೇಬಿಕ್ ಶೈಲಿಯಲ್ಲಿದ್ದು, ಗೋಪುರ ಕೂಷ್ಮಾಂಡ ಮಾದರಿಯಲ್ಲಿದೆ. ಮೊದಲ 4 ಅಂತಸ್ತುಗಳನ್ನು ಕೆಂಪು ಕಲ್ಲಿನಿಂದ ನಿರ್ಮಿಸಿ, ಗೋಪುರವನ್ನು ಗಾರೆಯಿಂದ ನಿರ್ಮಿಸಲಾಗಿದೆ. ಇದನ್ನು ಶತ್ರುಗಳಿಂದ ರಕ್ಷಿಸಿಕೊಳ್ಳುವ ತಾಣವಾಗಿ ಉಪಯೋಗಿಸುವುದಕ್ಕೆ ಮಂಟಪದ ಮಧ್ಯದಿಂದ ಹೊರಕ್ಕೆ ಹೋಗಲು ಪೂರ್ವ ದಿಕ್ಕಿನಲ್ಲಿ ಸುರಂಗ ಮಾರ್ಗವಿರುವುದೇ ಸಾಕ್ಷಿ. ಈ ಪುಷ್ಕರಣಿಯ ಮಂಟಪಗಳಲ್ಲಿ ವಿಜಯನಗರ ಶೈಲಿಯ ಅನೇಕ ಶಿಲ್ಪಗಳಿವೆ.

ಈ ಪುಷ್ಕರಣಿಯನ್ನು ಕಲ್ಲಿನ ಬಂಡೆಯ ಮೇಲೆ ನಿರ್ಮಿಸಲಾಗಿದೆ. ಇದಕ್ಕೆ ಸ್ವಾಭಾವಿಕ ಜಲ ಪ್ರಾಪ್ತಿಯಿಲ್ಲ. ಪಕ್ಕದ ಜಮೀನುಗಳ ಮೇಲೆ ಬೀಳುವ ಮಳೆ ನೀರು ಪುಷ್ಕರಣಿಯ ದಕ್ಷಿಣ ದಿಕ್ಕಿನಲ್ಲಿರುವ ಆನೆ ಹೊಂಡದಲ್ಲಿ ಸಂಗ್ರಹವಾಗಿ ಕತ್ತರಿ ತೂಬಿನ ಮಾರ್ಗವಾಗಿ ಈ ಹೊಂಡದಲ್ಲಿ ನಿರ್ಮಿಸಿರುವ ಜಲಹರಿ ಮಂಟಪದ ಮೂಲಕ ಶುದ್ಧಗೊಂಡು ಪುಷ್ಕರಣಿಗೆ ಬರುವ ವ್ಯವಸ್ಥೆ ಇದೆ. ಹೆಚ್ಚಾದ ನೀರು ಪೂರ್ವ ದಿಕ್ಕಿನ ಕೋಡಿ ಮಂಟಪದಿಂದ ಹೊರಹೋಗುವ ವ್ಯವಸ್ಥೆಯಿದೆ. ಇದನ್ನು ನಿರ್ಮಿಸಲು ಸು. 20 ವರ್ಷಗಳು ಹಿಡಿಯಿತು. ಇದು 500 ವರ್ಷಗಳಿಂದ ನೀರಿನಲ್ಲಿದ್ದರೂ ಈವರೆಗೂ ಹಾಳಾಗಿಲ್ಲ. ಆಗಿನ ತಂತ್ರಜ್ಞಾನ ಭವ್ಯತೆಗೆ ಈ ಕಟ್ಟಡ ಒಂದು ಮಾದರಿಯಾಗಿದೆ.

ಈ ಪುಷ್ಕರಣಿಯ ದಡದ ಮೇಲೆ 16 ಅಂಕಣ ವಿಸ್ತೀರ್ಣದ ರಾಮಚಂದ್ರ ದೇವಸ್ಥಾನವಿದೆ. ಮುಂದೆ ಇದೇ ಮುಸಾಫಿರ್‌ಖಾನೆಯಾಗಿ ಪರಿವರ್ತನೆಗೊಂಡಿತು. ಇದೂ ಒಂದು ಭವ್ಯವಾದ ಕಲ್ಲಿನ ಕಟ್ಟಡವಾಗಿದ್ದು ರಣದುಲ್ಲಾಖಾನನ ಅನುಚರರಾಗಿದ್ದ ಖಾನ್ ಖಾನ್, ಫತ್ತೆಖಾನ್, ಫರೀದ್‌ಖಾನ್, ಸರ್ಜಾಖಾನ್ 1641 ರಿಂದ 56ರವರೆಗಿನ ಅವಧಿಯಲ್ಲಿ ಇದನ್ನು ನಿರ್ಮಿಸಿದರು. ಭಾರತೀಯ–ಇಸ್ಲಾಂ ವಾಸ್ತುಶೈಲಿಯ ಈ ಕಟ್ಟಡ 31.5 ಮೀ ಉದ್ದ, 12 ಮೀ ಅಗಲವಿದ್ದ 16 ದೊಡ್ಡ ಕಂಬಗಳ ಮೇಲೆ 9 ಕಮಾನುಗಳ ಅಂಕಣ ಹೊಂದಿದೆ. ಇದರ ಮೇಲೆ ಹೋಗಲು 2 ಬದಿ ಮೆಟ್ಟಿಲುಗಳನ್ನು ನಿರ್ಮಿಸಿದ್ದು, ಉತ್ತರ ಭಾಗದ ಮೆಟ್ಟಿಲ ಮಾರ್ಗವನ್ನು ಈಗ ಮುಚ್ಚಲಾಗಿದೆ. ಪುಷ್ಕರಣಿ ಮತ್ತು ಮುಸಾಫಿರ್‌ಖಾನೆ ಎರಡನ್ನೂ ಈಗ ಕೇಂದ್ರಸರ್ಕಾರ ರಕ್ಷಿತ ಸ್ಮಾರಕವೆಂದು ಘೋಷಿಸಿದೆ. ಈ ಊರಿನ ಈಶಾನ್ಯಕ್ಕೆ ಇರುವ ಕೆರೆಯನ್ನು ಕೆಂಗಾ ಇಮ್ಮಡಿ ಹನುಮಪ್ಪನಾಯಕ 1567ರಲ್ಲಿ ನಿರ್ಮಿಸಿದ. ಬಿಜಾಪುರ ಸುಲ್ತಾನರ ಅಧೀನದವರೆಗೆ ಸಂತೆಬೆನ್ನೂರು ನಾಯಕರ ರಾಜಧಾನಿಯಾಗಿದ್ದ ಈ ಊರು ಅನಂತರ ತರೀಕೆರೆಗೆ ಸ್ಥಳಾಂತರಗೊಂಡ ಕಾರಣ ಮೊದಲಿನ ವೈಭವ ಕಳೆದುಕೊಂಡಿತು. (ಎಸ್.ಎನ್.ಎ.)

**ಸಂತೆಬೆನ್ನೂರು ನಾಯಕರು:** ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು

**ಸಂಪತ್ತಿನ ಸೋರಿಕೆ:** ಭಾರತದಲ್ಲಿ ತಯಾರಾದ ವಸ್ತುಗಳನ್ನು ಇಂಗ್ಲೆಂಡ್ ಮತ್ತು ಯುರೋಪ್ ಖಂಡಕ್ಕೆ ರಫ್ತು ಮಾಡುವ ವ್ಯಾಪಾರಿ ಸಂಸ್ಥೆಯಾಗಿ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿ ಭಾರತಕ್ಕೆ ಕಾಲಿಟ್ಟಿತು. ವರ್ಷಗಳುರುಳಿದಂತೆ ಕಂಪನಿ ಇಲ್ಲಿಯ ಆಡಳಿತವನ್ನೇ

ಆಕ್ರಮಿಸಿಕೊಂಡಿತು. ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಡಳಿತ ಹರಡಲು ಆರಂಭವಾದಂತೆ ಸ್ಥಳೀಯ ಕಸಬುದಾರರು, ಕರಕುಶಲಕರ್ಮಿಗಳು, ವ್ಯಾಪಾರಿಗಳು ಮತ್ತು ಬಹುಸಂಖ್ಯೆಯಲ್ಲಿ ರೈತಾಪಿ ವರ್ಗದವರು ತೀವ್ರತರನಾದ ಸಂಕಷ್ಟಗಳಿಗೆ ಈಡಾದರು. ಆರ್.ಪಿ.ದತ್ ಇಂಡಿಯ ಟುಡೆ ಕೃತಿಯ ಕರ್ತೃ ಮೊದಲ ಬಾರಿಗೆ ವಸಾಹತುಶಾಹಿ ಭಾರತದಲ್ಲಿ ವಿವಿಧ ಘಟ್ಟಗಳಲ್ಲಿಯ ಸಂಪತ್ತಿನ ಸೋರಿಕೆಯನ್ನು ಅಧ್ಯಯನ ಮಾಡಿದರು. 1757–1813ರ ವರೆಗೆ ಈಸ್ಟ್ ಇಂಡಿಯ ಕಂಪನಿಯ ವ್ಯಾಪಾರಿ ಏಕಸ್ವಾಮ್ಯದ ಕಾಲ. 1813–58ರ ಅವಧಿಯಲ್ಲಿ ಭಾರತ ಬ್ರಿಟನ್ನಿನ ಸಿದ್ಧಪಡಿಸಿದ ವಸ್ತುಗಳ ಮಾರುಕಟ್ಟೆಯಾಗಿ, ಅದರ ಕೈಗಾರಿಕೆಗಳಿಗೆ ಕಚ್ಚಾ ಸಾಮಾಗ್ರಿಗಳ ಪೂರೈಕೆದಾರನಾಗಿ, ಮುಕ್ತ ವ್ಯಾಪಾರಿ ನೀತಿಗೆ ಒಳಪಟ್ಟ ಪ್ರಮುಖ ಘಟ್ಟ. ಹತ್ತಿಯ ತವರೂರನ್ನು ಹತ್ತಿಯಿಂದಲೇ ಮುಳುಗಿಸಿದ್ದು ಇದೇ ಕಾಲಘಟ್ಟದಲ್ಲಿ. 19ನೆಯ ಶತಮಾನದ ಉತ್ತರಾರ್ಧ ಭಾಗದಿಂದ, ಬ್ರಿಟಿಷ್ ಬ್ಯಾಂಕುಗಳು, ಆಮದು–ರಫ್ತು ಉದ್ದಿಮೆಗಳ ಮೂಲಕ ಆರ್ಥಿಕ ಸಾಮ್ರಾಜ್ಯಶಾಹಿತ್ವ ಭಾರತವನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಲಾರಂಭಿಸಿದವು. ಭಾರತದ ಪ್ರಮುಖ ರಂಗಗಳ ಮೇಲಿನ ಪರಿಣಾಮಗಳ ಅಧ್ಯಯನದಿಂದ ಈ ಬೆಳವಣಿಗೆಯನ್ನು ನಾವು ಈ ವಸಾಹತು ಆರ್ಥಿಕ ಸಾಮ್ರಾಜ್ಯಶಾಹಿತ್ವವನ್ನು ಅರ್ಥೈಸಿಕೊಳ್ಳಬಹುದಾಗಿದೆ.

ಪ್ಲಾಸಿ ಕದನದ ಗೆಲುವಿನ ಅನಂತರ ಭಾರತದ ಅಧಿಪತಿಗಳಂತಾದ ಈಸ್ಟ್ ಇಂಡಿಯ ಕಂಪನಿ, ಬಂಗಾಲದ ಸಂಪತ್ತನ್ನು ಲೂಟಿ ಮಾಡಲಾರಂಭಿಸಿತು. ಬಂಗಾಲದ ರೈತಾಪಿ ವರ್ಗದ ಬೆನ್ನು ತೆರಿಗೆ ಭಾರದಿಂದ ಜಗ್ಗಿತು. ಪಾರಂಪರಿಕ ತೆರಿಗೆ ಸಂಗ್ರಾಹಕ ವರ್ಗವನ್ನು ಅಲಕ್ಷಿಸಿದ ಕಂಪನಿ, ಆದಾಯವನ್ನು ಹೆಚ್ಚಿಸಿಕೊಳ್ಳಲು ಕೃಷಿ ಭೂಮಿಯನ್ನು ವ್ಯಾಪಾರಿಗಳಿಗೆ ಮತ್ತು ಲೇವಾದೇವಿಗಾರರಿಗೆ ಹರಾಜುಹಾಕಿತು. ಕಾಲದಿಂದ ಕಾಲಕ್ಕೆ ಭೂಮಿಯ ಮೌಲ್ಯ ನಿರ್ಧಾರ, ಅತ್ಯಧಿಕ ತೆರಿಗೆ ಮತ್ತು ಸುಲಿಗೆ ಈ ಅವಧಿಯ ಪ್ರಮುಖ ಲಕ್ಷಣಗಳು. ಇವೆಲ್ಲದರ ಅಂತಿಮ ಪರಿಣಾಮವಾಗಿ 1770ರ ಕ್ಷಾಮ ಬಂಗಾಲದ ಮೂರನೆಯ ಭಾಗದಷ್ಟು ಜನಸಂಖ್ಯೆಯನ್ನು ಬಲಿ ತೆಗೆದುಕೊಂಡಿತು. ಅನಂತರವೇ ಒಲ್ಲದ ಮನಸ್ಸಿನಿಂದ ಎಚ್ಚೆತ್ತುಕೊಂಡ ಕಂಪನಿ ಅಧಿಕಾರಿಗಳು ಕಾರ್ನ್‌ವಾಲಿಸ್‌ನ ನೇತೃತ್ತ್ವದಲ್ಲಿ ಬಂಗಾಲ, ಬಿಹಾರ ಮತ್ತು ಒರಿಸ್ಸಗಳಲ್ಲಿ ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದಿತು (1793). ಮದರಾಸು ಮತ್ತು ಬಾಂಬೆ ಪ್ರೆಸಿಡೆನ್ಸಿಗಳ ವಿಶಾಲ ಪ್ರದೇಶದಲ್ಲಿ ರೈತವಾರಿ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಇದೇ ವೇಳೆಗೆ ಮಹಲ್ವಾರಿ ಮತ್ತು ಇನಾಂದಾರಿ ಕಂದಾಯ ಪದ್ಧತಿಗಳನ್ನೂ ಪ್ರಯೋಗ ಮಾಡಿ ನೋಡಲಾಯಿತು.

ಈ ಹಂತದಲ್ಲಿ ಭೂ ಇಳುವರಿ ಮೊಗಲರ ಕಾಲಕ್ಕಿಂತ ಸಾಕಷ್ಟು ಕಡಿಮೆಯಾಯಿತು. ಇದೇ ವೇಳೆಗೆ ಬದಲಾಗಿದ್ದ ಸಮಾಜೋ–ಆರ್ಥಿಕ ಪರಿಸ್ಥಿತಿಗಳಿಂದಾಗಿ ಲೇವಾದೇವಿಗಾರರು, ಧಾನ್ಯ ವರ್ತಕರು ಮತ್ತು ದೊಡ್ಡ ಜಮೀನ್ದಾರ ವರ್ಗಗಳು ತಲೆ ಎತ್ತಿ ಸರ್ಕಾರಕ್ಕೂ ರೈತರಿಗೂ ನಡುವೆ ಏಜೆಂಟರಂತೆ ಕಾರ್ಯನಿರ್ವಹಿಸಲಾರಂಭಿಸಿದವು. ಬ್ರಿಟಿಷ್ ಕಂದಾಯ ನೀತಿಯ ಒಂದು ಗಮನಾರ್ಹ ಅಂಶವೆಂದರೆ ಅದರಿಂದ ಉದ್ಭವಿಸಿದ ಭೂ ಒಡೆತನ. ಹೆಚ್ಚಿದ ವಿದೇಶಿ ವ್ಯಾಪಾರ, ಕೃಷಿಯ ವಾಣಿಜ್ಯೀಕರಣ ಮತ್ತು ಹಣದ ಹರಿವಿನಿಂದ ಭೂಮಿ ಬಂಡವಾಳಶಾಹಿಯ ಒಡೆತನಕ್ಕೆ ಒಳಗಾಯಿತು. ಮೊಗಲ್ ಆಡಳಿತದಡಿ ಜಮೀನ್ದಾರರು, ಜಾಹಗೀರದಾರರು ಮತ್ತು ತಾಲ್ಲೂಕುದಾರರು ಭೂಮಿಯ ಒಡೆಯರಾಗಿರಲಿಲ್ಲ, ಅವರು ಕೆಲವು ಸೀಮಿತ ಅಧಿಕಾರಗಳನ್ನು ಹೊಂದಿದ ತೆರಿಗೆ ಸಂಗ್ರಾಹಕರು ಮತ್ತು ಮಧ್ಯವರ್ತಿಗಳು ಮಾತ್ರವೇ ಆಗಿದ್ದರು. ಬ್ರಿಟಿಷರು ಕಂದಾಯದ ಭೂಮಿಯನ್ನು ಹರಾಜು ಹಾಕುವ ಮೂಲಕ ಅವರ ಅನೇಕ ಹಂತಗಳ, ಶ್ರೇಣಿಗಳ ಭೂಒಡೆಯರನ್ನು ಸೃಷ್ಟಿಸಿದರು. ಈ ಹಂತದಲ್ಲಿ ಅಪಾರ ಸಂಖ್ಯೆಯ ಸಂಸ್ಥಾನಿಕ ಅರಸರೊಂದಿಗೆ, ಗ್ರಾಮಗಳ ಮುಖಂಡರೊಂದಿಗೆ ಮತ್ತು ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಒಡಂಬಡಿಕೆಗೆ ಬರಲಾಯಿತು. ಆದರೆ ಬ್ರಿಟಿಷ್ ಸರ್ಕಾರ ಇಲ್ಲಿ ಪಾರಂಪರಿಕ ಗೇಣಿದಾರರನ್ನು ನಿರ್ಲಕ್ಷಿಸಿತು. ಈ ಗೇಣಿದಾರರು ತಲೆತಲಾಂತರಗಳಿಂದ ಅನುಭವಿಸುತ್ತಿದ್ದ ಭೂಮಿಯ ಕಾನೂನುಗಳು ಜಮೀನ್ದಾರರಿಗೆ ಬೆಂಬಲವಾಗಿ ಬಂದವು. ಈ ಎಲ್ಲ ಬೆಳವಣಿಗೆಗಳು ದೇಶಾದ್ಯಂತ ರೈತಾಪಿ ವರ್ಗಗಳನ್ನು ಹತಾಶೆಗೆ ನೂಕಿದವಲ್ಲದೆ ಮುಂದೆ ಸ್ಫೋಟಕ ಪರಿಸ್ಥಿತಿಗಳಿಗೆ ಕಾರಣವಾದವು.

ಆಹಾರ ಸಂಗ್ರಹಣೆಯೊಂದಿಗೆ ತಮ್ಮ ಪಾರಂಪರಿಕ ಕೃಷಿಯನ್ನೂ ನಡೆಸುತ್ತಿದ್ದ ಗುಡ್ಡಗಾಡು ಮತ್ತು ಆದಿವಾಸಿ ಜನತೆ ಈ ಹೊಸ ವ್ಯವಸ್ಥೆಯಡಿ ಯುರೋಪಿಯನ್ ಮತ್ತು ಭಾರತೀಯ ಪ್ಲಾಂಟರ್‌ಗಳಿಂದ ಹೊಸ ಬಗೆಯ ಶೋಷಣೆಗಳಿಗೆ ಒಳಗಾದರು. ಬಲಿಷ್ಠ ನಾಗರಿಕ ವರ್ಗಗಳು ಅವರ ಭೂಮಿಯನ್ನು ಅತಿಕ್ರಮಿಸಿಕೊಂಡವು. ಅವರ ಮೇಲೆ ಹೊಸ ಬೆಳೆಗಳನ್ನು, ವ್ಯಾಪಾರಿ ನಿಯಮಗಳನ್ನು ಮತ್ತು ಜೀತ ಪದ್ಧತಿಗಳನ್ನು ಹೇರಲಾಯಿತು. ಜಮೀನ್ದಾರರಿಂದ ಬಲವಂತವಾಗಿ ತಮ್ಮ ಭೂಮಿಗಳಿಂದ ಹೊರದೂಡಲ್ಪಟ್ಟ ಸಂತಾಲ ಬುಡಕಟ್ಟಿನ ಜನತೆ ಅಂತಿಮವಾಗಿ 1855ರಲ್ಲಿ ದಂಗೆ ಏಳುವಂತಾಗಿದ್ದು ಇದರಿಂದಲೇ.

ಭಾರತದಲ್ಲಿ ಕೃಷಿಯ ವಾಣಿಜ್ಯೀಕರಣ ಶಾಂತಿಯುತ ಪ್ರಕ್ರಿಯೆಯೇನೂ ಆಗಿರಲಿಲ್ಲ. ಅನೇಕ ಕಡೆ ರೈತರನ್ನು ಆಹಾರ ಧಾನ್ಯಗಳಿಗೆ ಬದಲಾಗಿ ಟೀ, ಕಾಫಿ, ರಬ್ಬರ್, ಇಂಡಿಗೋ, ಅಫೀಮು, ಹತ್ತಿ, ಎಣ್ಣೆ ಕಾಳುಗಳು, ಸೆಣಬು, ಮೆಣಸು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತೆ ಬಲಪ್ರಯೋಗ ಮಾಡಲಾಯಿತು. ಜಮೀನ್ದಾರರು, ರಫ್ತುದಾರರು ಮತ್ತು ಸ್ಥಳೀಯ ವ್ಯಾಪಾರಿಗಳು ಒಟ್ಟಾಗಿ ಸೇರಿ ರೈತರ ಮೇಲೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಒತ್ತಡ ಹೇರಿದರು. ಜಮೀನ್ದಾರಿ ಪ್ರದೇಶಗಳಲ್ಲಿ ಪ್ಲಾಂಟರ್‌ಗಳು ಜಮೀನ್ದಾರಿ ಹಕ್ಕುಗಳನ್ನು ಖರೀದಿಸಿ, ಗೇಣೀದಾರರು ವಾಣಿಜ್ಯ ಬೆಳೆಗಳನ್ನು ಮಾತ್ರವೇ ಬೆಳೆಯುವಂತೆ ಮಾಡಿದರು. ಇದು ಸಹಜವಾಗಿಯೇ ಆಹಾರ ಧಾನ್ಯಗಳ ಉತ್ಪಾದನೆಯನ್ನು ಗಮನಾರ್ಹ ಪ್ರಮಾಣದಲ್ಲಿ ಕುಗ್ಗಿಸಿತು. ಪರಿಣಾಮವಾಗಿ ಜನತೆ ತೀವ್ರ ಸಂಕಷ್ಟಗಳಿಗೆ ಗುರಿಯಾದರು. ಇದರಿಂದಾಗಿ 1860ರಲ್ಲಿ ನೀಲಿ ಬೆಳೆಗಾರರು ತಮ್ಮ ಬ್ರಿಟಿಷ್ ಪ್ಲಾಂಟರ್‌ಗಳ ವಿರುದ್ಧ ದಂಗೆ ಏಳುವಂತಾಯಿತು.

18ನೆಯ ಶತಮಾನದ ಕೊನೆಯ ಭಾಗದಲ್ಲಿ ಮತ್ತು 19ನೆಯ ಶತಮಾನದ ಆರಂಭದ ದಶಕಗಳಲ್ಲಿ ಭಾರತದ ಸಾಂಪ್ರದಾಯಿಕ ಕೈಗಾರಿಕೆಗಳು ಮತ್ತು ಕರಕುಶಲ ಕಲೆಗಳು ಅವನತಿಯ ಹಾದಿ ಹಿಡಿದವು. ಒಂದೆಡೆ ಇಂಗ್ಲೆಂಡ್ ಕೈಗಾರಿಕ ಕ್ರಾಂತಿಯಿಂದ ಪ್ರಗತಿಯೆಡೆಗೆ ಸಾಗುತ್ತಿದ್ದರೆ, ಅದೇ ಕಾಲದಲ್ಲಿ ಭಾರತೀಯ ಸಾಂಪ್ರದಾಯಿಕ ಕೈಗಾರಿಕೆಗಳು ಮತ್ತು ನೇಕಾರಿಕೆಗಳು ಅವನತಿಯಾಗುತ್ತಿದ್ದುದು ವ್ಯಂಗ್ಯವೇ ಸರಿ. ಕೈಗಾರಿಕ ಕ್ರಾಂತಿಯ ಉತ್ಕರ್ಷ ಕಾಲದಲ್ಲಿ ಮುಕ್ತ ವ್ಯಾಪಾರಿ ನೀತಿಯ ಮೂಲಕ ಇಂಗ್ಲೆಂಡ್‌ನ ವ್ಯಾಪಾರಿಗಳು ಮತ್ತು ಬಂಡವಾಳಗಾರರು ಭಾರತೀಯ ಕರಕುಶಲ ಮತ್ತು ನೇಕಾರಿಕ ಉದ್ದಿಮೆಗಳ ಮೇಲೆ ನೇರ ಆಕ್ರಮಣವನ್ನೇ ನಡೆಸಿದರು. ಭಾರತದೊಂದಿಗೆ ಮುಕ್ತ ವ್ಯಾಪಾರವನ್ನೂ ಭಾರತದಲ್ಲಿ ಇಂಗ್ಲೆಂಡ್‌ನ ವಸ್ತುಗಳಿಗೆ ಆಮದು ಸುಂಕ ರದ್ದತಿಯನ್ನೂ ಅವರು ಆಗ್ರಹಿಸಿದರು. ಅದೇ ವೇಳೆಗೆ ಭಾರತದಿಂದ ರಫ್ತಾಗುತ್ತಿದ್ದ ವಸ್ತುಗಳ ಮೇಲೆ ಅತ್ಯಧಿಕ ಕರಭಾರವನ್ನು ಹೇರಲಾಗುತ್ತಿತ್ತು. ಇದು ಇಂಗ್ಲೆಂಡ್‌ನಲ್ಲಿ ಭಾರತದ ವಸ್ತುಗಳಿಗೆ ಮಾರುಕಟ್ಟೆಯನ್ನು ಕುಗ್ಗಿಸಿತು. ಈ ಮೊದಲೇ ಈಸ್ಟ್ ಇಂಡಿಯ ಕಂಪನಿ ಕೂಡ ಭಾರತೀಯ ಉದ್ದಿಮೆಗಳ ಅವನತಿಗೆ ತನ್ನ ಕೊಡುಗೆ ನೀಡಿತ್ತು. 1813ರ ಚಾರ್ಟರ್ ಕಾಯ್ದೆಗೆ ಮೊದಲು ಭಾರತೀಯ ವಸ್ತುಗಳ ಪ್ರಮುಖ ರಫ್ತುದಾರನಾಗಿದ್ದ ಕಂಪನಿಯ ಏಜೆಂಟರು ಸ್ಥಳೀಯ ನೇಕಾರಿಕೆ ಮತ್ತು ಕರಕುಶಲ ಉದ್ದಿಮೆಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದರು. ಕಂಪನಿಯ ನೀತಿಗಳಿಂದಾಗಿ ಈ ಕರಕುಶಲಗಾರರು ನಾಶವಾದರು. ಸ್ವತಃ ಲಾರ್ಡ್ ವಿಲಿಯಂ ಬೆಂಟಿಕ್‌ನೇ ಈ ಕುರಿತು 1834ರಲ್ಲಿಯೇ ಈ ದುರಂತಕ್ಕೆ ಹೋಲಿಕೆ ಸಿಗುವುದು ಕಷ್ಟ. ಭಾರತದ ಬಯಲುಗಳು ನೇಕಾರರ ಮೂಳೆಗಳಿಂದ ಬಿಳುಪಾಗಿವೆ ಎಂದಿದ್ದ.

ಕಾರ್ಲ್‌ಮಾರ್ಕ್ಸ್‌ನ ಪ್ರಕಾರ ಭಾರತೀಯ ಕೈಮಗ್ಗವನ್ನು ಮುರಿದದ್ದು ಮತ್ತು ರಾಟೆಯನ್ನು ನಾಶಪಡಿಸಿದ್ದೇ ಬ್ರಿಟಿಷರು. ಬ್ರಿಟನ್ನಿನ ಮಾರುಕಟ್ಟೆಗಳಿಂದ ಭಾರತೀಯ ಹತ್ತಿಯನ್ನು ಒಕ್ಕಲೆಬ್ಬಿಸಿದ ಇಂಗ್ಲೆಂಡ್ ಅಂತಿಮವಾಗಿ ಹತ್ತಿಯ ತವರಿನಲ್ಲೆ ಹತ್ತಿಯ ಕ್ಷಾಮವನ್ನು ಸೃಷ್ಟಿಸಿತು. ತಮ್ಮ ವ್ಯಾಪಾರಿ ಸುಂಕಗಳು, ಆಮದು–ರಫ್ತು ನೀತಿ, ತೆರಿಗೆ ಪದ್ಧತಿಗಳ ಮೂಲಕ ಭಾರತವನ್ನು ಬ್ರಿಟಿಷರು ಕಚ್ಚಾಸರಕು ರಫ್ತುದಾರ ರಾಷ್ಟ್ರವನ್ನಾಗಿ ರೂಪಿಸಿದರು. ಇವರು ನಿರ್ಮಿಸಿದ ರೈಲ್ವೆ ಮಾರ್ಗಗಳು ಕೂಡ ಇದಕ್ಕೆ ಪೂರಕವಾಗಿದ್ದವು.

1757ರ ಪ್ಲಾಸಿ ಕದನದ ಅನಂತರ ಭಾರತದ ಸಂಪತ್ತು ಇಂಗ್ಲೆಂಡಿನ ಕಡೆಗೆ ಹರಿಯಲಾರಂಭಿಸಿತು. ಈ ಕುರಿತು ಬ್ರಿಟಿಷ್ ಮತ್ತು ಭಾರತೀಯ ಬರೆಹಗಾರರು ಸಾಕಷ್ಟು ಚರ್ಚೆಗಳನ್ನು ನಡೆಸಿದ್ದರು.

ಈಸ್ಟ್ ಇಂಡಿಯ ಕಂಪನಿ ಭಾರತದಲ್ಲಿ ಆಧಿಪತ್ಯವನ್ನು ಸ್ಥಾಪಿಸುವ ಮುನ್ನ ಇಂಗ್ಲೆಂಡ್ ಭಾರತದೊಡನೆ ವ್ಯಾಪಾರಕ್ಕಾಗಿ ತನ್ನ ಹಣವನ್ನು ರವಾನಿಸುತ್ತಿತ್ತು. ಆದರೆ ಬಂಗಾಲದ ಆಧಿಪತ್ಯ ದೊರಕಿದ ಅನಂತರ ಅಲ್ಲಿಯ ಕಂದಾಯ ಮತ್ತು ಸುಂಕಗಳನ್ನು ಬಳಸಿ ಭಾರತೀಯ ಸರಕುಗಳನ್ನು ಖರೀದಿಸಲಾರಂಭಿಸಿತು. ಇಂಗ್ಲೆಂಡ್, ಲಂಕಾಷೈರ್ ಮತ್ತು ಮ್ಯಾಂಚೆಸ್ಟರ್‌ಗಳು ಸ್ಪರ್ಧೆಯಲ್ಲಿ ಸಿಲುಕಿ ಭಾರತದ ಸಾಂಪ್ರದಾಯಿಕ ರಫ್ತುಗಳಾದ ಹತ್ತಿ, ರೇಷ್ಮೆಯ ಕುಸಿತದೊಂದಿಗೆ ಸಮಸ್ಯೆಗಳ ಆರಂಭವಾದವು. ಈ ಸಮಸ್ಯೆಗೆ ಒಂದು ಪರ್ಯಾಯವಾಗಿ ಇಂಗ್ಲೆಂಡ್ ಇಂಡಿಗೋವನ್ನು (ನೀಲಿ) ಪ್ರೋತ್ಸಾಹಿಸಿದ್ದಲ್ಲದೆ ಚೀನಕ್ಕೆ ಟೀಗೆ ಬದಲಾಗಿ ಅಫೀಮನ್ನು ರಫ್ತು ಮಾಡಲಾರಂಭಿಸಿತು. ಅದೇ ವೇಳೆ ಇನ್ನಿತರ ವಸ್ತುಗಳಾಗಿ ಕಚ್ಚಾ ಹತ್ತಿ, ಗೋದಿ, ಸೆಣಬು, ಟೀ, ಎಣ್ಣೆ ಕಾಳುಗಳು ಮುಂತಾದವನ್ನು ರಫ್ತು ಮಾಡಲಾರಂಭಿಸಿತು.

ಭಾರತದ ಸಂಪತ್ತಿನ ಸೋರಿಕೆಗೆ ಅಗಣಿತ ಮಾರ್ಗಗಳಿದ್ದವು. ಬ್ರಿಟನ್‌ನಲ್ಲಿದ್ದ ಭಾರತದ ಕಾರ್ಯದರ್ಶಿ ಭಾರತದ ಪರವಾಗಿ ಮಾಡುತ್ತಿದ್ದ ವೆಚ್ಚವನ್ನು ಕುರಿತಾದ ಗೃಹ ತೆರಿಗೆಗಳು ಇದರಲ್ಲಿ ಮೊದಲನೆಯದು. 1857ಕ್ಕೆ ಮೊದಲು ಹೋಂ ಚಾರ್ಜಸ್ ಎಂಬ ಹೆಸರಿನ ವೆಚ್ಚ ಭಾರತದ ಒಟ್ಟು ಆದಾಯದ ಶೇ.40ಕ್ಕೂ ಹೆಚ್ಚಿತ್ತು. 1833ರಲ್ಲಿ ಈಸ್ಟ್ ಇಂಡಿಯ ಕಂಪನಿ ಭಾರತದಲ್ಲಿಯ ತನ್ನ ವ್ಯಾಪಾರಿ ಏಕಸ್ವಾಮ್ಯವನ್ನು ಕಳೆದುಕೊಂಡಾಗ, ಕಂಪನಿಯ ಷೇರುದಾರರಿಗೆ ಡಿವಿಡೆಂಟ್ ನೀಡುವ ವ್ಯವಸ್ಥೆ ಮಾಡಲಾಯಿತು. ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದ ಕಂಪನಿಯ ಡಿವಿಡೆಂಡ್ ವಾರ್ಷಿಕವಾಗಿ 6,30,000 ಪೌಂಡ್‌ಗಳಷ್ಟಿತ್ತು. ವಸಾಹತುಶಾಹಿ ಯುದ್ಧಗಳಿಗಾಗಿ ಕಂಪನಿ ಮಾಡಿದ್ದ ಸಾರ್ವಜನಿಕ ಸಾಲವೇ 70 ಮಿಲಿಯನ್ ಪೌಂಡ್‌ಗಳಷ್ಟಿತ್ತು. 1900ರ ವೇಳೆಗೆ ಈ ಸಾರ್ವಜನಿಕ ಸಾಲದ ಮೊತ್ತ 224 ಮಿಲಿಯನ್ ಪೌಂಡ್‌ಗಳಿಗೆ ಏರಿತು. ಭಾರತದ ಆದಾಯದಲ್ಲಿ ಈ ಸಾಲಗಳಿಗೆ ಬಡ್ಡಿಯನ್ನು ಪಾವತಿಸಲಾಗುತ್ತಿತ್ತು. ಮಿಲಿಟರಿ ಮತ್ತು ನಾಗರಿಕ ಅಧಿಕಾರಿಗಳಿಗೆ ಕೊಡಮಾಡುತ್ತಿದ್ದ ಸಂಬಳ, ಪಿಂಚಣಿ ಮತ್ತಿತರ ಭತ್ಯೆಗಳೂ ದೊಡ್ಡ ಮೊತ್ತದ್ದಾಗಿತ್ತು. ಸೈನ್ಯ, ನೌಕಾಬಲಗಳ ಸಾಮಗ್ರಿಗಳನ್ನು ಇಂಗ್ಲೆಂಡ್‌ನಲ್ಲಿಯೇ ಖರೀದಿಸಲಾಗುತ್ತಿತ್ತು. ಇವೆಲ್ಲವೂ ಸಂಪತ್ತಿನ ಸೋರುವಿಕೆಯೇ ಆಗಿತ್ತು. ಭಾರತದಲ್ಲಿಯ ಬ್ರಿಟಿಷ್ ಹೂಡಿಕೆದಾರರ ಬಂಡವಾಳದ ಮೇಲಿನ ಬಡ್ಡಿ ಮತ್ತು

ಲಾಭಗಳೂ ಸೋರಿಕೆಯ ಪ್ರಕ್ರಿಯೆಗೆ ತಮ್ಮ ಕೊಡುಗೆ ನೀಡಿದವು. ದಾದಾಭಾಯಿ ನವರೋಜಿ, ಆರ್.ಸಿ.ದತ್ತ, ಡಿ.ಇ.ವಾಚಾ ಮತ್ತು ಜಿ.ವಿ. ಜೋಶಿ ಇನ್ನಿತರ ರಾಷ್ಟ್ರೀಯವಾದಿ ಬರೆಹಗಾರರು ಈ ಸಂಪತ್ತಿನ ಸೋರಿಕೆಯನ್ನು ಕಠಿಣವಾಗಿ ಖಂಡಿಸಿದ್ದಾರೆ. ಈ ಸಂಪತ್ತಿನ ಸೋರಿಕೆಯನ್ನು ನಿಲ್ಲಿಸಿ, ಭಾರತದ ಸಂಪತ್ತನ್ನು ಭಾರತದಲ್ಲಿಯೇ ಬಳಸಲು ಇವರು ಆಗ್ರಹಿಸಿದರು. ಭಾರತದಿಂದ ಆದ ಸಂಪತ್ತಿನ ಸೋರಿಕೆಯ ಅತಿ ದೊಡ್ಡ ಮಾರ್ಗವೆಂದರೆ ಕಚ್ಚಾ ಸರಕುಗಳದ್ದು. ಇಲ್ಲಿಂದ ರಫ್ತಾಗುತ್ತಿದ್ದ ಈ ವಸ್ತುಗಳಿಗೆ ಯಾವುದೇ ರೀತಿಯ ಪ್ರತಿಫಲವನ್ನು ನಿರೀಕ್ಷಿಸುವಂತಿರಲಿಲ್ಲ. ಈ ಹಿನ್ನೆಲೆಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ರಾಷ್ಟ್ರೀಯವಾದಿಗಳು ಸಂಪತ್ತಿನ ಸೋರಿಕೆಯನ್ನು ಹೋರಾಟದ ಒಂದು ಅಸ್ತ್ರವನ್ನಾಗಿ ಮಾಡಿಕೊಂಡಿದ್ದರಲ್ಲಿ ಆಶ್ಚರ್ಯವಿಲ್ಲ.

(ಎಸ್.ಜೆ.)

**ಸಂವಿಧಾನ:** ಒಂದು ರಾಜಕೀಯ ನೀತಿ ಸಂಹಿತೆ. ಅರಿಸ್ಟಾಟಲನ ಪ್ರಕಾರ ಸಂವಿಧಾನ ಸಾಮಾಜಿಕ ಕ್ರಿಯೆಯ ಹಾಗೂ ಮೌಲ್ಯದ ಒಂದು ವ್ಯವಸ್ಥೆಯಾಗಿದೆ. ರಾಜ್ಯದ ಅವಿಭಾಜ್ಯ ಅಂಗವಾದ ಸಂವಿಧಾನ ಆಯಾ ಪ್ರದೇಶದ ಕಾನೂನಿನ ಅವಿಭಾಜ್ಯ ಅಂಗ ಮಾತ್ರವಲ್ಲದೆ, ಶ್ರೇಷ್ಠ ಅಥವಾ ಮೂಲಭೂತ ಕಾನೂನಾಗಿರುತ್ತದೆ. ಆಧುನಿಕ ರಾಜ್ಯಶಾಸ್ತ್ರಜ್ಞರ ಪ್ರಕಾರ ಸಂವಿಧಾನಗಳು ಹಾಗೂ ಸಂವಿಧಾನಾತ್ಮಕ ಮೌಲ್ಯಗಳು 18ನೆಯ ಶತಮಾನದ ಜ್ಞಾನಯುಗದ ಪರಿಕಲ್ಪನೆಯ ಪರಿಣಾಮ. ಒಂದು ವ್ಯವಸ್ಥಿತ ರಾಜ್ಯದ ಅವಿಭಾಜ್ಯ ಅಂಗಗಳಾದ ಪ್ರಜೆಗಳು, ಭೌಗೋಳಿಕ ಗಡಿ, ಸರ್ಕಾರ ಇವುಗಳ ಜೊತೆಯಲ್ಲಿ ಸಂವಿಧಾನ ಅತ್ಯಾವಶ್ಯಕ. ಆಳುವವರ್ಗ ಮತ್ತು ಪ್ರಜೆ ಇವರ ಬಾಂಧವ್ಯವನ್ನು ವ್ಯವಸ್ಥಿತವಾಗಿ ನಿರೂಪಿಸುವಂತಹ ವ್ಯವಸ್ಥೆ ಇದಾಗಿದ್ದು, ಆಯಾ ಸಮಾಜದ ಒಪ್ಪಿದ ರಾಜಕೀಯ ಸಿದ್ಧಾಂತಗಳಿಗೆ ಅನುಗುಣವಾಗಿ ಹೊರಹೊಮ್ಮುವ ಪ್ರಾಥಮಿಕ ಸಂಹಿತೆಯಾಗಿರುತ್ತದೆ.

ಸಂವಿಧಾನವನ್ನು ಯಾವುದೇ ನಿರ್ದಿಷ್ಟ ವ್ಯಾಖ್ಯೆಯಿಂದ ಗುರುತಿಸಲಾಗದು. ರಾಜ್ಯಶಾಸ್ತ್ರಜ್ಞರು ತಮ್ಮ ಸಿದ್ಧಾಂತ ಅಥವಾ ಜ್ಞಾನದ ಪರಿಮಿತಿಗೆ ಒಳಪಟ್ಟಂತೆ ಇದನ್ನು ವ್ಯಾಖ್ಯಾನಿಸಿದ್ದಾರೆ. ಒಂದು ಸರ್ಕಾರದ ಅಂಗಗಳ ಪ್ರಕರ್ಮಗಳ ಚೌಕಟ್ಟು ಹಾಗೂ ಸಿದ್ಧಾಂತಗಳನ್ನು ತಿಳಿಹೇಳುವ, ವಿಶೇಷ ಶಾಸನೀಯ ಸಿಂಧುತ್ವವನ್ನು ಹೊಂದಿರುವ ಒಂದು ದಾಖಲೆಯಾಗಿರುತ್ತದೆ. ಎನ್‌ಸೈಕ್ಲೋಪೀಡಿಯ ಅಮೆರಿಕದಲ್ಲಿ ಹೇಳುವಂತೆ ಸಂವಿಧಾನ ಒಂದು ರಾಜ್ಯದ ಆಂತರಿಕ ವ್ಯವಸ್ಥೆಗೆ ಸಂಬಂಧಿಸಿದ ಸ್ಥಳೀಯ ಕಾನೂನಿನ ಒಂದು ಪ್ರಕಾರ. ಸಂವಿಧಾನ ಕೇವಲ ಕಾನೂನಿನ ಒಂದು ಅಂಗವಾಗಿರದೆ, ಪ್ರಮುಖವಾದ ರಾಜಕೀಯ ದಸ್ತಾವೇಜಾಗಿರುತ್ತದೆ ಹಾಗೂ ರಾಜಕೀಯ ಭೂಪಟವಾಗಿರುತ್ತದೆ ಎಂದು ಲೆನಿನ್ ಹೇಳಿದ್ದಾನೆ. ಒಟ್ಟಿನಲ್ಲಿ ಇದು ಒಂದು ನಿರ್ದಿಷ್ಟ ರಾಜ್ಯದ ರಾಜಕೀಯ ವ್ಯವಸ್ಥೆಯನ್ನು ಹಾಗೂ ಸರ್ಕಾರದ ಸಂಪೂರ್ಣ ವ್ಯವಸ್ಥೆಯನ್ನು ನಿರೂಪಿಸುವಂತಹುದಾಗಿದೆ.

ಸಂವಿಧಾನಗಳ ಬೆಳೆವಣಿಗೆಯ ಅಧ್ಯಯನಗಳಲ್ಲಿ ಮ್ಯಾಗ್ನಕಾರ್ಟವನ್ನು (1215) ಪ್ರಥಮ ಲಿಖಿತ ಆಕರವಾಗಿ ಹಾಗೂ ಅಡಿಪಾಯವಾಗಿ ನೋಡಬಹುದಾಗಿದೆ. ಅನಂತರದಲ್ಲಿ ಇಂಗ್ಲೆಂಡ್‌ನಲ್ಲಿ ಬಂದ ಪೆಟಿಷನ್ ಆಫ್ ರೈಟ್ಸ್ (1628), ಬಿಲ್ ಆಫ್ ರೈಟ್ಸ್(1689), ಪಾರ್ಲಿಮೆಂಟ್ ಆ್ಯಕ್ಟ್ (1911), ಕ್ರೌನ್ಸ್ ಪ್ರೊಸೀಡಿಂಗ್ಸ್ ಆ್ಯಕ್ಟ್ (1947) (ಇವೆಲ್ಲವೂ ಶಾಸನದ ರೀತಿ ಬಂದಿರುವುದು ಅಲ್ಲದೆ ಅಂತಾರಾಷ್ಟ್ರೀಯ ಕಾನೂನುಗಳು) ಪ್ರಮುಖ ಪಾತ್ರ ವಹಿಸಿವೆ.

ಸಂವಿಧಾನ ಲಿಖಿತ ಅಥವಾ ಅಲಿಖಿತವಾಗಿರಬಹುದು. ಪ್ರಪಂಚದ ಪ್ರಜಾಪ್ರಭುತ್ವದ ಜನ್ಮದಾತೆ ಎಂದು ಕರೆಸಿಕೊಳ್ಳುವ ಇಂಗ್ಲೆಂಡ್‌ನಲ್ಲಿ ಮಾತ್ರ ಅಲಿಖಿತ ಸಂವಿಧಾನವಿದೆ. ಅಲ್ಲಿ ಸಾಮಾನ್ಯ ಕಾನೂನು ಸಂವಿಧಾನವಾಗಿ ಅಂಗೀಕೃತವಾಗಿದೆ. ಅನೂಚಾನವಾಗಿ ಪಾಲಿಸಿಕೊಂಡುಬಂದಿರುವ ರೂಢಿ ಸಂಪ್ರದಾಯಗಳು, ಕಟ್ಟಳೆಗಳು ಹಾಗೂ ಶಾಸನಗಳು ಸಾಂವಿಧಾನಿಕ ಮೌಲ್ಯಗಳಾಗಿವೆ. ಚುನಾಯಿತ ಸಮುದಾಯ–ಪಾರ್ಲಿಮೆಂಟ್‌ನಲ್ಲಿ ವರಿಷ್ಠತೆಯನ್ನು ನೋಡಲಾಗಿದೆ. ಪಾರ್ಲಿಮೆಂಟ್ ಸಮೇತ ಚಕ್ರವರ್ತಿಯನ್ನು ಕಾನೂನುಬದ್ಧ ಸಾರ್ವಭೌಮನೆಂಬ ತತ್ತ್ವವನ್ನು ಗೌರವಿಸಲಾಗಿದೆ. ಅದರಲ್ಲೂ ಪ್ರಜಾಪ್ರಭುತ್ವದಲ್ಲಿ ಪ್ರಭುತ್ವವನ್ನು ಅಳವಡಿಸಿರುವ ವಿಶಿಷ್ಟ ಸಾಂವಿಧಾನಿಕ ಪದ್ಧತಿ ಇಂಗ್ಲೆಂಡಿನದ್ದಾಗಿದೆ. ಉತ್ತಮ ಸಂವಿಧಾನದ ಲಕ್ಷಣಗಳಿಂದ ಲಿಖಿತತೆ, ಸ್ಪಷ್ಟತೆ, ನಿರ್ದಿಷ್ಟತೆ, ಶ್ರೇಷ್ಠತೆ, ಹೊಣೆಗಾರಿಕೆ ಹಾಗೂ ನ್ಯಾಯಾಂಗ ಶ್ರೇಷ್ಠತೆಗಳು ಇಂಗ್ಲೆಂಡ್ ಮಾದರಿಯಲ್ಲಿ ಕಂಡುಬರಲಾರದೆಂದು ಸಂವಿಧಾನ ವಿಮರ್ಶಕರು ವ್ಯಾಖ್ಯಾನಿಸಿದ್ದರು. ಈ ಸಂವಿಧಾನ ಪದ್ಧತಿ ಅತ್ಯಂತ ಹಳೆಯ ಹಾಗೂ ಪ್ರಸ್ತುತ ಸಂವಿಧಾನವಾಗಿರುವುದಲ್ಲದೆ ಮಾದರಿ ಸಂವಿಧಾನವೂ ಆಗಿದೆ. ಸಂವಿಧಾನವನ್ನು ನಮ್ಯ ಹಾಗೂ ಅನಮ್ಯ ಸಂವಿಧಾನಗಳೆಂದು ವಿಭಜಿಸಿಲಾಗಿದೆ. ಸುಲಭವಾಗಿ ಸಂವಿಧಾನವನ್ನು ಬದಲಾವಣೆ ಮಾಡಬಹುದಾಗಿದ್ದರೆ ನಮ್ಯವೆಂದೂ ಸುಲಭವಾಗಿ ಸಂವಿಧಾನವನ್ನು ಬದಲಾಯಿಸಲು ಆಗದಿದ್ದರೆ ಅನಮ್ಯವೆಂದೂ ಪರಿಗಣಿಸಲಾಗುತ್ತದೆ. ಅರ್ಥಾತ್ ಸಂವಿಧಾನದ ತಿದ್ದುಪಡಿಯ ಅವಕಾಶದ ಮೇಲೆ ಈ ರೀತಿಯ ವಿಭಾಗೀಕರಣ ಅವಲಂಬಿತ. ಸಾಮಾನ್ಯವಾಗಿ ಲಿಖಿತ ಸಂವಿಧಾನಗಳು ಅನಮ್ಯ ಸಂವಿಧಾನಗಳೆಂಬ ತರ್ಕವೂ ಇದೆ. ಒಂದು ವೇಳೆ ತಿದ್ದುಪಡಿಮಾಡುವ ಅವಕಾಶ ಇದ್ದಲ್ಲಿ ಈ ಅಧಿಕಾರವನ್ನು ಶಾಸಕಾಂಗಕ್ಕೆ ನೀಡಲಾಗಿರುತ್ತದೆ. ಒಟ್ಟಾರೆ ನಮ್ಯ ಹಾಗೂ ಅನಮ್ಯ ಸಂವಿಧಾನಗಳ ಪರಸ್ಪರ ಪ್ರಯೋಜನಗಳನ್ನು ಹಾಗೂ ಗುಣಾವಗುಣಗಳನ್ನು ಮೌಲ್ಯೀಕರಿಸುವುದು ತ್ರಾಸದಾಯಕವಾಗುತ್ತದೆ. ರಾಜ್ಯದ ರಾಜಕೀಯ ವ್ಯವಸ್ಥೆ ಹಾಗೂ ಅಧಿಕಾರ ಕೇಂದ್ರೀಕೃತವಾಗಿರುವ ಹಿನ್ನೆಲೆಯಲ್ಲಿ, ಏಕಾತ್ಮಕ ಹಾಗೂ ವಿಕೇಂದ್ರೀಕೃತವಾಗಿದ್ದಲ್ಲಿ ಸಂಯುಕ್ತ ಸಂವಿಧಾನಗಳೆಂಬ ವಿಭಾಗೀಕರಣವುಂಟು. ರಾಜ್ಯ ವ್ಯವಸ್ಥೆ ಸಂಯುಕ್ತ ಅಥವಾ ಒಕ್ಕೂಟವಾಗಿದ್ದಾಗ, ಕೇಂದ್ರ ಹಾಗೂ ರಾಜ್ಯಗಳ ಪರಸ್ಪರ ಸಂಬಂಧಗಳನ್ನು ಹಾಗೂ ಇತಿಮಿತಿಗಳನ್ನು ಸಂವಿಧಾನವೇ ತಿಳಿಸಬೇಕು. ಇದು ಬಹು ಸಂಕೀರ್ಣ ಹಾಗೂ ಸೂಕ್ಷ್ಮ ಅಂಶವಾಗಿದೆ. ಈ ದೃಷ್ಟಿಯಲ್ಲಿ ಮಾದರಿಯಾಗಿ ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಆಸ್ಟ್ರೇಲಿಯ, ಭಾರತ ಹಾಗೂ ಸ್ವಿಟ್ಜರ್ಲೆಂಡ್ ಸಂವಿಧಾನಗಳನ್ನು ಹೆಸರಿಸಬಹುದಾಗಿದೆ. ಅಂತೆಯೇ ಏಕಾತ್ಮಕ ಸಂವಿಧಾನವಾಗಿ ಮೂಲತಃ ಇಂಗ್ಲೆಂಡ್ ಮಾದರಿಯನ್ನು ಆಧಾರವಾಗಿಟ್ಟುಕೊಂಡು ಶ್ರೀಲಂಕ, ಚೀನ, ಐರ್ಲೆಂಡ್, ಫ್ರಾನ್ಸ್ ಸಂವಿಧಾನಗಳನ್ನು ಹೆಸರಿಸಬಹುದು. ಅಮೆರಿಕ ಮಾದರಿಯ ಸಂಯುಕ್ತ ಪದ್ಧತಿ ಅನೇಕ ವಿಷಯಗಳಲ್ಲಿ ವಿಶಿಷ್ಟತೆಯನ್ನು ಹೊಂದಿದ್ದು, ಇತರೆ ಬಹುತೇಕ ಸಂವಿಧಾನಗಳಿಗೆ ಸ್ಫೂರ್ತಿದಾಯಕವಾಗಿದೆ. ಅಮೆರಿಕದ ಅಧ್ಯಕ್ಷೀಯ ಮಾದರಿ ಪ್ರಸಿದ್ಧವಾಗಿದ್ದು ಇಲ್ಲಿಯ ನ್ಯಾಯಾಂಗ ಪದ್ಧತಿ ಸ್ವತಂತ್ರವಷ್ಟೇ ಅಲ್ಲದೆ ಶ್ರೇಷ್ಠವೂ ಆಗಿರುವುದರಿಂದ, ನ್ಯಾಯಾಂಗ ಪುನರ್‌ವಿಮರ್ಶೆ ನಿಯಮ ಸಂವಿಧಾನದ ಶ್ರೇಷ್ಠತೆಯನ್ನು ಹೆಚ್ಚಿಸಿ ರಕ್ಷಣೆಯನ್ನು ಸಹ ನೀಡಿದೆ. ಅಂತೆಯೇ ಸಂವಿಧಾನಗಳನ್ನು ಪರಮೋಚ್ಚ ಹಾಗೂ ಅಧೀನ ಸಂವಿಧಾನಗಳೆಂದೂ ವಿಂಗಡಿಸಲಾಗಿದೆ. ಸಾಮಾನ್ಯವಾಗಿ ಸಂಯುಕ್ತ ವ್ಯವಸ್ಥೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳು ಪ್ರತ್ಯೇಕ ಸಂವಿಧಾನಗಳನ್ನು ಹೊಂದಿರುವುದಿಲ್ಲ. ಆದರೆ ಅಮೆರಿಕ ವ್ಯವಸ್ಥೆ ಇದಕ್ಕೆ ಅಪವಾದವಾಗಿದೆ. ಪ್ರತೀ ರಾಜ್ಯ ತನ್ನದೇ ಆದ ಸಂವಿಧಾನವನ್ನು ಹೊಂದಿದೆಯಾದರೂ ಅದು ಸಂಯುಕ್ತ ಸಂವಿಧಾನದ ಅಧೀನವಾಗಿರುತ್ತದೆ. ಅದೇ ರೀತಿ ದೈವಶಾಹಿಗಳಲ್ಲಿ ಧಾರ್ಮಿಕ ಗ್ರಂಥಗಳಿಗೆ ಲಿಖಿತ ಸಂವಿಧಾನಗಳು ಒಳಪಟ್ಟಿರುತ್ತವೆ. ಇದೇ ರೀತಿ ಇತರೆ ಲಕ್ಷಣಗಳ ಆಧಾರದ ಮೇಲೆ ಆದೇಶಾತ್ಮಕ ಹಾಗೂ ಉಪದೇಶಾತ್ಮಕ, ವಾಸ್ತವಿಕ ಹಾಗೂ ಸೈದ್ಧಾಂತಿಕ ಪ್ರಜಾಸತ್ತಾತ್ಮಕ ಹಾಗೂ ಮಂಡಲೇಶ್ವರಾತ್ಮಕ ವಿಶಾಲ ಹಾಗೂ ಸಂಕುಚಿತ ಇತ್ಯಾದಿ ಪ್ರಕಾರಗಳನ್ನು ಸಿದ್ಧಾಂತಕಾರರು ಗುರುತಿಸಿದ್ದಾರೆ. ಸಾಮಾನ್ಯವಾಗಿ ಲಿಖಿತ ಸಂವಿಧಾನಗಳು, ವಾಸ್ತವಿಕ, ಆದೇಶಾತ್ಮಕ, ಪ್ರಜಾಸತ್ತಾತ್ಮಕವಾಗಿರುತ್ತವೆ.

ಸಂವಿಧಾನಗಳು ಆಯಾ ರಾಜ್ಯದ ಪ್ರಜೆಗಳ ಆದೇಶದ ಪ್ರತಿರೂಪ. ಸೈದ್ಧಾಂತಿಕವಾಗಿ ಪ್ರಜೆಗಳು ಸಾರ್ವಭೌಮತ್ವವನ್ನು ಉಳಿಸಿಕೊಂಡಿರುತ್ತಾರಾದರೂ ವಾಸ್ತವಿಕವಾಗಿ ಅವರು ಆ ಅಧಿಕಾರವನ್ನು ಚಲಾಯಿಸಲು ಅಸಾಧ್ಯವಾದ ಕಾರಣ ಸಂವಿಧಾನರೂಪದಲ್ಲಿ ತಮ್ಮೆಲ್ಲ ಅಧಿಕಾರವನ್ನು ನಿಯೋಜಿಸಿರುತ್ತಾರೆ. ಅರ್ಥಾತ್ ಸಂವಿಧಾನ ಸಾರ್ವಭೌಮವಾಗಿ ಗೋಚರಿಸುತ್ತದೆ. ಎಲ್ಲ ಕಾನೂನಿನ ವ್ಯವಸ್ಥೆ ಹಾಗೂ ಸರ್ಕಾರದ ಅಂಗಗಳು ಈ ಸಂವಿಧಾನದ ರೀತ್ಯಾ ಕರ್ತವ್ಯ ನಿರ್ವಹಿಸಬೇಕು. ಇದೇ ರೂಲ್ ಆಫ್ ಲಾ ಸಿದ್ಧಾಂತದ ತಿರುಳು. ಸಂವಿಧಾನ ಹಾಗೂ ಕಾನೂನಿನ ಶ್ರೇಷ್ಠತೆ ಎರಡೂ ಪೂರಕವಾಗಿ, ಆಳುವವರ ಸೀಮಿತ ಅಧಿಕಾರ ಪ್ರಜೆಗಳ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತದೆ. ಯಾವ ರಾಜಕೀಯ ಆಡಳಿತ ವ್ಯವಸ್ಥೆ ಸಂವಿಧಾನ ಚೌಕಟ್ಟಿಗೆ ಕಟ್ಟುನಿಟ್ಟಾಗಿ ಒಳಪಟ್ಟು ಕಾನೂನಿನ ರೀತ್ಯಾ ನಡೆಯುತ್ತದೆಯೋ ಅದೇ ಉತ್ತಮವಾದ ಸಂವಿಧಾನಾತ್ಮಕ ಪ್ರಜಾಪ್ರಭುತ್ವ ವ್ಯವಸ್ಥೆಯಾಗಿರುತ್ತದೆ. ಅದನ್ನೇ ಉತ್ತಮ ಸಂವಿಧಾನವೆಂದು, ಯಾವ ವ್ಯವಸ್ಥೆಯಲ್ಲಿ ಸರ್ಕಾರಕ್ಕೆ ಇತಿಮಿತಿಗಳಿಲ್ಲದೆ, ಸಂವಿಧಾನ ಅಥವಾ ಕಾನೂನುಗಳು ಅಧಿಕಾರಿಗಳಿಗೆ ಅಧೀನವಾಗಿರುತ್ತದೆಯೋ ಅದೇ ಭ್ರಷ್ಟ ಸಂವಿಧಾನ ಎಂದು ಅರಿಸ್ಟಾಟಲ್ ಬಹಳ ಹಿಂದೆಯೇ ಪ್ರತಿಪಾದಿಸಿದ್ದಾನೆ.

ಸಂವಿಧಾನಗಳು ಸಾಮಾನ್ಯವಾಗಿ ಪ್ರಜೆಗಳ ಅಥವಾ ದೇವರ ಅಥವಾ ಧರ್ಮದ ಹೆಸರಿನಲ್ಲಿ ರಚಿತವಾಗಿದ್ದು ಸರ್ಕಾರದ ಅಂಗಗಳು, ಅವುಗಳ ರಚನೆ, ಅಧಿಕಾರವ್ಯಾಪ್ತಿ, ಜವಾಬ್ದಾರಿಗಳು, ಪ್ರಜೆಗಳ ಹಕ್ಕು ಹಾಗೂ ಕರ್ತವ್ಯಗಳು, ಭೌಗೋಳಿಕ ವ್ಯಾಪ್ತಿ, ಕಾನೂನು ರಚಿಸುವ ಪ್ರಕ್ರಿಯೆ, ತಿದ್ದುಪಡಿಮಾಡುವುದು, ಸಂವಿಧಾನ ಹಾಗೂ ದೇಶದ ರಕ್ಷಣೆ, ಪ್ರಮುಖವಾಗಿ ಸರ್ಕಾರದ ಧ್ಯೇಯೋದ್ದೇಶಗಳನ್ನು ತಿಳಿಸುತ್ತವೆ. ಸಂವಿಧಾನಗಳನ್ನು ರಾಜಕೀಯ ವ್ಯವಸ್ಥೆಯ ಬೆಳೆವಣಿಗೆಯ ಸಂಕೇತವೆಂದೂ ಆಯಾ ರಾಜ್ಯದ ಸಾರ್ವಭೌಮತ್ವದ ಬಾಹ್ಯ ಅಭಿವ್ಯಕ್ತಿಯೆಂದೂ ಆಂತರಿಕ ಸತ್ತ್ವವೆಂದೂ ತಿಳಿಯಬಹುದು.

ಪ್ರಸ್ತುತ ಲಭ್ಯವಿರುವ ಸಂವಿಧಾನಗಳಿಗೆ ಅಮೆರಿಕ, ಇಂಗ್ಲೆಂಡ್ ಹಾಗೂ ಫ್ರಾನ್ಸ್ ಸಂವಿಧಾನಗಳು ಮಾದರಿ. ಭಾರತದ ಸಂವಿಧಾನ ಮೂಲತಃ ಇಂಗ್ಲೆಂಡ್ ಮಾದರಿ ಹೋಲುತ್ತದೆಯಾದರೂ ಅಮೆರಿಕ ಮಾದರಿಯ ಅನೇಕ ಅಂಶಗಳನ್ನು ಅಳವಡಿಸಿಕೊಂಡಿದೆ. ಹಾಗೆಯೇ ಇತರೆ ಕೆಲವು ಸಂವಿಧಾನಗಳನ್ನೂ ಅನುಕರಿಸಿದೆ. ಭಾರತ ಸಂವಿಧಾನಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲಿ ರಚಿತವಾದ ಪ್ರಪಂಚದ ದೊಡ್ಡ ಲಿಖಿತ ಸಂವಿಧಾನ ಹಾಗೂ ಅತ್ಯಲ್ಪ ಸಮಯಾವಧಿಯಲ್ಲಿ ಹೆಚ್ಚಿನ ತಿದ್ದುಪಡಿಗಳನ್ನು ಪಡೆದಿರುವ ಸಂವಿಧಾನವೆಂಬ ಹೆಗ್ಗಳಿಕೆ ಭಾರತ ಸಂವಿಧಾನಕ್ಕೆ ಸಲ್ಲುತ್ತದೆ. ಯಾವುದೇ ಸಂವಿಧಾನದ ಶ್ರೇಷ್ಠತೆ ಆಯಾ ಜನರ ಪ್ರಬುದ್ಧತೆ ಹಾಗೂ ಬದ್ಧತೆಯ ಮೇಲೆ ಅವಲಂಬಿತವಾಗಿದೆ ಎಂದು ಹೇಳಲಾಗುತ್ತದೆ.

(ಸಿ.ಎ.ಜಿ.)

**ಸರ್ಕಾರ್, ಡಿ. ಸಿ.:** 1907–85. ಪ್ರಸಿದ್ಧ ಭಾರತೀಯ ಇತಿಹಾಸ ಮತ್ತು ಶಾಸನತಜ್ಞ, ವಿಶೇಷವಾಗಿ ಸಾತವಾಹನರನ್ನು ಕುರಿತಂತೆ ಆಳವಾದ ಅಧ್ಯಯನ ನಡೆಸಿದವರು. ದಿನೇಶ್‌ಚಂದ್ರ ಸರ್ಕಾರ್ ಎಂಬುದು ಇವರ ಪೂರ್ಣ ಹೆಸರು. ಈಗಿನ ಬಾಂಗ್ಲಾದೇಶದಲ್ಲಿರುವ ಫರಿದ್‌ಪುರದ

ಸಲ್ಕಥಿ ಕೃಷ್ಣಾನಗರ ಎಂಬ ಗ್ರಾಮದಲ್ಲಿ 1907ರಲ್ಲಿ ಜನಿಸಿದರು. ಫರಿದ್‌ಪುರದ ರಾಜೇಂದ್ರ ಕಾಲೇಜಿನಲ್ಲಿ ಅಧ್ಯಯನ ಮಾಡಿ ಸಂಸ್ಕೃತದಲ್ಲಿ ಆನರ್ಸ್ ಪದವಿ ಪಡೆದರು (1929). ವಿದ್ಯಾರ್ಥಿ ದೆಸೆಯಲ್ಲೆ ಇವರು ಅಪಾರ ಸಂಖ್ಯೆಯ ಹಸ್ತಪತ್ರಿಗಳನ್ನು ಸಂಗ್ರಹಿಸಿದ್ದರು. ರಾಮಾನಂದ ರಾಯನ ಜಗನ್ನಾಥವಲ್ಲಭಂ ನಾಟಕಂ ಎಂಬ ಪ್ರಾಚೀನ ಬಂಗಾಲಿ ನಾಟಕವನ್ನು ಓದುವುದರಲ್ಲಿ ಯಶಸ್ವಿಯಾದ ಇವರು, ರಾಜೇಂದ್ರ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಸತ್ಯಕಿಂಕರ್ ಮುಖ್ಯೋಪಾಧ್ಯಾಯರಿಂದ ಮೆಚ್ಚುಗೆ ಪಡೆದರು. ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಸ್ನಾತಕೋತ್ತರ ಪದವಿ ಪಡೆಯುವಂತೆ ಅವರಿಂದ ಸಲಹೆ ಪಡೆದು ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಶಾಸನಶಾಸ್ತ್ರ ಮತ್ತು ನಾಣ್ಯಶಾಸ್ತ್ರಗಳನ್ನು ಅಧ್ಯಯನ ಮಾಡಿ ಸ್ನಾತಕೋತ್ತರ ಪದವಿಯನ್ನು ಸುವರ್ಣ ಪದಕದೊಂದಿಗೆ ಪಡೆದರು (1931). ಇವರಿಗೆ ಭಾಷಾ ವಿಜ್ಞಾನ, ಸಾಹಿತ್ಯ, ಪುರಾತತ್ತ್ವ, ಮಾನವಶಾಸ್ತ್ರ ಮೊದಲಾದ ಅನೇಕ ಜ್ಞಾನಕ್ಷೇತ್ರಗಳಲ್ಲಿ ಆಳವಾದ ಪ್ರವೇಶವಿತ್ತು.

ಅನಂತರ ಎಚ್.ಸಿ. ರಾಯ್‌ಚೌಧುರಿಯವರ ಸಲಹೆ ಮೇರೆಗೆ ದಕ್ಷಿಣ ಭಾರತದ ಪ್ರಾಚೀನ ಶಾಸನಗಳನ್ನು ಕುರಿತು ಸಂಶೋಧನೆಯ ಜೊತೆಗೆ ಭಂಡಾರ್ಕರ್ ಅವರ ಖಾಸಗಿ ಗ್ರಂಥಾಲಯದಲ್ಲಿ ಎರಡು ವರ್ಷ ಅಧ್ಯಯನ ನಡೆಸಿದರು. ಪ್ರೇಮ್‌ಚಂದ್ ರಾಯ್‌ಚಂದ್ ವಿದ್ಯಾರ್ಥಿ ವೇತನ ಪಡೆದು ಪೂರ್ವ ದಖನಿನ ಕೆಲವು ಅರಸು ಮನೆತನಗಳ ಅಧ್ಯಯನ ಮಾಡಿದರು (1934). ಈ ಸಂಶೋಧನೆಗಾಗಿ ಮಾವುತ್ ಚಿನ್ನದ ಪದಕ ಗಳಿಸಿದರು (1937). ಸಕ್ಸಸರ್ಸ್ ಆಫ್ ಸಾತವಾಹನಾಸ್ ಇನ್ ಲೋಯರ್ ಡೆಕ್ಕನ್ ಎಂಬ ವಿಷಯದಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು (1936).

1937ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದಲ್ಲಿ ಉಪನ್ಯಾಸಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಇವರು ಅನಂತರ ಭಾರತದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಶಾಸನಶಾಸ್ತ್ರ ಶಾಖೆಯಲ್ಲಿ ಸಹಾಯಕ ಅಧೀಕ್ಷಕರಾಗಿ (1949), ಭಾರತದ ಮುಖ್ಯ ಶಾಸನತಜ್ಞರಾಗಿ (1955) ಸೇವೆ ಸಲ್ಲಿಸಿದರು. ಎಪಿಗ್ರಾಫಿಯ ಇಂಡಿಕ ಸಂಪುಟಗಳೂ ಸೇರಿದಂತೆ ಅನೇಕ ವಿದ್ವತ್ ಗ್ರಂಥಗಳಲ್ಲಿ ಮಹತ್ತ್ವದ ಶಾಸನಗಳನ್ನು ಪ್ರಕಟಿಸಿದರು. ದಕ್ಷಿಣ ಭಾರತೀಯ ಶಾಸನಗಳನ್ನು ಪ್ರಕಟಿಸಲು ವ್ಯವಸ್ಥೆ ಮಾಡಿದರು. ಅನಂತರ ಕಲ್ಕತ್ತ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ(1961), ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು (1965–74).

ಇವರು ದೇಶ ವಿದೇಶಗಳ ಅನೇಕ ವಿದ್ವತ್ ಸಮ್ಮೇಳನಗಳಲ್ಲಿ ಭಾಗವಹಿಸಿ ಸಂಶೋಧನ ಲೇಖನಗಳನ್ನು ಮಂಡಿಸಿದ್ದಾರೆ. ಭಾರತೀಯ ಇತಿಹಾಸ ಕಾಂಗ್ರೆಸ್, ಭಾರತದ ನಾಣ್ಯ ಸಂಸ್ಥೆ, ಭಾರತದ ಶಾಸನಶಾಸ್ತ್ರ ಸಂಸ್ಥೆ ಹಾಗೂ ವಿವಿಧ ಪ್ರಾದೇಶಿಕ ಸಂಘ ಸಂಸ್ಥೆಗಳ ಸಮ್ಮೇಳನಗಳಲ್ಲಿ ಅಧ್ಯಕ್ಷರಾಗಿದ್ದರು. ಇವರಿಗೆ ಏಷ್ಯಾಟಿಕ್ ಸೊಸೈಟಿ, ಬ್ರಿಟನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿ ಮತ್ತು ರಾಯಲ್ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿಗಳೊಂದಿಗೆ ನಿಕಟ ಸಂಪರ್ಕವಿತ್ತು. ಇವರು 35ಕ್ಕೂ ಹೆಚ್ಚು ಸ್ವಂತ ಕೃತಿಗಳನ್ನೂ 75ಕ್ಕಿಂತಲೂ ಹೆಚ್ಚು ಸಂಪಾದಿತ ಕೃತಿಗಳನ್ನೂ 1200ಕ್ಕೂ ಹೆಚ್ಚು ಲೇಖನ, ಟಿಪ್ಪಣಿ, ವಿಮರ್ಶೆಗಳನ್ನೂ ಪ್ರಕಟಿಸಿದ್ದಾರೆ. ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ಲಭ್ಯವಾಗಿದ್ದವು. ಇವರು 1985ರಲ್ಲಿ ನಿಧನರಾದರು. (ಸಿ.ಎಮ್‌ಡಿ.)

**ಸರ್ಕಾರ್, ಜಾದುನಾಥ್:** 1870–1958. ಪ್ರಸಿದ್ಧ ಇತಿಹಾಸಕಾರ. ಬಂಗಾಲದ ರಾಜ್‌ಶಾಹಿ ಜಿಲ್ಲೆಯ ಕರ್‌ಚಮರಿಯ ಎಂಬ ಗ್ರಾಮದಲ್ಲಿ 1870 ಡಿಸೆಂಬರ್ 10ರಂದು ಜನಿಸಿದರು. ತಂದೆ ರಾಜಕುಮಾರ್ ಸರ್ಕಾರ್. ಜಾದುನಾಥ್ ಅವರು ರಾಜ್‌ಶಾಹಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಈಗಿನ ಕೋಲ್ಕೊತದಲ್ಲಿ ಇತಿಹಾಸ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬಿ.ಎ. ಹಾಗೂ ಎಂ.ಎ., ಪದವಿ ಪಡೆದರು (1892). ಇವರು 1893ರಲ್ಲಿ ರಿಪ್ಪನ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾದರು. 1897ರಲ್ಲಿ ಪ್ರೇಮ್‌ಚಂದ್ ರಾಯ್‌ಚಂದ್ ಶಿಷ್ಯವೇತನ ದೊರಕಿತು. 1898ರಿಂದ ಕೋಲ್ಕತದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭಿಸಿದರು. 1899ರಲ್ಲಿ ಪಾಟ್ನ ಕಾಲೇಜಿಗೆ ವರ್ಗಾಯಿಸಲ್ಪಟ್ಟು 1926ರ ತನಕ ಬೋಧಿಸಿದರು. ಈ ನಡುವೆ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಆಧುನಿಕ ಭಾರತೀಯ ಇತಿಹಾಸವನ್ನು ಬೋಧಿಸಿದರು (1917–19). ಅನಂತರ ಒರಿಸ್ಸದ ಕಟಕ್‌ನಲ್ಲಿರುವ ರವೆನ್‌ಷಾ ಕಾಲೇಜಿನಲ್ಲಿ ಕೆಲಸ ಮಾಡಿದರು (1919–23). 1926ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಕುಲಪತಿಗಳಾದರು. 1928ರಲ್ಲಿ ಮದರಾಸು ವಿಶ್ವವಿದ್ಯಾಲಯದಲ್ಲಿ ಸರ್.ಡಬ್ಲ್ಯು.ಮೇಯರ್ ಪೀಠಕ್ಕೆ ಪ್ರಾಧ್ಯಾಪಕರಾಗಿದ್ದರು. ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿಯ ಗೌರವ ಸದಸ್ಯರಾಗಿದ್ದರು (1923). ಇವರ ಮಹತ್ತ್ವದ ಕೃತಿಗಳಿವು: ದಿ ಹಿಸ್ಟರಿ ಆಫ್ ಔರಂಗಜೇಬ್ (1912–24, 5 ಸಂಪುಟಗಳು); ಶಿವಾಜಿ ಅಂಡ್ ಹಿಸ್ ಟೈಮ್ಸ್. ಇವರು 1958 ಮೇ 19ರಂದು ನಿಧನರಾದರು. (ಎ.ಎಸ್.;ಎನ್.ಎಲ್.)

**ಸತನಿಕೋಟ:** ಆಂಧ್ರಪ್ರದೇಶ ರಾಜ್ಯದ ಕರ್ನೂಲ್ ಜಿಲ್ಲೆಯ ನಂದಿಕೊಟ್ಕೂರು ತಾಲ್ಲೂಕಿನ ಪುರಾತತ್ತ್ವ ನೆಲೆ. ತುಂಗಭದ್ರ ನದಿಯ ಬಲದಂಡೆಯ ಮೇಲಿದೆ. ಶ್ರೀಶೈಲಂ ಜಲವಿದ್ಯುತ್ ಯೋಜನೆಯಲ್ಲಿ ಈ ಪ್ರದೇಶ ಮುಳುಗಡೆಯಾಗುವ ಮೊದಲು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1977–80ರ ನಡುವೆ ಎನ್.ಸಿ.ಘೋಷ್‌ರ ನಿರ್ದೇಶನದಲ್ಲಿ ಇಲ್ಲಿ ಉತ್ಖನನ ನಡೆಸಿತು. ಆದಿ ಹಳೆಶಿಲಾಯುಗ ಕಾಲದಿಂದ ಮಧ್ಯಕಾಲೀನ ಯುಗದವರೆಗಿನ ಸಾಂಸ್ಕೃತಿಕ ಅವಶೇಷಗಳು ಇಲ್ಲಿವೆ. ಈ ನೆಲೆಯ ಸಾಂಸ್ಕೃತಿಕ ಅನುಕ್ರಮವನ್ನು ತಿಳಿಯುವ ಉದ್ದೇಶದಿಂದ ಹಲವಾರು ಕಡೆಗಳಲ್ಲಿ ಉತ್ಖನನ ನಡೆಸಲಾಯಿತು. ಹಳ್ಳಿಯೊಳಗಿರುವ ದಿಬ್ಬದಲ್ಲಿ ನಡೆಸಿದ ಉತ್ಖನನದ ವಿವರ ಇಂತಿದೆ:

ಹಳ್ಳಿದಿಬ್ಬದಲ್ಲಿರುವ ವಸತಿಪದರದಲ್ಲಿ (1.6ಮೀ) ಮೂರು ಸಾಂಸ್ಕೃತಿಕ ಹಂತಗಳಿವೆ. ಈ ಹಂತಗಳ ನಡುವೆ ಕಾಲದ ಮತ್ತು ಸಾಂಸ್ಕೃತಿಕ ಅಂತರವಿದೆ. ಅತ್ಯಂತ ಪ್ರಾಚೀನವಾದ ಒಂದನೆಯ ಹಂತದಲ್ಲಿ ಅಲಗು, ಮೊನೆ ಮತ್ತು ಕೊರೆಯುಳಿಗಳೆಂದು ವಿಂಗಡಿಸಬಹುದಾದ ಸೂಕ್ಷ್ಮ ಶಿಲೋಪಕರಣಗಳಿವೆ. ಇವು ಚಕಮಕಿಕಲ್ಲು, ಬೆಣಚುಕಲ್ಲು, ಜಾಸ್ಪರ್ ಮತ್ತು ಅಗೇಟ್ ಶಿಲೆಗಳಿಂದ ಮಾಡಲ್ಪಟ್ಟಿವೆ. ಶಿಲಾತುಂಡುಗಳು ಮತ್ತು ಚಕ್ಕೆ ಚೂರುಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಈ ಹಂತದಲ್ಲಿ ಮಣ್ಣಿನ ಪಾತ್ರೆ, ಪ್ರಾಣಿಮೂಳೆ ಅಥವಾ ಇನ್ನಾವುದೇ ಇತರ ಸಾಂಸ್ಕೃತಿಕ ಅವಶೇಷಗಳಿಲ್ಲ.

ಎರಡನೆಯ ಹಂತ ಆದಿಚಾರಿತ್ರಿಕ ಕಾಲಕ್ಕೆ (ಪ್ರ.ಶ.ಪೂ.1ನೆಯ ಶತಮಾನ–ಪ್ರ.ಶ.3ನೆಯ ಶತಮಾನ) ಸೇರುತ್ತದೆ. ಈ ಹಂತದಲ್ಲಿ ಕಟ್ಟಡ ರಚನೆಯ ಮೂರು ಘಟ್ಟಗಳು (1, 2ಎ ಮತ್ತು 2ಬಿ) ಕಂಡುಬಂದಿವೆ. ಮೊದಲನೆಯ ಘಟ್ಟದಲ್ಲಿ ಕಂದಕಸಹಿತವಾದ ಕೋಟೆಗೋಡೆ ಮತ್ತು ಹೆಬ್ಬಾಗಿಲುಗಳನ್ನು ನಿರ್ಮಿಸಲಾಯಿತು. ಕೋಟೆ ಸು.5 ಹೆಕ್ಟೇರ್ ಜಾಗವನ್ನಾವರಿಸಿದೆ. ಇದನ್ನು ನಿರ್ದಿಷ್ಟ ವಿನ್ಯಾಸದಲ್ಲಿ ಕಟ್ಟಲಾಗಿಲ್ಲ. ಕೋಟೆಯ ಮುಖ್ಯಗೋಡೆ 3.2ಮೀ ಅಗಲವಿದೆ. ಇದನ್ನು ಕಡಪ ಕಲ್ಲಿನಿಂದ ಕಟ್ಟಲಾಗಿದೆ; ವಿವಿಧ ಅಳತೆಯ ಕಲ್ಲುಗಳನ್ನು ಮಣ್ಣಿನ ಗಾರೆಯಿಂದ ಜೋಡಿಸಲಾಗಿದೆ. ಈ ಕಲ್ಲುಗೋಡೆಯ ಹೊರಭಾಗಕ್ಕೆ ತಾಗಿಕೊಂಡಂತೆ 1.45ಮೀ ಅಗಲದ ಸುಟ್ಟ ಇಟ್ಟಿಗೆಯ (56×28×8ಸೆಂಮೀ) ಗೋಡೆಯಿದೆ; ಕೋಟೆಯೊಳಗೆ ಕಲ್ಲುಗೋಡೆಗೆ ತಾಗಿ ಇಟ್ಟಿಗೆಯ ಚೂರುಗಳಿಂದ ಮಾಡಲಾದ 3ಮೀ ಅಗಲದ ಹಾದಿಯೊಂದಿದೆ. ಗೋಡೆಯನ್ನು ಹಲವಾರು ಸಲ ದುರಸ್ತಿ ಮಾಡಲಾಗಿದೆ. ಕೋಟೆಯ ಸುತ್ತಲೂ 3.2ಮೀ ಅಗಲದ ಮತ್ತು 4.25ಮೀ ಆಳದ ಕಂದಕವಿದೆ. ಕಂದಕದಿಂದ ನೀರು ಹೊರಗೆ ಬಾರದಂತೆ ಅಲ್ಲಲ್ಲಿ ಕಲ್ಲುಗಳ ತಗ್ಗುಗೋಡೆಯನ್ನು ಕಟ್ಟಲಾಗಿದೆ. ಕೋಟೆಯ ಒಂದು ಹೆಬ್ಬಾಗಿಲು ದಕ್ಷಿಣ ದಿಕ್ಕಿನಲ್ಲಿದೆ. ಸವಿಸ್ತಾರವಾಗಿರುವ ಈ ಹೆಬ್ಬಾಗಿಲಿಗೆ ಐದು ಮೆಟ್ಟಿಲುಗಳಿವೆ. ಮೆಟ್ಟಿಲುಗಳನ್ನು ಕಲ್ಲು ಮತ್ತು ಇಟ್ಟಿಗೆಗಳಿಂದ ಕಟ್ಟಲಾಗಿದೆ. ಇವುಗಳ ಸಮೀಪದಲ್ಲಿ ಮೂರು ಜೊತೆ 30ಸೆಂಮೀ ವ್ಯಾಸದ ಗೋಳಾಕಾರದ ಗುಳಿಗಳಿವೆ. ಇವುಗಳಲ್ಲಿ ಒಂದು ಜೊತೆ ಹೆಬ್ಬಾಗಿಲಿನ ದ್ವಾರಬಂಧ ಕಂಬಗಳ ಗುಳಿಗಳಾಗಿರಬಹುದು. ಕಂದಕದ ಹತ್ತಿರವಿರುವ ಮತ್ತೊಂದು ಜೊತೆ ಗುಳಿಗಳು ಕಂದಕವನ್ನು ದಾಟಲು ಇದ್ದಿರಬಹುದಾದ ಏರಿಳಿಸುವ ಸೇತುವೆಯ ಕಂಬಗಳದ್ದಾಗಿರಬೇಕು. ಕಂದಕವನ್ನು ದಾಟಲು ಶಾಶ್ವತ ಸೇತುವೆ ಇದ್ದ ಹಾಗೆ ಕಾಣುವುದಿಲ್ಲ.

ಕೋಟೆಯೊಳಗೆ ಒಂದನೆಯ ಘಟ್ಟಕ್ಕೆ ಸೇರುವ ಕಟ್ಟಡ ಸಂಕೀರ್ಣವೊಂದಿದೆ (300ಚ.ಮೀ). ಇದರಲ್ಲಿ ಆಯತಾಕಾರದ ಕೋಣೆಗಳು ಮತ್ತು ಆವರಣಗಳಿವೆ. ಈ ಕಟ್ಟಡವನ್ನು ಗಟ್ಟಿ ತಳಪಾಯದ ಮೇಲೆ ಕಟ್ಟಲಾಗಿದೆ. ಗೋಡೆಗಳು ಸುಟ್ಟಇಟ್ಟಿಗೆಯಿಂದ (56×28×8ಸೆಂಮೀ) ನಿರ್ಮಿತವಾಗಿದ್ದು 52–68ಸೆಂಮೀ ಅಗಲ ಇವೆ. ಕಟ್ಟಡ ರಚನೆಯ ಎರಡನೆಯ ಹಂತದಲ್ಲಿ ಎರಡು ಉಪಘಟ್ಟಗಳಿವೆ (2ಎ ಮತ್ತು ಬಿ). ಒಂದನೆಯ ಉಪಘಟ್ಟದಲ್ಲಿ (2ಎ) ಸುಟ್ಟಇಟ್ಟಿಗೆಯ (56×28×8ಸೆಂಮೀ) ಹಲವಾರು ಕಟ್ಟಡಗಳಿವೆ. ಇವು ನೆಲಮಟ್ಟದಿಂದ ಕೆಳಗಿವೆ. ಆಯತ ಅಥವಾ ಚೌಕಾಕಾರವಾಗಿರುವ (1–2ಮೀ ಉದ್ದಗಲ) ಈ ಕಟ್ಟಡಗಳು 3ರಿಂದ 4ಮೀ ಆಳ ಇವೆ. ಇವುಗಳ ತಳದಲ್ಲಿ ಇಟ್ಟಿಗೆಯ ನೆಲವಿದೆ ಅಥವಾ ಅಲ್ಲಲ್ಲಿ ನೈಸರ್ಗಿಕ ಬಂಡೆಯಿದೆ. ಛಾವಣಿ ಕಬ್ಬಿಣದ ಮೊಳೆಗಳಿಂದ ಕೂಡಿಸಿದ ಹೆಂಚಿನದ್ದಾಗಿರಬೇಕು. ಹೆಂಚು, ಇಟ್ಟಿಗೆ ಚೂರು, ಕಬ್ಬಿಣದ ಮೊಳೆ, ಮಣ್ಣಿನ ಪಾತ್ರೆಯ ಚೂರುಗಳು ಈ ಕಟ್ಟಡಗಳಿಂದ ಲಭಿಸಿವೆ. ಇವುಗಳು ಧಾನ್ಯದ ಕಣಜಗಳಾಗಿರುವ ಸಾಧ್ಯತೆಯಿದೆ. ಈ ಉಪಘಟ್ಟದ ಹೆಂಚುಗಳಲ್ಲಿ ನಾಲ್ಕು ಬಗೆಯಿವೆ. ಇವು–ಎರಡು ತೂತಿರುವ ಆಯತಾಕಾರದ ಮಟ್ಟವಾದ ಹೆಂಚು; ಹೊರಗೆ ಉಬ್ಬಿದ ಹೆಂಚು; ಒಂದು ಬದಿ ಉಬ್ಬಿದ ಆಯತಾಕಾರದ ಹೆಂಚು; ಕಲಶದಂತಿರುವ ಹೆಂಚು (ಫಿನಿಯಲ್). ಮೊದಲ ಮೂರು ಬಗೆಗಳಲ್ಲಿ ಮಳೆನೀರು ಇಳಿದು ಹೋಗಲು ಅನುವಾಗುವಂತೆ ಅನುಕ್ರಮವಾಗಿ 2,5,3 ನೀಳ ಗುಳಿಗಳನ್ನು ಬೆರಳಿನಿಂದ ಮಾಡಲಾಗಿದೆ. ಈ ಹಂತದ ಮಣ್ಪಾತ್ರೆಗಳಲ್ಲಿ ಮುಖ್ಯವಾದುವು ಕಪ್ಪು –ಕೆಂಪು ದ್ವಿವರ್ಣ ಪಾತ್ರೆ, ರೌಲೆಟ್ ಪಾತ್ರೆ, ಕೆಂಪು ಲೇಪನದಡಿ ಬಿಳಿಚಿತ್ರವುಳ್ಳ ಪಾತ್ರೆ, ಮೆರುಗುಳ್ಳ ಕೆಂಪು

ಪಾತ್ರೆ, ಕಡುಗಂದುಬಣ್ಣದ ಪಾತ್ರೆ, ಕೆಂಪು ಮತ್ತು ಕಪ್ಪುಬಣ್ಣದ ಪಾತ್ರೆಗಳು. ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು (ಶೇ.19) ನಯವಾದ ಮಣ್ಣಿನಿಂದ ಮಾಡಲ್ಪಟ್ಟಿವೆ. ತಟ್ಟೆ ಮತ್ತು ಬಟ್ಟಲು ಹೆಚ್ಚಾಗಿ ಕಾಣಸಿಗುವ ಆಕಾರಗಳು. ಕಪ್ಪು-ಕೆಂಪು ದ್ವಿವರ್ಣ ಹಾಗೂ ಕೆಂಪುಬಣ್ಣದ ಕೆಲವು ತಟ್ಟೆ ಮತ್ತು ಬಟ್ಟಲುಗಳಲ್ಲಿ (ಶೇ.17) ಲೇಪದಡಿ ಬಿಳಿ ಚಿತ್ರಗಳಿವೆ. ಉದ್ದ ಅಥವಾ ಅಡ್ಡಗೆರೆಗಳ ಗುಂಪು ಮತ್ತು ಬಿಂದುಗಳ ಬಗೆಬಗೆಯ ವಿನ್ಯಾಸಗಳನ್ನು ಚಿತ್ರಿಸಲಾಗಿದೆ. ರೌಲೆಟ್ ತಟ್ಟೆಗಳ ಸಂಖ್ಯೆ ಕೇವಲ 3ರಷ್ಟು. ಕೆಲವೊಂದು ತಟ್ಟೆಗಳ ತಳದಲ್ಲಿ ಬಿಳಿಯ ಬಣ್ಣದಿಂದ ಸುರುಳಿಯ ಚಿತ್ರ ಬಿಡಿಸಿದೆ. ಮೆರುಗುಳ್ಳ ಕೆಂಪುಪಾತ್ರೆ (ರೆಡ್ ಪಾಲಿಶ್ಡ್ ವೇರ್) ಬೆರಳೆಣಿಕೆಯಷ್ಟಿದೆ (ಶೇ.0.2). ಈ ಬಗೆಯಲ್ಲಿ ಅತಿಸಾಮಾನ್ಯವಾದ ನೀರುದಾನಿ ಮತ್ತು ಪುಟ್ಟ ಬಟ್ಟಲುಗಳಿವೆ. ಕಡುಗಂದುಬಣ್ಣದ ಪಾತ್ರೆಗಳಲ್ಲಿ (ಶೇ.11.5) ದೊಡ್ಡ ಅಳತೆಯ ಬೋಗುಣಿಗಳು ಸಾಮಾನ್ಯವಾಗಿವೆ. ಲೇಪವಿರುವ ಅಥವಾ ಲೇಪರಹಿತ ಕೆಂಪುಬಣ್ಣದ ಪಾತ್ರೆಗಳು ಅತಿಹೆಚ್ಚು ಸಂಖ್ಯೆಯಲ್ಲಿವೆ (ಶೇ.52.5). ಲೇಪವುಳ್ಳ ಬಗೆಯಲ್ಲಿ ತಟ್ಟೆ, ಬಟ್ಟಲು, ಬೋಗುಣಿ, ಮಡಕೆ, ಶೇಖರಣೆ ಜಾಡಿ, ಹಣತೆ, ಮೂತಿಯಿರುವ ಮತ್ತು ಹಿಡಿಯಿರುವ ಪಾತ್ರೆಗಳು ಕಂಡುಬರುತ್ತವೆ. ಜಾಡಿಗಳ ಮೇಲೆ ಗೀರಿನ ಮತ್ತು ಜೋಡಣೆಯ ವಿನ್ಯಾಸಗಳಿವೆ (ತ್ರಿರತ್ನ, ಬ್ರಾಹ್ಮಿಯ ಮ ಅಕ್ಷರ ಇತ್ಯಾದಿ). ಲೇಪರಹಿತ ಬಗೆಯಲ್ಲಿ ಬಟ್ಟಲುಗಳು ಮಾತ್ರ ಕಂಡುಬಂದಿವೆ. ಲೇಪವಿರುವ ಅಥವಾ ಲೇಪರಹಿತ ಕಪ್ಪು ಪಾತ್ರೆಯಲ್ಲಿ (ಶೇ.15.8) ತಟ್ಟೆ, ಬಟ್ಟಲು ಮತ್ತು ಅಗಲ ಬಾಯಿಯ ಮಡಕೆಗಳಿವೆ. ನಾಲ್ಕು ಕಾಲಿನ ಅರೆಯುವ ಕಲ್ಲು, ಕುಟ್ಟಾಣಿ, ಸಾತವಾಹನ ಶೈಲಿಯಲ್ಲಿರುವ ಸುಟ್ಟಮಣ್ಣಿನ ಒಂದು ಮನುಷ್ಯಾಕೃತಿ, ಮಣ್ಣಿನ ಬಿಲ್ಲೆಗಳು, ಕಬ್ಬಿಣದ ಮೊಳೆ, ಭರ್ಜಿಯ ಮೊನೆ, ಕೊರೆಯುಳಿ, ಚಾಣ ಮತ್ತು ಕತ್ತಿ, ಮೂಳೆಯ ಮೊನೆ, ಅನಿರ್ದಿಷ್ಟ ದಂತದ ವಸ್ತುಗಳು, ಶಂಖದ ಮತ್ತು ಗಾಜಿನ ಬಳೆ ಹಾಗೂ ಉಂಗುರಗಳು, ಗಾಜು, ಮಣ್ಣು, ಶಂಖ, ಜಾಸ್ಪರ್, ಅಗೇಟ್ ಮತ್ತು ಮಂದಗೆಂಪು ಕಲ್ಲಿನ ಮಣಿಗಳು, ತಾಮ್ರದ ಉಂಗುರ-ಬಳೆಗಳು ಮುಖ್ಯ ಸಾಂಸ್ಕೃತಿಕ ವಸ್ತುಗಳು.

ವೃತ್ತಾಕಾರದ ಸೀಸದ ನಾಣ್ಯವೊಂದು ಈ ಹಂತದ ಕೆಳಸ್ತರದಲ್ಲಿ ಸಿಕ್ಕಿದೆ. ಇದರ ವ್ಯಾಸ 2.3-2.5ಸೆಂಮೀ ಮತ್ತು ತೂಕ 7.773 ಗ್ರಾಂ. ನಾಣ್ಯದ ಒಂದು ಮುಖದಲ್ಲಿ ತ್ರಿರತ್ನ, ಸ್ವಸ್ತಿಕ ಮತ್ತು ನಂದಿಪಾದದ ಚಿಹ್ನೆಗಳಿವೆ. ಇವುಗಳ ಸುತ್ತ ಪ್ರಶ.ಪೂ.1ನೆಯ ಶತಮಾನದ ಬ್ರಾಹ್ಮಿ ಲಿಪಿಯಲ್ಲಿ ಕುಮಾರ ಸಿರಿ-ಸಾತ ಎಂದು ಬರೆಯಲಾಗಿದೆ; ಉಳಿದ ಅಕ್ಷರಗಳು ಪ್ರಾಯಶಃ ಮುದ್ರಿತವಾಗಿಲ್ಲ. ಮತ್ತೊಂದು ಮುಖದ ಮೇಲ್ಭಾಗದಲ್ಲಿ ಕಟಕಟೆಯೊಳಗಿರುವ ಮರದ ಚಿತ್ರವಿದೆ. ಇದರ ಕೆಳಗೆ ನದಿಯನ್ನು ಅಡ್ಡಾದಿಡ್ಡಿ ರೇಖೆಯಿಂದ ತೋರಿಸಲಾಗಿದೆ. ಈ ನಾಣ್ಯ ಶ್ರೀ ಸಾತಕುಮಾರ ಎಂಬ ಹೆಸರಿನ ರಾಜನದ್ದಿರಬಹುದು. ಇಲ್ಲವೆ ಸಾತ ಎಂಬ ಪದ ಸಾತಕರ್ಣಿ ಪದದ ಸಂಕ್ಷಿಪ್ತವಾಗಿದ್ದಲ್ಲಿ ಕುಮಾರ ಶ್ರೀಸಾತಕರ್ಣಿ ಎಂದೂ ಊಹಿಸ ಬಹುದು. ಸಾತವಾಹನ ಅರಸರ ವಂಶಾವಳಿಯ ಆದಿ ಭಾಗದಲ್ಲಿ ಶ್ರೀಶಾತಕರ್ಣಿ ಎಂಬ ಅರಸನಿದ್ದನು. ಇವನು ಯವರಾಜನಾಗಿದ್ದ ಕಾಲದಲ್ಲಿ ಹೊರಡಿಸಿದ ನಾಣ್ಯವಿರಬಹುದೇನೊ.

ಮಧ್ಯಕಾಲೀನ ಯುಗದ ವಸತಿ ಅವಶೇಷಗಳಲ್ಲಿ ಮಣ್ಣು ಅಥವಾ ಕಲ್ಲು ಚಪ್ಪಡಿಗಳ ನೆಲ ಮತ್ತು ಗೋಡೆಯ ಭಾಗಗಳಿವೆ. ಕಟ್ಟಡ ರಚನೆಯ ಎರಡು ಹಂತಗಳನ್ನು ಇಲ್ಲಿ ಗುರುತಿಸಲಾಗಿದೆ. ಮಣ್ಣಿನ ಪಾತ್ರೆಗಳಲ್ಲಿ ಕಪ್ಪು, ಬೂದು ಮತ್ತು ಕೆಂಪುಬಣ್ಣದ ಪಾತ್ರೆಗಳು ಮುಖ್ಯವಾದವು. ಬಟ್ಟಲು, ಬೋಗುಣಿ, ಮುಚ್ಚಳ, ಮೂತಿಯಿರುವ ಪಾತ್ರೆ, ತವ, ದಾನಿ, ಬಗೆಬಗೆಯ ಮಡಕೆಗಳು, ಅಗಲಬಾಯಿಯ ಪಾತ್ರೆಗಳು ಸಾಮಾನ್ಯ ಆಕಾರಗಳು. ಪಾತ್ರೆಗಳ ಮೇಲೆ ಗೀರಿನ, ಅಚ್ಚೊತ್ತಿದ ಮತ್ತು ಜೋಡಣೆಯ ವಿನ್ಯಾಸಗಳಿವೆ. ಇವು ಬಹುಮಟ್ಟಿಗೆ ಮಸ್ಕಿ ನಿವೇಶನದ ಮಧ್ಯಕಾಲೀನ ಯುಗದ ಪಾತ್ರೆಗಳನ್ನು ಹೋಲುತ್ತವೆ. ಕಲ್ಲಿನಲ್ಲಿ ಕೆತ್ತಿದ ಗಣಪತಿ-ಲಕುಲೀಶರ ಭಗ್ನಮೂರ್ತಿಗಳು ಮತ್ತು ಪ್ರಭಾವಳಿಯ ಒಂದು ಭಾಗ, ಕವಣೆ ಕಲ್ಲು, ಕುಟ್ಟಾಣಿ, ಮಣ್ಣಿನ ಮನುಷ್ಯಾಕೃತಿಗಳು ಮತ್ತು ಪ್ರಾಣಿಗೊಂಬೆಗಳು, ಮಣ್ಣಿನ 42 ಪ್ರಾಣಿಗೊಂಬೆಗಳ (ಗೂಳಿ, ಕುದುರೆ, ಆನೆ ಇತ್ಯಾದಿ) ಒಂದು ಗುಂಪು, ಕಬ್ಬಿಣದ ಮೊಳೆ, ಚಾಕು ಮತ್ತು ಇತರ ವಸ್ತುಗಳು, ಶಂಖದ ಮತ್ತು ಗಾಜಿನ ಬಳೆಗಳು, ಮಣ್ಣು, ಗಾಜು, ಶಂಖ ಮತ್ತು ಅರೆಪ್ರಶಸ್ತ ಕಲ್ಲುಗಳ (ಜಾಸ್ಪರ್, ಅಗೇಟ್, ಚಕಮಕಿ ಕಲ್ಲು, ಮಂದಗೆಂಪು ಕಲ್ಲು) ಮಣಿಗಳು ಹೆಸರಿಸಬಹುದಾದ ಸಾಂಸ್ಕೃತಿಕ ಅವಶೇಷಗಳು. ಮೂರು ತಾಮ್ರದ ನಾಣ್ಯಗಳು ನೆಲೆಯ ಮೇಲ್ಪೈಯಿಂದ ಸಿಕ್ಕಿವೆ. ಬೀದರಿನ ಷಂಸುದ್ದಿನ್ ಮುಹಮ್ಮದ್ ಶಾಹನ (1463-82) ಒಂದು ನಾಣ್ಯ, ಮತ್ತೆರಡು ದೆಹಲಿಯ ಅಲಾವುದ್ದಿನ್ ಮುಹಮ್ಮದ್ ಷಾ ಖಿಲ್ಜಿಯ (1296-1316) ನಾಣ್ಯಗಳಿರಬೇಕು.

ಈ ಹಳ್ಳಿಯ 2.8ಕಿಮೀ ಪೂರ್ವದಲ್ಲಿ, ತುಂಗಭದ್ರೆಯ ಬಲದಂಡೆಯ ಮೇಲೆ ಬೃಹತ್ ಶಿಲಾಗೋರಿಗಳ ಮೂರು ಸಂಕೀರ್ಣಗಳಿವೆ. ಸಮಾಧಿಗಳಲ್ಲಿ ಮೂರು ನಮೂನೆಗಳಿವೆ. ಇವು ಹಾದಿಕೋಣೆ ಸಮಾಧಿ, ಶವಕುಣಿಯಿರುವ ಶಿಲಾವೃತ್ತ ಮತ್ತು ನೆಲಕೋಣೆಯಿರುವ ಶಿಲಾವೃತ್ತ. ಈ ಸಮುಚ್ಚಯದ ಒಟ್ಟು 29 ಸಮಾಧಿಗಳಲ್ಲಿ ಎಂಟು ಪ್ರಾತಿನಿಧಿಕ ಸಮಾಧಿಗಳನ್ನು 1980ರಲ್ಲಿ ಉತ್ಖನನದ ಮೂಲಕ ಹೊರತೆಗೆಯಲಾಯಿತು. ಎರಡು ಸಮಾಧಿಗಳಲ್ಲಿ ಮಾತ್ರ ಮಾನವ ಅಸ್ಥಿಅವಶೇಷಗಳು ಕಂಡುಬಂದವು. ಎರಡನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ಸಮಾಧಿಗಳಲ್ಲಿ ತಿಗುರಿಯ ಮೇಲೆ ತಯಾರಾದ ಕಪ್ಪು-ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಮತ್ತು ಕೆಂಪುಬಣ್ಣದ ಪಾತ್ರೆಗಳಿವೆ. ಬಟ್ಟಲು, ಮುಚ್ಚಳ ಮತ್ತು ವಿವಿಧ ಆಕಾರದ ಮಡಕೆಗಳು ಸಮಾಧಿಗಳೊಳಗೆ ಕಂಡುಬಂದಿವೆ. ಕಬ್ಬಿಣದ, ತಾಮ್ರದ ಮತ್ತು ಕಂಚಿನ ಒಂದೆರಡು ವಸ್ತುಗಳು, ಶಂಖದ ಮತ್ತು ಗಾಜಿನ ಐದಾರು ಬಳೆಚೂರುಗಳು ಸಿಕ್ಕಿವೆ. (ವಿ.ಎಸ್.)

**ಸತ್ಯಬ್ರತರಾಯ ಚೌಧುರಿ:** 1935- . ರಾಜ್ಯಶಾಸ್ತ್ರ, ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ದಕ್ಷಿಣ ಏಷ್ಯ ಅಧ್ಯಯನ ವಿಷಯಗಳಲ್ಲಿ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆದ ಇತಿಹಾಸಜ್ಞರು. ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ತಮ್ಮ ಅಧ್ಯಯನವನ್ನು ಮುಗಿಸಿ ರವೀಂದ್ರ ಭಾರತಿ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ವಿಭಾಗವನ್ನು ಸ್ಥಾಪಿಸಿ ಅದರ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಕೆಲಸ ಮಾಡಿದರು. ಅನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳು ಎಂಬ ವಿಷಯದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಲ್ಲಿ ಅತಿಥಿ ಪ್ರಾಧ್ಯಾಪಕರಾಗಿದ್ದರು. ಲಂಡನ್ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಕಾಮನ್ ವೆಲ್ತ್‌ನಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳು ಕ್ಷೇತ್ರದಲ್ಲಿ ಹಿರಿಯ ಸದಸ್ಯರಾಗಿ ಮುಂದುವರಿದಿದ್ದಾರೆ. ಜೊತೆಗೆ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಟ್ರಾಟಜಿಕ್ ಸ್ಟಡಿಸ್, ಇನ್‌ಸ್ಟಿಟ್ಯೂಟ್ ಫಾರ್ ಡಿಫೆನ್ಸ್ ಅಂಡ್ ಅನಾಲಿಸಿಸ್ ಮತ್ತು ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗಳಲ್ಲಿಯೂ ಅಧ್ಯಯನ-ಸಂಶೋಧನೆ ಮಾಡುತ್ತಿದ್ದಾರೆ. 2000ದಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಇವರನ್ನು ಎಮಿರಿಟಸ್ ಪ್ರೊಫೆಸರ್ ಎಂದು ನಿಯೋಜಿಸಿತು.

ನ್ಯೂಕ್ಲಿಯಾರ್ ಪಾಲಿಟಿಕ್ಸ್: ಟುವರ್ಡ್ಸ್ ಎ ಸೇಫರ್ ವರ್ಲ್ಡ್ ಮತ್ತು ಲೆಫ್ಟಿಸಮ್ ಇನ್ ಇಂಡಿಯ (1917-47) - ಇವು ಇವರ ಎರಡು ಮುಖ್ಯ ಕೃತಿಗಳು. ಏಷ್ಯದ ವ್ಯವಹಾರಗಳ ಬಗ್ಗೆ ವಿಪುಲವಾಗಿ ಬರೆದಿದ್ದಾರೆ. ಕೊಲಂಬಿಯ ವಿಶ್ವವಿದ್ಯಾಲಯದ ಪ್ರಾಜೆಕ್ಟ್ ಸಿಂಡಿಕೇಟ್, ಲಾಸ್ ಏಂಜಲೀಸ್‌ನಲ್ಲಿಯ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಏಷ್ಯ ಇನ್‌ಸ್ಟಿಟ್ಯೂಟ್ ಮತ್ತು ಏಷ್ಯನ್ ಟೈಮ್ಸ್ ಆನ್‌ಲೈನ್ ಇವುಗಳ ಅಂಕಣಕಾರರು. ಇವರ ಕೆಲವು ಗ್ರಂಥಗಳು ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿವೆ. ಬ್ರಿಟಿಷ್ ಸಂಯುಕ್ತ ರಾಷ್ಟ್ರಗಳ ಅತ್ಯಂತ ಉನ್ನತ ಸಂಸ್ಥೆ ರಾಯಲ್ ಏಷ್ಯಾಟಿಕ್ ಸೊಸೈಟಿ 2006ರಲ್ಲಿ ಇವರ ದಕ್ಷಿಣ ಏಷ್ಯ ವಿಷಯಗಳ ಬಗೆಗಿನ ಅಧ್ಯಯನಗಳನ್ನು ಮಾನ್ಯಮಾಡಿ ಸಂಸ್ಥೆಯ ಫೆಲೊ ಎಂದು ಸನ್ಮಾನಿಸಿದೆ. ಇವರು ಭಾರತ ಸರ್ಕಾರದ ಮಿನಿಸ್ಟ್ರೀಸ್ ಆಫ್ ಡಿಫೆನ್ಸ್ ಅಂಡ್ ಎಕ್ಸ್‌ಟರ್ನಲ್ ಅಫೇರ್ಸ್‌ನ ಸಲಹೆಗಾರರಾಗಿದ್ದರು. ಭಾರತದ ರಕ್ಷಣೆ ಮತ್ತು ವಿದೇಶಿ ವ್ಯವಹಾರಗಳಲ್ಲಿ ಧೋರಣೆ ರೂಪಿಸುವಲ್ಲಿ ಇವರ ಪಾತ್ರ ದೊಡ್ಡದು, ನಿಶಸ್ತ್ರೀಕರಣ, ನಾನ್ ಪ್ರೊಲಿಫಿರೇಶನ್ ಆಫ್ ನ್ಯೂಕ್ಲಿಯರ್ ವೆಪನ್ಸ್, ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಸಂಘರ್ಷಗಳಿಗೆ ಶಾಂತಿ-ಸೌಹಾರ್ದ, ನಿರ್ಣಯಗಳು ಮತ್ತು ಟ್ರ್ಯಾಕ್ ಟೂ ಈ ಕ್ಷೇತ್ರಗಳಲ್ಲಿ ಇವರ ಕೊಡುಗೆಗಳು ಉತ್ತಮ ಮಾರ್ಗ ಸೂಚಿ ಎಂದು ಪ್ರಶಂಸಿಸಲ್ಪಟ್ಟಿವೆ. ಭಾರತ-ಚೀನ ನಡುವಿನ ಸಂಬಂಧಗಳ ವಿಷಯದಲ್ಲಿಯ ಇವರ ತಜ್ಞತೆಯನ್ನು ಮನಗಂಡು ಭಾರತ ಸರ್ಕಾರದ ವಿದೇಶಿ ಖಾತೆಯ (1998) ಕಾರ್ಯದರ್ಶಿಗಳಾಗಿದ್ದ ಜೆ.ಎನ್ ಕೌಲ್ ಅವರು ಇವರಿಗೆ ಚೀನ ಗಣರಾಜ್ಯದ ರಾಯಭಾರಿ ಹುದ್ದೆಯನ್ನು ನೀಡಿದ್ದರು. (ಎ.ಎಸ್.)

**ಸನೌಲಿ:** ಉತ್ತರಪ್ರದೇಶ ರಾಜ್ಯದ ಭಾಗಪತ್ ಜಿಲ್ಲೆಯಲ್ಲಿರುವ ಅಂತ್ಯ ಹರಪ್ಪ ಸಂಸ್ಕೃತಿಯ ಸ್ಮಶಾನಭೂಮಿ. ಯಮುನಾ ನದಿಯಿಂದ 6 ಕಿಮೀ ದೂರದಲ್ಲಿರುವ ಈ ನೆಲೆ ಕನಿಷ್ಠ 4 ಹೆ. ಪ್ರದೇಶದಲ್ಲಿ ವಿಸ್ತರಿಸಿದೆ. ಇದು ಭಾರತ ಉಪಖಂಡದಲ್ಲಿ ದೊರೆತಿರುವ

ಅಂತ್ಯ ಹರಪ್ಪ ಸ್ಮಶಾನ ನೆಲೆ

ಪ್ರಾಗೈತಿಹಾಸಿಕ ಕಾಲದ ಅತಿದೊಡ್ಡ ಸ್ಮಶಾನ ನೆಲೆಗಳಲ್ಲೊಂದಾಗಿದೆ. ಇಲ್ಲಿ ಕಂಡುಬಂದಿರುವ ಅವಶೇಷಗಳು ಹಲವಾರು ರೀತಿಯಲ್ಲಿ ಅಪೂರ್ವವಾಗಿವೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ತಂಡ ಇಲ್ಲಿ 2005-06ರಲ್ಲಿ ಉತ್ಖನನ ನಡೆಸಿ, 10x10 ಮೀ ವಿಸ್ತೀರ್ಣದ 10 ಗುಂಡಿಗಳಲ್ಲಿ 116 ಸಮಾಧಿಗಳನ್ನು ಅನಾವರಣಗೊಳಿಸಿತು. ನದಿಯ ಮರಳು-ಮೆಕ್ಕಲುಮಣ್ಣಿನ ಪದರಗಳಿಂದ ನಿರ್ಮಿತವಾದ

ಸಮತಟ್ಟಾದ ಕೃಷಿ ಭೂಮಿಯಲ್ಲಿ ಸಮಾಧಿಗಳು ಹುದುಗಿದ್ದವು. ಇವು ನೆಲಮಟ್ಟದಿಂದ ಗರಿಷ್ಠ 2.4 ಮೀ ಆಳದವರೆಗೆ ಕಂಡುಬಂದವು. ಹೆಚ್ಚಿನ ಸಮಾಧಿಗಳು ಉತ್ತರ–ದಕ್ಷಿಣ ದಿಕ್ಕಿನಲ್ಲಿವೆ. ಇವುಗಳಲ್ಲಿ 56 ಪೂರ್ಣ ಸಮಾಧಿಗಳು, 35 ಅಪೂರ್ಣ ಅಥವಾ ಪ್ರಾತಿನಿಧಿಕ ಸಮಾಧಿಗಳು ಮತ್ತು 29 ಸಾಂಕೇತಿಕ ಸಮಾಧಿಗಳು. ಪೂರ್ಣ ಸಮಾಧಿಗಳಲ್ಲಿ ಅಸ್ಥಿಪಂಜರಗಳು ನೇರಭಂಗಿಯಲ್ಲಿದ್ದು ಸುಸ್ಥಿತಿಯಲ್ಲಿವೆ. ಹೆಚ್ಚಿನ ಸಮಾಧಿಗಳಲ್ಲಿ ಕಾಲಿರುವ ತಟ್ಟೆಯನ್ನು ಸೊಂಟದ ಕೆಳಗೆ ಆಧಾರವಾಗಿ ಇಡಲಾಗಿದೆ. ಪ್ರಾತಿನಿಧಿಕ ಸಮಾಧಿಗಳಲ್ಲಿ ಕೆಲವೊಂದು ಆಯ್ದ ಮೂಳೆಗಳನ್ನು ಮಾತ್ರ ಸಮಾಧಿಗೊಳಿಸಿದ್ದರೆ, ಸಾಂಕೇತಿಕ ಸಮಾಧಿಗಳಲ್ಲಿ ಸಮಾಧಿ ಕಾಣಿಕೆಗಳು ಮಾತ್ರ ಇವೆ. ಸ್ತರಕ್ರಮದ ಆಧಾರದ ಮೇಲೆ ಸಮಾಧಿಗಳನ್ನು 3 ವರ್ಗಗಳಾಗಿ ವಿಂಗಡಿಸಲಾಗಿದೆ. ಕೆಲವು ಅಪೂರ್ವ ಸಮಾಧಿಗಳು ಇಲ್ಲಿ ದೊರೆತಿವೆ. ಇವುಗಳಲ್ಲಿ ಜೋಡಿ ಮತ್ತು ತ್ರಿವಳಿ ಅಸ್ಥಿಪಂಜರಗಳ ಒಂದೊಂದು ಸಮಾಧಿಗಳೂ ಸೇರಿವೆ. ಜೋಡಿ ಸಮಾಧಿ 30–35 ವರ್ಷ ವಯಸ್ಸಿನವರದ್ದು. ಒಂದು ಅಸ್ಥಿಪಂಜರ ಪುರುಷನದ್ದು; ಮತ್ತೊಂದರ ಲಿಂಗನಿರ್ಣಯ ಸಾಧ್ಯವಾಗಿಲ್ಲ. ಅಸ್ಥಿಪಂಜರಗಳ ಜೊತೆ 6 ಮಣ್ಣಿನಪಾತ್ರೆಗಳು, ಸ್ಟಿಯಟೈಟಿನ ಒಂದು ಸುಂದರ ಮಣಿ, ಬಿಳಿ ಅಗೇಟಿನ ಮಣಿಗಳು ಲಭಿಸಿವೆ. ತ್ರಿವಳಿ ಸಮಾಧಿಯಲ್ಲಿ ಒಂದರ ಪಕ್ಕ ಒಂದರಂತೆ 3 ಜನರ ಅಸ್ಥಿಅವಶೇಷಗಳನ್ನು ಇಡಲಾಗಿತ್ತು. ಜೊತೆಗೆ 21 ಮಣ್ಣಿನಪಾತ್ರೆಗಳಿದ್ದವು. ಇವುಗಳಲ್ಲಿ 2 ಜಾಡಿಗಳಿಗೆ ಗೂಳಿಯಾಕಾರದ ಹಿಡಿಕೆಯುಳ್ಳ ಮುಚ್ಚಳಗಳಿದ್ದವು. ಸಾಂಕೇತಿಕ ಸಮಾಧಿಯೊಂದರಲ್ಲಿ ತಾಮ್ರದ ಕೊಳವೆ ಹಾಗೂ ತಾಮ್ರೋಪಕರಣ ಗುಡ್ಡೆಯಲ್ಲಿ ಸಿಗುವಂತಹ ಅಪರೂಪ ನಮೂನೆಯ ಕತ್ತಿ ದೊರಕಿರುವುದು ಬಹಳ ವಿಶೇಷ. ಏಕೆಂದರೆ ಸಮಾಧಿಯೊಳಗೆ ಈ ನಮೂನೆಯ ಕತ್ತಿ ಕಂಡುಬರುತ್ತಿರುವುದು ಇದೇ ಮೊದಲು. ಈ ಕತ್ತಿ 49.3 ಸೆಂಮೀ ಉದ್ದ, 3.4 ಸೆಂಮೀ ಅಗಲವಿದೆ. ಇದರ ಒಂದು ತುದಿ ಚೂಪಾಗಿಯೂ ಹಿಡಿಕೆ ಚಿಟ್ಟೆಮೀಸೆಯ ಆಕಾರದಲ್ಲಿಯೂ (ಅಥವಾ ಜೋಡಿ ಹುಬ್ಬಿನ ಆಕಾರದಲ್ಲಿ) ಇದೆ. ಈ ವಸ್ತುಗಳೊಂದಿಗೆ 18 ಮಣ್ಪಾತ್ರೆಗಳಿದ್ದವು. ಇನ್ನೊಂದು ಪ್ರಾತಿನಿಧಿಕ ಸಮಾಧಿಯಲ್ಲಿ ಮಾನವ ತಲೆಬುರುಡೆ ಮಾತ್ರ ಇದ್ದು ಇದರ ಹಣೆಯ ಮೇಲೆ ಚಿನ್ನದ ತೆಳು ಹಾಳೆಯಿಂದ ಮಾಡಿದ ನಕ್ಷತ್ರಾಕಾರದ (ಅಥವಾ ಮನುಷ್ಯಾಕೃತಿ) ವಸ್ತುವಿದ್ದಿತು. ಇದಕ್ಕೆ ಸಮೀಪದಲ್ಲಿಯೇ ನಕ್ಷತ್ರಾಕಾರದಲ್ಲಿರುವ 6 ತಾಮ್ರದ ವಸ್ತುಗಳು ಸಿಕ್ಕಿದ್ದು ಇವನ್ನು ಮೂಲತಃ ಮರದ ಪಟ್ಟಿಗೆ ಅಂಟಿಸಿದ್ದಂತೆ ತೋರುತ್ತದೆ.

ಅಸ್ಥಿಪಂಜರ ಸಹಿತ ಶವಕುಣಿ (ಸಂಖ್ಯೆ 17), ಸನೌಲಿ

ಕುತೂಹಲಕಾರಿಯಾದ ಮತ್ತೊಂದು ಸಾಂಕೇತಿಕ ಸಮಾಧಿಯಲ್ಲಿ ತಾಮ್ರದ ತಟ್ಟೆಯೊಳಗೆ ಮೀನು ಅಥವಾ ಬಾಣದ ಮೊನೆಯ ಆಕಾರದಲ್ಲಿರುವ, ಕಾಗದದಷ್ಟು ತೆಳುವಾಗಿರುವ ತಾಮ್ರದ ವಸ್ತುಗಳನ್ನು 6 ಸಾಲುಗಳಲ್ಲಿ ಜೋಡಿಸಿಡಲಾಗಿತ್ತು. ಇದರೊಂದಿಗೆ ಪ್ರಾಣಿಯೊಂದರ ದವಡೆ ಮತ್ತು ಮೂರು ಬೆರಳುಗಳ ಗುರುತಿನ ಇಟ್ಟಿಗೆ ತುಂಡುಗಳಿದ್ದವು. ಕಡಲೆಕಾಯಿ ಆಕಾರದಲ್ಲಿರುವ ಈ ತಟ್ಟೆ ತೆಳುವಾದ ತಾಮ್ರದ ಹಾಳೆಯಿಂದ ಮಾಡಿದ್ದಾಗಿದೆ. ಈ ಸಮಾಧಿಗೆ ಸಮೀಪದಲ್ಲಿ ಇದಕ್ಕೆ ಸಮಾನಾಂತರದಲ್ಲಿ ಇಟ್ಟಿಗೆ ಗೋಡೆಯೊಂದಿದ್ದು ಇದರ 5 ವರಸೆಗಳು ಮಾತ್ರ ಉತ್ಖನನದಲ್ಲಿ ಕಂಡುಬಂದವು. ಹೀಗೆ ಸಮಾಧಿಯ ಅತಿಸನಿಹದಲ್ಲಿ ಗೋಡೆಯೊಂದು ಪ್ರಥಮ ಬಾರಿಗೆ ಕಂಡುಬಂದಿದೆ ಎಂಬುದನ್ನು ಗಮನಿಸಬಹುದು. ಸಮಾಧಿ ಸುತ್ತ ಗುರುತಿಗಾಗಿ ಕಟ್ಟಿದ್ದ ಗೋಡೆ ಇದಾಗಿರಬಹುದು. ಮತ್ತೊಂದು ಅಸದೃಶವಾದ ಪ್ರಾತಿನಿಧಿಕ ಸಮಾಧಿಯಲ್ಲಿ ನಿಗೂಢ ವಿನ್ಯಾಸ ತೋರಿಬಂತು. ಇದರಲ್ಲಿಯೂ ಕಡಲೆಕಾಯಿ ಆಕಾರದಲ್ಲಿ ಇರುವ ತೆಳುವಾದ ತಾಮ್ರದ ಹಾಳೆಯಿದ್ದು (ಸು.70x30 ಸೆಂಮೀ) ಇದರ ಮೇಲೆ ಸ್ಟಿಯಟೈಟಿನ ಮಣಿಗಳನ್ನು ಬಳಸಿ ಕುಂದಣದ ಕೆಲಸ ಮಾಡಲಾಗಿದೆ. ಆಯತಾಕಾರ ಮತ್ತು ಗೋಲಾಕಾರದ ಚಪ್ಪಟೆ ಮಣಿಗಳನ್ನು ಹಾಳೆಯ ಅಂಚಿನ ಸುತ್ತ 5 ಸಮಾನಾಂತರ ಸಾಲುಗಳಲ್ಲೂ ಮಧ್ಯ ಭಾಗದಲ್ಲಿ ಇಂತಹದೇ ಮಣಿಗಳನ್ನು ಸರಪಳಿಯ ವಿನ್ಯಾಸದಲ್ಲಿಯೂ ಹುದುಗಿಸಲಾಗಿದೆ. ಹಾಳೆಯ ಬಲ ಅಂಚಿನಲ್ಲಿ ಇದಕ್ಕೆ ತಾಗಿ ಕುಂದಣವಿರುವ ಸಣ್ಣಸಣ್ಣ ಪಟ್ಟಿಗಳನ್ನು ಗೋಲಾಕಾರದಲ್ಲಿ ಜೋಡಿಸಲಾಗಿತ್ತು. ಒಟ್ಟಾರೆ ಈ ರಚನೆ ಪೂರ್ವ–ಪಶ್ಚಿಮಾಭಿಮುಖವಾಗಿ ಮಲಗಿರುವ ಮನುಷ್ಯಾಕೃತಿಯಂತೆ ತೋರುವುದು ಸ್ವಾರಸ್ಯಕರ. ಇದರ ಮೇಲೆ ತಾಮ್ರದ ಕೊಳವೆಯನ್ನು ಅಡ್ಡಕ್ಕೆ ಇಡಲಾಗಿತ್ತು. ಜೊತೆಗೆ ಇನ್ನಾವುದೇ ಅವಶೇಷಗಳಾಗಲೀ ವಸ್ತುಗಳಾಗಲೀ ಇರಲಿಲ್ಲ.

ಮಕ್ಕಳ 6 ಸಮಾಧಿಗಳು ಇಲ್ಲಿ ದೊರೆತಿರುವುದು ಗಮನಾರ್ಹ. ಈ ಪೈಕಿ 2 ವರ್ಷದ ಗಂಡುಮಗುವೊಂದರ ಎಡ ತೋಳಿನಲ್ಲಿ ಕಟ್ಟಿದ್ದ ಅಗೇಟ್ ಮಣಿಯ ತಾಯತವೊಂದು ಹಾಗೆಯೇ ಉಳಿದಿತ್ತು. ಅಂತೆಯೇ 18 ವರ್ಷದ ಯುವತಿಯೊಬ್ಬಳ ಅಸ್ಥಿಪಂಜರದಲ್ಲಿ ಎರಡೂ ಕೈಗಳಲ್ಲಿ ಎರಡೆರಡು ಚಿನ್ನದ ದಪ್ಪ ಬಳೆಗಳು ಹಾಗೆಯೇ ಇದ್ದವು. ಹೃದಯಾಕಾರದ ಸಾದಾ ಚಿನ್ನದ ಬಳೆಗಳಿವು. ಈಕೆಯ ಕೊರಳಲ್ಲಿ 2 ತಾಮ್ರದ ತಂತಿಗಳಿಗೆ ಚಿನ್ನದ ತಂತಿಯನ್ನು ಸುತ್ತಿ ಮಾಡಿದ್ದ ಆಭರಣವಿದ್ದಿತು. ಇದರ ನಡುನಡುವೆ ಅಗೇಟ್ ಮಣಿಯನ್ನು ಪೋಣಿಸಲಾಗಿತ್ತು. ಮಂದಗೆಂಪಿನ ಕಲ್ಲಿನ ಕೊಳವೆಯಾಕಾರದ ಮಣಿಗಳ ಸರವನ್ನೂ ಈಕೆ ಪ್ರಾಯಶಃ ತೊಟ್ಟಿದ್ದಳು. ಏಕೆಂದರೆ ಇಂತಹ 5 ಮಣಿಗಳು ಕೊರಳ ಬಳಿ ಇದ್ದುವು. ಅಷ್ಟೇ ಅಲ್ಲದೆ ಈಕೆಯ ನಡುವಿನ ಕೆಳಗೆ ತಾಮ್ರದ ತಟ್ಟೆಯನ್ನು ಬೋರಲಾಗಿ ಇಡಲಾಗಿತ್ತು. ಇವೆಲ್ಲವನ್ನೂ ಗಮನಿಸಿದರೆ ಇವಳು ಗಣ್ಯ ಮನೆತನಕ್ಕೆ ಸೇರಿದವಳು ಎಂದು ತಿಳಿಯುತ್ತದೆ. ಮತ್ತೊಂದು ಸಮಾಧಿಯಲ್ಲಿ ಶಿರರಹಿತ ಅಸ್ಥಿಪಂಜರದ ಬಲಭುಜದ ಬಳಿ ಚಿನ್ನದ ಪುಟ್ಟ ಮುಚ್ಚಳವಿತ್ತು. ಈ ವ್ಯಕ್ತಿಯೂ ಉಚ್ಚವರ್ಗಕ್ಕೆ ಸೇರಿದ್ದಿರಬೇಕು.

2 ಸಮಾಧಿಗಳಲ್ಲಿ 9 ಕಪ್ಪು ಮತ್ತು ಬಿಳಿಯ ಗಾಜಿನ ಮಣಿಗಳು ಸಿಕ್ಕಿರುವುದು ಅತ್ಯಂತ ವಿಶೇಷ. ಏಕೆಂದರೆ 2ನೆಯ ಸಹಸ್ರಮಾನದ ಸಮಾಧಿಗಳಲ್ಲಿ ಗಾಜಿನ ಮಣಿಗಳು ಈ ಹಿಂದೆ ದೊರೆತಿಲ್ಲ. ಒಂದು ಸಮಾಧಿಯಲ್ಲಿ ಸ್ತ್ರೀಯ ಅಸ್ಥಿಪಂಜರದ ಕೊರಳ ಸುತ್ತ 6 ಕಪ್ಪು ಮತ್ತು 1 ಬಿಳಿಯ ಮಣಿಗಳಿದ್ದವು. ಈಕೆಯ ಎರಡೂ ಕೈಗಳಲ್ಲಿ ತಾಮ್ರದ ಬಳೆಗಳೂ ಒಂದು ಕೈಯಲ್ಲಿ ಸ್ಟಿಯಟೈಟ್ ಮಣಿಗಳ ಸಂಕೋಲೆಯೂ ಇದ್ದವು. ಸೊಂಟದಲ್ಲಿ ಈಕೆ ಧರಿಸಿದ್ದಿರಬಹುದಾದ ಸೊಂಟಪಟ್ಟಿಯಲ್ಲಿದ್ದ ಮಣ್ಣಿನ ಮಣಿ ಮಾತ್ರ ಉಳಿದಿತ್ತು. ಕೆಲವೊಂದು ಸಮಾಧಿಗಳಲ್ಲಿ ಕರಕಲಾದ ಧಾನ್ಯಾವಶೇಷಗಳೂ ದೊರೆತಿವೆ. ಇಲ್ಲಿ ಸಿಕ್ಕ ಮತ್ತೊಂದು ಅನನ್ಯ ಅವಶೇಷವೆಂದರೆ ಆಯತಾಕಾರದಲ್ಲಿರುವ ಸುಟ್ಟ ಮಣ್ಣಿನ ತೊಟ್ಟಿ ಅಥವಾ ಬಾನಿ. ಸುಣ್ಣಕಲ್ಲಿನುಂಡೆಗಳ (ಕಂಕರ್) ಹಾಸಿನ ಮೇಲೆ ಪೂರ್ವ–ಪಶ್ಚಿಮಕ್ಕೆ ಇಡಲಾದ ಈ ತೊಟ್ಟಿ 2.6 ಮೀ ಉದ್ದ, 1.07 ಮೀ ಅಗಲ ಮತ್ತು 0.64 ಮೀ ಎತ್ತರವಿದೆ. ಇದರ ದಪ್ಪ 6–7 ಸೆಂಮೀ ತೊಟ್ಟಿಯ ಎಡಭಾಗ ತೆರೆದುಕೊಂಡಿದೆ. ಒಳಭಾಗದಲ್ಲಿ ಮಣ್ಣಿನ ಲೇಪನವನ್ನು ಕಾಲಕಾಲಕ್ಕೆ ಹಚ್ಚಲಾಗಿದೆ. ದೀರ್ಘಕಾಲ ತೊಟ್ಟಿ ಬಳಕೆಯಲ್ಲಿದ್ದುದರ ಸಂಕೇತ ಇದಾಗಿದೆ. ತೆರೆದ ಭಾಗದಲ್ಲಿ ತೊಟ್ಟಿಯ ತಳದಲ್ಲಿ ಮಾನವನ ಸುಟ್ಟ ಮೂಳೆಗಳು ಮತ್ತು ಪ್ರಾಣಿಯ ದವಡೆಗಳು, ಸುಟ್ಟ ಮಣ್ಣಿನುಂಡೆಗಳು ಮತ್ತು ಇಟ್ಟಿಗೆ ತುಂಡುಗಳು ಕಂಡುಬಂದವು. ಈ ಆಧಾರದ ಮೇಲೆ ಇದು ಶವದಹನಕ್ಕಾಗಿ ಬಳಸಲಾದ ತೊಟ್ಟಿಯಿರಬಹುದೆಂದು ಅನುಮಾನಿಸಲಾಗಿದೆ. ತೊಟ್ಟಿ ಒಳಗೆ ಕಂಡುಬಂದ ಹಲಗೆಯಂತಹ ಅನೇಕ ಸುಟ್ಟಮಣ್ಣಿನ ತುಂಡುಗಳು ತೊಟ್ಟಿಗೆ ಇದ್ದಿರಬಹುದಾದ ಮುಚ್ಚಳದ ಭಾಗಗಳಾಗಿರಬಹುದು.

ಈವರೆಗೆ 40 ಅಸ್ಥಿಪಂಜರಗಳ ವೈಜ್ಞಾನಿಕ ಅಧ್ಯಯನ ನಡೆದಿದೆ. ಅಸ್ಥಿಪಂಜರಗಳಲ್ಲಿ 10 ಪುರುಷರದ್ದೂ 7 ಮಹಿಳೆಯರದ್ದೂ ಆಗಿವೆ. ಉಳಿದವುಗಳ ಲಿಂಗವನ್ನು ನಿರ್ಧರಿಸುವುದು ಸಾಧ್ಯವಾಗಿಲ್ಲ. 5 ಅಸ್ಥಿಪಂಜರಗಳು 1–5 ವರ್ಷದ ಮತ್ತು 10 ವರ್ಷದ ಮಕ್ಕಳದ್ದು; 6 ಹದಿವಯಸ್ಸಿನವರದು. ಪುರುಷರು 159–178 ಸೆಂಮೀ ಉದ್ದವಾಗಿದ್ದರೆ ಸ್ತ್ರೀಯರು ಅವರಿಗಿಂತ ಲಂಬವಾಗಿಯೂ (169–179 ಸೆಂಮೀ) ಗಟ್ಟಿಮುಟ್ಟಾಗಿಯೂ ಇದ್ದರು. ಒಂದು ಅಸ್ಥಿಪಂಜರ ಗೂನು ಬೆನ್ನಿನ ವ್ಯಕ್ತಿಯದ್ದಾಗಿದೆ.

ಅವಶೇಷಗಳ ಆಧಾರದ ಮೇಲೆ ಈ ಸ್ಮಶಾನಭೂಮಿಯ ಕಾಲವನ್ನು ಪ್ರ.ಶ.ಪೂ. 2200–1800 ಎಂದು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ. ಈ ಅವಶೇಷಗಳು ಅಂತ್ಯ ಹರಪ್ಪ ಕಾಲದ ಲಕ್ಷಣಗಳನ್ನು ಬಹುವಾಗಿ ಒಳಗೊಂಡಿದ್ದರೂ ಇಲ್ಲಿ ಪ್ರೌಢಾವಸ್ಥೆಯಲ್ಲಿದ್ದ ಹರಪ್ಪ ಸಂಸ್ಕೃತಿಯ ಲಕ್ಷಣಗಳೂ ಕೆಲವೊಂದಿವೆ. ಜೊತೆಗೆ ತಾಮ್ರೋಪಕರಣ ಗುಡ್ಡೆ ಸಂಸ್ಕೃತಿಯ ಲಕ್ಷಣವಾದ ಚಿಟ್ಟೆಮೀಸೆಯ ಕತ್ತಿಯೂ ಇಲ್ಲಿದೆ. ಹರಪ್ಪ ಮತ್ತು ತಾಮ್ರ ನಿಕ್ಷೇಪ ಸಂಸ್ಕೃತಿಗಳು ಸಮಕಾಲೀನವಾಗಿದ್ದವು ಎಂಬುದಕ್ಕೆ ಇದು ಮತ್ತೊಂದು ನೇರ ಆಧಾರವಾಗಿದೆ. ತಾಮ್ರ ನಿಕ್ಷೇಪ ಸಂಸ್ಕೃತಿಯ ಸ್ಥಾನಮಾನ ಮತ್ತು ಕಾಲಮಾನಗಳು ಊಹೆಯಾಗಿಯೇ ಉಳಿದಿರುವ ಪ್ರಸ್ತುತ ಸಂದರ್ಭದಲ್ಲಿ ಈ ಅನ್ವೇಷಣೆ ಮಹತ್ತ್ವದ್ದಾಗಿದೆ. (ವಿ.ಎಸ್.)

**ಸನ್ನತಿ:** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನಲ್ಲಿರುವ, ಕರ್ನಾಟಕದಲ್ಲಿ ಅತ್ಯಂತ ವಿಸ್ತೃತವೂ ಕುತೂಹಲಕರವೂ ಆದ ಬೌದ್ಧ ನಿವೇಶನ. ಕೃಷ್ಣೆಯ ಉಪನದಿ ಭೀಮಾನದಿಯ ಎಡದಂಡೆ ಮೇಲಿದೆ. ಯಾದಗಿರ್‌ನಿಂದ ಸು.50 ಕಿಮೀ ದೂರದಲ್ಲಿ ಹಾಗೂ ನಾಲ್ವಾರ್ ರೈಲ್ವೆ ನಿಲ್ದಾಣದಿಂದ (ಮಧ್ಯ–ದಕ್ಷಿಣ ರೈಲ್ವೆ) 19 ಕಿಮೀ ದೂರದಲ್ಲಿದೆ. ಶಾಕ್ತ ಪಂಥದ ದೇವಿಯರಲ್ಲಿ ಒಬ್ಬಳಾದ ಚಂದ್ರಲಾಂಬೆಯ ದೇವಾಲಯವಿರುವುದರಿಂದ ಇದು ಅನೇಕ ಭಕ್ತರನ್ನು ಆಕರ್ಷಿಸುವ ಯಾತ್ರಾಸ್ಥಳವೂ ಆಗಿದೆ. ಈ ದೇವಿಯನ್ನು ಚಂಡಲಾ (ಚಂಡಾಲಾ, ಚಂದ್ರಲಾ) ಪರಮೇಶ್ವರಿ ಎಂದೂ ಕರೆಯಲಾಗುತ್ತದೆ. ಸ್ಥಳಪುರಾಣ ಮತ್ತು ಐತಿಹ್ಯದಂತೆ ಪುರಾಣಪ್ರಸಿದ್ಧರಾದ ರಾಮ, ಸೀತೆಯರು, ನಾರಾಯಣ, ಚಂದ್ರವದನೆಯರಾಗಿ ಅವತರಿಸಿದ್ದಾಗ ಈ ಪ್ರದೇಶವನ್ನು ಆಳುತ್ತಿದ್ದ ಸೇತು (ಶ್ವೇತರಾಜ) ಎಂಬ ದೊರೆ ಚಂದ್ರವದನೆಯನ್ನು ಬಲಾತ್ಕರಿಸಿ ಆಕೆಯಿಂದ ಶಾಪ ಪಡೆದನೆಂದೂ ಮುಂದೆ ಈಕೆಯೇ ಚಂದ್ರಲಾ ಪರಮೇಶ್ವರಿ ಎಂಬ ಹೆಸರಿನಿಂದ ಪೂಜಿಸಲ್ಪಡುತ್ತಿರುವಳೆಂದೂ ತಿಳಿದುಬರುತ್ತದೆ. ಸನ್ನತಿಯ ಬಳಿ

ಇರುವ ಕೋಟೆಯನ್ನು ಈ ಹಿನ್ನೆಲೆಯಲ್ಲಿ ಸೇತುರಾಜನಕಟ್ಟೆ ಎಂಬ ಸ್ಥಳೀಯ ಹೆಸರಿನಿಂದ ಗುರುತಿಸುತ್ತಿರುವುದು ಗಮನಾರ್ಹ. ಕೆ.ವಿ.ರಮೇಶ್ ಅವರು ಅಭಿಪ್ರಾಯ ಪಟ್ಟಿರುವಂತೆ ಈ ಸೇತುರಾಜನಕಟ್ಟೆ ಶಾತವಾಹನರ ಕೋಟೆ ಎನ್ನುವುದರ ಅಪಭ್ರಂಶ ರೂಪವಾಗಿದ್ದಿರಬೇಕು.

ಪುರಾತತ್ತ್ವ ಶೋಧನೆಗಳು: ಈ ನಿವೇಶನವನ್ನು ಪತ್ತೆಮಾಡಿ ಇದರ ಮಹತ್ತ್ವವನ್ನು ಮೊದಲ ಬಾರಿಗೆ ಪ್ರಸ್ತಾಪಿಸಿದವರು ಕಪಟರಾಳು ಕೃಷ್ಣರಾಯ. ಮೈಸೂರು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದ ಎಂ. ಶೇಷಾದ್ರಿಯವರು ಈ ಸ್ಥಳದಲ್ಲಿ ಹೆಚ್ಚಿನ ಪರಿಶೋಧನೆ ನಡೆಸಿ (1964–65) ಇಲ್ಲಿನ ಶಿಲ್ಪ, ಶಾಸನಗಳನ್ನು ಕುರಿತಂತೆ ಸವಿವರ ಲೇಖನ ಬರೆದಿದ್ದಾರೆ. ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಪಿ.ಬಿ. ದೇಸಾಯಿಯವರು ಮತ್ತೊಮ್ಮೆ ಸನ್ನತಿಯಲ್ಲಿ ಸ್ಥಳ ಪರಿಶೋಧನೆ ಮಾಡಿ (ಫೆಬ್ರುವರಿ, 1966) ಇದು ಕರ್ನಾಟಕದ ಅತ್ಯಂತ ಮಹತ್ತ್ವಪೂರ್ಣ ಹಾಗೂ ಅತಿದೊಡ್ಡ ಬೌದ್ಧ ನಿವೇಶನ ಎಂದು ಅಭಿಪ್ರಾಯಪಟ್ಟಿದ್ದಾರೆ. ಸನ್ನತಿಯಿಂದ ಕನಗನಹಳ್ಳಿಯವರೆಗಿನ ಸು. 5–6 ಚ.ಕಿಮೀ ಪ್ರದೇಶದಲ್ಲಿ ಸಾತವಾಹನ ಹಾಗೂ ಅದಕ್ಕೂ ಹಿಂದಿನ ಕಾಲದ ಸಾಂಸ್ಕೃತಿಕ ಹಾಗೂ ವಾಸ್ತು ನಿರ್ಮಿತಿಗಳ ಬೃಹತ್ ಅವಶೇಷಗಳು, ಶಿಲ್ಪ ಫಲಕಗಳು, ಪುರಾತನ ಕಾಲದ ಹೆಂಚು, ಇಟ್ಟಿಗೆ, ಆಟಿಕೆ ಮುಂತಾದ ಮಣ್ಣೂರ್ತಿ, ಬೌದ್ಧಾಲಯಗಳ ಶಿಲ್ಪಾಲಂಕೃತ ವಸ್ತು ಭಾಗಗಳು ಆಂಧ್ರ ಸಾತವಾಹನ ಕಾಲದ ಹೊಳಪುಳ್ಳ ಕಪ್ಪು–ಕೆಂಪು ಮಣ್ಪಾತ್ರೆ, ಸ್ಫಟಿಕ, ಕಾರ್ನೇಲಿಯನ್ ಮುಂತಾದ ಅರೆಪ್ರಶಸ್ತ ಶಿಲೆಯ ಮಣಿಗಳು, ಶಂಖದ ಆಭರಣಗಳು ಇವೇ ಮುಂತಾದ ಆದಿ ಇತಿಹಾಸ ಯುಗದ ಜನವಸತಿಯ ಕುರುಹುಗಳು ಕಂಡುಬಂದಿವೆ. ಈ ಫಲಕಗಳ ಮೇಲೆ ಬುದ್ಧನ ಜೀವನದ ಪ್ರಮುಖ ಘಟನೆ, ಜಾತಕ ಕಥೆ, ಸಾಮಾಜಿಕ ಜನಜೀವನ ಮತ್ತು ಗೃಹಸ್ಥ ಜೀವನದ ಕೆಲವು ರಸಮಯ ಸನ್ನಿವೇಶಗಳ ಮನೋಜ್ಞ ಚಿತ್ರಣವನ್ನು ಕಾಣಬಹುದು. ಇದುವರೆಗೆ ಸನ್ನತಿಯಲ್ಲಿ 250ಕ್ಕೂ ಹೆಚ್ಚು ಕಿರುಶಾಸನಗಳು ದೊರೆತಿವೆ. ಅವುಗಳಲ್ಲಿ 241 ಬ್ರಾಹ್ಮಿಲಿಪಿಯಲ್ಲಿರುವ (ದಾನದ ಉಲ್ಲೇಖವಿರುವ) ತುಂಡು ಶಾಸನಗಳೂ ಉಳಿದವು ಬಾದಾಮಿ ಚಳುಕ್ಯ, ರಾಷ್ಟ್ರಕೂಟ ಕಾಲದವೂ ಆಗಿವೆ. ಲಿಪಿ, ಭಾಷೆ ಮತ್ತು ಶಿಲ್ಪ ಶೈಲಿ, ವಸ್ತು ಹಾಗೂ ತಂತ್ರವನ್ನೊಳಗೊಂಡಂತೆ ಈ ಶಿಲ್ಪಶಾಸನಗಳು ಪ್ರ.ಶ.ಪೂ.1ನೆಯ ಶತಮಾನದಿಂದ ಪ್ರ.ಶ.3ನೆಯ ಶತಮಾನದವರೆಗಿನ, ಅಮರಾವತಿಯ ಇಂಥದೇ ಶಿಲ್ಪಶಾಸನಗಳನ್ನು ಹೋಲುತ್ತವೆ.

ಸ್ತೂಪದಿಬ್ಬಗಳು: ಎರಡು ದಿಬ್ಬಗಳು ಗಮನಾರ್ಹವಾಗಿವೆ. ಇವುಗಳಲ್ಲಿ ಒಂದು ಚಂದ್ರಲಾ ಪರಮೇಶ್ವರಿ ದೇವಾಲಯದ ಸಮೀಪದಲ್ಲಿದ್ದು ಸಾಕಷ್ಟು ಸುಸ್ಥಿತಿಯಲ್ಲಿದೆ. ಈ ದಿಬ್ಬದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಹೈದರಾಬಾದ್ ವಲಯ ದಕ್ಷಿಣ ಏಷ್ಯ ಅಧ್ಯಯನ ಸಂಸ್ಥೆಯ ಜೇಮ್ಸ್ ಹೊವೆಲ್ಲರ ಸಹಯೋಗದೊಂದಿಗೆ ವೈಜ್ಞಾನಿಕವಾಗಿ ಉತ್ಖನನ ಕೈಗೊಂಡಿದೆ. ಇದಲ್ಲದೆ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ನಿರ್ದೇಶನಾಲಯ ಸನ್ನತಿಯ ಕೋಟೆಯ ಬಳಿ ಉತ್ಖನನ ಕೈಗೊಂಡು ಸಾತವಾಹನ ಹಾಗೂ ತತ್ಪೂರ್ವಕಾಲದ ಜನವಸತಿ, ಅವರ ಸಮೃದ್ಧ ಸಾಂಸ್ಕೃತಿಕ ಜೀವನ ಅವರ ಪದ್ಧತಿ ಇವುಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಬಲ್ಲಂತಹ ಅನೇಕ ಮಾಹಿತಿಗಳನ್ನು ಒದಗಿಸಿತು. ಸು.80 ಹೆಕ್ಟೇರ್ ಪ್ರದೇಶವನ್ನು ಸುತ್ತುವರೆದ 4ಮೀ ಎತ್ತರ, 3ಮೀ ಅಗಲದ ಕೋಟೆಯ ಗೋಡೆಯನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದೆ (46x21x10 ಸೆಂಮೀ). ಈ ಕೋಟೆಯ ಪ್ರದೇಶದಲ್ಲಿ ರಾಜ ಪ್ರಮುಖರ ಹಾಗೂ ಜನಸಾಮಾನ್ಯರ ಎರಡು ಪ್ರತ್ಯೇಕ ವಸತಿ ನೆಲೆಗಳನ್ನು ಗುರುತಿಸಲಾಗಿದೆ.

ದೇವಿಯ ಮಂದಿರ: ಚಂದ್ರಲಾಪರಮೇಶ್ವರಿ ಬಹುಶಃ ಬೌದ್ಧಧರ್ಮದ ಪ್ರಭಾವ ಕ್ಷೀಣಿಸಿದ ಮೇಲೆ ಬಾದಾಮಿ ಚಳುಕ್ಯ, ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದಂತೆ ಕಂಡುಬರುತ್ತದೆ. ಮುಂದೆ ಅನೇಕ ಬಾರಿ ಪುನರ್ನಿರ್ಮಾಣಗೊಂಡಿದ್ದರೂ ಮೂಲ ಗರ್ಭಗೃಹದ ದ್ವಾರಬಂಧ ಮುಂತಾದ ಕೆಲವಾದರೂ ವಾಸ್ತು ಭಾಗಗಳಲ್ಲಿ ರಾಷ್ಟ್ರಕೂಟ ಶೈಲಿಯ ಕೆಲವು ಲಕ್ಷಣಗಳನ್ನು ಗುರುತಿಸಬಹುದು.

ಶಾಸನಗಳು: ಅಶೋಕನ ಶಾಸನ ಮತ್ತು ಕನಗನಹಳ್ಳಿಯ ಮಹಾಸ್ತೂಪದ ಶಾಸನಗಳೂ ಸೇರಿದಂತೆ ಇದುವರೆಗೆ ಸು.350ಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿವೆ. ಇತರ ಸ್ತೂಪ ಮತ್ತು ವಿಹಾರ ನಿವೇಶನಗಳಲ್ಲಿ ಉತ್ಖನನ ನಡೆದರೆ ಇನ್ನಷ್ಟು ಶಾಸನಗಳು ದೊರೆಯುವ ಸಾಧ್ಯತೆಯೂ ಇದೆ. ಈಗಾಗಲೇ ಈ ಪ್ರದೇಶದಲ್ಲಿ 1995ರ ವರೆಗೆ ದೊರಕಿದ್ದ ಅಶೋಕ, ಸಾತವಾಹನ ದೊರೆಗಳು ಹಾಗೂ ಇತರರ ಸು. 85 ಶಾಸನಗಳನ್ನು ಐ.ಕೆ.ಶರ್ಮ ಪ್ರಕಟಿಸಿದ್ದಾರೆ. ಸ್ತೂಪದ ಉತ್ಖನನ ವರದಿಯಲ್ಲಿಯೂ ಸು.250 ಶಾಸನಗಳು ಪ್ರಕಟವಾಗುವ ನಿರೀಕ್ಷೆಯಿದೆ. ಕಂದು ಬಣ್ಣದ ಕಣಶಿಲೆಯ (ಗ್ರಾನೈಟ್) ಈ ಶಿಲಾಖಂಡ ಸು.30 ಸೆಂಮೀ ದಪ್ಪವಾಗಿದ್ದು ಆಯತಾಕಾರದಲ್ಲಿದೆ (2.33–1.21 ಮೀ). ಪಾರ್ಶ್ವಗಳನ್ನು ಒರಟಾಗಿ ಕತ್ತರಿಸಿ, ಮಧ್ಯದಲ್ಲಿ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲು ಅನುವಾಗುವಂತೆ ಆಯತಾಕಾರದ ರಂಧ್ರವನ್ನು ಕೊರೆದಿದ್ದಾರೆ. ಈ ಫಲಕ ಬಂಡೆಯೊಂದರ ಭಾಗವಾಗಿರದೆ ಎರಡೂ ಮುಖಗಳಲ್ಲಿ ಅಶೋಕನ ಶಾಸನವಿರುವ ಆಯತಾಕಾರದ ಫಲಕವಾಗಿದೆ. ಈ ಪ್ರಕಾರದ ಅಶೋಕನ ಶಿಲಾಶಾಸನ ಇಡೀ ಭಾರತದಲ್ಲಿಯೇ ಮೊದಲಬಾರಿಗೆ ಸನ್ನತಿಯಲ್ಲಿ ಕಂಡುಬಂದಿದೆ. ಮುಂಭಾಗದ 9ನೆಯ ಪಂಕ್ತಿಯಲ್ಲಿ ಇಯಂ ಧರ್ಮದ ಉಲ್ಲೇಖವಿರುವುದರಿಂದ ಇವು ಅಶೋಕನ ಶಾಸನಗಳೆಂದು ಸುಸ್ಪಷ್ಟವಾಗುತ್ತದೆ.

ಹೊಸದಾಗಿ ದೊರೆತಿರುವ ಶಾಸನಗಳ ಪ್ರಾಮುಖ್ಯ: ಈ ಫಲಕದಲ್ಲಿಯ 12 ಮತ್ತು 4ನೆಯ ಮುಖ್ಯ ಶಿಲಾಶಾಸನಗಳ ಆಧಾರದ ಮೇಲೆ ಭೀಮಾನದಿಯ ದಡದಲ್ಲಿರುವ ಗುಲ್ಬರ್ಗ ಜಿಲ್ಲೆಯ ಪ್ರದೇಶಗಳು ಅಶೋಕನ ಸಾಮ್ರಾಜ್ಯದ ಒಂದು ಭಾಗವಾಗಿತ್ತೆಂದೂ ಈ ಭಾಗದ ಆಡಳಿತಾಧಿಕಾರಿಯಾಗಿ ಮಹಾಮಾತ್ರನೊಬ್ಬನು ನಿಯುಕ್ತನಾಗಿದ್ದನೆಂದೂ ಹೇಳಬಹುದು.



ಅಶೋಕನ ಶಾಸನ ಫಲಕ

ಇತರ ಶಾಸನಗಳು: ಹೆಚ್ಚಿನ ತುಂಡು ಶಾಸನಗಳು ಛಾಯಾಪ್ರತಿಮೆಗಳ ಸ್ಥಾಪನೆಯ ಬಗೆಗೆ ಮಾಹಿತಿ ನೀಡುತ್ತವೆ. ಸ್ತೂಪದಲ್ಲಿ ದೊರೆತಿರುವ ಶಾಸನಗಳನ್ನು ಕಟಾಂಜನದ ಕಂಬ, ಆಯಕ ಕಂಬ, ಆಯಕ ಮತ್ತು ವೇದಿಕೆಯ ಅಲಂಕೃತ ಹೊದಿಕೆಗಳು, ಬುದ್ಧಪಾದ, ಬುದ್ಧಶಿಲ್ಪದ ಪೀಠ, ಪುಷ್ಪಗ್ರಹಣಿ, ಅಂಡಕ್ಕೆ ಹೊದಿಸಿದ ಅಲಂಕೃತ ಫಲಕಗಳು, ಹಾಸುಗಲ್ಲು, ಅಂಡವನ್ನು ಕಟ್ಟಲು ಉಪಯೋಗಿಸಿದ ಕಲ್ಲು, ಸ್ತೂಪದ ಪರಿಸರದಲ್ಲಿ ಸ್ಥಾಪಿಸಿದ ಧರ್ಮಸ್ತಂಭ ಮುಂತಾದ ಸ್ತೂಪದ ವಾಸ್ತು ಅಂಗಗಳ ಮೇಲೆ ಮತ್ತು ಉದ್ದೇಶಿತ ಕಿರುಸ್ತೂಪದ ವೇದಿಕೆ ಮುಂತಾದವುಗಳ ಮೇಲೆ ಬರೆಯಲಾಗಿದೆ.

ಇವುಗಳಲ್ಲಿ ಸಾತವಾಹನ ಅರಸರ ಆಳಿಕೆಯಲ್ಲಿ ಅವರ ಅಮಾತ್ಯರು, ಅಧಿಕಾರಿಗಳು, ಗೃಹಪತಿ, ಗೃಹಪತ್ನಿ, ಬೌದ್ಧ ಸಂಘಗಳ ಥೇರ, ಆಚಾರ್ಯ, ಭಿಕ್ಷು, ಭಿಕ್ಷುಣಿ, ಶ್ರಮಣ, ಅಂತೇವಾಸಿ, ಅಂತೇವಾಸಿನಿ, ನವಕರ್ಮಿ, ಶ್ರೀಮಂತ ವಣಿಜರು ಮುಂತಾದ ಜನಸಾಮಾನ್ಯರು ನೀಡಿದ ದಾನಗಳನ್ನು ಇವು ದಾಖಲಿಸಿವೆ. ಕೆಲವು ಶಾಸನಗಳಲ್ಲಿ ಬುದ್ಧನ ಜೀವನದ ಘಟನೆಗಳು, ಆತನ ನಿಕಟ ಸಂಪರ್ಕವಿದ್ದ ಸ್ಥಳ, ವಿಹಾರ, ಬೌದ್ಧ ಧರ್ಮದ ಪ್ರಸರಣಕ್ಕೆ ಸಂಬಂಧಿಸಿದ ಘಟನಾವಳಿ, ಜಾತಕ ಕಥೆ ಮುಂತಾದ ವಿವರಗಳಿರುವ ಫಲಕಗಳಿವೆ.

ಚಿಮುಕ ಸಾತವಾಹನ, ಗೌತಮೀಪುತ್ರ ಸಾತಕರ್ಣಿ, ಸಿರಿಸಾತಕರ್ಣಿ, ವಾಸಿಷ್ಠೀಪುತ್ರ ಸಿರಿಸಾತಕರ್ಣಿ, ಪುಳುಮಾವಿ ಸಿವಸಿರಿ ಗೌತಮೀಪುತ್ರ, ಯಜ್ಞಸಾತಕರ್ಣಿ ಮೊದಲಾದ ರಾಜರು, ಮಹಾಸಾತವಾಹನ ಅಗ್ನಿಶರ್ಮ ಮೊದಲಾದ ರಾಜಪ್ರತಿನಿಧಿಗಳು, ಅಮಾತ್ಯರು, ಮಹಾತಲವಾರ, ಮಹಾರಥಿ ಮತ್ತಿತರ ಅಧಿಕಾರಿಗಳು, ವಣಿಜರು, ಶ್ರೀಮಂತ ಮನೆತನದವರು ಹಾಗೂ ಜನಸಾಮಾನ್ಯರ ಮಹತ್ತ್ವದ ಉಲ್ಲೇಖಗಳೂ ಇವೆ. ಸನ್ನತಿಯ ಪರಿಸರ ನಿರಂತರ ಹಾಗೂ ಸಕ್ರಿಯ ರಾಜಕೀಯ, ಧಾರ್ಮಿಕ ಸಾಮಾಜಿಕ ಹಾಗೂ ಆರ್ಥಿಕ, ವ್ಯವಹಾರ, ವಹಿವಾಟುಗಳು ನಡೆಯುತ್ತಿದ್ದ ಕೇಂದ್ರ ಸ್ಥಳಗಳಲ್ಲಿ ಒಂದಾಗಿತ್ತೆಂದು ತಿಳಿಯುತ್ತದೆ.

ಪ್ರಾಗಿತಿಹಾಸ: 1991ರ ಅಕ್ಟೋಬರ್–ನವೆಂಬರ್‌ನಲ್ಲಿ ಸನ್ನತಿ ಪರಿಸರದ 24 ಹಳ್ಳಿಗಳಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ನಡೆಸಿದ ಪರಿಶೋಧನೆಯಿಂದ ಭೀಮಾ ಕಣಿವೆಯ ಈ ಪ್ರದೇಶದಲ್ಲಿ ಪ್ರಾಗೈತಿಹಾಸಿಕ, ಇತಿಹಾಸಾರಂಭ ಹಾಗೂ ಮಧ್ಯಯುಗದ ಕಾಲಗಳಲ್ಲಿನ ಜನವಸತಿ, ಸಂಸ್ಕೃತಿಗಳ ಬಗೆಗೆ ಅಮೂಲ್ಯ ಮಾಹಿತಿ ಬೆಳಕಿಗೆ ಬಂದಿದೆ.

ಕೊಲ್ಲೂರಿನ ಬಳಿ ದೊರಕಿರುವ ಆದಿ ಹಳೆಶಿಲಾಯುಗದ ಅಶೂಲಿಯನ್ ಉಪಕರಣಗಳಿಂದ ಪ್ರಾಗೈತಿಹಾಸಿಕ ಕಾಲದಿಂದಲೇ ಸನ್ನತಿ ಪ್ರದೇಶದಲ್ಲಿ ಜನವಸತಿ ಇತ್ತೆಂದು ತಿಳಿಯುತ್ತದೆ. ಕೈಗೊಡಲಿ, ಹೆರೆಚಕ್ಕೆ ಹಾಗೂ ಚಕ್ರಾಕಾರದ ಉಪಕರಣಗಳನ್ನು ಸ್ಥಳೀಯವಾಗಿ ದೊರಕುವ ಸುಣ್ಣಕಲ್ಲಿನ ದಪ್ಪ ಚಕ್ಕೆಗಳಿಂದಲೇ ರೂಪಿಸಿರುವುದು ಗಮನಾರ್ಹವಾಗಿದೆ. ಚಂದ್ರಲಾಪರಮೇಶ್ವರಿ ದೇವಾಲಯದ ಬಳಿಯ ನದೀದಂಡೆಯಲ್ಲಿ ಸಿಲಿಕಯುಕ್ತ ಶಿಲೆಯಲ್ಲಿ ರೂಪಿಸಿದ ಶಿಲೋಪಕರಣಗಳೂ ದೊರಕಿವೆ.

ಮಧ್ಯಶಿಲಾಯುಗದ ಉಪಕರಣಗಳು ಈಗ ಈ ಪರಿಸರದ ಅಣಬಿ, ಹಸರ್‌ಗುಂಡಿಗಿ ಮತ್ತು ಕನಗನಹಳ್ಳಿಯಲ್ಲಿಯೂ ದೊರಕಿದ್ದು, ಮಧ್ಯಶಿಲಾಯುಗದ ಕಾಲಕ್ಕೆ ಜನಸಾಂದ್ರತೆ ಹೆಚ್ಚಾಗಿದ್ದು ಈ ಸಂಸ್ಕೃತಿ ಹೆಚ್ಚು ವ್ಯಾಪಕವಾಗಿ ಹರಡಿತ್ತೆಂದು ಸೂಚಿಸುತ್ತವೆ. ಬೆಣಚುಕಲ್ಲು, ಸ್ಫಟಿಕಶಿಲೆ ಹಾಗೂ ಚಕಮಕಿ ಕಲ್ಲುಗಳ ದಪ್ಪ ಹಾಗೂ ತೆಳ್ಳನೆಯ ಚಕ್ಕೆಗಳ ಮೇಲೆ ರೂಪಿಸಿದ ವಿವಿಧ ರೀತಿಯ ಮೊನೆ, ಹರಿತವಾದ ಅಂಚಿನ ನೀಳಚಕ್ಕೆ ಮತ್ತು ಹೆರೆಚಕ್ಕೆಗಳು

ಹೆಚ್ಚಿನ ಸಂಖ್ಯೆಯಲ್ಲಿ ದೊರಕಿವೆ. ಸಿರಿವಾಳ ಹಳ್ಳ ಭೀಮಾನದಿಯನ್ನು ಸೇರುವ ಸಂಗಮ ಸ್ಥಾನದಲ್ಲಿ ಎಡದಂಡೆಯುದ್ದಕ್ಕೂ ಇಂತಹ ಉಪಕರಣಗಳು ಸಾಂದ್ರವಾಗಿ ಹರಳುಗಟ್ಟಿದ ಜಲಜಶಿಲೆಯ ಸು. 1–1/2 ಮೀ ದಪ್ಪವಾದ ಪದರವಿರುವುದು ಗಮನಾರ್ಹ ಅಂಶ. ಈ ಉಪಕರಣಗಳಲ್ಲಿ ಕೆಲವು ಕಿರುಗಾತ್ರದ ಸಮಾನಾಂತರ ನೀಳಚಕ್ಕೆಗಳು ಬಹುಶಃ ಅಂತ್ಯ ಹಳೆಶಿಲಾಯುಗದ ಆರಂಭವನ್ನು ಸೂಚಿಸುತ್ತವೆ.

ಅದರಂತೆಯೇ ನದೀದಡದುದ್ದಕ್ಕೂ ಸ್ವಾಭಾವಿಕವಾಗಿ ಉರುಟುಗಲ್ಲುಗಳ ರೂಪದಲ್ಲಿ ಹರಡಿರುವ ಉತ್ತಮ ಮಟ್ಟದ ಸಿಲಿಕದ ಸೂಕ್ಷ್ಮ ಹಾಗೂ ಸಾಂದ್ರಕಣಗಳಿಂದ ಕೂಡಿರುವ ಕ್ಯಾಲ್ಸೆಡನಿ, ಅಗೇಟ್, ಚರ್ಟ್ ಹಾಗೂ ಕ್ವಾರ್ಟ್ಸ್ ಶಿಲೆಯ ಉಂಡೆಗಲ್ಲು ಮತ್ತು ತೆಳ್ಳನೆಯ ಚಕ್ಕೆಗಳಿಂದ ತಯಾರಿಸಿದ ವಿವಿಧ ರೀತಿಯ ಮೊನೆ, ಹೆರೆಚಕ್ಕೆಗಳು ಮುಂತಾದ ಸೂಕ್ಷ್ಮ ಶಿಲಾಯುಗದ ಉಪಕರಣಗಳು ಹೇರಳವಾಗಿವೆ. ಈ ಮೊದಲು ಪದ್ದಯ್ಯ (1993 ಅಕ್ಟೋಬರ್ 1) ಸನ್ನತಿಯಲ್ಲಿ ಮಾತ್ರವೇ ಈ ಉಪಕರಣಗಳನ್ನು ಸಂಶೋಧಿಸಿದ್ದು ಸನ್ನತಿ ಪರಿಸರದ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ತೀವ್ರ ರೀತಿಯ ಬೇಟೆ ಮತ್ತು ಆಹಾರ ಸಂಗ್ರಹಣೆಯಲ್ಲಿ ತೊಡಗಿಕೊಂಡು, ಅಲೆಮಾರಿ ಈ ಪ್ರದೇಶದಲ್ಲಿ ವ್ಯಾಪಕವಾಗಿ ಹರಡಿದ್ದ ಸಂಸ್ಕೃತಿಯ ಭಾಗವಾಗಿದೆ ಎಂಬ ಅಭಿಪ್ರಾಯ ಪಟ್ಟಿದ್ದಾರೆ. ಸನ್ನತಿಯ ಪರಿಸರದಲ್ಲಿ ನವಶಿಲಾಯುಗ ಸಂಸ್ಕೃತಿಯ ಚಕ್ಕೆ ತೆಗೆದು ಉಜ್ಜಿ ನಯಗೊಳಿಸಿದ ಕೈಗೊಡಲಿಗಳು ಅಣಬಿ ಮತ್ತು ಸಿರಿವಾಳಗಳಲ್ಲಿ ದೊರಕಿವೆ. ಎರಡೂ ಉಪಕರಣಗಳನ್ನು ಸ್ಥಳೀಯವಾಗಿ ಸುಲಭವಾಗಿ ದೊರೆಯದ ಡಾಲರೈಟ್ ಕಲ್ಲಿನಲ್ಲಿ ರೂಪಿಸಲಾಗಿದೆ. ಈಚೆಗೆ ರಣಮಂಡಲದಲ್ಲಿ ನಡೆಸಿದ ಪರೀಕ್ಷಕ ಕುಳಿಯಲ್ಲಿನ ಅತ್ಯಂತ ಕೆಳಗಣ ಸ್ತರದಲ್ಲಿಯೂ ಸೂಕ್ಷ್ಮಶಿಲಾಯುಗದ ಇಂತಹ ಉಪಕರಣಗಳು ಬೆಳಕಿಗೆ ಬಂದಿರುವುದು ಗಮನಾರ್ಹವಾಗಿದೆ. ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಇದುವರೆಗೂ ಬೆಳಕಿಗೆ ಬಂದಿಲ್ಲ. ಆದರೆ ಭೀಮಾನದಿ ಕಣಿವೆಯಲ್ಲಿ ಅಲ್ಲಲ್ಲಿ ಬೃಹತ್ ಶಿಲಾಯುಗದ ಕಲ್ಗೋರಿ ಸಮೂಹಗಳು ವ್ಯಾಪಕವಾಗಿ ಹರಡಿರುವುದರಿಂದ ಬಹುಶಃ ಇತಿಹಾಸದ ಆರಂಭ ಯುಗದಿಂದ ಈಚೆಗೆ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ವಾಣಿಜ್ಯ ಮಹತ್ತ್ವದ ಚಟುವಟಿಕೆಗಳಿಂದ ಇಲ್ಲಿ ಇದ್ದಿರಬಹುದಾದ ಕಲ್ಗೋರಿಗಳು ಪೂರ್ತಿ ನಾಶವಾಗಿರುವುದು ಈ ದೃಷ್ಟಿಯಿಂದ ಗಮನಾರ್ಹ. ಜೊತೆಗೆ ರಣಮಂಡಲದಲ್ಲಿಯ ಆಳ ಉತ್ಖನನದಲ್ಲಿ ಸೂಕ್ಷ್ಮಶಿಲಾಯುಗದ ಅನಂತರದ ಮೇಲ್ಪದರಗಳಲ್ಲಿ ದೊರೆತಿರುವ ಬೃಹತ್ ಶಿಲಾಯುಗ ಸಂಸ್ಕೃತಿಯ ವಿಶಿಷ್ಟ ಆಕಾರದ ಕಪ್ಪು–ಕೆಂಪು ದ್ವಿವರ್ಣ ಹಾಗೂ ಹೊಳಪುಳ್ಳ ಕಪ್ಪು ಬಣ್ಣದ ಮಣ್ಪಾತ್ರೆಗಳು ಮತ್ತು ತುಕ್ಕು ಹಿಡಿದ ಕಬ್ಬಿಣದ ಉಪಕರಣಗಳೂ ಈ ಸಂಭವನೀಯತೆಯನ್ನು ಸಮರ್ಥಿಸುತ್ತವೆ.

ಕನಗನಹಳ್ಳಿಯ ಮಹಾಸ್ತೂಪ : ಚಂದ್ರಲಾಪರಮೇಶ್ವರಿ ದೇವಾಲಯದ ನೇರ ಪೂರ್ವಕ್ಕೆ ಸು.1 ಕಿಮೀ ದೂರದಲ್ಲಿ, ಭೀಮಾನದಿಯ ಎಡದಂಡೆಯಿಂದ ಸು. 300 ಮೀ ಉತ್ತರದಲ್ಲಿ ಸು. 3 ಮೀ ಎತ್ತರವಿದ್ದ ದಿಬ್ಬವೊಂದಿತ್ತು. ಶೇಷಾದ್ರಿಯವರು ಈ ಸ್ಥಳದಲ್ಲಿ ವೃತ್ತಾಕಾರದ ಇಟ್ಟಿಗೆ ಕಟ್ಟಡವೊಂದರ ಭಾಗವನ್ನು ಕಂಡು ಸ್ತೂಪದ ಮೇಧಿ ಇದ್ದಿರಬಹುದೆಂದು ಊಹಿಸಿದ್ದರು. ಈ ನಿವೇಶನದಿಂದ ಬಹುಶಃ 1960ರ ಸುಮಾರಿಗೆ ಅಷ್ಟಭುಜಾಕೃತಿಯ ಎತ್ತರದ ಸ್ತಂಭವೂ



ಮಹಾಸ್ತೂಪಾವಶೇಷ

ಸೇರಿದಂತೆ ಅನೇಕ ಶಾಸನಸಹಿತ ಶಿಲ್ಪಿತ ವಾಸ್ತುಭಾಗಗಳನ್ನು ಗುಲ್ಬರ್ಗದ ರಾಜ್ಯವಸ್ತು ಸಂಗ್ರಹಾಲಯಕ್ಕೆ ಸಾಗಿಸಿದಂತೆ ಕಂಡುಬರುತ್ತದೆ. ಜೇಮ್ಸ್ ಹೊವೆಲ್ ಈ ದಿಬ್ಬದ ಬಗೆಗಿನ ಇನ್ನಷ್ಟು ವಿವರಗಳನ್ನು ನೀಡಿದ್ದಾರೆ. ಈ ಸ್ತೂಪದಿಬ್ಬದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1994–95ರಲ್ಲಿ ಅಲ್ಪ ಪ್ರಮಾಣದಲ್ಲಿ, ಅನಂತರ 1995–96ರಿಂದ 2000–2001 ರವರೆಗೆ ತೀವ್ರ ರೀತಿಯ ವಿಸ್ತೃತ ಉತ್ಖನನ ನಡೆಸಿತು. ಇಡೀ ಭಾರತದಲ್ಲಿಯೇ ಅಪೂರ್ವವೆನಿಸುವ ಶಿಲ್ಪಫಲಕ, ಶಾಸನ, ಬುದ್ಧ ಶಿಲ್ಪಗಳಿಂದ ಅಲಂಕೃತವಾದ ಮಹಾಸ್ತೂಪ ಸಮುಚ್ಚಯವೊಂದು ಅನಾವರಣಗೊಂಡಿದೆ.

ಈ ಸ್ತೂಪ ನಾಲ್ಕು ಬದಿಗಳಲ್ಲಿ ಆಯಕವೇದಿಕೆಗಳಿರುವ ಸು.1.25 ಮೀ ವೃತ್ತ. ಎತ್ತರದ ವೇದಿಕೆ, ಅದರ ಮೇಲೆ ಸು. 2½ ಮೀ ಎತ್ತರದ ಅಂಡಭಾಗ, ಇದರ ಸುತ್ತು ಸು.3½ ಮೀ ಅಗಲವಾದ ಹಾಸುಗಲ್ಲಿನ ಪ್ರದಕ್ಷಿಣಾಪಥ, ಇವೆಲ್ಲವನ್ನೂ ಒಳಗೊಂಡಂತೆ ನಾಲ್ಕು ಸೂಚಿಗಳಿಂದ ಕೂಡಿದ ಬೇಲಿಯನ್ನು ಹೊಂದಿದೆ. ಪೂರ್ಣರೂಪದಲ್ಲಿದ್ದಾಗ ಸ್ತೂಪ ಸು.30x30 ಮೀ ವರ್ಗದೊಳಗೆ ನಿರ್ಮಿತವಾಗಿದ್ದು, ಸು.18 ಮೀ ಎತ್ತರವಿದ್ದಂತೆ ಕಾಣುತ್ತದೆ. ಸ್ತೂಪದ ಸುತ್ತಲೂ ಸು.10–12 ಇಟ್ಟಿಗೆಯ ಕಟ್ಟಡಗಳಿದ್ದು, ಅವುಗಳಲ್ಲಿ ಗಜಪೃಷ್ಠಾಕೃತಿಯ ದೇವಾಲಯ, ಚೌಕಾಕಾರದ, ಬುದ್ಧಪಾದವನ್ನು ಪೂಜಿಸಲು ಕಟ್ಟಿದ್ದ ವೇದಿಕೆಗಳು, ಧರ್ಮಸ್ತಂಭಗಳ ವೇದಿಕೆ ಹಾಗೂ ವೃತ್ತಾಕಾರದ ಔದ್ದೇಶಿಕ ಸ್ತೂಪಗಳಿದ್ದಂತೆ ಕಂಡುಬರುತ್ತದೆ. ಸ್ತೂಪಸಮುಚ್ಚಯದ ಉತ್ತರದಲ್ಲಿ ಆಯತಾಕಾರದ ವಿಸ್ತಾರವಾದ ವಿಹಾರ ಕಟ್ಟಡದ ಕೆಲಭಾಗಗಳೂ ಬೆಳಕಿಗೆ ಬಂದಿವೆ.

ನಿಂತಭಂಗಿಯಲ್ಲಿ ಬುದ್ಧ

ಸ್ತೂಪದ ಮುಖ್ಯಭಾಗವಾದ ಮೇಧಿ ಸು.16ಮೀ ವ್ಯಾಸವಿದ್ದು ಸು.3ಮೀ ಎತ್ತರವಿದೆ. ಇದರ ಸುತ್ತ ಸು.75–80 ಸೆಂಮೀ ಅಗಲದ ಕಿರು ಪ್ರದಕ್ಷಿಣಾಪಥವಿದ್ದು ಕೆಳಗೆ 1.25 ಮೀ ಎತ್ತರದ ವೇದಿಕೆಯಿದೆ. ಮೂಲಸ್ತೂಪ ಕಲ್ಲುಗುಂಡು, ಮಣ್ಣು, ಸುಣ್ಣಕಲ್ಲಿನ ಸಣ್ಣ ದೊಡ್ಡ ತುಂಡುಗಳನ್ನು ಕ್ರಮವಾಗಿ ಪೇರಿಸಿದ ದಿಬ್ಬವಾಗಿದ್ದು ಅದರ ಸುತ್ತ ಸುಣ್ಣಕಲ್ಲಿನ, ನಯಗೊಳಿಸಿದ ಬೆಣೆಯಾಕಾರದ ಕಲ್ಲುಗಳನ್ನು ಜೋಡಿಸಿ ಅರ್ಧಗೋಲಾಕೃತಿಯ ಅಂಡವನ್ನು ವಿನ್ಯಾಸಗೊಳಿಸಿದಂತೆ ಕಾಣುತ್ತದೆ. ಇದೇ ರೀತಿಯ ಸುಣ್ಣಕಲ್ಲಿನಿಂದ ವೇದಿಕೆಯನ್ನು ಕಟ್ಟಿ, ಅದರ ಸುತ್ತ ಇಟ್ಟಿಗೆಯ ಗೋಡೆಯೆಬ್ಬಿಸಿ ವೇದಿಕೆಯನ್ನು 1.25 ಮೀ ಅಗಲವಾಗಿಸಿದೆ. ಸ್ತೂಪದ ನಾಲ್ಕು ದಿಕ್ಕುಗಳಲ್ಲಿ ಆಯತಾಕಾರದ ಆಯಕ ವೇದಿಕೆಗಳಿದ್ದು ಇವುಗಳ ಮೇಲೆ ಆಯಕ ಕಂಬಗಳಿದ್ದಿರಬಹುದು. ಪೀಠಸಹಿತವಾದ, ಮನುಷ್ಯ ಗಾತ್ರಕ್ಕಿಂತ ದೊಡ್ಡದಾದ (ಸು. 2.5 ಮೀ ಎತ್ತರದ) ಸ್ಥಾನಕ ಬುದ್ಧ ಶಿಲ್ಪಗಳನ್ನು ದಕ್ಷಿಣ ಹಾಗೂ ಪಶ್ಚಿಮದ ಆಯತ ವೇದಿಕೆಗಳ ಮೇಲೆ ಸ್ಥಾಪಿಸಲಾಗಿತ್ತು. ಪಶ್ಚಿಮದ ಆಯತ ವೇದಿಕೆ ಹಾಗೂ ದ್ವಾರ ನದಿಯ ಕಡೆಯಿಂದ ಬರುವ ಭಕ್ತರಿಗಾಗಿ ಮತ್ತು ಪಶ್ಚಿಮ ದ್ವಾರ ಸನ್ನತಿಯ ರಣಮಂಡಲ ಕೋಟೆಯಿಂದ, ಚಂದ್ರಲಾ ಪರಮೇಶ್ವರಿ ದೇವಾಲಯದ ಮೂಲಕ ಹಾದು ಬರುವವರಿಗಾಗಿ ಮಾಡಿದ್ದ ಏರ್ಪಾಡು. ಈ ಎರಡು ಕಡೆಯಿಂದಲೂ ಸ್ತೂಪದ ಹಿನ್ನೆಲೆಯಲ್ಲಿ ಎತ್ತರವಾಗಿ ನಿಂತ ಗಂಭೀರ ಬುದ್ಧ ವಿಗ್ರಹಗಳು ವೀಕ್ಷಕರನ್ನು ಬಹುದೂರದಿಂದಲೇ ಅನುಗ್ರಹಪೂರ್ವಕವಾಗಿ ಆಕರ್ಷಿಸುವ ಭವ್ಯವಾದ ನೋಟ ಒದಗಿಸುತ್ತವೆ. ನಿಂತಿರುವ ಈ ಬುದ್ಧ ವಿಗ್ರಹಗಳಲ್ಲದೆ ವಿವಿಧ ಆಸನಗಳಲ್ಲಿ ಕುಳಿತ ಮತ್ತು ಅಲ್ಪ ಸ್ವಲ್ಪ ಭಿನ್ನವಾಗಿರುವ ಸು.9 ಕುಳಿತ ಬುದ್ಧ ವಿಗ್ರಹಗಳೂ ದೊರಕಿವೆ. ಶೈಲೀಯ ವಿವರಗಳಲ್ಲಿ ಈ ಶಿಲ್ಪಗಳು ಕೃಷ್ಣಾಕಣಿವೆಯ ಅಮರಾವತಿ, ನಾಗಾರ್ಜುನಕೊಂಡದ ಶಿಲ್ಪಗಳಿಗಿಂತ ದಖನಿನ ವಾಕಾಟಕ ಶಿಲ್ಪಗಳನ್ನು ಹೆಚ್ಚು ಹೋಲುತ್ತವೆ.



ಸಿದ್ಧಾಸನದಲ್ಲಿಯ ಮಾನುಷಿ ಬುದ್ಧ

ಕುಳಿತಿರುವ ಬುದ್ಧವಿಗ್ರಹಗಳನ್ನು ಬಹುಶಃ ಪ್ರದಕ್ಷಿಣಾಪಥದ ಹಾಸುಗಲ್ಲಿನ ಮೇಲೆ, ವೇದಿಕೆಯ ಶಿಲ್ಪರಹಿತ ವೇದಿಕಾ–ಫಲಕಗಳ ಹಿನ್ನೆಲೆಯಲ್ಲಿ ಎಂಟು ದಿಕ್ಕುಗಳಲ್ಲಿ ಒಂದೊಂದರಂತೆ ಪ್ರತಿಷ್ಠಾಪಿಸಲಾಗಿತ್ತು. ಈ ಶಿಲ್ಪಗಳು ಅಷ್ಟಮಾನುಷೀ ಬುದ್ಧರ ಶಿಲ್ಪಗಳಾಗಿದ್ದು, ಬಹುಶಃ ಇಡೀ ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ಎಂಟು ದಿಕ್ಕುಗಳಲ್ಲಿ ಪ್ರತ್ಯೇಕ ಮಾನುಷೀ ಬುದ್ಧ ಶಿಲ್ಪಗಳನ್ನು

ಸ್ಥಾಪಿಸುವ ಮಹಾಯಾನ ಪಂಥದ ಸಂಪ್ರದಾಯ ಕನಗನಹಳ್ಳಿಯಲ್ಲಿಯೇ ಉಗಮಿಸಿತೆಂದು ತೋರುತ್ತದೆ. ವಿವಿಧ ರೀತಿಯ ಆಯಕ ಸಿಕ್ಕಿವೆ. ಕೆಲವದರ ಚೌಕಾಕಾರದ ಕೆಳಭಾಗದಲ್ಲಿ ಸಿಂಹಾಸನ ಸಹಿತವಾದ ಬೋಧಿವೃಕ್ಷ, ಧರ್ಮಚಕ್ರ, ಸ್ತೂಪ ಮುಂತಾದ ಚಿತ್ರಣಗಳೂ ಶಾಸನಗಳೂ ಇವೆ. ಇವುಗಳನ್ನು ಬಹುಶಃ ಆಯಕ ವೇದಿಕೆಯ ಮೇಲೆ ಅಥವಾ ಪ್ರತ್ಯೇಕವಾದ ಕಟಾಂಜನ ಸಹಿತವಾದ ವೇದಿಕೆಗಳ ಮೇಲೆ ಸ್ಥಾಪಿಸಲಾಗಿತ್ತು. ಸ್ತೂಪದ ನೈರುತ್ಯಕ್ಕೆ ಇದ್ದ ಇಂತಹ ಒಂದು ಕಂಬದ ಮೇಲೆ ಕುಳಿತ ಭಂಗಿಯಲ್ಲಿರುವ, ಸೂಕ್ಷ್ಮ ಕಣಗಳ ಮರಳುಗಲ್ಲಿನಿಂದ ರೂಪಿಸಿದ ಸಿಂಹದ ಶಿಲ್ಪ ದೊರಕಿರುವುದು ಗಮನಾರ್ಹ.

ವೇದಿಕೆಯ ಸುತ್ತ ಸು.3 ಮೀ ಅಗಲದ ಪ್ರದಕ್ಷಿಣಾಪಥದಲ್ಲಿ ನಯಗೊಳಿಸಿದ ಸುಣ್ಣಕಲ್ಲಿನ, ಇದರ ಸುತ್ತ ಪ್ರತಿ ಜೋಡಿ ಕಂಬದ ನಡುವೆ ನಾಲ್ಕು ಸೂಚಿಗಳಿರುವ, ಸು.3 ಮೀ ಎತ್ತರದ ಕಟಾಂಜನವಿದ್ದಿತ್ತು. ಇದನ್ನು ಮೂಲಸ್ಥಾನದಲ್ಲಿ ಅಳಿದುಳಿದ ಪದ್ಮ ಚಿತ್ರಗಳಿಂದ, ಅಲಂಕೃತ ಕಂಬಗಳು ಹಾಗೂ ಅಸಂಖ್ಯಾತ ಸೂಚಿಗಳಿಂದ ತಿಳಿಯಬಹುದಾಗಿದೆ. ಇವುಗಳ ಒಳಮೈಯಲ್ಲಿ 2–4 ಸಾಲಿನ ದಾನಶಾಸನಗಳನ್ನು ಅಡ್ಡಡ್ಡವಾಗಿ ಬರೆಯಲಾಗಿದೆ. ಬಾರ್ಹುತ್, ಸಾಂಚಿ, ಅಮರಾವತಿ, ನಾಗಾರ್ಜುನಕೊಂಡಗಳ ಕಟಾಂಜನದ ಕಂಬ, ಸೂಚಿಗಳಂತೆ ಅಲ್ಲದೆ, ಇಲ್ಲಿಯ ವಿವಿಧ ರೀತಿಯ ಸ್ವಾಭಾವಿಕ ಹಾಗೂ ರೇಖಾ ವಿನ್ಯಾಸದ ಕಮಲಗಳ ಸೂಕ್ಷ್ಮ ಕೆತ್ತನೆಗಾಗಿ ಗಮನಾರ್ಹ. ಕಟಾಂಜನದ ಉಷ್ಣೀಷವನ್ನು ದೊಡ್ಡ ದೊಡ್ಡ ಆಯತಾಕಾರದ ಕಲ್ಲುಗಳಿಂದ ತಯಾರಿಸಲಾಗಿದ್ದು, ಹೊರಮೈಯಲ್ಲಿ ಗಂಟೆ ಹಾಗೂ ದೀರ್ಘವೃತ್ತಾಕೃತಿಗಳ ಸಾಲುಗಳ ನಡುವೆ ಸಹಜ ಹಾಗೂ ಪೌರಾಣಿಕ ರೀತಿಯ, ವಿವಿಧ ಭಂಗಿಗಳಲ್ಲಿರುವ ಗೂಳಿ, ಆನೆ, ಟಗರು, ಕುದುರೆ, ಕೋಣ, ಸಿಂಹ, ಒಂಟೆ ಮುಂತಾದ ಪ್ರಾಣಿಗಳ ಚಿತ್ರಣಗಳಿವೆ. ಪೌರಾಣಿಕ ರೀತಿಯ ಪ್ರಾಣಿಗಳಿಗೆ ಗಿಳಿಮೂಗು ಮತ್ತು ರೆಕ್ಕೆಗಳನ್ನು ಮೂಡಿಸಿದೆ. ನವರಸವುಕ್ಕಿಸುವಂತಹ ಮುಖಭಾವ, ಅದಕ್ಕೊಪ್ಪುವ ವಿಶಿಷ್ಟ ಭಂಗಿಗಳಿಂದ ಕೂಡಿರುವ ಈ ರೀತಿಯ ಪ್ರಾಣಿಯ ಶಿಲ್ಪಗಳು ಸನ್ನತಿಯ ಕಲಾವಿದರ ಅಪೂರ್ವ ನೈಪುಣ್ಯಕ್ಕೆ ಸಾಕ್ಷಿಯೆನಿಸಿವೆ.

ಆಯಕ ವೇದಿಕೆಗಳಿಗೆದುರಾಗಿ ಕಟಾಂಜನ ಮುಂಚಾಚಿದ್ದು ನಾಲ್ಕು ದಿಕ್ಕುಗಳಲ್ಲಿ ಪ್ರವೇಶ ದ್ವಾರಗಳಾಗಿ ಪರಿವರ್ತಿತವಾಗಿವೆ. ಪ್ರತಿ ದ್ವಾರದ ಎರಡೂ ಬದಿಗೆ ಕಡಿಮೆ ಎತ್ತರದ ಅಲಂಕೃತ ಯಕ್ಷ ಶಿಲ್ಪಗಳನ್ನು ನಿಲ್ಲಿಸಿ ಅದರ ಮೇಲೆ ಭಕ್ತರು ನೀಡಿದ ಕಾಣಿಕೆಗಳನ್ನು ಸಂಗ್ರಹಿಸಲು ಕಲ್ಲಿನ ವೃತ್ತ ಇಲ್ಲವೇ ಆಯತಾಕಾರದ ದೊಡ್ಡ ಬೋಗುಣಿಯನ್ನು (ಪುಷ್ಪಗ್ರಾಹಿಣಿ) ಇಟ್ಟಿದ್ದರು. ಉತ್ತರ ಮತ್ತು ಪಶ್ಚಿಮದ್ವಾರಗಳಲ್ಲಿ ಇಂತಹ ಪುಷ್ಪಗ್ರಾಹಿಣಿಯನ್ನು ಹೊತ್ತಿದ್ದ ಯಕ್ಷರ ಭಗ್ನ ಶಿಲ್ಪಗಳು ದೊರಕಿವೆ. ಇಲ್ಲಿಯ ದ್ವಾರಗಳಲ್ಲಿ ಸಾಂಚಿ ಮುಂತಾದೆಡೆ ಕಂಡುಬರುವಂತೆ ಅಲಂಕೃತ ತೋರಣಗಳಿಲ್ಲ. ಅದರ ಬದಲಿಗೆ ಎನ್ನುವಂತೆ ಪ್ರದಕ್ಷಿಣಾಪಥದ ಹೊರ ಅಂಚಿಗೆ ಹೊಂದಿಸಿದಂತೆ ಅಲಂಕರಿಸಿದ ಒಂದೇ ಕಲ್ಲಿನ ದೊಡ್ಡ ಹೊಸ್ತಿಲು ಮತ್ತು ಅದರ ಮುಂದೆ ಅಗಲವಾದ ಒಂದೇ ಕಲ್ಲಿನ ಚಂದ್ರಶಿಲೆಗಳನ್ನು ಕೂರಿಸಿದೆ. ಪಶ್ಚಿಮ ಮತ್ತು

ಮುಚಲಿಂಗ ನಾಗ

ದಕ್ಷಿಣ ಹೊಸ್ತಿಲು ಹಾಗೂ ಚಂದ್ರಶಿಲೆಗಳು ತೀವ್ರ ಸವೆತಕ್ಕೊಳಗಾಗಿದ್ದು ಈ ಮೊದಲು ಹೇಳಿದಂತೆ ಕ್ರಮವಾಗಿ ಸನ್ನತಿಗ್ರಾಮದ ಕಡೆಯಿಂದ ಹಾಗೂ ನದಿಯ ಕಡೆಯಿಂದ ಅಸಂಖ್ಯಾತ ಜನರು ನಿರಂತರವಾಗಿ ಬಹುಕಾಲದವರೆಗೆ ಸ್ತೂಪಕ್ಕೆ ಬರುತ್ತಿದ್ದರೆಂಬುದನ್ನು ಸೂಚಿಸುತ್ತದೆ.

ಆಯಕ ವೇದಿಕೆಯೂ ಸೇರಿದಂತೆ ಸ್ತೂಪದ ಮುಖ್ಯಭಾಗ ಅಲಂಕೃತ ವೇದಿಕೆ. ಇದು ಅರ್ಧಗೋಲಾಕಾರದಲ್ಲಿ ಮನೋಹರವಾಗಿ ಮೇಲೇರುವ ಅಂಡಕ್ಕೆ ಅಧಿಷ್ಠಾನವಾಗಿದೆ. ಜೊತೆಗೆ ಕಣ್ಣಿನ ಮಟ್ಟದಲ್ಲಿ ಬುದ್ಧಪಾದ, ಬುದ್ಧಶಿಲ್ಪ ಮುಂತಾದ ಪೂಜಾವಸ್ತುಗಳನ್ನು ಸ್ಥಾಪಿಸಲು ಮತ್ತು ಪೂಜಾಸಾಮಗ್ರಿ, ಕಾಣಿಕೆಗಳನ್ನು ಇಡಲು ಅಗಲವಾದ ಕಟ್ಟೆಯಿದೆ. ಅಲ್ಲದೆ ಗೋಲದ ಮೇಲಿಂದ ವೇದಿಕೆಯ ಸುತ್ತ ಇಟ್ಟಿಗೆಯ ಗೋಡೆ ಕಟ್ಟಿ ವೇದಿಕೆಯನ್ನು 0.90 ಮೀ ಅಗಲವಾಗಿಸಿದೆ. ಸು. 1.25 ಮೀ ಎತ್ತರವಿರುವ ವೇದಿಕೆ ಹಾಗೂ ಆಯಕ ವೇದಿಕೆಗಳಿಗೆ ವಿವಿಧ ರೀತಿಯ ಶಿಲ್ಪಗಳಿರುವ ಅಲಂಕೃತ ಫಲಕಗಳನ್ನು ಜೋಡಿಸಿದೆ. ಅರೆಕಂಬ, ಕಂಬಗಳ ವಿನ್ಯಾಸವುಳ್ಳ ಇಂತಹ ವೇದಿಕೆಯ ಫಲಕಗಳ ಮೇಲ್ಭಾಗದಲ್ಲಿ 15–16 ಸೆಂಮೀ ಅಗಲವಾದ ಪಟ್ಟಿಕೆಯಿದ್ದು, ಅದರ ಮೇಲೆ ಅಲ್ಲಲ್ಲಿ ಶಾಸನಗಳಿವೆ. ವೇದಿಕೆಯ ಫಲಕಗಳಲ್ಲಿ ವಿವಿಧ ರೀತಿಯ ಸ್ತೂಪಗಳು, ಧರ್ಮಚಕ್ರ, ಅನಾಥ ಪಿಂಡಕನು ಚಿನ್ನದ ನಾಣ್ಯಗಳನ್ನು ಹಾಸಿ ಜೇತವನವನ್ನು ಕೊಂಡುಕೊಂಡು ಬುದ್ಧನಿಗೆ ದಾನ ನೀಡಿ ಬುದ್ಧ ಮತ್ತು ಅವನ ಮುಖ್ಯ ಶಿಷ್ಯರಿಗಾಗಿ ವಿಹಾರಗಳನ್ನು ಕಟ್ಟಿಸಿಕೊಟ್ಟ ದೃಶ್ಯಾವಳಿ, ಬೋಧಿವೃಕ್ಷ, ಸಿಂಹಾಸನ, ಬೋಧಿಮಂಡಲ, ಸರ್ಪಗಳಿಂದ ಸುತ್ತುವರೆದ ರಾಮಗ್ರಾಮಸ್ತೂಪ, ಬೌದ್ಧ ಪಂಥದ ಪ್ರಕಾರ ಭವಚಕ್ರದ ನಿರೂಪಣೆ, 3 ರಿಂದ 9 ಹೆಡೆಗಳಿರುವ ಸುಂದರ ನಾಗಮುಚಲಿಂದ ಮುಂತಾದ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಪಶ್ಚಿಮ ದ್ವಾರಕ್ಕೆದುರಾಗಿ ಆಯಕ ವೇದಿಕೆಗೆ ಜೋಡಿಸಿರುವ ಒಂಬತ್ತು ಹೆಡೆಗಳ ನಾಗರಾಜ ಮುಚಲಿಂದನ ಶಿಲ್ಪ ಅತ್ಯಂತ ಕಲಾತ್ಮಕವಾದುದು. ಅದರಂತೆಯೇ ಬಹುಮಹಡಿಯ ಒಂದು ವಿಹಾರ ಕಟ್ಟಡ, ಉತ್ತರ ಆಯಕ ವೇದಿಕೆಯ ಧರ್ಮಚಕ್ರ, ಪೂರ್ವಆಯಕದ ಭವಚಕ್ರ ಮುಂತಾದ ಫಲಕಗಳು ವಸ್ತುವಿನ ಆಯ್ಕೆ, ನಿರೂಪಣೆ ಮತ್ತು ಕಂಡರಣೆಗಳ ದೃಷ್ಟಿಯಿಂದ ಶಿಲ್ಪಿಗಳ ಅದ್ಭುತ ನೈಪುಣ್ಯಕ್ಕೆ ಸಾಕ್ಷಿಯಾಗಿವೆ.

ಇದರ ಹೊರಪರಿಧಿಯಲ್ಲಿ ಸಣ್ಣ ಕಟಾಂಜನ (ಪುಷ್ಪಗ್ರಾಹಿಣಿ) ಇದೆ. ಇದರ ಹೊರ ಮೈಯಲ್ಲಿಯೂ ಸ್ತೂಪದ ಹೊರಗಿರುವಂತೆ ಚಿತ್ರಿಸಲಾದ ಸಣ್ಣ ಸಣ್ಣ ಪ್ರಾಣಿಗಳ ಶಿಲ್ಪಗಳ ಸಾಲಿದೆ. ಕಟಾಂಜನದ ಮೇಲ್ತುದಿಯ ಉದ್ದಕ್ಕೂ ಶಾಸನವಿದೆ.

ಅಂಡದ ಹೊರ ಮೈಗೆ ಬಹುಶಃ 1–25 ಮೀ ಅಗಲ ಹಾಗೂ 3–75 ಮೀ ಗೂ ಎತ್ತರದ ಅಲಂಕೃತ ಫಲಕಗಳನ್ನು ಹೊದಿಸಲಾಗಿತ್ತು. ಈ ಫಲಕಗಳೆಲ್ಲ ಮುರಿದುಬಿದ್ದಿದ್ದರೂ

ಸಿದ್ಧಾರ್ಥನ ಜನನದಿಂದ ಅರಮನೆಯನ್ನು ಬಿಟ್ಟುಹೋಗುತ್ತಿರುವವರೆಗಿನ ದೃಶ್ಯಾವಳಿ ಫಲಕ

ಕೆಲವಾದರೂ ಅಂಡಫಲಕದ ಕೆಳಭಾಗದ ಮೂಲಸ್ಥಾನದಲ್ಲಿಯೇ ಉಳಿದಿವೆ. ಕೆಳಭಾಗದಲ್ಲಿ ಸ್ತೂಪದುದ್ದಕ್ಕೂ ಸಾಗುವಂತೆ ಮೂಡಿಸಿದ ತ್ರಿಸೂಚಿ ಕಟಾಂಜನ ಚಿತ್ರಣವಿದೆ. ಫಲಕದ ಮೇಲ್ಭಾಗವನ್ನು ಹೂವನ್ನು ಹಿಡಿದು ಸ್ತೂಪವನ್ನು ಸುತ್ತುಹಾಕುತ್ತಿರುವಂತೆ ಕೆತ್ತಲಾದ, ನಾನಾಭಂಗಿಯಲ್ಲಿ ಹಾರುತ್ತಿರುವ ಪಕ್ಷಿಗಳ ಸಾಲಿರುವ ಪಟ್ಟಿಕೆ ಎರಡು ಭಾಗವಾಗಿ ವಿಭಜಿಸುತ್ತದೆ. ಈ ಎರಡೂ ಭಾಗಗಳಲ್ಲಿ ಸ್ತೂಪದ ಪರಿಧಿಯುದ್ದಕ್ಕೂ ಇರುವ ಫಲಕಗಳ ಮೇಲೆ ಜನಪ್ರಿಯ ಜಾತಕಕಥೆಗಳು, ಬುದ್ಧನ ಜೀವನದ ಮುಖ್ಯ ಘಟನೆಗಳು, ಬೌದ್ಧಧರ್ಮ ಪ್ರಸರಣದ ಘಟನೆಗಳು, ಮೌರ್ಯ, ಸಾತವಾಹನ ಅರಸರ ವ್ಯಕ್ತಿಚಿತ್ರಣವಿದ್ದು, ಬೌದ್ಧಧರ್ಮದ ಇತಿಹಾಸ ಹಾಗೂ ಬುದ್ಧನ ಜೀವನದ ದಿವ್ಯಚರಿತೆಯ ತಿರುಳೆ ಅನುಕ್ರಮವಾಗಿ ಪುಟಪುಟವಾಗಿ ವೀಕ್ಷಕರೆದುರು ಶಿಲ್ಪರೂಪದಲ್ಲಿ ತೆರೆದುಕೊಳ್ಳುತ್ತದೆ. ಬುದ್ಧನ ಜೀವನದ ಘಟನೆಗಳು ದೇವತೆಗಳು ತುಷಿತ ಸ್ವರ್ಗದಲ್ಲಿ ಬೋಧಿಸತ್ವನನ್ನು ಪ್ರಾರ್ಥಿಸಿಕೊಳ್ಳುವುದರಿಂದ ಆರಂಭವಾಗಿ, ಮಾಯಾದೇವಿಯ ಸ್ವಪ್ನದರ್ಶನ, ಅಸಿತ ಸ್ವಪ್ನಫಲವನ್ನು ವಿವರಿಸುವುದು, ಭಗವಾನನ ಜನನ, ಮಾರದರ್ಪಭಂಗ, ಬುದ್ಧನ ಶಾರೀರಿಕ ಅವಶೇಷಗಳ ವಿಭಜನೆ, ಅದಕ್ಕಾಗಿ ನಡೆದ ಹೋರಾಟ, ರಾಮಗ್ರಾಮದಲ್ಲಿಯ ಅಷ್ಟಭಾಗಸ್ತೂಪ ಮುಂತಾದ ಚಿತ್ರಣಗಳನ್ನೊಳಗೊಂಡಿದೆ. ಪ್ರಸಿದ್ಧ ಜಾತಕ ಕಥೆಗಳಲ್ಲಿ ಛದ್ದಂತ, ವಿದುರಪಾಂಡಿತ್ಯ ಸುತಸೋಮ, ಸೋನಕೀಯ ವೇಸ್ಸಂತರ ಮೊದಲಾದವು ವಿಸ್ತಾರವಾಗಿ 4 ರಿಂದ 5 ಪಟ್ಟಿಕೆ (2–3 ಫಲಕ) ಗಳಲ್ಲಿ ನಿರೂಪಿತವಾಗಿದ್ದರೆ ನಲಪಾನ, ಮಹಾಕಪಿ, ಚಾಂಪೇಯ, ಕಪಿ ಮೊದಲಾದವು ಒಂದೇ ದೃಶ್ಯ ಪಟ್ಟಿಕೆಯಲ್ಲಿ ನಿರೂಪಿತವಾಗಿವೆ. ಆಯಾ ಜಾತಕದ ಕೇಂದ್ರ ಘಟನೆಯನ್ನು ಸೂಕ್ತ ವಿವರಣೆಗಳೊಡನೆ ಮನೋಜ್ಞವಾಗಿ ಸ್ತಬ್ಧ ಚಿತ್ರರೂಪದಲ್ಲಿ ಶಿಲ್ಪಿ ಕುಶಲತೆಯಿಂದ ಸೆರೆಹಿಡಿದಿದ್ದಾನೆ. ಕೆಲವು ಜಾತಕ ಸನ್ನಿವೇಶಗಳ ನಿರೂಪಣೆಗಳಂತೂ ಇಡೀ ಭಾರತದ ಬೌದ್ಧ ಶಿಲ್ಪ ಪರಂಪರೆಯಲ್ಲಿ ಉತ್ಕೃಷ್ಟವಾಗಿವೆ.

ಚಕ್ರವರ್ತಿ ಅಶೋಕನ ಶಾಸನಸಹಿತವಾದ ಚಿತ್ರಣಗಳಿರುವುದು ಸಾಂಚಿ ತೋರಣ ಶಿಲ್ಪದಲ್ಲಿ. ಅಶೋಕ ತನ್ನ ರಾಣಿಯರೊಡನೆ ಬೋಧಿವೃಕ್ಷವನ್ನು ಸಂದರ್ಶಿಸುವ ಚಿತ್ರಣವಿದ್ದು, ಸನ್ನತಿಯ ಈ ಸ್ತೂಪದಲ್ಲಿ ಅದೇ ದೃಶ್ಯದ ವಿಸ್ತೃತ ಅವತರಣಿಕೆಯಿದೆ. ಅಶೋಕನ ಶಾಸನವಿರುವ ಎರಡನೆಯ ಚಿತ್ರಣ ಬಹುಶಃ ಮಹೇಂದ್ರ, ಸಂಘಮಿತ್ರೆಯರಿಗೆ ಅಶೋಕ ಆದೇಶ ನೀಡಿ ಬೀಳ್ಕೊಡುವುದಕ್ಕೆ ಸಂಬಂಧಿಸಿದ್ದು ಅಶೋಕನ ಚಿತ್ರಣದ ಜೊತೆಗೆ ಕೆಲವು ಪ್ರಮುಖ ಸಾತವಾಹನ ರಾಜರಾದ ಸಿಮುಕ, ಪುಳುಮಾವಿ, ಸಾತಕರ್ಣಿ ಮೊದಲಾದವರ ಚಿತ್ರಣಗಳೂ

ಇವೆ. ಇವಲ್ಲದೆ ಚಿತ್ರಿತ ಅಂಡಫಲಕಗಳ ಮೇಲೆ ಆಯಾ ಫಲಕದಲ್ಲಿ ನಿರೂಪಿತವಾದ ವಿಷಯ ವ್ಯಕ್ತಿಯನ್ನು ಗುರುತಿಸಲು ಅನುವಾಗುವಂತಹ ಕಿರುಶಾಸನಗಳನ್ನು ಬರೆಯಲಾಗಿದೆ. ಕರ್ನಾಟಕದ ಈ ಭಾಗದಲ್ಲಿ ಮೊದಲ ಬಾರಿಗೆ ಬೌದ್ಧಧರ್ಮದ ಬಗೆಗೆ ಪೂರ್ಣ ಚಿತ್ರಣ ನಿರೂಪಣೆಯಿರುವುದರಿಂದ ಸಂದೇಹಕ್ಕೆ ಆಸ್ಪದವಿಲ್ಲದಂತೆ ಇವುಗಳನ್ನು ಅರ್ಥವಿಸಲು ವಿವರಣಾತ್ಮಕ ಕಿರುಶಾಸನಗಳು ಅವಶ್ಯಕವೆನಿಸಿರಬೇಕು. ಲಿಪಿ ಬೆಳವಣಿಗೆಯ ಆಧಾರದ ಮೇಲೆ ಈ ಶಾಸನ ಹಾಗೂ ಶಿಲ್ಪಗಳನ್ನು ಪ್ರ.ಶ.ಪೂ.1ನೆಯ ಶತವಮಾನದಿಂದ ಪ್ರ.ಶ.ಪೂ.2ನೆಯ ಶತಮಾನದವರೆಗಿನವು ಎನ್ನಬಹುದು.



ಅಶೋಕನ ಹೆಸರಿರುವ ಶಿಲ್ಪ

ಕನಗನಹಳ್ಳಿಯ ಸ್ತೂಪ ದೇಬಲ ಮಿತ್ರ ಅವರು ಅಭಿಪ್ರಾಯ ಪಟ್ಟಿರುವಂತೆ ಪ್ರ.ಶ.ಪೂ 1ನೆಯ ಶತಮಾನದಿಂದ ತೊಡಗಿ ಪ್ರ.ಶ.ಪೂ.2–3ನೆಯ ಶತಮಾನದವರೆಗೂ ಪ್ರವರ್ಧಮಾನವಾಗಿತ್ತೆಂದು ಹೇಳಬಹುದು. ಸನ್ನತಿಯ ಪರಿಸರದಲ್ಲಿ ಅಶೋಕನ ವಿಶಿಷ್ಟ ಶಾಸನ ಫಲಕ, ಹೊಳಪುಳ್ಳ ಔತ್ತರೇಯ ಕಪ್ಪು ಬಣ್ಣದ ಮಣ್ಪಾತ್ರೆಗಳು, ಮುದ್ರಾಂಕಿತ ನಾಣ್ಯಗಳು, ಮಾತೃದೇವತಾ ಫಲಕ, ಮೌರ್ಯ ಕಾಲದ ವಿಶಿಷ್ಟ ಶಿಲಾಖಂಡಗಳು ಹಾಗೂ ಇನ್ನಿತರ ಮೌರ್ಯ ಸಂಸ್ಕೃತಿಯ ನಿರ್ಣಾಯಕ ಆಧಾರ ಸಾಮಗ್ರಿಗಳು ದೊರಕಿರುವ ಹಿನ್ನೆಲೆಯಲ್ಲಿ ಈ ಮಹಾಸ್ತೂಪದ, ಅಸ್ಪಷ್ಟವಾಗಿರುವ ಮೂಲರೂಪವೂ ಅಶೋಕನ ಕಾಲದ್ದೇ ಆಗಿರುವ ಸಾಧ್ಯತೆಯನ್ನು ನಿರಾಕರಿಸಲಾಗದು. ಸ್ತೂಪದ ಬೆಳವಣಿಗೆ ಶೈಲೀಯವಾಗಿ ಮೂರು–ನಾಲ್ಕು ಹಂತಗಳಲ್ಲಿ ಆದಂತೆ ಕಂಡು ಬರುತ್ತದೆ. ಒಂದು ಹಂತದವರೆಗೆ ಅಂಡಫಲಕ, ವೇದಿಕಾಫಲಕ, ವೇದಿಕೆಯ ಮೇಲಿರುವ ಬುದ್ಧಪಾದ ಹಾಗೂ ಕಟಾಂಜನದ ಅಲಂಕೃತ ಶಿಲಾಪಟ್ಟಿಕೆಗಳು, ಹೊರಕಟಾಂ ಜನದ ಕೆಲವಾದರೂ ಭಾಗಹೀನಯಾನ ಪಂಥದ ಪ್ರಾಬಲ್ಯ ವಿದ್ದಾಗ ಆಗಿರಬೇಕು. ಪಶ್ಚಿಮ ಹಾಗೂ ದಕ್ಷಿಣದ ಆಯಕ ವೇದಿಕೆಯ ಬುದ್ಧ ಶಿಲ್ಪಗಳು ಮತ್ತು ಮಾನುಷೀ ಬುದ್ಧರ ಶಿಲ್ಪಗಳ ಸ್ಥಾಪನೆ ಮಹಾಯಾನ ಪಂಥದ ಆಗಮನ ಮತ್ತು ಉತ್ಕರ್ಷ ಕಾಲವನ್ನು ಪ್ರತಿಬಿಂಬಿಸುತ್ತದೆ ಎನ್ನಬಹುದು.



ಮಾತೃದೇವತೆ ಫಲಕ

ಶಾಸನವಿರುವ ಕೆಲವು ಫಲಕಗಳು ಛಾಯಾಪ್ರತಿಮೆಗಳಾಗಿದ್ದು ಒಂದರ ಮೇಲೆ ಒಂದರಂತೆ ಮೂರು ಶಿಲ್ಪಫಲಕಗಳನ್ನು ಹೊಂದಿವೆ. ಕೆಳಗಣ ಫಲಕದಲ್ಲಿರುವ ನೊಗ ಕಳಚಿದ ಬಂಡಿಯ ಪಕ್ಕದಲ್ಲಿ ಜೋಡಿ ಎತ್ತುಗಳಿರುವ ಚಿತ್ರಣ ಪ್ರಯಾಣದ ಅಂತ್ಯ ಅಥವಾ ಮರಣವನ್ನು ಧ್ವನಿಸುತ್ತದೆ. ಕೆಲವದರಲ್ಲಿ ಸೇವಕ ಜೀನುಹಿಡಿದಿರುವ, ಸವಾರನಿಲ್ಲದ ಕುದುರೆಯ ಚಿತ್ರಣವಿದ್ದು ಇದು ಸವಾರನ ಮರಣವನ್ನು ಸೂಚಿಸುತ್ತದೆ. ಎರಡನೆಯ (ಮಧ್ಯದ) ಫಲಕದಲ್ಲಿ ಆಸನವೊಂದರಲ್ಲಿ ಅಥವಾ ಪ್ರತ್ಯೇಕ ಆಸನಗಳ ಮೇಲೆ ಕೈಯಲ್ಲಿ ಮಧುಪಾತ್ರೆ ಹಿಡಿದು ಸಂಭಾಷಿಸುತ್ತಿರುವಂತೆ ಕುಳಿತ ದಂಪತಿಗಳ ಚಿತ್ರಣವಿದ್ದು ಇವರ ಪಕ್ಕದಲ್ಲಿ ಚಾಮರ, ಸಂಗೀತವಾದ್ಯ, ಹಣ್ಣಿನ ಬುಟ್ಟಿ ಮುಂತಾದವುಗಳನ್ನು ಹಿಡಿದ ಸೇವಕ ಸೇವಕಿಯರ ಚಿತ್ರಣವಿದ್ದು ಇದು ಬಹುಶಃ ಮೃತರ ಸ್ವರ್ಗಾರೋಹಣವನ್ನು ಸಂಕೇತಿಸುತ್ತದೆ. ಮೇಲಣ ಫಲಕದಲ್ಲಿ ಚೈತ್ಯ ಕಿಟಕಿಗಳಿಂದ ಕೂಡಿದ ಒಂದು ಅಥವಾ ಹೆಚ್ಚಿನ ಮಾಳಿಗೆಗಳ ಪ್ರಾಸಾದದ ಚಿತ್ರಣವಿರುತ್ತದೆ. ಕೆಲವೊಮ್ಮೆ ಚೈತ್ಯ ಮಾದರಿಯ ಕಿಟಕಿಗಳಿಂದ ಜನರು ಇಣಿಕಿ ನೋಡುತ್ತಿರುವಂತೆ ಚಿತ್ರಿಸಿರುತ್ತದೆ. ಇಂತಹ ಶಿಲ್ಪಗಳು ಹೆಚ್ಚಾಗಿ ಆನೆಗುತ್ತಿಯ ಬಳಿಯ ಸ್ತೂಪದಲ್ಲಿ, ಬೆನಗುತ್ತಿಯ ವಿಹಾರದ ಬಳಿ, ಕಾತಾಳೆ ಹೊಲಗಳಲ್ಲಿ ಹೆಚ್ಚಾಗಿ ದೊರಕಿದ್ದು ಕನಗನಹಳ್ಳಿಯ ಸ್ತೂಪದ ಬಳಿ ಒಂದಾದರೂ ದೊರಕಿಲ್ಲ. ಇಂತಹ ಫಲಕಗಳ ಆಕಾರ, ಗಾತ್ರಗಳಿಂದ ಇವುಗಳನ್ನು ಧಾರ್ಮಿಕ ಕಟ್ಟಡಗಳ ಪರಿಸರದಲ್ಲಿ ಪ್ರತ್ಯೇಕವಾಗಿ ನಿಲ್ಲಿಸಿದ್ದಂತೆ ಕಂಡುಬರುತ್ತವೆ. ಒಟ್ಟಿನಲ್ಲಿ ಶೈಲೀಯವಾಗಿ ಇವು ಕೃಷ್ಣಾಕಣಿವೆಯ ಬೌದ್ಧ ನಿವೇಶನಗಳಲ್ಲಿ ದೊರಕಿರುವ ಛಾಯಾಪ್ರತಿಮೆಗಳನ್ನು ಬಹುತೇಕ ಹೋಲುತ್ತವೆ.

ವಜ್ರಾಸನ

ಮಣ್ಣೂರ್ತಿಗಳು: ಸಮಕಾಲೀನ ವೈವಿಧ್ಯಮಯ ಧಾರ್ಮಿಕ ಹಾಗೂ ಸಾಮಾಜಿಕ ವಸ್ತುಗಳನ್ನು ಪ್ರತಿಬಿಂಬಿಸುವ ಸುಡಾವೆ ಮಣ್ಣಿನ ಹಲವಾರು ಗೊಂಬೆಗಳು ದೊರೆತಿವೆ. ಗೊಂಬೆಗಳ ಸಂಖ್ಯೆ ಹಾಗೂ ಗುಣಮಟ್ಟದ ದೃಷ್ಟಿಯಿಂದ ಸಾತವಾಹನ ಕಾಲದ ಇತರ ಮುಖ್ಯ ನಿವೇಶನಗಳಲ್ಲಿದ್ದಂತೆ ಸನ್ನತಿಯ ಪರಿಸರದಲ್ಲಿಯೂ ಉತ್ತಮ ದರ್ಜೆಯ ಸುಡಾವೆ ಗೊಂಬೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಯಾರಿಸಲಾಗುತ್ತಿತ್ತೆಂದು ಕಾಣುತ್ತದೆ. ಜೊತೆಗೆ ಅಲ್ಪ ಪ್ರಮಾಣದಲ್ಲಿಯಾದರೂ ಬಿಳಿ ಜೇಡಿಮಣ್ಣಿನ ಗೊಂಬೆಗಳು ದೊರೆತಿವೆ.

ಯಕ್ಷ ಯಕ್ಷಿಯರು, ಹಾರಿತಿ, ಲಜ್ಜಾಗೌರಿ, ಮಹಿಷಮರ್ದಿನಿ (?), ಬೋಧಿಸತ್ವ ಮುಂತಾದ ದೇವದೇವಿಯರ ಗೊಂಬೆಗಳು ಹಾಗೂ ಹಲವಾರು ಸ್ತ್ರೀ–ಪುರುಷರ ಅಲಂಕೃತ ತಲೆಯ ಶಿರೋಭಾಗಗಳು ದೊರಕಿವೆ. ಆನೆ, ಕುದುರೆ, ಗೂಳಿ, ಆಡು ಮತ್ತಿತರ ಪ್ರಾಣಿ–ಪಕ್ಷಿಗಳ ಗೊಂಬೆಗಳೂ ಕೆಲವು ನಿತ್ಯ ಬಳಕೆಯ ಆಟಿಕೆಗಳೂ ದೊರಕಿವೆ.

ನಾಣ್ಯಗಳು: ಸನ್ನತಿಯ ಪರಿಸರದಲ್ಲಿ ಇದುವರೆಗೆ ನಡೆದಿರುವ ಶೋಧನೆಗಳಲ್ಲಿ ನೂರಾರು ನಾಣ್ಯಗಳು ಬೆಳಕಿಗೆ ಬಂದಿವೆ. ಇದರಿಂದ ಅಶೋಕನಿಗೂ ಹಿಂದಿನ ಮೌರ್ಯ ಕಾಲದ ಮಹಾಜನಪದ ನಿವೇಶನಗಳಲ್ಲಿ ಸಾಧಾರಣವಾಗಿ ಬೆಳ್ಳಿ ಹಾಗೂ ತಾಮ್ರದ ಮುದ್ರಾಂಕಿತ ನಾಣ್ಯಗಳು, ಕ್ಯಾಡ್ಯುಸಿಯಸ್ ಚಿಹ್ನೆಯುಳ್ಳ ಚತುಷ್ಪದ ತಾಮ್ರದ ನಾಣ್ಯಗಳಿಂದ ಹಿಡಿದು ಸಾತವಾಹನ ಕಾಲದಲ್ಲಿ ಪ್ರಚಲಿತವಿದ್ದ ಸೀಸ ಮತ್ತು ತವರ ಮಿಶ್ರಿತ ನಾಣ್ಯಗಳವರೆಗೆ ವೈವಿಧ್ಯಪೂರ್ಣ ಸಂಗ್ರಹ ಇಲ್ಲಿ ದೊರೆತಂತಾಗಿದೆ. ಇವು ಚೌಕ, ಆಯತ, ವೃತ್ತ ಹಾಗೂ ದೀರ್ಘವೃತ್ತಾಕಾರದಲ್ಲಿವೆ.

ನಾಣ್ಯಗಳ ಮೇಲಿರುವ ಬರೆಹದ ಆಧಾರದ ಮೇಲೆ ಮಹಾರಥಿ, ಸಾತವಾಹಗ, ಸಿರಿಸಾತವಾಹನ, ಪುಳುಮಾವಿ, ವಾಸಿಠಿಪುತ್ರ ಸಿರಿಸಾತಕರ್ಣಿ, ಸಿವಸಿರಿ ಪುಳುಮಾವಿ ಹಾಗೂ ಯಜ್ಞಶ್ರೀ ಸಾತಕರ್ಣಿಯ ನಾಣ್ಯಗಳು ಇದುವರೆಗೆ ಸನ್ನತಿಯಲ್ಲಿ ದೊರೆತಂತಾಗಿದೆ. ಮೌರ್ಯನಾಣ್ಯವನ್ನೇ ಹೋಲುವ ಸಾತವಾಹನ ರಾಜವಂಶದ ಮೊದಲ ಅರಸ ಸಿರಿಸಾತವಾಹನನ ನಾಣ್ಯ ಇಲ್ಲಿ ದೊರೆತಿದೆ.



ಬುದ್ಧಪಾದ

ಬುದ್ಧಪಾದ ಫಲಕಗಳು: ಮಹಾಸ್ತೂಪದ ಉತ್ಖನನದಲ್ಲಿ 8 ಪೂರ್ಣರೂಪದ ಬುದ್ಧಪಾದ ಫಲಕಗಳು ಮತ್ತು ಸು.12 ರಷ್ಟು ಫಲಕಗಳ ಭಗ್ನಭಾಗಗಳು ಸಿಕ್ಕಿವೆ. ಈ ಮೊದಲು ಸನ್ನತಿಯ ಪರಿಸರದ ಉಳಿದ ಯಾವ ನಿವೇಶನದ ಸ್ಥಳಪರಿಶೋಧನೆ ಅಥವಾ ಉತ್ಖನನದಲ್ಲಿ ಬುದ್ಧಪಾದ ಫಲಕಗಳು ದೊರಕದಿರುವ ಕಾರಣ, ಇಂತಹ ಫಲಕಗಳು ಮಹಾಸ್ತೂಪ ನಿವೇಶನದ ವಿಶೇಷ ಲಕ್ಷಣಗಳಲ್ಲಿ ಒಂದೆಂದು ಭಾವಿಸಬಹುದು. ಬುದ್ಧಪಾದ ಅಂಗಾಲಿನ ಮಧ್ಯದಲ್ಲಿ ಮಹಾಪುರುಷಲಕ್ಷಣವಾದ ಧರ್ಮಚಕ್ರ, ಹಿಮ್ಮಡಿಯಲ್ಲಿ ಅಲಂಕೃತ ರತ್ನ, ಅಕ್ಕಪಕ್ಕಗಳಲ್ಲಿ ಹಾಗೂ ಕೆಲವೊಮ್ಮೆ ಚಾಮರ ಮತ್ತು ಬೆರಳುಗಳಲ್ಲಿ ಅಷ್ಟ ಮಂಗಲ ಚಿಹ್ನೆಗಳಾದ ನಂದಿಪಾದ, ತ್ರಿರತ್ನ, ಶ್ರೀವತ್ಸ, ಸ್ವಸ್ತಿಕ ಭದ್ರಾಸನ, ಶಕ್ತಿಧ್ವಜ, ಶೀಲಯುಗದ ಅಂಕುಶ, ಪೀಠಸಹಿತವಾದ ಕನ್ನಡಿ ಮುಂತಾದ ಚಿಹ್ನೆಗಳಲ್ಲಿ ಕೆಲವು ಕಂಡುಬರುತ್ತವೆ. ಅಲಂಕೃತ ಫಲಕಗಳಲ್ಲಿ ನಾಲ್ಕು ಕಮಲನಾಳದ ಬೇರುಗಳನ್ನು ಫಲಕದ ಮೇಲೆ, ಪಾದಗಳ ಸುತ್ತ ಕಮಲದೆಲೆ, ದಳಗಳನ್ನು ಬಿಡಿಸಿ, ಪಾದ ಕಮಲಗಳೆಂದು ಸಾಂಕೇತಿಕವಾಗಿ ಸೂಚಿಸಲಾಗಿದೆ.

ರಣಮಂಡಲ–ಸರಕುಕೋಠಿ: ಸನ್ನತಿಯ ಕೋಟೆಯೊಳಗಣ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಪುರಾತತ್ತ್ವ ಇಲಾಖೆ 1985–86ರಲ್ಲಿ ಮೊದಲ ಬಾರಿಗೆ ಉತ್ಖನನ ಕೈಗೊಂಡಿತು. ರಣಮಂಡಲದ ನೈರುತ್ಯ ಭಾಗದಲ್ಲಿ ಭೀಮಾನದಿ ತಿರುವು ಇರುವ ದಿಬ್ಬದಲ್ಲಿ ನಡೆದ ಉತ್ಖನನದಲ್ಲಿ ಸಾತವಾಹನ ಕಾಲದಲ್ಲಿ ಸಾಧಾರಣವಾಗಿ ಬಳಕೆಯಲ್ಲಿದ್ದ ದೊಡ್ಡಗಾತ್ರದ ಇಟ್ಟಿಗೆ 55x27x8 ಸೆಂಮೀ ಮತ್ತು 30x19x6 ಸೆಂಮೀ ಕಟ್ಟಡದ ಅವಶೇಷಗಳು ಬೆಳಕಿಗೆ ಬಂದಿವೆ. ಹೆಚ್ಚು ಕಡಿಮೆ ಆಯತಾಕಾರ 9.9 x 9.6 ದಲ್ಲಿರುವ ಈ ಕಟ್ಟಡದ ನಡುವೆ ಕಿರಿದಾದ ಇಟ್ಟಿಗೆ ಹಾಸಿದ ಓಣಿಯಿದ್ದು ಅದರ ಎರಡೂ ಕಡೆಗೆ ಪರಸ್ಪರ ಪ್ರವೇಶವಿರುವ ಸಣ್ಣಸಣ್ಣ ಕೊಠಡಿಗಳಿವೆ. ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಿದ ಈ ದಪ್ಪಗೋಡೆಯ ಸುಣ್ಣ ಬಳಿದ ಕಟ್ಟಡ ಮಹಡಿ ಹಾಗೂ ಇಟ್ಟಿಗೆಯ ನೆಲಹಾಸಿನಿಂದ ಕೂಡಿದೆ. ಕಟ್ಟಡವಿರುವ

ಸಾತವಾಹನ ಕಾಲದ ಸರಕುಕೋಠಿಯ ತಳಭಾಗ

ನೆಲೆಯ ಸುತ್ತಲೂ ಇಟ್ಟಿಗೆಯ ಪ್ರಾಕಾರದಂತಹ ರಕ್ಷಣಾಗೋಡೆ ಇದೆ. ನದಿಗೆ ಸಮೀಪವಿರುವುದರಿಂದ ಇದನ್ನು ಸ್ನಾನಘಟ್ಟ ಇಲ್ಲವೇ ಬೌದ್ಧ ಭಿಕ್ಷುಗಳ ತಂಗುದಾಣ (ವಿಹಾರ) ಎಂದು ವಿದ್ವಾಂಸರು ಊಹಿಸಿದ್ದಾರೆ. ಆದರೆ ನದಿಗೆ ಸಮೀಪವಾಗಿ, ಭದ್ರಗೋಡೆಗಳಿಂದ ಕೂಡಿದ್ದು ವಿಶೇಷ ರಕ್ಷಣಾ ವ್ಯವಸ್ಥೆ ಇರುವಂತೆ ನಿರ್ಮಿಸಿರುವುದರಿಂದ ಇದು ವ್ಯಾಪಾರಿಗಳು ಸರಕು ಸಂಗ್ರಹಿಸಲು ಕಟ್ಟಿದ್ದ ಕೋಠಿ ಎನ್ನುವುದೇ ಸೂಕ್ತವೆನಿಸುತ್ತದೆ.

ರಣಮಂಡಲ ಉತ್ಖನನ: ಸು.85 ಹೆ. ವಿಸ್ತಾರವಾದ ಸ್ಥಳವನ್ನು ಆವರಿಸಿದ ರಣಮಂಡಲ ಕೋಟೆಯ ಒಳಗಣ ಪ್ರದೇಶದಲ್ಲಿ ಕಳೆದ 5 ದಶಕಗಳಲ್ಲಿ ಪರಿಶೋಧನೆಯಿಂದ ಆದಿ ಶಿಲಾಯುಗದ ಕಲ್ಲಿನ ಉಪಕರಣಗಳಿಂದ ಸಾತವಾಹನ ಕಾಲದ ನಾಣ್ಯ ಹಾಗೂ ಇನ್ನಿತರ ವಸ್ತುಗಳು, ಇಟ್ಟಿಗೆ ಕಟ್ಟಡದ ಅವಶೇಷಗಳು, ನಾನಾ ವಿಧದ ಮಣ್ಪಾತ್ರೆಗಳು ಮತ್ತು ಮಧ್ಯಯುಗದ ಬಹಮನಿ ನಾಣ್ಯಗಳು ಅಲ್ಲಲ್ಲಿ ಚದುರಿದಂತೆ ದೊರೆಯುತ್ತಿವೆ. ರಣಮಂಡಲದಲ್ಲಿ ಈ ಮೊದಲು ರಾಜ್ಯ ಸರ್ಕಾರದ ಪುರಾತತ್ತ್ವ ಇಲಾಖೆ ನಡೆಸಿದ ಉತ್ಖನನಗಳು ವಿಸ್ತಾರವಾಗಿದ್ದು ಇಟ್ಟಿಗೆ ಕಟ್ಟಡ ಮತ್ತು ಪ್ರ.ಶ.1–3 ನೆಯ ಶತಮಾನಗಳದ್ದೆಂದು ಭಾವಿಸಲಾದ ಪ್ರಾಚ್ಯವಸ್ತುಗಳು ಮಾತ್ರ ದೊರೆತಿದ್ದವು. ಈ ಪರಿಸರದ ಎಲ್ಲ ಬಹುಮುಖಿ ಸಂಸ್ಕೃತಿಯ ಆಯಾಮಗಳನ್ನು, ಚಟುವಟಿಕೆಗಳನ್ನು ಸರಿಯಾದ ಕಾಲಮಾನದ ಚೌಕಟ್ಟಿನಲ್ಲಿ ಅರ್ಥವಿಸಲು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1994–95ರಲ್ಲಿ ಉತ್ಖನನ ನಡೆಸಿತು. ನದಿಯ ಎಡದಂಡೆಯಿಂದ ಸು.250 ಮೀ ನೇರಪೂರ್ವಕ್ಕೆ ರಾಜ್ಯ ಪುರಾತತ್ತ್ವ ಇಲಾಖೆಯ ನಿವೇಶನದಿಂದ ಸು.700 ಮೀ ಈಶಾನ್ಯಕ್ಕೆ ಸು.6.50 ಮೀ ಆಳದವರೆಗೆ ಉತ್ಖನನ ನಡೆಯಿತು. ಇದರ ಪರಿಣಾಮವಾಗಿ 11 ಸ್ತರಗಳಲ್ಲಿ ಹರಡಿದ್ದ ನಾಲ್ಕು ಅನುಕ್ರಮ ಹಂತಗಳನ್ನು ಗುರುತಿಸಲಾಯಿತು.

ಈ ಸಾಂಸ್ಕೃತಿಕ ಹಂತಗಳಲ್ಲಿ ಕಂಡುಬಂದಂತೆ ಚರ್ಟ್ ಮತ್ತು ಬೆಣಚುಶಿಲೆಯ ಅರ್ಧಚಂದ್ರ, ಕಿರುನೀಳಗತ್ತಿ, ಮೊನೆ, ಕೊರೆಗ, ಕಲ್ಲುಳಿ (ಬ್ಯೂರಿನ್) ಮುಂತಾದ ಶಿಲೋಪಕರಣಗಳನ್ನು ಉಪಯೋಗಿಸುತ್ತಿದ್ದ ಸೂಕ್ಷ್ಮಶಿಲಾಯುಗದ ಜನರು ಸನ್ನತಿಯಲ್ಲಿ ಮೊದಲು ನೆಲೆಸಿದರೆಂದು ತಿಳಿಯುತ್ತದೆ. ಕೆಲವು ಮೂಲಶಿಲೆಯಂತಹ ಉಂಡೆಗಲ್ಲುಗಳು, ಹೆಚ್ಚಿನ ಪ್ರಮಾಣದಲ್ಲಿ ತ್ಯಾಜ್ಯಚಕ್ಕೆಗಳು ದೊರಕಿದ್ದು ಇಲ್ಲಿ ಶಿಲೋಪಕರಣಗಳ ಉತ್ಪಾದನೆಯನ್ನು ಸೂಚಿಸುತ್ತದೆ. ಸ್ವಲ್ಪ ಕಾಲದ ಅನಂತರ ಕಬ್ಬಿಣದ ಮೊಳೆಗಳು, ಮೀನಿನ ಗಾಳ, ಕಬ್ಬಿಣದ ಕಿಟ್ಟದ ಜೊತೆಗೆ ವಿಶಿಷ್ಟ ಕಪ್ಪು–ಕೆಂಪು ದ್ವಿವರ್ಣ ಹಾಗೂ ಹೊಳಪುಳ್ಳ ಕಪ್ಪುಬಣ್ಣದ ಮಣ್ಪಾತ್ರೆಗಳನ್ನು ಬಳಸುತ್ತಿದ್ದ ಬೃಹತ್ ಶಿಲಾಯುಗದ ಜನರು ಇಲ್ಲಿ ವಾಸಿಸತೊಡಗಿದರು. ಈ ಕಾಲದ ಎರಡನೆಯ ಹಂತದಲ್ಲಿಯೇ, ಮೇಲಿನ ಪದರಗಳಲ್ಲಿ ಬೃಹತ್ ಶಿಲಾಯುಗದ ವಿಶಿಷ್ಟ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ಕಡಿಮೆಯಾಗಿ ಆರಂಭಿಕ ಮೌರ್ಯ ಕಾಲದ ಕೆಂಪುಬಣ್ಣದ ಮತ್ತು ಹೊಳಪುಳ್ಳ ಕಪ್ಪುಬಣ್ಣದ ಮಣ್ಪಾತ್ರೆಗಳು ಹೆಚ್ಚಾಗಿವೆ.

ಮೂರನೆಯ ಹಂತದಲ್ಲಿ ಎರಡು ಉಪಹಂತಗಳನ್ನು ಗುರುತಿಸಲಾಗಿದ್ದು, ಮೊದಲನೆಯ ಹಂತದಲ್ಲಿ ಮೌರ್ಯಕಾಲೀನ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿರುವುದು ಕಪ್ಪು–ಕೆಂಪು ದ್ವಿವರ್ಣ ಹೊಳಪುಳ್ಳ ಕಪ್ಪು ಮಣ್ಪಾತ್ರೆಗಳ ಹೆಚ್ಚಳ ಮತ್ತು ಸ್ಥಳೀಯ ಕೆಂಪುವರ್ಣದ ಮಡಕೆಗಳ ಸಂಖ್ಯೆ ಕಡಿಮೆಯಾಗುವುದರಿಂದ ಸೂಚಿತವಾಗುತ್ತದೆ. ಅಲ್ಲದೆ ಮೌರ್ಯ ಕಾಲದ ಮೆರುಗಿನ ಶಿಲೋಪಕರಣಗಳ ಭಾಗ, ಮರಳುಗಡಿಯಾರ (ಡಂಬೆಲ್) ಆಕಾರದ ಪುಡಿಮಾಡುವ ಸಾಧನ, ಮನೆಯಲ್ಲಿನ ಮಂಟಪವೊಂದರ ಪೀಠ ಭಾಗವಾಗಿದ್ದ ಮೆರುಗುಳ್ಳ ಕಪ್ಪು ಕಣಶಿಲೆಯ ಘನಾಕೃತಿ, ಶಂಖದ ಬಳೆ, ಉಂಗುರ, ಕಾರ್ನೇಲಿಯನ್, ಅಗೇಟ್, ಸ್ಫಟಿಕ ಮುಂತಾದ ಅರೆಪ್ರಶಸ್ತಶಿಲೆಯ ಮಣಿಗಳು, ಸುಟ್ಟ ಮಣ್ಣಿನ ಅಡಕೆಯಾಕಾರದ ಮಣಿ: ಮೂಳೆ ಮತ್ತು ದಂತದ ಕಾಡಿಗೆ ಸೂಜಿ, ಲೇಖನಿ(?), ಬಾಣದ ಮೊನೆ, ಭರ್ಜಿಮೊನೆ ಮುಂತಾದವು ಮತ್ತು ತಾಮ್ರ ಹಾಗೂ ಸೀಸದ ನಾಣ್ಯಗಳು ಸಂಪತ್ಸಮೃದ್ಧಿಯನ್ನು ಸೂಚಿಸುತ್ತವೆ.

ಎರಡನೆಯ ಉಪಹಂತ ಮೌರ್ಯ ಸಂಸ್ಕೃತಿಯದ್ದೆನ್ನಲಾದ ಅಂಶಗಳು ಕಡಿಮೆಯಾಗುವುದು ಮತ್ತು ಸ್ಥಳೀಯ ಸಾತವಾಹನ ಸಂಸ್ಕೃತಿಯ ಪ್ರಾಬಲ್ಯವನ್ನು ನಿರ್ದೇಶಿಸುತ್ತದೆ. ಹೊಳಪಿನ ಕಪ್ಪುಬಣ್ಣದ ಮಣ್ಪಾತ್ರೆಗಳು ಕಡಿಮೆ ಸಂಖ್ಯೆಯಲ್ಲಿದ್ದು ಸ್ಥಳೀಯ ಕಪ್ಪು–ಕೆಂಪು ದ್ವಿವರ್ಣ, ಕಪ್ಪು ಲೇಪನವುಳ್ಳ, ಸಾಧಾರಣಗೆಂಪು ಹಾಗೂ ಹೊಳಪು ನೀಡಿರುವ ಕೆಂಪು ಮಣ್ಪಾತ್ರೆಗಳು ಹೆಚ್ಚಾಗಿವೆ. ಅರೆಪ್ರಶಸ್ತಶಿಲೆಯ ಹಾಗೂ ಸುಟ್ಟ ಮಣ್ಣಿನ ಅಡಕೆಯಾಕಾರದ ಮಣಿಗಳು ವಿವಿಧ ಆಕಾರ, ಗಾತ್ರಗಳಲ್ಲಿ ದೊರೆಯುತ್ತವೆ. ಶಂಖದ ಬಳೆ, ಕಿವಿ ಆಭರಣ, ಮೆರುಗುಳ್ಳ ಕಲ್ಲಿನ ಗೃಹೋಪಕರಣಗಳು ದೊರೆತಿವೆ. ಮುಖ್ಯವಾಗಿ ಸಾತವಾಹನ ಕಾಲದ ನಾಣ್ಯಗಳೊಡನೆ ಮಹಾರಥಿನೋ ಸಿರಿಸಾತವಾಹನಸ ಎಂಬ 1ನೆಯ ಶತಮಾನ ಅಥವಾ ಅದಕ್ಕೂ ಹಿಂದಿನ ಕಾಲದ ಲಿಪಿ ಲಕ್ಷಣವಿರುವ, ಬರೆಹವಿರುವ ದಪ್ಪ ಸೀಸದ ನಾಣ್ಯ ದೊರಕಿದೆ.

ಸಾತವಾಹನರ ಆರಂಭಕಾಲದಲ್ಲಿಯೇ ಸನ್ನತಿಯ ಪರಿಸರದಲ್ಲಿ ಇಟ್ಟಿಗೆಯಲ್ಲಿ ಕಟ್ಟಡ ನಿರ್ಮಾಣ ಪ್ರಾರಂಭವಾದಂತೆ ತೋರುತ್ತದೆ. ಬೇರೊಂದು ಕಟ್ಟಡದ ಭಾಗವಾಗಿದ್ದ ಇಟ್ಟಿಗೆಯ ಚೂರುಗಳು, ಸುಣ್ಣಕಲ್ಲಿನ ಚಿಕ್ಕ ತುಂಡುಗಳು, ನದೀದಡದಲ್ಲಿ ದೊರಕುವ ಕಲ್ಲುಗುಂಡುಗಳನ್ನು ಕಪ್ಪು ಮಣ್ಣಿನಲ್ಲಿ ಮಿಶ್ರ ಮಾಡಿ, ದಮ್ಮಸು ಮಾಡಿ, ಮೇಲೆ ಸುಣ್ಣ ಮತ್ತು ಮಡಕೆ ಚೂರುಗಳನ್ನು ಹಾಕಿ ಸಮತಟ್ಟಾಗಿಸಿದ ನೆಲ ಹಾಸುಳ್ಳ ವಿಶಾಲವಾದ ತಡಿಕೆ ಮನೆಗಳು, ಅವುಗಳ ಸಮೀಪದಲ್ಲಿ ಸಣ್ಣ ಸಣ್ಣ (15x12x5ಸೆಂಮೀ) ಬೆಣೆಯಾಕಾರದ ಇಟ್ಟಿಗೆಗಳಿಂದ ಕಟ್ಟಿದ ಆಳವಾದ ಬಾವಿಯೂ ಬೆಳಕಿಗೆ ಬಂದಿದೆ.

ಇದರ ಮುಂದಿನ ಹಂತ ಸಮೃದ್ಧ ಸಾತವಾಹನ ಸಂಸ್ಕೃತಿಯದು. ಕೆಂಪು, ಹೊಳಪುಳ್ಳ ಕೆಂಪು, ಮುದ್ರಾಂಕಿತ ಕೆಂಪು, ಕಪ್ಪು ಲೇಪನವುಳ್ಳ ಮಣ್ಪಾತ್ರೆಗಳ ಪ್ರಮಾಣ ಹೆಚ್ಚಾಗಿರುವ ಈ ಹಂತದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಬಿಳಿ ಜೇಡಿಮಣ್ಣಿನ ಅಲಂಕರಣವಿರುವ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳು ಹಾಗೂ ಸ್ಥಳೀಯವಾಗಿ ತಯಾರಿಸಿದ ಮತ್ತು ಆಮದಾದ ರೌಲೆಟ್ ಮಣ್ಪಾತ್ರೆಗಳು ಬಳಕೆಯಲ್ಲಿದ್ದವು. ತೆಳ್ಳಗಿನ, ವಿವಿಧಾಕಾರದ, ಅಲಂಕೃತ ಹೊಳಪುಳ್ಳ ಕೆಂಪು ಪಾತ್ರೆಗಳು ಹಾಗೂ ಇಟ್ಟಿಗೆಯ ಕಟ್ಟಡಗಳು ಕ್ರಮೇಣ ಹೆಚ್ಚಾಗಿರುವುದು ಕಂಡುಬರುತ್ತದೆ.

ಸನ್ನತಿಯ ಸಮೀಪದಲ್ಲಿಯೇ ಬೆನಗುತ್ತಿ (**ನೋಡಿ**), ಹಸರಗುಂಡಿಗಿ (**ನೋಡಿ**) ಎಂಬ ಬೌದ್ಧ ನೆಲೆಗಳಿವೆ. (ಎಂ.ವಿ.ವಿ.)

**ಸಮಾಲ್**: ಟರ್ಕಿಯ ಆಗ್ನೇಯ ಭಾಗದಲ್ಲಿ ಜಿಂಕಿರ್ಲಿಯೆಂದು ಈಗ ನಾಮಕರಣ ಗೊಂಡಿರುವ ಒಂದು ಗ್ರಾಮ. ಇಲ್ಲಿ ಶಿಕಾಗೊ ವಿಶ್ವವಿದ್ಯಾಲಯದ ಓರಿಯಂಟಲ್ ಇನ್‌ಸ್ಟಿಟ್ಯೂಟ್ ನಡೆಸಿದ ಉತ್ಖನನದಲ್ಲಿ 8ನೆಯ ಶತಮಾನದ ಕಬ್ಬಿಣಯುಗದ ಒಂದು ಅಪರೂಪದ ಶಾಸನಸಹಿತ ಚಿತ್ರ ಫಲಕ ಕಂಡುಬಂದಿತು. ಇದು ಕುಟ್ಟಮುವ ಎಂಬುವನ, ವಿಸ್ತರಿಸಿ ಕಟ್ಟಲಾದ ಮನೆಯ ಕೊಠಡಿಯೊಂದರಲ್ಲಿ ದೊರೆಯಿತು. ಇದನ್ನು ಬಹುಶಃ ಅವನ ಮರಣೋತ್ತರ ಸಂಸ್ಕಾರಕ್ಕಾಗಿ ಅವನ ಜೀವಿತ ಕಾಲದಲ್ಲಿಯೇ ಕಟ್ಟಿರಬೇಕೆಂಬ ಅಭಿಪ್ರಾಯವಿದೆ. 13 ಸಾಲುಗಳುಳ್ಳ ಶಾಸನದಲ್ಲಿ ಆಸನದ ಮೇಲೆ ಕುಳಿತ ಒಬ್ಬ ಗಡ್ಡಧಾರಿ ವ್ಯಕ್ತಿಯ ಚಿತ್ರವಿದೆ. ಇವನ ಹೆಸರು ಕುಟ್ಟುಮುವ ಎಂದಿದೆ. ಇವನ ಎಡಗೈಯಲ್ಲಿ ಶಂಕುವಿನಾಕಾರದ ಹಣ್ಣು ಮತ್ತು ಬಲಗೈಯಲ್ಲಿ ಪಾನಪಾತ್ರೆ ಇವೆ. ಹಣ್ಣು ಅಮರತ್ವ ಸೂಚಕ. ಇವನ ಮುಂದಿರುವ ಸಣ್ಣ ಮೇಜಿನ ಮೇಲೆ ಪ್ರಾಯಶಃ ಆಹಾರ ಪಾನೀಯಗಳ ಎರಡು ಪಾತ್ರೆಗಳಿವೆ. ಇವನು ತನ್ನ ಜೀವಿತಕಾಲದಲ್ಲಿಯೇ ತಾನು ಕಟ್ಟಿಸಿದ ಕಟ್ಟಡದ ಧಾರ್ಮಿಕ ವಿಧಿಯನ್ನು ನೆರವೇರಿಸಿದ ಸಂಧರ್ಭದಲ್ಲಿ ವಾಯುದೇವತೆ (ಹದದ್) ಮತ್ತು ಸೂರ್ಯದೇವತೆ (ಶಮಶ್)ಗಳಿಗೆ ಪೂಜೆ ಸಲ್ಲಿಸಿದ್ದನೆಂಬ ಉಲ್ಲೇಖ ಶಾಸನದಲ್ಲಿದೆ. ತನ್ನ ಆತ್ಮಕ್ಕೋಸ್ಕರ ಒಂದು ಹೋತವನ್ನು ಬಲಿಕೊಟ್ಟಿದ್ದ ನೆಂಬುದು ಇದರ ಮುಖ್ಯ ವಿಷಯವಾಗಿದೆ. ಇದು ಸಮಾಲ್ ಆಡುಭಾಷೆ ಮತ್ತು ವರ್ಣಮಾಲೆಯಲ್ಲಿದೆ. ಹೀಗೆ ಇದು ಸ್ಪಷ್ಟವಾಗಿ ಆ ಕಾಲದ ಜನರ ಮರಣೋತ್ತರ ವಿಷಯಗಳ ನಂಬಿಕೆಯ ಮೇಲೆ ಬೆಳಕು ಬೀರುವ ಅಪೂರ್ವ ಫಲಕವಾಗಿದೆ. ಈ ನೆಲೆಯು ಕೋಟೆಯಿಂದ ಆವೃತ್ತವಾಗಿದೆ. ಅಸ್ಸೀರಿಯ ನಾಗರಿಕತೆಯ ಗ್ರಂಥಗಳಲ್ಲಿ ಹೇಳಿರುವಂತೆ ಇದೇ ಹೆಸರಿನ ರಾಜ್ಯದ ರಾಜಧಾನಿಯಿತ್ತು. ಅಸ್ಸೀರಿಯ ರಾಜನ ಸಾಮಂತನಾದ ಘನಮುವನ ಅಧಿಕಾರಿ ಕುಟ್ಟಮುವ.

ಮೆಹರ್‌ಗಢ್ ಉತ್ಖನನದಲ್ಲಿ ನವಶಿಲಾಯುಗದ ಅತ್ಯಂತ ಪ್ರಾಚೀನ ಹಂತದ ಗೋರಿಗಳಲ್ಲಿ ಶವ ಸಂಸ್ಕಾರದ ಅಂಗವಾಗಿ ಬಲಿಕೊಟ್ಟ ನಾಲ್ಕು ಹೋತದ ಮರಿಗಳ ಅವಶೇಷಗಳಿರುವುದು ಈ ಸಂದರ್ಭದಲ್ಲಿ ಗಮನಾರ್ಹ. ಅಥರ್ವ ವೇದದಲ್ಲಿ ಮರಣಾನಂತರ ಮನುಷ್ಯನ ಆತ್ಮ ಹೋತದಲ್ಲಿ ಸೇರಿಕೊಳ್ಳುವುದರ ಬಗೆಗೆ ಪ್ರಸ್ತಾಪವಿದೆ. ಆಂಧ್ರಪ್ರದೇಶದ ಸಂಖಾವರಂನಲ್ಲಿಯ ಬೃಹತ್ ಶಿಲಾಗೋರಿಯಲ್ಲಿ ಹೋತದ ಆಕಾರದ ನಾಲ್ಕು ಕಾಲಿನ ಆಯತಾಕಾರದ ಮಣ್ಪಾತ್ರೆ ದೊರಕಿದೆ. (ಎ.ಎಸ್.;ಎನ್.ಎಲ್.)

**ಸರಾಯ್ ನಹರ್ ರಾಯ್:** ಉತ್ತರಪ್ರದೇಶ ರಾಜ್ಯದ ಪ್ರತಾಪಗಡ ಜಿಲ್ಲೆಯಲ್ಲಿರುವ ಸೂಕ್ಷ್ಮಶಿಲಾಯುಗದ ವಸತಿನೆಲೆ. ಅಲಹಾಬಾದ್ ವಿಶ್ವವಿದ್ಯಾಲಯದ ಪ್ರಾಚೀನ ಚರಿತ್ರೆ, ಸಂಸ್ಕೃತಿ ಮತ್ತು ಪುರಾತತ್ತ್ವ ವಿಭಾಗ ರಾಜ್ಯ ಸರ್ಕಾರದ ಸಹಯೋಗದಲ್ಲಿ ಜಿ.ಆರ್.ಶರ್ಮ ರವರ ನಿರ್ದೇಶನದಲ್ಲಿ ಇಲ್ಲಿ 1970–73ರ ನಡುವೆ ವಿಸ್ತೃತ ಉತ್ಖನನ ನಡೆಸಿತು. 1970ರಲ್ಲಿ ಮಾನವಶಾಸ್ತ್ರ ಸರ್ವೇಕ್ಷಣ ಇಲಾಖೆ ಈ ನೆಲೆಯಲ್ಲಿ ಒಂದು ಶವಕುಣಿಯನ್ನು ಹೊರತೆಗೆದಿತ್ತು.

ಹೂಳು ಮತ್ತು ಮಣ್ಣಿನಿಂದ ಮುಚ್ಚಿಹೋಗಿರುವ ಲಾಳಾಕೃತಿಯ ಸರೋವರವೊಂದರ ಪಶ್ಚಿಮ ದಂಡೆಯಲ್ಲಿ 1800 ಚ.ಕಿಮೀ ಜಾಗದಲ್ಲಿ ವಸತಿಮಣ್ಣು ಪಸರಿಸಿದೆ. ಉತ್ಖನನಕ್ಕೆ ಪೂರ್ವದಲ್ಲಿಯೆ ವಸತಿ ಪದರದ ಸಾಕಷ್ಟು ಭಾಗ ನಶಿಸಿದ್ದು ತಳಭಾಗದ 6 ಸೆಂಮೀನಷ್ಟು ಪದರ ಮಾತ್ರ ಉಳಿದಿತ್ತು. ಈ ತೆಳು ಪದರದಿಂದ 11 ಸಮಾಧಿಗಳು, 8 ಒಲೆಗಳು ಮತ್ತು ವಿಶಾಲ ನೆಲಗಟ್ಟೊಂದರ ಅವಶೇಷಗಳನ್ನು ಹೊರತೆಗೆಯಲಾಯಿತು. ಸೂಕ್ಷ್ಮಶಿಲೋಪಕರಣಗಳು, ಪ್ರಾಣಿಮೂಳೆಗಳು, ಸುಟ್ಟಮಣ್ಣಿನ ಉಂಡೆಗಳು ಈ ಪದರದಿಂದ ದೊರೆತ ಇತರ ಅವಶೇಷಗಳು. ಮಹದಹ ಮತ್ತು ದಮ್‌ದಮದಂತೆ ಇಲ್ಲಿಯೂ ಸಮಾಧಿಗಳು ಆಳವಿಲ್ಲದ ಉದ್ದ ಕುಣಿಗಳಲ್ಲಿವೆ. ಶವದಡಿಯಲ್ಲಿ 4–5 ಸೆಂಮೀನ ಮಣ್ಣಿನ ಪದರವನ್ನು ಹಾಸಲಾಗಿದೆ. 11 ಶವಕುಣಿಗಳಲ್ಲಿ 15 ಅಸ್ಥಿಪಂಜರಗಳು ಕಂಡುಬಂದಿವೆ. ಒಂದು ಸಮಾಧಿಯಲ್ಲಿ ಮಾತ್ರ ನಾಲ್ಕು (ಇಬ್ಬರು ಪುರುಷರು ಮತ್ತು ಇಬ್ಬರು ಮಹಿಳೆಯರು) ಅಸ್ಥಿಪಂಜರಗಳು ಒಟ್ಟಿಗಿವೆ. ಶವವನ್ನು ನೇರಭಂಗಿಯಲ್ಲಿ ಹೂಳಲಾಗಿದ್ದು ತಲೆ ಪಶ್ಚಿಮಕ್ಕಿದೆ. ಪುರುಷರ ಬಲಗೈ ಮತ್ತು ಮಹಿಳೆಯರ ಎಡಗೈಯನ್ನು ಹೊಟ್ಟೆಯ ಮೇಲೆ ಅಡ್ಡವಾಗಿ ಚಾಚಲಾಗಿದೆ. ಶವವನ್ನು ಇಟ್ಟ ನಂತರ ಕುಣಿಯನ್ನು ಮಣ್ಣು ಮತ್ತು ಒಲೆಯ ಬೂದಿಮಣ್ಣಿನಿಂದ ಮುಚ್ಚಲಾಗಿರಬೇಕು. ಏಕೆಂದರೆ ಇದರೊಳಗೆ ಸುಟ್ಟಮಣ್ಣಿನ ಉಂಡೆಗಳು ಮತ್ತು ಪ್ರಾಣಿಮೂಳೆಗಳು ಕಂಡುಬಂದವು. ಶವಸಂಸ್ಕಾರ ಸಮಯದಲ್ಲಿ ಶವದೊಡನೆ ಇಟ್ಟಿದ್ದ ಸೂಕ್ಷ್ಮಶಿಲೋಪಕರಣಗಳು ಮಾತ್ರ ಇವೆ. ಹತ್ತು ಅಸ್ಥಿಪಂಜರಗಳ ವೈಜ್ಞಾನಿಕ ಅಧ್ಯಯನ ನಡೆದಿದ್ದು ಇವುಗಳಲ್ಲಿ 7 ಪುರುಷರದ್ದು ಇನ್ನುಳಿದವು ಮಹಿಳೆಯರದ್ದೆಂದು ಗುರುತಿಸಲಾಗಿದೆ. ಇವು 16ರಿಂದ 35 ವರ್ಷದವರ ಅಸ್ಥಿಪಂಜರಗಳಾಗಿವೆ. ಈ ಜನರು ವಿಶಾಲ ಮತ್ತು ದೃಢ ಮೈಕಟ್ಟಿನವರಾಗಿದ್ದರು. ಆದರೆ ಹೆಚ್ಚಿನವರಲ್ಲಿ ಮೂಳೆಗಳು ಸವೆದಿದ್ದು 30ರ ವಯಸ್ಸಿನಲ್ಲಿಯೇ ಸಂಧಿವಾತದಿಂದಾಗುವ ಮೂಳೆ ಮಾರ್ಪಾಡುಗಳು ಕಂಡುಬಂದಿವೆ.

ಶವಕುಣಿಗಳ ಸುತ್ತಮುತ್ತ ಅನೇಕ ಗುಳಿ ಒಲೆಗಳಿವೆ. ಇವುಗಳಲ್ಲಿ 8 ಒಲೆಗಳನ್ನು ಹೊರತೆಗೆಯಲಾಯಿತು. ಇವು ಗುಂಡಾಗಿ ಅಥವಾ ಮೊಟ್ಟೆಯಾಕಾರದಲ್ಲಿವೆ. ಇವುಗಳ ಆಳ ಸಾಮಾನ್ಯವಾಗಿ 20–25 ಸೆಂಮೀ; ತಳಭಾಗ 1.02 ಮೀ ನಿಂದ 0.45 ಸೆಂಮೀ ಅಗಲವಿದೆ ಮತ್ತು ಮೇಲ್ಭಾಗದ ಅಗಲ 1.49 ಮೀ 70 ಸೆಂಮೀ. ಒಲೆಗಳೊಳಗೆ ಪ್ರಾಣಿಮೂಳೆಗಳಿದ್ದವು. ಹಾಗಾಗಿ ಇವು ಮಾಂಸವನ್ನು ಬೇಯಿಸಲು ಬಳಕೆಯಾಗಿರಬೇಕು. ಒಲೆಗಳನ್ನು ಹೆಚ್ಚು ಕಾಲ ಉಪಯೋಗಿಸಿದಂತೆ ಕಾಣುವುದಿಲ್ಲ. ಬೂದಿಯಿಂದ ತುಂಬಿದ ಒಲೆಗಳನ್ನು ಹಾಗೆಯೇ ಬಿಟ್ಟು ಹೊಸ ಜಾಗದಲ್ಲಿ ಒಲೆಗಳನ್ನು ಮಾಡುತ್ತಿದ್ದಿರಬೇಕು. ಒಂದು ಒಲೆಯಲ್ಲಿ ಮಾತ್ರ ಬೂದಿಯನ್ನು ತೆಗೆದು ಮತ್ತೊಮ್ಮೆ ಉಪಯೋಗಿಸಿದ ಚಿಹ್ನೆಗಳಿವೆ.

ಈ ನೆಲೆಯಲ್ಲಿ ದೊರೆತ ಮತ್ತೊಂದು ಮುಖ್ಯ ವಸತಿ ಅವಶೇಷ ನೆಲದ ಪದರ. ಆಯತಾಕಾರದ ಈ ನೆಲದ ಉದ್ದ 5.66 ಮೀ ಮತ್ತು ಅಗಲ 4.02 ಮೀ. ನೆಲದ ಅಡಿಯಲ್ಲಿ ಅವಶೇಷರಹಿತ ನೈಸರ್ಗಿಕ ಮಣ್ಣಿತ್ತು. ನೆಲವನ್ನು ಸುಟ್ಟಮಣ್ಣಿನ ಉಂಡೆಗಳ ಹಾಸಿನಿಂದ ಸ್ಥಿರಗೊಳಿಸಲಾಗಿದೆ. ನೆಲದ ಅಂಚಿನಲ್ಲಿ ನಾಲ್ಕು ಆಧಾರ ಕಂಬಗಳ ಗುಳಿಗಳಿವೆ. ಸೂಕ್ಷ್ಮಶಿಲೋಪಕರಣಗಳು, ಸುಟ್ಟಮಣ್ಣಿನ ಉಂಡೆಗಳು ಹಾಗೂ ಸುಟ್ಟ–ಅರೆ ಸುಟ್ಟ ಪ್ರಾಣಿಮೂಳೆಗಳು ನೆಲದುದ್ದಕ್ಕೂ ಹರಡಿವೆ. ಅಲ್ಲದೆ 5 ಒಲೆಗಳನ್ನೂ ಗುಳಿ ತೆಗೆದು ಮಾಡಲಾಗಿದೆ. ಈ ಎಲ್ಲ ಆಧಾರಗಳಿಂದ ಇದೊಂದು ಸಾಮುದಾಯಿಕ ಅಡುಗೆಯ ಸ್ಥಳವಾಗಿದ್ದಿರಬಹುದೆಂದು ಅನುಮಾನಿಸಲಾಗಿದೆ. ತ್ರಿಕೋನ, ಟ್ರಪಿಜಿಯಮ್ ಮೊದಲಾದ ರೇಖಾಕೃತಿಗಳ ಉಪಕರಣಗಳು ಗಮನಾರ್ಹ ಸಂಖ್ಯೆಯಲ್ಲಿವೆ. ಇವು ನೆಲೆಯಲ್ಲಿಯೇ ತಯಾರಾಗಿವೆ. ಅಲಗು, ಹೆರೆಚಕ್ಕೆ, ಮೊನೆ, ತ್ರಿಕೋನ ಮತ್ತು ಅರ್ಧಚಂದ್ರಾಕೃತಿಗಳು ಹೆಚ್ಚಾಗಿ ಕಂಡುಬರುವ ನಮೂನೆಗಳು. ಅಗೇಟ್, ಜಾಸ್ಪರ್, ಮಂದಗೆಂಪಿನ ಕಲ್ಲು ಮತ್ತು ಬೆಣಚುಕಲ್ಲುಗಳಿಂದ ಇವನ್ನು ಮಾಡಲಾಗಿದೆ. ಗಂಗಾನದಿ ಬಯಲಿನಲ್ಲಿ ಕಲ್ಲು ದೊರೆಯದ ಕಾರಣ ಈ ಶಿಲೆಗಳನ್ನು ವಿಂಧ್ಯೆಯಿಂದ ತರಲಾಗಿದೆ. ಮೂಳೆಗಳ ಉಪಕರಣಗಳು ಬೆರಳೆಣಿಕೆಯಷ್ಟಿವೆ. ಜಿಂಕೆಯ ಕೊಂಬುಗಳನ್ನೂ ಉಪಕರಣವಾಗಿ ಬಳಸಿರಬಹುದು. ಈ ವಸತಿನೆಲೆಯಲ್ಲಿ ದೊರೆತ ಮೂಳೆಗಳೆಲ್ಲವೂ ವನ್ಯಪ್ರಾಣಿ, ಪಕ್ಷಿ ಮತ್ತು ಜಲಚರಗಳದ್ದಾಗಿವೆ.

ಬೇಟೆ ಮತ್ತು ಸಂಗ್ರಹಣೆ ಸರಾಯ್ ನಹರ್ ರಾಯ್ ಜನರ ಜೀವನಾಧಾರವಾಗಿತ್ತು. ಮಣ್ಪಾತ್ರೆರಹಿತ ಸೂಕ್ಷ್ಮಶಿಲಾಯುಗ ಹಂತದ ಒಂದು ತಾತ್ಕಾಲಿಕ ವಸತಿ ತಾಣವಾಗಿ ಈ ನೆಲೆಯನ್ನು ಉತ್ಖನನಕಾರರು ಗುರುತಿಸಿದ್ದಾರೆ. ಆದರೆ ಇತ್ತೀಚಿನ ಅಧ್ಯಯನಗಳ ಪ್ರಕಾರ ಸರಾಯ್ ನಹರ್ ರಾಯ್, ದಮ್‌ದಮ ಮತ್ತು ಮಹದಹ ಅರೆ ಸ್ಥಾಯಿ ಅಥವಾ ಸ್ಥಾಯಿ ವಸತಿನೆಲೆಗಳಾಗಿದ್ದವು. ಸರಾಯ್ ನಹರ್ ರಾಯ್‌ನಿಂದ ದೊರೆತ ಅವಶೇಷಗಳ ಇಂಗಾಲ–14ರ ಕಾಲಮಾನ ಈ ನೆಲೆ ಪ್ರ.ಶ.ಪೂ. 8100±110ರ ಅವಧಿಯದೆಂದು ಸೂಚಿಸುತ್ತದೆ. (ಎ.ಎಸ್.)

**ಸವಣೂರು ಸಂಸ್ಥಾನ: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಸಾಂಕಳಿಯ, ಎಚ್.ಡಿ.:** 1908–89. ಭಾರತದ ಹೆಸರಾಂತ ಪುರಾತತ್ತ್ವಜ್ಞರು. ಮುಂಬಯಿಯ ಸೇಂಟ್ ಜೇವಿಯರ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದು ಬಾಂಬೆ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ. ಮತ್ತು ಎಂ.ಎ. ಪದವಿಗಳನ್ನೂ ಲಂಡನ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನೂ ಪಡೆದರು. ಹಿಸ್ಟಾರಿಕಲ್ ಅಂಡ್ ಕಲ್ಚರಲ್ ಜಿಯಾಗ್ರಫಿ ಅಂಡ್ ಎಥ್ನೊಗ್ರಫಿ ಆಫ್ ಗುಜರಾತ್–ಇವರ ಪಿಎಚ್.ಡಿ. ಪ್ರಬಂಧ. ಇವರ ಗುರುಗಳು ಹೆಸರಾಂತ ಫಾದರ್ ಹೆರಾಸ್ ಮತ್ತು ಫಾದರ್ ಜಿಮ್ಮರ್‌ಮ್ಯಾನ್. ಅನಂತರ



ಅರ್ನೆಸ್ಟ್ ಮ್ಯಾಕೆ ಮತ್ತು ಮಾರ್ಟಿಮರ್ ವೀಲರ್ ಇವರ ಮಾರ್ಗದರ್ಶನದಲ್ಲಿ ತಮ್ಮ ಸಂಶೋಧನೆಯನ್ನು ಮುಂದುವರೆಸಿದರು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪ್ರೋಟೊ ಇಂಡಿಯನ್ ಅಂಡ್ ಏನ್ಷಿಯೆಂಟ್ ಹಿಸ್ಟರಿಯ ಪ್ರಾಧ್ಯಾಪಕರಾಗಿ, ಪುಣೆ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ, ಸಂಸ್ಕೃತಿ ಮತ್ತು ಪುರಾತತ್ತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಅನಂತರ ಡೆಕ್ಕನ್ ಕಾಲೇಜಿನ ನಿರ್ದೇಶಕರೂ ಆಗಿ ಕೆಲಸಮಾಡಿದರು.

ಪುರಾತತ್ತ್ವಶಾಸ್ತ್ರ ವಿಭಾಗವನ್ನು ವೈಜ್ಞಾನಿಕವಾಗಿ ಬೆಳೆಸಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದದ್ದು ಇವರ ದೊಡ್ಡ ಸಾಧನೆ. ಜೊತೆಗೆ ದೇಶದ ವಿವಿಧ ಭಾಗಗಳಲ್ಲಿಯ ವಿಶ್ವವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆಗಳ ಸಹಯೋಗದೊಡನೆ ನಾಸಿಕ್, ನೆವಾಸ, ನವ್ದತೋಲಿ, ಜೋರ್ವೆ, ಸಂಗನಕಲ್ಲು, ತ್ರಿಪುರಿ, ಬ್ರಹ್ಮಪುರಿ (ಕೊಲ್ಹಾಪುರ) ಮುಂತಾದ ಪುರಾತತ್ತ್ವ ನೆಲೆಗಳ ಉತ್ಖನನಗಳನ್ನು ನಡೆಸಿ ತತ್ಸಂಬಂಧ ವರದಿಗಳನ್ನು ಪ್ರಕಟಿಸಿದರು. ಇವರ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ (1974).

ಇವರ ವ್ಯಕ್ತಿತ್ವದ ವಿಶಿಷ್ಟ ಗುಣವೆಂದರೆ ಹೃದಯ ವೈಶಾಲ್ಯತೆ. ಘನ ವಿದ್ವಾಂಸರಾಗಿದ್ದ ಇವರು ಅಪಾರ ಶಿಷ್ಯವೃಂದವನ್ನು ಹೊಂದಿದ್ದರು. ತಾವು ಶೋಧಿಸಿದ, ಅಧ್ಯಯನ ಮಾಡಿದ ವಿಷಯಗಳನ್ನು ಜನಸಾಮಾನ್ಯರಿಗೂ ತಲುಪುವಂತೆ ಮಾಡಲು ವೃತ್ತಪತ್ರಿಕೆಗಳಲ್ಲಿ ಸರಳ ಭಾಷೆಯಲ್ಲಿ ನಿರಂತರವಾಗಿ ಬರೆದು ಪ್ರಕಟಿಸಿದರು. ಇವರು ನೂರಾರು ಲೇಖನಗಳನ್ನೂ ಹಲವಾರು ಪುಸ್ತಕಗಳನ್ನೂ ಬರೆದಿದ್ದಾರೆ. ಇವುಗಳಲ್ಲಿ ಮುಖ್ಯವಾದುವು: ದಿ ಪ್ರಿ ಹಿಸ್ಟರಿ ಅಂಡ್ ಪ್ರೋಟೊ ಹಿಸ್ಟರಿ ಆಫ್ ಇಂಡಿಯ ಅಂಡ್ ಪಾಕಿಸ್ತಾನ್; ದಿ ಸ್ಟೋನ್ ಏಜ್ ಟೂಲ್ಸ್ ಅಂಡ್ ದೇರ್ ಟೆಕ್ನಿಕ್ಸ್; ಇಂಡಿಯನ್ ಆರ್ಕಿಯಾಲಜಿ ಟುಡೆ; ರಾಮಾಯಣ ಮಿಥ್ ಆರ್ ರಿಯಾಲಿಟಿ. ಇವರು ಇಂಟರ್ ನ್ಯಾಷನಲ್ ಕಾಂಗ್ರೆಸ್ ಆಫ್ ಪ್ರಿ ಹಿಸ್ಟಾರಿಕ್ ಅಂಡ್ ಪ್ರೋಟೊ ಹಿಸ್ಟಾರಿಕ್ ಸೈನ್ಸಸ್, ರೋಮ್‌ನ ಸಮಿತಿಯ ಸದಸ್ಯರೂ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಗೌರವ ಬಾತ್ಮೀದಾರರೂ ಆಗಿದ್ದರು. ಇವರು 1989 ಜನವರಿ 28ರಂದು ನಿಧನರಾದರು. (ಎ.ಎಸ್.)

**ಸಾಂಚಿ:** ಮಧ್ಯಪ್ರದೇಶ ರಾಜ್ಯದ ರಾಯ್‌ಸೇನ್ ಜಿಲ್ಲೆಯ ಐತಿಹಾಸಿಕ ಸ್ಥಳ. ಭೂಪಾಲ್‌ನಿಂದ 68 ಕಿಮೀ ದೂರದಲ್ಲಿದೆ. ಇಲ್ಲಿಯ ಬೌದ್ಧಸ್ತೂಪದಿಂದ ಈ ಸ್ಥಳ ಪ್ರಸಿದ್ಧವಾಗಿದೆ. ಪ್ರ.ಶ.ಪೂ.3ನೆಯ ಶತಮಾನದಿಂದ 12ನೆಯ ಶತಮಾನದವರೆಗಿನ ಬೌದ್ಧ ಅವಶೇಷಗಳು ಇಲ್ಲಿ ಲಭಿಸಿವೆ. ಇಲ್ಲಿನ ವಿವಿಧ ಪ್ರದೇಶಗಳನ್ನು ವಿದಿಶಾಗಿರಿ, ಸರಯೆಗಿರಿ, ಬೌತ್ತಸ್ತಿಪರ್ವತಗಳೆಂದು ಕರೆಯಲಾಗಿದೆ. ಇಲ್ಲಿಯ ಬೆಟ್ಟದ ಮೇಲಿರುವ ಸ್ತೂಪವನ್ನು ಪ್ರಶ.ಪೂ. 3ನೆಯ ಶತಮಾನದಲ್ಲಿ ಅಶೋಕ ಕಟ್ಟಿಸಿದ. ಇವನ ಪತ್ನಿ ದೇವಿ ಸಾಂಚಿಯ ಸಮೀಪ ವಿದಿಶಾನಗರದ ವರ್ತಕನೊಬ್ಬನ ಮಗಳು. ಇವಳು ವೆದಿಸಗಿರಿ ಅಥವಾ ಚೇತಿಯಗಿರಿ ವಿಹಾರವನ್ನು ಕಟ್ಟಿಸಿದ್ದಾಳೆ. ಈ ಸ್ತೂಪದ ಸಮೀಪ ಅಶೋಕ ಏಕಶಿಲಾ ಸ್ತಂಭವೊಂದನ್ನು ನೆಡಿಸಿದ್ದಾನೆ. ಅದರಲ್ಲಿ ನಾಲ್ಕು ಮುಖಗಳುಳ್ಳ ಶಿರವಿದೆ. ಇಲ್ಲಿ ಬುದ್ಧನ ಶರೀರದ ಅವಶೇಷಗಳನ್ನು (ಮೂಳೆ, ಭಸ್ಮ, ಕೂದಲು, ಹಲ್ಲು ಇತ್ಯಾದಿ) ಹುದುಗಿಡಲಾಗಿದೆಯೆಂದು ಹೇಳಲಾಗಿದೆ. ಆದರೆ ಈ ಯಾವುದೂ ಇದುವರೆವಿಗೂ ಪತ್ತೆಯಾಗಿಲ್ಲ. ಇಲ್ಲಿ ಪ್ರಶ.ಪೂ. 2ನೆಯ ಶತಮಾನಕ್ಕೆ ಸೇರಿದ ಬ್ರಾಹ್ಮಿ ಲಿಪಿಯ ಶಾಸನಗಳಿವೆ. ಪ್ರ.ಶ.ಪೂ. 1ನೆಯ ಶತಮಾನದಲ್ಲಿ ನಿರ್ಮಿತವಾದ ಮಹಾದ್ವಾರದ ಮೇಲೆ ಬುದ್ಧನ ಜೀವನಕ್ಕೆ ಸಂಬಂಧಿಸಿದ ದೃಶ್ಯಗಳಿವೆ. ಇವು ಭಾರತದ ಪ್ರಾಚೀನ ಶಿಲ್ಪಕಲೆಗೆ ಮಾದರಿಯಾಗಿವೆ. ಒಟ್ಟು ಇಲ್ಲಿ ವಿವಿಧ ಕಾಲಗಳ ಮೂರು ಸ್ತೂಪಗಳಿವೆ. ಭಾರತೀಯ ಬೌದ್ಧ ವಾಸ್ತುಶಿಲ್ಪಗಳ ಉಗಮ, ವಿಕಾಸ ಹಾಗೂ ಅವನತಿಯ ಇತಿಹಾಸವನ್ನು ಇವುಗಳಿಂದ ಅಧ್ಯಯನ ಮಾಡಬಹುದು. ಇಲ್ಲಿಯ ದೇವಾಲಯಗಳು ಮತ್ತು ವಿಹಾರಗಳು

12ನೆಯ ಶತಮಾನದವರೆವಿಗೂ ಸುಸ್ಥಿಯಲ್ಲಿದ್ದವು. ಇದು ಬಹುಮಟ್ಟಿಗೆ ಭಾರತೀಯ ಬೌದ್ಧಧರ್ಮದ ಸಂಪೂರ್ಣ ಕಾಲಮಾನವನ್ನು ಒಳಗೊಳ್ಳುತ್ತದೆ ಎನ್ನಬಹುದು. ಇಲ್ಲಿಯ ಎಲ್ಲ ಸ್ಮಾರಕಗಳನ್ನು ಸಂರಕ್ಷಿಸಲಾಗಿದೆ.

1818ರಲ್ಲಿ ಜನರಲ್ ಟೇಲರ್ ಇಲ್ಲಿಯ ಸ್ತೂಪಾವಶೇಷಗಳನ್ನು ಪತ್ತೆಹಚ್ಚಿದ. 1822ರಲ್ಲಿ ಕ್ಯಾಪ್ಟನ್ ಜಾನ್‌ಸನ್ 1ನೆಯ ಸ್ತೂಪದ ಒಂದು ಪಾರ್ಶ್ವವನ್ನು ಉತ್ಖನನ ಮಾಡಿದ. 1851ರಲ್ಲಿ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಎಫ್.ಸಿ.ಮೈಸ್ ನೊಂದಿಗೆ 2 ಮತ್ತು 3ನೆಯ ಸ್ತೂಪಗಳನ್ನು ಉತ್ಖನನಮಾಡಿದ. 1881ರಲ್ಲಿ ಇಲ್ಲಿಯ ಸ್ತೂಪಗಳ ಸಂರಕ್ಷಣೆಯ ಕಾರ್ಯ ನಡೆಯಿತು. ಈ ಸ್ಮಾರಕಗಳ ವ್ಯವಸ್ಥಿತ ಇತಿಹಾಸದ ಅಧ್ಯಯನವನ್ನು ಜಾನ್ ಮಾರ್ಷಲ್ ಕೈಗೊಂಡು ಸಂಶೋಧನೆ ನಡೆಸಿ ವಿವರಗಳನ್ನು ಪ್ರಕಟಿಸಿದ್ದಾನೆ (1912–19). ಇಲ್ಲಿಯ 2ನೆಯ ಸ್ತೂಪದಲ್ಲಿ ಅನೇಕ ಬೋಧಕರ (ಬೌದ್ಧ ಸನ್ಯಾಸಿಗಳ) ಅವಶೇಷಗಳಿವೆಯೆಂದು ಶಾಸನವೊಂದು ತಿಳಿಸುತ್ತದೆ. ಇಲ್ಲಿ ದೊರೆತ ಒಂದು ಪೆಟ್ಟಿಗೆಯಲ್ಲಿ ಹತ್ತು ಮಂದಿ ಬೌದ್ಧಭಿಕ್ಷುಕರ ಅಥವಾ ಬೋಧಕರ ಶರೀರ ಅವಶೇಷ (ಮೂಳೆ, ಭಸ್ಮ, ಕೂದಲು, ಹಲ್ಲು ಇತ್ಯಾದಿ)ಗಳು ದೊರೆತಿವೆ. ಮೂರನೆಯ ಸ್ತೂಪದಲ್ಲಿ ಬುದ್ಧನ ನೇರ ಶಿಷ್ಯರಾದ ಸಾರಿಪುತ್ರ ಮತ್ತು ಮಹಾ ಮೌದ್ಗಲ್ಯಾಯನರ ಅವಶೇಷಗಳು ದೊರೆತಿವೆ.

ಮಹಾಸ್ತೂಪದ ತೋರಣ

ಸ್ವಾರಸ್ಯದ ಸಂಗತಿ ಎಂದರೆ ಸಾಂಚಿಯು ಬುದ್ಧನ ಜೀವನದ ಯಾವುದೊಂದು ಘಟನೆಗೆ ಸಂಬಂಧಿಸಿದ ಅಥವಾ ಬೌದ್ಧ ಸನ್ಯಾಸಿಗಳ ಬದುಕಿಗೆ ಸಂಬಂಧಪಟ್ಟ ಸ್ಥಳವಲ್ಲ. ಭಾರತದಾದ್ಯಂತ ಬೌದ್ಧಸ್ಮಾರಕಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ದಾಖಲಿಸಿರುವ 7ನೆಯ ಶತಮಾನದ ಚೀನಿಯಾತ್ರಿಕ ಯುವಾನ್ ಚಾಂಗ್ ಸಾಂಚಿಯ ಬಗೆಗೆ ಮೌನವಾಗಿರುವುದು ಆಶ್ಚರ್ಯಕರ ಸಂಗತಿಯಾಗಿದೆ.

ಸಾಂಚಿಯ ಮೊದಲನೆಯ ಸ್ತೂಪ ಅಶೋಕನ ಕಾಲದ ಮಹಾಸ್ತೂಪ. ಇದು ಈಗ ಉಪಲಬ್ಧವಿರುವ ಅತೀ ಪ್ರಾಚೀನ ಮಾದರಿಗಳಲ್ಲಿ ಒಂದು. ಸಾಂಚಿಯ ಗುಡ್ಡದ ನೆತ್ತಿಯಲ್ಲಿ ಇದು ದಕ್ಷಿಣೋತ್ತರವಾಗಿ 360ಮೀ ಹಾಗೂ ಪೂರ್ವ ಪಶ್ಚಿಮವಾಗಿ 198ಮೀ ವಿಶಾಲವಾಗಿದೆ. ಮೂಲತಃ ಇಟ್ಟಿಗೆಯಿಂದ ಕಟ್ಟಲಾದ ಸ್ತೂಪವನ್ನು ಸು. 1ನೆಯ ಶತಮಾನದ ಅನಂತರ ವಿಸ್ತರಿಸಿ ಕಲ್ಲಿನ ಹೊದಿಕೆಯನ್ನು ಅಳವಡಿಸಲಾಯಿತು. ಕಲ್ಲಿನ ಕಟಕಟೆಯನ್ನು ತೋರಣದ್ವಾರಗಳನ್ನು ನಿರ್ಮಿಸಲಾಯಿತು. ಮರಗೆತ್ತನೆಯ ತಂತ್ರವನ್ನು ಕಲ್ಲಿನ ಕೆತ್ತನೆಯಲ್ಲೂ ಅಳವಡಿಸಲಾಗಿದೆ. ದಕ್ಷಿಣ ತೋರಣದ್ವಾರದ ಮೇಲಿನ ಶಾಸನವೊಂದು ಸಾತಕರ್ಣಿಯ ಮೇಲ್ವಿಚಾರಕ ಆವೇಶನಿಕನಾಗಿದ್ದ ಆನಂದನ ದಾನವನ್ನು ಹೇಳುತ್ತದೆ. ಇತರ ತೋರಣದ್ವಾರಗಳ ಮೇಲಿನ ಶಾಸನಗಳಿಂದ ಬಲಮಿತ್ರ, ನಾಮಪಿಯ ದಾನವಿತ್ತ ಸಂಗತಿ ತಿಳಿದುಬರುತ್ತದೆ. ತೋರಣದ್ವಾರ, ಶಿಲ್ಪಗಳು, ಯಕ್ಷಯಕ್ಷಿಯರು, ಸಾಲಭಂಜಿಕೆಯರು, ಅಲಂಕರಣಗಳು ಮೊದಲಾದವುಗಳಿಂದ ಕೂಡಿದ್ದು ಮರ, ಲೋಹ ಹಾಗೂ ದಂತದ ಉಬ್ಬುಗೆತ್ತನೆಯ ಅಲಂಕರಣ ವಿದಿಶದ ದಂತ ಕೆಲಸಗಾರರ ರೂಪಕಮ್ಮ (ರೂಪಕರ್ಮ್ಮ) ಚೌಕಾಕಾರದ ಎರಡು ಕಂಬಗಳು



ಮಹಾಸ್ತೂಪ

ಪ್ರತಿಯೊಂದು ತೋರಣದ್ವಾರದಲ್ಲೂ ಇದ್ದು, ಅವು ಸಿಂಹ, ಆನೆ ಅಥವಾ ಕುಬ್ಜರಶಿಲ್ಪಗಳಿಂದ ಕೂಡಿವೆ. ಜಾತಕ ಕಥೆಗಳಿಗೆ ಸಂಬಂಧಿಸಿದ ದೃಶ್ಯಗಳು, ಗೌತಮಬುದ್ಧನ ಜೀವನ ದೃಶ್ಯಗಳು, ಬೌದ್ಧಧರ್ಮದ ಇತಿಹಾಸಕ್ಕೆ ಸಂಬಂಧಿಸಿದ ಘಟನಾವಳಿಗಳು, ಮಾನುಷಿ ಬುದ್ಧರಿಗೆ ಸಂಬಂಧಪಟ್ಟ ದೃಶ್ಯಗಳು, ಇತರೆ ದೃಶ್ಯಗಳು ಹಾಗೂ ಅಲಂಕರಣಗಳಿವೆ. ತೋರಣದ್ವಾರಗಳ ವಸ್ತು ಸಮೃದ್ಧತೆ, ಸಸ್ಯ, ಜೀವನ ಚಿತ್ರಣಕ್ಕೆ ಸಾಂಚಿಶಿಲ್ಪಗಳು ಪ್ರಸಿದ್ಧವಾಗಿವೆ.

ಇಲ್ಲಿಯ ಕೆಲವು ಅವಶೇಷಗಳನ್ನು ಸ್ಥಳೀಯ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಅವುಗಳಲ್ಲಿ ಅಡುಗೆ ಪಾತ್ರೆಗಳು, ಗಂಟೆಗಳು, ಈಟಿ, ಬಾಕು, ಉಳಿ, ಸುತ್ತಿಗೆ, ಬೀಗ ಮತ್ತು ಕೀಲಿಕೈ, ಕಂಚಿನ ಪಾತ್ರೆ, ಬಳೆ, ಉಂಗುರಗಳು ಮತ್ತು ಮಣ್ಣಾತ್ರೆಗಳು ಮುಖ್ಯವಾಗಿವೆ. ಒಂದು ಪಾತ್ರೆಯಲ್ಲಿ ಕ್ಷತ್ರಪರಿಗೆ ಸೇರಿದ ಬೆಳ್ಳಿಯ ನಾಣ್ಯಗಳು ಕಂಡುಬಂದಿವೆ. ಜೇಮ್ಸ್ ಪ್ರಿನ್ಸೆಪ್ ಬ್ರಾಹ್ಮಿಲಿಪಿ ಶಾಸನಗಳನ್ನು ಓದುವ ಪ್ರಯತ್ನದಲ್ಲಿ ಇಲ್ಲಿಯ ಪುಟ್ಟ ಶಾಸನಗಳಿಂದ ಸುಳುಹು ಪಡೆದನೆನ್ನುವುದು ಗಮನಾರ್ಹ (1837).

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎ.ಕೆ.ಸಿನ್ಹ ಸಾಂಚಿಯಲ್ಲಿ 1995–99 ರವರೆಗೂ ಉತ್ಖನನ ಮತ್ತು ಪರಿಶೋಧನೆಯ ಕಾರ್ಯವನ್ನು ಮುಂದುವರೆಸಿದರು. ಇದರ ಫಲವಾಗಿ ಈಗಾಗಲೇ ಉತ್ಖನನ ಕಾರ್ಯಕೈಗೊಂಡ ಸ್ತೂಪಗಳಿಗೂ ಈಗಿರುವ ಪ್ರಾಚೀನ ಸ್ಮಾರಕಗಳಿಗೂ ಇರುವ ಸಂಬಂಧಗಳನ್ನು ಕಲ್ಪಿಸಲು ಸಾಧ್ಯವಾಗಿ ಅದರಲ್ಲೂ ವಿಶೇಷವಾಗಿ 37ನೆಯ ಬೌದ್ಧವಿಹಾರ ಮತ್ತು 4ನೆಯ ದೇವಾಲಯಗಳ ನಡುವಣ ಭಾಗದಲ್ಲಿ ಉತ್ಖನನ ಕಾರ್ಯ ನಡೆಸಿ ಅಲ್ಲಿ ಮೂರು ಅನುಕ್ರಮ ಹಂತಗಳಿಗೆ ಸಂಬಂಧಿಸಿದ ಅವಶೇಷಗಳನ್ನು ಪರಿಶೋಧನೆ ಮಾಡಿದ್ದಾರೆ.

ತೋರಣದಲ್ಲಿಯ ಸಾಲಭಂಜಿಕೆ

ಮೊದಲಿನ ಹಂತದಲ್ಲಿ ಸ್ಮಾರಕಗಳ ಅವಶೇಷಗಳು ಕಂಡುಬಂದಿವೆ. ಇವುಗಳನ್ನು ಅಲ್ಲಿಯ ಬಂಡೆಯ ಮೇಲೆ ಕಟ್ಟಲಾಗಿದೆ. ಈ ಸ್ಮಾರಕಗಳ ಅವಶೇಷಗಳಲ್ಲಿ ಬೌದ್ಧವಿಹಾರ ಸಂಕೀರ್ಣದ ಒಂದು ಭಾಗ, ಕಲ್ಲುಹಾಸನ್ನು ಹಾಕಿರುವ ದಾರಿ ಮತ್ತು ಇಟ್ಟಿಗೆಗಳಿಂದ ಕಟ್ಟಿದ ಚರಂಡಿ ಮುಖ್ಯವಾದವು. ಇಟ್ಟಿಗೆಗಳ ಆಕಾರ 80x42x18 ಸೆಂಮೀ ಆಗಿದ್ದು ಇವು ಮೌರ್ಯರ ಕಾಲದಲ್ಲಿ ಕಟ್ಟಿಸಿದ ಬೌದ್ಧವಿಹಾರ ಸಂಖ್ಯೆ 51ರಲ್ಲಿ ಇದ್ದಂತೆ ಇವೆ. ಇಲ್ಲಿ ಲಭ್ಯವಾಗಿರುವ ಮಣ್ಣಿನ ಪಾತ್ರೆಗಳ ವಿಧಗಳಲ್ಲಿ ಚಿತ್ರಿತ ಕಪ್ಪು ಮಣ್ಪಾತ್ರೆಗಳು, ಕೆಂಪುಮಣ್ಣಿನ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ದೊರೆತಿವೆ. ಇಲ್ಲಿನ ಪ್ರಾಕ್ತನ ವಸ್ತುಗಳಲ್ಲಿ ಜೇಡಿಮಣ್ಣಿನ ಬಳೆಗಳು, ಸಣ್ಣ ಸ್ತೂಪಗಳು, ಮತ್ತಿತರ ವಸ್ತುಗಳು ದೊರೆತಿವೆ.

ಎರಡನೆಯ ಹಂತದಲ್ಲಿ ಪಾತ್ರೆಗಳು ವಿಶೇಷವಾಗಿ ಅಭ್ರಕ ಮಿಶ್ರಿತ ಕೆಂಪು ಮಣ್ಪಾತ್ರೆಗಳು, (ಮೈಕೇಷಿಯಸ್ ರೆಡ್‌ವೇರ್) ಗಮನ ಸೆಳೆಯುತ್ತವೆ. ಇಲ್ಲಿನ ಅವಶೇಷಗಳಲ್ಲಿ ಸಣ್ಣ ಸ್ತೂಪಗಳು, ವಿವಿಧ ರೀತಿಯ ಮೊಳೆ, ಈಟಿ ಮೊನೆ, ಶಂಖದ ಬಳೆ ಮೊದಲಾದವು ದೊರೆತಿವೆ.

3ನೆಯ ಹಂತದಲ್ಲಿ ನಾಲ್ಕು ಕೊಠಡಿಯ ಕಟ್ಟಡ, ಕೆತ್ತನೆಮಾಡಿದ ಕಲ್ಲಿನ ಕಟ್ಟಡದ ಅವಶೇಷವನ್ನು ಉತ್ಖನನ ಮಾಡಲಾಗಿದೆ. ಇಲ್ಲಿ ಮುದ್ರಿತ ಮಣ್ಪಾತ್ರೆಗಳು ಪತ್ತೆಯಾಗಿರುವುದು ಒಂದು ವಿಶೇಷ ಸಂಗತಿ. ಜೇಡಿಮಣ್ಣಿನ ಒಂದು ಮುದ್ರೆಯ ಮೇಲೆ ಗುಪ್ತರ ಕಾಲದ ಬ್ರಾಹ್ಮಿಲಿಪಿಯಲ್ಲಿರುವ ಬೌದ್ಧಧರ್ಮದ ಸೂತ್ರಗಳಿವೆ. ಸ್ತೂಪಗಳು, ಜೇಡಿಮಣ್ಣಿನ ಮಣಿಗಳು, ಮಹಿಷಾಸುರ ಮರ್ದಿನಿಯ ಫಲಕ ದೊರೆತಿವೆ. (ಡಿ.ಟಿ.)

**ಸಾಂತರರು:** ಕರ್ನಾಟಕದಲ್ಲಿ ಆಳಿದ ಒಂದು ರಾಜಮನೆತನ. ಇವರು ಹುಂಚದ ಸಾಂತರರು ಎಂದೇ ಗುರುತಿಸಲ್ಪಟ್ಟಿದ್ದಾರೆ. ಶಾಸನಗಳ ಪ್ರಕಾರ ಇವರು ಆಳಿಕೆ ಮಾಡಿದ ಪ್ರದೇಶವನ್ನು ಸಾಂತಳಿಗೆ 1000 ಎಂದು ಗುರುತಿಸಲಾಗಿದೆ. ಸಾಂತರರು ಜೈನಧರ್ಮೀಯರು. ಹೊಂಬುಜ ಇವರ ರಾಜಧಾನಿಯಾಗಿತ್ತು. ಇದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿ ಹೊಸನಗರದಿಂದ ಸು.27 ಕಿಮೀ ದೂರದಲ್ಲಿದೆ. ಇಲ್ಲಿ ದಿಗಂಬರ ಜೈನರ ಪ್ರಸಿದ್ಧ ಮಠವಿದೆ. ಹಿಂದೆ ಈ ಪ್ರದೇಶವನ್ನಾಳಿದ ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ ಕಲೆಯ ಪ್ರಭಾವವನ್ನು

ಸಾಂತರರ ಕಲೆ ಹಾಗೂ ವಾಸ್ತುಶಿಲ್ಪದಲ್ಲಿ ಗುರುತಿಸಲು ಸಾಧ್ಯವಾಗಿದೆ. ಆದರೆ ಮಲೆನಾಡಿನ ಭೌಗೋಳಿಕ ಹಿನ್ನೆಲೆಯಲ್ಲಿ ಇವರು ದೇವಾಲಯ ವಾಸ್ತುಶಿಲ್ಪ ಮಾದರಿಯಲ್ಲಿ ಕೆಲವೊಂದು ಮಾರ್ಪಾಡು ಗಳನ್ನು ಮಾಡಿಕೊಂಡಿರುವುದರಿಂದ ಕಲಾತಜ್ಞರಾದ ಎಂ.ಎ.ಢಾಕಿಯವರು ಇಲ್ಲಿ ಬೆಳೆದು ಬಂದಿರುವ ಕಲಾ ಮಾದರಿಯನ್ನು ಪ್ರಾದೇಶಿಕ ಮಲೆನಾಡು ಶೈಲಿ ಎಂದೇ ಗುರುತಿಸಿದ್ದಾರೆ.

ಇಂದು ಹುಂಚದಲ್ಲಿ ಉಳಿದು ಬಂದಿರುವ ಹೆಚ್ಚಿನ ದೇವಾಲಯಗಳು ಜೈನಧರ್ಮಕ್ಕೆ ಸೇರಿದವುಗಳಾಗಿವೆ. ಆದರೆ ಈ ಪ್ರದೇಶದಲ್ಲಿ ಅತ್ಯಂತ ಪ್ರಾಚೀನ ದೇವಾಲಯವಾದ ಕಮಠೇಶ್ವರ ದೇವಾಲಯ ಶೈವಧರ್ಮಕ್ಕೆ ಸೇರಿದ್ದು, ಶಾಸನದ ಪ್ರಕಾರ ಇದನ್ನು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಲಾಗಿದೆ. ಅನಂತರ ಇದನ್ನು 12ನೆಯ ಶತಮಾನದಲ್ಲಿ ಪುನರ್ ನಿರ್ಮಿಸಲಾಗಿದೆ. ಜೈನೇತರ ದೇವಾಲಯಗಳಲ್ಲಿ ಹುಂಚದಿಂದ ಸು.5 ಕಿಮೀ ದೂರದಲ್ಲಿರುವ ಬಿಲ್ಲೇಶ್ವರ ದೇವಾಲಯ ಸಮುಚ್ಚಯ ಕೆಲವು ವಿಶಿಷ್ಟ ದೇವಾಲಯದ ಲಕ್ಷಣಗಳನ್ನು ಹೊಂದಿದೆ.

ಸಾಂತರಸರ ಕಾಲದಲ್ಲಿ ಬೆಳೆದು ಬಂದ ವಾಸ್ತುಶಿಲ್ಪ ಮಾದರಿಯ ಉದಯವನ್ನು ಕರ್ನಾಟಕದಲ್ಲಿ ಅಷ್ಟು ಹೊತ್ತಿಗಾಗಲೇ ರೂಪುಗೊಂಡಿದ್ದ ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟರು ಹಾಗೂ ಕಲ್ಯಾಣ ಚಾಳುಕ್ಯರ ಪ್ರಮುಖ ಶೈಲಿಗಳಲ್ಲಿ ಗುರುತಿಸಬಹುದು. ಅದರೊಂದಿಗೆ ಸ್ವಲ್ಪಮಟ್ಟಿಗೆ ಪ್ರಾದೇಶಿಕ ಅಂಶಗಳೂ ಇವೆ.

ಸಾಂತರರ ದೇವಾಲಯದ ವಾಸ್ತುಶಿಲ್ಪ ಮಾದರಿಯ ಪ್ರಮುಖ ಲಕ್ಷಣಗಳು ಹೀಗಿವೆ: ದೇವಾಲಯ ಅಥವಾ ಬಸದಿಗಳು ಸಾಮಾನ್ಯವಾಗಿ ಮಧ್ಯಮ ಗಾತ್ರದವು. ಸಾಮಾನ್ಯವಾಗಿ ಅವರ ದೇವಾಲಯ/ಬಸದಿಗಳು ಚಚ್ಚೌಕ ಆಕಾರದ ಗರ್ಭಗೃಹವನ್ನು ಹೊಂದಿದ್ದು, ಅದಕ್ಕೆ ತಾಗಿಕೊಂಡಂತೆ, ಅದಕ್ಕಿಂತ ಸ್ವಲ್ಪ ದೊಡ್ಡದಾದ ಮುಚ್ಚಿದ ಮಂಟಪವನ್ನು ಹೊಂದಿದೆ. ಕೆಲವು ಬಸದಿಗಳಲ್ಲಿ ಮಾತ್ರ ಅಂತರಾಳವನ್ನು ಕಲ್ಪಿಸಲಾಗಿದೆ. ಈ ಕಟ್ಟಡಗಳೆಲ್ಲ ನಿರಂಧಾರ ಮಾದರಿಗಳಾಗಿವೆ. ದೇವಾಲಯ ಅಥವಾ ಬಸದಿಗಳನ್ನು ಪಾರ್ಶ್ವನೋಟದಿಂದ ವೀಕ್ಷಿಸಿದಾಗ ಅವುಗಳನ್ನು ಸಣ್ಣ ಪ್ರಮಾಣದ ಸರಳವಾದ ಅಧಿಷ್ಠಾನದ ಮೇಲೆ ರಚಿಸಿದ್ದು, ಅನಂತರ ಅದರ ಮೇಲೆ ಅಲಂಕಾರ ರಹಿತವಾದ ಗೋಡೆಗಳನ್ನು ನಿರ್ಮಿಸಲಾಗಿರುತ್ತದೆ. ಈ ಗೋಡೆಗಳ ಸರಳತೆಯನ್ನು ಸಡಿಲವಾಗಿಸಲು ನಿರ್ದಿಷ್ಟ ಅಂತರದಲ್ಲಿ ಅರ್ಧ ಕಂಬಗಳ ರಚನೆಯನ್ನು ಮಾತ್ರ ಮಾಡಲಾಗಿರುತ್ತದೆ. ಗೋಡೆಯ ಕೊನೆಯ ಹಂತದಲ್ಲಿ ಅಂದರೆ ಪ್ರಸ್ತರದ ಕೆಳಭಾಗದಲ್ಲಿ ಒಂದು ಸಾಲಿನ ಕಿರಿದಾದ ಶಿಲ್ಪಕೆತ್ತನೆಗಳು ಕಂಡುಬರುತ್ತವೆ. ಉದಾ: ಕಮಠೇಶ್ವರ ದೇವಾಲಯ, ಬೋಗಾರ ಬಸದಿ. ಕಮಠೇಶ್ವರ ದೇವಾಲಯದ ಶಿಲ್ಪಸಾಲಿನಲ್ಲಿ ಕೆಲವು ಪಂಚತಂತ್ರ ಕಥೆಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಗೋಡೆಯ ಅಂಚಿನಲ್ಲಿ ಉದ್ದಕ್ಕೂ ಹಾರವಿದ್ದು, ಅನಂತರ ದೇವಾಲಯದ ಗರ್ಭಗೃಹದ ಮೇಲೆ ಸಾಮಾನ್ಯವಾಗಿ ದ್ರಾವಿಡ ಮಾದರಿಯ ಪ್ರಾಸಾದ ಕಂಡುಬರುತ್ತದೆ. ಆದರೆ ಕೆಲವೊಂದು ಪ್ರಮುಖ ದೇವಾಲಯಗಳ ಮೇಲೆ ಹೆಂಚಿನ ಇಳಿಜಾರಾದ ಮೇಲ್ಛಾವಣಿಯಿದ್ದು ಮೂಲ ಶಿಖರದ ರಚನೆಯನ್ನು ತಿಳಿಯಲು ಸಾಧ್ಯವಾಗಿಲ್ಲ ಉದಾ: ಪಂಚಕೂಟ ಬಸದಿ.

ಸಾಮಾನ್ಯವಾಗಿ ಇಲ್ಲಿರುವ ಎಲ್ಲ ದೇವಾಲಯಗಳೂ ಏಕಕೂಟ ದೇವಾಲಯಗಳಾಗಿದ್ದು, ಪಂಚಕೂಟ ದೇವಾಲಯ ಮಾತ್ರ ಹೆಸರೇ ಸೂಚಿಸುವಂತೆ ಪಂಚಕೂಟಗಳಿಂದ ಕೂಡಿದೆ. ಉಳಿದಂತೆ ಗರ್ಭಗೃಹಕ್ಕೆ ತಾಗಿಕೊಂಡಿರುವ ಮುಚ್ಚಿದ ಮಂಟಪ ಸಾಮಾನ್ಯವಾಗಿ ನಾಲ್ಕು ಕಂಬಗಳಿಂದ ಕೂಡಿದ್ದು, ಮಧ್ಯದಲ್ಲಿ ನಾಟ್ಯ ವೇದಿಕೆ ಕಂಡುಬರುತ್ತದೆ. ಆದರೆ ಕಂಬಗಳಲ್ಲಿ ಬೇರೆ ಬೇರೆ ಮಾದರಿಗಳಿವೆ. ದೇವಾಲಯದ ಗರ್ಭಗೃಹ ಹಾಗೂ ಮಂಟಪದ ದ್ವಾರಬಂಧ ಅನೇಕ ಶಾಖೆಗಳಿಂದ ಕೂಡಿದ್ದು ಸುಂದರವಾಗಿವೆ. ಲಲಾಟ ಬಿಂಬದಲ್ಲಿ ಕಮಠೇಶ್ವರ ಹಾಗೂ ಪಂಚಕೂಟ ಬಸದಿಯ ಸಮುಚ್ಚಯದಲ್ಲಿ ಕಂಡುಬರುವ ಪಾರ್ಶ್ವನಾಥ ಬಸದಿಯಲ್ಲಿ ಮಾತ್ರ ಗರ್ಭಗೃಹದ ದ್ವಾರಶಾಖೆಯ ಮೇಲ್ಭಾಗದಲ್ಲಿ ಉಬ್ಬು ಶಿಲ್ಪಗಳಿವೆ. ಅಲ್ಲಿ ಅನೇಕ ನೃತ್ಯ ವಾದ್ಯಗಳನ್ನು ನುಡಿಸುತ್ತಿರುವ ಶಿಲ್ಪಗಳ ಕೆತ್ತನೆ ಕಂಡುಬರುತ್ತದೆ.

ದೇವಾಲಯದ ಮಂಟಪದ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರ ಪಟ್ಟಿಕೆಯಿದೆ. ಮಧ್ಯದ ಪಟ್ಟಿಕೆಯಲ್ಲಿ ಮಾತ್ರ ಬೇರೆ ಮೂರ್ತಿಯ ರಚನೆ ಕಂಡುಬರುತ್ತದೆ. ಉಳಿದಂತೆ ಮೇಲ್ಛಾವಣಿ ಅತ್ಯಂತ ಸರಳವಾಗಿರುತ್ತದೆ. ಸಾಂತರರ ದೇವಾಲಯದ ಕಂಬಗಳನ್ನು ಮೂರು ನಮೂನೆಗಳಾಗಿ ವಿಂಗಡಿಸಬಹುದಾಗಿದೆ.

ಚಚ್ಚೌಕ ಆಕಾರದ ಕಂಬಗಳು: ಇಂತಹ ಕಂಬಗಳ ರಚನೆಗಳು ಕಮಠೇಶ್ವರ ದೇವಾಲಯ, ಪಂಚಕೂಟ ಬಸದಿಯ ಆವರಣದಲ್ಲಿರುವ ಪಾರ್ಶ್ವನಾಥ ದೇವಾಲಯ ಹಾಗೂ ಬೋಗಾರ ಬಸದಿಗಳಲ್ಲಿವೆ. ಮೊದಲೆರಡು ದೇವಾಲಯಗಳಲ್ಲಿ ಕಂಬ ದೊಡ್ಡ ಗಾತ್ರದಲ್ಲಿದ್ದು, ಹೆಚ್ಚು ಎತ್ತರವಿಲ್ಲ. ಆದರೆ ಕಂಬಗಳು ಸಣ್ಣದಾದ ಪೀಠದ ಮೇಲಿದ್ದು, ಕಂಬದ ಕಾಂಡ ಭಾಗವು ಚಚ್ಚೌಕ ಆಕಾರವಾಗಿದೆ. ಕಂಬದ ಮೇಲ್ಭಾಗದಲ್ಲಿ ವೃತ್ತಾಕಾರದ ದಿಂಬಿನ ರಚನೆಯಿದ್ದು, ಅದರ ಮೇಲೆ ಬಾದಾಮಿ ಚಳುಕ್ಯರ ಮಾದರಿಯಂತಹ ತರಂಗ ಬೋದಿಗೆಗಳ ರಚನೆಯಿದೆ. ಬೋದಿಗೆಗಳ ಮಧ್ಯಭಾಗದಲ್ಲಿ ಮಧ್ಯ ಪಟ್ಟಿಯಿದೆ. ಪಾರ್ಶ್ವನಾಥ ದೇವಾಲಯದ ಕಂಬಗಳ ಗಾತ್ರ ಕಿರಿದಾಗಿದ್ದು, ಪೀಠದ ಕಾಂಡಭಾಗವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ: ಕೆಳಗೆ ಚಚ್ಚೌಕ ಆಕಾರದ ಕಾಂಡ ಭಾಗ, ಅನಂತರ ಸ್ವಲ್ಪ ದೊಡ್ಡದಾದ ಚಚ್ಚೌಕ ಆಕಾರದ ಮಧ್ಯಭಾಗ ಅದರ ಮೇಲಿನ ಕಾಂಡಭಾಗ ಕಿರಿದಾಗಿ ಮಾಡಲ್ಪಟ್ಟಿದೆ. ಅದರ ಮೇಲೆ ದಿಂಬಿನ ರಚನೆಯಿದ್ದು, ಮೇಲೆ ಮಧ್ಯಪಟ್ಟಿಕೆ ಇರುವ ತರಂಗ ಬೋದಿಗೆಗಳು ಕಂಡುಬರುತ್ತವೆ.

ಬೋಗಾರ ಬಸದಿಯ ಕಂಬಗಳ ಮಧ್ಯದ ಕಾಂಡಭಾಗ ಅತ್ಯಂತ ಸುಂದರವಾದ ಕುಸುರಿ ಕೆತ್ತನೆಗಳಿಂದ ಅಲಂಕರಿಸಲ್ಪಟ್ಟಿದೆ. ಅದರಲ್ಲೂ ಬಸದಿಯ ಮಂಟಪದ ಮುಂದಿನ ಸಾಲಿನಲ್ಲಿ ಇರುವ ಎರಡೂ ಕಂಬಗಳಲ್ಲಿ ಕಮಾನಿನ ಮಧ್ಯೆ ನಿಂತಿರುವ ಬಾಹುಬಲಿ ಹಾಗೂ ಕಾಯೋತ್ಸರ್ಗದಲ್ಲಿನ ಐದು ತೀರ್ಥಂಕರರ ಮೂರ್ತಿಗಳು ಮನ ಸೆಳೆಯುವಂತಿವೆ. ಕುಂಚದ ಮೇಲಿನ ಭಾಗದಲ್ಲಿ ಸುಂದರ ಲತೆಯ ಅಲಂಕಾರವಿದ್ದು ಅಲ್ಲಿ ಕಮಲದ ಮೇಲೆ ಪದ್ಮಾಸನದಲ್ಲಿರುವ ಜಿನಮೂರ್ತಿಯ ಕೆತ್ತನೆಯಿದೆ. ತುದಿಯಲ್ಲಿ ತರಂಗ ಬೋದಿಗೆಗಳ ರಚನೆ ಸಹ ಕಂಡುಬರುತ್ತದೆ.

ಎರಡನೆಯ ಮಾದರಿಯ ಕಂಬಗಳು: ಇವುಗಳಿಗೆ ಸರಳವಾದ ಪೀಠವಿದ್ದು, ಕಾಂಡಭಾಗ ಹಲವು ಲಂಬಕೋನಗಳಾಗಿ ವಿಭಜಿಸಲ್ಪಟ್ಟಿದೆ; ಕಾಂಡದ ಮಧ್ಯ ಭಾಗ ವೃತ್ತಾಕಾರವಾಗಿದೆ. ಮೇಲ್ಗಡೆ ಚೂಪಾದ ಆಕಾರವನ್ನು ಟೊಳ್ಳು ತಟ್ಟೆಯಾಕಾರವಾಗಿದ್ದು, ಕಾಂಡಭಾಗದಲ್ಲಿ ಅತ್ಯಂತ ಸೂಕ್ಷ್ಮವಾದ ಕುಸುರಿ ಕೆತ್ತನೆಗಳಿದ್ದು ಅಲ್ಲಿರುವ ವ್ಯಾಳ ಚಿತ್ರ, ಅದರ ಬಾಯಿಂದ ಹೊರಹೊಮ್ಮುತ್ತಿರುವ ಮುತ್ತಿನ ಸಾಲುಗಳು, ತಾವರೆ ಹೂವಿನ ದಳದ ಅಲಂಕಾರ, ಹಗ್ಗದ ಅಲಂಕಾರ ಮನಸೆಳೆಯುವಂತಿದೆ. ಇಂತಹ ಕಂಬಗಳು ಗುಡ್ಡದ ಬಸದಿಯಲ್ಲಿ ಇರುವ ಪ್ರಾಚೀನ ದೇವಾಲಯದ ಅವಶೇಷಗಳಲ್ಲಿ ಮಾತ್ರ ಕಂಡುಬರುತ್ತಿದ್ದು, ಇದರ ಕಾಲ ಸು.9ನೆಯ ಶತಮಾನವಾಗಿದೆ.

ಅನಂತರದ ದೇವಾಲಯಗಳ ಕಂಬಗಳು ತಿರುಗುಯಂತ್ರದಿಂದ ಮಾಡಿದ ಕಂಬಗಳು. ಇವುಗಳನ್ನು ಪಂಚಬಸದಿಯ ತೆರೆದ ಮಂಟಪದಲ್ಲಿ ಹಾಗೂ ಆ ಬಸದಿಯ ಮುಂಭಾಗದಲ್ಲಿ ರುವ ಬಲಿಪೀಠದ ಸುತ್ತ ಇರುವ ಕಲ್ಲಿನ ಮಂಟಪದಲ್ಲಿ ವೀಕ್ಷಿಸಬಹುದಾಗಿದೆ. ಸಾಮಾನ್ಯವಾಗಿ ಇವು ಅಡ್ಡ ಮಡಿಕೆಗಳುಳ್ಳ ಪೀಠದ ಮೇಲಿದ್ದು, ಕಾಂಡಭಾಗದ ಕೆಳಭಾಗ ಹಾಗೂ ಚೌಕಾಕಾರ ವಾಗಿದ್ದು, ಮೇಲಿನ ಕಾಂಡಭಾಗ ಗಂಟೆಯಾಕಾರದಂತೆ ಕಂಡುಬರುತ್ತದೆ. ಕಾಂಡದ ಮೇಲೆ ವೃತ್ತಾಕಾರದ ದಿಂಬು, ಇದರ ಮೇಲೆ ಸರಳವಾದ ಬೋದಿಗೆಗಳು ಇವೆ. ಇವುಗಳ ಅಲಂಕಾರ ದಲ್ಲಿ ಕೆಲವೊಂದು ಸರಳ ಬದಲಾವಣೆಯನ್ನು ಹೊರತು ಪಡಿಸಿದರೆ, ಇವೆಲ್ಲವೂ ಸು.11ನೆಯ ಶತಮಾನದ ಕಂಬದ ಮಾದರಿಗಳಂತಿವೆ.

ಪಂಚಕೂಟದ ಒಳಭಾಗದ ಮುಚ್ಚಿದ ಮಂಟಪದಲ್ಲಿ ಐದು ಕಂಬಗಳ ಒಂದು ಸಾಲಿದೆ. ಮಧ್ಯಭಾಗದ ಕಂಬ ಸರಳವಾದ ಪೀಠದ ಮೇಲಿದ್ದು, ಇದರ ಕೆಳ ಕಾಂಡಭಾಗ ಸರಳ ಚಚ್ಚೌಕಾರ ಮಧ್ಯಭಾಗದಲ್ಲಿ ಅಷ್ಟಪಟ್ಟಿಕೆಗಳನ್ನಾಗಿ ಮಾಡಿದ್ದು, ಮೇಲ್ಭಾಗವು ಸರಳವಾದ ಚಚ್ಚೌಕಾಕಾರವಾಗಿದೆ. ಮೇಲಿನ ಭಾಗದಲ್ಲಿ ಕಿರಿದಾದ ಗಂಟೆಯಾಕಾರದಂತಿದ್ದು, ಅದರ ಮೇಲೆ ವೃತ್ತಾಕಾರದ ಒರಗು ದಿಂಬಿನಾಕಾರದ ಕುಂಭವಿದೆ.

ದೇವಾಲಯ ಶಿಖರಗಳು: ಕಮಠೇಶ್ವರ ದೇವಾಲಯ, ಬೋಗಾರ ಬಸದಿ, ಪಾರ್ಶ್ವನಾಥ ದೇವಾಲಯ, ಪಂಚಕೂಟ ಬಸದಿ ಹಾಗೂ ಬಿಲ್ಲೇಶ್ವರ ದೇವಾಲಯದ ಸಮುಚ್ಚಯದಲ್ಲಿ ಕಂಡುಬರುವ ಎರಡು ಪುಟ್ಟ ದೇವಾಲಯಗಳ ಶಿಖರಗಳು ಗಮನಾರ್ಹ.

ಕಮಠೇಶ್ವರ ದೇವಾಲಯದ ಮೇಲೆ ಏಕಕೂಟ ದ್ರಾವಿಡ ವಿಮಾನದ ರಚನೆ ಕಂಡುಬರು ತ್ತದೆ. ಇದರಲ್ಲಿ ಛತ್ತಿನಂಚಿನಲ್ಲಿ ಹಾರದ ರಚನೆ ಇಲ್ಲ. ಆದರೆ, ಗರ್ಭಗೃಹದ ಶಿಖರ ಭಾಗದಲ್ಲಿ ಫಲಕದ ಕೆಳಗೆ ಎರಡು ಮುಂಚಾಚಿರುವ ಕಲ್ಲಿನ ಸಾಲಿದ್ದು ಇದು ಮೂಲತಃ ಮರದ ವಾಸ್ತು ಶಿಲ್ಪಮಾದರಿಯ ಪ್ರಭಾವವನ್ನು ಇಲ್ಲಿ ತೋರಿಸುತ್ತದೆ. ಹಾಗೆಯೇ ಶಿಖರದ ಮೇಲ್ತುದಿಯಲ್ಲಿ ಚಚ್ಚೌಕಾಕಾರದ ನಾಗರ ಸ್ತೂಪಿಯಿದೆ.

ಬೋಗಾರ ಬಸದಿಯ ಶಿಖರವೂ ದ್ರಾವಿಡ ಮಾದರಿಯದಾಗಿದೆ. ಇದು ಸಹ ದ್ವಿತಲವಾ ಗಿದೆ. ಈಗ ಹೊಸದಾಗಿ ಹಾಕಿದ ಹೊರಗಿನ ಹೊದಿಕೆ ಮೂಲ ಶಿಖರವನ್ನು ಮರೆಮಾಚಿದೆ. ಈ ದೇವಾಲಯ ಪ್ರಸ್ತುತ ಗ್ರೀವ ಸಹಿತ ಕಪೋತವನ್ನು ಹೊಂದಿದ್ದು ಕೆಳಗಡೆ ಶಾಲಾ, ಕೂಟಗಳ ರಚನೆಗಳು ಕಂಡುಬರುತ್ತವೆ. ಶಾಲಾ, ಕೂಟಗಳ ಮಧ್ಯದಲ್ಲಿ ಚೈತ್ಯನಾಸಿಗಳಿದ್ದು, ನಾಸಿಗಳ ಮಧ್ಯದಲ್ಲಿ ಕಿನ್ನರ ಶಿರ ಹಾಗೂ ವ್ಯಾಳದ ಸುಂದರ ಕೆತ್ತನೆಗಳು ಕಂಡುಬರುತ್ತವೆ.

ಪಾರ್ಶ್ವನಾಥ ದೇವಾಲಯದ (ಪಂಚಕೂಟ ಆವರಣದಲ್ಲಿರುವುದು) ಶಿಖರದ ರಚನೆ ಸ್ವಲ್ಪ ಮುಂದುವರೆದ ದ್ರಾವಿಡ ಪ್ರಾಸಾದ ರಚನೆಯಾಗಿದೆ. ಈ ದೇವಾಲಯ ದ್ವಿತಲವಾಗಿದ್ದು ದೇವಾಲಯದ ಮೇಲೆ ಆದಿತಲ ಪುನರಾವರ್ತನೆಗೊಂಡು ಅದರ ಮೇಲ್ಗಡೆ ಶಿಖರ ಕಂಡುಬರುತ್ತದೆ. ಬ್ರಹ್ಮಾಛಂದ ರೀತಿಯ ಶಿಖರದ ಮೇಲೆ ಸ್ತೂಪ ಇದೆ. ಪಂಚಕೂಟ ಬಸದಿಯ ಮೇಲ್ಛಾವಣಿಯನ್ನು ಹೆಂಚಿನ ಇಳಿಜಾರಿನ ಮಾಡು ಪೂರ್ತಿಯಾಗಿ ಮರೆಮಾಡಿ ರುವುದರಿಂದ ಆ ಶಿಖರದ ಮೂಲ ಸ್ವರೂಪವನ್ನು ಸರಿಯಾಗಿ ಅರಿಯಲು ಸಾಧ್ಯವಾಗಿಲ್ಲ.

ಬಿಲ್ಲೇಶ್ವರ ದೇವಾಲಯ ಸಮುಚ್ಚಯದಲ್ಲಿ ಕದಂಬ ನಾಗರ (ಫಾಂಸನ) ಮಾದರಿಯ ಶಿಖರವಿದೆ.

ಸಾಂತರರ ಕಲಾ ಶೈಲಿಯನ್ನು ಅಭಿವ್ಯಕ್ತಗೊಳಿಸುವ ಉಳಿದ ವಾಸ್ತುಕೃತಿಗಳು ಮಾನಸ್ತಂಭದ ರಚನೆ ಹಾಗೂ ಮಕರ ತೋರಣಗಳು. ಹುಂಚದಲ್ಲಿ ಕೇವಲ ಎರಡು ಮಾನಸ್ತಂಭಗಳಿದ್ದು, ಒಂದು ಪದ್ಮಾವತಿ ದೇವಾಲಯದ ಪಕ್ಕದಲ್ಲಿರುವ ಪಾರ್ಶ್ವನಾಥ ಜೈನಮಂದಿರದ ಮುಂದಿದೆ. ಇದು ಅತ್ಯಂತ ಸರಳವಾಗಿದ್ದು ವಾಸ್ತುಮಾದರಿಯ ದೃಷ್ಟಿಯಿಂದ ವಿಶೇಷವಾಗಿಲ್ಲ. ಆದರೆ ಪಂಚಕೂಟ ಬಸದಿ ಮುಂದೆ ಇರುವ ಮಾನಸ್ತಂಭ ವಿಶೇಷವಾಗಿದೆ. ಇದು ಸು.15 ಮೀ ಎತ್ತರದ ಸ್ತಂಭ. ಇದನ್ನು ಮೂರು ಹಂತದ ಶಿಲಾ ವೇದಿಕೆಯ

ಮೇಲೆ ನಿರ್ಮಿಸಿದ್ದು, ವೇದಿಕೆ ಅತ್ಯಂತ ಸುಂದರವಾದ ಕೆತ್ತನೆಯಿಂದ ಕೂಡಿದೆ. ವೇದಿಕೆಯ ಅತ್ಯಂತ ಕೆಳಗಿನ ಭಾಗದಲ್ಲಿ ನಾಲ್ಕು ಮೂರ್ತಿಗಳು ಹಾಗೂ ಪಟ್ಟಿಕೆಯ ಮಧ್ಯದಲ್ಲಿ ನಾಲ್ಕು, ಒಟ್ಟು ಅಷ್ಟ ದಿಗ್ಗಜಗಳ ದುಂಡುಶಿಲ್ಪದ ಕೆತ್ತನೆಯಿದೆ. ಈ ಆನೆಗಳ ನಡುವೆ ಸಿಂಹಗಳ ಉಬ್ಬುಶಿಲ್ಪಗಳಿವೆ. ವೇದಿಕೆಯ ಹಂತದಲ್ಲಿ ನಾಲ್ಕು ದಿಕ್ಕುಗಳ ಪಟ್ಟಿಕೆಯಲ್ಲಿ ಅಷ್ಟದಿಕ್ಪಾಲಕರ ಶಿಲ್ಪ ಪಟ್ಟಿಕೆಯಿದೆ. ಅಷ್ಟ ದಿಕ್ಪಾಲಕರು ತಮ್ಮ ಪರಿವಾರ ಸಮೇತರಾಗಿ, ಸಂಗೀತ, ನೃತ್ಯ ವಾದ್ಯಗೋಷ್ಠಿಗಳೊಡನೆ ಚಲಿಸುತ್ತಿರುವಂತೆ ಕಂಡರಿಸಲಾಗಿದೆ. ವೇದಿಕೆಯ ಮೇಲ್ಭಾಗದಲ್ಲಿರುವ ಸಣ್ಣಗಾತ್ರದ ಮಿಥುನ ಶಿಲ್ಪಗಳ ಕೆತ್ತನೆಗಳು ಈ ಮಾನಸ್ತಂಭದ ವಿಶೇಷವಾಗಿದೆ. ಮಾನಸ್ತಂಭ ಕೆಳಗೆ ಚೌಕಾಕಾರವಾಗಿದ್ದು ಮೇಲೆ ಹೋದಂತೆ ಅಷ್ಟಭುಜಾಕಾರಕ್ಕೆ ತಿರುಗಿ, ಅನಂತರ ವೃತ್ತಾಕಾರವನ್ನು ಪಡೆದುಕೊಂಡಿದೆ. ಕಂಬದ ಮೇಲಿನ ಭಾಗದಲ್ಲಿ ಕಲ್ಲಿನ ಒಂದು ಸಣ್ಣ ಮಂಟಪವಿದ್ದು ಅದರಲ್ಲಿ ನಾಲ್ಕು ದಿಕ್ಕಿಗೂ ಮುಖ ಮಾಡಿರುವ ನಾಲ್ಕು ಜಿನ ಬಿಂಬಗಳಿವೆ.

ಮಕರ ತೋರಣಗಳು: ಸಾಂತರರ ವಾಸ್ತುಶಿಲ್ಪ ಮಾದರಿಯ ಇನ್ನೊಂದು ಪ್ರಮುಖ ಲಕ್ಷಣವೇನೆಂದರೆ ಇಲ್ಲಿ ಕಂಡುಬರುವ ಅತ್ಯಂತ ಸೂಕ್ಷ್ಮ ಕುಸುರಿ ಕೆತ್ತನೆಯ ಮಕರ ತೋರಣಗಳು. ಇವು ಸಾಮಾನ್ಯವಾಗಿ ದೇವಾಲಯದ ದ್ವಾರಕಾಂತಿಯ ಭಾಗದಲ್ಲಿದ್ದು ಎರಡು ಸರಳವಾದ ಕಲ್ಲುಕಂಬಗಳ ಮೇಲೆ ಅಡ್ಡಲಾಗಿ ನಿರ್ಮಿಸಲ್ಪಟ್ಟಿರುತ್ತದೆ. ಪಂಚಕೂಟವನ್ನು ಹೊರತುಪಡಿಸಿದರೆ ಬೇರೆ ಎಲ್ಲೂ ಮಕರ ತೋರಣ ಅದರ ನಿರ್ದಿಷ್ಟ ಸ್ಥಾನದಲ್ಲಿಲ್ಲ. ಪಾರ್ಶ್ವನಾಥ ದೇವಾಲಯದ ಆವರಣದಲ್ಲಿ ಇರಿಸಿರುವ ಪ್ರಾಚೀನ ಅವಶೇಷಗಳಲ್ಲಿ ಇಂತಹ ಹಲವು ಮಕರ ತೋರಣಗಳ ಅವಶೇಷಗಳನ್ನು ನೋಡಬಹುದಾಗಿದೆ. ಮಕರ ತೋರಣ ಹೆಸರೇ ಸೂಚಿಸುವಂತೆ ಸುಂದರವಾದ ಮಕರಗಳಿಂದ ಕೂಡಿದ್ದು ಮಧ್ಯದಲ್ಲಿ ಗಜಲಕ್ಷ್ಮಿ ಅಥವಾ ತೀರ್ಥಂಕರನ ಶಿಲ್ಪವನ್ನು ಹೊಂದಿರುತ್ತದೆ. ಮೇಲೆ ಕೀರ್ತಿಮುಖದ ರಚನೆಯಿದ್ದು, ಅಲ್ಲಿಂದ ಹೊರಹೊಮ್ಮಿದ ಮಕರ ಅತ್ಯಂತ ಸುಂದರವಾಗಿದ್ದು, ಕೆಲವೊಮ್ಮೆ ಅದರ ಮೇಲೆ ಸವಾರರನ್ನು ಕಾಣಬಹುದಾಗಿದೆ. ಹಾಗೆಯೇ ಕೆಲವು ಮಕರ ತೋರಣ ಪಟ್ಟಿಯಲ್ಲಿ ಆನೆ, ಟಗರು, ಕುದುರೆ ಮುಂತಾದ ಅನೇಕ ಅಲಂಕಾರಗಳಿದ್ದು ನೋಡುಗರ ಮನಸೆಳೆಯುತ್ತವೆ.

ಮೂರ್ತಿಶಿಲ್ಪ: ಸಾಂತರರ ಕಾಲದ ಕೆಲವು ಮೂರ್ತಿಶಿಲ್ಪಗಳು ಹುಂಚದ ದೇವಾಲಯ ಅಥವಾ ಬಸದಿಗಳಲ್ಲಿವೆ. ಅವುಗಳನ್ನು ವೈಷ್ಣವ, ಶೈವ, ಜೈನ ಎಂದು ವಿಂಗಡಿಸಬಹುದಾಗಿದೆ. ಈ ಶಿಲ್ಪಗಳಲ್ಲದೆ ಹುಂಚ ಪ್ರಾಂತದಲ್ಲಿ ಅನೇಕ ಜೈನ ತೀರ್ಥಂಕರರ ಮೂರ್ತಿಗಳು ಹಾಗೂ ಜೈನ ಯಕ್ಷ ಹಾಗೂ ಯಕ್ಷಿಯರ ಶಿಲ್ಪಗಳಿವೆ. ಹಾಗೆಯೇ ಕೆಲವು ಶೈವ ಶಿಲ್ಪಗಳು ಲಭ್ಯವಾಗಿವೆ. ಆದರೆ ಮೂರ್ತಿಶಿಲ್ಪ ಶಾಸ್ತ್ರದ ಹಿನ್ನೆಲೆಯಲ್ಲಿ ಅತ್ಯಂತ ವಿಶಿಷ್ಟವೆನಿಸಿರುವ ಕೇವಲ ನಾಲ್ಕು ಶಿಲ್ಪಗಳನ್ನು ಇಲ್ಲಿ ವಿವರಿಸಲಾಗಿದೆ.

ನಾಟ್ಯ ವಿಷ್ಣುಮೂರ್ತಿ ಶಿಲ್ಪಫಲಕ: ಈ ಮೂರ್ತಿ ಶಿಲ್ಪಫಲಕ ಇತ್ತೀಚೆಗಷ್ಟೆ ಹುಂಚದ ಪಂಚಕೂಟ ಬಸದಿಯ ಆವರಣದಲ್ಲಿ ದೇವಾಲಯದ ಜೀರ್ಣೋದ್ಧಾರ ಕೆಲಸ ನಡೆಯುತ್ತಿರುವಾಗ ಆಕಸ್ಮಿಕವಾಗಿ ಬೆಳಕಿಗೆ ಬಂದಿತು. ಈ ಫಲಕ ಇದೇ ದೇವಾಲಯದ ಮಂಟಪದ ಮೇಲ್ಛಾವಣಿಯ ಭಾಗವಾಗಿರಬಹುದೆಂದು ಊಹಿಸಲಾಗಿದೆ. ಏಕೆಂದರೆ, ದೇವಾಲಯದ ಆವರಣದಲ್ಲಿ ಅನೇಕ ಅಷ್ಟ ದಿಕ್ಪಾಲಕರ ಉಬ್ಬುಶಿಲ್ಪ ಫಲಕಗಳಿದ್ದು, ಈ ಫಲಕ ಅದೇ ಫಲಕಗಳ ಮಧ್ಯದ ಭಾಗವಾಗಿರಬಹುದೆಂದು ಊಹಿಸಲಾಗಿದೆ. ಇದೊಂದು ಕರಿಶಿಲೆಯಿಂದ ಮಾಡಲ್ಪಟ್ಟ ಸುಂದರವಾದ ಉಬ್ಬುಶಿಲ್ಪದ ಕೆತ್ತನೆಯಾಗಿದೆ. ಈ ಫಲಕದ ಮಧ್ಯದಲ್ಲಿ ನೃತ್ಯಭಂಗಿಯಲ್ಲಿರುವ ಅಷ್ಟಭುಜ ವಿಷ್ಣುವಿನ, ಅವನ ನೃತ್ಯಕ್ಕೆ ವಾದ್ಯವನ್ನು ನುಡಿಸುತ್ತಿರುವ ಬ್ರಹ್ಮ ಹಾಗೂ ರುದ್ರರ ಕೆತ್ತನೆ ಅತ್ಯಂತ ಮನಸೆಳೆಯುವಂತಿದೆ. ವಿಷ್ಣುವಿನ ಎಡಬಲಗಳಲ್ಲಿ ಶ್ರೀದೇವಿ ಹಾಗೂ ಭೂದೇವಿಯ ಪುಟ್ಟ ಶಿಲ್ಪಗಳಿವೆ. ಫಲಕದ ಮೇಲ್ಭಾಗದಲ್ಲಿ ಆಕಾಶದಲ್ಲಿ ಹಾರುತ್ತಿರುವ ವಿದ್ಯಾಧರರ ಸುಂದರ ಕೆತ್ತನೆ ಇದೆ. ವಿಷ್ಣು ಶಿಲ್ಪ ತಲೆಯಿಂದ ಪಾದದವರೆಗೆ ಸುಂದರವಾದ ಕಿರೀಟ, ಮಕರ ಕುಂಡಲಗಳು, ಕಂಠಹಾರ, ಪಕ್ಷಹಾರ, ಭುಜಕೀರ್ತಿ, ಕೇಯೂರ, ಕಂಕಣ, ಕಡಗ, ನೂಪುರಗಳಿಂದ ಅಲಂಕರಿಸಲ್ಪಟ್ಟಿದೆ. ಆದರೆ ಈ ಮೂರ್ತಿಯ ವಿಶೇಷವೇನೆಂದರೆ ಎಂಟು ಹಸ್ತಗಳಲ್ಲಿರುವ ವಿಶೇಷಣಗಳು ಮತ್ತು ಮುದ್ರೆಗಳು. ಬಲಗಡೆ ಅಭಯ ಮುದ್ರೆಯ ಸ್ತ್ರೀ ವಿಗ್ರಹವಿದೆ. ಅಂಜಲಿ ಮುದ್ರೆಯಲ್ಲಿರುವ ಪುರುಷಾಕೃತಿ ಮತ್ತು ಚಕ್ರ; ಎಡಗೈಗಳಲ್ಲಿ ಮೇಲಿನಿಂದ ಶಂಖ, ಅಂಜಲಿ ಮುದ್ರೆಯಲ್ಲಿರುವ ಪುರುಷಾಕೃತಿ, ಸ್ತ್ರೀ ಮೂರ್ತಿ ಹಾಗೂ ಎಡಗಡೆಯ ಕೆಳಗಿನ ಕೈ ಗಜಹಸ್ತ ಅಥವಾ ದಂಡಹಸ್ತದಲ್ಲಿದೆ. ಇಲ್ಲಿ ವಿಷ್ಣುವಿನ ಮಧ್ಯದ ಕೈಗಳಲ್ಲಿ ಹಿಡಿದಿರುವ ಸ್ತ್ರೀ ವಿಗ್ರಹ ಹಾಗೂ ಅಂಜಲಿ ಮುದ್ರೆಯಲ್ಲಿರುವ ಪುರುಷಾಕೃತಿಗಳು ಅತ್ಯಂತ ವಿಶೇಷವಾಗಿದ್ದು, ಅವುಗಳು ಅವನ ಆಯುಧ ಪುರುಷರಾಗಿರಬಹುದು.

ಶ್ರೀದೇವಿ, ಭೂದೇವಿಯ ಶಿಲ್ಪಗಳಲ್ಲಿ ಕಿರೀಟವಿಲ್ಲ. ಸಣ್ಣ ಪೀಠದ ಮೇಲೆ ನಿಂತಿರುವ ಇವರು ಬಹುಬೀಜ ಫಲವನ್ನೂ ಇನ್ನೊಂದರಲ್ಲಿ ತಾವರೆ ಹೂವನ್ನೂ ಹಿಡಿದಿದ್ದಾರೆ. ವೃತ್ತ ಕುಂಡಲ, ಕಂಠಹಾರ, ವಕ್ಷಹಾರ, ಕಂಕಣ, ಕಡಗ, ಪೈಜಿಣಿಗಳಿಂದ ಅಲಂಕರಿಸಲ್ಪಟ್ಟಿದ್ದಾರೆ. ನೆರಿಗೆಗಳಿರುವ ಪೀತಾಂಬರವನ್ನು ಹಿಡಿದಿರುವ ಕಟಿಬಂಧ ಸುಂದರವಾಗಿದೆ.

ವಿಷ್ಣುವಿನ ವಾದ್ಯದವನಾಗಿ ಫಲಕದ ಎಡಭಾಗದ ಕೆಳಗಡೆ ದ್ವಿಭುಜ ರುದ್ರನ ಉಬ್ಬು ಶಿಲ್ಪವಿದ್ದು, ಅವನು ನೃತ್ಯಕ್ಕೆ ತಾಳವನ್ನು ಬಾರಿಸುತ್ತಿದ್ದಾನೆ. ರುದ್ರನಿಗೆ ಸರಳವಾದ ಹಾರ ಹಾಗೂ ವೃತ್ತ ಕುಂಡಲಗಳ ಅಲಂಕಾರ ಮಾತ್ರ ಇದ್ದು, ಅವನನ್ನು ರುದ್ರನೆಂದು ಗುರುತಿಸಲು ಖಟಾಂಗವನ್ನು ಮೇಲೆ ಕೆತ್ತನೆ ಮಾಡಿದ್ದಾರೆ.

ಈ ಫಲಕದ ಬಲಭಾಗದ ಅಂಚಿನಲ್ಲಿ ಇನ್ನೊಬ್ಬ ವಾದ್ಯಗಾರನಾಗಿ ಚತುರ್ಭುಜ ಬ್ರಹ್ಮನ ಉಬ್ಬುಶಿಲ್ಪವಿದೆ. ಆದರೆ ಬ್ರಹ್ಮ ಒಂದೇ ಮುಖವನ್ನು ಹೊಂದಿದ್ದು, ಅವನ ತಲೆಯ ಮೇಲೆ ಕರಂಡ ಮಕುಟದ ಅಲಂಕಾರವಿದೆ. ಕಿವಿಯಲ್ಲಿ ವೃತ್ತಕುಂಡಲಗಳಿವೆ. ಸಣ್ಣ ಪೀಠದ ಮೇಲೆ ವಿರಾಜಮಾನನಾಗಿರುವ ಇವನು ಕೆಳಗಿನ ಎರಡು ಕೈಗಳಿಂದ ಕಾಲುಗಳ ಮಧ್ಯ ಹಿಡಿದಿರುವ ಘಟವನ್ನು ಬಾರಿಸುತ್ತಿದ್ದಾನೆ. ಮೇಲಿನ ಕೈಗಳಲ್ಲಿ ಅಕ್ಷರಮಾಲ ಹಾಗೂ ಪುಸ್ತಕಗಳನ್ನು ಕಾಣಬಹುದಾಗಿದೆ.

ಆಕಾಶದಲ್ಲಿ ಹಾರುತ್ತಿರುವ ವಿದ್ಯಾಧರರು ಒಂದು ಕೈಯಲ್ಲಿ ನೀಲೋತ್ಪಲ (ತಾವರೆ ಮೊಗ್ಗಿನ) ದಂಟನ್ನು ಹಿಡಿದಿದ್ದು, ಇನ್ನೊಂದು ಕೈ ವಿಷ್ಣುವಿನ ನಾಟ್ಯವನ್ನು ಆನಂದಿಸುತ್ತಿರುವಂತೆ ಹಾಗೂ ಹೊಗಳುತ್ತಿರುವಂತೆ ಎತ್ತಿ ಹಿಡಿದಿದೆ. ತಲೆಯಲ್ಲಿ ಶಿರಪಟ್ಟಿಯಿದ್ದು ವೃತ್ತಕುಂಡಲ, ವಕ್ಷಹಾರ, ಯಜ್ಞೋಪವೀತದ ಅಲಂಕಾರವಿದೆ. ವಿಷ್ಣು ತನ್ನ ಮೂರನೆಯ ಕೈಗಳಲ್ಲಿ ಹಿಡಿದಿರುವ ಪುರುಷಾಕೃತಿಗೆ ಗುಂಗುರು ಕೂದಲಿನ ಅಲಂಕಾರವಿದೆ.

ಒಂದು ಸಣ್ಣ ಶೈವ ದೇವಾಲಯದ ಹಿಂದಿನ ಹಾಗೂ ಎಡಗೋಡೆಗಳ ಮೇಲೆ ಈ ಮುಂದೆ ನಿರೂಪಿಸಿರುವಂತೆ ಎರಡು ವಿಶೇಷ ಶೈವ ಶಿಲ್ಪಗಳ ಫಲಕವಿದೆ.

ಮಹಾದೇವ ಶಿಲ್ಪ: ದೇವಾಲಯದ ಹಿಂದಿನ ಗೋಡೆಯಲ್ಲಿ ಚೆಲುವಾದ ಶಿಲ್ಪವೊಂದಿದೆ. ಇದನ್ನು ಹಂಪ ನಾಗರಾಜಯ್ಯ ಅವರು ತ್ರೈಪುರುಷನೆಂದು ಗುರುತಿಸಿದ್ದಾರೆ. ಆದರೆ ಮೂರ್ತಿ ಶಿಲ್ಪದ ಲಕ್ಷಣಗಳ ಆಧಾರದ ಮೇಲೆ ಅ.ಸುಂದರ ಅವರು ಇದನ್ನು ಮಹಾದೇವ ಶಿಲ್ಪವೆಂದಿದ್ದಾರೆ. ಕರ್ನಾಟಕದಲ್ಲಿ ಮಹಾದೇವ ಮೂರ್ತಿ ಶಿಲ್ಪ ಅತ್ಯಲ್ಪವಾಗಿವೆ. ಈ ಮೂರ್ತಿಯನ್ನು ಶಿರದಿಂದ ಪಾದದವರೆಗೆ ಕೆತ್ತಿರುವುದು ವಿಶೇಷ. ಇದು ಮೂರು ಮುಖಗಳಿಂದ ಕೂಡಿದೆ. ಸಿದ್ಧಾಸನದಲ್ಲಿರುವ ಈ ಚತುರ್ಭುಜ ಶಿಲ್ಪದ ಹಿಂದಿನ ಎರಡು ಕೈಗಳು ಸರ್ಪವನ್ನೂ ಕನ್ನಡಿಯನ್ನೂ (ತಾವರೆ ಹೂವು?) ಹಿಡಿದಿವೆ. ಮುಂದಿನ ಬಲಗೈ ಮುಕ್ಕಾಗಿದೆ. ಮುಂದಿನ ಎಡಗೈಯಲ್ಲಿ ತೊಡೆಯ ಮೇಲಿರುವ ಗುರುತಿಸಲು ಸಾಧ್ಯವಾಗಿಲ್ಲದ ವಸ್ತುವಿದೆ. ತ್ರಿಮುಖ ಶಿವನ ಮಧ್ಯದ ಮುಖ ಶಾಂತ ರೀತಿಯಿಂದಿದ್ದು, ಅದು ಸದ್ಯೋಜಾತ ಶಿವನೆಂದೂ ಸರ್ಪವನ್ನು ಹಿಡಿದಿರುವ ಕೈಯ ಭಾಗದ ಮುಖ ಕಠೋರತೆಯಿಂದ ಕೂಡಿದ್ದು, ಅದು ಅಘೋರ ಶಿವನೆಂದೂ ಕನ್ನಡಿಯನ್ನು ಹಿಡಿದಿರುವ ಶಿವನ ಮುಖ ಸ್ತ್ರೀ ಮುಖದಂತಿದ್ದು, ಅದು ವಾಮದೇವ ಶಿವನೆಂದೂ ಗುರುತಿಸಬಹುದಾಗಿದೆ. ವಾಮದೇವನ ಶಿವ ಸ್ವರೂಪ ಹಾಗೂ ಪಾರ್ವತಿಯರನ್ನು ಪ್ರತಿಬಿಂಬಿಸುತ್ತಿದ್ದು, ಅವನ ಕೈಯಲ್ಲಿರುವ ಕನ್ನಡಿ ಅದನ್ನು ಸೂಚ್ಯವಾಗಿ ತೋರಿಸುವಂತಿದೆ. ಉಬ್ಬುಶಿಲ್ಪವಾದುದರಿಂದ ಕೆಲವೇ ಕೆಲವು ಆಭರಣಗಳಿಂದ ಅಲಂಕರಿಸಲಾಗಿದೆ. ತತ್ತ್ವ ಸೂಚಿಸುವ ಶಿರವನ್ನು ತೋರಿಸ ಲಾಗುವುದಿಲ್ಲ. ಶೈಲಿ ದೃಷ್ಟಿಯಿಂದ ಮೂರ್ತಿ ಸು.8 ಅಥವಾ 9ನೆಯ ಶತಮಾನದ್ದಾಗಿರ ಬಹುದೆಂದು ಅಂದಾಜಿಸಲಾಗಿದೆ. ಮಕರ ತೋರಣದಲ್ಲಿರುವ ಈ ಶಿಲ್ಪ ಒಂದು ಉತ್ತಮ ಕಲಾಕೃತಿ.

ಪರಿವಾರಸಮೇತನಾದ ವೃಷಭರೂಢ ಶಿವನ ಶಿಲ್ಪ: ಇದೇ ದೇವಾಲಯದ ಎಡ ಗೋಡೆಯ ಮೇಲೆ ಮೂಡಿಸಿರುವ ಉಬ್ಬು ಶಿಲ್ಪವಾಗಿದೆ. ಇಲ್ಲಿ ವೃಷಭಾರೂಢನಾದ ಚತುರ್ಭುಜ ಶಿವನ ಅತ್ಯಂತ ಸುಂದರವಾದ ಕೆತ್ತನೆಯಿದೆ. ಶಿವನ ಹಿಂದಿನ ಕೈಗಳಲ್ಲಿ ತ್ರಿಶೂಲ ಹಾಗೂ ಡಮರುಗಗಳಿದ್ದು, ಮುಂದಿನ ಬಲಗೈ ವೃಷಭದ ಡುಬ್ಬದ ಮೇಲಿದೆ. ಎಡಗೈಯಲ್ಲಿ ಅಸ್ಪಷ್ಟ ವಸ್ತುವೊಂದಿದೆ. ಪ್ರಾಯಶಃ ಇದು ಕಪಾಲಪಾತ್ರೆಯಾಗಿರಬಹುದು. ಶಿವನ ತಲೆಯ ಮೇಲೆ ಅವನ ಪರಿಚಾರಕರು ದೊಡ್ಡ ಛತ್ರವನ್ನು (ಪಾರ್ಸಲ್) ಹಿಡಿದಿದ್ದಾರೆ. ವೃಷಭದ ಶರೀರ ರಚನೆ ಸಹಜವಾಗಿದ್ದು ಸುಂದರವಾಗಿದೆ. ಶಿವನ ಮುಂಭಾಗದಲ್ಲಿ ಅಲಂಕಾರ ಭೂಷಿತಳಾದ ಪಾರ್ವತಿ, ಗಣೇಶ ಹಾಗೂ ಮಯೂರರೂಢ ಕಾರ್ತಿಕೇಯನ ಸಣ್ಣ ಉಬ್ಬುಶಿಲ್ಪಗಳಿವೆ. ಪಾರ್ವತಿಯ ಬಲಗೈಯಲ್ಲಿ ಕಳಶವಿದೆ; ತಲೆಯ ಮೇಲೆ ಛತ್ರವಿದೆ. ಅವಳ ತಲೆಯ ಕೂದಲನ್ನು ಶಂಖಾಕಾರದಲ್ಲಿ ಹೆರಳು ಹಾಕಲಾಗಿದೆ. ಗಣೇಶನ ಕೈಯಲ್ಲಿ ಮೋದಕ ಪಾತ್ರೆಯಿದೆ. ಈ ಶಿಲ್ಪ ಶೈಲಿಯಿಂದ ಸು.8 ಅಥವಾ 9ನೆಯ ಶತಮಾನದ್ದಾಗಿರ ಬಹುದೆಂದು ಹೇಳಬಹುದು.

ಕಮಠೋಪಸರ್ಗ ಪಾರ್ಶ್ವನಾಥ: ಇಲ್ಲಿಯ ವಿಶೇಷ ಜೈನ ಶಿಲ್ಪವೆಂದರೆ, ಒಂದೇ ಮಾದರಿಯ ಎರಡು ಕಮಠೋಪಸರ್ಗ ಪಾರ್ಶ್ವನಾಥ ಶಿಲ್ಪಗಳು. ಇವು ಇಂದಿನ ಪದ್ಮಾವತಿ ದೇವಿಯ ದೇವಾಲಯದ ಪಕ್ಕದಲ್ಲಿರುವ ಪಾರ್ಶ್ವನಾಥ ದೇವಾಲಯದ ಮಂಟಪದ ಒಳಭಾಗದಲ್ಲಿಯ ಅಂತರಾಳದ ಬಾಗಿಲಿನ ಎರಡೂ ಬದಿಗಳಲ್ಲಿ ನಿಂತಿವೆ. ಇವುಗಳನ್ನು ಕಪ್ಪು ಹೊಳಪುಳ್ಳ ಬಳಪದ ಶಿಲೆಯಲ್ಲಿ ಕೆತ್ತಲಾಗಿದೆ. ಈ ಎರಡೂ ಮೂರ್ತಿಗಳು ಸು.1.5 ಮೀ ನಷ್ಟು ಎತ್ತರವಾಗಿದೆ. ಪಾರ್ಶ್ವನಾಥ ತೀರ್ಥಂಕರರು ಕೈವಲ್ಯ ಜ್ಞಾನವನ್ನು ಪಡೆಯಲು ತಪಸ್ಸಿಗೆ ನಿಂತಿದ್ದಾಗ ಕಮಠನು ಅವರಿಗೆ ನೀಡಿದ ಉಪಸರ್ಗಗಳನ್ನು ಅತ್ಯಂತ ಅದ್ಭುತವಾಗಿ ಶಿಲ್ಪಿಯು ಕೆತ್ತಿದ್ದಾನೆ. ಇಲ್ಲಿ ಪಾರ್ಶ್ವನಾಥನು ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವಂತಿದೆ. ಸುತ್ತಲೂ ಸುಂದರ ಪ್ರಭಾವಳಿ ಇದ್ದು, ಈ ಪ್ರಭಾವಳಿಯಲ್ಲಿ ಕಮಠೋಪಸರ್ಗಗಳ ಚಿತ್ರಣ ಕಂಡುಬರುತ್ತದೆ. ಹಾಗೆಯೇ ಈ ಕಮಠನ ಉಪಸರ್ಗದಿಂದ ಜಿನನಾಗುವ ಹಂತದಲ್ಲಿರುವ ಪಾರ್ಶ್ವನಾಥರನ್ನು ರಕ್ಷಿಸಲು ಧರಣೇಂದ್ರ ಸುರುಳಿ ಸುರುಳಿಯಾಗಿ ಪಾರ್ಶ್ವನಾಥರ ಹಿಂದೆ ಸುತ್ತಿಕೊಂಡು ತನ್ನ ಏಳು ಹೆಡೆಗಳನ್ನು ಪಾರ್ಶ್ವನಾಥರ ತಲೆಯ ಮೇಲೆ ಹಿಡಿದಿದ್ದು, ಅವರ ತಪಸ್ಸಿಗೆ ಕಮಠನ ಉಪಸರ್ಗಗಳಿಂದ ಭಂಗ ಬಾರದ ಹಾಗೆ ತಡೆಯುವ

ಪ್ರಯತ್ನದಲ್ಲಿರುವಂತೆ ಮೂಡಿಸಲಾಗಿದೆ. ಪಾರ್ಶ್ವನಾಥರ ಬಲಬದಿಯಲ್ಲಿ ಒಂದು ಕೈಯಲ್ಲಿ ಫಲವನ್ನು ಹಿಡಿದಿದ್ದು ಇನ್ನೊಂದು ಕೈಯನ್ನು ಜಂಘದ ಮೇಲೆ ಇರಿಸಿಕೊಂಡಿರುವ ಧರಣೇಂದ್ರ ಯಕ್ಷ, ಶಿಲ್ಪ ಸುಂದರವಾಗಿದೆ. ಅಂತೆಯೇ ಪಾರ್ಶ್ವನಾಥರ ಎಡಬದಿಯಲ್ಲಿ ಕಿರೀಟ ಮಕುಟಳಾದ ಪದ್ಮಾವತಿ ಯಕ್ಷಿಯು ತ್ರಿಭಂಗದಲ್ಲಿದ್ದು, ತನ್ನ ಕೈಗಳಿಂದ ದೊಡ್ಡದಾದ ಅತ್ಯಂತ ಸೊಗಸಾದ ವಜ್ರಕೊಡೆಯನ್ನು ಜಿನನ ತಲೆಯ ಮೇಲೆ ಹಿಡಿದಿದ್ದಾಳೆ. ಪಾರ್ಶ್ವನಾಥರ ಪ್ರಭಾವಳಿಯಲ್ಲಿ ರೂಪಿಸಿದ ಕಮಠನ ಉಪಸರ್ಗಗಳ ಬಲಗಡೆಯಿಂದ ಒಬ್ಬ ರಾಕ್ಷಸ ಭಾರವಾದ ಬಂಡೆಯನ್ನು ಹೊತ್ತು ಪಾರ್ಶ್ವನಾಥರ ಮೇಲೆ ಉರುಳಿಸಲು ಪ್ರಯತ್ನಿಸುತ್ತಿರುವುದು, ಇನ್ನೊಬ್ಬ ರಾಕ್ಷಸ ಪಾರ್ಶ್ವನಾಥನ ಕಡೆಗೆ ಬಾಣವನ್ನು ಬಿಡುತ್ತಿರುವುದು, ಮೇಲೇರಿ ಬರುತ್ತಿರುವ ಸಿಂಹ, ಎತ್ತು, ಹಾಗೆಯೇ ಎಡಗಡೆ ಮೇಲಿನಿಂದ ಕೆಳಗೆ ಒಬ್ಬ ರಾಕ್ಷಸ ಭಾರವಾದ ಗದೆಯನ್ನು ತನ್ನ ಭುಜದ ಮೇಲೆ ಹೊತ್ತು ನಿಂತಿರುವುದು, ಇನ್ನೊಬ್ಬ ರಾಕ್ಷಸ ಬಲಗೈಯಲ್ಲಿ ಕಠಾರಿಯನ್ನೂ ಎಡಗೈಯಲ್ಲಿ ಸರ್ಪವನ್ನೂ ಹಿಡಿದಿರುವುದು, ಮದವೇರಿದ ಆನೆ ಹಾಗೂ ನುಗ್ಗಿ ಬರುತ್ತಿರುವ ಹುಲಿಯ ಶಿಲ್ಪಗಳಿವೆ.

ಈ ಉಪಸರ್ಗದ ಕೊನೆಯ ಹಂತದಲ್ಲಿ ತನ್ನ ತಪ್ಪಿನ ಅರಿವಾದ ಕಮಠನು ಜಿನನ ಪಾದಕ್ಕೆ ಶರಣಾಗತನಾಗಿ ಅಂಜಲಿ ಮುದ್ರೆಯಲ್ಲಿ ಪಾರ್ಶ್ವನಾಥರ ಪಾದದ ಬಳಿಯಲ್ಲಿ ಕುಳಿತಿದ್ದಾನೆ. ಎಡಬದಿಯಲ್ಲಿ ಕಮಠನ ಪತ್ನಿ ಕಾಲೂರಿ ಕುಳಿತಿದ್ದು, ತನ್ನ ಬಲಗೈಯಿಂದ ಪಾರ್ಶ್ವನಾಥನನ್ನು ಹೊಗಳುತ್ತಿರುವಂತಿದೆ. ಹಾಗೆಯೇ ಈ ಫಲಕದಲ್ಲಿ ಜಿನ ಯಕ್ಷಿಯ ವಾಹನ ಕುಕ್ಕುಟ ಸರ್ಪದ ಚಿಹ್ನೆಯಿದೆ. ಒಟ್ಟಾರೆಯಾಗಿ ಈ ಶಿಲ್ಪ ಅತ್ಯಂತ ಸುಂದರವಾಗಿದ್ದು ಸ್ಫುಟವಾಗಿದೆ. ಪುರಾಣದಲ್ಲಿ ಬರುವ ಕಮಠೋಪಸರ್ಗವನ್ನು ಚೆನ್ನಾಗಿ ಅರಿತಿರುವ ಅಜ್ಞಾತ ಶಿಲ್ಪಿಯ ಶಿಲ್ಪ ಫಲಕ ಇದಾಗಿದೆ. ಶಿಲ್ಪ ಶೈಲಿಯ ದೃಷ್ಟಿಯಿಂದ 9ನೆಯ ಶತಮಾನದ ಕೊನೆಯ ಕಾಲದ್ದೆಂದು ಹೇಳಬಹುದು. (ಜಿ.ಎಸ್.ಎಮ್.)

**ಸಾಕ್ರಟೀಸ್:** ಪ್ರ.ಶ.ಪೂ.469–399. ಗ್ರೀಕ್ ತತ್ತ್ವಜ್ಞಾನಿ ಹಾಗೂ ಶಿಕ್ಷಕ. ವಿಮರ್ಶನ ಹಾಗೂ ಸತ್ಯಪರಿಶೋಧಕ ಪ್ರವೃತ್ತಿಯವ. ಪ್ರ.ಶ.ಪೂ.469 ರಲ್ಲಿ ಅಥೆನ್ಸ್‌ನಲ್ಲಿ ಜನಿಸಿದ. ತನ್ನ ಆತ್ಮಪ್ರತಿಷ್ಠೆಗೂ ವಿಚಿತ್ರ ವೇಷಭೂಷಣಗಳಿಗೂ ಹೆಸರಾಗಿದ್ದ. ಅರಿಸ್ಟೋಫೆನಸ್ ಹಾಗೂ ಕ್ಸೆನೋಫೆನ್‌ರ ಕೃತಿಗಳಿಂದ ಇವನ ಬದುಕು ಹಾಗೂ ಕಾರ್ಯವ್ಯಾಪ್ತಿ ವಿಚಾರಗಳನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದಾಗಿದೆ.



ಈತನಿಗಿಂತ ಮೊದಲು ಗ್ರೀಕ್ ತತ್ತ್ವಶಾಸ್ತ್ರ ಪ್ರಕೃತಿ ಹಾಗೂ ಬ್ರಹ್ಮಾಂಡ ವಿಚಾರಗಳ ಅಧ್ಯಯನಕ್ಕೆ ಸೀಮಿತವಾಗಿತ್ತು. ಇವನು ಮನುಷ್ಯನ ನೈತಿಕ ಸಮಸ್ಯೆ ಹಾಗೂ ಜೀವನ ಕುರಿತಾದ ದೃಷ್ಟಿಕೋನಗಳ ಅಧ್ಯಯನವನ್ನೂ ಈ ಕ್ಷೇತ್ರಕ್ಕೆ ಸೇರಿಸಿದ. ಅಷ್ಟೇ ಅಲ್ಲದೆ ನ್ಯಾಯ ಹಾಗೂ ಆತ್ಮಪರಿಶೋಧಕ ಪ್ರವೃತ್ತಿಯ ಅಧ್ಯಯನವನ್ನೂ ಅದರ ಅಧ್ಯಯನಕ್ಕೆ ಸೇರಿಸಬೇಕೆಂಬುದು ಇವನ ಬಲವಾದ ಒತ್ತಾಯವಾಗಿತ್ತು. ಈ ಮನೋಧರ್ಮಗಳಿಂದ ಪಾಶ್ಚಾತ್ಯ ವೈಚಾರಿಕತೆಯ ಇತಿಹಾಸದಲ್ಲಿ ಹಾಗೂ ತತ್ತ್ವಶಾಸ್ತ್ರ ಕ್ಷೇತ್ರದಲ್ಲಿ ಹೊಸ ದಿಕ್ಕನ್ನೇ ಹುಟ್ಟುಹಾಕಿದಂತಾಯಿತು. ಪರಿಶೋಧನೆಗೆ ಒಳಪಡದ ಜೀವನ ಬದುಕಲು ಅನರ್ಹ ಎಂಬ ಈತನ ಹೇಳಿಕೆ ವಿಚಾರಕ್ರಾಂತಿಗೆ ಆಹ್ವಾನ ನೀಡಿತು. ಅತ್ಯಂತ ಆಳವಾದ ಇವನ ಆಲೋಚನಾ ವಿಧಾನ, ಸಾವನ್ನು ಅತ್ಯಂತ ಶಾಂತವಾಗಿ, ಆಪ್ತವಾಗಿ ಬರಮಾಡಿಕೊಂಡ ಈತನ ರೀತಿಗಳು ಇವನನ್ನು ಉದಾತ್ತ ತತ್ತ್ವಜ್ಞಾನಿಯ ಪಂಕ್ತಿಗೆ ಸೇರಿಸಿದವು.

ಇವನು ಸಾಧಿಸಹೊರಟಿದ್ದೆಲ್ಲ ಸತ್ಯವಾಗಿರದಿದ್ದರೂ ಒಪ್ಪಿತ ಮೌಲ್ಯಗಳನ್ನು ಕುರಿತ ಸತ್ಯಶೋಧನೆಯ ಪ್ರಾಮಾಣಿಕ ಪ್ರಯತ್ನಗಳಾಗಿದ್ದವು. ಮನುಷ್ಯನ ದೇಹ ಹಾಗೂ ಆತ್ಮಗಳ ಸಂಬಂಧಗಳನ್ನು ಕುರಿತಂತೆ ಆಲೋಚನೆಗಳನ್ನು ಹುಟ್ಟುಹಾಕಿದ ಮೊದಲ ತತ್ತ್ವಜ್ಞಾನಿ ಈತ. ನೀತಿವಂತರಾಗಿ ಬಾಳಲು ನೈತಿಕ ಪ್ರಜ್ಞೆಯ ಬೆಳವಣಿಗೆಯ ಅವಶ್ಯಕತೆ ಅತಿ ಮುಖ್ಯ ಎಂದು ಭಾವಿಸಿದ ಈತ ನೈತಿಕ ಪ್ರಜ್ಞೆ ಹಾಗೂ ಆತ್ಮಸ್ಥೈರ್ಯಗಳನ್ನು ಕುರಿತು ವ್ಯಾಖ್ಯೆಗಳನ್ನು ನೀಡಿದವರಲ್ಲಿ ಮೊದಲಿಗ. ತತ್ತ್ವಶಾಸ್ತ್ರ ಕ್ಷೇತ್ರದಲ್ಲಿ ಅದುವರೆಗೆ ಸಿದ್ಧಾಲೋಚನೆಗಳಿಂದ ತುಂಬಿದ್ದ ಎಲ್ಲ ಅಂಶಗಳನ್ನೂ ಸತ್ಯಾನ್ವೇಷಣೆಗೆ ಒಳಪಡಿಸಿದ್ದು ಮಾತ್ರವಲ್ಲದೆ ತನ್ನ ಶಿಷ್ಯರಲ್ಲೂ ಇದೇ ಮನಃಸ್ಥಿತಿ ಬೆಳೆಸಲು ತರಬೇತಿ ನೀಡಿದ.

ಪರಿಶೀಲಿಸದೆ ಯಾವುದನ್ನೂ ಒಪ್ಪಬಾರದೆನ್ನುವ ಇವನ ತತ್ತ್ವ ಶಿಷ್ಯರಿಗೆ ಪ್ರಿಯವಾಗಿದ್ದರೂ ಅಥೆನ್ಸಿನ ಹಿರಿಯ ನಾಗರಿಕರಿಗೆ ಅಪ್ರಿಯವಾಯಿತು. ಸಮಾಜದಲ್ಲಿ ಕಿರಿಕಿರಿ ಉಂಟುಮಾಡುತ್ತಿರುವ ರಾಜಕೀಯ ವ್ಯಕ್ತಿ ಇವನಿರಬೇಕೆಂಬ ತಪ್ಪು ಆಪಾದನೆಗೆ ಈತ ಗುರಿಯಾದ. ಇದರ ಪರಿಣಾಮವಾಗಿ ಪ್ರ.ಶ.ಪೂ. 399 ರಲ್ಲಿ ಇವನಿಗೆ ಮರಣದಂಡನೆ ಶಿಕ್ಷೆ ವಿಧಿಸಲಾಯಿತು. ಈ ಶಿಕ್ಷೆಯನ್ನು ಅತ್ಯಂತ ಶಾಂತವಾಗಿ ಸ್ವೀಕರಿಸಿದ ಈತ ತನ್ನ ಸ್ನೇಹಿತರು, ಅನುಯಾಯಿಗಳೊಂದಿಗೆ ಹೆಮ್‌ಲಾಕ್ ವಿಷ ಸೇವಿಸಿ ಸಾವನ್ನಪ್ಪಿದ. (ಜಿ.ಎನ್.ಎಸ್.)

**ಸಾಗರ ಪುರಾತತ್ತ್ವ:** ಸರೋವರ, ನದಿ ಅಥವಾ ಸಮುದ್ರದಲ್ಲಿ ಮುಳುಗಿಹೋಗಿರುವ ಪ್ರಾಚ್ಯ ಅವಶೇಷಗಳನ್ನು ಶೋಧಿಸಿ ಅಧ್ಯಯನಿಸುವ ಪುರಾತತ್ತ್ವದ ನೂತನ ಕ್ಷೇತ್ರ (ಮೆರಿನ್ ಆರ್ಕಿಯಾಲಜಿ). ಸಮುದ್ರಯಾನ ಮಾರ್ಗಗಳು ಹಾಗೂ ತಂತ್ರೋಪಾಯಗಳು, ಸಾಗರೋತ್ತರ ವಾಣಿಜ್ಯ, ಬಂದರು ಸ್ಥಳಗಳ ಅನ್ವೇಷಣೆ, ಬಂದರು ವ್ಯವಸ್ಥೆ, ನೌಕಾ ತಂತ್ರಜ್ಞಾನ, ಪುರಾತನ ನೌಕಾಘಾತ ಘಟನೆಗಳು, ಮುಳುಗಿದ ಪ್ರಾಚೀನ ನಗರ ಅಥವಾ ಪ್ರದೇಶ–ಮುಂತಾದ ವಿಷಯಗಳು ಇದರ ವ್ಯಾಪ್ತಿಗೆ ಸೇರುತ್ತವೆ. ಸಾಗರ ತಳ ಸರ್ವೇಕ್ಷಣೆಗೆ ಪೂರ್ವಭಾವಿಯಾಗಿ ಹಾಗೂ ಪೂರಕವಾಗಿ ತೀರ ಪ್ರದೇಶದಲ್ಲಿಯೂ ಭೂಶೋಧನೆಯನ್ನು ನಡೆಸಲಾಗುತ್ತದೆ.

20ನೆಯ ಶತಮಾನದ ಪೂರ್ವಾರ್ಧದವರೆಗೆ ನದಿ–ಸಾಗರ ತಳದ ಪ್ರಾಚ್ಯ ಸಂಪತ್ತಿನ ಶೋಧನೆ ಆಕಸ್ಮಿಕ ಆವಿಷ್ಕಾರಗಳನ್ನಾಧರಿಸಿದ ಒಂದು ಹವ್ಯಾಸಿ ವೃತ್ತಿಯಾಗಿತ್ತು. ಅಲ್ಲದೆ ನೀರಿನಲ್ಲಿರುವಷ್ಟು ಸಮಯ ಮುಳುಗಿದವರು ಉಸಿರು ಹಿಡಿದಿಡುವುದು ಅನಿವಾರ್ಯವಾಗಿತ್ತು. 1952ರಲ್ಲಿ ಜಾಕ್ವೆಸ್ ಕೋಸ್ಟಿಯೊ ವಿನ್ಯಾಸಗೊಳಿಸಿದ ಅಂತರ್ಜಲ ಶ್ವಾಸೋಪಕರಣ (ಸ್ಕ್ಯೂಬ) ಉಸಿರಾಟವನ್ನು ಸರಾಗವಾಗಿಸುವುದರ ಮೂಲಕ ಅಂತರ್ಜಲ ಸರ್ವೇಕ್ಷಣೆಗೆ ಒಂದು ಹೊಸ ವೈಜ್ಞಾನಿಕ ಆಯಾಮ ಒದಗಿಸಿತು. ಪುರಾತತ್ತ್ವ ಅನ್ವೇಷಕ ಅವಶೇಷಗಳನ್ನು ಕೂಲಂಕಷವಾಗಿ ಪರೀಕ್ಷಿಸಿ, ಅವುಗಳ ವಿವರವಾದ ನಕ್ಷೆಯನ್ನು ತಯಾರಿಸಿ, ಉತ್ಖನನ ನಡೆಸಬಹುದಾದಷ್ಟು ಸಮಯಾವಕಾಶವನ್ನು ಈ ಸಾಧನ ಕಲ್ಪಿಸಿಕೊಟ್ಟಿತು. ವಿವಿಧ ಮಾದರಿಯ ಅತ್ಯಾಧುನಿಕ ಅಂತರ್ಜಲ ಕ್ಯಾಮರಗಳು, ಲೋಹ ಶೋಧಕಗಳು ಈಗ ಲಭ್ಯವಿವೆ. ನಾಣ್ಯ, ಗಂಟೆ, ಫಿರಂಗಿ ಮೊದಲಾದ ಅವಶೇಷಗಳನ್ನು ಗುರುತಿಸುವಲ್ಲಿ ಲೋಹ ಶೋಧಕಗಳು ನೆರವಾಗಬಲ್ಲವು. ಅಂತರ್ಜಲ ಸರ್ವೇಕ್ಷಣೆಯಲ್ಲಿ ಉಪಯುಕ್ತವಾಗುವ ಮತ್ತೊಂದು ಉಪಕರಣ ಸೈಡ್ ಸ್ಕ್ಯಾನ್ ಸೋನಾರ್. ಸಾಗರ ತಳದಲ್ಲಿ ಒಂದೇ ಬಾರಿಗೆ ವಿಸ್ತಾರ ಪ್ರದೇಶವನ್ನು ಶೋಧಿಸುವ ಸಾಮರ್ಥ್ಯ ಈ ಉಪಕರಣಕ್ಕಿದೆ. ನೌಕಾಘಾತ ನೆಲೆ ಹಾಗೂ ಪುರಾತತ್ತ್ವ ನೆಲೆಗಳನ್ನು ಪತ್ತೆ ಹಚ್ಚುವುದರಲ್ಲಿ ಇದು ಸಹಾಯಕಾರಿ. ಇತ್ತೀಚಿನ ಸಂಶೋಧನೆಗಳಲ್ಲಿ ಅಂತರ್ಜಲ ರೋಬಟ್‌ಗಳನ್ನೂ (ರಿಮೋಟ್ ಆಪರೇಟೆಡ್ ಅಂಡರ್‌ವಾಟರ್ ವೆಹಿಕಲ್ಸ್) ಬಳಸಲಾಗುತ್ತಿದೆ. ಕೆಲವೊಂದು ನೌಕಾಘಾತ ನೆಲೆಗಳನ್ನು ರೋಬಟ್ ಮೂಲಕ ಗುರುತಿಸಲಾಗಿದೆ. ಸಾಗರದ ಅತ್ಯಂತ ಆಳ ತಾಣಗಳಲ್ಲಿರಬಹುದಾದ ಅವಶೇಷಗಳನ್ನು ಬೆಳಕಿಗೆ ತರುವಲ್ಲಿ ಇವು ಅದ್ಭುತ ನೆರವು ನೀಡಬಲ್ಲವು.

ಭಾರತದಲ್ಲಿ ಸಾಗರ ಪುರಾತತ್ತ್ವೀಯ ಸಂಶೋಧನೆಯನ್ನು ಪ್ರಾರಂಭಿಸಿದವರು ಎಸ್.ಆರ್.ರಾವ್ (**ನೋಡಿ**). 1981ರಲ್ಲಿ ಗೋವದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷಿಯನೋಗ್ರಫಿಯಲ್ಲಿ (ಎನ್.ಐ.ಓ.) ಇದರ ಒಂದು ಶಾಖೆಯನ್ನು ಇವರು ಪ್ರಾರಂಭಿಸಿದರು. ಇವರ ನೇತೃತ್ವದಲ್ಲಿ ದ್ವಾರಕ, ಬೇಟ್ ದ್ವಾರಕ, ಸೋಮನಾಥ, ಗೋವ, ಲಕ್ಷದ್ವೀಪ ಮುಂತಾದ ಕಡೆಗಳಲ್ಲಿ ಸಾಗರ ತಳ ಅಧ್ಯಯನ ಕೈಗೊಳ್ಳಲಾಯಿತು.

ದ್ವಾರಕೆ ಕೃಷ್ಣನ ಅಂತ್ಯಾನಂತರ ಸಮುದ್ರದಲ್ಲಿ ಮುಳುಗಿತೆಂಬ ಪ್ರತೀತಿ ಇದೆ. ಸಮುದ್ರ ತೀರದ ಸರ್ವೇಕ್ಷಣೆಯಲ್ಲಿ ಪ್ರಾಚ್ಯಾವಶೇಷಗಳು ಸಿಕ್ಕಿವೆಯಾದರೂ ಇವನ್ನು ಮಹಾಭಾರತದ ಘಟನೆಗಳೊಂದಿಗೆ ಹೋಲಿಸಲು ಇಲ್ಲವೆ ಸಂಬಂಧ ತಿಳಿಯಲು ಆಗುವುದಿಲ್ಲ. ಇಲ್ಲಿ ಸಿಕ್ಕಿರುವ ಕಬ್ಬಿಣದ ಲಂಗರು, ತಾಮ್ರದ ಚೊಂಬು, ಕಂಚಿನ ಗಂಟೆ, ಮೊಳೆ, ಅಮೃತಶಿಲೆಯ ಮೂರ್ತಿಗಳ ಕಾಲಮಾನ ಪ್ರ.ಶ.ಪೂ.ಸು.1500 ಎನ್ನಲಾಗಿದೆ. ಆದರೆ ಕಾಲಮಾನ ಚರ್ಚಾಸ್ಪದ. ದ್ವಾರಕೆಯಿಂದ 30 ಕಿಮೀ ದೂರದಲ್ಲಿರುವ ಬೇಟ್ ದ್ವಾರಕದ ತೀರದಲ್ಲಿ ಹಾಗೂ ಸಮೀಪದಲ್ಲಿರುವ ಮತ್ತೊಂದು ಪುರಾಣ ಪ್ರಸಿದ್ಧ ಸ್ಥಳ ಸೋಮನಾಥ್‌ನಲ್ಲಿ (ಪ್ರಭಾಸ್ ಪಾಠಣ್) ಅಂತ್ಯ ಹರಪ್ಪ ಮತ್ತು ಆದಿ ಚಾರಿತ್ರಿಕ ಕಾಲದ ಅವಶೇಷಗಳು ಪತ್ತೆಯಾಗಿವೆ. ಅಂತೆಯೇ ಪೋರ್‌ಬಂದರ್ ಖಾರಿಯ ಬಳಿ ಮಧ್ಯಯುಗೀನ ಕಾಲದ ಕಾಪಿನ ಕುರುಹುಗಳನ್ನು ಗುರುತಿಸಲಾಗಿದೆ. ಸೌರಾಷ್ಟ್ರ ತೀರದಲ್ಲಿ ನಡೆಸಲಾಗಿರುವ ಸರ್ವೇಕ್ಷಣೆಯಲ್ಲಿ ಹೆಚ್ಚಾಗಿ ಮಧ್ಯಯುಗೀನ ಕಾಲದ ಲಂಗರುಗಳು ಕಂಡುಬಂದಿವೆ. ವಿಶೇಷವಾದುದೆಂದರೆ ತಲಾಜ ತಾಲೂಕಿನ ಮಿಥಿವಿರ್ದಿಯಲ್ಲಿ ಸಿಕ್ಕ ಲಂಗರು. ಪ್ರಪಂಚದಲ್ಲಿಯೇ ಅತಿ ದೊಡ್ಡದಾದ ಇಂಡೊ–ಅರೇಬಿಯ ನಮೂನೆಯ ಲಂಗರಿದು. ಗೋವದ ಸಮೀಪ ಕೈಗೊಂಡ ಶೋಧನೆಯಲ್ಲಿ ಕೆಲವು ನೌಕಾಘಾತ ನೆಲೆಗಳನ್ನು ಕಂಡುಹಿಡಿಯಲಾಗಿದೆ. ಮರ್ಮಗಾಂವ್ ಬಂದರಿನ ಹತ್ತಿರ 3–6 ಮೀ ಆಳದಲ್ಲಿ ಚೀನಿ ಪಿಂಗಾಣಿ, ಮಾರ್ಟಬನ್ ಮಾದರಿಯ ಪಾತ್ರೆ, ದಂತ, ನೀರಾನೆಯ ಹಲ್ಲು, ಬಂದೂಕು, ಗಾಜಿನ ಶೀಷೆ ಮುಂತಾದ ಅವಶೇಷಗಳು ಸಿಕ್ಕಿದ್ದು ಇವು ಆಫ್ರಿಕ ಮೂಲಕ ಗೋವಕ್ಕೆ ಬರುತ್ತಿದ್ದ ಹಡಗಿನಲ್ಲಿದ್ದ ಸರಕುಗಳಿರಬಹುದು. ಈ ಅಪಘಾತ ಸಂಭವಿಸಿದ್ದು 17ನೆಯ ಶತಮಾನದಲ್ಲಿ ಎಂಬುದು ಮಣ್ಪಾತ್ರೆಯ ಔಷ್ಣದೀಪ್ತಿ ಕಾಲಮಾನದಿಂದ

ತಿಳಿದಿದೆ. ಭಾರತ–ಪೋರ್ಚುಗೀಸ್ ವ್ಯಾಪಾರ ಸಂಬಂಧದ ಅಧ್ಯಯನಕ್ಕೆ ಇಂತಹ ಅವಶೇಷಗಳು ಅಪೂರ್ವ ಮಾಹಿತಿಯನ್ನೊದಗಿಸುತ್ತವೆ. ಪೂರ್ವ ಕರಾವಳಿ ತೀರದಲ್ಲಿ ಕಾವೇರಿಪಟ್ಟಣಂ (ಪೂಂಪುಹಾರ್) ಮತ್ತು ಮಹಾಬಲಿಪುರಂನಲ್ಲಿ ಮಹತ್ತ್ವ ಅವಶೇಷಗಳನ್ನು ಸಾಗರ ತಳದಿಂದ ಹೊರತೆಗೆಯಲಾಗಿದೆ. ಕಾವೇರಿಪಟ್ಟಣಂ ಸಂಗಮ್ ಚೋಳರ ಕಾಲದ ಮುಖ್ಯ ಬಂದರು ಪಟ್ಟಣ. ಮಗನ ಸಾವಿನ ಶೋಕದಲ್ಲಿ ಚೋಳ ರಾಜ ಇಂದ್ರನ ಹಬ್ಬವನ್ನು ಆಚರಿಸಲು ಮರೆತುದರಿಂದ ಮಣಿಮೇಖಲೈ ದೇವತೆ ಕುಪಿತಗೊಂಡು ಇಡೀ ಊರನ್ನೇ ನುಂಗುವಂತೆ ಸಮುದ್ರಕ್ಕೆ ಆದೇಶ ನೀಡಿದಳು ಎಂದು ಮಣಿಮೇಖಲೈ ಕಾವ್ಯ ಉಲ್ಲೇಖಿಸುತ್ತದೆ. ವೈಜ್ಞಾನಿಕವಾಗಿ ಈ ಊರು ಮುಳುಗಲು ಕಾರಣ ತೀವ್ರವಾದ ಸಮುದ್ರ ಕೊರೆತ. ಸು.8 ಮೀ ಆಳದ ನೀರಿನಲ್ಲಿ ನಡೆಸಿದ ಸರ್ವೇಕ್ಷಣೆಯಲ್ಲಿ ಕಲ್ಲಿನ ಕಟ್ಟಡಗಳೂ 4–5ನೆಯ ಶತಮಾನದ ಮಣ್ಪಾತ್ರೆ ಚೂರುಗಳೂ ಸಿಕ್ಕಿದ್ದು ಪ್ರಾಚೀನ ಊರಿನ ಕೆಲವೊಂದು ಭಾಗಗಳು ನೀರಿನಲ್ಲಿ ಮುಳುಗಿಹೋಗಿದ್ದನ್ನು ದೃಢಪಡಿಸುತ್ತವೆ. ಪೂಂಪುಹಾರ್ ತೀರದಿಂದ 3.5 ಕಿಮೀ ದೂರದಲ್ಲಿ ಸು.19 ಮೀ ಆಳದಲ್ಲಿ ಸೀಸದ ಗಟ್ಟಿಗಳನ್ನು ಸಾಗಿಸುತ್ತಿದ್ದ 17–18ನೆಯ ಶತಮಾನದ ಹಡಗೊಂದರ ಅವಶೇಷಗಳನ್ನು ಲೋಹ ಶೋಧಕ ತಂತ್ರವಿಧಾನದಿಂದ ಪತ್ತೆ ಹಚ್ಚಿ ಮೇಲೆತ್ತಲಾಗಿದೆ. ಮಹಾಬಲಿಪುರಂನಲ್ಲಿರುವ ಸಮುದ್ರ ತೀರದ ದೇವಾಲಯ ಏಳು ಮಂದಿರಗಳಲ್ಲೊಂದಾಗಿದ್ದು ಉಳಿದವು ಸಮುದ್ರದಲ್ಲಿ ಮುಳುಗಿಹೋಗಿವೆಯೆಂಬ ನಂಬಿಕೆಯಿದೆ. ಬ್ರಿಟನ್ನಿನ ಸೈಂಟಿಫಿಕ್ ಎಕ್ಸ್‌ಪ್ಲೋರೇಷನ್ ಸೊಸೈಟಿ ಹಾಗೂ ಎನ್.ಐ.ಓ. ತಂಡ ದೇವಾಲಯದಿಂದ 500–700 ಮೀ ದೂರದಲ್ಲಿ 5–8 ಮೀ ಆಳದ ನೀರಿನಲ್ಲಿ 2002ರಲ್ಲಿ ಸರ್ವೇಕ್ಷಣೆ ನಡೆಸಿದಾಗ ಗಾರೆರಹಿತವಾದ ಕಲ್ಲಿನ ಗೋಡೆಯ ಅವಶೇಷಗಳು, ಚದುರಿದ ಬಿಡಿಗಲ್ಲುಗಳು ಹಾಗೂ ಮತ್ತಿತ್ತರ ಕಟ್ಟಡ ಅವಶೇಷಗಳು ಸು.100×50 ಮೀ ಜಾಗದಲ್ಲಿ ಕಂಡುಬಂದವು. ಇವು 1500–1200 ವರ್ಷಗಳ ಹಿಂದಿನ, ಪಲ್ಲವರ ಕಾಲಾವಧಿಗೆ ಸೇರುವ ಅವಶೇಷಗಳು. ಐತಿಹ್ಯ ರೂಪದಲ್ಲಿರುವ ಊರು–ದೇವಾಲಯಗಳ ಭೌತಿಕ ಅವಶೇಷಗಳು ಸಾಗರ ಪುರಾತತ್ತ್ವ ಸಂಶೋಧನೆಯಿಂದ ಬೆಳಕಿಗೆ ಬರುತ್ತಿರುವುದು ಮಹತ್ತ್ವಪೂರ್ಣವಾಗಿದೆ. (ಎಸ್.ಟಿ.)

**ಸಾಣೂರು:** ತಮಿಳುನಾಡು ರಾಜ್ಯದ ಚೆಂಗಲ್‌ಪೇಟ್ ಜಿಲ್ಲೆಯಲ್ಲಿರುವ ಬೃಹತ್ ಶಿಲಾಗೋರಿಗಳ ನೆಲೆ. ಇಲ್ಲಿಯ ಗೋರಿಗಳನ್ನು ಕಲ್ಗುಪ್ಪೆ, ಕಲ್ಲುವೃತ್ತ ಸಹಿತ ಕಲ್ಗುಪ್ಪೆ ಮತ್ತು ಭಾಗಶಃ ಹೂಳಿದ ಕಂಡಿಕೋಣೆ ಗೋರಿಗಳಾಗಿ ವಿಂಗಡಿಸಬಹುದು. ಕೊನೆಯ ಪ್ರಕಾರದಲ್ಲಿ ಮೂರು ಉಪಪ್ರಕಾರಗಳಿವೆ. 1950–52ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆ 5 ಗೋರಿಗಳಲ್ಲಿ ಉತ್ಖನನ ನಡೆಸಿತು. ಇವುಗಳಲ್ಲಿ ಎರಡು ವೃತ್ತಕಲ್ಗುಪ್ಪೆಗಳು.



ಬೃಹತ್ ಶಿಲಾಸಂಸ್ಕೃತಿಯ ಕಲ್ಲುವೃತ್ತದಲ್ಲಿ ದೊರೆತ ಶಂಖದ ವಸ್ತುಗಳು (4,6,10,11) ಮಣಿಗಳು (1–3,7,8) ಮತ್ತು ಸುಡಾವೆ ಮಣ್ಣಿನ ಗೊಂಬೆ (5)

ಒಂದು ಗೋರಿಯಲ್ಲಿ ಕಾಲಿರುವ ದೋಣಿಯಾಕಾರದ ಮಣ್ಣಿನ 3 ಶವಪೆಟ್ಟಿಗೆಗಳಿದ್ದವು. ಇವುಗಳೊಳಗೆ ಅಸ್ಥಿ ಅವಶೇಷಗಳು, ಮಣ್ಪಾತ್ರೆಗಳು ಹಾಗೂ ಕಬ್ಬಿಣ ಉಪಕರಣಗಳಿದ್ದವು. ಮತ್ತೊಂದು ಪೆಟ್ಟಿಗೆಯಲ್ಲಿ ಮೂರು ಕಾಲಿನ ಜಾಡಿಗಳು, ಗುಂಡು ಬಟ್ಟಲು, ಸಿಂಬಿ, ಮುಚ್ಚಳಗಳಿದ್ದವು. ಬಹಳಷ್ಟು ಮಣ್ಪಾತ್ರೆಗಳ ಮೇಲೆ ಗೀರುಚಿತ್ರಗಳಿರುವುದು ವಿಶೇಷ. ಒಟ್ಟು 39 ಪ್ರಕಾರದ ಚಿತ್ರಗಳನ್ನು ಗುರುತಿಸಲಾಯಿತು. 5ನೆಯ ಕಲ್ಗೋರಿಯೊಂದರಲ್ಲಿಯೇ 28 ಪ್ರಕಾರದ ಚಿತ್ರಗಳಿದ್ದವು. ಕುದುರೆ ಕಡಿವಾಣ, ಬಾಣದ ಮೊನೆ, ಈಟಿ, ಕತ್ತಿ, ಚಪ್ಪಟೆ ಕೊಡಲಿ, ಒಂದು ತುದಿ ಬಾಗಿದ ತಂತಿಗಳು ಮೊದಲಾದುವು ಇಲ್ಲಿ ಸಿಕ್ಕಿರುವ ಕಬ್ಬಿಣ ಉಪಕರಣಗಳು. ನಕ್ಷತ್ರಾಕೃತಿಯ ಚಿತ್ರಗಳಿಂದ ಅಲಂಕರಿಸಲ್ಪಟ್ಟ ಶಂಖದ ಬಿಲ್ಲೆಗಳು, ತೂತಿನ ಶಂಖ, ಕೊಳವೆಯಾಕಾರದ ಉದ್ದ ಮಣಿಗಳು, ಅಲಂಕರಿಸಲ್ಪಟ್ಟ ಶಂಖ, ಕಲ್ಲಿನ ಕುಟ್ಟಾಣಿ, ಅಡಕೆಯಾಕಾರದ ಮಣಿಗಳು, ಸುಡಾವೆಮಣ್ಣಿನ ಪ್ರಾಣಿ ಗೊಂಬೆಗಳು ಇತರ ವಿಶೇಷ ಅವಶೇಷಗಳಾಗಿವೆ. (ಎ.ಎಸ್.;ಎನ್.ಎಲ್.)

**ಸಾತವಾಹನರು:** ಮೌರ್ಯರ ಅನಂತರ ದಖನ್ ಪ್ರದೇಶದಲ್ಲಿ ಆಳಿದ ರಾಜಮನೆತನ. ಸೀಮುಕ ಈ ಮನೆತನದ ಮೂಲಪುರುಷ. ಈ ವಂಶದ ಅರಸರನ್ನು ದಕ್ಷಿಣಾಪಥೇಶ್ವರರೆಂದು ಕರೆಯಲಾಗಿದೆ. ದಕ್ಷಿಣಾಪಥ ಎಂಬ ಮಾತಿಗೆ ವಿಂಧ್ಯಪರ್ವತದ ದಕ್ಷಿಣಕ್ಕಿರುವ ಭಾರತದ ಭೂಭಾಗ, ಎಂದರೆ ಸಮಗ್ರ ದಕ್ಷಿಣಭಾರತ ಎಂಬುದು ಕೆಲವರ ಅಭಿಪ್ರಾಯ. ಆದರೆ ಇದು ವಿಂಧ್ಯಪರ್ವತದ ಕೆಳಗಿನ ಈಗಿನ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳನ್ನೊಳಗೊಂಡ ದಖನ್ ಪ್ರದೇಶವೆಂಬುದು ಬಹುಜನರ ಅಭಿಮತ.

**ರಾಜಕೀಯ ಇತಿಹಾಸ:** ಸಾತವಾಹನರು ಯಾರು, ಸಾತವಾಹನ ಎಂದರೇನು ಎಂಬ ಬಗ್ಗೆ ಜಿಜ್ಞಾಸೆಯಿದೆ. ಸಾತವಾಹನ ಎಂಬ ಪದ ಶಾಸನಗಳಲ್ಲಿ ಮಾತ್ರ ಕಂಡುಬಂದಿದೆ. ಸಾತ ಎಂದರೆ ಮೊನಚಾದ, ತೆಳುವಾದ ಎಂದು ಅರ್ಥ. ಇದಕ್ಕೆ ಚುರುಕಾದ ಎಂಬ ಅರ್ಥವೂ ಇದೆ. ವಾಹನ ಎಂಬ ಮಾತನ್ನು ಕುದುರೆಗೂ ಅನ್ವಯಿಸಬಹುದು. ಹೀಗೆ ಸಾತವಾಹನ ಎಂದರೆ ಚುರುಕುಗತಿಯ (ಶೀಘ್ರಗಾಮಿಯಾದ) ಕುದುರೆಯನ್ನೇರುವವ ಎಂದಾಗುತ್ತದೆ. ಸಾತಕಣ್ಣಿ (ಸಾತಕರ್ಣಿ) ಎಂದೂ ಇವರು ತಮ್ಮನ್ನು ಕರೆದುಕೊಂಡಿದ್ದಾರೆ. ಸಾತಕಣ್ಣಿ ಎಂದರೆ ಚುರುಕಾದ ಕಿವಿ (ಕರ್ಣ) ಉಳ್ಳವನೆಂದಾಗುತ್ತದೆ. ಇವರನ್ನು ಕುರಿತು ನಮಗೆ ಪುರಾಣಗಳಲ್ಲಿ ವಿಶೇಷವಾದ ಮಾಹಿತಿ ದೊರಕುತ್ತದೆಯಾದರೂ ಅಲ್ಲೆಲ್ಲೂ ಇವರನ್ನು ಈ ಹೆಸರಿನಿಂದ ಕರೆದಿಲ್ಲ. ಪುರಾಣಗಳಲ್ಲಿ, ಅದರಲ್ಲೂ ಮತ್ಸ್ಯ, ವಾಯು, ವಿಷ್ಣು ಮತ್ತು ಭಾಗವತ ಪುರಾಣಗಳಲ್ಲಿ ಈ ಅರಸರನ್ನು ಕುರಿತ ವಿವರಗಳಿವೆ. ಆದರೆ ಇವುಗಳಲ್ಲಿ ಇವರನ್ನು ಆಂಧ್ರರೆಂದೋ ಆಂಧ್ರಭೃತ್ಯರೆಂದೋ ಕರೆಯಲಾಗಿದೆ. ಆಂಧ್ರಭೃತ್ಯ ಎಂಬ ಮಾತಿಗೆ ಆಂಧ್ರರಿಗೆ ಭೃತ್ಯರಾಗಿದ್ದವರೆಂದೂ ಭೃತ್ಯರಾಗಿದ್ದ ಆಂಧ್ರರೆಂದೂ ಎರಡು ಅರ್ಥಗಳನ್ನು ಮಾಡಲಾಗಿದೆ.

ಸಾತವಾಹನರ ಮೂಲ ಪ್ರದೇಶ ಯಾವುದು ಎಂಬುದನ್ನು ಕುರಿತು ಹಲವಾರು ವಿರೋಧಾಭಿಪ್ರಾಯಗಳಿವೆ. ಇವರ ಪ್ರಾಚೀನ ಶಾಸನಗಳೆಲ್ಲ ಪಶ್ಚಿಮ ತೀರದಲ್ಲಿ, ಮಹಾರಾಷ್ಟ್ರದ ನಾಸಿಕ್, ನಾಣೇಘಾಟ್, ಕಾರ್ಲೆ ಮುಂತಾದ ಸ್ಥಳಗಳಲ್ಲಿ ಲಭಿಸಿವೆ. ಪ್ರ.ಶ.ಪೂ. 1ನೆಯ ಶತಮಾನಕ್ಕೆ ಸೇರಿದ ಒರಿಸ್ಸದ ಖಾರವೇಲನ ಹಾಥಿಗುಂಫ ಶಾಸನದಲ್ಲಿ ತನ್ನ ರಾಜ್ಯದ ಪಶ್ಚಿಮದಲ್ಲಿ ರಾಜ್ಯವನ್ನಾಳುತ್ತಿದ್ದ ಸಾತಕರ್ಣಿಯನ್ನು ಲೆಕ್ಕಿಸದೆ ಆತ ಹಿರಿದಾದ ಸೈನ್ಯವನ್ನು ಪಶ್ಚಿಮಾಭಿಮುಖವಾಗಿ ಕಳುಹಿಸಿದನೆಂದು ಹೇಳಿದೆ. ಇದನ್ನವಲಂಬಿಸಿ ಸಾತಕರ್ಣಿಯ ರಾಜ್ಯ ಕಳಿಂಗದೇಶದ ಪಶ್ಚಿಮಕ್ಕಿದ್ದಿತೇ ಹೊರತು, ದಕ್ಷಿಣದ ಆಂಧ್ರವಾಗಿರಲಿಲ್ಲ ಎಂಬುದೊಂದು ವಾದ. ಆರಂಭದಲ್ಲಿ ಈ ಸಾತವಾಹನರು ಪಶ್ಚಿಮ ಭಾಗದಲ್ಲಿದ್ದು ಕ್ರಮೇಣ ಪೂರ್ವಭಾಗಕ್ಕೆ ಸರಿದರೆಂದೂ ಪುರಾಣಗಳು ತಮ್ಮ ಅಂತಿಮರೂಪವನ್ನು ತಾಳಿದ ಸು.3ನೆಯ ಶತಮಾನದ ವೇಳೆಗೆ ಇವರು ಆಂಧ್ರದಲ್ಲಿ ನೆಲಸಿದ್ದರೆಂದೂ ಆದ್ದರಿಂದಲೇ ಇವರನ್ನು ಪುರಾಣಗಳಲ್ಲಿ ಆಂಧ್ರರೆಂದು ಹೆಸರಿಸಲಾಗಿದೆಯೆಂದೂ ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ವಾದಗಳನ್ನು ಅಲ್ಲಗಳೆದು ಕೃಷ್ಣಾ, ಗೋದಾವರಿ ನದಿಗಳ ನಡುವಣ ಆಂಧ್ರಪ್ರದೇಶದ ಭಾಗ ಇವರ ಮೂಲಸ್ಥಾನವೆಂದೂ ಕೃಷ್ಣಾನದೀತೀರದ ಶ್ರೀಕಾಕುಳಂ ಇವರ ರಾಜಧಾನಿಯಾಗಿ ತ್ತೆಂದೂ ಇವರು ಕ್ರಮೇಣ ಪಶ್ಚಿಮದಿಕ್ಕಿನ ಕಡೆ ತಮ್ಮ ಪ್ರಭಾವವನ್ನು ಬೆಳೆಸುತ್ತ ಹೋದರೆಂದೂ ಕೆಲವರು ವಾದಿಸಿದ್ದಾರೆ.

ಸಾತವಾಹನರ ಆಳಿಕೆಯ ಕಾಲ, ಈ ವಂಶಕ್ಕೆ ಸೇರಿದ ಅರಸರ ಸಂಖ್ಯೆ ಇತ್ಯಾದಿ ವಿಚಾರಗಳಲ್ಲೂ ಭಿನ್ನಾಭಿಪ್ರಾಯಗಳಿವೆ. ಪುರಾಣಗಳಲ್ಲಿಯೂ ಈ ಬಗೆಗೆ ವಿಭಿನ್ನ ಹೇಳಿಕೆಗಳಿವೆ. ಸಾಮಾನ್ಯವಾಗಿ ಒಟ್ಟು 30 ಅರಸರು ಆಳಿದರೆಂದು ಹೇಳಿದ್ದರೂ ಇವರ ಆಳಿಕೆಯ ಕಾಲವನ್ನು 300 ವರ್ಷಗಳಿಂದ 460 ವರ್ಷಗಳವರೆಗೂ ಗುರುತಿಸಲಾಗಿದೆ. ಈ ಅರಸರನ್ನು ಕುರಿತು ಮಾಡಿರುವ ಉಲ್ಲೇಖಗಳನ್ನು ಗಮನಿಸಿದರೆ ಇನ್ನಷ್ಟು ವ್ಯತ್ಯಾಸಗಳು ಗೋಚರಿಸುತ್ತವೆ. ಮತ್ಸ್ಯಪುರಾಣದಲ್ಲಿ 25 ಅರಸರು ಆಳಿದರೆಂದು ಹೇಳಿದ್ದರೂ 30 ಅರಸರನ್ನು ಕುರಿತ ವಿವರಗಳಿವೆ. ವಾಯುಪುರಾಣದಲ್ಲಿ 17 ಅರಸರು ಸು.273 ವರ್ಷಗಳು ಮಾತ್ರ ಆಳಿದರೆಂಬ ಉಲ್ಲೇಖವಿದೆ. 30 ಅರಸರು (111 ಅಥವಾ 300 ವರ್ಷಗಳು) ಆಳಿದರೆಂದು ಇದರಲ್ಲೂ ಸಾಮಾನ್ಯ ಹೇಳಿಕೆ. ಭಾಗವತಪುರಾಣದಲ್ಲಿ 22 ಅರಸರನ್ನು ಕುರಿತು ವಿವರಗಳು ಮಾತ್ರ ಲಭಿಸಿವೆ. ಈ ಅರಸರಲ್ಲಿ ಅನೇಕ ಹೆಸರುಗಳಿಗೆ ಇತರ ಯಾವ ಆಧಾರಗಳೂ ಲಭ್ಯವಿಲ್ಲ.

ಮಗಧರಾಜ್ಯದ ಚಂದ್ರಗುಪ್ತಮೌರ್ಯ ಆಳತೊಡಗಿದುದು ಪ್ರ.ಶ.ಪೂ.324ರಲ್ಲಿ. ಬಳಿಕ ಶುಂಗಮನೆತನದ ಅರಸರು ಅಧಿಕಾರಕ್ಕೆ ಬಂದರು. ಅವರು 112 ವರ್ಷಗಳು ಆಳಿದರೆಂದೂ ಅನಂತರ ಬಂದ ಕಣ್ವರು 45 ವರ್ಷಗಳು ಆಳಿದರೆಂದೂ ಹೇಳಲಾಗಿದೆ. ಕಣ್ವಮನೆತನ ಪ್ರ.ಶ.ಪೂ.33ರಲ್ಲಿ ಕಣ್ಮರೆಯಾಯಿತು. ಇದಕ್ಕೆ ಕಾರಣ ಸೀಮುಕ. ಈತನ ಆಳಿಕೆ ಆ ವರ್ಷದಿಂದ ಆರಂಭವಾಯಿತು ಎಂಬುದೊಂದು ಅಭಿಪ್ರಾಯವಿದೆ. ಆದರೆ ಕಣ್ವವಂಶದ ಸುಶರ್ಮನನ್ನು ಸೋಲಿಸಿದಾತ ಸೀಮುಕನಲ್ಲವೆಂದೂ ಸೀಮುಕ ಎಂಬಾತ ಸಾತವಾಹನರ ಅರಸರಲ್ಲಿ ಅನಂತರ ಆಳಿಕೆಗೆ ಬಂದಾತನೆಂದೂ ಮತ್ಸ್ಯಪುರಾಣದಲ್ಲಿ ಹೇಳಿದಂತೆ ಸಾತವಾಹನರು 460 ವರ್ಷಗಳ ಕಾಲ ಆಳಿಕೆ ನಡೆಸಿ ಸೀಮುಕ 271ರಲ್ಲಿ ಆಳಿಕೆಗೆ ಬಂದನೆಂದೂ ಕಣ್ವಮನೆತನದ ಸುಶರ್ಮನನ್ನು ಸೋಲಿಸಿದಾತ ಸಾತವಾಹನರ 15ನೆಯ ಅರಸನಾದ ಮೊದಲನೆಯ ಪುಳುಮಾವಿ ಎಂದೂ ಹಲವಾರು ವಾದಗಳಿವೆ.

ಈ ವಾದವಿವಾದಗಳೇನೇ ಇರಲಿ, ಸಾತವಾಹನರು ದಖನಿನಲ್ಲಿ ಮೌರ್ಯರ ಅನಂತರ ಅವರ ಉತ್ತರಾಧಿಕಾರಿಗಳಾಗಿ ಆಳಿದ ಅರಸುಗಳೆಂಬುದು ನಿಜ. ಸೀಮುಕ, ಆತನ ಸೋದರ ಕೃಷ್ಣ, ಕೃಷ್ಣನ ಮಗ ಸಾತಕರ್ಣಿ–ಇವರು ಆರಂಭದ ಅರಸರು. ಇವರು ಅನುಕ್ರಮವಾಗಿ 23, 18 ಮತ್ತು 18 ವರ್ಷಗಳ ಕಾಲ ಆಳಿದರು. ಸಾತಕರ್ಣಿ ಒಂದು ರಾಜಸೂಯ, ಎರಡು ಅಶ್ವಮೇಧ ಹಾಗೂ ಇತರ ವೈದಿಕಯಾಗಗಳನ್ನು ಮಾಡಿದನೆಂದು ಹೇಳಿದೆ.

ರಠಿಕ ಮತ್ತು ಭೋಜಕ ವಂಶಗಳಿಗೆ ಸೇರಿದ ಈತನ ಸೇನಾನಿಗಳ ನೆರವಿನಿಂದ ರಾಜ್ಯವನ್ನು ವಿಸ್ತರಿಸಿದ. ಅನಂತರ ಈ ಸೇನಾನಾಯಕರು ಪ್ರಾಂತಾಧಿಕಾರಿಗಳಾದರು. ಸಾತಕರ್ಣಿಯ ಪತ್ನಿ ನಾಗನಿಕಾ ಮಹಾರಠಿಕ ವಂಶದವಳು. ಸಾತಕರ್ಣಿಯ ಅನಂತರದ ಒಂದು ಶತಮಾನ ಕಾಲ ಸಾತವಾಹನರು ತೆರೆಯ ಮರೆಯಲ್ಲಿ ಇರಬೇಕಾಯಿತು. ಆಗ ಭಾರತದಲ್ಲಿ ಗ್ರೀಕರು, ಶಕರು ದಂಡೆತ್ತಿ ಬಂದು ಭಾರತದ ರಾಜಕೀಯದಲ್ಲಿ ಅಭದ್ರತೆ ಉಂಟುಮಾಡಿದ್ದರು. ಅದರ ಬೇಗೆ ಸಾತವಾಹನರಿಗೂ ತಟ್ಟಿತ್ತು. ಆದರೆ ಸಾತವಾಹನರ ಗೌತಮೀಪುತ್ರ ಸಾತಕರ್ಣಿ ಈ ಅರಸರ ಶಕ್ತಿಯನ್ನು ಪುನಶ್ಚೇತನಗೊಳಿಸಿದ. ಶಕರ ಅರಸನಾದ ಕ್ಷಹರಾತಕುಲದ ನಹಪಾಣನನ್ನು ಸೋಲಿಸಿ ಅಪರಾಂತ, ಅನೂಪ, ಸೌರಾಷ್ಟ್ರ, ಅಕರ, ಅವಂತಿ ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡ. ಇದರಿಂದ ಇವನ ರಾಜ್ಯ ಕೊಂಕಣ, ಸೌರಾಷ್ಟ್ರ, ಮಾಳವ, ಬೀರಾರ್ ಮತ್ತು ಕೃಷ್ಣಾ ಕಣಿವೆ ಪ್ರದೇಶಗಳವರೆಗೂ ವಿಸ್ತರಿಸಿ, ಉತ್ತರ ಕರ್ನಾಟಕದ ಬಹುಭಾಗ ಇವನ ವಶವಾಯಿತು. ಕ್ಷಹರಾತ ವಂಶವನ್ನು ನಿರ್ನಾಮಮಾಡಿದವನು (ಕ್ಷಹರಾತವಂಶ ನಿರವಶೇಷ ಕರ), ಮೂರು ಸಮುದ್ರಗಳ ನೀರನ್ನು ಕುಡಿದ ಕುದುರೆಯನ್ನು ವಾಹನವಾಗಿ ಹೊಂದಿದವನು (ತ್ರಿಸಮುದ್ರತೋಯಪೀತವಾಹನ) ಸಾತವಾಹನರ ಯಶಸ್ಸನ್ನು ಪ್ರತಿಷ್ಠಾಪಿಸಿದವನು (ಸಾತವಾಹನ ಯಶಃಪ್ರತಿಷ್ಠಾಪನಕರ) ಇತ್ಯಾದಿ ಬಿರುದುಗಳನ್ನು ಈತ ಧರಿಸಿದ್ದ. ಇದರಿಂದ ಸಾತವಾಹನರ ಯಶಸ್ಸು ಪುನಃ ಪ್ರತಿಷ್ಠಾಪಿತವಾಯಿತು. ಈ ಘಟನೆ ನಡೆದುದು ಸು.124–25ರಲ್ಲಿ. ಗೌತಮೀಪುತ್ರನ ಆಳಿಕೆಯ ಕಾಲ ಸು.106–130ರವರೆಗೆ. ನಾಸಿಕದಲ್ಲಿ ದೊರೆತ ಈತನ ಮಗ ವಾಸಿಷ್ಠೀಪುತ್ರ ಪುಳುಮಾವಿಯ ಶಾಸನದಲ್ಲಿ ಈತನನ್ನು ಮುಕ್ತಕಂಠದಿಂದ ಹೊಗಳಲಾಗಿದೆ. ಇಷ್ಟಾದರೂ ಈತನ ಅಂತ್ಯ ದಾರುಣ ರೀತಿಯಲ್ಲಾಯಿತು. ಮಹಾಕ್ಷತ್ರಪನೆನಿಸಿದ ಶಕರ ಕುಲದ ಕಾರ್ದಮಕ ವಂಶಕ್ಕೆ ಸೇರಿದ ಚಷ್ಟಣನ ಮೊಮ್ಮಗ ರುದ್ರದಾಮ ಈತನನ್ನು ಕದನದಲ್ಲಿ ಸೋಲಿಸಿದ. ಅದರ ಪರಿಣಾಮವಾಗಿ ಈತನ ರಾಜ್ಯದ ಉತ್ತರದ ಹಲವು ಭಾಗಗಳು ಈತನ ಕೈಬಿಟ್ಟವು. ಈತನ ಮಗ ವಾಸಿಷ್ಠೀಪುತ್ರ (130–59) ರಾಜ್ಯವನ್ನು ಪೂರ್ವದಿಕ್ಕಿನಲ್ಲಿ ವಿಸ್ತರಿಸಿ ಕೃಷ್ಣಾನದಿಯ ಮುಖಜ ಪ್ರದೇಶಗಳನ್ನು ಆಕ್ರಮಿಸಿದ. ಕರ್ನಾಟಕದ ಬಳ್ಳಾರಿ ಜಿಲ್ಲೆ ಸಹ ಆಗ ಈತನ ವಶವಾದಂತೆ ತೋರುತ್ತದೆ. ಇವನ ಅನಂತರ ಕ್ರಮವಾಗಿ ಶಿವಶ್ರೀ(159–66), ಶಿವಸ್ಕಂಧ(166–74) ಮತ್ತು ಯಜ್ಞಶ್ರೀ (174–203) ಸಾತಕರ್ಣಿಗಳು ಆಳಿದರು. ಈ ಮನೆತನದ ಕೊನೆಯ ಖ್ಯಾತ ಅರಸನಾದ ಯಜ್ಞಶ್ರೀ ಶಕರನ್ನು ಸೋಲಿಸಿ ಉತ್ತರ ಮತ್ತು ಪಶ್ಚಿಮಭಾರತದ ಪ್ರದೇಶಗಳಿಂದ ಅವರನ್ನು ಹೊರಗಟ್ಟಿದ. ಈತನ ಬಳಿಕ ಸಾತವಾಹನರ ಬಲ ಕ್ರಮೇಣ ಕುಗ್ಗಿತು.

ಸಾತವಾಹನ ಕುಲಕ್ಕೆ ಸೇರಿದ ಕೆಲವು ಶಾಖೆಗಳವರು ಪೈಠಣ ಮತ್ತು ಕುಂತಲದೇಶ ಹಾಗೂ ಬನವಾಸಿ–ಇವುಗಳಿಂದ ಆಳುತ್ತಿದ್ದರು. ಕರ್ನಾಟಕದ ಸಾತವಾಹನರಲ್ಲಿ ಕುಂತಲ ಸಾತಕರ್ಣಿ ಮತ್ತು ಹಾಲ ಪ್ರಮುಖರು. ಪುರಾಣಗಳಲ್ಲಿ ಕುಂತಲ ಸಾತಕರ್ಣಿಯ ಪ್ರಸ್ತಾಪವಿದೆ. ವಾತ್ಸ್ಯಾಯನನ ಕಾಮಸೂತ್ರದಲ್ಲೂ ಈ ಅರಸನ ಹೆಸರಿದೆ. ಕಾವ್ಯಮೀಮಾಂಸಕನಾದ ರಾಜಶೇಖರನೂ ಕುಂತಲದ ಅರಸನೊಬ್ಬ ಸಾತವಾಹನನಾಗಿದ್ದನೆಂದಿದ್ದಾನೆ. ಪ್ರಾಕೃತಭಾಷೆಯ ಗಾಥಾಸತ್ತಸೈ (ಗಾಥಾ ಸಪ್ತಶತಿ) ಎಂಬ ಕೃತಿಯ ಕರ್ತೃವಾದ ಹಾಲ ಒಬ್ಬ ಕವಿ. ಶಾಂತಿವರ್ಮನ ತಾಳಗುಂದ ಶಾಸನದಲ್ಲಿ ಕದಂಬರಿಗೂ ಮೊದಲು ಸಾತಕರ್ಣಿ ಮತ್ತು ಇತರ ಅರಸರು ಇಲ್ಲಿಯ ಪ್ರಣವೇಶ್ವರ ದೇವರನ್ನು ಅರ್ಚಿಸುತ್ತಿದ್ದರೆಂದು ಹೇಳಿದೆ. ನಾಸಿಕದ ಶಾಸನದಲ್ಲಿ ಗೌತಮೀಪುತ್ರ ಸಾತಕರ್ಣಿಯು ವೈಜಯಂತಿಯಲ್ಲಿದ್ದಾಗ (ಈಗಿನ ಬನವಾಸಿ) ಆಜ್ಞೆ ಹೊರಡಿಸಿದನೆಂದು ಹೇಳಿದೆ. ಬನವಾಸಿಯಲ್ಲಿಯೇ ವಾಸಿಷ್ಠೀಪುತ್ರನ ಮಗ ಶಿವಶ್ರೀ ಪುಳುಮಾವಿಯ ಮಹಾದೇವಿಯ (ಅರಸಿ ?) ಸ್ಮಾರಕಶಿಲೆಯ ಶಾಸನವೊಂದು ದೊರೆತಿದೆ (1974). ಬಳ್ಳಾರಿಯ ಸಮೀಪದ ಮ್ಯಾಕದೋಣಿಯಲ್ಲಿ 3ನೆಯ ಶತಮಾನಕ್ಕೆ ಸೇರಿದ ಪುಳುಮಾವಿಯ ಶಾಸನವೊಂದಿದೆ. ಇದರಲ್ಲಿ ಸಾತಾವಾಹನಿಹಾರ ಎಂಬ ಭೌಗೋಳಿಕ ಭಾಗವನ್ನು ಹೆಸರಿಸಿದೆ. ಹಿರೇಹಡಗಲಿಯಲ್ಲಿ ದೊರೆತ ಪಲ್ಲವ ಶಿವಸ್ಕಂಧವರ್ಮನ ತಾಮ್ರಶಾಸನದಲ್ಲಿ ಈ ಸುತ್ತಲಿನ ಪ್ರದೇಶ, ಸಾತಹನಿರಟ್ಟಕ್ಕೆ (ಸಾತವಾಹನ ರಾಷ್ಟ್ರ) ಸೇರಿದುದೆಂದು ಹೇಳಿದೆ. ಇವುಗಳಿಂದ ಸಾತವಾಹನ ಕುಲದ ಅನೇಕ ಅರಸರು ಕರ್ನಾಟಕದಲ್ಲೂ ಆಳಿದರೆಂಬುದು ಸ್ಪಷ್ಟವಾಗುತ್ತವೆ. ಚುಟು ಮುಂತಾದ ಸಾತವಾಹನರ ಸಾಮಂತರ ಹಲವಾರು ನಾಣ್ಯಗಳು ಕರ್ನಾಟಕದ ಚಿತ್ರದುರ್ಗ ಹಾಗೂ ಕಾರವಾರ ಜಿಲ್ಲೆಗಳಲ್ಲಿ ದೊರೆತಿವೆ.

**ಆಡಳಿತ ವ್ಯವಸ್ಥೆ:** ಅರ್ಥಶಾಸ್ತ್ರದಲ್ಲಿ ನಿರೂಪಿಸಿದಂತೆ ರಾಜ್ಯವನ್ನು ಆಹಾರ ಅಥವಾ ರಾಷ್ಟ್ರಗಳಾಗಿ ವಿಂಗಡಿಸಲಾಗಿತ್ತು. ಒಂದೊಂದು ಆಹಾರದಲ್ಲಿಯೂ ನಿಗಮ ಎನಿಸಿದ ಒಂದಾದರೂ ಪಟ್ಟಣವಿರುತ್ತಿತ್ತು. ಗ್ರಾಮಗಳಂತೂ ರಾಜ್ಯದ ಜೀವನಾಡಿಗಳು. ಪ್ರತಿ ಆಹಾರಕ್ಕೂ ಅಮಾತ್ಯ ಮುಖ್ಯಾಧಿಕಾರಿಯಾಗಿ ನಿಯಮಿಸಲ್ಪಟ್ಟಿದ್ದ. ವಿಷ್ಣುಪಾಲಿತ, ಸ್ಯಮಕ ಮತ್ತು ಶಿವಸ್ಕಂಧದತ್ತರು, ಗೌತಮೀಪುತ್ರ ಸಾತಕರ್ಣಿ ಹಾಗೂ ಪುಳುಮಾವಿಯರ ಅಧೀನದಲ್ಲಿ ಗೋವರ್ಧನದ (ನಾಸಿಕ್) ಅಮಾತ್ಯರಾಗಿದ್ದರೆಂದು ತಿಳಿದುಬರುತ್ತದೆ. ರಾಜಾಮಾತ್ಯ ಎನಿಸಿದ ಅಧಿಕಾರಿಗಳು ಬಹುಶಃ ಇವರಿಗೂ ಮೇಲ್ದರ್ಜೆಯವರಾಗಿದ್ದು ಅರಸನ ಮಂತ್ರಿವರ್ಗಕ್ಕೆ ಸೇರಿದವರಾಗಿರಬಹುದು. ಭಾಂಡಾಗಾರಿಕಾ, ಹೇರಣಿಕ, ಮಹಾಸೇನಾಪತಿ, ಲೇಖಕ, ನಿಬಂಧಕ ಇವರು ಕೇಂದ್ರಾಡಳಿತದ ಇತರ ಪ್ರಮುಖ ಅಧಿಕಾರಿಗಳು. ಲೇಖಕ ರಾಜ್ಯದ ಮುಖ್ಯ ಕಾರ್ಯದರ್ಶಿ ಇದ್ದಂತೆ. ರಾಜನ ಬಾಯಿಮಾತಿನ ಆಜ್ಞೆಗಳಿಗೆ ದಾಖಲೆಗಳ ಸ್ವರೂಪ ಕೊಟ್ಟು ಇವನ್ನು ಇತರ ಅಧಿಕಾರಿಗಳಿಗೆ ತಿಳಿಯಪಡಿಸುವ, ಕಾರ್ಯಗತಗೊಳಿಸುವ ಹೊಣೆಗಾರಿಕೆ ಈತನದಾಗಿತ್ತು. ಲೇಖಕ ಸಿದ್ಧಗೊಳಿಸಿದ ದಾಖಲೆಗಳನ್ನು ವ್ಯವಸ್ಥಿತವಾಗಿಡುವ ಕಾರ್ಯ ನಿಬಂಧಕನದು. ಭಾಂಡಾಗಾರಿಕಾ ರಾಜ್ಯದ ಉಗ್ರಾಣಾಧಿಕಾರಿ. ಹೇರಣಿಕ ಬೊಕ್ಕಸದ ಅಧಿಕಾರಿ. ಲಭ್ಯವಿರುವ ಆಧಾರಗಳಿಂದ ರಾಜ್ಯದಲ್ಲಿ ಸುವ್ಯವಸ್ಥಿತವಾದ, ಕಾನೂನುಬದ್ಧವಾದ ಆಡಳಿತ ಪದ್ಧತಿ ಇದ್ದಿತೆಂದು ಸಹಜವಾಗಿ ಊಹಿಸಬಹುದು.

ರಾಜನ ನೇರವಾದ ಆಡಳಿತಕ್ಕೊಳಪಟ್ಟ ಭಾಗಗಳಲ್ಲದೆ ರಾಜನ ಸಾಮಂತರಾಗಿ ತಮ್ಮ ತಮ್ಮ ಪ್ರದೇಶಗಳ ಒಳಾಡಳಿತದಲ್ಲಿ ಸ್ವತಂತ್ರರಾಗಿದ್ದ ಮಹಾರಥಿ, ಮಹಾಭೋಜ ಎಂಬ ಮಾಂಡಳಿಕರು ಹಲವರು ಕಂಡುಬರುತ್ತಾರೆ. ಮಹಾರಥಿಗಳು ಪಶ್ಚಿಮಘಟ್ಟಗಳ ಉತ್ತರ ಭಾಗದಲ್ಲಿಯೂ ಮಹಾಭೋಜರು ಉತ್ತರ ಕೊಂಕಣ ಪ್ರದೇಶದಲ್ಲಿಯೂ ಆಳುತ್ತಿದ್ದರೆಂದು ಕಂಡುಬಂದಿದೆ. ಇವರು ಸ್ವತಂತ್ರರಾಗಿ ಭೂಮಿದಾನ ಮುಂತಾದವುಗಳನ್ನು ಮಾಡಬಹುದಾಗಿದ್ದರಿಂದ ಕೆಲವು ವೇಳೆ ಇವರು ತಮ್ಮದೇ ಆದ ನಾಣ್ಯಗಳನ್ನು ಸಹ ಅಚ್ಚುಹಾಕಿಸಿ ತಮ್ಮ ಆಡಳಿತ ಪ್ರದೇಶದಲ್ಲಿ ಚಲಾವಣೆಗೆ ತಂದಿದ್ದರು. ಸಾತವಾಹನರ ಪ್ರಾಬಲ್ಯ ಪಶ್ಚಿಮ ದಖನ್‌ನಲ್ಲಿ ಇಳಿಮುಖವಾದಾಗ ಬನವಾಸಿಯ ಸುತ್ತಲಿನ ಪ್ರದೇಶದಲ್ಲಿ ಚುಟುಗಳು ಸ್ವತಂತ್ರರಾಗಿ ಆಳುತ್ತಿದ್ದರು.

ರಾಜ್ಯದಲ್ಲಿ ಹಲವು ಪಟ್ಟಣಗಳೂ (ನಿಗಮ) ಅನೇಕ ಗ್ರಾಮಗಳೂ ಇದ್ದುವೆಂದು ಹೇಳಿದೆ. ಗ್ರಾಮ ಆಡಳಿತದ ಅತಿ ಸಣ್ಣ ಘಟಕ. ಇದರ ಅಧಿಕಾರಿ ಗ್ರಾಮಣಿ. ಹಾಲನ ಗಾಥಾಸಪ್ತಸತಿಯಲ್ಲಿ ಗ್ರಾಮಣಿಯು ಐದು ಅಥವಾ ಒಮ್ಮೊಮ್ಮೆ ಹತ್ತು ಗ್ರಾಮಗಳ ಅಧಿಕಾರಿಯಾಗಿದ್ದನೆಂದು ಹೇಳಿದೆ. ಪರದೇಶ ವಾಣಿಜ್ಯ ಬಹುಮಟ್ಟಿಗೆ ಅಭಿವೃದ್ಧಿ ಹೊಂದಿದ್ದ ಈ ಕಾಲದಲ್ಲಿ ಪೂರ್ವ ಹಾಗೂ ಪಶ್ಚಿಮ ತೀರಗಳಲ್ಲಿಯೂ ಒಳನಾಡಿನಲ್ಲಿಯೂ ಅನೇಕ ನಿಗಮಗಳಿದ್ದುವು. ಈಗಿನ ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಗೋದಾವರಿಯ ಉತ್ತರತೀರದ ಪೈಠಣ ಹಾಗೂ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಧನಕಟ–ಧಾನ್ಯಕಟಕ–ಧರಣಿಕೋಟೆ–ಇವರ ರಾಜಧಾನಿಗಳಾಗಿ ಮೆರೆದುವು. ಭರುಕಚ್ಛ, ಸೋಪಾರ, ಕಲ್ಯಾಣ, ಕಾನ್ಹೇರಿ, ತಗರ, ಜುನ್ನರ್, ಕಾರ್ಲೆ, ಗೋವರ್ಧನ ಮುಂತಾದವು ಇತರ ನಿಗಮಗಳು. ಇವುಗಳ ಆಡಳಿತ ಒಂದು ಸಭೆಗೆ (ನಿಗಮ ಸಭೆ) ಸೇರಿದ್ದಿತೆನ್ನಲು ಆಧಾರಗಳಿವೆ. ಈ ಸಭೆಯ ಮೂಲಕ ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದಾಗಿದ್ದಿತು. ಗ್ರಾಮಗಳಲ್ಲಿ ಗಹಪತಿಯೂ (ಬಹುಶಃ ಬೇಸಾಯಗಾರರ ಒಂದು ಸಂಘ) ವ್ಯಾಪಾರ ಕೇಂದ್ರಗಳೆನಿಸಿದ ಪಟ್ಟಣಗಳಲ್ಲಿ ಸೇನಿ (ಶ್ರೇಣಿ) ಎಂಬ ವಣಿಕ ಸಂಘವೂ ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡಿದ್ದವು. ಈ ವಣಿಕ ಸಂಘ ಅನೇಕ ಸಂದರ್ಭಗಳಲ್ಲಿ ಆಧುನಿಕ ಬ್ಯಾಂಕ್‌ಗಳಂತೆ ಲೇವಾದೇವಿ ವ್ಯವಹಾರಗಳಲ್ಲಿ ನಿರತವಾಗಿದ್ದಿತು. ಈ ಸಂಘಗಳು ಹಲವಾರು ದತ್ತಿಗಳನ್ನು ಸ್ವೀಕರಿಸಿ ಅದರಿಂದ ಬರುವ ಬಡ್ಡಿಹಣದಲ್ಲಿ ದಾನಕಾರ್ಯಗಳನ್ನು ಮಾಡಬಹುದಾಗಿದ್ದಿತಲ್ಲದೆ ಮೂಲಧನವನ್ನು ವರ್ತಕ ಹಾಗೂ ಇತರರಿಗೂ ಸಾಲ ಕೊಡುವ, ತನ್ಮೂಲಕ ವ್ಯಾಪಾರಕ್ಕೆ ಬಂಡವಾಳವನ್ನೊದಗಿಸುವ ಸಂಸ್ಥೆಗಳಂತೆ ಕಾರ್ಯನಿರತವಾಗಿದ್ದವು. ಬೇಸಾಯಕ್ಕೂ ವಾಣಿಜ್ಯಕ್ಕೂ ಪೋಷಕವಾಗಿ ಇತರ ಅನೇಕ ವೃತ್ತಿಸಂಘಗಳೂ ಇದ್ದವು. ಶಾಸನಗಳಲ್ಲಿ ಕುಲರಿಕ (ಕುಂಬಾರ), ಒದಯಂತ್ರಿಕ, ತಿಲಪಿಸಕ (ಗಾಣಿಗ), ಧನ್ನಿಕ (ಧಾನ್ಯಗಳ ಮಾರಾಟಗಾರ ?), ಕೊಲಿಕ (ನೇಕಾರ ?), ವಸಕಾರ, ಕಸಕಾರ (ಕಾಸ್ಯಕಾರ) ಮುಂತಾದ ವೃತ್ತಿಗಾರರನ್ನು ಹೆಸರಿಸಿದೆ. ಈ ವೃತ್ತಿಸಂಘಗಳು ಶ್ರೇಣಿಧರ್ಮಗಳನ್ನು ಪಾಲಿಸುತ್ತಿದ್ದುವು.

**ಆರ್ಥಿಕ, ಸಾಮಾಜಿಕ ಸ್ಥಿತಿ:** ಈ ಕಾಲದಲ್ಲಿ ವ್ಯಾಪಾರ ಬಹಳ ಅಭಿವೃದ್ಧಿಹೊಂದಿತ್ತು. ಪೆರಿಪ್ಲಸ್ ಆಫ್ ದಿ ಎರಿಥ್ರಿಯನ್ ಸೀ, ಟಾಲಮಿಯ ಜಿಯೋಗ್ರಫಿಗಳಲ್ಲಿ ದಖನ್ ಪ್ರದೇಶದಿಂದ ರಫ್ತಾಗುತ್ತಿದ್ದ, ಇಲ್ಲಿನ ಜನ ಆಮದು ಮಾಡಿಕೊಳ್ಳುತ್ತಿದ್ದ ವಸ್ತುಗಳ ವಿವರಗಳನ್ನು ಕೊಟ್ಟಿದೆ. ಸುಗಂಧದ್ರವ್ಯಗಳು, ಹತ್ತಿ ಹಾಗೂ ರೇಷ್ಮೆಯ ಬಟ್ಟೆಗಳು, ಮೆಣಸು ಮುಂತಾದ ಸಂಬಾರ ಪದಾರ್ಥಗಳು, ದಂತ, ಅಗೇಟ್, ಕಾರ್ನೀಲಿಯನ್ ಮತ್ತು ಲೀಸಿಯಮ್ ಮುಂತಾದ ಪ್ರಶಸ್ತ ಶಿಲೆಗಳು ಮುಂತಾದವುಗಳನ್ನು ರಫ್ತುಮಾಡಿ ತಾಮ್ರ, ತವರ, ಸೀಸ, ಉತ್ತಮ ದರ್ಜೆಯ ಹಲವು ಬಗೆಯ ಮದ್ಯಪೇಯಗಳು, ಅಲಂಕಾರವಸ್ತುಗಳು, ಗಾಜು ಮುಂತಾದವುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ರೋಮ್ ದೇಶದೊಡನೆ ವಾಣಿಜ್ಯ ಸಂಬಂಧಗಳು ಉತ್ತಮವಾಗಿದ್ದುವು. ದಖನ್ ಹಾಗೂ ದಕ್ಷಿಣ ಭಾರತದ ಅನೇಕ ಭಾಗಗಳಲ್ಲಿ ರೋಮನ್ ನಾಣ್ಯಗಳು ಲಭಿಸಿವೆ. ಅಲ್ಲದೆ ಬರ್ಮ, ಸುಮಾತ್ರ, ಅರಕಾನ್, ಚಂಪಾದೇಶಗಳೊಂದಿಗೂ ಈ ಕಾಲದ ವ್ಯಾಪಾರಿಗಳು ಸಂಪರ್ಕ ಹೊಂದಿದ್ದರು. ರೋಮನರೂ ಅರಬರೂ ಪರದೇಶದ ವರ್ತಕರಲ್ಲಿ ಪ್ರಮುಖರು. ಕಾಹಾಪಾನಾ (ಕರ್ಷಾಪಣ) ಹಾಗೂ ಸುವರ್ಣವೆಂಬ ನಾಣ್ಯಗಳು ಚಲಾವಣೆಯಲ್ಲಿದ್ದರೂ ಅವುಗಳು ಮಿತವಾಗಿ ಉಪಯೋಗಿಸಲ್ಪಟ್ಟಂತೆ ತೋರುತ್ತದೆ. ತಾಮ್ರ, ಸೀಸ, ಪೋಟಿನ್, ಚಿನ್ನ, ಬೆಳ್ಳಿ–ಈ ಲೋಹಗಳ ನಾಣ್ಯಗಳು ಲಭಿಸಿವೆ. ಇವುಗಳಲ್ಲಿ ಯಾವ ಕಲಾತ್ಮಕ ವಿಶೇಷವೂ ಇಲ್ಲ. ಆದರೂ ಇತ್ತೀಚೆಗೆ ದೊರೆತ ಹಲವಾರು ನಾಣ್ಯಗಳಲ್ಲಿ ಸಾತವಾಹನ ಅರಸರ ಚಿತ್ರಗಳು ಕಾಣಿಸಿಕೊಂಡಿವೆ. ವಾಣಿಜ್ಯ ಅಭಿವೃದ್ಧಿ ಹೊಂದಿದ್ದರೂ ವ್ಯವಸಾಯ ಮುಖ್ಯ ಕಸಬಾಗಿಯೇ ಉಳಿದಿತ್ತು. ಅರಸರು, ಜನರು ಮಾಡುತ್ತಿದ್ದ ಭೂದಾನ, ಗೋದಾನಗಳಿಂದ ಭೂಮಿಗೂ ಪಶುಗಳಿಗೂ ಇವರು ಕೊಟ್ಟಿದ್ದ ಪ್ರಾಶಸ್ತ್ಯ ಸ್ಪಷ್ಟವಾಗುತ್ತದೆ. ಬೆಳೆಯ ಷಡ್ಭಾಗ ರಾಜಾದಾಯಕ್ಕಾಗಿ ಹೋಗುತ್ತಿತ್ತು. ಉಪ್ಪನ್ನು ತಯಾರಿಸುವುದು ಬಹುಶಃ ಸರ್ಕಾರದ ಏಕಸ್ವಾಮ್ಯವಾಗಿತ್ತು.

ಸಮಾಜದಲ್ಲಿ ಪಿತೃಪ್ರಧಾನ ಸಹಕುಟುಂಬ ಪದ್ಧತಿ ಜಾರಿಯಲ್ಲಿತ್ತು. ಸಾತವಾಹನ ಅರಸರ ಹೆಸರುಗಳ ಆರಂಭದಲ್ಲಿ ತಾಯಿಯ ಹೆಸರನ್ನು (ಗೌತಮೀಪುತ್ರ, ವಾಸಿಷ್ಠೀಪುತ್ರ ಇತ್ಯಾದಿ) ಬಳಸುತ್ತಿದ್ದರು. ಇದು ಮಾತೃಪ್ರಧಾನ ಪದ್ಧತಿಯ ಪರಿಣಾಮವಲ್ಲ. ಶಾಸನಗಳಲ್ಲಿ ಮೊದಲ ಸ್ಥಾನ ಪಿತೃವಿಗೆ, ಅನಂತರ ಮಾತೃ, ಗಂಡುಮಕ್ಕಳು, ಹೆಣ್ಣುಮಕ್ಕಳು ಈ ಕ್ರಮದಲ್ಲಿ ಸ್ಥಾನಗಳನ್ನು ಕೊಟ್ಟಿದೆ. ಹಾಗೆಂದಾಕ್ಷಣ ಸ್ತ್ರೀಯರಿಗೆ ಸಮಾಜದಲ್ಲಿ ಪ್ರಮುಖಸ್ಥಾನವಿರಲಿಲ್ಲವೆಂದೇನೂ ಅಲ್ಲ. ಅನೇಕ ಸ್ತ್ರೀದಾನಿಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಪಿತೃಪ್ರಧಾನ ಪದ್ಧತಿ ವೈದಿಕಸಮಾಜದ ಪ್ರಭಾವವೆನ್ನಬಹುದು.

ಸಮಕಾಲೀನ ಶಾಸನಗಳನ್ನು, ಚಿತ್ರಗಳನ್ನು ಗಮನಿಸಿದಾಗ ಇವರ ಉಡುಗೆ ತೊಡುಗೆಗಳ ಬಗೆಗೆ ಹಲವಾರು ಅಂಶಗಳು ಗೋಚರವಾಗುತ್ತವೆ. ಸ್ತ್ರೀಯರು ಸೊಂಟದ ಕೆಳಗೆ ನೆರಿಗೆಹಿಡಿದ ಒಂದು ವಸ್ತ್ರವನ್ನುಡುತ್ತಿದ್ದರು. ಬಲಗಡೆಗೆ ಗಂಟನ್ನು ಹಾಕಿಕೊಂಡು ಸ್ವಲ್ಪ ಚುಂಗನ್ನು ಕೆಳಗೆ ಬಿಡುತ್ತಿದ್ದರು. ಎದೆಯನ್ನು ಮುಚ್ಚಿಕೊಳ್ಳುವ ಪದ್ಧತಿ ಇನ್ನೂ ಬಂದಿರಲಿಲ್ಲವೆಂದು ತೋರುತ್ತದೆ. ಕಿವಿಗಳಿಗೆ ಉಂಗುರ, ಮೊಳಕೈವರೆಗೂ ಕೈತುಂಬ ಬಳೆಗಳು, ಕಂಠಹಾರಗಳು ಮತ್ತು ಕಡಗಗಳನ್ನು ಧರಿಸುತ್ತಿದ್ದರು. ಕಾಲುಗಳಿಗೆ ಕಾಲಂದಿಗೆಗಳನ್ನು ಸ್ತ್ರೀಪುರುಷರೆಲ್ಲರೂ ಧರಿಸುತ್ತಿದ್ದರು. ಗಂಡಸರು ಸೊಂಟದ ಕೆಳಗೆ ವಸ್ತ್ರವನ್ನು ಉಟ್ಟು ತಲೆಗೆ ರುಮಾಲನ್ನು ಸುತ್ತುತ್ತಿದ್ದರು. ಪುರುಷರೂ ಆಭರಣಗಳನ್ನು ತೊಡುತ್ತಿದ್ದರು. ಚಿನ್ನದ ಆಭರಣಗಳ ಮೇಲೆ ಇವರಿಗೆ ಹೆಚ್ಚಿನ ಒಲವು.

ಈ ಕಾಲದಲ್ಲಿ ವೈದಿಕಧಮ ಪ್ರಧಾನ ಧರ್ಮವಾಗಿದ್ದಿತು. ಅರಸರು ವೈದಿಕ ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ವರ್ಣಾಶ್ರಮ ಧರ್ಮಗಳ ಪಾಲನೆ ಅವರ ಕರ್ತವ್ಯವಾಗಿತ್ತು. ಗೌತಮೀಪುತ್ರ ಸಾತಕರ್ಣಿ ವರ್ಣಸಂಕರವನ್ನು ತಡೆಯಲು ಯತ್ನಿಸಿದನೆಂಬುದು ಶಾಸನಗಳಿಂದ ತಿಳಿದ ವಿಷಯ. ಈ ವೇಳೆಗೆ ಪುರಾಣಗಳು ತಮ್ಮ ಅಂತಿಮ ರೂಪವನ್ನು ತಾಳಿದ್ದು ಪೌರಾಣಿಕ ದೇವತೆಗಳೆನಿಸಿದ ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರ, ಸೂರ್ಯ, ಯಮ, ವರುಣ, ಕುಬೇರ, ಪಶುಪತಿ, ಗೌರಿ, ಲಕ್ಷ್ಮೀನಾರಾಯಣ ಮೊದಲಾದವರನ್ನು ಪೂಜಿಸುವ ಪರಿಪಾಠ ಬೆಳೆದು ಬಂದಿತ್ತು. ಪರದೇಶೀಯರೆನಿಸಿದ ಶಕ, ಪಹೂವ, ಕುಷಾಣ ಮೊದಲಾದವರು ಸಹ ವೈದಿಕಧರ್ಮದ ಪ್ರಭಾವಕ್ಕೊಳಗಾಗಿ ವೈದಿಕದೇವತೆಗಳೆನಿಸಿದ ಶಿವ ಮತ್ತು ವಿಷ್ಣುವನ್ನು ಪೂಜಿಸುತ್ತಿದ್ದರು. ಗೋದಾನ ಭೂದಾನಗಳು, ಕೆರೆ ಕಟ್ಟಿಸುವುದು, ಬಾವಿಗಳನ್ನು ತೋಡುವುದು, ಪ್ರಯಾಣಿಕರ ಸೌಕರ್ಯಕ್ಕಾಗಿ ಛತ್ರಗಳನ್ನು ಕಟ್ಟಿಸಿ ಊಟ ವಸತಿ ಸೌಕರ್ಯಗಳನ್ನೇರ್ಪಡಿಸುವುದು, ತೀರ್ಥಯಾತ್ರೆ ಮಾಡುವುದು ಪವಿತ್ರ ಕರ್ತವ್ಯಗಳೆನಿಸಿಕೊಂಡಿದ್ದವು.

ಈ ಕಾಲದಲ್ಲಿ ಜೈನ ಹಾಗೂ ಬೌದ್ಧಧರ್ಮಗಳು ಪ್ರಮುಖ ಧರ್ಮಗಳೆನಿಸಿದ್ದುವು; ಬೌದ್ಧಧರ್ಮ ದಖನಿನ ಪೂರ್ವತೀರ ಪ್ರದೇಶಗಳಲ್ಲಿ ಬಹುಮಟ್ಟಿಗೆ ವ್ಯಾಪಿಸಿತ್ತು. ಜಗ್ಗಯ್ಯಪೇಟೆ, ಅಮರಾವತಿ ಮತ್ತು ಭಟ್ಟಿಪ್ರೋಲುಗಳಲ್ಲಿ ದೊರೆತ ಸ್ತೂಪಗಳಲ್ಲಿ ಪ್ರ.ಶ.ಪೂ. 2ನೆಯ ಶತಮಾನಕ್ಕೆ ಸೇರಿದ ಬ್ರಾಹ್ಮಿಲಿಪಿಯ ಶಾಸನಗಳು ಲಭಿಸಿವೆ. ಅಶೋಕನ ಶಾಸನಗಳು ಉತ್ತರ ಕರ್ನಾಟಕದ ಹಲವಾರು ಕಡೆ ಲಭಿಸಿರುವುದನ್ನು ಗಮನಿಸಿ ಆ ಪ್ರದೇಶಗಳು ಬೌದ್ಧಧರ್ಮ ಪ್ರಭಾವಕ್ಕೊಳಪಟ್ಟಿದ್ದುವೆಂದು ಹೇಳಬಹುದು. ಬನವಾಸಿ ಒಂದು ಪ್ರಮುಖ ಬೌದ್ಧಕೇಂದ್ರವಾಗಿದ್ದಿತು. ಅಶೋಕ ಧರ್ಮಪ್ರಸಾರಕ್ಕಾಗಿ ಕಳುಹಿಸಿದ ಭಿಕ್ಷುಗಳಲ್ಲಿ ಕೆಲವರು ಬನವಾಸಿಗೆ ಬಂದಿದ್ದರೆಂದು ತಿಳಿದಿದೆ. ನಾಗಾರ್ಜುನಕೊಂಡದಲ್ಲಿ ದೊರೆತ ಬೌದ್ಧಶಾಸನಗಳಲ್ಲಿಯೂ ಬನವಾಸಿಯಲ್ಲಿ ನೆಲಸಿದ್ದ ಬೌದ್ಧಭಿಕ್ಷುಗಳ ಪ್ರಸ್ತಾಪವಿದೆ. ಇತ್ತೀಚೆಗೆ ಬನವಾಸಿಯಲ್ಲಿ ನಡೆಸಿದ ಉತ್ಖನನದಲ್ಲಿ ಗಜಪೃಷ್ಠಾಕಾರದ ಕಟ್ಟಡದ ಅವಶೇಷಗಳು ಲಭಿಸಿವೆಯಾದರೂ ಅದು ಬೌದ್ಧಧರ್ಮಕ್ಕೆ ಸಂಬಂಧಿಸಿದುದೆಂದು ಖಚಿತವಾಗಿ ಹೇಳಲಾಗದು. ಲಭ್ಯ ಆಧಾರಗಳಿಂದ ಗುಲ್ಬರ್ಗ ಜಿಲ್ಲೆಯ ಸನ್ನತಿ ಒಂದು ಬೌದ್ಧ ಕೇಂದ್ರವಾಗಿದ್ದಿತೆಂದು ತಿಳಿದಿದೆ. ಇಲ್ಲಿ ಪ್ರ.ಶ.ಪೂ. 1ನೆಯ ಶತಮಾನದ ಬ್ರಾಹ್ಮಿಲಿಪಿಯ ಶಾಸನಗಳು ಲಭಿಸಿವೆ. (ಬಿ.ಆರ್.ಜಿ.)

**ಸಾಮಾಜಿಕ ಒಪ್ಪಂದ ಸಿದ್ಧಾಂತ:** ರಾಜ್ಯದ ಅಸ್ತಿತ್ವ ನಿರೂಪಣಾ ಸಿದ್ಧಾಂತ. ಈ ಸಿದ್ಧಾಂತಕ್ಕೆ ಇರುವ ಐತಿಹಾಸಿಕ ಹಿನ್ನೆಲೆಯನ್ನು ಕೆಲವು ರಾಜ್ಯಶಾಸ್ತ್ರಜ್ಞರು ಗುರುತಿಸಿದ್ದಾರೆ. ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವೆ ಆದ ಆಡಳಿತ ಸಂಬಂಧ ಒಪ್ಪಂದವೇ ಇದಕ್ಕೆ ಮೂಲವೆಂದು ಕೆಲವರ ಅಭಿಪ್ರಾಯ. ಪ್ಲೇಟೊವಿಗಿಂತ ಹಿಂದೆ ಇದ್ದ ಗ್ರೀಕ್ ತತ್ತ್ವಜ್ಞಾನಿಗಳ ಗುಂಪಿನ ಸೋಫಿಸ್ಟರಲ್ಲಿ ಈ ಒಪ್ಪಂದ ಸಿದ್ಧಾಂತ ಪ್ರಥಮವಾಗಿ ಕಾಣಬಂದಿತೆಂದು ಹೇಳಲಾಗಿದೆ. ಯಾವುದೇ ನಿರ್ದಿಷ್ಟವಾದ ರಾಜಕೀಯ ನಿಯಂತ್ರಣವಿಲ್ಲದಿದ್ದ ಕಾಲದಲ್ಲಿ ಜನರು ತಾವಾಗಿಯೇ ಮಾಡಿಕೊಂಡ ಒಪ್ಪಂದದ ಪರಿಣಾಮವಾಗಿ ರಾಜ್ಯ ಸೃಷ್ಟಿಯಾಯಿತೆಂದು ಹೇಳಿಕೆ. ಈ ಸೃಷ್ಟಿ ಸಾಮಾಜಿಕ ಸ್ವರೂಪದ್ದೆಂದು ಕೆಲವರು ಭಾವಿಸಿದರೆ ರಾಜಕೀಯ ಸ್ವರೂಪದ್ದೆಂದೇ ಕೆಲವರು ಭಾವಿಸುವರು. ಈ ಸಿದ್ಧಾಂತದಂತೆ ಮಾನವ ತಾನು ಅನುಭವಿಸುತ್ತಿದ್ದ ಸ್ವಾಭಾವಿಕ ಹಕ್ಕು ಬಾಧ್ಯತೆಗಳಲ್ಲಿ ಕೆಲವನ್ನು ಸಮಾಜದ ಪ್ರಯೋಜನಾರ್ಥ ಬಿಟ್ಟುಕೊಡುವುದು. ಹೀಗೆ ತಾನು ಬಿಟ್ಟುಕೊಟ್ಟ ಸ್ವಾಭಾವಿಕ ಹಕ್ಕುಬಾಧ್ಯತೆಗಳಿಗೆ ಪ್ರತಿಯಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಿಂದ ರಕ್ಷಣೆ ಪಡೆಯುವಂತಾದುದು. 11ನೆಯ ಶತಮಾನದಲ್ಲಿ ಪೋಪ್‌ಗಳ ಮತ್ತು ದೊರೆಗಳ ಮಧ್ಯೆ ನಡೆದ ಹಗರಣದಿಂದ ಹಿಡಿದು 18ನೆಯ ಶತಮಾನದ ಫ್ರಾನ್ಸಿನ ಕ್ರಾಂತಿಕಾಲದವರೆಗೆ ಈ ಸಿದ್ಧಾಂತದ ಐತಿಹಾಸಿಕ ಬೆಳೆವಣಿಗೆಯನ್ನು ಗುರುತಿಸಬಹುದು. 16–18ನೆಯ ಶತಮಾನದ ತನಕ ಈ ಸಿದ್ಧಾಂತ ಸರ್ವವ್ಯಾಪಿಯಾಗಿ ಅನೇಕ ಜನಾಂಗಗಳ ರಾಜಕೀಯ ಜೀವನ ರೂಪುಗೊಳ್ಳಲು ಸಹಾಯವಾಗಿತ್ತು. ಪೌರ್ವಾತ್ಯ ಇತಿಹಾಸದಲ್ಲಿಯೂ ಈ ಸಿದ್ಧಾಂತದ ಬಗ್ಗೆ ನಿದರ್ಶನಗಳು ದೊರೆಯುತ್ತವೆ. ಮಹಾಭಾರತದ ಶಾಂತಿಪರ್ವದಲ್ಲಿ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಈ ಸಿದ್ಧಾಂತವನ್ನು ಗುರುತಿಸಬಹುದು. ಪ್ಲೇಟೊವಿಗೆ ಮುಂಚೆ ಜೀವಿಸಿದ್ದ ಗ್ರೀಕ್ ತತ್ತ್ವಜ್ಞಾನಿಗಳ ಒಂದು ಗುಂಪಿನಲ್ಲಿ ಈ ಸಿದ್ಧಾಂತದ ಪ್ರತಿಪಾದನೆ ಇತ್ತು. ಆದರೆ ಪ್ಲೇಟೊ ಆಗಲಿ, ಅರಿಸ್ಟಾಟಲ್ ಆಗಲಿ ಇದನ್ನು ಪುಷ್ಠೀಕರಿಸಲಿಲ್ಲ. ಕ್ರೈಸ್ತಧರ್ಮದ ಉದಯವಾದ ಮೇಲೆ ಶತಮಾನಗಳ ತನಕ ಧಾರ್ಮಿಕ ಆಧಾರದ ಮೇಲೆ ರಾಜಕೀಯ ಭಾವನೆಗಳು ಬೆಳೆಯಲಾರಂಭಿಸಿದವು. ಭಗವಂತ ಮತ್ತು ಜನರು ಅಥವಾ ರಾಜ ಮತ್ತು ಪ್ರಜೆಗಳ ಮಧ್ಯೆ ಆದ ಒಪ್ಪಂದ ಅಥವಾ ಸಮ್ಮತಿಗಳ ಸೂಚನೆಗಳು ಬೈಬಲ್ಲಿನಲ್ಲಿ ಕಾಣಬರುತ್ತವೆ. ಸಾಮಾಜಿಕ ಒಪ್ಪಂದ ಸಿದ್ಧಾಂತಕ್ಕೆ ಧಾರ್ಮಿಕ ನೆಲೆಯೂ ಇದ್ದು ಮಧ್ಯಯುಗದಲ್ಲಿ ಅದು ಫಲಕಾರಿಯಾಗಿತ್ತೆಂದು ತಿಳಿದುಬರುವುದು. ಯುರೋಪಿನಲ್ಲಿ ಆ ಕಾಲದ ಸ್ಥಿತಿಗತಿಯ ವಾತಾವರಣಕ್ಕೆ ಈ ಸಿದ್ಧಾಂತ ಹೊಂದಿಕೊಂಡಿತ್ತು. ಆ ಕಾಲದಲ್ಲಿ ರಾಜರು ಸ್ವೀಕರಿಸುತ್ತಿದ್ದ ಪ್ರಮಾಣ ವಚನಗಳಲ್ಲಿ ಒಪ್ಪಂದದ ಸಂಕೇತ ಸ್ಪಷ್ಟವಾಗಿಯೇ ಇದ್ದಿತು. ಒಳ್ಳೆ ಆಡಳಿತ ನೀಡಲು ರಾಜರು ವಾಗ್ದಾನ ಮಾಡುತ್ತಿದ್ದರು. ರಾಜ ತಾನು ಮಾಡಿಕೊಂಡ ಒಪ್ಪಂದವನ್ನು ಅತಿಕ್ರಮಿಸಿದಲ್ಲಿ ಪ್ರಜೆಗಳು ಅವನಿಗೆ ವಿಧೇಯರಾಗಿರುವ ನೀತಿಯನ್ನು ಕೈಬಿಡುತ್ತಿದ್ದರು ಎಂಬ ಹೇಳಿಕೆಯಿದೆ. ಇದರಿಂದ ಒಪ್ಪಂದದ ಸ್ವರೂಪ ಅರ್ಥವಾಗುತ್ತದೆ.

ಕೌಟಿಲ್ಯ ತನ್ನ ಅರ್ಥಶಾಸ್ತ್ರ ದಲ್ಲಿ ಮನು ಮತ್ತು ಜನತೆಯೊಡನೆ ಆದ ಒಪ್ಪಂದವನ್ನು ಉಲ್ಲೇಖಿಸಿದ್ದಾನೆ. ಬಲಾಢ್ಯರು ದುರ್ಬಲರನ್ನು ನುಂಗಿ ಅನಾಯಕತ್ವ ಉಂಟುಮಾಡುವ ಸ್ಥಿತಿಯನ್ನು ತಪ್ಪಿಸಲು ಜನರು ಮನುವನ್ನು ರಾಜನನ್ನಾಗಿ ಆರಿಸಿ ತಮ್ಮ ಆದಾಯದಲ್ಲಿ ಒಂದು ಪಾಲನ್ನು ಒಪ್ಪಿಸುತ್ತಿದ್ದರು. ರಾಜ ತನ್ನ ಪ್ರಜೆಗಳ ಕ್ಷೇಮ ಮತ್ತು ರಕ್ಷಣೆಯ ಜವಾಬ್ದಾರಿ ಹೊತ್ತು ಕಾರ್ಯನಿರ್ವಹಿಸುತ್ತಿದ್ದನೆನ್ನಲಾಗಿದೆ. ರೋಮನ್ ಕಾನೂನು ಸಮಾಜ ಒಪ್ಪಂದ ಸಿದ್ಧಾಂತದ ಭಾವನೆ ಜೀವಂತವಾಗಿ ಉಳಿಯಲು ಪೋಷಣೆ ನೀಡಿತು. ರಾಜಕೀಯ ಅಧಿಕಾರಕ್ಕೆಲ್ಲ ಈ ಸಿದ್ಧಾಂತದಂತೆ ಜನರೇ ಮೂಲ. ರೋಮ್ ದೊರೆ ಜನರಿಂದ ಪಡೆದ ಅಧಿಕಾರವನ್ನು ಚಲಾಯಿಸುತ್ತಿದ್ದ. ದೊರೆಯ ಇಚ್ಛೆಯೇ ಕಾನೂನು ಎನ್ನುತ್ತಿದ್ದರು. ಏಕೆಂದರೆ ಜನರೇ ದೊರೆಗೆ ಸರ್ವೋಚ್ಚ ಅಧಿಕಾರಗಳನ್ನು ಒಪ್ಪಿಸಿರುತ್ತಿದ್ದರು.

11ನೆಯ ಶತಮಾನದಿಂದ ಪ್ರಭಾವ ಬೀರುತ್ತಾ ಬಂದ ಈ ಸಿದ್ಧಾಂತ 16ನೆಯ ಶತಮಾನದ ವೇಳೆಗೆ ಬಹುತೇಕ ಸಾರ್ವತ್ರಿಕ ಮನ್ನಣೆಯನ್ನು ಗಳಿಸಿತ್ತೆಂದು ಹೇಳಬಹುದು. ಕ್ರಮೇಣ ಈ ಸಿದ್ಧಾಂತದ ಪ್ರತಿಪಾದಕರು ಹೆಚ್ಚುತ್ತ ಬಂದರು. ಈ ಪೈಕಿ ಹಾಬ್ಸ್, ಲಾಕ್ ಮತ್ತು ರೂಸೋ ಪ್ರಮುಖರು.

16ನೆಯ ಶತಮಾನದಲ್ಲಿ ಹಾಗೂ 17ನೆಯ ಶತಮಾನದ ಆದಿಭಾಗದಲ್ಲಿ, ಧಾರ್ಮಿಕ ಆಂದೋಳನ ಸಮಯದಲ್ಲಿ ಈ ಸಿದ್ಧಾಂತ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕತ್ತಿಯಂತಿದ್ದು ರಕ್ಷಣೆಯ ಅಸ್ತ್ರವಾಯಿತು. ಏಕೆಂದರೆ ಬಹುಸಂಖ್ಯಾತರ ಧರ್ಮವನ್ನು ಅಲ್ಪಸಂಖ್ಯಾತರ ಮೇಲೆ ಹೇರುವ ಆಡಳಿತದ ಅಧಿಕಾರವನ್ನು ಅವರು ಪ್ರತಿಭಟಿಸುತ್ತಿದ್ದರು. ಆಗ್ಗೆ ಈ ಸಿದ್ಧಾಂತ ಅವರ ನೆರವಿಗೆ ನಿಂತು ಧಾರ್ಮಿಕ ಸ್ವಾತಂತ್ರ್ಯವನ್ನು ಕಾಪಾಡುವ ಸಾಧನವೂ ಆಯಿತು.

ದೈವಿಕ ಸಿದ್ಧಾಂತದ ಫಲವಾಗಿ ಜನರಿಗೆ ವ್ಯಕ್ತಿ ಸ್ವಾತಂತ್ರ್ಯವಾಗಲೀ ರಾಜಕೀಯ ಸ್ಥಾನಮಾನಗಳಾಗಲೀ ಸಿಗಲಿಲ್ಲ; ಬದಲಾಗಿ ನಿರಂಕುಶಾಧಿಕಾರ ಬಳಕೆಗೆ ಬಂದು ಜನರು ದಬ್ಬಾಳಿಕೆಗೆ ಗುರಿಯಾದುದರಿಂದ ಸಾಮಾಜಿಕ ಒಪ್ಪಂದ ಸಿದ್ಧಾಂತದ ಕಲ್ಪನೆಯಾಯಿತೆಂಬುದೂ ಗಮನೀಯ ವಿಚಾರ. ಈ ಸಿದ್ಧಾಂತದ ಪ್ರಕಾರವೇ ಇಸ್ರೇಲಿನ ಜನಪ್ರಮುಖರಿಗೂ ಡೇವಿಡ್ ದೊರೆಗೂ ಆದ ಒಪ್ಪಂದದ ಪ್ರಕಾರ ಡೇವಿಡ್ ರಾಜ್ಯಾಧಿಕಾರವನ್ನು ವಹಿಸಿಕೊಂಡನೆಂದು ತಿಳಿದುಬರುವುದು. ಫ್ರಾನ್ಸಿನ ಮಹಾಕ್ರಾಂತಿಯ ಸಮಯದಲ್ಲಿ ಈ ಸಿದ್ಧಾಂತದ ಕಿಡಿಗಳು ಹಾರಿದ್ದವೆಂಬುದು ಸರ್ವವಿಧಿತ. ಅಮೆರಿಕದ ಸ್ವಾತಂತ್ರ್ಯ ಹೋರಾಟದಲ್ಲೂ ಈ ಸಿದ್ಧಾಂತ ಪ್ರಭಾವ ಬೀರಿತ್ತು. ಅಮೆರಿಕದ ಮಹಾವ್ಯಕ್ತಿಗಳಾದ ಥಾಮಸ್ ಜೆಫರ್‌ಸನ್, ಮ್ಯಾಡಿಸನ್ ಮೊದಲಾದವರು ಆ ಕಾಲದಲ್ಲಿ ಇದನ್ನು ಬಳಸಿಕೊಂಡಿದ್ದರು.

ರಾಜಕೀಯ ತತ್ತ್ವವೇತ್ತರಲ್ಲಿ ಈ ಸಿದ್ಧಾಂತ ಕುರಿತು ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಇವು ವಿವರಗಳಿಂದಲೇ ಹೊರತು, ತಾತ್ವಿಕವಾಗಿ ಅಲ್ಲ. ಇದರಿಂದ ಅನುಕೂಲವೆಷ್ಟೋ ಪ್ರತಿಕೂಲವೂ ಅಷ್ಟೇ ಎಂದು ಅಭಿಪ್ರಾಯಪಡುವವರುಂಟು. ಈ ಸಿದ್ಧಾಂತದಲ್ಲಿ ಹೆಚ್ಚು ಅಪಾಯ ಸಂಭವನೀಯವೆಂದೂ ವ್ಯಕ್ತಿಯ ಸ್ವೇಚ್ಛಾ ಪ್ರವೃತ್ತಿ ಸೃಷ್ಟಿಯಾಗುತ್ತದೆಂದೂ ಒಂದು ಅಭಿಮತ. ಕ್ರಾಂತಿಯ ಅಪಾಯವನ್ನೂ ಇದರಲ್ಲಿ ಗುರುತಿಸಲಾಗುತ್ತದೆ. ಹಾಗೆಯೇ ಈ ಸಿದ್ಧಾಂತದ ಸುಲಕ್ಷಣಗಳನ್ನು ಕಾಣುವವರೂ ಇದ್ದಾರೆ. ಜನತೆಯ ಒಪ್ಪಿಗೆಯೇ ರಾಜ್ಯದ ನಿಜವಾದ ಹಾಗೂ ಸ್ಥಿರವಾದ ಅಸ್ತಿಭಾರವಾಗಿ ಅನೇಕ ರಾಜ್ಯಗಳ ಅಸ್ತಿತ್ವವನ್ನು ರೂಪಿಸಿದೆ. ಧಾರ್ಮಿಕ ಹಿಡಿತದಿಂದ ಪಾರುಮಾಡಿ ಈ ಸಿದ್ಧಾಂತ ಸ್ವಾತಂತ್ರ್ಯವನ್ನು ರಕ್ಷಿಸಿದೆ; ಇಷ್ಟೇ ಅಲ್ಲ, ಈ ಸಿದ್ಧಾಂತ ವಿಶ್ವಾಸವಷ್ಟೇ ಹೊರತು ಬಲೋದ್ಬಂಧನವಲ್ಲ ಹಾಗೂ ರಾಜ್ಯದ ಮೂಲವನ್ನೂ ಬಲಪಡಿಸಿದೆ. ರಾಜಕೀಯ ಸಮಾಜದ ಅಡಿಗಲ್ಲಿಗೆ, ಕೇವಲ ಶಕ್ತಿಯೊಂದೇ ಅಲ್ಲ ಸ್ವಭಾವ ಸಿದ್ಧವಾದ ಹಕ್ಕುಬಾಧ್ಯತೆಯೇ, ಅಂದರೆ ಸಾಮಾಜಿಕ ನ್ಯಾಯವೇ ಆಸರೆಯೆಂಬುದನ್ನು ಈ ಸಿದ್ಧಾಂತ ತೋರಿಸಿಕೊಟ್ಟಿದೆ ಎಂದು ಕೆಲವರು ಪ್ರತಿಪಾದಿಸಿದ್ದಾರೆ. (ಎಮ್.ವಿ.ಕೆ.)

**ಸಾರನಾಥ:** ಗೌತಮ ಬುದ್ಧ ತನ್ನ ಮೊದಲ ಧರ್ಮಪ್ರವಚನ ನೀಡಿದ ಸ್ಥಳ. ಮಹತ್ತ್ವದ ಬೌದ್ಧ ನೆಲೆಯಾಗಿರುವ ಇದು ಉತ್ತರ ಪ್ರದೇಶ ರಾಜ್ಯದ ವಾರಾಣಸಿ ಜಿಲ್ಲೆಯಲ್ಲಿ, ವಾರಾಣಸಿಯಿಂದ 5ಕಿಮೀ ದೂರದಲ್ಲಿದೆ. ಬೌದ್ಧರ ನಾಲ್ಕು ಪ್ರತಿಷ್ಠಿತ ಸ್ಥಳಗಳಲ್ಲಿ ಒಂದು. ಇತಿಹಾಸ ಕಾಲದಲ್ಲಿ ಇಲ್ಲಿ ಸದ್ಧರ್ಮ ಚಕ್ರವೆಂಬ ಮಹಾವಿಹಾರವಿತ್ತು. ಇಲ್ಲಿ ಅಶೋಕನ ಕಾಲದಿಂದ 12ನೆಯ ಶತಮಾನದವರೆಗಿನ ಪ್ರಾಕ್ತನ ವಸ್ತುಗಳು ದೊರೆತಿವೆ. ಅಶೋಕ ಕಟ್ಟಿಸಿದ ಅನೇಕ ಸ್ತೂಪಗಳಲ್ಲಿ ಇಲ್ಲಿಯ ಧರ್ಮರಾಜಿಕ ಸ್ತೂಪ ಒಂದು. ನಾಲ್ಕು ದಿಕ್ಕಿಗೆ ಮುಖಮಾಡಿ ಕುಳಿತ ನಾಲ್ಕು ಸಿಂಹಗಳ ಸ್ತಂಭವನ್ನು ಸ್ಥಾಪಿಸಿ, ಶಾಸನವನ್ನು ಬರೆಯಿಸಿದ್ದಾನೆ.



ಧಮ್ಮೇಕ ಸ್ತೂಪ

ಅಶೋಕ ಕಟ್ಟಿಸಿದ ಧರ್ಮರಾಜಿಕ ಸ್ತೂಪ ಸ್ಥಳೀಯರಿಂದ ಹಾನಿಗೊಳಗಾಗಿತ್ತು (1794). ಈ ನಿವೇಶನದಲ್ಲಿ ಅಗೆಯುವಾಗ ಕಂಡುಬಂದ ಅನೇಕ ಅಮೃತ ಶಿಲೆಯ ರಚನೆಗಳು ಮತ್ತು ವಿಗ್ರಹಗಳಿಗಾಗಿ ಜನರು ಇದನ್ನು ಮತ್ತಷ್ಟು ಹಾನಿಗೊಳಿಸಿದರು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರಾಗಿದ್ದ ಕನ್ನಿಂಗ್‍ಹ್ಯಾಮ್ ಇಲ್ಲಿ ಉತ್ಖನನ ನಡೆಸಿ ಅನೇಕ ಸ್ತೂಪಗಳನ್ನು ಗುರುತಿಸಿದ. ಮುಂದೆ ಎಂ.ಕಿಟ್ಟೋ ಹಾಗೂ ಎಸ್.ಸಿ.ಓರಟ್ ಅವರು ಈ ಪ್ರದೇಶದಲ್ಲಿ ವಿಹಾರ, ಸ್ತೂಪ, ಶಾಸನ ಹಾಗೂ ಶಿಲ್ಪಗಳನ್ನು ಉತ್ಖನನ ಮಾಡಿ ತೆಗೆದರು (1904–07). 1907 ರಿಂದ ಜಾನ್ ಮಾರ್ಷಲ್ ಮತ್ತು ಇತರರು ಉತ್ಖನನಗಳನ್ನು ಮುಂದುವರೆಸಿದರು. ಇಲ್ಲಿಯ ಧರ್ಮರಾಜಿಕ ಸ್ತೂಪ 12ನೆಯ ಶತಮಾನದವರೆಗೂ ವಿವಿಧ ವಿಸ್ತರಣೆಗಳಿಗೊಳಗಾಗಿದ್ದನ್ನು ಗುರುತಿಸಲಾಯಿತು. ಜೊತೆಗೆ ಇಟ್ಟಿಗೆಗಳಿಂದ ಕೂಡಿದ ದೇವಾಲಯವನ್ನು ಪತ್ತೆ ಮಾಡಲಾಯಿತು. ಇದು ಬಹುಶಃ ಭಗ್ನವಾದ ಮುಖ್ಯ ದೇವಾಲಯದ 60 ಮೀ ಎತ್ತರದ ಮೂಲ–ಗಂಧಕುಟಿ ಇರಬಹುದೆಂದೂ ಬುದ್ಧ ಈ ಜಾಗದಲ್ಲಿ ವಾಸಿಸುತ್ತಿದ್ದನೆಂಬುದನ್ನೂ ಚೀನಿ ಪ್ರವಾಸಿಗ ಯುವಾನ್‍ಚಾಂಗ್ ಬರವಣಿಗೆಯಲ್ಲಿ ಕಾಣಿಸಿದ್ದಾನೆ. ಮುಂದುವರೆದು ಹೀನಯಾನದ ಸಂಮಿತೀಯ ಶಾಖೆಯ 1500 ಭಿಕ್ಷುಗಳು ವಾಸಿಸುತ್ತಿದ್ದರೆಂದು ಮತ್ತು ಒಂದು ಮುಖ್ಯ ದೇವಾಲಯದಲ್ಲಿ ಧರ್ಮಚಕ್ರ ಪ್ರವರ್ತನ ಮುದ್ರೆಯಲ್ಲಿರುವ ಬುದ್ಧನ ಲೋಹಮೂರ್ತಿ ಇತ್ತೆಂದೂ ಹೇಳಿದ್ದಾನೆ. ಇಲ್ಲಿ

ಧಮ್ಮೇಕ ಸ್ತೂಪ, ಸೂಕ್ಷ್ಮಶಿಲ್ಪ ಕೆತ್ತನೆ

ಇತರ ವಿಹಾರಗಳು ಸ್ತೂಪಗಳೂ ದೊರೆತಿವೆ. ಇವುಗಳ ಕಾಲವನ್ನು 4 ಮತ್ತು 5ನೆಯ ಶತಮಾನದಿಂದ 12ನೆಯ ಶತಮಾನ ಎಂದು ಗುರುತಿಸಲಾಗಿದೆ.

ಇಲ್ಲಿನ ಧಮ್ಮೇಕ ಸ್ತೂಪ 28ಮೀ ಸುತ್ತಳತೆಯ ಒಂದು ವೃತ್ತಾಕಾರದ ರಚನೆ. ಇದರ ಎತ್ತರ 43.6 ಮೀ. ಇದನ್ನು ಭಾಗಶಃ ಕಲ್ಲಿನಿಂದಲೂ ಇಟ್ಟಿಗೆಗಳಿಂದಲೂ ಕಟ್ಟಲಾಗಿದೆ. ಇದರಲ್ಲಿ ಕಂಡುಬರುವ ಅಲಂಕಾರಿಕ ಕೆತ್ತನೆಗಳು ಗುಪ್ತರ ಕಾಲದ್ದೆಂದು ಅಭಿಪ್ರಾಯ ಪಡಲಾಗಿದೆ. ಸು. 25 ಮೀ ಎತ್ತರವಿರುವ ಚೌಖಂಡಿ ಸ್ತೂಪ ಮತ್ತೊಂದು ಮಹತ್ತ್ವದ ಸ್ತೂಪ. ಇಲ್ಲಿ ಕನಿಷ್ಕನ ಕಾಲದ ಬೃಹದಾಕಾರದ ಬೋಧಿಸತ್ವ ವಿಗ್ರಹವಿದೆ. ಅಸಂಖ್ಯ ಬೌದ್ಧ ಪ್ರತಿಮೆಗಳು ಕಂಡುಬಂದಿದ್ದು ಅವು ಗುಪ್ತರ ಕಾಲದ ಕಲಾ ಕೌಶಲವನ್ನು ತೋರಿಸುತ್ತವೆ. ಮೌರ್ಯರ ಕಾಲದಿಂದ ಗುಪ್ತರ ಕಾಲದವರೆಗಿನ ಶಿಲ್ಪಗಳೂ ದೊರೆತಿವೆ. ಗೌತಮ ಬುದ್ಧ ಧರ್ಮಬೋಧೆ ಮಾಡುತ್ತಿರುವುದು, ತುದಿಯಲ್ಲಿ ಸಿಂಹಗಳ ಶಿಲ್ಪವಿರುವ ಅಶೋಕ ಸ್ತಂಭದ ಶಿರೋಭಾಗಗಳು ಪ್ರಖ್ಯಾತವಾಗಿವೆ. ಇದು ನಮ್ಮ ರಾಷ್ಟ್ರ ಲಾಂಛನವೂ ಆಗಿದೆ. ಇಲ್ಲಿರುವ ಪುರಾತತ್ತ್ವ ವಸ್ತು ಸಂಗ್ರಹಾಲಯದಲ್ಲಿ ಗಮನಾರ್ಹವಾದ ಶಿಲ್ಪಗಳಿವೆ. ಇವಲ್ಲದೆ ಅಪಾರ ಪ್ರಮಾಣದಲ್ಲಿ ಗೃಹೋಪಕರಣಗಳು, ಜಾಡಿಗಳು, ಧಾನ್ಯ ಸಂಗ್ರಹಪಾತ್ರೆಗಳು, ಅಡುಗೆ ಪಾತ್ರೆಗಳು ಮೊದಲಾದವು ದೊರೆತಿವೆ.

ಇಲ್ಲಿಯ ಒಂದು ದೊಡ್ಡ ಗುಡ್ಡದ ಮೇಲೆ ಸಾರಂಗನಾಥ ಎಂಬ ಶಿವ ದೇವಾಲಯ ವಿದ್ದುದರಿಂದ ಈ ಪ್ರದೇಶವನ್ನು ಸಾರಂಗನಾಥ ಎಂದು ಕರೆಯಲಾಗುತ್ತಿದ್ದು ಕ್ರಮೇಣ ಅದು ಸಾರನಾಥವಾಯಿತೆಂದು ಪ್ರತೀತಿ. ಜೈನಗ್ರಂಥಗಳ ಪ್ರಕಾರ 11ನೆಯ ಜೈನ ತೀರ್ಥಂಕರ ಶೇಯಾಂಶನಾಥ ತಪಸ್ಸನ್ನು ಆಚರಿಸಿ ದೇಹ ಬಿಟ್ಟ ಸ್ಥಳವೆಂದು ವರ್ಣಿಸಲಾಗಿದೆ. ಬೌದ್ಧ ಗ್ರಂಥಗಳಲ್ಲಿ ಈ ಸ್ಥಳಕ್ಕೆ ಋಷಿ ಪಟ್ಟಣ ಮತ್ತು ಮೃಗದಾವ ಎಂದು ಹೆಸರಿತ್ತೆಂದು ಹೇಳಲಾಗಿದೆ. ಒಂದು ಜಾತಕ ಕಥೆಯ ಪ್ರಕಾರ ತಥಾಗತ ಜಿಂಕೆಯ ರೂಪವನ್ನು ಧರಿಸಿ ಜಿಂಕೆಯ ರಾಜನಾಗಿದ್ದು, ದೇಹತ್ಯಾಗ ಮಾಡಿದ್ದರಿಂದ ಇದರ ಮಹತ್ತ್ವ ಹೆಚ್ಚಿದೆಯೆಂದು ವರ್ಣಿಸುತ್ತದೆ.

ಘಜ್ನಿ ಮಹಮ್ಮದ್ ಧಾಳಿಯಲ್ಲಿ ಹಾಳಾದ ಮಂದಿರಗಳನ್ನು 1026ರಲ್ಲಿ ಸ್ಥಿರಕಾಲ ಮತ್ತು ವಸಂತಕಾಲ ಎಂಬ ಸಹೋದರರು ಜೀರ್ಣೋದ್ಧಾರ ಮಾಡಿದರೆಂದು ಶಾಸನ ತಿಳಿಸುತ್ತದೆ. 12ನೆಯ ಶತಮಾನದ ಕನೌಜದ ಗಾಹದ್ವಾಲ ಅರಸ ಗೋವಿಂದ ಚಂದ್ರನ (1114–54) ರಾಣಿ ಕುಮಾರದೇವಿ ಧರ್ಮಚಕ್ರ ಜಿನವಿಹಾರವೆಂಬ ಒಂದು ದೊಡ್ಡ ಮಠವನ್ನು ಕಟ್ಟಿಸಿದಳು. ಇಲ್ಲಿ ಈಚಿನ ವರ್ಷಗಳಲ್ಲಿ ಚೀನ ಮತ್ತು ಜಪಾನ್ ದೇಶದ ಬೌದ್ಧ ಯಾತ್ರಿಕರು ಕಟ್ಟಿಸಿದ ಭವ್ಯ ಮತ್ತು ಸುಂದರ ವಿಹಾರಗಳಿವೆ. (ಕೆ.ವಿ.ಎಸ್‍ಯು.;ಆರ್‍ಎಪಿ.)

**ಸಾರಾಭಾಯಿ, ವಿಕ್ರಮ್:** 1919–71. ವ್ಯೋಮ ಸಂಶೋಧನೆ, ಉದ್ಯಮ ಮತ್ತು ಸಾಮಾಜಿಕ ಕಾರ್ಯಗಳಿಗೆ ಚಾಲನೆ ನೀಡಿದ ಭಾರತದ ಭೌತವಿಜ್ಞಾನಿ. ಶ್ರೀಮಂತ ಕುಟುಂಬದಲ್ಲಿ ಜನಿಸಿದ ಇವರು ಮುಂಬಯಿ ಮತ್ತು ಕೇಂಬ್ರಿಜ್‍ಗಳಲ್ಲಿ ಶಿಕ್ಷಣ ಪಡೆದರು. ಅನಂತರ ಬೆಂಗಳೂರಿನ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವಿಶ್ವಕಿರಣ, ಭೂಕಾಂತತೆ,

ಅಂತರಗ್ರಹ ವ್ಯೋಮ, ಸೂರ್ಯ–ಭೂಮಿ ಸಂಬಂಧ ಮುಂತಾದವುಗಳನ್ನು ಕುರಿತು ಸಿ.ವಿ. ರಾಮನ್ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಿದರು. ಉಷ್ಣವಲಯದಲ್ಲಿ ವಿಶ್ವಕಿರಣಗಳು ಎಂಬ ವಿಷಯದ ಬಗೆಗಿನ ಇವರ ಸಂಶೋಧನೆಗೆ ಕೇಂಬ್ರಿಜ್ ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿತ್ತು (1947).

ಅಹಮದಾಬಾದಿನ ಫಿಸಿಕಲ್ ರಿಸರ್ಚ್ ಲ್ಯಾಬೊರೆಟರಿಯಲ್ಲಿ ಪ್ರಾಧ್ಯಾಪಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಇವರು ಮುಂದೆ ಅದರ ನಿರ್ದೇಶಕರೂ ಆದರು (1965). ಹೈಡ್ರೊಜನ್ನಿನ ದೈನಿಕ ವ್ಯತ್ಯಯ ಅಯಾನುಗೋಳದಲ್ಲಿ ಆಗುವ ಬದಲಾವಣೆಗಿಂತಲೂ ಹೆಚ್ಚಾಗಿ ಕಾಂತಗೋಳದಲ್ಲಿ ಆಗುವ ಬದಲಾವಣೆಗಳನ್ನು ಅವಲಂಬಿಸಿದೆ ಎಂದು ಸೂಚಿಸಿದ ಖ್ಯಾತಿ ಇವರದ್ದು. ಮೀಸಾನ್ ದೂರದರ್ಶಕ ರಚನೆ; ಕೊಡೈಕೆನಾಲ್, ತಿರುವನಂತಪುರ ಮತ್ತು ಗುಲ್ಮಾರ್ಗ್‍ಗಳಲ್ಲಿ ಸಂಶೋಧನ ಠಾಣ್ಯ ಸ್ಥಾಪನೆ –ಇವು ಇವರ ವಿಶಿಷ್ಟ ಕೊಡುಗೆಗಳು. ಅಹಮದಾಬಾದಿನ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಮ್ಯಾನೇಜ್‍ಮೆಂಟ್, ವಸ್ತ್ರೋದ್ಯಮ ಸಂಶೋಧನ ಸಂಸ್ಥೆ, ನೆಹರು ಫೌಂಡೇಶನ್ ಮತ್ತು ಕಮ್ಯೂನಿಟಿ ಸೈನ್ಸ್ ಸೆಂಟರ್‌ನಂಥ ಹಲವು ಸಂಸ್ಥೆಗಳ ಸ್ಥಾಪನೆಗೆ ಇವರು ಕಾರಣೀಭೂತರೂ ಆದರು.

ಯುರೇನಿಯಮ್ ಅದಿರಿನ ಅನ್ವೇಷಣೆಗೆ ಆದ್ಯತೆ ನೀಡಿಕೆ, ಕಲ್ಪಾಕಮ್‍ನ ಫಾಸ್ಟ್ ಬ್ರೀಡರ್ ರಿಯಾಕ್ಟರ್ ನಿರ್ಮಾಣದ ವೇಗವರ್ಧನೆ ಮತ್ತು ಭಾರತೀಯ ಸಂಪನ್ಮೂಲಗಳಿಂದಲೇ ಕಲ್ಕತ್ತದ ಸೈಕ್ಲೊಟ್ರಾನ್ ಸ್ಥಾಪನೆಗೆ ಚಾಲನೆ–ಇವು ಇವರು ಭಾರತದ ಪರಮಾಣು ಶಕ್ತಿ ಮಂಡಲಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಮಾಡಿದ ಸಾಧನೆಗಳು. ಭಾರತದ ಎಲೆಕ್ಟ್ರಾನಿಕ್ ಆಯೋಗದ ಹಾಗೂ ಸಂಯುಕ್ತ ರಾಷ್ಟ್ರ ಸಂಸ್ಥೆ ಸಂಘಟಿತ ಬಾಹ್ಯ ವ್ಯೋಮದ ಶಾಂತಿಯುತ ಉಪಯೋಗಗಳು ಅಧಿವೇಶನದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದರು. ಊರ್ಧ್ವ ನಿಯಂತ್ರಣವನ್ನೊಳಗೊಂಡ ಅನುಕ್ರಮಶ್ರೇಣಿಯ ಸಾಂಸ್ಥಿಕ ಸಂರಚನೆಗಳು ಭಾರತಕ್ಕೆ

ತಕ್ಕದ್ದಲ್ಲ ಎಂದು ದೃಢವಾಗಿ ನಂಬಿದ್ದ ಇವರು ಕ್ಷಿತಿಜೀಯ ನಿಯಂತ್ರಣ ಮತ್ತು ನಿರ್ವಹಣ ವ್ಯವಸ್ಥೆಗಳನ್ನು ಬೆಂಬಲಿಸಿದರು. ವ್ಯೋಮ ಸಂಶೋಧನೆಯಲ್ಲಿ ಭಾರತ ಸಾಧಿಸಿದ ಯಶಸ್ಸಿಗೆ ಇವರು ಸ್ಥಾಪಿಸಿದ ಇಂಥ ನಿರ್ವಹಣ ವ್ಯವಸ್ಥೆ ಕಾರಣವಾಯಿತು. ಭಾರತದ ಅವಶ್ಯಕತೆಗಳಿಗೆ ಪ್ರಸ್ತುತವಾದ ತಂತ್ರವಿದ್ಯಾಯೋಜನೆಯೊಂದನ್ನು ಇವರು ಹಾಕಿದ್ದರು. ಗದ್ದಲದಲ್ಲೂ ಸಂಗೀತವನ್ನು ಕೇಳಬಲ್ಲೆವಾದರೆ ನಾವು ಮಾಡುವ ಕೆಲಸ ಫಲಪ್ರದವಾಗುವುದು ನಿಶ್ಚಿತ ಎಂಬುದು ಇವರ ವೈಯಕ್ತಿಕ ಜೀವನದರ್ಶನದ ತಿರುಳು.

ಇವರು 1971 ಡಿಸೆಂಬರ್ 30 ರಂದು ಹೃದಯಾಘಾತದಿಂದ ನಿಧನರಾದರು. ತುಂಬಾದಲ್ಲಿರುವ ವಿಕ್ರಮ್ ಸಾರಾಭಾಯಿ ವ್ಯೋಮಕೇಂದ್ರ ಮತ್ತು ಪುಣೆಯ ಸಮೀಪದ ಆರ್ವಿಯಲ್ಲಿರುವ ವಿಕ್ರಮ್ ಭೂಠಾಣ್ಯ – ಇವು ಭಾರತೀಯ ವಿಜ್ಞಾನಿಗೆ ರಾಷ್ಟ್ರ ಸಲ್ಲಿಸಿದ ಕೃತಜ್ಞತೆಯ ಪ್ರತೀಕಗಳು. (ಎ.ಕೆ.ಬಿ.)

**ಸಾಲಂಕಾಯನರು:** ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯ ಭಾಗವನ್ನು 3–5ನೆಯ ಶತಮಾನದವರೆಗೆ ಆಳುತ್ತಿದ್ದವರು. ಸಾಲಂಕಾಯನ ಎಂಬ ಗೋತ್ರದಿಂದ ಗುರುತಿಸಿಕೊಂಡಿರುವ ಇವರು ವೆಂಗಿಪುರವನ್ನು ರಾಜಧಾನಿಯನ್ನಾಗಿಸಿಕೊಂಡಿದ್ದರಿಂದ ಇವರನ್ನು ವೈಂಗೇಯಕರು ಎಂದು ಸಹ ಗುರುತಿಸಲಾಗುತ್ತದೆ. ರಾಜಧಾನಿ ವಿಜಯವೆಂಗಿಪುರದಿಂದಲೇ ಇವರು ಬಹುತೇಕ ದಾನಶಾಸನಗಳನ್ನು ಹೊರಡಿಸಿದ್ದಾರೆ. ಇವರ ಮುದ್ರೆಗಳಲ್ಲಿ ವಂಶ ಲಾಂಛನ ನಂದಿಯ ಚಿತ್ರವಿರುವುದರಿಂದ ಇವರು ಶೈವರಿರಬೇಕು. ಚಿತ್ರರಥಸ್ವಾಮಿಯ ಪಾದಾರಾಧಕರೆಂದು ತಮ್ಮನ್ನು ಕರೆದುಕೊಳ್ಳುವುದರಿಂದ ಇವರು ಸೂರ್ಯನ ಉಪಾಸಕರು ಕೂಡ. ಪ್ರಾಕೃತ ಭಾಷೆಯಲ್ಲಿರುವ ಶಾಸನಗಳಿಂದ ಒಂದನೆಯ ಹಸ್ತಿವರ್ಮ, ಒಂದನೆಯ ನಂದಿವರ್ಮ, ಚಂದ್ರವರ್ಮ, ಇಮ್ಮಡಿ ನಂದಿವರ್ಮ, ಇಮ್ಮಡಿ ಹಸ್ತಿವರ್ಮ ಮತ್ತು ಸ್ಕಂದವರ್ಮ ಎಂಬ ರಾಜರ ಹೆಸರುಗಳು ತಿಳಿದುಬರುತ್ತವೆ. ಇವರೊಂದಿಗೆ ಸ್ಕಂದವರ್ಮ, ನಂದಿವರ್ಮ ಮತ್ತು ಹಸ್ತಿಸ್ವಾಮಿ ಎಂಬ ಹೆಸರುಗಳು ಸಹ ತಿಳಿದಿದೆ. ಆದರೆ ಇವರ ನಡುವಿನ ಸಂಬಂಧಗಳು ಸ್ಪಷ್ಟಪಡುವುದಿಲ್ಲ. ದೇವವರ್ಮ ಎಂಬ ರಾಜನು ಅಶ್ವಮೇಧಯಾಗ ಮಾಡಿದ. ಸಮುದ್ರಗುಪ್ತನ ಅಲಹಾಬಾದ್ ಶಾಸನ ವೆಂಗಿಯ ಹಸ್ತಿವರ್ಮನ ಹೆಸರನ್ನು ಉಲ್ಲೇಖಿಸಿದೆ. ಬಹುಶಃ ಇವನು ಹಸ್ತಿಸ್ವಾಮಿಯಾಗಿದ್ದು, ದೇವವರ್ಮನ ಉತ್ತರಾಧಿಕಾರಿಯಾಗಿರಬಹುದು. ಆದರೆ ಹಸ್ತಿಸ್ವಾಮಿಯೇ ಹಸ್ತಿವರ್ಮ ಎಂದು ದೃಢವಾಗಿ ಹೇಳಲು ಪ್ರಸ್ತುತ ಸಾಧ್ಯವಿಲ್ಲ. ಸಾಲಂಕಾಯನರು ಇಕ್ಷ್ವಾಕುಗಳ ಸಾಮಂತರಾಗಿದ್ದು ಇಕ್ಷ್ವಾಕುಗಳ ಪತನಾನಂತರ ವೆಂಗಿ ಪ್ರದೇಶವನ್ನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದರು ಎಂದು ತೋರುತ್ತದೆ. (ಸಿ.ಎಸ್.ವಿ.)

**ಸಾಲಿಹುಂಡಮ್:** ಆಂಧ್ರಪ್ರದೇಶ ರಾಜ್ಯದ ಶ್ರೀಕಾಕುಳಂ ಜಿಲ್ಲೆಯಲ್ಲಿ ಕಳಿಂಗ ಪಟ್ಟಣದಿಂದ ಸು.7ಕಿಮೀ ಪಶ್ಚಿಮಕ್ಕಿರುವ ಪುರಾತತ್ತ್ವ ನೆಲೆ. ಇದು ಕಿರುಬೆಟ್ಟದ ಮೇಲಿದೆ. ಪ್ರ.ಶ.ಪೂ.3ನೆಯ ಶತಮಾನದಿಂದ ಪ್ರ.ಶ.8ನೆಯ ಶತಮಾನದವರೆಗಿನ ಬೌದ್ಧ ಸಂಘಾರಾಮದ ಚಟುವಟಿಕೆಗಳ ಅವಶೇಷಗಳು ಇಲ್ಲಿವೆ. ಸ್ತೂಪ, ವಿಹಾರದ ಅವಶೇಷಗಳೂ ತಾಂತ್ರಿಕ ಪಂಥದ ಮಾರೀಚಿ, ತಾರ ಮುಂತಾದ ದೇವತೆಗಳ ಶಿಲ್ಪಾವಶೇಷಗಳೂ ಇಲ್ಲಿ ದೊರಕಿದ್ದರಿಂದ, ಎ.ಎಲ್.ಲಾಂಗ್‌ಹರ್ಸ್ಟ್ ಇಲ್ಲಿ ಉತ್ಖನನ ಮಾಡಿದ. ಸುಬ್ರಹ್ಮಣ್ಯ ಅವರು 1945ರಲ್ಲಿ ಉತ್ಖನನ ಕೈಗೊಂಡು ಮೂರು ಹಂತಗಳ ಜನವಸತಿಯನ್ನು ಗುರುತಿಸಿದರು.

ಮೊದಲ ಹಂತದಲ್ಲಿ (ಪ್ರ.ಶ.ಪೂ.3–2 ನೆಯ ಶತಮಾನ – ಪ್ರ.ಶ.2ನೆಯ ಶತಮಾನ) ಇಟ್ಟಿಗೆಯ ವೇದಿಕೆಯಲ್ಲದೆ, ಇಟ್ಟಿಗೆ ಸಾಲುಗಳು ಕಂಡುಬಂದಿವೆ. ಇವುಗಳೊಂದಿಗೆ ಮುದ್ರಾಂಕಿತ ನಾಣ್ಯಗಳು, ಬೃಹತ್ ಶಿಲಾಯುಗದ ಕಪ್ಪು–ಕೆಂಪು ದ್ವಿವರ್ಣ ಮತ್ತು ಸಾದಾ ಮಣ್ಪಾತ್ರೆಗಳು ದೊರೆತಿವೆ. 2ನೆಯ ಹಂತದಲ್ಲಿ (1–2ರಿಂದ 3–4ನೆಯ ಶತಮಾನ) ಮಹಾಚೈತ್ಯ, ಎರಡು ಕಿರುಸ್ತೂಪಗಳು, ಗಾರೆಯಲ್ಲಿ ಮೂಡಿಸಿದ ಬುದ್ಧನ ಶಿಲ್ಪವಿರುವ ಎರಡು ವರ್ತುಲಾಕಾರದ ಚೈತ್ಯಗೃಹಗಳು ಹಾಗೂ ಹಲವಾರು ವಿಹಾರಗಳು ಕಂಡುಬಂದಿವೆ. ರೌಲೆಟ್ ಪಾತ್ರೆಗಳು, ಮಾಸಲು ಕೆಂಪುಬಣ್ಣದ ಹಣತೆಗಳು, ಮೆರುಗಿನ ಕೆಂಪುಬಣ್ಣದ ಸ್ಪ್ರಿಂಕ್ಲರ್, ಅಡಿಕೆಯಾಕಾರದ ಸುಡಾವೆಮಣ್ಣಿನ ಮಣಿಗಳು, ವರ್ತುಲಾಕಾರದ ಕಿವಿಯ ಆಭರಣಗಳು, ಶಾಸನವುಳ್ಳ ಶಂಖಗಳು (ಒಂದು ಶಂಖದಲ್ಲಿ ಶಾಲಿಪಾಸಕ ಎಂಬ ಹೆಸರಿದೆ), ಸಾತವಾಹನ ನಾಣ್ಯ, ಪುರಿ–ಕುಷಾಣ ನಾಣ್ಯಗಳು, ಸುಡಾವೆಮಣ್ಣಿನ ಮುದ್ರೆಗಳು, ಅಲಂಕೃತ ಕುದುರೆ ಗೊಂಬೆ ಮತ್ತು ಬುದ್ಧನ ಚಿತ್ರವಿರುವ ಫಲಕಗಳು ಇಲ್ಲಿ ದೊರಕಿರುವ ಮುಖ್ಯ ಅವಶೇಷಗಳು. ಪ್ರಾಚೀನ ಕಟ್ಟಡಗಳ ಅವಶೇಷಗಳನ್ನು ಬಳಸಿ ನಿರ್ಮಿಸಿದ ಕೆಲವು ಸಾಂಕೇತಿಕ ಸ್ತೂಪಗಳು ಮತ್ತು ಕಂಬಗಳಿರುವ ಮಂಟಪ 3ನೆಯ ಹಂತದಲ್ಲಿವೆ (4–5 ರಿಂದ 7–8 ನೇ ಶತಮಾನ). ಮಾಸಿದ ಕೆಂಪು ಬಣ್ಣದ ಮಣ್ಪಾತ್ರೆ, ಅಚ್ಚಿನಲ್ಲಿ ತಯಾರಿಸಿದ ಬೆಣೆಯಾಕಾರದ ಇಟ್ಟಿಗೆಗಳು, ಹೆಂಚು, ಸುಡಾವೆ ಮಣ್ಣಿನ ಸ್ತೂಪಗಳು, ಮಣ್ಣು ಹಾಗೂ ಸ್ಫಟಿಕದ ಮಣಿಗಳು, ತಾಂತ್ರಿಕ ಪಂಥಕ್ಕೆ ಸೇರಿದ ಕೆಲವು ದೇವತೆಗಳ ಶಿಲಾಶಿಲ್ಪಗಳು ಮತ್ತು 7–8ನೆಯ ಶತಮಾನದ ಆರು ಶಿಲಾಶಾಸನಗಳು ಈ ಹಂತದ ಪ್ರಮುಖ ಅವಶೇಷಗಳಾಗಿವೆ. ಈ ಮೂರು ಹಂತಗಳು ಹೀನಯಾನ, ಮಹಾಯಾನ ಮತ್ತು ವಜ್ರಯಾನ ಪಂಥಗಳ ಬದಲಾದ ಪ್ರಾಧಾನ್ಯವನ್ನು ಸೂಚಿಸುತ್ತವೆ.

ಅರಿಕಮೇಡು, ಬ್ರಹ್ಮಪುರಿ, ನಾಗಾರ್ಜುನಕೊಂಡ, ಶಿಶುಪಾಲಗಡ, ತ್ರಿಪುರಿ, ಹಸ್ತಿನಾಪುರ ಮುಂತಾದೆಡೆಗಳಲ್ಲಿ ದೊರಕಿರುವ ವಸ್ತುಗಳು ಸಾಲಿಹುಂಡಮ್‌ನ ಅವಶೇಷಗಳನ್ನು ಹೋಲುವುದರಿಂದ ಈ ನೆಲೆ ಔತ್ತರೇಯ ಹಾಗೂ ದಾಕ್ಷಿಣಾತ್ಯ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿತ್ತೆಂದು ಹೇಳಬಹುದು. ಆಯಕ ವೇದಿಕೆ ಇಲ್ಲದ ಬೃಹದಾಕಾರದ ಸ್ತೂಪಗಳು ಹಾಗೂ ಅವುಗಳ ಮೇಲೆ ಹೊದಿಸಿದ ಚಿತ್ರಿತ ಫಲಕಗಳು ಉತ್ತರ ಭಾರತದ ಸ್ತೂಪಗಳ ಪ್ರಭಾವವನ್ನು ಮೈಗೂಡಿಸಿಕೊಂಡಿವೆ. ಆಂಧ್ರಪ್ರದೇಶದಲ್ಲಿನ ಸ್ತೂಪಗಳ ಪ್ರಭಾವ ಗೌಣವಾಗಿದೆ. ಇಲ್ಲಿ ದೊರಕಿರುವ ಬುದ್ಧನ ಗಾರೆಶಿಲ್ಪಗಳು ಗಾಂಧಾರ ಶೈಲಿಯನ್ನು ನೆನಪಿಸುತ್ತವೆ. ವ್ಯಕ್ತಿನಾಮ ಹಾಗೂ ಸ್ಥಳನಾಮಗಳ ಉಲ್ಲೇಖವಿರುವ ಮತ್ತು ವಿಹಾರದ ರೇಖಾಚಿತ್ರಗಳಿರುವ ಮಣ್ಪಾತ್ರೆಗಳು ಇಲ್ಲಿ ಎಲ್ಲ ಹಂತಗಳಲ್ಲಿ ದೊರಕಿರುವುದು ಗಮನಾರ್ಹ. (ಸಿ.ಎಸ್.ವಿ.)

**ಸಾಲೆತೊರೆ, ಬಿ. ಎ.:** 1900–63. ಹೆಸರಾಂತ ಇತಿಹಾಸ ವಿದ್ವಾಂಸರು. ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ ಭಾರತದ ವಿವಿಧ ಪ್ರಾಂತಗಳಲ್ಲೂ ಭಾರತ ಸರ್ಕಾರದ ಪ್ರಾಚೀನ ಐತಿಹಾಸಿಕ ದಾಖಲೆಗಳ ಸಂಗ್ರಹಾಲಯದಲ್ಲೂ ಸೇವೆಸಲ್ಲಿಸಿದರು. ಭಾಸ್ಕರ ಆನಂದ ಸಾಲೆತೊರೆ ಇವರ ಪೂರ್ಣ ಹೆಸರು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸಾಲೆತೊರೆ ಗ್ರಾಮದಲ್ಲಿ 1900 ಅಕ್ಟೋಬರ್ 11ರಂದು ಜನಿಸಿದರು. ಫಾದರ್ ಹೆರಾಸರ ಆಶ್ರಯದಲ್ಲಿ

ಶಿಕ್ಷಣ ಮುಗಿಸಿದ ಅನಂತರ ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ಜೀವನ ಎಂಬ ಪ್ರೌಢ ಪ್ರಬಂಧವನ್ನು ಲಂಡನ್ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ 1931ರಲ್ಲಿ ಪಿಎಚ್.ಡಿ. ಪದವಿ ಪಡೆದರು. ಇವರಿಗೆ ಕನ್ನಡವಲ್ಲದೆ ಸಂಸ್ಕೃತ, ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಅಪಾರ ಪಾಂಡಿತ್ಯವಿತ್ತು. 1936ರಲ್ಲಿ ಇವರು ಪುಣೆಯ ಸರ್ ಪರಶುರಾಮಭಾವು ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದರು. ಅನಂತರ ಅಲಹಾಬಾದ್ ವಿಶ್ವವಿದ್ಯಾಲಯದಲ್ಲೂ ಪ್ರಾಧ್ಯಾಪಕ ವೃತ್ತಿ ನಿರ್ವಹಿಸಿದರು. ಇವರ ವಿದ್ವತ್ತನ್ನು ಗಮನಿಸಿದ ಭಾರತ ಸರ್ಕಾರ ಇವರನ್ನು ಐತಿಹಾಸಿಕ ದಾಖಲೆಗಳ ಸಂಗ್ರಹಾಲಯದ ನಿರ್ದೇಶಕರನ್ನಾಗಿ ನೇಮಿಸಿತು. ಕಡೆಯವರೆಗೆ ಆ ಹುದ್ದೆಯನ್ನು ನಿರ್ವಹಿಸಿ ನಿವೃತ್ತಿ ಹೊಂದಿದರು. ಅನಂತರ ಇವರು ಕರ್ನಾಟಕ ವಿಶ್ವವಿದ್ಯಾಲಯದ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದ ಪ್ರಾಧ್ಯಾಪಕರಾಗಿಯೂ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿಯೂ ಕೆಲಸ ನಿರ್ವಹಿಸಿದರು.

ಇವರು ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಅಂಡರ್ ವಿಜಯನಗರ ಎಂಪೈರ್, ಏನ್ಷಿಯಂಟ್ ಕರ್ನಾಟಕ, ಸಂಪುಟ1–ಹಿಸ್ಟರಿ ಆಫ್ ದಿ ತುಳುವ, ಇಂಡಿಯಾಸ್ ಡಿಪ್ಲೊಮ್ಯಾಟಿಕ್ ರಿಲೇಷನ್ಸ್ ವಿತ್ ದಿ ವೆಸ್ಟ್, ಏನ್ಷಿಯಂಟ್ ಇಂಡಿಯನ್ ಪೊಲಿಟಿಕಲ್ ಥಾಟ್ ಅಂಡ್ ಇನ್‌ಸ್ಟಿಟ್ಯೂಷನ್ಸ್, ಮಿಡೀವಲ್ ಜೈನಿಸಮ್, ವೈಲ್ಡ್ ಟ್ರೈಬ್ಸ್ ಇನ್ ಇಂಡಿಯನ್ ಹಿಸ್ಟರಿ, ದಿ ಮರಾಠ ಡೊಮಿನಿಯನ್ ಇನ್ ಕರ್ನಾಟಕ ಮುಂತಾದ ಗ್ರಂಥಗಳು ಇಂಗ್ಲಿಷನಲ್ಲಿವೆ. ವರ್ಟ ಡೇರ್ ಉಸ್ಪಿಷೆನ್ ಲೆ ಹ್ರೆನ್ ಫುರ್ ಡೈ ಲೂಸಂಗ್ ಎಂಬ ಗ್ರಂಥ ಜರ್ಮನ್ ಭಾಷೆಯಲ್ಲಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ ನಾಡಿನ ಚರಿತ್ರೆಯ ಒಂದನೆಯ ಸಂಪುಟವನ್ನು ಇಲ್ಲಿ ಹೆಸರಿಸಬಹುದಾಗಿದೆ. ಇವುಗಳ ಜೊತೆಗೆ ಇತಿಹಾಸ, ಕಲೆ, ಸಾಹಿತ್ಯ ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ.

ಇವರು ಹಂಪೆಯ ವಿಜಯನಗರ ಸಾಮ್ರಾಜ್ಯದ 6ನೆಯ ಶತಮಾನದ ನೆನಪಿಗಾಗಿ ನಡೆದ ಮಹೋತ್ಸವದಲ್ಲಿ ಭಾಗವಹಿಸಿದ್ದರು (1936). 1957ರಲ್ಲಿ ಧಾರವಾಡದಲ್ಲಿ ನಡೆದ ಇತಿಹಾಸ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಇವರು 1963 ಡಿಸೆಂಬರ್ 18ರಂದು ನಿಧನಹೊಂದಿದರು. (ಬಿ.ಕೆ.ಜಿ.;ಆರ್.ಟಿ.ಎಸ್.)

**ಸಾಲೊಟಗಿ:** ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಒಂದು ಗ್ರಾಮ;ಇತಿಹಾಸ ಪ್ರಸಿದ್ಧ ಸ್ಥಳ. ಇಂಡಿಯಿಂದ ಆಗ್ನೇಯಕ್ಕೆ 8ಕಿಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪ್ರಾಚೀನ ಶಿವಯೋಗೀಶ್ವರ ದೇವಾಲಯವಿದೆ. ಬಿದರೆಯ ದೊರೆಗಳು ಇದನ್ನು ಕಟ್ಟಿಸಿ ಅನೇಕ ದತ್ತಿಗಳನ್ನು ಬಿಟ್ಟರೆಂಬುದು ಸ್ಥಳೀಯ ಪ್ರತೀತಿ. ಇಲ್ಲಿ ಪ್ರತಿ ವರ್ಷ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ.

10–12ನೆಯ ಶತಮಾನಗಳ ಅವಧಿಯಲ್ಲಿ ಈ ಗ್ರಾಮ ಪಾವಿಟ್ಟಿಗೆ ಎಂಬ ಹೆಸರಿನ ಒಂದು ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಇಲ್ಲಿನ ವಿದ್ಯಾಶಾಲೆ ಅದರಿಂದೀಚೆಗೂ ಪ್ರವರ್ಧಮಾನ ಸ್ಥಿತಿಯಲ್ಲಿದ್ದು, ಗ್ರಾಮಶಾಲಾ ಪಾವಿಟ್ಟಿಗೆ ಎಂಬ ಹೆಸರು ತಳೆದಿರಬೇಕು; ಅದೇ ಕಾಲಕ್ರಮೇಣ ಸಾಲೊಟಗಿ ಎಂದಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಮೂಲತಃ ಸಾಲೊಟಗಿಯಲ್ಲಿದ್ದ ಒಂದು ಸ್ತಂಭದ ಮೇಲೆ ಕೆತ್ತಿರುವ 3 ಶಾಸನಗಳಿಂದ ಇಲ್ಲಿನ ವಿದ್ಯಾಶಾಲೆಯ ವಿವರಗಳು ದೊರಕುತ್ತವೆ. 945ರ ಸಂಸ್ಕೃತ ಪದ್ಯರೂಪದ ಮೊದಲ ಶಾಸನದಲ್ಲಿ ರಾಷ್ಟ್ರಕೂಟ

3ನೆಯ ಕೃಷ್ಣನ ಪ್ರಧಾನಮಂತ್ರಿಯೂ ಸಂಧಿವಿಗ್ರಹಿಯೂ ಸ್ವಯಂಪಂಡಿತನೂ ಆಗಿದ್ದ ನಾರಾಯಣನೆಂಬಾತ ಪಾವಿಟ್ಟಿಗೆ ಗ್ರಾಮದಲ್ಲಿ ಒಂದು ಶಾಲೆಯನ್ನು ಕಟ್ಟಿಸಿ, ಅಲ್ಲಿ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಿದ ಎಂದು ತಿಳಿಸುತ್ತದೆ. ಇದೇ ಶಾಸನದ ಪ್ರಕಾರ ಈ ಶಾಲೆಯಲ್ಲಿದ್ದ ವಿದ್ಯಾರ್ಥಿಗಳು ಹಲವಾರು ದೇಶಗಳಿಂದ ಬಂದವರು (ಅತ್ರ ವಿದ್ಯಾರ್ಥಿನಃ ಸಂತಿ ನಾನಾ ಜನಪದೋದ್ಭವಾ). ಪಾವಿಟ್ಟಿಗೆ ಗ್ರಾಮಪ್ರತಿಯಾಗಿದ್ದ ಚಕ್ರಾಯುಧಭಟ್ಟ ಈ ವಿದ್ಯಾಶಾಲೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ 27½ ನಿವರ್ತನ ಭೂಮಿಯನ್ನೂ ದೀಪಗಳ ಖರ್ಚಿಗಾಗಿ 12 ನಿವರ್ತನ ಭೂಮಿಯನ್ನೂ ವಿದ್ಯಾರ್ಥಿಗಳ ಭೋಜನ ವ್ಯವಸ್ಥೆಗಾಗಿ 500 ನಿವರ್ತನ ಭೂಮಿಯನ್ನೂ ಅಲ್ಲಿನ ಅಧ್ಯಾಪಕರೊಬ್ಬರಿಗೆ 50 ನಿವರ್ತನ ಭೂಮಿ ಮತ್ತು ಒಂದು ವಾಸಸ್ಥಾನವನ್ನೂ ಮಾನ್ಯವಾಗಿ ಬಿಟ್ಟುಕೊಟ್ಟಿದ್ದ. ಅಲ್ಲದೆ ಗ್ರಾಮಸ್ಥರು ವಿವಾಹದ ಸಂದರ್ಭಗಳಲ್ಲಿ 5 ನಾಣ್ಯಗಳನ್ನೂ (ಸು–ದ್ರವ್ಯಾಣಿ ಪಂಚ ಪುಷ್ಪಾಣಿ) ಉಪನಯನದ ಹಾಗೂ ಚೂಡಾಕರ್ಮದ ಸಂದರ್ಭದಲ್ಲಿ ಅದರ ಅರ್ಧದಷ್ಟನ್ನೂ ಶಾಲಾ ವಿದ್ಯಾರ್ಥಿ ಸಂಘಕ್ಕೆ ಕೊಡುತ್ತಿದ್ದರು. ಅಲ್ಲದೆ ಬ್ರಾಹ್ಮಣ ಭೋಜನವೇರ್ಪಟ್ಟಾಗಲೆಲ್ಲ ಶಾಲೆಯ ಉಪಾಧ್ಯಾಯರುಗಳನ್ನೂ ವಿದ್ಯಾರ್ಥಿಗಳನ್ನೂ ಯಥಾಶಕ್ತಿ ಆಹ್ವಾನಿಸಬೇಕೆಂಬ ನಿರ್ಧಾರವೂ ಆಗಿತ್ತು.

ಸು.11ನೆಯ ಶತಮಾನದಲ್ಲಿ ರಚಿತವಾಗಿರಬಹುದಾದ ಒಂದು ಶಾಸನದ ಪ್ರಕಾರ ಸಾಲೊಟಗಿಯ ಶಾಲೆಯ ಕಟ್ಟಡ ಬಿದ್ದುಹೋದಾಗ ಕುಂಚಿಗೆ ಎಂಬಾತ ಅದನ್ನು ಮತ್ತೆ ಕಟ್ಟಿಸಿದ. ಅಲ್ಲಿನ ಹಲವಾರು ಕಂಬಗಳನ್ನು ನಿಲ್ಲಿಸುವಾಗ, ಕುಂಚಿಗ ತಾನೇ ಒಂದೆರಡನ್ನು ಧರ್ಮವನ್ನೇ ಎತ್ತಿ ನಿಲ್ಲಿಸುತ್ತಿರುವಂತೆ ನಿಲ್ಲಿಸಿದನಂತೆ; ಹಾಗೆ ನಿಲ್ಲಿಸಿದ ಸ್ತಂಭವೇ ಅವನ ಕೀರ್ತಿಸ್ತಂಭವಾದಂತಾಯಿತು ಎಂದು ತಿಳಿದುಬರುತ್ತದೆ.

ಸು.11–12ನೆಯ ಶತಮಾನದಲ್ಲಿ ರಚಿತವಾದ ಇನ್ನೊಂದು ಶಾಸನ ಕನ್ನಡ ಗದ್ಯದಲ್ಲಿದ್ದು, ಮಹಾಮಂಡಲೇಶ್ವರ ಗೋವಣರಸ ಈ ಶಾಲೆಗೆ ಬಿಟ್ಟುಕೊಟ್ಟ ಭೂಮಿದತ್ತಿಯನ್ನು ಪ್ರಸ್ತಾಪಿಸುತ್ತದೆ. (ಜಿ.ಎಸ್.)

**ಸಾಲ್ವಡಗಿ:** ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ತಾಳಿಕೋಟೆಯಿಂದ ಪೂರ್ವಕ್ಕೆ 11 ಕಿಮೀ ದೂರದಲ್ಲಿರುವ ಒಂದು ಗ್ರಾಮ. ಇಲ್ಲಿಯ ಪ್ರಾಗೈತಿಹಾಸಿಕ ನೆಲೆಗಳು ಪ್ರಸಿದ್ಧವಾಗಿವೆ. ಈ ಗ್ರಾಮದ ಪೂರ್ವದಿಕ್ಕಿಗೆ ಸು.2½ ಕಿಮೀ ದೂರದಲ್ಲಿ ಮಧ್ಯ ಹಳೆಶಿಲಾಯುಗ ಹಾಗೂ ಅಂತ್ಯ ಹಳೆಶಿಲಾಯುಗದ ಕಲ್ಲಿನ ಚಕ್ಕೆ ಉಪಕರಣಗಳು, ಅವುಗಳ ತಯಾರಿಕೆಗೆ ಉಪಯೋಗಿಸುವ ಕಲ್ಲಿನ ಗಟ್ಟಿಗಳು ಮತ್ತು ಅವುಗಳನ್ನು ಮಾಡುತ್ತಿದ್ದಾಗ ಬಿದ್ದ ಪುಡಿಚಕ್ಕೆಗಳು ಹೇರಳವಾಗಿ ಸಿಕ್ಕಿವೆ. ಮಧ್ಯ ಹಳೆಶಿಲಾಯುಗ ಸಂಸ್ಕೃತಿಯ ಕಲ್ಲಿನ ಉಪಕರಣಗಳಲ್ಲಿ ಹೆರೆಯಲು ಉಪಯೋಗವಾಗುವಂಥ ವಿವಿಧಾಕಾರಗಳ ಚಕ್ಕೆಗಳು, ತೂತು ಮಾಡುವಂಥ ಮೊನೆಗಳು ಇವೆ. ಅಂತ್ಯ ಹಳೆಶಿಲಾಯುಗದ ಉಪಕರಣಗಳಲ್ಲಿ ಹೆಚ್ಚಿನವು ನೀಳವಾದ, ಎರಡು ಬದಿಗಳಲ್ಲಿ ಹರಿತವಾದ ಬಾಯಿಯುಳ್ಳ ಚಕ್ಕೆಗಳು. ಇವು ಚರ್ಟ್ ಹಾಗೂ ಜಾಸ್ಪರ್ ಶಿಲೆಗಳಿಂದ ಮಾಡಿದವು.

ಈ ಹಳ್ಳಿಯ ಆಗ್ನೇಯ ದಿಕ್ಕಿಗೆ ಮತ್ತೊಂದು ಪ್ರಾಚೀನ ನಿವೇಶನವಿದೆ. ಇದು ನವ ಶಿಲಾ–ತಾಮ್ರಯುಗದ ಸಂಸ್ಕೃತಿಯ ಜನರ ನೆಲೆ. ಹರಪ್ಪ ಸಂಸ್ಕೃತಿಯ ನೀಳ, ಉದ್ದ ಚಕ್ಕೆಗಳನ್ನು ಹೋಲುವಂಥ ಕಲ್ಲಿನ ಚಕ್ಕೆಗಳು, ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿಗಳು, ಬೂದು ಹಾಗೂ ನಸುಗೆಂಪು ಬಣ್ಣಗಳ ಹರವಿ, ಕೊಡ, ಬಟ್ಟಲು, ತಟ್ಟೆ, ಮುಚ್ಚಳ ಮುಂತಾದ ಮಣ್ಪಾತ್ರೆಗಳ ಅವಶೇಷಗಳು, ಪ್ರಾಣಿಗಳ ಎಲುಬುಗಳು ಇವೇ ಮೊದಲಾದ ಅವಶೇಷಗಳು ಇಲ್ಲಿ ವಿಪುಲವಾಗಿ ಸಿಕ್ಕಿವೆ. ಹಂತಗಳನ್ನು ಸ್ಪಷ್ಟವಾಗಿ ತೋರಿಸುವಂಥ ಅಪರೂಪವಾದ ಸ್ಥಳಗಳಲ್ಲಿ ಒಂದಾಗಿದೆ. ಡೆಕ್ಕನ್ ಕಾಲೇಜಿನ ಕೆ.ಪದ್ದಯ್ಯನವರು ಉತ್ಖನನ ಮಾಡಿ ಮಧ್ಯ ಮತ್ತು ಅಂತ್ಯ ಹಳೆ ಶಿಲಾಯುಗಗಳ ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದ್ದಾರೆ. (ಎ.ಎಸ್.)

**ಸಾವನದುರ್ಗ:** ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾಯುಗದ ಗೋರಿ ನೆಲೆ. ಸಾವನದುರ್ಗ ಬೆಟ್ಟದ ಪಶ್ಚಿಮ ತಪ್ಪಲಿನಲ್ಲಿರುವ ಇಟ್ಟಿಗೆಬೈಲು ಎಂಬ ಜಾಗದಲ್ಲಿ ಹಲವಾರು ಗೋರಿಗಳಿವೆ. ಹೆಚ್ಚಿನವು ಕಲ್ಲುವೃತ್ತಗಳೊಳಗಿನ ಕಲ್ಮನೆ ಮತ್ತು ನೆಲಕೋಣೆಗಳು. ಕೆಲವು ಗೋರಿಗಳಿಗೆ 2 ಅಥವಾ 3 ಏಕಕೇಂದ್ರದ ವೃತ್ತಗಳಿದ್ದರೆ ಇನ್ನು ಕೆಲವಕ್ಕೆ ವೃತ್ತಗಳಿಲ್ಲ. ವೃತ್ತಗಳ ವ್ಯಾಸ 12–30ಮೀ. 1879ರಲ್ಲಿ ಬಿ.ಆರ್.ಬ್ರ್ಯಾನ್‌ಫಿಲ್ ನಾಲ್ಕು ಗೋರಿಗಳನ್ನು ಉತ್ಖನನ ಮಾಡಿ ಹೊರತೆಗೆದ. ಒಂದನೆಯ ನೆಲಕೋಣೆಯ ತಳದಲ್ಲಿದ್ದ ಆಯತಾಕಾರದ ಚಪ್ಪಡಿಕಲ್ಲಿನ ಮೇಲೆ ಮಾನವ ಅಸ್ಥಿ ಅವಶೇಷಗಳೊಂದಿಗೆ ಮಡಕೆಗಳಲ್ಲದೆ ಅಂಡಾಕಾರದ ಒಂದು ತೆಳು ತಟ್ಟೆ, ಮುಳ್ಳಿರುವ ಬಾಣದ ಮೊನೆಗಳು, ಭರ್ಜಿಯ ಮೊನೆ, ಉಳಿಯಂತಹ ಸಾಧನಗಳು, ತಂತಿ, 2 ಪಟ್ಟಿಗಳು, ಚೂರಿ ಮುಂತಾದ ಕಬ್ಬಿಣದ ವಸ್ತುಗಳು ಕಂಡುಬಂದವು. ಇವಲ್ಲದೆ ಸಿಂಬಿಯೊಂದರೊಳಗೆ 10 ಕಬ್ಬಿಣದ ಬಾಣದ ಮೊನೆಗಳೂ ಮಡಕೆಯೊಂದರೊಳಗೆ ರಾಗಿಯಂತಹ ಸಣ್ಣ ಕಾಳಿನ ಅವಶೇಷಗಳೂ ಇದ್ದವು. ಈ ನೆಲಕೋಣೆಯ ವಿಶೇಷವೆಂದರೆ ಕೊಂಬಿನಾಕಾರದಲ್ಲಿದ್ದು ತುದಿಯಲ್ಲಿ ರಂಧ್ರವಿದ್ದ 2 ಮಡಕೆಗಳು. ನೆಲಕೋಣೆಯನ್ನು ತುಂಬಿದ್ದ ಮಣ್ಣಿನಲ್ಲಿ 1 ಬಾಣದ ಮೊನೆ, ಅತಿಯಾಗಿ ಸವೆದುಹೋಗಿದ್ದು ನಾಣ್ಯದಂತೆ ತೋರುವ ತಾಮ್ರದ ಗೋಲಾಕಾರದ ವಸ್ತು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಚೂರುಗಳು ದೊರೆತವು. ಎರಡನೆಯ ನೆಲಕೋಣೆಯಲ್ಲಿ ಮಾನವನ ಅಸ್ಥಿಗಳಿಂದ ಕೂಡಿದ ಬಟ್ಟಲೊಂದನ್ನು ಬಿಟ್ಟರೆ ಇನ್ನಾವುದೇ ಅವಶೇಷಗಳಿರಲಿಲ್ಲ. ಮೂರು ವೃತ್ತಗಳಿದ್ದ ಮೂರನೆಯ ನೆಲಕೋಣೆಯಲ್ಲಿ, ಉತ್ಖನನ ಮಾಡುವಾಗ ಮುಚ್ಚಳದ ಕಲ್ಲುಚಪ್ಪಡಿ ಇರಲಿಲ್ಲ. ಇದರ ತಳದಲ್ಲಿದ್ದ ಚಪ್ಪಡಿಕಲ್ಲಿನ ಮೇಲೆ ಮಡಕೆಗಳು, ಕಬ್ಬಿಣದ ಒಂದು ಭರ್ಜಿಯ ಮೊನೆ ಹಾಗೂ ಚೂರಿಗಳಿದ್ದವು. ಮುಚ್ಚಳ ಕಲ್ಲಿರದಿದ್ದ 4ನೆಯ ನೆಲಕೋಣೆಯ ತಳದಲ್ಲಿ ಒಟ್ಟು 32 ಮಡಕೆ ಮತ್ತು ಜಾಡಿಗಳಲ್ಲದೆ ಬಟ್ಟಲು, ಸಿಂಬಿ ಮತ್ತು ಮೂರು ಕಾಲಿನ ಮಣ್ಪಾತ್ರೆಗಳು ಹಾಗೂ ಕಬ್ಬಿಣದ ವಸ್ತುಗಳು ಕಂಡುಬಂದವು. ಕೆಲವೊಂದು ಪಾತ್ರೆಗಳ ಮೇಲೆ ಗೀರು ರೇಖಾವಿನ್ಯಾಸಗಳಿದ್ದವು. (ಎಂ.ಎಂ.ಪಿ.)

**ಸಾವರಕರ, ವಿನಾಯಕ ದಾಮೋದರ:** 1883–1966. ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ, ಕವಿ, ಹೆಸರಾಂತ ಇತಿಹಾಸಕಾರ, ಹಿಂದುತ್ವದ ಪ್ರಭಾವಿ ವಕ್ತಾರ. ಇವನು ಮಹಾರಾಷ್ಟ್ರ ರಾಜ್ಯದ ನಾಸಿಕ್ ಜಿಲ್ಲೆಯ ಭಗೂರ್ ಎಂಬಲ್ಲಿ ಜನಿಸಿದ. ತಂದೆ ದಾಮೋದರ ಪಂತ, ತಾಯಿ ರಾಧಾಬಾಯಿ. ಇವರದು ಇನಾಮ್‌ದಾರ್ ಮನೆತನ. ಇವನು ಬಾಲ್ಯದಲ್ಲಿಯೆ ರಾಮಾಯಣ, ಮಹಾಭಾರತ ಮತ್ತು ಮರಾಠ ಇತಿಹಾಸಗಳಿಂದ

ಸ್ಫೂರ್ತಿಗೊಂಡು ಉಗ್ರರಾಷ್ಟ್ರವಾದಿಯಾದ ಲೋಕಮಾನ್ಯ ಬಾಳ ಗಂಗಾಧರ ಟಿಳಕರನ್ನು ಬಂಧಿಸಿ, ನಾತು ಬಂಧುಗಳನ್ನು ಗಲ್ಲಿಗೇರಿಸುವ ದೃಶ್ಯ ನೋಡಿದ. ಈತ ಸ್ವಾತಂತ್ರ್ಯ ಸಾಧನೆಗಾಗಿ ಪ್ರಾಣಾರ್ಪಣೆ ಮಾಡಲು ದುರ್ಗಾದೇವಿಯ ಸಮ್ಮುಖದಲ್ಲಿ ಕಂಕಣಬದ್ಧನಾದ. ಭಾರತದ ಸ್ವಾತಂತ್ರ್ಯದ ಬಗ್ಗೆ ಮರಾಠಿ ಭಾಷೆಯಲ್ಲಿ ಲಾವಣಿಯೊಂದನ್ನು ರಚಿಸಿದ.

ಈತ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಇತಿಹಾಸ, ರಾಜ್ಯಶಾಸ್ತ್ರ ಅಭ್ಯಾಸಮಾಡಿ ಪದವಿ ಪಡೆದ(1900). ವಿದ್ಯಾರ್ಥಿ ದೆಸೆಯಲ್ಲೇ ಕ್ರಾಂತಿಕಾರಿ ವಿಚಾರಗಳಿಂದ ಪ್ರಭಾವಿತನಾಗಿದ್ದ. ಮಹಾರಾಷ್ಟ್ರದಲ್ಲಿ ಯುವಜನತೆಯನ್ನು ಒಗ್ಗೂಡಿಸುವ ಉದ್ದೇಶದಿಂದ ಅಭಿನವ ಭಾರತ ಎಂಬ ಸಂಘ ಸ್ಥಾಪಿಸಿದ. ಶ್ಯಾಮ್‌ಜೀ ಕೃಷ್ಣಶರ್ಮ ಎಂಬುವವರು ಇವನಿಗೆ ಶಿಷ್ಯವೇತನ ಕೊಟ್ಟು ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಕಳಿಸಿಕೊಟ್ಟರು. ಇವನು ಅಲ್ಲಿಯೂ ತನ್ನ ಕ್ರಾಂತಿಕಾರಿ ವಿಚಾರಗಳನ್ನು ಭಾರತೀಯ ವಿದ್ಯಾರ್ಥಿಗಳಲ್ಲಿ ತುಂಬಿದ. ಒಂದು ಗುಪ್ತಸಂಸ್ಥೆಯನ್ನು ಕಟ್ಟಿದ. ಇವನಿಂದ ಸ್ಫೂರ್ತಿಗೊಂಡ ಭಾರತೀಯ ವಿದ್ಯಾರ್ಥಿಗಳು ಬಾಂಬ್ ತಯಾರಿಸುವುದನ್ನು ಕಲಿತರು. ಇದಕ್ಕಾಗಿ ಕೃಷ್ಣಶರ್ಮ ಇಂಗ್ಲೆಂಡಿನ ತನ್ನ ಮನೆ ಭಾರತಭವನವನ್ನು ಒಪ್ಪಿಸಿದರು. ಅಲ್ಲಿ ಇವನು ಮತ್ತು ಇವನ ಸ್ನೇಹಿತರು ಬ್ರಿಟಿಷರನ್ನು ಭಾರತದಿಂದ ಹೊರದೂಡುವ ವಿಧಾನಗಳನ್ನು ಬೋಧಿಸುತ್ತಿದ್ದರು. ಇಷ್ಟೆಲ್ಲ ಚಟುವಟಿಕೆಗಳ ನಡುವೆಯೂ ಇವನು ಇಟಲಿಯ ಮುಖಂಡನಾದ ಜೋಸೆಫ್ ಮ್ಯಾಜಿನಿಯನ್ನು ಕುರಿತಂತೆ ಆತ್ಮವೃತ್ತ ಮತ್ತು ರಾಜಕಾರಣ ಎಂಬ ಗ್ರಂಥವನ್ನು ಮರಾಠಿ ಭಾಷೆಯಲ್ಲಿ ರಚಿಸಿದ. ಇದೊಂದು ಸಂಶೋಧನ ಗ್ರಂಥವಾಗಿದ್ದು ಇದರಿಂದ ಈತ ಪ್ರಪಂಚ ಖ್ಯಾತನಾದ. ಅನಂತರ ದಿ ಫಸ್ಟ್ ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್ ಎಂಬ ಗ್ರಂಥವನ್ನು ಬರೆದ. ಇದರಲ್ಲಿ ಭಾರತದ 1857ರ ಪ್ರಥಮ ಸ್ವಾತಂತ್ರ್ಯ ಚಳವಳಿಯ ಬಗೆಗೆ ಹಾಗೂ ರಾಷ್ಟ್ರೀಯ ಜಾಗೃತಿಯ ಬಗೆಗೆ ಮಾರ್ಮಿಕ ವಿಚಾರಗಳಿವೆ. ಅಭಿನವ ಭಾರತದ ಚಟುವಟಿಕೆಗಳು ಬ್ರಿಟಿಷ್ ಆಡಳಿತದ ವಿರುದ್ಧ ಇದ್ದುದರಿಂದ ಅದರ ಸಂಚಾಲಕರನ್ನು ಬಂಧಿಸಲಾಯಿತು. ಇವನು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಯುದ್ಧ ಹೂಡಿದನೆಂದು ಆರೋಪಿಸಿ ಗಡಿಪಾರಿನ ಶಿಕ್ಷೆ ವಿಧಿಸಲಾಯಿತು(1909). ಇವನಿಂದ ದೀಕ್ಷೆಪಡೆದ ಭಾರತೀಯ ಯುವಕರು ಗುಪ್ತವಾಗಿ ತಮ್ಮ ರಾಜಕೀಯ ಗುರಿಗಳನ್ನು ರೂಪಿಸುತ್ತಿದ್ದರು.

ಭಾರತ ಸ್ವತಂತ್ರ ವಾಗಬೇಕು, ಅದೊಂದು ಪ್ರಜಾಪ್ರಭುತ್ವ ರಾಷ್ಟ್ರವಾಗಬೇಕು, ಅದಕ್ಕೊಂದು ಭಾಷೆ ಇರಬೇಕು, ಅದು ಹಿಂದಿ ಭಾಷೆಯಾಗಿರಬೇಕು ಎಂಬ ನಿಲುವು ಇವನದಾಗಿತ್ತು. ಇಂಥ ಉಗ್ರ ವಿಚಾರಗಳಿಂದ ಕೋಪಗೊಂಡ ಬ್ರಿಟಿಷ್ ಸರ್ಕಾರ ಇವನನ್ನು ಬಂಧಿಸಿತು. ಆಗ ಸ್ವಾತಂತ್ರ್ಯದಂತಹ ಪವಿತ್ರಕಾರ್ಯಕ್ಕಾಗಿ ತನ್ನ ಪ್ರಾಣಾರ್ಪಣೆ ಮಾಡುವ ಉದ್ಗಾರ ಮಾಡಿದ. ಬ್ರಿಟಿಷ್ ಸರ್ಕಾರ ಇವನನ್ನು ಭಾರತಕ್ಕೆ ಹಡಗಿನಲ್ಲಿ ಕರೆತರುವಾಗ ಅವರ ಕಣ್ಣುತಪ್ಪಿಸಿ ಸಮುದ್ರದಲ್ಲಿ ಈಜಿ ಫ್ರಾನ್ಸ್ ತಲುಪಿದ. ಫ್ರಾನ್ಸ್‌ನಲ್ಲಿ ತನಗೆ ರಕ್ಷಣೆ ಮತ್ತು ನೆರವು ದೊರೆಯಬಹುದೆಂದು ನಿರೀಕ್ಷಿಸಿದ್ದ. ಆದರೆ ಫ್ರಾನ್ಸ್ ಇವನಿಗೆ ರಕ್ಷಣೆ ಕೊಡಲಿಲ್ಲ, ಬದಲಾಗಿ ಇವನನ್ನು ಬ್ರಿಟಿಷರಿಗೆ ಒಪ್ಪಿಸಿತು. ಇವನನ್ನು ಭಾರತಕ್ಕೆ ಕರೆತಂದು ಇವನ ಮೇಲೆ ರಾಜಕೀಯ ಕೊಲೆ ಆಪಾದನೆ ಹೊರಿಸಿ ಅಂಡಮಾನ್‌ನಲ್ಲಿ ಇರಿಸಲಾಯಿತು. ಇವನು ಇಲ್ಲಿಯೂ

ಜನರನ್ನು ಜಾಗೃತಗೊಳಿಸಿದ. ಅನಂತರ ಭಾರತಕ್ಕೆ ಬಂದಾಗ ಮಹಾತ್ಮಗಾಂಧಿಯವರು ಸ್ವಾತಂತ್ರ್ಯ ಚಳವಳಿ ನಾಯಕರಾಗಿದ್ದರು. ಆದರೆ ಗಾಂಧೀಜಿಯವರ ಮಾರ್ಗ ಹಾಗೂ ವಿಚಾರಧಾರೆಗಳು ಇವನಿಗೆ ಇಷ್ಟವಾಗಲಿಲ್ಲ. ಇವನು ಉಗ್ರ ಹೋರಾಟದ ಮೂಲಕ ಬ್ರಿಟಿಷರ ಆಡಳಿತ ಕೊನೆಗಾಣಿಸಲು ಮುಂದಾದ. ಹಿಂದು ಮಹಾಸಭೆಯ ಮುಖಂಡನಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ. ಹಿಂದುಗಳು ಉನ್ನತ ಶಿಕ್ಷಣ, ತರಬೇತಿ ಪಡೆದು ಉನ್ನತ ಹುದ್ದೆಗಳಲ್ಲಿರಬೇಕೆಂಬುದು ಇವನ ಇಚ್ಛೆಯಾಗಿತ್ತು. ಭಾರತದಲ್ಲಿರುವವರೆಲ್ಲರೂ ಹಿಂದುಗಳು, ಎಲ್ಲರೂ ಹಿಂದುಸ್ಥಾನದಲ್ಲಿ ನೆಲೆಸಿದ್ದಾರೆ, ಪ್ರತಿಯೊಬ್ಬ ಪ್ರಜೆಗೂ ಒಂದೇ ಮತ, ರಾಜಕಾರಣದಲ್ಲಿ ಜಾತೀಯತೆಯ ಹೆಸರನ್ನು ತರಕೂಡದು, ಸರ್ವರಿಗೂ ಸರಿಯಾದ ಸವಲತ್ತುಗಳನ್ನು ಕೊಡಬೇಕು ಇವೇ ಮುಂತಾದ ವಿಚಾರಗಳನ್ನು ಪಕ್ಷದ ಮುಖಾಂತರ ಪ್ರಚಾರಗೊಳಿಸಿದ. ಇವನ ಹಲವು ವಿಚಾರಗಳು ರಾಷ್ಟ್ರೀಯ ಚಳವಳಿಗೆ ಪೂರಕವಾದವು. ಕ್ರಾಂತಿಕಾರಿ ವಿಚಾರ ಹಾಗೂ ಕ್ರಿಯೆಗಳಿಂದಾಗಿ ವೀರ ಎಂಬ ಬಿರುದು ಈತನಿಗೆ ದೊರಕಿತು. ಈತ 83ನೆಯ ವಯಸ್ಸಿನಲ್ಲಿ 1966ರಲ್ಲಿ ನಿಧನ ಹೊಂದಿದ. (ಎಸ್.ಎಮ್.ಎಚ್.)

**ಸಾಹ್ನಿ, ಬೀರ್ಬಲ್:** 1891–1949. ಭಾರತದ ಪ್ರಸಿದ್ಧ ಪ್ರಾಗ್ಸಸ್ಯ ವಿಜ್ಞಾನಿ (ಪೇಲಿಯೋ ಬಾಟನಿಸ್ಟ್). ಇವರು 1891 ನವೆಂಬರ್ 11ರಂದು ಜನಿಸಿದರು. ತಂದೆ ರೂಚಿರಾಮ್ ಸಾಹ್ನಿಯವರು ಈಗಿನ ಪಾಕಿಸ್ತಾನದಲ್ಲಿರುವ ಲಾಹೋರಿನ ಕಾಲೇಜಿನಲ್ಲಿ ರಸಾಯನವಿಜ್ಞಾನ ಪ್ರಾಧ್ಯಾಪಕರಾಗಿದ್ದರು. ಲಾಹೋರ್ ವಿಶ್ವವಿದ್ಯಾಲಯದಿಂದ ಅತ್ಯುತ್ತಮ ಶ್ರೇಣಿಯಲ್ಲಿ ಸಸ್ಯವಿಜ್ಞಾನ ದಲ್ಲಿ ಬೀರ್ಬಲ್ ಅವರು ಪದವಿ ಪಡೆದರು. (1911). ಇವರ ತಂದೆಗೆ ಮಗ ಆಡಳಿತಾಧಿಕಾರಿ ಪರೀಕ್ಷೆಗೆ ಕೂರಬೇಕೆಂಬ ಅಭಿಲಾಷೆ ಇತ್ತು. ಆದರೆ ಇವರಿಗೆ ಒಲವಿದ್ದುದು ಸಸ್ಯವಿಜ್ಞಾನದಲ್ಲಿ. ಇವರು ಕೇಂಬ್ರಿಜ್ ವಿಶ್ವವಿದ್ಯಾಲಯದ ಎಮಾನ್ಯುಯಲ್ ಕಾಲೇಜ್ ಸೇರಿ ಅಧ್ಯಾಪಕ ಅಲೆಕ್ಸಾಂಡರ್ ಅವರ ನೇತೃತ್ವದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು. ಪ್ರಾಗ್ಸಸ್ಯ ವಿಜ್ಞಾನಿ ಎ.ಸಿ.ಆರ್ನಾಲ್ಡ್ ಅವರ ಮಾರ್ಗದರ್ಶನದಲ್ಲಿ ಇದೇ ವಿಷಯ ಕುರಿತು ಸಂಶೋಧನೆಗೆ ಮುಂದಾದರು. ಇವರ ಸೂಕ್ಷ್ಮಬುದ್ಧಿ ಮತ್ತು ವಿಷಯಮಂಡನ ಕೌಶಲ ಗಮನಿಸಿದ ಆರ್ನಾಲ್ಡ್‌ರು ಇವರಿಗೆ ಗೊಂಡ್ವಾನ ಮತ್ತು ಇತರ ಪ್ರದೇಶಗಳ ಸಸ್ಯಾವಶೇಷಗಳನ್ನು ಕುರಿತು ಅಧ್ಯಯನ ನಡೆಸಲು ಆದೇಶಿಸಿದರು. ಅಂದು ಲಾಸನ್ ಬರೆದ ಸಸ್ಯವಿಜ್ಞಾನ ಗ್ರಂಥ ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕವಾಗಿತ್ತು. ಭಾರತೀಯ ಸಸ್ಯ ಸಂಪತ್ತನ್ನೂ ಇದರೊಳಗೆ ಅಳವಡಿಸುವ ಹೊಣೆಯನ್ನೂ ಖುದ್ದು ಲಾಸನ್ ಅವರೇ ಸಾಹ್ನಿಯವರಿಗೆ ಒಪ್ಪಿಸಿದರು. ಸಾಹ್ನಿಯವರು ಪರಿಷ್ಕರಿಸಿದ ಲಾಸನ್ ಪುಸ್ತಕ ಇಂದಿಗೂ ಒಂದು ಉತ್ತಮ ಆಕರ ಗ್ರಂಥವಾಗಿದೆ.

ಇವರು 1919ರಲ್ಲಿ ಡಾಕ್ಟರೇಟ್ ಪದವಿ ಪಡೆದು ಭಾರತಕ್ಕೆ ಮರಳಿ ಕಾಶಿ ವಿಶ್ವವಿದ್ಯಾಲಯ ದಲ್ಲಿ ಸಸ್ಯವಿಜ್ಞಾನ ವಿಭಾಗದಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ತಮ್ಮ ಅಭಿರುಚಿಗೆ ಅನುರೂಪರಾದ ಸಾವಿತ್ರಿಯವರನ್ನು ವಿವಾಹವಾದರು (1920). ಅನಂತರ ಲಖನೌ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಆಯ್ಕೆಗೊಂಡರು (1921). ಅಲ್ಲಿ ಸ್ವತಂತ್ರ ಸಸ್ಯವಿಜ್ಞಾನ ವಿಭಾಗ ಪ್ರಾರಂಭಿಸಿದ, ಅದನ್ನು ಬೆಳೆಸಿದ ಹೆಗ್ಗಳಿಕೆ ಇವರದು. ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾಗಿದ್ದರೂ ಸ್ನಾತಕೋತ್ತರ ತರಗತಿಗಳ ಜೊತೆಗೆ ಪದವಿ ತರಗತಿಗಳಿಗೂ ಬೋಧಿಸಿ ಹೆಸರು ಗಳಿಸಿದರು. ಇವರ ಸತ್ತ್ವ ಮತ್ತು ಸ್ಫೂರ್ತಿಯುತ ಬೋಧನೆ ಅಸಂಖ್ಯಾತ ವಿದ್ಯಾರ್ಥಿಗಳನ್ನು ಈ ವಿಭಾಗಕ್ಕೆ ಆಕರ್ಷಿಸಿತು. ಅದರ ಒಂದು ಪರಿಣಾಮವಾಗಿ ವಿಭಾಗದಲ್ಲಿ ಸಂಶೋಧನ ಕಾರ್ಯಕ್ಕೆ ಸ್ಥಳಾಭಾವವಾದರೂ ಹಿಂಜರಿಯಲಿಲ್ಲ; ಗ್ರಂಥಾಲಯದ ಬೀರುಗಳ ಹಿಂದಿನ ಇಕ್ಕಟ್ಟಿನ ಜಾಗದಲ್ಲೇ ಸಂಶೋಧನೆ ನಡೆಸಿದರು. ತಮ್ಮ ಡಾಕ್ಟರೇಟ್ ಪದವಿಗಾಗಿ ಆರ್ನಾಲ್ಡ್ ಜೊತೆ ನಡೆಸಿದ ಗೊಂಡ್ವಾನ ಸಸ್ಯಾವಶೇಷಗಳ ಸಂಶೋಧನೆಯ ಪುನರವಲೋಕನ; ಜೊತೆಗೆ ಭಾರತದ ಸಸ್ಯಾವಶೇಷಗಳ ಅಧ್ಯಯನ, ವಿವಿಧ ಪ್ರಭೇದಗಳನ್ನೂ ಶಾಸ್ತ್ರೀಯವಾಗಿ ವಿಂಗಡಿಸಿದರು. ಬಿಹಾರ ಪ್ರಾಂತದ ರಾಜಮಹಲ್ ಬೆಟ್ಟಗಳಲ್ಲಿಯ ಗ್ಲಾಸಾಪ್ಟರಿಸ್ ಸಸ್ಯಗಳ ಬಗ್ಗೆ ಮತ್ತು ಹಿಮ್ಮತ್ ನಗರದ ಸುಣ್ಣಕಲ್ಲು ರೂಪದ ಮರಳುಕಲ್ಲುಗಳ ಒಣ ನೆಲದಲ್ಲಿ ಬೆಳೆಯುವ ಫರ್ನ್ ಗಿಡಗಳ ಅವಶೇಷಗಳ ಬಗ್ಗೆ ಇವರು ರಚಿಸಿದ ಕೃತಿಗಳು ಪ್ರಪಂಚದ ಪ್ರಾಗ್ಸಸ್ಯ ವಿಜ್ಞಾನಿಗಳ ಅಪಾರ ಮೆಚ್ಚುಗೆ ಗಳಿಸಿವೆ. ಭೂಗರ್ಭಶಾಖೆಗೆ ತಜ್ಞ ಸಲಹಾಕಾರರಾಗಿಯೂ ಇವರು ಸೇವೆಸಲ್ಲಿಸಿದರು. ಭೂಮಿಯ ವಿವಿಧ ಪದರಗಳಲ್ಲಿ ದೊರೆತ ಸಸ್ಯಗಳ ಸಾದೃಶ್ಯ ಮತ್ತು ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಿ ವಯೋಮಾನ ಮತ್ತು ಅವುಗಳ ವಿವಿಧ ಯುಗಗಳ ಬೂಷ್ಟು ಜಾತಿಯ ಸಸ್ಯಗಳ ಚೂರುಗಳು, ಪಾಚಿಜಾತಿಯ ಸಸ್ಯ ಬೀಜಗಳು, ಫರ್ನ್ ಸಸ್ಯದ ಸ್ಪೊರಾಂಜಿಯಮ್‌ಗಳ ಶೋಧನೆ; ದಖನ್ ಸ್ತಂಭ ಶಿಲಾರಚನೆಯಲ್ಲಿಯ ಸಸ್ಯಾವಶೇಷಗಳು ಇಯೊಸೀನ್ ಯುಗಕ್ಕೆ ಸೇರಿದವೆಂಬ ಪ್ರಮುಖ ನಿರ್ಧಾರ ಇವರ ಮುಖ್ಯ ಕೊಡುಗೆಗಳು. ಕಾಶ್ಮೀರ ಕಣಿವೆಯ ಕರೇವದಲ್ಲಿ ಸಸ್ಯ ನಿಕ್ಷೇಪಗಳು ಪ್ಲೀಸ್ಟೊಸೀನ್ ಯುಗದಲ್ಲಿ ಹಿಮಾಲಯದಲ್ಲಾದ ಭಾರಿ ಬದಲಾವಣೆಯ ಸೂಚಕವೆಂಬ ಇವರ ಶೋಧನೆ ಮಹತ್ತ್ವದ್ದಾಗಿದೆ. ಕಲ್ಕತ್ತ ಸಂಗ್ರಹಾಲಯದಲ್ಲಿ ಲಭ್ಯವಿದ್ದ ಭಾರತದ ಸಸ್ಯಾವಶೇಷಗಳ ಅಧ್ಯಯನದಿಂದ ದೊರೆತ ಮಾಹಿತಿಯನ್ನು ವಿಮರ್ಶಿಸಿ, ಕ್ರೋಡೀಕರಿಸಿ ಹಲವಾರು ಉಪಯುಕ್ತ ಲೇಖನಗಳನ್ನು ವಿಶ್ಲೇಷಿಸಿ ಪ್ರಕಟಿಸಿದರು. ಇವರ ಬಹುಮುಖ ಪ್ರತಿಭೆ ಗಮನಿಸಿದ ಕೇಂಬ್ರಿಜ್ ವಿಶ್ವವಿದ್ಯಾಲಯ ಇವರಿಗೆ ಎಸ್‌ಸಿ.ಡಿ ಪದವಿಕೊಟ್ಟು ಗೌರವಿಸಿತು (1929). ಈ ಪದವಿ ಪಡೆದ ಭಾರತೀಯರಲ್ಲಿ ಇವರೇ ಮೊದಲಿಗರು.

ಆಮ್‌ಸ್ಟರ್ಡ್ಯಾಮಿನಲ್ಲಿ ನಡೆದ 6ನೆಯ ಅಂತಾರಾಷ್ಟ್ರೀಯ ಸಸ್ಯವಿಜ್ಞಾನ ವಿಭಾಗದ ಕಾಂಗ್ರೆಸ್‌ನಲ್ಲಿ ಇವರು ಭಾಗವಹಿಸಿದರು. ಭಾರತ, ಸೈಬೀರಿಯ, ಚೀನ, ಕೊರಿಯ ಮುಂತಾದ ದೇಶಗಳಲ್ಲಿ ಗೊಂಡ್ವಾನ ಪದರಗಳಲ್ಲಿಯ ಸಸ್ಯಾವಶೇಷಗಳ ತುಲನಾತ್ಮಕ ಅಧ್ಯಯನ ಮಂಡಿಸಿದ ಪ್ರಬಂಧ ಇವರನ್ನು ಪ್ರಪಂಚದ ಶ್ರೇಷ್ಠ ಪ್ರಾಗ್ಸಸ್ಯವಿಜ್ಞಾನಿಗಳ ಸಾಲಿಗೆ ಸೇರಿಸಿತು. ಇಂಗ್ಲೆಂಡಿನ ರಾಯಲ್ ಸೊಸೈಟಿಯ ಸದಸ್ಯತ್ವ ದೊರೆಯಿತು. ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಅಧ್ಯಕ್ಷರಾದರು (1940). ಅಮೆರಿಕದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಗೌರವ ಸದಸ್ಯತ್ವವೂ ದೊರೆಯಿತು (1948).

ಇವರು ಬರೆದ, ಪುರಾತನ ಕಾಲದ ಭಾರತದಲ್ಲಿ ನಾಣ್ಯ ತಯಾರಿಕೆಯ ಯಂತ್ರ ಕೌಶಲ ಎಂಬ ಸಂಶೋಧನ ಲೇಖನ (1945) ಇವರ ಬಹುಮುಖ ಪ್ರತಿಭೆಗೆ ನಿದರ್ಶನ. ಇದರಲ್ಲಿ ಕಾಶ್ಮೀರದ ಕೊಕ್ರಕಾಟದಲ್ಲಿ ದೊರೆತ ಟೆರ್‍ರಾಕೋಟ ನಾಣ್ಯಗಳ ಅಚ್ಚುಗಳನ್ನು ಭಾರತದ ಇತರೆಡೆ ದೊರೆತ ಅಚ್ಚುಗಳೊಡನೆ ತೌಲನಿಕವಾಗಿ ವಿಶ್ಲೇಷಿಸಲಾಗಿದೆ. ಕೊಕ್ರಕಾಟದಲ್ಲಿ ದೊರೆತ ಅಚ್ಚು ಬಹುಧಾನ್ಯಕ ಭಾಗವಾದ ಯೌಧೇಯ ರಾಜ್ಯಕ್ಕೆ ಸೇರಿದುದು ಎಂಬ ಅಂಶ ಗಮನಾರ್ಹ ಸಂಶೋಧನೆ. ಈ ಯೌಧೇಯ ರಾಜ್ಯದ ಉಲ್ಲೇಖ ಮಹಾಭಾರತದಲ್ಲಿರು ವುದರಿಂದ ಮಹಾಭಾರತದ ಕಾಲನಿರ್ಣಯ ಮಾಡಿದಂತಾಯಿತು.

ಅಪಾರ ಸಂಖ್ಯೆಯ ಸಂಶೋಧಕರನ್ನು ಪ್ರಾಗ್ಸಸ್ಯವಿಜ್ಞಾನ ಪ್ರಪಂಚಕ್ಕೆ ಪರಿಚಯಿಸಿ ತಮ್ಮ ಜೀವನದ ಮಹತ್ತರ ಕನಸಾದ ಪ್ರಾಗ್ಸಸ್ಯ ವಿಜ್ಞಾನ ಸಂಶೋಧನ ಸಂಸ್ಥೆಯ ಸ್ಥಾಪನೆಯಾದ ಆರು ದಿನಗಳಲ್ಲೇ ಅಕಾಲ ಮರಣಕ್ಕೀಡಾದರು (1949). ಇವರ ಪತ್ನಿ ಸಾವಿತ್ರಿ ಸಾಹ್ನಿಯವರು ತಮ್ಮ ಪತಿಯ ಸ್ಮರಣಾರ್ಥ ಸಾಹ್ನಿ ಇನ್‌ಸ್ಟಿಟ್ಯೂಟ್ ಆಫ್ ಪೇಲಿಯೋಬಾಟನಿಯನ್ನು ಬೆಳೆಸಿದುದು ಇವರ ಸಾರ್ಥಕ ಜೀವನಕ್ಕೆ ಸಂದ ಮಹತ್ತರ ಗೌರವವಾಗಿದೆ. (ವಿ.ಪಿ.ಕೆ.)

**ಸಿಂಧೂ–ಸರಸ್ವತಿ ಸಂಸ್ಕೃತಿ:** ಭಾರತದ ಪ್ರಾಚೀನ ಸಂಸ್ಕೃತಿ ನೆಲೆಗಳನ್ನು ಅವು ಹುಟ್ಟಿ ಬೆಳೆದು ಹರಡಿದ ಸಿಂಧೂ–ಸರಸ್ವತಿ ನದಿಗಳ ಮೂಲತಾಣಗಳಿಂದ ಗುರುತಿಸಲಾಗಿದೆ. 20ನೆಯ ಶತಮಾನದ ಪ್ರಥಮ ಚರಣ ಪ್ರಾಚೀನ ಭಾರತದ ಪುರಾತಾತ್ತ್ವಿಕ ಇತಿಹಾಸದಲ್ಲಿ ಒಂದು ಸುವರ್ಣ ಘಟ್ಟವೆಂದು ಹೇಳಬಹುದು. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರಾಗಿದ್ದ ಜಾನ್ ಮಾರ್ಷಲ್ ನಿರ್ದೇಶನದಲ್ಲಿ ಕ್ಷೇತ್ರೀಯ ಅಧಿಕಾರಿಗಳಾಗಿದ್ದ ರಾಯಬಹದ್ದೂರ್ ದಯರಾಮ ಸಾಹ್ನಿ 1920–21ರಲ್ಲಿ ಅಂದಿನ ಅವಿಭಜಿತ ಪಂಜಾಬ್ ಪ್ರಾಂತದಲ್ಲಿರುವ ಹರಪ್ಪ ನೆಲೆಯನ್ನೂ 1922–23ರ ಸಾಲಿನಲ್ಲಿ ರಾಖಲದಾಸ್ ಬ್ಯಾನರ್ಜಿಯವರು ಸಿಂಧ್ ಪ್ರಾಂತದಲ್ಲಿರುವ ಮೊಹೆಂಜೋದಾರೊ ನೆಲೆಯನ್ನೂ ಉತ್ಖನನ ಮಾಡಿದ ಪರಿಣಾಮವಾಗಿ ಪ್ರಾಚೀನ ಭಾರತದ ಸಂಸ್ಕೃತಿ ಪ್ರಪಂಚದ ಅತ್ಯಂತ ಪ್ರಾಚೀನ ಸಂಸ್ಕೃತಿಗಳಾದ ಮೆಸಪೊಟೇಮಿಯ ಹಾಗೂ ಈಜಿಪ್ಟ್ ಸಂಸ್ಕೃತಿಗಳ ಸಮಕಾಲೀನ ಸಂಸ್ಕೃತಿಯೆಂದು ತಿಳಿದುಬಂತು. ಈ ಸಂಸ್ಕೃತಿಯ ಪ್ರಪ್ರಥಮ ನೆಲೆಯಾದ ಹರಪ್ಪವನ್ನು 1826ರಲ್ಲಿ ಸಾರಸ್ವತ ಲೋಕಕ್ಕೆ ಪರಿಚಯಿಸಿದ ಶ್ರೇಯಸ್ಸು ಬ್ರಿಟಿಷ್ ಸಂಶೋಧಕ ಚಾರ್ಲ್ಸ್‌ಮೆಸನ್‌ಗೆ ಸಲ್ಲುತ್ತದೆ. ಈ ಸ್ಥಳ ಅಲೆಕ್ಸಾಂಡರ್‌ನೊಂದಿಗೆ ಹೋರಾಡಿದ ಪೋರಸ್‌ನ ರಾಜಧಾನಿಯಾದ ಸಂಗಲ ನಗರವಿರಬಹುದೆಂದು ಇವನು ಸೂಚಿಸಿದ. 1831ರಲ್ಲಿ ಇನ್ನೊಬ್ಬ ಅನ್ವೇಷಕ ಅಲೆಕ್ಸಾಂಡರ್ ಬರ್ನ್ಸ್ ಹರಪ್ಪ ನೆಲೆಯನ್ನು ಸಂದರ್ಶಿಸಿ ಅದರ ಪುರಾತಾತ್ತ್ವಿಕ ಮಹತ್ತ್ವವನ್ನು ಅರಿತ. 1853 ಮತ್ತು 1856ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಹರಪ್ಪ ನೆಲೆಗೆ ಎರಡು ಬಾರಿ ಭೇಟಿ ನೀಡಿದ. ಚೀನದ ಬೌದ್ಧಭಿಕ್ಷು ಯುವಾನ್‌ಚಾಂಗ್‌ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸಿದ ಪೊ–ಫ–ತೊ ನಗರವೇ ಬಹುಶಃ ಹರಪ್ಪ ದಿಬ್ಬಗಳಿರಬಹುದೆಂದು ಅನುಮಾನಿಸಿ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ 1872ರಲ್ಲಿ ಅಲ್ಪ ಪ್ರಮಾಣದ ಉತ್ಖನನವನ್ನು ಕೈಗೆತ್ತಿಕೊಂಡ. ಆದರೆ ಕನ್ನಿಂಗ್‌ಹ್ಯಾಮ್ ಹುಡುಕುತ್ತಿದ್ದ ಬೌದ್ಧ ಅವಶೇಷಗಳು ಈ ಉತ್ಖನನದಿಂದ ಪ್ರಾಪ್ತವಾಗದೆ, ವಿಚಿತ್ರ ರೀತಿಯ ವರ್ಣಚಿತ್ರವುಳ್ಳ ಪಾತ್ರೆಗಳು, ಕಲ್ಲಿನ ಚಕ್ಕೆಗಳು, ಪ್ರಾಣಿಚಿತ್ರ ಸಹಿತ ಲಿಪಿಯನ್ನೊಳಗೊಂಡ ಮುದ್ರೆ ಇತ್ಯಾದಿ ಅವಶೇಷಗಳು ದೊರೆತವು. ಇವುಗಳ ವರದಿಯನ್ನು ಕನ್ನಿಂಗ್‌ಹ್ಯಾಮ್ ಪ್ರಕಟಿಸಿದ. ಸುಮಾರು ಅರ್ಧಶತಕದ ಅನಂತರ ಲಾಹೋರ್ ಮತ್ತು ಮುಲ್ತಾನ್ ನಗರಗಳ ನಡುವೆ ರೈಲ್ವೆ ಸಂಪರ್ಕವನ್ನು ಕಲ್ಪಿಸುವುದಕ್ಕಾಗಿ ಮಾರ್ಗದ

ಸಮೀಪದಲ್ಲಿಯೇ ಇದ್ದ ಹರಪ್ಪ ದಿಬ್ಬಗಳಲ್ಲಿ ಹೂತುಹೋದ ಸುಟ್ಟ ಇಟ್ಟಿಗೆಗಳನ್ನು ಕಿತ್ತು ಒಯ್ಯುವ ಕೆಲಸ ನಡೆದಾಗ ಅನೇಕ ವಿಚಿತ್ರ ರೂಪದ ಇನ್ನಷ್ಟು ಅವಶೇಷಗಳು ಬೆಳಕಿಗೆ ಬಂದವು. ಈ ಅವಶೇಷಗಳಿಂದಾಗಿ ಹರಪ್ಪ ನೆಲೆಯಲ್ಲಿ ಪುರಾತತ್ತ್ವಶಾಸ್ತ್ರಜ್ಞರು 1920–21ರಲ್ಲಿ ವಿಸ್ತೃತ ಉತ್ಖನನ ನಡೆಸಿದರು.

ನಗರ ವಿನ್ಯಾಸ, ಹರಪ್ಪ

ಎರಡು ಪ್ರಮುಖ ನೆಲೆಗಳಾದ ಹರಪ್ಪ ಮತ್ತು ಮೊಹೆಂಜೋದಾರೊವಿನಲ್ಲಿ ನಡೆದ ವಿಸ್ತೃತ ಉತ್ಖನನದಿಂದಾಗಿ ವಿಶಾಲವಾದ ಸುಸಜ್ಜಿತ ವಿನ್ಯಾಸವನ್ನಾಧರಿಸಿದ ವಿಕಸಿತ ನಗರಗಳು ಬೆಳಕಿಗೆ ಬಂದು ಅಚ್ಚರಿ ಮೂಡಿಸಿದವು. ಈ ಎರಡೂ ನೆಲೆಗಳು ಸಿಂಧೂನದಿಯ ಬಯಲಿನಲ್ಲಿದ್ದ ಕಾರಣ ಜಾನ್ ಮಾರ್ಷಲ್ ಈ ಸಂಸ್ಕೃತಿಯನ್ನು ಸಿಂಧೂ ಸಂಸ್ಕೃತಿ ಎಂದು ಕರೆದ. ಆದರೆ ಪುರಾತತ್ತ್ವ ಸಂಪ್ರದಾಯದ ಪ್ರಕಾರ ಯಾವುದೇ ಅಪರಿಚಿತ ಸಂಸ್ಕೃತಿಯ ಶೋಧವಾದಾಗ ಆ ಸಂಸ್ಕೃತಿಯನ್ನು ಪ್ರಥಮ ಬಾರಿಗೆ ಅದರ ಅವಶೇಷ ದೊರೆತ ಸ್ಥಳದ ಹೆಸರಿನಿಂದ ಸಂಬೋಧಿಸಬೇಕು. ಆದ್ದರಿಂದಾಗಿ ಈ ಹೊಸ ಸಂಸ್ಕೃತಿಯನ್ನು ಹರಪ್ಪ ಸಂಸ್ಕೃತಿ ಎಂದೂ ಕರೆಯಲಾಗಿದೆ. ಮುಂದೆ ಅನೇಕ ವಿದ್ವಾಂಸರು ಇದನ್ನು ಸಿಂಧೂ ಬಯಲಿನ ಸಂಸ್ಕೃತಿ ಎಂದೂ ಕರೆದರು. ಆದರೆ ಈ ಸಂಸ್ಕೃತಿಯ ನೆಲೆಗಳು ಕೇವಲ ಸಿಂಧೂ ಹಾಗೂ ಅದರ ಉಪನದಿಗಳಿಗೆ ಸೀಮಿತವಾಗಿರದೆ, ಅವಿಭಜಿತ ಭಾರತದ ವಾಯವ್ಯ, ಉತ್ತರ ಹಾಗೂ ಪಶ್ಚಿಮ ದಿಶೆಯ ಬಹು ವಿಶಾಲವಾದ ಭಾಗವನ್ನಾಕ್ರಮಿಸಿವೆ. ಸಿಂಧೂ ನದಿಗೆ ಪಡಿರೂಪವಾಗಿದ್ದಂಥ, ಋಗ್ವೇದದಲ್ಲಿ ಪ್ರಸಿದ್ಧಿಯನ್ನು ಪಡೆದ, ಅನಂತರ ಬತ್ತಿಹೋದ ಸರಸ್ವತಿ ನದಿ ಮತ್ತು ಅದರ ಉಪನದಿಗಳ ತಟದಲ್ಲಿಯೂ ಈ ಸಂಸ್ಕೃತಿಯ ನೆಲೆಗಳನ್ನು ಹೇರಳ ಸಂಖ್ಯೆಯಲ್ಲಿ ಪತ್ತೆಹಚ್ಚಲಾಗಿದೆ. ಈ ಸತ್ಯಾಂಶಗಳಿಂದಾಗಿ ಅನೇಕ ವಿದ್ವಾಂಸರು ಇದನ್ನು ಸಿಂಧೂ-ಸರಸ್ವತಿ ಸಂಸ್ಕೃತಿ ಎಂದೂ ಕರೆಯುತ್ತಾರೆ. ಈ ಸಂಶೋಧನೆಯೂ ಸಂಪೂರ್ಣವಾಗಿ ಕೊರತೆಯಿಂದ ಮುಕ್ತವಾಗಿಲ್ಲ. ಏಕೆಂದರೆ ಈ ಸಂಸ್ಕೃತಿಯ ವ್ಯಾಪ್ತಿ ಕೇವಲ ಎರಡೇ ನದಿಗಳ ಬಯಲಿಗೆ ಸೀಮಿತವಾಗಿತ್ತು ಎಂಬ ಅರ್ಥವನ್ನು ಇದು ಕೊಡುತ್ತದೆಯೇ ಹೊರತು ಪಶ್ಚಿಮ ದಿಶೆಯಲ್ಲಿರುವ ಕಚ್ಛ್, ಸೌರಾಷ್ಟ್ರವನ್ನೊಳಗೊಂಡ ಗುಜರಾತ್ ಭಾಗಕ್ಕೂ ಬೆಳೆದು ನಿಂತ ಈ ಸಂಸ್ಕೃತಿಯ ಅಸ್ತಿತ್ವವನ್ನು ಎತ್ತಿ ತೋರಿಸುವುದಿಲ್ಲ.

ಸಮಕಾಲೀನ ಸಂಸ್ಕೃತಿಗಳಾದ ಮೆಸಪೊಟೇಮಿಯ ಹಾಗೂ ಈಜಿಪ್ಟ್‌ಗಳಿಗಿಂತ ಸಿಂಧೂ–ಸರಸ್ವತಿ ಸಂಸ್ಕೃತಿ ವಿಸ್ತಾರದಲ್ಲಿ ನಾಲ್ಕು ಪಟ್ಟು ದೊಡ್ಡದಾಗಿತ್ತು. ಪಶ್ಚಿಮ ದಿಶೆಯಲ್ಲಿ ಮಕ್ರಾನ್ ಕರಾವಳಿಯಲ್ಲಿರುವ ದಷ್ತ ಬಯಲಿನಲ್ಲಿರುವ ಸುತ್ಕಜೆಂಡರ್‌ನಿಂದ ಪೂರ್ವದಲ್ಲಿ ಉತ್ತರ ಪ್ರದೇಶದಲ್ಲಿರುವ ಆಲಂಗೀರ್‌ಪುರದವರೆಗೆ; ಉತ್ತರದಲ್ಲಿ ಜಮ್ಮುವಿನಲ್ಲಿರುವ ಮಾಂಡದಿಂದ, ದಕ್ಷಿಣದಲ್ಲಿ ಗುಜರಾತ್ ರಾಜ್ಯದ ತಾಪಿ ನದಿತಟದಲ್ಲಿರುವ ಭಗತ್‌ರಾವ್‌ವರೆಗೆ ಈ ಸಂಸ್ಕೃತಿ ತನ್ನ ಉಚ್ಛ್ರಾಯಕಾಲದಲ್ಲಿ ಸ್ಥಿತಿಯಲ್ಲಿ ವಿಸ್ತಾರವಾಗಿ ಹರಡಿತ್ತು. ಇದರ ವ್ಯಾಪ್ತಿಯ ವಿಸ್ತೀರ್ಣ ಸು.2.5 ದಶಲಕ್ಷ ಚ.ಕಿಮೀ.

ಸಿಂಧೂ–ಸರಸ್ವತಿ ಸಂಸ್ಕೃತಿಯ ಹುಟ್ಟು ಮತ್ತು ಬೆಳವಣಿಗೆ ಕುರಿತಾಗಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಹರಪ್ಪ ಹಾಗೂ ಮೊಹೆಂಜೋದಾರೊ ಉತ್ಖನನದಿಂದ ದೊರೆತ ಅವಶೇಷಗಳನ್ನಾಧರಿಸಿ ನಡೆಸಿದ ಅಧ್ಯಯನದಲ್ಲಿ ಜಾನ್ ಮಾರ್ಷಲ್ ಭಾರತೀಯ ಮೂಲವನ್ನು ಸ್ಪಷ್ಟವಾಗಿ ಎತ್ತಿ ಹಿಡಿದಿದ್ದಾನೆ. ಇದಕ್ಕೆ ಬೆಂಬಲವಾಗಿ, ಈ ಸಂಸ್ಕೃತಿ ಕೇವಲ ಭಾರತಕ್ಕೆ ನಿರ್ದಿಷ್ಟವಾಗಿದ್ದು ಐತಿಹಾಸಿಕ ಭಾರತದ ಮೂಲ ಆಧಾರಗಳೆಲ್ಲಾ ಖಂಡಿತವಾಗಿಯೂ ಸಿಂಧೂ–ಸರಸ್ವತಿಯ ಅವಶೇಷಗಳಲ್ಲಿ ಕಾಣಸಿಗುತ್ತವೆಯೆಂದು ಗೋರ್ಡನ್ ಚೈಲ್ಡ್ ನುಡಿದಿದ್ದಾನೆ. ಈ ಅಭಿಪ್ರಾಯವನ್ನೇ ಪ್ರತಿಪಾದಿಸುತ್ತ ಈ ಸಂಸ್ಕೃತಿಯ ಮೂಲವನ್ನು ಭಾರತವನ್ನು ಬಿಟ್ಟು ಅನ್ಯ ಪ್ರದೇಶಗಳಲ್ಲಿ ಹುಡುಕುವುದು ಅಸಂಭವವೆಂದು ಸ್ಟುವರ್ಟ್ ಪಿಗ್ಗಾಟ್ ಹೇಳಿದ್ದಾನೆ. ಭಾರತ ಮೂಲವನ್ನು ವಿರೋಧಿಸಿ ಹೇಳಿಕೆ ನೀಡಿದವರಲ್ಲಿ ಪ್ರಥಮ ವಿದ್ವಾಂಸನೆಂದರೆ ಮಾರ್ಟಿಮರ್ ವೀಲರ್. ಇವನ ಪ್ರಕಾರ ನಗರವೆಂಬ ಭಾವರೂಪವನ್ನು ಸಿಂಧೂ–ಸರಸ್ವತಿ ಸಂಸ್ಕೃತಿಗೆ ಮೆಸಪೊಟೇಮಿಯದಿಂದ ಆಮದು ಮಾಡಿಕೊಳ್ಳಲಾಗಿದೆ. ಮೆಸಪೊಟೇಮಿಯದ ಕಲ್ಲುಕುಟಿಗರೂ ಇಲ್ಲಿಗೆ ಬಂದು ಭವನ ನಿರ್ಮಾಣ ಕಾರ್ಯವನ್ನು ನಿರ್ದೇಶಿಸಿದ್ದರೆಂದೂ ವೀಲರ್ ಹೇಳಿದ್ದಾನೆ. ಇಂಥ ಅಭಿಪ್ರಾಯಗಳನ್ನಾಧರಿಸಿಯೇ ಸಿಂಧೂ ಸಂಸ್ಕೃತಿಯನ್ನು ಮೆಸಪೊಟೇಮಿಯ ಮೂಲದ್ದು ಅಥವಾ ಸುಮೇರಿಯ ಮೂಲದ್ದೆಂದು ಕರೆಯುವ ವಾಡಿಕೆ ಇದೆ. ಮೊದಲೇ ಸಂಶೋಧಿಸಲ್ಪಟ್ಟ ಮೆಸಪೊಟೇಮಿಯ ಸಂಸ್ಕೃತಿಯ ಅರಿವಿದ್ದ ಪೂರ್ವಗ್ರಹ ಪೀಡಿತ ಪಾಶ್ಚಾತ್ಯ ವಿದ್ವಾಂಸರು ಸಿಂಧೂ–ಸರಸ್ವತಿ ನಗರ ಸಂಸ್ಕೃತಿಯ ಉಗಮಕ್ಕೆ ಪಶ್ಚಿಮ ಏಷ್ಯ ಸಂಸ್ಕೃತಿಯೇ ಪ್ರಚೋದಕ ಶಕ್ತಿಯಾಗಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಎರಡೂ ಸಂಸ್ಕೃತಿಗಳ ನಡುವೆ ಇದ್ದ ವ್ಯಾಪಾರ ಸಂಬಂಧದ ಕುರುಹುಗಳಾಗಿ ಸಿಂಧೂ–ಸರಸ್ವತಿ ಬಯಲಿನ ಅವಶೇಷಗಳು ಮೆಸಪೊಟೇಮಿಯ ನಗರಗಳಲ್ಲಿ ದೊರೆತಿರುವುದೇ ಇಂಥ ಅಭಿಪ್ರಾಯಗಳಿಗೆ ಮುಖ್ಯ ಕಾರಣ. ಆದರೆ ಈ ಎರಡೂ ಸಂಸ್ಕೃತಿಗಳ ಸಾಮಾಜಿಕ, ಧಾರ್ಮಿಕ ಸ್ಥಿತಿಗತಿ, ಭಾಷೆ, ಲಿಪಿ ಹಾಗೂ ಇನ್ನಿತರ ಮೂಲಭೂತ ತತ್ತ್ವಗಳಲ್ಲಿ ಅಜಗಜಾಂತರ ಭೇದಗಳಿವೆ. ಉದಾ: ಮೆಸಪೊಟೇಮಿಯದ ಜಿಗ್ಗುರಾಟ್ ಮಂದಿರ ಅಥವಾ ರಾಜಗೋರಿಗಳೆಂದು ಕರೆಯುವ ಕಟ್ಟಡಗಳನ್ನು ಹೋಲುವ ಒಂದೂ ಕಟ್ಟಡ ಸಿಂಧೂ–ಸರಸ್ವತಿ ನಗರಗಳಲ್ಲಿ ಕಂಡುಬಂದಿಲ್ಲ. ಅದೇ ರೀತಿ ಮೆಸಪೊಟೇಮಿಯದಲ್ಲಿ ಸಿಂಧೂ–ಸರಸ್ವತಿ ಸಂಸ್ಕೃತಿಯ ವೈಶಿಷ್ಟ್ಯವೆಂಬಂತಿರುವ ನಗರ ರಚನೆಗಳಿಲ್ಲ. ಹೀಗೆ ಎರಡೂ ಪ್ರದೇಶಗಳಲ್ಲಿ ಸಾಂಸ್ಕೃತಿಕ ಲಕ್ಷಣಗಳ ವ್ಯತ್ಯಾಸವಿದ್ದಾಗ, ಒಂದರಿಂದ ಇನ್ನೊಂದು ಸಂಸ್ಕೃತಿ ಪ್ರಚೋದಿತ ವಾಯಿತೆಂದು ಹೇಳುವುದು ಅಸಂಗತ ಹಾಗೂ ತರ್ಕಹೀನ. ಇನ್ನೊಬ್ಬ ವಿದ್ವಾಂಸರಾದ ಎಮ್.ತೋಸಿ ಈ ಸಂಸ್ಕೃತಿಯ ಮೂಲವನ್ನು ಈಶಾನ್ಯ ಇರಾನಿನಲ್ಲಿರುವ ತುರಾನ್ ಪ್ರದೇಶಕ್ಕೆ ಕೊಂಡೊಯ್ದು, ಪ್ರ.ಶ.ಪೂ.4ನೆಯ ಸಹಸ್ರಮಾನದ ಆರಂಭಕಾಲದಲ್ಲಿ ತುರಾನ್‌ನಲ್ಲಿ ಹೊಸ ಸಾಂಸ್ಕೃತಿಕ ಘಟಕಗಳು ಉದ್ಭವಿಸಿದವು; ಇವು ಆಫ್ಘಾನಿಸ್ತಾನ ಹಾಗೂ ಬಲೂಚಿಸ್ತಾನ ದಲ್ಲಾಗಲೇ ಇದ್ದ ಸಂಸ್ಕೃತಿಗಳ ಮೇಲೆ ಪ್ರಭಾವ ಬೀರಿ (ಕಲ್ಚರಲ್ ಶಾಕ್) ಸಿಂಧೂ–ಸರಸ್ವತಿಯ ನಗರ ಜೀವನದ ವಿಕಾಸಕ್ಕೆ ಕಾರಣವಾಯಿತು. ಗ್ರೆಗರಿ ಪೊಷೆಲ್ ಮತ್ತು ಸಿ.ಸಿ.ಲ್ಯಾಂಬರ್ಗ್ ಕಾರ್ಲೋವಸ್ಕಿ ಸಿಂಧೂ–ಸರಸ್ವತಿಯ ಉಗಮ ಪ್ರೇರಣಾ ಸ್ಥಾನ ದಕ್ಷಿಣ ಇರಾನ್ ಹಾಗೂ ನೈರುತ್ಯ ಇರಾನ್‌ನಲ್ಲಿಯ ಈಳಮ್ ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಬಲೂಚಿಸ್ತಾನದ ನವಶಿಲಾಯುಗ ಮತ್ತು ತಾಮ್ರಯುಗ ಸಂಸ್ಕೃತಿ (ಪ್ರ.ಶ.ಪೂ. 7000–5000): ಭಾರತದ ಪೂರ್ವಭಾವಿ ಇತಿಹಾಸ ಸಂಸ್ಕೃತಿ ಅವಿಭಜಿತ ಭಾರತದ



ನಗರ ವಿನ್ಯಾಸ, ಮೊಹೆಂಜೋದಾರೊ

ವಾಯವ್ಯ ದಿಕ್ಕಿನಲ್ಲಿರುವ ಬಲೂಚಿಸ್ತಾನ ಪರ್ವತ ಶ್ರೇಣಿಗಳ ತಪ್ಪಲು ಪ್ರದೇಶದಲ್ಲಿ ಬೆಳೆದು ಬಂದ ನವಶಿಲಾಯುಗ ಸಂಸ್ಕೃತಿಯಿಂದ ಉಗಮವಾಗಿದೆಯೆಂಬುದು ತಿಳಿದ ವಿಷಯ. ಪ್ರ.ಶ.ಪೂ.8ನೆಯ ಸಹಸ್ರಾಬ್ದಿಯ ಆರಂಭಕಾಲದ ನವಶಿಲಾಯುಗದ ನೆಲೆಗೆ ಉದಾಹರಣೆ ಯೆಂದರೆ ಮೆಹರ್‌ಗಡ. ಈ ಶೋಧದ ಪೂರ್ವದಲ್ಲಿ ಬಲೂಚಿಸ್ತಾನದ ನವಶಿಲಾಯುಗ ಸಂಸ್ಕೃತಿಯನ್ನು ದಕ್ಷಿಣ ತುರ್ಕಮೇನಿಯ ಹಾಗೂ ಇರಾನಿನ ನವಶಿಲಾಯುಗ ಜನ್ಯವೆಂದು ಹೇಳಲಾಗುತ್ತಿತ್ತು. ಹೊಸ ಸಂಶೋಧನೆಗಳಿಂದಾಗಿ ಈಗ ವಸ್ತುಸ್ಥಿತಿ ಬದಲಾಗಿದೆ. ಇದುವರೆಗೆ ತಿಳಿದಂತೆ ಪರ್ವತಶ್ರೇಣಿಗಳಿಂದ ಕೂಡಿದ ಶುಷ್ಕ ವಾತಾವರಣವುಳ್ಳ ಬಲೂಚಿಸ್ತಾನ, ಮಧ್ಯ ಏಷ್ಯ ಹಾಗೂ ಪಶ್ಚಿಮ ಏಷ್ಯದಿಂದ ವಲಸೆಗೊಂಡ ಸಂಸ್ಕೃತಿಗಳು ಸಂಧಿಸುವ ಸಾಂಸ್ಕೃತಿಕ ಮೊಗಸಾಲೆಯಾಗಿರದೆ, ಈ ಪ್ರದೇಶ ನಿಜವಾಗಿಯೂ ಒಂದು ಸಾಂಸ್ಕೃತಿಕ ಮೂಸೆಯಂತಿದ್ದು

ಅನೇಕ ಸ್ಥಳೀಯ ನವಶಿಲಾಯುಗ ಆರಂಭಕಾಲದ ಗ್ರಾಮಗಳ ನೆಲೆಬೀಡಾಗಿತ್ತು. ಮಣ್ಪಾತ್ರೆರಹಿತ ಹಂತವುಳ್ಳ ಮೆಹರ್‌ಗಡ ನವಶಿಲಾಯುಗ ಸಂಸ್ಕೃತಿ ಅವಿಚ್ಛಿನ್ನವಾಗಿ ವಿವಿಧ ಹಂತಗಳಲ್ಲಿ ಪ್ರಗತಿ ಸಾಧಿಸಿ ಆದಿಹರಪ್ಪ ಸಂಸ್ಕೃತಿಯ ಉತ್ಪತ್ತಿಗಿಂತಲೂ ಮೊದಲಿನ ಕಾಲವಾದ ಪ್ರ.ಶ.ಪೂ.4ನೆಯ ಸಹಸ್ರಾಬ್ದಿಯ ಮಧ್ಯಾವಧಿಯವರೆಗೆ ಬೆಳೆದು, ಇಲ್ಲಿಂದಲೇ ಮುಂದೆ ಆದಿ ಸಿಂಧೂ–ಸರಸ್ವತಿ ಸಂಸ್ಕೃತಿ ಜನ್ಮತಳೆದು, ಕ್ರಮೇಣವಾಗಿ ಅದ್ಭುತವಾದ ನಗರ ಸಂಸ್ಕೃತಿಯಾಗಿ ಬೆಳೆಯಿತು.

1950ರಲ್ಲಿ ಫೇರ್ ಸರ್ವಿಸ್ ಕ್ವೆಟ್ಟದ ಬಳಿಯಿರುವ ಕಿಲೆಗುಲ್‌ಮೊಹಮ್ಮದ್ ನೆಲೆಯನ್ನು ಅಗೆದಾಗ ಮಣ್ಪಾತ್ರೆರಹಿತ ನವಶಿಲಾಯುಗದ ಪ್ರಥಮ ಹಂತದಲ್ಲಿ ಗುಡಿಸಲುಗಳು, ಸಾಕುಪ್ರಾಣಿಗಳು ಹಾಗೂ ವನ್ಯಮೃಗಗಳ ಅಸ್ಥಿ ಅವಶೇಷಗಳು ದೊರೆತವು. ಇಂಗಾಲ–14ರ ವಿಧಾನದಿಂದ ಇದು ಪ್ರ.ಶ.ಪೂ.4000 ವರ್ಷದ್ದೆಂದು ನಿಷ್ಕರ್ಷಿಸಲಾಯಿತು. ಇರಾನಿನ ನವಶಿಲಾಯುಗದ ಆರಂಭಿಕ ಕಾಲಮಾನ ಪ್ರ.ಶ.ಪೂ.7000ವಾಗಿರುವುದರಿಂದ ಕಿಲೆಗುಲ್‌ಮೊಹಮ್ಮದ್ ನೆಲೆಯ ಮೂಲ ಇರಾನ್ ಆಗಿರಬೇಕೆಂದು ತರ್ಕಿಸಲಾಯಿತು. ಇದೇ ರೀತಿ ಕಿಲೆಗುಲ್‌ಮೊಹಮ್ಮದ್ 2 ಮತ್ತು 3ನೆಯ ಹಂತಗಳಲ್ಲಿ ದೊರೆತ ವರ್ಣಚಿತ್ರಿತ ಮಣ್ಪಾತ್ರೆಗಳು ಹಾಗೂ ಬಲೂಚಿಸ್ತಾನದಲ್ಲಿಯ ನವಶಿಲಾಯುಗ–ತಾಮ್ರಶಿಲಾಯುಗದ ಇನ್ನೊಂದು ನೆಲೆಯಾದ ಟೋಗೋದಲ್ಲಿಯ ಕ್ಯಾಪ್ರಿಡ್ ಹಾಗೂ ಪಕ್ಷಿ ವರ್ಣಚಿತ್ರಗಳನ್ನೊಳಗೊಂಡ ಮಣ್ಪಾತ್ರೆಗಳು ಮೆಹರ್‌ಗಡ 2ನೆಯ ಹಂತದ ಮಣ್ಪಾತ್ರೆಸಹಿತ ನವಶಿಲಾಯುಗ ಹಂತದಲ್ಲಿಯೂ ಕಾಣಸಿಗುತ್ತವೆ. ಇಂತಹ ವರ್ಣಚಿತ್ರವುಳ್ಳ ಪಾತ್ರೆಗಳನ್ನು ದಕ್ಷಿಣ ಆಫ್ಘಾನಿಸ್ತಾನದ ಅಷ್ಟೇ ಪ್ರಾಚೀನ ನೆಲೆಯಾದ ಮುಂಡಿಗಾಕ್‌ನಲ್ಲಿಯೂ ದಕ್ಷಿಣ ತುರ್ಕಮೇನಿಯದ ನಮಝುಗಾದ 2 ಮತ್ತು 3ನೆಯ ಹಂತದಲ್ಲಿಯೂ ಕಾಣಬಹುದು. ಇದರಿಂದಾಗಿ ದಕ್ಷಿಣ ತುರ್ಕಮೇನಿಯದಿಂದ ಕೆಲವು ವಲಸೆಗಾರರು ಮೊದಲು ಮುಂಡಿಗಾಕ್ ಸೇರಿ ಅನಂತರ ಕ್ವೆಟ್ಟ ಪ್ರದೇಶವನ್ನು ತಲುಪಿದರೆಂದು ತರ್ಕಿಸಲಾಯಿತು. ಇದೇ ಜನರೇ ಪ್ರ.ಶ.ಪೂ.3000ದಲ್ಲಿ ಕಂಡುಬರುವ ಕ್ವೆಟ್ಟ ಚಿತ್ರಿತ ಮಣ್ಪಾತ್ರೆ ಸಂಸ್ಕೃತಿಯ ಕರ್ತೃಗಳೆಂದು ನಂಬಲಾಯಿತು. ನಮಝುಗಾ 3ನೆಯ ಹಂತದ ಜನರೇ ಬಲೂಚಿಸ್ತಾನಕ್ಕೆ ವಾಸ್ತುಕಲೆ, ಲೋಹವಿಜ್ಞಾನ, ಮಾನವಗೊಂಬೆಗಳ ನಿರ್ಮಾಣ ಹಾಗೂ ಮುದ್ರೆಗಳನ್ನು ಪರಿಚಯಿಸಿದರೆಂದು ಹೇಳಲಾಯಿತು.

ಆದರೆ ಮೆಹರ್‌ಗಡ ನೆಲೆಯ ಉತ್ಖನನದಿಂದ ದೊರೆತ ಇಂಗಾಲ–14 ಕಾಲಗಣನೆಯಂತೆ ಕೃಷಿ ಹಾಗೂ ಪಶುಪಾಲನೆಯನ್ನೊಳಗೊಂಡ ಮಣ್ಪಾತ್ರೆರಹಿತ ನವಶಿಲಾಯುಗದ ಕಾಲ ಪ್ರ.ಶ.ಪೂ.7000ಕ್ಕಿಂತಲೂ ಪೂರ್ವದ್ದೆಂದು ಹಾಗೂ ಇರಾನ್ ಅಥವಾ ತುರ್ಕಮೇನಿಯದ ನೆಲೆಗಳ ಸಂಸ್ಕೃತಿಗೆ ಇದು ಋಣಿಯಾಗಿಲ್ಲವೆಂಬುದನ್ನೂ ಸಿದ್ಧಪಡಿಸಲಾಗಿದೆ. ಈ ರೀತಿಯಾಗಿ ಸ್ವತಂತ್ರವಾಗಿ ಬೆಳೆದು ಬಂದ ನವಶಿಲಾಯುಗ ಹಾಗೂ ತಾಮ್ರಶಿಲಾಯುಗಕ್ಕೆ ಸಂಬಂಧಿಸಿದ ಗ್ರಾಮೀಣ ಸಂಸ್ಕೃತಿಯ ಅನೇಕ ನೆಲೆಗಳನ್ನು ಬಲೂಚಿಸ್ತಾನದಲ್ಲಿ ವಿಭಿನ್ನ ಭೌಗೋಳಿಕ ಪರಿಸರಗಳಲ್ಲಿ ಶೋಧಿಸಿ, ಇವುಗಳ ಉತ್ಖನನ ಮಾಡಲಾಗಿದೆ. ಇವುಗಳಲ್ಲಿ ಪ್ರಮುಖ ನೆಲೆಗಳು ಇಂತಿವೆ: ಕ್ವೆಟ್ಟ ಬಯಲಿನಲ್ಲಿರುವ ಕಿಲೆಗುಲ್‌ಮೊಹಮ್ಮದ್ ಮತ್ತು ದಾಂಬ್‌ಸಾದಾತ್ ನೆಲೆಗಳ ಇಂಗಾಲ 14 ಕಾಲಮಾನ ಪ್ರ.ಶ.ಪೂ.6–5ನೆಯ ಸಹಸ್ರಾಬ್ದಿ; ಜೋಬ್ ಬಯಲಿನಲ್ಲಿರುವ ರಾಣಾಘುಂಡೈ, ಪೆರಿಯಾನೊ ಘುಂಡೈ ಮತ್ತು ಸುರ್‌ಜಂಗಾಲ್. ಇವುಗಳಲ್ಲಿ ರಾಣಾಘುಂಡೈ ಕಾಲಮಾನ ಪ್ರ.ಶ.ಪೂ.5ನೆಯ ಸಹಸ್ರಾಬ್ದಿ; ದಕ್ಷಿಣಮಧ್ಯ ಬಲೂಚಿಸ್ತಾನದಲ್ಲಿರುವ ನಾಲ್ ನೆಲೆಯ ಕಾಲಮಾನ ಪ್ರ.ಶ.ಪೂ.5ನೆಯ ಸಹಸ್ರಾಬ್ದಿಯ ಉತ್ತರಕಾಲ; ಲಾಸ್‌ಬೆಲಾ ಮೈದಾನ ಪ್ರದೇಶದಲ್ಲಿರುವ ಬಾಲಾಕೋಟ್‌ನ ಕಾಲಮಾನ ಪ್ರ.ಶ.ಪೂ.5ನೆಯ ಸಹಸ್ರಾಬ್ದಿಯ ಅಂತ್ಯಕಾಲ; ಇರಾನಿನ ಸರಹದ್ದಿನಲ್ಲಿರುವ ತುರ್ಬತ್ ನೀರಿನ ಚಿಲುಮೆಯ ಪಕ್ಕದಲ್ಲಿರುವ ಮಿರಿ ನೆಲೆಯ ಕಾಲಮಾನ ಪ್ರ.ಶ.ಪೂ.6ನೆಯ ಸಹಸ್ರಾಬ್ದಿ.

**ವರ್ಣಚಿತ್ರಿತ ಮಣ್ಣಿನ ಲೋಟಗಳು, ಜೋಬ್**

ಇದುವರೆಗೆ ಶೋಧಿಸಿದ ಬಲೂಚಿಸ್ತಾನದ ನವಶಿಲಾಯುಗದ ಅತ್ಯಂತ ಪ್ರಾಚೀನ ಗ್ರಾಮೀಣ ನೆಲೆಯೆಂದರೆ ಮೆಹರ್‌ಗಡ ಬಲೂಚಿಸ್ತಾನದ ಉತ್ತರಭಾಗದಲ್ಲಿರುವ ಕ್ವೆಟ್ಟಬಯಲಿನಿಂದ ಹರಿದು ಬರುವ ಬೋಲನ್ ನದಿ ದಕ್ಷಿಣದಲ್ಲಿ ಕಚ್ಛ್ ಮೈದಾನವನ್ನು ಸೇರುತ್ತದೆ. ಬೋಲನ್ ಕಣಿವೆಮಾರ್ಗ ಬಲೂಚಿಸ್ತಾನದ ಪರ್ವತ ಶ್ರೇಣಿಗಳ ಮತ್ತು ಸಿಂಧೂ ಮೈದಾನ ಪ್ರದೇಶವನ್ನು ಜೋಡಿಸುವ ಜೀವನಾಡಿಯಾಗಿದೆ. ಈ ನದಿಯ ಫಲವತ್ತಾದ ಮುಖಜಭೂಮಿಯಂತಿರುವ ಈ ಮೈದಾನ ಭಾಗವನ್ನು ಬಲೂಚಿಸ್ತಾನದ ಅಕ್ಷಯ ಪಾತ್ರೆ ಎಂದು ಕರೆಯುತ್ತಾರೆ. ಇಂಥ ಆಯಕಟ್ಟಿನ ಸ್ಥಾನದಲ್ಲಿ ಮೆಹರ್‌ಗಡ ನೆಲೆ ಇದೆ. ನವಶಿಲಾಯುಗದಿಂದ ಬೆಳೆದುಬಂದ ಬಲೂಚಿಸ್ತಾನದ ವಿಭಿನ್ನ ಸಾಂಸ್ಕೃತಿಕ ಹಂತಗಳುಳ್ಳ ನೆಲೆಗಳಲ್ಲಿ ಮೆಹರ್‌ಗಡ ಒಂದು ಮಾದರಿಯಾಗಿದೆ. ಸು.200 ಹೆ. ಜಮೀನಿನ ಮೇಲೆ ಬೆಳೆದುನಿಂತ ಮೆಹರ್‌ಗಡ ದಿಬ್ಬ ಹಾಗೂ ಅದರ ಪಕ್ಕದಲ್ಲಿಯೇ ಇರುವ ನೌಶಾರೊ ಹಾಗೂ ಪಿರಾಕ್ (**ನೋಡಿ**) ಎಂಬ ಇನ್ನೆರಡು ನೆಲೆಗಳನ್ನು ಒಟ್ಟಿಗೆ ಫ್ರೆಂಚ್ ಪುರಾತತ್ತ್ವ ನಿಯೋಗದ ಜೆ.ಎಫ್.ಜಾರಿಜ್ ನೇತೃತ್ವದಲ್ಲಿ ಅಗೆಯಲಾಯಿತು. ಮೆಹರ್‌ಗಡದಲ್ಲಿ ಪ್ರ.ಶ.ಪೂ.7ನೆಯ ಸಹಸ್ರಾಬ್ದಿಯಷ್ಟು ಹಿಂದಿನಿಂದಲೇ ನವಶಿಲಾಯುಗದ ಆರಂಭಿಕ ನಗರ ಜೀವನ ಹಾಗೂ ವಿಕಸಿತ ನಗರ ಜೀವನ ಕಾಣಿಸಿಕೊಂಡು, ಪ್ರ.ಶ.ಪೂ.ಸು. 1ನೆಯ ಸಹಸ್ರಾಬ್ದಿಯಷ್ಟೊತ್ತಿಗೆ ನಗರ ಜೀವನಶೈಲಿ ಸಂಪೂರ್ಣವಾಗಿ ಬೆಳೆದುಬಂದಿರುವುದನ್ನು ಉತ್ಖನನದಿಂದ ಬೆಳಕಿಗೆ ತರಲಾಗಿದೆ.

ತಾಮ್ರ–ಶಿಲಾಯುಗದ ಗ್ರಾಮಗಳು (ಪ್ರ.ಶ.ಪೂ.4000): ಪ್ರ.ಶ.ಪೂ.4ನೆಯ ಸಹಸ್ರಾಬ್ದಿಯ ಆರಂಭಕಾಲದಲ್ಲಿ ಬಲೂಚಿಸ್ತಾನದ ಪರ್ವತಶ್ರೇಣಿಗಳ ತಪ್ಪಲು ಪ್ರದೇಶಗಳಲ್ಲಿ ಹಾಗೂ ಸಿಂಧೂ–ಸರಸ್ವತಿ ಮೈದಾನ ಪ್ರದೇಶದಲ್ಲಿ ಬಹಳಷ್ಟು ಬದಲಾವಣೆ ಕಂಡುಬರುತ್ತದೆ. ಬಹುಶಃ ಮುಂಬರುವ ನಗರ ಸಂಸ್ಕೃತಿಯ ಬೀಜಾಂಕುರದ ಚಿಹ್ನೆಗಳಂತೆ ಜನಸಂಖ್ಯೆಯಲ್ಲಿ ವೃದ್ಧಿ ಹಾಗೂ ವ್ಯಾಪಕ ರೂಪದಲ್ಲಿ ಕೃಷಿ ಪ್ರಸರಣವಾಗಿ ಸಿಂಧೂ–ಸರಸ್ವತಿ ಬಯಲು ಪ್ರದೇಶದಲ್ಲಿ ತಾಮ್ರ–ಶಿಲಾಯುಗದ ಗ್ರಾಮೀಣ ನೆಲೆಗಳು ಉದ್ಭವಿಸಿದವು. ಬಾಲಾಕೋಟ್, ಆಮ್ರಿ I, ಗಾಂಧಿಶಹಾ I, ಜಲೀಲಪುರ್ I, ಹರಪ್ಪ I ಮತ್ತು ಚೋಲಿಸ್ತಾನದಲ್ಲಿರುವ ಬಹವಾಲ್‌ಪುರ್ ಪ್ರದೇಶ ಇತ್ಯಾದಿ ಹಾಗೂ ಭಾರತದ ಹರಿಯಾಣ ರಾಜ್ಯದಲ್ಲಿರುವ ಭಿರಡಾಣ 1ಎ ಮತ್ತು ಕುಣಾಲ್ 1ಎ ನೆಲೆಗಳಲ್ಲಿ ಇಂಥ ಸಂಸ್ಕೃತಿಯನ್ನು ನೋಡಬಹುದು. ಗುಜರಾತ್ ರಾಜ್ಯದಲ್ಲಿ ಕೂಡ ಇದೇ ಸಮಯದಲ್ಲಿ ತಾಮ್ರ–ಶಿಲಾಯುಗದ ವಸತಿಗಳು ಬೆಳೆದುಬಂದಿದ್ದವು. ಉತ್ತರ ಗುಜರಾತಿನಲ್ಲಿರುವ ಲೋಟೇಶ್ವರ ಹಾಗೂ ದಕ್ಷಿಣ ಗುಜರಾತಿನ ಪಾದ್ರಿ ಇದಕ್ಕೆ ಉತ್ತಮ ಉದಾಹರಣೆಗಳು. ಇದುವೇ ಮುಂಬರುವ ಸಿಂಧೂ–ಸರಸ್ವತಿ ಸಂಸ್ಕೃತಿಯ ನಿರ್ಣಾಯಕ ಹಂತವಾಗಿದ್ದರಿಂದ ಇದನ್ನು ಕೃಷಿ ಅಭಿವೃದ್ಧಿ ಹಂತ ಮತ್ತು ಆರಂಭಿಕ ಆದಿ ಹರಪ್ಪ ಕಾಲವೆಂದು ಎಫ್.ಆರ್. ಅಲ್ಚಿನ್ ಕರೆದರೆ, ಜಿಮ್ ಷಾಫರ್ ಇದನ್ನು ಸ್ಥಳೀಯತೆ ಎಂದು ಸಂಬೋಧಿಸಿದ್ದಾರೆ. ಎಸ್.ಪಿ. ಗುಪ್ತ ಅವರು ಈ ಕಾಲವನ್ನು ರೂಪಧಾರಣ ಕಾಲ ಎಂದು ಕರೆದಿದ್ದಾರೆ.

ಕೃಷಿ ಆಧರಿತವಾದ ಈ ಸಂಕ್ರಮಣ ಸಂಸ್ಕೃತಿಯನ್ನು ದಕ್ಷಿಣ ಬಲೂಚಿಸ್ತಾನದ ಮಕ್ರಾನ್ ಕರಾವಳಿಯ ಬಾಲಾಕೋಟ್ ಹಾಗೂ ಸಿಂಧೂ ಕೆಳದಂಡೆಯ ಆಮ್ರಿಯಲ್ಲಿ ಕಾಣಬಹುದು. ಬಾಲಾಕೋಟ್ I ಪ್ರ.ಶ.ಪೂ.ಸು.4ನೆಯ ಸಹಸ್ರಾಬ್ದಿಯ ಪೂರ್ವಾರ್ಧ ಕಾಲದ ಪ್ರಥಮ ಕೃಷಿ ಆಧರಿತ ನೆಲೆಯಾಗಿದ್ದು, ಇಲ್ಲಿ ಜವೆ ಧಾನ್ಯ, ದನಕರು, ಕುರಿ ಮತ್ತು ಆಡುಗಳ ಅಸ್ಥಿ ಅವಶೇಷಗಳು ದೊರೆತಿವೆ. ಆದರೆ ಆಮ್ರಿ 1ಎ ಆರಂಭ ಕಾಲ ಪ್ರ.ಶ.ಪೂ.ಸು.3500 ಆಗಿದ್ದು ಇಲ್ಲಿಯ ಮಣ್ಪಾತ್ರೆಗಳು ಶೈಲಿ, ಆಕಾರಗಳಲ್ಲಿ ಮೆಹರ್‌ಗಡದ 3, 4 ಮತ್ತು 5ನೆಯ ಹಂತದಲ್ಲಿರುವ ಮಣ್ಪಾತ್ರೆಗಳನ್ನು ಹಾಗೂ ಅವುಗಳ ಮೇಲಿರುವ ಜ್ಯಾಮಿತೀಯ ವರ್ಣಚಿತ್ರಗಳನ್ನು ಹೋಲುತ್ತವೆ. ಇದೇ ರೀತಿಯಾಗಿ ನವಶಿಲಾಯುಗದ ತಟ್ಟೆ ಸಮತಲ ಮಾಡಿದ ನೆಲಗಟ್ಟು ಹಾಗೂ ಅವುಗಳಲ್ಲಿ ಧಾನ್ಯ ಶೇಖರಣೆಯ ಗುಂಡಿಗಳುಳ್ಳ ವಾಸಸ್ಥಾನಗಳು ಗೋಮಲ್ ಮತ್ತು ಬನ್ನುಬಯಲುಗಳಲ್ಲಿ ಕಾಣಿಸಿಕೊಂಡವು. ಕೈಯಿಂದ ಹಾಗೂ ತಿಗುರಿಯಿಂದ ತಯಾರಿಸಿದ ಸಾದಾ ಹಾಗೂ ವರ್ಣಚಿತ್ರಿತ ಕೆಂಪು, ನಸುಹಳದಿ ಹಾಗೂ ಬೂದುಬಣ್ಣದ ಮಣ್ಪಾತ್ರೆಗಳು ಬಳಕೆಗೆ ಬಂದುವು. ಇಂಥ ಗ್ರಾಮಗಳ ಉಗಮ ಬನ್ನುಬಯಲಿನ ಲೇವಾನ್ ಹಾಗೂ ಗೋಮಲ್‌ಬಯಲಿನ ಗುಮ್ಲಾದಲ್ಲಿ ಅಲ್ಲದೆ ವಾಯವ್ಯ ಪ್ರಾಂತದ ಇನ್ನುಳಿದ ಭಾಗಗಳಲ್ಲಿಯೂ ಆಯಿತು. ಶಿಲಾ ಅಲಗುಗಳು, ಚಕ್ಕೆಗಳು, ಉಜ್ಜಿ ಹೊಳಪು ಮಾಡಿದ ಕೊಡಲಿಗಳು, ಬಾಣದ ಮೊನೆ ಇತ್ಯಾದಿ ಉಪಕರಣಗಳ ಬಳಕೆ ಸರ್ವೇಸಾಮಾನ್ಯವಾಗಿತ್ತು. ಲೇವಾನ್ ನೆಲೆಯಲ್ಲಿ ನವಶಿಲಾಯುಗ ಹಂತದ ಅನಂತರ ಇತರ ಸಂಸ್ಕೃತಿಯ ಅವಶೇಷಗಳಿಲ್ಲ. ಆದರೆ ಗುಮ್ಲಾದಲ್ಲಿ ತಾಮ್ರದ ಉಪಕರಣಗಳು, ಹಸಿಮಣ್ಣಿನ ಹಾಗೂ ಅದರಿಂದ ತಯಾರಿಸಿದ ಇಟ್ಟಿಗೆಗಳ ಮನೆಗಳು, ತಿಗುರಿಯಿಂದ ತಯಾರಿಸಿದ ಸಾದಾ ಹಾಗೂ ವರ್ಣಚಿತ್ರಿತ ಮಣ್ಪಾತ್ರೆಗಳು ಮುಂತಾದವುಗಳಿಂದ ತಾಮ್ರ–ಶಿಲಾಯುಗದಲ್ಲಿ ಗ್ರಾಮದ ಬೆಳವಣಿಗೆ ಮುಂದುವರೆಯುತ್ತದೆ. ಬನ್ನುವಿನ ದಕ್ಷಿಣ ದಿಶೆಯಲ್ಲಿರುವ ತರ್ಕಾಯ್ ಕೋಟೆ ನಿವೇಶನದಲ್ಲಿಯೂ ಇದೇ ಸ್ಥಿತಿಯನ್ನು ನೋಡಬಹುದು.

ಹಾಕ್ರ ಮಣ್ಪಾತ್ರೆ (ಹಾಕ್ರವೇರ್ಸ್ ಸಂಸ್ಕೃತಿ): ಸಟ್ಲೆಜ್ ದಕ್ಷಿಣಕ್ಕೆ ಪಾಕಿಸ್ತಾನದ ಚೋಲಿಸ್ತಾನ ಮರುಭೂಮಿ ಮತ್ತು ಭಾರತ–ಪಾಕಿಸ್ತಾನ ಗಡಿಯಿಂದ ಪೂರ್ವಕ್ಕೆ (ರಾಜಸ್ತಾನ, ಹರಿಯಾಣ ರಾಜ್ಯಗಳು) ಇರುವ ಪ್ರದೇಶ ಒಂದು ವಿಭಿನ್ನ ಪ್ರಾಂತದಂತಿದೆ. ಇಲ್ಲಿ ಋಗ್ವೇದದಲ್ಲಿ ವಿಶೇಷವಾಗಿ ಪ್ರಶಂಸಿಸಲ್ಪಟ್ಟ ಸರಸ್ವತಿ ನದಿಯ ಬತ್ತಿಹೋದ ಪಾತ್ರವಿದೆ. ಪಶ್ಚಿಮಕ್ಕೆ ಸಿಂಧೂ ನದಿ ಜಾಲ ಮತ್ತು ಪೂರ್ವದಲ್ಲಿ ಗಂಗಾ–ಯಮುನ ನದಿ ಹರಿವಿನ ನಡುವೆ ಸರಸ್ವತಿ ಬಯಲು ಒಂದು ಮಹತ್ತ್ವಪೂರ್ಣ ಜಲಾನಯನ ಭಾಗವಾಗಿತ್ತು. 1970ರ ದಶಕದ ಆರಂಭದಲ್ಲಿ ಚೋಲಿಸ್ತಾನ ಪ್ರದೇಶದಲ್ಲಿ ಸರಸ್ವತಿ ನದಿಪಾತ್ರದ ಸುತ್ತಮುತ್ತಲಿನ ನೆಲೆಗಳಲ್ಲಿ (99) ವಿಶಿಷ್ಟ ಪ್ರಕಾರದ ವಿವಿಧ ಮಣ್ಪಾತ್ರೆಗಳನ್ನು ಪಾಕಿಸ್ತಾನದ ಪುರಾತತ್ತ್ವಜ್ಞ ರಫೀಕ್ ಮುಗಲ್

ಕಂಡುಹಿಡಿದ ಈ ಪಾತ್ರೆಗಳ ಸಮೂಹಕ್ಕೆ ಹಾಕ್ರವೇರ್ (ಹಾಕ್ಡವೇರ್)ಎಂದು ನಾಮಕರಣ ಮಾಡಿದ. ಏಕೆಂದರೆ ಬತ್ತಿ ಹೋದ ಸರಸ್ವತಿ ನದಿಯನ್ನು ಚೋಲಿಸ್ತಾನ ಭಾಗದಲ್ಲಿ ಹಾಕ್ರ ಎಂದು ಕರೆಯುತ್ತಾರೆ. ಈ ನೆಲೆಗಳು 0.1-30 ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದ್ದು, ಹೆಚ್ಚಾಗಿ ನದಿಯಿಂದ ಉಂಟಾದ ಕೆಸರಿನ ಸಮತಟ್ಟಾದ ಭಾಗದಲ್ಲಿವೆ(ಮಡ್ ಫ್ಲ್ಯಾಟ್); ಆದರೆ ಕೆಲವೊಂದು ನೆಲೆಗಳು ಹೂತುಹೋದ ಮರಳು ದಿಬ್ಬಗಳ ಮೇಲಿವೆ. ಇಲ್ಲಿ ಪ್ರಾಪ್ತವಾದ ಅವಶೇಷಗಳೆಂದರೆ ಸುಟ್ಟಮಣ್ಣಿನ ದನಕರುಗಳ ಗೊಂಬೆಗಳು, ಸುಟ್ಟ ಮಣ್ಣಿನ ಹಾಗೂ

ಹಾಕ್ರ ಸಂಸ್ಕೃತಿ ಮಣ್ಪಾತ್ರೆಗಳು

ಶಂಖದ ಬಳೆಗಳು, ಬೀಸುವ ಕಲ್ಲು, ತಾಮ್ರದ ತುಣುಕುಗಳು ಮಣ್ಪಾತ್ರೆ ಸಂಸ್ಕೃತಿಯ ಸೂಕ್ಷ್ಮಶಿಲೋಪಕರಣಗಳು. ಸದ್ಯಕ್ಕೆ ಹಾಕ್ರ ಗ್ರಾಮಗಳು ಸಿಂಧೂ-ಸರಸ್ವತಿ ನದಿ ಪ್ರದೇಶದಲ್ಲಿಯ ಅತ್ಯಂತ ಪ್ರಾಚೀನ ಹಳ್ಳಿಗಳಾಗಿವೆ. ಆದರೆ ಇದುವರೆಗೆ ಚೋಲಿಸ್ತಾನದ ಯಾವ ನೆಲೆಯನ್ನೂ ಅಗೆದಿಲ್ಲ. ಆದಾಗ್ಯೂ ಪಾಕಿಸ್ತಾನದ ಪಂಜಾಬದಲ್ಲಿರುವ ಮುಲ್ತಾನ ನಗರದ ಸಮೀಪ ಹಾಗೂ ರಾವಿನದಿ ಮೈದಾನದಲ್ಲಿರುವ ಜಲೀಲಪುರದಲ್ಲಿ ನಡೆಸಿದ ಉತ್ಖನನದಿಂದ ಹಾಕ್ರ ಮಣ್ಪಾತ್ರೆ ಸಂಸ್ಕೃತಿ ಆದಿಹರಪ್ಪ ಕಾಲಕ್ಕಿಂತಲೂ ಮೊದಲಿನ ಸ್ಥಳೀಯ ಸಂಸ್ಕೃತಿ ಎಂದು ಸಿದ್ಧಪಡಿಸಲಾಯಿತು. ಜಲೀಲಪುರದ ಪ್ರಥಮ ಹಂತದಲ್ಲಿ ಹಾಕ್ರಪಾತ್ರೆಗಳೊಡನೆ ಬಂಗಾರ, ಹವಳ ಹಾಗೂ ಇನ್ನಿತರ ಅರೆಪ್ರಶಸ್ತ ಕಲ್ಲಿನ ಮಣಿಗಳು, ಗಿಲಾವು ಮಾಡಿದ ನೆಲಗಟ್ಟುಗಳು, ಚರ್ಟನ ಅಲಗುಗಳು, ಮೀನಿನ ಬಲೆಗಳನ್ನು ಮುಳುಗಿಸಲು ಕಟ್ಟುವ ಸುಟ್ಟಮಣ್ಣಿನ ಉದ್ದನೆ ಮಣಿಗಳು, ಎಲುಬಿನ ಮೊನೆಗಳು ದೊರೆತಿವೆ.

ಇತ್ತೀಚೆಗೆ ಹರಪ್ಪ ನೆಲೆಯಲ್ಲಿರುವ ಎ-ಬಿ ಹೆಸರಿನ ದಿಬ್ಬದಲ್ಲಿ ಮೆಡೋಸ್ ಮತ್ತು ಕೆನೋಯರ್ ನಡೆಸಿದ ಉತ್ಖನನದಲ್ಲಿ ಎರಡು ಹೊಸ ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದ್ದಾರೆ. ಮೊದಲನೆಯ ಹಂತವನ್ನು ರಾವಿ ಎಂದು ಕರೆದಿದ್ದಾರೆ. ಎರಡನೆಯ ಹಂತ ಕೋಟ್‌ದಿಜಿ ಅಥವಾ ಆದಿಹರಪ್ಪ ಹಂತವಾಗಿದೆ. ಇಲ್ಲಿಯ ರಾವಿ ಹಂತವೇ ಸರಸ್ವತಿಬಯಲಿನ ಹಾಕ್ರ ಮಣ್ಪಾತ್ರೆ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಈ ಕಾಲದ ಮನೆಗಳಲ್ಲಿ ಮರದ ಕಂಬಗಳಿದ್ದು ಸುತ್ತಲೂ ಹುಲ್ಲು ಮಣ್ಣು ಮೆತ್ತಿದ ತಡಿಕೆಗೋಡೆಯಿತ್ತು. ಇಂಥ ಮನೆಗಳಿಂದ ಪ್ರಾಪ್ತವಾದ ಅವಶೇಷಗಳೆಂದರೆ ವರ್ಣಚಿತ್ರಿತ ಮಣ್ಪಾತ್ರೆಗಳು, ಕಂಠಹಾರದ ಮಣಿಗಳು, ಎಲುಬು ಹಾಗೂ ಕಲ್ಲಿನಿಂದ ತಯಾರಿಸಿದ ಉಪಕರಣಗಳು, ಸುಟ್ಟಮಣ್ಣಿನ ತಕಲಿಗಳು, ಸುಟ್ಟಮಣ್ಣಿನ ಹಾಗೂ ಶಂಖದ ಬಳೆಗಳು. ಮಣ್ಪಾತ್ರೆಗಳಲ್ಲಿಯ ಆಕರ್ಷಕ ವರ್ಣಚಿತ್ರಗಳೆಂದರೆ ಮೀನಿನ ರೇಖಾಚಿತ್ರ, ಅಶ್ವತ್ಥ ಎಲೆ, ಒಂದನ್ನೊಂದು ಛೇದಿಸುವ ವರ್ತುಲಗಳು, ಬಲೆ ಹಾಗೂ ಪಕ್ಷಿಗಳ ಚಿತ್ರಗಳು. ಬಹುವರ್ಣಗಳಿಂದ ಬಿಡಿಸಿದ ಚಿತ್ರಗಳೂ ಇವೆ. ಸ್ಟಿಯಟೈಟ್ ಮಣಿಗಳ ಉದ್ಯಮ ಇದ್ದುದಲ್ಲದೆ ಸುಟ್ಟಮಣ್ಣಿನ, ಕಾರ್ನೇಲಿಯನ್, ಪಟ್ಟೆ ಅಗೇಟ್, ವಿಭಿನ್ನ ವರ್ಣದ ಜಾಸ್ಪರ್, ವೈಡೂರ್ಯ ಹಾಗೂ ಅಮೆಝೊನೈಟ್ ಮಣಿಗಳನ್ನು ಇಲ್ಲಿ ತಯಾರಿಸುತ್ತಿದ್ದರು. ರೇಖಾಚಿತ್ರಗಳನ್ನೊಳಗೊಂಡ ಎಲುಬಿನ ಮುದ್ರೆಗಳೂ ದೊರೆತಿವೆ. ಎಲುಬಿನ ಸೂಜಿ ಹಾಗೂ ಮೊನೆಗಳು ಸರ್ವೇಸಾಮಾನ್ಯ. ವಿಶೇಷವೆಂದರೆ ಈ ಕಾಲದಲ್ಲಿಯ ಮಣ್ಪಾತ್ರೆಗಳ ಮೇಲೆ ವಿವಿಧ ಗೀರುಗೀಟುಗಳಿವೆ. ಇಂಥ ಸಂಕೇತಗಳೇ ಆದಿಹರಪ್ಪ ಹಾಗೂ ಪ್ರೌಢ ಹರಪ್ಪ ಸಂಸ್ಕೃತಿಯ ಲಿಪಿಗಳ ಮೂಲರೂಪಗಳೆಂಬ ಅಭಿಪ್ರಾಯವಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸರಸ್ವತಿ ನದಿ ಬಯಲಿನಲ್ಲಿ ನಡೆಸಿದ ಅನೇಕ ಪುರಾತಾತ್ತ್ವಿಕ ಅನ್ವೇಷಣೆ ಹಾಗೂ ಉತ್ಖನನದಿಂದ ಹಾಕ್ರ ಮಣ್ಪಾತ್ರೆ ಸಂಸ್ಕೃತಿಯ ಅವಶೇಷಗಳು ಕಾಲಕ್ರಮದಲ್ಲಿ ಆದಿಹರಪ್ಪ ಕಾಲಕ್ಕಿಂತ ಪೂರ್ವದ್ದೆಂದು ಹೇಳುವ ಪುರಾವೆಗಳು ದೊರಕಿರಲಿಲ್ಲ. ಹಾಕ್ರ ಮಣ್ಪಾತ್ರೆಗಳನ್ನು ಹೋಲುವ ಅನೇಕ ತುಣುಕುಗಳು ಕಾಲಿಬಂಗನ್, ಬನಾವಳಿ, ರಾಖಿಗಡಿ ಹಾಗೂ ಕುಣಾಲ್ ಉತ್ಖನನದಲ್ಲಿ ಆದಿಹರಪ್ಪ ಕಾಲದ ಅವಶೇಷಗಳೊಡನೆ ದೊರೆತಿವೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎಲ್.ಎಸ್.ರಾವ್ ಹರಿಯಾಣ ರಾಜ್ಯದಲ್ಲಿರುವ ಫತೇಹಬಾದ್ ಜಿಲ್ಲೆಯ ಭಿರಡಾಣದಲ್ಲಿರುವ ಹರಪ್ಪ ಸಂಸ್ಕೃತಿಯ ದಿಬ್ಬದಲ್ಲಿ ನಡೆಸಿದ ಉತ್ಖನನದಲ್ಲಿ (2003-2006) ಅತ್ಯಂತ ಕೆಳಭಾಗದ ಸ್ವತಂತ್ರ ಸ್ತರಗಳಿಂದ ಹಾಕ್ರ ಮಣ್ಪಾತ್ರೆಸಂಸ್ಕೃತಿಯ ಅವಶೇಷಗಳು ಪ್ರಥಮಬಾರಿಗೆ ಕಂಡುಬಂದುವು. ಈ ಉತ್ಖನನದಿಂದ ಗ್ರಾಮೀಣ ಜನಜೀವನ ಶೈಲಿಯ ಈ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗಿದೆ (**ನೋಡಿ-ಭಿರಡಾಣ**).

ಹೀಗೆ ಬಲೂಚಿಸ್ತಾನದ ಕಿರ್ಥಾರ್ ಹಾಗೂ ಸುಲೇಮಾನ್ ಪ್ರದೇಶದಲ್ಲಿ ಪ್ರ.ಶ.ಪೂ. ಸು.8-7ನೆಯ ಸಹಸ್ರಮಾನದಲ್ಲಿ ನವಶಿಲಾಯುಗ ಆರಂಭವಾಯಿತು. ಮುಂದೆ ಸು.3000 ವರ್ಷಗಳ ಅವಧಿಯಲ್ಲಿ, ಅಂದರೆ ಪ್ರ.ಶ.ಪೂ.4ನೆಯ ಸಹಸ್ರಾಬ್ದಿಯ ಮಧ್ಯಾವಧಿಯಲ್ಲಿ ಬೆಟ್ಟಗಳ ತಪ್ಪಲುಪ್ರದೇಶ ಹಾಗೂ ಸಿಂಧೂ-ಸರಸ್ವತಿ ಮೈದಾನ ಪ್ರದೇಶಗಳಲ್ಲಿ ಹಲವು ತೀವ್ರ ಪರಿವರ್ತನ ಲಕ್ಷಣಗಳು ಕಾಣಿಸಿಕೊಂಡವು. ಈ ಪರಿವರ್ತನೆಯ ದಿಶೆ ಏಕರೂಪದ ಆದಿ ಹಾಗೂ ಪ್ರೌಢ ಸಿಂಧೂ-ಸರಸ್ವತಿ ಹಂತಗಳಿಗೆ ಎಡೆಮಾಡಿಕೊಟ್ಟಿತು. ಈ ದಿಶೆಯಲ್ಲಿ ಗ್ರಾಮಗಳು ಮತ್ತು ನಗರಗಳು ಒಂದಕ್ಕೊಂದು ಪೂರಕವಾಗಿ ಪ್ರಗತಿ ಸಾಧಿಸಿದವು. ಈ ರೀತಿಯಾಗಿ ಪ್ರ.ಶ.ಪೂ.4ನೆಯ ಸಹಸ್ರಾಬ್ದಿ ಸಿಂಧೂ-ಸರಸ್ವತಿ ಸಂಸ್ಕೃತಿಯ ಉಗಮದಲ್ಲಿ ಒಂದು ಮಹತ್ತ್ವಪೂರ್ಣ ಹಾಗೂ ನಿರ್ಣಾಯಕ ಘಟ್ಟವಾಗಿದೆ.

ಆದಿ ಹರಪ್ಪ ಅಥವಾ ಆದಿ ಸಿಂಧೂ-ಸರಸ್ವತಿ ಸಂಸ್ಕೃತಿ (ಪ್ರ.ಶ.ಪೂ.3500-2800): ಬಯಲು ಪ್ರದೇಶಗಳಲ್ಲಿ ವಾಸದ ಅನುಭವ ಹಾಗೂ ಅದರಿಂದಾಗುವ ಲಾಭ ಹಾಗೂ ನದಿಪ್ರವಾಹಗಳ ಕಷ್ಟವನ್ನು ಅರಿತ ಅನಂತರ, ಹೆಚ್ಚಿನ ಸಂಖ್ಯೆಯಲ್ಲಿ ಕುಟುಂಬಗಳು ಸೇರಿ ಮಣ್ಣಿನ ಹಾಗೂ ಹಸಿ ಇಟ್ಟಿಗೆಗಳ ಎತ್ತರ ಕಟ್ಟೆಯನ್ನು ಕಟ್ಟಿ, ಅದರ ಮೇಲೆ ಮನೆಗಳನ್ನೂ ಸುತ್ತ ಕಟ್ಟೆಗೋಡೆಯನ್ನೂ ಕಟ್ಟಲು ಆರಂಭಿಸಿದರು. ಇಂಥ ಕಾರ್ಯಗಳಲ್ಲಿ ಇಡೀ ಸಮಾಜದ ಹಿತವಡಗಿದ್ದನ್ನು ತಿಳಿದ ಸಮಾಜ, ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪನ್ನು ತಮ್ಮ ಧುರೀಣರನ್ನಾಗಿ ಮಾಡಿ ಸಮಾಜಹಿತದ ದಿಶಾನಿರ್ದೇಶನಗಳನ್ನು ಅನೂಚಾನವಾಗಿ ಪಾಲಿಸಿ, ಪ್ರಗತಿ ಸಾಧಿಸಿದುದಕ್ಕೆ ಕೋಟ್‌ದಿಜಿ ಪ್ರಥಮ ಹಂತದಲ್ಲಿ ಬೆಳೆದುಬಂದ ಸುರಕ್ಷಾಕೋಟೆಗೋಡೆಯುಕ್ತ ಅನೇಕ ನೆಲೆಗಳು ಸಾಕ್ಷಿಯಾಗಿವೆ. ಆದುದರಿಂದ ಈ ಸಾಂಸ್ಕೃತಿಕ ಹಂತವನ್ನು ಆದಿಹರಪ್ಪ ಅಥವಾ ಆದಿ ಸಿಂಧೂ-ಸರಸ್ವತಿ ಸಂಸ್ಕೃತಿಯೆಂದು ಕರೆಯಲಾಗುತ್ತದೆ.

ವಿಕಾಸಗೊಂಡ ನಗರ ಸಂಸ್ಕೃತಿಯ ಪ್ರೌಢಹರಪ್ಪ ಸಂಸ್ಕೃತಿ ಪ್ರಥಮವಾಗಿ ಬೆಳಕಿಗೆ ಬಂದಾಗ ವಿದ್ವಾಂಸರಲ್ಲಿ ಈ ಸಂಸ್ಕೃತಿಯ ಪೂರ್ವಚರಿತ್ರೆಯನ್ನು ಅರಿಯುವ ಜಿಜ್ಞಾಸೆ ತೀವ್ರವಾಗಿತ್ತು. 1929-31ರಲ್ಲಿ ನಾನಿಗೋಪಾಲ ಮಜುಮ್‌ದಾರ್ ಅವರು ಆಮ್ರಿ ಮತ್ತು ಇನ್ನಿತರ ನೆಲೆಗಳಲ್ಲಿ ಅನ್ವೇಷಣೆ ನಡೆಸಿ ಹೊಸ ಮಾಹಿತಿಯನ್ನು ಸಂಗ್ರಹಿಸಿದರು. ಅನಂತರ ಅನೇಕ ನೆಲೆಗಳಿಂದ ಆದಿಹರಪ್ಪ ಅವಶೇಷಗಳನ್ನು ಶೋಧಿಸಲಾಯಿತು. ವಿದ್ವಾಂಸರು ಈ ಹಂತವನ್ನು ವಿಭಿನ್ನ ಹೆಸರಿನಿಂದ ಸಂಬೋಧಿಸಿದ್ದಾರೆ; ಕೋಟ್‌ದಿಜಿಯನ್, ಹರಪ್ಪ ಪೂರ್ವ ಕಾಲ, ಆದಿಸಿಂಧೂ. ನಗರಪೂರ್ವ ಕಾಲದ ಅನೇಕ ನೆಲೆಗಳು ಪಾಕಿಸ್ತಾನ ಹಾಗೂ ಭಾರತದಲ್ಲಿವೆ.

ಪಾಕಿಸ್ತಾನದ ಆದಿಹರಪ್ಪ ಮಾದರಿ ನೆಲೆಗಳು: ಆಮ್ರಿ, ಕೋಟ್‌ದಿಜಿ1, ನೌಶಾರೊ 1ನೆಯ ಎ-ಸಿ ಹಂತ, ರೆಹಮಾನ್‌ಧೇರಿ1, ದಾಂಬ್ ಸಾದತ್ 2-3, ಕುಲ್ಲಿ-ಮೇಹಿ, ನಾಲ್, ಗುಮ್ಲಾ 2-3, ಲೇಕ್‌ಲಾರ್ಗಿಯಿ ಧೇರಿ, ತರ್ಕಾಯ್ ಕೋಟೆ, ಹರಪ್ಪ 2, ಜಲೀಲಪುರ, ಚೋಲಿಸ್ತಾನದ ಹಾಕ್ರ ಮಣ್ಪಾತ್ರೆ ಸಂಸ್ಕೃತಿಯ ನೆಲೆಗಳು.

ಭಾರತದ ಆದಿಹರಪ್ಪ ಮಾದರಿ ನೆಲೆಗಳು: ಕಾಲಿಬಂಗನ್ 1, ಸೋಥಿ, ಬನಾವಳಿ 1 ಎ-ಬಿ, ಕುಣಾಲ್ 1 ಎ-ಸಿ, ಭಿರಡಾಣ 1ಬಿ, ರಾಖಿಗಡಿ1, ಮಿಟಾತಲ್, ಧೋಲಾವೀರ 1-2, ಪಾದ್ರಿ ಇತ್ಯಾದಿ.

ಚೋಲಿಸ್ತಾನ ಪ್ರದೇಶದಲ್ಲಿ ಸ್ತರೀಕೃತ ನೆಲೆಗಳಿರುವುದು ಗಮನಾರ್ಹ. ಹಾಕ್ರ ಮಣ್ಪಾತ್ರೆ ಸಂಸ್ಕೃತಿಯ ನೆಲೆಗಳು ಅರ್ಧದಷ್ಟು ತಾತ್ಕಾಲಿಕ ವಸತಿ ನೆಲೆಗಳಾಗಿದ್ದು ಇನ್ನುಳಿದವು ಸ್ಥಿರವಾದ ಊರುಗಳಾಗಿದ್ದವು.

ಆರಂಭದಲ್ಲಿ ಆದಿಹರಪ್ಪ ಕಾಲದ ಹೆಚ್ಚಿನ ನೆಲೆಗಳಲ್ಲಿ ಕೋಟೆಗಳಿರಲಿಲ್ಲ. ಕಾಲಾಂತರದಲ್ಲಿ ಕೆಲವು ನೆಲೆಗಳಲ್ಲಿ ಅಲ್ಲಲ್ಲಿಯ ಬೆಳವಣಿಗೆಗಳಿಗೆ ಅನುಗುಣವಾಗಿ, ಸಮಾಜದ ಸುರಕ್ಷೆಗಾಗಿ ಕೋಟೆಯಿಂದ ಆವೃತವಾದವು. ರೆಹಮಾನ್‌ಧೇರಿ ನಗರದ ತಳವಿನ್ಯಾಸ ದೀರ್ಘಚತುರಸ್ರಾಕಾರವಾಗಿದ್ದು ಒಳಗೆ ಸಮಾನಾಂತರದ ಸಾಲಿನಲ್ಲಿ ಮನೆ ಮತ್ತು ಬೀದಿಗಳನ್ನು ಕಟ್ಟಲಾಗಿದೆ. ಮನೆಯ ಉತ್ತರ ಹಾಗೂ ದಕ್ಷಿಣ ದಿಕ್ಕಿನ ಗೋಡೆಗಳಲ್ಲಿ ಒಂದು ಮುಖ್ಯದ್ವಾರವಿದೆ. ಸಿಂಧ್ ಪ್ರಾಂತದಲ್ಲಿರುವ ಕೋಟ್‌ದಿಜಿ ಆದಿಹರಪ್ಪ ಕಾಲದ ಒಂದು ಅತಿಮುಖ್ಯ ನೆಲೆ. ಇದು ಕೋಟೆ ಮತ್ತು ಅದರ ಹೊರ ಭಾಗದಲ್ಲಿ ಸಾಮಾನ್ಯ ನಾಗರಿಕರಿಗಾಗಿ ಕೆಳನಗರವೆಂಬ ಸಂಕೀರ್ಣ ವಿನ್ಯಾಸವನ್ನು ಹೊಂದಿದೆ. ಕಾಲಿಬಂಗನ್ ಕೋಟೆಯ ತಳವಿನ್ಯಾಸ ಸಮಾಂತರ ಚತುರ್ಭುಜದ್ದಾಗಿದೆ. ನದಿಯ ಕಡೆ ಹೋಗಲು ಕೋಟೆಗೋಡೆಯಲ್ಲಿ ದ್ವಾರವಿದೆ. ಧೋಲಾವೀರದ ಪ್ರಥಮ ನಿವಾಸಿಗಳು ಆದಿಹರಪ್ಪಕಾಲದವರಾಗಿದ್ದು, ಆರಂಭದಿಂದಲೇ ಆಯತಾಕಾರದ ಕೋಟೆಯೊಳಗೆ ಪಟ್ಟಣವನ್ನು ನಿರ್ಮಿಸಿದರು. ಆದರೆ ಬನಾವಳಿಯಲ್ಲಿ ಆದಿಹರಪ್ಪಕಾಲದ ಪ್ರಥಮ ಹಂತದ ವಸತಿಯಲ್ಲಿ ಕೋಟೆಯಿಲ್ಲ. 2ನೆಯ ಹಂತದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಇಂಥ ಕೋಟೆಗೋಡೆಗಳನ್ನು ಸ್ಥಳೀಯವಾಗಿ ದೊರಕುವ ಕಟ್ಟಡ ಸಾಮಗ್ರಿಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ಕೋಟ್‌ದಿಜಿ ಹಾಗೂ ಧೋಲಾವೀರದಲ್ಲಿ ಕಲ್ಲು ಮತ್ತು ಹಸಿಇಟ್ಟಿಗೆಗಳನ್ನು ಕೂಡಿ ಬಳಸಲಾಗಿದೆ. ಧೋಲಾವೀರದ ಕೋಟೆಯನ್ನು

ಒರಟಾಗಿ ಕೆತ್ತಿದ ಕಲ್ಲುಗಳಿಂದ ಕಟ್ಟಿರುವುದು ಗಮನಾರ್ಹ. ಕಾಲಿಬಂಗನ್ ಮತ್ತು ಬನಾವಳಿಯಲ್ಲಿ ಕೋಟೆಗೋಡೆಗಳನ್ನು ಕೇವಲ ಹಸಿಇಟ್ಟಿಗೆಯಿಂದ ಕಟ್ಟಲಾಗಿದೆ. 1946ರಲ್ಲಿ ಮಾರ್ಟಿಮರ್ ವೀಲರ್ ನಡೆಸಿದ ಹರಪ್ಪ ನೆಲೆಯ ಉತ್ಖನನದಲ್ಲಿ ಅತ್ಯಂತ ಕೆಳಗಿನ ಸ್ತರಗಳಾದ 26 ಹಾಗೂ 26ಎ ದಿಂದ ಬಲೂಚಿಸ್ತಾನ ಮೂಲದ ಆದಿಹರಪ್ಪ ಮಣ್ಪಾತ್ರೆಗಳು ದೊರಕಿವೆ. ಆದರೆ ಸ್ಥಳ ಅಭಾವದಿಂದಾಗಿ ಈ ಸ್ತರಗಳಲ್ಲಿ ಮನೆಗಳ ಅಥವಾ ಕೋಟೆಗೋಡೆಗಳ ಅವಶೇಷಗಳು ದೊರೆಯಲಿಲ್ಲ. ಇತ್ತೀಚೆಗೆ ಹರಪ್ಪ ನೆಲೆಯನ್ನು ಪುನಃ ಅಗೆಯುತ್ತಿರುವ ಡೇಲ್ಸ್ ಮತ್ತು ಕೆನೋಯರ್ ಪ್ರೌಢಹರಪ್ಪ ಹಂತದ ಕೆಳಭಾಗದಲ್ಲಿ ಕೋಟ್‌ದಿಜಿ ಕಾಲದ ಹಸಿಇಟ್ಟಿಗೆಯ ಕೋಟೆಗೋಡೆಯಿಂದಾವೃತ ಜಗಲಿ ಹಾಗೂ ಇದರ ಮೇಲಿರುವ ಬೃಹತ್ ಭವನಗಳು ಹಾಗೂ ಮನೆಗಳನ್ನು ಬೆಳಕಿಗೆ ತಂದಿದ್ದಾರೆ. ಆದಿಹರಪ್ಪ ಕಾಲದ ಎಲ್ಲ

ಉಳುಮೆ ಮಾಡಿದ ಹೊಲ, ಕಾಲಿಬಂಗನ್

ನೆಲೆಗಳ ಕೋಟೆಗೋಡೆಯಲ್ಲಿ 3:2:1 ಅನುಪಾತದ ಹಸಿಇಟ್ಟಿಗೆಗಳನ್ನು ಬಳಸಲಾಗಿದೆ. ಆದರೆ ಹರಪ್ಪ ನೆಲೆಯಲ್ಲಿ ಮಾತ್ರ ಕಟ್ಟಡಗಳಿಗೆ 4:2:1 ಅನುಪಾತದ ಇಟ್ಟಿಗೆಗಳನ್ನು ಉಪಯೋಗಿಸಲಾಗಿದೆ. ರೆಹಮಾನ್‌ಧೇರಿ ಹಾಗೂ ವಾಯವ್ಯ ದಿಕ್ಕಿನಲ್ಲಿರುವ ಇನ್ನಿತರ ನೆಲೆಗಳಲ್ಲಿ ನದಿಯಲ್ಲಿ ದೊರಕುವ ಕಲ್ಲುಗುಂಡುಗಳನ್ನೂ ಹಸಿಇಟ್ಟಿಗೆಯಿಂದ ಕಟ್ಟಿದ ಮನೆಯ ಅಡಿಪಾಯಕ್ಕೆ ಉಪಯೋಗಿಸಲಾಗಿದೆ.

ವಿವಿಧ ಪರಿಸರದಲ್ಲಿರುವ ಆದಿಹರಪ್ಪ ಸಂಸ್ಕೃತಿಯ ನೆಲೆಗಳಲ್ಲಿ ಅಲ್ಲಿಯ ಹವಾಮಾನಕ್ಕನುಗುಣವಾಗಿ ಕೃಷಿ ಮಾಡಲಾಗುತ್ತಿತ್ತು. ಸಿಂಧೂ–ಸರಸ್ವತಿ ಹಾಗೂ ಇವುಗಳ ಉಪನದಿಗಳ ಪ್ರವಾಹದ ಮಿತಿಯಲ್ಲಿ ಬರುವ ಪ್ರದೇಶಗಳು ಮೆಕ್ಕಲುಮಣ್ಣಿನಿಂದ ಕೂಡಿದ್ದು ಕೃಷಿಗೆ ಫಲವತ್ತಾದ ಭೂಮಿಯಾಗಿತ್ತು. ಇಲ್ಲಿ ರಾಬಿ ಮತ್ತು ಖಾರೀಫ್ ಎರಡೂ ರೀತಿಯ ಬೆಳೆಗಳನ್ನು ತೆಗೆಯಲಾಗುತ್ತಿತ್ತು. ಆದಿಹರಪ್ಪ ಕಾಲದಲ್ಲಿ ಗೋದಿ ಮತ್ತು ಜವೆ ಸರ್ವೇಸಾಮಾನ್ಯ ಬೆಳೆಗಳಾಗಿದ್ದವು. ಇವುಗಳೊಂದಿಗೆ ದ್ವಿದಳ ಧಾನ್ಯಗಳು, ಬೇಳೆಕಾಳುಗಳು, ಎಳ್ಳು, ನಾರಗಸೆ, ಖರ್ಜೂರ, ದ್ರಾಕ್ಷಿ, ಬೋರೆಹಣ್ಣು(ಎಲಚಿ) ಮುಂತಾದವುಗಳನ್ನೂ ಕೃಷಿ ಮಾಡಲಾಗುತ್ತಿತ್ತು. ಕೃಷಿಯ ಪ್ರಮುಖ ಉಪಕರಣವಾದ ನೇಗಿಲಿನ ತಯಾರಿಕೆ ಆದಿಹರಪ್ಪ ಕಾಲದ ಒಂದು ಮಹತ್ತರ ಸಾಧನೆ. ಕಾಲಿಬಂಗನ್‌ನಲ್ಲಿ ಉಳುಮೆ ಮಾಡಿದ ಜಾಗವನ್ನು ಬೆಳಕಿಗೆ ತರಲಾಗಿದೆ. ಈ ಜಾಗದ ಮೇಲೆ ಆದಿ ಪ್ರೌಢ ಹರಪ್ಪ ಕಾಲದ ಭಗ್ನಾವಶೇಷಗಳಿದ್ದವು. ಈ ಹೊಲದಲ್ಲಿ ನೇಗಿಲಿನ ಸಾಲುಗಳು ಉತ್ತರ–ದಕ್ಷಿಣ ಹಾಗೂ ಪೂರ್ವ–ಪಶ್ಚಿಮ ದಿಶಾಭಿಮುಖವಾಗಿದ್ದು, ಇಂಥ ಸಾಲುಗಳು ಒಂದನ್ನೊಂದು ಸಮಕೋನದಲ್ಲಿ ಛೇದಿಸುತ್ತವೆ. ಇದು ಒಂದೇ ಸಮಯದಲ್ಲಿ ಎರಡು ಬೆಳೆಗಳನ್ನು ಬೆಳೆಯುವ ಪದ್ಧತಿಯ ಗುರುತು. ಇಂದಿಗೂ ಇಂಥ ಉಳುಮೆ ಪದ್ಧತಿಯನ್ನು ರಾಜಸ್ತಾನದಲ್ಲಿ ನೋಡಬಹುದು.

ಆದಿ ಹರಪ್ಪ ಕಾಲದ ಜನರು ಸಸ್ಯಾಹಾರಿಗಳೂ ಮಾಂಸಾಹಾರಿಗಳೂ ಆಗಿದ್ದರು. ದನಕರುಗಳು, ಕುರಿ ಹಾಗೂ ಆಡುಗಳನ್ನು ಇವರು ಸಾಕುತ್ತಿದ್ದರು. ಕೃಷಿಯೊಂದಿಗೆ ಸಮಾಜದಲ್ಲಿ ವಿವಿಧ ಕಸಬುಗಳು ಹಾಗೂ ತಂತ್ರಜ್ಞಾನದ ಬೆಳವಣಿಗೆಯಾದುದನ್ನು ಆದಿಹರಪ್ಪ ಕಾಲದಲ್ಲಿ ಕಾಣಬಹುದು. ಅಲಗು ಉದ್ಯಮಕ್ಕಾಗಿ ಉತ್ತಮಗುಣದ ಚರ್ಟ್ ಕಲ್ಲು, ರುಬ್ಬುವ ಹಾಗೂ ಇತರ ಸಲಕರಣೆಗಳ ತಯಾರಿಕೆಗೆ ಇನ್ನಿತರ ಕಲ್ಲುಗಳನ್ನು ಬೇರೆ ಬೇರೆ ಕಡೆಗಳಿಂದ ಆಮದು ಮಾಡಲಾಗುತ್ತಿತ್ತು. ತಾಮ್ರದಿಂದ ದಿನನಿತ್ಯ ಬಳಕೆಯ ಉಪಕರಣ, ಆಭರಣ ಹಾಗೂ ಇನ್ನಿತರ ಸಲಕರಣೆಗಳನ್ನು ತಯಾರಿಸಲಾಗುತ್ತಿತ್ತು. ಮಡಕೆ–ಕುಡಿಕೆಗಳನ್ನು ತಿಗುರಿಯ ಮೇಲೆ ತಯಾರಿಸಿ, ಸುಂದರ ವರ್ಣಚಿತ್ರಗಳಾದ ಅಶ್ವತ್ಥ ಎಲೆಗಳು, ನವಿಲು, ಒಂದನ್ನೊಂದು ಛೇದಿಸುವ ವರ್ತುಲಗಳು, ಮೀನು ಇತ್ಯಾದಿಯಿಂದ ಅಲಂಕರಿಸಲಾಗುತ್ತಿತ್ತು. ತೌಲನಿಕ ದೃಷ್ಟಿಯಿಂದ ಈ ಕಾಲದ ಪಾತ್ರೆಗಳು ತರುವಾಯ ಪ್ರೌಢ ಹರಪ್ಪ ಕಾಲದ ಪಾತ್ರೆಗಳಿಂದ ಭಿನ್ನವಾಗಿವೆ. ಕಾಲಿಬಂಗನ್ ನೆಲೆಯ ಮಣ್ಪಾತ್ರೆಗಳನ್ನು ಆರು ವರ್ಗಗಳಲ್ಲಿ ವಿಂಗಡಿಸಲಾಗಿದೆ (ಎ– ಎಫ್‌ವರೆಗೆ); ಬಿಳಿ ಬಿಲ್ಲೆಗಳನ್ನೊಳಗೊಂಡ ವರ್ಣಚಿತ್ರವುಳ್ಳ ಮಣ್ಪಾತ್ರೆಗಳನ್ನು ಈ ಕಾಲದ ಒಂದು ವಿಶೇಷ ಲಕ್ಷಣವೆಂದು ಹೇಳಬಹುದು. ಸುಡಾವೆ ಮಣ್ಣಿನ ಆಟಿಗೆ, ಬಳೆ, ಮಣಿ ಹಾಗೂ ಪಶುಗಳ ಬೊಂಬೆಗಳನ್ನೂ ವಿವಿಧ ಆಕಾರದ ಮಣಿಗಳನ್ನೂ ಅರೆಪ್ರಶಸ್ತ ಕಲ್ಲು, ಹಸ್ತಿದಂತ, ಎಲುಬು ಇತ್ಯಾದಿ ವಸ್ತುಗಳಿಂದಲೂ ತಯಾರಿಸುತ್ತಿದ್ದರು. ಇನ್ನೊಂದು ವಿಶೇಷ ಉದ್ಯಮವೆಂದರೆ ಅರೆಪ್ರಶಸ್ತ ಕಲ್ಲು, ಎಲುಬು, ದಂತ ಇತ್ಯಾದಿಯಿಂದ ತಯಾರಿಸಲಾಗುತ್ತಿದ್ದ ಲಿಪಿರಹಿತ ಆಯತಾಕಾರದ ಮುದ್ರೆಗಳು. ಕುಣಾಲ್ ನೆಲೆಯಿಂದ ದೊರೆತ ಈ ಕಾಲದ ಬೆಳ್ಳಿಯ ಕಿರೀಟಗಳು ಮಹತ್ತ್ವಪೂರ್ಣವಾದವು.

ಆದಿಹರಪ್ಪ ಕಾಲದಲ್ಲಿ ವಿವಿಧ ಭೌಗೋಳಿಕ ಪ್ರಾಂತಗಳಲ್ಲಿ ವಾಸಿಸುತ್ತಿದ್ದ ಜನರಲ್ಲಿ ಪರಸ್ಪರ ಸಂಬಂಧ ವೃದ್ಧಿಯಾಯಿತು. ಇದಕ್ಕೆ ವ್ಯಾಪಾರ ಮತ್ತು ಸುದ್ದಿ ಸಮಾಚಾರಗಳ ವಿನಿಮಯದಲ್ಲಿ ಆದ ಅತಿಶಯ ಪ್ರಗತಿ ಒಂದು ಮೂಲಭೂತ ಕಾರಣವೆಂದು ತಿಳಿಯಲಾಗಿದೆ. ಇದನ್ನು ವಿದ್ವಾಂಸರು ಸಾಂಸ್ಕೃತಿಕ ಸಮನ್ವಯವೆಂದು ಬಗೆದಿದ್ದಾರೆ. ಇಡೀ ಸಿಂಧೂ–ಸರಸ್ವತಿ ಪ್ರದೇಶದಲ್ಲಿ ಕುಂಬಾರರು ಕೆಲವೊಂದು ಪ್ರಮಾಣಾನುಸಾರ ಮಣ್ಪಾತ್ರೆಗಳನ್ನು ಸಿದ್ಧಮಾಡುತ್ತಿದ್ದರು. ಇಂಥ ಪಾತ್ರೆಗಳ ಮೇಲೆ ಸೀಮಿತ, ಪ್ರಮಾಣಬದ್ಧ ವರ್ಣಚಿತ್ರಗಳಿರುತ್ತಿದ್ದವು. ಇಂಥ ಉತ್ಕೃಷ್ಟ ದರ್ಜೆಯ ಮಣ್ಪಾತ್ರೆಗಳು ವ್ಯಾಪಾರದ ಮೂಲಕ ವಿಭಿನ್ನ ಪ್ರಾಂತಗಳಲ್ಲಿ ಬಳಕೆಗೆ ಬಂದವೆ ಎಂಬುದು ಸ್ಪಷ್ಟವಾಗಿಲ್ಲ. ಆದಿಹರಪ್ಪ ಕಾಲದ ರಸ್ತೆ ಸಾರಿಗೆ ಸಂಚಾರದ ಸ್ವರೂಪದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಪ್ರಾಯಶಃ ಬಹುದೂರದ ಪ್ರದೇಶಗಳಿಗೆ ವ್ಯಾಪಾರಕ್ಕಾಗಿ ಭಾರದ ಸಾಮಾನುಗಳನ್ನು ಸಾಗಿಸಲು ಎತ್ತು–ಕತ್ತೆಗಳನ್ನು ಬಳಸಲಾಗುತ್ತಿತ್ತೆಂದು ಕಾಣುತ್ತದೆ. ಮುಂದೆ ಆದಿ ಹರಪ್ಪ ಕಾಲದಲ್ಲಿಯೇ ಒಂದು ಮಹತ್ತ್ವದ ಬದಲಾವಣೆಯಾಗಿ ಇಡೀ ದಕ್ಷಿಣ ಏಷ್ಯದ ಸಾರಿಗೆಯಲ್ಲಿ ಕ್ರಾಂತಿಯುಂಟುಮಾಡಿತು. ಇದರಿಂದಾಗಿ ಗ್ರಾಮೀಣ ಮತ್ತು ಪಟ್ಟಣಗಳ ಜೀವನಶೈಲಿಯಲ್ಲಿ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಹೆಚ್ಚೆಚ್ಚು ಪ್ರಗತಿಯಾಯಿತು – ಇದುವೇ ಗಾಲಿಯ ಎತ್ತಿನಬಂಡಿಯ ಬಳಕೆ. ಇತ್ತೀಚಿನವರೆಗೆ ಇಂಥ ಎತ್ತಿನ ಬಂಡಿಯ ಸುಟ್ಟಮಣ್ಣಿನ ಚೌಕಟ್ಟುಗಳ ಮಾದರಿಗಳು ಯಾವ ಪ್ರಮುಖ ನೆಲೆಯಲ್ಲಿಯೂ ದೊರೆತಿರಲಿಲ್ಲ. ಆದರೆ ಇಂಥ ಬಂಡಿಗೆ ಬೇಕಾದ ವರ್ಣಚಿತ್ರಿತ ಅಥವಾ ಸಾದಾ ಸುಟ್ಟಮಣ್ಣಿನ ಮಾದರಿ ಘನಗಾಲಿಗಳು ಮಾತ್ರ ಎಲ್ಲ ಪ್ರಮುಖ ಆದಿ ಹರಪ್ಪ ನೆಲೆಗಳಿಂದ ಪ್ರಾಪ್ತವಾಗಿದ್ದವು. ಆದರೆ ಇತ್ತೀಚೆಗೆ ಭಿರಡಾಣ ನೆಲೆಯಲ್ಲಿ ಆದಿ ಹರಪ್ಪ ಸ್ತರಗಳಿಂದ ಮುಚ್ಚಳರಹಿತ ಪೆಟ್ಟಿಗೆಯನ್ನು ಹೋಲುವ, ನಾಲ್ಕು ಗಾಲಿಯುಳ್ಳ ಹಾಗೂ ಎರಡು ಗಾಲಿಗಳುಳ್ಳ, ಸುಟ್ಟಮಣ್ಣಿನ ಮಾದರಿ ಬಂಡಿ ಚೌಕಟ್ಟುಗಳು ದೊರಕಿವೆ. ಅಲ್ಲದೆ ಮುಕ್ತ ಚೌಕಟ್ಟಿನ ಬಂಡಿಯ ಅವಶೇಷ ದೊರೆತಿರುವುದು ಕುತೂಹಲಕಾರಿಯಾದ ವಿಷಯ. ಈ ಆಧಾರದ ಮೇಲೆ ಆದಿ ಹರಪ್ಪ ಕಾಲದಲ್ಲಿ ಘನಚೌಕಟ್ಟುಳ್ಳ ಬಂಡಿಗೆ ಘನ ಚಕ್ರಗಳನ್ನಷ್ಟೇ ಉಪಯೋಗಿಸುತ್ತಿದ್ದರು ಎಂದು ಹೇಳಬಹುದು. ಈ ಸಂದರ್ಭದಲ್ಲಿ ಬನಾವಳಿಯಲ್ಲಿ ದೊರೆತ ಆದಿ ಹರಪ್ಪ ಕಾಲದ ಮಡಕೆ ಚೂರಿನ ಮೇಲೆ ವರ್ಣಚಿತ್ರದಲ್ಲಿ ಬಿಡಿಸಿದ ಘನಚಕ್ರವುಳ್ಳ ಹಾಗೂ ಛತ್ರಿಯುಳ್ಳ ಬಂಡಿ ಅಥವಾ ರಥವನ್ನೂ ನೆನಪಿಸಿಕೊಳ್ಳಬಹುದು. ಆದಿ ಹರಪ್ಪ ಕಾಲದಲ್ಲಿ ಕೇವಲ ರಸ್ತೆ ಸಾರಿಗೆಯೊಂದೇ ಅಲ್ಲದೆ ಆಂತರಿಕ ವ್ಯಾಪಾರ ಸಂಬಂಧಕ್ಕಾಗಿ ಜಲಮಾರ್ಗಗಳನ್ನೂ ಉಪಯೋಗಿಸಿರಬಹುದು. ಆದರೆ ಇದಕ್ಕೆ ಸಂಬಂಧಿಸಿದ ದೋಣಿಗಳ ಮಾದರಿಯಾಗಲೀ ಅಥವಾ ಇನ್ನಿತರ ಕುರುಹಾಗಲೀ ದೊರೆತಿಲ್ಲ.

ಆದಿ ಹರಪ್ಪ ಕಾಲದ ಇನ್ನೊಂದು ಮಹತ್ತ್ವದ ಸಂಗತಿಯೆಂದರೆ ಮಣ್ಪಾತ್ರೆಗಳ ಮೇಲಿರುವ ಗೀರು ಗೀಟಿನ ಸಂಕೇತಗಳು. ಇವರ ಪೂರ್ವಜರಾದ ಹಾಕ್ರ ಮಣ್ಪಾತ್ರೆ ಸಂಸ್ಕೃತಿಯ ಜನರು ಉಪಯೋಗಿಸಿದ ಪಾತ್ರೆಗಳ ಮೇಲೆಯೂ ಈ ರೀತಿಯ ಸಂಕೇತಗಳಿವೆ. ಈ ಚಿಹ್ನೆಗಳೇ ಪ್ರೌಢ ಹರಪ್ಪಕಾಲೀನ ಲಿಪಿಯ ಆರಂಭದ ರೂಪಗಳಾಗಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ಏಕೆಂದರೆ ಈ ಚಿಹ್ನೆಗಳಲ್ಲಿ ಮತ್ತು ಪ್ರೌಢ ಹರಪ್ಪ ಕಾಲದ ಲಿಪಿಯ ಕೆಲವು ಅಕ್ಷರಗಳಲ್ಲಿ ಬಹಳಷ್ಟು ಸಾಮ್ಯವಿದೆ. ಬಹುಶಃ ಆಂತರಿಕ ವ್ಯಾಪಾರ ಸಂದರ್ಭದಲ್ಲಿ ವಿಚಾರ ವಿನಿಮಯದ ಆವಶ್ಯಕತೆಯ ಮಹತ್ತ್ವವನ್ನರಿತು ಇಂಥ ಚಿಹ್ನೆಗಳು ಹುಟ್ಟಿಕೊಂಡಿರಬೇಕು. ಇದಕ್ಕೆ ಪೂರಕವೆಂಬಂತೆ ಇದೇ ಕಾಲದಿಂದಲೇ ರೆಹಮಾನ್‌ಧೇರಿ, ಕುಣಾಲ್, ಹರಪ್ಪ, ಭಿರಡಾಣ ಹಾಗೂ ಇನ್ನಿತರ ನೆಲೆಗಳಲ್ಲಿ ಲಿಪಿರಹಿತ ಮುದ್ರೆಗಳ ಆವಿಷ್ಕಾರವಾದದ್ದನ್ನು ಇಲ್ಲಿ ಸ್ಮರಿಸಬಹುದು. ಈ ಸಂದರ್ಭದಲ್ಲಿ ಲೆವಾನ್ ನೆಲೆಯಲ್ಲಿ ದೊರೆತ ಹಸಿಮಣ್ಣಿನ ಮುದ್ರಾಂಕನದ ಹಿಂಭಾಗದಲ್ಲಿರುವ ಸೂತ್ರದ ಹಾಗೂ ಬಟ್ಟೆಯ ಅಚ್ಚೊತ್ತು ಮಹತ್ತ್ವದ್ದು. ಇದು ಬಟ್ಟೆಯಲ್ಲಿ ಕಟ್ಟಿದ ಸಾಮಾನುಗಳ ಸುರಕ್ಷೆಗಾಗಿ ಅಥವಾ ದಾಸ್ತಾನು ಭಂಡಾರದ ಬಾಗಿಲನ್ನು ಭದ್ರವಾಗಿ ಮುಚ್ಚಲು ಹಾಕಿದ ಮುದ್ರಾಂಕನ ಪದ್ಧತಿಯ ಸೂಚಕವಾಗಿದೆ. ಇಂಥ ವ್ಯವಸ್ಥೆ ಈಗಲೂ ಭಾರತದಲ್ಲಿ ಪ್ರಚಲಿತವಿದೆ.

ಹರಪ್ಪ ಸಂಸ್ಕೃತಿಯ ಅಧ್ಯಯನದಲ್ಲಿ ರಾಜಸ್ತಾನದಲ್ಲಿರುವ ಅರಾವಳಿ ಪ್ರದೇಶದ ಮಹತ್ತ್ವವನ್ನು ಅಲ್ಲಗಳೆಯುವಂತಿಲ್ಲ. ಈ ಪ್ರದೇಶ ತಾಮ್ರ, ಸೀಸ, ಸತು ಹಾಗೂ ತವರ ಖನಿಜಗಳ ನಿಕ್ಷೇಪದ ಆಗರ. ಇದು ಹರಪ್ಪ ಸಂಸ್ಕೃತಿ ಪ್ರದೇಶದ ಒಂದು ಭಾಗವೂ ಹೌದು. ವಿಶೇಷವಾಗಿ ತಾಮ್ರ ನಿಕ್ಷೇಪದ ಸುತ್ತಮುತ್ತಿನ ಭಾಗದಲ್ಲಿ ಸ್ಥಳೀಯ ಸಂಸ್ಕೃತಿಗಳ ನೆಲೆಗಳಿವೆ. ಉದಾ: ಗಣೇಶ್ವರ **(ನೋಡಿ)**, ಬಾಲಾಥಲ್**(ನೋಡಿ)** ಇತ್ಯಾದಿ. ಕಾಲಮಾನದೃಷ್ಟಿಯಿಂದ ಈ ನೆಲೆಗಳು ಆದಿ ಹರಪ್ಪ ಸಂಸ್ಕೃತಿಯ ಸಮಕಾಲೀನದ್ದಾಗಿದ್ದರೂ ಆದಿಹರಪ್ಪ ಹಂತದ ಯಾವುದೇ ವಿಶಿಷ್ಟ ಗುಣಲಕ್ಷಣಗಳುಳ್ಳ ವಸ್ತುಗಳು ಇಲ್ಲಿ ಕಾಣಬರಲಿಲ್ಲ. ಬಹುಶಃ ಈ

ಸ್ಥಳೀಯ ಸಂಸ್ಕೃತಿಯ ಜನರು ತಾಮ್ರ ಮತ್ತು ಇನ್ನಿತರ ಲೋಹಗಳಿಂದ ತಯಾರಿಸಲ್ಪಟ್ಟ ಉಪಕರಣಗಳನ್ನು ರಾಜಸ್ತಾನ, ಹರಿಯಾಣ, ಚೋಲಿಸ್ತಾನ, ಪಂಜಾಬ್ ಹಾಗೂ ಇನ್ನಿತರ ಪ್ರದೇಶಗಳಲ್ಲಿದ್ದ ಸಿಂಧೂ–ಸರಸ್ವತಿ ಸಂಸ್ಕೃತಿಯ ಜನರಿಗೆ ಸರಬರಾಜು ಮಾಡುತ್ತಿದ್ದಿರಬೇಕು.

ಹೀಗೆ ಹಾಕ್ರ ಮಣ್ಪಾತ್ರೆ ಸಂಸ್ಕೃತಿಯಿಂದ ಬಂದ ಜ್ಞಾನ ಮತ್ತು ಸಂಪ್ರದಾಯಗಳೊಂದಿಗೆ ಆದಿ ಹರಪ್ಪ ಸಮಾಜ ತನ್ನ ಅಂತಃಶಕ್ತಿ ಹಾಗೂ ಹೊಸ ವಿಚಾರಗಳನ್ನು ಅಳವಡಿಸಿಕೊಂಡು ಇಡೀ ಸಿಂಧೂ–ಸರಸ್ವತಿ ಬಯಲು ಪ್ರದೇಶದಲ್ಲಿ, ತಾವು ತಯಾರಿಸಿದ ಭೌತಿಕ ವಸ್ತುಗಳಲ್ಲಿ ಪ್ರಮಾಣಮಾನ ಹಾಗೂ ಏಕರೂಪತೆಯ ಬೀಜಾಂಕುರವನ್ನು ಮಾಡಿದ್ದು ಪ್ರಗತಿಯ ಪಥದಲ್ಲಿ ಒಂದು ಪ್ರಮುಖ ಘಟ್ಟ. ಇದೇ ರೀತಿಯಾಗಿ ಇವರ ಭಾವನೆಗಳನ್ನು ವರ್ಣಚಿತ್ರಿತ ಕೋಡುಗಳುಳ್ಳ ದೇವತೆ, ಅಶ್ವತ್ಥ ಎಲೆಗಳು, ಸುಟ್ಟ ಮಣ್ಣಿನ ಪ್ರಾಣಿ ಹಾಗೂ ಸ್ತ್ರೀಯರ ಗೊಂಬೆಗಳಲ್ಲಿ ಕಾಣಬಹುದು.

ಆದಿ ಪ್ರೌಢ ಹರಪ್ಪ ಅಥವಾ ಸಿಂಧೂ–ಸರಸ್ವತಿ ಸಂಕ್ರಮಣ ಕಾಲ (ಪ್ರ.ಶ.ಪೂ.2800–2600): ಆದಿ ಹರಪ್ಪ ಹಾಗೂ ಪ್ರೌಢ ಹರಪ್ಪ ಹಂತಗಳಲ್ಲಿಯ ಆಂತರಿಕ ಸಂಬಂಧದ ಕುರಿತಾಗಿ ಭಿನ್ನ ಭಿನ್ನ ಅನಿಸಿಕೆಗಳನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಕೆಲವು ವಿದ್ವಾಂಸರ ಪ್ರಕಾರ ಆದಿ ಹರಪ್ಪ ಹಂತದಿಂದ ಪ್ರೌಢ ಹರಪ್ಪ ಹಂತದ ಬೆಳವಣಿಗೆಯಲ್ಲಿ ಸಹಜ ಪ್ರಗತಿ ಇರದೆ, ಪ್ರೌಢ ಹರಪ್ಪ ಹಂತ ಥಟ್ಟನೆ ಬೆಳೆದಂತೆ ತೋರುತ್ತದೆ. ಕೋಟ್‌ದಿಜಿ, ಬಾಲಾಕೋಟ್, ರೆಹಮಾನ್‌ಧೇರಿ ಇತ್ಯಾದಿ ನೆಲೆಗಳಲ್ಲಿ ಈ ಎರಡೂ ಸಾಂಸ್ಕೃತಿಕ ಹಂತಗಳ ನಡುವೆ ಸುಟ್ಟ ಅವಶೇಷಗಳ ಸ್ತರವಿದೆ. ಇದರಿಂದುಂಟಾದ ಅಂತರ ಈ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಇದೇ ಪ್ರಕಾರ ಕಾಲಿಬಂಗನ್ ನೆಲೆಯಲ್ಲಿ ಆದಿ ಹರಪ್ಪ ಹಾಗೂ ಪ್ರೌಢ ಹರಪ್ಪ ಹಂತಗಳ ನಡುವೆ ಭೂಕಂಪದ ಕಾರಣದಿಂದಾಗಿ ಜನವಸತಿ ಇಲ್ಲದ ಒಂದು ಹಂತವಿದೆ. ಆದರೆ ಪಾಕಿಸ್ತಾನದಲ್ಲಿರುವ ನೌಶಾರೊ 1 ಮತ್ತು ಹರಪ್ಪ 2 ನೆಲೆಗಳಲ್ಲಿ ಹಾಗೂ ಧೋಲಾವೀರ 3, ಬನಾವಳಿ 1ಸಿ, ಕುಣಾಲ್ 1ಸಿ, ಭಿರಡಾಣ 2ಎ ನೆಲೆಗಳಲ್ಲಿ ಆದಿ ಹರಪ್ಪ ಕಾಲದಿಂದ ಪ್ರೌಢ ಹರಪ್ಪ ಕಾಲದ ನಡುವಿನ ಸ್ಥಿತ್ಯಂತರ ಅಥವಾ ಸಂಕ್ರಮಣ ಹಂತವನ್ನು ಪತ್ತೆ ಹಚ್ಚಲಾಗಿದೆ. ಇದನ್ನು ಸಂಕ್ರಮಣ ಕಾಲ ಅಥವಾ ಆದಿಪ್ರೌಢಹರಪ್ಪ ಕಾಲ ಎಂದು ಕರೆಯಲಾಗಿದೆ.

ಧೋಲಾವೀರದಲ್ಲಿ ಆರಂಭದಿಂದಲೇ ಕಟ್ಟಲಾಗಿದ್ದ ಆದಿ ಹರಪ್ಪ ಕಾಲದ ಸುರಕ್ಷಾ ಗೋಡೆಯನ್ನು ಆದಿ ಪ್ರೌಢ ಹರಪ್ಪ ಕಾಲದಲ್ಲಿ ವಿಸ್ತರಿಸಲಾಯಿತು. ಆಡಳಿತವರ್ಗ ಹಾಗೂ ಅವರ ಕರ್ಮಚಾರಿಗಳಿಗಾಗಿ ಕಟ್ಟಡಗಳ ಸಂಕೀರ್ಣವನ್ನೊಳಗೊಂಡ ಸಂಪೂರ್ಣ ಹಾಗೂ ಸ್ವತಂತ್ರವಾದ ಕೋಟೆ ಹಾಗೂ ಅದರ ಪಶ್ಚಿಮಕ್ಕೆ ಹೊಂದಿಕೊಂಡಿರುವ ಹೊರಪ್ರಾಕಾರ ಮತ್ತು ಅದರ ಒಳಗಿನ ರಕ್ಷಣಾ ವಲಯಗಳನ್ನು ಕಟ್ಟಲಾದವು. ಅಲ್ಲದೆ ನಗರದ ಉತ್ತರ ದಿಶೆಯಲ್ಲಿ ಅನ್ಯ ನಾಗರಿಕರಿರುವ ಸ್ಥಾನವನ್ನೂ ವಿಸ್ತರಿಸಿ ಮಧ್ಯನಗರ ಹಾಗೂ ಕೆಳನಗರವೆಂಬ ಎರಡು ಘಟಕಗಳಿಗೆ ಪ್ರತ್ಯೇಕ ಸುರಕ್ಷಾ ಗೋಡೆಯನ್ನು ಕಟ್ಟಲಾಯಿತು. ಭಾಗಶಃ ಶುಷ್ಕ ಹವಾಮಾನವನ್ನು ಹೊಂದಿದ್ದ ಕಚ್ಛ್ ಪ್ರಾಂತದಲ್ಲಿರುವ ಧೋಲಾವೀರದಂತಹ ಬೃಹತ್ ನಗರಕ್ಕೆ ಬೇಕಾಗುವ ನೀರಿನ ಪೂರೈಕೆಯನ್ನು ಮಳೆಗಾಲದ ಹಳ್ಳಗಳಿಗೆ ಕಲ್ಲಿನ ಅಡ್ಡಗೋಡೆಯನ್ನು ಕಟ್ಟಿ, ನೀರನ್ನು ತಡೆಹಿಡಿದು, ಕೋಟೆಯ ಅಕ್ಕಪಕ್ಕದಲ್ಲಿ ನಿರ್ಮಿಸಿದ ಬೃಹತ್ ತೊಟ್ಟಿಗಳಲ್ಲಿ ನೀರನ್ನು ಸಂಗ್ರಹಿಸುವ ಕಾರ್ಯ ಆರಂಭವಾದುದು ಈ ಕಾಲದಲ್ಲಿಯೇ.




ಮಕ್ಕಳ ಆಟಿಕೆಗಳು, ಸುಡಾವೆಮಣ್ಣಿನ ಗಾಡಿಚಕ್ರಗಳು

ಬನಾವಳಿಯಲ್ಲಿಯೂ ಪ್ರಥಮ ಬಾರಿಗೆ ನಗರವನ್ನು ಎರಡು ಭಾಗಗಳಲ್ಲಿ ವಿಭಜಿಸಲಾಯಿತು. ಆದಿ ಹರಪ್ಪ ಕಾಲದ ಕೋಟೆಗೋಡೆಯನ್ನು ಅವಶ್ಯವಿದ್ದೆಡೆಯಲ್ಲಿ ವಿಸ್ತರಿಸಿ, ಮೇಲ್‌ನಗರಕ್ಕಾಗಿ ಸ್ಥಳವನ್ನು ಕಲ್ಪಿಸಲಾಯಿತು. ಇದಕ್ಕೆ ಹೊಂದಿಕೊಂಡೇ ಅನ್ಯ ಜನಸಮುದಾಯಗಳಿಗಾಗಿ ಕೆಳನಗರದ ರಚನೆಯಾಯಿತು. ಮೇಲ್‌ನಗರದ ಕೆಲವು ಕಟ್ಟಡಗಳ ವಿಶಿಷ್ಟ ತಳವಿನ್ಯಾಸ ಕುತೂಹಲಕಾರಿಯಾಗಿದೆ. ಈ ಕಟ್ಟಡಗಳ ತಳವಿನ್ಯಾಸ ಗಜಪೃಷ್ಠಾಕಾರದಲ್ಲಿದ್ದು ಅವುಗಳ ಹಿಂಭಾಗದಲ್ಲಿ ಚಿಕ್ಕದಾದ ಇನ್ನೊಂದು ಗಜಪೃಷ್ಠಾಕಾರದ ಅಗ್ನಿಕುಂಡವಿದ್ದು ಇದರೊಳಗೆ ಬೂದಿಯಿತ್ತು. ಅವಶೇಷಗಳನ್ನಾಧರಿಸಿ ಇವು ಪ್ರಾಯಶಃ ತಾಂತ್ರಿಕ ಕಾರ್ಯಾಗಾರಗಳಾಗಿರಬೇಕೆಂದು ಉತ್ಖನನಕಾರರ ಅಭಿಪ್ರಾಯ.

ಭಿರಡಾಣದ ಆದಿ ಪ್ರೌಢ ಹರಪ್ಪ ಜನರು ತಮ್ಮ ಪ್ರಗತಿಪರ ವಿಚಾರ ಹಾಗೂ ತಾಂತ್ರಿಕ ಜ್ಞಾನದಿಂದಾಗಿ ಸಾಮಾಜಿಕ ಹಾಗೂ ನಾಗರಿಕ ಜೀವನಶೈಲಿಯಲ್ಲಿ ಅದ್ಭುತ ಪ್ರಗತಿ ಸಾಧಿಸಿದ್ದು ಈ ಕಾಲದಿಂದಲೇ. ಪ್ರಥಮ ಬಾರಿಗೆ ಭಿರಡಾಣ ನೆಲೆಯ ಸುತ್ತಲೂ ಸುರಕ್ಷಾ ಗೋಡೆಯನ್ನು ಕಟ್ಟಲಾಯಿತು. ಇದಕ್ಕೆ ತಕ್ಕಂತೆ ನಗರವನ್ನು ಯೋಜನಾಬದ್ಧ ರೀತಿಯಲ್ಲಿ ರೂಪಿಸಲಾಯಿತು. ನಗರದ ಒಳಭಾಗವನ್ನು ಮೇಲ್‌ನಗರ ಹಾಗೂ ಕೆಳನಗರವೆಂದು ಎರಡು ಭಾಗಗಳಾಗಿ ವಿಂಗಡಿಸಲಾಯಿತು.

ಹರಪ್ಪ ಸಂಸ್ಕೃತಿಯ ವಿಕಾಸದಲ್ಲಿ ಆದಿ ಪ್ರೌಢ ಹರಪ್ಪ ಅತಿ ಮಹತ್ತ್ವದ ಘಟ್ಟ. ವಿಶೇಷ ಲಕ್ಷಣಗಳುಳ್ಳ ವಾಸ್ತುಕಲೆ, ಯೋಜನೆಗಳಿಗೆ ಸಂಬಂಧಿಸಿದ ಅವಶೇಷಗಳು ಸೂಚಿಸುವ ಹೊಸ ವಿಚಾರಧಾರೆಗಳು, ಆದಿ ಹರಪ್ಪ ಕಾಲದಿಂದ ಬಳುವಳಿಯಾಗಿ ಬಂದ ಸಾಂಸ್ಕೃತಿಕ ಜೀವನದಲ್ಲಿ ಹಾಸುಹೊಕ್ಕಾಗಿ ಹೊರಹೊಮ್ಮಿ, ಮುಂಬರುವ ಜೀವನಕ್ಕೆ ಹೊಸ ತಿರುವನ್ನು ಕೊಟ್ಟವು. ನಗರಗಳು ಸಂಪೂರ್ಣ ಯೋಜನಾಬದ್ಧ ನವನಿರ್ಮಾಣವೆನಿಸಿದವು. ಜೊತೆಗೆ ಎಸ್–ಆಕಾರದ ಜಾಡಿ, ಬಹುರಂಧ್ರದ ಜಾಡಿ, ಹಿಡಿ ಬಟ್ಟಲು ಇತ್ಯಾದಿಯಾದ ಗಾಢ ಕೆಂಪುಬಣ್ಣದ ಲೇಪನವುಳ್ಳ ಮಣ್ಪಾತ್ರೆಗಳು, ಅನಂತರದ ಪ್ರೌಢ ಹರಪ್ಪ ಕಾಲದ ಮುದ್ರೆಗಳನ್ನು ಹೋಲುವ ಚತುರಸ್ರಾಕಾರದ ಸ್ಟಿಯಟೈಟ್ ಮುದ್ರೆಗಳು ಮತ್ತು ಮಣ್ಪಾತ್ರೆಗಳ ಮೇಲೆ ಗೀರುಗೀಟಿನ ರೇಖಾಚಿತ್ರ/ರಂಗೋಲಿಯನ್ನು ಹೋಲುವ ಲಿಪಿ ಸಂಕೇತಗಳು ಸಾಕಷ್ಟು ದೊರಕಿವೆ.

ಭಿರಡಾಣದಲ್ಲಿ ಈ ಹಂತದಲ್ಲಿ ಪ್ರಥಮ ಬಾರಿಗೆ ಅರೆಗಳುಳ್ಳ ಗಾಲಿಗಳ ಆವಿಷ್ಕಾರವಾದದ್ದು ಒಂದು ಮಹತ್ತ್ವದ ಸಂಗತಿ. ಈ ಹೊಸ ತಾಂತ್ರಿಕ ವ್ಯವಸ್ಥೆಯ ಬಳಕೆಯಿಂದಾಗಿ ಆಂತರಿಕ ವ್ಯಾಪಾರ, ದೂರಸಂಚಾರ ಹಾಗೂ ರಸ್ತೆ ಸಾರಿಗೆಯಲ್ಲಿ ಬಹಳಷ್ಟು ಬದಲಾವಣೆಗಳಾದವು.

ಪ್ರೌಢ ಹರಪ್ಪ ಅಥವಾ ಪ್ರೌಢ ಸಿಂಧೂ–ಸರಸ್ವತಿ ಸಂಸ್ಕೃತಿ (ಪ್ರ.ಶ.ಪೂ.2600–2000): ಪ್ರೌಢ ಹರಪ್ಪ ಸಂಸ್ಕೃತಿಯ ಭೌಗೋಳಿಕ ವಿಸ್ತಾರ ಆದಿ ಹರಪ್ಪ ಸಂಸ್ಕೃತಿಯಷ್ಟೆ ಇತ್ತು. ಇಂದಿನ ಸಮಗ್ರ ಪಾಕಿಸ್ತಾನ ಹಾಗೂ ಭಾರತದ ಜಮ್ಮು ಹಾಗೂ ಕಾಶ್ಮೀರ, ಪಂಜಾಬ್, ಹರಿಯಾಣ, ರಾಜಸ್ತಾನ, ಉತ್ತರ ಪ್ರದೇಶ ಹಾಗೂ ಗುಜರಾತ್ ರಾಜ್ಯಗಳಲ್ಲಿ ಈ ಅವಧಿಯ ಸಾವಿರಾರು ಬಹುದೊಡ್ಡ ಹಾಗೂ ಸಣ್ಣ ನಗರ ಮತ್ತು ಹಳ್ಳಿಗಳನ್ನು ಕಂಡುಹಿಡಿಯಲಾಗಿದೆ. ಅತಿದೊಡ್ಡ ನಗರಗಳನ್ನು ಒಂದೇ ಬಾರಿಗೆ ಕಟ್ಟಲಿಲ್ಲ. ಅನೇಕ ಶತಮಾನಗಳಿಂದ ಅದೇ ಸ್ಥಾನದಲ್ಲಿದ್ದ ಹಳ್ಳಿಗಳೇ ಕಾಲಾಂತರದಲ್ಲಿ ಪ್ರಗತಿಯನ್ನು ಸಾಧಿಸುತ್ತಾ ಜನಸಂಖ್ಯೆಯಲ್ಲಿ ವೃದ್ಧಿ ಮತ್ತು ಸ್ಥಾನವಿಸ್ತರಣೆಯಿಂದಾಗಿ ವಿವಿಧ ಆಕಾರದ ನಗರಗಳಾಗಿ ಬೆಳೆದವು. ಪ್ರೌಢ ಹರಪ್ಪ ಸಂಸ್ಕೃತಿಯ ಕೆಲವು ಪ್ರಮುಖ ನೆಲೆಗಳು ಇಂತಿವೆ: ಮೊಹೆಂಜೋದಾರೊ, ಹರಪ್ಪ, ಗನವೇರಿವಾಲ, ರಾಖಿಗಡಿ, ಧೋಲಾವೀರ, ಕಾಲಿಬಂಗನ್, ಲೋಥಲ್, ಬನಾವಳಿ, ಭಿರಡಾಣ, ಸುರಕೋಟಡ.

ಬಹುತೇಕವಾಗಿ ಸಿಂಧೂ–ಸರಸ್ವತಿ ಸಂಸ್ಕೃತಿಯ ನಗರ ರಚನೆ ಎರಡು ಭಾಗಗಳನ್ನು ಒಳಗೊಂಡಿತ್ತು. ಪಶ್ಚಿಮ ದಿಶೆಯಲ್ಲಿಯ ಎತ್ತರದ ದಿಬ್ಬವು ಕೋಟೆ ಅಥವಾ ದುರ್ಗ (ಸಿಟೆಡಲ್) ಅಥವಾ ಮೇಲ್‌ನಗರದ (ಅಪ್ಪರ್ ಟೌನ್) ಸ್ಥಾನವಾಗಿದ್ದರೆ, ಪೂರ್ವದಲ್ಲಿಯ ವಿಶಾಲವಾದ ದಿಬ್ಬ ಕೆಳನಗರದ (ಲೋಯರ್ ಟೌನ್) ಭಾಗವಾಗಿತ್ತು. ಈ ರೀತಿಯ ತಳವಿನ್ಯಾಸದ ನಗರಗಳಾದ ಮೊಹೆಂಜೋದಾರೊ ಹಾಗೂ ಹರಪ್ಪ ನೆಲೆಗಳನ್ನು ಕಂಡ ಮಾರ್ಟಿಮರ್ ವೀಲರ್ ಇದು ಆಕಸ್ಮಿಕ ರಚನೆಯಲ್ಲ ಎಂಬುದನ್ನು ಮನಗಂಡ. ಇದೇ ತಳವಿನ್ಯಾಸವನ್ನು ಕಾಲಿಬಂಗನ್‌ನಲ್ಲಿಯೂ ಕಾಣಬಹುದು. ಹರಪ್ಪ ನಗರದಂತೆ ಕಾಲಿಬಂಗನ್ ನದಿಯ ದಕ್ಷಿಣ ತಟದಲ್ಲಿದ್ದು, ಉತ್ತರ–ದಕ್ಷಿಣಾಭಿಮುಖವಾಗಿದೆ. ಕಾಲಿಬಂಗನ್‌ನ ಕೋಟೆಯ ತಳವಿನ್ಯಾಸ ಎರಡು ಸಮಚತುರಸ್ರಗಳಂತಿದ್ದು, ನಡುವೆ ಇವೆರಡನ್ನು ಬೇರ್ಪಡಿಸುವ ಗೋಡೆಯಿದೆ. ಉತ್ತರ ಭಾಗದ ಚತುರಸ್ರದಲ್ಲಿ ಮನೆಗಳಿವೆ; ದಕ್ಷಿಣ ಚತುರಸ್ರದ ಒಳಗೆ ಪ್ರವೇಶಕ್ಕಾಗಿ ದಕ್ಷಿಣ ಗೋಡೆಯಲ್ಲಿ ದ್ವಾರವಿದೆ. ಈ ಭಾಗದಲ್ಲಿ ಸಾಲಾಗಿ ಕಟ್ಟಿರುವ ಕಟ್ಟೆಗಳಿವೆ. ಬಹುಶಃ ಧಾರ್ಮಿಕ ಸಂಸ್ಕಾರ ವಿಧಿಗಳಿಗಾಗಿ ಅಥವಾ ಪಶುಬಲಿಗಾಗಿ ಇವುಗಳನ್ನು ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ಕಾಲಿಬಂಗನ್ ಕೆಳನಗರ ಮೊಹೆಂಜೋದಾರೊದಲ್ಲಿರುವ ನಗರ ವಿನ್ಯಾಸದಂತೆ ಪ್ರಧಾನ ದಿಶಾಭಿಮುಖವಾದ ಅನೇಕ ಬೀದಿಗಳು ಮತ್ತು ಮನೆಗಳಿಂದ ಕೂಡಿದೆ. ಈ ಮೂರೂ ನಗರಗಳ ಘಟಕಗಳಲ್ಲಿರುವ ಅಳತೆಯ ಅನುಪಾತದಲ್ಲಿ ಸಾಮ್ಯವಿರುವುದು ಆಶ್ಚರ್ಯಕರ.

ಮೊದಮೊದಲು ಸಿಂಧೂ–ಸರಸ್ವತಿಯ ಎಲ್ಲ ನೆಲೆಗಳ ತಳವಿನ್ಯಾಸ ಈ ಮೇಲೆ ಹೇಳಿದಂತೆ ಸುರಕ್ಷಾ ಗೋಡೆಗಳಿಂದ ಆವೃತವಾದ ಕೋಟೆ ಮತ್ತು ಕೆಳನಗರವೆಂಬ ಎರಡು ಘಟಕಗಳಿಂದ ಕೂಡಿದ್ದು, ನಗರದ ಒಳರಚನೆಯಲ್ಲಿ ಬೀದಿಗಳು ಮತ್ತು ಭವನಗಳು ಪ್ರಧಾನ ದಿಶಾಭಿಮುಖವಾಗಿರುತ್ತವೆ ಎಂದು ನಂಬಲಾಗಿತ್ತು. ಆದರೆ ಹೊಸ ಸಂಶೋಧನೆಯಿಂದ ಬೆಳಕಿಗೆ ಬಂದ ಆಧಾರಗಳಿಂದ ಇಂಥ ಅನಿಸಿಕೆಗಳು ಭಾಗಶಃ ಸತ್ಯವೆಂದು ತಿಳಿದುಬಂತು. ಉದಾ: ಬನಾವಳಿ ನಗರ ಮೇಲೆ ಹೇಳಿದ ಯೋಜನೆಗೆ ವ್ಯತಿರಿಕ್ತವಾಗಿದೆ.

ಇಡೀ ನಗರ ವಿಷಮಭುಜ ಚೌಕೋನಾಕಾರದ ಸುರಕ್ಷಾ ಗೋಡೆಯಿಂದ (240x300ಮೀ) ಆವೃತವಾಗಿದ್ದು, ಒಳಗೆ ಅರ್ಧಚಂದ್ರಾಕೃತಿಯ ವಿನ್ಯಾಸದಲ್ಲಿ ಗೋಡೆಯನ್ನು ಕಟ್ಟಿ, ಕೋಟೆ ಅಥವಾ ಮೇಲ್‌ನಗರ ಮತ್ತು ಕೆಳನಗರವೆಂದು ವಿಭಜಿಸಲಾಗಿದೆ. ಈ ಎರಡೂ ಘಟಕಗಳ ಸಂಪರ್ಕಕ್ಕಾಗಿ ಎರಡು ಪ್ರವೇಶ ದ್ವಾರಗಳಿವೆ. ಮೇಲ್‌ನಗರ ಎತ್ತರ ಸ್ಥಾನದಲ್ಲಿದ್ದ ಕಾರಣ ಕೆಳನಗರದಿಂದ ಏರಿ ಹೋಗಲು ದ್ವಾರಗಳ ಮುಂಭಾಗದಲ್ಲಿ ಪಾವಟಿಗೆಗಳನ್ನು ಕಟ್ಟಲಾಗಿದೆ. ಸುರಕ್ಷಾಗೋಡೆಗಳಲ್ಲಿ ಅವಶ್ಯವಿದ್ದೆಡೆ ಬುರುಜು ಹಾಗೂ ಪ್ರವೇಶದ್ವಾರಗಳನ್ನು ಕಲ್ಪಿಸಲಾಗಿದೆ. ಸಿಂಧೂ–ಸರಸ್ವತಿ ನಗರಗಳ ಸುರಕ್ಷಾ ವ್ಯವಸ್ಥೆಯ ಇತಿಹಾಸದಲ್ಲಿ ಬನಾವಳಿ ನಗರಕ್ಕೆ ವಿಶಿಷ್ಟ ಸ್ಥಾನವಿದೆ. ಇಲ್ಲಿಯ ಪೂರ್ವಭಾಗದ ಸುರಕ್ಷಾ ಗೋಡೆಯಿಂದಾಚೆ ಕಂದಕವಿರುವುದನ್ನು ಪ್ರಥಮ ಬಾರಿಗೆ ಪತ್ತೆ ಹಚ್ಚಲಾಗಿದೆ. ಈ ಗೋಡೆಯಲ್ಲಿರುವ ಪ್ರವೇಶ ದ್ವಾರದ ಅಡಿಯಲ್ಲಿ ಕಟ್ಟಿರುವ ಚರಂಡಿಯಿಂದ ಹರಿದು ಬರುವ ಮಳೆನೀರನ್ನು ಈ ಕಂದಕಕ್ಕೆ ಜೋಡಿಸಲಾಗಿದೆ. ನಗರದ ಬೀದಿಗಳು ಮೊಹೆಂಜೋದಾರೊ, ಕಾಲಿಬಂಗನ್‌ನಂತೆ ಪ್ರಧಾನ ದಿಶಾಭಿಮುಖ ವಾಗಿರದೆ ನಗರದ ಒಂದು ಕೇಂದ್ರಭಾಗದಿಂದ ಸುಮಾರು ನಾಲ್ಕರಿಂದ ಐದು ಬೀದಿಗಳು ಸೂರ್ಯನ ಕಿರಣಗಳಂತೆ ವಿವಿಧ ದಿಶೆಗಳಲ್ಲಿ ಚಾಚಿವೆ ಅಥವಾ ಇಂಥ ಬೀದಿಗಳು ವಿವಿಧ ದಿಕ್ಕುಗಳಿಂದ ಹೊರಟು ಬಂದು ಒಂದು ಕೇಂದ್ರಭಾಗದಲ್ಲಿ ಸೇರುತ್ತವೆ. (ಎಲ್.ಎಸ್.ಆರ್.)

ವ್ಯಾಪಾರ ಹಾಗೂ ವಾಣಿಜ್ಯೋದ್ಯಮವನ್ನು ಗಮನದಲ್ಲಿಟ್ಟುಕೊಂಡು ಕೆಲವು ನೆಲೆಗಳನ್ನು ವಿಶೇಷವಾಗಿ ಕರಾವಳಿ ತೀರದಲ್ಲಿ ಕಟ್ಟಿ ಬೆಳೆಸಲಾಗಿದೆ. ಮುಖ್ಯವಾದ ನೆಲೆಯೆಂದರೆ ಖಂಬತ್ ಕೊಲ್ಲಿಯಲ್ಲಿರುವ ಲೋಥಲ್ ನಗರ. ಸಾಬರಮತಿ ನದಿಯ ಒಂದು ಉಪನದಿಯ ಎಡದಂಡೆಯ ಮೇಲೆ ದೀರ್ಘಚತುರಸ್ರಾಕಾರದಂತಿರುವ ಲೋಥಲ್ ನಗರದ ಸುತ್ತಲೂ ಮಜಬೂತಾದ ಸುರಕ್ಷಾ ಗೋಡೆಯನ್ನು ಕಟ್ಟಲಾಗಿದೆ. ನಗರದ ಆಗ್ನೇಯ ದಿಶೆಯಲ್ಲಿ ಸುಟ್ಟಇಟ್ಟಿಗೆಯಿಂದ ಕಟ್ಟಲ್ಪಟ್ಟ ಎತ್ತರ ಕಟ್ಟೆಯ ಮೇಲೆ ಕಟ್ಟಡಗಳಿದ್ದ ಭಾಗವನ್ನು ಮೇಲ್‌ನಗರ ಎಂದು ಕರೆಯಲಾಗಿದೆ. ಸಿಂಧೂ–ಸರಸ್ವತಿ ಸಂಸ್ಕೃತಿಯ ಇತಿಹಾಸದಲ್ಲಿ ಪ್ರಥಮ ಬಾರಿಗೆ ಮಾನವ ನಿರ್ಮಿತ ಬಂದರನ್ನು ಅಳವಡಿಸಿ ರಚಿಸಿದ ನಗರವೇ ಲೋಥಲ್. ನಗರದ ಪೂರ್ವದುದ್ದಕ್ಕೂ ಸುಟ್ಟಇಟ್ಟಿಗೆಗಳಿಂದ ಕಟ್ಟಿದ ಬಂದರು ಕಟ್ಟೆ ಇದೆ. ಅದಕ್ಕೆ ಹೊಂದಿಕೊಂಡಂತೆ 219 ಮೀx13 ಮೀ ಉದ್ದಗಲವುಳ್ಳ ವಿಶಾಲವಾದ ಮಾನವ ನಿರ್ಮಿತ ಹೊಂಡವಿದೆ. ವ್ಯಾಪಾರ ನೌಕೆಗಳು ಈ ಹೊಂಡದಲ್ಲಿ ಲಂಗರು ಹಾಕಿ ನಿಲ್ಲುವುದಕ್ಕೆ ಬೇಕಾಗುವಷ್ಟು ನೀರಿನಮಟ್ಟವನ್ನು ಕಾಯ್ದಿಡುವುದು ಆವಶ್ಯಕವಾಗಿರುತ್ತದೆ. ಆದುದರಿಂದಾಗಿ ಈ ಹೊಂಡದಲ್ಲಿ ಯಾವಾಗಲೂ ಒಂದೇ ಮಟ್ಟಕ್ಕೆ ನೀರು ಇರುವುದಕ್ಕಾಗಿ ನದಿಯಿಂದ ಕಾಲುವೆಯನ್ನು ಕಟ್ಟಿ ಹೊಂಡಕ್ಕೆ ಜೋಡಿಸಲಾಗಿದೆ. ಅಲ್ಲದೆ ಹೆಚ್ಚಾದ ನೀರು ಕಾಲುವೆ ತೂಬಿನಿಂದ ಹೊರಹೋಗುವಂತೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಬಂದರು ಕಟ್ಟೆಯ ಪಕ್ಕದಲ್ಲಿಯೇ ಒಂದು ಉಗ್ರಾಣವಿದ್ದು ಅದರೊಳಗೆ ಸುಟ್ಟಮಣ್ಣಿನ ಅನೇಕ ಮುದ್ರಾಂಕನಗಳು ದೊರಕಿವೆ. ಈ ಮುದ್ರಾಂಕನಗಳ ಹಿಂಬದಿಯಲ್ಲಿ ಸರಕುಗಳ ಮೂಟೆಗಳನ್ನು ಕಟ್ಟಿದ ಹಗ್ಗ ಮತ್ತು ಬಟ್ಟೆಗಳ ಕುರುಹುಗಳು ಮುದ್ರಿತವಾಗಿವೆ.

ಆಯಕಟ್ಟಿನ ಸ್ಥಳದಲ್ಲಿ ಕಟ್ಟಲ್ಪಟ್ಟ ಅತಿ ಮಹತ್ವದ ನಗರವೆಂದರೆ, ಧೋಲಾವೀರ. ಗುಜರಾತ್ ರಾಜ್ಯದ ಕಚ್ಛ್ ಜಿಲ್ಲೆಯಲ್ಲಿರುವ ಧೋಲಾವೀರದಲ್ಲಿ ಸಿಂಧೂ–ಸರಸ್ವತಿ ನಾಗರಿಕತೆಯ ಅಡಿಪಾಯವನ್ನು ಆದಿ ಹರಪ್ಪ ಕಾಲದಲ್ಲಿ ಹಾಕಲಾಯಿತು. ಕೇವಲ ರಾಜಕೀಯ ಅಥವಾ ಸುರಕ್ಷಾಯುಕ್ತಿಗಳಲ್ಲದೆ ವ್ಯಾಪಾರ ದೃಷ್ಟಿಯಿಂದಲೂ ಈ ನೆಲೆ ಮಹತ್ತ್ವಪೂರ್ಣದ್ದಾಗಿದೆ. ಉತ್ತರದಲ್ಲಿ ಸರಸ್ವತಿ, ಘಗ್ಗರ್, ಹಾಕ್ರ ನದಿ ಹಾಗೂ ಸಿಂಧೂ ನದಿಯ ಮುಖಜಭೂಮಿಗಳ ವ್ಯಾಪಾರ ಸಂಬಂಧ, ದಕ್ಷಿಣದಲ್ಲಿ ಸೌರಾಷ್ಟ್ರ ಹಾಗೂ ಗುಜರಾತಿನಿಂದ ಹೋಗಿ ಬರುವ

ಎರಡು ಹಾದಿಗಳು ಕೂಡುವ ಸಂಧಿಸ್ಥಳ, ಧೋಲಾವೀರ

ವ್ಯಾಪಾರ ನೌಕೆಗಳ, ಕೋರಿ ಕೊಲ್ಲಿಯಿಂದ ಅರಬ್ಬಿಸಮುದ್ರದ ಮುಖಾಂತರ ನಡೆಸುತ್ತಿದ್ದ ಪಶ್ಚಿಮ ಏಷ್ಯ ಜೊತೆಗಿನ ಅಂತಾರಾಷ್ಟ್ರೀಯ ವ್ಯಾಪಾರ ಸಂಬಂಧಗಳ ನಿಯಂತ್ರಣವನ್ನು ಮಾಡಲಾಗುತ್ತಿತ್ತೆಂದು ತೋರಿಬರುತ್ತದೆ. ಈ ನೆಲೆಯ ವಿನ್ಯಾಸವೂ ಪ್ರಧಾನ ದಿಶಾಭಿಮುಖ ವಾಗಿದ್ದರೂ ನಗರದ ಒಳರಚನೆ ಇತರ ಹರಪ್ಪಸಂಸ್ಕೃತಿಯ ನೆಲೆಗಳಲ್ಲಿರುವುದಕ್ಕಿಂತ ಭಿನ್ನವಾಗಿದೆ. ಇದರಲ್ಲಿ ಒಟ್ಟು ಮೂರು ವಾಸಸ್ಥಾನಗಳಿದ್ದು– ದುರ್ಗ, ಮಧ್ಯನಗರ, ಕೆಳನಗರ–ಎಲ್ಲವೂ ಹಸಿಇಟ್ಟಿಗೆಗಳಿಂದ ಕಟ್ಟಿದ ಕೋಟೆಗೋಡೆಯಿಂದ ಆವೃತವಾಗಿವೆ. ಈ ಕೋಟೆಯ ನಿರ್ದಿಷ್ಟ ಅಂತರಗಳಲ್ಲಿ ಚತುರಸ್ರಾ ಕಾರದ ಬುರುಜುಗಳಿವೆ. ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ಎರಡು ಪ್ರಮುಖ ಪ್ರವೇಶದ್ವಾರ ಗಳಿವೆ. ನೆಲೆಯ ದಕ್ಷಿಣ ದಿಶೆಯಲ್ಲಿರುವ ದುರ್ಗ 300 ಮೀ x 300 ಮೀ ಇದ್ದು, ಕೆಳನಗರದ ಸಮತಟ್ಟಿನಿಂದ ಸು. 13ಮೀ ಎತ್ತರವಿದ್ದು, ಒರಟಾಗಿ ಕೆತ್ತಿದ ಕಲ್ಲಿನ ಹೊರಹೊದಿಕೆ ಯನ್ನು ಹೊದ್ದಿರುವ ಸ್ವತಂತ್ರ ಸುರಕ್ಷಾ ಗೋಡೆಯನ್ನು ಹೊಂದಿದೆ. ಒಂದೊಂದು ಗೋಡೆಗಳಲ್ಲಿ ನಾಲ್ಕು ಪ್ರವೇಶ ದ್ವಾರಗಳಿವೆ. ಆದರೆ ಉತ್ತರ ದಿಶೆಯಲ್ಲಿರುವ ಪ್ರವೇಶದ್ವಾರ ಪ್ರಮುಖ ವಾಗಿತ್ತೆಂದು ತೋರುತ್ತದೆ. ಏಕೆಂದರೆ ಈ ದ್ವಾರದ ಮುಂಭಾಗದಲ್ಲಿ ಆಯತಾ ಕಾರದ ಒಂದು ವಿಶಾಲ ಬಯಲಿದೆ. ಇದನ್ನು ಉತ್ಖನನಕಾರರು ಕ್ರೀಡಾಂಗಣ ಎಂದು ಗುರುತಿಸಿದ್ದಾರೆ. ಈ ಅಂಕಣ ದಿಂದ ಉತ್ತರ ದ್ವಾರದ ಸಂಪರ್ಕಕ್ಕಾಗಿ ಉತ್ತರ ಗೋಡೆಯ ಪೂರ್ವಾರ್ಧದ ಅಡಿಯುದ್ದಕ್ಕೂ ಒಂದು ಇಳಿಜಾರನ್ನು ಕಲ್ಪಿಸಲಾಗಿದೆ. ದ್ವಾರದ ಎಡ–ಬಲದಲ್ಲಿ ಕಾವಲುಗಾರರ ಎರಡು ದೊಡ್ಡ ಕೋಣೆಗಳಿವೆ. ಈ ಕೋಣೆಗಳ ಚಾವಣಿ ಯನ್ನು ಹೊತ್ತು ನಿಂತಿದ್ದ ಮರದ ಆಧಾರ ಸ್ತಂಭಗಳಿಗಾಗಿ ಕೆತ್ತಿ ನಯ ಮಾಡಿದ ದುಂಡು ಕಲ್ಲಿನ ಎರಡು ಪೀಠಗಳನ್ನು ಒದಗಿಸಲಾಗಿದೆ. ಇಂದಿಗೂ ಯಥಾ ಸ್ಥಾನದಲ್ಲಿರುವ ಈ ಕಲ್ಲಿನ ಪೀಠಗಳ ಆಧಾರದಿಂದಾಗಿ ಹರಪ್ಪ ಹಾಗೂ ಮೊಹೆಂಜೋದಾರೊವಿನಲ್ಲಿ ಸ್ಥಾನಪಲ್ಲಟವಾಗಿದ್ದ ಇಂಥದೇ ಕಲ್ಲಿನ ಪೀಠಗಳ ನಿಜವಾದ ಔಚಿತ್ಯವನ್ನರಿಯಲು ಸಾಧ್ಯವಾಗಿದೆ. ಈ ದ್ವಾರದ ಪಶ್ಚಿಮ ದಿಶೆಯ ಕೋಣೆಯಲ್ಲಿ ಹರಪ್ಪ ಕಾಲದ ಅತಿ ದೊಡ್ಡ ಶಾಸನ ಅಥವಾ ನಾಮಫಲಕವೊಂದು ದೊರಕಿದೆ. ಈ ಅಕ್ಷರಗಳನ್ನು ಬಿಳಿಯ ಜಿಪ್ಸಮ್ ಅಂಟು ಹಿಟ್ಟಿನಿಂದ ತಯಾರಿಸಿ ಮರದ ಫಲಕದಲ್ಲಿ ಕೊರೆದ ಈ ಅಕ್ಷರಗಳಲ್ಲಿ ತುಂಬಲಾಗಿದೆ. ಒಟ್ಟು ಹತ್ತು ಅಕ್ಷರ ಸಂಕೇತಗಳಿದ್ದು, ಪ್ರತಿ ಸಂಕೇತದ ಎತ್ತರ ಸು. 37 ಸೆಂಮೀ, ಅಗಲ 25 ರಿಂದ 27 ಸೆಂಮೀ ಇದೆ. ಈ ಅಕ್ಷರಗಳ ಸಮೂಹ ಒಂದು ಹೆಸರು ಅಥವಾ ಬಿರುದಾಗಿರಬಹುದೆಂದು ಅನುಮಾನಿಸಲಾಗಿದೆ. ಈ ಲಿಖಿತ ಫಲಕವನ್ನೂ ಉನ್ನತವಾದ ಉತ್ತರದ್ವಾರದ ಮೇಲ್ಭಾಗದಲ್ಲಿ ತೂಗು ಹಾಕಿದ್ದಿರಬೇಕು. ದುರ್ಗದ ಉತ್ತರ ದಿಶೆಯಲ್ಲಿರುವ ಕ್ರೀಡಾಂಗಣದಿಂದಾಚೆ ಇರುವ ಮಧ್ಯನಗರದ ವಿಸ್ತೀರ್ಣ 360x250 ಮೀ ಇದ್ದು, ನಾಲ್ಕು ದಿಶೆಯಿಂದಲೂ ಸುರಕ್ಷಾ ಗೋಡೆಯಿಂದ ಆವೃತವಾಗಿದೆ. ನಾಲ್ಕು ಗೋಡೆಗಳಲ್ಲಿ ಒಂದೊಂದು ಪ್ರವೇಶದ್ವಾರಗಳನ್ನು ಒದಗಿಸಲಾಗಿದೆ. ಮಧ್ಯನಗರದ ಪೂರ್ವ ದಿಶೆಯಲ್ಲಿ ಕೆಳನಗರವಿದ್ದು, ಅದಕ್ಕೆ ಸ್ವತಂತ್ರವಾದ ಸುರಕ್ಷಾ ಗೋಡೆಗಳಿಲ್ಲ. ಆದರೆ ಈ ಮೂರೂ ವಾಸಸ್ಥಾನಗಳನ್ನಾವರಿಸಿ ಒಂದು ಬಾಹ್ಯ ಸುರಕ್ಷಾ ಗೋಡೆಯಿದೆ. ಕೆಳನಗರದಲ್ಲಿಯ ಕೆಲವು ಸ್ಥಳಗಳನ್ನು ವಿವಿಧ ಕಸುಬುಗಳ ನೆಲೆಗಳೆಂದು ಗುರುತಿಸಲಾಗಿದೆ. ಉದಾ: ಅಗೇಟ್ ಮಣಿಗಳ, ಶಂಖದ ಉದ್ಯಮ, ಕುಂಬಾರನ ಆವಿಗೆಗಳು ಇತ್ಯಾದಿ. ಈ ಉದ್ಯಮ ಸ್ಥಳಗಳನ್ನು ಹೊಂದಿಕೊಂಡೇ ಜನರು ವಾಸಿಸುವ ಕಟ್ಟಡಗಳಿವೆ. ನಗರ ಬೀದಿಗಳು ಪ್ರಧಾನ ದಿಶಾಭಿಮುಖವಾಗಿ ಒಂದನ್ನೊಂದು ಸಮಾಂತರಭುಜಗಳಲ್ಲಿ

ಕಂಬದ ಪೀಠ, ಧೋಲಾವೀರ

ಕಂಬಗಳು, ಧೋಲಾವೀರ

ಛೇದಿಸಿವೆ. ಇದರಿಂದ ಉಂಟಾದ ನಾಲ್ಕು ಭಾಗಗಳಲ್ಲಿ ಸಾಲು ಮನೆಗಳಿವೆ. ಆದಿಪ್ರೌಢ ಹರಪ್ಪ ಕಾಲದಿಂದಲೇ ಕಲ್ಪಿಸಿದ ನೀರು ಸರಬರಾಜು ವ್ಯವಸ್ಥೆಯಲ್ಲಿ ಇನ್ನಷ್ಟು ಪ್ರಗತಿಯನ್ನು ಸಾಧಿಸಲಾಯಿತು. ಸು.10 ಹೆ. ನಷ್ಟು ಜಮೀನಿನ ಭಾಗವನ್ನು ನೀರಿನ ತೊಟ್ಟಿಗಳಿಗಾಗಿ ಬಳಸಲಾಗಿದೆಯೆಂದು ಉತ್ಖನನಕಾರರು ಅಂದಾಜು ಮಾಡಿದ್ದಾರೆ. ಈ ನೆಲೆಯ ಪಶ್ಚಿಮ ದಿಶೆಯಲ್ಲಿ ಹರಪ್ಪ ಕಾಲದ ಸ್ಮಶಾನವಿದ್ದು ಅಂದಿನ ಸಮಾಜದಲ್ಲಿ ಪ್ರಚಲಿತವಿದ್ದ ಶವಸಂಸ್ಕಾರ ವಿಧಿಗಳ ಬಗ್ಗೆ ವಿಶೇಷ ಮಾಹಿತಿ ದೊರಕಿದೆ.

ಇದುವರೆಗೆ ಶೋಧಿಸಲ್ಪಟ್ಟ ಸಾವಿರಾರು ನೆಲೆಗಳಲ್ಲಿ ತಮ್ಮ ಅಸಾಧಾರಣ ಗಾತ್ರ, ವೈವಿಧ್ಯಮಯ ಅವಶೇಷ ಹಾಗೂ ಕಟ್ಟಡ/ಭವನಗಳಿಂದಾಗಿ ಇಂದಿಗೂ ಹರಪ್ಪ ಮತ್ತು ಮೊಹೆಂಜೋದಾರೊ ಪ್ರೌಢ ಹರಪ್ಪ ಸಂಸ್ಕೃತಿಯ ಪ್ರಮುಖ ನೆಲೆಗಳಾಗಿವೆ. ಈಗಿನ ಪಾಕಿಸ್ತಾನದ ಸಿಂಧ್ ಪ್ರಾಂತದಲ್ಲಿ ಹರಿಯುವ ಸಿಂಧೂ ನದಿಯ ಬಲದಂಡೆಯಲ್ಲಿರುವ ಮೊಹೆಂಜೋದಾರೊ ನೆಲೆಯನ್ನು 1921ರಲ್ಲಿ ಪ್ರಥಮ ಬಾರಿಗೆ ಸರ್ ಜಾನ್ ಮಾರ್ಷಲ್‌ರ ನೇತೃತ್ವದಲ್ಲಿ, ಅನಂತರ 1931ರಲ್ಲಿ ಇ.ಜೆ.ಎಚ್ ಮ್ಯಾಕೆಯವರ ನಿರ್ದೇಶನದಲ್ಲಿ ಅಗೆಯಲಾಯಿತು. 1947ರಲ್ಲಿ ಭಾರತದ ವಿಭಜನೆಯ ಅನಂತರವೂ ಮಾರ್ಟಿಮರ್ ವೀಲರ್ ಹಾಗೂ ಪೆನ್‌ಸಿಲ್ವೇನಿಯ ವಿಶ್ವವಿದ್ಯಾಲಯದ ಜಾರ್ಜ್‌ಡೇಲ್ಸ್ ಮೊಹೆಂಜೋದಾರೊದ ಉತ್ಖನನ ಕಾರ್ಯವನ್ನು ಮುಂದುವರೆಸಿದರು. ಆದರೆ ಇಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿರುವುದರಿಂದಾಗಿ ಉತ್ಖನನಗಳಲ್ಲಿ ಈ ನೆಲೆಯ ತಳವನ್ನು ತಲುಪಲಾಗಲಿಲ್ಲ. ಪಾಕಿಸ್ತಾನದ ಪಂಜಾಬ್ ಪ್ರಾಂತದಲ್ಲಿರುವ ಹರಪ್ಪ ನೆಲೆ ಸಿಂಧೂ ನದಿಯ ಉಪನದಿಯಾದ, ಬತ್ತಿಹೋದ ರಾವಿ ನದಿಯ ಎಡದಂಡೆಯ ಮೇಲಿದೆ. 1920ರಲ್ಲಿ ಜಾನ್ ಮಾರ್ಷಲ್ ಹಾಗೂ 1934 ರ ಅವಧಿಯಲ್ಲಿ ಪಂಡಿತ ಮಾಧೋಸ್ವರೂಪ ವತ್ಸರ ನಿರ್ದೇಶನದಲ್ಲಿ ಇಲ್ಲಿ ಉತ್ಖನನ ನಡೆಸಲಾಯಿತು. ತದನಂತರ 1946 ರಲ್ಲಿ ಮಾರ್ಟಿಮರ್ ವೀಲರ್ ಪುನಃ ಉತ್ಖನನಗೈದರು. ತತ್ಪರಿಣಾಮವಾಗಿ ಪ್ರೌಢ ಸಿಂಧೂ–ಸರಸ್ವತಿ ಸಂಸ್ಕೃತಿಗಿಂತಲೂ ಪೂರ್ವದಲ್ಲಿದ್ದ ಹರಪ್ಪ ಪೂರ್ವ ಸಂಸ್ಕೃತಿಯ ಅವಶೇಷಗಳನ್ನು ಪ್ರಥಮ ಬಾರಿಗೆ ಈ ನೆಲೆಯಿಂದ ಬೆಳಕಿಗೆ ತರಲಾಯಿತು. ಪುನಃ 1990ರ ದಶಕದಲ್ಲಿ ಮೆಡೋಸ್ ಮತ್ತು ಕೆನೋಯರ್ ನಡೆಸಿದ ಉತ್ಖನನದಿಂದಾಗಿ ಹರಪ್ಪ ನೆಲೆಯ ಇತಿಹಾಸ ಹಾಕ್ರ ಮಣ್ಪಾತ್ರೆ ಸಂಸ್ಕೃತಿಯಷ್ಟು (ಈ ಸಂಸ್ಕೃತಿಯನ್ನು ಉತ್ಖನನಕಾರರು ರಾವಿ ಸಂಸ್ಕೃತಿ ಎಂದು ಸಂಬೋಧಿಸಿದ್ದಾರೆ) ಪ್ರಾಚೀನದ್ದೆಂದು ತಿಳಿದುಬಂದಿದೆ.

ಹರಪ್ಪ ಮತ್ತು ಮೊಹೆಂಜೋದಾರೊ ನೆಲೆಗಳಲ್ಲಿ ನಡೆಸಿದ ಉತ್ಖನನಗಳಿಂದಾಗಿ ಹರಪ್ಪ ಕಾಲದ ನಗರಗಳ ವಿನ್ಯಾಸ, ವಾಸ್ತು ರಚನೆ, ಕಲೆ ಮತ್ತು ಕಸಬುಗಳ, ಅಂದಿನ ಜನಜೀವನ ಶೈಲಿಗೆ ಸಂಬಂಧಪಟ್ಟ ಹೇರಳ ಹಾಗೂ ವಿಶಿಷ್ಟ ಮಾಹಿತಿ ದೊರಕಿದೆ. ಆದರೆ 1947ಕ್ಕೂ ಪೂರ್ವದಲ್ಲಿ ನಡೆಸಿದ ಉತ್ಖನನದ ಕಾರ್ಯತಂತ್ರಗಳ ಮಿತಿಗಳಿಂದಾಗಿ ಈ ನಗರಗಳು ಹಂತ ಹಂತವಾಗಿ ಬೆಳೆದು ಬಂದ ವಿಷಯವಾಗಲೀ ಅಥವಾ ಅದಕ್ಕೆ ಸಂಬಂಧಿಸಿದ ಕಾಲಾವಧಿಯನ್ನಾಗಲೀ ತಿಳಿಯಲಾಗಲಿಲ್ಲ. ಆದರೂ ಈ ಸಂಸ್ಕೃತಿಯ ಕೆಲವು ಮೂಲಭೂತ ಲಕ್ಷಣಗಳನ್ನು ಈ ಎರಡೂ ನೆಲೆಗಳು ಒದಗಿಸಿಕೊಟ್ಟಿವೆ. ಪ್ರೌಢ ಹರಪ್ಪ ಕಾಲದಲ್ಲಿ ಅತಿ ಸುಂದರ ಹಾಗೂ ಉಚ್ಚಸ್ತರದ ಪೌರಾಡಳಿತದ ಪ್ರಶಾಸನವನ್ನು ಹೊಂದಿದ ಸುಸಜ್ಜಿತ ನಗರಗಳು ಈ ನೆಲೆಗಳಲ್ಲಿ ಅಸ್ತಿತ್ವಕ್ಕೆ ಬಂದವು. ಕೇವಲ ನಗರಗಳೊಂದೇ ಅಲ್ಲದೆ, ಬಹು ವಿಸ್ತಾರವಾದ ಭೂಭಾಗದಲ್ಲಿ ಬೆಳೆದು ನಿಂತ ಈ ಸಂಸ್ಕೃತಿಯ ಏಕರೂಪತೆಯೂ ಮಹತ್ತ್ವದ ಲಕ್ಷಣವಾಗಿದೆ. ಸಾಂಸ್ಕೃತಿಕ ಏಕರೂಪತೆಯ ಅರ್ಥ ಎಲ್ಲ ಸ್ಥಳಗಳಲ್ಲಿ ಒಂದೇ ಪದ್ಧತಿಯನ್ನು ಚ್ಯುತಿಬಾರದಂತೆ ಅನುಸರಿಸಿಕೊಂಡು ಹೋಗುವ ವ್ಯವಸ್ಥೆಯಲ್ಲ. ಬಾಹ್ಯದೃಷ್ಟಿಗೆ ಒಂದೇ ರೀತಿಯಾಗಿ ಕಂಡರೂ ಸ್ಥಳೀಯ ಆವಶ್ಯಕತೆಗಳಿಗೆ ಅನುಗುಣವಾಗಿ ವ್ಯವಸ್ಥೆಯಲ್ಲಿ ಮಾರ್ಪಾಟುಗಳನ್ನು ಮಾಡಿಕೊಳ್ಳಲಾಗಿದೆ. ಇಂಥ ಏಕರೂಪತೆಯನ್ನು ಪ್ರೌಢ ಹರಪ್ಪ ನಗರಗಳ ತಳವಿನ್ಯಾಸ, ಕಟ್ಟಡಗಳ ರಚನಾಕ್ರಮ, ನಿರ್ದಿಷ್ಟ ಪ್ರಮಾಣಮಾನವನ್ನು ಹೊಂದಿದ ಕಟ್ಟಡ ಸಾಮಾಗ್ರಿಗಳಲ್ಲಿ ಕಾಣಬಹುದು. ಏಕರೂಪತೆಯನ್ನು ಹೊಂದಿದ ಕೆಳನಗರದ ಮನೆಗಳು, ಉತ್ತಮ ಬೀದಿ, ಓಣಿ, ಒಳೋಣಿಗಳು, ಸಾರ್ವಜನಿಕ ಒಳಚರಂಡಿಗಳ ಅಥವಾ ಮನೆಗಳಿಂದ ಹೊರಬರುವ ಕೊಳಚೆ ನೀರನ್ನು ಸಂಗ್ರಹಿಸಲು ಬೀದಿಗಳಲ್ಲಿ ಹೂಳಿದ ದೊಡ್ಡ ದೊಡ್ಡ ಜಾಡಿಗಳ ವ್ಯವಸ್ಥೆ, ವಿವಿಧ ಕಸಬುಗಳನ್ನಾಧರಿಸಿ ವಿಂಗಡಿಸಲ್ಪಟ್ಟ ನಗರದ ವಿವಿಧ ಭಾಗಗಳ ಬೀದಿಗಳುದ್ದಕ್ಕೂ ಕಲ್ಪಿಸಿದ ವ್ಯಾಪಾರದ ಮಳಿಗೆಗಳು, ವಸ್ತುಗಳ ತಯಾರಿಕೆಯಲ್ಲಿ ಕಂಡುಬರುವ ತಾಂತ್ರಿಕತೆಯ ಪ್ರಮಾಣಮಾನ ವ್ಯವಸ್ಥೆ– ಇಂಥ ದೃಶ್ಯ ಅನುಶಾಸನಾತ್ಮಕವಾಗಿ ಪೌರಾಡಳಿತದ ಕಾಯ್ದೆ ಕಾನೂನುಗಳ ಬಗ್ಗೆ ಅವಿಭಾಜ್ಯ ಪ್ರಾಚೀನ ಭಾರತೀಯರಲ್ಲಿದ್ದ ಆಸ್ಥೆಯನ್ನು ದರ್ಶಿಸುತ್ತದೆ. ಇದೊಂದು ಶ್ಲಾಘನೀಯ ಸಂಗತಿ, ಹೆಮ್ಮೆಪಡತಕ್ಕಂಥ ವಿಷಯ.

ವಾಸ್ತು ನಿರ್ಮಿತಿಗಳು: ಪ್ರೌಢಹರಪ್ಪ ಕಾಲದ ನಗರ ಅಥವಾ ಗ್ರಾಮಗಳ ಕಟ್ಟಡಗಳಲ್ಲಿ ಉಪಯೋಗಿಸಿದ ಕಚ್ಚಾ ಸರಕುಗಳೆಂದರೆ ಹಸಿ ಹಾಗೂ ಸುಟ್ಟ ಇಟ್ಟಿಗೆ, ಮರ ಹಾಗೂ ಹುಲ್ಲು. ಆದರೆ ಬೆಟ್ಟಗಳ ತಪ್ಪಲು ಪ್ರದೇಶದಲ್ಲಿ, ಕಚ್ಛ್ ಸೌರಾಷ್ಟ್ರ ಪ್ರಾಂತಗಳಲ್ಲಿ ಸ್ಥಳೀಯವಾಗಿ ದೊರೆಯುವ ಕಲ್ಲನ್ನು ಮನೆ, ಕೋಟೆ ಇತ್ಯಾದಿ ಕಟ್ಟಡಗಳಲ್ಲಿ ಹೇರಳವಾಗಿ ಉಪಯೋಗಿಸಲಾಗಿದೆ. ಒರಟಾಗಿ ಅಥವಾ ನಯವಾಗಿ ಕೆತ್ತಿದ ಸೂಕ್ತ ಆಕಾರದ ಕಲ್ಲುಗಳನ್ನು ಇಟ್ಟಿಗೆಯ ಬದಲಿಗೆ ಉಪಯೋಗಿಸಲಾಗಿದೆ. ಇಟ್ಟಿಗೆಗಳನ್ನು ಪೂರ್ವ ನಿರ್ಧರಿತ ಅನುಪಾತವಾದ 4:2:1 ರ ಪ್ರಮಾಣದಲ್ಲಿ ತಯಾರಿಸಲಾಗಿದೆ. ಹಸಿಇಟ್ಟಿಗೆ, ಸುಟ್ಟ ಇಟ್ಟಿಗೆ ಹಾಗೂ ಕಲ್ಲುಗಳನ್ನು ಅಡಿಪಾಯ ಮತ್ತು ಗೋಡೆಗಳಲ್ಲಿ ಉಪಯೋಗಿಸಿದ್ದರೆ, ಬಾಗಿಲು, ಕಂಬ, ಕಿಟಕಿಗಳಿಗೆ ಮರ ಮತ್ತು ಚಾಪೆಗಳನ್ನು ಉಪಯೋಗಿಸಲಾಗಿದೆ. ಮನೆಯ ನೆಲಗಟ್ಟನ್ನು ದಮ್ಮಸು ಮಾಡಿ ಮೇಲೆ ಗಿಲಾವು ಮಾಡುತ್ತಿದ್ದರು. ಸ್ನಾನಗೃಹ ಮತ್ತು ಚರಂಡಿಗಳನ್ನು ಸುಟ್ಟ ಇಟ್ಟಿಗೆಗಳಿಂದ ಕಟ್ಟುತ್ತಿದ್ದರು. ಕೆಲವು ಮನೆಗಳಲ್ಲಿ ನೆಲವನ್ನು ಇಟ್ಟಿಗೆ ಹಾಸು ಅಥವಾ ಸುಟ್ಟಮಣ್ಣಿನ ಹೆಂಚು/ಬಿಲ್ಲೆಗಳಿಂದ ಅಲಂಕರಿಸಲಾಗಿದೆ. ಮರ, ಹುಲ್ಲು ಮತ್ತು ಹಸಿಮಣ್ಣಿನಿಂದ ಚಾವಣಿಯನ್ನು ಕಟ್ಟಲಾಗುತ್ತಿತ್ತು. ಅಂದಿನ ಕಾಲದ ಮರದ ಅವಶೇಷಗಳು ದೊರಕಿಲ್ಲ. ಆದರೆ ಗೋಡೆಗಳನ್ನಾವರಿಸಿ ನಿಂತ ಮರದ ಗೋಡೆಗಂಬಗಳ ಅಚ್ಚೊತ್ತುಗಳನ್ನುಳ್ಳ ಹಸಿಇಟ್ಟಿಗೆಯ ಗೋಡೆಗಳ ಅವಶೇಷಗಳು ಬನಾವಳಿ ಮತ್ತು ಭಿರಡಾಣದಲ್ಲಿ ಸಿಕ್ಕಿವೆ. ಜೊತೆಗೆ ಉತ್ಖನನದಲ್ಲಿ ದೊರೆತ ಸುಟ್ಟಮಣ್ಣಿನ ಫಲಕಗಳಲ್ಲಿ ಬಾಗಿಲು, ಕಿಟಕಿಗಳ ಪ್ರತಿಕೃತಿ ಚಿತ್ರಗಳಿವೆ. ಇಂಥ ನಗರಗಳ ನಿರ್ಮಾಣಕ್ಕಾಗಿ ವಡ್ಡ, ಬಡಿಗೇರ, ಇಟ್ಟಿಗೆಕಾರ ಹಾಗೂ ಇನ್ನಿತರ ಕುಶಲಕರ್ಮಿಗಳ ವರ್ಗಗಳು ಅಂದಿನ ಸಮಾಜದ ಅವಿಭಾಜ್ಯ ಅಂಗಗಳಾಗಿದ್ದವೆಂಬುದು ಸ್ಪಷ್ಟ.



**ಉತ್ಖನನಗೊಂಡ ಧೋಲಾವೀರ ನೆಲೆಯ ಒಂದು ಭಾಗ**

ಉತ್ಖನನದಿಂದಾಗಿ ವಿವಿಧ ಪ್ರಕಾರದ ಮನೆಗಳು, ಸಾರ್ವಜನಿಕ ಕಟ್ಟಡಗಳುಳ್ಳ ನಗರ ಹಾಗೂ ಹಳ್ಳಿಗಳನ್ನು ಬೆಳಕಿಗೆ ತರಲಾಗಿದೆ. ನಗರ ಮತ್ತು ಹಳ್ಳಿಗಳಲ್ಲಿಯ ಕಟ್ಟಡಗಳಲ್ಲಿರುವ ವ್ಯತ್ಯಾಸವನ್ನು ಸರಕುಗಳ ಸಂಯೋಜನೆಯಿಂದ ತಿಳಿಯಬಹುದು. ಹಳ್ಳಿಗಳಲ್ಲಿ ಮನೆಗಳನ್ನು ಕೇವಲ ಹಸಿಇಟ್ಟಿಗೆಗಳಿಂದ ಕಟ್ಟಿದ್ದರೆ, ಅವುಗಳ ಅಡಿಪಾಯ ಹಾಗೂ ಮಳೆನೀರು ಹರಿದು ಹೋಗಲು ಕಟ್ಟಿದ ಚರಂಡಿಗಳಲ್ಲಿ ಸುಟ್ಟ ಇಟ್ಟಿಗೆ ಅಥವಾ ಕಲ್ಲನ್ನು ಉಪಯೋಗಿಸಲಾಗಿದೆ. ಕೆಲವು ನಗರಗಳಲ್ಲಿ ಮನೆಗಳನ್ನು ಒಣ ಇಟ್ಟಿಗೆಯಿಂದ ಕಟ್ಟಿದ್ದರೂ ಹೆಚ್ಚಾಗಿ ಭವನಗಳಲ್ಲಿ ಸಂಪೂರ್ಣವಾಗಿ ಇಲ್ಲವೆ ಆಂಶಿಕವಾಗಿ ಸುಟ್ಟ ಇಟ್ಟಿಗೆಗಳನ್ನು ಉಪಯೋಗಿಸಲಾಗಿದೆ. ಮನೆಗಳ ಮಧ್ಯಭಾಗದಲ್ಲಿ ಸಾಮಾನ್ಯವಾಗಿ ಸಮಚತುರ್ಭುಜ ಮುಕ್ತ ಅಂಗಳವಿದ್ದು ಅದರ ಸುತ್ತಲೂ ಕೋಣೆಗಳಿರುತ್ತವೆ. ಮನೆಗಳ ಮುಖ್ಯದ್ವಾರ ಮತ್ತು ಕಿಟಕಿಗಳು ಮುಖ್ಯ ಬೀದಿಯೆಡೆ ಇರದೆ, ಪಕ್ಕದಲ್ಲಿರುವ ಓಣಿಗಳ ಕಡೆಗಿನ ಗೋಡೆಗಳಲ್ಲಿ ಇರುತ್ತದೆ. ಓಣಿಯಲ್ಲಿ ಓಡಾಡುವ ಜನರ ದೃಷ್ಟಿಗೆ ಮನೆಯೊಳಗೆ ನಡೆಯುವ ಕಾರ್ಯಕಲಾಪಗಳು ಬೀಳದಂತೆ ಒಂದು ಅಡ್ಡಗೋಡೆಯನ್ನು ಕಟ್ಟಲಾಗುತ್ತಿತ್ತು. ಕೆಲಮನೆಗಳು ಎರಡು ಅಥವಾ ಮೂರು ಮಹಡಿಗಳಿಂದ ಕೂಡಿದ್ದವು. ಮಹಡಿಗೆ ಅಥವಾ ಚಾವಣಿಗೆ ಹೋಗಲು ಯಾವುದಾದರೊಂದು ಕೋಣೆಯಲ್ಲಿ ಅಥವಾ ಮುಕ್ತ ಅಂಗಳದಲ್ಲಿ ಸೋಪಾನವಿರುತ್ತಿತ್ತು. ಬಾಗಿಲುಗಳು ಮರದ ಚೌಕಟ್ಟನ್ನು ಹೊಂದಿದ್ದು, ಹೊಸ್ತಿಲಿನ ಹಿಂಭಾಗದಲ್ಲಿ ಬಾಗಿಲ ಕವಾಟುಗಳು ತಿರುಗುವುದಕ್ಕಾಗಿ ಇಟ್ಟಿಗೆಯ ಕುಳಿಯನ್ನಿಡಲಾಗುತ್ತಿತ್ತು. ಪ್ರಥಮ ಮತ್ತು ಎರಡನೆಯ ಮಹಡಿಗಳ ಕಿಟಕಿಗಳಿಗೆ ಕದಗಳಿದ್ದು ಅವುಗಳ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಜಾಲಂಧ್ರವುಳ್ಳ ಅಡ್ಡಕಂಬಿಗಳಿದ್ದುವು. ಇಂತಹ ಕಿಟಕಿಯ ಕದಗಳನ್ನು ಏಕಾಂತಕ್ಕಾಗಿ ಮುಚ್ಚಿದಾಗಲೂ ಗಾಳಿ, ಬೆಳಕಿಗೆ ಕೊರತೆಯಿರದು. ಜಾಲಂಧ್ರವುಳ್ಳ ಕಿಟಕಿಯ ಕದಗಳನ್ನು ಬಹುಶಃ ಮರ ಅಥವಾ ಹುಲ್ಲು ಕಡ್ಡಿಯ ಚಾಪೆಯಿಂದ ತಯಾರಿಸಿರಬಹುದು. ಈ ರೀತಿಯ ಜಾಲಂಧ್ರಯುಕ್ತ ಕಿಟಕಿಗಳ ಉದಾಹರಣೆಗಳು ಶಿಲೆ ಹಾಗೂ ಹಾಲುಗಲ್ಲಿನಲ್ಲಿ ಕೊರೆದ ಅವಶೇಷಗಳ ರೂಪದಲ್ಲಿ ಮೊಹೆಂಜೋದಾರೊ ಮತ್ತು ಹರಪ್ಪ ನೆಲೆಗಳಿಂದ ದೊರೆತಿವೆ. ಇಂಥ ಮನೆಗಳಲ್ಲದೆ, ಬಹುದೊಡ್ಡ ಸೌಧಗಳು ಹಾಗೂ ಸಾರ್ವಜನಿಕ ಭವನಗಳನ್ನು ಮೊಹೆಂಜೋದಾರೊವಿನ ದುರ್ಗದ ಮೇಲಿರುವ ಕಟ್ಟಡಗಳಲ್ಲಿ ಕಾಣಬಹುದು. ಇವುಗಳಲ್ಲಿ ಮಹತ್ತ್ವದ ಕಟ್ಟಡಗಳೆಂದರೆ ಕಣಜ, ಬೃಹತ್ ಸ್ನಾನಗೃಹ, ಮಹಾವಿದ್ಯಾಲಯ, ಸಭಾಗೃಹ, ಮಾರುಕಟ್ಟೆಯ ಸ್ಥಾನ ಅಥವಾ ಸಾರ್ವಜನಿಕ ಸಭಾಸ್ಥಾನ, ಮುಖ್ಯಸ್ಥನ ಮನೆ, ದೇವಾಲಯ ಇತ್ಯಾದಿ.

ಬೃಹತ್ ಸ್ನಾನದ ಕೊಳ: ಮೊಹೆಂಜೋದಾರೊವಿನ ದುರ್ಗದಲ್ಲಿರುವ ಈ ಸ್ನಾನಗೃಹದಲ್ಲಿ ಪ್ರಪಂಚದ ಅತ್ಯಂತ ಪ್ರಾಚೀನ ಕೊಳವಿದೆ. ಅನೇಕ ವಿದ್ವಾಂಸರ ಪ್ರಕಾರ ಇದು ಈಜುಕೊಳ. ಈ ಕೊಳದ ಉದ್ದಗಲ ಹಾಗೂ ಆಳ ಇಂತಿವೆ: ಉತ್ತರ–ದಕ್ಷಿಣ 12 ಮೀ; ಪೂರ್ವ–ಪಶ್ಚಿಮ 7 ಮೀ; ಇದರ ಅತಿ ಹೆಚ್ಚಿನ ಆಳ 2.4ಮೀ ನೀರಿಗಿಳಿಯಲು ಉತ್ತರ ಹಾಗೂ ದಕ್ಷಿಣ ದಿಶೆಯಲ್ಲಿ ಸೋಪಾನಗಳಿವೆ. ಮೆಟ್ಟಲಿನ ಕೆಳಮಟ್ಟದಲ್ಲಿ ಸುತ್ತಲೂ ಮುಂಚಾಚಿದ



ಬೃಹತ್ ನೀರಿನ ಕೊಳ, ಮೊಹೆಂಜೋದಾರೊ

ಕಿರಿಯಗಲದ ಕಟ್ಟೆಯಿದೆ. ಈ ಮುಂಚಾಚಿದ ಕಟ್ಟೆಯ ಮೇಲೆ ಸುತ್ತಲೂ ನಡೆದಾಡಬಹುದು. ಕೊಳದ ನೀರು ಸೋರಿಹೋಗದಂತೆ ಇದರ ನೆಲಕ್ಕೆ ಇಟ್ಟಿಗೆಗಳನ್ನು ಹಾಸಿ ಜಿಪ್ಸಮ್ ಗಿಲಾವಿನಿಂದ ಭದ್ರವಾಗಿ ಜೋಡಿಸಲಾಗಿದೆ. ಕೊಳದ ಗೋಡೆಗಳನ್ನೂ ಇದೇ ರೀತಿಯಾಗಿ ಭದ್ರಪಡಿಸಲಾಗಿದೆ. ಇಷ್ಟಲ್ಲದೆ ಕೊಳದ ನಾಲ್ಕು ಪಾರ್ಶ್ವಗಳಲ್ಲಿ ಬಹುಶಃ ನೆಲಗಟ್ಟಿನಡಿಯಲ್ಲಿಯೂ ಗಾಜಿನಂತೆ ಬಿಟುಮೆನ್‌ನ ಒಂದು ಪದರವನ್ನೇರಿಸಲಾಗಿದೆ. ನೆಲಗಟ್ಟು ನೈರುತ್ಯ ದಿಶೆಯ ಕಡೆ ಇಳಿಜಾರಾಗಿದ್ದು, ಆ ದಿಶೆಯಲ್ಲಿ ಕಲ್ಪಿಸಿದ ಚರಂಡಿ ಮಾರ್ಗವಾಗಿ ನೀರು ಹೊರಗೆ ಹರಿದುಹೋಗುತ್ತಿತ್ತು. ಈ ಸ್ನಾನಗೃಹ ಸಂಕೀರ್ಣವನ್ನು ಪ್ರವೇಶಿಸಲು ದಕ್ಷಿಣ ದಿಶೆಯಲ್ಲಿರುವ ಎರಡು ದ್ವಾರಗಳಲ್ಲದೆ, ಉತ್ತರ ಮತ್ತು ಪೂರ್ವ ದಿಶೆಗಳಲ್ಲಿಯೂ ಇತರ ಎರಡು ಪ್ರವೇಶ ದ್ವಾರಗಳಿವೆ. ಕೊಳದ ಪೂರ್ವ ಅಂಚಿನಲ್ಲಿ ಕೋಣೆಗಳಿವೆ. ಇಂತಹ ಒಂದು ಕೋಣೆಯಲ್ಲಿರುವ ಬಾವಿಯಿಂದ ಕೊಳಕ್ಕೆ ನೀರು ಪೂರೈಸಲಾಗುತ್ತಿತ್ತೆಂದು ತೋರುತ್ತದೆ. ಈ ಸ್ನಾನಗೃಹ ಸಾರ್ವಜನಿಕ ಉಪಯೋಗಕ್ಕಾಗಿರದೆ, ಕೆಲವು ವಿಶೇಷ ಧಾರ್ಮಿಕ ಸಂಸ್ಕಾರಗಳಿಗಾಗಿ ಇದನ್ನು ಉಪಯೋಗಿಸುತ್ತಿದ್ದಿರಬಹುದೆಂದು ವಿದ್ವಾಂಸರ ಅಭಿಮತ.

ಕಣಜಗಳು: ಬೃಹತ್ ಸ್ನಾನಗೃಹದ ನೈರುತ್ಯ ದಿಶೆಯಲ್ಲಿರುವ ಇನ್ನೊಂದು ಸಾರ್ವಜನಿಕ ಕಟ್ಟಡವನ್ನು ಮೊದಲು ಬಿಸಿ ಹಬೆಯ ಸ್ನಾನಗೃಹ (ಹಮಾಮ್) ಎಂದು, ಅನಂತರ ಇದನ್ನು ರಾಜ್ಯಕಣಜ ಎಂದು ಗುರುತಿಸಲಾಗಿದೆ. ಮಜಬೂತಾದ ಇಟ್ಟಿಗೆಯ ಅಡಿಪಾಯವನ್ನು

ಉಗ್ರಾಣದ ತಳಪಾಯ, ಹರಪ್ಪ

ಹೊಂದಿದ ಈ ಭವನ ಪೂರ್ವ–ಪಶ್ಚಿಮವಾಗಿ 50 ಮೀ ಉದ್ದ, ಉತ್ತರ–ದಕ್ಷಿಣವಾಗಿ 27 ಮೀ ಅಗಲವಿದೆ. ಈ ಕಟ್ಟಡದಲ್ಲಿ ಒಟ್ಟು 27 ಚತುರಸ್ರ ಹಾಗೂ ಆಯತಾಕಾರದ ಪೀಠಗಳ ಕಟ್ಟೆಗಳಿದ್ದು (ಬ್ಲಾಕ್ಸ್) ಇವುಗಳ ನಡುವೆ ಅಡ್ಡಾಡಲು ದಾರಿಗಳುಂಟು. ಇದರ ನೈರುತ್ಯ ಮೂಲೆಯಲ್ಲಿ ಒಂದು ವಿಶಾಲ ಸೋಪಾನವಿದೆ. ಅದರ ಅಡಿಭಾಗದಲ್ಲಿ ಒಂದು ಬಾವಿ ಮತ್ತು ಸೋಪಾನದ ಮೇಲೆ ಒಂದು ಸ್ನಾನದ ಕಟ್ಟೆಯೂ ಇವೆ. ಕಣಜದ ಉತ್ತರ ಭಾಗದಲ್ಲಿ ಮರದ ತೊಲೆಗಳಿಗಾಗಿ ಮಾಡಿದ ಗುಳಿಗಳುಳ್ಳ ಒಂದು ಎತ್ತರ ಕಟ್ಟೆ ಇದೆ. ಬಹುಶಃ ಇದು ಕಣಜಗಳಲ್ಲಿ ಸಾಮಾನುಗಳನ್ನು ಏರಿಸಿ –ಇಳಿಸುವ ಸ್ಥಳವಿರಬಹುದೆಂದು ಮಾರ್ಟಿಮರ್ ವೀಲರ್ ಅಭಿಪ್ರಾಯಪಟ್ಟಿದ್ದಾನೆ. ಹರಪ್ಪದಲ್ಲಿರುವ ಎಫ್ ದಿಬ್ಬದ ಮೇಲಿನ ಇನ್ನೊಂದು ಪ್ರಕಾರದ ಕಟ್ಟಡವನ್ನು ಎಮ್.ಎಸ್.ವತ್ಸ ಅವರು ಕಣಜ ಎಂದು ಗುರುತಿಸಿದ್ದಾರೆ. ಈ ವಿಶಾಲವಾದ ಭವನ ಘನಿಷ್ಠವಾದ ಹಸಿಇಟ್ಟಿಗೆಯ ಅಡಿಪಾಯವನ್ನು ಹೊಂದಿದ್ದು, ಉತ್ತರ–ದಕ್ಷಿಣವಾಗಿ 50 ಮೀ ಹಾಗೂ ಪೂರ್ವ–ಪಶ್ಚಿಮಾಭಿಮುಖವಾಗಿ 40 ಮೀ ಇದೆ. ಒಂದೊಂದು ಸಾಲಿನಲ್ಲಿ ಆರು ಕೋಣೆಗಳಂತೆ ಎರಡು ಸಾಲುಗಳಲ್ಲಿ ಕಟ್ಟಿದ ಈ ಭವನದ ಮಧ್ಯಭಾಗದಲ್ಲಿ 7 ಮೀ ವಿಶಾಲವಾದ ಹಾಗೂ ಆಂಶಿಕವಾಗಿ ಇಟ್ಟಿಗೆಯಿಂದ ಕಟ್ಟಿದ ಹಾದಿ ಇದೆ. ಪ್ರತಿಕೋಣೆಯ ವಿಸ್ತೀರ್ಣ 15.2ಮೀ x 6.1 ಮೀ. ನೆಲಗಟ್ಟಿನ ಅಡಿಯಲ್ಲಿರುವ ತ್ರಿಕೋಣಾಕಾರದ ಗಾಳಿಕೊಳವೆ ಮುಖಾಂತರ ಕಣಜಗಳಿಗೆ ಸ್ವಚ್ಛ ಗಾಳಿ ಪ್ರವೇಶಿಸುತ್ತಿತ್ತು. ಈ ಕಟ್ಟಡದ ಸಮೀಪದಲ್ಲಿರುವ ಮಂಡಲಾಕಾರದ ಕಟ್ಟೆಗಳನ್ನು ಕಣವಾಗಿ ಉಪಯೋಗಿಸುತ್ತಿದ್ದ ಸ್ಥಳವೆಂದು ಊಹಿಸಲಾಗಿದೆ. ಇನ್ನಿತರ ವಿದ್ವಾಂಸರು ಈ ಭವನಗಳನ್ನು ಕಣಜಗಳೆಂದು ಪರಿಗಣಿಸದೆ, ಇವುಗಳು ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸಲಾಗುತ್ತಿದ್ದ ಸಾರ್ವಜನಿಕ ಸಭಾಗೃಹಗಳು ಅಥವಾ ಧಾರ್ಮಿಕ ಕಾರ್ಯಕ್ರಮಗಳ ಸ್ಥಳಗಳಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಏನೇ ಆದರೂ ಇಂತಹ ಬೃಹತ್ ಕಟ್ಟಡಗಳು ಅಂದಿನ ವಾಸ್ತುಶಿಲ್ಪಿಗಳ ಪರಿಣಿತ ನಿರ್ಮಾಣ ಕೌಶಲ್ಯವನ್ನು ಎತ್ತಿ ಹಿಡಿದಿವೆ. ಇಷ್ಟೇ ಅಲ್ಲದೆ ದುರ್ಗದಲ್ಲಿರುವ ಇಂತಹ ಭವ್ಯ ಭವನಗಳು ಅಂದಿನ ಆಡಳಿತ ವರ್ಗದ ಶ್ರೀಮಂತಿಕೆ, ಕುಶಲ ಪ್ರಶಾಸನ ಹಾಗೂ ಅಧಿಕಾರವನ್ನು ಪ್ರತಿಬಿಂಬಿಸುತ್ತ ವೆಯೆಂದು ಹೇಳಿದರೆ ತಪ್ಪಾಗಲಾರದು.

ನೀರು ಸರಬರಾಜು ವ್ಯವಸ್ಥೆ: ಪ್ರೌಢಹರಪ್ಪ ಸಂಸ್ಕೃತಿಯ ನೆಲೆಗಳು ಹೆಚ್ಚಾಗಿ ನದಿತಟದಲ್ಲಿ ಅಥವಾ ಇನ್ನಿತರ ನೀರಿನ ಸ್ರೋತ ಸಮೀಪದಲ್ಲಿದ್ದಾಗ್ಯೂ ಪ್ರಮುಖ ನಗರಗಳಲ್ಲಿ ದಿನನಿತ್ಯದ ಬಳಕೆಗಾಗಿ ಬೇಕಾಗುವ ನೀರು ಸರಬರಾಜಿಗಾಗಿ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು.

ನೀರಿನ ತೊಟ್ಟಿ, ಧೋಲಾವೀರ

ಮೊಹೆಂಜೋದಾರೊದಂತಹ ಅತಿ ದೊಡ್ಡ ನಗರದಲ್ಲಿ ಪ್ರತಿಯೊಂದು ಮನೆಯಲ್ಲಿ ಬಾವಿಯಿತ್ತು. ಅಲ್ಲದೆ ನಗರಗಳ ಸಾರ್ವಜನಿಕ ಸ್ಥಳಗಳಲ್ಲಿಯೂ ಇಂಥ ಜನಸಾಮಾನ್ಯರಿಗಾಗಿ ಬಾವಿಗಳಿದ್ದವು.

ಭಾಗಶಃ ಶುಷ್ಕ ವಾತಾವರಣದಲ್ಲಿರುವ ಧೋಲಾವೀರದಂಥ ನಗರಕ್ಕಾಗಿ ವಿಶೇಷ ಪ್ರಯತ್ನದಿಂದ ನೀರನ್ನು ಪೂರೈಸುವ ವ್ಯವಸ್ಥೆ ಗಮನಾರ್ಹವಲ್ಲದೆ, ಶ್ಲಾಘನೀಯವಾಗಿದೆ. ನಗರದ ಉತ್ತರ ಹಾಗೂ ದಕ್ಷಿಣ ದಿಶೆಯಲ್ಲಿ ಹರಿಯುತ್ತಿದ್ದ ಮನ್ಹರ್ ಮತ್ತು ಮನ್ಸರ್ ಹೆಸರಿನ ಎರಡು ಹಳ್ಳಗಳ ಆಯಕಟ್ಟಿನ ಸ್ಥಳಗಳಲ್ಲಿ ಕಲ್ಲಿನ ಅಡ್ಡಗೋಡೆಗಳನ್ನು ಕಟ್ಟಿ, ನಗರದ ಹೊರಗಿನ ಸುರಕ್ಷಾ ಕೋಟೆಯೊಳಗಿನ ಪೂರ್ವ, ದಕ್ಷಿಣ ಹಾಗೂ ಪಶ್ಚಿಮ ದಿಶೆಯಲ್ಲಿರುವ ಬಯಲು ಸ್ಥಳಗಳಲ್ಲಿ ಕಟ್ಟಿರುವ ದೊಡ್ಡ ದೊಡ್ಡ ನೀರಿನ ತೊಟ್ಟಿಗಳಿಗೆ ನೀರನ್ನು ಹರಿಬಿಟ್ಟು ಸಂಗ್ರಹಿಸಲಾಗುತ್ತಿತ್ತು. ಇಂಥ ವ್ಯವಸ್ಥೆ ಅಂದಿನ ಅಭೂತಪೂರ್ವ ಸಾಧನೆಯಾಗಿತ್ತು. ಹರಪ್ಪ, ಕಾಲಿಬಂಗನ್, ಬನಾವಳಿಯಲ್ಲೂ ಬಾವಿಗಳಿದ್ದವು. ಅನೇಕ ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳು, ನದಿ ತೀರದ ಪ್ರದೇಶದಲ್ಲಿದ್ದ ಕಾರಣದಿಂದಾಗಿ ದೈನಂದಿನ ಬಳಕೆಗಾಗಿ ಜನರು ನೀರನ್ನು ನೇರವಾಗಿ ನದಿಗಳಿಂದಲೇ ಪಡೆಯುತ್ತಿದ್ದರೆಂದು ತೋರಿಬರುತ್ತದೆ. ಸಾಮಾನ್ಯವಾಗಿ ಬಾವಿಗಳ ಪಕ್ಕದಲ್ಲಿಯೇ ಸ್ನಾನಗೃಹಗಳಿರುತ್ತಿದ್ದವು.

ಸಾರ್ವಜನಿಕ ಬೀದಿಗಳು, ಶೌಚಕೂಪ ಹಾಗೂ ಚರಂಡಿಗಳು: ಪ್ರೌಢ ಹರಪ್ಪ ಕಾಲದ ಸಮಾಜದಲ್ಲಿ ಕೇವಲ ನಗರನಿರ್ಮಾಣಕ್ಕಷ್ಟೇ ಅಲ್ಲದೆ, ನೈರ್ಮಲೀಕರಣ ಹಾಗೂ ಸಾರ್ವಜನಿಕ ಆರೋಗ್ಯಕ್ಕೂ ಮಹತ್ತ್ವವನ್ನು ನೀಡಲಾಗಿತ್ತೆಂಬ ಅಂಶ ಒಳಚರಂಡಿ ವ್ಯವಸ್ಥೆಯಿಂದ ಸ್ಪಷ್ಟವಾಗುತ್ತದೆ. ಮನೆಯೊಳಗಿನ ಸ್ನಾನಗೃಹದಿಂದ ಬಚ್ಚಲು ನೀರನ್ನು ಮನೆಯ ನೆಲಗಟ್ಟಿನ ಸ್ತರದಲ್ಲಿ ಕಲ್ಪಿಸಿದ ಕಾಲುವೆ ಮುಖಾಂತರ ಹೊರಗಡೆ ಬೀದಿಯ ಚರಂಡಿಗಳಿಗೆ ಜೋಡಿಸಲಾಗಿರುತ್ತಿತ್ತು. ಮೇಲ್ಮಹಡಿಯಿಂದ ಬಚ್ಚಲು ನೀರು ಮನೆ ಗೋಡೆಗಳ ಮಧ್ಯದಲ್ಲಿ ಹುದುಗಿಸಿದ ಕೊಳವೆಗಳಿಂದ ಹರಿದು ಬಂದು, ಬೀದಿಯಲ್ಲಿದ್ದ ಚರಂಡಿಯನ್ನು ಸೇರುತ್ತಿತ್ತು. ಒಳಚರಂಡಿ

ವ್ಯವಸ್ಥೆಯಿಲ್ಲದ ನಗರಗಳಾದ ಕಾಲಿಬಂಗನ್, ಬನಾವಳಿ, ಭಿರಡಾಣದಲ್ಲಿ ಮನೆಗಳಿಂದ ಬರುವ ಬಚ್ಚಲು ನೀರನ್ನು ಕಾಲುವೆಗಳ ಮುಖಾಂತರ ಬೀದಿಯಲ್ಲಿ ಹೂಳಿಟ್ಟ ದೊಡ್ಡ ದೊಡ್ಡ ಜಾಡಿಗಳಲ್ಲಿ ಸಂಗ್ರಹವಾಗುವಂತೆ ಮಾಡಲಾಗಿತ್ತು. ಚರಂಡಿಗಳು ಇಟ್ಟಿಗೆಗಳಿಂದ ಅಥವಾ ವಿಶೇಷವಾಗಿ ತಯಾರಿಸಿದ ಚಪ್ಪಡಿಕಲ್ಲುಗಳಿಂದ ಮುಚ್ಚಲ್ಪಟ್ಟಿರುತ್ತಿದ್ದವು. ಸಾರ್ವಜನಿಕ ಚರಂಡಿಗಳು ಬೀದಿಗಳ ಮಧ್ಯಭಾಗದಡಿಯಲ್ಲಿ ಹರಿದು ನಗರದ ಸುರಕ್ಷಾ ಕೋಟೆಗೋಡೆ ಯಿಂದಾಚೆಗೆ ಕೊಳಚೆ ಮತ್ತು ಮಳೆನೀರನ್ನು ಹೊರಚೆಲ್ಲುತ್ತಿದ್ದವು. ಇಂಥ ಚರಂಡಿಗಳ ಹೊರ ದ್ವಾರದಿಂದ ಪರಕೀಯರು ಅಥವಾ ಶತ್ರುಗಳು ನಗರವನ್ನು ಪ್ರವೇಶಿಸಬಾರದೆಂದು ಅವುಗಳ ಮುಖಭಾಗದಲ್ಲಿ ಕಂಬಿ ಚೌಕಟ್ಟು ಸೇರಿಸಲಾಗಿತ್ತು. ಅಲ್ಲಲ್ಲಿ ಮುಖ್ಯ ಚರಂಡಿಗಳ ನಡುವೆ ಆಯತಾಕಾರದ ಸಂಪುಗುಂಡಿಗಳನ್ನು ಕಟ್ಟಿದ್ದು ಅವುಗಳಲ್ಲಿಯ ಕೊಳಚೆ ಶೇಖರಣೆ ಯನ್ನು ಕಾಲಕಾಲಕ್ಕೆ ಸ್ವಚ್ಛ ಮಾಡಲಾಗುತ್ತಿತ್ತು. ಇತ್ತೀಚೆಗೆ ಹರಪ್ಪ ನೆಲೆಯಲ್ಲಿ ನಡೆಸಿದ ಉತ್ಖನನದಿಂದ ಅಲ್ಲಿಯ ಮನೆಗಳಲ್ಲಿ ಶೌಚಕ್ಕಾಗಿ ಪ್ರತ್ಯೇಕ ಕೋಣೆಯಿದ್ದುದು ಕಂಡುಬಂದಿದೆ. ಅಂಥ ಕೋಣೆಯ ನೆಲಗಟ್ಟಿನಲ್ಲಿ ಹೂತಿಟ್ಟ ದೊಡ್ಡ ಸಂಪು ಜಾಡಿಗಳನ್ನು ನಾಲೆಗಳಿಗೆ ಜೋಡಿಸಿದ್ದು ಕಲ್ಮಶವನ್ನು ಹೊರಹಾಕಲಾಗುತ್ತಿತ್ತು. ಜಾಡಿಯಲ್ಲಿ ಸೇರಿದ ನೀರು ಭೂಮಿಯಲ್ಲಿ ಇಂಗಿ ಹೋಗುವಂತೆ ಜಾಡಿಯ ತಳದಲ್ಲಿ ಉದ್ದೇಶಪೂರ್ವಕವಾಗಿ ರಂಧ್ರವನ್ನು ಮಾಡಲಾಗು ತ್ತಿತ್ತು. ಶೌಚಾಲಯದ ಜಾಡಿ, ನಗರದ ಚರಂಡಿಗಳು ಮತ್ತು ಸಾರ್ವಜನಿಕ ಬೀದಿಗಳನ್ನು ನಿತ್ಯವೂ ಸ್ವಚ್ಛಗೊಳಿಸುವ ಸಿಬ್ಬಂದಿವರ್ಗವಿರಬಹುದೆಂದು ಊಹಿಸಲಾಗಿದೆ.

ಕೃಷಿ ಹಾಗೂ ಪಶುಪಾಲನೆ: ಪ್ರೌಢ ಹರಪ್ಪ ನೆಲೆಗಳಲ್ಲಿ ನಡೆಸಿದ ಉತ್ಖನನಗಳಲ್ಲಿ ದೊರೆತ ಧಾನ್ಯಾವಶೇಷಗಳನ್ನಾಧರಿಸಿ ಈ ಕಾಲದಲ್ಲಿ ವಿವಿಧ ಪ್ರಾಂತಗಳ ಪರಿಸರಕ್ಕನುಗುಣವಾಗಿ ರೂಢಿಸಿಕೊಂಡ ಕೃಷಿ ಪದ್ಧತಿ ಮತ್ತು ವಿವಿಧ ಧಾನ್ಯಗಳ ಬಗ್ಗೆ ಮಾಹಿತಿ ಲಭ್ಯವಾಗಿದೆ. ಆದಿ ಕಾಲದಿಂದಲೂ ಗೋದಿ, ಜವೆ, ಸಾವೆ, ರಾಗಿ ಇತ್ಯಾದಿ ಧಾನ್ಯಗಳನ್ನು ಬೆಳೆಯಲಾಗುತ್ತಿತ್ತು. ಆದರೆ ಬತ್ತ (ನೆಲ್ಲು)ವನ್ನು ಕೇವಲ ಬಾಲು ಮತ್ತು ಕುಣಾಲ್ ನೆಲಗಳ ಆದಿ ಹರಪ್ಪ ಸ್ತರದಿಂದ ವರದಿ ಮಾಡಲಾಗಿದೆ. ಪ್ರೌಢ ಹರಪ್ಪ ಕಾಲದಲ್ಲಿಯೂ ನೆಲ್ಲಕ್ಕಿಯ (ಬತ್ತ) ಬೇಸಾಯ ಮಾಡುತ್ತಿದ್ದರೆಂಬುದಕ್ಕೆ ಪಾಕಿಸ್ತಾನದ ಪಂಜಾಬದಲ್ಲಿರುವ ಹರಪ್ಪ ಹಾಗೂ ಭಾರತದ ಲೋಥಲ್‌ನಿಂದ ದೊರೆತ ನೆಲ್ಲಕ್ಕಿಯ ಅವಶೇಷಗಳು ಸಾಕ್ಷಿಯಾಗಿವೆ. ಈಗ ಉಪಯೋಗಿಸುತ್ತಿರುವ ಎಲ್ಲ ತರಹದ ದ್ವಿದಳ ಧಾನ್ಯಗಳು ಕುಣಾಲಿನ ಆದಿ ಹರಪ್ಪ ಸ್ತರಗಳಿಂದ ಲಭ್ಯವಾಗಿವೆ. ಇವುಗಳಲ್ಲದೆ ಎಳ್ಳು, ಔಡಲ ಅಥವಾ ಹರಳು, ಸಾಸಿವೆ ಮೊದಲಾದ ಎಣ್ಣೆಕಾಳು ಗಳನ್ನೂ ಮೆಂತ್ಯ, ಬೆಳ್ಳುಳ್ಳಿಯನ್ನೂ ಬಳೂಲ, ನೇರಳೆ, ನಿಂಬೆ, ದ್ರಾಕ್ಷಿ, ಬಾದಾಮಿ, ಅಕ್ರೋಟ್, ಖರ್ಜೂರ, ಕರಬೂಜ, ಕಲ್ಲಂಗಡಿ, ಬೋರೆ ಹಣ್ಣುಗಳನ್ನೂ ಬೆಳೆಯಲಾಗುತ್ತಿತ್ತು. ಸುವಾಸನಾಯುಕ್ತ ಕಾಂತಿವರ್ಧಕ ರೀಠಾ ಹಾಗೂ ಸೀಗೆಕಾಯಿಗಳನ್ನಲ್ಲದೆ ಜಾಜಿ, ಮಲ್ಲಿಗೆ ಹಾಗೂ ಹರ್ಸಿಂಗಾರ್ ಹೂವುಗಳನ್ನು ಉಪಯೋಗಿಸಲಾಗುತ್ತಿತ್ತು. ಮತ್ತೇರಿಸುವ ಗುಣವುಳ್ಳ ಗಸಗಸೆ ಮತ್ತು ಗಾಂಜ ಗಿಡಗಳನ್ನು ಕೃಷಿ ಮಾಡಲಾಗುತ್ತಿತ್ತು. ದನಕರುಗಳ ಮೇವಾಗಿ ಉಪಯೋಗಿಸುವ ಅವರೆ ಜಾತಿಯ ಸಸ್ಯ ಹಾಗೂ ಕುದುರೆ ಮೊದಲಾದ ಪ್ರಾಣಿಗಳಿಗೆ ಮೇವಾಗಿ ಉಪಯೋಗಿಸುವ ಮೂರೆಲೆಯ ದಳಗಳುಳ್ಳ ಸಸ್ಯವನ್ನೂ ಬೆಳೆಯಲಾಗುತ್ತಿತ್ತು.

ಪ್ರೌಢ ಹರಪ್ಪ ಕಾಲದಲ್ಲಿದ್ದ ಸಾಕುಪ್ರಾಣಿಗಳ ಹಾಗೂ ವನ್ಯಮೃಗಗಳ ಮೂಳೆಗಳು ಉತ್ಖನನದಿಂದ ಹೇರಳವಾಗಿ ಪ್ರಾಪ್ತವಾಗಿದ್ದು, ಅವುಗಳ ಅಧ್ಯಯನದಿಂದ ಜಾನುವಾರು ಎಮ್ಮೆ, ಕುರಿ, ಮೇಕೆ, ಹಂದಿ, ಒಂಟೆ, ಕುದುರೆ, ಆನೆ, ನಾಯಿ, ಬೆಕ್ಕು, ಕತ್ತೆ ಮುಂತಾದ ಪ್ರಾಣಿಗಳನ್ನು ಗುರುತಿಸಲಾಗಿದೆ. ಪ್ರೌಢ ಹರಪ್ಪ ಕಾಲದಲ್ಲಿ ಕುದುರೆಯ ಅಸ್ತಿತ್ವವನ್ನು ಕೆಲವು ವಿದ್ವಾಂಸರು ಪ್ರಶ್ನಿಸಿದ್ದಾರೆ. ಈ ಪ್ರಾಣಿಯ ಅಸ್ಥಿಅವಶೇಷಗಳ ಸಂಶೋಧನೆಯಿಂದ ಕುದುರೆ ಇರಲಿಲ್ಲ ಎಂಬ ವಾದ ನಿರಾಧಾರವೆಂದು ಸಾಬೀತಾಗಿದೆ. ಹರಪ್ಪ, ಮೊಹೆಂಜೋದಾರೊ, ಲೋಥಲ್, ಸುರಕೋಟಡ, ಕಾಲಿಬಂಗನ್ ಹಾಗೂ ಕುಂತಾಸಿ ನೆಲೆಗಳಲ್ಲಿಯ ಪ್ರಾಣಿಗಳ ಅಸ್ಥಿಅವಶೇಷಗಳಲ್ಲಿ ಕುದುರೆಗಳ ಮೂಳೆಗಳನ್ನು ನಿಸ್ಸಂಶಯವಾಗಿ ಗುರುತಿಸಲಾಗಿದೆ. ಅಲ್ಲದೆ ಈ ಸಂದರ್ಭದಲ್ಲಿ ಲೋಥಲ್ ಹಾಗೂ ಚನ್ಹುದಾರೊ ನೆಲೆಗಳಿಂದ ವರದಿ ಮಾಡಿದ ಸುಟ್ಟಮಣ್ಣಿನ ಕುದುರೆಯ ಗೊಂಬೆಗಳನ್ನೂ ಸ್ಮರಿಸಬಹುದು. ಒಂದೇ ಡುಬ್ಬವುಳ್ಳ ಒಂಟೆಯ ಅಸ್ಥಿಅವಶೇಷಗಳು ಕುಂತಾಸಿಯಲ್ಲಿ ಸಿಕ್ಕಿವೆ. ಸಾಕುಪ್ರಾಣಿಗಳಲ್ಲದೆ ಕಾಡುಕುರಿ, ಮೇಕೆ, ಕತ್ತೆ, ಹಂದಿಗಳ ಅಸ್ಥಿಅವಶೇಷಗಳು ಈ ಕಾಲದ ಸ್ತರಗಳಿಂದ ವರದಿ ಮಾಡಲಾಗಿದೆ. ವಿಭಿನ್ನ ಜಾತಿಯ ಜಿಂಕೆಗಳನ್ನು ಬೇಟೆಯಾಡುತ್ತಿದ್ದರು. ಮೀನು, ಆಮೆ ಹಾಗೂ ದನಗಳ ಮಾಂಸವೂ ಭೋಜ್ಯ ಪದಾರ್ಥಗಳಾಗಿದ್ದವು. ಕೆಲಜಾತಿಯ ಮೃದ್ವಂಗಿಯಂಥ ಜೀವಿಗಳನ್ನು ಆಹಾರವಾಗಿ ಈ ಕಾಲದ ಜನರು ಸೇವಿಸುತ್ತಿದ್ದರು.

ಖನಿಜ ಸಂಪತ್ತು ಮತ್ತು ಲೋಹಗಳು: ಬಲೂಚಿಸ್ತಾನ, ಹರಿಯಾಣ, ರಾಜಸ್ತಾನ, ಗುಜರಾತ್, ಜಮ್ಮು–ಕಾಶ್ಮೀರ, ಲಡಾಕ್, ಹಿಮಾಚಲ ಪ್ರದೇಶಗಳಲ್ಲಿ ತಾಮ್ರದ ನಿಕ್ಷೇಪಗಳು ಹೇರಳವಾಗಿವೆ. ಈ ರಾಜ್ಯಗಳಲ್ಲಿ ಪೂರ್ವಭಾವಿ ಇತಿಹಾಸ ಕಾಲದಿಂದಲೂ ಉಪಯೋಗ ದಲ್ಲಿದ್ದ ತಾಮ್ರದ ಖನಿಜಗಳನ್ನು ಪತ್ತೆಹಚ್ಚಲಾಗಿದೆ. ರಾಜಸ್ತಾನದಲ್ಲಿಯ ತಾಮ್ರದ ಖೇತ್ರಿಗಣಿಗಳು ಪ್ರಸಿದ್ಧಿಯಾಗಿವೆ. ಆದರೆ ಸಿಂಧೂ–ಸರಸ್ವತಿ ನಗರ ಅಥವಾ ಗ್ರಾಮ ನೆಲೆಗಳಲ್ಲಿ ತಾಮ್ರದ ಅದಿರನ್ನು ಕರಗಿಸುವ ಕುಲುಮೆಗಳ ಅಥವಾ ಮೂಸೆಗಳ ಪುರಾವೆಗಳು ಇದುವರೆಗೆ ದೊರೆತಿಲ್ಲ. ತಾಮ್ರ ನಿಕ್ಷೇಪಗಳಿರುವ ಸ್ಥಳಗಳಲ್ಲಿ ಮಾತ್ರ ಖನಿಜವನ್ನು ಕರಗಿಸಲು ಬೇಕಾದ ಕುಲುಮೆ ಹಾಗೂ ಬಹಳಷ್ಟು ಕಡೆಗಳಲ್ಲಿ ಕಿಟ್ಟದ ಗುಡ್ಡೆಗಳು ವರದಿಯಾಗಿವೆ. ಈ ಸ್ಥಳಗಳಲ್ಲಿ ತಾಮ್ರವನ್ನು ಕರಗಿಸಿ, ಅದರ ಮುದ್ದೆಗಳನ್ನು ತಯಾರಿಸಿ ತಾಮ್ರೋಪಕರಣಗಳನ್ನು ತಯಾರಿಸುವ ಸ್ಥಳಗಳಿಗೆ ಸರಬರಾಜು ಮಾಡುತ್ತಿದ್ದರೆಂದು ತೋರುತ್ತದೆ. ಪ್ರೌಢ ಹರಪ್ಪ ನೆಲೆಗಳಲ್ಲಿ ತಾಮ್ರದ ಮುದ್ದೆಗಳನ್ನು ಕರಗಿಸಲು ಬೇಕಾಗುವ ಮೂಸೆಗಳ ಅವಶೇಷಗಳು ದೊರೆತಿವೆ.




ತಾಮ್ರದ ಚಪ್ಪಟೆ ಕೊಡಲಿ ಮತ್ತು ಈಟಿಮೊನೆ, ಭಿರಡಾಣ

ಈ ಕಾಲದಲ್ಲಿ ತಾಮ್ರದಿಂದ ವಿವಿಧ ಪ್ರಕಾರಗಳ ಸಾಮಾನುಗಳನ್ನು ತಯಾರಿಸುತ್ತಿದ್ದರು. ವಿವಿಧ ಆಕಾರಗಳ ಪಾತ್ರೆಗಳು, ಕೊಡಲಿ, ಈಟಿಯ ಮೊನೆ, ಬಾಣದ ಮೊನೆ, ಚಾಕು, ಕಠಾರಿ, ಕ್ಷೌರಕತ್ತಿ, ಗರಗಸ, ಕುಡುಗೋಲು, ಮೀನಿನ ಗಾಳ, ಉಳಿ, ದಬ್ಬಣ, ಲೋಹ ತೂತು ಮಾಡುವ ಬೈರಿಗೆ, ಸೂಜಿ, ಕಾಡಿಗೆಕಡ್ಡಿ, ಉಂಗುರ, ಬಳೆ, ಮುರುವು, ಖಡ್ಗ/ಬಾರು ಇವುಗಳಲ್ಲದೆ ನಳಿಕೆ, ಬೊಂಬೆಗಳು, ಲಂಬಮಾನವನ್ನು ಪರೀಕ್ಷಿಸಲು ಉಪಯೋಗಿಸುವ ತೂಗುಗುಂಡು, ಬೈರಿಗೆ, ಅಗಳಿ, ತಕ್ಕಡಿತಟ್ಟೆ, ತೊಲೆ, ದರ್ಪಣ ಇತ್ಯಾದಿ ತಾಮ್ರದ ವಸ್ತುಗಳನ್ನು ದಿನನಿತ್ಯ ಉಪಯೋಗಿಸುತ್ತಿದ್ದರು. ಎರಕ ಹೊಯ್ಯದ ಅಥವಾ ಎರಡು ಕವಾಟಿನ ಎರಕದ ಅಚ್ಚಿನಲ್ಲಿ ತುಂಬಿ ವಸ್ತುಗಳನ್ನು ತಯಾರಿಸುತ್ತಿದ್ದರು. ಇಂತಹ ಅಚ್ಚುಗಳನ್ನು ಉಸುಕು ಮಿಶ್ರಿತ ಜೇಡಿಮಣ್ಣಿನಿಂದ ತಯಾರಿಸಲಾಗುತ್ತಿತ್ತು. ಮಧೂಚ್ಛಿಷ್ಟ ವಿಧಾನದಿಂದ ಬೊಂಬೆಗಳನ್ನು ತಯಾರಿಸುತ್ತಿದ್ದರು. ಈ ಸಂದರ್ಭದಲ್ಲಿ ಮೊಹೆಂಜೋದಾರೊವಿನ ಪ್ರಪಂಚಪ್ರಸಿದ್ಧ ನೃತ್ಯಾಂಗನೆಯ ಕಂಚಿನ ಬೊಂಬೆಯನ್ನು ಉದಾಹರಿಸಬಹುದು. ಉಪಕರಣಗಳನ್ನು ತಯಾರಿಸುವ ತಂತ್ರ ಬೇರೆ ಬೇರೆ ರೀತಿಯದ್ದಾಗಿತ್ತೆಂದು ಕಾಣುತ್ತದೆ. ಬೆಂಕಿಯಲ್ಲಿ ತಾಮ್ರವನ್ನು ಕಾಯಿಸಿ, ಸುತ್ತಿಗೆಯಿಂದ ಬಡಿದು ಆಕಾರ ಕೊಡುವುದು, ಕುಗ್ಗಿಸುವುದು, ಘನಪಡಿಸುವುದು, ಉಪಕರಣದ ವಿವಿಧ ಭಾಗಗಳ ಜೋಡಣೆಯನ್ನು ಕಾಯಿಸಿ ಅಥವಾ ಕಾಯಿಸದೇ ಇರುವ ರೀತಿಯಿಂದಲೂ ಕುಟ್ಟಿ, ಬಡಿದು ತಯಾರಿಸುತ್ತಿದ್ದರೆಂಬುದು ತಿಳಿದ ವಿಷಯ.



ಕಂಚಿನ ಮೂರ್ತಿ, ಜೋಬ್

ಮಿಶ್ರಲೋಹವನ್ನು ತಯಾರಿಸುವ ರೀತಿ ಭಿನ್ನ ಭಿನ್ನ ಪ್ರಕಾರದ್ದಾಗಿತ್ತು. ಭಾರತದ ಪೂರ್ವಭಾವಿ ಇತಿಹಾಸ ಕಾಲದಲ್ಲಿ ಶುದ್ಧ ತಾಮ್ರವನ್ನು ಉಪಯೋಗಿಸುವುದು ಒಂದು ಸಂಪ್ರದಾಯವೇ ಆಗಿತ್ತೆಂದು ತೋರಿಬರುತ್ತದೆ. ಅಲ್ಲದೆ ತಾಮ್ರ ಮತ್ತು ತವರವನ್ನು ಕೂಡಿಸಿದ ಮಿಶ್ರಲೋಹದ ವಸ್ತುಗಳ ತಯಾರಿಕೆಯನ್ನು ನೋಡಬಹುದು. ತವರದ ನಿಕ್ಷೇಪಗಳು ಭಾರತದ ಹರಿಯಾಣ ಹಾಗೂ ಪಾಕಿಸ್ತಾನದ ಭಗ್ಯೈ ಪರ್ವತ ಪ್ರದೇಶದಲ್ಲಿದೆ. ಸೀಸ ಹಾಗೂ ತಾಮ್ರದ ಮಿಶ್ರಣದಿಂದ ಚಿಕ್ಕ ಪುಟ್ಟ ವಸ್ತುಗಳನ್ನು ತಯಾರಿಸಲಾಗಿದೆ. ಸೀಸದ ಗಣಿಗಳು ಬಲೂಚಿಸ್ತಾನ, ಗುಜರಾತ್, ರಾಜಸ್ತಾನ ಇತ್ಯಾದಿ ಪ್ರದೇಶಗಳಲ್ಲಿವೆ. ಪಾಷಾಣ, ಸತು ಹಾಗೂ ನಿಕ್ಕಲ್ ಮಿಶ್ರಿತ ಲೋಹದಿಂದ ತಯಾರಿಸಿದ ಅವಶೇಷಗಳೂ ದೊರೆತಿವೆ. ಪಾಷಾಣ ಕೇವಲ ರಾಜಸ್ತಾನದಲ್ಲಿ ದೊರೆತರೆ, ಸತು ರಾಜಸ್ತಾನ ಹಾಗೂ ಗುಜರಾತ್ ರಾಜ್ಯಗಳಲ್ಲಿ ದೊರೆಯುತ್ತದೆ. ತಾಮ್ರ ಹಾಗೂ ಇನ್ನಿತರ ಖನಿಜಗಳೊಂದಿಗೆ ನಿಕ್ಕಲ್ ಕೂಡ ಸಿಗುತ್ತದೆ. ಪ್ರೌಢ ಹರಪ್ಪ ಕಂಚುಗಾರರು ಶುದ್ಧ ತಾಮ್ರವನ್ನು ಹೆಚ್ಚು ಬಳಸುವುದರ ಜೊತೆಗೆ ತಾಮ್ರದ ವಿವಿಧ ಮಿಶ್ರ ಲೋಹಗಳನ್ನೂ ಉಪಯೋಗಿಸುತ್ತಿದ್ದರೆಂಬುದು ಕುತೂಹಲಕಾರಿ.

ಬಂಗಾರದ ಆಭರಣಗಳು ನಿಧಿರೂಪದಲ್ಲಿ ಪ್ರೌಢ ಹರಪ್ಪನೆಲೆಗಳಾದ ಮೊಹೆಂಜೋದಾರೊ, ಹರಪ್ಪ, ಅಲ್ಲಹದೀನೊ ಇತ್ಯಾದಿ ನೆಲೆಗಳಿಂದ ಉತ್ಖನನದಲ್ಲಿ ದೊರಕಿವೆ. ಇತ್ತೀಚೆಗೆ ಅಂತ್ಯ ಹರಪ್ಪ ಕಾಲದ ಬಂಗಾರ ಆಭರಣಗಳ ಒಂದು ದೊಡ್ಡ ಖಜಾನೆಯನ್ನು ಉತ್ತರಪ್ರದೇಶ ರಾಜ್ಯದ ಮುಜ಼ಫರ್‌ನಗರ ಜಿಲ್ಲೆಯ ಮಂಡಿ (**ನೋಡಿ**) ಗ್ರಾಮದಿಂದ ವರದಿ ಮಾಡಲಾಗಿದೆ. ಸಾಮಾನ್ಯವಾಗಿ ಇದುವರೆಗೂ ಉತ್ಖನಿತ ನೆಲೆಗಳಿಂದ ಸಿಕ್ಕ ವಿವಿಧ ಬಂಗಾರದ ಆಭರಣಗಳು ಇಂತಿವೆ: ಬಳೆಗಳು, ಕಡಗ, ಪದಕಗಳು, ತಾಯಿತ, ಕಂಠಹಾರ, ತೋಳ್ಬಂದಿ, ಕರ್ಣಾಭರಣಗಳು, ಮುರುವು, ಬೆಂಡೋಲೆ, ಮಣಿಗಳು, ಪದಕ ಸೂಜಿ (ಬ್ರೂಚ್), ಕಟ್ಟು ಪಟ್ಟಿ, ಉಂಗುರ, ಸೂಜಿಗಳು, ಶಂಕುವಿನಾಕಾರದ ಆಭರಣ, ಬಂಗಾರದ ತಗಡು, ಪಿನ್ನುಗಳು, ಕಟಿಬಂಧ. ಬಂಗಾರದ ತಗಡಿನಿಂದ ಕಡಗಗಳನ್ನು ತಯಾರಿಸುತ್ತಿದ್ದು, ಕಡಗದ ಒಳಮೈಯಲ್ಲಿ ತಗಡಿನ ಜೋಡಣೆಯಿರುತ್ತದೆ. ಕೊನೆಮಣಿಗಳು (ಟರ್ಮಿನಲ್ ಬೀಡ್) ಮಣಿಗಳನ್ನು ಎರಕದಿಂದ ತಯಾರಿಸುತ್ತಿದ್ದರೆ ಮತ್ತು ಸಮಾನಾಂತರ ರಂಧ್ರವುಳ್ಳ ಮಣಿಗಳನ್ನು (ಸ್ಪೇಸರ್ ಬೀಡ್) ಬಂಗಾರದ ತಗಡಿನಿಂದ ಕತ್ತರಿಸಿ ತಯಾರಿಸಲಾಗುತ್ತಿತ್ತು. ಬಂಗಾರದ ಕುಂದಣ ಕೆಲಸದಲ್ಲಿಯೂ ಅಂದಿನ ಜನರು ನಿಪುಣರಾಗಿದ್ದರು. ಬಂಗಾರದ ಹಾಗೂ ಅರೆಪ್ರಶಸ್ತಕಲ್ಲಿನ ಮಣಿಗಳನ್ನು ಸಂಯೋಜಿಸಿ ಕಂಠಾಭರಣಗಳನ್ನು ತಯಾರಿಸಲಾಗಿದೆ. ಅತಿ ತೆಳುವಾದ ತಗಡು ಹಾಗೂ ಸೂಕ್ಷ್ಮದಿಂದ ಮಧ್ಯಮ ಗಾತ್ರದವರೆಗಿನ ಆಕಾರದ ಸಾವಿರಾರು ಸಂಖ್ಯೆಯ ಬಂಗಾರದ ಮಣಿಗಳು, ಅವುಗಳೊಂದಿಗೆ ಸ್ಪೇಸರ್ ಮಣಿ ಮತ್ತು ಕೊನೆಮಣಿಗಳು ಮಂಡಿಯಿಂದ ದೊರೆತ ಬಂಗಾರದ ಆಭರಣಗಳಲ್ಲಿಯ ವಿಶೇಷ ವಸ್ತುಗಳಾಗಿವೆ. ಭಾರತದಲ್ಲಿ ಬಂಗಾರದ ಗಣಿಗಳು ಕರ್ನಾಟಕದಲ್ಲಿವೆ. ಹಟ್ಟಿ ಹಾಗೂ ಕೋಲಾರ ಗಣಿಗಳಿಂದಲ್ಲದೆ ಉತ್ತರ ಹಾಗೂ ವಾಯವ್ಯ ಪ್ರಾಂತದಲ್ಲಿ ದೊರೆಯುವ ಬಂಗಾರ ಮಿಶ್ರಿತ ರೇವೆಮಣ್ಣಿನಿಂದಲೂ ಹರಪ್ಪ ಕಾಲೀನ ಜನರು ಬಂಗಾರ ಪಡೆಯುತ್ತಿದ್ದಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ. ಕಂದಹಾರ್ ಪ್ರದೇಶ ಹಾಗೂ ಆಫ್ಘಾನಿಸ್ತಾನದ ಸಿಯೆಸ್ತಾನ್ ಪ್ರದೇಶದಲ್ಲೂ ಬಂಗಾರದ ಗಣಿಗಳು ವರದಿಯಾಗಿದೆ.

ರಾಜಸ್ತಾನದಲ್ಲಿ ಉತ್ತಮ ದರ್ಜೆಯ ಬೆಳ್ಳಿಯ ನಿಕ್ಷೇಪವಿದೆ. ಬೆಳ್ಳಿಯನ್ನು ಬಳೆಗಳು, ಕಾಲಂದಿಗೆ ಇತ್ಯಾದಿ ಆಭರಣಗಳಿಗಲ್ಲದೆ, ಕುಣಾಲ್‌ನೆಲೆಯಲ್ಲಿ ದೊರೆತ ಕಿರೀಟಗಳಿಗೂ ಉಪಯೋಗಿಸಲಾಗಿತ್ತು.

ಮಣ್ಪಾತ್ರೆಗಳು: ವಿಶೇಷ ಲಕ್ಷಣವುಳ್ಳ ಪ್ರೌಢ ಹರಪ್ಪ ಮಣ್ಪಾತ್ರೆಗಳು ಕೆಂಪು ಬಣ್ಣದ್ದಾಗಿವೆ. ನುಣುಪಾದ ಮಣ್ಣಿನಿಂದ ತಯಾರಿಸಿದ ಪಾತ್ರೆಗಳ ರಚನೆ ಉತ್ಕೃಷ್ಟವಾಗಿದ್ದು ಪಾತ್ರೆಗಳು ಭಾರವಾಗಿಯೂ ಗಟ್ಟಿಮುಟ್ಟಾಗಿ, ಆವಿಗೆಯಲ್ಲಿ ಸುಟ್ಟದ್ದರಿಂದ ಕಡುಗೆಂಪು ಅಥವಾ ತಿಳಿಗೆಂಪು ಬಣ್ಣವನ್ನು ಹೊಂದಿರುತ್ತವೆ. ಅತಿ ಉಷ್ಣತೆಯಲ್ಲಿಯೂ ಈ ಪಾತ್ರೆಗಳು ಹಾಳಾಗದಂತೆ ಉತ್ತಮ ಮರಳುಯುಕ್ತ ಜೇಡಿಮಣ್ಣನ್ನು ಉಪಯೋಗಿಸಲಾಗಿದೆ. ಹದವಾಗಿ ಸುಟ್ಟ ಕಾರಣ ಪಾತ್ರೆಗಳನ್ನು ಕುಟ್ಟಿದಾಗ ಗಂಟೆಯ ಶಬ್ದ ಹೊರಹೊಮ್ಮಿದಂತಿರುತ್ತದೆ. ಅತಿ ಹೆಚ್ಚು ಅಥವಾ ಕಡಿಮೆ ಉಷ್ಣತೆಯಲ್ಲಿ ಈ ಮಣ್ಪಾತ್ರೆಗಳನ್ನು ಸುಟ್ಟಿರುವುದು ವಿರಳ. ಈ ಅಂಶ ಆವಿಗೆಯಲ್ಲಿ ಶಾಖವನ್ನು ನಿಯಂತ್ರಿಸುವ ಕುಂಬಾರನ ಕರಕೌಶಲವನ್ನು ತೋರಿಸುತ್ತದೆ. ಈ ಪಾತ್ರೆಗಳ ಸಮಾನ ಗಾತ್ರ ಮತ್ತು ಪಾತ್ರೆಯ ಒಳಭಾಗದಲ್ಲಿ ಸಮಾನಾಂತರದಲ್ಲಿರುವ ಕುಂಬಾರನ ಬೆರಳಿನ ಗೀಟುಗಳು ಅವುಗಳನ್ನು ತೀವ್ರಗತಿಯ ತಿಗುರಿಯ ಮೇಲೆ ತಯಾರಿಸಿರುವುದರ ಸಂಕೇತಗಳಾಗಿವೆ. ಬಹುಶಃ ದೊಡ್ಡ ದೊಡ್ಡ ಪಾತ್ರೆಗಳ ಕಂಠಭಾಗ, ನಡುವಿನ ಹಾಗೂ ತಳಭಾಗಗಳನ್ನು ಬೇರೆ ಬೇರೆಯಾಗಿ ತಯಾರಿಸಿ ಅನಂತರ ಒಂದನ್ನೊಂದು ಜೋಡಿಸಲಾಗುತ್ತಿತ್ತು. ಡೊಳ್ಳು ಹೊಟ್ಟೆಯುಳ್ಳ ಜಾಡಿಗಳನ್ನು ತಟ್ಟೊತ್ತಿಗೆಯ ಸಹಾಯದಿಂದ ತಯಾರಿಸುತ್ತಿದ್ದಿರಬೇಕು. ಬಹಳಷ್ಟು ಮಣ್ಪಾತ್ರೆಗಳ ಮೇಲ್ಮೈ ಭಾಗದಲ್ಲಿ ಕೆಂಪು ಲೇಪನವಿರುತ್ತದೆ. ಅವುಗಳ ಮೇಲೆ ಕಪ್ಪುವರ್ಣದ ಚಿತ್ರಗಳನ್ನು ಬಿಡಿಸಿರುತ್ತದೆ. ವರ್ಣಚಿತ್ರಗಳಲ್ಲಿ ವಿವಿಧ ರೇಖಾಕೃತಿಗಳು ಅಥವಾ ಗಿಡಬಳ್ಳಿಗಳ ನಡುವೆ ನವಿಲು ಹಾಗೂ ಮೀನಿನ ಬಲೆಯ ಚಿತ್ರವನ್ನು ಕಾಣಬಹುದು. ಅಲ್ಲದೆ ಅಶ್ವತ್ಥ ಎಲೆ, ಉರುಪೆಯ ಮೀನಿನ ವಿನ್ಯಾಸವನ್ನು ಬಿಡಿಸಲಾಗಿದೆ. ಈ ಕಾಲದ ಪಾತ್ರೆಗಳೆಂದರೆ ಮೈತುಂಬ ತೂತುಗಳುಳ್ಳ ಜಾಡಿಗಳು, ಎಸ್–ಆಕಾರದ ಜಾಡಿ, ಗಟ್ಟಿಮುಟ್ಟಾದ ಅಲಂಕೃತ ಕಾಲಿರುವ ತಟ್ಟೆ. ಗುಜರಾತ್ ಪ್ರಾಂತದ ವಿಶೇಷವೆಂಬಂತೆ ಹಿಡಿಕೆಯುಳ್ಳ ಬಟ್ಟಲುಗಳಿದ್ದು ವರ್ಣಚಿತ್ರಗಳೂ ಮನೋಹರ ವಾಗಿವೆ. ಕಿರಿದಾದ ಬಾಯಿ ಹಾಗೂ ಪುಟ್ಟ ಗುಂಡಿಯಾಕಾರದ ತಳವುಳ್ಳ ಸಾವಿರಾರು ಪಾನಪಾತ್ರೆಗಳು (ಗ್ರಾಬ್ಲೆಟ್) ದೊರಕಿವೆ. ಸಂಗ್ರಹ ಜಾಡಿಗಳು, ತಟ್ಟೆಗಳು, ಹೊರಬಾಗಿದ ಅಂಚಿನ ಅಡುಗೆ ಪಾತ್ರೆಗಳು, ನೀರ ಕೊಡಗಳು, ನೀರಿನ ಜಾಡಿಗಳು ಬಳಕೆಯಲ್ಲಿದ್ದವು. ನಸುಹಳದಿ ಹಾಗೂ ಬೂದುಬಣ್ಣದ ಮಣ್ಪಾತ್ರೆಗಳು ಈ ಕಾಲದಲ್ಲಿ ವಿರಳ. ಆದರೆ ಕಪ್ಪು–ಕೆಂಪು ದ್ವಿವರ್ಣದ ಪಾತ್ರೆಗಳು ಗುಜರಾತ್ ಪ್ರದೇಶದ ನೆಲೆಗಳಲ್ಲಿ ಮಾತ್ರ ಉಪಯೋಗದಲ್ಲಿದ್ದವು. ಕೆಲವು ನೆಲೆಗಳಲ್ಲಿ ಕುಂಬಾರನ ಆವಿಗೆಗಳೂ ಇದ್ದುವು. ಸಾಮಾನ್ಯವಾಗಿ ತೆರೆದ ಆವಿಗೆಯಲ್ಲಿ ಸುಡುತ್ತಿದ್ದುದೇ ಹೆಚ್ಚು. ಆದಾಗ್ಯೂ ಎರಡು ಅಂತಸ್ತಿನ ಆವಿಗಳಲ್ಲಿ ಕೆಳಭಾಗದಲ್ಲಿ ಬೆಂಕಿಯಿದ್ದು ಮೇಲ್ಭಾಗದಲ್ಲಿ ಮಡಕೆಗಳನ್ನಿಟ್ಟು ಸುಡುತ್ತಿದ್ದ ವಿಧಾನವೂ ಇತ್ತು. ವಿವಿಧ ಸ್ವರೂಪದ ಮಣ್ಣನ್ನು ಬಳಸುತ್ತಿದ್ದರೂ ಈ ಕಾಲದ ಪಾತ್ರೆಗಳಲ್ಲಿರುವ ಏಕರೂಪತೆ ಆಶ್ಚರ್ಯಕರವಾದದ್ದು.

ಮಣ್ಪಾತ್ರೆಗಳು

ಕಲ್ಲು ಉಪಕರಣಗಳು: ವಿವಿಧ ಆಕಾರ ಹಾಗೂ ಅಳತೆಯ ಅಲಗುಗಳನ್ನು ಅನೇಕ ಕಾರ್ಯಗಳಿಗಾಗಿ ತಯಾರಿಸುವುದು ಒಂದು ಉದ್ಯಮವೇ ಆಗಿತ್ತು. ಪಾಕಿಸ್ತಾನದಲ್ಲಿರುವ ರೋಹರಿ ಹಾಗೂ ಸುಕೂರ್ ಬೆಟ್ಟಗಳ ಚರ್ಟ್ ಕಲ್ಲಿನಿಂದ ತೆಳುವಾದ ನೀಳ ಅಲಗುಗಳನ್ನು ತಯಾರಿಸಿ ಸಿಂಧೂ–ಸರಸ್ವತಿ ಸಂಸ್ಕೃತಿಯ ಪ್ರಮುಖ ನಗರಗಳಿಗೆ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಚರ್ಟ್ ಕಲ್ಲೊಂದೇ ಅಲ್ಲದೆ ಇನ್ನಿತರ




ಚರ್ಟ್‌ಕಲ್ಲಿನ ಅಲಗುಗಳು

ಕಲ್ಲುಗಳಲ್ಲಿಯೂ ಅಲಗುಗಳನ್ನು ತಯಾರಿಸಿ ಸರಬರಾಜು ಮಾಡುತ್ತಿದ್ದರೆಂದು ತೋರುತ್ತದೆ. ಲೋಥಲ್‌ನಲ್ಲಿ ದೊರೆತ ಸಾವಿರಾರು ಚಿಕ್ಕ–ಪುಟ್ಟ ಅಲಗುಗಳು ಸ್ಥಳೀಯ ಕಲ್ಲಿನಿಂದ ತಯಾರಿಸಲ್ಪಟ್ಟವು. ಬಹುಶಃ ಸೂಕ್ಷ್ಮಶಿಲೆಗಳನ್ನು ಉಪಯೋಗಿಸುತ್ತಿದ್ದ ಇತರ ಸಮಕಾಲೀನ ನೆಲೆಗಳಿಂದ ಇಂತಹ ಸಲಕರಣೆಗಳನ್ನು ಸಿಂಧೂ–ಸರಸ್ವತಿ ಸಂಸ್ಕೃತಿಯ ಜನರು ವಿನಿಮಯದ ಮೂಲಕ ಪಡೆದಿರಬಹುದು. ಇಂತಹ ಸೂಕ್ಷ್ಮಶಿಲೆಗಳ ಇತ್ತೀಚಿನ ಅಧ್ಯಯನದಿಂದ ಕಂಡುಬಂದ ಅಂಶವೆಂದರೆ, ಇನ್ನಿತರ ಗಟ್ಟಿ ಪದಾರ್ಥಗಳಿಗೆ ತೂತು ಹಾಕಲು ಬೇಕಾಗುವ ಬೈರಿಗೆಯಂಥ

ಉಪಕರಣಗಳನ್ನು ಇಂಥ ಸೂಕ್ಷ್ಮಶಿಲೆಗಳಲ್ಲಿ ತಯಾರಿಸಿರುವುದು. ದೈನಂದಿನ ಕಾರ್ಯಗಳಲ್ಲಿ ಉಪಯೋಗಿಸುವ ಇತರ ಕಲ್ಲಿನ ಸಲಕರಣೆಗಳೆಂದರೆ ಹಾಸುಗಲ್ಲು ಮತ್ತು ರುಬ್ಬು ಗುಂಡು ಕಲ್ಲುಗಳು, ಬೀಸುವ ಕಲ್ಲು, ಕವಣೆ ಕಲ್ಲು ಹಾಗೂ ಮಕ್ಕಳಾಟಕ್ಕಾಗಿ ಉಪಯೋಗಿಸುವ ಗೋಲಿಗಳು.

ಕಲ್ಲುಬಳೆಗಳು: ಸಿಂಧೂ–ಸರಸ್ವತಿ ಸಂಸ್ಕೃತಿಯ ಕೆಲವು ನೆಲೆಗಳಿಂದ ವರದಿಯಾದ ಕಲ್ಲುಬಳೆಗಳನ್ನು ವಿಶಿಷ್ಟ ತಂತ್ರದಿಂದ ತಯಾರಿಸಲಾಗುತ್ತಿತ್ತು. ನುಣ್ಣಗೆ ಅರೆದು ಪುಡಿ ಮಾಡಿದ ಜೇಡಿಮಣ್ಣಿನಿಂದ ತಯಾರಿಸಿದ ಈ ಬಳೆಗಳ ಮೇಲೆ ಸೂಕ್ಷ್ಮವಾಗಿ ಕೊರೆದ ಲಿಪಿಗಳು ಅಥವಾ ಕುಂಬಾರರ ಕಸಬು ಚಿಹ್ನೆಗಳಾಗಿರಬೇಕು (ಪಾಟರ್ಸ್ ಮಾರ್ಕ್). ಇಂತಹ ಬಳೆಗಳನ್ನು ತಯಾರಿಸಲು ಆವಿಗೆಯಲ್ಲಿಯ ತಾಪಮಾನ 1050 ರಿಂದ 1100 ಸೆಂಟಿಗ್ರೇಡ್ ಇದ್ದಿರಬಹುದೆಂದು ಅನುಮಾನಿಸಲಾಗಿದೆ. ಹೊಳಪುಳ್ಳ ಕೆಂಪುಬಣ್ಣದ ಹಾಗೂ ಕಡುಗೆಂಪಿನಿಂದ ಕಪ್ಪು ಮಿಶ್ರಿತ ಬೂದುಬಣ್ಣವುಳ್ಳ ಎರಡು ಪ್ರಕಾರದ ಬಳೆಗಳನ್ನು ತಯಾರಿಸಲಾಗುತ್ತಿತ್ತು.



**ವಿವಿಧ ಬಗೆಯ ಆಭರಣಗಳು, ಹರಪ್ಪ**

ಫಯಾನ್ಸ್ ವಸ್ತುಗಳು: ಈ ಕಾಲದಲ್ಲಿ ವಿಶೇಷವಾಗಿ ತಯಾರಿಸಿದ ಫಯಾನ್ಸ್ ಮಣಿಗಳು, ಬಳೆಗಳು, ಕರ್ಣಾಭರಣಗಳು, ಗೊಂಬೆ ಇತ್ಯಾದಿ ವಸ್ತುಗಳು ದೊರಕಿವೆ. ಫಯಾನ್ಸ್ ಕಚ್ಚ ತಯಾರಿಸುವ ವಿಧಾನ ಇಂತಿದೆ: ಬೆಣಚುಕಲ್ಲನ್ನು ಚೆನ್ನಾಗಿ ಪುಡಿ ಮಾಡಿ ಅದರೊಳಗೆ ಕೆಲವು ಖನಿಜ ಬಣ್ಣದಕಾರಕಗಳನ್ನು ಹಾಗೂ ಸ್ವಲ್ಪ ಅಂಟು ಪದಾರ್ಥವನ್ನು ಸೇರಿಸಿ ಈ ಮಿಶ್ರಣವನ್ನು ಅಧಿಕ ಉಷ್ಣಾಂಶದಲ್ಲಿ ಸುಟ್ಟಾಗ ಇದು ಕಾಚದ್ರವ್ಯ ಮಿಶ್ರಣವಾಗುತ್ತದೆ. ಇಂಥ ಕಾಚದ್ರವ್ಯವನ್ನು ಪುನಃ ಚೆನ್ನಾಗಿ ಅರೆದು ಅದರಲ್ಲಿ ಎಲೆಬಳ್ಳಿಗಳ ರಸವನ್ನು ಉಪಯೋಗಿಸಿ, ಅಂಟು ಹಿಟ್ಟಿನಂತೆ ತಯಾರಿಸಿ, ಅದರಿಂದ ವಿವಿಧ ವಸ್ತುಗಳನ್ನು ತಯಾರಿಸಲಾಗುತ್ತದೆ. ಈ ರೀತಿ ತಯಾರಿಸಿದ ವಸ್ತುಗಳನ್ನು ಭಟ್ಟಿಯಲ್ಲಿ ಸುಟ್ಟಾಗ ಗಾಜಿನಂಥ ನುಣುಪಾದ ಮೈಯನ್ನು ಪಡೆದು, ಅದರ ಒಳಭಾಗ ಶಾಖದಿಂದ ಕರಗಿದ ಗಾಜಿನ ಮುದ್ದೆಯಂತೆ ಕಾಣುತ್ತದೆ. ಸಮಕಾಲೀನ ಸಂಸ್ಕೃತಿಗಳ ಪೈಕಿ ಈ ಶ್ರೇಷ್ಠ ತಂತ್ರಜ್ಞಾನದ ಅರಿವು ಸಿಂಧೂ–ಸರಸ್ವತಿ ಸಂಸ್ಕೃತಿಯ ಕಸಬುದಾರರಿಗಷ್ಟೇ ಗೊತ್ತಿತ್ತು.

ನೇಯ್ಗೆ ವಸ್ತ್ರಗಳು: ಪ್ರೌಢ ಹರಪ್ಪ ಕಾಲದ ನೇಯ್ಗೆ ವಸ್ತ್ರಗಳ ಕುರುಹುಗಳು ದೊರಕಿಲ್ಲ. ಆದರೆ ಈ ಕಾಲದ ಮುದ್ರಾಂಕನಗಳ ಹಿಂಭಾಗದಲ್ಲಿ ವಸ್ತ್ರದ ಅಚ್ಚೊತ್ತುಗಳಿವೆ. ಅಂತೆಯೆ ಮೊಹೆಂಜೋದಾರೊದಲ್ಲಿ ದೊರೆತ ಒಂದು ಬೆಳ್ಳಿಪಾತ್ರೆಯ ಮೇಲೆ ಬಟ್ಟೆಯ ಅಚ್ಚೊತ್ತನ್ನು ಗುರುತಿಸಲಾಗಿದೆ. ಹರಪ್ಪ ಮತ್ತು ಮೊಹೆಂಜೋದಾರೊ ನೆಲೆಗಳಲ್ಲಿ ದೊರೆತ ತಾಮ್ರದ ವಸ್ತುಗಳ ಮೇಲೆ ದಾರ ಅಥವಾ ಬಟ್ಟೆಗಳಿದ್ದುದನ್ನು ಗುರುತಿಸಲಾಗಿದೆ. ಫಯಾನ್ಸ್ ಪಾತ್ರೆಗಳನ್ನು ತಯಾರಿಸಲು ಉಸುಕು ತುಂಬಿದ ಸಣ್ಣ ದುಂಡಾಕಾರದ ಬಟ್ಟೆಯ ಚೀಲಗಳ ಮೇಲ್ಭಾಗದಲ್ಲಿ ಕಾಚದ್ರವ್ಯವನ್ನು ಮೆತ್ತಿ ಸುಟ್ಟಿರುವುದರಿಂದ ಅಂಥ ಪಾತ್ರೆಗಳ ಒಳಭಾಗದಲ್ಲಿ ಬಟ್ಟೆ ಚೀಲದ ನೇಯ್ಗೆಯ ಅಚ್ಚು ಇದೆ.

ಅರೆಪ್ರಶಸ್ತ ಕಲ್ಲಿನ ಮಣಿಗಳು: ಮಣಿಗಳನ್ನು ಕೇವಲ ಅರೆಪ್ರಶಸ್ತಕಲ್ಲುಗಳಿಂದಲ್ಲದೆ ಸುಟ್ಟಮಣ್ಣಿನಿಂದ, ಶಂಖದಿಂದ ತಯಾರಿಸಲಾಗುತ್ತಿತ್ತು. ಅಗೇಟ್, ಜಾಸ್ಪರ್, ಕಾರ್ನೇಲಿಯನ್, ವೈಡೂರ್ಯ (ಲ್ಯಾಪಿಸ್ ಲ್ಯಾಸೂಲಿ), ಆನಿಕ್ಸ್, ಗಾರ್ನೆಟ್ ಇತ್ಯಾದಿ ಮಣಿಗಳನ್ನು ತಯಾರಿಸಿ ವ್ಯಾಪಾರ ಮಾಡುತ್ತಿದ್ದರು. ಸಿಂಧೂ–ಸರಸ್ವತಿಯ ಅನೇಕ ಉತ್ಖನಿತ ನೆಲೆಗಳಲ್ಲಿ ಇಂಥ ಮಣಿ ತಯಾರಿಕೆಯ ಕಾರ್ಯಾಗಾರಗಳನ್ನು ಗುರುತಿಸಲಾಗಿದೆ. ಅರೆಪ್ರಶಸ್ತ ಕಲ್ಲಿನ ಹೊರಮೈಯಿಂದ ಚಕ್ಕೆಯನ್ನು ಎಬ್ಬಿಸಿ, ಕೊರೆದು, ಅನಂತರ ಭಟ್ಟಿಯಲ್ಲಿ ಸುಡಲಾಗುತ್ತಿತ್ತು. ಕಲ್ಲುಗಳನ್ನು ಸುಡುವುದರಿಂದ ಅದರಲ್ಲಿಯ ಖನಿಜಗಳು ರೂಪಾಂತರ ಹೊಂದಿ ವಿವಿಧ ಬಣ್ಣವನ್ನು ಪಡೆಯುತ್ತವೆ. ಮೊನಚುಳ್ಳ ಬೈರಿಗೆಯಿಂದ ಮಣಿಗಳಲ್ಲಿ ತೂತನ್ನು ಕೊರೆಯಲಾಗುತ್ತಿತ್ತು. ಹರಪ್ಪ ಸಂಸ್ಕೃತಿಯ ಛಾಪು ಎನಿಸಿಕೊಂಡಿರುವ ಮದ್ದಲೆಯಾಕಾರದ ನೀಳ ಕಾರ್ನೇಲಿಯನ್ ಮಣಿಗಳನ್ನು ಇದೇ ತಂತ್ರದಿಂದ ತಯಾರಿಸಲಾಗುತ್ತಿತ್ತು. ಕೆಲವು ಕಾರ್ನೇಲಿಯನ್ ಮಣಿಗಳ ಹೊರಮೈ ಮೇಲೆ ವಿವಿಧ ವಿನ್ಯಾಸದಲ್ಲಿ ರೇಖೆಗಳನ್ನು ಕೊರೆದು ಇವುಗಳೊಳಗೆ ಬಿಳಿಬಣ್ಣವನ್ನು ತುಂಬಿ(ಎಚಿಂಗ್) ಇವನ್ನು ಆಕರ್ಷಕವಾಗಿ ಮಾಡುವುದೂ ಇತ್ತು. ಕೆಲವು ಸಸ್ಯಜನ್ಯರಸವನ್ನು ಮಿಶ್ರಣಮಾಡಿ ತಯಾರಿಸಿದ ಕರಿಯ ದ್ರಾವಣದಿಂದ ಕಾರ್ನೇಲಿಯನ್ ಮಣಿಗಳ ಹೊರಮೇಲ್ಮೈಯಲ್ಲಿ ಇಚ್ಛಿಸಿದ ವಿನ್ಯಾಸಗಳನ್ನು ಬಿಡಿಸಲಾಗುತ್ತಿತ್ತು ಆವಿಗೆಯಲ್ಲಿ ಸುಟ್ಟಾಗ ಮಣಿಗಳು ಕೆಂಪುಬಣ್ಣವನ್ನು ಪಡೆಯುತ್ತಿದ್ದವು ಹಾಗೂ ಅವುಗಳ ಮೇಲೆ ದ್ರಾವಣದಿಂದ ಬಿಡಿಸಿದ ವಿನ್ಯಾಸಗಳು ಬಿಳಿಬಣ್ಣದಲ್ಲಿ ಪರಿವರ್ತನೆ ಹೊಂದಿ ಮಣಿಗಳ ಮೇಲೆ ಶಾಶ್ವತವಾಗಿಯೇ ಉಳಿದುಬಿಡುತ್ತಿದ್ದವು.

ಸ್ಟಿಯಟೈಟ್ ವಸ್ತುಗಳು: ಸ್ಟಿಯಟೈಟ್‌ನಿಂದ ಪ್ರೌಢ ಹರಪ್ಪ ಕಸಬುದಾರರು ಮುದ್ರೆಗಳನ್ನೂ ಸೂಕ್ಷ್ಮಾಕಾರದ ಮಣಿಗಳನ್ನೂ ತಯಾರಿಸುತ್ತಿದ್ದರು. ಬೇಕಾದ ಆಕಾರದಲ್ಲಿ ಮುದ್ರೆಗಳನ್ನು ಕೊರೆದು ಕ್ಷಾರೀಯ ದ್ರಾವಣದಲ್ಲಿ ಅದ್ದಿ ಹೆಚ್ಚು ಉಷ್ಣತೆಯಲ್ಲಿ ಸುಟ್ಟಾಗ, ಮುದ್ರೆ ಗಟ್ಟಿಯಾಗಿ, ಹೊಳಪುಳ್ಳದ್ದಾಗಿ, ಬಿಳಿಯ ಬಣ್ಣವನ್ನು ಪಡೆಯುತ್ತದೆ. ಸ್ಟಿಯಟೈಟ್‌ನ ಸೂಕ್ಷ್ಮಾಕಾರದ ಮಣಿಗಳು (1 ರಿಂದ 3 ಮಿಮೀ ದಪ್ಪ ಹಾಗೂ 1ಮಿಮೀ ಹೊರವ್ಯಾಸ) ಹೇರಳವಾಗಿ ದೊರಕಿವೆ. ಈ ಮಣಿಗಳ ಸಮರೂಪತೆ ಆಶ್ಚರ್ಯಮೂಡಿಸುತ್ತದೆ. ಬಹುಶಃ ಸ್ಟಿಯಟೈಟ್‌ನ ಹಿಟ್ಟಿನಂಥ ಮುದ್ದೆಯನ್ನು ತಯಾರಿಸಿ, ಇದನ್ನು ನೀವಿ ತೂತುಳ್ಳ ಉದ್ದದ ಎಳೆಗಳನ್ನು ತಯಾರಿಸಿಕೊಳ್ಳಲಾಗುತ್ತಿತ್ತು. ಎಳೆಗಳನ್ನು ಬೇಕಾದ ಅಳತೆಗೆ ತುಂಡು ಮಾಡಿ, ಸುಟ್ಟು, ಗಟ್ಟಿಯಾದ ಮಣಿಗಳನ್ನು ತಯಾರಿಸುತ್ತಿದ್ದರು. ಸ್ಟಿಯಟೈಟ್‌ನ ಇನ್ನಿತರ ಅಳತೆ, ಆಕಾರಗಳ ಮಣಿಗಳೂ ವಿಪುಲವಾಗಿ ದೊರಕಿವೆ.

ಶಂಖ ವಸ್ತುಗಳು: ಪ್ರಾಚೀನ ಕಾಲದಿಂದಲೇ ನಡೆದು ಬಂದ ಸಂಪ್ರದಾಯದಂತೆ ಈ ಕಾಲದಲ್ಲಿಯೂ ಮಹಿಳೆಯರು ಶಂಖದ ಬಳೆಗಳನ್ನು ಧರಿಸುತ್ತಿದ್ದರು. ಶಂಖದಿಂದ ಬಳೆಗಳನ್ನು ತಾಮ್ರ ಅಥವಾ ಕಂಚಿನ ಗರಗಸದಿಂದ ಕೊರೆದು, ಬೇರ್ಪಡಿಸಿ ತಯಾರಿಸಲಾಗುತ್ತಿತ್ತು. ಶಂಖದಿಂದ ತಯಾರಿಸಲ್ಪಟ್ಟ ಇನ್ನಿತರ ವಸ್ತುಗಳೆಂದರೆ, ಸಟ್ಟುಗ, ಚಮಚಗಳು, ಹದಿಯಲಂಕಾರ ವಸ್ತುಗಳು ಇತ್ಯಾದಿ. ಸಿಂಧೂ–ಸರಸ್ವತಿ ಪ್ರದೇಶದಲ್ಲಿ ಉಪಯೋಗಿಸಿದ ಶಂಖಗಳನ್ನೆಲ್ಲ ಗುಜರಾತ್ ಮತ್ತು ಸಿಂಧ್ ಕರಾವಳಿಯಿಂದ ಪಡೆಯಲಾಗುತ್ತಿತ್ತು. ಈ ಶಂಖಗಳು ಹೆಚ್ಚಾಗಿ ಟರ್ಬಿನೆಲ್ಲ ಪೈರಮ್ ವರ್ಗದವು.



**ಶಂಖದಿಂದ ಮಾಡಿದ ಸಟ್ಟುಗ, ಹರಪ್ಪ**

ಸಿಂಧೂ–ಸರಸ್ವತಿ ಸಂಸ್ಕೃತಿಯ ಲಿಪಿ ಹಾಗೂ ಮುದ್ರೆಗಳು: ಪ್ರೌಢ ಹರಪ್ಪ ಕಾಲದಲ್ಲಿ ಲಿಪಿಯ ಉಗಮವಾಯಿತೆಂಬುದು ಸಾಮಾನ್ಯ ನಂಬಿಕೆ. ಆದರೆ ಇತ್ತೀಚೆಗೆ ಗುಜರಾತಿನಲ್ಲಿರುವ ಪಾದ್ರಿ ನೆಲೆಯಲ್ಲಿ ಹಾಗೂ ಹರಪ್ಪ ನೆಲೆಯಲ್ಲಿ ನಡೆಸಿದ ಉತ್ಖನನದಿಂದಾಗಿ ಲಿಪಿಯ ಉಗಮ ಆದಿ ಹರಪ್ಪ ಕಾಲದಿಂದಲೇ ಪ್ರಾರಂಭವಾಗಿದ್ದುದು ಕಂಡುಬಂದಿದೆ. ಲಿಪಿಯ ಆವಿಷ್ಕಾರ ಈ ಸಂಸ್ಕೃತಿಯ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ವಿಷಯಗಳಲ್ಲದೆ ಸಂಚಾರ ಮಾಧ್ಯಮದಲ್ಲೂ ತ್ವರಿತ ಬೆಳವಣಿಗೆಯನ್ನು ತಂದಿತು. ಈ ಲಿಪಿಯ ಉಗಮ, ಇದರ ಉದ್ದೇಶ ಹಾಗೂ ಇದರ ಅವನತಿಯನ್ನು ಕುರಿತಾಗಿ ಈವರೆಗೆ ಎಲ್ಲರೂ ಒಪ್ಪಬಹುದಾದ ನಿಶ್ಚಿತ ಉತ್ತರವಿಲ್ಲ. ಸಿಂಧೂ–ಸರಸ್ವತಿ ಲಿಪಿ ಪ್ರಶ.ಪೂ.ಸು.2600ರ ವೇಳೆಗೆ ಆಗ್ನೇಯ ಮೆಸಪೊಟೇಮಿಯನದೊಂದಿಗಿನ (ಈಳಮ್=ಇರಾನ್‌ನ ನೈರುತ್ಯ ಭಾಗ) ಸಂಪರ್ಕ ಪ್ರೇರಣೆಯಿಂದ ಹುಟ್ಟಿರಬೇಕೆಂದು ಕೆಲವು ವಿದ್ವಾಂಸರ ಅನಿಸಿಕೆ. ಏಕೆಂದರೆ ಈ ಎರಡೂ ಲಿಪಿಗಳಲ್ಲಿ ಬಾಹ್ಯ ನೋಟದಲ್ಲಿ ಸಾಮ್ಯವಿದೆ. ಅಲ್ಲದೆ ಈ ಎರಡೂ ಪ್ರದೇಶಗಳ ನಡುವೆ ಮೊದಲಿನಿಂದಲೂ ಇದ್ದ ವ್ಯಾಪಾರ ಸಂಬಂಧ ಸಿಂಧೂ–ಸರಸ್ವತಿ ಲಿಪಿಯ ಉಗಮಕ್ಕೆ ಪ್ರೇರಣೆಯಾಗಿರಬೇಕೆಂದು ಊಹಿಸಿದ್ದಾರೆ. ಹರಪ್ಪದಲ್ಲಿಯ ಇತ್ತೀಚಿನ ಉತ್ಖನನದಲ್ಲಿ ದೊರೆತ ಸಂಕೇತಗಳು ಇದುವರೆಗೆ ದೊರೆತ ಎಲ್ಲ ಲಿಪಿಗಳಲ್ಲಿ ಅತ್ಯಂತ ಪ್ರಾಚೀನವೆಂದು ಉತ್ಖನನಕಾರ ಕೆನೋಯರ್ ಅಭಿಪ್ರಾಯ ಪಟ್ಟಿದ್ದಾನೆ. ಇದರ ಕಾಲಮಾನ ಪ್ರಶ.ಪೂ.ಸು.3000. ಗಣಕಯಂತ್ರ ಆಧರಿತ ಅಧ್ಯಯನದಿಂದ ಸಿಂಧೂ–ಸರಸ್ವತಿ ಲಿಪಿಗೆ ಇನ್ನಿತರ ಯಾವುದೇ ಲಿಪಿಯ ಜೊತೆಗೆ ನೇರ ಸಂಬಂಧವಿಲ್ಲ ಎಂದು ಆಸ್ಕೋ ಪರಪೋಲಾ ಅಭಿಪ್ರಾಯ ಪಟ್ಟಿದ್ದಾನೆ. ಈಜಿಪ್ಟ್, ಮೆಸಪೊಟೋಮಿಯ ಹಾಗೂ ಸಿಂಧೂ–ಸರಸ್ವತಿ ಬಯಲುಗಳ ಸಂಸ್ಕೃತಿಗಳು ತಮ್ಮ–ತಮ್ಮ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಸ್ವತಂತ್ರವಾಗಿ ಲಿಪಿಯನ್ನು ಬೆಳೆಸಿಕೊಂಡವೆಂದು ಇವನು ತಿಳಿಸಿದ್ದಾನೆ. ಇದುವರೆಗೆ ಸು.4000ಕ್ಕೂ ಹೆಚ್ಚು ಸಿಂಧೂ–ಸರಸ್ವತಿ ಮುದ್ರೆಗಳು ದೊರಕಿವೆ. ಇವುಗಳ ಮೇಲೆ ಅಂಕಿತವಾದ ಸಂಕೇತಗಳ ಸಂಖ್ಯೆ ಅತಿ ಕಡಿಮೆ. ಸರಾಸರಿ ಐದು ಸಂಕೇತಗಳನ್ನು ಹೊಂದಿದ ಮುದ್ರೆಗಳು ಹಲವಾರಿವೆ. 26 ಸಂಕೇತಗಳುಳ್ಳ ಮುದ್ರೆ ಅತಿ ಉದ್ದದ ಬರೆಹವಾಗಿದೆ. ಕೆಲವು ವಿದ್ವಾಂಸರ ಪ್ರಕಾರ ಸಂಕೇತಗಳ ಒಟ್ಟು ಸಂಖ್ಯೆ 400ಕ್ಕೂ ಹೆಚ್ಚಿದೆ. ಕೈಬರೆಹದಿಂದಾಗಿ ಒಂದೇ ಸಂಕೇತದ ಆಕಾರದಲ್ಲಿ ವ್ಯತ್ಯಾಸಗಳನ್ನು ನೋಡಬಹುದು.

ಅಲ್ಲದೆ ಬಹು ಸಂಕೇತಗಳ ಸಂಯುಕ್ತದಿಂದ ಉಂಟಾದ ಸಂಯುಕ್ತ ಸಂಕೇತಗಳನ್ನು ಸರಳೀಕರಿಸುವುದು ಸುಲಭವಲ್ಲ. ಆದರೂ ಗಣಕತಂತ್ರದಿಂದ ಇಂಥ ಸಮಸ್ಯೆಗೆ ಉಪಾಯವನ್ನು ಕಂಡುಕೊಳ್ಳಲಾಗಿದೆ. ಸಿಂಧೂ-ಸರಸ್ವತಿಯ ಅನೇಕ ಮುದ್ರೆಗಳ ಮೇಲೆ ಒಂದೊಂದೇ ಸಂಕೇತವಿದೆ. ಈ ಸಂಕೇತ ಒಂದು ಶಬ್ದ ಅಥವಾ ಭಾವಲಿಪಿಯ ಪ್ರತೀಕವಾಗಿರಬಹುದು. ಈವರೆಗೂ ಬಿಡಿಸಿ ಓದಿದ ಇನ್ನಿತರ ಪ್ರಾಚೀನ ಲಿಪಿಗಳ ಪದ್ಧತಿಯ ಪ್ರಕಾರ, ಆರಂಭದಲ್ಲಿ ಪ್ರತಿಯೊಂದು ಸಂಕೇತ ಭಾವಲಿಪಿ ಅಥವಾ ಪದಚಿಹ್ನೆಯಂತಿದ್ದು, ಕಾಲಾಂತರದಲ್ಲಿ ಇವೇ ಸಂಕೇತಗಳು ಪದಭಾಗ ಅಥವಾ ಉಚ್ಚಾರಾಂಶ ಇಲ್ಲವೆ ಒಂದು ಶಬ್ದವನ್ನು ಪ್ರತಿನಿಧಿಸುವಂತಾದವು. ಈ ಪ್ರಕ್ರಿಯೆಯಲ್ಲಿ ಸಂಕೇತಗಳ ಸಂಖ್ಯೆಯೂ ಕಡಿಮೆಯಾದದ್ದನ್ನು ಕಾಣಬಹುದು. ಉದಾಹರಣೆಗೆ ಪ್ರಾಚೀನ ಸುಮೇರಿಯದಲ್ಲಿದ್ದ ಸು.700 ವಿವಿಧ ಸಂಕೇತಗಳನ್ನು ಕಾಲಾಂತರದಲ್ಲಿ 50 ಅಕ್ಷರ ಲಿಪಿಗಳ ರೂಪಕ್ಕೆ ತರಲಾಗಿದೆ.

ಸಿಂಧೂ-ಸರಸ್ವತಿ ಸಂಸ್ಕೃತಿಯ ಮುದ್ರೆಗಳ ಮೇಲಿರುವ ಸಂಕೇತಗಳು ವರ್ಣಮಾಲೆಯ ಬರೆಹವಲ್ಲ ಹಾಗೂ ಪದಚಿಹ್ನೆಯ ಸಂಕೇತ ಪದ್ಧತಿಯೂ ಅಲ್ಲ ಎನ್ನುವುದು ಬಹಳಷ್ಟು ವಿದ್ವಾಂಸರ ಅಭಿಪ್ರಾಯ. ಬಹುಶಃ ಈ ಎರಡೂ ಪದ್ಧತಿಗಳ ಮಧ್ಯಾವಸ್ಥೆಗೆ ಸಂಬಂಧಿಸಿದ ಲಿಪಿಯಾಗಿರಬಹುದೆಂದು ಕೆಲವರ ಅನಿಸಿಕೆ. ಆದ್ದರಿಂದ ಇದನ್ನು ಲೋಗೊ ಸಿಲಬಿಕ್ ಎಂದು ಕರೆದಿದ್ದಾರೆ. ಈ ಪದ್ಧತಿಯಲ್ಲಿ ಒಂದು ಸಂಕೇತ, ಒಂದು ಪದಭಾಗ ಅಥವಾ ಉಚ್ಚಾರಾಂಶವಾಗಿರಬಹುದು ಅಥವಾ ಒಂದು ಶಬ್ದವಾಗಿರಬಹುದು. ಅನೇಕ ವಿದ್ವಾಂಸರಂತೆ ಸಿಂಧೂ-ಸರಸ್ವತಿ ಲಿಪಿ ಲೋಗೊ ಸಿಲಬಿಕ್ ಆಗಿದ್ದು, ಮುದ್ರೆಗಳಲ್ಲಿರುವ ಒಂದು ಅಥವಾ ಒಂದಕ್ಕಿಂತಲೂ ಹೆಚ್ಚಿನ ಸಂಕೇತಗಳ ಸರಣಿ, ಒಂದು ಸ್ವತಂತ್ರ ಪದವನ್ನಾಗಲಿ ಅಥವಾ ಅನೇಕ ಪದಗಳ ವ್ಯಾಕರಣಬದ್ಧ ವಾಕ್ಯವನ್ನಾಗಲಿ ಪ್ರತಿನಿಧಿಸುತ್ತಿರಬಹುದು. ಕೆಲವೊಂದು ಚಿಹ್ನೆಗಳು ಚಿತ್ರಲಿಪಿಯಂತಿವೆ. ಉದಾ: ಮೀನಿನಾಕಾರ, ಧನುರ್ಧಾರಿ ಇತ್ಯಾದಿ. ಇಂಥ ಒಂದೇ ಸಂಕೇತವನ್ನು ಬಳಸಿದಾಗ ಅದು ಒಂದು ಭಾವ ಅಥವಾ ಪರಿಪೂರ್ಣವಾದ ಅಥವಾ ಅದರೊಂದಿಗೆ ಕೂಡಿಕೊಂಡ ಸಂಪೂರ್ಣ ಘಟನೆಯನ್ನು ಪ್ರತಿಬಿಂಬಿಸುತ್ತಿರ ಬಹುದು. ಕೆಲವೊಂದು ವಸ್ತುಗಳ ಒಂದು ಮುಖದಲ್ಲಿ ಒಂದೇ ಒಂದು ಸಂಕೇತವಿದ್ದರೆ, ಇನ್ನೊಂದು ಮುಖದಲ್ಲಿ ಸಂಕೇತಗಳ ಸಾಲನ್ನು ಕಾಣಬಹುದು.

ಪ್ರೌಢ ಹರಪ್ಪ ಹಂತದಲ್ಲಿಯ ಬರೆಹಗಳನ್ನು ಪ್ರಮುಖವಾಗಿ ಮುದ್ರೆ, ಮುದ್ರಾಂಕಿತ, ತಾಮ್ರದ ಫಲಕ, ತಾಮ್ರ ಅಥವಾ ಕಂಚಿನ ಉಪಕರಣ, ಮಣ್ಪಾತ್ರೆ ಹಾಗೂ ಸುಡಾವೆ ಮಣ್ಣು, ಕಲ್ಲು, ಫಯಾನ್ಸ್ ಇನ್ನಿತರ ಪದಾರ್ಥಗಳಲ್ಲಿ ತಯಾರಿಸಿದ ವಸ್ತುಗಳ ಮೇಲೆ ನೋಡಬಹುದು. ಇವುಗಳಲ್ಲದೆ ಮರ, ಬಟ್ಟೆ, ಚರ್ಮ, ತಾಳೆಗರಿಗಳು/ಭೂರ್ಜಪತ್ರಗಳ ಮೇಲೂ ಬರೆದಿದ್ದಿರಬಹುದು. ಈ ಪ್ರಕಾರವಾಗಿ ವಿವಿಧ ವಸ್ತು ಹಾಗೂ ಮಾಧ್ಯಮಗಳ ಮೇಲೆ ಬರೆಯುವ ಪದ್ಧತಿ ಹಾಗೂ ತಾಂತ್ರಿಕ ರೀತಿ ಪ್ರಪಂಚದ ಇನ್ನಾವ ಸಮಕಾಲೀನ ಸಂಸ್ಕೃತಿಗಳಲ್ಲೂ ನೋಡಲು ಸಿಗುವುದಿಲ್ಲ. ವಿಶೇಷವಾಗಿ ಮುದ್ರೆಗಳ ಮೇಲೆ ಋಣಾತ್ಮಕ ಸಂಕೇತಗಳನ್ನು (ನೆಗೆಟಿವ್ ಇಂಪ್ರೆಷನ್) ಕೊರೆಯಲಾಗಿದ್ದು, ಹಸಿ ಮಣ್ಣಿನ ಮತ್ತಿತರ ವಸ್ತುವಿನ ಮೇಲೆ ಅಚ್ಚೊತ್ತಿದ್ದಾಗ ಈ ಸಂಕೇತಗಳು ಧನಾತ್ಮಕ ರೂಪದಲ್ಲಿ ಎದ್ದು ಕಾಣುತ್ತವೆ. ಇಂಥ ಪ್ರತಿಕೃತಿಗಳನ್ನು ಸುಟ್ಟಮಣ್ಣಿನ ಅಥವಾ ಫಯಾನ್ಸ್‌ನ ಫಲಕಗಳಲ್ಲಿ ಕಾಣಬಹುದು. ಇಂತಹ ಮುದ್ರಾಂಕನಗಳು ಕಡಿಮೆ. ಕುಂಬಾರ ತನ್ನ ಮಡಕೆ ಹಾಗೂ ಇನ್ನಿತರ ವಸ್ತುಗಳ ಮೇಲೆ ಇಂಥ ಮುದ್ರೆಗಳ ಅಚ್ಚನ್ನು ಒತ್ತಿದ ಉದಾಹರಣೆಗಳಿವೆ. ಮೊಹೆಂಜೋದಾರೊವಿನ ಮುದ್ರೆಗಳ ಅಧ್ಯಯನ ಮಾಡಿ, ಅವುಗಳ ಆಕಾರಕ್ಕನುಗುಣವಾಗಿ ಈ.ಜೆ.ಎಚ್.ಮ್ಯಾಕೆ ಹತ್ತು ವರ್ಗಗಳಲ್ಲಿ ವಿಂಗಡಿಸಿದ್ದಾನೆ. ಸ್ತಂಭಾಕೃತಿಯ ಮುದ್ರೆ, ಹಿಂಭಾಗದಲ್ಲಿ ಛೇದವಿರುವ ಹಿಡಿಕೆಯುಳ್ಳ ಚತುರಸ್ರಾಕಾರದ ಮುದ್ರೆ, ಹಿಡಿಕೆ ರಹಿತ, ಎರಡೂ ಮುಖಗಳಲ್ಲಿ ಬರೆಹವಿದ್ದ ಚತುರಸ್ರಾಕಾರದ ಮುದ್ರೆ, ಹಿಡಿಕೆ ರಹಿತ ಆಯತಾಕಾರದ ಮುದ್ರೆ, ರೇಖಾ ವಿನ್ಯಾಸವುಳ್ಳ ಗುಂಡಿಮುದ್ರೆ, ಛೇದವಿರುವ ಹಿಂಭಾಗ ಹೊಂದಿದ ಆಯತಾಕಾರದ ಮುದ್ರೆ, ಸಮಚತುರಸ್ರಗಳಿಂದಾದ ಘನಾಕೃತಿ ಮುದ್ರೆ, ಛೇದವಿರುವ ಹಿಡಿಕೆಯುಳ್ಳ ಆಯತಾಕಾರದ ಮುದ್ರೆ, ಹಿಡಿಕೆ ರಹಿತ, ಎರಡೂ ಮುಖಗಳ ಮೇಲೆ ಬರೆಹವಿರುವ ವೃತ್ತಾಕಾರ ಮುದ್ರೆ.

ಹರಪ್ಪ ಸಂಸ್ಕೃತಿಯ ಮುದ್ರೆಗಳು ಸಾಮಾನ್ಯವಾಗಿ ಚೌಕ ಅಥವಾ ಆಯತಾಕಾರದ್ದಾಗಿವೆ. ಸ್ತಂಭಾಕೃತಿಯ ಮುದ್ರೆಗಳು ಮೆಸಪೊಟೇಮಿಯದ ಮುದ್ರಾ ಮಾದರಿಯಾದರೆ, ವೃತ್ತಾಕಾರದ ಮುದ್ರೆಗಳು ಪರ್ಷಿಯನ್ ಖಾರಿ ಪ್ರದೇಶದ ಸಾಮಾನ್ಯ ಮುದ್ರೆಗಳಾಗಿವೆ.

ಮುದ್ರೆಗಳು ಹೆಚ್ಚಾಗಿ ಸ್ಟಿಯಟೈಟ್‌ನವು. ಕೆಲವೊಂದನ್ನು ಬೆಳ್ಳಿ, ಫಯಾನ್ಸ್ ಹಾಗೂ ಕ್ಯಾಲ್ಸೈಟ್‌ನಲ್ಲಿಯೂ ತಯಾರಿಸಲಾಗಿದೆ. ತಾಮ್ರ ಹಾಗೂ ಮೆದುಕಲ್ಲಿನಿಂದ (ಸೋಪ್‌ಸ್ಟೋನ್) ತಯಾರಿಸಿದ ಮುದ್ರೆಗಳು ಲೋಥಲ್‌ನಲ್ಲಿ ಸಿಕ್ಕಿವೆ. ಸ್ಟಿಯಟೈಟ್ ಮುದ್ರೆಗಳ ಹೊರಮೈ ಗಾಜಿನಂತೆ ನುಣುಪಾಗಿ, ಹೊಳಪುಳ್ಳದ್ದಾಗಿದೆ. ಮುದ್ರೆಗಳ ಮೇಲೆ ಚಿತ್ರ ಹಾಗೂ ಸಂಕೇತಗಳನ್ನು ಕೊರೆಯುವುದಕ್ಕೂ ಮೊದಲೇ ಅದನ್ನು ಒಂದು ಕ್ಷಾರೀಯ ದ್ರಾವಣದಲ್ಲಿ ಮುಳುಗಿಸಿ, ಅನಂತರ ಋಣಾತ್ಮಕವಾಗಿ ಚಿತ್ರ ಹಾಗೂ ಸಂಕೇತಗಳನ್ನು ಕೊರೆದು, ಭಟ್ಟಿಯಲ್ಲಿ ಸುಡಲಾಗು ತ್ತಿತ್ತು. ಏಕೆಂದರೆ ಕೆಲ ಭಗ್ನಗೊಂಡ ಮುದ್ರೆಗಳ ತಿರುಳು ಬೂದುಬಣ್ಣದ್ದಾಗಿದ್ದು ಹೊರಮೈ ಮಾತ್ರ ಹೊಳಪುಳ್ಳ ಬಿಳಿ ಬಣ್ಣವನ್ನು ಪಡೆದಿರುತ್ತದೆ.

ಬರೆಹವಲ್ಲದೆ ಈ ಮುದ್ರೆಗಳ ಮೇಲೆ ಕೊರೆದು ಬಿಡಿಸಿದ ಪ್ರಾಣಿಗಳು ಇಂತಿವೆ: ಧ್ವಜ ಸ್ತಂಭದಂಥ ನಿಲುಗಂಬಾಕಾರದ ಮುಂದೆ ನಿಂತ ಏಕಶೃಂಗಿ, ಸಮತಲ ಹಾಗೂ ನಿಮ್ನ ಮಧ್ಯ ಪಾರ್ಶ್ವಗಳುಳ್ಳ (ಕಾನ್‌ಕೇವ್ ಸೈಡ್ಸ್) ಗೋದಣಿಗೆಯ (ಗೋದಲೆ) ಮುಂದೆ ನಿಂತ ಚಿಕ್ಕ ಕೊಂಬುಗಳುಳ್ಳ ಹೋರಿ; ಗಾಳಿಯನ್ನು ಆಘ್ರಾಣಿಸುವ ಎಮ್ಮೆ; ಗಂಗೆದೊಗಲು ಮತ್ತು ಹಿಣಿಯುಳ್ಳ ಬ್ರಾಹ್ಮಣಿ ತಳಿಯ ಹೋರಿ, ತೊಟ್ಟಿಯ ಮುಂದೆ ನಿಂತ ಖಡ್ಗಮೃಗ, ಹುಲಿ, ಕೋಡುಗಳುಳ್ಳ ಹುಲಿ, ಆನೆ, ಕೋರೆದಂತದ ಆನೆ, ಮೀನನ್ನು ತಿನ್ನುತ್ತಿರುವ ಮೊಸಳೆ, ಜಿಂಕೆ, ಅಳಿಲು ಇತ್ಯಾದಿ. ಕೆಲವು ಪೌರಾಣಿಕ ದೃಶ್ಯವನ್ನು ಹೋಲುವ ಪ್ರಾಣಿ ಹಾಗೂ ಸಸ್ಯ ಗುಂಪಿನ ಚಿತ್ರಗಳನ್ನೂ ಕೊರೆಯಲಾಗಿದೆ.

ಮುದ್ರೆಗಳು

ಸಿಂಧೂ-ಸರಸ್ವತಿ ಸಂಸ್ಕೃತಿಯ ಲಿಪಿಯನ್ನು ಸೆಮಿಟಿಕ್ ಲಿಪಿಗಳಾದ ಅರಬ್ಬಿ ಹಾಗೂ ಹೀಬ್ರುವಿನಂತೆ ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು. ಲಂಬ ವಾಕ್ಯ ಅಥವಾ ವಿಷಯವನ್ನು ಅನೇಕ ಸಾಲುಗಳಲ್ಲಿ ಬರೆಯಲಾಗಿದೆ. ಇಂಥ ಸಂದರ್ಭದಲ್ಲಿ ಪ್ರಥಮ ಸಾಲು ಬಲದಿಂದ ಎಡಕ್ಕಿದೆ. ಎರಡನೆಯ ಸಾಲನ್ನು ಎಡದಿಂದ ಬಲಕ್ಕೆ ಬರೆಯಲಾಗುತ್ತಿದ್ದು, ಮುಂದಿನ ಸಾಲುಗಳನ್ನು ಇದೇ ಕ್ರಮಕ್ಕನುಗುಣವಾಗಿ ಬರೆಯಲಾಗುತ್ತಿತ್ತು. ಇಂಥ ಬರವಣಿಗೆಯ ಶೈಲಿಯನ್ನು ಬೌಸ್ಟ್ರೋಫೆಡನ್ ಎಂದು ಕರೆಯುತ್ತಾರೆ.

ಇಂಥ ಮುದ್ರೆಗಳನ್ನು ಬಹುಶಃ ಆಡಳಿತವರ್ಗದವರು, ಧರ್ಮಗುರುಗಳು, ವ್ಯಾಪಾರಿಗಳು ಮತ್ತು ಭೂಮಾಲೀಕರು ಉಪಯೋಗಿಸುತ್ತಿದ್ದಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಇವನು ವ್ಯಾಪಾರದಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿದ್ದರೆಂಬುದಕ್ಕೆ ಲೋಥಲ್‌ನ ಕಣಜಗಳಿಂದ ದೊರೆತ ಸುಟ್ಟುಹೋದ ಮುದ್ರಾಂಕನಗಳು ಸಾಕ್ಷಿ. ಸಿಂಧೂ-ಸರಸ್ವತಿ ಕ್ಷೇತ್ರದಿಂದ ಪರದೇಶಗಳಿಗೆ ಹೋದ ವ್ಯಾಪಾರಿಗಳು, ತಮ್ಮ ಚಿಹ್ನೆ ಹಾಗೂ ಸಂಕೇತಗಳುಳ್ಳ ಮುದ್ರೆಗಳನ್ನು ತೆಗೆದುಕೊಂಡು ಹೋದಂತಹ ಸಂದರ್ಭದಲ್ಲಿ ಕೆಲವೊಮ್ಮೆ ಅಲ್ಲಿಯ ಪರಿಸ್ಥಿತಿಗನುಸಾರವಾಗಿ ತಮ್ಮ ಮುದ್ರೆಗಳ ಮೇಲೆಯೇ ಪರದೇಶದ ಲಿಪಿಯನ್ನೂ ಕೊರೆದ ಉದಾಹರಣೆಯನ್ನು ಇರಾನಿನ ಸೂಸಾದಲ್ಲಿ ದೊರೆತ ಸ್ಟಿಯಟೈಟ್‌ನ ಸ್ತಂಭಾಕಾರದ ಮುದ್ರೆಯಲ್ಲಿ ಕಾಣಬಹುದು. ಈ ಮುದ್ರೆಯ ಮೇಲೆ ಕಿರಿಯ ಕೋಡುಗಳುಳ್ಳ ಎರಡು ಹೋರಿಗಳಿದ್ದು, ಮೇಲ್ಭಾಗದಲ್ಲಿ ಸಿಂಧೂ-ಸರಸ್ವತಿಯ ಲಿಪಿ-ಸಂಕೇತಗಳ ಸಾಲಿದೆ. ಆದರೆ ಈವರೆಗೂ ಸಿಂಧೂ-ಸರಸ್ವತಿ ಬಯಲಿನಲ್ಲಿ ಪರದೇಶದ ಲಿಪಿಯುಳ್ಳ ಮುದ್ರೆಗಳಾಗಲೀ ಮುದ್ರಾಂಕನವಾಗಲೀ ದೊರೆತಿಲ್ಲ.

ಇದುವರೆಗೆ ಸಿಂಧೂ-ಸರಸ್ವತಿ ಲಿಪಿಗಳ ಸ್ವರೂಪ ಹಾಗೂ ರಚನಾಕ್ರಮದ ಅಧ್ಯಯನ ಮಾಡಿ ಅರ್ಥೈಸಿ ಹೇಳಿದ ವಿದ್ವಾಂಸರುಗಳಲ್ಲಿ ಎರಡು ಅಭಿಪ್ರಾಯಗಳಿವೆ. ಮೊದಲನೆಯ ಅಭಿಪ್ರಾಯದಂತೆ ಈ ಲಿಪಿಗಳು ಭಾರತದಲ್ಲಿರುವ ಇಂದಿನ ತಮಿಳಿನ ಪೂರ್ವ ಸ್ವರೂಪವಾದ ಪ್ರೋಟೊದ್ರಾವಿಡ ಭಾಷೆ. ಎರಡನೆಯ ಅಭಿಪ್ರಾಯದಂತೆ ಸಂಸ್ಕೃತ ಭಾಷೆ ಹಾಗೂ ಲಿಪಿಗಳ

ಪೂರ್ವರೂಪಗಳಿವು. ಇಷ್ಟೇ ಅಲ್ಲದೆ ಬ್ರಾಹ್ಮಿ ಲಿಪಿ ಹಾಗೂ ಐತಿಹಾಸಿಕ ಕಾಲದ ಲಿಪಿಗಳ ಸಂಬಂಧವನ್ನು ಕುರಿತಾಗಿಯೂ ಚರ್ಚೆಗಳನ್ನು ಮಾಡಿದ್ದಾರೆ. ಈ ಎರಡೂ ಲಿಪಿಗಳ ಸ್ವರೂಪದಲ್ಲಿ ಕಿಂಚಿತ್ ಸಾಮ್ಯವೂ ಕಂಡುಬರುತ್ತದೆ. ಇಷ್ಟೆಲ್ಲಾ ಪ್ರಯತ್ನಗಳ ನಡುವೆಯೂ ಸಿಂಧೂ-ಸರಸ್ವತಿ ಲಿಪಿ ಒಂದು ಚಿದಂಬರ ರಹಸ್ಯವಾಗಿ ಉಳಿದಿದೆ **(ನೋಡಿ- ಲಿಪಿಗಳು)**.

ತೂಕದ ಬಟ್ಟುಗಳು ಹಾಗೂ ಅಳತೆ ಮಾಪನಗಳು: ವ್ಯಾಪಾರವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ನಿಗದಿತ ತೂಕದ ಬಟ್ಟುಗಳು ಹಾಗೂ ಅಳತೆ ಮಾಪನಗಳು ಅವಶ್ಯ. ಮೊಹೆಂಜೋದಾರೊ ನೆಲೆಯಿಂದ ದೊರೆತ ಎಲ್ಲ ತೂಕದ ಬಟ್ಟುಗಳನ್ನು



ತೂಕದ ಬಟ್ಟುಗಳು

ಅಧ್ಯಯನ ಮಾಡಿದ ಎ.ಎಸ್.ಹೆಮ್ಮಿಯವರ ಪ್ರಕಾರ 0.871 ಗ್ರಾಂ ತೂಕ ಕನಿಷ್ಠ; ಮತ್ತು 10.865 ಗ್ರಾಂ ಗರಿಷ್ಠ. ಈ ಎರಡೂ ತೂಕಗಳ ಸರಾಸರಿ ತೂಕದೊಂದಿಗೆ ಎಲ್ಲ ತೂಕದ ಬಟ್ಟುಗಳನ್ನು ಕ್ರಮದಲ್ಲಿರಿಸಿ, ಅವುಗಳ ಅನುಪಾತ ಸಂಬಂಧವನ್ನು ಕಂಡುಹಿಡಿದಿದ್ದಾರೆ. ಇದೇ ಪ್ರಕಾರ ಲೋಥಲ್ ಹಾಗೂ ಮೊಹೆಂಜೋದಾರೊವಿನ ತೂಕದ ಬಟ್ಟುಗಳನ್ನು ಮೆಟ್ರಿಕ್ ಪದ್ಧತಿಯ ತತ್ತ್ವವನ್ನಾಧರಿಸಿ ಕ್ರಮದಲ್ಲಿ ಜೋಡಿಸಿದಾಗ ಅದರಲ್ಲಿ ನಿರ್ದಿಷ್ಟವಾದ ಎರಡು ತೂಕ ಶ್ರೇಣಿಗಳನ್ನು ವಿದ್ವಾಂಸರು ಪತ್ತೆಹಚ್ಚಿದ್ದಾರೆ. ಈ ಎರಡು ಶ್ರೇಣಿಯ ಅನುಪಾತದ ತೂಕಗಳು, ಈಗ ಪ್ರಚಲಿತವಿರುವ ಸಂಪ್ರದಾಯದಿಂದ ಬಂದ, ಗುಲಗುಂಜಿ (ಗುಂಜ) ತೂಕಕ್ಕೆ ತಾಳೆಹೊಂದುತ್ತವೆಯೆಂದೂ ಅಭಿಪ್ರಾಯಪಟ್ಟಿದ್ದಾರೆ. ಈ ಸಂಸ್ಕೃತಿಯ ತೂಕದ ಬಟ್ಟುಗಳು ಬಹುತೇಕವಾಗಿ ಆಯತಾಕಾರ ಹಾಗೂ ಘನಚತುರ ಸ್ರಾಕಾರವಾಗಿದ್ದು, ಚರ್ಟ್‌ಕಲ್ಲಿನಿಂದಲೇ ತಯಾರಿಸಲಾಗಿದ್ದರೂ ಇನ್ನಿತರ ಪದಾರ್ಥ ಹಾಗೂ ಕಲ್ಲುಗಳಲ್ಲಿಯೂ ಪ್ರಮಾಣಬದ್ಧವಾಗಿ ತಯಾರಿಸಲಾಗುತ್ತಿತ್ತು. ಸಣ್ಣ ತೂಕದ ಬಟ್ಟುಗಳಲ್ಲಿ ದ್ವಿಮಾನ ಪದ್ಧತಿಯನ್ನು ಅಳವಡಿಸಲಾಗಿದ್ದು, ಅನಂತರ ದಶಮಾನ ಪದ್ಧತಿಗನುಗುಣವಾಗಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಮೊಹೆಂಜೋದಾರೊ ಮತ್ತು ಲೋಥಲ್‌ನಲ್ಲಿ ರೇಖಾತ್ಮಕ ರೂಪದಲ್ಲಿರುವ ಶಂಖದಿಂದ ತಯಾರಿಸಿದ ಅಳತೆ ಪಟ್ಟಿಗಳು ಹಾಗೂ ಹರಪ್ಪದಲ್ಲಿ ತಾಮ್ರ/ಕಂಚಿನ ಅಳತೆ ಕೋಲುಗಳನ್ನು ಕಾಣಬಹುದು. ಅಳತೆಯ ಗುರುತಿನ ಗೀಟುಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಉದ್ದಳತೆ ದಶಮಾನ ಪದ್ಧತಿಗೆ ಅನುಗುಣವಾಗಿದೆಯೆಂದು ವಿದ್ವಾಂಸರ ಅಭಿಪ್ರಾಯ. ಲೋಥಲ್‌ನ ಶಂಖದ ಒಂದು ಉಪಕರಣವನ್ನು ಕೋನ ಮಾಪಕ ಎಂದು ಉತ್ಖನನಕಾರರು ಊಹಿಸಿದ್ದಾರೆ.

ಸಾರಿಗೆ ಸಂಪರ್ಕ: ಪರ್ವತ ತಪ್ಪಲು ಪ್ರದೇಶದಿಂದ ವಲಸೆ ಬಂದ ಜನರಿಗೆ ಸಿಂಧೂ-ಸರಸ್ವತಿ ಬಯಲುಗಳ ಸಮತಟ್ಟಾದ ಪ್ರದೇಶ ಆದರ್ಶ ತಾಣವಾಗಿದ್ದು ಅವರ ರಸ್ತೆ ಸಾರಿಗೆ ಸಂಪರ್ಕದಲ್ಲಿ ಅದ್ಭುತ ಬದಲಾವಣೆಯನ್ನು ತಂದಿತು. ಇದಕ್ಕೆ ಮುಂಚೆ ಸರಕು ಸಾಗಾಣಿಕೆ ಹೇರು ಪ್ರಾಣಿಗಳ ಮೂಲಕ ನಡೆಯುತ್ತಿತ್ತು. ಈ ಕಾಲದಲ್ಲಿ ಎತ್ತಿನಗಾಡಿಯ ಬಳಕೆಯಿಂದಾಗಿ ಸಾಮಾನುಗಳನ್ನು ಸಗಟು ರೂಪದಲ್ಲಿ ದೂರಪ್ರದೇಶಗಳಿಗೆ ಸಾಗಿಸುವುದು ಸಾಧ್ಯವಾಯಿತು. ಪ್ರಾಚೀನ ಕಾಲದಲ್ಲಿ ಎತ್ತಿನ ಗಾಡಿಗಳನ್ನು ಮರದಿಂದ ತಯಾರಿಸಲಾಗುತ್ತಿತ್ತು. ಇವುಗಳ ಅವಶೇಷಗಳು ಉತ್ಖನನದಲ್ಲಿ ಸಿಕ್ಕಿಲ್ಲ. ಆದರೆ ಆ ಕಾಲದ ಗಾಡಿಗಳನ್ನು ಹೋಲುವ ಸುಟ್ಟಮಣ್ಣಿನ ಹಾಗೂ ಕಂಚಿನ ಆಟಿಗೆ ಚಕ್ಕಡಿಗಳು ಪ್ರೌಢ ಹರಪ್ಪ ಕಾಲದ ನೆಲೆಗಳಲ್ಲಿ ಸಿಕ್ಕಿವೆ. ಈ ಮೂಲಕ ಎತ್ತಿನ ಗಾಡಿಗಳಲ್ಲಿ ಕಾಲಾಂತರದಲ್ಲಿ ಆದ ತಾಂತ್ರಿಕ ವಿಕಾಸವನ್ನು ತಿಳಿಯಲು ವಿದ್ವಾಂಸರು ಪ್ರಯತ್ನಿಸಿದ್ದಾರೆ.

ಹರಪ್ಪ ಮತ್ತು ಮೊಹೆಂಜೋದಾರೊಗಳಲ್ಲಿ ಪ್ರೌಢ ಹರಪ್ಪ ಕಾಲದ ವಿಭಿನ್ನ ಆಕಾರದ ಚಕ್ಕಡಿ ಹಾಗೂ ರಥಗಳು ದೊರೆತಿವೆ. ಇವು ಘನ ಚೌಕಟ್ಟಿನ ಹಾಗೂ ಮುಕ್ತ ಚೌಕಟ್ಟಿನ ಬಂಡಿಗಳು. ಭಿರಡಾಣದ ಆದಿ ಪ್ರೌಢ ಹರಪ್ಪ ಹಾಗೂ ಸ್ಥಿತ್ಯಂತರ ಕಾಲದಲ್ಲಿ ಚಕ್ಕಡಿಗಳ ಗಾಲಿಗಳಲ್ಲಿ ಆದ ಸುಧಾರಣೆಯನ್ನು ಕಾಣಬಹುದು. ಅರೆಗಳುಳ್ಳ ಗಾಲಿಗಳನ್ನು ಭಿರಡಾಣ, ಬನಾವಳಿ, ಕಾಲಿಬಂಗನ್ ಹಾಗೂ ರಾಖಿಗಡಿಗಳಲ್ಲಿ ನೋಡಬಹುದು. ಕೇವಲ ಚೌಕಟ್ಟು ಹಾಗೂ ಅರೆಗಳುಳ್ಳ ಗಾಲಿಯನ್ನು ಹೊಂದಿದ ಚಕ್ಕಡಿ ತಾಂತ್ರಿಕ ದೃಷ್ಟಿಯಿಂದ, ಘನ ಚೌಕಟ್ಟು ಹಾಗೂ ಘನಗಾಲಿಯುಳ್ಳ ಚಕ್ಕಡಿಗಿಂತಲೂ ಉತ್ತಮವಾದದ್ದು. ಹೀಗಾಗಿ ಈ ಕಾಲದಲ್ಲಿ ಕೇವಲ ಚೌಕಟ್ಟಿನ, ಅರೆಗಳುಳ್ಳ ಗಾಡಿಯ ಸಂಖ್ಯೆ ವೃದ್ಧಿಯಾದದ್ದು ತೋರಿಬರುತ್ತದೆ. ಇಂಥ ಬಂಡಿಯಲ್ಲಿ ಒಟ್ಟು ಭಾರ ಕಡಿಮೆಯಾಗಿ ಅರೆಗಳುಳ್ಳ ಗಾಲಿಗಳೂ ಇರುಸಿನಿಂದ ಬೇರ್ಪಟ್ಟು ಸ್ವತಂತ್ರವಾಗಿ ಉರುಳುವುದರೊಂದಿಗೆ ತೀವ್ರ ಚಾಲನೆಯನ್ನು ಕೊಡುವುದರಿಂದಾಗಿ ಸಾರಿಗೆ ಸಂಚಾರದಲ್ಲಿ ಹೆಚ್ಚಿನ ಪ್ರಗತಿಯಾಯಿತು.



ಆಟಿಕೆಬಂಡಿ

ಹರಪ್ಪ ಮತ್ತು ಚನ್ಹುದಾರೊದಿಂದ ದೊರೆತ ತಾಮ್ರ/ಕಂಚಿನಿಂದ ತಯಾರಿಸಿದ ಆಟಿಗೆ ಚಕ್ಕಡಿಗಳು ಇಂದಿನ ಎಕ್ಕಾ ಗಾಡಿಯನ್ನು ಹೋಲುತ್ತವೆ. ಬಹುಶಃ ಇಂಥ ಎಕ್ಕಾಗಾಡಿಗಳು ಇಂದಿನ ಹಾಗೆ ಅಂದೂ ಕುದುರೆಗಳಿಂದ ಎಳೆಯಲ್ಪಡುತ್ತಿದ್ದಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ಸವಾರಿ ಚಕ್ಕಡಿಗಳು ಎತ್ತು ಅಥವಾ ಎಮ್ಮೆ/ಕೋಣಗಳಿಂದ ಎಳೆಯಲ್ಪಡುತ್ತಿದ್ದವೆಂದು ತೋರುತ್ತದೆ.

ಎತ್ತರ ಮುಂಭಾಗ, ಸಮತಟ್ಟಾದ ತಳ ಹಾಗೂ ಮಧ್ಯದಲ್ಲಿ ಕೋಣೆಯುಳ್ಳ, ಹುಟ್ಟು ಮತ್ತು ನೌಕಾಪಟಗಳ ನೆರವಿನಿಂದ ಚಲಿಸುವ ಮರದ ನೌಕೆಗಳನ್ನು ನದಿಯಾನದಲ್ಲಿ ಬಳಸುತ್ತಿದ್ದಂತೆ ತೋರುತ್ತದೆ. ಇಂಥ ನೌಕೆಯ ಪ್ರತಿಕೃತಿಯನ್ನು ಮೊಹೆಂಜೋದಾರೊವಿನ ಒಂದು ಮುದ್ರೆಯ ಮೇಲೆ ಕೊರೆದು ಬಿಡಿಸಲಾಗಿದೆ. ಇನ್ನೂ ಕೆಲವು ಪ್ರಕಾರಗಳ ನೌಕೆಯ ಸುಡಾವೆ ಮಣ್ಣಿನ ಮಾದರಿಗಳು ದೊರಕಿವೆ. ಲೋಥಲ್‌ನಿಂದ ದೊರೆತ ಒಂದು ದೋಣಿ ಚತುರಸ್ರ ಹಿಂಭಾಗವುಳ್ಳದ್ದಾಗಿ, ಚೂಪಾದ ಮೂತಿಯನ್ನು ಹೊಂದಿದೆ. ಬಹುಶಃ ಇಂಥ ದೋಣಿಗಳನ್ನು ಸಮುದ್ರಯಾನಕ್ಕೆ ಬಳಸಿರಬಹುದು.

ಬೃಹತ್ ದೋಣಿಯ ಚಿತ್ರಮುದ್ರಿಕೆ, ಮೊಹೆಂಜೋದಾರೊ

ಅಂತರ್ದೇಶಿಯ ಹಾಗೂ ಅಂತಾರಾಷ್ಟ್ರೀಯ ವ್ಯಾಪಾರ: ಪ್ರೌಢ ಹರಪ್ಪ ಕಾಲದ ವ್ಯಾಪಾರ ವ್ಯವಸ್ಥೆಯನ್ನು ಎರಡು ವರ್ಗಗಳನ್ನಾಗಿ ಮಾಡಬಹುದು. ಆಂತರಿಕ ವ್ಯಾಪಾರ ಒಂದು ವರ್ಗವಾದರೆ, ಸಮಕಾಲೀನ ಸಂಸ್ಕೃತಿಗಳು ಅಥವಾ ರಾಜ್ಯಗಳೊಂದಿಗೆ ಇದ್ದ ಅಂತಾರಾಷ್ಟ್ರೀಯ ವ್ಯಾಪಾರ ಎರಡನೆಯ ವರ್ಗ. ಈ ಸಂಸ್ಕೃತಿಯ ನೆಲೆಗಳಲ್ಲಿ ಬಳಸಿದ ಕಚ್ಚಾ ಸರಕುಗಳು, ಇವುಗಳ ನಿಕ್ಷೇಪಸ್ಥಾನ ಹಾಗೂ ಸಾಮಾನುಗಳನ್ನಾಧರಿಸಿ ಎಲ್ಲಿಂದ ಎಲ್ಲಿಗೆ ಸಾಮಾನುಗಳನ್ನು ಸಾಗಿಸಲಾಗಿದೆಯೆಂದು ಸಹಜವಾಗಿ ಅನುಮಾನಿಸಬಹುದು. ಅನೇಕ ಸಂಚಾರ ಮಾರ್ಗಗಳನ್ನು ಬಹುತೇಕ ಮಟ್ಟಿಗೆ ಅಂದಾಜು ಮಾಡಿ ನಿರ್ಧರಿಸಲಾಗಿದೆ. ಈ ಕಾಲದಲ್ಲಿ ಪ್ರಚಲಿತವಿದ್ದ ವಿವಿಧ ಉದ್ಯಮಗಳಿಗಾಗಿ ಬಳಸಿದ ಕಚ್ಚಾ ಸರಕುಗಳು ಇಂತಿದ್ದವು: ಸ್ಟಿಯಟೈಟ್, ಹಾಲುಗಲ್ಲು, ಶಂಖ, ಹಸ್ತಿದಂತ, ಕಾರ್ನೇಲಿಯನ್, ಅಗೇಟ್, ಜಾಸ್ಪರ್, ಜೇಡ್, ವೈಡೂರ್ಯ, ತಾಮ್ರ, ಬಂಗಾರ, ಬೆಳ್ಳಿ, ಸತು, ಸರ್ಪಶಿಲೆ, ಟರ್ಕ್ವಾ, ಅಮೆರೆಜೊನೈಟ್, ಓನಿಕ್ಸ್, ಟೋಪಾಜ್, ರಕ್ತಶಿಲೆ, ಅಮೆಥಿಸ್ಟ್, ಪ್ಲಾಸ್ಮಾ, ಫೆಲ್ಡಸ್ಪಾರ್, ಕ್ಯಾಲ್ಸೆಡನಿ, ಚರ್ಟ್, ನೈಸರ್ಗಿಕ ಸುಣ್ಣಕಲ್ಲು, ಸ್ಲೇಟ್, ಫ್ಲಿಂಟ್, ಮರಳುಗಲ್ಲು, ಬೆಣಚುಕಲ್ಲು, ಅಗ್ನಿಶಿಲೆ, ಜೈಸಲ್ಮೇರ್ ಕಲ್ಲು, ಕ್ಯಾಲ್ಸೈಟ್, ಡೈಯೊರೈಟ್, ಶಿಲಾಜಿತ್, ಹವಳ, ಪಚ್ಚೆ. ಆದಿ ಹರಪ್ಪ ಕಾಲದಲ್ಲಿಯೇ ಈ ಎಲ್ಲ ಕಲ್ಲುಗಳು ಬಳಸಲ್ಪಡುತ್ತಿದ್ದವು.

ಸಿಂಧೂ-ಸರಸ್ವತಿಯ ಜನ ಹೆಚ್ಚಾಗಿ ಟರ್ಬಿನೆಲ್ಲ ಪೈರಮ್ ಶಂಖದಿಂದ ಬಳೆಗಳಲ್ಲದೆ ಇತರ ವಸ್ತುಗಳನ್ನು ತಯಾರಿಸುತ್ತಿದ್ದರು. ಬಲೂಚಿಸ್ತಾನದ ಸೋನ್‌ಮಿಯಾನಿ ಖಾರಿ, ಭಾರತದ ಗುಜರಾತ್ ರಾಜ್ಯದ ಕಚ್ಛ್ ಹಾಗೂ ಸೌರಾಷ್ಟ್ರ ಕರಾವಳಿ ಪ್ರದೇಶದಿಂದ ಈ ಶಂಖಗಳನ್ನು ಸಂಗ್ರಹಿಸುತ್ತಿದ್ದರು. ಗುಜರಾತಿನ ಕರಾವಳಿ ಪ್ರದೇಶದಲ್ಲಿರುವ ನಾಗೇಶ್ವರ, ನಗವಾಡ ಹಾಗೂ ಬಗಸ್ರ **(ನೋಡಿ)** ನೆಲೆಗಳಲ್ಲಿ ಶಂಖಗಳ ಭಗ್ನಾವಶೇಷಗಳನ್ನು ಹೇರಳವಾಗಿ ಬೆಳಕಿಗೆ ತರಲಾಗಿದೆ. ಹರಪ್ಪ ನೆಲೆಯಲ್ಲಿ ದೊರೆತ ಹವಳ ಹಾಗೂ ಭಾರತದ ಪಂಜಾಬ್ ಪ್ರಾಂತದಲ್ಲಿರುವ ಧೇರ್‌ಮಜ್ರ ನೆಲೆಯಿಂದ ದೊರೆತ ಪಚ್ಚೆಯ ಮೂಲವನ್ನು ತಿಳಿಯುವುದು ಕಠಿಣವಾಗಿದೆ. ಸಿಂಧ್ ಪ್ರಾಂತದಲ್ಲಿ ಹವಳ ನಿಸರ್ಗ ರೂಪದಲ್ಲಿ ದೊರೆಯುತ್ತದೆ. ಜೇಡ್ ಚೀನದ ತುರ್ಕಿಸ್ತಾನದಲ್ಲಿ

ದೊರೆಯುತ್ತದೆ. ಬಲೂಚಿಸ್ತಾನದ ಛಗೈ ಪರ್ವತಗಳಲ್ಲಿ ಟರ್ಕ್ವಾಯಿಜ್ ದೊರೆಯುತ್ತಿದ್ದಾಗ್ಯೂ, ಇದರ ಆಯಾತ ಅಫ್ಘಾನಿಸ್ತಾನ ಮತ್ತು ಇರಾನನಿಂದಾಗಿರಬಹುದೆಂದು ವಿದ್ವಾಂಸರ ಅನಿಸಿಕೆ. ಇದೇ ಪರ್ವತ ಶ್ರೇಣಿಯಲ್ಲಿ ವೈಡೂರ್ಯ ದೊರೆಯುತ್ತದೆ. ಆದರೆ ಪ್ರೌಢ ಸಿಂಧೂ–ಸರಸ್ವತಿಯ ಜನರು ಈಶಾನ್ಯ ಅಫ್ಘಾನಿಸ್ತಾನದಲ್ಲಿರುವ ಬದಕ್ಷನ್ ಗಣಿಯ ಬಳಿ ಶೋರ್ತುಘೈ ಎಂಬಲ್ಲಿ ತಮ್ಮ ಬಿಡಾರವನ್ನು ಹೂಡಿ, ವೈಡೂರ್ಯವನ್ನು ವಿವಿಧ ನೆಲೆಗಳಿಗೆ ಸರಬರಾಜು ಮಾಡಿದ ಪುರಾವೆಯಿದೆ. ಬಲೂಚಿಸ್ತಾನದಲ್ಲಿಯ ಪರ್ವತಗಳಲ್ಲಿ ತಾಮ್ರ ಹಾಗೂ ಸೀಸದ ನಿಕ್ಷೇಪಗಳಿದ್ದರೆ, ಅರಾವಳಿ ಬೆಟ್ಟಗಳಲ್ಲಿ ತಾಮ್ರ, ಸೀಸ, ಸತು ಹಾಗೂ ತವರದ ನಿಕ್ಷೇಪಗಳಿವೆ.

ಪ್ರೌಢ ಹರಪ್ಪ ಕಾಲದಲ್ಲಿಯ ಒಳನಾಡಿನ ವ್ಯಾಪಾರ ಪ್ರಸ್ತುತ ಪಾಕಿಸ್ತಾನದ ಬಲೂಚಿಸ್ತಾನ, ಪಂಜಾಬ್, ಸಿಂಧ್ ಪ್ರಾಂತ ಹಾಗೂ ಭಾರತದ ರಾಜ್ಯಗಳಾದ ಪಂಜಾಬ್, ಹರಿಯಾಣ, ರಾಜಸ್ತಾನ, ಗುಜರಾತ್, ಜಮ್ಮು–ಕಾಶ್ಮೀರ, ಉತ್ತರ ಪ್ರದೇಶದ ಆಂಶಿಕ ಭಾಗಗಳನ್ನು ಆವರಿಸಿತ್ತು. ಈ ಸಂಸ್ಕೃತಿಯ ಜೀವನಾಡಿಗಳಂತಿದ್ದ ಸಿಂಧೂ ಹಾಗೂ ಸರಸ್ವತಿ (ಹಾಕ್ರ–ಘಗ್ಗರ್–ಸರಸ್ವತಿ)ನದಿಗಳಲ್ಲಿ ದೋಣಿಗಳ ಮುಖಾಂತರವೇ ಆಹಾರ ಧಾನ್ಯಗಳು, ಮರ–ದಿಮ್ಮಿಗಳು, ಮಣ್ಪಾತ್ರೆಗಳು ಇತ್ಯಾದಿ ದೈನಂದಿನ ಜೀವನದಲ್ಲಿ ಬೇಕಾಗುವ ಸಾಮಾನುಗಳನ್ನು ಬೇರೆ ಬೇರೆ ಸ್ಥಳಗಳಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಿರಲು ಸಾಧ್ಯ. ಈ ಕಚ್ಚಾಸರಕುಗಳ ಹಾಗೂ ಅವುಗಳ ಸರಬರಾಜಿನ ವ್ಯವಸ್ಥೆಯನ್ನು ಅವಲೋಕಿಸಿದಾಗ ಕಂಡುಬರುವ ಪ್ರಮುಖ ಅಂಶವೆಂದರೆ ಸಿಂಧೂ–ಸರಸ್ವತಿ ಸಂಸ್ಕೃತಿಯ ಜನರು ತಮ್ಮ ವಿವಿಧ ಉದ್ಯಮಗಳಿಗೆ ಬೇಕಾದ ಸಾಧನ ಸಂಪತ್ತನ್ನು ತಮ್ಮ ನಾಡಿನಲ್ಲಿಯೇ ಅಥವಾ ಅದರ ಸುತ್ತ ಮುತ್ತಲಿನ ಭಾಗಗಳಲ್ಲಿಂದಲೇ ಪಡೆಯುತ್ತಿದ್ದರೇ ವಿನಹ ಬಹುದೂರ ದೇಶಗಳಿಂದಲ್ಲ.

ಇತರ ಸಮಕಾಲೀನ ಸಂಸ್ಕೃತಿಗಳ ಪ್ರದೇಶಗಳೊಂದಿಗೆ ಪ್ರೌಢ ಹರಪ್ಪ ಸಂಸ್ಕೃತಿಯ ವ್ಯಾಪಾರ ಸಂಬಂಧಕ್ಕೆ ಆ ಸ್ಥಳಗಳಲ್ಲಿಂದ ದೊರೆತ ಹರಪ್ಪ ಸಂಸ್ಕೃತಿಯ ಅವಶೇಷಗಳು ಪ್ರತ್ಯಕ್ಷ ಪ್ರಮಾಣಗಳಾಗಿವೆ. ಇವುಗಳಲ್ಲಿ ಪ್ರಮುಖ ಪ್ರದೇಶಗಳೆಂದರೆ ಅಫ್ಘಾನಿಸ್ತಾನ, ತುರ್ಕಮೆನಿಸ್ತಾನ, ಇರಾನ, ಮೆಸಪೊಟೇಮಿಯ (ಈಗಿನ ಇರಾಕ್) ಹಾಗೂ ಪರ್ಷಿಯ ಖಾರಿ ಪ್ರದೇಶ. ಅಫ್ಘಾನಿಸ್ತಾನದಲ್ಲಿ ಶೋರ್ತುಘೈ ಹರಪ್ಪ ಸಂಸ್ಕೃತಿಯ ಒಂದು ಮಹತ್ತ್ವಪೂರ್ಣ ವಸಾಹತು ಆಗಿತ್ತು. ಇಲ್ಲಿಂದ ಕೇವಲ ವೈಡೂರ್ಯದ ಆಯಾತವನ್ನು ಮಾಡಿಕೊಳ್ಳದೆ ಬಹುಶಃ ಮಧ್ಯ ಏಷ್ಯ ರಾಷ್ಟ್ರಗಳೊಂದಿಗೆ ತವರ ಹಾಗೂ ಕುದುರೆಗಳ ವ್ಯಾಪಾರವನ್ನೂ ಮಾಡಿರಬಹುದೆಂದು ಕೆಲ ವಿದ್ವಾಂಸರು ಊಹಿಸಿದ್ದಾರೆ. ಉತ್ತರ–ಅಫ್ಘಾನಿಸ್ತಾನದ ಬ್ಯಾಕ್ಟ್ರ ಪ್ರದೇಶದಲ್ಲಿಯ ಗೋರಿಗಳಲ್ಲಿ ಸಿಂಧೂ–ಸರಸ್ವತಿ ಬಯಲಿನಲ್ಲಿ ತಯಾರಿಸಲ್ಪಟ್ಟ ಕೊರೆದು ಬಿಳಿ ಬಣ್ಣ ತುಂಬಿದ ಕಾರ್ನೇಲಿಯನ್ ಮಣಿಗಳು ಹಾಗೂ ಸ್ಟಿಯಟೈಟ್ ಮುದ್ರೆಗಳು ಕಂಡುಬಂದಿವೆ. ದಕ್ಷಿಣ ಅಫ್ಘಾನಿಸ್ತಾನದಲ್ಲಿರುವ ಮುಂಡಿಗಾಕ್ ನೆಲೆಯಿಂದ ಒಂದೇ ಒಂದು ಅಲಂಕರಿಸಿದ ಕಾರ್ನೇಲಿಯನ್ ಮಣಿ ದೊರಕಿದೆ.

ದಕ್ಷಿಣ ತುರ್ಕಮೆನಿಯದ ಪ್ರಮುಖ ನೆಲೆಗಳಾದ ಆಲ್ತೈನ್ ತೆಪೆ ಹಾಗೂ ನಮಝುಗಾ ತೆಪೆಗಳಿಂದಲೂ ಸಿಂಧೂ–ಸರಸ್ವತಿ ಸಂಸ್ಕೃತಿಯ ಅವಶೇಷಗಳು ಪ್ರಾಪ್ತವಾಗಿವೆ. ಆಲ್ತೈನ್ ತೆಪೆಯಿಂದ ಎರಡು ಸಂಕೇತಗಳುಳ್ಳ ಹಾಲುಗಲ್ಲು ಅಥವಾ ಮೆದುಕಲ್ಲಿನ ಚತುರಸ್ರಾಕಾರದ ಮುದ್ರೆ, ತೂತುಗಳುಳ್ಳ ಸ್ತಂಭಾಕೃತಿಯ ಜಾಡಿ, ಕೊರೆದು ಅಲಂಕರಿಸಿದ ಕಾರ್ನೇಲಿಯನ್ ಮಣಿ, ಬೇರ್ಪಟ್ಟ ಹಾಗೆ ಕಾಣುವ ಫಯಾನ್ಸ್ ಮಣಿಗಳು ನಮಝುಗಾದಿಂದ ಲಿಂಗೋಪಾದಿಯಂತಹ ಸುಟ್ಟಮಣ್ಣಿನ ಅವಶೇಷಗಳು ಈ ಎರಡೂ ಪ್ರದೇಶಗಳ ನಡುವಿನ ಸಂಬಂಧದ ಪ್ರತೀಕವೆಂದು ಪರಿಗಣಿಸಬಹುದು.

ಉತ್ತರ ಹಾಗೂ ದಕ್ಷಿಣ ಇರಾನ್‌ನಲ್ಲಿರುವ ನೆಲೆಗಳಿಂದ ಸಿಂಧೂ–ಸರಸ್ವತಿ ಸಂಸ್ಕೃತಿಯ ಅವಶೇಷಗಳು ದೊರಕಿವೆ.

ಉತ್ತರ ಇರಾನ್‌ನ ಮುಖ್ಯ ನೆಲೆಗಳು: ಹಿಸ್ಸಾರ್, ಶಹತೆಪೆ ಮತ್ತು ಮಾರ್ಲಿಕ್ ಹಾಗೂ ದಕ್ಷಿಣ ಇರಾನ್‌ನ ನೆಲೆಗಳು: ಶಹದಾದ್, ತೆಪೆಯಾಹ್ಯಾ, ಜಲಾಲಾಬಾದ್, ಕಲ್ಲೇಹನಿಸ್ಸಾರ್, ಲೂರಿಸ್ತಾನ್ ಹಾಗೂ ಸೂಸಾ. ಉತ್ತರ ಇರಾನ್‌ನ ನೆಲೆಗಳಿಂದ ವಿಶೇಷವಾಗಿ ಅಲಂಕಾರಯುಕ್ತ ಕಾರ್ನೇಲಿಯನ್ ಮಣಿಗಳೂ ಮಾರ್ಲಿಕ್‌ನಿಂದ ಒಂದೇ ಒಂದು ಉದ್ದನೆಯ ಮದ್ದಳೆಯಾಕಾರದ ಕಾರ್ನೇಲಿಯನ್ ಮಣಿಯೂ ಸಿಕ್ಕಿವೆ. ಶಹದಾದ್‌ನಲ್ಲಿ ಹೇರಳ ಸಂಖ್ಯೆಯಲ್ಲಿ ದೊರೆತ ಕೊರೆದು ಅಲಂಕರಿಸಿದ ಮಣಿಗಳು, ತೆಪೆಯಾಹ್ಯಾದಲ್ಲಿ ದೊರೆತ ಮುದ್ರಾಂಕನವುಳ್ಳ ಮಣ್ಪಾತ್ರೆಯ ತುಣುಕು, ಕಾರ್ನೇಲಿಯನ್ ಮಣಿ, ಎರಡೂ ಕೈಗಳನ್ನು ಮೇಲಕ್ಕೆತ್ತಿ, ಪದ್ಮಾಸನದಲ್ಲಿ ಕುಳಿತಿರುವ ಹಾಗೂ ಶಿರೋಲಂಕಾರವುಳ್ಳ ವ್ಯಕ್ತಿಯ ಚಿತ್ರವುಳ್ಳ ಸುಟ್ಟಮಣ್ಣಿನ ಮುದ್ರಾಂಕನ ಗಮನಾರ್ಹ. ಜಲಾಲಾಬಾದಿನಲ್ಲಿ ಉದ್ದನೆಯ ಮೃದಂಗಾಕಾರದ ಹಾಗೂ ಅಲಂಕೃತ ಕಾರ್ನೇಲಿಯನ್ ಮಣಿಗಳು, ಕಲ್ಲೇಹನಿಸ್ಸಾರ್‌ನಲ್ಲಿ ಅಲಂಕೃತ ಕಾರ್ನೇಲಿಯನ್ ಮಣಿಗಳು, ಲೂರಿಸ್ತಾನ್ ಹಾಗೂ ಸೂಸಾದಲ್ಲಿ ಸಿಂಧೂ–ಸರಸ್ವತಿ ಬಯಲಿನ ಮುದ್ರೆಗಳು ದೊರೆತಿವೆ. ಇರಾನ್‌ನ ಸಯೆಸ್ತಾನ್ ಪ್ರದೇಶದಲ್ಲಿರುವ ಶಹರ್–ಏ–ಸೋಖ್ತಾದಿಂದ ವರದಿಯಾದ ಕ್ವಾಂಕಸ್ ಪೈರಮ್ ಶಂಖಗಳನ್ನು ಬಹುಶಃ ಗುಜರಾತಿನ ಕರಾವಳಿ ತೀರದಿಂದ ರಫ್ತು ಮಾಡಲಾಗಿರಬಹುದೆಂದು ವಿದ್ವಾಂಸರ ಅನಿಸಿಕೆ. ಪರ್ಷಿಯನ್ ಖಾರಿ ಪ್ರದೇಶಗಳಲ್ಲಿ ಬಹರಿನ್, ಶಾರ್ಜ, ಫಯಿಲಕಾ ಮತ್ತು ಓಮನ್ ಪರ್ಯಾಯ ದ್ವೀಪಗಳಿಂದಲೂ ಪ್ರೌಢ ಹರಪ್ಪ ಅವಶೇಷಗಳು ದೊರಕಿವೆ. ಬಹರಿನ್‌ನ ರಸ್–ಅಲ್–ಕಲಾ, ಹಜ್ಜರ್ ಹಾಗೂ ಹಮದ್‌ಪಟ್ಟಣಗಳಿಂದ ಪಡೆದ ಹರಪ್ಪ ಲಿಪಿಯುಕ್ತ ವರ್ತುಲಾಕಾರದ ಮುದ್ರೆಗಳು ಮತ್ತು ತೂಕದ ಬಟ್ಟುಗಳು ಮುಖ್ಯವಾದವು. ಶಾರ್ಜದ ಟೆಲ್‌ಅಬ್ರಕ್‌ದಿಂದ ತೂಕದ ಬಟ್ಟುಗಳಲ್ಲದೆ ದಂತದ ಬಾಚಣಿಕೆಯನ್ನೂ ಸಿಂಧೂ–ಸರಸ್ವತಿ ಬಯಲಿನಿಂದ ಆಮದು ಮಾಡಿಕೊಂಡಿರಬಹುದೆಂದು ವಿದ್ವಾಂಸರ ತಿಳಿವಳಿಕೆಯಾಗಿದೆ. ಫಯಿಲಕಾದಿಂದಲೂ ಸಿಂಧೂ–ಸರಸ್ವತಿ ಬಯಲಿನ ವರ್ತುಲಾಕಾರದ ಮುದ್ರೆಗಳು ದೊರಕಿವೆ. ಓಮನ್‌ನ ರಸ್–ಅಲ್–ಜುನಾಯಝು



ಹರಪ್ಪ ಲಿಪಿ ಇರುವ ತವರದ ತಗಡು

ನಿಂದ ಸಿಂಧೂ ಸರಸ್ವತಿಯ ಕೆಲವು ವಿಶಿಷ್ಟ ಅವಶೇಷಗಳನ್ನು ಶೋಧಿಸಲಾಗಿದೆ. ಲಿಪಿಯುಕ್ತ ಮಣ್ಪಾತ್ರೆಯ ತುಣುಕು, ಸ್ಟಿಯಟೈಟ್ ಮುದ್ರೆ, ಹಸ್ತಿದಂತದ ಬಾಚಣಿಗೆ ಈ ಎಲ್ಲಾ ಅವಶೇಷಗಳನ್ನು ಬಿಟುಮನ್‌ಲೇಪಿತ ಮರದ ದೋಣಿಯಿಂದ ಸಂಗ್ರಹಿಸಲಾಗಿದೆ. ಉತ್ತರ ಹಾಗೂ ದಕ್ಷಿಣ ಇರಾಕ್‌ನಲ್ಲಿರುವ (ಪ್ರಾಚೀನ ಮೆಸಪೊಟೇಮಿಯ) ಕಿಷ್, ಲಗಾಷ್, ನಿಪ್ಪೂರ್, ಉಮ್ಮಾ, ಟೆಲ್‌ಅಸ್ಮಾರ್, ತೆಪೆ ಗವ್ರ, ಅಸ್ಸೂರ್ ಈ ಎಲ್ಲ ಸ್ಥಳಗಳಿಂದ ಪ್ರೌಢ ಹರಪ್ಪ ಕಾಲದ ಅವಶೇಷಗಳನ್ನು, ವಿಶೇಷವಾಗಿ ಮುದ್ರೆಗಳು ಹಾಗೂ ಅಲಂಕೃತ ಕಾರ್ನೇಲಿಯನ್ ಮಣಿಗಳನ್ನು ವರದಿ ಮಾಡಲಾಗಿದೆ. ಆಯತ ಅಥವಾ ಚತುರಸ್ರ ಮುದ್ರೆಗಳ ಮೇಲೆ ರೇಖಾಚಿತ್ರವಿದ್ದರೆ ವರ್ತುಲಾಕಾರದ ಮುದ್ರೆಗಳಲ್ಲಿ ಚಿತ್ರಲಿಪಿ ಸಹಿತ ಹಿಣಿಲುಳ್ಳ ಹೋರಿ, ಆನೆ, ಖಡ್ಗಮೃಗಗಳ ಚಿತ್ರಗಳನ್ನೂ ಬಿಡಿಸಲಾಗಿದೆ. ಒಂದು ಆಯತಾಕಾರದ ಕಪ್ಪುವರ್ಣದ ಸ್ಟಿಯಟೈಟ್ ಮುದ್ರೆಯೊಂದು ಉರ್‌ನಲ್ಲಿ ಸಿಕ್ಕಿದೆ. ಇದೇ ಸ್ಥಳದಲ್ಲಿರುವ ರಾಜಗೋರಿಗಳಿಂದ ಉದ್ದನೆಯ ಮದ್ದಳೆಯಾಕಾರದ ಹಾಗೂ ಕೊರೆದು ಅಲಂಕರಿಸಿದ ಕಾರ್ನೇಲಿಯನ್ ಮಣಿಗಳು ದೊರಕಿವೆ. ಇವುಗಳಲ್ಲದೆ ತೂಕದ ಬಟ್ಟುಗಳು ಮತ್ತು ಚದುರಂಗದ ದಾಳಗಳನ್ನೂ ಸಿಂಧೂ–ಸರಸ್ವತಿ ಬಯಲಿನಿಂದ ಆಮದು ಮಾಡಿಕೊಳ್ಳಲಾಗಿದೆಯೆಂದು ವಿದ್ವಾಂಸರ ಅಭಿಪ್ರಾಯ. ಈಶಾನ್ಯ ಸಿರಿಯ ಭಾಗದಿಂದಲೂ ಅಲಂಕೃತ ಕಾರ್ನೇಲಿಯನ್ ಮಣಿಗಳನ್ನು ವರದಿ ಮಾಡಲಾಗಿದೆ. ಶಿಶ್ನೋಪಾದಿಯಂತಹ ಸುಟ್ಟಮಣ್ಣಿನ ಆಕೃತಿಗಳು ನಿಪ್ಪೂರಿನಿಂದ ದೊರಕಿವೆ.

ಖಾದಿಮಾದರಿ ಮುದ್ರೆಗಳು, ಲೋಥಲ್

ಪ್ರೌಢ ಹರಪ್ಪ ಕಾಲದ ಅತ್ಯಂತ ಪ್ರಾಚೀನ ವಸ್ತುಗಳು ಮೆಸಪೊಟೇಮಿಯದ ಉರ್ ರಾಜಗೋರಿಗಳಲ್ಲಿದ್ದುವು. ಈ ಗೋರಿಗಳು ಮೆಸಪೊಟೇಮಿಯ ನಾಗರಿಕತೆಯ ಎರಡನೆಯ ಹಂತಗಳಾದ ಅಕ್ಕಾಡಿಯನ್ ಮತ್ತು ಅಕ್ಕಾಡಿಯನ್ನೋತ್ತರ ಕಾಲಕ್ಕೆ ಸಂಬಂಧಿಸಿವೆ. ಈ ಆಧಾರದ ಮೇಲೆ ವಿದ್ವಾಂಸರು ಸಿಂಧೂ–ಸರಸ್ವತಿ ಹಾಗೂ ಮೆಸಪೊಟೇಮಿಯದ ನಡುವಣ ಸಂಬಂಧ ಕಾಲವನ್ನು ಪ್ರ.ಶ.ಪೂ.ಸು.2600–ಪ್ರ.ಶ.ಪೂ.ಸು.1300 ರವರೆಗೆ ಇರಬಹುದೆಂದು ನಿರ್ಧರಿಸಿದ್ದಾರೆ.

ಪ್ರೌಢ ಹರಪ್ಪ ನೆಲೆಗಳಲ್ಲಿಯ ದೊರೆತ ಪುರಾವೆಗಳೂ ಸೂಚ್ಯವಾಗಿ ಪಶ್ಚಿಮ ಹಾಗೂ ಮಧ್ಯ ಏಷ್ಯ ಪ್ರದೇಶಗಳೊಂದಿಗಿದ್ದ ವ್ಯಾಪಾರ ಒಡನಾಟವನ್ನು ಸೂಚಿಸುತ್ತವೆ. ಲೋಥಲ್‌ನಲ್ಲಿ ದೊರೆತ ವರ್ತುಲಾಕಾರದ ಖಾರಿ ಮಾದರಿ ಮುದ್ರೆಯ ಮಹತ್ತ್ವವನ್ನು ಈ ಸಂಬಂಧದ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕು. ಗುಜರಾತಿನ ಬೆಟ್ ದ್ವಾರಕದಲ್ಲಿ ದೊರೆತ ಪ್ರ.ಶ.ಪೂ.14 ನೆಯ ಶತಮಾನದ ತಕಲಿಯ ರೇಖಾವಿನ್ಯಾಸವುಳ್ಳ ಮುದ್ರೆ ಖಾರಿ ಮೂಲದ್ದಾಗಿರಬಹುದು. ಸಾಮಾನ್ಯವಾಗಿ ಸ್ತಂಭಾಕೃತಿಯ ಮುದ್ರೆಗಳು ಖಾರಿ ಪ್ರದೇಶದ ವಿಶಿಷ್ಟ ಅವಶೇಷಗಳು. ಆದರೆ ಆಕಾರದಲ್ಲಿ ಸ್ತಂಭಾಕೃತಿಯಂತಿದ್ದು, ಸಿಂಧೂ–ಸರಸ್ವತಿಯ ಚಿತ್ರ ಹಾಗೂ ಲಿಪಿಯುಳ್ಳ ಮುದ್ರೆಗಳನ್ನು ಮೊಹೆಂಜೋದಾರೊ, ಕಾಲಿಬಂಗನ್ ಮತ್ತು ರಾಖಿಗಡಿಯಿಂದ ವರದಿ

ಮಾಡಲಾಗಿದೆ. ಇಂಥ ಉದಾಹರಣೆಗಳು ಎರಡೂ ಪ್ರದೇಶಗಳ ನಡುವಿನ ವ್ಯಾಪಾರ ಸಂಬಂಧದ ಫಲವೆನ್ನಬಹುದು. ಗಿಲ್ಗಮೀಶ್ ಚಿತ್ರವುಳ್ಳ ಮೊಹೆಂಜೋದಾರೊವಿನ ಮುದ್ರೆ ಇಂಥಾ ಸಂಬಂಧದ ಕುರುಹು ಎಂದು ತಿಳಿಯಲಾಗಿದೆ.

ಅಂತಾರಾಷ್ಟ್ರೀಯ ವ್ಯಾಪಾರದ ಅಧ್ಯಯನದಿಂದ ಕಂಡುಬಂದ ಪ್ರಮುಖ ಅಂಶವೆಂದರೆ ಮೆಸಪೊಟೇಮಿಯ, ಇರಾನ್, ಮಧ್ಯಏಷ್ಯ ಹಾಗೂ ಖಾರಿ ಪ್ರದೇಶಗಳಲ್ಲಿ ಪ್ರೌಢ ಹರಪ್ಪ ಕಾಲದ ವಸ್ತುಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಆದರೆ ಆ ಪ್ರದೇಶಗಳಿಂದ ಆಮದು ಅಥವಾ ವ್ಯಾಪಾರದ ಕುರುಹುಗಳು ಸಿಂಧೂ-ಸರಸ್ವತಿ ಬಯಲಿನಲ್ಲಿ ವಿರಳವಾಗಿವೆ. ಮೆಸಪೊಟೇಮಿಯದ ಪುರಾಭಿಲೇಖನಗಳಲ್ಲಿ ಉಲ್ಲೇಖಿಸಿದ ಮೆಲೂಹಾ ಹೆಸರಿನ ಪ್ರಾಂತ ಸಿಂಧೂ-ಸರಸ್ವತಿ ಪ್ರದೇಶವೆಂದು ಬಹಳಷ್ಟು ವಿದ್ವಾಂಸರ ಅಭಿಪ್ರಾಯ. ಮೆಲೂಹಾ ಪ್ರದೇಶ ಮೆಸಪೊಟೇಮಿಯದ ಪೂರ್ವದಿಶೆಯಲ್ಲಿದ್ದು, ಅಲ್ಲಿಂದ ಅನೇಕ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರೆಂದು ಹೇಳಲಾಗಿದೆ. ಬಟ್ಟೆಗಳು, ಅಲಂಕರಣ ಸಾಮಗ್ರಿಗಳಾದ ಹಸ್ತಿದಂತದ ಬಾಚಣಿಗೆ, ವಿವಿಧ ಹಾಗೂ ನಿರ್ದಿಷ್ಟ ಪ್ರಕಾರದ ಕಾರ್ನೇಲಿಯನ್ ಮಣಿಗಳು, ಚದುರಂಗದ ದಾಳ, ನುಣುಪಾಗಿಸಿದ ತೂಕದ ಬಟ್ಟುಗಳು, ಶಂಖದಿಂದ ತಯಾರಿಸಿದ ಅನೇಕ ವಸ್ತುಗಳು ಇತ್ಯಾದಿ. ಆದರೆ ಮೆಸಪೊಟೇಮಿಯದಿಂದ ಮೆಲೂಹನ್ನರು ಯಾವ ವಸ್ತುಗಳನ್ನು ಆಯಾತ ಮಾಡಿಕೊಳ್ಳುತ್ತಿದ್ದರೆಂದು ತಿಳಿದು ಬಂದಿಲ್ಲ. ಈ ಅಂತಾರಾಷ್ಟ್ರೀಯ ವ್ಯಾಪಾರ ಸಂಬಂಧ ಭೂ ಹಾಗೂ ಜಲಮಾರ್ಗಗಳಿಂದ ನಡೆಯುತ್ತಿತ್ತೆನ್ನುವುದು ಖಚಿತ.

ಗಿಲ್ಗಮಿಷ್ ಚಿತ್ರವುಳ್ಳ ಮುದ್ರೆ

ಕಲೆ: ಪ್ರೌಢ ಹರಪ್ಪ ಕಾಲದ ಕಲೆ ತನ್ನದೇ ಆದ ವಿಶೇಷ ಶೈಲಿಯನ್ನು ಹೊಂದಿದೆ. ಆದಿ ಹರಪ್ಪ ಕಾಲದಿಂದ ಮಣ್ಪಾತ್ರೆಗಳ ಮೇಲಿನ ವರ್ಣಚಿತ್ರಗಳು ಹಾಗೂ ಸುಟ್ಟಮಣ್ಣಿನ ಗೊಂಬೆಗಳನ್ನು ಮಾಡುವ ವಿಧಾನಗಳು ಬಳುವಳಿಯಾಗಿ ಈ ಕಾಲದಲ್ಲೂ ಮುಂದುವರೆದರೆ, ಕೆತ್ತನೆಯ ಕೆಲಸ, ಲೋಹದ ಹಾಗೂ ಕಲ್ಲಿನ ಶಿಲ್ಪಕಲೆಗಳು ಪ್ರೌಢ ಕಾಲದ ದೇಣಿಗೆಯಾಗಿವೆ. ಈ ಕಾಲದ ಮಣ್ಪಾತ್ರೆಗಳ ಮೇಲೆ ಬಿಡಿಸಿದ ವರ್ಣಚಿತ್ರಗಳು ವಿವಿಧ ಪ್ರಕಾರಗಳ ಗಿಡ ಸಸ್ಯಗಳಿಂದ ಕೂಡಿವೆ. ಇವುಗಳಲ್ಲಿ ಅಶ್ವತ್ಥ ಎಲೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಪಕ್ಷಿಗಳಲ್ಲಿ ನವಿಲು ಚಿತ್ರಗಳು ಹೆಚ್ಚಿವೆ. ಜಲಚರ ಪ್ರಾಣಿಗಳಲ್ಲಿ ಮೀನು ಅಗ್ರಸ್ಥಾನವನ್ನು ಹೊಂದಿದೆ. ರೇಖಾಕೃತಿಗಳಲ್ಲಿ ಒಂದನ್ನೊಂದು ಛೇದಿಸುವ ವೃತ್ತಗಳು, ತರಂಗಗಳಂಥ ರೇಖೆಗಳು, ಕುಣಿಕೆಯಲಂಕಾರ ನಮೂನೆಗಳನ್ನು ನೋಡಬಹುದು. ಚಿತ್ರ ಬಿಡಿಸಲು ಹೆಚ್ಚಿನ ಸ್ಥಳವಿದ್ದಾಗ ಚದುರಂಗ ಪಟ್ಟೆಯಲ್ಲಿ ತ್ರಿಕೋಣಾಕಾರದ ನಮೂನೆಯನ್ನೊಳಗೂಡಿಸಿದ ಚಿತ್ರಗಳಿಂದ ಅಲಂಕರಿಸಲಾಗಿದೆ. ಅಲಂಕಾರದ ಚಿಹ್ನೆಗಳನ್ನು ಬಣ್ಣಗಳಿಂದ ತುಂಬದೆ, ಒಂದನ್ನೊಂದು ಛೇದಿಸುವ ನೀಳ ರೇಖೆಗಳಿಂದ ತುಂಬಲಾಗಿದೆ. ಪಾತ್ರೆಯ ಭುಜ ಹಾಗೂ ಉದರ ಭಾಗಗಳ ಮೇಲೆ ವರ್ಣಚಿತ್ರಗಳನ್ನು ಬಿಡಿಸಲಾಗಿರುತ್ತದೆ. ಇನ್ನುಳಿದ ಭಾಗವನ್ನು ಸಮತಲ ರೇಖೆ ಅಥವಾ ಅಪ್ರಧಾನ ರೇಖೆಗಳಿಂದ ಅಲಂಕಾರಗಳನ್ನು ಸಂಯೋಜಿಸಿ ಪೂರ್ಣ ಮಾಡಲಾಗಿರುತ್ತದೆ. ಆದರೆ ಗುಜರಾತಿನ ಮಣ್ಪಾತ್ರೆಗಳ ಮೇಲಿರುವ ವರ್ಣಚಿತ್ರಗಳು ಅರ್ಥಗರ್ಭಿತವಾಗಿರುತ್ತವೆ. ಈ ಸಂದರ್ಭದಲ್ಲಿ ಲೋಥಲ್ ಮಡಕೆಯ ಮೇಲೆ ಬಿಡಿಸಿರುವ ನಿಂತ ಸಾರಂಗದ ಚಿತ್ರವನ್ನು ಸ್ಮರಿಸಬಹುದು. ಅಲ್ಲದೆ ಆ ಕಾಲದಲ್ಲಿಯೂ ಬಹುಶಃ ಪ್ರಚಲಿತವಿದ್ದ ಜನಪದ ಕಥೆಗಳಾದ ನೀರಡಸಿದ ಕಾಗೆ ಹಾಗೂ ಠಕ್ಕನರಿ ಮತ್ತು ಕಾಗೆಯಂಥ ಸನ್ನಿವೇಶದ ಚಿತ್ರಗಳನ್ನು ನೋಡಬಹುದು.

ಸುಡಾವೆಮಣ್ಣಿನ ಬೊಂಬೆ

ಸುಟ್ಟಮಣ್ಣಿನ ಮಾನವಾಕಾರದ ಹಾಗೂ ಮಾತೃದೇವತೆಯ ಬೊಂಬೆಗಳನ್ನು ಜೇಡಿಮಣ್ಣನ್ನು ನಾದಿ ಅಥವಾ ತಟ್ಟಿ ತಯಾರಿಸಲಾಗುತ್ತಿತ್ತು. ಕಣ್ಣು, ಬಾಯಿ, ಸ್ತನಗಳು, ನಾಭಿ ಇತ್ಯಾದಿಯನ್ನು ಪ್ರತ್ಯೇಕವಾಗಿ ತಯಾರಿಸಿ ದೇಹದ ಆಯಾಯ ಭಾಗಗಳಲ್ಲಿ ಮೆತ್ತಲಾಗುತ್ತಿತ್ತು. ಈ ಬೊಂಬೆಗಳು ವಿಶೇಷವಾದ ಕೇಶವಿನ್ಯಾಸ ಹಾಗೂ ಆಭರಣಗಳಿಂದ ಅಲಂಕೃತಗೊಂಡಿರುತ್ತವೆ. ಈ ರೀತಿಯ ಮೃಣ್ಮಯ ಗೊಂಬೆಗಳು ಮೊಹೆಂಜೋದಾರೊ ಹಾಗೂ ಹರಪ್ಪದಿಂದ ಹೇರಳ ಸಂಖ್ಯೆಯಲ್ಲಿ ಸಿಕ್ಕಿವೆ. ಆದರೆ ಆಶ್ಚರ್ಯಕರ ಸಂಗತಿಯೆಂದರೆ ಇಂಥ ಗೊಂಬೆಗಳು ಇನ್ನಿತರ ಪ್ರಮುಖ ಪ್ರೌಢ ಹರಪ್ಪ ನೆಲೆಗಳಲ್ಲಿ ವಿರಳ. ಕಾಲಿಬಂಗನ್ ಮತ್ತು ಲೋಥಲ್‌ನಲ್ಲಿ ಮಾತೃದೇವತೆಯ ಒಂದು ಗೊಂಬೆಯೂ ದೊರಕಿಲ್ಲ. ಆದರೆ ಲೋಥಲಿನ ಅನ್ಯ ಸ್ತ್ರೀ ಪುರುಷರ ಗೊಂಬೆಗಳು ಕಲೆ ಹಾಗೂ ಅಲಂಕಾರ ದೃಷ್ಟಿಯಿಂದಲೂ ತುಂಬಾ ಒರಟಾಗಿವೆ. ಈ ಸಂದರ್ಭದಲ್ಲಿ ಹರಪ್ಪ ನೆಲೆಯ ಸ್ತ್ರೀ ಪುರುಷ ಹಾಗೂ ಪ್ರಾಣಿಗಳ ಗೊಂಬೆಗಳನ್ನು ಈ ಕಾಲದ ಮಾದರಿ ಗೊಂಬೆಗಳೆಂದು ಪರಿಗಣಿಸಬಹುದು. ಪುರುಷ ಹಾಗೂ ಸ್ತ್ರೀ ಗೊಂಬೆಗಳು ವಿವಿಧ ಭಂಗಿಗಳಲ್ಲಿದ್ದು ಆಭರಣಗಳಿಂದ ಅಲಂಕರಿಸಲ್ಪಟ್ಟಿವೆ.

ಪುರುಷವರ್ಗದ ಗೊಂಬೆಗಳು ಇಂತಿವೆ: ಕುಳಿತು ಮಡಿಸಿದ ಮೊಣಕಾಲುಗಳನ್ನು ಎರಡೂ ಕೈಯಿಂದ ಬಿಗಿಯಾಗಿ ಹಿಡಿದಂತೆ ಅಥವಾ ಕೈಗಳು ಅಂಜಲಿ ಮುದ್ರೆಯಲ್ಲಿದ್ದಂತೆ; ಕೊರಳ ಪಟ್ಟಿಯುಳ್ಳ ನಿಂತ ಗೊಂಬೆ, ಬುಗುಟು ಆಕಾರದ ಅಲಂಕಾರವುಳ್ಳ ಕೌಪೀನ ಧರಿಸಿ, ವಿಶೇಷವಾಗಿ ಅಲಂಕರಿಸಿದ ಕಂಠಹಾರಗಳುಳ್ಳ ಗೊಂಬೆ, ಕವಾಯತಿನಲ್ಲಿ ನಿಂತ ಗೊಂಬೆ; ಬಾತುಕೋಳಿಯನ್ನು ಕೊಂಡೊಯ್ಯುವ ಗೊಂಬೆ; ಪೀಠಾಸೀನ ಗಡ್ಡಧಾರಿ ಗೊಂಬೆ; ಜಡೆ ಹಾಕಿದ ತಲೆಗೂದಲುಳ್ಳ ಗೊಂಬೆ; ಮಗುವನ್ನೆತ್ತಿಕೊಂಡಿರುವ ಗೊಂಬೆ; ಕಂಠವಸ್ತ್ರವುಳ್ಳ ಗೊಂಬೆ; ಶಂಕುವಿನಂತೆ ಸುರಳಿಯಾಕಾರದಲ್ಲಿ ಸುತ್ತಿರುವ ಕೂದಲುಳ್ಳ ಗೊಂಬೆ; ಕಂಠಿಗಳನ್ನು ಧರಿಸಿದ ಗೊಂಬೆ; ತಲೆಯ ಮೇಲೆ ಕೋಡುಗಳುಳ್ಳ ಗೊಂಬೆ.

ಸ್ತ್ರೀ ಗೊಂಬೆಗಳು ಇಂತಿವೆ: ಹಿಟ್ಟು ನಾದುತ್ತಿರುವ ನಾರಿ; ಪದಕಸೂಜಿ ಧರಿಸಿರುವ ನಾರಿ; ಕೊಳವೆಯಾಕಾರದ ಅಥವಾ ಮುಕ್ಕಾಲಿನ ಪೀಠದ ಮೇಲೆ ಕುಳಿತ ಸ್ತ್ರೀ; ಗರ್ಭಿಣಿ ಸ್ತ್ರೀ; ಆಹಾರ ಕೊಂಡೊಯ್ಯುವ ಸ್ತ್ರೀ; ಸ್ತನ್ಯಪಾನ ಮಾಡುವ ಮಗುವನ್ನು ಎತ್ತಿಕೊಂಡು ನಿಂತ ಸ್ತ್ರೀ; ಪುಷ್ಪಗಳಿಂದಲಂಕರಿಸಿದ ಕೇಶವಿನ್ಯಾಸಯುಕ್ತ ಸ್ತ್ರೀ; ಜೋಡು ಜಡೆಯುಳ್ಳ ಸ್ತ್ರೀ; ಸಾಮಾನುಗಳುಳ್ಳ ಬುಟ್ಟಿಯನ್ನು ಹೆಗಲಮೇಲೆ ಹೊತ್ತ ಸ್ತ್ರೀ; ತಲೆಯ ಮೇಲೆ ಬುತ್ತಿಯನ್ನು ಹೊತ್ತ ಸ್ತ್ರೀ, ಕೋಡುಗಳುಳ್ಳ ವಸ್ತುವನ್ನು ತಲೆಯ ಮೇಲೆ ಹೊತ್ತ ಸ್ತ್ರೀ; ಭುಜವನ್ನು ನಿಲುಕದಂತೆ ಕತ್ತರಿಸಿದ ಕೂದಲುಳ್ಳ ಸ್ತ್ರೀ; ಮಂಚ ಅಥವಾ ಮಣೆಯ ಮೇಲೆ ಕುಳಿತ ಸ್ತ್ರೀ ಇತ್ಯಾದಿ. ಇದೇ ರೀತಿ ವಿಭಿನ್ನ ವರ್ಗದ ಪ್ರಾಣಿಗಳನ್ನೂ ಮಣ್ಣು, ಫಯಾನ್ಸ್ ಹಾಗೂ ಶಿಲೆಗಳಲ್ಲಿ ತಯಾರಿಸಲಾಗಿದೆ. ಇವುಗಳಲ್ಲಿ ಹರಿದಾಡುವ ಅಥವಾ ಉರಗ ವರ್ಗಕ್ಕೆ ಸೇರಿದ ಜೀವಿಗಳು, ದಂಶಕ ಪ್ರಾಣಿಗಳು, ಜಲಚರ ಮತ್ತು ಪಕ್ಷಿಗಳೂ ಸೇರಿವೆ. ಉದಾ: ಗಿಳಿ, ಗುಬ್ಬಿ, ಪಾರಿವಾಳ, ಹದ್ದು, ಹುಂಜ, ಕೋಳಿ, ಬಾತುಕೋಳಿ, ನವಿಲು, ಹೆಬ್ಬಾತು, ಟಗರು, ಅಳಿಲು, ಜೋಲು ಕಿವಿಯುಳ್ಳ ನಾಯಿ, ಮೀನು, ಆಮೆ, ಮೊಸಳೆ, ಹಾವು, ಮುಂಗುಸಿ, ಮೊಲ, ಕೋತಿ, ಮೊಲವನ್ನು ಕಚ್ಚಿ ಹಿಡಿದ ಬೇಟೆನಾಯಿ, ಕೊರಳ ಪಟ್ಟಿ ಹಾಗೂ ಇನ್ನಿತರ ಸಾಮಾನುಗಳಿಂದ ಅಲಂಕೃತ ಸಜ್ಜುಳ್ಳ ನಾಯಿ, ಬೆಕ್ಕು, ಹಿಣಿಲುಳ್ಳ ಗೂಳಿ, ಖಡ್ಗಮೃಗ, ಆನೆ, ಹುಲಿ ಇತ್ಯಾದಿ.

ಸುಡಾವೆಮಣ್ಣಿನ ಪ್ರಾಣಿಬೊಂಬೆ

ಈ ಕಾಲದಲ್ಲಿ ತಯಾರಿಸಿದ ದನಕರುಗಳ ಗೊಂಬೆಗಳು ಮಕ್ಕಳ ಆಟಿಗೆಯ ವಸ್ತುಗಳಾಗಿರಬಹುದು. ಆದರೆ ಪಶುಗಳಲ್ಲಿ ವಿಶೇಷವಾಗಿ ಬ್ರಾಹ್ಮಣಿ ಗೂಳಿಗಳನ್ನು ಹೋಲುವ ಗೊಂಬೆಗಳು ಇದಕ್ಕೆ ಹೊರತಾಗಿರಬಹುದೆಂದು ಕೆಲವಿದ್ವಾಂಸರ ಅನಿಸಿಕೆ. ಇಂಥ ಶಕ್ತಿಶಾಲಿ ಗೂಳಿಗಳ ಮಾದರಿ ಗೊಂಬೆಗಳು ಹರಪ್ಪ, ಮೊಹೆಂಜೋದಾರೊ, ಕಾಲಿಬಂಗನ್ ಹಾಗೂ ಲೋಥಲ್‌ನಲ್ಲಿ ದೊರಕಿವೆ. ಇಂಥ ಗೂಳಿಗಳ ದೇಹರಚನೆಯನ್ನು ಕಲಾಕಾರನೂ ವಿಶೇಷ ಚತುರತೆಯಿಂದ ತಯಾರಿಸಿದ್ದಾನೆ. ಅದರ ಬಲಿಷ್ಠತೆ, ಗಂಭೀರ ನಿಲುವು, ಎದ್ದು ಕಾಣುವ ಹಿಣಿಲು ಹಾಗೂ ದಷ್ಟ-ಪುಷ್ಟವಾದ ಅಂಗಸೌಷ್ಠವ, ಜೀವಂತ ಕಳೆ ಮೆಚ್ಚುವಂಥದ್ದು.

ಪ್ರಸಿದ್ಧಿ ಪಡೆದ ಕಂಚಿನ ಅಥವಾ ಕಲ್ಲಿನ ಶಿಲ್ಪಗಳೆಲ್ಲಾ ಮೊಹೆಂಜೋದಾರೊ ಹಾಗೂ ಹರಪ್ಪ ನೆಲೆಗಳಿಂದಲೇ ವರದಿಯಾಗಿವೆ. ಮಧೂಚ್ಛಿಷ್ಟ ತಂತ್ರದಿಂದ ತಯಾರಿಸಿದ ನೃತ್ಯಾಂಗನೆಯೆಂದೇ ಪ್ರಸಿದ್ಧಿ ಪಡೆದ ನಿಂತ ಕಂಚಿನ ಗೊಂಬೆ ಮೊಹೆಂಜೋದಾರೊ ಉತ್ಖನನದಲ್ಲಿ

ದೊರಕಿದೆ. ಈ ಶಿಲ್ಪದ ಬಲಗೈ ಟೊಂಕದ ಮೇಲಿದ್ದು, ಇಳಿಬಿದ್ದ ಎಡಗೈ ಅಲ್ಪ ಮಡಚಿದ ಎಡತೊಡೆಯ ಮೇಲಿದೆ. ಎಡಗೈ ತುಂಬಾ ಬಳೆಗಳಿದ್ದರೆ, ಬಲಗೈಯಲ್ಲಿ ಮುಂಗೈ ಮತ್ತು ಮೊಳಕೈಯಲ್ಲಿ ಎರಡೆರಡು ಬಳೆಗಳಿವೆ. ತಲೆಗೂದಲನ್ನು ಅಂದವಾಗಿ ಬಾಚಿ ಕಟ್ಟಿದ ತುರುಬು ಬಲಭುಜದ ಮೇಲೆ ತೂಗುಬಿದ್ದಿದೆ. ಅರ್ಧನಿಮೀಲಿತ ಚಕ್ಷುಗಳುಳ್ಳ ನೃತ್ಯಾಂಗನೆಯ ಕಂಠವನ್ನು ಮೂರು ಪದಕಗಳುಳ್ಳ ಏಕಾವಳಿ ಹಾರ ಅಲಂಕರಿಸಿದೆ. ಚಿಕ್ಕದಾದ ಸ್ತನಗಳುಳ್ಳ ಶರೀರ ನಗ್ನಭಾವವನ್ನು ದರ್ಶಿಸುತ್ತಿದೆ. ಎಡಗಾಲನ್ನು ಎತ್ತಿ ಮುಂದಿಟ್ಟಂತೆ ಕಾಣುತ್ತಿದ್ದರೆ, ಸ್ವಲ್ಪ ಬಾಗಿದಂತೆ ತೋರುವ ಬಲಗಾಲು ದಿಟವಾಗಿಟ್ಟಿರುವಂತಿದೆ. ನೃತ್ಯಾಂಗನೆಯ ಬೆನ್ನು ಭಾಗದ ಮೈಮಾಟ ಸುಂದರವಾದ ಕಲಾ ಮಾದರಿಯಂತಿದೆ. ಇತ್ತೀಚಿನವರೆಗೆ ಇಂಥ ನೃತ್ಯಾಂಗನೆಯ ಪಡಿಯಚ್ಚು ಅಥವಾ ಪ್ರತಿಕೃತಿ ಯಾವುದೇ ಮಾಧ್ಯಮದಲ್ಲಿರದೆ ಇದು ಅದ್ವಿತೀಯ ಶಿಲ್ಪವಾಗಿ ಉಳಿದಿತ್ತು. ಆದರೆ ಭಿರಡಾಣ ನೆಲೆಯಲ್ಲಿ ದೊರೆತ ಪ್ರೌಢ ಹರಪ್ಪ ಮಡಕೆ ತುಂಡಿನ ಮೇಲೆ ಕೇವಲ ಗೀರುಗೀಟುಗಳಿಂದ ಬಿಡಿಸಿದ ಚಿತ್ರ ಈ ನೃತ್ಯಾಂಗನೆ ಶಿಲ್ಪದ ಪ್ರತಿಕೃತಿಯಾಗಿದೆ. ಭಿರಡಾಣದ ಈ ಚಿತ್ರ ಶಿಲ್ಪದ ತದ್ರೂಪವಾಗಿದ್ದು, ವಸ್ತ್ರ ಹಾಗೂ ಆಭರಣಗಳನ್ನು ತೊಟ್ಟಂತೆ ಬಿಡಿಸಲಾಗಿದೆ. ಲೋಥಲ್‌ನಿಂದ ವರದಿಯಾದ ತಾಮ್ರದಿಂದ ತಯಾರಿಸಿದ ನಾಯಿ ಹಾಗೂ ಪಕ್ಷಿ, ಕಾಲಿಬಂಗನ್‌ನ ಕಂಚಿನ ಗೂಳಿಗಳು ತಮ್ಮ ಶೈಲಿ ಹಾಗೂ ಕಲೆಯಿಂದ ಹರಪ್ಪ ಮತ್ತು ಮೊಹೆಂಜೋದಾರೊವಿನ ಕಲಾಕೃತಿಗಳಂತಿವೆ. ಇದೇ ರೀತಿಯಾಗಿ ಕೇಶಸೂಜಿಯ ಮೇಲೆ ಕೆತ್ತಿದ ಒಂದನ್ನೊಂದು ಆಲಂಗಿಸಿದ ಮೂರು ಮಂಗಗಳ ಸಂಯೋಜನೆ ನೈಜತೆಯಿಂದ ಕೂಡಿದೆ. ಸ್ಟಿಯಟೈಟ್‌ನಲ್ಲಿ ತಯಾರಿಸಿದ ಜೋಲು ಕಿವಿಯ ಬೇಟೆ ನಾಯಿ, ಕುಳಿತ ಎರಡು ಟಗರುಗಳು ಹಾಗೂ ತನ್ನ ಎರಡೂ ಮುಂಗಾಲುಗಳಲ್ಲಿ ತಿನ್ನುವ ಪದಾರ್ಥವನ್ನು ಹಿಡಿದುಕೊಂಡು, ಬೆನ್ನಿನುದ್ದಕ್ಕೂ ಬಾಲವನ್ನೆತ್ತರಿಸಿಕೊಂಡು ಕುಳಿತಿರುವ ಅಳಿಲು ನೋಡುವವರ ಮನಸೂರೆಗೈಯುತ್ತವೆ.



**ಕಂಚಿನ ಗೂಳಿ, ಕಾಲಿಬಂಗನ್**

ಹರಪ್ಪ ನೆಲೆಯಿಂದ ದೊರೆತ ಕಡು ಬೂದುಬಣ್ಣದ ಸ್ಟಿಯಟೈಟ್ ಗೊಂಬೆಯ ನಿಂತಿರುವ ನೃತ್ಯ ಭಂಗಿಯನ್ನಾಧರಿಸಿ ಕೆಲವು ವಿದ್ವಾಂಸರು ಇದನ್ನು ಇತಿಹಾಸ ಕಾಲದ ನಟರಾಜನ ಮೂರ್ತಿಯಂತಿದೆಯೆಂದು ವರ್ಣಿಸಿದ್ದಾರೆ. ಈ ಶಿಲ್ಪದ ತಲೆ ಹಾಗೂ ಕೈಗಳನ್ನು ಪ್ರತ್ಯೇಕವಾಗಿ ತಯಾರಿಸಿ ಮುಂಡಭಾಗಕ್ಕೆ ಜೋಡಿಸಲಾಗಿದೆ. ಇದಕ್ಕಾಗಿ ಕುತ್ತಿಗೆಯ ಮೇಲ್ಭಾಗ ಹಾಗೂ ಭುಜಗಳ ಸ್ಥಾನಗಳಲ್ಲಿ ಬೈರಿಗೆಯಿಂದ ತೂತುಗಳನ್ನು ಕೊರೆಯಲಾಗಿದೆ. ಪುರುಷ ಜನನೇಂದ್ರಿಯ ಹಾಗೂ ಸ್ತನಗಳಿಗಾಗಿಯೂ ಇಂತಹ ಆಳವಾದ ತೂತನ್ನು ಕೊರೆಯಲಾಗಿದೆ. ಈ ಮೂರ್ತಿಯ ನಿಂತ ನಿಲುವು ನೃತ್ಯಭಂಗಿಯಲ್ಲಿದೆ. ಎಡಗಾಲನ್ನು ಗಟ್ಟಿಯಾಗಿ ಊರಿ ನಿಂತು, ಬಲಗಾಲನ್ನು ಮುಂಭಾಗದಲ್ಲಿ ಮೇಲಕ್ಕೆ ಎತ್ತಿ, ಎಡಗಡೆ ತಿರುಗಿದಂತಿದೆ. ಕಟಿಯ ಮೇಲ್ಭಾಗದ ದೇಹ ಸಂಪೂರ್ಣವಾಗಿ ಎಡಗಡೆ ತಿರುಗಿಕೊಂಡದ್ದಲ್ಲದೆ, ಅದರೊಂದಿಗೆ ಎರಡೂ ಕೈಗಳೂ ಸಹಿತ ಅದೇ ದಿಶೆಯಲ್ಲಿ ತಿರುಗಿಕೊಂಡಂತೆ ತೋರಿಸಲಾಗಿದೆ. ಮೂರ್ತಿಯ ದಪ್ಪಗಿರುವ ಕುತ್ತಿಗೆಯ ಮೇಲೆ ಬಹುಶಃ ಮೂರು ಮುಖಗಳುಳ್ಳ ತಲೆಯನ್ನು ಅಥವಾ ಪ್ರಾಣಿಯ ಮುಖವನ್ನು ಜೋಡಿಸಿರಬಹುದೆಂದು ವಿದ್ವಾಂಸರು ಅನುಮಾನಿಸಿದ್ದಾರೆ. ಕೆಂಪು ಮರಳುಕಲ್ಲಿನ ಭಗ್ನಗೊಂಡ ಇನ್ನೊಂದು ಮೂರ್ತಿಯ ತಲೆ, ಕೈಗಳು, ಸ್ತನಗಳನ್ನೂ ಸಹಿತ ಮೇಲೆ ಹೇಳಿದ ವಿಧಾನದಿಂದಲೇ ಜೋಡಿಸಲಾಗಿದ್ದಾಗಿ ತೋರಿಬರುತ್ತದೆ. ಈ ಎರಡೂ ಶಿಲ್ಪಗಳ ದೇಹ ಮಾಂಸಖಂಡಗಳಿಂದ ತುಂಬಿದ್ದು, ಸಪಾಟಾದ ಪೃಷ್ಠ ಹಾಗೂ ಎದ್ದು ಕಾಣುವ ಉದರ ಭಾಗವಿದೆ. ಇಂಥ ರಚನೆಗಳಲ್ಲಿ ಕೇವಲ ಭಾರತೀಯ ಅಂಗಸೌಷ್ಠವದ ಲಕ್ಷಣಗಳಿವೆಯೇ ಹೊರತು, ಪರಕೀಯರ ದೈಹಿಕ ಲಕ್ಷಣಗಳಿಲ್ಲವೆಂದು ವಿದ್ವಾಂಸರು ನುಡಿದಿದ್ದಾರೆ.

ಮೊಹೆಂಜೋದಾರೊದ ಪುರೋಹಿತ–ರಾಜ ಅಥವಾ ಶ್ರಮಣನ ಮೂರ್ತಿಯೆಂದು ಪ್ರಸಿದ್ಧವಾಗಿರುವ ಶಿಲ್ಪವನ್ನು ಬಿಳಿಬಣ್ಣದ ಲಘು ಸ್ಟಿಯಟೈಟ್‌ನಲ್ಲಿ ತಯಾರಿಸಲಾಗಿದೆ. ಈ ಶಿಲ್ಪದ ಕೆಳಭಾಗ ಹಾಗೂ ತಲೆಯ ಆಂಶಿಕ ಭಾಗಗಳು ಒಡೆದುಹೋಗಿವೆ. ಅಂಚುಳ್ಳ ಉತ್ತರೀಯ ಬಲಗೈ ಕೆಳಗಿನಿಂದ ಎಡಭುಜದ ಮೇಲೆ ಹಾಯ್ದು ಹೋಗುವಂತೆ ಹೊದೆಯಲಾಗಿದೆ. ಉತ್ತರೀಯವನ್ನು ಮೂರು ಎಸಳುಗಳುಳ್ಳ ಹೂವಿನಾಕಾರದ ಚಿತ್ರಗಳು ಹಾಗೂ ವೃತ್ತಗಳಿಂದ ಅಲಂಕರಿಸಲಾಗಿದೆ. ಈ ಚಿತ್ರಗಳನ್ನು ಕೊರೆದು ಬಿಡಿಸಿದ ಅನಂತರ ಅವುಗಳಲ್ಲಿ ಕೆಂಪುಬಣ್ಣವನ್ನು ತುಂಬಿದ್ದ ಕುರುಹುಗಳೂ ಕಾಣುತ್ತವೆ. ಈ ಮೂರ್ತಿ ಗಡ್ಡಧಾರಿಯಾಗಿದ್ದು, ಮೀಸೆಯನ್ನು ಮಾತ್ರ ಕ್ಷೌರಗೊಳಿಸಲಾಗಿದೆ. ನೇರದೃಷ್ಟಿಯುಳ್ಳ ಚಕ್ಷುಗಳು ಅರ್ಧನಿಮೀಲಿತ ವಾಗಿವೆ. ಒಂದು ಕಣ್ಣಿನ ಒಳಭಾಗದಲ್ಲಿ ಶಂಖದ ತುಂಡನ್ನು ಹುದುಗಿಸಿದ್ದನ್ನು ನೋಡಬಹುದು. ಮೂರ್ತಿಯ ಆಕಾರಕ್ಕೆ ತಕ್ಕ ಮೂಗು, ಕಿರಿದಾದ ಹಾಗೂ ಇಳಿಜಾರು ಹಣೆ, ತುಂಬಿದ ತುಟಿಗಳು, ಶಂಖದಾಕಾರದ ಕಿವಿಗಳಿದ್ದು, ಬೈತಲೆಯುಳ್ಳ ತಲೆಗೂದಲನ್ನು ಹಿಂದಕ್ಕೆ ಬಾಚಲಾಗಿದೆ. ಹಣೆಪಟ್ಟಿಯಂತಿರುವ ಆಭೂಷಣದ ನಡುವೆ ವರ್ತುಲಾಕಾರದ ಪದಕ ಇದ್ದು, ತಲೆಯ ಹಿಂಭಾಗದಲ್ಲಿ ಕಟ್ಟಿದ ಗಂಟಿನ ಅಂಚುಗಳು ತೂಗುಬಿದ್ದಿವೆ. ಚಿಲುಕು ಕಟ್ಟುಳ್ಳ ತೋಳ್ಬಂದಿ ಬಲಗೈಯನ್ನು ಅಲಂಕರಿಸಿದೆ. ಕಿವಿಯ ಕೆಳಗೆ ಕತ್ತಿನಲ್ಲಿರುವ ಎರಡು ಛೇದಗಳು ಬಹುಶಃ ಕಂಠಾಭರಣವನ್ನು ಭದ್ರಗೊಳಿಸಲಿಕ್ಕಿರಬಹುದು. ಇಂಥ ಶಿಲ್ಪಶೈಲಿ ಭಾರತವನ್ನು ಬಿಟ್ಟು ಇನ್ನಾವ ಸಮಕಾಲೀನ ಸಂಸ್ಕೃತಿಗಳಲ್ಲಿ ನೋಡಲು ಸಿಗುವುದಿಲ್ಲ. ಕಾಲಿಬಂಗನ್‌ನಿಂದ ವರದಿಯಾದ ಒಂದು ಸುಟ್ಟಮಣ್ಣಿನ ಪುರುಷ ಗೊಂಬೆಯ ಮುಖ ಲಕ್ಷಣಗಳು ಈ ಮೂರ್ತಿಯನ್ನು ಹೋಲುತ್ತದೆಯೆಂದು ಅಭಿಪ್ರಾಯ. ಮೊಹೆಂಜೋದಾರೊವಿನಿಂದ ವಿವಿಧ ಬಣ್ಣದ ಸುಣ್ಣಕಲ್ಲು ಹಾಗೂ ಹಾಲುಗಲ್ಲಿನಲ್ಲಿ ತಯಾರಿಸಿದ ಭಗ್ನಗೊಂಡ ಅನೇಕ ಮಾನವ ಶಿಲ್ಪಗಳೂ ದೊರಕಿವೆ. ಉದಾಹರಣೆಗೆ ಬಲಕಣ್ಣಿನಲ್ಲಿ ಹುದುಗಿಸಿದ ಬಿಳಿಕಲ್ಲುಳ್ಳ ಸ್ತ್ರೀಯ ತಲೆಭಾಗ; ಹಿಂಭಾಗದಲ್ಲಿ ಮುಡಿಕಟ್ಟಿದ ತಲೆಗೂದಲು, ಮುಖದಲ್ಲಿ ಚಿಕ್ಕ ಬಾಯಿ, ಮೂಗು ಹಾಗೂ ಸ್ಫುಟವಾದ ಗದ್ದವುಳ್ಳ ಶಿರೋಭಾಗ; ಅಧೋರುಕವನ್ನು ಧರಿಸಿ ಪುರೋಹಿತ–ರಾಜನಂತೆ ಉತ್ತರೀಯ ಹೊದ್ದು, ಅರ್ಧಪರ್ಯಂಕಾಸನೋಪಾದಿಯಲ್ಲಿ ಕುಳಿತು, ಎಡಗೈ ಮಡಚಿ, ಎತ್ತಿದ್ದ ಎಡಗಾಲ ಮಂಡಿಯನ್ನು ಹಿಡಿದುಕೊಂಡಿದ್ದರೆ, ಬಲಗೈ ಬಲತೊಡೆಯ ಮೇಲಿದ್ದು, ಶಿಲ್ಪದ ಬೆನ್ನ ಮೇಲೆ ಕೂದಲಿನಿಂದ ತಯಾರಿಸಿದ ಹಗ್ಗ ತೂಗುಬಿದ್ದಿದೆ. ಕುತ್ತಿಗೆಯಿಂದ ಮೇಲ್ಭಾಗ ಭಗ್ನಗೊಂಡಿದೆ. ಲಘುವಾಗಿ ಹುಬ್ಬು ಮೇಲಕ್ಕೇರಿಸಿದ ಹಾಗೂ ವಿಶಾಲ ಕಣ್ಣುಗಳು, ತೆಳುವಾದ ಮೇಲ್ತುಟಿ, ತುಂಬಿದ ಕೆಳದುಟಿ, ಬಸಿಯಾಕಾರದಂತಹ ಕಿವಿಗಳಲ್ಲಿ ಚಿಕ್ಕದಾದ ತೂತು, ಮೊಟಕಾಗಿ ಕತ್ತರಿಸಿದ ಕಪೋಲ ಕೇಶಗಳು, ತರಂಗದಂತಿರುವ ತಲೆಗೂದಲನ್ನು ನೂಲಿನಂತಹ ಹಣೆಪಟ್ಟಿಯಿಂದ ಬೆನ್ನ ಹಿಂದೆ ಗಂಟು ಕಟ್ಟಿದ್ದು ಅದರಲ್ಲಿರುವ ದುಂಡನೆಯ ತಲೆಕಟ್ಟಿರುವ ಕೇಶ ಸೂಜಿ; ವಾತಾವರಣದಿಂದಾಗಿ ಶಿಲ್ಪ ಲಕ್ಷಣಗಳು ಮಾಸಿದ್ದರೂ ಅರ್ಧ ಮೊಣಕಾಲೂರಿ ಕುಳಿತ ಭಂಗಿಯಲ್ಲಿ ಬಲಗಾಲನ್ನು ಮಡಚಿ ಎತ್ತಿಡಲಾಗಿದ್ದು, ಕೈಗಳೆರಡೂ ಮೊಳಕಾಲ ಮೇಲಿಡಲಾಗಿದೆ, ಕಾಲುಗಳ ನಡುವೆ ಉಟ್ಟ ಬಟ್ಟೆಯ ನೆರಿಗೆಗಳನ್ನು ಹಾಗೂ ಅದರ ಅಂಚಿನ ಭಾಗ ಬೆನ್ನ ಹಿಂದೆ ಕಾಣಬಹುದು; ತಲೆಗೂದಲನ್ನು ಕಟ್ಟಿದ ಕೂದಲ ಪಟ್ಟಿಯ ಶೇಷಭಾಗಗಳು ಬೆನ್ನ ಮೇಲೆ ಜೋತುಬಿದ್ದಿವೆ.

ಮೊಹೆಂಜೋದಾರೊದಲ್ಲಿ ಸಿಕ್ಕ ಪೀಠದ ಮೇಲೆ ಕುಳಿತು ಹಿಂದಕ್ಕೆ ಬಾಗಿದ ಕೊಂಬುಗಳುಳ್ಳ ಕಾಡುಮೇಕೆ, ಟಗರು ಇತ್ಯಾದಿ ಪ್ರಾಣಿಗಳ ಗೊಂಬೆಗಳು ಅತಿ ಚಿಕ್ಕದಾಗಿವೆ. ಆದರೆ ಇವೆಲ್ಲದರಕ್ಕಿಂತ ಅಜ್ಞಾತ ಮೂಲದ, ಕುಳಿತ ಒಂದು ಟಗರಿನ ಶಿಲ್ಪದ ನೈಜತೆ ಪ್ರಶಂಸನೀಯ. ತನ್ನ ನಾಲ್ಕು ಕಾಲುಗಳನ್ನು ಮಡಚಿ ಕುಳಿತು/ ಮಲಗಿದ ಈ ಸಹಜ ಲಕ್ಷಣಗಳನ್ನು ಕಲಾಕಾರನು ಸ್ಪಷ್ಟ ರೀತಿಯಲ್ಲಿ ಎತ್ತಿ ತೋರಿಸಿದ್ದಾನೆ. ಈ ಲಕ್ಷಣಗಳು ಟಿಬೆಟ್, ಬಲೂಚಿಸ್ತಾನ ಹಾಗೂ ಇರಾನ್ ಪ್ರದೇಶದಲ್ಲಿರುವ ಉರಿಯಲ್ ಎಂಬ ತಳಿಯ ಟಗರನ್ನು ಹೋಲುತ್ತವೆ.

ಧೋಲಾವೀರದಲ್ಲಿ ಓರ್ವ ಶಿರ ರಹಿತ ಆಸೀನ ವ್ಯಕ್ತಿಯ ಭಗ್ನಗೊಂಡ ಶಿಲಾ ಮೂರ್ತಿ ಮತ್ತು ಕಲ್ಲಿನ ಉಡ ಅಥವಾ ಗೋಧಿಕಾದ ಶಿಲ್ಪವೂ ಲೋಥಲ್‌ನಲ್ಲಿ ಡಿಂಬದ ಭುಜ ಭಾಗದಲ್ಲಿ ಜೋಡಿಸುವುದಕ್ಕಾಗಿ ಅದರ ಮೇಲೆ ಬೈರಿಗೆಯಿಂದ ಕೊರೆದ ತೂತುಳ್ಳ ಮಾನವನ ಹಾಲುಗಲ್ಲಿನಲ್ಲಿ ಮಾಡಿದ ಕೈಭಾಗವೂ ದೊರೆತಿವೆ.

ಪ್ರೌಢ ಹರಪ್ಪದ ಇನ್ನೊಂದು ವಿಶಿಷ್ಟಪೂರ್ಣವಾದ ಕಲೆಯೆಂದರೆ ಮುದ್ರೆಗಳಲ್ಲಿ ಕಂಡುಬರುವ ಕೆತ್ತನೆ ಕೆಲಸ. ಮುದ್ರೆಗಳನ್ನು ಸ್ಟಿಯಟೈಟ್ ಕಲ್ಲು ಅಥವಾ ಈ ಕಲ್ಲನ್ನು ಪುಡಿ ಮಾಡಿ, ಹಿಟ್ಟಿನ ಮುದ್ದೆಯಂತೆ ತಯಾರಿಸಿ, ಅದರಿಂದ ಬೇಕಾದ ಅಳತೆಯ ಮುದ್ರೆಗಳ ಬಿಲ್ಲೆಗಳನ್ನು ತಯಾರಿಸಿ, ಅದರ ಮೇಲೆ ಅಕ್ಷರಸಂಕೇತಗಳ ಹಾಗೂ ಚಿತ್ರಗಳ ಸಂಯೋಜನೆಯನ್ನು ಕೊರೆಯಲಾಗುತ್ತಿತ್ತು. ಕ್ರಮವಿರುದ್ಧವಾಗಿದ್ದಾಗ್ಯೂ ಮುದ್ರೆಗಳ ಮೇಲೆ ಕೊರೆದು ಬಿಡಿಸಿದ ಪ್ರಾಣಿಗಳು, ಮಾನವರ ಅಥವಾ ದೇವತೆಗಳ ಚಿತ್ರಗಳನ್ನು ನೈಜಸ್ವರೂಪಕ್ಕನುಗುಣವಾಗಿವೆ. ಉದಾಹರಣೆಗೆ ಬ್ರಾಹ್ಮಣಿ ಗೂಳಿ ಅಥವಾ ಕಾಡೆಮ್ಮೆ, ನೀರೆಮ್ಮೆ, ಆನೆ, ಹುಲಿ ಇತ್ಯಾದಿ ಪ್ರಾಣಿಗಳ ನಿಜ ಶರೀರ ರಚನೆ ಹಾಗೂ ಇಂಥ ಪ್ರಾಣಿಗಳ ನಿಂತ ನಿಲುವು ಅಥವಾ ಇನ್ನಿತರ ಸಹಜ ಭಂಗಿಗಳನ್ನು ಕಲಾಕಾರನು ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಮುದ್ರೆಗಳ ಮೇಲಿನ ಅಲ್ಪ ಜಾಗದಲ್ಲಿ ಅವುಗಳ ಯಥಾರೂಪವನ್ನು ಬಿಂಬಿಸಿದ್ದಾನೆ. ಇದೇ ರೀತಿಯಾಗಿ ಪಶುಪತಿ –ಶಿವನೆಂದೇ ಪ್ರಸಿದ್ಧಿ ಪಡೆದ ಆಸೀನ ವ್ಯಕ್ತಿಯ ಚಿತ್ರ ನಿಜವಾಗಿಯೂ ಧ್ಯಾನ ಮುದ್ರೆಯಲ್ಲಿ ಕುಳಿತಿರುವ ಯೋಗಿಯಂತೆ ಕಾಣಿಸುತ್ತದೆ. ಪ್ರೌಢ ಸಿಂಧೂ–ಸರಸ್ವತಿ ಕಾಲದ ಕಲಾ ಅವಶೇಷಗಳ ಪ್ರಸರಣ ಹಾಗೂ ವ್ಯಾಪ್ತಿಯನ್ನು ಕಂಡಾಗ, ಕಲೆ ಒಂದು ಪ್ರಬಲ ಕೇಂದ್ರದ ಮಾರ್ಗದರ್ಶನದಡಿಯಲ್ಲಿ ಈ ಸಂಸ್ಕೃತಿಯ ಭೌಗೋಳಿಕ ವ್ಯಾಪ್ತಿಯಲ್ಲಿ

ಬೆಳೆಯದೆ, ವಿವಿಧ ಪ್ರದೇಶಗಳ ಭೌಗೋಳಿಕ ಪರಿಸ್ಥಿತಿಗನುಗುಣವಾಗಿ ವಿವಿಧ ರೂಪವನ್ನು ಧಾರಣ ಮಾಡಿ ಬೆಳೆದು ಬಂದಿತೆನ್ನಬಹುದು. ಉದಾ: ಧೋಲಾವೀರದಿಂದ ವರದಿಯಾದ ಗೋಧಿಕಾ ಅಥವಾ ಉಡದ ಶಿಲ್ಪಗಳು ಮೊಹೆಂಜೋದಾರೊ ಅಥವಾ ಹರಪ್ಪದಲ್ಲಿ ಇದುವರೆಗೆ ವರದಿಯಾಗಿಲ್ಲ. ಈ ಪ್ರಾಣಿಯನ್ನು ಕುರಿತಾಗಿ ಆ ಕಾಲದಲ್ಲಿಯೂ ಕಚ್ಛ್ ಪ್ರಾಂತದಲ್ಲಿ ಧಾರ್ಮಿಕ ನಂಬಿಕೆಗಳು ಇದ್ದಿರಬಹುದು. ಏಕೆಂದರೆ ಐತಿಹಾಸಿಕ ಕಾಲದ ಸಂಪ್ರದಾಯದಂತೆ ಗುಜರಾತ್ ಭಾಗದಲ್ಲಿ ಉಡ ಪಾರ್ವತಿ ದೇವಿಯ ವಾಹನ. ಸಿಂಧೂ–ಸರಸ್ವತಿ ಸಂಸ್ಕೃತಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಕಲೆಯನ್ನು ಬೆಳೆಸಿಕೊಂಡು ಬಂದಿದೆಯೇ ವಿನಃ ಸಮಕಾಲೀನ ಪಶ್ಚಿಮ ಏಷ್ಯ ಅಥವಾ ಮಧ್ಯಏಷ್ಯ ಸಂಸ್ಕೃತಿಗಳಿಂದ ಪ್ರೇರಿತವಾಗಿಲ್ಲ. ಸಾಮಾನ್ಯವಾಗಿ ವಿಭಿನ್ನ ಸಂಸ್ಕೃತಿಗಳ ಸರಹದ್ದಿನಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಮೇಲಾದ ಔಪಚಾರಿಕ ಪ್ರಭಾವ ಕೆಲವೊಂದು ಅವಶೇಷಗಳಲ್ಲಿ ಕಂಡುಬಂದರೆ ಆಶ್ಚರ್ಯವಿಲ್ಲ. ಈ ರೀತಿಯ ಪ್ರಭಾವವನ್ನು ಎರಡೂ ಪ್ರದೇಶಗಳಲ್ಲಿ ನೋಡಬಹುದು. ಆದಾಗ್ಯೂ ಇಲ್ಲಿಯ ಶಿಲ್ಪಗಳ ಕುಳಿತಿರುವ ಭಂಗಿಯನ್ನೂ, ತಲೆಗೂದಲನ್ನು ಬಾಚಿದ ರೀತಿಯನ್ನು ಪಶ್ಚಿಮ ಏಷ್ಯದ ಶೈಲಿಯೊಂದಿಗೆ ತುಲನೆ ಮಾಡಿ, ಸಿಂಧೂ–ಸರಸ್ವತಿಯ ಕಲೆ ಪಶ್ಚಿಮ ಏಷ್ಯದಿಂದ ಪ್ರೇರಿತವಾಗಿದೆ ಎಂದು ವಾದಿಸುವ ವಿದ್ವಾಂಸರು ಇದ್ದಾರೆ. ಈ ವಾದಗಳಲ್ಲಿ ಹುರುಳಿಲ್ಲವೆಂಬ ವಿದ್ವಾಂಸರ ತಂಡವೂ ಇದೆ. ಪ್ರೌಢ ಸಿಂಧೂ–ಸರಸ್ವತಿಯ ಶಿಲ್ಪ ಸಂಪ್ರದಾಯ ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರಬಹುದೇ ಎಂಬ ಪ್ರಶ್ನೆಗೆ ಬಿಡಿ ಶಿಲ್ಪಗಳಂತೆ ದೊರೆತ ಶ್ರಮಣ ಅಥವಾ ಪುರೋಹಿತ–ರಾಜ, ಪಶುಪತಿ–ಶಿವ, ನಟರಾಜ ಇತ್ಯಾದಿ ಯೋಗಶಾಸ್ತ್ರದ ಜೊತೆಗೆ ಧಾರ್ಮಿಕ ಭಾವನೆಗಳನ್ನು ಒಳಗೂಡಿಸಿಕೊಂಡು ದೈವತ್ವವನ್ನು ಪ್ರತಿಬಿಂಬಿಸುವ ಕುರುಹುಗಳಾಗಿವೆಯೆಂದು ಕೆಲ ವಿದ್ವಾಂಸರ ಅಭಿಪ್ರಾಯ. ಇಂತಹ ವಿಚಾರಕ್ಕೆ ಈ ಕಾಲದ ಪ್ರಾಣಿ ಶಿಲ್ಪಗಳೂ ಹೊರತಾಗಿರಲು ಸಾಧ್ಯವಿಲ್ಲ.

ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿ: ಇಂಥ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಸೈದ್ಧಾಂತಿಕ ಸಾಹಿತ್ಯದ ಆವಶ್ಯಕತೆಯಿರುತ್ತದೆ. ಆದರೆ ಇಂಥ ಲಿಖಿತ ಸಾಮಗ್ರಿಗಳ ಅಭಾವವಿರುವುದರಿಂದ ಕೇವಲ ಪುರಾತಾತ್ತ್ವಿಕ ಅವಶೇಷಗಳನ್ನಾಧರಿಸಿ ಈ ಕಾಲದ ರಾಜಕೀಯ ಹಾಗೂ ಸಾಮಾಜಿಕ ಪದ್ಧತಿಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಈ ಸಂಸ್ಕೃತಿಯ ಸಂಶೋಧನೆಯ ಆರಂಭದಲ್ಲಿ ಕಂಡುಬಂದ ಮೊಹೆಂಜೋದಾರೊ, ಹರಪ್ಪ ಹಾಗೂ ಕಾಲಿಬಂಗನ್ ನಗರಗಳ ರಚನಾ ವಿನ್ಯಾಸ ಒಂದೇ ರೀತಿಯಾಗಿತ್ತು. ಈ ನಗರ ವಿನ್ಯಾಸದ ಪಶ್ಚಿಮ ದಿಶೆಯಲ್ಲಿ ಒಂದು ಎತ್ತರವಾದ ವಿಶೇಷ ಸ್ಥಳವನ್ನು ಆಡಳಿತ ವರ್ಗಕ್ಕಾಗಿ ನಿರ್ಮಿಸಲಾಗಿದ್ದು, ಸ್ವತಂತ್ರವಾದ ಕೋಟೆಗೋಡೆಯನ್ನು ಹೊಂದಿರುತ್ತದೆ. ಇದನ್ನು ದುರ್ಗ ಎಂದು ಕರೆಯಲಾಗಿದೆ. ಇದರ ಪೂರ್ವ ಭಾಗದಲ್ಲಿರುವ ಇನ್ನೊಂದು ಘಟಕ ಆಕಾರದಲ್ಲಿ ದೊಡ್ಡದಾಗಿದ್ದು, ಇನ್ನುಳಿದ ನಾಗರಿಕರ ವಾಸಸ್ಥಾನವಾಗಿರುತ್ತದೆ. ಇದನ್ನು ಕೆಳನಗರವೆಂದು ಕರೆಯಲಾಗಿದೆ. ಇತ್ತೀಚಿನವರೆಗಿನ ಉತ್ಖನನ ಮಾಡಿದ ನೆಲೆಗಳಲ್ಲಿ ನಗರ ವಿನ್ಯಾಸ ಸಂಪ್ರದಾಯದಂತೆ ಎರಡು ಘಟಕಗಳಿಂದ ಕೂಡಿದಾಗ್ಯೂ ಸ್ಥಳೀಯ ಅನುಕೂಲತೆಗೆ ತಕ್ಕಂತೆ ವಿನ್ಯಾಸದಲ್ಲಿ ಬದಲಾವಣೆಗಳನ್ನು ಮಾಡಲಾಗಿತ್ತು. ಎರಡು ಘಟಕಗಳ ನಗರ ವಿನ್ಯಾಸದ ಸಂಪ್ರದಾಯಕ್ಕೆ ಭಿನ್ನವಾಗಿ ಧೋಲಾವೀರದಲ್ಲಿ ಮೂರು ಪ್ರತ್ಯೇಕ ನಿವಾಸ ಸ್ಥಾನಗಳಿದ್ದು, ಅವುಗಳೆಲ್ಲವೂ ಹೊರಗಿನ ಸುರಕ್ಷಾ ಗೋಡೆಯಿಂದ ಆವೃತ್ತವಾಗಿವೆ. ಇದೇ ಪ್ರಕಾರವಾಗಿ ರಾಖಿಗಡಿ ಹಾಗೂ ಹರಪ್ಪ ನೆಲೆಗಳಲ್ಲಿ ಎರಡಕ್ಕೂ ಹೆಚ್ಚಿನ ದಿಬ್ಬಗಳಿದ್ದ ಕಾರಣ, ಅಲ್ಲಿಯೂ ಹಲವು ವಿನ್ಯಾಸದ ಘಟಕಗಳಿರಬಹುದೆಂದು ವಿದ್ವಾಂಸರು ಅನುಮಾನಿಸಿದ್ದಾರೆ. ಈ ರೀತಿಯ ಏಕರೂಪತೆ ನಗರ ನಿರ್ಮಾಣದಲ್ಲಿರುವುದು ಬಹುಶಃ ಇಂಥ ವಿನ್ಯಾಸವನ್ನು ಯಾವುದೋ ಒಂದು ಆಡಳಿತ ವ್ಯವಸ್ಥೆ ತಯಾರಿಸಿರಬಹುದೆಂಬ ಅನುಮಾನ ಹುಟ್ಟಿಕೊಳ್ಳುತ್ತದೆ. ಆದರೆ ಇಂಥ ಆಡಳಿತಾಧಿಕಾರವನ್ನು ಪಡೆದವರಾರು ಎಂಬ ಪ್ರಶ್ನೆಗೆ ಸಮಂಜಸ ಉತ್ತರವಿನ್ನೂ ದೊರಕಿಲ್ಲ. ಆದಾಗ್ಯೂ ಕೆಲವು ವಿದ್ವಾಂಸರ ಅಭಿಪ್ರಾಯದಂತೆ ಹರಪ್ಪ ಸಂಸ್ಕೃತಿಯಲ್ಲಿ ರಾಜವಂಶದ ಆಳಿಕೆ ಇತ್ತು. ಪ್ರತ್ಯೇಕ ಕೋಟೆಯುಳ್ಳ ದುರ್ಗದಲ್ಲಿ ರಾಜಮಾನ್ಯಕ್ಕೆ ಒಪ್ಪುವಂಥ ಅರಮನೆಗಳನ್ನು ಹೋಲುವ ಭವನಗಳು ಬೆಳಕಿಗೆ ಬಂದಿಲ್ಲ. ಸಮಕಾಲೀನ ಈಜಿಪ್ಟ್ ಹಾಗೂ ಮೆಸಪೊಟೇಮಿಯದಲ್ಲಿನ ವೈಭವೋಪೇತ ರಾಜಭವನಗಳಂಥ ಕಟ್ಟಡಗಳೂ ಸಿಂಧೂ–ಸರಸ್ವತಿ ಪ್ರದೇಶದಲ್ಲಿಲ್ಲ. ಈ ಹಿನ್ನೆಲೆಯಲ್ಲಿ ತಾತ್ವಿಕ ದೃಷ್ಟಿಯಿಂದ ಇಲ್ಲಿಯ ರಾಜವಂಶಜರು ವೈಭವೋಪೇತ ಜೀವನ ಶೈಲಿಗೆ ಒತ್ತು ಕೊಟ್ಟಿರಲಿಲ್ಲವೆಂದೂ ತಮ್ಮ ಕರ್ತವ್ಯಕ್ಕೆ ಆದ್ಯತೆಯನ್ನು ಕೊಟ್ಟಿರಬಹುದೆಂದೂ ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಇಷ್ಟು ವಿಸ್ತಾರವಾದ ಭೂಭಾಗದಲ್ಲಿ, ಸಾಂಸ್ಕೃತಿಕ ಸಮನ್ವಯವನ್ನು ಹೊಂದಿದ ಸಮಾಜವನ್ನು ಅಡಚಣೆಗಳಿಲ್ಲದೆ ನಡೆಸಿಕೊಂಡು ಹೋಗಲು ಪ್ರಾಂತೀಯ ಆಡಳಿತ ಕ್ಷೇತ್ರಗಳಿದ್ದಿರಬಹುದು. ಇಂಥ ಮಹತ್ತರ ವ್ಯವಸ್ಥೆಯಲ್ಲಿ ರಾಜ ಮುಖ್ಯಸ್ಥ ಕೇಂದ್ರಬಿಂದುವಾಗಿದ್ದರೆ ಅವನ ಸಹಾಯಕ್ಕಾಗಿ ಪುರೋಹಿತ ಅಥವಾ ಧರ್ಮಗುರುವಿನ ಸೇವೆಯೂ ಅನಿವಾರ್ಯವಾಗಿತ್ತೆಂದು ತೋರುತ್ತದೆ. ಕಾಲಿಬಂಗನ್‌ನ ದುರ್ಗದ ದಕ್ಷಿಣ ಭಾಗದಲ್ಲಿರುವ ಯಜ್ಞಕುಂಡಗಳುಳ್ಳ ಜಗಲಿಗಳು, ಬಾವಿ ಇತ್ಯಾದಿ ಪುರೋಹಿತನ ಇರುವಿಕೆಯ ಸಂಕೇತಗಳಂತಿವೆ. ದುರ್ಗದಲ್ಲಿ ರಾಜ, ಅವನ ಪರಿವಾರದ ಜನ, ಸಹಾಯಕ ಸಿಬ್ಬಂದಿಯಲ್ಲದೆ, ರಾಜಪುರೋಹಿತನೂ ವಾಸಿಸುತ್ತಿದ್ದನೆಂದು ತೋರುತ್ತದೆ. ಪ್ರೌಢ ಸಿಂಧೂ–ಸರಸ್ವತಿಯ ಕಾಲದ ಇನ್ನೊಂದು ಪ್ರಮುಖ ವರ್ಗವೆಂದರೆ ವ್ಯಾಪಾರಿಗಳು. ಇವರಲ್ಲದೆ ವಿವಿಧ ಕಸುಬುಗಳನ್ನಾಧರಿಸಿದ್ದ, ವಿಭಿನ್ನ ವರ್ಗದವರಿದ್ದರೆಂಬುದು ಗೊತ್ತಿದ್ದ ವಿಷಯ. ಕಚ್ಚಾಸರಕಿನ ಸರಬರಾಜು ಹಾಗೂ ಅವುಗಳಿಂದ ತಯಾರಾದ ವಸ್ತುಗಳನ್ನು ಮಾರಾಟ ಮಾಡುವ ಕಾರ್ಯವನ್ನು ಸಮಾಜದ ಒಂದು ವಿಶಿಷ್ಟ ವರ್ಗದವರು ನಡೆಸಿಕೊಂಡು ಹೋಗುತ್ತಿದ್ದಿರಬಹುದು. ಆದರೆ ನಗರಗಳಲ್ಲಿರುವ ಮನೆಗಳ ಸಂಯೋಜನೆಯನ್ನು ನೋಡಿದಾಗ ಬಹುಶಃ ವರ್ಗಭೇದ ಇಂದಿನ ಸಮಾಜದಲ್ಲಿ ಇದ್ದಂತಿರಲಿಲ್ಲವೆನಿಸುತ್ತದೆ. ಇನ್ನೊಂದು ಪ್ರಮುಖ ಜವಾಬ್ದಾರಿಯನ್ನು ಹೊತ್ತ ತಂಡ ನಗರ ನಿರ್ಮಲೀಕರಣ ಮಾಡುತ್ತಿದ್ದ ಸಿಬ್ಬಂದಿ. ಮೇಲೆ ತಿಳಿಸಿದಂತೆ ನಗರರಚನೆಯ ಅತಿ ಮುಖ್ಯವಾದ ಅಂಗವೆಂದರೆ ಒಳಚರಂಡಿ ವ್ಯವಸ್ಥೆ. ಈ ವ್ಯವಸ್ಥೆ ಇಲ್ಲದೆಡೆ, ಸ್ನಾನಗೃಹದಿಂದ ಅಥವಾ ಶೌಚಕೂಪದಿಂದ ಹೊರಬಂದ ಬಚ್ಚಲು ನೀರು ಬೀದಿಯಲ್ಲಿ ಹೂತಿಟ್ಟ ಜಾಡಿಯಲ್ಲಿ ಸಂಗ್ರಹವಾಗುತ್ತಿತ್ತು. ನಿಯತಕಾಲಕ್ಕೆ ಸರಿಯಾಗಿ ಅವುಗಳನ್ನು ಸ್ವಚ್ಛ ಮಾಡಲಾಗುತ್ತಿತ್ತು. ಈ ಸಿಬ್ಬಂದಿಯ ಜನರೂ ಇನ್ನುಳಿದವರ ಜೊತೆಗೆ ನಗರದಲ್ಲಿಯೇ ವಾಸಿಸುತ್ತಿದ್ದರೆಂದು ತೋರುತ್ತದೆ.

ಶಿವಲಿಂಗ, ಹರಪ್ಪ

ಧಾರ್ಮಿಕ ಪರಿಸ್ಥಿತಿ: ಹರಪ್ಪ ಮತ್ತು ಮೊಹೆಂಜೋದಾರೊ ನಗರಗಳ ಅವಶೇಷಗಳನ್ನಾಧರಿಸಿ ಜಾನ್ ಮಾರ್ಷಲ್ ಈ ಸಂಸ್ಕೃತಿಯ ಧರ್ಮದ ವಿಷಯವಾಗಿ ಹೇಳಿದ ಅಭಿಪ್ರಾಯ ಇಂದಿಗೂ ಸತ್ಯಕ್ಕೆ ಸಮೀಪವಿದೆಯೆಂದು ತೋರುತ್ತದೆ. ಈ ಎರಡೂ ನೆಲೆಗಳಿಂದ ಕಲ್ಲಿನ ಶಿವಲಿಂಗಗಳಂತೆ ತೋರುವ ಹಾಗೂ ಯೋನಿಪಟ್ಟದಂತಹ ಕಲ್ಲಿನ ಫಲಕಗಳು ದೊರೆತಿವೆ. ಈ ಎರಡೂ ಘಟಕಗಳು ಉತ್ಖನನದಲ್ಲಿ ಬೇರೆ ಬೇರೆಯಾಗಿ ದೊರೆತಿದ್ದ ಕಾರಣ ಕೆಲವು ವಿದ್ವಾಂಸರು ಅವು ಲಿಂಗ ಮತ್ತು ಯೋನಿಪಟ್ಟದ ಪ್ರತೀಕವೆಂದು ಒಮ್ಮತ ತೋರಿಸಿಲ್ಲ. ಆದರೆ ಕಾಲಿಬಂಗನ್‌ನಿಂದ ವರದಿಯಾದ ಸುಟ್ಟಮಣ್ಣಿನ ಯೋನಿಪಟ್ಟ ಸಹಿತ ಶಿವಲಿಂಗ



ಸುಡಾವೆ ಮಣ್ಣಿನ ಮಹಿಷಕೊಂಬಿನ ಆಕೃತಿಗಳು

ಯಾರನ್ನಾದರೂ ಅಚ್ಚರಿಗೊಳಿಸುತ್ತದೆ. ನಿಸ್ಸಂದೇಹವಾಗಿ ಈ ಶಿವಲಿಂಗ ಸಿಂಧೂ–ಸರಸ್ವತಿ ಸಂಸ್ಕೃತಿಯ ಧರ್ಮದಲ್ಲಿ ಶೈವಧರ್ಮದ ಅಸ್ತಿತ್ವವನ್ನು ಸ್ಪಷ್ಟವಾಗಿ ಸಾರುತ್ತದೆ. ಇವುಗಳಲ್ಲದೆ ಮುದ್ರೆಗಳಲ್ಲಿ ಬಹುಶಃ ಮೂರು ಮುಖವುಳ್ಳ, ಯೋಗಮುದ್ರೆಯಲ್ಲಿದ್ದು ಪೀಠಾಸೀನನೂ ಊರ್ಧ್ವಮೇಢ್ರನೂ ಆದ, ತಲೆಯ ಮೇಲೆ ಮಹಿಷಕೊಂಬುಗಳನ್ನುಳ್ಳ ಮಕುಟವನ್ನು ಧರಿಸಿರುವ, ಸುತ್ತಲೂ ಖಡ್ಗಮೃಗ, ಎಮ್ಮೆ, ಆನೆ, ಹುಲಿ ಹಾಗೂ ಜಿಂಕೆಗಳಿಂದಾವೃತವಾದ ವ್ಯಕ್ತಿಯನ್ನು ಜಾನ್ ಮಾರ್ಷಲ್ ಪಶುಪತಿ ಶಿವನೆಂದು ಗುರುತಿಸಿದ್ದಾನೆ. ಕಲ್ಲಿನ ಮತ್ತೊಂದು ಶಿಲ್ಪವನ್ನು

ಶಿವನ ಇನ್ನೊಂದು ರೂಪವಾದ ನಟರಾಜ ಶಿಲ್ಪವಿರಬಹುದೆಂದು ಹೇಳಲಾಗಿದೆ. ಅನೇಕ ಮುದ್ರೆಗಳ ಮೇಲೆ ಕೋಡುಗಳುಳ್ಳ ಮುಕುಟ ಧರಿಸಿದ ವ್ಯಕ್ತಿಗಳು ಪೌರಾಣಿಕ ರೂಪಕಗಳ ಚಿತ್ರಗಳಂತೆ ತೋರುತ್ತವೆ. ಬಹುಶಃ ಅಂದಿನ ಸಮಾಜದಲ್ಲಿ ಪ್ರಚಲಿತವಿದ್ದ ಧಾರ್ಮಿಕ ವಿಷಯಗಳ ನಿದರ್ಶನಗಳಂತಿವೆ. ಪ್ರೌಢ ಸಿಂಧೂ–ಸರಸ್ವತಿ ಸಂಸ್ಕೃತಿಯ ಧಾರ್ಮಿಕ ಸಂಸ್ಕಾರಗಳ ಸಂಕೇತಗಳಂತೆ ಮಹಿಷಕೊಂಬುಗಳನ್ನು ಮಣ್ಪಾತ್ರೆಗಳ ಮೇಲಿನ ವರ್ಣಚಿತ್ರಗಳಲ್ಲಿ ಹಾಗೂ ಮುದ್ರೆಗಳ ಮೇಲಿನ ವ್ಯಕ್ತಿಗಳ ತಲೆಯ ಮೇಲೆ ಕೊರೆದು ಬಿಡಿಸಲಾಗಿದೆ. ಇತ್ತೀಚೆಗೆ ಸುಡಾವೆ ಮಣ್ಣಿನ ಇಂಥ ಸಾಂಕೇತಿಕ ಮಹಿಷಕೊಂಬುಗಳು ಭಿರಡಾಣದಿಂದ ಗಣನೀಯ ಸಂಖ್ಯೆಯಲ್ಲಿ ದೊರೆತಿವೆ. ವಿಭಿನ್ನ ನೆಲೆಗಳಿಂದ ದೊರೆತ ಮಣ್ಣಿನ ಗೊಂಬೆಗಳನ್ನು ಮಾತ್ರ ದೇವತೆಗಳೆಂದು ಪರಿಗಣಿಸಲಾಗಿದೆ. ಕೆಲಮುದ್ರೆಗಳಲ್ಲಿ ವೃಕ್ಷೋಪಾಸನೆ ಸನ್ನಿವೇಶಗಳನ್ನು ಬಿಡಿಸಲಾಗಿದೆ. ಒಂದು ಮುದ್ರೆಯಲ್ಲಿ ಬಿಡಿಸಿದ ನಿಂತ ಏಳು ಸ್ತ್ರೀ ಚಿತ್ರಗಳನ್ನು ಕೆಲವು ವಿದ್ವಾಂಸರು ಸಪ್ತಮಾತೃಕೆಯರೆಂದು ಹೇಳುತ್ತಾರೆ. ಲೋಥಲ್, ಬನಾವಳಿ, ವಿಶೇಷವಾಗಿ ಕಾಲಿಬಂಗನ್‌ನಲ್ಲಿ ಕಂಡುಬಂದ ಕುಂಡಗಳು ಬಹುಶಃ ಯಜ್ಞಕುಂಡಗಳಿರಬಹುದೆಂಬ ಅನುಮಾನವಿದೆ. ಕಾಲಿಬಂಗನ್ ಯಜ್ಞಕುಂಡದಲ್ಲಿ ದೊರೆತ ಪ್ರಾಣಿಗಳ ಸುಟ್ಟ ಎಲುಬುಗಳು ಪಶುಬಲಿ ಸಂಪ್ರದಾಯದ ಸಂಕೇತಗಳೆಂದು ತೋರುತ್ತದೆ. ಪ್ರೌಢ ಸಿಂಧೂ–ಸರಸ್ವತಿಯ ಕಾಲದಲ್ಲಿ, ಹಿಂದುಧರ್ಮದ ವಿಭಿನ್ನ ಮತ-ಸಂಪ್ರದಾಯಗಳ ಪ್ರಾಚೀನ ಹಂತಗಳು ಹಾಗೂ ಸಂಸ್ಕಾರಗಳ ಆವಿಷ್ಕಾರವಾದದ್ದನ್ನು ಕಾಣಬಹುದು.

ಶವಸಂಸ್ಕಾರ: ಸಿಂಧೂ–ಸರಸ್ವತಿ ಸಮಾಜದಲ್ಲಿ ಮಾನವ ಶವಸಂಸ್ಕಾರವನ್ನು ವಿವಿಧ ರೀತಿಯಲ್ಲಿ ಮಾಡುತ್ತಿದ್ದರು. ಸಾಮಾನ್ಯವಾಗಿ ಸ್ಮಶಾನ ಊರಿನ ಪಶ್ಚಿಮ ದಿಶೆಯಲ್ಲಿರುತ್ತಿತ್ತು. ಶವವನ್ನು ಹೂಳುತ್ತಿದ್ದರು. ಆಳವಾದ ಹಾಗೂ ಆಯತಾಕಾರದ ಶವಕುಣಿಗಳ ಅಂಚಿನಲ್ಲಿ ಹಸಿಇಟ್ಟಿಗೆಗಳನ್ನಿಟ್ಟು, ಶವದ ಜೊತೆಗೆ ಬಹುಶಃ ಪರಲೋಕ ಯಾತ್ರೆಯಲ್ಲಿ ಮೃತಾತ್ಮಕ್ಕೆ ಬೇಕೆಂದು ಮಣ್ಪಾತ್ರೆಗಳಲ್ಲಿ ಆಹಾರ, ನೀರನ್ನು ಇಟ್ಟಿರುತ್ತಿದ್ದರು. ಉತ್ತರ–ದಕ್ಷಿಣ ದಿಶೆಯಲ್ಲಿ

ಸಮಾಧಿ, ಧೋಲಾವೀರ

ಅಂಗಾತ ಮಲಗಿಸಿದ ಶವದ ತಲೆ ಉತ್ತರ ದಿಕ್ಕಿನಲ್ಲಿರುತ್ತದೆ. ಕೆಲವು ಗೋರಿಗಳಲ್ಲಿ ಶವದ ಕಾಲುಗಳನ್ನು ಮೇಲಕ್ಕೆ ಮಡಚಿಟ್ಟು ಮಗ್ಗುಲಲ್ಲಿ ಮಲಗಿಸಿರಲಾಗುತ್ತದೆ. ಹರಪ್ಪ ನೆಲೆಯಲ್ಲಿಯ ಗೋರಿಗಳಲ್ಲಿ ವಿಶೇಷ ರೀತಿಯ ಶವಸಂಸ್ಕಾರ ಮಾಡಲಾಗಿತ್ತು. ಇಲ್ಲಿ ಶವಕುಣಿಯಲ್ಲಿ ಮೊದಲು ಪಾತ್ರೆಗಳನ್ನಿಟ್ಟು, ಅವುಗಳನ್ನು ಮಣ್ಣಿಂದ ಮುಚ್ಚಿ ಅನಂತರ, ಅದರ ಮೇಲೆ ಶವಪೆಟ್ಟಿಗೆಯಲ್ಲಿಟ್ಟ ಮೃತದೇಹವನ್ನು ಪೆಟ್ಟಿಗೆಯೊಂದಿಗೆ ಹೂಳಲಾಗಿದೆ. ಮುಚ್ಚಳವಿದ್ದ ಇಂಥ ಮರದ ಶವಪೆಟ್ಟಿಗೆ ಕಾಲಾಂತರದಲ್ಲಿ ಪುಡಿಯಾಗಿ ಹೋಗಿದ್ದು, ಇದರ ಸ್ಥಳದಲ್ಲಿ ಪೆಟ್ಟಿಗೆಯಾಕಾರದ ಕಪ್ಪು ನಿಶಾನೆಯಿತ್ತು. ಶವವನ್ನು ಆಭರಣ ಸಮೇತವಾಗಿ ಹೂಳಲಾಗುತ್ತಿತ್ತು. ಕೆಲವು ಗಂಡಸರ ಶವಗಳ ಎಡಗೈಯಲ್ಲಿ ಕೇವಲ ಶಂಖದ ಬಳೆಗಳು ಹಾಗೂ ಸ್ಟಿಯಟೈಟ್ ಮಣಿಗಳ ಕಾಲಂದಿಗೆ (ರುಳಿ) ಇದ್ದರೆ, ಇತರ ಸ್ತ್ರೀ ಹಾಗೂ ಗಂಡಸರ ಅಸ್ಥಿಪಂಜರಗಳ ಮೇಲೆ ವೈಡೂರ್ಯ, ಕಾರ್ನೇಲಿಯನ್ ಹಾಗೂ ತಾಮ್ರದ ಮಣಿಗಳ ಹಾರಗಳು, ಉಂಗುರಗಳಿರುತ್ತಿದ್ದವು. ಕೆಲವೊಂದು ಶವಗಳ ಜಡೆಯನ್ನು ಸ್ಟಿಯಟೈಟ್ ಮಣಿಗಳ ಗೊಂಚಲುಗಳಿಂದ ಅಲಂಕರಿಸಲಾಗಿತ್ತು. ಕೆಲವು ಗಂಡಸರ ಗೋರಿಗಳಲ್ಲಿ ಕಂಚಿನ ಕನ್ನಡಿಯನ್ನೂ ಇಡಲಾಗಿತ್ತು.

ಕಾಲಿಬಂಗನ್‌ನ ಒಂದು ಗೋರಿಯಲ್ಲಿ ಕೇವಲ ಮೂರು ತಲೆಬುರುಡೆಗಳು ಮತ್ತು ಎಲುಬುಗಳು ಮಾತ್ರ ಕಂಡುಬಂದವು. ಈ ನೆಲೆಯ ಕುಂಭ–ಗೋರಿಗಳು ಹಾಗೂ ಆಯತಾಕಾರದ ಗೋರಿಗಳಲ್ಲಿ ಅಸ್ಥಿ ಅವಶೇಷಗಳು ಇರಲಿಲ್ಲ. ಲೋಥಲ್‌ನಲ್ಲಿ ಒಂದೇ ಶವವಿರುವ ಗೋರಿಗಳಲ್ಲದೆ, ಒಂದೇ ಕುಣಿಯಲ್ಲಿ ಎರಡು ಶವಗಳಿದ್ದ ಎರಡು ಗೋರಿಗಳನ್ನು ಬೆಳಕಿಗೆ ತರಲಾಗಿದೆ. ಒಂದು ಗೋರಿಯ ಕುಣಿಯ ಅಂಚಿನ ಸುತ್ತಲೂ ಹಸಿಇಟ್ಟಿಗೆಗಳನ್ನಿಡಲಾಗಿತ್ತು. ಶವವನ್ನು ಉತ್ತರ–ದಕ್ಷಿಣ ದಿಶೆಯಲ್ಲಿ ಮಲಗಿಸಲಾಗಿದ್ದು, ಶವದ ಮುಖ ಪೂರ್ವ ದಿಶೆಯೆಡೆ ತಿರುಗಿಸಿಟ್ಟಂತೆ ಇದೆ. ಜೋಡಿ ಶವಗಳುಳ್ಳ ಲೋಥಲ್ ಗೋರಿಯನ್ನು ಕುರಿತಾಗಿ ಸತಿ ಸಹಗಮನಪದ್ಧತಿ ಅಥವಾ ಇನ್ನಾವುದಾದರೂ ಬೇರೆ ಸಂಪ್ರದಾಯವಿರಬಹುದೆಂದು ಅಭಿಪ್ರಾಯಗಳಿವೆ. ಕೆಲವೊಂದು ಗೋರಿಗಳಲ್ಲಿ ಪ್ರಾಣಿಗಳ ಅಸ್ಥಿ ಅವಶೇಷಗಳೂ ಇದ್ದವು. ಧೋಲಾವೀರದಲ್ಲಿ ಬೆಳಕಿಗೆ ತಂದ ಗೋರಿಗಳ ರಚನಾಕ್ರಮ ಸಮಕಾಲೀನ ಗೋರಿಗಳಿಗಿಂತ ಭಿನ್ನವಾಗಿದೆ. ಶವವನ್ನು ಹೂಳುತ್ತಿದ್ದರು. ಅಂಥ ಶವಕುಣಿಯಂಚಿನಲ್ಲಿ ಹಳದಿ ಬಣ್ಣದ ಸುಣ್ಣಕಲ್ಲುಗಳನ್ನಿಡಲಾಗಿದೆ. ಬಹುಶಃ ಇಂಥ ಕಲ್ಲುಚಪ್ಪಡಿಗಳುಳ್ಳ ಕುಣಿಯ ಮೇಲೆ ಮೇಲ್ಚಪ್ಪಡಿ ಕಲ್ಲೂ ಇದ್ದಿರಬಹುದೆಂದು ಊಹಿಸಲಾಗಿದೆ. ಇನ್ನೊಂದು ಗೋರಿಯ ಒಳ ವಿನ್ಯಾಸ ಐತಿಹಾಸಿಕ ಕಾಲದ ಅರೆಗಳುಳ್ಳ ಬೌದ್ಧ ಸ್ತೂಪದ ರಚನೆಯಂತೆ ಇರುವುದು ಆಶ್ಚರ್ಯಕರ ಸಂಗತಿಯಾಗಿದೆ. ಇಂಥ ಸ್ತೂಪದ ಉಗಮ ಪ್ರೌಢ ಹರಪ್ಪ ಕಾಲದಲ್ಲಿ ಪ್ರಾರಂಭವಾಯಿತು ಎಂಬ ಜಿಜ್ಞಾಸೆ ವಿದ್ವಾಂಸರಲ್ಲಿ ಮೂಡಿದೆ. ಒಂದು ಗೋರಿಯ ಒಳಭಾಗವನ್ನು ನುಣುಪಾದ ಬೂದುಬಣ್ಣದ ಮಣ್ಣಿನಿಂದ ಸಾರಿಸಿ ಅದರ ಮೇಲೆ ಕೆಮ್ಮಣ್ಣಿನ ತೆಳು ಲೇಪನ ಮಾಡಲಾಗಿತ್ತು. ಆದರೆ ಈ ಗೋರಿಯಲ್ಲಿ ಅಸ್ಥಿ ಅವಶೇಷಗಳಿರಲಿಲ್ಲ. ಬಹುಶಃ ಇಂಥ ಗೋರಿಗಳು ಮೃತ ವ್ಯಕ್ತಿಯ ಶವ ದೊರೆಯದಿದ್ದಾಗ, ಸಾಂಕೇತಿಕವಾಗಿ ಸಂಸ್ಕಾರಗಳನ್ನು ಆಚರಿಸಿದ ಕುರುಹುಗಳಾಗಿರಬಹುದು. ಶವವನ್ನು ಹೂಳುವ ಪದ್ಧತಿಯಲ್ಲದೆ, ಸುಡುವ ಹಾಗೂ ಇನ್ನಿತರ ಶವಸಂಸ್ಕಾರ ಪದ್ಧತಿಗಳೂ ಪ್ರಾಯಶಃ ಇದ್ದಿರಬೇಕು.

ಈ ಕಾಲದ ಮಾನವ ಅಸ್ಥಿಪಂಜರಗಳ ಅಧ್ಯಯನ ಮಾಡಿದ ತಜ್ಞರ ಅನಿಸಿಕೆಯಂತೆ ಸಿಂಧೂ–ಸರಸ್ವತಿ ವ್ಯಾಪ್ತಿ ಕ್ಷೇತ್ರದ ಇಂದಿನ ಜನರೇ ಸಿಂಧೂ–ಸರಸ್ವತಿ ಸಂಸ್ಕೃತಿ ಜನರ ವಂಶಜರಾಗಿದ್ದಾರೆ. ವಿವಿಧ ಭೌಗೋಳಿಕ ಪರಿಸ್ಥಿತಿಗಳಿಂದಾಗಿ ಸ್ಥಳೀಯ ಆಚಾರ–ವಿಚಾರಗಳಲ್ಲಿ ಕೆಲವು ವ್ಯತ್ಯಾಸಗಳಿದ್ದಾಗ್ಯೂ ಎಲ್ಲರೂ ಒಂದೇ ಸಾಂಸ್ಕೃತಿಕ ಸಂಪ್ರದಾಯದವರಾಗಿದ್ದಾರೆಂಬುದು ನಿರ್ವಿವಾದದ ವಿಷಯ. ಅಲ್ಲದೆ ಅಸ್ಥಿಪಂಜರಗಳ ಅಧ್ಯಯನದಿಂದ ಆ ಕಾಲದಲ್ಲಿ ರೋಗಗಳ ಬಗ್ಗೆಯೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅವನತಿ: ನಗರ ನಾಗರಿಕತೆಯ ಉಚ್ಛ್ರಾಯ ಸ್ಥಿತಿಯನ್ನು ತಲುಪಿದ ಸಿಂಧೂ–ಸರಸ್ವತಿ ಸಂಸ್ಕೃತಿ ಕಾಲದ ನಿಯಮದಂತೆ ಅವನತಿ ಹೊಂದಿತು. ಇದುವರೆಗೂ ಇಂತಹುದೇ ನಿರ್ದಿಷ್ಟ ಕಾರಣಗಳಿಂದಾಗಿ ಈ ಸಂಸ್ಕೃತಿ ನಿರ್ನಾಮವಾಯಿತೆಂದು ಹೇಳಲು ಆಗಿಲ್ಲ. ವಿದ್ವಾಂಸರು ಹಲವು ವಿಭಿನ್ನ ಕಾರಣಗಳನ್ನೊಡ್ಡಿದ್ದಾರೆ. ಈ ದಿಶೆಯಲ್ಲಿ ಪ್ರಥಮ ಬಾರಿಗೆ ಮಾರ್ಟಿಮರ್ ವೀಲರ್ ಆರ್ಯರ ಆಕ್ರಮಣದಿಂದಾಗಿ ಹರಪ್ಪ ಸಂಸ್ಕೃತಿ ನಶಿಸಿತೆಂಬ ಅಭಿಪ್ರಾಯ ವ್ಯಕ್ತಪಡಿಸಿದ. ಈತ 1946ರಲ್ಲಿ ನಡೆಸಿದ ಹರಪ್ಪ ನೆಲೆಯ ಉತ್ಖನನದಲ್ಲಿ ಕಂಡುಬಂದ ಮೂರನೆಯ ಹಂತದ ದುರ್ಗದ ಪ್ರವೇಶದ್ವಾರಗಳಲ್ಲಿ ಒಂದನ್ನು ಗೋಡೆಕಟ್ಟಿ ಪೂರ್ತಿಯಾಗಿ ಮುಚ್ಚಲಾಗಿದ್ದರೆ, ಇನ್ನೊಂದರ ಎದುರಿಗೆ ನೇರ ಪ್ರವೇಶವನ್ನು ತಡೆಯುವ ಇನ್ನೊಂದು ಅಡ್ಡ ಗೋಡೆಯನ್ನು ಕಟ್ಟಲಾಗಿತ್ತು. ಸುರಕ್ಷಾ ದ್ವಾರಗಳಲ್ಲದೆ ಇಂಥ ಬದಲಾವಣೆಗಳು ಹರಪ್ಪ ಸಮಾಜದಲ್ಲಿ ಉಂಟಾದ ಅಭದ್ರತೆಯ ಭಾವನೆಗಳನ್ನು ಪ್ರತಿಬಿಂಬಿಸುತ್ತವೆ ಎಂದು ಈತ ವಾದಿಸಿದ್ದಾನೆ. ಋಗ್ವೇದದಲ್ಲಿ ಉಲ್ಲೇಖಿಸಿದ ವೈದಿಕ ಪರಂಪರೆಯ ದೇವತೆ ಇಂದ್ರನನ್ನು ಪುರಂದರ ಎಂದು ಸಂಬೋಧಿಸಿದ ಬಿರುದನ್ನು ಆಧರಿಸಿ ವೀಲರ್ ಆಕ್ರಮಣಕಾರಿ ಆರ್ಯರ ಇಂದ್ರನೇ ಕೋಟೆಯುಕ್ತ ಹರಪ್ಪ ಸಂಸ್ಕೃತಿಯ ನಗರಗಳನ್ನು ಧ್ವಂಸಮಾಡಿದನೆಂದು ತನ್ನ ವಾದವನ್ನು ಪ್ರತಿಪಾದಿಸಿದ್ದಾನೆ. ಮೊಹೆಂಜೋದಾರೊ ನೆಲೆಯ ವಿಭಿನ್ನ ಸ್ತರಗಳಿಂದ ದೊರೆತ ಮಾನವ ಅಸ್ಥಿಪಂಜರಗಳೆಲ್ಲ ಆಕ್ರಮಣಕಾರಿ ಆರ್ಯರಿಂದ ಕಗ್ಗೊಲೆಗೀಡಾದ ಹರಪ್ಪ ಸಂಸ್ಕೃತಿಯ ಜನರನ್ನು ಪ್ರತಿನಿಧಿಸುತ್ತವೆಯೆಂದು ತನ್ನ ವಾದಕ್ಕೆ ಪುರಾತಾತ್ತ್ವಿಕ ಪುರಾವೆಯ ಮೆರುಗನ್ನು ನೀಡಿದ್ದಾನೆ. ಅಂತ್ಯದಲ್ಲಿ ಹರಪ್ಪ ಸಂಸ್ಕೃತಿಯ ನಗರಗಳ ನಾಶಕ್ಕೆ ಇಂದ್ರನೇ ದೋಷಿಯೆಂದು ವೀಲರ್ ನಿರ್ದಾಕ್ಷಿಣ್ಯವಾಗಿ ಆರೋಪಿಸಿದ. ಋಗ್ವೇದವನ್ನು ಕುರಿತಾಗಿ ಮ್ಯಾಕ್ಸ್‌ಮುಲರ್ ಹೇಳಿದ ಕಾಲಮಾನದಂತೆ ಅನೇಕ ವಿದ್ವಾಂಸರು ಋಗ್ವೇದದ ಸಂಕಲನ ಕಾಲವನ್ನು ಪ್ರ.ಶ.ಪೂ.ಸು.15ನೆಯ ಶತಮಾನವೆಂದು ನಂಬಿದ್ದೊಂದೇ ಅಲ್ಲದೆ, ಇದೇ ಕಾಲದಲ್ಲಿ ಹರಪ್ಪ ಸಂಸ್ಕೃತಿ ಸಂಪೂರ್ಣ ಪತನ ಹೊಂದಿತೆಂದೂ ನಿಷ್ಕರ್ಷಿಸಿದ್ದಾರೆ. ಹರಪ್ಪ ನೆಲೆಯ ಮೇಲ್ಭಾಗದಿಂದ ದೊರೆತ ಅಂತ್ಯ ಹರಪ್ಪ ಕಾಲವನ್ನು ಪ್ರತಿನಿಧಿಸುವ ಸಿಮೆಟ್ರಿ–ಎಚ್ ಮಣ್ಪಾತ್ರೆಗಳು ಹಾಗೂ ಅವುಗಳೊಂದಿಗಿನ ಅವಶೇಷಗಳು ಆಕ್ರಮಣಕಾರಿ ಆರ್ಯರ ಪುರಾತಾತ್ತ್ವಿಕ ಅವಶೇಷಗಳೆಂದೂ ಊಹಿಸಿದ್ದಾರೆ. ವೀಲರ್‌ನ ಹೇಳಿಕೆಗಿಂತಲೂ ಮುಂಚೆ ಜಾನ್ ಮಾರ್ಷಲ್ ಸಿಂಧೂ–ಸರಸ್ವತಿ ಸಂಸ್ಕೃತಿ ಪ್ರಾಗ್ವೈದಿಕ ಹಾಗೂ ವೈದಿಕೇತರ ಸಂಸ್ಕೃತಿಯೆಂದು ಅಭಿಪ್ರಾಯ ಪಟ್ಟಿದ್ದ. ಈ ವಿಚಾರಧಾರೆಯ ಮುಂದಿನ ಸರಣಿಯೇ ವೀಲರ್ ಮಂಡಿಸಿದ ವಾದ. ಇನ್ನೂ ಕೆಲವು ವಿದ್ವಾಂಸರು ಕೆಲವೊಂದು ನೆಲೆಗಳಲ್ಲಿ ಬೆಳಕಿಗೆ ಬಂದ ಪ್ರೌಢ ಹರಪ್ಪ ಹಾಗೂ ಅಂತ್ಯ ಹರಪ್ಪ ಕಾಲದ ಸ್ತರಗಳ ಮಧ್ಯದಲ್ಲಿಯ ಸುಟ್ಟು

ಹೋದ ಸ್ತರ ಹಾಗೂ ಕೆಲವೊಂದು ಪಶ್ಚಿಮ ಏಷ್ಯ ಸಂಬಂಧಿತ ಅವಶೇಷಗಳನ್ನು ಆರ್ಯರ ಆಕ್ರಮಣದ ಕುರುಹುಗಳಾಗಿ ಅರ್ಥೈಸಿದ್ದಾರೆ. ವೀಲರ್‌ನ ಹರಪ್ಪ ನೆಲೆಯ ಉತ್ಖನನವನ್ನು ಪುನರ್ ಪರಿಶೀಲಿಸಿ, ಪ್ರೌಢ ಹರಪ್ಪ ಸಂಸ್ಕೃತಿ ಹಾಗೂ ಸಿಮೆಟ್ರಿ–ಎಚ್‌ಗಳ ನಡುವೆ ಎರಡೂ ಹಂತಗಳನ್ನು ಬೇರ್ಪಡಿಸುವ ಭಗ್ನಾವಶೇಷಗಳಿರುವುದರಿಂದ ಸಿಮೆಟ್ರಿ–ಎಚ್ ಕರ್ತೃಗಳು ಹರಪ್ಪ ಸಂಸ್ಕೃತಿಯ ಅವನತಿಗೆ ನೇರ ಜವಾಬ್ದಾರರಾಗಿರಲಿಕ್ಕಿಲ್ಲ ಎಂದು ಬಿ.ಬಿ.ಲಾಲ್ ವಾದಿಸಿದ್ದಾರೆ. ಇದೇ ದಿಶೆಯಲ್ಲಿ ಜಿ.ಎಫ್.ಡೇಲ್ಸ್ ಕೂಡ ಮೊಹೆಂಜೋದಾರೊ ನೆಲೆಯ ವಿಭಿನ್ನ ಹಂತಗಳ ಸ್ತರಗಳಲ್ಲಿ ದೊರೆತ ಅಸ್ಥಿಪಂಜರಗಳು ಆಕ್ರಮಣ ಕಾಲದಲ್ಲಿ ಮೃತರಾದವರ ದ್ದಲ್ಲವೆಂದು ಎತ್ತಿ ತೋರಿಸಿದ್ದಾರೆ. ಒಂದು ವೇಳೆ ಆಕ್ರಮಣದಿಂದ ಮೃತರಾಗಿದ್ದರೆ ಶವಗಳೆಲ್ಲಾ ಒಂದೇ, ಅದೂ ಮೇಲಿನ ಹಂತ ಹಾಗೂ ಸ್ತರಗಳಿಂದ ಸಿಗಬೇಕಾಗಿತ್ತು. ಅಸ್ಥಿಪಂಜರಗಳ ಅಧ್ಯಯನದಿಂದ ಕಂಡುಬಂದ ಆಶ್ಚರ್ಯಕರ ಅಂಶವೆಂದರೆ ಕೆಲವರಲ್ಲಿ ಸಾವಿಗೆ ಮುಂಚೆಯೇ ಎಲುಬಿನ ಗಾಯಗಳು ಗುಣವಾಗಿದ್ದವು! ಯುದ್ಧದಲ್ಲಿ ತೀವ್ರ ಗಾಯಗೊಂಡವರು ತಕ್ಷಣವೇ ಮೃತರಾಗುತ್ತಾರೆ. ಅಲ್ಲದೆ ಶವಗಳು ದೊರಕಿದ ಸ್ಥಳಗಳಲ್ಲಿ ಧಾಳಿಯನ್ನು ಸೂಚಿಸುವ ಯಾವುದೇ ಅವಶೇಷಗಳು ದೊರಕಿಲ್ಲ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜಿ.ಎಫ್.ಡೇಲ್ಸ್ ಮೊಹೆಂಜೋದಾರೊ ಕಗ್ಗೊಲೆ ಕಾಲ್ಪನಿಕ ಸಿದ್ಧಾಂತ ಎಂದಿದ್ದಾನೆ. ಆರ್ಯರ ಇಂದ್ರ ದೋಷಮುಕ್ತ ಎಂದು ಲಾಲ್ ನುಡಿದಿದ್ದಾರೆ. ಅನಾದಿಕಾಲದಿಂದಲೂ ಸಿಂಧೂ–ಸರಸ್ವತಿ ಸಂಸ್ಕೃತಿ ವ್ಯಾಪ್ತಿ ಕ್ಷೇತ್ರ ಹಾಗೂ ದಕ್ಷಿಣ ಮಧ್ಯ ಏಷ್ಯ ಪ್ರದೇಶಗಳು ಪರಸ್ಪರ ಸಂಬಂಧ ಬೆಳೆಸಿಕೊಂಡಿದ್ದವು. ಆದ್ದರಿಂದ ಈ ಪ್ರಾಂತಗಳಿಂದ ದೊರೆತ ವಿಭಿನ್ನ ಸಂಸ್ಕೃತಿಗಳ ಅವಶೇಷಗಳನ್ನು ಕಾಲಾಂತರದಿಂದ ನಡೆದು ಬಂದ ಸಾಂಪ್ರದಾಯಿಕ ಸಂಬಂಧದ ಕುರುಹುಗಳು ಎಂದು ತಿಳಿಯಬೇಕೇ ವಿನಃ ಇವು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ವಲಸೆ ಬಂದ ಜನಾಂಗದ ಸಂಕೇತವೆಂದಲ್ಲ.

ಋಗ್ವೇದದಲ್ಲಿ ಪ್ರಸಿದ್ಧಿ ಪಡೆದ ಸರಸ್ವತಿ ನದಿ ಲುಪ್ತವಾಗಿ ಬತ್ತಿಹೋದ ಅದರ ಪಾತ್ರವನ್ನು ಭಿನ್ನ ಭಿನ್ನ ಪ್ರಾಂತದಲ್ಲಿ ಭಿನ್ನ ಹೆಸರಿನಲ್ಲಿ ಕರೆಯುತ್ತಾರೆ. ಪಾಕಿಸ್ತಾನದ ಚೋಲಿಸ್ತಾನ ಪ್ರದೇಶದಲ್ಲಿ ಬತ್ತಿಹೋದ ಸರಸ್ವತಿ ಭಾಗವನ್ನು ಹಾಕ್ರ ನದಿಯೆಂದು ಕರೆಯುತ್ತಾರೆ. ಈ ನದಿಯ ಸುತ್ತಮುತ್ತಲಿನ ಪ್ರದೇಶವನ್ನು ಅನ್ವೇಷಿಸಿ ಪತ್ತೆ ಹಚ್ಚಿದ ವಿಶಿಷ್ಟ ಲಕ್ಷಣಗಳುಳ್ಳ ಮಣ್ಪಾತ್ರೆಗಳ ಸಮೂಹಕ್ಕೆ ರಫೀಕ್‌ಮುಗಲ್ ಹಾಕ್ರ ಮಣ್ಪಾತ್ರೆ ಸಂಸ್ಕೃತಿ ಎಂದು ಕರೆದರು. ತದನಂತರ ಪಾಕಿಸ್ತಾನದಲ್ಲಿರುವ ಜಲೀಲಪುರದ ಉತ್ಖನನದಲ್ಲಿ ಹಾಕ್ರ ಮಣ್ಪಾತ್ರೆ ಸಂಸ್ಕೃತಿ ಆದಿ ಹರಪ್ಪ ಸ್ತರಗಳ ಕೆಳಗಿನ ಸ್ತರಗಳಲ್ಲಿ ದೊರೆತ ಕಾರಣ, ಹಾಕ್ರ ಸಂಸ್ಕೃತಿಯ ಜನರು ಆದಿ ಹರಪ್ಪ ಜನರ ಪೂರ್ವಜರಾಗಿದ್ದರು. ಲುಪ್ತ ಸರಸ್ವತಿಯ ತಟದಲ್ಲಿರುವ ಭಿರಡಾಣ ಉತ್ಖನನದಲ್ಲಿ ಇದನ್ನು ದೃಢೀಕರಿಸಲಾಗಿದೆ. ಈ ಪ್ರಕಾರವಾಗಿ ಸಿಂಧೂ–ಸರಸ್ವತಿ ಸಂಸ್ಕೃತಿಯ ಉಗಮಕ್ಕೂ ಪೂರ್ವದಲ್ಲಿಯೇ ಅಂದರೆ ಹಾಕ್ರ ಸಂಸ್ಕೃತಿಯ ಕಾಲದಲ್ಲಿ, ಆರ್ಯರು ಸರಸ್ವತಿ ಬಯಲಿಗೆ ವಲಸೆ ಬಂದಿದ್ದರೆಂದು ಒಂದು ವಿದ್ವಾಂಸರ ತಂಡ ವಾದವನ್ನು ಮುಂದೊಡ್ಡಿದೆ. ಅಂದರೆ ವೈದಿಕ ಸಂಸ್ಕೃತಿ ಹರಪ್ಪ ಸಂಸ್ಕೃತಿಗಿಂತಲೂ ಹಳೆಯದ್ದಾಗಿದೆ ಎಂದು ವಾದಿಸಿದಂತಾಯಿತು. ಇದಕ್ಕೆ ತದ್ವಿರುದ್ಧವಾಗಿ ಸಿಂಧೂ–ಸರಸ್ವತಿ ಸಂಸ್ಕೃತಿಯ ಅವನತಿ ಕಾಲದಲ್ಲಿ ಮಧ್ಯ ಏಷ್ಯದಿಂದ ಆರ್ಯರು ವಲಸೆ ಬಂದರೆಂದು ಇನ್ನೊಂದು ವಿದ್ವಾಂಸರ ತಂಡ ವಾದಿಸಿದೆ. ಇತ್ತೀಚೆಗೆ ಸಂಶೋಧಿಸಿದ ಮಧ್ಯ ಏಷ್ಯ ಭಾಗದ ಕೆಲವು ಸಂಸ್ಕೃತಿಗಳು ಸಿಂಧೂ–ಸರಸ್ವತಿ ಸಂಸ್ಕೃತಿಯ ಅವನತಿ ಹಾಗೂ ಅದರ ಮುಂದಿನ ರೂಪಾಂತರ ಪರಿಸ್ಥಿತಿಗೆ ಮಹತ್ತ್ವಪೂರ್ಣ ಭೂಮಿಕೆಯನ್ನು ನಿರ್ವಹಿಸಿದೆ ಎನ್ನುವುದೇ ಈ ಎರಡನೆಯ ವಾದದ ತಾತ್ಪರ್ಯ. ಪ್ರ.ಶ.ಪೂ.ಸು.2000 ಹಾಗೂ ಪ್ರ.ಶ.ಪೂ.1750ರ ಮಧ್ಯಾವಧಿಯಲ್ಲಿ ತುರ್ಕಮೆನಿಸ್ತಾನದ ಮಾರ್ಜಿಯಾನ ಪ್ರಾಂತ ಹಾಗೂ ಉತ್ತರ ಅಫ್ಘಾನಿಸ್ತಾನದ ಪೂರ್ವಬ್ಯಾಕ್ಟ್ರಿಯ ಭಾಗದಲ್ಲಿದ್ದ ಸಾಂಸ್ಕೃತಿಕ ಅವಶೇಷಗಳನ್ನು ಸಂಯುಕ್ತವಾಗಿ ಬ್ಯಾಕ್ಟ್ರಿಯಾನ–ಮಾರ್ಜಿಯಾನ ಪುರಾತಾತ್ತ್ವಿಕ ಸಂಕೀರ್ಣ ಎಂದು ಗುರುತಿಸಲಾಗಿದೆ. ಈ ಸಂಸ್ಕೃತಿಯ ಕೆಲವೊಂದು ಅವಶೇಷಗಳು ಮೊಹೆಂಜೋದಾರೊ ಸಿಂಧೂ–ಸರಸ್ವತಿಯ ಕೆಲವು ನೆಲೆಗಳಿಂದ ವರದಿಯಾಗಿದೆ. ಇಂಥ ಬಿಡಿ ಬಿಡಿಯಾಗಿ ದೊರೆತ ಅವಶೇಷಗಳನ್ನು ಈ ಎರಡು ಸಂಸ್ಕೃತಿಗಳ ನಡುವಿನ ಪರಸ್ಪರ ಸಂಬಂಧದ ನಿಶಾನೆಗಳೆಂದು ತಿಳಿಯಬೇಕಾಗುತ್ತದೆ.

ಈ ಸಂಸ್ಕೃತಿಯ ಇಳಿಮುಖಕ್ಕೆ ಸಿಂಧೂ ನದಿಯಲ್ಲಿ ಬರುತ್ತಿದ್ದ ಮಹಾಪೂರವೇ ಕಾರಣವೆಂದು ಪ್ರಥಮ ಬಾರಿಗೆ ವಾದ ಮಾಡಿದವನು ಇ.ಜೆ.ಮ್ಯಾಕೆ. ಅನಂತರ ಸಿಂಧೂ ನದಿಯ ಕೆಳದಂಡೆಯ ಪ್ರದೇಶದಲ್ಲಿರುವ ಬುಧಟಕ್ಕರ್ ಮತ್ತು ಝಿಲಕ್ ಮೊರಡಿಗಳ ಮೇಲೆ ಶಂಖಮಿಶ್ರಿತ ನೆರೆಮಣ್ಣನ್ನು ಪತ್ತೆ ಹಚ್ಚಿದ ಎಂ.ಆರ್.ಸಾಹನಿಯವರು ವಾದ ಮಾಡಿದಂತೆ ಸಾಮಾನ್ಯ ಮಹಾಪೂರದ ಪಾತ್ರಕ್ಕಿಂತಲೂ ಎತ್ತರದ ಮೊರಡಿಗಳ ಮೇಲೆ ಸಿಹಿನೀರ ಸಂಚಯವಾಗಬೇಕಾದರೆ ಅತಿ ಭಯಾನಕ ಮಹಾಪೂರವಿದ್ದಿರಬೇಕು. ಬಹುಶಃ ಭೂಕಂಪನದಿಂದಾಗಿ ಸಿಂಧೂ ನದಿಯ ಮಾರ್ಗ ತಡೆಗಟ್ಟಿದಾಗ ಇಂಥ ಮಹಾಪೂರ ಹುಟ್ಟಿರಬೇಕು ಅಥವಾ ಪಂಜಾಬ್‌ನ ಎಲ್ಲಾ ನದಿಗಳಲ್ಲಿ ಒಂದೇ ಸಮಯದಲ್ಲಿ ಮಹಾಪೂರಗಳು ಹುಟ್ಟಿ, ಸಿಂಧೂ ನದಿಯಲ್ಲಿ ತೀವ್ರವಾದ ಮಹಾಪೂರವಾಗಿ ಈ ಸಂಸ್ಕೃತಿಯ ನೆಲೆಗಳು ಹಾಳಾಗಿರಬಹುದು. ಲೋಥಲ್ ನೆಲೆಯ ಪ್ರತಿಹಂತದ ಕೊನೆಯಲ್ಲಿ, ವಿಶೇಷವಾಗಿ 4ನೆಯ ಹಂತದ ಕಾಲದಲ್ಲಿ ಬಂದ ಮಹಾಪೂರದಿಂದ ನಗರ ಮತ್ತು ಬಂದರು ಕಟ್ಟೆ ಸಂಪೂರ್ಣವಾಗಿ ಹಾಳಾಯಿತು. ಮಹಾಪೂರ ವಾದದ ಹಿನ್ನೆಲೆಯಲ್ಲಿ ಮೊಹೆಂಜೋದಾರೊ ನೆಲೆಯನ್ನು ಸಂಶೋಧಿಸಿದ ಆರ್.ಎಲ್.ರೈಕ್ಸ್‌ನ ಅಭಿಪ್ರಾಯ ಹೀಗಿದೆ: ಸಿಂಧೂ ನದಿಯ ಮೈದಾನ ಭಾಗದಲ್ಲಿ ಸು.21 ಮೀ ಮೆಕ್ಕಲುಮಣ್ಣಿದೆ. ಸಿಂಧೂ ನದಿಯ ಕೇವಲ ವಾರ್ಷಿಕ ಮಹಾಪೂರ ದಿಂದ ಇಷ್ಟೊಂದು ಮೆಕ್ಕಲುಮಣ್ಣು ಶೇಖರವಾಗುವುದು ಸಾಧ್ಯವಿಲ್ಲ. ಬಹುಶಃ ಮೊಹೆಂಜೋದಾರೊ ನೆಲೆಯ ದಕ್ಷಿಣ ಭಾಗದ ಭೂರಚನೆಯಲ್ಲಿ ನೆಲದುಬ್ಬರದಿಂದ ಅಡ್ಡಗೋಡೆ ಹುಟ್ಟಿಕೊಂಡಾಗ, ಹಿಂಭಾಗದಲ್ಲುಂಟಾದ ತಗ್ಗು ಪ್ರದೇಶದಲ್ಲಿ ಸಿಂಧೂ ನದಿಯ ನೀರಿನ ಸರೋವರ ರಚನೆಯಾಗಿರಬೇಕು. ನದಿಯ ಪಾತ್ರದಲ್ಲಾದ ಮಣ್ಣಿನ ಈ ಅಡ್ಡ ಗೋಡೆಯಡಿಯಿಂದ ನೀರು ಒಳಹೊಕ್ಕು ಹರಿದು ಹೋದಾಗ ಮೊಹೆಂಜೋದಾರೊ ಹಾಗೂ ಇತರ ಅನೇಕ ನೆಲೆಗಳು ಉಳಿದ ಮೆಕ್ಕಲು ಮಣ್ಣಿನಿಂದ ಆವೃತಗೊಂಡಿರಬಹುದು. ಇಂಥ ಸಮಸ್ಯೆಯಿಂದಾಗಿ ನಿವಾಸಿಗಳು ನೆಲೆಗಳನ್ನು ತ್ಯಜಿಸಿ ಹೋಗಿರಬಹುದು. ಈ ವಾದವನ್ನು ಗಹನವಾಗಿ ವಿಮರ್ಶೆ ಮಾಡಿ ಎಚ್.ಟಿ.ಲ್ಯಾಂಬ್ರಿಕ್ ತನ್ನದೇ ಆದ ಊಹೆಯನ್ನು ಈ ರೀತಿಯಾಗಿ ಹೇಳಿದ. ಮೊದಲಿಗೆ ಸಿಂಧೂ ನದಿಯ ಪಾತ್ರ ಮೊಹೆಂಜೋದಾರೊ ನೆಲೆಗೆ ಸಮೀಪದಲ್ಲಿತ್ತು. ಕಾಲಾಂತರದಲ್ಲಿ ನದಿಯ ಪಾತ್ರ ಪೂರ್ವ ದಿಶೆಯ ಕಡೆಗೆ ಸರಿಯುತ್ತಾ




ಹೋದ ಕಾರಣದಿಂದಾಗಿ ಮೊಹೆಂಜೋದಾರೊ ನಿವಾಸಿಗಳು ತಮ್ಮ ಊರನ್ನು ತ್ಯಜಿಸಿರಬೇಕು. ಈ ಕಾರಣ ಸಂಭವನೀಯವಾಗಿರಬಹುದೆಂದು ಕೆಲವು ವಿದ್ವಾಂಸರು ಒಪ್ಪಿದ್ದಾರೆ.

ಮೊಹೆಂಜೋದಾರೊದಂಥ ನಗರದ ನಿರ್ಮಾಣಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಸುಟ್ಟ ಇಟ್ಟಿಗೆಗಳನ್ನು ತಯಾರಿಸಲು, ನೆಲೆಯ ಸುತ್ತ ಮುತ್ತಲಿನ ಅರಣ್ಯವನ್ನು ಕಡಿದು ಸೌದೆಯಾಗಿ ಉಪಯೋಗಿಸಿದ್ದರಿಂದ, ಅರಣ್ಯ ಸಂಪತ್ತು ಹಾಳಾಗಿ ಹೋಗಿರಬೇಕು. ಈ ಕಾರಣದಿಂದಲೂ ಮೊಹೆಂಜೋದಾರೊ ನಗರವನ್ನು ಜನರು ತ್ಯಜಿಸಿರಬೇಕೆಂದು ಮಾರ್ಟಿಮರ್ ವೀಲರ್‌ನ ಅಭಿಪ್ರಾಯವಾಗಿದೆ. ಆದರೆ ಈ ವಿಚಾರಕ್ಕೆ ಹೆಚ್ಚು ಪುಷ್ಟಿ ದೊರೆತಿಲ್ಲ.

ಸಿಂಧೂ –ಸರಸ್ವತಿ ಸಂಸ್ಕೃತಿಯ ಅವನತಿಗೆ ಇನ್ನೊಂದು ಪ್ರಬಲವಾದ ಕಾರಣವೆಂದರೆ ಸರಸ್ವತಿ ನದಿಯ ಬತ್ತುವಿಕೆ. ಈ ನದಿಯ ತೀರದಲ್ಲಿ ಬೆಳೆದು ನಿಂತ ನೂರಾರು ನೆಲೆಗಳಲ್ಲಿ ಜನ ಸಮುದಾಯಗಳು ನೀರಿನ ಅಭಾವದಿಂದ ಉಂಟಾದ ಭೀಕರ ಪರಿಸ್ಥಿತಿಯನ್ನು ಎದುರಿಸ ಬೇಕಾಯಿತು. ನದಿಯ ನೀರು ಬತ್ತುವ ಕ್ರಿಯೆ ಥಟ್ಟನೆ ಆದ ಘಟನೆಯಲ್ಲ. ಮೊದಲನೆಯದಾಗಿ ಈ ಕ್ರಿಯೆ ಯಾವ ಕಾರಣಗಳಿಂದ ಪ್ರಾರಂಭವಾಯಿತು, ವಿಭಿನ್ನ ಪ್ರಾಂತಗಳಲ್ಲಿ ಯಾವ ಯಾವ ಕಾಲದಲ್ಲಿ ಬತ್ತುವಿಕೆಯ ಪರಿಸ್ಥಿತಿಯನ್ನು ಜನರು ಎದುರಿಸಬೇಕಾಯಿತು, ಯಾವ ಸಮಯದಲ್ಲಿ ಸರಸ್ವತಿ ನದಿ ಸಂಪೂರ್ಣವಾಗಿ ಬತ್ತಿ ಹೋಯಿತು ಮುಂತಾದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಪಡೆಯುವ ಸಂಶೋಧನೆಗಳು ನಡೆಯುತ್ತಿವೆ. ಸರಸ್ವತಿ ನದಿ ಬತ್ತಿದ ಕ್ರಿಯೆ ಒಂದು ಸತ್ಯ ಘಟನೆ. ಆದರೆ ಸರಸ್ವತಿ ನದಿಯ ತಟದಲ್ಲಿ ಸಿಂಧೂ–ಸರಸ್ವತಿಯ ಸಂಸ್ಕೃತಿ ಅವನತಿಯ ಅನಂತರ ಐತಿಹಾಸಿಕ ಕಾಲದಲ್ಲಿ ಕುಷಾಣ ಹಾಗೂ ಗುಪ್ತರ ಕಾಲದ ಅನೇಕ ಸ್ಥಾಯಿ ನೆಲೆಗಳು ಬೆಳೆದವು. ಇವುಗಳಲ್ಲಿ ರಾಜಸ್ತಾನದಲ್ಲಿ ಬಿಕನೇರ್ ಭಾಗದಲ್ಲಿರುವ ರಂಗಮಹಲ್ ನೆಲೆ ಒಂದು ಉತ್ತಮ ಉದಾಹರಣೆ. ಈ ನೆಲೆಗಳ ಅಸ್ತಿತ್ವ ಈ ನದಿಯಲ್ಲಿ ಪ್ರ.ಶ.4–5 ನೆಯ ಶತಮಾನದಲ್ಲಿ ನೀರು ಇರುತ್ತಿತ್ತೆಂಬುದನ್ನು ತೋರಿಸುತ್ತದೆ.

ಆದರೆ ಪಾಕಿಸ್ತಾನದ ಚೋಲಿಸ್ತಾನ ಭಾಗದಲ್ಲಿ ಅನ್ವೇಷಣೆ ನಡೆಸಿದ ಮುಗಲ್ ಅವರು ಇತಿಹಾಸ ಕಾಲದ ಎರಡೇ ನೆಲೆಗಳನ್ನು ವರದಿ ಮಾಡಿದ್ದಾರೆ. ಚೋಲಿಸ್ತಾನದಲ್ಲಿ ಇತಿಹಾಸ ಕಾಲದಲ್ಲಿ ಸರಸ್ವತಿ ನದಿ ಬಹುತೇಕವಾಗಿ ಬತ್ತಿ ಹೋಗಿತ್ತೆಂದು ತೋರುತ್ತದೆ. ಆದರೆ ಸರಸ್ವತಿ ನದಿಮಾರ್ಗದ ಒಂದು ವಿಶೇಷ ಅನುಕೂಲವೆಂದರೆ ಈ ಮಾರ್ಗದ ಮೂಲಕ ಪಾಕಿಸ್ತಾನದ ಸಿಂಧ್, ಮುಲ್ತಾನ ಪ್ರದೇಶಗಳನ್ನೂ, ದೆಹಲಿ, ಹರಿಯಾಣ ಪಂಜಾಬ್ ಭಾಗಗಳನ್ನೂ ಸುಲಭವಾಗಿ ತಲುಪಬಹುದು. ಈ ಮಾರ್ಗವನ್ನು ಹರಪ್ಪ ಕಾಲದಲ್ಲಿಯೂ ಫಲಕಾರಿಯಾಗಿ ಉಪಯೋಗಿಸಲಾಗಿತ್ತು. ಆದ್ದರಿಂದ ಹಿಂದಿನಿಂದಲೂ ನಡೆದು ಬಂದ ಈ ಸರಳ ಮಾರ್ಗದ ಆಕರ್ಷಣೆಯಿಂದಾಗಿ ಮಧ್ಯಯುಗೀನ ಕಾಲದಿಂದ ಹದಿನೆಂಟನೆಯ ಶತಮಾನದವರೆಗೂ ಚೋಲಿಸ್ತಾನ ಪ್ರದೇಶದಲ್ಲಿ ಅನೇಕ ಕೋಟೆಗಳನ್ನು ಕಟ್ಟಲಾಗಿದೆ. ಅಂದರೆ ಸಿಂಧೂ-ಸರಸ್ವತಿ ಸಂಸ್ಕೃತಿಯ ಪತನದ ಅನಂತರವೂ ಸರಸ್ವತಿ ನದಿಯಲ್ಲಿ ನೀರಿನ ಅಭಾವವಿದ್ದಾಗ್ಯೂ ಐತಿಹಾಸಿಕ ಹಾಗೂ ಮಧ್ಯಯುಗೀನ ಕಾಲದಲ್ಲಿಯೂ ಈ ನದಿಯ ತೀರದಲ್ಲಿ ಅನೇಕ ಜನನಿವಾಸದ ನೆಲೆಗಳು ಬೆಳೆದು ಬರಬೇಕಾದರೆ ನೀರಿನ ಪರ್ಯಾಪ್ತ ಆಧಾರವಿತ್ತೆಂದು ತೋರುತ್ತದೆ. ನದಿಯ ಪಾತ್ರದಲ್ಲಿ ಸತತವಾಗಿ ನೀರು ಹರಿಯುತ್ತಿರದೆ ಬಹುಶಃ ಮಳೆಗಾಲದ ನೀರು ಅನೇಕ ಸ್ಥಳಗಳಲ್ಲಿ ಸರೋವರದಂತೆ ನದಿಯ ಪಾತ್ರದಲ್ಲಿ ಉಪಲಬ್ಧವಾಗಿರಬಹುದು. ಚೋಲಿಸ್ತಾನ ಹಾಗೂ ರಾಜಸ್ತಾನದಲ್ಲಿರುವ ಐತಿಹಾಸಿಕ ನೆಲೆಗಳ ಸಂಖ್ಯೆಯ ಅಸಮತೋಲನ ದಿಂದ ಕಂಡುಬರುವ ಅಂಶವೆಂದರೆ ಸರಸ್ವತಿ ಅಥವಾ ಹಾಕ್ರ ನದಿಯ ಬತ್ತುವ ಕ್ರಿಯೆ ಚೋಲಿಸ್ತಾನದಲ್ಲಿ ತೀವ್ರವಾಗಿದ್ದರೆ, ರಾಜಸ್ತಾನದ ಸರಸ್ವತಿ ಅಥವಾ ಘಗ್ಗರ್ ಭಾಗದಲ್ಲಿ ಅಷ್ಟೊಂದು ತೀವ್ರವಾಗಿರಲಿಲ್ಲ.

ಅನೇಕ ದಶಕಗಳವರೆಗೆ ಸರಸ್ವತಿ ನದಿಯ ಉಗಮ ಶಿವಾಲಿಕ್ ಪರ್ವತಗಳ ತಪ್ಪಲು ಪ್ರದೇಶದಲ್ಲಿರುವ ಆದಿಬದ್ರಿ ಎಂಬ ಸ್ಥಾನವೆಂದು ನಂಬಲಾಗಿತ್ತು. ಆದರೆ ಇತ್ತೀಚೆಗೆ ಉಪಗ್ರಹಗ ಳಿಂದ ಪಡೆದ ಛಾಯಾಚಿತ್ರಗಳ ಪುನರ್ ಅಧ್ಯಯನ ಸರಸ್ವತಿ ನದಿಯ ಮೂಲವನ್ನು ಹಿಮಾಲಯ ಉನ್ನತ ಪರ್ವತಗಳಲ್ಲಿರುವ ನೀರ್ಗಲ್ಲ ನದಿ ಎಂದು ದೃಢೀಕರಿಸಿದೆ. ಈ ಅಧ್ಯಯನಕ್ಕೂ ಮೊದಲಿನ ಸಂಶೋಧನೆಯಲ್ಲಿ ಈಗಿನ ಸಟ್ಲೆಜ್ ಹಾಗೂ ಯಮುನಾ ನದಿಗಳೆರಡೂ ಸರಸ್ವತಿ ನದಿಯ ಉಪನದಿಗಳಾಗಿದ್ದವೆಂದು ತಜ್ಞರು ಸಾಬೀತು ಪಡಿಸಿದ್ದಾರೆ. ಋಗ್ವೇದದಲ್ಲಿ ಸಟ್ಲೆಜ್ ಮತ್ತು ಯಮುನೆಯನ್ನು ಶತುದ್ರಿ ಹಾಗೂ ದೃಶದ್ವತಿಯೆಂದು ಕರೆಯಲಾಗಿದ್ದು, ಈ ಎರಡೂ ನದಿಗಳು ಸರಸ್ವತಿಯ ಉಪನದಿಗಳೆಂದು ಉಲ್ಲೇಖಿಸಲಾಗಿದೆ. ಆದರೆ ಕಾಲಾಂತರದಲ್ಲಿ ಭೂರಚನೆಯಲ್ಲಾದ ಬದಲಾವಣೆಗಳಿಂದಾಗಿ ಈ ಎರಡೂ ಉಪನದಿಗಳು ತಮ್ಮ ತಮ್ಮ ಪಾತ್ರದ ದಿಶೆಯನ್ನು ಬದಲಿಸಿಕೊಂಡವು. ಇದರಿಂದಾಗಿ ಸಟ್ಲೆಜ್ ಪಶ್ಚಿಮ ದಿಶಾಭಿಮುಖವಾಗಿ ಸರಿದು ಸಿಂಧೂ ನದಿಯನ್ನು ಸೇರಿಕೊಂಡರೆ, ಯಮುನಾ ಪೂರ್ವಾಭಿಮುಖವಾಗಿ ಹರಿದು ಗಂಗೆಯನ್ನು ಸೇರಿಕೊಂಡಿತು. ಇದೇ ಅಲ್ಲೋಲಕಲ್ಲೋಲ ದಿಂದಾಗಿ ಶಿವಾಲಿಕ್ ಬೆಟ್ಟಗಳ ತಪ್ಪಲಲ್ಲಿದ್ದ ಸರಸ್ವತಿ ನದಿಯ ಮಾರ್ಗವೂ ಮುಚ್ಚಿ ಹೋದ ಕಾರಣದಿಂದಾಗಿ ಪರ್ವತ ಪ್ರದೇಶದಲ್ಲಿಯೇ ಸರಸ್ವತಿಯ ನೀರು ಯಮುನೆಯಲ್ಲಿ ಸೇರಿಹೋಗಿದೆಯೆಂದು ತಜ್ಞರ ಅಭಿಪ್ರಾಯವಾಗಿದೆ. ನಮ್ಮ ಪ್ರಾಚೀನ ಪರಂಪರೆಯಲ್ಲೂ ಇದೇ ತಿಳಿವಳಿಕೆಯಿದೆ. ಪ್ರಯಾಗದಲ್ಲಿರುವ ತ್ರಿವೇಣಿ ಸಂಗಮ ಗಂಗೆ, ಯಮುನೆ ಮತ್ತು ಗುಪ್ತಗಾಮಿನಿ ಸರಸ್ವತಿ ನದಿಗಳ ಸಂಗಮ ಸ್ಥಳವೆಂದು ಪರಂಪರಾನುಗತ ನಂಬಿಕೆ. ಸತತವಾಗಿ ಹರಿಯುತ್ತಿದ್ದ ಇಂಥ ಮಹಾನದಿ ನೀರಿನ ಅಭಾವದಿಂದಾಗಿ ಕ್ರಮೇಣ ನಿಷ್ಕ್ರಿಯಾವಸ್ಥೆಯನ್ನು ತಲುಪಿತು. ಇದು ಪರೋಕ್ಷವಾಗಿ ಸಿಂಧೂ-ಸರಸ್ವತಿ ಸಂಸ್ಕೃತಿಯ ಆರ್ಥಿಕ ವ್ಯವಸ್ಥೆ ಹಾಗೂ ಇನ್ನಿತರ ಪರಿಸ್ಥಿತಿಗಳ ಮೇಲೆ ಕುಠಾರಪ್ರಹಾರದಂತಾಗಿ ಅವನತಿಗೆ ಎಡೆಮಾಡಿತು.

ದೋಷಪೂರಿತ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಯಿಂದಾಗಿ ಸಿಂಧೂ-ಸರಸ್ವತಿ ನದಿಯ ನಗರತ್ವ ಸಂಸ್ಕೃತಿಯ ಅವನತಿಯಾಯಿತೆಂಬ ಅಭಿಪ್ರಾಯಗಳನ್ನು ಕೆಲವು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.

ಅಂತ್ಯ ಹರಪ್ಪ/ಅಂತ್ಯ ಸಿಂಧೂ-ಸರಸ್ವತಿ ಸಂಸ್ಕೃತಿ (ಪ್ರ.ಶ.ಪೂ.2000-1300): ಪ್ರೌಢ ಹರಪ್ಪ ಸಂಸ್ಕೃತಿಯ ಅವನತಿಯ ಅನಂತರದ ಕಾಲವನ್ನು ಅಂತ್ಯ ಹರಪ್ಪ ಅಥವಾ ಅಂತ್ಯ ಸಿಂಧೂ-ಸರಸ್ವತಿ ಸಂಸ್ಕೃತಿಯೆಂದು ಗುರುತಿಸಲಾಗಿದೆ. ಈ ಕುಂಠಿತ ಅವಸ್ಥೆ ಕೇವಲ ಒಂದು ನೆಲೆಗೆ ಸೀಮಿತವಾಗಿರದೆ, ಸಿಂಧೂ-ಸರಸ್ವತಿ ಸಂಸ್ಕೃತಿ ವ್ಯಾಪ್ತಿ ಕ್ಷೇತ್ರದಲ್ಲೆಲ್ಲಾ ಕಂಡು ಬಂದಿದೆ. ಈ ಕಾಲದಲ್ಲಿಯೂ ಪ್ರಾಂತೀಯ ಲಕ್ಷಣಗಳನ್ನು ಹೊಂದಿದಾಗ್ಯೂ ಏಕರೂಪತೆ ಸ್ಪಷ್ಟವಾಗಿ ತೋರಿಬರುತ್ತದೆ. ಪ್ರೌಢಾವಸ್ಥೆಯ ನಗರ ವಿನ್ಯಾಸ, ಚಿತ್ರಿತ ಲಿಪಿಯುಕ್ತ ಮುದ್ರೆ ಇತ್ಯಾದಿ ಲಕ್ಷಣಗಳೆಲ್ಲ ಕಾಣದಾಗಿದೆ. ಮಣ್ಪಾತ್ರೆಗಳು, ಅವುಗಳ ನಮೂನೆಗಳು ಹಾಗೂ ವರ್ಣಚಿತ್ರಗಳು ಸಾಧಾರಣ ದರ್ಜೆಯದಾಗಿವೆ.

ಅಂತ್ಯ ಹರಪ್ಪ ಪ್ರಾರಂಭ ಕಾಲ ಎಲ್ಲ ನೆಲೆಗಳಲ್ಲಿ ನಿರ್ದಿಷ್ಟವಾಗಿ ಒಂದೇ ಸಮಯದಲ್ಲಿ ಪ್ರಾರಂಭವಾಯಿತೆಂದು ಹೇಳಲಾಗುವುದಿಲ್ಲ. ಈ ಹಂತ ಪ್ರ.ಶ.ಪೂ.ಸು.2000-1800 ಅವಧಿಯಲ್ಲಿ ಪ್ರಾರಂಭವಾಗಿರಬಹುದೆಂದು ವಿದ್ವಾಂಸರು ಅನುಮಾನಿಸಿದ್ದಾರೆ. ಆದರೆ ಪಶ್ಚಿಮ ಏಷ್ಯದ ಮೆಸಪೊಟೇಮಿಯ ಮತ್ತು ಖಾರಿ ಪ್ರದೇಶಗಳಲ್ಲಿ ದೊರೆತ ಕ್ಯಾಲ್ಸೈಟ್ ಮುದ್ರೆಗಳು ಈ ಸಂಸ್ಕೃತಿ ಪ್ರ.ಶ.ಪೂಸು.14ನೆಯ ಶತಮಾನದವರೆಗೆ ಊರ್ಜಿತವಾಗಿತ್ತೆಂದು ಸೂಚಿಸುತ್ತವೆ.

ಸಿಂಧೂ ಬಯಲಿನಲ್ಲಿ ಅಂತ್ಯ ಹರಪ್ಪ ಕಾಲದ ಅವನತಿ ಸ್ಥಿತಿಯನ್ನು ಝೂಕರ್ ನೆಲೆಯಲ್ಲಿ ಪತ್ತೆ ಹಚ್ಚಲಾಯಿತು. ಕೆಂಪು ಮೇಲ್ಮೈಯುಳ್ಳ ಮಣ್ಪಾತ್ರೆಗಳ ಮೇಲೆ ಕಪ್ಪುವರ್ಣ ಚಿತ್ರಗಳ ಅಲಂಕರಣ ಮುಂದುವರೆದಾಗ್ಯೂ ಇದರಲ್ಲಾದ ಗುಣಮಟ್ಟದ ಬದಲಾವಣೆಯನ್ನು ಸಹಜವಾಗಿ ಗುರುತಿಸಬಹುದು. ಆದಿ ಹರಪ್ಪ ಕಾಲದ ದ್ವಿವರ್ಣ ಚಿತ್ರ ಸಂಪ್ರದಾಯದ ಪುನರುಜ್ಜೀವನವಾಯಿತು. ಮಾಸಿದ ಹಳದಿ ಬಣ್ಣದ ಒರಟಾದ ಪಾತ್ರೆಗಳ ಮೇಲೆ ಸಾಧಾರಣ ವರ್ಣಚಿತ್ರಗಳಿವೆ. ಪಾತ್ರೆಗಳ ಆಕಾರ, ನಮೂನೆಗಳಲ್ಲಿ ವೈವಿಧ್ಯವಿಲ್ಲ. ಕೆಲವು ಪಾತ್ರೆಗಳ ಹೊರಮೈಯನ್ನು ಗೀರುಗಳಿಂದ ಅಲಂಕರಿಸಲಾಗಿದೆ. ಝೂಕರ್ ನೆಲೆಯ ಉತ್ಖನನಕಾರ ಮುಗಲ್ ಹೇಳಿದ ಮಾತುಗಳು ಈ ಹಂತದ ಸ್ಪಷ್ಟ ಸ್ವರೂಪವನ್ನು ದರ್ಶಿಸುತ್ತವೆ. ಸ್ತರವಿಂಗ ಡಣೆಯ ಆಧಾರದ ಮೇಲೆ ಝೂಕರ್ ಪಾತ್ರೆಗಳು ಮುಂದುವರೆಯುತ್ತಿದ್ದ ಪ್ರೌಢ ಹರಪ್ಪ ಸಂಪ್ರದಾಯದ ಪಾತ್ರೆಯ ಜೊತೆ-ಜೊತೆಗೆ ಬದಲಾವಣೆಗಳನ್ನೊಳಗೊಂಡು ಹುಟ್ಟಿಕೊಂಡ ಪಾತ್ರೆಗಳೇ ವಿನಹ ಪ್ರತ್ಯೇಕ ಅಥವಾ ಹೊಸ ಸಂಸ್ಕೃತಿಯ ಆಗಮನದ ಕುರುಹುಗಳಲ್ಲ ಎಂಬುದು ಖಚಿತವಾಗುತ್ತದೆ. ಹರಪ್ಪ ಸಂಸ್ಕೃತಿಯ ಅಂತ್ಯವಾಗಲಿಲ್ಲ, ಆದರೆ ಅನೇಕ ಬದಲಾವಣೆಗಳಾದವು. ಚತುರಸ್ರಾಕಾರದ ಮುದ್ರೆಗಳ ಬದಲಿಗೆ ಪರ್ಷಿಯನ್ ಖಾರಿಯ ಮುದ್ರೆಯನ್ನು ಹೋಲುವ ಆದರೂ ಭಿನ್ನ ನಮೂನೆಗಳಿಂದ ಕೂಡಿದ ಮುದ್ರೆಗಳು ಉಪಯೋಗ ದಲ್ಲಿ ಬಂದವು. ಘನ ಚತುರಸ್ರಾಕಾರದ ತೂಕದ ಬಟ್ಟುಗಳು ಹಾಗೂ ಸುಡಾವೆಮಣ್ಣಿನ ಸ್ತ್ರೀ ಗೊಂಬೆಗಳು ಕಾಣುವುದಿಲ್ಲ. ವ್ಯಾಪಾರದ ದೃಷ್ಟಿಯಿಂದ ಈ ಕಾಲದಲ್ಲಿ ಅರೆ ಪ್ರಶಸ್ತ ಮಣಿಗಳ ಹಾಗೂ ಫಯಾನ್ಸ್‌ನಿಂದ ತಯಾರಿಸಿದ ವಸ್ತುಗಳ ಪ್ರಮಾಣದಲ್ಲಿ ವೃದ್ಧಿಯಾಗಿದೆ. ಕೇವಲ ಮಣ್ಪಾತ್ರೆಗಳ ಮೇಲೆ ಹರಪ್ಪ ಚಿತ್ರಲಿಪಿಗಳನ್ನು ಕೊರೆದು ಬಿಡಿಸುವ ಪದ್ಧತಿ ಮುಂದುವರೆಯಿತು.

ಸಮಾಧಿ, ಫರ್ಮಾನ

ಗುಜರಾತಿನ ರಂಗಪುರ ನೆಲೆಯ 2ಎ ಹಂತ ಪ್ರೌಢ ಹರಪ್ಪ ಕಾಲವನ್ನು ಪ್ರತಿನಿಧಿಸುತ್ತದೆ. ಮುಂದೆ 2ಬಿ ಹಂತದಲ್ಲಿ ಮಣ್ಪಾತ್ರೆಗಳ ಗುಣಮಟ್ಟ ಕ್ಷೀಣಿಸಿದೆ. ಹುಲ್ಲಿನ ಮೇಲ್ಹಾವಣಿಯುಳ್ಳ ಮನೆಗಳಲ್ಲಿ ಸ್ನಾನಗೃಹ ಹಾಗೂ ಒಳಚರಂಡಿಗಳ ವ್ಯವಸ್ಥೆಯಿಲ್ಲ. ರಂಗಪುರ 2ಸಿ ಹಂತದಲ್ಲಿ ಪ್ರೌಢ ಹರಪ್ಪ ಮಣ್ಪಾತ್ರೆಗಳು ಸಂಪೂರ್ಣವಾಗಿ ಕಾಣೆಯಾಗಿ ಹೊಳಪಿನ ಕೆಂಪುಬಣ್ಣದ ಪಾತ್ರೆಗಳು ಬಳಕೆಯಲ್ಲಿದ್ದವು. ಇಂಥ ಪಾತ್ರೆಗಳೇ 3ನೆಯ ಹಂತದಲ್ಲಿ ಪ್ರಮುಖವಾಗಿದ್ದವು. ಈ ಪಾತ್ರೆಗಳ ಹೊರಮೈ ಮೇಲೆ ಕೆಂಪುಬಣ್ಣದ ದಪ್ಪ ಲೇಪನ ಹಚ್ಚಿ ಹೊಳಪು ಅಥವಾ ಮೆರುಗು ಬರುವಂತೆ ಮೇಲ್ಭಾಗವನ್ನು ಉಜ್ಜಲಾಗುತ್ತಿತ್ತು. ಇಂಥ ಪಾತ್ರೆಗಳು ಬೇರೊಂದು ಸಂಸ್ಕೃತಿಯ ಆಗಮನದ ಸೂಚನೆಯಲ್ಲ. ಇವು ಮೊದಲಿನಿಂದಲೂ ಇದ್ದ ಹರಪ್ಪ ಸಂಸ್ಕೃತಿಯ ಮಣ್ಪಾತ್ರೆಗಳ ತಯಾರಿಕೆಯ ಪದ್ಧತಿಯಿಂದಲೆ ವಿಕಸಿತವಾಗಿವೆ. ಈ ಸಮಯದಲ್ಲಿ ತಾಮ್ರದ ಉಪಕರಣಗಳ ಬಳಕೆ ಕಡಿಮೆಯಾಯಿತು. ಹರಪ್ಪ ಕಾಲದ ಚೆರ್ಟ್‌ನ ಉದ್ದನೆಯ ಅಲಗುಗಳ ಬದಲಿಗೆ ಈಗ ಜಾಸ್ಪರ್ ಹಾಗೂ ಕ್ಯಾಲ್ಸೆಡನಿಯಿಂದ ತಯಾರಿಸಿದ ಚಿಕ್ಕ ಅಲಗುಗಳು ಬಳಕೆಯಲ್ಲಿ ಬಂದವು. ಅರೆಪ್ರಶಸ್ತ ಕಲ್ಲಿನ ಮಣಿಗಳಿಗೆ ಬದಲಾಗಿ ಸುಟ್ಟಮಣ್ಣಿನ ದ್ವಿಶಂಕುವಿ ನಾಕಾರದ ಮಣಿಗಳು ಬಳಕೆಯಲ್ಲಿದ್ದವು. ಚೆರ್ಟ್ ಮತ್ತು ಅಗೇಟ್‌ನೊಂದಿಗೆ ಶಿಸ್ತ್ ಹಾಗೂ ಮರಳುಕಲ್ಲಿನ ದೊಡ್ಡ ಆಕಾರದ ತೂಕದ ಬಟ್ಟುಗಳು ಉಪಯೋಗದಲ್ಲಿದ್ದವು. ಎಲ್ಲಕ್ಕಿಂತ ಮಿಗಿಲಾಗಿ ಚಿತ್ರರಹಿತ ಆಯತಾಕಾರದ ಮುದ್ರೆಗಳೂ ಮುಂದುವರೆದವು.

ಗುಜರಾತಿನಲ್ಲಿ ಕೆಲವು ಅಂತ್ಯ ಹರಪ್ಪ ನೆಲೆಗಳನ್ನು ಉತ್ಖನನಿಸಲಾಗಿದೆ. ಪ್ರಮುಖ ನೆಲೆಗಳೆಂದರೆ ರೋಜಡಿ ಮತ್ತು ಪ್ರಭಾಸ್ ಪಾಠಣ್. ರೋಜಡಿ ಹಾಗೂ ಪ್ರಭಾಸ್‌ನ ಮಣ್ಪಾತ್ರೆಗಳು ಅಂತ್ಯ ಹರಪ್ಪ ಸಂಸ್ಕೃತಿಯ ಲಕ್ಷಣಗಳನ್ನೊಳಗೊಂಡಿವೆ. ಆದರೆ ಇಂಗಾಲ 14 ಕಾಲಮಾನದಂತೆ ರೋಜಡಿ ನೆಲೆ ಪ್ರೌಢ ಹರಪ್ಪ ಕಾಲದ್ದೆಂದು ಉತ್ಖನನಕಾರರು ಹೇಳಿದ್ದಾರೆ. ಪ್ರಭಾಸ್ ಪಾಠಣ್ ಈ ಕಾಲಮಾನದಂತೆ ಪ್ರೌಢ ಹರಪ್ಪ ಕಾಲದ ನೆಲೆಯಾಗುತ್ತದೆ. ಇದರಿಂದಾಗಿ ಈ ನೆಲೆಗಳನ್ನು ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದಾಗ್ಯೂ ಸ್ತರವಿಂಗಡಣ ತತ್ತ್ವವನ್ನಾಧರಿಸಿ ಎರಡು ನೆಲೆಗಳ ಕಾಲಸಂಬಂಧವನ್ನು ನಿರ್ಧರಿಸುವುದರಲ್ಲಿ ಸತ್ಯತೆ ಇದೆ.

ಕಲ್ಲಿನ ಕೋಟೆಗೋಡೆಯಿಂದ ಆವೃತವಾದ ರೋಜಡಿ ನೆಲೆ ಭಾದರ್ ನದಿ ದಂಡೆಯ ಮೇಲಿದೆ. ಇದರ ಪಶ್ಚಿಮ ಗೋಡೆಯಲ್ಲಿ ಎರಡು ಬುರುಜುಗಳುಳ್ಳ ಪ್ರವೇಶದ್ವಾರವಿದೆ. ಪ್ರಭಾಸ್ ಪಾಠಣ್‌ದಲ್ಲಿಯೂ ಕಲ್ಲು ಮತ್ತು ಮಣ್ಣುಗಾರೆಯ ಕಟ್ಟಡದ ಸಂಕೀರ್ಣವೊಂದನ್ನು ಬೆಳಕಿಗೆ ತರಲಾಗಿದೆ. ಇದು ಧಾನ್ಯ ಸಂಗ್ರಹದ ಕಟ್ಟಡವೆಂದು ಗುರುತಿಸಲಾಗಿದೆ. ರೋಜಡಿಯಿಂದ ವಿವಿಧ ತಾಮ್ರ ಉಪಕರಣಗಳು ದೊರಕಿದ್ದರೆ, ಪ್ರಭಾಸ್ ಪಾಠಣ್‌ನಿಂದ ಒಬ್ಸಿಡಿಯನ್,

ಸಾಂಕೇತಿಕ ಸಮಾಧಿ, ಸನೌಲಿ

ಕ್ಯಾಲ್ಸೆಡನಿ, ಕಾರ್ನೇಲಿಯನ್, ಅಗೇಟ್, ಬಂಗಾರ, ಫಯಾನ್ಸ್ ಮಣಿಗಳೊಂದಿಗೆ ಒಂದು ಸ್ಟಿಯಟೈಟ್ ಮುದ್ರೆಯ ತಾಯತ (ಆ್ಯಮುಲೆಟ್) ಹಾಗೂ ತೂಕದ ಬಟ್ಟುಗಳು ಸಿಕ್ಕಿವೆ. ಬೆಟ್‌ದ್ವಾರಕದಲ್ಲಿಯೂ ಅಂತ್ಯ ಹರಪ್ಪ ಕಾಲದ ಸುರಕ್ಷಾಗೋಡೆಯಿತ್ತು. ಈ ನೆಲೆಯ ಮಹತ್ತ್ವದ ಅವಶೇಷಗಳೆಂದರೆ ಖಾರಿ ಮುದ್ರೆಯಾಕಾರದಲ್ಲಿರುವ ಮೂರು ತಲೆಗಳುಳ್ಳ ಪ್ರಾಣಿಯ ಚಿತ್ರದ ಮುದ್ರೆ, ಹರಪ್ಪ ಲಿಪಿ ಇರುವ ಹರಕೆ ಜಾಡಿ ಹಾಗೂ ಅನೇಕ ಕಟ್ಟಡಗಳ ಅವಶೇಷಗಳು.

ಇನ್ನೊಂದು ಪ್ರಕಾರದ ಅಂತ್ಯ ಹರಪ್ಪ ನೆಲೆಗಳು ಉತ್ತರ ಗುಜರಾತ್‌ನ ರೂಪೆನ್ ನದಿಕೊಳ್ಳದಲ್ಲಿ ಇವೆ. ಇಂಥ ನೆಲೆಗಳು ತಾತ್ಕಾಲಿಕ ಬಿಡಾರಗಳಾಗಿದ್ದು, ಸಾಂಸ್ಕೃತಿಕ ಅವಶೇಷಗಳು ಬಹಳಷ್ಟು ಕಡಿಮೆ. ಅಲೆಮಾರಿ ದನಗಾಹಿಗಳು ವರ್ಷದ ಯಾವುದಾದರೊಂದು ಅವಧಿಯಲ್ಲಿ ತಮ್ಮ ಮೂಲ ನೆಲೆಯಲ್ಲಿ ಪುನಃ ಬಂದು ನೆಲೆಸುತ್ತಿದ್ದಂಥ ಸ್ಥಳಗಳಿವು. ಉತ್ತಮ ಉದಾಹರಣೆಗಳೆಂದರೆ ಓರಿಯೊಟಿಂಬೋ ಮತ್ತು ನೆಸಾಡಿ. ಈ ಎಲ್ಲ ನೆಲೆಗಳಲ್ಲೂ ಹೊಳಪಿನ ಕೆಂಪು ಬಣ್ಣದ ಮಣ್ಪಾತ್ರೆಗಳಿದ್ದುವು. ಮಧ್ಯ ಗುಜರಾತಿನ ಖೇಡಾ ಜಿಲ್ಲೆಯಲ್ಲಿರುವ ಕಾನೆವಾಲ್ ನೆಲೆಯಲ್ಲಿ ವೃತ್ತ ಗುಡಿಸಲಿನಲ್ಲಿ ದಮ್ಮಸು ಮಾಡಿದ ನೆಲಗಟ್ಟಿದ್ದು, ಸುಟ್ಟಮಣ್ಣಿನ ಬಿಲ್ಲೆಗಳು ಹಾಗೂ ಸಣ್ಣ ಗುಂಡುಗಳು, ಕಾರ್ನೇಲಿಯನ್, ಫಯಾನ್ಸ್, ಶಂಖ, ಸುಟ್ಟಮಣ್ಣಿನ ಮಣಿಗಳು, ಸುಟ್ಟಮಣ್ಣಿನ ತಕಲಿ, ಮೀನಿನ ಬಲೆ ಮುಳುಗಿಸುವ ಉದ್ದ ಮಣಿಗಳು, ತಾಮ್ರ, ಹೊಳಪಿನ ಮಣ್ಪಾತ್ರೆಗಳು, ಹರಪ್ಪ ಚಿತ್ರಲಿಪಿಯುಳ್ಳ ಮಡಕೆಯ ಚೂರುಗಳು ದೊರಕಿವೆ. ಈ ಜಿಲ್ಲೆಯಲ್ಲಿ ಇಂಥ ಅನೇಕ ನೆಲೆಗಳನ್ನು ಪತ್ತೆ ಹಚ್ಚಲಾಗಿದೆ.

ಅಂತ್ಯ ಹರಪ್ಪ ಕಾಲದಲ್ಲಿ ನಗರವಿನ್ಯಾಸ, ತಾಂತ್ರಿಕ ಜ್ಞಾನವನ್ನು ಆಧರಿಸಿದ ವಿಭಿನ್ನ ಕಸಬುಗಳು, ಲಿಪಿ ಬಳಕೆಯಲ್ಲಿ ಅವನತಿಯಾದಾಗ್ಯೂ ಈ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಸ್ವರೂಪಗಳನ್ನು ಕಾಲ ಮತ್ತು ಸ್ಥಳಕ್ಕನುಸಾರವಾಗಿ ರೂಪಾಂತರ ಹೊಂದಿ ಬದುಕಿ ಉಳಿದುಕೊಂಡಿದ್ದವು.

ಹರಪ್ಪ ನೆಲೆಯ ಸಿಮೆಟ್ರಿ–ಎಚ್ ನೆಲೆ ಅಂತ್ಯ ಹರಪ್ಪ ಕಾಲದ್ದು. ಚೋಲಿಸ್ತಾನದಲ್ಲಿ ಮುಗಲ್ ಅವರು ಇಂಥ 50 ನೆಲೆಗಳನ್ನು ಕಂಡುಹಿಡಿದಿದ್ದಾರೆ. ಇವುಗಳಲ್ಲಿ ಕುಡುವಾಲ ನೆಲೆ ಸು. 31.1 ಹೆಕ್ಟೇರಿನಷ್ಟು ವಿಶಾಲವಾಗಿದೆ. ಇತ್ತೀಚೆಗೆ ಹರಪ್ಪ ನೆಲೆಯನ್ನು ಪುನಃ ಅಗೆದಾಗ ಈ ನಗರದಲ್ಲಿ ಕಂಡುಬಂದ ಅಂತ್ಯ ಹರಪ್ಪ ಸಮಾಜದ ಪರಿಸ್ಥಿತಿ ಕುತೂಹಲಕಾರಿಯಾಗಿದೆ. ಈ ವಿಷಯವನ್ನು ಕುರಿತು ಮಾರ್ಟಿಮರ್ ವೀಲರ್ ತಾನು ನಡೆಸಿದ ಉತ್ಖನನದ ಫಲಿತಾಂಶವನ್ನಾಧರಿಸಿ ಹೇಳಿದ ಸಂಗತಿಯನ್ನು ಮೊದಲಿಗೆ ಉಲ್ಲೇಖಿಸಲಾಗಿದೆ. ಪ್ರೌಢ ಅವಸ್ಥೆಯಲ್ಲಿದ್ದ ವಿಶಾಲ ನಗರ ಅಂತ್ಯ ಹರಪ್ಪ ಕಾಲದಲ್ಲಿ ವಿಸ್ತಾರದಲ್ಲಿ ಚಿಕ್ಕದಾಗಿದ್ದರೂ ಸಾಂಸ್ಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ಆಗು–ಹೋಗುಗಳ ಕೇಂದ್ರವಾಗಿ ಉಳಿದುಕೊಂಡಿತ್ತು. ಚೋಲಿಸ್ತಾನದಲ್ಲಿಯ ಅಂತ್ಯ ಹರಪ್ಪ ಸನ್ನಿವೇಶವನ್ನು ಕುರಿತು ಮುಗಲ್ ಹೇಳಿದ ಮಾತುಗಳು ಸೂಚ್ಯವಾಗಿವೆ. ಬಹುಶಃ ಸರಸ್ವತಿ ನದಿಯ ಪಾತ್ರದಲ್ಲಿ ನೀರಿನಮಟ್ಟ ಕಡಿಮೆಯಾಗುತ್ತಿದ್ದ ಕಾರಣದಿಂದ ಸ್ಥಾಯಿ ಜನವಸತಿಗಳು ಹರಿದು ಹಂಚಲ್ಪಟ್ಟು ತಾತ್ಕಾಲಿಕ ಬಿಡಾರಗಳು ಹೆಚ್ಚಾದವು. ಇದರರ್ಥ ಜನರು ನೀರು ಇರುವೆಡೆಗೆ ಚದುರಿಹೋಗುತ್ತಿದ್ದರೇ ವಿನಹ ಈ ಪ್ರದೇಶ ಪೂರ್ಣವಾಗಿ ಜನಶೂನ್ಯವಾಗಲಿಲ್ಲ.

ಹರಿಯಾಣ ರಾಜ್ಯದಲ್ಲಿಯ ಸರಸ್ವತಿ, ಘಗ್ಗರ್ ಹಾಗೂ ದೃಶದ್ವತಿ ನದಿ ಪ್ರದೇಶದಲ್ಲಿರುವ ಹರಪ್ಪ ನೆಲೆಗಳ ಮೇಲುಸ್ತರಗಳಿಂದ ಅಂತ್ಯ ಹರಪ್ಪ ಕಾಲದ ಅವಶೇಷಗಳು ದೊರಕಿದ್ದು ಇಂಥ ನೆಲೆಗಳನ್ನು ಉತ್ಖನನಿಸಲಾಗಿದೆ. ಬನಾವಳಿಯ ಅಂತ್ಯ ಹರಪ್ಪ ಅವಶೇಷಗಳು ಮತ್ತು ಪಂಜಾಬ್ ರಾಜ್ಯದ ಬಾರ ಸಂಸ್ಕೃತಿಯ ಅವಶೇಷಗಳಲ್ಲಿ ಸಾಮ್ಯತೆ ಇದ್ದ ಕಾರಣ ಉತ್ಖನನಕಾರರು ಈ ಹಂತವನ್ನು ಬನಾವಳಿ–ಬಾರ ಸಂಸ್ಕೃತಿ ಎಂದು ನಾಮಕರಣ ಮಾಡಿದ್ದಾರೆ. ನಗರದ ಲಕ್ಷಣಗಳನ್ನು ಕಳೆದುಕೊಂಡಿರುವ ಈ ಕಾಲದ ಮನೆಗಳನ್ನು ಕೇವಲ ಮಣ್ಣಿನಿಂದಲೇ ಕಟ್ಟಲಾಗಿದೆ. ಆದಿ ಹರಪ್ಪ ಕಾಲದ ಸಂಪ್ರದಾಯಗಳ ಪುನರಾವೃತ್ತಿಯಂತೆ ಮನೆಯ ನೆಲಗಟ್ಟಿನಲ್ಲಿ ತೋಡಿದ ಧಾನ್ಯ ಶೇಖರಣೆ ಗುಂಡಿಗಳು, ತಂದೂರು ಒಲೆಗಳು ಇತ್ಯಾದಿಗಳಿದ್ದುವು. ಮಣ್ಪಾತ್ರೆಗಳೂ ಆದಿ ಹರಪ್ಪ ಸಂಪ್ರದಾಯವನ್ನು ಅನುಸರಿಸಿದಂತೆ ತೋರುತ್ತದೆ. ಪ್ರೌಢ ಹರಪ್ಪ ಕಾಲದ ಚಿತ್ರಯುಕ್ತ ಮುದ್ರೆಗಳು, ತೂಕದ ಬಟ್ಟುಗಳು, ಚರ್ಟ್ ಅಲಗುಗಳು, ತ್ರಿಕೋಣಾಕಾರದ ಸುಟ್ಟಮಣ್ಣಿನ ಚಪ್ಪಟೆ ಬಿಲ್ಲೆಗಳು ಕಾಣಬರುವುದಿಲ್ಲ. ಆಶ್ಚರ್ಯಕರ ವಿಷಯವೆಂದರೆ ಈ ಕಾಲದಲ್ಲಿಯೂ ಫಯಾನ್ಸ್‌ನಿಂದ ತಯಾರಿಸಿದ ಬಳೆಗಳು, ಕಾಲಂದಿಗೆ, ಉಂಗುರಗಳು, ಮಣಿಗಳು, ಅಶ್ವತ್ಥ ಎಲೆಯಾಕಾರದ ಕರ್ಣಾಭರಣಗಳು ಸಂಖ್ಯೆ ಹಾಗೂ ಗುಣಾತ್ಮಕ ದೃಷ್ಟಿಯಿಂದ ಹೇರಳವಾಗಿರುವುದು. ಅರೆಪ್ರಶಸ್ತ ಕಲ್ಲಿನ ಮಣಿಗಳು ಬಳಕೆಯಲ್ಲಿದ್ದವು. ಸಿಸ್‌ವಾಲ್ ನೆಲೆಯ ಸಿ ಹಂತವೂ ಅಂತ್ಯ ಹರಪ್ಪ ಕಾಲದ್ದೆಂದು ಉತ್ಖನನಕಾರರು ಹೇಳಿದ್ದಾರೆ. ಭಗವಾನ್‌ಪುರದ 1ಎ ಹಂತ ಉತ್ತರ ಹರಪ್ಪ ಕಾಲದ್ದು. ಈ ಹಂತದಲ್ಲಿ ಪಾವಟಿಗೆಯುಳ್ಳ ಮಣ್ಣಿನ ಕಟ್ಟೆಗಳನ್ನು ಕಟ್ಟಲಾಗಿತ್ತು. ಪ್ರೌಢ ಹರಪ್ಪ ಕಾಲದ ಮಣ್ಪಾತ್ರೆಗಳ ಕೆಲವು ಲಕ್ಷಣಗಳು ಮತ್ತು ನಮೂನೆಗಳು ಮುಂದುವರೆದಾಗ್ಯೂ ಬದಲಾವಣೆಗಳು ಕಂಡುಬರುತ್ತವೆ. ಈ ಹಂತದ ಅವಶೇಷಗಳಾದ ಸುಡಾವೆಮಣ್ಣಿನ ಪ್ರಾಣಿ ಹಾಗೂ ಮಾನವ ಗೊಂಬೆಗಳು, ತಾಮ್ರದ ಕೇಶಪಿಡಿಕೆಗಳು (ಪಿನ್ನು) ಹಾಗೂ ಸರಳುಗಳು; ಫಯಾನ್ಸ್ ಹಾಗೂ ಸುಡಾವೆಮಣ್ಣಿನ ಬಳೆಗಳು, ಅರೆಪ್ರಶಸ್ತ ಕಲ್ಲಿನ, ಫಯಾನ್ಸ್ ಹಾಗೂ ಸುಡಾವೆಮಣ್ಣಿನ ಮಣಿಗಳು; ಎಲುಬಿನ ಬಾಣದ ಮೊನೆಗಳ ತಯಾರಿಕೆಯಲ್ಲಿಯೂ ಹಿಂದಿನಿಂದ ಬಂದ ಪದ್ಧತಿಯನ್ನು ನೋಡಬಹುದು. ಕುತೂಹಲಕಾರಿ ವಿಷಯವೆಂದರೆ ಧೇರಮಜ್ರ ನೆಲೆಯಲ್ಲಿ ಜೇಡ್ ಮತ್ತು ವೈಡೂರ್ಯ ಮಣಿಗಳು ಹಾಗೂ ದಧೇರಿ ನೆಲೆಯಲ್ಲಿ ವೈಡೂರ್ಯದ ಮಣಿಗಳನ್ನು ಸರಗಳಲ್ಲಿ ಉಪಯೋಗಿಸಲಾಗಿತ್ತು. ಬಾರ ನೆಲೆಯಲ್ಲಿ ಗ್ರಾನೈಟ್ ಹಾಗೂ ಮರಳುಕಲ್ಲಿನಲ್ಲಿ ತಯಾರಿಸಿದ ತೂಕದ ಬಟ್ಟುಗಳು ಬಳಕೆಯಲ್ಲಿದ್ದವು.

ಉತ್ತರ ಪ್ರದೇಶದಲ್ಲಿರುವ ಅಂತ್ಯ ಹರಪ್ಪ ನೆಲೆ ಹುಲಾಸ್‌ನಲ್ಲಿ ಮೂರು ಅನುಕ್ರಮ ಸಾಂಸ್ಕೃತಿಕ ಹಂತಗಳಲ್ಲಿಯೂ ಆಯತಾಕಾರದ ಮನೆಗಳನ್ನು ಹಸಿ ಇಟ್ಟಿಗೆಗಳಿಂದ ಕಟ್ಟಲಾಗಿತ್ತು. ವೃತ್ತ ವಿನ್ಯಾಸದ ಗುಡಿಸಲಿನಲ್ಲಿ ವಾಸಿಸುವವರೂ ಇದ್ದರು. ಈ ವಾಸಸ್ಥಾನಗಳಿಂದ ಧಾನ್ಯ ಶೇಖರಣೆಯ ಗುಂಡಿಗಳು, ಕುಲುಮೆಗಳು, ಸುಟ್ಟಮಣ್ಣಿನ ಬಿಲ್ಲೆಗಳು, ಪ್ರಾಣಿಗಳ ಗೊಂಬೆಗಳು, ದ್ವಿಶಂಕುವಿನಾಕಾರದ ಸುಟ್ಟಮಣ್ಣಿನ ಮಣಿಗಳು, ಹರಪ್ಪ ಚಿತ್ರಲಿಪಿಯುಳ್ಳ ಚೆಂಡು, ತಾಮ್ರದ ಬಳೆ, ಉಳಿ, ಮೀನಿನ ಗಾಳದ ಕೊಕ್ಕೆ, ಸೂಜಿ, ಅರೆಯುವ ಕಲ್ಲು ಮತ್ತು ರುಬ್ಬುಗುಂಡು, ಫಯಾನ್ಸಿನ ಮಣಿಗಳು, ಬಳೆಗಳು, ಚಿಕ್ಕ ಆಕಾರದ ಕುಡಿಕೆಗಳು ಹಾಗೂ ಅಗೇಟಿನ ಮಣಿಗಳು ಮೊದಲಾದವುಗಳನ್ನು ಸಂಗ್ರಹಿಸಲಾಗಿದೆ.

ಅಂತ್ಯ ಹರಪ್ಪ ಕಾಲದಲ್ಲಿ ಬೇರೆ ಬೇರೆ ಪ್ರಾಂತಗಳಿಗೆ ಚದುರಿಹೋದ ಸಿಂಧೂ–ಸರಸ್ವತಿ ಸಂಸ್ಕೃತಿಯ ಜನರು ಈಗಿನ ಮಹಾರಾಷ್ಟ್ರ ಪ್ರದೇಶವನ್ನು ತಲುಪಿದ್ದರೆಂಬುದಕ್ಕೆ ದೈಮಾಬಾದ್ ನೆಲೆ ಸಾಕ್ಷಿಯಾಗಿದೆ. ಗೋದಾವರಿಯ ನದಿ ಉಪನದಿಯಾದ ಪ್ರವರಾ ಎಡದಂಡೆಯಲ್ಲಿರುವ ದೈಮಾಬಾದ್‌ನ ಎರಡನೆಯ ಅಂತ್ಯ ಹರಪ್ಪ ಕಾಲದ ಸಾಂಸ್ಕೃತಿಕ ಹಂತ. ಇವರ ಮನೆಗಳು ಮಣ್ಣಿನವು. ಕ್ಯಾಲ್ಸೆಡನಿ ಹಾಗೂ ಚರ್ಟ್‌ನ ಅಲಗು ಉದ್ಯಮವಲ್ಲದೆ, ಅರೆ ಪ್ರಶಸ್ತ ಕಲ್ಲಿನ ಮಣಿಗಳು, ಮಣ್ಣಿನ ಅಳತೆಯ ಪಟ್ಟಿ, ಹಸ್ತಿದಂತದ ಕಿವಿಯಾಭರಣ ಈ ಹಂತದ ಮಹತ್ತ್ವಪೂರ್ಣ ಅವಶೇಷಗಳು. ಹರಪ್ಪ ಚಿತ್ರ ಲಿಪಿಯುಳ್ಳ ಸುಟ್ಟಮಣ್ಣಿನ ಬಿರಡೆಯಾಕಾರದ ಎರಡು ಮುದ್ರೆಗಳು ಹಾಗೂ ಚಿತ್ರಲಿಪಿಯುಳ್ಳ ನಾಲ್ಕು ಮಡಕೆಯ ಚೂರುಗಳು ಗಮನಾರ್ಹ. ಈ ಕಾಲದ ಅಸ್ಥಿಪಂಜರವುಳ್ಳ ಒಂದು ಗೋರಿಯ ಕುಣಿಯ ಅಂಚಿನ ಉದ್ದಕ್ಕೂ ಹಸಿ ಇಟ್ಟಿಗೆಯನ್ನಿಡಲಾಗಿದೆ. ಅಲ್ಲದೆ ಶವವನ್ನು ನಾರಿನ ಸಸ್ಯಗಳಲ್ಲಿ ಸುತ್ತಿಡಲಾಗಿತ್ತು.

ಇತ್ತೀಚೆಗೆ ಉತ್ತರ ಪ್ರದೇಶದ ಬಾಗಪತ್ ಜಿಲ್ಲೆಯಲ್ಲಿರುವ ಸನೌಲಿ (**ನೋಡಿ**) ಗ್ರಾಮದಲ್ಲಿ ಅಂತ್ಯ ಹರಪ್ಪ ಕಾಲದ ಸ್ಮಶಾನವೊಂದು ಆಕಸ್ಮಿಕವಾಗಿ ಬೆಳಕಿಗೆ ಬಂದಿದೆ.

ಕಾಲಾಂತರದಲ್ಲಿ ಸಿಂಧೂ–ಸರಸ್ವತಿ ಸಂಸ್ಕೃತಿಯ ನಾಗರಿಕ ಜೀವನ ಶೈಲಿಯ ಪ್ರಖರತೆ ಕಡಿಮೆಯಾಗುತ್ತ ಬಂದಾಗ್ಯೂ ಸಂಪ್ರದಾಯದಿಂದಾಗಿ, ಜನಮಾನಸದಲ್ಲಿ ಖಚಿತವಾಗಿ ಉಳಿದುಕೊಂಡು ಬಂದ ಈ ಸಂಸ್ಕೃತಿಯ ಮೂಲಭೂತ ಲಕ್ಷಣಗಳು ಕಾಲದಿಂದ ಕಾಲಕ್ಕೆ ಬಳುವಳಿಯಾಗಿ ಬಂದು ಇಂದಿಗೂ ಭಾರತೀಯ ಸಮಾಜದ ದೈನಂದಿನ ಜೀವನದಲ್ಲಿ ಕೆಲವೊಂದು ಅಂಶಗಳು ಜೀವಂತವಾಗಿ ಉಳಿದುಕೊಂಡಿವೆ. (ಎಲ್.ಎಸ್.ಆರ್.)

**ಹರಪ್ಪ ನಾಗರಿಕತೆಯ ಜನಸಮುದಾಯ:** 1920ರ ದಶಕದಲ್ಲಿ ಬೆಳಕಿಗೆ ಬಂದ ಹರಪ್ಪ ನಾಗರಿಕತೆಯ ಮೂಲಪುರುಷರು ಯಾರು ಎಂಬುದು ಇಂದಿಗೂ ಒಂದು ಸಮಸ್ಯಾತ್ಮಕ ವಿಷಯವಾಗಿದೆ. ಹರಪ್ಪ ಲಿಪಿಯನ್ನು ಅರ್ಥೈಸುವ ಪ್ರಯತ್ನಗಳು ಪೂರ್ಣವಾಗಿ ಯಶಸ್ವಿಯಾಗದಿರುವ ಹಿನ್ನೆಲೆಯಲ್ಲಿ ಈ ಪ್ರಶ್ನೆಯೂ ರಹಸ್ಯವಾಗಿಯೇ ಉಳಿದಿದೆ. ಇಂಡೊ–ಸುಮೇರಿಯನ್, ಪ್ರೋಟೊ–ಎಲಮೈಟ್, ಎಲಮೈಟ್, ಆರ್ಯರು, ದ್ರಾವಿಡರು ಮೊದಲಾದವರು ಹರಪ್ಪ ನಾಗರಿಕತೆಯ ನಿರ್ಮಾತೃಗಳು ಎಂಬ ಸಿದ್ಧಾಂತಗಳಿದ್ದರೂ ಈ ವಿಷಯದಲ್ಲಿ ಒಮ್ಮತವಿಲ್ಲ.

ಹರಪ್ಪ ನೆಲೆ 1921ರಲ್ಲಿ ಆರ್.ಡಿ.ಬ್ಯಾನರ್ಜಿಯವರಿಂದಲೂ ಮೊಹೆಂಜೋದಾರೊ ನೆಲೆ 1922ರಲ್ಲಿ ಡಿ.ಆರ್.ಸಾಹ್ನಿಯವರಿಂದಲೂ ಉತ್ಖನನಕ್ಕೆ ಒಳಪಟ್ಟವು. ಈ ವಸತಿನೆಲೆಗಳು ಸಮಕಾಲೀನವೆಂಬುದನ್ನು ಮನಗಂಡ ಜಾನ್ ಮಾರ್ಷಲ್ 1924ರಲ್ಲಿ ಇಲ್ಲಸ್ಟ್ರೇಟೆಡ್ ಲಂಡನ್ ನ್ಯೂಸ್ ಪತ್ರಿಕೆಯಲ್ಲಿ ಇಲ್ಲಿ ದೊರೆತ ಪ್ರಾಚ್ಯವಸ್ತುಗಳ ಬಗ್ಗೆ ಲೇಖನವೊಂದನ್ನು ಪ್ರಕಟಿಸಿದ. ಒಂದು ವರ್ಷದ ಅನಂತರ ಎ.ಎಚ್.ಸೇಸ್ ಹರಪ್ಪ–ಮೊಹೆಂಜೋದಾರೊ ಹಾಗೂ ಸುಮೇರಿಯದ ಪ್ರಾಚ್ಯಾವಶೇಷಗಳಲ್ಲಿರುವ ಸಾಮ್ಯತೆಯ ಮೇಲೆ ವಿದ್ವಾಂಸರ ಗಮನ ಸೆಳೆದನಲ್ಲದೆ ಭಾರತದ ಈ ನೆಲೆಗಳು 3ನೆಯ ಉರ್ ವಂಶದ ಕಾಲದವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ. ಈ ಹೋಲಿಕೆಗೆ ಪುಷ್ಟಿ ನೀಡುವ ಮತ್ತಷ್ಟು ಅಂಶಗಳನ್ನು ಸಿಡ್ನಿ ಸ್ಮಿತ್ ಮತ್ತು ಸಿ.ಜೆ. ಗ್ಯಾಡ್‌ರವರು ಬೆಳಕಿಗೆ ತಂದರು. ಇದೇ ಸಮಯದಲ್ಲಿ ಮೊಹೆಂಜೋದಾರೊ ಮತ್ತು ಕಿಷ್‌ಗಳ ಮಣ್ಪಾತ್ರೆಗಳು ಹಾಗೂ ಮುದ್ರಿಕೆಗಳು ಒಂದನ್ನೊಂದು ಹೋಲುವುದನ್ನು ಮ್ಯಾಕೆಯು ಮಾರ್ಷಲ್‌ನ ಗಮನಕ್ಕೆ ತಂದ. ಈ ಎಲ್ಲ ಹೋಲಿಕೆಗಳ ಆಧಾರದ ಮೇಲೆ ಮಾರ್ಷಲ್ ನವನಾಗರಿಕತೆಯನ್ನು ಮೊದಲಿಗೆ ಇಂಡೊ–ಸುಮೇರಿಯನ್ ಎಂದು ಕರೆದ. ಹೀಗೆ ಕರೆಯಲು ಮತ್ತೊಂದು ಕಾರಣವೆಂದರೆ ಹರಪ್ಪ–ಮೊಹೆಂಜೋದಾರೊ ಹಾಗೂ ಸುಮೇರಿಯನ್ ಮತ್ತು ಪ್ರೋಟೊ–ಎಲಮೈಟ್ ಜನಾಂಗಗಳ ನಡುವೆ ನಿಕಟ ಸಂಬಂಧವಿದ್ದಿರಬಹುದೆಂಬ ಇವನ ಅಭಿಪ್ರಾಯ. ಆದರೂ ಇಂಡೊ–ಸುಮೇರಿಯನ್ ಎಂಬ ಹೆಸರು ಸಮಂಜಸವಲ್ಲವೆಂದೆನಿಸಿ ಹೊಸನಾಗರಿಕತೆಗೆ ಇವನು ಇಂಡಸ್ ಎಂದು ಮರುನಾಮಕರಣ ಮಾಡಿದ. ಇದೇ ಹೊತ್ತಿಗೆ ಹರಪ್ಪ–ಮೆಸಪೊಟೇಮಿಯದ ಸಾಮ್ಯತೆಗಳಿಂದ ಉತ್ತೇಜಿತರಾದ ಗ್ಯಾಡ್, ಸ್ಮಿತ್, ವಾಡೆಲ್, ಬಾರ್ಟನ್, ಪ್ರಾಣನಾಥ, ಹಂಟರ್ ಮೊದಲಾದ ವಿದ್ವಾಂಸರು ಸುಮೇರಿಯ, ಪ್ರೋಟೊ–ಎಲಮೈಟ್, ಹಿಟೈಟ್, ಎಲಮೈಟ್, ಮಿನೊವನ್ ಮೊದಲಾದ ಲಿಪಿಗಳ ಸಹಾಯದಿಂದ ಇಂಡಸ್ ಲಿಪಿಯನ್ನು ಓದುವ ವ್ಯರ್ಥ ಪ್ರಯತ್ನ ನಡೆಸುತ್ತಿದ್ದರು. ಆಗ ಕೆಲವೊಂದು ಸಾಹಿತ್ಯಕ ಹಾಗೂ ಪುರಾತತ್ತ್ವ ಆಧಾರಗಳ ಮೇಲೆ ಮಾರ್ಷಲ್ ಇಂಡಸ್ ನಾಗರಿಕತೆ ವೇದಪೂರ್ವದ್ದು ಹಾಗೂ ಆರ್ಯೇತರ ಜನಾಂಗದ್ದು ಎಂಬುದಾಗಿ ತರ್ಕಿಸಿದ. ಇಂಡಸ್ ಲಿಪಿಯ ಭಾಷೆ ಸಂಸ್ಕೃತವಿರಬಹುದಾದ ಸಾಧ್ಯತೆಯನ್ನು ಇವನು ತಳ್ಳಿಹಾಕಿದ. ಇವನ ವಾದ ಎಷ್ಟು ಬಲವಾಗಿತ್ತೆಂದರೆ ಸಮಕಾಲೀನ ದೇಶಿ–ವಿದೇಶಿ ವಿದ್ವಾಂಸರುಗಳಲ್ಲಿ ಅನೇಕರು ಇದನ್ನು ಎರಡು ಮಾತಿಲ್ಲದೆ ಒಪ್ಪಿಕೊಂಡರು.

ಸಿಂಧೂ ನಾಗರಿಕತೆಯ ಅನ್ವೇಷಣೆಗೆ ಬಹು ಮೊದಲೇ ಆಗಿನ ಪ್ರಚಲಿತ ಭಾರತೀಯ ಇತಿಹಾಸದ ಪ್ರಭಾವದಿಂದ ಆರ್ಯರ ಕುರಿತಾದ ಒಂದು ಚಿತ್ರಣ ಜನಮನದಲ್ಲಿ ಬೇರೂರಿತ್ತು. ಪಶುಸಂಗೋಪನೆ ಮತ್ತು ಆದಿಮ ಕೃಷಿಯನ್ನು ಅವಲಂಬಿಸಿದ್ದ ಆರ್ಯರು ಸಿಂಧೂ–ಸರಸ್ವತಿ ಬಯಲುಗಳಲ್ಲಿ ಸಮೃದ್ಧವಾಗಿ ಬೆಳೆದಿದ್ದ ನಗರ–ಪಟ್ಟಣಗಳ ಮೇಲೆ ಆಕ್ರಮಣ ಮಾಡಿ ಅವನ್ನು ಕೊಳ್ಳೆಹೊಡೆದು ನಾಶಮಾಡುತ್ತಿದ್ದರು; ವಾಯವ್ಯ ಪರ್ವತಗಳ ಮಾರ್ಗವಾಗಿ ಬಯಲುಪಟ್ಟಣಗಳ ಮೇಲೆ ಧಾಳಿಮಾಡುತ್ತಿದ್ದ ಇವರು ಜಾನುವಾರುಗಳನ್ನೂ ಗದ್ದೆ–ಗೋಮಾಳಗಳನ್ನೂ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದರು; ಅಶ್ವ ರಥಗಳಲ್ಲಿ ಇವರು ಸಂಚರಿಸುತ್ತಿದ್ದರೂ ನಗರ ಜೀವನ ಹಾಗೂ ಅದರ ಸವಲತ್ತುಗಳನ್ನು ಅರಿಯದವರಾಗಿದ್ದರು; ಇವರು ಅಗ್ನಿಆರಾಧಕರೂ ಸೋಮಪಂಥೀಯರೂ ಆಗಿದ್ದರು; ಸರಳ ಮತಾಚರಣೆಗಳನ್ನು ರೂಢಿಸಿಕೊಂಡಿದ್ದ ಇವರು ಪ್ರಾಕೃತಿಕ ಶಕ್ತಿಗಳನ್ನೇ ದೈವ ರೂಪದಲ್ಲಿ ಪೂಜಿಸುತ್ತಿದ್ದರು; ಇವರ ದೈವ ಸಮೂಹದಲ್ಲಿ ಬಲಿಷ್ಠನಾದವನು ಇಂದ್ರ–ಇವನು ಗಾಳಿ, ಮಳೆ, ಸಿಡಿಲು, ಗುಡುಗುಗಳ ಅಧಿಪತಿಯೂ ಯುದ್ಧ ದೇವತೆಯೂ ಆಗಿದ್ದ; ಆರ್ಯ ಸಂಸ್ಕೃತಿಯಲ್ಲಿ ಸ್ತ್ರೀ ದೇವತೆಗಳಿಗೆ ಆದ್ಯ ಸ್ಥಾನವಿರಲಿಲ್ಲ ಮತ್ತು ಮೂರ್ತಿಪೂಜೆಯಿರಲಿಲ್ಲ. ಇಂತಹ ವಿಚಾರಗಳು ಸುಸಂಸ್ಕೃತ ಸಿಂಧೂ ನಾಗರಿಕತೆಯನ್ನು ಆದಿಮ ಆರ್ಯ ಸಂಸ್ಕೃತಿಯಿಂದ ದೂರವಿರಿಸಿದವು. ಸಿಂಧೂ ನೆಲೆಗಳಲ್ಲಿ ಅಶ್ವ ಅವಶೇಷಗಳು ಹಾಗೂ ಆರ್ಯರು ಬಳಸುತ್ತಿದ್ದ ರಕ್ಷಾ ಕವಚಗಳು ಕಾಣದಿದ್ದುದೂ ಈ ಎರಡೂ ನಾಗರಿಕತೆಗಳು ಬೇರೆ ಎಂಬ ವಿಚಾರಧಾರೆಗೆ ನೀರನ್ನೆರೆದವು. ಇವರೆಡರ ನಡುವೆ ಕಂಡುಬಂದ ಇನ್ನಷ್ಟು ಭಿನ್ನತೆಗಳೆಂದರೆ ಲಂಬಕಾಯರಾಗಿದ್ದ ಆರ್ಯರು ಶ್ವೇತವರ್ಣೀಯರಾಗಿದ್ದರೆ ಸಿಂಧೂ ಜನರು ಶ್ಯಾಮಲವರ್ಣದವರೂ ದಪ್ಪ ಮೂಗಿನವರೂ ಆಗಿದ್ದರು. ಆರ್ಯರು ಗೋವನ್ನು ಆರಾಧಿಸುತ್ತಿದ್ದರೆ ಸಿಂಧೂ ಜನರು ಗೂಳಿಯನ್ನು ಪೂಜಿಸುತ್ತಿದ್ದರು. ಶವದಹನ ಆರ್ಯನ್ನರ ಸಂಸ್ಕಾರ ಪದ್ಧತಿಯಾದರೆ ಸಿಂಧೂ ಜನರು ಶವವನ್ನು ಹೂಳುತ್ತಿದ್ದರು. ಆರ್ಯರು ಕಬ್ಬಿಣ ತಂತ್ರಜ್ಞಾನವನ್ನೂ ಸಿಂಧೂ ಜನರು ತಾಮ್ರ–ಕಂಚಿನ ತಂತ್ರಜ್ಞಾನವನ್ನೂ ಅವಲಂಬಿಸಿದ್ದರು. ಕೊನೆಯದಾಗಿ ಕಾಲಮಾನದಲ್ಲೂ ಅಜಗಜಾಂತರ ವ್ಯತ್ಯಾಸವಿತ್ತು; ಸಿಂಧೂ ನಾಗರಿಕತೆ ಪ್ರ.ಶ.ಪೂ.3ನೆಯ ಸಹಸ್ರಮಾನದಲ್ಲಿ ಅರಳಿ ಅಳಿದರೆ ಆರ್ಯರು ಪ್ರ.ಶ.ಪೂ.1500–1200ರ ಕಾಲಾವಧಿಯಲ್ಲಿ ಉಪಖಂಡಕ್ಕೆ ವಲಸೆಬಂದರು. ಕಾಲಮಾನ, ಸಂಸ್ಕೃತಿ, ತಂತ್ರಜ್ಞಾನ, ಮತಾಚರಣೆಗಳಲ್ಲಿದ್ದ ಅಂತರದಿಂದ ಈ ಎರಡೂ ಜನಾಂಗಗಳನ್ನು ಸಮೀಕರಿಸುವ ಪ್ರಶ್ನೆಯೇ ಏಳಲಿಲ್ಲ.

ಇಂತಹ ಸಮಯದಲ್ಲಿ ಸಿಂಧೂ–ಆರ್ಯ ಸಂಶೋಧನೆಗೆ ಒಂದು ಹೊಸ ತಿರುವನ್ನು ಸೃಷ್ಟಿಸಿದವನು ವೀಲರ್. ಮೆಸಪೊಟೇಮಿಯ ಮತ್ತು ಈಳಮ್ ನೆಲೆಗಳಿಂದ ಲಭಿಸಿದ ಪರಿಷ್ಕೃತ ಕಾಲಮಾನಗಳ ಹಿನ್ನೆಲೆಯಲ್ಲಿ ಇವನು ಸಿಂಧೂ ನಾಗರಿಕತೆಯನ್ನು ಪ್ರ.ಶ.ಪೂ. 2500–1500ರ ಅವಧಿಯಲ್ಲಿ ಇರಿಸಿದ. ಅಲ್ಲಿಗೆ ಸಿಂಧೂ ನಾಗರಿಕತೆಯ ಅಂತ್ಯಕಾಲ ವಾಯವ್ಯ ಭಾರತದಲ್ಲಿ ಇಂಡೊ–ಆರ್ಯರ ಪ್ರವೇಶ ಕಾಲಕ್ಕೆ (ಅಂದು ತಿಳಿದಿದ್ದಂತೆ) ಸರಿಸಮವಾಯಿತು. ಅಷ್ಟೇ ಅಲ್ಲ, ಆಕ್ರಮಣಕಾರಿ ಆರ್ಯರು ಮತ್ತು ನದಿಬಯಲುಗಳಲ್ಲಿದ್ದ ದಸ್ಯು/ದಾಸ ಅಥವಾ ಅಸುರ ಪುರವಾಸಿಗಳ ನಡುವೆ ಆಗುತ್ತಿದ್ದ ಕದನಗಳಿಗೆ ಈ ಕಾಲಮಾನ ಒಂದು ಚಾರಿತ್ರಿಕ ಸಂದರ್ಭವನ್ನು ಕಲ್ಪಿಸಿತು. ಇಂತಹ ಕದನಗಳಲ್ಲಿ ಆರ್ಯರೇ ಮೇಲುಗೈ ಸಾಧಿಸುತ್ತಿದ್ದರು. ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ವೀಲರ್ ಋಗ್ವೇದದಲ್ಲಿ ಪುರಗಳಿಗೆ ಸಂಬಂಧಿಸಿದಂತೆ ಇರುವ ಉಲ್ಲೇಖಗಳನ್ನು (ಉದಾ: ಪೃಥ್ವಿ, ಉರ್ವೀ, ಶರಾದ್ರಿ, ಶತಭುಜಿ ಇತ್ಯಾದಿ) ಧಾರಾಳವಾಗಿ ಬಳಸಿಕೊಂಡ. ಆರ್ಯರ ಯುದ್ಧ ದೇವತೆಯಾದ ಇಂದ್ರ ಪುರಂದರ, ಅಂದರೆ ಕೋಟೆಯ ವಿನಾಶಕನಾಗಿದ್ದು ಅನೇಕ ಕೋಟೆಯಿಂದಾವೃತವಾದ ನಗರಗಳನ್ನು ಭಂಜಿಸಿದನೆಂದು ವೀಲರ್ ವಾದಿಸಿದ. ಇದೇ ಕಾರಣಕ್ಕಾಗಿ ಈತ ಇಂದ್ರನಿಗೆ ಅಪರಾಧಿ ಪಟ್ಟ ಕಟ್ಟಿದ. ಹರಪ್ಪ ನೆಲೆಯ ಅಗಾಧ ಕೋಟೆಗೋಡೆ, ಬುರುಜು ಮತ್ತು ಪ್ರವೇಶದ್ವಾರಗಳನ್ನು ಉತ್ಖನನದಿಂದ ಅನಾವರಣಗೊಳಿಸಿದವನು ವೀಲರ್ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಪುರಾತತ್ತ್ವ ಆಧಾರ ವೀಲರ್‌ನ ಆಕ್ರಮಣಕಾರಿ ಆರ್ಯ ಸಿದ್ಧಾಂತದೊಡನೆ ತಾಳೆಯಾಯಿತು. ಆದರೆ ಮುಂದೊಂದು ದಿನ ಕಾಲಮಾನಗಳು ಮತ್ತೆ ಪರಿಷ್ಕೃತಗೊಂಡ ಸಂದರ್ಭದಲ್ಲಿ ಈ ಸಿದ್ಧಾಂತ ಕುಸಿಯುವ ಎಚ್ಚರಿಕೆ ವೀಲರ್‌ನಿಗೆ ಇಲ್ಲದಿರಲಿಲ್ಲ. ಅನಂತರ ಹರಪ್ಪದಲ್ಲಿರುವ ಸಿಮೆಟ್ರಿ ಎಚ್ ಸಂಸ್ಕೃತಿ ಆರ್ಯ ಆಕ್ರಮಣಕಾರರಿಗೆ ಸಂಬಂಧಿಸಿದ್ದಿರಬಹುದು ಎಂಬ ಸಂಶಯವನ್ನು ಇವನು ವ್ಯಕ್ತಪಡಿಸಿದ. ಸಿಮೆಟ್ರಿ ಎಚ್ ಮಣ್ಪಾತ್ರೆಗಳ ಮೇಲಿನ ಚಿತ್ರಗಳನ್ನು ಪರೀಕ್ಷಿಸಿದ ವತ್ಸ ಇವು ಋಗ್ವೇದ, ಐತ್ತರೇಯ ಬ್ರಾಹ್ಮಣ ಮತ್ತು ವೈದಿಕ ಸೂತ್ರಗಳಲ್ಲಿಯ ಕೆಲವು ವರ್ಣನೆಗಳಿಗೆ ಸಮೀಪವಾಗಿರುವುದನ್ನು ತೋರಿಸಿಕೊಟ್ಟದ್ದು ವೀಲರ್‌ನ ಮತ್ತೊಂದು ಸಿದ್ಧಾಂತಕ್ಕೆ ದಾರಿಮಾಡಿತು. ಅದೇನೆಂದರೆ, ಹರಪ್ಪ ನಾಗರಿಕತೆಯ ಅಂತ್ಯ ಹಾಗೂ ಆರ್ಯರ ಪ್ರವೇಶದ ನಡುವಿನ ಹ್ರಸ್ವ ಕಾಲಾವಧಿಯಲ್ಲಿ ಮತ್ತೊಂದು ಸುಸಜ್ಜಿತ ನಾಗರಿಕತೆ ಹುಟ್ಟಿಬೆಳೆದು ಪ್ರಾಯಶಃ ಅದು ಆರ್ಯರ ಆಕ್ರಮಣಕಾರಿ ಧಾಳಿಗೆ ತುತ್ತಾಯಿತು. ಮುಂದಿನ ದಿನಗಳಲ್ಲಿ ಹರಪ್ಪದ ಅವಶೇಷಗಳಿಗೆ ಇಂಗಾಲ–14ರ ಕಾಲಮಾನ ಲಭಿಸಿತಲ್ಲದೆ ವೀಲರ್‌ನ ಮೊಹೆಂಜೋದಾರೊ ಕಗ್ಗೊಲೆ ಸಿದ್ಧಾಂತದ ಟೊಳ್ಳುತನಗಳು ಬಯಲಿಗೆ ಬಂದವು. ಆಗ ವೀಲರ್ ತಪ್ಪೊಪ್ಪಿಕೊಂಡು ಇಂದ್ರ ನಿರ್ದೋಷಿ ಎಂದು ಘೋಷಿಸಿದ. ಇದರಿಂದ ಋಗ್ವೇದದ ಪುರಗಳಿಗೆ ಚಾರಿತ್ರಿಕತೆಯನ್ನು ಒದಗಿಸುವ ಪ್ರಯತ್ನಗಳಿಗೆ ಕೆಲಸಮಯ ತೆರೆ ಎಳೆದಂತಾಯಿತು. ಆದರೆ ಸಿಂಧೂ ಜನರು ಆರ್ಯೇತರರು ಎಂಬ ಅಭಿಪ್ರಾಯಕ್ಕೆ ಈ ಸಿದ್ಧಾಂತಗಳು ಭಂಗ ತರಲಿಲ್ಲ.

ಈ ನಡುವೆ ಋಗ್ವೇದದಲ್ಲಿ ಬರುವ ಕೃಷ್ಣ, ಕೃಷ್ಣ ತ್ವಚ್ (ಶ್ಯಾಮಲವರ್ಣೀಯ), ಕೃಷ್ಣ ವಿಶ್ (ಕರಿಯ ಜನಾಂಗ), ಅನಾಸ (ಮೊಂಡು ನಾಸಿಕ), ಅವ್ರತ (ಧರ್ಮಹೀನ), ಅನ್ಯವ್ರತ (ಪರಧರ್ಮೀಯ), ಅದೇವ (ದೇವರಿಲ್ಲದವರು), ಶಿಶ್ನದೇವ (ಶಿಶ್ನ ಆರಾಧಕ) ಇತ್ಯಾದಿ ವಿವರಗಳು ಹರಪ್ಪ ಜನರು ಆರ್ಯರಲ್ಲಿ ದ್ರಾವಿಡ ಭಾಷೀಯರೂ ಆಗಿದ್ದರು ಎಂಬ ಪ್ರಮೇಯವನ್ನು ಪೋಷಿಸಿದವು. ಬಲೂಚಿಸ್ತಾನದಲ್ಲಿ ಬ್ರಾಹೂಇ ಎಂಬ ದ್ರಾವಿಡ ಜನಾಂಗ ಇಂದಿಗೂ ನೆಲೆಸಿರುವುದು ಸಹ ಹರಪ್ಪ–ದ್ರಾವಿಡ ವಾದವನ್ನು ಸಮರ್ಥಿಸಿತು. ಅಂದರೆ ವಾಯವ್ಯ ಭಾರತ ಸಿಂಧೂ ನಾಗರಿಕತೆಯ ಸಮಯದಲ್ಲಿ ದ್ರಾವಿಡ ಜನಾಂಗಗಳ ನೆಲೆವೀಡಾಗಿತ್ತು. ಈ ಜನಾಂಗಗಳನ್ನು ಆರ್ಯರು ದಕ್ಷಿಣದೆಡೆಗೆ ತಳ್ಳಿದರಲ್ಲದೆ ಶಿವ, ಶಕ್ತಿ ಮೊದಲಾದ ಅನೇಕ ಪದ–ಪರಿಕಲ್ಪನೆಗಳನ್ನು ಈ ಸಂಸ್ಕೃತಿಯಿಂದ ಎರವಲು ಪಡೆದರು. ಈ ದೃಷ್ಟಿಯಿಂದ ಸಿಂಧೂ ಲಿಪಿಯನ್ನು ಪ್ರಾಚೀನ ತಮಿಳು ಲಿಪಿ–ಭಾಷೆಯ ಮೂಲಕ ಓದುವ ಪ್ರಯತ್ನಗಳು ಮೊದಲುಗೊಂಡವು. ಹೀಗೆ ಸಿಂಧೂ ಲಿಪಿ–ಭಾಷೆಯಲ್ಲಿ ಈ ಜನಾಂಗದ ಸುಳಿವುಗಳನ್ನು ಹುಡುಕುವ ಪರಂಪರೆ ಆರಂಭಗೊಂಡಿತು.

ಸಿಂಧೂ ಲಿಪಿಯನ್ನು ಅರ್ಥೈಸಲು ಯತ್ನಿಸಿದ ಮೊದಲಿಗರಲ್ಲೊಬ್ಬನಾದ ಫೇರ್‌ಸರ್ವಿಸ್ ಸಿಂಧೂ ಮುದ್ರಿಕೆಗಳಲ್ಲಿ 400 ಅಕ್ಷರ ಸಂಕೇತಗಳನ್ನು ಗುರುತಿಸಿದ. ಇನ್ನೂ ಪೂರ್ತಿಯಾಗಿ ಓದಲಾಗದ ಪೂರ್ವಭಾವಿ ಎಲಮೈಟ್ ಹಾಗೂ ದ್ರಾವಿಡ ಭಾಷೆಯ ಮುಖಾಂತರ ಸಿಂಧೂ ಲಿಪಿಯನ್ನು ಈತ ಓದಿದ. ಭಾಷಾತಜ್ಞರಾದ ಡೇವಿಡ್ ಮ್ಯಾಕ್‌ಅಲ್ಪೈನ್ ಮತ್ತು ಮಲ್ಲೊರಿಯವರ ದೃಷ್ಟಿಯಲ್ಲಿ ದಕ್ಷಿಣ ಇರಾನಿನ ಎಲಮೈಟ್ ಭಾಷೆಗೂ ದ್ರಾವಿಡ ಭಾಷೆಗಳಿಗೂ ಸಂಬಂಧವಿದ್ದು ಇವೆರಡೂ ಉಪ–ಭಾಷಾವರ್ಗಗಳ ಮೂಲ ಒಂದೇ. ಅಲ್ಲದೆ ಪ್ರಾದೇಶಿಕವಾಗಿಯೂ ಭಾಷೆಯ ದೃಷ್ಟಿಯಿಂದಲೂ ಈ ಎರಡು ಉಪ–ಭಾಷಾವರ್ಗಗಳ ನಡುವಿನ ಸ್ಥಾನವನ್ನು ಬ್ರಾಹೂಇ ಭಾಷೆ ಆಕ್ರಮಿಸಿಕೊಂಡಿದೆ. ಈ ನಿಲುವನ್ನು ರೆನ್‌ಫ್ರ್ಯೂರವರು ಒಪ್ಪುವುದಿಲ್ಲ. ಇದಕ್ಕೆ ಪ್ರತಿಯಾಗಿ, ಸಿಂಧೂ ನಾಗರಿಕತೆ ದಕ್ಷಿಣ ಇರಾನಿನ ಸಂಸ್ಕೃತಿಗಳಿಂದ ಪ್ರೇರೇಪಿತವಾದದ್ದು ಎಂದು ಸಿದ್ಧಪಡಿಸುವುದು ಸಾಧ್ಯವಾದಲ್ಲಿ ಮಾತ್ರ ಮ್ಯಾಕ್‌ಅಲ್ಪೈನ್–ಮಲ್ಲೊರಿಯವರ ವಾದ ಸಮ್ಮತವಾಗುತ್ತದೆ ಎಂದು ಭಗವಾನ್‌ಸಿಂಗ್ ಅಭಿಪ್ರಾಯಪಟ್ಟಿದ್ದಾರೆ. 1969ರಲ್ಲಿ ಫ್ಲಿನಿಶ್ ವಿದ್ವಾಂಸರಾದ ಆಸ್ಕೊ ಪರ್ಪೋಲನ ತಂಡ ಸಿಂಧೂ ಲಿಪಿಯಲ್ಲಿ ಪೂರ್ವಭಾವಿ–ದ್ರಾವಿಡ ಭಾಷೆಯ ಅಂಶಗಳನ್ನು ಗುರುತಿಸಿದ್ದಾಗಿ ವರದಿ ಮಾಡಿತು. ಈ ಲಿಪಿ ದ್ರಾವಿಡ ಭಾಷೆಗೆ ಸಂಬಂಧಿಸಿದ್ದಾದರೂ ಇಂಡೊ–ಆರ್ಯನ್ ಅಥವಾ ಅನಂತರದ ಪರಂಪರೆಯಲ್ಲಿ ಈ ಲಿಪಿಯ ಛಾಯೆ ಕಂಡುಬರುತ್ತದೆ ಎಂಬುದು ಐರಾವತಂ ಮಹದೇವನ್ ಅವರ ಅಧ್ಯಯನದ ಮುಖ್ಯಾಂಶ.

ಈ ವಿದ್ವಾಂಸರು ದ್ರಾವಿಡ/ಪೂರ್ವಭಾವಿ ದ್ರಾವಿಡ ಪಂಥಕ್ಕೆ ಸೇರಿದವರಾದರೆ ಕೃಷ್ಣರಾವ್, ರಿಕ್ವರ್ ಉಶನಸ್, ಎಸ್.ಆರ್. ರಾವ್ ಮೊದಲಾದವರು ಸಂಸ್ಕೃತ/ಪೂರ್ವಭಾವಿ ಸಂಸ್ಕೃತ ಪಂಗಡದ ಅನುಯಾಯಿಗಳು. ಎಸ್.ಆರ್. ರಾವ್ ಅವರ ಅಧ್ಯಯನ ಸೂಚಿಸುವಂತೆ ಸಿಂಧೂ ಲಿಪಿಗೆ ವರ್ಣಮಾಲೆಯ ಸ್ವರೂಪವಿದೆ. ಈ ವರ್ಣಮಾಲೆಯಲ್ಲಿ ಕೇವಲ 20 ಧ್ವನಿ ಸೂಚಕ ಸಂಕೇತಗಳಿವೆ; ಕೆಲವು ಸಂದರ್ಭಗಳಲ್ಲಿ 3–4 ಸಂಕೇತಗಳು ಸೇರಿ ಒಂದು ಅಕ್ಷರವಾಗುತ್ತವೆ. ಮೊದಲಿಗೆ ಇವರು ಈ ಸಂಕೇತಗಳನ್ನು ದಕ್ಷಿಣ ಸೆಮಿಟಿಕ್ ಸಂಕೇತಗಳೊಂದಿಗೆ ಹೋಲಿಸಿ ನೋಡಿದರು. ಆದರೆ ಸೆಮಿಟಿಕ್ ಲಿಪಿಯ ಕಾಲಮಾನ ಪ್ರ.ಶ.ಪೂ. 1600–1200 ಎಂಬುದು ಗಮನಕ್ಕೆ ಬಂದಾಗ ಈ ಹೋಲಿಕೆ ಸರಿಯೆನಿಸದೆ ಇವರು ಸುಮೇರಿಯನ್, ಅಕ್ಕಾಡಿಯನ್ ಮತ್ತು ಉಗರಿಟಿಕ್ ಲಿಪಿಗಳ ಮೊರೆಹೊಕ್ಕರು. ಸಿಂಧೂ ಸಂಕೇತಗಳ ಮೂಲಭಾಗವನ್ನು ಸುಮೇರಿಯನ್ ಲಿಪಿಯ ನೆರವಿನಿಂದಲೂ ಮೂಲಭಾಗಕ್ಕೆ ಸೇರಿಸಿರುವ ಅಡ್ಡಗೆರೆಗಳನ್ನು (ಸ್ಟ್ರೋಕ್ಸ್) ಅಕ್ಕಾಡಿಯನ್ ಮತ್ತು ಉಗರಿಟಿಕ್‌ಗಳ ಕ್ಯೂನಿಫಾರ್ಮ್ ಬರವಣಿಗೆಯ ನೆರವಿನಿಂದಲೂ ಇವರು ಅರ್ಥೈಸಿರುವರು. ಈ ಪ್ರಯತ್ನದಲ್ಲಿ ಸಿಂಧೂ ಲಿಪಿಯಲ್ಲಿ ಸಂಸ್ಕೃತ ಭಾಷಾ ಪದಗಳಿರುವುದು ಗೋಚರವಾಯಿತು.

ಕೆಲವೊಂದು ಹರಪ್ಪ ಸಂಕೇತ ಅಥವಾ ಚಿಹ್ನೆಗಳು ಈ ನಾಗರಿಕತೆಯೊಂದಿಗೆ ಅಳಿಯಲಿಲ್ಲ. ಮಧ್ಯ ಭಾರತ, ಉತ್ತರ ದಖನ್ ಹಾಗೂ ಗುಜರಾತಿನ ತಾಮ್ರ–ಶಿಲಾಯುಗ ಸಂಸ್ಕೃತಿಗಳಲ್ಲಿ (ಪ್ರ.ಶ.ಪೂ. 2000) ಮರುಕಳಿಸಿದ ಈ ಚಿಹ್ನೆಗಳು ದಕ್ಷಿಣ ಭಾರತದ ಬೃಹತ್‌ಶಿಲಾ ಸಂಸ್ಕೃತಿಯಲ್ಲಿಯೂ (ಪ್ರ.ಶ.ಪೂ. 1000) ಮುಂದುವರೆದುದಾಗಿ ಬಿ.ಬಿ. ಲಾಲ್ ಅವರು ತಿಳಿಸುತ್ತಾರೆ. ಆದಿ ಹರಪ್ಪ, ಹರಪ್ಪ, ತಾಮ್ರ–ಶಿಲಾಯುಗ, ಕಬ್ಬಿಣಯುಗ ಹಾಗೂ ಆದಿಚಾರಿತ್ರಿಕ ಕಾಲದ ಮಣ್ಪಾತ್ರೆಗಳ ಮೇಲೆ ಹಾಗೂ ಬಂಡೆಚಿತ್ರಗಳಲ್ಲಿರುವ ಗೀರುಚಿತ್ರಗಳ ತುಲನಾತ್ಮಕ ಅಧ್ಯಯನ ಮಾಡಿರುವ ಎಸ್. ಗುರುಮೂರ್ತಿಯವರು ದಕ್ಷಿಣ ಭಾರತದಲ್ಲಿಯ ಅನೇಕ ಗೀರು ಸಂಕೇತಗಳು ಸಿಂಧೂ ಚಿಹ್ನೆಗಳನ್ನು ಹೋಲುವುದನ್ನು ಗುರುತಿಸಿದ್ದಾರೆ. ಇತ್ತೀಚೆಗೆ ತಮಿಳುನಾಡಿನ ಶೆಂಬಿಯನ್ ಕಂಡಿಯೂರ್‌ನಲ್ಲಿ ಸಿಕ್ಕ ನವಶಿಲಾಯುಗದ ಕೊಡಲಿಯೊಂದರ ಮೇಲೆ ಕಂಡರಿಸಿರುವ 4 ಚಿಹ್ನೆಗಳು ಮಹದೇವನ್ ಅವರ ಅಭಿಪ್ರಾಯದಲ್ಲಿ ಶುದ್ಧ ಸಿಂಧೂ ಬರವಣಿಗೆಯೇ ಆಗಿದೆ. ಇದನ್ನು ಇವರು ಮುರುಕ್ಕು ಅನ್-ಮುರುಗನ್ (ತಮಿಳು ದೇವತೆ) ಎಂದು ಓದಿದ್ದಾರೆ. ಹರಪ್ಪ ಹಾಗೂ ತಮಿಳುನಾಡಿನ ನವಶಿಲಾಯುಗದ ಜನರು ದ್ರಾವಿಡ ಭಾಷೀಯರಾಗಿದ್ದರು ಎಂಬ ಅವರ ಅಭಿಪ್ರಾಯಕ್ಕೆ ಇದು ಒಂದು ಆಧಾರ. ನವಶಿಲಾಯುಗದ ಜನರು ಅಂತ್ಯ ಹರಪ್ಪ ಜನರೊಂದಿಗೆ ಸಂಪರ್ಕವಿರಿಸಿಕೊಂಡಿದ್ದು, ಹರಪ್ಪ ನೆಲೆಗಳಿಗೆ ಕೋಲಾರದ ಚಿನ್ನ ರಫ್ತಾಗುತ್ತಿದ್ದುದು ಇವರು ಉಲ್ಲೇಖಿಸುವ ಇತರ ಆಧಾರಗಳಾಗಿವೆ.

ದ್ರಾವಿಡ ಪಂಥದ ಮತ್ತೊಬ್ಬ ಪ್ರಮುಖ ವಿದ್ವಾಂಸರಾದ ಆರ್. ಮಧಿವಣನ್ ಅವರು ಸಿಂಧೂ ಭಾಷೆ ಶುದ್ಧ ದ್ರಾವಿಡ ಭಾಷೆಯಾಗಿತ್ತೆಂದು ವಾದಿಸುತ್ತಾರೆ. ತಮಿಳು–ಬ್ರಾಹ್ಮಿ ಲಿಪಿಯೊಂದಿಗೆ ಇವರು ಸಿಂಧೂ ಸಂಕೇತಗಳನ್ನು ಹೋಲಿಸಿದ್ದಾರೆ. ಇವರ ಪ್ರಕಾರ ಪ್ರತಿಯೊಂದು ಸಂಕೇತ ಅಥವಾ ಸಂಕೇತಗಳ ಸಮೂಹ ಒಂದು ಧ್ವನಿಯ ಉಚ್ಚಾರಕ್ಕೆ (ಸಿಲಬಿಕ್ ಸೌಂಡ್) ಸಮನಾಗಿದೆ. ಇವಲ್ಲದೆ ಕೆಲವು ಚಿತ್ರ ಮತ್ತು ಶಬ್ದ ಸೂಚಕಗಳೂ ಇವೆ. 12 ಸ್ವರ ಮತ್ತು 18 ವ್ಯಂಜನಗಳಿಂದ ಕೂಡಿದ 30 ಚಿಹ್ನೆ/ಸಂಕೇತಗಳನ್ನೂ ಹಲವಾರು ಚಿತ್ರ ಸಂಕೇತಗಳನ್ನೂ ಇವರು ಗುರುತಿಸಿದ್ದಾರೆ. ಇದರಲ್ಲಿ ಅನೇಕ ಸಂಕೇತಗಳಿಗೆ ಪರ್ಯಾಯ ಸಂಕೇತಗಳಿವೆ. ಉದಾ: ನ್‌ಗೆ 40 ಪರ್ಯಾಯ ಸಂಕೇತಗಳಿವೆ. 3000ಕ್ಕೂ ಹೆಚ್ಚು ಲಿಖಿತ ಸಿಂಧೂ ಮುದ್ರಿಕೆಗಳನ್ನು ಇವರು ವ್ಯಕ್ತಿ ಅಥವಾ ಸ್ಥಳನಾಮವಾಗಿ ಅರ್ಥೈಸಿದ್ದಾರೆ. ಇವರ ಪ್ರಕಾರ ಧೋಲಾವೀರದಲ್ಲಿ ಸಿಕ್ಕಿರುವ 10ಚಿಹ್ನೆಗಳ ಫಲಕದ ಅರ್ಥ ನಾಡನ್ ಪಣ್ಣಿಯನ್ ನಾನ್ ಮಣ್ಣವನ್. ಇದೇ ಶಾಸನವನ್ನು ನಟವರ್ ಝಾ ಅವರು ಮದ್–ದ್ವೈಧಾಃ–ಋಗ್–ವೇದ–ಶ್ವೈಃ–ಸಹಸ್ರಧಾ ಎಂದು ಸಂಸ್ಕೃತದಲ್ಲಿ ಓದಿರುವರು. ಇವರು 162 ಸಂಯುಕ್ತ ಸಂಕೇತ ಹಾಗೂ 15 ಚಿತ್ರ–ಧ್ವನಿ ಚಿಹ್ನೆಗಳಲ್ಲದೆ 33 ಸಂಸ್ಕೃತ ವ್ಯಂಜನಗಳು ಹಾಗೂ 3 ಸ್ವರಗಳನ್ನು ಪ್ರತಿನಿಧಿಸುವ ಸಂಕೇತಗಳನ್ನು ಗುರುತಿಸಿದ್ದಾರೆ. ಅಶೋಕನ ಬ್ರಾಹ್ಮಿಗೂ ದೇವನಾಗರಿಗೂ ಮೂಲವಾದ ಹಳೆಯ ಬ್ರಾಹ್ಮಿಲಿಪಿ ಇದಾಗಿದ್ದು ಭಾಷೆ ನಿಘಂಟು–ನಿರುಕ್ತ ಪರಂಪರೆಯ ಸಂಸ್ಕೃತ ಎಂಬುದು ಇವರ ಅಭಿಪ್ರಾಯ.

ಪೂರ್ವ ಹಾಗೂ ಮಧ್ಯಭಾರತದ ಆದಿವಾಸಿಗಳಾದ ಸಂತಾಲರು ತಮ್ಮ ಧಾರ್ಮಿಕ ಮಂಡಲಗಳಲ್ಲಿ ಉಪಯೋಗಿಸುವ ಸಂಕೇತಗಳ ಅಧ್ಯಯನದ ಮೂಲಕ ಎನ್.ಕೆ. ವರ್ಮ ಅವರು ಸಿಂಧೂಲಿಪಿಯಲ್ಲಿ ಸಂಸ್ಕೃತ ಅಕ್ಷರಗಳಿಗೆ ಸರಿಸಮವಾದ ಚಿಹ್ನೆಗಳನ್ನು ಪಟ್ಟಿಮಾಡಿದ್ದಾರೆ. ಇವು ಯಾವುದೇ ಭಾಷೆಗೆ ಸಂಬಂಧಿಸಿರದೆ ಕೇವಲ ಸಂಖ್ಯಾ ಚಿಹ್ನೆಗಳಾಗಿವೆ ಎಂಬ ಹೊಸ ವ್ಯಾಖ್ಯೆ ಬಿ.ಪಿ. ಸುಬ್ಬರಾಯಪ್ಪನವರದು. ಹೀಗೆ ಹೇಳಲು ಕಾರಣ ಇಂಡಸ್ ಮುದ್ರಿಕೆಗಳು ಕೃಷಿ ಉತ್ಪನ್ನಗಳಿಗೆ ಮತ್ತು ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಸಂಖ್ಯಾ ದಾಖಲೆಗಳು ಎಂಬ ಇವರ ನಂಬಿಕೆ. ಹೀಗೆ ಸಿಂಧೂಲಿಪಿಯನ್ನು ಸಂಸ್ಕೃತ ಅಥವಾ ದ್ರಾವಿಡ ಭಾಷೆಯಲ್ಲಿ ಓದುವ ಹಲವಾರು ಪ್ರಯತ್ನಗಳು ಸಾಗಿವೆ. ಇವೆಲ್ಲವೂ ಪರೋಕ್ಷವಾಗಿ ಈ ನಾಗರಿಕತೆಯ ಮೂಲಬೇರನ್ನು ಶೋಧಿಸುವ ಯತ್ನವೇ ಆಗಿವೆ.

ವೈದಿಕ ಸಂಸ್ಕೃತಿಯ ಜನರೇ ಹರಪ್ಪ/ಸಿಂಧೂ ನಾಗರಿಕತೆಯ ಜನಕರು ಎಂಬ ವಿಚಾರ ಇತ್ತೀಚಿನ ದಿನಗಳಲ್ಲಿ ಗಮನ ಸೆಳೆಯುತ್ತಿದೆ. ವೈದಿಕ ಸಾಹಿತ್ಯ ಅತ್ಯಂತ ಸುಸಜ್ಜಿತ–ಸುಸಂಸ್ಕೃತ ಸಮಾಜದ ಪ್ರತಿಬಿಂಬವಾಗಿದೆ ಎಂದು ಸಂಸ್ಕೃತ ಪಂಡಿತರಾದ ಎಚ್.ಎಚ್. ವಿಲ್ಸನ್ ಅವರು ಬಹಳ ಮುಂಚೆಯೇ ವ್ಯಕ್ತಪಡಿಸಿದ್ದರೂ ಅದು ಹೆಚ್ಚಾಗಿ ಗಮನ ಸೆಳೆದಿರಲಿಲ್ಲ. ಕಳೆದೆರಡು ದಶಕಗಳಲ್ಲಿ ಭಗವಾನ್ ಸಿಂಗ್, ಎಸ್.ಮಣಿಕ್, ಎಸ್.ಎ.ಚಂಚಲ್, ಆರ್.ಎಸ್.ಬಿಶ್ಟ್, ಆರ್.ಎನ್.ನಂದಿ, ಶಿವಾಜಿ ಸಿಂಗ್ ಮೊದಲಾದವರು ಈ ನಿಟ್ಟಿನಲ್ಲಿ ಸಂಶೋಧನೆ ನಡೆಸಿದ್ದಾರೆ. ಕಾಲಿಬಂಗನ್, ಬನಾವಳಿ, ರಾಖಿಗಡಿ, ಲೋಥಲ್ ಮೊದಲಾದ ಹರಪ್ಪ ವಸತಿನೆಲೆಗಳಲ್ಲಿ ಕಂಡುಬಂದಿರುವ ಹೋಮಕುಂಡಗಳು ಈ ವಿಚಾರವನ್ನು ಸಮರ್ಥಿಸುತ್ತವೆ. ವೈದಿಕ ಜನರ ಜೀವಸೆಲೆಯಾಗಿದ್ದ ಸರಸ್ವತಿ ನದಿ ಪ್ರ.ಶ.ಪೂ.2000–1900ರಲ್ಲಿ ಬತ್ತಿಹೋದದ್ದು ಮತ್ತು ಅದೇ ಸಮಯಕ್ಕೆ ಹರಪ್ಪ ನಾಗರಿಕತೆ ಅವನತಿಯ ಹಾದಿಹಿಡಿದದ್ದು, ಋಗ್ವೇದ ಆರ್ಯರ ವಸತಿ ವಲಯ ಸಿಂಧೂ–ಸರಸ್ವತಿ ನೆಲೆಗಳ ವ್ಯಾಪ್ತಿಯೊಂದಿಗೆ ತಾಳೆಯಾಗುವುದು ಇವೇ ಮೊದಲಾದ ಪುರಾತತ್ತ್ವ ಸಂಗತಿಗಳು ಈ ಸಮೀಕರಣಕ್ಕೆ ಮತ್ತಷ್ಟು ಬೆಂಬಲ ನೀಡಿವೆ. ನಿಕೊಲಸ್ ಕಜ್ಞನಸ್ ಅವರು ಹರಪ್ಪ–ಪೂರ್ವ ಸಂಸ್ಕೃತಿ ಋಗ್ವೇದ ಸಾಹಿತ್ಯದ ವಸ್ತುವಾಗಿದೆ ಎಂದು ಪ್ರತಿಪಾದಿಸಿದರೆ ಭಗವಾನ್ ಸಿಂಗ್ ಅವರು ಹರಪ್ಪ ಜನರನ್ನೇ ವೈದಿಕ ಆರ್ಯರೆನ್ನುತ್ತಾರೆ. ಹರಪ್ಪ ಸಮಾಜ ಸಂಕೀರ್ಣವಾಗಿದ್ದು ಆರ್ಯ–ಆರ್ಯೇತರ ಜನಾಂಗಗಳಿಂದ ತುಂಬಿತ್ತು ಎಂಬುದು ಶಿವಾಜಿ ಸಿಂಗ್‌ರವರ ನಿಲುವು. (ಬಿ.ಆರ್.ಎಸ್.)

**ಸಿಖ್‌ಧರ್ಮ:** ಭಾರತದ ಒಂದು ಪ್ರಮುಖ ಧರ್ಮ. ಗುರುನಾನಕ್ (1469–1538) ತನ್ನ ಉಪದೇಶವನ್ನು ಪಾಲಿಸುವ ಅನುಯಾಯಿಗಳನ್ನು ಸಿಖ್ ಎಂದು ಕರೆದ. ಸಿಖ್ ಎಂದರೆ ಶಿಷ್ಯ, ಅನುಯಾಯಿ ಎಂದರ್ಥ. ಗುರುನಾನಕನ ಮನೋಧರ್ಮ ಭಕ್ತನ ಮನೋಧರ್ಮವಾಗಿದ್ದು ಇತರ ಧರ್ಮವನ್ನು ಕೀಳೆಂದು ಕಾಣದಿದ್ದರೂ ತನ್ನ ಧರ್ಮ ಉತ್ತಮವಾದದ್ದು, ಉದಾತ್ತವಾದುದೆಂಬ ಭಾವನೆಯಿತ್ತು. ಹಿಂದು ಸಮಾಜದ ವಿಗ್ರಹಪೂಜೆ, ಜಾತಿವ್ಯವಸ್ಥೆ, ಸಹಗಮನಪದ್ಧತಿ ಮುಂತಾದವನ್ನು ಮುಸ್ಲಿಮರೂ ಹೀಯಾಳಿಸುತ್ತಿದ್ದರು. ಮೂಲ ಹಿಂದು ಧರ್ಮದವನೇ ಆಗಿದ್ದ ನಾನಕ್ ಹಿಂದುಧರ್ಮದಲ್ಲಿನ ಲೋಪದೋಷಗಳನ್ನು ತಿದ್ದಲು ಪ್ರಯತ್ನಿಸಿದ. ನಾನಕ್ ತನ್ನ ಉಪದೇಶವನ್ನು ಮುಂದುವರಿಸಿ ತನ್ನ ಅನಂತರ ಶಿಷ್ಯ ಸಮುದಾಯವನ್ನು ಬೆಳೆಸಲು ತನ್ನ ಪ್ರಿಯಶಿಷ್ಯ ಅಂಗದನನ್ನು ನೇಮಿಸಿದ. ಅಂಗದದೇವ (1504–52) 13 ವರ್ಷ ಗುರುವಾಗಿದ್ದು ಅಮರದಾಸ್ ಎಂಬಾತನನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ. ಗುರು ಅಮರದಾಸ್ (1439–1534) ತಮ್ಮ ಅನುಯಾಯಿಗಳಲ್ಲಿ



ಸ್ವರ್ಣಮಂದಿರ, ಗುರುದ್ವಾರ

ಜಾತಿಭೇದ ಅಳಿಸುವ ಉದ್ದೇಶದಿಂದ ತಮ್ಮ ಶಿಷ್ಯರು ಯಾವ ಜಾತಿಯಿಂದಲೇ ಬಂದಿದ್ದರೂ ಸಿಖ್ ಆದಮೇಲೆ ತಮ್ಮ ಬಿಡದಿಯಲ್ಲಿ ತಯಾರಿಸಿದ ಆಹಾರವನ್ನು ಸ್ವೀಕರಿಸಬೇಕೆಂಬ ನಿಯಮ ಮಾಡಿದ. ಹಾಗೆಯೇ ಸಿಖ್ ಆದವರಲ್ಲಿ ಸಹಗಮನ ಕೂಡದು ಎಂದು ವಿಧಿಸಿದ. ಅಮರದಾಸನ ಅನಂತರ ಬಂದವನು ಅವನ ಅಳಿಯನಾದ ಗುರು ರಾಮದಾಸ್ (1534–81). ಈತ ಈಗ ಅಮೃತಸರ ಎಂದು ಪ್ರಖ್ಯಾತವಾಗಿರುವ ಸ್ಥಳದಲ್ಲಿ ಸಿಖ್ ಜನರ ಒಂದು ವಸತಿಯನ್ನೂ ತಟಾಕವನ್ನೂ ನಿರ್ಮಿಸಿದ. ಗುರು ರಾಮದಾಸನ ಅನಂತರ ಅವನ ಕೊನೆಯ ಮಗ ಅರ್ಜುನದೇವ (1553–1606) ಗುರು ಆದ. ಈತ ಅಮೃತಸರದಲ್ಲಿ ತನ್ನ ತಂದೆ ನಿರ್ಮಿಸಿದ್ದ ಸರೋವರದ ಬಳಿ ಪ್ರಸಿದ್ಧ ಸ್ವರ್ಣಮಂದಿರವನ್ನು ಕಟ್ಟಿಸಿದ.

ಅರ್ಜುನದೇವ ಸಿಖ್ ಜನರ ಆದಿಗುರು ರಚಿಸಿದ್ದ ಗೀತೆ, ಶ್ಲೋಕಗಳನ್ನೂ ಅವನ ಅನಂತರದ ಗುರುಗಳು ರಚಿಸಿದ್ದ ಗೀತೆ, ಶ್ಲೋಕಗಳನ್ನೂ ಕೂಡಿಸಿ ಸಿಖ್‌ಧರ್ಮದ ಆದಿಗ್ರಂಥವನ್ನು ರೂಪುಗೊಳಿಸಿದ. ಈತನ ಕಾಲದಲ್ಲಿ ಜಹಾಂಗೀರ್ ಚಕ್ರವರ್ತಿಯ ಮಗ ಖುಸ್ರು ತಂದೆಗೆ ಎದುರಾಗಿ ದಂಗೆಯೆದ್ದ. ಆ ಸಂದರ್ಭದಲ್ಲಿ ದ್ರೋಹಿಯಾದ ತನ್ನ ಮಗನಿಗೆ ಅರ್ಜುನದೇವ ನೆರವಾದನೆಂದು ಮೊಗಲ್ ಚಕ್ರವರ್ತಿ ಭಾವಿಸಿ ಅರ್ಜುನದೇವನಿಗೆ

ಮರಣದಂಡನೆ ವಿಧಿಸಿದ. ಈ ಕಾರಣದಿಂದ ಸಿಖ್ ಸಮುದಾಯದಲ್ಲಿ ದೆಹಲಿಯ ಚಕ್ರವರ್ತಿ ವಿರುದ್ಧ ಅಸಮಾಧಾನ ಹೆಚ್ಚಾಯಿತು. ಸಿಖ್ ಪಂಥಕ್ಕಾಗಿ ಬಲಿಯಾದ ಮೊಟ್ಟಮೊದಲ ಹುತಾತ್ಮನಾಗಿ ಗುರು ಅರ್ಜುನದೇವ ಪ್ರಸಿದ್ಧನಾಗಿದ್ದಾನೆ.

ಇವನ ಅನಂತರ ಗುರು ಹರಗೋವಿಂದ್ (1595–1644), ಗುರು ಹರರಾಯ್ (1630–61), ಗುರು ಹರಕಿಷನ್ (1656–64) ಸಿಖ್ ಸಮುದಾಯದ ಹಿರಿಯರಾಗಿ ಅದನ್ನು ಮುನ್ನಡೆಸಿದರು. ಹರಗೋವಿಂದ್ ಗುರುವಿನ ಕಿರಿಯಮಗ ತೇಗ್ ಬಹದ್ದೂರ್‌ನನ್ನು (1621–75) ಗುರುವಾಗಿ ಸಿಖ್ ಸಮುದಾಯ ಸ್ವೀಕರಿಸಿತು. ಈತ ಭಾರತದ ಪೂರ್ವಭಾಗದಲ್ಲಿ ರುವ ಕಾಮರೂಪದವರೆಗೂ ದೇಶಪರ್ಯಟನೆಮಾಡಿದ. ಔರಂಗಜೇಬ್ ಎಲ್ಲ ಧರ್ಮಗಳ ಜನರನ್ನೂ ಬಲಾತ್ಕಾರದಿಂದ ಇಸ್ಲಾಂ ಧರ್ಮಕ್ಕೆ ಸೇರಿಸಲು ಯತ್ನಿಸಿದಾಗ ಅದನ್ನು ವಿರೋಧಿಸಿದ. ಧೈರ್ಯವಾಗಿ ದೆಹಲಿಗೆ ಹೋಗಿ ನೀನು ನಡೆಯುತ್ತಿರುವ ರೀತಿ ತಪ್ಪು ಎಂದು ಚಕ್ರವರ್ತಿಗೆ ತಿಳಿಸಿದನಂತೆ. ಆಗ ಔರಂಗಜೇಬ್ ನನಗೆ ದೇವರು ಹೀಗೆ ಮಾಡೆಂದು ಅಪ್ಪಣೆ ಕೊಟ್ಟಿದ್ದಾನೆ ಎಂದನಂತೆ. ಗುರು ತೇಗ್ ಬಹದ್ದೂರ್ ಇಲ್ಲ ನೀನು ಸುಳ್ಳು ನುಡಿಯುತ್ತಿದ್ದೀಯೆ ಅಥವಾ ನಿನ್ನ ದೇವರು ತಪ್ಪು ನುಡಿಯುತ್ತಿದ್ದಾನೆ ಎಂದನಂತೆ. ಚಕ್ರವರ್ತಿ ಆಯಿತು, ಈಗ ನೀನು ಮುಸ್ಲಿಮ್ ಆದರೆ ಸರಿ, ಇಲ್ಲವಾದರೆ ನಿನ್ನ ತಲೆ ತೆಗೆಸುತ್ತೇನೆ ಎಂದು ಹೇಳಿದನಂತೆ. ತೇಗ್‌ಬಹದ್ದೂರ್ ಗುರು, ಆಗಲಿ, ನಾನು ನಿನಗೆ ತಲೆಯನ್ನು ಬೇಕಾದರೆ ಒಪ್ಪಿಸಿಯೇನು, ಆದರೆ ನನ್ನ ನಂಬಿಕೆಯನ್ನು ಒಪ್ಪಿಸಲಾರೆ ಎಂದು ತೇಗ್‌ಬಹದ್ದೂರ್ ಹೇಳಿದನಂತೆ. ಔರಂಗಜೇಬನು ನಗರದ ಸಾರ್ವಜನಿಕ ಸ್ಥಳದಲ್ಲಿ ಇವನ ತಲೆಯನ್ನು ಕಡಿಸಿದ. ಸಾಯುವ ಮುನ್ನ ಗುರು ತೇಗ್‌ಬಹದ್ದೂರ್ ತನ್ನ ಮಗ ಗೋವಿಂದನನ್ನು ಬಳಿಗೆ ಕರೆದು ಅವನನ್ನು ಸಿಖ್ ಸಮುದಾಯದ ಗುರುಪದದಲ್ಲಿ ಪ್ರತಿಷ್ಠೆಮಾಡಿ ಹೊಸಗುರುವಿಗೆ ಶಿಷ್ಯನೆಂದು ಸಂಪ್ರದಾಯಪೂರ್ಣ ತಾನೂ ನಮಸ್ಕಾರ ಮಾಡಿದ. ತೇಗ್‌ಬಹದ್ದೂರ್ ಅನಂತರದಲ್ಲಿ ಇವನ ನಾಲ್ವರು ಮಕ್ಕಳೂ ಧರ್ಮ ರಕ್ಷಣೆಗಾಗಿ ಬಲಿಯಾದರು. ಗುರುಗೋವಿಂದ (1660–1708) ಸಿಖ್ ಧರ್ಮದ ಹತ್ತನೆಯ ಮತ್ತು ಕೊನೆಯ ಗುರು.

ಅರ್ಜುನದೇವ ಹಾಗೂ ತೇಗ್‌ಬಹದ್ದೂರರು ಮೊಗಲ್ ಚಕ್ರವರ್ತಿಗಳ ಮತಾಂಧತೆಗೆ ಬಲಿಯಾದದ್ದರಿಂದ ಸಿಖ್ ಸಮುದಾಯ ತಮ್ಮ ರಕ್ಷಣೆಯ ಕಡೆ ಗಮನಕೊಡಬೇಕಾದ ಅನಿವಾರ್ಯತೆಯುಂಟಾಯಿತು. ಗುರು ಹರಗೋವಿಂದ್ ಈ ಯೋಜನೆಗೆ ರೂಪುಕೊಟ್ಟ ಮೊದಲನೆಯ ಗುರು. ಸಿಖ್ಖರು ಧರ್ಮ ರಕ್ಷಣೆಯ ವೀರಭಟರಾಗಬೇಕೆಂದು ಕರೆಕೊಟ್ಟ. ಅಂದಿನಿಂದ ಸಿಖ್ ಸಮುದಾಯ ಇಸ್ಲಾಂ ದೌರ್ಜನ್ಯದ ವಿರುದ್ಧ ಧರ್ಮರಕ್ಷಣೆಗಾಗಿ ಸಮರ ಸಾರಿತು. ಈ ಕಾರ್ಯಕ್ಕಾಗಿ ತನ್ನ ಶಿಷ್ಯರಲ್ಲಿ ಪ್ರಮುಖರಾದ ಐವರನ್ನು ನೇಮಿಸಿದ. ಹೀಗೆ ದುಡಿಯುವ ವೀರ ಸಿಖ್ಖರನ್ನು ಖಾಲ್ಸಾ ಎಂದು ಕರೆದ. ಖಾಲ್ಸಾ ಎಂದರೆ ಶುದ್ಧ, ಪಾವನ, ಪವಿತ್ರ ಎಂದರ್ಥ. ಈ ಐವರು ಪಂಚ್‌ಪ್ಯಾರಾ (ಪಂಚಪ್ರಿಯರು) ಎಂದು ಹೆಸರಾದರು. ಈ ಐವರಲ್ಲಿ ಒಬ್ಬಾತ ಬ್ರಾಹ್ಮಣ, ಒಬ್ಬಾತ ಕ್ಷತ್ರಿಯ, ಉಳಿದವರು ಇತರ ಜಾತಿಯವರು. ದೀಕ್ಷೆ ವಹಿಸಿದ ವೇಳೆ ಈ ಐವರೂ ಒಂದೇ ಪಾತ್ರೆಯಿಂದ ಪಾನೀಯವನ್ನು ತೆಗೆದುಕೊಂಡರು. ಅಂದಿನಿಂದ ಇವರ ಹೆಸರಿಗೆ ಸಿಂಗ್ ಎಂಬ ಪದ ಸೇರತಕ್ಕದ್ದು ಎಂದು ನಿರ್ಣಯವಾಯಿತು. ಐವರೂ ವಾಹ್ ಗುರು (ಎಂಥ ಗುರು) ಎಂಬ ಗುರುಪ್ರಶಂಸೆಯನ್ನು ಜಪಿಸಿ ಗುರುನಾನಕ್‌ನ ಜಪಜೀಯ ಪ್ರಾರಂಭವಾಕ್ಯಗಳನ್ನು ನುಡಿದರು. ಆಗ ಗುರು ಇವರಿಗೆ ಐದು ಬೊಗಸೆ ಅಮೃತವನ್ನು ಕುಡಿಯಲು ಕೊಟ್ಟ. ಇವರ ತಲೆಯ ಮೇಲೆ, ಕಣ್ಣಮೇಲೆ ಅದನ್ನು ಐದು ಸಲ ಚಿಮುಕಿಸಿದ; ಇವರು ವಾಹ್ ಗುರೂಜೀಕಾ ಖಾಲ್ಸಾ, ವಾಹ್ ಗುರೂಜೀಕಾ ಪಂಥಾ ಎಂದು ಪುನರುಚ್ಚರಣ ಮಾಡಿದರು. ಅಂದಿನಿಂದ ಈ ಬಗೆಯ ಸಂಪ್ರದಾಯ ಆರಂಭವಾ ಯಿತು. ಹೀಗೆ ದೀಕ್ಷೆ ಪಡೆದ ಈ ಐವರು ಐದು ಲಕ್ಷಣಗಳನ್ನು ಬಿಡದೆ ಕಾಪಾಡಿಕೊಳ್ಳಬೇಕು ಎಂದು ಆಜ್ಞಪ್ತರಾದರು. ಈ ಐದು ಲಕ್ಷಣಗಳನ್ನು ಸಿಖ್ ಧರ್ಮದಲ್ಲಿ ಪಂಚ ಕ ಕಾರ ಎಂದು ಹೇಳುತ್ತಾರೆ (ಕೇಶ, ಕಂಘ್, ಕರ, ಕಚ್ಛ, ಕಿರ್‌ಪಾಣು). ಕೇಶ ಎಂದರೆ ಕ್ಷೌರಮಾಡಿ ಕೊಳ್ಳದೆ ಹುಟ್ಟುಕೂದಲನ್ನು ಹಾಗೆಯೇ ಉಳಿಸಿಕೊಳ್ಳುವುದು. ಕಂಘ್ ಎಂದರೆ ಕೇಶಸಂಸ್ಕಾರ ಕ್ಕಾಗಿ ಹಣಿಗೆ ಧರಿಸಿರುವುದು. ಕರ ಎಂದರೆ ಬಲಕೈಯಲ್ಲಿ ಉಕ್ಕಿನ ಕಂಕಣ ಧರಿಸುವುದು. ಕಚ್ಛ ಎಂದರೆ ವೀರ ಕಾಸೆಯನ್ನು ಧರಿಸುವುದು. ಕಿರ್‌ಪಾಣು ಎಂದರೆ ಕಿರುಕತ್ತಿ ಇಟ್ಟುಕೊಳ್ಳು ವುದು. ದೀಕ್ಷೆ ಕೊಟ್ಟ ಅನಂತರ ಗುರುವಾದವನು ಐವರಿಂದ ಇದೇ ರೀತಿಯ ದೀಕ್ಷೆಯನ್ನು ಸ್ವೀಕರಿಸಿದ. ತನ್ನ ಅನಂತರ ಇನ್ನು ಗುರು ಇಲ್ಲ, ಆದಿಗುರುವಾದ ಭಗವಂತನಿಂದ ಗುರುಪದ ವನ್ನು ಪಡೆದ ನಾನಕ್ ಗುರುವಿನ ಗುರುತ್ವ ಕ್ರಮವಾಗಿ ಅವನ ಉತ್ತರಾಧಿಕಾರಿಗಳಲ್ಲಿ ಪ್ರಸ್ಥಾನಮಾಡಿ ತನ್ನಲ್ಲಿಗೆ ಬಂದಿದ್ದುದು ಮುಂದೆ ಖಾಲ್ಸಾದಲ್ಲಿ ಸೇರಿರುತ್ತದೆ ಎಂದು ಸಿಖ್ ಸಮುದಾಯಕ್ಕೆ ಬೋಧಿಸಿದ. ಇನ್ನು ಮುಂದೆ ಸಿಖ್ ಸಮುದಾಯಕ್ಕೆ ಗ್ರಂಥಸಾಹಿಬ್ ಗುರು ಆಗಿರುತ್ತದೆ ಎಂದು ತಿಳಿಸಿದ.

ಸಿಖ್ಖರ ಪ್ರಾರ್ಥನಾ ಮಂದಿರಗಳಿಗೆ ಗುರುದ್ವಾರ ಎಂದು ಹೆಸರು. ಪರಂಪರೆಯಿಂದ ಗುರುದ್ವಾರಗಳ ಆಡಳಿತವನ್ನು ನೋಡಿಕೊಳ್ಳುವ ದೀಕ್ಷೆತೊಟ್ಟ ನಿಷ್ಠಾವಂತ ಸಿಖ್ಖರನ್ನು ಅಕಾಲಿಗ ಳೆಂದು ಕರೆದರು. ಇವರೇ ಮುಂದೆ ಅಕಾಲಿ ಎಂಬ ಹೆಸರಿನ ಸಂಪ್ರದಾಯದ ಒಂದು ಗುಂಪಿನವರಾದರು. ಗುರುದ್ವಾರಗಳನ್ನು ನೋಡಿಕೊಳ್ಳಲು ಈಗ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ಎಂಬ ಪ್ರಮುಖ ಸಮಿತಿಯೊಂದಿದೆ.

ಗ್ರಂಥಸಾಹಿಬ್ ಸಿಖ್ಖರ ಧರ್ಮಗ್ರಂಥ. ಸಿಖ್‌ಧರ್ಮದ ಉಪದೇಶಗಳು ಈ ಗ್ರಂಥದಲ್ಲಿ ಹಾಗೂ ಈ ಉಪದೇಶಗಳನ್ನು ಒಂದು ರೂಪಕ್ಕೆ ತಂದ ಗುರು ಅರ್ಜುನದೇವ ರಚಿಸಿದ ಕೃತಿಗಳಲ್ಲಿ ದೊರೆಯುತ್ತವೆ.

ಗುರುನಾನಕ್ ಶುದ್ಧ ಮನಸ್ಸು ಏಕೈಕ ಸೌಭಾಗ್ಯ, ಎಲ್ಲರನ್ನೂ ಪ್ರೀತಿಸು, ಎಲ್ಲರ ತಪ್ಪನ್ನೂ ಮನ್ನಿಸು, ಎಲ್ಲಿ ಕ್ಷಮೆಯಿರುತ್ತದೋ ಅಲ್ಲಿ ದೇವ ತಾನೆ ಪ್ರತ್ಯಕ್ಷನಾಗಿ ಇದ್ದಾನೆ, ಯಾರಿಗೂ ಕೇಡನ್ನು ಬಯಸಬೇಡ, ಕಠಿಣ ನುಡಿಯಬೇಡ, ನಿನ್ನ ಜೀವವನ್ನಾದರೂ ಕೊಟ್ಟು ಪರರ ಕಷ್ಟವನ್ನು ಹರಿಸು ಎಂದ. ಗುರುನಾನಕ್‌ನ ಜಪಜೀ ಎಂಬ ಕೃತಿ ಗ್ರಂಥಸಾಹಿಬ್ ಕೃತಿಯ ಸಾರ ಎಂದು ಪರಿಗಣಿತವಾಗಿದೆ.

ಸಿಖ್ ಸಮುದಾಯವನ್ನು ಧರ್ಮರಕ್ಷಕ ಸೇವೆಯಾಗಿ ರೂಪಿಸಿದ ಗುರು ಗೋವಿಂದ ಸಿಂಗ್ ಮುಕ್ತನಾಮಾ (ಮುಕ್ತಿಗೆ ದಾರಿ) ಎಂಬ ತನ್ನ ಕೃತಿಯಲ್ಲಿ ಸಿಖ್ಖರಿಗೆ ಕೆಲವು ನೇಮಗಳನ್ನು ನಿರೂಪಿಸಿದ್ದಾನೆ: ಸಾಲ ಕೇಳಬೇಡ; ಸಾಲ ಪಡೆದರೆ ತಪ್ಪದೆ ಹಿಂದಿರುಗಿಸು, ಸುಳ್ಳಾಡಬೇಡ, ದುಷ್ಟರನ್ನು ಸೇರಬೇಡ, ಸತ್ಸಂಗಮಾಡು; ದುಡಿದು ಅನ್ನಗಳಿಸು; ಮೋಸಮಾಡಬೇಡ; ಲೋಭಿಯಾಗಬೇಡ, ಊಟಕ್ಕೆ ಮೊದಲು ಜಪಜೀಗಳನ್ನು ನುಡಿ, ನಗ್ನ ಸ್ತ್ರೀಯರನ್ನು ನೋಡಬೇಡ; ಸ್ತ್ರೀಧ್ಯಾನ ಮಾಡಬೇಡ; ಪರಸ್ತ್ರೀಗಮನ ಬೇಡ; ಮೈಶುದ್ಧವಾಗಿರಲಿ, ಎಲ್ಲರೊಡನೆ ವ್ಯವಹಾರ ಇರಿಸಿಕೊ, ಆದರೆ ನೀನು ಪ್ರತ್ಯೇಕ ಎನ್ನುವುದು ಸ್ಮೃತಿಯಲ್ಲಿ ಇರಲಿ; ಉಣಬಡಿಸುವಲ್ಲಿ ಮೇಲುಕೀಳೆಂಬ ಭೇದಮಾಡಬೇಡ ಇತ್ಯಾದಿ. (ಎಚ್.ವಿ.ಐ.)

**ಸಿದ್ಧಮಾತೃಕಾ ಲಿಪಿ: ನೋಡಿ–ಲಿಪಿಗಳು**

**ಸಿಪಾಯಿದಂಗೆ: ನೋಡಿ– ಪ್ರಥಮ ಸ್ವಾತಂತ್ರ್ಯ ಸಂಗ್ರಾಮ–1857**

**ಸಿರಪುರ:** ಛತ್ತೀಸ್‌ಗಡ ರಾಜ್ಯದ ಮಹಾಸಮುಂದ್ ಜಿಲ್ಲೆಯಲ್ಲಿ ಮಹಾನದಿಯ ಬಲದಂಡೆಯ ಮೇಲಿರುವ ಐತಿಹಾಸಿಕ ಪಟ್ಟಣ. 5ರಿಂದ 8ನೆಯ ಶತಮಾನದವರೆಗೆ ದಕ್ಷಿಣ ಕೋಸಲದ ಶರಭಪುರಿಯ ಮತ್ತು ಪಾಂಡುವಂಶಿಗಳ ರಾಜಧಾನಿಯಾಗಿದ್ದ ಇದರ ಪ್ರಾಚೀನ ಹೆಸರು ಶ್ರೀಪುರ. 6ನೆಯ ಶತಮಾನದಲ್ಲಿ ಈ ಪಟ್ಟಣವನ್ನು ವಶಪಡಿಸಿಕೊಂಡ ಸೋಮವಂಶದ ರಾಜನಾದ ತೀವರದೇವನ ಆಳಿಕೆಯನ್ನು ಸಿರಪುರದ ಸುವರ್ಣಯುಗ ಎಂದು ಕರೆಯಬಹುದು. ಇವನ ಆಡಳಿತಾವಧಿಯಲ್ಲಿ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಸಾಹಿತ್ಯ–ಇವೆಲ್ಲವೂ ಉಚ್ಚ್ರಾಯ ಹಂತವನ್ನು ತಲುಪಿದವು. ಸಿರಪುರವು ಅರಮನೆ, ವಾಸಗೃಹ ಗಳು, ಶೈವ, ಜೈನ, ಬೌದ್ಧ ದೇವಾಲಯಗಳಿಂದ ಕೂಡಿದ ಭವ್ಯ ಪಟ್ಟಣವಾಗಿ ಬೆಳೆಯಿತು. 639ರಲ್ಲಿ ಇಲ್ಲಿಗೆ ಬಂದ ಯುವಾನ್‌ಚಾಂಗನು ನೂರಕ್ಕೂ ಹೆಚ್ಚು ವಿಹಾರ ಹಾಗೂ 150 ದೇಗುಲಗಳು ಇಲ್ಲಿರುವುವೆಂದು ತಿಳಿಸಿದ್ದಾನೆ.

ಸಿರಪುರದ ಪುರಾತತ್ತ್ವ ಮಹತ್ತ್ವವನ್ನು ಮೊದಲಿಗೆ ಗುರುತಿಸಿದವರು ಬೆಗ್ಲರ್ (1872) ಮತ್ತು ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್ (1881–82). ಅನಂತರ ಎಂ.ಜಿ. ದೀಕ್ಷಿತರು

ಶೈವದೇವಾಲಯ

ನಡೆಸಿದ ಉತ್ಖನನದಲ್ಲಿ 3 ಸಾಂಸ್ಕೃತಿಕ ಹಂತಗಳು ಕಂಡುಬಂದವು. 5ನೆಯ ಶತಮಾನದ ಕೊನೆಯ ಭಾಗಕ್ಕೆ ಸೇರುವ 1ನೆಯ ಹಂತದಲ್ಲಿ ಶರಭಪುರಿಯ ರಾಜ ಪ್ರಸನ್ನಮಾತ್ರನ ಒಂದು ತ್ರುಟಿತ ಚಿನ್ನದ ನಾಣ್ಯ ಸಿಕ್ಕಿತು. 6–8ನೆಯ ಶತಮಾನಕ್ಕೆ ಸೇರುವ 2ನೆಯ ಹಂತದಲ್ಲಿ ಇಟ್ಟಿಗೆಯ ಅನೇಕ ವಸತಿ ಕಟ್ಟಡಗಳು, ಶೈವ ದೇವಾಲಯಗಳು, ಬೌದ್ಧ ವಿಹಾರಗಳು, ಅರಮನೆ ಸಂಕೀರ್ಣ, ನೀರಿನ ತೊಟ್ಟಿಗಳು ನಿರ್ಮಾಣವಾದವು. 3ನೆಯ ಹಂತ ರತನಪುರ ಶಾಖೆಯ ಅವಧಿಯದ್ದು (11ನೆಯ ಶತಮಾನ).

62×42 ಕಿಮೀ ಪ್ರದೇಶವನ್ನು ಆವರಿಸಿದ್ದ ಈ ರಾಜಧಾನಿ ಪಟ್ಟಣ ಮಹಾನದಿ ಯಿಂದಲೂ ಬೆಟ್ಟಶ್ರೇಣಿಯಿಂದಲೂ ರಕ್ಷಿತವಾಗಿತ್ತು. ಈ ಪಟ್ಟಣದ ಪ್ರಧಾನ ವಾಸ್ತು ಶಿಲ್ಪಿ ವಿಷ್ಣುದತ್ತನೆಂಬ ಉಲ್ಲೇಖ 6–7ನೆಯ ಶತಮಾನದ ಒಂದು ಶಾಸನದಲ್ಲಿದೆ. ಇಲ್ಲಿರುವ ವಾಸಗೃಹಗಳು ಹಾಗೂ ಬೌದ್ಧ ವಿಹಾರಗಳು ಎರಡು ಅಂತಸ್ತಿನ ಕಟ್ಟಡಗಳಾಗಿದ್ದು ಇವನ್ನು

ನೀಲಿನಕ್ಷೆಯಾಧಾರದ ಮೇಲೆ ಸುವ್ಯವಸ್ಥಿತವಾಗಿ ಕಟ್ಟಲಾಗಿದೆ. ಗೋಡೆಗಳಿಗೆ ಸುಣ್ಣದ ಲೇಪನವನ್ನು ಹಚ್ಚಲಾಗಿದೆ. ಇಲ್ಲಿನ ಒಳಚರಂಡಿ ವ್ಯವಸ್ಥೆ ಸಮರ್ಪಕ ನಗರ ಯೋಜನೆಯ ಮತ್ತೊಂದು ನಿದರ್ಶನವಾಗಿದೆ.

2000–2007ರವರೆಗೆ ಇಲ್ಲಿ ಮತ್ತೆ ಸರ್ವೇಕ್ಷಣೆಯನ್ನು ನಡೆಸಿ 184 ಪುರಾತನ ದಿಬ್ಬಗಳನ್ನು ಗುರುತಿಸಲಾಯಿತಲ್ಲದೆ 25 ದಿಬ್ಬಗಳಲ್ಲಿ ಉತ್ಖನನ ನಡೆಸಲಾಯಿತು. 9 ಶೈವ ದೇವಾಲಯ ಸಂಕೀರ್ಣಗಳು, ತ್ರಿಮೂರ್ತಿದೇವಾಲಯ, ಬೌದ್ಧ ದೇವಾಲಯ, 6 ಬೌದ್ಧ ವಿಹಾರ, 1 ಜೈನ ವಿಹಾರ, ವಿಶಾಲವಾದ ವಸತಿಗೃಹಗಳು, ಅರಮನೆಯ ಅವಶೇಷಗಳು ಹಾಗೂ ಮಹಾಶಿವಗುಪ್ತ ಬಾಲಾರ್ಜುನನ ವಸತಿಗೃಹದ ಅವಶೇಷಗಳು ಉತ್ಖನನದಿಂದ ಬೆಳಕುಕಂಡವು. ಬಾಲಾರ್ಜುನನ ನಿವಾಸದಲ್ಲಿ ಸಿಕ್ಕ ತಾಮ್ರಪಟಗಳು ಈ ಗೃಹವನ್ನು ಬಾಲೇಶ್ವರ ಭಟ್ಟರಕ್ ಮಠಿಕ ಎಂದು ಉಲ್ಲೇಖಿಸಿದ್ದು ಶಿವಗುಪ್ತನು 300 ಕಬ್ಬಿಣದ ಬಾಣಲೆಗಳನ್ನು, ಸೌದೆಯನ್ನು ಪುರೋಹಿತರಿಗೂ ಸಾಧುಗಳಿಗೂ ಹಂಚಿದ್ದಾಗಿ ತಿಳಿಸುತ್ತದೆ. ಈ ಮನೆಯ ಕೋಣೆಯೊಂದರೊಳಗೆ ಕಬ್ಬಿಣದ ಶಿರೋಪೇಟ ಹಾಗೂ ಮುಖಕವಚವಿದ್ದುದು ಗಮನಾರ್ಹ.

ಸಿರಪುರದ ಶೈವ ದೇವಾಲಯಗಳು ಸಾಮಾನ್ಯವಾಗಿ ಪಂಚಾಯತನ ಮಾದರಿಯಲ್ಲಿವೆ. ಪ್ರಾಕಾರ ಗೋಡೆ, ಕಲ್ಲುಹಾಸಿದ ಅಂಗಳ, ತೋರಣ ದ್ವಾರ ಹಾಗೂ ನಾಲ್ಕು ಉಪಗುಡಿಗಳನ್ನು ಹೊಂದಿರುವ ಈ ದೇವಾಲಯಗಳ ಆವರಣದೊಳಗೆ ಪುರೋಹಿತನ ವಾಸಗೃಹ ಹಾಗೂ ಪುಷ್ಕರಣಿಗಳಿವೆ. ಗೋಡೆಗಳನ್ನು ಶೇಲ್, ಜಂಬಿಟ್ಟಿಗೆ ಹಾಗೂ ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಶಿಲ್ಪ ಹಾಗೂ ಪೀಠಗಳನ್ನು ಮರಳುಗಲ್ಲು, ಶೇಲ್, ಬಳಪಕಲ್ಲು ಮತ್ತು ಗ್ರಾನೈಟ್ ಕಲ್ಲುಗಳಿಂದ ರೂಪಿಸಲಾಗಿದೆ. ಬಾಗಿಲ ಕಟ್ಟು ಮತ್ತು ಹಿಡಿ, ಬೀಗ ಇವೆಲ್ಲವೂ ಕಬ್ಬಿಣದವು. ಶೈವ ದೇವಾಲಯಗಳಲ್ಲಿ ಮುಖ್ಯವಾದುದು ಬಾಲೇಶ್ವರ ಸಂಕೀರ್ಣ ಹಾಗೂ ಹರಿಹರ ದೇಗುಲ. ಮಹಾಶಿವಗುಪ್ತ ಬಾಲಾರ್ಜುನನ ಕಾಲದಲ್ಲಿ ನಿರ್ಮಾಣಗೊಂಡ ಬಾಲೇಶ್ವರ ಸಂಕೀರ್ಣದಲ್ಲಿ ಬಾಲೇಶ್ವರ ಹಾಗೂ ಉದಯೀಶ್ವರ ದೇಗುಲಗಳಿವೆ. ಇವುಗಳ ಗರ್ಭಗೃಹದ ಹೊರಭಾಗ ನಕ್ಷತ್ರಾಕಾರದಲ್ಲಿದೆ. ಭಿತ್ತಿಯ ಕೋಶಗಳಲ್ಲಿರುವ ಮಹಿಷಮರ್ದಿನಿ, ಯಮ, ಸೂರ್ಯ, ಮಯೂರಾರೂಢನಾದ ಕಾರ್ತಿಕೇಯರ ಶಿಲ್ಪಗಳು ಗಮನಾರ್ಹ. ಮಂಟಪದ ಗೋಡೆಗಳನ್ನು ಮಿಥುನ ಹಾಗೂ ನೃತ್ಯ ಶಿಲ್ಪಗಳಿಂದಲೂ ಸುಂದರ ದೃಶ್ಯಗಳಿಂದಲೂ ಅಲಂಕರಿಸಲಾಗಿದೆ. ತನ್ನ ರಾಣಿಯರೊಡನೆ ನೃತ್ಯದಲ್ಲಿ ತೊಡಗಿರುವ ರಾಜ, ಕೈಕೈ ಹಿಡಿದು ಜಗಳವಾಡುತ್ತಿರುವ ರಾಣಿಯರ ನಡುವೆ ಅಸಹಾಯಕನಾಗಿ ಅಡಗಿರುವ ರಾಜ, ಘರ್ಜಿಸುತ್ತಿರುವ ಸಿಂಹ ಇವೇ ಮೊದಲಾದ ದೃಶ್ಯಗಳು ಕಲ್ಲಿನಲ್ಲಿ ಅದ್ಭುತವಾಗಿ ಮೂಡಿವೆ. ಮತ್ತೊಂದು ಶೈವ ದೇವಾಲಯ ಸಂಕೀರ್ಣದಲ್ಲಿ ವಿಗ್ರಹ ಪೀಠದ ಮೇಲೆ 5–6ನೆಯ ಶತಮಾನದ ಶಾಸನವೂ ಕಂಬಗಳ ತಳಭಾಗದಲ್ಲಿ 10–11ನೆಯ ಶತಮಾನದ ದಾನಿಗಳೀರ್ವರ ಹೆಸರನ್ನೂ ಕೊರೆಯಲಾಗಿದೆ. ಮತ್ತೊಂದು ಕಂಬದ ತಳಭಾಗದಲ್ಲಿ 7–8ನೆಯ ಶತಮಾನದ ಲಿಪಿಯಲ್ಲಿ ಶ್ರೀ ಧ್ರುವ ಬಲೆ ಎಂದು ಕಂಡರಿಸಲಾಗಿದೆ.


ಲಕ್ಷ್ಮಣ ದೇವಾಲಯ

ಬೌದ್ಧ ದೇವಾಲಯದ ಗರ್ಭಗೃಹದಲ್ಲಿ ಭೂಮಿಸ್ಪರ್ಷ ಮುದ್ರೆಯಲ್ಲಿರುವ ಬುದ್ಧನ ಶಿರರಹಿತ ವಿಗ್ರಹ ದೊರೆತಿದೆ. ಇದರೊಂದಿಗೆ 30 ಸೆಂಮೀ ಉದ್ದ ಹಾಗೂ ವ್ಯಾಸದ ಕಬ್ಬಿಣದ ಗಂಟೆ ಸಿಕ್ಕಿರುವುದು ವಿಶೇಷವಾಗಿದೆ. ಗರ್ಭಗೃಹದ ಎದುರು ಮಿಥುನ ಶಿಲ್ಪ, ಚೌರಿಧಾರಿಣಿಯರು ಹಾಗೂ ಲತಾವಿನ್ಯಾಸಗಳಿಂದ ಅಲಂಕೃತವಾದ 16 ಕಂಬಗಳ ಮಂಟಪವೂ ಇದರ ಮೂರು ಬದಿಯಲ್ಲಿ ಭಿಕ್ಷುಣಿಯರ ವಾಸಕೋಣೆಗಳೂ ಇವೆ. ಸಿರಪುರದ ಅತ್ಯಂತ ದೊಡ್ಡ ಬೌದ್ಧ ವಿಹಾರ ಅಲಂಕೃತ ಅರ್ಧಮಂಟಪ, ಅಂತರಾಳ, 16 ಕಂಬಗಳ ಮಂಟಪ, ಗರ್ಭಗೃಹ ಹಾಗೂ ಹಲವಾರು ಕೋಣೆಗಳಿಂದ ಕೂಡಿದ, 2 ಅಂತಸ್ತಿನ, 2 ಹಂತಗಳಲ್ಲಿ ಕಟ್ಟಲ್ಪಟ್ಟ ಒಂದು ಸಂಕೀರ್ಣ. ಈ ವಿಹಾರ 560ರ ಸಮಯದಲ್ಲಿ ಮಹಾಶಿವಗುಪ್ತ ತೀವರದೇವನ ಕಾಲದಲ್ಲಿ ನಿರ್ಮಾಣಗೊಂಡಿತೆಂಬುದನ್ನು ಶಾಸನಗಳು ತಿಳಿಸುತ್ತವೆ. ಸಿರಪುರದ ಚರಿತ್ರೆಯ ಮೇಲೆ ಈ ವಿಹಾರ ಹೊಸ ಬೆಳಕನ್ನು ಚೆಲ್ಲಿದೆ. (ವಿ.ಎಸ್.)

**ಲಕ್ಷ್ಮಣ ದೇವಾಲಯ:** ಶಿಲಾಶಾಸನದ ಪ್ರಕಾರ ಈ ದೇವಾಲಯವನ್ನು ದಕ್ಷಿಣ ಕೋಸಲದ ನರೇಶ ಮಹಾಶಿವಗುಪ್ತ ಬಾಲಾರ್ಜುನನ ತಾಯಿ, ಮಹಾರಾಣಿ ವಾಸಟಾ ತನ್ನ ಪತಿ ಮಹಾರಾಜ ಹರ್ಷಗುಪ್ತನ ಸ್ಮರಣಾರ್ಥವಾಗಿ ಕಟ್ಟಿಸಿದಳು. ಇದೇ ಶಾಸನದ ಪ್ರಕಾರ ಇದೊಂದು ವಿಷ್ಣು ದೇವಾಲಯ. ಆದರೆ ಕಾಲಾಂತರದಲ್ಲಿ ಈ ದೇವಾಲಯ ಲಕ್ಷ್ಮಣದೇವಾಲಯ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಇದಕ್ಕೆ ನಿರ್ದಿಷ್ಟ ಕಾರಣಗಳೇನೆಂದು ತಿಳಿದುಬಂದಿಲ್ಲ. ಇಟ್ಟಿಗೆಯಿಂದ ಕಟ್ಟಿದ ಪ್ರಾಚೀನಭಾರತದ ದೇವಾಲಯಗಳಲ್ಲಿ ಸಿರಪುರದ ಲಕ್ಷ್ಮಣದೇವಾಲಯ ವಿಶಿಷ್ಟ ಶೈಲಿ ಹಾಗೂ ಅಲಂಕಾರ ದೃಷ್ಟಿಯಿಂದ ಅದ್ವಿತೀಯವಾಗಿದೆ. 1.8ಮೀ ಎತ್ತರದ ಜಗತಿಯ ಮೇಲೆ ಕಟ್ಟಿರುವ ಈ ನಾಗರ ರೇಖಾ ಮಾದರಿಯ ದೇವಾಲಯವನ್ನು ತಲುಪಲು ಜಗತಿಯ ಪೂರ್ವಭಾಗದಲ್ಲಿ ಎರಡು ಪಾರ್ಶ್ವ–ಸೋಪಾನಗಳನ್ನೊದಗಿಸಲಾಗಿದೆ. ಚತುರಸ್ರ ಗರ್ಭಗೃಹದ ಮೇಲೆ ಮೇಲ್ಮುಖವಾಗಿ ಒಳ ಬಾಗುತ್ತ ಹೋದ ಶಿಖರವಿದೆ. ಗರ್ಭಗೃಹದ ಮುಂಭಾಗದಲ್ಲಿ ಚಿಕ್ಕದಾದ ಅಂತರಾಳ ಹಾಗೂ ಬಿದ್ದು ಹೋದ ಕಲ್ಲಿನ ಸ್ತಂಭಗಳಿಂದ ಕೂಡಿದ ಮಂಟಪವಿದೆ. ದೇವಾಲಯದ ಗೋಡೆಗಳ ಹೊರಮೈ ಅತ್ಯುತ್ತಮ ಆಲಂಕಾರಿಕ ಗೋಡೆಗಂಬಗಳಿಂದಲೂ ಚೌಕಟ್ಟಿ ಗೂಡುಗಳು, ಸೂಕ್ಷ್ಮಪ್ರಮಾಣದ ಶಿಖರಗಳು, ಚೈತ್ಯ–ಗವಾಕ್ಷಗಳಿಂದಲೂ ಓರಣವಾಗಿ ಅಲಂಕರಿಸಲ್ಪಟ್ಟಿದೆ.

ಗರ್ಭಗೃಹದ ತಳ ಹಾಗೂ ಊರ್ಧ್ವ ವಿನ್ಯಾಸ ಪಂಚರಥ ಮಾದರಿಯದು. ಪೂರ್ವ ಗೋಡೆಯಲ್ಲಿ ಪ್ರವೇಶದ್ವಾರ ಪೂರ್ವಾಭಿಮುಖವಾಗಿದೆ. ಇನ್ನುಳಿದ ಮೂರು ಬದಿಗಳ ಗೋಡೆಗಳ ಭದ್ರರಥಗಳ ಮೇಲೆ ಸುಂದರವಾಗಿ ಕೆತ್ತಿದ ಘನದ್ವಾರಗಳಿವೆ. ಗರ್ಭಗೃಹದ ಮೇಲಿನ ನಾಗರ ಶಿಖರದ ಭದ್ರರಥಗಳ ಮೇಲೂ ಅಲಂಕೃತ ಘನ ಚೈತ್ಯ–ಗವಾಕ್ಷಗಳಿವೆ. ಶಿಖರದ ನಾಲ್ಕೂ ಮೂಲೆಗಳ ಪ್ರತಿಯೊಂದು ಭೂಮಿಯ ಮೇಲಿನಂಚಿನಲ್ಲಿ ಒಂದೊಂದು ಕರ್ಣಾಮಲವಿದೆ. ಶಿಖರಕ್ಕೆ ಹೊಂದಿಕೊಂಡು ಅಂತರಾಳದ ಮೇಲೆ ಮುಂಚಾಚಿ ಇದ್ದ, ಭಗ್ನ ಸುಕನಾಸಿಯನ್ನು ನೋಡಬಹುದು.

ಗರ್ಭಗೃಹಕ್ಕೆ ಕಲ್ಲಿನ ಪಂಚಶಾಖಾ ದ್ವಾರವಿದೆ. ಇದರಲ್ಲಿಯ ಮನಮೋಹಕ ಶಿಲ್ಪಗಳು ಈ ದೇವಾಲಯದ ವಿಶೇಷ ಆಕರ್ಷಣೆಯಾಗಿವೆ. ಮೊದಲ ಹಾಗೂ ನಾಲ್ಕನೆಯದು ಪತ್ರಶಾಖೆಗಳಾಗಿದ್ದರೆ, ಎರಡು, ಮೂರು ಹಾಗೂ ಐದನೆಯದು ಕ್ರಮವಾಗಿ ರತ್ನ, ಮಿಥುನ ಹಾಗೂ ದಶಾವತಾರ ಶಾಖೆಗಳಾಗಿರುತ್ತವೆ. ವಿಷ್ಣುವಿನ ದಶಾವತಾರಗಳಲ್ಲಿ ಮತ್ಸ್ಯ, ವರಾಹ, ನೃಸಿಂಹ, ವಾಮನ, ರಾಮ, ಬುದ್ಧ ಹಾಗೂ ಕಲ್ಕಿಯ ಉಬ್ಬು ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಅನಂತಶಾಯಿ ವಿಷ್ಣುವಿದ್ದರೆ, ಅದರಪಾರ್ಶ್ವಭಾಗದಲ್ಲಿ ಹಯಗ್ರೀವ, ಕೃಷ್ಣಲೀಲೆಗೆ ಸಂಬಂಧಿಸಿದ ಕೇಶಿ ಹಾಗೂ ಕಂಸ ವಧೆಯನ್ನೊಳಗೊಂಡ ಇನ್ನಿತರ ಚಿತ್ರಗಳಿವೆ. ಗರ್ಭಗೃಹದಲ್ಲಿ ಮೂಲ ವಿಗ್ರಹವಿಲ್ಲ.

ಗುಪ್ತರಕಾಲದಿಂದ ಬಂದ ಅನೇಕ ವಾಸ್ತು ಹಾಗೂ ಶಿಲ್ಪಕಲೆಯ ವಿಧಾನಗಳು ಮುಂದುವರೆದದ್ದನ್ನು ಈ ದೇವಾಲಯದ ಜಗತಿ, ಸುಕನಾಸಿ ಹಾಗೂ ಶಿಲ್ಪಶೈಲಿಯಲ್ಲಿ ನೋಡಬಹುದು. ಇಲ್ಲಿಯ ಶಿಲಾಶಾಸನ, ವಾಸ್ತುಕಲೆ ಹಾಗೂ ಶಿಲ್ಪವನ್ನಾಧರಿಸಿ ಈ ದೇವಾಲಯದ ನಿರ್ಮಾಣ ಕಾಲ ಸು.625–50 ಎಂದು ಅಭಿಪ್ರಾಯ ಪಡಬಹುದಾಗಿದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ರಾಯಪುರ ಮಂಡಲದ ಅಧೀನದಲ್ಲಿ ರುವ ಲಕ್ಷ್ಮಣದೇವಾಲಯವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಲಾಗಿದೆ. (ಎಲ್.ಎಸ್.ಆರ್.)

**ಸುಬ್ಬರಾವ್.ಬಿ:** 1921–1962. ಭಾರತೀಯ ಪುರಾತತ್ತ್ವಜ್ಞ. ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಜನಿಸಿದರು. ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಲಕ್ಷ್ಮಣರಾವ್ ಚಿನ್ನದ ಪದಕ ಪಡೆಯುವುದರೊಂದಿಗೆ ಬಿ.ಎ. ಪೂರೈಸಿದರು. 1945ರಲ್ಲಿ ಲಖನೌ ವಿಶ್ವವಿದ್ಯಾಲಯ ದಿಂದ ಪ್ರಾಚೀನ ಭಾರತೀಯ ಇತಿಹಾಸದಲ್ಲಿ ಎಂ.ಎ. ಪದವಿ ಪಡೆದರು, ಎಲ್.ಎಲ್.ಬಿ ಮಾಡಿದರು. ಆರ್.ಕೆ. ಮುಖರ್ಜಿಯವರ ಸಲಹೆಯ ಮೇರೆಗೆ ಬಾಂಬೆ ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾಗಿದ್ದ ಡೆಕ್ಕನ್ ಕಾಲೇಜಿನಲ್ಲಿ (ಪುಣೆ) ಪ್ರಿಹಿಸ್ಟಾರಿಕ್ ಅಂಡ್ ಅರ್ಲಿ ಹಿಸ್ಟಾರಿಕ್ ಬಳ್ಳಾರಿ ಎಂಬ ವಿಷಯದ ಮೇಲೆ ಅಧ್ಯಯನ ನಡೆಸಿ ಪಿಎಚ್.ಡಿ ಪಡೆದರು (1949). ಇವರ ಪ್ರಬಂಧದ ಮೌಲ್ಯಮಾಪಕರು ಸರ್ ಮಾರ್ಟಿಮರ್ ವೀಲರ್ ಎಂಬುದು ಗಮನಾರ್ಹ. ಬಿ.ಎ. ಓದುವ ದಿನಗಳಲ್ಲೇ ಬೆಂಕಿಯ ಆಕಸ್ಮಿಕದಲ್ಲಿ ತಮ್ಮ ಬಲ ಮುಂಗೈಯನ್ನು ಕಳೆದುಕೊಂಡ ಇವರು ಸಂಗನಕಲ್ಲಿನಲ್ಲಿ ನಡೆಸಿದ ಉತ್ಖನನ ಮಾದರಿಯಾಗಿದೆ. ಜೊತೆಗೆ ಈ ಉತ್ಖನನದಲ್ಲಿ ನವಶಿಲಾಯುಗ ಹಿಂದಿನ ಹಂತದ ಅವಶೇಷಗಳು ದೊರೆತಿದ್ದು ಮಹತ್ತ್ವಪೂರ್ಣ. ವಿದ್ಯಾರ್ಥಿ ದೆಸೆಯಲ್ಲಿ ಹರಪ್ಪ, ಬ್ರಹ್ಮಗಿರಿ, ಲಾಂಗ್‌ನಾಜ್ ಮುಂತಾದ ನೆಲೆಗಳ ಉತ್ಖನನದಲ್ಲಿ ಭಾಗವಹಿಸಿದ್ದ ಇವರಿಗೆ ಜಾಯ್‌ನರ್ ಹಾಗೂ ಇತರ ವಿದ್ವಾಂಸರ ಸಹಯೋಗ ದೊರೆತು ವೈಜ್ಞಾನಿಕ ದೃಷ್ಟಿಕೋನವನ್ನು ಬೆಳಸಿಕೊಳ್ಳಲು ನೆರವಾಯಿತು. 1950ರಲ್ಲಿ ಬರೋಡದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾದ ಪುರಾತತ್ತ್ವ ವಿಭಾಗ ಗುಜರಾತಿನ ಮಾಹಿ ನದಿಬಯಲಿನ ಸರ್ವೇಕ್ಷಣೆಯ (1950) ಜವಾಬ್ದಾರಿಯನ್ನು ಇವರಿಗೆ ವಹಿಸಿತು. ಈ ಸಂದರ್ಭದಲ್ಲಿ ಇವರು ಅನೇಕ ಶಿಲಾಯುಗ ನೆಲೆಗಳನ್ನು ಪತ್ತೆಹಚ್ಚಿದರಲ್ಲದೆ ಅಮರಪುರದಲ್ಲಿ ಸಣ್ಣ ಉತ್ಖನನ ನಡೆಸಿದರು. ಇವರ ಕಾರ್ಯದಕ್ಷತೆಯನ್ನು ಗುರುತಿಸಿದ ವಿಶ್ವವಿದ್ಯಾಲಯ ಇವರನ್ನು ಹಿರಿಯ ಉಪನ್ಯಾಸಕರಾಗಿ ನೇಮಿಸಿತು. ಮುಂದೆ ಲಿಕೋಟ ಹಾಗೂ ಬರೋಡ ನಗರದ ವೈದ್ಯಕೀಯ ಕಾಲೇಜಿನ ಪರಿಸರದಲ್ಲಿ ಇವರು ಉತ್ಖನನ ನಡೆಸಿದರು. ಉತ್ಖನನವನ್ನು ಆಧರಿಸಿ ಬರೋಡ ಥ್ರೂ ದಿ ಏಜಸ್ (1953) ಎಂಬ ಕಿರುಪುಸ್ತಕ ಪ್ರಕಟಿಸಿದರು.

1952–53ರಲ್ಲಿ ಮಧ್ಯಪ್ರದೇಶದ ಮಹೇಶ್ವರ ಮತ್ತು ನವ್ದತೋಲಿಯಲ್ಲಿ ಎಚ್.ಡಿ. ಸಾಂಕಳಿಯ ಅವರ ಸಂಯೋಗದಲ್ಲಿ ಇವರು ಕೈಗೊಂಡ ಉತ್ಖನನ ಒಂದು ಮಹತ್ತ್ವಪೂರ್ಣ ಕಾರ್ಯ. ಇದರ ವರದಿ 1958ರಲ್ಲಿ ಪ್ರಕಟವಾಯಿತು. ಭಾರತದಲ್ಲಿ ವಿಜ್ಞಾನ ಮತ್ತು ಇತಿಹಾಸದ

ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾದ ವಿದ್ವಾಂಸರನ್ನು ಒಂದೆಡೆ ಕಲೆಹಾಕಿದ ಮೊದಲ ವಿಭಾಗ ಎಂಬುದು ಇದರ ಹಿರಿಮೆ. ಬ್ರಿಟಿಷ್ ಕೌನ್ಸಿಲ್‌ನ ಕಾಮನ್‌ವೆಲ್ತ್ ಯೂನಿವರ್ಸಿಟೀಸ್ ಇಂಟರ್‌ಚೇಂಜ್ ಸ್ಕೀಮ್‌ನ ಆರ್ಥಿಕ ನೆರವಿನೊಂದಿಗೆ ಲಂಡನ್ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿಯಲ್ಲಿ ಹೆಚ್ಚಿನ ತರಬೇತಿ ಹಾಗೂ ಸಂಶೋಧನೆಗಾಗಿ ನೇಮಕಗೊಂಡದ್ದು ಇವರ ವೃತ್ತಿಜೀವನದ ಒಂದು ಮೈಲಿಗಲ್ಲು. ಅಲ್ಲಿಂದ ಮರಳಿದ ಅನಂತರ ಅಣ್ಣಾಮಲೈನಗರದಲ್ಲಿ ನಡೆದ 18ನೆಯ ಆಲ್ ಇಂಡಿಯ ಓರಿಯೆಂಟಲ್ ಕಾನ್‌ಫರೆನ್ಸ್‌ನ ಅಧ್ಯಕ್ಷತೆ ವಹಿಸಿದರು (1955).

ತಮ್ಮ ವಿಭಾಗದ ವತಿಯಿಂದ ಸಹೋದ್ಯೋಗಿಯಾದ ವಿ.ಪಿ. ಪಾಂಡ್ಯ ಅವರ ಒಡಗೂಡಿ ಇವರು ಸೌರಾಷ್ಟ್ರದ ನೆಲೆಗಳಾದ ವಡ್‌ನಗರ (1954), ಅಮ್ರಿ (1956), ಲಖ್‌ಬಾವಲ್ (1956) ಹಾಗೂ ಸೋಮನಾಥದಲ್ಲಿ (1956–57) ಉತ್ಖನನ ನಡೆಸಿದರು. ಈ ನೆಲೆಗಳಲ್ಲಿ ಹರಪ್ಪ ಸಂಸ್ಕೃತಿಗೆ ಸಮಕಾಲೀನವಾದ ತಾಮ್ರ–ಶಿಲಾಯುಗ ವಸತಿಗಳಿದ್ದುದನ್ನು ಇವರು ಮೊದಲಿಗೆ ಗುರುತಿಸಿದರು. 1959–60ರಲ್ಲಿ ಬೌದ್ಧ ವಸತಿಯಾಗಿದ್ದ ದೇವಿನ್‌ಮೋರಿಯಲ್ಲಿ ಇವರು ನಡೆಸಿದ ಉತ್ಖನನ ಗುಜರಾತಿನ ಆದಿ ಇತಿಹಾಸಕ್ಕೆ ಮಹತ್ತ್ವದ ಕೊಡುಗೆ.

ದಿ ಪರ್ಸನಾಲಿಟಿ ಆಫ್ ಇಂಡಿಯ (1956) ಇವರ ವಿಚಾರಪೂರ್ಣ ಕೃತಿ. ಇದರಲ್ಲಿ ಭಾರತೀಯ ಉಪಖಂಡದಲ್ಲಿ ಶಿಲಾಯುಗದಿಂದ ಇತಿಹಾಸ ಕಾಲದವರೆಗೆ ವಸ್ತುಸಂಸ್ಕೃತಿ ಬೆಳೆದು ಬಂದ ರೀತಿಯನ್ನು ವಿಭಿನ್ನ ದೃಷ್ಟಿಕೋನದಿಂದ ವಿವರಿಸಿದ್ದಾರೆ. ಆರ್ಕಿಯಲಾಜಿಕಲ್ ಎಕ್ಸ್‌ಪ್ಲೊರೇಷನ್ ಇನ್ ದಿ ಬಳ್ಳಾರಿ ಏರಿಯ (1948), ಜಿಯಾಗ್ರಫಿಕ್ ಫ್ಯಾಕ್ಟರ್ಸ್ ಇನ್ ಆಂಧ್ರ ಹಿಸ್ಟರಿ ಅಂಡ್ ಆರ್ಕಿಯಾಲಜಿ (1949), ಚಾಲ್ಕೊಲಿಥಿಕ್ ಬ್ಲೇಡ್ ಇಂಡಸ್ಟ್ರಿ ಆಫ್ ಮಹೇಶ್ವರ್ ಅಂಡ್ ಎ ನೋಟ್ ಆನ್ ದಿ ಹಿಸ್ಟರಿ ಆಫ್ ದಿ ಟೆಕ್ನಿಕ್ (1955), ಸಮ್ ಪ್ರಾಬ್ಲಮ್ಸ್ ಇನ್ ದಿ ಆರ್ಕಿಯಾಲಜಿ ಆಫ್ ಸೌತ್ ಇಂಡಿಯ (1956–57), ದಿ ಪ್ರಾಬ್ಲಮ್ ಆಫ್ ದಿ ಬ್ಲಾಕ್ ಅಂಡ್ ರೆಡ್ ವೇರ್ಸ್ ಆಫ್ ನಾರ್ತ್ ಇಂಡಿಯ, ಅಂಡ್ ದೇಯರ್ ಬೇರಿಂಗ್ಸ್ ಆನ್ ದಿ ಸೌತ್ (1961) ಇವರ ಪ್ರಮುಖ ಲೇಖನಗಳು.

1962ರಲ್ಲಿ ವಡ್‌ನಗರ ಮೊದಲಾದ ನೆಲೆಗಳ ಉತ್ಖನನಗಳ ವರದಿಗಳನ್ನು ಸಿದ್ಧ ಮಾಡುತ್ತಿದ್ದ ಅವಧಿಯಲ್ಲಿ ಹೃದಯಾಘಾತದಿಂದ ಇವರು ನಿಧನರಾದರು. (ವಿ.ಎಸ್.)

**ಸುಮಿತ್ ಸರ್ಕಾರ್:** ಪ್ರಸಿದ್ಧ ಇತಿಹಾಸ ತಜ್ಞರು. ದೆಹಲಿ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರಾಗಿ 1976ರಲ್ಲಿ ಬೋಧನೆಯನ್ನು ಪ್ರಾರಂಭಿಸಿ ಈಗ ಪ್ರಾಧ್ಯಾಪಕರಾಗಿದ್ದಾರೆ. ಭಾರತೀಯ ಸಮಾಜ ವಿಜ್ಞಾನ ಇತಿಹಾಸಕಾರರಾದ ಇವರು ರೈಟಿಂಗ್ ಸೋಷಿಯಲ್ ಹಿಸ್ಟರಿ ಎಂಬ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಭಾರತದ ಉತ್ತರ ಕಾಲಿನ ವಸಾಹತುಶಾಹಿ ವ್ಯವಸ್ಥೆಯಲ್ಲಿ ಪಾಶ್ಚಾತ್ಯ ವಸಾಹತುಶಾಹಿ ಪ್ರಭುತ್ವದ ಲಕ್ಷಣ ಮತ್ತು ವಿಸ್ತಾರಗಳ ಬಗೆಗಿನ ಚರ್ಚೆ ಇದೆ.

ಭಾರತೀಯ ಇತಿಹಾಸ ಸಂಶೋಧನ ಪರಿಷತ್ತಿನ ಯೋಜನೆಯಲ್ಲಿ ಟುವರ್ಡ್ಸ್ ಫ್ರೀಡಮ್ ಎಂಬ ಸಂಪುಟವನ್ನು ರಚಿಸಿದ್ದಾರೆ. ಇವರ ಇತ್ತೀಚಿನ ಪುಸ್ತಕ ಲಿಮಿಟ್ಸ್ ಆಫ್ ನ್ಯಾಷನಲಿಸಂ. ಇವರಿಗೆ 2004ರಲ್ಲಿ ಪಶ್ಚಿಮ ಬಂಗಾಲ ಸರ್ಕಾರದ ರವೀಂದ್ರ ಪುರಸ್ಕಾರ್ ಪ್ರಶಸ್ತಿ ಲಭಿಸಿದೆ. ಸರ್ಕಾರದ ವಿರುದ್ಧದ ರೈತ ಹೋರಾಟದ ಸಂದರ್ಭದಲ್ಲಿ ಇವರು ಈ ಪ್ರಶಸ್ತಿಯನ್ನು ಹಿಂದಿರುಗಿಸಿದರು. ಇತಿಹಾಸ ತಜ್ಞರಾದ ತನಿ ಸರ್ಕಾರ್ ಇವರ ಪತ್ನಿ. (ಎ.ಎಸ್.;ಎಸ್.ಎಲ್.)

**ಸುಮೇರಿಯನ್ ಸಂಸ್ಕೃತಿ:** ಮೆಸಪೊಟೇಮಿಯ (ದಕ್ಷಿಣ ಇರಾಕ್) ಪ್ರದೇಶದಲ್ಲಿಯ ಅತ್ಯಂತ ಪ್ರಾಚೀನ ನಾಗರಿಕತೆಯ ನೆಲೆ (ಅಕ್ಕಾಡಿಯನ್ನಿನ ಸುಮೇರು ಬೈಬಲ್ಲಿನ ಶಿನಾರ್). ಇದರ ಮೊದಲನೆಯ (ಉತ್ತರಾರ್ಧ ಪ್ರ.ಶ.ಪೂ.6ನೆಯ ಸಹಸ್ರಮಾನದ) ಉಬೈದಿನ ಎರಿಡು ನಗರದಿಂದ ಉರುಕ್ (ಪ್ರ.ಶ.ಪೂ.4ನೆಯ ಸಹಸ್ರಮಾನ) ಮತ್ತು ರಾಜವಂಶಾವಳಿ (ಪ್ರ.ಶ.ಪೂ.3ನೆಯ ಶತಮಾನ) ಬ್ಯಾಬಿಲೋನಿಯ ಹಂತದ (ಪ್ರ.ಶ.ಪೂ.2ನೆಯ ಸಹಸ್ರಮಾನ) ವರೆಗಿನ ಅವಧಿಯ ಸಂಸ್ಕೃತಿ. ವರ್ಷವಿಡೀ ಕೃಷಿ ಉದ್ಯೋಗವನ್ನು ಇವರು ಮಾಡುತ್ತಿದ್ದರಿಂದ ಒಂದೆಡೆ ನೆಲೆಯಾಗಿ ನಿಂತು ಅಭಿವೃದ್ಧಿ ಹೊಂದಿದರು. ಇದರಿಂದ ಜನಸಂಖ್ಯೆ ಬೆಳೆಯಿತು. ಸಹಜವಾಗಿ ತಮ್ಮಲ್ಲಿ ಕೆಲಸವನ್ನು ಹಂಚಿಕೊಂಡು ಲೆಖ್ಖಪತ್ರವನ್ನಿಡಬೇಕಾದ ಸಂದರ್ಭವೊದಗಿದ್ದರಿಂದ ಪ್ರ.ಶ.ಪೂ.ಸು.2500ರಲ್ಲಿ ಬರೆಯಲನುಕೂಲವಾಗುವಂತೆ ಲಿಪಿಯನ್ನು ಹುಟ್ಟುಹಾಕಿದರು. ಈ ಜನರನ್ನು ಅಕ್ಕಾಡಿಯನ್ನರು ಸುಮಾರು ಎಂದು ಕರೆದಿದ್ದರಿಂದ ಇವರಿಗೆ ಈ ಹೆಸರು ಬಂದಿತು. ಆದರೆ ಇವರು ತಮ್ಮನ್ನು ಸಗ್–ಗಿಗ (ಕಪ್ಪುತಲೆಯ ಜನರು) ಎಂದು ಕರೆದುಕೊಳ್ಳುತ್ತಿದ್ದರು. ಪ್ರ.ಶ.ಪೂ.ಸು.4ನೆಯ ಸಹಸ್ರಮಾನದ ಹೊತ್ತಿಗೆ 10–12 ಸ್ವತಂತ್ರ ನಗರ–ಪ್ರಾಂತಗಳು ಹುಟ್ಟಿಕೊಂಡುವು. ಒಂದು ನಿರ್ದಿಷ್ಟ ಪರಿಕಲ್ಪನೆಯ ದೇವ/ದೇವಿಯ ದೇವಾಲಯದ ಸುತ್ತ ಇಂಥ ನಗರ–ಪ್ರಾಂತಗಳು ಬೆಳೆದವು. ಇದರ ಧಾರ್ಮಿಕ ಗುರು ಪಟ್ಟಣ ಪ್ರಾಂತದ ಮುಖ್ಯಸ್ಥ. ಇಂಥ ಪ್ರಾಂತ ದೇವಾಲಯದ ಕಾರ್ಯಗಳಲ್ಲಿ ನಿರತನಾದ ಒಬ್ಬ ರಾಜನ ಆಳಿಕೆಗೂ ಒಳಪಟ್ಟಿರಬಹುದು. ವಂಶಪಾರಂಪರ್ಯವಾದ ರಾಜಾಡಳಿತದ ಹಿಂದಿನ ಲಾರ್ಸ, ಕುವರ, ಜಬಲ ಮೊದಲಾದ 5 ನಗರ ಪ್ರಾಂತಗಳಿದ್ದುವು. ಇವಲ್ಲದೆ ಉರ್, ನಿಪ್ಪೂರ್, ಅಕ್ಕಾಡ್, ಕಿಷ್ ಮೊದಲಾದ ಇತರ 23 ನಗರ ಪ್ರಾಂತಗಳು ಯೂಫ್ರಟೀಸ್–ಟೈಗ್ರಿಸ್ ನದಿ ಬಯಲಿನಲ್ಲಿದ್ದುವು. ಇವುಗಳು ಉಬೈದ್ ಮತ್ತು ಉರುಕ್ ಹಂತಗಳಲ್ಲಿ ಅಭಿವೃದ್ಧಿಯಾದವು.

ಸುಮೇರಿಯ ಇತಿಹಾಸ ಪ್ರ.ಶ.ಪೂ.ಸು.2600ರಷ್ಟು ಪ್ರಾಚೀನ. ಆದರೆ ಪ್ರ.ಶ.ಪೂ.2300ರ ಹೊತ್ತಿಗೆ ಉಚ್ಚಾರಾಂಶ ಸಹಿತ ಬರವಣಿಗೆ ಬೆಳೆದುಬಂದಿದ್ದರಿಂದ ಇಲ್ಲಿಂದ ಮುಂದಿನ ಇತಿಹಾಸವನ್ನು ಇವರ ಬರವಣಿಗೆಗಳಿಂದ ತಿಳಿಯಲು ಸಾಧ್ಯವಾಗಿದೆ. ಇಷ್ಟು ಹೊತ್ತಿಗೆ ಅಕ್ಕಾಡಿಯನ್ನರು ಪ್ರಬಲರಾದರು. ಪ್ರ.ಶ.ಪೂ.ಸು.1700ರಲ್ಲಿ ಬ್ಯಾಬಿಲೋನಿಯನ್ನರು ತಮ್ಮ ಆಡಳಿತವನ್ನು ಸ್ಥಾಪಿಸಿದರು. ಒಟ್ಟಾರೆ ಮೆಸಪೊಟೇಮಿಯದ ವಿವಿಧ ಅನುಕ್ರಮ ಸಾಂಸ್ಕೃತಿಕ ಹಂತಗಳು ಹೀಗಿವೆ:

1. ಉಬೈದ್ ಹಂತ (ಪ್ರ.ಶ.ಪೂ.5300–4100) ನವಶಿಲಾಯುಗ–ತಾಮ್ರ ಶಿಲಾಯುಗ
2. ಉರುಕ್ ಹಂತ (ಪ್ರ.ಶ.ಪೂ.4100–2900) ಉತ್ತರಕಾಲೀನ ತಾಮ್ರಶಿಲಾ–ಕಂಚಿನಯುಗ (ಉರುಕ್ XIV-IV ಮತ್ತು III ಉಪಹಂತಗಳು)
3. ಆದಿ ರಾಜವಂಶಾವಳಿ I, II ಮತ್ತು III (ಪ್ರ.ಶ.ಪೂ.2900–2334 ಆದಿಕಂಚಿನ) ಹಂತ
4. ಅಕ್ಕಾಡಿಯನ್ (ಸಾಮ್ರಾಜ್ಯ) ಹಂತ (ಪ್ರ.ಶ.ಪೂ.2334–2218.; ಸಾರ್ಗಾನ್)
5. ಗುತಿಯನ್ ಹಂತ (ಪ್ರ.ಶ.ಪೂ.2218–2047) ಆದಿ ಕಂಚಿನಯುಗದ IV ಉಪಹಂತ
6. ಉರ್ ಹಂತ (ಪ್ರ.ಶ.ಪೂ.2047–1940)

ಅಹುರ್‌ಮಜ್ದ ದೇವತೆ

ಮೊದಲನೆಯ ಉಪಹಂತದಲ್ಲಿ ವಿಲಂಬಗತಿಯ ಚಕ್ರದ ಮೇಲೆ ಮಾಡಿದ ಉತ್ತಮ ಗುಣಮಟ್ಟದ ವರ್ಣಚಿತ್ರಿತ ಮಣ್ಪಾತ್ರೆಗಳು ಇಡೀ ಮೆಸಪೊಟೇಮಿಯ ಮತ್ತು ಪರ್ಷಿಯನ್ ಕೊಲ್ಲಿಯಲ್ಲಿ ಬಳಕೆಯಲ್ಲಿತ್ತು. ಬಹುಶಃ ಉತ್ತರ ಮೆಸಪೊಟೇಮಿಯದ ಸಮಗ್ರ ಸಂಸ್ಕೃತಿಯನ್ನೂ ಇವರು ತಂದಂತೆ ಕಾಣುತ್ತದೆ. ಇವರದು ಕೃಷಿ ಪ್ರಧಾನ ಉದ್ಯೋಗ. ಎರಿಡು ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ಎರಡನೆಯ ಹಂತದಲ್ಲಿ ಕಸಬುದಾರರು ಹೆಚ್ಚಿನ ಪ್ರಮಾಣದಲ್ಲಿ ವೇಗಗತಿಯ ಚಕ್ರದ ಮೇಲಿಂದ ತಯಾರಿಸಿದ ವರ್ಣಚಿತ್ರ ರಹಿತ ಮಣ್ಪಾತ್ರೆಗಳು ವಿಶೇಷ. ವ್ಯಾಪಾರದ ಸರಕುಗಳು ಕಾಲುವೆ, ನದಿಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಸಾಗಾಣಿಕೆ ಯಾಗುತ್ತಿದ್ದರಿಂದ ದೇವಾಲಯ ಪ್ರಧಾನವಾದ ದೊಡ್ಡ ನಗರಗಳು ಹುಟ್ಟಿಕೊಂಡವು. ಒಂದೊಂದು ನಗರದಲ್ಲೂ 10,000ಕ್ಕೂ ಹೆಚ್ಚು ಶ್ರೇಣೀಕೃತ ಜನಸಮುದಾಯವಿರುತ್ತಿತ್ತು. ಕೇಂದ್ರಾಡಳಿತ ನಿಪುಣರಾದವರನ್ನು ಆಯಾಯ ಕೆಲಸಗಳಿಗೆ ನೇಮಿಸಿಕೊಳ್ಳುತ್ತಿತ್ತು.

ಇವರ ಅತ್ಯಂತ ಪ್ರಾಚೀನ ಬರವಣಿಗೆಗಳಿಂದ ಪರ್ವತ ನಿವಾಸಿಗಳನ್ನು ವಶಪಡಿಸಿಕೊಂಡು ತಮ್ಮ ಬೃಹತ್ ಯೋಜನೆಗಳಲ್ಲಿ ಗುಲಾಮರನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಈ ಸಂಸ್ಕೃತಿಯ ವಸ್ತುಗಳು ಮತ್ತು ಇವರ ವಸಾಹತುಗಳು ವಿಶಾಲವಾಗಿ ತುರ್ಕಿಸ್ತಾನದ ತೌರಸ್ ಪರ್ವತ ಪ್ರದೇಶದಿಂದ ಮೆಡಿಟರೇನಿಯನ್ ಸಮುದ್ರದವರೆಗೆ ಪೂರ್ವದಲ್ಲಿ ಮಧ್ಯ ಇರಾನಿನವರೆಗೆ ಪಸರಿಸಿತ್ತು. ತತ್ಪರಿಣಾಮವಾಗಿ ನೆರೆಹೊರೆಯ ಪ್ರದೇಶಗಳಲ್ಲಿಯ ಜನರ ಮೇಲೆ ಮುಖ್ಯವಾಗಿ ಆರ್ಥಿಕ ಸ್ಥಿತಿ–ಗತಿ ಮತ್ತು ಸಂಸ್ಕೃತಿಗಳ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡಿತು. ಆದರೆ ಸೈನಿಕ ಬಲದಿಂದ ಇವರಿಗೆ ದೂರ ದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದ ವಸಾಹತುಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಹಂತದ ನಗರ ಪ್ರಾಂತಗಳು ಪುರೋಹಿತಶಾಹಿ ಆಡಳಿಕ್ಕೊಳಪಟ್ಟಿತ್ತು. ಸ್ತ್ರೀ–ಪುರುಷ ಹಿರಿಯ ಸಭಾಸದರಿಂದ ಕೂಡಿದ ಸಮಿತಿ ಆಡಳಿತಕ್ಕೆ ಮಾರ್ಗಸೂಚಿಯಾಗಿತ್ತು. ಇದಕ್ಕನುಗುಣವಾಗಿ ದೇವ–ದೇವತೆಗಳ ಪರಿಕಲ್ಪನೆಯೂ ಆಗುತ್ತಿತ್ತು. ಸುಮೇರಿಯ ಸಂಸ್ಕೃತಿಯ ಹಲವಾರು ಪ್ರಮುಖ ನಗರ–ಪ್ರಾಂತಗಳ ರಾಜವಂಶಾವಳಿಗಳಲ್ಲಿ ಅತ್ಯಂತ ಮೊದಲನೆಯದು ಮಹಾಪ್ರಳಯದ ಮುಂಚೆಯೇ ಆಳುತ್ತಿತ್ತು. ಈ ವಂಶಾವಳಿಯ ಅಲುಲಿಮ್, ದುಮಿಜ್ಜಿದ್ ಮೊದಲಾದ ರಾಜರ ಹೆಸರುಗಳು ಕಾಲ್ಪನಿಕವೆಂದು ಕಾಣುತ್ತದೆ.

ಪ್ರ.ಶ.ಪೂ.ಸು.2900–2700ರ ಅವಧಿಯಲ್ಲಿ ದಂತಕಥೆಗಳ ಎನ್ಮರ್‌ಕರ್ ಮತ್ತು ಗಿಲ್ಗಮಿಶ್ ರಾಜ್ಯಭಾರ ನಡೆಸುತ್ತಿದ್ದರೆಂದು ತಿಳಿದುಬರುತ್ತದೆ. ಉಚ್ಚಾರಾಂಶವುಳ್ಳ ಬರವಣಿಗೆ ಆರಂಭ ಕಾಲದಿಂದ, ದಂತಕಥೆಗಳಿಂದ ತಿಳಿದುಬಂದ ಅತ್ಯಂತ ಹಿಂದಿನ ರಾಜವಂಶದ ರಾಜ ಎತನ. ಇವನು ಕಿಷ್ ನಗರ ಪ್ರಾಂತದ 13ನೆಯ ರಾಜ. ಪುರಾತತ್ತ್ವ ಆಕರಗಳಿಂದ ತಿಳಿದುಬಂದಂತೆ ಎನ್ಮೆಬರಗೆಸಿ. ಇವನ ಹೆಸರು ಗಿಲ್ಗಮಿಶ್‌ನ ಕಥೆಯಲ್ಲಿಯೂ ಬರುತ್ತದೆ. ಇದರಿಂದ ಗಿಲ್ಗಮಿಶನೂ ಐತಿಹಾಸಿಕ ವ್ಯಕ್ತಿಯಾಗಿರಬಹುದೆಂಬ ಅನುಮಾನವಿದೆ. ಲಗಶ್ ನಗರ ಪ್ರಾಂತದ ರಾಜರ ಹೆಸರುಗಳು ಪಟ್ಟಿಯಲ್ಲಿಲ್ಲದಿದ್ದರೂ ಅವರ ಕಾಲದ ಮಹತ್ತ್ವದ ನಿರ್ಮಿತಿಗಳು ಅವರ ಬಗೆಗಿನ ಗಟ್ಟಿ ಪುರಾವೆಗಳಾಗಿವೆ. ಲಗಶ್‌ನ ಎನ್ನತುಮ್ ಕಾಲದಲ್ಲಿ ರಾಜ್ಯ ಅತಿ ವಿಸ್ತಾರವಾಗಿತ್ತು. ಇವನು ಭಯೋತ್ಪಾದನೆಯಿಂದ ಶತ್ರುಗಳನ್ನು ಗೆದ್ದು ಅವರನ್ನು ಕ್ರೂರತನದಿಂದ ನಡೆಸಿಕೊಳ್ಳುತ್ತಿದ್ದ. ಇದು ಇವನ ಶಿಲಾಫಲಕ ಶಾಸನದಿಂದ ತಿಳಿದುಬರುತ್ತದೆ. ಸುಮೇರಿಯ ಜನಾಂಗೀಯದ ಕೊನೆಯ ರಾಜ ಲುಗಲ್–ಝಗೆ–ಸಿ. ಇವನು ಲಗಶ್ ಪ್ರಭುತ್ವವನ್ನು ತೊಡೆದುಹಾಕಿ ಉರುಕ್ ಅನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಮೆಡಿಟರೇನಿಯನ್ ಸಮುದ್ರ ಪ್ರದೇಶದ ಪರ್ಷಿಯನ್ ಕೊಲ್ಲಿಯವರೆಗೆ ರಾಜ್ಯ ವಿಸ್ತರಣೆ ಮಾಡಿದುದು ಗಮನಾರ್ಹ ಸಂಗತಿ. ಅನಂತರ ಸೆಮೈಟ್ ಸಂತತಿಯ ಅಕ್ಕಾಡಿಯದ ಸಾರ್ಗಾನ್ ರಾಜನಾದ.

ಗಣ್ಯ ಸ್ತ್ರೀ

ಕಿಷ್ ನಗರ ಪ್ರಾಂತದ ರಾಜರ ಹೆಸರುಗಳು ಅಕ್ಕಾಡಿಯ ಭಾಷೆಯಲ್ಲಿದೆ. ಸಾರ್ಗಾನ್ (ಪ್ರ.ಶ.ಪೂ.2270–2215) ಕಾಲದಲ್ಲಿ ಈ ಭಾಷೆಯ ಬಳಕೆ ಅತ್ಯಂತ ಉಚ್ಛ್ರಾಯ ಹಂತದಲ್ಲಿತ್ತು. ಆದರೂ ಆಡಳಿತದ ವಿಷಯಗಳನ್ನು ಸುಮೇರಿಯ ಭಾಷೆಯಲ್ಲಿ ಬರೆಯಲಾಗುತ್ತಿತ್ತು. ಪ್ರ.ಶ.ಪೂ.ಸು.1800ರ ವರೆಗೆ ಎರಡೂ ಭಾಷೆಗಳು ಜನ ಬಳಕೆಯಲ್ಲಿದ್ದುವು. ಅನಂತರ ಸುಮೇರಿಯ ಭಾಷೆಯ ಬಳಕೆ ನಿಂತು ಹೋಯಿತು.

ಸ್ಥಳೀಯ ಸುಮೇರಿಯದ ಗುಡಿಯನು ಅಕ್ಕಾಡಿಯ ರಾಜ್ಯದ ಪತನಕ್ಕೆ ಕಾರಣನಾಗಿ ಲಗಶ್‌ನ ರಾಜನಾದ. ಆದರೆ ಅಕ್ಕಾಡಿಯ ಪರಂಪರೆಯನ್ನು ಮುಂದುವರೆಸಿದ. ಹಲವಾರು ಸುಂದರವಾದ ಕಟ್ಟಡಗಳ ನಿರ್ಮಾಣಕ್ಕೆ ಕಾರಣನಾದ.

ಕೊನೆಗೆ ಉರ್‌ನ 3ನೆಯ ಅರಸು ಮನೆತನದ ಉರ್–ನಮ್ಮು ಮತ್ತು ಶುಲ್ಗಿ ಇವರ ಕಾಲದಲ್ಲಿ ಸುಮೇರಿಯ ಪರಂಪರೆ ಅಂತಿಮವಾಗಿ ಪುನರುಜ್ಜೀವನಗೊಂಡಿತು. ಆದರೆ ಅಮೊರೈಟ್ ಮರ್ತುಗಳು ತಂಡ ತಂಡವಾಗಿ ಬರಲು ಆರಂಭಿಸಿದ ಮೇಲೆ ಈ ಪ್ರದೇಶದಲ್ಲಿ ಸೆಮಿಟಿಕ್ ಸಂಪ್ರದಾಯ ಊರ್ಜಿತವಾಗುತ್ತ ಬಂತು. ಇವರೆ ಬ್ಯಾಬಿಲೋನಿಯ ರಾಜ್ಯವನ್ನು ಸ್ಥಾಪಿಸಿದವರು.

ಎರಿಡು ಮತ್ತು ನಿಪ್ಪೂರ್ ಸುಮೇರಿಯ ಸಂಸ್ಕೃತಿಯ ಎರಡು ಪ್ರಮುಖ ಕೇಂದ್ರಗಳು. ಸುಮೇರಿಯದ ಎರಡು ಭಿನ್ನ ಧಾರ್ಮಿಕ ಪರಂಪರೆಗಳನ್ನು ಈ ಎರಡು ಕೇಂದ್ರಗಳಲ್ಲಿ ಕಾಣಬಹುದು. ನಿಪ್ಪೂರಿನಲ್ಲಿ ಎನ್‌ಲಿಲ್ ಪ್ರಧಾನ ದೇವತೆ. ಇದು ಛಾಯಾರೂಪದ ಭೂಮಿ ದೇವತೆ. ಮಾಟ–ಮಂತ್ರಗಳನ್ನು ಇದು ಅನುಗ್ರಹಿಸಬಲ್ಲದು. ಇವುಗಳಿಂದ ಒಳ್ಳೆಯ ಕೆಟ್ಟ ದೆವ್ವಗಳು ಹೇಳಿದಂತೆ ಕೆಲಸ ಮಾಡಿಸಲು ಆಗುತ್ತದೆ. ಪರ್ವತ ಪ್ರದೇಶ ಇವನ ಅಧೀನ. ಇವನು ಸೃಷ್ಟಿಸಿದ ಜೀವಿಗಳು ಪಾತಾಳದಲ್ಲಿರುತ್ತವೆ.

ಇದರ ವಿರುದ್ಧ ಎರಿಡುವಿನ ಎಂಕಿ ಸಂಸ್ಕೃತಿಯ ಆಗರ. ಸಂಪತ್ತನ್ನು ಅನುಗ್ರಹಿಸುವ, ಭೂಮಿಯಡಿಯಲ್ಲಿಯ ಸಿಹಿನೀರಿನ ಅಧಿದೇವತೆ, ಮಾನವರ ಸ್ನೇಹಿತ, ದುಃಖ ನಿವಾರಕ; ಕಲೆ–ವಿಜ್ಞಾನ, ಕೈಗಾರಿಕೆ, ನಾಗರಿಕತೆ, ಪ್ರಥಮ ನ್ಯಾಯಶಾಸ್ತ್ರ ಮೊದಲಾದವುಗಳನ್ನು ಮಾನವರಿಗೆ ಅನುಗ್ರಹಿಸಿದವನು. ಎರಿಡು ಒಂದು ವ್ಯಾಪಾರ ಬಂದರು ಆಗಿತ್ತು. ನೀರಿನ ಹೃದಯಾಂತರಾಳದಿಂದ ಭೂಮಿ ಹುಟ್ಟಿತೆಂಬ ತಿಳಿವಳಿಕೆಯಿತ್ತು. ಸುಮೇರಿಯನ್ನರಿಗೆ ಮಾನವ ಜೀವನದ ಬಗ್ಗೆ ಅಷ್ಟಾಗಿ ಪ್ರಸನ್ನ ದೃಷ್ಟಿಕೋನ ಇದ್ದಂತೆ ಕಾಣಿಸುವುದಿಲ್ಲ. ಇವರು ಸಂಗೀತಪ್ರಿಯರಾಗಿದ್ದರು. ತಂತುವಾದ್ಯವನ್ನು ಹೆಚ್ಚಾಗಿ ಬಳಸುತ್ತಿದ್ದರು. ಧಾರ್ಮಿಕ ಮತ್ತು ಸಾಮಾಜಿಕ ಸಮಾರಂಭಗಳಲ್ಲಿ ಸಂಗೀತ ಪ್ರಧಾನವಾಗಿತ್ತು. ಇವರಲ್ಲಿ ಬಹುಪತಿತ್ವ ಪದ್ಧತಿ ಇತ್ತು. ಇದನ್ನು ಲಗಶ್‌ನ ರಾಜ ಉರುಕಗಿನ ರದ್ದು ಮಾಡಿದ. ತಪ್ಪಿತಸ್ಥರನ್ನು ಕಲ್ಲಿನಿಂದ ಹೊಡೆದು ಸಾಯಿಸುವ ಕ್ರೂರಶಿಕ್ಷೆ ಇತ್ತು. ಸ್ತ್ರೀಯರ ಸ್ಥಾನಮಾನ ಉತ್ತಮವಾಗಿತ್ತು. ಮೂರನೆಯ ಹಂತದ ಉರ್ ಅವಧಿಯಲ್ಲಿ ಸಿದ್ಧವಾದ ಉರ್–ನಮ್ಮು ಶಾಸನದಿಂದ ಆಗಿನ ಸಮಾಜದ ನೀತಿ ನಿಯಮಾವಳಿಗಳನ್ನು ತಿಳಿಯಲು ಸಾಧ್ಯ. ಸಮಾಜದಲ್ಲಿ ಮುಖ್ಯವಾಗಿ ಸ್ವತಂತ್ರರು (ಲು) ಮತ್ತು ಗುಲಾಮರು (ಪುರುಷ ಅರದ್, ಸ್ತ್ರೀ ಗೆಮೆ) ಎಂಬ ಎರಡು ವರ್ಗಗಳಿದ್ದವು. ವಿಧವಾ ವಿವಾಹಕ್ಕೆ ಅವಕಾಶವಿತ್ತು.

ಮುಖ್ಯ ಸಾಂಸ್ಕೃತಿಕ ಅವಶೇಷಗಳೆಂದರೆ ಸುಮೇರಿಯ ಭಾಷೆಯ ಬೆಣೆಯಾಕಾರದ ಲಿಪಿಯ ಶಾಸನವುಳ್ಳ ಮಣ್ಣಿನ ಫಲಕಗಳು, ಮುದ್ರಿಕೆಗಳು. ಈ ಭಾಷೆ ಇದುವರೆಗೆ ತಿಳಿದುಬಂದಿರುವ ಪ್ರಪಂಚದ ಯಾವುದೇ ಭಾಷಾವರ್ಗಕ್ಕೆ ಸೇರುವುದಿಲ್ಲ. ಪ್ರ.ಶ.ಪೂ.3500 ವರ್ಷಗಳ ಹಿಂದಿನ ಬೆಣೆಯಾಕಾರದ ಲಿಪಿ ಪೂರ್ವದ ಬರವಣಿಗೆಯೂ ಕಂಡುಬಂದಿದೆ. ಅಕ್ಕಾಡಿಯ ಭಾಷೆ ಆಫ್ರಿಕ–ಏಷ್ಯ ಭಾಷಾವರ್ಗಕ್ಕೆ ಸೇರಿದೆ. ಮೊದಮೊದಲಿನ ಚಿತ್ರಲಿಪಿಯಿಂದ ಬೆಣೆಯಾಕಾರದ ಲಿಪಿ ಬೆಳೆದುಬಂತೆಂದು ಕಂಡುಬಂದಿದೆ. ಈ ಶಾಸನಗಳು ವೈಯಕ್ತಿಕ, ಆಡಳಿತಾತ್ಮಕ, ವಾಣಿಜ್ಯ ವ್ಯವಹಾರ, ಹಣ ಪಾವತಿ, ಕಾನೂನು, ಧಾರ್ಮಿಕ ಶ್ಲೋಕಗಳು, ದೇವತಾ ಪ್ರಾರ್ಥನೆ, ಮಂತ್ರ–ಮಾಟ, ಗಣಿತ, ಖಗೋಳ, ವೈದ್ಯಕೀಯ ಮೊದಲಾದ ವಿಷಯಗಳಿಗೆ ಸಂಬಂಧಿಸಿವೆ. ಸೆಮಿಟಿಕ್ ಜನಾಂಗೀಯ ಆಡಳಿತ ಕಾಲದಲ್ಲಿಯೂ ಧರ್ಮ ಮತ್ತು ಕಾನೂನು ವಿಷಯಗಳು ಸುಮೇರಿಯ ಭಾಷೆಯಲ್ಲಿ ಇದ್ದುವು. ಇವರ ಧರ್ಮ ಅನೇಕ ದೇವತಾರಾಧನೆ ಹಾಗೂ ಇತರ ದೇವತೆಗಳೊಡನೆ ಪ್ರಧಾನ ದೇವತೆ ಆರಾಧನೆಯಾಗಿತ್ತು. ಮೂರ್ತಿಪೂಜೆ ಸಾಮಾನ್ಯ. ತಮ್ಮ ತಮ್ಮ ಧಾರ್ಮಿಕ ನಂಬಿಕೆಗಳನ್ನು, ಕಟ್ಟು–ಕಟ್ಟಳೆಗಳನ್ನು ಬರೆದಿಟ್ಟವರಲ್ಲಿ ಇವರೇ ಮೊದಲಿಗರು. ಇವರ ಸಾರ್ವಕಾಲಿಕ ದೇವರು ಅನ್ (ಸ್ವರ್ಗ, ಆಕಾಶ) ಮತ್ತು ಕಿ (ಭೂಮಿ). ಇವರ ಸಂತತಿಯವರೇ ಇತರ ದೇವತೆಗಳು. ಇವುಗಳಲ್ಲಿ ದಕ್ಷಿಣದ ಎರಿಡುವಿನಲ್ಲಿಯ ಎಬ್ಜು ದೇವಾಲಯದ ಎಂಕಿ, ಉತ್ತರದ ನಿಪ್ಪೂರುನಲ್ಲಿಯ ಎಕುರ್, ಎನ್ನ ದೇವಾಲಯದ ಎನ್‌ಲಿಲ್, ಉರುಕ್‌ನಲ್ಲಿಯ ಈನ್ನ ದೇವಾಲಯದಲ್ಲಿಯ ಇನನ್ನ (ಬೆಳಗಿನ ಮತ್ತು ಸಂಜೆಯ ನಕ್ಷತ್ರ), ಸಿಪ್ಪರ್‌ನಲ್ಲಿಯ ಉತು (ಸೂರ್ಯ) ಮತ್ತು ಉರ್‌ನಲ್ಲಿಯ ನನ್ನ (ಚಂದ್ರ) ದೇವಾಲಯಗಳು ಪ್ರಮುಖವಾದುವು. ಈ ದೇವತೆಗಳು ಮಣ್ಣಿನಿಂದ ಮನುಷ್ಯರನ್ನು ಸೃಷ್ಟಿ ಮಾಡಿದರೆಂದು ನಂಬಿಕೆ. ವಿಶ್ವ ಒಂದು ತಟ್ಟೆಯಂತಿದೆ. ಇದರ ಮೇಲೆ ಅರ್ಧ ಗೋಲಾಕೃತಿಯ ತವರದ ಗುಮ್ಮಟವಿದೆಯೆಂದು ನಂಬಿಕೆ. ಸತ್ತ ಅನಂತರ ಮನುಷ್ಯರು ಮಂಕಾದ ಪಾತಾಳ ಲೋಕದಲ್ಲಿ ಪ್ರೇತಗಳಾಗಿ ಕೆಟ್ಟ ಸ್ಥಿತಿಯಲ್ಲಿ ಶಾಶ್ವತವಾಗಿ ಇರುವರೆಂಬ ನಂಬಿಕೆ.

ಇವರ ಪ್ರಧಾನ ಕಸುಬು ನೀರಾವರಿ ವ್ಯವಸಾಯ. ಮುಖ್ಯ ಬೆಳೆಗಳು ಬಾರ್ಲಿ, ಅವರೆಕಾಳು, ಗೋದಿ, ಖರ್ಜೂರ, ಈರುಳ್ಳಿ, ಬೆಳ್ಳುಳ್ಳಿ, ಸಾಸುವೆ ಇತ್ಯಾದಿ. ಹಂದಿ, ಕುರಿ, ಮೇಕೆ ಮತ್ತು ದನಕರುಗಳನ್ನು ಸಾಕುತ್ತಿದ್ದರು. ಎತ್ತುಗಳನ್ನು ಶ್ರಮದಾಯಕ ಕೆಲಸಕ್ಕೆ, ಕತ್ತೆ–ಕುದುರೆಗಳನ್ನು ಸರಕು ಸಾಗಾಣಿಕೆಗೆ ಉಪಯೋಗಿಸುತ್ತಿದ್ದರು. ಮೀನು, ಕಾಡುಕೋಳಿ, ಚುಕ್ಕೆ ಜಿಂಕೆಗಳನ್ನು ಬೇಟೆಯಾಡುತ್ತಿದ್ದರು. ನೀರಾವರಿಗೋಸ್ಕರ ಕಾಲುವೆ, ಒಡ್ಡು, ಜಲಾಶಯ ಮೊದಲಾದವುಗಳನ್ನು ನಿರ್ಮಿಸಲಾಗಿತ್ತು. ಸರ್ಕಾರದ ಇಂಥ ನಿರ್ಮಾಣ ಕೆಲಸಗಳಲ್ಲಿ ಜನರು ಬಿಟ್ಟಿ ಕೆಲಸ ಮಾಡಬೇಕಾಗಿತ್ತು ಇಲ್ಲವೇ ಹಣ ತೆರಬೇಕಾಗಿತ್ತು. ಹೊಸ ವರ್ಷ ಹಬ್ಬದ ಅನಂತರ ಕೃಷಿಕರು ತಮ್ಮ ಹೊಲ–ಗದ್ದೆಗಳಿಗೆ ಚೆನ್ನಾಗಿ ನೀರು ಹಾಯಿಸಿ ಎತ್ತುಗಳಿಂದ ಬಿರುಸಿನಿಂದ ಚೆನ್ನಾಗಿ ಕಳೆ ನಾಶವಾಗುವಂತೆ ತುಳಿಸಿ, ಒಣಗಿದ ಅನಂತರ ನೇಗಿಲು ಹೊಡೆದು ಮೂರು ಸಲ ಹಲಗೆ ಹೊಡೆದು ಭೂಮಿಯನ್ನು ಸಮಮಾಡಿ ಬಿತ್ತನೆ ಮಾಡುತ್ತಿದ್ದರು. ಭೂಮಿಯಲ್ಲಿ ಉಪ್ಪಿನಂಶ ಹೆಚ್ಚಿದ್ದರಿಂದ ಬೇಗ ಒಣಗಿ ಹೋಗುತ್ತಿದ್ದರಿಂದ ಈ ನೈಸರ್ಗಿಕ ಸ್ಥಿತಿಗೆ ಹೊಂದಿಕೊಳ್ಳುವ ಬಾರ್ಲಿಯನ್ನೇ ಹೆಚ್ಚು ಬೆಳೆಯಲಾಗುತ್ತಿತ್ತು.

ಮೆಸಪೊಟೇಮಿಯ ಪ್ರದೇಶದಲ್ಲಿ ಖನಿಜ ಮತ್ತು ಮರಗಳೇ ಸಂಪತ್ತು. ಎಲ್ಲ ಕಟ್ಟಡಗಳನ್ನು ಒಬ್ಬದಿ ಉಬ್ಬಿದ ಇಟ್ಟಿಗೆಗಳಿಂದ ಗಾರೆಯಿಲ್ಲದೆ ಕಟ್ಟಲಾಗುತ್ತಿತ್ತು. ಕಟ್ಟಡಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ ಒಂದರ ಮೇಲೆ ಒಂದರಂತೆ ಕಿರುದಾಗುತ್ತ ಹೋಗುವ ಅಡ್ಡಗಟ್ಟೆಗಳ ದಿಬ್ಬದ ಮೇಲಿನ ದೇವಾಲಯಗಳು. ಇವುಗಳನ್ನು ಜಿಗ್ಗುರಾಟ್ ಎಂದು ಕರೆಯಲಾಗಿದೆ. ಸಾಮಾನ್ಯರು ಜೊಂಡುಹುಲ್ಲಿನಿಂದ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ವಾಸ್ತುತಂತ್ರದಲ್ಲಿ ಕಮಾನು ಕಟ್ಟುವುದನ್ನು ಬೆಳೆಸಿಕೊಂಡದ್ದರಿಂದ ಹಲವಾರು ಕಮಾನುಗಳಿಂದ ಗುಮ್ಮಟ ನಿರ್ಮಾಣ ಸಾಧ್ಯವಾಯಿತು. ನಗರದ ಸುತ್ತಲೂ ರಕ್ಷಣಾ ಗೋಡೆಯಿರುತ್ತಿತ್ತು.

ಪ್ರಶ.ಪೂ.ಸು.4000 ಹೊತ್ತಿಗಾಗಲೇ ತೂಕ–ಅಳತೆ ಕ್ರಮದಲ್ಲಿ ಸುಧಾರಣೆಯಾದುದಲ್ಲದೆ ಸಂಖ್ಯೆ, ಬೀಜಗಣಿತ, ರೇಖಾ ಗಣಿತ ಮತ್ತು ಸಾಮಾನ್ಯ ಗಣಿತ ಶಾಸ್ತ್ರಗಳನ್ನೂ ಬೆಳೆಸಿಕೊಂಡರು. ಪ್ರ.ಶ.ಪೂ.ಸು.2600ರ ಸುಮಾರಿಗೆ ಮಣ್ಣಿನ ಫಲಕಗಳ ಮೇಲೆ ಕೋಷ್ಟಕವನ್ನು ಬರೆದಿಡಲಾಗುತ್ತಿತ್ತು. ಪ್ರ.ಶ.ಪೂ.ಸು.2700–2300 ಅವಧಿಯಲ್ಲಿ ಪ್ರಥಮ ಬಾರಿಗೆ ಲೆಕ್ಕ ಮಾಡುವುದನ್ನು ಕಲಿಯಲು ಮಣಿ ಚೌಕಟ್ಟನ್ನು ತಯಾರಿಸಲಾಯಿತು. ಸಂಖ್ಯೆಗುಚ್ಛದಲ್ಲಿ ಆಯಾಯ ಅಂಕೆಯ ಸ್ಥಾನದ ಮೇಲಿಂದ ಅದರ ಮೌಲ್ಯವನ್ನು ನಿಗದಿ ಮಾಡುವ ಕ್ರಮವನ್ನು ತಂದರು. ಇವರು ಮೊದಲು ಇದೇ ಬಗೆಯಲ್ಲಿ ಖಗೋಳ ಲೆಕ್ಕಾಚಾರಕ್ಕೆ ಮಾಪಕ ದಂಡವನ್ನು ಮಾಡಿಕೊಂಡಿದ್ದರು.

ಈ ನಾಗರಿಕತೆಯ ಅವಶೇಷಗಳಲ್ಲಿ ದೊರೆತ ಅನಟೋಲಿಯದ ಅಬ್ಸಿಡಿಯನ್, ಆಫ್ಘಾನಿಸ್ತಾನದ ಲ್ಯಾಪಿಸ್‌ಲ್ಯಾಸೂಲಿ, ಲೆಬನಾನಿನಿಂದ ದೇವದಾರು ಮರ, ಬಹರೇನ್ ಪ್ರದೇಶದ ಆಭರಣದ ಮಣಿಗಳು, ಸಿಂಧೂ–ಸರಸ್ವತಿ ಮುದ್ರಿಕೆಗಳಿಂದ ಈ ಜನರ ವ್ಯಾಪಾರ ಜಾಲ ಬಹಳ ದೂರದವರೆಗೂ ವಿಸ್ತರಿಸಿತ್ತೆಂಬುದನ್ನು ಸೂಚಿಸುತ್ತವೆ.

ಇವರ ನಗರ–ಪ್ರಾಂತಗಳ ನಡುವೆ ಪದೇ ಪದೇ ಯುದ್ಧವಾಗುತ್ತಿದ್ದರಿಂದ ಉತ್ತಮ ಗುಣಮಟ್ಟದ ಸೇನಾ ತಂತ್ರ, ಆಡಳಿತ ಬೆಳೆಯಿತು. ಇವರ ಈ ಕುಶಲತೆಯನ್ನು ಲಗಶ್ ಮತ್ತು ಉಮ್ಮ ನಡುವಿನ ಯುದ್ಧದಲ್ಲಿ ಲಗಶ್‌ನ ರಾಜ ತನ್ನ ಸೈನ್ಯ ವ್ಯೂಹ ರಚನೆಯ ಬಗ್ಗೆ ತನ್ನ ಈಗಲ್ ಶಾಸನದಲ್ಲಿ ವರ್ಣಿಸಿದ್ದಾನೆ. ಈ ರೀತಿಯ ಪದಾತಿಗಳು ಹೆಚ್ಚಾಗಿರುವ ಸೈನ್ಯ ಸಂಘಟನೆಯಲ್ಲಿ ಸಿಪಾಯಿಗಳು ಶಿಸ್ತುದಾರರಾಗಿ ಒಳ್ಳೆಯ ತರಬೇತಿಯನ್ನು ಪಡೆದಿರಬೇಕು. ಸೈನಿಕರ ಪ್ರಧಾನವಾದ ಆಯುಧಗಳು ಈಟಿ ಮತ್ತು ಗುರಾಣಿ; ತಾಮ್ರದ ಶಿರಸ್ತ್ರಾಣವನ್ನು ಧರಿಸುತ್ತಿದ್ದರು. ಹೇಸರಗತ್ತೆಯಿಂದ ಎಳೆಯಲ್ಪಟ್ಟ ಎರಡು ಅಥವಾ ನಾಲ್ಕು ಚಕ್ರಗಳ ಗಾಡಿ/ರಥಗಳನ್ನು ಪ್ರಯಾಣಕ್ಕೆ ಯುದ್ಧದಲ್ಲಿ ಉಪಯೋಗಿಸಲಾಗುತ್ತಿತ್ತು. (ಎ.ಎಸ್.)

**ಸುರಕೋಟಡ:** ಗುಜರಾತ್ ರಾಜ್ಯದ ಕಚ್ಛ್ ಜಿಲ್ಲೆಯಲ್ಲಿರುವ ಹರಪ್ಪ ಸಂಸ್ಕೃತಿಯ ನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಜೆ.ಪಿ.ಜೋಶಿಯವರ ತಂಡ 1964, 1965 ಮತ್ತು 1968ರಲ್ಲಿ ನಡೆಸಿದ ಅನ್ವೇಷಣೆಯಲ್ಲಿ ಈ ನೆಲೆಯೂ ಸೇರಿದಂತೆ ಹರಪ್ಪ ಸಂಸ್ಕೃತಿಯ 120 ನೆಲೆಗಳು ಕಚ್ಛ್ ಪ್ರದೇಶದಲ್ಲಿ ಪತ್ತೆಯಾದುವು. ಇದೇ ತಂಡ 1971 ಮತ್ತು 1972ರಲ್ಲಿ ಸುರಕೋಟಡದಲ್ಲಿ ಉತ್ಖನನ ನಡೆಸಿತು. ಈ ನೆಲೆ 160x125 ಮೀ ವಿಸ್ತೀರ್ಣ ಹೊಂದಿದ್ದು 5–8 ಮೀ ಎತ್ತರವಿದೆ. ಹರಪ್ಪ ಸಂಸ್ಕೃತಿಯ 3 ಹಂತಗಳನ್ನು (ಪ್ರಶ.ಪೂ.2300 ರಿಂದ 1700) ಉತ್ಖನನದಲ್ಲಿ ಗುರುತಿಸಲಾಗಿದೆ. 1ಎ ಹಂತದಲ್ಲಿ 120x60 ಮೀ ಆಯತಾಕಾರದ ಕೋಟೆಯಿದ್ದು ಇದರಲ್ಲಿ ದುರ್ಗ (ಸಿಟಡೆಲ್) ಮತ್ತು ನಿವಾಸ ಸಂಕೀರ್ಣ (ರೆಸಿಡೆನ್ಷಿಯಲ್ ಕಾಂಪ್ಲೆಕ್ಸ್) ಎಂಬ ಎರಡು ಭಾಗಗಳಿವೆ. 1ಬಿ ಮತ್ತು 1ಸಿ ಹಂತಗಳಲ್ಲಿ ಕೋಟೆಯ ವಿನ್ಯಾಸದಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಆದರೆ ಮಣ್ಪಾತ್ರೆ ಸಂಪ್ರದಾಯಗಳಲ್ಲಿ ಬದಲಾವಣೆ ಕಂಡುಬರುತ್ತದೆ.

ಹಂತ 1ಎ: ಹರಪ್ಪ ಸಂಸ್ಕೃತಿ ಆರಂಭಗೊಳ್ಳುವ ಮೊದಲು (ಹರಪ್ಪ ಪೂರ್ವ ಕಾಲ) ಇಲ್ಲಿ ಕೆಂಪು ಹಾಗೂ ತಿಳಿಗುಲಾಬಿ ಬಣ್ಣಗಳ ವರ್ಣಚಿತ್ರಿತ ಪಾತ್ರೆಗಳನ್ನು ಉಪಯೋಗಿ ಸುತ್ತಿದ್ದ ಜನಸಮುದಾಯವಿತ್ತು. ಈ ಪಾತ್ರೆಗಳನ್ನು ಕಪ್ಪು ಹಾಗೂ ಬಿಳಿಬಣ್ಣಗಳಿಂದ ಅಲಂಕರಿಸಲಾಗುತ್ತಿತ್ತು. ಈ ಪಾತ್ರೆಗಳ ಪ್ರಮಾಣ ಶೇ.7 ಮಾತ್ರ. ಇಂಥ ಪಾತ್ರೆಗಳು ಮೊಹೆಂಜೋದಾರೊ ಮತ್ತು ಲೋಥಲ್‌ನಲ್ಲೂ ಕಂಡುಬಂದಿಲ್ಲ. ಗಾಢ ಕೆಂಪು ಲೇಪನದ ಪಾತ್ರೆಗಳನ್ನೂ ಇವರು ಉಪಯೋಗಿಸುತ್ತಿದ್ದರು.

ಅನಂತರದಲ್ಲಿ ಹರಪ್ಪ ಸಂಸ್ಕೃತಿಯ ಲಕ್ಷಣಗಳು ಇಲ್ಲಿ ಆರಂಭವಾದುವು. ಆಯತಾಕಾರದ ಕೋಟೆಯಿಂದ ಸುತ್ತುವರೆದಿದ್ದ ಈ ವಸತಿಯ ಪಶ್ಚಿಮದಲ್ಲಿ ಎತ್ತರ ಪ್ರದೇಶದಲ್ಲಿ ಆಡಳಿತ ವರ್ಗದ ಸಂಕೀರ್ಣವೂ (ಸಿಟಡೆಲ್) ಪೂರ್ವದಲ್ಲಿ ಜನಸಾಮಾನ್ಯರ ವಸತಿ ಸಂಕೀರ್ಣವೂ ಇದ್ದುವು. ಈ ಎರಡು ಸಂಕೀರ್ಣಗಳನ್ನು ಗೋಡೆಯಿಂದ ಪ್ರತ್ಯೇಕಿಸಲಾಗಿತ್ತು. ಕಲ್ಲು, ಹಸಿಇಟ್ಟಿಗೆ ಮತ್ತು ಮಣ್ಣಿನ ಮುದ್ದೆಗಳಿಂದ ಕಟ್ಟಲಾಗಿದ್ದ ಕೋಟೆಯ ತಳಪಾಯದ ಅಗಲ 7 ಮೀ. ವಸತಿ ಸಂಕೀರ್ಣದ ಗೋಡೆಯ ಅಗಲ 3.25 ಮೀ. ದುರ್ಗದ ದಕ್ಷಿಣಗೋಡೆಯಲ್ಲಿ ಪ್ರವೇಶದ್ವಾರವಿತ್ತು. ದುರ್ಗದಿಂದ ವಸತಿ ಸಂಕೀರ್ಣದೊಳಗೆ ಪ್ರವೇಶಿಸಲು ಮಧ್ಯ ಗೋಡೆಯಲ್ಲಿ ದ್ವಾರವಿತ್ತು.

ಈ ಹಂತದ ಮಣ್ಪಾತ್ರೆಗಳಲ್ಲಿ ಶೇ. 93ರಷ್ಟು ಕಪ್ಪು ಮಣ್ಪಾತ್ರೆಗಳಿದ್ದು ಸೂರ್ಯ, ಅರಳಿಮರ, ಬಾಳೆಗಿಡ, ಜಿಂಕೆ, ಕೊಕ್ಕರೆ, ನವಿಲು, ಮೀನು, ಮೀನಿನ ಉರುಪೆ, ತ್ರಿಕೋಣಗಳು, ಗೆರೆಗಳ ತುದಿಯಲ್ಲಿ ಚುಕ್ಕೆಗಳು ಮುಂತಾದ ಚಿತ್ರಗಳಿಂದ ಇವನ್ನು ಅಲಂಕರಿಸಲಾಗಿದೆ. ಹರಪ್ಪ ಸಂಸ್ಕೃತಿಯ ವಿಶಿಷ್ಟವಾದ ಆಕಾರಗಳಾದ ರಂಧ್ರಗಳುಳ್ಳ ಹೂಜಿ, ಪಾನ ಪಾತ್ರೆಗಳು (ಗಾಬ್ಲೆಟ್), ಕಾಲಿರುವ ತಟ್ಟೆ, ಎಸ್–ಆಕಾರದ ದೊಡ್ಡ ಜಾಡಿ, ರಂಧ್ರವುಳ್ಳ ಹಿಡಿಯಿರುವ ಬಟ್ಟಲುಗಳು ಇಲ್ಲಿವೆ.

ಅವಶೇಷಗಳಲ್ಲಿ ಸುಡಾವೆಮಣ್ಣಿನ ಗೋಲಿ, ಬಳೆ, ಗಾಲಿ, ಎತ್ತಿನ ಗಾಡಿಯ ಭಾಗಗಳು, ಬಿಲ್ಲೆ, ಕವಣೆಯ ಗುಂಡು, ಒನಕೆಕಲ್ಲುಗಳು, ಅರೆಯುವ ಕಲ್ಲು, ತೂಕದ ಬಟ್ಟು, ಚರ್ಟ್ ಕಲ್ಲಿನ ತೆಳು ನೀಳಚಕ್ಕೆ, ಕಾರ್ನೇಲಿಯನ್, ವೈಡೂರ್ಯ ಮುಂತಾದ ಅಮೂಲ್ಯ ಕಲ್ಲುಗಳ ಮಣಿಗಳು, ತಾಮ್ರದ ಉಂಗುರ, ಬಳೆ ಮತ್ತು ಭರ್ಜಿ, ದಂತದ ಬಾಚಣಿಗೆಯ ಚೂರು, ಮೂಳೆಯ ಮೊನೆ ಇತ್ಯಾದಿಗಳಿವೆ. ಏಕಶೃಂಗ ಮತ್ತು ಹರಪ್ಪ ಸಂಸ್ಕೃತಿಯ ಲಿಪಿಚಿಹ್ನೆಗಳುಳ್ಳ ಸ್ಟಿಯಟೈಟ್ ಮುದ್ರೆಗಳು ಮತ್ತು ಮಡಕೆ ಚೂರುಗಳ ಮೇಲಿರುವ ಈ ಚಿಹ್ನೆಗಳು ಗಮನಾರ್ಹ.

ಇಲ್ಲಿ ಊರಿನ ವಾಯವ್ಯಕ್ಕೆ ಸಮಾಧಿ ಇತ್ತು. ಅಸ್ಥಿ ಅವಶೇಷಗಳುಳ್ಳ ಮಡಕೆಗಳನ್ನು ಹೂಳಿ, ಚಪ್ಪಡಿಕಲ್ಲಿನಿಂದ ಅಥವಾ ಕಲ್ಲಿನ ರಾಶಿಯಿಂದ ಮುಚ್ಚುವ ಪದ್ಧತಿ ಇತ್ತೀಚೆಗೆ ಜುನಿಕುರಣದಲ್ಲೂ ಕಂಡುಬಂದಿದೆ.

ಹಂತ 1ಬಿ- ಈ ಹಂತದಲ್ಲಿ ವಿಶಿಷ್ಟವಾದ ಕಪ್ಪು ಚಿತ್ರವುಳ್ಳ ಕೆಂಪುಪಾತ್ರೆಗಳ ಬಳಕೆ ಕಡಿಮೆಯಾಯಿತು. ಒರಟಾದ ಕೆಂಪುಪಾತ್ರೆಗಳು ಅಧಿಕವಾದುವು. ಇವನ್ನು ನಿಧಾನವಾಗಿ ತಿರುಗುವ ಮರದ ಹಲಗೆಯ ಮೇಲೆ ಮಾಡಿ ಕಡಿಮೆ ಉಷ್ಣತೆಯಲ್ಲಿ ಸುಡಲಾಗುತ್ತಿತ್ತು. ಮುಖ್ಯವಾದ ಆಕಾರಗಳೆಂದರೆ ಅಗಲವಾದ ಬಾಯುಳ್ಳ ಗೋಲ ಮಡಕೆಗಳು, ಕಿರಿದಾದ ಕಂಠದ ಹೂಜಿ, ಬೋಗುಣಿ, ಬಟ್ಟಲು, ತಟ್ಟೆಗಳು, ನಾಳ ಅಥವಾ ಕೈಹಿಡಿ ಇರುವ ಬಟ್ಟಲುಗಳು, ಕಾಲಿರುವ ತಟ್ಟೆ ಅಥವಾ ಬಟ್ಟಲು ಇತ್ಯಾದಿ. ಸರಳ ಗೆರೆಗಳು, ಪಟ್ಟೆಗಳು, ಜಾಲ ಮತ್ತು ತರಂಗ ಮುಂತಾದ ವಿನ್ಯಾಸಗಳನ್ನು ಚೂಪಾದ ದಬ್ಬಳದಿಂದ ಮಾಡಲಾಗಿದೆ. ಕೋಟೆ ಗೋಡೆಯ ನಕ್ಷೆಯಲ್ಲಿ ಯಾವ ವ್ಯತ್ಯಾಸವಾಗಲಿಲ್ಲ. ಆದರೆ ಹಸಿಇಟ್ಟಿಗೆಯ ಗೋಡೆಗಳಿಂದ ಮೂಲಗೋಡೆಯನ್ನು ಬಲಗೊಳಿಸಲಾಯಿತು. ಪುರಾವಶೇಷಗಳಲ್ಲಿ ಮುಖ್ಯವಾದುವೆಂದರೆ ತಾಮ್ರದ ಕೊಡಲಿ (25x10x1 ಸೆಂಮೀ) ಮತ್ತು ತಾಮ್ರದ ಉಳಿ (12x1 ಸೆಂಮೀ). ಚರ್ಟ್ ಕಲ್ಲಿನ ಜೊತೆಗೆ ಕಾರ್ನೇಲಿಯನ್ ಮತ್ತು ಕ್ಯಾಲ್ಸೆಡನಿ ಕಲ್ಲುಗಳನ್ನೂ ನೀಳಚಕ್ಕೆಗಳಿಗಾಗಿ ಬಳಸಲಾಯಿತು. ಉಳಿದ ವಸ್ತುಗಳು ಹಿಂದಿನ ಹಂತದಲ್ಲಿದ್ದಂತೆಯೇ ಇವೆ. ಈ ಹಂತದ ಅಂತ್ಯದಲ್ಲಿ ಇಡಿ ವಸತಿಗೆ ಬೆಂಕಿ ಬಿದ್ದುದು ಬೂದಿಯ ಪದರದಿಂದ ತಿಳಿಯುತ್ತದೆ.

1ಸಿ ಹಂತದಲ್ಲಿ ಬಿಳಿವರ್ಣ ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಬಳಕೆಗೆ ಬಂದಿತು. ಆದರೆ ಅಧಿಕವಾಗಿ ಬಳಸಲ್ಪಡುತ್ತಿದ್ದುದು ಚಿತ್ರರಹಿತ ಒರಟು ಕೆಂಪುಪಾತ್ರೆಗಳು, ಸಂಗ್ರಹಣ ಜಾಡಿಗಳು, ಹೂಜಿ, ಬೋಗುಣಿ ಮುಂತಾದ ಆಕಾರಗಳು ಇದರೊಳಗಿದ್ದುವು. ಇವುಗಳ ಮೇಲೆ ಉಗುರಿನಿಂದ ಅಥವಾ ಚೂಪಾದ ದಬ್ಬಳದಲ್ಲಿ ಮಾಡಿರುವ ರೇಖಾಕೃತಿಗಳು, ಮಣ್ಣನ್ನು ಮೆತ್ತಿ ಮಾಡಿರುವ ಅಲಂಕಾರಗಳು ಕಂಡುಬರುತ್ತವೆ.

ಈ ಕಾಲದಲ್ಲಿ ಕೋಟೆಯನ್ನು ಸಂಪೂರ್ಣವಾಗಿ ಕಲ್ಲುಗಳಿಂದ ಭದ್ರಪಡಿಸಲಾಯಿತು. ಹೆಬ್ಬಾಗಿಲುಗಳನ್ನು ನವೀಕರಿಸಲಾಯಿತು. ದಕ್ಷಿಣ ಗೋಡೆಯಲ್ಲಿ ಕೊತ್ತಲಗಳನ್ನೂ ದಕ್ಷಿಣದ ಹೆಬ್ಬಾಗಿಲಲ್ಲಿ ಕಾವಲುಗಾರರ ಕೊಠಡಿಗಳು, ಮೆಟ್ಟಿಲುಗಳು, ಇಳಿಜಾರುಗಳನ್ನೂ ಸೇರಿಸಲಾಯಿತು. ಮನೆಗಳು, ರಸ್ತೆಗಳು, ಓಣಿಗಳು ಮತ್ತು ಜಗಲಿಗಳ ಅವಶೇಷಗಳು ಇಲ್ಲಿ ಕಂಡುಬಂದಿವೆ. ಈ ಕಾಲದ ಗಮನಾರ್ಹ ವಸ್ತುಗಳೆಂದರೆ ತಾಮ್ರ, ಸ್ಟಿಯಟೈಟ್ ಮತ್ತು ಕಾರ್ನೇಲಿಯನ್ ಕಲ್ಲಿನ ಮಣಿಗಳು ಹಾಗೂ ತಾಮ್ರದ ಬಳೆಗಳು. 30.5x 2.75 ಸೆಂಮೀ ಉದ್ದಗಲದ ತಾಮ್ರದ ಉಳಿಯೂ ಸಿಕ್ಕಿದೆ. ಕುದುರೆಯ ಎಲಬುಗಳು ವಿಪುಲವಾಗಿ ದೊರಕಿವೆ. (ಯು.ಎಸ್.)

**ಸುರೇಂದ್ರನಾಥ ಬ್ಯಾನರ್ಜಿ:** 1848–1925. ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಣತಜ್ಞ ಮತ್ತು ಪತ್ರಿಕೋದ್ಯಮಿ. ಕಲ್ಕತ್ತದ ಶ್ರೀಮಂತ ಕುಟುಂಬದಲ್ಲಿ 1848 ನವೆಂಬರ್ 10ರಂದು ಜನಿಸಿದರು. ತಂದೆ ದುರ್ಗಾಚರಣ್ ಬ್ಯಾನರ್ಜಿ, ವೈದ್ಯ. ಮೊದಲು ಬಂಗಾಲಿ ಶಾಲೆಯಲ್ಲಿ ಕಲಿತ ಸುರೇಂದ್ರನಾಥರು ಅನಂತರ ಪೇರೆಂಟಲ್ ಅಕಾಡೆಮಿಕ್ ಸಂಸ್ಥೆ ಮತ್ತು ಡೋವ್‌ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ 1868ರಲ್ಲಿ ಪದವೀಧರರಾದರು. ತಂದೆಯ ಆಕಾಂಕ್ಷೆಯಂತೆ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗಾಗಿ 1868 ಮಾರ್ಚ್ 3ರಂದು ಇಂಗ್ಲೆಂಡಿಗೆ ತೆರಳಿದರು. 1869ರಲ್ಲಿ ಐಸಿಎಸ್ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 1871ರಲ್ಲಿ ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅದೇ ವರ್ಷ ಇಂದಿನ ಅಸ್ಸಾಮ್ ರಾಜ್ಯಕ್ಕೆ ಸೇರಿರುವ ಸಿಲ್ಹೆಟ್‌ನಲ್ಲಿ ಸಹಾಯಕ ನ್ಯಾಯಾಧೀಶರನ್ನಾಗಿ ನೇಮಕಮಾಡಲಾಯಿತು. ಭಾರತೀಯರ ಬಗೆಗೆ ಸದಭಿಪ್ರಾಯವಿಲ್ಲದ ಬ್ರಿಟನ್ನಿನವನೇ ಆದ ಜಿಲ್ಲಾ ನ್ಯಾಯಾಧೀಶನು ಇವರು ಆ ಹುದ್ದೆಯಲ್ಲಿರುವುದನ್ನು ಸಹಿಸಲಿಲ್ಲ. ಯಾವುದೋ ಸಣ್ಣ ಕಾರಣವನ್ನೇ ದೊಡ್ಡದು ಮಾಡಿ ಬ್ರಿಟಿಷ್ ಸರ್ಕಾರ 1874 ಮಾರ್ಚ್‌ನಲ್ಲಿ ಇವರನ್ನು ಸೇವೆಯಿಂದ ವಜಾ ಮಾಡಿತು. ಆಗ ಪಂಡಿತ ಈಶ್ವರಚಂದ್ರ ವಿದ್ಯಾಸಾಗರರು ಮೆಟ್ರೊಪಾಲಿಟನ್ ಸಂಸ್ಥೆಯಲ್ಲಿ ತಿಂಗಳಿಗೆ ರೂ. 200 ಸಂಬಳವಿತ್ತು ಇಂಗ್ಲಿಷ್ ಪ್ರಾಧ್ಯಾಪಕ ಹುದ್ದೆಯನ್ನು ಇವರಿಗೆ ನೀಡಿದರು (1876).

ಬ್ರಿಟಿಷ್ ಆಡಳಿತಗಾರರು ಭಾರತೀಯರಿಗೆ ಮಾಡುತ್ತಿದ್ದ ಅನ್ಯಾಯವನ್ನು ಸ್ವಾನುಭವದಿಂದಲೇ ಕಂಡ ಬ್ಯಾನರ್ಜಿಯವರು ಮಧ್ಯಮವರ್ಗದ ವಿದ್ಯಾವಂತರಿಗೆ ಉತ್ತೇಜನ ನೀಡಲು ಹಾಗೂ ಐಕಮತ್ಯದ ಚೈತನ್ಯ ತುಂಬಲು 1876 ಜುಲೈ 26ರಂದು ಇಂಡಿಯನ್ ಅಸೋಸಿಯೇಷನ್ ಸ್ಥಾಪಿಸಿದರು. ಮುಂದೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಸಂಸ್ಥೆ ಸಲ್ಲಿಸಿದ ಸೇವೆ ಸ್ಮರಣೀಯ. 1880ರಿಂದ ಬ್ಯಾನರ್ಜಿಯವರು ಫ್ರೀಚರ್ಚ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಮುಂದೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿದರು (1885). 1882ರಲ್ಲಿ ಕಲ್ಕತ್ತ ನ್ಯಾಯಾಲಯದ ಗೌರವ ಪ್ರೆಸಿಡೆನ್ಸಿ ನ್ಯಾಯಾಧೀಶರಾಗಿ ನೇಮಕಗೊಂಡರು. ಆಗಲೇ ಪ್ರೆಸಿಡೆನ್ಸಿ ವಿದ್ಯಾಸಂಸ್ಥೆಯನ್ನು ವಹಿಸಿಕೊಂಡು ಲಾರ್ಡ್ ರಿಪನ್‌ನ ಹೆಸರಿನಲ್ಲಿ ರಿಪನ್ ಕಾಲೇಜ್ ಸ್ಥಾಪಿಸಿದರು; ಶಿಕ್ಷಣ ಕ್ಷೇತ್ರದಲ್ಲಿ ದುಡಿದರು (1875–1912).

ಲಾಹೋರಿನಲ್ಲಿ ಟ್ರಿಬ್ಯೂನ್ ಪತ್ರಿಕೆ ಸ್ಥಾಪಿಸಲು ದಯಾಲ್ ಸಿಂಗ್ ಮಜೀಥಿಯವರಿಗೆ ಇವರು 1881ರಲ್ಲಿ ಮುದ್ರಣ ಯಂತ್ರ ಕೊಂಡುಕೊಟ್ಟು ಸಹಾಯ ಮಾಡಿದರು. 1879ರಲ್ಲಿ ಬಂಗಾಲ ಭಾಷಾ ಪತ್ರಿಕೆ ಬೆಂಗಾಲಿಯನ್ನು ವಹಿಸಿಕೊಂಡು ವ್ಯವಸ್ಥಾಪಕರಾಗಿ ಹಾಗೂ ಸಂಪಾದಕರಾಗಿ ದುಡಿದರು. ವಿಚಾರಣೆಗಾಗಿ ಹಿಂದು ದೇವರ ವಿಗ್ರಹಗಳನ್ನು ನ್ಯಾಯಾಲಯಕ್ಕೆ ತರಬೇಕೆಂದು ಆಜ್ಞಾಪಿಸಿದ ಕಲ್ಕತ್ತದ ಮುಖ್ಯ ಬ್ರಿಟಿಷ್ ನ್ಯಾಯಾಧೀಶರನ್ನು ಧಿಕ್ಕರಿಸಿದರು. ನ್ಯಾಯಾಲಯ ನಿಂದನೆಗಾಗಿ ಇವರಿಗೆ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಸಮಾಜ ಸುಧಾರಣೆಗಾಗಿ ತಮ್ಮ ಜೀವನಪರ್ಯಂತ ದುಡಿದ ಇವರು ಮದ್ಯಪಾನದ ವಿರುದ್ಧ ಮತ್ತು ವಿಧವಾ ಪುನರ್ವಿವಾಹದ ಪರ ಅನೇಕ ಚಳವಳಿಗಳನ್ನು ನಡೆಸಿದರು.

ಇವರು ಭಾರತದ ರಾಜಕೀಯ ಕಾಂಗ್ರೆಸ್ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು. ಭಾರತದ ರಾಜಕೀಯ ಸುಧಾರಣೆಗಳ ಜಾರಿಗಾಗಿ ಆಗಿನ ಬ್ರಿಟಿಷ್ ಸರ್ಕಾರದ ಹಾಗೂ ಪ್ರಜೆಗಳ ಗಮನ ಸೆಳೆಯಲು ಮುಂಬಯಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಇವರನ್ನೂ ಸೇರಿದಂತೆ ಇತರ ಪ್ರಮುಖರ ತಂಡವನ್ನು 1890ರಲ್ಲಿ ಲಂಡನ್ನಿಗೆ ಕಳುಹಿಸಿಕೊಡಲಾಯಿತು.

1893ರಲ್ಲಿ ಬಂಗಾಲದ ವಿಧಾನಪರಿಷತ್ತಿಗೆ ಅವಿರೋಧವಾಗಿ ಆಯ್ಕೆಯಾದ ಬ್ಯಾನರ್ಜಿಯವರು 1901ರ ತನಕ ಸತತವಾಗಿ ಪರಿಷತ್ತಿಗೆ ಆರಿಸಿಬಂದ ಪ್ರಥಮ ಹಾಗೂ ಏಕೈಕ ಬಂಗಾಲಿ ನೇತಾರರು. 1895ರಲ್ಲಿ ಇವರನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಲಾಯಿತು. 1902ರಲ್ಲಿ ಎರಡನೆಯ ಬಾರಿಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದರು. 1909ರಲ್ಲಿ ಲಂಡನ್ನಿನಲ್ಲಿ ನಡೆದ ಇಂಪೀರಿಯಲ್ ಪತ್ರಿಕಾ ಸಮ್ಮೇಳನದಲ್ಲಿ ಇವರು ಭಾರತದ ಏಕೈಕ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಬೆಂಗಾಲಿ ವಾರಪತ್ರಿಕೆಯನ್ನು 1900ರಲ್ಲಿ ದಿನಪತ್ರಿಕೆಯಾಗಿ ಪರಿವರ್ತಿಸಲಾಯಿತು. ಇದು ಇಂಗ್ಲೆಂಡಿನ ರಾಯಿಟರ್ ಸುದ್ದಿ ಸಂಸ್ಥೆಯ ಚಂದಾದಾರರಲ್ಲಿ ಪ್ರಥಮ ಭಾರತೀಯ ಭಾಷಾಪತ್ರಿಕೆ. ಬಂಗಾಲ ವಿಭಜನೆಯ ವಿರುದ್ಧ ಇವರು ತಮ್ಮ ಪತ್ರಿಕೆಯ ಮೂಲಕ ಆಂದೋಲನ ನಡೆಸಿದರು. ಭಾರತೀಯ ಭಾಷಾ ಪತ್ರಿಕೋದ್ಯಮದಲ್ಲಿ ಬಂಗಾಲೀ ಪತ್ರಿಕೆಗೆ ವಿಶೇಷ ಸ್ಥಾನವಿದೆ.

ಕಲ್ಕತ್ತ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ವಿದ್ಯಾಕ್ಷೇತ್ರದಲ್ಲಿ ಸುಧಾರಿತ ಕಾನೂನುಗಳನ್ನು ಜಾರಿಗೆ ತರಲು ಕಾರಣರಾದರು. 1921ರಲ್ಲಿ ಕಲ್ಕತ್ತದ ಬಾರಾಕ್‌ಪುರ್‌ನಿಂದ ಬಂಗಾಲದ ವಿಧಾನ ಪರಿಷತ್ತಿಗೆ ಆಯ್ಕೆಯಾದರು. ಸ್ಥಳೀಯ ಸ್ವಯಂ ಸರ್ಕಾರದ ಮಂತ್ರಿಯಾದರು. ಬಂಗಾಲ ವಿಭಜನೆಯ ವಿರುದ್ಧ, ಸ್ವಯಂ ಸರ್ಕಾರಕ್ಕಾಗಿ ಹಾಗೂ ಮಾನವ ಹಕ್ಕುಗಳಿಗಾಗಿ ದೃಢವಾಗಿ ಹೋರಾಡಿದ ಇವರು ಬ್ರಿಟಿಷ್ ಸರ್ಕಾರ ನೀಡಿದ ನೈಟ್ ಪದವಿಯನ್ನು ಅಂಗೀಕರಿಸಿದ್ದರು. ರಾಷ್ಟ್ರೀಯ ಕಾಂಗ್ರೆಸ್‌ನ ಸುಧಾರಣಾವಾದಿಗಳ ಗುಂಪಿಗೆ ಸೇರಿದ್ದ ಇವರು ಮುಂದೆ ಕಾಂಗ್ರೆಸ್‌ನ ಚಟುವಟಿಕೆಗಳು ತೀವ್ರಗೊಂಡಾಗ ಮತ್ತು ಮಾಂಟೆಗೊ-ಚೆಲ್ಮ್ಸ್‌ಫರ್ಡ್ ಸುಧಾರಣೆಯ ಮುನ್ನೆಡೆಯಲ್ಲಿ ಕಾಂಗ್ರೆಸ್ ವಿಭಜನೆಗೊಂಡಾಗ ಹಿಂದೆ ಸರಿದರು.

ಎ ನೇಷನ್ ಇನ್ ಮೇಕಿಂಗ್ ಇವರು ಬರೆದ ಆತ್ಮಚರಿತ್ರೆ (1925). ಇದು ಭಾರತ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಹಂತವನ್ನು ಸಮಗ್ರವಾಗಿ ಚಿತ್ರಿಸುತ್ತದೆ. (ಎನ್.ಯು.ಆರ್.)

**ಸುಲೂರು:** ತಮಿಳುನಾಡು ರಾಜ್ಯದ ಕೊಯಮತ್ತೂರು ಜಿಲ್ಲೆಯಲ್ಲಿ, ಕೊಯಮತ್ತೂರಿನ ಹತ್ತಿರ ಇರುವ ಬೃಹತ್ ಶಿಲಾಸಂಸ್ಕೃತಿಯ ಗೋರಿ ನೆಲೆ. ಇಲ್ಲಿ ಬೃಹತ್ ಶಿಲಾಸಂಸ್ಕೃತಿಯ ಮಣ್ಪಾತ್ರೆ, ರೌಲೆಟ್ ಮಣ್ಪಾತ್ರೆ, ಅರೆ ಪ್ರಶಸ್ತಕಲ್ಲಿನ ಮಣಿ ಮತ್ತು ಮುದ್ರಾಂಕಿತ ಹಾಗೂ ರೋಮನ್ ನಾಣ್ಯಗಳು ದೊರೆತಿವೆ. ಇಲ್ಲಿ ದೊರೆತ ಒಂದು ಮಣ್ಣಿನ ಬಟ್ಟಲಿನ ಅಂಚಿನಲ್ಲಿ ಒಂದೇ ಸಾಲಿನಲ್ಲಿ ಐದು ಗೀರು ಸಂಕೇತಗಳಿವೆ. ಐರಾವತಮ್ ಮಹದೇವನ್ ಅವರು ಮೂರು ಬದಿ ಬರೆವಣಿಗೆಯುಳ್ಳ ಆಯತಾಕಾರದ ಹರಪ್ಪ ಸಂಸ್ಕೃತಿಯ ಒಂದು ಮುದ್ರಿಕೆಯಲ್ಲಿರುವ ಅಕ್ಷರಗಳಿಗೂ ಸುಲೂರು ಮಣ್ಪಾತ್ರೆ ಮೇಲಿನ ಗೀಚುಗಳಿಗೂ ಹೋಲಿಕೆ ಇರುವುದನ್ನು ಗುರುತಿಸಿದ್ದಾರೆ. ಇದನ್ನೂ ಶೆಂಬಿಯನ್ ಕಂಡಿಯೂರಿನ ಹರಪ್ಪ ಲಿಪಿಯನ್ನು ಹೋಲುವ ಅಕ್ಷರಗಳುಳ್ಳ ನವಶಿಲಾಯುಗ ಕೊಡಲಿಯನ್ನೂ ಗಮನಿಸಿದಾಗ ಹರಪ್ಪ ಲಿಪಿ ದಕ್ಷಿಣ ಭಾರತಕ್ಕೆ ಪ್ರಸರಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂಬುದು ಇವರ ಅಭಿಪ್ರಾಯ. ಈ ಮಣ್ಪಾತ್ರೆಯ ಕಾಲ ಪ್ರ.ಶ.ಪೂ.ಸು.100. ಒಂದು ಮುದ್ರಾಂಕಿತ ನಾಣ್ಯ ಮತ್ತು ಅಲೆಯಂತಿರುವ ಬಿಳಿವರ್ಣ ರೇಖೆಗಳಿಂದ ಅಲಂಕರಿಸಲ್ಪಟ್ಟ ಕಾವಿ ವರ್ಣದ ಮಣ್ಪಾತ್ರೆ ಗಮನಾರ್ಹ. (ಎ.ಎಸ್.;ಎನ್.ಎಲ್.)

**ಸುಶ್ರುತ:** ಪ್ರ.ಶ.ಪೂ.ಸು.6-7ನೆಯ ಶತಮಾನದಲ್ಲಿದ್ದ ಪ್ರಾಚೀನ ಭಾರತದ ಆಯುರ್ವೇದ ವೈದ್ಯ. ವಿಶ್ವಾಮಿತ್ರ ಋಷಿಯ ಮಗ. ವೈದ್ಯಶಾಸ್ತ್ರದ ಅಧಿದೇವತೆಯಾದ ಧನ್ವಂತರಿಯ ಅವತಾರ ರೂಪನೆಂದು ಪರಿಗಣಿಸಲ್ಪಟ್ಟಿದ್ದ ಕಾಶೀರಾಜ ದಿವೋದಾಸನಿಂದ ಈ ಶಾಸ್ತ್ರವನ್ನು ಕಲಿತ. ಋಷಿ ಜೀವನ ನಡೆಸಿದ ಸುಶ್ರುತ, ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಸುಶ್ರುತ ಸಂಹಿತೆ ಎಂಬ ಕೃತಿ ರಚಿಸಿದ್ದಾನೆ.

ಪ್ರಕೃತ ಉಪಲಬ್ಧವಿರುವ ಸುಶ್ರುತ ಸಂಹಿತೆ ಬೌದ್ಧಭಿಕ್ಷು ನಾಗಾರ್ಜುನನಿಂದ 2ನೆಯ ಶತಮಾನದಲ್ಲಿ ಮತ್ತೆ ಸಂಸ್ಕರಿಸಲ್ಪಟ್ಟಿದೆಂದು ವಿದ್ವಾಂಸರ ಅಭಿಪ್ರಾಯ. ಮೂಲಸಂಹಿತೆ 5 ಸ್ಥಾನಗಳಿಂದ ಕೂಡಿದ್ದು ಶಸ್ತ್ರಚಿಕಿತ್ಸಾ ವಿಷಯಗಳನ್ನು ಒಳಗೊಂಡಿದೆ. ನೇತ್ರ, ಕರ್ಣ, ನಾಸಾ ಮತ್ತು ಕಾಯರೋಗಗಳ ನಿದಾನ ಹಾಗೂ ಚಿಕಿತ್ಸೆ ತಿಳಿಸುವ ಉತ್ತರತಂತ್ರವನ್ನು ತರುವಾಯದ ಗ್ರಂಥಕರ್ತೃವೊಬ್ಬ ಸೇರಿಸಿರಬಹುದಾಗಿ ತಿಳಿದುಬರುತ್ತದೆ. ಮತ್ತೆ ಸಂಸ್ಕರಿಸುವಾಗ ಗ್ರಂಥ ಏನೇ ಬದಲಾವಣೆ ಹೊಂದಿದ್ದರೂ ಇದು ಶಸ್ತ್ರ ಚಿಕಿತ್ಸಾ ವಿಧಾನ ತಿಳಿಸುವ ಉತ್ಕೃಷ್ಟ ಗ್ರಂಥವಾಗಿ ಉಳಿದಿದೆ. ಯಂತ್ರ ಶಸ್ತ್ರಗಳ ವರ್ಣನೆ, ಶಸ್ತ್ರ ಚಿಕಿತ್ಸೆಯ ವಿವರ, ಪಶ್ಚಾತ್ಕರ್ಮ ಮತ್ತು ತತ್ಸಂಬಂಧಿಯಾದ ಇತರ ಅಧ್ಯಾಯಗಳು ವಿಶದವಾಗಿ ವಿವರಿಸಲ್ಪಟ್ಟಿವೆ.

ಚರಕ ಸಂಹಿತೆಯ ಭೌಗೋಳಿಕ ಕ್ಷೇತ್ರ ಮುಖ್ಯವಾಗಿ ಭಾರತದ ವಾಯವ್ಯ ಪ್ರಾಂತ ಮಾತ್ರ. ಸುಶ್ರುತನಿಗೆ ಇಡೀ ಭಾರತದ ಪರಿಚಯವಿದ್ದುದು ಆತನ ಕೃತಿಯಿಂದಲೇ ವೇದ್ಯವಾಗುತ್ತದೆ. ಈ ಕೃತಿಯಲ್ಲಿ ಪೂರ್ವದಲ್ಲಿ ಕಳಿಂಗ ದೇಶದ ಉಲ್ಲೇಖವೂ ಉತ್ತರದಲ್ಲಿ ಕಾಶ್ಮೀರ ಮತ್ತು ಉತ್ತರ ಕುರುಪ್ರಾಂತಗಳ ಉಲ್ಲೇಖವೂ ಬರುತ್ತವೆ. ಹಿಮಾಲಯ, ಸಹ್ಯಾದ್ರಿ, ಮಹೇಂದ್ರಪರ್ವತ, ಮಲಯಾಚಲ, ಶ್ರೀಪರ್ವತ, ದೇವಗಿರಿ, ಸಿಂಧೂನದಿ ಮುಂತಾದವೂ ಉಲ್ಲೇಖಗೊಂಡಿವೆ. ಚರಕ ಸಂಹಿತೆಯಲ್ಲಿ ಇಷ್ಟು ವಿಸ್ತೃತ ಭೂಗೋಳದ ಪರಿಚಯವಿಲ್ಲ. ಶ್ರೀಪರ್ವತ, ಸಹ್ಯಾದ್ರಿ, ದೇವಗಿರಿ, ಮಲಯಾಚಲ ಮುಂತಾದವನ್ನು ಸುಶ್ರುತ ವಿಶೇಷವಾಗಿ ಹೇಳಿದ್ದಾನೆ. ದಕ್ಷಿಣಪಥವೆಂಬ ಹೆಸರೂ ಕಂಡುಬರುತ್ತದೆ. ಈತ ದಕ್ಷಿಣ ಭಾರತದ ಅನೇಕ ಶಬ್ದಗಳನ್ನು ಬಳಸಿದ್ದಾನೆ. ಪಶ್ಚಿಮಘಟ್ಟಗಳಲ್ಲಿ ಕಂಡುಬರುವ ತುವರಕವನ್ನು ವಿವರಿಸಿದ್ದಾನೆ. ಸುಶ್ರುತನ ಕಾಲದ ಅಧ್ಯಯನ ಉಪನಿಷತ್ತುಗಳಲ್ಲಿದ್ದಂತೆ ಅಂತೇವಾಸಿ ರೂಪದ್ದಾಗಿತ್ತು. ತರಬೇತಿಯಲ್ಲಿ ಉಪನ್ಯಾಸ, ಪ್ರತ್ಯಕ್ಷ ಮತ್ತು ಪ್ರಾಯೋಗಿಕ ವಿಧಾನಗಳಿಗೆ ಮಹತ್ತ್ವ ಕೊಟ್ಟಿರುವುದು ಈತನ ವೈಶಿಷ್ಟ್ಯವೆಂದು ಹೇಳಬಹುದು.

ಶಲ್ಯತಂತ್ರಕ್ಕೆ ಕ್ರಿಯಾತ್ಮಕ ಜ್ಞಾನದೊಡನೆ ಹೆಚ್ಚು ಸಂಬಂಧ ಇರುವುದರಿಂದ ಕ್ರಿಯಾತ್ಮಕ ಜ್ಞಾನದ ಶಿಕ್ಷಣ ಕೊಡಲು ಯೋಗ್ಯಾಸೂತ್ರೀಯ ಅಧ್ಯಾಯ ಸುಶ್ರುತದಲ್ಲಿ ಹೇಳಲ್ಪಟ್ಟಿದೆ. ಇದರಲ್ಲಿ ಯಾವ ಕರ್ಮವನ್ನು ಯಾವ ವಸ್ತುವಿನ ಮೇಲೆ ಅಭ್ಯಾಸ ಮಾಡಬೇಕೆಂಬುದರ ವಿಶೇಷ ಉಲ್ಲೇಖವಿದೆ. ಶವಚ್ಛೇದನ ವಿಧಾನದ ಬಗೆಗೆ ದೊರೆಯುವ ವಿವರಣೆ ಅತಿ ಪ್ರಾಚೀನವಾದ್ದರಿಂದ ಸುಶ್ರುತನನ್ನು ಶರೀರರಚನಾಶಾಸ್ತ್ರದ ಪಿತಾಮಹನೆಂದು ಹೇಳಬಹುದು. ಚರ್ಮ ಮತ್ತು ಪದರ, ಮೂಳೆ ಮತ್ತು ಸಂಧಿ, ಮಾಂಸಪೇಶಿ ಮತ್ತು ರಕ್ತನಾಳ ಇವನ್ನು ವಿಸ್ತಾರವಾಗಿಯೂ ಸೂಕ್ಷ್ಮವಾಗಿಯೂ ವಿವರಿಸಿದ್ದಾನೆ.

ಯಂತ್ರ ಶಸ್ತ್ರ: ಶಸ್ತ್ರ ಕರ್ಮೋಪಯೋಗಿಯಾದ ಸಾಧನಗಳನ್ನು ಯಂತ್ರ, ಶಸ್ತ್ರ, ಕ್ಷಾರ, ಅಗ್ನಿ ಮತ್ತು ಜಲೌಕ ಎಂಬ ರೂಪಗಳಲ್ಲಿ 4 ಅಧ್ಯಾಯಗಳಲ್ಲಿ ವರ್ಣಿಸಿದ್ದಾನೆ. ಯಂತ್ರ ಮತ್ತು ಶಸ್ತ್ರಗಳನ್ನು ಉಪಯೋಗಕ್ಕೆ ಅನುಗುಣವಾಗಿ ರಚಿಸಿ ಅವುಗಳ ಆಕಾರಕ್ಕೆ ತಕ್ಕಂತೆ ಪ್ರಾಣಿ ಪಕ್ಷಿಗಳ ಹೆಸರನ್ನು ಕೊಟ್ಟಿರುವುದು ಕಂಡುಬರುತ್ತದೆ. ಈತ 101 ಯಂತ್ರಗಳನ್ನು ಹೇಳಿದ್ದು ಅವುಗಳ ಪೈಕಿ ಹಸ್ತವನ್ನು ಪ್ರಧಾನ ಯಂತ್ರವಾಗಿ ಪರಿಗಣಿಸಿದ್ದಾನೆ. ಕ್ಷಾರವನ್ನು ತಯಾರಿಸುವುದು ಮತ್ತು ಹಚ್ಚುವುದು, ಅಗ್ನಿಕರ್ಮ ಮಾಡುವುದು, ಜಲೌಕಾವಚರಣ ಮತ್ತು ಜಲೌಕಗಳ ರಕ್ಷಣಾದಿ ವಿಷಯದಲ್ಲಿ ಪೂರ್ಣ ವಿವರಣೆ ಗ್ರಂಥದಲ್ಲಿ ಕೊಡಲ್ಪಟ್ಟಿದೆ. ಇದರ ಅನಂತರ ಕರ್ಣಬಂಧನದ ಉಲ್ಲೇಖವಿದೆ.

ಅಭಿಘಟನ ಶಲ್ಯ (ಪ್ಲಾಸ್ಟಿಕ್ ಸರ್ಜರಿ): ಈ ಪ್ರಸಂಗದಲ್ಲಿ ಅನ್ಯಸ್ಥಾನದಿಂದ ಮಾಂಸವನ್ನು ಕತ್ತರಿಸಿ ಅಥವಾ ಕಪೋಲದ ಮಾಂಸದಿಂದ ನಾಸಾಬಂಧ ಮಾಡುವ ಉಲ್ಲೇಖವಿದೆ. ನಾಸಾಸಂಧಾನ ವಿಧಿಯ ಅನುಸಾರ ಓಷ್ಠ ಸಂಧಾನ ವಿಧಿಯ ಉಲ್ಲೇಖವೂ ಇದೆ. ಕರ್ಣವ್ಯಧನದಂತೆ ನಾಸಿಕ ವ್ಯಧನ ಮಾಡಿ ಇದರಲ್ಲಿ ಆಭರಣಗಳನ್ನು ಧರಿಸುತ್ತಿದ್ದರು. ಬಹುಶಃ ಓಷ್ಠದಲ್ಲೂ ಆಭರಣ ಧರಿಸುತ್ತಿದ್ದಿರಬಹುದು. ಜನ್ಮದಿಂದ ಅಥವಾ ಯಾವುದೇ ಕಾರಣದಿಂದ ಭೇದನ ಉಂಟಾದರೆ ಅದನ್ನು ಜೋಡಿಸುವ ವಿಧಿಯ ಉಲ್ಲೇಖವಿದೆ. ಚಿಕಿತ್ಸಾ ಶಾಸ್ತ್ರದಲ್ಲಿ ಸುಶ್ರುತ ಸಂಹಿತೆಯಲ್ಲೇ ಸರ್ವಪ್ರಥಮವಾಗಿ ಪ್ಲಾಸ್ಟಿಕ್ ಸರ್ಜರಿ ಸಂಬಂಧವಾದ ಲಿಖಿತ ಪ್ರಮಾಣ ದೊರೆಯುತ್ತದೆ. ಪ್ಲಾಸ್ಟಿಕ್ ಸರ್ಜರಿ ಸುಶ್ರುತನ ಮಹತ್ತ್ವದ ಕೊಡುಗೆಯಾಗಿದ್ದು ಪ್ರಪಂಚ ಈ ವಿಷಯದಲ್ಲಿ ಈತನಿಗೆ ಋಣಿಯಾಗಿದೆ.

ಸುಶ್ರುತ ಸಂಹಿತೆಯಲ್ಲಿ ಅಶ್ಮರೀ, ಅರ್ಶ, ಉದರರೋಗ, ಮೂಢಗರ್ಭ ಹಾಗೂ ವ್ರಣಗಳ ಉಪಕ್ರಮವೇ ಮುಂತಾದ ಶಸ್ತ್ರಕರ್ಮ ಸಂಬಂಧೀ ವಿವರಣೆ ಸ್ಪಷ್ಟ ರೂಪದಲ್ಲಿದೆ. ಭಯಂಕರ ಶಲ್ಯಕರ್ಮದಲ್ಲಿ ಅಂದರೆ ಎಲ್ಲಿ ಪ್ರಾಣರಕ್ಷಣೆಯ ಸಂಶಯವಿರುತ್ತದೋ ಅಲ್ಲಿ ರೋಗಿಯ ಸಂಬಂಧಿಕರ ಒಪ್ಪಿಗೆ ಪಡೆದು ಹಾಗೂ ಬೇರೆಯವರಿಗೆ (ರಾಜನಿಗೆ) ತಿಳಿಸಿ ಶಸ್ತ್ರಕರ್ಮ ಮಾಡಬೇಕು. ಶಸ್ತ್ರಕರ್ಮದ ಪೂರ್ವಕರ್ಮ, ಪ್ರಧಾನಕರ್ಮ ಮತ್ತು ಪಶ್ಚಾತ್ಕರ್ಮಗಳ ಸ್ಪಷ್ಟ ನಿರೂಪಣೆ ಇದೆ. ಕಲ್ಪಸ್ಥಾನದಲ್ಲಿ ವಿಷದಿಂದ ರಾಜರ ರಕ್ಷಣೆಯನ್ನು ಹೇಗೆ ಮಾಡಬೇಕು, ವಿಷ ಪ್ರಯೋಗ ಯಾವ ಯಾವ ಸ್ಥಾನಗಳಲ್ಲಿ ಮತ್ತು ಯಾವ ಯಾವ ರೀತಿ ಆಗುತ್ತದೆ ಎಂಬ ಪೂರ್ಣ ವಿವರಣೆ ಕಂಡುಬರುತ್ತದೆ. ಅಡುಗೆ ಮನೆಯ ವ್ಯವಸ್ಥೆ, ಆಹಾರ ಪರೀಕ್ಷೆ, ಧೂಪ, ವಾಯು, ಮಾರ್ಗ, ಜಲ, ವಸ್ತ್ರ, ಮಾಲಾ, ಪಾದುಕೆ, ಬಾಚಣಿಗೆ ಮುಂತಾದವುಗಳಲ್ಲಿ ವಿಷಸೇರಿದರೆ ಇದನ್ನು ಹೇಗೆ ಶುದ್ಧಿ ಮಾಡಬೇಕೆಂಬ ವಿಷಯಗಳೂ ಇವೆ. (ಎನ್.ಎಆರ್.)

**ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳು:** ಹಳೆಶಿಲಾಯುಗ ಮತ್ತು ನವಶಿಲಾಯುಗದ ನಡುವಿನ ಹಂತ. ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳು ಈಗಿನ ಯುಗದ (ಹಾಲೋಸೀನ್) ಪ್ರಾರಂಭದಲ್ಲಿ ತಲೆದೋರಿದವು. ಈ ಸಮಯದಲ್ಲಿ ಹವಾಮಾನದಲ್ಲಿ ತೀಕ್ಷ್ಣ ಬದಲಾವಣೆಗಳು ಉಂಟಾದವು. ಹಿಮಯುಗದ ವೈಪರೀತ್ಯಗಳು ಕೊನೆಗೊಂಡು ಹವಾಮಾನ ಹಿತಕರವಾಯಿತು. ಇದರ ಪರಿಣಾಮವಾಗಿ ಈ ಮೊದಲು ಹಿಮಗಡ್ಡೆಗಳಿಂದ ಆವೃತವಾಗಿದ್ದ ಪ್ರದೇಶಗಳು ಈಗ ಸ್ಟೆಪ್ಪಿ ಹುಲ್ಲುಗಾವಲುಗಳಾದವು. ಜೌಗು ಭೂಭಾಗಗಳು ಹೆಚ್ಚೆಚ್ಚು ಫಲವತ್ತಾಗಿ ದಟ್ಟ ಅರಣ್ಯಗಳು ಸೃಷ್ಟಿಯಾದವು. ಹೊಸ ಸಸ್ಯ ಮತ್ತು ಪ್ರಾಣಿ ಸಂಕುಲಗಳು ಹುಟ್ಟಿಕೊಂಡವು. ಪರಿಸರದಲ್ಲಾದ ಈ ಮಾರ್ಪಾಡುಗಳು ಮಾನವನ ಜೀವನಕ್ರಮದ ಮೇಲೆ ಅಗಾಧ ಪರಿಣಾಮ ಬೀರಿದವು. ಹೊಸ ಪರಿಸರಕ್ಕೆ ತಕ್ಕುದಾದ ಬೇಟೆ, ಆಹಾರ ಸಂಗ್ರಹಣೆಯಲ್ಲಿ ಹೊಸ ತಂತ್ರ, ವಿಧಾನಗಳನ್ನು ಈ ಯುಗದ ಜನ ಅಳವಡಿಸಿಕೊಂಡರು. ತತ್ಪರಿಣಾಮವಾಗಿ ಹೊಸ ಉಪಕರಣ ಬಗೆಗಳು ತಯಾರಾದುವು. ಯುರೋಪ್ ಖಂಡ: ಹಿಮಯುಗದ ತರುವಾಯ ತಾಪಮಾನ ಏರಿದ ಕಾರಣ ಯುರೋಪಿನಲ್ಲಿ ಆಲ್ಪೈನ್ ಮತ್ತು ಸ್ಕ್ಯಾಂಡಿನೇವಿಯನ್

ಹಿಮಗಡ್ಡೆಗಳು ಕರಗಿ ನೀರಾದವು. ಇದರಿಂದ ಸಮುದ್ರಮಟ್ಟ ಹೆಚ್ಚಿತು. ಬಯಲು ಪ್ರದೇಶಗಳಲ್ಲಿ ದಟ್ಟಕಾಡುಗಳು ಬೆಳೆದವು. ಹುಲ್ಲುಗಾವಲುಗಳು ಕಣ್ಮರೆಯಾಗಿ ಇವನ್ನು ಅವಲಂಬಿಸಿದ್ದ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ಬಹುಶಃ ಕ್ಷೀಣಿಸಿತು. ಈ ಸಮಯದಲ್ಲಿ ದಕ್ಷಿಣ ಯುರೋಪಿನಲ್ಲಿ ಅಜ಼ೀಲಿಯನ್, ಸೌಟೆರ್‍ರಿಯನ್ ಮತ್ತು ಟಾರ್ಡೆನೋಶಿಯನ್ ಸಂಸ್ಕೃತಿಗಳು ಬೆಳೆದವು. ಈ ಸಂಸ್ಕೃತಿಗಳನ್ನು ಆಯಾ ಪ್ರದೇಶಗಳ ಹೆಸರಿನಿಂದ ಗುರುತಿಸಲಾಗಿದೆ. ಉತ್ತರ ಯುರೋಪಿನ ಬಾಲ್ಟಿಕ್ ಹಾಗೂ ಉತ್ತರಸಮುದ್ರದ ಕರಾವಳಿಗಳಲ್ಲಿ ಮ್ಯಾಗ್ಲೆಮೋಶಿಯನ್ ಮತ್ತು ಕುಂದ ಸಂಸ್ಕೃತಿಗಳ ಜನಸಮುದಾಯಗಳು ಈ ಹೊತ್ತಿಗೆ ಕಾಡುಪ್ರದೇಶದಲ್ಲಿ ಬೇಟೆಯಾಡುವ–ಸಸ್ಯ ಸಂಗ್ರಹಿಸುವ ಕಲೆಯನ್ನು ತಮ್ಮದಾಗಿಸಿಕೊಂಡಿದ್ದವು. ಈ ಎರಡು ಸಂಸ್ಕೃತಿಗಳ ಜನರು ಹೆಚ್ಚಾಗಿ ಕಾಡಿನ ಮಧ್ಯದ ಮೈದಾನಗಳಲ್ಲಿ, ಮುಕ್ತಬಯಲುಗಳಲ್ಲಿ ವಾಸಿಸುತ್ತಿದ್ದರು. ಬೇಟೆ ಮತ್ತು ಸಸ್ಯಮೂಲ ಸಂಗ್ರಹಣೆಯೊಂದಿಗೆ ಮೀನು, ಕಡಲಸ್ತನಿಗಳು ಮತ್ತು ಪಕ್ಷಿಗಳನ್ನು ಆಹಾರಕ್ಕಾಗಿ ಅವಲಂಬಿಸಿದ್ದ ಸಂಸ್ಕೃತಿಗಳಲ್ಲಿ ಡೆನ್‍ಮಾರ್ಕಿನ ಎರ್ಟೆಬೋಲ್ ಸಂಸ್ಕೃತಿ ಗಮನಾರ್ಹ. ನೈರುತ್ಯ ಸ್ಕ್ಯಾಂಡಿನೇವಿಯದ ವಸತಿನೆಲೆಗಳಲ್ಲಿ ಕಪ್ಪೆಚಿಪ್ಪಿನ ದೊಡ್ಡದೊಡ್ಡ ರಾಶಿಗಳು ಕಂಡುಬರುತ್ತದೆ. ಒಟ್ಟಿನಲ್ಲಿ ಈ ಕಾಲದ ಬಹುತೇಕ ಸಮುದಾಯಗಳು ಹೆಚ್ಚಾಗಿ ನದಿ, ಸರೋವರ ಮತ್ತು ಸಮುದ್ರ ತೀರಗಳಲ್ಲಿ ನೆಲೆಸಿದ್ದವು. ನಾಯಿಯನ್ನು ಪಳಗಿಸಿ ಸಾಕಿಕೊಳ್ಳುವ ಮಾರ್ಗವನ್ನು ಮೊದಲ ಬಾರಿಗೆ ಈ ಜನ ಕಲಿತುಕೊಂಡರು. ಪ್ರ.ಶ.ಪೂ.7500ರ ಸಮಯದ ಸ್ಟಾರ್‍ಕಾರ್ ವಸತಿನೆಲೆಯಲ್ಲಿ ನಾಯಿಯ ಅವಶೇಷಗಳು ಸಿಕ್ಕಿವೆ. ಬಿಲ್ಲುಬಾಣದ ಅಧಿಕಬಳಕೆ ಹಾಗೂ ನಾಯಿಯೊಂದಿಗಿನ ಒಡನಾಟದ ಫಲವಾಗಿ ಬೇಟೆ ತಂತ್ರಗಳಲ್ಲಿ ಸುಧಾರಣೆಗಳಾದವು. ಯುರೋಪಿನ ಸೂಕ್ಷ್ಮಶಿಲಾ ತಂತ್ರಜ್ಞಾನ ಅಂತ್ಯ ಹಳೆಶಿಲಾಯುಗ ತಂತ್ರಜ್ಞಾನದ ಮುಂದುವರಿಕೆಯಾಗಿತ್ತು. ಈ ಜನರ ಆಭರಣಗಳು ಸರಳವಾಗಿದ್ದವು. ದಕ್ಷಿಣ ಸ್ಕ್ಯಾಂಡಿನೇವಿಯದಲ್ಲಿನ ಸೂಕ್ಷ್ಮಶಿಲಾಯುಗದ ಅಂತ್ಯ ಹಂತದ ಸಮಾಧಿಗಳಲ್ಲಿ ಒಂದು ಮಟ್ಟದ ಸಾಮಾಜಿಕ ಸಂಕೀರ್ಣತೆ ಪ್ರತಿಬಿಂಬಿತವಾಗಿದೆ. ಪ್ರ.ಶ.ಪೂ.5500 ಅವಧಿಯ ಈ ಸಮಾಧಿಗಳು ಅನೇಕ ಆಭರಣಗಳನ್ನು ಧರಿಸಿದ ವ್ಯಕ್ತಿಗಳದ್ದು. ಮಣ್ಪಾತ್ರೆ ಮಾಡುವ ಕಲೆ ಇದೇ ವೇಳೆಗೆ ದಕ್ಷಿಣ ಸ್ಕ್ಯಾಂಡಿನೇವಿಯ ಮತ್ತು ಉತ್ತರ ಸ್ವೀಡನ್‍ಗಳಲ್ಲಿ ರೂಢಿಗೆ ಬಂದಿತು.

ಸಮೀಪ ಪ್ರಾಚ್ಯ ದೇಶಗಳು: ಹಿಮಯುಗದ ಮುಕ್ತಾಯದೊಂದಿಗೆ ಈ ದೇಶಗಳಲ್ಲಿ ಹವಾಮಾನ ಶುಷ್ಕವಾಗತೊಡಗಿತು (ಆದರೆ ಇಂದಿಗಿಂತ ತೇವವಾಗಿತ್ತು). ದೊಡ್ಡ ನದಿ ಬಯಲುಗಳಲ್ಲಿ, ವಿಶೇಷವಾಗಿ ಹುಲ್ಲುಗಾವಲು–ಅರಣ್ಯಪ್ರದೇಶ–ನದಿಬಯಲುಗಳು ಒಂದನ್ನೊಂದು ಕೂಡುವಂತಹ ಪ್ರದೇಶಗಳಲ್ಲಿ (ಅಂತರ್ವಲಯ), ಈ ಕಾಲದ ವಸತಿನೆಲೆಗಳು ಅಧಿಕ ಸಂಖ್ಯೆಯಲ್ಲಿವೆ. ಅಂತರ್ವಲಯಗಳಲ್ಲಿದ್ದ ಇಂತಹ ಸ್ಥಾಯಿ ನೆಲೆಗಳೇ ಕೃಷಿ ಮತ್ತು ಪಶುಪಾಲನೆಯ ಉಗಮ ಅಥವಾ ಪೋಷಕ ಸ್ಥಳಗಳಾದವು. ಪ್ರ.ಶ.ಪೂ.10000ದ ಸುಮಾರಿನಲ್ಲಿ ಸೂಕ್ಷ್ಮಶಿಲಾಯುಗ ವಸತಿಗಳು ಲೆವಂಟ್ (ಟರ್ಕಿ ಇತ್ಯಾದಿ), ಇರಾಕ್ ಮತ್ತು ಇರಾನಿನ ಜ್ಯಾಗ್ರೋಸ್ ಪರ್ವತ ಶ್ರೇಣಿ ಹಾಗೂ ಇವುಗಳ ಪಶ್ಚಿಮ ತಪ್ಪಲುಗಳಿಗೆ ಸೀಮಿತಗೊಂಡಿದ್ದವು. ಜೋರ್ಡನ್ ಬಯಲು ಮತ್ತು ಮಧ್ಯ ಯೂಫ್ರಟೀಸ್ ಬಯಲುಗಳಂತಹ ಕೆಲವು ಪ್ರದೇಶಗಳಲ್ಲಿ ವಸತಿಗಳು ದಟ್ಟವಾಗಿದ್ದವು. ಈ ಸಮುದಾಯಗಳ ಜನರು ಬೆಟ್ಟದ ಇಳಿಜಾರು ಗಳಲ್ಲಿದ್ದ ಕಾಡುಗಳಲ್ಲಿ ಬೆಳೆಯುವ ಧಾನ್ಯ –ಕಾಯಿಗಳನ್ನು ಸಂಗ್ರಹಿಸುತ್ತಿದ್ದರು. ಜೊತೆಗೆ ನದಿಬಯಲು ಮತ್ತು ಹುಲ್ಲುಗಾವಲುಗಳಲ್ಲಿ ವಾಸಿಸುತ್ತಿದ್ದ ಪ್ರಾಣಿಗಳನ್ನು ಬೇಟೆಯಾಡು ತ್ತಿದ್ದರು. ಸಿರಿಯ ದೇಶದ ಯೂಫ್ರಟೀಸ್ ನದಿದಂಡೆಯಲ್ಲಿದ್ದ ಅಬು ಹುರ್‍ರೆಯ ಎಂಬ ವಸತಿನೆಲೆ ಒಂದು ಉತ್ತಮ ಉದಾಹರಣೆ. ಇಲ್ಲಿ ಪ್ರ.ಶ.ಪೂ.10,500–9000 ನಡುವೆ ಸು.300–400 ಜನರ ಒಂದು ಸ್ಥಾಯಿ ವಸತಿಯಿತ್ತು. ಈ ಜನರು ಹುಲ್ಲಿನ ಮಾಡು ಇರುವ ಗುಂಡಿಗಳಲ್ಲಿ ವಾಸಿಸುತ್ತಿದ್ದರು. ಬೇಟೆ ಮತ್ತು ಆಹಾರ ಸಂಗ್ರಹಣೆ ಇವರ ಮುಖ್ಯ ಕಸಬಾಗಿತ್ತು. ವಸಂತಮಾಸದಲ್ಲಿ ದಕ್ಷಿಣದಿಂದ ವಲಸೆಬರುತ್ತಿದ್ದ ಒಂದು ತಳಿಯ ಜಿಂಕೆಗಳನ್ನು (ಗಜ಼ೆಲ್) ನೂರಾರು ಸಂಖ್ಯೆಯಲ್ಲಿ ಆಹಾರಕ್ಕಾಗಿ ಕೊಲ್ಲುತ್ತಿದ್ದರು. ಹವಾಮಾನದಲ್ಲಾಗುತ್ತಿದ್ದ ಪ್ರತಿಕೂಲ ಬದಲಾವಣೆ ಮತ್ತು ಅತಿಬಳಕೆಯಿಂದಾದ ಸಸ್ಯ ಸಂಪತ್ತಿನ ನಾಶದ ಕಾರಣ ಈ ಜನ ತಮ್ಮ ನೆಲೆಯನ್ನು ತೊರೆದರು. ಆದರೆ ಪ್ರ.ಶ.ಪೂ.8500ರ ಕಾಲದಲ್ಲಿ ಜನ ಇಲ್ಲಿ ಮತ್ತೆ ವಾಸ್ತವ್ಯ ಹೂಡಿದರು. ಈ ಹಳ್ಳಿಯಲ್ಲಿ ಸಣ್ಣ ಓಣಿಗಳಿಂದ ಬೇರ್ಪಟ್ಟ ಆಯತಾಕಾರದ ಮನೆಯ ಸಾಲುಗಳಿದ್ದವು. ಮೊದಲಿಗೆ ಇವರೂ ಗಜ಼ೆಲ್‍ಗಳನ್ನು ಆಹಾರಕ್ಕಾಗಿ ಕೊಲ್ಲುತ್ತಿದ್ದರು. ಆದರೆ ಪ್ರ.ಶ.ಪೂ.8000ದ ಹೊತ್ತಿಗೆ ಇವರು ಕುರಿ–ಮೇಕೆ ಸಾಕಾಣಿಕೆಯನ್ನು ತಮ್ಮ ಕಸಬಾಗಿಸಿಕೊಂಡರು. ಜೊತೆಗೆ ಜೋಳ, ಧಾನ್ಯ ಮತ್ತು ಕಾಳುಗಳನ್ನು ಬೆಳೆಯತೊಡಗಿದರು.

ದಕ್ಷಿಣ ಮತ್ತು ಆಗ್ನೇಯ ಏಷ್ಯ: ಕರ್‍ಕಮರ್ (ಪ್ರ.ಶ.ಪೂ.8500) ಸೇರಿದಂತೆ ಅಫ್ಘಾನಿಸ್ತಾನದ ಅನೇಕ ಗುಹೆಗಳಲ್ಲಿ ಸೂಕ್ಷ್ಮಶಿಲಾಯುಗ ಕಾಲದ ಉಪಕರಣ ಸಮುಚ್ಚಯಗಳು ಕಂಡುಬಂದಿವೆ. ಉತ್ತರ ಅಫ್ಘಾನಿಸ್ತಾನದ ಬಹುತೇಕ ವಸತಿನೆಲೆಗಳಲ್ಲಿ ತೆಳುವಾದ ವಸತಿ ಪದರವಿದೆ. ಈ ವಸತಿಗಳು ಅರೆ–ವಲಸೆ ಸ್ವರೂಪದ್ದಾಗಿದ್ದವು ಎಂಬುದು ಇದರಿಂದ ತಿಳಿಯುತ್ತದೆ.

ಭಾರತದಲ್ಲಿ ವಿಶೇಷವಾಗಿ ಬೇಲನ್ ನದಿ ಬಯಲಿನಲ್ಲಿ, ಗುಜರಾತಿನ ಮಾಹಿ ನದಿ ಬಯಲಿನ ಲಾಂಗ್‍ನಾಜ್, ರಾಜಸ್ತಾನದ ಬಾಗೋರ್, ದಕ್ಷಿಣ ಭಾರತದ ತೇರಿ (ತಮಿಳುನಾಡು), ಕೇರಳದ ತೇನ್ಮಲೈ, ಕರ್ನಾಟಕದ ಸಂಗನಕಲ್ಲು, ಮಹಾರಾಷ್ಟ್ರದ ಪಾಟ್ನೆ ಮೊದಲಾದ ಪ್ರದೇಶಗಳಲ್ಲಿ ಸೂಕ್ಷ್ಮಶಿಲಾಯುಗದ ಕೆಲವು ವಸತಿ ನೆಲೆಗಳು ಶೋಧವಾಗಿವೆ. ಹಿಮಯುಗದ ಅಂತ್ಯ ಹಂತದಲ್ಲಿ ಮಾನವ ಸಮುದಾಯಗಳು ಜಪಾನ್ ಪ್ರದೇಶದಲ್ಲೂ ಕಾಣಿಸಿಕೊಂಡವು. ಹೊಸೆದ ಹುರಿಯ ಅಚ್ಚಿನ ಚಿತ್ರಾಲಂಕಾರದ ಮಣ್ಪಾತ್ರೆಗಳನ್ನು ಉಪಯೋಗಿಸುತ್ತಿದ್ದ ಜೋಮೊನ್–ಪೂರ್ವ ಮತ್ತು ಜೋಮೊನ್ ಸಂಸ್ಕೃತಿಗಳು ಜಪಾನಿನಲ್ಲಿ ಈಗಿನ ಯುಗದ ಪ್ರಾಚೀನ ಸಂಸ್ಕೃತಿಗಳೆಂದು ತಿಳಿಯಲಾಗಿದೆ.

ಆಗ್ನೇಯ ಏಷ್ಯದಲ್ಲಿ, ವಿಶೇಷವಾಗಿ ಇಂಡೊ–ಚೀನ, ಮಲೇಷ್ಯ ಮತ್ತು ಈಶಾನ್ಯ ಸುಮಾತ್ರದಲ್ಲಿ, ಈಗಿನ ಯುಗದ ಆದಿ ಸಂಸ್ಕೃತಿ ಹೊಬಿನಿಯನ್ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಸಂಸ್ಕೃತಿಯ ವಸತಿನೆಲೆಗಳು ಗುಹೆ–ಕಲ್ಲಾಸರೆಗಳಲ್ಲಿ, ಬೆಟ್ಟ ಪ್ರದೇಶಗಳಲ್ಲಿ (ಕರ್ಸ್ಟ್ ಭೂಮಿ) ಮತ್ತು ಸಮುದ್ರ ತೀರಗಳಲ್ಲಿ ಇವೆ. ದುಂಡುಕಲ್ಲಿನಿಂದ ಮಾಡಿದ ಉಪಕರಣಗಳು ಮತ್ತು ದೊಡ್ಡ ಗಾತ್ರದ ಚಕ್ಕೆಗಳು ಈ ಸಂಸ್ಕೃತಿಯ ವಿಶಿಷ್ಟ ಉಪಕರಣಗಳು. ಈ ಸಂಸ್ಕೃತಿ ಬೇಟೆ ಮತ್ತು ಕಂದಮೂಲ ಸಂಗ್ರಹಣೆಯ ಹಂತದಲ್ಲಿತ್ತು. ಸಮುದ್ರತೀರದ ಪಂಗಡಗಳು ಆಹಾರಕ್ಕಾಗಿ ಸಮುದ್ರದಲ್ಲಿ ಮೀನು ಹಿಡಿಯುತ್ತಿದ್ದವು. ಕಪ್ಪೆಚಿಪ್ಪು ಸಂಗ್ರಹಣೆಯೂ ಒಂದು ಆಹಾರ ಮಾರ್ಗವಾಗಿತ್ತು. ಹೀಗಾಗಿ ಇವರ ವಸತಿನೆಲೆಗಳಲ್ಲಿ ಕಪ್ಪೆಚಿಪ್ಪಿನ ಗುಪ್ಪೆಗಳು ಸರ್ವೇಸಾಮಾನ್ಯವಾಗಿವೆ. ಈ ಆಹಾರಕ್ಕೆ ಪೂರಕವಾಗಿ ಇವರು ಜಿಂಕೆ, ಹಂದಿ ಮತ್ತು ಕಾಡು ದನಗಳನ್ನು ಬೇಟೆಯಾಡುತ್ತಿದ್ದರು. ಇಂಡೊನೇಷ್ಯ ಮತ್ತು ಫಿಲಿಪೀನ್ಸ್‌ನ ಉಪಕರಣಗಳು ಹೊಬಿನಿಯನ್ ಉಪಕರಣಗಳಿಗಿಂತ ಭಿನ್ನವಾಗಿವೆ. ಇವು ಅಗ್ನಿಶಿಲೆಯಲ್ಲಿ ಮಾಡಲ್ಪಟ್ಟಿವೆ.

ಆಫ್ರಿಕ: ಈಗಿನ ಯುಗದ ಆರಂಭ ಹಂತದಲ್ಲಿ ಆಫ್ರಿಕ ಖಂಡದಾದ್ಯಂತ ಬೇಟೆ–ಸಸ್ಯಾಹಾರ ಸಂಗ್ರಹಣೆಯನ್ನು ವೃತ್ತಿಯಾಗಿಸಿಕೊಂಡಿದ್ದ ಪಂಗಡಗಳು ಹರಡಿದ್ದವು. ಈ ಅವಧಿಯಲ್ಲಿ ತಾಪಮಾನ ಏರುಗತಿಯಲ್ಲಿತ್ತು. ಮುಖ್ಯವಾಗಿ ನೈಲ್ ಬಯಲಿನಲ್ಲಿ ತ್ವರಿತ ಬೆಳವಣಿಗೆಗಳಾದವು. ಪ್ರಾಣಿ–ಸಸ್ಯಗಳ ಸಂಖ್ಯೆ ಕ್ಷೀಣಿಸಿದ್ದರಿಂದ ಮರುಭೂಮಿಯ ಜನರು ನೈಲ್ ನದಿಯ ಕಡೆಗೆ ಪ್ರಾಯಶಃ ವಲಸೆ ಬಂದ ಕಾರಣ ಇಲ್ಲಿ ಜನಸಂಖ್ಯೆ ಗಣನೀಯವಾಗಿ ಹೆಚ್ಚಾಯಿತು. ಎಮ್ಮೆ, ನೀರಾನೆ ಮತ್ತು ಗಜ಼ೆಲ್ ಮೊದಲಾದ ಪ್ರಾಣಿಗಳ ಬೇಟೆ, ಮೀನುಗಾರಿಕೆ ಮತ್ತು ವನ್ಯಧಾನ್ಯಗಳ ಸಂಗ್ರಹಣೆ ನೈಲ್ ಬಯಲಿನ ಸ್ಥಾಯಿ ಸಮುದಾಯಗಳ ಜೀವನೋಪಾಯಗಳಾಗಿದ್ದವು. ದಕ್ಷಿಣ ಆಫ್ರಿಕದಲ್ಲಿಯೂ ಸೂಕ್ಷ್ಮಶಿಲಾಯುಗ ಸಂಸ್ಕೃತಿ ಪ್ರಾದೇಶಿಕ ವೈವಿಧ್ಯತೆಗಳೊಂದಿಗೆ ಬೆಳೆಯಿತು.

ಹಿಮಯುಗದ ಅಂತ್ಯ ಹಂತ ಮತ್ತು ಈಗಿನ ಯುಗದ ಪ್ರಾರಂಭದ ಅವಧಿಯಲ್ಲಿ ಹೊಸ ಪ್ರಪಂಚದ ಭೂಭಾಗಗಳಾದ ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಗಳಲ್ಲಿ ಜನವಸತಿ ಮೊಟ್ಟಮೊದಲ ಬಾರಿಗೆ ಕಾಣಿಸಿಕೊಂಡಿತು. ಈ ಸಮುದಾಯಗಳೆಲ್ಲವೂ ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಆಧರಿಸಿದ್ದವು. ಈ ಸಮಯದಲ್ಲಿ ಅಮೆರಿಕದಲ್ಲಿ ಸಹ ಹವಾಮಾನ ಬದಲಾಯಿತು. ಅಮೆರಿಕದ ಉತ್ತರ ಭಾಗಗಳಲ್ಲಿ ಹಿಮಗಡ್ಡೆಗಳು ಕರಗುತ್ತಿದ್ದಂತೆ ಈ ಪ್ರದೇಶದಲ್ಲಿ ಸಮಶೀತೋಷ್ಣವಲಯದ ಸಸ್ಯಸಂಪತ್ತು ವೃದ್ಧಿಸತೊಡಗಿತು. ಕಾಡೆಮ್ಮೆಯನ್ನು ಹೊರತುಪಡಿಸಿ ಹಿಮಯುಗದ ಮತ್ತೆಲ್ಲ ದೈತ್ಯ ಪ್ರಾಣಿಗಳು ಈ ಹೊತ್ತಿಗಾಗಲೇ ಅಳಿದುಹೋಗಿದ್ದವು. ಇಂತಹ ಸಂದರ್ಭದಲ್ಲಿ ಹುಟ್ಟಿಬಂದ ಪ್ಯಾಲಿಯೊ–ಇಂಡಿಯನ್ ಮತ್ತು ಅನಂತರದ ಆರ್ಕೇಯಿಕ್ ಮೊದಲಾದ ಆದಿಮ ಸಂಸ್ಕೃತಿಗಳೇ ಕಳೆದ ಹತ್ತು ಸಾವಿರ ವರ್ಷಾವಧಿಯಲ್ಲಿ ಅನೇಕ ಸಾಂಸ್ಕೃತಿಕ ಕವಲುಗಳಾಗಿ ಬೆಳೆದು ಇಂದಿನ ಆಧುನಿಕ ಜನಸಮುದಾಯಗಳಾಗಿವೆ.

(ಜಿ.ಎನ್.ಪಿ.)

ಭಾರತ: ಶಿಲಾಯುಗದ ಇತರ ಹಂತಗಳಿಗೆ ಹೋಲಿಸಿದರೆ ಭಾರತದಲ್ಲಿ ಸೂಕ್ಷ್ಮಶಿಲಾಯುಗ ನೆಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಈಗಿನ ಯುಗದಲ್ಲಿ ಭೂಮೇಲ್ಮೈಯಲ್ಲಿ ಪರಿಣಾಮಕಾರಿ ಬದಲಾವಣೆಗಳಾಗದಿರುವುದು ಇದಕ್ಕೆ ಒಂದು ಕಾರಣ. ನೆಲೆಗಳು ಅಧಿಕವಾಗಿರುವುದಕ್ಕೆ ಮತ್ತೊಂದು ಕಾರಣವೆಂದರೆ ಸೂಕ್ಷ್ಮಶಿಲಾಯುಗದಲ್ಲಾದ ಜನಸಂಖ್ಯಾ ಹೆಚ್ಚಳ. ಪ್ರಾಯಶಃ ಇದೇ ಕಾರಣಕ್ಕಾಗಿ ಈ ಹಿಂದೆ ಜನವಾಸ ಇರದಿದ್ದ ಸ್ಥಳಗಳಲ್ಲಿ ಇವರು ವಾಸ್ತವ್ಯ ಹೂಡಿ ಅಲ್ಲಿಯ ವೈವಿಧ್ಯ ಸಂಪನ್ಮೂಲಗಳನ್ನು ನಿತ್ಯಜೀವನದಲ್ಲಿ ಬಳಸಿಕೊಂಡರು. ಈ ಕಾಲದ ನೆಲೆಗಳಲ್ಲಿ ಜೈವಿಕ ಅವಶೇಷಗಳು ವಿಪುಲವಾಗಿವೆ. ಭಾರತದಲ್ಲಿ ಮಾನವ ಸಮಾಧಿಗಳು ಪ್ರಥಮವಾಗಿ ಕಂಡುಬರುವುದು ಈ ಕಾಲದಲ್ಲಿ. ಅಂತ್ಯ ಹಳೆಶಿಲಾಯುಗದಲ್ಲಿಯೇ ಭಾರತದಲ್ಲಿ ಮಾನವ ಶಿಲಾಚಿತ್ರಗಳನ್ನು ರಚಿಸತೊಡಗಿದನೆಂಬ ಅಭಿಪ್ರಾಯವಿದ್ದರೂ ಗುಹೆ ಕಲ್ಲಾಸರೆಗಳ ಗೋಡೆಗಳು ಚಿತ್ರಗಳಿಂದ ತುಂಬಿದ್ದು ಸೂಕ್ಷ್ಮಶಿಲಾಯುಗದಲ್ಲಿ. ಪಶ್ಚಿಮ ಹಾಗೂ ಮಧ್ಯ ಭಾರತದಲ್ಲಿ ಉತ್ಖನನಕ್ಕೊಳಗಾದ ನೆಲೆಗಳು ಈ ಕಾಲದ ಜನಜೀವನ, ಆಹಾರ ಪದ್ಧತಿ, ಜನರ ಶಾರೀರಿಕ ರಚನೆ, ಆರೋಗ್ಯ ಸ್ಥಿತಿ, ಶವಸಂಸ್ಕಾರ ಕ್ರಮ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಿವೆ. ಈ ಕಾಲದಲ್ಲಾದ ಸಾಂಸ್ಕೃತಿಕ ವಿಕಸನದ ಹಂತಗಳನ್ನು ನಿರ್ದಿಷ್ಟವಾಗಿ ಗುರುತಿಸುವಲ್ಲಿ ವೈಜ್ಞಾನಿಕ ಕಾಲಮಾನಗಳು ನೆರವಾಗಿವೆ. ಶಿಲಾಯುಗದ ಇತರ ಹಂತಗಳ ಬಗ್ಗೆ ಇಷ್ಟೊಂದು ಮಾಹಿತಿ ದೊರಕಿಲ್ಲ.

ಈಶಾನ್ಯ ಭಾರತ ಹಾಗೂ ಪಶ್ಚಿಮ ಘಟ್ಟಗಳನ್ನು ಹೊರತುಪಡಿಸಿ ಭಾರತದ ಇನ್ನೆಲ್ಲ ಭಾಗಗಳಲ್ಲೂ ಹರಡಿದ್ದ ಈ ಸಂಸ್ಕೃತಿಯನ್ನು ಮೊದಲಿಗೆ ಗುರುತಿಸಿದವನು ಎ.ಸಿ.ಎಲ್. ಕಾರ್ಲೈಲ್ (1867–8). 2000 ಕ್ಕೂ ಹೆಚ್ಚು ನೆಲೆಗಳು ಈವರೆಗೆ ವರದಿಯಾಗಿದ್ದು ಸು. 30 ನೆಲೆಗಳು ಉತ್ಖನನಕ್ಕೆ ಒಳಪಟ್ಟಿವೆ. ಪ್ರಮುಖ ನೆಲೆಗಳೆಂದರೆ ಬಾಗೋರ್, ತಿಲವಾರ

(ರಾಜಸ್ತಾನ), ಲಾಂಗ್‌ನಾಜ್, ಲೋಟೇಶ್ವರ (ಗುಜರಾತ್), ಬೀರ್‌ಭಾನ್‌ಪುರ (ಪಶ್ಚಿಮ ಬಂಗಾಲ), ಸರಾಯ್ ನಹರ್ ರಾಯ್, ದಮ್‌ದಮ, ಮಹದಹ, ಮೊರಹಾನಾ ಪಹಾಡ್, ಲೇಖಾನಿಯ, ಬಾಘೈಖೋರ್, ಚೋಪನಿ–ಮಾಂಡೊ (ಉತ್ತರ ಪ್ರದೇಶ), ಭೀಂಬೇಟ್ಕ, ಬಾಘೋರ್ (ಮಧ್ಯ ಪ್ರದೇಶ), ಕುಚೈ (ಒರಿಸ್ಸ), ಸಂಗನಕಲ್ಲು (ಕರ್ನಾಟಕ), ಮುಚ್ಚಟ್ಲ ಚಿಂತಾಮನು ಗವಿ (ಆಂಧ್ರ ಪ್ರದೇಶ), ತೇನ್ಮಲೈ (ಕೇರಳ).

ತಮಿಳುನಾಡಿನ ತೇರಿ ನೆಲೆಗಳು ಒಂದು ವಿಶಿಷ್ಟ ವರ್ಗವಾಗಿವೆ. ಇವು ಟ್ಯೂಟಿಕಾರ್ನ್‌ನ ಸುತ್ತಮುತ್ತ ಕರಾವಳಿ ತೀರದಲ್ಲಿವೆ. ತೇರಿ ಎಂದರೆ ಸಮುದ್ರದ ಮರಳಿನ ದಿಣ್ಣೆ. ಕಬ್ಬಿಣದ ಅಂಶ ಸೇರಿರುವುದರಿಂದ ಮರಳು ಕೆಂಬಣ್ಣ ಪಡೆದಿದೆ. ಇಂಥ ದಿಣ್ಣೆಗಳ ಮೇಲೆ ಬೆಣಚುಕಲ್ಲು ಮತ್ತು ಚರ್ಟ್‌ನಿಂದ ಮಾಡಿದ ಬದಿ ಮೊಂಡಾಗಿಸಿದ ಅಲಗು, ಹೆರೆಚಕ್ಕೆ, ತ್ರಿಕೋಣ, ಮೊನೆ, ಅರ್ಧಚಂದ್ರಾಕೃತಿ ಮುಂತಾದ ಉಪಕರಣ ಸಮುಚ್ಚಯಗಳು ಕಂಡುಬರುತ್ತವೆ. ಕೆಲವು ಉಪಕರಣಗಳೂ ಕೆಂಬಣ್ಣವನ್ನು ಹೀರಿಕೊಂಡಿವೆ. ಇನ್ನಾವ ಸಾಂಸ್ಕೃತಿಕ ಅವಶೇಷಗಳೂ ಇರದ ಇಂಥ ನೆಲೆಗಳ ಕಾಲಮಾನ ಒಂದು ಒಗಟಾಗಿದೆ. ಇದಿನ್‌ಕರೈ ಎಂಬ ನೆಲೆ ಮಾತ್ರ ಉತ್ಖನನಕ್ಕೊಳಪಟ್ಟಿದೆ. ಇಲ್ಲಿ ಮರಳುದಿಣ್ಣೆಯೊಳಗೆ ಉಪಕರಣಗಳು ಕಂಡುಬರದಿದ್ದುದು ಈ ಸಮುಚ್ಚಯಗಳು ದಿಣ್ಣೆಗಳ ನಿರ್ಮಾಣದ ಅನಂತರ ಇಲ್ಲಿ ಸಂಗ್ರಹಗೊಂಡಿರಬಹುದು ಎಂಬುದನ್ನು ಸೂಚಿಸುತ್ತದೆ.



ಸೂಕ್ಷ್ಮ ಶಿಲೋಪಕರಣಗಳು – ಯುರೋಪ್

ಸೂಕ್ಷ್ಮಶಿಲೋಪಕರಣ ತಂತ್ರಜ್ಞಾನ ಹಲವು ಕಾರಣಗಳಿಂದ ವಿಶಿಷ್ಟವಾಗಿದೆ. 1–5 ಸೆಂಮೀ ಗಾತ್ರದ ಉಪಕರಣಗಳನ್ನು ಸಾಮಾನ್ಯವಾಗಿ ಸೂಕ್ಷ್ಮಶಿಲೋಪಕರಣವೆಂದು ಗುರುತಿಸಲಾಗುತ್ತದೆ. ಇದರಲ್ಲಿ ಎರಡು ವರ್ಗಗಳಿವೆ– ಜ್ಯಾಮಿತೀಯ ಅಥವಾ ನಿರ್ದಿಷ್ಟ ಆಕಾರದ ಅಥವಾ ರೇಖಾಕೃತಿಯ ಉಪಕರಣ ಹಾಗೂ ಅನಿರ್ದಿಷ್ಟ ಆಕಾರದ ಉಪಕರಣ. ಅಲಗನ್ನು ಮಾರ್ಪಡಿಸಿ ಮಾಡಲಾದ ವಿವಿಧಾಕಾರದ ತ್ರಿಕೋಣ, ಅರ್ಧಚಂದ್ರಾಕೃತಿ, ಅಸಮ ಚತುರ್ಭುಜ ಮುಂತಾದ ಜ್ಯಾಮಿತೀಯ ಆಕಾರಗಳು ಮೊದಲ ವರ್ಗದ ಉಪಕರಣಗಳಲ್ಲಿ ಕಂಡುಬಂದರೆ ಎರಡನೆಯ ವರ್ಗದಲ್ಲಿ ಹೆರೆಚಕ್ಕೆ, ಅಲಗು, ಮೊನೆ ಮುಂತಾದ ಉಪಕರಣಗಳಿವೆ. ಇವೆಲ್ಲವೂ ಸಂಯುಕ್ತ ಉಪಕರಣಗಳ ಭಾಗಗಳಾಗಿದ್ದ ವೆಂಬುದು ಈ ಕಾಲದ ವರ್ಣಚಿತ್ರಗಳಿಂದ ದೃಢಪಡುತ್ತದೆ. ಬಾಗೋರ್, ಭೀಂಬೇಟ್ಕ ಮುಂತಾದ ನೆಲೆಗಳಲ್ಲಿ ಸಿಕ್ಕ ಉಪಕರಣಗಳು ಈ ತಂತ್ರಜ್ಞಾನದ ಅತ್ಯುತ್ತಮ ಉದಾಹರಣೆ ಗಳಾದರೆ ಗಂಗಾನದಿ ಬಯಲಿನ ಉಪಕರಣಗಳು ಒಡ್ಡೊಡ್ಡಾಗಿರುತ್ತವೆ. ಪಶ್ಚಿಮ ಬಂಗಾಲ ಹಾಗೂ ತಮಿಳುನಾಡಿನ ತೇರಿ ನೆಲೆಗಳಲ್ಲಿ ಅಲಗಿನ ಬದಲಿಗೆ ಚಕ್ಕೆಯಿಂದಲೇ ನೇರವಾಗಿ ಉಪಕರಣಗಳನ್ನು ಮಾಡಲಾಗಿದೆ. ಮುಂಬಯಿ ಪ್ರದೇಶ ಹಾಗೂ ತೇರಿ ನೆಲೆಗಳಲ್ಲಿ ಕೊಚ್ಚುವ ಉಪಕರಣಗಳು (ಚಾಪರ್ಸ್) ವಿರಳವಾಗಿ ಕಂಡುಬಂದಿವೆ. ಸುತ್ತಿಗೆಕಲ್ಲು, ಅರೆಯುವ ಕಲ್ಲು, ತೂತಿರುವ ವರ್ತುಲಾಕಾರದ ಕಲ್ಲು ಇವು ಸಾಮಾನ್ಯವಾಗಿ ಸಿಗುವ ಇತರ ಕಲ್ಲಿನ ಉಪಕರಣಗಳಾಗಿವೆ. ಮೂಳೆ ಹಾಗೂ ಜಿಂಕೆಯ ಕೊಂಬಿನಿಂದಲೂ ಬಾಣದ ಮೊನೆ, ಉಳಿ ಮುಂತಾದ ಉಪಕರಣಗಳನ್ನು ತಯಾರಿಸಲಾಗುತ್ತಿತ್ತು. ಇದಕ್ಕೆ ಉತ್ತಮ ನಿದರ್ಶನವೆಂದರೆ ಮಹದಹ ನೆಲೆ.

ಲಾಂಗ್‌ನಾಜ್, ಬಾಗೋರ್, ಆದಂಗಡ, ಮಹದಹ, ಸರಾಯ್ ನಹರ್ ರಾಯ್, ದಮ್‌ದಮ ಮುಂತಾದ ನೆಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಂರಕ್ಷಿತವಾಗಿದ್ದ ಪ್ರಾಣಿಮೂಳೆಗಳಿಂದಲೂ ಶಿಲಾಚಿತ್ರಗಳಲ್ಲಿನ ಕೆಲವು ದೃಶ್ಯಗಳಿಂದಲೂ ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆ, ಜೇನು ಸಂಗ್ರಹಣೆ ಇವು ಆಹಾರ ಸಂಪಾದನೆಯ ಮುಖ್ಯ ಮಾರ್ಗಗಳಾಗಿದ್ದವೆಂದು ತಿಳಿಯುತ್ತದೆ. ಕಾಡೆಮ್ಮೆ, ವಿವಿಧ ಜಾತಿಯ ಜಿಂಕೆ, ನೀಲಗಾಯ್, ನರಿ, ಉಡ ಮುಂತಾದ ಪ್ರಾಣಿಗಳನ್ನು ಸಾಮಾನ್ಯವಾಗಿ ಬೇಟೆಯಾಡಲಾಗುತ್ತಿತ್ತು. ಲಾಂಗ್‌ನಾಜ್‌ನಲ್ಲಿ ಖಡ್ಗಮೃಗದ ಮೂಳೆಗಳೂ ಸರಾಯ್ ನಹರ್ ರಾಯ್‌ನಲ್ಲಿ ಆನೆಯ ಮೂಳೆಗಳೂ ಆದಂಗಡದಲ್ಲಿ ಮುಳ್ಳುಹಂದಿಯ ಮೂಳೆಗಳೂ ಸಿಕ್ಕಿರುವುದು ವಿಶೇಷವಾಗಿದೆ. ಬಾಗೋರ್‌ನಲ್ಲಿ ಆಮೆ ಹಾಗೂ ಮೀನಿನ ಮೂಳೆಗಳು ಅಧಿಕವಾಗಿವೆ. ಬಿಲ್ಲು–ಬಾಣ, ಭರ್ಜಿಗಳನ್ನು ಬಳಸಿ ಬೇಟೆಯಾಡುತ್ತಿರುವ, ಬಲೆಯೊಡ್ಡಿ ಸಣ್ಣಪುಟ್ಟ ಪ್ರಾಣಿಗಳನ್ನು ಹಿಡಿಯುತ್ತಿರುವ ದೃಶ್ಯಗಳು ಕಲ್ಲಾಸರೆ–ಗುಹೆಗಳ ಭಿತ್ತಿಯ ಮೇಲೆ ಚಿತ್ರಿತವಾಗಿವೆ. ಮಧ್ಯ ಪ್ರದೇಶದ ಜಾವರ ನೆಲೆಯಲ್ಲಿ ಬಿಲದಲ್ಲಿ ಅಡಗಿರುವ ಇಲಿಗಳನ್ನು ಉಪಾಯದಿಂದ ಹಿಡಿಯುತ್ತಿರುವ ಒಂದು ಚಿತ್ರದೃಶ್ಯ ಸ್ವಾರಸ್ಯಕರವಾಗಿದೆ. ಬಾಗೋರ್, ಆದಂಗಡ, ಲೋಟೇಶ್ವರ ಮುಂತಾದ ನೆಲೆಗಳಲ್ಲಿ ಜಾನುವಾರು, ಕುರಿ, ಮೇಕೆ, ಹಂದಿ, ಎಮ್ಮೆ ಮುಂತಾದ ಪ್ರಾಣಿಗಳನ್ನು ಸಾಕಿದ್ದ ಕುರುಹುಗಳಿವೆ.

ವಾಸಗೃಹದ ಅವಶೇಷಗಳು ಬಾಗೋರ್, ತಿಲವಾರ, ಬಾಘೋರ್, ಸರಾಯ್ ನಹರ್ ರಾಯ್ ನೆಲೆಗಳಲ್ಲಿ ಕಂಡುಬಂದಿವೆ. ಇವು ಸಾಮಾನ್ಯವಾಗಿ ಮಣ್ಣಿನ ನೆಲವಿದ್ದ ತಡಿಕೆಗೋಡೆಯ ವೃತ್ತಾಕಾರದ ಗುಡಿಸಲಿನ ಅವಶೇಷಗಳು. ಮಧ್ಯ ಪ್ರದೇಶದಲ್ಲಿ ಹೆಚ್ಚಾಗಿ ಗುಹೆ–ಕಲ್ಲಾಸರೆಗಳನ್ನು ಆಶ್ರಯಿಸಲಾಗಿತ್ತು. ಭೀಂಬೇಟ್ಕದ ಒಂದು ಕಲ್ಲಾಸರೆಯ ಒಳಗೆ ಕಲ್ಲಿನ ಗೋಡೆಯನ್ನು ಅಲ್ಲಲ್ಲಿ ನಿರ್ಮಿಸಿದ್ದು ಕಂಡುಬಂದಿದೆ. ಮಹದಹದ ಸಮಾಧಿಗಳಲ್ಲಿ ಮೃತರು ಧರಿಸಿದ್ದ ಜಿಂಕೆಕೊಂಬಿನ ಆಭರಣಗಳು ಹಾಗೂ ಬಾಗೋರಿನ ಸಮಾಧಿಯೊಂ ದರಲ್ಲಿ ಕಲ್ಲು–ಮೂಳೆಯ ಮಣಿಗಳನ್ನು ಬಿಟ್ಟರೆ ಇನ್ನಾವ ಸಾಂಸ್ಕೃತಿಕ ಅವಶೇಷಗಳು ಸಿಕ್ಕಿಲ್ಲ. ವಿಶೇಷ ಸಂದರ್ಭಗಳಲ್ಲಿ ಇವರು ತೊಡುತ್ತಿದ್ದ ಮುಖವಾಡ ಹಾಗೂ ಶಿರೋಭೂಷಣಗಳ ಚಿತ್ರಣ ಶಿಲಾಚಿತ್ರಗಳಿಂದ ಸಿಗುತ್ತದೆ. ಸುಲಿದು ಒಣಗಿಸಿದ ಚರ್ಮದ ಚಿತ್ರಗಳಿಂದ ಚರ್ಮದ ಬಳಕೆಯಿತ್ತೆಂಬುದು ಸ್ಪಷ್ಟವಾಗುತ್ತದೆ.

ಶವಸಂಸ್ಕಾರದ ಮೊಟ್ಟಮೊದಲ ಕುರುಹುಗಳು ಕಂಡುಬರುವುದು ಈ ಕಾಲದಲ್ಲಿ. ವಸತಿಯ ಜಾಗದಲ್ಲಿಯೇ ಶವವನ್ನು ಕುಣಿಯಲ್ಲಿ ಹೂಳುವುದು ಈ ಕಾಲದ ಸಂಪ್ರದಾಯವಾಗಿತ್ತು. ಸರಾಯ್ ನಹರ್ ರಾಯ್, ಮಹದಹ, ದಮ್‌ದಮ, ಮೊರಹಾನಾ ಪಹಾಡ್, ಬಾಘೈಖೋರ್, ಲೇಖಾನಿಯ, ಬಾಗೋರ್, ಲಾಂಗ್‌ನಾಜ್, ಭೀಂಬೇಟ್ಕ ಮುಂತಾದ ನೆಲೆಗಳಲ್ಲಿ ಇಂಥ ಸಮಾಧಿಗಳಿವೆ. ಭೀಂಬೇಟ್ಕದ ಒಂದು ಸಮಾಧಿಯಲ್ಲಿ ಶವದೊಡನೆ ಕಾವಿಕಲ್ಲು, ಮೂಳೆಯ ಮೊನೆ, ಜಿಂಕೆಯ ಕೊಂಬಿನ ತುಂಡುಗಳನ್ನು ಇಡಲಾಗಿತ್ತು; ಮತ್ತೊಂದರಲ್ಲಿ ಅರೆಯುವ ಕಲ್ಲುಗಳು ಶವದ ಬದಿಯಲ್ಲಿದ್ದವು. ಬಾಗೋರಿನ ಒಂದು ಸಮಾಧಿಯಲ್ಲಿ ಪ್ರಾಯಶಃ ಆಹಾರ ಪಾನೀಯಗಳಿದ್ದ ಮಣ್ಪಾತ್ರೆಗಳೂ ತಾಮ್ರದ ಉಪಕರಣಗಳೂ ಅಸ್ಥಿ ಅವಶೇಷಗಳೊಂದಿಗಿದ್ದವು.



ಸೂಕ್ಷ್ಮ ಶಿಲೋಪಕರಣಗಳು – ಭಾರತ

ಕೊರೆದು ಮೂಡಿಸಿರುವ ಜಾಲರಿಯ ವಿನ್ಯಾಸವುಳ್ಳ ಶಿಲಾತಿರುಳೊಂದು (ಬ್ಲೇಡ್ ಕೋರ್) ಗುಜರಾತಿನ ಚಂದ್ರವತಿಯಲ್ಲಿ ಸಿಕ್ಕಿದೆ. ಭೀಂಬೇಟ್ಕದಲ್ಲಿ ಕೆಲವೊಂದು ಮೂಳೆತುಂಡುಗಳ ಮೇಲೆ ಇಂತಹ ವಿನ್ಯಾಸಗಳನ್ನು ಮೂಡಿಸಲಾಗಿದೆ. ಇವು ಸಂಚಾರಿ ಕಲಾಕೃತಿಗಳಾಗಿವೆ

(ಪೋರ್ಟೆಬಲ್ ಆರ್ಟ್). ಈ ಕಾಲದ ಶಿಲಾಚಿತ್ರಗಳು ಕಥಾವಸ್ತು, ವರ್ಣ ಸಂಯೋಜನೆ, ಶೈಲಿ– ಈ ಎಲ್ಲ ದೃಷ್ಟಿಯಿಂದಲೂ ಬೆರಗು ಮೂಡಿಸುತ್ತವೆ (**ನೋಡಿ–ಶಿಲಾಚಿತ್ರಗಳು**). ಆಭರಣಗಳು ಇವರ ಕಲಾಭಿರುಚಿಯ ಮತ್ತೊಂದು ರೂಪವಾಗಿವೆ.

ಸೂಕ್ಷ್ಮಶಿಲಾಯುಗದ ಕೊನೆಯ ಹಂತದಲ್ಲಿ ಬಯಲುಗಳಲ್ಲಿ ವಾಸಿಸುತ್ತಿದ್ದ ರೈತಾಪಿ ಜನರೊಂದಿಗೆ ಇವರ ಸಂಪರ್ಕವೇರ್ಪಟ್ಟಿತು. ಈ ಸಂಪರ್ಕದ ಕುರುಹುಗಳಾಗಿ ಮಣ್ಪಾತ್ರೆಗಳು, ತಾಮ್ರದ ವಸ್ತುಗಳು ಕಂಡುಬರುತ್ತವೆ. ಲಾಂಗ್‌ನಾಜ್, ಬಾಗೋರ್, ಭೀಂಬೇಟ್ಕ, ಲೇಖಾನಿಯ ಮುಂತಾದ ನೆಲೆಗಳಲ್ಲಿ ಇಂಥ ಕುರುಹುಗಳಿವೆ.

ಕೆಲವು ನೆಲೆಗಳಿಂದ ದೊರೆತ ಇಂಗಾಲ 14 ಕಾಲಮಾನಗಳು ಇಂತಿವೆ: ಭೀಂಬೇಟ್ಕ–ಪ್ರ.ಶ.ಪೂ.6556–6177 ಮತ್ತು ಪ್ರ.ಶ.ಪೂ.4895–4580; ಬಾಗೋರ್–ಪ್ರ.ಶ.ಪೂ. 5418–4936 ಮತ್ತು ಪ್ರ.ಶ.ಪೂ.4575–4344; ಸರಾಯ್ ನಹರ್ ರಾಯ್–ಪ್ರ.ಶ.ಪೂ. 9253–8965; ತೇನ್ಮಲೈ–ಪ್ರ.ಶ.ಪೂ.4220–2911; ಲೋಟೇಶ್ವರ–ಪ್ರ.ಶ.ಪೂ.6010±120; ಲೇಖಾನಿಯ–ಪ್ರ.ಶ.ಪೂ.6420±75 ಮತ್ತು 6050±75; ದಮ್‌ದಮ–ಪ್ರ.ಶ.ಪೂ.6690±65 ಮತ್ತು 6915±65. ಈಗಿನ ಯುಗದ ಆದಿಯಲ್ಲಿ ಆರಂಭವಾದ ಈ ಸಂಸ್ಕೃತಿ ಪ್ರ.ಶ.ಪೂ. 7–6ನೆಯ ಸಹಸ್ರಮಾನದ ವೇಳೆಗೆ ಪ್ರವರ್ಧಿಸಿತ್ತೆಂಬುದನ್ನು ಈ ಕಾಲಮಾನಗಳು ಸೂಚಿಸುತ್ತವೆ.

(ಆರ್.ಪಿ.)

ಬೇಲನ್ ನದಿಬಯಲು: ಭಾರತದಲ್ಲಿ ಸೂಕ್ಷ್ಮಶಿಲಾಯುಗದ ಅವಶೇಷಗಳು ಪ್ರಪ್ರಥಮ ವಾಗಿ ಪತ್ತೆಯಾದ ಪ್ರಮುಖ ಪುರಾತತ್ತ್ವ ಪ್ರದೇಶ. ಮಿರ್ಜಾಪುರ, ಸೋನಭದ್ರ, ಅಲಹಾಬಾದ್ (ಉತ್ತರಪ್ರದೇಶ) ಮತ್ತು ರೀವಾ (ಮಧ್ಯ ಪ್ರದೇಶ) ಜಿಲ್ಲೆಗಳಲ್ಲಿ ಹರಿಯುವ ಬೇಲನ್ ನದಿಬಯಲಿನಲ್ಲಿ ಈ ಸಂಸ್ಕೃತಿ ಹರಡಿತ್ತು. ಗಂಗಾನದಿಯ ಉಪನದಿಯಾದ ಬೇಲನ್‌ನ ವಿಸ್ತೀರ್ಣ 7,800 ಚ.ಕಿಮೀ. ವಿಂಧ್ಯ ಪರ್ವತಶ್ರೇಣಿಯ ಉತ್ತರ ತಪ್ಪಲಿನಲ್ಲಿರುವ ಈ ನದಿಬಯಲಿನಲ್ಲಿ ಕಳೆದ ಐದು ದಶಕಗಳಿಂದ ಬಹುಶಿಸ್ತೀಯ ಅಧ್ಯಯನ ನಡೆಯುತ್ತಿರು ವುದರಿಂದ ಹಲವಾರು ಪ್ರಾಗೈತಿಹಾಸಿಕ ನೆಲೆಗಳು ಬೆಳಕಿಗೆ ಬಂದಿದ್ದು, ಹಿಮಯುಗದ ಭೂ–ಸ್ತರಕ್ರಮ ಲಭ್ಯವಾಗಿದೆ. ಭಾರತದ ಪುರಾತತ್ತ್ವ ನಕ್ಷೆಯಲ್ಲಿ ಈ ಕಾರಣದಿಂದ ಬೇಲನ್ ನದಿಬಯಲು ಮಹತ್ತ್ವದ ಸ್ಥಾನ ಗಳಿಸಿದೆ.

ಈ ನದಿಯ ಉಗಮ ಪ್ರದೇಶವಾದ ಕೈಮೂರ್ ಪರ್ವತ ಶ್ರೇಣಿಗಳಲ್ಲಿರುವ ಕಲ್ಲಾಸರೆ–ಗುಹೆಗಳಲ್ಲಿ ಕಾರ್ಲೈಲ್ 1867–68 ರಲ್ಲಿ ಸೂಕ್ಷ್ಮ ಶಿಲೋಪಕರಣಗಳನ್ನು ಕಂಡುಹಿಡಿದ. ಕೆಲವು ಕಲ್ಲಾಸರೆ ಗುಹೆಗಳಲ್ಲಿ ಇವನು ನಡೆಸಿದ ಪ್ರಾಥಮಿಕ ಉತ್ಖನನಗಳಲ್ಲಿ ಪ್ರಾಣಿ ಮೂಳೆ, ಮಾನವ ಸಮಾಧಿಗಳು, ಒಲೆಗಳು ಮತ್ತು ಕಲ್ಲಿನ ಉಪಕರಣಗಳಿಂದ ಕೂಡಿದ ಸೂಕ್ಷ್ಮಶಿಲಾ ಯುಗದ ವಸತಿ ಪದರ ಕಂಡುಬಂದಿತು. ಪುರಾತತ್ತ್ವ ಅವಶೇಷಗಳಲ್ಲದೆ ಗುಹೆಗಳ ಗೋಡೆ, ಸೂರುಗಳ ಮೇಲೆ ಬಿಡಿಸಲಾದ ವರ್ಣಚಿತ್ರಗಳೂ ಇವನ ಗಮನಕ್ಕೆ ಬಂದವು. ಅನಂತರ ಕಾಕ್‌ಬರ್ನ್ ಈ ಪ್ರದೇಶದ ಗುಹಾಚಿತ್ರ ಮತ್ತು ಪ್ರಾಣಿ ಪಳೆಯುಳಿಕೆಗಳ ಅಧ್ಯಯನವನ್ನು 1880–90 ರ ಅವಧಿಯಲ್ಲಿ ನಡೆಸಿದ.

ಬೇಲನ್ ನದಿಬಯಲಿನಲ್ಲಿ ಕ್ರಮಬದ್ಧ ಪುರಾತತ್ತ್ವ ಅಧ್ಯಯನವನ್ನು ಕೈಗೊಂಡ ಕೀರ್ತಿ ಅಲಹಾಬಾದ್ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ. ಈ ವಿಶ್ವವಿದ್ಯಾಲಯ ನಡೆಸಿದ ಉತ್ಖನನಗಳಲ್ಲಿ ಮೊರಹಾನಾ ಪಹಾಡ್, ಬಾಘೈಖೋರ್, ಲೇಖಾನಿಯ (ಮಿರ್ಜಾಪುರ ಜಿಲ್ಲೆ) ಮತ್ತು ಚೋಪನಿ–ಮಾಂಡೊ (ಅಲಹಾಬಾದ್ ಜಿಲ್ಲೆ) ಮುಖ್ಯವಾದವು. ಬೇಲನ್ ಬಯಲಿನ ಮತ್ತೊಂದು ಪ್ರಮುಖ ನೆಲೆಯಾದ ಲಹರಿಯಾದಿಹ್‌ನಲ್ಲಿ (ಮಿರ್ಜಾಪುರ ಜಿಲ್ಲೆ) ಬನಾರಸ್ ವಿಶ್ವವಿದ್ಯಾಲಯ ಉತ್ಖನನ ನಡೆಸಿದೆ. ಈ ಬಯಲಿನಲ್ಲಿ 100ಕ್ಕೂ ಹೆಚ್ಚು ಸೂಕ್ಷ್ಮ ಶಿಲಾಯುಗದ ನೆಲೆಗಳು ಕ್ಷೇತ್ರಕಾರ್ಯಗಳಲ್ಲಿ ಬೆಳಕಿಗೆ ಬಂದಿದ್ದು ಈ ಕಾಲಘಟ್ಟದಲ್ಲಾದ ಜನಸಂಖ್ಯೆಯ ಹೆಚ್ಚಳವನ್ನು ಇದು ಸೂಚಿಸುತ್ತದೆ.

ಸೂಕ್ಷ್ಮಶಿಲಾಯುಗದ ನೆಲೆಗಳು ಬಯಲು ಪ್ರದೇಶಗಳಲ್ಲೂ ನದಿ–ಹಳ್ಳಗಳ ಎತ್ತರದ ದಂಡೆಗಳ ಮೇಲೂ ಗುಡ್ಡ–ಬೆಟ್ಟಗಳ ತಪ್ಪಲು, ಇಳಿಜಾರು ಮತ್ತು ನೆತ್ತಿಯ ಮೇಲೂ ಇವೆ. ಕೈಮೂರ್ ಶ್ರೇಣಿಯ ಬೆಟ್ಟಗಳಲ್ಲಿರುವ ಗುಹೆ–ಕಲ್ಲಾಸರೆಗಳಲ್ಲೂ ಈ ಕಾಲದ ವಸತಿ ಅವಶೇಷಗಳಿವೆ. ಇವು ಸು.0.15–1.75 ಹೆಕ್ಟೇರುವರೆಗಿನ ವಿಸ್ತೀರ್ಣದ ನೆಲೆಗಳಾಗಿವೆ.

ಚೋಪನಿ–ಮಾಂಡೊ (**ನೋಡಿ**) ವಸತಿ ನೆಲೆಯಲ್ಲಿ ಅಂತ್ಯ ಹಳೆ ಶಿಲಾಯುಗೋತ್ತರ, ಆದಿ ಸೂಕ್ಷ್ಮಶಿಲಾಯುಗ ಮತ್ತು ಮುಂದುವರೆದ ಸೂಕ್ಷ್ಮಶಿಲಾಯುಗದ ಹಂತಗಳಿವೆ.

ಮೊರಹಾನಾ ಪಹಾಡ್ ಮತ್ತು ಬಾಘೈಖೋರ್ ನೆಲೆಗಳಲ್ಲಿ ಆರ್.ಕೆ.ವರ್ಮ 1963 ರಲ್ಲಿ ಉತ್ಖನನ ನಡೆಸಿದರು. ಮೊರಹಾನಾ ಪಹಾಡ್‌ನ ಕಲ್ಲಾಸರೆ–ಗುಹೆಗಳಲ್ಲಿ ಮತ್ತು ಬಯಲು ಪ್ರದೇಶಗಳಲ್ಲಿ ಸೂಕ್ಷ್ಮಶಿಲಾಯುಗದ ವಸತಿ ಅವಶೇಷಗಳಿವೆ. ಬಯಲು ನೆಲೆಯಲ್ಲಿಯ ಉತ್ಖನನದಲ್ಲಿ ಒಟ್ಟು 92 ಸೆಂಮೀ ದಪ್ಪದ ವಸತಿ ನೆಲೆಯಲ್ಲಿ 6 ಸ್ತರಗಳನ್ನು ಗುರುತಿಸಲಾಗಿದೆ. ಅತ್ಯಂತ ಕೆಳಗಿನ 6ನೆಯ ಸ್ತರ ನೈಸರ್ಗಿಕವಾಗಿ ಸವೆದು ಚೂರು ಚೂರಾದ ಗುಲಾಬಿ ಮತ್ತು ಬಿಳಿಯ ಬಣ್ಣದ ಮರಳುಗಲ್ಲಿನ ಪದರ. ಇದರ ಮೇಲಿನ 5ನೆಯ ಸ್ತರ ಮರಳು, ಜಲ್ಲಿಕಲ್ಲು ಮತ್ತು ಸವೆದ ಮರಳುಗಲ್ಲಿನ ತುಂಡುಗಳಿಂದ ರಚಿತವಾದ ಕೆಂಪುಬಣ್ಣದ ಪದರ. ಅನಿರ್ದಿಷ್ಟ ಆಕೃತಿಯ ಸೂಕ್ಷ್ಮಶಿಲೋಪಕರಣಗಳಿರುವ ಈ ಸ್ತರದ ಸಂರಚನೆ ಆರ್ದ್ರ ಹವಾಮಾನವನ್ನು ಸೂಚಿಸುತ್ತದೆ. 4ನೆಯ ಸ್ತರದ ಬಣ್ಣ ಮತ್ತು ಸಂರಚನೆ 5ನೆಯ ಸ್ತರದಂತೆಯೇ ಇದೆ; ಈ ಸ್ತರದಲ್ಲಿ ನಿರ್ದಿಷ್ಟಾಕಾರ್ ಶಿಲೋಪಕರಣಗಳು ಮತ್ತು ಒಂದೆರಡು ಮಣ್ಪಾತ್ರೆಗಳ ಚೂರುಗಳು ಅನಿರ್ದಿಷ್ಟ ಆಕಾರಗಳ ಉಪಕರಣಗಳೊಂದಿಗೆ ಇರುವುದು ಕಂಡುಬಂದಿತು. 3ನೆಯ ಸ್ತರದಲ್ಲಿ ಕಂದುಬಣ್ಣದ ಸೂಕ್ಷ್ಮಶಿಲೋಪಕರಣಗಳು ಮಣ್ಪಾತ್ರೆಗಳ ತುಂಡುಗಳು ಅತ್ಯಧಿಕ ಸಂಖ್ಯೆಯಲ್ಲಿದ್ದವು. ಅತ್ಯಂತ ಮೇಲಿನ 2 ಮತ್ತು 1 ನೆಯ ಸ್ತರಗಳಲ್ಲಿ ಗಾಳಿಯಿಂದ ಬಂದು ಶೇಖರಗೊಂಡ ಅತಿ ಸಣ್ಣ ಮರಳಿನಲ್ಲಿ ಸೂಕ್ಷ್ಮಶಿಲೋಪಕರಣಗಳು ಮತ್ತು ಮಣ್ಪಾತ್ರೆಗಳು ಸೇರಿಕೊಂಡಿದ್ದವು. ಒಟ್ಟಿನಲ್ಲಿ ಇಲ್ಲಿ ಅನಿರ್ದಿಷ್ಟ ಆಕಾರಗಳ ಉಪಕರಣಗಳಿರುವ ಮಣ್ಪಾತ್ರೆರಹಿತ ಸೂಕ್ಷ್ಮಶಿಲಾಯುಗ ಹಂತದ ಅನಂತರ ನಿರ್ದಿಷ್ಟ ಆಕಾರಗಳ ಉಪಕರಣಗಳಿರುವ ಮಣ್ಪಾತ್ರೆ–ಸಹಿತ ಸೂಕ್ಷ್ಮ ಶಿಲಾಯುಗದ ಹಂತವಿದೆ.



ಮನೆಯ ನೆಲಗಟ್ಟು

ಮೊರಹಾನಾ ಪಹಾಡ್‌ನಲ್ಲಿರುವ ವರ್ಣಚಿತ್ರಿತ ಕಲ್ಲಾಸರೆಯೊಂದರಲ್ಲೂ ಉತ್ಖನನ ನಡೆಸಲಾಯಿತು. ಇಲ್ಲಿಯ ವಸತಿ ನೆಲೆಯಲ್ಲಿ 4 ಸ್ತರಗಳನ್ನು ಗುರುತಿಸಲಾಗಿದೆ. 4ನೆಯ ಸ್ತರ ಬೂದುಗೆಂಪು ಬಣ್ಣದ ಮಣ್ಣಿನಿಂದಲೂ 3ನೆಯ ಸ್ತರ ಕೆಂಪು–ಕಪ್ಪು–ಬೂದು ಬಣ್ಣದ ಸಡಿಲವಾದ ಮಣ್ಣಿನಿಂದಲೂ ರಚಿತವಾಗಿದೆ. 3ನೆಯ ಸ್ತರದಲ್ಲಿ ಸುಟ್ಟ ಕುರುಹುಗಳಿವೆ. ಎರಡೂ ಸ್ತರಗಳಲ್ಲಿ ಸೂಕ್ಷ್ಮ ಶಿಲೋಪಕರಣಗಳು ಮತ್ತು ಮಣ್ಪಾತ್ರೆಯ ಚೂರುಗಳಿವೆ. ದಟ್ಟ ನಸುಹಳದಿ ಬಣ್ಣದ 2ನೆಯ ಸ್ತರದಲ್ಲಿ ಮಣ್ಪಾತ್ರೆಗಳ ಚಿಕ್ಕ ಚಿಕ್ಕ ತುಂಡುಗಳೊಂದಿಗೆ ಉರುಟು ಸುಣ್ಣಕಲ್ಲುಗಳಿವೆ (ಕಂಕರ್). ಮೇಲಿನ 1ನೆಯ ಸ್ತರ ಗಾಳಿಯೊಡನೆ ಹಾರಿಬಂದು ಶೇಖರಗೊಂಡ ನಸುಹಳದಿ–ಕೆಂಪುಬಣ್ಣದ ಮಣ್ಣಿನಿಂದ ಆಗಿದ್ದು ಅವಶೇಷರಹಿತವಾಗಿದೆ.

ಬಾಘೈಖೋರ್‌ನಲ್ಲಿ ಉತ್ಖನನಕ್ಕೊಳಪಡಿಸಿದ 1ನೆಯ ಕಲ್ಲಾಸರೆಯಲ್ಲಿಯೂ 4 ಸ್ತರಗಳನ್ನು ಗುರುತಿಸಲಾಗಿದೆ. ಚಿಕ್ಕ ಚಿಕ್ಕ ಚಕ್ಕೆಗಳು, ಬೂದಿ ಮತ್ತು ಬೂದುಬಣ್ಣದ ಮಣ್ಣಿನಿಂದ ಕೂಡಿದ 4ನೆಯ ಸ್ತರದಲ್ಲಿ ಅನಿರ್ದಿಷ್ಟಾಕಾರದ ಶಿಲೋಪಕರಣಗಳಿದ್ದವು. 3ನೆಯ ಸ್ತರ ಸಡಿಲವಾದ ಸೂಕ್ಷ್ಮ ಮರಳಿನ ಪದರ. 2 ಮತ್ತು 2ಎ ಸ್ತರಗಳು ಚಿಕ್ಕಚಿಕ್ಕ ಚಕ್ಕೆಗಳಿಂದ ಮಿಶ್ರಿತವಾದ ಬೂದುಮಣ್ಣಿನ ಪದರವಾದರೆ ಮೊದಲನೆಯದು ದಟ್ಟವಾದ ಕಡುಬೂದಿ ಬಣ್ಣದ ಪದರ. ಸೂಕ್ಷ್ಮಶಿಲಾಯುಗದ ಮಾನವ ಸಮಾಧಿಯೊಂದನ್ನು ಇಲ್ಲಿ ಹೊರತೆಗೆಯಲಾಯಿತು. 2ಎ ಸ್ತರದಿಂದ 3–4ನೆಯ ಸ್ತರದೊಳಗೆ ಗುಳಿಯಗೆದು ಶವವನ್ನು ಹೂಳಲಾಗಿತ್ತು. ಶವಕುಣಿಗಾಗಿ ವಸತಿ ಪದರದಡಿಯಲ್ಲಿರುವ ನೈಸರ್ಗಿಕ ಬಂಡೆಯನ್ನೂ ಸ್ವಲ್ಪ ಮಟ್ಟಿಗೆ ಕೊರೆಯಲಾಗಿತ್ತು. ಸು. 20–21ರ ವಯಸ್ಸಿನ ಮಹಿಳೆಯ ಈ ಅಸ್ಥಿಪಂಜರ ನೇರಭಂಗಿಯಲ್ಲಿದ್ದು ಇದರ ತಲೆ ಪಶ್ಚಿಮಕ್ಕಿತ್ತು. ಸೂಕ್ಷ್ಮಶಿಲೋಪಕರಣಗಳನ್ನು ಹೊರತುಪಡಿಸಿ ಇನ್ನಾವುದೇ ವಸ್ತು ಅವಶೇಷಗಳು ಶವಕುಣಿಯೊಳಗಿರಲಿಲ್ಲ. ಕೈಯಿಂದಲೇ ತಟ್ಟಿ ಮಾಡಿದ ಮಣ್ಪಾತ್ರೆಗಳು ಮತ್ತು ನಿರ್ದಿಷ್ಟ ಆಕಾರಗಳ ಸೂಕ್ಷ್ಮಶಿಲೋಪಕರಣಗಳಿರುವ ಸ್ತರದಲ್ಲಿ ಈ ಅಸ್ಥಿಪಂಜರ ಕಂಡುಬಂದಿತು.

1964ರಲ್ಲಿ ವಿ.ಡಿ.ಮಿಶ್ರ ಲೇಖಾನಿಯದ 2 ಕಲ್ಲಾಸರೆಗಳಲ್ಲಿ ಮತ್ತು ಸಮೀಪದಲ್ಲಿರುವ 3 ಬಯಲುನೆಲೆಗಳಲ್ಲಿ ಉತ್ಖನನ ನಡೆಸಿದರು. ಅನಿರ್ದಿಷ್ಟ ಆಕಾರದ ಸೂಕ್ಷ್ಮ ಶಿಲೋಪಕರಣ ಹಂತದಿಂದ ನಿರ್ದಿಷ್ಟ ಆಕೃತಿಗಳುಳ್ಳ ಉಪಕರಣದ ಹಂತದವರೆಗಿನ ಸೂಕ್ಷ್ಮ ಬೆಳವಣಿಗೆಗಳು ಈ ನೆಲೆಗಳಲ್ಲಿ ದಾಖಲಾಗಿವೆ. 2ನೆಯ ಕಲ್ಲಾಸರೆಯ ಅವಶೇಷಗಳಲ್ಲಿ ಸೂಕ್ಷ್ಮ ಶಿಲೋಪಕರಣ ಗಳು ಮಾತ್ರ ಇದ್ದವು. 1ನೆಯ ಕಲ್ಲಾಸರೆಯಲ್ಲಿ ಮಾನವ ಸಮಾಧಿಗಳನ್ನು ಉತ್ಖನನದಲ್ಲಿ ಅನಾವರಣಗೊಳಿಸಲಾಯಿತು. ಕನಿಷ್ಠ 27 ಜನರ ಅಸ್ಥಿ ಅವಶೇಷಗಳು ಪ್ರತ್ಯೇಕ ಗುಳಿಗಳಲ್ಲಿ ಕಂಡುಬಂದವು. ಸೂಕ್ಷ್ಮ ಶಿಲೋಪಕರಣಗಳು, ಮೂಳೆಗಳು, ಕಪ್ಪೆಚಿಪ್ಪು, ಆಮೆಯ ಚಿಪ್ಪು ಮೊದಲಾದ ವಸ್ತುಗಳು ಅಸ್ಥಿ ಅವಶೇಷಗಳೊಂದಿಗಿದ್ದವು. ಈ ಕಾಲಕ್ಕಾಗಲೇ ಶವಸಂಸ್ಕಾರ ಒಂದು ರೀತಿಯ ಸಂಪ್ರದಾಯವಾಗಿ ರೂಪುಗೊಂಡಿತ್ತೆಂಬುದು ಈ ಸಮಾಧಿಗಳಿಂದ ತಿಳಿದುಬರುತ್ತದೆ.

ಅಂತ್ಯ ಹಳೆಶಿಲಾಯುಗೋತ್ತರ ಹಂತದಿಂದ ಸೂಕ್ಷ್ಮ ಶಿಲಾಯುಗದ ಅಂತ್ಯದವರೆಗಿನ ಸೂಕ್ಷ್ಮ ಶಿಲೋಪಕರಣಗಳ ನಮೂನೆ–ತಂತ್ರಜ್ಞಾನದಲ್ಲಿ ಆದ ಬದಲಾವಣೆಗಳು ಚೋಪನಿ–ಮಾಂಡೊ ನೆಲೆಯಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ. ಈ ನೆಲೆಯಲ್ಲಿ ನಿರ್ದಿಷ್ಟಾಕಾರದ ಉಪಕರಣದ ಹಂತದಲ್ಲಿ ಕ್ವಾರ್ಟ್ಜೈಟ್ ಮತ್ತು ಮರಳುಗಲ್ಲಿನ ಇತರ ಶಿಲೋಪಕರಣಗಳೂ ಗಣನೀಯ ಪ್ರಮಾಣದಲ್ಲಿ ದೊರೆತಿವೆ. ಇವು ಹೆಚ್ಚಾಗಿ ದೊಡ್ಡ ಗಾತ್ರದ ದ್ವಿಮುಖ ಉಪಕರಣಗಳು. ಕೆಲವನ್ನು ಹಿಡಿಕೆಗೆ ಸಿಕ್ಕಿಸಲು ಅನುಕೂಲವಿರುವಂತೆ ಮಾಡಲಾಗಿದೆ. ಕೊಚ್ಚುವ, ಕತ್ತರಿಸುವ ಮತ್ತು ಹೆರೆಯುವ ಕೆಲಸಗಳಲ್ಲಿ ಇವನ್ನು ಉಪಯೋಗಿಸುತ್ತಿದ್ದಿರಬೇಕು. ಇವುಗಳಲ್ಲಿ ಕೆಲವೊಂದು ನವಶಿಲಾಯುಗದ ಉಳಿ ಮುಂತಾದ ಉಪಕರಣಗಳನ್ನು ಹೋಲುತ್ತವೆ.

ಮೊರಹಾನಾ ಪಹಾಡ್, ಬಾಘೈಖೋರ್, ಲೇಖಾನಿಯ ಮತ್ತು ಚೋಪನಿ–ಮಾಂಡೊ ವಸತಿ ನೆಲೆಗಳಲ್ಲಿ ಕೈಯಿಂದಲೇ ತಟ್ಟಿಮಾಡಿದ ಮಣ್ಪಾತ್ರೆಗಳು ನಿರ್ದಿಷ್ಟ ಆಕಾರದ ಉಪಕರಣದ ಹಂತದಲ್ಲಿ ಮೊದಲ ಬಾರಿಗೆ ಕಂಡುಬರುತ್ತವೆ. ಇದು ಕುಂಬಾರಿಕೆಯ ಪ್ರಾರಂಭಿಕ ಹಂತ. ಕಡಿಮೆ ತಾಪದಲ್ಲಿ ಸುಟ್ಟಿದ್ದರಿಂದ ಈ ಪಾತ್ರೆಗಳು ದುರ್ಬಲವಾಗಿವೆ. ಮೊರಹಾನಾ ಪಹಾಡ್ ಮತ್ತು ಬಾಘೈಖೋರ್‌ನ ಪಾತ್ರೆಗಳು ಮರಳು–ಸಿಲಿಕ–ಜಂಬುಕಲ್ಲಿನ ಗುಳಿಗೆ ಗಾತ್ರದ ಚೂರುಗಲ್ಲು ಬೆರೆತ ದೊರಕುಮಣ್ಣಿನಿಂದ ಮಾಡಲ್ಪಟ್ಟಿವೆ. ಚೋಪನಿ–ಮಾಂಡೊ ಮತ್ತು ಲೇಖಾನಿಯದ ಪಾತ್ರೆಗಳಲ್ಲಿ ಜೇಡಿಮಣ್ಣಿನಲ್ಲಿ ಹೊಟ್ಟು–ಒಣಹುಲ್ಲನ್ನು ಮಿಶ್ರ ಮಾಡಲಾಗಿದೆ. ಈ ಹಂತದಲ್ಲಿ ಸರಳ ಆಕಾರದ ಬಟ್ಟಲು ಮತ್ತು ಮಡಕೆಗಳು ಮಾತ್ರ ಇವೆ. ಕಾವಿ ಕೆಂಪುಬಣ್ಣ ಅಥವಾ ಬೂದುಗಂದು ಬಣ್ಣದ ಪಾತ್ರೆಗಳಿವು. ಇವುಗಳ ಮೇಲೆ ಲೇಪನವಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಮಡಕೆಗಳ ಕುತ್ತಿಗೆ ಮತ್ತು ಉಳಿದ ಭಾಗವನ್ನು ಬೇರೆಬೇರೆಯಾಗಿ ಮಾಡಿ ಅನಂತರ ಜೋಡಿಸಲಾಗಿದೆ. ಮೊರಹಾನಾ ಪಹಾಡ್, ಬಾಘೈಖೋರ್ ಮತ್ತು ಲೇಖಾನಿಯಗಳಲ್ಲಿ ಮಣ್ಪಾತ್ರೆಗಳ ಹೊರಮೈ ಮೇಲೆ ನೇರ–ಅಡ್ಡ–ಓರೆಗೆರೆಗಳ, ಚುಕ್ಕಿ, ಚೌಕಾಕಾರ, ಜಾಲಂಧ್ರದ ಗೀರು ವಿನ್ಯಾಸಗಳಿವೆ. ಲೇಖಾನಿಯದ ಒಂದೆರಡು ಪಾತ್ರೆಗಳ ಮೇಲೆ ಮಣ್ಣಿನ ಪಟ್ಟಿಯನ್ನು ಅಂಟಿಸಿ ಮಾಡಿದ ಅಲಂಕರಣವಿದೆ. ಹುರಿಹಗ್ಗವನ್ನು ಒತ್ತಿ ಮೂಡಿಸಿದ ಗುರುತಿನಿಂದ ಅಲಂಕರಿಸಿದ ಕೆಲವು ಪಾತ್ರೆ ತುಂಡುಗಳೂ ಈ ನೆಲೆಯಲ್ಲಿ ಸಿಕ್ಕಿವೆ. ಚೋಪಾನಿ–ಮಾಂಡೊ ಮತ್ತು ಬಾಘೈಖೋರ್‌ನಲ್ಲಿ ದೊರೆತ ಹಲವು ಚೂರುಗಳ ಮೇಲೆ ಕಪ್ಪೆಚಿಪ್ಪಿನಂತಹ ವಸ್ತುವನ್ನು ಒತ್ತಿ ಮಾಡಿದ ವಿನ್ಯಾಸಗಳಿವೆ. ಅಲ್ಲದೆ ಹೂವಿನಂತಹ ವಿನ್ಯಾಸವನ್ನೂ ಮುದ್ರೆಯೊತ್ತಿ ಮೂಡಿಸಲಾಗಿದೆ.

ಲೇಖಾನಿಯದ ಕೊಳವೆಯಾಕಾರದ ಮಣಿಗಳು ಮೂಳೆ ಮತ್ತು ಚೋಪಾನಿ–ಮಾಂಡೊವಿನ ಅಂತ್ಯ ಹಂತದಲ್ಲಿ ಸಿಕ್ಕ ಕಲ್ಲಿನ ಮಣಿ ಇಲ್ಲಿ ಉಲ್ಲೇಖಾರ್ಹ. ಈ ಜನರ ಅಲಂಕಾರಪ್ರಿಯತೆಯ ಉದಾಹರಣೆಗಳಿವು. ಲೇಖಾನಿಯದ ಮೂಳೆಯ ಉಪಕರಣಗಳು ಮತ್ತು ಚೋಪಾನಿ–ಮಾಂಡೊವಿನಲ್ಲಿ ದೊರೆತ ಗೀರುಗಳುಳ್ಳ ಮೂಳೆಯ ಚೂರುಗಳು ಸರಳ ಕಲಾ ವಿನ್ಯಾಸಕ್ಕೆ ಮೂಳೆಯೂ ಮಾಧ್ಯಮವಾಗಿತ್ತು ಎಂಬುದಕ್ಕೆ ಉದಾಹರಣೆಗಳಾಗಿವೆ. ಮಾಂಸಾಹಾರದ ಜೊತೆಗೆ ಈ ಜನ ಸಸ್ಯಾಹಾರವನ್ನೂ ಸೇವಿಸುತ್ತಿದ್ದರು. ಚೋಪನಿ–ಮಾಂಡೊವಿನಲ್ಲಿ ಸುಟ್ಟು ಕರಕಲಾದ ಅಕ್ಕಿ ಮತ್ತು ಬತ್ತದ ಹೊಟ್ಟು ಸುಟ್ಟ ಮಣ್ಣಿನುಂಡೆಗಳಲ್ಲಿ ಸಿಕ್ಕಿವೆ.

ಉತ್ತರ ಪ್ರದೇಶದ ಅಲಹಾಬಾದ್, ಮಿರ್ಜಾಪುರ, ಸೋನ್‌ಭದ್ರ ಜಿಲ್ಲೆಗಳಲ್ಲಿ ಮತ್ತು ಮಧ್ಯ ಪ್ರದೇಶದ ಸಿಧಿ, ರೀವಾ ಜಿಲ್ಲೆಗಳಲ್ಲಿ ಸೂಕ್ಷ್ಮಶಿಲಾಯುಗದ ಹಲವಾರು ವರ್ಣಚಿತ್ರಿತ ಗುಹೆಗಳಿವೆ. ಈ ದಿಶೆಯಲ್ಲಿ ಲೇಖಾನಿಯ ಮತ್ತು ಬಾಘೈಖೋರ್ ಹೆಸರಿಸಬಹುದಾದ ನೆಲೆಗಳು. ಗುಹೆಗಳ ಗೋಡೆ ಮತ್ತು ಚಾವಣಿಗಳ ಮೇಲೆ ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳಲ್ಲಿ ಚಿತ್ರಗಳನ್ನು ಬಿಡಿಸಲಾಗಿದೆ. ಕೆಲವು ರೇಖಾಚಿತ್ರಗಳಾದರೆ ಉಳಿದವು ಪೂರ್ಣವಾಗಿ ತೆಳುವಾದ ಬಣ್ಣ ತುಂಬಿದಂತಹವು. ಬೇಟೆ ಹಾಗೂ ಸಮೂಹ ನೃತ್ಯದ ದೃಶ್ಯಗಳು, ಜಿಂಕೆ, ದನ–ಗೂಳಿ ಮೊದಲಾದ ಪ್ರಾಣಿಗಳ ಚಿತ್ರಗಳು, ಹಸ್ತ ಮುದ್ರೆಗಳು ಸಾಮಾನ್ಯ. ಮಿರ್ಜಾಪುರ ಜಿಲ್ಲೆಯಲ್ಲಿರುವ ಗುಹಾಚಿತ್ರಗಳನ್ನು ಅಭ್ಯಸಿಸಿರುವ ಆರ್.ಕೆ.ವರ್ಮರವರು ತಂತ್ರ, ಅಧ್ಯಾರೋಪ (ಸೂಪರ್ ಇಂಪೊಸಿಷನ್) ಮತ್ತು ಸಂರಕ್ಷಣೆಯ ಆಧಾರದ ಮೇಲೆ ಇವನ್ನು 5 ವರ್ಗಗಳಾಗಿ ವಿಂಗಡಿಸಿದ್ದಾರೆ. ಮೊದಲ ವರ್ಗಕ್ಕೆ ಸೇರುವ ಈ ಪ್ರದೇಶದ ಅತಿ ಪ್ರಾಚೀನ ಚಿತ್ರಗಳು ನೈಜ ಗಾತ್ರದಲ್ಲಿ, ಸ್ವಾಭಾವಿಕ ಭಂಗಿಗಳಲ್ಲಿ ಚಿತ್ರಿಸಿರುವ ಪ್ರಾಣಿಗಳದ್ದು. ಕೆಂಪುಬಣ್ಣದಲ್ಲಿರುವ ಈ ಚಿತ್ರಗಳ ಮೇಲೆ ಅನಂತರದ ಕಾಲದಲ್ಲಿ ಮತ್ತೆ ಚಿತ್ರಗಳನ್ನು ಬಿಡಿಸಲಾಗಿದೆ. 2ನೆಯ ವರ್ಗದಲ್ಲಿ ಶೈಲೀಕೃತ ಪ್ರಾಣಿಗಳು, ಬೇಟೆ ಮತ್ತು ಬಲೆಯೊಡ್ಡಿರುವ ದೃಶ್ಯ, ಪ್ರಾಣಿ ಸವಾರರು ಮತ್ತು ಮನುಷ್ಯರ ಚಿತ್ರಗಳಿವೆ. 3ನೆಯ ವರ್ಗದ ಚಿತ್ರಗಳು ಸಾಂಕೇತಿಕವಾದವು. ವರ್ತುಲ, ಬಿಂದು, ಸುರುಳಿ ಮತ್ತು ಕುಣಿಕೆಗಳಂತಹ ವಿನ್ಯಾಸಗಳು ಇಲ್ಲಿ ಸಾಮಾನ್ಯವಾಗಿವೆ. ಬಿಳಿಬಣ್ಣದ ಪ್ರಾಣಿ ಮತ್ತು ಮನುಷ್ಯರ ಚಿತ್ರಗಳು 4ನೆಯ ವರ್ಗಕ್ಕೆ ಸೇರುತ್ತವೆ. 5ನೆಯ ವರ್ಗದಲ್ಲಿ ತಾಮ್ರ–ಶಿಲಾಯುಗದ ಚಿತ್ರಗಳಿವೆ. ಈ ಚಿತ್ರಗಳಲ್ಲಿ ಕಪ್ಪುಬಣ್ಣವನ್ನೂ ಬಳಸಿರುವರು. ಮೊದಲ ನಾಲ್ಕು ವರ್ಗಗಳ ಚಿತ್ರ ಸಮೂಹಗಳು ವಿಂಧ್ಯ ಪ್ರದೇಶ–ಬೇಲನ್ ನದಿಬಯಲಿನ ಅಂತ್ಯ ಹಳೆಶಿಲಾಯುಗೋತ್ತರ–ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಜೀವನಶೈಲಿಯನ್ನು ತಿಳಿಯುವಲ್ಲಿ ಸಹಕಾರಿಯಾಗಿವೆ. ಬೇಟೆ ಮತ್ತು ಸಂಗ್ರಹಣೆ ಈ ಸಂಸ್ಕೃತಿಗಳ ಜೀವನೋಪಾಯವಾಗಿದ್ದವು ಎಂಬುದು ಈ ಚಿತ್ರಗಳ ವಸ್ತುವಿಷಯಗಳಲ್ಲಿ ವ್ಯಕ್ತವಾಗಿದೆ. ಸೂಕ್ಷ್ಮಶಿಲಾಯುಗ ಸಂಸ್ಕೃತಿ ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯ ವಿಕಸಿತ ಹಂತ ವಾಗಿದೆ ಎಂಬ ಸಂಗತಿ ಬೇಲನ್ ಬಯಲಿನ ನೆಲೆಗಳಲ್ಲಿನ ಸ್ತರಕ್ರಮ ಹಾಗೂ ಉಪಕರಣಗಳ ನಮೂನೆ–ತಂತ್ರಜ್ಞಾನದ ಅಧ್ಯಯನಗಳಿಂದ ದೃಢಪಟ್ಟಿದೆ. ಮಹಾಗರದಲ್ಲಿಯ ಅವಶೇಷಗಳ ವೈಜ್ಞಾನಿಕ ಪರೀಕ್ಷಣದಿಂದ 5 ಇಂಗಾಲ–14 ಕಾಲಮಾನಗಳು ಲಭ್ಯವಾಗಿವೆ. ಇವು 13,740±400 ರಿಂದ 9,740±115 ವರ್ಷಗಳ ಹಿಂದಿನ ಅವಧಿಗೆ ಸೇರುತ್ತವೆ. ಬಾಘೋರ್ ಮತ್ತು ಸೋನ್ ಪಾತ್ರಗಳ ಭೂಸ್ತರವೊಂದು 11,870±120 ವರ್ಷಗಳಷ್ಟು ಹಿಂದೆ ಸಂಚಯಗೊಂಡಿದೆ. ಇವೆಲ್ಲ ಕಾಲಮಾನಗಳ ಆಧಾರದ ಮೇಲೆ ಬೇಲನ್ ಮತ್ತು ಸೋನ್ ನದಿಬಯಲುಗಳಲ್ಲಿ ಅಂತ್ಯ ಹಳೆಶಿಲಾಯುಗೋತ್ತರ ಸಂಸ್ಕೃತಿ 20,000–16,000 ವರ್ಷಗಳ ಹಿಂದೆ ಅಸ್ತಿತ್ವದಲ್ಲಿತ್ತು ಎಂದು ಹೇಳಬಹುದು.

ಸೂಕ್ಷ್ಮ ಶಿಲಾಯುಗಕ್ಕೆ ಸಂಬಂಧಿಸಿದಂತೆ ಸೋನ್ ನದಿ ಪಾತ್ರದಲ್ಲಿರುವ ಬಾಘೋರ್ ನೆಲೆಯಿಂದ 6,380±220 ರ ಕಾಲಮಾನ ದೊರೆತಿದೆ. ಲೇಖಾನಿಯದ ಕಲ್ಲಾಸರೆಯಿಂದ ಪ್ರ.ಶ.ಪೂ.6420±75 ಮತ್ತು ಪ್ರ.ಶ.ಪೂ.6050±75 (ಎ.ಎಮ್.ಎಸ್–ಇಂಗಾಲ 14)– ಈ ಎರಡು ಕಾಲಮಾನಗಳಿವೆ. ಬೇಲನ್ ನದಿಬಯಲಿನಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿ 10,000–8000 ವರ್ಷಗಳ ಹಿಂದಿನ ಅವಧಿಯಲ್ಲಿ ಇತ್ತೆಂಬುದು ನಿಶ್ಚಿತ. (ಜಿ.ಎನ್.ಪಿ.)

**ಸೂಫಿ ಪಂಥ:** ಇಸ್ಲಾಂ ಧರ್ಮದ ಒಂದು ಭಕ್ತಿ ಪಂಥ. ಸೂಫಿ ಎಂಬ ಪದ ಸಫ಼್ ಎಂಬ ಪರ್ಷಿಯನ್ ಪದದಿಂದ ನಿಷ್ಪನ್ನವಾಗಿದ್ದು, ಸಫ಼್ ಎಂದರೆ ಪರಿಶುದ್ಧ ನಡವಳಿಕೆಯುಳ್ಳವನು ಹಾಗೂ ಸೂಫ್ ಎಂದರೆ ಉಣ್ಣೆ ಎಂದರ್ಥ. ಕೆಲವು ವಿದ್ವಾಂಸರು ಸೋಫಿಯ ಎಂಬ ಗ್ರೀಕ್ ಪದದಿಂದ ನಿಷ್ಪನ್ನವಾಗಿದೆ ಎಂದೂ ಅಭಿಪ್ರಾಯಪಡುತ್ತಾರೆ. ಸೂಫಿಪಂಥಕ್ಕೆ ಕುರಾನ್ ಮತ್ತು ಷರೀಯತ್ ಮೂಲಾಧಾರವಾದರೂ ಜರುತುಷ್ಟ್ರಧರ್ಮ ಕ್ರೈಸ್ತಧರ್ಮ, ಬೌದ್ಧಧರ್ಮ, ಹಿಂದುಧರ್ಮಗಳ ಹಲವು ಉತ್ತಮ ಅಂಶಗಳನ್ನು ಎರವಲು ಪಡೆದುಕೊಂಡಿದೆ.

ಸೂಫಿಪಂಥ ಮೊದಲು ಅರೇಬಿಯದಲ್ಲಿ ಜನಿಸಿ, ಅನಂತರ ಇರಾಕ್, ಇರಾನ್‌ಗಳಲ್ಲಿ ವಿಕಾಸಹೊಂದಿ ಇಸ್ಲಾಮಿನ ಪ್ರವೇಶದೊಂದಿಗೆ ಭಾರತಕ್ಕೂ ಪರಿಚಯಿಸಲ್ಪಟ್ಟಿತು. ವಾಯವ್ಯ ಭಾರತದಲ್ಲಿ ಮೊದಲು ಪರಿಚಯಿಸಲ್ಪಟ್ಟ ಸೂಫಿಪಂಥ ಅನಂತರ ಉತ್ತರ, ಪೂರ್ವ, ಮಧ್ಯ ಮತ್ತು ಅನಂತರದಲ್ಲಿ ಬಹಮನಿ ಸುಲ್ತಾನಾಧಿಪತ್ಯದ ಅವಧಿಯಲ್ಲಿ ದಖನ್‌ಪ್ರದೇಶಕ್ಕೂ ಕಾಲಿಟ್ಟು ವೃದ್ಧಿಯಾಯಿತು. ಭಾರತದಲ್ಲಿ ಮೊದಲು ಸೂಫಿಪಂಥದ ವಿಚಾರಧಾರೆಯನ್ನು ಪ್ರಚಾರ ಮಾಡಿದ ಕೀರ್ತಿ ಸಂತ ಆಲ್‌ಹುಜಿವಿಗೆ ಸಲ್ಲುತ್ತದೆ. ಆತನಿಂದ ಲಾಹೋರ್‌ನಲ್ಲಿ ಸೂಫಿಪಂಥ ಜನಪ್ರಿಯವಾಯಿತು.

ಎಲ್ಲಾ ಧರ್ಮಗಳಲ್ಲಿ ತಮ್ಮದೇ ಆದ ಪೂಜಾವಿಧಾನ, ಆಲೋಚನೆ ಧಾರ್ಮಿಕ ವಿಧಿವಿಧಾನಗಳಿದ್ದು ಅವುಗಳ ಅಂತಿಮ ಉದ್ದೇಶ ದೇವರ ಸಾಕ್ಷಾತ್ಕಾರವನ್ನು ಪಡೆಯುವುದಾಗಿದೆ. ಗುರಿ ಒಂದೇ ಆದರೂ ಮಾರ್ಗಗಳು ಭಿನ್ನ ಎಂದು ಬಗೆದು ಪರಮತಸಹಿಷ್ಣುತೆ, ಶಾಂತಿಸಹಬಾಳ್ವೆ, ಮಾನವತೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದರು. ತಮ್ಮ ಕುರಾನ್ ಮತ್ತು ಷರೀಯತ್ ಎಂಬ ಇಸ್ಲಾಮಿ ಕಾಯಿದೆಯನ್ನು ಮೀರಿದ ಉದಾತ್ತ ಧಾರ್ಮಿಕ ಭ್ರಾತೃತ್ವ ಮತ್ತು ಸಹಿಷ್ಣುತೆಯನ್ನು ಆಚರಿಸಿ ಪ್ರಚಾರ ಮಾಡಿದರು.

ಸೂಫಿ ಸಿದ್ಧಾಂತವನ್ನು ಅದ್ವೈತ ಸಿದ್ಧಾಂತಕ್ಕೆ ಸಮೀಕರಿಸಬಹುದು. ಅದ್ವೈತದಲ್ಲಿ ಜೀವಾತ್ಮನು ಪರಮಾತ್ಮನಲ್ಲಿ ಐಕ್ಯವಾಗುವಂತೆಯೇ ಸೂಫಿಸಂತರು ಕೂಡ ವಿಶ್ವದೈವವಾದ ವಾಹದತ್–ಉಲ್–ವಾಜುದ್‌ದ್ದನ್ನು ಅಂದರೆ ಸೃಷ್ಟಿಕರ್ತ ಮತ್ತು ಸೃಷ್ಟಿಸಲ್ಪಡುವವನ (ಖಲ್ಕ್) ಐಕ್ಯವನ್ನು ಆಧರಿಸಿದ್ದು.

ಸೂಫಿಸಂತರು ತಮ್ಮ ಸಿಲ್‌ಸಿಲಾಹ್‌ಗಳನ್ನು ಸಂಘಟಿಸಿಕೊಂಡಿದ್ದರು. ಇಂತಹ ಸು.14 ಸಿಲ್ (ಪಂಥ) ಸಿಲಾಹ್‌ಗಳು ಮಧ್ಯಕಾಲೀನ ಭಾರತದಲ್ಲಿ ಆಚರಣೆ ಅಸ್ತಿತ್ವದಲ್ಲಿದ್ದವೆಂದು ಅಬುಲ್‌ಫಜಲ್ ತಿಳಿಸಿದ್ದಾರೆ. ಇವುಗಳನ್ನು ಸ್ಥೂಲವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು: ಷರೀಯತ್ ಪಾಲಿಸುವ (ಬಿ–ಷಾರ) ಮತ್ತು ಷರೀಯತ್‌ಗೆ ಜೋತುಬೀಳದ (ಬೆ–ಷಾರ) ಪಂಗಡಗಳು. ಸಿಲ್‌ಸಿಲಾಹ್‌ಗಳು ಸಾಮಾನ್ಯವಾಗಿ ಪ್ರಮುಖ ಸೂಫಿಸಂತನ ನೇತೃತ್ವದಲ್ಲಿ ಸಂಘಟನೆಗೊಂಡು ಖಾನ್‌ಕಾಹ್‌ಗಳೆಂಬ ಮಠಗಳಲ್ಲಿ ಅಥವಾ ಗುಹೆರೂಪದ ಕೋಣೆಗಳಲ್ಲಿ ತಮ್ಮ ಶಿಷ್ಯರೊಂದಿಗೆ ಸದಾ ದೇವರ ಸಂಕೀರ್ತನೆ– ಧ್ಯಾನದಲ್ಲಿ ನಿರತರಾಗಿರುತ್ತಿದ್ದರು. ಗುರು / ಸಂತ (ಫೀರ್) ಮತ್ತು ಆತನ ಶಿಷ್ಯರ (ಮುರಾದ್) ನಡುವಿನ ಸಂಬಂಧವೇ ಈ ಸೂಫಿಸಂಪ್ರದಾಯದ ಮುಖ್ಯ ಭಾಗವಾಗಿತ್ತು. ಸೂಫಿಪಂಥದ ವಿಚಾರಧಾರೆ ಭಾರತದಲ್ಲಿ ತುರ್ಕರ ಆಡಳಿತ ಸ್ಥಾಪನೆಗಿಂತ ಮುಂಚೆಯೇ ಪರಿಚಯವಾದರೂ, ತುರ್ಕರು ಮತ್ತು ಮೊಗಲರ ಆಡಳಿತಾವಧಿಯಲ್ಲಿ ಭಾರತದಾದ್ಯಂತ ಪ್ರಚಾರವಾಯಿತು.

ಭಾರತದಲ್ಲಿ ಪ್ರಮುಖ ಸೂಫಿಪಂಥಿ ಪಂಗಡಗಳು:

1. ಚಿಸ್ತಿ ಸಿಲ್‌ಸಿಲಾಹ್: ಭಾರತದಲ್ಲಿ ಬಹಳಷ್ಟು ಪ್ರಸಿದ್ಧಿ ಹೊಂದಿದ್ದ ಸೂಫಿ ಪಂಥದ ಒಂದು ಶಾಖೆ ಮತ್ತು ಬಹಳಷ್ಟು ಶಿಷ್ಯ ಸಂಪತ್ತನ್ನು ಹೊಂದಿದ್ದ ಪಂಗಡ. ಭಾರತದಲ್ಲಿ ಈ ಪಂಗಡದ ಸ್ಥಾಪಕ ಶೇಖ್ ಮೊಯಿನುದ್ದೀನ್ ಚಿಸ್ತಿ (ಮರಣ 1236). ಇವನು ಅಜ್ಮೀರವನ್ನು ಕೇಂದ್ರವಾಗಿಸಿಕೊಂಡು ತನ್ನ ವಿಚಾರಧಾರೆಯನ್ನು ಪ್ರಚಾರ ಮಾಡಿದ. ಹಮೀದುದ್ದೀನ್ ನಕಾರಿ (13ನೆಯ ಶತಮಾನ), ಶೇಖ್ ಕುತುಬುದ್ದೀನ್ ಭಕ್ತ್ಯಾರ್ ಕಕೀ

12 ಮತ್ತು 13ನೆಯ ಶತಮಾನದಲ್ಲಿ ಜೀವಿಸಿದ್ದ ಈತ ದೆಹಲಿಯನ್ನು ಕೇಂದ್ರವಾಗಿರಿಸಿಕೊಂಡು ತನ್ನ ಪ್ರವಚನ ನೀಡಿದ. ಈತನ ಸ್ಮರಣಾರ್ಥವಾಗಿ ದೆಹಲಿಯಲ್ಲಿ ಪ್ರಸಿದ್ಧ ಕುತುಬ್‌ಮಿನಾರ್ ಅನ್ನು ನಿರ್ಮಿಸಲಾಗಿದೆ. ದೆಹಲಿಯ ಹಜರತ್ ಕ್ವಾಜ ನಿಜಾಮುದ್ದೀನ್ ಔಲಿಯಾ (13 ಮತ್ತು 14ನೆಯ ಶತಮಾನ), ನಾಸಿರುದ್ದೀನ್ ಚಿರಾಗ್; ಫತೇಪುರ್ ಸಿಕ್ರಿಯ ಸಲೀಂ ಚಿಸ್ತಿ (16ನೆಯ ಶತಮಾನ) ಬಂದೇನವಾಜ್ (ಗುಲ್ಬರ್ಗ) ಮುಂತಾದವರುಗಳು ಈ ಪಂಥದ ಪ್ರಮುಖ ಪ್ರಚಾರಕರು. ಈ ಪಂಥದ ಸಂತರು ರಾಜಸ್ತಾನ, ಉತ್ತರ ಪ್ರದೇಶ, ಪಂಜಾಬ್, ಬಿಹಾರ್, ಬಂಗಾಲ, ಒರಿಸ್ಸ ಮತ್ತು ದಖನ್‌ಭಾಗಗಳಲ್ಲಿ ಖಾನ್‌ಕಾಹ್‌ಗಳನ್ನು ಸ್ಥಾಪಿಸಿ, ಸರಳ ಜೀವನವನ್ನು ನಡೆಸುತ್ತಾ, ಆಸ್ತಿ ಹೊಂದುವಿಕೆಯನ್ನು ತಿರಸ್ಕರಿಸಿ (ರಾಜ್ಯ ಕೊಡುವ ದತ್ತಿ) ಅಧ್ಯಾತ್ಮಿಕ ಉನ್ನತಿಗೆ ಶ್ರಮಿಸುವುದರ ಮೂಲಕ ಸಾಮಾನ್ಯ ಜನರಲ್ಲಿ ವಿಶಾಲಮನೋಭಾವ ಬೆಳೆಸುವುದರ ಮೂಲಕ ಶಾಂತಿಯನ್ನು ಸ್ಥಾಪಿಸಿದರು. ಈಶ್ವರ ಮತ್ತು ಅಲ್ಲಾ ಇಬ್ಬರೂ ಒಬ್ಬನೇ ಎಂದು ಹೇಳಿ ಸಹಬಾಳ್ವೆಯಿಂದ ಜೀವಿಸುವಂತೆ ಕರೆ ನೀಡಿದರು.

2. ಸುಹ್ರವರ್ದಿ ಸಿಲ್‌ಸಿಲಾಹ್: ಶೇಖ್ ಷಿಹಾಬುದ್ದೀನ್ ಉಮರ್‌ಸುಹ್ರವರ್ದಿ (ಮರಣ ಸು.1234) ಸ್ಥಾಪಿಸಿದ ಈ ಶಾಖೆಯನ್ನು ವ್ಯವಸ್ಥಿತವಾಗಿ ಸಂಘಟಿಸಿದ ಶ್ರೇಯಸ್ಸು ಶೇಖ್ ಬಹಾವುದ್ದೀನ್ ಜಕಾರಿಯಾ (ಮರಣ ಸು.1262) ನಿಗೆ ಸಲ್ಲುತ್ತದೆ. ಈತ ಮುಲ್ತಾನ್‌ನಲ್ಲಿ ಒಂದು ಭವ್ಯವಾದ ಖಾನ್‌ಕಾಹ್ ಸ್ಥಾಪಿಸಿ ಸಿಂಧ್ ಮತ್ತು ನೆರೆಯ ಪ್ರದೇಶಗಳಿಂದ ಅಪಾರ ಸಂಖ್ಯೆಯಲ್ಲಿ ಶಿಷ್ಯರನ್ನು ಆಕರ್ಷಿಸಿದ. ಉಚ್ ಮತ್ತು ಮುಲ್ತಾನ್‌ಗಳು ಸುಹ್ರವರ್ದೀ ಪಂಗಡದ ಪ್ರಮುಖ ಕೇಂದ್ರಗಳಾಗಿದ್ದವು. ವಾಯವ್ಯ ಭಾರತದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿದ್ದ ಈ ಪಂಥದ ಸಂತರು ಚಿಸ್ತಿಗಳಿಗೆ ವ್ಯತಿರಿಕ್ತವಾಗಿ ಐಶಾರಾಮಿ ಜೀವನ ನಡೆಸುತ್ತಾ ಸರ್ಕಾರದ ದತ್ತಿಯನ್ನು ಸ್ವೀಕರಿಸಿ, ಮಧ್ಯಕಾಲೀನ ಸರ್ಕಾರದ ಧೋರಣೆಗಳ ಮೇಲೆ ಪ್ರಭಾವ ಬೀರಿದ್ದರು.

3. ಖಾದ್ರಿ ಸಿಲ್‌ಸಿಲಾಹ್: ಈ ಶಾಖೆಯ ಸ್ಥಾಪಕ ಬಾಗ್ದಾದಿನ ಶೇಖ್ ಅಬ್ದುಲ್ ಕಾದಿರ್ ಜಿಲಾನಿ (12ನೆಯ ಶತಮಾನ). ಭಾರತದಲ್ಲಿ ಈ ಪಂಥವನ್ನು ಪರಿಚಯಿಸಿದವನು ಶಾಹ್ ನಿಜಾಮತ್ ಉಲ್ಲಾ ಕಾದಿರಿ (ಮರಣ ಸು.1430). ನಾಸಿರುದ್ದೀನ್ ಮಹಮದ್ ಜಿಲಾನಿ (ಮರಣ ಸು.1517) ಇದನ್ನು ಭದ್ರಬುನಾದಿಯ ಮೇಲೆ ಸಂಘಟಿಸಿದ. ಷಹಜಹಾನನ ಹಿರಿಯ ಮಗ ದಾರಾಷುಕೊ ಕೂಡ ಈ ಶಾಖೆಯ ಪ್ರಮುಖ ಅನುಯಾಯಿಯಾಗಿದ್ದ. ಈ ಪಂಥ ಹಿಂದು–ಮುಸ್ಲಿಮರ ಧಾರ್ಮಿಕ ಅಧ್ಯಾತ್ಮಿಕ ಮಾರ್ಗಗಳಲ್ಲಿ ಸಾಮರಸ್ಯವನ್ನುಂಟು ಮಾಡಲು ಯತ್ನಿಸಿತು. ದಾರಾಷುಕೊ ತನ್ನ ಹೆಸರಾಂತ ಗ್ರಂಥ ಮಜ್ಮ–ಉಲ್–ಬಹರೈನ್‌ನಲ್ಲಿ ಹಿಂದು ಮತ್ತು ಇಸ್ಲಾಂ ಧರ್ಮಗಳು ವಿಶ್ವೈಕ್ಯವಾದದ (ಅದ್ವೈತವಾದ) ಏಕತ್ವ ಮೂಲ ಲಕ್ಷಣಗಳನ್ನು ಪಡೆದಿವೆ ಎಂದು ತಿಳಿಸಿದ್ದಾನೆ. ಈತ ನಿಷ್ಠ ವಿಶ್ವೇಕ್ಯವಾದಿಯಾಗಿದ್ದ. ಈ ಪಂಥ ಸಿಂಧ್ ಮತ್ತು ಲಾಹೋರ್‌ಗಳಲ್ಲಿ ಪ್ರಚಲಿತದಲ್ಲಿತ್ತು.

4. ನಕೇಶ್‌ಬಂದೀ ಸಿಲ್‌ಸಿಲಾಹ್: ಅಕ್ಬರನ ಆಳಿಕೆಯ ಕಾಲದಲ್ಲಿ ದೆಹಲಿಯಲ್ಲಿ ನೆಲೆಸಿದ ಖ್ವಾಜಾ ಬಕೀ ಬಿಲ್ಲಾಹ್ (ಮರಣ ಸು.1603) ನಿಂದ ಶಾಖೆ ಪ್ರಚಾರದಲ್ಲಿ ಬಂದಿತು. ಶೇಖ್ ಅಹ್ಮದ್ ಸಿರ್‌ಹಿಂದಿಯ (ಮರಣ ಸು.1624) ಮುಂದಾಳತ್ವದಲ್ಲಿ ಈ ಶಾಖೆ ಭಾರತದಲ್ಲಿ ಮಹತ್ವದ ಸ್ಥಾನ ಪಡೆಯಿತು. ಇದು ಇತರ ಶಾಖೆಗಳ ವಿಶ್ವದೇವತ್ವ ತತ್ತ್ವಜ್ಞಾನಕ್ಕೆ (ವಹ್‌ದತ್ – ಉಲ್–ವುಜೂದ್) ವ್ಯತಿರಿಕ್ತವಾಗಿ ವಹ್‌ದತ್–ಉಲ್–ಷುಜೂದ್ ಎಂಬ ಪ್ರಕೃತಿ ಜಗತ್ತಿನ ಒಗ್ಗಟ್ಟಿನ ತತ್ವ (ಫಿಲಾಸಫಿ ಆಫ್ ಅಪಾರಂಟಿಸ್ಮ್) ವನ್ನು ಪ್ರತಿಪಾದಿಸಿತು. ಅಹಮದ್ ಸಿರ್‌ಹಿಂದ್ ಅಕ್ಬರನ ಧಾರ್ಮಿಕ ಧೋರಣೆಯನ್ನು ವಿರೋಧಿಸುತ್ತಿದ್ದ.

5. ಫಿರ್ದವ್ಸೀ ಸಿಲ್‌ಸಿಲಾಹ್: ಸಮರ್‌ಖಂಡ್‌ನ ಶೇಖ್ ಸೈಫುದ್ದೀನ್ ಬಾಖರ್ಜಿಯ ಶಿಷ್ಯನಾದ ಶೇಖ್ ಬದ್ರುದ್ದೀನ್ ಈ ಶಾಖೆಯನ್ನು ದೆಹಲಿಯಲ್ಲಿ ಸ್ಥಾಪಿಸಿದ. ಅನಂತರ ಇದು ಬಿಹಾರ ಪ್ರಾಂತದಲ್ಲಿ ಪ್ರಭಾವಶಾಲಿ ಶಾಖೆಯಾಗಿ ಬೆಳೆಯಿತು. ವಿಶ್ವದೇವೈಕ್ಯ ಅದ್ವೈತ ವಾದದಲ್ಲಿ (ವಾಹದತ್–ಉಲ್–ವ್ರುಜುದ್) ನಂಬಿಕೆ ಇಟ್ಟಿದ್ದ ಶೇಖ್ ಶರಫುದ್ದೀನ್ ಯಹ್ಯಾಮು ನೇರಿ (ಮರಣ ಸು.1571) ಈ ಶಾಖೆಯ ವೈಶಿಷ್ಟ್ಯಪೂರ್ಣ ಸಂತನಾಗಿದ್ದ.

6. ಶತ್ತಾರೀ ಸಿಲ್‌ಸಿಲಾಹ್: ಮಂಡುವಿನಲ್ಲಿ ಸಮಾಧಿ ಹೊಂದಿದ ಶಾಹ್ ಅಬ್ದುಲಾಹ್ ಶತ್ತಾರೀ (ಮರಣ ಸು.1485) ಯಿಂದ ಭಾರತದಲ್ಲಿ ಈ ಶಾಖೆ ಸ್ಥಾಪಿತವಾಯಿತು. ಈತ ಕೇವಲ ಅಧ್ಯಾತ್ಮಿಕ (ಸುಕ್ರ) ಜೀವನವನ್ನು ಉಪದೇಶಿಸಿದ. ಈತ ಸಾಮಾನ್ಯ ಸೈನಿಕನಂತೆ ಸಮವಸ್ತ್ರ ಧರಿಸಿ ಮಾಳವ, ಜಾನ್‌ಪುರ ಮತ್ತು ಬಂಗಾಲಗಳಲ್ಲಿ ತನ್ನ ವಿಚಾರಗಳನ್ನು ಪ್ರಚಾರ ಮಾಡಿದ. ಶತ್ತಾರೀ ಸಂತರು ಹಿಂದು ಮತ್ತು ಮುಸಲ್ಮಾನ್ ಯೋಗಿಗಳ ಆಚಾರ ವಿಚಾರಗಳ ಹೊಂದಾಣಿಕೆಗಾಗಿ ಯತ್ನಿಸಿದರು.

ಕರ್ನಾಟಕದಲ್ಲಿ ಬಹಮನಿ ಸುಲ್ತಾನರು ಮತ್ತು ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಸೂಫಿಪಂಥ ಜನಪ್ರಿಯವಾಯಿತು. ಇವರ ರಾಜಧಾನಿ ನಗರಗಳಾದ ಗುಲ್ಬರ್ಗ, ಬೀದರ್ ಮತ್ತು ಬಿಜಾಪುರಗಳು ಸೂಫಿಪಂಥದ ಕೇಂದ್ರಗಳಾಗಿದ್ದವು. ದೆಹಲಿಯ ಸುಲ್ತಾನಾಧಿಪತ್ಯ ಅವಸಾನದ ಅಂಚಿನಲ್ಲಿದ್ದ ಸಂದರ್ಭದಲ್ಲಿ ಅನೇಕ ಸೂಫಿಗಳು ಕರ್ನಾಟಕಕ್ಕೆ ವಲಸೆ ಬಂದರು. ಹೀಗೆ ವಲಸೆ ಬಂದ ಪ್ರಮುಖ ಸೂಫಿಸಂತರೆಂದರೆ–ಖ್ವಾಜಾ ಬಂದೇನವಾಜ್ (ಗುಲ್ಬರ್ಗ), ಷೇಕ್ ಷಿಯಾಬುದ್ದೀನ್, ಸೈಯದ್‌ಹುಸೇನ್, ಷೇಕ್ ಕಮಾಲುದ್ದೀನ್, ಹಜರತ್ ಸಯ್ಯದ್ ಕೊತ್ವಾಲ್‌ಷಾ (ಬೆಳಗಾಂವಿ), ಹಜರತ್ ಸೈಯದ್ ಮುರ್ತಾಜ್ ಖಾದಿರಿ (ಬಿಜಾಪುರ), ಹಜರತ್ ಬುರ್‍ದನುದ್ದೀನ್‌ಷಾ (ಬಾಬಾ ಬುಡನ್‌ಗಿರಿ), ಹಜರತ್‌ವಾಲಿ ಅಲ್ಲಾಖಾದಿರಿ (ಧಾರವಾಡ) ಮುಂತಾದವರಿಂದ ಕರ್ನಾಟಕದಲ್ಲಿ ಸೂಫಿಪಂಥ ಪ್ರಚಾರಗೊಂಡಿತು. ಗುಲ್ಬರ್ಗ, ಬಾಬಾಬುಡನ್‌ಗಿರಿ ಇಂದಿಗೂ ಕರ್ನಾಟಕದ ಪ್ರಸಿದ್ಧ ಸೂಫಿಕೇಂದ್ರಗಳಾಗಿವೆ.

ಗುಲ್ಬರ್ಗದಲ್ಲಿ ನೆಲೆಸಿದ ಸೂಫಿಗಳು ಬಹಮನಿ ಸುಲ್ತಾನರೊಂದಿಗೆ ನಿಕಟಸಂಬಂಧವನ್ನು ಬೆಳೆಸಿಕೊಂಡು ಅವರ ಆಸ್ಥಾನದಲ್ಲಿ ಪ್ರಭಾವಶಾಲಿಗಳಾದರು. ಗುಲ್ಬರ್ಗದ ಪ್ರಸಿದ್ಧ ಸಂತ ಬಂದೇನವಾಜ್‌ರು ಫಿರೋಜ್ ಷಾನ ಕಾಲದಲ್ಲಿ ಪವಾಡಪುರುಷನಾಗಿ ಪ್ರಸಿದ್ಧ ಪಡೆದಿದ್ದ. ಈತನ ದರ್ಗಾ ಗುಲ್ಬರ್ಗದಲ್ಲಿದ್ದು, ಅದು ಇಂದಿಗೂ ಹಿಂದು–ಮುಸ್ಲಿಮರಿಗೆ ಯಾತ್ರಾಸ್ಥಳ ವಾಗಿದೆ. ಅನಂತರ ರಾಜಧಾನಿ ಬೀದರ್‌ಗೆ ಬದಲಾವಣೆಯಾದಾಗ ಬರೀದ್‌ಶಾಹಿಗಳು ಚಿಸ್ತಿಪಂಥಕ್ಕೆ ಬದಲಾಗಿ ಖಾದಿರಿ ಎಂಬ ನೂತನ ಸೂಫಿಪಂಥಕ್ಕೆ ಮನ್ನಣೆಕೊಟ್ಟರು. ಅನಂತರ ಬಿಜಾಪುರದ ಆದಿಲ್‌ಶಾಹಿಗಳು ಪ್ರಬಲಿಸಿ ಬಿಜಾಪುರ ಶಕ್ತಿಶಾಲಿ ಸೂಫಿ ಪಂಥದ ಕೇಂದ್ರವಾಗಿ ಬೆಳೆಯಿತು. ಚಿಸ್ತಿಪಂಥ ಪುನಃ ಮನ್ನಣೆ ಪಡೆದುಕೊಂಡಿತು. ಬಾದ್‌ಷಾ–ಜಗದ್ಗುರು–ಸಂತ ದೊರೆ ಎಂದೇ ಹೆಸರಾದ 2ನೆಯ ಇಬ್ರಾಹಿಂ ಚಿಸ್ತಿಪಂಥವನ್ನು ಉತ್ತೇಜಿಸಿದನು. ಈತ ಗುಜರಾತ್‌ನಿಂದ ಸೂಫಿಸಂತರನ್ನು ಆಹ್ವಾನಿಸಿದ. ಇವರು ಬಿಜಾಪುರ ಬಳಿಯ ಷಹಪುರದಲ್ಲಿ ಬಂದು ನೆಲೆಸಿದರು. ಷೇಕ್ ಅಮೀನುದ್ದೀನ್ ಬಿಜಾಪುರದ ಸೂಫಿಗಳಲ್ಲಿ ಅತ್ಯಂತ ಜನಪ್ರಿಯ ನಾಗಿದ್ದ. ಈತ ಅನೇಕ ಪವಾಡಗಳನ್ನು ಮೆರೆದ. ಈತನ ದರ್ಗಾ ಬಿಜಾಪುರದಲ್ಲಿದ್ದು ಇಲ್ಲಿ ಇಂದಿಗೂ ಉರುಸ್ (ಜಾತ್ರೆ) ನಡೆಯುತ್ತಿದ್ದು ಸಾಮರಸ್ಯದ ಸಂಕೇತದಂತಿದೆ. ಸಂತನೆಂದೇ ಹೆಸರು ಪಡೆದಿದ್ದ ಸುಲ್ತಾನ ಇಬ್ರಾಹಿಂ ಸ್ವತಃ ಕಿತಾಬೇನವರಸ್ ಎಂಬ ಸಂಗೀತ ಕೃತಿಯನ್ನು ರಚಿಸಿದ ಹಾಗೂ ನವರಸಪುರವೆಂಬ ನಗರವನ್ನು ನಿರ್ಮಿಸಿದ.

**ಸೂಫಿ ಪಂಥದ ಪ್ರಭಾವ ಮತ್ತು ಕೊಡುಗೆಗಳು:** 1. ಮುಸ್ಲಿಮರಲ್ಲಿ ಅನ್ಯಧರ್ಮ ಸಹಿಷ್ಣುತೆಯ ಭಾವನೆಯನ್ನು ಬೆಳೆಸಿತು. ಸೂಫಿಸಂತರು ಬೋಧಿಸಿದ ದೇವರಲ್ಲಿಯ ಪ್ರೇಮ, ಶಾಂತಿ, ಸಹಬಾಳ್ವೆ, ಪರಮತಸಹಿಷ್ಣುತೆ, ಸಹೋದರತ್ವ, ಏಕೇಶ್ವರತತ್ವ, ದೇವರೊಂದಿಗಿನ ಸಂಬಂಧ, ಧಾರ್ಮಿಕ ಸಾಮರಸ್ಯ ತತ್ವಗಳು ಹಿಂದು–ಮುಸ್ಲಿಮರ ನಡುವೆ ಸೌಹಾರ್ದತೆ ಬೆಳೆಯಲು ಕಾರಣವಾದವು. ಇದನ್ನು ಇಂದಿಗೂ ಗುಲ್ಬರ್ಗದಲ್ಲಿ ಕಾಣಬಹುದಾಗಿದೆ. 2. ಹಿಂದು–ಮುಸ್ಲಿಮರಲ್ಲಿ ಐಕ್ಯತೆಯನ್ನು ಉಂಟುಮಾಡಿತು. ಸೂಫಿಪಂಥದಿಂದಾಗಿ ದರ್ಗಾ ಸಂಸ್ಕೃತಿ (ಸೂಫಿ ಸಂತರ ಸಮಾಧಿ ಸ್ಥಳಗಳೇ ದರ್ಗಾಗಳು) ಬೆಳೆದು ಅಲ್ಲಿ ವಾರ್ಷಿಕ ಉರುಸ್/ಜಾತ್ರೆಗಳು ಜರುಗುತ್ತಿದ್ದು ಹಿಂದು–ಮುಸ್ಲಿಮರು ಒಟ್ಟಾಗಿ ಬೆರೆಯುತ್ತಾರೆ. ಅವುಗಳು ಯಾತ್ರಾ ಸ್ಥಳಗಳಾಗಿದ್ದು ಹಿಂದು–ಮುಸ್ಲಿಮರ ಐಕ್ಯತೆಯ ಚಿಹ್ನೆಗಳಾಗಿವೆ. 3. ಮಧ್ಯಕಾಲೀನ ಭಾರತದ ಮುಸ್ಲಿಂ ದೊರೆಗಳ ಆಡಳಿತದ ಮೇಲೆ ಅಪಾರ ಪ್ರಭಾವವನ್ನು ಬೀರಿತು. ಷೇರ್‌ಷಾ, ಅಕ್ಬರ್, ದಾರಾಷುಕೊ, 2ನೆಯ ಇಬ್ರಾಹಿಂ ಮುಂತಾದ ದೊರೆಗಳು ಮತಾಂಧತೆಯನ್ನು ತೊರೆದು ಅನ್ಯಧರ್ಮ ಸಹಿಷ್ಣುತೆಯನ್ನು ಅನುಸರಿಸಿ ಭಾರತದಲ್ಲಿ ರಾಷ್ಟ್ರೀಯ ರಾಜ್ಯ ಸ್ಥಾಪನೆಗೆ ಸ್ಫೂರ್ತಿ ನೀಡಿತು. 4. ಭಾರತೀಯ ಸಂಯುಕ್ತ ಸಂಸ್ಕೃತಿಯ (ಇಂಡಿಯನ್ ಕಾಂಪೊಸಿಟ್ ಕಲ್ಚರ್) ನಿರ್ಮಾಣದಲ್ಲಿ ಇದರ ಕೊಡುಗೆ ಅಪಾರ. ಸೂಫಿಪಂಥದ ಪ್ರಭಾವದಿಂದ ದಖನಿ ಉರ್ದುಭಾಷೆ ವಿಕಾಸಹೊಂದಿತು. ಸ್ಥಳೀಯ ಭಾಷೆಗಳು ಬೆಳವಣಿಗೆಯಾದವು (ಸ್ಥಳೀಯ ಭಾಷೆಗಳಲ್ಲಿ ಪ್ರವಚನ ನೀಡಿದ್ದರಿಂದ); ಸಂಗೀತ ಕ್ಷೇತ್ರದಲ್ಲಿ ಅಮೀರ್ ಖುಸ್ರು, 2ನೆಯ ಇಬ್ರಾಹಿಂ (ಕಿತಾಬೇನವರಸ್), ಬಂದೇನವಾಜ್, ಸಂತಶಿಶುನಾಳ ಷರೀಫ ಮುಂತಾದವರು ಅನೇಕ ಭಾವಗೀತೆ, ಭಕ್ತಿಗೀತೆ, ಕೀರ್ತನೆ, ಶಾಹಿರಿ (ಉರ್ದು ಕವನಗಳು) ಗದ್ಯ–ಪದ್ಯಗಳು, ಘಜಲ್‌ಗಳನ್ನು ಪರ್ಷಿಯನ್ ಮತ್ತು ಕನ್ನಡ ಭಾಷೆಗಳಲ್ಲಿ ರಚಿಸಿದರು. ಬಿಜಾಪುರ ಬಳಿಯ ನವರಸಪುರ ಪ್ರಸಿದ್ಧ ಸಂಗೀತ ಕೇಂದ್ರವಾಗಿತ್ತು. ಗುಲ್ಬರ್ಗದ ಸೈಯದ್ ಮಹಮದ್–ಹುಸೇನ್ ಬಂದೇ ನವಾಜ್‌ರು ಸೂಫಿಸಂತರಲ್ಲೇ ಪ್ರಸಿದ್ಧರಾಗಿದ್ದು ದಖನಿ ಉರ್ದು ಸಾಹಿತ್ಯದ ಪಿತಾಮಹರೆಂದೇ ಗುರುತಿಸಲಾಗಿದೆ. (ಜಿ.ಟಿ.ಎಸ್.)

**ಸೆನಫನ್:** ಪ್ರ.ಶ.ಪೂ.ಸು.434–355. ಗ್ರೀಕ್ ಯೋಧ ಹಾಗೂ ಇತಿಹಾಸಕಾರ. ಅಥೆನ್ಸ್‌ನಲ್ಲಿ ಜನಿಸಿದ. ಸಾಕ್ರಟೀಸನ ಶಿಷ್ಯನಾದ ಈತ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಸೈರಸ್ ಸಿಂಹಾಸನಕ್ಕಾಗಿ ತನ್ನ ಹಿರಿಯಣ್ಣನೊಡನೆ ನಡೆಸಿದ ಸಮರದ ವರ್ಣನೆಯನ್ನು ಅನಾಬೆಸಿಸ್ ಎಂಬ ಕೃತಿಯಲ್ಲಿ ವಿವರಿಸಿದ್ದಾನೆ. ಸ್ಪಾರ್ಟನ್ನರ ಬಗ್ಗೆ ತೋರಿದ ಸಹಾನುಭೂತಿ ಗಾಗಿಯೋ ಅಥವಾ ಸಾಕ್ರಟೀಸನ ಮಿತ್ರನಾದ ತಪ್ಪಿಗೋ ಇವನು ದೇಶಭ್ರಷ್ಟನಾಗಬೇಕಾಯಿತು. ಇವನು 396ರಲ್ಲಿ ಸ್ಪಾರ್ಟದ ಸೇನೆ ಸೇರಿದ. ಅಥೆನ್ಸ್ – ಸ್ಪಾರ್ಟ ನಡುವೆ ಪುನಃ ಮೈತ್ರಿ ಸ್ಥಾಪನೆ ಆದ ಮೇಲೆ ಈತನ ಮೇಲೆ ವಿಧಿಸಿದ್ದ ಗಡಿಪಾರು ಆಜ್ಞೆ ರದ್ದಾಯಿತು. ಇವನು ತನ್ನ ಜೀವನದ ಕಡೆಯ ದಿನಗಳನ್ನು ಕಾರಿಂಥ್‌ನಲ್ಲಿ ಕಳೆದ. ಅಜಿಸಿಲಸ್ ಜೀವನ ಚರಿತ್ರೆ, ಗ್ರೀಸ್ ಚರಿತ್ರೆ (ಪ್ರ.ಶ.ಪೂ.411–362) ಹೆಲೆನಿಕ, ಮೆಮೋರಾ ಬಿಲಿಯ ಆಫ್ ಸಾಕ್ರಟೀಸ್, ಅಪೊಲೋಜಿಯ, ಎಕನಾಮಿಕಸ್, ಸಿಂಪೋನಿಯಮ್ ಇವು ಇವನ ಇತರ ಕೃತಿಗಳು. ಈ ಎಲ್ಲ ಕೃತಿಗಳ ಮೇಲೂ ಸಾಕ್ರಟೀಸನ ಪ್ರಭಾವ ಮೂಡಿದೆ. (ಪಿ.ಎಲ್.ಜಿ.)

**ಸೆಲ್ಯೂಕಸ್, ನಿಕೇಟಾರ್:** ಪ್ರಶಪೂ.358–281. ಅಲೆಕ್ಸಾಂಡರನ ದಂಡನಾಯಕ ಹಾಗೂ ಪ್ರಾಚೀನ ಭಾರತದ ಮೇಲೆ ಆಕ್ರಮಣ ಮಾಡಿದ ಗ್ರೀಕ್ ಧಾಳಿಕಾರ. ಅಲೆಕ್ಸಾಂಡರ್‌ನ ಮರಣಾನಂತರ ಅವನ ಸಾಮ್ರಾಜ್ಯ ಛಿದ್ರಛಿದ್ರವಾಗಿ, ಅವನ ದಂಡನಾಯಕರು ಅಲ್ಲಲ್ಲಿ

ತಾವೇ ಸ್ವತಂತ್ರ ರಾಜರಾದರು. ಟಾಲಮಿ ಈಜಿಪ್ಟ್ ಪ್ರಭುವಾದರೆ, ಆಂಟಿಗೋನಸ್ ಮ್ಯಾಸಿಡೋನಿಯಕ್ಕೆ ರಾಜನಾದ. ಸೆಲ್ಯೂಕಸ್ ಪಶ್ಚಿಮ ಏಷ್ಯದ ಅಧಿಪತಿಯಾದ. ಅಲೆಕ್ಸಾಂಡರ್ ವಾಯವ್ಯ ಭಾರತದಲ್ಲಿ ಗೆದ್ದುಕೊಂಡಿದ್ದ ಪ್ರದೇಶಗಳನ್ನು ಈತ ಜಯಿಸಲು ನಿರ್ಧರಿಸಿದ. ಇವನು ಬ್ಯಾಕ್ಟ್ರಿಯವನ್ನು ಗೆದ್ದ ಮೇಲೆ ವಾಯವ್ಯ ಭಾರತದ ಕಡೆ ನುಗ್ಗಿದ (ಪ್ರ.ಶ.ಪೂ.305). ಆಗ ಭಾರತ ಚಂದ್ರಗುಪ್ತಮೌರ್ಯನ ಆಡಳಿತದಲ್ಲಿ ಬಲಾಢ್ಯ ಸಾಮ್ರಾಜ್ಯವಾಗಿತ್ತು. ಸಿಂಧೂ ನದಿ ದಾಟಿ ಬಂದ ಇವನನ್ನು ಎದುರಿಸಲು ಚಂದ್ರಗುಪ್ತ ಮೌರ್ಯ ಐದು ಲಕ್ಷ ಸೈನ್ಯದೊಂದಿಗೆ ಸಜ್ಜಾಗಿದ್ದ. ಇವರಿಬ್ಬರಿಗೂ ಕಾಳಗ ನಡೆದು, ಸೋಲು ಖಚಿತವೆಂದರಿತ ಈತ ಚಂದ್ರಗುಪ್ತ ನೊಡನೆ ಒಪ್ಪಂದ ಮಾಡಿಕೊಂಡ. ಒಪ್ಪಂದದ ಪ್ರಕಾರ ಚಂದ್ರಗುಪ್ತಮೌರ್ಯನಿಗೆ ಹೀರಟ್, ಕಂದಹಾರ್, ಕಾಬೂಲ್, ಬಲೂಚಿಸ್ತಾನ ಪ್ರಾಂತಗಳನ್ನು ಬಿಟ್ಟುಕೊಟ್ಟ. ಹೊಸ ಪ್ರಾಂತಗಳ ಸೇರ್ಪಡೆಯಿಂದಾಗಿ ಮೌರ್ಯ ಸಾಮ್ರಾಜ್ಯ ಹಿಂದೂಕುಷ್ ಪರ್ವತದವರೆಗೆ ಹಬ್ಬಿತು. ಚಂದ್ರಗುಪ್ತ ಮೌರ್ಯನ ಪ್ರತಿಷ್ಠೆ ಮತ್ತಷ್ಟು ಹೆಚ್ಚಿತು. ಇದಕ್ಕೆ ಪ್ರತಿಯಾಗಿ ಚಂದ್ರಗುಪ್ತ ಮೌರ್ಯ ಇವನಿಗೆ 500 ಆನೆಗಳನ್ನು ಕೊಟ್ಟ. ಸೆಲ್ಯೂಕಸ್ ತನ್ನ ಸ್ನೇಹದ ಸಂಕೇತವಾಗಿ ಮಗಳು ಹೆಲೆನಳನ್ನು ಚಂದ್ರಗುಪ್ತಮೌರ್ಯನಿಗೆ ಮದುವೆ ಮಾಡಿಕೊಟ್ಟ. ಈತ ಮೆಗಾಸ್ತನೀಸ್ ಎಂಬ ತನ್ನ ರಾಯಭಾರಿಯನ್ನು ಚಂದ್ರಗುಪ್ತನ ಆಸ್ಥಾನಕ್ಕೆ ಕಳಿಸಿದ್ದ. ಮೆಗಾಸ್ತನೀಸ್ ನಾಲ್ಕು ವರ್ಷ ಪಾಟಲಿಪುತ್ರದಲ್ಲಿದ್ದು ಇಂಡಿಕಾ ಎಂಬ ಗ್ರಂಥ ರಚಿಸಿದ (ಪ್ರ.ಶ.ಪೂ.305–299). (ಎಸ್.ಕೆ.ಕೆ.)

**ಸೇಂದ್ರಕರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು**

**ಸೇವುಣ ವಂಶ:** ಸು.9ನೆಯ ಶತಮಾನದಿಂದ 14ನೆಯ ಶತಮಾನದ ಆರಂಭದವರೆಗೆ ಆಳಿದ ಒಂದು ರಾಜಮನೆತನ. ಇವರು ಇತ್ತೀಚಿನವರೆಗೂ ಇತಿಹಾಸಕಾರರಿಗೆ ದೇವಗಿರಿಯ ಯಾದವರೆಂದೇ ಪರಿಚಿತರಾಗಿದ್ದರು. ಮುಸ್ಲಿಂ ಚರಿತ್ರಕಾರರನ್ನು ಅನುಸರಿಸಿ ಇತ್ತೀಚಿನ ಇತಿಹಾಸಕಾರರೂ ಇವರನ್ನು ಯಾದವ ವಂಶದವರೆಂದೇ ಪರಿಗಣಿಸುತ್ತಿದ್ದರು. ಆದರೆ ಎ.ವಿ.ನರಸಿಂಹ ಮೂರ್ತಿ ಮತ್ತು ಶ್ರೀನಿವಾಸ ರಿತ್ತಿ ಎಂಬ ವಿದ್ವಾಂಸರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಇವರನ್ನು ದೇವಗಿರಿಯ ಸೇವುಣರೆಂದು ಕರೆಯಬೇಕೆಂಬ ವಾದವನ್ನು ಮಂಡಿಸಿದ ಅನಂತರ ಇವರನ್ನು ಸೇವುಣರೆಂದೇ ಗುರುತಿಸಲಾಗುತ್ತಿದೆ.

**ರಾಜಕೀಯ ಇತಿಹಾಸ:** ಸೇವುಣರು ಯಾದವ ವಂಶದವರು. ಆದರೆ ಸೇವುಣಚಂದ್ರ ಎಂಬ ರಾಜ ಪ್ರಸಿದ್ಧಿಯನ್ನು ಗಳಿಸಿದ್ದರಿಂದ ಇವನ ವಂಶಕ್ಕೆ ಸೇವುಣ ವಂಶವೆಂದು ಹೆಸರಾಯಿತೆಂದು ಚತುರ್ವರ್ಗ ಚಿಂತಾಮಣೀ ಗ್ರಂಥದ ಕರ್ತೃ ಹೇಮಾದ್ರಿ ಹೇಳಿದ್ದಾನೆ. ಇದನ್ನು ಕೆಲವು ಶಾಸನಗಳು ಸ್ಪಷ್ಟೀಕರಿಸುತ್ತವೆ. ಈ ವಂಶದ ಹೆಸರನ್ನು ಉಲ್ಲೇಖಿಸುವಾಗ ಸೇವುಣ, ಸೇಉಣ ಎಂದೂ ಬರೆಯಲಾಗುತ್ತದೆ. ಶಾಸನಗಳಲ್ಲಿ ಈ ಎರಡು ರೂಪಗಳೂ ದೊರೆಯುತ್ತವೆ. ಈ ಪದದ ಅರ್ಥ ಮಾತ್ರ ಇನ್ನೂ ತಿಳಿದಿಲ್ಲ. ಸೇವುಣ ವಂಶದ ಮೂಲದ ಬಗೆಗೂ ವಾದಗಳಿವೆ. ಫ್ಲೀಟ್, ಭಂಡಾರ್‌ಕರ್, ಅಳತೇಕರ, ಡೆರೆಟ್ ಮೊದಲಾದ ವಿದ್ವಾಂಸರು ಸೇವುಣರು ಮಹಾರಾಷ್ಟ್ರದವರು ಎಂಬ ವಾದವನ್ನು ಮಂಡಿಸಿದ್ದರು. ಬಹುಕಾಲದವರೆಗೂ ಈ ಅಭಿಪ್ರಾಯವೇ ಮಾನ್ಯವಾಗಿತ್ತು. ಆದರೆ ಅನಂತರ ನಡೆದ ಸಂಶೋಧನೆಗಳಿಂದ ಈ ವಾದದಲ್ಲಿ ಹುರುಳಿಲ್ಲವೆಂದೂ ಇವರು ಕನ್ನಡಿಗರೆಂದೂ ಸ್ಪಷ್ಟವಾಗಿದೆ. ಸೇವುಣರು ಮಧುರಾ ನಗರದಲ್ಲಿದ್ದವರೆಂದೂ ಅನಂತರವೇ ಕೃಷ್ಣನ ಕಾಲದಲ್ಲಿ ದ್ವಾರಾವತಿಗೆ ಬಂದರೆಂದೂ ಹೇಮಾದ್ರಿಯ ಗ್ರಂಥ ಮತ್ತು ಕೆಲವು ಶಾಸನಗಳಿಂದ ತಿಳಿಯುತ್ತದೆ. ಆದರೆ ಇದಕ್ಕೆ ಚರಿತ್ರಾಧಾರ ವಿಲ್ಲ. ಸೇವುಣ ರಾಜರ ಹೆಸರುಗಳಾದ ಧಡಿಯಪ್ಪ, ವಡ್ಡಿಗ, ರಾಜಗ, ಮಲ್ಲುಗಿ, ಜೈತುಗಿ ಮುಂತಾದವು ಕನ್ನಡದ ಪದಗಳು. ಸೇವುಣ ರಾಜರು ಹಾಕಿಸಿದ ಶಾಸನಗಳಲ್ಲಿ ಬಹುಪಾಲು ಕನ್ನಡ ಭಾಷೆಯಲ್ಲಿವೆ. ಇವರ ರಾಜ್ಯ ಬಹುಪಾಲು ಕನ್ನಡನಾಡನ್ನು ಒಳಗೊಂಡಿತ್ತು. ಇವರು ವಿವಾಹ ಸಂಬಂಧ ಬೆಳೆಸಿದ ರಾಜವಂಶಗಳೂ ಕನ್ನಡನಾಡಿನವು. ಇವರು ಮರಾಠಿಯನ್ನು ಪ್ರೋತ್ಸಾಹಿಸಿದರೂ ಕನ್ನಡಕ್ಕೂ ಸಾಕಷ್ಟು ಪ್ರೋತ್ಸಾಹ ನೀಡಿದರು. ಕೆಲವು ರಾಜರು ಸಲ್ಲವಿಡೆಗ, ಕರ್ಣಾಟರಾಯ ವಂಶಾಭಿರಾಮ ಎಂಬ ಬಿರುದುಗಳನ್ನೂ ಧರಿಸಿದರು. ಈ ಎಲ್ಲ ಅಂಶಗಳನ್ನೂ ಪರಿಶೀಲಿಸಿದರೆ, ಸೇವುಣರು ಕನ್ನಡನಾಡಿನವರು ಮತ್ತು ಸಾಮಂತರಾಗಿ ಆಳಿಕೆ ನಡೆಸಿ ಸ್ವತಂತ್ರ ಸಾಮ್ರಾಜ್ಯ ಸ್ಥಾಪಿಸಿದವರು ಎಂಬುದು ಸ್ಪಷ್ಟವಾಗುತ್ತದೆ.

ಸೇವುಣರ ರಾಜಕೀಯ ಇತಿಹಾಸವನ್ನು ಪರಿಶೀಲಿಸುವಾಗ ಇವರನ್ನು ಸಾಮಂತರು ಮತ್ತು ಸ್ವತಂತ್ರರು ಎಂದು ವಿಭಾಗಿಸಬೇಕಾಗುತ್ತದೆ. ಮೊದಲನೆಯ ರಾಜನಿಂದ ಪ್ರಾರಂಭವಾಗಿ ಐದನೆಯ ಭಿಲ್ಲಮನವರೆಗೆ ಇವರು ಸಾಮಂತರಾಗಿ ಆಳಿದರು. ಅನಂತರ ಐದನೆಯ ಭಿಲ್ಲಮ ಸ್ವತಂತ್ರನಾಗಿ ರಾಜ್ಯ ಸ್ಥಾಪನೆ ಮಾಡಿದ. ಇವನಿಂದ ಪ್ರಾರಂಭವಾಗಿ ಇವರ ರಾಜ್ಯ ಮಹಮದೀಯರ ಅಧೀನವಾಗುವವರೆಗೆ ಇವರು ಸ್ವತಂತ್ರವಾಗಿ ಆಳಿದರು. ಇವರು ಸಾಮಂತ ರಾಗಿದ್ದಾಗ ಹೊರಡಿಸಿದ ಶಾಸನಗಳು ಬಹು ಕಡಿಮೆ. ಕೆಲವು ರಾಜರ ಶಾಸನಗಳು ದೊರಕಿಲ್ಲ. ಇದರಿಂದ ಈ ಕಾಲದ ಇವರ ರಾಜಕೀಯ ಚರಿತ್ರೆಯನ್ನು ತಿಳಿಯುವುದು ಕಷ್ಟವಾಗಿದೆ.

ಹೇಮಾದ್ರಿಯ ರಾಜಪ್ರಶಸ್ತಿಯ ಪ್ರಕಾರ ಪ್ರತಿಬಾಹುವಿನ ಮಗನಾದ ಸುಬಾಹು ತನ್ನ ರಾಜ್ಯವನ್ನು ನಾಲ್ಕು ಭಾಗಗಳಾಗಿ ಮಾಡಿ, ದಕ್ಷಿಣ ಭಾಗವನ್ನು ದೃಢಪ್ರಹಾರನಿಗೆ ಕೊಟ್ಟನೆಂದು ತಿಳಿಯುತ್ತದೆ. ಶಾಸನಗಳಲ್ಲಿ ಸುಬಾಹುವಿನ ಹೆಸರು ಕಾಣಬರುವುದಿಲ್ಲ. ಬಹುಶಃ ಇವನು ಚರಿತ್ರಾರ್ಹನಲ್ಲ. ಅನಂತರ ಆಳಿದ ದೃಢಪ್ರಹಾರನ ಹೆಸರು ಕೆಲವು ಶಾಸನಗಳಲ್ಲಿ ಮಾತ್ರ ಕಾಣಬರುತ್ತದೆ. ಅನಂತರ ಬಂದವನೇ ಸೇವುಣಚಂದ್ರ I. ಬಹುಶಃ ಇವನೇ ಈ ವಂಶದ ಮೊದಲನೆಯ ದೊರೆ. ಇವನ ರಾಜಧಾನಿ ಸಿಂದಿನೇರ ಎಂಬ ಪ್ರಾಂತದಲ್ಲಿದ್ದ ಸೇವುಣಪುರ. ಇವನ ಕಾಲ ಸು. 850–75. ಇವನ ತರುವಾಯ ರಾಜರಾದ ಒಂದನೆಯ ಧಡಿಯಪ್ಪ, ಒಂದನೆಯ ಭಿಲ್ಲಮ ಮತ್ತು ರಾಜಗ ಇವರ ವಿಷಯ ತಿಳಿಯದು. ಅನಂತರ ಬಂದವನು ಒಂದನೆಯ ವಡ್ಡಿಗ (960–75). ಇವನು ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಸಾಮಂತ ನಾಗಿದ್ದ. ನಾಲ್ವಡಿ ಗೋವಿಂದನನ್ನು ಪದಚ್ಯುತನನ್ನಾಗಿ ಮಾಡಲು ಇವನು ಮುಮ್ಮಡಿ ಕೃಷ್ಣನಿಗೆ ಸಹಾಯ ಮಾಡಿ ಪ್ರಾಮುಖ್ಯವನ್ನು ಪಡೆದು ದೋರಪ್ಪನ ಮಗಳಾದ ವಡ್ಡಿಯವ್ವಳನ್ನು ವಿವಾಹವಾದ. ವಡ್ಡಿಗನ ಅನಂತರ ಇಮ್ಮಡಿ ಭಿಲ್ಲಮ (975–1000) ರಾಜನಾದ. ಇವನು ರಾಷ್ಟ್ರಕೂಟರನ್ನು ಕಡೆಗಣಿಸಿ ಚಾಳುಕ್ಯ ತೈಲಪನಿಗೆ ಸಹಾಯ ಮಾಡಿದುದಕ್ಕಾಗಿ ಆತ ಇವನಿಗೆ ಮಹಾ ಸಾಮಂತ ಎಂಬ ಬಿರುದನ್ನೂ ಅಹಮದ್‌ನಗರ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳನ್ನೂ ಕೊಟ್ಟ. ಇದರಿಂದ ಸೇವುಣರ ಪ್ರಾಬಲ್ಯ ಹೆಚ್ಚಲು ಅವಕಾಶವಾಯಿತು. ಇವನು ಝುಂಝುರಾಜನ ಮಗಳಾದ ಲಚ್ಚಿಯವ್ವಳನ್ನು ಮದುವೆಯಾದ. ಒಟ್ಟಿನಲ್ಲಿ ಸೇವುಣ ರಾಜ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಎರಡನೆಯ ಭಿಲ್ಲಮನಿಗೆ ಸಲ್ಲುತ್ತದೆ.

ಅನಂತರ ರಾಜನಾದ ವೇಸುಗಿ ಚಾಳುಕ್ಯ ಗೊಗ್ಗಿದೇವನ ಮಗಳಾದ ನಾಯಿಲ್ಲದೇವಿ ಯನ್ನು ಮದುವೆಯಾದ. ಅನಂತರ ರಾಜನಾದವನು ಮುಮ್ಮಡಿ ಭಿಲ್ಲಮ (1025–55). ಕಲಾಸ್ ಬದ್ರುಕ್ ಮತ್ತು ದೇವಲಾಲಿಯಲ್ಲಿ ಇವನ ಶಾಸನಗಳು ದೊರಕಿವೆ. ಇವನು ಚಾಳುಕ್ಯ ಎರಡನೆಯ ಜಯಸಿಂಹನ ಪುತ್ರಿಯೂ ಆಹವಮಲ್ಲ ಸೋಮೇಶ್ವರನ ಸಹೋದರಿಯೂ ಆದ ಅವಲ್ಲದೇವಿಯನ್ನು ವಿವಾಹವಾದ. ಜಯಸಿಂಹ ಮತ್ತು ಆಹವಮಲ್ಲ ಸೋಮೇಶ್ವರರಿ ಬ್ಬರಿಗೂ ವಿಧೇಯನಾಗಿದ್ದ ಈತ ಅವರ ಯುದ್ಧಗಳಲ್ಲಿ ಸಹಾಯ ಮಾಡಿದ. ಇವನ ಮರಣಾನಂತರ ವಡ್ಡಿಗ II, ವೇಸುಗಿ II, ಮತ್ತು ಭಿಲ್ಲಮ IV ರಾಜ್ಯವಾಳಿದರು. ಇವರನ್ನು ಸೋಲಿಸಿ ಇಮ್ಮಡಿ ಸೇವುಣಚಂದ್ರ ರಾಜನಾದ (1069–98) ಚಾಳುಕ್ಯ ವಿಕ್ರಮಾದಿತ್ಯನಿಗೆ ಸಹಾಯಮಾಡಿ ಮಹಾಮಂಡಳೇಶ್ವರ ಎಂಬ ಪದವಿಯನ್ನು ಪಡೆದ. ಈತ ಕೊಂಕಣದ ರಾಜಕೀಯದಲ್ಲಿ ಪ್ರವೇಶಿಸಿ, ಥಾಣೆ ಜಿಲ್ಲೆಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇವನ ಅನಂತರ ಇವನ ಮಗನಾದ ಐರಮದೇವ ಆಳಿದ (1098–1123). ಇವನೂ ಚಾಳುಕ್ಯ 2ನೆಯ ಸೋಮೇಶ್ವರನನ್ನು ಸೋಲಿಸಲು ವಿಕ್ರಮಾದಿತ್ಯನಿಗೆ ಸಹಾಯ ಮಾಡಿದನೆಂದು ತನ್ನ ಆಶ್ವಿ ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಇವನ ರಾಜ್ಯ ನರ್ಮದಾ ತೀರದವರೆಗೂ ಹಬ್ಬಿತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ. ಇವನ ಮರಣಾನಂತರ ಇವನ ಸಹೋದರ ನಾದ ಒಂದನೆಯ ಸಿಂಘಣ ರಾಜನಾದ (1123–42). ಕೆಲವು ಶಾಸನಗಳು ಇವನನ್ನು ಸೇವುಣದೇವ ಎಂದೂ ಕರೆಯುತ್ತವೆ. ಇವನು ಲಂಜೀಪುರದಿಂದ ಕರ್ಪೂರತಿಲಕ ಎಂಬ ಆನೆಯನ್ನು ತಂದು ವಿಕ್ರಮಾದಿತ್ಯನು ಕರ್ಪೂರ ವ್ರತವನ್ನು ಪೂರೈಸಲು ಸಹಾಯಕನಾದನೆಂದು ಹೇಮಾದ್ರಿ ಹೇಳಿದ್ದಾನೆ. ಲಂಜೀಪುರ ಕೊಂಕಣದಲ್ಲಿ ಅಥವಾ ಮಧ್ಯಪ್ರದೇಶದಲ್ಲಿದ್ದಿರಬಹುದು. ಅನಂತರ ರಾಜನಾದವನು ಮಲ್ಲುಗಿ (1142–67). ಇವನು ಪರ್ಣಖೇಟವನ್ನು ತನ್ನ ಶತ್ರುಗಳಿಂದ ಗೆದ್ದು ಉತ್ಕಲದೇಶದ ರಾಜನಿಂದ ಆನೆಗಳನ್ನು ಕಡ ಪಡೆದನು ಎಂದು ಹೇಮಾದ್ರಿ ಹೇಳಿದ್ದಾನೆ. ಪರ್ಣಖೇಟ ಅಕೋಲಾ ಜಿಲ್ಲೆಯ ಪಾಟ್‌ಖೇಡ್ ಆಗಿರಬೇಕೆಂದು ಊಹೆ. ಉತ್ಕಲದ ವಿಜಯದ ವಿಷಯದಲ್ಲಿ ಏನೂ ತಿಳಿಯದು. ಜಲ್ಹಣನ ಸೂಕ್ತಿಮುಕ್ತಾವಳಿ ಗ್ರಂಥ ಮಲ್ಲುಗಿಯ ವಿಜಯಗಳನ್ನು ವಿವರಿಸುತ್ತದೆ. ಮಲ್ಲುಗಿಯ ಮರಣಾನಂತರ ಸೇವುಣ ವಂಶದಲ್ಲಿ ಕಲಹಗಳು ಪ್ರಾರಂಭವಾದವು. ರಾಜ್ಯದಲ್ಲಿ ಕ್ಷೋಭೆ ಉಂಟಾಯಿತೆಂದೂ ಇದರಲ್ಲಿ ಅಮರ ಮಲ್ಲುಗಿ, ಅಮರ ಗಾಂಗೇಯ, ಗೋವಿಂದರಾಜ, ಕಾಲಿಯ ಬಲ್ಲಾಳ ಮತ್ತು ಕರ್ಣ ಎಂಬುವರು ಪಾಲ್ಗೊಂಡಿದ್ದರೆಂದೂ ಹೇಮಾದ್ರಿಯ ರಾಜ್ಯ ಪ್ರಶಸ್ತಿ ಮತ್ತು ಸಮಕಾಲೀನ ಶಾಸನಗಳಿಂದ ತಿಳಿಯುತ್ತದೆ. ಇವರ ಪರಸ್ಪರ ಸಂಬಂಧಗಳು ಅಸ್ಪಷ್ಟ. ಈ ಅರಾಜಕತೆಯನ್ನು ಹೋಗಲಾಡಿಸಿ ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿದವನು ಐದನೆಯ ಭಿಲ್ಲಮ.

ಶೂರನೂ ಧೀರನೂ ಆದ ಐದನೆಯ ಭಿಲ್ಲಮ (1173–92) ತನ್ನ ದಾಯಾದಿಗಳನ್ನು ಸದೆಬಡಿದು ಚಾಳುಕ್ಯರಿಂದ ಸ್ವತಂತ್ರನಾಗಿ ಸೇವುಣರ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದ. 1173ರ ಶಾಸನವೊಂದರಲ್ಲಿ ಭಿಲ್ಲಮನ ಹೆಸರು ಕಾಣಸಿಗುವು ದರಿಂದ ಇವನು ಆ ಸಮಯಕ್ಕಾಗಲೇ ರಾಜನಾಗಿದ್ದನೆಂದು ತಿಳಿಯುತ್ತದೆ. ಆದರೆ ಇವನು ಸ್ವತಂತ್ರನಾದುದು 1184ರಲ್ಲಿ ಎಂದು ಇವನ ಶಾಸನಗಳಿಂದ ಹೇಳಬಹುದು. ಭಿಲ್ಲಮ ರಾಜನಾದ ಸಮಯದಲ್ಲಿ ಮಹತ್ತರ ರಾಜಕೀಯ ಬದಲಾವಣೆಗಳುಂಟಾಗುತ್ತಿದ್ದವು. ಕಳಚುರಿ ಬಿಜ್ಜಳ ಚಾಳುಕ್ಯರನ್ನು ಸೋಲಿಸಿ ಪ್ರಭಾವಿತನಾಗಿದ್ದ. ಇದನ್ನು ಗಮನಿಸಿದ ಭಿಲ್ಲಮ ತಾನೂ ಚಾಳುಕ್ಯರನ್ನು ಕಡೆಗಣಿಸಿ, ಕಳಚುರಿಗಳ ಸಾಮಂತನಾದ. ಆದರೆ ಕಳಚುರಿ ಬಿಜ್ಜಳನ ಮರಣಾ ನಂತರ ಆ ರಾಜ್ಯಕ್ಕೆ ಎಲ್ಲೆಡೆಯಲ್ಲಿಯೂ ವಿರೋಧ ಹೆಚ್ಚಿತು. ಇದರಿಂದ ಸ್ಫೂರ್ತಿಯನ್ನು ಪಡೆದ ಭಿಲ್ಲಮನೂ ಕಳಚುರಿಗಳನ್ನು ಎದುರಿಸಲು ಹವಣಿಸಿ, ಬಿಜ್ಜಳನ ಮಗನಾದ ಮೈಲುಗಿಯ ಮೇಲೆ ಯುದ್ಧಮಾಡಿ ಆತನನ್ನು ಸೋಲಿಸಿದ. ಈ ಮಧ್ಯೆ ಚಾಳುಕ್ಯ ನಾಲ್ಕನೆಯ ಸೋಮೇಶ್ವರ ಹೇಗಾದರೂ ಮಾಡಿ ತನ್ನ ರಾಜ್ಯವನ್ನು ಸ್ಥಾಪಿಸಬೇಕೆಂದು ಪ್ರಯತ್ನಗಳನ್ನು ನಡೆಸುತ್ತಿದ್ದ. ಸು.1180ರ ಸಮಯಕ್ಕೆ ಕಳುಚುರಿಗಳನ್ನು ಸೋಮೇಶ್ವರ ಸೋಲಿಸಿದ. ಇದೇ ಸಮಯದಲ್ಲಿ

ಹೊಯ್ಸಳರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಇವುಗಳೆಲ್ಲವನ್ನು ಭಿಲ್ಲಮ ಗಮನಿಸುತ್ತಿದ್ದರೂ ಉತ್ತರ ದೇಶದ ಕಡೆಗೆ ತನ್ನ ಗಮನವನ್ನು ಹರಿಸಿದ. ಮಂಗಳವೇಷ್ಟಕದ ರಾಜನಾದ ರಾಯಮುರಾರಿ ಸೋವಿದೇವನ ಮಗನಾದ ಬಿಜ್ಜಳನನ್ನು ಸೋಲಿಸಿದ. ಅನಂತರ ಅಂಸಲ ರಾಜ್ಯದ ದೊರೆಯನ್ನು ಸೋಲಿಸಿ ಅವನಿಂದ ಶ್ರೀವರ್ಧನವೆಂಬ ನಗರವನ್ನು ವಶಪಡಿಸಿಕೊಂಡ (ಕೊಂಕಣದಲ್ಲಿ ಶ್ರೀವರ್ಧನವೆಂಬ ನಗರವಿದೆ. ಪುಣೆ ನಗರಕ್ಕೆ ಸಮೀಪದಲ್ಲಿ ಮತ್ತೊಂದು ಇದೇ ಹೆಸರಿನ ನಗರವಿದೆ). ವೀರವರ್ಧನವೆಂಬ ನಗರವನ್ನು ಹೊಯ್ಸಳ ಬಲ್ಲಾಳನು ಸೇವುಣರಿಂದ ಗೆದ್ದುಕೊಂಡನೆಂದೂ ಶಾಸನವೊಂದರಲ್ಲಿ ಹೇಳಿದೆ. ಈ ಶ್ರೀವರ್ಧನ ನಗರ ಯಾವುದು ಎನ್ನುವುದು ಖಚಿತವಾಗಿ ತಿಳಿದಿಲ್ಲ. ಭಿಲ್ಲಮ ಪ್ರತ್ಯಾಂಡಕ ರಾಜನ ಮೇಲೆ ವಿಜಯವನ್ನು ಸಂಪಾದಿಸಿದನೆಂದು ಹೇಮಾದ್ರಿ ಹೇಳಿದ್ದಾನೆ. ಇದು ಭೋರ್ ರಾಜ್ಯದ ಪ್ರಚ್ಛಂದಗಡವೇ ಅಥವಾ ತೋರಣ ನಗರವೇ ಎಂಬುದು ತಿಳಿದಿಲ್ಲ.

ಈ ಸಣ್ಣಪುಟ್ಟ ರಾಜರ ಮೇಲಿನ ವಿಜಯಗಳಿಂದ ಉತ್ತೇಜಿತನಾದ ಭಿಲ್ಲಮ ಮಾಳವ ದೇಶಕ್ಕೆ ನುಗ್ಗಿದ. ಭಿಲ್ಲಮನ ಕರಿವೃಂದನಾಥನಾದ ಜಲ್ಹನು ಆನೆಗಳೊಡನೆ ನುಗ್ಗಿ ಮಾಳವ ರಾಜನ ಸೈನ್ಯದಲ್ಲಿ ಕೋಲಾಹಲವನ್ನುಂಟುಮಾಡಿ, ವಿಂಧ್ಯವರ್ಮನನ್ನು ಸೋಲಿಸಿದ. ಅನಂತರ ಭಿಲ್ಲಮನ ಸೈನ್ಯ ಗುಜರಾತಿನ ಚಾಳುಕ್ಯರ ಮೇಲೆ ನುಗ್ಗಿ ಎರಡನೆಯ ಭೀಮನನ್ನು ಸೋಲಿಸಿತು. ಅನಂತರ ಸೈನ್ಯ ಮಾರವಾರ ದೇಶಕ್ಕೆ ನುಗ್ಗಿತು. ನಡ್ಡೋಲದಲ್ಲಿ ಆಳುತ್ತಿದ್ದ ಚಾಹಮಾನ ಕಲ್ಹಣನು ಭಿಲ್ಲಮನನ್ನು ತಡೆದ. ಮುಂದೆ ನುಗ್ಗಲಾರದೆ ಭಿಲ್ಲಮ ಸೋತು ಹಿಂತಿರುಗಿದ. ಈ ವಿಜಯಗಳಿಂದ ಭಿಲ್ಲಮನಿಗೆ ಯಾವ ರಾಜ್ಯ ವಿಸ್ತರಣೆಯೂ ಆಗಲಿಲ್ಲ. ಇತ್ತ ದಕ್ಷಿಣದಲ್ಲಿ 1184–86ರಲ್ಲಿ ಚಾಳುಕ್ಯ ಸೋಮೇಶ್ವರ ಕಲ್ಯಾಣವನ್ನು ಬಿಟ್ಟು ಜಯಂತಿಪುರಕ್ಕೆ ಓಡಿಹೋದ. ಮಾರ್ಗದಲ್ಲಿ ಭಿಲ್ಲಮ ಚಾಳುಕ್ಯ ಸೋಮೇಶ್ವರನನ್ನು ಎದುರಿಸಿದ. ಆದರೆ ಹೊಯ್ಸಳ ಬಲ್ಲಾಳ ಕಲ್ಯಾಣವನ್ನು ತನ್ನ ವಶಮಾಡಿಕೊಂಡ. ಕೂಡಲೆ ಭಿಲ್ಲಮ ಕಲ್ಯಾಣಕ್ಕೆ ಬಂದು ಬಲ್ಲಾಳನ ಮೇಲೆ ಯುದ್ಧವನ್ನು ಮಾಡಿ ಅವನು ಓಡಿಹೋಗುವಂತೆ ಮಾಡಿ ಅವನ ಬೆನ್ನಟ್ಟಿ ಮಾರ್ಗಮಧ್ಯದಲ್ಲಿ ತರ್ದವಾಡಿ, ಬೆಳ್ವೊಲ, ಎಡೆದೊರೆನಾಡುಗಳನ್ನು ತನ್ನ ವಶಮಾಡಿಕೊಂಡ. ಇನ್ನೇನು ಭಿಲ್ಲಮನೇ ದಕ್ಷಿಣಾಪಥದ ರಾಜನಾಗುತ್ತಾನೋ ಎನ್ನುವ ಮಟ್ಟಿಗೆ ವಿಜಯವನ್ನು ಸಂಪಾದಿಸಿದ. ಹಿಮ್ಮೆಟ್ಟಿದ ಬಲ್ಲಾಳ 1191ರಲ್ಲಿ ಯುದ್ಧಸಿದ್ಧತೆಗಳನ್ನು ಮಾಡಿಕೊಂಡು ಭಿಲ್ಲಮನ ಮೇಲೆ ಸೊರಟೂರು ಎಂಬಲ್ಲಿ ಯುದ್ಧಮಾಡಿದ. ಈ ಯುದ್ಧದಲ್ಲಿ ಸೋತ ಭಿಲ್ಲಮನ ಸೈನ್ಯ ಲೊಕ್ಕಿಗುಂಡಿ ಕೋಟೆಯನ್ನು ಹೊಕ್ಕಿತು. ಜೈತ್ರಸಿಂಹನ ನೇತೃತ್ವದಲ್ಲಿದ್ದ ಸೇವುಣ ಸೈನ್ಯವನ್ನು ಬಲ್ಲಾಳ ಸೋಲಿಸಿ, ಸೇವುಣರನ್ನು ಓಡಿಸಿದ. ಭಿಲ್ಲಮ ಈ ಯುದ್ಧದಲ್ಲಿ ಪೂರ್ಣವಾಗಿ ಸೋತ. ಇವನು ಈ ಯುದ್ಧದಲ್ಲಿ ಮಡಿದನೇ ಎಂಬುದು ಸಂದೇಹಾಸ್ಪದ ವಿಷಯ. ಆದರೂ ಇವನು ಹೆಚ್ಚು ಕಾಲ ಬದುಕಲಿಲ್ಲ. ಅದೇ ವರ್ಷವೇ ಮರಣಹೊಂದಿದ. ದೇವಗಿರಿ ನಗರವನ್ನು ಸ್ಥಾಪಿಸಿ, ಸ್ವಶಕ್ತಿ ಸಾಮರ್ಥ್ಯಗಳಿಂದ ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿ ಸೇವುಣ ರಾಜ್ಯದ ನಿಜಸ್ಥಾಪಕನೆನಿಸಿಕೊಂಡ ಕೀರ್ತಿ ಇವನಿಗೆ ಸಲ್ಲುತ್ತದೆ.

ಇವನ ಮರಣಾನಂತರ ಇವನ ಮಗನಾದ ಜೈತುಗಿ 1192ರಲ್ಲಿ ರಾಜನಾದ. ಹೊಯ್ಸಳರು ಸಾಧಿಸಿದ ವಿಜಯಗಳಿಂದ ಅವರು ಪ್ರಬಲರಾಗಿದ್ದರು. ಆದುದರಿಂದ ಜೈತುಗಿ ತನ್ನ ಗಮನವನ್ನು ಆ ಕಡೆ ಹರಿಸಲಿಲ್ಲ. ಇತರ ಕಡೆಗಳಲ್ಲಿ ರಾಜ್ಯ ವಿಸ್ತರಣೆಯ ದೃಷ್ಟಿಯಿಂದ ಜೈತುಗಿ ಕಾಕತೀಯರ ಕಡೆ ತಿರುಗಿದ. ಕಾಕತೀಯ ರಾಜನಾದ ರುದ್ರ ಮತ್ತು ಮಹದೇವ ಇಬ್ಬರನ್ನೂ ಸೋಲಿಸಿದುದೇ ಅಲ್ಲದೆ ಯುದ್ಧದಲ್ಲಿ ಕೊಂದು ತೆಲುಂಗುರಾಯ ಶಿರಃಕಮಲಮೂಲೋತ್ಪಾಟನ ಮತ್ತು ತೆಲುಂಗರಾಯ ಸ್ಥಾಪನಾಚಾರ್ಯ ಎಂಬ ಬಿರುದುಗಳನ್ನು ಧರಿಸಿದ. ರುದ್ರ ಮತ್ತು ಮಹದೇವ ಇಬ್ಬರೂ ಮರಣಹೊಂದಿದ ಅನಂತರ ಗಣಪತಿಯನ್ನು ಸೆರೆ ಹಿಡಿದು, ಅವನನ್ನೇ ಕಾಕತೀಯ ರಾಜನನ್ನಾಗಿ ಮಾಡಿದ ಕೀರ್ತಿ ಜೈತುಗಿಗೆ ಸಲ್ಲುತ್ತದೆ. ಅನಂತರ ಜೈತುಗಿಯ ಸೇನಾಧಿಪತಿಯಾದ ಸಹದೇವ ಮಾಳ್ವದೇಶಕ್ಕೆ ನುಗ್ಗಿ ಸುಭಟವರ್ಮನನ್ನು ಸೋಲಿಸಿ ಹಿಂದಿರುಗಿದ. ಜೈತುಗಿ 1200ರಲ್ಲಿ ಮರಣ ಹೊಂದಲು ಇವನ ಮಗನಾದ ಎರಡನೆಯ ಸಿಂಘಣ ರಾಜನಾದ.

ಸಿಂಘಣನ ರಾಜ್ಯಾರಂಭದ ಕಾಲದ ವಿಷಯದಲ್ಲಿ ವಿದ್ವಾಂಸರಲ್ಲಿ ಒಮ್ಮತವಿರಲಿಲ್ಲ. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇವನು 1200ರಲ್ಲಿ ಪಟ್ಟಕ್ಕೆ ಬಂದನೆಂದು ಖಚಿತವಾಗಿ ತಿಳಿದುಬಂದಿದೆ. ಇವನು ರಾಜನಾದ ಕೂಡಲೆ ತನ್ನ ಗಮನವನ್ನು ಹೊಯ್ಸಳರತ್ತ ತಿರುಗಿಸಿದ. ಹೊಯ್ಸಳ ರಾಜ್ಯದ ಭಾಗಗಳನ್ನು ಆಕ್ರಮಿಸಲು ಪ್ರಾರಂಭಿಸಿದ. ಹೊನ್ನಾಳಿ, ಸೊರಬ, ಶಿವಮೊಗ್ಗ ಇವನ ವಶವಾದವು. ಇಷ್ಟರಲ್ಲಿಯೇ ಬಲ್ಲಾಳ ಮೃತನಾದ. ಇದರಿಂದ ಪರಿಸ್ಥಿತಿ ಸೇವುಣರಿಗೆ ಇನ್ನೂ ಉತ್ತೇಜನಕರವಾಯಿತು. ಹೊಯ್ಸಳ ನಾರಸಿಂಹ ಸೇವುಣ ಸೈನ್ಯವನ್ನು ಸ್ವಲ್ಪ ಮಟ್ಟಿಗೆ ತಡೆದರೂ ಏನೂ ಪ್ರಯೋಜನವಾಗಲಿಲ್ಲ. ನಾರಸಿಂಹನ ಮರಣಾನಂತರ ಹೊಯ್ಸಳ ಸೋಮೇಶ್ವರನೂ ಸಿಂಘಣನನ್ನು ಓಡಿಸುವ ಪ್ರಯತ್ನ ಮಾಡಿದ. ಈ ಪ್ರಯತ್ನ ಹೆಚ್ಚು ಫಲಕಾರಿಯಾಗಲಿಲ್ಲ.

ಒಂದು ಕಡೆ ಹೊಯ್ಸಳರ ಮೇಲೆ ದಂಡಯಾತ್ರೆ ನಡೆಸುತ್ತಿದ್ದರೂ ಅದೇ ಸಮಯದಲ್ಲಿ ಸಿಂಘಣ ಉತ್ತರ ಭಾರತದ ಕಡೆ ವಿಜಯಕ್ಕೆ ಏರ್ಪಾಟು ನಡೆಸುತ್ತಿದ್ದ. ಮೊದಲಿಗೆ ಮಾಳವ ದೇಶಕ್ಕೆ ನುಗ್ಗಿ ಪರಮಾರ ರಾಜ ಸುಭಟವರ್ಮನನ್ನು ಕೊಂದ ಅನಂತರ ಯುದ್ಧವನ್ನು ಮುಂದುವರಿಸಿದ ಸುಭಟವರ್ಮನ ಮಗ ಅರ್ಜುನವರ್ಮನೂ ಸೋತ. ಅನಂತರ ಸಿಂಘಣ ಲಾಟ ರಾಜ್ಯದ ಮೇಲೆ ಮುಂದುವರಿದ. ಚಾಹಮಾನ ಸಿಂಹ, ಶಂಖ ಮತ್ತು ಚಾಳುಕ್ಯ ಭೀಮನ ಸೈನ್ಯಗಳು ಸಿಂಘಣನನ್ನು ಎದುರಿಸಿದವು. ಸಿಂಘಣನಿಗೆ ಜಯವಾಗಲಿಲ್ಲ; ಹಿಂದಿರುಗಿದ. ಈ ಘಟನೆಗಳು ನಡೆದದ್ದು ಸು. 1210ರಲ್ಲಿ.

ಅನಂತರ ಸಿಂಘಣ ಸು.1213ರಲ್ಲಿ ಶಿಲಾಹಾರ ಎರಡನೆಯ ಭೋಜನನ್ನು ಸೋಲಿಸಿದ. ಆತ ಸೋತು ಕೊಲ್ಲಾಪುರದಿಂದ ಪನ್ಹಾಳ ಎಂಬಲ್ಲಿಗೆ ಓಡಿಹೋದ. ಅಲ್ಲಿಗೂ ಬೆನ್ನಟ್ಟಿಹೋದ ಸೇವುಣ ಸೈನ್ಯ ಭೋಜನನ್ನು ಸೋಲಿಸಿ ಕೊಲ್ಲಾಪುರವನ್ನು ವಶಮಾಡಿಕೊಂಡಿತು. ಅಲ್ಲಿಂದ ಸಿಂಘಣನ ಸೈನ್ಯ ಕೊಂಕಣದ ಕಡೆ ತಿರುಗಿ ಕೇಶಿರಾಜನನ್ನು ಸೋಲಿಸಿ ಅವನನ್ನು ಸಾಮಂತನನ್ನಾಗಿ ಮಾಡಿತು. ಸಿಂಘಣ ಹಿಂದೆ ಒಂದು ಬಾರಿ ಲಾಟದೇಶದ ಮೇಲೆ ದಂಡೆತ್ತಿಹೋಗಿ ವಿಫಲನಾಗಿದ್ದ. ಈ ಬಾರಿ ಸಫಲನಾಗುವ ಆಸೆ ಹೊತ್ತು ಅತ್ಯಂತ ಸಮರ್ಥನಾದ ಖೋಲೇಶ್ವರ ಎಂಬ ದಂಡನಾಯಕನ ನೇತೃತ್ವದಲ್ಲಿ ಸಿಂಘಣನ ಸೈನ್ಯ ಲಾಟದೇಶಕ್ಕೆ ನುಗ್ಗಿತು. ಯುದ್ಧದಲ್ಲಿ ಸಿಂಹನೂ ಅವನ ಸಹೋದರ ಸಿಂಧುರಾಜನೂ ಕೊಲ್ಲಲ್ಪಟ್ಟರು. ಶಂಖ ಸೆರೆಸಿಕ್ಕಿದ. ಖೋಲೇಶ್ವರ ಬ್ರೋಚ್ ನಗರವನ್ನು ತನ್ನ ವಶಮಾಡಿಕೊಂಡು ವಿಜಯಸ್ತಂಭವನ್ನು ಸ್ಥಾಪಿಸಿದ. ಸೆರೆಯಿಂದ ಶಂಖನನ್ನು ಬಿಡಿಸಿ ರಾಜ್ಯವನ್ನು ಅವನಿಗೆ ಹಿಂದಿರುಗಿಸಿದ. ಅಲ್ಲಿಂದ ಮುಂದೆ ಸಿಂಘಣ ಚಾಳುಕ್ಯ ರಾಜ್ಯಕ್ಕೆ ನುಗ್ಗಿದ. ಲವಣಪ್ರಸಾದನಿಗೂ ಸಿಂಘಣನಿಗೂ ಸಂಧಿಯಾಯಿತು. ಅನಂತರ ಸಿಂಘಣ ಹಿಂದಿರುಗಿದ.

ಈ ಕಡೆ ಸಿಂಘಣನ ದಂಡನಾಯಕರು ಸಣ್ಣಪುಟ್ಟ ರಾಜರುಗಳನ್ನು ಸೋಲಿಸುತ್ತಿದ್ದರು. ಸು.1239ರಲ್ಲಿ ಕದಂಬ ಮಲ್ಲಿದೇವ ಸೋತ. ಗುತ್ತವೊಳಲಿನ ಜೋಯಿದೇವ ಸಾಮಂತನಾದ. ಸಿಂಘಣನ ಸೈನ್ಯಾಧಿಪತಿ ಬೀಚಣನು ರಟ್ಟರಾಜ ಲಕ್ಷ್ಮೀದೇವನನ್ನು ಸೋಲಿಸಿದ. ಬೆಳಗುತ್ತಿಯ ಮತ್ತು ಯಲಬುರ್ಗಿಯ ಸಿಂದರೂ ಸೋತು ಸಾಮಂತರಾದರು. ಅನಂತರ ಸೇವುಣ ಸೈನ್ಯ ತೆಲುಗು ಚೋಳರನ್ನು ಸೋಲಿಸಿತು. 1240ರಲ್ಲಿ ಸಿಂಘಣನ ಸೈನ್ಯಾಧಿಪತಿಯಾದ ರಾಮ ಮತ್ತೊಮ್ಮೆ ಲಾಟದೇಶಕ್ಕೆ ನುಗ್ಗಿದ. ನರ್ಮದಾ ನದಿಯನ್ನು ದಾಟಿದ ಸೇವುಣನ ಸೈನ್ಯವನ್ನು ವೀರಧವಳನ ಮಗನಾದ ವೀಸಲದೇವ ತಡೆದು ರಾಮನನ್ನು ಕೊಂದ. ಸಿಂಘಣನ ರಾಜ್ಯ ದಕ್ಷಿಣಾಪಥದ ಬಹುಭಾಗಗಳನ್ನು ಒಳಗೊಂಡಿತ್ತು. ಉತ್ತರದಲ್ಲಿ ನರ್ಮದಾ ತೀರದವರೆಗೂ ದಕ್ಷಿಣದಲ್ಲಿ ಕಾವೇರಿಯವರೆಗೂ ಇವನು ವಿಜಯಯಾತ್ರೆಯನ್ನು ಕೈಗೊಂಡಿದ್ದ. ಪೂರ್ವದಲ್ಲಿ ಚಾಂದ ಜಿಲ್ಲೆಯವರೆಗೆ ಇವನ ರಾಜ್ಯ ಹಬ್ಬಿತ್ತು. ಆಂಧ್ರದ ಪಶ್ಚಿಮ ಭಾಗ ಎರಡು ದಶಕಗಳ ಕಾಲ ಇವನ ಆಳಿಕೆಗೆ ಸೇರಿದ್ದಿತು. ಸಿಂಘಣ ಶೂರನು ಮಾತ್ರವಲ್ಲದೆ ಸಾಹಿತ್ಯಪ್ರಿಯನೂ ಆಗಿದ್ದ. ಸಂಗೀತಶಾಸ್ತ್ರಜ್ಞ ಶಾರ್ಙ್ಗದೇವ, ಕಮಲಭವ, ಖಗೋಳಶಾಸ್ತ್ರಜ್ಞ ಚಂಗದೇವ ಮತ್ತು ಅನಂತದೇವ ಇವನ ಆಶ್ರಯದಲ್ಲಿದ್ದರು. ಇವನಿಗೆ ಜೈತುಗಿ ಎಂಬ ಮಗನಿದ್ದ. ಇವನು ಸಿಂಘಣನಿಗಿಂತ ಮುಂಚೆಯೇ ಮರಣ ಹೊಂದಲು, ಇವನ ಮೊಮ್ಮಗನಾದ ಕೃಷ್ಣ 1247ರಲ್ಲಿ ದೊರೆಯಾದ.

ಕೃಷ್ಣ ಅಧಿಕಾರ ವಹಿಸಿಕೊಂಡ ಕೂಡಲೇ ತನ್ನ ಗಮನವನ್ನು ಗುಜರಾತಿನ ಕಡೆಗೆ ಹರಿಸಿದ. ಮಾಳವ ರಾಜ್ಯಕ್ಕೆ ನುಗ್ಗಿ ರಾಜನಾದ ಜೈತುಗಿದೇವನನ್ನು ಇವನು ಸೋಲಿಸಿರಬೇಕೆಂದು ಹೇಳಬಹುದು. ಅನಂತರ ಗುಜರಾತಿಗೆ ನಡೆದು ವೀರಧವಳನ ಮಗನಾದ ವೀಸಲದೇವನ ಸೈನ್ಯವನ್ನು ಸೋಲಿಸಿದ. ಇದಾದನಂತರ ತನ್ನ ಗಮನವನ್ನು ಹೊಯ್ಸಳರ ಕಡೆಗೆ ಹರಿಸಿದ. ಹೊಯ್ಸಳ ನಾರಸಿಂಹನು ಕೃಷ್ಣನನ್ನು ಎದುರಿಸುವಷ್ಟು ಸಮರ್ಥನಾಗಿರಲಿಲ್ಲ. ಇದರಿಂದ ಸೇವುಣ ಸೈನ್ಯ ಚಿತ್ರದುರ್ಗದ ಅನೇಕ ಭಾಗಗಳನ್ನು ತನ್ನ ವಶಮಾಡಿಕೊಂಡಿತು. ಕೃಷ್ಣನ ಸೇನಾಧಿಪತಿಗಳಾದ ಚಂಗದೇವ ಮತ್ತು ಕೇಶವದೇವ ಗೋವೆಯ ಕದಂಬ ರಾಜ ಷಷ್ಠರಾಜನನ್ನು ಸೋಲಿಸಿದರು. ಅವನು ಕೃಷ್ಣನ ಸಾಮಂತನಾದ. ಗುತ್ತವೊಳಲಿನ ಗುತ್ತರು ಕೃಷ್ಣನನ್ನು ಕಡೆಗಣಿಸಿದರು. ಮೂರನೆಯ ಗುತ್ತರಾಜನನ್ನು ಕೃಷ್ಣನ ಸೇನಾಧಿಪತಿಗಳು ಸೋಲಿಸಿದರು. ಅವನು 1259ರಲ್ಲಿ ಸಾಮಂತನಾಗಿ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಸಿಂದವಂಶದ ಬೀರದೇವನೂ ಸೋಲಿಸಲ್ಪಟ್ಟ. ಅವನ ರಾಜ್ಯ ಸೇವುಣ ರಾಜ್ಯದಲ್ಲಿ ಲೀನವಾಗಿ ಹೋಯಿತು. ಇದೇ ರೀತಿ ನಾಗರಸ ಸವದತ್ತಿಯ ರಟ್ಟರನ್ನು ಸೋಲಿಸಿ ಲಕ್ಷ್ಮೀದೇವ ಸಾಮಂತನಾಗುವಂತೆ ಮಾಡಿದ. ಕೃಷ್ಣನೂ ಕಾಕತೀಯ ಗಣಪತಿಯೂ ಮಿತ್ರರಾಗೇ ಇದ್ದರು. ಕೃಷ್ಣನ ರಾಜ್ಯ ವಿಸ್ತಾರವಾಗಿಯೇ ಇದ್ದಿತು. ದಕ್ಷಿಣದಲ್ಲಿ ನೊಳಂಬವಾಡಿ ಪ್ರದೇಶ ಸೇರಿಸಲ್ಪಟ್ಟಿತು. ಪೂರ್ವದಲ್ಲಿ ಛತ್ತೀಸ್‌ಗಡ ಇವನ ಆಳಿಕೆಗೆ ಸೇರಿತ್ತು. ಸೂಕ್ತಿಮುಕ್ತಾವಳಿ ಗ್ರಂಥದ ಕರ್ತೃ ಜಲ್ಹಣ, ಕಲ್ಪತರು ಗ್ರಂಥಕರ್ತೃ ಅಮಲಾನಂದ ಮೊದಲಾದವರು ಕೃಷ್ಣನ ಆಸ್ಥಾನದಲ್ಲಿದ್ದರು. ಕೃಷ್ಣ ಮಹಾನುಭಾವ ಪಂಥದ ಗುರು ಚಕ್ರಧರನನ್ನು ಸಂದರ್ಶಿಸಿದ್ದ. ಇವನು 1261ರಲ್ಲಿ ಮರಣ ಹೊಂದಲು ಇವನ ಸಹೋದರನಾದ ಮಹಾದೇವ ರಾಜನಾದ.

ಕೃಷ್ಣನ ರಾಜ್ಯಭಾರ ಕಾಲದಲ್ಲಿ ಯುವರಾಜನಾಗಿದ್ದ ಮಹಾದೇವ ರಾಜನಾದ ಕೂಡಲೇ ಕೊಂಕಣದಲ್ಲಿ ಆಳುತ್ತಿದ್ದ ಶಿಲಾಹಾರ ರಾಜ ಸೋಮೇಶ್ವರನ ಮೇಲೆ ಯುದ್ಧಮಾಡಿ ಅವನನ್ನು ಸೋಲಿಸಿದ. ಅವನು ಸೋತು ಸಮುದ್ರದ ಮೂಲಕ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಮಹಾದೇವ ಅವನನ್ನು ಹಿಂಬಾಲಿಸಿ ನೌಕಾಯುದ್ಧದಲ್ಲಿ ಸೋಲಿಸಿದ. ಗುಜರಾತಿನ ವೀಸಲದೇವ ಮಹಾದೇವನ ಮೇಲೆ ಒಂದು ಸೈನ್ಯವನ್ನು ಕಳುಹಿಸಿದ. ಈ ಯುದ್ಧದಲ್ಲಿಯೂ ಮಹಾದೇವ ಜಯಶಾಲಿಯಾದ. ಮಹಾದೇವನ ಸಮಕಾಲೀನ ಕಾಕತೀಯ ರಾಣಿ

ರುದ್ರಮದೇವಿಗೂ ಮಹಾದೇವನಿಗೂ ಯುದ್ಧಗಳಾದವು. ಈ ಯುದ್ಧಗಳಲ್ಲಿ ರುದ್ರಮದೇವಿ ಗೆದ್ದಳೆಂದು ತೆಲುಗು ಗ್ರಂಥಗಳು ತಿಳಿಸಿದರೆ, ಮಹಾದೇವನ ಶಾಸನಗಳು ಮಹಾದೇವನೇ ಜಯಶಾಲಿಯಾದನೆಂದು ತಿಳಿಸುತ್ತವೆ.

ಮಹಾದೇವ ಹೊಯ್ಸಳರ ಮೇಲೆ ದಂಡೆತ್ತಿಹೋಗುವ ಮುನ್ನ 1270ರಲ್ಲಿ ಕದಂಬ ಕಾಮದೇವನನ್ನು ಸೋಲಿಸಿದ. ಅನಂತರ ಹೊಯ್ಸಳರ ಮೇಲೆ ದಂಡೆತ್ತಿಹೋದ. ಹೊಯ್ಸಳ ಶಾಸನಗಳ ಪ್ರಕಾರ ಮಹಾದೇವ ಸೋತು ಓಡಿಹೋದ. ರಟ್ಟರು ಮತ್ತು ಸಿಂಧರು ಮಹಾದೇವನ ಸಾಮಂತರಾಗಿದ್ದರು. 1270ರಲ್ಲಿ ಮಹಾದೇವ ಮರಣಹೊಂದಲು ಇವನ ಮಗನಾದ ಆಮಣ ದೊರೆಯಾದ. ಆದರೆ ಕೆಲವೇ ತಿಂಗಳುಗಳಲ್ಲಿ ಕೃಷ್ಣನ ಮಗನಾದ ರಾಮಚಂದ್ರ ಇವನನ್ನು ಕೊಂದು ತಾನೇ ದೊರೆಯಾದನೆಂದು ಮಹಾನುಭಾವ ಪಂಥದ ಗ್ರಂಥಗಳಿಂದ ತಿಳಿಯುತ್ತದೆ.

1271ರಲ್ಲಿ ದೊರೆಯಾದ ರಾಮಚಂದ್ರ ಸೇವುಣವಂಶದ ಕೊನೆಯ ಪ್ರಖ್ಯಾತ ದೊರೆ. ಇವನು ದೊರೆಯಾದ ಕೂಡಲೆ ಮಾಳವದೇಶಕ್ಕೆ ಹೋಗಿ ಪರಮಾರ ಅರ್ಜುನವರ್ಮನನ್ನು ಸೋಲಿಸಿದ. ಅನಂತರ ಗುಜರಾತಿಗೆ ಮುಂದುವರಿದು ವಾಘೇಲರಾಜ ಅರ್ಜುನನನ್ನು ಸೋಲಿಸಿದ. ಅಲ್ಲಿಂದ ಹಿಂದಿರುಗಿ ಹೊಯ್ಸಳರ ಕಡೆಗೆ ತನ್ನ ಗಮನವನ್ನು ಹರಿಸಿದ. ಹೊಯ್ಸಳರು ಸೇವುಣ ಸಾಮಂತ ಕದಂಬ ಕಾಮದೇವನ ಮೇಲೆ ಯುದ್ಧ ಮಾಡಿದರು. ಕೂಡಲೇ ರಾಮಚಂದ್ರ ತನ್ನ ಸೇನಾಧಿಪತಿ ಸಾಳುವ ತಿಕ್ಕಮನನ್ನು ಯುದ್ಧಕ್ಕೆ ಕಳುಹಿಸಿದ. ತಿಕ್ಕಮ ಹೊಯ್ಸಳರನ್ನು ಸೋಲಿಸಿ ಕದಂಬರಿಗೆ ಒದಗಿದ್ದ ವಿಪತ್ತನ್ನು ತಪ್ಪಿಸಿದ. ಅನಂತರ ತಿಕ್ಕಮ ಸಾಂತರ ಬೊಮ್ಮರಸನನ್ನು ಸೋಲಿಸಿದ. ಅಲ್ಲಿಂದ ಮುಂದೆ ಗುತ್ತವೊಳಲಿಗೆ ಹೋಗಿ ಮೂರನೆಯ ಗುತ್ತನೊಡನೆ ಬೆಳವಾಡಿ ಕೋಟೆಗೆ ಮುತ್ತಿಗೆ ಹಾಕಿದ. ಈ ಯುದ್ಧದಲ್ಲಿ ಹೊಯ್ಸಳ ಸೇನಾಧಿಪತಿಗಳಾದ ನಂಜಯ್ಯ ಮತ್ತು ಗುಲ್ಲಯ್ಯ ತಿಕ್ಕಮನನ್ನು ಗಾಯಗೊಳಿಸಿದರು. ಅಲ್ಲಿಂದ ಮುಂದೆ ಹೋಗಲಾರದೆ ತಿಕ್ಕಮನ ಸೈನ್ಯ ಹಿಂದಿರುಗಿತು. 1296ರಲ್ಲಿ ಕಾಕತೀಯ ರಾಣಿ ರುದ್ರಮದೇವಿ ರಾಮಚಂದ್ರನನ್ನು ಸೋಲಿಸಿದಳು. ಹೀಗೆ ರಾಮಚಂದ್ರ ಯುದ್ಧ ನಿರತನಾಗಿದ್ದಾಗ ದೇವಗಿರಿಗೆ ಒಂದು ದೊಡ್ಡ ವಿಪತ್ತು ಬಂದೊದಗಿತ್ತು. ರಾಮಚಂದ್ರನ ಐಶ್ವರ್ಯದ ವಿಷಯವನ್ನು ಕೇಳಿದ್ದ ಅಲಾಉದ್ದೀನನು 1296ರ ಫೆಬ್ರವರಿ 26ರಂದು ದೇವಗಿರಿಗೆ ಮುತ್ತಿಗೆ ಹಾಕಿದ. ರಾಮಚಂದ್ರನ ಸಾಮಂತನಾದ ಕರ್ಣ ಅಲಾಉದ್ದೀನನನ್ನು ಎದುರಿಸಿ ಸೋತ. ರಾಮಚಂದ್ರ ಅಸಹಾಯಕತೆಯಿಂದ ಕೋಟೆಯೊಳಗೆ ಸೇರಿಕೊಂಡ. ಒಳಗಿದ್ದ ಆಹಾರ ಪದಾರ್ಥಗಳು ಮುಗಿಯುತ್ತ ಬಂದಿದ್ದವು. ಈ ಮಧ್ಯದಲ್ಲಿ ಅಲಾಉದ್ದೀನನು ಈಗಿನ ತನ್ನ ಸೈನ್ಯ ಕೇವಲ ಒಂದು ಭಾಗವೆಂದೂ ಎಪ್ಪತ್ತು ಸಾವಿರದ ಸೈನ್ಯ ಹಿಂದೆ ಬರುತ್ತಿದೆಯೆಂದೂ ಒಂದು ಸುಳ್ಳು ಸಮಾಚಾರವನ್ನು ಹಬ್ಬಿಸಿ ರಾಮಚಂದ್ರ ಈ ಸುದ್ದಿಯನ್ನು ನಂಬುವಂತೆ ಮಾಡಿದ. ಮೋಸಹೋದ ರಾಮಚಂದ್ರ ಮುಸ್ಲಿಂ ಸೈನ್ಯದೊಡನೆ ಹೋರಾಡುವುದು ಉಪಯೋಗವಿಲ್ಲವೆಂದು ಅಲಾಉದ್ದೀನನಿಗೆ ಶರಣಾಗತನಾದ. ಅನಂತರ ಏನಾಯಿತು ಎಂಬುದು ಸ್ಪಷ್ಟವಾಗಿ ತಿಳಿಯದು. ಮುಸ್ಲಿಂ ಇತಿಹಾಸಕಾರರಲ್ಲಿ ಒಮ್ಮತವಿಲ್ಲ. ಇಸಾಮಿಯ ಪ್ರಕಾರ ರಾಮಚಂದ್ರನ ಮಗ ಸಿಂಘಣ ತನ್ನ ತಂದೆಯ ಮಾತನ್ನು ನಿರಾಕರಿಸಿ ಅಲಾಉದ್ದೀನನಿಗೆ ನಿನಗೆ ನಿನ್ನ ಪ್ರಾಣದ ಮೇಲೆ ಆಸೆ ಇದ್ದರೆ ನೀನು ಲೂಟಿ ಮಾಡಿರುವುದೆಲ್ಲ ವನ್ನೂ ಹಿಂದಿರುಗಿಸಿ, ತಪ್ಪಿಸಿಕೊಂಡು ಓಡಿಹೋಗುವುದು ನಿನ್ನ ಅದೃಷ್ಟವೆಂದು ಭಾವಿಸು ಎಂದು ತಿಳಿಸಿದ. ಇದರಿಂದ ಕೋಪಗೊಂಡ ಅಲಾಉದ್ದೀನ ಸಿಂಘಣನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿ 600 ಮಣ ಮುತ್ತು, 1 ಮಣ ವಜ್ರ, 1 ಸಾವಿರ ಮಣ ಬೆಳ್ಳಿ, 4 ಸಾವಿರ ರೇಷ್ಮೆ ಬಟ್ಟೆ ಮತ್ತು ಎಲಿಚ್‌ಪುರದ ವಾರ್ಷಿಕ ಆದಾಯ ಇವುಗಳನ್ನು ತೆಗೆದುಕೊಂಡು ಹಿಂದಿರುಗಿದ. ಈ ಎರಡರಲ್ಲಿ ಯಾವುದು ಸರಿ ಎಂದು ಖಚಿತವಾಗಿ ತಿಳಿದಿಲ್ಲ. ರಾಮಚಂದ್ರ ಇಷ್ಟಾದರೂ ಬುದ್ಧಿಯನ್ನು ಕಲಿಯಲಿಲ್ಲ. ಮುಸ್ಲಿಮರನ್ನು ಸೋಲಿಸಲು ತನ್ನ ಸೈನ್ಯವನ್ನು ಬಲಪಡಿಸಿಕೊಳ್ಳುವ ಬದಲು 1303ರಲ್ಲಿ ಹೊಯ್ಸಳರ ಮೇಲೆ ದ್ವೇಷ ತೀರಿಸಿಕೊಳ್ಳಲು ನಿಂತ. ಹೊಳಲ್ಕೆರೆಯಲ್ಲಿ ಆ ವರ್ಷ ಹೊಯ್ಸಳರಿಗೂ ಸೇವುಣರಿಗೂ ಯುದ್ಧವಾಯಿತು. ರಾಮಚಂದ್ರನಿಗೆ ಜಯ ಲಭಿಸಲಿಲ್ಲ.

ಸ್ವಲ್ಪಕಾಲದವರೆಗೆ ರಾಮಚಂದ್ರ ಅಲಾಉದ್ದೀನ್‌ನಿಗೆ ವಿಧೇಯನಾಗಿ ನಡೆದುಕೊಂಡ, 1306ರ ವೇಳೆಗೆ ತಾನು ಕಳುಹಿಸಬೇಕಾದ ಕಾಣಿಕೆಯನ್ನು ನಿಲ್ಲಿಸಿದ. ಇದರಿಂದ ಕುಪಿತನಾದ ಅಲಾಉದ್ದೀನ್ ಮಲ್ಲಿಕ್ ಕಾಫರನನ್ನು ದೇವಗಿರಿಗೆ ಕಳುಹಿಸಿದ. ಅಲ್ಪ್‌ಖಾನನ ಸಹಾಯದಿಂದ ಮಲ್ಲಿಕ್ ಕಾಫರನು ಹಿಂದು ಸೈನ್ಯವನ್ನು 1307 ಮಾರ್ಚ್ 24ರಂದು ಸೋಲಿಸಿದ. ರಾಮಚಂದ್ರ ಶರಣಾಗತನಾದ. ಇವನ ಮಕ್ಕಳು ಓಡಿಹೋದರು. ರಾಮಚಂದ್ರ ಕೈದಿಯಂತೆ ದೆಹಲಿಗೆ ಒಯ್ಯಲ್ಪಟ್ಟ. ಅಲಾಉದ್ದೀನನು ಇವನನ್ನು ಬಹು ಮರ್ಯಾದೆಯಿಂದ ಬರಮಾಡಿಕೊಂಡು ಬಹುಮಾನಗಳೊಡನೆ ವಾಪಸು ಕಳುಹಿಸಿದ. 1309ರಲ್ಲಿ ಅಲಾಉದ್ದೀನ್‌ನ ಸೈನ್ಯ ವಾರಂಗಲ್ಲಿಗೆ ಹೋಗುವ ಮಾರ್ಗದಲ್ಲಿ ದೇವಗಿರಿಯಲ್ಲಿ ತಂಗಿತು. ರಾಮಚಂದ್ರ ಅದಕ್ಕೆ ತಕ್ಕ ಅನುಕೂಲತೆಗಳನ್ನು ಮಾಡಿಕೊಟ್ಟು ವಾರಂಗಲ್ಲಿಗೆ ದಾರಿ ತೋರಿಸಲು ದಳವಾಯಿ ಪರಶುರಾಮನನ್ನು ಕಳುಹಿಸಿದ. ಈ ರೀತಿ ಇವನು ಸುಲ್ತಾನನಿಗೆ ವಿಧೇಯನಾಗಿ ನಡೆದುಕೊಂಡ. ರಾಮಚಂದ್ರ ಮರಾಠಿ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟ. ಮಹಾನುಭಾವ ಪಂಥದ ಅನೇಕ ಗ್ರಂಥಗಳು ಇವನ ಕಾಲದಲ್ಲಿ ರಚಿತವಾದವು. ಇವನು 1312ರಲ್ಲಿ ಮರಣಹೊಂದಲು ಇವನ ಮಗ ಮೂರನೆಯ ಸಿಂಘಣ ರಾಜನಾದ. ಇವನನ್ನು ಹಿಂದಿನ ಇತಿಹಾಸಕಾರರು ಸಂಗಮ, ಶಂಕರ ಎಂಬ ಹೆಸರಿನಿಂದ ಕರೆದಿದ್ದರು. ಸಿಂಘಣನಿಗೂ ದೇವಲದೇವಿಗೂ ಇದ್ದ ಪ್ರೇಮದ ವಿಷಯದಲ್ಲಿ ಅಮೀರ್ ಖುಸ್ರು ಒಂದು ಕಾವ್ಯವನ್ನೇ ರಚಿಸಿದ್ದಾನೆ. ಇದು ಎಷ್ಟರಮಟ್ಟಿಗೆ ಚರಿತ್ರಾರ್ಹವೆಂದು ಹೇಳುವುದು ಕಷ್ಟ ತಾನು ಪ್ರೇಮಿಸಿದ್ದ ದೇವಲದೇವಿಯನ್ನು ಅಲಾಉದ್ದೀನ್ ಅಪಹರಿಸಿದ್ದುದು ಸಿಂಘಣ ಅಲಾಉದ್ದೀನ್‌ನನ್ನು ದ್ವೇಷಿಸಲು ಕಾರಣವಿರಬಹುದು. ಅಲಾಉದ್ದೀನ್‌ನಿಗೆ ಕೊಡಬೇಕಾದ ಕಪ್ಪಕಾಣಿಕೆಗಳನ್ನು ನಿಲ್ಲಿಸಿದ್ದರಿಂದ ಕೋಪಗೊಂಡ ಮಲ್ಲಿಕ್ ಕಾಫರನು ಮತ್ತೆ (ಮೂರನೆಯ ಸಾರಿ) ದೇವಗಿರಿಗೆ ಬಂದು ಸಿಂಘಣನನ್ನು ಸೋಲಿಸಿ ಅವನನ್ನು ಅಮಾನುಷ ರೀತಿಯಲ್ಲಿ ಕೊಲ್ಲಿಸಿದ. ದೇವಗಿರಿ ಮಹಮ್ಮದೀಯರ ವಶವಾಯಿತು. 1316ರಲ್ಲಿ ಅಲಾಉದ್ದೀನ್ ಮರಣಹೊಂದಲು, ಮಲ್ಲಿಕ್ ಕಾಫರನು ದೇವಗಿರಿಯಿಂದ ಮುಸ್ಲಿಂ ಪ್ರಾಂತಪಾಲ ಐನ್ ಉಲ್‌ಮುಲ್ಕನನ್ನು ಹಿಂದಕ್ಕೆ ಕರೆಯಿಸಿಕೊಂಡ. ದೇವಗಿರಿಯಲ್ಲಿ ಮುಸ್ಲಿಂ ಪ್ರಾಂತಪಾಲ ಇಲ್ಲದಿರುವುದನ್ನು ಗಮನಿಸಿದ ರಾಮಚಂದ್ರನ ಅಳಿಯನಾದ ಹರಪಾಲದೇವ ತನ್ನ ಮಂತ್ರಿ ರಾಘವನ ಸಹಾಯದಿಂದ ದೇವಗಿರಿಯನ್ನು ವಶಪಡಿಸಿಕೊಂಡ. ಖುಸ್ರುಖಾನ್ ಕೂಡಲೇ ಹಿಂದಿರುಗಿ 1318 ರಲ್ಲಿ ಹರಪಾಲನನ್ನು ಸೋಲಿಸಿ ಅವನನ್ನು ಜೀವಸಹಿತ ಸುಡಿಸಿ ಅವನ ತಲೆ ಬುರುಡೆಯನ್ನು ದೇವಗಿರಿಯ ಕೋಟೆಯ ಮೇಲೆ ನೇತುಹಾಕಿಸಿದ ಎಂದು ಫೆರಿಸ್ತ ಹೇಳುತ್ತಾನೆ. ಅನಂತರ ಮಲ್ಲಿಕ್ ಯಾಖ್‌ಲಾಖಿ ದೇವಗಿರಿಯ ರಾಜ್ಯಪಾಲನಾದ. 1333–34ರ ಶಾಸನವೊಂದರಲ್ಲಿ ಸೇವುಣ ವಂಶದ ಮೇಲುಗಿದೇವನ ಪ್ರಸ್ತಾಪವಿದೆ. ಇವನು ಮುಸ್ಲಿಮರ ಅಧೀನದಲ್ಲಿ ಆಳುತ್ತಿದ್ದಿರಬಹುದೆಂದು ಊಹಿಸಲಾಗಿದೆ. ಅನಂತರ ಸೇವುಣರ ವಿಷಯ ತಿಳಿದುಬರುವುದಿಲ್ಲ.(ಎ.ವಿ.ಎನ್.)

**ಆಡಳಿತ ವ್ಯವಸ್ಥೆ:** ಕೆಲವು ಶತಮಾನಗಳ ಕಾಲ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದ ಸೇವುಣರು ತಾವು ಪರಮಾಧಿಕಾರ ಪಡೆದ ಮೇಲೂ ಹಿಂದಿನ ಆಡಳಿತ ವ್ಯವಸ್ಥೆಯ ಮೂಲಸ್ವರೂಪವನ್ನೇ ಮುಂದುವರಿಸಿಕೊಂಡು ಬಂದರು. ಇವರ ಆಡಳಿತ ಕ್ರಮದಲ್ಲಿ ಇವರ ಸಮಕಾಲೀನ ಸ್ಥಿತಿಗನುಗುಣವಾಗಿ ರಾಜನು ರಾಜ್ಯದ ಮುಖ್ಯನೂ ನಿರಂಕುಶನೂ ಆಗಿದ್ದ. ಇವನು ವಿವಿಧ ಬಿರುದುಗಳನ್ನು ಧರಿಸುತ್ತಿದ್ದ. ರಾಜನಿಗೆ ರಾಜಗುರುಗಳು ಇರುತ್ತಿದ್ದರು. ಅವರ ಸಲಹೆಗೆ ಮಾನ್ಯತೆ ಇತ್ತು.

ರಾಜನು ಜ್ಯೇಷ್ಠಪುತ್ರನನ್ನು ಯುವರಾಜನನ್ನಾಗಿ ನೇಮಿಸುತ್ತಿದ್ದ. ಈತ ರಾಜನ ಮರಣಾನಂತರ ಉತ್ತರಾಧಿಕಾರಿಯಾಗುತ್ತಿದ್ದ. ಉತ್ತರಾಧಿಕಾರಿ ಅಸಮರ್ಥನಾಗಿದ್ದಾಗ ಅಥವಾ ರಾಜನಿಗೆ ಗಂಡು ಮಕ್ಕಳಿಲ್ಲದಾಗ ಎರಡನೆಯ ಮಗ ಅಥವಾ ತಮ್ಮಂದಿರು ಸಿಂಹಾಸನ ಏರಿರುವ ಪ್ರಕರಣಗಳೂ ಉಂಟು. ರಾಜ ನಿರಂಕುಶನಾಗಿದ್ದರೂ ಇವನ ಸಹಾಯಕ್ಕೆ ಮಂತ್ರಿಮಂಡಲವಿರುತ್ತಿತ್ತು. ಆಡಳಿತ ವಿಷಯಗಳಲ್ಲಿ ಮಂತ್ರಿಮಂಡಲದ ಸಲಹೆ ಕೇಳುವುದು ಪರಿಪಾಠವಾಗಿತ್ತು. ಮಹಾಮಾತ್ಯ, ಮಹಾಪ್ರಧಾನಿ, ಸಂಧಿವಿಗ್ರಹಿ, ಕೋಶಾಧ್ಯಕ್ಷ ಶ್ರೀಕರಣಾಧಿಪ, ಮಹತ್ತಮ, ರಾಜಾಧ್ಯಕ್ಷ, ಅಪಾಯಿಕ ಮೊದಲಾದ ಮಂತ್ರಿಗಳ ಮತ್ತು ಉನ್ನತಾಧಿಕಾರಿಗಳ ಹುದ್ದೆಗಳ ಹೆಸರುಗಳು ಕಂಡುಬರುತ್ತವೆ. ಮಹಾಮಾತ್ಯ ಕಂದಾಯ ಸಚಿವನಾಗಿದ್ದನೆಂದು ಅಭಿಪ್ರಾಯವಿದೆ. ಆದರೆ ಇವನೇ ಮುಖ್ಯಮಂತ್ರಿಯಾಗಿದ್ದಿರಬೇಕು. ಪ್ರಾಂತ ಮತ್ತು ಜಿಲ್ಲೆಯ ಅಧಿಕಾರಿಗಳನ್ನು ಮಹಾಪ್ರಧಾನರೆಂದು ಕರೆಯಲಾಗುತ್ತಿತ್ತು. ಕೆಲವು ವಿದ್ವಾಂಸರು ಮಹಾಪ್ರಧಾನನನ್ನು ಪ್ರಧಾನಮಂತ್ರಿ ಎಂದು ಭಾವಿಸಿದ್ದಾರೆ. ಆದರೆ ಆಗಿನ ಶಾಸನಗಳಿಂದ ಅವರು ಅಧಿಕಾರಿಗಳಾಗಿ ವಿವಿಧ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದುದು ತಿಳಿದುಬರುವುದರಿಂದ ಈ ಅಂಶ ದೃಢಪಡುವುದಿಲ್ಲ. ಸರ್ವಾಧಿಕಾರಿ ಎಂಬ ಇನ್ನೊಂದು ವರಿಷ್ಠ ಹುದ್ದೆಯೂ ಇತ್ತು. ಈ ಅಧಿಕಾರಿಗಳನ್ನು ರಾಜನು ನೇಮಿಸುತ್ತಿದ್ದ. ಕೆಲವೊಮ್ಮೆ ಆನುವಂಶಿಕವಾಗಿಯೂ ಈ ಹುದ್ದೆಗಳು ದೊರೆಯುತ್ತಿದ್ದವು.

ಸೇವುಣರಿಗೆ ಅನೇಕ ಮನ್ನೆಯರು ಅಥವಾ ಸಾಮಂತರಿದ್ದರು. ಚಕ್ರವರ್ತಿಗೆ ವಾರ್ಷಿಕ ಕಪ್ಪಕಾಣಿಕೆಗಳನ್ನು ಕೊಡುವುದು, ಯುದ್ಧಕಾಲದಲ್ಲಿ ಸೈನ್ಯವನ್ನು ಒದಗಿಸುವುದು, ಅವರ ಮುಖ್ಯ ಕರ್ತವ್ಯಗಳಾಗಿದ್ದವು. ಅವರವರ ಪ್ರದೇಶಗಳಲ್ಲಿ ಶಾಂತಿ ಶಿಸ್ತು ವ್ಯವಸ್ಥೆ ಮಾಡಬೇಕಾಗಿತ್ತು. ಈ ಸಾಮಂತರಲ್ಲಿ ಶ್ರೇಷ್ಠರೆನಿಸಿದವರನ್ನು ಅಥವಾ ಬಲಿಷ್ಠರೆನಿಸಿದವರನ್ನು ಚಕ್ರವರ್ತಿ ಮಹಾಮಂಡಲೇಶ್ವರರೆಂದು ಮಾನ್ಯ ಮಾಡುತ್ತಿದ್ದ. ಸಾಮಂತರ ರಾಜಧಾನಿಯಲ್ಲಿ ಚಕ್ರವರ್ತಿಯ ಪ್ರತಿನಿಧಿಗಳಾಗಿ ಮಹಾಪ್ರಧಾನರಿರುತ್ತಿದ್ದರು.

ಸಾಮ್ರಾಜ್ಯವನ್ನು ವಿಷಯ ಅಥವಾ ಪ್ರಾಂತಗಳಾಗಿ ವಿಂಗಡಿಸಲಾಗಿತ್ತು. ದೇಶವೆಂಬ ಆಡಳಿತ ವಿಭಾಗವಿತ್ತೆಂಬ ಅಭಿಪ್ರಾಯವಿದೆ. ಆದರೆ ದೇಶದ ವ್ಯಾಪ್ತಿಯ ಬಗ್ಗೆ ನಿಖರವಾಗಿ ತಿಳಿದುಬರುವುದಿಲ್ಲ. ವಿಷಯವನ್ನು ನಾಡು ಮತ್ತು ಕಂಪಣಗಳಾಗಿ ವಿಭಜಿಸಲಾಗಿತ್ತು. ನಾಡುಗಳಲ್ಲಿ ಮಹಾನಾಡು ಮತ್ತು ನಾಡುಗಳೆಂಬ ವರ್ಗಗಳಿದ್ದುವು. ನಾಡಿಗೆ ನಾಡಗೌಡ, ನಾಡಪ್ರಭು, ನಾಡ ಹೆಗ್ಗಡೆ ಮೊದಲಾದ ಮುಖ್ಯಾಧಿಕಾರಿಗಳಿರುತ್ತಿದ್ದರು. ಸೇನಬೋವ ಎಂಬ ಲೆಕ್ಕಾಧಿಕಾರಿ ನಾಡಗೌಡನ ಸಹಾಯಕನಾಗಿದ್ದ. ನಾಡಿನಲ್ಲಿ ಪಟ್ಟಣಗಳೂ ಗ್ರಾಮಗಳೂ ಇದ್ದವು. ಪಟ್ಟಣಕ್ಕೆ ಪಟ್ಟಣಸ್ವಾಮಿ ಎಂಬುವನು ಮುಖ್ಯನಾಗಿರುತ್ತಿದ್ದ, ಗೌಡ, ಪ್ರಭು, ಹೆಗ್ಗಡೆ ಮೊದಲಾದವರು ಗ್ರಾಮಾಧಿಕಾರಿಗಳಾಗಿದ್ದರು. ಪಟ್ಟಣಸಭೆ ಮತ್ತು ಗ್ರಾಮಸಭೆಗಳು ಅಸ್ತಿತ್ವದಲ್ಲಿದ್ದವು. ಅಗ್ರಹಾರಗಳಲ್ಲಿ ಮಹಾಜನ ಸಭೆಗಳಿರುತ್ತಿದ್ದವು.

**ಆರ್ಥಿಕ–ಸಾಮಾಜಿಕ ಸ್ಥಿತಿ:** ಸೇವುಣರ ಸಾಮ್ರಾಜ್ಯದ ಆರ್ಥಿಕತೆಯ ಮುಖ್ಯ ಆಧಾರ ವ್ಯವಸಾಯ. ಜನತೆ ಬಹುಪಾಲು ವ್ಯವಸಾಯ ಮತ್ತು ಅದಕ್ಕೆ ಸಂಬಂಧಿಸಿದ ಉಪಕಸಬುಗಳನ್ನು ಜೀವನೋಪಾಯಕ್ಕಾಗಿ ಅವಲಂಬಿಸಿತ್ತು. ಬತ್ತ, ಗೋದಿ, ಧಾನ್ಯಗಳು, ಎಣ್ಣೆಬೀಜಗಳು ಮುಖ್ಯ ಬೆಳೆಗಳಾಗಿದ್ದವು. ತೆಂಗು ಅಡಕೆ, ವೀಳೆಯದೆಲೆ, ನಿಂಬೆ, ಮಾವು, ಸೇಬು, ದ್ರಾಕ್ಷಿ ಮೊದಲಾದ ತೋಟದ ಬೆಳೆಗಳಿದ್ದವು. ಹತ್ತಿ, ಮೆಣಸು, ಏಲಕ್ಕಿ, ಶುಂಠಿ ಮೊದಲಾದ ವಾಣಿಜ್ಯ ಬೆಳೆಗಳಿದ್ದವು.

ನೀರಾವರಿ ವ್ಯವಸ್ಥೆಯನ್ನು ವಿಸ್ತರಿಸಿ ಉತ್ಪನ್ನ ಹೆಚ್ಚಿಸಲು ಸರ್ಕಾರದಿಂದ ಪ್ರೋತ್ಸಾಹ ದೊರೆಯುತ್ತಿತ್ತು. ರಾಜರು, ಸಾಮಂತರು, ಅಧಿಕಾರಿಗಳು, ವಣಿಕರು, ಧನಿಕರು, ತಮ್ಮ ಹೆಸರುಗಳಲ್ಲಿ ಕೆರೆಗಳನ್ನು ಕಟ್ಟಿಸುತ್ತಿದ್ದರು. ಕಾಲುವೆಗಳನ್ನು ತೋಡಿಸುತ್ತಿದ್ದರು. ರೈತರ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಗೇಣಿಪದ್ಧತಿ ಇತ್ತು. ಶ್ರೀಮಂತ ಭೂಮಾಲೀಕರು, ಜಹಾಗೀರದಾರರು ರೈತರನ್ನು ಶೋಷಿಸುತ್ತಿದ್ದರು. ಯುದ್ಧಕಾಲದ ಕೊಳ್ಳೆಗೆ, ಅಧಿಕಾರಿಗಳ ಕಿರುಕುಳಕ್ಕೆ ಜನಸಾಮಾನ್ಯರೇ ಈಡಾಗುತ್ತಿದ್ದರು. ಅಗ್ರಹಾರಗಳಿಗೆ ಬ್ರಾಹ್ಮಣರಿಗೆ ಅಧ್ಯಯನ ಮತ್ತು ಧಾರ್ಮಿಕ ಉದ್ದೇಶಗಳಿಗಾಗಿ ಭೂಮಿಯನ್ನು ದತ್ತಿ ನೀಡಲಾಗುತ್ತಿತ್ತು. ವ್ಯವಸಾಯ ಜಮೀನಿನ ಮೇಲೆ ವಿಧಿಸಲಾಗುತ್ತಿದ್ದ ಕಂದಾಯ ರಾಜಾದಾಯದ ಬಹುದೊಡ್ಡ ಭಾಗವಾಗಿತ್ತು.

ಹತ್ತಿ ಬಟ್ಟೆ ನೇಯುವುದು, ಚರ್ಮ ಹದ ಮಾಡುವುದು, ಚಾಪೆ ನೇಯುವುದು, ಬುಟ್ಟಿ ಹೆಣೆಯುವುದು, ವ್ಯವಸಾಯ ಉಪಕರಣಗಳನ್ನು ತಯಾರಿಸುವುದು ಮೊದಲಾದವಕ್ಕೆ ಸಂಬಂಧಿಸಿದ ಉದ್ಯಮಗಳಿದ್ದವು. ಗಾಣದಿಂದ ಎಣ್ಣೆ ತೆಗೆಯುವುದು, ಬಟ್ಟೆ ಹೊಲಿಯುವುದು ಮೊದಲಾದ ಕಸಬುಗಳಿದ್ದವು. ಗಣಿಕಾರಿಕೆ, ಲೋಹದ ಪಾತ್ರೆಗಳ ತಯಾರಿಕೆ ನಡೆಯುತ್ತಿತ್ತು. ರತ್ನಗಳು, ಹವಳ, ವಜ್ರ, ವೈಡೂರ್ಯಗಳಿಗೆ ದಖನ್ ಪ್ರಸಿದ್ಧವಾಗಿತ್ತು. ಕಲಾವಸ್ತುಗಳು ಮತ್ತು ಆಭರಣಗಳ ತಯಾರಿಕೆ ಕುಶಲಕರ್ಮಿಗಳ ಮಾಧ್ಯಮವಾಗಿದ್ದವು. ದೇವಾಲಯಗಳನ್ನು ಕಟ್ಟಲು ಶಿಲ್ಪಿಗಳ ಪಡೆಯೇ ಇತ್ತು.

ವ್ಯಾಪಾರ ಸಂಘಗಳು ಸುಸ್ಥಿತಿಯಲ್ಲಿದ್ದವು. ಅವು ದೇಶವಿದೇಶಗಳಲ್ಲಿ ವ್ಯಾಪಾರ ನಡೆಸುತ್ತಿದ್ದವು. ಅಂತಹ ಸಂಘಗಳಲ್ಲಿ ಅಯ್ಯಾವೊಳೆ ಐನೂರ್ವರು ಎಂಬುದು ಪ್ರಸಿದ್ಧವಾಗಿತ್ತು. ಇವರು ಮತ್ತು ದಕ್ಷಿಣ ಭಾರತದಲ್ಲಿ ಪ್ರಸಿದ್ಧರಾಗಿದ್ದ ನಾನಾದೇಶಿಗಳು, ನೇಪಾಲ, ಕಾಂಬೋಜ, ಮಲಯ, ಸಿಂಹಳ ಮೊದಲಾದ ದೇಶಗಳಿಗೆ ಹೋಗಿ ವ್ಯಾಪಾರ ನಡೆಸುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಇವರನ್ನು ವೀರ ಬಣಜಿಗರೆಂದೂ ಕರೆಯಲಾಗುತ್ತಿತ್ತು. ದ್ವಾರಾವತಿ, ಬಳ್ಳಿಗಾಮೆ, ಐಹೊಳೆ, ಕೊಲ್ಲಾಪುರ, ದೇವಗಿರಿ, ವಾರಂಗಲ್ಲು, ಕಾಂಚಿಪುರ, ಮದುರೆ ಮೊದಲಾದ ಸ್ಥಳಗಳು ಇವರ ಚಟುವಟಿಕೆಯ ಕೇಂದ್ರಗಳಾಗಿದ್ದವು.

ಇವರ ವ್ಯಾಪಾರ ವಸ್ತುಗಳಲ್ಲಿ ರತ್ನ, ವಜ್ರ, ವೈಡೂರ್ಯಗಳ ಜೊತೆಗೆ ಆನೆಗಳು, ಕುದುರೆಗಳು, ಸಂಬಾರ ಪದಾರ್ಥಗಳು, ಚಂದನ, ಕರ್ಪೂರ, ದಂತ, ಸುಗಂಧ ವಸ್ತುಗಳು ಮೊದಲಾದವು ಸೇರಿದ್ದವು. ಅರೇಬಿಯ ಮತ್ತು ಚೀನ, ದಖನಿನೊಂದಿಗೆ ನಿಕಟ ವ್ಯಾಪಾರ ಸಂಬಂಧವಿಟ್ಟುಕೊಂಡಿದ್ದುದು ಪ್ರವಾಸಿಗರ ಕಥನಗಳಿಂದ ತಿಳಿದುಬರುತ್ತದೆ. ದಖನ್‌ನ ಮಸ್ಲಿನ್ ಬಟ್ಟೆ, ದಂತ, ವಜ್ರಗಳು, ಸುಗಂಧ ವಸ್ತುಗಳು, ಸಂಬಾರ ವಸ್ತುಗಳನ್ನು ಕೊಳ್ಳಲು ವಿದೇಶಗಳಿಂದ ವ್ಯಾಪಾರಿಗಳ ಸಮೂಹವೇ ಬರುತ್ತಿತ್ತು.

ಸೇವುಣರ ಕಾಲದಲ್ಲಿ ರಾಜಭಂಡಾರದಲ್ಲಿ, ಶ್ರೀಮಂತರಲ್ಲಿ ಅಪಾರ ಐಶ್ವರ್ಯವಿತ್ತು. ಅಲಾಉದ್ದೀನ್ ಸೇವುಣರನ್ನು ಸೋಲಿಸಿದಾಗ ಅವನಿಗೆ ಒಪ್ಪಿಸಿದ ಬಂಗಾರ, ವಜ್ರವೈಡೂರ್ಯಗಳ ರಾಶಿಯೇ ಇದಕ್ಕೆ ಸಾಕ್ಷಿ. ಆಹಾರ ಮತ್ತು ಅಗತ್ಯ ವಸ್ತುಗಳಲ್ಲಿ ದೇಶ ಸ್ವಾವಲಂಬಿಯಾಗಿದ್ದು ಸಾಮಾನ್ಯರೂ ಸಮಾಧಾನದಿಂದ ಬದುಕುತ್ತಿದ್ದರು.

**ವಾಸ್ತು–ಶಿಲ್ಪ:** ಸೇವುಣರ ವಾಸ್ತುಶಿಲ್ಪ ಕೆಲವೊಂದು ವ್ಯತ್ಯಾಸಗಳೊಂದಿಗೆ ದಖನಿನ ಚಾಳುಕ್ಯ ಶೈಲಿಯ ಮುಂದುವರಿಕೆಯಾಗಿದೆ. ಈ ಕಾಲದಲ್ಲಿ ಹೊಯ್ಸಳ ವಾಸ್ತುಶಿಲ್ಪ ಗಮನಾರ್ಹ ಬದಲಾವಣೆ ತೋರಿಸಿದರೆ, ಸೇವುಣ ವಾಸ್ತುಶಿಲ್ಪ ಹೆಚ್ಚಿನ ವೈಶಿಷ್ಟ್ಯಗಳನ್ನು ಪ್ರದರ್ಶಿಸಲಿಲ್ಲ. ಅಂಬರನಾಥ ಬಲಸಾನೆ, ಪೆಡಗುಂದ, ಸಾತಗಾಂವ, ಲೋಣಾರ್, ಪಾಟಣ, ವಾಘುಲಿ, ತಹಕಾರಿ, ಅಕೋಲ, ಕೊಕಮತಾನ್ ಮೊದಲಾದೆಡೆಗಳಲ್ಲಿ ಸೇವುಣರ ವಾಸ್ತುಶಿಲ್ಪದ ಪ್ರಾತಿನಿಧಿಕವೆನ್ನಬಹುದಾದ ದೇವಾಲಯಗಳಿವೆ. ಶಿವ, ವಿಷ್ಣು, ಗಣಪತಿ, ಜಗದಾಂಬಿಕೆ, ಭವಾನಿ ಮೊದಲಾದ ದೇವತೆಗಳ ಹೆಸರಿನಲ್ಲಿ ಈ ದೇವಾಲಯಗಳಿವೆ.

ಸೇವುಣರ ದೇವಾಲಯಗಳು ಗಾತ್ರದಲ್ಲಿ ಚಿಕ್ಕವು. ಅವುಗಳಲ್ಲಿ ಅತಿದೊಡ್ಡ ದೆಂದರೆ ನಾಸಿಕ್ ಜಿಲ್ಲೆಯ ಸಿನ್ನರ್‌ನಲ್ಲಿರುವ ಗೊಂಡೇಶ್ವರ ದೇವಾಲಯ. ಈ ದೇವಾಲಯಗಳಲ್ಲಿ ಬಳಸಿದ ಕೂಡುಕಂಬಗಳು ಏಕಶಿಲೆಯಾಗಿದ್ದು, ಮೊಟಕಾಗಿದ್ದುದರಿಂದ ಮತ್ತು ಅದನ್ನಾಧರಿಸಿ ಇಡೀ ದೇವಾಲಯದ ರಚನೆ ರೂಪಿಸಿದ್ದರಿಂದ ಅವು ದೊಡ್ಡದಾಗಿ ರೂಪುಗೊಳ್ಳಲು ಅವಕಾಶವಾಗಲಿಲ್ಲ. ದೇವಾಲಯಗಳು ಸಮಕೋನಾಕಾರದಲ್ಲಿ ಅಥವಾ ನಕ್ಷತ್ರಾಕಾರದಲ್ಲಿವೆ. ಈ ಆಕಾರಕ್ಕೆ ಉತ್ತರದ ಸೋಲಂಕಿ ದೇವಾಲಯಗಳ ಮಾದರಿಯ ಪ್ರಭಾವ ಕಾರಣವೆಂದು ಭಾವಿಸಲಾಗಿದೆ. ಸೇವುಣ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಮುಂಗೋಣೆ, ದೊಡ್ಡಮಂಟಪ ಮತ್ತು ದ್ವಾರಮಂಟಪಗಳು ಕಂಡುಬರುತ್ತವೆ. ಶಿವಾಲಯಗಳ ಮುಂಭಾಗದಲ್ಲಿ ನಂದಿಮಂಟಪಗಳಿರುತ್ತವೆ. ಕೆಲವು ಪಂಚಕೂಟ ದೇವಾಲಯಗಳಿವೆ.

ದೇವಾಲಯ ರಚನೆಗೆ ಜ್ವಾಲಾಮುಖಿ ಶಿಲೆಗಳನ್ನು ಬಳಸುತ್ತಿದ್ದರು. ಇದರಿಂದ ಇವು ಚಾಳುಕ್ಯರ ದೇವಾಲಯಗಳ ನಯಗಾರಿಕೆ ಕಳೆದುಕೊಂಡುವು. ಕೆಲವೆಡೆ ಬಿಟ್ಟರೆ ಉಳಿದಂತೆ ದೇವಾಲಯಗಳ ಕಂಬಗಳಲ್ಲಿ ಕಲಾಕುಶಲತೆ ವಿರಳ, ಸಭಾಮಂಟಪದ ಚಾವಣಿ ಕಲಾತ್ಮಕವಾಗಿದ್ದರೆ ಗರ್ಭಗುಡಿಯ ಚಾವಣಿ ಸರಳವಾಗಿರುತ್ತದೆ. ಚಾವಣಿಗಳನ್ನು ಕೆಲವೆಡೆ ಮೂಲೆಚಪ್ಪಡಿಗಳನ್ನು ಬಳಸಿ ಗೋಪುರದಂತೆ ನಿರ್ಮಿಸಿ ಮೇಲೆ ಕಿರಿದಾದ ಬಾಯಿಬಿಟ್ಟು ಅದನ್ನು ಇನ್ನೊಂದು ಚಪ್ಪಡಿಯಿಂದ ಮುಚ್ಚಲಾಗಿದೆ. ಇಂತಹ ಮೇಲು ಚಪ್ಪಡಿಗಳಲ್ಲಿ ಕಮಲದ ಕೆತ್ತನೆಗಳಿರುತ್ತವೆ. ಈ ಕಾಲದ ದೇವಾಲಯಗಳ ವೈಶಿಷ್ಟ್ಯವೆಂದರೆ ಅವುಗಳ ಶಿಖರದ ವಿನ್ಯಾಸ. ಇದು ಈ ದೇವಾಲಯಗಳನ್ನು ಉತ್ತರದ ಸೋಲಂಕಿ ಮತ್ತು ದಕ್ಷಿಣ ಚಾಳುಕ್ಯ ಶೈಲಿಯಿಂದ ಬೇರ್ಪಡಿಸಿದೆ. ಈ ಶಿಖರಗೋಪುರ ನಾಲ್ಕು ಮೂಲೆಯಾಕಾರದಲ್ಲಿದ್ದು ನೇರವಾಗಿ ಮೇಲೇರುತ್ತ ಅಟ್ಟುಗಳ ನಡುವೆ ಚಿತ್ರಿತ ಅಲಂಕಾರ ಕೆಲಸ ಮಾಡಲಾಗಿದೆ. ತುದಿಯಲ್ಲಿ ಚಪ್ಪಡಿಯಿಂದ ಮುಚ್ಚಲಾಗಿರುತ್ತದೆ. ಕೆಲವು ಗೋಪುರಗಳನ್ನು ಇಟ್ಟಿಗೆಗಳಿಂದ ಕಟ್ಟಲಾಗಿದೆ.

ಸೇವುಣರ ಕಾಲದ ದೇವಾಲಯಗಳಲ್ಲಿ ಬಹುತೇಕ ದೇವಾಲಯಗಳು ಒಂದಲ್ಲ ಒಂದು ರೀತಿಯಲ್ಲಿ ಜೀರ್ಣಗೊಂಡಿವೆ. ಹೀಗೆ ಭಗ್ನಗೊಳ್ಳಲು ಅವುಗಳ ಅಡಿಪಾಯ ಆಳವಾಗಿರದಿದ್ದುದು ಮತ್ತು ಸುಭದ್ರವಾಗಿರದಿದ್ದು ಹಾಗೂ ಗೋಪುರಗಳನ್ನು ಇಟ್ಟಿಗೆಗಳಿಂದ ಕಟ್ಟುತ್ತಿದ್ದುದು ಕಾರಣವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸೇವುಣ ದೇವಾಲಯಗಳನ್ನು ವಾಸ್ತುತಜ್ಞರು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಪ್ರಾರಂಭದವು ಮೊದಲ ಗುಂಪಿಗೂ 13 ಮತ್ತು 14ನೆಯ ಶತಮಾನಗಳಲ್ಲಿ ಕಟ್ಟಲಾದ ದೇವಾಲಯಗಳು 2ನೆಯ ಗುಂಪಿಗೂ ಸೇರುತ್ತವೆ. ಹೊಯ್ಸಳರ ಜಕಣಾಚಾರಿಯಂತೆಯೇ ಮಹಾರಾಷ್ಟ್ರದಲ್ಲಿ ಹೇಮಾದ್ ಪಂತ್ ಅಥವಾ ಹೇಮಾದ್ರಿ ಪಂತನೆಂಬುವನು ಇಲ್ಲಿನ ಬಹುತೇಕ ದೇವಾಲಯಗಳನ್ನು ನಿರ್ಮಿಸಿದನೆಂದು ಪ್ರತೀತಿ. ಆದರೆ ಸೇವುಣರ ಕೊನೆಯ ಕಾಲದ ದೇವಾಲಯಗಳ ಶೈಲಿಯಲ್ಲಿ ಸ್ವಲ್ಪ ಭಿನ್ನತೆಯಿದ್ದು ಅವು ಹೇಮಾದ್ರಿ ರೂಪಿಸಿದ ಶೈಲಿಗೆ ಸೇರಿರಬಹುದೆಂದೂ ಆದ್ದರಿಂದ ಈ ಶೈಲಿಗೆ ಸೇರಿದ ದೇವಾಲಯಗಳನ್ನು ಹೇಮಾದ್ರಿಪಂತ ನಿರ್ಮಿಸಿದನೆಂಬ ಪ್ರತೀತಿ ಬೆಳೆಯಿತೆಂದೂ ಅಭಿಪ್ರಾಯವಿದೆ. ಈ ಶೈಲಿಯಲ್ಲಿ ಮಂಟಪದ ಮಧ್ಯೆ ವೇದಿಕೆ ಇದ್ದು ಗುಡಿಯ ಮೂರು ಕಡೆ ಗೂಡುಗಳಿರುವುದು ಕಂಡುಬರುತ್ತದೆ. ನಾಸಿಕ್ ಜಿಲ್ಲೆಯ ಚಾಂದರ್ ಅಥವಾ ಚಂದ್ರಾದಿತ್ಯಪುರ ಮತ್ತು ತ್ರಿಂಗಲ್ವಾಡಿಗಳಲ್ಲಿರುವ ಜೈನ ಗುಹಾ ದೇವಾಲಯಗಳೂ ಈ ಕಾಲದ ವಾಸ್ತು ಮತ್ತು ಕಲೆಯ ನಿದರ್ಶನಗಳಾಗಿವೆ. ಈ ಕಾಲದಲ್ಲಿ ಧರ್ಮಶಾಲೆಗಳು, ಮಠಗಳು, ದುರ್ಗಗಳು ನಿರ್ಮಿತವಾದವು. ದೇವಗಿರಿದುರ್ಗ ಸೇವುಣ ವಾಸ್ತುಶಿಲ್ಪದ ಮಹತ್ಸಾಧನೆ. (ಡಿ.ಎಸ್.ಜಿ.)

**ನಾಣ್ಯಗಳು:** ದೊರಕಿರುವ ಸೇವುಣರ ನಾಣ್ಯಗಳು ಕಡಿಮೆ. ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸುವ ವಿಷಯ ಶಾಸನಗಳಲ್ಲಿ ಕಾಣಸಿಗುತ್ತದೆ. ಟಂಕೆ ಎಂಬ ತೆರಿಗೆ ಈ ಕಾಲದ ಶಾಸನವೊಂದರಲ್ಲಿ ಕಾಣಬರುತ್ತದೆ. ನಾಣ್ಯಗಳನ್ನು ಅಚ್ಚು ಹಾಕಿಸುವ ಹಕ್ಕನ್ನು ಪಡೆದಿದ್ದವರು ಕೊಡಬೇಕಾಗಿದ್ದ ತೆರಿಗೆ ಇದೆಂದು ವಿದ್ವಾಂಸರ ಮತ. ಅದೇ ರೀತಿಯಲ್ಲಿ ನಾಣ್ಯಗಳ ಅಚ್ಚನ್ನು ತಯಾರು ಮಾಡುವವರು, ಅದನ್ನು ಹೊಂದಿರುವವರು ಮುದ್ರೆ ಎಂಬ ತೆರಿಗೆಯನ್ನು ಕೊಡಬೇಕಾಗಿತ್ತು. ಸೇವುಣರ ಶಾಸನಗಳಲ್ಲಿ ನಿಷ್ಕ, ದ್ರಮ್ಮ, ಗದ್ಯಾಣ, ಸುವರ್ಣಪಣ, ಚವುಲ, ಹಾಗ, ಕಾಕಿನಿ, ಬೇಳೆ, ವೀಸ ಮುಂತಾದ ನಾಣ್ಯಗಳ ಹೆಸರುಗಳು ಕಾಣಸಿಗುತ್ತವೆ. ಈ ಕಾಲದಲ್ಲಿ ಬಹುವಾಗಿ ಬಳಕೆಯಲ್ಲಿದ್ದ ನಾಣ್ಯ ಗದ್ಯಾಣ. ರಾಯಗದ್ಯಾಣ, ಅಂಬಿಲಿಗದ್ಯಾಣ, ಪ್ರಿಯಗ್ರಾಹಿಗಜಮಲ್ಲಗದ್ಯಾಣ ಎಂಬ ಪ್ರಭೇದಗಳು ಕಾಣಬಂದರೂ ಅವುಗಳ ಖಚಿತ ರೂಪ ತಿಳಿದಿಲ್ಲ. ಲೊಕ್ಕಿ ಗದ್ಯಾಣ ಅಂದರೆ ಲೊಕ್ಕಿಗುಂಡಿಯಲ್ಲಿ ಟಂಕಿಸಲಾದ ಗದ್ಯಾಣಗಳು ಈ ಕಾಲದಲ್ಲಿಯೂ ಬಳಕೆಯಲ್ಲಿದ್ದವು.

ಇದುವರೆಗೂ ದೊರಕಿರುವ ಸೇವುಣ ನಾಣ್ಯಗಳು ಪದ್ಮಟಂಕ ಎಂಬ ಪ್ರಭೇದಕ್ಕೆ ಸೇರಿದವು. ತೆಳುವಾದ ಚಿನ್ನದ ತಗಡಿನ ಮೇಲೆ ಮಧ್ಯದಲ್ಲಿ ಪದ್ಮದ ಚಿಹ್ನೆಯ ತಲೆ ಇರುವ ಅಚ್ಚನ್ನು ಬಡಿದು ಮಾಡಿದವು. ಈ ಬಡಿಯುವಿಕೆಯಿಂದ ನಾಣ್ಯ ಸಣ್ಣ ಬಟ್ಟಲಿನ ಆಕಾರವನ್ನು ಪಡೆದಿರುತ್ತದೆ. ಸುತ್ತಲೂ ಕೆಲವು ಚಿಹ್ನೆಗಳು ಮತ್ತು ರಾಜನ ಹೆಸರೂ ಇರುತ್ತವೆ. ಮಧ್ಯದಲ್ಲಿ ಪದ್ಮವಾದರೆ, ಅದರ ಎದುರುಬದರಿನಲ್ಲಿ ಶ್ರೀ ಎಂಬ ಕನ್ನಡ ಅಕ್ಷರ, ಮೂರನೆಯದು ಶಂಖ. ನಾಲ್ಕನೆಯದು ನಾಗರೀಲಿಪಿಯಲ್ಲಿ ಬರೆದ ರಾಜನ ಹೆಸರು. ಮಧ್ಯದ ಜಾಗ ಕೆಲವು ವೇಳೆ ಚುಕ್ಕೆಗಳು ಇಲ್ಲವೆ ಪ್ರಾಣಿಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಸೇವುಣ ಚಿನ್ನದ ಪದ್ಮ ಟಂಕೆಗಳ ತೂಕ 57 ಗ್ರೇನ್‌ಗಳು. ಇವು ವೃತ್ತಾಕಾರದವು. ಇವುಗಳ ವ್ಯಾಸ 15 ಮಿಮೀ.

ಇದುವರೆಗೂ ಐದನೆಯ ಭಿಲ್ಲಮ, ಎರಡನೆಯ ಸಿಂಘಣ, ಕೃಷ್ಣ, ಮಹಾದೇವ ಮತ್ತು ರಾಮಚಂದ್ರ–ಇವರ ನಾಣ್ಯಗಳು ಮಾತ್ರ ದೊರಕಿವೆ. ಇವರ ನಾಣ್ಯಗಳು ಆಂಧ್ರ ಪ್ರದೇಶದ ಕರೀಂನಗರ, ಮೇದಕ್, ಮೆಹಬೂಬ್ ನಗರ ಮತ್ತು ಕೃಷ್ಣ ಜಿಲ್ಲೆಗಳಲ್ಲೂ ಮಹಾರಾಷ್ಟ್ರ, ಒರಿಸ್ಸ, ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ ದೊರಕಿವೆ. ಕೃಷ್ಣ ಜಿಲ್ಲೆಯ ರಾಚಪಟ್ಟಣದಲ್ಲಿ ದೊರಕಿದ ನಾಣ್ಯಗಳು ಇತಿಹಾಸದ ದೃಷ್ಟಿಯಿಂದ ಮುಖ್ಯವಾದವು. ಇತ್ತೀಚೆಗೆ ದೇವಲ ಜಹರಿಯಲ್ಲಿ ದೊರಕಿದ 5ನೆಯ ಭಿಲ್ಲಮನ ನಾಣ್ಯಗಳಲ್ಲಿ ಶ್ರೀಭಿಲ್ಲಮದೇವ ಎಂಬ ನಾಗರೀ

ಬರೆಹವಿದೆ. ಸೋನ್‌ಪುರದಲ್ಲಿ ದೊರೆತ 2ನೆಯ ಸಿಂಘಣನ ನಾಣ್ಯಗಳಲ್ಲಿ ಸಿಂಘಣ ಎಂಬ ನಾಗರೀ ಬರೆಹ, ಶ್ರೀ ಎಂಬ ಕನ್ನಡ ಅಕ್ಷರ ಮತ್ತು ಚಿತ್ರಗಳಿವೆ. ಮಧ್ಯಪ್ರದೇಶದ ಪರಸಿದ್‌ನಲ್ಲಿ ದೊರಕಿದ ಇವನ ನಾಣ್ಯದ ಮೇಲೆ ಸಿಂಘಣ ಎಂಬ ನಾಗರೀ ಲಿಪಿಯ ಬರೆಹದ ಕೆಳಗೆ ಕತ್ತಿಯಿದೆ. ಇನ್ನೊಂದು ರೀತಿಯ ನಾಣ್ಯದ ಮೇಲೆ ಕತ್ತಿಗೆ ಬದಲು ಬಿಲ್ಲು. ಕೃಷ್ಣನ ನಾಣ್ಯಗಳ ಮೇಲೆ ಕನ್ನಪ ಮತ್ತು ಕನ್ನ ಎಂಬ ಬರೆವಣಿಗೆಯಿದೆ. ಮಹಾದೇವನ ನಾಣ್ಯಗಳ ಮೇಲೆ ನಾಗರೀಲಿಪಿಯಲ್ಲಿ ಮಹಾದೇವ, ಮಹಾದೇ, ಮಹಾ ಎಂಬ ಬರೆಹ ಕಾಣುತ್ತದೆ. ರಾಮಚಂದ್ರನ ನಾಣ್ಯಗಳ ಮೇಲೆ ಶ್ರೀರಾಮ ಅಥವಾ ರಾಮ ಎನ್ನುವ ನಾಗರೀ ಬರೆಹವಿದೆ. ಇವನ ಇನ್ನೊಂದು ನಮೂನೆಯ ನಾಣ್ಯದಲ್ಲಿ ಪದ್ಮದ ಬದಲು ಗರುಡನ ಚಿತ್ರವೂ ರಾಮಚ ಎಂಬ ನಾಗರೀ ಲಿಪಿಯ ಬರೆಹವೂ ಇದೆ. (ಎ.ವಿ.ಎನ್.)

**ಶಾಸನಗಳು:** ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಸೇವುಣರಿಗೆ ಸೇರಿದ ಒಟ್ಟು ಸು.600 ಶಾಸನಗಳು ಉಪಲಬ್ಧವಾಗಿವೆ. ಶಾಸನಗಳಲ್ಲಿ ಸೆಉಣ, ಸೇಗುಣ, ಸೇವುಣ, ಸೇಮುಣ ಮತ್ತು ಸೇಗುಣ್ಣ ಎಂಬ ರೂಪಗಳು ಕಾಣಸಿಗುತ್ತವೆ. ಸೇವುಣ ಶಾಸನಗಳಲ್ಲಿ ಎರಡನೆಯ ಭಿಲ್ಲಮನ ಕಾಲದ (1000) ಸಂಗಮನೇರ್ ಶಾಸನ ಅತ್ಯಂತ ಪ್ರಾಚೀನವಾದುದು; ಮೇಲುಗಿದೇವನ ಕಾಲದ 1334ರ ಬೋರಾಡ್ಡೀ ಶಾಸನ ಅತ್ಯಂತ ಈಚಿನದು. ಎಲ್ಲ ಅರಸರ ಶಾಸನಗಳೂ ದೊರೆತಿಲ್ಲ. ಎರಡನೆಯ ಭಿಲ್ಲಮ, ಮೂರನೆಯ ಭಿಲ್ಲಮ, ಎರಡನೆಯ ಸೇವುಣ ಚಂದ್ರ, ಐರಮದೇವ, ಸೇವುಣದೇವ, ಐದನೆಯ ಭಿಲ್ಲಮ, ಜೈತುಗಿ, ಸಿಂಘಣ, ಕೃಷ್ಣ, ಮಹಾದೇವ, ರಾಮಚಂದ್ರ, ಮೇಲುಗಿದೇವ–ಈ ಅರಸರ ಶಾಸನಗಳು ಲಭ್ಯವಾಗಿವೆ. ಸೇವುಣರಿಗೆ ಸೇರಿದ, ಆದರೆ ಅರಸರ ಹೆಸರಿಲ್ಲದ ಸು.25 ಶಾಸನಗಳು ದೊರೆತಿವೆ. ಒಟ್ಟು ಶಾಸನಗಳಲ್ಲಿ ಐದು ತಾಮ್ರ ಶಾಸನಗಳು, ಮಿಕ್ಕವು ಶಿಲಾಶಾಸನಗಳು. ಇವುಗಳಲ್ಲಿ ಯಾದವ ನಾರಾಯಣ, ಯಾದವ ವಂಶೋದ್ಭವ, ದ್ವಾರಾವತೀಪುರವರಾಧೀಶ್ವರ, ಸೇಉಣ ಚಕ್ರವರ್ತಿ, ಸೇವುಣವಂಶ ಶಿಖಾಮಣಿ ಮುಂತಾದ ಬಿರುದುಗಳಿವೆ.

1896ರಲ್ಲಿ ಫ್ಲೀಟ್ ಅವರು ದಿ ಡೈನಾಸ್ಟೀಸ್ ಆಫ್ ಕ್ಯಾನರೀಸ್ ಡಿಸ್ಟ್ರಿಕ್ಟ್ಸ್ ಎಂಬ ಕೃತಿಯನ್ನು ಪ್ರಕಟಿಸಿದಾಗ ಲಭ್ಯವಿದ್ದ ಸೇವುಣರ ಶಾಸನಗಳ ಸಂಖ್ಯೆ ಕೇವಲ 120. ಆದರೆ ಅನಂತರ ಕಾಲದಲ್ಲಿ ಮುಖ್ಯವಾಗಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಶಾಸನ ಶಾಖೆಯ ಸತತ ಕ್ಷೇತ್ರಕಾರ್ಯಗಳಿಂದಾಗಿ ಶಾಸನಗಳ ಸಂಖ್ಯೆ ನಾಲ್ಕೈದು ಪಟ್ಟು ಹೆಚ್ಚಿದೆ. ಈ ಶಾಸನಗಳನ್ನು ಆನ್ಯುಯಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಫಿಯ ಪುರವಣಿಗಳಲ್ಲಿ ಪಟ್ಟಿ ಮಾಡಿದೆ. ಅನೇಕ ಶಾಸನಗಳು ಎಪಿಗ್ರಾಫ್ರಿಯ ಇಂಡಿಕ, ಎಪಿಗ್ರಾಫಿಯ ಕರ್ನಾಟಿಕ, ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸೋರ್ಸಸ್ ಆಫ್ ಮಿಡೀವಲ್ ಹಿಸ್ಟರಿ ಆಫ್ ಡೆಕ್ಕನ್, ಇನ್‌ಸ್ಕ್ರಿಪ್ಷನ್ಸ್ ಆಫ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಹಾಪುರ ಸ್ಟೇಟ್, ಜೈನಿಸಮ್ ಇನ್ ಸೌತ್ ಇಂಡಿಯ ಅಂಡ್ ಸಮ್ ಜೈನ ಎಪಿಗ್ರಾಫ್ಸ್, ಎ ಕಾರ್ಪಸ್ ಆಫ್ ಇನ್‌ಸ್ಕ್ರಿಪ್ಷನ್ಸ್ ಫ್ರಮ್ ದಿ ಕನ್ನಡ ಡಿಸ್ಟ್ರಿಕ್ಟ್ಸ್ ಆಫ್ ಹೈದರಾಬಾದ್ ಸ್ಟೇಟ್, ಸೆಲೆಕ್ಟಡ್ ಇನ್‌ಸ್ಕ್ರಿಪ್ಷನ್ಸ್ ಫ್ರಮ್ ಮಹಾರಾಷ್ಟ್ರ, ಇನ್‌ಸ್ಕ್ರಿಪ್ಷನ್ಸ್ ಫ್ರಮ್ ದಿ ನಾಂದೇಡ್ ಡಿಸ್ಟ್ರಿಕ್ಟ್, ಪ್ರಾಚೀನ ಮರಾಠೀ ಕೋರೀವ್ ಲೇಖ್ ಮುಂತಾದ ಹತ್ತು ಹಲವು ಸಂಪುಟಗಳಲ್ಲಿ ಸಂಪಾದಿತವಾಗಿವೆ. ಇನ್ನೂ ಹಲವಾರು ಶಾಸನಗಳು ಪ್ರಕಟವಾಗಬೇಕಾಗಿವೆ.

ಸೇವುಣರ ಶಾಸನಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯ ಶಾಸನಗಳೇ ಹೆಚ್ಚು. ಕೆಲವು ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿಯಲ್ಲಿಯೂ ಮತ್ತೆ ಕೆಲವು ಸಂಸ್ಕೃತ ಭಾಷೆ ಮತ್ತು ನಾಗರೀ ಲಿಪಿಯಲ್ಲಿಯೂ ಇವೆ. ಸೇವುಣರ ಆಳಿಕೆಯ ಕೊನೆಗಾಲಕ್ಕೆ ಸೇರಿದ ಕೆಲವು ಶಾಸನಗಳು ಮರಾಠಿ ಭಾಷೆಯಲ್ಲಿವೆ. ಕಳಚುರಿ, ಹೊಯ್ಸಳ ಮತ್ತು ಸೇವುಣ ಶಾಸನಗಳಲ್ಲಿ ಬಳಸಿದ ಲಿಪಿಯಲ್ಲಿ ಅಂಥ ಭಿನ್ನತೆಯೇನೂ ಕಂಡುಬರುವುದಿಲ್ಲ. ಅಕ್ಷರಗಳು ತುಂಬ ಗುಂಡಾಗಿಯೂ ಅಲಂಕಾರಯುಕ್ತವಾಗಿಯೂ ಇವೆ.

ಸೇವುಣರ ಶಾಸನಗಳಲ್ಲಿ ಸಮಕಾಲೀನ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳ, ವಿದ್ಯಾಭ್ಯಾಸ ಮತ್ತು ಆಡಳಿತ ಪದ್ಧತಿಗಳ ಒಂದು ಚಿತ್ರ ಕಾಣಸಿಗುತ್ತದೆ. ಮಾಳವದ ಅರಸರು, ಗುರ್ಜರ, ಹೊಯ್ಸಳ ಮತ್ತು ಕಾಕತೀಯ ಮುಂತಾದ ರಾಜಮನೆತನಗಳ ಮೇಲೆ ಸೇವುಣ ಅರಸರು ಸಾಧಿಸಿದ ದಿಗ್ವಿಜಯಗಳನ್ನು ಕುರಿತು ಸೇವುಣ ಶಾಸನಗಳು ಬಹುವಾಗಿ ವರ್ಣಿಸುತ್ತವೆ. ಶಾಸನ ಕಲ್ಲುಗಳ ಮೇಲೆ ಶಂಖ, ಲಿಂಗ, ಪ್ರತಿಗ್ರಹಿ, ಹಸು ಕರು, ಸೂರ್ಯ, ಚಂದ್ರ, ನಂದಿ, ಗರುಡ, ವಿಷ್ಣು ಮತ್ತು ಲಕ್ಷ್ಮೀ, ಕಲಶ, ಮುಕ್ಕೊಡೆ, ಕಂಡಲು ಮುಂತಾದ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ.

ಮಹಾಮಂಡಲೇಶ್ವರ ಬಂದರಸ ಅಥವಾ ಬಂದುಗಿ, ಚೈತ್ರಸಿಂಹ, ವಿರುಪದೇವರಸ, ಮಾಯಿದೇವ, ಬೀಚಿಸೆಟ್ಟಿ, ಲಕ್ಷ್ಮೀದೇವ, ಸಹದೇವ ದಂಡನಾಥ, ಸಾಮಂತ ಖೋಲೇಶ್ವರ ಮತ್ತು ಅವನ ಮಗ ರಾಮ, ಹರದೇವ ಮತ್ತು ಮಹದೇವ, ಮಾಯಿದೇವ ಪಂಡಿತ, ಹೊನ್ನಬೊಮ್ಮಿಸೆಟ್ಟಿ, ಬೀಚಣ, ಮಲ್ಲಿಸೆಟ್ಟಿ, ಲೆಕ್ಕರಸ, ಚಂದ್ರದೇವ, ಕೇಶವದೇವ, ಕೂಚರಸ, ಚಟ್ಟರಸ, ದೇವರಾಜ, ಸಾಳುವ ತಿಕ್ಕಮ ಹಾಗೂ ಪುರುಷೋತ್ತಮ ಮೊದಲಾದವರು ಸೇವುಣ ಶಾಸನಗಳು ಉಲ್ಲೇಖಿಸುವ ಪ್ರಮುಖ ಅಧಿಕಾರಿಗಳಲ್ಲಿ ಕೆಲವರು. ಭಾಗುಬಾಯಿ ಎಂಬ ಸ್ತ್ರೀಯೊಬ್ಬಳು ಸರ್ವಾಧಿಕಾರಿಯಾಗಿರುವುದು ಗಮನ ಸೆಳೆಯುವಂಥದು. ಪ್ರಸಿದ್ಧ ವೀರಶೈವ ಸುಧಾರಕ ಸಂಗನಬಸವ, ಖಗೋಳಶಾಸ್ತ್ರಜ್ಞ ಚಂಗದೇವ, ಗಣಿತಶಾಸ್ತ್ರಜ್ಞ ಭಾಸ್ಕರಾಚಾರ್ಯ, ಧರ್ಮಗುರು ಶಂಕರಸ್ವಾಮಿ, ರಾಜಗುರು ಸರ್ವೇಶ್ವರದೇವ ಮುಂತಾದವರ ಉಲ್ಲೇಖ ಶಾಸನಗಳಲ್ಲಿ ಕಾಣಸಿಗುತ್ತದೆ. ಹಾವೇರಿ, ಹೆಮ್ಮೆನಬೇತೂರು, ಹಿಲ್ಲ, ಸೊನ್ನಲಿಗೆ, ಗದಗ, ಬಳ್ಳಿಗಾವೆ, ಲಕ್ಷ್ಮೇಶ್ವರ, ಚೌಡದಾನಪುರ ಮೊದಲಾದ ಧಾರ್ಮಿಕ ಕೇಂದ್ರಗಳನ್ನು ಮತ್ತು ಬೊಮ್ಮಕೂರು, ಅಕ್ಕಲಕೋಟೆ, ಹಿರೇಬೇವಿನೂರು, ದೇವಣಗಾವೆ, ಮುದ್ಗಲ್ಲು, ಅಣ್ಣಿಗೇರಿ, ಲಕ್ಕುಂಡಿ, ಕುಕ್ಕನೂರು, ಗಬ್ಬೂರು ಮುಂತಾದ ಹಲವು ಬ್ರಹ್ಮಪುರಿ ಅಥವಾ ಅಗ್ರಹಾರಗಳನ್ನು ಶಾಸನಗಳು ಹೆಸರಿಸುತ್ತವೆ.

ಸೇವುಣರ ಶಾಸನಗಳಲ್ಲಿ ಹೆಚ್ಚಿನವು ದಾನಶಾಸನಗಳು. ಇವುಗಳಲ್ಲಿ ಶಿವ, ಬ್ರಹ್ಮ, ವಿಷ್ಣು, ಸೂರ್ಯ, ಭವಾನಿ, ಲಕ್ಷ್ಮಿ ನರಸಿಂಹ ಮುಂತಾದ ದೇವತೆಗಳ ಹಾಗೂ ಜಿನತೀರ್ಥಂಕರರ ಸ್ತುತಿ ಇವೆ. ನೊಳಂಬವಾಡಿ 32000, ಬನವಾಸಿ 12000, ಪಲಸಿಗೆ 12000, ಪಾಳಿಯಾಂಡ 4000, ಕರಹಡ 4000, ಕೊಂಡಿ 3000, ಮಿರಿಂಜೆ 3000, ಎಡೆದೊರೆ 2000, ಅಲಂದೆ 1000, ಸಿಂದವಾಡಿ 1000, ತರ್ದವಾಡಿ 1000, ಬೆಳ್ವೊಲ 300, ಪುಲಿಗೆರೆ 300, ಅರಳು 300, ಹಗರಿಟಗೆ 300 ಮುಂತಾದ ಪ್ರಸಿದ್ಧ ನಾಡುಗಳನ್ನಲ್ಲದೆ ಹತ್ತಾರು ಸಣ್ಣಪುಟ್ಟ ಆಡಳಿತ ವಿಭಾಗಗಳನ್ನು ಸೇವುಣ ಶಾಸನಗಳು ಹೆಸರಿಸುತ್ತವೆ.

ಸಾಹಿತ್ಯಕವಾಗಿಯೂ ಸೇವುಣ ಶಾಸನಗಳು ಗಮನಾರ್ಹವಾಗಿವೆ. ತಿಳಿವಳ್ಳಿ, ದೇವಸ್ಥಾನ ಹಕ್ಕಲು ಹಾಗೂ ದಾವಣಗೆರೆ ಶಾಸನಗಳು ಉತ್ತಮ ಶಾಸನಕಾವ್ಯಕ್ಕೆ ನಿದರ್ಶನಗಳು. ವಚನಸಾಹಿತ್ಯ ಬೆಳೆದಂತೆ, ಶಾಸನಗಳ ಮೇಲೆ ಅದರ ಪ್ರಭಾವ ಪ್ರಾರಂಭವಾಯಿತು. ಸು.25 ಶಾಸನಗಳಲ್ಲಿ ಸೊನ್ನಲಿಗೆಯ ಸಿದ್ಧರಾಮನ ವಚನಗಳು ಉದಾಹೃತವಾಗಿವೆ. ಕೃಷ್ಣನ ಟಾಕಳಿ ಶಾಸನದಲ್ಲಿ ಸಿದ್ಧರಾಮನ ವಚನವೊಂದರ ಸಂಸ್ಕೃತ ಭಾಷಾಂತರ ಕೊಟ್ಟಿರುವುದು ಗಮನಾರ್ಹ. ಕೆಲವು ಸಂಸ್ಕೃತ ಶಾಸನಗಳನ್ನು ಹರಿಶ್ಚಂದ್ರ, ವೈಜನಾಥ, ಮಾಧವ, ಕವಿರಾಜ ವಾಗ್ದೇವತಾ ಭಟ್ಟ, ವೇದಾರ್ಥವಾದಿ ಸೂರ್ಯನರಸಿಂಹ, ವೈಜಾರ್ಯ ಹಾಗೂ ಶಾರದಾದರ್ಪಣನೆನಿಸಿದ ಮಾಯಿದೇವ ಮುಂತಾದವರು ರಚಿಸಿದ್ದಾರೆ. ಕನ್ನಡ ಶಾಸನ ಕವಿಗಳಲ್ಲಿ ಬೆಡಗಿನ ಸೋಮನಾಥ ಪಂಡಿತ, ವಾಮನ, ಕನ್ನಡ ಸರಸತಿ ಎನಿಸಿದ ದೇವ, ಹುಡುಗೆಯ ಸೋಮಯ್ಯ, ಸೇನಬೋವ ಬಾಚರಸ, ಗೋಪಿರಾಜ ಮತ್ತು ಈಶ್ವರಾರ್ಯ ಮೊದಲಾದವರು ಸೇರಿದ್ದಾರೆ. ಕವಿಯ ಹೆಸರಿಲ್ಲದಿದ್ದರೂ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದ ಶಾಸನಗಳೂ ಇವೆ.

(ಎಚ್.ಎಂ.ಎನ್.ಆರ್.)

**ಸೈಯ್ಯದ್ ಅಹಮದ್ ಖಾನ್:** 1817–98. ಆಧುನಿಕ ಭಾರತದ ಇಸ್ಲಾಂ ಚಿಂತಕರಲ್ಲಿ ಮೊದಲಿಗರು. ಆಧುನಿಕ ಉನ್ನತ ಶಿಕ್ಷಣ ಹಾಗೂ ಆಡಳಿತದ ಮೂಲಕ ಮಾತ್ರ ಭಾರತೀಯ ಮುಸ್ಲಿಂರ ಏಳ್ಗೆ ಸಾಧ್ಯವೆಂದರಿತು ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣಕರ್ತರಾದವರು, ಹೆಸರಾಂತ ಬರೆಹಗಾರರು.



ಇವರು 1817 ಅಕ್ಟೋಬರ್ 17 ರಂದು ದೆಹಲಿಯಲ್ಲಿ ಜನಿಸಿದರು. ಇವರ ತಂದೆ ಸೈಯದ್ ಅಹಮದ್ ತಾಖಿ. ಇವರ ವಂಶಜರು ಮೊಗಲ್ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದರು. ಇವರ ತಾತ ಈಸ್ಟ್ ಇಂಡಿಯ ಕಂಪನಿಯ ಸೇವೆಯಲ್ಲಿದ್ದ ಕಾರಣ ಸಹಜವಾಗಿಯೇ ಅಹಮದ್ ಖಾನ್ ಅವರಿಗೆ ಉತ್ತಮ ಶಿಕ್ಷಣ ದೊರಕಿತು. ಇವರು ಲಖನೌನಲ್ಲಿ ವ್ಯಾಸಂಗ ಮುಗಿಸಿ ತಮ್ಮ 30ನೆಯ ವಯಸ್ಸಿನಲ್ಲಿ ಮೊಗಲರ ಕೊನೆಯ ದೊರೆ ಎರಡನೆಯ ಬಹದ್ದೂರ್ ಷಾನ ಆಸ್ಥಾನದಲ್ಲಿ ಹುದ್ದೆಗೆ ಸೇರಿದರು. ಆ ಕಾಲದಲ್ಲಿ ಮೊಗಲ್ ಸಾಮ್ರಾಟ ಕೇವಲ ತೋರಿಕೆಗಷ್ಟೆ ಅಧಿಕಾರಹೊಂದಿದ್ದು ಬ್ರಿಟಿಷರ ಆಣತಿಯ ಮೇಲೆ ಆಡಳಿತ ನಡೆಸುತ್ತಿದ್ದ ಕಾರಣ ಆ ಕೆಲಸ ತ್ಯಜಿಸಿ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ಶಿರಸ್ತೇದಾರ್ ಆಗಿ ನೇಮಕಗೊಂಡರು. 1846–55 ರ ವರೆಗೆ ಕಲ್ಕತ್ತದಲ್ಲಿ ಸೇವೆ ಸಲ್ಲಿಸಿ ಅನಂತರ ದೆಹಲಿಗೆ ವರ್ಗಗೊಂಡರು.

1855ರಲ್ಲಿ ಬಿಜನೂರ್‌ನಲ್ಲಿ ನ್ಯಾಯಾಧೀಶರಾಗಿ ಸೇವೆಗೆ ಸೇರಿದರು. ಈ ವೇಳೆಯಲ್ಲಿ ದೆಹಲಿಯಲ್ಲಿ ಉಂಟಾದ ಸಿಪಾಯಿದಂಗೆ ಅಥವಾ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ಕಣ್ಣಾರೆ ಕಂಡು ಮುಸ್ಲಿಂ ಸಮುದಾಯದ ಮೇಲೆ ಬ್ರಿಟಿಷ್ ಅಧಿಕಾರಿಗಳು ನಡೆಸಿದ ಕ್ರೂರ ದೌರ್ಜನ್ಯಕಾಗಿ ಮರುಗಿದರು. ಆಡಳಿತದಲ್ಲಿ ಭಾಗವಹಿಸಲು ಆಧುನಿಕ ಉನ್ನತ ಶಿಕ್ಷಣದ ಆವಶ್ಯಕತೆಯ ಮನಗಂಡು ಅದಕ್ಕಾಗಿ ಶ್ರಮಿಸಲು ಕಂಕಣ ತೊಟ್ಟರು. ಈ ವೇಳೆಯಲ್ಲಿ

ದೆಹಲಿಯ ಪುರಾತತ್ತ್ವ ಚರಿತ್ರೆ ಎಂಬ ತಮ್ಮ ಪ್ರಥಮ ಗ್ರಂಥವನ್ನು ರಚಿಸಿ ದೆಹಲಿಯ ವಾಸ್ತುಶಿಲ್ಪದ ಬಗ್ಗೆ ಪರಿಪೂರ್ಣ ಮಾಹಿತಿ ನೀಡಿದರು. ಧಾರ್ಮಿಕ ವಿಷಯಗಳ ಬಗ್ಗೆ ಆಸಕ್ತಿ ಹೊಂದಿದ್ದ ಇವರು ಅಬುಲ್ ಫಜಲ್ ರಚಿಸಿರುವ ಐನ್–ಇ–ಅಕ್ಬರಿ ಕೃತಿಯನ್ನು ಸಂಪಾದಿಸಿ ಅದಕ್ಕೆ ಜಹಾಂಗೀರ್ ಹಾಗೂ ಜಿಯಾ ಉದ್–ದಿನ್–ಬರಾಸ್‌ರ ಆತ್ಮಕತೆಯನ್ನು ಸೇರಿಸಿ ಪ್ರಕಟಿಸಿದರು. 1861 ರಲ್ಲಿ ಎಂ. ಗಾರ್ಸಿನ್ ಡಿ ತಾಸಿಯವರು ರಚಿಸಿದ ಫ್ರೆಂಚ್ ಭಾಷೆಯ ದೆಹಲಿ ಪುರಾತತ್ತ್ವ ಬಗೆಗಿನ ಗ್ರಂಥವನ್ನು ಭಾಷಾಂತರಿಸಿ ಪ್ರಕಟಿಸಿದರು. 1864 ರಲ್ಲಿ ಇವರಿಗೆ ಲಂಡನ್ನಿನ ರಾಯಲ್ ಏಷಿಯಾಟಿಕ್ ಸೊಸೈಟಿಯ ಗೌರವ ಸದಸ್ಯತ್ವ ದೊರೆಯಿತು. 20 ವರ್ಷ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ಅನಂತರ 1869 ರಲ್ಲಿ ತಮ್ಮ ಮಗನೊಡನೆ ಕೇಂಬ್ರಿಜ್‌ಗೆ ತೆರಳಿದರು.

ಲಂಡನ್ನಿನಲ್ಲಿನ ಸಹವಾಸ, ಚರ್ಚೆ, ಅಧ್ಯಯನಗಳ ಫಲವಾಗಿ ಉನ್ನತ ಚಿಂತನೆಗಳು ಇವರಿಗೆ ಮನವರಿಕೆಯಾದವು. ಭಾರತದ ಶಾಸಕಾಂಗ ಸಭೆಯಲ್ಲಿ ಭಾರತೀಯರ ಪಾಲ್ಗೊಳ್ಳುವಿಕೆಯ ಅನಿವಾರ್ಯತೆಯ ಬಗ್ಗೆ ಬ್ರಿಟಿಷ್ ಸಂಸತ್ತಿನಲ್ಲಿ ವಿಚಾರ ಮಂಡಿಸಿ ಯಶಸ್ವಿಯಾದರು. 1866ರಲ್ಲಿ ಪ್ರಾರಂಭವಾದ ಅಲಿಘರ್ ಇನ್‌ಸ್ಟಿಟ್ಯೂಟ್ ಗೆಜೆಟ್ ಭಾರತೀಯರಿಗೆ ಉನ್ನತ ಶಿಕ್ಷಣದ ಬಗ್ಗೆ ಮಾರ್ಗದರ್ಶನ ನೀಡುವಂತಾಯಿತು. 1866 ಫೆಬ್ರವರಿ 14 ರಂದು ವಿಜ್ಞಾನ ಸಂಸ್ಥೆಯನ್ನು ಅಲಿಘರ್‌ನಲ್ಲಿ ಸ್ಥಾಪಿಸಿದರು. 1870 ರಲ್ಲಿ ಮಹಮ್ಮದೀಯರ ಸಾಮಾಜಿಕ ವ್ಯವಸ್ಥೆ ಕುರಿತು ಒಂದು ಲೇಖನ ಪ್ರಕಟಿಸಿದರು. ಆಗ ಇಸ್ಲಾಂ ಸಂಪ್ರದಾಯಸ್ಥರ ವಿರೋಧವನ್ನು ಎದುರಿಸಿ ತಮ್ಮದೇ ಆದ ವೈಜ್ಞಾನಿಕ ಹಿನ್ನಲೆಯಲ್ಲಿ ಕುರಾನ್ ಧರ್ಮಗ್ರಂಥವನ್ನು ಕುರಿತು ವಿಮರ್ಶೆಯನ್ನು ಪ್ರಕಟಿಸಿದರು. ತಮ್ಮ ಅಧಿಕಾರದ ಅವಧಿಯಲ್ಲಿ 1858ರಲ್ಲಿ ಮುರಾದ್‌ಬಾದ್, 1863 ಗಾಜೀಪುರದಲ್ಲಿ ಶಿಕ್ಷಣ ಸಂಸ್ಥೆ ತೆರೆದದ್ದು ಇವರ ಪ್ರಮುಖ ಸಾಧನೆ. 1876 ರಲ್ಲಿ ಬನಾರಸ್‌ನಲ್ಲಿ ಉರ್ದು ಅಥವಾ ಪರ್ಷಿಯನ್ ಭಾಷೆ ಮಾಧ್ಯಮದ ಉನ್ನತ ಶಿಕ್ಷಣ ಕೇಂದ್ರವನ್ನು ತೆರೆಯಲು ಬ್ರಿಟಿಷ್ ಸರ್ಕಾರವನ್ನು ಆಗ್ರಹಿಸಿದಾಗ ಹಿಂದು ಮತ್ತು ಮುಸ್ಲಿಂ ಸಮುದಾಯದ ನಡುವೆ ಸಂಘರ್ಷ ಕಂಡುಬಂದಿತು. ಸಂಸ್ಕೃತ ಹಾಗೂ ಉರ್ದು ಸಮಸ್ಯೆ ಕೋಮುವಾದಕ್ಕೆ ಕಾರಣವಾಗಬಾರದೆಂದರಿತು ಅಲಿಘರ್‌ಗೆ ಹಿಂದಿರುಗಿದರು.

ಕಲ್ಕತ್ತ ವಿಶ್ವವಿದ್ಯಾಲಯದಂತೆಯೆ (1858) ಅಲಿಘರ್‌ನಲ್ಲಿ ಉನ್ನತ ಶಿಕ್ಷಣ ಸಂಸ್ಥೆ ಸ್ಥಾಪಿಸಲು ಮುಂದಾಗಿ ಭಾರತದಾದ್ಯಂತ ಸಂಚರಿಸಿ ದೇಣಿಗೆ ಸಂಗ್ರಹಿಸಿದರು. 1873 ರಲ್ಲಿ ಅಖಿಲ ಭಾರತ ಮುಸ್ಲಿಂ ಸಮ್ಮೇಳನ ಆಯೋಜಿಸಿದರು. 1877 ಜನವರಿ 8 ರಂದು ಭಾರತದ ಮೊದಲ ವೈಸ್‌ರಾಯ್ ಲಾರ್ಡ್‌ಲಿಟ್ಟನ್ ನಿಂದ ಮಹಮಡನ್ ಆಂಗ್ಲೋ ಓರಿಯಂಟಲ್ ಕಾಲೇಜಿಗೆ ಶಂಕುಸ್ಥಾಪನೆ ನೆರವೇರಿಸಿದರು. ಎಲ್ಲ ಸಮುದಾಯದವರಿಗೂ ಉನ್ನತ ಶಿಕ್ಷಣಕ್ಕೆ ಈ ಸಂಸ್ಥೆ ತನ್ನ ಬಾಗಿಲು ತೆರೆಯಿತು. ಇದೇ ಮುಂದೆ ಪ್ರಸಿದ್ಧ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವೆಂದು ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಪಡೆಯಿತು. ಇವರು ತಮ್ಮ ಜೀವನದ ಅಂತಿಮ ವರ್ಷಗಳಲ್ಲಿ ಬಹುತೇಕ ಮುಸ್ಲಿಂ ಸಮುದಾಯದ ಪರವಾದ ನಿಲುವು ಹೊಂದಿದ್ದುದು ಕಂಡುಬರುತ್ತದೆ. ಅಲಿಘರ್‌ನಲ್ಲಿ ಇಸ್ಲಾಂ ಸಂಸ್ಕೃತಿಯನ್ನು ಪ್ರಚಾರ ಪಡಿಸಲು ಸ್ಥಾಪಿಸಿದ್ದ ವಿಜ್ಞಾನ ಸಂಘ ಇವರ ನಿಧನಾನಂತರ ಲಖನೌಗೆ ವರ್ಗಾಯಿಸಲ್ಪಟ್ಟು (1903) ಮುಸ್ಲಿಂ ಲೀಗ್ ಎಂದು ಮರುನಾಮಕರಣಗೊಂಡಿತು. ಬ್ರಿಟಿಷ್ ಸರ್ಕಾರ 1883 ಇವರಿಗೆ ಸರ್ ಪದವಿ ನೀಡಿ ಗೌರವಿಸಿತು. (ಸಿ.ಜಿ.ಎಸ್.)

**ಸೋನ್‌ಪುರ:** ಬಿಹಾರ ರಾಜ್ಯದ ಗಯ ಜಿಲ್ಲೆಯಲ್ಲಿರುವ ಐತಿಹಾಸಿಕ ನೆಲೆ. ಇದಕ್ಕೆ ಸೋನೆಪುರ್, ಸೊಂತಿಪುರ ಎಂಬ ಹೆಸರುಗಳಿವೆ. ಇಲ್ಲಿಯ ಪ್ರಾಚೀನ ದಿಬ್ಬವನ್ನು ಬಾಣಾಸುರ್‌ಕದಾರ್ ಎಂದು ಕರೆಯುವರು. ಭಾರತದಾದ್ಯಂತ ಈ ಹೆಸರುಳ್ಳ ಅನೇಕ ಸ್ಥಳಗಳಿದ್ದು ಇವೆಲ್ಲವನ್ನೂ ಬಾಣರ ರಾಜಧಾನಿ ಶೊಂತಿಪುರವೆಂದು ಗುರುತಿಸಲಾಗುತ್ತದೆ. ಹೆಸರಿನಲ್ಲಿರುವ ಸಾಮ್ಯತೆಯನ್ನು ಹೊರತುಪಡಿಸಿದರೆ ಸೋನಪುರವನ್ನು ಬಾಣರ ರಾಜಧಾನಿ ಯೊಂದಿಗೆ ಸಮೀಕರಿಸುವುದಕ್ಕೆ ಯಾವುದೇ ಆಧಾರಗಳಿಲ್ಲ. 1955ರಲ್ಲಿ ವಿ.ಮಿತ್ರ ಅವರು ಈ ದಿಬ್ಬದ ಸರ್ವೇಕ್ಷಣೆಯನ್ನು ಕೈಗೊಂಡಾಗ ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆ, ತಾಮ್ರದ ನಾಣ್ಯ ಮತ್ತು ಮರಳುಶಿಲೆಯ ಕೆಲವು ಚೂರುಗಳು ದೊರಕಿದ್ದರಿಂದ ಇಲ್ಲಿ ಉತ್ಖನನ ನಡೆಸಿದರು. ಕೆ.ಪಿ.ಜಯಸ್ವಾಲ್ ಸಂಶೋಧನ ಸಂಸ್ಥೆಯವರು 1956–57ರಿಂದ 1961–62ರವರೆಗೆ ಮತ್ತು ಬಿಹಾರ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ದವರು 1970–71ರಲ್ಲಿ ಉತ್ಖನನವನ್ನು ನಡೆಸಿದರು. ಇಲ್ಲಿ 3 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು. 1ನೆಯ ಹಂತದಲ್ಲಿ ಎ ಮತ್ತು ಬಿ ಉಪಹಂತಗಳಿವೆ. 1ಎ ಉಪಹಂತದಲ್ಲಿ ಜನರು ಮಣ್ಣು ಮೆತ್ತಿದ ಬೊಂಬಿನ ತಡಿಕೆ ಮನೆಗಳಲ್ಲಿ ವಾಸಿಸುತ್ತಿದ್ದರು. ಆವಿಗೆಯಲ್ಲಿ ಸುಟ್ಟ ಒರಟಾದ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳನ್ನು ಇವರು ಉಪಯೋಗಿಸುತ್ತಿದ್ದರು. ಪಾತ್ರೆಗಳನ್ನು ಹೆಚ್ಚಾಗಿ ಕೈಯಿಂದಲೇ ತಟ್ಟಿ ಮಾಡುವ ಸಂಪ್ರದಾಯವಿತ್ತು. ತಿಗುರಿಯ ಮೇಲೆ ಮಾಡಿದ ಪಾತ್ರೆಗಳು ಅಪರೂಪ. ತಾಮ್ರದ ತಂತಿ ಇಲ್ಲಿ ದೊರಕಿರುವುದರಿಂದ ತಾಮ್ರ ಬಳಕೆ ಇವರಿಗೆ ತಿಳಿದಿತ್ತೆಂಬುದು ಖಚಿತ. ಪ್ರಾಣಿಮೂಳೆಗಳು, ತೊಟ್ಟಿರುವ ಬಾಣದ ಮೊನೆ ಮತ್ತು ಬತ್ತದ ಹೊಟ್ಟು ಮುಂತಾದ ಅವಶೇಷಗಳು ಗಮನಾರ್ಹ.

1ಬಿ ಉಪಹಂತದಲ್ಲಿ ತಿಗುರಿಯ ಮೇಲೆ ತಯಾರಿಸಿದ ಉತ್ತಮ ಗುಣಮಟ್ಟದ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಗಳಲ್ಲದೆ ಬಿಳಿವರ್ಣದ ಜ್ಯಾಮಿತೀಯ ಚಿತ್ರಗಳಿಂದ ಅಲಂಕರಿಸಲಾದ ಕಪ್ಪು ಮಣ್ಪಾತ್ರೆ ಚೂರುಗಳು, ಎಲುಬು ಚೂರುಗಳಿದ್ದ ಕೆಂಪು ಹೂಜಿಗಳು ದೊರೆತಿವೆ. ಚಕಮಕಿಕಲ್ಲು ಮತ್ತು ಬೆಣಚುಕಲ್ಲಿನ ಚಕ್ಕೆ ಹಾಗೂ ಅಲಗುಗಳು ವಿರಳವಾಗಿದ್ದುವು. ಸುಣ್ಣದ ಲೇಪನವಿರುವ ನೆಲಗಟ್ಟುಗಳಲ್ಲಿ ವರ್ತುಲಾಕಾರದ ಗುಂಡಿಗಳನ್ನು ಮಾಡಲಾಗಿತ್ತು. 1.84–2.4 ಮೀ ವ್ಯಾಸದ ಈ ಗುಂಡಿಗಳಲ್ಲಿ ಬೂದಿ, ಪ್ರಾಣಿ ಮತ್ತು ಪಕ್ಷಿಗಳ ಮೂಳೆಗಳಿದ್ದವು. ಇವು ತಾಮ್ರ–ಶಿಲಾಯುಗದ ಜನರ ವಾಸದ ಗುಂಡಿಗಳಿರಬಹುದು. ಸುಡಾವೆ ಮಣ್ಣಿನ ಮತ್ತು ಅರೆಪ್ರಶಸ್ತ ಕಲ್ಲುಗಳ ಮಣಿಗಳು, ಎಲುಬಿನ ಬಾಣದ ಮೊನೆಗಳು, ಲೇಖನಿ ಹಾಗೂ ಚಪ್ಪಟೆ ಕೊಡಲಿಗಳು ಇವರು ಉಪಯೋಗಿಸಿದಂಥ ವಸ್ತುಗಳಾಗಿವೆ. ಸು. 1ಮೀ ಆಳದ ವರ್ತುಲಾಕಾರದ ಶವಕುಣಿಗಳು ಇಲ್ಲಿದ್ದು ಇವುಗಳಲ್ಲಿ ದಹನನಂತರದ ಅಸ್ಥಿಅವಶೇಷಗಳೂ ಮಣ್ಪಾತ್ರೆಗಳೂ ಇದ್ದುವು. ಸುಟ್ಟ ಅಕ್ಕಿಕಾಳುಗಳಿದ್ದ ದೊಡ್ಡ ಜಾಡಿಗಳು, ಕಬ್ಬಿಣದ ಅದಿರು ಮತ್ತು ಕಿಟ್ಟಗಳು ಈ ಹಂತದಲ್ಲಿ ದೊರೆತಿರುವುದು ವಿಶೇಷ.

ಬಂಗಾರ, ಬೆಳ್ಳಿ ಹೊಳಪಿನ ಕಡುನೀಲಿ, ನಸುಗೆಂಪು ಮತ್ತು ದ್ವಿವರ್ಣಗಳ ಔತ್ತರೇಯ ಮೆರುಗಿನ ಮಣ್ಪಾತ್ರೆಗಳು 2ನೆಯ ಹಂತದ ವೈಶಿಷ್ಟ್ಯ. ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಯ ಚೂರುಗಳು, ಮಣ್ಣಿನ ಗೋಡೆ ಮತ್ತು ಗಟ್ಟಿಗೊಳಿಸಿದ ಮಣ್ಣಿನ ನೆಲಗಟ್ಟು ಈ ಹಂತದ ಪ್ರಮುಖ ಅವಶೇಷಗಳು. 61 ಸೆಂಮೀ ವ್ಯಾಸದ ಸುಡಾವೆಮಣ್ಣಿನ ಉಂಗುರುಗಳಿದ್ದ 30 ಬಾವಿಗಳು ಇಲ್ಲಿದ್ದುವು. ಇವುಗಳನ್ನು ಸಾಮಾನ್ಯವಾಗಿ ಇಂಗುಗುಣಿಗಳಾಗಿ ಬಳಸಲಾಗುತ್ತಿತ್ತು. ಒಂದು ಇಂಗುಗುಣಿಯಲ್ಲಿ ರಂಧ್ರಗಳುಳ್ಳ ತಳಭಾಗವಿದ್ದುದರಿಂದ ಇದನ್ನು ಜಲ ಶುದ್ಧೀಕರಣಕ್ಕಾಗಿ ಬಳಸಿರಬಹುದೆಂದು ಊಹಿಸಲಾಗಿದೆ. ಕಬ್ಬಿಣದ ಆಯುಧೋಪಕರಣಗಳು, ತಾಮ್ರದ ಉಂಗುರ, ಬಳೆ, ಬಾಣದ ಮೊನೆಗಳು, ಸುಡಾವೆಮಣ್ಣಿನ ಗೊಂಬೆಗಳು, ಅರೆಪ್ರಶಸ್ತ ಕಲ್ಲಿನ ಮಣಿಗಳು, ತಾಮ್ರದ ಮುದ್ರಾಂಕಿತ ಹಾಗೂ ಎರಕಹೊಯ್ದ ನಾಣ್ಯಗಳು, ಮಾನವ ಮುಖದ ರೂಪದಲ್ಲಿರುವ ಸ್ಫಟಿಕದ ಪದಕ ಇವು ಇಲ್ಲಿ ದೊರಕಿರುವ ಇತರ ಅವಶೇಷಗಳಾಗಿವೆ. ಈ ಹಂತದ ಮೇಲ್ಪದರದಲ್ಲಿ ಬೂದಿಯ ಪದರವಿರುವುದರಿಂದ ವಸತಿ ಅಗ್ನಿ ದುರಂತಕ್ಕೆ ಒಳಗಾಗಿದ್ದಿರಬಹುದು.

2ನೆಯ ಹಂತದ ಅನಂತರ ಕೆಲಕಾಲ ಈ ನೆಲೆಯಲ್ಲಿ ಜನವಾಸ್ತವ್ಯವಿರಲಿಲ್ಲ. 3ನೆಯ ಹಂತದಲ್ಲಿ ಮೆತ್ತಿ ಮಾಡಿದ ಅಲಂಕರಣೆಯಿರುವ ಕೆಂಪುಬಣ್ಣದ ಮಣ್ಪಾತ್ರೆಗಳು ದೊರಕಿವೆ. ಇಟ್ಟಿಗೆ (43×31×8 ಸೆಂಮೀ) ಕಟ್ಟಡಗಳ ಅಳಿದುಳಿದ ಭಾಗಗಳಿವೆ. ಕೊಳವೆ ಬಾವಿಗಳು ವಿರಳವಾಗಿವೆ. ಆಂಟಿಮನಿ ಕಡ್ಡಿ, ಬಳೆ, ಮಣಿ, ಕಿವಿಯ ಆಭರಣ, ಪದಕ, ತಾಮ್ರದ ಉಂಗುರಗಳು, ಮೊಳೆ ಮತ್ತು ದಂತದ ವಸ್ತುಗಳು, ಅಚ್ಚಿನಿಂದ ಹಾಗೂ ಕೈಯಿಂದ ತಯಾರಿಸಿದ ಸುಡಾವೆಮಣ್ಣಿನ ವಿವಿಧ ಪ್ರಾಣಿಗೊಂಬೆಗಳು, ನೈಗಮೇಶ ದೇವತೆಯ ಅಪರೂಪದ ಮೂಟ್ಟಮೂರ್ತಿ, ಗಾಡಿ, ತ್ರಿಕೋನಾಕಾರದ ವಸ್ತುಗಳು, ಹರಕೆ ದೀಪಗಳು, ಮುದ್ರೆ–ಮುದ್ರಿಕೆ ಹಾಗೂ ಮುದ್ರಾಂಕಿತ ನಾಣ್ಯಗಳು ದೊರಕಿವೆ. (ಸಿ.ಎಸ್.ವಿ.)

**ಸೋಲಂಕಿ ಮನೆತನ:** ಗುಜರಾತಿನಲ್ಲಿ ಆಳಿದ ಪ್ರಸಿದ್ಧ ರಾಜ ಮನೆತನ. ಇವರನ್ನು ಗುಜರಾತಿನ ಚಾಳುಕ್ಯರೆಂದು ಕರೆಯಲಾಗುತ್ತದೆ. ಗೂರ್ಜರ ಪ್ರತೀಹಾರರ (8–9ನೆಯ ಶತಮಾನ) ಅನಂತರ ಇವರು ಗುಜರಾತಿನಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದರು. ಇವರ ಆಳಿಕೆಯಲ್ಲಿ ಗುಜರಾತಿನ ಗಡಿಗಳು ಬಹುದೂರದ ವರೆಗೆ ವಿಸ್ತರಿಸಿದ್ದುವು. ಸರಸ್ವತಿ ನದಿತೀರದ ಮೇಲಿದ್ದ ಅನಿಲವಾಡದಿಂದ ಇವರು ಮೂರು ಶತಮಾನಗಳ ಕಾಲ ಆಳಿಕೆ ನಡೆಸಿದರು.

ಮೂಲರಾಜ (961–96) ಈ ಮನೆತನದ ಸ್ಥಾಪಕ. ಸಾಹಸಿಯೂ ಪರಾಕ್ರಮಿಯೂ ಆಗಿದ್ದ ಈತ ಚಾಹಮಾನ, ಪರಮಾರ, ಕಲ್ಯಾಣಿಯ ಚಾಳುಕ್ಯ ಹಾಗೂ ಸಿಂಧ್ ದೊರೆಗಳೊಡನೆ ಹೋರಾಡಿ ರಾಜ್ಯವನ್ನು ವಿಸ್ತರಿಸಿದ. ಇವನ ಅನಂತರ ಚಾಮುಂಡ ಮತ್ತು ದುರ್ಲಭರಾಜರು ಆಳಿಕೆ ನಡೆಸಿದರು. ಒಂದನೆಯ ಭೀಮನ ಆಳಿಕೆಯಲ್ಲಿ (1022–64) ಘಜ್ನಿಮಹಮ್ಮದ್ ಗುಜರಾತಿನ ಸೋಮನಾಥ ದೇವಾಲಯದ ಮೇಲೆ ಧಾಳಿ ನಡೆಸಿದ. ಪರಮಾರರು ಹಾಗೂ ಕಳಚೂರಿ ದೊರೆ ಕರ್ಣನನ್ನು ಭೀಮ ಸೋಲಿಸಿದ.

ಅನಂತರ ಆಳಿದ ಜಯಸಿಂಹ (1094–1144) ಈ ಸಂತತಿಯ ಪ್ರಸಿದ್ಧ ದೊರೆ. ಇವನು ಶಾಕಾಂಬರಿಯ ಚೌಹಾಣರು, ಮಾಳವದ ಪರಮಾರರು ಮತ್ತು ಬುಂದೇಲ್ ಖಂಡದ ಚಂದೇಲರನ್ನು ಸೋಲಿಸಿ ರಾಜ್ಯ ವಿಸ್ತರಿಸಿದ. ಇವನ ರಾಜ್ಯ ಜೋಧಪುರದ ಬಾಲಿಯವರೆಗೆ ಮತ್ತು ಜೈಪುರದ ಸಾಂಬಾರ್‌ವರೆಗೂ ಪೂರ್ವದಲ್ಲಿ ಭೀಲ್ಸ ಮತ್ತು ಪಶ್ಚಿಮದಲ್ಲಿ ಕಾಥೇವಾಡ್ ಮತ್ತು ಕಚ್‌ವರೆಗೂ ವಿಸ್ತರಿಸಿತ್ತು. ಇವನಿಗೆ ಸಿದ್ಧರಾಜ ಎಂಬ ಬಿರುದಿತ್ತು. ಪ್ರಸಿದ್ಧ ಕವಿ ಹೇಮಚಂದ್ರ ಜಯಸಿಂಹನ ಆಸ್ಥಾನದಲ್ಲಿದ್ದ.

ಜಯಸಿಂಹನ ಅನಂತರ ಬಂದ ಕುಮಾರಪಾಲ (1144–73) ಈ ಸಂತತಿಯ ಮತ್ತೊಬ್ಬ ಪ್ರಸಿದ್ಧ ದೊರೆ. ಈತ ಕೊಂಕಣದ ಮೇಲೆ ದಂಡಯಾತ್ರೆ ನಡೆಸಿ ತನ್ನ ರಾಜ್ಯವನ್ನು ವಿಸ್ತರಿಸಿದ. ತನ್ನ ರಾಜ್ಯದ ಮೇಲೆ ಆಕ್ರಮಣವೆಸಗಿದ ಚೌಹಾಣರ ಅರ್ಣೋರಾಜ, ಪರಮಾರರ ವಿಕ್ರಮಸಿಂಹನನ್ನೂ ಮಾಳ್ವದ ಬಲ್ಲಾಳನನ್ನೂ ಇವನು ಸೋಲಿಸಿದ. ಹೇಮಚಂದ್ರಮುನಿ ಪ್ರಭಾವಕ್ಕೆ ಒಳಗಾಗಿ ಜೈನಧರ್ಮವನ್ನು ಸ್ವೀಕರಿಸಿದ.

ಇವನ ಅನಂತರ ಪ್ರತಾಪಮಲ್ಲ ಮತ್ತು ಅಜಯಪಾಲರ ನಡುವೆ ರಾಜ್ಯಕ್ಕಾಗಿ ಕಲಹಗಳು ನಡೆದುವು. ಅಜಯಪಾಲ ಜಯಗಳಿಸಿ ಸಿಂಹಾಸನವೇರಿದ. ಇವನ ಅನಂತರ ಸೋಲಂಕಿ ರಾಜವಂಶ ಕ್ಷೀಣಿಸಲಾರಂಭಿಸಿತು. 1197ರಲ್ಲಿ ದೆಹಲಿಯ ಕುತುಬ್ ಉದ್ದೀನ್ ಐಬಕ್ ಅನಿಲವಾಡವನ್ನು ಕೊಳ್ಳೆ ಹೊಡೆದ. ಚಾಳುಕ್ಯರ ಮಂತ್ರಿಯಾಗಿದ್ದ ಲವಣ ಪ್ರಸಾದ 13ನೆಯ ಶತಮಾನದಲ್ಲಿ ವಾಘೇಲ ಸಂತತಿಯನ್ನು ಸ್ಥಾಪಿಸಿದ. ಕರ್ಣದೇವ ವಾಘೇಲ ಈ ಸಂತತಿಯ ಸಮರ್ಥ ದೊರೆ. ಅಲಾವುದ್ದೀನ್ ಖಿಲ್ಜಿ 13ನೆಯ ಶತಮಾನದಲ್ಲಿ ಈ ಸಂತತಿಯ ಆಳಿಕೆಯನ್ನು ಕೊನೆಗಾಣಿಸಿದ. ಸೋಲಂಕಿ ವಂಶದ ದೊರೆಗಳು ಪ್ರಜಾನುರಾಗಿಗಳಾಗಿದ್ದು ಕಲೆ, ಸಾಹಿತ್ಯ, ವಾಸ್ತುಶಿಲ್ಪಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. (ಎಸ್.ಎಮ್.ವಿ.)

**ಸೌಂದರರಾಜನ್, ಕೆ.ವಿ.:** 1925–2003. ದಕ್ಷಿಣ ಭಾರತದ ಹೆಸರಾಂತ ಕಲಾ ಇತಿಹಾಸಕಾರ. 1925 ಫೆಬ್ರುವರಿ 17ರಂದು ತಮಿಳುನಾಡು ರಾಜ್ಯದ ಕಾಂಚೀಪುರಂ ಜಿಲ್ಲೆಯ ಚೆಯ್ಯೂರು ಎಂಬಲ್ಲಿ ಜನಿಸಿದರು. ಇವರದು ವೇದವೃತ್ತಿ ಪಾರಂಗತ ಅಹೋಬಿಲ ಮಠದ ಸಂಪ್ರದಾಯದ ಕುಟುಂಬ. ತಂದೆ ವೃತ್ತಿಯಿಂದ ಸೈನಿಕ ಅಧಿಕಾರಿಯಾಗಿದ್ದರು. ಮದುರೈ ತಾಯುಮನ್ನವರ್ ಹಿಂದು ಮಹಾವಿದ್ಯಾಲಯದಿಂದ ಪದವಿಯನ್ನೂ ಅಲಹಾಬಾದ್ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದರು. ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನಶಾಸ್ತ್ರಗಳಲ್ಲಿಯೂ ತಮಿಳು, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿಯೂ ಪ್ರಭುತ್ವ ಹೊಂದಿದ್ದ ಇವರು ಮಾರ್ಟಿಮರ್ ವೀಲರ್, ಎಫ್.ಐ.ಥಾಯ್‌ನರ್ ಮತ್ತು ಎಚ್.ಡಿ.ಸಾಂಕಳಿಯ ಅವರ ಮಾರ್ಗದರ್ಶನದಲ್ಲಿ ಓರ್ವ ಪುರಾತತ್ತ್ವಜ್ಞರಾದರು.

ಇವರು ವಿಷಯ ತಜ್ಞರಾಗಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯನ್ನು ಸೇರಿದರು. ಸ್ವಲ್ಪ ಸಮಯದಲ್ಲಿಯೇ ಉತ್ಖನನ ಸಹಾಯಕರಾಗಿ ಬಡ್ತಿ ಪಡೆದರು. ಅನಂತರ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಪ್ರಾಗಿತಿಹಾಸ ವಿಭಾಗದ ಅಧೀಕ್ಷಕರಾಗಿ ನೇಮಕಗೊಂಡರು. ದೆಹಲಿ ಇವರ ಕೇಂದ್ರ ಕಾರ್ಯಸ್ಥಳವಾಗಿತ್ತು. ಮದರಾಸು ಪ್ರಾದೇಶಿಕ ವಿಭಾಗ (ದಕ್ಷಿಣ ವೃತ್ತ)ದಲ್ಲಿ ಟೆಂಪಲ್ ಸರ್ವೆ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡಿದರು (1964–68). ಅನಂತರ 1975ರಲ್ಲಿ ನಿರ್ದೇಶಕರಾದರು. 1980ರಲ್ಲಿ ಸಹ ಮಹಾನಿರ್ದೇಶಕ, 1983ರಲ್ಲಿ ಹೆಚ್ಚುವರಿ ಮಹಾ ನಿರ್ದೇಶಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಉತ್ಖನನಗಳು, ಪ್ರಾಗಿತಿಹಾಸ ಸಂಶೋಧನೆಗಳು, ವಾಸ್ತುಶಿಲ್ಪಶಾಸ್ತ್ರ, ಕಲಾ ಇತಿಹಾಸ, ಶಾಸನಶಾಸ್ತ್ರ, ಮೂರ್ತಿಶಿಲ್ಪ ಮತ್ತು ನಾಣ್ಯ ಅಧ್ಯಯನ ಶಾಸ್ತ್ರಗಳಲ್ಲಿ ಪರಿಣತಿ ಪಡೆದಿದ್ದ ಇವರು ಸರ್ವೇಕ್ಷಣ ಇಲಾಖೆಯ ಗೌರವ ಮತ್ತು ದಕ್ಷತೆಯ ಹೆಚ್ಚಳಕ್ಕೆ ಕಾರಣರಾದರು. ಇವರು ಅತಿ ವಿರಳ ಎನ್ನಬಹುದಾದ ಏನಲ್ ವಿಶ್ಲೇಷಣಾ ಸಾಮರ್ಥ್ಯ ಪಡೆದಿದ್ದರು. ಇವರ ಬರೆವಣಿಗೆಗಳಲ್ಲಿ ಮಾನಸಾರ ಮತ್ತು ಇತರ ಶಿಲ್ಪಶಾಸ್ತ್ರ ಆಕರಗಳ ಪ್ರಭಾವ ಅಪರಿಮಿತವಾಗಿತ್ತು. ಹೊರದೇಶಗಳಲ್ಲಿ ಇವರು ಅನೇಕ ಉಪನ್ಯಾಸಗಳನ್ನು ನೀಡಿದ್ದರು. ಕೆಲವು ಮುಖ್ಯ ಉಪನ್ಯಾಸಗಳಿವು: ದಕ್ಷಿಣ ಭಾರತದ ಬೃಹತ್ ಶಿಲಾಸಂಸ್ಕೃತಿ, ಮಿಸ್ಸೌರಿ ಗೂಯ್ಮೆನೆಟ್, ಪ್ಯಾರಿಸ್ (1971), ಭಾರತೀಯ ಕಲೆ, ಮಿನ್ನಸೋಟ ವಿಶ್ವವಿದ್ಯಾಲಯ, ಯು.ಎಸ್.ಎ. (1971) ಅಭಿಜಾತ ಕಲೆ – ಇಸ್ಲಾಮಿಕ್ ವಾಸ್ತುಶಿಲ್ಪ, ಜೆರುಸಲೇಮ್, ಹಫಿಯ, ಟೆಲ್ ಅವೈವ್ ಮತ್ತು ಬೀರಸೇವ್ ಎಂಬಲ್ಲಿ ವಿಜ್ಞಾನ ಮತ್ತು ಮಾನವಿಕ ಅಧ್ಯಯನ ಸಂಸ್ಥೆ, ಇಸ್ರೇಲ್ ಹಾಗೂ ಹೀಬ್ರು ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ನೀಡಿದ ಉಪನ್ಯಾಸಗಳು.

ಇವರ ನೂರಾರು ಸಂಶೋಧನ ಲೇಖನಗಳೂ ಇಪ್ಪತ್ತೈದು ಗ್ರಂಥಗಳೂ ಪ್ರಕಟವಾಗಿವೆ. ಇಂಡಿಯನ್ ಟೆಂಪಲ್ ಸ್ಟೈಲ್, ಇಸ್ಲಾಂ ಬಿಲ್ಟ್ಸ್ ಇನ್ ಇಂಡಿಯ, ಕಾವೇರಿಪಟ್ಟಿಣಂ– ಇವರ ಕೆಲವು ಮುಖ್ಯ ಕೃತಿಗಳು. ಇತ್ತೀಚೆಗೆ ಪ್ರಕಟಗೊಂಡಿರುವ, ಇವರ ಸಂಪಾದನೆಯಲ್ಲಿ ಸಿದ್ಧಪಡಿಸಿದ ಆರು ಸಂಪುಟಗಳ ಸಂಕ್ಷಿಪ್ತ ಹಿಂದುಧರ್ಮ ನಿಘಂಟು ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ತುಂಬಾ ಸಹಾಯಕಾರಿಯಾಗಬಲ್ಲದು. ಇವರು 2003 ಮೇ 8ರಂದು ನಿಧನರಾದರು. (ಸಿ.ಕೆ.ಎಂ)

**ಸ್ಟೈನ್, ಆರೆಲ್ ಸರ್:** 1862–1943. ಭಾರತದ ಪ್ರಸಿದ್ಧ ಬ್ರಿಟಿಷ್ ಪುರಾತತ್ತ್ವಶಾಸ್ತ್ರಜ್ಞ. ಇವನು ಭಾರತ ಹಾಗೂ ಏಷ್ಯ ಖಂಡದ ಅನೇಕ ಪ್ರದೇಶಗಳಲ್ಲಿ ನಡೆಸಿದ ಸಂಶೋಧನೆ ಅದ್ವಿತೀಯವಾದುದು. ಚೀನ, ತುರ್ಕಿಸ್ತಾನ, ಮಧ್ಯ ಏಷ್ಯ, ಪರ್ಷಿಯ, ಬಲೂಚಿಸ್ತಾನ, ಮಕ್ರಾನ್, ಇರಾನ್, ಇರಾಕ್, ಜೋರ್ಡಾನ್ ಮುಂತಾದ ಪ್ರದೇಶಗಳಲ್ಲಿಯೂ ಪುರಾತತ್ತ್ವ ಸಂಬಂಧಿ ಸಂಶೋಧನೆ ನಡೆಸಿ ಅನೇಕ ಮಹತ್ತ್ವದ ವಿಚಾರಗಳನ್ನು ಪ್ರಕಟಿಸಿದ್ದಾನೆ. ಐತಿಹಾಸಿಕ ವಸ್ತು ವಿಚಾರಗಳ ಬಗ್ಗೆ ಅಪಾರ ಕಾಳಜಿಹೊಂದಿದ ಇವನು ತಾನು ಪತ್ತೆಹಚ್ಚಿದ ಅನೇಕ ಅವಶೇಷಗಳನ್ನೂ ವಸ್ತುಗಳನ್ನೂ ಜೋಪಾನವಾಗಿ ಸಂರಕ್ಷಿಸಿದ (ಈಗ ಇವು ನವದೆಹಲಿಯ ಪುರಾತತ್ತ್ವ ವಸ್ತುಸಂಗ್ರಹಾಲಯದಲ್ಲಿವೆ). ಈತ ರಜಪುತಾಣ ಹಾಗೂ ಹಾಕ್ರನದಿ (ಇಂಗಿಹೋಯಿತೆನ್ನಲಾದ ಪ್ರಾಚೀನ ಸರಸ್ವತಿನದಿ) ಪ್ರದೇಶಗಳಲ್ಲಿ ನಡೆಸಿದ ಸಂಶೋಧನೆಗಳಿಂದ ಈ ನೆಲೆಗಳು ಇತಿಹಾಸ ಪೂರ್ವಕಾಲದಲ್ಲಿ ಮಾನವನ ವಾಸದ ನೆಲೆಗಳಾಗಿದ್ದವೆಂದು ತಿಳಿದುಬಂತು. ಜೈಪುರದಲ್ಲಿ (ರಾಜಸ್ತಾನ) ನಡೆಸಿದ ಉತ್ಖನನದಲ್ಲಿ ನಾಣ್ಯಗಳು, ಚಿತ್ರಗಳು ಮುಂತಾದ ಪುರಾತನ ವಸ್ತುಗಳು ದೊರೆತಿರುವುದರಿಂದ ಇವು ಆ ಪ್ರದೇಶದ ಇತಿಹಾಸದ ಅಧ್ಯಯನಕ್ಕೆ ಸಹಕಾರಿಯಾದವು. ಇಲ್ಲಿನ ಸಂಶೋಧನೆಯಿಂದ ಕಾರ್ಕೋಟನಗರ ಎಂಬ ವಿಶಾಲ ನಿವೇಶನವನ್ನು ಕಂಡುಹಿಡಿಯಲಾಯಿತು. ಇದು ಮಾಳವ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಬೈರಾತ್ ಎಂಬಲ್ಲಿ ಮಯೂರವಂಶದ ಆಳಿಕೆಗೆ ಸಂಬಂಧಿಸಿದ ವೃತ್ತಾಕಾರದ ದೇವಾಲಯವನ್ನು ಸಂಶೋಧಿಸಲಾಯಿತು. ರೈತ್ ಎಂಬಲ್ಲಿ ನಡೆಸಿದ ಉತ್ಖನನದಿಂದ ಇದು ಪ್ರಸಿದ್ಧ ಗಣಿಪ್ರದೇಶವೂ ವ್ಯಾಪಾರಸ್ಥಳವೂ ಆಗಿತ್ತೆಂದು ತಿಳಿದುಬರುತ್ತದೆ.

ಇವನು ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಕ್ರಾನಿಕಲ್ ಆಫ್ ಕಿಂಗ್ಸ್ ಆಫ್ ಕಾಶ್ಮೀರ್ (1900), ಏನ್ಷಿಯಂಟ್ ಖೋಟಾನ್ (1907), ರುಯಿನ್ಸ್ ಆಫ್ ಡೆಸರ್ಟ್ ಕ್ಯಾಥರಿ (1912), ದಿ ಥೌಸಂಡ್ ಬುದ್ಧಾಸ್ (1921), ಎನ್ ಅಲೆಗ್ಸಾಂಡರ್ ಟ್ರ್ಯಾಕ್ ಟು ದಿ ಇಂಡಸ್ (1929), ಆರ್ಕಿಯಲಾಜಿಕಲ್ ರಿಕಾನಿಸನ್ಸ್ ಇನ್ ಸೌತ್ ಈಸ್ಟ್ ಇರಾನ್ (1937), ಎನ್ ಓಲ್ಡ್ ರೂಟ್ ಆಫ್ ವೆಸ್ಟರ್ನ್ ಇರಾನ್ (1940)–ಇವು ಇವನ ಕೆಲವು ಮುಖ್ಯ ಕೃತಿಗಳು. ಈತ ಸಂಸ್ಕೃತ ಭಾಷೆಯಲ್ಲಿ ಅಪಾರ ಪಾಂಡಿತ್ಯ ಗಳಿಸಿಕೊಂಡಿದ್ದನಲ್ಲದೆ ಅನೇಕ ಗ್ರಂಥಗಳನ್ನು ರಚಿಸಿದ. ಇವನು 1940ರಲ್ಲಿ ನಿಧನಹೊಂದಿದ. (ಜಿಆರ್.)

**ಸ್ಟೋನ್‌ಹೆಂಜ್:** ಯುರೋಪಿನಲ್ಲಿರುವ ಬೃಹತ್ ಶಿಲಾಯುಗ ಸಮಾಧಿಗಳ ಕೇಂದ್ರ. ಸು.18ನೆಯ ಶತಮಾನದ ಹೊತ್ತಿಗೆ ಬ್ರಿಟಿಷ್ ಪುರಾತತ್ತ್ವ ಹವ್ಯಾಸಿ ವಿಲಿಯಂ ಸ್ಟಕ್ಲೆ ಈ ನೆಲೆಯಲ್ಲಿನ 19 ನಿಲಸುಕಲ್ಲು ಚಪ್ಪಡಿಗಳ ಗಜಪೃಷ್ಠಕಾರದ ನಿರ್ಮಿತಿ ಮತ್ತು ಇದಕ್ಕೆ ಸೇರಿದ ಮುಕ್ಕಲ್ಲು ವಿನ್ಯಾಸದ ಪ್ರವೇಶಭಾಗದಲ್ಲಿ ಮಧ್ಯ ಬೇಸಗೆಯಲ್ಲಿ ಸೂರ್ಯೋದಯದ ಕಿರಣಗಳು ಬೀಳುವುದನ್ನು ಗುರುತಿಸಿದ. ಸೂರ್ಯನ ಕಿರಣಗಳು ಈ ಭಾಗದಲ್ಲಿ ಬೀಳುವ ರೀತಿಯಲ್ಲಿಯೇ ಇದನ್ನು ವಿನ್ಯಾಸಗೊಳಿಸಲಾಗಿದೆಯೆಂದು ಅರ್ಥೈಸಲಾಯಿತು. ಈ ಗ್ರಹಿಕೆ ಸ್ಟೋನ್‌ಹೆಂಜ್ ಅಧ್ಯಯನದ ಮೇಲೆ ಗಾಢ ಪ್ರಭಾವ ಬೀರಿತು. ಸ್ಟಕ್ಲೆ ಮತ್ತು 20ನೆಯ ಶತಮಾನದ ಸರ್ ನಾರ್ಮನ್ ಲಾಕ್ಕಿಯರ್ ಈ ಬೃಹತ್ ರಚನೆ ಸೂರ್ಯದೇವನ ಆರಾಧನೆಗೆ ಸಂಬಂಧಿಸಿದ್ದೆಂದು ಅಭಿಪ್ರಾಯಪಟ್ಟರು. ಇದು ಸೂರ್ಯ ದೇವಾಲಯವೆಂಬುದು ಸಾಮಾನ್ಯ ಅಭಿಪ್ರಾಯವಾಗಿತ್ತು. ಆದರೆ ಗೆರಾಲ್ಡ್

ಆವ್‌ಬೆರಿ, ಇಂಗ್ಲೆಂಡ್

ಹಾಕಿನ್ಸ್ ಎಂಬ ಖಗೋಳ ವಿಜ್ಞಾನಿಯ ಪ್ರಕಾರ ಇದು ಕೇವಲ ಸೂರ್ಯಚಂದ್ರರ ಗತಿಗಳಿಗೆ ಸಂಬಂಧಿಸಿದ್ದಲ್ಲದೆ ಗ್ರಹಣ ಮೊದಲಾದ ಖಗೋಳ ಘಟನೆಗಳನ್ನು ಮುಂಚಿತವಾಗಿ ಅರಿಯುವ ಮಾರ್ಗವೂ ಆಗಿತ್ತು. ನಡುಬೇಸಗೆಯಲ್ಲಿ ಸೂರ್ಯನ ಬೆಳಕು ನೇರವಾಗಿ ನಿರ್ಮಿತಿಯ ಕೇಂದ್ರದಲ್ಲಿ ಬೀಳುವಂತಿರುವುದು ಆಕಸ್ಮಿಕವಲ್ಲ. ಏಕೆಂದರೆ ಸೂರ್ಯೋದಯದ ಕಾಲ ಅಕ್ಷಾಂಶದಿಂದ ಅಕ್ಷಾಂಶಕ್ಕೆ ಬದಲಾಗುತ್ತದೆ. ಸ್ಟೋನ್‌ಹೆಂಜ್ $51^0 11'$ ಅಕ್ಷಾಂಶದ ಮೇಲಿದೆ. ಇದನ್ನು ಸಮರ್ಥಿಸುವಂತೆ ಎಂಜಿನಿಯರಿಂಗ್ ಮತ್ತು ಗಣಿತಶಾಸ್ತ್ರದ ಪ್ರಾಧ್ಯಾಪಕ ಅಲೆಗ್ಸಾಂಡರ್ ಥಾಮ್ ಬ್ರಿಟನ್ನಿನ ಎಲ್ಲಾ ಬೃಹತ್ ಶಿಲಾಗೋರಿಗಳನ್ನು ಸೂರ್ಯ–ಚಂದ್ರರ ಪಥಕ್ಕೆ ಸರಿಹೊಂದುವಂತೆ ಕಟ್ಟಲಾಗಿರುವುದನ್ನು ತೋರಿಸಿಕೊಟ್ಟ. ಈ ಬೃಹತ್ ರಚನೆಗಳನ್ನು ಕಟ್ಟಿದವರಿಗೆ ಸೂರ್ಯಚಂದ್ರರ ಚಲನವಲನದ ಬಗ್ಗೆ ತಿಳಿದಿತ್ತೆನ್ನಬಹುದು. ಸೂರ್ಯನ ಚಲನಪಥವನ್ನು ಗಮನದಲ್ಲಿಟ್ಟುಕೊಂಡೇ ಸ್ಟೋನ್‌ಹೆಂಜ್ ಸ್ಥಳವನ್ನು ಆಯ್ಕೆ ಮಾಡಲಾಗಿದೆಯೆಂಬುದು ಸ್ಪಷ್ಟ. ಉಳಿದ ಭಾಗಗಳನ್ನು ಅನಂತರದಲ್ಲಿ ರಚಿಸಲಾಗಿದೆ. ಕೇಂದ್ರದಲ್ಲಿರುವ ಗಜಪೃಷ್ಠ ರಚನೆಯನ್ನು ಕೊನೆಯ ಹಂತದಲ್ಲಿ ಸೇರಿಸಲಾಯಿತೆಂದೂ ಇದರಲ್ಲಿ ಯಾವುದೇ ರೀತಿಯ ಖಗೋಳ ಲೆಕ್ಕಾಚಾರಗಳಿಲ್ಲವೆಂದೂ ಅಭಿಪ್ರಾಯ ಇದೆ.

ಈ ರಚನೆಯ ಸುತ್ತಲೂ ಇರುವ ಕಟ್ಟೆಯ ಒಳಬದಿಯಲ್ಲಿ 56 ಗುಂಡಿಗಳಿರುವುದನ್ನು ಔಬ್ರೆ ಪತ್ತೆ ಹಚ್ಚಿದ. ಆದ್ದರಿಂದ ಇವುಗಳನ್ನು ಔಬ್ರೆ ಗುಂಡಿಗಳೆಂದು ಹೆಸರಿಸಲಾಗಿದೆ. ಇವುಗಳ ಒಳಬದಿಯಲ್ಲಿ ನಾಲ್ಕು ಮೂಲೆಗಳಲ್ಲೂ ಒಂದೊಂದು ಕಲ್ಲಿದ್ದು ಇವನ್ನು ಕೂಡಿಸಿದಾಗ ಆಯತಾಕಾರದ ರಚನೆಯಾಗುತ್ತದೆ. ಇದಕ್ಕೂ ನಿರ್ಮಿತಿಯ ಕೇಂದ್ರ ಬಿಂದುವಿಗೂ ಸಂಬಂಧವಿರುವಂತೆ ಕಾಣುತ್ತದೆ. ಖಗೋಳಶಾಸ್ತ್ರಜ್ಞರ ಪ್ರಕಾರ ಔಬ್ರೆ ಗುಂಡಿಗಳು ಚಂದ್ರನ ಚಲನಾಪಥವನ್ನು ಅನುಸರಿಸಲು ರಚಿಸಿರುವ ನಿಗದಿತ ಬಿಂದುಗಳು. ಇಂತಹ ಲೆಕ್ಕಾಚಾರಗಳಿಂದ ಸೂರ್ಯಚಂದ್ರ ಸಂಧಿಸಿ ಗ್ರಹಣ ಉಂಟಾಗುವ ಸಮಯವನ್ನು ಅಂದಾಜಿಸುವ ಸಾಧ್ಯತೆಗಳಿವೆ. ಸ್ಟೋನ್‌ಹೆಂಜ್‌ನಿಂದ 2.8ಕಿಮೀ ದೂರದಲ್ಲಿರುವ ಪ್ರಾಗಿತಿಹಾಸ ಕಾಲದ ಗ್ರಾಮವೊಂದನ್ನು ಉತ್ಖನನದಿಂದ ಹೊರತೆಗೆಯಲಾಗಿದೆ. ಈ ಉತ್ಖನನ ಇಂಗ್ಲಿಷ್

ವಿಶ್ವವಿದ್ಯಾಲಯಗಳು ದಿ ಸ್ಟೋನ್ ಹೆಂಜ್ ರಿವರ್ ಸೈಡ್ ಪ್ರಾಜೆಕ್ಟ್ ಆಶ್ರಯದಡಿ ನಡೆಯಿತು. ಪ್ರ.ಶ.ಪೂ.2500ರ ಈ ನೆಲೆಯಲ್ಲಿ 8 ಮರದ ಮನೆಗಳ ಅವಶೇಷಗಳು, ಉಪಕರಣಗಳು, ಆಭರಣಗಳು, ಮಣ್ಪಾತ್ರೆಗಳು, ಮನುಷ್ಯರ ಹಾಗೂ ಪ್ರಾಣಿಗಳ ಎಲುಬುಗಳು ಮುಂತಾದುವುಗಳನ್ನು ಸಂಗ್ರಹಿಸಲಾಯಿತು. ಶೆಫೀಲ್ಡ್ ವಿಶ್ವವಿದ್ಯಾಲಯದ ಮೈಕ್ ಪಾರ್ಕರ್ ಪಿಯರ್‌ಸನ್ ಈ ಮನೆಗಳು ವಿಶಾಲವಾದ ವಸತಿಯ ಭಾಗವೆಂದೂ ಇವು ಹಳೆಶಿಲಾಯುಗದ ಅಂತ್ಯ ಕಾಲದ್ದೆಂದೂ ಹೇಳಿದ್ದಾನೆ. ಈ ವಸತಿ ಸ್ಟೋನ್‌ಹೆಂಜ್‌ಗೆ ಸಮಕಾಲೀನವಾದುದೆಂದೂ

ಉತ್ಖನನ

ಈ ನೆಲೆಯಲ್ಲಿ ಇಂತಹ ನೂರಾರು ಗೃಹಾವಶೇಷಗಳು ದೊರೆಯಬಹುದೆಂದೂ ಇವನ ಅಭಿಪ್ರಾಯ. 2 ಮನೆಗಳು ಪ್ರತ್ಯೇಕವಾಗಿದ್ದು ಸುತ್ತಲೂ ಮರದ ಬೇಲಿಯೂ ಇದರ ಹೊರಬದಿಯಲ್ಲಿ ಕಂದಕವೂ ಇವೆ. ಈ ದೊಡ್ಡ ಮನೆಗಳು ಮುಖ್ಯಸ್ಥ ಇಲ್ಲವೇ ಅರ್ಚಕನದಾಗಿರಬೇಕು. ಆದರೆ ಈ ಮನೆಗಳಲ್ಲಿ ಯಾವುದೇ ನಿತ್ಯುಪಯೋಗಿ ವಸ್ತುಗಳು ಇಲ್ಲದಿದ್ದರಿಂದ ಇಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದಿರಬಹುದೆಂದು ಇವನು ಸೂಚಿಸಿದ್ದಾನೆ. ಈ ನೆಲೆಯಲ್ಲಿ ಪ್ರಾಗೈತಿಹಾಸಕಾಲದ ಡ್ಯೂರಿಂಗ್ ಟನ್ ವಾಲ್ ಎಂದು ಕರೆಯಲ್ಪಡುವ ಮಣ್ಣಿನ ದಿಬ್ಬದಲ್ಲಿ ಕಲ್ಲಿನ ಕಂಬಗಳ ಗುಳಿಗಳನ್ನು ಗುರುತಿಸಲಾಗಿದೆ. ಮಣ್ಣಿನ ದಿಬ್ಬದ ಒಳಬದಿಯಲ್ಲಿ ಇಂತಹ ಮರದಕಂಬಗಳಿದ್ದ ಎರಡು ವೃತ್ತಗಳಿವೆ. ಒಂದು ವೃತ್ತವನ್ನು 40 ವರ್ಷಗಳ ಹಿಂದೆಯೇ ಗುರುತಿಸಲಾಗಿತ್ತು. ಉತ್ಖನನದಲ್ಲಿ ಏಕಕೇಂದ್ರದ ಎರಡು ವೃತ್ತಗಳು ಡ್ಯೂರಿಂಗ್ ಟನ್ ವಾಲ್ ಒಳಬದಿಯಲ್ಲಿರುವುದು ತಿಳಿಯಿತು. ಇವು ಕೂಡ ಸ್ಟೋನ್‌ಹೆಂಜ್‌ಗೆ ಸಮಕಾಲೀನ. ಡ್ಯೂರಿಂಗ್ ಟನ್ ವಾಲ್‌ನ ದಕ್ಷಿಣದಲ್ಲಿ 40ಮೀ ವ್ಯಾಸದ ಏಕಕೇಂದ್ರದ ಐದು ವೃತ್ತಗಳು ಮತ್ತು ಒಂದು ಸಣ್ಣ ವೃತ್ತವನ್ನು ಗುರುತಿಸಲಾಗಿದೆ. ಪಿಯರ್‌ಸನ್ ಪ್ರಕಾರ ಸ್ಟೋನ್‌ಹೆಂಜ್ ಮತ್ತು ಡ್ಯೂರಿಂಗ್ ಟನ್ ವಾಲ್‌ಗಳಿಗೆ ಪರಸ್ಪರ ಸಂಬಂಧವಿದೆ. ಸ್ಟೋನ್‌ಹೆಂಜ್ ಮಕರ ಸಂಕ್ರಾಂತಿ ದಿನದಂದು ಸೂರ್ಯನ ಅಸ್ತಮಾನಕ್ಕೆ ಅಭಿಮುಖವಾಗಿದ್ದರೆ, ಡ್ಯೂರಿಂಗ್ ಟನ್ ವಾಲ್ ಒಳಗಿನ ಮರದ ದೊಡ್ಡ ವೃತ್ತ ಅದೇ ದಿನದಂದು ಸೂರ್ಯೋದಯಕ್ಕೆ ಅಭಿಮುಖವಾಗಿರುತ್ತದೆ. (ಎ.ಎಸ್.;ಎನ್.ಎಲ್.)

**ಸ್ಪಾರ್ಟ:** ಗ್ರೀಸ್ ದೇಶದ ಇತಿಹಾಸ ಪ್ರಸಿದ್ಧ ಪುರಾತನ ನಗರ. ಗ್ರೀಸ್ ದೇಶದ ದಕ್ಷಿಣದಲ್ಲಿರುವ ಪೆಲೊಪೊನೀಸ್ ಪರ್ಯಾಯ ದ್ವೀಪದ ಈಗಿನ ಲೆಕೊನಿಯ ಪ್ರಾಂತದ ರಾಜಧಾನಿ ಮತ್ತು ಆಡಳಿತ ಕೇಂದ್ರ. ಯೂರೊಟಸ್ ನದಿ ದಡದ ಮೇಲಿದೆ. ಜ್ಯೂಸ್ ಮತ್ತು ಟೇಗೇಟ್ ದಂಪತಿಗಳ ಮಗನಾದ ಲೇಕಡ್‌ಮನ್ ತನ್ನ ಪತ್ನಿಯ ನೆನಪಿಗಾಗಿ ಈ ನಗರವನ್ನು ನಿರ್ಮಿಸಿದನೆಂದು ಪೌರಾಣಿಕ ಕಥೆ. ಟ್ರೋಜನ್ ಸಮರದ 80 ವರ್ಷಗಳ ಬಳಿಕ ಡೋರಿಯನರು ವಲಸೆ ಹೋಗಲಾರಂಭಿಸಿದರು. ಈ ವಲಸೆಗಾರರು ಲೆಕೊನಿಯಕ್ಕೆ ಬಂದ ಬಳಿಕ ಸ್ಪಾರ್ಟ ಅವರ ಮುಖ್ಯ ವಾಸಸ್ಥಳವಾಯಿತು. ಪರಸ್ಪರ ವೈಷಮ್ಯ, ಕಲಹಗಳಿಂದಾಗಿ ಸ್ಪಾರ್ಟ ಅಭಿವೃದ್ಧಿಗೊಳ್ಳಲೇ ಇಲ್ಲ. ಇದರಿಂದಾಗಿ ಇಲ್ಲಿ ಸುವ್ಯವಸ್ಥಿತ ಸಾಮಾಜಿಕ ಜೀವನ ಬೆಳೆಯಲಿಲ್ಲ. ಆದರೆ ಲೈಕರ್ಗಸ್ ಅಧಿಕಾರಕ್ಕೆ ಬಂದ ಬಳಿಕ ಶಾಸನಾತ್ಮಕವಾಗಿ ಇಲ್ಲಿಯ ಜನರ ಜೀವನವನ್ನು ವ್ಯವಸ್ಥಿತಗೊಳಿಸಿ ಸಂಘಟಿಸಿದ. ಇದರಿಂದಾಗಿ ಇಲ್ಲಿಯ ನಾಗರಿಕರ ವಿದ್ಯಾಭ್ಯಾಸದ ಕ್ರಮದಲ್ಲಿಯೇ ತೀವ್ರವಾದ ಮಾರ್ಪಾಡುಗಳುಂಟಾದವು. ಪ್ರತಿಯೊಬ್ಬ ಪ್ರಜೆಯೂ ವಿಧೇಯತೆ, ಸಹಿಷ್ಣುತೆ ಹಾಗೂ ಸಮರ ವಿಜ್ಞಾನಗಳಲ್ಲಿ ಕಟ್ಟುನಿಟ್ಟಾದ ತರಬೇತಿ ಪಡೆಯಬೇಕಾಯಿತು. ಪ್ರತಿ ನಾಗರಿಕನನ್ನೂ ದಕ್ಷ ಸೈನಿಕನನ್ನಾಗಿ ತಯಾರಿಸುವುದೇ ಈ ಹೊಸ ವಿದ್ಯಾಭ್ಯಾಸ ಯೋಜನೆಯ ಗುರಿಯಾಗಿತ್ತು. ಆದರೆ ಸ್ಪಾರ್ಟನರ ಜೀವನದಲ್ಲಿ ಸೌಂದರ್ಯ, ಸೌಮ್ಯತೆ, ಗಾಂಭೀರ್ಯಗಳಿಗೆ ಸ್ಥಾನವಿಲ್ಲದೆ ಹೋಯಿತು. ಇವರಲ್ಲಿ ಸಮರ, ಕ್ರೌರ್ಯ ನೆಲೆಗೊಂಡಿತು. ವಿಪರೀತ ನಿಬಂಧನೆಗಳಿಂದ ನಿಯಂತ್ರಿಸಲ್ಪಟ್ಟ ಸ್ಪಾರ್ಟರು ರಾಜನ ಅಧಿಕಾರ ವ್ಯಾಪ್ತಿಯಿಂದ ಹೊರಬಿದ್ದ ಕೂಡಲೇ ಅನಿರ್ಬಂಧಿತ ಕುಡಿತ, ದುರಾಚಾರಗಳಲ್ಲಿ ಮಗ್ನರಾಗುತ್ತಿದ್ದರು. ಇವರು ದಕ್ಷ ಸೈನಿಕರಾದರೇ ಹೊರತು ನುರಿತ ಆಡಳಿತಗಾರರಾಗಲಿಲ್ಲ.

ಲೆಕೊನಿಯವನ್ನು ಸ್ಪಾರ್ಟ ತನ್ನ ಅಧೀನಕ್ಕೆ ತಂದುಕೊಂಡುದರ ಬಗ್ಗೆ ವಿವರಗಳು ನಮಗೆ ಹೆಚ್ಚಿಗೆ ತಿಳಿದುಬಂದಿಲ್ಲ. ಅರ್ಕಲಸ್ ಮತ್ತು ಕಾರಿಲಸರ ಆಡಳಿತದ ಕಾಲದಲ್ಲಿ ಯೂರೊಟಸ್ ಕಣಿವೆಯನ್ನು ಆಕ್ರಮಣ ಮಾಡುವುದರಿಂದ ಆರಂಭವಾದ ಸ್ಪಾರ್ಟನ್ನರ ರಾಜ್ಯ ವಿಸ್ತರಣಾ ಯೋಜನೆ ಕ್ರಮವಾಗಿ ಸುತ್ತಲಿನ ನಗರಗಳನ್ನು ಕಬಳಿಸಿ ಪೆಲೊಪೊನೀಸ್‌ನ ಪಶ್ಚಿಮ ತೀರದಲ್ಲಿದ್ದ ಆರ್ಗಿವ್ಸ್ ಜನರನ್ನು ಹೊರದೂಡಿ ಆ ಪ್ರದೇಶವನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುವುದರಿಂದ ಪೂರ್ಣವಾಗಿ ಲೆಕೊನಿಯವನ್ನೂ ಆಕ್ರಮಿಸಿದಾಗ ಒಂದು ಘಟ್ಟ ಮುಟ್ಟಿತು. ಪೂರ್ವದಿಕ್ಕಿನ ತಮ್ಮ ನೆರೆಯವರಾದ ಮೆಸ್ಸೆನಿಯರನ್ನು ಸದೆಬಡಿದು ಅವರಿಂದ ಕಪ್ಪಪಡೆಯಲು ಸ್ಪಾರ್ಟಕ್ಕೆ 20 ವರ್ಷಗಳು ಹಿಡಿದವು. ಎರಡನೆಯ ಮೆಸ್ಸೆನಿಯ ಕದನದ ಕೊನೆಗೆ ಅದು ಸಂಪೂರ್ಣವಾಗಿ ಸ್ಪಾರ್ಟದ ಅಧೀನವಾಯಿತು. ಈ ವೇಳೆಗೆ (ಪ್ರ.ಶ.ಪೂ. ಸು.631) ಅರ್ಕೆಡಿಯ ಮತ್ತು ಆರ್ಗೊಲಿಸ್ ಹೊರತಾಗಿ ಉಳಿದ ಯಾವ ರಾಜ್ಯಕ್ಕೂ ಸ್ಪಾರ್ಟವನ್ನು ಎದುರಿಸುವ ಶಕ್ತಿಯಿರಲಿಲ್ಲ. ಅಲೆಗ್ಸಾಂಡ್ರಿಡಸ್ ಮತ್ತು ಅರಿಸ್ಟೋನ್ ಇವರ ಆಳಿಕೆಯ ಕಾಲದಲ್ಲಿ ಇವರು ಸು.550ರಲ್ಲಿ ಟೆಗಿಯ ನಗರವನ್ನು ವಶಪಡಿಸಿಕೊಂಡು ಅರ್ಕೆಡಿಯವನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಅನಂತರ ಮೊದಲನೆಯ ಕ್ಲಿಯೊಮೆನಸ್ ಪ್ರ.ಶ.ಪೂ.545ರಲ್ಲಿ ಆರ್ಗೊಲಿಸ್‌ನ ಪ್ರಾಬಲ್ಯವನ್ನು ಮುರಿದು ಪೆಲೊಪೊನೀಸ್‌ನ ನಾಯಕತ್ವವನ್ನು ಸ್ಪಾರ್ಟಕ್ಕೆ ದೊರಕಿಸಿಕೊಟ್ಟ.

ಪ್ರ.ಶ.ಪೂ.5ನೆಯ ಶತಮಾನದಲ್ಲಿ ಗ್ರೀಸ್ ದೇಶಕ್ಕೆ ಪ್ರಥಮತಃ ಪರ್ಷಿಯನ್ನರ ಆಕ್ರಮಣದ ಭಯ ಆರಂಭವಾಯಿತು. ಪರ್ಷಿಯ ಸಾಮ್ರಾಜ್ಯದ ಸೈರಸ್ ಎಂಬಾತ ಪ್ರ.ಶ.ಪೂ.546ರಲ್ಲಿ ಕ್ರೋಷಸ್‌ನನ್ನು ಸೋಲಿಸಿ ಲಿಡಿಯವನ್ನು ಸ್ವಾಧೀನಪಡಿಸಿಕೊಂಡ. ಬಳಿಕ ಅಯೋನಿಯದ ಗ್ರೀಕರನ್ನು ಸುಲಭವಾಗಿ ಸೋಲಿಸಿದ. ಆದರೆ ಅಯೋನಿಯದ ನಾಗರಿಕರು ದಂಗೆಯೆದ್ದರು. ಇತ್ತ ಪರ್ಷಿಯ ವಿರುದ್ಧದ ಸಹಾಯಕ್ಕಾಗಿ ಗ್ರೀಸ್ ದೇಶಕ್ಕೆ ಮೊರೆಯಿಟ್ಟಾಗ ಸ್ಪಾರ್ಟ ಸಹಾಯ ಮಾಡಲು ನಿರಾಕರಿಸಿತು. ಅಯೋನಿಯದ ದಂಗೆಯಲ್ಲಿ ಅಥೇನಿಯನರು, ಎರೆಟ್ರಿಯನರೂ ಸ್ಪಾರ್ಟನರಿಗೆ ಸಹಾಯ ಮಾಡಿದರೆಂಬ ಕಾರಣ ಅವರನ್ನು ಶಿಕ್ಷಿಸಲೆಂಬ ನೆಪದಿಂದ ಪ್ರ.ಶ.ಪೂ.490ರಲ್ಲಿ ಪರ್ಷಿಯದ ಡೇರಿಯಸ್ 40,000 ಸೈನ್ಯಬಲದೊಂದಿಗೆ ಗ್ರೀಸ್ ದೇಶದ ಮೇಲೆ ದಂಡೆತ್ತಿ ಬಂದ. ಆಗ ಸ್ಪಾರ್ಟ ಡೇಟಿಸ್ ಮತ್ತು ಆರ್ಟಾಫರ್ನೆ ಎಂಬುವರ ನಾಯಕತ್ವದಲ್ಲಿ ಸೈನ್ಯವೊಂದನ್ನು ಅಥೆನ್ಸಿನ ಸಹಾಯಕ್ಕಾಗಿ ಕಳುಹಿಸಿತು. ಆದರೆ ಈ ಸೈನ್ಯ ಮ್ಯಾರತಾನ್ ಕದನ ಮುಗಿದ ಬಳಿಕ ಯುದ್ಧಭೂಮಿಗೆ ಬಂತು. 10 ವರ್ಷಗಳ ಅನಂತರ ಡೇರಿಯಸ್‌ನ ಮಗನಾದ ಸರಕ್ಸೀಸ್ ಎಂಬಾತ ಮತ್ತೆ ದಂಡೆತ್ತಿ ಬಂದಾಗ ಸ್ಪಾರ್ಟದ ದೊರೆ ಲಿಯೊನಿಡಾಸ್ ಗ್ರೀಸಿನ ಸಂಯುಕ್ತ ಸೈನ್ಯದ ನಾಯಕತ್ವ ವಹಿಸಿ ಥರ್ಮೊಪಿಲೆಯನ್ನು ಕಾಪಾಡಲು ಬಹಳವಾಗಿ ಹೋರಾಡಿ ಕೊನೆಗೆ ರಣರಂಗದಲ್ಲಿ ಅಸುನೀಗಿದ. ಅಥೆನ್ಸಿನ ಥೆಮಿಸ್ಟೊಕ್ಲಿಸನ ನಾಯಕತ್ವದಲ್ಲಿ ಸಲಮಿಸ್ ಎಂಬಲ್ಲಿ ನಡೆದ ನೌಕಾಕದನದಲ್ಲಿ ಪರ್ಷಿಯನರು ಭಾರಿಸೋಲು ಅನುಭವಿಸಿ ಹಿಮ್ಮೆಟ್ಟಬೇಕಾಯಿತು.

ಪರ್ಷಿಯನರೊಡನೆ ನಡೆದ ಈ ಕದನಗಳಲ್ಲಿ ಸ್ಪಾರ್ಟದ ಯುದ್ಧಸಾಮರ್ಥ್ಯ ಪ್ರಕಟಗೊಂಡಿತು; ಆದರೆ ಇದರೊಂದಿಗೆ ಅವರಲ್ಲಿದ್ದ ಸ್ವಾರ್ಥ, ಅಲ್ಪತ್ವ ಮೊದಲಾದ ಅವಗುಣಗಳೂ ಬಯಲಾದುವು. ಕ್ರಮೇಣ ಅಥೆನ್ಸ್ ಮತ್ತು ಸ್ಪಾರ್ಟಗಳ ನಡುವಣ ಸಂಬಂಧ ಕಡಿದುಹೋಗಿ ಪರಸ್ಪರ ವೈಷಮ್ಯ ತಲೆದೋರಿತು. ಪೆಲೊಪೊನೇಷ್ಯನ್ ಕದನದ ಮೊದಲ ಘಟ್ಟಗಳಲ್ಲಿ ಅಥೆನ್ಸಿನ ವಿರುದ್ಧ ಹೋರಾಡಲು ಸ್ಪಾರ್ಟ ಹಿಂಜರಿಯಿತು. ಅನಂತರ ಪೆಲೊಪೊನೇಷ್ಯನ್ ಲೀಗಿನ ನಾಯಕತ್ವ ವಹಿಸಿದ್ದ ಕಾರಣದಿಂದಲೂ ಮಿತ್ರರಾಷ್ಟ್ರಗಳ ಬಲವಂತದಿಂದಲೂ ಇವೆಲ್ಲಕ್ಕಿಂತ ಹೆಚ್ಚಾಗಿ ಆ ತನಕ ಆಂತರಿಕವಾಗಿ ಬೆಳೆದುಬಂದಿದ್ದ ವಿದ್ವೇಷದಿಂದಲೂ ಅದು ಆ ಸಮರದಲ್ಲಿ ಪ್ರಮುಖ ಪಾತ್ರ ವಹಿಸಿತು; ಅಥೆನ್ಸ್ ಸಂಪೂರ್ಣವಾಗಿ ನಾಶವಾಗಲು ಕಾರಣವಾಯಿತು. ಇದರಿಂದ ತನ್ನ ಬಲವನ್ನು ಸ್ಪಾರ್ಟ ನಿರೂಪಿಸಿಕೊಂಡಿತಾದರೂ ವಿಜಯದಿಂದ ಲಭ್ಯವಾದ ಅಧಿಕಾರಕ್ಕೆ ಅನರ್ಹತೆಯನ್ನೂ ತೋರಿಸಿಕೊಂಡಿತು. ತನ್ನ ಅಧೀನದ ರಾಜ್ಯಗಳಲ್ಲೆಲ್ಲ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯಿತ್ತು ಮಿತಜನಾಧಿಪತ್ಯವನ್ನು ಸ್ಥಾಪಿಸತೊಡಗಿ ಅಲ್ಲಿಯ ಜನರ ವಿರೋಧವನ್ನು ಕಟ್ಟಿಕೊಂಡಿತು.

ಆದರೆ ಈ ಅಧಿಕಾರ ವ್ಯವಸ್ಥೆ ಬಹಳ ಕಾಲ ನಿಲ್ಲಲಿಲ್ಲ. ಪರ್ಷಿಯದೊಡನೆ ಪುನಃ ನಡೆದ ನೌಕಾಕದನದಲ್ಲಿ ಸೋಲಿಸಲ್ಪಟ್ಟ ಸ್ಪಾರ್ಟ ನೌಕಾರಂಗದಲ್ಲಿ ತನ್ನ ಸ್ಥಾನ ಕಳೆದುಕೊಂಡಿತು. ಅಲ್ಲದೆ, ಪರ್ಷಿಯನರ ನಿರಂತರ ಆಕ್ರಮಣ ನಿಲ್ಲಿಸಲು ಮತ್ತು ಅವರ ಸಹಾಯದೊಡನೆ ಗ್ರೀಸ್ ದೇಶದಲ್ಲಿ ತನ್ನ ಪ್ರಾಬಲ್ಯ ಉಳಿಸಿಕೊಳ್ಳಲು ಪರ್ಷಿಯದ ದೊರೆ ಎರಡನೆಯ ಸರಕ್ಸೀಸ್‌ನೊಡನೆ ಒಂದು ಒಪ್ಪಂದ ಮಾಡಿಕೊಂಡಿತು. ಅದರಂತೆ ಏಷ್ಯಮೈನರ್ ತೀರದಲ್ಲಿಯ ಗ್ರೀಕ್ ನಗರಗಳನ್ನೂ ಸೈಪ್ರಸನ್ನೂ ಪರ್ಷಿಯನ್ನರಿಗೆ ಒಪ್ಪಿಸಿ, ಇತರ ಗ್ರೀಕ್ ನಗರಗಳಿಗೆ ಸ್ವಾತಂತ್ರ್ಯ ನೀಡಲೂ ಒಪ್ಪಿಕೊಂಡಿತು. ಆದರೆ ತನ್ನ ಅಧೀನದಲ್ಲಿದ್ದ ಬೋಇಷಿಯದ ನಗರಗಳು ಕೈತಪ್ಪಿ ಹೋಗುವವೆಂಬ ಹೆದರಿಕೆಯಿಂದ ಥೀಬ್ಸ್ ಈ ಕೊನೆಯ ಕರಾರಿಗೆ ಒಪ್ಪಲಿಲ್ಲ. ಇದರಿಂದ ಥೀಬ್ಸ್ ಮತ್ತು ಸ್ಪಾರ್ಟಗಳ ನಡುವೆ ಘರ್ಷಣೆಗಳುಂಟಾಗಿ ಥೀಬ್ಸ್‌ನ ಎಪಮಿನಾಂಡಸ್ ನಾಲ್ಕು ಬಾರಿ ಸ್ಪಾರ್ಟದ ಮೇಲೆ ದಂಡೆತ್ತಿ ಹೋಗಿ ಅದರ ಶಕ್ತಿಯನ್ನು ಮುರಿಯುವಲ್ಲಿ ಸಫಲನಾದ. ಇದರಿಂದ ಸ್ಪಾರ್ಟದ ಪ್ರಾಬಲ್ಯ ಕ್ಷೀಣಿಸಿತು. ಮ್ಯಾಸಿಡೋನಿಯದ ಫಿಲಿಪ್‌ನಿಗೆ

ಸ್ಪಾರ್ಟವನ್ನು ಕಬಳಿಸಲು ಸದವಕಾಶ ಕಲ್ಪಿಸಿಕೊಟ್ಟಿತು. ಕೊನೆಯತನಕವೂ ಹೋರಾಡಿ ಅವನನ್ನು ಹಿಮ್ಮೆಟ್ಟಲು ಸ್ಪಾರ್ಟ ಯತ್ನಿಸಿತಾದರೂ ಸಫಲಗೊಳ್ಳಲಿಲ್ಲ. ರೋಮನರ ಸಹಾಯದಿಂದ ಫಿಲಿಪ್‌ನು ಮ್ಯಾಸಿಡೋನಿಯವನ್ನು ದಕ್ಕಿಸಿಕೊಂಡ. ಇದರೊಡನೆ ಸ್ಪಾರ್ಟದ ಸ್ವಾತಂತ್ರ್ಯವೂ ಅಂತ್ಯಗೊಂಡಿತು.

ಈಗ ಪ್ರಾಚೀನ ನಗರ ಸ್ಪಾರ್ಟ ನಿವೇಶನಕ್ಕೆ ಸಮೀಪದಲ್ಲಿ ಆಧುನಿಕ ನಗರವೊಂದು ತಲೆಯೆತ್ತಿದೆ. 1835ರಲ್ಲಿ ಈ ನಗರವನ್ನು ರೂಪಿಸಲಾಯಿತು. ಪ್ರಾಚೀನ ನಗರ ನಿವೇಶನದಲ್ಲಿ ಅನೇಕ ಉತ್ಖನನಗಳು ನಡೆದಿದ್ದು, ಈ ನಗರದ ಪೂರ್ವೇತಿಹಾಸಕ್ಕೆ ಸಂಬಂಧಿಸಿದ ನಾನಾ ಬಗೆಯ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಲಾಗಿದೆ. (ಬಿ.ಆರ್.ಜಿ.)

**ಸ್ಪಾರ್ಟಕಸ್:** ಪ್ರ.ಶ.ಪೂ.–71. ರೋಮನ್ನರ ಎದುರಾಗಿ ಹೋರಾಡಿದ ಪ್ರಸಿದ್ಧ ಗುಲಾಮ ವೀರ. ಗ್ರೀಸ್‌ನ ಈಶಾನ್ಯದಲ್ಲಿರುವ ತ್ರೇಸ್ ಎಂಬಲ್ಲಿನ ಅಲೆಮಾರಿ ಜನಾಂಗದಲ್ಲಿ ಜನಿಸಿದ ಈತ ಚಿಕ್ಕಂದಿನಲ್ಲಿ ಕುರುಬನಾಗಿದ್ದ. ಮುಂದೆ ಇವನು ರೋಮನ್ ಸೈನ್ಯಕ್ಕೆ ಸೇರಿದ್ದ. ಸೈನ್ಯವನ್ನು ತೊರೆದಾಗ ರೋಮನರು ಇವನನ್ನು ಸೆರೆಹಿಡಿದು ಗುಲಾಮನನ್ನಾಗಿ ಮಾಡಿ ಕಾಪುಲಿ ಎಂಬಲ್ಲಿನ ಯುದ್ಧ ತರಬೇತಿ ಶಾಲೆಗೆ ಮಾರಿದರು. ಗುಲಾಮಗಿರಿ ಪ್ರಾಚೀನ ಬ್ಯಾಬಿಲೋನಿಯ, ಗ್ರೀಸ್, ರೋಮ್ ದೇಶಗಳಲ್ಲಿ ವಿಶೇಷವಾಗಿ ಆಚರಣೆಯಲ್ಲಿತ್ತು. ಯುದ್ಧದಲ್ಲಿ ಸೆರೆಸಿಕ್ಕವರನ್ನು ಗುಲಾಮರನ್ನಾಗಿ ಮಾಡಿಕೊಳ್ಳುತ್ತಿದ್ದರು, ಅನಂತರ ಮಾರುತ್ತಿದ್ದರು. ಪ್ರಾಚೀನ ರೋಮ್‌ನಲ್ಲಿ ಜನಪ್ರಿಯವಾಗಿದ್ದ ಸಾರ್ವಜನಿಕ ಖಡ್ಗಮಲ್ಲಯುದ್ಧಗಳಲ್ಲಿ ಭಾಗವಹಿಸಲು ಗುಲಾಮರಿಗೆ ಶಿಕ್ಷಣ ಕೊಡಲಾಗುತ್ತಿತ್ತು. ಅವರನ್ನು ಗ್ಲಾಡಿಯೇಟರ್ಸ್ ಎಂದು ಕರೆಯುತ್ತಿದ್ದರು.

ಈತನಿಗೆ ಗುಲಾಮರ ಬಗ್ಗೆ ಬಹಳ ಅನುಕಂಪವಿತ್ತು. ಒಬ್ಬ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿ ಗುಲಾಮನಾಗಿರುವುದು ಸರಿಯಲ್ಲ; ಎಲ್ಲರೂ ಸ್ವತಂತ್ರರಾಗಿ ಬಾಳಬೇಕೆಂಬ ಉದಾತ್ತ ಭಾವನೆಯಿಂದ ಪ್ರೇರಿತನಾಗಿ ಮಲ್ಲಶಾಲೆಯೊಂದರಲ್ಲಿ ಗುಲಾಮರಾಗಿದ್ದ ಎಪ್ಪತ್ತು ಜನ ಒಡನಾಡಿ ಮಲ್ಲರೊಡನೆ ಸೇರಿ ರೋಮನ್ ದೊರೆಯ ವಿರುದ್ಧ ದಂಗೆ ಎದ್ದ. ಅವರೊಡನೆ ವೆಸೂವಿಯಸ್ ಪರ್ವತದಲ್ಲಿ ಆಶ್ರಯ ಪಡೆದ. ಅಲ್ಲಿ ಈಗಾಗಲೇ ಸೇರಿಕೊಂಡಿದ್ದ ಅನೇಕ ಗುಲಾಮರು ಇವನನ್ನು ಕೂಡಿಕೊಂಡರು. ಇವರು ಸ್ವಲ್ಪ ಶಸ್ತ್ರಾಸ್ತ್ರಗಳನ್ನು ಪಡೆದು ರೋಮನರ ಎರಡು ಪಡೆಗಳನ್ನು ಒಂದಾದ ಮೇಲೊಂದರಂತೆ ಸೋಲಿಸಿದರು; ದಕ್ಷಿಣ ಇಟಲಿಯ ಬಹುಭಾಗವನ್ನು ಗೆದ್ದರು. ಆರಂಭಕ್ಕೆ ಶೇ.70 ರಷ್ಟಿದ್ದ ಯೋಧರ ಬಲ ಅನೇಕ ಸಾವಿರವಾಯಿತು. ಅನೇಕ ಗುಲಾಮರು ಇಟಲಿಯನ್ನು ಬಿಡಲು ಒಪ್ಪದಿದ್ದಾಗ ಈತ ಮತ್ತು ಈತನ ಒಡನಾಡಿಗಳು ಸಿಸಿಲಿಗೆ ಹೋಗಬೇಕೆಂದಿರುವಾಗಲೇ ಇವರನ್ನು ಹೊಸ ರೋಮನ್ ನಾಯಕ ಮಾರ್ಕಸ್ ಲಿಸಿನಿಯಸ್ ಕ್ರಾಸಸ್ ಎದುರಿಸಿ ಜರ್ಮಾನಿ ಮತ್ತು ಫ್ರಾನ್ಸ್ ಗುಲಾಮರನ್ನು ಸೋಲಿಸಿದ. ಸ್ಪಾರ್ಟಕಸ್ ಕೊನೆಯವರೆಗೂ ಶೂರತನದಿಂದ ಹೋರಾಡಿ ಮಡಿದ (ಪ್ರ.ಶ.ಪೂ.71). ಸೆರೆ ಸಿಕ್ಕಿದ ಸಾವಿರಾರು ಗುಲಾಮರನ್ನು ಶಿಲುಬೆಗೇರಿಸಲಾಯಿತು.

ಪ್ರ.ಶ.ಪೂ. ಒಂದನೆಯ ಶತಮಾನದಿಂದ ಇಂದಿನವರೆಗೂ ಸ್ಪಾರ್ಟಕಸ್ ಎಂಬ ಹೆಸರು ಅನೇಕ ಕ್ರಾಂತಿಕಾರರ ಗುಪ್ತನಾಮವಾಗಿದೆ. ಮನುಷ್ಯನ ಎಂದೂ ನಂದದ ಸ್ವಾತಂತ್ರ್ಯದಾಹಕ್ಕೆ ಈತ ಸಂಕೇತವಾಗಿದ್ದಾನೆ. ಈತನ ಉದಾತ್ತ ಭಾವನೆ ಇಂದಿಗೂ ತುಳಿತಕ್ಕೆ ಒಳಗಾದವರ ಸ್ವಾತಂತ್ರ್ಯದ ಬಯಕೆಗೆ ಪ್ರೇರಣೆಯಾಗಿದೆ. (ಎನ್.ಎಲ್.)

**ಸ್ಪಿರಿಟ್ ಕೇವ್:** ವಾಯವ್ಯ ಥೈಲೆಂಡಿನ ಪಾಂಗ್ ಮಫ ಜಿಲ್ಲೆಯಲ್ಲಿ ಮೆ ಹೊಂಗ್ ಸೋನ್ ಪ್ರಾಂತದಲ್ಲಿರುವ ಪುರಾತತ್ತ್ವ ನೆಲೆ. ಸಾಲ್ವೀನ್ ನದಿಯ ಅಂಚಿನಲ್ಲಿ ಸುಣ್ಣಕಲ್ಲಿನ ಬೆಟ್ಟದ ತಪ್ಪಲಿನಲ್ಲಿದೆ. ಈ ನೆಲೆಯಲ್ಲಿ 1960ರ ದಶಕದಲ್ಲಿ ಚೆಸ್ಟರ್ ಗೋರ್ಮನ್ ಉತ್ಖನನ ನಡೆಸಿ ಹೊಬಿನಿಯನ್ ಹಾಗೂ ನವಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಪತ್ತೆಹಚ್ಚಿದ. ಇಲ್ಲಿ ಸಿಕ್ಕ ಅನೇಕ ಬಗೆಯ ಸಸ್ಯಾವಶೇಷಗಳು ಈ ನೆಲೆಯ ಪ್ರಾಮುಖ್ಯವನ್ನು ಹೆಚ್ಚಿಸಿವೆ.

ಪ್ರ.ಶ.ಪೂ.9000–6000ದ ನಡುವೆ ಹೊಬಿನಿಯನ್ ಸಂಸ್ಕೃತಿಯ ಜನರು ಇಲ್ಲಿ ನೆಲೆಸಿದ್ದರು. ಬೇಟೆ ಹಾಗೂ ಸಂಗ್ರಹಣೆಯನ್ನು ಅವಲಂಬಿಸಿದ್ದ ಈ ಜನರು ಉಪಯೋಗಿಸಿದ ಮರದ ಹಾಗೂ ಶಿಲೆಯ ಉಪಕರಣಗಳೂ ಆಹಾರವಾಗಿ ಬಳಸಿದ ಪ್ರಾಣಿಮೂಳೆಗಳೂ ಇಲ್ಲಿ ವಿಪುಲವಾಗಿವೆ. ಮೂಳೆಗಳ ಮೇಲೆ ಕತ್ತರಿಸಿದ ಗುರುತುಗಳಿದ್ದರೂ ಮಾಂಸವನ್ನು ಸುಟ್ಟು ತಿಂದ ಕುರುಹುಗಳಿಲ್ಲದಿರುವುದು ಸ್ವಾರಸ್ಯಕರ. ಪ್ರಾಯಶಃ ಇಂದಿನಂತೆ ಅಂದೂ ಬಿದಿರ ಹಂಡೆಗಳಲ್ಲಿ ಮಾಂಸವನ್ನು ಕುಸುಪಿ (ಸ್ಟ್ಯೂ) ತಿನ್ನುವ ರೂಢಿಯಿತ್ತು. ಅಡಕೆ, ಅವರೆ, ಬಟಾಣಿ, ಕಾಳುಮೆಣಸು, ಸೋರೆಕಾಯಿ, ಸೌತೆಕಾಯಿ, ವಾಟರ್ ಚೆಸ್ಟ್‌ನಟ್ ಮುಂತಾದ ಕಾಳು–ತರಕಾರಿಗಳ ಅವಶೇಷಗಳು ಇಲ್ಲಿ ದೊರೆತಿವೆ. ಹೆಚ್ಚಿನವು ಸಂಗ್ರಹಿಸಿದ ಕಾಡುತಳಿಗಳು. ಆದರೆ ಚೆಸ್ಟ್‌ನಟ್, ಅಡಕೆ ಹಾಗೂ ಸೋರೆಗಳನ್ನು ಇವರೇ ಬೆಳೆದಿರುವಂತೆ ಕಾಣುತ್ತದೆ. ಈ ಜನರು ಸಸ್ಯಾಹಾರ ಸಂಗ್ರಹಣೆಯೊಂದಿಗೆ ಪ್ರಾಯಶಃ ತೋಟಗಾರಿಕೆಯನ್ನೂ ಮಾಡುತ್ತಿದ್ದರೆಂಬ ಅನುಮಾನಕ್ಕೆ ಇವು ಇಂಬುಕೊಟ್ಟಿವೆ. ಈವರೆಗೆ ಇವು ಆಗ್ನೇಯ ಏಷ್ಯದಲ್ಲಿ ಸಸ್ಯ ಕೃಷಿಯ ಪ್ರಾಚೀನ ಉದಾಹರಣೆಗಳಾಗಿವೆ.

ಪ್ರ.ಶ.ಪೂ.ಸು.6600ರ ಹೊತ್ತಿಗೆ ಇಲ್ಲಿ ನವಶಿಲಾಯುಗ ಸಂಸ್ಕೃತಿ ಆರಂಭಗೊಂಡಿತೆಂಬುದು ಮಣ್ಪಾತ್ರೆ ಹಾಗೂ ಶಿಲೋಪಕರಣಗಳಿಂದ ತಿಳಿದುಬರುತ್ತದೆ. ಮಣ್ಪಾತ್ರೆಗಳಿಗೆ ಉಜ್ಜಿ ಹೊಳಪು ಕೊಡಲಾಗಿದೆ (ಬರ್ನಿಷ್ಡ್). ಇವನ್ನು ಗಟ್ಟಿಗೊಳಿಸಲು ಮಣ್ಣಿನೊಂದಿಗೆ ಸಸ್ಯದ ನಾರನ್ನು ಬೆರೆಸಲಾಗಿದೆ. ಹೊರಮೈ ಮೇಲೆ ಹುರಿಯೊತ್ತಿ ಅಲಂಕರಿಸಲಾಗಿದೆ. ಶಿಲೋಪಕರಣಗಳಲ್ಲಿ ಆಯತಾಕಾರದ, ಭಾಗಶಃ ಉಜ್ಜಿ ನಯಗೊಳಿಸಿದ ಬಾಚಿಗಳು ಅಧಿಕವಾಗಿವೆ. (ವಿ.ಎಸ್.)

**ಸ್ವಾಟ್ ಕಣಿವೆ ಕಲ್ಗೋರಿಗಳು:** ಪಾಕಿಸ್ತಾನದ ವಾಯವ್ಯ ಅಂಚಿನಲ್ಲಿರುವ ಕಣಿವೆ ಪ್ರದೇಶ. ಇಲ್ಲಿ ಪ್ರ.ಶ.ಪೂ.2ನೆಯ ಸಹಸ್ರಮಾನ ಉತ್ತರ ಭಾಗದಿಂದ 1ನೆಯ ಸಹಸ್ರಮಾನದ ಮಧ್ಯದವರೆಗಿನ ಹಂತದ ವಿವಿಧ ಪ್ರಕಾರಗಳ ಕಲ್ಗೋರಿಗಳಿವೆ. ಈ ಪ್ರದೇಶದ ಪಶ್ಚಿಮ ಭಾಗ ಗಾಂಧಾರ ಪ್ರಾಂತವನ್ನೊಳಗೊಂಡಿದೆ. ಆದ್ದರಿಂದ ಇಲ್ಲಿಯ ಕಲ್ಗೋರಿ ಸಂಸ್ಕೃತಿಯನ್ನು ವಿ.ಹೆಚ್. ದಾನಿ ಅವರು ಗಾಂಧಾರ ಸಮಾಧಿ ಸಂಸ್ಕೃತಿ ಎಂದು ಹೆಸರಿಸಿದರು. ಇಟಲಿಯ ತುಚಿ ಆ್ಯಂಟೊನಿ ಇದನ್ನು ಬೌದ್ಧಯುಗ ಪೂರ್ವದ ಸಂಸ್ಕೃತಿಯೆಂದು ಕರೆದರು. ಬಲಿಬಂಟ ಮತ್ತು ಘಲಿಗೈನಲ್ಲಿ ಕಲ್ಗೋರಿಗಳುಳ್ಳ 12 ನೆಲೆಗಳನ್ನೂ ಈ ಸಂಸ್ಕೃತಿಯ ಜನ ವಾಸ್ತವ್ಯ ನೆಲೆಯನ್ನೂ ಶೋಧಿಸಲಾಗಿದೆ. ಸ್ಟಕುಲ್ ನೇತೃತ್ವದಲ್ಲಿ ಇಟಲಿಯ ಪುರಾತತ್ತ್ವಜ್ಞರ ತಂಡ ಮತ್ತು ಪಾಕಿಸ್ತಾನದ ತಂಡ ಈ ಪ್ರದೇಶದಲ್ಲಿ ಅನ್ವೇಷಣೆ ಮತ್ತು ಉತ್ಖನನವನ್ನು ನಡೆಸಿದವು.

ನೆಲಕೋಣೆ

ಇಂಗಾಲ–14 ವಿಧಾನದಿಂದ ದಾನಿಯವರು ಇಲ್ಲಿಯ ನೆಲೆಗಳನ್ನು ತಾಮ್ರ ಮತ್ತು ಕಬ್ಬಿಣಯುಗದ್ದಾಗಿ ಗುರುತಿಸಿದ್ದಾರೆ. ತಾಮ್ರಯುಗದ ಒಂದನೆಯ ಹಂತದ ಗೋರಿಗಳ ಕಾಲಮಾನ ಪ್ರ.ಶ.ಪೂ.1600–1300, ಎರಡನೆಯ ಹಂತದವು ಪ್ರ.ಶ.ಪೂ.1200–1000. ಕಬ್ಬಿಣಯುಗದ ಹಂತದ ಗೋರಿಗಳು ಪ್ರ.ಶ.ಪೂ.900–600 ಕಾಲಾವಧಿಯದ್ದು. ಸ್ಟಕುಲ್ ಅವರ ಪ್ರಕಾರ ಕಂಚಿನಯುಗದ (1ನೆಯ ಹಂತ) ಕಾಲಮಾನ ಪ್ರ.ಶ.ಪೂ.1600–1000; ಆದಿ ಕಬ್ಬಿಣಯುಗ (2ನೆಯ ಹಂತ) 1000–600 (ದಾನಿಯವರ 2 ಮತ್ತು 3ನೆಯ ಹಂತ) ಮತ್ತು ಮಧ್ಯಕಾಲಿನ ಕಬ್ಬಿಣಯುಗದ 3ನೆಯ ಹಂತ ಪ್ರ.ಶ.ಪೂ.600–400. ಶವವನ್ನು ಗುಂಡಿಯಲ್ಲಿ ನೇರ ಭಂಗಿಯಲ್ಲಿ ಹೂಳುವುದು ಹಾಗೂ ದಹನ ಕ್ರಿಯೆ ಈ ಎರಡು ಕ್ರಮಗಳು ಇಲ್ಲಿ ಕಂಡುಬಂದಿವೆ. ದಹನದ ಅನಂತರ ಪೂರ್ಣ ಅಥವಾ ಕೆಲವೊಂದು ಅಸ್ಥಿಗಳನ್ನು ಸಂಗ್ರಹಿಸಿ ಅಥವಾ ಬಯಲಿನಲ್ಲಿಟ್ಟ ಶವದ ಅಸ್ಥಿಗಳನ್ನು ಸಂಗ್ರಹಿಸಿ ಗುಂಡಿಯೊಳಗಿಟ್ಟು ಪದ್ಧತಿಗಳಿಗನುಸಾರವಾಗಿ ಹೂಳುವ ವಿಧಾನಗಳಿದ್ದವು. ಕೆಲವೊಂದರಲ್ಲಿ ಹಳೆಯ ಗುಂಡಿ ಭಾಗಶಃ ಸೇರಿದಂತೆ ಹೊಸ ಗುಂಡಿಯನ್ನು ಅಗೆದದ್ದು ಕಂಡುಬಂದಿದೆ.

ಮೊದಲು 2–4 ಮೀ ವ್ಯಾಸದ ದುಂಡನೆ ಗುಂಡಿಯನ್ನು (ಮೇಲ್ಗುಂಡಿ) 1–2ಮೀ ಆಳದವರೆಗೆ ಅಗೆದು ಇದರ ತಳದಲ್ಲಿ ಆಯತಾಕಾರದ ಮತ್ತೊಂದು ಗುಂಡಿ (ಕೆಳಗುಂಡಿ) ಅಗೆಯುತ್ತಿದ್ದರು. ಇದರೊಳಗೆ ಅಸ್ಥಿ ಅವಶೇಷಗಳನ್ನೂ ಮಣ್ಪಾತ್ರೆ, ಲೋಹದ ಉಪಕರಣಗಳನ್ನೂ ಇಡುತ್ತಿದ್ದರು. ಈ ಗುಂಡಿಯನ್ನು ಕಲ್ಲು ಹಲಗೆಗಳಿಂದ ಮುಚ್ಚಲಾಗುತ್ತಿತ್ತು. ಮೇಲಿನ ಗುಂಡಿಯನ್ನು ಮಣ್ಣಿನಿಂದ ತುಂಬಿ ನೆಲಮಟ್ಟದಲ್ಲಿ ಗುಂಡಿಯ ಸುತ್ತಲೂ ಒಂದರ ಪಕ್ಕದಲ್ಲೊಂದರಂತೆ ಕಲ್ಲುಗಳನ್ನು ಇಡಲಾಗುತ್ತಿತ್ತು. ಮಕ್ಕಳ ಶವಕುಣಿಗಳನ್ನು ನೆಲೆಯ ಒಂದು ಬದಿಯಲ್ಲಿ ಮಾಡಲಾಗುತ್ತಿತ್ತು. ಆಯತಾಕಾರದ ಏಕೈಕ ಶವಗುಂಡಿಯಿದ್ದು ಗುಂಡಿಯ

ಗೋಡೆಗಳಿಗೆ ಅಂಟಿಕೊಂಡಂತೆ ಕಲ್ಲುಚಪ್ಪಡಿಯನ್ನು ನೆಡುತ್ತಿದ್ದರು ಅಥವಾ ತುಂಡುಕಲ್ಲುಗಳಿಂದ ಗೋಡೆಯನ್ನು ನಿರ್ಮಿಸಲಾಗುತ್ತಿತ್ತು. ನೆಲಮಟ್ಟದಲ್ಲಿ ಕಲ್ಲು ವೃತ್ತವಿರುತ್ತಿರಲಿಲ್ಲ. ತಿಮರ್‌ಗರ್ಹ್, ಬಲಂಬಟ್, ಬುತ್ಕರII, ಕತೆಲೈI, ಲೊಯಿಬನ್ಸ್, ತರಿಕೆ, ಲಾಲಬತ್ಯೆ, ಸೊಗಲ್ಯೆ, ಖೆಲ್ಯೆ ಮೊದಲಾದ ನೆಲೆಗಳಲ್ಲಿ ಉತ್ಖನನ ಮಾಡಲಾಗಿದೆ. ಈ ಗೋರಿಗಳಲ್ಲಿ ಸಾಮಾನ್ಯವಾಗಿ ಮನುಷ್ಯನ ಹಾಗೂ ಪ್ರಾಣಿಗಳ ಅಸ್ಥಿ ಅವಶೇಷಗಳು, ವಿವಿಧ ಪ್ರಕಾರಗಳ ಮಣ್ಪಾತ್ರೆಗಳು, ಸುಡಾವೆಮಣ್ಣಿನ ಗೊಂಬೆಗಳು, ಲೋಹದ ಉಪಕರಣಗಳು, ಅರೆಪ್ರಶಸ್ತ ಕಲ್ಲಿನ ಮಣಿಗಳು, ಆಭರಣಗಳು ದೊರೆತಿವೆ. ತಿಮರ್‌ಗರ್ಹ್‌ದಲ್ಲಿ ಕಡಿವಾಣವಿರುವ ಲಗಾಮು, ಅಸ್ಥಿ ಅವಶೇಷಗಳು ದೊರೆತಿವೆ. ಮನುಷ್ಯನ ಮುಖದಂತಿರುವ ಮಣ್ಣಿನ ಪಾತ್ರೆ. ಮತ್ತೊಂದು ಶವಕುಣಿಯಲ್ಲಿ ಎರಡು ಹಂತಗಳಲ್ಲಿ ಮಾನವ ಅಸ್ಥಿಗಳಿದ್ದು ಇದನ್ನು ಎರಡು ಬಾರಿ ಉಪಯೋಗಿಸಿರುವುದು ಸ್ಪಷ್ಟ. ಇನ್ನೊಂದು ಕುಣಿಯಲ್ಲಿ ಕಾಲುಗಳನ್ನು ಮಡಿಸಿ ಅಡ್ಡಮಲಗಿಸಿದ ಶವ ಹಾಗೂ ಹೊರಗಿಟ್ಟ ಶವದ ಅಸ್ಥಿ ಸಂಗ್ರಹ ಹೀಗೆ ಎರಡು ಪದ್ಧತಿಗಳ ಮಿಶ್ರಣದ ಕುರುಹುಗಳಿದ್ದುವು. ಕತೆಲೈ 1 ರಲ್ಲಿಯ ಸುಟ್ಟ ಅಸ್ಥಿಗಳ, ಹೊರಗಿಟ್ಟ ಶವಗಳ ಅಸ್ಥಿ ಸಂಗ್ರಹ ಹಾಗೂ ವಿಶೇಷವಾಗಿ ಕಾಲು ಮೇಲಕ್ಕೆ ಮಡಿಸಿ ಎದುರು ಬದುರು ಅಡ್ಡಮಲಗಿಸಿದ ಶವಜೋಡಿಗಳ ಸಮಾಧಿಗ ಳಿದ್ದುವು. ಅತ್ಯಂತ ಅಪರೂಪವಾಗಿ ಬೂದಿ ಹಾಗೂ ಸುಟ್ಟ ಅಸ್ಥಿಗಳಿದ್ದ ಸುಡಾವೆಮಣ್ಣಿನ ಪೆಟ್ಟಿಗೆಗಳಿದ್ದುವು. ಇಲ್ಲಿಯ ಶವಕುಣಿಗಳ ನೆಲೆಯಲ್ಲಿ ಪ್ರತ್ಯೇಕವಾಗಿ ಹುಗಿದ, ಸಾಕಿದ ಎರಡು ಕುದುರೆಗಳ ಅಸ್ಥಿಪಂಜರವಿದ್ದುದು ಗಮನಾರ್ಹ. ಇನ್ನೊಂದು ಶವಕುಣಿಯಲ್ಲಿ ಕುಣಿಗೆ ಅಡ್ಡಲಾಗಿಟ್ಟ ಕಲ್ಲುಚಪ್ಪಡಿಯಲ್ಲಿ ಉದ್ದೇಶಪೂರ್ವಕವಾಗಿ ಮಾಡಿದ ತೂತು ಇದ್ದಿತ್ತು. ಸೈದು ಶರೀಫನಲ್ಲಿಯ ಶವಕುಣಿಗಳಲ್ಲಿ ಕಂಚಿನ ಗಾಳ, ಚಿನ್ನದ ಉಂಗುರ, ಬೆಳ್ಳಿಯ ತೆಳು ತಗಡು, ತುದಿಯಲ್ಲಿ ಕಬ್ಬಿಣದ ಉಂಗುರ ಹಾಕಿದ ಈಟಿ ಮೊನೆ, ಎಲುಬಿನ ಕೈಬಳೆ, ಕಾರ್ನೆಲಿಯನ್, ಕ್ಯಾಲ್ಸೆಡನಿ ಮೊದಲಾದ ಅರೆಪ್ರಶಸ್ತ ಕಲ್ಲುಗಳ ನೂರಾರು ಮಣಿಗಳು, ಸುಡಾವೆಮಣ್ಣಿನ ಸ್ತ್ರೀ, ಪ್ರಾಣಿಗೊಂಬೆಗಳಿದ್ದುದು ಗಮನಾರ್ಹ.



ಶವಕೋಣೆಯಲ್ಲಿಯ ಮನುಷ್ಯ ಮುಖವಾಡದಂತಿರುವ ಮಣ್ಪಾತ್ರೆ

ಸ್ವಾಟ್ ಕಣಿವೆಯ ಕಂಚಿನಯುಗದ ಮತ್ತು ಆದಿ ಕಬ್ಬಿಣಯುಗದ ಶವಕುಣಿಗಳು ಕ್ರಮವಾಗಿ ಋಗ್ವೇದ ಕಾಲದಲ್ಲಿ (ಅಯಸ್) ಮತ್ತು ಮಹಾಭಾರತ ಕಾಲದಲ್ಲಿ ಆರ್ಯರು ಭಾರತಕ್ಕೆ ವಲಸೆಬಂದುದನ್ನು ಸೂಚಿಸುತ್ತವೆ ಎಂದು ದಾನಿ ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಶವಕುಣಿಗಳಲ್ಲಿ ದೊರೆತ ಅವಶೇಷಗಳು ಆರ್ಯ ಸಮುದಾಯದ ಸಂಸ್ಕೃತಿಯದೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಈ ನೆಲೆಗಳಲ್ಲಿ ದೊರೆತ ಸಾಂಸ್ಕೃತಿಕ ಅವಶೇಷಗಳು ಬಲೂಚಿಸ್ತಾನದ ತಾಮ್ರ-ಶಿಲಾಯುಗ ಇಲ್ಲವೆ ಹರಪ್ಪ ಸಂಸ್ಕೃತಿಯ ಅವಶೇಷಗಳನ್ನು ಹೋಲುವುದಿಲ್ಲ. ಉತ್ತರ ಇರಾನ್ ಮತ್ತು ಮಧ್ಯ ಏಷ್ಯ ಸಂಸ್ಕೃತಿಗಳೊಡನೆ ಇವು ಸಂಬಂಧ ಹೊಂದಿದ್ದಂತೆ ಕಾಣುತ್ತದೆ. ಇವು ಒಂದು ಪ್ರತ್ಯೇಕ ಸಂಸ್ಕೃತಿ ಸಂಕೀರ್ಣವನ್ನು ಸೂಚಿಸುತ್ತವೆ ಯೆಂಬ ಅಭಿಪ್ರಾಯವಿದೆ. (ಎ.ಎಸ್.)

**ಸ್ವಾತಂತ್ರ್ಯ ಹೋರಾಟ-ಭಾರತದಲ್ಲಿ:** ಪ್ಲಾಸಿ ಕದನದಿಂದ ಆರಂಭಿಸಿ (1757) ಪಂಜಾಬಿನ ಸಿಖ್ಖರ ಪತನ(1848)ದವರೆಗಿನ ಅವಧಿಯಲ್ಲಿ ಭಾರತ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ವಶಕ್ಕೆ ಬಂತು. ಪರಸ್ಪರ ಅನೈಕ್ಯತೆ, ದ್ವೇಷಗಳಿಂದ ಪರಕೀಯರ ವಶವಾದರೂ ಭಾರತೀಯರು ಬೇರೆ ಬೇರೆ ಕಾಲದಲ್ಲಿ ಬ್ರಿಟಿಷರ ವಿರುದ್ಧ ಪ್ರತ್ಯೇಕ ಬಂಡಾಯಗಳನ್ನು ಹೂಡಿದ್ದರು. ಅವು ಸಂಘಟಿತ ಹೋರಾಟಗಳಲ್ಲವಾದರೂ ಪರಕೀಯರ ಆಳಿಕೆ ಬಗ್ಗೆ ತೋರಿದ ಉಗ್ರ ಪ್ರತಿಭಟನೆಗಳೇ ಆಗಿದ್ದವು. ಬಂಗಾಲದಲ್ಲಿ 1763ರಿಂದಲೇ ಸನ್ಯಾಸಿ ಬಂಡಾಯವೆಂದು ಪ್ರಸಿದ್ಧವಾದ ಅಶಾಂತಿ 1800ರ ವರೆಗೆ ಸಾಗಿತು. ಛೋಟಾನಾಗಪುರ ಮತ್ತು ಮಣಿಪುರದ ಚೌರರು 1767ರಿಂದಲೇ ಬಂಡೆದ್ದು 1799ರಲ್ಲಿ ಈ ಬಂಡಾಯ ಉಗ್ರ ರೂಪ ತಾಳಿತು. ವಾರಾಣಸಿಯ ಚೈತ್‌ಸಿಂಗನ ಸೈನಿಕರು 1780ರಲ್ಲಿ ಬಂಡುಹೂಡಲು ಅವರನ್ನು ಹತ್ತಿಕ್ಕಬಂದ ವಾರನ್ ಹೇಸ್ಟಿಂಗ್ಸ್‌ನೇ ಪಲಾಯನ ಮಾಡುವ ಪ್ರಸಂಗ ಬಂದಿತ್ತು. ಬಿಹಾರದ ಸಸಾರಾಂನ ರೇಜಾ ಕೂಲಿಖಾನ್ 1780ರಲ್ಲಿ, ಆಂಧ್ರದ ವಿಜೇನಗರಂನ ರಾಜ 1794ರಲ್ಲಿ, ಘಟವಾಳನ ಜಗನ್ನಾಥ ದೇವ್ 1773ರಲ್ಲಿ, ಅವಧ್‌ನ (ಅಯೋಧ್ಯೆ) ವಜೀರ್ ಅಲಿ ಮತ್ತು ಗಯದ ಬಳಿಯ ತಿಕಾರಿಯ ರಾಜ ಮಿತ್ರಜಿತ್ 1799ರಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆ ಮಾಡಿದರು.

1800-1801ರಲ್ಲಿ ಕರ್ನಾಟಕ (ಧೋಂಡಿಯ ವಾಘ್), ಕೇರಳ (ಕೇರಳವರ್ಮ), ತಮಿಳುನಾಡು (ಮರುದು ಪಾಂಡ್ಯನ್, ಕಟ್ಟಬೊಮ್ಮನ್ ಇತ್ಯಾದಿ) ಇವರೆಲ್ಲ ಸೇರಿ ದಕ್ಷಿಣ ಭಾರತ ಬಂಡಾಯವೆಂದು ಪ್ರಸಿದ್ಧವಾದ ಭಾರೀ ಉತ್ಥಾನ ನಡೆಸಿ ಬ್ರಿಟಿಷರನ್ನು ಹಣ್ಣುಗಾಯಿ ನೀರುಗಾಯಿ ಮಾಡಿದರು. ಕೇರಳದ ಈ ಬಂಡಾಯ 1803ರ ವರೆಗೆ ಸಾಗಿ, ಮುಂದೆ ಯೆಮನ್ ನಾಯರ್ ಎಂಬವನಿಂದ 1806ರಲ್ಲಿ ಮತ್ತೆ ಕಾಣಿಸಿತು. 1806 ಪ್ರಸಿದ್ಧ ವೆಲ್ಲೂರು ಬಂಡಾಯವಾಯಿತು. ತಿರುವಾಂಕೂರಿನಲ್ಲಿ ವೇಲು ತಂಬಿ ದಳದಿಂದ 1809ರಲ್ಲಿ ಪ್ರತಿಭಟನೆಯಾಯಿತು.

1816ರಲ್ಲಿ ಬರೇಲಿಯಲ್ಲಿ (ಪೇಶ್ವೆಯ ಸೇನಾನಿ ತ್ರಿಯಂಬಕಜಿ ಡೆಂಗ್ಲೆಯಿಂದ ಪ್ರೇರಿತವಾಗಿ) ಖಾನದೇಶದ (ನಾಸಿಕ) ಭಿಲ್ಲರು 1817-18ರಲ್ಲಿ, ಕಾಥೇವಾಡದ ರಾವ್ ಭಾರಾಮಲ್ 1816ರಲ್ಲಿ, ಕೊಪ್ಪಳದ ಜಮೀನುದಾರ ವೀರಪ್ಪ 1819ರಲ್ಲಿ, ಬೀದರ್‌ನ ಸುಳಿಯಳ್ಳಿಯ ದೇಶಮುಖರು 1820ರಲ್ಲಿ ದಂಗೆಯೆದ್ದ ಘಟನೆಗಳು ಮುಖ್ಯವಾದವು. ಇದಲ್ಲದೆ 1824ರಲ್ಲಿ ಭಾರತದ ಎಲ್ಲೆಡೆ ದಂಗೆಗಳ ಸರಣಿಯೇ ಆಯಿತು. ರೂರ್ಕಿಯ ತಾಲ್ಲೂಕುದಾರ ಬಿಜಯ್ ಸಿಂಗ್ ಮೊದಲು ಬಂಡೆದ್ದ. ರೊಟಕ್‌ನ ಜಾಟರದು ಮುಂದಿನ ಸರದಿ. ಸೂರಜ್‌ಮಲ್ ಜಾಟ್ ಇವರ ನಾಯಕ. ಬುಂದೇಲ್‌ಖಂಡದ ಜಾಲನ್‌ನ ನಾನಾಪಂಡಿತ ಬಂಡು ಘೋಷಿಸಿದ. ಪತಿ ಕಣಿವೆಯಲ್ಲಿ ದಲ್ಲಾ ಎಂಬ ಪಿಂಡಾರಿ ಭಿಲ್ಲರ ನೆರವಿನಿಂದ ಭಾರಿ ಬಂಡಾಯ ನಡೆಸಿದ. ಕಚ್ಛ್‌ನ ರಾವ್ ಭಾರಾಮಲ್ ಮತ್ತು ಅಮೀರ್ ಸಿಂಗರೂ ಬಂಡಾಯದ ಬಾವುಟ ಹಾರಿಸಿದರು. ಮರುವರ್ಷ (1825) ಅನೇಕ ಪಾಟೀಲರ ನೆರವಿನಿಂದ ಖಾನ್ ದೇಶದ ಭಿಲ್ಲರು ಮತ್ತೆ ಬಂಡೆದ್ದರು. 1824ರ ವರ್ಷ ಕಚ್ಛ್‌ನ ಕೋಲರು ದಂಗೆ ನಡೆಸಿದರು. 1828ರಲ್ಲಿ ಮತ್ತೆ ಅವರ ಬಂಡಾಯವಾಯಿತು.

ದಕ್ಷಿಣದಲ್ಲಿ ಅದೇ ವರ್ಷ (1824) ಪೇಶ್ವೆಯ ಅಧಿಕಾರಿ ದಿವಾಕರ್ ದೀಕ್ಷಿತ್ ಸಿಂದಗಿಯಲ್ಲಿ ಬಂಡಾಯ ಹೂಡಿದ. ಕಿತ್ತೂರು ಚೆನ್ನಮ್ಮನ ಬಂಡಾಯ ನಡೆದದ್ದೂ ಅದೇ ವರ್ಷ. ಇದೇ ಕಿತ್ತೂರಲ್ಲಿ 1829-33ರಲ್ಲಿ ಸಂಗೊಳ್ಳಿ ರಾಯಣ್ಣನ ಹೋರಾಟವಾಯಿತು. ಕಿತ್ತೂರಲ್ಲಿ ಅನೇಕ ಬಂಡಾಯಗಳಾದವು. ಆಂಧ್ರದ ಪರ್ಲಿಕಿಮೇಡಿಯ ಜಮೀನ್ದಾರರು 1829ರಲ್ಲಿ ಆರಂಭಿಸಿದ ಬಂಡಾಯ 1835ರ ವರೆಗೆ ಸಾಗಿತ್ತು. ಕರ್ನಾಟಕದ ನಗರ ಬಂಡಾಯ (1830-31) ಎಷ್ಟು ಉಗ್ರವಾಗಿತ್ತೆಂದರೆ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರ ಕಳೆದುಕೊಳ್ಳಬೇಕಾಯಿತು. ಇದೇ ಕಾಲಕ್ಕೆ 1830-31ರಲ್ಲಿ ಕೆನರ ಬಂಡಾಯ ಕನ್ನಡ ಕರಾವಳಿಯಲ್ಲಿ ರೈತರಿಂದ ಸಾಗಿತು. 1836-37ರಲ್ಲಿ ಕೊಡಗಿನ ಕಲ್ಯಾಣಪ್ಪನ ಕಾಟುಕಾಯಿ ಎಂಬ ಸರಣಿ ಪ್ರಸಿದ್ಧ. ಒರಿಸ್ಸದ ಗುಂಸಾರ್‌ನ ಜಮೀನ್ದಾರ ಧನಂಜಯ ಭಾಂಜಾ 1835ರಲ್ಲಿ ದಂಗೆಯೇಳಲು ಬ್ರಿಟಿಷರು ಅವನ ಜೊತೆ ಒಪ್ಪಂದ ಮಾಡಿಕೊಂಡರು. ಸತಾರಾ ಛತ್ರಪತಿಯ ಅಧಿಕಾರಿಯಾಗಿದ್ದ ನರಸಪ್ಪ ಪೇಟಕರ್ ಬಾದಾಮಿಯಲ್ಲಿ 1841ರಲ್ಲಿ ದಂಗೆ ಎದ್ದ. ಕೊಲ್ಹಾಪುರದ ಗಡಕರಿಗಳೆಂಬ ಕಿಲ್ಲೇದಾರರ ಬಂಡಾಯ 1844-45ರಲ್ಲಿ ನಡೆಯಿತು. ಇದು ಬೆಳಗಾಂವಿ ಜಿಲ್ಲೆಗೂ ಹರಡಿತು. ಕೊಂಕಣದ ಸಾವಂತವಾಡಿಯಲ್ಲಿ ಅಲ್ಲಿನ ಐರೋಪ್ಯ ಪೊಲಿಟಿಕಲ್ ಸೂಪರಿಂಟೆಂಡ್ ವಿರುದ್ಧ 1844ರಲ್ಲಿ ಉಗ್ರ ದಂಗೆ ಆಯಿತು.

ಕರ್ನೂಲಿನ ಪಾಳೆಯಗಾರರ ವಂಶಸ್ಥ ನರಸಿಂಹರೆಡ್ಡಿ ಬಳ್ಳಾರಿ - ಕರ್ನೂಲುಗಳಲ್ಲಿ ಭಾರಿ ಬಂಡಾಯ ಹೂಡಿದ (1846-47). ಈಶಾನ್ಯ ಭಾರತದ ಗುಡ್ಡಗಾಡುಗಳ ಜನ ನಡೆಸಿದ್ದ ಬಂಡಾಯಗಳ ದೊಡ್ಡ ಪಟ್ಟಿಯನ್ನೇ ಆರ್.ಸಿ.ಮಜುಂದಾರ್ ಕೊಟ್ಟಿದ್ದಾರೆ. 1829ರಲ್ಲಿ ಖಾಸಿ ಬೆಟ್ಟದ ಮೋಲಿಂನ ಬಾರ್ ಮಲಿಕ್ ಇತರ 30 ಖಾಸಿ ಬುಡಕಟ್ಟು ನಾಯಕರ ಜೊತೆ ಬಂಡೆದ್ದು ನಂಕ್ಲೊನ್ ಎಂಬಲ್ಲಿ ಬ್ರಿಟಿಷ್ ಕಚೇರಿ ಸುಟ್ಟುಹಾಕಿದರು. ಭೋಟರು, ಸಿಂಗ್‌ಫೋಗಳು ಮತ್ತು ಇತರ ಗಿರಿಜನರ ನಾಯಕರು 1833ರ ವರೆಗೆ ಈ ಬಂಡಾಯ ಮುಂದುವರಿಸಿದರು. ಸಿಂಗಫೋಗಳ ಬಂಡಾಯ 1839ರ ವರೆಗೆ ಸಾಗಿತು. ಕಪಸ್ಟೋರ್ ಅಕಾಸ್‌ನ ತಾಗಿ ರಾಜನ ಬಂಡಾಯ 1835-42ರ ವರೆಗೆ ಸಾಗಿತು. ನಾಗಾಗಳು 1849-51ರ ನಡುವೆ, ಕೂಕಿಗಳು 1826, 1844 ಮತ್ತು 1849ರಲ್ಲಿ ಬಂಡು ಹೂಡಿದ್ದರು.

ಮಾನಭೂಮ ಭೂಮಿಜರು 1832ರಲ್ಲಿ ಬಂಡೆದ್ದು ಬಾರಾಬಜಾರ್ ಸುಟ್ಟರು. ಕೋಲರು ಇವರ ಜೊತೆ ಕೈಜೋಡಿಸಿದರು. ಒರಿಸ್ಸದ ಗಡಿಯ ಖೋಂಡ್‌ಮಲ್‌ನ ಖೋಂಡರು 1846-48 ಮತ್ತು 1855ರಲ್ಲಿ ಎರಡು ಭಾರಿ ಬಂಡಾಯ ಹೂಡಿದರು. 1855-56ರಲ್ಲಿ ಸಂತಾಲರು ಭಾರಿ ಬಂಡಾಯ ಹೂಡಿದರು. 30,000 ಜನ ಇದರಲ್ಲಿ ಪಾಲುಗೊಂಡಿದ್ದರು. ಬ್ರಿಟಿಷ್ ಮತ್ತು ಸಿಖ್ ವಿರೋಧಿ ಮುಸ್ಲಿಂ ವಹಾಬಿಗಳ ಬಂಡಾಯ 1820-70ರ ವರೆಗೆ ಸತತವಾಗಿ ಅಫ್ಘಾನಿಸ್ತಾನದ ಸಿತ್ತಾನಾದಿಂದ ಸಾಗುತ್ತಿದ್ದು ವಹಾಬಿ ದಂಗೆ ದಕ್ಷಿಣದ ಹೈದರಾಬಾದ್‌ವರೆಗೆ ವ್ಯಾಪಿಸಿತ್ತು. ಒಬ್ಬ ವಹಾಬಿ ಬಂಧಿ ಅಂಡಮಾನ್‌ನಲ್ಲಿ 1872ರಲ್ಲಿ ವೈಸ್‌ರಾಯ್ ಲಾರ್ಡ್ ಮೇಯೋನನ್ನು ಕೊಂದಿದ್ದ.

1857-58ರ ಸಿಪಾಯಿ ದಂಗೆ ಎಂದು ಬ್ರಿಟಿಷರು ಕರೆದ ಜ್ವಾಲಾಮುಖಿಯಂತೆ ಸ್ಫೋಟಿಸಿದ ಪ್ರಥಮ ಸ್ವಾತಂತ್ರ್ಯ ಬಂಡಾಯ ಪ್ರಸಿದ್ಧವಾದುದು. ಈ ಭಾರಿ ಹೋರಾಟ ವಿಫಲವಾಗಿ ಕಂಪನಿಯಿಂದ ಆಡಳಿತ ಬ್ರಿಟಿಷ್ ರಾಣಿಯ ವಶಕ್ಕೆ ಬಂತು.

ಮುಂದೆ ಭಾರತದಲ್ಲಿ ಕಾನೂನುಬದ್ಧ (ವೈಧಾನಿಕ) ಚಳವಳಿಗಳ ಆರಂಭ ಆಗುವ ಮೊದಲು ಕೂಡ ಸಿಖ್ಖರ ಕೂಕಾ ವಿದ್ರೋಹ ಪಾಟಿಯಾಲ ಮತ್ತು ಕೋಟ್ಲಾಗಳಲ್ಲಿ 1870-71ರಲ್ಲಿ ನಡೆಯಿತು. ರಾಮಸಿಂಗ್ ಕೂಕಾ ಇದರ ನಾಯಕ. ಪುಣೆಯ ಬಳಿ ವಾಸುದೇವ ಬಲವಂತ ಫಡ್ಕೆ ನಡೆಸಿದ ಉತ್ಥಾನವೂ ಅಷ್ಟೇ ಪ್ರಸಿದ್ಧ. ಆತ ರಾಮೋಶಿಗಳೆಂಬ

ಬೇಡರನ್ನು ಸಂಘಟಿಸಿದ್ದ. ಆಂಧ್ರದ ಗೋದಾವರಿ ಜಿಲ್ಲೆಯ ರಂಪಾ ಮತ್ತು ರೇಖಪಲ್ಲಿಗಳಲ್ಲಿ ಅಂಬುಲ್ ರೆಡ್ಡಿ ಎಂಬಾತ 1879ರಲ್ಲಿ ಹೂಡಿದ ಬಂಡಾಯ ಹತ್ತಿಕ್ಕಲು ಆಂಗ್ಲರ ಆರು ರೆಜಿಮೆಂಟುಗಳು ಬೇಕಾದವು.

ಬ್ರಿಟಿಷ್ ಆಡಳಿತದಿಂದ ಇಂಗ್ಲಿಷ್ ಶಿಕ್ಷಣ, ಪಾಶ್ಚಾತ್ಯ ಉದಾರವಾದ, ಪ್ರಜಾತಂತ್ರದ ಕಲ್ಪನೆಗಳನ್ನು ಮೈಗೂಡಿಸಿಕೊಂಡ ಇಂಗ್ಲಿಷ್ ಕಲಿತ ನಗರವಾಸಿ ಮಧ್ಯಮ ವರ್ಗವೊಂದು ಉದಯಿಸುತ್ತಿತ್ತು. ಅಂಚೆ, ತಂತಿ, ರಸ್ತೆ ಸಂಪರ್ಕ, ಮುದ್ರಣ (ಪತ್ರಿಕೆ)ಗಳಿಂದ ದೇಶದ ವಿವಿಧ ಮೂಲೆಗಳಲ್ಲಿ ಇದ್ದ ಈ ವರ್ಗದ ದೇಶ ಹಿತಚಿಂತಕರ ಒಂದು ಸಮೂಹ ರೂಪು ತಾಳುತ್ತಿತ್ತು. ಬ್ರಹ್ಮ ಸಮಾಜ, ಆರ್ಯಸಮಾಜ, ಥಿಯೊಸಾಫಿಕಲ್ ಸೊಸೈಟಿಯಂಥ ಸಂಘಟನೆಗಳಿಂದ ಸಮಾನ ಮನಸ್ಕರ ಸಮುದಾಯಗಳು ಬೆಳೆದವು. ದೇಶದಲ್ಲಿನ ನೇಯ್ಗೆ, ಗೋಣಿನೇಯ್ಗೆ ಮುಂತಾದ ಗೃಹ ಕೈಗಾರಿಕೆಗಳು ಇಂಗ್ಲೆಂಡ್‌ನಲ್ಲಾದ ಕೈಗಾರಿಕಾ ಕ್ರಾಂತಿಯಿಂದಾಗಿ ನಾಶವಾಗಿ ಲಕ್ಷಾಂತರ ಜನ ಉದ್ಯೋಗ ಕಳೆದುಕೊಂಡು ಉದ್ವಿಗ್ನರಾದರು.

1885ರಲ್ಲಿ ಬೊಂಬಾಯಿಯಲ್ಲಿ ಉಮೇಶಚಂದ್ರ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಸೇರಿತು. ಭಾರತೀಯರಿಗೆ ನೌಕರಿಯಲ್ಲಿ, ಸೇನೆಯಲ್ಲಿ ಹೆಚ್ಚಿನ ಅವಕಾಶಕೊಡಬೇಕು, ಆಡಳಿತದ ವೆಚ್ಚವನ್ನು ಕಡಿಮೆಮಾಡಬೇಕು ಮುಂತಾದ ಅರ್ಜಿಗಳ ರೂಪದ ಠರಾವು ಮಂಜೂರು ಮಾಡುವುದರ ವಿನಾ ಹೆಚ್ಚಿನ ಸ್ವಾತಂತ್ರ್ಯದ ಬೇಡಿಕೆಯಂಥ ಕಲ್ಪನೆಗಳು ಆಗ ಇರಲಿಲ್ಲ. ಮುಂದಿನ 20 ವರ್ಷ ಕಾಂಗ್ರೆಸ್ ಹೀಗೆ ಸಾಗಿದರೂ ಅಧಿವೇಶನಕ್ಕೆ ಬರುವ ಸದಸ್ಯರ ಸಂಖ್ಯೆ ಹೆಚ್ಚಿತು. 1885ರಲ್ಲಿ ಬೊಂಬಾಯಿಗೆ 72 ಪ್ರತಿನಿಧಿಗಳು ಬಂದರೆ ಮರು ವರ್ಷ ಕಲ್ಕತ್ತೆಕ್ಕೆ 434 ಜನ ಬಂದಿದ್ದರು. ಮುಂದೆ 1887ರಲ್ಲಿ ಮದರಾಸಿಗೆ 607 ಮಂದಿ ಬಂದಿದ್ದರೆ 1888ರಲ್ಲಿ ಅಲಹಾಬಾದ್‌ನಲ್ಲಿ 1200ಕ್ಕೂ ಹೆಚ್ಚು ಪ್ರತಿನಿಧಿಗಳಿದ್ದರು. ಕಾಂಗ್ರೆಸ್‌ನಲ್ಲಿ ಮಂದಗಾಮಿಗಳೆಂಬ ಬ್ರಿಟಿಷ್ ಸತ್ತೆಯ ಅಭಿಮಾನಿಗಳಿದ್ದರು. ಬ್ರಿಟಿಷರು ಆಡಳಿತ ಸುಧಾರಿಸಿ ಮಿತವ್ಯಯ ಸಾಧಿಸಿ ದೇಶವನ್ನೂ ಸಮಾಜವನ್ನು ಆಧುನಿಕಗೊಳಿಸಬೇಕೆಂಬುದು ಅವರ ಇಚ್ಛೆ. ಬ್ರಿಟಿಷರು ದೇಶ ಬಿಡಬೇಕೆನ್ನುವವರಲ್ಲ–ಅದು ಎಂದಾದರೊಮ್ಮೆ ಆಗಬೇಕಾದ ಪ್ರಸಂಗ. ದಾದಾ ಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಫಿರೋಜ್ ಷಾ ಮೆಹತ ಇದರ ನಾಯಕರು. ತೀವ್ರಗಾಮಿಗಳು ಇನ್ನೊಂದು ಗುಂಪು. ತೀವ್ರಗಾಮಿಗಳಿಗೆ ಲೋಕಮಾನ್ಯ ಟಿಳಕ್, ಬಿಪಿನ್‌ಚಂದ್ರ ಪಾಲ್, ಲಾಲಾ ಲಜಪತರಾಯ್, ಅರವಿಂದ ಘೋಷರಂಥವರು ನಾಯಕರು. ಬ್ರಿಟಿಷರು ಎಷ್ಟು ಬೇಗ ದೇಶ ಬಿಟ್ಟರೆ ಅಷ್ಟು ಒಳಿತು ಅನ್ನುವವರು ಅವರು. ಮಂದಗಾಮಿಗಳ ಕೆಲವು ಬೇಡಿಕೆಗಳನ್ನು ಬ್ರಿಟಿಷರು ಮಾನ್ಯ ಮಾಡಿದ್ದರು. ಮಿಂಟೊಮಾರ್ಲೆ ಸುಧಾರಣೆ (1909) ಇದರಲ್ಲಿ ಒಂದು.

ಆದರೆ 1905ರ ಬಂಗಾಲ ವಿಭಜನೆ (ಅದನ್ನು ಬಂಗಾಲಿಗಳ ಐಕ್ಯ ಮುರಿಯಬೇಕೆಂದು ಮಾಡಿದ್ದರಿಂದ) ಮಾಡಿದ್ದರ ವಿರುದ್ಧ ತೀವ್ರ ಚಳವಳಿ ಹರಡಿ ಇಡೀ ದೇಶದಲ್ಲಿ ಬಂಗಾಲ, ಪಂಜಾಬ್, ಮಹಾರಾಷ್ಟ್ರಗಳಲ್ಲಿ ಉಗ್ರ ಸ್ವದೇಶೀ ಚಳವಳಿ ಆಯಿತು. ವಿದೇಶೀ ವಸ್ತುಗಳ ಬಳಕೆ ಕಡಿಮೆಯಾಯಿತು. ಸ್ವದೇಶಿ ಚಳವಳಿ ಬ್ರಿಟಿಷರನ್ನು ಕೆರಳಿಸುವ ಕ್ರಮವೆಂದು ಮಂದಗಾಮಿಗಳು ವಿರೋಧಿಸಿದರು. ರಾಜಕೀಯದಲ್ಲಿ ಸಾಮಾನ್ಯ ಜನ ಪಾಲುಗೊಂಡು ಶಾಂತಿ ಕದಡುವಂತಾಗಬಾರದೆಂದು ಅವರ ನಿಲುವು. ಬಂಗಾಲ ಮತ್ತು ಇತರೆಡೆ ಬ್ರಿಟಿಷರು ನಡೆಸಿದ ದಬ್ಬಾಳಿಕೆ ಕ್ರಾಂತಿಕಾರಿಗಳ ಚಳವಳಿಗೆ ಮಾರ್ಗವಾಯಿತು. ಬಂಗಾಲ ವಿಭಜನೆ ಬೆಂಬಲಿಸಿ ಮುಸ್ಲಿಂಲೀಗ್ ಹುಟ್ಟಿತು(1905).

ಪುಣೆಯಲ್ಲಿ ಪ್ಲೇಗ್ ಬಂದಾಗ ಮನೆಗಳನ್ನು ಖಾಲಿಮಾಡಿಸಲು ಬ್ರಿಟಿಷ್ ಪೊಲೀಸರ ಅಸಭ್ಯತೆಯ ಮಿತಿಮೀರಿದ ಕ್ರಮಗಳಿಂದ ಚಾಪೆಕರ್ ಸೋದರರು ಇಬ್ಬರು ಆಂಗ್ಲ ಅಧಿಕಾರಿಗಳನ್ನು ಕೊಲ್ಲಲು ಅವರಿಗೆ ಗಲ್ಲು ಶಿಕ್ಷೆ ಆಯಿತು. ಈ ಬಗ್ಗೆ ಟಿಳಕರು ಹೊರಡಿಸುತ್ತಿದ್ದ ಕೇಸರಿ ಮರಾಠಿ ಪತ್ರಿಕೆಯಲ್ಲಿ ಬರೆದ ಲೇಖನಕ್ಕಾಗಿ ಅವರಿಗೆ 18 ತಿಂಗಳ ಶಿಕ್ಷೆ ಆಯಿತು. ಚಾಪೇಕರರನ್ನು ಗಲ್ಲಿಗೇರಿಸಿದ ದಿನ (1889) ವಿನಾಯಕ ದಾಮೋದರ ಸಾವರ್ಕರ್ ಎಂಬ ತರುಣ ಕ್ಷುದ್ರನಾಗಿ ನಾಸಿಕದಲ್ಲಿ ಮಿತ್ರ ಮೇಳಾ ಎಂಬ ದೇಶಭಕ್ತ ಸಂಘಟನೆ ಆರಂಭಿಸಿ, ಮುಂದೆ ಅಭಿನವ ಭಾರತ ಎಂಬ ಕ್ರಾಂತಿಕಾರಿ ತಂಡ ರಚಿಸಿದ (1904). ಇದೇ ರೀತಿಯಲ್ಲಿ ಬ್ಯಾರಿಸ್ಟರ್ ಮಿತ್ರ ಅನುಶೀಲನ ಸಮಿತಿಯನ್ನು (1902) ಬಂಗಾಲದಲ್ಲಿ ಆರಂಭಿಸಿದರು. ಲಾಲಾ ಹರದಯಾಳರು ಸಹರಾನಪುರದಲ್ಲಿ ಒಂದು ಗುಪ್ತ ಸಂಘಟನೆ ಆರಂಭಿಸಿದರು. ಇವರು ಬಂಗಾಲ ಕ್ರಾಂತಿಕಾರಿಗಳ ಜೊತೆ ಸಂಬಂಧ ಹೊಂದಿದ್ದರು(1905). ಲಂಡನ್‌ನಲ್ಲಿ ಶ್ಯಾಮಜಿ ಕೃಷ್ಣವರ್ಮ ಇಂಡಿಯ ಹೋಮ್‌ರೂಲ್ ಸೊಸೈಟಿ ಆರಂಭಿಸಿ ಕ್ರಾಂತಿಕಾರಿಗಳ ತರಬೇತಿಗಾಗಿ ಇಂಡಿಯ ಹೌಸ್ ಆರಂಭಿಸಿದರು. ವಿನಾಯಕ ಸಾವರ್ಕರ್ ಲಂಡನ್‌ಗೆ ಹೋಗಿ ಇಂಡಿಯ ಹೌಸ್‌ನಲ್ಲಿ ಇದ್ದು ಶಿಕ್ಷಣ, ಕ್ರಾಂತಿಕಾರಿ ಚಟುವಟಿಕೆ ನಡೆಸಿದರು. ಈ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ವರದಿಮಾಡುತ್ತಿದ್ದ ಕರ್ಜನ್ ವೈಲಿ ಎಂಬ ಅಧಿಕಾರಿಯ ಕೊಲೆಮಾಡಿ ಮದನಲಾಲ್ ದಿಂಗ್ರಾ ಎಂಬ ಕ್ರಾಂತಿಕಾರಿ ಗಲ್ಲು ಶಿಕ್ಷೆ ಪಡೆದ (1909). ಸಾವರ್ಕರರಿಗೆ ಇದೇ ಪ್ರಕರಣದಲ್ಲಿ 50 ವರ್ಷಗಳ (ಅಂಡಮಾನ್ ವಾಸದ ಕರಿನೀರು) ಶಿಕ್ಷೆ ಆಯಿತು. ನಾಸಿಕದ ಕಲೆಕ್ಟರ್ ಜಾಕ್ಸನ್ ಕೊಲೆ ಪ್ರಕರಣದಲ್ಲಿ ಅವರ ಇಬ್ಬರು ಸೋದರರೂ ಕರಿನೀರು ಶಿಕ್ಷೆಗೆ ಒಳಗಾದರು. ಸ್ವದೇಶಿ ಚಳವಳಿಯಲ್ಲಿ ಪಾಲುಗೊಂಡವರಿಗೆ ಕಠಿಣ ಶಿಕ್ಷೆ ನೀಡಿದ ಡಾಕದ ಇಂಗ್ಲಿಷ್ ಮ್ಯಾಜಿಸ್ಟ್ರೇಟ್ ಕಿಂಗ್‌ಫೋರ್ಡ್ ಮೇಲೆ 1906ರಲ್ಲಿ ಬಾಂಬ್ ಬೀರಿ ಖುದಿರಾಮ್ ಬೋಸ್ ಎಂಬ ಕ್ರಾಂತಿಕಾರಿ ಬಂಧಿತನಾದ. ಖುದಿರಾಮನಿಗೆ ಫಾಶಿ ಶಿಕ್ಷೆ ಆದಾಗ ಆ ಬಗ್ಗೆ ಖಂಡನಾ ಲೇಖನ ಬರೆದ ಟಿಳಕರಿಗೆ ಆರು ವರ್ಷ ಶಿಕ್ಷೆ ಆಗಿ ಮಾಂಡಲೆ ಜೈಲಿಗೆ ಕಳುಹಿಸಲು ಅಲ್ಲಿ ಅವರು ಗೀತಾಪ್ರವಚನ ಎಂಬ ಗೀತೆಯ ಮೇಲಿನ ಟೀಕಾಗ್ರಂಥ ಬರೆದರು. ಲಾಲಾ ಲಜಪತ್‌ರಾಯರನ್ನೂ 1907ರಲ್ಲಿ ಗಡೀಪಾರು ಮಾಡಿದರು.

ಇದಕ್ಕೂ ಮೊದಲು 1906ರ ಕಲ್ಕತ್ತ ಕಾಂಗ್ರೆಸ್‌ನಲ್ಲಿ ಸ್ವರಾಜ್ಯದ ಪರ ಠರಾವಾಗಿ, ಮುಂದೆ 1907ರ ಸೂರತ್ ಕಾಂಗ್ರೆಸ್‌ನಲ್ಲಿ ಇದರ ಕಾರ್ಯಾಚರಣೆ ಕೈಕೊಂಡ ಕ್ರಮಗಳ ಬಗ್ಗೆ ತೀವ್ರ ಚರ್ಚೆ ಆಗಿ, ಅಲ್ಲಿ ಮಂದಗಾಮಿ ಮತ್ತು ತೀವ್ರಗಾಮಿಗಳ ನಡುವೆ ಹೊಡೆದಾಟ ನಡೆದು ಕಾಂಗ್ರೆಸ್ ಇಬ್ಭಾಗವಾಯಿತು. ತೀವ್ರಗಾಮಿಗಳು ಕಾಂಗ್ರೆಸ್‌ನಿಂದ ಹೊರ ನಡೆದರು. 1911ರಲ್ಲಿ ದೇಶದ ರಾಜಧಾನಿಯನ್ನು ಕೋಲ್ಕತ್ತಾದಿಂದ ದೆಹಲಿಗೆ ವರ್ಗಾಯಿಸಲು ಬ್ರಿಟಿಷರು ನಿರ್ಣಯಿಸಿ, ಬಂಗಾಲಿಗಳಲ್ಲಿ ಇನ್ನಷ್ಟು ಅಸಮಾಧಾನವಾಗುವುದೆಂದು, ಅದನ್ನು ತಡೆಯಲು ಬಂಗಾಲ ವಿಭಜನೆ ರದ್ದುಮಾಡಿದರು.

ಇದೇ ಕಾಲಕ್ಕೆ ಅಮೆರಿಕದಲ್ಲಿ ಘದರ್ ಪಕ್ಷ ಸಂಘಟಿಸಿ 1915ರ ಭಾರತದಲ್ಲಿ ಭಾರಿ ಕ್ರಾಂತಿ ಸಂಘಟಿಸುವ ಯತ್ನ ವಿಫಲವಾಯಿತು. ರಾಜಾ ಮಹೇಂದ್ರ ಪ್ರತಾಪರು ಕಾಬೂಲ್‌ನಲ್ಲಿ ಆಗ ಪ್ರತಿ ಸರ್ಕಾರ ಕೂಡ ಸ್ಥಾಪಿಸಿದ್ದರು.

ಒಂದನೆಯ ಮಹಾಯುದ್ಧ (1914–18) ನಡೆದಾಗ ಯುದ್ಧ ಮುಗಿದ ಮೇಲೆ ದೇಶದ ಆಡಳಿತದಲ್ಲಿ ಏನಾದರೂ ಭಾರತೀಯರಿಗೆ ಪಾಲು ಸಿಗಬಹುದೆಂಬ ಆಶೆ ಇತ್ತು. ಈ ನಡುವೆ ಬಿಡುಗಡೆ ಆಗಿ ಬಂದ ಟಿಳಕರು, ಥಿಯೊಸಾಫಿಕಲ್ ಸೊಸೈಟಿಯ ನಾಯಕಿ ಆನಿಬೆಸೆಂಟ್ ಈ ಇಬ್ಬರೂ 1916ರಲ್ಲಿ ಹೋಂ ರೂಲ್‌ಲೀಗ್‌ಗಳನ್ನು ಸ್ಥಾಪಿಸಿ ಆಂತರಿಕ ಸ್ವಾಯತ್ತತೆಯ ಬಗ್ಗೆ ಪ್ರಬಲ ಪ್ರಚಾರ ಮಾಡಿದರು. ಇದೇ ಕಾಲಕ್ಕೆ ದೇಶದಲ್ಲಿ ಕ್ರಾಂತಿಕಾರಿಗಳ ಚಟುವಟಿಕೆ ಹೆಚ್ಚಿತು. ಮಿಂಟೊಮಾರ್ಲೆ ಸುಧಾರಣೆಯ ಮುಂದಿನ ಹೆಜ್ಜೆಯಾಗಿ 1919ರಲ್ಲಿ ಸಾರಿದ ಮಾಂಟೆಗೂ ಚೆಲ್ಮ್ಸ್‌ಫರ್ಡ್ ಸುಧಾರಣೆ ನಿರೀಕ್ಷಿತ ರಿಯಾಯತಿಗಳನ್ನು ತರದೆ ತೀರ ನಿರಾಶೆ ಹುಟ್ಟಿಸಿತು. ಅಲ್ಲದೆ ರೌಲತ್ ಆಕ್ಟ್ ಎಂಬ ಒಂದು ಉಗ್ರ ಮಸೂದೆ ತಂದು, ರಾಜಕೀಯ ಚಟುವಟಿಕೆಗಳ ಮೇಲೆ ಭಾರಿ ಪ್ರತಿಬಂಧ ಹೇರಿದರು. ಇದರ ವಿರುದ್ಧ ಅಮೃತಸರದಲ್ಲಿ ಬೈಶಾಖಿ ಜಾತ್ರೆಯ ಕಾಲಕ್ಕೆ ನಡೆದ ಶಾಂತ ಪ್ರತಿಭಟನಾ ಸಭೆಯ ವಿರುದ್ಧ ನಿರ್ದಯವಾಗಿ ಗುಂಡು ಹಾರಿಸಿ ಭಾರಿ ರಕ್ತಪಾತಕ್ಕೆ ಸರಕಾರ ಕಾರಣವಾಯಿತು. (379 ಜನ ಸತ್ತರು, 1317 ಜನ ಗಾಯಗೊಂಡರು). ಇದು ಜಲಿಯನ್‌ವಾಲಾಬಾಗ್ ದುರಂತ ಎಂದು ಹೆಸರಾಗಿದೆ. ಅಲ್ಲದೆ ಮಾರ್ಷಲ್ ಲಾ ಜಾರಿ ಮಾಡಿ ಪಂಜಾಬಿನಲ್ಲಿ ಅಮಾನುಷ ದಬ್ಬಾಳಿಕೆ ಮಾಡಿದರು. ಈ ನಿರಂಕುಶ ವರ್ತನೆಯಿಂದ ಬ್ರಿಟಿಷರ ನ್ಯಾಯಪರತೆಯ ಬಗ್ಗೆ ಜನರಿಗಿದ್ದ ವಿಶ್ವಾಸ ಪೂರ್ತಿ ಹೊರಟು ಹೋಯಿತು. ಕವಿ ಠಾಕೂರರು ತಮಗಿತ್ತ ನೈಟ್ ಪದವಿ ತ್ಯಜಿಸಿ, ಶಂಕರನ್ ನಾಯರ್ ವೈಸ್‌ರಾಯರ ಎಕ್ಸಿಕ್ಯೂಟಿವ್ ಕೌನ್ಸಿಲ್‌ಗೆ ರಾಜೀನಾಮೆ ಇತ್ತು ಪ್ರತಿಭಟನೆ ಸೂಚಿಸಿದರು. 1916ರ ಲಕ್ನೋ ಕಾಂಗ್ರೆಸ್‌ನಲ್ಲಿ ಮಂದಗಾಮಿ ಹಾಗೂ ತೀವ್ರಗಾಮಿಗಳು ಮತ್ತೆ ಒಂದಾದರು. ಈ ವೇಳೆಗೆ ಮಂದಗಾಮಿ ನಾಯಕರಾದ ಗೋಖಲೆ, ಫಿರೋಜ ಷಾ ನಿಧನರಾದರು. ಆಗಲೇ ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ ನೀತಿಯ ವಿರುದ್ಧ ಸತ್ಯಾಗ್ರಹ ಅಸ್ತ್ರ ಬಳಸಿ ಖ್ಯಾತರಾದ ಗಾಂಧೀಜಿ ಭಾರತಕ್ಕೆ ಬಂದರು. 1920ರಲ್ಲಿ ಟಿಳಕರು ತೀರಿಕೊಂಡಾಗ ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧೀಯುಗ ಆರಂಭವಾಯಿತು.

1920ರಲ್ಲಿ ಗಾಂಧೀಜಿ ಅಸಹಕಾರ ಆಂದೋಲನ ಹೂಡಲು ನಿರ್ಧರಿಸಿದರು. ವಿದ್ಯಾರ್ಥಿಗಳಿಂದ ಶಾಲೆ ಕಾಲೇಜುಗಳ ತ್ಯಾಗ, ಸರಕಾರಿ ನೌಕರರಿಂದ ನೌಕರಿ ತ್ಯಾಗ, ಜನರು ಸರ್ಕಾರಿ ನ್ಯಾಯಾಲಯಗಳಿಗೆ ಹೋಗದಿರುವುದು, ವಕೀಲರಿಂದ ವೃತ್ತಿ ತ್ಯಾಗ, ಚುನಾವಣೆಗಳಿಗೆ ಸ್ಪರ್ಧಿಸದಿರುವುದು (ಶಾಸನ ಸಭೆಗಳ ತ್ಯಾಗ), ಜೊತೆಯಲ್ಲಿ ವಿದೇಶ ವಸ್ತು ಬಹಿಷ್ಕಾರ, ಖಾದಿ ಧಾರಣೆ, ಪ್ರತಿಯೊಬ್ಬರು ನಿತ್ಯ ಒಂದು ಗಂಟೆ ನೂಲುವುದು ಮುಂತಾದ ವಿವಿಧ ಮುಖದ ಕಾರ್ಯಕ್ರಮಗಳಿಂದ ಚಳವಳಿ ಆರಂಭವಾಯಿತು. ಟರ್ಕಿಯ ಖಲೀಫನನ್ನು ಬ್ರಿಟಿಷರು ಪದಚ್ಯುತಗೊಳಿಸಿದ್ದರ ವಿರುದ್ಧ ಮುಸಲ್ಮಾನರು ಪ್ರತಿಭಟಿಸಲು, ಅವರು ನಡೆಸಿದ ಖಿಲಾಫತ್ ಚಳವಳಿಯನ್ನು ಕಾಂಗ್ರೆಸ್ ಸ್ವೀಕರಿಸಿತು. ವಿದೇಶಿ ವಸ್ತುಗಳ ಮಾರಾಟದ ಮತ್ತು ಮದ್ಯ ಮಾರಾಟದ ಅಂಗಡಿಗಳ ಮುಂದೆ ಪಿಕೆಟಿಂಗ್ ಚಳವಳಿಯ ಅಸ್ತ್ರಗಳಲ್ಲಿ ಒಂದಾಯಿತು. ಚಳವಳಿ ಅಂಹಿಸಾತ್ಮಕ ಮಾರ್ಗದಿಂದ ಸಾಗಬೇಕೆಂದು ಗಾಂಧೀಜಿ ಆದೇಶ ನೀಡಿದ್ದರು. 1921ರಲ್ಲಿ ಚಳವಳಿ ಆರಂಭ ಆದಾಗ ವಿದ್ಯಾರ್ಥಿಗಳು ಶಾಲೆ ಕಾಲೇಜು ತ್ಯಜಿಸಿದರು. ವಕೀಲರು ವೃತ್ತಿ ತ್ಯಜಿಸಿದರು. ಚಿತ್ತರಂಜನ ದಾಸ್, ಮೋತಿಲಾಲ್ ನೆಹರು, ರಾಜೇಂದ್ರ ಪ್ರಸಾದ್, ರಾಜಗೋಪಾಲಾಚಾರಿ, ವಲ್ಲಭಭಾಯಿ ಪಟೇಲ್, ಮದನ ಮೋಹನ ಮಾಲವೀಯ – ಹೀಗೆ ಅನೇಕ ಗಣ್ಯರು ವಕೀಲಿ ವೃತ್ತಿ ತ್ಯಜಿಸಿ ರಾಷ್ಟ್ರೀಯ ಚಳವಳಿಗೆ ಬದ್ಧಕಂಕಣರಾದರು. ಸಭೆ, ಮೆರವಣಿಗೆಗಳ ಮೇಲಿನ ಪ್ರತಿಬಂಧ ಮುರಿದು, ಪಿಕೆಟಿಂಗ್ ನಡೆಸಿ ಮಹಿಳೆಯರೂ ಸೇರಿ 1921ರ ಡಿಸೆಂಬರ್ ಹೊತ್ತಿಗೆ 40,000 ಜನ ಜೈಲು ಕಂಡರು. ಪೊಲೀಸರ ಲಾಠಿಯೇಟು, ಗುಂಡೇಟುಗಳಿಂದ ಸತ್ತವರು ನೂರಾರು. ಚಳವಳಿ

ನಡೆದಿರಲು ಗೋರಖಪುರ ಬಳಿಯ ಚೌರಿಚೌರ ಎಂಬಲ್ಲಿ ಹಿಂಸಾಚಾರವಾಗಿ 22 ಪೋಲೀಸರ ಸಜೀವ ದಹನವಾಯಿತು. ಈ ಹಿಂಸಾಚಾರದಿಂದ ನೊಂದು ಗಾಂಧೀಜಿ ಚಳವಳಿಯನ್ನು ಹಿಂದೆ ತೆಗೆದರು (1922 ಫೆಬ್ರವರಿ).

ಇದೇ ಕಾಲಕ್ಕೆ ಕ್ರಾಂತಿಕಾರಿಗಳಾದ ತರುಣರು ಹಿಂದುಸ್ತಾನ್ ರಿಪಬ್ಲಿಕನ್ ಅಸೋಸಿಯೇಶನ್ ಸ್ಥಾಪಿಸಿ ಬ್ರಿಟಿಷ್ ಸರ್ಕಾರವನ್ನು ಬುಡಮೇಲು ಮಾಡಿ ಅದರ ಧೈರ್ಯ, ಸ್ಥೈರ್ಯ ಕುಂದಿಸಬೇಕೆಂದು ಗುಪ್ತವಾಗಿ ಶ್ರಮಿಸಿದರು. ಲಕ್ನೋ ಬಳಿ ಕಾಕೋರಿ ರೈಲು ನಿಲ್ದಾಣದಲ್ಲಿ ಸರ್ಕಾರಿ ತಿಜೋರಿಯೊಂದನ್ನು ಅಪಹರಿಸಿದರು. ಈ ಪ್ರಕರಣದಲ್ಲಿ 40 ಜನರ ಬಂಧನವಾಗಿ ಮೂವರಿಗೆ 1927ರಲ್ಲಿ ಫಾಶಿ ಆಯಿತು. ಉಳಿದವರಲ್ಲಿ ಹಲವರಿಗೆ ಅಂಡಮಾನ್ ಶಿಕ್ಷೆ ಆಯಿತು. ಈ ತರುಣರ ಅಪೂರ್ವ ತ್ಯಾಗ ಸಾಹಸಗಳು ಸಾವಿರಾರು ತರುಣರಿಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲುಗೊಳ್ಳಲು ಸ್ಫೂರ್ತಿ ನೀಡಿದವು. 1928ರಲ್ಲಿ ಹಿಂದುಸ್ತಾನ ಸೋಶಿಯಲಿಸ್ಟ್ ರಿಪಬ್ಲಿಕನ್ ಆರ್ಮಿ ಹುಟ್ಟಿತು.

ಭಾರತದಲ್ಲಿ ವೈಧಾನಿಕ ಸುಧಾರಣೆಯ ಸಾಧ್ಯತೆಗಳ ಪರಿಶೀಲನೆಗೆ ಸೈಮನ್ ಆಯೋಗ 'ವನ್ನು ಬ್ರಿಟಿಷರು ನೇಮಿಸಲು, ಈ ಆಯೋಗದಲ್ಲಿ ಭಾರತೀಯ ಸದಸ್ಯರಿಲ್ಲವೆಂದು ಕಾಂಗ್ರೆಸ್ ಅದನ್ನು ಬಹಿಷ್ಕರಿಸಿತು. ಎಲ್ಲೆಡೆ ಸೈಮನ್ ಆಯೋಗದ ವಿರುದ್ಧ ಸೈಮನ್ ಮರಳಿಹೋಗು ಎಂದು ಉಗ್ರ ಪ್ರತಿಭಟನೆ ನಡೆದು ಭಾರಿ ಚಳವಳಿ ಆಯಿತು. ಇಂಥ ಪ್ರತಿಭಟನೆಯಲ್ಲಿ ಪಾಲುಗೊಂಡ ಲಾಲಾ ಲಜಪತ್‌ರಾಯ್ ಮೇಲೆ ಉಗ್ರ ಲಾಠಿ ಪ್ರಹಾರವಾಗಿ ಅದರಿಂದ ಮುಂದೆ ಅವರು ದಿವಂಗತರಾದರು. ಈ ಅನಾಹುತಕ್ಕೆ ಕಾರಣನಾದ ಸಾಂಡರ್ಸ್ ಎಂಬ ಅಧಿಕಾರಿಯನ್ನು ಕ್ರಾಂತಿಕಾರಿಗಳಾದ ಭಗತ್‌ಸಿಂಗ್ ಮತ್ತು ರಾಜಗುರು ಗುಂಡಿಕ್ಕಿ ಕೊಂದರು. ಮುಂದೆ ಭಾರತದ ಕೇಂದ್ರ ಶಾಸನ ಸಭೆಯಲ್ಲಿ ಭಗತ್‌ಸಿಂಗ್ ಮತ್ತು ಬಟುಕೇಶ್ವರದತ್ತರು ಬಾಂಬೆಸೆದು ಬ್ರಿಟಿಷರ ದುರಾಡಳಿತ ಜಗಜ್ಜಾಹಿರಾಗುವಂತೆ ಪ್ರಚಾರಮಾಡಿ ಮುಂದೆ ಫಾಶಿ ಶಿಕ್ಷೆಗೆ ಒಳಗಾದರು. ಚಂದ್ರಶೇಖರ್ ಆಜಾದ್ ಎಂಬ, ಈ ತಂಡದ ಕ್ರಾಂತಿಕಾರಿ 1931ರಲ್ಲಿ ಪೊಲೀಸರೊಡನೆ ಗುಂಡಿನ ಕಾಳಗ ನಡೆಸಿ ಹುತಾತ್ಮನಾದ. ಈ ಕ್ರಾಂತಿಕಾರಿಗಳು ತರುಣರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಳ್ಳಲು ಅಪಾರ ಸ್ಫೂರ್ತಿ ನೀಡಿದರು. ಇಂಥ ಕ್ರಾಂತಿಕಾರಿಗಳು ಅಂಡಮಾನ್‌ನಲ್ಲಿ ಅಪಾರ ಯಾತನೆಯ ಶಿಕ್ಷೆ ಅನುಭವಿಸಿದರು. ಸಾವರ್ಕರರು ಸ್ವತಃ ಇದರ ವಿವರಗಳನ್ನು ನನ್ನ ಕರಿನೀರು ವಾಸ ಎಂಬ ಪುಸ್ತಕದಲ್ಲಿ ಬರೆದಿದ್ದಾರೆ.

ಈ ನಡುವೆ 1924ರಲ್ಲಿ ಟರ್ಕಿಯಲ್ಲಿ ಕೆಮಾಲ್ ಪಾಶಾ ತನ್ನ ಸರ್ವಾಧಿಕಾರ ಸ್ಥಾಪಿಸಿ, ಖಲೀಫನ ಸ್ಥಾನ ಪುನರ್‌ಪ್ರತಿಷ್ಠಾಪನೆ ಮಾಡುವ ಅವಕಾಶ ತಪ್ಪಿಸಿದ. ಭಾರತೀಯ ಖಿಲಾಫತ್ ಚಳವಳಿಯ ನಾಯಕರಿಗೆ ತೀವ್ರ ಹತಾಶೆಯಾಗಿ ಜಾತೀಯ ದಂಗೆಗಳಾದವು. ಭಾರತೀಯ ಸಮಾಜದಲ್ಲಿ ಒಡಕಾಗಿ ಮುಸ್ಲಿಂಲೀಗ್‌ನ ಚಟುವಟಿಕೆ ಹೆಚ್ಚಿ ಮುಂದೆ ದೇಶ ವಿಭಜನೆಗೆ ಮಾರ್ಗವಾಯಿತು. 1909 ಮಿಂಟೊ ಮಾರ್ಲೆ ಸುಧಾರಣೆಯಲ್ಲಿ ಪ್ರತ್ಯೇಕ ಮತಕ್ಷೇತ್ರ ಸ್ಥಾಪಿಸಲು ಆದ ನಿರ್ಣಯದಿಂದಲೇ ದೇಶ ವಿಭಜನೆಯ ಬೀಜ ಬಿತ್ತಲಾಗಿತ್ತು. ಮುಸ್ಲಿಂಲೀಗ್ ಇದಕ್ಕೆ ನೀರೆರೆಯಿತು.

ಚಳವಳಿಯ ಮುಂದಿನ ಘಟ್ಟವೆಂದರೆ 1930ರಲ್ಲಿ ಉಪ್ಪಿನ ಸತ್ಯಾಗ್ರಹ ಹೂಡಿ ಆರಂಭಿಸಿದ ಕಾನೂನು ಭಂಗ ಚಳವಳಿ. ಸಬರಮತಿ ಆಶ್ರಮದಿಂದ ದಂಡಿಯೆಂಬ ದೂರದ ಕಡಲತೀರದ ಹಳ್ಳಿಗೆ ಕಾಲ್ನಡಿಗೆಯಿಂದ ಹೋಗಿ ಸರಕಾರದ ಉಪ್ಪು ತಯಾರಿಕೆಯ ಮೇಲಿನ ಏಕಸ್ವಾಮ್ಯ ಕಾನೂನು ಮುರಿದು ಗಾಂಧೀಜಿ ಏಪ್ರಿಲ್ 6ರಂದು ಉಪ್ಪು ತಯಾರಿಸಿದರು. ದೇಶದ ಎಲ್ಲೆಡೆ ಸಾಗರ ತೀರದಲ್ಲಿ ಮದರಾಸು, ಕಲ್ಕತ್ತ, ಕಲ್ಲಿಕೋಟೆ, ಮಂಗಳೂರು, ಬೊಂಬಾಯಿ ಹೀಗೆ ನೂರಾರು ಕಡೆ ಉಪ್ಪಿನ ಸತ್ಯಾಗ್ರಹ ಸತತ ಸಾಗಿ ಸಾವಿರಾರು ಜನ ಜೈಲುಕಂಡರು. ಮುಂದೆ ಕಾದಿಟ್ಟ ಅಡವಿಗಳ ಮರಗಳು ಹಾಗೂ ಶ್ರೀಗಂಧದ, ಸೇಂದಿ ಇಳಿಸುವ ಮರಗಳನ್ನು ಕಡಿಯುವುದು, ಸಾರಾಯಿ, ವಿದೇಶಿ ವಸ್ತ್ರಮಾರುವ ಅಂಗಡಿಗಳ ಎದುರು ಪಿಕೆಟಿಂಗ್ ಹೀಗೆ ಕಾನೂನು ಭಂಗ ಹಲವಾರು ಬಗೆಯಲ್ಲಿ ಸಾಗಿತು. ಚಳವಳಿ ಉಗ್ರವಾಗಿ ಸಾಗಿ ಜೈಲುಗಳು ತುಂಬಿರಲು 1931 ಮಾರ್ಚ್‌ನಲ್ಲಿ ಗಾಂಧಿ-ಇರ್ವಿನ್ (ವೈಸ್ರಾಯ್) ಒಪ್ಪಂದವಾಗಿ ಚಳವಳಿ ನಿಂತು ಗಾಂಧೀಜಿ ಲಂಡನ್ನಿನ ದುಂಡುಮೇಜಿನ ಪರಿಷತ್ತಿಗೆ ಹೋಗಿ ಸಂವಿಧಾನ ಸುಧಾರಣೆ ಬಗ್ಗೆ ಅಪೇಕ್ಷಿತ ಸುಧಾರಣೆ ಕಾಣದೆ ಬರಿಗೈಯಲ್ಲಿ ಮರಳಿ, ಭಾರತಕ್ಕೆ ಬಂದ ತಕ್ಷಣ ಬಂಧಿತರಾಗಿ ಕಾಂಗ್ರೆಸ್ ಮತ್ತು ಅದರ ಅಂಗ ಸಂಸ್ಥೆಗಳನ್ನು ಸರಕಾರ ಪ್ರತಿಬಂಧಿಸಿತು. ಮತ್ತೆ ಕಾನೂನು ಭಂಗ ಚಳವಳಿ ಉಗ್ರವಾಗಿ ಆರಂಭವಾಯಿತು (1932). ಕರ್ನಾಟಕದ ಸಿದ್ದಾಪುರ, ಅಂಕೋಲ ಸಹಿತ ಹಲವೆಡೆ ರೈತರು ಕಂದಾಯ ಕೊಡದೆ ಕರನಿರಾಕರಣ ಚಳವಳಿ ನಡೆಸಿದರು.

ಮತೀಯ ಪ್ರಾತಿನಿಧ್ಯದಂತೆ ಪರಿಶಿಷ್ಟ ಜಾತಿಯವರಿಗೂ ಪ್ರತ್ಯೇಕ ಪ್ರಾತಿನಿಧ್ಯ ಸ್ಥಾಪಿಸಬಯಸಿದ ರಾಮ್ಸೆ ಮ್ಯಾಕ್ಡೊನಾಲ್ಡ್ ಕೊಡುಗೆಯ ವಿರುದ್ಧ ಗಾಂಧೀಜಿ ಪುಣೆಯ ಜೈಲಿನಲ್ಲಿ ಉಪವಾಸ ಕೈಗೊಳ್ಳಲು ಕಡೆಗೆ ಅಂಬೇಡ್ಕರರಿಗೂ ಗಾಂಧೀಜಿಗೂ ಪೂನ ಒಪ್ಪಂದವಾಗಿ ಪರಿಶಿಷ್ಟ ಜಾತಿಯವರಿಗೂ ಇತರ ಹಿಂದುಗಳ ಜೊತೆಗೆ ಜಂಟಿ ಮತದಾರ ಕ್ಷೇತ್ರ ಇರುವಂತಾಗಿ, ಪ್ರಾಂತಗಳ ಶಾಸನ ಸಭೆಗಳಲ್ಲಿ ಒಟ್ಟು (71ರ ಬದಲು) 148 ಸ್ಥಾನ ಹಾಗೂ ಕೇಂದ್ರ ಶಾಸನ ಸಭೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ. 18 ಸ್ಥಾನ ಮೀಸಲಿಡಲು ಒಪ್ಪಂದವಾಗಿ ಸರಕಾರ ಇದನ್ನು ಒಪ್ಪಿತು. ಇದರ ಹಿಂದೆ ಗಾಂಧೀಜಿ ಹರಿಜನ ಸೇವಕ ಸಂಘ ಸ್ಥಾಪಿಸಿ ಅಸ್ಪೃಶ್ಯತಾ ನಿವಾರಣೆಗಾಗಿ ತಮ್ಮ ಬಿಡುಗಡೆಯ ಅನಂತರ (ಮೇ 1933) ಪ್ರಚಾರ ಪ್ರವಾಸ ಕೈಗೊಂಡರು (1934).

ಮುಂದೆ ವೈಧಾನಿಕ ಸುಧಾರಣೆಯ ಫೆಡರಲ್ ಆಕ್ಟ್ 1935ರಲ್ಲಿ ಮಂಜೂರಾಗಿ 1937ರಲ್ಲಿ ಪ್ರಾಂತೀಯ ಶಾಸನ ಸಭೆಗಳಲ್ಲಿ ಹನ್ನೊಂದರಲ್ಲಿ ಎಂಟು ಪ್ರಾಂತಗಳಲ್ಲಿ ಕಾಂಗ್ರೆಸ್ ಬಹುಮತಗಳಿಸಿ ಮಂತ್ರಿ ಮಂಡಲ ರಚಿಸಿತು. ಕೇಂದ್ರ ಶಾಸನಸಭೆಯಲ್ಲೂ ಬಹುಮತ ಗಳಿಸಿತು. ಉತ್ತರ ಪ್ರದೇಶದಲ್ಲಿ ಮುಸ್ಲಿಂಲೀಗ್ ಜೊತೆ ಅಧಿಕಾರ ಹಂಚಿಕೊಳ್ಳಲು ಒಪ್ಪದೆ ಲೀಗ್‌ನ ಮನಸ್ತಾಪ ಹೆಚ್ಚಿತು. 1937-39ರ ನಡುವೆ ಕಾಂಗ್ರೆಸ್ ಸದಸ್ಯತ್ವ 5 ಲಕ್ಷದಿಂದ 50 ಲಕ್ಷಕ್ಕೆ ಹೆಚ್ಚಿತು.

2ನೆಯ ಮಹಾಯುದ್ಧ (1939-45) ಆರಂಭ ಆದಾಗ ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜೀನಾಮೆ ಕೊಟ್ಟವು. ಕಾಂಗ್ರೆಸ್ಸನ್ನು ಕೇಳದೆ ಭಾರತ ಮಹಾಯುದ್ಧದಲ್ಲಿ ಭಾಗವಹಿಸುವುದಾಗಿ ಬ್ರಿಟಿಷರು ಘೋಷಿಸಿದ್ದೇ ಇದಕ್ಕೆ ಕಾರಣ. 1940 ಮತ್ತು 1941ರಲ್ಲಿ ಯುದ್ಧ ವಿರೋಧಿ ವೈಯಕ್ತಿಕ ಸತ್ಯಾಗ್ರಹ ನಡೆಸಿ ಗಾಂಧೀಜಿಯವರೇ ಆದಿಯಾಗಿ ಸು.24,000 ಗಣ್ಯ ಕಾರ್ಯಕರ್ತರು ಬಂಧಿತರಾದರು.

ಈ ನಡುವೆ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಸಿದ್ಧಿಸದೆಂದು ನಂಬಿದ್ದ ಸುಭಾಷ್‌ಚಂದ್ರ ಬೋಸರು 1938 ಮತ್ತು 1939ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆ ಆಗಿ, ಗಾಂಧೀಜಿಯವರ ವಿರೋಧದಿಂದಾಗಿ ಅಧ್ಯಕ್ಷತೆಗೆ ರಾಜೀನಾಮೆ ನೀಡಿ ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪಿಸಿದರು. ಗೃಹ ಬಂಧನದಲ್ಲಿದ್ದವರು ಕಣ್ಣು ತಪ್ಪಿಸಿ ಜರ್ಮನಿ ತಲುಪಿ, ಜರ್ಮನಿಯ ನೆರವಿನಿಂದ ಬ್ರಿಟಿಷರ ವಿರುದ್ಧ ಯುದ್ಧ ಸಾರುವ ಚಿಂತನೆ ಮಾಡಿದರು. ಜರ್ಮನಿಯಿಂದ ಜಲಾಂತರ್ಗಾಮಿ ಮೂಲಕ ಜಪಾನ್ ತಲುಪಿ ಅಲ್ಲಿ ಇಂಡಿಯನ್ ನ್ಯಾಷನಲ್ ಆರ್ಮಿ (ಆಜಾದ್ ಹಿಂದ್ ಫೌಜ್) ನಾಯಕತ್ವದಿಂದ ಸಿಂಗಪುರದಲ್ಲಿ ಸ್ವತಂತ್ರ ಭಾರತ ಸರಕಾರ ಸ್ಥಾಪಿಸಿ ಅಂಡಮಾನ್, ಬರ್ಮಾ ಮೂಲಕ ಅವರ ಸೈನ್ಯ ಭಾರತದ ಗಡಿ ಒಳಗೆ ಪ್ರವೇಶಿಸಿದ್ದು ಚರಿತ್ರಾರ್ಹ ಘಟನೆ. ಭಾರತದ ತರುಣರಿಗೆ ಇದರಿಂದ ಅಪಾರ ಸ್ಫೂರ್ತಿ, ದೊರೆಕಿತು.

ಗಾಂಧೀಜಿ 1942 ಆಗಸ್ಟ್ 8ರಂದು ಕ್ವಿಟ್ ಇಂಡಿಯ ಚಳವಳಿ ಘೋಷಿಸಿದರು. ಗಾಂಧೀಜಿ, ಮೌಲಾನಾ ಆಜಾದ್ ಸಹಿತ ಎಲ್ಲ ನಾಯಕರ ಬಂಧನವಾಗಿ ಚಳವಳಿ ಬುಡಮೇಲು ಕೃತ್ಯ, ಸರಕಾರಿ ಆಸ್ತಿ ಪಾಸ್ತಿಗಳ ಹಾನಿ ಉಗ್ರ ರೂಪ ತಾಳಿತು. ಸರ್ಕಾರಿ ಕಚೇರಿ, ರೈಲ್ವೆ ನಿಲ್ದಾಣ, ತಂತಿ ಸಂಪರ್ಕಗಳ ವಿಧ್ವಂಸ ವ್ಯಾಪಕವಾಗಿ ಆಯಿತು. ಬಿಹಾರದಲ್ಲಿ ಹಲವು ದಿನ ಸರಕಾರವೇ ಇಲ್ಲದ ಸ್ಥಿತಿ. ಎಲ್ಲ ಪ್ರಾಂತಗಳಲ್ಲು ಜೈಲುಗಳು ತುಂಬಿದವು. ಅಹಮದಾಬಾದ್, ಬೊಂಬಾಯಿ, ದೆಹಲಿ, ಪುಣೆ, ಕಲ್ಕತ್ತಗಳಲ್ಲಿ ಕಾರ್ಖಾನೆಗಳ ಮುಷ್ಕರ, ಹಲವು ತಿಂಗಳು ಶಾಲೆ ಕಾಲೇಜುಗಳು ಬಂದ್ ಆದವು. ನವೆಂಬರ್ 11ಕ್ಕೆ ಜಯಪ್ರಕಾಶ್ ನಾರಾಯಣ್ ಹಜಾರಿಬಾಗ್ ಜೈಲಿನಿಂದ ತಪ್ಪಿಸಿಕೊಂಡು ಚಳವಳಿಯ ನಾಯಕತ್ವ ವಹಿಸಿದರು. ಲೋಹಿಯಾ, ಅಚ್ಯುತ ಪಟವರ್ಧನ, ಸುಚೇತಾ ಕೃಪಲಾನಿ, ಅರುಣಾ ಆಸಫ್ ಅಲಿ, ರಂಗನಾಥ ದಿವಾಕರ ಭೂಗತ ಚಳವಳಿಯ ನಾಯಕತ್ವ ವಹಿಸಿದರು. ಸಂಸ್ಥಾನಗಳಲ್ಲೂ ಹಿಂದೆಂದೂ ಇಲ್ಲದಂತೆ ಚಳವಳಿ ಸಾಗಿತು. ಒಂದು ಲಕ್ಷಕ್ಕೂ ಮೇಲ್ಪಟ್ಟು ಜನ ಬಂಧಿತರಾದರು. ಸುಭಾಷರ ಐ.ಎನ್.ಎ. 1944ರ ಮೇ ಮಣಿಪುರದ ಮೂಲಕ ಈಶಾನ್ಯ ಭಾರತದಲ್ಲಿ 250 ಕಿಮೀ ದೂರ ಒಳನುಗ್ಗಿದಾಗ ತರುಣರ ಉತ್ಸಾಹಕ್ಕೆ ಮೇರೆ ಇಲ್ಲದಾಯಿತು. ಆದರೆ ಮುಂದೆ ಈ ಸೈನ್ಯ (ಜಪಾನರು ಹಿಂದೆಗೆದುದರಿಂದ) ಯುದ್ಧ ತ್ಯಜಿಸಬೇಕಾಯಿತು. ಸು.20,000 ಐ.ಎನ್.ಎ ಸೈನಿಕರು ಬಂಧಿತರಾದರು (ಮುಂದೆ ನವೆಂಬರ್ 1945ರಲ್ಲಿ ದೆಹಲಿ ಕೆಂಪುಕೋಟೆಯಲ್ಲಿ ಇವರನ್ನು ವಿಚಾರಣೆ ಮಾಡಲು ಮುಂದಾದಾಗ ದೇಶದಲ್ಲಿ ಉಗ್ರ ಪ್ರತಿಭಟನೆ ಆಗಿ ಸರ್ಕಾರ ನಡುಗಿತು).

ಕ್ವಿಟ್ ಇಂಡಿಯ ಚಳವಳಿ ವಿಧ್ವಂಸಕ ಸ್ವರೂಪ ತಳೆದ ವಿಚಾರ ತಿಳಿದು ಜೈಲಿನಲ್ಲಿದ್ದ ಗಾಂಧೀಜಿ 1943ರ ಮಾರ್ಚ್‌ನಲ್ಲಿ ಚಳವಳಿ ಹಿಂದೆಗೆದರೂ ಉಪವಾಸ ಮಾಡಿದರೂ ಚಳವಳಿ ನಿಲ್ಲಲು ಕಾಲಾವಕಾಶವಾಯಿತು. ಬ್ರಿಟಿಷ್ ಸಿಂಹಾಸನ ನಿಜವಾಗಿ ನಡುಗಿತು. ಈ ನಡುವೆ ಕ್ರಿಪ್ಸ್ ಮಿಶನ್ ಕೊಡುಗೆಗಳು, ಆಗಸ್ಟ್ ಆಫರ್ ಇವೆಲ್ಲ ಕಾಂಗ್ರೆಸ್ಸಿನಿಂದ ತಿರಸ್ಕೃತವಾದವು. ಜಿನ್ನಾರ ನಾಯಕತ್ವದ ಮುಸ್ಲಿಂಲೀಗ್ 1940ರಲ್ಲಿ ಪಾಕಿಸ್ತಾನದ ಬೇಡಿಕೆ ಮುಂದಿಡಲು ಕಾಂಗ್ರೆಸ್ ಅದನ್ನೂ ಒಪ್ಪಲಿಲ್ಲ.

1945ರಲ್ಲಿ ಕೇಂದ್ರ ಶಾಸನ ಸಭೆಗೆ ಚುನಾವಣೆ ನಡೆದು 102ರಲ್ಲಿ 57 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದಿತು. ಆದರೆ ಕಾದಿಟ್ಟ ಮುಸ್ಲಿಂ ಮತದಾರ ಸಂಘಗಳಲ್ಲಿ ಮುಸ್ಲಿಂಲೀಗ್ 30 ಸ್ಥಾನ ಗೆದ್ದಿತು. ಈ ಮತದಾರ ಸಂಘಗಳಲ್ಲಿ ನಿಂತ ಕಾಂಗ್ರೆಸ್‌ನ ಮುಸ್ಲಿಂ ಉಮೇದುವಾರರು ಠೇವಣಾತಿ ಕಳೆದುಕೊಂಡರು. ಪರಿಶಿಷ್ಟ ಜಾತಿಯವರು ಕಾಂಗ್ರೆಸ್ಸನ್ನು ಬೆಂಬಲಿಸಿದರು. ದೇಶದ ಮುಸಲ್ಮಾನರ ಮತಗಳಲ್ಲಿ ಮುಸ್ಲಿಂಲೀಗಿಗೆ 86.6 ಮತಗಳು ದೊರೆತವು. ವಾಯವ್ಯ ಗಡಿ ಪ್ರಾಂತ್ಯದಲ್ಲಿ ಮಾತ್ರ ಕಾಂಗ್ರೆಸ್‌ಗೆ ಮುಸಲ್ಮಾನರ ಮತಗಳು ಬಂದವು.

1946 ಫೆಬ್ರವರಿ 18ಕ್ಕೆ ರಾಯಲ್ ಇಂಡಿಯನ್ ನೇವಿಯ (ನೌಕಾಪಡೆ) ಭಾರತೀಯ ಸೈನಿಕರು ಮುಂಬೈ, ಕರಾಚಿ, ಮದರಾಸು, ಕಲ್ಕತ್ತದಲ್ಲಿ ಬ್ರಿಟಿಷರ ವಿರುದ್ಧ ಹೂಡಿದ ಬಂಡು ಬ್ರಿಟಿಷರನ್ನು ದಂಗು ಬಡಿಸಿತು. ಬೊಂಬಾಯಿಯಲ್ಲೇ 200 ಬಿಳಿ ಅಧಿಕಾರಿಗಳನ್ನು

ಕೊಂದುಹಾಕಿದರು. ಬಾಡಿಗೆ ಸೈನ್ಯ ಅವಲಂಬಿಸಿ ಈ ದೇಶ ಆಳಲು ಬಾರದೆಂದು ಬ್ರಿಟಿಷರಿಗೆ ಮನವರಿಕೆ ಆಯಿತು. ಬಂಡೆದ್ದ ಸೈನಿಕರು ಸುಭಾಷರ ಐ.ಎನ್.ಎ ಬ್ಯಾಡ್ಜ್‌ಗಳನ್ನು ಧರಿಸಿದ್ದರು. ಕ್ಯಾಬಿನೆಟ್ ಮಿಶನ್ ಭಾರತಕ್ಕೆ ಬಂದು ದೇಶಕ್ಕೆ ಸ್ವಾತಂತ್ರ್ಯ ನೀಡುವ, ದೇಶವಿಭಜನೆ ಮಾಡುವ ಸಲಹೆ ಮುಂದಿಟ್ಟಿತು. ಕಾಂಗ್ರೆಸ್ ವಿಭಜನೆಗೆ ಒಪ್ಪಲಿಲ್ಲ. ದೇಶವನ್ನು ತುಂಡರಿಸುವ ಮುನ್ನ ನನ್ನನ್ನು ತುಂಡರಿಸಿ ಎಂದ ಗಾಂಧೀಜಿ, ಸ್ವಾತಂತ್ರ್ಯಕ್ಕಾಗಿ ಇನ್ನೊಂದು ಕಾನೂನು ಭಂಗ ಚಳವಳಿ ಆರಂಭಿಸುವುದಾಗಿ ಹೇಳಿದರು. ಆದರೆ ಅವರ ನಿಕಟಾನುಯಾಯಿ ನಾಯಕಗಣ ಇದಕ್ಕೆ ಒಪ್ಪಲಿಲ್ಲ.

ಪಾಕಿಸ್ತಾನದ ಸಾಧನೆಗಾಗಿ ಆಗ ಎಲ್ಲೆಡೆ ಜಾತೀಯ ದಂಗೆ, ರಕ್ತಪಾತ ಸಾಗಿರಲು 1947 ಆಗಸ್ಟ್ 16 ರಿಂದ ನೇರಕ್ರಮ ನಡೆಸಲು ಜಿನ್ನಾ ಕರೆನೀಡಲು ಬಂಗಾಲದಲ್ಲೆ ಸಾವಿರಾರು ಹಿಂದುಗಳ ಮಾರಣಹೋಮವಾಯಿತು. ಕಾಂಗ್ರೆಸ್ ನಾಯಕರು ಬೆದರಿ ದೇಶವಿಭಜನೆಗೆ ಒಪ್ಪಿದರು. 1946 ಸೆಪ್ಟೆಂಬರ್ 2ರಂದು ಜವಾಹರ್‌ಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ನಡುಗಾಲ ಕೇಂದ್ರ ಸರಕಾರ ಸ್ಥಾಪನೆ ಆಗಿ ಸಂವಿಧಾನ ಸಭೆ ಸೇರಿತು. ಗೃಹ ಸಚಿವ ಸರ್ದಾರ್ ಪಟೇಲರು 500ಕ್ಕೂ ಮೀರಿದ್ದ ದೇಶೀಯ ಸಂಸ್ಥಾನಿಕರನ್ನು ಭಾರತ ಒಕ್ಕೂಟಕ್ಕೆ ಸೇರುವಂತೆ ಮಾಡಲು ಯಶಸ್ವಿಯಾದರು. 1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾಯಿತು. ಪಾಕಿಸ್ತಾನದ ಸೃಷ್ಟಿಯೂ ಆಯಿತು.

ಲಕ್ಷಾಂತರ ಜನರ ತ್ಯಾಗ, ಬಲಿದಾನ, ಜೈಲುವಾಸಗಳ ಫಲವಾಗಿ ಈ ಸ್ವಾತಂತ್ರ ಬಂತು. ಜೈಲಿಗೆ ಹೋದ ಸಾವಿರಾರು ಜನರ ಕುಟುಂಬಗಳು ಉಪವಾಸದಿಂದ ನರಳಿದವು. ಗಾಂಧೀಜಿ ನಡೆಸಿದ ಅಹಿಂಸಾತ್ಮಕ ಹೋರಾಟ ಅಹಿಂಸಾತ್ಮಕವಾಗಿ ಉಳಿಯಲಿಲ್ಲ. ಸುಭಾಶ್‌ಚಂದ್ರ ಬೋಸ್, ಭಗತ್‌ಸಿಂಗ್, ಚಂದ್ರಶೇಖರ ಆಜಾದ್, ಸಾವರ್ಕರ್ ಮೊದಲಾದ ಕ್ರಾಂತಿಕಾರಿಗಳೂ ಇದಕ್ಕೆ ಅಪೂರ್ವ ಸ್ಫೂರ್ತಿ ನೀಡಿದರು. ಗಾಂಧೀಜಿಯ ನೇತೃತ್ವದಲ್ಲಿ ಕಾಂಗ್ರೆಸ್ ಹೋರಾಟದಲ್ಲಿ ತೀರ ಗಣ್ಯ ಪಾತ್ರವಹಿಸಿತು. ಭಾರತಕ್ಕೆ ಸ್ವಾತಂತ್ರ್ಯ ನೀಡುವ ಮಸೂದೆಯನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಂಡಿಸಿದಾಗ ಸ್ವಾತಂತ್ರ್ಯ ನೀಡಲು ಪ್ರಧಾನಿ ಆಟ್ಲಿ ನೀಡಿದ ಮುಖ್ಯ ಕಾರಣಗಳು ಇವು: ಮಹಾಯುದ್ಧದಿಂದಾಗಿ ಬ್ರಿಟನ್ನಿನ ಆರ್ಥಿಕ ಶಕ್ತಿ ಕುಗ್ಗಿ ಭಾರತವನ್ನು ಸಾಮ್ರಾಜ್ಯದಲ್ಲಿ ಉಳಿಸಿಕೊಳ್ಳುವ ಸಾಮರ್ಥ್ಯ ಇಂಗ್ಲೆಂಡ್‌ಗೆ ಉಳಿದಿಲ್ಲ, ಈಗ ಭಾರತದ ಕೂಲಿ ಸೈನ್ಯ (ಮರ್ಸೆನರಿ ಆರ್ಮಿ) ಬ್ರಿಟಿಷ್ ಚಕ್ರವರ್ತಿಗೆ ನಿಷ್ಠೆಯನ್ನು ಹೊಂದಿಲ್ಲ.

ಇದುವರೆಗೆ ಒಟ್ಟಾರೆ ಭಾರತದ ಸ್ವಾತಂತ್ರ್ಯ ಚಳವಳಿಯ ಒಂದು ಸ್ಥೂಲ ಸ್ವರೂಪವನ್ನು ನಿರೂಪಿಸಲಾಯಿತಷ್ಟೆ. ಇದರಲ್ಲಿ ಈ ಚಳವಳಿಯಲ್ಲಿಯ ಕರ್ನಾಟಕದ ಪಾತ್ರದ ಬಗ್ಗೆ ಅನಿವಾರ್ಯವಾಗಿ ಅಲ್ಲೊಂದು ಇಲ್ಲೊಂದು ಸಣ್ಣ ಸಣ್ಣ ಸಂಗತಿಗಳಿಂದ ಮುಕ್ತಾಯವಾಗಿದೆ. ಆದರೆ ಈ ರಾಷ್ಟ್ರೀಯ ಚಳವಳಿಯಲ್ಲಿ ಕರ್ನಾಟಕದ ಪಾತ್ರವೂ ಪ್ರಮುಖವಾಗಿತ್ತೆಂಬುದನ್ನು ತಿಳಿದುಕೊಳ್ಳುವುದು ಅವಶ್ಯ.

**ಭಾರತ ಬಿಟ್ಟು ತೊಲಗಿ ಚಳವಳಿ:** ಭಾರತ ಸ್ವಾತಂತ್ರ್ಯ ಹೋರಾಟದ ಒಂದು ಮಜಲು. 1942 ಆಗಸ್ಟ್ 8ರಂದು ಗಾಂಧೀಜಿ ನೀಡಿದ ಕರೆಯಂತೆ ನಡೆದ ಒಂದು ಮಹಾಚಳವಳಿ. ಚಲೇಜಾವ್ ಮತ್ತು ಕ್ವಿಟ್ ಇಂಡಿಯ ಎಂತಲೂ ಈ ಚಳವಳಿ ಪ್ರಸಿದ್ಧ.

ಎರಡನೆಯ ಮಹಾಯುದ್ಧ ಆರಂಭವಾದಾಗ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದ ಪ್ರಾಂತಗಳ ಸರ್ಕಾರಗಳು ರಾಜೀನಾಮೆ ನೀಡುವಂತೆ ಕಾಂಗ್ರೆಸ್ ಕರೆ ನೀಡಿತು. ಆದರೆ ಯುದ್ಧದಲ್ಲಿ ಜರ್ಮನಿಯದೆ ಮೇಲುಗೈ ಆದಾಗ ದೇಶಹಿತ ದೃಷ್ಟಿಯಿಂದ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು ಕೇಂದ್ರದಲ್ಲಿ ಸ್ಥಾಪಿಸಿದರೆ ತಾವು ಸರ್ಕಾರದೊಡನೆ ಸಹಕರಿಸುವುದಾಗಿ ಕಾಂಗ್ರೆಸ್ ಪ್ರಕಟಿಸಿತು. ಇದನ್ನು ಒಪ್ಪದ ಸರ್ಕಾರ ಯುದ್ಧಸಲಹಾ ಮಂಡಲಿಯ ಸ್ಥಾಪನೆ, ವೈಸರಾಯ್ ಸಲಹಾ ಮಂಡಲಿಯ ವಿಸ್ತರಣೆ, ಈ ಎರಡೂ ಮಂಡಲಿಗಳಲ್ಲಿ ಭಾರತೀಯರ ನೇಮಕ, ಹೊಸ ಸಂವಿಧಾನ ರಚಿಸಲು ಪ್ರಾತಿನಿಧಿಕ ಸಭೆಯೊಂದರ ರಚನೆ ಮುಂತಾದ 1940 ಆಗಸ್ಟ್ ತಿಂಗಳ ಕೊಡುಗೆಯನ್ನು ಮುಂದೊಡ್ಡಿತು. ಇದನ್ನು ಕಾಂಗ್ರೆಸ್ಸು ತಿರಸ್ಕರಿಸಿ ಸತ್ಯಾಗ್ರಹಹೂಡಿತು. ಮುಂದೆ 1942 ಮಾರ್ಚ್‌ನಲ್ಲಿ ರಂಗೂನ್ ಜಪಾನಿನ ವಶವಾದಾಗ ಬ್ರಿಟಿಷ್ ಸರ್ಕಾರ ಹೆದರಿ ಕ್ರಿಪ್ಸ್ ರಾಯಭಾರಕ್ಕೆ ಏರ್ಪಾಡುಮಾಡಿತು. ಕಾಂಗ್ರೆಸ್ ಇದನ್ನು ತಿರಸ್ಕರಿಸಿತು. 1942ರ ಆಗಸ್ಟ್ 8ಕ್ಕೆ ಬೊಂಬಾಯಿ ಯಲ್ಲಿ ಸೇರಿದ ಎ ಐ ಸಿ ಸಿ ಯು ಭಾರತಬಿಟ್ಟುತೊಲಗಿ ಚಳವಳಿಗೆ ಕರೆನೀಡಿತು. ನಾಯಕರ ಬಂಧನವಾದಲ್ಲಿ ಪ್ರತಿಯೊಬ್ಬ ಕಾರ್ಯಕರ್ತನೂ ತಾನೇ ನಾಯಕನೆಂದು ಭಾವಿಸಿ, ಬ್ರಿಟಿಷ್ ಸರ್ಕಾರದ ಅಸ್ತಿತ್ವದ ವಿರುದ್ಧ ಅಹಿಂಸಾತ್ಮಕ ಪ್ರತಿಭಟನೆ ತೋರಬೇಕೆಂದು ಗಾಂಧೀಜಿ ಕರೆಕೊಟ್ಟರು ಅದೇದಿನ ರಾತ್ರಿ ಗಾಂಧೀಜಿ, ನೆಹರೂ, ಆಜಾದ್ ಮತ್ತು ಇತರ ನಾಯಕರ ಬಂಧನವಾಯಿತು. ಗಾಂಧೀಜಿ ಮತ್ತು ಕಾಂಗ್ರೆಸ್ ನಾಯಕರ ಬಂಧನದ ವಿರುದ್ಧ ಉಗ್ರಪ್ರತಿಭಟನೆ ಮುಂಬೈಯಿಂದ ಆರಂಭಿಸಿ ಎಲ್ಲಕಡೆಗೂ ಹರಡಿತು. ಸಿಟ್ಟಿಗೆದ್ದ ಜನ ಕಲ್ಲೆಸೆತ, ಕಟ್ಟಡಗಳಿಗೆ ಅಗ್ನಿಸ್ಪರ್ಶ, ಪೋಲೀಸರನ್ನೂ ಪೋಲೀಸ್ ವಾಹನಗಳನ್ನೂ ಆಕ್ರಮಿಸುವ–ಹೀಗೆ ವಿವಿಧರೂಪದ ಪ್ರತಿಭಟನೆ ತೋರಿತು. ಶಾಲಾ ಕಾಲೇಜುಗಳು ಹಾಗೂ ಕಾರ್ಖಾನೆಗಳು ಮುಚ್ಚಿ ಮುಷ್ಕರದಲ್ಲಿ ಭಾಗವಹಿಸಿದರು. ಮಶ್ರುವಾಲಾ ಮತ್ತು ಕಾಲೆಲ್ಕರ್ ಅವರು ಹರಿಜನದಲ್ಲಿ ಚಳವಳಿಯನ್ನು ನಡೆಸುವ ವಿಧಾನವನ್ನು ಪ್ರಕಟಿಸಿ ಜನರಿಗೆ ಮಾರ್ಗದರ್ಶನ ಮಾಡಿದರು. ಸರ್ಕಾರೀ ಯಂತ್ರ ನಡೆಯದಂತೆ ಹಾಗೂ ಬ್ರಿಟಿಷರ ಯುದ್ಧ ಪ್ರಯತ್ನಗಳಿಗೆ ಸಹಕಾರ ಸಿಗದಂತೆ ಮಾಡಲು ಜೀವಹಾನಿಯಾಗದಂತೆ ರೈಲುಹಳಿ ಕೀಳುವುದು, ತಂತಿ ಕತ್ತರಿಸುವುದು ಸರ್ಕಾರೀ ಕಟ್ಟಡಗಳಿಗೆ ಹಾನಿಮಾಡುವುದು ಹೀಗೆ ವಿವಿಧ ಸ್ವರೂಪದ ಬುಡಮೇಲು ಕೃತ್ಯಗಳನ್ನು ಭೂಗತ ಗುಂಪುಗಳು ಆರಂಭಿಸಿದುವು. ಬಿಹಾರ, ಉತ್ತರ ಪ್ರದೇಶ, ಮುಂಬಯಿ ಪ್ರಾಂತಗಳಲ್ಲಿ ಬಿರುಸಾಗಿ ಚಳವಳಿ ನಡೆಯಿತು. ಮುಂಬಯಿ ಮೈಸೂರುಗಳಲ್ಲಿ ಈ ಚಳವಳಿಯಿಂದಾಗಿ ಹಲವು ತಿಂಗಳು ಶಾಲಾಕಾಲೇಜುಗಳು ಮುಚ್ಚಿದ್ದರೆ ಅಹ್ಮದಾಬಾದ್‌ನ ಗಿರಣಿಗಳು ಹಲವಾರು ತಿಂಗಳು ಮುಚ್ಚಿದ್ದವು. ಕಾರ್ಮಿಕ ಸಂಘಗಳ ಮೇಲೆ ನಿಯಂತ್ರಣ ಹೊಂದಿದ್ದ ಕಮ್ಯುನಿಷ್ಟರು ಸರ್ಕಾರದ ಪರವಾಗಿದ್ದರೂ ಮುಂಬಯಿಯಲ್ಲಿ ಸಾವಿರಾರು ಕಾರ್ಮಿಕರು ಹಲವು ವಾರ ಮುಷ್ಕರ ಆಚರಿಸಿದರು. ಬೇರೆಬೇರೆ ಕಡೆ ಸ್ಫೋಟಗಳ ಬಳಕೆಯೂ ಆಯಿತು. ಮುಂಬಯಿಯ ಮಜಗಾಂವ್ ಬಂದರಿನಲ್ಲಿ ಅಕ್ಟೋಬರ್ 3ರಂದು ಭಾರಿ ಸ್ಫೋಟವಾಯಿತು. ಪುಣೆ ಸಿನಿಮಾಮಂದಿರದ ಸ್ಫೋಟದಿಂದ ಐವರು ಬಿಳಿಯರು ಸತ್ತರು. ವಿವಿಧ ಕಡೆ ಪೋಲೀಸರು ಗಲಭೆ ತಡೆಯಲು ಸೇನೆ ಕರೆಸಲಾಯಿತು. ಈ ಸಂದರ್ಭದಲ್ಲಿ ನಡೆದ ಗೋಲೀಬಾರಿನಲ್ಲಿ ದೆಹಲಿಯಲ್ಲಿ 150 ಜನ, ಉತ್ತರ ಪ್ರದೇಶದ ಬಾಲ್ಲಿಯಾದಲ್ಲಿ 167 ಜನ. ಮಧುಬನ್‌ನಲ್ಲಿ 34 ಜನ, ಅಸ್ಸಾಮಿನ ಗೋಲ್‌ಪಾಡಾದಲ್ಲಿ 60 ಜನ ಸತ್ತರು. ಪಟ್ನಾ ಅಸೆಂಬ್ಲಿಹಾಲ್ ಮೇಲೆ ಆಗಸ್ಟ್ 11ರಂದು ಧ್ವಜ ಹಾರಿಸಿದಾಗ ಆರು ಜನ ಸತ್ತರು. ಜೈಲಿಗೆ ಒಯ್ದ ನಾಯಕರ ಬಗ್ಗೆ ವಿವರಣೆ ನೀಡದಿದ್ದರಿಂದಲೂ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಿದ್ದರಿಂದಲೂ ಆಗಸ್ಟ್ 15ಕ್ಕೆ ಜೈಲಿನಲ್ಲಿ ಮಹಾದೇವ ದೇಸಾಯಿ ತೀರಿಕೊಂಡಾಗ ಅವರನ್ನೂ ಇತರ ನಾಯಕರನ್ನೂ ಗುಂಡಿಕ್ಕಿ ಕೊಲ್ಲಲಾಯಿತೆಂಬ ವದಂತಿಹರಡಿ ಆಗಸ್ಟ್ 16, 17ರಂದು ಎಲ್ಲೆಡೆ ಮತ್ತೆ ಮೆರವಣಿಗೆ, ಹಿಂಸಾಚಾರ ನಡೆದುವು. ಬೆಂಗಳೂರಲ್ಲೇ ಆಗ 5ರಿಂದ 10 ಮಂದಿ ಮಡಿದರೆನ್ನಲಾಗಿದೆ. ಬೆಂಗಳೂರಿನ ವಿಮಾನ ಕಾರ್ಖಾನೆಯ ಆದಿಯಾಗಿ ಸಾವಿರಾರು ಕಾರ್ಮಿಕರು ಮುಷ್ಕರ ಹೂಡಿದ್ದರು. ಸ್ವಾತಂತ್ರ್ಯ ಹೋರಾಟಗಾರರು ಮುಂಬಯಿಯಿಂದ ಗುಪ್ತ ಆಕಾಶವಾಣಿ ಪ್ರಸಾರವನ್ನೂ ಆರಂಭಿಸಿದರು.

ಬಂಧನದಲ್ಲಿದ್ದ ಜಯಪ್ರಕಾಶ ನಾರಾಯಣರು ನವೆಂಬರ್ 11ರ ರಾತ್ರಿ ಹಜಾರಿಬಾಗ್ ಜೈಲಿನಿಂದ ಪಾರಾಗಿ ಒಂದು ಕೇಂದ್ರ ಗುಪ್ತ ಸಂಘಟನೆಯನ್ನು ರೂಢಿಸಿ ಭೂಗತ ಚಳವಳಿಗೆ ಮಾರ್ಗದರ್ಶನ ಮಾಡಿದರು. ಅಚ್ಯುತ್ ಪಟ್ಟವರ್ಧನ್, ಅರುಣಾ ಅಸಫ್‌ಆಲಿ, ರಾಮಮನೋಹರ ಲೋಹಿಯಾ, ರಂಗರಾವ್ ದಿವಾಕರ್ ಮುಂತಾದವರು ಈ ಗುಪ್ತ ಸಂಘಟನೆ ಮಾರ್ಗದರ್ಶನ ಮಾಡುತ್ತಿದ್ದರು. ಮುಂಬಯಿ ಇದರ ಕೇಂದ್ರವಾಗಿತ್ತು. ದೇಶದ ಎಲ್ಲೆಡೆ ಹಾಗೂ ಮೈಸೂರು ಸಂಸ್ಥಾನದಲ್ಲಿ ಮತ್ತು ಇತರ ಆಶ್ರಿತರಾಜರ ಸಂಸ್ಥಾನಗಳಲ್ಲೂ ಉಗ್ರವಾಗಿ ಸಾಗಿತು. ಮಧ್ಯಪ್ರಾಂತದ ಅಷ್ಟಿ, ಚಿಮೂರ್‌ಗಳಂತೆ ಮೈಸೂರಿನ ಈಸೂರಿನಲ್ಲೂ, ಪೋಲೀಸರ ಮೇಲೆ ರೊಚ್ಚಿಗೆದ್ದ ಜನ ಆಕ್ರಮಣ ಮಾಡಿದರು. ಈಸೂರ ಐವರು ದೇಶಭಕ್ತರಿಗೆ ಗಲ್ಲುಶಿಕ್ಷೆ ವಿಧಿಸಲಾಯಿತು. ರೈಲುಗಳ ಸಂಚಾರಕ್ಕೆ ತೀವ್ರ ತಡೆಯಾಯಿತು. ಮದ್ರಾಸಿನ ರೈಲು ಕಾರ್ಮಿಕರ ಮುಷ್ಕರದಿಂದ ಮದ್ರಾಸು–ಕಲ್ಕತ್ತ ರೈಲು ಸಂಚಾರ ಸ್ಥಗಿತವಾಯಿತು. ಬೆಂಗಳೂರು–ಗುಂತಕಲ್ ಮಾರ್ಗದಲ್ಲಿ ರೈಲುಹಳಿಗಳ ವಿಧ್ವಂಸದಿಂದ ಹಲವು ದಿನ ರೈಲು ಸಂಚಾರವೇ ನಿಂತಿತು. ಗುಜರಾತಿನ ಬಾರ್ಡೋಲಿ ರೈಲುಹಾದಿಯ ವಿಧ್ವಂಸದಿಂದ ಖ್ಯಾತವಾಯಿತು. ವಾಯವ್ಯಗಡಿ ಪ್ರಾಂತದಲ್ಲಿ ಅಹಿಂಸಾತ್ಮಕ ಚಳವಳಿ ನಡೆದು 2,500 ಜನ ಜೈಲುಕಂಡರು. ಕರ್ನಾಟಕದ ಬೆಳಗಾಂವಿ, ಧಾರವಾಡ ಜಿಲ್ಲೆಗಳಲ್ಲಿ ಹತ್ತಾರು ತಂಡಗಳು ಭೂಗತವಾಗಿ ಸತತವಾಗಿ ಒಂದು ವರ್ಷಕ್ಕೂ ದೀರ್ಘಕಾಲ ರೈಲುಹಳಿ ಕೀಳುವುದು, ಗ್ರಾಮಚಾವಡಿ ಮತ್ತು ಗ್ರಾಮದಫ್ತರ್ ಸುಡುವುದು ಮುಂತಾದ ಚಟುವಟಿಕೆಗಳನ್ನು ನಡೆಸಿ (ಕರ್ನಾಟಕ ಪ್ಯಾಟರ್ನ್) ಕರ್ನಾಟಕ ಮಾದರಿಯ ಚಳವಳಿ ಎಂದು ಖ್ಯಾತವಾದ ಯಶಸ್ವಿ ಭೂಗತ ಚಳವಳಿಯನ್ನು ನಡೆಸಿ ಜಯಪ್ರಕಾಶರಂಥ ನಾಯಕರ ಮೆಚ್ಚುಗೆಗೆ ಪಾತ್ರರಾದರು. ಈ ಎರಡೂ ಜಿಲ್ಲೆಗಳಿಗೆ ಬಿಳಿಯರೆ ಇದ್ದ ಸೈನ್ಯ ತಂದರು. ಭಾರತ ವಿದೇಶಿಯರ ದಾಳಿಯ ತೀವ್ರಭೀತಿಯಲ್ಲಿ ಇದ್ದಾಗ ಈ ಚಳವಳಿ ಬ್ರಿಟಿಷರ ಯುದ್ಧಯತ್ನಗಳನ್ನು ತೀವ್ರವಾಗಿ ಕುಂಠಿತಗೊಳಿಸಿತು. ಆಕ್ರಮಣಭಯಕ್ಕೆ ಒಳಗಾದ ಪೂರ್ವ ಭಾರತದ ಜೊತೆ ಸಂಪರ್ಕಸಾಧನ ನಾಶಗೊಳಿಸುವುದರ ಜೊತೆ ಸೇನೆಗೆ ಬೇಕಾದ ಅಗತ್ಯ ವಸ್ತುಗಳ ಪೂರೈಕೆಗೂ ಈ ಚಳವಳಿ ತಡೆಯನ್ನೊಡ್ಡಿತು ಮತ್ತು ಉತ್ಪನ್ನದಲ್ಲಿ ಶೇ.45, ಚರ್ಮದ ವಸ್ತುಗಳಲ್ಲಿ ಶೇ.50 ಕಡಿಮೆ ಆಯಿತು ಎಂದು ಹಚಿನ್ಸ್, ಖಾಕಿ ಹೇಳಿದ್ದಾರೆ.

ಭಾರತ ಸರ್ಕಾರದ ಅಂಕೆಸಂಖ್ಯೆಗಳಂತೆ 1943 ಡಿಸೆಂಬರ್ ತನಕ ಭಾರತದ ಬ್ರಿಟಿಷ್ ಪ್ರಾಂತಗಳಲ್ಲಿ ಮಾತ್ರ 91.836 ಜನರನ್ನು ಬಂಧಿಸಲಾಯಿತು. 601 ಬಾರಿ ಗೋಲಿಬಾರಾಯಿತು. 763 ಜನ ಸತ್ತರು. ಇದರಲ್ಲಿ ಸಂಸ್ಥಾನಗಳಲ್ಲಿಯ ಅಂಕೆ ಸಂಖ್ಯೆಗಳು ಸೇರಿಲ್ಲ. ಆಗಿನ ಮೈಸೂರು ಸಂಸ್ಥಾನ ಒಂದರಲ್ಲೆ 5000ಕ್ಕೂ ಹೆಚ್ಚು ಬಂಧನಗಳೂ 25ಕ್ಕೂ ಹೆಚ್ಚು ಸಾವುಗಳಾದವು. ಹೀಗಿರುವಾಗ ಮೇಲೆ ಕೊಟ್ಟ ಅಂಕೆಸಂಖ್ಯೆಯ ಅಸಮರ್ಪಕತೆ ಸ್ಪಷ್ಟವಾಗುತ್ತದೆ. ದೇಶಾದ್ಯಂತ ಜ್ವಾಲಾಮುಖಿಯಂತೆ ಸ್ಫೋಟಿಸಿದ ಈ ಚಳವಳಿ ಸುಮಾರು ಎರಡು ವರ್ಷಗಳವರೆಗೆ ಸಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಒಂದು ಮೈಲಿಗಲ್ಲಾಯಿತು. ಹಾಗೂ ಈ ದೇಶವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಕಷ್ಟಸಾಧ್ಯವೆಂಬ ಸಂಗತಿಯನ್ನು ಬ್ರಿಟಿಷರಿಗೆ ಮನವರಿಕೆ ಮಾಡಿಕೊಟ್ಟಿತು.

**ಕರ್ನಾಟಕ:** 1799ರಲ್ಲಿ ಟಿಪ್ಪುವಿನ ಪತನ, 1818ರಲ್ಲಿ ಪೇಶ್ವೆಯ ಸೋಲು ಹಾಗೂ ನಿಜಾಮ ಬ್ರಿಟಿಷರ ಸಹಾಯಕ ಸೇನಾ ಮೈತ್ರಿಗೆ ಸೇರಿದ್ದು, ಈ ಘಟನೆಗಳ ಅನಂತರ ಕರ್ನಾಟಕವು ಪೂರ್ತಿ ಬ್ರಿಟಿಷರ ವಶವಾಯಿತು. ಕೊಡಗಿನ ರಾಜರು ಟಿಪ್ಪುವಿನ ಪತನಕ್ಕೆ ಮೊದಲೇ ಬ್ರಿಟಿಷರ ಅಧಿರಾಜತ್ವ ಒಪ್ಪಿದ್ದರು.

ಆದರೆ ಕನ್ನಡಿಗರು ಬ್ರಿಟಿಷರ ಅಧಿರಾಜತ್ವ ಹಾಗೆಯೇ ಒಪ್ಪಿಕೊಳ್ಳಲಿಲ್ಲ. 1800–1802 ರ ನಡುವೆ ಧೋಂಡಿಯಾ ವಾಘ್ ಮತ್ತು ಬಲಂನ ಕೃಷ್ಣಪ್ಪ ನಾಯಕ ಬ್ರಿಟಿಷರ ವಿರುದ್ಧ ಬಂಡೆದ್ದರು. 1819 ರಲ್ಲಿ ಕೊಪ್ಪಳದಲ್ಲಿ ವೀರಪ್ಪ ದೇಸಾಯಿ, 1820ರಲ್ಲಿ ಬೀದರ್ ಜಿಲ್ಲೆಯ ದೇಶಮುಖರು, 1824 ರಲ್ಲಿ ಸಿಂದಗಿಯ ಬಂಡಾಯ, ಅದೇ ವರ್ಷ ಕಿತ್ತೂರ ರಾಣಿ ಚನ್ನಮ್ಮನ ಬ್ರಿಟಿಷರ ವಿರುದ್ಧ ಸಮರವೆಸಗಿದುದು, 1829ರಲ್ಲಿ ಸಂಗೊಳ್ಳಿ ರಾಯಣ್ಣನ ಹೋರಾಟ, 1830–31 ರಲ್ಲಿ ಕೆನರಾ ಮತ್ತು ನಗರ ಬಂಡಾಯ, 1837ರಲ್ಲಿ ಕೊಡಗಿನಲ್ಲಿ ದಂಗೆ ಉಲ್ಲೇಖನೀಯ.

ಆದರೆ ಅದಲ್ಲದೆ 1857ರ ಸರಣಿಯಲ್ಲಿ ಹಲಗಲಿಯ ಬೇಡರು, ಸುರಪುರದ ವೆಂಕಟಪ್ಪ (ಫೆಬ್ರವರಿ 1858), ನರಗುಂದದ ಬಾಬಾ ಸಾಹೇಬ, ಮುಂಡರಗಿ ಭೀಮರಾಯ ಹಾಗೂ ಹಮ್ಮಿಗೆ ಕೆಂಚನಗೌಡ (ಜೂನ್ 1858) ನಡೆಸಿದ ಹೋರಾಟ ಸ್ಮರಣೀಯ. 1858–59 ಸೂಪಾ, ಖಾನಾಪುರ ತಾಲ್ಲೂಕುಗಳಲ್ಲಿ ಗೋವೆಯಿಂದ ಬಂದ ಸಾವಂತ ಸೋದರರು ಸೂಪಾದ ಫಡ್ನೀಸ್ ಸೋದರರು ಸಿದ್ಧಿಗಳೂ ನಡೆಸಿದ ಹೋರಾಟ ದೀರ್ಘಕಾಲದ್ದು.

ಆದರೆ ಕರ್ನಾಟಕದಲ್ಲಿ ರಾಷ್ಟ್ರೀಯತೆ ಚಳವಳಿ ಚಿಗುರಲು ಇಂಗ್ಲಿಷ್ ಮತ್ತು ಪಾಶ್ಚಾತ್ಯ ಶಿಕ್ಷಣಗಳೇ ಮುಖ್ಯ ಕಾರಣ. ಇಲ್ಲಿಯ ಗುಡಿಕೈಗಾರಿಕೆಗಳ ನಾಶದಿಂದ ಜನ ನರಳಿ ಕೆರಳಿದ್ದೂ ಇನ್ನೊಂದು ಕಾರಣ. ಆಲೂರು ವೆಂಕಟರಾಯರು, ಗಳಗನಾಥ, ಶಾಂತಕವಿ, ಕೆರೂರು ವಾಸುದೇವಾಚಾರ್ಯ, ಸುಬೋಧ ರಾಮರಾಯ, ಬಿ. ವೆಂಕಟಾಚಾರ್ಯ ಮತ್ತಿತರರು ಆರಂಭ ಹಂತದಲ್ಲಿ ತಮ್ಮ ಬರೆಹಗಳಿಂದ ರಾಷ್ಟ್ರೀಯ ಭಾವನೆಗಳನ್ನು ಬಿತ್ತಿದರು. ವೃತ್ತಪತ್ರಿಕೆಗಳೂ ತಮ್ಮ ಪಾಲಿನ ಕೊಡುಗೆ ನೀಡಿದುವು.

ಟಿಳಕರು ಮತ್ತು ಅವರ ಕೇಸರಿ ಪತ್ರಿಕೆ ಬೀರಿದ ಪ್ರಭಾವ ಗಮನಾರ್ಹ. ಮುಖ್ಯವಾಗಿ ಮುಂಬೈ ಪ್ರದೇಶಕ್ಕೆ ಒಳಗಾಗಿದ್ದ ಕನ್ನಡನಾಡಿಗೆ ಈ ಮಾತು ಅನ್ವಯಿಸುತ್ತದೆ.

1885ರಲ್ಲಿ ಮುಂಬೈನಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‍ನ ಅಧಿವೇಶನಕ್ಕೆ ಕರ್ನಾಟಕದಿಂದ ಮೊಟ್ಟಮೊದಲಿಗೆ ಬೆಳಗಾವಿ ಮತ್ತು ಬಳ್ಳಾರಿ ಕಡೆಯ ಎರಡು ತಂಡಗಳು ಹೋಗಿದ್ದವು. ಮುಂದೆ ಮುಂಬಯಿ, ಚೆನ್ನೈ ಮತ್ತು ಅಲಹಾಬಾದ್‍ಗಳಲ್ಲಿ ನಡೆದ ಅಧಿವೇಶನಗಳಿಗೂ ತಂಡಗಳು ಹೋದುವು.

1893ರಲ್ಲಿ ಧಾರವಾಡ ಮತ್ತು ಬೆಳಗಾಂವಿಗಳಲ್ಲಿ ನಡೆದ ಮುಂಬಯಿ ಪ್ರಾಂತ ರಾಜಕೀಯ ಸಮಾವೇಶಗಳನ್ನು ಉದ್ದೇಶಿಸಿ ಎ. ಒ. ಹ್ಯೂಮ್ ಅವರು ಮಾತನಾಡಿದ್ದರು (ದಿನ್‍ಷಾಆ ವಾಚಾ ಅವರು ಅಧ್ಯಕ್ಷತೆ ವಹಿಸಿದ್ದರು). 1895ನೆಯ ವರ್ಷ ಬೆಳಗಾಂವಿಯಲ್ಲಿ ಮುಂಬಯಿ ಪ್ರಾಂತ ರಾಜಕೀಯ ಸಮ್ಮೇಳನ ನಡೆಯಿತು. ಧಾರವಾಡದಲ್ಲಿ 1903 ರಲ್ಲಿ ನಡೆದ ಇಂಥ ಸಮ್ಮೇಳನಕ್ಕೆ ಟಿಳಕ್ ಮತ್ತು ಫಿರೋಜ್‍ಷಾ ಮೆಹ್ತಾ ಬಂದಿದ್ದರು.

ಬಂಗಾಲವನ್ನು ವಿಭಜಿಸಿದಾಗ ನಡೆದ ವಂಗಭಂಗ ಚಳವಳಿಯ ನೆರಳು ಕರ್ನಾಟಕದ ಮೇಲೂ ಬಿದ್ದಿತು. ಧಾರವಾಡ, ಬೆಳಗಾಂವಿ, ಅಳಣಾವರ, ಗದಗ, ಬಾಗಲಕೋಟೆ, ಕಿತ್ತೂರು ಮುಂತಾದ ಕಡೆ ಪ್ರತಿಭಟನಾ ಸಭೆಗಳು ನಡೆದವು. ಇದನ್ನೇ ಸ್ವದೇಶಿ ಆಂದೋಲನದ ಉಗಮ ಎಂದು ಕರೆಯಬಹುದು. ಬಂಧನಗಳೂ ಆದುವು. ಗಂಗಾಧರರಾವ್ ದೇಶಪಾಂಡೆ ಅವರು ಬೆಳಗಾಂವಿಯಲ್ಲಿ ನ್ಯಾಷನಲ್ ಸ್ಕೂಲನ್ನು ತೆರೆದರು. ಅಲ್ಲಿನ ಶಿಕ್ಷಕರ ಪೈಕಿ ಕಾಕಾ ಕಾಲೇಲ್ಕರ್ ಸಹಾ ಒಬ್ಬರು. ಹಲವು ಕಡೆ ಇಂಥ ಶಾಲೆಗಳು ಆರಂಭವಾದುವು. ಧಾರವಾಡದಲ್ಲಿ ಇಂಥ ಶಾಲೆ ಆರಂಭಿಸಿದವರು ಆಲೂರರು.

1907ರಲ್ಲಿ ನಡೆದ ಸೂರತ್ ಕಾಂಗ್ರೆಸ್ ಅಧಿವೇಶನಕ್ಕೆ ಧಾರವಾಡದಿಂದ ಆಲೂರು ವೆಂಕಟರಾವ್ ಮತ್ತು ಅಣ್ಣಾಚಾರ್ಯ ಹೊಸಕೇರಿ, ವಿಜಾಪುರದಿಂದ ಶ್ರೀನಿವಾಸರಾವ್ ಕೌಜಲಗಿ, ಬೆಳಗಾವಿಯಿಂದ ಗಂಗಾಧರರಾವ್ ದೇಶಪಾಂಡೆ ಹೋಗಿದ್ದರು. ಆಗ ಘರ್ಷಣೆ ನಡೆದು ಕಾಂಗ್ರೆಸ್ ಒಡೆದಾಗ ಕರ್ನಾಟಕದ ನಾಯಕರು ಟಿಳಕ್ ಮತ್ತು ಇತರ ತೀವ್ರಗಾಮಿಗಳ ಜೊತೆಗಿದ್ದರು. ಟಿಳಕರು ಉತ್ತರ ಕರ್ನಾಟಕ ಭಾಗಗಳಲ್ಲಿ ಆಗಾಗ ಸಂಚರಿಸುತ್ತಿ ದ್ದರು. 1905ರಲ್ಲಿ ಬಳ್ಳಾರಿಗೆ ಹಾಗೂ 1906ರಲ್ಲಿ ಬೆಳಗಾಂವಿ ಮತ್ತು ಗುರ್ಲಹೊಸೂರು ಇಲ್ಲಿಗೆ ಭೇಟಿ ಕೊಟ್ಟಿದ್ದರು. ಹೋಂರೂಲ್ ಲೀಗ್‍ನ ಶಾಖೆಗಳನ್ನು ತೆರೆಯುವ ಸಲುವಾಗಿ 1916ರಲ್ಲಿ ಬೆಳಗಾಂವಿ, ಸಂಕೇಶ್ವರ ಮತ್ತು ನಿಪ್ಪಾಣಿಗಳಿಗೆ ಬಂದಿದ್ದರು. ಧಾರವಾಡ, ಹುಬ್ಬಳ್ಳಿ, ಉತ್ತರ ಕನ್ನಡದ ಸಿದ್ಧಾಪುರ ಮತ್ತು ದಕ್ಷಿಣ ಕನ್ನಡದ ಮುಲ್ಕಿಗಳಲ್ಲಿ ಸಹಾ ಶಾಖೆಗಳು ಇದ್ದವು. ಕರ್ನಾಟಕಕ್ಕೆ ಪ್ರತ್ಯೇಕ ಹೋಂ ರೂಲ್ ಲೀಗ್ ಘಟಕ ನೀಡಿದ್ದರು. ದತ್ತೋಪಂತ ಬೆಳವಿ ಇದರ ಅಧ್ಯಕ್ಷರು.

ಮುಂಬಯಿ ಪ್ರಾಂತ ರಾಜಕೀಯ ಸಮ್ಮೇಳನವು 1916ರಲ್ಲಿ ಬೆಳಗಾಂವಿಯಲ್ಲಿ ಹಾಗೂ 1918ರಲ್ಲಿ ವಿಜಾಪುರದಲ್ಲಿ ನಡೆದಾಗ ಎರಡಕ್ಕೂ ಗಾಂಧೀಜಿ ಬಂದಿದ್ದರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸುವಲ್ಲಿ ಆರ್ಯಸಮಾಜ ಮುಖ್ಯವಾದ ಪಾತ್ರ ವಹಿಸಿತ್ತು. ಚಿಂಚೋಳಿ, ಕಲ್ಬುರ್ಗಿ, ರಾಯಚೂರು ಮತ್ತು ಕುಕನೂರುಗಳಲ್ಲಿ ರಾಷ್ಟ್ರೀಯ ಶಾಲೆಗಳು ಆರಂಭವಾದುವು. ರಾಯಚೂರಿನ ಚಟುವಟಿಕೆಗಳಿಗಾಗಿ 1920ರಲ್ಲಿ ಪಂಡಿತ್ ತಾರಾನಾಥರನ್ನು ಹೈದರಾಬಾದ್ ಪ್ರಾಂತದಿಂದ ಹೊರದೂಡಲಾಗಿತ್ತು. ಹಳೆಯ ಮೈಸೂರು ಪ್ರಾಂತದಲ್ಲಿ ಅನಿಬೆಸಂಟರ ನೇತೃತ್ವದಲ್ಲಿ ಥಿಯಸಾಫಿಕಲ್ ಸೊಸೈಟಿ ಹರಡಿಕೊಂಡು ರಾಷ್ಟ್ರೀಯ ಭಾವನೆಗೆ ಪುಷ್ಟಿ ಕೊಡುತ್ತಿತ್ತು. 1917ರಲ್ಲಿ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲನ್ನು ಆರಂಭಿಸಿದ್ದು ಆ ಸಂಸ್ಥೆಯೇ. 1919ರಲ್ಲಿ ಇದರ ಆಶ್ರಯದಲ್ಲಿ ಬೆಂಗಳೂರಲ್ಲಿ ನಡೆದ ಸಾರ್ವಜನಿಕ ಸಭೆಯು ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಿತು. ಡಿ.ವಿ.ಗುಂಡಪ್ಪ ಜವಾಬ್ದಾರಿ ಸರಕಾರದ ವಿಚಾರ ಸತತ ಪ್ರಯತ್ನ ಮಾಡಿದರು.

1920ರಲ್ಲಿ ಧಾರವಾಡದಲ್ಲಿ ನಡೆದ ಕರ್ನಾಟಕ ರಾಜ್ಯ ರಾಜಕೀಯ ಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರಿನ ಮಾಜಿ ದಿವಾನ್ ವಿ. ಪಿ. ಮಾಧವರಾವ್ ವಹಿಸಿದ್ದರು. ಅಲ್ಲಿ ಕೈಗೊಂಡ ನಿರ್ಣಯದ ಫಲವಾಗಿ 800 ರಷ್ಟು ದೊಡ್ಡ ಸಂಖ್ಯೆಯಲ್ಲಿ ಪ್ರತಿನಿಧಿಗಳು ಅದೇ ವರ್ಷ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಹೋದರು. ಪ್ರತ್ಯೇಕ ಪ್ರದೇಶ ಕಾಂಗ್ರೆಸ್ ಸಮಿತಿ ಸ್ಥಾಪಿಸಿಕೊಳ್ಳಲು ಇಲ್ಲಿ ಅನುಮತಿ ದೊರಕಿದಾಗ ಕರ್ನಾಟಕ ಸಿಂಹ ಎನಿಸಿಕೊಂಡಿದ್ದ ಗಂಗಾಧರರಾವ್ ದೇಶಪಾಂಡೆ ಅವರು ಮೊಟ್ಟಮೊದಲ ಅಧ್ಯಕ್ಷರಾದರು. ಅದರ ಅಡಿಯಲ್ಲಿ ಇಡೀ ಮೈಸೂರು ಸಂಸ್ಥಾನವನ್ನು ಒಂದು ಜಿಲ್ಲೆಯಾಗಿ ಪರಿಗಣಿಸಿ ಒಂದು ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಜಸ್ಟಿಸ್ ಸೆಟ್ಲೂರ್ ಅವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿದರು. ಅದರ ಸ್ಥಳೀಯ ಸಮಿತಿಗಳು ಬೆಂಗಳೂರು, ಮೈಸೂರು, ಚಿಕ್ಕಮಗಳೂರು ಮತ್ತು ತುಮಕೂರುಗಳಲ್ಲಿ ಆರಂಭವಾದುವು.

ಕನ್ನಡ ಮತ್ತು ಕರ್ನಾಟಕದ ಅಭಿಮಾನವನ್ನು ಬಲಪಡಿಸಿದರೆ ರಾಷ್ಟ್ರೀಯತೆಯನ್ನು ಸಾಧಿಸುವುದು ಸುಲಭವೆಂದು ಮನಗಂಡವರೆಂದರೆ ಆಲೂರು ವೆಂಕಟರಾಯರು. ಏಕೀಕರಣ ಚಳವಳಿ ಆರಂಭವಾಗಿದ್ದು ಆಗಲೇ. ಅವರು ಕರ್ನಾಟಕದ ಗತವೈಭವವನ್ನು ಬರೆದಿದ್ದು 1917ರಲ್ಲಿ.

ಕರ್ನಾಟಕದಲ್ಲಿ 1920 ಮತ್ತು 1921 ರಲ್ಲಿ ಗಾಂಧೀಜಿ ಅವರು ಪ್ರವಾಸ ಮಾಡಿದಾಗ ಅಲಿ ಸೋದರರು ಅವರ ಜೊತೆಗಿದ್ದರು. ಖಿಲಾಫತ್ ಚಳವಳಿ ಪರಿಣಾಮವಾಗಿ ಕರ್ನಾಟಕದಲ್ಲಿ ದೊಡ್ಡ ಸಂಖ್ಯೆಯ ಮುಸ್ಲಿಮರು ಕಾಂಗ್ರೆಸ್ಸನ್ನು ಸೇರಿದರು. ಗಾಂಧೀಜಿ ಅವರು ಮಂಗಳೂರು, ಬೆಂಗಳೂರು, ಬೆಳಗಾಂವಿ, ಹಳಿಯಾಳ, ಧಾರವಾಡ ಮತ್ತು ಗದಗಗಳಿಗೆ ಆ ವೇಳೆ ಭೇಟಿ ಕೊಟ್ಟಿದ್ದರು.

ಕಚೇರಿ, ಶಾಲಾಕಾಲೇಜು ಮತ್ತು ಕೋರ್ಟುಗಳನ್ನು ತ್ಯಜಿಸಬೇಕೆಂದು ಗಾಂಧೀಜಿ ಅವರು ಅಸಹಕಾರ ಚಳವಳಿ ಸಂದರ್ಭದಲ್ಲಿ ನೀಡಿದ ಕರೆಗೆ ಕರ್ನಾಟಕದಲ್ಲಿ ಭಾರೀ ಪುರಸ್ಕಾರ ಸಿಕ್ಕಿತು. ಬೆಳಗಾಂವಿಯಲ್ಲಿ ಕೇಶವರಾವ್ ಗೋಖಲೆ, ದಾದಾಕಾಳೆ, ಬಾಬುರಾವ್ ಠಾಕೂರ್, ಅನಂತರಾವ್ ಚಿಕ್ಕೋಡಿ ಮತ್ತಿತರರು ಕಾಲೇಜು ತ್ಯಜಿಸಿದರು. ದತ್ತೋಪಂತ ಮಜಲಿ, ಕೃಷ್ಣರಾವ್ ಕರಗುಪ್ಪಿ, ನಾರಾಯಣರಾವ್ ಜೋಷಿ ಮತ್ತು ಅಜರೇಕರ್ ಅವರು ವಕೀಲ ವೃತ್ತಿ ಕೈಬಿಟ್ಟರು. ಅದೇ ರೀತಿ ವಿಜಾಪುರದಲ್ಲಿ ವಕೀಲರಾದ ಶ್ರೀನಿವಾಸರಾವ್ ಕೌಜಲಗಿ, ಜಯರಾವ್ ನರಗುಂದ, ರಂಗರಾವ್ ತಿಲಗುಳ, ಜನಾಬ್ ಜಾನವೇಕರ್ ಮತ್ತು ಹಣಮಂತರಾವ್ ಕೌಜಲಗಿ ಅವರು ಕೋರ್ಟುಗಳಿಂದ ಹೊರ ಬಂದರು. ಗದಗ್‍ನ ಅನಂತರಾವ್ ಜಾಲಿಹಾಳ ಮತ್ತು ವೆಂಕಟೇಶ್ ಕುಲಕರ್ಣಿ, ಮಂಗಳೂರಿನ ಕಾರ್ನಾಡ ಸದಾಶಿವರಾವ ಮತ್ತು ಕೆ.ಆರ್.ಕಾರಂತ, ಹೊನ್ನಾವರದ ಎಸ್.ಎಸ್.ಶಾಸ್ತ್ರಿ, ಸಿರಸಿಯ ಕೊಲ್ಲಾಳಿ ವಾಸುದೇವರಾವ್, ಧಾರವಾಡದ ಮಧ್ವರಾವ್ ಕಬ್ಬೂರು, ವೆಂಕಟರಾವ್ ಮುದುವೀಡಕರ್ ರಾಷ್ಟ್ರೀಯ ಚಳವಳಿಗೆ ಧುಮುಕಿದ ವಕೀಲರಲ್ಲಿ ಸೇರಿದ್ದರು.

1921–22ರಲ್ಲಿ ವಿದೇಶಿ ವಸ್ತುಗಳ ಹೋಳಿ, ಸಭೆ ಮೆರವಣಿಗೆಗಳನ್ನು ಕಂಡ ಕರ್ನಾಟಕದ 70ಕ್ಕೂ ಹೆಚ್ಚು ಜನರು ಬಂಧಿತರಾದರು. ಸರ್ಕಾರದ ದಮನ ಕಾರ್ಯ ತೀವ್ರವಾಗಿತ್ತು. ಮದ್ಯದಂಗಡಿಯ ಪಿಕೆಟಿಂಗ್‍ಗಾಗಿ ಜನ ಮುತ್ತಿದಾಗ ಧಾರವಾಡದಲ್ಲಿ 1921 ಜುಲೈ 1 ರಂದು ಗೋಲಿಬಾರ್ ನಡೆದು ಮಾಲಿಕಸಾಬ, ಗೌಸ್ ಸಾಬ ಮತ್ತು ಚುಗ್ತಾಯಿ ಅವರು ಹುತಾತ್ಮರಾದರು. ಆಗ ಆರ್.ಆರ್. ದಿವಾಕರ, ವಾಮನರಾವ್ ಜಠಾರ್ ಮತ್ತು ನರಸಿಂಗರಾವ್ ಭಿಸೆ ಸೇರಿದಂತೆ 29 ಜನರನ್ನು ಬಂಧಿಸಲಾಯಿತು. ಹಲವರ ಮೇಲೆ ತಪ್ಪು ಹೊರಿಸಿ ಜೈಲು ಶಿಕ್ಷೆ ವಿಧಿಸಲಾಯಿತು.

1922ರ ನವೆಂಬರ್ 18 ರಂದು ಬೆಂಗಳೂರು ದಂಡು ಪ್ರದೇಶದ ಕಮರ್ಷಿಯಲ್ ಸ್ಟ್ರೀಟ್ ನಲ್ಲಿ ಮದ್ಯದಂಗಡಿಗೆ ಮುತ್ತಿಗೆ ಹಾಕಿದ ಯುವಕರ ಮೇಲೆ ಪೊಲೀಸರು ಬಾಯೊನೆಟ್ ಪ್ರಯೋಗಿಸಿ ಇಬ್ಬರು ಮುಸ್ಲಿಮರು ಸತ್ತರು.

ನವಲಗುಂದದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದಕ್ಕಾಗಿ 1921ರಲ್ಲಿ ಗಂಗಾಧರರಾವ್ ದೇಶಪಾಂಡೆ ಅವರನ್ನು ಬಂಧಿಸಲಾಯಿತು. ವಿಜಾಪುರ ಜಿಲ್ಲೆಯಲ್ಲಿ ಜಯರಾವ್ ನರಗುಂದ, ಶ್ರೀನಿವಾಸರಾವ್ ಹಣಮಂತರಾವ್ ಕೌಜಲಗಿ, ಹಣಮಂತರಾವ್ ಮೊಹರೆ ಮತ್ತಿತರರನ್ನು ವಿದ್ರೋಹಕಾರಿ ವಸ್ತುಗಳನ್ನು ಹೊಂದಿದ್ದಕ್ಕಾಗಿ, ಭಾಷಣ ಮಾಡಿದ್ದಕ್ಕಾಗಿ ಬಂಧಿಸಿದರು.

ಉತ್ತರ ಕನ್ನಡದಲ್ಲಿ ಸಿದ್ಧಾಪುರದ ಚೌಡನಾಯಕ ಎಂಬ ರೈತ ಮೊದಲ ರಾಜಕೀಯ ಬಂದಿ ಆದರು. ಶಿರಸಿಯ ಹೆಡ್ಮಾಸ್ತರ್ ಹುದ್ದೆಗೆ ರಾಜೀನಾಮೆ ನೀಡಿ ಅಲ್ಲಿನ ನ್ಯಾಷನಲ್ ಸ್ಕೂಲೊಂದನ್ನು ಸೇರಿದ್ದ ತಿಮ್ಮಪ್ಪ ನಾಯಕ ಜೈಲು ಸೇರಿದರು. ಆದರೆ ರಾಷ್ಟ್ರೀಯತೆಯನ್ನು

ಬಿತ್ತುವ ಕಾರ್ಯವು ರಾಷ್ಟ್ರೀಯ ಶಾಲೆಗಳಲ್ಲಿ ಅವ್ಯಾಹತವಾಗಿ ನಡೆದಿತ್ತು. ಮಂಗಳೂರಿನಲ್ಲಿ 1921ರಲ್ಲಿ ಕಾರ್ನಾಡರು ಸ್ಥಾಪಿಸಿದ ಶಾಲೆ, ಧಾರವಾಡದಲ್ಲಿ ಆಲೂರರ ಶಾಲೆ, ಹುಬ್ಬಳ್ಳಿಯಲ್ಲಿ ಬುರ್ಸೆ ಅವರ ಶಾಲೆ ಇವು ಸೇರಿದಂತೆ ಕರ್ನಾಟಕದಲ್ಲಿ ಒಟ್ಟು 50 ಇಂಥ ಶಾಲೆಗಳಿದ್ದುವು. ಬೆಳಗಾಂವಿ, ಬಾಗಲಕೋಟೆ ಮತ್ತು ವಿಜಾಪುರ ಶಾಲೆಗಳೂ ಇದೇ ಗುಂಪಿಗೆ ಸೇರಿದ್ದುವು.

ನಿಷೇಧಾಜ್ಞೆಯನ್ನು ಮುರಿದಿದ್ದಕ್ಕಾಗಿ ಬಳ್ಳಾರಿಯಲ್ಲಿ ಟೇಕೂರು ನಾರಾಯಣ ಶಾಸ್ತ್ರಿ, ಕಲ್ಲೂರು ಸುಬ್ಬರಾವ್ ಮತ್ತು ಸಾಂಗ್ಲಿ ಭೀಮಸೇನರಾವ್ ಅವರು ಆರು ತಿಂಗಳ ಶಿಕ್ಷೆಗೆ ಗುರಿ ಆದರು. ಬೆಳಗಾಂವಿ ಮತ್ತು ಗೋಕಾಕ್‌ಗಳಲ್ಲೂ ಇದೇ ವಿದ್ಯಮಾನ.

ಚೌರಿಚೌರ ಪ್ರಕರಣದ ಅನಂತರ ದೇಶದ ಮಿಕ್ಕೆಲ್ಲ ಕಡೆ ಚಟುವಟಿಕೆ ಸ್ತಬ್ಧಗೊಂಡಂತೆ ಆಗಿದ್ದರೂ ಕರ್ನಾಟಕದಲ್ಲಿ ಹಾಗಿರಲಿಲ್ಲದುದು ಗಮನಾರ್ಹ. 1922ರಲ್ಲಿ ಕಾರ್ನಾಡ ಸದಾಶಿವರಾಯರು ಮಂಗಳೂರಿನಲ್ಲಿ ರಾಜ್ಯದ ಎರಡನೆಯ ರಾಜಕೀಯ ಸಮ್ಮೇಳನವನ್ನು ಕರೆದಾಗ ಸರೋಜಿನಿ ನಾಯ್ಡು ಅವರು ಅಧ್ಯಕ್ಷರಾಗಿದ್ದರು. ಎರಡು ವರ್ಷಗಳ ಅನಂತರ ಗೋಕರ್ಣದಲ್ಲಿ ಮೂರನೆಯ ಸಮ್ಮೇಳನ ನಡೆಸಿದಾಗ ದ್ವಾರಕಾಪೀಠದ ಶಂಕರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ನಾಗಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹಕ್ಕೆ ಕರ್ನಾಟಕದಿಂದ ಸಾಕಷ್ಟು ಮಂದಿ ಸ್ವಯಂಸೇವಕರು ಹೋಗಿದ್ದರು. ನಾಗಪುರದಲ್ಲಿ ಜೈಲು ಸೇರಿದವರ ಪೈಕಿ, ಎನ್. ಎಸ್.ಹರ್ಡೀಕರ್ ಸಹಾ ಇದ್ದರು. ಅವರು ಹಿಂದುಸ್ತಾನಿ ಸೇವಾದಳ ರಚಿಸಲು ನಿರ್ಧರಿಸಿದರು. ಅದರ ಕೇಂದ್ರ ಹುಬ್ಬಳ್ಳಿಯಾಯಿತು. ಜವಹರಲಾಲ್ ನೆಹರು ಅದರ ಅಧ್ಯಕ್ಷರಾದರು. ಬೆಳಗಾಂವಿಯಲ್ಲಿ 1924ರ ಕಾಂಗ್ರೆಸ್ ಸಮಾವೇಶಗೊಂಡಾಗ ಹರ್ಡೀಕರರಿಂದ ತರಬೇತಿ ಪಡೆದ 1700 ಸ್ವಯಂಸೇವಕರು ಕಾರ್ಯ ನಿರ್ವಹಿಸಿದರು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿಗೆ ಸಂದ ಯಶಸ್ಸಿನಲ್ಲಿ ಸೇವಾದಳದ ಪಾಲು ಕಡಿಮೆಯೇನಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವನ್ನು ನಡೆಸುವ ಅವಕಾಶ ಕರ್ನಾಟಕಕ್ಕೆ ಲಭಿಸಿದ್ದು ಒಮ್ಮೆ ಮಾತ್ರವೇ. ಆಗ ಮಹಾತ್ಮಾ ಗಾಂಧಿ ಅವರೇ ಅಧ್ಯಕ್ಷತೆ ವಹಿಸಿದ್ದು ವಿಶೇಷ. ಬೆಳಗಾಂವಿಯ 1924ರ ಈ ಮಹಾನ್ ಸಮಾವೇಶಕ್ಕೆ ಇನ್ನೊಂದು ಮಹತ್ತ್ವವೂ ಉಂಟು. ಈ ಅಧಿವೇಶನದ ಅನಂತರ ಅದೇ ಸ್ಥಳದಲ್ಲೇ ಕರ್ನಾಟಕ ಏಕೀಕರಣ ಸಮ್ಮೇಳನವೂ ನಡೆಯಿತು. ಅನಾರೋಗ್ಯದಿಂದ ಗಾಂಧೀಜಿ ಅವರು 1927ರಲ್ಲಿ ನಂದಿಬೆಟ್ಟದಲ್ಲಿ ತಂಗಿದ್ದರು. ಖಾದಿಯನ್ನು ಜನಪ್ರಿಯಗೊಳಿಸಲು ಅವರು ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡಿದರು. ಮೈಸೂರು, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಇವರು ಹೋದೆಡೆಯೆಲ್ಲ ವಿದ್ಯುತ್ ಸಂಚಾರವಾದಂತೆ ಆಯಿತು. 1928 ಮತ್ತು 1929 ರಲ್ಲಿ ಸುಲ್ತಾನ ಪೇಟೆ ಗಣಪತಿ ಪ್ರಕರಣದಲ್ಲಿ ಮೈಸೂರು ಸರ್ಕಾರವು ಬಲಪ್ರಯೋಗ ಮಾಡಿದ್ದರಿಂದ ಕಾಂಗ್ರೆಸ್ ಬಲವೃದ್ಧಿ ಸಾಧ್ಯವಾಯಿತು. 1917ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದ ನ್ಯಾಷನಲ್ ಹೈಸ್ಕೂಲಿನಲ್ಲಿ ಕೆ. ಸಂಪದ್ಗಿರಿರಾವ್ ಅವರ ನೇತೃತ್ವದಲ್ಲಿ ರಾಷ್ಟ್ರೀಯ ಚಟುವಟಿಕೆ ಬಲವಾಗಿತ್ತು.

1930ರ ಆಗಸ್ಟ್‌ನಲ್ಲಿ ಹಾವೇರಿಯಲ್ಲಿ ಹರ್ಡೇಕರ ಮಂಜಪ್ಪ ಅವರ ನೇತೃತ್ವದಲ್ಲಿ ಸೇರಿದ್ದ ವೀರಶೈವ ಮಹಾಸಭಾ ವೀರಶೈವರು ಕಾಂಗ್ರೆಸ್ ಸೇರಬೇಕೆಂದು ನಿರ್ಣಯ ಕೈಗೊಂಡಿತು. ಕಾಂಗ್ರೆಸ್ಸೆಂದರೆ ಬ್ರಾಹ್ಮಣರ ಪಕ್ಷವೆಂಬ ಅಪವಾದದಿಂದ ಪಾರಾಗಲು ಇದರಿಂದ ಸಾಧ್ಯವಾಯಿತು. ಅಲ್ಲಿಂದ ಮುಂದೆ ಕಾಂಗ್ರೆಸ್ ಜನಸಮುದಾಯಗಳ ಪಕ್ಷವೆನಿಸಿಕೊಂಡಿತು. ಹಾವೇರಿಯ ಸಿದ್ದಪ್ಪ ಹೊಸಮನಿ ಅವರು ಕೆಪಿಸಿಸಿ ಅಧ್ಯಕ್ಷರಾದರು.

1930ರಲ್ಲಿ ಗಾಂಧೀಜಿಯವರು ಆರಂಭಿಸಿದ ಕಾನೂನು ಭಂಗ ಚಳವಳಿಯು ಕರ್ನಾಟಕದಲ್ಲಿ ಒಂದಿಲ್ಲೊಂದು ಬಗೆಯ ಪ್ರತಿರೋಧಕ್ಕೆ ದಾರಿ ಮಾಡಿಕೊಟ್ಟಿತು. ಕಾನೂನು ಭಂಗ ಮಾಡಿದ್ದ ನೂರಾರು ಮಂದಿ ಜೈಲು ತುಂಬಿದರು. 1930ರ ಜನವರಿ 26ರಂದು ಬೆಂಗಳೂರು, ತುಮಕೂರು, ಮೈಸೂರು ಸೇರಿದಂತೆ ಹಳೆಯ ಮೈಸೂರಿನ ಹಲವು ಕಡೆ ರಾಷ್ಟ್ರಧ್ವಜವನ್ನು ಹಾರಿಸುವ ಸಮಾರಂಭಗಳು ನಡೆದುವು. 1930 ಏಪ್ರಿಲ್ 13ರಂದು ಎಂ. ಪಿ. ನಾಡಕರ್ಣಿ ಮತ್ತಿತರರು 30 ಸಹಸ್ರಕ್ಕೂ ಅಧಿಕ ಜನರನ್ನು ಸೇರಿಸಿ ಅಂಕೋಲದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಿದರು. ಇದು 45 ದಿನಗಳ ಕಾಲ ನಡೆಯಿತು. ಕೆ.ಪಿ.ಸಿ.ಸಿ.ಯು ತನ್ನೆಲ್ಲ ಸಂಘಟನಾ ಶಕ್ತಿಯನ್ನು ಇದಕ್ಕಾಗಿ ಕ್ರೋಡಿಕರಿಸಿತ್ತು. ದಕ್ಷಿಣ ಕನ್ನಡದ ಮಂಗಳೂರು, ಕುಂದಾಪುರ, ಪಡುಬಿದರೆ, ಉಡುಪಿ, ಕಾರ್ಕಳ, ಪುತ್ತೂರು, ಮಲ್ಪೆ, ಕಾಪು, ಮಂಜೇಶ್ವರ, ವಿಜಾಪುರದ ಬಿಸನಾಳ, ಧಾರವಾಡದ ಕಿರೇಸೂರು ಮತ್ತು ಯಾವಗಲ್ ಮುಂತಾದ 30 ಕಡೆ ಉಪ್ಪಿನ ಸತ್ಯಾಗ್ರಹ ನಡೆಯಿತು. ಅಂಕೋಲದಲ್ಲಿ ಏಪ್ರಿಲ್ 25 ಮತ್ತು 27 ರಂದು ಹಾಗೂ ಮೇ 3 ರಂದು ಉಪ್ಪಿನ ಮಾರಾಟ ಏರ್ಪಡಿಸಲಾಗಿತ್ತು. ತೆರಿಗೆ ನೀಡದೆ ನೂರಾರು ಮೂಟೆ ಉಪ್ಪನ್ನು ಮಾರಾಟ ಮಾಡಲಾಯಿತು. ಈ ಚಳವಳಿ ಪರಿಣಾಮವಾಗಿ ಎಕ್ಸೈಜ್ ನಿಯಮ ಮೂಲೆ ಗುಂಪಾಯಿತು. ಇದೊಂದು ಚಳವಳಿ ಇತಿಹಾಸದಲ್ಲಿ ಮಹತ್ತ್ವದ ಘಟನೆ.

ಉಪ್ಪಿನ ಚಳವಳಿ ಅನಂತರ ಅರಣ್ಯ ಸತ್ಯಾಗ್ರಹ ಮತ್ತು ಮದ್ಯ ಮಾರಾಟಕ್ಕೆ ಪ್ರತಿರೋಧ ಇವು ಜನಮನ ಸೆಳೆದುವು. ಜನರು ಅರಣ್ಯ ಕಾಯಿದೆ ಭಂಗ ಮಾಡಿ ಮೀಸಲು ಅರಣ್ಯಗಳ ಒಳಕ್ಕೆ ನುಗ್ಗಿದರು. ಉರವಲು (ಕಟ್ಟಿಗೆ) ಮತ್ತು ದನಕ್ಕೆ ಮೇವು ಸಂಗ್ರಹಿಸಿ ತಂದರು. ಬಂಧನಕ್ಕೆ ಒಳಗಾದರು. ಮದ್ಯದ ಅಂಗಡಿಗಳ ಮುಂದೆ ಪ್ರದರ್ಶನ, ಈಚಲು ಮರಗಳ ಧ್ವಂಸ, ಹೆಂಡದ ಅಂಗಡಿ ಹರಾಜು ವಿರುದ್ಧ ಪ್ರದರ್ಶನ ನಡೆದವು.

ಗುಜರಾತಿನ ಬರ್ಡೋಲಿಯಲ್ಲಿ ನಡೆದ ಕರನಿರಾಕರಣೆ ಚಳವಳಿಯ ಪ್ರಯೋಗ ಯಶಸ್ವಿಯಾದ ಅನಂತರ ಹಮ್ಮಿಕೊಂಡ ಧಾರವಾಡ ಜಿಲ್ಲೆಯ ಹಿರೇಕೆರೂರು, ಉತ್ತರ ಕನ್ನಡದ ಅಂಕೋಲ, ಸಿರ್ಸಿ ಮತ್ತು ಸಿದ್ದಾಪುರ–ಈ ನಾಲ್ಕು ತಾಲ್ಲೂಕುಗಳನ್ನು ಕರನಿರಾಕರಣ ಚಳವಳಿಗೆ ಆಯ್ದುಕೊಳ್ಳಲಾಗಿತ್ತು. ವೀರನಗೌಡ ಪಾಟೀಲ, ಟಿ.ಆರ್.ನೆಸ್ವಿ, ಕೆ.ಎಫ್. ಪಾಟೀಲ ಮತ್ತು ಹಳ್ಳಿಕೇರಿ ಇವರಿಂದಾಗಿ ಹಿರೆಕೆರೂರಿನಲ್ಲಿ ಚಳವಳಿ ಸಂಪೂರ್ಣ ಯಶಸ್ವಿ ಆಯಿತು. ಸಿದ್ದಾಪುರ ಮತ್ತು ಅಂಕೋಲಗಳಲ್ಲಿ ದಮನ ಕಾರ್ಯ ಬಲವತ್ತರವಾಗಿದ್ದರೂ ಚಳವಳಿ ಯಶಸ್ವಿಯಾಯಿತು.

ಕೆಪಿಸಿಸಿ ಪ್ರಕಟಣೆ ಪ್ರಕಾರ 1930–31 ಈ ಒಂದೇ ಸಾಲಿನಲ್ಲಿ ಬಂಧಿತರಾದ ಸಂಖ್ಯೆ; ಸತ್ಯಾಗ್ರಹಿಗಳ ಬೆಳಗಾಂವಿ ಜಿಲ್ಲೆ 442, ಧಾರವಾಡ 202, ದಕ್ಷಿಣ ಕನ್ನಡ 159, ವಿಜಾಪುರ 158, ಬಳ್ಳಾರಿ 77 ಮತ್ತು ಕೊಡಗು 20. ಸಭೆ ಮೆರವಣಿಗೆಗಳಲ್ಲಿ ಭಾಗವಹಿಸಿದ್ದಕ್ಕೆ, ಈಚಲು ಮರ ಕಡಿದಿದ್ದಕ್ಕೆ, ಮದ್ಯದಂಗಡಿ ಮತ್ತು ವಿದೇಶಿ ಬಟ್ಟೆಗಳ ಮಾರಾಟದ ವಿರುದ್ಧ ಪ್ರದರ್ಶನ ನಡೆಸಿದ್ದಕ್ಕೆ ಸರ್ಕಾರಿ ಜಮೀನಿನಿಂದ ಕೊಯ್ದುಕೊಂಡು ಬಂದ ಹುಲ್ಲಿಗಾಗಿ ತೆರಿಗೆ (ಹುಲ್ಲುಬನ್ನಿ) ಪಾವತಿ ಮಾಡದೇ ಇದ್ದುದಕ್ಕೆ, ಗಂಧದ ಮರ ಕಡಿದಿದ್ದಕ್ಕೆ, ಉರುವಲು ಮುಂತಾದ ಅರಣ್ಯ ಉತ್ಪನ್ನ ಸಾಗಿಸಿ ತಂದಿದ್ದಕ್ಕೆ, ಭೂಕಂದಾಯ ಮತ್ತಿತರ ಕರ ತೆರದೇ ಹೋದುದಕ್ಕೆ ಎಂಬ ಕಾರಣಗಳ ಮೇಲೆ ವಿಧಿಸಿದ ನಾನಾ ಅವಧಿಯ ಜೈಲು ಶಿಕ್ಷೆಯನ್ನು ಸತ್ಯಾಗ್ರಹಿಗಳು ಅನುಭವಿಸಬೇಕಾಯಿತು.

ಗಾಂಧಿ–ಇರ್ವಿನ್ ಒಪ್ಪಂದದ ಕಾರಣ 1931ರಲ್ಲಿ ಚಳವಳಿ ಸ್ವಲ್ಪ ಕಾಲ ಸ್ಥಬ್ದಗೊಂಡಿತು. 1932ರಲ್ಲಿ ಮತ್ತೆ ಕರ ನಿರಾಕರಣ ಚಳವಳಿ ಆರಂಭವಾಯಿತು. ಮೂರು ವರ್ಷಗಳ ಅವಧಿಯಲ್ಲಿ ಉತ್ತರ ಕನ್ನಡದ ಅಂಕೋಲ ಮತ್ತು ಸಿದ್ದಾಪುರ ತಾಲೂಕುಗಳ ಜನರು ಮಾಡಿದ ತ್ಯಾಗ ಮತ್ತು ಪಟ್ಟ ಬವಣೆಗಳನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾಗುತ್ತದೆ. ಅಂಕೋಲೆಯ ಅನಕ್ಷರಸ್ಥ ನಾಡವರು; ಸಿದ್ದಾಪುರದ ಸಂಪ್ರದಾಯವಾದಿ ಬ್ರಾಹ್ಮಣರು, ಮುಖ್ಯವಾಗಿ ಹವ್ಯಕರು, ತೆರಿಗೆ ಕೊಡದೆ ಉಳಿದಿದ್ದೇ ಅಲ್ಲದೆ ಮುಟ್ಟಗೋಲು ಕಾರಣ ತಮ್ಮ ಜಮೀನು ಮತ್ತು ಮನೆಮಾರು ಕಳೆದುಕೊಳ್ಳಲು ಸಿದ್ಧರಾದರು. ಅವರ ಪಾತ್ರೆ ಪಗಡಿ, ಜಾನುವಾರು ಕೂಡಾ ಜಪ್ತಿ ಆದವು. ಅವನ್ನು ಹರಾಜಿಗೆ ಇಟ್ಟಾಗ ಕೊಳ್ಳುವವರೇ ಇರುತ್ತಿರಲಿಲ್ಲ. ಕೆಲವರು ಸರ್ಕಾರಿ ನೌಕರರು ಮತ್ತು ಬ್ರಿಟಿಷ್ ರಾಜಸತ್ತೆಗೆ ನಿಷ್ಠರಾಗಿ ಉಳಿದವರು ಅವನ್ನು ಕೊಂಡ ಪ್ರಸಂಗಗಳೂ ಇದ್ದುವು. ಇಂಥವರ ಮನೆ ಮುಂದೆ ಮಹಿಳಾ ಸ್ವಯಂಸೇವಕರು ನಿರಶನ ಕೂತರು. ಆ ವೇಳೆ ಅವರ ಅವಹೇಳನ, ಭರ್ತ್ಸನೆಗಳು ನಡೆದುವು. ಅವರ ಮೇಲೆ ಕಸಕಡ್ಡಿ ತಿಪ್ಪೆ ಎಸೆದರು. ಬೈಗುಳ ಹೇರಿದರು. ಅವರ ಮೇಲೆ ಗೂಂಡಾಗಳನ್ನು ಹರಿಬಿಟ್ಟರು. ಆದರೆ ಆ ಮಹಿಳೆಯರು ದಿಟ್ಟತನ ತೋರಿದರು. ನಿರಶನ ಬಿಡಲಿಲ್ಲ. ಕೆಲವೊಮ್ಮೆ ಈ ಉಪವಾಸ ಸತ್ಯಾಗ್ರಹ ವಾರಗಳ ಪರ್ಯಂತ ನಡೆದಿದ್ದೂ ಉಂಟು. ಪೊಲೀಸರೂ ಈ ಮಹಿಳೆಯರಿಗೆ ಹಿಂಸೆ ಕೊಟ್ಟರು. ಚಾವಟಿ ಬೀಸಿದರು. ಹೀಗಾದರೂ ಚರಾಸ್ತಿಗಳನ್ನು ಆಯಾ ಮಾಲೀಕರಿಗೆ ವಾಪಸು ಕೊಟ್ಟ ಮೇಲೆಯೇ ಅವರು ನಿರಶನ ನಿಲ್ಲಿಸುತ್ತಿದ್ದರು. ಸುಮಾರು 30 ಮಂದಿ ಮಹಿಳೆಯರಲ್ಲಿ ಗೌರಮ್ಮ ವೆಂಕಟರಾಮಯ್ಯ, ಕಮಲಮ್ಮ ಚಂದೂರ್, ಕಲ್ಲಾಳ ಕಾವೇರಮ್ಮ, ಮಹಾದೇವತಾಯಿ ದೊಡ್ಡಮನೆ, ಸುಬ್ಬಮ್ಮ ಜೋಯಿಸ್, ಲಕ್ಷ್ಮೀಬಾಯಿ ಪೈ ಮತ್ತು ಸೀತಬಾಯಿ ಪೈ ಸಹಾ ಸೇರಿದ್ದರು.

ತೆರಿಗೆ ಕೊಡದೇ ಹೋದಾಗ ಇಡೀ ಕುಟುಂಬಗಳನ್ನೇ ಬಂಧಿಸುತ್ತಿದ್ದರು. ಮನೆಗಳಿಗೆ ಬೀಗ ಹಾಕುತ್ತಿದ್ದರು. ತಪಾಸಣೆ ಮಾಡುವ ನೆಪದಲ್ಲಿ ಪೊಲೀಸರು ಇಡೀ ಮನೆಯನ್ನು ಹಾಳುಗೆಡವುತ್ತಿದ್ದರು. ಬೆಲೆ ಬಾಳುವ ವಸ್ತುಗಳನ್ನು ಹುಗಿದಿಡುತ್ತಾರೆಂದು ಶಂಕಿಸಿ ಮನೆಗಳ ಒಳಗೆ ನೆಲವನ್ನು ತೋಡಿ ಹಾಕುತ್ತಿದ್ದರು. ದೊಡ್ಡವರನ್ನೆಲ್ಲ ಬಂಧಿಸಿ ಒಯ್ದಾಗ ಕಿರಿಯರ ಸ್ಥಿತಿ ಅನಾಥರಂತೆ ಆಗುತ್ತಿತ್ತು. ಅವರ ಸಂರಕ್ಷಣೆಗಾಗಿ ಬಾಲಕಾಶ್ರಮಗಳನ್ನು ತೆರೆಯುವ ಕಾರ್ಯ ನಡೆಯಿತು. ಕಾರವಾರ ಮತ್ತು ಶಿವಮೊಗ್ಗಗಳಲ್ಲಿ 60ಕ್ಕೂ ಹೆಚ್ಚು ಮಕ್ಕಳು ಇಂಥ ಬಾಲಕಾಶ್ರಮಗಳನ್ನು ಸೇರಿದ್ದುವು. ಜೈಲಿನಿಂದ ಹೊರ ಬಂದ ನಂತರ ಸತ್ಯಾಗ್ರಹಿಗಳಲ್ಲಿ ಅನೇಕರು ತಮ್ಮ ಮನೆಮಾರು ಜರ್ಝರಿತವಾಗಿ ಕುಸಿದು ಬಿದ್ದುದನ್ನು ಕಂಡರು; ಬಿಸಿಲು ಮಳೆಗೆ ಸಿಕ್ಕಿದ್ದಲ್ಲದೆ ಅವು ಪೊಲೀಸ್ ಕಾರ್ಯಾಚರಣೆಯಿಂದಾಗಿ ಸಹಾ ಕುಸಿದಿದ್ದವು. 1932–33ರ ಒಂದು ಪ್ರಕರಣದಲ್ಲಿ ಸಿದ್ದಾಪುರ ತಾಲ್ಲೂಕಿನ ಸು.30 ಕುಟುಂಬಗಳು ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದವು. ಅವರನ್ನು ಸಾಗರ ತಾಲ್ಲೂಕಿನಲ್ಲಿ ನೆಲೆಗೊಳಿಸಲಾಯಿತು. ಮುಂಬೈನಲ್ಲಿ 1937–38ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆಯೇ ಮುಟ್ಟುಗೋಲಾದ ಇವರ ಜಮೀನು ಮರಳಿ ದಕ್ಕಿದ್ದು.

ಚಳವಳಿ 1930–31ಕ್ಕಿಂತ 1931–33ರಲ್ಲಿ ತೀವ್ರಗೊಂಡಿತ್ತು. 1932ರ ಮೇ ತಿಂಗಳಲ್ಲಿ ಬಾಗಲಕೋಟೆಯಲ್ಲಿ ನಡೆದ ಕರ್ನಾಟಕ ರಾಜ್ಯ ರಾಜಕೀಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದಕ್ಕಾಗಿ ಎಚ್.ಆರ್.ಪುರೋಹಿತ ಅವರು ಬಂಧನಕ್ಕೊಳಗಾದರು. ಸಮ್ಮೇಳನಕ್ಕೆ ಮುಂಚೆಯೇ ಸರ್ಕಾರ ಅದನ್ನು ನಿಷೇಧಿಸಿ ಆಜ್ಞೆ ಹೊರಡಿಸಿತ್ತು. ನೂರಾರು ಮಂದಿ ಸೆರೆಯಾದರು. ಜೂನ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಸಮ್ಮೇಳನ ನಡೆದಾಗ ಇದೇ ರೀತಿ ಖಂಡಿಗೆ ಕೃಷ್ಣಭಟ್ ಮತ್ತಿತರ ನೂರಾರು ಮಂದಿ ಸೆರೆ ಸೇರಿದರು. ಕರ್ನಾಟಕದಲ್ಲಿ

ಆ ವರ್ಷ ಒಟ್ಟು 3000 ಜನ ಬಂಧನಕ್ಕೆ ಒಳಗಾದರು. ಬೆಳಗಾಂವಿ ಜಿಲ್ಲೆಯೊಂದರಲ್ಲೇ 1000 ಜನ ಹೀಗೆ ಕಾರಾಗೃಹ ವಾಸಕ್ಕೆ ನಡೆದರು. ಆದರೆ ಈ ಎಲ್ಲ ಚಳವಳಿಗಳೂ ಕೊಡಗು ಸಹ ಸೇರಿದಂತೆ ಬ್ರಿಟಿಷರ ನೇರ ಆಳಿಕೆ ಇದ್ದ ಪ್ರದೇಶಗಳಿಗೆ ಸೀಮಿತವಾಗಿದ್ದವು.

ಮುಂಬೈ ಮತ್ತು ಮದರಾಸು ಶಾಸನ ಸಭೆಗಳಿಗೆ ಕರ್ನಾಟಕದ ಪ್ರದೇಶಗಳಿಂದ ಕಾಂಗ್ರೆಸ್ ಉಮೇದುವಾರರಾಗಿ ಸ್ಪರ್ಧಿಸಿದ ಬಹುತೇಕ ಎಲ್ಲರೂ ಗೆದ್ದು ಬಂದರು. ಈ ಪ್ರಾಂತಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಅಸ್ತಿತ್ವಕ್ಕೆ ಬಂದುವು. ಈ ಪ್ರೆಸಿಡೆನ್ಸಿ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟ ಮತ್ತು ಸ್ಥಳೀಯ ಸಂಸ್ಥೆಗಳು ಸಹ ಕಾಂಗ್ರೆಸ್ ವಶಕ್ಕೆ ಬಂದುವು. ಬ್ರಿಟಿಷ್ ಸರ್ಕಾರವು  ಎರಡನೇ ವಿಶ್ವ ಸಮರದಲ್ಲಿ ಭಾರತವನ್ನು ಪಾಲ್ಗೊಳ್ಳುವಂತೆ ಮಾಡಲು ಹೊರಟಾಗ ಅದನ್ನು ಪ್ರತಿಭಟಿಸಿ 1939ರಲ್ಲಿ ಈ ಸರ್ಕಾರಗಳು ರಾಜೀನಾಮೆ ನೀಡಿದುವು. 1940-41ರಲ್ಲಿ ಸುಮಾರು 1700 ಮಂದಿ ವೈಯಕ್ತಿಕ ಸತ್ಯಾಗ್ರಹಕ್ಕೆ ಇಳಿದರು. ಯುದ್ಧ ವಿರೋಧಿ ಘೋಷಣೆಗಳನ್ನು ಕೂಗಿದ ಅಪರಾಧಕ್ಕಾಗಿ ಮೂರು ತಿಂಗಳಿನಿಂದ ಒಂದು ವರ್ಷದವರೆಗಿನ ವಿವಿಧ ಅವಧಿಯ ಜೈಲು ಶಿಕ್ಷೆಗೆ ಗುರಿಯಾದರು.

ಹಳೆಯ ಮೈಸೂರಿನಲ್ಲಿ ಮುಖ್ಯವಾದ ಊರು ನಗರಗಳಲ್ಲೆಲ್ಲ ಕಾಂಗ್ರೆಸ್ ಸಮಿತಿಗಳಿದ್ದುವು. ಆದರೂ ಚಳವಳಿ ನಡೆಸಲು ಗಾಂಧೀಜಿ ಅವರು ಅನುಮತಿ ನೀಡಿರಲಿಲ್ಲ. ರಾಜರುಗಳು ಭಾರತೀಯರೇ ಆದುದರಿಂದ ಅವರ ಆಳಿಕೆಯ ಸಂಸ್ಥಾನಗಳಲ್ಲಿ ಚಳವಳಿ ಬೇಡ ಎನ್ನುವುದು ಅದಕ್ಕೆ ಕಾರಣವಾಗಿತ್ತು. ಆದರೆ, ಖಾದಿ, ಹಿಂದೀ ಪ್ರಚಾರ, ಹರಿಜನೋದ್ಧಾರ, ಗೋರಕ್ಷಣ ಮುಂತಾದ ರಚನಾತ್ಮಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅನೇಕ ಮಂದಿ ಯುವಕರು ಬ್ರಿಟಿಷರ ಆಳಿಕೆಯ ಪ್ರದೇಶಗಳಿಗೆ ತೆರಳಿ ಚಳವಳಿಯಲ್ಲಿ ಭಾಗವಹಿಸುತ್ತಿದ್ದರು. 1930-31ನೇ ಮತ್ತು 1932-34ರಲ್ಲಿ ಹೀಗೆ ಅನೇಕರು ಬಂಧನಕ್ಕೆ ಒಳಗಾದರು.

ಮೈಸೂರು ಸಂಸ್ಥಾನದಲ್ಲಿ ಪ್ರಜಾ ಮಿತ್ರಮಂಡಲಿ (1917), ಪ್ರಜಾ ಪಕ್ಷ (1930), ಪ್ರಜಾ ಸಂಯುಕ್ತ ಪಕ್ಷ (1934) ಎಂಬ ಪಕ್ಷಗಳ ಅಡಿ ಜನವರ್ಗಗಳು ಸಂಘಟಿತವಾಗಿದ್ದುದೂ ಉಂಟು. ವಾಸ್ತವವಾಗಿ ಪ್ರಜಾ ಸಂಯುಕ್ತ ಪಕ್ಷ ಮೊದಲ ಎರಡು ಪಕ್ಷಗಳ ವಿಲೀನದಿಂದ ರೂಪುಗೊಂಡಿದ್ದು. ಅದು ಜವಾಬ್ದಾರಿ ಸರ್ಕಾರ ಬೇಕೆಂದು ಹೋರಾಟ ನಡೆಸಿದ್ದರೂ ಕಾಂಗ್ರೆಸ್ ಜೊತೆ ಸಹಕರಿಸುತ್ತಿರಲಿಲ್ಲ. ಕಾಂಗ್ರೆಸ್ಸಿಗೆ ಬ್ರಾಹ್ಮಣರ ಪಕ್ಷವೆಂಬ ಹಣೆಪಟ್ಟಿ ಇದ್ದುದೇ ಅದಕ್ಕೆ ಕಾರಣ. 1937ರಲ್ಲಿ ಮದರಾಸು ಮತ್ತು ಬೊಂಬಾಯಿಗಳಲ್ಲಿ ಸರ್ಕಾರ ರಚಿಸಿದ ಮೇಲೆ ಈ ಪ್ರಜಾಪಕ್ಷ ನಾಯಕರ ನಿಲುವು ಬದಲಾಗುತ್ತಾ ಬಂದಿತು. ಅನಂತರ ಅದೇ ವರ್ಷ ಕಾಂಗ್ರೆಸ್ ಮತ್ತು ಪ್ರಜಾ ಸಂಯುಕ್ತ ಪಕ್ಷ ಇವೆರಡೂ ವಿಲೀನಗೊಂಡವು. ಮೈಸೂರು ಕಾಂಗ್ರೆಸ್ ಎಂಬ ಹೆಸರು ಪಡೆಯಿತು. ಸದಸ್ಯರನ್ನು ಸೇರಿಸಿಕೊಳ್ಳುವಾಗ ಮೈಸೂರು ಕಾಂಗ್ರೆಸ್‍ಗೆ ಹಾಗೂ ಎಐಸಿಸಿಗೆ ಎಂದು ಪ್ರತ್ಯೇಕವಾಗಿ ಸದಸ್ಯತ್ವ ನೀಡಲಾಗುತ್ತಿತ್ತು.

ಈ ಏಕೀಕೃತ ಪಕ್ಷದ ಮೊದಲ ಸಮ್ಮೇಳನ 1938 ಏಪ್ರಿಲ್‍ನಲ್ಲಿ ಶಿವಪುರದಲ್ಲಿ ನಡೆಯಿತು. ಟಿ. ಸಿದ್ಧಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಸಾಹುಕಾರ್ ಚೆನ್ನಯ್ಯ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಎಚ್.ಕೆ.ವೀರಣ್ಣಗೌಡ ಪ್ರಧಾನ ಕಾರ್ಯದರ್ಶಿ. ಮೈಸೂರು ರಾಜ್ಯ ಆತನಕ ಕಂಡು ಕೇಳರಿಯದಂಥ ಅತಿ ದೊಡ್ಡ ಸಮಾವೇಶವಾಗಿತ್ತು ಅದು. ತ್ರಿವರ್ಣ ಧ್ವಜವನ್ನು ಪ್ರತಿಬಂಧಕ ಆಜ್ಞೆ ಮುರಿದು ಏರಿಸಿದ್ದಕ್ಕಾಗಿ ಸ್ಥಳದಲ್ಲೇ ಹಲವಾರು ನಾಯಕರನ್ನು ಬಂಧಿಸಲಾಯಿತು. ಮುಂದೆ ರಾಜ್ಯದಾದ್ಯಂತ ಇದೇ ರೀತಿ ಧ್ವಜ ಸತ್ಯಾಗ್ರಹ ನಡೆದು ನೂರಾರು ಜನ ಜೈಲು ಕಂಡರು. 1938 ಏಪ್ರಿಲ್ 28ರಂದು ವಿದುರಾಶ್ವತ್ಥದಲ್ಲಿ ತ್ರಿವರ್ಣ ಧ್ವಜ ಹಾರಿಸಿದ ವೇಳೆ ಪೊಲೀಸರು ಗುಂಡು ಹಾರಿಸಿದರು. ಒಬ್ಬ ಮಹಿಳೆಯೂ ಸೇರಿದಂತೆ 10 ಮಂದಿ ಯಾತ್ರಾರ್ಥಿಗಳು ಗುಂಡಿಗೆ ಆಹುತಿಯಾದರು. ಅದು ವಿದುರಾಶ್ವತ್ಥ **(ನೋಡಿ)** ದುರಂತ ಎನಿಸಿಕೊಂಡಿತು. ಮೈಸೂರು ಜನರು ಇದನ್ನು ತಮ್ಮ ಪ್ರದೇಶದಲ್ಲಿ ನಡೆದ ಜಲಿಯನ್ ವಾಲಾಬಾಗ್ ಮಾದರಿ ದುರಂತ ಎಂದೇ ಭಾವಿಸಿದರು. ಇದರ ಫಲವಾಗಿ ರಾಜರ ಬಗೆಗಿನ ಗೌರವ ಕುಗ್ಗಿತು. 1939ರಲ್ಲಿ ಅರಸೀಕೆರೆಯಲ್ಲಿ ನಡೆದ ಮೈಸೂರು ಕಾಂಗ್ರೆಸ್ ಸಭೆಯಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ನಡೆಸಲು ನಿರ್ಧರಿಸಲಾಯಿತು. ಕೆ. ಟಿ. ಭಾಷ್ಯಂ, ತಾಳಕೆರೆ ಸುಬ್ರಹ್ಮಣ್ಯಂ, ಯಶೋಧರಾ ದಾಸಪ್ಪ, ಎಚ್. ಸಿ. ದಾಸಪ್ಪ, ಕೆ. ಸಿ. ರೆಡ್ಡಿ, ಬಿ. ಎನ್. ಗುಪ್ತ, ಎಚ್. ಕೆ. ವೀರಣ್ಣಗೌಡ, ಕೆ. ಹನುಮಂತಯ್ಯ, ಎಚ್. ಸಿದ್ದಯ್ಯ, ಪಾರ್ಥನಾರಾಯಣ ಪಂಡಿತ, ಸಾಹುಕಾರ್ ಚೆನ್ನಯ್ಯ, ಎಸ್. ನಿಜಲಿಂಗಪ್ಪ, ಎಂ. ಎನ್. ಜೋಯಿಸ್ ಮೊದಲಾದ ಧುರೀಣರು ಚಳವಳಿ ನಿರ್ಣಯ ಕೈಗೊಂಡವರಲ್ಲಿ ಸೇರಿದ್ದರು.

1939 ಸೆಪ್ಟೆಂಬರ್‍ನಲ್ಲಿ ತುರುವನೂರಿನಲ್ಲಿ ಮೈಸೂರಿಗೆ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸುವ ಅರಣ್ಯ ಸತ್ಯಾಗ್ರಹ ಆರಂಭವಾಯಿತು. ಈಚಲು ಮರಗಳನ್ನು ಕಡಿದಿದ್ದಕ್ಕಾಗಿ ಎಸ್.ನಿಜಲಿಂಗಪ್ಪ ಸಹ ಸೇರಿದಂತೆ 14 ಜನರನ್ನು ಬಂಧಿಸಲಾಯಿತು. ಮೈಸೂರು ರಾಜ್ಯದ ಅನೇಕ ಕಡೆ ನಡೆದ ಅರಣ್ಯ ಸತ್ಯಾಗ್ರಹದಲ್ಲಿ 1200ಕ್ಕೂ ಅಧಿಕ ಜನರ ಬಂಧನವಾಯಿತು. 1939 ಸೆಪ್ಟೆಂಬರ್ 1ರಂದು ಅದನ್ನು ಬೆಂಗಳೂರು ಬನಪ್ಪ ಪಾರ್ಕ್‍ನಲ್ಲಿ ನಿಷೇಧಾಜ್ಞೆ ಉಲ್ಲಂಘಿಸಿದ್ದಕ್ಕಾಗಿ ಟಿ. ಸಿದ್ಧಲಿಂಗಯ್ಯ ಅವರ ಬಂಧನವಾಯಿತು. ಅನಂತರ ರಾಜ್ಯಾದ್ಯಂತ ನಿಷೇಧಾಜ್ಞೆ ಉಲ್ಲಂಘನೆಗಾಗಿ ಸು.700 ಜನ ಸತ್ಯಾಗ್ರಹಿಗಳನ್ನು ಸೆರೆ ಹಿಡಿದರು. ಈ ಪ್ರಬಲ ಚಳವಳಿಯನ್ನು 1940 ಫೆಬ್ರುವರಿಯಲ್ಲಿ ಹಿಂತೆಗೆದುಕೊಳ್ಳಲಾಯಿತು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸಲು ಮೈಸೂರು ಕಾಂಗ್ರೆಸ್ ಮುಂದಾಗಿ ಒಟ್ಟು 173 ಸ್ಥಾನಗಳನ್ನು ಗೆದ್ದುಕೊಳ್ಳುವಲ್ಲಿ ಯಶಸ್ವಿ ಆಯಿತು. 1941ರಲ್ಲಿ ಪ್ರಜಾಪ್ರತಿನಿಧಿ ಸಭೆ (ಅಸೆಂಬ್ಲಿ) ಚುನಾವಣೆಯಲ್ಲಿ ಸಹ ಕಾಂಗ್ರೆಸಿಗೆ ಗಮನಾರ್ಹ ವಿಜಯ ಲಭಿಸಿತು. ಬೆಂಗಳೂರು, ಮೈಸೂರು, ಭದ್ರಾವತಿ, ಕೆಜಿಎಫ್ ಮತ್ತು ಇತರ ಕೈಗಾರಿಕಾ ನಗರಗಳ ಕಾರ್ಮಿಕರು ಕಾಂಗ್ರೆಸ್‍ನಡಿ ಪರಸ್ಪರ ಸಂಘಟನೆ ಸಾಧಿಸಿದ್ದರು.

ಹೈದರಾಬಾದು ಕರ್ನಾಟಕ ಪರಿಷತ್ತು 1934ರಲ್ಲಿ ಆರಂಭವಾಗಿ ರಾಷ್ಟ್ರೀಯ ಚಟುವಟಿಕೆಗಳನ್ನು ಹಮ್ಮಿಕೊಂಡಿತು. ಮುಂದೆ ಹೈದರಾಬಾದ್ ಕಾಂಗ್ರೆಸ್ ಸ್ಥಾಪನೆ ಆಗಿದ್ದು 1938ರಲ್ಲಿ. ಜಿ. ರಾಮಾಚಾರ್ಯ, ರಾಮಾನಂದ ತೀರ್ಥ, ಮೇಲುಕೋಟೆ, ಅಣ್ಣಾರಾವ್ ಗಣಮುಖಿ, ಶರಣಗೌಡ ಇನಾಂದಾರ್, ವೀರಭದ್ರಪ್ಪ ಶಿರೂರು, ಎ. ಶಿವಮೂರ್ತಿ ಸ್ವಾಮಿ ಮತ್ತಿತರರು ಹೈದರಾಬಾದ್ ಕರ್ನಾಟಕ ಪ್ರದೇಶದ ಮುಂದಾಳುಗಳು.

ಕರ್ನಾಟಕದಲ್ಲಿ ಹಿಂದೆಂದೂ ಇಲ್ಲದಂಥ ಅತಿ ದೊಡ್ಡ ಪ್ರಮಾಣದ ಜನ ಜಾಗೃತಿ ಮೂಡಿದ್ದು 1942ರ ಕ್ವಿಟ್ ಇಂಡಿಯ ಚಳವಳಿಯ ವೇಳೆ. ಮಹಾತ್ಮಾ ಗಾಂಧಿ ಅವರು 1942 ಆಗಸ್ಟ್ 8ರಂದು ಮುಂಬೈ ಎಐಸಿಸಿ ಅಧಿವೇಶನದಲ್ಲಿ ಕ್ವಿಟ್ ಇಂಡಿಯ ಚಳವಳಿಯನ್ನು ಘೋಷಿಸುತ್ತಿದ್ದಂತೆ ಕಾಂಗ್ರೆಸ್‍ನ ಎಲ್ಲ ಪ್ರಮುಖ ಮುಖಂಡರ ಬಂಧನವಾಯಿತು. ಚಳವಳಿ ಧುರೀಣವಿಹೀನವಾಯಿತು. ಪ್ರತಿಯೊಬ್ಬ ಪ್ರಜೆ ಮತ್ತು ಪ್ರತಿ ಸ್ವಯಂಸೇವಕನೂ ತನಗೆ ತಾನೇ ನಾಯಕನೆಂದು ಭಾವಿಸಬೇಕೆಂದೂ ಚಳವಳಿಯನ್ನು ಅಹಿಂಸಾತ್ಮಕವಾಗಿ ಮುಂದುವರೆಸಿಕೊಂಡು ಹೋಗಬೇಕೆಂದೂ ಮಹಾತ್ಮಾ ಗಾಂಧಿ ಕರೆ ಕೊಟ್ಟಿದ್ದರು. ಇದು ಕಟ್ಟಕಡೆಯ ಚಳವಳಿ ಎಂದೂ ಅವರು ಹೇಳಿದರು. ಮಾಡು ಇಲ್ಲವೆ ಮಡಿ ಎಂದು ಕರೆಕೊಟ್ಟರು. ನಾಯಕರೆಲ್ಲ ಬಂಧಿತರಾಗಿದ್ದರೂ ಚಳವಳಿ ಮುಂದುವರೆಸಬೇಕೆಂದು ಕಾಂಗ್ರೆಸ್ಸಿಗರಿಗೆ ಕರೆ ನೀಡಿದ್ದರು. ಗಾಂಧೀಜಿಯವರ ಕಟ್ಟಾ ಅನುಯಾಯಿಗಳಾಗಿದ್ದ ಕಾಕಾ ಕಾಲೇಲ್ಕರ್ ಮತ್ತು ಮಶ್ರುವಾಲ ಅವರು ಹರಿಜನ ಸಾಪ್ತಾಹಿಕದಲ್ಲಿ, ಸರ್ಕಾರವು ನಿಷ್ಕ್ರಿಯಗೊಳ್ಳುವಂತೆ ವಿಧ್ವಂಸಕ ಕೃತ್ಯಗಳನ್ನು ನಡೆಸಬೇಕೆಂದೂ ದೈಹಿಕವಾಗಿ ಹಿಂಸೆ ನೀಡುವ ಕಾರ್ಯ ಕಿಂಚಿತ್ತೂ ನಡೆಯಬಾರದೆಂದೂ ಅವರು ಸೂಚಿಸಿದ್ದರು.

ಕೆಪಿಸಿಸಿಯು ಕ್ರಿಯಾ ಸಮಿತಿ ರಚಿಸಿತ್ತು. ವಿಜಾಪುರದ ಸಿ.ಜೆ.ಅಂಬಲಿ ಅವರು ಅಧ್ಯಕ್ಷರು; ಆರ್.ಆರ್.ದಿವಾಕರ್ ಕಾರ್ಯದರ್ಶಿ; ಯು.ಶ್ರೀನಿವಾಸ ಮಲ್ಯ, ಡಿ.ಪಿ.ಕರಮರಕರ ಮತ್ತು ಆರ್.ಎಸ್.ಹುಕ್ಕೇರಿಕರ ಸದಸ್ಯರು ಆಗಿದ್ದರು. ಕೇಂದ್ರ ಕಛೇರಿ ಮುಂಬೈಯಲ್ಲಿತ್ತು. ಚಳವಳಿ ಬೆಳಗಾಂವಿ, ಧಾರವಾಡ ಜಿಲ್ಲೆಗಳಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಉಗ್ರ ಸ್ವರೂಪ ತಳೆದಿತ್ತು. ಬೆಳಗಾಂವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅಸಂಖ್ಯಾತ ಗ್ರಾಮ ಚಾವಡಿಗಳನ್ನು ಸುಡಲಾಯಿತು. ಗ್ರಾಮ ಲೆಕ್ಕಪತ್ರಗಳನ್ನು ವಶಪಡಿಸಿಕೊಂಡು ಬೆಂಕಿ ಹಚ್ಚಲಾಯಿತು. ತಾರು ತಂತಿ ಕಡಿದು ರೈಲು ಹಳಿಗಳನ್ನು ಕೀಳಲಾಯಿತು. ರೈಲ್ವೆ ನಿಲ್ದಾಣ ಮತ್ತು ಸರ್ಕಾರಿ ಕಛೇರಿಗಳಿಗೆ ಬೆಂಕಿ ಇಡಲಾಯಿತು. ಬೆಳಗಾಂವಿ ಜಿಲ್ಲೆಯ ಅಣ್ಣು ಗುರೂಜಿ, ಚನ್ನಪ್ಪವಾಲಿ, ವಾಮನರಾವ್ ಬಿದರಿ, ಚಿನ್ಮಯಸ್ವಾಮಿ ಓಂಕಾರ ಮಠ, ಜಯದೇವರಾವ್ ಕುಲಕರ್ಣಿ, ರಾಮಚಂದರ ವಡವಿ ಮತ್ತು ಇತರರು; ಧಾರವಾಡ ಜಿಲ್ಲೆಯ ಕರಿಯಪ್ಪ ಸಂಗೂರು, ಮೈಲಾರ ಮಹಾದೇವಪ್ಪ, ತಿಮ್ಮನಗೌಡ ಮೆಣಸಿನಹಾಳ, ವಿ.ಟಿ. ಮಾಗಡಿ, ಎನ್.ಟಿ.ದಾಬಡೆ ಮತ್ತು ಬಿಂಧುಮಾಧವ ಬುರ್ಲಿ; ಉತ್ತರ ಕನ್ನಡ ಜಿಲ್ಲೆಯ ರಾಮಚಂದ್ರ ಪ್ರಭು, ಶ್ರೀಧರ ಬಾಳಗಿ ಮತ್ತು ಕೆ.ಜಿ.ಜೋಷಿ; ವಿಜಾಪುರ ಜಿಲ್ಲೆಯ ಸಿ.ಜೆ. ಅಂಬಲ, ಇವರು ಭೂಗತ ಚಟುವಟಿಕೆಯ ಮುಂಚೂಣಿಯಲ್ಲಿ ಇದ್ದವರು.

ಹಳೆಯ ಮೈಸೂರು ಭಾಗದಲ್ಲಿ ಬೆಂಗಳೂರು, ಭದ್ರಾವತಿ, ಕೆಜಿಎಫ್, ದಾವಣಗೆರೆ ಮತ್ತಿತರ ಕಡೆಗಳಲ್ಲಿ ಗಾಂಧೀಜಿ ಮತ್ತಿತರ ನಾಯಕರ ಬಂಧನವನ್ನು ಪ್ರತಿಭಟಿಸಿ ಕಾರ್ಮಿಕರು ಮುಷ್ಕರ ನಡೆಸಿದರು. ಅನೇಕ ದಿನಗಳ ಕಾಲ ಮುಷ್ಕರಗಳು ನಡೆದುವು. ವಿದ್ಯಾರ್ಥಿಗಳು ಸಹ ಚಳವಳಿ ಮಾರ್ಗ ಹಿಡಿದು ತರಗತಿಗಳಿಂದ ಹೊರ ಬಂದರು. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಸುಮಾರು ಮೂರು ತಿಂಗಳ ಕಾಲ ಶಾಲೆ ಕಾಲೇಜುಗಳನ್ನು ಮುಚ್ಚಲಾಗಿತ್ತು. ವಿಧ್ವಂಸಕ ಕೃತ್ಯಗಳಿಂದಾಗಿ ಬೆಂಗಳೂರು ಮತ್ತು ಗುಂತಕಲ್ ನಡುವಣ ರೈಲು ಮಾರ್ಗ ಎರಡು ವಾರ ಕಾಲ ಬಂದ್ ಆಗಿತ್ತು.

ಕ್ವಿಟ್ ಇಂಡಿಯ ಚಳವಳಿಯ ಆರಂಭ ಹಂತದಲ್ಲೇ ಹಿರಿಯ ನಾಯಕರೆಲ್ಲರ ದಸ್ತಗಿರಿ ಆದ ಕಾರಣ ಭೂಗತ ಚಟುವಟಿಕೆಯ ನೇತೃತ್ವವನ್ನು ಮೈಸೂರು ಸಂಸ್ಥಾನದಲ್ಲಿ ಕೆ.ಎ.ವೆಂಕಟರಾಮಯ್ಯ, ಎ.ಜಿ.ರಾಮಚಂದ್ರರಾವ್, ಎನ್. ಡಿ. ಶಂಕರ್, ಮಗನ್ ಲಾಲ್ ಷಾ, ಎಚ್. ಎಸ್. ದೊರೆಸ್ವಾಮಿ, ಕಡಿದಾಳ್ ಮಂಜಪ್ಪ, ಕೊಟ್ರೆ ನಂಜಪ್ಪ, ಆರ್. ಎಸ್. ಆರಾಧ್ಯ ಮತ್ತಿತರರು ವಹಿಸಿದ್ದರು.

ಕ್ವಿಟ್ ಇಂಡಿಯ ಚಳವಳಿ ಕನಿಷ್ಠ ಮೂರು ತಿಂಗಳ ಕಾಲವಾದರೂ ಉಗ್ರ ಸ್ವರೂಪದಲ್ಲೇ ಮುಂದುವರೆದಿತ್ತು. ಮೈಸೂರು ಸಂಸ್ಥಾನದಲ್ಲಿ ಸ್ವಲ್ಪ ತಣ್ಣಗಾದರೂ ಮುಂಬೈ ಕರ್ನಾಟಕದಲ್ಲಿ ಸುಮಾರು ಎರಡು ವರ್ಷ ಕಾಲ ಚಳವಳಿ ಬಿರುಸಾಗಿತ್ತು. ಬ್ರಿಟಿಷರ ನೇರ ಆಳಿಕೆ ಇದ್ದ ಕಡೆ ಸತತವಾಗಿ ಬಿರುಸಾದ ವಿಧ್ವಂಸಕ ಚಳವಳಿ ನಡೆದ ಮಾದರಿಯು ಕರ್ನಾಟಕದ ಮಾದರಿ ಎಂದೇ ಪ್ರಖ್ಯಾತವಾದುದು ಒಂದು ವಿಶೇಷ. ಕರ್ನಾಟಕದಲ್ಲಿ 25 ರೈಲ್ವೆ ನಿಲ್ದಾಣಗಳು ಹಾನಿಗೊಳಗಾದವು, ಇಲ್ಲವೇ ಅಗ್ನಿ ಸ್ಪರ್ಶಕ್ಕೆ ಒಳಗಾದವು. ಪೂರ್ತಿ ಧ್ವಂಸಗೊಂಡ ಅಂಚೆ ಕಛೇರಿಗಳೆಂದರೆ ಬೆಂಗಳೂರು ಮತ್ತು ನಿಪ್ಪಾಣಿ. ಸರ್ಕಾರಿ ಕಛೇರಿಗಳನ್ನೂ ಸಬ್ ರಿಜಿಸ್ಟ್ರಾರ್

ಕಛೇರಿಯನ್ನೂ ಸುಟ್ಟಿದ್ದಕ್ಕಾಗಿ ನಿಪ್ಪಾಣಿಯಲ್ಲಿ 2 ಲಕ್ಷ ರೂಪಾಯಿಗೂ ಅಧಿಕ ಪುಂಡುಗಂದಾಯವನ್ನು ಸಾರ್ವಜನಿಕರಿಂದ ಸಂಗ್ರಹಿಸಿದರು. ತಂತಿ ಸಂಪರ್ಕ ಕಡಿದು, ರಸ್ತೆ, ಸೇತುವೆಗಳಿಗೆಲ್ಲ ಡೈನಮೈಟ್ ಇಟ್ಟು ಸಿಡಿಸಿದ್ದರು. ಉತ್ತರ ಕನ್ನಡದ ಸಿದ್ಧಾಪುರ ದೇಶದ ಉಳಿದೆಲ್ಲ ಭಾಗಗಳಿಂದ ಪೂರ್ಣವಾಗಿ ಸಂಪರ್ಕವಿಹೀನಗೊಂಡಿತ್ತು. ಗಂಗಾವಳಿ ಮತ್ತು ಹಟ್ಟಿಕೇರಿ ಸರ್ಕಾರಿ ಮರಮಟ್ಟು ಡಿಪೋಗಳು ಭಸ್ಮವಾದುವು. ಗಂಗಾವಳಿ ಡಿಪೋಗೆ ಬೆಂಕಿ ಹಾಕಿದ್ದಕ್ಕಾಗಿ ಗೋಕರ್ಣ ಜನರ ಮೇಲೆ ಪುಂಡುಗಂದಾಯ ವಿಧಿಸಿ 30 ಸಾವಿರ ರೂಪಾಯಿ ಸಂಗ್ರಹಿಸಿದರು. 1942 ಸೆಪ್ಟೆಂಬರ್ ತಿಂಗಳ ಮಂಗಳೂರಿನ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಎಂ.ಡಿ. ಅಧಿಕಾರಿ ಅವರನ್ನು ಬಡಿದು ಹಾಕಿದರು. ಭಾರೀ ಜನಸ್ತೋಮದ ಮೇಲೆ ಲಾಠಿ ಪ್ರಹಾರ ಬಹಳ ಭೀಕರವಾಗಿತ್ತು.

ಅದೇ ವರ್ಷ ಆಗಸ್ಟ್ 15 ರಂದು ಜೈಲಿನಲ್ಲಿ ಮಹಾದೇವ ದೇಸಾಯಿ ಅವರು ಸತ್ತ ಸುದ್ದಿ ತಲುಪಿದ ಅನಂತರ ಬೆಂಗಳೂರು ನಗರದಲ್ಲಿ ನಡೆದ ಗಲಭೆಗಳ ವೇಳೆ ಒಟ್ಟು 11 ಮಂದಿ ಸಾವಿಗೀಡಾದರು. ಮೈಸೂರು ಬ್ಯಾಂಕ್ ಚೌಕ ಮತ್ತು ಆಸುಪಾಸಿನ ಬೀದಿ ಮತ್ತು ಗಲ್ಲಿಗಳಲ್ಲಿ ಪೊಲೀಸರು ಜನರ ಬೆನ್ನಟ್ಟಿ ಜನರನ್ನು ಬಡಿಯುತ್ತಿದ್ದರು. 1943 ಏಪ್ರಿಲ್ 1 ರಂದು ಧಾರವಾಡ ಜಿಲ್ಲೆಯ ಹೊಸರೀತಿಯಲ್ಲಿ ಸರ್ಕಾರಿ ಖಜಾನೆ ಲೂಟಿ ಯತ್ನದಲ್ಲಿದ್ದ ಮೈಲಾರ ಮಹಾದೇವಪ್ಪ ಹಾಗೂ ಇನ್ನಿಬ್ಬರು ಹುತಾತ್ಮರಾದರು.

ಶಿವಮೊಗ್ಗ ಜಿಲ್ಲೆಯ ಈಸೂರು ರೈತರು ತಮ್ಮ ಗ್ರಾಮವನ್ನು ಸ್ವತಂತ್ರ ಎಂದು ಘೋಷಿಸಿದರು. 1942 ಸೆಪ್ಟೆಂಬರ್‌ನಲ್ಲಿ ಅಲ್ಲಿಗೆ ಬಂದ ಇಬ್ಬರು ಸರ್ಕಾರಿ ಅಧಿಕಾರಿಗಳನ್ನು ಕೊಂದು ಹಾಕಿದರು. ಇದಕ್ಕೆ ಪ್ರತೀಕಾರವಾಗಿ 1943 ಮಾರ್ಚ್‌ನಲ್ಲಿ ಈಸೂರಿನ ಐವರು ರಾಷ್ಟ್ರಪ್ರೇಮಿ ಯುವಕರನ್ನು ನೇಣು ಹಾಕಲಾಯಿತು. ಪೊಲೀಸ್ ಗೋಲಿಬಾರ್‌ನಿಂದಾಗಿ ದಾವಣಗೆರೆಯಲ್ಲಿ ಐವರು ಮತ್ತು ಬೈಲಹೊಂಗಲದಲ್ಲಿ ಏಳು ಮಂದಿ ಮೃತಪಟ್ಟರು. ವಾರದ ಸಂತೆ, ಜಾತ್ರೆಗಳು, ಸಂತೆ ಸುಂಕ ಕೊಡದಂತೆ ಪಿಕೆಟಿಂಗ್ ಕೇಂದ್ರಗಳಾಗುತ್ತಿದ್ದುವು. ಹಾಸನ ಜಿಲ್ಲೆಯಲ್ಲಿ ವಾರದ ಸಂತೆ ಎಂದರೆ ಚಳವಳಿ ಕಾರ್ಯಕ್ಕೆ ಮೀಸಲು ಎಂಬಂತೆ ಆಗಿತ್ತು. ಶ್ರವಣಬೆಳಗೊಳ ಸಂತೆಯಲ್ಲಿ ಪೊಲೀಸರು ಗುಂಡು ಹಾರಿಸಿದಾಗ ಆರು ಜನ ಸತ್ತರು. ಸರ್ಕಾರಿ ಖಜಾನೆ ಲೂಟಿ ಯತ್ನದಲ್ಲಿದ್ದ ಕೊಲ್ಲಾಪುರ ಸಂಸ್ಥಾನದ ಗಾರಗೋಟಿಯಲ್ಲಿ ನಿಪ್ಪಾಣಿ ತಾಲೂಕಿನ ಏಳು ಮಂದಿ ಕಾರ್ಯಕರ್ತರು ಸತ್ತರು. ನಿಪ್ಪಾಣಿ ಪೇಟೆಯಲ್ಲಿ ಶಾಲಾ ಬಾಲಕನೊಬ್ಬ ಸತ್ತ.

ತಿಪಟೂರು ರೈಲ್ವೆ ನಿಲ್ದಾಣಕ್ಕೆ ಜನ ನುಗ್ಗಿದ ಪ್ರಕರಣದಲ್ಲಿ ಗುಂಡೇಟಿನಿಂದ ಒಬ್ಬಾತ ಅಸು ನೀಗಿದ. ಜೈಲಿನಲ್ಲಿ ಪೊಲೀಸರ ದೌರ್ಜನ್ಯಕ್ಕೆ ಹಾಗೂ ಅನೇಕ ಬಂದಿಖಾನೆಗಳಲ್ಲಿ ಹರಡಿದ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗಿ ಸತ್ತವರ ಸಂಖ್ಯೆ ಅನೇಕ.

1942–43ರಲ್ಲಿ ಕರ್ನಾಟಕದಾದ್ಯಂತ ಜೈಲು ಸೇರಿದವರ ಸಂಖ್ಯೆ 15000. ಅದರಲ್ಲಿ ಮೈಸೂರು ಭಾಗದವರೇ 10 ಸಹಸ್ರ ಮಂದಿ. ಎಲ್ಲ ಕಡೆ ಜೈಲುಗಳು ತುಂಬಿ ಹೋಗಿದ್ದವು. ರಾಜಕೀಯ ಬಂದಿಗಳನ್ನು ಇಡಲೆಂದೇ ಬ್ಯಾರಕ್ಕುಗಳನ್ನು ನಿರ್ಮಿಸಲಾಗಿತ್ತು. ರಾಷ್ಟ್ರಪ್ರೇಮದಲ್ಲಿ ತ್ಯಾಗ ಬಲಿದಾನಗಳಿಗೆ ಮುಂದಾಗುವಲ್ಲಿ ದೇಶದ ಇತರ ಭಾಗಗಳವರಿಗಿಂತ ತಾವು ಎಷ್ಟು ಮಾತ್ರವೂ ಕಡಿಮೆಯವರಲ್ಲ ಎಂದು ಕರ್ನಾಟಕದ ಜನ ತೋರಿಸಿಕೊಟ್ಟರು. ಅಂಥವರ ಪೈಕಿ ಮಹಿಳೆಯರೂ ಸಾಕಷ್ಟು ಇದ್ದರು. ಕಮಲಾದೇವಿ ಚಟ್ಟೋಪಾಧ್ಯಾಯ, ಕೃಷ್ಣಬಾಯಿ ಪಂಜೇಕರ್, ನಾಗಮ್ಮ ಪಾಟೀಲ್, ಸಿದ್ದಮ್ಮ ಬಳ್ಳಾರಿ, ಉಮಾಬಾಯಿ ಕುಂದಾಪುರ, ಯಶೋಧರಾ ದಾಸಪ್ಪ, ಸುಬ್ಬಮ್ಮ ಜೋಯಿಸ್ ಮೊದಲಾದವರನ್ನು ಹೆಸರಿಸಬಹುದು. 1944 ಆಗಸ್ಟ್‌ನಲ್ಲಿ ದಿವಾಕರ್, ಅಂಬಲಿ ಮತ್ತಿತರ ಭೂಗತ ನಾಯಕರು ಪ್ರಕಟಕ್ಕೆ ಬಂದು ಪೊಲೀಸರಿಗೆ ಶರಣಾದ ಮೇಲೆ ಚಳವಳಿ ಕೊನೆಗೊಂಡಿತು.

ಭಾರತ ಸ್ವತಂತ್ರಗೊಂಡ ಮೇಲೆ ಭಾರತ ಒಕ್ಕೂಟದಲ್ಲಿ ವಿಲೀನಗೊಳ್ಳಲು ಮೈಸೂರು ಮಹಾರಾಜರು ಒಪ್ಪಿದರಾದರೂ ಜವಾಬ್ದಾರಿ ಸರ್ಕಾರ ರಚನೆಗೆ ಒಪ್ಪದೆ ಹೋದಾಗ ಮೈಸೂರು ಚಲೋ ಚಳವಳಿ ಆರಂಭವಾಯಿತು. 1947ರ ಚಳವಳಿಗಳೆಂದರೆ, ಮೈಸೂರು ಅರಮನೆ ಎದುರು ಸತ್ಯಾಗ್ರಹ ಹಾಗೂ ತಾಲ್ಲೂಕು ಕಚೇರಿಗಳ ಪಿಕೆಟಿಂಗ್ ನಡೆಸುವುದು ಪ್ರಮುಖವಾದವು. ಚಳವಳಿಕಾರರ ಮೇಲೆ ಭಾರೀ ದಮನ ಕಾರ್ಯ ನಡೆಯಿತು. ಆಗ ಅನೇಕರು ಹುತಾತ್ಮರಾದರು 4000 ಮಂದಿ ಬಂಧನಕ್ಕೊಳಗಾದರು; ಸೆರೆಮನೆ ಸೇರಿದರು. ಅದರಲ್ಲಿ ರೈಲ್ವೆ ಕಾರ್ಮಿಕರು, ವಿವಿಧ ಕಾರ್ಖಾನೆಗಳ ಕಾರ್ಮಿಕರು ಮಾತ್ರವಲ್ಲದೆ ಪೊಲೀಸರು ಸಹಾ ಇದರಲ್ಲಿ ಸೇರಿಕೊಂಡರು. ಕಡೆಗೂ ಮಹಾರಾಜರು ಚಳವಳಿಗೆ ತಲೆಬಾಗಿ ಜವಾಬ್ದಾರಿ ಸರ್ಕಾರ ರಚಿಸಲು ಸಮ್ಮತಿಸಿದರು. 1947 ಅಕ್ಟೋಬರ್ 24ರಂದು ಜವಾಬ್ದಾರಿ ಸರಕಾರದ ಪ್ರಥಮ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಸಂಪುಟ ಸೇರಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೆಂದರೆ ಎಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ, ಎಚ್.ಸಿದ್ದಯ್ಯ ಮತ್ತು ಆರ್.ಚೆನ್ನಿಗರಾಮಯ್ಯ.

1948 ಸೆಪ್ಟೆಂಬರ್‌ನಲ್ಲಿ ಪೊಲೀಸ್ ಕಾರ್ಯಾಚರಣೆ ನಡೆದ ಮೇಲೆಯೇ ಹೈದರಾಬಾದ್‌ನ ನಿಜಾಮ್ ಸಂಸ್ಥಾನ ಭಾರತದಲ್ಲಿ ವಿಲೀನಗೊಂಡಿದ್ದು. ರಜಾಕಾರರ ದಮನಕಾರಿ ಆಳಿಕೆ ವಿರುದ್ಧ ಜನರು ಹೋರಾಟ ನಡೆಸಲು ಹೈದರಾಬಾದಿನ ಕಾಂಗ್ರೆಸ್‌ನ ಅಧ್ಯಕ್ಷರೂ ಆಗಿದ್ದ ಕನ್ನಡಿಗ ಮುಂದಾಳು ಸ್ವಾಮಿ ರಮಾನಂದತೀರ್ಥ ಅವರು ಮಾರ್ಗದರ್ಶನ ನೀಡಿದರು. (ಎಸ್‌ಎನ್.ಕೆ.)

ಈ ಸ್ವಾತಂತ್ರ್ಯ ಚಳವಳಿಗಳಲ್ಲಿ ಮಹಿಳೆಯರಪಾಲೂ ವಿಶಿಷ್ಟವಾಗಿದ್ದುದರಿಂದ ಗಾಂಧೀಜಿಯವರು ಇದನ್ನು ಸುವರ್ಣಾಕ್ಷರಗಳಲ್ಲಿ ಬರೆಯಲರ್ಹವಾದುದೆಂದು ಉದ್ಗರಿಸಿದ್ದಾರೆ. ವಸ್ತುತಃ ಗಾಂಧೀಜಿಯವರ ಪ್ರವೇಶದ ಅನಂತರವೇ ಚಳವಳಿ ಮಹಿಳೆಯರನ್ನು ಒಳಗೊಂಡಂತೆ ಎಲ್ಲರಿಗೂ ಮುಕ್ತವಾಗಿದ್ದು, ಸ್ತ್ರೀ ಶಕ್ತಿಗೆ ರಾಜಕೀಯ ಸ್ವರೂಪ ನೀಡುವ ಪ್ರಕ್ರಿಯೆ ಗಾಂಧೀಪೂರ್ವ ಯುಗದಲ್ಲೇ ಆರಂಭವಾಗಿತ್ತು. ಮಹಿಳೆಯರ ಸ್ಥಾನಮಾನ ಕುರಿತಂತೆ ರಾಷ್ಟ್ರವ್ಯಾಪಿ ಚರ್ಚೆಗಳು ನಡೆದದ್ದು ಇದೇ ಕಾಲಘಟ್ಟದಲ್ಲಿ. ಈ ಚರ್ಚೆಗಳ ಬಗ್ಗೆ ಮಹಿಳೆಯರಿಗೆ ಅರಿವಿತ್ತು. ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿ ಸ್ತ್ರೀಯರಿಗೂ ಸದಸ್ಯತ್ವ ಮುಕ್ತವಾಗಿಡಲಾಯಿತು. ಈ ಕಾಲದ ರಾಷ್ಟ್ರೀಯವಾದಿ ಸಾಹಿತ್ಯವೂ ಮಹಿಳೆಯರ ಮೇಲೆ ಅಪಾರ ಪ್ರಭಾವ ಬೀರಿತು. ಕೆಲವು ಮಹಿಳೆಯರು ಐಎನ್‌ಸಿ ಸದಸ್ಯರಾದರು. ಅವರೆಲ್ಲರೂ ಬಹುತೇಕ ಪುರುಷ ಸದಸ್ಯರ ಸಂಬಂಧಿಗಳೇ ಆಗಿದ್ದರು. ಈ ಆರಂಭದ ಕಾಲಘಟ್ಟದಲ್ಲಿ ಕಾಂಗ್ರೆಸ್ಸಿನ ನೀತಿನಿರೂಪಣೆ ಇಲ್ಲವೇ ಚರ್ಚೆಗಳಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆ ಇರಲಿಲ್ಲ.

20ನೆಯ ಶತಮಾನದ ಆರಂಭದಲ್ಲಿ ಕರ್ಜನ್‌ನ ಬಂಗಾಲ ವಿಭಜನೆ ನಿರ್ಧಾರದ ವಿರುದ್ಧದ ಸ್ವದೇಶಿ ಚಳವಳಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿತೆನ್ನಬಹುದು. ಆರಂಭದಲ್ಲಿ ಕೇವಲ ಬಂಗಾಲ ಪ್ರಾಂತ್ಯಕ್ಕೆ ಸೀಮಿತವಾಗಿದ್ದ ಚಳವಳಿ ಅನಂತರದ ದಿನಗಳಲ್ಲಿ ತೀವ್ರಗಾಮಿ ನಾಯಕತ್ವದ ಪ್ರಯತ್ನದಿಂದ ರಾಷ್ಟ್ರವ್ಯಾಪಿ ಹೋರಾಟದ ಸ್ವರೂಪ ಪಡೆಯಿತು. ಬಂಗಾಲಿ ಮಹಿಳೆಯರು ಮೊದಲ ಬಾರಿಗೆ ಪುರುಷರ ಜೊತೆಗೂಡಿ ಸ್ವದೇಶಿ ಚಳವಳಿ ಸೇರಿ ವಿಭಜನೆಯನ್ನು ವಿರೋಧಿಸಿದರು. ಬೇರೆ ಬೇರೆ ಸ್ಥಳ, ವರ್ಗದ ಮಹಿಳೆಯರು ವಿವಿಧ ಸಂಘಟನೆಗಳ ಮೂಲಕ ಚಳವಳಿಯ ಚಟುವಟಿಕೆಗಳಲ್ಲಿ ವ್ಯಾಪಕವಾಗಿ ಪಾಲ್ಗೊಂಡರು. ಚಳವಳಿ ಬಂಗಾಲದಿಂದ ಮುಂಬಯಿ (ಬಾಂಬೆ), ಚೆನ್ನೈ(ಮದ್ರಾಸ್)ಗಳಿಗೆ ಹಬ್ಬಿತು. ಸ್ವದೇಶಿ ವಸ್ತುಪ್ರದರ್ಶನ, ಸ್ವದೇಶಿ ವಸ್ತುಭಂಡಾರಗಳ ಸ್ಥಾಪನೆ ಪ್ರಚಾರ, ಚರಕಗಳ ಬಳಕೆ ಇತ್ಯಾದಿಗಳಲ್ಲಿ ಸ್ತ್ರೀಯರು ಪಾಲ್ಗೊಂಡಿರುವುದೇ ಹೆಚ್ಚು. ಈ ಕಾಲಘಟ್ಟದಲ್ಲಿ ಕೆಲವು ಮಹಿಳೆಯರು ಕ್ರಾಂತಿಕಾರಿ ತತ್ತ್ವಗಳೆಡೆಗೆ ಸಹಾನುಭೂತಿ ಹೊಂದಿದ್ದರಲ್ಲದೆ, ಕೆಲವರು 1920–30 ರ ದಶಕದಲ್ಲಿ ಹಿಂಸಾತ್ಮಕ ಚಟುವಟಿಕೆಗಳಲ್ಲೂ ಪಾಲ್ಗೊಂಡರು. ಆದರೆ ಮಹಾತ್ಮ ಗಾಂಧೀಜಿಯ ಪ್ರವೇಶದೊಂದಿಗೆ ಚಳವಳಿಯ ದಿಕ್ಕು ಬದಲಾಯಿತು. ಹಾಗೆಯೇ ಮಹಿಳಾ ಪಾಲ್ಗೊಳ್ಳುವಿಕೆ ದಿಕ್ಕು ಕೂಡಾ. ಆದರೂ ಒಟ್ಟು ಪಾಲ್ಗೊಳ್ಳುವಿಕೆ ದೃಷ್ಟಿಯಿಂದ ಮಹಿಳೆಯರು ಅಲ್ಪಸಂಖ್ಯಾತರೇ ಆಗಿದ್ದರು. ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಇಲ್ಲಿಯ ಪ್ರಾದೇಶಿಕ ವ್ಯತ್ಯಾಸಗಳನ್ನು ಗಮನದಲ್ಲಿಡುವುದು ಅನಿವಾರ್ಯ.

ಭಾರತದ ಬೇರೆಲ್ಲಾ ಪ್ರಾಂತ್ಯಗಳಿಗಿಂತ ಕನ್ನಡ ಪ್ರಾಂತ್ಯಗಳು ವಿಶಿಷ್ಟವಾದವು. ಟಿಪ್ಪುವಿನ ಮರಣಾನಂತರ ಸಾಮ್ರಾಜ್ಯಶಾಹಿಗಳು ಕನ್ನಡ ಪ್ರಾಂತ್ಯಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವಿಂಗಡಿಸಿದ್ದರು. ಕನ್ನಡಿಗರು ಆಗಿನ ಬಾಂಬೆ, ಮದರಾಸು ಪ್ರೆಸಿಡೆನ್ಸಿಗಳಲ್ಲಿ (ಇಂದಿನ ಗುಜರಾತ್–ಮಹಾರಾಷ್ಟ್ರ–ಕರ್ನಾಟಕದ ವಾಯವ್ಯಭಾಗ ಮತ್ತು ತಮಿಳುನಾಡು) ಮಾತ್ರವಲ್ಲದೆ ಮೈಸೂರು, ಆಂಧ್ರ ಒಳಗೊಂಡಂತೆ ಅನೇಕ ದೇಶೀಯ ಸಂಸ್ಥಾನಗಳಲ್ಲಿ ಹಂಚಿಹೋಗಿದ್ದರು. ಹೈದರಾಬಾದ್‌ನ ಅಡಿಯಲ್ಲಿ ಕೆಲವು ಕನ್ನಡ ಪ್ರಾಂತ್ಯಗಳಿದ್ದರೆ, ದೇಶಿ ಸಂಸ್ಥಾನಗಳ ಪೈಕಿ ಮೈಸೂರೊಂದೇ ಅತ್ಯಂತ ಹೆಚ್ಚು ಕನ್ನಡಿಗರನ್ನು ಹೊಂದಿದ ಸಂಸ್ಥಾನವಾಗಿತ್ತು.

ಪ್ರೆಸಿಡೆನ್ಸಿ ನಗರಗಳಾದ ಬೊಂಬಾಯಿ, ಮದರಾಸುಗಳು ತೀವ್ರ ತೆರನಾದ ರಾಷ್ಟ್ರೀಯ ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಇಲ್ಲಿ ಏಳಿಗೆಯಾಗುತ್ತಿದ್ದ ಸಮಾಜ ಸುಧಾರಣೆ ಚಳವಳಿಗಳಾಗಲಿ, ರಾಜಕೀಯ ಚಳವಳಿಗಳಾಗಲಿ. ಸಹಜವಾಗಿಯೇ ಈ ಪ್ರೆಸಿಡೆನ್ಸಿಗಳಿಗೆ ಜೋಡಿಸಲ್ಪಟ್ಟಿದ್ದ ಕನ್ನಡ ಪ್ರಾಂತಗಳ ಮೇಲೆ ಪ್ರಭಾವ ಬೀರುತ್ತಿದ್ದುವು. ಅದರಲ್ಲೂ ಸದರನ್ ಮರಾಠ ಕಂಟ್ರಿ ಎಂದೇ ಕರೆಯಲ್ಪಡುತ್ತಿದ್ದ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಈ ತೆರನಾದ ಪ್ರಭಾವ ತೀವ್ರವಾಗಿರುತ್ತಿತ್ತು. ಬ್ರಿಟಿಷ್ ಕರ್ನಾಟಕ ಪ್ರದೇಶಗಳು ಶೈಕ್ಷಣಿಕವಾಗಿ ಹಿಂದುಳಿದಿದ್ದರಿಂದ ಸಹಜವಾಗಿಯೇ ಉನ್ನತ ಶಿಕ್ಷಣ ಆಕಾಂಕ್ಷಿಗಳು ಮುಂಬೈ (ಬಾಂಬೆ), ಪೂನಾ (ಪುಣೆ) ಇಲ್ಲವೆ ಮದರಾಸು (ಚೆನ್ನೈ)ಗಳಿಗೆ ಹೋಗಬೇಕಿತ್ತು. ಅಲ್ಲಿಯ ತೀವ್ರ ತೆರನಾದ ರಾಜಕೀಯ, ಸಾಮಾಜಿಕ ಚಳವಳಿಗಳು, ಕನ್ನಡಿಗ ವಿದ್ಯಾರ್ಥಿಗಳ ಮೇಲೆ ಅಷ್ಟೇ ಸಹಜವಾಗಿಯೇ ಪ್ರಭಾವಬೀರುತ್ತಿದ್ದುವು. ಪರಿಣಾಮವಾಗಿ ಬಾಂಬೆ, ಕರ್ನಾಟಕ ಪ್ರದೇಶದಲ್ಲಿ ಮಹಿಳೆಯರ, ಅದರಲ್ಲೂ ವಿಧವಾ ಸಮಸ್ಯೆಯನ್ನು ಕೈಗೆತ್ತಿಕೊಂಡು ಅನೇಕ ಸುಧಾರಕರು ಹೊರಹೊಮ್ಮಿದರು. ಗುಲ್ವಾಡಿ ವೆಂಕಟರಂಗೋಕಟ್ಟಿ ಮೊದಲಾದವರು ಬರಿಯ ಬೋಧನೆಯನ್ನಷ್ಟೆ ಮಾಡದೇ ಅನೇಕ ವಿಧವಾ ಪುನರ್ ವಿವಾಹಗಳನ್ನು ಸಂಘಟಿಸಿ ಬಹಿಷ್ಕಾರಕ್ಕೂ ಒಳಗಾಗಿದ್ದರು. ಬಾಲಗಂಗಾಧರ ಟಿಳಕರ ನೇತೃತ್ವದಲ್ಲಿ ದಕ್ಷಿಣ ಭಾರತದಲ್ಲಿ ಸಂಘಟಿತವಾದ ಸ್ವದೇಶಿ ಚಳವಳಿಯ ಕಾಲಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ದೊರಕಿತು. ಸ್ವದೇಶಿ ಬಳಕೆಯೇ ಪ್ರತಿಯೊಬ್ಬನ ರಾಷ್ಟ್ರೀಯತೆ ಎಂಬ ತಿಲಕರ ಭಾಷಣಗಳು ಜನರ ಮೇಲೆ ತೀವ್ರ ತೆರನಾದ ಪರಿಣಾಮ ಬೀರಿದ್ದವು. ರಾಷ್ಟ್ರೀಯತೆಯ ಜೊತೆಯಲ್ಲೇ ಸ್ವದೇಶಿ ಚಳವಳಿ ಕನ್ನಡಿಗರಲ್ಲಿ ಸ್ವಭಾಷಾ ಅಭಿಮಾನವನ್ನು ಹುಟ್ಟುಹಾಕಿತು. ಪ್ರೆಸಿಡೆನ್ಸಿ ನಗರಗಳು ಸುದೀರ್ಘ ಕಾಲದಿಂದ ಅನ್ಯಭಾಷೆಗಳ ಆಕ್ರಮಣಕ್ಕೆ ಒಳಗಾಗಿದ್ದು ಕನ್ನಡಿಗರಲ್ಲಿ, ಅದರಲ್ಲೂ ಮರಾಠಿ ದಬ್ಬಾಳಿಕೆಗೆ ತುತ್ತಾಗಿದ್ದ ಬಾಂಬೆ, ಕರ್ನಾಟಕದ ಕನ್ನಡಿಗರಲ್ಲಿ ಸ್ವದೇಶಿ ಕನ್ನಡತನವನ್ನು ಹೆಚ್ಚಿಸಿತು.

ಇದೇ ಸಮಯದಲ್ಲಿ ಕಾಣಿಸಿಕೊಂಡ ಸಾಹಿತ್ಯಕ ಚಟುವಟಿಕೆಗಳ ಪ್ರಗತಿ ಹಾಗೂ ಪತ್ರಿಕೋದ್ಯಮದ ಏಳಿಗೆಗೆ ಪೂರಕವಾಗಿತ್ತಲ್ಲದೆ, ರಾಷ್ಟ್ರೀಯ ಚಟುವಟಿಕೆಗಳ ಬೆಳವಣಿಗೆಗೂ ಸಹಾಯಕವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ರಾಷ್ಟ್ರೀಯ ಭಾವನೆಗಳನ್ನು ಹರಡಲು ದೇಶಭಾಷೆಗಳನ್ನು ಬಳಸುವುದು ಅಗತ್ಯವೆಂಬ ತಿಲಕರ ನಿಲುವು ಹೊಸ ಪ್ರಾಂತೀಯ ಭಾವನೆಗಳಿಗೆ ಭೀಮಬಲ ತಂದುಕೊಟ್ಟಿತು. ಈ ಯುಗದ ಬಹುತೇಕ ಕನ್ನಡಿಗ ರಾಷ್ಟ್ರೀಯವಾದಿಗಳು ತಿಲಕ್‌ವಾದಿಗಳೂ ಆಗಿದ್ದರಿಂದ ಸ್ವದೇಶಿಯತೆ ಸಾಕಷ್ಟು ಜನಪ್ರಿಯವಾಗಿತ್ತು. ದೇಶದ ಇತರೆಡೆಗಳಂತೆ ಕನ್ನಡ ಪ್ರಾಂತಗಳ ಮಹಿಳೆಯರೂ ಈ ಎಲ್ಲ ಚಟುವಟಿಕೆಗಳಿಗೆ ಸ್ಪಂದಿಸುತ್ತಿದ್ದರು. ಸಮಾಜದಲ್ಲಿ ತಮ್ಮ ಸ್ಥಾನ–ಮಾನಗಳ ಸುಧಾರಣೆಗಾಗಿ ನಡೆಯುತ್ತಿದ್ದ ಪ್ರಯತ್ನಗಳು ಮತ್ತು ಆ ಕುರಿತ ಬಿಸಿಬಿಸಿ ಚರ್ಚೆಗಳ ಬಗ್ಗೆ ಅವರಿಗೆ ಅರಿವಿತ್ತು. ಆದರೆ ಈ ಪ್ರಯತ್ನಗಳು ಮಹಿಳಾ ನಾಯಕತ್ವ ಇಲ್ಲದೇ ನಡೆಯುತ್ತಿದ್ದವು. ಇದರೊಂದಿಗೆ ರಾಜಕೀಯ ನಾಯಕತ್ವ ಕೂಡ ಮಹಿಳಾ ಪ್ರಾತಿನಿಧ್ಯದ ಬಗ್ಗೆ ಯಾವುದೇ ಪ್ರಯತ್ನ ನಡೆಸಲಿಲ್ಲ. ಪ್ರಾಚೀನ ಕಾಲದಿಂದ ಮನೆಯ ನಾಲ್ಕು ಗೋಡೆಗಳಿಂದ ಈಚೆಗೆ ಬಾರದಿದ್ದ, ಮಹಿಳೆಯರು ಈಗ ಸ್ವದೇಶೀ ಚಟುವಟಿಕೆಗಳತ್ತ ಆಸಕ್ತಿ ತಾಳಿದರು. ಅವರು ದೊಡ್ಡ ಸಮೂಹವಾಗಿ ಪಾಲ್ಗೊಳ್ಳದಿದ್ದರೂ ತಮ್ಮದೇ ಮಿತಿಯಲ್ಲಿ ಅಂದರೆ ವಿದೇಶಿ ಬಳೆ, ಬಟ್ಟೆ, ಸಕ್ಕರೆ, ಕರ್ಪೂರ, ಚಹ ಇತ್ಯಾದಿಗಳನ್ನು ಬಹಿಷ್ಕರಿಸುವುದರ ಮೂಲಕ ಸ್ವದೇಶಿ ಚಳವಳಿಯನ್ನು ಬೆಂಬಲಿಸಿದರು. ಮಹಿಳೆಯರನ್ನು ಸ್ವದೇಶಿ ಚಳವಳಿಗೆ ಬೆಂಬಲಿಸಲು ಕೋರುವ ನಿಟ್ಟಿನಲ್ಲಿ ಕೆಲವು ನಾಯಕರು ವಿದೇಶಿ ವಸ್ತುಗಳನ್ನು ಬಳಸುವ ಮಹಿಳೆಯರು ಡಾಕಿಣಿಗೆ ಸಮಾನ ಎಂದೂ ಕರೆದಿದ್ದರು.

ಆದರೆ 1920 ರ ಅನಂತರದ ಸನ್ನಿವೇಶದಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆ ಗಮನಾರ್ಹವಾಗಿ ಹೆಚ್ಚಾಯಿತು. 1921 ರ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಉಮಾಬಾಯಿ ಕುಂದಾಪುರ ಅವರಂಥ ಕೆಲವು ಮಹಿಳೆಯರು ಭಾಗವಹಿಸಿದ್ದರು. ಕೆಲವು ಮಹಿಳೆಯರು ಖಾದಿ ಪ್ರಚಾರ ಮಾಡಿದರಲ್ಲದೆ, ಸ್ವದೇಶಿಯತೆ ಕುರಿತು ನಾಟಕಗಳನ್ನು ಬರೆದು ನಟಿಸಿದರು ಕೂಡ. ಉಮಾಬಾಯಿ ಕುಂದಾಪುರ ಅವರು ತನ್ನ ಗಂಡನ ಮರಣಾನಂತರ ತಮ್ಮ ಮಾವ ಆನಂದರಾವ್ ಜೊತೆ ಸೇರಿ ಹುಬ್ಬಳ್ಳಿಯಲ್ಲೇ ನೆಲೆಸಿದರು. ಅಲ್ಲಿ ಟಿಳಕ್ ಕನ್ಯಾಶಾಲಾ ಸ್ಥಾಪನೆಯಾಗಿ ಉಮಾಬಾಯಿ ಅದರ ಮೇಲ್ವಿಚಾರಕಿಯಾಗಿದ್ದರು. ಸೇವಾದಳ ಸ್ಥಾಪಿಸಿದ್ದ ಎನ್.ಎಸ್.ಹರ್ಡೀಕರ್‌ರ ಪ್ರಭಾವಕ್ಕೆ ಒಳಗಾಗಿದ್ದ ಇವರು, ಸೇವಾದಳ ಮಹಿಳಾ ಘಟಕದ ನಾಯಕಿಯೂ ಆಗಿದ್ದರು. ರಾಷ್ಟ್ರೀಯ ಚಳವಳಿ ರಂಗದ ಮೇಲೆ ಗಾಂಧೀಜಿಯ ಪ್ರವೇಶ ಚಿತ್ರಣವನ್ನು ಬದಲಾಯಿಸಿತು. ಸಮಾಜದ ಎಲ್ಲ ವರ್ಗದ ಪಾಲ್ಗೊಳ್ಳುವಿಕೆಯ ಧ್ಯೇಯ ಹೊಂದಿದ್ದ ಗಾಂಧೀಜಿಯ ಹೋರಾಟದ ವಿಧಾನದಿಂದ ಚಳವಳಿ ತನ್ನ ಹಿಂದಿನ ಪರಿಮಿತಿಗಳಿಂದ ಹೊರಬಂತು. ಹೋರಾಟದಲ್ಲಿ ಪುರುಷ ಚಳವಳಿಗಾರರು ಬಂಧಿತರಾಗಿ ಸೆರೆಮನೆ ಸೇರಿದ್ದರಿಂದ ಚಳವಳಿಯನ್ನು ಮುಂದುವರಿಸಲು ಮಹಿಳಾ ಚಳವಳಿಗಾರರ ಆವಶ್ಯಕತೆಯೂ ಉಂಟಾಗಿತ್ತು. ಅಷ್ಟೇ ಅಲ್ಲದೆ, ಈ ಚಳವಳಿಗಳ ಮೂಲಕ ಗಾಂಧೀಜಿ ಬ್ರಿಟಿಷ್ ಆಡಳಿತವನ್ನು ಕೊನೆಗಾಣಿಸುವ ಉದ್ದೇಶ ಮಾತ್ರ ಹೊಂದಿರದೆ, ಅದನ್ನು ಸಾಮಾಜಿಕ ಪುನರುತ್ಥಾನದ ಮಾರ್ಗವನ್ನಾಗಿಯೂ ಬಳಸಲು ಯೋಜಿಸಿದ್ದರು. ಸ್ವರಾಜ್ ಮತ್ತು ಸರ್ವೋದಯ ಪರಿಕಲ್ಪನೆಯನ್ನು ಜಾರಿಗೆ ತರಬೇಕಾದರೆ ಸಾಮಾಜಿಕ ದೋಷಗಳನ್ನು ಅದರಲ್ಲೂ ಸ್ತ್ರೀಯರ ಅವಗಣನೆಯನ್ನು ತೊಡೆದುಹಾಕಿದರೆ ಮಾತ್ರ ಸಾಧ್ಯ ಎಂದು ಗಾಂಧೀಜಿ ನಂಬಿದ್ದರು. ಅವರ ಅಹಿಂಸಾ ತತ್ತ್ವದ ನಂಬಿಕೆ, ಹೋರಾಟದ ವಿಧಾನ, ಸ್ತ್ರೀತತ್ತ್ವದ ಎತ್ತಿಹಿಡಿಯುವಿಕೆ, ಸಾಂಪ್ರದಾಯಿಕ ಸಂಕೇತಗಳ ಬಳಕೆ, ಪಾರಂಪರಿಕ ಮಹಿಳಾವಾದದ ಬಳಕೆ ಭಾರತೀಯ ಭಾವನೆಗಳಿಗೆ ಪೂರಕವಾಗಿದ್ದವು.

ತನ್ನ ಹಿಂದಿನ ಕೇಂದ್ರಸ್ಥಾನಕ್ಕೆ ಖಾದಿಯನ್ನು ತರುವುದು, ಮಹಿಳೆಯರಿಗೆ ವಿಶೇಷ ಸ್ಥಾನಮಾನಗಳನ್ನು ನೀಡುತ್ತದೆ ಎಂದು ಹೇಳಿದ ಗಾಂಧೀಜಿ ಖಾದಿ ನೂಲುವಿಕೆಗೆ ಒತ್ತು ನೀಡಿದರು. ಮಹಿಳೆಯರಿಗೆ ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿ ಸ್ಥಳಾವಕಾಶವನ್ನು ಒದಗಿಸಿಕೊಟ್ಟರು. ಗಾಂಧೀಜಿ ಪ್ರಣೀತ ಆರ್ಥಿಕ ಸ್ವಾವಲಂಬನೆ, ಸ್ವದೇಶಿ ಅಥವಾ ಸ್ವರಾಜ್ಯ ಇಲ್ಲವೆ ಇವೆರಡರ ನಡುವಿನ ಅಂತರ್‌ಸಂಬಂಧಗಳನ್ನು ವಿವಿಧ ವರ್ಗಗಳಿಗೆ ಸೇರಿದ ಮಹಿಳೆಯರು ವಿಭಿನ್ನ ರೀತಿಯಲ್ಲಿ ಅರ್ಥೈಸಿಕೊಂಡರೂ ಆದ ಪರಿಣಾಮ ಮಾತ್ರ ಘನವಾಗಿತ್ತು. ಮಹಿಳೆಯರು ವಿದೇಶಿ ಬಟ್ಟೆ ಮತ್ತು ಮದ್ಯದಂಗಡಿಗಳ ಪಿಕೆಟಿಂಗ್ ಮತ್ತು ಚರಕಗಳ ಬಳಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಹಾಗಾಗಿ ಗಾಂಧೀಜಿ ಚಳವಳಿಯ ಪಾವಿತ್ರ್ಯವನ್ನು ಮಹಿಳೆಯರು ಅರ್ಥೈಸಿಕೊಂಡಿದ್ದಾರೆ ಮತ್ತು ಭಾರತದ ಪಾವಿತ್ರ್ಯ ಮಹಿಳೆಯ ಪಾವಿತ್ರ್ಯ ತಿರುಗುವ ಚರಕದ ಸಂಗೀತದಲ್ಲಿದೆ ಎಂದು ಘೋಷಿಸಿದ್ದರು. ನೂಲುವಿಕೆ ಮಹಿಳೆಯರನ್ನು ಗೃಹಕೃತ್ಯದಿಂದ ವಿಮುಖಗೊಳಿಸುತ್ತಿರಲಿಲ್ಲವಾದ್ದರಿಂದ ಮನೆಯ ಗಂಡಸರು ಇದನ್ನು ಒಪ್ಪಿದರು. ಜೊತೆಗೆ ಕಾರ್ಮಿಕರು, ಮಹಿಳೆಯರು ಮತ್ತು ಮಕ್ಕಳನ್ನು ಒಳಗೊಂಡಂತೆ ಸಮಾಜದ ಎಲ್ಲ ವರ್ಗಗಳೊಂದಿಗೆ ಗಾಂಧೀಜಿ ತಮ್ಮನ್ನು ಗುರುತಿಸಿಕೊಂಡಿದ್ದು, ಹೋರಾಟವನ್ನು ಸಮೂಹ ಚಳವಳಿಯನ್ನಾಗಿಸಿದ್ದರು. ಈ ಕುರಿತು ಸುಚೇತಾಕೃಪಲಾನಿ ಗಾಂಧೀಜಿಯ ವ್ಯಕ್ತಿತ್ವ ಮಹಿಳೆಯರಲ್ಲಿ ಮಾತ್ರವಲ್ಲದೆ, ಅವರ ಪೋಷಕರಲ್ಲಿ, ಗಂಡಂದಿರಲ್ಲಿ, ತಂದೆ ಹಾಗೂ ಸಹೋದರರಲ್ಲಿ ಒಂದು ನಂಬಿಕೆಯನ್ನು ಹುಟ್ಟುಹಾಕಿತು ಎಂದಿರುವುದು ಸೂಕ್ತವಾಗಿದೆ.

ಅಸಹಕಾರ ಚಳವಳಿ ಆರಂಭಿಸಿದಾಗ ಗಾಂಧೀಜಿಯವರ ಕರೆಗೆ ವಿವಿಧ ಪ್ರದೇಶಗಳ ಮಹಿಳೆಯರು ಸ್ಪಂದಿಸಿದರು. ಕನ್ನಡ ಪ್ರಾಂತ್ಯಗಳಿಗೆ ಸಂಬಂಧಿಸಿ ಹೇಳುವುದಾದರೆ, ದೇಶಿ ಸಂಸ್ಥಾನವಾದ ಮೈಸೂರಿಗಿಂತ ಬ್ರಿಟಿಷ್–ಕರ್ನಾಟಕ ಪ್ರಾಂತ್ಯಗಳ ಮಹಿಳೆಯರ ಪ್ರತಿಕ್ರಿಯೆ ತೀವ್ರವಾಗಿತ್ತು. ಮಹಿಳೆಯರು ಮನೆಮನೆಗೆ ತೆರಳಿ ಸ್ವದೇಶಿ ಬಟ್ಟೆ ಪ್ರಚಾರ ಹಾಗೂ ವಿದೇಶಿ ವಸ್ತು ಬಹಿಷ್ಕಾರದ ಸಂದೇಶವನ್ನು ಹರಡಲಾರಂಭಿಸಿದರು. ಈ ಹಂತದಲ್ಲಿ ಮಹಿಳೆಯರು ಹೆಚ್ಚಾಗಿ ನೂಲುವಿಕೆ, ವಿದೇಶಿ ವಸ್ತುಗಳ ಪಿಕೆಟಿಂಗ್ ಮತ್ತು ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡರು. ಖಾದಿ ಪ್ರಚಾರಕ್ಕಾಗಿ ಪ್ರದರ್ಶನ, ಭಾಷಣಗಳು ನಡೆದವು. ಕನ್ನಡ ಪ್ರಾಂತ್ಯಗಳಲ್ಲಿ ಕೈಗೊಂಡ ಗಾಂಧೀಜಿಯ ಪ್ರವಾಸ ಈ ಚಟುವಟಿಕೆಗಳನ್ನು ಉತ್ತೇಜಿಸಿತು. ಖಾದಿ ಪ್ರಯೋಜನಗಳನ್ನು ಕುರಿತು ಮೈಸೂರಿನಲ್ಲಿ ಭಾಷಣ ಮಾಡುವಾಗ ಪ್ರಖ್ಯಾತ ಚಳವಳಿಗಾರ್ತಿ ಗೌರಮ್ಮನವರು ಭಾರತದ ಸಂಪತ್ತಿನ ಸೋರುವಿಕೆ ಕುರಿತು ಮಾತನಾಡಿದ್ದರು. ಈ ಹಂತದಲ್ಲಿ ಮಹಿಳೆಯರು ಸಾರ್ವಜನಿಕ ಜೀವನ–ಹೋರಾಟಕ್ಕೆ ಪ್ರವೇಶ ಮಾಡಿದರು.

1924ರಲ್ಲಿ ಗಾಂಧೀಜಿರವರ ಅಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಸು.150 ಮಹಿಳಾ ಸ್ವಯಂಸೇವಕಿಯರನ್ನು ನೇಮಿಸಲಾಗಿತ್ತು. ಇಲ್ಲಿ ಎನ್.ಎಸ್.ಹರ್ಡೀಕರ್ ಮತ್ತು ಉಮಾಬಾಯಿ ಕುಂದಾಪುರ ಪ್ರಮುಖ ಪಾತ್ರ ನಿರ್ವಹಿಸಿದರು. ಬ್ರಿಟಿಷ್ ಕರ್ನಾಟಕ ಪ್ರಾಂತ್ಯಗಳಲ್ಲಿ ಪಿಕೆಟಿಂಗ್ ಮತ್ತು ಪ್ರಭಾತ ಫೇರಿಗಳಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆ ಹೆಚ್ಚಾಯಿತು. ರಮಾಬಾಯಿ ಕಲ್ಯಾಣಪುರ, ಭವಾನಿ ನಾಡಕರ್ಣಿ, ಕುಮುದ ಕುಲಕರ್ಣಿ, ಕ್ಯಾಪ್ಟನ್ ಅಂಬಾ ಎಂದೇ ಖ್ಯಾತರಾಗಿದ್ದ ಅಂಬಾಬಾಯಿ ಶ್ಯಾನುಭಾಗ ಮೊದಲಾದವರು ಮೇಲೆ ಹೇಳಿದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಶಿರಸಿ, ಗೋಕರ್ಣ, ಹೊನ್ನಾವರ ಮತ್ತಿತರ ಕಡೆಗಳಲ್ಲಿ ಜಾತ್ರೆಗಳು ನಡೆದಾಗ ಸ್ವದೇಶಿ ವಸ್ತುಭಂಡಾರಗಳು ತೆರೆಯಲ್ಪಟ್ಟು ಸಾಕಷ್ಟು ಜನಪ್ರಿಯವೂ ಆದವು. ಇಲ್ಲೆಲ್ಲಾ ಮಹಿಳೆಯರ ಪಾತ್ರ ಹೆಚ್ಚಾಗಿತ್ತು.

1930ರ ವೇಳೆಗೆ ಆರಂಭವಾದ ಕರನಿರಾಕರಣ ಚಳವಳಿ ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಘಟ್ಟ. ವಸಾಹತುಶಾಹಿಯ ಆರ್ಥಿಕ ನೀತಿಗಳು, ಕ್ಷಾಮಗಳು, ಭೂಫಲವತ್ತತೆಯ ಕುಸಿತ, ಮತ್ತಿತರ ನೈಸರ್ಗಿಕ ಕಾರಣಗಳಿಂದ ಭಾರತದ ವಿವಿಧ ಪ್ರಾಂತ್ಯಗಳ ರೈತರು ದಿವಾಳಿಯ ಅಂಚು ತಲುಪಿದ್ದರು. ಆದರೂ ಸರ್ಕಾರ ಕಂದಾಯ ರದ್ದು ಮಾಡುವುದಾಗಲೀ ಇಲ್ಲವೆ ಕಡಿತಗೊಳಿಸುವುದಾಗಲೀ ಮಾಡಲಿಲ್ಲ. ಇಂಥ ಸಂದಿಗ್ಧ ಸಂದರ್ಭದಲ್ಲಿ ಗಾಂಧೀಜಿ ಕರನಿರಾಕರಣೆ ಚಳವಳಿಗೆ ಕರೆ ನೀಡಿದರು. ಉಪವಾಸ ಸತ್ಯಾಗ್ರಹಕ್ಕಿಂತಲೂ ಈ ಚಳವಳಿ ಹೆಚ್ಚಿನ ಜನಸಮೂಹವನ್ನು ಸೆಳೆಯಿತು. ಅಂಕೋಲದಲ್ಲಿ ಉಪ್ಪಿನ ಕಾನೂನು ಭಂಗ ಚಳವಳಿ ಅಭೂತಪೂರ್ವ ಪ್ರತಿಕ್ರಿಯೆ ಕಂಡಿತು. ಶ್ರೀಮತಿ ಆರ್.ಆರ್.ದಿವಾಕರ್ ಅವರಂಥ ಕೆಲವು ಮಹಿಳಾ ಸತ್ಯಾಗ್ರಹಿಗಳು ಅಂಕೋಲಕ್ಕೆ ಧಾವಿಸಿದರು. ಕಾನೂನು ಭಂಗ ಮಾಡಿದ್ದಕ್ಕಾಗಿ ಅನೇಕ ನಾಯಕರು ಸತ್ಯಾಗ್ರಹಿಗಳು ಬಂಧಿತರಾಗಿದ್ದು ಮಹಿಳೆಯರನ್ನು ಚಳವಳಿಗೆ ಇಳಿಯಲು ಪ್ರೇರೇಪಿಸಿತು. ಸೀತಾಬಾಯಿ, ಷರೀಫ್, ಆನಂದೀಬಾಯಿ ಮೊದಲಾದ ಮಹಿಳೆಯರು ಮುಂಚೂಣಿಗೆ ಬಂದು ಸತ್ಯಾಗ್ರಹದಲ್ಲಿ ಪಾಲ್ಗೊಂಡು ಮಹಿಳೆಯರನ್ನು ಹುರಿದುಂಬಿಸಿದರು. ತೀವ್ರ ತೆರನಾದ ಪಿಕೆಟಿಂಗ್, ಹರತಾಳ, ಮೆರವಣಿಗೆ, ಕರನಿರಾಕರಣೆ, ರಕ್ಷಿತ ಅರಣ್ಯಗಳಲ್ಲಿ ಮರಕಡಿಯುವಿಕೆ ಮೊದಲಾದ ಚಟುವಟಿಕೆಗಳಲ್ಲಿ ಮಹಿಳೆಯರು ಪಾಲ್ಗೊಂಡರು. ಕೆಲವೆಡೆ ಅರಣ್ಯಗಳಲ್ಲಿ ಮರಕಡಿದು ತಮ್ಮನ್ನು ಬಂಧಿಸಬೇಕೆಂದು ಪೋಲೀಸರನ್ನು ಒತ್ತಾಯಿಸಿದ ಘಟನೆಗಳೂ ನಡೆದವು.

ದಿನಕಳೆದಂತೆ ಕರನಿರಾಕರಣ ಚಳವಳಿ ತೀವ್ರವಾಯಿತು. ಕೃಷ್ಣಾಬಾಯಿ ಪಂಜೇಕರ ಅವರು ಆರ್. ಆರ್. ದಿವಾಕರ ಮತ್ತು ಕರ್ಮರ್‌ಕರ ಜೊತೆ ಸೇರಿ ಬಾಂಬೆ, ಕರ್ನಾಟಕದ ಅನೇಕ ತಾಲ್ಲೂಕುಗಳಲ್ಲಿ ವ್ಯಾಪಕ ಪ್ರವಾಸಕೈಗೊಂಡರು. ಶಿರಸಿ, ಸಿದ್ಧಾಪುರ ಮತ್ತು ಅಂಕೋಲಗಳಲ್ಲಿ ಕರನಿರಾಕರಣ ಚಳವಳಿ ವಿಶೇಷ ಮಹತ್ತ್ವ ಪಡೆಯಿತು. ಹಿಂದೆಯೇ ಪೊಲೀಸರ ದಮನಕಾರಿ ಕಾರ್ಯಾಚರಣೆ ತೀವ್ರಗೊಂಡಿದ್ದರಿಂದ ರೈತರು ಭೂಗತರಾಗಬೇಕಾದ ಮತ್ತು ಪೊಲೀಸರ ಜಪ್ತಿಯಿಂದ ಬೆಲೆಬಾಳುವ ಸಾಮಾಗ್ರಿಗಳನ್ನು ಅಡಗಿಸಿಡುವ ಅನಿವಾರ್ಯತೆ ಎದುರಾಯಿತು. ಜಪ್ತಿ ಮಾಡಿದ ಸಾಮಾಗ್ರಿಗಳನ್ನು ಗ್ರಾಮದಿಂದ ಹೊರಗೆ ಸಾಗಿಸಲು ಹಳ್ಳಿಯವರು ಸರ್ಕಾರದ ಅಧಿಕಾರಿಗಳಿಗೆ ಸಹಕಾರ ನೀಡಲಿಲ್ಲ.

ಚಳವಳಿ ತೀವ್ರವಾದಂತೆ ಮಹಿಳೆಯರು ಮಕ್ಕಳು ಸಂದೇಶವಾಹಕರಾಗಿದ್ದಲ್ಲದೆ, ಕರಪತ್ರಗಳನ್ನು ಹಂಚಿದರು. ವಿಧವೆಯರು ಮನೆಯಿಂದ ಹೊರಬಂದು ಚಳವಳಿಯಲ್ಲಿ ಪಾಲ್ಗೊಂಡರು. ಮನೆಯ ಗಂಡಸರು ಜೈಲಿನಲ್ಲಿ, ಶಿಬಿರಗಳಲ್ಲಿದ್ದಾಗ ಮಹಿಳೆಯರು ಮತ್ತು ಮಕ್ಕಳು ಹೇಳಲಾಗದ ಕಷ್ಟ–ಸಂಕಷ್ಟಗಳನ್ನು ಅನುಭವಿಸಿದ್ದರು. ಪೊಲೀಸರ ಲಾಠಿ–ಬೂಟಿನ ಏಟು, ಅವಾಚ್ಯ ಬೈಗುಳಕ್ಕೆ ತುತ್ತಾದರು. ಪೊಲೀಸರ ಕ್ರೌರ್ಯ ಗರ್ಭಿಣಿಯರನ್ನೂ ಬಿಡಲಿಲ್ಲ. ಕೆಲವರು ಹಸುಗೂಸುಗಳೊಂದಿಗೆ ಜೈಲಿಗೂ ಹೋದರು.

ಕಂದಾಯ ನಿರಾಕರಿಸಿದವರ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು ಹರಾಜು ಹಾಕಿತು. ಆದರೆ ಸತ್ಯಾಗ್ರಹಿಗಳ ವಸ್ತುಗಳನ್ನು ಹರಾಜಿನಲ್ಲಿ ಕೊಂಡವರ ಮನೆಗಳ ಮುಂದೆ ಮಹಿಳೆಯರು ಧರಣಿ ನಡೆಸಿ ಅವುಗಳನ್ನು ಮೂಲ ಮಾಲೀಕರಿಗೆ ಹಿಂದಿರುಗಿಸುವಂತೆ ಮಾಡಿದ್ದು ಈ ಚಳವಳಿಯ ವಿಶೇಷಗಳಲ್ಲಿ ಒಂದು. ಹಚ್ಚೆ ಎಂಬ ಹಳ್ಳಿಯಲ್ಲಿ ಗೌರಮ್ಮ, ಲಕ್ಷ್ಮಮ್ಮ, ಕಾವೇರಮ್ಮ ಮೊದಲಾದವರು ಇಂಥ ಧರಣಿಯ ನೇತೃತ್ವ ವಹಿಸಿದ್ದರು. ಈ ಹೋರಾಟದಲ್ಲಿ ಆ ಹಳ್ಳಿಯ ಮುಖ್ಯಸ್ಥನ ಮಗಳೂ ಭಾಗವಹಿಸಿದ್ದು ವಿಶೇಷ.

ಇನ್ನೊಂದು ಸತ್ಯಾಗ್ರಹದಲ್ಲಿ ಗೌರಮ್ಮ, ಲಕ್ಷ್ಮಮ್ಮ, ಗಂಗೆ ಕೃಷ್ಣಪ್ಪ, ಸರಸಮ್ಮ ಅಪ್ಪಕಂತು, ಗಂಗಮ್ಮ ಶರ್ಮೇಮನೆ ಮೊದಲಾದವರ ನಾಯಕತ್ವದಲ್ಲಿ ಅನೇಕ ಮಹಿಳೆಯರು ಗಾಂಧೀಜಿಯ ಭಾವಚಿತ್ರದೊಡನೆ ಧರಣಿಯಲ್ಲಿ ಪಾಲ್ಗೊಂಡರು. ಪೊಲೀಸರಿಂದ ಹಲ್ಲೆಗೊಳಗಾದರೂ ಗೌರಮ್ಮನವರು ಗಾಂಧೀಜಿಯ ಫೋಟೋ ಬಿಡಲು ನಿರಾಕರಿಸಿದ ಘಟನೆಯೂ ನಡೆಯಿತು. ಈ ಸಂದರ್ಭದಲ್ಲೆ ಹರಿಜನರ ದೇವಿ ತನ್ನ ಪ್ರಾಣವನ್ನೇ ಒತ್ತೆ ಇಟ್ಟು ತನ್ನ ಒಡೆಯರ ನಗ–ನಾಣ್ಯವನ್ನು ಸಂರಕ್ಷಿಸಿದ್ದು.

ತಿಗಣೆ ಸತ್ಯಾಗ್ರಹ ಮಹಿಳೆಯರ ಸ್ಥೈರ್ಯ, ಸಾಹಸ ಪ್ರದರ್ಶನದ ಮತ್ತೊಂದು ಉದಾಹರಣೆ. ನಿರಂತರ ಸುರಿಯುತ್ತಿದ್ದ ಮಳೆಯಲ್ಲೆ ಕೈಗೂಸಿನೊಂದಿಗೆ ಮಹಿಳಾ ಸತ್ಯಾಗ್ರಹಿಗಳು ಧರಣಿ ಮುಂದುವರಿಸಿದರು. ಹಳ್ಳಿಯ ಮುಖಂಡನ ಕಡೆಯ ಗೂಂಡಾಗಳ ಹಲ್ಲೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಚಾಕುವನ್ನು ಬಳಸಿದ್ದು ಈ ಮಹಿಳೆಯರ ಸ್ಥೈರ್ಯಕ್ಕೆ ಹಿಡಿದ ಕನ್ನಡಿಯಾಗಿತ್ತು. ಮಾವಿನಗುಂಡಿ, ಕಲ್ಬಾಳಗಳಲ್ಲಿ ಲಕ್ಷ್ಮಮ್ಮ, ಭುವನೇಶ್ವರಮ್ಮ ಮೊದಲಾದವರು ಹರಾಜು ಹಾಕಲಾಗಿದ್ದ ದನಗಳಿಗಾಗಿ ಸತ್ಯಾಗ್ರಹ ನಡೆಸಿದರು. ಇನ್ನೊಂದು ಘಟನೆಯಲ್ಲಿ ಗಂಗಮ್ಮ, ದೇವಮ್ಮ, ಸೀತಮ್ಮ, ಭಾಗೀರತಮ್ಮ ಮೊದಲಾದವರು ಸತ್ಯಾಗ್ರಹ ನಡೆಸಿದ್ದಕ್ಕಾಗಿ ಬೈಗುಳ, ನಿಂದನೆಗಳಿಗೆ ಒಳಗಾದರು. ಅಂಕೋಲದ ಮಹಿಳಾ ಸತ್ಯಾಗ್ರಹಿಗಳ ವಿರುದ್ಧ ಪೋಲಿಸ್ ದೌರ್ಜನ್ಯ ಮಿತಿಮೀರಿತ್ತು. ಈ ಸಂದರ್ಭದಲ್ಲಿ ಮಹಿಳೆಯರು ತೋರಿದ ಧೈರ್ಯ–ಸ್ಥೈರ್ಯ ರಾಷ್ಟ್ರೀಯ ನಾಯಕರ ಪ್ರಶಂಸೆಗೆ ಪಾತ್ರವಾಗಿದ್ದವು. ಈ ಕುರಿತು ಮಾತನಾಡುತ್ತಾ ಸರ್ದಾರ್ ವಲ್ಲಭಾಯಿ ಪಟೇಲರು ಅವರ ಸಾಹಸ ಹಾಗೂ ತ್ಯಾಗಗಳ ಕಥೆಗಳು ನನ್ನಲ್ಲಿ ಹೆಮ್ಮೆ ಉಂಟುಮಾಡಿದೆ. ಆ ಸಂದರ್ಭದಲ್ಲಿ ಅವರು ಅನುಭವಿಸಿದ ಸಂಕಷ್ಟಗಳು ನನ್ನನ್ನು ಘಾಸಿಗೊಳಿಸಿವೆ ಎಂದಿರುವುದು ಗಮನಾರ್ಹ.

ಇಡೀ ರಾಷ್ಟ್ರದ ಗಮನ ಸೆಳೆದಿದ್ದ ಇಂಥ ಚಳವಳಿಯಲ್ಲಿ ಬಾಂಬೆ, ಕರ್ನಾಟಕ ಪ್ರಾಂತ್ಯಗಳ ಮಹಿಳೆಯರಿಂದ ಪ್ರೇರಣೆ ಪಡೆದ ಮೈಸೂರಿನ ಮಹಿಳೆಯರು ಸಹಜವಾಗಿಯೇ ಪಾಲ್ಗೊಂಡರು. ಮೈಸೂರು ಪ್ರಾಂತ್ಯದ ಮಹಿಳೆಯರ ಧೈರ್ಯಕ್ಕೆ ಬಹುಮುಖ್ಯ ಉದಾಹರಣೆ ಶಿವಪುರ ಧ್ವಜ ಸತ್ಯಾಗ್ರಹ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಧ್ವಜ ಹಾರಿಸುವಿಕೆ ಮತ್ತು ಧ್ವಜವಂದನೆಗಳನ್ನು ನಡೆಸಲು ಮೈಸೂರು ಕಾಂಗ್ರೆಸ್ ತೀರ್ಮಾನಿಸಿತು. ಕಾಂಗ್ರೆಸ್ ಕರೆಯ ಮೇರೆಗೆ ನಿಗದಿಯಾದ ದಿನದಂದು ಶಿವಪುರದಲ್ಲಿ 20–30 ಸಾವಿರ ಮಂದಿ ಸಂಸ್ಥಾನದ ವಿವಿಧ ಭಾಗಗಳಿಂದ ಬಂದು ಸೇರಿದರು. ಇದರ ಅಧ್ಯಕ್ಷತೆಯನ್ನು ಟಿ.ಸಿದ್ಧಲಿಂಗಯ್ಯ ವಹಿಸಿದ್ದರು. ಕಾನೂನು ಮುರಿದ ಅಪರಾಧಕ್ಕಾಗಿ ಎಲ್ಲ ಪುರುಷ ನಾಯಕರು ಬಂಧನಕ್ಕೆ ಒಳಗಾದಾಗ ಮಹಿಳೆಯರು ನಾಯಕತ್ವ ವಹಿಸಿಕೊಂಡರು. ಬಳ್ಳಾರಿ ಸಿದ್ಧಮ್ಮನವರಂತೂ ಅಹಿಂಸಾ ಮಾರ್ಗ ಬಿಡದೆ ರಾಷ್ಟ್ರಧ್ವಜದ ಗೌರವವನ್ನು ರಕ್ಷಿಸಲು ಹುತಾತ್ಮರಾಗಲೂ ಸಿದ್ಧರಾಗಿ ಎಂದು ಯುವಶಕ್ತಿಯನ್ನು ಹುರಿದುಂಬಿಸಿದರು. ಯಶೋಧಮ್ಮ ದಾಸಪ್ಪ, ಸುಬ್ಬಮ್ಮ ಜೋಯೀಸ್, ಬಳ್ಳಾರಿ ಸಿದ್ಧಮ್ಮ, ಟಿ.ಸುನಂದಮ್ಮ, ಕಲ್ಯಾಣಮ್ಮ, ವೆಂಕಮ್ಮ, ಸಾವಿತ್ರಮ್ಮ ಹೀಗೆ ಸಾಲು ಸಾಲು ಮಹಿಳೆಯರು ಚಳವಳಿಯಲ್ಲಿ ಭಾಗವಹಿಸಿದರು. ಇಲ್ಲಿ ಜವಾಬ್ದಾರಿ ಸರ್ಕಾರದ ರಚನೆಯೂ ಸೇರಿದಂತೆ 18 ನಿಲುವಳಿಗಳನ್ನು ಈ ಸಭೆ ಅಂಗೀಕರಿಸಿತು. ಶಿವಪುರ ಧ್ವಜ ಸತ್ಯಾಗ್ರಹದ ಬೆನ್ನಲ್ಲೇ ನಡೆದದ್ದು ವಿದುರಾಶ್ವಥ ದುರಂತ. ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವಥದಲ್ಲಿ ಸರ್ಕಾರದ ನಿರ್ಬಂಧಗಳನ್ನು ಧಿಕ್ಕರಿಸಿ ಕಾಂಗ್ರೆಸ್ ನಾಯಕರು, ಧ್ವಜ ಹಾರಾಟ ಹಾಗೂ ಭಾಷಣಗಳನ್ನು ಮಾಡಿದರು. ಅನಂತರ ಚದುರುತ್ತಿದ್ದ ಅಮಾಯಕರ ಮೇಲೆ ಪೋಲಿಸರು ಗೋಲಿಬಾರ್ ನಡೆಸಿದ್ದರಿಂದ ಗರ್ಭಿಣಿಯೊಬ್ಬಳು ಸೇರಿದಂತೆ ಕನಿಷ್ಠ 40 ಮಂದಿ ಸಾವಿಗೀಡಾದರು. ಜಲಿಯನ್‌ವಾಲಾಬಾಗ್ ದುರಂತದೊಂದಿಗೆ ಹೋಲಿಸಲಾಗಿರುವ ಈ ದುರಂತ ಸಂಸ್ಥಾನದಲ್ಲಿ ಚಳವಳಿಯನ್ನು ಮತ್ತಷ್ಟು ತೀವ್ರವಾಗಿಸಿತು. ಈ ವೇಳೆಗಾಗಲೇ ಚಳವಳಿಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ನಿರಂತರವಾಗಿತ್ತು. ಇದು ಹ್ಯಾಮಿಲ್ಟನ್ ಮತ್ತು ಅರಣ್ಯ ಸತ್ಯಾಗ್ರಹಗಳಲ್ಲೂ ಮುಂದುವರಿಯಿತು. ದೊಡ್ಡಪೇಟೆಯಲ್ಲಿ ಹೊಸದಾಗಿ ನಿರ್ಮಿಸಿದ ಪೋಲೀಸ್ ಠಾಣೆ ಕಟ್ಟಡಕ್ಕೆ ಅಂದಿನ ಕ್ರೂರಿ ಐಜಿಪಿ ಎಂದೇ ಹೆಸರಾಗಿದ್ದ ಹ್ಯಾಮಿಲ್ಟನ್ ಹೆಸರಿಡಲು ಸರ್ಕಾರ ಉದ್ದೇಶಿಸಿದ್ದನ್ನು ವಿರೋಧಿಸಿ 1939ರಲ್ಲಿ ಸತ್ಯಾಗ್ರಹ ನಡೆಯಿತು. ಯಶೋಧಮ್ಮ ದಾಸಪ್ಪ ಮತ್ತು ಟಿ.ಸುನಂದಮ್ಮ ಮೊದಲಾದವರು ಪಾಲ್ಗೊಂಡರು. ಹಾಗೇ 1939ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹದಲ್ಲೂ ಮಹಿಳೆಯರು ಮರಗಳನ್ನು ಕಡಿದರು. 1939 ರ ಸೆಪ್ಟೆಂಬರ್‌ನಲ್ಲಿ ಆರಂಭವಾದ ತಿರುವಾನೂರು ಅರಣ್ಯ ಸತ್ಯಾಗ್ರಹದಲ್ಲೂ ಇಲ್ಲಿ ಹೆಸರಿಸಲೇಬೇಕು. ಬಳ್ಳಾರಿ ಸಿದ್ಧಮ್ಮ ಮತ್ತು ನಾಗರತ್ನಮ್ಮ ಸತ್ಯಾಗ್ರಹಿಗಳನ್ನು ಸಂಘಟಿಸಿದ್ದು ಮಾತ್ರವಲ್ಲದೆ ನೇರವಾಗಿ ಚಳವಳಿಯಲ್ಲಿ ಪಾಲ್ಗೊಂಡರು. ಚಿತ್ರದುರ್ಗ ಜಿಲ್ಲೆಯೊಂದರಲ್ಲೆ ಪುರುಷ–ಮಹಿಳೆಯರು ಸೇರಿ 5 ಸಾವಿರ ಮರ ಕಡಿದರು. ಇದೇ ಹಿನ್ನೆಲೆಯಲ್ಲಿ ಬಳ್ಳಾರಿ ಸಿದ್ಧಮ್ಮನವರು ಬಂಧನಕ್ಕೆ ಒಳಗಾಗಿ 18 ತಿಂಗಳು ಸೆರೆವಾಸ ಅನುಭವಿಸಿದರು. ಅನಂತರ ಚಳವಳಿ ದಾವಣಗೆರೆ, ತುಮಕೂರು ಜಿಲ್ಲೆಗೂ ಹರಡಿತು. ಸತ್ಯಾಗ್ರಹ ಯಶಸ್ವಿಯಾದ ಬೆನ್ನಲ್ಲೇ ಅಪಾರ ಪ್ರಮಾಣದ ಸತ್ಯಾಗ್ರಹಿಗಳು ಬಂಧಿತರಾದರು. ಮುಂದಿನ 2–3 ವರ್ಷ ಗುಪ್ತಗಾಮಿನಿಯಾಗಿ ಹರಿಯುತ್ತಿದ್ದ ಸ್ವಾತಂತ್ರ್ಯದ ಅಭೀಪ್ಸೆ 1942ರ ಭಾರತ ಬಿಟ್ಟು ತೊಲಗಿ ಚಳವಳಿಯ ಕರೆಯೊಂದಿಗೆ ಮಹಾಪ್ರವಾಹವಾಯಿತು. ಶಿಕ್ಷಣ ಸಂಸ್ಥೆಗಳ ಬಹಿಷ್ಕಾರ, ಪ್ರಭಾತ ಫೇರಿಗಳು ದಿನನಿತ್ಯದ ಮಾತಾಯಿತು. ಯಾವುದೇ ಅಳುಕಿಲ್ಲದೆ ವಿದ್ಯಾರ್ಥಿನಿಯರು, ಮಹಿಳೆಯರು ಪಾಲ್ಗೊಂಡರು.

ರಾಷ್ಟ್ರೀಯ ಮತ್ತು ಮೈಸೂರು ಕಾಂಗ್ರೆಸ್ ನಾಯಕರ ಬಂಧನದಿಂದ ಬೆಂಗಳೂರು, ಮೈಸೂರು ಮೊದಲಾದ ಕಡೆ ಅನಾಯಕತ್ವ ಉಂಟಾಯಿತು. ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಹೋರಾಟದಲ್ಲಿ ಪಾಲ್ಗೊಂಡರು. ಪೊಲೀಸರು ಕೂಡಾ ಭೇದ–ಭಾವವಿಲ್ಲದೆ ದಮನಕಾರಿ ಕ್ರಮ ಕೈಗೊಂಡರು. ಗೋಲಿಬಾರ್‌ಗಳು ನಡೆದವು. ಮೈಸೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರು ಚಳವಳಿಗಿಳಿದಿದ್ದರಿಂದ ಗಾಬರಿಗೊಂಡ ಆಡಳಿತ ಮಂಡಳಿ ವಿದ್ಯಾರ್ಥಿನಿಯರನ್ನು ಮನೆಗೆ ಕರೆದೊಯ್ಯುವಂತೆ ಪೋಷಕರಿಗೆ ಸೂಚಿಸಿತು. ಆದರೆ ವಿದ್ಯಾರ್ಥಿನಿಯರು ಉಪವಾಸ ಸತ್ಯಾಗ್ರಹ ಕೈಗೊಂಡರು. ಉಪನ್ಯಾಸಕಿ ಕೇಸರಿಕೋಶನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ವಿದ್ಯಾರ್ಥಿನಿಯರ ಮುಖಂಡತ್ವ ವಹಿಸಿದ್ದು ಮೀನಾಕ್ಷಿ, ಪೊನ್ನಮ್ಮ, ಕುಂತಳ ಸೇತುರಾವ್, ಕೋಮಲ ಮೊದಲಾದವರು. ಶಿಕ್ಷಣ ಸಂಸ್ಥೆಗಳ ಪಿಕೆಟಿಂಗ್ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಚಳವಳಿಯ ಸಂದೇಶವನ್ನು ಹರಡುವಲ್ಲಿ ಯಶಸ್ವಿಯಾಯಿತು. ಬಹುತೇಕ ಎಲ್ಲ ಜಿಲ್ಲೆಗಳಿಗೂ ಚಳವಳಿ ಹರಡಿ ಮಹಿಳೆಯರು ಪಾಲ್ಗೊಂಡರು. ದಾವಣಗೆರೆ, ಶ್ರವಣಬೆಳಗೊಳ ಮತ್ತು ಈಸೂರುಗಳಲ್ಲಿ ಹಿಂಸಾಕೃತ್ಯಗಳು ನಡೆದವು. ಅದರಲ್ಲಿ ಈಸೂರು ದುರಂತ ಮುಖ್ಯವಾದುದು. ಹೋರಾಟ ಹಿಂಸೆಗೆ ತಿರುಗಿದ್ದರಿಂದ ಪೊಲೀಸ್ ಮತ್ತು ಸೈನ್ಯ ಹಳ್ಳಿಯನ್ನು ಆಕ್ರಮಿಸಿದವು. ಕಾಡುಗಳಲ್ಲಿ ತಲೆಮರೆಸಿಕೊಂಡಿದ್ದವರನ್ನು ಹುಡುಕಿ ಬಂಧಿಸಲಾಯಿತು. ಈ ಸಂದರ್ಭದಲ್ಲೇ ವಿಶೇಷವಾಗಿ ಮಹಿಳೆಯರು ಮತ್ತು ಯುವತಿಯರ ಮೇಲೆ ದೌರ್ಜನ್ಯ, ದೈಹಿಕ ಆಕ್ರಮಣಗಳೂ ನಡೆದವು. ಹಾಲಮ್ಮ, ಪಾರ್ವತಮ್ಮ ಮತ್ತು ಸಿದ್ಧಮ್ಮ ಈ ಸಂದರ್ಭದಲ್ಲೇ ಜೀವಾವಧಿ ಶಿಕ್ಷೆಗೆ ಒಳಗಾದ ಸತ್ಯಾಗ್ರಹಿಗಳ ಪೈಕಿ ಸೇರಿದ್ದರು. ಕಾರ್ಮಿಕ ಚಳವಳಿಯಲ್ಲಿಯೂ ಮಹಿಳೆಯರು ಪುರುಷರೊಡನೆ ಕೈಜೋಡಿಸಿದ್ದರು. 1942ರಲ್ಲಿ ಬೆಂಗಳೂರಿನ ಬಿನ್ನಿ, ಮಹಾರಾಜ ಮತ್ತು ಮಿನರ್ವ ಮಿಲ್‌ಗಳಲ್ಲಿ ತೀವ್ರತರನಾದ ಸತ್ಯಾಗ್ರಹಗಳು ನಡೆದವು. ಮೆರವಣಿಗೆ, ಪ್ರತಿಕೃತಿ ದಹನ ಮೊದಲಾದ ಕ್ರಮಗಳ ಮೂಲಕ ಪ್ರತಿಭಟನೆ ವ್ಯಕ್ತವಾಯಿತು. ಭಾರತ ರಕ್ಷಣಾ ಕಾಯ್ದೆ ಜಾರಿಗೆ ತಂದು ಕಾರ್ಮಿಕ ಚಳವಳಿಯನ್ನು ಬಗ್ಗು ಬಡಿಯಲು ಸರ್ಕಾರ ಯತ್ನಿಸಿತು. ಅಣುಕು ಶವಯಾತ್ರೆ ಪಾಲ್ಗೊಂಡಿದ್ದಕ್ಕಾಗಿ ಭಾಗೀರಥಮ್ಮ, ಚಂಗಲಾರಾಧ್ಯ ಬಂಧಿತರಾಗಿ ಶಿಕ್ಷೆಗೊಳಗಾದರು. ಕುಂತಳಾ ಅವರ ನೇತೃತ್ವದಲ್ಲಿ ಅನೇಕ ವಿದ್ಯಾರ್ಥಿನಿಯರು ಮುಷ್ಕರ ನಿರತ ಕಾರ್ಮಿಕರಿಗೆ ಅನೇಕ ಪರಿಹಾರ ಕಾರ್ಯಗಳನ್ನು ಪ್ರತಿಬಂಧಕಾಜ್ಞೆಗಳನ್ನು ಧಿಕ್ಕರಿಸಿ ಕೈಗೊಂಡರು. ಇತರೆಡೆಗಳಲ್ಲಿ ನಾಗಮ್ಮ ಪಾಟೀಲ್, ಪದ್ಮಾವತಿ ಬಾದಾಮಿ, ಲೀಲಾವತಿ ಮಾಗಡಿ, ಇಂದುಮತಿ ಗುಣಾಜಿ ಮತ್ತಿತರರು ಚಳವಳಿಯಲ್ಲಿ ಪಾಲ್ಗೊಂಡು ಸೆರೆವಾಸಕ್ಕೀಡಾದರು. ಎಲ್ಲ ಕನ್ನಡ ಪ್ರಾಂತ್ಯಗಳಿಗೆ ಹೋಲಿಸಿದರೆ, ಹೈದರಾಬಾದ್ ಕರ್ನಾಟಕ ಪ್ರಾಂತ್ಯಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸ್ವಲ್ಪ ಕಡಿಮೆ ಎನ್ನಬಹುದು. ಇದಕ್ಕೆ ಅಲ್ಲಿನ ರಾಜಕೀಯ ಸನ್ನಿವೇಶ ಕಾರಣ. ಈ ತೆರನಾದ ಹಿನ್ನಡೆಗಳು, ಪ್ರಾದೇಶಿಕ ವೈವಿಧ್ಯತೆಗಳು ಏನೇ ಇದ್ದರೂ ಒಟ್ಟು ಚಳವಳಿಯ ದೃಷ್ಟಿಯಿಂದ ಮಹಿಳೆಯರ ಪಾಲ್ಗೊಳ್ಳುವಿಕೆ ಮಹತ್ತ್ವದ್ದಾಗಿತ್ತು. ಪೋಲಿಸರ ದಮನಕಾರಿ ಕ್ರಮಗಳ ನಡುವೆಯೇ ಸತ್ಯಾಗ್ರಹ, ಹರತಾಳ, ಪಿಕೆಟಿಂಗ್‌ಗಳಲ್ಲಿ ಭಾಗವಹಿಸಿ ಜೈಲು ಕಂಡರು. ಈ ಸಂದರ್ಭಗಳಲ್ಲಿ ಅವರು ತೋರಿದ ನಾಯಕತ್ವದ ಗುಣಗಳು ಕೂಡ ಗಮನಾರ್ಹ. ಮೇಲ್ವರ್ಗ ಮತ್ತು ಮಧ್ಯಮ ವರ್ಗದ ಮಹಿಳೆಯರ ಪಾತ್ರ ಎದ್ದುಕಂಡರೂ ಎಲ್ಲ ಸ್ತರಗಳ ಮಹಿಳೆಯರೂ ಇಲ್ಲಿ ಪಾಲ್ಗೊಂಡು ತಮ್ಮದೇ ರೀತಿ ಚಳವಳಿಗೆ ಕಾಣಿಕೆ ನೀಡಿದರು. ಹೀಗಾಗಿ ಉಳಿದೆಲ್ಲ ಅಂಶಗಳ ಜೊತೆಗೆ ಎಲ್ಲ ವರ್ಗ, ಸ್ತರ, ಜಾತಿ ಹಿನ್ನೆಲೆಗಳ ಮಹಿಳೆಯರ ಪಾಲ್ಗೊಳ್ಳುವಿಕೆಯಿಂದ ಭಾರತದ ಸ್ವಾತಂತ್ರ್ಯ ಚಳವಳಿಗೆ ಪರಿಪೂರ್ಣತೆ ಲಭ್ಯವಾಯಿತು ಎನ್ನಬಹುದು. (ಜೆ.)

# ಹ

**ಹಂಪಿ:** ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಐತಿಹಾಸಿಕ ಕೇಂದ್ರ. ಬೆಂಗಳೂರಿಗೆ 360 ಕಿಮೀ, ಬಳ್ಳಾರಿಗೆ 77 ಕಿಮೀ ಹಾಗೂ ಹೊಸಪೇಟೆಗೆ 13 ಕಿಮೀ ದೂರದಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲಿದೆ. ವಿಜಯನಗರ ಸ್ಥಾಪನೆಯ ಮುಂಚಿನಿಂದಲೂ ಪಂಪಾಕ್ಷೇತ್ರ, ಪಂಪಾತೀರ್ಥ, ಭಾಸ್ಕರಕ್ಷೇತ್ರ, ವಿರೂಪಾಕ್ಷ ಮಹಾಕ್ಷೇತ್ರ ಮತ್ತು ಕಿಷ್ಕಿಂಧೆ ಮೊದಲಾದ ನಾಮಗಳಿಂದ ಪ್ರಸಿದ್ಧಿ ಹೊಂದಿ ಜನಮನದಲ್ಲಿ ಆಳವಾಗಿ ಬೇರೂರಿದೆ. ವಿಜಯನಗರ ಸ್ಥಾಪನೆಯಿಂದ ದಖನ್ ಭಾಗದ ಹಿಂದು ಮಹಾನಗರಗಳಲ್ಲಿ ಒಂದೆನಿಸಿತು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ, ಸಂಗಮ,ಸಾಳುವ, ತುಳುವ, ಅರವೀಡು ರಾಜವಂಶಸ್ಥರ ಆಳಿಕೆಯ ಅವಧಿಯಲ್ಲಿ ದೇಶ–ವಿದೇಶಗಳಲ್ಲಿ ಕೀರ್ತಿ ಗಳಿಸಿತು.

ಇದರ ಉಚ್ಛ್ರಾಯದ ವೈಭವವನ್ನು ಅನೇಕ ವಿದೇಶಿ ಪ್ರವಾಸಿಗರು, ರಾಯಭಾರಿಗಳು ಹಾಗೂ ಚರಿತ್ರೆಕಾರರು ಮುಕ್ತಮನಸ್ಸಿನಿಂದ ವರ್ಣಿಸಿದ್ದಾರೆ. ಇಂಥ ದೊಡ್ಡ ಸಾಮ್ರಾಜ್ಯಕ್ಕೆ ವಿದೇಶಗಳಿಂದ ಬಂದುಹೋದವರ ಸಂಖ್ಯೆ ಅಪರಿಮಿತ. 15ನೆಯ ಶತಮಾನದ ಪೂರ್ವಾರ್ಧದಿಂದ ಈ ಯಾತ್ರೆ ಆರಂಭವಾಗಿ, ಸಾಮ್ರಾಜ್ಯದ ಅವನತಿಯ ಅನಂತರವೂ ಕಳೆದ ಶತಮಾನದವರೆಗೂ



ವಿರೂಪಾಕ್ಷ ದೇವಸ್ಥಾನ

ಭೇಟಿ ನೀಡಿದವರ ಸಂಖ್ಯೆ ಕಡಿಮೆಯೇನಿಲ್ಲ. ಅವರಲ್ಲಿ ನಿಕೊಲೊ-ಡಿ-ಕೊಂಟಿ, ಅಬ್ದುಲ್ ರಜಾಕ್, ದುಆರ್ತೆ, ಬಾರ್ಬೋಸ, ಡೊಮಿಂಗೊ ಪೆಯಿಸ್, ನ್ಯೂನಿಜ್ ಮೊದಲಾದವರು ತಾವು ಕಂಡು ಕೇಳಿದ ಸಂಗತಿಗಳನ್ನು ದಾಖಲಿಸಿದ್ದಾರೆ.

ಹಂಪಿ ಪರಿಸರದಲ್ಲಿ ನಿಸರ್ಗನಿರ್ಮಿತ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಹೊತ್ತ ಬೆಟ್ಟಗಳು, ನೀರಿನ ಸರಬರಾಜು, ಮಾನವನ ವಾಸಸ್ಥಾನಕ್ಕೆ ಯೋಗ್ಯವಾಗಿದ್ದರಿಂದ, ಇಲ್ಲಿ ಪ್ರಾಗಿತಿಹಾಸ ಕಾಲದ ಸಂಸ್ಕೃತಿ ಬೆಳೆದು ಬರಲು ಕಾರಣವಾಯಿತು. ಸ್ಥಳೀಯವಾಗಿ ಕರೆಯುತ್ತಿರುವ ಮಸಳಯ್ಯನ ಗುಡ್ಡ, ಕಮಲಾಪುರ ಹತ್ತಿರದ ಹಳ್ಳದಲ್ಲಿ ಆದಿಶಿಲಾಯುಗದ ಅವಶೇಷಗಳು ಹಾಗೂ ಹಂಪಿಯ ಸುತ್ತಮುತ್ತಲಿನ 14 ಸ್ಥಳಗಳಲ್ಲಿ ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ ಕುರುಹುಗಳಿವೆ. ಆದಿ ಮಾನವ ನಿರ್ಮಿಸಿದ ಗವಿವರ್ಣ ಚಿತ್ರಗಳು ಬೆಟ್ಟಸಾಲುಗಳಲ್ಲಿವೆ. ಇಲ್ಲಿಯ ಉತ್ಖನನದಲ್ಲಿ ದೊರೆತ 1-2 ನೆಯ ಶತಮಾನಕ್ಕೆ ಸೇರಿದ ಬ್ರಾಹ್ಮಿಲಿಪಿಯ ಶಾಸನದಲ್ಲಿ ತಾರಸ ಪುತಸ ದಾನಮ್ ಎಂದು ಬರೆಯಲಾಗಿದೆ. ಅಲ್ಲದೆ ಬುದ್ಧನ ಜಾತಕ ಕಥೆಗಳನ್ನೊಳಗೊಂಡ ಐದು ಫಲಕಗಳು ಸನ್ನತಿ, ಲಿಂಗಸುಗೂರು ಬೌದ್ಧಾವಶೇಷಗಳ ಮಾದರಿಯನ್ನು ಹೋಲುತ್ತವೆ. ಹಂಪಿ ನಗರಕ್ಕೆ ಸೇರಿದ ಕಮಲಾಪುರದಲ್ಲಿ ದೊರೆತ ಎರಡು ಗಚ್ಚು ಶಿಲ್ಪಗಳಲ್ಲಿ, ಒಂದು ತೆಳುವಾದ ಉಡುಗೆಯನ್ನು ಹೊಂದಿ ಗಾಂಧಾರ ಶಿಲ್ಪ ಮಾದರಿಯಲ್ಲಿದೆ. ಹಂಪಿಯ ಸುತ್ತಮುತ್ತಲಿನ ಪರಿಸರದಲ್ಲಿರುವ ಅಶೋಕನ ಶಾಸನಗಳು ಮತ್ತು ಇಲ್ಲಿಯ ಅವಶೇಷಗಳನ್ನು ಗಮನಿಸಿದರೆ ಪ್ರಸ್ತುತ ಅವಧಿಯಲ್ಲಿ ಹಂಪಿ, ಉತ್ತರದ ಸನ್ನತಿ, ದಕ್ಷಿಣದ ಚಂದ್ರವಳ್ಳಿ, ವಾಯವ್ಯದ ವಡಗಾಂವ್-ಮಾಧವಪುರ, ಕೊಲ್ಲಾಪುರಗಳಲ್ಲದೆ ಬಹುದೂರದ ಗಾಂಧಾರ ಪ್ರದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಪಡೆದಿದ್ದಂತೆ ಕಾಣುತ್ತದೆ. ಹಂಪಿಯಲ್ಲಿ ದೊರೆತ ಐದು ಫಲಕಗಳಲ್ಲಿ ಎರಡರಲ್ಲಿ ಶಾಸನಗಳಿವೆ. ಒಂದರಲ್ಲಿ ಧಾನ್ಯಕಟಕವೆಂಬ ಸ್ಥಳದ ಒಬ್ಬ ವರ್ತಕನ ಮಗ ದಮ್ಮನೆಂಬುವವನು ತನ್ನ ತಂದೆ, ತಾಯಿ, ಹೆಂಡತಿ, ಮಗ, ಮೊಮ್ಮಗ, ಸ್ನೇಹಿತರು, ಸಂಬಂಧಿಕರು ಮತ್ತು ವರ್ತಕ ಸಮುದಾಯದವರು ಇಲ್ಲಿಯ ಚೈತ್ಯಕ್ಕೆ ದಾನ ಕೊಟ್ಟ ವಿಷಯವಿದೆ. ಬುದ್ಧನ ಚಿತ್ರವುಳ್ಳ ಇನ್ನೊಂದು ಫಲಕದಲ್ಲಿ ಶಾಸನ ತೀರ ಹಾಳಾಗಿದೆ. ವನಿಯ, ಅತೆ ವಾಸನಿಯ, ಪವಚಿತಯ, ಬಿಕುಣಿ, ದಮ್ಮ ಮೊದಲಾದ ಪದಗಳನ್ನು ಮಾತ್ರ ಗುರುತಿಸಲಾಗಿದೆ.

**ಉತ್ಖನನ:** ಹಂಪಿಯಲ್ಲಿಯ ವಿಜಯ ವಿಠ್ಠಲ ದೇವಾಲಯದ ಆಗ್ನೇಯ ದಿಕ್ಕಿನ ಬೆಟ್ಟದ ಸಾಲಿನಲ್ಲಿ ಮಸಳಯ್ಯನ ಗುಡ್ಡದ ಒಂದು ಭಾಗದ ಸಮತಟ್ಟಿನಲ್ಲಿ ನವ ಶಿಲಾಯುಗ ಮತ್ತು ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಗಳ ಒಂದು ನೆಲೆಯನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆ ಗುರುತಿಸಿತು. ಈ ಇಲಾಖೆ 2003 ರಲ್ಲಿ ಈ ನೆಲೆಯಲ್ಲಿಯ ಸಂಸ್ಕೃತಿಗಳ ಅನುಕ್ರಮ ಹಂತಗಳು ಮತ್ತು ಸ್ಥೂಲವಾದ ಲಕ್ಷಣಗಳನ್ನು ತಿಳಿಯಲು ಸಣ್ಣ ಪ್ರಮಾಣದಲ್ಲಿ ಉತ್ಖನನ ನಡೆಸಿತು. ಇದರಲ್ಲಿ 1ಮೀ ಮಂದದ ಪದರದಲ್ಲಿ ಐದು ಸ್ತರಗಳನ್ನು ಗುರುತಿಸಲಾಯಿತು. ಮೊದಲ ಮೂರು ಸ್ತರಗಳಲ್ಲಿ ಎರಡು ಸಂಸ್ಕೃತಿಗಳ ಅವಶೇಷಗಳು ಒಟ್ಟೊಟ್ಟಿಗೆ ಇರುವುದು ಕಂಡುಬಂದಿತು. ನಾಲ್ಕನೆಯ ಸ್ತ್ರರದಲ್ಲಿ ಈ ಸಂಸ್ಕೃತಿಗಳ ಆರಂಭವು ಕಂಡುಬಂದಿತು. ಕನ್ನೆ ನೆಲದ ಮೇಲಿದ್ದ ಐದನೆಯ ಸ್ತರದಲ್ಲಿ ತಾಮ್ರ-ಶಿಲಾಯುಗ ಹಂತದಲ್ಲಿದ್ದ ನವಶಿಲಾ ಸಂಸ್ಕೃತಿಯ ಅವಶೇಷಗಳು ಮಾತ್ರ ಇದ್ದವು. ಮೊದಲ ಎರಡು ಸ್ತರಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಜನರ ಮಕ್ಕಳ ಎರಡು ಶವಕುಣಿಗಳು ಒಂದೊಂದರಂತೆ ಇದ್ದವು. ಎರಡನೆಯ ಸ್ತರದ ಶವಕುಣಿಯಲ್ಲಿದ್ದ ಒಂದು ಬಟ್ಟಲಿನಲ್ಲಿ ಒಳಗೆ ಮತ್ತು ಹೊರಗೆ ಅಸ್ಥಿ ಅವಶೇಷಗಳಿದ್ದವು ಮತ್ತು ಒಂದು ಸಣ್ಣ ಮಡಕೆಯ ಕಂಠ ಭಾಗದ ಹೊರಬದಿಯಲ್ಲಿ ಎರಡು ಸಣ್ಣ ಗುಮ್ಮಟಗಳನ್ನು ಅಂಟಿಸಲಾಗಿತ್ತು. ಇವು ಪ್ರಾಯಶಃ ಮಾತೃತ್ವದ ಸಂಕೇತವಾಗಿರಬಹುದು. ಒಟ್ಟಿನಲ್ಲಿ ಇದೊಂದು ಅಪರೂಪ ಮಾದರಿಯ ಪಾತ್ರೆ. ಇದರ ಜೊತೆಯಲ್ಲಿ ಕೆಂಪು ಬಣ್ಣದ ದೊಡ್ಡ ಗಡಿಗೆಯಲ್ಲಿ ಕಪ್ಪು-ಕೆಂಪು ದ್ವಿವರ್ಣದ ಬಟ್ಟಲಿದ್ದಿತು. ಪಾತ್ರೆಗಳ ಸುತ್ತಲೂ ಕಲ್ಲು ಚಕ್ಕೆಗಳನ್ನು ಇಡಲಾಗಿತ್ತು. ಮೂರನೆಯ ಸ್ತರದ ತಳಭಾಗದಲ್ಲಿ ದಮ್ಮಸು ಮಾಡಿದ ನೆಲದ ತುಣುಕುಗಳು ಕಂಡುಬಂದವು. ಬಹುಶಃ ಇವು ವಾಸದ ಮನೆಯ ಅವಶೇಷಗಳಾಗಿರಬೇಕು. ಮೊದಲ ಎರಡು ಸ್ತರಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಪಾತ್ರೆಗಳು ಹೆಚ್ಚಾಗಿದ್ದವು. ನವಶಿಲಾ ಸಂಸ್ಕೃತಿಯ ಪಾತ್ರೆಗಳು ತೀರಾ ಕಡಿಮೆ. ಮೂರನೆಯ ಸ್ತರದಲ್ಲಿ ಎರಡು ಸಂಸ್ಕೃತಿಯ ಪಾತ್ರೆಗಳು ಹೆಚ್ಚು ಕಡಿಮೆ ಸಮಾನ ಪ್ರಮಾಣದಲ್ಲಿದ್ದವು. ನಾಲ್ಕನೆಯ ಸ್ತರದಲ್ಲಿ ನವ ಶಿಲಾ ಸಂಸ್ಕೃತಿಯ ಮಣ್ಪಾತ್ರೆಗಳು ಹೆಚ್ಚಿನ ಪ್ರಮಾಣದಲ್ಲಿದ್ದುವು. ಐದನೆಯ ಸ್ತರದಲ್ಲಿ ಅಭ್ರಕ ಮಿಶ್ರಿತ ಹೊಳಪಿನ ಬೂದುಬಣ್ಣದ ಪಾತ್ರೆಗಳು ವಿಶೇಷವಾಗಿವೆ. ಉಬ್ಬು ಹೊಟ್ಟೆಯ ಮಡಕೆಗಳು, ಬಟ್ಟಲುಗಳು, ವಿಶೇಷವಾಗಿ ಲಾಳಿಕೆ ಆಕಾರದ ಪಾತ್ರೆಗಳು, ಮುಖ್ಯವಾಗಿ ಬೃಹತ್ ಶಿಲಾ ಸಂಸ್ಕೃತಿಯ ಪಾತ್ರೆ ಪ್ರಕಾರಗಳು ಸಾಮಾನ್ಯವಾಗಿವೆ. ಒಂದೆರಡು ಕಪ್ಪುಬಣ್ಣದ ಮಣ್ಪಾತ್ರೆಗಳ ಮೇಲೆ ಮಸುಕಾದ ಬಿಳಿ ವರ್ಣದ ರೇಖಾಚಿತ್ರಗಳಿವೆ. ನವ ಶಿಲಾ ಸಂಸ್ಕೃತಿಯ ಪಾತ್ರೆಗಳಲ್ಲಿ ಬೂದುಬಣ್ಣದ ಪಾತ್ರೆಗಳು ಹೆಚ್ಚು, ಕೆಂಪುವರ್ಣದ ಪಾತ್ರೆಗಳು ಕಡಿಮೆ. ಚಿಳ್ಳಿಯ ಬಟ್ಟಲು, ತಟ್ಟೆಗಳು, ನಳಿಕೆಯುಳ್ಳ ಉಬ್ಬುಹೊಟ್ಟೆ ಪಾತ್ರೆಗಳು, ಬಹು ರಂಧ್ರಗಳುಳ್ಳ ಪಾತ್ರೆಗಳು ಸಾಮಾನ್ಯ. ಇವು ಹೆಚ್ಚಾಗಿ ತಿರುಗುವ ಹಲಗೆಯ ಮೇಲೆ ಮಾಡಿದ ಪಾತ್ರೆಗಳು. ಕೈಯಿಂದ ಮಾಡಿದ ಪಾತ್ರೆಗಳೂ ಹೆಚ್ಚಾಗಿವೆ. ಮೂರನೆಯ ಸ್ತರದಲ್ಲಿ ಪಾತ್ರೆಗಳ ಜೊತೆಗೆ ತಗ್ಗು ನೀಳ ಪಟ್ಟಿಗಳುಳ್ಳ ಮತ್ತು ಒಂದು ತುದಿಯಲ್ಲಿ ಉದ್ದೇಶಪೂರ್ವಕವಾಗಿ ಮಾಡಿದ ಸಮತಲವುಳ್ಳ ತಿರುಳುಗಲ್ಲು ಸಿಕ್ಕಿವೆ. ನಾಲ್ಕನೆಯ ಪದರಿನಲ್ಲಿಯೇ ಇಂತಹ ತಿರುಳುಗಲ್ಲು ಸಮಾನಾಂತರ ಅಂಚುಳ್ಳ ಚರ್ಟ್ ಕಲ್ಲಿನ ತೆಳ್ಳನೆಯ ಅಲಗುಗಳು ಹೆಚ್ಚಾಗಿದ್ದವು. ಎರಡು ಮತ್ತು ಮೂರನೆಯ ಪದರಿನಲ್ಲಿ ಯಾವುದೇ ನಿರ್ದಿಷ್ಟ ಆಕಾರವನ್ನು ಗುರುತಿಸಲಾರದ ಕಬ್ಬಿಣದ ವಸ್ತುಗಳು ಇದ್ದವು. ವಿಶೇಷವೆಂದರೆ ಕಬ್ಬಿಣದ ಕಿಟ್ಟವು ದೊರಕಿರುವುದು. ಇವೆಲ್ಲವೂ ಸ್ಥಳೀಯವಾಗಿ ಗಣಿಗಾರಿಕೆ, ಲೋಹ ಮತ್ತು ವಿವಿಧ ವಸ್ತುಗಳನ್ನು ಸ್ಥಳದಲ್ಲಿಯೇ ಮಾಡಲಾಗುತ್ತಿದ್ದುದನ್ನು ಸೂಚಿಸುತ್ತವೆ. ಇನ್ನಿತರ ಗಮನಾರ್ಹ ಅವಶೇಷಗಳೆಂದರೆ ಸುಡಾವೆ ಮಣ್ಣಿನ



ಚಿತ್ರಸಹಿತ ಪಿಂಗಾಣಿ ಪಾತ್ರೆಗಳು

ದಪ್ಪ ಉಂಗುರಗಳು ಈ ಹಂತದಲ್ಲಿ ದೊರೆತಿರುವುದು. ಮೂರು ಮತ್ತು ನಾಲ್ಕನೆಯ ಪದರಗಳಲ್ಲಿ ಇಬ್ಬದಿ ಸ್ಫಟಿಕ ಆಕೃತಿಯ ಕಲ್ಲಿನ ಮಣಿ ಹಾಗೂ ಚಿಪ್ಪಿನ ಮಣಿಗಳು ದೊರೆತಿವೆ. ಒಂದನೆಯ ಪದರಿನಲ್ಲಿ ಸುಡಾವೆ ಮಣ್ಣಿನ ಗೊಂಬೆ ದೊರೆತಿದೆ. ಎಲ್ಲ ಪದರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಾಣಿಗಳ ಎಲುಬುಗಳು ಇದ್ದವು. ಇನ್ನೊಂದು ಗಮನಾರ್ಹ ಅಂಶವೆಂದರೆ ಅಧಿಕ ಪ್ರಮಾಣದಲ್ಲಿ ಅಭ್ರಕವುಳ್ಳ ಗ್ರಾನೈಟ್ ಕಲ್ಲಿನ ಸಣ್ಣ ಸಣ್ಣ ಚಕ್ಕೆಗಳು ಗಣನೀಯ ಪ್ರಮಾಣದಲ್ಲಿ ಸಿಕ್ಕಿವೆ.

ಈ ಪ್ರದೇಶದ ಇತರ ಸಮಕಾಲೀನ ನೆಲೆಗಳ ಆರಂಭದ ಕಾಲಮಾನವನ್ನು ಇಂಗಾಲ-14ರ ತಂತ್ರದಿಂದ ಪ್ರ.ಶ.ಪೂ.1800 ಎಂದು ನಿಗದಿಪಡಿಸಲಾಗಿದೆ. ಆದ್ದರಿಂದ ಈ ನೆಲೆ ಕೂಡ ಇದೇ ಕಾಲದ್ದಾಗಿರಬಹುದು. ಇದಕ್ಕೂ ಪೂರ್ವದಿಂದಲೇ ಇಲ್ಲಿ ಜನವಸತಿ ಆರಂಭವಾಗಿರುವ ಸೂಚನೆಗಳೂ ಇವೆ. ಸಾತವಾಹನರ ಕಾಲಕ್ಕಿಂತಲೂ ಸು.2000 ವರ್ಷಕ್ಕೂ ಹಿಂದಿನಿಂದ ಈ ಉತ್ಖನನ ಹಂಪಿಯಲ್ಲಿ ಕೆಲವು ನಿರ್ದಿಷ್ಟ ಸಂಸ್ಕೃತಿಗಳ ಜನಸಮುದಾಯಗಳು ನೆಲೆಸಿದ್ದವೆಂದು ಈ ಉತ್ಖನನ ತೋರಿಸಿಕೊಟ್ಟಿದೆ.

ಐತಿಹ್ಯದ ಪ್ರಕಾರ ವಿಜಯನಗರ ಸಾಮ್ರಾಜ್ಯಕ್ಕೂ ಮುನ್ನ ಇಲ್ಲಿ ಪಂಪಾಕ್ಷೇತ್ರವೆಂಬ ಒಂದು ಪಟ್ಟಣವಿತ್ತು. ಪಂಪಾಮಹಾತ್ಮೆಯಲ್ಲಿ ಹಂಪಿಯ ಪರಿಸರ ಹಾಗೂ ಕ್ಷೇತ್ರ ಮಹಿಮೆಯನ್ನು ಸಾಂಗವಾಗಿ ಚಿತ್ರಿಸಲಾಗಿದೆ. ಹೇಮಕೂಟದ ಉತ್ತರಕ್ಕಿರುವ ವಿಪ್ರಕೂಟವೆಂಬ ಪರ್ವತದ ಬಳಿಯ ಸರೋವರದ (ಪಂಪಾ ಸರೋವರ - ದಡದಲ್ಲಿ ಪಂಪಾದೇವಿ ತಪಸ್ಸನ್ನಾಚರಿಸಿ, ಶಿವನನ್ನು ಮದುವೆಯಾಗುತ್ತಾಳೆ. ಅನಂತರ ಇದು ಪಂಪಾದೇವಿ, ಪಂಪಾವತಿ, ಪಂಪಾಕ್ಷೇತ್ರ, ಪಂಪಾಸರೋವರ, ಪಂಪಾಪುರ ಮೊದಲಾದ ಹೆಸರುಗಳಿಂದ ಖ್ಯಾತಿಯಾಯಿತು.

ಈ ಪಂಪಾಪುರಕ್ಕೆ ವಿರೂಪಾಕ್ಷನೇ ಒಡೆಯನಾಗಿದ್ದ. ಮಹಾಮಂಡಲೇಶ್ವರರು ಆತನ ಹೆಸರಿನಲ್ಲಿ ಈ ಕ್ಷೇತ್ರವನ್ನು ಪಾಲಿಸುತ್ತಿರುವುದಾಗಿ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಕಾಲಾವಧಿಯಲ್ಲಿ ಹಂಪಿಯ ಸುತ್ತಮುತ್ತ ಸ್ಥಳೀಯ ದೇವಾಲಯ ಗಳಿಗೆ, ವ್ಯಕ್ತಿಗಳಿಗೆ ದಾನ-ದತ್ತಿ ಬಿಡುವಾಗ ಪಂಪಾಕ್ಷೇತ್ರದ ವಿರೂಪಾಕ್ಷನ ಸನ್ನಿಧಿಯನ್ನು ನೆನೆಯಲಾಗಿದೆ. 12ನೆಯ ಶತಮಾನದ ವೇಳೆಗೆ ಹಂಪಿ ಕರ್ನಾಟಕದಲ್ಲಿಯೇ ಪ್ರಮುಖ ಧಾರ್ಮಿಕ ಕೇಂದ್ರವಾಗಿ ರೂಪ ತಳೆಯಿತು. ಅದರ ಒಡೆಯ ವಿರೂಪಾಕ್ಷ ಕವಿವರ್ಯರಿಂದಲೂ ಸ್ತುತಿಸಲ್ಪಟ್ಟ, ಕನ್ನಡದ ಸುಪ್ರಸಿದ್ಧ ಕವಿಗಳಾದ ಹರಿಹರ, ರಾಘವಾಂಕರು ತಮ್ಮ ಅನೇಕ ಕೃತಿಗಳಲ್ಲಿ ಪಂಪಾವಿರೂಪಾಕ್ಷನ ಸ್ತುತಿಯಿಂದ ಹಂಪಿಯಾಳ್ದ ಇಲ್ಲವೆ ಹಂಪಿಯರಸನೆಂದು ಕೊಂಡಾಡಿದ್ದಾರೆ.

ಕಲ್ಲಿನ ರಥ

ಪಂಪಾಕ್ಷೇತ್ರದಂತೆ ಅದರ ಇನ್ನೊಂದು ಮುಖವಾಗಿ ಹಂಪಿ, ರಾಮಾಯಣದ ಕಿಷ್ಕಿಂಧೆಯೆಂದು ಹೆಸರು ಪಡೆಯಿತು. ಕಥೆ, ಪುರಾಣ ಹಾಗೂ ಶಾಸನಗಳು ಕಿಷ್ಕಿಂಧೆ ನಗರವನ್ನು ವರ್ಣಿಸುತ್ತವೆ. ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣವಾದ ದೇವಾಲಯಗಳ ಗೋಡೆ, ಕಂಬಗಳ ಮೇಲೆ ರಾಮಾಯಣದ ಅನೇಕ ಸನ್ನಿವೇಶಗಳನ್ನು ಚಾರಿತ್ರಿಕ ಘಟನೆಗಳಂತೆ ನಿರೂಪಿಸಲಾಗಿದೆ. ಸ್ಥಳಪುರಾಣದಲ್ಲಿ ಹೇಳಿರುವಂತೆ, ಋಷ್ಯಮೂಕ, ಕಿಷ್ಕಿಂಧಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಸೋಮಪರ್ವತ, ಮಣಿಭದ್ರೇಶ್ವರ ಪರ್ವತ ಮೊದಲಾದವು ಹಂಪಿಯ ಪರಿಸರದಲ್ಲಿವೆ. ರಾಮಾಯಣ ಕಾಲದಲ್ಲಿ ವಾನರ ಸಹೋದರರಾದ ವಾಲಿ, ಸುಗ್ರೀವರ ರಾಜಧಾನಿ ಇದು. ಇಲ್ಲಿಗೆ ಬಂದು ಶ್ರೀರಾಮನು ದರ್ಶನವಿತ್ತನೆಂದು ಪ್ರತೀತಿ. ತುಂಗಭದ್ರಾ ನದಿ ಎರಡೂ ದಂಡೆಗಳ ಮೇಲಿನ ಪಂಪಾವನ, ಮಾನಸ ಸರೋವರ, ಶಬರಿಗುಹೆ, ಅಂಜನಾದ್ರಿ, ವಾಲಿಭಂಡಾರ, ಸುಗ್ರೀವಗುಹೆ, ಸೀತೆಯ ಸೆರಗು, ಮತಂಗ ಪರ್ವತ, ಹೇಮಕೂಟ, ರತ್ನಕೂಟ ಮೊದಲಾದವು ರಾಮಾಯಣದ ಕಿಷ್ಕಿಂಧಾ ನಗರವಾಗಿತ್ತೆನ್ನುವುದಕ್ಕೆ ಪುಷ್ಟಿ ನೀಡುತ್ತವೆ.

ಹಂಪಿಯ ಮುಖ್ಯದೇವತೆ ವಿರೂಪಾಕ್ಷ, ವಿಜಯನಗರ ಅರಸರ ಕುಲದೈವ. ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿಯೇ ವಿರೂಪಾಕ್ಷ ಅಥವಾ ಪಂಪಾಪತಿ ಹೆಚ್ಚು ಜನಪ್ರಿಯವಾಗಿದ್ದುದನ್ನು ಶಾಸನಗಳು ದೃಢಪಡಿಸುತ್ತವೆ. ಮೊದಲೇ ನಿರ್ಮಾಣವಾಗಿದ್ದ ಈ ದೇವಾಲಯಕ್ಕೆ ವಿಜಯನಗರ ಕಾಲದಲ್ಲಿ ಅನೇಕ ಸೇರ್ಪಡೆಗಳಾದವೆಂದು ವಾಸ್ತುತಜ್ಞರ ಅಭಿಪ್ರಾಯ (**ನೋಡಿ-ವಿಜಯನಗರ ಸಾಮ್ರಾಜ್ಯ**). (ಎಂ.ವಿ.ವಿ.)

**ಹತ್ತುಸ:** ಟರ್ಕಿಯ ರಾಜಧಾನಿ. ಅಂಕಾರದ ಪೂರ್ವಕ್ಕೆ 200 ಕಿಮೀ ದೂರದಲ್ಲಿದ್ದ ಪ್ರಾಚೀನ ಹಿಟೈಟ್ ಸಾಮ್ರಾಜ್ಯದ ರಾಜಧಾನಿ. ಇದು ಪುರಾತತ್ತ್ವ ಮಹತ್ತ್ವದ ಕೊರುಮ್ ಪ್ರಾಂತದ ಬೊಗಸ್‌ಕೊಯ್ (ಇಂದಿನ ಬೊಗಸ್ಕ) ಹತ್ತಿರದಲ್ಲಿದೆ. ಪ್ರಶ.ಪೂ.2000 ವರ್ಷಗಳ ಹಿಂದೆ ಇದ್ದ ಸ್ಥಳೀಯ ಜನರನ್ನು ಹಟ್ಟಿ ಜನ ಸಮುದಾಯ ಎಂದು ಗುರುತಿಸಲಾಗಿದೆ. ಇಲ್ಲಿನ ಅತ್ಯಂತ ಪ್ರಾಚೀನ ಜನ ವಾಸ್ತವ್ಯ ಪ್ರ.ಶ.ಪೂ.ಸು.6 ಸಹಸ್ರಮಾನ ಹಿಂದಿನದು. ಪ್ರಶ.ಪೂ.19 ಮತ್ತು 18ನೆಯ ಶತಮಾನಗಳಲ್ಲಿ ಅಸ್ಸೀರಿಯದ ಅಪ್ಪುರ್‌ನಿಂದ ಬಂದ ವರ್ತಕರು ಇಲ್ಲಿಯ ನಗರದ ಒಂದು ಭಾಗದಲ್ಲಿ ತಮ್ಮ ವ್ಯಾಪಾರದ ಕೋಠಿಯನ್ನು ಆರಂಭಿಸಿದರು. ಇವರ ವ್ಯಾಪಾರ ಕೇಂದ್ರವಾದ ಕನೆಷ್ (ನೆಷ್) ಪುರಾತತ್ತ್ವ ನೆಲೆ ಕುಲ್ತೆಪೆ ಎಂದು ಕರೆಯಲಾಗಿರುವ ಕಯ್‌ಸೆರಿ ಹತ್ತಿರವಿದೆ. ವರ್ತಕರು ತಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಕಾಗದ ಪತ್ರಗಳನ್ನು ಇಟ್ಟುಕೊಳ್ಳಬೇಕಾಗುತ್ತಿತ್ತು. ಆದ್ದರಿಂದ ಇವರು ತಮ್ಮ ಬೆಣೆಲಿಪಿಯನ್ನು ಈ ಪ್ರದೇಶದಲ್ಲಿ ಚಾಲನೆಗೆ ತಂದರು.

ಪ್ರ.ಶ.ಪೂ.1700ರಲ್ಲಿ ಕುಷಾರ್‌ನ ರಾಜ ಅನಿತ್ತ ಈ ನಗರವನ್ನು ಸುಟ್ಟುಹಾಕಿ ಇಲ್ಲಿ ತನ್ನ ಒಂದು ಶಾಪಶಾಸನವನ್ನು ಕಲ್ಲಿನಲ್ಲಿ ಕೆತ್ತಿಸಿದ. ಅದು ಹೀಗಿದೆ: ನಾನು ರಾತ್ರಿಯಲ್ಲಿ ಈ ನಗರವನ್ನು ನನ್ನ ಬಲದಿಂದ ಸ್ವಾಧೀನಪಡಿಸಿಕೊಂಡೆ. ಇಲ್ಲಿ ಕಳೆ ಬೀಜಗಳನ್ನು ಬಿತ್ತಿದೆ. ನನ್ನ ಅನಂತರ ಮುಂದೆ ಯಾವ ರಾಜನಾದರೂ ಇದನ್ನು ಮತ್ತೆ ಅಭಿವೃದ್ಧಿ ಪಡಿಸಲು ಪ್ರಯತ್ನಿಸಿದಲ್ಲಿ ಸ್ವರ್ಗದ ವಾಯುದೇವ ಅವನನ್ನು ನಾಶಮಾಡಲಿ.

ಆದರೆ ಕೇವಲ ಒಂದು ತಲೆಮಾರಿನ ಅನಂತರ ಹಿಟೈಟ್ ಭಾಷೆ ಮಾತನಾಡುತ್ತಿದ್ದ ಕುಸೆರ ಪ್ರಾಂತದ ರಾಜ ಇಲ್ಲಿ ಒಂದು ಅರಮನೆ ಕಟ್ಟಿಸಿ ರಾಜಧಾನಿಯನ್ನಾಗಿ ಮಾಡಿಕೊಂಡ. ಸ್ಥಳೀಯ ಹ್ಯಾಟಿಕ್ ಭಾಷೆ ಮೂಲೆಗುಂಪಾಗಿ ಹಿಟೈಟ್ ಭಾಷೆ ಪ್ರಧಾನವಾಗುತ್ತ ಬಂತು. ಹ್ಯಾಟಿಕ್ ಭಾಷೆಯ ಹತ್ತುಸ್ ಆಯಿತು. ಹಿಟೈಟ್ ಭಾಷೆಯ ಮತ್ತು ರಾಜನು ಹತ್ತುಸಿಲಿ 1 ಎಂದು ಹೆಸರಿಟ್ಟುಕೊಂಡ. ಇವನ ವಂಶದ 27 ಜನ ರಾಜರು ರಾಜ್ಯವಾಳಿದರು. ಆದರೆ ಇವರ ಹೆಸರುಗಳನ್ನು ಬಿಟ್ಟರೆ ಹೆಚ್ಚಿನ ವಿವರಣೆ ದೊರೆಯುವುದಿಲ್ಲ. ಈ ರಾಜ್ಯದ ಉತ್ತರದಲ್ಲಿ ಕಸ್‌ಕಸ್ ಜನರು ಈ ನಗರಕ್ಕೆ ಎರಡು ಬಾರಿ ಮುತ್ತಿಗೆ ಹಾಕಿದ್ದರಿಂದ ತಮ್ಮ ರಾಜಧಾನಿಯನ್ನು ಪದೇ ಪದೇ ಬದಲಾಯಿಸುತ್ತಿದ್ದರು. ಮುವತಲ್ಲಿ 11 ಕಾಲದಲ್ಲಿ ರಾಜಧಾನಿಯನ್ನು ದಕ್ಷಿಣದ ತರ್‌ಹುನ್ ತಸ್ಸು ಎಂಬಲ್ಲಿಗೆ ಬದಲಾಯಿಸಲಾಯಿತು. ಆದರೆ ಹತ್ತುಸ ನಗರಕ್ಕೆ ಹತ್ತುಸಲಿ 111ಯನ್ನು ರಾಜ ಪ್ರತಿನಿಧಿಯಾಗಿ ನೇಮಿಸಿದ. ಮುರ್ಸಿಲಿ 111 ಕಾಲದಿಂದ ಇವರ ವಂಶ ಪ್ರ.ಶ.ಪೂ.ಸು.1400-1190ರ ವರೆಗೂ ಹತ್ತುಸದಿಂದ ರಾಜ್ಯಭಾರ ಮಾಡಿತು.

ಈ ನಗರ ಸು.1.8 ಕಿಮೀ ವಿಸ್ತಾರವಾಗಿದ್ದು, ಎರಡು ಸುತ್ತಿನ ಕೋಟೆಯಿಂದ ಆವೃತ್ತವಾಗಿತ್ತು. ಈ ಕೋಟೆಯನ್ನು ಸುಪ್ಪಿಲುಲಿಯುಮ 1 (ಪ್ರ.ಶ.ಪೂ.ಸು.1375-1335) ಕಟ್ಟಿಸಿದ. ಇದು 0.8 ಕಿಮೀ ವಿಸ್ತಾರವಾಗಿತ್ತು. ಕೋಟೆಯೊಳಗೆ ದೊಡ್ಡ ದೊಡ್ಡ ಆಡಳಿತ ಕಛೇರಿ ಮತ್ತು ದೇವಾಲಯಗಳಿದ್ದುವು. ಇದರ ದಕ್ಷಿಣಕ್ಕೆ ಸು.1 ಕಿಮೀ ವಿಸ್ತಾರವಾದ ಇನ್ನೊಂದು ನಗರವಿದ್ದಿತು. ದೊಡ್ಡ ಸ್ಫಿಂಕ್ಸ್ (ಹೆಂಗಸಿನ ತಲೆ, ಸಿಂಹದ ದೇಹ, ರೆಕ್ಕೆಗಳು ಇದ್ದ ಒಂದು ಪ್ರಾಣಿ), ಸಿಂಹ, ಯೋಧರು ಮುಂತಾದ ದೊಡ್ಡ ಶಿಲ್ಪದಿಂದ ಅಲಂಕೃತವಾದ ಮಹಾದ್ವಾರ ಗಳಿದ್ದವು. ಇದರೊಳಗೆ ಇದ್ದ ನಾಲ್ಕು ದೇವಾಲಯಗಳಲ್ಲಿ ಒಂದನ್ನು ಬೃಹತ್ ದೇವಾಲಯ ವೆಂದು ಗುರುತಿಸಲಾಗಿದೆ. ಜೊತೆಗೆ ಸಾರ್ವಜನಿಕ ಕಟ್ಟಡಗಳು, ವಾಸದ ಮನೆಗಳು, ಕೋಟೆಯ ಹೊರಗೆ ಸ್ಮಶಾನಭೂಮಿಯಿದ್ದು ದಹನ ಸಂಸ್ಕಾರದ ಗುರುತುಗಳಿವೆ. ಉಚ್ಛ್ರಾಯ ಹಂತದಲ್ಲಿ ದ್ದಾಗ ಇಲ್ಲಿ ಸು.40 -50 ಸಾವಿರ ಜನಸಂಖ್ಯೆ ಇದ್ದಿರಬಹುದೆಂದು ಅಂದಾಜು ಮಾಡಲಾಗಿದೆ. ಸಾಮಾನ್ಯವಾಗಿ ವಾಸದ ಮನೆಗಳನ್ನು ಮಣ್ಣಿನ ಇಟ್ಟಿಗೆ ಮತ್ತು ಮರಗಳಿಂದ ಕಟ್ಟಲಾಗಿತ್ತು. ಅರಮನೆ ಮತ್ತು ದೇವಾಲಯಗಳನ್ನು ಕಲ್ಲಿನಿಂದ ನಿರ್ಮಿಸಿದ್ದರು.

ಕಂಚಿನ ಯುಗದ ಅವನತಿಯ ಕಾಲದಲ್ಲಿ (ಪ್ರ.ಶ.ಪೂ.ಸು.1200) ಈ ನಗರ ಹಾಳಾಗಿ ಹಿಟೈಟ್ ಸಾಮ್ರಾಜ್ಯ ಕೊನೆಗೊಂಡಿತು. ಪ್ರ.ಶ.ಪೂ.1ನೆಯ ಸಹಸ್ರಮಾನದ ಮಧ್ಯದವರೆಗೂ ಇಲ್ಲಿ ಜನವಸತಿಯಿರಲಿಲ್ಲ. ಅನಂತರ ಫ್ರಿಜಿಯನರು ಇಲ್ಲಿ ನೆಲೆಸಿದರು. ಇಲ್ಲಿ ಜನಜೀವನ ಹೆಲೆನಿಸ್ಟಿಕ್(ಪ್ರಶ.ಪೂ.3-1) ಯುಗದ ಕೊನೆಯವರೆಗೂ ಹೀಗೆ ಬೆಳೆದುಬಂದಿತು. ಗೆಲತಿಯನ್ ಎಂಬ ಕೆಲ್ಟಿಕ್ ಬುಡಕಟ್ಟಿನ ಆಕ್ರಮಣಕಾರರು ಇಲ್ಲಿ ನೆಲೆಸಿದರು. ಇಲ್ಲಿ ರೋಮನ್ ಮತ್ತು

ಕೋಟೆದ್ವಾರ

ಕ್ರೈಸ್ತರ ಕಾಲದ ಅವಶೇಷಗಳಿವೆ. ಮುಂದಕ್ಕೆ ಪ್ರ.ಶ. 18ನೆಯ ಶತಮಾನದಲ್ಲಿ ಬೊಗಸ್‌ಕೊಯಿ ಗ್ರಾಮ ಸ್ಥಾಪನೆಯವರೆಗೂ ಇಲ್ಲಿ ಜನವಸತಿ ಇರಲಿಲ್ಲ. ಈ ಪುರಾತತ್ತ್ವ ನೆಲೆಯನ್ನು ಮೊದಲು ನೋಡಿದವ ಫ್ರಾನ್ಸ್‌ನ ಚಾರ್ಸಲ್ ಟೆಕ್ಸಿಯರ್. ಈ ನೆಲೆಯಿಂದ 1.5 ಕಿಮೀ ದೂರದಲ್ಲಿ ಎಲಿಕಯ ಎಂದು ಕರೆಯಲಾಗುವ ಒಂದು ಶಿಲಾ ದೇವಾಲಯವನ್ನು ಮತ್ತು ನಗರದ ಅವಶೇಷಗಳನ್ನು ಪತ್ತೆಹಚ್ಚಿದ.

1893ರಲ್ಲಿ ಅರ್ನೆಸ್ಟ್ ಚಂತ್ರೆ ಆಗ ಬೊಗಜ್‌ಕೊಯ್ ಎಂದು ಕರೆಯಲಾದ ಈ ಗ್ರಾಮದಲ್ಲಿ ಉತ್ಖನನ ಮಾಡಿದ. 1906ರ ಅನಂತರ ಮತ್ತೆ ಉತ್ಖನನ ನಡೆಯಿತು. ಅನಂತರ ಜರ್ಮನ್ ಆರ್ಕಿಯಲಾಜಿಕಲ್ ಇನ್‌ಸ್ಟಿಟ್ಯೂಟ್‌ನವರು ಉತ್ಖನನ ಮುಂದುವರಿಸಿದರು. ಅತಿ ಸ್ವಾರಸ್ಯಕರವಾದ ಶೋಧನೆ ಎಂದರೆ ಅರಮನೆಯ ಪತ್ರಾಗಾರ. ಅದರಲ್ಲಿ ಬೆಣೆಯಾಕಾರದ ಬರೆವಣಿಗೆಯುಳ್ಳ ಮಣ್ಣಿನ ಮುದ್ರಿಕೆಗಳು, ಆಡಳಿತ ಪತ್ರಗಳು, ಕಾನೂನು, ಧಾರ್ಮಿಕ ಹಬ್ಬಗಳು ನಡೆಸುವ ರೀತಿ, ಭವಿಷ್ಯವಾಣಿ, ಸಾಹಿತ್ಯಕ್ಕೆ ಸಂಬಂಧಿಸಿದ ಅವಶೇಷಗಳಿದ್ದವು. ಇದರಲ್ಲಿ ಈಜಿಪ್ಟ್ ನಾಗರಿಕತೆಯ ರ್‍ಯಾಮ್ಸೆಸ್ II (ಪ್ರ.ಶ.ಪೂ.ಸು.1283) ಮತ್ತು ಹಿಟೈಟ್

ರಾಜರ ನಡುವೆ ಆದ ಒಪ್ಪಂದದ ಪ್ರತಿ ಅತಿ ಮಹತ್ತ್ವದ್ದು. ಪ್ರಪಂಚದ ಇತಿಹಾಸದಲ್ಲಿ ನಡೆದ ಅಂತಾರಾಷ್ಟ್ರೀಯ ಒಪ್ಪಂದಗಳಲ್ಲಿ ಇದೇ ಮೊದಲನೆಯದು. ಇದರ ಪ್ರತಿಯನ್ನು ಈಗ ನ್ಯೂಯಾರ್ಕ್‌ನ ವಿಶ್ವಸಂಸ್ಥೆಯ ಕಛೇರಿಯಲ್ಲಿ ಪ್ರದರ್ಶಿಸಲಾಗಿದೆ. ಇದುವರೆಗೆ ಸು.30,000 ಮಣ್ಣಿನ ಮುದ್ರಿಕೆಗಳನ್ನು ಸಂಗ್ರಹಿಸಲಾಗಿದೆ. ಹೆಚ್ಚಿನ ಮುದ್ರಿಕೆಗಳು ಸಾಹಿತ್ಯಕ್ಕೆ ಸಂಬಂಧಿಸಿದವು.

ಈ ಮಹತ್ತ್ವದ ನೆಲೆಯನ್ನು ವಿಶ್ವಸಂಸ್ಥೆ 1986 ರಲ್ಲಿ ವಿಶ್ವ ಪರಂಪರೆಯ ಸ್ಮಾರಕವೆಂದು ಘೋಷಿಸಿದೆ. (ಎ.ಎಸ್.;ಎನ್.ಎಲ್.)

**ಹತ್ನೋರ:** ಮಧ್ಯಪ್ರದೇಶ ರಾಜ್ಯದ ಹೊಷಂಗಾಬಾದ್ ಜಿಲ್ಲೆಯಲ್ಲಿ ನರ್ಮದ ನದಿಯ ದಂಡೆಯ ಮೇಲಿರುವ ಹಿಮಯುಗದ ಮಾನವನ ಅಸ್ಥಿಪಳೆಯುಳಿಕೆಯ ನೆಲೆ. 1982 ಡಿಸೆಂಬರ್ 5 ರಂದು ಭಾರತೀಯ ಭೂವಿಜ್ಞಾನ ಸರ್ವೇಕ್ಷಣ ಇಲಾಖೆಯ ಅರುಣ್ ಸೊನಾಕಿಯ ಅವರು ಇಲ್ಲಿ ನರ್ಮದ ನದಿಯ ಸ್ತರದಲ್ಲಿ ತಲೆಬುರುಡೆಯ ಪಳೆಯುಳಿಕೆಯನ್ನು ಶೋಧಿಸುವ ಮೂಲಕ ಭಾರತದಲ್ಲಿ ಆದಿಮಾನವನ ಪಳೆಯುಳಿಕೆಗಳು ದೊರೆಯುವ ಸಾಧ್ಯತೆಯನ್ನು ಋಜುತ ಪಡಿಸಿದರು. ಇಂಥ ಪಳೆಯುಳಿಕೆಗಳು ಭಾರತದಲ್ಲಿ ಈ ಮುಂಚೆ ದೊರಕದಿದ್ದುದು ಪ್ರಾಗ್ಜೀವಶಾಸ್ತ್ರ ಕ್ಷೇತ್ರದಲ್ಲಿ ಒಂದು ಕೌತುಕವನ್ನೇ ಸೃಷ್ಟಿಸಿತ್ತು. ಈ ಬುರುಡೆ ಸು.6–7 ಲಕ್ಷವರ್ಷ ಹಿಂದೆ ಜೀವಿಸಿದ್ದ 30ರ ವಯಸ್ಸಿನ ಹೋಮೋ ಎರೆಕ್ಟಸ್

ತಲೆಬುರುಡೆಯ ಪಳೆಯುಳಿಕೆ

ಮಾನವನದೆಂಬುದು ಇವರ ಅಭಿಪ್ರಾಯ. ಇದರೊಂದಿಗೆ ನಶಿಸಿದ ಸ್ತನಿ ಪ್ರಾಣಿಗಳ ಪಳೆಯುಳಿಕೆಗಳೂ ಮಚ್ಚುಗತ್ತಿ, ಕೈಗೊಡಲಿ, ಸೀಳುಗತ್ತಿ, ಹೆರೆಚಕ್ಕೆ ಮುಂತಾದ ಆದಿ ಹಳೆಶಿಲಾ ಯುಗದ ಉಪಕರಣಗಳೂ ದೊರೆತಿವೆ. 1983 ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಎ.ಕೆ.ಶರ್ಮ ಅವರು ರೇಖಾಚಿತ್ರದ ಮೂಲಕ ಈ ಪಾರ್ಶ್ವ ಬುರುಡೆಯನ್ನು ಪುನಾರಚಿಸಿ ದರು. ಹಿಂಚಾಚಿದ ಹಣೆ, ಉಬ್ಬಿದ ಹುಬ್ಬು, ದಪ್ಪ ಎಲುಬು ಮುಂತಾದ ಲಕ್ಷಣಗಳನ್ನೊಳಗೊಂಡ ಈ ಮಾನವ ಹೋಮೋ ಎರೆಕ್ಟಸ್ ವರ್ಗಕ್ಕೆ ಸೇರಿದ ಜಾವ ಮಾನವನನ್ನು ಹೋಲುವನೆಂದೂ ಇವನ ಕಾಲಮಾನ ಸು.2.5–3 ಲಕ್ಷವರ್ಷವೆಂದೂ ಇವರು ತಿಳಿಸಿದ್ದಾರೆ. ಇದು ಆದಿಮಾನವನ ತಲೆಬುರುಡೆ ಎಂಬುದು ನಿಶ್ಚಿತವಾಗಿದ್ದರೂ ಮಾನವ ವಿಕಸನ ವೃಕ್ಷದಲ್ಲಿ ಇವನ ಸ್ಥಾನಮಾನದ ಬಗೆಗೆ ಸಂಶಯವಿದೆ. ಜಿ.ಎಲ್. ಬಾದಾಮ್, ಕೆನೆತ್ ಕೆನಡಿ ಮೊದಲಾದವರ ಪ್ರಕಾರ ಈ ಬುರುಡೆ ಹೋಮೋ ಎರೆಕ್ಟಸ್‌ಗಿಂತ ಹೆಚ್ಚಾಗಿ ಇದರ ಮುಂದಿನ ಹಂತವಾದ ಹೋಮೋ ಸೇಪಿಯನ್ಸ್ (ಆಧುನಿಕ ಮಾನವ) ಲಕ್ಷಣಗಳನ್ನು ಹೊಂದಿದೆ. 1990ರ ದಶಕದಲ್ಲಿ ಬುರುಡೆ ದೊರೆತ ಸ್ಥಳದ ಸಮೀಪದಲ್ಲಿ ಪಕ್ಕೆಲುಬು ಹಾಗೂ ಕೊರಳೆಲುಬುಗಳ ಪಳೆಯುಳಿಕೆಯನ್ನು ಭಾರತೀಯ ಮಾನವಶಾಸ್ತ್ರ ಸರ್ವೇಕ್ಷಣ ಇಲಾಖೆ ಶೋಧಿಸಿತು. 25–35 ವರ್ಷ ವಯಸ್ಸಿನ ಗಿಡ್ಡಆಕೃತಿಯ ಮಹಿಳೆಯದಾದ ಈ ಮೂಳೆಗಳು 2–5 ಲಕ್ಷವರ್ಷ ಹಳೆಯವೆಂದು ಇವುಗಳ ಅಧ್ಯಯನ ನಡೆಸಿದ ಎ.ಆರ್. ಸಾಂಖ್ಯನ್ ಅಂದಾಜುಮಾಡಿದ್ದಾರೆ. ಇವಳು ವಿಕಸನದ ಯಾವ ಹಂತಕ್ಕೆ ಸೇರಿದವಳೆಂಬುದು ಒಂದು ರಹಸ್ಯವಾಗಿದೆ. (ಎ.ಎಸ್.;ಎನ್.ಎಲ್.)

**ಹಮುರಬಿ:** ಪ್ರಶ.ಪೂ.ಸು.1792–50. ಬ್ಯಾಬಿಲೋನಿಯದ ಪ್ರಸಿದ್ಧ ದೊರೆ. ಪ್ರಪಂಚದ ಮೊದಲ ಕಾನೂನು ತಜ್ಞ, ಅಮೋರಿಟ ವಂಶದವನು. ಇವನು ತನ್ನ ಆಳಿಕೆಯಲ್ಲಿ ಮೆಸಪೊಟೇಮಿಯ ಸಾಮ್ರಾಜ್ಯಕ್ಕೆ ಏಕ ಚಕ್ರಾಧಿಪತ್ಯ ಒದಗಿಸಿದ. ದಕ್ಷ ಆಡಳಿತಗಾರ, ರಾಜನೀತಿಜ್ಞನಾದ ಈತ ತನ್ನ ಸಾಮ್ರಾಜ್ಯವನ್ನು ಪರ್ಷಿಯದ ಕೊಲ್ಲಿವರೆಗೂ ವಿಸ್ತರಿಸಿದ. ಸುಮೇರಿಯ ಮತ್ತು ಅಕ್ಕಾಡಿಯ ರಾಜ್ಯಗಳನ್ನು ವಶಪಡಿಸಿಕೊಂಡ. ದಕ್ಷ ಸೇನೆ ಮತ್ತು ಅಧಿಕಾರ ಬಲದಿಂದ ಕೇಂದ್ರೀಕೃತ ಪ್ರಭುತ್ವ ಸ್ಥಾಪಿಸಿದ. ಸಂಯುಕ್ತ ಬ್ಯಾಬಿಲೋನಿಯ ರಾಜ್ಯಗಳನ್ನು ನಿರ್ಮಿಸಿ, ಹಲವು ಪ್ರಾಂತಗಳಾಗಿ ವಿಂಗಡಿಸಿ ಅವುಗಳನ್ನು ರಾಜ್ಯಪಾಲರಿಗೆ ವಹಿಸಿದ. ಇವನು ಕೃಷಿ, ನೇಯ್ಗೆ ಮತ್ತು ಪಶುಪಾಲನೆಗಳನ್ನು ಪ್ರೋತ್ಸಾಹಿಸಿದ. ಬ್ಯಾಬಿಲಾನ್ ನಗರವನ್ನು ಸುಂದರಗೊಳಿಸಿದ. ಇವೆಲ್ಲಕ್ಕಿಂತ ಮಿಗಿಲಾಗಿ ಇವನು ಜಾರಿಗೆ ತಂದ ಕಾನೂನುಗಳಿಂದ ಈತ ಇತಿಹಾಸದಲ್ಲಿ ಹೆಸರಾಗಿದ್ದಾನೆ. ಇವನು ಜಾರಿಗೆ ತಂದ ಕಾನೂನುಗಳನ್ನು ಹಮುರಬಿ ಕೋಡ್ ಎಂದು ಕರೆಯಲಾಗಿದೆ. ಇವುಗಳನ್ನು ಹಿಂದಿನ ಸುಮೇರಿಯನ್, ಅಕ್ಕಾಡಿಯನ್ನರ ಕಾನೂನುಗಳಿಂದ ಪಡೆದು, ಅವನ್ನು ಮತ್ತಷ್ಟು ಸುಧಾರಿಸಿ ತನ್ನದೇ ಆದ ಕಾನೂನುಗಳನ್ನು ಜಾರಿಗೊಳಿಸಿದ. ಇವನ್ನು ಸೂರ್ಯದೇವ ಷಮಾಷ್‌ನಿಂದ ಪಡೆದವುಗಳೆಂದೂ ಇವುಗಳ ಸಂಖ್ಯೆ 285ರಷ್ಟು ಇತ್ತೆಂದೂ ಪ್ರತೀತಿ. ಈ ಕಾನೂನುಗಳನ್ನು 2.40ಮೀ ಶಿಲೆಯ ಮೇಲೆ ಕೆತ್ತಿಸಿ ಬ್ಯಾಬಿಲಾನಿನ ಮಾರ್ಡುಕ್ ದೇವಾಲಯದ ಮುಂದೆ ನಿಲ್ಲಿಸಿದ.

ಹಮುರಬಿ ಶಾಸನ

ಈ ಕಾನೂನುಗಳು ವಿವಾಹ, ಆಸ್ತಿ, ಹಣಕಾಸು, ದರೋಡೆ, ಶ್ರಮ, ಬ್ಯಾಂಕ್ ವ್ಯವಹಾರ, ಅಪರಾಧ, ಕೊಲೆ ಮತ್ತು ಸಾರ್ವಜನಿಕ ನೀತಿಗಳಿಗೆ ಸಂಬಂಧಿಸಿದವು. ಇವು ಸರಳವೂ ನ್ಯಾಯಯುತವೂ ಆಗಿದ್ದುವು. ಸ್ತ್ರೀಯರಿಗೆ, ಕಾರ್ಮಿಕರಿಗೆ, ಅನಾಥರಿಗೆ ಮತ್ತು ಬಡವರಿಗೆ ನ್ಯಾಯ ದೊರಕಿಸಿಕೊಟ್ಟಿದ್ದುವು. ಮುಯ್ಯಿಗೆ ಮುಯ್ಯಿ ಅಥವಾ ಸೇಡಿಗೆ ಪ್ರತಿಸೇಡು ಇಂಥ ತತ್ತ್ವದ ಆಧಾರದ ಮೇಲೆ ರೂಪಿತವಾಗಿದ್ದುವು. ಉದಾಹರಣೆಗೆ ವೈದ್ಯನೊಬ್ಬ ಶಸ್ತ್ರ ಚಿಕಿತ್ಸೆಯಲ್ಲಿ ವಿಫಲನಾದರೆ ಅವನ ಕೈಗಳನ್ನು ಕತ್ತರಿಸುವುದು, ದಾದಿಯ ಅಲಕ್ಷ್ಯದಿಂದ ಮಗು ಸತ್ತರೆ ಅವಳ ಮಗುವನ್ನು ಸಾಯಿಸುವುದು, ಕಣ್ಣಿಗೆ ಕಣ್ಣು, ರಕ್ತಕ್ಕೆ ರಕ್ತ ಇತ್ಯಾದಿ. ಈ ಕಾಯಿದೆಗಳು ಕೊಲೆ ಪಾತಕಿಗಳಿಗೆ, ಭ್ರಷ್ಟ ಅಧಿಕಾರಿಗಳಿಗೆ, ದುರ್ನಡತೆಯ ಪೂಜಾರಿಗಳಿಗೆ, ಅಳತೆಮೀರಿ ಖರ್ಚು ಮಾಡುವ ಹೆಂಡತಿಯರಿಗೆ, ಬೇಜವಾಬ್ದಾರಿ ವೈದ್ಯರಿಗೆ ಮರಣ ದಂಡನೆ ವಿಧಿಸಬೇಕೆಂದು ಹೇಳುತ್ತವೆ. ಶಿಕ್ಷೆಗಳನ್ನು ದಂಡದ ರೂಪದಲ್ಲೂ ವಿಧಿಸಲಾಗುತ್ತಿತ್ತು. ಗಂಡ, ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳದಿದ್ದಲ್ಲಿ ಹೆಂಡತಿ ವಿವಾಹ ವಿಚ್ಛೇದನ ಪಡೆದು ಲಗ್ನದ ವೇಳೆ ಕೊಟ್ಟ ವರದಕ್ಷಿಣೆಯನ್ನು ಮರಳಿ ಪಡೆಯಬಹುದಿತ್ತು. ಇದೇ ರೀತಿ ಗಂಡನ ಸೇವೆ ಮಾಡದ ಹೆಂಡತಿಯನ್ನು ಬಾವಿಗೆ ತಳ್ಳುವ ಹಕ್ಕು ಗಂಡನಿಗಿತ್ತು. ಹಮುರಬಿಯ ಕಾನೂನುಗಳನ್ನು ಆಧುನಿಕ ಕಾನೂನು ವ್ಯವಸ್ಥೆಯ ಹಿನ್ನೆಲೆಯಲ್ಲಿ ಬರ್ಬರ ಕಾನೂನುಗಳೆಂದು ಕರೆಯುವುದಿದೆ. *

**ಹಯವದನರಾವ್, ಸಿ. :** 1865–1946. ಪ್ರಸಿದ್ಧ ವಿದ್ವಾಂಸರು. ಆಂಧ್ರಪ್ರದೇಶ ರಾಜ್ಯದ ಕೃಷ್ಣಗಿರಿ ತಾಲ್ಲೂಕಿನ ಹೊಸೂರಿನಲ್ಲಿ 1865 ಜುಲೈ 10ರಂದು ಜನಿಸಿದರು. ಇವರ ತಂದೆ ರಾಜಾರಾವ್. ಹಯವದನರಾಯರು ಹೊಸೂರಿನಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸವನ್ನೂ ಮದರಾಸಿನ ಹಿಂದು ಹೈಸ್ಕೂಲಿನಲ್ಲಿ ಪ್ರೌಢಶಾಲಾಭ್ಯಾಸವನ್ನೂ ಮುಗಿಸಿದರು. ಅನಂತರ ಮದರಾಸಿನ ಪ್ರೆಸಿಡೆನ್ಸಿ ಕಾಲೇಜು ಮತ್ತು ಕ್ರಿಶ್ಚಿಯನ್ ಕಾಲೇಜುಗಳಲ್ಲಿ ಅಭ್ಯಾಸ ಮಾಡಿ ಬಿ.ಎ. ಮತ್ತು ಬಿ.ಎಲ್. ಪದವಿ ಪಡೆದರು. ವಿದ್ಯಾರ್ಥಿ ದೆಸೆಯಲ್ಲಿಯೇ ಇವರು ಪತ್ರಿಕೋದ್ಯಮದಲ್ಲಿ ಆಸಕ್ತಿ ತಳೆದಿದ್ದರು. ಸ್ವಲ್ಪಕಾಲ ಮದರಾಸಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಕ್ಯೂರೇಟರ್ ಆಗಿ ಕೆಲಸ ಮಾಡಿದರು. ಅದನ್ನು ಬಿಟ್ಟು ಮದರಾಸ್ ಟೈಮ್ಸ್ ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡರು. ಅನಂತರ ಅಲಹಾಬಾದಿಗೆ ತೆರಳಿ ದಿ ಲೀಡರ್ ಎಂಬ ಪತ್ರಿಕೆಯ ಸಂಪಾದಕರಾಗಿ ಸಾಕಷ್ಟು ಪ್ರಸಿದ್ಧಿಪಡೆದರು. ಇವರ ಖ್ಯಾತಿಯನ್ನು ಗಮನಿಸಿದ ಎಂ.ವಿಶ್ವೇಶ್ವರಯ್ಯನವರು ಇವರನ್ನು ಮೈಸೂರಿಗೆ ಆಹ್ವಾನಿಸಿ ದಿ ಮೈಸೂರ್ ಎಕನಾಮಿಕ್ ಜರ್ನಲ್ ಪತ್ರಿಕೆಯ ಸಂಪಾದಕರಾಗಿ ನೇಮಿಸಿದರು. ಇವರು ತಮ್ಮ ಜೀವಿತದ ಕೊನೆಯವರೆಗೂ ಈ ಪತ್ರಿಕೆಯೊಡನೆ ಸಂಪರ್ಕವಿಟ್ಟುಕೊಂಡಿದ್ದರು.

ಬೆಂಗಳೂರು ಪ್ರೆಸ್‌ನ ಸ್ಥಾಪನೆಗೂ ಇವರೇ ಮುಖ್ಯ ಕಾರಣಕರ್ತರು. ಅದರ ಕಾರ್ಯದರ್ಶಿ ಮತ್ತು ನಿರ್ದೇಶಕರಾಗಿ ದುಡಿದು ಆ ಮುದ್ರಣಾಲಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಬೆಂಗಳೂರಿನ ಪುರಸಭೆಯಲ್ಲಿ ಬಹುಕಾಲ ಚುನಾಯಿತ ಪ್ರತಿನಿಧಿಯಾಗಿದ್ದ ಇವರು ಈಗಿನ ಗವಿಪುರ ಗುಟ್ಟಹಳ್ಳಿ ಬಡಾವಣೆಯ ನಿರ್ಮಿತಿಗೆ ಕಾರಣರಾದರು. ಇವರು ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು (1934–40). ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್ ಸದಸ್ಯರಾಗಿದ್ದರು. ಶ್ರೀ ಕೃಷ್ಣರಾಜ ಸಿಲ್ವರ್ ಜ್ಯೂಬಿಲಿ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್‌ನ ಸ್ಥಾಪನೆಯಲ್ಲಿಯೂ ಇವರ ಪಾತ್ರವಿತ್ತು. ಕೆಲಕಾಲ ಇವರು ಆಮ್ಯೊಬ್ಯಾಟರೀಸ್ ಸಂಸ್ಥೆಯ ಸ್ಥಾಪಕ–ನಿರ್ದೇಶಕರಾಗಿ ದ್ದರು. ಬೆಂಗಳೂರಿನ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿ ಕೆಲಸಮಾಡಿದರು. ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್‌ನ ಸದಸ್ಯರಾಗಿಯೂ ಅದರ ವ್ಯಾವಹಾರಿಕ ಸದಸ್ಯರಾಗಿಯೂ ಕೆಲಸ ಮಾಡಿದರು. ಇಂಡಿಯನ್ ಪಿ.ಇ.ಎನ್. ಸದಸ್ಯರಾಗಿಯೂ ಗ್ರೇಟ್ ಬ್ರಿಟನ್ನಿನ ರಾಯಲ್ ಆಂಥ್ರೊಪೊಲಾಜಿಕಲ್ ಇನ್‌ಸ್ಟಿಟ್ಯೂಟಿನ ಸದಸ್ಯರಾಗಿಯೂ ರಾಯಲ್ ಸೊಸೈಟಿ ಆಫ್ ಎಕನಾಮಿಕ್ಸ್‌ನ ಫೆಲೊ ಆಗಿಯೂ ಆಯ್ಕೆಯಾಗಿದ್ದರು.

ಇವರು ಬಹುಭಾಷಾ ಜ್ಞಾನವುಳ್ಳ ವಿದ್ವಾಂಸರಾಗಿದ್ದರು. ಇಂಗ್ಲಿಷ್, ಲ್ಯಾಟಿನ್, ಫ್ರೆಂಚ್, ಜರ್ಮನ್, ಸಂಸ್ಕೃತ, ಕನ್ನಡ, ತೆಲುಗು, ಮರಾಠಿ, ತಮಿಳು ಭಾಷೆಗಳಲ್ಲಿ ಇವರಿಗೆ ಅಪಾರ ಪರಿಶ್ರಮವಿತ್ತು. ಇವರು ಅನೇಕ ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೆಲುಗು ಭಾಷೆಯ ಪರೀಕ್ಷಕರಾಗಿದ್ದರು.

ಕರ್ನಾಟಕ ಇತಿಹಾಸ ರಚನೆಯಲ್ಲಿ ಇವರದು ದೊಡ್ಡ ಹೆಸರು. ಆಗಿನ ಮೈಸೂರು ಪ್ರಾಂತದ ಇತಿಹಾಸ ರಚನೆಗೆ ಇವರೇ ನಾಂದಿ ಹಾಡಿದವರು. ಇವರು ಸಂಪಾದಿಸಿರುವ ಮೈಸೂರು ಗೆಜೆಟಿಯರ್ಸ್ ಹೆಬ್ಹೊತ್ತಿಗೆಗಳು ಇತಿಹಾಸ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಪ್ರಮಾಣ ಗ್ರಂಥಗಳಾಗಿವೆ. ಲೂಯಿ ರೈಸ್ ಅವರು ರಚಿಸಿದ ಗೆಜೆಟಿಯರ್ ಅನ್ನು ನವೀಕರಿಸಲು ಮೈಸೂರು ಸರ್ಕಾರ 1924ರಲ್ಲಿ ಇವರನ್ನು ಸಂಪಾದಕರನ್ನಾಗಿ ನಿಯಮಿಸಿತು. ಇವರು ಈ ಕೆಲಸವನ್ನು ಸಮರ್ಪಕವಾಗಿ ಮಾಡಿ ಏಳು ಸಂಪುಟಗಳಲ್ಲಿ ಮೈಸೂರು ಗೆಜೆಟಿಯರ್ ಮಾಲೆಯನ್ನು ಪ್ರಕಟಿಸಿದರು. ಇತಿಹಾಸ, ನಾಣ್ಯಶಾಸ್ತ್ರ, ಶಾಸನಶಾಸ್ತ್ರ, ವಾಸ್ತುಶಿಲ್ಪ ಮುಂತಾದ ವಿಷಯಗಳಲ್ಲಿ ಇಂದಿಗೂ ಈ ಸಂಪುಟಗಳು ಕರ್ನಾಟಕ ಇತಿಹಾಸದ ಅಭ್ಯಾಸಿಗಳಿಗೆ ಅಮೂಲ್ಯ ಆಕರಗಳಾಗಿವೆ. ಇವರು ರಚಿಸಿದ ಇನ್ನೊಂದು ಗ್ರಂಥ ಮೂರು ಸಂಪುಟಗಳ ಹಿಸ್ಟರಿ ಆಫ್ ಮೈಸೂರ್ (1399–1799). ಮೈಸೂರು ಒಡೆಯರ ರಾಜವಂಶಕ್ಕೆ ಸಂಬಂಧಿಸಿದ ಈ ಕೃತಿ 2,840 ಪುಟಗಳನ್ನೊಳಗೊಂಡಿದೆ. ಶ್ರೀಪತಿ ಪಂಡಿತಾಚಾರ್ಯರು ರಚಿಸಿದ ಶ್ರೀಕರಭಾಷ್ಯಕ್ಕೆ ಬರೆದ ದೀರ್ಘವ್ಯಾಖ್ಯಾನ (ಸು. 885 ಪುಟ) ಇವರ ಮತ್ತೊಂದು ಕೃತಿ. ಈ ಗ್ರಂಥಗಳಲ್ಲದೆ ಇವರು ಅನೇಕ ಪ್ರೌಢಲೇಖನಗಳನ್ನೂ ಬರೆದಿದ್ದಾರೆ.

ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ದೊರಕಿವೆ. ಬ್ರಿಟಿಷ್ ಸರ್ಕಾರ 1911ರಲ್ಲಿ ರಾವ್ ಸಾಹೇಬ್ ಎಂಬ ಬಿರುದನ್ನು ನೀಡಿ ಗೌರವಿಸಿತು. ಲಾರ್ಡ್ ಲಿನ್‌ಲಿತ್‌ಗೊ ಇವರಿಗೆ ರಾವ್‌ಬಹದ್ದೂರ್ ಎಂಬ ಬಿರುದನ್ನು ನೀಡಿ ಗೌರವಿಸಿದ. ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ ರಾಜಚರಿತವಿಶಾರದ ಎಂಬ ಬಿರುದನ್ನು ನೀಡಿ ಗೌರವಿಸಿದರು. ಇವರು 1946ರಲ್ಲಿ ನಿಧನಹೊಂದಿದರು. (ಎ.ವಿ.ಎನ್.)

**ಹರಪ್ಪ:** ಸಿಂಧೂ–ಸರಸ್ವತಿ ನಾಗರಿಕತೆಯ ಪ್ರಮುಖ ನೆಲೆ. ಈಗ ಇದು ಪಾಕಿಸ್ತಾನದ ಪಂಜಾಬಿನ ಮಾಂಟೆಗೊಮರಿ ಜಿಲ್ಲಾ ಕೇಂದ್ರದಿಂದ ವಾಯವ್ಯಕ್ಕೆ ಸು.25 ಕಿಮೀ ಹಾಗೂ ಲಾಹೋರ್‌ನಿಂದ 187ಕಿಮೀ ದೂರದಲ್ಲಿ ರಾವಿನದಿ ಎಡದಂಡೆಯ ಮೇಲಿದೆ. ಈ ನೆಲೆಯಲ್ಲಿ ಮೊದಲು ಈ ನಾಗರಿಕತೆಯನ್ನು ಗುರುತಿಸಿದುದರಿಂದ ಇದನ್ನು ಹರಪ್ಪ ಸಂಸ್ಕೃತಿ ಎಂದು ಕರೆಯಲಾಗುತ್ತದೆ. 1826ರಲ್ಲಿ ಅಮೆರಿಕದ ಎಂಜಿನಿಯರ್ ಚಾರ್ಲ್ಸ್ ಮಾಸನ್ ಈ ನೆಲೆಯಲ್ಲಿ ಎರಡು ದಿಬ್ಬ ಇರುವುದಾಗಿ ವರದಿ ಮಾಡಿದ್ದ. 1862ರಲ್ಲಿ ಪ್ರಾಚ್ಯವಸ್ತು ಸಂಶೋಧನಾಧಿಕಾರಿ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಪ್ರಾಥಮಿಕ ಶೋಧನೆ ಕೈಗೊಂಡು ಕೆಲವು ಮುದ್ರಿಕೆ ಹಾಗೂ ಚಿತ್ರಲಿಪಿ ಪತ್ತೆಹಚ್ಚಿ 1875ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಪತ್ರಿಕೆಯಲ್ಲಿ ವರದಿ ಮಾಡಿದ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕ ಸರ್ ಜಾನ್ ಮಾರ್ಷಲ್‌ನ ನಿರ್ದೇಶನದಲ್ಲಿ ಇವನ ಸಹೋದ್ಯೋಗಿ ದಯಾರಾಮ್ ಸಾಹ್ನಿ ಇದನ್ನು ಮೊದಲು ಉತ್ಖನನ ಮಾಡಿದರು (1921). ಅನಂತರ ಜಾನ್ ಮಾರ್ಷಲ್ 1924 ಸೆಪ್ಟಂಬರ್ 20 ರಂದು ಉತ್ಖನನದಲ್ಲಿ ಕಂಡುಬಂದ ವಿಶಿಷ್ಟ



**ಉತ್ಖನನದಲ್ಲಿ ಕಂಡುಬಂದ ಕಟ್ಟಡಾವಶೇಷ**

ನಾಗರಿಕತೆಯ ಸ್ಥೂಲ ಚಿತ್ರವನ್ನು ಇಲಸ್ಟ್ರೇಟೆಡ್ ಲಂಡನ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಿಸಿ ಜಾಹಿರುಗೊಳಿಸಿದ. ಇಲ್ಲಿ ವಿವಿಧ ಕಟ್ಟಡಗಳು, ಉಗ್ರಾಣ, ಸಮಾಧಿಗಳು, ಮುದ್ರೆಗಳು, ವೈವಿಧ್ಯಮಯ ನಾಗರಿಕ ಜೀವನದ ಇತರ ವಸ್ತುಗಳು ದೊರೆತಿವೆ. ಇಲ್ಲಿಯ ದಕ್ಷಿಣ ದಿಬ್ಬ ಚಿಕ್ಕದಿದ್ದು ಉತ್ತರ–ದಕ್ಷಿಣವಾಗಿ 450 ಮೀ, ಪೂರ್ವ ಪಶ್ಚಿಮವಾಗಿ 196 ಮೀ ಉದ್ದದ ಕೋಟೆಗೋಡೆ ನಾಶವಾಗಿದೆ. ಇದರಲ್ಲಿ ಪ್ರವೇಶದ್ವಾರ, ಪಹರೆ ಕೋಣೆ, ಕಾವಲುಗಾರರ ವಸತಿಗಳಿವೆ. ಇಲ್ಲಿಯ ಕಟ್ಟಡಗಳನ್ನು ಸುಟ್ಟ ದಪ್ಪ ಇಟ್ಟಿಗೆಯಿಂದ 6 ಬಾರಿ ನಿರ್ಮಿಸಲಾಗಿದೆ. ಚರಂಡಿ ವ್ಯವಸ್ಥೆ, ಎರಡು ಅಥವಾ ಹೆಚ್ಚು ಅಂತಸ್ತುಳ್ಳ ಮನೆ, ಮೆಟ್ಟಿಲು ವ್ಯವಸ್ಥೆಗಳಿವೆ. ಕೋಟೆಯ ಹೊರಗೆ ಕೂಲಿಮನೆಗಳು ಮತ್ತು 275ಚ.ಮೀ ವಿಸ್ತೀರ್ಣದ ಆದರೆ ಮೊಹೆಂಜೋದಾರೋದಲ್ಲಿ ಉಗ್ರಾಣ ಕೋಟೆಯ ಒಳಗಿದೆ. ಉಗ್ರಾಣದಲ್ಲಿ 15.24×6.10 ಮೀ ಅಳತೆಯ ಒಂದೊಂದು ಸಾಲಿನಲ್ಲಿ 6ರಂತೆ 2 ಸಾಲುಗಳ 12 ಉಗ್ರಾಣಗಳಿವೆ. ಈ ಉಗ್ರಾಣಗಳ ಮಧ್ಯದ ದಾರಿ 7.01ಮೀ ಇದ್ದು, ಸುಟ್ಟ ಇಟ್ಟಿಗೆ ಹಾಗೂ ಮಣ್ಣಿನಿಂದ ದಮ್ಮಸು ಮಾಡಿದ 1.22 ಮೀ ಎತ್ತರದ ವೇದಿಕೆಯ ಮೇಲೆ ನಿಂತಿದೆ. ಉಗ್ರಾಣಕ್ಕೆ ನದಿಯ ಉತ್ತರದ ಕಡೆ ಪ್ರವೇಶದ್ವಾರವಿದ್ದು ಧಾನ್ಯ ಸಾಗಿಸಲು ದೋಣಿಗಳನ್ನು ಬಳಸಿದಂತಿದೆ.

**ಗೀರುರೇಖೆಗಳುಳ್ಳ ಮಣ್ಪಾತ್ರೆಗಳು**

ಕಾರ್ಮಿಕರ ಮನೆಗಳು ಬಿಡಿ ಬಿಡಿಯಾಗಿ ಎರಡು ಸಾಲುಗಳಲ್ಲಿದ್ದು ಪ್ರತಿ ಮನೆಯೂ 18×8ಮೀ ಇದೆ. ಮನೆಗಳನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಪ್ರತ್ಯೇಕವಾದ 2 ಕೋಣೆಗಳು ಹಾಗೂ ವಿಶಾಲವಾದ ಅಂಗಳಗಳಿವೆ. ಈ ಮನೆಗಳ ಪಕ್ಕದಲ್ಲಿಯೇ ಕಣಜವಿದ್ದು ಧಾನ್ಯಗಳ ಹೊಟ್ಟನ್ನು ತೆಗೆಯಲು ಬಳಸುತ್ತಿದ್ದ ವೃತ್ತಾಕಾರ ಕಣಗಳು ಕಂಡುಬಂದಿವೆ. 16 ಕುಲುಮೆಗಳು ದೊರೆತಿದ್ದು, ಕಂಚು ಮತ್ತಿತರ ಲೋಹಗಳನ್ನು ಸಿದ್ಧವಸ್ತುಗಳಾಗಿ ಇಲ್ಲಿಯ ಜನರು ತಯಾರಿಸುತ್ತಿದ್ದರು. ಇಲ್ಲಿ ಮಡಕೆ, ಚರ್ಟ್ ಕಲ್ಲು, ತಾಮ್ರ ಮತ್ತು ಕಂಚಿನ ಸಲಕರಣೆ, ಸುಡಾವೆ ಮಣ್ಣಿನ ಗೊಂಬೆಗಳು ಮತ್ತು ಮುದ್ರೆಗಳು ದೊರಕಿದ್ದು, ಇವು ಸಿಂಧೂ–ಸರಸ್ವತಿ ನಾಗರಿಕತೆಯ ವೈಶಿಷ್ಟ್ಯಗಳಾಗಿವೆ. ಇಲ್ಲಿ 891 ಮುದ್ರೆಗಳು ದೊರೆತಿವೆ. ಯಕ್ಷ, ನಗ್ನ ಪುರುಷನ ಕೆಂಪು ಕಲ್ಲಿನ ವಿಗ್ರಹ, ನೃತ್ಯಭಂಗಿಯಲ್ಲಿರುವ ಚಿತ್ರ, ಹಲವಾರು ಪ್ರಾಣಿಗಳಿಂದ ಸುತ್ತುವರೆಯಲ್ಪಟ್ಟ ಕುಳಿತ ಯೋಗಿಯ ಮುದ್ರಾ ಶಿಲ್ಪಗಳು ದೊರೆತಿವೆ.

ಹರಪ್ಪ ಕೋಟೆಗೋಡೆಯ ಪ್ರದೇಶದಲ್ಲಿ ವಿವಿಧ ರೀತಿಯ 67 ಸಮಾಧಿಗಳನ್ನು ಮಾರ್ಟಿಮರ್ ವೀಲರ್ ಪತ್ತೆ ಹಚ್ಚಿದ. ಶವವನ್ನು ಉತ್ತರಕ್ಕೆ ತಲೆಮಾಡಿ ಸಮಾಧಿಯಲ್ಲಿಟ್ಟು ವ್ಯಕ್ತಿಯ ಅವಶ್ಯ ವಸ್ತುಗಳನ್ನು ಜೊತೆಯಲ್ಲಿ ಮಡಕೆಯಲ್ಲಿಟ್ಟು ಹೂಳುತ್ತಿದ್ದರು. ಸಮಾಧಿ ಗುಂಡಿಯನ್ನು 15ರಿಂದ 120 ಮಡಕೆಗಳನ್ನಿಡುವಷ್ಟು ವಿಶಾಲವಾಗಿ ಇಟ್ಟಿಗೆಯಿಂದ ಕಟ್ಟುತ್ತಿದ್ದರು. ಅಲ್ಲದೆ 12 ಸಮಾಧಿಗಳಲ್ಲಿ ಕಂಚಿನ ಕನ್ನಡಿಗಳು ದೊರೆತಿವೆ. ಇಲ್ಲಿ ಸ್ಫಟಿಕಾಕೃತಿಯ ಮೂಲ ಲೋಹದ ಕಡ್ಡಿ, ಮುತ್ತಿನ ಚಿಪ್ಪು, ತಾಮ್ರದ ಕನ್ನಡಿ, ಕತ್ತಿನ ಸರ, ಬೆರಳುಂಗುರ, ಪಾತ್ರೆ, ಮಣಿ, ಬಳೆ ಇತ್ಯಾದಿ ವಸ್ತುಗಳು ದೊರೆತಿವೆ. ಸ್ತ್ರೀ ಅಸ್ಥಿಪಂಜರದಲ್ಲಿ ಆಭರಣ ದೊರೆತಿದೆ. ಇಲ್ಲಿ ಒಂದು ಜೋಡಿನ ಹೊದಿಕೆಯಲ್ಲಿ ಮುಚ್ಚಲ್ಪಟ್ಟ ದೇಹ ಮರದ ಸಂಪುಟದಲ್ಲಿ ದೊರೆತಿದ್ದು ಇದು ಹರಪ್ಪ ಸಂಸ್ಕೃತಿಗೆ ಸಾಮಾನ್ಯವಲ್ಲದಿದ್ದರೂ ಸಮಕಾಲೀನ ಮೆಸಪೊಟೇಮಿಯದ ಸಾಮಾನ್ಯ ಪದ್ಧತಿಯಾಗಿದ್ದು ಪಾಶ್ಚಾತ್ಯ ದೇಶದ ಒಬ್ಬ ಮನುಷ್ಯ ಇಲ್ಲಿ ಸಮಾಧಿ ಮಾಡಲ್ಪಟ್ಟಿರುವ ಸಾಧ್ಯತೆ ಇದೆ. ಇದರ ಮೇಲಿನ ಪದರದಲ್ಲಿ ಕಲ್ಲಂಗಡಿಬೀಜ, ಸುಟ್ಟ ಬಟಾಣಿ, ಎಳ್ಳು, ಗೋದಿ, ಬಾರ್ಲಿ ಧಾನ್ಯಗಳೂ ದೊರೆತಿವೆ.

1940ರಲ್ಲಿ ವತ್ಸ್, 1962ರಲ್ಲಿ ಮಾರ್ಟಿಮರ್ ವೀಲರ್, 1966ರಲ್ಲಿ ಪಾಕಿಸ್ತಾನದ ಪುರಾತತ್ತ್ವ ಇಲಾಖೆಯ ಮಹಮದ್ ರಫೀಕ್ ಮುಗಲ್ ಉತ್ಖನನ ಕೈಗೊಂಡರು. ಇದರ ಕ್ರಮಬದ್ಧ ಬಹುಶಿಸ್ತೀಯ, ಮೊದಲ ಉತ್ಖನನ 1986–90ರ ಅವಧಿಯಲ್ಲಿ ಹರಪ್ಪ ಆರ್ಕಿಯಲಾಜಿಕಲ್ ಪ್ರಾಜೆಕ್ಟ್ ಜಾರ್ಜ್ ಎಫ್ ಡೇಲ್ಸ್ ಮತ್ತು ಜೆ.ಮಾರ್ಕ್ ಕೆನೊಯರ್ ಮಾರ್ಗದರ್ಶನದಲ್ಲಿ ನಡೆಯಿತು. ಇದಕ್ಕೆ ರಿಚರ್ಡ್ ಎಚ್.ಮಿಡೊಸ್ ಸಹ–ನಿರ್ದೇಶಕನಾಗಿದ್ದ. ಇದನ್ನು ಪಾಕಿಸ್ತಾನದ ಪುರಾತತ್ತ್ವ ಇಲಾಖೆ ಮತ್ತು ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಬರ್ಕ್‌ಲಿ ತಂಡ ಜಂಟಿಯಾಗಿ ನಡೆಸಿತು. ಹರಪ್ಪದಲ್ಲಿ ಸಿಕ್ಕಿದ ಹೊಸ ಶೋಧನೆಗಳು (1995–98) ಎಂಬ ವರದಿಯನ್ನು ಫೆಬ್ರವರಿ 1999ರಲ್ಲಿ ಬಿ.ಬಿ.ಸಿ. ವಾರ್ತೆ ಬಿತ್ತರಿಸಿತು. ಸೀತಾ ಎನ್.ರೆಡ್ಡಿ, ಎಂ.ಎಲ್.ಮಿಲ್ಲರ್, ರೊನಾಲ್ಡ್ ಅಮುಂಡ್‌ಸನ್, ಇಲಿಸೆ ಪೆಂಡಲ್, ಬ್ರೈನ್.ಇಹೆಮ್‌ಪಿಲ್, ಜಾನ್.ಆರ್.ಲೂಕಾಕ್ಸ್, ಕೆ.ಎ.ಕೆನಡಿ ಮೊದಲಾದವರು ಇಲ್ಲಿ ಸಂಶೋಧನೆ ಮಾಡಿ ಹಲವಾರು ವಿಚಾರಗಳನ್ನು ಹೊರಗೆಡವಿದರು. ಪ್ರ.ಶ.ಪೂ.3500ರ ಅತ್ಯಂತ ಪ್ರಾಚೀನ ಬರವಣಿಗೆಯನ್ನು ಮಡಕೆಯ ಚೂರೊಂದರಲ್ಲಿ ಪತ್ತೆ ಹಚ್ಚಿದರು. ಇಲ್ಲಿ

ಸಂಶೋಧನೆಗೆ ಅಗತ್ಯವಿರುವ ಹಲವಾರು ವಿಷಯಗಳಿವೆ. ಬಹುಪಾಲು ಪ್ರಾಚ್ಯ ಸಂಶೋಧಕರು ಪ್ರಾಚೀನ ಹರಪ್ಪ, ಮೇಲಣ ಸಿಂಧೂ ಪ್ರದೇಶದ ನಗರ ಸಿಂಧೂ ನಾಗರಿಕತೆಯ ಪ್ರಮುಖ ಕೇಂದ್ರವಾಗಿತ್ತೆಂದೂ ಭಾವಿಸಿದ್ದಾರೆ.

2001–03ರಲ್ಲಿ ಕೆನೊಯರ್ ಹರಪ್ಪದಲ್ಲಿ ಉತ್ಖನನವನ್ನು ಮುಂದುವರೆಸಿ ಆದಿ ಹರಪ್ಪ ನಾಗರಿಕತೆಯ ಹಂತಕ್ಕಿಂತಲೂ ಪೂರ್ವದ ಸಾಂಸ್ಕೃತಿಕ ಹಂತವನ್ನು ಗುರುತಿಸಿದ್ದು ಇದನ್ನು ರಾವಿ ಹಂತವೆಂದು ಕರೆದಿದ್ದಾನೆ. ಇದುಮಟ್ಟಿಗೆ ಪಾಕಿಸ್ತಾನದ ಹಾಕ್ರ ಸಂಸ್ಕೃತಿ ಹಂತದ ವಸ್ತುಗಳ ಸಂಕೀರ್ಣಗಳಂತಿವೆ. ಇತ್ತೀಚೆಗೆ 2005–07ರಲ್ಲಿ ಹರಿಯಾಣ ರಾಜ್ಯದ ಭಿರಡಾಣದಲ್ಲಿಯೂ (**ನೋಡಿ**) ಆದಿ ಹರಪ್ಪ ಹಂತದ ಪೂರ್ವದ ಹಾಕ್ರ ಸಾಂಸ್ಕೃತಿಕ ಹಂತವನ್ನು ಗುರುತಿಸಲಾಗಿದೆ. (ಬಿ.ಆರ್.ಎಸ್.)

**ಹರ್ಮನ್ ಮೋಗ್ಲಿಂಗ್:** 1811–81. ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸ. ಜರ್ಮನಿಯ ಫ್ರಾಕನ್ ಹೈಮ್‌ನಲ್ಲಿ ಜನಿಸಿದ ಈತ ತನ್ನ ಎಳವೆಯಲ್ಲಿಯೇ ತಾಯಿಯನ್ನು ಕಳೆದುಕೊಂಡ. 1829ರಲ್ಲಿ ಟ್ಯೂಬಿಂಗೆನ್ ವಿಶ್ವವಿದ್ಯಾಲಯದಲ್ಲಿ ಐದು ವರ್ಷ ವ್ಯಾಸಂಗ ಮಾಡಿ ಡಾಕ್ಟೊರೇಟ್ ಪದವಿ ಪಡೆದ. 1836ರಲ್ಲಿ ಭಾರತಕ್ಕೆ ಬಂದ. ಮೊದಲಿಗೆ ಈತ ಧಾರವಾಡ, ಮಂಗಳೂರು, ಕೊಡಗು ಪ್ರದೇಶಗಳಲ್ಲಿ ಕ್ರೈಸ್ತಧರ್ಮ ಪ್ರಸಾರ, ಶಿಕ್ಷಣಾಭಿವೃದ್ಧಿ ಮತ್ತು ಕನ್ನಡ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡತೊಡಗಿದ. ಈ ಸಂಬಂಧದಲ್ಲಿ ಈತ ರಚಿಸಿದ ಜಾತಿ (ಮತ) ವಿಚಾರಣೆ (1845), ದೇವ ವಿಚಾರಣೆ (1852) ಎಂಬ ಪುಸ್ತಕಗಳು ಹೊಸಗನ್ನಡದ ಆದ್ಯಪ್ರಬಂಧಗಳೆಂದು ಹೆಸರು ಪಡೆದಿವೆ. ಹೆಬಿಕ್ ಎಂಬುವನ ಜೊತೆಗೂಡಿ 1842ರಲ್ಲಿ ಹೃದಯದರ್ಪಣ ಎಂಬ ಧಾರ್ಮಿಕ ಕೃತಿಯನ್ನು ರಚಿಸಿದ. ಈತನ ಈರಾರು ಪತ್ರಿಕೆ 12 ಪತ್ರಗಳ ಪುಟ್ಟಪುಸ್ತಕ. ಆ ಕಾಲದಲ್ಲಿ ಆನಂದರಾಯ ಕೌಂಡಿನ್ಯನೆಂಬಾತ ಮತಾಂತರ ಹೊಂದಿದ್ದನ್ನು ಕಥನರೀತಿಯಲ್ಲಿ ನಿರೂಪಿಸುತ್ತದೆ. ನೈಗಲ್ ಎಂಬುವನೊಡನೆ ಕೆಲವೊಂದು ಕ್ರೈಸ್ತಗೀತೆಗಳನ್ನು ರಚಿಸಿದ್ದಲ್ಲದೆ, ಪಿಲ್‌ಗ್ರಿಮ್ಸ್ ಪ್ರೋಗ್ರೆಸ್ ಗ್ರಂಥವನ್ನು ಯಾತ್ರಿಕನ ಸಂಚಾರ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ. ಚಿಕ್ಕವನಾದ ಹೆನ್ರಿಯೂ ಅವನ ಬೋಯಿಯೂ (1849), ದೇವವಾಕ್ಯ ವ್ಯಾಖ್ಯಾನ, ಬಾಸೆಲ್ ಮಿಶನ್ನಿನ ಸಭಾಕ್ರಮ–ಈತನ ಇತರ ಕೃತಿಗಳು. ಇವುಗಳಲ್ಲಿ ಕೆಲವು ಕೃತಿಗಳು ಪುನರ್‌ಮುದ್ರಣಗೊಂಡಿವೆ.

ಈತ ಹಳಗನ್ನಡ ಸಾಹಿತ್ಯಕ್ಕೆ ಗ್ರಂಥಸಂಪಾದನೆಯ ಮೂಲಕ ಸೇವೆಸಲ್ಲಿಸಿದ್ದು ಗಮನೀಯ. ಬಿ.ಎಲ್.ರೈಸ್ ಅವರಿಗಿಂತಲೂ ಮೊದಲೇ ಬಿಬ್ಲಿಯೋತಿಕ ಕರ್ಣಾಟಿಕ ಮಾಲೆಯನ್ನಾರಂಭಿಸಿ 1848ರಲ್ಲಿ ಜೈಮಿನಿ ಭಾರತವನ್ನೂ (ಅಪೂರ್ಣ) 1849ರಲ್ಲಿ ತೊರವೆ ರಾಮಾಯಣವನ್ನೂ ಅಚ್ಚುಮಾಡಿದ. 1850ರಲ್ಲಿ ನೂರು ಹಾಡುಗಳುಳ್ಳ ದಾಸರ ಪದಗಳು ಎಂಬ ಕೃತಿಯನ್ನು ತಂದ. ಅನಂತರ ಕನಕದಾಸರ ಹರಿಭಕ್ತಿಸಾರ, ಕುಮಾರವ್ಯಾಸ ಭಾರತ, ಬಸವಪುರಾಣ, ಚೆನ್ನಬಸವಪುರಾಣ ಈ ಕಾವ್ಯಗಳನ್ನು ಅಚ್ಚುಮಾಡಿದ. 1847ರ ವೇಳೆಗೆ ಕನ್ನಡ ಗಾದೆಗಳು ಎಂಬ ಪುಸ್ತಕವನ್ನು ಪ್ರಕಟಿಸಿದ. ಇದರಲ್ಲಿ 3,547 ಗಾದೆಗಳಿದ್ದುವೆಂದು ತಿಳಿದುಬರುತ್ತದೆ. ಈ ದೃಷ್ಟಿಯಿಂದ ಕನ್ನಡ ಜಾನಪದ ಕ್ಷೇತ್ರದಲ್ಲಿ ಇವನ ಹೆಸರು ಸ್ಮರಣೀಯ ವಾದದ್ದು. 1843 ಜುಲೈ 1ರಲ್ಲಿ ಈತ ಪ್ರಕಟಿಸಲಾರಂಭಿಸಿದ ಮಂಗಳೂರ ಸಮಾಚಾರ ಎಂಬ ಪತ್ರಿಕೆ ಕನ್ನಡ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿತು. ಇದರಿಂದಾಗಿ ಈತ ಕನ್ನಡ ಪತ್ರಿಕೋದ್ಯಮರಂಗದ ಜನಕನೆಂಬ ಪ್ರಸಿದ್ಧಿಗೆ ಪಾತ್ರನಾದ. 8 ತಿಂಗಳ ಅನಂತರ ಮಂಗಳೂರ ಸಮಾಚಾರವೇ ಕನ್ನಡ ಸಮಾಚಾರವೆಂಬ ಹೆಸರಿನಿಂದ ಬಳ್ಳಾರಿಯಿಂದ ಹೊರಡಲಾರಂಭಿಸಿತು. ಅನಂತರ 1857ರಲ್ಲಿ ಕನ್ನಡ ಸುವಾರ್ತಿಕ ಎಂಬ ಪತ್ರಿಕೆ ಯನ್ನು ಹೊರಡಿಸಲಾರಂಭಿಸಿದ. ಇದು ಕನ್ನಡದ ಎರಡನೆಯ ಪತ್ರಿಕೆ. ಮೈಸೂರಿನಿಂದ ಬರುತ್ತಿದ್ದ ಕರ್ನಾಟಕ ವಾಗ್ವಿಧಾಯಿನಿ, ಉಡುಪಿಯಿಂದ ಬರುತ್ತಿದ್ದ ಕ್ರೈಸ್ತ ಸಭಾಪತ್ರ ಪತ್ರಿಕೆಗಳಲ್ಲೂ ಇವನ ಪಾತ್ರವಿತ್ತು. 1854ರಲ್ಲಿ ಈತ ರಾಜೇಂದ್ರನಾಮೆ ಎಂಬ ಗ್ರಂಥವನ್ನು ಪ್ರಕಟಿಸಿದ. ಕೊಡಗಿನ ಇತಿಹಾಸದಲ್ಲಿ ಈತನಿಗಿದ್ದ ಆಸಕ್ತಿಗೆ ಇದು ಕುರುಹಾಗಿದೆ. 1852ರಲ್ಲಿ ಕೂರ್ಗ್ ಮೆಮೋರೀಸ್ ಎಂಬ ಪುಸ್ತಕವನ್ನು ಈತ ಪ್ರಕಟಿಸಿದ್ದು ಈ ಹಿನ್ನೆಲೆಯಲ್ಲಿ ಸ್ಮರಣೀಯ.

ಈತ 1860ರಲ್ಲಿ ತನ್ನ ಸ್ವದೇಶವಾದ ವರ್ಟಂಬರ್ಗ್‌ಗೆ ಹಿಂದಿರುಗಿದನಾದರೂ ಕನ್ನಡದ ಕೆಲಸವನ್ನು ಅವ್ಯಾಹತವಾಗಿ ಕೈಗೊಂಡ. ದಾಸರ ಪದಗಳು ಎಂಬ ಪುಸ್ತಕದಿಂದ 24 ಪದಗಳನ್ನು ಆಯ್ದುಕೊಂಡು ಅವುಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ ಪೀಠಿಕೆ ಯೊಂದಿಗೆ (ಜಡ್‌ಡಿಎಂಜಿ) ಪತ್ರಿಕೆಯಲ್ಲಿ ಪ್ರಕಟಿಸಿದ್ದು ಈತನ ಕನ್ನಡ ಪ್ರೇಮಕ್ಕೆ ಸಾಕ್ಷಿಯಾಗಿದೆ. ತುಳು ಪಾಡ್ದನಗಳನ್ನೂ ಸಂಗ್ರಹಿಸಿದ್ದ. ಕನ್ನಡ ಲಿಪಿ ಸುಧಾರಣೆಯ ಬಗ್ಗೆ ಇವನಿಗೆ ತೀವ್ರವಾದ ಕಾಳಜಿ ಇತ್ತು. ಕನ್ನಡ ಲಿಪಿ ಸುಧಾರಕರಲ್ಲಿ ಈತನಿಗೆ ಗಣ್ಯಸ್ಥಾನವಿದೆ ಎಂಬುದು ಹೊಸಗನ್ನಡ ಸಾಹಿತ್ಯ ಚರಿತ್ರಕಾರರ ಅಭಿಪ್ರಾಯ. (ಎನ್.ಎಸ್.ಟಿ.)

**ಹರ್ಷಚರಿತ:** ಥಾನೇಶ್ವರ ಮನೆತನದ ಹರ್ಷನ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ವರ್ಣಿಸುವ ಒಂದು ಐತಿಹಾಸಿಕ ಕಾವ್ಯ. ಸಂಸ್ಕೃತದಲ್ಲಿ ಗದ್ಯದಲ್ಲಿದೆ. ಆಖ್ಯಾಯಿಕೆಯ ಮಾದರಿಯ ಕಾವ್ಯ. ಇದರ ಕರ್ತೃ ಬಾಣ. ಇವನು 7ನೆಯ ಶತಮಾನದ ಶ್ರೇಷ್ಠ ಪಂಡಿತ–ಕವಿ. ಈ ಕೃತಿಯಲ್ಲಿ ಬಾಣ ತನ್ನ ಆಶ್ರಯದಾತನಾದ ಹರ್ಷವರ್ಧನನ ಜೀವನ ಚರಿತ್ರೆಯನ್ನು ವಸ್ತುವನ್ನಾಗಿ ಮಾಡಿಕೊಂಡಿದ್ದಾನೆ. ಇದು 8 ಅಧ್ಯಾಯಗಳಿಂದ ಕೂಡಿದೆ. ಮೊದಲೆರಡು ಅಧ್ಯಾಯಗಳಲ್ಲಿ ಬಾಣನ ವಂಶದ ಮತ್ತು ಜೀವನದ ವಿವರವಿದೆ. ಇವನು ತನ್ನ ವಂಶ ದಧೀಚ ಮತ್ತು ಸರಸ್ವತಿಯಿಂದ ಪ್ರಾರಂಭವಾಯಿತೆಂದು ತಿಳಿಸಿದ್ದಾನೆ. ತನ್ನ ಪೂರ್ವಿಕರ ಹೆಸರುಗಳನ್ನು, ಅವರ ಧರ್ಮನಿಷ್ಠೆ ಮತ್ತು ಪಾಂಡಿತ್ಯವನ್ನು ಗೌರವದಿಂದ ವರ್ಣಿಸಿದ್ದಾನೆ. ಇವನ ತಾಯಿ ರಾಜ್ಯದೇವಿ ಇವನು ಮಗುವಿದ್ದಾಗಲೇ ನಿಧನಳಾದಳು. ಇವನು 14 ವರ್ಷದವನಿದ್ದಾಗ ತಂದೆಯನ್ನು ಕಳೆದುಕೊಂಡ. ಅನಂತರ ಇವನ ವೃತ್ತಿ ಮತ್ತು ಸಂಗಡಿಗರು, ಹರ್ಷನ ಆಸ್ಥಾನಕ್ಕೆ ಆಹ್ವಾನಿತವಾದ ವಿಚಾರದ ಪ್ರಸ್ತಾಪವಿದೆ. ಮೂರು ಮತ್ತು ನಾಲ್ಕನೆಯ ಅಧ್ಯಾಯದಲ್ಲಿ ಥಾನೇಶ್ವರ ಮನೆತನದ ಹರ್ಷನ ಪೂರ್ವಿಕರ ಇತಿಹಾಸವಿದೆ. ಹರ್ಷನ ತಂದೆ ಪ್ರಭಾಕರವರ್ಧನ, ತಾಯಿ ಯಶೋಮತಿ, ಅಣ್ಣ ರಾಜ್ಯವರ್ಧನ, ತಂಗಿ ರಾಜ್ಯಶ್ರೀ. ರಾಜ್ಯಶ್ರೀಯನ್ನು ಕನೌಜ್‌ನ (ಕನ್ಯಾಕುಬ್ಜ) ಮೌಖರಿ ದೊರೆ ಗೃಹವರ್ಮನಿಗೆ ಕೊಟ್ಟು ವಿವಾಹ ಮಾಡಿದ್ದರು. 604ರಲ್ಲಿ ಹರ್ಷ ರಾಜ್ಯವರ್ಧನನೊಡನೆ ಹೂಣರನ್ನು ಎದುರಿಸಲು ಹೋದಾಗ, ತಂದೆ ಪ್ರಭಾಕರವರ್ಧನ ಮೃತನಾದ ವಾರ್ತೆ ತಿಳಿದು ಹಿಂದಿರುಗಿದ. ತಾಯಿ ಯಶೋಮತಿ ಸಹಗಮನ ಮಾಡಿದಳು. ಐದನೆಯ ಅಧ್ಯಾಯದಲ್ಲಿ ತಂದೆ ತಾಯಿಗಳ ವಿಯೋಗದಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಮೌಖರಿ ದೊರೆ ಗೃಹವರ್ಮನನ್ನು ಮಾಳವದ ದೊರೆ (ದೇವಗುಪ್ತ) ಕೊಂದು ಆತನ ಪತ್ನಿಯಾದ ರಾಜ್ಯಶ್ರೀಯನ್ನು ಬಂಧಿಸಿದ ಆಘಾತದ ವಾರ್ತೆ ತಿಳಿಯಿತು. ಇದನ್ನು ತಿಳಿದು ರಾಜ್ಯವರ್ಧನ ಮಾಳವ ರಾಜನ ಮೇಲೆ ದಂಡೆತ್ತಿ ಹೋದ. ಆದರೆ ಮಾಳವ ರಾಜ ಮೋಸದಿಂದ ರಾಜ್ಯವರ್ಧನನನ್ನು ಉಪಾಯದಿಂದ ಕೊಲ್ಲಿಸಿದ. ಇದನ್ನು ತಿಳಿದು ಹರ್ಷ ಅಣ್ಣನ ಕೊಲೆಗೆ ಕಾರಣನಾದ ಮಾಳವ ರಾಜನನ್ನು ಕೊಲ್ಲುವುದಕ್ಕಾಗಿ ಸೈನ್ಯ ಸಮೇತನಾಗಿ ಹೊರಟ. ಅಷ್ಟರೊಳಗೆ ಹರ್ಷನ ಆಪ್ತನಾದ ಭಂಡಿ ಎಂಬಾತ ಮಾಳವ ರಾಜನನ್ನು ಕಂಡು ಹರ್ಷನ ಬಳಿಗೆ ಬಂದು ರಾಜ್ಯಶ್ರೀ ಸೆರೆಮನೆಯಿಂದ ತಪ್ಪಿಸಿಕೊಂಡಿದ್ದ ಸುದ್ದಿ ತಿಳಿಸಿದ. ಆರು ಮತ್ತು ಏಳನೆಯ ಅಧ್ಯಾಯದಲ್ಲಿ ಹರ್ಷನ ಯುದ್ಧಗಳನ್ನು ಮತ್ತು ದಿಗ್ವಿಜಯವನ್ನು ಬಾಣ ವಿವರಿಸಿದ್ದಾನೆ. ಕೊನೆಯ ಅಧ್ಯಾಯದಲ್ಲಿ ವಿಂಧ್ಯ ಪ್ರದೇಶದ ಅರಣ್ಯದಲ್ಲಿ ವಾಸಿಸುವ ಅನೇಕ ಧಾರ್ಮಿಕ ಪಂಥಗಳನ್ನು ವರ್ಣಿಸಿದ್ದಾನೆ. ಸೆರೆಮನೆಯಿಂದ ತಪ್ಪಿಸಿಕೊಂಡ ತಂಗಿಯನ್ನು ಹುಡುಕಲು ಹೊರಟು ವಿಂಧ್ಯಾರಣ್ಯದಲ್ಲಿ ಬೌದ್ಧ ಸನ್ಯಾಸಿ ದಿವಾಕರ ಮಿತ್ರನ ಆಶ್ರಮವನ್ನು ತಲುಪಿದ. ಅಲ್ಲಿ ವಿಷಯ ತಿಳಿಸುವ ಸಮಯಕ್ಕೆ ಸರಿಯಾಗಿ ಯುವಕನೊಬ್ಬ ಓಡಿ ಬಂದು ಒಬ್ಬ ಯುವತಿ ಅಗ್ನಿಪ್ರವೇಶ ಮಾಡುತ್ತಿರುವುದಾಗಿ ತಿಳಿಸಿದ. ಹರ್ಷ ಅದನ್ನು ಕೇಳಿ ಅವಳು ತಂಗಿಯೇ ಇರಬಹುದೆಂದು ಭಾವಿಸಿ ಅಲ್ಲಿಗೆ ಹೋಗಿ ಅವಳನ್ನು ಸಂತೈಸಿ ಕರೆತಂದು ಬೌದ್ಧ ಸನ್ಯಾಸಿಯ ಆಶ್ರಯದಲ್ಲಿ ಅವಳನ್ನು ಬಿಟ್ಟು, ಮಾಳವ ರಾಜನ ಮೇಲೆ ದಂಡೆತ್ತಿ ಹೋದ. ಶತ್ರುಗಳಿಂದ ಕಪ್ಪಕಾಣಿಕೆಗಳನ್ನು ಪಡೆದು, ರಾಜ್ಯವನ್ನು ತನ್ನ ಮಗನಿಗೆ ವಹಿಸಿ, ಅನಂತರ ದಿವಾಕರ ಮಿತ್ರನ ಆಶ್ರಯಕ್ಕೆ ಹಿಂದಿರುಗಿ ತಂಗಿಯ ಜೊತೆಯಲ್ಲಿ ಧ್ಯಾನದಲ್ಲಿ ತೊಡಗಿದ. ಕೊನೆಯ ಅಧ್ಯಾಯದಲ್ಲಿ ಐದು ದೀರ್ಘ ವಿವರಣೆಗಳಿವೆ. ಇವುಗಳಿಂದ ಅಂದಿನ ಧಾರ್ಮಿಕ, ಸಾಮಾಜಿಕ, ರಾಜಕೀಯ ಜೀವನವನ್ನು ತಿಳಿಯಬಹುದು. ಇದರಲ್ಲಿ ಹರ್ಷವರ್ಧನನಿಗೆ ಎಷ್ಟೇ ಕಷ್ಟನಷ್ಟಗಳಾದರೂ ಮನಃಸ್ಥೈರ್ಯ, ಸಮಾಧಾನಗಳನ್ನು ಕಳೆದುಕೊಳ್ಳಲಿಲ್ಲವೆಂಬ ಆದರ್ಶವನ್ನು ಪರಿಣಾಮಕಾರಿಯಾಗಿ ನಿರೂಪಿಸಿದೆ. ಕೊನೆಯ ಅಧ್ಯಾಯ ಮುಸ್ಸಂಜೆಯ ವರ್ಣನೆಯೊಡನೆ ಕೊನೆಗೊಳ್ಳುತ್ತದೆ. (ಎನ್.ಎಲ್)

**ಹಸರ್‌ಗುಂಡಿಗಿ:** ಗುಲ್ಬರ್ಗ ಜಿಲ್ಲೆಯಲ್ಲಿ ಸನ್ನತಿಗೆ ಸಮೀಪದಲ್ಲಿರುವ ಆದಿಚಾರಿತ್ರಿಕ ಕಾಲದ ಸ್ತೂಪನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಕೆ.ಪಿ. ಪೂಣಚ್ಚ ಅವರ ತಂಡ ಇಲ್ಲಿ 1993–94ರಲ್ಲಿ ಉತ್ಖನನ ನಡೆಸಿತು. 625ಚ.ಮೀ ಜಾಗದಲ್ಲಿ ಸ್ತೂಪದ ಭಗ್ನಾವಶೇಷಗಳು ಹರಡಿದ್ದವು.



ಬೌದ್ಧಸ್ತೂಪ ತಳಪಾಯ

ಈ ನೆಲೆಯಲ್ಲಿ ವೃತ್ತಾಕಾರದ (13.7ಮೀ ವ್ಯಾಸ) ತಳವಿನ್ಯಾಸದ ವೇದಿಕೆಯ ಮೇಲೆ ಸುಟ್ಟ ಇಟ್ಟಿಗೆಗಳಿಂದ ಅರೆಗೋಲಾಕಾರದ ಸ್ತೂಪವನ್ನು ನಿರ್ಮಿಸಲಾಗಿತ್ತು. ತಳಪಾಯದಲ್ಲಿ ಕರಿಮಣ್ಣು ಮತ್ತು ಆಯತಾಕಾರದ ಸುಣ್ಣಕಲ್ಲು ಚಪ್ಪಡಿಗಳನ್ನು ಹಾಸಲಾಗಿತ್ತು. ಸ್ತೂಪದ

ಗೋಡೆಯ ಒಳ ಮೈಗೆ ಮಣ್ಣಿನ ಲೇಪನವೂ ಹೊರ ಮೈಗೆ ಸುಣ್ಣದ ಲೇಪನವೂ ಇದ್ದಿತ್ತು. ಸ್ತೂಪದ ಸುತ್ತಲೂ ವೇದಿಕೆಯ ಮೇಲೆ 2.85ಮೀ ಅಗಲದ ಪ್ರದಕ್ಷಿಣಾಪಥ ಇತ್ತು. ನಾಲ್ಕೂ ದಿಕ್ಕಿನಲ್ಲಿ ಸ್ತೂಪಕ್ಕೆ ಹೊಂದಿದಂತೆ ಆಯಕ ವೇದಿಕೆಯಿತ್ತು. ವೇದಿಕೆಯ ಸುತ್ತಲೂ ಸ್ವಲ್ಪ ಅಂತರದಲ್ಲಿ ಸುಣ್ಣಕಲ್ಲಿನ ಭವ್ಯ ಕಟಕಟೆಯೂ ಇದ್ದಿತ್ತು. ನಿರ್ದಿಷ್ಟ ಅಂತರದಲ್ಲಿ ಕಟಕಟೆಯಲ್ಲಿ ಆಯಕ ವೇದಿಕೆಗೆ ಎದುರಾಗಿ ಕಮಲದ ಫಲಕಗಳಿಂದ ಅಲಂಕರಿಸಲಾದ ತೋರಣಗಳಿದ್ದವು. ಆನೆ, ಗೂಳಿ, ಕರಡಿ, ಹುಲಿ, ಕುದುರೆ, ಜಿಂಕೆ ಮುಂತಾದ ಪ್ರಾಣಿಗಳ ಉಬ್ಬುಕೆತ್ತನೆಗಳಿರುವ ಬಿಡಿ ಫಲಕಗಳು ಇಲ್ಲಿ ದೊರೆತಿದ್ದು ಇವು ಮೂಲತಃ ಸ್ತೂಪವನ್ನು ಅಲಂಕರಿಸಿದ್ದ ಭಾಗಗಳಾಗಿರಬಹುದು. ಸ್ತೂಪದ ಪಶ್ಚಿಮದಲ್ಲಿ ಅಗೆದ ಸಣ್ಣ ಪರೀಕ್ಷೆಗುಂಡಿಯಲ್ಲಿ ಸೀಸ ಮತ್ತು ತವರದ ನಾಣ್ಯಗಳು, ಸುಡಾವೆಮಣ್ಣಿನ ಸವೆದ ಗೊಂಬೆಗಳು, ಶಂಖದ ಬಳೆಗಳು, ನೂರಾರು ಹೆಂಚಿನ ಚೂರುಗಳು ಸಿಕ್ಕವು. ಕೆಲವು ನಾಣ್ಯಗಳ ಒಂದು ಮುಖದ ಮೇಲೆ ಸಾತವಾಹನರದಾದ ಉಜ್ಜಯನಿ ಚಿಹ್ನೆಯಿದ್ದುದು ಸ್ತೂಪ ಸಾತವಾಹನರ ಕಾಲದ್ದೆಂಬುದನ್ನು ದೃಢಪಡಿಸುತ್ತದೆ. ಇದಕ್ಕೆ ಪೂರಕವಾಗಿ ಇಲ್ಲಿನ ಅವಶೇಷಗಳು ಸನ್ನತಿ ಪ್ರದೇಶದ ಇತರೆಡೆಗಳಲ್ಲಿ ಕಂಡುಬಂದಿರುವ ಆದಿಚಾರಿತ್ರಿಕ ಕಾಲದ ಅವಶೇಷಗಳನ್ನು ಹೋಲುತ್ತವೆ. (ವಿ.ಎಸ್.)

**ಹಸ್ತಿನಾಪುರ:** ಉತ್ತರಪ್ರದೇಶ ರಾಜ್ಯದ ಮೀರತ್ ಜಿಲ್ಲೆಯಲ್ಲಿರುವ ಪುರಾತತ್ತ್ವ ನೆಲೆ. ಮಹಾಭಾರತದ ಕೌರವರ ರಾಜಧಾನಿ. ಗಂಗಾನದಿಯ ಪುರಾತನ ಪಾತ್ರದ ಬಲದಂಡೆಯ ಮೇಲಿದೆ. ಇಲ್ಲಿನ ದಿಬ್ಬ 18ಮೀ ಎತ್ತರವಾಗಿದ್ದು 400×800 ಮೀ ವಿಸ್ತೀರ್ಣ ಹೊಂದಿದೆ. ಇದರ ಪೂರ್ವಕ್ಕೆ 1 ಕಿಮೀ ದೂರದಲ್ಲಿ ಹರಿಯುವ ಬುಧಿ ಗಂಗೆಯ (ಹಳೆ ಗಂಗಾ) ದಂಡೆಯ ಮೇಲೆ ಮಹಾಭಾರತದ ಕಾಲದ್ದೆಂದು ಹೇಳಲಾಗುವ ದ್ರೌಪದಿ ಘಾಟ್ ಮತ್ತು ಕರ್ಣ ಘಾಟ್ ಎಂಬ ಎರಡು ಸ್ಥಳಗಳಿವೆ. ಶಾಂತಿನಾಥ, ಕುಂಥನಾಥ ಮತ್ತು ಅರನಾಥರೆಂಬ ಮೂವರು ಜೈನತೀರ್ಥಂಕರರು ಹಸ್ತಿನಾಪುರದೊಂದಿಗೆ ಸಂಬಂಧ ಹೊಂದಿದ್ದರು ಎಂಬ ಪ್ರತೀತಿಯಿದೆ. ಈಗ ಇಲ್ಲಿ ಶ್ವೇತಾಂಬರ ಮತ್ತು ದಿಗಂಬರ ಪಂಥಗಳಿಗೆ ಸೇರಿದ ಎರಡು ಜೈನ ದೇವಾಲಯಗಳಿವೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1950–52ರಲ್ಲಿ ಉತ್ಖನನ ನಡೆಸಿ 5 ಸಾಂಸ್ಕೃತಿಕ ಹಂತಗಳನ್ನು ಗುರುತಿಸಿತು. 1ನೆಯ ಹಂತದಲ್ಲಿ ಕಾವಿಬಣ್ಣದ ಮಣ್ಪಾತ್ರೆಗಳನ್ನು ಬಿಟ್ಟರೆ ಇನ್ನಾವುದೇ ವಸತಿಯ ಕುರುಹುಗಳು ಕಾಣಲಿಲ್ಲ. ಈ ಹಂತದ ಕೊನೆಯಲ್ಲಿ ಜನ ವಸತಿಯನ್ನು ತೊರೆದರು. ಅನಂತರ ಕೆಲಕಾಲ ಇಲ್ಲಿ ಕುರುಚಲು ಕಾಡು ಬೆಳೆದಿದ್ದಂತೆ ತೋರುತ್ತದೆ. 2ನೆಯ ಹಂತ ಚಿತ್ರಿತ ಬೂದುಬಣ್ಣದ ಪಾತ್ರೆ ಸಂಸ್ಕೃತಿಯದಾಗಿದ್ದು ಇದು ಮಹಾಭಾರತದ ಸಮಕಾಲೀನವೆಂಬ ಅಭಿಪ್ರಾಯವಿದೆ. ಬೂದುಬಣ್ಣದ ಪಾತ್ರೆಗಳ ಮೇಲೆ ಬಿಳಿಬಣ್ಣದಲ್ಲಿ ಜ್ಯಾಮಿತೀಯ ವಿನ್ಯಾಸಗಳ ಚಿತ್ರಗಳಿವೆ. ಬಟ್ಟಲು ಮತ್ತು ಮಡಕೆಗಳು ಸಾಮಾನ್ಯ ಆಕಾರಗಳಾಗಿವೆ. ಕಪ್ಪು ಲೇಪನವುಳ್ಳ ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಹಾಗೂ ಕೆಂಪುಬಣ್ಣದ ಪಾತ್ರೆಗಳು ಈ ಹಂತದ ಇತರ ಪಾತ್ರೆ ಪ್ರಕಾರಗಳು. ಮನೆಗಳ ನೆಲಗಳು ಇಲ್ಲಿ ಕಂಡುಬಂದಿಲ್ಲ. ಆದರೆ ತಡಿಕೆ ಗೋಡೆಯ ಭಾಗಗಳು ಮತ್ತು ಹಸಿಇಟ್ಟಿಗೆ ಚೂರುಗಳು ದೊರೆತಿವೆ. ವ್ಯವಸಾಯ ಮತ್ತು ಪಶುಪಾಲನೆ ಈ ಜನರ ಮುಖ್ಯ ಕಸಬುಗಳು. ಬತ್ತವನ್ನು ಪ್ರಧಾನವಾಗಿ ಬೆಳೆಯಲಾಗುತ್ತಿತ್ತು. ಹಸು, ಕರು, ಎಮ್ಮೆ ಮತ್ತು ಹಂದಿ ಪ್ರಮುಖ ಸಾಕುಪ್ರಾಣಿಗಳಾಗಿದ್ದವು. ಕುದುರೆಯನ್ನೂ ಇವರು ಸಾಕುತ್ತಿದ್ದರು. ಪ್ರಾಣಿಗಳ ಮೂಳೆಗಳು ದೊರೆತಿದ್ದು ಇವರು ಮಾಂಸಹಾರಿಗಳಾಗಿದ್ದರೆಂದು ತಿಳಿಯುತ್ತದೆ. ಈ ಕಾಲದಲ್ಲಿ ತಾಮ್ರ ಮತ್ತು ಕಬ್ಬಿಣದ ಉಪಯೋಗ ಕಂಡುಬರುತ್ತದೆ. ತಾಮ್ರದ ವಸ್ತುಗಳಲ್ಲಿ ಬಾಣದ ಮೊನೆ, ಕೊರೆಯುಳಿ, ಮೃದು ಕಂಬಿ ಮತ್ತು ಉಗುರು ಕತ್ತರಿಸುವ ಉಪಕರಣಗಳಿವೆ. ಕಬ್ಬಿಣದ ವಸ್ತುಗಳು ಅಧಿಕವಾಗಿಲ್ಲ. ಆದರೆ ಅತ್ರಂಜಿಖೇಡದಲ್ಲಿ ದೊರೆತಿರುವ ಅವಶೇಷಗಳಿಂದ ಈ ಜನರು ಬಾಣದ ಮೊನೆ, ಈಟಿಯ ಮೊನೆ, ಕಠಾರಿ ಮುಂತಾದ ವಸ್ತುಗಳನ್ನು ಕಬ್ಬಿಣದಿಂದ ತಯಾರಿಸುತ್ತಿದ್ದರು ಎಂದು ಹೇಳಬಹುದು. ಈ ಹಂತದ ಇತರ ಅವಶೇಷಗಳೆಂದರೆ ಕಾರ್ನೇಲಿಯನ್, ಅಗೇಟ್ ಮುಂತಾದ ಕಲ್ಲಿನ ಮಣಿಗಳು, ಮೂಳೆ, ಗಾಜಿನ ಬಳೆಗಳು, ಸುಡಾವೆಮಣ್ಣಿನ ಕುದುರೆ ಹಾಗೂ ಗೂಳಿಯ ಗೊಂಬೆಗಳು, ಜಿಂಕೆಕೊಂಬಿನ ಚೂಪು ಮೊನೆಗಳು ಇತ್ಯಾದಿ. ನಾಲ್ಕು ಬದಿಗಳಲ್ಲಿ ಕ್ರಮವಾಗಿ 1,2,3,4 ಗುರುತುಗಳಿರುವ ಚೌಕಾಕಾರದ ದಂತದ ದಾಳ ಈ ಜನರಿಗೆ ಚದುರಂಗ ದಾಟ ತಿಳಿದಿತ್ತೆಂಬುದನ್ನು ಸೂಚಿಸುತ್ತದೆ. ನೆರೆಯಿಂದಾಗಿ ಈ ವಸತಿ ಕೊನೆಗೊಂಡಿತು.

ಕೆಲಕಾಲದ ಅನಂತರ ಔತ್ತರೇಯ ಮೆರುಗಿನ ಕಪ್ಪುಪಾತ್ರೆಯನ್ನು ಬಳಸುವ ಜನ ಇಲ್ಲಿ ನೆಲೆನಿಂತರು (3ನೆಯ ಹಂತ). ಈ ಪಾತ್ರೆಗಳಲ್ಲಿ ವೈವಿಧ್ಯವಿದೆ. ಕಪ್ಪು, ಕಬ್ಬಿಣದ ಬೂದು, ತಿಳಿನೀಲಿ, ಬೆಳ್ಳಿಯ ಬಿಳಿ ಹಾಗೂ ಚಿನ್ನದ ಬಣ್ಣ–ಈ ಎಲ್ಲ ಛಾಯೆಗಳ ಪಾತ್ರೆಗಳು ಈ ವರ್ಗದಲ್ಲಿವೆ. ಸಾಮಾನ್ಯ ಬಳಕೆಯಲ್ಲಿದ್ದುದೆಂದರೆ ಕೆಂಪುಬಣ್ಣದ ಪಾತ್ರೆಗಳು. ಈ ಹಂತದ ಮನೆಗಳು ಹಸಿಇಟ್ಟಿಗೆ ಹಾಗೂ ಸುಟ್ಟಇಟ್ಟಿಗೆಗಳಿಂದ (44.4X25.5X7 ಸೆಂಮೀ) ಕಟ್ಟಲ್ಪಟ್ಟವು. ಮನೆಗಳು ಪ್ರಮುಖ ದಿಕ್ಕುಗಳಿಗೆ ಅಭಿಮುಖವಾಗಿರುವುದು ನಗರ ವಿನ್ಯಾಸದ ಅರಿವು ಇವರಿಗಿತ್ತೆಂಬುದು ತಿಳಿಸುತ್ತದೆ. ನಗರಯೋಜನೆಗೆ ಅನುಗುಣವಾಗಿ ಒಳಚರಂಡಿ ವ್ಯವಸ್ಥೆಯಿತ್ತು. ಸುಡಾವೆಮಣ್ಣಿನ ಬಳೆಗಳನ್ನು ಒಂದರ ಮೇಲೊಂದು ಜೋಡಿಸಿ ನಿರ್ಮಿಸಿರುವ ಇಂಗುಗುಂಡಿಗಳೂ ಬಾವಿಗಳೂ ಧಾನ್ಯಸಂಗ್ರಹಣೆಯ ಕಣಜಗಳೂ ಕಂಡುಬಂದಿವೆ. ಈ ಹಂತದಲ್ಲಿ ಕೃಷಿ ಪ್ರಧಾನವಾಗಿತ್ತು. ಕಬ್ಬಿಣದ ಆಯುಧೋಪಕರಣಗಳ ಬಳಕೆಯೂ ಅಧಿಕವಾಗಿತ್ತು. ನೇಗಿಲಿನ ಕುಳ, ಕುಡುಗೋಲು, ಕೊಡಲಿ ಮತ್ತು ಬಾಚಿಗಳಲ್ಲದೆ ಬಾಣದ ಮೊನೆ, ಈಟಿ ಮೊನೆ, ಮೊಳೆ, ಲೋಹದ ಹಾಗೂ ಬಳೆ ಮುಂತಾದ ವಸ್ತುಗಳು ಕಂಡುಬಂದಿವೆ. ಮುದ್ರಾಂಕಿತ ಹಾಗೂ ತಾಮ್ರದ ನಾಣ್ಯಗಳು ಈ ಹಂತದ ಆರ್ಥಿಕ ಸ್ಥಿತಿಗತಿಯನ್ನು ಸೂಚಿಸುತ್ತವೆ. ಆರಂಭದಲ್ಲಿ ಬೆಳ್ಳಿ ಮತ್ತು ತಾಮ್ರ ನಾಣ್ಯಗಳೂ ಕೊನೆಯಲ್ಲಿ ತಾಮ್ರದವೂ ಚಲಾವಣೆಯಲ್ಲಿದ್ದವು. ಈ ಹಂತದಲ್ಲಿ ದೊರೆತಿರುವ ಇತರ ಪ್ರಾಚ್ಯಾವಶೇಷಗಳೆಂದರೆ ಸುಡಾವೆಮಣ್ಣಿನ ಮನುಷ್ಯ ಮತ್ತು ಪ್ರಾಣಿಗೊಂಬೆಗಳು, ಗಾಜಿನ ಹಾಗೂ ಅರೆಪ್ರಶಸ್ತ ಕಲ್ಲಿನ ಮಣಿಗಳು, ತಾಮ್ರದ ಬಳೆಗಳು ಮತ್ತು ಉಂಗುರಗಳು. ಈ ವಸತಿ ಅಗ್ನಿ ಅನಾಹುತದಿಂದ ನಾಶವಾಯಿತು.

ನಾಲ್ಕನೆಯ ಹಂತ ಪ್ರ.ಶ.ಪೂ.ಸು.2ನೆಯ ಶತಮಾನದಲ್ಲಿ ಆರಂಭವಾಯಿತು. ಇದರ ಕೆಳಗಿನ ಸ್ತರಗಳಲ್ಲಿ ಮಥುರ ನಾಣ್ಯಗಳು ಮತ್ತು ಶುಂಗರ ಕಾಲದ ಮಣ್ಣಿನಗೊಂಬೆಗಳು ಸಿಕ್ಕಿವೆ. ಮಣ್ಪಾತ್ರೆಗಳು ಕೆಂಪುಬಣ್ಣದ್ದಾಗಿದ್ದು ಕೆಲವೊಮ್ಮೆ ಮುದ್ರಿತ ವಿನ್ಯಾಸಗಳಿಂದ ಅಲಂಕರಿಸಲ್ಪಟ್ಟಿವೆ. ಇಲ್ಲಿಯ ಮನೆಗಳು ಉತ್ತರ–ದಕ್ಷಿಣ ಮತ್ತು ಪೂರ್ವ–ಪಶ್ಚಿಮಾಭಿಮುಖವಾಗಿ ಸುಟ್ಟಇಟ್ಟಿಗೆಗಳಿಂದ ಕಟ್ಟಲ್ಪಟ್ಟಿವೆ. ಮನೆಯೊಂದರ ಒಳಗೆ ಮಣ್ಣಿನ ಬಳೆಗಳ ಬಾವಿ ಕಂಡುಬಂದಿದೆ. ಕಟ್ಟಡಗಳು ಏಳು ಹಂತಗಳಲ್ಲಿ ನಿರ್ಮಾಣವಾಗಿವೆ. ಈ ಹಂತದ ಮಧ್ಯದ ಸ್ತರಗಳಲ್ಲಿ ಯೌಧೇಯರ ನಾಣ್ಯಗಳೂ (ಪ್ರ.ಶ. ಆರಂಭಿಕ ಕಾಲ) ಮೇಲ್ಭಾಗದ ಸ್ತರಗಳಲ್ಲಿ ಕುಷಾಣ ರಾಜ ವಾಸುದೇವನ (2–3ನೆಯ ಶತಮಾನ) ನಾಣ್ಯಗಳನ್ನು ಹೋಲುವ ನಾಣ್ಯಗಳೂ ದೊರೆತಿವೆ. ಈ ಹಂತದ ಮೇಲ್‍ಸ್ತರಗಳಿಂದ ದೊರೆತ ಪ್ರಾಚ್ಯಾವಶೇಷಗಳೆಂದರೆ–ಬೀಸುವಕಲ್ಲು, ಹರಕೆ ತಟ್ಟೆ, ಮಣ್ಣುಗಾರೆಯಿಂದ ಮಾಡಿದ ಬೋಧಿಸತ್ವ ಮೈತ್ರೇಯನ ಶಿಲ್ಪ. ಕೊನೆಯದು ಮಥುರಶೈಲಿಯಲ್ಲಿದೆ. ಈ ಹಂತದ ಅನಂತರ ಇಲ್ಲಿ ಕೆಲಶತಮಾನಗಳ ಕಾಲ ಜನವಸತಿ ಇರಲಿಲ್ಲ. 11ನೆಯ ಶತಮಾನದ ಕೊನೆಯ ಭಾಗದಲ್ಲಿ ಇಲ್ಲಿ ಮತ್ತೆ ವಸತಿ ಆರಂಭವಾಯಿತು (5ನೆಯ ಹಂತ). ಈ ಕಾಲದ ಮನೆಗಳು ಹಿಂದಿನ ಹಂತಗಳ ಇಟ್ಟಿಗೆಚೂರುಗಳನ್ನು ಬಳಸಿ ಕಟ್ಟಲ್ಪಟ್ಟವು. ಮಂದ ಕೆಂಪುಬಣ್ಣದ ಪಾತ್ರೆಗಳು ಸಾಮಾನ್ಯವಾಗಿದ್ದು ಅಪರೂಪವಾಗಿ ಮುದ್ರೆ ಮತ್ತು ವರ್ಣಚಿತ್ರಗಳಿಂದ ಅಲಂಕೃತವಾಗಿವೆ. ನೀಲಿ, ಕಂದು ಮತ್ತು ಹಸುರು ಬಣ್ಣಗಳಲ್ಲಿ ಬಳ್ಳಿಗಳ ಚಿತ್ರವನ್ನು ಇವುಗಳ ಮೇಲೆ ಬಿಡಿಸಲಾಗಿದೆ. ಈ ಹಂತದಲ್ಲಿ ಬಲ್ಬನ್‍ನ (1266–77) ನಾಣ್ಯಗಳು ಸಿಕ್ಕಿವೆ. ಈ ಹಂತ ಸು. 15ನೆಯ ಶತಮಾನದಲ್ಲಿ ಕೊನೆಗೊಂಡಿತು.

ಮೊದಲು ಈ ಹಂತಗಳ ಕಾಲಮಾನವನ್ನು ಮಣ್ಪಾತ್ರೆ, ನಾಣ್ಯ ಹಾಗೂ ಸ್ತರಕ್ರಮಗಳ ಆಧಾರದ ಮೇಲೆ ನಿರ್ಧರಿಸಲಾಗಿತ್ತು. ಈಗ ಈ ಹಂತಗಳಿಗೆ ಇಂಗಾಲ–14 ಕಾಲಮಾನಗಳು ಲಭ್ಯವಾಗಿವೆ. ಇದರಂತೆ 1ನೆಯ ಹಂತ ಪ್ರ.ಶ.ಪೂ.ಸು.2ನೆಯ ಸಹಸ್ರಮಾನದ ಪೂರ್ವಾರ್ಧಕ್ಕೆ ಸೇರುತ್ತದೆ. 2ನೆಯ ಹಂತ ಪ್ರ.ಶ.ಪೂ. 11–8ನೆಯ ಶತಮಾನ; 3ನೆಯ ಹಂತ ಪ್ರ.ಶ.ಪೂ. 6–3ನೆಯ ಶತಮಾನ; 4ನೆಯ ಹಂತ ಪ್ರ.ಶ.ಪೂ.2ನೆಯ ಶತಮಾನ–ಪ್ರ.ಶ.3ನೆಯ ಶತಮಾನ; 5ನೆಯ ಹಂತ 11ನೆಯ ಶತಮಾನದ ಅಂತ್ಯ–15ನೆಯ ಶತಮಾನದ ಪೂರ್ವಾರ್ಧ.

ಪುರಾಣಗಳ ಪ್ರಕಾರ ಹಸ್ತಿನಾಪುರ ಪಟ್ಟಣ ಗಂಗೆಯಲ್ಲಿ ಕೊಚ್ಚಿಹೋದ ಅನಂತರ ನಿಚಕ್ಷು ರಾಜ ಈ ಊರನ್ನು ಬಿಟ್ಟು ಕೌಶಾಂಬಿಯಲ್ಲಿ ರಾಜ್ಯ ಆರಂಭಿಸಿದ. ಹಸ್ತಿನಾಪುರ ಹಾಗೂ ಕೌಶಾಂಬಿ ಉತ್ಖನನಗಳಲ್ಲಿ ವರ್ಣಚಿತ್ರಿತ ಬೂದುಬಣ್ಣದ ಪಾತ್ರೆಗಳು ದೊರಕಿರುವುದು ಈ ಘಟನೆಯನ್ನು ಪುಷ್ಟೀಕರಿಸುವಂತಿದೆ. ಈ ಪಾತ್ರೆಗಳ ಆಧಾರದ ಮೇಲೆ ಮಹಾಭಾರತದ ಈ ಘಟನೆಯನ್ನು ಪ್ರ.ಶ.ಪೂ.9ನೆಯ ಶತಮಾನಕ್ಕೆ ಸಮೀಕರಿಸಲಾಗಿದೆ. (ಎಸ್.ಪಿ.ಐ.)

**ಹಳೇಬೀಡು:** ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಸ್ಥಳ. ಬೇಲೂರಿನ ಪೂರ್ವಕ್ಕೆ 16ಕಿಮೀ ದೂರದಲ್ಲಿದೆ. ಸು.10ನೆಯ ಶತಮಾನದಲ್ಲಿ ನಿರ್ಮಿತವಾಯಿತೆನ್ನಲಾದ ದೊಡ್ಡ ಕೆರೆಯಿಂದಾಗಿ ಈ ಊರಿಗೆ ದೋರಸಮುದ್ರ ಎಂಬ ಹೆಸರು ಬಂದಿತೆಂದು ತಿಳಿದುಬರುತ್ತದೆ. ಈ ಊರಿಗೆ 950ರ ವೇಳೆಗೆ ದ್ವಾರಾವತಿ ಎಂಬ ಹೆಸರು ಬಳಕೆಗೆ ಬಂದಿದ್ದುದಾಗಿ ಶಾಸನಗಳಲ್ಲಿ ಹೇಳಲಾಗಿದೆ. ಹೊಯ್ಸಳರ ಕಾಲದಲ್ಲಿ ಈ ಊರು ಬಸದಿ, ದೇವಾಲಯಗಳಿಂದ ತುಂಬಿ ಅತಿ ವೈಭವದಿಂದ ವಿಜೃಂಭಿಸಿದ ನಗರವಾಗಿತ್ತು. ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಈ ಊರು ಅತ್ಯಂತ ವಿಸ್ತಾರಗೊಂಡು ಸಂಪದ್ಭರಿತ ನಗರವಾಗಿ ವೈಭವದ ಪರಾಕಾಷ್ಠತೆಯನ್ನು ಮುಟ್ಟಿತ್ತು. ಆದರೆ 1310ರಲ್ಲಿ ಅಲಾಉದ್ದೀನನ ದಂಡನಾಯಕ ಮಲ್ಲಿಕ್‍ಕಾಫರ್ ಈ ನಗರವನ್ನು ಮುತ್ತಿ ಬಲ್ಲಾಳನನ್ನು ಸೋಲಿಸಿ ಕೊಳ್ಳೆ ಹೊಡೆದಾಗ ತತ್ತರಿಸಿಹೋದ ಈ ಊರು ಮತ್ತೆ ಚೇತರಿಸಿಕೊಳ್ಳಲಾಗಲಿಲ್ಲ. ಅನಂತರದಲ್ಲಿ ಈ ಊರು ಹಳೇಬೀಡು ಎಂಬ ಹೆಸರು ಪಡೆಯಿತು. ಇಲ್ಲಿ ಈಗ ಉಳಿದುಬಂದಿರುವ ದೇವಾಲಯಗಳಲ್ಲೆಲ್ಲ ಅತ್ಯುತ್ತಮವಾದುದೆಂದರೆ ಹೊಯ್ಸಳೇಶ್ವರ ದೇವಾಲಯ (**ನೋಡಿ–ಹೊಯ್ಸಳ ವಂಶ; ವಾಸ್ತುಶಿಲ್ಪ**). ಸಾಮಾನ್ಯವಾಗಿ ಪಂಚಲಿಂಗೇಶ್ವರ ಎಂದು ಗುರುತಿಸಲ್ಪಡುವ ಈ ದೇವಾಲಯಗಳ ಸಮೂಹ, ಇಂದಿನ ಹಳೇಬೀಡು ಗ್ರಾಮದ ಪ್ರವಾಸಿ ಬಂಗಲೆಯ ಪಶ್ಚಿಮಕ್ಕೆ ಅದರ ಪೌಳಿ ಗೋಡೆಗೆ ಹೊಂದಿಕೊಂಡಂತೆ ಇದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಇಲ್ಲಿ ಉತ್ಖನನ ನಡೆಸುವುದಕ್ಕೆ ಮೊದಲು ಐದು ಮಣ್ಣಿನ ದಿಬ್ಬಗಳಿದ್ದು ಅವುಗಳಲ್ಲಿ ಮೂರರಲ್ಲಿ ಶಿವಲಿಂಗದ ಪಾಣಿಪೀಠ ಕಂಡಿದ್ದರಿಂದ ಪ್ರಾಯಶಃ ಪಂಚಲಿಂಗೇಶ್ವರ ಎಂದು ಕರೆಯಲಾಗಿದೆ. *

1986-87ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಇಲ್ಲಿ ವಿಸ್ತೃತ ಉತ್ಖನನ ನಡೆಸಿ ಹೊಯ್ಸಳ ಅಲಂಕೃತ ಶೈಲಿಯ, ಮಹಾದ್ವಾರ ಸಹಿತ, ದಕ್ಷಿಣೋತ್ತರವಾಗಿ ಆಯೋಜಿಸಿದ, ಪೂರ್ವಾಭಿಮುಖವಾಗಿ ನಿರ್ಮಿಸಲ್ಪಟ್ಟ ಮೂರು ಶೈವ ದೇಗುಲಗಳನ್ನೂ ಅಲ್ಲಿಯೇ ಪ್ರಾಕಾರದ ಹೊರಗಿನ ಗೋಡೆಗೆ ಹೊಂದಿಕೊಂಡಂತೆ ಆಗ್ನೇಯ ದಿಕ್ಕಿನಲ್ಲಿ ಪಶ್ಚಿಮಾಭಿಮುಖವಾಗಿ ನಿರ್ಮಿಸಲ್ಪಟ್ಟ ಹೆಚ್ಚು ಭಗ್ನಗೊಂಡ ಸೋಮನಾಥ ವಜ್ರೇಶ್ವರ (ಅಪ್ರಕಟಿತ ಶಾಸನದಲ್ಲಿ ಹೇಳಿರುವಂತೆ) ಎಂಬ ಜೈನ ದೇವಾಲಯದ ಅವಶೇಷಗಳನ್ನೂ ಹೊರತೆಗೆದು ಸಂರಕ್ಷಿಸಿದೆ.

ನಂದಿ ಮಂಟಪ, ಹಳೇಬೀಡು

ಉತ್ಖನನದಲ್ಲಿ ದೊರೆತ ದೇಗುಲಗಳಲ್ಲಿ ದ್ವಾರಮಂಟಪಕ್ಕೆ ಎದುರಾಗಿ ನಿರ್ಮಿತವಾಗಿರುವ ದೇವಾಲಯ ಎಲ್ಲಕ್ಕಿಂತ ದೊಡ್ಡದಾಗಿದ್ದು ತನ್ನದೇ ಆದ ಬೃಹತ್ ನಂದಿಮಂಟಪವನ್ನು ಹೊಂದಿದ್ದು ಪ್ರಾಯಶಃ ಹಳೇಬೀಡಿನ ಶಾಸನಗಳಲ್ಲಿ ಉಲ್ಲೇಖಗೊಂಡ ನಖರೇಶ್ವರ ಅಥವಾ ನಗರೇಶ್ವರ ದೇಗುಲವಿರಬಹುದು. ಈ ದೇಗುಲಕ್ಕೆ ಹೊಂದಿಕೊಂಡಂತೆ ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿ ಇನ್ನೆರಡು ಶೈವ ದೇವಾಲಯಗಳಿವೆ. ಈ ಎರಡು ಗುಡಿಗಳಿಗೂ ನಂದಿಮಂಟಪಗಳು ಕಂಡುಬಂದಿಲ್ಲ.

ಉತ್ಖನನದಲ್ಲಿ ದೇಗುಲಗಳ ಜಗತಿ ಮತ್ತು ಮೂಲ ದೇವಾಲಯದ ಸ್ವಲ್ಪಮಟ್ಟಿನ ಅಧಿಷ್ಠಾನ ಮಾತ್ರ ಬೆಳಕಿಗೆ ಬಂದಿದ್ದು ಅವುಗಳಲ್ಲಿ ದಕ್ಷಿಣ ದೇವಾಲಯದ ಏಳು ಸ್ತರದ ಅಲಂಕೃತ ಪಟ್ಟಿಕೆಗಳು ಸುಸ್ಥಿತಿಯಲ್ಲಿ ದೊರೆತಿವೆ. ಈ ಪಟ್ಟಿಕೆಗಳಲ್ಲಿ ಆನೆ, ಕುದುರೆ, ಸಿಂಹ, ಲತಾ ವರ್ತುಲಗಳು, ಮಕರ ಮತ್ತು ಹಂಸ ಮುಖ್ಯವಾಗಿದ್ದು, ಕೆತ್ತನೆಯಲ್ಲಿ ಸ್ಥಳೀಯ ಕೇದಾರೇಶ್ವರ, ಬ್ರಹ್ಮೇಶ್ವರ (ವಿರಕ್ತಮಠ) ಕೆತ್ತನೆಗಳನ್ನು ಮೀರಿಸುತ್ತವೆ. ಇವುಗಳು ಗಾತ್ರದಲ್ಲಿ ಹೊಯ್ಸಳೇಶ್ವರದ ಪಟ್ಟಿಕೆಗಳಿಗಿಂತ ತುಸುವೇ ಕಿರಿದಾದರೂ ಕೆತ್ತನೆಯಲ್ಲಿ ಇನ್ನೂ ಸೂಕ್ಷ್ಮತೆಯಿಂದ ಕೂಡಿವೆ. ಈ ಪಟ್ಟಿಕೆಗಳ ಜೊತೆಗೆ ರಾಮಾಯಣ ಹಾಗೂ ಮಹಾಭಾರತ ಕಾವ್ಯಗಳಿಂದ ಆಯ್ದ ಭಾಗಗಳನ್ನು ಕ್ರಮವಾಗಿ ದಕ್ಷಿಣ ಹಾಗೂ ಉತ್ತರ ಭಾಗಗಳಲ್ಲಿ ನಕ್ಷತ್ರಾಕಾರದ ತಲವಿನ್ಯಾಸಕ್ಕೆ ಹೊಂದಿಕೊಂಡಂತೆ ರೂಪಿಸಿ ಅಳವಡಿಸಲಾಗಿದೆ. ಈ ಕಥಾನಕಗಳು ಉಳಿದ ದೇಗುಲಗಳಲ್ಲಿ ಕಂಡುಬರುವಂತೆ ಮಹಾಮಂಟಪದ ಆಗ್ನೇಯ ದಿಕ್ಕಿನಿಂದ ಶುರುವಾಗಿ ಸುಕನಾಸಿ, ಗರ್ಭಗೃಹವನ್ನು ಬಳಸಿಕೊಂಡು ಅದೇ ಮಹಾಮಂಟಪದ ವಾಯವ್ಯ ದಿಕ್ಕಿನಲ್ಲಿ ಕೊನೆಗೊಂಡಿವೆ. ಪ್ರಸ್ತುತ ಉಳಿದಿರುವ ರಾಮಾಯಣದ ಸನ್ನಿವೇಶಗಳಲ್ಲಿ ಕಿಷ್ಕಿಂಧಾ ಕಾಂಡದಲ್ಲಿ ಬರುವ ವಾನರರ ಸೀತಾನ್ವೇಷಣೆ, ಹನುಮಂತನ ಲಂಕಾ ದಹನ, ಯುದ್ಧ ಕಾಂಡದ ರಾಕ್ಷಸ ಸಂಹಾರ ಇತ್ಯಾದಿ ಪ್ರಮುಖವಾದುವು. ಮಹಾಭಾರತದಲ್ಲಿ ಉತ್ತರ ಗೋಗ್ರಹಣ, ಅರ್ಜುನ ಸಂಪ್ತಕರೊಂದಿಗೆ ಯುದ್ಧ ಮಾಡುವ ಚಿತ್ರಣವನ್ನು ಕಾವ್ಯಗಳಿಂದ ಕಾಣಬಹುದು. ಪ್ರತಿಯೊಂದು ಶಿಲ್ಪವನ್ನೂ ಬಹು ಸೂಕ್ಷ್ಮವಾಗಿ, ಜಾಣ್ಮೆಯಿಂದ ಕೆತ್ತಿರುವುದು ಮತ್ತು ಅವುಗಳ ಹೊಸತನ ಅಚ್ಚರಿ ಮೂಡಿಸುತ್ತದೆ.

ಸಾಮಾನ್ಯವಾಗಿ ಇತರ ದೇವಾಲಯಗಳಲ್ಲಿರುವಂತೆ ಈ ದೇಗುಲಗಳಲ್ಲಿಯೂ ವಿವಿಧ ಶೈವ, ವೈಷ್ಣವದ ಮೂರ್ತಿಗಳೂ ಮದನಿಕೆ ಮತ್ತಿತರ ಭಿತ್ತಿಶಿಲ್ಪಗಳೂ ಇವೆ. ಎಲ್ಲ ದೇಗುಲಗಳಲ್ಲಿಯೂ ಗರ್ಭಗೃಹ ಭಾಗದ ಜಗತಿಯಲ್ಲಿ, ನಕ್ಷತ್ರದ ಮೊನೆಗಳಿಗೆ ಹೊಂದಿಕೊಂಡಂತೆ ದಿಗ್ಗಜಗಳನ್ನು ಹೊಂದಿಸಿದ್ದು ಅವುಗಳಲ್ಲಿ ಕೆಲವು ಅದೇ ಸ್ಥಳಗಳಲ್ಲಿವೆ. ಎರಡು ಗುಡಿಗಳಲ್ಲಿ ಈಗಲೂ ಶಿವಲಿಂಗ ಪೀಠವನ್ನು ಗರ್ಭಗೃಹದಲ್ಲಿ ಕಾಣಬಹುದು.

ಮಧ್ಯದಲ್ಲಿರುವ ದೇಗುಲದ ಎದುರು ಸು.5ಮೀ ದೂರದಲ್ಲಿ ಸಮಪ್ರಮಾಣದ ಎರಡು ಭಾಗಗಳಿಂದಾದ ದ್ವಾರಮಂಟಪವಿದೆ. ಈ ಮಂಟಪವನ್ನು ಒಳಗೊಂಡಂತೆ ಮತ್ತು ನಡುವಿನ ದೇವಾಲಯವನ್ನು ಆವರಿಸುವಂತೆ ಇದ್ದ ಪ್ರಾಕಾರದ ಅವಶೇಷಗಳು ದೊರಕಿದ್ದು ಈ ಪ್ರಾಕಾರದ ಒಳಗೆ ಆಗ್ನೇಯ ದಿಕ್ಕಿನಲ್ಲಿ ಪಾಕಶಾಲೆಯ(?) ಅವಶೇಷಗಳೂ ಇವೆ. ಇದಲ್ಲದೆ ದೇವಾಲಯಗಳ ನಿರ್ಮಾಣ ಕಾಲದಲ್ಲಿ ಕೆಲಸಗಾರರಿಗೆ ಕುಡಿಯುವ ನೀರಿನ ಅನುವು ಮಾಡಿಕೊಡಲು ನಿರ್ಮಿಸಿದ್ದ ನೀರ್ಗಾಲುವೆಗಳ ಅವಶೇಷಗಳೂ ದೊರೆತಿವೆ. ಈ ದೇವಾಲಯಗಳ ಭಿತ್ತಿಶಿಲ್ಪಗಳು ಹೊಯ್ಸಳೇಶ್ವರ ದೇವಾಲಯದ ಆವರಣದಲ್ಲಿರುವ ಸ್ಥಳೀಯ ವಸ್ತುಸಂಗ್ರಹಾಲಯದಲ್ಲಿದ್ದು, ಕೆತ್ತನೆಯ ಆಧಾರದ ಮೇಲೆ ಈ ದೇಗುಲಗಳ ಕಾಲವನ್ನು ಸು.1121-75ರ ಒಳಗೆ ಎಂದು ನಿರ್ಣಯ ಮಾಡಬಹುದು. ಇದಕ್ಕೆ ಪೂರಕವಾಗಿ ಇಲ್ಲಿಯೇ ದೊರೆತ ಎರಡನೆಯ ನರಸಿಂಹನ (1220-35) ಕಾಲದ ಶಾಸನವೊಂದು ಜೈನದೇಗುಲದ ಜೀರ್ಣೋದ್ಧಾರಕ್ಕೆ ನೀಡಿದ ದಾನಗಳ ಬಗ್ಗೆ ತಿಳಿಸುವುದರಿಂದ ಮತ್ತು ನಗರೇಶ್ವರ ದೇಗುಲಗಳ ಹೊರಗಿನ ಜೈನ ದೇವಾಲಯದ ಶಾಸನವಾದುದರಿಂದ ಮೇಲೆ ತಿಳಿಸಿದ ಕಾಲವನ್ನು ನಿರ್ಣಯ ಮಾಡಬಹುದು. (ಕೆ.ಟಿ.ಎಂ.)

**ಹಳ್ಳೂರು:** ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿ ತುಂಗಭದ್ರಾ ನದೀತೀರದಲ್ಲಿರುವ ಪ್ರಾಗೈತಿಹಾಸಿಕ ನೆಲೆ; ರಾಣೆಬೆನ್ನೂರಿಗೆ 45 ಕಿಮೀ ದೂರದಲ್ಲಿದೆ. ಈ ಪ್ರದೇಶದಲ್ಲಿರುವ ಶಾಸನೋಕ್ತ ಹಳ್ಳವೂರು, ವಿಜಯಸಮುದ್ರ, ವಿಜಯಪುರವನ್ನು ಹಳ್ಳೂರೆಂದು ಊಹಿಸಲಾಗಿದೆ. ಈ ಪ್ರದೇಶ ಬೆಳಗುತ್ತಿ ಸಿಂದರ ಆಧಿಪತ್ಯ ಸ್ಥಳವಾಗಿತ್ತು. ಹೊಯ್ಸಳರ ಅಧೀನ ಅರಸರಾಗಿದ್ದ ಇವರು ಹಳ್ಳೂರನ್ನು ಒಂದು ಸೈನಿಕ ಠಾಣೆಯಾಗಿಟ್ಟು ಕೊಂಡಿರಬೇಕು. ಈ ಊರಿನಲ್ಲಿ ಶ್ರೀರಂಗನಾಥ ದೇವಾಲಯವಿದೆ.

ಇಲ್ಲಿ ನಡೆಸಿದ ಉತ್ಖನನಗಳಿಂದಾಗಿ ನವಶಿಲಾಯುಗ ಸಂಸ್ಕೃತಿಯಿಂದ ಮೊದಲುಗೊಂಡು ಬೃಹತ್ ಶಿಲಾಯುಗ ಸಂಸ್ಕೃತಿಯವರೆಗಿನ ಚಿತ್ರಣ ಸಾಧ್ಯವಾಗಿದೆ. ನವಶಿಲಾಯುಗ ಸಂಸ್ಕೃತಿಯಲ್ಲಿ ಆದಿಭಾಗ (ಪ್ರ.ಶ.ಪೂ.ಸು.1710) ಹಾಗೂ ಅಂತ್ಯಭಾಗ (ಪ್ರ.ಶ.ಪೂ.ಸು.1425-1195) ಎಂದು ಎರಡು ಹಂತಗಳನ್ನು ಗುರುತಿಸಬಹುದಾಗಿದೆ. ಆದಿಭಾಗದ ಪದರದಲ್ಲಿ ಕಪ್ಪುಬಣ್ಣದ ಮಡಕೆಗಳೂ ಅವುಗಳ ಮೇಲೆ ಕೆಂಪುಬಣ್ಣದ ಅಲಂಕರಣೆಗಳೂ ಕೆಂಪುಬಣ್ಣದ ಮಡಕೆಗಳೂ ಅವುಗಳ ಮೇಲೆ ನೇರಳೆಬಣ್ಣದ ಅಲಂಕರಣೆಗಳೂ ಕಂಡುಬಂದಿವೆ. ನಯಗೊಳಿಸಿದ ಕಲ್ಲಿನ ಕೊಡಲಿಗಳು ಈ ಪದರದಲ್ಲಿ ಹೇರಳವಾಗಿ ಸಿಕ್ಕಿಲ್ಲ. ಕಟ್ಟಡಗಳ ಅವಶೇಷಗಳೂ ಸಿಕ್ಕಿಲ್ಲ. ಕ್ವಾರ್ಟ್ಜ್ ಕಲ್ಲಿನ ಚಕ್ಕೆಗಳು ದೊರೆತಿವೆ. ತಾಮ್ರ-ಶಿಲಾಯುಗ ಉದ್ದಮದಲ್ಲಿ ವಿಶೇಷವಾಗಿ ಸಿಗುವ ಅಲಗುಗಳು ಇಲ್ಲಿ ದೊರೆತಿರುವುದು ಗಮನಾರ್ಹ. ಆದರೆ ಲೋಹದ ವಸ್ತುಗಳಾವುವೂ ಸಿಕ್ಕಿಲ್ಲ.

ಅಂತ್ಯಭಾಗದಲ್ಲಿ ನವಶಿಲಾಯುಗೀನ ಸಂಸ್ಕೃತಿಯ ಚಿತ್ರಣ ಇನ್ನೂ ಸ್ಪಷ್ಟ. ವೃತ್ತಾಕಾರದ ಕಟ್ಟಡದ ತಳಪಾಯ, ದಮ್ಮಸು ಮಾಡಿದ ನೆಲದ ಭಾಗ, ಒಲೆ, ಬೆಂಕಿ ಉರಿಸುತ್ತಿದ್ದ ಸ್ಥಳ ಇತ್ಯಾದಿಗಳನ್ನು ಗುರುತಿಸಲಾಗಿದೆ. ವೃತ್ತಾಕಾರದ ಕಟ್ಟಡದ ಮಧ್ಯದಲ್ಲಿ ಎರಡು ಕುಣಿಗಳು ಕಂಡುಬಂದಿವೆ. ಇವುಗಳಲ್ಲಿ ಬಹುಶಃ ನೆಟ್ಟಕಂಬದ ಮೇಲೆ ಇಳಿಜಾರಾದ ಮಾಡು ನಿರ್ಮಿತವಾಗಿತ್ತು. ಈ ನೆಲೆಯಲ್ಲಿ ನಯಗೊಳಿಸಿದ ಕಲ್ಲಿನ ಕೊಡಲಿಗಳೂ ತಲೆಗೆ ಊರೆಯಾಗಿಟ್ಟು ಕೊಳ್ಳುತ್ತಿದ್ದಿರಬಹುದಾದ ತಲೆಯಾಸರೆ ಸಿಕ್ಕಿವೆ. ಕೈಯಿಂದ ಮಾಡಿದ ಮಡಕೆ ಕುಡಿಕೆಗಳೂ ಶವಸಂಸ್ಕಾರದಲ್ಲಿ ಉಪಯೋಗಿಸುತ್ತಿದ್ದ ಮಣ್ಣಿನ ದೊಡ್ಡ ಪಾತ್ರೆಗಳೂ ಸಿಕ್ಕಿವೆ. ಇಂಥ ಪಾತ್ರೆಗಳಲ್ಲಿ ಎಲುಬುಗಳನ್ನಿಟ್ಟು, ಅವುಗಳ ಬಾಯಿಗಳನ್ನು ಒಂದಕ್ಕೊಂದು ಸೇರಿಸಿಬಿಡುತ್ತಿದ್ದರು. ಮಣ್ಣಿನಿಂದ ಮಾಡಿದ ಸುಟ್ಟ ಮಣಿಗಳೂ ಚಿಪ್ಪಿನಿಂದ ಮಾಡಿದ ಹಾಗೂ ಸಾಬೂನುಗಲ್ಲಿನಿಂದ ಮಾಡಿದ ಮಣಿಗಳೂ ಸಾಕಷ್ಟು ಸಿಕ್ಕಿವೆ. ಎಲುಬಿನಿಂದ ತಯಾರಿಸಿದ ದಬ್ಬಳದಂಥ ಉಪಕರಣಗಳೂ ದೊರೆತಿವೆ. ಎರಡು ಅಲಗುಳ್ಳ ತಾಮ್ರದ ಕೊಡಲಿ (ಪರಶುವಿನಂಥ ಕೊಡಲಿ), ಮೀನು ಹಿಡಿಯಲು ಬಳಸುವ ಗಾಳಗಳೂ ಕಂಡುಬಂದಿವೆ. ಸುಟ್ಟ ಎಲುಬಿನ ಚೂರುಗಳೂ ಸುಟ್ಟ ರಾಗಿಕಾಳುಗಳೂ ದೊರೆತಿದ್ದು ಇವು ಆ ಕಾಲದ ಜನರ ಆಹಾರ ವಿಧಾನದ ಬಗೆಗೆ ವಿಶೇಷ ಮಾಹಿತಿ ನೀಡುತ್ತವೆ (ರಾಗಿಯ ಅತ್ಯಂತ ಪ್ರಾಚೀನ ಕಾಳುಗಳು ದೊರೆತದ್ದು ಈ ಸ್ಥಳದಲ್ಲಿ ಎಂಬುದನ್ನು ಇಲ್ಲಿ ಗಮನಿಸಬೇಕು: ಪ್ರ.ಶ.ಪೂ.ಸು.1600). ಈ ಎಲ್ಲ ವಸ್ತು ವಿಶೇಷಗಳನ್ನು ಆಧರಿಸಿ ಈ ಪ್ರದೇಶದಲ್ಲಿದ್ದ ನವಶಿಲಾಯುಗದ ಜನರ ಜೀವನಕ್ರಮ, ಆಹಾರ ಪದ್ಧತಿ, ಪ್ರಾಣಿ ಸಾಕಣೆ, ಕೃಷಿ, ಕೈಗಾರಿಕೆ, ಚಾಪೆ ಹೆಣಿಗೆ, ಮೀನುಗಾರಿಕೆ ಇತ್ಯಾದಿ ಚಿತ್ರಿಸಬಹುದು. ಶವಸಂಸ್ಕಾರ ಪದ್ಧತಿಯನ್ನು ಗಮನಿಸಿದರೆ ಆ ಜನರಿಗೆ ಬಹುಶಃ ಪುನರ್ಜನ್ಮದಲ್ಲಿ ನಂಬಿಕೆಯಿದ್ದಿರಬೇಕು. ನವಶಿಲಾಯುಗ ಸಂಸ್ಕೃತಿಯ ಅನಂತರ ಪ್ರ.ಶ.ಪೂ.ಸು.1000ರಲ್ಲಿ ಬೃಹತ್ ಶಿಲಾಯುಗೀನ ಜನಜೀವನ ಆರಂಭವಾಯಿತು. ಸಮಾಧಿ ರಚನೆಯಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸುವುದು, ವಿವರಪೂರ್ಣವಾದ ಶವಸಂಸ್ಕಾರ ಪದ್ಧತಿ, ಚರಕದ ಮೇಲಿಟ್ಟು ರಚಿಸಿದ ಕಪ್ಪು-ಕೆಂಪು ಮಡಕೆ ಕುಡಿಕೆಗಳ ಬಳಕೆ, ಕಬ್ಬಿಣದ ಆಯುಧೋಪಕರಣಗಳ ಉಪಯೋಗ (ಬಾಣದ ಮೊನೆ, ಭರ್ಜಿ, ಚಾಕು ಇತ್ಯಾದಿ) ಮುಂತಾದವು ಇಲ್ಲಿಯ ಬೃಹತ್ ಶಿಲಾಯುಗೀನ ಸಂಸ್ಕೃತಿಯ ಕೆಲವು ಲಕ್ಷಣಗಳು. ಇವಲ್ಲದೆ ಹಳ್ಳೂರಿನಲ್ಲಿ ಕಬ್ಬಿಣದ ಉಪಕರಣಗಳಿಗೆ ಅಂಟಿಕೊಂಡಿದ್ದ ಬತ್ತದ ಹೊಟ್ಟು ಪತ್ತೆಯಾಗಿದ್ದು, ಇದರಿಂದ ಆ ಕಾಲದ ಆಹಾರ ಪದ್ಧತಿಯ ಬಗೆಗೆ ಮಾಹಿತಿ ದೊರೆಯುತ್ತದೆ. ಇಲ್ಲಿ ದೊರೆತ ಕಬ್ಬಿಣದ ಆಯುಧೋಪಕರಣಗಳ ಕಾಲ ಪ್ರ.ಶ.ಪೂ.ಸು.1000. (ಎಚ್.ಆರ್.ಆರ್.ಬಿ.)

**ಹಾಲಿನ್‌ಷಿಡ್, ರ್‍ಯಾಫೆಲ್:** 1580. ಇಂಗ್ಲೆಂಡಿನ ಇತಿಹಾಸ ಬರೆಹಗಾರ. ಪ್ರಾಯಃ ಷೆಫೈರ್‌ನಲ್ಲಿ ಹುಟ್ಟಿದ. ಲಂಡನ್‌ನಲ್ಲಿ ರೆಜಿನಲ್ಡ್ ವುಲ್ಫ್ ಎಂಬ ಜರ್ಮನ್ ಮುದ್ರಣಕಾರನ ಬಳಿ ಅನುವಾದಕನಾಗಿ ಕೆಲಸಕ್ಕೆ ಸೇರಿದ. ಜಾನ್‌ಲಿಲೆಂಡ್ (1506-52) ಎಂಬಾತ ಶೇಖರಿಸಿದ ಸಾಮಗ್ರಿಯನ್ನು ಬಳಸಿಕೊಂಡು ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಐರ್ಲೆಂಡಿನ ವೃತ್ತಾಂತಗಳು (ಕ್ರಾನಿಕಲ್) ಎಂಬ ಕೃತಿಯನ್ನು ರಚಿಸಿದ (1578). ಹಾಲಿನ್‌ಷಿಡ್‌ನ ವೃತ್ತಾಂತಗಳು ಎಂಬ ಹೆಸರಿನಲ್ಲಿಯೂ ಈ ಕೃತಿ ಪ್ರಸಿದ್ಧವಾಗಿದೆ. ಇದರಲ್ಲಿ ಕೆಲವು ಭಾಗಗಳನ್ನು

ಇತರರು ಬರೆದರು. ನೊವಾನ ಯುಗದಿಂದ ಸಮಕಾಲೀನ ಯುಗದವರೆಗಿನ ಚರಿತ್ರೆ ಇದರ ವಸ್ತು. ತಾನು ಬಳಸುವ ಅಂಶಗಳ ಮೂಲವನ್ನು ಸೂಚಿಸಿ ವಿಪುಲವಾದ ಸಾಮಗ್ರಿಯನ್ನು ನೀಡುವ ಈ ಕೃತಿ ಜನಪ್ರಿಯವಾಯಿತು. ಸ್ಪೆನ್ಸರ್‌ನನ್ನೊಳಗೊಂಡು ಅನೇಕ ಇಂಗ್ಲಿಷ್ ಸಾಹಿತಿಗಳು ಈ ಕೃತಿಯ ಸಾಮಗ್ರಿಯನ್ನು ತಮ್ಮ ಕೃತಿಗಳಿಗೆ ಆಕರವಾಗಿ ಬಳಸಿಕೊಂಡರು. ವಿಲಿಯಮ್ ಷೇಕ್‌ಸ್ಪಿಯರ್‌ನ ಐತಿಹಾಸಿಕ ನಾಟಕಗಳಿಗೆ ಈ ಗ್ರಂಥ ಮೂಲ ಸಾಮಗ್ರಿಯನ್ನು ಒದಗಿಸಿದೆ. ಪ್ರಾಟೆಸ್ಟೆಂಟ್ ದೃಷ್ಟಿಕೋನದಿಂದ ಪ್ರಭಾವಿತವಾಗಿ ರಚಿತವಾದ ಚಾರಿತ್ರಿಕ ಗ್ರಂಥವಿದು. ಶೈಲಿಯಲ್ಲಿ ಅಲ್ಲಲ್ಲಿ ಆಲಂಕಾರಿಕ ಪದಗಳ ಮೋಹ ಕಂಡುಬಂದರೂ ಸ್ಪಷ್ಟತೆಯನ್ನು ಗುರುತಿಸಬಹುದಾಗಿದೆ. (ಎಲ್.ಎಸ್.ಎಸ್.)

**ಹಾಲೇರಿ ಮನೆತನ:** ಕೊಡಗಿನಲ್ಲಿ ಸು.1633–1834ರ ಅವಧಿಯಲ್ಲಿ ಆಳುತ್ತಿದ್ದ ರಾಜಮನೆತನ. ಇವರ ರಾಜಧಾನಿ ಮಡಿಕೇರಿ. ಮೊದಲು ಹಾಲೇರಿ, ಸ್ವಲ್ಪಕಾಲ ನಾಲ್ಕುನಾಡು ರಾಜಧಾನಿಗಳಾಗಿದ್ದುವು. ಈ ವಂಶದ ರಾಜರು ತಾವು ಚಂದ್ರವಂಶದವರು, ಆಶ್ವಲಾಯನಸೂತ್ರ ಋಕ್ ಶಾಖೆಯವರು, ವೀರಶೈವಮತ ಧುರೀಣರು ಎಂದು ಕರೆದುಕೊಂಡಿದ್ದಾರೆ. ಈ ಅರಸರೂ ಒಡೆಯರು ಎಂಬ ಉತ್ತರನಾಮವನ್ನು ಬಳಸುತ್ತಿದ್ದರು. ಈ ವಂಶದ ವೀರರಾಜೇಂದ್ರ (1780–1809) ಬರೆಯಿಸಿದ ರಾಜೇಂದ್ರನಾಮೆ ಮತ್ತು ಹಲವು ಬ್ರಿಟಿಷರ ಬರೆಹಗಳು ಈ ವಂಶದ ಚರಿತ್ರೆಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸುತ್ತವೆ.

17ನೆಯ ಶತಮಾನದ ಆದಿಭಾಗದಲ್ಲಿ ವೀರರಾಜನೆಂಬ ಇಕ್ಕೇರಿಯ ರಾಜಕುಮಾರ ಜಂಗಮ ವೇಷದಲ್ಲಿ ಕೊಡಗಿಗೆ ಬಂದು ಮಡಿಕೇರಿ ಹತ್ತಿರದಲ್ಲಿರುವ ಹಾಲೇರಿಯಲ್ಲಿ ನೆಲೆಸಿದ. ಇವನೇ ಹಾಲೇರಿ ವಂಶದ ಮೂಲಪುರುಷ. ಅಪ್ಪಾಜಿರಾಜನ ಮಗ ಮುದ್ದುರಾಜ 1633–87ರ ವರೆಗೆ ಆಳಿದ. ಇವನು 1681ರಲ್ಲಿ ಮಡಿಕೇರಿಯಲ್ಲಿ ಅರಮನೆಯನ್ನೂ ಅದರ ಸುತ್ತ ಕೋಟೆಯನ್ನೂ ಕಟ್ಟಿಸಿದ. ಆ ಕಾಲದಲ್ಲಿ ಬಹುಶಃ ಬಲಯುತ ರಾಜನಾಗಿದ್ದ ಈತ ಪಿರಿಯಾಪಟ್ಟಣ ಮೈಸೂರು ಅರಸರಿಂದ ಧಾಳಿಗೆ ಒಳಗಾದ ಸಂದರ್ಭದಲ್ಲಿ ಅದನ್ನು ರಕ್ಷಿಸುವ ಮನಸ್ಸು ಮಾಡಿದ್ದ. ಮುದ್ದುರಾಜನಿಗೆ ದೊಡ್ಡವೀರಪ್ಪ (1687–1736), ಅಪ್ಪಾಜಿರಾಜ ಮತ್ತು ನಂದರಾಜ ಎಂಬ ಮೂವರು ಮಕ್ಕಳಿದ್ದರು. ದೊಡ್ಡವೀರಪ್ಪ ತಂದೆಯ ಮರಣಾನಂತರ ಪಟ್ಟಕ್ಕೆ ಬಂದ. ಈತ ಕೊಟ್ಟಾಯಂ ಅರಸ ವೀರವರ್ಮನನ್ನು ಯುದ್ಧದಲ್ಲಿ ಸೋಲಿಸಿ ಕೊಂದ. ಬಿದನೂರ ಸೋಮಶೇಖರನಾಯಕನೊಡನೆ ಮೈತ್ರಿ ಸಾಧಿಸಿದ. 49 ವರ್ಷಗಳ ಕಾಲ ಈತ ದಕ್ಷತೆಯಿಂದ ಆಳಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿ ತನ್ನ 78ನೆಯ ವಯಸ್ಸಿನಲ್ಲಿ ಮರಣಹೊಂದಿದ. ಇವನ ಅನಂತರ ಆಳಿದವನು ಚಿಕ್ಕವೀರಪ್ಪ (1736–66). ಇವನು ದುರ್ಬಲನಾಗಿದ್ದುದರಿಂದ, ಏಳುಸಾವಿರ ಸೀಮೆ, ಬೆಮ್ಮತ್ತಿ, ಮಲ್ಲಿಪಟ್ಟಣ ಮತ್ತು ಹೊಸೂರು ಹೋಬಳಿಗಳನ್ನು ಹೈದರ್‌ಅಲಿ ವಶಪಡಿಸಿಕೊಂಡ. ಚಿಕ್ಕವೀರಪ್ಪನ ಅನಂತರ ಹಾಲೇರಿಯ ಮುದ್ದುರಾಜ ಮತ್ತು ಹೊರಮಲೆಯ ಮುದ್ದಯ್ಯ ಇವರಿಬ್ಬರೂ ಸಮರಸದಿಂದ 1766–70ರ ವರೆಗೆ ಒಟ್ಟಿಗೆ ಆಡಳಿತ ನಡೆಸಿದರು. ಈ ಕಾಲದಲ್ಲಿ ಪಂಜ ಮತ್ತು ಬೆಳ್ಳಾರೆಗಳನ್ನು ಸೇರಿಸಿಕೊಂಡು ಕೊಡಗು ವಿಸ್ತರಿಸಲ್ಪಟ್ಟಿತು. ಮುದ್ದಯ್ಯನ ಮಗ ದೇವಪ್ಪರಾಜ 4 ವರ್ಷ ಆಳಿದ ಅನಂತರ ಸಿಂಹಾಸನಕ್ಕಾಗಿ ಹೋರಾಟ ನಡೆಯಿತು. ಹೊರಮಲೆಯವರು ದೇವಪ್ಪನನ್ನು ಸಿಂಹಾಸನಕ್ಕೇರಿಸಿದರೂ ಹಾಲೇರಿಯ ಒಂದನೆಯ ಲಿಂಗರಾಜೇಂದ್ರ (1774–80) ಐಗೂರಿಗೆ ಹೋಗಿ ಹೈದರನ ಸಹಾಯದಿಂದ ಸಿಂಹಾಸನ ಪಡೆದ. ತನ್ನ ಅಧಿಕಾರಾವಧಿಯಲ್ಲಿ ಮಲೆಯಾಳಕ್ಕೆ (ಕೇರಳ) ಸೇರಿಹೋಗಿದ್ದ ಕಲ್ಲಾತಿಯವರೆಗೆ ಕೊಡಗಿನ ಹಕ್ಕನ್ನು ಸಾಧಿಸಿಪಡೆದ. ಹೈದರನಿಗೆ ಹಣವನ್ನು ನೀಡಿ ಅದಕ್ಕೆ ಪ್ರತಿಫಲವಾಗಿ ಕೆಲವು ಸೀಮೆಗಳನ್ನು ಪಡೆದು ಕೊಡಗಿನ ಗಡಿಗಳನ್ನು ವಿಸ್ತರಿಸಿದ. ಇವನು 1780ರಲ್ಲಿ ನಿಧನಹೊಂದಿದ. ಇವನ ಮಕ್ಕಳು ಪ್ರಾಪ್ತವಯಸ್ಕರಾಗುವತನಕ ಅವರ ಪೋಷಕನಾಗುವ ನೆಪದಲ್ಲಿ ಹೈದರ್ ಕೊಡಗನ್ನು ವಶಪಡಿಸಿಕೊಂಡ. ರಾಜಕುಮಾರರನ್ನು ಮೊದಲು ಹಾಸನ ಜಿಲ್ಲೆಯ ಗೊರೂರಿನಲ್ಲಿಯೂ ಅನಂತರ ಪಿರಿಯಾಪಟ್ಟಣದಲ್ಲಿಯೂ ಸೆರೆಯಲ್ಲಿಟ್ಟಿದ್ದ. 1782ರಲ್ಲಿ ಕೊಡಗರು ದಂಗೆಯೆದ್ದರು. ಅದೇ ವರ್ಷ ಹೈದರನೂ ಮರಣಹೊಂದಿದ.

ಹೈದರನ ಅನಂತರ ಟಿಪ್ಪುಸುಲ್ತಾನ್ ಕೊಡಗಿನಲ್ಲಿ ತನ್ನ ಅಧಿಕಾರ ಸ್ಥಾಪಿಸಿದ. ಈ ಸಂದರ್ಭದಲ್ಲಿ ಪುನಃ ಕೊಡಗಿನಲ್ಲಿ ದಂಗೆಗಳುಂಟಾದಾಗ ಆ ದಂಗೆಗಳನ್ನು ಅಡಗಿಸಿ ಸೆರೆಸಿಕ್ಕವರನ್ನು ಶ್ರೀರಂಗಪಟ್ಟಣಕ್ಕೆ ಕಳಿಸಿದ. ಕೊಡಗು ಪ್ರದೇಶವನ್ನು ಮುಸ್ಲಿಂ ಜಮೀನ್ದಾರರಿಗೆ ಕೊಟ್ಟು ಉಳಿದ ಕೊಡಗರನ್ನೆಲ್ಲ ಕೊಡಗಿನಿಂದ ಉಚ್ಚಾಟಿಸುವಂತೆ ತಿಳಿಸಿದ. ವೀರರಾಜೇಂದ್ರ ತನ್ನ ಪತ್ನಿ ಮತ್ತು ಸಹೋದರರೊಡನೆ ಪಿರಿಯಾಪಟ್ಟಣದಿಂದ ತಪ್ಪಿಸಿಕೊಂಡು ಸ್ವಲ್ಪ ಅಧಿಕಾರ ಹಿಂದಕ್ಕೆ ಪಡೆದ. ಟಿಪ್ಪುವಿನೊಡನೆ ಯುದ್ಧದಲ್ಲಿ ತೊಡಗಿದ್ದ ಬ್ರಿಟಿಷರ ಸಹಾಯದಿಂದ ವೀರರಾಜೇಂದ್ರ ಪುನಃ ಸಿಂಹಾಸನವೇರಿದ. 1792ರಲ್ಲಿ ಲಾರ್ಡ್ ಕಾರ್ನ್‌ವಾಲೀಸ್ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಅನೇಕ ಜನ ಕೊಡಗರು ಕೊಡಗಿಗೆ ಹಿಂದಿರುಗಿದರು. ವೀರರಾಜೇಂದ್ರ ಕೊಡಗಿನ ರಾಜರಲ್ಲೆಲ್ಲ ಅತ್ಯಂತ ಪ್ರಮುಖನಾಗಿದ್ದವ. ಭೂಹಿಡುವಳಿಗಳನ್ನು ವಿಂಗಡಿಸಿ, ವೀರರಾಜೇಂದ್ರ ಶಿಸ್ತು ಆಡಳಿತ ಸುಧಾರಣೆಗೆ ವೀರರಾಜೇಂದ್ರ ಹುಕುಂನಾಮಾ ನಿರೂಪ ನೀಡಿದ. ಚಾರಿತ್ರಿಕ ದಾಖಲೆಯಾಗಿ ವಂಶಚರಿತ್ರೆಯಾದ ರಾಜೇಂದ್ರನಾಮೆಯನ್ನು ಖಾಸಾರಹಸ್ಯದ ಶಂಭಯ್ಯನಿಂದ ಬರೆಸಿದ. 1795ರಲ್ಲಿ ನಾಲ್ಕುನಾಡು ಅರಮನೆಯನ್ನೂ 1805ರಲ್ಲಿ ಮಡಿಕೇರಿಯ ಹೊಸ ಅರಮನೆಯನ್ನೂ ಕಟ್ಟಿಸಿದ. ಈತ ಟಿಪ್ಪುವನ್ನು ಸೋಲಿಸಿ ಕುಶಾಲನಗರ, ಬೆಪ್ಪುನಾಡು, ಭಾಗಮಂಡಲ– ಈ ಮೂರು ಕೋಟೆಗಳನ್ನು ವಶಪಡಿಸಿಕೊಂಡ.

1790ರಲ್ಲಿ ಮೂರನೆಯ ಮೈಸೂರು ಯುದ್ಧ ಪ್ರಾರಂಭವಾದಾಗ ತಲಚೇರಿಯಲ್ಲಿದ್ದ ಇಂಗ್ಲಿಷ್ ಮುಖಂಡ ರಾಬರ್ಟ್ ಟೇಲರ್ ಕೊಡಗಿನ ರಾಜನೊಡನೆ ಸಂಧಾನ ಆರಂಭಿಸಿ, ವ್ಯಾಪಾರ ಸೌಕರ್ಯಗಳನ್ನು ಪಡೆದ. ಬ್ರಿಟಿಷ್ ಕಂಪನಿ ಕೊಡಗಿನ ಸ್ವಾತಂತ್ರ್ಯ ರಕ್ಷಿಸಲು ಒಪ್ಪಿತು. ಇದೇ ಸಂದರ್ಭದಲ್ಲಿ ಇಂಗ್ಲಿಷರ ವಿರುದ್ಧ ಯುದ್ಧ ಮಾಡಿದರೆ ಕೆಲವು ಪ್ರದೇಶಗಳನ್ನು ಕೊಡುವುದಾಗಿ ಟಿಪ್ಪು ಹೇಳಿಕಳಿಸಿದ. ಆದರೆ ವೀರರಾಜೇಂದ್ರ ಟಿಪ್ಪುವಿನ ಆಹ್ವಾನವನ್ನು ಒಪ್ಪಲಿಲ್ಲ. ಸಿದ್ದೇಶ್ವರದ ಬಳಿ ಬ್ರಿಟಿಷ್ ಸೈನ್ಯ ಬೀಡುಬಿಟ್ಟಿದ್ದಾಗ ವೀರರಾಜ ನೀಲ್ ಅಬರ್‌ಕ್ರಾಂಬಿಯನ್ನು ಭೇಟಿಮಾಡಿದ. ಇದರ ನೆನಪಿಗಾಗಿ 1792ರಲ್ಲಿ ಒಂದು ಪಟ್ಟಣ ಕಟ್ಟಿಸಿ, ಅದಕ್ಕೆ ವೀರರಾಜಪೇಟೆ ಎಂದು ಹೆಸರಿಟ್ಟ. 1793ರಲ್ಲಿ ಬ್ರಿಟಿಷರೊಡನೆ ಪುನಃ ಒಪ್ಪಂದ ಮಾಡಿಕೊಂಡು ಅವರಿಗೆ ವರ್ಷಕ್ಕೆ 24,000 ರೂಪಾಯಿ ಪೊಗದಿ ಕೊಡಲು ಸ್ವಯಂಪ್ರೇರಣೆಯಿಂದ ಒಪ್ಪಿದ. ಮೊದಲ ರಾಣಿಗೆ ಗಂಡು ಮಕ್ಕಳಿಲ್ಲದ್ದರಿಂದ 1796 ಫೆಬ್ರವರಿಯಲ್ಲಿ ಮಹದೇವಮ್ಮಾಜಿಯನ್ನು ವಿವಾಹ ಮಾಡಿಕೊಂಡ. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಈತ ಬ್ರಿಟಿಷರಿಗೆ ಸಹಾಯ ಮಾಡಿದ. ಯುದ್ಧದಲ್ಲಿ ಟಿಪ್ಪು ಮಡಿದಾಗ ಅವನ ಯುದ್ಧಾಶ್ವ, ಪಲ್ಲಕ್ಕಿ ಮತ್ತು ಅಂಬಾರಿಗಳು ವೀರರಾಜೇಂದ್ರನಿಗೆ ಬಹುಮಾನವಾಗಿ ದೊರೆತವು. ಟಿಪ್ಪುವಿನ ಪ್ರದೇಶಗಳ ಹಂಚಿಕೆಯ ಅನಂತರ ಮೈಸೂರು ಮತ್ತು ಕೊಡಗುಗಳ ಗಡಿ ಸ್ಪಷ್ಟವಾಗಿ ಗುರುತಿಸಲ್ಪಟ್ಟವು.

ವೀರರಾಜೇಂದ್ರನ ಸಹೋದರ ಎರಡನೆಯ ಲಿಂಗರಾಜೇಂದ್ರ 1811–20ರವರೆಗೆ ಆಳಿದ. ಇವನ ಕಾಲದಲ್ಲಿ ಮಡಿಕೇರಿಯ ಅರಮನೆ (1812), ಓಂಕಾರೇಶ್ವರ ದೇವಸ್ಥಾನ (1820) ನಿರ್ಮಾಣಗೊಂಡವು. ಓಂಕಾರೇಶ್ವರ ದೇವಾಲಯಕ್ಕೆ ಶಿವಲಿಂಗವನ್ನು ಕಾಶಿಯಿಂದ ತರಿಸಿ 1820 ಮಾರ್ಚ್ 26ರಂದು ಪ್ರತಿಷ್ಠಾಪಿಸಿದ.

ಇವನ ಮಗ ವೀರರಾಜೇಂದ್ರ II ಹಾಲೇರಿ ವಂಶದ ಹಾಗೂ ಕೊಡಗಿನ ಕೊನೆಯ ದೊರೆ (1820–34). ಇವನು ಅನೇಕ ಕೊಲೆಗಳಿಗೆ ಕಾರಣನಾಗಿದ್ದುದರ ಫಲವಾಗಿ ವಿಚಾರಣೆ ಮಾಡಲು ತೀರ್ಮಾನಿಸಿದಾಗ ರಾಜ ಅದನ್ನು ಪ್ರತಿಭಟಿಸಿದ. ಸೋದರಿ ದೇವಮ್ಮಾಜಿಯೂ ಆಕೆಯ ಗಂಡ ಚನ್ನಬಸಪ್ಪನೂ 1831ರಲ್ಲಿ ಮೈಸೂರಿಗೆ ಓಡಿಹೋಗಿ ಬ್ರಿಟಿಷರ ರಕ್ಷಣೆ ಕೋರಿದರು. ಬ್ರಿಟಿಷರು ವೀರರಾಜನನ್ನೂ ಆತನ ಕುಟುಂಬದವರನ್ನೂ ವಾರಾಣಸಿಗೆ ಕಳಿಸಿದರು. 1852ರಲ್ಲಿ ವೀರರಾಜೇಂದ್ರ ಮತ್ತು ಅವನ ಪುತ್ರಿ ಗೌರಮ್ಮ ಇಂಗ್ಲೆಂಡಿಗೆ ಹೋದರು. ಭಾರತದಿಂದ ಇಂಗ್ಲೆಂಡಿಗೆ ಪ್ರಯಾಣ ಮಾಡಿದ ರಾಜರುಗಳಲ್ಲಿ ವೀರರಾಜೇಂದ್ರ ಮೊದಲನೆಯವನು. ಗೌರಮ್ಮ ಕ್ರೈಸ್ತಧರ್ಮ ಅವಲಂಬಿಸಿ ಇಂಗ್ಲಿಷ್ ಅಧಿಕಾರಿಯೋರ್ವನನ್ನು ವಿವಾಹ ಮಾಡಿಕೊಂಡಳು. ವೀರರಾಜೇಂದ್ರ 1859 ಸೆಪ್ಟೆಂಬರ್ 24ರಂದು ಲಂಡನ್ನಿನಲ್ಲಿ ನಿಧನ ಹೊಂದಿದ. ಅವನ ದೇಹವನ್ನು ವಾರಾಣಸಿಗೆ ತಂದು ಅಲ್ಲಿ ಸಮಾಧಿ ಮಾಡಲಾಯಿತು.

**ಹಾಲೇರಿ ರಾಜರ ವಂಶಾವಳಿ:**




(ವಿ.ಕೆ.)

**ಹಿಂದು ಇಸ್ಲಾಂ ವಾಸ್ತುಶಿಲ್ಪ:** 15ನೆಯ ಶತಮಾನದ ಆರಂಭದಲ್ಲಿ ದೆಹಲಿಯ ತುಗಲಕ್ ವಂಶ ಕೊನೆಗೊಂಡು ಕೇಂದ್ರದ ಅಧಿಕಾರ ಆಡಳಿತಗಳು ಶಕ್ತಿಗುಂದಿ, ಸಾಮ್ರಾಜ್ಯದ ವಿವಿಧ ಪ್ರಾಂತಗಳಲ್ಲಿ ಅಧೀನರಾಗಿ ಆಡಳಿತ ನಿರ್ವಹಿಸುತ್ತಿದ್ದ ಸುಬೇದಾರರು ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು. ಪ್ರಾಂತಾಧಿಕಾರಿಗಳಾಗಿದ್ದಾಗ ತಮ್ಮ ನಿರ್ಲಕ್ಷ್ಯ, ನಿರಾಸಕ್ತಿಯಿಂದ ದುರಾಡಳಿತದಲ್ಲಿ ತೊಡಗಿದ್ದ ಇವರು ಸ್ವತಂತ್ರರಾದ ಮೇಲೆ ಆಸಕ್ತಿ ವಹಿಸಿ, ಆಡಳಿತವನ್ನು ಬಲಪಡಿಸಿ ಪ್ರಬಲರಾದರು. ಇದರಿಂದ ಭಾರತದ ಮೂಲೆ ಮೂಲೆಯ ಇಸ್ಲಾಂ ಆಡಳಿತ ಮುಂದುವರೆಯಲು ಅನುಕೂಲವಾಯಿತು. ಒಳಪ್ರಾಂತಗಳಲ್ಲಿಯೂ ಇಸ್ಲಾಂ ಧರ್ಮ, ಸಂಸ್ಕೃತಿಗಳ ಪ್ರಸರಣ, ಸಂವರ್ಧನೆಗೆ ಹೊಸ ಚೈತನ್ಯ, ಉತ್ಸಾಹ ಒದಗಿತು. ಈ ಮೊದಲು ದೆಹಲಿಯೊಂದಿಗೆ ನೇರಸಂಪರ್ಕವಿದ್ದ ಕೆಲವೇ ಸ್ಥಳ ಇಸ್ಲಾಂ ಸಂಸ್ಕೃತಿ, ಕಲೆ, ವಿದ್ವತ್ತಿನ ಕೇಂದ್ರವಾಗಿ ಬೆಳೆದಿದ್ದರೆ, ಸ್ಥಳೀಯ ಆಡಳಿತ ತೊಡಗಿದ ಮೇಲೆ ಅಹಮದಾಬಾದ್, ಗೌರ್, ಪಾಂಡುವಾ, ಗುಲ್ಬರ್ಗ, ಬಿಜಾಪುರ ಮುಂತಾದ ಹಲವಾರು ಪ್ರಾಂತೀಯ ರಾಜಧಾನಿಗಳಲ್ಲಿಯೂ ಮುಸ್ಲಿಂ ಸಂಸ್ಕೃತಿ, ಜೀವನ ಶೈಲಿ, ಕಲೆಗಳು ಹೊಸ ಲವಲವಿಕೆಯಿಂದ ಅರಳತೊಡಗಿದವು. ಆಳುತ್ತಿದ್ದ ಅಲ್ಪಸಂಖ್ಯಾತ ಮುಸ್ಲಿಮರು ಅನಿವಾರ್ಯವಾಗಿ ಸ್ಥಳೀಯರ ಮೇಲೆ ಹೆಚ್ಚು ಹೆಚ್ಚಾಗಿ ಅವಲಂಬಿತರಾದಂತೆಲ್ಲ ತಮ್ಮ ನಿಷ್ಠುರ ಮೂಲಭೂತವಾದಿ ಧೋರಣೆಯನ್ನು ಮೃದುಗೊಳಿಸಿಕೊಳ್ಳಬೇಕಾಯಿತು. ಇದರಿಂದ ಒಂದು ಸಾಂಸ್ಕೃತಿಕ ಸಾಮರಸ್ಯ, ಸಮನ್ವಯ ಮನೋಭಾವ ಮೂಡಬಲ್ಲ ವಾತಾವರಣವೂ ಬಲಿಯಿತು.

ಸ್ಥಳೀಯ ರಾಜ್ಯಗಳಿಗೆ ದೆಹಲಿಗಿದ್ದಂತಹ ಗಡಿನಾಡಿನ ಧಾಳಿ, ಆಗಾಗ ಉಂಟಾಗುತ್ತಿದ್ದ ಒಳಜಗಳ, ದಂಗೆಗಳ ಬಾಧೆಯಿರಲಿಲ್ಲ. ಅಲ್ಲದೆ ತಮ್ಮ ಉಳಿವು, ಭದ್ರತೆಗೆ ಮಾತ್ರವಲ್ಲದೆ ಇದೇ ನೆಲದಲ್ಲಿ ಬೇರೂರಿ ತಮ್ಮ ಮುಂದಿನ ಬದುಕನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನೂ ಮನಗಂಡ ಸ್ಥಳೀಯ ಅರಸರು ಆಯಾಪ್ರದೇಶಗಳಲ್ಲಿದ್ದ ಕೋಟೆಕೊತ್ತಲಗಳನ್ನು ಬಲಪಡಿಸಿ, ಹಲವು ತೆರನಾದ ಜನಪರ ಕಾರ್ಯಗಳಿಂದ ರಾಜ್ಯವನ್ನು ಸುಭಿಕ್ಷಗೊಳಿಸಿದರು. ಆಡಳಿತದಲ್ಲಿ ಸ್ಥಳೀಯರಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಿ ಅವರನ್ನು ಒಲಿಸಿಕೊಂಡರು. ಜೊತೆಗೆ ಪರರಾಜ್ಯ ಲೂಟಿ, ಕರಸಂಗ್ರಹಗಳಿಂದ ಒಟ್ಟುಗೂಡಿಸಿದ ಅಪಾರ ಸಂಪತ್ತನ್ನು ದೆಹಲಿಗೆ ಒಪ್ಪಿಸದೆ, ಅದನ್ನೇ ಬಳಸಿ ಸ್ಥಳೀಯರ ಸಾಂಸ್ಕೃತಿಕ ಜೀವನ, ಕಲಾಪ್ರಕಾರಗಳನ್ನು ಶ್ರೀಮಂತಗೊಳಿಸಲು ಶ್ರಮಿಸಿದರು. ಇದರಿಂದ ಉತ್ತರ ಪ್ರದೇಶ, ಗುಜರಾತ್, ಜೌನಪುರ, ಮಾಳವ, ಕಾಶ್ಮೀರಗಳಲ್ಲಿ ಸಂಗೀತಕಲೆ ಅನನ್ಯವಾಗಿ ಬೆಳೆಯಿತು. ಪರ್ಷಿಯನ್ ಭಾಷೆಯ ಬದಲಿಗೆ ಸ್ಥಳೀಯ ಭಾಷೆ ಆಡಳಿತ ಭಾಷೆಯಾಯಿತು. ಉತ್ತಮ ಸಾಹಿತ್ಯ ಕೃತಿಗಳ ಪರಸ್ಪರ ಅನುವಾದಗಳಾಗಿ ಎರಡೂ ಭಾಷೆಗಳಲ್ಲಿ ಶ್ರೀಮಂತ ಸಾಹಿತ್ಯ ರೂಪುಗೊಂಡವು. ಪ್ರಾದೇಶಿಕ ಸೊಗಡಿನ ಚಿತ್ರಕಲಾಶೈಲಿಗಳು ರಾಜಾಶ್ರಯ ಪಡೆದು ಮುಖ್ಯವಾಹಿನಿಯಲ್ಲಿ ಸೇರಿದವು. ಎಲ್ಲಕ್ಕಿಂತ ಹೆಚ್ಚಾಗಿ ವಾಸ್ತುಶೈಲಿಗಳಲ್ಲಿ ಮಹತ್ತ್ವದ ಬದಲಾವಣೆ ಆದವು. ಜನಪ್ರಿಯವೂ ಪ್ರಚಲಿತವೂ ಆಗಿದ್ದ ಸ್ಥಳೀಯ ವಾಸ್ತು ಹಾಗೂ ಇಸ್ಲಾಂ ಶೈಲಿಯ ವಿಶಿಷ್ಟ ಲಕ್ಷಣಗಳ ಆಯ್ಕೆ, ಮಾರ್ಪಾಡು, ರೂಪಾಂತರ ಹಾಗೂ ಹದವರಿತ ಅಳವಡಿಕೆಗಳಿಂದ ಅಪೂರ್ವ ಸೌಂದರ್ಯದ ಪ್ರಾದೇಶಿಕ ಹಿಂದು-ಇಸ್ಲಾಂ ವಾಸ್ತುಶೈಲಿಗಳ ಶ್ರೇಣಿಯೇ ಉಗಮಿಸಿತು.

ಒಂದೆಡೆ ಆಕ್ರಮಿತ ಪ್ರದೇಶಗಳಲ್ಲಿ ಪರಿಣತ ಕಲಾವಿದರ ತಂಡ ನಿರಾಶ್ರಿತವಾಗಿ ಬವಣೆಪಡುತ್ತಿತ್ತು. ಇನ್ನೊಂದೆಡೆ ಹೊಸದಾಗಿ ಸ್ವತಂತ್ರರಾಗಿ ಶ್ರೀಮಂತಿಕೆಯ ಅಮಲಿನಲ್ಲಿ ತೇಲುತ್ತಿದ್ದ ದೊರೆಗಳು ತಮ್ಮ ಮಹತ್ವಾಕಾಂಕ್ಷೆ, ವ್ಯಕ್ತಿ, ವೈಶಿಷ್ಟ್ಯ, ಮನದಾಳದಲ್ಲಿ ಹುದುಗಿದ್ದ ಇಸ್ಲಾಂ ಧರ್ಮದ ಪಾರಮ್ಯವನ್ನು ವಿನೂತನವಾಗಿ ಸ್ಥಾಪಿಸಿ, ಪ್ರಚುರಪಡಿಸಿ ಮೆರೆಸಲು ತುಡಿಯುತ್ತಿದ್ದರು. ಇವರ ಪರಸ್ಪರ ಅನಿವಾರ್ಯತೆ, ಆವಶ್ಯಕತೆಗಳಿಂದಾಗಿ ಪ್ರಾಂತೀಯ ಶೈಲಿಗಳು ರೂಪುಗೊಂಡವು. ಅಪೂರ್ವ ಸೌಂದರ್ಯದ ದೇವಾಲಯಗಳನ್ನು ಸೃಜಿಸುತ್ತಿದ್ದ ಕಲಾವಿದರು ತಮ್ಮೆಲ್ಲ ಕಲಾಪ್ರೌಢಿಮೆಯನ್ನು ಮೆರೆದು, ವೈಯಕ್ತಿಕ ಧಾರ್ಮಿಕ ಒಲವುಗಳನ್ನು ಅದುಮಿ, ಹೊಸ ಆಶ್ರಯದಾತರು ಸೂಚಿಸಿದ ಕಟ್ಟಡಗಳ ನಿರ್ಮಾಣಕ್ಕೆ ತಮ್ಮ ಸೃಜನಶೀಲ ಸಾಮರ್ಥ್ಯ, ಕಲ್ಪನೆ, ಜಾಣ್ಮೆಗಳನ್ನು ಧಾರೆಯೆರೆದುದರಿಂದ, ವಿಶಿಷ್ಟ ಸೊಬಗಿನ ಶೈಲಿಗಳು ಅರಳಲು ಸಾಧ್ಯವಾಯಿತು.

ಹೀಗೆ 1150-1686ರ ವರೆಗಿನ ಐದು ಶತಮಾನಗಳಿಗೂ ಮೀರಿದ ಅವಧಿಯಲ್ಲಿ ಅಂದಿನ ಅಖಂಡ ಭಾರತದಲ್ಲಿ ಕಲಾತ್ಮಕ ಲಕ್ಷಣಗಳಿಂದ ಕಂಗೊಳಿಸುವ ಏಳು ಪ್ರಾಂತೀಯ ಶೈಲಿಗಳು ಉಗಮಿಸಿದವು. ಅವುಗಳಲ್ಲಿ ಮೊದಲನೆಯದು ಪ್ರಸ್ತುತ ಪಾಕಿಸ್ತಾನದಲ್ಲಿರುವ ಲಾಹೋರ್, ಮುಲ್ತಾನ್ ಮುಂತಾದೆಡೆಗಳಲ್ಲಿ ಅರಳಿದ ಪಂಜಾಬ್‍ಶೈಲಿ, ಇನ್ನುಳಿದವು ಬಂಗಾಲ (ಸು.1336-1756), ಜೌನಪುರ (1394-1478), ಗುಜರಾತ್ (1396-1583), ಮಾಳವ (1401-1531), ಕಾಶ್ಮೀರ (1346-1589) ಹಾಗೂ ದಖನಿ (1347-1686) ಶೈಲಿಗಳು. ಸಹಜವಾಗಿ ಇವೆಲ್ಲ ಆಯಾಪ್ರಾಂತದ ಕಲಾವಿದರು ಹಲವು ಶತಮಾನಗಳಿಂದ ತಾವು ಪಳಗಿಸಿಕೊಂಡಿದ್ದ ನಿರ್ಮಾಣ ಸಾಮಗ್ರಿಗಳ ಮೇಲಿನ ಹಿಡಿತ; ಕಲ್ಪನೆ, ಸೃಜನಶೀಲತೆಗಳಿಂದ ರೂಢಿಸಿಕೊಂಡಿದ್ದ ಅಲಂಕರಣ ವಿನ್ಯಾಸ ವೈಖರಿ-ಇವನ್ನು ಹೊಸ ಧರ್ಮದ ಕಟ್ಟಡಗಳಿಗೆ ಎರಕ ಹೊಯ್ದ ಪರಿಣಾಮಗಳೇ. ವಾಸ್ತು ಕಲೆಗಳ ಮೇಲೆ ಇಸ್ಲಾಂಧರ್ಮದ ನಿಷ್ಠುರ ನೀತಿ, ನಿಯಮಾವಳಿಯ ಹಿಡಿತ ಕಡಿಮೆಯಾದಂತೆಲ್ಲ ಪ್ರಾಂತೀಯ ಶೈಲಿಗಳು ಬೆಳೆದು, ಇವುಗಳ ಸ್ವಂತಿಕೆ, ವೈಶಿಷ್ಟ್ಯ ಬಲಿತವು.

ಇವುಗಳಲ್ಲಿ ಸಾಮಾನ್ಯವಾಗಿ ದಖನಿ ಶೈಲಿಯೆಂದೇ ಪ್ರಸಿದ್ಧವಾಗಿರುವ ಶೈಲಿ ಒಂದು ರೀತಿಯಲ್ಲಿ ಮುಖ್ಯವಾಗಿ ಕರ್ನಾಟಕದ್ದೇ ಕೊಡುಗೆ. ಇದು ಗುಲ್ಬರ್ಗದಲ್ಲಿ ಬೇರೂರಿ, ಕುಡಿಯೊಡೆದು, ಬೀದರ್‌ನಲ್ಲಿ ಬಳ್ಳಿಯಾಗಿ ಟಿಸಿಲೊಡೆದು, ಬಿಜಾಪುರದಲ್ಲಿ ವಿಶೇಷವಾಗಿ ಸರ್ವಾಂಗಸುಂದರ ಕುಸುಮಗಳಾಗಿ ಅರಳಿತು. ಇಲ್ಲಿ ರೂಪುಗೊಂಡ ಕೆಲವು ವಿಶಿಷ್ಟಲಕ್ಷಣಗಳು ಅಹ್ಮದ್‌ನಗರ, ಬೀರಾರ್, ಗೋಲ್ಕೊಂಡಗಳಲ್ಲಿನ ಶೈಲಿಗಳನ್ನು ಗಾಢವಾಗಿ ಪ್ರಭಾವಿಸಿದವು. ಈ ಶೈಲಿಯ ಕಲಾವಂತಿಕೆಯ ಸೊಗಡನ್ನು ಆಯಾ ಸ್ಥಳಗಳಲ್ಲಿನ ರಕ್ಷಣಾವಾಸ್ತು, ಪೌರ ಅಥವಾ ನಾಗರಿಕ ವಾಸ್ತು ಮತ್ತು ವಿಶೇಷವಾಗಿ ಧಾರ್ಮಿಕ ವಾಸ್ತುವಿನ ವಿನ್ಯಾಸ ಹಾಗೂ ಅಲಂಕರಣಗಳಲ್ಲಿ ಕಾಣಬಹುದು **(ನೋಡಿ-ಮಧ್ಯಕಾಲೀನ ಇಸ್ಲಾಮಿ ವಾಸ್ತುಶಿಲ್ಪ)**. (ಎಂ.ವಿ.ವಿ.)

**ಹಿಟ್ಟೈಟರು:** ಪ್ರಶ.ಪೂ.2000 ವರ್ಷಗಳ ಹಿಂದೆ ಏಷ್ಯಮೈನರ್ ಪ್ರಸ್ಥಭೂಮಿ ಪ್ರದೇಶದಲ್ಲಿ ನೆಲೆಸಿದ್ದ ಒಂದು ಜನವರ್ಗ. ಇವರ ಉತ್ಕರ್ಷಕಾಲ ಪ್ರ.ಶ.ಪೂ. 1400 ರಿಂದ 1200. ಇವರು ಟಾರಸ್ ಪರ್ವತ ಶ್ರೇಣಿಯನ್ನು ದಾಟಿ, ದಕ್ಷಿಣದಲ್ಲಿ ಸಿರಿಯದ ಕೆಲವು ಪ್ರದೇಶಗಳನ್ನೂ, ಪೂರ್ವದಲ್ಲಿ ಯೂಫ್ರಟೀಸ್ ನದೀಬಯಲಿನ ಕೆಲವು ಭಾಗಗಳನ್ನೂ ಸ್ವಾಧೀನಪಡಿಸಿಕೊಂಡರು. ಈಜಿಪ್ಟ್ ಮತ್ತು ಅಸ್ಸೀರಿಯ ರಾಜ್ಯಗಳೊಂದಿಗೆ ಇವರು ಕಾದಾಡುತ್ತಲೇ ಇದ್ದರು. ಹತ್ತುಸ ಇವರ ರಾಜಧಾನಿ (ಈಗಿನ ಹೆಸರು ಬೋಗಾಸ್ ಕೊಯ್). ಇವರು ಲೋಹವಿದ್ಯೆಯನ್ನರಿತಿದ್ದರು. ಟಾರಸ್ ಪರ್ವತಗಳ ಗಣಿಯಿಂದ ಬೆಳ್ಳಿಯನ್ನು ತೆಗೆದು ಉಪಯೋಗಿಸುತ್ತಿದ್ದರು. ಕಬ್ಬಿಣದ ಉಪಯೋಗವೂ ಇವರಿಗೆ ಚೆನ್ನಾಗಿ ತಿಳಿದಿತ್ತು. ಕಬ್ಬಿಣ ಬಳಸಿದ ಪ್ರಾಚೀನ ಜನವರ್ಗಗಳಲ್ಲಿ ಇವರೇ ಮೊದಲಿಗರು. ಬ್ಯಾಬಿಲಾನ್ ಹಾಗೂ ಅಸ್ಸೀರಿಯ ಜನರಿಗಿಂತ ಅನೇಕ ಶತಮಾನಗಳ ಹಿಂದೆಯೇ ಇವರು ಕುದುರೆ ಗಾಡಿಗಳನ್ನು ಉಪಯೋಗಿಸುತ್ತಿದ್ದರು. ಸರಕಾರ ಊಳಿಗಮಾನ್ಯ ಪದ್ಧತಿಗನುಸಾರವಾಗಿತ್ತು. ದೊರೆಗೆ ಆಡಳಿತ ವಿಷಯಗಳಲ್ಲಿ ಸಲಹೆ ನೀಡುವುದಕ್ಕೆ ರಾಜಸಂಬಂಧಿಗಳನ್ನೊಳಗೊಂಡ ಒಂದು ಸಮಿತಿಯಿತ್ತು. ಸಿಂಹಾಸನಕ್ಕೆ ಉತ್ತರಾಧಿಕಾರ ಮುಂತಾದ ಮುಖ್ಯ ರಾಜಕೀಯ ವಿಷಯಗಳಲ್ಲಿ ದೊರೆ ಈ ಸಮಿತಿಯ ಒಪ್ಪಿಗೆ ಪಡೆಯುವುದು ಅವಶ್ಯಕವಾಗಿತ್ತು. ಪ್ರಜೆಗಳ ರಕ್ಷಣೆಯ ಜವಾಬ್ದಾರಿ ರಾಜನದಾಗಿತ್ತು. ಯುದ್ಧಗಳಲ್ಲಿ ಇವನದೇ ನಾಯಕತ್ವ. ರಾಜ ನಿಷ್ಪಕ್ಷಪಾತ ದೃಷ್ಟಿಯಿಂದ ನ್ಯಾಯತೀರ್ಮಾನ ಮಾಡುತ್ತಿದ್ದ. ನಿರಂಕುಶಾಧಿಕಾರವಿರಲಿಲ್ಲ. ತನ್ನ ಜೀವಿತ ಕಾಲದಲ್ಲಿ ದೊರೆ ಸಾಮಾನ್ಯ ಜನರಂತೆಯೇ ಪರಿಗಣಿಸಲ್ಪಟ್ಟು, ಸತ್ತ ಮೇಲೆ ದೇವತೆಗಳ ಪಂಕ್ತಿಗೆ ಸೇರಿ ಗೌರವ ಪಡೆಯುತ್ತಿದ್ದ. ಯುದ್ಧದಲ್ಲಿ ಶತ್ರುಗಳನ್ನು ವಿನಾಕಾರಣ ಕೊಲ್ಲುತ್ತಿರಲಿಲ್ಲ, ಸೆರೆ ಸಿಕ್ಕಿದವರೆಲ್ಲ ಗುಲಾಮರಾಗುತ್ತಿದ್ದರು. ಅವರ ನೆಲೆಗಳನ್ನು ನಾಶಪಡಿಸಲಾಗುತ್ತಿತ್ತು. ಇವರಲ್ಲಿ ಷುಬ್ಬಿಲು ಮಾಸ್ ಎಂಬ ದೊರೆ ಪ್ರಸಿದ್ಧನಾಗಿದ್ದ. ಇವನು ಈಜಿಪ್ಟ್ ದೊರೆಗಳೊಂದಿಗೆ ಮೈತ್ರಿ ಬೆಳೆಸಿದ. ಅಖ್ನಾಟನ್ ಈಜಿಪ್ಟ್ ಸಿಂಹಾಸನಕ್ಕೆ ಬಂದಾಗ ಅವನಿಗೆ ಶುಭಾಶಯಗಳನ್ನು ಕೋರಿ ಬಹುಮಾನಗಳನ್ನು ಕಳುಹಿಸಿದ. ಆದರೆ ಆತನ ಮರಣಾನಂತರ ಈಜಿಪ್ಟನೊಂದಿಗೆ ಯುದ್ಧಮಾಡುವ ಪ್ರಸಂಗ ಬಂದಿತು. ಹಿಟೈಟ್ ಸೈನ್ಯ ನೈಲ್‍ನದಿ ಮುಖಜ ಪ್ರದೇಶಕ್ಕೆ ನುಗ್ಗಿ ಈಜಿಪ್ಟ್ ಸೈನ್ಯವನ್ನು ಸೋಲಿಸಿತು. ಅಪಾರ ಸಂಪತ್ತನ್ನು ಕೊಳ್ಳೆ ಹೊಡೆಯಿತು. ಷುಬ್ಬಿಲು ಮಾಸ್‍ನ ಅನಂತರ ಆಳಿದ ದೊರೆಗಳು ಈಜಿಪ್ಟಿನೊಡನೆ ಆಗಾಗ ಯುದ್ಧಮಾಡುತ್ತಿದ್ದರು.

ಫ್ರಿಜಿಯನ್ ಜನರ ಆಕ್ರಮಣಕ್ಕೆ ತುತ್ತಾಗಿ ಹಿಟೈಟ್ ರಾಜ್ಯ ನಾಶವಾಯಿತು. ಅಸ್ಸೀರಿಯದ ಎರಡನೆಯ ಸಾರ್ಗನ್ ದೊರೆ ಹಿಟೈಟ್ ಪಂಗಡವನ್ನು ಹೇಳಹೆಸರಿಲ್ಲದಂತೆ ಮಾಡಿದ. ಪಶ್ಚಿಮ ಏಷ್ಯದ ಚರಿತ್ರೆಯಲ್ಲಿ ಹಿಟೈಟ್ ಜನರಿಗೆ ಗಣನೀಯವಾದ ಸ್ಥಾನವಿದೆ. ಪೂರ್ವದಿಂದ ನುಗ್ಗಿಬರುತ್ತಿದ್ದ ಜನರ ಧಾಳಿಯನ್ನು ತಡೆಗಟ್ಟಿ ಮೆಸಪೊಟೇಮಿಯ ಮತ್ತು ಸಿರಿಯ ನಾಗರಿಕತೆಗಳು ಬೆಳೆಯಲು ಸಹಾಯ ಮಾಡಿದರು. ಇವರಿಂದ ಈಜಿಪ್ಟ್ ರಾಜ್ಯ ಪೌರ್ವಾತ್ಯ ದೇಶಗಳಿಗೆ ಹರಡದಂತೆ ಆದದ್ದು, ಕಬ್ಬಿಣವನ್ನು ತಮ್ಮ ಗಣಿಗಳಿಂದ ಹೇರಳವಾಗಿ ಒದಗಿಸಿದ್ದೂ ಅಲ್ಲದೆ ಅದರ ಉಪಯೋಗವನ್ನೂ ಬೇರೆಯವರಿಗೆ ಹೇಳಿಕೊಟ್ಟದ್ದು ಇವರ ದೊಡ್ಡ ಸಾಧನೆ. ಇವರಿಂದ ಅಸ್ಸೀರಿಯನ್ನರು ಅನೇಕ ವಿಷಯಗಳನ್ನು ಕಲಿತರು. (ಎ.ಎಮ್.)

**ಹಿಟ್ಲರ್, ಅಡಾಲ್ಫ್:** ನಾಜಿ ಜರ್ಮನಿಯ ಸರ್ವಾಧಿಕಾರಿ (ನ್ಯಾಷನಲ್ ಸೋಷಿಯಲಿಸ್ಟ್ ವರ್ಕರ್ಸ್ ಪಾರ್ಟಿ). ಈತ 1933ರಲ್ಲಿ ಜರ್ಮನಿಯ ಛಾನ್ಸಲರ್‌ನೂ 1934 ರಿಂದ ಕೊನೆಯುಸಿರು ಇರುವವರೆಗೂ ಜರ್ಮನಿಯ ನಾಯಕನೂ ಆಗಿದ್ದ.

ಒಂದನೆಯ ಮಹಾಯುದ್ಧದಲ್ಲಿ ಜರ್ಮನಿಯ ಸೋಲು ಹಾಗೂ ಯುದ್ಧದ ಅನಂತರ ನಿರ್ಮಾಣವಾದ ಜರ್ಮನಿಯ ವಾತಾವರಣವನ್ನು ಎದುರಿಸಿ ಅಧಿಕಾರಿಯಾದ. ಈತ ಅದ್ವಿತೀಯ ಭಾಷಣಕಾರನಾಗಿದ್ದು, ತನ್ನ ಆರ್ಥಿಕ ಬೇಡಿಕೆಗಳ ಕುರಿತು ಇವನು ನೀಡಿದ ಭಾಷಣಕ್ಕೆ ಮಧ್ಯಮ ಮತ್ತು ಕೆಳವರ್ಗದ ಜನರು ಮಾರುಹೋದರು. ಇಟಲಿಯ ಫ್ಯಾಸಿಸಂನಂತೆ, ಜರ್ಮನಿಯ ಆರ್ಥಿಕ ವ್ಯವಸ್ಥೆಯನ್ನು ಪುನಾರಚಿಸಿ, ಜರ್ಮನಿಯನ್ನು ಸೈನಿಕವಾಗಿ ಸಜ್ಜುಗೊಳಿಸಿ, ಪೂರ್ಣ ಪ್ರಮಾಣದ ನಾಜಿ ಸರ್ವಾಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸಿದ. ಬೆಳೆಯುತ್ತಿರುವ ಜರ್ಮನ್ ಜನಾಂಗಕ್ಕೆ ವಿಶಾಲ ಪ್ರದೇಶವನ್ನು ದೊರಕಿಸಿಕೊಳ್ಳಲು, ಕಠಿಣ ವಿದೇಶಾಂಗನೀತಿಯನ್ನು ಅಳವಡಿಸಿಕೊಂಡ. ಇದು ಎರಡನೆಯ ಮಹಾಯುದ್ಧಕ್ಕೆ ದಾರಿಮಾಡಿಕೊಟ್ಟಿತು. ಜರ್ಮನಿಯ ನಾಜಿಯ ಅಧಿಕಾರ ಉತ್ತುಂಗದಲ್ಲಿದ್ದಾಗ, ಯುರೋಪಿನ ಬಹುಭಾಗವನ್ನು ಅದು ಆವರಿಸಿತ್ತು. ಆದರೆ ಕ್ರಮೇಣವಾಗಿ, ಜರ್ಮನಿ ಮತ್ತು ಆಕ್ಸಿಸ್

ಪಕ್ಷದ ಅಧಿಕಾರಿಗಳು ವೈರಿ ಪಕ್ಷದವರಿಂದ ಸೋಲಿಸಲ್ಪಟ್ಟರು. ಹಿಟ್ಲರ್ ಜನಾಂಗ ನೀತಿ ಸುಮಾರು ಹನ್ನೊಂದು ಮಿಲಿಯನ್ ಜನರನ್ನು ನಾಶಮಾಡಿತು. ಅವರಲ್ಲಿ ಆರು ಮಿಲಿಯನ್ ಜನರು ಯಹೂದಿ ಜನಾಂಗದವರಾಗಿದ್ದರು. ಇದನ್ನು ಪೂರ್ಣಾಹುತಿ ಎನ್ನುತ್ತಾರೆ.

ಹಿಟ್ಲರ್ 1889 ಏಪ್ರಿಲ್ 20 ರಂದು ಆಸ್ಟ್ರಿಯದ ಬ್ರಾನಾಮ್ ಎಂಬ ಸಣ್ಣ ಪಟ್ಟಣದಲ್ಲಿ ಜನಿಸಿದ. ಈತನ ತಂದೆ ಅಲೋಯಿಸ್ ಹಿಟ್ಲರ್ ಸುಂಕದ ಇಲಾಖೆಯಲ್ಲಿ ಸಾಮಾನ್ಯ ದರ್ಜೆಯ ನೌಕರನಾಗಿದ್ದ. ಈತನ ತಾಯಿ ಕ್ಲಾರಪೋಲ್‌ಜಲ್. ಹಿಟ್ಲರ್‌ನ ಪ್ರಾಥಮಿಕ ವಿದ್ಯಾಭ್ಯಾಸ ಏಳಿಗೆ ಕಂಡರೂ ಹೈಸ್ಕೂಲಿನ ವಿದ್ಯಾಭ್ಯಾಸ ಉತ್ತಮವಾಗಿರಲಿಲ್ಲ. ಈತನ ಗುರುಗಳು ಈತನಿಗೆ ಕಲಿಕೆಯಲ್ಲಿ ಆಸಕ್ತಿಯಿಲ್ಲ ಎಂದೂ ದೂರಿದ್ದರು. ಹಿಟ್ಲರ್ ತನ್ನ 16ನೆಯ ವಯಸ್ಸಿನಲ್ಲಿ ಯಾವುದೇ ವಿದ್ಯಾರ್ಹತೆಯಿಲ್ಲದೇ ಶಾಲೆಯನ್ನು ತೊರೆದ. ಈತನ ಆತ್ಮಚರಿತ್ರೆ ಚಿತ್ರಕಲೆಯಲ್ಲಿ ಈತನಿಗಿದ್ದ ಆಸಕ್ತಿಯ ಮೇಲೆ ಬೆಳಕುಚೆಲ್ಲುತ್ತದೆ. ಆದರೆ ವಿಯನ್ನದ ಚಿತ್ರಕಲಾ ಅಕಾಡೆಮಿ ಎರಡು ಸಲ ಈತನನ್ನು ತಿರಸ್ಕರಿಸಿತು. ತದನಂತರ ಈತ ಪೋಸ್ಟ್‌ಕಾರ್ಡ್‌ಗಳ ಮೇಲೆ ಚಿತ್ರಿಸುತ್ತಾ ತನ್ನ ವರ್ಣಚಿತ್ರಗಳನ್ನು ವ್ಯಾಪಾರಸ್ಥರಿಗೆ, ಪ್ರವಾಸಿಗರಿಗೆ ಮಾರಿ ಸ್ವಲ್ಪ ಹಣ ಸಂಪಾದಿಸಿದ. 1909ರಲ್ಲಿ ಒಂದು ಮನೆಯಲ್ಲಿ ಆಶ್ರಯಪಡೆದ. ಹಾಗೇ 1910 ರಲ್ಲಿ ಬಡಕೆಲಸಗಾರರಿಗೆ ನಿರ್ಮಿಸಲಾದ ಮನೆಯಲ್ಲಿ ಸ್ಥಿರವಾಗಿ ನೆಲೆಸಿದ.

ಹಿಟ್ಲರ್ ವಿಯನ್ನದಲ್ಲಿ ಸೆಮಿಟಿಕ್ ಜನಾಂಗದ ವಿರೋಧಿಯಾಗಿದ್ದ. ಜನಾಂಗ ಸಿದ್ಧಾಂತಿಗಳ ಮತ್ತು ಸೆಮಿಟ್ ವಿರೋಧಿಗಳಾದ ಲಾಜ್–ವಾನ್–ಲೀಬಿನ್‌ಫೆಲ್ಸ್ ಹಾಗೂ ಫೋಲಿಮಿಸ್‌ರ ಬರೆವಣಿಗೆಯಿಂದ ಪ್ರೇರೇಪಿತನಾಗಿದ್ದ. ಅಲ್ಲದೆ, ರಾಜಕಾರಣಿಗಳಾದ ಕಾರ್ಲ್‌ಲಿಯುಗರ್, ಕ್ರಿಶ್ಚಿಯನ್ ಸಮಾಜ ಪಕ್ಷದ ಸ್ಥಾಪಕ ಮತ್ತು ಜಾರ್ಜ್ ರಿಟರ್ ವಾನ್ ಸ್ಕೂನರ್ ಪಾನ್ ಜರ್ಮನಿಯ, ರೋವಿನಿಂದ ಹೊರಗೆ ಚಳವಳಿಯ ನಾಯಕರಿಂದಲೂ ಪ್ರೇರೇಪಿತನಾಗಿದ್ದ. ಹಿಟ್ಲರ್ ತನ್ನ ಮೇನ್‌ಕೆಂಫ್ ಗ್ರಂಥದಲ್ಲಿ ಯಹೂದಿಗಳು, ಆರ್ಯ ಜನಾಂಗದ ಸ್ವಾಭಾವಿಕ ಶತ್ರುಗಳೆಂದು ಹೇಳಿದ್ದಾನೆ.

1913ರಲ್ಲಿ ಹಿಟ್ಲರ್ ಮ್ಯೂನಿಚ್‌ಗೆ ತೆರಳಿದ. ಜರ್ಮನಿ ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿದಾಗ, ಹಿಟ್ಲರ್ ರಾಜ ಮೂರನೆಯ ಲಾರ್ಡ್ ವಿಗ್‌ನಿಂದ ಬವೇರಿಯ ರೆಜಿಮೆಂಟ್‌ನಲ್ಲಿ ಸೇವೆ ಮಾಡಲು ಒಪ್ಪಿಗೆ ಪಡೆದ. ಹಾಗಾಗಿ ಹಿಟ್ಲರ್‌ನ ಹೆಸರು ಬವೇರಿಯದ ಸೈನ್ಯದಲ್ಲಿ ನೇಮಕಗೊಂಡಿತು. ಜರ್ಮನಿ ಸರ್ಕಾರ ಇವನು ಯುದ್ಧಭೂಮಿಯಲ್ಲಿ ತೋರಿಸಿದ ಧೈರ್ಯ ಸಾಹಸಗಳಿಗಾಗಿ ಈತನಿಗೆ ಎರಡು ಸಲ ಐರನ್ ಕ್ರಾಸ್ ಪದಕವನ್ನು ನೀಡಿತು.

1920ರಲ್ಲಿ ಹಿಟ್ಲರ್ ಸೇನೆಯಿಂದ ಹೊರಬಂದು, 1921ರಲ್ಲಿ ಜರ್ಮನಿ ಕಾರ್ಮಿಕರ ಪಕ್ಷದ ಸದಸ್ಯನಾದ. ತದನಂತರ ಈತನು ತನ್ನದೇ ಆದ ನ್ಯಾಷನಲ್ ಸೋಷಿಯಲಿಸ್ಟ್ ಜರ್ಮನ್ ವರ್ಕರ್ಸ್ ಪಾರ್ಟಿಯನ್ನು ಸ್ಥಾಪಿಸಿದ. ಜರ್ಮನ್ ಗಣರಾಜ್ಯದ ವಿರುದ್ಧ ಸಂಚು ನಡೆಸಿದ ಕಾರಣ ಇವನನ್ನು ಬಂಧಿಸಿ ಐದು ವರ್ಷಗಳ ಸೆರೆಮನೆ ಶಿಕ್ಷೆ ವಿಧಿಸಿ ಲ್ಯಾಂಡ್‌ಬರ್ಗ್ ಸೆರೆಮನೆಯಲ್ಲಿರಿಸಲಾಯಿತು. ಆದರೆ ಸರ್ಕಾರ ಒಂದು ವರ್ಷ ತುಂಬುವುದರೊಳಗೆ ಶಿಫಾರಸ್ಸಿನ ಮೇಲೆ ಈತನನ್ನು ಸೆರೆಮನೆಯಿಂದ ಬಿಟ್ಟಿತು. ಹಿಟ್ಲರ್ ಸೆರೆಮನೆಯಲ್ಲಿದ್ದಾಗ ತನ್ನ ರಾಜಕೀಯ ಗ್ರಂಥ ಮೇನ್‌ಕೆಂಫ್ (ನನ್ನ ಹೋರಾಟ) ವನ್ನು ಡೆಪ್ಯುಟಿ ರೂಡಾಲಹೆಸ್‌ನಿಗೆ ಅರ್ಪಿಸಿದ. ಈ ಕೃತಿ ಹಿಟ್ಲರ್‌ನ ಆತ್ಮಕಥೆಯಾಗಿರುವುದಲ್ಲದೇ ಈತನ ಸಿದ್ಧಾಂತವನ್ನು ನಿರೂಪಿಸುವ ಗ್ರಂಥವಾಗಿದೆ. ಈ ಕೃತಿಯನ್ನು 1925 ಮತ್ತು 1926ರಲ್ಲಿ ಎರಡು ಸಂಪುಟಗಳಲ್ಲಿ ಮುದ್ರಿಸಲಾಯಿತು.

1930 ರಲ್ಲಿ ಜರ್ಮನಿಯ ಪರಿಸ್ಥಿತಿ ಹದಗೆಟ್ಟಿತ್ತು. ಅಲ್ಲದೇ ಈ ಕಾಲಾವಧಿ ಹಿಟ್ಲರ್‌ನ ಜೀವನದ ಮಹತ್ತ್ವದ ಘಟ್ಟವೂ ಆಗಿದೆ. 1932ರಲ್ಲಿ ಹಿಟ್ಲರ್ ಅಧ್ಯಕ್ಷ ಪಾಲ್‌ವಾನ್ ಹಿಂಡೇನ್‌ಬರ್ಗ್‌ನ ವಿರುದ್ಧವಾಗಿ ಆಳಲು ಪ್ರಯತ್ನಿಸಿದ. ಆದರೆ ಹಿಟ್ಲರ್‌ಗೆ ಜರ್ಮನಿಯ ಪೌರತ್ವ ದೊರಕಿರಲಿಲ್ಲ. ಆದರೆ ಬರ್ನ್ಸ್‌ವಿಕ್‌ನ ರಾಜ್ಯ ಸರ್ಕಾರ ಹಿಟ್ಲರನನ್ನು ಒಂದು ಸಣ್ಣ ಆಡಳಿತ ಹುದ್ದೆಗೆ ನೇಮಕಮಾಡಿಕೊಳ್ಳುವಾಗ, ಈತನಿಗೆ ಜರ್ಮನಿಯ ಪೌರತ್ವವನ್ನು ನೀಡಿತು. ಆದರೆ ಅಷ್ಟುಹೊತ್ತಿಗೆ ಅಧಿಕಾರ ಹಿಂಡೇನ್‌ಬರ್ಗ್‌ನ ಪಾಲಾಗಿತ್ತು. 1932 ಜುಲೈಯಲ್ಲಿ ಸರ್ಕಾರದಲ್ಲಿ ನಡೆದ ಗಲಭೆಗಳಿಂದ ಮರು ಚುನಾವಣೆ ನಡೆದು, ಚುನಾವಣೆಯಲ್ಲಿ ನಾಜಿ ಪಕ್ಷ ರೀಕ್‌ಸ್ಟಾಗ್ ಅತಿ ದೊಡ್ಡ ಪಕ್ಷವಾಯಿತು.

1934 ಆಗಸ್ಟ್ 2ರಂದು ಅಧ್ಯಕ್ಷ ಹಿಂಡೇನ್‌ಬರ್ಗ್ ಕಾಲವಾದ ಕಾರಣ, ಮಂತ್ರಿಮಂಡಲ ಹೊಸ ಕಾನೂನನ್ನು ಜಾರಿಗೊಳಿಸಿ ಹಿಟ್ಲರನಿಗೆ ಅಧ್ಯಕ್ಷಪದವಿ ಹಾಗೂ ರಾಜ್ಯದ ಮುಖ್ಯಸ್ಥನನ್ನಾಗಿ ಮಾಡಿ, ರಾಜ್ಯದ ಪ್ರಮುಖ ಕಚೇರಿಯ ಅಧಿಕಾರ ಮತ್ತು ವಾಯುಯನ್ನು ವಹಿಸಲಾಯಿತು. ಅಲ್ಲದೇ ಮಿಲಿಟರಿ ಮತ್ತು ಪಕ್ಷದ ವಾಯುಯನ್ನು ಈತನಿಗೆ ನೀಡಲಾಯಿತು. ಒಟ್ಟಿನಲ್ಲಿ ಯಾವುದೇ ಕಾನೂನು ಪ್ರತಿಭಟಿಸಲು ಸಾಧ್ಯವಾಗದ ಮಟ್ಟಿಗೆ ಸರ್ವಾಧಿಕಾರವನ್ನು ಹಿಟ್ಲರ್ ಹೊಂದಿದ್ದ.

ಜರ್ಮನಿ ಕೈಗಾರಿಕಾ ಕ್ಷೇತ್ರದಲ್ಲಿ ಹಿಂದೆಂದೂ ಕಾಣದ ಅಭಿವೃದ್ಧಿ, ಉತ್ಪಾದನೆ ಹೆಚ್ಚಳವನ್ನು ಹಿಟ್ಲರನ ಆಡಳಿತ ಅವಧಿಯಲ್ಲಿ ಕಂಡಿತು. ಇದರಿಂದ ಸಾರ್ವಜನಿಕ ಜೀವನದಲ್ಲೂ ಮಿಲಿಟರಿ ಕ್ಷೇತ್ರದಲ್ಲೂ ಸುಧಾರಣೆಗಳಾದವು. ನಾಜಿ ಸಿದ್ಧಾಂತ ಮಹಿಳೆಯರು ಮನೆಯಲ್ಲೇ ಇರಲು ಪ್ರೋತ್ಸಾಹಿಸಿತು.

ಮೂರನೆಯ ರೀಚ್‌ನ ಸರ್ಕಾರ ಅಧಿಕವಾಗಿ ವಾಸ್ತುಶಿಲ್ಪವನ್ನು ಪ್ರೋತ್ಸಾಹಿಸಿತು. ಅಲ್ಲದೇ 1936 ರಲ್ಲಿ ಬರ್ಲಿನ್‌ನಲ್ಲಿ ಬೇಸಗೆಯ ಒಲಂಪಿಕ್ ಕ್ರೀಡೆಯನ್ನು ನಡೆಸಿತು. 1935 ಮಾರ್ಚ್‌ನಲ್ಲಿ ಹಿಟ್ಲರ್ ಜರ್ಮನಿಯಲ್ಲಿ ಬಲಾತ್ಕಾರದಿಂದ ರಾಷ್ಟ್ರಸೇವೆಗಾಗಿ ಜನರನ್ನು ಸೇನೆಯಲ್ಲಿ ಸೇರಿಸಿಕೊಳ್ಳುವುದರ ಮುಖಾಂತರ ವರ್ಸೆಲ್ ಒಪ್ಪಂದವನ್ನು ತಿರಸ್ಕರಿಸಿದ. ದೊಡ್ಡ ಗಾತ್ರದ ಮಿಲಿಟರಿ ಯಂತ್ರವನ್ನು ನಿರ್ಮಿಸಿ, ನೌಕಾದಳ ಮತ್ತು ವಿಮಾನ ಬಲವನ್ನು ಹೆಚ್ಚಿಸಲಾಯಿತು. ಹೊಸ ಮಿಲಿಟರಿ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರು ಮತ್ತು ಗಂಡಸರನ್ನು ನೇಮಿಸಿಕೊಳ್ಳುವ ಮುಖಾಂತರ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದ. ಆದರೆ ಇದು ಜರ್ಮನಿಯ ಆರ್ಥಿಕ ಸ್ಥಿತಿಯನ್ನು ಹದಗೆಡಿಸಿತು. 1936 ಮಾರ್ಚ್‌ನಲ್ಲಿ ಹಿಟ್ಲರ್‌ನ ಜರ್ಮನ್ ಸೈನ್ಯ ಲೊಕಾರ್ನೊ ಒಪ್ಪಂದವನ್ನು ಉಲ್ಲಂಘಿಸಿ ನಿಶ್ಶಸ್ತ್ರೀಕರಣಗೊಂಡಿದ್ದ ರೈನ್ ಪ್ರದೇಶವನ್ನು ಆಕ್ರಮಿಸಿತು. ಬ್ರಿಟನ್ ಮತ್ತು ಫ್ರಾನ್ಸ್ ಈ ವಿಷಯದಲ್ಲಿ ಮೌನ ತಾಳಿದ್ದರಿಂದ ಹಿಟ್ಲರ್ ಇನ್ನೂ ಬಲಶಾಲಿಯಾಗಿ ಬೆಳೆದ. 1936ಜುಲೈ ನಲ್ಲಿ ಸ್ಪೇನ್‌ನಲ್ಲಿ ಆಂತರಿಕ ಯುದ್ಧ ನಡೆದು, ಹಿಟ್ಲರ್ ಜನರಲ್ ಫ್ರಾಂಕೊಗೆ ನೆರವು ನೀಡಲು ಸೈನ್ಯವನ್ನು ಕಳುಹಿಸಿದ. 1940 ರಲ್ಲಿ ಜರ್ಮನಿ, ಜಪಾನ್ ಮತ್ತು ಇಟಲಿಯ ನಡುವೆ ತ್ರಿಪಕ್ಷ ಒಪ್ಪಂದ ನಡೆಯಿತು. ಅನಂತರದ ದಿನಗಳಲ್ಲಿ ಈ ಪಕ್ಷಕ್ಕೆ ಹಂಗೇರಿ, ರೊಮೇನಿಯ ಮತ್ತು ಬಲ್ಗೇರಿಯ ಸೇರಿತು. ಈ ಕೂಟಕ್ಕೆ ಆಕ್ಸಿಸ್ ಒಪ್ಪಂದ ಎಂತಲೂ ಕರೆಯಲಾಯಿತು. ಹಿಟ್ಲರನ ಸಾಮಾಜಿಕ ನೀತಿಗಳ ತಳಪಾಯವೆಂದರೆ ಜನಾಂಗ ಪರಿಶುದ್ಧತೆಯಲ್ಲಿ ನಂಬಿಕೆಯಿಟ್ಟಿರುವುದು.

1938 ಮಾರ್ಚ್ 12 ರಂದು ತನ್ನ ದೇಶಿ ನಿವಾಸಿಗಳಾದ ಆಸ್ಟ್ರಿಯನ್ನರನ್ನು ಜರ್ಮನಿ ರಾಜ್ಯದೊಂದಿಗೆ ಸೇರಿಕೊಳ್ಳಲು ಒತ್ತಾಯಿಸಿ, ಅನಂತರ ಜಯಶೀಲವಾಗಿ ವಿಯನ್ನವನ್ನು ಪ್ರವೇಶಿಸಿದ. ಇದಾದನಂತರ ಹಿಟ್ಲರ್ ಚೆಕೊಸ್ಲೊವಾಕಿಯದ, ಜರ್ಮನ್ ಭಾಷೆ ಮಾತನಾಡುವ ಸಡೆಟನ್ ಪ್ರದೇಶದ ಜರ್ಮನರಿಗೆ ಎಲ್ಲ ನೆರವನ್ನಿತ್ತು ದಂಗೆಯೇಳುವಂತೆ ಮಾಡಿದ. ಇದರಿಂದ 1938 ಸೆಪ್ಟೆಂಬರ್ 29 ರಂದು ಮ್ಯೂನಿಚ್ ಒಪ್ಪಂದ ನಡೆದು, ಚೆಕೊಸ್ಲೊವಾಕಿಯ ಸಡೆಟನ್ ಜರ್ಮನ್ ಪ್ರದೇಶವನ್ನು ಅಕ್ಟೋಬರ್ 10ರ ಒಳಗೆ ಜರ್ಮನಿಗೆ ಬಿಟ್ಟುಕೊಡಬೇಕಾಯಿತು. ಇಂಗ್ಲೆಂಡಿನ ಪ್ರಧಾನಿ ನೆವಿಲ್ ಚೇಂಬರ್ ಲೈನ್ ಈ ಒಪ್ಪಂದದ ಬಗ್ಗೆ ನಮ್ಮ ಕಾಲಕ್ಕೆ ಶಾಂತಿಯನ್ನು ಕಾಪಾಡಿದೆ ಎಂದೂ ಹೇಳುವುದರ ಮೂಲಕ ತನ್ನ ಪೂರ್ಣ ಸಮಾಧಾನ ವ್ಯಕ್ತಪಡಿಸಿದ. ಆದರೆ ಚೆಕೊಸ್ಲೊವಾಕಿಯವನ್ನು ಹಿಟ್ಲರ್‌ನ ಅನುಕಂಪಕ್ಕೆ ಬಿಡಲಾಯಿತು. 1939 ಆಗಸ್ಟ್ 23 ರಂದು ಹಿಟ್ಲರ್ ಗುಪ್ತವಾಗಿ ರಷ್ಯದ ಸ್ಟಾಲಿನ್‌ನೊಂದಿಗೆ ಅನಾಕ್ರಮಣ ಒಪ್ಪಂದಕ್ಕೆ ಸಹಿ ಹಾಕಿದ. ಬಹುಶಃ ಈ ಒಪ್ಪಂದದ ಪ್ರಕಾರ ರಷ್ಯ ಮತ್ತು ನಾಜಿ ಜರ್ಮನಿ ಪೋಲೆಂಡನ್ನು ವಿಭಜಿಸಿ ರಷ್ಯ ಪೂರ್ವಪೋಲೆಂಡನ್ನೂ ಜರ್ಮನಿ ಪಶ್ಚಿಮ ಪೋಲೆಂಡನ್ನೂ ಹೊಂದಲು ನಿರ್ಧರಿಸಿತು. 1940 ಮೇ ನಲ್ಲಿ ಹಿಟ್ಲರ್ ಫ್ರಾನ್ಸ್ ಮೇಲೆ ಧಾಳಿ ಮಾಡಲು ತನ್ನ ಪಡೆಗೆ ಆದೇಶವಿತ್ತ ಹಾಗೂ ನೆದರ್ಲೆಂಡ್, ಲಕ್ಸಂಬರ್ಗ್ ಮತ್ತು ಬೆಲ್ಜಿಯಂ ವಶಪಡಿಸಿಕೊಂಡ. ಈ ವಿಜಯಗಳಿಂದಾಗಿ ಹಿಟ್ಲರ್‌ನ ಜೊತೆಗಾರ ಬೆನಿಟೋ ಮುಸ್ಸೊಲಿನಿ ತೃಪ್ತಿಪಟ್ಟು 1940 ಮೇ ನಲ್ಲಿ ಹಿಟ್ಲರ್‌ನ ಪರವಾಗಿ ಯುದ್ಧಮಾಡಲು ಈತನ ಸೈನ್ಯ ಸೇರಿದ. ಆಗ ಹಿಟ್ಲರ್ ಬ್ರಿಟನ್ನಿನ ವಿಮಾನ ಪಡೆಯನ್ನು ನಾಶಮಾಡಲು ಆದೇಶವಿತ್ತ. ಇಲ್ಲಿಂದ ಬ್ರಿಟನಿನ ಯುದ್ಧ ಪ್ರಾರಂಭವಾಯಿತು. ಬ್ರಿಟಿಷ್ ವಾಯುಪಡೆ ಶತ್ರುಗಳ ಅನೇಕ ವಿಮಾನಗಳನ್ನು ಹೊಡೆದುರುಳಿಸಿತು. ಹಿಟ್ಲರ್ 1940–41ರ ಚಳಿಗಾಲದ ರಾತ್ರಿ ವೇಳೆಯಲ್ಲಿ ಲಂಡನ್ ಮತ್ತಿತರ ನಗರಗಳ ಮೇಲೆ ಧಾಳಿಮಾಡಲು ಜರ್ಮನರಿಗೆ ಆದೇಶಿಸಿದ.

1941 ಜೂನ್ 22 ರಂದು ಹಿಟ್ಲರ್ ರಷ್ಯದ ಮೇಲೆ ಧಾಳಿ ಮಾಡಲು ಜರ್ಮನ್ ಪಡೆಗೆ ಆದೇಶಿಸಿದ. ಆದರೆ ಹಿಟ್ಲರ್ ಎಣಿಸಿದಂತೆ ಜಯ ಲಭಿಸಲಿಲ್ಲ. ರಷ್ಯದ ಹಿಮಪಾತ ದೊಡ್ಡ ತೊಡಕಾಯಿತು ರಷ್ಯನರು ಜರ್ಮನಿಯ ಪಡೆಯನ್ನು ಸಮರ್ಥವಾಗಿ ಎದುರಿಸಿದರು. ಹಿಟ್ಲರ್ ಅಮೆರಿಕನ್ನರ ಮೇಲೆಯೂ ಯುದ್ಧವನ್ನು ಘೋಷಿಸಿದ. ಆದರೆ 1943ರ ಅನಂತರ ಹಿಟ್ಲರ್‌ನ ಸೈನ್ಯ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳಲಾರಂಭಿಸಿತು. ಹಿಟ್ಲರ್‌ನ ಆರೋಗ್ಯವೂ ಕ್ಷೀಣಿಸುತ್ತಿತ್ತು. ಈತ ಪಾರ್ಕಿನ್‌ಸನ್ ಕಾಯಿಲೆಯಿಂದ ಬಳಲುತ್ತಿದ್ದ.

1945 ಏಪ್ರಿಲ್‌ನಲ್ಲಿ ರಷ್ಯದ ಸೈನ್ಯ ಬರ್ಲಿನ್ ಗೇಟಿನ ಬಳಿ ಬಂದಿರುವ ಸುದ್ದಿತಿಳಿದ ಹಿಟ್ಲರ್ 1945 ಏಪ್ರಿಲ್ 30 ರಂದು ತನ್ನ ಮಡದಿ ಈವಾಬ್ರೌನ್ ಜೊತೆ ಆತ್ಮಹತ್ಯೆ ಮಾಡಿಕೊಂಡ. ಹಿಟ್ಲರನ ಮರಣದ ಸಮಯದಲ್ಲಿ ಜರ್ಮನಿಯ ಪ್ರಮುಖ ರಾಜ್ಯಗಳೆಲ್ಲವೂ ನಾಶವಾಗಿದ್ದವು.

(ಎಸ್‌ಯು.ಎಸ್.)

**ಹಿಯೆನಸ್:** ದಕ್ಷಿಣ ಕೊರಿಯದ ದಕ್ಷಿಣ ಗಿಯೊಂಗ್‍ಸಂಗ್ ಪ್ರಾಂತದ ಗಯ ಪರ್ವತದ ಮೇಲಿರುವ ಬೌದ್ಧ ದೇವಾಲಯ. ಕೊರಿಯದ ತ್ರಿರತ್ನ ದೇವಾಲಯಗಳಲ್ಲಿ ಇದೂ ಒಂದು. ಕೊರಿಯದ ತ್ರಿಪಿಟಕವನ್ನು ಮುದ್ರಿಸಲಾದ 81,258 ಮರದ ಅಚ್ಚುಗಳನ್ನು 1398ರಿಂದ ಇಲ್ಲಿ ಸಂರಕ್ಷಿಸಲಾಗಿದೆ. ಈ ಅಚ್ಚುಗಳನ್ನು ಸಂರಕ್ಷಿಸಲಾಗಿರುವ ಸಭಾಂಗಣದ ಕಾಲ ಅನಿಶ್ಚಿತವಾಗಿದ್ದರೂ ಇದನ್ನು ರಾಜ ಸೆಜೊ 1457ರಲ್ಲಿ ವಿಸ್ತರಿಸಿ ಜೀರ್ಣೋದ್ಧಾರ ಮಾಡಿಸಿದ. ಈ ಅಚ್ಚುಗಳಿರುವ ಕಟ್ಟಡದಲ್ಲಿ ಆಯತಾಕಾರದ ನಾಲ್ಕು ಸಭಾಂಗಣಗಳಿವೆ. ಉತ್ತರ ಸಭಾಂಗಣವನ್ನು ಧರ್ಮ ಸಭಾಂಗಣವೆಂದೂ (ಬೆಪ್ ಜೊಜೆಂನ್) ದಕ್ಷಿಣದ್ದನ್ನು ಸೂತ್ರಗಳು ಸಭಾಂಗಣವೆಂದೂ (ಸುದರಜಂಗ್) ಕರೆಯಲಾಗುತ್ತದೆ. ಪೂರ್ವ ಮತ್ತು ಪಶ್ಚಿಮದಲ್ಲಿರುವ ಸಭಾಂಗಣಗಳಲ್ಲಿ ಚಿಕ್ಕ ಗ್ರಂಥಾಲಯಗಳಿವೆ. ಈ ಮರದ ಅಚ್ಚುಗಳ ಸಂರಕ್ಷಣೆಗಾಗಿ ಕಟ್ಟಡವನ್ನು ಸಮುದ್ರಮಟ್ಟದಿಂದ 655ಮೀ ಎತ್ತರ ಸ್ಥಳದಲ್ಲಿ ನಿರ್ಮಿಸಿ ತೇವದಿಂದ ಕೂಡಿದ ಆಗ್ನೇಯಗಾಳಿ ಹೊಡೆತ ತಪ್ಪಿಸಲು ನೈರುತ್ಯಾಭಿಮುಖವಾಗಿ ಕಟ್ಟಲಾಗಿದೆ. ಸಭಾಂಗಣದಲ್ಲಿ ಗಾಳಿ ಸಂಚಲನಕ್ಕೆ ಅನುಕೂಲವಾಗುವಂತೆ ವಿವಿಧ ಅಳತೆಗಳ ಕಿಟಕಿಗಳನ್ನು ಜೋಡಿಸಲಾಗಿದೆ. ಇದರಿಂದ ಗರಿಷ್ಠ ಪ್ರಮಾಣದಲ್ಲಿ ಗಾಳಿ ಸಂಚಲನ ಮತ್ತು ಹವಾಗುಣದ ಸಮತೋಲನವನ್ನು ಕಾಯ್ದುಕೊಳ್ಳಲಾಗಿದೆ. ಮಣ್ಣಿನ ನೆಲಕ್ಕೆ ಇದ್ದಿಲು, ಕ್ಯಾಲ್ಸಿಯಂ ಆಕ್ಸೈಡ್, ಉಪ್ಪು, ಸುಣ್ಣ ಮತ್ತು ಮರಳು ಮಿಶ್ರಣವನ್ನು ಬಳಸಲಾಗಿದೆ. ಇದರಿಂದ ನೆಲದ ತೇವ ಮಳೆಗಾಲದಲ್ಲಿ ಕಡಿಮೆಯಾಗಿರುತ್ತದೆ. ಈ ಕಟ್ಟಡದ ಯಾವ ಭಾಗವೂ ನೆರಳಿನ ಅಡಿಯಲ್ಲಿ ಬರುವ ಹಾಗೆ ನಿರ್ಮಾಣ ಮಾಡಿಲ್ಲ. ಈ ರೀತಿಯ ಸಂರಕ್ಷಣಾ ಕ್ರಮದಿಂದಾಗಿ 500 ವರ್ಷಗಳಿಂದಲೂ ಈ ಮರದ ಅಚ್ಚುಗಳಿಗೆ ಧಕ್ಕೆಯಾಗದದೆ ಉಳಿದಿದೆ. 1970ರಲ್ಲಿ ಅತ್ಯಂತ ಆಧುನಿಕ ಸಂರಕ್ಷಣಾ ತಂತ್ರಗಳಿಂದ ಕೂಡಿದ ಸಂಗ್ರಹಾಲಯವನ್ನು ಕಟ್ಟಲಾಯಿತು. ಇದರ ಸಾಮರ್ಥ್ಯ ಪರೀಕ್ಷಿಸಲು ಇದರೊಳಗೆ ಕೆಲವು ಮರದ ತುಂಡುಗಳನ್ನು ಇಡಲಾಯಿತು. ಅವುಗಳ ಮೇಲೆ ತುಂತುರು ಹನಿಗಳು ಕಾಣಿಸಿಕೊಂಡದ್ದರಿಂದ ಹೊಸ ಯೋಜನೆ ಕೈಬಿಟ್ಟು ಅವುಗಳನ್ನು ಮೊದಲಿದ್ದ ಸ್ಥಳದಲ್ಲಿಯೇ ಸಂರಕ್ಷಿಸಲಾಗಿದೆ. (ಎ.ಎಸ್;ಎನ್.ಎಲ್)

**ಹಿರೇಬೆನಕಲ್ಲು:** ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಪುರಾತತ್ತ್ವ ನೆಲೆ. ಸುತ್ತಲೂ ಎತ್ತರದ ಬೆಟ್ಟಗಳ ಸಾಲುಗಳಿಂದ ಸುತ್ತುವರೆಯಲ್ಪಟ್ಟಿದೆ. ಬೃಹತ್ ಬಂಡೆಗಳ ರಾಶಿಯ ಈ ಬೆಟ್ಟಗಳಲ್ಲಿ ಜನವಸತಿಗೆ ಯೋಗ್ಯವಾದ ಅಸಂಖ್ಯಾತ ಗವಿಗಳು, ಕಲ್ಲಾಸರೆಗಳಿವೆ. ಈ ಬೆಟ್ಟಗಳ ಸುತ್ತಲ್ಲ ವಿಶಾಲವಾದ ಬಯಲು ಭೂಮಿಯಿದೆ. ಗ್ರಾಮದ ಉತ್ತರಕ್ಕೆ 1½ಕಿಮೀ ದೂರದಲ್ಲಿ ಕಿಟ್ಟದಂಥ ಬೂದಿಗುಡ್ಡೆಯಿದ್ದು ಅದು ಕಾಲಕ್ರಮೇಣ ಪೂರ್ಣ ನೆಲಸಮವಾಗಿದೆ. ಈ ನೆಲೆಯಲ್ಲಿ ನವಶಿಲಾತಾಮ್ರಯುಗ ಸಂಸ್ಕೃತಿಯ ಮಣ್ಪಾತ್ರೆ ಚೂರುಗಳು, ಚರ್ಟ್, ಜಾಸ್ಪರ್ ಮುಂತಾದ ಕಲ್ಲುಗಳ ಚಕ್ಕೆ ಉಪಕರಣಗಳು, ಅರೆಬರೆ ಪಳೆಯುಳಿಕೆಗಳಾದ ಪ್ರಾಣಿಗಳ ಎಲುಬುಗಳು ಮುಂತಾದ ಜನವಸತಿಗೆ ಸಂಬಂಧಿಸಿದ ಅವಶೇಷಗಳಿವೆ. ವಿಶೇಷವಾಗಿ ಇಲ್ಲಿಯ ವೈವಿಧ್ಯಮಯ ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳಿಗೆ ಈ ನೆಲೆ ಹೆಸರುವಾಸಿಯಾಗಿದೆ. ಈ ನೆಲೆಯ ಬಗ್ಗೆ ಮೊದಲು ಸೂಚನೆ ಕೊಟ್ಟವನು ಕೀಸ್. 1915ರಲ್ಲಿ ಎಲ್. ಮನ್ ಇಲ್ಲಿಯ ಬೆಟ್ಟಗಳಲ್ಲಿ ಬೃಹತ್ ಶಿಲಾ ಗೋರಿ ನೆಲೆಯ ಸಮೀಪ ಮೂರು ಗವಿ ಚಿತ್ರಗಳನ್ನೂ ಶೋಧಿಸಿದ. ಈ ಎಲ್ಲ ಶೋಧನೆಗಳನ್ನು ಗಮನಿಸಿದ ಹಿಂದಿನ ಹೈದರಾಬಾದ್ ಸಂಸ್ಥಾನದ ಪುರಾತತ್ತ್ವ ಇಲಾಖೆ ಈ ನೆಲೆಯನ್ನು ಸಂರಕ್ಷಿಸಲು ಕ್ರಮ ಕೈಗೊಂಡಿತು. 1956ರಿಂದ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಇದನ್ನು ಸಂರಕ್ಷಿಸುತ್ತಿದೆ.



ಕಲ್ಗೋರಿಗಳು

1964-68ರಲ್ಲಿ ಅ.ಸುಂದರ ಅವರು ನೆಲೆ ಪರಿಶೀಲನೆಯಲ್ಲಿ ಸು.8 ಗವಿಚಿತ್ರಗಳನ್ನೂ ಬೃಹತ್ ಶಿಲಾ ಸಂಸ್ಕೃತಿ ಜನರ 2 ವಸತಿ ನೆಲೆಗಳನ್ನೂ ಪತ್ತೆಹಚ್ಚಿದರು. 2003-04ರಲ್ಲಿ ಪುರಾತತ್ತ್ವ ಇಲಾಖೆ ಇಲ್ಲಿಯ ಒಂದು ವಸತಿ ನೆಲೆಯಲ್ಲಿ ಸಣ್ಣ ಪ್ರಮಾಣದಲ್ಲಿ ಉತ್ಖನನ ನಡೆಸಿತು.

ಸ್ಥಳೀಯವಾಗಿ ದುರ್ಗದ ದಡಿ ಎಂದು ಕರೆಯಲಾಗುವ ಬಿಳಿ-ಬೂದುವರ್ಣದ ಕಲ್ಲಿನ ಬೆಟ್ಟದ ಮೇಲೆ ಸು.1½ ಕಿಮೀ ಉದ್ದಗಲದಷ್ಟು ವಿಸ್ತಾರವಾದ ಸಮತಟ್ಟಿನ ಪ್ರದೇಶದಲ್ಲಿ ಮೂರು ಸ್ಥಳಗಳಲ್ಲಿ 300ಕ್ಕೂ ಹೆಚ್ಚು ಬೃಹತ್ ಶಿಲಾಗೋರಿಗಳಿವೆ. ಸ್ಥಳೀಯರು ಈ ಕಲ್ಮನೆಗಳನ್ನು ಮೋರಿಯರ ಮನೆಗಳು ಎಂದು ಕರೆಯುತ್ತಾರೆ. ಪಶ್ಚಿಮದಿಂದ ಮೊದಲನೆಯ ಸ್ಥಳದಲ್ಲಿ ಅರ್ಧ ಹುಗಿದ ವೃತ್ತ ಕಂಡಿ ಇರುವ ಆಯತಾಕಾರದ ಕಲ್ಗೋರಿಗಳಿದ್ದರೆ ಅದರ ಮುಂದಿನದರಲ್ಲಿ ನೆಲದ ಮೇಲೆ ನಿರ್ಮಿಸಿದ ಪೆಟ್ಟಿಗೆಯಾಕಾರದ ವಿವಿಧ ಪ್ರಮಾಣದ ಚೌಕೋನ ಕಂಡಿ ಕಲ್ಮನೆಗಳಿವೆ. ಇದರ ಮುಂದಿನ ಸ್ಥಳದಲ್ಲಿ ನೆಲದಲ್ಲಿ ಅರ್ಧ ಹುಗಿದ ಚೌಕೋನದ ಕಂಡಿ ಮನೆಗಳಿವೆ. ಈ ಮೂರು ಪ್ರಕಾರದ ಕಲ್ಮನೆಗಳು ಕಲ್ಲು ಚಪ್ಪಡಿಗಳಿಂದ ನಿರ್ಮಿತವಾಗಿವೆ.

ಒಂದು ಪ್ರಕಾರದಲ್ಲಿ ಕಲ್ಮನೆಯನ್ನು ನೆಲದ ಮೇಲೆಯೆ ಸ್ವಸ್ತಿಕ ವಿನ್ಯಾಸದಲ್ಲಿ ರಚಿಸಲಾಗಿದೆ. ಇದರಲ್ಲಿ ವೃತ್ತ, ಅರ್ಧ ವೃತ್ತಾಕಾರ ಅಥವಾ ತ್ರಿಕೋಣ, ಚೌಕೋನಾಕಾರದ ಸಣ್ಣ ದೊಡ್ಡ ಕಂಡಿ ಮಧ್ಯದಲ್ಲಿಯೋ ಇಲ್ಲವೆ ಮೇಲಿನ ಅಥವಾ ಕೆಳಅಂಚಿನಲ್ಲಿ, ಪೂರ್ವ ಅಥವಾ



ಮನುಷ್ಯಾಕೃತಿಯ ಕಲ್ಗೊಂಬೆ ಸಹಿತ ಕಲ್ಗೋರಿ

ಪಶ್ಚಿಮ ಬದಿಯ ನಿಲುಗಲ್ಲಿನಲ್ಲಿರಬಹುದು. ಕಲ್ಮನೆಯ ಹೊರಬದಿಯಲ್ಲಿ ಸುತ್ತಲೂ ಕಲ್ಲುತುಂಡುಗಳನ್ನು ಪೇರಿಸಿ ಅದರ ಸುತ್ತಲೂ ಒಂದರ ಪಕ್ಕದಲ್ಲೊಂದರಂತೆ ಮೇಲಿನ ಅಡ್ಡಚಪ್ಪಡಿಗೆ ಆನಿಸಿ ದೊಡ್ಡ ಕಲ್ಲುಚಪ್ಪಡಿಗಳನ್ನು ನಿಲ್ಲಿಸಲಾಗಿರುತ್ತದೆ. ಅಪರೂಪವಾಗಿ ಹೀಗೆ ನಿಲ್ಲಿಸಿದ ಕಲ್ಲುಚಪ್ಪಡಿಗಳಲ್ಲಿ ಒಂದು ಕೈಯನ್ನು ಮೇಲಕ್ಕೆತ್ತಿದ ಮನುಷ್ಯನ ಸೂಕ್ಷ್ಮ ಸ್ವರೂಪವನ್ನು ಕಾಣಬಹುದು. ಹಿರೆ ಬೆನಕಲ್ಲಿನ ಕಲ್ಮನೆಗಳಲ್ಲೊಂದರಲ್ಲಿ ವಿರುದ್ಧ ದಿಕ್ಕಿಗೆ ಅಡ್ಡ ಬಾಗಿದ ಎರಡು ಕೊಂಬೆಯ ದೊಡ್ಡ ನಿಲಸಕಲ್ಲು ಒಂದು ಕಲ್ಮನೆಗೆ ಒರಗಿ ನಿಂತಿದೆ. ಈ ಮಾದರಿಯ ಕಲ್ಮನೆಗಳಿರುವ ನೆಲೆಗಳು ದಕ್ಷಿಣ ಭಾರತದಲ್ಲಿ ವಿರಳ. ಸುಸ್ಥಿತಿಯಲ್ಲಿರುವ ಇಂಥ ಕಲ್ಮನೆಯೊಳಗೆ ಏನೂ ಇಲ್ಲದಿರುವುದು ಕುತೂಹಲಕಾರಿಯಾಗಿದೆ.

ಇವಲ್ಲದೆ, ಅಪರೂಪದ ಇನ್ನೆರಡು ಪ್ರಕಾರದ ಕಲ್ಮನೆಗಳಿವೆ. ತುಂಡುಕಲ್ಲುಗಳನ್ನು ಒಂದರಮೇಲೊಂದು ಇಟ್ಟು ಸು.60 ಸೆಂಮೀ ಎತ್ತರದ ಕಂಬಗಳನ್ನಾಗಿ ಮಾಡಿ ಅವುಗಳ ಮೇಲೆ ಅಡ್ಡಾದಿಡ್ಡಿಯಾಕಾರದ ದಪ್ಪದ ಚಪ್ಪಡಿಯನ್ನು ಅಡ್ಡಲಾಗಿ ಇಡಲಾಗಿದೆ. ಇವು ಯಾವುದೇ ನಿರ್ದಿಷ್ಟ ವಿನ್ಯಾಸದಲ್ಲಿರುವುದಿಲ್ಲ. ಸ್ಥಳೀಯರ ಪ್ರಕಾರ ಇಂಥ ಕಲ್ಮನೆಗಳನ್ನು ಹಿಂದೆ ಸಣ್ಣ ಪ್ರಾಣಿಗಳನ್ನು ಹಿಡಿಯಲು ನಿರ್ಮಿಸಲಾಗುತ್ತಿತ್ತು. ಇನ್ನೊಂದು ಸಣ್ಣ ಗವಿಯ ಮುಂಬದಿಯಲ್ಲಿ ತುಂಡುಕಲ್ಲಿನ ಗೋಡೆಯನ್ನು ನಿರ್ಮಿಸಿ ಮನೆಯನ್ನಾಗಿ ಮಾಡಲಾಗಿದೆ. ಇವು ನೆಲೆಯ ಪಶ್ಚಿಮ ಭಾಗದಲ್ಲಿ ಗಣನೀಯ ಸಂಖ್ಯೆಯಲ್ಲಿವೆ. ಇವು ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದವೆಂದು ಹೇಳಲು ಸದ್ಯಕ್ಕೆ ಖಚಿತ ಆಧಾರಗಳಿಲ್ಲ. ಈ ನೆಲೆಯ ಸಮೀಪ ಮತ್ತು ಇದರ ಸಮೀಪ ಬೆಟ್ಟದ ತಪ್ಪಲಿನ ತಳವಾರನ ಮೂಲೆ ಎಂಬ ಭಾಗದಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಜನವಾಸ್ತವ್ಯದ ನೆಲೆಗಳಿರುವುದನ್ನು ಗುರುತಿಸಲಾಗಿದೆ.

ಈ ಗ್ರಾಮದ ಸುತ್ತ ಮುತ್ತಲಿನ ಬಿಳೆಭಾವಿ, ಶಿವಪುರ, ಮಲ್ಲಾಪುರ, ಚಿಕ್-ರಾಮಪುರ, ಅಂಜನಹಳ್ಳಿ, ಆನೆಗೊಂದಿ, ಹಂಪಿ ಮುಂತಾದ ಗ್ರಾಮಗಳ ಬೆಟ್ಟದ ಸಾಲುಗಳಲ್ಲಿ ಚಿತ್ರಿತ ಗವಿಗಳು, ಬೃಹತ್ ಶಿಲಾ ಸಂಸ್ಕೃತಿಯ ಕಲ್ಮನೆಗಳು ಅಧಿಕವಾಗಿವೆ. ಹಿರೆಬೆನಕಲ್ಲಿನ ಗವಿ ಚಿತ್ರಗಳೆಲ್ಲವೂ ಕೆಮ್ಮಣ್ಣಿನ ಬಣ್ಣದವು. ಒಟ್ಟಾರೆ ಈ ಚಿತ್ರಗಳನ್ನು ಮೂರು ಮುಖ್ಯ ವರ್ಗಗಳನ್ನಾಗಿ ವಿಂಗಡಿಸಬಹುದು: 1. ನೆರಳಿನಾಕೃತಿಯ ಅಥವಾ ಬಾಹ್ಯ ರೇಖಾಕೃತಿಯ ಈ ಚಿತ್ರಗಳನ್ನು ಗವಿಯೊಳಗಿನ, ಅಕ್ಕಪಕ್ಕದ ಮತ್ತು ಚಾವಣಿಯ ಒರಟು ಮೇಲ್ಮೈಯ ಬಂಡೆಗಳ ಮೇಲೆ ಬಿಡಿ ಬಿಡಿಯಾಗಿ, ಬೇರೆ ಬೇರೆ ಕಾಲಘಟ್ಟಗಳಲ್ಲಿ ಬಿಡಿಸಲಾಗಿದೆ. ಚಿಕ್ಕ ಮಕ್ಕಳು ಸೇರಿದಂತೆ ಕೈ-ಕೈ ಹಿಡಿದುಕೊಂಡು ತಮ್ಮ ಸಂಪ್ರದಾಯದ ಕುಣಿತಕ್ಕೆ ಸಿದ್ಧರಾಗಿ ವೃತ್ತ ಅಥವಾ ನೇರ ಸಾಲಿನಲ್ಲಿ ನಿಂತ ಮನುಷ್ಯರ ಸಾಲು, ಕುದುರೆ ಸವಾರರು, ಕತ್ತಿ, ಬಿಲ್ಲು ಬಾಣ ಮುಂತಾದ ಆಯುಧಗಳನ್ನು ಹಿಡಿದು ನಿಂತವರು, ಪ್ರಾಣಿಗಳನ್ನು ಹಿಂಬಾಲಿಸುತ್ತಿರುವ ಕುದುರೆ ಮೇಲಿರುವ ಬೇಟೆಗಾರರು, ಸಂಭೋಗದಲ್ಲಿ ತೊಡಗಿರುವ ಜೋಡಿ, ಧಾರ್ಮಿಕ ಕಟ್ಟಳೆಗನುಗುಣವಾಗಿ ಮೈತುಂಬ ರೇಖಾಚಿತ್ರಗಳಿಂದ ಅಲಂಕೃತವಾಗಿ ವಿಶಿಷ್ಟ ಭಂಗಿಯಲ್ಲಿರುವ ನಗ್ನ ಮನುಷ್ಯ; 2. ನವಿಲು, ಆನೆ, ಹುಲಿ, ಚಿರತೆ, ಜಿಂಕೆ, ಜಿಂಕೆಗಳ ಸಾಲು, ದನ ಗೂಳಿ ಮುಂತಾದ ಪಶು-ಪಕ್ಷಿಗಳು; 3. ಜನಸಮುದಾಯದ ಕಟ್ಟುಕಟ್ಟಳೆಗಳಿಗೆ ಸಂಬಂಧಿಸಿದ ವೈವಿಧ್ಯಮಯ ರೇಖಾಮಂಡಲಗಳು. ಇವಲ್ಲದೆ ಅಪರೂಪವಾಗಿ ಹಿರೆಬೆನಕಲ್ಲಿನ 2ನೆಯ ಕಲ್ಲಾಸರೆಯಲ್ಲಿ

ಕಾಡಿನಲ್ಲಿ ಕರಡಿಯಿಂದ ಹಿಂಬಾಲಿಸಲ್ಪಟ್ಟು ಜೀವಭಯದಿಂದ ಓಡುತ್ತಿರುವ ಮನುಷ್ಯನ ಚಿತ್ರ ತುಂಬ ಸಹಜವಾಗಿದೆ. 3ನೆಯ ಗವಿಯಲ್ಲಿ ಮೇಲೆ ಹೇಳಿದ ಮೈತುಂಬ ರೇಖಾಚಿತ್ರಗಳಿಂದ ಅಲಂಕೃತನಾದ, ಎರಡೂ ಕೈಗಳನ್ನು ಅರ್ಧಕ್ಕೆ ಮೇಲಕ್ಕೆತ್ತಿ ದೊಗ್ಗಾಲಿನಲ್ಲಿ ನಿಂತ, ಪ್ರಮಾಣಬದ್ಧ, ಸು.2ಮೀ ಎತ್ತರದ ನಗ್ನ ಮನುಷ್ಯನ ಚಿತ್ರ ತಲೆಯ ಮೇಲಿನ ಬಂಡೆಯ ಮೇಲಿದೆ. ಅಲ್ಲಿ ಅಷ್ಟು ಪ್ರಮಾಣಬದ್ಧವಾಗಿ ಚಿತ್ರವನ್ನು ಬಿಡಿಸಲು ಹೇಗೆ ಸಾಧ್ಯವಾಯಿತೆಂಬುದು ಕುತೂಹಲ ಕಾರಿಯಾದ ವಿಷಯ. ಜಿಂಕೆಗಳ ಸಾಲಿನಲ್ಲಿ ಎಲ್ಲ ಜಿಂಕೆಗಳೂ ಒಂದೆ ಪ್ರಮಾಣ ಮತ್ತು ಆಕಾರದಲ್ಲಿವೆ. ಒಂದು ಅಗಲವಾದ ದಪ್ಪ ಎಲೆಯಲ್ಲಿ ಜಿಂಕೆ ಆಕೃತಿಯನ್ನು ಕತ್ತರಿಸಿಕೊಂಡು ಅದನ್ನು ಬಂಡೆಯ ಮೇಲಿಟ್ಟುಕೊಂಡು ಒಂದರ ಪಕ್ಕದಲ್ಲೊಂದರಂತೆ ಬಿಡಿಸಿರ ಬೇಕೆಂದು ಕಾಣುತ್ತದೆ. ಈಗಿನ ಕಾಲ ದಲ್ಲಿ ಸ್ಟೆನ್ಸಿಲ್ ಉಪಯೋಗಿಸಿಕೊಂಡು ಬರೆದಂತೆ. ಇನ್ನೊಂದರಲ್ಲಿ ತಲೆಗೆ ವಿಶಿಷ್ಟವಾದ ಟೋಪಿಯನ್ನು ಹಾಕಿಕೊಂಡ ಒಬ್ಬ ನಗ್ನ ವ್ಯಕ್ತಿ ಸಾಮಾಜಿಕ ಕಟ್ಟಳೆಯಲ್ಲಿ ತೊಡಗಿದಂತೆ ಕಾಣುತ್ತದೆ. ಇವನ ಬದಿಯಲ್ಲಿ ಸಂಕಲನ ಚಿಹ್ನೆಯುಳ್ಳ ವೃತ್ತವಿದೆ. ಈ ಪ್ರಕಾರದ ಸಂಕೇತ ಸಿಂಧೂ ಲಿಪಿಯಲ್ಲೂ ಇದೆ. ರೇಖಾ ಚಿತ್ರಗಳಲ್ಲಿ ಒಂದು ಮೂಲೆಯಲ್ಲಿ ಮತ್ತು ಬಾಹುಗಳ ಮಧ್ಯದಲ್ಲಿ ಗುಣುಸುಗಳುಳ್ಳ ಒಂದನ್ನೊಂದು ಭೇದಿಸುವ ಎರಡು ಚತುರ್ಭುಜಾಕೃತಿ, ಮೂರು ಸಾಲಿನ ಒಂಬತ್ತು ಚುಕ್ಕೆಗಳನ್ನು ಉದ್ದ ಅಡ್ಡ ಗೆರೆಗಳಿಂದ ಸೇರಿಸಿ ಉಂಟಾದ ನಾಲ್ಕು ಚತುರ್ಭುಜಗಳಲ್ಲಿ ಒಂದನ್ನೊಂದು ಭೇದಿಸುವ ಕರ್ಣರೇಖೆಗಳ ಮಂಡಲಗಳಿವೆ. ಇವು ಕೂಡ ಹರಪ್ಪ ಮುದ್ರಿಕೆಗಳಲ್ಲಿವೆ. ಹೀಗೆ ಆಯಾಯ ಕಾಲದ ಜನಸಮುದಾಯದ ಕಸಬು, ಸಾಮಾಜಿಕ ಕಟ್ಟುಕಟ್ಟಳೆಗಳು, ಮನರಂಜನೆ, ಪರಿಸರ, ಜನರ ಸೌಂದರ್ಯ ಪ್ರಜ್ಞೆ, ವರ್ಣಚಿತ್ರಕಲೆ ಮುಂತಾದ ಸ್ವಾರಸ್ಯಕರ ವಿಷಯಗಳಿಂದ ಈ ಗವಿಚಿತ್ರಗಳು ಅರ್ಥಪೂರ್ಣ ಹಾಗೂ ಮಹತ್ತ್ವದ್ದಾಗಿವೆ. (ಎ.ಎಸ್.)

ಜೋಡಿ ಕಲ್ಗೋರಿ

ಒಂದನೆಯ ಗವಿಯ ಪೂರ್ವಬದಿಯಲ್ಲಿ ಒಂದೇ ಮುಂಡದಲ್ಲಿ ಪರಸ್ಪರ ಅಭಿಮುಖ ವಾಗಿ ನಿಂತಿರುವ ದನಗಳ ಚಿತ್ರ ವಿಶೇಷವೆನಿಸುತ್ತದೆ. ದಕ್ಷಿಣಬದಿಯಲ್ಲಿ ಪರಸ್ಪರ ಕೈ, ಕೈ ಹಿಡಿದು ಸಾಲಾಗಿ ನಿಂತು ನೃತ್ಯ ಮಾಡುತ್ತಿರುವ 10 ಜನರ, 13 ಜನರ ತಂಡಗಳ ಚಿತ್ರಗಳು ಆ ಕಾಲದ ಸಾಮಾಜಿಕ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಮೂಹ ನೃತ್ಯದಲ್ಲಿ ತಲೆಯಲ್ಲಿ ಸಣ್ಣ ಸಣ್ಣ ಗೆರೆಗಳನ್ನು ಎಳೆದು ಅವರನ್ನು ಸ್ತ್ರೀಯರೆಂದು ಸೂಚಿಸಿರುವುದು ಕಲಾವಿದರ ರೂಪ ಗ್ರಹಿಕೆಗೆ ಸಾಕ್ಷಿಯಾಗಿದೆ. ಜೊತೆಗೆ ಅಶ್ವಸವಾರ ಚಿತ್ರಗಳಲ್ಲಿ ಸವಾರರು ಕೊಡಲಿಗಳನ್ನು ಹಿಡಿದಿರುವುದು, ಹುಲಿಯೊಂದಕ್ಕೆ ಭಲ್ಲೆ ಎಸೆಯುತ್ತಿರುವ ಮನುಷ್ಯ ಚಿತ್ರಗಳು ಬೇಟೆಗಾರಿಕೆಯನ್ನು ತಿಳಿಸುತ್ತವೆ. ಎರಡನೆಯ ಕಲ್ಲಾಸರೆಯ ಚಿತ್ರಿತಭಾಗ ಸು.20ಮೀ ಅಗಲ ಮತ್ತು 18ಮೀ ಎತ್ತರವಾಗಿದ್ದು, ಉಳಿದೆಲ್ಲ ಚಿತ್ರಗಳಿಗಿಂತ ಅತ್ಯಂತ ದೊಡ್ಡ ಪ್ರಮಾಣದಲ್ಲಿದೆ. ಇಲ್ಲಿ ಮೇಲೆ ಮತ್ತು ಕೆಳಗೆ ಎರಡು ಬೃಹತ್ ಹೆಬ್ಬಾವುಗಳನ್ನು ಮನುಷ್ಯರು ಬೇಟೆಯಾಡುತ್ತಿರುವ ಚಿತ್ರಗಳಿವೆ. ಹೆಬ್ಬಾವುಗಳಲ್ಲಿ ಅರೆವೃತ್ತಾಕಾರದ ತಲೆ (ಹೆಡೆ) ಅದರಲ್ಲಿ ಎರಡು ಕಣ್ಣು, ಬಾಯಿಯಿಂದ ಹೊರಬಂದ ಸೀಳುನಾಲಗೆ, ದಪ್ಪನಾದ ದೇಹ ಮತ್ತು ಬಾಲ ಎಲ್ಲ ಅಂಗಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಈ ಹೆಬ್ಬಾವುಗಳ ಮೇಲೆಲ್ಲಾ ಕೆಲವು



ಕಲ್ಗೋರಿ

ಮನುಷ್ಯರು ನಿಂತು ತುಳಿಯುತ್ತಿರುವಂತಿದೆ. ಸುತ್ತೆಲ್ಲ ಗರ್ಭಿಣಿ ಸ್ತ್ರೀ, ಹಸು, ಹಂದಿಯ ಚಿತ್ರಗಳಿವೆ. ಈವರೆಗೆ ತಿಳಿದಂತೆ ಮಧ್ಯಪ್ರದೇಶದ ರಾಯ್‍ಸೇ ಜಿಲ್ಲೆಯ ಗೋರಾಗಂಜ್‍ನ ಸನಕುಸ್ ಮತ್ತು ಭಾಗವಾನಿ ನದಿಗಳ ನಡುವೆ ಇರುವ ಜವರ ಕಲ್ಲಾಸರೆಯ 3.60 ಮೀ ಉದ್ದದ ಕೋಣದ ಚಿತ್ರವನ್ನು ದೇಶದ ಪ್ರಾಗಿತಿಹಾಸ ಕಾಲದ ಅತ್ಯಂತ ದೊಡ್ಡ ಚಿತ್ರವೆಂದು ತಿಳಿಯಲಾಗಿತ್ತು. ಆದರೆ 12ಮೀ ಉದ್ದದ ಹಿರೇಬೆನಕಲ್ಲಿನ 2ನೆ ಕಲ್ಲಾಸರೆಯ ಹೆಬ್ಬಾವಿನ ಚಿತ್ರಗಳೇ ದೇಶದ ಅತಿ ದೊಡ್ಡ ಚಿತ್ರಗಳೆಂದು ಗುರುತಿಸಲಾಗಿದೆ.

ನಾಲ್ಕನೆಯ ಗವಿಯಲ್ಲಿ ಎರಡು ಕಾಲುಗಳನ್ನು ಸೊಟ್ಟಗೆ ಮಾಡಿನಿಂತ ಪುರುಷನ ನಗ್ನ ಚಿತ್ರವಿದೆ. ಎರಡೂ ಕೈಗಳನ್ನು ಅರ್ಧಮೇಲಕ್ಕೆತ್ತಿದ್ದು ಹಸ್ತ, ಕಣ್ಣು, ಕಿವಿಗಳನ್ನು ತೋರಿಸಿಲ್ಲ. ಶಿಶ್ನವನ್ನು ಬಿಡಿಸಲಾಗಿದೆ. ಮೈತುಂಬ ತ್ರಿಕೋನಾಕಾರದ, ವಜ್ರಾಕೃತಿಯ ರೇಖೆಯನ್ನು ಎಳೆಯಲಾಗಿದೆ. ಇದು ಮಾಂತ್ರಿಕ ಆಚರಣೆಯಲ್ಲಿ ನಿರತನಾದ ಮನುಷ್ಯನ ಚಿತ್ರವೆಂದು ಗುರುತಿಸಬಹುದು. ನಾಲ್ಕನೆಯ ಗವಿಯಲ್ಲಿ ಚಿತ್ರಗಳು ಸಾಕಷ್ಟು ಮಾಸಿದ್ದು, ನವಿಲು, ಅಶ್ವ ಸವಾರರು, ಚಿಗರೆಯ ಚಿತ್ರಗಳಿವೆ. ಐದನೆಯ ಗವಿಯ ಮನುಷ್ಯ ಚಿತ್ರವೊಂದು ಗಮನಸೆಳೆ ಯುತ್ತದೆ. ಡೊಂಕು ಡೊಂಕಾದ ಕೋಡುಗಳುಳ್ಳ ಜಿಂಕೆಗಳ ಹಿಂಡಿನ ಮಧ್ಯ ಅವನು ನಿಂತಿದ್ದು, ತಲೆಗೆ ಜಿಂಕೆ ರೀತಿಯ ಕೋಡುಗಳನ್ನು ಮತ್ತು ಸೊಂಟಕ್ಕೆ ಬಾಲವನ್ನು ಕಟ್ಟಿಕೊಂಡಿ ದ್ದಾನೆ. ಸೂಕ್ಷ್ಮಗ್ರಹಿಕೆಯ ಪ್ರಾಣಿಗಳಾದ ಜಿಂಕೆಗಳನ್ನು ಅವುಗಳಂತೆಯೇ ನಟಿಸಿ ಆಹಾರಕ್ಕಾಗಿ ಸೆರೆ ಹಿಡಿಯುವ ತಂತ್ರವಾಗಿರಬಹುದೆಂದು ಈ ಚಿತ್ರವನ್ನು ಗ್ರಹಿಸಬಹುದಾಗಿದೆ. ಆರನೆಯ ಗವಿಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದ ಮನುಷ್ಯರ, ಭರ್ಜಿಗಳನ್ನಿಡಿದ ಅಶ್ವಸವಾರರ, ಕೆಚ್ಚಲುಳ್ಳ ಆಕಳು, ನವಿಲು, ಗೂಳಿಗಳ ಚಿತ್ರಗಳಿವೆ. ಇಲ್ಲಿ ಒಬ್ಬ ಕುದುರೆ ಸವಾರನು ಚಿಗರಿಯನ್ನು ಹಿಡಿಯಲು ಪ್ರಯತ್ನಿಸುತ್ತಿರುವ ಹುಲಿಯ ಕಡೆಗೆ ಬಿಲ್ಲಿಗೆ ಹೂಡಿದ ಬಾಣದಿಂದ ಹೊಡೆಯುತ್ತಿರುವಂತಿದೆ.

ಕಲ್ಗೋರಿ

ಏಳನೆಯ ಗವಿ ಇರುವ ಭಾಗಕ್ಕೆ ಮ್ಯಾದರಬಂಡೆ ಎಂದು ಹೆಸರು. ಇಲ್ಲಿ ಕೆಲವು ಗೂಳಿಗಳ, ನವಿಲಿನ ಚಿತ್ರಗಳು, ಎಂಟರಲ್ಲಿ ಹುಲಿಗಳ, ಒಂಬತ್ತರಲ್ಲಿ ಹುಲಿ ಮತ್ತು ರೇಖಾಕೃತಿಗಳ, ಹತ್ತರಲ್ಲಿ ಹಿಡಿಕೆಯುಳ್ಳ ಉದ್ದ ಕತ್ತಿಗಳನ್ನು, ಬಿಲ್ಲು ಬಾಣಗಳನ್ನು ಹಿಡಿದುಕೊಂಡು ನಿಂತ ಮನುಷ್ಯರ ಚಿತ್ರಗಳಿವೆ. ಹನ್ನೊಂದನೆಯ ಗವಿಯಲ್ಲಿ ಕೈ-ಕೈ ಹಿಡಿದು ನೃತ್ಯ ಮಾಡುತ್ತಿರುವ ಮನುಷ್ಯರ ನೇರ ಹಾಗೂ ವೃತ್ತಸಾಲುಗಳಿವೆ. ಆಯಾ ಮನುಷ್ಯ ಚಿತ್ರಗಳ ಕೆಳಗೆ ನೇರವಾಗಿ ಮತ್ತು ದ್ವಿಅರೆ ವೃತ್ತಾಕಾರದ ಗೆರೆಗಳಿವೆ. ಮನುಷ್ಯ ಜೋಡಿಯ ಸಂಭೋಗ, ಗೂಳಿಗಳ ಮತ್ತು ಜಿಂಕೆಗಳ ಸಾಲು ಚಿತ್ರಗಳು ಕೂಡ ಇಲ್ಲಿವೆ.

ಹನ್ನೆರಡನೆಯ ಗವಿಯಲ್ಲಿ ಕೈ-ಕೈ ಹಿಡಿದುಕೊಂಡು ಸಾಲಾಗಿ ನಿಂತು ನೃತ್ಯಮಾಡುತ್ತಿರುವ 27 ಜನರ ತಂಡದ ಚಿತ್ರ, ಅರ್ಧಚಂದ್ರಾಕೃತಿಯ ಗೆರೆಯ ಮೇಲೆ ನಿಂತ ಹನ್ನೆರಡು ಜನರ ಮತ್ತೊಂದರಲ್ಲಿ ಒಬ್ಬ ಮನುಷ್ಯ ಒಂದು ಗೂಳಿಯನ್ನು ಚಪ್ಪರಿಸುತ್ತಿರುವ ಚಿತ್ರಗಳಿವೆ. ಇನ್ನೊಂದೆಡೆ ಇಪ್ಪತ್ತೂರು ಕುದುರೆ ಸವಾರರ ಸಾಲು, ಹದಿನಾಲ್ಕು ಜಿಂಕೆಗಳ ಸಾಲು, ಆಯುಧ ಪಾಣಿಯಾದ ಮನುಷ್ಯನ ಚಿತ್ರಗಳಿವೆ. ಹದಿಮೂರನೆಯ ಗವಿಯಲ್ಲಿ ಎತ್ತುಗಳ, ಜಿಂಕೆಗಳ ಚಿತ್ರಗಳಿವೆ. ಹದಿನಾಲ್ಕನೆಯ ನೆಲೆ ಬೃಹತ್ ಶಿಲಾಸಮಾಧಿಗಳ ಕೋಣೆಗಳಿರುವ ಸ್ಥಳದಲ್ಲಿದೆ. ಇಲ್ಲಿಯ ಒಂದು ಶಿಲಾ ಕೋಣೆಯ ಹಲಗೆಗಳ ಮೇಲೆ ತಿಳಿ ಕೆಂಪು ವರ್ಣದ ಮೂರು ಜಿಂಕೆಗಳ ಚಿತ್ರಗಳಿವೆ. ಹದಿನೈದನೆಯ ಕಲ್ಲಾಸರೆಯಲ್ಲಿ ಅರ್ಥವಾಗದ ಒಂದು ವಿಶಿಷ್ಟವಾದ ಆಕೃತಿ ಇದೆ. ಹದಿನಾರರಲ್ಲಿ ಮೀನು ಮತ್ತು ಮನುಷ್ಯನ ಚಿತ್ರಗಳಿವೆ. ಐದು ಉಡಗಳಿದ್ದು ದೇಹದ ಮೇಲೆಲ್ಲಾ ಅನೇಕ ವಜ್ರಾಕೃತಿಯ ರೇಖೆಗಳಿವೆ. ಮೀನಿನ ದೇಹದ ಅಕ್ಕಪಕ್ಕಗಳಲ್ಲಿ ರೆಕ್ಕೆಗಳನ್ನು ಬಿಡಿಸಲಾಗಿದೆ. ಹದಿನೇಳನೆಯ ಗವಿಯಲ್ಲಿ ಮನುಷ್ಯ ಹಾಗೂ ಹಲ್ಲಿಯಾಕಾರದ ಎರಡು ಆಕೃತಿಗಳಿವೆ. ಮನುಷ್ಯಾಕೃತಿ 5 ಮೀ ಉದ್ದವಿದ್ದು ತ್ರಿಕೋನಾಕಾರದ ತಲೆ, ಬೆನ್ನುಬಾಗಿಸಿದ ಭಂಗಿಯಲ್ಲಿದೆ. ಎಡಗೈ ತುಂಡಾದಂತೆ ಇದೆ. ಮೈಮೇಲೆಲ್ಲಾ ಅಡ್ಡಗೆರೆ ಗಳಿದ್ದು, ಹೊಟ್ಟೆಯಲ್ಲಿ ಅದೇ ಆಕಾರದ ಚಿಕ್ಕ ಮನುಷ್ಯಾಕೃತಿ ಇದೆ. ಹಲ್ಲಿಯಾಕಾರದ ಇನ್ನೊಂದು ಚಿತ್ರ 7ಮೀ ಉದ್ದವಾಗಿದ್ದು ವೃತ್ತಾಕಾರದ ತಲೆ, ಮುಂಡ, ಉದ್ದವಾದ ಬಾಲಗಳಿವೆ. ಇಲ್ಲಿನ ಗವಿವರ್ಣಚಿತ್ರಗಳು ಕಾಲಮಾನದ ದೃಷ್ಟಿಯಿಂದ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ಕಾಲಕ್ಕೆ ಸೇರುತ್ತವೆ. ಚಿತ್ರಿತ ಗವಿಗಳ ಸುತ್ತಮುತ್ತಲ ಸಾಂಸ್ಕೃತಿಕ ಪರಿಸರ, ಚಿತ್ರಗಳ ಶೈಲಿ, ಪ್ರಮಾಣ, ಕಾಲನಿರ್ಧರಿತ ಚಿತ್ರಗಳೊಡನೆ ಹೋಲಿಕೆ ಮುಂತಾದ ಅಂಶಗಳನ್ನು ಅನುಲಕ್ಷಿಸಿ

ಇಲ್ಲಿಯ ಚಿತ್ರಗಳು ಪ್ರಾಯಶಃ ಬೃಹತ್ ಶಿಲಾಯುಗದ–ಆದಿ ಮಧ್ಯ (ಪ್ರ.ಶ.ಪೂ.ಸು.1000–500) ಭಾಗಕ್ಕೆಸೇರುತ್ತವೆ ಎಂದು ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಚಿತ್ರಗಳು ವಿಷಯ ವೈವಿಧ್ಯತೆ ಹಾಗೂ ತಾಂತ್ರಿಕ ದೃಷ್ಟಿಯಿಂದ ಗಮನಸೆಳೆಯುತ್ತವೆ. ಪ್ರಾಣಿ ಚಿತ್ರಗಳು ಪ್ರಧಾನವಾಗಿದ್ದರೂ ಮನುಷ್ಯ ಚಿತ್ರಗಳೇನೂ ವಿರಳವಾಗಿಲ್ಲ. ಪ್ರಾಣಿಗಳಲ್ಲಿ ಜಿಂಕೆ, ಹಸು, ಗೂಳಿ, ಹುಲಿ, ನಾಯಿ, ಕೋಣ, ಕುದುರೆ, ನವಿಲು, ಹಾವು, ಉಡ, ಮೀನು ಹೀಗೆ ವೈವಿಧ್ಯತೆ ಕಂಡುಬರುತ್ತದೆ. ಮನುಷ್ಯ ಚಿತ್ರಗಳಲ್ಲಿ ಬಿಡಿ ಮತ್ತು ಗುಂಪುಗಳಿವೆ. ಗುಂಪುಚಿತ್ರಗಳಲ್ಲಿ ಕೈ–ಕೈ ಹಿಡಿದುಕೊಂಡು ಸಾಲಾಗಿ ನಿಂತು ನರ್ತಿಸುತ್ತಿರುವ ಸ್ತ್ರೀ–ಪುರುಷರನ್ನೊಳಗೊಂಡ ತಂಡಗಳು ಹೆಚ್ಚಾಗಿವೆ. ಇವುಗಳಲ್ಲಿ 4–27 ಜನರಿದ್ದಾರೆ. ಜೊತೆಗೆ ಪಶುಪಾಲನೆ, ಬೇಟೆಗಾರಿಕೆಯಂತಹ ದೃಶ್ಯಚಿತ್ರಗಳೂ ಇವೆ. ಚಿತ್ರಗಳು ಸಂಖ್ಯಾತ್ಮಕವಾಗಿ ವಿಪುಲವಾಗಿರುವಂತೆ ಅವುಗಳ ಅಳತೆಯಲ್ಲಿ ವೈವಿಧ್ಯತೆ ಇಲ್ಲ. ಚಿಕ್ಕ ಚಿಕ್ಕ ಚಿತ್ರಗಳ ಜೊತೆಗೆ 5–12ಮೀ ವರೆಗಿನ ಬೃಹತ್ ಪ್ರಮಾಣದ ಚಿತ್ರಗಳಿರುವುದು ಹಿರೆಬೆನಕಲ್ಲಿನ ವೈಶಿಷ್ಟ್ಯ. ವಿಶೇಷವೆಂದರೆ ಇಲ್ಲಿಯ 17ನೆಯ ಚಿತ್ರಗಳನ್ನು ದೇಶದ ಪ್ರಾಗಿತಿಹಾಸ ಕಾಲದ ಗವಿವರ್ಣ ಚಿತ್ರಗಳಲ್ಲೇ ಅತ್ಯಂತ ಬೃಹತ್ ಪ್ರಮಾಣದ ಚಿತ್ರಗಳೆಂದು ಗುರುತಿಸಬಹುದು. (ಎಸ್.ಬಿ.ಕೆ.)

**ಹಿರೋಡಾಟಸ್:** ಪ್ರ.ಶ.ಪೂ. 484–424. ಪ್ರಾಚೀನ ಗ್ರೀಕ್ ಇತಿಹಾಸಕಾರ. ಗತಕಾಲದ ಘಟನೆಗಳ ಅಧ್ಯಯನ ಮತ್ತು ಅವಲೋಕನವನ್ನು ಇತಿಹಾಸವೆಂದು ಬಗೆದಿದ್ದ ಈತ ಇತಿಹಾಸದ ಪಿತಾಮಹನೆಂದು ಹೆಸರಾಗಿದ್ದಾನೆ. ಈತ ಏಷ್ಯಮೈನರ್‌ನ ದಕ್ಷಿಣ ಭಾಗದಲ್ಲಿರುವ ಹಾಲಿಕಾರ್ನಾಸಸ್ ಎಂಬ ಗ್ರೀಕ್ ವಸಾಹತು ನಗರದಲ್ಲಿ ಪ್ರ..ಶ.ಪೂ.ಸು.484ರಲ್ಲಿ ಜನಿಸಿದ. ಯುವಕನಾಗಿದ್ದಾಗ ಸಾಹಿತ್ಯದಲ್ಲಿ ಶ್ರದ್ಧೆಯುಳ್ಳವನಾಗಿ ಇಟಲಿ, ಫೊನೀಷಿಯ, ಈಜಿಪ್ಟ್, ಲಿಬಿಯ, ಮೆಸಪೊಟೇಮಿಯ, ಅರೇಬಿಯ, ಸಿರಿಯ ಮುಂತಾದ ದೇಶಗಳಲ್ಲಿ ಸಂಚರಿಸಿ ವಿಪುಲ ಅನುಭವ ಪಡೆದ. ಈತ ಪ್ರತಿಯೊಂದು ವಿಷಯದಲ್ಲೂ ಕುತೂಹಲವುಳ್ಳವನಾಗಿದ್ದ. ತನಗೆ ತಿಳಿಯದ ವಿಷಯವನ್ನು ಇತರರಿಂದ ಕೇಳಿ ತಿಳಿದುಕೊಳ್ಳುತ್ತಿದ್ದ. ತಾನು ಸಂಚರಿಸಿದ ದೇಶಗಳ ಜನರ ಬಗೆಗೆ ಅಧ್ಯಯನ ನಡೆಸಿ ವಿಷಯ ಸಂಗ್ರಹಿಸಿದ. ಅಥೆನ್ಸ್‌ನ ದೊರೆ ಪೆರಿಕ್ಲಿಸ್‌ನಿಗೆ ಇವನ ಮೇಲೆ ವಿಶೇಷ ಅಭಿಮಾನವಿತ್ತು. ಈತ ಸು. 40ವರ್ಷ ವಯಸ್ಸಿನವನಾಗಿದ್ದಾಗ ಅಥೆನ್ಸ್‌ನಲ್ಲಿದ್ದ ಪ್ರಸಿದ್ಧ ನಾಟಕಕಾರ ಸಾಫೋಕ್ಲೀಸ್‌ನನ್ನು ಭೇಟಿಯಾಗಿದ್ದ.



ಈತನ ಬರೆಹಗಳಲ್ಲಿ ಗ್ರೀಸ್ ದೇಶದ ನಗರಗಳ ಪ್ರಗತಿ, ಸಾಮ್ರಾಜ್ಯದ ಉದಯ, ಗ್ರೀಸಿನ ಮೇಲೆ ಪರ್ಷಿಯನ್ನರ ಆಕ್ರಮಣ, ಆಕ್ರಮಣಕಾರರನ್ನು ಎದುರಿಸಿದ ಗ್ರೀಕ್ ವೀರರ ಶೌರ್ಯದ ವರ್ಣನೆಗಳಿವೆ. ಇವುಗಳಲ್ಲಿ ಗ್ರೀಕ್ ಮತ್ತು ಪರ್ಷಿಯನ್ನರ ಸಮರ ದ್ವೇಷವನ್ನು ಪುರಾಣಕಾಲದವರೆಗೆ ಗುರುತಿಸಿದ್ದಾನೆ. ಇವನ ಬರೆಹಗಳು ಭೂಮಧ್ಯ ಮೆಡಿಟರೇನಿಯನ್ ಸಮುದ್ರದ ಪೂರ್ವಭಾಗದ ದೇಶಗಳ ಪ್ರಾಚೀನ ಇತಿಹಾಸಕ್ಕೆ ಮೂಲ ಆಕರಗಳಾಗಿವೆ. ಈತ ಒಂಬತ್ತು ಸಂಪುಟಗಳಲ್ಲಿ ಅನೇಕ ದೇಶಗಳ ಜನರ ನಡವಳಿಕೆ, ಧಾರ್ಮಿಕ, ಸಾಮಾಜಿಕ ನಂಬಿಕೆ, ಮೂಢನಂಬಿಕೆ, ಅಂಧಶ್ರದ್ಧೆ, ಪವಾಡಗಳಂಥ ಪ್ರತಿಯೊಂದು ವಿವರಗಳನ್ನೂ ದಾಖಲಿಸಿದ್ದಾನೆ. ಈತ ಪ್ರತಿಭಾಶಾಲಿ ಬರೆಹಗಾರ. ಗ್ರೀಸ್ ದೇಶದ ಪ್ರಖ್ಯಾತ ಯುದ್ಧ ಸಂಬಂಧೀ ಕಥೆಗಳಿಗೆ ಇವನ ಕೃತಿ ಅಮೂಲ್ಯ ಆಧಾರ ಗ್ರಂಥವಾಗಿದೆ. ಈತ ತಾನು ಕೇಳಿದ ದಂತಕಥೆಗಳನ್ನೆಲ್ಲ ಐತಿಹಾಸಿಕ ಘಟನೆಗಳೆಂದೇ ಭಾವಿಸಿ ಚಿತ್ರಿಸಿದ್ದಾನೆ. ಕೇಳಿದ್ದನ್ನೆಲ್ಲ ನಿಜವೆಂದು ಈತ ನಂಬುತ್ತಿದ್ದ. ಇದರಿಂದ ಕೆಲವರು ಇವನನ್ನು ಸುಳ್ಳುಗಳ ಜನಕ ಎಂದೂ ಕರೆದಿದ್ದಾರೆ. ನೀತಿಬೋಧನೆಯ ಉದ್ದೇಶದಿಂದ ಈತ ಬರೆದಿದ್ದಾನೆಂದೂ ಹೇಳುವರು.

ಈತ ಸ್ವಾರಸ್ಯಕರವಾದ ವಿಷಯಗಳನ್ನು ಅಥೆನ್ಸ್ ಮತ್ತು ಒಲಂಪಿಯ ನಗರಗಳಲ್ಲಿ ಸಾರ್ವಜನಿಕರ ಮುಂದೆ ಓದಿ ಹೇಳುತ್ತಿದ್ದ. ಇವನ ವರ್ಣನೆಗಳನ್ನು ಕೇಳಿ ಉತ್ತೇಜಿತರಾದ ಗ್ರೀಸಿನ ಜನರು ಇವನಿಗೆ ನಿಧಿ ಅರ್ಪಿಸುತ್ತಿದ್ದರು. ಗತಕಾಲದ ಘಟನೆಗಳನ್ನು ಬರವಣಿಗೆಯಲ್ಲಿ ದಾಖಲಿಸಿ ಈತ ಇತಿಹಾಸ ರಚನೆಯ ಜನಕನೆಂದು ಹೆಸರಾಗಿದ್ದಾನೆ. ಇವನ ಕೃತಿಗಳು ಪ್ರಾಚೀನ ಗ್ರೀಕರ ಐತಿಹ್ಯದ ಅಮೂಲ್ಯ ಭಂಡಾರವಾಗಿವೆ. (ಎನ್.ಎಲ್.)

**ಹಿರೋಷಿಮ:** ಎರಡನೆಯ ಮಹಾಯುದ್ಧದ ಕಾಲದಲ್ಲಿ ಅಮೆರಿಕ ಹಾಕಿದ ಅಣುಬಾಂಬಿಗೆ ತುತ್ತಾದ ಜಪಾನಿನ ಎರಡು ನಗರಗಳಲ್ಲೊಂದು; ಇನ್ನೊಂದು ನಾಗಾಸಾಕಿ. ಈ ನಗರ ಜಪಾನಿನ ದಕ್ಷಿಣದಲ್ಲಿನ ಹಾನ್ ಷ್ಯೂ ದ್ವೀಪದ ಪಶ್ಚಿಮಕ್ಕೆ ನದಿ ಮುಖಜಭೂಮಿಯಲ್ಲಿದೆ. ಹಿಂದೆ ಹಿರೋಷಿಮ ಜಪಾನಿ ಬೆಸ್ತರ ಒಂದು ಹಳ್ಳಿಯಾಗಿತ್ತು. ಮುಂದೆ ಅಸಾನೊ ಕುಟುಂಬದವರ ಕೋಟೆಪಟ್ಟಣವೆನಿಸಿ ದೊಡ್ಡನಗರವಾಗಿ (1600–1868) ಮತ್ತು ವ್ಯಾಪಾರ ಸ್ಥಳವಾಗಿಯೂ ಬೆಳವಣಿಗೆ ಹೊಂದಿತು. ಎರಡನೆಯ ಮಹಾಯುದ್ಧದ ಕಾಲಕ್ಕೆ (1939–45) ಇದೊಂದು ಮುಖ್ಯ ಮಿಲಿಟರಿ ನೆಲೆಯಾಗಿತ್ತು. ಜಪಾನ್ ಅಮೆರಿಕದ ಪರ್ಲ್‌ಹಾರ್ಬರ್ ಬಂದರಿನ ಮೇಲೆ ಧಾಳಿ ಮಾಡಿದ ಪರಿಣಾಮವಾಗಿ 1945 ಆಗಸ್ಟ್ 6 ರಂದು ಹಿರೋಷಿಮ



ಶಾಂತಿ ವನ

ನಗರದ ಮೇಲೆ ಅಮೆರಿಕ ಅಣುಬಾಂಬನ್ನು ಹಾಕಿತು. ಆಗ ಈ ನಗರದ 13 ಚ.ಕಿಮೀ ಪ್ರದೇಶ ಸಂಪೂರ್ಣ ನಾಶವಾಯಿತು. ಸು.1 ಲಕ್ಷ ಮಂದಿ ಸತ್ತರು; ಲಕ್ಷಾಂತರ ಜನ ಅಣುವಿಕಿರಣಕ್ಕೆ ತುತ್ತಾದರು; ಗಾಯಗೊಂಡರು, ವಿಕಲಾಂಗರಾದರು. ಮೂರು ದಿನಗಳ ಬಳಿಕ (1945 ಆಗಸ್ಟ್ 9) ನಾಗಾಸಾಕಿ ನಗರದ ಮೇಲೆ ಅಣುಬಾಂಬನ್ನು ಹಾಕಲಾಯಿತು. 1945 ಸೆಪ್ಟೆಂಬರ್ 2ರಂದು ಜಪಾನ್ ಯುದ್ಧ ನಿಲ್ಲಿಸಿ ಶರಣಾಯಿತು.

ಅನಂತರದ ದಿನಗಳಲ್ಲಿ ಈ ನಗರ ಕ್ರಮೇಣ ಚೇತರಿಸಿಕೊಂಡಿತು. ಈಗ ಮೊದಲಿಗಿಂತಲೂ ಸುಂದರವಾಗಿ, ಹೆಚ್ಚು ಜನಸಂಖ್ಯೆಯುಳ್ಳದ್ದಾಗಿ ದೊಡ್ಡಕೈಗಾರಿಕಾ ನಗರವಾಗಿದೆ. ಆಟೊಮೊಬೈಲ್, ವಿವಿಧ ಯಂತ್ರಗಳು, ಹಡಗು ನಿರ್ಮಾಣ ಮುಂತಾದವುಗಳ ಕೇಂದ್ರವಾಗಿದೆ. ಬಾಂಬ್ ಬಿದ್ದ ಕೇಂದ್ರಸ್ಥಳದಲ್ಲಿ ಶಾಂತಿವನ ನಿರ್ಮಿಸಲಾಗಿದೆ. ಇಲ್ಲಿ ಪ್ರತಿವರ್ಷ ಆಗಸ್ಟ್ 6ರಂದು ಶಾಂತಿಸಭೆ ಸೇರುತ್ತದೆ. ಅಣುಬಾಂಬಿಗೆ ತುತ್ತಾದ ಒಂದು ದೊಡ್ಡ ಕಟ್ಟಡದ ಅವಶೇಷವನ್ನು ಬಾಂಬಿನ ವಿನಾಶದ ಗುರುತಾಗಿ, ಭವಿಷ್ಯದ ಜನಾಂಗಕ್ಕೆ ಎಚ್ಚರಿಕೆಯಾಗಿ ಹಾಗೆಯೇ ಉಳಿಸಿಕೊಳ್ಳಲಾಗಿದೆ. (ಎ.ಡಿ.)

**ಹುಣಸಗಿ:** ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ಒಂದು ಪ್ರಾಗೈತಿಹಾಸಿಕ ನೆಲೆ. 1974–78ರ ಅವಧಿಯಲ್ಲಿ ಡೆಕ್ಕನ್ ಕಾಲೇಜಿನ ಕೆ.ಪದ್ದಯ್ಯನವರು ಆದಿ ಹಳೆಶಿಲಾಯುಗದ ಅಶೂಲಿಯನ್ ಸಂಸ್ಕೃತಿಗೆ ಸೇರುವ 15 ನೆಲೆಗಳ ಸಂಕೀರ್ಣವನ್ನು ಇಲ್ಲಿ ಶೋಧಿಸಿದರು. ಈ ನೆಲೆಗಳು ಹಳ್ಳಿಯ 2ಕಿಮೀವ್ಯಾಪ್ತಿಯಲ್ಲಿವೆ. ಇವು ಹುಣಸಗಿ ಹಳ್ಳ (ಕೃಷ್ಣೆಯ ಉಪನದಿ) ಮತ್ತು ಇದನ್ನು ಸೇರುವ ಇತರ ಚಿಕ್ಕಪುಟ್ಟ ಹಳ್ಳಗಳ ದಂಡೆಗಳ ಮೇಲಿವೆ. ಬಹುತೇಕ ನೆಲೆಗಳಲ್ಲಿ ಅಶೂಲಿಯನ್ ಸಾಂಸ್ಕೃತಿಕ ಪದರ ಅದರ ಯಥಾಸ್ಥಿತಿಯಲ್ಲಿ ಕಂಡುಬಂದಿದೆ. ಉಪಕರಣಗಳು ಪ್ರಧಾನವಾಗಿ ಸ್ಥಳೀಯ ಭೀಮಾ ಶಿಲಾ ಶ್ರೇಣಿಯ ಸುಣ್ಣಕಲ್ಲಿನಿಂದ ಮಾಡಲ್ಪಟ್ಟಿವೆ.

ಈ ನೆಲೆಗಳ ಪೈಕಿ, ನೆಲೆ–5ರಲ್ಲಿ ಪದ್ದಯ್ಯನವರು 1975–76ರಲ್ಲಿ ಉತ್ಖನನ ನಡೆಸಿದರು. ಹಳ್ಳಿಯ ಒಂದು ಕಿಮೀ ಪೂರ್ವಕ್ಕೆ ಹುಣಸಗಿ ಹಳ್ಳದ ಎಡದಂಡೆ ಮೇಲೆ ಈ ನೆಲೆಯಿದೆ. ಈ ಪ್ರದೇಶದಲ್ಲಿ ಭೂಮಿಯಡಿಯಲ್ಲಿ ಗ್ರಾನೈಟ್ ದಿಣ್ಣೆಗಳಿವೆ. ಭೂಸ್ತರಕ್ರಮದಲ್ಲಿ ಅಶೂಲಿಯನ್ ಪದರದ ಸ್ಥಾನವನ್ನು ಖಚಿತಪಡಿಸಿಕೊಳ್ಳಲು ಹಲವಾರು ಪರೀಕ್ಷೆ ಗುಂಡಿಗಳನ್ನು ಮತ್ತು ಮೂರು ಕ್ರಮಬದ್ಧ ಗುಂಡಿಗಳನ್ನು ಇಲ್ಲಿ ಅಗೆಯಲಾಯಿತು. ಗುಂಡಿ–3ರಲ್ಲಿ ಅಶೂಲಿಯನ್ ಪದರ ಸುಸ್ಥಿತಿಯಲ್ಲಿ ಕಂಡುಬಂತು. ಈ ಗುಳಿಯ ಸ್ತರಕ್ರಮ ಹೀಗಿದೆ. ಮೇಲಿನ ಕಾರಿ ಮಣ್ಣಿನ ಪದರ 30 ಸೆಮೀ ದಪ್ಪವಿದೆ. ಇದರ ಕೆಳಗಿರುವ 2ನೆಯ ಪದರ ಸಡಿಲವಾಗಿದ್ದು ಸು. 70 ಸೆಂಮೀ ದಪ್ಪವಿದೆ; ಎತ್ತರದ ಇಳಿಜಾರು ಪ್ರದೇಶದಿಂದ ಉರುಳಿಬಂದ ಮಣ್ಣು–ಕಲ್ಲುಗಳಿಂದ ಆದಂತಹ ಪದರವಿದು. ಈ ಪದರದ ಕೆಳಗೆ ಅಶೂಲಿಯನ್ ಸಾಂಸ್ಕೃತಿಕ ಪದರವಿದೆ. 5–30 ಸೆಂಮೀ ದಪ್ಪವಿರುವ ಅಶೂಲಿಯನ್ ಪದರದ ಕೆಳಗೆ ಅರೆಸವೆದ ಗ್ರಾನೈಟ್ ಶಿಲಾಸ್ತರವಿದೆ. ಅಶೂಲಿಯನ್ ಪದರ ಸಾಂದ್ರವಾಗಿದೆ. ಇದರಲ್ಲಿ ಈಗಷ್ಟೇ ತಯಾರಾದಂತಿರುವ ಸುಣ್ಣಕಲ್ಲಿನ ಉಪಕರಣಗಳು ಹಾಗೂ ಸುಣ್ಣಕಲ್ಲಿನ ಚಪ್ಪಡಿ–ಜಲ್ಲಿಕಲ್ಲುಗಳಿವೆ. ಈ ಶಿಲಾವಶೇಷಗಳು ಗ್ರಾನೈಟಿನ ಸವೆಯುವಿಕೆಯಿಂದ ಉಂಟಾದ ತಿಳಿಗಂದುಬಣ್ಣದ ಗರಸುಮಣ್ಣಿನೊಂದಿಗೆ ಬೆರೆತಿವೆ. ಒಟ್ಟು 63 ಚ.ಮೀ ಜಾಗದಲ್ಲಿ ಅವಶೇಷಗಳು ಹರಡಿವೆ.

ಈ ಜಾಗದ ಪೂರ್ವ ಮತ್ತು ಪಶ್ಚಿಮ ಅಂಚಿನಲ್ಲಿ ನೈಸರ್ಗಿಕವಾಗಿ ರಚಿತವಾದ ಗ್ರಾನೈಟ್ ಕಲ್ಲಿನ ಸಣ್ಣತುಂಡುಗಳ ಸಾಲಿವೆ. ಉತ್ತರದ ಅಂಚಿನಲ್ಲಿ ಆದಿಮಾನವರೇ ರಚಿಸಿರುವ ಕಲ್ಲಿನ ಸಾಲು ಕಂಡುಬಂದಿದೆ. ಗ್ರಾನೈಟ್ ಕಲ್ಲುಗಳಿಂದ ರಕ್ಷಿತವಾದ ಆವರಣವನ್ನು ಆದಿಮಾನವರು ತಮ್ಮ ಕಾರ್ಯಕ್ಷೇತ್ರದ ನೆಲೆಯಾಗಿ ಆಯ್ದುಕೊಂಡಿರಬೇಕು. ವೃತ್ತಾಕಾರದ ಅಥವಾ ಅಂಡಾಕಾರದ ಗುಡಿಸಲುಗಳನ್ನು ಕಟ್ಟುವಲ್ಲಿ ಇಂತಹ ಕಲ್ಲಿನ ವೃತ್ತದ ತಳಪಾಯ ಆವಶ್ಯಕ.



ಉತ್ಖನನ ಗುಂಡಿ, ನೆಲೆ 5

ಈ ಗುಂಡಿಯಲ್ಲಿ ಕಲ್ಲಿನ ಉಪಕರಣಗಳು, ತ್ಯಾಜ್ಯಕಲ್ಲು ಮತ್ತು ಚಕ್ಕೆಚೂರುಗಳು 900ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕಿವೆ. ಕಲ್ಲಿನ ಚಕ್ಕೆ ಮತ್ತು ಉಪಕರಣಗಳು ಹರಿತವಾಗಿದ್ದು ಪದರ ಯಥಾಸ್ಥಿತಿಯಲ್ಲಿ ಇರುವುದನ್ನು ದೃಢಪಡಿಸುತ್ತವೆ. ವಸತಿ ಹಾಗೂ ಉಪಕರಣ ತಯಾರಿಕೆಯ ಸ್ಥಳ ಇದಾಗಿತ್ತೆಂಬುದು ಈ ಮೂಲಕ ತಿಳಿದುಬರುತ್ತದೆ. ಉಪಕರಣಗಳಲ್ಲಿ ಕೈಗೊಡಲಿ, ಚೂರಿ, ಪಿಕಾಸಿ ತರಹದ ಹಾಗೂ ಕೊಚ್ಚುವ ಉಪಕರಣಗಳು ಮುಖ್ಯವಾದುವು.

ಈ ನೆಲೆಗೆ ಸಮೀಪದಲ್ಲಿರುವ ನೆಲೆ–6ರಲ್ಲಿ ಪದ್ದಯ್ಯನವರು 1977ರಲ್ಲಿ ಉತ್ಖನನ ನಡೆಸಿದರು. ಇಲ್ಲಿಯೂ ನೆಲೆ–5ರ ಫಲಿತಾಂಶವೇ ದೊರಕಿದೆ. 1986ರಲ್ಲಿ ಇವರು ಹುಣಸಗಿ ಬಯಲಿಗೆ ತಾಗಿ ಇರುವ ಬೈಚಬಾಳು ಬಯಲಿನಲ್ಲಿರುವ ಯಡಿಯಾಪುರ ನೆಲೆಯಲ್ಲಿ ಉತ್ಖನನ ಮಾಡಿದರು. ಈ ನೆಲೆ ಫತೇಪುರ ಹಳ್ಳದ ಬಲದಂಡೆಯ ಮೇಲಿದೆ. ಇಲ್ಲಿ 15–20 ಸೆಮೀ ದಪ್ಪದ ಕಪ್ಪುಬಣ್ಣದ ಹೂಳುಮಣ್ಣಿನ ಪದರದ ಕೆಳಗೆ ಅಶೂಲಿಯನ್ ಸಾಂಸ್ಕೃತಿಕ ಪದರವಿದೆ. ಇಲ್ಲಿ ಸುಣ್ಣಕಲ್ಲು ಮತ್ತು ಗ್ರಾನೈಟ್ ಕಲ್ಲನ್ನು ಉಪಕರಣಗಳ ತಯಾರಿಕೆಯಲ್ಲಿ ಬಳಸಲಾಗಿದೆ. (ಪಿ.ಕೆ.)

**ಹಲ್ಷ್:** 1857–1927. ಪ್ರಸಿದ್ಧ ಶಾಸನತಜ್ಞ, ಭಾಷಾ ವಿದ್ವಾಂಸ, ದಕ್ಷ ಆಡಳಿತಗಾರ. ಇವನು ಜರ್ಮನಿ ದೇಶದ ಡ್ರೆಸ್ಡನ್ ಎಂಬಲ್ಲಿ 1857 ಮಾರ್ಚ್ 29ರಂದು ಜನಿಸಿದ. ಇವನ ಪೂರ್ಣ ಹೆಸರು ಯುಜಿನ್ ಜೂಲಿಯಸ್ ಥಿಯೊಡರ್ ಹಲ್ಷ್. ಲೆಪ್‌ಜಿಗ್ ವಿಶ್ವವಿದ್ಯಾಲಯ ದಿಂದ ಪದವೀಧರನಾಗಿ, ಬಾನ್ ನಗರದಲ್ಲಿ ಪ್ರಾಚೀನ ಸಾಹಿತ್ಯಗಳನ್ನು ಮತ್ತು ಪೌರಸ್ತ್ಯ ಭಾಷೆಗಳನ್ನು ವಿಶೇಷವಾಗಿ ಅಧ್ಯಯನ ಮಾಡಿ ಪರಿಣತಿ ಹೊಂದಿದ. ಆನ್‌ಫ್ರೆಚ್ ಮತ್ತು ಬ್ಯೂಲರ್ ಮೊದಲಾದ ಪ್ರಸಿದ್ಧ ಜರ್ಮನ್ ವಿದ್ವಾಂಸರ ಮಾರ್ಗದರ್ಶನದಿಂದ ಅಭಿಜಾತ ಹಾಗೂ ಪ್ರಾಚ್ಯತತ್ತ್ವಶಾಸ್ತ್ರ ವಿಷಯಗಳಲ್ಲಿ ವಿಶೇಷ ಅಧ್ಯಯನ ನಡೆಸಿ ಪದವಿಪಡೆದ. ವಿಯೆನ್ನ ನಗರದಲ್ಲಿ ಬ್ಯೂಲರ್ ಹಾಗೂ ಆನ್‌ಫ್ರೆಚ್‌ರ ಪ್ರಭಾವಕ್ಕೊಳಗಾದನಲ್ಲದೇ ತಾನೂ ಅವರಂತೆ ಸಂಶೋಧನ ಕಾರ್ಯ ಕೈಗೊಳ್ಳಬೇಕೆಂದು ಕಾರ್ಯ ಪ್ರವೃತ್ತನಾದ.

ಬ್ರಿಟಿಷ್ ಭಾರತದ ಮದರಾಸು ಪ್ರಾಂತದಲ್ಲಿ 1881ರಲ್ಲಿ ಹೊಸದಾಗಿ ಸಂಘಟಿತವಾಗಿದ್ದ ದಕ್ಷಿಣ ಭಾರತದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ನಿರ್ದೇಶಕನಾಗಿದ್ದ ಜೇಮ್ಸ್ ಬರ್ಜೆಸ್ ಎಂಬಾತ ಮದರಾಸು ವಿಭಾಗಕ್ಕೆ ಸಂಸ್ಕೃತ, ಪಾಲಿ ಹಾಗೂ ದ್ರಾವಿಡ ಭಾಷೆಗಳಲ್ಲಿ ಪಾಂಡಿತ್ಯವುಳ್ಳ ಶಾಸನತಜ್ಞನನ್ನು ನೇಮಿಸಲು ಸರ್ಕಾರಕ್ಕೆ ಶಿಫಾರಸು ಮಾಡಿದ. ಇದರ ಫಲವಾಗಿ 1886 ನವೆಂಬರ್ 21ರಂದು ಹಲ್ಷ್ ಈ ವಿಭಾಗಕ್ಕೆ ಪ್ರಪ್ರಥಮ ಶಾಸನತಜ್ಞನಾಗಿ ನೇಮಕಗೊಂಡ. ಇಲ್ಲಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ. ತರುವಾಯ ಇವನು ದಕ್ಷಿಣ ಭಾರತದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಶಾಸನತಜ್ಞ ಹುದ್ದೆಗೆ ಪದೋನ್ನತಿಯನ್ನು ಪಡೆದು ಮೂರು ವರ್ಷಗಳ ಕಾಲ ಸ್ವತಂತ್ರವಾಗಿ ಕಾರ್ಯನಿರ್ವಹಿಸಿದ. ಆಮೇಲೆ ಇವನು ಜರ್ಮನಿಯ ಹಾಲ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ.

ಇವನು ಪುರಾತತ್ತ್ವ ಸರ್ವೇಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಅನೇಕ ಮಹತ್ತ್ವದ ಶಾಸನಗಳನ್ನು ಬೆಳಕಿಗೆ ತಂದು, ಅವುಗಳನ್ನು ವ್ಯವಸ್ಥಿತವಾಗಿ (ಅನುವಾದ, ಪಾಠ, ಸಾರಾಂಶ, ಟಿಪ್ಪಣಿ ಇತ್ಯಾದಿ) ಪ್ರಕಟಿಸುತ್ತಿದ್ದ. ಹೀಗೆ ದೇಶದ ವಿವಿಧ ಭಾಗಗಳಲ್ಲಿ ಅನೇಕ ವಿದ್ವಾಂಸರು ಹೊಸದಾಗಿ ಬೆಳಕಿಗೆ ತರುತ್ತಿದ್ದ ಶಾಸನಗಳನ್ನು ಒಂದೆಡೆ ಕಲೆಹಾಕಿ ಪ್ರಕಟಿಸಿದರೆ ಇತಿಹಾಸ ತಜ್ಞರಿಗೆ, ಸಂಶೋಧಕರಿಗೆ, ಶಾಸನಾಧ್ಯಯನಾಸಕ್ತರಿಗೆ ಉಪಯುಕ್ತವಾಗುತ್ತದೆ ಎಂಬ ದೃಷ್ಟಿಯಿಂದ ಎಪಿಗ್ರಾಫಿಯ ಇಂಡಿಕ (1886) ಎಂಬ ತ್ರೈಮಾಸಿಕವನ್ನೂ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ಎಂಬ ಶಾಸನ ಸಂಪುಟಗಳನ್ನೂ ಪ್ರಕಟಿಸಲಾಯಿತು. ಇವನು ಎಪಿಗ್ರಾಫಿಯ ಇಂಡಿಕ ಸಂಪುಟ–1ರ ಉಪಸಂಪಾದಕನಾಗಿ, ತರುವಾಯ 2–9ನೆಯ ಸಂಪುಟದವರೆಗೂ ಸಂಪಾದಕನಾಗಿ ಕಾರ್ಯನಿರ್ವಹಿಸಿದ. ಇದರಂತೆ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ಸಂಪುಟ 1 ಮತ್ತು 2 (ಭಾಗ–1) ಹಾಗೂ 3–ಇವುಗಳ ಸಂಪಾದಕ ಹಾಗೂ ಅನುವಾದಕನಾಗಿಯೂ ಕಾರ್ಯ ನಿರ್ವಹಿಸಿದ.

ಇವನು ಮದರಾಸು ಪ್ರಾಂತದ ಪರಿಸರದಲ್ಲಿ ಅನೇಕ ಮಹತ್ತ್ವದ ಶಾಸನಗಳನ್ನು ಬೆಳಕಿಗೆ ತಂದ. ಇವುಗಳನ್ನೆಲ್ಲ ಎಪಿಗ್ರಾಫಿಯ ಇಂಡಿಕ ಸಂಪುಟಗಳಲ್ಲಿ ಪ್ರಕಟಿಸಿದ್ದಾನೆ. ಈ ಸಂಪುಟಗಳ ಪ್ರಕಟಣೆಗಳಲ್ಲಿ ಇವನ ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳ ಪಾಂಡಿತ್ಯ, ದ್ರಾವಿಡ ಭಾಷೆಗಳ ಬಗ್ಗೆ ವಿಶೇಷವಾಗಿ ತಮಿಳಿನ ಬಗ್ಗೆ ಇವನಿಗಿದ್ದ ಪಾಂಡಿತ್ಯ ವ್ಯಕ್ತವಾಗುತ್ತದೆ. ಕನ್ನಡ ವಿದ್ವಾಂಸರಾದ ಟಿ.ಎಸ್.ವೆಂಕಣ್ಣಯ್ಯ ಎ.ಆರ್.ಕೃಷ್ಣಶಾಸ್ತ್ರೀ ಇವನ ಸಹಾಯಕರಾಗಿದ್ದರು. ರಾಷ್ಟ್ರಕೂಟ, ಚಾಳುಕ್ಯ, ಚೋಳ, ಪಾಂಡ್ಯ, ಚೇರ ಮೊದಲಾದ ರಾಜಸಂತತಿಗಳಿಗೆ ಸಂಬಂಧಿಸಿದ ಶಾಸನಗಳ ಬಗ್ಗೆಯೂ ಬೆಳಕು ಚೆಲ್ಲಿದ.

ಇವನು ಮದರಾಸು ಪ್ರಾಂತದ (ತಮಿಳುನಾಡು) ತಮಿಳು ಮತ್ತು ಸಂಸ್ಕೃತ ಶಾಸನಗಳನ್ನೂ ಸಂಗ್ರಹಿಸಿ ಪ್ರಕಟಿಸಿದ್ದಾನೆ. ಸರ್ಕಾರಿ ಶಾಸನತಜ್ಞ ಹುದ್ದೆಯಿಂದ ನಿವೃತ್ತನಾದ ತರುವಾಯ ಈತ ಸಂಪಾದಿಸಿ ಪ್ರಕಟಿಸಿದ (1925) ಕಾರ್ಪಸ್ ಇನ್‌ಸ್ಕ್ರಿಪ್ಷನಮ್ ಇಂಡಿಕಾರಮ್ ಸಂಪುಟ–1 ಇದು ಮೌರ್ಯ ಸಾಮ್ರಾಟ ಅಶೋಕನ ಶಾಸನಗಳ ಅಧ್ಯಯನಕ್ಕೆ ಬಹು ಉಪಯುಕ್ತವಾಗಿದೆ. ಪ್ರಾಕೃತ, ಸಂಸ್ಕೃತ, ತಮಿಳು, ಕನ್ನಡ ಭಾಷೆಗಳಲ್ಲಿ ಉತ್ತಮ ಪಾಂಡಿತ್ಯವನ್ನು ಪಡೆದಿದ್ದ ಇವನು ಬೋಧಾಯನನ ಧರ್ಮಶಾಸ್ತ್ರ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ(1884). ಇದೇ ರೀತಿ ಕಾಳಿದಾಸನ ಮೇಘದೂತ ಕಾವ್ಯವನ್ನೂ ವಲ್ಲಭದೇವನ ಭಾಷ್ಯದೊಡನೆ ಸಂಪಾದಿಸಿದ್ದಾನೆ. ಪಾರಿಜಾತ ಮಂಜರಿ, ತರ್ಕಸಂಗ್ರಹ, ತರ್ಕಕೌಮುದಿ, ಪ್ರಾಕೃತ ರೂಪಾವತಾರ ಮುಂತಾದ ಅನೇಕ ವಿದ್ವತ್‌ಪೂರ್ಣ ಲೇಖನಗಳನ್ನು ಪ್ರಕಟಿಸಿದ್ದಾನೆ. ಇವನು ಜರ್ಮನಿಯ ಹಲ್ಲೆ(ಸಾಳೆ) ಎಂಬಲ್ಲಿ 1927 ಜನವರಿ 16ರಂದು ನಿಧನಹೊಂದಿದ. (ಕೆ.ಜಿ.ಕೆ.;ಎ.ಎನ್.ಎಚ್.)

**ಹೆಗ್ಗಡೆಹಳ್ಳಿ:** ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾಸಂಸ್ಕೃತಿಯ ಸಮಾಧಿ ನೆಲೆ. ಇದನ್ನು ಪಾಂಡವ ಪರೆ, ಪಾಂಡವ ಬಂಡೆ ಎಂದೂ ಕರೆಯುವರು. ಕೆ.ಕೆ.ಸುಬ್ಬಯ್ಯನವರು 1971ರಲ್ಲಿ 200 ಗೋರಿಗಳನ್ನು ಶೋಧಿಸಿದರು. ಅವುಗಳಲ್ಲಿ ಪ್ರಮುಖವಾದ ನಾಲ್ಕು ಗೋರಿಗಳಲ್ಲಿ ಮೊದಲು ಉತ್ಖನನ ನಡೆಸಲಾಯಿತು. 1975ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಇನ್ನಷ್ಟು ವಿಸ್ತೃತ ಅಧ್ಯಯನಕ್ಕಾಗಿ ಶಿಲಾಗೋರಿಗಳನ್ನು ಉತ್ಖನನಕ್ಕೊಳಪಡಿಸಿತು. 1995ರಲ್ಲಿ ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯ ವಿಭಾಗ 11 ಬೃಹತ್ ಶಿಲಾಗೋರಿಗಳಲ್ಲಿ ಉತ್ಖನನ ನಡೆಸಿತು. ಇಲ್ಲಿ ನಡೆಸಿದ ಉತ್ಖನನಗಳಿಂದ ಒರಟು ಕಲ್ಲುಗುಂಡುಗಳಿಂದ ದುಂಡಾಗಿ ನಿರ್ಮಿಸಿದ ಕಲ್ಲುವೃತ್ತ ಗೋರಿಗಳು, ಕಲ್ಲುವೃತ್ತ ಸಹಿತ ನೆಲಕೋಣೆ ಗೋರಿಗಳು, ನಿಲಸುಗಲ್ಲುಗಳು ಈ ಮೂರು ಬಗೆಯ ಶಿಲಾಗೋರಿಗಳು ಬೆಳಕಿಗೆ ಬಂದವು. ಒಂದು ಮತ್ತು ಎರಡನೆಯ ಮಾದರಿಯ ಶಿಲಾಗೋರಿಗಳು ಅಧಿಕ ಸಂಖ್ಯೆಯಲ್ಲಿವೆ. ಮೊದಲನೆಯ ಪ್ರಕಾರದಲ್ಲಿ ಕಲ್ಲುವೃತ್ತಗಳ ಕೇಂದ್ರದಲ್ಲಿ ಶವಕುಣಿಗಳಿವೆ. ವೃತ್ತದೊಳಗಿನ ಭಾಗವನ್ನು ಕಲ್ಲುತುಂಡುಗಳಿಂದ ತುಂಬಲಾಗಿದೆ. ಶವಕುಣಿಗಳು ಆಯತಾಕಾರವಾಗಿದ್ದು ಇವುಗಳಲ್ಲಿ ಕೆಲವಕ್ಕೆ ತಳದಲ್ಲಿ ಚಪ್ಪಡಿಗಳಿವೆ. ನೆಲಕೋಣೆ ಗೋರಿಯಲ್ಲಿ ಆಯತಾಕಾರದ ಶವಕುಣಿಯನ್ನು ತೋಡಿ ಅದರ 4 ಬದಿಗಳಲ್ಲಿ ಗ್ರಾನೈಟ್ ಕಲ್ಲುಚಪ್ಪಡಿಗಳನ್ನು ನಿಲ್ಲಿಸಿ ಮತ್ತೊಂದು ಚಪ್ಪಡಿಕಲ್ಲಿನಿಂದ ಅದನ್ನು ಮುಚ್ಚಲಾಗಿದೆ. ತಳದಲ್ಲಿ ಚಪ್ಪಡಿಗಲ್ಲನ್ನು ಹಾಸಿ ನಿರ್ಮಿಸಿದ ಗೋರಿಗಳು ವಿರಳವಾಗಿವೆ. ಪೂರ್ವದಿಕ್ಕಿನ ಕಲ್ಲುಚಪ್ಪಡಿಯ ಮೇಲೆ U ಮಾದರಿಯ ಕಿಂಡಿ ಇದೆ. ಈ ಪ್ರದೇಶದಲ್ಲಿ ಎರಡು ನಿಲಸುಗಲ್ಲುಗಳಿವೆ; ಇವು ಗಾತ್ರದಲ್ಲಿ ದೊಡ್ಡದಾಗಿದ್ದು ಬೃಹತ್ ಶಿಲಾಸಂಸ್ಕೃತಿಯ ಒಂದು ಭಾಗವೋ ಅಥವಾ ಸ್ಮಾರಕ ಶಿಲೆಯೋ ಎನ್ನುವುದು ಅವುಗಳ ಉತ್ಖನನದಿಂದ ಮಾತ್ರ ಹೇಳಲು ಸಾಧ್ಯ. ಉತ್ಖನನ ಮಾಡಿದ ಶಿಲಾಗೋರಿಗಳಲ್ಲಿ ವಿವಿಧ ಪ್ರಕಾರಗಳ ಅವಶೇಷಗಳು ದೊರೆತಿವೆ. ಶಂಕುವಿನಾಕಾರದ ಹೊಳಪಿನ ಕಪ್ಪುಬಣ್ಣದ ಮಡಕೆಗಳು, ಚಿಕ್ಕ ತಟ್ಟೆ–ಲೋಟಗಳು, ಬಿಳಿ ವರ್ಣಚಿತ್ರವಿರುವ

ಯು ಆಕಾರದ ಕಂಡಿಕೋಣೆ ಗೋರಿ

ಕಪ್ಪು–ಕೆಂಪು ದ್ವಿವರ್ಣ ಮಡಕೆಗಳು, ಕೆಂಪುಬಣ್ಣದ ದೊಡ್ಡ ಮಡಕೆ, ನಳಿಕೆ ಬಾಯಿ ಮತ್ತು ಮೂರು ಕಾಲುಗಳುಳ್ಳ ಮಡಕೆ, ಬತ್ತದ ಹೊಟ್ಟು ಮತ್ತು ರಾಗಿ ತುಂಬಿದ ಪಾತ್ರೆ, ತಟ್ಟೆ, ಲೋಟ, ಹೂಜಿಗಳು, ಬಿಳಿ ರೇಖೆಗಳಿಂದ ಅಲಂಕರಿಸಿದ ಕಾರ್ನೇಲಿಯನ್ ಮತ್ತು ಜೇಡಿಮಣ್ಣಿನಿಂದ ತಯಾರಿಸಿದ ಮಣಿಗಳು, ಸಣ್ಣ ದುಂಡನೆಯ ನಾಣ್ಯದ ಮಾದರಿಯ ಆಭರಣ ಮತ್ತು ಮಾನವನ ಎಲುಬು, ಹಲ್ಲು, ಕಬ್ಬಿಣದ ವಸ್ತುಗಳು ಇಲ್ಲಿ ದೊರೆತಿವೆ. ಅವಶೇಷಗಳ ತೌಲನಿಕ ವಿಶ್ಲೇಷಣೆಯಿಂದ ವಿದ್ವಾಂಸರು ಈ ಸಂಸ್ಕೃತಿಯ ಕಾಲವನ್ನು ಪ್ರ.ಶ.ಪೂ.1000–600 ಎಂದು ನಿರ್ಧರಿಸಿದ್ದಾರೆ. (ಜಿಜಿ.ಎಸ್.;ಟಿ.ಎಸ್.ಜಿ.)

**ಹೆನ್ರಿ, ರಾಲಿನ್‌ಸನ್:** 1810–95. ಪೌರಾತ್ಯ ವಿದ್ವಾಂಸ, ಬ್ರಿಟಿಷ್ ರಾಜತಾಂತ್ರಿಕ, ಅಸ್ಸೀರಿಯ ಪುರಾತತ್ತ್ವದ ಪಿತಾಮಹನೆಂದು ಪ್ರಸಿದ್ಧ. 1827ರಿಂದ ಸೈನ್ಯದ ಸೇವೆಯನ್ನು ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ಅಧೀನದಲ್ಲಿದ್ದ ಸೈನಿಕ ಕಾಲೇಜು ವಿದ್ಯಾರ್ಥಿಯಾಗಿ ಭಾರತದಲ್ಲಿ ಪ್ರಾರಂಭಿಸಿದ. 6 ವರ್ಷಗಳ ಅನಂತರ ಸೇನೆಯೊಡನೆ ಇರಾನ್‌ಗೆ ಕಳುಹಿಸಲ್ಪಟ್ಟ. ಅಲ್ಲಿ ಪರ್ಷಿಯನ್ ಭಾಷೆಯಲ್ಲಿ ಪರಿಣಿತನಾದ. ಜೊತೆಗೆ ಶಾಸನಗಳ ಅಧ್ಯಯನದಲ್ಲಿ ಆಸಕ್ತಿ ಬೆಳೆಸಿಕೊಂಡ. 2 ವರ್ಷಗಳ ಅನಂತರ ಬೆಹಿಸ್ತಾನದಲ್ಲಿಯ ಪ್ರ.ಶ.ಪೂ.5ನೆಯ ಶತಮಾನದ ಪರ್ಷಿಯ ಮತ್ತು ಮೆಡೆಸ್ ರಾಜ 1ನೆಯ ಡೇರಿಯಸ್‌ನ ಶಾಸನ ಓದಲು ಪ್ರಯತ್ನಿಸಿದ. ಇದು ಬೆಣೆ ಲಿಪಿಯ ಹಳೆ ಪರ್ಷಿಯನ್, ಬ್ಯಾಬಿಲೋನಿಯ ಮತ್ತು ಎಲಮೈಟ್ ಭಾಷೆಯಲ್ಲಿದೆ. ಪರ್ಷಿಯನ್ ಭಾಷೆಯಲ್ಲಿರುವ ಭಾಗವನ್ನು ತೌಲನಿಕವಾಗಿ ಅಧ್ಯಯನ ಮಾಡಿದ. ಇದರ ಸಹಾಯದಿಂದ ಉಳಿದ 2 ಭಾಷೆಯ ಶಾಸನಗಳನ್ನು ಓದಿದ. ಇದರಿಂದ ಅದುವರೆಗೆ ಪ್ರಯತ್ನಿಸಿದ್ದರೂ ಓದಲಾಗದಿದ್ದ ಬ್ಯಾಬಿಲೋನಿಯದ ಬೆಣೆಯಾಕಾರದ ಲಿಪಿಯ ಶಾಸನವನ್ನು ಪ್ರಥಮ ಬಾರಿಗೆ ಓದುವುದರಲ್ಲಿ ಯಶಸ್ವಿಯಾದ. ತಾನು ಸಂಗ್ರಹಿಸಿದ ಬ್ಯಾಬಿಲೋನಿಯ, ಸಸೇನಿಯ, ಸಬನಿಯದ ಪ್ರಾಚೀನ ವಸ್ತುಗಳನ್ನು ಬ್ರಿಟಿಷ್ ವಸ್ತುಸಂಗ್ರಹಾಲಯಕ್ಕೆ ಕೊಟ್ಟ. ಇದಕ್ಕೆ ಪ್ರತಿಯಾಗಿ ಅವರು ಲಯರ್ಡ್ ಪ್ರಾರಂಭಿಸಿದ ಬ್ಯಾಬಿಲೋನಿಯ ಮತ್ತು ಅಸ್ಸೀರಿಯ ಉತ್ಖನನ ನಡೆಸಲು ಹಣ ಕೊಟ್ಟರು. 1876ರಿಂದ ತನ್ನ ಬದುಕಿನ ಕೊನೆಯವರೆಗೂ ಬ್ರಿಟಿಷ್ ವಸ್ತುಸಂಗ್ರಹಾಲಯದ ಟ್ರಸ್ಟಿಯಾಗಿದ್ದ. 1874–75 ಮತ್ತು 1878–81ರಲ್ಲಿ ಕ್ರಮವಾಗಿ ಬ್ರಿಟಿಷ್ ಜಿಯಾಗ್ರಾಫಿಕಲ್ ಸೊಸೈಟಿ ಮತ್ತು ಏಷ್ಯಾಟಿಕ್ ಸೊಸೈಟಿಯ ಅಧ್ಯಕ್ಷನಾಗಿದ್ದ. ಆಕ್ಸ್‌ಫರ್ಡ್, ಕೇಂಬ್ರಿಜ್ ಮತ್ತು ಎಡಿನ್‌ಬರೊ ವಿಶ್ವವಿದ್ಯಾಲಯಗಳು ಇವನಿಗೆ ಗೌರವ ಪದವಿಗಳನ್ನು ನೀಡಿದವು. 1862ರಲ್ಲಿ ಲೂಯಿಸ್ ಕರೋಲಿನ ಹರ್ಕೋರ್ಟ್‌ಸೆಮೊರ್ ಎಂಬಾಕೆಯನ್ನು ಮದುವೆಯಾದ. 1852ರಿಂದ ಸಕ್ರಿಯವಾಗಿ ರಾಜಕೀಯದಲ್ಲಿ ಭಾಗಿಯಾಗಿದ್ದ. 1844ರಲ್ಲಿ ಕಂಪ್ಯಾನಿಯನ್ ಆಫ್ ದಿ ಬಾತ್ (ಸಿ.ಬಿ), 1855ರಲ್ಲಿ ಬ್ರಿಟಿಷ್ ಸರ್ಕಾರದ ನೈಟ್ ಕಮಾಂಡರ್ ಆಫ್ ದಿ ಬಾತ್ (ಕೆ.ಸಿ.ಬಿ) ಎಂಬ ಪ್ರಶಸ್ತಿಗಳನ್ನು ಇವನಿಗೆ ಕೊಟ್ಟು ಗೌರವಿಸಲಾಯಿತು. ಇವನ ಕೆಲವು ಗ್ರಂಥಗಳು: ದಿ ಪರ್ಷಿಯನ್ ಕ್ಯೂನಿಫಾರಂ ಇನ್‌ಸ್ಕ್ರಿಪ್ಷನ್ ಅಟ್ ಬೆಹಿಸ್ತಾನ್ (1846–51), ಔಟ್‌ಲೈನ್ ಆಫ್ ದಿ ಹಿಸ್ಟರಿ ಆಫ್ ಅಸ್ಸೀರಿಯ (1852), ನೋಟ್ಸ್ ಆನ್ ದಿ ಅರ್ಲಿ ಹಿಸ್ಟರಿ ಆಫ್ ಬ್ಯಾಬಿಲಾನ್ (1854). ಇವನು 1895ರಲ್ಲಿ ಲಂಡನ್‌ನಲ್ಲಿ ನಿಧನನಾದ. (ಎ.ಎಸ್.;ಎನ್.ಎಲ್.)

**ಹೆಮ್ಮಿಗೆ:** ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ಒಂದು ಹಳ್ಳಿ. ಕಸಬೆಯ ಪೂರ್ವಕ್ಕೆ 11 ಕಿಮೀ ದೂರದಲ್ಲಿ ಕಾವೇರಿಯ ಬಲದಂಡೆಯ ಮೇಲಿದೆ. ಈ ಗ್ರಾಮಕ್ಕೆ ಬಹು ಪ್ರಾಚೀನ ಇತಿಹಾಸವಿದೆ. ತಲಕಾಡಿಗೆ ನದಿ ದಾಟಿಹೋಗಲು ಮುಖ್ಯವಾದ ಹಾಯ್ಗಡದ ಬಳಿಯೇ ಬೆಳೆದ ಈ ಊರಿನಲ್ಲಿ ಫಲವತ್ತಾದ ಭೂಮಿ, ಕಾವೇರಿಯ ನಿರಂತರವಾದ ನೀರಿನ ಅನುಕೂಲವಿದ್ದು, ಚರಿತ್ರಪೂರ್ವಕಾಲದಿಂದಲೂ ಇಲ್ಲಿ ಜನವಸತಿ ಇದ್ದುದು ಕಂಡುಬಂದಿದೆ. ಗಂಗರ ಶಾಸನಗಳಲ್ಲಿ ಇದನ್ನು ಪೆಮೊಗೆ ಎಂದಿದ್ದರೆ ಮುಂದೆ ವಿಜಯನಗರ ಮತ್ತು ಅನಂತರದ ಕಾಲಗಳಲ್ಲಿ ಹೆಮ್ಮಿಗೆ, ಹೆಮ್ಮಿಗರೆ ಎಂದೂ ಕರೆಯಲಾಗಿದೆ. ಈ ಊರು ಪ್ರಮುಖವಾದ ಹಾಯ್ಗಡಕ್ಕೆ ಹೊಂದಿಕೊಂಡು ಇದ್ದುದರಿಂದ ಇದನ್ನು ಹೆಮೊಗ್ಗೆ ಎಂದರೆ ಹಿರಿಯ ಮೊಗೆ ಅಥವಾ ಹಾಯ್ಗಡ ಎಂಬ ಅರ್ಥದಲ್ಲಿ ಕರೆದಿರಬಹುದು. ಇಲ್ಲಿ ದೊರೆತ ಆ ಕಾಲದ ಅವಶೇಷಗಳು, ಗಂಗ ವಾಸ್ತುಶಿಲ್ಪ ರೀತಿಗೆ ಸೇರಿದ ಸೂರ್ಯನ ವಿಗ್ರಹ, ಕಂಬಗಳು ಮೊದಲಾದವುಗಳು ಗಂಗರು ಇಲ್ಲಿ ಆಳಿದ್ದನ್ನು ಸ್ಪಷ್ಟಪಡಿಸುತ್ತವೆ. ಚೋಳರು ಈ ಪ್ರದೇಶವನ್ನಾಕ್ರಮಿಸಿ ತಲಕಾಡಿನಲ್ಲಿ ಆಡಳಿತ ವಹಿಸಿಕೊಂಡ ಮೇಲೆ ಇಲ್ಲಿನ ವರದರಾಜಸ್ವಾಮಿ ದೇವಾಲಯದ ನಿರ್ಮಾಣವಾಗಿ ಅದರ ಮುಂದಿನ ಊರು ಬೆಳೆದಿರಬೇಕು. ಚೋಳರ ಕಾಲಕ್ಕೆ ಸೇರಿದ್ದಿರಬಹುದಾದ ತೋರಣಗಲ್ಲಿನ ಶಿಲ್ಪವೂ ಇಲ್ಲಿ ದೊರೆತಿದೆ. ವರದರಾಜಸ್ವಾಮಿ ದೇವಾಲಯ ಮಾತ್ರ ಮುಂದೆ ವಿಜಯನಗರ ಕಾಲದಲ್ಲಿ ಪುನರ್‌ನಿರ್ಮಾಣವಾದಂತೆ ತೋರುತ್ತದೆ. ಬಹುಶಃ ಹೊಯ್ಸಳ ವಿಷ್ಣುವರ್ಧನ ತಲಕಾಡಿನ ಮೇಲೆ ದಂಡೆತ್ತಿ ಬಂದು ಚೋಳರನ್ನು ಓಡಿಸಿದಾಗ ಇಲ್ಲಿ ನಡೆದ ಯುದ್ಧದಲ್ಲಿ ಈ ಊರು ನಾಶವಾಗಿರಬೇಕು. ಮುಂದೆ ವಿಜಯನಗರದ ಇಮ್ಮಡಿ ಹರಿಹರನ ಕಾಲದಲ್ಲಿ, 1397ರಲ್ಲಿ ಹೆಮ್ಮಿಗೆಯನ್ನು ಅಗ್ರಹಾರವನ್ನಾಗಿ ಮಾಡಿ ಹರಿಹರರಾಜೇಂದ್ರಪುರವೆಂದು ಹೆಸರಿಟ್ಟರು. ಸುಮಾರು ಇದೇ ಕಾಲದಲ್ಲಿ ತಲಕಾಡಿನಲ್ಲಿ ಅಧಿಕಾರಿಯಾಗಿದ್ದ ಮಾಧವಮಂತ್ರಿ ಹಾಯ್ಗಡಕ್ಕೆ ಹೊಂದಿದಂತೆ ಕಾವೇರಿ ನದಿಗೆ ಒಂದು ಅಡ್ಡಕಟ್ಟೆ ಹಾಕಿಸಿದ. ಇದು ಈಗಲೂ ಮಾಧವ ಮಂತ್ರಿ ಅಣೆಕಟ್ಟು ಎಂದು ಪ್ರಸಿದ್ಧವಾಗಿದೆ. ಈಗ ಅದನ್ನು ಹೆಮ್ಮಿಗೆ ಹೊಸಹಳ್ಳಿ ಎಂದು ಕರೆದಿರುವುದು ಈ ಊರನ್ನು ಹೊಸದಾಗಿ ನಿರ್ಮಿಸಿದುದನ್ನು ಸೂಚಿಸುತ್ತದೆ. 1526ರಲ್ಲಿ ಕೃಷ್ಣದೇವರಾಯ ಇದೇ ಹೆಮ್ಮಿಗೆಯನ್ನು ಮತ್ತೆ ದತ್ತಿಯಾಗಿ ಬಿಟ್ಟ. ಈಗ ಉಳಿದು ಬಂದಿರುವ ವರದರಾಜಸ್ವಾಮಿ ದೇವಾಲಯ ಎತ್ತರವಾದ ಜಗತಿಯ ಮೇಲೆ ಕಟ್ಟಿರುವ ವಿಜಯನಗರದ ಕಾಲದ ಸರಳವಾದ ಗುಡಿ. ಮೂಲವಿಗ್ರಹ ಮಾತ್ರ ಚೋಳರ ಕಾಲದ ಸುಂದರವಾದ ಮೂರ್ತಿಯಾಗಿದ್ದು ಊರಿನಲ್ಲಿ ಕೆಲವು ವೀರಗಲ್ಲುಗಳೂ ಇವೆ.

1964ರಲ್ಲಿ ರಾಜ್ಯ ಪುರಾತತ್ತ್ವ ಇಲಾಖೆ ನಡೆಸಿದ ಉತ್ಖನನಗಳಿಂದ ಚರಿತ್ರ ಪೂರ್ವ ಕಾಲದಲ್ಲಿಯೇ ಇಲ್ಲಿ ಹೆಚ್ಚಿನ ಜನವಸತಿ ಇದ್ದುದು ತಿಳಿದುಬಂದಿದೆ. ಊರಿನ ಮುಂದೆ ಮತ್ತು ಮಾಧವಮಂತ್ರಿ ಅಣೆಕಟ್ಟಿನ ಬಳಿ (ಈಗ ದ್ವೀಪವಾಗಿರುವ ಆದಿಯನ ತಿಟ್ಟು ಎಂಬ ದಿಬ್ಬದಲ್ಲಿ) ನಡೆದ ಉತ್ಖನನಗಳಲ್ಲಿ ನವಶಿಲಾಯುಗ ಹಾಗೂ ತಾಮ್ರ–ಶಿಲಾಯುಗಗಳಿಗೆ ಸೇರಿದ ಬೇರೆ ಬೇರೆ ಸಂಸ್ಕೃತಿಗಳು ಇಲ್ಲಿ ಬೆಳೆದುಬಂದಿರುವುದು ಪ್ರಕಟವಾಯಿತು. ಮುಖ್ಯವಾಗಿ ಆದಿಯನ ತಿಟ್ಟು ಪ್ರದೇಶದಲ್ಲಿ ಇದರ ಬೆಳವಣಿಗೆಯನ್ನು ಗುರುತಿಸಬಹುದು. ಇಲ್ಲಿ ದೊರೆತ ಮಣ್ಣಾತ್ರೆಗಳು ಕೈಯಿಂದ ಮಾಡಿದುವು. ಕೆಲವು ವೇಳೆ ಅವಕ್ಕೆ ತೆಳುಬಣ್ಣ ಲೇಪಿಸಿ ಉಜ್ಜಿ ಹೊಳಪು ಬರಿಸಿರುವುದುಂಟು. ಇದರಿಂದ ಬೂದು, ಮಾಸಲು ಕೆಂಪು ಅಥವಾ ಕಂದುಬಣ್ಣಗಳಲ್ಲಿ ಅವು ಕಂಡುಬರುತ್ತವೆ. ಇವುಗಳಲ್ಲಿ ಸಾಮಾನ್ಯವಾಗಿ ಗುಂಡಾದ, ದೊಡ್ಡ ಬಾಯುಳ್ಳ, ಅಗಲವಾದ ಹೊರಮುಖ ಕಂಠಗಳನ್ನುಳ್ಳ ಮಡಕೆಗಳು, ಗುಂಡು ತಳವುಳ್ಳ, ಕಂಠವಿಲ್ಲದ ಆದರೆ ನಾಲಗೆಯಂತೆ ಚಾಚಿರುವ ಮೂತಿಯಿರುವ ಬೋಗುಣಿಗಳು, ಬಟ್ಟಲುಗಳು ಇವುಗಳೊಂದಿಗೆ ತಿರುಮಕೂಡಲು ನರಸೀಪುರದಲ್ಲಿ ಕಂಡುಬಂದಿರುವ ವಿಶಿಷ್ಟವಾದ ಮಣ್ಣಿನ ತಲೆಯಾಸರೆ ದೊರೆತಿದೆ. ಕಲ್ಲಿನ ವಸ್ತುಗಳಲ್ಲಿ ನವಶಿಲಾಯುಗಕ್ಕೆ ಸೇರಿದ ಉಜ್ಜಿ ಹರಿತಗೊಳಿಸಿದ ಕಲ್ಕೊಡಲಿಗಳು. ಅವುಗಳ ಜೊತೆಯಲ್ಲಿಯೇ ಶಿಲಾ ಉದ್ಯಮಕ್ಕೆ ಸೇರಿದ ಮೂಲ ಶಿಲೆ, ಅದರಿಂದ ಚಕ್ಕೆ ಎಬ್ಬಿಸಿದ ಕಿರುಶಿಲೋಪಕರಣಗಳೂ ದೊರೆತಿರುವುದು ಇಲ್ಲಿಯ ವಿಶೇಷ. ಈ ಸೂಕ್ಷ್ಮಶಿಲೋಪಕರಣಗಳು ತೀರ ಕಿರುಪ್ರಮಾಣದವು. 1–2 ಸೆಂ.ಮೀಗಳಿಗಿಂತ ಹೆಚ್ಚು ಉದ್ದವಾಗಿಲ್ಲ, ಅಷ್ಟೇನೂ ಕ್ರಮಬದ್ಧವಾಗಿ ಚಕ್ಕೆ ಎಬ್ಬಿಸಿದವೂ ಅಲ್ಲ. ಮೂಲಶಿಲೆ ಉತ್ತಮ ಜಾತಿಯದೂ ಅಲ್ಲ. ಆದ್ದರಿಂದ ಇವುಗಳನ್ನು ಪ್ರಸಿದ್ಧವಾದ ಬ್ರಹ್ಮಗಿರಿ, ಪಿಕ್ಲಿಹಾಳ, ಮಸ್ಕಿ ಮೊದಲಾದ ಕಡೆ ದೊರೆತ ಸೂಕ್ಷ್ಮಶಿಲೋಪಕರಣಗಳೊಡನೆ ಹೋಲಿಸಲಾಗದು. ಬಹುಶಃ ನವಶಿಲಾಯುಗಕ್ಕೆ ಮುಂಚಿನ ಕಾಲಕ್ಕೆ ಸೇರಿದ್ದ ಶಿಲಾ ಉದ್ಯಮ ಈ ನವಶಿಲಾ–ತಾಮ್ರಯುಗದ ಕಾಲದಲ್ಲಿ ಇಲ್ಲಿ ಮುಂದುವರಿದುದನ್ನು ಇದು ಸೂಚಿಸುತ್ತದೆ. ಆದಿಯನ ತಿಟ್ಟಿನಲ್ಲಲ್ಲದೆ ಊರ ಮುಂದಿನ ನಿವೇಶನದಲ್ಲಿಯೂ ಅತ್ಯಂತ ಕೆಳಗಿನಸ್ತರಕ್ಕೆ ಸೇರಿದ ಸ್ವಾಭಾವಿಕ ಭೂಪದರದ ಮೇಲೆಯೇ ಇಟ್ಟಂತಿದ್ದ ನವಶಿಲಾ–ತಾಮ್ರಯುಗಕ್ಕೆ ಸೇರಿದ ಮಡಕೆಗಳು, ಬೋಗುಣಿಗಳು, ಮಣ್ಣಿನ ತಲೆಯಾಸರೆ, ನಾಳವುಳ್ಳ ಗಿಂಡಿ ರಾಶಿಯಾಗಿದ್ದುದು ಕಂಡುಬಂದಿದೆ. ಆದರೆ ಇಲ್ಲಿ ಜನ ಹೆಚ್ಚುಕಾಲ ವಾಸ ಮಾಡಿದ ಕುರುಹುಗಳೇನೂ ಉಳಿದಿಲ್ಲ. ಬಹುಶಃ ಜನ ಇಲ್ಲಿ ವಾಸಕ್ಕೆ ಆರಂಭಿಸಿದ ಸ್ವಲ್ಪಕಾಲದಲ್ಲಿಯೇ ಪ್ರವಾಹ ಬಂದದ್ದರಿಂದ ಅವರು ತಮ್ಮ ವಸತಿಯನ್ನು ಬದಲಾಯಿಸಿರಬಹುದು ಅಥವಾ ಸ್ವಲ್ಪವೂ ಒಡೆಯದ ಮಡಕೆಗಳು ರಾಶಿಯಾಗಿದ್ದುದನ್ನು ನೋಡಿದರೆ ಇಲ್ಲಿ ಯಾವುದಾದರೂ ಧಾರ್ಮಿಕ ವಿಧಿಯನ್ನು ನೆರವೇರಿಸಿದ್ದಿರಬಹುದೆನಿಸುತ್ತದೆ.

ಈ ಹಂತದ ಅನಂತರ ಈ ನಿವೇಶನದಲ್ಲಿ ವಸತಿಹೀನ ಸ್ತರಗಳಿದ್ದು ಮೇಲಿನ ಎರಡು ಸ್ತರಗಳಲ್ಲಿ ಮಾತ್ರ ಪ್ರಸಕ್ತಶಕದ ಆರಂಭಕಾಲದ್ದು ಎನ್ನಬಹುದಾದ ವಸ್ತುಗಳು ದೊರೆತಿವೆ. ಇವುಗಳಲ್ಲಿ ಕೆಂಪು–ಕಪ್ಪು ದ್ವಿವರ್ಣ ಮಡಕೆಗಳು, ಅಂಥ ಮಡಕೆಗಳ ಮೇಲೆ ಬಿಳಿಯ ಬಣ್ಣದಿಂದ ಅಲೆಯಲೆಯಾಗಿ, ಚುಕ್ಕೆಗಳ ಸಾಲುಗಳಾಗಿ ಹಾಗೂ ಇತರ ರೀತಿಯಲ್ಲಿ ಬಿಡಿಸಿರುವ ಚಿತ್ರಗಳು, ಶಂಖದ, ಗಾಜಿನ ಬಳೆಗಳು, ಕಲ್ಲಿನ ಮಣಿಗಳು, ಕದಿರಿನ ತೂಕಗಳು, ಕಬ್ಬಿಣದ ಉಪಕರಣಗಳು ದೊರೆತಿದ್ದು ಚಂದ್ರವಳ್ಳಿ, ಬ್ರಹ್ಮಗಿರಿ, ಮಸ್ಕಿ ಮೊದಲಾದ ಕಡೆ ದೊರೆತ ಇಂಥ ವಸ್ತುಗಳನ್ನು ಹೋಲುತ್ತವೆ. ಆದರೆ ಇಲ್ಲಿ ಅವು ದೊಡ್ಡ ಪ್ರಮಾಣದಲ್ಲಿಲ್ಲ. ನವಶಿಲಾ ಯುಗಕ್ಕೆ ಮುಂಚೆಯೂ ಇಲ್ಲಿ ಪ್ರಾಯಶಃ ಅಲೆಮಾರಿ ಜನವಸತಿ ಇದ್ದುದಕ್ಕೆ ಹೊಳೆಯ ದಡದಲ್ಲಿ ದೊರೆತ ಹಲವು ಶಿಲೋಪಕರಣಗಳು ಸಾಕ್ಷಿಯಾಗಿವೆ. ಇಲ್ಲಿನ ಉತ್ಖನನದಿಂದ ಕಾವೇರಿ ಜಲಾನಯನದ ಮೇಲ್ಭಾಗ ಬೆಳೆದುಬಂದ ಸಾಂಸ್ಕೃತಿಕ ಪರಂಪರೆಯ ಬಗೆಗೆ ಹೆಚ್ಚಿನ ಬೆಳಕು ಬಿದ್ದಿದೆ. ತಿರುಮಕೂಡಲು ನರಸೀಪುರದ ಉತ್ಖನನಗಳಲ್ಲಿ ಅಸ್ಪಷ್ಟವಾಗಿ ಸೂಚಿತವಾಗಿದ್ದ ಕೆಲವು ಸಾಂಸ್ಕೃತಿಕ ಮಜಲುಗಳು ಇಲ್ಲಿ ಸ್ಪಷ್ಟಗೊಂಡಿವೆ. (ಎಮ್.ಎಚ್.)

**ಹೇಮಾದ್ರಿ:** ಸೇವುಣ ದೊರೆ ಮಹಾದೇವನ (1260–71) ಆಸ್ಥಾನ ವಿದ್ವಾಂಸ. ಇವನ ತಾತ ವಾಸುದೇವ, ತಂದೆ ಕಾಮದೇವ. ಪಾಂಡಿತ್ಯಕ್ಕೆ ಪ್ರಸಿದ್ಧನಾಗಿದ್ದ ಈತ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ವ್ರಾತಖಂಡ ಇವನ ಪ್ರಥಮ ಕೃತಿ. ಚತುರ್ವರ್ಗಚಿಂತಾಮಣಿ, ಕಾಲನಿರ್ಣಯ, ತಿಥಿನಿರ್ಣಯ, ಪರ್ಜನ್ಯ ಪ್ರಯೋಗ, ದಾನವಾಕ್ಯಾವಳಿ, ಆಯುರ್ವೇದ ರಸಾಯನ ಮೊದಲಾದವು ಇವನಿಂದ ರಚಿತವಾದ ಇತರ ಗ್ರಂಥಗಳು. ವ್ರಾತಖಂಡದಲ್ಲಿ ಸೇವುಣರ ಪ್ರಾರಂಭದ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ಘಟನೆಗಳನ್ನೂ ತನ್ನ ಪೋಷಕನಾದ ಮಹಾದೇವನ ಯುದ್ಧ ವಿಜಯಗಳನ್ನೂ ವರ್ಣಿಸಿದ್ದಾನೆ. ಮಹಾದೇವ ಗುಜರಾತಿನ ವಾಘೇಲರನ್ನೂ ಮಾಳವದ ಪರಮಾರರನ್ನೂ ತೆಲಂಗಾಣದ ಕಾಕತೀಯರನ್ನೂ ಸೋಲಿಸಿದುದಾಗಿ ಇವನ ವರ್ಣನೆಗಳಿಂದ ತಿಳಿದುಬರುತ್ತದೆ.

ಈತನ ಗ್ರಂಥಗಳಲ್ಲಿ ಚತುರ್ವರ್ಗಚಿಂತಾಮಣಿ ಅತ್ಯಂತ ಪ್ರಸಿದ್ಧವಾದುದು. ಈ ಗ್ರಂಥ ಮತೀಯ ನಿಯಮಗಳಿಗೆ ಸಂಬಂಧಿಸಿದ ವ್ರತಖಂಡ, ದಾನಖಂಡ, ತೀರ್ಥಖಂಡ, ಮೋಕ್ಷಖಂಡ ಮತ್ತು ಪರಿಶಿಷ್ಟಖಂಡ ಎಂಬ ಭಾಗಗಳಿಂದ ಕೂಡಿದೆ. ಈತ ಮರಾಠಿ ಭಾಷೆಯಲ್ಲಿ ಮೋಡಿ ಲಿಪಿಯನ್ನು ಆಚರಣೆಗೆ ತಂದ. ಹೇಮದ್ ಪಂತ್ ಎಂಬ ಶೈಲಿಯ ಅನೇಕ ದೇವಾಲಯಗಳನ್ನು ಈತ ನಿರ್ಮಿಸಿದನೆಂದೂ ಇವನಿಗೆ ಹೇಮದ್ ಪಂತ್ ಎಂಬ ಹೆಸರೂ ಪ್ರಚಲಿತವಿತ್ತೆಂದೂ ತಿಳಿದುಬರುತ್ತದೆ. (ಜಿ.ಆರ್.ಆರ್.)

**ಹೇಲಿಯೋಡೋರಸ್‌ನ ಶಾಸನ:** ಇಸ್ರೇಲಿನ ಅತಿ ಮಹತ್ತ್ವದ ಗ್ರೀಕ್ ಶಾಸನಗಳಲ್ಲೊಂದು. ಮ್ಯಾಕಬೀಸ್‌ನ ಎರಡನೆಯ ಗ್ರಂಥದಲ್ಲಿ (ಯಹೂದಿ ಚರಿತ್ರೆ ಮತ್ತು ದೇವತಾಶಾಸ್ತ್ರದ 4 ಗ್ರಂಥಗಳಲ್ಲೊಂದು) ನಿರೂಪಿತವಾಗಿರುವ ಹೇಲಿಯೋಡೋರಸ್‌ನ ವೃತ್ತಾಂತ ಹಾಗೂ ಜೆರುಸಲೇಂ ದೇವಾಲಯದ ಮೇಲೆ ಈ ಶಾಸನ (ಪ್ರ.ಶ.ಪೂ.2ನೆಯ ಶತಮಾನ) ಹೊಸ ಬೆಳಕು ಚೆಲ್ಲುತ್ತದೆ. ಮ್ಯಾಕಬೀಸ್ ಗ್ರಂಥದಲ್ಲಿ ದಾಖಲಾಗಿರು ವಂತೆ ಜೆರುಸಲೇಂ ದೇವಾಲಯದ ಸಂಪತ್ತನ್ನು ಕೊಳ್ಳೆಹೊಡೆಯಲು ನಾಲ್ಕನೆಯ ಸೆಲ್ಯೂಕಸ್ ದೊರೆಯ ಅಧಿಕಾರಿ ಹೇಲಿಯೋಡೋರಸ್‌ನು ಪ್ರಯತ್ನಿಸಿದಾಗ ಒಬ್ಬ ಅಶ್ವಾರೋಹಿ ಹಾಗೂ ಅವನ ಇಬ್ಬರು ಬಲಿಷ್ಠ ಸಹಚರರು ಹೇಲಿಯೋಡೋರಸ್‌ನ ಪ್ರಯತ್ನವನ್ನು ವಿಫಲ ಗೊಳಿಸಿದರು. ಹತ್ತು ವರ್ಷಗಳ ಅನಂತರ (ಪ್ರ.ಶ.ಪೂ.ಸು.169) ಸೆಲ್ಯೂಕಸ್‌ನ ಉತ್ತರಾಧಿಕಾರಿ ಯಾದ ಆಂತಿಯೋಕಸ್ ಈಪಿಫನೀಜ಼್‌ನು ತನ್ನ ಸೈನ್ಯದೊಂದಿಗೆ ಜೆರುಸಲೇಂ ಪಟ್ಟಣವನ್ನು ಮುತ್ತಿ, ಪ್ರಜೆಗಳ ಕಗ್ಗೊಲೆ ಮಾಡಿದ್ದಲ್ಲದೆ ಜೆರುಸಲೇಂ ದೇವಾಲಯವನ್ನು ಲೂಟಿ ಮಾಡಿ ಅಪವಿತ್ರಗೊಳಿಸಿದ. ಇದಕ್ಕೆ ಪ್ರತ್ಯುತ್ತರವಾಗಿ ಮೆಕಾಬಿಗಳು (ಯಹೂದಿಗಳು) ಗ್ರೀಕರ ವಿರುದ್ಧ ದಂಗೆ ಯೆದ್ದರು. ಇದೇ ಮೆಕಾಬಿ ದಂಗೆ. ಈ ದಂಗೆಯಲ್ಲಿ ಯಹೂದಿಗಳು ಜಯಗಳಿಸಿದರು. ಈ ಗೆಲುವಿನ ಸ್ಮರಣಾರ್ಥವಾಗಿ ಇಂದಿಗೂ ಇವರು ಹಾನೂಕ ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಶಾಸನ ಮೆಕಾಬಿ ದಂಗೆಗೆ ಕಾರಣವಾದ ಒಂದು ರಾಜಕೀಯ ಘಟನೆಯನ್ನು ಉಲ್ಲೇಖಿಸುತ್ತದೆ. ಸೆಲ್ಯೂಸಿಡ್ ಸಾಮ್ರಾಜ್ಯದ ಚಕ್ರವರ್ತಿಯಾದ ನಾಲ್ಕನೆಯ ಸೆಲ್ಯೂಕಸ್ (ಪ್ರ.ಶ.ಪೂ.187–175) ಹೇಲಿಯೋಡೋರಸ್‌ನಿಗೆ ಕಳುಹಿಸಿದ ಒಕ್ಕಣೆಯನ್ನು ಈ ಶಾಸನ ನಮೂದಿಸುತ್ತದೆ. ಇಸ್ರೇಲ್ ಒಳಗೊಂಡಂತೆ ತನ್ನ ಸಾಮ್ರಾಜ್ಯದೊಳಗಿರುವ ಪವಿತ್ರ ಕ್ಷೇತ್ರಗಳಿಂದ ಉತ್ಪತ್ತಿಯಾಗುವ ಆದಾಯ ಮತ್ತು ಬೊಕ್ಕಸಕ್ಕೆ ಅದರಿಂದ ಸಲ್ಲಬೇಕಾದ ತೆರಿಗೆಯ ನಿರ್ವಹಣೆಗಾಗಿ ಆಡಳಿತಾಧಿಕಾರಿಗಳನ್ನು ನೇಮಿಸಿದ್ದಾಗಿ ಸೆಲ್ಯೂಕಸ್ ತನ್ನ ಆದೇಶದಲ್ಲಿ ತಿಳಿಸುತ್ತಾನೆ. ಈ ರಾಜಕೀಯ ಬೆಳವಣಿಗೆಯೇ ಯಹೂದಿಗಳ ಧಾರ್ಮಿಕ ಸ್ವಾತಂತ್ರ್ಯಕ್ಕೆ ಕುತ್ತಾಯಿತು. ಒಟ್ಟಾರೆ ಯಹೂದಿಗಳ ಧಾರ್ಮಿಕ ವ್ಯವಹಾರಗಳಲ್ಲಿ ಗ್ರೀಕರ ಹಸ್ತಕ್ಷೇಪ ಆರಂಭವಾದುದನ್ನು ಈ ಶಾಸನ ಸೂಚಿಸುತ್ತದೆ. ಈ ಶಾಸನದಲ್ಲಿ ಚಕ್ರವರ್ತಿ ಹೊರಡಿಸಿದ 3 ಆದೇಶಗಳ ಸಾರಾಂಶವಿದ್ದು ಇದರಲ್ಲಿ ಮೊದಲನೆಯದು ಹಾಗೂ ಮಹತ್ತ್ವವಾದದ್ದು ಹೇಲಿಯೋಡೋರಸ್‌ನಿಗೆ ಕಳುಹಿಸಿದ ಆದೇಶ. ಇದರ ಪ್ರಸ್ತಾವನೆಯ ಭಾಗವಷ್ಟೇ ಇಂದು ಉಳಿದಿದೆ. ಮತ್ತೆರಡು ಆದೇಶಗಳು ಪ್ರ.ಶ.ಪೂ. 178ರಲ್ಲಿ ರವಾನಿಸಿದ ಒಕ್ಕಣೆಗಳಾಗಿದ್ದು ಇವನ್ನು ಹೇಲಿಯೋ ಡೋರಸ್‌ನು ತನ್ನ ಅಧೀನದಲ್ಲಿರುವ ಅಧಿಕಾರಿಗಳಿಗೆ ಮುಟ್ಟಿಸಬೇಕಿತ್ತು. ಈ ಶಾಸನವನ್ನು ಓದಿ ವ್ಯಾಖ್ಯಾನಿಸಿದವರೆಂದರೆ ಜೆರುಸಲೇಂನ ಹೀಬ್ರು ವಿಶ್ವವಿದ್ಯಾಲಯದ ಹ್ಯಾನ ಕಾಟನ್ ಮತ್ತು ಮ್ಯೂನಿಕ್‌ನ ಜರ್ಮನ್ ಆರ್ಕಿಯಲಾಜಿಕಲ್ ಇನ್‌ಸ್ಟಿಟ್ಯೂಟಿನ ಮೈಕಲ್ ವೊಯರ್ಲ್. (ವಿ.ಎಸ್.)

**ಹೇಸ್ಟಿಂಗ್ಸ್, ವಾರನ್:** 1732–1818. ಭಾರತದ ಪ್ರಥಮ ಗವರ್ನರ್ ಜನರಲ್(1773–85). 1732ರಲ್ಲಿ ಇಂಗ್ಲೆಂಡಿನ ಆಕ್ಸ್‌ಫರ್ಡ್ ಷೈರ್‌ನ ಚರ್ಚಿಲ್‌ನಲ್ಲಿ ಜನಿಸಿದ. ಇವನು ತನ್ನ 17ನೆಯ ವಯಸ್ಸಿನಲ್ಲಿ ಈಸ್ಟ್ ಇಂಡಿಯ ಕಂಪನಿಯಲ್ಲಿ ಗುಮಾಸ್ತನಾಗಿ ಭಾರತಕ್ಕೆ ಬಂದ. ಕಂಪನಿ ಸರ್ಕಾರದಲ್ಲಿ ಹಲವಾರು ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಬಂಗಾಲದ ರಾಜ್ಯಪಾಲನಾಗಿ ನೇಮಕವಾದ(1772). ಅನಂತರ ರೆಗ್ಯುಲೇಟಿಂಗ್ ಕಾಯಿದೆ ಪ್ರಕಾರ ಬಂಗಾಲದ ಪ್ರಥಮ ಗವರ್ನರ್ ಜನರಲ್ ಆದ (1773). ಇವನ ಆಡಳಿತಾವಧಿಯಲ್ಲಿ ಅನೇಕ ಗಮನಾರ್ಹ ಸುಧಾರಣೆಗಳನ್ನು ಜಾರಿಗೊಳಿಸಿದ. ಕಂಪನಿ ವ್ಯವಹಾರಗಳನ್ನು ಒಂದುಗೂಡಿಸಿದ. ಬಂಗಾಲದ ದ್ವಿಸರ್ಕಾರ ಪದ್ಧತಿ ರದ್ದುಪಡಿಸಿದ. ಕಂಪನಿ ಖಜಾನೆಯನ್ನು ಮುರ್ಷಿದಾಬಾದ್‌ನಿಂದ ಕಲ್ಕತ್ತಕ್ಕೆ ವರ್ಗಾಯಿಸಿದ. ಕಂದಾಯ ಸುಧಾರಣೆಗೊಳಿಸಿ ಐದು ವರ್ಷಗಳ ಅವಧಿಗೆ ಕಂದಾಯ ನಿಗದಿ ಪಡಿಸುವುದರ ಜೊತೆಗೆ ಹರಾಜಿನಲ್ಲಿ ಹೆಚ್ಚು ಹಣಕೊಡುವ ಶ್ರೀಮಂತರಿಗೆ ನೀಡಿದ. ಪುನಃ ಈ ಅವಧಿಯನ್ನು ಎರಡು ವರ್ಷಕ್ಕೆ ಇಳಿಸಿದ(1771). ಜಿಲ್ಲಾಧಿಕಾರಿ ಹಾಗೂ ಇತರ ಕಂದಾಯ ಅಧಿಕಾರಿಗಳ ನೇಮಕಮಾಡಿದ. ನ್ಯಾಯಾಂಗ ಕ್ಷೇತ್ರ ಸುಧಾರಣೆಗೊಳಿಸಿ ಜಿಲ್ಲಾಮಟ್ಟದಲ್ಲಿ ದಿವಾನಿ ಮತ್ತು ಫೌಜುದಾರಿ ನ್ಯಾಯಾಲಯಗಳನ್ನು ಸ್ಥಾಪಿಸಿದ. ಕಲ್ಕತ್ತದಲ್ಲಿ ಸಾದರ್‌ದಿವಾನಿ ಮತ್ತು ನಿಜಾಮತ್ ಅದಾಲತ್ ನ್ಯಾಯಾಲಯಗಳನ್ನು ಸ್ಥಾಪಿಸಿ ಕಾನೂನು, ಶಿಸ್ತು ಕಾಪಾಡಲು ಪ್ರತಿ ಜಿಲ್ಲೆಗೆ ಪೊಲೀಸ್ ಸೂಪರಿಂಟೆಂಡೆಂಟರನ್ನು ನೇಮಿಸಿದ. ಹಿಂದು ಮುಸ್ಲಿಮ್ ಕಾನೂನುಗಳನ್ನು ಕ್ರೋಡೀಕರಣಗೊಳಿಸಿದ.

ಇವನು ಪರ್ಷಿಯನ್, ಬಂಗಾಲಿ ಭಾಷೆಗಳಲ್ಲಿ ಪರಿಣತಿ ಪಡೆದಿದ್ದ. ಐರೋಪ್ಯ ವಿದ್ವಾಂಸರಿಗೆ ಸಂಸ್ಕೃತ ಸಾಹಿತ್ಯ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟ, ಮುದ್ರಣಾಲಯಗಳನ್ನು ಸ್ಥಾಪಿಸಿದ. ಕಲ್ಕತ್ತದಲ್ಲಿ ಮದರಸಾ ಸ್ಥಾಪಿಸಿದ. ರಾಯಲ್ ಏಷ್ಯಾಟಿಕ್ ಸೊಸೈಟಿ ಸ್ಥಾಪಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ಆಳಿಕೆಯಲ್ಲಿ ರೋಹಿಲ್ಲಾ ಯುದ್ಧ(1774), ಮೊದಲ ಬ್ರಿಟಿಷ್-ಮರಾಠಯುದ್ಧ (1778–82), ಎರಡನೆಯ ಬ್ರಿಟಿಷ್-ಮರಾಠಯುದ್ಧ(1803–04), ಎರಡನೆಯ ಬ್ರಿಟಿಷ್-ಮೈಸೂರುಯುದ್ಧ (1880–84) ಮೊದಲಾದ ಯುದ್ಧಗಳು

ನಡೆದವು. ಇವನು ಪಿಟ್ಸ್‌ಇಂಡಿಯ ಕಾಯಿದೆ ಜಾರಿಗೊಳಿಸಿದ. ಮೀರ್ ಜಾಫರನ ವಿಧವೆ ರಾಣಿಯಿಂದ (ಮೂರುವರೆ ಲಕ್ಷ ರೂಪಾಯಿ) ಹಾಗೂ ಯುವರಾಣಿಯಿಂದ (ಒಂದುವರೆ ಲಕ್ಷ ರೂಪಾಯಿ) ಬಹುಮಾನವೆಂದು ಲಂಚ ಪಡೆದುದಕ್ಕೆ ಮಹಾರಾಜ ನಂದಕುಮಾರ್ ಇವನ ವಿರುದ್ಧ ಕಂಪನಿಗೆ ಆಪಾದಿಸಿದ. ಇದರಿಂದ ಕುಪಿತನಾದ ಈತ ನಂದಕುಮಾರ ಮತ್ತು ಅವನ ಅನುಯಾಯಿಗಳ ಮೇಲೆ ಸುಳ್ಳು ಆಪಾದನೆ ಹೊರಿಸಿ ಬಂಧಿಸಿ, ಕೊಲೆ ಮಾಡಿಸಿದ(1775). ಈ ಘಟನೆ ಇವನ ಜೀವನದಲ್ಲಿ ಕಪ್ಪುಚುಕ್ಕೆಯಾಗಿ ಉಳಿಯಿತು. ಅನೇಕ ಆಪಾದನೆಗಳಿಗೆ ಗುರಿಯಾದ ಈತ ಕಡೆಗೆ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಿದ(1785). ಬ್ರಿಟಿಷ್ ಪಾರ್ಲಿಮೆಂಟ್ ಇವನ ಮೇಲಿನ ಮೊಕದ್ದಮೆಗಳನ್ನು ಆರು ವರ್ಷಗಳ ಕಾಲ ವಿಚಾರಣೆ ನಡೆಸಿ ನಿರ್ದೋಷಿ ಎಂದು ತೀರ್ಪು ನೀಡಿತು. ಇತಿಹಾಸ ವಿಮರ್ಶಕ ಪಿ.ಇ.ರಾಬರ್ಟ್ಸ್ ಇವನನ್ನು ಶ್ರೇಷ್ಠ ರಾಜತಂತ್ರಜ್ಞ ಎಂದು ಹೊಗಳಿದ್ದಾನೆ. ಈತ 1818ರಲ್ಲಿ ನಿಧನ ಹೊಂದಿದ. (ಡಿ.ಎನ್.)

**ಹೈಗುಂದ:** ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ನಡುಗಡ್ಡೆಯಲ್ಲಿರುವ ಆದಿ ಇತಿಹಾಸಕಾಲದ ಒಂದು ನೆಲೆ. ಹಲವಾರು ಇಟ್ಟಿಗೆ ಕಟ್ಟಡ, ಬಾವಿ, ಕಪ್ಪು-ಕೆಂಪು ದ್ವಿವರ್ಣ, ಕೆಂಪು ಮತ್ತು ಕಪ್ಪು ವರ್ಣದ ನಾನಾ ಪ್ರಕಾರದ ಮಣ್ಣಿನ ಪಾತ್ರೆಗಳ ಅವಶೇಷಗಳು ಇಲ್ಲಿ ಹರಡಿವೆ. ಒಂದು ಬಾವಿ ಚೌಕೋನ ವಿನ್ಯಾಸದಲ್ಲಿದೆ. ಅತಿ ಮಹತ್ತ್ವದ ಅವಶೇಷಗಳೆಂದರೆ ಸು.2 ಮೀ ಎತ್ತರದ ಯಕ್ಷ ಮೂರ್ತಿ, ಒಂದು ಕುಬ್ಜ ಯಕ್ಷ ಮೂರ್ತಿ, ನಿಂತ ಭಂಗಿಯಲ್ಲಿಯ ಎರಡು ಬುದ್ಧ ಮೂರ್ತಿಗಳು (1.12ಮೀ ಮತ್ತು 1.40ಮೀ ಎತ್ತರ). ಸಮಭಂಗದಲ್ಲಿರುವ ಚತುರ್ಭುಜ ಮಹಾವಿಷ್ಣುಮೂರ್ತಿ ಇತ್ಯಾದಿ. ಮೊದಲೆರಡು ಮೂರ್ತಿಗಳು ಸು. 1–2ನೆಯ ಶತಮಾನದ್ದಾದರೆ, ಉಳಿದ ಮೂರ್ತಿಗಳು ಸು.5ನೆಯ ಶತಮಾನದವು. ಎಲ್ಲವೂ ದುಂಡು ಶಿಲ್ಪಗಳು. ದ್ವಿಭುಜ ಬೃಹತ್ ಯಕ್ಷ ಮೂರ್ತಿಯ ಬಲಗೈ ಸೊಂಟದ ಮೇಲಿದ್ದು ಎಡಗೈ ಮುರಿದಿದೆ. ಅಂಚಿನಲ್ಲಿ ಪಟ್ಟಿಯುಳ್ಳ ಶಿರಸ್ತ್ರಾಣವಿದೆ. ಇದು ನೆತ್ತಿಯ ಮೇಲೆ ಉಷ್ಣೀಷದಂತೆ ಉಬ್ಬಿದೆ. ಎಡುಬದಿಯಲ್ಲಿ ನವಿಲು ಗರಿಯೋಪಾದಿಯ ಅಲಂಕರಣ ಪಟ್ಟಿಯಿದೆ; ಮುತ್ತಿನ ಕಂಠಾಭರಣ, ತೋಳಬಂದಿಗಳಿಂದ ಅಲಂಕೃತವಾಗಿದೆ. ನಡುಪಟ್ಟಿಯಿಂದ ಬಿಗಿದ ಧೋತ್ರವನ್ನು ಉಡಿಸಲಾಗಿದೆ. ಆಯತಾಕಾರದ ಸರಳ ಪೀಠದ ಮೇಲೆ ಈ ಮೂರ್ತಿಯಿದೆ. ಬೌದ್ಧ ಗ್ರಂಥವನ್ನು ಆಧರಿಸಿ ಇದನ್ನು ಯಕ್ಷನೆಂದು ಗುರುತಿಸಲಾಗಿದೆ. ಕುಬ್ಜ ಯಕ್ಷಮೂರ್ತಿಯ ಹಿಂಭಾಗ ಒಡೆದುಹೋಗಿದೆ. ಗಿಡ್ಡ ಹಾಗೂ ಸ್ಥೂಲವಾಗಿರುವ ಈ ಮೂರ್ತಿ ತಲೆಯ ಮೇಲೆ ಪ್ರಾಯಶಃ ದೀಪವನ್ನು ಹೊತ್ತಿದೆ. ಆದ್ದರಿಂದ ಇದು ದೀಪಧಾರಿ ಯಕ್ಷಮೂರ್ತಿ ಇರಬಹುದು. ಸಮಭಂಗದಲ್ಲಿಯ ಬುದ್ಧಮೂರ್ತಿಗಳಲ್ಲಿ ಬಲಗೈ ಅಭಯ ಮುದ್ರೆಯಲ್ಲಿದ್ದಿರಬಹುದು; ಈಗ ಒಡೆದು ಹೋಗಿದೆ. ಎಡಗೈ ಇಳಿಬಿಟ್ಟಿದೆ. ನೆತ್ತಿಯ ಮೇಲೆ ಉಷ್ಣೀಷವಿದೆ. ಧೋತ್ರ ಮತ್ತು ಬ್ರಹ್ಮವಸ್ತ್ರವನ್ನು ಧರಿಸಿದಂತೆ ಬಿಂಬಿಸಲಾಗಿದೆ. ಗಂಭೀರ ವದನ, ಉದ್ದನೆ ಕಿವಿಗಳು, ವಿಶಾಲವಾದ ಎದೆ ಎದ್ದು ಕಾಣುತ್ತವೆ. ಮಹಾವಿಷ್ಣುಮೂರ್ತಿ ಮಿತವಾಗಿ ಸಾಲಂಕೃತವಾಗಿದೆ. ಹಿಂದಿನ ಬಲಗೈಯಲ್ಲಿ ಪ್ರಯೋಗ ಚಕ್ರ, ಎಡಗೈಯಲ್ಲಿ ಶಂಖವಿದ್ದು ಮುಂದಿನ ಎಡಗೈ ಗದೆಯ ಮೇಲೆಯೂ ಬಲಗೈ ಕಟಿಯ ಮೇಲೆಯೂ ಇವೆ. ಬುದ್ಧ, ವಿಷ್ಣು ಮತ್ತು ಯಕ್ಷ ಮೂರ್ತಿಗಳು ಕ್ರಮವಾಗಿ 5 ಮತ್ತು 1–2 ಶತಮಾನದ ಶಿಲ್ಪವೆಂದು ಹೇಳಬಹುದು. ನಿಂತ ಭಂಗಿಯಲ್ಲಿರುವ ಬುದ್ಧನ ದುಂಡು ಶಿಲ್ಪ ದೊರೆತಿರುವುದು ಇಲ್ಲಿಯೆ ಮೊದಲು.

ಈ ಹಿಂದೆ ಹೊನ್ನಾವರದ ಕೇಕೆಯ ಅಶಂಕಿತನವರ್ಮ ಅರಸನ ತಾಮ್ರಪಟಗಳು ಅರಸನು ಪೈಯ್ವುಗುಂದದಲ್ಲಿ (ಹೈಗುಂದ) ಒಂದು ಬೌದ್ಧ ವಿಹಾರ ನಿರ್ಮಿಸಿ ತನ್ನ ರಾಜ (ಬನವಾಸಿ) ಕದಂಬ ಮೃಗೇಶವರ್ಮನಿಂದ ಭೂಮಿ ದಾನ ಪಡೆದನೆಂದು ತಿಳಿಸುತ್ತವೆ. ಈಗ ಈ ನೆಲೆಯಲ್ಲಿ ಬುದ್ಧನಮೂರ್ತಿಗಳು ದೊರೆತಿರುವುದು ಶಾಸನ ಉಲ್ಲೇಖಕ್ಕೆ ಪೂರಕವಾಗಿದೆ. (ಎ.ಎಸ್.;ಎನ್.ಎಲ್.)

**ಹೈದರ್ ಅಲಿ:** 1721–82. ಮೈಸೂರು ಸಂಸ್ಥಾನದ ಸುಲ್ತಾನ. 1721ರಲ್ಲಿ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಜನಿಸಿದ. ಇವನ ತಂದೆ ಫತೆ ಮಹಮ್ಮದ್ ಶಿರಾದ ನವಾಬನ ಸೇವೆಯಲ್ಲಿದ್ದ. ಹೈದರ್ ಬಾಲ್ಯದಲ್ಲಿ ಶಾಲೆಗೆ ಹೋಗದೆ ಜೀವನವಿಡೀ ನಿರಕ್ಷರಕುಕ್ಷಿಯಾಗುಳಿದ.

ಮುಂದೆ ಇವನು ಮೈಸೂರು ದಳವಾಯಿ ನಂಜರಾಜನ ಸೈನ್ಯದಲ್ಲಿ ಸೇರಿದ. 1749ರಲ್ಲಿ ದೇವನಹಳ್ಳಿ ಮುತ್ತಿಗೆಯ ಸಂದರ್ಭದಲ್ಲಿ ಈತ ತೋರಿಸಿದ ಶೌರ್ಯವನ್ನು ಕಂಡು ಸುಪ್ರೀತನಾದ ದಳವಾಯಿಯ ಪ್ರೋತ್ಸಾಹದಿಂದ ಬಹುಬೇಗ ಉನ್ನತ ಹುದ್ದೆಗೇರಿದ. ಇಂಗ್ಲಿಷರು ಮತ್ತು ಫ್ರೆಂಚರ ನಡುವೆ ನಡೆದ ಕರ್ನಾಟಿಕ್(ಈಗಿನ ತಮಿಳುನಾಡು ಭಾಗ) ಯುದ್ಧಗಳಲ್ಲಿ ತಿರುಚಿರಾಪಳ್ಳಿಯನ್ನು ಪಡೆಯುವ ಆಸೆಯಿಂದ ನಂಜರಾಜ ಕರ್ನಾಟಕದ ನವಾಬ ಮಹಮ್ಮದ್ ಅಲಿಯನ್ನು ಬೆಂಬಲಿಸಿದ. ಈ ಯುದ್ಧದಲ್ಲಿ ಭಾಗವಹಿಸಲು ಹೈದರ್ ಅಲಿಯ ನೇತೃತ್ವದಲ್ಲಿ ಮೈಸೂರು ಸೈನ್ಯದ ತುಕಡಿಯೊಂದನ್ನು ಕಳುಹಿಸಿದ. ಮಹಮ್ಮದ್ ಅಲಿ ತನ್ನ ಶತ್ರುಗಳನ್ನು ಸೋಲಿಸಲು ಹೈದರ್ ಅವನಿಗೆ ನೆರವಾದ. ಮೈಸೂರಿನವರು ಫ್ರೆಂಚರ ಕಡೆ ಸೇರಿಕೊಂಡು ಇಂಗ್ಲಿಷರ ವಿರುದ್ಧ ಹೋರಾಡುತ್ತಾ ಹೈದರ್ ಈ ಕಾರ್ಯಾಚರಣೆಗಳಲ್ಲಿ ನಾಲ್ಕು ವರ್ಷಗಳಿಗೂ ಹೆಚ್ಚುಕಾಲ ಪಾಲ್ಗೊಂಡು ಸೈನಿಕ ವಿಷಯಗಳಲ್ಲಿ ಅಪಾರ ಅನುಭವಗಳಿಸಿದ. ಅಲ್ಲದೆ ಗಾಡಿಗಟ್ಟಲೆ ಚಿನ್ನ, ತುಪಾಕಿಗಳು, ಮತ್ತಿತರ ಯುದ್ಧ ಸಾಮಗ್ರಿಗಳನ್ನು ಸಾಗಿಸಿಕೊಂಡು ಬಂದ. ಈ ಸಂಪನ್ಮೂಲಗಳನ್ನು ಬಳಸಿಕೊಂಡು ಇವನು 500 ಜನ ಸಿಪಾಯಿಗಳುಳ್ಳ 200 ಅಶ್ವಗಳ ಸಣ್ಣ ಸೈನ್ಯವೊಂದನ್ನು ಕಟ್ಟಿ, ಅದಕ್ಕೆ ಫ್ರೆಂಚ್ ಮಾದರಿಯಲ್ಲಿ ತರಬೇತುಕೊಟ್ಟ. ಮೈಸೂರು ಸೈನ್ಯದ ಸರ್ವಾಧಿಕಾರಿ ನಂಜರಾಜ ದಿವಾಳಿ ಅಂಚಿನಲ್ಲಿದ್ದ ಸಂದರ್ಭವನ್ನು ಬಳಸಿಕೊಂಡು ಮೈಸೂರು ರಾಜ್ಯದ ಬಹುತೇಕ ಭಾಗಕ್ಕೆ ಆಡಳಿತಗಾರನಾದ. ನಂಜರಾಜ ಹಾಗೂ ಅವನ ಸೋದರ ದಳವಾಯಿ ದೇವರಾಜರನ್ನು ಅಧಿಕಾರದಿಂದ ಕೆಳಗಿಳಿಸಿ ಹೈದರ್ ಮೈಸೂರಿನ ದಳವಾಯಿಯಾದ.

ವರ್ಣಚಿತ್ರ

ಹೈದರ್ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ಮೇಲೆ ರಾಜ್ಯದ ಸರಹದ್ದುಗಳನ್ನು ವಿಸ್ತರಿಸುವತ್ತ ಗಮನ ಹರಿಸಿದ. 1761ರಲ್ಲಿ ಇವನು ಆದೋನಿಯ ಬಸಾಲತ್ ಜಂಗ್‌ನೊಡನೆ ಕೂಡಿಕೊಂಡು ಶಿರಾವನ್ನು ವಶಪಡಿಸಿಕೊಂಡ. ತರುವಾಯ ಬಸಾಲತ್ ಜಂಗನಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಶಿರಾವನ್ನು ಪಡೆದ. ದಕ್ಷಿಣದಲ್ಲಿ ಸಮಗ್ರ ಮೊಗಲ್ ಪ್ರಾಂತದ ರಾಜಧಾನಿಯಾದ ಶಿರಾ ವಶವಾದ ಕೂಡಲೆ ಅದರ ಸುತ್ತುಮುತ್ತಲ ವಿಸ್ತಾರ ಪ್ರದೇಶವನ್ನು ಹೈದರ್ ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಬಹುಬೇಗ ಹೊಸಕೋಟೆ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಪೆನುಗೊಂಡ, ಮಡಕಶಿರಾ, ನಂದಿದುರ್ಗ, ಹರಪನಹಳ್ಳಿ ಮತ್ತು ಚಿತ್ರದುರ್ಗವನ್ನು ಜಯಿಸಿದ. ಪ್ರಾಕೃತಿಕ ಸಂಪನ್ಮೂಲ ಹೊಂದಿದ್ದ ಬಿದನೂರನ್ನು ಗೆದ್ದಿದ್ದು ಈ ಕಾಲದಲ್ಲಿ ಇವನು ಗಳಿಸಿದ ವಿಜಯಗಳಲ್ಲೆಲ್ಲ ಅತಿಮುಖ್ಯವಾದುದು. ಹೊನ್ನಾವರದಿಂದ ಮಂಗಳೂರಿನವರೆಗಿನ ಪಶ್ಚಿಮ ತೀರಪ್ರದೇಶ ಇವನ ಸ್ವಾಧೀನವಾಯಿತು. ಇವನು ಸೋಂದವನ್ನು ಸಹ ವಶಪಡಿಸಿಕೊಂಡು ತಾನು ಅಧಿಕಾರಕ್ಕೆ ಬಂದ ಮೂರು ವರ್ಷಗಳೊಳಗೆ ರಾಜ್ಯವನ್ನು ಗೋವದವರೆಗೆ ವಿಸ್ತರಿಸಿದ.

1765ರಲ್ಲಿ ಮರಾಠರೊಡನೆ ಶಾಂತಿ ಒಪ್ಪಂದ ಮಾಡಿಕೊಂಡು ಹೈದರ್ ಮಲಬಾರಿನ ದಿಗ್ವಿಜಯ ಕೈಗೊಂಡ. ಇವನು ಬಿದನೂರು ರಾಜ್ಯವನ್ನು ಗೆದ್ದದ್ದು ಮಲಬಾರನ್ನು ಸ್ವಾಧೀನಪಡಿಸಿಕೊಳ್ಳಲು ಅನುಕೂಲವಾಯಿತು. ಡಚ್ಚರ ನೆರವಿನಿಂದ ಹೈದರ್ ತನ್ನ ನೌಕಾಪಡೆಯನ್ನು ಬಲಗೊಳಿಸಿ ಯುದ್ಧಾಕಾಂಕ್ಷಿ ನಾಯರ್ ಅಧಿಪತಿಗಳನ್ನು ಸದೆಬಡಿದು ಮಲಬಾರನ್ನು ವಶಪಡಿಸಿಕೊಂಡ.

ಹೈದರ್ ಅಲಿಯ ರಾಜಕೀಯ ಬೆಳವಣಿಗೆ ಬ್ರಿಟಿಷರಿಗೆ ನುಂಗಲಾರದ ತುತ್ತಾಯಿತು. ಮೈಸೂರಿನ ಸಾಂಪ್ರದಾಯಿಕ ವಿರೋಧಿಗಳಾದ ಮರಾಠರ ಜೊತೆಗೂಡಿ ಬ್ರಿಟಿಷರು ಹೈದರಾಬಾದ್ ನಿಜಾಮನೊಂದಿಗೆ ಪ್ರಬಲ ಒಕ್ಕೂಟ ರಚಿಸಿ ಹೈದರನ ಮೇಲೆ ಧಾಳಿ ನಡೆಸಿದರು. ಆದರೆ ತನ್ನ ಚಾಣಾಕ್ಷತನದಿಂದ ಹೈದರ್ ಈ ಒಕ್ಕೂಟವನ್ನು ಒಡೆದು ಇಂಗ್ಲಿಷರನ್ನು ಸೋಲಿಸಿ ಅವರನ್ನು ಶಾಂತಿ ಒಪ್ಪಂದಕ್ಕೆ ಬರುವಂತೆ ಮಾಡಿ 1770ರಲ್ಲಿ ಮದರಾಸು ಒಪ್ಪಂದಕ್ಕೆ ಸಹಿಹಾಕಿಸಿದ. ಇದು ಬ್ರಿಟಿಷರಿಗೆ ಅತ್ಯಂತ ಅಪಮಾನದ ಒಪ್ಪಂದವಾಗಿತ್ತು. ಹೈದರ್ ಅಲಿ ಇಂಗ್ಲಿಷರನ್ನು ಸೋಲಿಸಿದ್ದರಿಂದ ಇವನ ಘನತೆ ಬಹುವಾಗಿ ಹೆಚ್ಚಿತು. 1770 ಜನವರಿಯಲ್ಲಿ ಮರಾಠರು ಇವನ ರಾಜ್ಯದ ಮೇಲೆ ಧಾಳಿ ಮಾಡಿದಾಗ ಇವನು ಇಂಗ್ಲಿಷ್ ಪಡೆಗಳನ್ನು ಕಳುಹಿಸುವಂತೆ ಇಂಗ್ಲಿಷರನ್ನು ಕೇಳಿದ. ಇಂಗ್ಲಿಷರು ಇದನ್ನು ನಿರಾಕರಿಸಿ ತಮ್ಮ ಷರತ್ತನ್ನು ಉಲ್ಲಂಘಿಸಿದಾಗ ಅವರು ಭಾರಿ ಬೆಲೆ ತೆರಬೇಕಾಯಿತು.

ಮರಾಠರು 1770ರಲ್ಲಿ ಹೈದರ್‌ನ ಮೇಲೆ ದಂಡೆತ್ತಿ ಬಂದಾಗ ಅವರನ್ನು ಸೋಲಿಸಿ ಕೃಷ್ಣನದಿಯ ತನಕ ತನ್ನ ಎಲ್ಲೆಯನ್ನು ವಿಸ್ತರಿಸಿದನಲ್ಲದೆ ಕೊಡಗನ್ನು ತನ್ನ ವಶಕ್ಕೆ ತೆಗೆದುಕೊಂಡ. 1780ರಲ್ಲಿ ಹೈದರ್ ಅಲಿ ಇಂಗ್ಲಿಷರ ವಿರುದ್ಧ ದೇಶಿಯ ಮೈತ್ರಿಕೂಟವನ್ನು ರಚಿಸಿ ಯುದ್ಧಕ್ಕೆ ದುಮುಕಿದ. ಈ ಯುದ್ಧದಲ್ಲಿ ಬ್ರಿಟಿಷರನ್ನು ಸೋಲಿಸಿ ವಿಜಯಶಾಲಿಯಾದ. ಆದರೆ ಈತ ಹೆಚ್ಚು ಕಾಲ ಬಾಳಲಿಲ್ಲ. 1782 ಡಿಸೆಂಬರ್ 16ರಂದು ಬೆನ್ನುಫಣಿ ರೋಗದಿಂದ ಮರಣ ಹೊಂದಿದ. ಇವನ ಪಾರ್ಥಿವ ಶರೀರವನ್ನು ಶ್ರೀರಂಗಪಟ್ಟಣದ ಗುಂಬಜ್ ಎಂಬಲ್ಲಿ ಸಮಾಧಿ ಮಾಡಲಾಯಿತು. (ಎ.ವಿ.ಎನ್.;ಬಿ.ಎಸ್.ಎ.)

**ಹೈಹಯರು:** ಕರ್ನಾಟಕದಲ್ಲಿ 1085 ರಿಂದ ಸು.150ವರ್ಷ ರಾಜ್ಯವಾಳಿದ ಕಲ್ಯಾಣ ಚಾಳುಕ್ಯರ ಮಹಾಮಂಡಲೇಶ್ವರರು. ಮಾಹಿಷ್ಮತಿ ಪಟ್ಟಣಾಧಿಪತಿಗಳೆಂದು ಹೆಸರಾದ ಇವರ ಸ್ಪಷ್ಟವಾದ ಉಲ್ಲೇಖ ನಾಗಾಯಿ ಮತ್ತು ಹಂದರ್ಶಿ ಶಾಸನಗಳಲ್ಲಿದೆ (1122). ಹೈಹಯವಂಶದ ದೊರೆಗಳೆಂದರೆ ಐಚ I, ಲೋಕರಸ IV, ಐಚ II, ಆನೆಗ II, ಲೋಕರಸ V, ಅಲ್ಲಪುಲಿಯರಸ, ಅಯ್ಯಣದೇವ ಮೊದಲಾದವರು.

ಈ ಮನೆತನದ ಮೂಲಪುರುಷ Iನೆಯ ಐಚ ಮಿರಿಂತೆನಾಡಿಗೆ ಅಧಿಪತಿಯಾಗಿದ್ದ. ಮಿರಿಂತೆ ಇಂದಿನ ವರ್ತೂರು ಎಂಬ ಊಹೆ ಸಂಪೂರ್ಣ ನಿರಾಧಾರವಾದುದಲ್ಲ. 1085ರ ಪೂರ್ವದಲ್ಲಿಯೆ ಎರಗ I ಎಂಬಾತ ಆಳುತ್ತಿದ್ದ. ಈತನ ಮಗ ಚೌಟ್ಟಿನಾಯ್ಕರಸ ಆಗಿರಬೇಕು. ಈ ನಾಯ್ಕರಸನ ಮಗನೆ ಐಚ I. 1096ರ ವರೆಗೆ ಈತ ಆಳಿದ. ಇವನು ಕಲ್ಯಾಣ ಚಾಳುಕ್ಯ 6ನೆಯ ವಿಕ್ರಮಾದಿತ್ಯ ಚಕ್ರವರ್ತಿಯ ಮಹಾಮಂಡಲೇಶ್ವರನಾಗಿ ಅರಲು 300, ಮಿರಿಂತೆ 300 ಅನ್ನು ಬೀಳಾನುವೃತ್ತಿಯಿಂದ ಆಳಿರುವನು. ಐಚಭೂಪನ ಮಗ ಲೋಕರಸ. ಈತನ ಆಳಿಕೆಯ ಬಗ್ಗೆ ಸ್ಪಷ್ಟವಾದ ದಾಖಲೆಗಳಿಲ್ಲ. ಲೋಕರಸನ ಸೋದರನಾದ ಬಾಚನ ಮಗ ಆನೆಗ. ಈತ 1094ರಲ್ಲಿ ಅರಲು 300, ಮಿರಿಂತೆ 300 ಪ್ರದೇಶವನ್ನು ಆಳಿದನೆಂದು ಹಂದರ್ಶಿ (1122) ಶಾಸನ ತಿಳಿಸುತ್ತದೆ. ಬಾಚನ ಮಗ ಆನೆಗಮರಸ ಎಂದು ಹಂದರ್ಶಿ ಶಾಸನ ಗುರುತಿಸಿದರೆ ನಾಗಾಯಿಯ ಶಾಸನದಲ್ಲಿ ಈತನನ್ನು ಬಾಚಿಗನಂಕಕಾರ ಎಂದಿದೆ. ಒಬ್ಬ ಆನೆಗಮರಸನ ಆಳಿಕೆ ಸಾಕಷ್ಟು ಹಿಂದೆಯೆ ಆಗಿಹೋಗಿರುವುದರಿಂದ, ಇಲ್ಲಿಯ ಆನೆಗಮರಸ ಎರಡನೆಯ ವ್ಯಕ್ತಿಯಾಗಿರುವ ಸಾಧ್ಯತೆ ಇದೆ. ಆನೆಗಮರಸನ ಹೆಂಡತಿ ಮಹಾದೇವಿ. ಇವರ ಪುತ್ರನೇ Vನೆಯ ಲೋಕರಸ. ಕಲ್ಯಾಣ ಚಾಳುಕ್ಯ ಚಕ್ರವರ್ತಿ 6ನೆಯ ವಿಕ್ರಮಾದಿತ್ಯ ಇವರ ಬಗ್ಗೆ ಹೆಚ್ಚು ಆಸ್ಥೆ ವಹಿಸಿದ್ದರಿಂದ ಅರಲು 300 ಮತ್ತು ಮಿರಿಂತೆ 300 ಪ್ರದೇಶವನ್ನು ಎಡಬಿಡದೆ ಇದೇ ಮನೆತನದವರು ಆಳಿದ್ದು ವಿದಿತವಾಗುತ್ತದೆ.

Vನೆಯ ಲೋಕರಸನ ಪ್ರಥಮ ಉಲ್ಲೇಖ 1107ರ ದಿಗ್ಗಾವಿ ಶಾಸನದಲ್ಲಿದೆ. ಈತ ತನ್ನ ಹಿರಿಯರು ಆಳಿದ ಅರಲು ಮತ್ತು ಮಿರಿಂತೆಯ ರಾಜ್ಯಭಾರ ಕೈಗೊಂಡಿದ್ದ. ಈತನ ಆಳಿಕೆಯಲ್ಲಿ ಚಕ್ರವರ್ತಿ 6ನೆಯ ವಿಕ್ರಮಾದಿತ್ಯನ ಪಟ್ಟಮಹಾದೇವಿ ಮಲಯಮತಿ ಮಹದೇವಿಯ ಆಜ್ಞೆಯ ಮೇರೆಗೆ ದಿಗ್ಗದಿಗೆಯಲ್ಲಿ ದಾವಣಭಟ್ಟರು ಮಾಡಿಸಿದ ಶ್ರೀ ಸ್ವಯಂಭೂದೇವರಿಗೆ ಇದೆಮ್ಮ ಮನೆಯರ ಧರ್ಮವೆಂದು ಅನುರಾಗದಿಂದ ದಾನ ಬಿಟ್ಟಿರುವರು.

1077ರ ಗುಲ್ಬರ್ಗ ಜಿಲ್ಲೆಯ ವಡಗೇರಿ ಶಾಸನ ಅಲ್ಲಪುಲಿಯರಸನನ್ನು ಉಲ್ಲೇಖಿಸಿದೆ. ಚಕ್ರವರ್ತಿ ವಿಕ್ರಮಾದಿತ್ಯ ತನ್ನ ಪಟ್ಟಬಂಧೋತ್ಸವದ ನಿಮಿತ್ತ ಹಲವಾರು ದಾನಗಳನ್ನು ಕೊಡುವಾಗ ಮಂಡಳಿಕ ದಾಯಿಮಯ್ಯನ ಬಿನ್ನಪದ ಮೇರೆಗೆ ಸಾಸವಿ ಒಡಂಗೆರೆಯಲ್ಲಿ ಮಂಡಳಿಕ ಕಟ್ಟಿಸಿದ ದಾಯಿಮೇಶ್ವರದೇವರಿಗೆ ಭೂದಾನ ಬಿಟ್ಟಿದ್ದಾನೆ. ಈತನ ಆಳಿಕೆಯ ಪ್ರದೇಶ ಹಾಗೂ ಇನ್ನಿತರ ಯಾವುದೇ ವಿಷಯದ ಬಗ್ಗೆ ಉಲ್ಲೇಖಗಳಿಲ್ಲ.

ಈ ವಂಶದ ಇನ್ನೊಬ್ಬ ದೊರೆ ಅಯ್ಯಣದೇವ. ಆದರೆ ಹೈಹಯ ವಂಶಾವಳಿಯಲ್ಲಿ ಇವನ ಉಲ್ಲೇಖವಿಲ್ಲ. ಇವನು ಹೈಹಯವಂಶದ ಬೇರೊಂದು ಶಾಖೆಗೆ ಸಂಬಂಧಪಟ್ಟಿರಬೇಕು. ಇವನು ತನ್ನನ್ನು ಮಹಾರಾಣಿ ಮಲಯಮತಿಯ ಸೇವಕನೆಂದು ಕರೆದುಕೊಂಡು ಆಕೆಗೆ ತನ್ನ ಗೌರವವನ್ನು ಸೂಚಿಸಿರುವನು. (ಸಿ.ಪಿ.)

**ಹೊದಿಗೆರೆ:** ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಪೂರ್ವಕ್ಕೆ 9 ಕಿಮೀ ದೂರದಲ್ಲಿರುವ ಗ್ರಾಮ. ಇಲ್ಲಿ ಸು. 17ನೆಯ ಶತಮಾನಕ್ಕೆ ಸೇರಿದ ಭವಾನಿ ದೇವಾಲಯ, ಬಸವೇಶ್ವರ ದೇವಾಲಯ, ಕಲ್ಲೇಶ್ವರ ದೇವಾಲಯ, ಹಾಳಾದ ಕೋಟೆ ಹಾಗೂ ರಾಚಿರಾಂ ಬಾವಿ ಇವೆ. ಮರಾಠಿ ಇತಿಹಾಸದ ಪ್ರಕಾರ 1664 ಜನವರಿ 23ರಂದು ಶಿವಾಜಿಯ ತಂದೆ ಶಹಾಜಿ ಇಲ್ಲಿ ಮರಣ ಹೊಂದಿದ. ಶಹಾಜಿಯ ಗೋರಿಯ ಮೇಲೆ ಒಂದು ಶಾಸನವಿದ್ದು ಶ್ರೀ ಶಹಾಜಿ ರಾಜನ ಸಮಾಧಿ ಎಂದು ಕನ್ನಡದಲ್ಲಿ ಬರೆಯಲಾಗಿದೆ. ಹೊದಿಗೆರೆ ಗ್ರಾಮಕ್ಕೆ ಹಿಂದೆ ಕೇದಿಗೆರೆ ಎಂಬ ಹೆಸರಿತ್ತೆಂಬುದಾಗಿ ಮೆಕೆಂಜಿಯವರ ಕೈಫಿಯತ್‌ನಿಂದ ತಿಳಿದು ಬರುತ್ತದೆ. ಇಲ್ಲಿ ಸಂತೆಬೆನ್ನೂರಿನ ಇಮ್ಮಡಿ ಕೆಂಗಾ ಹನುಮಪ್ಪ ನಾಯಕ 1492 ರಲ್ಲಿ ಕೆರೆಯೊಂದನ್ನು ಕಟ್ಟಿಸಿದ್ದ. ಮುಂದೆ ಇದು ಕೆಳದಿ, ಚಿತ್ರದುರ್ಗ, ಮೈಸೂರು ಮುಂತಾದ ರಾಜರ ಆಳಿಕೆಗೊಳಪಟ್ಟಿತ್ತು. (ಎಸ್.ಎನ್.ವಿ.)

**ಹೊನ್ನಾಳಿ ನವಾಬರು:** ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು

**ಹೊಯ್ಸಳ ವಂಶ:** 10ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಮಧ್ಯಭಾಗದವರೆಗೆ, ವಿಶೇಷವಾಗಿ ದಕ್ಷಿಣ ಕರ್ನಾಟಕ ಮತ್ತು ಸುತ್ತಲಿನ ಭಾಗಗಳನ್ನು ಆಳಿದ ರಾಜಮನೆತನ. ಈ ವಂಶದ ಅರಸರ ರಾಜಧಾನಿ ಮೊದಲು ಶಶಕಪುರ ಅಥವಾ

ಸೊಸೆವೂರು (ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ಅಂಗಡಿ). ಅನಂತರ ಬೇಲೂರು ಮತ್ತು ದೋರಸಮುದ್ರ (ಹಾಸನ ಜಿಲ್ಲೆ). ಮಲೆನಾಡಿನ ಒಂದು ಚಿಕ್ಕ ಪಾಳೆಯಪಟ್ಟಾಗಿ ಆರಂಭವಾಗಿ, ತತ್ಕಾಲೀನ ಅಸ್ತವ್ಯಸ್ತ ರಾಜಕೀಯ ಪರಿಸ್ಥಿತಿಯ ಲಾಭಪಡೆದು, ಮೊದಲು ಕಲ್ಯಾಣ ಚಾಳುಕ್ಯರ ಸಾಮಂತರಾಗಿ ನೆಲೆಗೊಂಡು, ಮುಂದೆ ಶೌರ್ಯ ಹಾಗೂ ಸ್ವಸಾಮರ್ಥ್ಯದಿಂದ ರಾಜ್ಯ ವಿಸ್ತಾರ ಮಾಡಿ, ಸ್ವತಂತ್ರರಾಗಿ, ಸುಸಂದರ್ಭದಲ್ಲಿ ತಮ್ಮ ಪ್ರಭಾವವನ್ನು ತಮಿಳುನಾಡಿಗೂ ವಿಸ್ತರಿಸಿ, ನಾಡಿನ ಆರ್ಥಿಕ ಸಾಂಸ್ಕೃತಿಕ ರಂಗಗಳಲ್ಲಿ ಉನ್ನತ ಸಾಧನೆಗಳಿಗೆ ಪ್ರೋತ್ಸಾಹ ನೀಡಿ, ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ವೈಭವೋಪೇತವಾಗಿ ಮೆರೆದ ಈ ರಾಜವಂಶದ ಇತಿಹಾಸ ಕರ್ನಾಟಕ ಇತಿಹಾಸದ ಒಂದು ಮುಖ್ಯ ಅಧ್ಯಾಯ.

**ರಾಜಕೀಯ ಇತಿಹಾಸ:** ಹೊಯ್ಸಳರು ಯಾದವವಂಶದವರೆಂದೂ ಇವರ ಆದ್ಯನಾದ ಸಳ ಎಂಬುವನು ತನ್ನ ಗುರುವಾದ ಜೈನಯತಿ ಸುದತ್ತಾಚಾರ್ಯನೊಡನೆ ಶಶಕಪುರದ ಬಳಿಯ ವಾಸಂತಿಕಾ ದೇವಾಲಯದಲ್ಲಿ ದೇವತೆಯ ಅರ್ಚನೆಯಲ್ಲಿ ತೊಡಗಿದ್ದಾಗ ಒಂದು ದಿನ ಹುಲಿಯೊಂದು ಅವರತ್ತ ಜಿಗಿದು ಬಂದಿತೆಂದೂ ಜೈನ ಮುನಿಗಳು ತನ್ನ ಕೈಯಲ್ಲಿದ್ದ ಕೋಲನ್ನು ಸಳನ ಕೈಗಿತ್ತು ಪೊಯ್ ಸಳ ಎಂದು ಅಪ್ಪಣೆ ಮಾಡಿದನೆಂದೂ ಸಳನು ಧೈರ್ಯದಿಂದ ಹುಲಿಯನ್ನು ಕೊಂದನೆಂದೂ ಇದರಿಂದ ಸುಪ್ರೀತನಾದ ಮುನಿ ತನ್ನ ಶಿಷ್ಯನು ರಾಜನಾಗುವಂತೆ ದೇವತೆಯಿಂದ ವರ ಪಡೆದು ಸಳನನ್ನು ಹರಸಿದನೆಂದೂ ಆದ್ದರಿಂದಲೇ ಅವನ ವಂಶಕ್ಕೆ ಪೊಯ್ಸಳ ಎಂದು ಹೆಸರಾಯಿತೆಂದೂ ಹೊಯ್ಸಳರ ಶಾಸನಗಳು ತಿಳಿಸುತ್ತವೆ. ಆದರೆ ಈ ಕಥೆಗಳೆಲ್ಲ ಅನೇಕ ಮೂಲ ವ್ಯತ್ಯಾಸಗಳೊಡನೆ ಕೇವಲ 12 ಮತ್ತು ಅನಂತರದ ಶತಮಾನಗಳಲ್ಲಷ್ಟೇ ಕಂಡುಬರುವುದರಿಂದ ಇವೆಲ್ಲ ಹೊಯ್ಸಳರು ರಾಜ್ಯ ಸಾಧಿಸಿದ ಮೇಲೆ ಆ ವಂಶದ ಹೆಸರನ್ನು ವಿವರಿಸಲು ಹುಟ್ಟಿಕೊಂಡ ಕಟ್ಟುಕಥೆಗಳೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದ್ಯನೆಂದು ಹೇಳುವ ಸಳ ಐತಿಹಾಸಿಕ ವ್ಯಕ್ತಿ ಎಂಬುದು ಸಹ ಅನುಮಾನಾಸ್ಪದ. ಆದರೆ ಹೊಯ್ಸಳರು ಮೊದಲಿಗೆ ರಾಜ್ಯ ಸ್ಥಾಪನೆ ಮಾಡಿದ ಈಗಿನ ಅಂಗಡಿ ಗ್ರಾಮ ದಟ್ಟಡವಿಯಿಂದ ಕೂಡಿದ್ದು ಒಬ್ಬ ಯುವಕ ಹುಲಿಯನ್ನು ಎದುರಿಸಿ ಕೊಂದಿರುವುದು ಅಸಂಭವವಲ್ಲ. ಇಂತಹ ಪ್ರಕರಣ ಬೇಲೂರುನಾಯಕರ ಕಾಲದಲ್ಲೂ ಈ ಮಲೆನಾಡಿನಲ್ಲಿ ನಡೆದಿದ್ದು ಹುಲಿ ಕೊಂದವನು ರಾಜನ ಪ್ರಶಂಸೆಗೆ ಪಾತ್ರನಾದುದು ಆ ಕಾಲದ ಶಾಸನವೊಂದರಿಂದ ತಿಳಿದುಬರುತ್ತದೆ.

ಹೊಯ್ಸಳರ ಶಾಸನಗಳಲ್ಲಿ ಆದ್ಯ ಸಳನಿಗೂ ಅಂಗಡಿಯ ವಾಸಂತಿಕಾದೇವಿಗೂ ಸಂಬಂಧವನ್ನು ಹೇಳಿರುವುದರಿಂದ ಮತ್ತು ಅತಿ ಪ್ರಾಚೀನ ಶಾಸನಗಳೆಲ್ಲ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲೇ ದೊರೆಯುವುದರಿಂದ ಇವರು ಮೂಲತಃ ಮಲೆನಾಡಿನವರು ಎಂದು ಸುಲಭವಾಗಿ ಊಹಿಸಬಹುದು. ಮೊದಮೊದಲು ಅಲ್ಲಿದ್ದ ಇತರ ತುಂಡು ರಾಜರ ಮೇಲೆ ವಿಜಯಗಳಿಸಿ ಇವರು ಪ್ರಸಿದ್ಧಿಗೆ ಬಂದಿರಬೇಕೆಂದು ಮಲೆವರ ಮಾರಿ, ಮಲೆಪರೊಳ್ ಗಂಡ ಮುಂತಾದ ಇವರ ಬಿರುದುಗಳು ತೋರಿಸುತ್ತವೆ. ಇತ್ತೀಚಿನ ಚಿಕ್ಕಮಗಳೂರು ಪಟ್ಟಣದ ಸಮೀಪದ ಉಪ್ಪವಳ್ಳಿ ಅಥವಾ ಉಪ್ಪಳ್ಳಿಯಲ್ಲಿ ದೊರೆತ ಶಾಸನವನ್ನು ಶಾಸನತಜ್ಞ ಎಚ್.ಎಂ.ನಾಗರಾಜರಾವ್‌ರವರು ಪ್ರಚುರಪಡಿಸಿದ್ದಾರೆ. ಈ ಶಾಸನವನ್ನು 1136ರಲ್ಲಿ ವಿಷ್ಣುವರ್ಧನನ ಕಾಲದಲ್ಲಿ ಹಾಕಿಸಿದ್ದರೂ ಅದರಲ್ಲಿ 1083ರಲ್ಲಿ ಎರಡನೆಯ ವಿನಯಾದಿತ್ಯನ ಕಾಲದಲ್ಲಿ ಹಾಕಿಸಿದ್ದ ಶಾಸನದ ಮೂಲ ಪಾಠದ ಭಾಗವೂ ಇದೆ. ಇದು ಇದುವರೆಗೆ ತಿಳಿಯದಿದ್ದ ಹೊಯ್ಸಳ ರಾಜರ ಸ್ಪಷ್ಟ ಚಿತ್ರಣ ನೀಡುತ್ತದೆ. ಆ ಪ್ರಕಾರ ಮಾರವೊಯ್ಸಳ ದೇವ, ಉಪ್ಪಿಡಿವೊಯ್ಸಳ, ಎರೆಯಂಗ ವೊಯ್ಸಳ, ತಳಕಾಡುವೊಯ್ಸಳ, ಉದಯಾದಿತ್ಯ, ಕುಂಟ ವಿನಯಾದಿತ್ಯ, ನೃಪಕಾಮ ಹಿರಿಯ ಪೊಯ್ಸಳದೇವ– ಇವರು ವಿನಯಾದಿತ್ಯನಿಗಿಂತ ಮೊದಲು ಆಳಿದ ರಾಜರು. ಮೂಡಿಗೆರೆ ತಾಲ್ಲೂಕಿನ ಕೆಸವೊಳಲು ಗ್ರಾಮದಲ್ಲಿ ಒಂದು ಹೊಸ ಶಾಸನ ದೊರೆತಿದ್ದು ಅದನ್ನು ಡಿ.ಎಸ್. ಜಯಪ್ಪಗೌಡ ಪ್ರಚುರಪಡಿಸಿದ್ದು ಎಪಿಗ್ರಾಫಿಯ ಕರ್ನಾಟಿಕದ ಹನ್ನೊಂದನೆಯ ಸಂಪುಟದಲ್ಲಿ ಬೆಳಕು ಕಂಡಿದೆ. ಇದರಲ್ಲಿ ಚಾಳುಕ್ಯರ ನಾಲ್ಕನೆಯ ವಿಕ್ರಮಾದಿತ್ಯನ ಮಗ ಶೋಭನರಸ ಅಥವಾ ಶೋಭನಯ್ಯ ಸೊಸೆವೂರ ಅಂದರೆ ಈಗಿನ ಅಂಗಡಿ ಗ್ರಾಮದಲ್ಲಿ ಆಳುತ್ತಿದ್ದ ಹೊಯ್ಸಳರಲ್ಲಿ ಸಂಧಿವಿಗ್ರಹಿಯಾಗಿದ್ದದ್ದು ತಿಳಿದುಬರುತ್ತದೆ. ಚಾಳುಕ್ಯ ಎರಡನೆಯ ತೈಲಪ 973ರಲ್ಲಿ ರಾಷ್ಟ್ರಕೂಟರನ್ನು ಸೋಲಿಸಿ ಸಾಮ್ರಾಜ್ಯ ಸ್ಥಾಪಿಸಿದಾಗ ಆತನಿಗೆ ಚೋಳರ ವಿರುದ್ಧ ಹೊಯ್ಸಳರ ಬೆಂಬಲ ಬೇಕಾಗಿತ್ತು. ಅವನು ಸಹೋದರ ಶೋಭನರಸನನ್ನು ಹೊಯ್ಸಳ ರಾಜ್ಯಕ್ಕೆ ರಾಜತಾಂತ್ರಿಕ ಪ್ರತಿನಿಧಿಯಾಗಿ ಕಳುಹಿಸಿದ್ದ. ಈ ಶೋಭನರಸ 980ರ ದಶಕದಲ್ಲಿ ಬನವಾಸಿ ಪ್ರಾಂತದಲ್ಲಿ ಮಹಾಮಂಡಲೇಶ್ವರನಾಗಿದ್ದದ್ದು ಶಾಸನಗಳಿಂದ ತಿಳಿದುಬರುತ್ತದೆ. ಇದರಿಂದಲೂ ಹೊಯ್ಸಳರು ಹತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ದೃಢವಾಗಿ ಮಲೆನಾಡಿನ ಈ ಭಾಗದಲ್ಲಿ ಚಿಕ್ಕ ರಾಜ್ಯದ ಅಧಿಪತಿಗಳಾಗಿದ್ದದ್ದು ಸ್ಪಷ್ಟಪಡುತ್ತದೆ. ಸು.978ರಲ್ಲಿ ರಚಿತವಾದ ಚಾವುಂಡರಾಯ ಪುರಾಣದಲ್ಲಿ ಪ್ರಬಲನಾಗಿದ್ದ ಹೊಯ್ಸಳ ರಾಜನ ಕೂಟವನ್ನು ಮಾರಸಿಂಹ ಸೋಲಿಸಿದ ಬಗ್ಗೆ ಪ್ರಸ್ತಾಪವಿದೆ. ಇದು ಈ ದೃಷ್ಟಿಗೆ ಸಮರ್ಥನೆ ಒದಗಿಸುತ್ತದೆ.

ಇತಿಹಾಸಕಾರರು 1006ರ ತಿರುಮಕೂಡಲುನರಸೀಪುರ ತಾಲ್ಲೂಕಿನ ಕಲಿಯೂರು ಶಾಸನದ ಆಧಾರದ ಮೇಲೆ ಹತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಹೊಯ್ಸಳರು ಆಗತಾನೇ ಚೋಳರ ಧಾಳಿಯಿಂದ ಕಣ್ಮರೆಯಾಗಿದ್ದ ತಲಕಾಡಿನ ಗಂಗರ ಸಾಮ್ರಾಜ್ಯದ ಒಂದು ಭಾಗದಲ್ಲಿ ತಲೆ ಎತ್ತಿದರೆಂದು ಭಾವಿಸಿದ್ದರು. ಆದರೆ ಪೂರ್ವೋಕ್ತ ಶಾಸನಗಳಲ್ಲದೆ ಮೂಡಿಗೆರೆ ತಾಲ್ಲೂಕಿನ ಅಂಗಡಿ ಮತ್ತು ಉಗ್ಗೇಹಳ್ಳಿಗಳಲ್ಲಿ ದೊರೆತಿರುವ ಶಾಸನಗಳು ಹಾಗೂ ಬೇಲೂರು ತಾಲ್ಲೂಕಿನ ತೊಳಲು ಗ್ರಾಮದ ಒಂದು ವೀರಗಲ್ಲು ಹೊಯ್ಸಳ ಮಾರೆಯ, ಮಾರನೃಪತಿ ಮತ್ತು ಕಾಮವೊಯ್ಸಳರ ಬಗ್ಗೆ ಮಾಹಿತಿ ನೀಡುತ್ತವೆ. ಈ ಎಲ್ಲ ಹೆಸರುಗಳು ಒಂದೇ ವ್ಯಕ್ತಿಯದೋ ಅಲ್ಲವೋ ಎಂಬ ಬಗ್ಗೆ ಹೆಚ್ಚಿನ ಪರಿಶೀಲನೆಯ ಅಗತ್ಯವಿದೆ. ಚಿಕ್ಕಮಗಳೂರು ತಾಲ್ಲೂಕು ಉಪ್ಪವಳ್ಳಿಯ ಒಂದನೆಯ ವಿನಯಾದಿತ್ಯನ ಶಾಸನ 1012ಕ್ಕೆ ಸೇರಿದ್ದು. ಆದರೆ ಒಂದನೆಯ ವಿನಯಾದಿತ್ಯ ಇರಲೇ ಇಲ್ಲ ಎಂಬ ಕಲ್ಪನೆಯ ಮೇರೆಗೆ ಶಾಸನತಜ್ಞರು ಈ ಶಾಸನದ ಕಾಲವನ್ನು ಅರವತ್ತು ವರ್ಷ ಮುಂದೂಡಿದ್ದರು. ಈಗ ಬೆಳಕಿಗೆ ಬಂದಿರುವ ಆಧಾರಗಳ ಮೇಲೆ ಒಂದನೆಯ ವಿನಯಾದಿತ್ಯ ಇದ್ದ ಬಗ್ಗೆ ಸ್ಪಷ್ಟಪಡುತ್ತದೆ ಹಾಗೂ ಹೊಯ್ಸಳರಲ್ಲಿ ಅನೇಕ ಪ್ರಾರಂಭದ ಅರಸರು ಆಳಿದ್ದಾರೆ ಎಂದು ತಿಳಿದುಬರುತ್ತದೆ. ಗಂಗರ ಸಮಕಾಲೀನನಾಗಿ ಆಳಿದ ಕಾಮವೊಯ್ಸಳ ರಾಜಮಲ್ಲ ಪೆರ್ಮಾಡಿ ಎಂದು ಬಿರುದು ಧರಿಸಿದ್ದ. ರಕ್ಕಸಗಂಗ ಎಂಬ ಬಿರುದನ್ನೂ ಈ ವಂಶದ ರಾಜರು ಧರಿಸಿದ್ದು ತಿಳಿದುಬಂದಿದೆ. ಇದರಿಂದ ಹೊಯ್ಸಳ ಮನೆತನ ಪ್ರಾರಂಭದ ಅರಸರು ತಲಕಾಡಿನ ಗಂಗ ಮನೆತನದೊಂದಿಗೆ ನಿಕಟ ಸಂಬಂಧ ಹೊಂದಿದ್ದುದು ಸ್ಪಷ್ಟವಾಗುತ್ತದೆ.

ಕಲಿಯೂರು ಕದನ ಹೊಯ್ಸಳರ ಇತಿಹಾಸದಲ್ಲಿ ಮೈಲಿಗಲ್ಲಾಯಿತು. ಅವರು ಆಗತಾನೇ (1004) ಗಂಗವಾಡಿಯ ಮೇಲೆ ಆಧಿಪತ್ಯ ಸ್ಥಾಪಿಸಿದ್ದ ಚೋಳರನ್ನು ಎದುರಿಸಿದ್ದರು. ಹೊಯ್ಸಳ ರಾಜನ ನೇತೃತ್ವದಲ್ಲಿ ನಡೆದ ಈ ಯುದ್ಧದಲ್ಲಿ ದಕ್ಷಿಣ ಕರ್ನಾಟಕದ ಅನೇಕ ತುಂಡರಸರು ಪಾಲ್ಗೊಂಡಿದ್ದರು. ಇದರಿಂದಾಗಿ ಯುದ್ಧದಲ್ಲಿ ಈ ಮೈತ್ರಿಕೂಟ ಸೋತರೂ ಚೋಳರ ವಿಸ್ತರಣಾ ಆಕಾಂಕ್ಷೆಗೆ ದೊಡ್ಡ ಪೆಟ್ಟು ಬಿದ್ದಿತು. ಚಾಳುಕ್ಯರಿಗೆ ಸಾಮ್ರಾಜ್ಯ ಭದ್ರಪಡಿಸಲು ಇದು ಪ್ರೋತ್ಸಾಹದಾಯಕವಾಯಿತು. ನೃಪಕಾಮ ಹೊಯ್ಸಳರ ಪ್ರಥಮ ಪ್ರಮುಖ ದೊರೆ ಎನಿಸಿದ. ಇವನ ಕಾಲವನ್ನು ಸು.1020–45 ಎಂದು ನಿರ್ಧರಿಸಲಾಗಿದೆ. ಹಾಸನ ಜಿಲ್ಲೆ ಮತ್ತು ಸುತ್ತಲ ಪ್ರದೇಶಗಳು ಮಾತ್ರ ಇವನ ಆಳಿಕೆಗೆ ಒಳಪಟ್ಟಿರಬೇಕೆಂದು ಇವನ ಶಾಸನಗಳ ಸೀಮಿತ ವ್ಯಾಪ್ತಿಯಿಂದ ತಿಳಿಯಬಹುದು. ಆದರೆ ತನ್ನ ಕಿರುರಾಜ್ಯಕಾಲದಲ್ಲಿ ಚೋಳಾಶ್ರಿತರಾದ ಕೊಂಗಾಳ್ವರನ್ನು ಎದುರಿಸಿದ್ದಲ್ಲದೆ (1022, 1026) ಯಾವುದೋ ಸಂದರ್ಭದಲ್ಲಿ ಬನವಾಸಿಯ ಮೇಲೆ ನಡೆದ (1027) ಧಾಳಿಯನ್ನು ಎದುರಿಸಲು ಅಲ್ಲಿಯ ಅರಸರಿಗೆ ಸಹಾಯ ಮಾಡಿದ. ಅಂದರೆ ಈ ಕಾಲದಲ್ಲಿ ಹೊಯ್ಸಳರ ಪ್ರಭಾವ ಏರುಗತಿಯಲ್ಲಿದ್ದಿತೆಂದು ಊಹಿಸಲು ಅವಕಾಶವಿದೆ.

ಮುಂದಿನ ದೊರೆ ಎರಡನೆಯ ವಿನಯಾದಿತ್ಯನಿಗೂ (ಸು.1045–98) ನೃಪಕಾಮನಿಗೂ ಸಂಬಂಧವೇನೆಂದು ಸ್ಪಷ್ಟವಾಗಿಲ್ಲ. ಆದರೆ ಅನಂತರದ ಕೆಲವು ಶಾಸನಗಳ ಆಧಾರದಿಂದ ಇವರು ತಂದೆ–ಮಕ್ಕಳಿರಬೇಕೆಂದು ಊಹಿಸುವ ಸಾಧ್ಯತೆ ಇದೆ. ಹೊಯ್ಸಳ ವಿನಯಾದಿತ್ಯನನ್ನೇ ವಂಶಾದ್ಯನಾಗಿ ವಿವರಿಸುತ್ತವೆಯಾದ್ದರಿಂದ ಪ್ರಾಯಶಃ ಇವನ ಕಾಲದಲ್ಲಿ ಹೊಯ್ಸಳ ರಾಜ್ಯ, ನೃಪಕಾಮನ ಪಾಳೆಯಗಾರಿಕೆ ಸ್ಥಿತಿಯನ್ನು ಮೀರಿ, ಮೊದಲಿಗೆ ಸ್ಪಷ್ಟ ರಾಜಕೀಯ ಶಕ್ತಿಯಾಗಿ ರೂಪುಗೊಂಡಿರಬೇಕು. ಎರಡನೆಯ ವಿನಯಾದಿತ್ಯನ ಆಳಿಕೆ ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೂ ಮೀರಿ ಸುತ್ತಣ ತುಮಕೂರು ಮತ್ತು ಮೈಸೂರು ಜಿಲ್ಲೆಗಳ ಭಾಗಗಳಿಗೂ ಹಬ್ಬಿದ್ದಿತು. ಒಂದು ಶಾಸನದ ಪ್ರಕಾರ ವಿನಯಾದಿತ್ಯನ ಕಾಲದಲ್ಲಿ ಹೊಯ್ಸಳ ರಾಜ್ಯಕ್ಕೆ ಕೊಂಕಣ, ಆಳ್ವಖೇಡ, ವೈನಾಡು ಮತ್ತು ತಲಕಾಡು ಗಡಿಪ್ರದೇಶಗಳಾಗಿದ್ದುವು. ಆಗಿನ ದಕ್ಷಿಣ ಭಾರತದ ಪ್ರಭಾವೀ ರಾಜಕೀಯ ಶಕ್ತಿಗಳಾಗಿದ್ದ ಚಾಳುಕ್ಯ ಮತ್ತು ಚೋಳರ ರಾಜ್ಯಗಳ ನಡುವೆ ಇವನು ಆಳಬೇಕಾದ್ದರಿಂದ ಈತ ತನ್ನ ನಡೆಯಲ್ಲಿ ಬಹಳ ಜಾಗರೂಕತೆಯನ್ನು ವಹಿಸಬೇಕಾಗಿತ್ತು. ಹಳೆಯ ಗಂಗವಾಡಿಯ ಭಾಗಗಳನ್ನು ಇವನು ಆಳುತ್ತಿದ್ದುದರಿಂದ ಸ್ಥಳೀಯರೊಡನೆ ಇವನ ಸಂಬಂಧ ನಿಕಟವಾಗಿದ್ದು ಚೋಳರೊಡನೆ ಸ್ನೇಹ ಬೆಳೆಸುವ ಸಾಧ್ಯತೆಯೇ ಇರಲಿಲ್ಲವಾಗಿ, ತನ್ನ ಅಧಿಕಾರ ಭದ್ರತೆಗಾಗಿ ಚಾಳುಕ್ಯರೊಡನೆ ರಕ್ತಸಂಬಂಧ ಮತ್ತು ರಾಜಕೀಯ ಬಾಂಧವ್ಯವನ್ನು ಬೆಳೆಸಿ, ಹೊಯ್ಸಳರ ಮೂಲೋದ್ದೇಶವಾದ ಚೋಳೋಚ್ಚಾಟನೆಗಾಗಿ ಶಕ್ತಿ ಸಂಚಯ ಮಾಡಿಕೊಳ್ಳಲಾರಂಭಿಸಿದ. ಉದ್ದಿಶ್ಯ ಸ್ಪಷ್ಟವಾಗಿದ್ದರೂ ಇನ್ನೂ ತಾನಿದ್ದ ಅಬಲ ಸ್ಥಿತಿಯಲ್ಲಿ ಚೋಳರ ಮೇಲೆ ಬೀಳುವುದು ಅಪಾಯಕರವೆಂದು ವಿನಯಾದಿತ್ಯ ಅರಿತಿರಬೇಕು. ಇವನ ಅರ್ಧ ಶತಮಾನಕ್ಕೆ ಹೆಚ್ಚಿನ ಆಳಿಕೆಯಲ್ಲಿಯೂ ಅವರೊಡನೆ ನೇರವಾಗಿ ಸೆಣಸಿಲ್ಲದಿರುವುದಕ್ಕೆ ಇದೇ ಕಾರಣ. ಆದರೆ ಚಾಳುಕ್ಯ 2ನೆಯ ಸೋಮೇಶ್ವರ ಮತ್ತು 6ನೆಯ ವಿಕ್ರಮಾದಿತ್ಯರೊಡನೆ ಉತ್ತಮ ಬಾಂಧವ್ಯವನ್ನು ಸಾಧಿಸಿಕೊಂಡು ತನ್ನ ಮಗ ಎರೆಯಂಗನನ್ನೂ ಮೊಮ್ಮಕ್ಕಳಾದ ಒಂದನೆಯ ಬಲ್ಲಾಳ, ವಿಷ್ಣುವರ್ಧನರನ್ನೂ ಚಾಳುಕ್ಯರ ದಂಡೆಯಾತ್ರೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿ, ಮೇಲ್ಮಟ್ಟದ ರಾಜಕೀಯ ಮತ್ತು ಯುದ್ಧತಂತ್ರಗಳಲ್ಲಿ ಅವರನ್ನು ನಿಷ್ಣಾತರಾಗುವಂತೆ ಮಾಡಿದ್ದಲ್ಲದೆ ಚಾಳುಕ್ಯರ ಬೆಂಬಲವನ್ನೂ ಗಳಿಸಿಕೊಂಡ. ಈ ರಾಜಕೀಯ ಮುತ್ಸದ್ದಿತನ ಮುಂದೆ ಹಲವೇ ವರ್ಷಗಳಲ್ಲಿ ಫಲನೀಡಿತು. ಚೋಳರ ಉಚ್ಚಾಟನೆ, ಹೊಯ್ಸಳರ ಬೃಹತ್ ಸಾಮ್ರಾಜ್ಯ ಸ್ಥಾಪನೆ ನೆರವೇರಿತು. ವಿನಯಾದಿತ್ಯನ ಅನಂತರ ಪಟ್ಟಕ್ಕೆ ಬಂದ ಅವನ ಮಗ ಎರೆಯಂಗನ ಆಳಿಕೆಯ ಕಾಲ (ಸು.1098–1100) ಗಮನಾರ್ಹವಾದುದೇನಲ್ಲ. ಈ ಕಾಲಕ್ಕಾಗಲೇ ಇವನ ಮಕ್ಕಳಾದ ಒಂದನೆಯ ಬಲ್ಲಾಳ, ವಿಷ್ಣುವರ್ಧನರು ರಾಜಕೀಯ ಕ್ಷೇತ್ರದಲ್ಲಿ ಸಮರ್ಥರಾಗಿದ್ದರು.

ಒಂದನೆಯ ಬಲ್ಲಾಳನ (ಸು.1100–1108) ಕಾಲದಲ್ಲಿ ಹೊಯ್ಸಳ ಇತಿಹಾಸದಲ್ಲಿ ಒಂದು ಮುಖ್ಯ ತಿರುವು ಕಂಡುಬರುತ್ತದೆ. ಈ ಹಿಂದಿನ ದೊರೆಗಳಂತೆ ಈತನೂ ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿ ಚಾಳುಕ್ಯ ಸಾಮಂತತ್ವವನ್ನು ಒಪ್ಪಿಕೊಂಡಿದ್ದರೂ ಪ್ರಾಯಶಃ ಚಾಳುಕ್ಯ ವಿಕ್ರಮಾದಿತ್ಯನ ತಪ್ಪು ನಡೆಯಿಂದಾಗಿ ಅವನ ಮಿತ್ರ ಸಾಮಂತ ಹೊಯ್ಸಳರ ಮೇಲೆರಗಿ ಬಂದು ಚಾಳುಕ್ಯ–ಹೊಯ್ಸಳ ಸಂಬಂಧವನ್ನು ಕಲಕಿದ. ಈ ಸಂದರ್ಭದಲ್ಲಿ ಶೌರ್ಯದಿಂದ ಹೋರಾಡಿ ವಿಜಯಿಗಳಾದ ಬಲ್ಲಾಳ–ವಿಷ್ಣುವರ್ಧನರಲ್ಲಿ ಹೊಸ ಧೈರ್ಯ, ಹುಮ್ಮಸ್ಸು ಬೆಳೆದುಬಂದು ಸುತ್ತಣ ಚೆಂಗಾಳ್ವ, ಆಳುಪ ರಾಜ್ಯಗಳನ್ನೇ ಅಲ್ಲದೆ ಚಾಳುಕ್ಯರ ಸಾಮಂತರಾದ ಉಚ್ಚಂಗಿಯ ಪಾಂಡ್ಯರ ಮೇಲೂ ಜಯಗಳಿಸಿದರು. ಇದು ಮಂಡಲೇಶ್ವರ ರಾಗಿದ್ದ ಹೊಯ್ಸಳರು ಸ್ವತಂತ್ರ ರಾಜ್ಯವನ್ನು ಸಾಧಿಸುವತ್ತ ಇಟ್ಟ ಮೊದಲ ಹೆಜ್ಜೆ ಎಂದು ಗುರುತಿಸಬಹುದು.

ವಿಷ್ಣುವರ್ಧನನ 34 ವರ್ಷಗಳ ಆಳಿಕೆ (ಸು. 1108–42) ಹೊಯ್ಸಳ ಇತಿಹಾಸದಲ್ಲಿ ಮಹತ್ತ್ವಪೂರ್ಣವಾದುದು. ಚಿಕ್ಕ ಹೊಯ್ಸಳ ರಾಜ್ಯ ಸಾಮ್ರಾಜ್ಯ ಪದವನ್ನು ರೂಢಿಸಿಕೊಂಡಿದ್ದು ಈ ಕಾಲದಲ್ಲಿ. ವಿಷ್ಣುವರ್ಧನ ತಾನು ಪಟ್ಟವೇರುವ ಮೊದಲೇ ತಂದೆ ಎರೆಯಂಗ ಮತ್ತು ಅಣ್ಣ ಬಲ್ಲಾಳರ ಕಾಲದಲ್ಲಿ ಯುದ್ಧ ಮತ್ತು ರಾಜ್ಯಾಡಳಿತದಲ್ಲಿ ಭಾಗಿಯಾಗಿದ್ದು ಅಪಾರ ಅನುಭವವನ್ನು ಸಾಧಿಸಿದ್ದ. ಇದರ ಪೂರ್ಣ ಉಪಯೋಗವನ್ನು ಪಡೆದುಕೊಂಡು, ಆ ಪ್ರದೇಶದ ಶೂರ ಯೋಧರನ್ನು ಕಲೆಹಾಕಿ, ಗಂಗವಾಡಿಯನ್ನು ಪರಕೀಯ ಆಳಿಕೆಯಿಂದ ಮುಕ್ತಗೊಳಿಸಿ, ಹೊಯ್ಸಳ ರಾಜ್ಯವನ್ನು ಚಾಳುಕ್ಯಾಧೀನತ್ವದಿಂದ ಪಾರುಮಾಡುವ ಎರಡು ಗುರಿಗಳನ್ನಿಟ್ಟುಕೊಂಡು ಕಾರ್ಯಾರಂಭ ಮಾಡಿದ. ಚೋಳರೂ ಚಾಳುಕ್ಯರೂ ಪ್ರಬಲ ಸಾಮ್ರಾಟರಾದ್ದರಿಂದ ಅವರನ್ನು ಮೊದಲು ಎದುರಿಸುವುದು ಆತ್ಮಘಾತಕವಾದೀತೆಂದು ಭಾವಿಸಿ, ತನ್ನ ರಾಜ್ಯಾಡಳಿತದ ಆರಂಭದಲ್ಲಿ ಮೊದಲಿಗೆ ರಾಜ್ಯದ ಸುತ್ತಲಿದ್ದ ಚಿಕ್ಕಪುಟ್ಟ ತುಂಡರಸರನ್ನು ಮೆಟ್ಟಿ ತನ್ನ ಸೈನ್ಯಬಲ ಹಾಗೂ ಕೋಶವನ್ನು ವೃದ್ಧಿಸಿಕೊಂಡ. ಈ ಕಾರ್ಯಾಚರಣೆಯಲ್ಲಿ ಚೆಂಗಾಳ್ವ, ಕೊಂಗಾಳ್ವರೂ ಆಳುಪರೂ ಪ್ರಾಯಶಃ ಉಚ್ಚಂಗಿಯ ಪಾಂಡ್ಯರೂ ಪೆಟ್ಟು ತಿಂದರು. ಇವರುಗಳ ಮೇಲೆ ಗಳಿಸಿದ ಜಯ ವಿಷ್ಣುವರ್ಧನನಿಗೆ ಹೆಚ್ಚು ಕೆಚ್ಚನ್ನು ಒದಗಿಸಿತು. ಕುಲೋತ್ತುಂಗ ಚೋಳನು ವೆಂಗಿಯ ರಾಜಕೀಯದಲ್ಲಿ ಮಗ್ನನಾಗಿದ್ದ ಸುಸಂದರ್ಭವನ್ನು ಉಪಯೋಗಿಸಿಕೊಂಡು ತಲಕಾಡಿನ ಮೇಲೆ ಧಾಳಿ ಮಾಡಿ (1116) ಅಲ್ಲಿದ್ದ ಆದಿಯಮನೆಂಬ ಚೋಳಪ್ರತಿನಿಧಿಯನ್ನೂ ಇನ್ನಿತರ ಚೋಳಾಧಿಕಾರಿ ಗಳನ್ನೂ ಓಡಿಸಿ ತಲಕಾಡನ್ನು ವಶಪಡಿಸಿಕೊಂಡದ್ದೇ ಅಲ್ಲದೆ, ಅದೇ ಭರದಲ್ಲಿ ಅವರುಗಳನ್ನು ಅಟ್ಟಿಸಿಕೊಂಡು ಘಟ್ಟದ ಮೇಲೆ ಈಗಿನ ಕೋಲಾರ, ಬೆಂಗಳೂರು ಜಿಲ್ಲೆಯ ಪ್ರದೇಶಗಳು ಹಾಗೂ ಘಟ್ಟದ ಕೆಳಗಿನ ಕೊಯಮತ್ತೂರು, ಸೇಲಂ, ಧರ್ಮಪುರಿ, ಉತ್ತರ ಆರ್ಕಾಟು ಜಿಲ್ಲೆಗಳ ಭಾಗಗಳ ಮೇಲೂ ಧಾಳಿ ಮಾಡಿ, ಪ್ರಾಯಶಃ ಕಾಂಚೀಪುರದವರೆಗೂ ಮುನ್ನಡೆದ. ಇದೇ ಹುರುಪಿನಲ್ಲೇ ಉಚ್ಚಂಗಿಯ ಪಾಂಡ್ಯರನ್ನೂ ಸೋಲಿಸಿದ. ಒಂದು ಚಿಕ್ಕ ಅಧೀನ ರಾಜ್ಯದ ಚಿಕ್ಕ ಅರಸೊಬ್ಬ ಬೃಹತ್ ಚೋಳ ಸಾಮ್ರಾಟನ ಮೇಲೆ ಜಯ ಗಳಿಸಿದುದು ನಿಜಕ್ಕೂ ಮಹತ್ತ್ವದ ಸಂಗತಿ. ಈ ಎಲ್ಲ ಸಾಧನೆಗಳಿಂದ 1117ರ ಒಂದು ಶಾಸನ ವಿವರಿಸುವಂತೆ ದಕ್ಷಿಣದಲ್ಲಿ ಚೇರಮನ ಮಲೆ, ಕೊಂಗು ವಿಷಯದಿಂದ ಹಿಡಿದು (ನೀಲಗಿರಿ, ಕೊಯಮತ್ತೂರು ಭಾಗಗಳು) ಉತ್ತರದಲ್ಲಿ ಸಾವಿಮಲೆಯ (ಸಂಡೂರು ಬಳ್ಳಾರಿ ಜಿಲ್ಲೆ)ವರೆಗೂ ಪೂರ್ವದಲ್ಲಿ ಸಂಗಲಿಘಟ್ಟದಿಂದ (ಕೋಲಾರ ಜಿಲ್ಲೆ ಮುಳಬಾಗಲು ಬಳಿಯ ನಂಗಲಿ) ಪಶ್ಚಿಮದಲ್ಲಿ ಬಾರಕನೂರು ಘಟ್ಟದ (ಸಹ್ಯಾದ್ರಿಯ ಪಶ್ಚಿಮ ಅಂಚು) ವರೆಗೂ ಹೊಯ್ಸಳ ರಾಜ್ಯ ವಿಸ್ತೃತ ವಾಯಿತು. ಹಿಂದೆ ಗಂಗರ ಅನೂಚಾನ ಆಧಿಪತ್ಯಕ್ಕೊಳಪಟ್ಟಿದ್ದ ರಾಜ್ಯವೆಲ್ಲ ವಿಷ್ಣುವರ್ಧನನ ಏಕಚ್ಛತ್ರದಡಿಗೆ ಬಂದು, ಹೊಯ್ಸಳರು ಗಂಗವಾಡಿ 96000ದ ನಾಯಕರೆಂಬ ಹೇಳಿಕೆಯೂ ಇವನ ವೀರಗಂಗನೆಂಬ ಬಿರುದೂ ಸಫಲವಾದುವು. ಚಾಳುಕ್ಯ 6ನೆಯ ವಿಕ್ರಮಾದಿತ್ಯ ಮೊದಲಿಗೆ ತನ್ನ ಸಾಮಂತರಾಗಿದ್ದ ಈ ಹೊಯ್ಸಳರ ಏಳ್ಗೆಯನ್ನು ಗಮನಿಸುತ್ತಲೇ ಬಂದಿದ್ದ. ಅವನು ತನ್ನ ರಾಜ್ಯದ ದಕ್ಷಿಣದಲ್ಲಿ ಪ್ರಬಲವಾಗುತ್ತಿದ್ದುದಲ್ಲದೆ ಹಿಂದೆ ಉಂಟಾದ ಚಾಳುಕ್ಯ–ಹೊಯ್ಸಳ ವಿರಸದಿಂದ ಹೆಚ್ಚುಕಡಿಮೆ ಸ್ವತಂತ್ರರಂತೆಯೇ ವರ್ತಿಸುತ್ತ ನಿಷ್ಠಾವಂತ ಚಾಳುಕ್ಯ ಸಾಮಂತ ರಾಗಿದ್ದ ಉಚ್ಚಂಗಿಯ ಪಾಂಡ್ಯರ ಮೇಲೂ ಹೊಯ್ಸಳರ ಧಾಳಿ ನಡೆದದ್ದನ್ನು ಸಹಿಸಲಿಲ್ಲ. 1118ರಲ್ಲಿ ವಿಷ್ಣುವರ್ಧನನ್ನು ಬಗ್ಗಿಸಲು ಬೃಹತ್ ಸೈನ್ಯವೊಂದನ್ನು ಕಳುಹಿಸಿದಾಗ ಹೊಯ್ಸಳ ದಂಡನಾಯಕರು ಶೌರ್ಯದಿಂದ ಎದುರಿಸಿ ಚಾಳುಕ್ಯ ಬಲವನ್ನು ಹಿಮ್ಮೆಟ್ಟಿಸಿದರು. ಚಾಳುಕ್ಯ ಶೃಂಖಲೆ ಮುರಿಯಿತು. ಹೊಯ್ಸಳ ಸಾರ್ವಭೌಮತ್ವ ಸಿದ್ಧವಾಯಿತು. ಮುಂದಿನ ವರ್ಷಗಳಲ್ಲಿ ವಿಷ್ಣುವರ್ಧನ ತಾನು ಗಳಿಸಿದ ನಾಡಿನ ಸುವ್ಯವಸ್ಥೆಗೆ ಗಮನಕೊಟ್ಟುದಲ್ಲದೆ ಅವಕಾಶ ಒದಗಿದಾಗ ಚಾಳುಕ್ಯ ರಾಜ್ಯದ ಒಳಕ್ಕೂ ತನ್ನ ಆಧಿಪತ್ಯವನ್ನು ವಿಸ್ತರಿಸಲು ಯತ್ನಿಸಿದ. ಈ ಕೆಲಸ ಸುಲಭ ಸಾಧ್ಯವಾಗಿರಲಿಲ್ಲ. ಆತ ಪ್ರತಿ ಹೆಜ್ಜೆಯಲ್ಲೂ ಚಾಳುಕ್ಯರು ಮತ್ತು ಅವರ ನಿಷ್ಠ ಸಾಮಂತರೊಡನೆ ಸತತ ಹೋರಾಟ ನಡೆಸಬೇಕಾಯಿತು. 6ನೆಯ ವಿಕ್ರಮಾದಿತ್ಯನ ಅನಂತರ ಬಂದ ಭೂಲೋಕಮಲ್ಲ ಅಷ್ಟೇನೂ ಶಕ್ತನಾಗಿರಲಿಲ್ಲವಾಗಿ ಅವನ ರಾಜ್ಯದಲ್ಲೇ ಸ್ವಹಿತ ಸಾಧಕರು ಬೆಳೆದಿದ್ದು, ಸ್ವಲ್ಪಮಟ್ಟಿಗೆ ವಿಷಮ ಪರಿಸ್ಥಿತಿಯೂ ಇದ್ದಿತಾದ್ದರಿಂದ ವಿಷ್ಣುವರ್ಧನ ಹಲವು ಸಂದರ್ಭಗಳಲ್ಲಿ ಹಾನಗಲ್ಲಿನ ಕದಂಬರು ಮೊದಲಾದವರನ್ನು ಸೋಲಿಸಿ ಕೃಷ್ಣಾ ನದಿಯವರೆಗೂ ಮುನ್ನಡೆದನಲ್ಲದೆ ತನ್ನ ಆಳಿಕೆಯ ಕೊನೆಯ ಘಟ್ಟದಲ್ಲಿ ಬೆಳ್ವೊಲ ಪ್ರಾಂತವನ್ನೆಲ್ಲ ಆಕ್ರಮಿಸಿ, ಬಂಕಾಪುರವನ್ನು ನೆಲೆವೀಡಾಗಿ ಮಾಡಿಕೊಂಡ. ಪ್ರಾಯಶಃ ಈ ಕಾಲದಲ್ಲಿ ದಕ್ಷಿಣದಲ್ಲಿದ್ದ ಚೋಳರೂ ಬಲಗುಂದಿದ್ದು ಅತ್ತ ಕಡೆಯಿಂದ ಆಕ್ರಮಣ ಭಯವೂ ಇಲ್ಲದ್ದು, ಉತ್ತರದಲ್ಲಿ ಹೊಯ್ಸಳ ರಾಜ್ಯದ ವಿಸ್ತರಣೆಗೆ ಕಾರಣವಾಗಿರಬೇಕು. ವಿಷ್ಣುವರ್ಧನನ ಶೌರ್ಯ, ರಾಜಕೀಯ ಮುತ್ಸದ್ದಿತನ, ಇವನ ದಂಡನಾಯಕರು ಮತ್ತು ಸಾಮಂತರ ಅಚಲ ನಿಷ್ಠೆ– ಇವುಗಳಿಂದ ಹೊಯ್ಸಳರು ದಕ್ಷಿಣ ಭಾರತದ ರಾಜಕೀಯದ–ಚೋಳ–ಚಾಳುಕ್ಯರ ಜೊತೆಗೆ– ಇನ್ನೊಂದು ಮುಖ್ಯ ಬಲವಾಗಿ ನೆಲೆಗೊಂಡರು.

ವಿಷ್ಣುವರ್ಧನನಿಗೆ ಕುಮಾರ ಬಲ್ಲಾಳ ಮತ್ತು ನರಸಿಂಹರಲ್ಲದೆ ವಿಜಯನಾರಾಯಣನೆಂಬ ಮಗನೂ ಇದ್ದನೆಂದು ಉಪ್ಪವಳ್ಳಿ ಶಾಸನದಿಂದ ತಿಳಿದುಬರುತ್ತದೆ. ವಿಷ್ಣುವರ್ಧನನ ಮರಣಾ ನಂತರ ಪಟ್ಟಕ್ಕೆ ಬಂದ ಅವನ ಮಗ ಒಂದನೆಯ ನರಸಿಂಹ (1142–73) ಇನ್ನೂ ಬಾಲಕನಾಗಿದ್ದುದರಿಂದಲೂ ಪ್ರಾಪ್ತವಯಸ್ಕನಾದ ಮೇಲೂ ಸ್ವಭಾವತಃ ಅಶಕ್ತನೂ ಸುಖಲೋಲುಪನೂ ಆಗಿದ್ದುದರಿಂದಲೂ ಚಾಳುಕ್ಯ ಜಗದೇಕಮಲ್ಲ ಮತ್ತು ಹಿಂದೆ ವಿಷ್ಣುವರ್ಧನ ನಿಂದ ಪೆಟ್ಟು ತಿಂದಿದ್ದ ಚಾಳುಕ್ಯ ಸಾಮಂತರು, ಹರಿಹರದಿಂದ ಉತ್ತರಕ್ಕಿದ್ದ ಹೊಯ್ಸಳರ ಗಳಿಕೆಯನ್ನೆಲ್ಲ ಕಬಳಿಸಿದರು. ಪೂರ್ವದಲ್ಲಿ ಚೋಳರೂ ಈಗಿನ ಕೋಲಾರ ಜಿಲ್ಲೆಯ ಸ್ವಲ್ಪ ಭಾಗವನ್ನು ಆಕ್ರಮಿಸಿದರು. ದಕ್ಷಿಣದಲ್ಲಿ ಚೆಂಗಾಳ್ವರು ಸಂದರ್ಭದ ಲಾಭ ಪಡೆಯಲು ಪ್ರಯತ್ನಿಸಿದರೂ ಅದು ಸಫಲವಾಗಲಿಲ್ಲ. ನರಸಿಂಹನ ಕಾಲದಲ್ಲಿ ತಂದೆಯ ಬಾಹುಬಲದಿಂದ ವೃದ್ಧಿಸಿದ್ದ ಹೊಯ್ಸಳ ರಾಜ್ಯ ಸಂಕುಚಿತವಾಯಿತು. ನರಸಿಂಹ ಚಾಳುಕ್ಯ ಸಾರ್ವಭೌಮತ್ವವನ್ನೂ ಒಪ್ಪಬೇಕಾಯಿತು. ಪ್ರಾಯಶಃ ಈ ವಿಷಮ ಸ್ಥಿತಿಯಲ್ಲಿ ಹೊಯ್ಸಳ ರಾಜ್ಯ ಛಿದ್ರವಾಗದಿದ್ದುದು ಕೆಲವು ನಿಷ್ಠಾವಂತ ಹೊಯ್ಸಳ ದಂಡನಾಯಕರಿಂದಾಗಿ ಎನ್ನಬಹುದು. ಅಲ್ಲದೆ ಇವನ ಆಳಿಕೆಯ ಉತ್ತರಾರ್ಧದಲ್ಲಿ ಮಗನಾದ ಎರಡನೆಯ ಬಲ್ಲಾಳ ಆಡಳಿತದಲ್ಲಿ ಪಾಲ್ಗೊಂಡಿದ್ದೂ ಕಾರಣವಾಗಿರಬಹುದು. ಶಕ್ತನಾದ ಬಲ್ಲಾಳ ತಂದೆಯ ದುರ್ಬಲ ಆಡಳಿತವನ್ನು ಸಹಿಸದೆ ದಂಗೆಯೆದ್ದು 1173ರಲ್ಲಿ ತಾನೇ ಸಿಂಹಾಸನವನ್ನೇರಿದ.

ಹೊಯ್ಸಳರ ಲಾಂಛನ ಶಿಲ್ಪ

ಎರಡನೆಯ ಬಲ್ಲಾಳ (1173–1220) ತನ್ನ ತಾತನಾದ ವಿಷ್ಣುವರ್ಧನನ ಗುರಿಯಾಗಿದ್ದ ಸಾಮ್ರಾಜ್ಯ ಸ್ಥಾಪನೆಯನ್ನು ಸಾಧಿಸುವ ಸಂಕಲ್ಪ ಮಾಡಿದ. ಅಧಿಕಾರಕ್ಕೆ ಬಂದ ಕೂಡಲೇ ರಾಜ್ಯದಲ್ಲಿ ತಲೆದೋರಿದ್ದ ಅರಾಜಕತೆಯನ್ನು ಹೋಗಲಾಡಿಸಿ ವಿಸ್ತರಣಾ ಕಾರ್ಯದಲ್ಲಿ ತೊಡಗಿದ. ವಿಷ್ಣುವರ್ಧನನ ಕಾಲದಲ್ಲಿ ಸಾಮಂತನಾಗಿ, ನರಸಿಂಹನ ಕಾಲದಲ್ಲಿ ಸ್ವತಂತ್ರನಾದ ಚೆಂಗಾಳ್ವ ರಾಜನನ್ನು ಹತ್ತಿಕ್ಕಿ (1173), 1177ರಲ್ಲಿ ಉಚ್ಚಂಗಿಯನ್ನು ಮುತ್ತಿ ಪಾಂಡ್ಯ ಕಾಮದೇವನನ್ನು ಸೋಲಿಸಿದ. ಅನಂತರ ಕಳಚುರಿಗಳ ಮೇಲೆ ಯುದ್ಧಮಾಡಿ ತುಂಗಭದ್ರಾ ನದಿಯ ಪ್ರದೇಶಗಳನ್ನು ವಶಪಡಿಸಿಕೊಂಡ. ಅದೇ ಸಮಯದಲ್ಲಿ ಸಿಂಧರಾಜನನ್ನೂ ಸಾಂತರರನ್ನೂ ಹಾನುಗಲ್ಲಿನ ಕದಂಬರನ್ನೂ ತುಳುರಾಜನನ್ನೂ ಸೋಲಿಸಿದ. ಈ ವೇಳೆಗೆ ಚಾಳುಕ್ಯರ ಸಾಮಂತ ಪಕ್ಷವನ್ನು ವಹಿಸಿದ್ದ ಉಚ್ಚಂಗಿ ಕಾಮದೇವ ಪಾಂಡ್ಯನ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ (1187).

ಸೋಮೇಶ್ವರನು ಪುನಃ ಚಾಳುಕ್ಯರ ಅಧಿಕಾರವನ್ನು ಸ್ಥಾಪಿಸಿದರೂ ಕುಂತಳ ಸಾಮ್ರಾಜ್ಯದ ಅವನತಿಯ ಕುರುಹುಗಳು ಕಾಣಬಂದದ್ದರಿಂದ ವೀರಬಲ್ಲಾಳ 1189ರಲ್ಲಿ ಕಲ್ಯಾಣಿಯವರೆಗೂ ದಂಡೆತ್ತಿ ಹೋಗಿ ಸೋಮೇಶ್ವರನ ಪ್ರಧಾನ ದಂಡನಾಯಕನಾದ ಬ್ರಹ್ಮದಂಡೇಶನನ್ನು ಸೋಲಿಸಿ ಚಾಳುಕ್ಯ ಸಾಮ್ರಾಜ್ಯದ ದಕ್ಷಿಣ ಭಾಗದ ಮೇಲೆ ತನ್ನ ಆಳಿಕೆಯನ್ನು ಸ್ಥಾಪಿಸಿ ಕರ್ನಾಟಕ ಚಕ್ರವರ್ತಿಯೆಂಬ ಬಿರುದನ್ನು ಧರಿಸಿದ. ಅನಂತರ ಕುಂತಳ ಸಾಮ್ರಾಜ್ಯದ ಒಡೆತನಕ್ಕಾಗಿ ದೇವಗಿರಿಯ ಸೇವುಣರಿಗೂ ಹೊಯ್ಸಳರಿಗೂ ಯುದ್ಧಗಳು ಪ್ರಾರಂಭವಾದವು. ಸೇವುಣ ರಾಜನಾದ ಭಿಲ್ಲಮ ದಕ್ಷಿಣಕ್ಕೆ ಮುನ್ನುಗ್ಗಿದಾಗ ಬಲ್ಲಾಳ ಅವನನ್ನು ಸೊರಟೂರಿನ ಬಳಿಯಲ್ಲಿ ಎದುರಿಸಿ ಓಡಿಸಿದ (1190). ಸುತ್ತಲಿನ ಯಲಬುರ್ಗಿಯ ಸಿಂಧರೇ ಮೊದಲಾದ

ಕಿರುದೊರೆಗಳನ್ನು ಜಯಿಸಿ ಹೊಯ್ಸಳ ರಾಜ್ಯವನ್ನು ಉತ್ತರದಲ್ಲಿ ಮಲಪ್ರಭಾ, ಕೃಷ್ಣಾನದಿಗಳವರೆಗೂ ವಿಸ್ತರಿಸಿದ. ತನ್ನ ಸಾಮ್ರಾಟ ಪದವಿಯ ಕುರುಹಾಗಿ 1192ರಲ್ಲಿ ತನ್ನ ಹೆಸರಿನಲ್ಲಿ ಶಕವೊಂದನ್ನು ಸ್ಥಾಪಿಸಿದ. 1173–92 ಬಲ್ಲಾಳನ ಆಳಿಕೆಯಲ್ಲಿ ನಿರಂತರ ಅಭಿವೃದ್ಧಿಯ ಕಾಲ. ಈ ಕಾಲದಲ್ಲಿ ಉತ್ತರ ಕರ್ನಾಟಕದ ರಾಜಕೀಯ ಶಕ್ತಿಗಳಾಗಿದ್ದ ಕಳಚುರಿಗಳು ಮತ್ತು ಚಾಳುಕ್ಯರು ಇತಿಹಾಸದಿಂದ ಮರೆಯಾದರಷ್ಟೆ. ಇದರಿಂದ ಅಲ್ಲಿ ಉದ್ಭವವಾದ ರಾಜಕೀಯ ಶೂನ್ಯತೆಯನ್ನು ಬಲ್ಲಾಳ ಚಾಕಚಕ್ಯತೆಯಿಂದ ತನಗೆ ಲಾಭದಾಯಕವಾಗಿ ಮಾಡಿಕೊಂಡ. ಆದರೆ ಅನಂತರದಲ್ಲಿ ಬಲ್ಲಾಳನ ಮುನ್ನಡೆ ಕುಂಠಿತವಾಯಿತು. ಮೊದಲಿಗೆ ಉತ್ತರ ಕರ್ನಾಟಕದ ಅನೇಕ ಚಿಕ್ಕ ರಾಜಮನೆತನಗಳೂ ಬಲ್ಲಾಳನಂತೆಯೇ ತತ್ಕಾಲದ ಸಾರ್ವಭೌಮಶೂನ್ಯತೆಯನ್ನು ಗಮನದಲ್ಲಿಟ್ಟು ಸ್ವಲಾಭ ನಿರತವಾಗಿದ್ದವು. ಹೊಸದಾಗಿ ಆ ಪ್ರದೇಶದಲ್ಲಿ ಕಾಲಿಟ್ಟಿದ್ದ ಬಲ್ಲಾಳನ ಸಾರ್ವಭೌಮತ್ವವನ್ನು ಸಹಿಸಲು ಒಪ್ಪಲಿಲ್ಲ. ಸಾಧ್ಯವಾದಷ್ಟುಮಟ್ಟಿಗೆ ಸ್ವತಂತ್ರ ರಾಜರಾಗಿರಲು ಅಲ್ಲಿನ ಅರಸರು ಪ್ರಯತ್ನಿಸುತ್ತಿದ್ದರು. ಅಲ್ಲದೆ ದೇವಗಿರಿಯಲ್ಲಿ ಸಿಂಘಣ ಕ್ರಮೇಣ ಬಲಯುತನಾಗುತ್ತಿದ್ದ. ಬೆಳ್ವೊಲ, ಬನವಾಸಿ ಪ್ರಾಂತದಲ್ಲಿದ್ದ ಕೆಲವು ಚಿಕ್ಕ ರಾಜಮನೆತನಗಳಿಗೆ ಸಹಾಯ ಮಾಡುವ ನೆವದಲ್ಲಿ ದಕ್ಷಿಣ ದಂಡಯಾತ್ರೆಯನ್ನು ಕೈಗೊಂಡ. ಬೆಳ್ವೊಲ–ಬನವಾಸಿ ಪ್ರಾಂತದ ಆಧಿಪತ್ಯಕ್ಕಾಗಿ ದಖನಿನ ಎರಡು ಬಲಿಷ್ಠ ರಾಜರು ಪರಸ್ಪರ ವಿರುದ್ಧವಾಗಿ ನಿಂತರು. ಬಲ್ಲಾಳನಿಗೆ ಈ ಪರಿಸ್ಥಿತಿ ಅನುಕೂಲಕರವಾಗಿರಲಿಲ್ಲವಾಗಿ ತಾನು ಗಳಿಸಿದ ಉತ್ತರ ಕರ್ನಾಟಕದ ಭಾಗಗಳನ್ನು ಉಳಿಸಿಕೊಳ್ಳುವುದೇ ಪ್ರಯಾಸವಾಯಿತು. 1212ರವರೆಗೆ ಆ ನೆಲವನ್ನೆಲ್ಲ ಹಿಡಿತದಲ್ಲಿಟ್ಟುಕೊಂಡಿದ್ದರೂ ಮುಂದೆ 1215ರ ಹೊತ್ತಿಗೆ ಸಿಂಘಣನ ಪ್ರಾಬಲ್ಯದಿಂದ ಬಲ್ಲಾಳ ತುಂಗಭದ್ರೆಯ ಉತ್ತರದ ಭಾಗವನ್ನೆಲ್ಲ ಕಳೆದುಕೊಂಡ. ಆದರೆ ಹೊಯ್ಸಳ ರಾಜ್ಯ ಭದ್ರವಾದ ಬುನಾದಿಯ ಮೇಲೆ ನಿಂತಿತ್ತು. ಸಿಂಘಣನಂಥ ಶೂರನ ಪ್ರಯತ್ನಗಳು, ಅದರ ಹೊರ ಎಲ್ಲೆಯನ್ನಷ್ಟೇ ಮುಟ್ಟಲು ಸಾಧ್ಯವಾಯಿತು.

ಈ ವೇಳೆಗೆ ಶಕ್ತಿಯುತವಾಗಿ ಬೆಳೆದಿದ್ದ ಹೊಯ್ಸಳ ರಾಜ್ಯಕ್ಕೆ ಹೊಸ ವಿಸ್ತರಣ ಅವಕಾಶಗಳು ಬೆಳೆದುಬಂದುವು. ಈ ಹಿಂದೆಯೇ ರಕ್ತಸಂಬಂಧವನ್ನು ಬೆಳೆಸಿದ್ದ ಚೋಳರೊಡನೆ ರಾಜಕೀಯ ಸಂಬಂಧವನ್ನು ಬೆಳೆಸಲಾಯಿತು. ಮೂರನೆಯ ಕುಲೋತ್ತುಂಗ ಚೋಳ ತನ್ನ ಸಾಮಂತರಾದ ಪಾಂಡ್ಯರಿಂದ ಪರಾಜಿತನಾದಾಗ, ತನ್ನ ದುಃಸ್ಥಿತಿಯಲ್ಲಿ ಬಲ್ಲಾಳನ ಸಹಾಯವನ್ನು ಯಾಚಿಸಿದ. ಬಲ್ಲಾಳ ತನ್ನ ಕುಮಾರ ಎರಡನೆಯ ನರಸಿಂಹನ ನೇತೃತ್ವದಲ್ಲಿ ಹೊಯ್ಸಳ ಸೈನ್ಯವನ್ನು ಕುಲೋತ್ತುಂಗನ ಸಹಾಯಕ್ಕೆ ಕಳುಹಿಸಿದ. ನರಸಿಂಹ ರಾಜರಾಜನ ಶತ್ರುಗಳನ್ನು ಸೋಲಿಸಿ ಅವನನ್ನು ಚೋಳ ಸಿಂಹಾಸನದ ಮೇಲೆ ಕೂರಿಸಿದ. ಇದರಿಂದ ತಮಿಳುನಾಡಿನ ರಾಜಕೀಯದಲ್ಲಿ ಹೊಯ್ಸಳರ ಕೈವಾಡದ ನಾಂದಿಯಾಯಿತು. ಬಲ್ಲಾಳ ಪಾಂಡ್ಯರಾಜ ಗಜಕೇಸರಿ, ಚೋಳರಾಜ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದುಗಳನ್ನು ಧರಿಸಿದ.

ಇಮ್ಮಡಿ ವೀರಬಲ್ಲಾಳ (1173–1220) ಹೊಯ್ಸಳ ಸಂತತಿಯ ಸಾಮ್ರಾಟರಲ್ಲೆಲ್ಲ ಅತ್ಯಂತ ಪರಾಕ್ರಮಿ. ನರಸಿಂಹನ ಕಾಲದಲ್ಲಿ ಮುದುರಿಹೋಗಿದ್ದ ಹೊಯ್ಸಳ ರಾಜ್ಯವನ್ನು ತನ್ನ ಬಾಹುಬಲಸಾಮರ್ಥ್ಯ ಹಾಗೂ ದೂರದೃಷ್ಟಿಯಿಂದ ವಿಸ್ತರಿಸಿ, ದಕ್ಷಿಣ ಭಾರತದ ರಾಜಕೀಯದಲ್ಲಿ ಹೊಯ್ಸಳ ವಂಶವನ್ನು ಒಂದು ಮುಖ್ಯ ಶಕ್ತಿಯಾಗಿ ರೂಪಿಸಿದ ಕೀರ್ತಿ ಈತನದು.

ಇವನ ಮಗ ಎರಡನೆಯ ನರಸಿಂಹನ (1220–35) ಕಾಲದಲ್ಲಿ ಈ ಹಿಂದೆ ಬಲ್ಲಾಳ ಸ್ಥಾಪಿಸಿದ್ದ ಸಾಮ್ರಾಜ್ಯ ಭದ್ರಪಟ್ಟುದಲ್ಲದೆ ಅಂದು ತಮಿಳುನಾಡಿನಲ್ಲಿ ಆಳುತ್ತಿದ್ದ ಚೋಳರು ಬಹಳ ಬಲಹೀನರಾಗಿ, ಪಾಂಡ್ಯರೇ ಮೊದಲಾದವರಿಂದ ಪೀಡಿತರಾಗಿದ್ದು, ಹಲವು ಸಂದರ್ಭಗಳಲ್ಲಿ ರಾಜ್ಯವನ್ನೂ ಕಳೆದುಕೊಂಡಿದ್ದರು. ಬಲ್ಲಾಳನ ಕಾಲದಿಂದಲೂ ಬೆಳೆದುಬಂದಿದ್ದ ಚೋಳ–ಹೊಯ್ಸಳ ರಕ್ತಸಂಬಂಧ ಮತ್ತು ತತ್ಕಾಲೀನ ತಮಿಳುನಾಡಿನ ಅಸ್ತವ್ಯಸ್ತ ಸ್ಥಿತಿಯನ್ನು ಚಾಕಚಕ್ಯತೆಯಿಂದ ಬಳಸಿಕೊಂಡ ನರಸಿಂಹ, ಹಲವು ಬಾರಿ ತಮಿಳುನಾಡಿಗೆ ನುಗ್ಗಿ ಚೋಳವೈರಿಗಳನ್ನು ಸದೆಬಡಿದು ಚೋಳರಿಗೆ ರಾಜ್ಯ ದಕ್ಕಿಸಿಕೊಟ್ಟ. ಚೋಳರು ಕೃತಜ್ಞತೆಯಿಂದ ಪ್ರಾಯಶಃ ನರಸಿಂಹನ ರಾಜಕೀಯ ಚಾತುರ್ಯದಿಂದಲೂ ಇರಬಹುದು, ತಮಿಳುನಾಡಿನ ಕೊಯಮತ್ತೂರು, ತಿರುಚ್ಚಿರಾಪಳ್ಳಿ ಜಿಲ್ಲೆಯ ಹಲವು ಭಾಗಗಳನ್ನು ಹೊಯ್ಸಳರಿಗೆ ವಹಿಸಿಕೊಟ್ಟರು. ಇದರಿಂದಾಗಿ ನರಸಿಂಹನ ಕಾಲದಲ್ಲಿ ಹೊಯ್ಸಳ ರಾಜ್ಯ ತಮಿಳುನಾಡಿಗೂ ವಿಸ್ತರಿಸಿತು. ಇತ್ತ ರಾಜ್ಯ ವಿಸ್ತರಣೆಯಾದರೂ ಉತ್ತರದಲ್ಲಿ ಸೇವುಣರ ಧಾಳಿಗಳು ಮುಂದುವರಿಯುತ್ತಲೇ ಇದ್ದವು. ಆದರೂ ರಾಜ್ಯದ ಉತ್ತರ ದಕ್ಷಿಣದ ಎರಡು ಕಡೆಗಳಲ್ಲೂ ಸೈನ್ಯಾಚರಣೆಯಲ್ಲಿ ನಿರತನಾಗಿ ಹೊಯ್ಸಳ ರಾಜ್ಯವನ್ನು ಗಟ್ಟಿಯಾಗಿ ಉಳಿಸಿದ್ದಲ್ಲದೆ ದಕ್ಷಿಣದಲ್ಲಿ ವಿಸ್ತರಿಸಿದ್ದು ಎರಡನೆಯ ನರಸಿಂಹನ ಮುಖ್ಯ ಸಾಧನೆ. ಈ ಕಾಲದಿಂದ ಹೊಯ್ಸಳ ಪ್ರಭಾವ ತಮಿಳುನಾಡಿನಲ್ಲಿ ಭದ್ರವಾಗಿ ನೆಲೆಯೂರಿದ್ದೂ ಗಮನಾರ್ಹ ಅಂಶ.

ನರಸಿಂಹನ ಮಗ ಸೋಮೇಶ್ವರ (1235–53) ತತ್ಕಾಲೀನ ರಾಜಕೀಯದಲ್ಲಿ ಹೇಳಿಕೊಳ್ಳುವ ಚಾಕಚಕ್ಯತೆಯನ್ನೇನೂ ತೋರಿಸಲಿಲ್ಲ. ಇವನು ಹೆಚ್ಚಾಗಿ ತಮಿಳುನಾಡಿನಲ್ಲೇ ಇರುತ್ತಿದ್ದುದರಿಂದ ಹೊಯ್ಸಳ ರಾಜ್ಯದ ಉತ್ತರದಲ್ಲಿ ಸೇವುಣರು ಸಾಕಷ್ಟು ಬಲಸಂವರ್ಧನೆ ಮಾಡಿಕೊಂಡಂತೆ ತೋರುತ್ತದೆ. ಆದರೆ ಹೊಯ್ಸಳ ರಾಜ್ಯಕ್ಕೇನೂ ಹೆಚ್ಚು ಧಕ್ಕೆಯಾಗಲಿಲ್ಲ. ಲಾಭವಂತೂ ಸಾಧ್ಯವೇ ಇರಲಿಲ್ಲ. ತಮಿಳುನಾಡಿನಲ್ಲಿ ಅಂದಿನ ರಾಜಕೀಯ ಸಮತೋಲನ ಅಸ್ತವ್ಯಸ್ತವಾದ್ದರಿಂದ ಹಲವು ಯುದ್ಧಗಳಲ್ಲಿ ಈತ ಭಾಗವಹಿಸಬೇಕಾಯಿತು. ಇವನು ಚೋಳರೊಡನೆಯೇ ಅಲ್ಲದೆ ಅವರ ವೈರಿಗಳಾಗಿದ್ದ ಪಾಂಡ್ಯರೊಡನೆಯೂ ರಕ್ತಸಂಬಂಧ ಬೆಳೆಸಿದ್ದ. ಈ ಎರಡು ವಂಶದವರ ಶಾಸನಗಳೂ ಸೋಮೇಶ್ವರನನ್ನು ಮಾವ ಎಂದು ಹೆಸರಿಸುತ್ತವೆ. ಆದರೆ ಇದನ್ನೇ ಲಾಭ ಮಾಡಿಕೊಂಡ ಸೋಮೇಶ್ವರ ಇಬ್ಬರಲ್ಲಿ ಯುದ್ಧವಾದಾಗ ಯಾವ ಒಂದು ಕಡೆಗೂ ಒಲವು ತೋರಿಸದೆ, ಇಬ್ಬರನ್ನೂ ನಿಗ್ರಹಿಸಿ ಹೊಯ್ಸಳ ಪ್ರಭಾವವನ್ನು ಸುಮಾರು ತಮಿಳುನಾಡಿನಲ್ಲೆಲ್ಲ ಹರಡಿ, ಆ ದೇಶದ ಪ್ರಬಲಶಕ್ತಿಯಾದದ್ದು ಇವನ ಮುಖ್ಯ ಸಾಧನೆ. ಈ ಕಾಲದಲ್ಲಿ ಹೊಯ್ಸಳ ರಾಜ್ಯ ಬಹು ವಿಸ್ತಾರವಾಗಿದ್ದುದರಿಂದಲೂ ಇವನ ಮಕ್ಕಳಾದ 3ನೆಯ ನರಸಿಂಹ ಮತ್ತು ರಾಮನಾಥರಲ್ಲಿ ಸಾಮರಸ್ಯವಿಲ್ಲದ್ದರಿಂದಲೂ ಸೋಮೇಶ್ವರ ತನ್ನ ಆಳಿಕೆಯ ಕಡೆಯ ಭಾಗದಲ್ಲಿ ರಾಜ್ಯವನ್ನು ಇಬ್ಭಾಗ ಮಾಡಿ ಹಂಚಿದ.

ಹೊಯ್ಸಳ ರಾಜ್ಯದ ಕರ್ನಾಟಕ ಭಾಗವನ್ನು ಆಳುತ್ತಿದ್ದ 3ನೆಯ ನರಸಿಂಹನ (1253–92) ಕಾಲದಲ್ಲಿ ಇವನಿಗೂ ಇವನ ಮಲತಮ್ಮನಾದ ವೀರ ರಾಮನಾಥನಿಗೂ ನಡೆದ ದಾಯಾದಿ ಕಲಹಗಳಷ್ಟೇ ಪ್ರಮುಖವಾಗಿ ಕಂಡುಬರುತ್ತವೆ. ಹಲವು ಬಾರಿ ಸೇವುಣ ರಾಮಚಂದ್ರ ಮತ್ತು ಮಹಾದೇವ ಹೊಯ್ಸಳ ರಾಜ್ಯವನ್ನು ಕಬಳಿಸಲು ಪ್ರಯತ್ನಿಸಿದರಾದರೂ ಅದನ್ನು ಸಾಧಿಸಲು ಅವಕಾಶ ಕೊಡದಿದ್ದುದಷ್ಟೇ ಈ ನರಸಿಂಹನ ಸಾಧನೆ.

ವಿಕ್ರಮಪುರದಿಂದ ಹೊಯ್ಸಳ ರಾಜ್ಯದ ತಮಿಳು ಭಾಗಗಳನ್ನು ಆಳುತ್ತಿದ್ದ ವೀರರಾಮನಾಥ (1253–95) ತನ್ನ ಆಳಿಕೆಯ ಪ್ರಾರಂಭದಲ್ಲೇ ಮದುರೆಯ ಜಟಾವರ್ಮನ್ ಸುಂದರಪಾಂಡ್ಯನಿಂದ ಪರಾಜಿತನಾಗಿ ತನ್ನ ರಾಜ್ಯದ ಹೆಚ್ಚು ಪ್ರದೇಶಗಳನ್ನು ಕಳೆದುಕೊಂಡು ಹೊಸೂರು ಬಳಿಯ ಕುಂದಾಣಿಯನ್ನು ರಾಜಧಾನಿಯಾಗಿ ಮಾಡಿಕೊಂಡು ತನ್ನ ಸಹೋದರ ನರಸಿಂಹನಿಗೆ ಸೇರಿದ ಪ್ರದೇಶಗಳನ್ನು ಅನೇಕ ವೇಳೆ ಮುತ್ತುವುದಷ್ಟೇ ಅವನು ಜೀವನಪರ್ಯಂತ ನಡೆಸಿದ ಕೆಲಸ. ರಾಮನಾಥ ಮತ್ತು ನರಸಿಂಹರ ಕಾಲದಲ್ಲಿ ಹೊಯ್ಸಳರು ತಮಿಳುನಾಡಿನ ಮೇಲೆ ಹೊಂದಿದ್ದ ಪ್ರಭುತ್ವಕ್ಕೆ ಚ್ಯುತಿ ಬಂದಿತು.

3ನೆಯ ನರಸಿಂಹನ ಮಗ ಮೂರನೆಯ ಬಲ್ಲಾಳನ (1292–1343) ಆಳಿಕೆಯ ಮೊದಲೆರಡು ದಶಕಗಳು ಆಶಾದಾಯಕವಾಗಿದ್ದುವು. ಈತ ಪಟ್ಟಕ್ಕೆ ಬಂದ ಕೂಡಲೇ ದಾಯಾದಿ ಕಲಹದಿಂದ ಅಧೋಗತಿಗೆ ಇಳಿದಿದ್ದ ರಾಜ್ಯವನ್ನು ಸುಭದ್ರಸ್ಥಿತಿಗೆ ತರಲು ಯತ್ನಿಸಿದ. 1301ರ ವೇಳೆಗೆ ರಾಮನಾಥನ ಆಡಳಿತದಲ್ಲಿ ಇದ್ದ ಪ್ರದೇಶಗಳನ್ನು ಪೂರ್ಣವಾಗಿ ವಶಪಡಿಸಿಕೊಂಡು ಹೋಳಾಗಿದ್ದ ರಾಜ್ಯವನ್ನು ಒಂದುಗೂಡಿಸಿದ. 1302ರ ಹೊತ್ತಿಗೆ ಸೇವುಣರ ಮೇಲೂ ಯುದ್ಧ ಹೂಡಿ ರಾಜ್ಯದ ಉತ್ತರದ ಗಡಿಯನ್ನು ಭದ್ರಪಡಿಸಿ, ಹೊಯ್ಸಳ ರಾಜ್ಯದ ಹಿಂದಿನ ಪ್ರಭಾವೀಸ್ಥಿತಿಯನ್ನು ಸಾಧಿಸಿದ. ಆದರೆ ಬಲ್ಲಾಳನ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಸಂದಿಗ್ಧ ಕಾಲ. ಅತ್ತ ಉತ್ತರ ಭಾರತದಲ್ಲಿ ಮುಸಲ್ಮಾನ ಅರಸರು ಪ್ರಬಲರಾಗಿ ದಕ್ಷಿಣ ಭಾರತದ ಮೇಲೂ ಕಣ್ಣು ಹಾಯಿಸುವ ಸ್ಥಿತಿಗೇರಿದ್ದರು.

1310ರ ವೇಳೆಗೆ ಅಲಾಉದ್ದೀನ್‌ನ ಅಪ್ಪಣೆಯ ಮೇರೆಗೆ ಅವನ ದಂಡನಾಯಕನಾದ ಮಲ್ಲಿಕ್ ಕಾಫರ್ ದೇವಗಿರಿಯ ಸೇವುಣರನ್ನು ಸೋಲಿಸಿ ಕರ್ನಾಟಕ ಮತ್ತು ತಮಿಳುನಾಡುಗಳನ್ನು ಜಯಿಸಿ ಅಪರಿಮಿತ ಐಶ್ವರ್ಯವನ್ನು ದೋಚುವುದಕ್ಕಾಗಿ ದೋರಸಮುದ್ರದತ್ತ ಮುಂದುವರಿದ. ಇವನು ಹೊಯ್ಸಳ ರಾಜ್ಯದ ಗಡಿಗಳನ್ನು ಪ್ರವೇಶಿಸುತ್ತಿದ್ದ ಸಮಯದಲ್ಲಿ ಬಲ್ಲಾಳ ತಮಿಳುನಾಡಿನಲ್ಲಿ ತನ್ನ ಪ್ರಭಾವ ಸ್ಥಾಪಿಸುವ ಯತ್ನದಲ್ಲಿದ್ದ. ಹಲವು ಭಾಗಗಳು ಶತ್ರುಗಳ ಧಾಳಿಗೆ ಸಿಕ್ಕಿ ಪಾಳುಬಿದ್ದವು. ಬಲ್ಲಾಳ ಈ ವಿಷಮ ಪರಿಸ್ಥಿತಿಯಿಂದ ಪಾರಾಗಲು ಕಾಫರನಿಗೆ ವಿಶೇಷ ಐಶ್ವರ್ಯವನ್ನು ನೀಡಿ ಒಪ್ಪಂದ ಮಾಡಿಕೊಂಡ. ಮಹಮ್ಮದೀಯ ಧಾಳಿ ಕೇವಲ ಆಕಸ್ಮಿಕವೆಂದು ಭಾವಿಸಿದ್ದ ಬಲ್ಲಾಳ ಪುನಃ ಹಳೆಯ ರಾಜಕೀಯ ಅಂತರ್ಯುದ್ಧಗಳಲ್ಲಿ ತೊಡಗಿದ. ತಮಿಳುನಾಡಿನಲ್ಲಿ ಪಾಂಡ್ಯವಂಶದ ಈರ್ವರು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾಗ ಒಬ್ಬನಿಗೆ ಬೆಂಬಲ ನೀಡಿ ಅವನಿಗೆ ರಾಜ್ಯ ದಕ್ಕಿಸಿಕೊಟ್ಟು, ಇದೇ ಸಂದರ್ಭದಲ್ಲಿ ತಿರುವಣ್ಣಾಮಲೈ ಮತ್ತು ಸುತ್ತಲಿನ ಪ್ರದೇಶಗಳನ್ನು ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡ. ಆದರೆ ಮಹಮ್ಮದೀಯರ ಉತ್ಕರ್ಷವನ್ನು ಗಮನಿಸಿ ದಕ್ಷಿಣ ಭಾರತದ ತಮ್ಮ ಆಳಿಕೆಯನ್ನು ಭದ್ರಪಡಿಸಿಕೊಳ್ಳಲು ಒಟ್ಟುಗೂಡಿ ಸತತ ಪ್ರಯತ್ನವನ್ನು ನಡೆಸಬೇಕಾಗಿದ್ದ ಈ ಕಾಲದಲ್ಲಿ ಅಂತರ್ಯುದ್ಧದಲ್ಲಿ ತೊಡಗಿ ಎಲ್ಲರೂ ಬಲಹೀನರಾಗುತ್ತಿದ್ದುದು ಮುಂದಿನ ರಾಜಕೀಯ ದುರಂತಕ್ಕೆ ದಾರಿಯಾಯಿತು. 1325ರಲ್ಲಿ ಪುನಃ ಉತ್ತರದಿಂದ ಉಪದ್ರವ ತಲೆದೋರಿತು. ಆ ವೇಳೆಗೆ ದೆಹಲಿಯ ಸಾಮ್ರಾಟನಾಗಿದ್ದ ಮಹಮ್ಮದ್ ಬಿನ್ ತುಗಲಕ್ ದಖನ್ ಪ್ರಸ್ಥಭೂಮಿಯವರೆಗೂ ರಾಜ್ಯ ವಿಸ್ತರಿಸಿದ್ದ. ತನ್ನ ವಿರುದ್ಧ ದಂಗೆಯೆದ್ದ ಬಹಾಉದ್ದೀನನನ್ನು ಸೆರೆಹಿಡಿಯಲು ಮಹಮ್ಮದ್ ಬಿನ್ ತುಗಲಕ್ ಕಳುಹಿಸಿದ ಸೈನ್ಯದಿಂದ ವಾರಂಗಲ್ ಮತ್ತು ಕಂಪಿಲಿಯ ರಾಜಮನೆತನಗಳು ನಿರ್ನಾಮವಾದವು. ಬಹಾಉದ್ದೀನನನ್ನು ಮಹಮ್ಮದ್ ಬಿನ್ ತುಗಲಕನ ಸೈನ್ಯಕ್ಕೆ ಒಪ್ಪಿಸಿ ವೀರಬಲ್ಲಾಳ ಮಹಮದೀಯರ ಆಕ್ರಮಣದಿಂದ ತನ್ನ ರಾಜ್ಯವನ್ನು ಪಾರುಮಾಡಿದ.

**ಹೊಯ್ಸಳರ ವಂಶಾವಳಿ:**

ಸಳ
- ಮಾರ– (ನೃಪಕಾಮ)
  - ಉಪ್ಪಿಡಿವೊಯ್ಸಳ
    - ಎರೆಯಂಗ
      - ತಳಕಾಡುವೊಯ್ಸಳ
        - ಉದಯಾದಿತ್ಯ
          - ಕುಂಟವಿನಯಾದಿತ್ಯ/ವಿನಯಾದಿತ್ಯI (1006–20)
- ನೃಪಕಾಮ II (ಸು. 1000–45)
  - ವಿನಯಾದಿತ್ಯ II (ಸು. 1045–98)
    - ಎರೆಯಂಗ (ಸು. 1098–1100)
      - ಬಲ್ಲಾಳ I (ಸು.1100–1108)
      - ವಿಷ್ಣುವರ್ಧನ (ಸು.1108–42)
        - ಬಲ್ಲಾಳದೇವ
        - ನರಸಿಂಹ I (1142–73)
          - ಬಲ್ಲಾಳ II (1173–1220)
            - ನರಸಿಂಹ II (1220–35)
              - ಸೋಮೇಶ್ವರ (1235– ಸು. 53)
                - ನರಸಿಂಹ III (ಸು. 1253–92)
                  - ಬಲ್ಲಾಳ III (1292–1343)
                    - ವಿರೂಪಾಕ್ಷ ಬಲ್ಲಾಳ IV (1343–ಸು. 46)
                - ರಾಮನಾಥ (ಸು.1253–95)
        - ವಿಜಯನಾರಾಯಣ
      - ಉದಯಾದಿತ್ಯ II

ಅನಂತರ ಬಲ್ಲಾಳ ಮಹಮದೀಯ ರಾಜ್ಯಗಳ ನಿಜಶಕ್ತಿಯನ್ನು ಅರಿತಂತೆ ತೋರುತ್ತದೆ. ಮುಂದೆ ತನ್ನ ರಾಜ್ಯದ ಗಡಿಗಳಲ್ಲಿ ಉಪರಾಜಧಾನಿಗಳನ್ನು ಸ್ಥಾಪಿಸಿ ರಕ್ಷಣೆಗಾಗಿ ಸೈನ್ಯದ ತುಕಡಿಗಳನ್ನು ನೇಮಿಸಿದ. ಇವನು ಶಕ್ತಿಯುತನಾಗಿ ಪಶ್ಚಿಮ–ಪೂರ್ವ ಸಮುದ್ರ ಪರ್ಯಂತದ ರಾಜ್ಯವನ್ನು ಅನುಭವಿಸುತ್ತಿದ್ದರೂ ಉತ್ತರದಲ್ಲಿ ದೇವಗಿರಿಯಲ್ಲೂ ದಕ್ಷಿಣದಲ್ಲಿ ಮದುರೆಯಲ್ಲೂ ಮುಸಲ್ಮಾನ ರಾಜ್ಯಗಳು ನೆಲೆಗೊಂಡಿದ್ದುವು. ಮುಂದೆ ದೊಡ್ಡ ಸಾಮ್ರಾಜ್ಯ ಸ್ಥಾಪನೆಗೆ ರಾಜಧಾನಿಯಾದ ವಿಜಯನಗರ ಅಥವಾ ಹಂಪಿಯಲ್ಲೂ ತನ್ನ ಬಲವನ್ನು ಸ್ಥಾಪಿಸಿದ. ಬಲ್ಲಾಳ ಉತ್ತರದಿಂದ ಬಂದ ಈ ಹೊಸ ರಾಜಕೀಯ ಶಕ್ತಿಯನ್ನು ಎದುರಿಸಲು ಇಲ್ಲಿ ಉಳಿದಿದ್ದ ಏಕೈಕ ರಾಜನಾಗಿದ್ದ. ಆದರೆ ಕಾಲಕ್ಕೆ ತಕ್ಕ ಹೊಸ ರಾಜನೀತಿಯನ್ನು ರೂಪಿಸಿಕೊಳ್ಳುವ ಇವನ ಕ್ರಮ ಬಹು ತಡವಾಗಿ ಹುಟ್ಟಿತು.

ಬಲ್ಲಾಳ ಅಪರಿಮಿತ ಸೈನ್ಯದೊಡನೆ 1342ರಲ್ಲಿ ತಮಿಳುನಾಡಿಗೆ ಹೋದ. ಕೊಪ್ಪಂ ಕಣ್ಣಾನೂರಿನ ಬಳಿಯಲ್ಲಿ ಮದುರೆಯ ಸುಲ್ತಾನನ ಸೈನ್ಯಕ್ಕೂ ಹೊಯ್ಸಳ ಸೈನ್ಯಕ್ಕೂ ಕದನ ನಡೆದು ಮಹಮದೀಯ ಸೈನ್ಯ ಸೋಲನ್ನು ಅನುಭವಿಸಿದರೂ ಶತ್ರುಗಳ ಕುತಂತ್ರದಿಂದ ಬಲ್ಲಾಳ ಅವರ ಸೆರೆಯಾಗಿ, ಕೊನೆಗೆ ಬಲಿಯಾದ (1343). ಹೊಯ್ಸಳ ಸಾಮ್ರಾಜ್ಯ ಅಸ್ತಂಗತವಾಯಿತು. ಇವನ ಮಗ ವಿರೂಪಾಕ್ಷ ಪಟ್ಟವೇರಿದರೂ ತನ್ನ ದುರ್ಬಲತೆಯಿಂದಾಗಿ ಕೆಲವೇ ವರ್ಷಗಳಲ್ಲಿ ರಾಜಕೀಯದಿಂದ ಕಣ್ಮರೆಯಾದ. ಆದರೆ ಮೂರನೆಯ ಬಲ್ಲಾಳ ತನ್ನ ಆಳಿಕೆಯ ಕೊನೆಯ ಭಾಗದಲ್ಲಿ ದಕ್ಷಿಣದಲ್ಲಿ ಹಿಂದು ರಾಜ್ಯವನ್ನು ಸ್ಥಾಪಿಸಲು ಹೊಂದಿದ್ದ ಉದ್ದೇಶದ ಬೀಜ ಬಲವಾಗಿ ಬೇರೂರಿದ್ದು 1336ರಲ್ಲಿ ಹುಟ್ಟಿದ ವಿಜಯನಗರ ಸಾಮ್ರಾಜ್ಯದಲ್ಲಿ ಫಲ ನೀಡಿತು. (ಜಿ.ಆರ್.ಆರ್)

**ಆಡಳಿತ ವ್ಯವಸ್ಥೆ:** ಹೊಯ್ಸಳರ ಕಾಲದ ಆಡಳಿತ ಮತ್ತು ಅಂದಿನ ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಕುರಿತಂತೆ ಬೆಳಕು ಚೆಲ್ಲುವ ಹಲವಾರು ಶಾಸನ ಮತ್ತು ಸಾಹಿತ್ಯಾಧಾರಗಳಿವೆ. ಇವರ ಕಾಲದ ಆಡಳಿತ ಪ್ರಾಚೀನ ಕಾಲದ ರಾಜ ಪ್ರಭುತ್ವಕ್ಕನುಗುಣವಾದ ವ್ಯವಸ್ಥೆಯಾಗಿತ್ತು. ಅಧಿಕಾರ ರಾಜನಲ್ಲಿಯೇ ಕೇಂದ್ರೀಕರಣಗೊಂಡಿದ್ದು ರಾಜನೇ ಸರ್ವಾಧಿಕಾರಿಯಾಗಿದ್ದ. ರಾಜ್ಯವನ್ನು ಹಲವಾರು ಭಾಗಗಳಾಗಿ ಮಾಡಲಾಗಿರುತ್ತಿತ್ತು. ಮಹಾಮಂಡಲಾಧಿಕಾರಿಗಳು, ಯುವರಾಜ, ದಂಡನಾಯಕರು, ಸಂಧಿವಿಗ್ರಹಿಗಳು ಮೊದಲಾದ ಪ್ರತಿಷ್ಠಿತ ಅಧಿಕಾರಿಗಳಿದ್ದರು. ಹಣಕಾಸಿನ ಆಡಳಿತ ಶ್ರೀಕರಣ ಸರ್ವಾಧಿಕಾರಿ ಎಂಬ ಲೆಕ್ಕಪತ್ರ ಮುಖ್ಯಸ್ಥನ ನಿಯಂತ್ರಣದಲ್ಲಿತ್ತು. ಹೊಯ್ಸಳ ಅಧಿಕಾರಿಗಳಲ್ಲಿ ಶ್ರೇಷ್ಠ ದರ್ಜೆಯವನೇ ದಂಡನಾಯಕ. ಇವನಿಗೆ ಮಹಾಪ್ರಧಾನ ಸಲಹೆಗಾರನಾಗಿದ್ದ. ಭಂಡಾರಿ, ಸೇನ, ಬೋವ, ಪೆರ್ಗಡೆ, ಹೆಗ್ಗಡೆ ಎಂಬ ಅಧಿಕಾರಿಗಳು ಸಹಕರಿಸುತ್ತಿದ್ದರು. ಹೊಯ್ಸಳರ ಕಾಲದ ಪ್ರಮುಖ ದಂಡನಾಯಕರಲ್ಲಿ ಪೆರುಮಾಳ ದೇವ, ಸೋಮೆಯ, ಚಾವುಂಡರಾಯ, ಗಂಗರಾಜ, ಮರಿಯಾನೆ, ಕೇತಯ್ಯ, ಮಲ್ಲಯ್ಯ ಮುರಾರಿ, ಭೋಗಯ್ಯ, ಚಂದ್ರಮೌಳಿ ಪುಣಿಸಮಯ್ಯ ಬಿಟ್ಟಿಮಯ್ಯ, ರಾಯಣ ದಂಡನಾಥ, ಶಂಕರ ನಾಡದಂಡನಾಥರನ್ನು ಹೆಸರಿಸಬಹುದು.

ಹೊಯ್ಸಳರ ಸೈನ್ಯ ಚತುರಂಗ ಬಲದಿಂದ ಕೂಡಿತ್ತು. ಇವು–ಕಾಲ್ದಳ, ರಥದಳ, ಗಜದಳ ಮತ್ತು ಅಶ್ವದಳ. ಅಶ್ವಗಳನ್ನು ಸಿಂಧ್, ಅರೇಬಿಯ, ಕಾಂಭೋಜಗಳಿಂದ ಆಮದು ಮಾಡಿಕೊಳ್ಳುತ್ತಿದ್ದರು. ಬೇಡರು ಮತ್ತು ಲೆಂಕರು ಕಾಲ್ದಳದಲ್ಲಿ ಅಧಿಕ ಸಂಖ್ಯೆಯಲ್ಲಿದ್ದರು. ಗರುಡರು ಅಥವಾ ಅಂಗರಕ್ಷಕರು ರಾಜರಕ್ಷಣೆಗೆ ಮುಂದಾಗಿದ್ದು ರಾಜ ಯುದ್ಧದಲ್ಲಿ ಕಾದಾಡಿ ಮಡಿದಾಗ ತಾವು ಆತನೊಂದಿಗೆ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದರು.

ಮಹಾಸಂಧಿವಿಗ್ರಹಿ, ಸಂಧಿವಿಗ್ರಹಿ ವಿದೇಶಾಂಗ ಸಚಿವರಾಗಿದ್ದು ಯುದ್ಧ ಮತ್ತು ಶಾಂತಿ ಮುಖ್ಯಸ್ಥರಾಗಿದ್ದರು. ಯುದ್ಧದಲ್ಲಿ ಮಡಿದವರ ಕುಟುಂಬಕ್ಕೆ ಪರಿಹಾರವಾಗಿ ನೆತ್ತರು ಕೊಡುಗೆ ರಕ್ತ ಕೊಡುಗೆ ಎಂಬ ಭೂದಾನ ನೀಡುತ್ತಿದ್ದರು. ರಾಜ್ಯದ ರಕ್ಷಣೆಯಲ್ಲೂ ದುರ್ಗ ಅಥವಾ ಕೋಟೆ ಪ್ರಮುಖ ಅಂಗವಾಗಿತ್ತು. ಹೊಯ್ಸಳ ವೀರಗಲ್ಲು ಶಿಲ್ಪಗಳಲ್ಲಿ ಮತ್ತು ದೇವಾಲಯ ಶಿಲ್ಪಗಳಲ್ಲಿ ಸೈನಿಕರನ್ನು ಕೆತ್ತಲಾಗಿದೆ. ಅವರು ಧರಿಸಿರುವ ಆಭರಣ, ಉಡುಗೆ ತೊಡುಗೆಗಳಿಂದ ಸೈನಿಕರ ವೇಷಭೂಷಣ, ಆಯುಧಗಳನ್ನು ಅಂದಾಜು ಮಾಡಬಹುದು. ಕತ್ತಿ ಗುರಾಣಿ, ಈಟಿ ಭರ್ಜಿ, ತೋಮರ, ಶೂಲ, ಶಲ್ಯ ಶಕ್ತಿ ಮುದ್ಗರ, ಮೂಸಲ, ಮುಸಂದಿ, ಪರಿಘ, ಪಲಗೆ ಇತ್ಯಾದಿ ಆಯುಧಗಳನ್ನು ಹೆಸರಿಸಬಹುದು. ಹೊಯ್ಸಳ ಅರಸರು ದುಷ್ಟ ಶಿಕ್ಷಕ ಶಿಷ್ಟಪರಿಪಾಲಕರಾಗಿದ್ದರು. ಸ್ಥಳೀಯ ಸಮುದಾಯಗಳು ತಮ್ಮದೇ ಆದ ಕಟ್ಟಲೆಗಳನ್ನು ಮಾಡಿಕೊಂಡಿದ್ದವು. ಮೊಕದ್ದಮೆಗಳನ್ನು ಆಧರಿಸಿ ಸ್ಥಳೀಯರು, ಸ್ಥಾನಿಕರು, ದಂಡನಾಯಕರು, ರಾಜರು ನ್ಯಾಯ ತೀರ್ಮಾನ ಮಾಡುತ್ತಿದ್ದರು. ದಂಡ, ತಪ್ಪು ಶಿಕ್ಷೆಗಳಾಗಿದ್ದವು. ಹೊಯ್ಸಳರು ಸ್ವತಂತ್ರ ರಾಜ್ಯವನ್ನು ಕಟ್ಟುವುದಕ್ಕೆ ಮೊದಲು ತಲಕಾಡಿನ ಗಂಗರು, ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರುಗಳ ಕಾಲದಲ್ಲಿ ವಿವಿಧ ಅಧಿಕಾರ ಸ್ಥಾನಗಳಲ್ಲಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ. ಹೀಗಾಗಿ ಪ್ರಾರಂಭಿಕ ಅರಸುಗಳಿಂದಲೂ ಇವರಿಗೆ ರಾಜ್ಯವನ್ನು ನಡೆಸಿ ಕೊಂಡು ಹೋಗುವುದು ಕರತಲಾಮಲಕವಾಗಿದ್ದಿತು. ರಾಜನಿಗೆ ಕೇಂದ್ರಾಡಳಿತದಲ್ಲಿ ನೆರವಾಗುತ್ತಿದ್ದ ಅಧಿಕಾರ ವರ್ಗವನ್ನು ಮಾನಸೋಲ್ಲಾಸದಲ್ಲಿ ಪ್ರಸ್ತಾಪಿಸಲಾಗಿದೆ. ಇವರು ರಾಜಗುರು ಅಥವಾ ಪುರೋಹಿತ, ಅಮಾತ್ಯ (ಮಂತ್ರಿ), ಮಂತ್ರಿ (ಸಲಹೆಗಾರ) ಮಹಾಮಂಡ ಲೇಶ್ವರ (ರಾಜ್ಯಪಾಲರು), ಸಾಮಂತ ಅಮಾತ್ಯ (ಸಾಮಂತರು), ಕೋಶಾಧಿಕಾರಿನ್, ನಿಷ್ಕಾಧಿಕಾರಿನ್, ಮೂಲ್ಯಧಿಕಾರಿನ್, ಅರ್ಘಾನಿಧಿಕಾರಿನ್, ಕರುಣಾಧಿಕಾರಿನ್, ವಿದ್ಯಾಧಿಕಾರಿನ್ (ಶಿಕ್ಷಣಾಧಿಕಾರಿ), ಶಾಸ್ತ್ರಾಧಿಕಾರಿನ್ (ವೈದ್ಯಕೀಯ, ಖಗೋಳ, ಸಂಗೀತ, ಜಾತಕಶಾಸ್ತ್ರ), ಚಿತ್ರಾಧಿಕಾರಿನ್ (ಚಿತ್ರಶಾಲೆ), ಮೃಗಾಧಿಕಾರಿನ್ (ಜಿಂಕೆ ಅಥವಾ ಇತರ ಪ್ರಾಣಿಗಳೂ), ಪ್ರಾಣಾಧಿಕಾರಿ (ಫಿಜಿಶಿಯನ್ಸ್), ಗಾಸಾಧಿಕಾರಿನ್(ಅರಣ್ಯ ಇಲಾಖೆ), ವಸ್ತ್ರಾಧಿಕಾರಿನ್ (ಉಡುಪು ಇಲಾಖೆ), ಫಲಾಧಿಕಾರಿನ್ (ಉದ್ಯಾನವಿಭಾಗ), ಪರ್ಣಾಧಿಕಾರಿನ್ (ಎಲೆ ಅಡಕೆ ಹಾಗೂ ಇತರ ವಿಭಾಗ), ವರ್ಣಾಧಿಕಾರಿನ್ (ಜಾತಿ ನಡತೆ ಸಂಪ್ರದಾಯದ ಮೇಲ್ವಿಚಾರಕ), ದುಷ್ಟಾಧಿಕಾರಿನ್ (ಸೆರೆಮನೆ ಮೇಲ್ವಿಚಾರಕ), ದುರ್ಗಾಧಿಕಾರಿನ್ (ಕೋಟೆಗಳ ಮೇಲ್ವಿಚಾರಕ), ಅಂಗಾಧಾರಿನ್ (ಅಂಗರಕ್ಷಕರು). ಅರಮನೆಯ ಆಡಳಿತಕ್ಕೆ ಸಂಬಂಧಿಸಿದಂತೆ ಪಸಾಯಿತ, ಮಹಾಪಸಾಯಿತ, ಅಂತಃಪುರಾಧ್ಯಕ್ಷ ಅಥವಾ ಮೇಲ್ವಿಚಾರಕ ಎಂಬ ಅಧಿಕಾರಿ ವರ್ಗ ಇದ್ದಿತು. ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ಮಂಡಲ, ನಾಡು ಮತ್ತು ಊರು ಎಂಬುದಾಗಿ ವಿಭಾಗಿಸಲಾಗಿತ್ತು. ರಾಜ ರಾಜಧಾನಿಯ ಸುತ್ತಮುತ್ತಲಿನ ವಿಭಾಗಗಳ ಆಡಳಿತವನ್ನು ನೇರವಾಗಿ ನಿರ್ವಹಿಸುತ್ತಿದ್ದ. ಪ್ರತಿ ನಾಡು, ನಾಡಪ್ರಭು ಅಥವಾ ನಾಡಗೌಡಗಳಿಂದ ನಿರ್ವಹಿಸಲ್ಪಡುತ್ತಿತ್ತು. ಊರು ಎಂಬ ಆಡಳಿತ ಘಟಕವನ್ನು ಊರ ಗವುಡ ಅಥವಾ ಪ್ರಭು ಗವುಡ ನೋಡಿಕೊಳ್ಳುತ್ತಿದ್ದ.

ಜಿಲ್ಲಾ ಆಡಳಿತ ಘಟಕ ಹೆಗ್ಗಡೆ ಅಥವಾ ಹೆಗ್ಗಡೆ ಕರ್ಣಮ್, ರಾಜ್ಯಾಧ್ಯಕ್ಷ ಕರ್ಣಮ್ ಅಥವಾ ರಾಜ್ಯಾಧ್ಯಕ್ಷ ಹೆಗ್ಗಡೆ ಎಂಬ ಅಧಿಕಾರಿಗಳ ಅಧೀನದಲ್ಲಿತ್ತು. ಇವರು ಭೂಕಂದಾಯ ವಸೂಲಿ ಮತ್ತು ನ್ಯಾಯಪಾಲನೆಯ ಜವಾಬ್ದಾರಿ ಹೊಂದಿರುತ್ತಿದ್ದರು.

ಆಡಳಿತದ ಕೊನೆಯ ಘಟಕ ಗ್ರಾಮಗಳು. ಗ್ರಾಮಸಭೆ, ಮಹಾಸಭೆ ಎಂಬ ಅನೇಕ ಉಲ್ಲೇಖಗಳಿವೆ. ಗ್ರಾಮದ ಮುಖಂಡ ಗೌಡ, ಪ್ರಭು. ಆತನನ್ನು ಪೆರ್ಗಡೆ, ನಾಯಕ, ಮೂಲಿಗ, ಪ್ರಭುಗಾವುಂಡ ಎಂದು ಕರೆಯಲಾಗುತ್ತಿತ್ತು. ಗ್ರಾಮಸಭೆಗಳು ಸ್ವಾಯತ್ತತೆಯಿಂದ ಕೂಡಿದ್ದು ಸಾರ್ವಜನಿಕ ಕಾರ್ಯಗಳನ್ನು ಕೈಗೊಳ್ಳುತ್ತಿದ್ದವು. ಉದಾ: ದೇವಾಲಯ ನಿರ್ಮಾಣ, ದುರಸ್ತಿ, ವಿಸ್ತರಣೆ, ಕೆರೆಕಟ್ಟೆ ಕಾಲುವೆ, ರಸ್ತೆಗಳ ನಿರ್ಮಾಣ, ಭೂದಾನ, ಗ್ರಾಮ ಸಭೆಯ ಕಾರ್ಯ ಕಲಾಪಗಳು ಇತ್ಯಾದಿ. ಸೇನಬೋವ ಲೆಕ್ಕಿಗನಾಗಿದ್ದು ಭೂನಕ್ಷೆ, ಭೂದಾನ, ದತ್ತಿ ದಾಖಲೆಗಳನ್ನು ಹೊಂದಿರುತ್ತಿದ್ದ.

**ಆರ್ಥಿಕ ಪರಿಸ್ಥಿತಿ:** ಹೊಯ್ಸಳರನಾಡು ಸಂಪದ್ಭರಿತವಾದ ಬೀಡಾಗಿತ್ತು. ಆರ್ಥಿಕ ಬೆನ್ನೆಲುಬಾಗಿದ್ದ ಚಟುವಟಿಕೆಯೆಂದರೆ ಕೃಷಿ. ಕೃಷಿಗೆ ಅನುಕೂಲವಾಗುವಂತೆ ದೋರಸಮುದ್ರ, ವಿಷ್ಣುಸಮುದ್ರ, ರಾಮಸಮುದ್ರ, ರಂಗಸಮುದ್ರ ಮುಂತಾದ ಬೃಹತ್‌ಕೆರೆಗಳನ್ನು ನಿರ್ಮಿಸಿದ್ದರು. ಗ್ರಾಮ ಪಂಚಾಯತಿಗಳು ಕೆರೆಕಟ್ಟೆ, ಕಾಲುವೆಗಳನ್ನು ನಿರ್ಮಿಸುವ ಜವಾಬ್ದಾರಿ ಹೊಂದಿರುತ್ತಿದ್ದವು. ಗುಡಿ ಕೈಗಾರಿಕೆಗಳು, ವ್ಯಾಪಾರ ಹಾಗೂ ತೆರಿಗೆಗಳು –ಈ ಮೂರು ಒಂದಕ್ಕೊಂದು ಪೂರಕವಾದ ಘಟಕಗಳು. ಸಾಗುವಳಿ ಜಮೀನು, ಅದರಲ್ಲಿ ಬೆಳೆಯುವ ವಿಭಿನ್ನ ಬೆಳೆಗಳು, ಜಮೀನುಗಳ ವಿಸ್ತಾರ ಮತ್ತು ವಿಂಗಡಣೆ ಕಂದಾಯ ನಿರ್ಧಾರಕ್ಕೆ ಆಧಾರವಾಗಿದ್ದವು. ಭೂಮಿಯನ್ನು ಕಂಬ ಮಾಪನದಿಂದ ಅಳೆಯಲಾಗುತ್ತಿತ್ತು. ಕಂಬ ಮಾಪನ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿತ್ತು. ಜಮೀನನ್ನು ಅಳೆಯಲು ಕಬ್ಬಿಣದ ಸಲಾಕೆ ಮತ್ತು ಸರಪಳಿಯನ್ನು ಸಹ ಬಳಸುತ್ತಿದ್ದರು. ಕಂದಾಯ ನಿರ್ಧರಿಸಲು ಅಳತೆ ಮಾಡಿ ಜಮೀನಿನ ಸರಹದ್ದುಗಳನ್ನು ಶಂಖ, ಚಕ್ರ, ಹನುಮ ಮೊದಲಾದ ಕಲ್ಲುಗಳಿಂದ ಗುರುತಿಸಲಾಗುತ್ತಿತ್ತು. ದವಸ ಧಾನ್ಯಗಳನ್ನು ಅಳೆಯಲು ಕೊಳಗ ಮತ್ತು ಖಂಡುಗಗಳು ಹೆಚ್ಚಾಗಿ ರೂಢಿಯಲ್ಲಿದ್ದವು. ಮಣ್ಣಿನ ಫಲವತ್ತತೆ ಮತ್ತು ಬೆಳೆಗಳ ಪ್ರಮಾಣ ಮೊದಲಾದವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಸಾಮಾನ್ಯವಾಗಿ ಆ ಕಾಲದಲ್ಲಿ ಒಟ್ಟು ಉತ್ಪನ್ನದ 1/6 ಭಾಗವನ್ನು ತೆರಿಗೆಯಾಗಿ ತೆಗೆದು ಕೊಳ್ಳಲಾಗುತ್ತಿತ್ತು. ಇನ್ನು ಕೆಲವು ಸಂದರ್ಭಗಳಲ್ಲಿ ಇದು 1/4 ಭಾಗ ಅಥವಾ 1/12 ಭಾಗವಾಗಿರುತ್ತಿತ್ತು. ಈ ಕಂದಾಯವನ್ನು ದವಸದ ರೂಪದಲ್ಲಿ ಪಡೆಯುತ್ತಿದ್ದುದೆ ಹೆಚ್ಚು. ಕೆಲವು ಸಂದರ್ಭಗಳಲ್ಲಿ ಸುವರ್ಣ ಅಂದರೆ ಗದ್ಯಾಣ ಮತ್ತು ಪಣಗಳೆಂಬ ಚಿನ್ನದ ನಾಣ್ಯದ ರೂಪದಲ್ಲಿಯೂ ಪಡೆಯಲಾಗುತ್ತಿತ್ತು.

ಆ ಕಾಲದಲ್ಲಿ ಜಾನುವಾರು, ಮೇಕೆ ಮತ್ತು ಹುಲ್ಲುಗಾವಲುಗಳು ಹಾಗೂ ಆಸ್ತಿಯ ಮೇಲೂ ತೆರಿಗೆಗಳನ್ನು ಹಾಕಲಾಗುತ್ತಿತ್ತು. ವಿವಿಧ ವೃತ್ತಿಗಳಿಗೆ ಸಂಬಂಧಿಸಿದಂತೆ ಅಗಸರು, ದನಗಾಹಿಗಳು, ನಾಯಿಂದರು, ವೇಶ್ಯೆಯರು ಮತ್ತು ಇತರ ವರ್ಗಗಳಿಗೆ ತೆರಿಗೆ ಬೀಳುತ್ತಿದ್ದಿತು. ಮರಗೆಲಸದವರಿಗೆ, ಕುಶಲಕರ್ಮಿಗಳಿಗೆ, ಜಟ್ಟಿಗಳಿಗೆ ಸಹ ತೆರಿಗೆ ಅನ್ವಯಿಸುತ್ತಿತ್ತು. ಉಪ್ಪು ತಯಾರಿಕೆ, ಕುಂಬಾರಿಕೆ, ಕಮ್ಮಾರಿಕೆ ವೃತ್ತಿಗಳು ತೆರಿಗೆಯ ವ್ಯಾಪ್ತಿಗೆ ಬರುತ್ತಿದ್ದವು. ವಿವಿಧ ಕೈಗಾರಿಕೆಗಳು ನೀಡುವ ತೆರಿಗೆ ಸರ್ಕಾರದ ಮುಖ್ಯ ಆದಾಯ ಮೂಲಗಳಲ್ಲಿ ಒಂದಾಗಿತ್ತು. ಎಣ್ಣೆ ಕಾಳುಗಳಿಗೆ, ಮಗ್ಗಗಳಿಗೆ ಕವಕಶೇಷೆ, ಆನೆಯ ಶೇಷೆ, ಮನೆದೆರೆ, ಕುದುರೆಯ ಹದಿಕೆ ಮುಂತಾದ ತೆರಿಗೆಗಳಿದ್ದವು. ನಾಣ್ಯಗಳನ್ನು ಮುದ್ರಿಸಲಾಗುತ್ತಿದ್ದ ಟಂಕಸಾಲೆಗೆ ಮುದ್ರೆಮನೆ ಎಂದು ಕರೆಯಲಾಗುತ್ತಿತ್ತು.

**ನಾಣ್ಯಗಳು:** ಹೊಯ್ಸಳರ ರಾಜ್ಯ ಸಮೃದ್ಧವಾಗಿದ್ದುದರಿಂದ ಇವರ ಆಳಿಕೆಯಲ್ಲಿ ನಾಣ್ಯಗಳ ಚಲಾವಣೆ ತಕ್ಕಷ್ಟು ಹೆಚ್ಚಾಗಿಯೇ ಇದ್ದಿರಬೇಕು. ದಾನದತ್ತಿ ಬಿಡುವಾಗ ಭೂಮಿಯ ಹುಟ್ಟುವಳಿ ಯನ್ನು ನಾಣ್ಯಗಳಲ್ಲಿ ಸೂಚಿಸುತ್ತಿದ್ದುದಕ್ಕೆ ಶಾಸನಗಳಲ್ಲಿ ಹೇರಳವಾದ ಉಲ್ಲೇಖಗಳಿವೆ. ದೇವಾಲಯಗಳಲ್ಲಿ ಪೂಜೆಪುನಸ್ಕಾರಗಳಿಗಾಗಿ ನಾಣ್ಯಗಳನ್ನು ದತ್ತಿಯಾಗಿ ಕೊಡುತ್ತಿದ್ದು ಅದರ ಬಡ್ಡಿಯಿಂದ ಕೈಂಕರ್ಯಗಳನ್ನು ನಡೆಸುತ್ತಿದ್ದುದನ್ನು ಬೇಲೂರಿನ ಚೆನ್ನಕೇಶವ ದೇವಾಲಯ ಮತ್ತು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯಗಳ ಗೋಡೆಗಳ ಮೇಲಿನ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ ಮುಖ್ಯವಾಗಿ ಗದ್ಯಾಣ, ಪಣ ಎಂಬ ಎರಡು ನಾಣ್ಯಗಳ ಹೆಸರು ಕಂಡುಬರುತ್ತದೆ. ಇವುಗಳಲ್ಲಿ ಗದ್ಯಾಣವೇ ದೊಡ್ಡ ನಾಣ್ಯವಾಗಿದ್ದು ಪಣ ಅದರ 1/10 ರಷ್ಟಿತ್ತೆಂಬುದು ಶಾಸನಗಳಿಂದ ಸೂಚಿತವಾಗುತ್ತದೆ. ಗದ್ಯಾಣವು ಚಿನ್ನದ ನಾಣ್ಯವಾಗಿದ್ದು ಎಷ್ಟೋ ವೇಳೆ ಅದನ್ನು ಹೊನ್ನು ಎಂಬ ಪದದಿಂದಲೇ ವ್ಯವಹರಿಸಲಾಗಿದೆ. ಈ ಎರಡು ಹೆಸರುಗಳಲ್ಲದೆ ಶಾಸನಗಳಲ್ಲಿ ಅಡ್ಡ, ಹಾಗ, ಬೇಳೆ, ವೀಸ, ಕಾಣಿ ಎಂಬ ಪದಗಳು ನಾಣ್ಯದ ಅನೇಕ ಭಾಗಗಳನ್ನು ಸೂಚಿಸಲು ಬಂದಿವೆ. ಇವು ಅವುಗಳ ಹೆಸರೇ ಸೂಚಿಸುವಂತೆ ಪಣದ 1/2, 1/4, 1/8, 1/16, 1/64 ಎಂಬುದನ್ನು ಸೂಚಿಸುವುದಿದ್ದು ಈ ಬೇರೆ ಬೇರೆ ಪ್ರಮಾಣದ ನಾಣ್ಯಗಳು ಚಲಾವಣೆಯಲ್ಲಿದ್ದುವೇ ಎಂಬುದು ತಿಳಿದುಬಂದಿಲ್ಲ.

ಈಗ ಖಚಿತವಾಗಿ ಹೊಯ್ಸಳರ ಕಾಲದ್ದೆಂದು ಹೇಳಬಹುದಾದ ನಾಣ್ಯಗಳು ಉಳಿದು ಬಂದಿರುವುದು ತೀರ ಕಡಿಮೆ. ಇವುಗಳ ಪರಿಶೀಲನೆಯಿಂದ ಒಂದು ವಿಶೇಷ ಸಂಗತಿ ವ್ಯಕ್ತವಾಗುತ್ತದೆ. ಚಾಳುಕ್ಯರ ಸಾಮಂತರಾಗಿ ಅನಂತರ ಸ್ವತಂತ್ರರಾಗಿ ಹೊಯ್ಸಳರು ರಾಜ್ಯವಾಳಲು ಉಪಕ್ರಮಿಸಿದರೂ ನಾಣ್ಯಪದ್ಧತಿಯಲ್ಲಿ ಅವರನ್ನು ಅನುಸರಿಸಿದಂತೆ ತೋರುವುದಿಲ್ಲ. ಚಾಳುಕ್ಯರ ನಾಣ್ಯಗಳು 58 ಗ್ರೇನ್ ತೂಕವಿದ್ದರೆ ಹೊಯ್ಸಳರ ನಾಣ್ಯಗಳು 63 ಗ್ರೇನ್ ತೂಗುತ್ತವೆ. ಚೋಳರ ನಾಣ್ಯಗಳೂ ಇದೇ ರೀತಿ 63 ಗ್ರೇನ್ ತೂಗುವುದರಿಂದ ತೂಕದ ಮಟ್ಟಿಗೆ ಹೊಯ್ಸಳರು ಚೋಳರ ನಾಣ್ಯಗಳನ್ನನುಸರಿಸಿದರು. ಚಾಳುಕ್ಯರ ಕಡಿಮೆ ತೂಕದ ನಾಣ್ಯಗಳೂ ಹೊಯ್ಸಳ ನಾಡಿನಲ್ಲಿ ಚಲಾವಣೆಯಲ್ಲಿದ್ದಿರಬೇಕೆನ್ನುವುದಕ್ಕೆ ಶಾಸನಗಳಲ್ಲಿ ಸೂಚನೆ ಇದೆ. ಬೇಲೂರಿನ ಶಾಸನವೊಂದರಲ್ಲಿ 65 ಗದ್ಯಾಣಗಳಿಗೆ ಬಂದ ರೊಕ್ಕ 54 ಗದ್ಯಾಣ ಎಂದು ಹೇಳಿದೆ. ಇಲ್ಲಿ ಮೊದಲನೆಯದು ಚಾಳುಕ್ಯ ನಾಡಿನ ಗದ್ಯಾಣಗಳಾಗಿದ್ದು ಅವಕ್ಕೆ ಪ್ರತಿಯಾಗಿ ಹೊಯ್ಸಳ ಗದ್ಯಾಣಗಳನ್ನು ಪಡೆಯಲಾಯಿತು ಎಂಬ ಅಭಿಪ್ರಾಯವಿರಬಹುದು. ಹೀಗೆಯೇ ಶಾಸನಗಳಲ್ಲಿ ಅಪರೂಪವಾಗಿ ತಿಳಿಸಿರುವ ಲೊಕ್ಕಿ ಗದ್ಯಾಣ ಚಾಳುಕ್ಯರ ನಾಣ್ಯವಾಗಿರಬಹುದು.

ಹೊಯ್ಸಳರ ನಾಣ್ಯಗಳಿಗೆ ಎರಡು ಕಡೆಯೂ ಬೇರೆ ಬೇರೆ ಮುದ್ರೆಯೊತ್ತಿರುತ್ತಿತ್ತು. ಒಂದು ಕಡೆ ಮೂರ್ತಿಯ ಗುರುತೂ ಮತ್ತೊಂದು ಕಡೆ ಅಂಕನವೂ ಇದ್ದು ಇಂಥ ಪದ್ಧತಿಯನ್ನು ಹೊಯ್ಸಳರು ಹೊಸದಾಗಿ ಆರಂಭಿಸಿದಂತೆ ತೋರುತ್ತದೆ. ಈಗ ದೊರೆತಿರುವ ನಾಣ್ಯಗಳಲ್ಲಿ ಒಂದರ ಮೇಲೆ ಮುಂಭಾಗದಲ್ಲಿ ಮುಂದಿನ ಕಾಲೊಂದನ್ನು ಎತ್ತಿ ನಿಂತಿರುವ ಸಿಂಹ, ಅದರ ಮೇಲೆ ಅದೇ ರೀತಿಯ ಮತ್ತೊಂದು ಸಿಂಹ, ಅದರ ಎರಡು ಕಡೆಯೂ ಚಂದ್ರಸೂರ್ಯರು, ದೊಡ್ಡ ಸಿಂಹದ ಎದುರಿಗೆ ಒಂದು ದಂಡವೂ ಇದೆ. ಹಿಂಭಾಗದಲ್ಲಿ ಶ್ರೀತಳಕಾಡುಗೊಣ್ಡ ಎಂಬ ಅಂಕನ ಮೂರು ಸಾಲಿನಲ್ಲಿ ಕನ್ನಡ ಅಕ್ಷರದಲ್ಲಿದೆ. ಇಲ್ಲಿ ದೊಡ್ಡ ಸಿಂಹ ಮತ್ತು ದಂಡ ಹೊಯ್ಸಳರು ಲಾಂಛನವಾಗಿ ಸ್ವೀಕರಿಸಿದ ಹುಲಿ ಮತ್ತು ಬೆತ್ತವಾಗಿರಬೇಕು. ಶಾರ್ದೂಲ ಲಾಂಛನ ಸಿಂದಪಟದಲ್ಲಿ ಹೊನ್ನಿನಲ್ಲಿ ಸಲೆನಿಲೆ ಸಂದುದು ಎಂದು ಶಾಸನವೊಂದು ತಿಳಿಸುತ್ತದೆ. ಮೇಲಿನ ಚಿಕ್ಕ ಸಿಂಹ ದುರ್ಗಿಯನ್ನು ಪ್ರತಿನಿಧಿಸುವ, ಆ ದೇವತೆಯ ವಾಹನವಾಗಿರಬಹುದು, ತಳಕಾಡುಗೊಣ್ಡ ಎಂಬುದು ವಿಷ್ಣುವರ್ಧನ ತಲಕಾಡನ್ನು ಗೆದ್ದ ಅನಂತರ ಇಟ್ಟುಕೊಂಡ ಬಿರುದಾದ್ದರಿಂದ ಈ ನಾಣ್ಯ ವಿಷ್ಣುವರ್ಧನ ನದಾಗಿರಬೇಕು. ಇದೇ ರೀತಿ ಮತ್ತೊಂದು ನಾಣ್ಯದ ಮೇಲೆ ಮುಂಭಾಗದಲ್ಲಿ ಅದೇ ಸಿಂಹಗಳ ಲಾಂಛನವಿದ್ದರೂ ಅದು ಸ್ಪಷ್ಟವಾಗಿಲ್ಲದೆ ಸಾಂಕೇತಿಕವಾಗಿದೆ. ಹಿಂಭಾಗದಲ್ಲಿ ವಿಷ್ಣುವರ್ಧನನ ಮತ್ತೊಂದು ಬಿರುದಾದ ನೊಳಂಬವಾಡಿ ಗೊಣ್ಡ ಎಂಬ ಮೂರು ಸಾಲಿನ ಅಂಕನವಿರುವುದರಿಂದ ಇದೂ ವಿಷ್ಣುವರ್ಧನನದೇ ಆಗಿರಬೇಕು. ಮೂರನೆಯ ಬಗೆಯ ನಾಣ್ಯಗಳ ಮುಂಭಾಗದಲ್ಲಿ ಶಂಖಚಕ್ರಗಳನ್ನು ಹಿಡಿದ, ಸಿಂಹವಾಹಿನಿಯಾದ ದುರ್ಗಾ ಮತ್ತು ಹಿಂಭಾಗದಲ್ಲಿ ಶ್ರೀ ಪ್ರತಾಪನಾರಸಿಂಹ ಎಂಬ ಅಂಕನ ಇವೆ. ಇದು ಬಹುಶಃ ಒಂದನೆಯ ನರಸಿಂಹನ ಕಾಲದ್ದಾಗಿರಬಹುದು. ಉಳಿದಂತೆ ಬೇರೆ ರಾಜರ ಅಂಕನಗಳುಳ್ಳ ನಾಣ್ಯಗಳು ದೊರೆತಿಲ್ಲ. ಇವು ಸು. 63 ಗ್ರೇನ್ ತೂಕವುಳ್ಳದ್ದಾಗಿದ್ದು ಶಾಸನಗಳಲ್ಲಿ ತಿಳಿಸಿರುವ ಗದ್ಯಾಣಗಳಾಗಿರಬೇಕು. ಸು. ಇದರ 1/10 ಭಾಗದಷ್ಟು ತೂಕವುಳ್ಳ ಚಿಕ್ಕ ಚಿನ್ನದ ನಾಣ್ಯಗಳು ಕೆಲವು ದೊರೆತಿದ್ದು ಒಂದು ಕಡೆ ಸಿಂಹದ ಸಾಂಕೇತಿಕ ಚಿಹ್ನೆಯೂ ಮತ್ತೊಂದೆಡೆ ವರಾಹದ ಸಾಂಕೇತಿಕ ಚಿಹ್ನೆಯೂ ಇದ್ದು ಸಿಂಹದ ಆಕೃತಿ ಇರುವೆಡೆ ವೀರರೇಖೆಯಂತೆ ಚಿಹ್ನೆಯೊಂದಿರುವುದರಿಂದ ಅಂಥ ನಾಣ್ಯಗಳನ್ನು ವೀರರಾಯಿಪಣಗಳೆಂದು ಕರೆಯಲಾಗುತ್ತದೆ. ಇವು ಮೂರನೆಯ ವೀರಬಲ್ಲಾಳನ ನಾಣ್ಯಗಳಿರಬಹುದೆಂದು ಎಂ.ಎಚ್. ಕೃಷ್ಣ ಅವರು ಅಭಿಪ್ರಾಯಪಡುತ್ತಾರೆ. ಆದರೂ ಅವುಗಳನ್ನು ಹೊಯ್ಸಳರ ಕಾಲದ್ದೆಂದು ನಿಖರವಾಗಿ ಹೇಳಲು ಖಚಿತ ಆಧಾರಗಳು ಸಾಲದಾಗಿವೆ.

**ಸಾಮಾಜಿಕ ಸ್ಥಿತಿ:** ಹೊಯ್ಸಳರ ಕಾಲ ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳ ಸಮನ್ವಯ ಕಾಲ. ಜೈನ, ವೈಷ್ಣವ, ಶೈವ ಮತ್ತು ವೀರಶೈವ ಧರ್ಮಗಳು ಕೂಡಿ ಬಾಳಿದವಲ್ಲದೆ ಉನ್ನತಿಯಲ್ಲಿದ್ದವು. ಇವರು ಎಲ್ಲ ಧರ್ಮಗಳನ್ನು ಸಮಾನವಾಗಿ ನೋಡಿಕೊಂಡು ತಮ್ಮ ರಾಜಧರ್ಮ ನೀತಿಯನ್ನು ಯಶಸ್ವಿಯಾಗಿ ಪಾಲಿಸಿದರು. ಹಿಂದಿನಿಂದಲೂ ಬಂದ ಧರ್ಮೋ ರಕ್ಷತಿ ರಕ್ಷಿತಾಃ ಎಂಬ ಪ್ರಾಚೀನ ವಾಣಿಯನ್ನು ಸಾಮಾನ್ಯವಾಗಿ ಜನ ಪಾಲಿಸುತ್ತಿದ್ದರೆಂದು ಹೇಳಬಹುದು. ದೇವಾಲಯಗಳು ಹಾಗೂ ಬಸದಿಗಳ ನಿರ್ಮಾಣ ಮೋಕ್ಷ ಸಾಧನೆಗೆ ಮಾರ್ಗ ಎಂಬ ದೃಢವಾದ ನಂಬಿಕೆಯಿತ್ತು. ಇವರ ಕಾಲದಲ್ಲಿ ಜೈನ, ವೈಷ್ಣವ ವಿಶೇಷವಾಗಿ ಶ್ರೀ ವೈಷ್ಣವ ಪಂಥಗಳ ಸಂತರು, ವಿದ್ವಾಂಸರು ರಾಜಾಶ್ರಯವನ್ನು ಪಡೆದುಕೊಂಡಿದ್ದರು. ವಿಶೇಷವಾಗಿ ತಮಿಳುನಾಡಿನಿಂದ ಬಂದ ರಾಮಾನುಜಾಚಾರ್ಯರು ಹೊಯ್ಸಳ ನಾಡಿನಲ್ಲಿ ಭಕ್ತಿ ಮತ್ತು ಪ್ರಪತ್ತಿ (ಶರಣಾಗತಿ) ತತ್ತ್ವಗಳ ಮೂಲಕ ಕೈಗೊಂಡ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣಾ ಕಾರ್ಯಗಳು ಜನಪ್ರಿಯವಾದವು. ಅಸ್ಪೃಶ್ಯತಾ ನಿವಾರಣೆ, ದೇವಾಲಯ ಗಳಿಗೆ ಸಾರ್ವಜನಿಕರ ಪ್ರವೇಶ ಮೊದಲಾದ ಕ್ರಾಂತಿಕಾರಕ ಸುಧಾರಣೆಗಳು ಕಾಣಿಸಿಕೊಂಡವು. ಮೇಲುಕೋಟೆ, ತೊಣ್ಣೂರು, ಪಾಂಡವಪುರ, ಶ್ರೀರಂಗಪಟ್ಟಣ, ಮೈಸೂರು, ಬೇಲೂರು, ಹಳೇಬೀಡು ಮೊದಲಾದ ಶ್ರೀವೈಷ್ಣವ ಕೇಂದ್ರಗಳು ಪ್ರಸಿದ್ಧಿಗೆ ಬಂದವು. ಅಲ್ಲದೆ ಪುಣ್ಯ ಪ್ರಾಪ್ತಿಗಾಗಿ ದಾನದತ್ತಿಗಳನ್ನು ನೀಡಲಾಗುತ್ತಿತ್ತು. ಕಾಶ್ಮೀರಿ ಬ್ರಾಹ್ಮಣರ ನೆಲೆಸುವಿಕೆಯಿಂದಾಗಿ ಕಾಶ್ಮೀರಿಶೈವಪಂಥ ಪ್ರಭಾವಶಾಲಿಯಾಗಿತ್ತು. ರಾಮಾನುಜಾಚಾರ್ಯರು ತಮಿಳುನಾಡಿನಿಂದ ಹೊಯ್ಸಳನಾಡಿಗೆ ಬಂದು ವೈಷ್ಣವ ಧರ್ಮ ಪ್ರಚಾರದಲ್ಲಿ ತೊಡಗಿದ್ದರು. ಲಕುಲೀಶಪಂಥ ಗುಜರಾತಿನಿಂದ ಕರ್ನಾಟಕಕ್ಕೆ ಪ್ರವೇಶ ಪಡೆದಿತ್ತು. ಅಂದು ಶ್ರೀಶೈಲ ಕಾಳಾಮುಖ ಕಾಪಾಲಿಕ, ಲಕುಲೀಶ ಪಾಶುಪತ ವೀರಶೈವ ಪಂಥಗಳ ಸಹಬಾಳ್ವೆಯ ಕೇಂದ್ರವಾಗಿತ್ತು. ಕಲ್ಯಾಣ ವೀರಶೈವರ ಕೇಂದ್ರವಾಗಿತ್ತು.

ಜಾತಿ ಮತ್ತು ವರ್ಣ ವ್ಯವಸ್ಥೆಯಲ್ಲಿ ವಿಂಗಡಿತವಾಗಿದ್ದ ಸಮಾಜ ಹೊಯ್ಸಳರ ಕಾಲದಲ್ಲಿಯೂ ಹಾಗೆಯೇ ಮುಂದುವರೆದಿತ್ತು. ಸಮಾಜದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಭೂ ಮಾಲೀಕರು ಪ್ರಭಾವಿಶಾಲಿಗಳಾಗಿದ್ದರು. ಬ್ರಾಹ್ಮಣರು ಸಮಾಜದ ವಿವಿಧ ಉನ್ನತ ಹುದ್ದೆಗಳಲ್ಲಿಯೂ ಹಾಗೂ ಸೈನ್ಯದಲ್ಲಿ ದಂಡನಾಯಕರಾಗಿಯೂ ಮಹಾಪ್ರಧಾನರಾಗಿಯೂ ಕಾರ್ಯನಿರ್ವಹಿಸುತ್ತಿದ್ದುದುಂಟು. ಆದರೆ ಬ್ರಾಹ್ಮಣರ ಮುಖ್ಯ ವೃತ್ತಿ ವೇದಾಧ್ಯಯನ, ಪೌರೋಹಿತ್ಯ, ಜೋತಿಷ್ಯ ಮತ್ತು ಶಾನುಭೋಗಿಕೆಯಾಗಿತ್ತು. ಹೊಯ್ಸಳರು ಅಗ್ರಹಾರಗಳನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ಪ್ರೋತ್ಸಾಹ ನೀಡಿದರು. ವೈಶ್ಯರು ಮತ್ತು ವಿವಿಧ ವೃತ್ತಿಗಳ ಸಮುದಾಯಗಳು ಸಮಾಜದಲ್ಲಿ ಉತ್ತಮ ಸ್ಥಾನಗಳನ್ನು ಪಡೆದಿದ್ದರು. ಅವರು ವೃತ್ತಿ ಸಂಘಗಳನ್ನು ಮಾಡಿಕೊಂಡು ತಮ್ಮ ಸಂಘದ ಸದಸ್ಯರ ಕ್ಷೇಮಾಭಿವೃದ್ಧಿಗೆ ಶ್ರಮಿಸುತ್ತಿದ್ದರು. ಅಂದಿನ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನದ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ.

ರಾಜಮನೆತನದವರಿಂದ ಹಿಡಿದು ಸಾಮಾನ್ಯ ಕುಟುಂಬಗಳವರೆಗೆ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಪಾತ್ರವಹಿಸುತ್ತಿದ್ದುದರ ಉಲ್ಲೇಖಗಳಿವೆ. ಆದ್ದರಿಂದ ಈ ಕಾಲದಲ್ಲಿ ಮಹಿಳೆಯರು ಸಾಕಷ್ಟು ಸಾಮಾಜಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಹೊಂದಿದ್ದರೆಂದು ಹೇಳಬಹುದು. ಸ್ತ್ರೀಯರು ಕಲೆ, ಸಂಗೀತ, ನೃತ್ಯ ಮತ್ತು ಅಧ್ಯಯನಗಳಲ್ಲಿ ತೊಡಗಿದ್ದರು. ವಿಷ್ಣುವರ್ಧನನ ಪತ್ನಿ ಶಾಂತಲೆ ಸಂಗೀತ ನಾಟ್ಯ ಸರಸ್ವತಿ ಎಂದು ಪ್ರಸಿದ್ಧಳಾಗಿದ್ದಳು. ಕೆಲವು ಸ್ತ್ರೀ ಅಧಿಕಾರಿಗಳು ಇದ್ದರು. ದೇವಾಲಯಗಳಲ್ಲಿ ವಾರಾಂಗನೆಯರು ಸೇವೆ ಸಲ್ಲಿಸುವ ಪದ್ಧತಿ ಇತ್ತು. ದೇವಾಲಯಗಳು ಧಾರ್ಮಿಕ, ಸಾಮಾಜಿಕ ಕೇಂದ್ರಗಳಾಗಿ ಜನರಿಗೆ ಮಾರ್ಗದರ್ಶಕವಾಗಿದ್ದವು. (ಡಿ.ಟಿ.)

**ಶಾಸನಗಳು:** ಹೊಯ್ಸಳರ ಆಳಿಕೆಯ ಕಾಲ ಶಾಸನಗಳ ರಚನೆಯ ಸಮೃದ್ಧಿಯ ಕಾಲ. ಕರ್ನಾಟಕದ ಶಾಸನಗಳ ರಚನೆಯಲ್ಲಿ ಈ ಕಾಲವನ್ನು ಸುವರ್ಣಯುಗವೆನ್ನಬಹುದು. ಶಾಸನಗಳ ರಚನೆಯ ಕಲೆಗಾರಿಕೆಯಲ್ಲಾಗಲೀ, ಲಿಪಿಯ ಸೌಂದರ್ಯದಲ್ಲಾಗಲೀ, ಭಾಷೆ ಹಾಗೂ ಸಾಹಿತ್ಯದ ಸಮೃದ್ಧಿಯಲ್ಲಾಗಲೀ ಹೊಯ್ಸಳ ಶಾಸನಗಳನ್ನು ಸರಿತೂಗುವ ಶಾಸನಗಳು ಅಪರೂಪ. ಐತಿಹಾಸಿಕ ಮಹತ್ತ್ವದ ದೃಷ್ಟಿಯಿಂದಲೂ ಈ ಶಾಸನಗಳನ್ನು ಕಡೆಗಣಿಸುವಂತಿಲ್ಲ. ಹೊಯ್ಸಳರು ಆಳಿದ ಸು.300 ವರ್ಷಗಳ ಅವಧಿಯಲ್ಲಿ 2,000ಕ್ಕೂ ಮೀರಿ ಶಾಸನಗಳು ಹುಟ್ಟಿಕೊಂಡಿವೆ. ವಿಷ್ಣುವರ್ಧನನ ಕಾಲಕ್ಕೆ ಮುನ್ನ ಶಾಸನಗಳನ್ನು ಹಾಕಿಸುವಲ್ಲಿ ಅಷ್ಟು ಸಮೃದ್ಧಿಯಾಗಲೀ ವೈವಿಧ್ಯತೆಯಾಗಲೀ ಕಂಡುಬರುವುದಿಲ್ಲ. ಶಾಸನಗಳು ಕಗ್ಗಲ್ಲಿನ ಮೇಲೋ ಒರಟುಕಲ್ಲಿನ ಮೇಲೋ ದಪ್ಪ ಅಕ್ಷರಗಳಲ್ಲಿದ್ದು ವಿವರಗಳು ಬಹು ಕಡಿಮೆ ಇರುತ್ತಿದ್ದವು. ವಿಷ್ಣುವರ್ಧನನ ಕಾಲದಲ್ಲಿ ಶಾಸನಗಳ ರಚನೆಯಲ್ಲಿ ಒಂದು ಸಿದ್ಧರೂಪವನ್ನು ಕೊಡಲು, ವೈವಿಧ್ಯವನ್ನು ತರಲು ಪ್ರಯತ್ನಿಸಿದ್ದಂತೆ ತೋರುತ್ತದೆ.

ಹೊಯ್ಸಳರ ಶಾಸನಗಳಲ್ಲಿ ಕಂಡುಬರುವ ಒಂದು ವೈಲಕ್ಷಣ್ಯವೆಂದರೆ ಅವರು ಶಾಸನಗಳನ್ನು ಹಾಕಿಸುವಲ್ಲಿ ಒಂದು ಕಡೆ ಚೋಳರನ್ನು ಅನುಕರಿಸಿದ್ದರೆ ಮತ್ತೊಂದು ಕಡೆ ಚಾಳುಕ್ಯರ ಮೇಲ್ಪಂಕ್ತಿಯನ್ನು ಅನುಸರಿಸಿರುವುದು. ಚೋಳರು ಆಕ್ರಮಿಸಿದ್ದ ಗಂಗವಾಡಿಯ ಭಾಗವಾಗಿದ್ದ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಭಾಗಗಳನ್ನು ಹಿಂದಕ್ಕೆ ಪಡೆದ ಮೇಲೆ ಬಹುಕಾಲ ಆ ಭಾಗಗಳಲ್ಲಿ ಹೊಯ್ಸಳರೂ ತಮಿಳಿ ನಲ್ಲಿಯೇ ಶಾಸನಗಳನ್ನು ಹಾಕಿಸಿದರು. ಅಷ್ಟೇ ಅಲ್ಲ, ಚೋಳರಂತೆ ಇವರೂ ದೇವಾಲಯದ ತಳಪಾದಿ ಕಲ್ಲುಗಳು, ಗೋಡೆಗಳು, ಕಂಬಗಳನ್ನೇ ಶಾಸನ ಹಾಕಿಸಲು ಬಳಸಿದರು. ಚೋಳರನ್ನು ಓಡಿಸಿ ತಲಕಾಡನ್ನು ಗೆದ್ದುಕೊಂಡು, ಅಲ್ಲಿ ವಿಷ್ಣುವರ್ಧನ ಕಟ್ಟಿಸಿದ ಕೀರ್ತಿನಾರಾಯಣಸ್ವಾಮಿ ದೇವಾಲಯದ ತಳಪಾದಿಯ ಮೇಲೆ ಈ ವಿಷಯವನ್ನು ತಿಳಿಸುವ ಮತ್ತು ದತ್ತಿ ಕೊಟ್ಟುದನ್ನು ತಿಳಿಸುವ ಹಲವಾರು ಶಾಸನಗಳಿರುವುದು ತಮಿಳಿನಲ್ಲಿಯೇ, ಇಂಥ ನೂರಾರು ಶಾಸನಗಳನ್ನು ಅಗರದ ರಾಮೇಶ್ವರ, ನರಸಿಂಹ, ದುರ್ಗಾ ದೇವಾಲಯಗಳ ಮೇಲೆ, ಮಾರೆಹಳ್ಳಿ ನರಸಿಂಹ ದೇವಾಲಯದ ಮೇಲೆ, ಬೆಳಗೊಳದ ಜನಾರ್ದನಸ್ವಾಮಿ ದೇವಾಲಯದ ತಳಪಾದಿಯ ಮೇಲೆ, ತೊಣ್ಣೂರಿನ ನಾರಾಯಣ, ಗೋಪಾಲಕೃಷ್ಣ, ನರಸಿಂಹಸ್ವಾಮಿ ದೇವಾಲಯಗಳಲ್ಲಿ ನೋಡಬಹುದು. ಅಪರೂಪವಾಗಿ ಹಳೇಬೀಡಿನ ಪಕ್ಕದಲ್ಲಿಯೇ ಇರುವ ನರಸೀಪುರದ ನರಸಿಂಹಸ್ವಾಮಿ ದೇವಾಲಯದ ಗೋಡೆಯ ಮೇಲೆ ತಮಿಳು ಶಾಸನಗಳಿವೆ. ಇವು ಸಾಮಾನ್ಯವಾಗಿ ವಸ್ತುನಿಷ್ಠವಾದ ಕಿರುಗದ್ಯ ಶಾಸನಗಳು. ಕನ್ನಡ ಶಾಸನಗಳಿಗೆ ಹೋಲಿಸಿದರೆ ಇಂಥ ಶಾಸನಗಳ ಸಂಖ್ಯೆ ಬಹು ಕಡಿಮೆ ಎನ್ನಬಹುದು, ಹೊಯ್ಸಳರ ಒಟ್ಟು ಶಾಸನಗಳಲ್ಲಿ ಈ ತಮಿಳು ಶಾಸನಗಳ ಸಂಖ್ಯೆ ಬಹು ಕಡಿಮೆ.

ಹೊಯ್ಸಳರು ಹೇರಳವಾಗಿ ಹಾಕಿಸಿರುವ ಕನ್ನಡ ಶಾಸನಗಳು ಪ್ರಸಿದ್ಧವಾ ದುವು. ಸೊಸೆವೂರಿನ ಆಸುಪಾಸಿನಲ್ಲಿ ದೊರೆತಿರುವ ಇವರ ಮೊದಮೊದಲ ಶಾಸನಗಳು ಪ್ರತ್ಯೇಕ ಮೈಲಿಗಲ್ಲುಗಳಾಕಾರದ ಶಿಲಾ ಹಲಗೆಯ ಮೇಲೆ ರಚಿಸಿದವುಗಳಾಗಿವೆ. ಮುಂದೆ ದೇವಾಲಯದ ಗೋಡೆಗಳ ಮೇಲೆ ಶಾಸನಗಳನ್ನು ಹಾಕಿಸುವ ಪದ್ಧತಿಯನ್ನನುಸರಿಸಿದರೂ ಶಾಸನಗಳನ್ನು ಕಂಡರಿಸುವುದಕ್ಕಾಗಿಯೇ ಬೇರೆಯಾಗಿ ಶಿಲಾಫಲಕಗಳನ್ನು ಸಿದ್ಧಪಡಿಸುವ ಪದ್ಧತಿ ಸಾಮಾನ್ಯವಾಯಿತು. ವಿಷ್ಣುವರ್ಧನ ಬೇಲೂರಿನಲ್ಲಿ ವಿಜಯನಾರಾಯಣಸ್ವಾಮಿ ದೇವಾಲಯವನ್ನು ಕಟ್ಟಿಸಿದಾಗ ಅದರ ವಿವರಗಳನ್ನು ತಿಳಿಸುವ ದೀರ್ಘವಾದ ಶಾಸನವನ್ನು ಆ ದೇವಾಲಯದೊಳಗಿನ ಗೋಡೆಯ ಮೇಲೆ ಹಾಕಿಸಿದ್ದಾನೆ. ಹಾಗೆಯೇ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಒಳಗೋಡೆಯ ಮೇಲೆ ಹದಿನಾರು ದತ್ತಿ ಶಾಸನಗಳಿವೆ. ಶಾಂತಿಗ್ರಾಮದ ನರಸಿಂಹ ದೇವಾಲಯದ ಮುಂಭಾಗದ ಗೋಡೆಯ ತುಂಬ ಕಂಡರಿಸಿರುವ ಶಾಸನಗಳನ್ನೂ ನಿಟ್ಟೂರಿನ ಜೈನಬಸದಿಯ ಮುಂಭಾಗದ ಗೋಡೆಯ ಮೇಲೆ ಆ ಬಸದಿಯನ್ನು ಕಟ್ಟಿಸಿದ ವಿವರಗಳನ್ನು ತಿಳಿಸುವ ಶಾಸನವನ್ನೂ ನೋಡಬಹುದು. ಗೋಡೆಗಳನ್ನೂ ಶಿಲ್ಪಗಳಿಂದ ತುಂಬಿಸುತ್ತಿದ್ದುದರಿಂದ ಮತ್ತು ಕಾರ್ನೀಸುಗಳೂ ಅಲಂಕರಣಗಳಿಂದ ಕೂಡಿರುತ್ತಿದ್ದುದರಿಂದ ಅವುಗಳ ಮೇಲೆ ಶಾಸನ ಹಾಕಿಸುವ ಪದ್ಧತಿ ಕೈಬಿಟ್ಟು ಹೋಗಿರಬೇಕು. ಇದರ ಬದಲು ಕೆಲವು ವೇಳೆ ಕಂಬದ ಬುಡದ ಮುಖಗಳ ಮೇಲೋ ಅಡ್ಡತೊಲೆಗಳ ಮೇಲೋ ದತ್ತಿಶಾಸನಗಳಿರುವುದುಂಟು, ನರಸೀಪುರದ ನರಸಿಂಹ ದೇವಾಲಯ, ಹೆಗ್ಗೆರೆಯ ಜೈನಬಸದಿ, ಹಿರೇನಲ್ಲೂರಿನ ಈಶ್ವರ ದೇವಾಲಯ, ಬಗ್ಗವಳ್ಳಿಯ ನರಸಿಂಹ ದೇವಾಲಯಗಳ ಮುಖಮಂಟಪ ಅಥವಾ ನವರಂಗದ ತೊಲೆಗಳ ಮೇಲೆ ಈ ರೀತಿಯ ಶಾಸನಗಳಿವೆ. ಆದರೆ ಇವರ ಶಾಸನಗಳಲ್ಲಿ ಮುಖ್ಯವಾದುವೂ ವಿಶಿಷ್ಟವಾದುವೂ ಎಂದರೆ ದೇವಾಲಯ ಬಸದಿಗಳ ಮುಂದೆ ಬೇರೆಯಾಗಿ ನಿಲ್ಲಿಸಿರುವ ಶಾಸನ ಕಲ್ಲುಗಳು, ಈ ಕಾಲದಲ್ಲಿ ಇಂಥ ಶಾಸನ ಲೇಖನವೂ ಒಂದು ಕಲೆಯಾಗಿ ಬೆಳೆಯಿತು. ಸುಂದರವಾದ ಕಲ್ಲಿನ ಹಲಗೆ, ಅದರ ಮೇಲ್ಭಾಗ ಕಮಾನಾಗಿದ್ದು ಅದಕ್ಕೆ ಬಳ್ಳಿಸುರುಳಿಯ ಅಂಚು; ಆ ಕಮಾನಿನ ಕೆಳಗೆ ಆಯಾ ದೇವಾಲಯ, ಬಸದಿಗಳಿಗೆ ಸಂಬಂಧಿಸಿದಂತೆ ದೇವತಾಮೂರ್ತಿಗಳು–ಶಿವದೇವಾಲಯವಾದರೆ ಲಿಂಗ, ನಂದಿ, ಪೂಜಾರಿ ಭಕ್ತಮೂರ್ತಿಗಳು; ವಿಷ್ಣುದೇವಾಲಯವಾದರೆ ಆ ದೇವಾಲಯದ ಮೂಲಮೂರ್ತಿಗಳಾದ ಕೇಶವ ಅಥವಾ ನರಸಿಂಹ ಅಥವಾ ವೇಣುಗೋಪಾಲ, ಬಸದಿಯಾದರೆ ಮುಕ್ಕೊಡೆಯ ಕೆಳಗೆ ಜಿನಮೂರ್ತಿ–ಅಲ್ಲಿಂದ ಕೆಳಗೆ ಮಟ್ಟಸವಾಗಿ ನುಣುಪಾಗಿ ಮಾಡಿರುವ ಕಲ್ಲಿನ ಮೇಲೆ ಗುಂಡಾಗಿ ಒಂದೇ ಪ್ರಮಾಣದಲ್ಲಿ ಅಂದವಾಗಿ ಕೊರೆದಿರುವ ಪಂಕ್ತಿಗಳು, ಅದರಲ್ಲಿಯೂ ಮೊದಲ ಮತ್ತು ಕಡೆಯ ಸಾಲುಗಳಲ್ಲಿ ತಲೆಕಟ್ಟನ್ನೋ ಒತ್ತಕ್ಷರವನ್ನೋ ದೀರ್ಘವನ್ನೋ ಬಳ್ಳಿಸುರುಳಿಯಂತೆ, ಎಲೆಯಂತೆ, ಹಕ್ಕಿಯಂತೆ, ಗರಿಯಂತೆ ಬೆಳೆಸಿರುವಲ್ಲಿ ಬರೆದವನ ಅಥವಾ ಕೊರೆದವನ ಕಲೆಗಾರಿಕೆಯ ಸೊಗಸು ಎದ್ದು ಕಾಣುತ್ತದೆ. ಸೋಮನಾಥಪುರದ ಕೇಶವ ದೇವಾಲಯದ, ಪಂಚಲಿಂಗ ದೇವಾಲಯದ ಶಾಸನಗಳು, ಶ್ರವಣಬೆಳಗೊಳದ ಅಕ್ಕನ ಬಸದಿಯ ಶಾಸನ, ತಿಪ್ಪೂರಿನ ಗಂಗರಾಜನ ಶಾಸನ, ಗೋವಿಂದನ ಹಳ್ಳಿ, ಕೆರೆಸಂತೆ, ವರಾಹನಾಥ ಕಲ್ಲಹಳ್ಳಿಯ ಶಾಸನಗಳು ಈ ಮೊದಲಾದುವು ಇಂಥ ಸುಂದರವಾದ ಅಭಿವ್ಯಕ್ತಿಗೆ ಮಾದರಿಗಳು.

ದೇವಾಲಯದ ಗೋಡೆಗಳ ಮೇಲೆ ಕಂಡರಿಸಿರುವ ಮೂರ್ತಿಗಳ, ಪೀಠಗಳ ಮೇಲೆ ಅವುಗಳ ಹೆಸರನ್ನೋ ಅಥವಾ ಕಂಡರಿಸಿದ ರೂವಾರಿಯ ಹೆಸರನ್ನೋ ತಿಳಿಸುವ–ತ್ರಿವಿಕ್ರಮ, ಸಂಕ್ರಂದನ, ಅಚ್ಯುತ ಅಥವಾ ಮಲ್ಲಿತಂಮ, ಮಸಣ, ಮಾಬ, ಮಾಣಿಬಲಕಿ ಇತ್ಯಾದಿ–ಒಂದೇ ಪದದ ಪೀಠಶಾಸನಗಳಿಂದಾರಂಭಿಸಿ, ಮೇಲೆ ಹೇಳಿದ ಶಾಸನಗಳನ್ನು ಕಂಡರಿಸಲೆಂದೇ ತಯಾರಿಸಿದ ಸುಂದರವಾದ ಶಿಲಾಫಲಕಗಳ ಮೇಲಿನ ವಿಸ್ತಾರವಾದ ದೇವತಾಸ್ತುತಿ, ರಾಜಮನೆತನದ ಪೀಳಿಗೆಯ ವರ್ಣನೆ, ರಾಜನ ವಿಸ್ತಾರವಾದ ಹೆಗ್ಗಳಿಕೆ, ಅವನ ಕೈಕೆಳಗಿನ ಸಾಮಂತ ಅಥವಾ ಅಧಿಕಾರಿಯ ಹೆಗ್ಗಳಿಕೆ, ಅವನ ವಂಶ, ಅವನು ನಿರ್ಮಿಸಿದ ದೇವಾಲಯ, ಬಿಟ್ಟ ದತ್ತಿ ಹಾಗೂ ಅವುಗಳ ವರ್ಣನೆ, ದತ್ತಿ ಪಡೆದವರ ವಂಶಾವಳಿ, ಕೊನೆಯಲ್ಲಿ ಶಪನ ಮುಂತಾದ ಹತ್ತಾರು ವಿವರಗಳನ್ನೊಳಗೊಂಡ ದೀರ್ಘವಾದ ಶಾಸನಗಳವರೆಗೂ ವಿಷಯ ವ್ಯಾಪ್ತಿಯುಂಟು. ಹೊಯ್ಸಳ ರಾಜರಂತೆ ಅವರ ಪ್ರಧಾನಿಗಳು, ದಂಡನಾಯಕರು, ಇತರ ಅಧಿಕಾರಿಗಳು ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ದತ್ತಿಬಿಟ್ಟ ಶಾಸನಗಳು ಹೀಗೆ ವಿಸ್ತಾರವಾಗಿರುತ್ತವೆ. ಗಂಗರಾಜ, ಪುಣಿಸ, ಹುಳ್ಳ, ಚಂದ್ರಮೌಳಿ, ಬೂಚಿರಾಜ, ಗೋವಿಂದ, ಪೋಲಾಳ್ವ, ಸೋಮನಾಥ ಮೊದಲಾದವರು ಹಾಕಿಸಿರುವ ಇಂಥ ಶಾಸನಗಳಲ್ಲಿ ವಿವರಗಳನ್ನು ಗದ್ಯಪದ್ಯಾತ್ಮಕವಾಗಿ ಚಂಪೂ ಶೈಲಿಯಲ್ಲಿ ಕೊಡುವುದು ಪದ್ಧತಿ. ಅಂದವಾದ ಕಲ್ಲಿನ ಕಂಡರಣೆ, ಸುಂದರವಾದ ಲಿಪಿಗಳಿರುವಂತೆ ಉತ್ತಮ ಸಾಹಿತ್ಯ ಲಕ್ಷಣಗಳನ್ನೂ ಈ ಶಾಸನಗಳಲ್ಲಿ ಕಾಣಬಹುದು. ಚಿದಾನಂದ ಬುಧ, ಜನ್ನ ಮೊದಲಾದ ಪ್ರಸಿದ್ಧ ಕವಿಗಳೂ ಇಂಥ ಶಾಸನಗಳನ್ನು ರಚಿಸಿದ್ದಾರೆ. ರಾಜರ ಪೀಳಿಗೆಯನ್ನು ಕೊಡುವಲ್ಲಿ, ಅವರ ಗುಣಗಾನ ಮಾಡುವಲ್ಲಿ ಒಂದೇ ಬಗೆಯ ಪದ್ಯಗಳನ್ನು ಹಲವಾರು ಶಾಸನಗಳಲ್ಲಿ ಕಾಣಬಹುದು. ಬಹುಶಃ ಆಸ್ಥಾನದಲ್ಲಿದ್ದ ಪಂಡಿತರಿಂದ ರಾಜವಂಶ ಪ್ರಶಸ್ತಿಯನ್ನು ಬರೆಸಿಟ್ಟಿದ್ದು ಹೊಸ ಹೊಸ ಶಾಸನಗಳನ್ನು ರಚಿಸುವಾಗ ಆ ಪ್ರಶಸ್ತಿಯಿಂದ ಕೆಲ ಪದ್ಯಗಳನ್ನು ಆಯ್ದುಕೊಳ್ಳುತ್ತಿದ್ದರೆಂದು ತೋರುತ್ತದೆ. ಧರ್ಮಕಾರ್ಯಗಳನ್ನು, ಪುಣ್ಯಕಾರ್ಯಗಳನ್ನು, ದಾನದತ್ತಿಗಳನ್ನು ಉಲ್ಲೇಖಿಸುವುದೇ ಈ ಶಾಸನಗಳ ಉದ್ದೇಶವಾದರೂ ಇವುಗಳಲ್ಲಿ ಆಯಾ ಕಾಲದಲ್ಲಿ ಆಳುತ್ತಿದ್ದ ರಾಜನ ವಂಶ ಮತ್ತು ಪ್ರಶಸ್ತಿಗಳನ್ನು ಕೊಡುವ ಪದ್ಧತಿ ಇದ್ದುದರಿಂದ ಸ್ವಾಭಾವಿಕವಾಗಿ ಐತಿಹಾಸಿಕ ವಿಷಯಗಳು ಇವುಗಳಲ್ಲಿ ತುಂಬಿರುತ್ತವೆ. ಅನೇಕ ಶಾಸನಗಳು ಆ ಕಾಲದ ಜನಜೀವನ, ಸಾಮಾಜಿಕ ಆರ್ಥಿಕ ಸ್ಥಿತಿ, ಸಾಂಸ್ಕೃತಿಕ ಬೆಳವಣಿಗೆ, ಮತಗಳಲ್ಲಿನ ಸೌಹಾರ್ದ ಮೊದಲಾದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ.

ಹೊಯ್ಸಳರ ಕಾಲದ ತಾಮ್ರಶಾಸನಗಳ ಸಂಖ್ಯೆ ಬಹು ಕಡಿಮೆ. ಅಲ್ಲಿಯವರೆಗೆ ಈ ಭಾಗದಲ್ಲಿ ಹಾಕಿಸುತ್ತಿದ್ದ ತಾಮ್ರಶಾಸನಗಳ ಮಾದರಿಯನ್ನು ಕೈಬಿಟ್ಟು ಹೊಯ್ಸಳರು ಚೋಳರನ್ನು ಅನುಸರಿಸಿ ತಾಮ್ರದ ಹಲಗೆಗಳನ್ನು ದಪ್ಪನಾಗಿಯೂ ಅಗಲವಾಗಿಯೂ ಇರುವಂತೆ ಮಾಡಿದರು.

ಮೂರರಿಂದ ಏಳರವರೆಗೆ ಈ ಹಲಗೆಗಳಿದ್ದು ದಪ್ಪನಾದ ಬಳೆಗೆ ಅವುಗಳನ್ನು ಸೇರಿಸಿರುತ್ತಿತ್ತು. ಈ ಬಳೆಗೆ ಹುಲಿಯ ಗುರುತಿನ ಮುದ್ರೆ ಹಾಕಿಸುತ್ತಿದ್ದರು. ಓಲೆಯ ಗರಿಯಂತೆ ಅಡ್ಡಡ್ಡಲಾಗಿರುತ್ತಿದ್ದ ತಾಮ್ರ ಶಾಸನಗಳು ಈಗ ಉದ್ದುದ್ದವಾಗಿದ್ದು ಮೇಲ್ಭಾಗದಲ್ಲಿ ಉಂಗುರ ಮುದ್ರೆಗಳು ಸೇರಿದುವು. ಶಿಲಾಶಾಸನಗಳಂತೆ ಅಕ್ಷರಗಳನ್ನು ಅತಿ ಗುಂಡಾಗಿ ಕೊರೆದು ಮೇಲಿನ ಮತ್ತು ಕೆಳಗಿನ ಸಾಲುಗಳ ಅಕ್ಷರಗಳಿಗೆ ಬಗೆಬಗೆಯ ಅಲಂಕರಣ ಮಾಡಿರುವುದುಂಟು. ಇವುಗಳಲ್ಲಿ ಮಾದರಿಯಾದುದು ಬೇಲೂರಿನ ಚೆನ್ನಕೇಶವ ದೇವಾಲಯದ ಬಗೆಗೆ ವಿವರಗಳನ್ನು ಕೊಡುವ ತಾಮ್ರಶಾಸನ. ಹೊಯ್ಸಳರ ಕಾಲದ ತಾಮ್ರಶಾಸನಗಳೇ ಕರ್ನಾಟಕದ ತಾಮ್ರಶಾಸನಗಳಲ್ಲೆಲ್ಲ ಹೆಚ್ಚು ವಿಸ್ತಾರವಾದುವೂ ತೂಕವುಳ್ಳವೂ ಆಗಿವೆ. ಇವರು ಮೊದಮೊದಲಿನ ಶಾಸನಗಳಲ್ಲಿ ಕನ್ನಡ ಹಾಗೂ ಸಂಸ್ಕೃತ–ಈ ಎರಡೂ ಭಾಷೆ ಹಾಗೂ ಲಿಪಿಯನ್ನು ಬಳಸಿದ್ದುಂಟು. ಅನಂತರದ ತಾಮ್ರಶಾಸನಗಳು ನಾಗರಿಲಿಪಿಯಲ್ಲಿದ್ದು ಸಂಸ್ಕೃತದಲ್ಲಿಯೇ ಇವೆ.

ಈ ಕಾಲದಲ್ಲಿ ವೀರಗಲ್ಲುಗಳೂ ಹೇರಳವಾಗಿ ದೊರೆತಿವೆ. ಗಂಗರ ಕಾಲದ ವೀರಗಲ್ಲುಗಳಿಗಿಂತ ಭಿನ್ನವಾಗಿರುವ ಈ ವೀರಗಲ್ಲುಗಳಲ್ಲಿ ನಿರ್ದಿಷ್ಟವಾದ ಒಂದು ಆಕಾರ ಬಳಕೆಗೆ ಬಂದಿದೆ. ಆದರೆ ಇಲ್ಲಿನ ಶಿಲ್ಪಗಳಲ್ಲಿ ಗಂಗರ ವೀರಗಲ್ಲುಗಳ ಮೇಲೆ ಕಾಣುವ ಕೆಚ್ಚು ಕಸುವು ಅಷ್ಟಾಗಿ ಕಂಡುಬರುವುದಿಲ್ಲ.

ಹೊಯ್ಸಳರ ಕಾಲಕ್ಕೇ ವಿಶಿಷ್ಟವಾದ ಕೆಲವು ಶಾಸನಗಳುಂಟು. ಈ ರಾಜರಿಗೆ ನಿಷ್ಠರಾಗಿದ್ದ ಲೆಂಕರು ತಮ್ಮ ರಾಜ ಕಾಲವಾದಲ್ಲಿ ತಾವೂ ಉಳಿಯುವುದಿಲ್ಲವೆಂಬ ಪ್ರತಿಜ್ಞೆ ಮಾಡಿ ಅದೇ ರೀತಿ ಪ್ರಾಣ ಬಿಟ್ಟ ಉದಾಹರಣೆಗಳಿವೆ. ಇಂಥವರನ್ನು ಗರುಡರೆಂದು ಶಾಸನಗಳು ಕರೆದಿವೆ. ಇಂಥ ಗರುಡರ ನೆನಪಿಗಾಗಿ ಹಾಕಿಸಿದ ಶಾಸನಗಳನ್ನು ಸಾಮಾನ್ಯವಾಗಿ ಅದಕ್ಕೇ ಮೀಸಲಾದ ಕಂಬಗಳ ಬುಡದ ಮುಖಗಳ ಮೇಲೆ ಕಂಡರಿಸಿ ದೇವಾಲಯಗಳ ಬಳಿ ನಿಲ್ಲಿಸಿರುತ್ತಾರೆ. ಇವುಗಳನ್ನು ಗರುಡಗಂಬಗಳೆಂದು ಕರೆಯಬಹುದು. ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ಮುಂದೆ ನಿಂತಿರುವ ಮೂರು ಕಂಬಗಳ ಮೇಲಿನ ಶಾಸನಗಳು ಹೊಯ್ಸಳ ರಾಜರಿಗೆ ಗರುಡರಾದ ಲೆಂಕರ ಒಂದು ಪೀಳಿಗೆಯನ್ನೇ ಕೊಡುತ್ತವೆ. ಈ ಕಂಬಗಳ ಮೇಲೆ ಆನೆಯನ್ನೇರಿದ ವೀರ ತನ್ನ ಹೆಂಡತಿ ಮತ್ತು ಹಿಂಬಾಲಕರೊಂದಿಗಿದ್ದು ಗರುಡನೊಡನೆ ಹೋಗುತ್ತಿರುವ ಶಿಲ್ಪವಿದೆ. ಅತ್ಯಂತ ಪ್ರಸಿದ್ಧವಾದ ಗರುಡಶಾಸನವೆಂದರೆ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಆವರಣದಲ್ಲಿರುವ, ಕುವರಲಕ್ಷ್ಮನು ಇಮ್ಮಡಿ ಬಲ್ಲಾಳನಿಗೆ ಗರುಡನಾದುದನ್ನು ತಿಳಿಸುವ ಸ್ತಂಭಶಾಸನ. ಅವನೊಂದಿಗೆ ಅವನ ಸಾವಿರ ಜನ ಭಟರೂ ಅವರ ಹೆಂಡಿರೂ ಪ್ರಾಣ ತೆತ್ತುದನ್ನು ಇದು ವರ್ಣಿಸುತ್ತದೆ. ಕಂಬದ ಸುತ್ತಲೂ ಇರುವ ಶಿಲ್ಪ ಅವರು ಆತ್ಮಾರ್ಪಣೆ ಮಾಡಿಕೊಂಡ ಬೇರೆ ಬೇರೆ ರೀತಿಯನ್ನು ಚಿತ್ರಿಸುತ್ತದೆ. ಅದೇ ದೇವಾಲಯದಲ್ಲಿ ತೊಲೆಯೊಂದಕ್ಕೆ ಊರೆಯಾಗಿ ಕೊಟ್ಟಿರುವ ಪ್ರೌಢರಾಯನ ಕಂಬವೂ ಇಂಥ ಒಬ್ಬ ಗರುಡನ ನೆನಪಿಗೆ ಹಾಕಿಸಿರುವ ಶಾಸನವೇ. ಒಂದನೆಯ ನರಸಿಂಹನ ಆಸ್ಥಾನದಲ್ಲಿ ಗಮಕಿಗಳು ವರ್ಣಿಸಿದ ಬಾವನ್ನವೀರರ ವೀರಾಲಾಪನವನ್ನು ಕೇಳಿದ ರವಳಬೋವನೆಂಬ ವೀರನು ಅಲ್ಲಿಯೇ ಆತ್ಮಾರ್ಪಣೆ ಮಾಡಿ ವೀರವನ್ನು ಮೆರೆದುದನ್ನು ವರ್ಣಿಸುವ ಈ ಅಪರೂಪದ ರೋಮಾಂಚಕರ ಶಾಸನಗಳನ್ನು ಕಣ್ಣಾರೆ ಕಂಡು ವರ್ಣಿಸಿದವನು ಮಾಧವ ವಿಬುಧ.  ಕಲೆ, ಲಿಪಿ, ಭಾಷೆ, ಸಾಹಿತ್ಯ, ಸಮೃದ್ಧಿ, ವೈವಿಧ್ಯ– ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಹೊಯ್ಸಳರ ಶಾಸನಗಳು ಕರ್ನಾಟಕ ಶಾಸನಸಂಪತ್ತಿಗೆ ಮೆರುಗನ್ನು ನೀಡಿವೆ ಎನ್ನಬಹುದು. (ಎಂ.ಎಚ್.)

**ಸಾಹಿತ್ಯ:** ಹೊಯ್ಸಳರು ಸಾಹಿತ್ಯಕ್ಕೂ ಪ್ರೋತ್ಸಾಹ ನೀಡಿದರು. ಹರಿಹರ, ರಾಘವಾಂಕ, ನಾಗಚಂದ್ರ, ಜನ್ನ, ಕೆರೆಯ ಪದ್ಮರಸ, ಕೇಶಿರಾಜ, ವಿದ್ಯಾ ಚಕ್ರವರ್ತಿ ಹೀಗೆ ಅನೇಕರು ಸಾಹಿತ್ಯದಲ್ಲಿ ನಿರತರಾಗಿದ್ದರು. ಸಂಸ್ಕೃತ ಉನ್ನತ ಸ್ಥಾನವನ್ನು ಪಡೆದಿದ್ದಿತು. ಗದ್ಯಾಕರ್ಣಾಮೃತ ಎಂಬ ಕೃತಿ ಐತಿಹಾಸಿಕ ಮಾಹಿತಿಗಳನ್ನು ಒಳಗೊಂಡಿದೆ. ಇವರ ಕಾಲದಲ್ಲಿ ಧರ್ಮ ದರ್ಶನ, ಪುರಾಣ, ಗಣಿತ, ವೈದ್ಯ, ವ್ಯಾಕರಣ ಮುಂತಾದ ಶಾಸ್ತ್ರಗ್ರಂಥಗಳಲ್ಲದೆ ಹಲವು ಕಾವ್ಯಗಳು ಚಂಪು, ರಗಳೆ, ಷಟ್ಪದಿ, ದ್ವಿಪದಿ ವಚನ ನಾಟಕ ಮುಂತಾದ ಪ್ರಕಾರಗಳಲ್ಲಿ ಸಂಸ್ಕೃತ ಪ್ರಾಕೃತ ಕನ್ನಡ ಭಾಷೆಗಳಲ್ಲಿ ರಚಿತವಾದವು. ಇವರ ಕಾಲದಲ್ಲಿ ರಚಿತವಾದ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಗ್ರಂಥಗಳು ಸಮಕಾಲೀನ ಸಾಮಾಜಿಕ ಸ್ಥಿತಿಗತಿಗಳು, ನಂಬಿಕೆ ಮತ್ತು ನಡವಳಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುತ್ತವೆ.

ಶಿಕ್ಷಣ ಪ್ರಸಾರದಲ್ಲಿ ಅಗ್ರಹಾರಗಳು, ಮಠಗಳು ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು ಮತ್ತು ದೇವಾಲಯಗಳು ಮುಖ್ಯವಾದವು. ಹೊಯ್ಸಳ ಅರಸರು, ಅಧಿಕಾರಿಗಳು ಹಲವೆಡೆಗಳಲ್ಲಿ ಅಗ್ರಹಾರಗಳನ್ನು ಸ್ಥಾಪಿಸಿದರು. ಉದಾ: ವೀರಬಲ್ಲಾಳನ ಆಶ್ರಯದಲ್ಲಿ ನೇಮಿಚಂದ್ರ, ರುದ್ರಭಟ್ಟ, ಜನ್ನ, ಆಚಣ್ಣ, ಪೋಲಾಳ್ವ ದಂಡನಾಥ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದರು. ಜೈನಕವಿಗಳು, ವಚನಕಾರರು, ಆಚಾರ್ಯರು, ಸಾರಸ್ವತ ಲೋಕವನ್ನು ಸಮೃದ್ಧಿಗೊಳಿಸಿದರು.

ಅಭಿನವ ಪಂಪ ಅಥವಾ ನಾಗಚಂದ್ರ ಪಂಪರಾಮಾಯಣ ಅಥವಾ ಮಲ್ಲಿನಾಥ ಪುರಾಣ ರಚಿಸಿದ್ದ. ಕಂತಿಯು ಅಭಿನವ ವಾಗ್ದೇವಿ ಎಂಬ ಬಿರುದು ಧರಿಸಿದ್ದಳು. ಕೀರ್ತಿವರ್ಮ ಗೋವೈದ್ಯ, ಬ್ರಹ್ಮಶಿವ ಸಮಯ ಪರೀಕ್ಷೆ, ಕಂದವೃತ್ತ ಕೃತಿ ರಚಿಸಿದ್ದಾನೆ. ಇದು ಅಂದಿನ ಸಾಮಾಜಿಕ ನಂಬಿಕೆಗಳ ಮೇಲೆ ಬೆಳಕು ಚೆಲ್ಲುತ್ತದೆ. ನಯಸೇನನ ಧರ್ಮಾಮೃತ ಹೊಸ ಕನ್ನಡದಲ್ಲಿ ಚಂಪೂ ಶೈಲಿಯಲ್ಲಿದ್ದು ನೈತಿಕ ಮೌಲ್ಯಗಳನ್ನೊಳಗೊಂಡಿದೆ. ಸಮಕಾಲೀನನಾದ ಮೌಕ್ತಿಕ ಕವಿ ಚಂದ್ರನಾಥ ಅಷ್ಟಕವನ್ನು ಕನ್ನಡದಲ್ಲಿ ರಚಿಸಿದ್ದಾನೆ. ವಾದಿ ಕುಮುದ ಚಂದ್ರ ಜೈನಧರ್ಮದ ಮೇಲೆ ಕನ್ನಡ ವ್ಯಾಖ್ಯಾನವನ್ನು ಜಿನ ಸಂಹಿತೆ ಕೃತಿಯಲ್ಲೂ ಕರ್ಣಾಪಾರ್ಯನು ಚಂಪೂಶೈಲಿಯಲ್ಲಿ ನೇಮಿನಾಥ ಪುರಾಣವನ್ನು, ಜನ್ನನ ಗುರು ಎರಡನೆಯ ನಾಗವರ್ಮ ಕಾವ್ಯಾವಲೋಕನವನ್ನು, ವ್ಯಾಕರಣ, ಕರ್ನಾಟಕ ಭಾಷಾ ಭೂಷಣ ಸಂಸ್ಕೃತದಲ್ಲಿ ಕನ್ನಡ ವ್ಯಾಕರಣ ಹಾಗೂ ವಸ್ತು ಕೋಶ ಸಂಸ್ಕೃತ ಕರ್ಣಾಟಕ ನಿಘಂಟು ಕೃತಿಗಳನ್ನು ಅರ್ಪಿಸಿದ್ದಾನೆ. ಚೋಳರಾಜ ಮನೆತನದ ಉದಯಾದಿತ್ಯ ಉದಯಾದಿತ್ಯಾಲಂಕಾರವನ್ನು ಬರೆದಿದ್ದಾನೆ.

ನರಸಿಂಹನ ಕಾಲದಲ್ಲಿದ್ದ ಹರಿಹರ 63 ಮಂದಿ ಶೈವ ಸಂತರು ಅಥವಾ ಪುರಾತನರನ್ನು ಪ್ರಶಂಸಿಸಿ ಶಿವ ಗಣದ ರಗಳೆ, ಗಿರಿಜಾ ಕಲ್ಯಾಣ ಮತ್ತು ರಕ್ಷಾಶತಕವನ್ನೂ ನೇಮಿಚಂದ್ರ ಅರ್ಧನೇಮಿ ಪುರಾಣ, ಲೀಲಾವತಿ ಕೃತಿಯನ್ನು, ರುದ್ರಭಟ್ಟ ವಿಜಯನಾಥವಿಜಯವನ್ನು ಚಂಪೂಶೈಲಿಯಲ್ಲೂ ಅಗ್ಗಳ ಚಂದ್ರಪುರಾಣ, ಆಚಣ್ಣ ವರ್ಧಮಾನಪುರಾಣ, ಬಂಧುವರ್ಮ ಹರಿವಂಶಾಭ್ಯುದಯ, ಕವಿಕಾಮ ಶೃಂಗಾರ ರತ್ನಾಕರವನ್ನು ಬರೆದಿದ್ದಾರೆ (ಕನ್ನಡದಲ್ಲಿ ಭಾವ ಅಥವಾ ರಸಕ್ಕೆ ಸಂಬಂಧಪಟ್ಟ ಶ್ರೇಷ್ಠ ಹಾಗೂ ಪ್ರಥಮಕೃತಿ). ಎರಡನೆಯ ಬಲ್ಲಾಳನ ಆಸ್ಥಾನದಲ್ಲಿದ್ದ ಜೈನಕವಿಗಳಲ್ಲಿ ಜನ್ನ ಕವಿಚಕ್ರವರ್ತಿ ಎಂಬ ಬಿರುದು ಧರಿಸಿದ್ದು ಯಶೋಧರ ಚರಿತೆ ಮತ್ತು ಅನಂತನಾಥಪುರಾಣವನ್ನು ಚಂಪೂ ಕಾವ್ಯ ಶೈಲಿಯಲ್ಲಿ ರಚಿಸಿದನ್ನು. ಪಾರ್ಶ್ವನಾಥ ಪಂಡಿತ ಮೊದಲ ಬಾರಿಗೆ 23ನೆಯ ತೀರ್ಥಂಕರನ ಕುರಿತು ಪಾರ್ಶ್ವನಾಥ ಪುರಾಣವನ್ನು ಜನ್ನನ ತಂದೆ ಕಟಕೋಪಾಧ್ಯ ಅಥವಾ ಸುಮನೋಬಾಣನು ಎರಡನೆಯ ನರಸಿಂಹನ ಆಸ್ಥಾನದಲ್ಲಿದ್ದು ಜೈನ ಪುರಾಣವನ್ನು ರಚಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ಶಿಶುಮಾಯಣ ಎಂಬ ಜೈನಕವಿ ಸಾಂಗತ್ಯದಲ್ಲಿ ತ್ರಿಪುರದಹನ ಸಾಂಗತ್ಯ ಮತ್ತು ಅಂಜನಾ ಚರಿತೆಯನ್ನು, ಪೊಲಾಳ್ವ ದಂಡನಾಥ ಷಟ್ಪದಿಯಲ್ಲಿ ಹರಿಚರಿತೆಯನ್ನು ಎರಡನೆಯ ವೀರಬಲ್ಲಾಳ ಮತ್ತು ಎರಡನೆಯ ವೀರ ನರಸಿಂಹನ ಮಂತ್ರಿಯಾಗಿದ್ದು ರಚಿಸಿರುವನು. ಆಂಡಯ್ಯ ಚಂಪೂ ಶೈಲಿಯಲ್ಲಿ ಕಬ್ಬಿಗರ ಕಾವ ಅಥವಾ ಮದನ ವಿಜಯವನ್ನು, ಗುಣವರ್ಮ ಜನ್ನನ ಸಮಕಾಲೀನನಾಗಿದ್ದು ಪುಷ್ಪದಂತ ಪುರಾಣವನ್ನು ಚಂಪೂಶೈಲಿಯಲ್ಲಿ ಚಂದ್ರನಾಥಾಷ್ಟಕವನ್ನು ತ್ರಿಭುವನ ಜಿನಾಲಯದ ಚಂದ್ರನಾಥನನ್ನು ಪ್ರಶಂಶಿಸಿ ಪದ್ಯ ರಚಿಸಿದ್ದಾನೆ. ಮತ್ತೊಬ್ಬ ಜೈನ ಕವಿ ಕಮಲಾಭವ ಶಾಂತಿನಾಥ ಪುರಾಣವನ್ನು ಕೇಶಿರಾಜನ ತಂದೆ ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ, ಕೇಶಿರಾಜ ಶಬ್ದಮಣಿದರ್ಪಣವನ್ನು ಸೋಮೇಶ್ವರನ ಕಾಲದಲ್ಲಿ ರಚಿಸಿರುವರು (ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಶ್ರೇಷ್ಠ ಕೃತಿ). ಮಹಾಬಲ ಕವಿ ವಿರಚಿತ ನೇಮಿನಾಥ ಪುರಾಣ ಹರಿವಂಶ ಮತ್ತು ಕುರುವಂಶದ ಕಥೆಯನ್ನು ನಿರೂಪಿಸುತ್ತದೆ. ಕುಮುದೇಂದು ರಚಿಸಿದ ಕುಮುದೇಂದು ರಾಮಾಯಣ ಷಟ್ಪದಿಯಲ್ಲಿದ್ದು ವಾಲ್ಮೀಕಿ ರಾಮಾಯಣದ ಜೈನ ಕೃತಿಯಾಗಿದೆ. ರಟ್ಟ ಕವಿ ಅಥವಾ ಅರ್ಹದ್ದಾಸ ಮತ್ತೊಬ್ಬ ಜೈನ ಕವಿಯಾಗಿದ್ದು ರಟ್ಟಶಾಸ್ತ್ರ ಅಥವಾ ರಟ್ಟಮತ ಅರೆ ವೈಜ್ಞಾನಿಕ ಕೃತಿಯಾಗಿದ್ದು ಮಳೆ, ಭೂಕಂಪ, ಮಿಂಚು, ಪ್ರಾಣಿ–ಪಕ್ಷಿಗಳು, ಗ್ರಹಗಳು ಹಾಗೂ ಇತರ ಭೂಗೋಳಶಾಸ್ತ್ರಕ್ಕೆ ಸಂಬಂಧಪಟ್ಟದ್ದು ರೈತರಿಗೆ ಉಪಯುಕ್ತವಾಗಿದೆ. ಚಾವುಂಡರಸ ಅಭಿನವ ದಶಕುಮಾರ ಚರಿತೆ ಮತ್ತು ನಳಚರಿತೆಯನ್ನೂ ನಾಚಿರಾಜ ಅಮರಕೋಶಕ್ಕೆ ಕನ್ನಡ ವ್ಯಾಖ್ಯಾನವನ್ನೂ ನರಹರಿತೀರ್ಥರು ರಘುಕುಲ ತಿಲಕವನ್ನೂ ಪದ್ಯರೂಪದಲ್ಲಿ ಬರೆದಿರುವರು.

ವೀರಶೈವ ಆಂದೋಲನದಿಂದಾಗಿ ವಚನ ಸಾಹಿತ್ಯ ಬೆಳವಣಿಗೆ ಹೊಂದಿತು. ಧಾರ್ಮಿಕ ಹಾಗೂ ತಾತ್ತ್ವಿಕ ವಿಚಾರಗಳು ಈ ಸಾಹಿತ್ಯದಲ್ಲಿ ಪ್ರಕಟವಾಗಿದೆ. ಸೊನ್ನಲಿಗೆಯ ಸಿದ್ಧರಾಮ, ಕಪಿಲಸಿದ್ಧ ಮಲ್ಲಿಕಾರ್ಜುನನ ನಾಮಾಂಕಿತದಲ್ಲಿ ಬಸವ ಸ್ತೋತ್ರ ತ್ರಿವಿಧಿ, ಅಷ್ಟಾವರ್ಣ ತ್ರಿವಿಧಿ, ಮಿಶ್ರ ಸ್ತೋತ್ರದ ತ್ರಿವಿಧಿ ಮತ್ತು ಕಾಲಜ್ಞಾನವನ್ನು ಪ್ರಭುದೇವ ಅಥವಾ ಅಲ್ಲಮಪ್ರಭು ಗುಹೇಶ್ವರ ನಾಮಾಂಕಿತದಲ್ಲಿ ಗುಹೇಶ್ವರ ವಚನಗಳು, ಬೆಡಗಿನ ವಚನ, ಸೃಷ್ಟಿಯ ವಚನ, ಶೂನ್ಯಸಂಪಾದನೆ ಮತ್ತು ಮಂತ್ರಗೋತ್ರ ಕೃತಿಗಳು ಮೂಡಿಬಂದಿವೆ. ಕೊಂಡಗುಳಿ ಕೇಶಿರಾಜ ಷಡಕ್ಷರ ಕಂದವನ್ನೂ ಅಕ್ಕಮಹಾದೇವಿ ಮಲ್ಲಿಕಾರ್ಜುನನ ನಾಮಾಂಕಿತದಲ್ಲಿ ಯೋಗಾಂಗ ತ್ರಿವಿದಿ, ಸೃಷಿಯ ವಚನ, ಅಕ್ಕಗಳ ಪೀಠಿಕೆಯನ್ನೂ ಘಟ್ಟಿವಾಳಯ್ಯ ಕಾಲಜ್ಞಾನವನ್ನೂ ಪಾಲ್ಕುರಿಕೆ ಸೋಮನಾಥ, ಗುರುಲಿಂಗಯ್ಯ, ಗೊಬ್ಬೂರು ಸಂಗಣ್ಣ, ಮಲ್ಲಿನಾಥ, ಚನ್ನರಾಮರನ್ನು ವೀರಶೈವ ವಚನಕಾರರನ್ನು ಹೆಸರಿಸಬಹುದು.

ವಾರಂಗಲ್ ಮತ್ತು ದ್ವಾರಸಮುದ್ರದ ರಾಜಾಶ್ರಯ ಪಡೆದಿದ್ದ ಹಂಪೆಯ ರಾಘವಾಂಕ ವೀರಶೈವ ಕವಿಗಳ ಪ್ರಶಂಸೆಗೆ ಪಾತ್ರನಾಗಿದ್ದ. ಷಟ್ಪದಿಯಲ್ಲಿ ಹರಿಶ್ಚಂದ್ರಕಾವ್ಯವನ್ನು, ಹರಿಶ್ಚಂದ್ರನ ಕುರಿತು ವಾರ್ಧಕ ಷಟ್ಪದಿಯಲ್ಲಿ ಸೋಮನಾಥ ಚರಿತೆಯನ್ನು, ಪುಲಿಗೆರೆ ಸೋಮನಾಥನ ಬಗ್ಗೆ ಸೊನ್ನಲಿಗೆ ಸಿದ್ಧರಾಮನ ಕುರಿತು ಸಿದ್ಧರಾಮಪುರಾಣವನ್ನು ಹಾಗೂ ವೀರಶೈವ ಚರಿತೆ ಮತ್ತು ಶರಭ ಚರಿತೆಯನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾನೆ. ಕೆರೆಯ ಪದ್ಮರಸನ ಸಂಸ್ಕೃತದ ವಾದ್ವೈತವನ್ನು ರಗಳೆಯಲ್ಲಿ ದೀಕ್ಷಾ ಬೋಧವನ್ನು ಹೆಸರಿಸಬಹುದು. ಪಾಲ್ಕುರಿಕೆ ಸೋಮನಾಥನ ಸೋಮೇಶ್ವರ ಶತಕ, ಸಹಸ್ರ ಗಣ ನಾಮಾವಳಿ, ಪಂಚರತ್ನ ಕೃತಿಗಳಲ್ಲದೆ ತೆಲುಗಿನ ಪಂಡಿತಾರಾಧ್ಯ ಚರಿತಮು ಶ್ರೇಷ್ಠ ಕೃತಿಯಾಗಿದೆ (ವಿವಿಧ ಸಂಗೀತ ವಾದ್ಯಗಳ ಉಲ್ಲೇಖಗಳಿವೆ). ವಿಷ್ಣುವರ್ಧನನ ಸಮಕಾಲೀನರಾದ ರಾಮಾನುಜಾಚಾರ್ಯರು ಮೂರನೆಯ ನರಸಿಂಹ ಮತ್ತು ಮೂರನೆಯ ಬಲ್ಲಾಳನ ಸಮಕಾಲೀನರಾಗಿದ್ದ ಮಧ್ವಾಚಾರ್ಯರು ರಚಿಸಿದ ಕೃತಿಗಳು ತಾತ್ತ್ವಿಕ ವಿಚಾರವನ್ನು ಆಧರಿಸಿದ್ದು ಸಂಸ್ಕೃತದಲ್ಲಿವೆ. ಕನ್ನಡ ಕವಿಗಳು

ಸಂಸ್ಕೃತದಲ್ಲೂ ಪಾಂಡಿತ್ಯ ಪಡೆದಿದ್ದು ಉಭಯ ಕವಿ ಎಂಬ ಬಿರುದು ಪಡೆದಿದ್ದರು. ವೈದಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಧ್ವಾಚಾರ್ಯರ ಬುಗ್‌ಭಾಷ್ಯಾ ವಿದ್ಯಾತೀರ್ಥರ ರುದ್ರಪ್ರಸನ್ನ ಭಾಷ್ಯಾ ಗಮನಾರ್ಹ. ಮಧ್ವಾಚಾರ್ಯರ ಭಾಗವತ ತಾತ್ಪರ್ಯ ನಿರ್ಣಯ ವಿಷ್ಣುಚಿತ್ತರ ವಿಶಿಷ್ಟಾದ್ವೈತವನ್ನು ಆಧರಿಸಿ ರಚಿಸಿದ ವಿಷ್ಣುಪುರಾಣ, ಪರಾಶಭಟ್ಟನ ಗುಣರತ್ನ ಕೋಶ, ಶ್ರೀಮಾಧ್ವರ ಸದಾಚಾರ ಸ್ಮೃತಿ, ತಂತ್ರಸಾರ, ದ್ವಾದಶಸ್ತೋತ್ರ, ಕೃಷ್ಣಾಮೃತ ಮಹಾರ್ಣವ, ಸಣ್ಣ ಕೃತಿಗಳು, ಶ್ರೀ ಭಾಷ್ಯಾವೃತ್ತಿ, ರಾಮಾನುಜರ ಆಶಯದಂತೆ ರಾಮಮಿಶ್ರ ದೇಶಿಕ ವತ್ಸ ವರದರ ತತ್ತ್ವಸಾರ, ವರದನಾರಾಯಣ ಭಟ್ಟಾರಕನ ಪ್ರಾಗ್ಯ ಪರಿತ್ರಾಣ ಮತ್ತು ಪರಾಶರರ ತತ್ತ್ವ ರತ್ನಾಕರವನ್ನು ಹೆಸರಿಸಬಹುದು.

ವಿಷ್ಣುಚಿತ್ತರ ಪ್ರಮೇಯ ಸಂಗ್ರಹ ಸಂಗತಿ ಮಾಲಾ ಈ ಕಾಲಕ್ಕೆ ಸೇರಿದ ದ್ವೈತ ಸಿದ್ಧಾಂತದ ಶ್ರೀ ಮಧ್ವಾಚಾರ್ಯರು 32 ಕೃತಿಗಳನ್ನು ರಚಿಸಿದ್ದು ಬ್ರಹ್ಮ ಸೂತ್ರಕ್ಕೆ ಭಾಷ್ಯ ಅಣುಭಾಷ್ಯ, ಅಣುವ್ಯಾಖ್ಯಾನ ಮತ್ತು ನ್ಯಾಯ ವಿವರ್ಣ ಎಂದು ನಾಲ್ಕು ವ್ಯಾಖ್ಯಾನ ಬರೆದಿದ್ದಾರೆ. ಕರ್ಮ ನಿರ್ಣಯ ಮತ್ತೊಂದು ಕೃತಿ. ಮಧ್ವರ ಬ್ರಹ್ಮಸೂತ್ರಕ್ಕೆ ತ್ರಿವಿಕ್ರಮ ಪಂಡಿತ ವ್ಯಾಖ್ಯಾನ ಬರೆದಿದ್ದಾನೆ. ಪ್ರಮುಖ ಶಿಷ್ಯರಾದ ಪದ್ಮನಾಭ ತೀರ್ಥರು 14 ಕೃತಿ ರಚಿಸಿದ್ದು ಸತರ್ಕ ರತ್ನಾವಳಿ ಮತ್ತು ಸನ್ಮಯ ರತ್ನಾವಳಿ ಮುಖ್ಯವಾದವು. ಮತ್ತೊಬ್ಬ ಶಿಷ್ಯರಾದ ಶ್ರೀ ನರಹರಿ ತೀರ್ಥರು ಗೀತಾ ಭಾಷ್ಯದ ಮೇಲೂ ಯಮಕ ಭಾರತ ವಿಷ್ಣು ತತ್ತ್ವ ನಿರ್ಣಯ ಮತ್ತು ಕರ್ಮ ನಿರ್ಣಯ ಕುರಿತು ಬರೆದಿರುವರು.

ಈ ಕಾಲದಲ್ಲಿ ಅದ್ವೈತ ಶಾಖೆಗೆ ಸಂಬಂಧಿಸಿದಂತೆ ಆನಂದಬೋಧ ಭಟ್ಟಾಚಾರ್ಯರು ನ್ಯಾಯ ಮಾರ್ಕಾಂಡ, ನ್ಯಾಯ ದೀಪಾವಳಿ, ಪ್ರಮಾಣಮಾಲಾ, ಆನಂದಜ್ಞಾನರ ತತ್ತ್ವಲೋಕ, ಪ್ರಕಾಶಾತ್ಮರ ಪಂಚಪಧಿಕಾ ವಿವರ್ಣ, ಅಖಂಡಾನಂದರ ತತ್ತ್ವೋದ್ದೀಪನ, ವಾಧೀಂದ್ರ ಮಹಾವಿದ್ಯಾವಿಡಂಬನ ಶ್ರೀಕರನಂದರ ಗೀತಾ ತಾತ್ಪರ್ಯ ಬೋಧಿನಿ ಮತ್ತು ಉಪನಿಷತ್ ರತ್ನ ಮುಖ್ಯವಾದವು.

ಗಣಿತಶಾಸ್ತ್ರಕ್ಕೆ ಸಂಬಂಧಿಸಿದಂತೆ ರಾಜಾದಿತ್ಯನ ಲೀಲಾವತಿ ವ್ಯವಹಾರ ಗಣಿತ, ವ್ಯವಹಾರ ರತ್ನ, ಎರಡನೆಯ ಭಾಸ್ಕರನ ಸಿದ್ಧಾಂತ ಶಿರೋಮಣಿ ಉಲ್ಲೇಖಿಸಬಹುದು.

ಲಲಿತ ಕಲೆಗಳು: ಇವರ ಕಾಲದಲ್ಲಿ ಚಿತ್ರಕಲೆ, ಸಂಗೀತ ಮತ್ತು ನೃತ್ಯಗಳಲ್ಲಿ ಸಂಸ್ಕೃತಿ ಅಭಿವ್ಯಕ್ತವಾಗಿದೆ. ಶಿಲ್ಪಕಲೆ ಮತ್ತು ಶಾಸನಗಳಿಂದ ಇವರ ಕಾಲದ ಲಲಿತ ಕಲೆಯ ಬೆಳೆವಣಿಗೆಯನ್ನು ತಿಳಿದುಕೊಳ್ಳಬಹುದು. ಇವರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು ನೃತ್ಯ ಮಾದರಿಗಳಿಂದಲೂ ಸೂಕ್ಷ್ಮ ಕೆತ್ತನೆಯ ಶಿಲ್ಪಗಳಿಂದಲೂ ಅಂಕೃತವಾಗಿವೆ. ಅನೇಕ ಶಿಲ್ಪಾಕೃತಿಗಳು ವೀಣೆ, ಕೋಲು, ತಾಳ ಮದ್ದಲೆ ಮತ್ತು ಇತರ ಕಂಕೇವಾದ್ಯಗಳ ಸಹಿತವಾಗಿ ಕೆತ್ತಲ್ಪಟ್ಟಿವೆ. ಜನರು ಸಂಗೀತ ಮತ್ತು ನೃತ್ಯದಲ್ಲಿ ಅಭಿರುಚಿಯನ್ನು ಗುರುತಿಸಿಕೊಳ್ಳಲು ಶಿಲ್ಪಕಲೆ ಹೆಚ್ಚು ಸಹಕಾರಿಯಾಗುತ್ತದೆ. ಬೇಲೂರು, ಹಳೇಬೀಡು ಮತ್ತು ಸೋಮನಾಥಪುರ ದೇವಾಲಯದಲ್ಲಿ ಕೆತ್ತಿರುವ ನೃತ್ಯಕಲಾ ಶಿಲ್ಪಗಳು ರಸ ರಾಗವನ್ನು ಧ್ವನಿಸುತ್ತವೆ. ವಿಷ್ಣುವರ್ಧನನ ಕಾಲದಲ್ಲಿ ಶ್ರವಣಬೆಳಗೊಳದ ಶಾಂತಿನಾಥ ಬಸದಿಯ ಭಿತ್ತಿಗಳು ಹಾಗೂ ಚಾವಣಿಗಳಲ್ಲಿ ವರ್ಣಚಿತ್ರಗಳ ಕುರುಹುಗಳಿವೆ. (ಡಿ.ಟಿ.)

**ವಾಸ್ತು, ಮೂರ್ತಿಶಿಲ್ಪ ಕಲೆ:** ಹೊಯ್ಸಳರು 11ನೆಯ ಶತಮಾನದಲ್ಲಿ ತಮ್ಮ ಸ್ವತಂತ್ರ ಆಳಿಕೆಯನ್ನು ಪ್ರಾರಂಭಿಸುವ ಸಮಯಕ್ಕಾಗಲೇ ಕರ್ನಾಟಕದಲ್ಲಿ ವಾಸ್ತು–ಶಿಲ್ಪಕಲೆ ಸಾಕಷ್ಟು ಪ್ರವರ್ಧಮಾನವಾಗಿ ಬೆಳೆದಿತ್ತು. ಈ ಕಾಲಕ್ಕಾಗಲೇ ಕಲ್ಯಾಣ ಚಾಳುಕ್ಯ ಶಿಲ್ಪಿಗಳು ಮರಳುಗಲ್ಲು ಮತ್ತು ಕಣಶಿಲೆಯ ಬಳಕೆಯನ್ನು ಬಿಟ್ಟು ಮೃದುತರ ಬಳಪದಕಲ್ಲನ್ನು (ಕ್ಲೋರೈಟಿಕ್ ಶಿಸ್ಟ್) ದೇವಾಲಯ ನಿರ್ಮಾಣಕ್ಕೆ ಬಳಸಿದ್ದರು. ಈ ಬದಲಾವಣೆಯಿಂದಾಗಿ ದೇವಾಲಯದ ವಿನ್ಯಾಸದಲ್ಲಿ, ಅಲಂಕರಣೆಯಲ್ಲಿ ಬಹಳಷ್ಟು ಆಕರ್ಷಣೆ ಬಂದಿತ್ತು. ಜೊತೆಗೆ ಅವರು ಒಂದೇ ಕಟ್ಟಡದ ತಳವಿನ್ಯಾಸದಲ್ಲಿ ಐದು ಗುಡಿಗಳವರೆಗಿನ ದೇವಾಲಯಗಳನ್ನು ನಿರ್ಮಿಸಿದ್ದರು. ಹಾಗೆಯೇ ಕೆಲವೊಂದು ನಕ್ಷತ್ರಾಕಾರದ ತಳವಿನ್ಯಾಸಗಳನ್ನು ಸಹ ರೂಪಿಸಿದ್ದರು. ಈ ಎಲ್ಲ ಬದಲಾವಣೆಗಳನ್ನು ಕೈಗೊಂಡಿದ್ದರೂ ಮೂಲಭೂತವಾಗಿ, ಕೆಲವೊಂದನ್ನು ಬಿಟ್ಟು, ಇವರ ಎಲ್ಲ ದೇವಾಲಯಗಳೂ ದ್ರಾವಿಡ ಮಾದರಿಯಲ್ಲೇ ನಿರ್ಮಿತವಾಗಿದ್ದವು. ಈ ಪರಂಪರೆಯ ಹಿನ್ನೆಲೆಯನ್ನು ಹೊಂದಿದ್ದ ಹೊಯ್ಸಳ ವಾಸ್ತುಶೈಲಿ ಮತ್ತು ಶಿಲ್ಪಶೈಲಿಗಳು, ಇನ್ನೂ ಹೆಚ್ಚು ವಿನ್ಯಾಸಗಳಿಂದ, ಅಲಂಕರಣೆಗಳಿಂದ, ಸುಂದರ–ಸೂಕ್ಷ್ಮ ಕೆತ್ತನೆಗಳಿಂದ ಮತ್ತು ಹೊಸ–ಹೊಸ ಆವಿಷ್ಕಾರಗಳಿಂದಾಗಿ ಶ್ರೀಮಂತವಾದ ಮತ್ತು ವೈಭವೋಪೇತವಾದ ಶೈಲಿಯಾಗಿ ಕಂಗೊಳಿಸಿತು.

ಹೊಯ್ಸಳ ಶೈಲಿಯ ಶ್ರೀಮಂತಿಕೆಗೆ ಮತ್ತೊಂದು ಕಾರಣವೂ ಇದೆ. ಅದೇ ಹೊಯ್ಸಳ ಸಮಾಜದಲ್ಲಿ ಉಂಟಾದ ಪ್ರಗತಿಪರ ಸಾಮಾಜಿಕ ಭಾವನೆಗಳು, ಹೊಯ್ಸಳ ಕಾಲ ಕರ್ನಾಟಕ ಸಾಮಾಜಿಕ ಪರಂಪರೆಯ ಪರ್ವಕಾಲ. ಸಾಹಿತ್ಯ, ಸಂಗೀತ, ಧರ್ಮ, ವಿದ್ಯೆ, ವಿಜ್ಞಾನ ಹಾಗೂ ಸಂಬಂಧಿತ ಇನ್ನಿತರ ಕ್ಷೇತ್ರಗಳಲ್ಲಿ ಉಂಟಾದ ಪ್ರಗತಿ ವಾಸ್ತುಶಿಲ್ಪ ಪರಂಪರೆಯ ಮೇಲೂ ತನ್ನ ಪ್ರಭಾವ ಬೀರಿತ್ತು. ಪ್ರಗತಿಪರ ಸಮಾಜದ ಅವಿಭಾಜ್ಯ ಅಂಗವಾಗಿದ್ದ ಶಿಲ್ಪಿಗಳು ಈ ಪ್ರಗತಿಯನ್ನು ತಮ್ಮ ವಾಸ್ತುಶಿಲ್ಪ ಕೃತಿಗಳಲ್ಲಿ ಪ್ರತಿಬಿಂಬಿಸಿದ್ದಾರೆ. ವಿಜ್ಞಾನದ ಅಂಗಗಳಾಗಿದ್ದ ವಾಸ್ತುಶಾಸ್ತ್ರ, ತಂತ್ರಜ್ಞಾನ, ಖಗೋಳ, ಗಣಿತ, ಲೋಹಶಾಸ್ತ್ರ, ಶಿಲಾಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿ ಆದ ಪ್ರಗತಿ ಹೊಯ್ಸಳ ಶಿಲ್ಪಿಗಳಿಗೆ ಅನುಕೂಲವಾಗಿ ಒದಗಿತು. ಸಾಹಿತ್ಯ ಕ್ಷೇತ್ರದ ಉತ್ತಮ ಕೃತಿಗಳು, ಅವುಗಳಲ್ಲಿಯ ಸೌಂದರ್ಯೋಪಾಸನೆ, ಉತ್ಪ್ರೇಕ್ಷೆ, ವೀರ್ಯ, ಶೌರ್ಯ, ಪರಾಕ್ರಮಗಳು, ವಿರಹ ವೇದನೆಗಳು, ಶೃಂಗಾರ ರಸಗಳು ಹಾಗೂ ಇನ್ನಿತರ ಭಾವಗಳು ಹೊಯ್ಸಳ ಶಿಲ್ಪಿಗಳಿಗೆ ಪ್ರೇರಣೆಗಳಾದವು. ಲಯಬದ್ಧ, ನಿರರ್ಗಳ ಕಾವ್ಯಶೈಲಿ ಬಳ್ಳಿ ಸುರುಳಿ, ಹಂಸ–ವ್ಯಾಳ ಮಾಲೆಗಳ ರೂಪದಲ್ಲಿ ಪ್ರಕಟಗೊಂಡವು. ವಾಸ್ತುಕ್ಷೇತ್ರದ ವಿವಿಧ ಗಣಗಳ, ಸಂಘಗಳ, ಗುಂಪುಗಳ ಸ್ಥಾಪನೆ, ಶಿಲ್ಪಿಗಳಲ್ಲೇ ಪರಸ್ಪರ, ಪೈಪೋಟಿಗೆ, ಸ್ಪರ್ಧೆಗಳಿಗೆ ಆಸ್ಪದವಾಯಿತು. ಒಂದಕ್ಕಿಂತ ಒಂದು ಸುಂದರ ದೇವಾಲಯಗಳು, ಶಿಲ್ಪಗಳು, ವಿನ್ಯಾಸಗಳು, ರಚನೆಗಳು ವಿವಿಧ ಪ್ರಯೋಗಗಳಿಗೆ ಎಡೆಮಾಡಿತು. ವಾಸ್ತುಶಿಲ್ಪ ಕ್ಷೇತ್ರದಲ್ಲಿ ಹೊಸತನ, ಹುರುಪು, ಅಭಿರುಚಿ, ಅನ್ವೇಷಣೆ, ಆವಿಷ್ಕಾರ, ಕುಶಲತೆ, ಪ್ರಗತಿ ಪರತೆಗಳು ಮೂಡಿಬಂದು ಹೊಯ್ಸಳ ಶೈಲಿಯೆಂದು ಪ್ರತ್ಯೇಕಿಸಬಹುದಾದ ಶೈಲಿಯೊಂದರ ಉದಯ ವಾಯಿತು. ಇಂತಹ ಅಗಣಿತ ಹೊಸತನಗಳಿಂದ ಕೂಡಿದ ಕಲಾ ಪ್ರಕಾರದಲ್ಲಿ ಹೊಯ್ಸಳ ಶಿಲ್ಪಿಗಳು ನೂರಾರು ದೇವಾಲಯಗಳನ್ನು, ಸಹಸ್ರಾರು ಶಿಲ್ಪಗಳನ್ನು ನಿರ್ಮಿಸಿದ್ದಾರೆ.

ಚನ್ನಕೇಶವ ದೇವಾಲಯ, ಬೇಲೂರು

ಹೊಯ್ಸಳ ಶೈಲಿಯೆಂದರೆ ವೇಸರ ಶೈಲಿ ಎನ್ನುವ ತಪ್ಪು ಕಲ್ಪನೆ ಇದೆ. ಇವುಗಳು ನೋಡುವುದಕ್ಕೆ ಸ್ಥೂಲವಾಗಿ ಒಂದೇ ರೀತಿಯದಂತಿದ್ದರೂ ಇವುಗಳ ನಿರ್ಮಾಣದಲ್ಲಿ ವೈವಿಧ್ಯ, ಭಿನ್ನತೆ ಇದೆ. ಇದರಿಂದಾಗಿ ಹೊಯ್ಸಳ ವಾಸ್ತು ಶೈಲಿಯ ವಿಭಿನ್ನ ಪ್ರಕಾರಗಳನ್ನು ಅಧ್ಯಯನ ಮಾಡಿ ಹೊಯ್ಸಳ ಶೈಲಿಯನ್ನು ತಿಳಿಯುವುದು ಸೂಕ್ತವೆನ್ನಬಹುದು. ಹೊಯ್ಸಳರು ತಮ್ಮ ವಾಸ್ತು ನಿರ್ಮಾಣಗಳಿಗೆ ವಿವಿಧ ವಾಸ್ತು ಪ್ರಕಾರಗಳನ್ನು ಬಳಸಿದ್ದಾರೆ, ಹಾಗೆಯೇ ತಮಗನಿಸಿದ ರೀತಿಯಲ್ಲಿ ಆ ಶೈಲಿಗಳ ರೂಢಿಗಳಲ್ಲಿ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಹೊಯ್ಸಳರು ಬಳಸಿದ ಮುಖ್ಯ ವಾಸ್ತು ಶೈಲಿಗಳೆಂದರೆ ವೇಸರ, ದ್ರಾವಿಡ, ಕದಂಬ ನಾಗರ ಮತ್ತು ಭೂಮಿಜ ಪ್ರಕಾರಗಳು. ಇವುಗಳ ಅಲಂಕರಣೆಯಲ್ಲಿ ತಮ್ಮದೇ ಆದ ರೀತಿಯಲ್ಲಿ ಬದಲಾವಣೆಗಳನ್ನು ಅಳವಡಿಸಿ, ಹೊಯ್ಸಳ ಶಿಲ್ಪ ಸಂಪ್ರದಾಯದ ವಿಶಿಷ್ಟವಾದ ಛಾಪನ್ನು ಹೊಂದಿರುವಂತೆ ಮಾಡಿರುವುದರಿಂದ, ಹೊಯ್ಸಳ ದೇವಾಲಯ ಶೈಲಿ ವಿಭಿನ್ನತೆಯಲ್ಲಿ ಏಕತೆಯ ಲಕ್ಷಣವನ್ನು ಪ್ರದರ್ಶಿಸುತ್ತದೆ. ಹೊಯ್ಸಳ ವಾಸ್ತುಶಿಲ್ಪ ಶೈಲಿಯ ಈ ವಿಶಿಷ್ಟ ಲಕ್ಷಣ ಆ ಶೈಲಿಗೆ ಹೇಗೆ ಬಂದಿತು ಎನ್ನುವುದನ್ನು ತಿಳಿಯಬೇಕಾದರೆ ಹೊಯ್ಸಳರು ರೂಪಿಸಿ ಮೂಡಿಸಿದ ವಿವಿಧ ಶಿಲ್ಪ ಭಾಗಗಳ ಒಂದು ಸ್ಥೂಲ ವಿವರಣೆ ಅವಶ್ಯಕ.

ಹೊಯ್ಸಳ ದೇವಾಲಯಗಳ ವೈಭವದ ಕೆತ್ತನೆ, ಆಕರ್ಷಣೆ ಮುಂತಾದವುಗಳಿಗೆ ಕಾರಣವಾದ ಮುಖ್ಯ ಅಂಶವೆಂದರೆ ಆ ಶಿಲ್ಪಿಗಳು ಬಳಸಿದ ನಿರ್ಮಾಣ ಮಾಧ್ಯಮ. ಇವರು ದೇವಾಲಯ ನಿರ್ಮಾಣಕ್ಕೆ ಸ್ಥಳೀಯವಾಗಿ ದೊರೆಯುವ ಕಲ್ಲನ್ನು (ಕ್ಲೋರೈಟಿಕ್ ಶಿಷ್ಟ್) ಅತ್ಯಧಿಕವಾಗಿ ಬಳಸಿದರು. ಈ ಶಿಲೆ ಬಹಳ ಮೃದು, ನುಣುಪು ಹಾಗೂ ಸೂಕ್ಷ್ಮ ಕಣಗಳಿಂದ ಕೂಡಿರುವಂಥದ್ದು. ಇದರ ಬಣ್ಣ ದಟ್ಟ ಧೂಮ್ರವರ್ಣದಿಂದ ಹಿಡಿದು ತೆಳು ನೀಲಿ/ಹಸಿರು ವರ್ಣಗಳವರೆಗಿನ ವರ್ಣಗಳ ಪ್ರಭೇದಗಳಾಗಿದ್ದು, ಅಪರೂಪವಾಗಿ ಇವುಗಳಿಗಿಂತ ಸ್ವಲ್ಪ ವಿಭಿನ್ನವೂ ಆಗಿ ಕಾಣಬರುತ್ತದೆ (ಕರ್ನಾಟಕ ವಾಸ್ತುವಿನಲ್ಲಿ ಈ ಶಿಲೆ ಹೊಯ್ಸಳರಿಗಿಂತ ಮುಂಚೆಯೂ ಉಪಯೋಗದಲ್ಲಿತ್ತು. ಆದರೆ ಕಲ್ಯಾಣ ಚಾಳುಕ್ಯರು ಮತ್ತು ಹೊಯ್ಸಳರು ಈ ಶಿಲೆಯನ್ನು ಅತ್ಯಂತ ಅಧಿಕವಾಗಿ ದೇವಾಲಯ ನಿರ್ಮಾಣದಲ್ಲಿ ಬಳಸಿದರು). ಸುಲಭವಾಗಿ ಕೆತ್ತನೆ ಮಾಡಲು ಸಾಧ್ಯವಿರುವುದರಿಂದ, ಈ ಕಲ್ಲಿನಲ್ಲಿ ನಿರ್ಮಿತಿಗೊಂಡ ಎಲ್ಲ ಕಲಾಕೃತಿಗಳಲ್ಲಿ, ಹೆಚ್ಚಿನ ಹಾಗೂ ಸೂಕ್ಷ್ಮ ಕೆತ್ತನೆಗಳು, ಅಲಂಕರಣ–ಆಭರಣಗಳು, ನುಣುಪು, ಹೊಳಪು ಮುಂತಾದವು ಹೆಚ್ಚಾಗಿ ಕಲಾಕೃತಿಗಳಿಗೆ ವಿಶೇಷ ಆಕರ್ಷಣೆ, ಚೆಲುವು ಮೂಡಿಬಂದಿದೆ. ಕಲ್ಲುಕುಟಿಗರ ಸುತ್ತಿಗೆ, ಉಳಿಗಳಿಗೆ ಬದಲಾಗಿ ಬಡಗಿಗಳ ಉಪಕರಣಗಳಾದ ಬಾಚಿ, ಮರದ ಸುತ್ತಿಗೆ, ಬೈರಿಗೆ, ದಬ್ಬಳ ಮುಂತಾದವು ಬಳಸಲ್ಪಟ್ಟವು. ಕಲಾಕೃತಿಗಳು ದಂತದ, ಗುಡಿಗಾರರ, ಅಕ್ಕಸಾಲಿಗರ ಕೆಲಸವನ್ನು ಹೋಲುವಷ್ಟರ ಮಟ್ಟಿಗೆ ಸೂಕ್ಷ್ಮ ಕೆತ್ತನೆಗಳಿಂದ ಕಂಗೊಳಿಸಿದವು ಎಂದರೆ ಅತಿಶಯೋಕ್ತಿಯಲ್ಲ. ಬಳಪದಕಲ್ಲಿನ ಮೃದು ಸ್ವಭಾವದಿಂದಾಗಿ ವಾಸ್ತು ರೂಪಗಳಲ್ಲಿ ಅನೇಕ ಬದಲಾವಣೆಗಳಾ ದವು. ಈ ಕಲ್ಲಿನಲ್ಲಿ ಉದ್ದವಾದ ತೊಲೆಗಳು ದೊರೆಯುವುದು ಕಡಿಮೆ, ಲಭ್ಯವಾದರೂ ಅವುಗಳಿಗೆ

ಭಾರವಾಹಕ ಶಕ್ತಿ ಕಡಿಮೆ. ಆದ್ದರಿಂದ ತಾರಸಿಯ ನಿರ್ಮಾಣದಲ್ಲಿ ಸಣ್ಣ-ಸಣ್ಣ ತೊಲೆಗಳ ಬಳಕೆಯಾಯಿತು. ಈ ಕಾರಣ ಹಜಾರ, ಮಂಟಪಗಳ ನಿರ್ಮಾಣದಲ್ಲಿ ಹೆಚ್ಚಿನ ಕಂಬಗಳು ಬಳಕೆಯಾದವು. ಕೆತ್ತನೆ ಸುಲಭವಾಗಿ ಶಿಲ್ಪಾಲಂಕಾರ ಜಾಸ್ತಿಯಾಯಿತು. ಶಿಲ್ಪಾಲಂಕರಣೆ ಚಾವಣಿಯಲ್ಲಿ ಮೂಡಿಬಂದಿತು. ಈ ಶಿಲ್ಪಾಲಂಕರಣೆ ಕಾಣುವಂತೆ ಮಾಡಲು ಚಾವಣಿಯ ಎತ್ತರವನ್ನು ಇಳಿಸಲಾಯಿತು. ಹೊರಭಿತ್ತಿಯಲ್ಲಿ ಭದ್ರತೆಗಾಗಿ ಹಾಗೂ ಅಲಂಕರಣಕ್ಕಾಗಿ ಹಿಂದೆ-ಮುಂದೆ ಸರಿತಗಳು ವಿಪರೀತವಾಯಿತು. ಇವುಗಳ ವಿಸ್ತೀರ್ಣಕ್ಕನುಗುಣವಾಗಿ

**ಕೇದಾರೇಶ್ವರ ದೇವಾಲಯ, ಹಳೇಬೀಡು**

ಹಾಗೂ ಭಿತ್ತಿಯ ಎತ್ತರ ಪರಿಮಾಣಬದ್ಧವಾಗಿ ಶಿಲ್ಪಗಳು ಹಾಗೂ ಇತರೆ ಅಲಂಕರಣಗಳು ರೂಪುಗೊಂಡವು. ಇದರಿಂದಾಗಿ ಭಿತ್ತಿಯ ಎತ್ತರವೂ ಕಡಿಮೆಯಾಯಿತು – ದೇವಾಲಯ ಕುಳ್ಳಾಯಿತು. ದೇವಾಲಯದ ಎತ್ತರವನ್ನು ಹೆಚ್ಚಿಸುವುದಕ್ಕೆ ಜಗತಿ/ಜಗಲಿ ನಿರ್ಮಾಣವಾಯಿತು. ಒಳಪ್ರದಕ್ಷಿಣಕ್ಕಿಂತ ಹೊರಪ್ರದಕ್ಷಿಣ ಪಥ ಹೆಚ್ಚು ಉಪಕಾರಿ, ಆರೋಗ್ಯಕಾರಿ ಎನಿಸಿತು. ದೇವಾಲಯದ ಜಗತಿಯೇ ಹೊರ ಪ್ರದಕ್ಷಿಣ ಪಥ ಆಗುವಂತೆ ನಿರ್ಮಾಣವಾಯಿತು.

ಬಳಪದಕಲ್ಲನ್ನಲ್ಲದೆ ಹೊಯ್ಸಳರ ಪೋಷಣೆಯಲ್ಲಿ ಕಣಶಿಲೆಯಲ್ಲೂ ದೇವಾಲಯಗಳು ನಿರ್ಮಾಣವಾಗಿದೆ. ಈ ರಚನೆಗಳು ಎಲ್ಲ ರೀತಿಯಲ್ಲೂ ಬಳಪದ ಕಲ್ಲಿನ ದೇಗುಲಗಳನ್ನೇ ಬಹಳ ಮಟ್ಟಿಗೆ ಹೋಲುವುದಾದರೂ ಅಲಂಕರಣ ಮಾತ್ರ ಮಾಧ್ಯಮದ ಕಠಿಣತೆಯಿಂದಾಗಿ ಸರಳವೂ ಕಡಿಮೆಯೂ ಇರುತ್ತದೆ. ಈ ದೇಗುಲಗಳಲ್ಲಿ ಹೊಯ್ಸಳರು ತಮ್ಮ ಕಲೆಯ ಛಾಪನ್ನು ಮೂಡಿಸಲು ನವರಂಗದ ಮಧ್ಯಭಾಗಕ್ಕೆ ಮಾತ್ರ ಬಳಪದ ಕಲ್ಲಿನಲ್ಲಿ ಮಾಡಿದ, ಹೊಯ್ಸಳ ಪ್ರಕಾರದ ಕಂಬಗಳನ್ನೇ ಕೂಡಿಸುತ್ತಿದ್ದರು.ತಲಕಾಡಿನ ಕೀರ್ತಿನಾರಾಯಣ, ತೊಣ್ಣೂರಿನ ನಂಬಿ ನಾರಾಯಣ, ಶ್ರವಣಬೆಳಗೊಳದ ಮೇಲಿನ ಕೆಲವು ಬಸದಿಗಳು ಇತ್ಯಾದಿ ಈ ಮಾಧ್ಯಮಗಳ ಬಳಕೆಗೆ ಉತ್ತಮ ಉದಾಹರಣೆಗಳು. ಕಲ್ಲಿನ ಜೊತೆಗೇ ಇಟ್ಟಿಗೆ, ಗಾರೆಯನ್ನು ಬಳಸಿ ಹೊಯ್ಸಳರು ದೇವಾಲಯ ನಿರ್ಮಾಣ ಮಾಡಿದುದರ ಉದಾಹರಣೆಗಳೂ ಇವೆ. ಶ್ರವಣಬೆಳಗೊಳದ ಚಂದ್ರಗಿರಿಯ ಮೇಲಿನ ಶಾಸನ ಬಸದಿ ಈ ಮಿಶ್ರಮಾಧ್ಯಮ ಬಳಕೆಗೆ ಒಂದು ಉದಾಹರಣೆ. ಬಸದಿಯ ಅಧಿಷ್ಠಾನ, ಕಂಬಗಳು ಮತ್ತು ಚಾವಣಿ ಕಣಶಿಲೆಯದಿದ್ದರೆ, ಗೋಡೆಗಳು ಮಾತ್ರ ಇಟ್ಟಿಗೆ ಗಾರೆಯವು.

ಜಗತಿ: ಹೊಯ್ಸಳರ ಕಾಲದಲ್ಲಿ ರಾಜ್ಯದ ಸಂಸ್ಕೃತಿಯಲ್ಲಿ ವಿಶೇಷವಾದ ಬದಲಾವಣೆಗಳಾದವು. ಅವುಗಳಲ್ಲಿ ಹಲವು ಹೊಯ್ಸಳರ ವಾಸ್ತುಮಾದರಿಗಳಲ್ಲಿ ಪ್ರತಿಫಲನಗೊಂಡಿವೆ. ವಾಸ್ತುಕೃತಿಗಳ ನಿರೂಪಣೆಯಲ್ಲಿ ನಿರ್ಮಾಣದಲ್ಲಿ ಹೊಸತನ, ಹುರುಪು, ಚೈತನ್ಯ ಕಾಣಬರುತ್ತದೆ (ಈ ಹೊಸರೂಪುಗಳು ಆಗಿನ ಸಮಾಜದ ಸೌಂದರ್ಯ ಪ್ರಜ್ಞೆ, ಪರಿಕಲ್ಪನಾ ಶಕ್ತಿ ಮತ್ತು ಸಮಾಜದ ಸಂತೋಷ ಗೆಲುವುಗಳ ಪ್ರತೀಕವೆನಿಸುತ್ತವೆ). ವಾಸ್ತು ನಿರ್ಮಾಣಗಳಲ್ಲಿ ಪ್ರಧಾನವಾಗಿ ಕಾಣುವುದು ಜಗತಿಯ ನಿರ್ಮಾಣ. ಜಗತಿ ಎಂದರೆ ಎತ್ತರವಾದ ಜಗಲಿ ಅಥವಾ ಪೀಠ. ಇದರ ಉದ್ದೇಶ ಕಟ್ಟಡಕ್ಕೆ ಹೆಚ್ಚಿನ ಭದ್ರತೆ ಮತ್ತು ಭವ್ಯತೆಯನ್ನು ನೀಡುವುದೇ ಆಗಿತ್ತು. ಜಗತಿಯ ಎತ್ತರ ಸಾಮಾನ್ಯವಾಗಿ ಸು. 1–2ಮೀ ವರೆಗೂ ಇರುತ್ತದೆ. ಜಗತಿಯ ಮೇಲೇರಲು ಬೇಕಾದ ಕಡೆಗಳಲ್ಲಿ ಸೋಪಾನಗಳಿವೆ. ಜಗತಿಯ ಹೊರವಲಯ ದೇವಾಲಯದ ತಳವಿನ್ಯಾಸದ ಹೊರವಲಯಕ್ಕೆ ಸಮಾನಾಂತರವಾಗಿರುತ್ತದೆ. ಆದರೆ ದೇವಾಲಯದ ವಿಸ್ತೀರ್ಣಕ್ಕಿಂತ ಜಗತಿಯ ವಿಸ್ತೀರ್ಣ ಜಾಸ್ತಿ ಇರುವುದರಿಂದ ದೇಗುಲದ ಸುತ್ತಲೂ ಅಗಲವಾದ (1.50–2.50ಮೀ) ಪಥವನ್ನು ನೀಡುತ್ತದೆ. ಜಗತಿಗಳಿಲ್ಲದ ಹೊಯ್ಸಳ ದೇಗುಲಗಳ ಸಂಖ್ಯೆಯೂ ಸಾಕಷ್ಟಿವೆ. ಆದ್ದರಿಂದ ಜಗತಿ ನಿರ್ಮಾಣ ವಾಸ್ತುಶಿಲ್ಪಿಗೆ ಬಿಟ್ಟ ವಿಷಯವಾಗಿತ್ತು. ಜಗತಿಯ ಹೊರಮುಖವನ್ನು ವಿವಿಧಾಕಾರದ ದಿಂಡುಗಳಿಂದ, ಶಿಲ್ಪಗಳಿಂದ ಅಲಂಕರಿಸುವ ಪರಿಪಾಠವೂ ಇತ್ತು. ಜಗತಿಯ ಮೇಲ್ಮುಖ ಕಲ್ಲುಹಾಸಿನಿಂದ ಮುಚ್ಚಿರುತ್ತದೆ.

ತಳವಿನ್ಯಾಸ: ದೇವಾಲಯದ ತಳವಿನ್ಯಾಸವನ್ನು ರಚಿಸುವಾಗ ಹೊಯ್ಸಳರು ವಿವಿಧ ಪರೀಕ್ಷಾ ಪ್ರಯೋಗಗಳನ್ನು ಮಾಡಿದ್ದಾರೆ. ಒಂದೇ ದೇವಾಲಯದಲ್ಲಿ ಒಂದರಿಂದ ಐದರವರೆಗಿನ ಗರ್ಭಗೃಹಗಳನ್ನು ವಿನ್ಯಾಸಗೊಳಿಸಿದ್ದಾರೆ. ಪ್ರತೀ ಗರ್ಭಗೃಹದ ಮೇಲೂ ಒಂದೊಂದು ಪ್ರಾಸಾದಗಳನ್ನು ರಚಿಸಿ ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟ ಆಲಯಗಳನ್ನು ನಿರ್ಮಿಸಿದ್ದಾರೆ. ಗರ್ಭಗೃಹಗಳನ್ನು ಒಂದೇ ಸಾಲಿನಲ್ಲಿ ಅಥವಾ ವಿವಿಧ ಮಾದರಿಗಳಲ್ಲಿ ಸ್ಥಾನೀಕರಿಸುವುದರ ಮೂಲಕ ವಿವಿಧ ರೀತಿಯ ತಲನಕ್ಷೆಗಳನ್ನು ವಿನ್ಯಾಸ ಮಾಡಿದ್ದಾರೆ. ಗರ್ಭಗೃಹಗಳೆಲ್ಲವೂ ಒಳಭಾಗದಲ್ಲಿ ಸಾಮಾನ್ಯವಾಗಿ ಚೌಕ ಅಥವಾ ಅಪರೂಪವಾಗಿ ಆಯತಾಕಾರವಾಗಿರುತ್ತದೆ. ವೃತ್ತ, ಅರ್ಧವೃತ್ತ ಅಥವಾ ಇನ್ಯಾವುದೇ ಆಕೃತಿಯ ಗರ್ಭಗೃಹ ಹೊಯ್ಸಳ ವಾಸ್ತುವಿನಲ್ಲಿ ಕಾಣಬರುವುದಿಲ್ಲ. ಗರ್ಭಗೃಹದ ತಳನಕ್ಷೆಯ ಹೊರವಲಯ ಸಾಮಾನ್ಯವಾಗಿ ವಿಪರೀತವಾದ ಹಿಂದೆ-ಮುಂದೆ ಸರಿತಗಳಿಂದ ಕೂಡಿರುತ್ತದೆ. ದ್ರಾವಿಡ ಮಾದರಿಗಳಂತೆ ಭದ್ರ, ಪ್ರತಿಭದ್ರ, ಕರ್ಣ ಮುಂತಾದವುಗಳ ಉಪಯೋಗವೂ ಸಾಕಷ್ಟು ಕಾಣಬರುತ್ತದೆ. ವೇಸರ ಮಾದರಿಯ ದೇವಾಲಯಗಳಲ್ಲಿ ಮಾತ್ರ ನಕ್ಷತ್ರಾಕಾರದ ತಳಕಟ್ಟನ್ನು ಕಾಣಬಹುದು. ಈ ನಕ್ಷತ್ರಾಕಾರದ ವಿನ್ಯಾಸದಲ್ಲೂ ಸಾಕಷ್ಟು ಕೌಶಲದಿಂದ, ಆಕೃತಿಯಲ್ಲೇ ಸಾಕಷ್ಟು ಉಪಪ್ರಭೇದಗಳನ್ನು ರಚಿಸಿದ್ದಾರೆ. ನಕ್ಷತ್ರಾಕಾರದ ತಳವಿನ್ಯಾಸ ಕೇವಲ ಗರ್ಭಗುಡಿಯ ಭಾಗಕ್ಕೆ ಮಾತ್ರ ಮೀಸಲಾಗಿರುವುದು. ಅಪರೂಪಕ್ಕೆ ಈ ನಕ್ಷೆ ಮುಂದಿನ ರಂಗಮಂಟಪದಲ್ಲಿಯೂ ಉಪಯೋಗವಾಗಿದೆ (ಅರಸೀಕೆರೆ). ಗರ್ಭಗೃಹದ ಸುತ್ತಲೂ ಶ್ರವಣಬೆಳಗೊಳದ ಕತ್ತಲೆ ಬಸದಿಯನ್ನು ಬಿಟ್ಟು, ಒಳಪ್ರದಕ್ಷಿಣ ಪಥವಿರುವುದಿಲ್ಲ. ಗರ್ಭಗೃಹದ ಮುಂದುಗಡೆ ಶುಕನಾಸ ಅಥವಾ ಅರ್ಧಮಂಟಪ, ನವರಂಗ ಮುಂತಾದವು ಎಲ್ಲ ದೇವಾಲಯಗಳಲ್ಲೂ ಸಾಮಾನ್ಯ. ನವರಂಗಕ್ಕೆ ಮುಂಭಾಗದಲ್ಲಿ, ಪಾರ್ಶ್ವಗಳಲ್ಲಿ ದ್ವಾರಗಳಿರುತ್ತವೆ. ಆದರೆ ಸಾಮಾನ್ಯವಾಗಿ ಭಿತ್ತಿಯಲ್ಲಿ ಜಾಲಂಧ್ರಗಳು ಕಾಣುವುದಿಲ್ಲ. ಸಾಮಾನ್ಯವಾಗಿ ನವರಂಗದ ಮುಂದಿನ ಅರ್ಧಭಾಗ ತೆರವಾಗಿರುತ್ತದೆ. ನವರಂಗದ ದ್ವಾರಗಳಿಗೆ ಮುಖಮಂಟಪಗಳು ಇರುತ್ತವೆ. ಕೆಲವು ದೇವಾಲಯಗಳಲ್ಲಿ ದೇವಾಲಯದ ಮಾನಸೂತ್ರಕ್ಕೆ ಸರಿಯಾಗಿರುವಂತೆ ವಿಶಾಲವಾದ ತೆರೆದ ರಂಗಮಂಟಪವನ್ನೂ ನಿರ್ಮಿಸಿದ್ದಾರೆ. ಅರಸೀಕೆರೆ, ಬಸ್ತಿಹಳ್ಳಿ, ಹಳೇಬೀಡು ಮತ್ತು ಅಮೃತಾಪುರ ಮುಂತಾದೆಡೆ ಈ ರೀತಿಯ ರಂಗಮಂಟಪಗಳನ್ನು ಕಾಣಬಹುದು. ಮಂಟಪದ ತೆರನಾಗಿರುವ ಭಾಗಗಳಲ್ಲಿ ಸುತ್ತಲೂ ಕಕ್ಷಾಸಗಳ ವ್ಯವಸ್ಥೆ ಇರುತ್ತದೆ. ದೇವಸ್ಥಾನದ ಸುತ್ತಲೂ ಪ್ರಾಂಗಣ, ಎತ್ತರವಾದ ಪೌಳಿಗೋಡೆ, ದ್ವಾರ ಮಂಟಪಗಳು, ಪರಿವಾರ ದೇವತಾಗೃಹಗಳು, ಕೈಸಾಲೆಗಳು, ಪುಷ್ಕರಿಣಿ, ಭಾವಿ, ಧ್ವಜಸ್ತಂಭ, ಮಾನಸ್ತಂಭ, ಬಲಿಪೀಠ ಇತ್ಯಾದಿಗಳು ಇರುವ/ಇದ್ದ ನಿದರ್ಶನಗಳೂ ಸಾಕಷ್ಟಿವೆ. ನವರಂಗದ ವಿನ್ಯಾಸದಲ್ಲಿ ಹೊಯ್ಸಳರ ಕಾಲದಲ್ಲಿ ಅನೇಕ ಬದಲಾವಣೆಗಳಾದವು. ಕೆಲವು ನವರಂಗಗಳು ಮುಂಭಾಗದಲ್ಲಿ

**ಅಮೃತೇಶ್ವರ ದೇವಾಲಯ, ಅಮೃತಾಪುರ**

ತೆರದಿರುತ್ತಿತ್ತು. ಮತ್ತೆ ಕೆಲವದರಲ್ಲಿ ಜಾಲಂಧ್ರಗಳಿರುತ್ತಿತ್ತು. ನವರಂಗಕ್ಕೆ ಒಳ್ಳೆಯ ಗಾಳಿ-ಬೆಳಕನ್ನು ಒದಗಿಸುವುದು ಈ ವಿನ್ಯಾಸದ ಉದ್ದೇಶ. ಕಾರಣ ಆದಿ ಮಧ್ಯಯುಗೀನ ಕಾಲದಲ್ಲಿ ದೇವಾಲಯ ಹಲವಾರು ಸಾಮಾಜಿಕ ಧಾರ್ಮಿಕ ಆಚರಣೆಗಳ ಆಗರವಾಗಿತ್ತು. ಸಂಗೀತ ಕಚೇರಿ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತಿ ಶ್ರದ್ಧೆಯಿಂದ ದೇವರ ಸೇವೆಗಾಗಿ ನಡೆಯುತ್ತಿದ್ದವು. ಅಂತೆಯೇ ಗಾಳಿ-ಬೆಳಕು-ಆಸನ ವ್ಯವಸ್ಥೆಗಳು ನವರಂಗದ ಅವಿಭಾಜ್ಯ ಲಕ್ಷಣಗಳಾದವು. ಕತ್ತಲು-ಮಸುಕಾಗಿರುತ್ತಿದ್ದ ಹಜಾರ ಪ್ರಕಾಶಮಾನವಾದ ಸಭಾಂಗಣವಾಯಿತು. ಸರಳವಾಗಿರುತ್ತಿದ್ದ ಹಜಾರದ ಒಳಭಾಗ ವಿವಿಧಾಲಂಕಾರದ, ವಿನ್ಯಾಸದ ಭುವನೇಶ್ವರಿಗಳಿಂದ, ಕಂಬಗಳಿಂದ, ಸಾಲಭಂಜಿಕೆಯರಿಂದ, ಸಣ್ಣ-ಸಣ್ಣ ಗುಡಿ-ಕೋಷ್ಠಗಳಿಂದ ವಿಜೃಂಭಿಸಿದವು. ನವರಂಗದ ಮಧ್ಯದ ಅಂಕಣದಲ್ಲಿ ನೆಲಮಟ್ಟದಿಂದ ಸ್ವಲ್ಪ ಏರಿದಂತೆ ರಂಗಸ್ಥಳವೂ ಸೃಷ್ಟಿಯಾಯಿತು. ಹಜಾರದ ಸುತ್ತಲೂ ಆಸನ ವ್ಯವಸ್ಥೆಯೂ (ಕಕ್ಷಾಸನ) ನಿರ್ಮಾಣವಾಯಿತು.

ತಳವಿನ್ಯಾಸದ ಹೊರಆಕೃತಿಗೆ ಬರುವುದಾದರೆ ಭದ್ರತೆ ಮತ್ತು ಸೌಂದರ್ಯಗಳ ದೃಷ್ಟಿಯಿಂದ ಗೋಡೆಯ ಹೊರವಲಯದ ರಚನೆಯನ್ನು ರೂಪಿಸಲಾಗಿದೆ. ಗೋಡೆಯ ಹೊರಮುಖದಲ್ಲಿ ವಿಪರೀತವಾದ ಹಿಂದೆ-ಮುಂದೆ ಸರಿತಗಳನ್ನು ಹೊಂದಿರುತ್ತದೆ. ಈ ರೀತಿಯ ರಚನೆಗೆ ಹಲವಾರು ಕಾರಣಗಳಿದ್ದವು. ಅವುಗಳೆಂದರೆ ನೇರ ಗೋಡೆಯ ಏಕತಾನತೆಯನ್ನು ಹೋಗಲಾಡಿಸುವುದು, ಗೋಡೆಗೆ ಹೆಚ್ಚಿನ ದೃಢತೆಯನ್ನು ಕೊಡುವುದು,

ಶಿಲ್ಪ ಕೆತ್ತನೆಗೆ ಹೆಚ್ಚಿನ ಸ್ಥಳಾವಕಾಶ ಮಾಡಿಕೊಡುವುದು ಮತ್ತು ಕೊನೆಯದಾಗಿ ಭಿತ್ತಿಯ ಶಿಲ್ಪಗಳಿಗೆ ನೆರಳು-ಬೆಳಕಿನ ಹೊನಲಾಟದ ಮೂಲಕ ಹೆಚ್ಚಿನ ಆಕರ್ಷಣೆಯನ್ನು ಒದಗಿಸುವುದು. ಕೊನೆಯ ಈ ಲಕ್ಷಣಕ್ಕೆ ಇಟಾಲಿಯನ್ ಭಾಷೆಯಲ್ಲಿ ಕ್ಯಾರಸ್-ಕ್ಯೂರೊ ಎನ್ನಲಾಗುತ್ತದೆ. ಇದು ಯುರೋಪಿಯನ್ ಚಿತ್ರಕಲೆಯ ಒಂದು ವಿಶಿಷ್ಟವಾದ ಹಾಗೂ ಪ್ರಬುದ್ಧ ಕಲಾ ಲಕ್ಷಣ. ಈ ಲಕ್ಷಣ ಯುರೋಪಿಯನ್ ವರ್ಣಚಿತ್ರದಲ್ಲಿ 16ನೆಯ ಶತಮಾನದ ಆವಿಷ್ಕಾರ.



**ಹೊಯ್ಸಳೇಶ್ವರ ದೇವಾಲಯದ ಅಧಿಷ್ಠಾನ, ಹಳೇಬೀಡು**

ಹೊಯ್ಸಳರು ಈ ಒಂದು ಲಕ್ಷಣವನ್ನು ಸು.500 ವರ್ಷಗಳಿಗೆ ಮುಂಚೆಯೇ ತಮ್ಮ ಶಿಲ್ಪಕಲೆಯಲ್ಲಿ ರೂಢಿಸಿಕೊಂಡಿದ್ದರೆಂಬ ಅಂಶ ಮೆಚ್ಚಬೇಕಾದದ್ದೇ. ನೆರಳು ಬೆಳಕಿನ ಹೊನಲಾಟದಿಂದ ಶಿಲ್ಪಗಳ ಭಾವನೆಗಳಲ್ಲಿ ಏರಿಳಿತಗಳು ಕಾಣಬರುವಂತೆ ಮಾಡಿ ಶಿಲ್ಪಗಳ ಸೌಂದರ್ಯ, ಅರ್ಥ, ಮಹತ್ತ್ವಗಳ ಪರಿಚಯ ಮಾಡಿಕೊಡುವುದು ಶಿಲ್ಪಿಗಳ ಉದ್ದೇಶವಾಗಿತ್ತು.

ಗರ್ಭಗೃಹದ ಮೇಲ್ಭಾಗದಲ್ಲಿ ಪ್ರಾಸಾದವನ್ನು ನಿರ್ಮಿಸುವುದು ಅಂದಿನ ವಾಸ್ತು ಶೈಲಿಯ ರೂಢಿಯಾಗಿತ್ತು. ಇದಕ್ಕಾಗಿ ಗರ್ಭಗೃಹದ ಗೋಡೆಗಳು ಹೆಚ್ಚು ದೃಢವಾಗಿರಬೇಕಾಗಿರುತ್ತಿತ್ತು. ಈ ನಿಯಮಾನುಸಾರ ಕೆಲವು ಪ್ರಕಾರದ ದೇವಾಲಯದ ಗರ್ಭಗೃಹದ ಗೋಡೆಯ ಬದಿಯ ಸುಭದ್ರಗಳಿರುವ ಭಾಗದಲ್ಲಿ ದೇವಕೋಷ್ಠಗಳಿರಬೇಕಾಗುತ್ತದೆ. ಇದಕ್ಕಾಗಿ ಗೋಡೆಯ ದಪ್ಪವನ್ನು ಹೆಚ್ಚಿಸಬೇಕಾಗುತ್ತದೆ. ಇದರಿಂದ ಗೋಡೆಗೆ ದೃಢತೆಯೂ ಹೆಚ್ಚುತ್ತದೆ. ಹೆಚ್ಚಾಗಿ ಹೊಯ್ಸಳ ದೇವಾಲಯಗಳು ಈ ಪ್ರಕಾರದವು (ಬೇಲೂರು). ಭಿತ್ತಿಯ ಹೊರಮುಖದ ಎಲ್ಲ ಅಂಗಗಳೂ ಕೆತ್ತನೆಗಳೂ ಈ ಗುಡಿಗಳ ಮೇಲ್ಮೈಯಲ್ಲಿ ಮುಂದುವರೆದು, ಈ ಗುಡಿಗಳೂ ದೇವಾಲಯದ ವಿನ್ಯಾಸದಲ್ಲಿ ಲೀನವಾಗಿ ಉತ್ತಮ ನೋಟವನ್ನು ನೀಡುತ್ತಿದ್ದವು.

ಮೇಲೆ ಹೇಳಿದ ಲಕ್ಷಣಗಳೆಲ್ಲವೂ ಹೆಚ್ಚು-ಕಡಿಮೆ ಎಲ್ಲ ಹೊಯ್ಸಳ ಶೈಲಿಯ ಗುಡಿಗಳಲ್ಲಿಯೂ ಕಾಣಬಹುದಾಗಿದೆ. ಆದರೆ ಹೊಯ್ಸಳ ದೇವಾಲಯಗಳಲ್ಲಿ ಕೆಲವೆಡೆ ಮಾತ್ರ ಕಾಣುವ ಒಂದು ವಿಶೇಷ ಲಕ್ಷಣವೆಂದರೆ ನಕ್ಷತ್ರಾಕಾರದ ತಳವಿನ್ಯಾಸ. ಇದು ವೇಸರ ಶೈಲಿಯ ಒಂದು ಅವಿಭಾಜ್ಯ ಅಂಗ. ನಕ್ಷತ್ರಾಕಾರವಿಲ್ಲದಿದ್ದರೆ ಗುಡಿಗೆ ಗಜಪೃಷ್ಠಾಕಾರ ಅಥವಾ ವಲಯಾಕಾರವನ್ನು ನೀಡುವುದು ಅಸಾಧ್ಯ. ಹೀಗಾಗಿ ವೇಸರ ಮಾದರಿಯ ನಿರ್ಮಿತಿಗಳಿಗೆ ಹೊಯ್ಸಳರು ನಕ್ಷತ್ರಾಕಾರದ ವಿನ್ಯಾಸವನ್ನು ಬಳಸಿದ್ದಾರೆ. ಆವಶ್ಯಕತೆಗಳಿಗೆ ಅನುಗುಣವಾಗಿ ನಕ್ಷತ್ರದ ಮೂಲೆಗಳ ಸಂಖ್ಯೆಯನ್ನು ಹೆಚ್ಚೂ-ಕಡಿಮೆ ಮಾಡಿಕೊಳ್ಳುತ್ತಿದ್ದರು. ಗರ್ಭಗೃಹವನ್ನು ಬಿಟ್ಟರೆ ನಕ್ಷತ್ರಾಕಾರದ ತಳವಿನ್ಯಾಸ ಇನ್ನುಳಿದ ಭಾಗಗಳಿಗೆ ಕಾಣಬರುವುದು ಅಪರೂಪ. ಕೇವಲ ಅರಸೀಕೆರೆಯಲ್ಲಿ ಮಾತ್ರ ನಕ್ಷತ್ರಾಕಾರದ ತಳವಿನ್ಯಾಸವನ್ನು ರಂಗಮಂಟಪಕ್ಕೆ ಬಳಸಲಾಗಿದೆ. ನಕ್ಷತ್ರಾಕಾರದ ತಳವಿನ್ಯಾಸದಲ್ಲಿ ಅನೇಕ ಉಪ-ಪ್ರಭೇದಗಳನ್ನು ರಚಿಸಿ ಹೊಯ್ಸಳ ಶಿಲ್ಪಿಗಳು ತಮ್ಮ ಚಾಣಾಕ್ಷತೆಯನ್ನು ಮೆರೆದಿದ್ದಾರೆ. ನಕ್ಷತ್ರದ ಚೂಪು ತುದಿಗಳನ್ನು ಹಾಗೆಯೇ ಉಳಿಸಿಕೊಳ್ಳುವುದು (ರಾಮನಾಥಪುರ, ಭದ್ರಾವತಿ), ಚೂಪು ತುದಿಗಳನ್ನೇ ಒಂದು ಬಿಟ್ಟು ಒಂದನ್ನು ಚಿಕ್ಕದು-ದೊಡ್ಡದು ಮಾಡುವುದು, ನಕ್ಷತ್ರದ ಮುಂದಿನ ತುದಿಗಳನ್ನು ವಲಯಾಕಾರವಾಗಿ ರೂಪಿಸುವುದು (ಸೋಮನಾಥಪುರ), ಕೆಲವನ್ನು ಚೂಪಾಗಿ ಉಳಿಸಿ ಇನ್ನು ಕೆಲವನ್ನು ಚಪ್ಪಟೆಯಾಗಿ ರೂಪಿಸುವುದು (ಬೆಳ್ಳೂರು), ನಕ್ಷತ್ರಾಕೃತಿಯ ಮಧ್ಯೆ ಭದ್ರಗಳನ್ನು ನಿರ್ಮಿಸುವುದು (ಮೂಲೆಶಂಕರ-ತುರುವೇಕೆರೆ), ಭದ್ರ-ನಕ್ಷತ್ರ ಚಾಚುಗಳನ್ನು ಪರ್ಯಾಯವಾಗಿ ರೂಪಿಸುವುದು (ಅರಸೀಕೆರೆ) ಹೀಗೆ ವಿವಿಧ ಪ್ರಯೋಗಗಳನ್ನು ಕಾಣಬಹುದು. ಅಪರೂಪವಾಗಿ ನಕ್ಷತ್ರ ಮತ್ತು ಚೌಕಾಕಾರದ ತಳವಿನ್ಯಾಸಗಳನ್ನು ಒಂದೇ ಬಹುಕೂಟ ದೇವಾಲಯದ ವಿವಿಧ ಗರ್ಭಗೃಹಗಳಿಗೆ ಬಳಸಿರುವುದನ್ನು ಕಾಣಬಹುದು (ಶೆಟ್ಟಿಕೆರೆ).

ಅಧಿಷ್ಠಾನ: ಅಧಿಷ್ಠಾನ ಹೊಯ್ಸಳ ದೇವಾಲಯದ ಒಂದು ಆಕರ್ಷಕ ಅಂಗ. ಇವುಗಳಲ್ಲಿ ಎರಡು ಬಗೆಗಳುಂಟು. ಒಂದು ಸಾಧಾರಣ, ಇನ್ನೊಂದು ಸಾಲಂಕೃತ. ಸಾಧಾರಣ ರೀತಿಯದರಲ್ಲಿ ಸಾಂಪ್ರದಾಯಿಕ ದ್ರಾವಿಡ ಮಾದರಿಯ ದಿಂಡುಗಳನ್ನು ಕಾಣಬಹುದು. ದ್ರಾವಿಡ ಅಧಿಷ್ಠಾನದ ಉಪಾನ, ಜಗತಿ, ಕುಮುದ, ಕಂಠ, ಕಪೋತ ಪಟ್ಟಿಕಾ ಮತ್ತು ಪ್ರತಿ-ಇವುಗಳ ಅಡ್ಡ ದಿಂಡುಗಳು ಕಾಣಬರುತ್ತವೆ. ಕುಮುದವು ದಪ್ಪನಾದ, ಅರ್ಧವಲಯಾಕಾರದ ಬದಲಾಗಿ ತೆಳುವಾದ, ಚೂಪಾದ, ನಾಜೂಕಾದ, ದಿಂಡಾಗಿ ಕಾಣುತ್ತದೆ. ಕಪೋತ ತೆಳುವಾಗಿಯೂ ಅಸಂಪ್ರದಾಯಕವೂ ಆಗಿದ್ದು ದೂರ-ದೂರದಲ್ಲಿ ದಂತುರಗಳನ್ನು (ಡೆಂಟಿಕ್) ಹೊಂದಿರುತ್ತದೆ. ಪಟ್ಟಿಕೆ ಭಾಗ ನಿಬಿಡವಾಗಿ ಕೆತ್ತಿದ ದಂತುರಗಳನ್ನು ಹೊಂದಿರುತ್ತದೆ. ದಂತುರಗಳನ್ನು ನೆಗೆಯುತ್ತಿರುವ ಸಣ್ಣ-ಸಣ್ಣ ವ್ಯಾಳಗಳ ರೀತಿ ಕೆತ್ತಿರುವುದೂ ಉಂಟು. ಉಳಿದಂತೆ ಇತರ ಭಾಗಗಳು ಸರಳ ಸಾಮಾನ್ಯ. ಸಾಲಂಕೃತ ಅಧಿಷ್ಠಾನದಲ್ಲಿ ವಿವಿಧಾಕೃತಿಯ ಸಾಂಪ್ರದಾಯಿಕ ದಿಂಡುಗಳ ಬದಲಾಗಿ ಅನೇಕ ಸಮಾನಾಂತರ ಚಿತ್ರ ಪಟ್ಟಿಕೆಗಳಿರುತ್ತವೆ. ಪ್ರತಿಯೊಂದು ಪಟ್ಟಿಕೆಯೂ ಮುಂಭಾಗದಲ್ಲಿ ಚಪ್ಪಟೆಯಾಗಿರುತ್ತದೆ. ಎರಡು ಪಟ್ಟಿಕೆಗಳ ನಡುವೆ ಕಿರಿದಾಗಿ, ಆಳವಾದ ಸಂಧಿಗಳಿರುತ್ತವೆ. ಎಲ್ಲ ಪಟ್ಟಿಕೆಗಳ ಮೇಲೂ ನಿರ್ದಿಷ್ಟ ರೀತಿಯ ಅಲಂಕರಣ ಕೆತ್ತನೆಗಳಿರುತ್ತವೆ.

ಅಧಿಷ್ಠಾನದ ಪಟ್ಟಿಕೆಗಳ ಅಲಂಕರಣದಲ್ಲಿ ಹೊಯ್ಸಳ ಶಿಲ್ಪಿಗಳು ತಮ್ಮದೇ ಆದ ವಿಶಿಷ್ಟ ಸಂಪ್ರದಾಯವನ್ನು ಬೆಳೆಸಿಕೊಂಡಿದ್ದರು, ಅದೇ ಪಟ್ಟಿಕೆಗಳ ನಿರ್ದಿಷ್ಟ ಮಾದರಿಯ ಅಲಂಕರಣ ಪದ್ಧತಿ, ಎಲ್ಲ ಹೊಯ್ಸಳ ದೇವಾಲಯಗಳಲ್ಲೂ ಈ ಶಿಲ್ಪ ವಿಧಾನ ಕಾಣಬರುತ್ತವೆ. ಈ ಪದ್ಧತಿಯ ಪ್ರಕಾರ ಅತ್ಯಂತ ಕೆಳಗಿನ ಪಟ್ಟಿಕೆಯಲ್ಲಿ ಆನೆಯ ಸಾಲಿನ ಶಿಲ್ಪದ ಕೆತ್ತನೆ ಕಾಣಬರುತ್ತದೆ. ಅದರ ಮೇಲ್ಗಡೆ ಕುದುರೆ ಸಾಲಿನ ಪಟ್ಟಿ, ಅದರ ಮೇಲೆ ಪೌರಾಣಿಕ ಕಥಾನಕ ಶಿಲ್ಪ ಸಾಲಿನ ಪಟ್ಟಿ-ಇವು ಮೂರು ಮಾತ್ರ ಇದೇ ಕ್ರಮದಲ್ಲೇ ಇರಬೇಕು. ಅಧಿಷ್ಠಾನದ ಎತ್ತರವನ್ನು ಏರಿಸಲು ಇವುಗಳ ಮಧ್ಯೆ-ಮಧ್ಯೆ ಮತ್ತು ಮೇಲ್ಗಡೆ ಲತಾಪಟ್ಟಿಕೆ, ವ್ಯಾಳಪಟ್ಟಿಕೆ, ಹಂಸಪಟ್ಟಿಕೆಗಳನ್ನು ಆವಶ್ಯಕತೆಗೆ ತಕ್ಕಂತೆ ಬಳಸುತ್ತಿದ್ದರು. ಹೀಗೆ ಮಾಡುವಾಗ ಪೌರಾಣಿಕ ಶಿಲ್ಪ ಪಟ್ಟಿಕೆಯನ್ನು ಮಾತ್ರ ಆಬಾಲವೃದ್ಧರಾದಿಯಾಗಿ, ನೋಡುಗರ ಶ್ರಮವಿಲ್ಲದ ನೋಟಕ್ಕೆ ಅನುಕೂಲವಾದ ಎತ್ತರದಲ್ಲಿರುವಂತೆ ಎಚ್ಚರಿಕೆ ವಹಿಸುತ್ತಿದ್ದರು. ಕಾರಣ ಈ ಪಟ್ಟಿಕೆ ಸಮಾಜದ ಎಲ್ಲ ವರ್ಗದವರಿಗೂ ವಯಸ್ಸಿನವರಿಗೂ ಭಾರತೀಯ ಪುರಾಣ ಸಂಸ್ಕೃತಿಗಳ ಬಗ್ಗೆ ಶಿಕ್ಷಣ ನೀಡುವುದಕ್ಕೆಂದೇ ನಿರ್ಮಿತವಾದ ಪಟ್ಟಿಕೆ. ಈ ಪಟ್ಟಿಕೆ ದೃಶ್ಯ ಮಾಧ್ಯಮದ ಮೂಲಕ ಸಮಾಜದ ಸಮಸ್ತ ಜನರಿಗೂ ರಾಮಾಯಣ, ಮಹಾಭಾರತ,

**ಸೋಪಾನ ಕೂಟ, ಚನ್ನಕೇಶವ ದೇವಾಲಯ, ಬೇಲೂರು**

ಭಾಗವತ, ಪುರಾಣ, ಪಂಚತಂತ್ರ, ದಶಾವತಾರ ಮುಂತಾದ ವಿಷಯಗಳ ಬಗ್ಗೆ ಜ್ಞಾನ ನೀಡುತ್ತಿತ್ತು. ಇಂತಹ ಪೌರಾಣಿಕ ಸನ್ನಿವೇಶಗಳಲ್ಲಿ ಕಿರಾತಾರ್ಜುನೀಯ, ಪ್ರಹ್ಲಾದನ ಕಥೆ, ಶ್ರೀಕೃಷ್ಣನ ಬಾಲಲೀಲೆಗಳು, ಪಂಚತಂತ್ರ ಮುಂತಾದವು ಹೆಚ್ಚು ಸಂಖ್ಯೆಯಲ್ಲಿ ಕಾಣಬರುತ್ತವೆ. ಕಾರಣ ಕಿರಾತಾರ್ಜುನೀಯದ ಕಥೆಯ ಮೂಲಕ ಯುವಕರಲ್ಲಿ ಹೆಚ್ಚಿನ ಕೆಚ್ಚು, ಪೌರುಷ, ಧೈರ್ಯ-ಸ್ಥೈರ್ಯ ಮನೋಭಾವವನ್ನು ತುಂಬುವುದು. ಪ್ರಹ್ಲಾದನ ಕಥೆಯ ಮೂಲಕ ಬಾಲಕರಲ್ಲಿ ದೈವ ಭಕ್ತಿಯನ್ನು ವರ್ಧಿಸುವುದು, ಪಂಚತಂತ್ರ ಕತೆಗಳ ಮೂಲಕ ಸರ್ವರಿಗೂ ನೀತಿ ಬೋಧನೆ, ಲೌಕಿಕ ಚತುರತೆ ಇತ್ಯಾದಿ ಹೀಗೆ ಹೊಯ್ಸಳ ಶಿಲ್ಪಿಗಳು ಸಹ ಸಮಾಜ

ಶಿಕ್ಷಣದಲ್ಲಿ ತಮ್ಮ ಜವಾಬ್ದಾರಿಯನ್ನೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅಧಿಷ್ಠಾನ ಪಟ್ಟಿಕೆಗಳು ಶಿಕ್ಷಣವನ್ನಲ್ಲದೆ ಜನರಿಗೆ ಮನರಂಜನೆಯನ್ನು ನೀಡುತ್ತಿದ್ದ ಮಹತ್ತ್ವದ ಚಿತ್ರಕೋಶವಾಗಿತ್ತು. ಆನೆಯ ಪಟ್ಟಿಕೆಯಲ್ಲಿ ಸಾಲಾಗಿ ಆನೆಗಳನ್ನು ಚಿತ್ರಿಸಿರುತ್ತಾರೆ. ಆನೆಯ ಸಹಜವಾದ ಲೀಲಾ ವಿನೋದಗಳು, ಭಾವ ಭಂಗಿಗಳು, ಭಯಂಕರ ಕಾಳಗಗಳು, ಆಟ–ಪಾಠಗಳು, ದೇಹ ಸೌಷ್ಠವ, ಆನೆಗಳ ಬಳಕೆ, ಉಪಯೋಗ, ಅವುಗಳಿಗೆ ಮಾಡುವ ಅಲಂಕಾರ, ಹಾಕುವ



ಭಿತ್ತಿ ದೇವಕೋಷ್ಠಗಳು, ಚನ್ನಕೇಶವ ದೇವಾಲಯ, ಬೇಲೂರು

ವಸ್ತ್ರಾಭರಣಗಳು, ಅವುಗಳ ಸವಾರಿ–ಹೀಗೆ ಅನೇಕಾನೇಕ ವಿಷಯಗಳು ಈ ಪಟ್ಟಿಕೆಯಲ್ಲಿರುತ್ತವೆ. ಆನೆಯ ಜೀವನದ ವಿವಿಧ ಮುಖಗಳ ಅಧ್ಯಯನ ಮಾಡಬೇಕಾದರೆ ಅರಣ್ಯಗಳಿಗೆ ಹೋಗಿಯೇ ಈ ಅಧ್ಯಯನದಲ್ಲಿ ತೊಡಗಬೇಕಾಗಿಲ್ಲ. ಕೇವಲ ಹೊಯ್ಸಳ ದೇವಾಲಯಗಳಿಗೆ ಹೋಗಿ ಅಲ್ಲಿ ಆನೆಯ ಪಟ್ಟಿಕೆಯನ್ನು ನೋಡಿದರೆ ಸಾಕು, ಆನೆಗಳ ಬಗ್ಗೆ ಎಲ್ಲ ವಿಷಯಗಳೂ ದೊರೆಯುತ್ತವೆ ಎನ್ನುವಷ್ಟರ ಮಟ್ಟಿಗೆ ಈ ಪಟ್ಟಿಕೆಗಳು ಶೈಕ್ಷಣಿಕವಾಗಿವೆ. ಅಂತೆಯೇ ಕುದುರೆ, ಕುದುರೆ ಸವಾರರ ಪಟ್ಟಿ. ಇಲ್ಲೂ ಕುದುರೆಗಳ ಬಗ್ಗೆ ಸರ್ವರೀತಿಯ ವಿಷಯಗಳೂ ಕಾಣಬರುತ್ತವೆ. ಜೊತೆಗೆ ಹೊಯ್ಸಳ ಕಾಲದ ಅಶ್ವದಳದ ಸಂಪೂರ್ಣ ಚಿತ್ರಣವನ್ನು ಇಲ್ಲಿ ಕಾಣಬಹುದಾಗಿದೆ. ಆಲಂಕಾರಿಕ ಪಟ್ಟಿಕೆಗಳಲ್ಲಿ ನಿರಂತರವಾದ ಸುರುಳಿಗಳಲ್ಲಿ ಇಡೀ ದೇವಾಲಯವನ್ನೇ ಆವರಿಸಿರುವ ಲತಾಪಟ್ಟಿಕೆ, ವ್ಯಾಳ–ಹಂಸಮಾಲೆಗಳು ಶಿಲ್ಪಿಯ ಕಲ್ಪನಾ ಲೋಕದ ಪರಾಕಾಷ್ಠತೆಯನ್ನು ನಿರೂಪಿಸುವುದಲ್ಲದೆ, ಇವುಗಳು ವಿಪುಲವಾಗಿ ಬೆಳೆದಿದ್ದ ಸಮಕಾಲೀನ ಸಾಹಿತ್ಯ ಶೈಲಿಯ ವೈಭವದ ನಿರೂಪಣಾ ವೈಖರಿಗೆ ಪ್ರತಿಸ್ಪರ್ಧಿಯಾಗಿ ಸೃಷ್ಟಿಯಾಗಿದ್ದ, ಶಿಲ್ಪ ಕಲಾವಿದರ ಪ್ರತಿಕ್ರಿಯೆ ಎಂದರೆ ಅತಿಶಯೋಕ್ತಿಯಲ್ಲ. ಯಾವ ವಿವಿಧ ರಸಗಳನ್ನು ಕವಿಗಳು ಕಾವ್ಯ ರೂಪದಲ್ಲಿ ಅತಿಶಯೋಕ್ತಿಗಳಿಂದ, ಅಲಂಕಾರಗಳಿಂದ, ವಿಜೃಂಭಣೆಯಿಂದ ವಿವರಿಸಿದ್ದರೋ ಆ ವಸ್ತುವನ್ನೇ ಸಮರ್ಥವಾಗಿ ಕಣ್ಣಿಗೆ ಕಟ್ಟುವ ದೃಶ್ಯಕಾವ್ಯದಂತೆ ರೂಪಿಸಿದ್ದಾರೆ ಹೊಯ್ಸಳ ಶಿಲ್ಪಿಗಳು. ಅಂತಹ ಸಮಕಾಲೀನ ಸಮಾಜದ ಕೆಲವು ಮುಖ್ಯ ಸಾಂಸ್ಕೃತಿಕ ಅಂಶಗಳನ್ನು ಪ್ರತಿಬಿಂಬಿಸುವ ಕನ್ನಡಿಯೇ ಹೊಯ್ಸಳ ದೇವಾಲಯಗಳ ಈ ಸಚಿತ್ರ ಅಧಿಷ್ಠಾನಗಳು.

ಭಿತ್ತಿ: ಹೊಯ್ಸಳ ದೇವಾಲಯಗಳ ಭಿತ್ತಿ ಸ್ವರೂಪ ಸಾಂಪ್ರದಾಯಿಕ ದ್ರಾವಿಡ ಮಾದರಿಯದೇ ಆಗಿದೆ. ಭಿತ್ತಿಯನ್ನು ಅರೆಗಂಬಗಳಿಂದಲೂ (ಭಿತ್ತಿಪಾದ) ಕೋಷ್ಠಗಳಿಂದಲೂ ಶಿಲ್ಪಗಳಿಂದಲೂ ಅಲಂಕರಿಸುವ ಪದ್ಧತಿಯನ್ನು ಹೊಯ್ಸಳರು ಹಲವು ಬದಲಾವಣೆಗಳೊಂದಿಗೆ ಅಳವಡಿಸಿಕೊಂಡರು. ಅಧ್ಯಯನದ ದೃಷ್ಟಿಯಿಂದ ಹೊಯ್ಸಳ ದೇವಾಲಯ ಭಿತ್ತಿಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು, ಅವುಗಳೆಂದರೆ ನಿರಾಲಂಕೃತ ಭಿತ್ತಿ, ಅಲ್ಪಾಲಂಕೃತ ಭಿತ್ತಿ ಮತ್ತು ಸಾಲಂಕೃತ ಭಿತ್ತಿ. ನಿರಾಲಂಕೃತ ಭಿತ್ತಿಗಳಲ್ಲಿ ಕೇವಲ ವಾಸ್ತು ಅಲಂಕರಣಗಳನ್ನು ಮಾತ್ರ ಕಾಣಬಹುದು. ಉದಾ: ಬಸ್ತಿಹಳ್ಳಿಯ (ಹಳೇಬೀಡು) ಪಾರ್ಶ್ವನಾಥ ಬಸದಿ ಈ ಬಸದಿಯ ಭಿತ್ತಿಯಲ್ಲಿ ತೆಳ್ಳನೆಯ ಭಿತ್ತಿಪಾದಗಳನ್ನು ಮಾತ್ರ ಕಾಣಬಹುದು. ಬಹುಪಾಲು ಸಮಕಾಲೀನ ಬಸದಿಗಳಲ್ಲಿ ಈ ಲಕ್ಷಣ ಇದೆ. ಕೆಲವು ದೇವಾಲಯಗಳಲ್ಲೂ ಈ ಲಕ್ಷಣ ಕಾಣುತ್ತದೆ. ಈ ರೀತಿಯ ಭಿತ್ತಿ ನಿರೂಪಣೆಗೆ ಯಾವುದೇ ಮತ–ಪಂಥಗಳ ಭೇದವಿಲ್ಲ. ಕೆಲವು ವೇಸರ ಮಾದರಿ ದೇವಾಲಯಗಳಲ್ಲೂ ಈ ಲಕ್ಷಣ ಕಾಣುತ್ತದೆ (ರಾಮನಾಥಪುರ, ನುಗ್ಗೇಹಳ್ಳಿ). ಅಲ್ಪಾಲಂಕೃತ ಭಿತ್ತಿಗಳಲ್ಲಿ ವಾಸ್ತು ಅಂಗಗಳಿಗೂ ಮತ್ತು ಶಿಲ್ಪಾಲಂಕರಣಕ್ಕೂ ಸಮಾನ ಗಮನ ಹರಿಸುತ್ತಿದ್ದರು. ವಾಸ್ತು ಅಲಂಕರಣದಲ್ಲಿ ಮೆಚ್ಚುವಂತಹ ಕೌಶಲ ಕಾಣುತ್ತದೆ. ಭಿತ್ತಿಯ ಹಿಂದೆ–ಮುಂದೆ ಚಾಚುಗಳು ವಿಸ್ತೀರ್ಣದಲ್ಲಿ ಚಿಕ್ಕದಾಗಿದ್ದು ಭಿನ್ನವಾಗಿರುತ್ತದೆ. ಮುಂಚಾಚುಗಳಲ್ಲಿ ಕೋಷ್ಠಗಳನ್ನು, ಹಿಂಚಾಚುಗಳಲ್ಲಿ ಸ್ತಂಭ ಪಂಜರ, ತೋರಣ ಮುಂತಾದವುಗಳನ್ನು ಕಂಡರಿಸಿರುತ್ತಾರೆ. ಈ ವಾಸ್ತು ಅಲಂಕರಣಗಳ ಮುಂಭಾಗದಲ್ಲಿ ಶಿಲ್ಪಾಲಂಕರಣವೂ ಇರಬಹುದು. ಇವುಗಳಲ್ಲದೆ, ಮೇಲಿನಿಂದ ಕೆಳಗಿನವರೆಗೆ ಸಸ್ಯಾಲಂಕಾರದ ಪಟ್ಟಿಗಳೂ ಇರಬಹುದು (ಅಮೃತಾಪುರ ಇತ್ಯಾದಿ).

ಸಾಲಂಕೃತ ಭಿತ್ತಿಯಲ್ಲಿ ಸಾಮಾನ್ಯವಾಗಿ ಕಪೋತವನ್ನು ನಿರ್ಮಿಸುವುದರ ಮೂಲಕ ಭಿತ್ತಿಯನ್ನು ಎರಡು ಸಮಾನಾಂತರ ಭಾಗಗಳಾಗಿ ವಿಂಗಡಿಸಿರುತ್ತಾರೆ. ಕೆಳಭಾಗದಲ್ಲಿ ಒತ್ತೊತ್ತಾಗಿ ಸಾಲುಶಿಲ್ಪಗಳನ್ನು ಕಂಡರಿಸಿ, ಕಪೋತದ ಮೇಲ್ಭಾಗದಲ್ಲಿ ವಾಸ್ತು ವಿನ್ಯಾಸಗಳನ್ನು ಕೆತ್ತಿರುತ್ತಾರೆ. ಕೆಳಭಿತ್ತಿ ಹೆಚ್ಚು ರಮಣೀಯ ಮತ್ತು ಆಕರ್ಷಕ ಭಾಗ. ದೇವಾಲಯದ ಪಂಥಕ್ಕೆ ಸಂಬಂಧಿಸಿದ ಶಿಲ್ಪಗಳ ಸಮೂಹ ಇಲ್ಲಿಯ ಶಿಲ್ಪ ವಿಷಯ. ಮಧ್ಯೆ–ಮಧ್ಯೆ ಸಮಾಜೋ–ಧಾರ್ಮಿಕ, ಲೌಕಿಕ ಶಿಲ್ಪಗಳೂ ಇಲ್ಲದಿಲ್ಲ. ಸಾಮಾನ್ಯವಾಗಿ ಒಂದೇ ಎತ್ತರ, ಗಾತ್ರ, ಅಲಂಕರಣ, ನೋಟವನ್ನು ಹೊಂದಿರುವ ಈ ಶಿಲ್ಪಸಾಲಿನ ಪ್ರತಿಯೊಂದು ಶಿಲ್ಪಕ್ಕೂ ಪ್ರತ್ಯೇಕವಾದ ಚೌತಿ–ಚಂದ್ರಾಕಾರದ ಲತಾಕುಂಜವನ್ನು ಸಾಮಾನ್ಯವಾಗಿ ಕಂಡರಿಸಿರುತ್ತಾರೆ. ಇದರ ಬದಲಾಗಿ ವಾಸ್ತು ರೂಪಣೆಯೂ ವಳ್ಳಿಮಾಲೆಯೂ ಇಲ್ಲದಿಲ್ಲ. ಈ ಶಿಲ್ಪಗಳು ಸ್ಥಾನಕ, ಆಸೀನ ಅಪರೂಪವಾಗಿ ಶಯನ ಮೂರ್ತಿಗಳಾಗಿರುತ್ತವೆ. ಆದರೆ ಸ್ಥಾನಕ ಮೂರ್ತಿಗಳೇ ಹೆಚ್ಚು. ಅಕ್ಕ–ಪಕ್ಕಗಳಲ್ಲಿ ಹಿಂಬಣಿ–ಮುಂಬಣಿಗಳಿಗನುಗುಣವಾಗಿ ಅನುಚರರು, ಸಹಚರರು, ಆಯುಧ ಪುರುಷರು, ಪರಿವಾರ ದೇವತೆಗಳು ಇತ್ಯಾದಿಗಳ ಸೂಕ್ತ ಶಿಲ್ಪಗಳನ್ನು ನಿಗದಿತ ಸಣ್ಣ ಪ್ರಮಾಣದಲ್ಲಿ ಕಡೆದಿರುತ್ತಾರೆ. ಕೆಲವೆಡೆ ಈ ಶಿಲ್ಪಗಳನ್ನು ಸೂಕ್ಷ್ಮ ಪ್ರಮಾಣದಲ್ಲಿ ಕಾಲಿನ ಬಳಿಯೂ ಕಾಣಬಹುದು. ಹಿಂಬಣಿ–ಮುಂಬಣಿಗಳಿಗನುಗುಣವಾಗಿ ವಿವಿಧ ದಿಕ್ಕುಗಳತ್ತ ಮುಖಮಾಡಿರುವ ಈ ಶಿಲ್ಪಗಳ ಮುಖಭಾವಗಳು ನೆರಳು ಬೆಳಕಿನ ಹೊನಲಾಟದಿಂದಾಗಿ ವಿವಿಧ ಭಾವನೆಗಳನ್ನು, ದಿನದ ವಿವಿಧ ಕಾಲಗಳಲ್ಲಿ ಹೊರಹೊಮ್ಮುತ್ತವೆಂದು ಕಲಾವಿಮರ್ಶಕರ ಅಭಿಪ್ರಾಯ.

ಭಿತ್ತಿಯ ಮಧ್ಯಭಾಗದಲ್ಲಿ ತೆಳುವಾದ, ಉದ್ದವಾದ ಆಂಗ್ಲ ಅಕ್ಷರ ಎಸ್ ಆಕಾರದಲ್ಲಿ ಎರಡು ಬಾಗುಳ್ಳ ಕಪೋತವನ್ನು ಕೂಡಿಸುತ್ತಿದ್ದರು. ಸಾಲಂಕೃತವಾದ ಈ ಕಪೋತ ಭಿತ್ತಿಯನ್ನು ಎರಡು ಭಾಗಗಳನ್ನಾಗಿ ಕಾಣಿಸುವುದರ ಜೊತೆಗೆ ಭಿತ್ತಿಯ ಏಕತಾನತೆಯ ನೋಟವನ್ನು ಹೋಗಲಾಡಿಸುತ್ತದೆ ಮತ್ತು ಭಿತ್ತಿಗೆ ಮೇಖಲದ ರೀತಿಯ ಸೌಂದರ್ಯವನ್ನೂ ನೀಡುತ್ತದೆ. ಕಪೋತದ ಮೇಲ್ಗಡೆ ಸಾಲಾಗಿ ಭಿತ್ತಿಪಾದಗಳು ಮತ್ತು ಆಲಂಕಾರಿಕ ಶಿಖರಗಳ ಸರಮಾಲೆಯೇ ಇರುತ್ತದೆ. ಇವುಗಳು ಕೆಳಗಿನ ಶಿಲ್ಪಗಳ ನೇರದಲ್ಲಿ, ಮೇಲ್ಭಾಗದಲ್ಲಿ ಸಾಂಕೇತಿಕವಾಗಿ ಇದ್ದು ದ್ರಾವಿಡ ಮಾದರಿ ಭಿತ್ತಿ ಕೋಷ್ಠ, ಶಿಲ್ಪ ಮತ್ತು ವಾಸ್ತು ತೋರಣದ, ವೈಭವೀಕೃತ ನಿರೂಪಣೆ ಎನಿಸಿಕೊಳ್ಳುತ್ತವೆ. ಈ ರೀತಿಯ ಭಿತ್ತಿಯ ಉದಾಹರಣೆಗಳು ಸಾಮಾನ್ಯವಾಗಿ ಎಲ್ಲ ಸಾಲಂಕೃತ ದೇವಾಲಯಗಳಲ್ಲೂ ಕಾಣುತ್ತದೆ.

ಹೊಯ್ಸಳ ಶಿಲ್ಪಗಳು ಭಿತ್ತಿಯ ಅಲಂಕರಣವನ್ನು ಕುರಿತು ಯಾವುದೇ ನಿರ್ದಿಷ್ಟ ನಿಯಮವನ್ನು ಪಾಲಿಸಿದಂತೆ ಕಾಣುವುದಿಲ್ಲ. ನಿರಾಲಂಕೃತ, ಅಲ್ಪಾಲಂಕೃತ ಮತ್ತು ಸಾಲಂಕೃತ ಭಿತ್ತಿಗಳನ್ನು ಇವರು ನಿರ್ಮಿಸಿದ್ದಾರೆ. ಒಂದೇ ದೇವಾಲಯ ಸಮುಚ್ಚಯದಲ್ಲಿ ಬಗೆ–ಬಗೆಯಾದ ಅಲಂಕರಣವನ್ನು ಮಾಡಿದ್ದಾರೆ. ಉದಾ: ಬೆಳವಾಡಿಯ ವೀರನಾರಾಯಣ ದೇವಾಲಯ ತ್ರಿಕೂಟಾಲಯ. ಇಲ್ಲಿ ಪ್ರಧಾನ ದೇವಾಲಯದ ಭಿತ್ತಿ ಅಲ್ಪಾಲಂಕೃತವಾಗಿದೆ. ಆದರೆ ಮುಂದಿನ ಎಡ ಮತ್ತು ಬಲ ಪಾರ್ಶ್ವದ ದೇವಾಲಯಗಳಲ್ಲಿ ಸಾಲಂಕೃತ ಭಿತ್ತಿಯಿದೆ. ದ್ರಾವಿಡ, ವೇಸರ ಮಾದರಿಗಳೆಂಬ ಭೇದವೂ ಭಿತ್ತಿ ಅಲಂಕರಣದ ನಿಯಮದಲ್ಲಿರಲಿಲ್ಲ. ಭಿನ್ನ ರೀತಿಯ ಭಿತ್ತಿ ಅಲಂಕರಣೆಗಳು ಸೋಮನಾಥಪುರದ ಕೇಶವ ದೇವಾಲಯದ ವಿವಿಧ ಗರ್ಭಗೃಹಗಳಿಗೆ ಮಾಡಿರುವುದು ಕಾಣುತ್ತದೆ.

ಕಪೋತ: ಭಿತ್ತಿಯ ಮೇಲ್ತುದಿಯಲ್ಲಿ ನಿರ್ಮಿಸುತ್ತಿದ್ದ ಕಪೋತವನ್ನು ನಾಜೂಕಾಗಿಯೂ ನವಿರಾಗಿಯೂ ರೂಪಿಸುತ್ತಿದ್ದರು. ಹೊಯ್ಸಳ ದೇವಾಲಯದ ಕಪೋತಗಳು ದ್ರಾವಿಡ ಕಪೋತಗಳಿಗಿಂತ ವಿಭಿನ್ನ. ಇವು ತೆಳುವಾಗಿಯೂ ಹೆಚ್ಚು ಅಗಲವಾಗಿಯೂ ಎರಡು

ಬಾಗುಗಳಿಂದ ಕೂಡಿದ್ದಾಗಿಯೂ ಇವೆ. ಕಪೋತದ ಕೆಳಮುಖ ಆಳವಾಗಿದ್ದು, ಸಾಮಾನ್ಯವಾಗಿ ಹೆಂಚಿನ ಚಾವಣಿಯ ಸೂರಿನ ಕೆಳಭಾಗದ ವಿನ್ಯಾಸವನ್ನು ಹೊಂದಿರುತ್ತದೆ. ಮರದ ತೊಲೆ ಅಡ್ಡ ಪಟ್ಟಿಗಳು, ಕೂಡುವ ಸ್ಥಳದಲ್ಲಿ ಗುಬ್ಬಿ ಗಂಟುಗಳು, ಗುಬುಟುಗಳೂ ಮುಂತಾದ ಅಲಂಕರಣೆಯನ್ನು ಹೊಂದಿರುತ್ತದೆ. ಕಪೋತದ ಮೇಲ್ಭಾಗ ಎರಡು ಬಾಗಿನ ಇಳಿಜಾರು ಕಪೋತದ ಮುಂದಿನ ಅಂಚಿಗೆ ಕಸೂತಿಯನ್ನು ಹೋಲುವ ಮುಕ್ತಾಗ್ರಾಸಗಳ ಅಲಂಕರಣವೂ ಉಂಟು. ತೆರೆದ ಮಹಾಮಂಟಪ, ರಂಗಮಂಟಪಗಳ ಸುತ್ತಲೂ ಹೆಚ್ಚು ಮುನ್‌ಚಾಚಿದ ಕಪೋತಗಳನ್ನು ಅಳವಡಿಸುತ್ತಿದ್ದರು. ಇಂತಹ ಕಪೋತವನ್ನು ಅಮೃತಾಪುರದ ಅಮೃತೇಶ್ವರ ದೇವಾಲಯದಲ್ಲಿ ಕಾಣಬಹುದು. ವಿಜಯನಗರ ದೇವಾಲಯಗಳ ತೆರೆದ ಮಂಟಪಗಳ ಸುತ್ತಲಿನ ಎರಡು ಬಾಗುಳ್ಳ ವಿಸ್ತಾರವಾದ ಕಪೋತಗಳ ಮುನ್–ಮಾದರಿಗಳಿವು ಎಂದು ಹೇಳಬಹುದು.

**ಹೊಯ್ಸಳೇಶ್ವರ ದೇವಾಲಯದ ಭಿತ್ತಿಶಿಲ್ಪಗಳು, ಹಳೇಬೀಡು**

ಹಾರ: ಹೊಯ್ಸಳ ದೇವಾಲಯದ ಹಾರಗಳು (ಕೈಪಿಡಿಗೋಡೆ) ಅತಿ ಕ್ಲಿಷ್ಟವಾದ ರೀತಿಯಲ್ಲಿ ವಿನ್ಯಾಸಗೊಂಡಿದೆ. ಆದರೆ ಇವು ವಾಸ್ತು ರೀತಿಯ ಆವಶ್ಯಕತೆಯಾಗಿತ್ತು. ಹಿಂದೆಯೇ ಉಲ್ಲೇಖಿಸಿದಂತೆ ಭಿತ್ತಿಯಲ್ಲಿ ಅಸಂಖ್ಯಾತ, ನಿಬಿಡ ಹಿಂದೆ–ಮುಂದೆ ಚಾಚುಗಳು ಇರುತ್ತಿದ್ದುದರಿಂದ ದ್ರಾವಿಡ ಮಾದರಿಯಂತೆ ನೇರವಾಗಿ ಶಾಲಕೂಟ, ಪಂಜರಗಳ ಸಾಲನ್ನು ಪ್ರಭಾವಯುತವಾಗಿ ಕಂಡರಿಸಲು ಪ್ರಸ್ತರ ಭಾಗದಲ್ಲಿ ಅವಕಾಶವಿರಲಿಲ್ಲ. ಇದರ ಬದಲಿಗೆ ದಿಂಡುಗಳುಳ್ಳ ವೇದಿಯನ್ನು ನಿರ್ಮಿಸಿ ಅದರ ಮೇಲೆ ಸಾಲಂಕೃತ, ಸಾಂಪ್ರದಾಯಿಕ ಕೂಡುಗಳನ್ನು ಕಡೆಯುತ್ತಿದ್ದರು. ಈ ಕೂಡುಗಳು ಅತಿಶಯವಾದ ಸೂಕ್ಷ್ಮ ಕೆತ್ತನೆಗಳಿಂದ ಅಲಂಕರಿಸಲ್ಪಟ್ಟ ಪ್ರಧಾನವಾದ ಕೀರ್ತಿಮುಖವನ್ನು ಹೊಂದಿರುತ್ತವೆ. ಈ ಕೀರ್ತಿಮುಖಗಳು ಕೈಪಿಡಿಯ ವೇದಿಕೆಯಮೇಲೆ ಸಾಲಾಗಿ ಶಿಖೆಗಳ ರೂಪದಲ್ಲಿ ಕಾಣುತ್ತವೆ. ಕೂಲಂಕಷವಾಗಿ ಇವುಗಳನ್ನು ಗಮನಿಸಿದರೆ ಇವು ಶಾಲಕೂಟ, ಪಂಜರ ಮಂಟಪಗಳ ನಾಸಿಗಳ ಮೇಲ್ತುದಿಗ ಳೆಂಬುದಾಗಿ ಗುರುತಿಸಬಹುದು. ಈ ಕೂಡುಗಳ ಗಾಢಗಳಲ್ಲಿ ಸಣ್ಣ–ಸಣ್ಣ ಧಾರ್ಮಿಕ ಹಾಗೂ ಆಲಂಕಾರಿಕ ಶಿಲ್ಪಗಳಿರುತ್ತವೆ.

ಸುಕನಾಸಿ: ಗರ್ಭಗೃಹದ ಮೇಲಿನ ಪ್ರಾಸಾದದಿಂದ ಮುಂದಕ್ಕೆ ಚಾಚಿರುವ ಪಂಜರ ರೀತಿಯ ಬೆನ್ನು, ಮುಖವುಳ್ಳ ಸುಕನಾಸಿಗಳನ್ನು ಹೊಯ್ಸಳ ಶಿಲ್ಪಿಗಳು ಕಲಾತ್ಮಕವಾಗಿ ನಿರ್ಮಿಸಿದ್ದಾರೆ. ಈ ಅಂಗ ದ್ರಾವಿಡ, ನಾಗರ, ವೇಸರ–ಮೂರೂ ಶೈಲಿಯ ಪ್ರಾಸಾದಗಳಲ್ಲಿ ಕಾಣಬರುತ್ತದೆ. ಇದರ ಪಾರ್ಶ್ವ ಅಲಂಕರಣ, ಪ್ರಾಸಾದದ ಅದೇ ಮಟ್ಟದ ಅಲಂಕರಣಗ ಳೊಂದಿಗೆ ಹೋಲುತ್ತದೆ. ಮುಖ ಭಾಗದಲ್ಲಿ ದೊಡ್ಡದಾದ ಕೂಡು (ಮಹಾನಾಸಿ) ಇರುತ್ತದೆ. ಸಾಮಾನ್ಯವಾಗಿ ಗುಡಿಯ ಮೂರ್ತಿಯ ಕಿರಿದಾದ ಶಿಲ್ಪವನ್ನು ಈ ಕೂಡುವಿನಲ್ಲಿ ಕಂಡರಿಸಿರುತ್ತಾರೆ. ಸುಕನಾಸಿಯ ಇಳಿಜಾರು ಬೆನ್ನಿನ ಮೇಲೆ, ಹೊಯ್ಸಳ ಲಾಂಛನವಾದ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪವಿರುತ್ತದೆ.

ದ್ವಾರ ಬಂಧಗಳು: ದೇವಾಲಯ ಯಾವುದೇ ಶೈಲಿಯ ವಾಸ್ತುವಾಗಿರಲೀ, ಹೊಯ್ಸಳ ದೇವಾಲಯಗಳ ದ್ವಾರ ಬಂಧಗಳು ಅತಿ ಆಕರ್ಷಕ ಭಾಗಗಳು. ಸಾಮಾನ್ಯವಾಗಿ ಭಿತ್ತಿಪಾದ, ತೊಲೆ, ಕಪೋತ, ಹಾರ ಮುಂತಾದವುಗಳು ದ್ವಾರಬಂಧದ ಸಾಮಾನ್ಯ ಕೆತ್ತನೆಗಳು. ಜೊತೆಗೆ ದ್ವಾರದ ನಿಲುವು ಪಟ್ಟಿ ಮತ್ತು ತೊಲೆಗಳ ಮೇಲೆ ವಿವಿಧಾಲಂಕಾರದ ಪಟ್ಟಿಗಳು (ಶಾಖೆಗಳೂ) ಸಾಮಾನ್ಯ. ಹೆಚ್ಚು ಅಲಂಕೃತವಾದರೆ ಇನ್ನೂ ಹೆಚ್ಚು ವೈವಿಧ್ಯಮಯ ಪಟ್ಟಿಗಳು ಮತ್ತು ಮೇಲೆ ಮಕರತೋರಣ ಇರುತ್ತದೆ. ಶಾಖೆಗಳಲ್ಲಿ ರತ್ನ ಪಟ್ಟಿ, ಮಣಿಮಾಲೆಗಳು, ಸರಗಳು, ಗಂಟೆಗಳು, ಕುಚ್ಚುಗಳು, ರಂಧ್ರಗಳು, ಗುಬುಟಗಳು, ಗಾಡಿಗಳು, ಅಂಚುಗಳು, ಏಣುಗಳು – ಹೀಗೆ ವಿವಿಧ ರೀತಿಯ ಕೆತ್ತನೆ ಕಾಣುತ್ತದೆ. ನಿಲುವು ಪಟ್ಟಿಯ ಪಾರ್ಶ್ವಗಳಲ್ಲಿ ಜಾಲಂಧ್ರಗಳೂ ಇರಬಹುದು. ಬುಡದಲ್ಲಿ ದ್ವಾರಪಾಲಕ ಶಿಲ್ಪಗಳು, ಚಾಮರಧಾರಿಗಳೂ ನದಿ ದೇವತೆಗಳೂ ದಾನಿಗಳೂ ಇತ್ಯಾದಿ ಶಿಲ್ಪಗಳನ್ನು ಸಾಲಾಗಿ ಕಂಡರಿಸಿರುತ್ತಾರೆ. ನಿಜಗಾತ್ರದ ದ್ವಾರಪಾಲಕರ ಶಿಲ್ಪಗಳು ಸಹ ಇಲ್ಲದಿಲ್ಲ (ಹಳೇಬೀಡು). ಹೊಯ್ಸಳ ದ್ವಾರ ಬಂಧದ ಮತ್ತೊಂದು ವಿಶೇಷವೆಂದರೆ ಸವಿಸ್ತಾರವಾಗಿ ಕೆತ್ತನೆ ಮಾಡಿದ ಮಕರ ತೋರಣಗಳು. ಇದರ ಕೆತ್ತನೆ ಕೆಲವೊಮ್ಮೆ ಚಾಣಾಕ್ಷ ಶಿಲ್ಪಿಗಳ ಹೆಮ್ಮೆಯ ಕೆಲಸಗಳೂ ಆಗಿವೆ (ಹಳೇಬೀಡು). ವಿಸ್ತಾರವಾಗಿ, ಸೂಕ್ಷ್ಮವಾಗಿ, ವೈಭವೋಪೇತವಾಗಿ ಕೆತ್ತನೆ ಮಾಡಿದ ಮುಖಾಮುಖಿ ಮಕರಗಳು, ಇವುಗಳ ಮಧ್ಯೆ ನರ್ತಿಸುತ್ತಿರುವ ನಟರಾಜ ಅಥವಾ ವಿಷ್ಣು ಅಥವಾ ಇಂದ್ರ ಅಥವಾ ತ್ರಿಮೂರ್ತಿ ಶಿಲ್ಪಗಳು. ಈ ಲೀಲೆಯನ್ನು ವೀಕ್ಷಿಸುತ್ತಿರುವ ಇತರ ದೇವ–ದೇವತೆಗಳು ಇಲ್ಲಿಯ ಮುಖ್ಯ ವಿಷಯ. ಕೆಲವೊಮ್ಮೆ ಶಿಲ್ಪಗಳೊಡಗೂಡಿದ ಜಾಲಂಧ್ರ ರೀತಿಯಲ್ಲಿ ಭಾಗವನ್ನು ಅಲಂಕರಿಸುತ್ತಿದ್ದರು. ಮಕರ ತೋರಣದ ಉತ್ಕೃಷ್ಟ ಮಾದರಿಗಳನ್ನು ಬೇಲೂರು, ಹಳೇಬೀಡುಗಳಲ್ಲಿ ಕಾಣಬಹುದು.

ಕಂಬಗಳು: ಹೊಯ್ಸಳ ಶೈಲಿಯ ಕಂಬಗಳು ವಿಶಿಷ್ಟವಾದ ಕೆತ್ತನೆಗಳಿಂದ ಅಲಂಕೃತವಾಗಿರುತ್ತವೆ. ಶಿಲ್ಪಿಗಳು ಕಂಭ ತಯಾರಿಕೆಯಲ್ಲಿ ವಿಶೇಷ ಪರಿಣಿತಿಯನ್ನೇಗಳಿಸಿದ್ದರು, ಬೆರಗು ಮೂಡಿಸುವಷ್ಟು ಸೂಕ್ಷ್ಮವಾಗಿ, ನಿಖರವಾಗಿ, ಸಮಾಕೃತಿಯಲ್ಲಿ ಕಂಬಗಳು ತಯಾರಾಗಿವೆ. ಕೆತ್ತನೆಯ ನಿಖರತೆ, ಸೂಕ್ಷ್ಮತೆ ಎಷ್ಟಿದೆಯೆಂದರೆ ಇವುಗಳನ್ನು ಬರಿಗೈಯಲ್ಲಿ ತಯಾರಿಸುವುದು ಅಸಾಧ್ಯದ ಮಾತೇ ಸರಿ. ಯಾವುದೇ ಒಂದು ತಿರುಗಣೆ ಯಂತ್ರದ ಮೇಲೆ ಇವುಗಳನ್ನು ಜೋಡಿಸಿ, ತಿರುಗಿಸಿ ಕಡೆದು ಕೆತ್ತನೆ ಮಾಡಿದಂತಿದೆ. ಇದರಿಂದಾಗಿ ಈ ಕಂಬಗಳನ್ನು ತಿರುಗಣೆ ಅಥವಾ ರಾಟೆ ಯಂತ್ರದ ಕಂಬಗಳೆಂದೇ ಕರೆಯುವುದು ವಾಡಿಕೆಯಾಗಿದೆ. ಈ ಕಂಬಗಳ ವಿನ್ಯಾಸದಲ್ಲಿ ಎರಡು ವಿಧಗಳನ್ನು ಗಮನಿಸಬಹುದು. ಮೊದಲನೆಯದು ಸಮಾನಾಂತರ ಕೆತ್ತನೆ ಅಂಗಗಳುಳ್ಳ, ರಾಟೆಯಲ್ಲಿ ತಯಾರಿಸಿ ಹೊಳಪು ಮಾಡಿದ ಕಂಬಗಳು ಮತ್ತು ಎರಡನೆಯದು ಇದೇ ರೀತಿಯಾಗಿ ತಯಾರಿಸಿದ ಕಂಬದ ದಿಂಡನ್ನು ಮತ್ತೆ ಲಂಬ ಗಾಡಿಗಳನ್ನು ಕೊರೆಯುವುದರ ಮೂಲಕ ಬಹು ಮೂಲೆಯ ನಕ್ಷತ್ರಾಕಾರದ ಕಂಬಗಳನ್ನಾಗಿ ಪರಿವರ್ತಿಸಿರುವುದು. ಮೊದಲನೆಯ ವಿಧದ ಕಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಮಾನ್ಯವಾಗಿ ಕಾಣಬರುತ್ತವೆ. ಎರಡನೆಯ ವಿಧಾನ ಕಂಬಗಳು ವಿರಳವಾಗಿದೆ. ಚತುರಸ್ರಾಕಾರದ ದಿಂಡುಳ್ಳ ಕಂಬಗಳನ್ನು ಹೆಚ್ಚಾಗಿ ಭದ್ರಕ (ಗೋಡೆ) ಕಂಬಗಳನ್ನಾಗಿ ಬಳಸುತ್ತಿದ್ದರು. ಎಲ್ಲ ಬಗೆಯ ಕಂಬಗಳಿಗೂ ನಿಯಮವೆಂಬಂತೆ ಚೌಕಾಕಾರದ ಪೀಠ ಮತ್ತು ಬುಡಭಾಗವಿರುತ್ತವೆ.

ಮೊದಲನೆಯ ವಿಧದ ಕಂಬಗಳು ಚೌಕಾಕಾರದ ಬುಡದ ಮೇಲೆ ಉರುಳೆಯಕಾರದ ದಿಂಡನ್ನು ಹೊಂದಿರುತ್ತವೆ. ಈ ಉರುಳೆ ದಿಂಡಿನ ಮಧ್ಯಭಾಗದಲ್ಲಿ ಪ್ರಧಾನವಾಗಿ ಕಾಣುವಂತೆ ಗಂಟೆಯಾಕೃತಿಯ ಭಾಗವಿರುತ್ತದೆ. ಗಂಟೆಯಾಕಾರದ ಮೇಲೆ ಮತ್ತು ಕೆಳಗಿನ ಭಾಗಗಳಲ್ಲಿ ಸೂಕ್ಷ್ಮವಾಗಿ, ಒತ್ತೊತ್ತಾಗಿ ಕೊರೆದ ಅನೇಕ ಸಂಖ್ಯೆಯ ನಿಮ್ನ, ಪೀನ, ಸುರುಳಿ, ಉರುಳೆ, ಪಟ್ಟಿ ಆಕಾರದ, ವಿವಿಧ ಆಳ–ಅಗಲದ ಕೊರೆತಗಳು, ಊರ್ಧ್ವ–ಅಧಃಪದ್ಮಗಳು, ಹಗ್ಗ–ಸರಪಣಿ ಮುಂತಾದ ಕೆತ್ತನೆಗಳು ಸಮಾನಾಂತರವಾಗಿ ಕಾಣಬರುತ್ತವೆ. ಈ ದಿಂಡಿನ ಮೇಲೆ ದಿಂಬಿನಾಕಾರದ ಅಥವಾ ಜಾರೇಣಿಉಳ್ಳ ಅಥವಾ ಮೊನಚಾದ ಮುಖವುಳ್ಳ ಬೋದಿಗೆ ಇರುತ್ತದೆ. ಇದರ ಮೇಲೆ ದ್ರಾವಿಡ ರೀತಿಯ (ಪಲಗೈ) ಫಲಕ ಕೂಡಿಸಿರುತ್ತಾರೆ. ಮೇಲಿನ ಚಾಚು ಪೀಠಗಳು, ಸುರುಳಿಯಾಕಾರದ ತುದಿಯುಳ್ಳದ್ದಾಗಿದ್ದು (ಮುಷ್ಟಿ ಬಂಧ) ಕೆಲವೊಮ್ಮೆ ಪದ್ಮದಳದೊಂದಿಗೆ, ಕೆಲವೊಮ್ಮೆ ವ್ಯಾಘ್ರಮುಖದೊಂದಿಗೆ, ಕೆಲವೊಮ್ಮೆ ಭಾರವಾಹಕರೊಂದಿಗೆ ಕೂಡಿರುತ್ತವೆ.

ಸಾಮಾನ್ಯವಾಗಿ ಈ ಕಂಭಗಳ ಆಕರ್ಷಣೆ ಎಂದರೆ ಹೊಳಪಾದ ಮೇಲ್ಮೈ, ಕಡೆತದ ಸೂಕ್ಷ್ಮತೆ, ನಿರ್ದಿಷ್ಟತೆ ಮತ್ತು ಏಕ ರೀತಿಯ ಅಲಂಕರಣೆ. ಇವುಗಳನ್ನು ಕಡೆಯಲು ಯಾವ ರೀತಿಯ ರಾಟೆ ಯಂತ್ರಗಳನ್ನು ಅವರು ಬಳಸುತ್ತಿದ್ದರು ಎಂಬುದರ ಮಾಹಿತಿ ಇಲ್ಲ. ಆದರೆ ರಾಟೆ ಯಂತ್ರಗಳನ್ನು ಬಳಸಿರುವುದಂತೂ ನಿಜ. ರಾಟೆಗಳ ಮೇಲೆ ದಿಂಡುಗಳನ್ನು ತಯಾರಿಸಿ ಅನಂತರ ಬೇಕಾದ ಕಡೆಗಳಲ್ಲಿ ಕೆತ್ತನೆಯ ಕೆಲಸವನ್ನು ಮಾಡಿರುವ ನಿದರ್ಶನಗಳೂ ಸಾಕಷ್ಟಿವೆ. ಎರಡನೆಯ ಬಗೆಯ ಕಂಬಗಳನ್ನು ತಯಾರಿಸುವಾಗ ಮೇಲೆ ಹೇಳಿದ ರೀತಿಯಲ್ಲಿ ಆವಶ್ಯಕ ಗಾತ್ರದ ದಿಂಡನ್ನು ತಯಾರಿಸಿ ಅದರ ಮೇಲೆ ಲಂಬವಾಗಿ ಸಮಾನಾಂತರ ಗಾಡಿಗಳನ್ನು ಮೇಲಿನಿಂದ ಕೆಳಗಿನವರೆಗೂ ಕೈಯಿಂದಲೇ ಕತ್ತರಿಸುತ್ತಿದ್ದರು. ವೈವಿಧ್ಯಗಳನ್ನು ರೂಪಿಸುತ್ತಿದ್ದರು. ಈ ಲಂಬಕೊರೆತಗಳು ನೋಡುವುದಕ್ಕೆ ಸಮಾನಾಂತರವಾಗಿ ಕಂಡರೂ ರಾಟೆಯಂತ್ರದ ಸೂಕ್ಷ್ಮತೆ, ನಿಖರತೆ ಇವುಗಳಲ್ಲಿ ಕಾಣುವುದಿಲ್ಲ.

ಭುವನೇಶ್ವರಿಗಳು: ಹೊಯ್ಸಳ ದೇವಾಲಯಗಳಲ್ಲಿ ಭುವನೇಶ್ವರಿಗಳ ಪರಿಕಲ್ಪನೆ ವಿಶೇಷವಾಗಿ ನವರಂಗ, ರಂಗಮಂಟಪಗಳಲ್ಲಿ ಕಾಣಬರುತ್ತದೆ. ಭುವನೇಶ್ವರಿಯ ವಿನ್ಯಾಸ, ನಿರ್ಮಾಣ ತಂತ್ರದ ಒಂದು ಆವಶ್ಯಕತೆಯಿಂದಾಗಿ ಉಂಟಾಗಿದೆ. ಬಳಪದ ಕಲ್ಲಿನ ಉದ್ದವಾದ

ಚಪ್ಪಡಿಗಳು, ಅವುಗಳ ಮೃದುತ್ವದಿಂದಾಗಿ ಬಾಳಿಕೆ ಬರುವುದಿಲ್ಲ. ಬದಲಾಗಿ ಅದೇ ಕಲ್ಲಿನ ತುಂಡು-ತುಂಡು ಚಪ್ಪಡಿಗಳನ್ನು ವಿಶಿಷ್ಟವಾದ ರೀತಿಯಲ್ಲಿ, ವಿನ್ಯಾಸದಲ್ಲಿ ಜೋಡಿಸಿ ಗುಮ್ಮಟಾಕಾರದ ಅಥವಾ ನಾಭಿ ಛಂದ ರೀತಿಯ ಚಾವಣಿ ನಿರ್ಮಿಸಿ, ಅದರ ಒಳಮುಖವನ್ನು ಆಕರ್ಷಕವಾಗಿ ಕೆತ್ತನೆ ಮಾಡಿ, ನಯನ ಮನೋಹರವಾದ ಭುವನೇಶ್ವರಿಗಳನ್ನು ನಿರ್ಮಿಸಿದ್ದಾರೆ. ಆಕರ್ಷಣೆಯಲ್ಲದೆ ಈ ಭುವನೇಶ್ವರಿಗಳಿಂದ ಮತ್ತೊಂದು ಉಪಯೋಗವೂ ಇದೆ. ಹೊಯ್ಸಳ ಕಾಲದ ದೇವಾಲಯಗಳು ಸೇರಿದಂತೆ ಮಧ್ಯಕಾಲೀನ ದೇಗುಲಗಳ ವಿಶಾಲ ರಂಗಮಂಟಪಗಳಲ್ಲಿ, ನವರಂಗಗಳಲ್ಲಿ, ದೇವರ ಸೇವೆಗಾಗಿ ವಿಶೇಷ ಪೂಜಾವಿಧಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿದ್ದುದ್ದು ತಿಳಿದಿರುವ ವಿಷಯವೇ ಆಗಿದೆ. ಜೋರಾದ ಘಂಟಾನಾದ, ಜಾಗಟೆಯ ಸದ್ದು, ಓಲಗ, ಡಮರು, ಡೋಲು, ನಗಾರಿ, ಕೊಂಬು. ಕಹಳೆ ಮುಂತಾದ



ಮಕರ ತೋರಣ, ಚನ್ನಕೇಶವ ದೇವಾಲಯ, ಬೇಲೂರು

ವಾದ್ಯಗಳ ಕಿವಿಗಡಚಿಕ್ಕುವ ಶಬ್ದ ರಂಗಮಂಟಪದಲ್ಲಿ ಉಂಟಾಗುತ್ತಿತ್ತು. ಮಟ್ಟವಾದ ಮೇಲ್ಛಾವಣಿಯಿದ್ದಲ್ಲಿ ಈ ಭಾರೀ ಶಬ್ದ ಪ್ರತಿಧ್ವನಿಸಿ ವಾದ್ಯದ ನಿಜವಾದ ಸ್ವರೂಪಕ್ಕೆ ಧಕ್ಕೆಯುಂಟಾಗುತ್ತಿತ್ತು. ಅಂತಹ ಸ್ಥಳದಲ್ಲಿ ಗುಮ್ಮಟಾಕಾರದ ಭುವನೇಶ್ವರಿಗಳು ಇದ್ದಲ್ಲಿ ಶಬ್ದವನ್ನು ಪ್ರತಿಧ್ವನಿಸದೆಯೇ ಶಬ್ದವನ್ನು ಹೀರಿ, ಪ್ರತಿಧ್ವನಿಯನ್ನು ನಿಯಂತ್ರಿಸುತ್ತಿತ್ತು. ಇದು ವೈಜ್ಞಾನಿಕವಾಗಿ ರುಜುವಾತು ಪಡಿಸಬಹುದಾದ ವಿಷಯ. ಇದರಿಂದಾಗಿ ಮಟ್ಟವಾದ ಚಾವಣಿ ಗಿಂತ ಹೆಚ್ಚು ಬಾಳಿಕೆ ಬರುವ, ಸುಂದರವಾದ ಪ್ರತಿಧ್ವನಿಯನ್ನು ನಿಯಂತ್ರಿಸುವ ಭುವನೇಶ್ವರಿಗಳು ಮಧ್ಯಕಾಲೀನ ದೇಗುಲಗಳು ಹೆಚ್ಚು ಜನಪ್ರಿಯವಾದವು. ಭುವನೇಶ್ವರಿಗಳ ನಿರೂಪಣೆಯಲ್ಲಿ ಅಲಂಕರಣೆಯಲ್ಲಿ ಕಾಣದ ಆಲಂಕಾರಿಕ ಕೆತ್ತನೆಗಳಿಲ್ಲ, ಕಾಣದ ವಿನ್ಯಾಸಗಳಿಲ್ಲ, ಕಾಣದ ಧಾರ್ಮಿಕ ವಿಷಯಗಳಿಲ್ಲವೆಂಬ ರೀತಿಯಲ್ಲಿ ಇವುಗಳ ವಸ್ತು ವೈವಿಧ್ಯತೆ ಇದೆ, ತಾಂತ್ರಿಕ ಪರಿಣತಿ ಇದೆ, ರಚನಾಕೌಶಲ್ಯವಿದೆ ಮತ್ತು ಶಿಲ್ಪಿಯ ಫಲವತ್ತಾದ ಕಲ್ಪನೆಯ ಪರಾಕಾಷ್ಠತೆ ಇದೆ.

ಶಿಲ್ಪಗಳು: ಹೊಯ್ಸಳ ಕಲಾ ಸಂಪ್ರದಾಯದ ಪರಿಪೂರ್ಣತೆಯನ್ನು, ವೈಶಿಷ್ಟ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಅವರ ಶಿಲ್ಪಗಳು ಪ್ರತಿಬಿಂಬಿಸುತ್ತವೆ. ದೇವಾಲಯ ಭಿತ್ತಿಗಳಲ್ಲಿ ಹಾಗೂ ಇನ್ನಿತರ ಭಾಗಗಳಲ್ಲಿ ಕಾಣುವ ಹೊಯ್ಸಳ ಶಿಲ್ಪಗಳು ಅವುಗಳ ಸೌಂದರ್ಯಕ್ಕೆ, ನಿಲುವಿಗೆ, ಲಾಲಿತ್ಯಕ್ಕೆ, ವೈಭವಕ್ಕೆ, ಒನಪು-ವಯ್ಯಾರಗಳಿಗೆ, ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಗಳಿಗೆ ಮತ್ತು ವೈವಿಧ್ಯತೆಗಳಿಗೆ ಹೆಸರುವಾಸಿಯಾಗಿವೆ. ಈ ಕಾರಣಗಳಿಂದಾಗಿ ಹೊಯ್ಸಳ ಶಿಲ್ಪಗಳು ಭಾರತೀಯ ಶಿಲ್ಪಕಲಾ ಪರಂಪರೆಯಲ್ಲಿ ವಿಶಿಷ್ಟವಾದ ಹಾಗೂ ಪ್ರತ್ಯೇಕವಾದ ಸ್ಥಾನಪಡೆದಿವೆ. ವಾಸ್ತು ಅಂಗಗಳಂತೆ ಈ ಶಿಲ್ಪಗಳೂ ಬಳಪದ ಕಲ್ಲಿನ ಕೃತಿಗಳು ಹೊಯ್ಸಳ ವಾಸ್ತು ಕೃತಿಗಳು ಬಳಪದ ಕಲ್ಲಿನಲ್ಲಲ್ಲದೆ, ಕಣಶಿಲೆಯಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ದೊರೆತಿವೆ. ಆದರೆ ಬಳಪದ ಕಲ್ಲಿನದಲ್ಲದ ಹೊಯ್ಸಳ ಶಿಲ್ಪಗಳು ಮಾತ್ರ ದುರ್ಲಭ. ಮೃದು ಮಾಧ್ಯಮದಿಂದಾಗಿ ಹೊಯ್ಸಳ ಶಿಲ್ಪ ಕೆತ್ತನೆಯಲ್ಲಿ ಆಡಂಬರ ದುಂದುತನ ಹೆಚ್ಚಾಗಿ ಕಾಣಬರುತ್ತದೆ.

ಹೊಯ್ಸಳ ಶಿಲ್ಪಗಳನ್ನು ಎರಡು ಬಗೆಯದಾಗಿ ವಿಂಗಡಿಸಬಹುದು: ದುಂಡು ಶಿಲ್ಪಗಳು ಮತ್ತು ಉಬ್ಬು ಶಿಲ್ಪಗಳು. ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸುತ್ತಿದ್ದ ಪೂಜಾ ಶಿಲ್ಪಗಳು, ಮದನಿಕಾ ಶಿಲ್ಪಗಳು, ಕೆಲವು ದ್ವಾರಪಾಲಕ ಶಿಲ್ಪಗಳು, ನಂದಿ ಶಿಲ್ಪಗಳು, ಸಳನ ಶಿಲ್ಪಗಳು ಹಾಗೂ ಇನ್ನಿತರ ಕೆಲವು ವಿಶೇಷ ಕಲ್ಪನೆಗಳು ಮತ್ತು ಪ್ರಾಣಿ ಶಿಲ್ಪಗಳು. ಪೂಜಾ ಶಿಲ್ಪಗಳ ಕಂಡರಣೆಯಲ್ಲಿ ಶಿಲ್ಪಿ ಮುಖ್ಯವಾಗಿ ಪ್ರತಿಮಾಶಾಸ್ತ್ರದ ನಿಬಂಧನೆಗಳಿಗೆ ಅನುಗುಣವಾಗಿ ಕೆತ್ತನೆ ಮಾಡುತ್ತಿದ್ದನೆಂಬ ಅಂಶ ರುಜುವಾತಾಗಿದೆ. ಹೀಗಾಗಿ ಇವುಗಳ ಕಂಡರಣೆಯಲ್ಲಿ ವೈವಿಧ್ಯ ಕಡಿಮೆ, ನಿಬಂಧನೆ ಜಾಸ್ತಿ. ಉಬ್ಬು ಶಿಲ್ಪಗಳು ಸಂಖ್ಯೆಯಲ್ಲಿ ಅಪಾರ. ದೇವಾಲಯಗಳ ಭಿತ್ತಿಗಳ ಮೇಲೆ ನೂರಾರು ಸಂಖ್ಯೆಯಲ್ಲಿ ಇವು ಕಾಣಬರುತ್ತವೆ. ಧಾರ್ಮಿಕ, ಲೌಕಿಕ, ಸಾಮಾಜಿಕ, ಪ್ರಾಣಿ, ಪಕ್ಷಿ ಮುಂತಾದ ವಿಷಯಗಳನ್ನು ಇವು ಒಳಗೊಂಡಿರುತ್ತವೆಯಾದರೂ ಧಾರ್ಮಿಕ, ಪೌರಾಣಿಕ ಶಿಲ್ಪಗಳೇ ಸಂಖ್ಯೆಯಲ್ಲಿ ಹೆಚ್ಚು.ಧಾರ್ಮಿಕ ಶಿಲ್ಪಗಳು ಧರ್ಮಬೋಧನೆಗೆ, ಪ್ರಚಾರಕ್ಕೆ, ಪ್ರವರ್ಧನೆಗೆ ಮತ್ತು ಸಮೂಹ ಶಿಕ್ಷಣಕ್ಕೆ ಕಡೆದಂತಹ ಶಿಲ್ಪಗಳು. ಇವು ಪೂಜಾ ವಿಧಿಗಳಾಗಿ ಮಾಡಿದಂಥವುಗಳಲ್ಲ. ಹೀಗಾಗಿ ಇವುಗಳ ರಚನೆಯಲ್ಲಿ, ರೂಪಣೆಯಲ್ಲಿ ವೈವಿಧ್ಯ ಇದೆ. ಶಿಲ್ಪಿಯ ನಿರೂಪಣಾ ಕೌಶಲವಿದೆ. ರಚನಾ-ರೂಪಣಾ ಸ್ವಾತಂತ್ರ್ಯವಿದೆ. ಧಾರ್ಮಿಕ ಶಿಲ್ಪಗಳ ಕಂಡರಣೆಯಲ್ಲಿ ಮೂರು ವಿಧಗಳನ್ನು ಗಮನಿಸಬಹುದು. ಅವುಗಳೆಂದರೆ ಸ್ಥಾನಕ, ಆಸೀನ ಮತ್ತು ಶಯನ ಮೂರ್ತಿಗಳು. ಮೂರನೆಯದು ಅಪರೂಪ. ಕೇವಲ ವಿಷ್ಣು ಮಾತ್ರ ಈ ರೂಪದಲ್ಲಿ ಅಪರೂಪವಾಗಿ ಕಾಣಬರುತ್ತಾನೆ. ಸ್ಥಾನಕ ಮೂರ್ತಿಗಳು ಹೆಚ್ಚು ಮತ್ತು ಆಸೀನ ಮೂರ್ತಿಗಳು ಸಂಖ್ಯೆಯಲ್ಲಿ ಸ್ವಲ್ಪ ಕಡಿಮೆ. ಹಿಂದು, ಜೈನ ಪಂಥದ ಸಕಲ ದೇವಾಧಿದೇವತೆಗಳು, ಉಪದೇವತೆಗಳು, ಯಕ್ಷ ಗಂಧರ್ವ, ಅಪ್ಸರೆ, ಗಣ, ಕಿನ್ನರ ಇತ್ಯಾದಿಯಾಗಿ ಎಲ್ಲರೂ ಹೊಯ್ಸಳ ಶಿಲ್ಪಗಳಲ್ಲಿ ಕಾಣಬರುತ್ತಾರೆ. ಇವುಗಳಲ್ಲದೆ ಅನೇಕ ಸಾಮಾಜಿಕ ಅರೆಧಾರ್ಮಿಕ ವ್ಯಕ್ತಿಗಳೂ ಅಲ್ಲಲ್ಲಿ ಕಾಣಬರುತ್ತಾರೆ.

ಶಿಲ್ಪಗಳ ವಸ್ತು ವಿಷಯ ವೈವಿಧ್ಯಮಯವಾಗಿದ್ದರೂ ಶಿಲ್ಪಗಳ ಲಕ್ಷಣ, ಅಂಗರಚನೆ, ಅಲಂಕರಣ ಸಾಮಾನ್ಯವಾಗಿ ಒಂದೇ ಶೈಲಿಯ ಛಾಪನ್ನು ಹೊಂದಿರುತ್ತದೆ. ಆದ್ದರಿಂದ ಶೈಲಿಯ ಆಧಾರದ ಮೇಲೆ ಹೊಯ್ಸಳ ಶಿಲ್ಪವನ್ನು ಸುಲಭವಾಗಿ ಗುರುತಿಸಬಹುದು. ಆದರೆ ಇದೇ ಆಧಾರದ ಮೇಲೆ ಶಿಲ್ಪದ ಕಾಲವನ್ನು ನಿರ್ಧರಿಸುವುದು ಕಷ್ಟ. ಶುದ್ಧವೋ-ಅಶುದ್ಧವೋ ಅಲಂಕೃತವೋ ನಿರಾಲಂಕೃತವೋ ಸುಂದರವೋ ಅಲ್ಲವೋ ಇವೆಲ್ಲವೂ ಶಿಲ್ಪಿಯ ಸಾಮರ್ಥ್ಯ ಹಾಗೂ ಅಭಿರುಚಿಯನ್ನು ಅರಿಯಲು ಸಹಕಾರಿಯಾಗುವುದು.

ಹೊಯ್ಸಳ ಶಿಲ್ಪಗಳ ಅಂಗರಚನೆಯಲ್ಲಿ ಗಮನಾರ್ಹವಾಗಿ ಕಾಣಬರುವ ಅಂಶವೆಂದರೆ ಪುರುಷ ಶಿಲ್ಪಗಳು ಪೌರುಷ, ಗಾಂಭೀರ್ಯದಿಂದಲೂ ಸ್ತ್ರೀ ರೂಪಗಳು ಲಾಲಿತ್ಯದಿಂದಲೂ ಕೂಡಿರುವುದು. ಸಾಮಾನ್ಯವಾಗಿ ಹೊಯ್ಸಳ ಶಿಲ್ಪಗಳೆಲ್ಲವೂ ಕೆಲವು ಸಾಮಾನ್ಯ ಲಕ್ಷಣಗಳನ್ನು ಹೊಂದಿರುತ್ತವೆ. ಎಲ್ಲ ಶಿಲ್ಪಗಳ ಮುಖಗಳೂ ಸಾಮಾನ್ಯವಾಗಿ ವೃತ್ತಾಯತಾಕಾರದ ಮುಖವನ್ನು ಹೊಂದಿರುತ್ತವೆ. ಕಿರಿದಾದ ನೀಳನೇತ್ರ, ಉದ್ದವಾದ ಬಿಲ್ಲಿನಾಕಾರದ ಹುಬ್ಬು, ಮೊನಚಾದ ನಾಸಾದಂಡ, ಸ್ಥೂಲೋಷ್ಠ, ಸಣ್ಣ ಬಾಯಿ, ಗಿಡ್ಡಾದ ದಪ್ಪ ಕುತ್ತಿಗೆ, ಮಿತ ಕಟಿಯುಳ್ಳ ದಷ್ಟ-ಪುಷ್ಟವಾದ ದೇಹ ಮುಂತಾದವು ಈ ಶಿಲ್ಪಗಳ ಮುಖ್ಯ ಲಕ್ಷಣಗಳು. ಸಾಲಭಂಜಿಕೆಯರನ್ನು ಬಿಟ್ಟು ಇತರ ಸ್ತ್ರೀ ಶಿಲ್ಪಗಳಿಗೂ ಮೇಲಿನ ಲಕ್ಷಣಗಳು ಅನ್ವಯಿಸುತ್ತವೆ. ಆದರೆ ದೇಹಸೌಷ್ಠವ ಮಾತ್ರ ಸ್ವಲ್ಪ ತೆಳ್ಳಗೂ ಲಾಲಿತ್ಯ, ಲಾವಣ್ಯಪೂರ್ಣವೂ ಆಗಿರುತ್ತದೆ. ಆಭರಣಾಲಂಕಾರಗಳು ಎಲ್ಲ ಶಿಲ್ಪಗಳಿಗೂ ಸಾಂಪ್ರದಾಯಿಕವೂ ಸಮರೀತಿಯವೂ ಮತ್ತು



ಜಾಲಂಧ್ರ, ಸೋಮೇಶ್ವರ ದೇವಾಲಯ, ಬಂದಳಿಕೆ

ಸಿರಿವಂತಿಕೆಯಿಂದ ಕೂಡಿದವೂ ಆಗಿರುತ್ತವೆ. ದೈವೀ ಶಿಲ್ಪಗಳು ಎತ್ತರವಾದ ಕಿರೀಟ ಅಥವಾ ಕೇಶಾಲಂಕಾರ, ಕುಂಡಲಗಳು, ಅಡ್ಡಿಕೆ ಗಳು, ಹಾರಗಳು, ತೋಳ್ಬಂದಿಗಳು, ಬಳೆಗಳು, ಉಂಗುರಗಳು, ಒಡ್ಯಾಣಗಳು ಅಥವಾ ಕಟಿಬಂಧಗಳು, ಕಡಗಗಳು, ಗೆಜ್ಜೆಗಳು, ಪಾದಸರಗಳು, ಕಾಲುಂಗುರಗಳು ಮುಂತಾದ ಸಕಲಾಭರಣಗಳಿಂದ ಭೂಷಿತವಾಗಿರುತ್ತವೆ. ಈ ಸಾಂಪ್ರದಾಯಿಕ ಒಡವೆಗಳೊಂದಿಗೆ ವೈಜಯಂತಿ ಎಂಬ ವಿಶಿಷ್ಟವಾದ ಹಾರ ಸಾಮಾನ್ಯವಾಗಿ ಎಲ್ಲ ಶಿಲ್ಪಗಳಲ್ಲಿಯೂ ಕಾಣಬರುತ್ತದೆ. ಯಜ್ಞೋಪವೀತದ ರೀತಿಯಲ್ಲಿ ಶಿಲ್ಪದ ಹೆಗಲಿನಿಂದ ಮೊಣಕಾಲಿನವರೆಗೂ ಪ್ರಧಾನವಾಗಿ ಕಾಣುವ ಹಾರ ಇದು. ಎಲ್ಲ ದೇವ-ದೇವತಾ ಮೂರ್ತಿಗಳಲ್ಲಿ ಸ್ತ್ರೀ ಪುರುಷ ಶಿಲ್ಪಗಳಲ್ಲಿ ಒಂದಲ್ಲ ಒಂದು ರೀತಿ ಈ ಮಾಲೆ ಕಾಣುತ್ತದೆ. ವೈಜಯಂತಿ, ಮಣಿ ಮುತ್ತುಗಳಿಂದ, ಪುಷ್ಪದಳಗಳಿಂದ, ಪದಕ-ಸರಪಳಿಗಳಿಂದ, ಗೆಜ್ಜೆಗಳಿಂದ, ಅಪರೂಪವಾಗಿ ರುಂಡಗಳಿಂದ (ಶಾಕ್ತ ಶಿಲ್ಪಗಳಲ್ಲಿ) ರಚನೆಯಾಗಿರುತ್ತದೆ.

ಹೊಯ್ಸಳ ಶಿಲ್ಪಗಳಲ್ಲಿ ವಸ್ತ್ರಾಲಂಕರಣಕ್ಕಿಂತ ಆಭರಣಾಲಂಕಾರವೇ ಹೆಚ್ಚು. ವಸ್ತ್ರಗಳು ಸೂಚ್ಯವಾಗಿಯೂ ಸಾಂಕೇತಿಕವಾಗಿಯೂ ಇರುತ್ತದೆ. ಉತ್ತರೀಯ ಸಾಮಾನ್ಯವಾಗಿ ಕಾಣುವುದಿಲ್ಲ. ಅಂತರೀಯದ ಇಕ್ಕೆಲದ ಗಂಟುಗಳು ಮತ್ತು ಕುಚ್ಚುಗಳು ಮಾತ್ರ ಕಾಣುತ್ತವೆ. ಅಂತರೀಯವು ಕಟಿಯಿಂದ ಮೊಣಕಾಲಿನವರೆಗೂ ವಿಸ್ತರಿಸಬಹುದು. ಕೀರ್ತಿಮುಖವುಳ್ಳ ಕೊಂಡಿಪದಕ, ಸರಪಳಿ, ಮಣಿಹಾರ, ಮಣಿಗೊಂಚಲು, ಕುಚ್ಚುಗಳಿಂದ ಕೂಡಿದ ಈ ಅಂತರೀಯವು ಆಭರಣಗಳಿಂದ ಮಾಡಿದ ತುಂಡು-ಲಂಗದ ರೀತಿಯಲ್ಲಿರುತ್ತದೆ. ಕೆಲವು ಸ್ತ್ರೀ ಶಿಲ್ಪಗಳು ಸೀರೆ ಅಥವಾ ಧೋತಿಯನ್ನು ಬಿಗಿಯಾಗಿ ಉಟ್ಟಿರುವಂತೆ ಕಾಣುತ್ತವೆ.

ನೆರಿಗೆಯ ಕಸೂತಿಯ ವಿನ್ಯಾಸವನ್ನೂ ವಸ್ತ್ರಗಳ ಮೇಲೆ ಅಲ್ಲಲ್ಲಿ ಗಮನಿಸಬಹುದು. ಹೊಯ್ಸಳ ಶಿಲ್ಪಗಳು ಆಯಾಯ ಧಾರ್ಮಿಕ ಕ್ರಮದಂತೆ ವಿಶೇಷಗಳನ್ನು ಹಿಡಿದಿರುತ್ತವೆ. ಈ ವಿಶೇಷಗಳು ಆಯುಧಗಳೇ ಆಗಿರಬಹುದು ಅಥವಾ ಇನ್ನಾವುದೇ ವಸ್ತುವಾಗಿರಬಹುದು. ಆದರೆ ಪ್ರತಿಯೊಂದು ವಿಶೇಷವೂ ಅತಿ ಸೂಕ್ಷ್ಮತೆಯಿಂದ, ಬೆಡಗಿನಿಂದ ಕಂಡರಣೆಯಾಗಿರುತ್ತದೆ. ಉದಾ: ಕಮಲ ಪುಷ್ಪ, ಶಂಖ, ಚಕ್ರ, ಗದೆ, ತ್ರಿಶೂಲ, ಡಮರು ಇತ್ಯಾದಿ ಎಲ್ಲವಕ್ಕೂ ಉದ್ದವಾದ ಮಣಿ ಕುಚ್ಚುಗಳಿರುತ್ತವೆ. ಮೇಲ್ತುದಿಯಲ್ಲಿ ಕೀರ್ತಿಮುಖಗಳೂ ಇರಬಹುದು. ಹೀಗೆ ಆಯುಧಗಳು, ವಿಶೇಷಗಳು ತಮ್ಮ ನಿಜ ಸ್ವರೂಪವನ್ನೇ ಕಳೆದುಕೊಂಡಿರುವಂತೆ ತೋರುತ್ತದೆ. ಇನ್ನುಳಿದ ವಿಶೇಷಗಳಾದ ಬಿಲ್ಲು, ಬಾಣ, ಖಡ್ಗ, ಖೇಟಕ, ಮೃಗ, ಪುಸ್ತಕ, ವಜ್ರ, ವೀಣೆ, ಕೊಳಲು, ಅಕ್ಷಮಾಲೆ, ಕಳಶ ಇತ್ಯಾದಿ ಸುತ್ತಲಿನ ಅಲಂಕರಣಕ್ಕೆ ಹೊಂದಿಕೊಳ್ಳುವಂತೆ ರಚಿಸಲ್ಪಟ್ಟಿರುತ್ತದೆ.

ಭಿತ್ತಿಶಿಲ್ಪ, ಹೊಯ್ಸಳೇಶ್ವರ ದೇವಾಲಯ, ಹಳೇಬೀಡು

ಹೊಯ್ಸಳ ಶಿಲ್ಪಗಳ ವಸ್ತು-ವಿಷಯಗಳು ವೈವಿಧ್ಯಮಯವಾಗಿವೆ. ಧಾರ್ಮಿಕ, ಪೌರಾಣಿಕ, ಲೌಕಿಕ, ಹೂವು, ಬಳ್ಳಿ-ಪ್ರಾಣಿ-ಪಕ್ಷಿ ಹಾಗೂ ಆಲಂಕಾರಿಕ ವಿನ್ಯಾಸಗಳು ಒಂದಕ್ಕೊಂದು ಪೂರಕವಾಗಿ ನಿರರ್ಗಳವಾಗಿ ಕಾಣಬರುತ್ತವೆ. ಯಾವುದೇ ಅಲಂಕರಣಕ್ಕೂ ಸ್ಥಳ ನಿರ್ದಿಷ್ಟತೆ ಇದ್ದಂತೆ ಕಾಣುವುದಿಲ್ಲ. ಕೆಲವೊಂದನ್ನು ಬಿಟ್ಟು, ಎಲ್ಲವೂ ಎಲ್ಲ ಕಡೆ ಕಾಣಬರುತ್ತದೆ. ಆದರೆ ಮಿಥುನ ಶಿಲ್ಪಗಳನ್ನು, ಪ್ರಧಾನ ಭಿತ್ತಿ ಶಿಲ್ಪಗಳನ್ನಾಗಿ ಕಂಡರಿಸಿರುವುದು ಅಪರೂಪ. ಹೊಯ್ಸಳ ಶಿಲ್ಪ ಸಾಲಿನಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ಕಂಡರಣೆಯಾಗಿರುವ ಶಿಲ್ಪಗಳೆಂದರೆ, ಭಿತ್ತಿಯ ಮೇಲಿನ ಧಾರ್ಮಿಕ ಶಿಲ್ಪಗಳು. ಇಲ್ಲಿ ಪ್ರತಿಯೊಂದು ದೇವತೆಯ ಶಿಲ್ಪವೂ ಒಂದೊಂದು ವಸ್ತು. ಈ ದೇವತೆಗಳು ತಮ್ಮ ಸ್ತ್ರೀಯೊಂದಿಗೆ ಮತ್ತು ಸಹಚರ, ಅನುಚರರೊಂದಿಗೆ, ಪರಿವಾರಗಳೊಂದಿಗೆ ನಿರೂಪಿಸಲ್ಪಟ್ಟಿರುತ್ತಾರೆ. ಪರಿವಾರ ದೇವತೆ, ಸಹಚರ, ಅನುಚರರು,ಪ್ರಧಾನ ಶಿಲ್ಪಗಳ ಪಕ್ಕದಲ್ಲಿ ಸ್ವಲ್ಪ ಸಣ್ಣ ಆಕೃತಿಯಲ್ಲಿ ಅಥವಾ ಪಾದದ ಬಳಿ ಸೂಕ್ಷ್ಮಾಕೃತಿಯಲ್ಲಿ ಕಾಣಬರುತ್ತದೆ. ದೇವತಾ ಮೂರ್ತಿಗಳು ಸ್ಥಾಣಕ, ಆಸೀನ, ನೃತ್ತ, ಸಂಹಾರ, ಅಪರೂಪವಾಗಿ ಶಯನ ರೂಪದಲ್ಲಿ ಕಾಣಬರುತ್ತದೆ. ಕೆಲವು ಶಿಲ್ಪಗಳು ದೈವ ದಂಪತಿಗಳದ್ದಾಗಿರುತ್ತವೆ. ಉದಾ: ಉಮಾ-ಮಹೇಶ್ವರ, ಲಕ್ಷ್ಮೀನಾರಾಯಣ, ಸರಸ್ವತಿ-ಬ್ರಹ್ಮ, ರತಿ-ಮನ್ಮಥ, ಅಷ್ಟದಿಕ್ಪಾಲಕರು ಇತ್ಯಾದಿ. ಇವರು ತಮ್ಮ ಪತ್ನಿಯರೊಡಗೂಡಿ ಸಿಂಹಾಸನ/ವಾಹನಾರೂಢರಾಗಿರುತ್ತಾರೆ ಅಥವಾ ನಿಂತಿರುತ್ತಾರೆ ಅಥವಾ ದುಷ್ಟ ಶಕ್ತಿಗಳನ್ನು ಗೆಲ್ಲುವ ಪಾರಮ್ಯದ ದ್ಯೋತಕವಾಗಿ ಶಿವ, ವಿಷ್ಣು, ದುರ್ಗಾ, ಸರಸ್ವತಿ, ಗಣೇಶ ಮುಂತಾದ ಮೂರ್ತಿಗಳನ್ನು ಸಂಹಾರ ಭಂಗಿಯಲ್ಲಿ, ನೃತ್ಯ ಭಂಗಿಯಲ್ಲಿ ತೋರಿಸಿರುವುದು ಸಾಮಾನ್ಯ. ಈ ನೃತ್ಯಮೂರ್ತಿಗಳು ಆ ಸಮಾಜದಲ್ಲಿ ನಾಟ್ಯಕಲೆಗಿದ್ದ ಜನಪ್ರಿಯತೆಯನ್ನು ತೋರಿಸುವುದಲ್ಲದೆ, ಶಿಲ್ಪ ಸಾಲಿನ ಜಡತೆಯನ್ನು ಹೋಗಲಾಡಿಸಿ ಚಟುವಟಿಕೆಯ ಭಾವನೆಯನ್ನು ಒದಗಿಸುತ್ತದೆ. ಈ ಶಿಲ್ಪಗಳಲ್ಲಿ ಮೂರ್ತಿಯ ಪ್ರತಿಯೊಂದು ಅಂಗವೂ ಒಡವೆಯೂ ಆಯುಧ, ವಸ್ತ್ರ, ಅಲಂಕರಣ ನಿರೂಪಣೆ ಶಿಲ್ಪಕರ್ಮಿಯ ಕಾರ್ಯನೈಪುಣ್ಯವನ್ನೂ ಕೌಶಲ್ಯವನ್ನೂ ಪ್ರಬುದ್ಧತೆಯನ್ನೂ ಪ್ರತಿಬಿಂಬಿಸುತ್ತದೆ. ದೇವಾಲಯದ ಪ್ರತಿಯೊಂದು ಭಾಗದ ಮೇಲೂ ಕಾಣುವ ಅಲಂಕರಣಗಳು, ಕೆತ್ತನೆಗಳು, ಕುಶಲಕರ್ಮಿಗಳಿಗೆ ಸೂಕ್ಷ್ಮ ಶಿಲ್ಪಕಲೆಯ ಮೇಲಿದ್ದ ವ್ಯಾಮೋಹ ಮತ್ತು ಗೀಳನ್ನು ಪ್ರಕಟಿಸುತ್ತವೆ.

ಹೊಯ್ಸಳ ಶಿಲ್ಪಕಲೆಯಲ್ಲಿ ನಮ್ಯತೆಯನ್ನು ಅತ್ಯಂತ ಪ್ರಭಾವಯುತವಾಗಿ, ಉತ್ಕೃಷ್ಟವಾಗಿ ಪ್ರದರ್ಶಿಸುವ ಶಿಲ್ಪಗಳೆಂದರೆ ಸಾಲಭಂಜಿಕೆಯರ ಶಿಲ್ಪಗಳು, ಸೂಚ್ಯವಾಗಿ ಮದನಿಕೆಯರ ಶಿಲ್ಪಗಳೆಂದು ಕರೆಯಲ್ಪಡುವ ಈ ಶಿಲ್ಪಗಳು ಸಂಪೂರ್ಣ ಶಿಲ್ಪವಾಗಿದ್ದು, ಕೆಲವನ್ನು ಹೊರತುಪಡಿಸಿ, ಸ್ತ್ರೀ ಸೌಂದರ್ಯದ ಆಡಂಬರ, ಬೆಡಗು, ಬಿನ್ನಾಣದ ವಿವಿಧ ರೂಪಗಳನ್ನೂ ಮುಖಗಳನ್ನೂ ಪ್ರತಿಬಿಂಬಿಸುತ್ತವೆ. ಲತಾಕುಂಜದ ಕಮಾನಿನ ಪ್ರಭಾವಳಿಯ ಛಾಯೆಯಲ್ಲಿ, ವಿವಿಧ ಭಾವ-ಭಂಗಿಗಳಲ್ಲಿ ಸುಂದರ ತರುಣಿಯರು ರೂಪಿಸಲ್ಪಟ್ಟಿದ್ದಾರೆ. ಈ ತರುಣಿಯರು ಹೊರಹೊಮ್ಮಿಸುವ ರಸ ಮುಖ್ಯವಾಗಿ ಶೃಂಗಾರ, ಜೊತೆಗೆ ಸ್ತ್ರೀ ಸೌಂದರ್ಯ ಲಾವಣ್ಯ. ಈ ಶಿಲ್ಪಗಳಲ್ಲಿ ಕೆಲವು ನಗ್ನವಾಗಿದ್ದರೂ ಕಾಮುಕವಾಗಿಲ್ಲ, ಭೋಗಲಾಲಸೆಯಿಂದ ಕೂಡಿದ್ದರೂ ಅಶ್ಲೀಲವಾಗಿಲ್ಲ. ಇವುಗಳ ನಿರೂಪಣೆಯ ಪ್ರಧಾನ ವಸ್ತು ಸೌಂದರ್ಯವೇ ಹೊರತು ಮೈಥುನ ಭಾವವಲ್ಲ. ಸಾಲಭಂಜಿಕೆಯರ ಈ ಶಿಲ್ಪಗಳು ನಿಸ್ಸಂದೇಹವಾಗಿ ಹೊಯ್ಸಳ ಓಜರ ಮೇರು ಕೃತಿಗಳೇ ಹೌದು. ಇವರು ತಮ್ಮ ಈ ಸೃಷ್ಟಿಗಳಲ್ಲಿ ತಮ್ಮ ಹಸ್ತಾಕ್ಷರಗಳನ್ನು ಹಾಕಿದ್ದಾರೆ. ಈ ಸುಂದರ ವಿಗ್ರಹಗಳು ಹೊಯ್ಸಳ ಕಲಾಕೂಟದ ಅತ್ಯುತ್ತಮ ಶಿಲ್ಪಗಳಿಂದ ಕೆತ್ತನೆಗೊಳ್ಳುತ್ತಿದ್ದವು. ಕ್ಲುಪ್ತ ಅಲಂಕರಣ, ನಾಜೂಕಾದ ಸೂಕ್ಷ್ಮ ಕೆತ್ತನೆಗಳು, ಸ್ತ್ರೀ ಮೈಮಾಟದ ಆಕರ್ಷಣೆ ಮತ್ತು ನಮ್ಯತೆ, ಬೆಡಗು-ಬಿನ್ನಾಣಗಳಿಂದ ಕೂಡಿದ ಈ ಮದನಿಕೆಯರ ಶಿಲ್ಪಗಳು ಭಾರತೀಯ ಶಿಲ್ಪಕಲಾ ಪರಂಪರೆಯಲ್ಲಿ ಹೊಯ್ಸಳ ಕಲಾ ಕೂಟಗಳಿಗೆ ವಿಶೇಷ ಸ್ಥಾನ ನೀಡಿವೆ.

ಶಿಲ್ಪಿಗಳು: ತಮ್ಮ ಸೃಜನ ವೈಶಿಷ್ಟ್ಯದಿಂದ, ಶಿಲೆಯಲ್ಲಿ ಅದ್ಭುತ ಕಲಾಕೃತಿಗಳನ್ನು ಸೃಷ್ಟಿಸಿದ ಕುಶಲ ಶಿಲ್ಪಿಗಳನ್ನು ಉಲ್ಲೇಖಿಸದಿದ್ದರೆ ಹೊಯ್ಸಳ ಕಲಾ ಇತಿಹಾಸವೇ ಅಪೂರ್ಣವೆನಿಸುವುದು. ಅದೃಷ್ಟವಶಾತ್ ಈ ಶಿಲ್ಪಿಗಳು ತಾವು ಕೊರೆದ ಶಿಲ್ಪಗಳ, ವಾಸ್ತುಭಾಗಗಳ ಅಡಿಗಳಲ್ಲಿ ತಮ್ಮ ಹೆಸರುಗಳನ್ನು ಕೊರೆದಿರುವುದರಿಂದ ಕೆಲವಾರು ಹೊಯ್ಸಳ ಶಿಲ್ಪಿಗಳ ಹೆಸರುಗಳು, ಅವರ ಕಲಾ ಕೂಟಗಳು, ಶ್ರೇಣಿ, ಸಂಘಗಳು ಇತ್ಯಾದಿಗಳ ಬಗ್ಗೆ ಅಲ್ಪ-ಸ್ವಲ್ಪ ಮಾಹಿತಿ ದೊರಕುತ್ತದೆ. ದಾಸೋಜ ಮತ್ತು ಅವನ ಮಗ ಚಾವಣ, ಹಾಗೆಯೇ ಕೇದಾರೋಜ, ಕಾಳಿದಾಸ, ದೇಮೋಜ ಮಾಬಣ, ಚಂದಯ್ಯ, ಇತ್ಯಾದಿ ಅನೇಕ ಶಿಲ್ಪಿಗಳ ಹೆಸರುಗಳು ಉಳಿದಿವೆ. ಕೆಲವು ಶಿಲ್ಪಿಗಳು ತಮ್ಮ ಹೆಸರಿನ ಜೊತೆಗೆ ತಮ್ಮ ಸಂಘದ ಹೆಸರನ್ನೂ ಬರೆದಿದ್ದಾರೆ. ಹರಿಪನೆಂಬ ಶಿಲ್ಪಿ ಸರಸ್ವತೀಸರಣದಾಸನಾಗಿದ್ದ. ಅಂದರೆ ಸರಸ್ವತೀ ಗಣಕ್ಕೆ ಸೇರಿದ್ದವನು. ಈ ಶಿಲ್ಪಿಗಳು ಹೊಸ-ಹೊಸ ಕಾರ್ಯಗಳ, ಕೆಲಸಗಳ, ಒಪ್ಪಂದಗಳ ಮೇರೆಗೆ ಸ್ಥಳದಿಂದ-ಸ್ಥಳಕ್ಕೆ ವಲಸೆ ಹೋಗುತ್ತಿದ್ದರು. ದಾಸೋಜ ಬಳ್ಳಿಗಾವೆಯವನು. ಚಿಕ್ಕಮಗಳೂರು ಜಿಲ್ಲೆಯ ಅಮೃತಾಪುರದಲ್ಲಿ 1197ರಲ್ಲಿ ಕೆಲಸ ನಿರ್ವಹಿಸಿದ ಮಲ್ಲಿತಂಮ ಸು.1250 ರಲ್ಲಿ ಜಾವಗಲ್ಲು, ಗೋವಿಂದನಹಳ್ಳಿಯಲ್ಲಿ ಕೆಲಸ ನಿರ್ವಹಿಸಿ, 1268ರಲ್ಲಿ ಮೈಸೂರು ಜಿಲ್ಲೆಯ ಸೋಮನಾಥಪುರದ ಕೇಶವ ದೇವಾಲಯದ ಪ್ರಧಾನ ಶಿಲ್ಪಿಯಾಗಿ ಕಾರ್ಯ ನಿರ್ವಹಿಸಿದ. 1170 ರ ಹಾರಹಳ್ಳಿ ದೇವಾಲಯದಲ್ಲಿ ಈತ ಕಡೆದ ಶಿಲ್ಪಗಳಿವೆ. ಹೊಯ್ಸಳ ಶಿಲ್ಪಿಗಳ ಹಸ್ತಾಕ್ಷರವಿರಲೀ ಇಲ್ಲದಿರಲೀ ಒಬ್ಬ ಓಜನ ಕೆಲಸಕ್ಕೂ ಇನ್ನೊಬ್ಬ ಓಜನ ಕೆಲಸಕ್ಕೂ ವ್ಯತ್ಯಾಸ ಗುರುತಿಸುವುದು ಕಷ್ಟ. ಶಿಲ್ಪ ಕಂಡರಣೆಯಲ್ಲಿ ಶಿಲ್ಪಿಗಳ ವೈಯಕ್ತಿಕ ಛಾಪಿಗಿಂತಲೂ ಶೈಲಿ ಲಕ್ಷಣಗಳಿಗೆ ಹೆಚ್ಚು ಒತ್ತು ಕೊಡುತ್ತಿದ್ದಂತೆ ಕಂಡು ಬರುತ್ತದೆ.

ಹೊಯ್ಸಳ ಆಳಿಕೆಯಲ್ಲಿ ನಿರ್ಮಾಣವಾದ ದೇಗುಲಗಳು, ಬಸದಿಗಳು ಅವರ ರಾಜ್ಯದ ಉದ್ದಗಲಕ್ಕೂ ಹರಡಿವೆ. ಮೂರು ಶತಮಾನಕ್ಕೂ ಹೆಚ್ಚು ಕಾಲ ರಾಜ್ಯವಾಳಿದ ಹೊಯ್ಸಳರು ರಚಿಸಿರುವಷ್ಟು ದೇವಾಲಯಗಳನ್ನು, ಚೋಳರನ್ನು ಬಿಟ್ಟರೆ ಭಾರತದ ಇನ್ನಾವುದೇ ರಾಜವಂಶ ಕಟ್ಟಿಸಿಲ್ಲ ಎನ್ನುವುದು ಗಮನಿಸಬೇಕಾದ ಅಂಶ. ಶೆಟ್ಟರ್ ಅವರ ಪ್ರಕಾರ ಹೊಯ್ಸಳರು ರಾಜ್ಯವಾಳಿದ ಸು.200 ವರ್ಷಗಳ ಕಾಲದಲ್ಲಿ (1100-1300) ನಿರಂತರವಾಗಿ ದೇವಾಲಯ ನಿರ್ಮಾಣ ಕಾರ್ಯ ನಡೆಯಿತು. ಈ ಅವಧಿಯಲ್ಲಿ 1521 ದೇಗುಲಗಳ ನಿರ್ಮಾಣವಾದವು. ಅಂದರೆ ವರ್ಷವೊಂದಕ್ಕೆ ಸರಾಸರಿ ಎಂಟು ದೇವಾಲಯಗಳು ನಿರ್ಮಾಣಗೊಂಡವು. ಈ ದೇವಾಲಯಗಳು ಶೈವ, ವೈಷ್ಣವ ಮತ್ತು ಜೈನ ಪಂಥಗಳದ್ದಾಗಿವೆ. ಇವುಗಳಲ್ಲಿ 965 ಶಿವನಿಗೂ 293 ವಿಷ್ಣುವಿಗೂ 173 ಜೈನರಿಗೂ 54 ಶಾಕ್ತ ದೇವತೆಗೂ 12 ಸೂರ್ಯನಿಗೂ 11 ಹರಿಹರನಿಗೂ ಮತ್ತು 5 ಬ್ರಹ್ಮನಿಗೂ ಅರ್ಪಿತವಾಗಿವೆ. ಇಷ್ಟು ದೇವಾಲಯಗಳಲ್ಲಿ ಪ್ರಸ್ತುತ 434 ದೇವಾಲಯಗಳು ವಿವಿಧಾವಸ್ಥೆಯಲ್ಲಿ ಒಟ್ಟು 238 ಸ್ಥಳಗಳಲ್ಲಿ ಉಳಿದುಬಂದಿವೆ.

(ಎಂ.ಎಸ್.ಕೆ.)

**ಮಾನಸೋಲ್ಲಾಸ:** ಹೊಯ್ಸಳ ದೇವಾಲಯಗಳಲ್ಲಿಯ ಶಿಲಾಬಾಲಿಕಾ ಶಿಲ್ಪಗಳ ಬಗೆಗೆ ಮಾನಸೋಲ್ಲಾಸ ಗ್ರಂಥದಿಂದ ಹೆಚ್ಚು ಅರ್ಥಗರ್ಭಿತ ವಿವರಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಗ್ರಂಥದಲ್ಲಿ ಹೇಳಿರುವಂತೆ ರಾಣಿಯರು ಶೌರ್ಯವರ್ಧಿಸುವ ಉತ್ಸಾಹ ತುಂಬುವ ಬಿಲ್ಲುವಿದ್ಯೆಯಲ್ಲಿ ಪರಿಣಿತರಾಗಿದ್ದರು. ಧನುರ್ವಿದ್ಯೆ ಯುದ್ಧವಿದ್ಯೆಯ ಒಂದು ಭಾಗ. ಕ್ರೀಡೆಯ ರೂಪದಲ್ಲಿ ರಾಜರ ಜೊತೆ ರಾಣಿಯರೂ ಬೇಟೆಗೆ ಹೋಗುತ್ತಿದ್ದುದರಿಂದ ಅವರಿಗೆ ಬಿಲ್ಲು ಬಾಣಗಳನ್ನು ಉಪಯೋಗಿಸುವ ಕ್ರಮಗಳನ್ನು ಕಲಿಸಲಾಗುತ್ತಿತ್ತು. ಬಾಣ ಹೂಡುತ್ತಿರುವ ಸ್ತ್ರೀ ಶಿಲ್ಪಗಳು, ಚಾಳುಕ್ಯ ಹಾಗೂ ಹೊಯ್ಸಳ ಶಿಲ್ಪಗಳ ಪ್ರಿಯ ವಸ್ತುವಾಗಿತ್ತು. ರಾಣಿಯರ ಬಿಲ್ಲು ವಿದ್ಯೆಯ ಚತುರತೆಯನ್ನು ಕೇಂದ್ರ ಗುರಿಗೆ ಬಾಣಹೊಡೆಯುವ ಹಾಗೂ ಚಲಿಸುವ ವಾಹನದಿಂದ ಗುರಿಸಾಧಿಸುತ್ತಿರುವ ಶಿಲ್ಪಗಳ ಮೂಲಕ ತಿಳಿಯಪಡಿಸುತ್ತಿದ್ದರು. ಇದರ ಒಂದು ಉದಾಹರಣೆಯನ್ನು ಬೇಲೂರು ಚನ್ನಕೇಶವ ದೇವಾಲಯದ ಅಪ್ಸರ ಶಿಲಾಬಾಲಿಕೆಯ ವಿಗ್ರಹದಲ್ಲಿ ಕಾಣಬಹುದು. ವೀರಭಂಗಿಯಲ್ಲಿ ಅಪ್ಸರೆ ಹಕ್ಕಿಗಳಿಗೆ ಬಾಣಯೊಡೆಯುತ್ತಿರುವ ದೃಶ್ಯ ಮತ್ತು ಮೂರ್ತಿಯ ಕೆಳಗಿರುವ ಕುಬ್ಜ ಪರಿಚಾರಿಕೆಯ ಕೈಯಲ್ಲಿ ಬತ್ತಳಿಕೆ ಹಿಡಿದಿರುವುದನ್ನು ಕಾಣಬಹುದು.

**ಬೇಟೆ (ಶಿಕಾರಿ):** ಈ ಗ್ರಂಥದ 5ನೆಯ ಪ್ರಕರಣದ 292 ಶ್ಲೋಕಗಳು 21 ಪ್ರಕಾರದ ಚಳಿಗಾಲದ ಕ್ರೀಡಾಬೇಟೆಗಳ ಬಗ್ಗೆ ವಿವರಣೆ ನೀಡುತ್ತವೆ. ರಾಜ ಪರಿವಾರದವರು ರಾಜಧಾನಿಯಿಂದ ದೂರವಲ್ಲದ ರಕ್ಷಿತ ಅರಣ್ಯಗಳಲ್ಲಿ ದುಷ್ಟ ಹಾಗೂ ಕ್ರೂರ ಮೃಗಗಳನ್ನು ಹೊರತುಪಡಿಸಿ ಮೃದುಸ್ವಭಾವದ ಜಿಂಕೆ, ಕಡವೆ, ಮೊಲ, ನವಿಲು ಮತ್ತು ಅನೇಕರೀತಿಯ ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು. ಸ್ತ್ರೀಯರು ದ್ವಿಪದಿಗಳೆಂಬ ಹಸುರು ಬಣ್ಣದ ಚಲ್ಲಣವನ್ನು ಧರಿಸಿ ಬೇಟೆಯಕ್ರೀಡೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಮಾನಸೋಲ್ಲಾಸದಲ್ಲಿ ದೀಪಮೃಗವೆಂಬ ಬೇಟೆಯ ಕ್ರೀಡೆಯನ್ನು ವರ್ಣಿಸಲಾಗಿದೆ. ಸಂಸ್ಕೃತದಲ್ಲಿ ದೀಪ ಎಂದರೆ ಪ್ರಕಾಶಿಸುವುದು, ಉದ್ರೇಕಿಸುವುದು, ಉತ್ತೇಜಿಸುವುದು ಎಂಬ ಅರ್ಥವಿದೆ. ಪುಷ್ಟವಾದ ಸುಂದರಕಣ್ಣುಗಳುಳ್ಳ, ಚಿಕ್ಕಪ್ರಾಯದ ಹೆಣ್ಣುಜಿಂಕೆಯನ್ನು ಶಬ್ದದ ಸಂಜ್ಞೆಗಳಿಗೆ ಪ್ರತಿಕ್ರಿಯಿಸಲು ತರಬೇತು ಕೊಡಲಾಗುತ್ತಿತ್ತು ಮತ್ತು ಅದನ್ನು ದೀಪಮೃಗವೆಂದು ಗುರುತಿಸುತ್ತಿದ್ದರು. ಇಂತಹ ಜಿಂಕೆಗೆ ಕುದುರೆಗೆ ಹಾಕುವಂತೆ ಕಡಿವಾಣ ಹಾಕಿ ಬೇಟೆಗೆ ಕರೆದೊಯ್ಯುತ್ತಿದ್ದರು. ಆಮಿಷವಾಗಿ ಇದನ್ನು ಒಡ್ಡಿ ಕಾಡಿನ ಜಿಂಕೆಗಳೊಂದಿಗೆ ಬೆರೆಯಲು ಬಿಡುತ್ತಿದ್ದರು. ಸನ್ನೆಯ ಕೂಗು ಕೇಳಿದಾಕ್ಷಣ, ಯಜಮಾನನಲ್ಲಿಗೆ ಓಡಿಬಂದಾಗ, ಅದನ್ನು ಹಿಂಬಾಲಿಸಿಬಂದ ಕಾಡುಜಿಂಕೆಗಳನ್ನು ಬೇಟೆಯಾಡುತ್ತಿದ್ದರು. ದೀಪಮೃಗ ಬೇಟೆಯಾಡುವಲ್ಲಿ ತೊಡಗಿರುವ ರಾಣಿ ಚಿತ್ರದಲ್ಲಿ ಒಬ್ಬಳು ಸ್ತ್ರೀ ಬಾಣ ಬಿಡುತ್ತಿರುವುದನ್ನೂ ದೀಪಮೃಗವನ್ನು ಕಡಿವಾಣದೊಂದಿಗೆ ಎಡಗೈಲಿ ಹಿಡಿದು, ಬಲಗೈಯಲ್ಲಿ ಬಾಣಗಳ ಬತ್ತಳಿಕೆಯನ್ನು ಹಿಡಿದ ಪರಿಚಾರಿಕೆಯ ಕುಬ್ಜ ಸಖಿಯವಿಗ್ರಹ ಈ ಮೂವರನ್ನು ಕಾಣಬಹುದು. ಇಬ್ಬರು ಸ್ತ್ರೀಯರೂ ಧರಿಸಿರುವ ಚಿಕ್ಕ ದ್ವಿಪದಿ ಚಲ್ಲಣದಲ್ಲಿ ಎಲೆಗಳ ಕೆತ್ತನೆ ಇದ್ದು, ಹಸುರುಬಣ್ಣದ್ದು ಎಂದು ಸೂಚಿಸಲಾಗಿದೆ. ಮುಖ್ಯ ವಿಗ್ರಹದ ಸ್ತ್ರೀ ಮೇಲ್ದರ್ಜೆಯವಳು ಎಂದು ತೋರಿಸಲ್ಪಟ್ಟ ಬ್ರಹ್ಮಸೂತ್ರವನ್ನು (ಯಜ್ಞೋಪವೀತ) ಬಿಡಿಸಿದ್ದಾರೆ ಮತ್ತು ಕೆಳಗಿರುವ ಸಖಿ ಇದನ್ನು ಧರಿಸಿಲ್ಲ.



ಡೋಲು ಬಾರಿಸುವವರು, ಹಳೇಬೀಡು

ಮದ್ದಲೆ ಬಾರಿಸುತ್ತಿರುವ ಯಕ್ಷ, ಸೋಮನಾಥಪುರ

ಪಾನೀಯಜ ಮತ್ತೊಂದು ಕ್ರೀಡೆ. ಬೆಳದಿಂಗಳ ರಾತ್ರಿಯಲ್ಲಿ ರಾಣಿ ತನ್ನ ಸಖಿಯರೊಡನೆ ಕೆರೆ ಅಥವಾ ನದಿಯ ದಡದಲ್ಲಿ ಮರದ ಪೊಟರೆಯಲ್ಲಿ ಅವಿತಿರುತ್ತಿದ್ದಳು. ನೆನೆಸಿದ ಕಾಳುಗಳನ್ನೂ ಸೊಪ್ಪನ್ನೂ ಹರಡಿ ಜಿಂಕೆಗಳನ್ನು ಆಕರ್ಷಿಸುತ್ತಿದ್ದರು. ನೀರು ಕುಡಿಯಲು ಅಥವಾ ಕಾಳು ತಿನ್ನಲು ಬಂದ ಜಿಂಕೆಗಳನ್ನು ಬೇಟೆಯಾಡುತ್ತಿದ್ದರು. ಬೇಟೆಯಾಟದಲ್ಲಿ ಆದ ಕಾಲಿನ ಗಾಯಗಳಿಗೆ ಪ್ರಥಮ ಚಿಕಿತ್ಸೆ ನೀಡುತ್ತಿರುವ ಸಖಿ ಮತ್ತು ಕೊಂದ ಮೃಗಗಳನ್ನು ಕೋಲಿಗೆ ಕಟ್ಟಿ ಸಾಗಿಸುವ ದೃಶ್ಯಗಳನ್ನು ಇಂತಹ ಧನುರ್ವಿದ್ಯೆಯ ಶಿಲ್ಪಗಳಲ್ಲಿ ನೋಡಬಹುದು.

ವನಕ್ರೀಡೆ: ರಾಜ ಮನೆತನದವರು ವನದಲ್ಲಿ ಆಡುತ್ತಿದ್ದ ಕ್ರೀಡೆಗಳ ಬಗ್ಗೆ ವಿವರಣೆಯುಂಟು. ಅರಮನೆಯಿಂದ ಸ್ವಲ್ಪದೂರದ ವನದಲ್ಲಿ ಹಲಸು, ಮಾವು, ಬಾಳೆ, ದಾಳಿಂಬೆ ಮೊದಲಾದ ಆಯ್ದರೀತಿಯ ಫಲವೃಕ್ಷಗಳು ಹಾಗೂ ಮಲ್ಲಿಗೆ, ಸಂಪಿಗೆ, ಬಕುಳ ಮುಂತಾದ ಸುವಾಸನೆಯುಕ್ತ ಗಿಡಮರಗಳನ್ನು ವನದಲ್ಲಿ ಬೆಳೆಸಲಾಗುತ್ತಿತ್ತು. ರಾಜರು ತಮ್ಮ ಆಯ್ದ ಅಂತಃಪುರದ ಸ್ತ್ರೀಯರೊಡನೆ ವಿಹರಿಸಿ, ಇಚ್ಛೆಸಿದ ಹಣ್ಣುಹೂವುಗಳನ್ನು ಸೇವಿಸಿ ಸಂತೋಷಿಸುತ್ತಿದ್ದರು. ಅಪ್ಸರೆಯಂಥ ಸ್ತ್ರೀ ಹಣ್ಣು ಕೀಳುತ್ತಿರುವ ದೃಶ್ಯ, ವನದ ಲತಾಗೃಹದಲ್ಲಿ ವಿವಿಧ ರೀತಿಯ ಹೂಬಳ್ಳಿಗಳಿದ್ದು, ವಸಂತ ಋತುವಿನಲ್ಲಿ ರಾಣಿಯರು ಹೂಗಳನ್ನು ಕಿತ್ತು ಮಾಲೆ ಮತ್ತು ಹೂಗುಚ್ಛಗಳನ್ನು ತಯಾರಿಸಿ ತಮ್ಮನ್ನು ಅಲಂಕರಿಸಿಕೊಳ್ಳುತ್ತಿದ್ದರು. ರಾಜನ ಕಿವಿ, ಕೈ, ಕೂದಲು, ಕುತ್ತಿಗೆಗಳಲ್ಲಿ ಹೂವಿನಮಾಲೆಯಿಂದ ಅಲಂಕರಿಸುತ್ತಿದ್ದರು. ಒಬ್ಬಳು ಸುಂದರಿ ಕೈಯಲ್ಲಿ ಹೂವೊಂದನ್ನು ಹಿಡಿದು ಅದು ಕಿವಿಯ ಆಭರಣವಾಗಿ ಹೇಗೆ ಕಾಣುತ್ತದೆಂದು ನೋಡಲು ಉತ್ಸುಕಳಾಗಿದ್ದಾಳೆ. ಹಣೆಯ ಮೇಲ್ಭಾಗದಲ್ಲೂ ಹೂವಿನಿಂದ ಅಲಂಕರಿಸಿಕೊಂಡಿದ್ದಾಳೆ. ಬಲಭಾಗದಲ್ಲಿರುವ ಪರಿಚಾರಿಕೆ ಅವಳಿಗೆ ಕನ್ನಡಿಯನ್ನು ತೋರಿಸುತ್ತಿದ್ದಾಳೆ ಹಾಗೂ ಎಡಭಾಗದಲ್ಲಿರುವ ಪರಿಚಾರಿಕೆ ರಾಣಿಯ ಅಲಂಕಾರಕ್ಕೆ ಮಾಲೆಯನ್ನೂ ಹಿಡಿದು ನಿಂತಿದ್ದಾಳೆ. ಸಿಂಗಾರದ ಅನಂತರ ವನದಲ್ಲಿ ಕಣ್ಣುಮುಚ್ಚಾಲೆ ಹಾಗೂ ಉಯ್ಯಾಲೆಯಾಟ ಆಡಿ ಆನಂದಿಸುತ್ತಿದ್ದರು.

ಜಲಕ್ರೀಡೆ: ಗ್ರೀಷ್ಮ ಋತುವಿನ ಬೇಸಗೆಯ ಕಾಲದಲ್ಲಿ ರಾಜಪರಿವಾರದವರ ಜಲಕ್ರೀಡೆಗಾಗಿ ಕೃತಕ ಜಲಪಾತ ಮತ್ತು ಸರೋವರವನ್ನು ನಿರ್ಮಿಸುತ್ತಿದ್ದರು. ಇಂತಹ ಧಾರಾಗೃಹಗಳನ್ನು ಪರದೆಗಳಿಂದ ಹೇಗೆ ಆವೃತಗೊಳಿಸುತ್ತಿದ್ದರೆಂಬ ಬಗೆಯನ್ನು ಮಾನಸೋಲ್ಲಾಸದಲ್ಲಿ ವಿಶದವಾಗಿ ವಿವರಿಸಲಾಗಿದೆ. ಸೋಪಾನಬಾವಿಗ ಳಲ್ಲಿ ಧಾರಾಗೃಹಕ್ಕೆ ಆವಶ್ಯಕವಾದ ನೀರನ್ನು ಸಂಗ್ರಹಿಸುತ್ತಿದ್ದರು. ರಾಣಿ ಯರ ಮನರಂಜನೆಗೆ ಯಂತ್ರಚಾಲಿತ ನೀರಿನ ಬುಗ್ಗೆಗಳು, ಕೃತಕ ಜಲಪಾತ ಗಳು ಮತ್ತು ಪ್ರಾಣಿಯಾಕೃತಿಯ ಮೂಲಕ ನೀರಿನ ಪ್ರವಾಹ ಹರಿದು ಬರುವಂತೆ ನಿರ್ಮಿಸಲಾಗುತ್ತಿತ್ತು. ಬೇಸಗೆಯ ಮತ್ತೊಂದು ಕ್ರೀಡೆ–ಸೇಚನಕ್ರೀಡೆ. ಈ ಕ್ರೀಡೆಗೆ ರಾಜ ಉನ್ನತ ಪದವಿಯ ಗೌರವಪೂರ್ಣ ಅತಿಥಿಗಳನ್ನು ಹಾಗೂ ಅಂತಃಪುರದ ಸ್ತ್ರೀಯರನ್ನು ಆಹ್ವಾನಿಸುತ್ತಿದ್ದ. ಸುಗಂಧಿತ ಶೀತಲ ಜಲವನ್ನು ಚಿನ್ನ ಹಾಗೂ ಬೆಳ್ಳಿಯ ದೊಡ್ಡ ಬೋಗುಣಿಯಲ್ಲಿ ತುಂಬಿಸಿಟ್ಟು, ನೀರೆರೆಚಲು, ಚಿನ್ನ, ಬೆಳ್ಳಿಯ ಪಿಚಕಾರಿಗಳನ್ನು ಮತ್ತು ಹಸುವಿನ ಕೊಂಬುಗಳನ್ನು ಅಣಿಯಾಗಿಡುತ್ತಿದ್ದರು. ಕ್ರೀಡೆಯ ಪ್ರಾರಂಭೋತ್ಸವವನ್ನು ಸುಂದರ ಯೌವ್ವನೆಯರು ಹಳದಿ, ಕೆಂಪು, ಚಂದನ ಮತ್ತು ಶ್ರೀಗಂಧದ ನೀರನ್ನು ರಾಜನಿಗೆ ಎರಚುವುದರ ಮೂಲಕ ಪ್ರಾರಂಭಿಸಿ ಅನಂತರ ಸರ್ವರೂ ನೀರೆರಚುವ ಸೇಚನ ಕ್ರೀಡೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ರಾಣಿಯೊಬ್ಬಳು ನೀರನ್ನು ಪಿಚಕಾರಿಯಿಂದ ಹೊಡೆಯುತ್ತಿರುವುದನ್ನು ಕಾಣಬಹುದು. ಎಡಪಕ್ಕದಲ್ಲಿ ಒಬ್ಬ ಪುರುಷ ನೀರನ್ನು ಪಿಚಕಾರಿಗೆ ತುಂಬುತ್ತಿದ್ದಾನೆ. ಬಲಪಕ್ಕದಲ್ಲಿ ಒಬ್ಬ ಪುರುಷ ಒಂದು ಪಾತ್ರೆಯಿಂದ ರಾಣಿಗೆ ನೀರೆರಚುತ್ತಿದ್ದಾನೆ. ಸ್ತ್ರೀ ಪುರುಷರು ಸಂಕೋಚವಿಲ್ಲದೆ ಮುಕ್ತವಾಗಿ, ನೀರೆರಚಿ ಆನಂದಿಸುತ್ತಾ ಗ್ರೀಷ್ಮದ ಬೇಗೆಯನ್ನು ತಣಿಸುತ್ತಿರುವ ದೃಶ್ಯ ಕುತೂಹಲವನ್ನು ಕೆರಳಿಸುತ್ತದೆ. ಈ ಕ್ರೀಡೆಯನ್ನೆ ತೋರಿಸುವ ಬೇಲೂರಿನ ಮತ್ತೊಂದು ಶಿಲ್ಪದಲ್ಲಿ ರಾಣಿ ತನ್ನ ಕೂದಲಿನ ನೀರನ್ನು ತೆಗೆಯುತ್ತಿರುವ ಹಾಗೂ ಅವಳ ಸಖಿಯರು ಕನ್ನಡಿ ಮತ್ತು ಹೂವಿನ ಮಾಲೆಯೊಂದಿಗೆ ನಿಂತಿರುವುದನ್ನೂ ಶಿಲ್ಪಿಸಲಾಗಿದೆ. ಇದರಂತೆ ರಾಜಪರಿವಾರದವರು ಮತ್ತು ಸಾಮಾನ್ಯ ಪ್ರಜೆಗಳು ಸೇರಿ ಕೋಳಿ, ಟಗರು, ಕೋಣನ ಕಾಳಗಗಳು ಮತ್ತು ಬಯಲುರಂಗದಲ್ಲಿಯ ಕೋಲಾಟಗಳಿಂದ ಪರಸ್ಪರ ಒಡನಾಡುತ್ತಿದ್ದರು.

ಸಾಲಭಂಜಿಕೆಯರ ಪರಿಚಾರಕರು, ಬೇಲೂರು

**ಮುದ್ದಿನ ಸಾಕುಪ್ರಾಣಿಗಳು:** ಮುದ್ದು ಸಾಕುಪ್ರಾಣಿಗಳನ್ನು ಬೆಳೆಸುವುದು ರಾಣಿವಾಸದವರ ಮತ್ತೊಂದು ಪ್ರಿಯ ಹವ್ಯಾಸವಾಗಿತ್ತು. ಹಲವಾರು ಶಿಲಾಬಾಲಿಕೆಯ ಶಿಲ್ಪದಲ್ಲಿ ರಾಣಿ ತನ್ನ ಗಿಣಿಯೊಡನೆ ಮಾತಾಡುವ ದೃಶ್ಯ ಹಾಗೂ ಅದಕ್ಕೆ ದಾಸಿಯರು ನೀಡುತ್ತಿರುವ ಚಿಕ್ಕ ಹಣ್ಣಿನ ಗೊಂಚಲು ಮತ್ತು ರಾಣಿಯ ಹಾರದೊಡನೆ ಆಟವಾಡುತ್ತಿರುವ ಗಿಣಿ ಮುಂತಾದ ಚಿತ್ರಣವನ್ನು ಸುಂದರವಾಗಿ ಕಲ್ಲಿನಲ್ಲಿ ಕೆತ್ತಿದ್ದಾರೆ. ಮಾನಸೋಲ್ಲಾಸದಲ್ಲಿ ಸಂದೇಶವಾಹಕ ಪಾರಿವಾಳದ ಬಗ್ಗೆಯೂ ವಿವರಗಳಿವೆ. ಪಳಗಿದ ಗಂಡುಪಾರಿವಾಳದ ಕುತ್ತಿಗೆಗೆ ಲಕೋಟೆಯನ್ನು ಕಟ್ಟಿ ಹಾರಿಬಿಡಲಾಗುತ್ತಿತ್ತು. ಸಂದೇಶ ತಲುಪಬೇಕಾದ ಸ್ಥಳದಲ್ಲಿ ಅದರ ಸಹಪಾಟಿ ಹೆಣ್ಣು ಪಾರಿವಾಳವನ್ನು ಇಡಲಾಗುತ್ತಿತ್ತು. ರಾಣಿಯ ಬಲಗೈ ಮೇಲೆ ಕುಳಿತಿರುವ ಪಾರಿವಾಳವನ್ನು ಮತ್ತು ಎಡಗೈಯಲ್ಲಿ ದಾರದೊಂದಿಗಿರುವ ಲಕೋಟೆಯನ್ನೂ ನೋಡಬಹುದು. ಸಣ್ಣ ಪ್ರಾಯದ ಸಖಿಯೊಬ್ಬಳು ಬಿಗಿಯಾದ ಚಲ್ಲಣತೊಟ್ಟು, ರಾಣಿಯ ಲಕೋಟೆಯ ದಾರವನ್ನು ಬಿಡಿಸಲು ಸಹಾಯ ಮಾಡುತ್ತಿದ್ದಾಳೆ. ಹಲವಾರು ಶಿಲಾಬಾಲಿಕೆಯರಲ್ಲಿ ಸಾಕಿದ ಕೋತಿಯೊಂದಿಗಿರುವ ರಾಣಿಯ ಚಿತ್ರಣವನ್ನೂ ಕಾಣಬಹುದು.

**ಲಲಿತಕಲೆಗಳು:** ಪ್ರಕರಣದ 10–34ನೆಯ ಅಧ್ಯಾಯದಲ್ಲಿ ಗೀತ ವಿನೋದದ ಬಗ್ಗೆ ಹೇಳಲಾಗಿದೆ. ಗೀತವಿನೋದ, ಸಂಗೀತ, ನೃತ್ಯ, ನಾಟಕ, ಸಾಹಿತ್ಯ–ಈ 4 ವಿಧದ ಸಂಗೀತ ವಾದ್ಯಗಳು, ರಾಗ–ತಾಳಗಳ ವೈವಿಧ್ಯತೆಗಳು, ವಾದ್ಯಗಳ ತಾಡನಕ್ರಮ ಇವೆಲ್ಲದರ ಬಗ್ಗೆ ತಿಳಿಸುತ್ತದೆ. 950–1400 ಶ್ಲೋಕದ ವರೆಗೆ 450 ಶ್ಲೋಕಗಳಲ್ಲಿ ನೃತ್ಯದ ಕ್ಲಿಷ್ಟ ಚಲನೆಗಳ ಬಗ್ಗೆ ವಿವರಣೆ ಇದೆ. ರಾಜರು ಮತ್ತು ರಾಣಿಯರು ನಾಟ್ಯಶಾಸ್ತ್ರದಲ್ಲಿ ಪರಿಣಿತರಾಗಿರುತ್ತಿದ್ದರು ಹಾಗೂ ಈ ದೈವಿಕ ಕಲೆಗಳನ್ನೂ ಆಸ್ವಾದಿಸುತ್ತಿದ್ದರು. ನರ್ತಕಿಯರು ತತ ಹಾಗೂ ಅವನದ್ಧ ವಾದ್ಯಗಳನ್ನು ಎತ್ತಿಹಿಡಿದು ಲೀಲಾ ಜಾಲವಾಗಿ ನರ್ತಿಸುತ್ತ ನುಡಿಸುತ್ತಿರುವ ಅನೇಕ ಶಿಲ್ಪಗಳನ್ನು ಚನ್ನಕೇಶವ ದೇವಾಲಯದಲ್ಲಿ ನೋಡಬಹುದು.

**ಕಥಾವಿನೋದ:** ಈ ಗ್ರಂಥದಲ್ಲಿ ಉಲ್ಲೇಖಿತವಾಗಿರುವಂತೆ ರಾಜಮನೆತನದವರು ಕಥಾವಿನೋದಗಳಲ್ಲಿ ತಲ್ಲೀನರಾಗುತ್ತಿದ್ದರು. ರಾಣಿಯರು ನಾಟ್ಯಶಾಸ್ತ್ರದಲ್ಲಿರುವಂತೆ ನಾಟಕೀಯ ಸನ್ನಿವೇಶಗಳನ್ನು ಅಭಿನಯಿಸುತ್ತಿದ್ದರು. ರಾಜ ತನ್ನ ರಾಣಿಯರ ಮೂಲಕ ಪೌರಾಣಿಕ ಮತ್ತು ದಂತಕಥೆಗಳ ನಿರೂಪಣೆಯನ್ನು ಕೇಳಿ ಪ್ರೋತ್ಸಾಹಿಸುತ್ತಿದ್ದ. ಇದು ಇಬ್ಬರ ಸಂಭಾಷಣೆಯ ಸ್ವರೂಪದಲ್ಲಿ ದ್ವಿವಕ್ತ್ರ ಎಂದು ನಾಲ್ಕು ಜನರು ಮಂಡಿಸಿದಾಗ ಚತುರ್ಮುಖ ಎಂದೂ ಕರೆಯಲ್ಪಡುತ್ತಿತ್ತು. ಒಬ್ಬ ನರ್ತಕಿ ಭೈರವಿಯಂತೆ ಅಲಂಕರಿಸಿಕೊಂಡು, ಇದಕ್ಕೆ ಸಂಬಂಧಪಟ್ಟ ಕಥಾಭಾಗವನ್ನು ನಿರೂಪಿಸುತ್ತಿರುವಂತೆ ಕಾಣುತ್ತದೆ. ನರ್ತಕಿಯರ ಜೊತೆ ಕುಶೀಲವ ಎಂದು ಕರೆಯಲ್ಪಡುವ ಚತುರ ವಾದ್ಯ ಕಲಾವಿದರು ಸಹಕಾರ ನೀಡುತ್ತಿದ್ದರು. ಚಾಳುಕ್ಯ ಹಾಗೂ ಹೊಯ್ಸಳ ರಾಣಿಯರು ಬೌದ್ಧಿಕ ಚರ್ಚೆ ಮತ್ತು ವಾದವಿವಾದದಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರೆಂದು ಮಾನಸೋಲ್ಲಾಸದಲ್ಲಿ ಹೇಳಿದೆ. ರಾಣಿಯೊಬ್ಬಳು ತಾಳಪತ್ರಗಳನ್ನು ಎಡಗೈಯಲ್ಲಿ ಹಿಡಿದು, ಗ್ರಂಥ ವಿವರಣೆಯನ್ನು ನೀಡುತ್ತಿರುವ ಹಾಗೆ ಕೆತ್ತಲಾಗಿದೆ.

ಉಮಾಮಹೇಶ್ವರ, ಹಳೇಬೀಡು

ಈ ಕೃತಿಯಲ್ಲಿ ನಿರೂಪಿಸಿರುವ ರಾಜ ಮನೆತನದ ಸ್ತ್ರೀಯರ ಜೀವನಶೈಲಿ, ಕಲಾಪ್ರೇಮ, ಪ್ರಕೃತಿ ಮತ್ತು ಪ್ರಾಣಿಪ್ರೇಮ, ವೀರೋಚಿತ ಕ್ರೀಡೆಗಳು ಮತ್ತು ಇತರ ಆಮೋದ ಪ್ರಮೋದಗಳ ದೃಶ್ಯರೂಪವನ್ನು ಬೇಲೂರು ಚನ್ನಕೇಶವ ದೇವಾಲಯ ಹಾಗೂ ಇತರ ಚಾಳುಕ್ಯರ ದೇವಾಲಯಗಳಲ್ಲಿ ಕಾಣಬಹುದು. ರಾಜನ ಅಂತಃಪುರದಲ್ಲಿ ಬಹುಪತ್ನಿತ್ವ ಇದ್ದು, ಒಬ್ಬಳು ನರ್ತಕಿಯಾಗಿದ್ದರೆ, ಮತ್ತೊಬ್ಬಳು ಗಾಯಕಿ, ಇನ್ನೊಬ್ಬಳು ಬಿಲ್ಲುವಿದ್ಯೆಯ ನಿಷ್ಣಾತೆ, ಮಗದೊಬ್ಬಳು ರಾಜನನ್ನು ಜಲ–ವನಕ್ರೀಡೆಗಳಲ್ಲಿ ರಂಜಿಸುತ್ತಿದ್ದರೆಂದು ತೋರುತ್ತದೆ. (ಆರ್.ಆರ್.)

**ದೇವನರ್ತಕಿಯರು:** ದೇವಾಲಯಗಳಲ್ಲಿ ನೃತ್ಯ ಸೇವೆಯನ್ನು ಮಾಡುತ್ತಿದ್ದ ಕಲಾವಿದರು. ದೇವಾಲಯದ ಸಂಸ್ಕಾರ ಶಾಸ್ತ್ರವಿಧಿಗಳು ವಿಸ್ತಾರವಾದಾಗ ದೇವರಿಗೆ ಎರಡು ರೀತಿಯಲ್ಲಿ ಕೈಂಕರ್ಯವನ್ನು ನಡೆಸಲಾಗುತ್ತಿತ್ತು: ಅಂಗಭೋಗ, ರಂಗಭೋಗ. ಈ ಪದ್ಧತಿ ಹಿಂದಿನಿಂದ ಇದ್ದರೂ 11–12ನೆಯ ಶತಮಾನದ ಹೊತ್ತಿಗೆ ವೈಭವದ ಉಚ್ಛ್ರಾಯ ಘಟ್ಟವನ್ನು ಕಂಡಿತು. ಅಂಗಭೋಗವೆಂದರೆ ದೇವತಾ ಮೂರ್ತಿಗೆ ಅಭಿಷೇಕ, ಅಲಂಕರಣ, ಧೂಪ ದೀಪಾರ್ಚನೆ ಮತ್ತು ನೈವೇದ್ಯವನ್ನು ಸಂಪನ್ನಗೊಳಿಸುವುದು. ರಂಗಭೋಗವೆಂದರೆ ಪೂಜಾರಿಗಳು ಹೂಕಾರರು ಕಲಾವಿದರು ಮೊದಲಾದವರ ಸಹಾಯದಿಂದ ನಿರ್ವಹಿಸಲಾಗುತ್ತಿದ್ದ ಸೇವೆ. ವಿಶೇಷವಾಗಿ ಸಂಗೀತನರ್ತನಾದಿ ಸೇವೆ. ದೇವಾಲಯದ ದೇವರನ್ನು ದೇವ ಅತಿಥಿ ಎಂದು ಪರಿಗಣಿಸಿ ಅಂಗಭೋಗ ರಂಗಭೋಗಗಳನ್ನು ನಡೆಸಲಾಗುತ್ತಿತ್ತು. ರಂಗಭೋಗವನ್ನು ಅರ್ಪಿಸುತ್ತಿದ್ದ ಸ್ಥಳ ನವರಂಗ. ಇದರ ಆಯಾಮವನ್ನು ಸ್ವಲ್ಪ ಎತ್ತರಿಸುತ್ತಿದ್ದರು, ಸೇವೆಗಳನ್ನು ವೀಕ್ಷಿಸಲು ಜನರಿಗೋಸ್ಕರ ಕಕ್ಷಾಸನಗಳನ್ನು ನಿರ್ಮಿಸಲಾಗುತ್ತಿತ್ತು. ರಂಗಭೋಗ ಎಲ್ಲ ದೇವಾಲಯಗಳಲ್ಲೇನೂ ನಡೆಯುತ್ತಿರಲಿಲ್ಲ. ರಂಗಭೋಗ ನಡೆಯುವ ದೇವಸ್ಥಾನಗಳಲ್ಲಿ ಪ್ರತಿಭಾನ್ವಿತ ಸಂಗೀತ, ನೃತ್ಯ ರಂಗ ಕಲಾವಿದರು ಇರಬೇಕಾಗುತ್ತಿತ್ತು. ಹೊಯ್ಸಳ ದೇವಾಲಯದ ರಂಗಮಂಟಪಗಳು ಪ್ರಮುಖ ದೇವಾಲಯದ ಪ್ರಾಂಗಣದ ಒಳಗೇ ನಿರ್ಮಿತವಾಗಿವೆ. ನಾಟ್ಯಶಾಲಾ, ನೃತ್ಯ ಮಂಟಪ, ನೃತ್ಯ ಗೀತೆಗಳ ಬಗೆಗೆ ಕೆಲವು ಶಾಸನೋಲ್ಲೇಖಗಳಿವೆ. ದೇವಾಲಯದ ಕಲಾವಿದರನ್ನು ವಿದ್ವಾಂಸರೆಂದು ಕರೆದಿರುವುದುಂಟು. ಉದಾ: ಮಂಡುಬ್ಬೆ ಸಿದ್ಧನಾಥನ ದೇವಾಲಯದ ಶಿಲಾಶಾಸನದಲ್ಲಿ ನೃತ್ಯಕಲಾವಿದರನ್ನು ಲಚ್ಚನಿ ಎಂದೂ ಸಂಗೀತ ಕಲಾವಿದರನ್ನು ಪಾಡುವಿನರ್ ಎಂದೂ ತಾಡನವಾದ್ಯಕಾರರನ್ನು ಸವಗನಿ ಎಂದೂ ಕೊಳಲು ವಾದಕರನ್ನು ಪಾತ್ರ ಎಂದೂ ಕರೆದಿದೆ.

ರಂಗಭೋಗದ ಸೇವೆ ಪ್ರಾಯಶಃ ವಂಶಪಾರಂಪರ್ಯವಾಗಿತ್ತು. ಆದರೆ ನೃತ್ಯಕಲಾವಿದರಿಗೆ ಸಂಗೀತಗಾರರಾಗುವ ಅಥವಾ ಮತ್ತ್ಯಾವುದಾದರೂ ಕೈಂಕರ್ಯ ನಡೆಸುವ ಸ್ವಾತಂತ್ರ್ಯ ಇತ್ತು. ರಂಗಭೋಗ ಸೇವೆಯಲ್ಲಿ ಪಾತ್ರಕ್ಕೆ ಗಾಯಕರು ಹಾಗೂ ವಾದಕರಿಗೆ ಗೌರವದ ಸ್ಥಾನ ಹಿಂದಿನಿಂದಲೂ ಇತ್ತು. ಯುವಾನ್ ಚಾಂಗ್ ದೇವಾಲಯ ನರ್ತಕಿಯರ ಬಗ್ಗೆ ದಾಖಲಿಸಿದ್ದಾನೆ. ನಟುವ (ನಟುವಾಂಗ ಕಲಾವಿದ) ಪ್ರಮುಖ ಗುರುವಾಗಿದ್ದು ಕಾರ್ಯಕ್ರಮ ಅವನ ನೇತೃತ್ವದಲ್ಲಿ ನಡೆಯುತ್ತಿತ್ತು. ಈತ ನಾಟ್ಯಶಾಸ್ತ್ರದಲ್ಲಿ ಘನ ವಿದ್ವಾಂಸನಾಗಿರಬೇಕಾಗಿತ್ತು.

ನೃತ್ಯ ಸಂಗೀತ ಕಲೆಗಳಲ್ಲಿ ನಿಷ್ಣಾತರಾಗಿದ್ದ ಹೊಯ್ಸಳ ರಾಣಿಯರಿಂದ ದೇವಾಲಯದಲ್ಲಿ ನೃತ್ಯ ಕಲೆಗೆ ಪ್ರೋತ್ಸಾಹ ಮತ್ತು ಉತ್ತೇಜನ ಸಿಕ್ಕಿತು. ಹೊಯ್ಸಳ ದೇವಾಲಯಗಳಲ್ಲಿರುವ ಶಿಲಾಬಾಲಿಕೆಯರ ಕೆತ್ತನೆ ಹೊಯ್ಸಳ ದೇವಾಲಯಗಳಲ್ಲಿ ನೃತ್ಯಕ್ಕೆ ಇದ್ದ ಮಹತ್ತ್ವವನ್ನು ವಿಶದಪಡಿಸುತ್ತದೆ. ಪ್ರಸಿದ್ಧ ರಾಣಿ ಶಾಂತಲದೇವಿ ಸಾಹಿತ್ಯ, ಸಂಗೀತ ನೃತ್ಯಗಳಲ್ಲಿ ವಿಶಾರದೆಯಾಗಿದ್ದಳು. ಶಾಸನವೊಂದು ಈಕೆಯನ್ನು ಭರತಾಗಮಭವನನಿಹಿತಮಹನೀಯ ಮತಿ ಪ್ರದೀಪೆ ಎಂದು ಬಣ್ಣಿಸುತ್ತದೆ. ಶ್ರವಣಬೆಳಗೊಳದ ಶಿಲಾಶಾಸನದಲ್ಲಿ ಗೀತ ವಾದ್ಯ ನೃತ್ಯ ಸೂತ್ರಧಾರಿ ಎಂದು ಕರೆದಿದೆ. ಇದರಿಂದ ಶಾಂತಲದೇವಿ ಸ್ವತಃ ಕಲಾವಿದಳಾಗಿರುವ ಜೊತೆಗೆ ನೃತ್ಯ ಸಂಗೀತ ಕಾರ್ಯಕ್ರಮಗಳ ವ್ಯವಸ್ಥಾಪಕಳೂ ಆಗಿದ್ದಳೆಂದು ತಿಳಿದುಬರುತ್ತದೆ. ರಾಜಮನೆತನದವರು ನೃತ್ಯ ಸಂಗೀತ ಕಲಾವಿದರಾಗಿರುತ್ತಿದ್ದರು. ಕಲೆ ಅವರಲ್ಲಿ ಒಂದು ರೀತಿಯಲ್ಲಿ ಪಾರಂಪರಿಕವಾಯಿತು. ಹೀಗಾಗಿ ದೇವಾಲಯಗಳಲ್ಲಿ ನೃತ್ಯ ಶಿಲ್ಪಗಳು ಹೇರಳವಾಗಿದ್ದು ರಾಜಪರಿವಾರದವರ ಕಲಾಸಕ್ತಿಯನ್ನು ತೋರಿಸುತ್ತದೆ. ಪಾತ್ರ ಎಂದರೆ ನೃತ್ಯ ಮತ್ತು ಸಂಗೀತದಲ್ಲಿ ಪರಿಣಿತಿ ಪಡೆದ ವ್ಯಕ್ತಿ ದೇವತಾ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸಬೇಕಾಗಿತ್ತು. ದೇವಾಲಯವನ್ನು ಶುಭ್ರವಾಗಿ ಅಲಂಕರಿಸುವ ಕಾರ್ಯವನ್ನು ಸೂಳೆ ನಿರ್ವಹಿಸಬೇಕಾಗಿತ್ತು. ರಂಗಸೇವೆ ಮಾಡಲು ಬಂದವರನ್ನು ಪಾತ್ರ ಎಂದು ಕರೆಯುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಪಾತ್ರಳನ್ನು ದಿವ್ಯ ಸ್ತ್ರೀ ಎನ್ನುತ್ತಿದ್ದರು. ಏಕೆಂದರೆ ಅವಳ ಜೀವನ ಭಗವಂತನ ಸೇವೆಗೆ ಮುಡಿಪಾಗಿತ್ತು. ದೇವಾಲಯದಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನೃತ್ಯ ಮತ್ತು ಸಂಗೀತಸೇವೆಯೇ ಪ್ರಮುಖವಾಗಿತ್ತು. ನರ್ತಕಿ ಪುರಾಣಕಥೆಗಳನ್ನು ಮಾತ್ರ ಆರಿಸಿಕೊಂಡು ನಾಟ್ಯಾಂಶವನ್ನು ಅಭಿನಯಸುತ್ತ ದೇವರಿಗೆ ಪೂಜೆ ಸಲ್ಲಿಸುತ್ತಿದ್ದಳು. ಕಥೆಯ ಬೇರೆ ಬೇರೆ ಪಾತ್ರಗಳನ್ನು ಅವಳೊಬ್ಬಳೇ ಅಭಿನಯಿಸುತ್ತ ನರ್ತಿಸುತ್ತಿದ್ದುದರಿಂದ ಪಾತ್ರ ಎಂಬ ಹೆಸರನ್ನು ಪಡೆದಳು. ದೇವಾಲಯದಲ್ಲಿ ದಿನಕ್ಕೆ ಎರಡು ಅಥವಾ ಮೂರು ಬಾರಿ ದೇವರಿಗೆ ನೃತ್ಯ ಸೇವಾ ಕೈಂಕರ್ಯ ನಡೆಸುವುದು ಅವರ ಕೆಲಸವಾಗಿತ್ತು. ನರ್ತಕಿಯರು ಮದ, ಚಾಮರ, ಪಾತ್ರ, ಕಂಬ, ಓಲಗ ಮೊದಲಾದ ಸೇವಾ ಕಾರ್ಯಗಳಿಗೆ ನಿಯುಕ್ತಿಗೊಳ್ಳುತ್ತಿದ್ದರು. ನಗವಾಸದ (ನರ್ತಿಸುವುದು, ಚಾಮರ ಬೀಸುವುದರ ಬಗ್ಗೆ ತರಬೇತಿ ನೀಡುವ ಜಾಗ) ಬಗ್ಗೆ ಶಾಸನವೊಂದು ಉಲ್ಲೇಖಿಸುತ್ತದೆ. ನಗವಾಸದ ಪ್ರಮುಖ ವ್ಯವಸ್ಥಾಪಕಿಯನ್ನು ಮೊಖರೀತಿ ಎಂದು ಕರೆಯುತ್ತಿ ದ್ದರು. ನಗವಾಸಕ್ಕೆ ದೊರೆಯುತ್ತಿದ್ದ 300 ಗದ್ಯಾಣದಲ್ಲಿ ಮೊಖರೀತಿಗೆ 30 ಗದ್ಯಾಣಗಳು ಸಂದಾಯವಾಗುತ್ತಿದ್ದವು. ನಂದಿಕೇಶ್ವರನ ಅಭಿನಯ ದರ್ಪಣದಲ್ಲಿ ನಾಟ್ಯಮ್ ಕನ್ನಾಟಕಂ ಚೈವ ಪೂಜ್ಯಂ ಪೂರ್ವ ಕಥಾಯುತಂ ಎಂದು ಹೇಳಿದೆ. ನಾಟ್ಯದಲ್ಲಿ ಪುರಾಣ ಉಪನಿಷತ್ ಪ್ರಸಿದ್ಧ ಕಥೆಗಳನ್ನು ಅಭಿನ ಯಿಸಬೇಕು ಎನ್ನಲಾಗಿದೆ. ದೇವನರ್ತಕಿಯರು ರಾಮಾಯಣ, ಮಹಾಭಾರ ತದ ಕಥೆಗಳನ್ನು ಅಭಿನಯಿಸುತ್ತಿದ್ದರು. ಹಾಗೆಯೇ ಶಿವಲೀಲ, ಕೃಷ್ಣಲೀಲ ಕಥೆಗಳನ್ನು ಸಹಿತ ಅಭಿನಯಿಸುತ್ತಿದ್ದರು. ಈ ಕಥೆಗಳಲ್ಲಿ ಅಡಗಿರುವ ಭಕ್ತಿ ಮತ್ತು ವೇದಾಂತಸಾರಗಳನ್ನು ಜನಸಾಮಾನ್ಯರಿಗೆ ನೃತ್ಯ ಸಂಗೀತದ ಮೂಲಕ ಅರ್ಥೈಸುತ್ತಿದ್ದರು. ನೃತ್ಯ ಸಂಬಂಧಿತ ಶಿಲಾ ಫಲಕಗಳು ನರ್ತಕಿಜನ ಸಮೂಹದೆದುರು ನರ್ತಿಸುತ್ತಿರುವುದನ್ನು ತೋರಿಸುತ್ತದೆ. (ಆರ್.ಇ.)

ಮದನಿಕಾ ಶಿಲ್ಪ

**ಸ್ವಾರಸ್ಯ:** ಕಲೆ ಮತ್ತು ವಾಸ್ತುಶಿಲ್ಪ ಬೆಳವಣಿಗೆಯಲ್ಲಿ ಹೊಯ್ಸಳರ ಕೊಡುಗೆ ಅಪಾರ. ಇವರ ಕಾಲದ ನಿರ್ಮಿತಿಗಳಲ್ಲಿ ಅಂದು ಅಸ್ತಿತ್ವದಲ್ಲಿದ್ದ ದ್ರಾವಿಡ ಶೈಲಿಯ ಮತ್ತು ರೇಖಾ–ನಾಗರ–ಪ್ರಾಸಾದ ಶೈಲಿಯ ಅಂಶಗಳನ್ನು ಹಿತಮಿತವಾಗಿ ಬಳಸಿಕೊಂಡು ತಮ್ಮದೇ ಆದ

ವಿಶಿಷ್ಟ ಅಲಂಕರಣ ಚಾತುರ್ಯದೊಂದಿಗೆ ಸುಲಲಿತವಾಗಿ ಸಿಂಗರಿಸಿರುವುದನ್ನು ಅವರ ಅನೇಕ ಅಲಂಕೃತ ದೇಗುಲಗಳಲ್ಲಿ ಕಾಣಬಹುದು. ಉಳಿದ ರಾಜಮನೆತನಕ್ಕೆ ಹೋಲಿಸಿದಲ್ಲಿ ಇವರ ಕಾಲದಲ್ಲಿ ಸು.400ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹೊಯ್ಸಳ ಶೈಲಿಯ ಅಥವಾ ಅವರ ಕಾಲದ ಸಾಧಾರಣ ಮತ್ತು ಅಲಂಕೃತ ದೇಗುಲಗಳು ವಿವಿಧ ಸಂರಕ್ಷಿತ ಹಂತದಲ್ಲಿವೆ. ಕಾಲ, ನೆಲೆ, ಮಾಧ್ಯಮ ಮತ್ತು ವಸ್ತು ಇವರ ಕಲೆಯನ್ನು ರೂಪಿಸುವಲ್ಲಿ ಅಗಾಧ ಪರಿಣಾಮವನ್ನು ಬೀರಿವೆ.

ಸ್ಥಳೀಯ ಮತ್ತು ನೆರೆಯ ಕಲ್ಯಾಣ ಚಾಳುಕ್ಯರ ರಾಜ್ಯದಿಂದ ಬಂದಿದ್ದ ವಾಸ್ತು ಶಿಲ್ಪಿಗಳು ಮತ್ತು ಕುಶಲಕರ್ಮಿಗಳು ಒಂದು ಕಡೆ ಕಲ್ಯಾಣ ಚಾಳುಕ್ಯರ ವಾಸ್ತುಶೈಲಿ ಮತ್ತೊಂದು ಕಡೆ ಗಂಗರ ಶಿಲ್ಪ ಶೈಲಿಯ ರೂಪುರೇಷೆ, ಅಲಂಕರಣ ಅಂಶಗಳನ್ನು ಅಳವಡಿಸಿಕೊಂಡು ತಮ್ಮದೇ ಆದ ವಿಶಿಷ್ಟ ಪೂರ್ವಯೋಜಿತ ತಲ ವಿನ್ಯಾಸದಲ್ಲಿ ಮತ್ತು ಅಲಂಕರಣ ಚಾತುರ್ಯದಿಂದ ದೇಗುಲಗಳ ನಿರ್ಮಾಣ ಮಾಡಿದರು. ಈ ನಿಟ್ಟಿನಲ್ಲಿ ಕಲ್ಲುಕಟಿಗನ ಚಿಮ್ಮಟಿಗೆಯ ಹೊಡೆತಕ್ಕಿಂತ ಬಡಗಿಯ ಕುಸುರಿ ಕೆಲಸವೇ ಎದ್ದು ಕಾಣುತ್ತದೆ. ಈ ಶೈಲಿಯ ನಿರ್ಮಿತಿಯಲ್ಲಿ ಬಹುತೇಕವಾಗಿ ಉಪಯೋಗಿಸಿದ ನುಣುಪಾದ ಹಾಗೂ ಮೃದುವಾದ ಬಳಪದ ಕಲ್ಲು (ಶಿಸ್ಟ್) ಕೆತ್ತನೆಯ ಕಾಲಕ್ಕೆ ಮೃದುವಾಗಿದ್ದು ಅನಂತರ ಪೆಡಸಾಗುತ್ತದೆ.

ಹೊಯ್ಸಳ ದೇವಾಲಯದ ಮಾದರಿಗಳನ್ನು ಅವಲೋಕಿಸಿದಾಗ, ಅವುಗಳ ಕೃತಿಯಲ್ಲಿ ಅಥವಾ ನಿರ್ಮಾಣದಲ್ಲಿ ದೇಗುಲಗಳಿಗೆ ಅಡಿಪಾಯ-ಔನ್ನತ್ಯ ನೀಡುವ ಜಗತಿ, ಗರ್ಭಗೃಹ, ಮಹಾಮಂಟಪ ಮತ್ತು ಮುಖ ಮಂಟಪಗಳನ್ನು ಅಳವಡಿಸಿರುವ ನಕ್ಷತ್ರಾಕಾರದ ಅಥವಾ ಮೂಲೆ ಮುರಿದ ಚೌಕಾಕಾರದ ತಲವಿನ್ಯಾಸ, ಮುಖ್ಯ ದೇವಾಲಯದ ಅಧಿಷ್ಠಾನ ಭಾಗದಲ್ಲಿ ಅಳವಡಿಸಿರುವ ಅಲಂಕೃತ ಪಟ್ಟಿಕೆಗಳು, ತಲ ವಿನ್ಯಾಸವನ್ನು ಆಧರಿಸಿ ನಿರ್ಮಿಸಿದ ಮೂರ್ತಿ ಶಿಲ್ಪಗಳ ಭಿತ್ತಿ ಇತರ ಶೈಲಿಯ ದೇವಾಲಯಗಳಿಗಿಂತ ಭಿನ್ನವಾಗಿವೆ. ಸುಂದರ ಭಿತ್ತಿ ಶಿಲ್ಪಗಳನ್ನು ಮಳೆ, ಬಿಸಿಲಿನಿಂದ ರಕ್ಷಿಸಲು ಅಳವಡಿಸಿರುವ ಉಪ-ಕಪೋತ ಅದರ ಮೇಲೆ ಅನೇಕ ಬಗೆಯ ಅಲಂಕೃತ ಶಿಖರ ಮಾದರಿಗಳಿಂದ ಕೆತ್ತಲ್ಪಟ್ಟ ಉಳಿದ ಭಿತ್ತಿ ಮತ್ತದರ ಮೇಲೆ ಸಜ್ಜುಗೊಳಿಸಲಾದ ಭಾರವಾದ ಸಜ್ಜಾ ದೇಗುಲದ ಉನ್ನತ ಪರಿಮಾಣವನ್ನು ಪೂರೈಸುತ್ತದೆ. ಗರ್ಭಗೃಹದಿಂದ ಸುಕನಾಸಿಯವರೆಗೆ, ಶಿಖರದ ಮೊದಲನೆಯ ತಳವನ್ನು ವಿಸ್ತರಿಸಿರುವುದರ ಜೊತೆಗೆ ಶಿಖರದ ಇತರ ತಳಗಳನ್ನು ಅರ್ಪಿತ ಶೈಲಿಯಲ್ಲಿ ಸಂಯೋಜಿಸಿ ಅದರ ಮೇಲೆ ವಿನ್ಯಾಸಕ್ಕೆ ತಕ್ಕಂತೆ ಸ್ತೂಪಿಸಲಾಗಿದೆ ಮತ್ತು ಕಲಶಗಳನ್ನು ಅಳವಡಿಸಲಾಗಿದೆ. ಅನೇಕ ದೇಗುಲಗಳಲ್ಲಿ ಶಿಖರದ ಪ್ರಥಮ ತಳವನ್ನು ಮಹಾಮಂಟಪ ಹಾಗೂ ಮುಖ ಮಂಟಪದ ಮೇಲ್ಛಾವಣಿಯವರೆಗೂ ವಿಸ್ತರಿಸಿ ಅದರ ಶಾಲ, ಕೂಟ ಮತ್ತು ಪಂಜರದ ಗುಡುಗಳಲ್ಲಿ ಯಕ್ಷ, ಯಕ್ಷಿ, ಮತ್ತಿತರ ದೇವಾನುದೇವತೆಗಳ ಶಿಲ್ಪಗಳಿಂದ ಅಲಂಕರಿಸಲಾಗಿದೆ. ಈ ರೀತಿಯ ಶಿಲ್ಪಗಳ ಚಿತ್ರಣವನ್ನು ಶಿಖರದಲ್ಲಿಯೂ ಕಾಣಬಹುದು. ದೇಗುಲದ ಹೊರಭಾಗದಲ್ಲಿ ಅಳವಡಿಸಿದ ಸೂಕ್ಷ್ಮಶಿಲ್ಪಕಲಾ ಪ್ರೌಢಿಮೆಯನ್ನು ಒಳಭಾಗದಲ್ಲಿ ಗರ್ಭಗೃಹದಲ್ಲಿ ಮೂಲ ದೇವತಾ ವಿಗ್ರಹದಲ್ಲಿ, ಬಾಗಿಲುವಾಡದ ದ್ವಾರಶಾಖೆಗಳು ಮತ್ತು ಅವುಗಳನ್ನಾಧರಿಸಿ ನಿಂತ ತೋಳೆಗಳಲ್ಲಿ, ಬಹು ಅಲಂಕೃತ ಚಾವಣಿಗಳಲ್ಲಿ/ಮಿತಾನಗಳಲ್ಲಿ (ಭುವನೇಶ್ವರಿ), ಆಭರಣಗಳ ಭಂಡಾರದಂತಿರುವ ದ್ವಾರಪಾಲಕ ವಿಗ್ರಹಗಳಲ್ಲಿ, ಬಗೆ ಬಗೆಯ ವಿನ್ಯಾಸ ಗೊಂಡಿರುವ ಯಾಂತ್ರೀಕೃತ ಸ್ತಂಭಗಳಲ್ಲಿ ಹಾಗೂ ಕಡೆಯದಾಗಿ ಮಹಾ ಮಂಟಪದ ಗೋಡೆಗಳಿಗಾನಿಸಿ ನಿರ್ಮಿಸಿರುವ ಪರಿವಾರ ದೇವತೆಗಳ ದೇವಕೋಷ್ಠಕದಲ್ಲಿ ಮೆರೆದಿದ್ದು ವಿಸ್ಮಯಗೊಳಿಸುತ್ತದೆ.



ಮದನಿಕಾ ಶಿಲ್ಪ

ಈ ಶೈಲಿಯ ಮಾದರಿಗಳಾದ ಬೇಲೂರಿನ ಚೆನ್ನಕೇಶವ ಮತ್ತು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯಗಳ ಅನುಪಮ ಕಲಾ ಸಿರಿವಂತಿಕೆ ಬೇಲೂರು ಒಳ ನೋಡು, ಹಳೇಬೀಡು ಹೊರನೋಡು ಎಂಬ ನಾಣ್ಣುಡಿಗೆ ಸಾಕ್ಷಿಯಾಗಿದೆ. ಇವರ ಕಾಲದ ಕೆಲವು ದೇಗುಲಗಳ ಹೊರನೋಟಕ್ಕೆ ಸಾಧಾರಣವೆನಿಸಿದರೂ ಒಳಭಾಗದಲ್ಲಿ ಮನೋಹರವಾದ ಕೆತ್ತನೆಗಳನ್ನು ಹೊಂದಿವೆ. ತಳ ವಿನ್ಯಾಸಗಳಲ್ಲಿ ಆ ಕಾಲಕ್ಕಾಗಲೇ ಬೆಳೆದಿದ್ದ ಶೈಲಿಯನ್ನು ಅಳವಡಿಸಿಕೊಂಡು ಏಕ ಶಿಲ್ಪಿಗಳು, ತಮ್ಮ ಅಗಾಧ ಪರಿಶ್ರಮದಿಂದ ಅನೇಕ ಮಾರ್ಪಾಟುಗಳನ್ನು ಮಾಡಿ ಬಗೆ ಬಗೆಯ ಏಕಕೂಟ (ಚೆನ್ನಕೇಶವ, ಬೇಲೂರು), ದ್ವಿಕೂಟ (ಹೊಯ್ಸಳೇಶ್ವರ, ಹಳೇಬೀಡು), ತ್ರಿಕೂಟ (ಕೇಶವ, ಸೋಮನಾಥಪುರ),ಚತುಷ್ಕೂಟ (ಲಕ್ಷ್ಮೀದೇವಿ, ದೊಡ್ಡಗದ್ದವಳ್ಳಿ) ಮತ್ತು ಪಂಚಕೂಟ (ಗೋವಿಂದನಹಳ್ಳಿ) ಪ್ರಕಾರಗಳಲ್ಲಿ ಸವಿಸ್ತಾರವಾದ ವೈಭವೋಪೇತ ನಿರ್ಮಾಣ ಮಾಡಿರುವುದು ಇಂದಿಗೂ ಅಚ್ಚರಿ ಮೂಡಿಸುತ್ತವೆ.

ಮದನಿಕಾ ಶಿಲ್ಪ

ಹೊಯ್ಸಳ ವಾಸ್ತು ಶಿಲ್ಪಗಳ ನೈಪುಣ್ಯತೆಯಿಂದ ಅನೇಕ ದೇಗುಲಗಳನ್ನು ನಕ್ಷತ್ರಾಕಾರದ ತಳವಿನ್ಯಾಸದಲ್ಲಿ ಕಾಣಬಹುದು. ಗರ್ಭಗೃಹದಲ್ಲಿ ಅಳವಡಿಸಿಕೊಂಡ ನಕ್ಷತ್ರಾಕಾರದ ತಳವಿನ್ಯಾಸವನ್ನು ಕೆಲವೊಮ್ಮೆ ಡಂಬಳದ ದೊಡ್ಡ ಬಸವಣ್ಣ ದೇವಾಲಯ, ಅರಸೀಕೆರೆಯ ಈಶ್ವರ ದೇವಾಲಯದಲ್ಲಿರುವಂತೆ ಮುಖಮಂಟಪಕ್ಕೂ ಅಳವಡಿಸಿ ಒಂದು ಅದ್ವಿತೀಯ ತಳವಿನ್ಯಾಸವನ್ನು ನೀಡಿದ್ದಾರೆ.

ಹೊಯ್ಸಳರ ಕಾಲಕ್ಕಾಗಲೇ ನಿಪುಣ ಶಿಲ್ಪಗಳ ಸುಸಂಘಟಿತವಾದ ಒಕ್ಕೂಟವಿದ್ದು (ಗಿಲ್ಡ್) ಸಂದರ್ಭಕ್ಕೆ, ತಲವಿನ್ಯಾಸಕ್ಕೆ, ಪರಿಸರಕ್ಕೆ, ಒದಗಿಸಿದ ಕಲ್ಲಿಗೆ ಮತ್ತು ನಿರ್ಮಾತೃಗಳ ಹಣದ ವ್ಯವಸ್ಥೆಗೆ ತಕ್ಕಂತೆ ತಮ್ಮ ತಮ್ಮ ಕಲಾಪ್ರೌಢಿಮೆಯನ್ನು ಮೆರೆದಿದ್ದಾರೆ. ಇವರಲ್ಲಿ ಕೆಲವರು ಒಂದಕ್ಕಿಂತ ಹೆಚ್ಚಿನ ದೇವಾಲಯಗಳ ನಿರ್ಮಾಣದಲ್ಲಿ ಭಾಗವಹಿಸಿದ್ದರೆಂಬುದಕ್ಕೆ ಅವರು ರೂಪಿಸಿದ ಶಿಲ್ಪಗಳ ನಾಮಫಲಕ ಶಾಸನಗಳೇ ಸಾಕ್ಷಿ. ಅವರವರ ಪರಿಣತಿಗೆ ತಕ್ಕಂತೆ ಅನೇಕ ಬಿರುದುಗಳಿಗೂ ಅವರು ಪಾತ್ರರಾಗಿದ್ದರು. ಅಂದಿನ ಕಾಲಕ್ಕಾಗಲೇ ಕ್ರೋಡೀಕರಿಸಿದ ಶಿಲ್ಪಶಾಸ್ತ್ರ ವೈಖಾನಸ, ಪಾಂಚರಾತ್ರ, ಶೈವ ಆಗಮನಗಳಿದ್ದು ವಾಸ್ತು ನಿರ್ಮಿತಿಯಲ್ಲಿ ಅಂದಿನ ರಚನೆಗಳನ್ನು ರೂಪಿಸಿ, ವೈಭವೀಕರಿಸಿದ ಮೂರ್ತಿಶಿಲ್ಪಗಳ ಕೆತ್ತನೆಯಲ್ಲಿ, ವಾಸ್ತು ಚಿತ್ರಣದಲ್ಲಿ ಸಮಕಾಲೀನ ಸಾಮಾಜಿಕ ಚಿತ್ರಣವನ್ನು ನವಿರಾಗಿ ಮೇಳೈಸಿ ನವರಸ, ಹಾವ, ಭಾವ ಮತ್ತು ಬಹು ಪ್ರಚಲಿತವಿದ್ದ ನರ್ತನದೊಂದಿಗೆ ಸಿಂಗರಿಸಿ ನ ಭೂತೋನ ಭವಿಷ್ಯತಿ ಎಂಬಂತೆ ಸೂಕ್ಷ್ಮ ಕೆತ್ತನೆಯಲ್ಲಿ ಅವರಿಗೆ ಸರಿಸಾಟಿಯಿಲ್ಲ ಎಂಬುದನ್ನು ಸಾಧಿಸಿ ಆಚಂದ್ರಾರ್ಕ ಸ್ಥಾನವನ್ನು ಕರ್ನಾಟಕ ಶಿಲ್ಪಶಾಸ್ತ್ರಕ್ಕೆ ನೀಡಿದ್ದಾರೆ. ಹೊಯ್ಸಳ ಶಿಲ್ಪಿಗಳು, ಬೇಲೂರಿನ ಚೆನ್ನಕೇಶವ ದೇವಾಲಯದ (1117) ಸ್ತಂಭಗಳು, ದ್ವಾರಬಂಧಗಳು, ಚಾವಣಿಯಲ್ಲಿನ ಮದನಿಕೆಯರು, ಹಳೇಬೀಡಿನ ಹೊಯ್ಸಳೇಶ್ವರ (1121), ಕೇದಾರೇಶ್ವರ (1120), ನಗರೇಶ್ವರ (1150-75) ಭಿತ್ತಿ ಶಿಲ್ಪಗಳು ಹೊಯ್ಸಳೇಶ್ವರದ ಬೃಹತ್ ನಂದಿ ವಿಗ್ರಹಗಳು, ಅಮೃತಾಪುರದ ಅಮೃತೇಶ್ವರ ದೇಗುಲದ (1286) ಮುಖ ಮಂಟಪದ ಕೆತ್ತನೆಗಳು, ಸೋಮನಾಥಪುರದ ಕೇಶವ ದೇವಾಲಯದ (1268) ಶಿಖರ ಮತ್ತು ವಿತಾನಗಳಲ್ಲಿ ತೋರಿಸಿರುವ ಸೃಜನಶೀಲ ಕೆತ್ತನೆ ಅಮೋಘ. ಇವುಗಳೆಲ್ಲಕ್ಕೂ ಕುಂದಣವಿಟ್ಟಂತೆ ಹಾಗೂ ಎಣೆಯಿಲ್ಲದ ಶಿಲ್ಪಗಳು, ಅವರು ರೂಪಿಸಿದ ಗರ್ಭಗೃಹದ ಮೂರ್ತಿಗಳು, ಸೃಷ್ಟಿಕರ್ತನ ಸೃಷ್ಟಿಯನ್ನೂ ಮೀರಿಸುವಂಥವೆಂದರೆ ಅತಿಶಯೋಕ್ತಿಯಲ್ಲ. (ಟಿ.ಎಂ.ಕೆ.)

**ಹೊಹೆನ್‌ಜಲರನ್:** ಸು.17-18ನೆಯ ಶತಮಾನ. ಪ್ರಷ್ಯದಲ್ಲಿ ನಿರಂಕುಶ ಪ್ರಭುತ್ವದ ಸ್ಥಾಪಕ. ಈ ಮನೆತನ ಪ್ರಬಲ ರಾಜ್ಯವನ್ನು ಕಟ್ಟಿ ಕೀರ್ತಿ ಪಡೆಯುವುದೆಂಬ ಮುನ್ಸೂಚನೆಯನ್ನು ವ್ಯಕ್ತಪಡಿಸಿದವರಲ್ಲಿ ಒಂದನೆಯ ಫ್ರೆಡ್ರಿಕ್ ವಿಲಿಯಮ್(1640) ಮೊದಲನೆಯವನು. ಇವನನ್ನು ಗ್ರೇಟ್ ಎಲೆಕ್ಟರ್ ಎಂದು ಕರೆಯುತ್ತಿದ್ದರು. ಪ್ರಷ್ಯದಲ್ಲಿ ಈತ ನಿರಂಕುಶ ಪ್ರಭುತ್ವ ಸ್ಥಾಪಿಸಿದ. ಮಗ ಒಂದನೆಯ ಫ್ರೆಡ್ರಿಕ್‌ನನ್ನು ಪ್ರಷ್ಯದ ರಾಜನೆಂದು ಘೋಷಿಸಿದ. ಈತನ ಮೊಮ್ಮಗ ಎರಡನೆಯ ಫ್ರೆಡ್ರಿಕ್ ವಿಲಿಯಮ್ ಒರಟು ಸ್ವಭಾವದವ. ತನ್ನ ಸೈನಿಕ ಬಲವನ್ನು ಹೆಚ್ಚಿಸಿ ಜಿಪುಣನಂತೆ ಜೀವಿಸಿ ಸಾಯುವ ವೇಳೆಗೆ ಹೇರಳವಾಗಿ ಹಣ ಕೂಡಿಸಿ ತನ್ನ ಮಗ ಎರಡನೆಯ ಫ್ರೆಡ್ರಿಕ್‌ನಿಗೆ ಬಿಟ್ಟು ಹೋದ. ಎರಡನೆಯ ಫ್ರೆಡ್ರಿಕ್ ಮಹಾಶಯ ಎಂಬುದಾಗಿ ಖ್ಯಾತಿ ಪಡೆದ. ಈತನ ಕಾಲದಲ್ಲಿ ಪ್ರಷ್ಯ ರಾಜ್ಯ ವಿಸ್ತರಿಸಲ್ಪಟ್ಟು ಏಳಿಗೆಗೆ ಬಂತು. ಈತ ಆಸ್ಟ್ರಿಯ ಮತ್ತು ಪೋಲೆಂಡಿನ ಸ್ವಲ್ಪ ಭಾಗವನ್ನು ಗೆದ್ದ. ಪ್ರಷ್ಯ ರಾಜ್ಯದ ಜನಸಂಖ್ಯೆಯೂ ಹೆಚ್ಚಿತು. 200,000 ಸೈನಿಕರಿದ್ದ ಪ್ರಬಲ ಸೈನ್ಯ ಸಿದ್ಧವಾಯಿತು ಹಾಗೂ ಪ್ರಪಂಚದಲ್ಲೆಲ್ಲ ಸುಸಜ್ಜಿತವಾದ ಮತ್ತು ದಕ್ಷತೆಯುಳ್ಳ ಸೈನ್ಯವೆಂದು ಹೆಸರು ಪಡೆಯಿತು. ಇಂಗ್ಲೆಂಡಿನೊಡನೆ ಸಖ್ಯ ಬೆಳೆಸಿ ಫ್ರೆಂಚರ ವಿರುದ್ಧ 1756-63ರ ತನಕ ಯುದ್ಧಮಾಡಿ ಜಯಗಳಿಸಿದ. ತನ್ನ ಆಳಿಕೆಯಲ್ಲಿ ಈತ ಅನೇಕ ಉಪಯುಕ್ತ ಕಾರ್ಯಗಳನ್ನು ಮಾಡಿದ. ಪೋಟ್ಸ್‌ಡಾಮ್ ಪಟ್ಟಣದಲ್ಲಿ ವಿಶಾಲ ಅರಮನೆಯನ್ನೂ ಸಾನ್‌ಸೌಸಿ ಎಂಬ ಉದ್ಯಾನವನ್ನೂ ರಾಜಮಾರ್ಗ

ಗಳನ್ನೂ ನಿರ್ಮಿಸಿದ. ಶಿಲ್ಪಕಲೆಗೂ ಸಾಹಿತ್ಯಕ್ಕೂ ವಿಶೇಷ ಪ್ರೋತ್ಸಾಹ ಕೊಟ್ಟ. ಫ್ರೆಂಚ್ ತತ್ತ್ವಜ್ಞಾನಿ ವಾಲ್ಟೇರನಿಗೆ ಈತ ಆಶ್ರಯ ಕೊಟ್ಟಿದ್ದ. ಪ್ರಜೆಗಳಿಗೆ ಮತ ಸ್ವಾತಂತ್ರ್ಯ ನೀಡಿದ. ಕಿರುಕುಳ ಸಹಿಸಲಾರದೇ ಫ್ರಾನ್ಸಿನಿಂದ ಓಡಿಬಂದ ಪ್ರಾಟೆಸ್ಟಂಟರಿಗೆ ತನ್ನ ರಾಜ್ಯದಲ್ಲಿ ಆಶ್ರಯ ಕೊಟ್ಟ. *

**ಹೊಳಪಿನ ಕೆಂಪು ಮಣ್ಪಾತ್ರೆ ಸಂಸ್ಕೃತಿ:** ಪೂರ್ವಭಾವಿ ಇತಿಹಾಸ ಕಾಲಕ್ಕೆ ಸೇರಿದ ಒಂದು ವಿಶಿಷ್ಟ ಮಣ್ಪಾತ್ರೆ, ಗುಜರಾತಿನ ರಂಗ್‌ಪುರ್ ಎಂಬಲ್ಲಿ ನಡೆದ ಉತ್ಖನನದಲ್ಲಿ ಮೊದಲ ಬಾರಿಗೆ ಕಂಡುಬಂದದ್ದರಿಂದ ಈ ಮಣ್ಪಾತ್ರೆಯನ್ನಾಧರಿಸಿದ ಸಂಸ್ಕೃತಿಯನ್ನು ರಂಗ್‌ಪುರ್ ಎಂದೇ ಕರೆಯಲಾಗುತ್ತದೆ. ಉತ್ಖನನಕಾರರಾದ ಎಸ್.ಆರ್.ರಾವ್ ಅವರು ಈ ಪಾತ್ರೆಗೆ ಹೊಳಪಿನ ಕೆಂಪು ಪಾತ್ರೆ (ಲಸ್ಟರಸ್ ರೆಡ್ ವೇರ್) ಎಂದು ಹೆಸರು ಕೊಟ್ಟರು. ಅಂತ್ಯ ಹರಪ್ಪ–ತಾಮ್ರ ಶಿಲಾಯುಗ ಸಂಸ್ಕೃತಿಯ ಸಂಕ್ರಮಣ ಹಂತದಲ್ಲಿ ಕಾಣಿಸಿಕೊಳ್ಳುವ ಈ ಪಾತ್ರೆಯ ಕೇಂದ್ರಸ್ಥಾನ ಗುಜರಾತಿನ ಕಾಥೇವಾಡ್ ಪ್ರಾಂತ. ಅಪರೂಪಕ್ಕೆ ಮಧ್ಯ ಭಾರತ ಮತ್ತು ದಖನ್ ಪ್ರದೇಶದ ತಾಮ್ರ–ಶಿಲಾಯುಗ ನೆಲೆಗಳಲ್ಲಿ ಈ ಪಾತ್ರೆಯ ಭಾಗಗಳು ಸಿಕ್ಕಿವೆ. ಇವು ನಯವಾದ ಮಣ್ಣಿನಿಂದ ತಿಗುರಿಯ ಮೇಲೆ ಮಾಡಿದ, ಚೆನ್ನಾಗಿ ಸುಟ್ಟ ಪಾತ್ರೆಗಳು. ಅರ್ಧ ಒಣಗಿದ ಮೇಲೆ ಹೆಮಟೈಟ್ ಉಂಡೆಯಿಂದ ಉಜ್ಜಿ ಮೇಲ್ಮೈಗೆ ಹೊಳಪನ್ನು ಕೊಡಲಾಗಿದೆ. ಬಟ್ಟಲು, ಕಾಲಿನ ತಟ್ಟೆ, ಉದ್ದ ಕತ್ತಿನ ಸಂಗ್ರಹಣೆ ಜಾಡಿ, ಆಳ ತಟ್ಟೆ, ಪುಟ್ಟ ಜಾಡಿ ಮುಂತಾದ ಆಕಾರಗಳಲ್ಲಿರುವ ಈ ಪಾತ್ರೆಯ ಕಾಲಮಾನ ಪ್ರ.ಶ.ಪೂ.ಸು.1100–800. ಹೊರಮೈ ಮೇಲೆ ತ್ರಿಕೋಣ, ವರ್ತುಲ, ನೇರ–ಅಡ್ಡ ಗೆರೆ ಮುಂತಾದ ರೇಖಾ ವಿನ್ಯಾಸಗಳನ್ನು ಅಥವಾ ನೈಸರ್ಗಿಕ ಭಂಗಿಯಲ್ಲಿರುವ ಜಿಂಕೆ–ಗೂಳಿ ಮೊದಲಾದ ಪ್ರಾಣಿ ಚಿತ್ರಗಳನ್ನು ಬಿಡಿಸಲಾಗಿರುತ್ತೆ. ಪಾತ್ರೆಯನ್ನು ಸುಟ್ಟ ಅನಂತರ ಚಿತ್ರಗಳನ್ನು ಬರೆದಿರುವಂತೆ ಕಾಣುತ್ತದೆ. (ಡಿ.ಕೆ.ಎನ್.)

**ಹೋಚೀಮಿನ್:** 1890–1969. ಸ್ವತಂತ್ರ ಸ್ಥಾಪಕ, ಉತ್ತರ ವಿಯಟ್ನಾಮ್‌ನ ಮೊದಲ ಅಧ್ಯಕ್ಷ. ಇವನ ನಿಜವಾದ ಹೆಸರು ಗುಯೆನ್ ಢಚ್ ಥಾ. ಹ್ವಾಂಗ್ ಟು ಎಂಬಲ್ಲಿ 1890 ಮೇ 19ರಂದು ಜನಿಸಿದ. ಬಡತನದಲ್ಲೇ ಬೆಳೆದ ಈತ ಫ್ರಾನ್ಸಿನಲ್ಲಿ ಉಪಾಧ್ಯಾಯನಾಗಿ, ನಾವಿಕನಾಗಿ, ಕಾರ್ಮಿಕನಾಗಿ ಕೆಲಸಮಾಡಿದ. ಫ್ರಾನ್ಸಿನಲ್ಲಿರುವಾಗಲೇ (1917–23) ಕಮ್ಯೂನಿಸಮ್ ಸಿದ್ಧಾಂತದ ಪ್ರಭಾವಕ್ಕೊಳಗಾದ. ಪ್ಯಾರಿಸ್ಸಿನಲ್ಲಿ ವಿಯಟ್ನಾಮಿನ ಮಾರ್ಕ್ಸಿಸ್ಟ್ ಗುಂಪೊಂದನ್ನು 1917ರಲ್ಲೆ ಒಟ್ಟುಗೂಡಿಸಿದ. 1920ರ ಹೊತ್ತಿಗೆ ಸೋವಿಯತ್ ರಷ್ಯಕ್ಕೆ ಹೋಗಿ ಕಮ್ಯೂನಿಸ್ಟ್ ಸಿದ್ಧಾಂತದ ವಿಧಾನಗಳನ್ನು ಪರಿಚಯಿಸಿಕೊಂಡ. ಅಲ್ಲಿಂದ ಚೀನಕ್ಕೆ ಬಂದು ಕ್ಯಾಂಟನ್ ನಗರದಲ್ಲಿ ಚೀನದ ಕಮ್ಯೂನಿಸ್ಟರು ಹಾಗೂ ರಷ್ಯದ ಸಲಹೆಗಾರರ ನೆರವಿನಿಂದ ಯುವ ಕ್ರಾಂತಿ ಪಕ್ಷವನ್ನು ಸ್ಥಾಪಿಸಿದ. ಇದೇ ಮುಂದಿನ ವಿಯಟ್ನಾಮ್ ಕಮ್ಯೂನಿಸ್ಟ್ ಪಕ್ಷದ ಉದಯಕ್ಕೆ ನಾಂದಿಯಾಯಿತು. ರಷ್ಯದ ಬೋರೋಡಿನ್‌ನ ಸಹಾಯಕನಾಗಿ ಕೆಲಸಮಾಡಿದ ಈತ ವಿಯಟ್ನಾಮ್‌ನಲ್ಲಿ ಕಮ್ಯೂನಿಸ್ಟ್ ಸಿದ್ಧಾಂತದ ಪ್ರವರ್ತಕನಾದ. ಕಮ್ಯೂನಿಸ್ಟ್ ಸಿದ್ಧಾಂತದಿಂದ ಪ್ರಭಾವಿತನಾಗಿ ವಿಯಟ್ನಾಮ್‌ನ ಸ್ವಾತಂತ್ರ್ಯ ಸಮರದಲ್ಲಿ ಕಮ್ಯೂನಿಸ್ಟ್ ಧೋರಣೆಯಿಂದ ಹೋರಾಡಿ ಕೊನೆಗೆ ಉತ್ತರ ವಿಯಟ್ನಾಮಿನಲ್ಲಿ ಕಮ್ಯೂನಿಸ್ಟ್ ರಾಜ್ಯವನ್ನು ಸ್ಥಾಪಿಸಿ ಅದರ ಮೊದಲ ಅಧ್ಯಕ್ಷನಾದ. ಎರಡನೆಯ ಮಹಾಯುದ್ಧದ ಸಮಯದಲ್ಲಿ ತನ್ನ ವಿವೇಕಶಾಲಿ ನಾಯಕತ್ವ ತೋರಿ ಜಪಾನೀಯರನ್ನೂ, ಫ್ರೆಂಚರನ್ನು ಉತ್ತರ ವಿಯಟ್ನಾಮಿನಿಂದ ಓಡಿಸಿ ಅತ್ಯಂತ ಮಹತ್ತ್ವಪೂರ್ಣ ವ್ಯಕ್ತಿ ಎನಿಸಿಕೊಂಡ. 20ನೆಯ ಶತಮಾನದ ಗಣನೀಯ ಕಮ್ಯೂನಿಸ್ಟ್ ನಾಯಕರಲ್ಲಿ ಹೋ ಚೀಮಿನ್‌ನ ಹೆಸರು ಮುಖ್ಯವಾದದ್ದು.



1930ರಲ್ಲಿ ಹಾಂಕಾಂಗಿನಲ್ಲಿ ನಡೆದ ಮಹಾಸಭೆಯಲ್ಲಿ ಈತ ವಿಯಟ್ನಾಮ್ ಕಮ್ಯೂನಿಸ್ಟ್ ಪಕ್ಷವನ್ನು ಸ್ಥಾಪಿಸಿದ. ಅಲ್ಲಲ್ಲಿ ಚೆದುರಿ ಹೋಗಿದ್ದ ಕ್ರಾಂತಿಕಾರಿ ಪಕ್ಷಗಳೆಲ್ಲವೂ ಈ ಪಕ್ಷದಲ್ಲಿ ವಿಲೀನವಾದವು. ರೈತರ ಹಿತರಕ್ಷಣೆಗಾಗಿ ಚಳವಳಿಗಳು ಮೆರವಣಿಗೆಗಳು ನಡೆದವು. ಅಲ್ಲಲ್ಲಿ ಸಣ್ಣಮಟ್ಟ ದಂಗೆಗಳಾದವು. ಫ್ರೆಂಚ್ ಸರ್ಕಾರ ಈ ಚಳವಳಿಗಳನ್ನು ನೆಲಸಮ ಮಾಡಿತು. 1931ರಲ್ಲಿ ಬ್ರಿಟಿಷರು ಹಾಂಕಾಂಗಿನಲ್ಲಿ ಈತನನ್ನು ಭೂಗತ ಕಾರ್ಯ ಚಟುವಟಿಕೆಗಳಿಗಾಗಿ ಬಂಧಿಸಿ ಎರಡು ವರ್ಷಗಳ ಕಾಲ ಸೆರೆಯಲ್ಲಿಟ್ಟರು. ವಿಯಟ್ನಾಮ್ ವಿಮೋಚನಾ ಚಳವಳಿಯ ನಾಯಕತ್ವವನ್ನು ಕಮ್ಯೂನಿಸ್ಟ್ ಪಕ್ಷ ವಹಿಸಿಕೊಂಡಿತು. ಉತ್ತರ ವಿಯಟ್ನಾಮಿನಲ್ಲಿ ಜನಾಡಳಿತ ಸ್ಥಾಪನೆಯ ಪ್ರಯತ್ನ ವಿಫಲಗೊಂಡಾಗ ಕಮ್ಯೂನಿಸ್ಟರು ಚೀನದ ಕ್ವಾಂಗ್ಸಿ ಪ್ರಾಂತದ ಲ್ಯೂಜೊನಲ್ಲಿ ಸಭೆ ಸೇರಿದರು. ಹೋ ಚೀಮಿನ್‌ನ ನಾಯಕತ್ವದಲ್ಲಿ ವಿಯಟ್ನಾಮ್ ಸ್ವತಂತ್ರ ಪಕ್ಷ ಅಥವಾ ವಿಯಟ್ನಾಮಿನ್ ಸ್ಥಾಪಿತವಾಯಿತು. ವಿಯಟ್ನಾಮಿನ ಇತರ ದೇಶಪ್ರೇಮಿ ಗುಂಪುಗಳು ಇದರೊಂದಿಗೆ ಸೇರಿ ವಿಯಟ್ನಾಮ್ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧವಾದವು. 1941ರ ಮೇ ತಿಂಗಳಲ್ಲಿ ರೂಪುಗೊಂಡ ಈ ಪಕ್ಷದ ರೂಪುರೇಷೆಗಳು ಅಕ್ಟೋಬರ್ ಹೊತ್ತಿಗೆ ತೀವ್ರ ಪ್ರಸಾರ ಹೊಂದಿದವು. ಮಾವೋ ಹೇಳಿದ ಹೊಸ ಪ್ರಜಾತಂತ್ರದ ಮಾದರಿಯಲ್ಲೇ ವಿಸಂಯುಕ್ತ ಬೂರ್ಜ್ವಾ–ಕಮ್ಯೂನಿಸ್ಟ್ ಕ್ರಾಂತಿಗಾಗಿ ಯೋಜನೆಯನ್ನು ರೂಪಿಸಿದರು. ವಿಯಟ್ನಾಮಿನ್ ಪಕ್ಷದ ಗುರಿ ಜಪಾನೀಯರನ್ನೂ ಫ್ರೆಂಚರನ್ನೂ ವಿಯಟ್ನಾಮಿನಿಂದ ಓಡಿಸುವುದು; ಎಲ್ಲ ವರ್ಗಗಳ ಶೋಷಿತರನ್ನೂ ಕ್ರಾಂತಿಕಾರರನ್ನೂ ಒಟ್ಟುಗೂಡಿಸಿ ವಸಾಹತುಶಾಹಿಯ ವಿರುದ್ಧ ಹೋರಾಡಿ ಸ್ವಾತಂತ್ರ್ಯವನ್ನು ಸ್ಥಾಪಿಸುವುದು; ಸ್ವತಂತ್ರ ರಾಷ್ಟ್ರದಲ್ಲಿ ಸಾರ್ವತ್ರಿಕ ಚುನಾವಣೆ, ಪ್ರಜಾತಂತ್ರ ಸ್ವಾತಂತ್ರ್ಯವನ್ನು ನೀಡಿ ಉಳುವವನಿಗೇ ಭೂಮಿ ಹಾಗೂ ಖಾಸಗೀ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು. ಇಂಥ ಘೋಷಣೆಗಳಿಂದಾಗಿ ರಾಷ್ಟ್ರೀಯ ಭಾವನೆ ಜಾಗೃತಗೊಂಡಿತು. ಎಲ್ಲ ವರ್ಗಗಳಿಗೂ ಚೇತನ ದೊರಕಿ ಒಂದುಗೂಡಿದವು. ವಿಯಟ್ನಾಮ್ ಗೆರಿಲ್ಲಾ ಹೋರಾಟ ಆರಂಭಿಸಿ ಅನೇಕ ಪ್ರದೇಶಗಳನ್ನು ಆಕ್ರಮಿಸತೊಡಗಿತು.

1945ರ ವೇಳೆಗೆ ಜಪಾನಿನ ಪರಿಸ್ಥಿತಿ ಹದಗೆಟ್ಟಾಗ ಅದು ಇಂಡೋಚೀನದ ನೇರ ನಿಯಂತ್ರಣಕ್ಕೆ ತೊಡಗಿತು. ವಿಯಟ್ನಾಮಿನ ವಸಾಹತು ಸ್ಥಿತಿ ಕೊನೆಗೊಂಡಿತೆಂದು ಘೋಷಿಸಿ, ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸಿತು. ಅನ್ನಾಮಿನ ಹಿಂದಿನ ದೊರೆ ಬೋಡೆಯನ್ನು ಪುನಃ ಸ್ಥಾಪಿಸಿತು. 1946ರ ಆಗಸ್ಟ್‌ನಲ್ಲಿ ವಿಯಟ್ನಾಮ್ ಸ್ವತಂತ್ರ ರಾಷ್ಟ್ರವಾಯಿತು. ಹೋ ಚೀಮಿನ್ ಅದರ ಪ್ರಥಮ ಅಧ್ಯಕ್ಷನಾದ. ಫ್ರೆಂಚರು ಈ ಸ್ವಾತಂತ್ರ್ಯವನ್ನು ಅಂಗೀಕರಿಸಲಿಲ್ಲ. 1946ರ ಸೆಪ್ಟೆಂಬರ್‌ನಲ್ಲಿ ಫೌಂಟನ್ ಬ್ಲೂ ಒಪ್ಪಂದ ನಡೆಯಿತು. ಹೋಚೀಮಿನ್ ಹೊಂದಾಣಿಕೆಗೆ ಸಿದ್ಧವಿದ್ದರೂ ಫ್ರೆಂಚರ ಬಿಗಿ ವರ್ತನೆಯಿಂದಾಗಿ ಒಪ್ಪಂದ ಮುರಿಯಿತು. 1946ರ ಕೊನೆಗೆ ಯುದ್ಧ ಪ್ರಾರಂಭವಾಯಿತು. ಸು.8 ವರ್ಷಗಳ ಕಾಲ (1954) ನಡೆದ ಗೆರಿಲ್ಲ ಯುದ್ಧ ಎರಡೂ ಕಡೆಯಲ್ಲೂ ಅಪಾರ ಹಾನಿಯನ್ನುಂಟುಮಾಡಿತು. ಯುದ್ಧಕಾಲದಲ್ಲಿ ವಿಯಟ್ನಾಮ್ ಪೂರ್ಣ ಕಮ್ಯೂನಿಸ್ಟ್‌ಧೋರಣೆ ಹೊಂದಿತು. 1954ರ ಜಿನೀವ ಒಪ್ಪಂದ ಯುದ್ಧವನ್ನು ಕೊನೆಗೊಳಿಸಿತು. ಆದರೆ ವಿಯಟ್ನಾಮ್ ಎರಡು ಭಾಗವಾಗಿ ಒಡೆಯಿತು. ಉತ್ತರ ವಿಯಟ್ನಾಮ್ ಹೋ ಚೀಮಿನ್ನನ ನೇತೃತ್ವದಲ್ಲಿ ಕಮ್ಯೂನಿಸ್ಟ್ ರಾಷ್ಟ್ರವಾಗಿ ಬೆಳೆಯಿತು. 1960ರ ಹೊತ್ತಿಗೆ ಉತ್ತರ ಹಾಗೂ ದಕ್ಷಿಣ ವಿಯಟ್ನಾಮ್ ನಡುವೆ ಪುನಃ ಯುದ್ಧ ಆರಂಭವಾಯಿತು. ಹೋಚೀಮಿನ್ ಪರೋಕ್ಷವಾಗಿ ಇದರ ಹೊಣೆ ಹೊತ್ತ. ಈ ಹೊತ್ತಿಗೆ ಆರೋಗ್ಯ ಕ್ಷೀಣಿಸಿ 1969 ಸೆಪ್ಟೆಂಬರ್ 3ರಂದು ಹೃದಯಾಘಾತದಿಂದ ನಿಧನನಾದ.

ಈತ ಕಮ್ಯೂನಿಸ್ಟ್ ವಿಯಟ್ನಾಮಿನ ಪಿತಾಮಹ. ಎರಡನೆಯ ಮಹಾಯುದ್ಧ ಕಾಲದಲ್ಲಿ ತನ್ನ ರಾಜಕೀಯ ನಿಪುಣತೆ, ವಿವೇಕ ಮತ್ತು ಯುಕ್ತ ನಾಯಕತ್ವದಿಂದ ಜಪಾನೀಯರನ್ನೂ ಫ್ರೆಂಚರನ್ನೂ ಉತ್ತರ ವಿಯಟ್ನಾಮಿನಿಂದ ಓಡಿಸಿದ. ಈತನ ಸರಳತೆ, ಪ್ರಾಮಾಣಿಕತೆ, ಸ್ಥಿರತೆ ಜನರ ಮೆಚ್ಚುಗೆಗೆ ಪಾತ್ರವಾದವು. ಇವನ ನೆನಪಿನಲ್ಲಿ ಸೈಗಾನ್ ನಗರವನ್ನು ಹೋ ಚೀಮಿನ್ ನಗರವೆಂದು (1975) ಕರೆಯಲಾಯಿತು. ಈತ ಜೈಲಿನಲ್ಲಿದ್ದಾಗ ನೋಟ್ ಬುಕ್ ಫ್ರಮ್ ಪ್ರಿಸನ್ ಎಂಬ ಪುಸ್ತಕವನ್ನು ಬರೆದ. ಈತ ಒಮ್ಮೆ ಭಾರತಕ್ಕೆ ಭೇಟಿನೀಡಿದ್ದ. (ಎಸ್.ಎಮ್.ವಿ.)

**ಹೋಪ್‌ವೆಲ್ ಸಂಸ್ಕೃತಿ:** ಪ್ರ.ಶ.ಪೂ.ಸು.200 – ಪ್ರ.ಶ.500ರ ಅವಧಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಈಶಾನ್ಯ–ಮಧ್ಯ ಪಶ್ಚಿಮ ಭಾಗದಲ್ಲಿಯ ನದಿಪ್ರದೇಶಗಳಲ್ಲಿ ಅಲ್ಲಲ್ಲಿ ಹರಡಿದ್ದ, ವಸ್ತು ವಿನಿಮಯ ಮತ್ತು ನಿರ್ದಿಷ್ಟ ವ್ಯಾಪಾರ ಜಾಲದ ಮೂಲಕ ಪರಸ್ಪರ ಸಂಬಂಧವಿದ್ದ, ವಿವಿಧ ಅಮೆರಿಕ ಜನಸಮುದಾಯಗಳ ಸಾಮಾನ್ಯ ಸಾಂಸ್ಕೃತಿಕ ಅಂಶಗಳ ಒಂದು ಸಂಕೀರ್ಣ. ಇದು ಯಾವುದೇ ಒಂದು ನಿರ್ದಿಷ್ಟ ಸಂಸ್ಕೃತಿಯನ್ನು ಸೂಚಿಸುವುದಿಲ್ಲ.

ವಸ್ತು ವಿನಿಮಯ ಜಾಲ ಸಂಯುಕ್ತ ಸಂಸ್ಥಾನಗಳ ಆಗ್ನೇಯ ಭಾಗದಿಂದ ಕೆನಡದ ಆಗ್ನೇಯ ಭಾಗದ ಒಂಟಾರಿಯೊ ಸರೋವರದವರೆಗೆ ವಿಸ್ತರಿಸಿತ್ತು. ಸಂಯುಕ್ತ ಸಂಸ್ಥಾನಗಳ ಎಲ್ಲೆಡೆಗಳಿಂದ ಪಡೆದ ಕಚ್ಚಾ ವಸ್ತುಗಳಿಂದ ಉತ್ತಮ ಗುಣಮಟ್ಟದ ಆಕರ್ಷಕ ವಿವಿಧ ಉತ್ಪನ್ನಗಳನ್ನು ಸಿದ್ಧಮಾಡಿ ಬಹಳ ದೂರದವರೆಗೂ ನಿರ್ಯಾತ ಮಾಡಲಾಗುತ್ತಿತ್ತು. ಈ ವಸ್ತುಗಳು ಮಧ್ಯ ಪಶ್ಚಿಮ ಪ್ರದೇಶದ ಹೊರಗಡೆಯಲ್ಲಿಯ ಸಮಾಧಿಗಳಲ್ಲೂ ಕಂಡುಬಂದಿವೆ. ಈ ಸಮುದಾಯಗಳ ಮೂಲ ವಿವಾದಾಸ್ಪದವಾಗಿದೆ. ಪಶ್ಚಿಮ ನ್ಯೂಯಾರ್ಕ್ ಇಲ್ಲವೆ ಪಶ್ಚಿಮ ಇಲನಾಯ್ಸ್‌ದಿಂದ ಓಹಿಯೊ ಪ್ರದೇಶದ ಕಡೆಗೆ ಇವರ ಧರ್ಮಗುರುಗಳ ಸೂಚನೆಯಂತೆ ವಲಸೆ ಹೋಗಿರಬಹುದೆಂಬ ಅಭಿಪ್ರಾಯ ಪ್ರಾಯಶಃ ಹಿಂದಿನ ಅಡೆನ ಪೂರ್ವಜರಿಂದ ಈ ಸಮುದಾಯಗಳು ಸ್ತರೀಕೃತ ಸಾಮಾಜಿಕ ಪದ್ಧತಿಯನ್ನು ಮತ್ತು ತಮ್ಮ ತಮ್ಮ ನಡುವಿನ ಸಂಬಂಧಗಳನ್ನು ಬಲಪಡಿಸಿಕೊಳ್ಳುವುದನ್ನೂ ಆಹಾರ ಸಾಮಗ್ರಿಗಳ ಹೊಂದಾಣಿಕೆ ಮಾಡಿಕೊಳ್ಳುವುದನ್ನೂ ಪಡೆದುಕೊಂಡಂತೆ ಕಾಣುತ್ತದೆ. ಇವರಲ್ಲಿ ಶವದಹನ ಪದ್ಧತಿ ಸಾಮಾನ್ಯ. ಗಣ್ಯವ್ಯಕ್ತಿಗಳನ್ನು ಮಾತ್ರ ಹೂಳಲಾಗುತ್ತಿತ್ತು. ಇವರಲ್ಲಿ ಬೇಟೆಗಾರರಿಗೆ

ಉನ್ನತ ಸ್ಥಾನವಿದ್ದಂತೆ ಕಾಣುತ್ತದೆ. ಸಮಾಜದಲ್ಲಿ ಎಲ್ಲರು ತಮ್ಮ ಅಭಿಪ್ರಾಯಗಳನ್ನು ಹಾಗೂ ಧರ್ಮ ಮತ್ತು ವ್ಯಾಪಾರ ವ್ಯವಹಾರ ವಿಷಯಗಳಲ್ಲಿ ತಮ್ಮ ವಿಚಾರಗಳನ್ನು ಒಪ್ಪಿಕೊಳ್ಳುವಂತೆ ಮಾಡುವ ಸಾಮರ್ಥ್ಯವುಳ್ಳ ಜನರು ಸಮಾಜದ ಗಣ್ಯ ನಾಯಕರಾಗಿರುತ್ತಿದ್ದರು.

ಈ ಸಮುದಾಯಗಳು ನಿರ್ಮಿಸಿದ ಧಾರ್ಮಿಕ ಮತ್ತು ಶವ ಸಂಸ್ಕಾರದ ನಾನಾ ರೇಖಾವಿನ್ಯಾಸದಲ್ಲಿರುವ ದಿಬ್ಬಗಳು ವಿಶಿಷ್ಟವಾಗಿವೆ. ಇವುಗಳಲ್ಲಿ ಓಹಿಯೊ ನದಿ ಪ್ರದೇಶದಲ್ಲಿಯ ದಿಬ್ಬಗಳು ಗಮನಾರ್ಹ. ಬ್ರಾಡ್ಲೆ ಲೆಪ್ಪರ್ ಅವರು ಅಷ್ಟಬಾಹು ದಿಬ್ಬವು ಚಾಂದ್ರಮಾನ ವೀಕ್ಷಣ ನೆಲೆಯಾಗಿತ್ತು 18–6 ವರ್ಷ ಚಕ್ರದಲ್ಲಿ ಚಂದ್ರೋದಯ ಮತ್ತು ಅಸ್ತಮಾನವನ್ನು ಗೊತ್ತುಮಾಡುತ್ತಿದ್ದರೆಂದು ವಿಶ್ಲೇಷಿಸಿದ್ದಾರೆ. ಮುಖ್ಯವಾಗಿ ರೆಹಿವ್ಲೆ ಮತ್ತು ರಾಬರ್ಟ್ ಹಾರ್ನ್ ಮತ್ತು ಕೆಲವು ಪ್ರಾಚೀನ ಖಗೋಳಶಾಸ್ತ್ರಜ್ಞರು ನಿಯಾರ್ಕ್, ಚಿಲ್ಲಿಕೋತ್ ಮುಂತಾದೆಡೆಗಳಲ್ಲಿಯ ಇಂಥ ದಿಬ್ಬಗಳನ್ನು ತಮ್ಮ ತಮ್ಮ ಅಧ್ಯಯನಗಳಿಂದ ಸೂರ್ಯ–ಚಂದ್ರ ಗತಿಗಳಿಗೆ ಇವು ಸಂಬಂಧಿಸಿದೆಯೆಂದು ತರ್ಕಿಸಿದ್ದಾರೆ.

ಇವರ ವೈವಿಧ್ಯಮಯ ಕರಕುಶಲ ಕೃತಿಗಳು ಹೆಸರುವಾಸಿಯಾಗಿದ್ದುವು. ಹೆಚ್ಚಾಗಿ ಇವು ಧಾರ್ಮಿಕ ಅರ್ಥವುಳ್ಳದ್ದಾಗಿದ್ದುವು. ಬೂದುಕರಡಿಯ ಹಲ್ಲು, ಶಾರ್ಕ್‌ಮೀನಿನ ಹಲ್ಲು, ಸಿಹಿನೀರಿನಮುತ್ತು, ತಾಮ್ರ ಮುಂತಾದವುಗಳಿಂದ ಮಾಡಿದ ಅತಿ ಸುಂದರವಾದ ಆಲಂಕಾರಿಕ ಆಭರಣಗಳು ಜನಪ್ರಿಯವಾಗಿದ್ದವು. ಇವರು ಪಕ್ಷಿ, ಪ್ರಾಣಿ ಮುಂತಾದ ಆಕೃತಿಗಳ ಕೆತ್ತನೆಯುಳ್ಳ ವಿವಿಧ ಪ್ರಕಾರಗಳ ತಂಬಾಕಿನ ಆಕರ್ಷಕ ಚುಂಗಾಣಿಗಳನ್ನು ಮಾಡುವುದರಲ್ಲಿ ಎತ್ತಿದ ಕೈ. ಮೌಂಡ್ ಸಿಟಿನಲ್ಲಿಯ ಮೌಂಡ್ ಆಫ್ ಪೈಪ್ಸ್‌ನಲ್ಲಿ ಸು.200ಕ್ಕೂ ಹೆಚ್ಚು ತಂಬಾಕಿನ ಚುಂಗಾಣಿಗಳು, ಸಣ್ಣ ಸಣ್ಣ ಶಿಲ್ಪಗಳು ಸಿಕ್ಕಿವೆ. ಒಂದು ಚುಂಗಾಣಿಯಂತೂ ಎಲುಬಿನ ಕುಂಠಿತ ಬೆಳೆವಣಿಗೆಯಿಂದಾದ ಕುಬ್ಜಮನುಷ್ಯನೆಂದು ಸ್ಪಷ್ಟವಾಗಿ ಕಾಣುತ್ತದೆ. ಇದೇ ದಿಬ್ಬದಲ್ಲಿ ದೊರೆತ ಮನುಷ್ಯನ ತಲೆಬುರುಡೆಯನ್ನು ಮುಖವಾಡವನ್ನಾಗಿ ಮಾರ್ಪಡಿಸಿದ ಕಲಾಕೃತಿ ಇವರ ಶ್ರೇಷ್ಠ ಕುಸುರಿ ಕೆತ್ತನೆಗೆ ಉತ್ತಮ ಉದಾಹರಣೆ.

ಮೂರ್ತಿಗಳಲ್ಲಿಯ ವೇಷ–ಭೂಷಣ, ಆಭರಣ, ಕೇಶಾಲಂಕಾರ ಮುಂತಾದವುಗಳನ್ನು ಅತಿ ಸೂಕ್ಷ್ಮವಾಗಿ ಬಿಡಿಸಲಾಗಿದೆ. ಅಭ್ರಕದ ಹಾಳೆಯಲ್ಲಿ ಬಿಡಿಸಿದ ಮನುಷ್ಯ ಹಸ್ತ ನಿಜಕ್ಕೂ ಇವರ ಕರಕುಶಲತೆಗೆ ಕೈಗನ್ನಡಿ. ಈ ರೀತಿಯ ಸಾಮಾನ್ಯ ಪರಂಪರೆಯುಳ್ಳ ವಿವಿಧ ಸಾಂಸ್ಕೃತಿಕ ಸಮುದಾಯಗಳು ಓಹಿಯೊ ಹೋಪ್ ವೆಲ್, ಮಾರ್ಕ್ಸ್‌ವಿಲ್ಲೆ, ಸ್ವಿಪ್ಟ್‌ಕ್ರೀಕ್ ಕೊಪೆನ, ಕ್ರ್ಯಾಬ್ ಆರ್ಚರ್ಡ್ ಮುಂತಾದವು.

ಈ ಪರಂಪರೆ ಯಾವ ಕಾರಣಗಳಿಂದ ಕೊನೆಗೊಂಡಿತೆಂಬುದು ಸರಿಯಾಗಿ ತಿಳಿದುಬಂದಿಲ್ಲ. ಈ ವಿಷಯದಲ್ಲಿ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. (ಎ.ಎಸ್.;ಎನ್.ಎಲ್.)

**ಹೋಮ್‌ರೂಲ್ ಚಳವಳಿ:** ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಜರುಗಿದ ಪ್ರಸಿದ್ಧ ಚಳವಳಿ. ಇದರ ಸಂಘಟಕರು ಡಾ. ಆನಿಬೆಸೆಂಟ್. ಇವರು ಐರ್ಲೆಂಡ್ ದೇಶದವರು. ಈ ಚಳವಳಿಯನ್ನು ಭಾರತದಲ್ಲಿ 1916ರಲ್ಲಿ ಆರಂಭಿಸಲಾಯಿತು. ಆನಿಬೆಸೆಂಟ್ ಅಧ್ಯಕ್ಷರಾಗಿ ಹಾಗೂ ಜಾರ್ಜ್ ಅರುಂಡೇಲ್ ಸಂಘಟನಾ ಕಾರ್ಯದರ್ಶಿಯಾಗಿ ನಿಯುಕ್ತರಾದರು. ಐರ್ಲೆಂಡ್‌ನಲ್ಲಿ ನಡೆಯುತ್ತಿದ್ದ ಹೋಮ್‌ರೂಲ್ ಚಳವಳಿಯ ಪ್ರೇರಣೆಯಿಂದ ಭಾರತದಲ್ಲಿ ಈ ಚಳವಳಿಯನ್ನು ವ್ಯವಸ್ಥಿತವಾಗಿ ಸಂಘಟಿಸಿದವರು ಆನಿಬೆಸೆಂಟ್ ಹಾಗೂ ಬಾಲಗಂಗಾಧರ ಟಿಳಕ್. ಇದರ ಉದ್ದೇಶ ಭಾರತದಲ್ಲಿ ಸ್ವಯಂ ಆಡಳಿತ ಪಡೆಯುವುದಾಗಿತ್ತು.

ಒಂದನೆಯ ಮಹಾಯುದ್ಧದ ಕಾಲದಲ್ಲಿ ರಾಷ್ಟ್ರೀಯ ಚಳವಳಿಗೆ ತೀವ್ರ ಹಿನ್ನಡೆಯುಂಟಾಗಿತ್ತು. ಮಂದಗಾಮಿ ನಾಯಕತ್ವದಲ್ಲಿ ತೃಪ್ತಿಕರವಾದ ಸಾಧನೆಗಳೇನೂ ಆಗಿರಲಿಲ್ಲ. ಇದರೊಂದಿಗೆ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷ್ ಸರ್ಕಾರ ಜಾರಿಗೊಳಿಸಿದ ತೀವ್ರ ದಬ್ಬಾಳಿಕೆ ನೀತಿಯಿಂದ ಭಾರತೀಯರು ಅಸಮಾಧಾನಗೊಂಡರು. ಈ ಸಂದರ್ಭದಲ್ಲಿ ಬಾಲಗಂಗಾಧರ ಟಿಳಕರ ಬಿಡುಗಡೆಯಾಯಿತು (1914). ಐರ್ಲೆಂಡಿನಲ್ಲಿ ಐರಿಷರು ಆಡಳಿತ ಸುಧಾರಣೆಗಾಗಿ ನಡೆಸುತ್ತಿದ್ದ ಹೋಮ್‌ರೂಲ್ ಚಳವಳಿ ಮಾದರಿಯಲ್ಲಿ ಭಾರತದಲ್ಲೂ ಆಡಳಿತ ಸುಧಾರಣೆಗಾಗಿ ಹೋಮ್‌ರೂಲ್ ಅಥವಾ ಸ್ವಯಂ ಆಡಳಿತಕ್ಕಾಗಿ ಹೋರಾಟ ನಡೆಸಬೇಕಾದ ಆವಶ್ಯಕತೆಯಿದೆ ಎಂದು ಬಾಲಗಂಗಾಧರ ಟಿಳಕರು ಘೋಷಿಸಿದರು. 1916 ಏಪ್ರಿಲ್ 28ರಂದು ಬೆಳಗಾಂವಿಯಲ್ಲಿ ನಡೆದ ಬಾಂಬೆ ಪ್ರಾಂತಿಯ ಸಮ್ಮೇಳನದಲ್ಲಿ ಹೋಮ್‌ರೂಲ್ ಲೀಗ್ ಸ್ಥಾಪಿಸಲಾಯಿತು. ಇದೇ ವೇಳೆಯಲ್ಲಿ ಆನಿಬೆಸೆಂಟರು ಸ್ವರಾಜ್ಯ ಹಾಗೂ ಸ್ವಯಂ ಆಡಳಿತವನ್ನು ಹೋಮ್‌ರೂಲ್ ಚಳವಳಿಯಿಂದ ಮಾತ್ರ ಪಡೆಯಬಹುದೆಂದು, ಭಾರತವನ್ನು ದಾಸ್ಯದಿಂದ ಪಾರುಮಾಡಬಹುದೆಂದು ನ್ಯೂ ಇಂಡಿಯಾ ಪತ್ರಿಕೆಯಲ್ಲಿ ಬರೆದರು. ಶೀಘ್ರದಲ್ಲಿಯೇ ಬೇರೊಂದು ಹೋಮ್‌ರೂಲ್‌ಲೀಗನ್ನು ಸ್ಥಾಪಿಸುವ ಉದ್ದೇಶವಿರುವುದಾಗಿ ಸ್ಪಷ್ಟಪಡಿಸಿದರು. ಹೋಮ್‌ರೂಲ್‌ಲೀಗ್‌ನ ಸ್ಥಾಪನೆಯಾದ ಅನಂತರ ಬಾಲಗಂಗಾಧರ ಟಿಳಕರಿಗೂ ಆನಿಬೆಸೆಂಟರಿಗೂ ಹೋರಾಟದ ವಿಧಾನ, ಆಲೋಚನೆಗಳಲ್ಲಿ ತಾತ್ತ್ವಿಕ ಭಿನ್ನಾಭಿಪ್ರಾಯ ಏರ್ಪಟ್ಟಿದ್ದರಿಂದ ಎರಡೂ ಹೋಮ್‌ರೂಲ್ ಲೀಗ್‌ಗಳು ಒಂದುಗೂಡಲಿಲ್ಲ. ಈ ರೀತಿ ಆನಿಬೆಸೆಂಟರ ಹೋಮ್ ರೂಲ್ ಫಾರ್ ಇಂಡಿಯ ಲೀಗ್ ಹಾಗೂ ಬಾಲಗಂಗಾಧರ ಟಿಳಕರ ಇಂಡಿಯನ್ ಹೋಮ್‌ರೂಲ್ ಲೀಗ್ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಿದುವು. ಬಾಲಗಂಗಾಧರ ಟಿಳಕರ ಹೋಮ್‌ರೂಲ್ ಲೀಗ್ ಮಹಾರಾಷ್ಟ್ರ ಹಾಗೂ ಕರ್ನಾಟಕಗಳಲ್ಲಿ ಕೇಂದ್ರೀಕರಿಸಿದರೆ, ಆನಿಬೆಸೆಂಟರದು ದಕ್ಷಿಣ ಭಾರತಾದ್ಯಂತ ವ್ಯಾಪಿಸಿತಲ್ಲದೆ ಬಿಹಾರ, ಬಂಗಾಲ, ಗುಜರಾತ್ ಮುಂತಾದೆಡೆಗಳಲ್ಲೂ ಕಾರ್ಯನಿರ್ವಹಿಸಿತು.

ಬಾಲಗಂಗಾಧರ ಟಿಳಕರು 1918ರ ವೇಳೆಗೆ 32,000 ಸದಸ್ಯರನ್ನು ಒಳಗೊಂಡ ಹೋಮ್‌ರೂಲ್ ಲೀಗಿನ ಆರು ಶಾಖೆಗಳನ್ನು ಸ್ಥಾಪಿಸಿದರು. ಕರಪತ್ರ ಹಂಚುವುದು, ಬರೆಹಗಳು ಹಾಗೂ ಭಾಷಣಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದರು. ಜೊತೆಗೆ ಸಾಮಾಜಿಕ ಸೇವಾಕಾರ್ಯಗಳನ್ನು ಹಮ್ಮಿಕೊಳ್ಳಲಾಯಿತು. ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ ಬ್ರಿಟಿಷ್ ಸರ್ಕಾರ ಬಾಲಗಂಗಾಧರ ಟಿಳಕರಿಗೆ ಷೋಕಾಸ್ ನೋಟೀಸನ್ನು ನೀಡಿ 60 ಸಾವಿರ ರೂಪಾಯಿ ಭದ್ರತಾ ಠೇವಣಿಯಾಗಿಡಬೇಕೆಂದು ಆದೇಶ ನೀಡಿತು. ಟಿಳಕರ ಪರವಾಗಿ ಭಾರತೀಯ ವಕೀಲರು ನ್ಯಾಯಾಲಯದಲ್ಲಿ ಹೋರಾಡಿ ತಡೆಯಾಜ್ಞೆ ತಂದರು.

ಆನಿಬೆಸೆಂಟರ ಹೋಮ್‌ರೂಲ್ ಲೀಗಿನ 200 ಶಾಖೆಗಳು ದೇಶಾದ್ಯಂತ ತಲೆಎತ್ತಿದುವು. ರಾಜಕೀಯ, ಶಿಕ್ಷಣ ಹಾಗೂ ಚರ್ಚೆಗಳ ಮೂಲಕ ಜಾಗೃತಿ ಮೂಡಿಸಿ ಚಳವಳಿಯನ್ನು ಪ್ರಮುಖ ಜನಾಂದೋಲನವನ್ನಾಗಿ ಮಾಡಲು ಪ್ರಯತ್ನಿಸಿದರು. ಜೊತೆಗೆ ಸಮಾಜ ಸೇವಾ ಕಾರ್ಯವನ್ನು ಆರಂಭಿಸಿದರು. ಇದು ರಾಜಕೀಯ ಸಮಾವೇಶಗಳ ಮೂಲಕ ಜನರನ್ನು ಸಂಘಟಿಸುವ ಪ್ರಮುಖ ಸಂಸ್ಥೆಯಾಗಿಯೂ ಕಾರ್ಯನಿರ್ವಹಿಸಿತು.

1916ರ ಕೊನೆಯ ವೇಳೆಗೆ ಈ ಚಳವಳಿ ತೀವ್ರಗೊಂಡಿತು. 1916ರ ಲಖನೌ ಅಧಿವೇಶನದಲ್ಲಿ ಮಂದಗಾಮಿ ಹಾಗೂ ತೀವ್ರಗಾಮಿಗಳು ಒಂದುಗೂಡಿದರು. ಮುಸ್ಲಿಮ್ ಲೀಗ್ ಹಾಗೂ ಕಾಂಗ್ರೆಸ್ ನಡುವೆ ಒಪ್ಪಂದ ಏರ್ಪಟ್ಟಿತು. ಈ ಅಧಿವೇಶನದಲ್ಲಿ ಹೋಮ್‌ರೂಲ್ ಲೀಗಿನ ಸದಸ್ಯರು ಕಾಂಗ್ರೆಸ್ಸಿನ ಸದಸ್ಯರಾದರು. ಲಖನೌ ಕಾಂಗ್ರೆಸ್‌ನ ಅನಂತರ ಟಿಳಕರು ಹಾಗೂ ಆನಿಬೆಸೆಂಟರು ಭಾರತಾದ್ಯಂತ ಸಂಚರಿಸಿ ಬೆಂಬಲಗಳಿಸಿದರು. ಪರಿಣಾಮವಾಗಿ ಸಮಗ್ರ ಭಾರತದ ರಾಜಕೀಯದಲ್ಲಿಯೇ ಹೊಸ ವಿಚಾರಕ್ರಾಂತಿಯ ಬಿರುಗಾಳಿ ಬೀಸಿತು. ಈ ಚಳವಳಿಯ ಪರಿಣಾಮವಾಗಿ ಕಾಂಗ್ರೆಸ್ ಬಲಗೊಂಡಿತು. ಬ್ರಿಟಿಷರ ನಿಲುವಿನಲ್ಲಿ ಸೌಮ್ಯ (ಮಂದಗಾಮಿ)ವಾದಿಗಳಿಗೆ ನಂಬಿಕೆ ಹುಟ್ಟಲಿಲ್ಲ. ಮಹಾಯುದ್ಧದಲ್ಲಿ ಟರ್ಕಿ ಜರ್ಮನಿ ಪರ ಇದ್ದುದರಿಂದ ಭಾರತೀಯ ಮುಸಲ್ಮಾನರಿಗೆ ಬ್ರಿಟಿಷರ ಬಗ್ಗೆ ಸಹಾನುಭೂತಿ ಇರಲಿಲ್ಲ. ಇದೇ ಸಮಯದಲ್ಲಿ ಟಿಳಕರು ಶ್ರಮವಹಿಸಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಎರಡನ್ನು ಒಂದುಗೂಡಿಸಿದರು. ಎಲ್ಲರಿಂದಲೂ ಈ ಚಳವಳಿಗೆ ಬೆಂಬಲ ದೊರಕಿತ್ತಲ್ಲದೆ, ಮೋತಿಲಾಲ್ ನೆಹರು ಉತ್ತರ ಪ್ರದೇಶದ ಹೋಮ್‌ರೂಲ್ ಲೀಗಿನ ಅಧ್ಯಕ್ಷರಾದರು.

ಚಳವಳಿ ತೀವ್ರವಾಗುತ್ತಿದ್ದಂತೆ ಬ್ರಿಟಿಷ್ ಸರ್ಕಾರ ಉಗ್ರಕ್ರಮ ಕೈಗೊಳ್ಳಲಾರಂಭಿಸಿತು. ಆನಿಬೆಸೆಂಟ್, ಜಾರ್ಜ್ ಅರುಂಡೇಲ್ ಮುಂತಾದ ನಾಯಕರ ಬಂಧನವಾಯಿತು. ಈ ಬಂಧನದ ವಿರುದ್ಧ ಭಾರತಾದ್ಯಂತ ತೀವ್ರ ಪ್ರತಿಭಟನೆ ನಡೆಸಲಾಯಿತು. ಮಂದಗಾಮಿಗಳಲ್ಲಿ ಅನೇಕರು ಈ ಲೀಗಿನ ಸದಸ್ಯರಾದರು. ಭಾರತೀಯರಲ್ಲಿ ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ಬ್ರಿಟಿಷ್ ಸರ್ಕಾರ ತನ್ನ ಧೋರಣೆಯನ್ನು ಬದಲಿಸಿಕೊಂಡಿತು. ಅಂದಿನ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗೂ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಯುದ್ಧಾನಂತರ ಆಡಳಿತ ಸುಧಾರಣೆಗಳ ಭರವಸೆ ನೀಡಿ ಕ್ರಮೇಣ ಸ್ವಯಂ ಆಡಳಿತ ನೀಡುವುದೇ ಸರ್ಕಾರದ ಗುರಿ ಎಂದು 1917ರ ಆಗಸ್ಟ್‌ರಂದು ಘೋಷಿಸಿದ. 1917ರ ಸೆಪ್ಟೆಂಬರ್‌ನಲ್ಲಿ ಆನಿಬೆಸೆಂಟರ ಬಿಡುಗಡೆಯಾಯಿತು. ಇದೇ ವರ್ಷ ಕಲ್ಕತ್ತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೆಯಾಗಿ ಆನಿಬೆಸೆಂಟ್ ಆಯ್ಕೆಗೊಂಡರು(1917). 1918ರ ವೇಳೆಗೆ ಹೋಮ್‌ರೂಲ್ ಚಳವಳಿಯ ತೀವ್ರತೆ ಕಡಿಮೆಯಾಯಿತು. ಈ ಚಳವಳಿ ಹಳ್ಳಿ–ಪಟ್ಟಣಗಳಲ್ಲಿದ್ದ ಜನಸಾಮಾನ್ಯರನ್ನು ಜಾಗೃತಗೊಳಿಸಿ ಮುಂಬರುವ ಗಾಂಧೀಯುಗದ ಜನಾಂದೋಲನಕ್ಕೆ ಭೂಮಿಕೆಯನ್ನು ಒದಗಿಸಿತು. (ಬಿ.ಪಿ.ಐ.)

**ಹೋಮರ್:** ಗ್ರೀಕ್ ಮಹಾಕಾವ್ಯಗಳಾದ ಇಲಿಯಡ್ ಮತ್ತು ಒಡಿಸಿಗಳನ್ನು ಸಂಯೋಜಿಸಿದವನೆಂದು ತಿಳಿಯಲಾದ ಮಹಾಕವಿ. ಈತನ ಬಗ್ಗೆ ವಿಶೇಷ ಮಾಹಿತಿಗಳು ಲಭ್ಯವಿಲ್ಲ. ಕೆಲವರು ಈತ ಏಜಿಯನ್ ಸಮುದ್ರದ ಪೂರ್ವ ತೀರದಲ್ಲಿ ಗ್ರೀಕ್ ಭಾಷೆಯನ್ನಾಡುವ ಪ್ರದೇಶದಲ್ಲಿದ್ದಿರಬೇಕೆಂದೂ ಅಥವಾ ಕಿಯೋಸ್ ದ್ವೀಪದಲ್ಲಿದ್ದಿರಬೇಕೆಂದೂ ಹೇಳಿದರೆ ಇನ್ನೂ ಕೆಲವರು ಈತ ಇದ್ದನೆಂಬುದನ್ನೇ ಒಪ್ಪುವುದಿಲ್ಲ. ಐತಿಹ್ಯಗಳ ಪ್ರಕಾರ ಈತ ಅಂಧನಾಗಿದ್ದ.

ಇವನ ಎರಡು ಮಹಾಕಾವ್ಯಗಳು ಟ್ರೋಜನ್ ಯುದ್ಧಾವಧಿ ಹಾಗೂ ಅನಂತರದ ಘಟನೆಗಳನ್ನು ಆಧರಿಸಿವೆ. ಪ್ರ.ಶ.ಪೂ.ಸು. 1200ರಲ್ಲಿ ಗ್ರೀಸ್ ಮತ್ತು ಟ್ರಾಯ್ ನಗರಗಳ ನಡುವೆ ನಡೆದ ಯುದ್ಧ ಸಂಗತಿಗಳನ್ನು ಇವು ಪ್ರಾಯಃ ಆಧರಿಸಿವೆ. ಈ ಕಾವ್ಯಗಳು ಪ್ರ.ಶ.ಪೂ. 800–700ರ ಅವಧಿಯ ಸಾಮಾಜಿಕ ಪರಿಸ್ಥಿತಿಗಳನ್ನು ಹೇಳುವುದರಿಂದ ಈ ಅವಧಿಯಲ್ಲಿ ಇವು ಸಂಯೋಜನೆಗೊಂಡಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಕಾವ್ಯಗಳಲ್ಲಿ ವರ್ಣಿಸಲಾದ ಕೆಲವು ಸಂಗತಿಗಳಿಗೆ ಚಾರಿತ್ರಿಕ ಆಧಾರ ಒದಗಿಸುವಂಥ ಪುರಾವೆಗಳನ್ನು ಟ್ರಾಯ್ ಮತ್ತು ಗ್ರೀಸ್ ಅವಶೇಷಗಳಲ್ಲಿ ಪುರಾತತ್ತ್ವಜ್ಞರು ಪತ್ತೆಹಚ್ಚಿದ್ದಾರೆ. ಕಾವ್ಯಗಳಲ್ಲಿ ಚಿತ್ರಿತವಾಗಿರುವ ಪಾತ್ರ ಮತ್ತು ಘಟನೆಗಳು ಭಾಗಶಃ ನಿಜವಾದ ವ್ಯಕ್ತಿ ಮತ್ತು

ಚಾರಿತ್ರಿಕ ಸಂಗತಿಗಳನ್ನಾಧರಿಸಿದ್ದರೂ ಜನಪದ ಗಾಯಕರಿಂದಲೂ ಕಥೆಗಳಿಂದಲೂ ಶತಮಾನಗಳಿಂದ ಪರಿಷ್ಕರಣೆಗೆ ಒಳಗಾಗಿವೆ. ಜನಪದ ಗಾಯಕರು (ಬಾರ್ಡ್ಸ್) ಟ್ರೋಜನ್ ಯುದ್ಧ ವಿವರಗಳನ್ನು ಸರಣಿಯೋಪಾದಿ ಸೃಷ್ಟಿಸಿ ಹಾಡುತ್ತಿದ್ದರು. ಇವುಗಳಲ್ಲಿ ಇವೆರಡು ಕಾವ್ಯಗಳು ಮಾತ್ರ ಉಳಿದು ಬಂದಿವೆ ಎನ್ನಲಾಗಿದೆ. ಈತನ ಕಾಲಾನಂತರ ಗ್ರೀಸಿನ ಧಾರ್ಮಿಕ ಮಹೋತ್ಸವಗಳಲ್ಲಿ ಈ ಕಾವ್ಯಗಳ ಪಠಣ ಮಾಡಲಾಗುತ್ತಿತ್ತು. ಪ್ರಾಚೀನ ಗ್ರೀಸಿನ ಐತಿಹ್ಯ ಹಾಗೂ ಪುರಾಣಗಳನ್ನು ಅಭ್ಯಸಿಸಲು ಮತ್ತು ಓದು ಕಲಿಯಲು ಈ ಕಾವ್ಯಗಳು ಗ್ರೀಕ್ ಮಕ್ಕಳ ಮೂಲ ಪಠ್ಯಗಳಾಗಿದ್ದುವು. ಇದರ ಪರಿಣಾಮವಾಗಿ ಹೋಮರ್‌ನ ದೇವಾನುದೇವತೆಗಳ ಚಿತ್ರಣದ ರೀತಿಯಲ್ಲಿ ಗ್ರೀಕರು ತಮ್ಮ ಧಾರ್ಮಿಕ ರೀತಿನೀತಿಗಳನ್ನು ರೂಪಿಸಿಕೊಳ್ಳುವಂತಾಯಿತು. ಈತನ ಕಾವ್ಯಗಳು ಮಹಾನ್ ದುರಂತ ನಾಟಕಗಳನ್ನು ರಚಿಸಿದ ಪ್ರ.ಶ.ಪೂ. ಸು. 400ರ ಈಸ್ಕಿಲಸ್, ಯೂರಿಪಿಡೀಸ್ ಮತ್ತು ಸಾಫೋಕ್ಲೀಸರ ಮೇಲೆ ಅಗಾಧ ಪರಿಣಾಮ ಬೀರಿದುವು.



ಈ ಕಾವ್ಯಗಳ ಶ್ರವಣ ಹಾಗೂ ಲಿಖಿತ ಪ್ರತಿಗಳ ಪಠಣಗಳಿಂದ ಗ್ರೀಕರು ಹೋಮರ್‌ನ ಬಗ್ಗೆ ಅರಿಯಲಾರಂಭಿಸಿದರು. ಪ್ರತಿಗಳನ್ನು ತಯಾರಿಸುವಾಗ ತಪ್ಪುಗಳನ್ನೂ ಉದ್ದೇಶಪೂರ್ವಕ ಬದಲಾವಣೆಗಳನ್ನೂ ಬರೆಹಗಾರರು ಮಾಡುತ್ತಿದ್ದರು. ಪ್ರ.ಶ.ಪೂ. 300ರ ವೇಳೆಗೆ ಗ್ರೀಸ್‌ನಲ್ಲಿ ಇಲಿಯಡ್ ಮತ್ತು ಒಡಿಸಿಗಳ ಭಿನ್ನ ಪಾಠಗಳು ಲಭ್ಯವಿದ್ದುವು. ಪ್ರ.ಶ.ಪೂ.ಸು. 300–100ರ ಅವಧಿಯಲ್ಲಿ ಈಜಿಪ್ಟ್‌ನ ಗ್ರೇಟ್ ಅಲೆಕ್ಸಾಂಡ್ರಿಯನ್ ಗ್ರಂಥಾಲಯದ ವಿದ್ವಾಂಸರು ಎರಡೂ ಮಹಾಕಾವ್ಯಗಳ ಬದಲಾವಣೆಗಳನ್ನು ಸರಿಪಡಿಸಲು ಹಾಗೂ ಅವುಗಳ ಮೂಲ ರೂಪವನ್ನು ಕಾಯ್ದಿಡಲು ಪ್ರಯತ್ನಿಸಿದರು. ಕೆಲವು ವಿದ್ವಾಂಸರು ಈ ಕಾವ್ಯಗಳು ಇಬ್ಬರು ಬೇರೆ ಬೇರೆ ಕವಿಗಳಿಂದ ರಚಿತವಾದುವೆಂದು ನಂಬಿದರು. ಈ ವಿದ್ವಾಂಸರನ್ನು ಭಿನ್ನಮಾರ್ಗಿಗಳೆಂದು ಕರೆಯಲಾಯಿತು. ಭಾಷೆ, ದೃಷ್ಟಿಕೋನ ಹಾಗೂ ವಸ್ತುಗಳ ವಿಷಯದಲ್ಲಿ ಇವೆರಡೂ ಕಾವ್ಯಗಳು ಒಬ್ಬನಿಂದಲೇ ರಚಿತವಾಗಿದ್ದರೆ ಇಷ್ಟೊಂದು ವ್ಯತ್ಯಾಸಗಳಿರುತ್ತಿರಲಿಲ್ಲ ಎಂದು ಇವರು ವಾದಿಸುತ್ತಾರೆ.

ಏಕಕರ್ತೃತ್ವದ ಪ್ರತಿಪಾದಕರು ವಿಶ್ಲೇಷಕ ಪಂಥದವರನ್ನು ವಿರೋಧಿಸಿ ಈ ಕಾವ್ಯಗಳು ಪ್ರತಿಭಾವಂತ ಏಕ ಕವಿಯ ಸೃಷ್ಟಿಗಳೇ ಆಗಿವೆ; ಹೆಚ್ಚೆಂದರೆ ಇಬ್ಬರಿರಬಹುದು ಎಂದು ಹೇಳುತ್ತಾರೆ. ಇವರು ಕಥೆಯ ಏಕ ಸೂತ್ರತೆಯನ್ನೂ ನಿಶ್ಚಿತ ಪಾತ್ರ ಚಿತ್ರಣವನ್ನೂ ತಮ್ಮ ವಾದಕ್ಕೆ ಸಮರ್ಥನೆಯಾಗಿ ನೀಡುತ್ತಾರೆ. ಈ ಎರಡು ಪಂಥದವರ ವಾದ ವಿವಾದಗಳು ಹೋಮರಿಕ್ ಸಮಸ್ಯೆ ಎಂದೇ ಪ್ರಸಿದ್ಧವಾಗಿವೆ.

*

**ಹೋವರ್ಡ್ ಕಾರ್ಟರ್:** 1874–1939. ಆಂಗ್ಲ ಈಜಿಪ್ಟಾಲಜಿಸ್ಟ್. ಪ್ರಪಂಚ ಪ್ರಸಿದ್ಧ ಟುಟಂಕಮನ್ ಪಿರಮಿಡ್ ಹಾಗೂ ರಾಣಿ ಹಟ್‌ಷೆಪ್‌ಸುಳ ಸಮಾಧಿಯ ಶೋಧಕ. ತನ್ನ 17ನೆಯ ವಯಸ್ಸಿನಲ್ಲಿ ಈಜಿಪ್ಟ್ ನಾಗರಿಕತೆಯ ವರ್ಣಚಿತ್ರ ಹಾಗೂ ಶಾಸನಗಳ ಅಧ್ಯಯನ ಆರಂಭಿಸಿದ. 1891ರಲ್ಲಿ ಪ್ರ.ಶ.ಪೂ.ಸು. 2000 ವರ್ಷಗಳ ಹಿಂದಿನ ಈಜಿಪ್ಟ್ ನಾಗರಿಕತೆಯ ರಾಜಕುಮಾರರ ಸಮಾಧಿ ನೆಲೆಯಾದ ಬೆನಿ ಹಸನ್ ಉತ್ಖನನದಲ್ಲಿ ಭಾಗಿಯಾಗಿದ್ದ. ಅನಂತರ ವಿಲಿಯಂ ಫ್ಲಿಂಡರ್ಸ್ ಪೆಟ್ರಿಯ ಶಿಷ್ಯನಾದ. 1907 ರಲ್ಲಿ ಗಣ್ಯ ಲಾರ್ಡ್ ಕಾರ್ನರ್‌ವೋನ್‌ನ ಪರಿಚಯವಾಯಿತು. ಆತ ಟುಟಂಕಮನ್ ಪಿರಮಿಡ್‌ನ ಶೋಧನೆಯಲ್ಲಿ ನಿರತನಾಗಿದ್ದ ಕಾರ್ಟರ್‌ಗೆ ಧನಸಹಾಯ ಮಾಡಿದ. ಹಲವಾರು ವಿಫಲ ಪ್ರಯತ್ನಗಳ ಅನಂತರ 1922 ನವೆಂಬರ್ 4ರಂದು ಸಮಾಧಿಯ ಮೆಟ್ಟಿಲಿರುವ ಜಾಗವನ್ನು ಗುರುತಿಸುವಲ್ಲಿ ಕಾರ್ಟರ್ ಯಶಸ್ವಿಯಾದ. ಸುಸ್ಥಿತಿಯಲ್ಲಿ ಸಂರಕ್ಷಿತವಾಗಿರುವ ಸಮಾಧಿ ಇದೆಂಬುದು ಇವನ ಅರಿವಿಗೆ ಬಂದಿತು. 1922 ನವೆಂಬರ್ 11 ರಂದು ಇವನು ಕಾರ್ನರ್‌ವೋನ್ ಹಾಗೂ ಅವನ ಮಗಳೊಂದಿಗೆ ಸಮಾಧಿಯ ಬಾಗಿಲಿನ ಎಡ ಮೇಲ್ಭಾಗದಲ್ಲಿ ಸಣ್ಣ ಕಿಂಡಿಯೊಂದನ್ನು ಮಾಡಿ ಮೇಣದ ಬತ್ತಿಯ ಬೆಳಕಿನಲ್ಲಿ ಒಳಗೆ ಇಣುಕಿದಾಗ ಆಶ್ಚರ್ಯ ಕಾದಿತ್ತು. ಚಿನ್ನ ಹಾಗೂ ಕರಿಮರದ ಅನರ್ಘ್ಯ ವಸ್ತುಗಳು ಅಲ್ಲಿದ್ದವು. ದ್ವಾರಬಂಧದಲ್ಲಿ ದ್ವಾರಪಾಲಕ ವಿಗ್ರಹಗಳಿದ್ದುದರಿಂದ ಇದು ಕೇವಲ ನಿಕ್ಷೇಪಗಳಿರುವ ಕೋಣೆ ಯಲ್ಲವೆಂಬುದು ಸ್ಪಷ್ಟವಾಗಿತ್ತು. 1923 ಫೆಬ್ರವರಿ 16ರಂದು ಬೀಗಮುದ್ರೆಯೊತ್ತಿದ್ದ ಸಮಾಧಿ ಕೋಣೆಯ ಬಾಗಿಲನ್ನು ಕಾರ್ಟರ್ ತೆರೆದ. ಹೀಗೆ ಟುಟಂಕಮನ್ ಸಮಾಧಿ ಬೆಳಕು ಕಂಡಿತು. ಸಮಾಧಿಯ ಈ ಶೋಧನೆ ಈಜಿಪ್ಟ್ ನಾಗರಿಕತೆಯ ಸಂಶೋಧನೆಯ ಒಂದು ಪ್ರಮುಖ ಮೈಲಿಗಲ್ಲಾಯಿತು. ಕಾರ್ಟರ್‌ನು ಸಮಾಧಿಯನ್ನು ಹೊಕ್ಕಾಗ 150 ಚಿನ್ನದ ತಾಯತಗಳು ಹಾಗೂ 11 ಕಿಗ್ರಾಂ ತೂಕದ ಚಿನ್ನದ ಮುಖವಾಡ ಅಲ್ಲಿತ್ತೆಂದು ಹೇಳಲಾಗುತ್ತದೆ. ಅಲ್ಲಿದ್ದ ವಸ್ತುಗಳ ಸಮಗ್ರ ಪಟ್ಟಿಯನ್ನು ಈತ ತಯಾರಿಸಿದ. 1924ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಈತ ಚಿತ್ರಸಹಿತ ಉಪನ್ಯಾಸಗಳನ್ನು ನೀಡುವುದರ ಮೂಲಕ ಜನರಲ್ಲಿ ಈಜಿಪ್ಟ್ ನಾಗರಿಕತೆಯ ಬಗ್ಗೆ ತೀವ್ರ ಆಸಕ್ತಿ ಮೂಡಿಸಿದ. 1939 ಮಾರ್ಚ್ 2 ರಂದು ಈತ ಲಂಡನ್ನಿನಲ್ಲಿ ನಿಧನನಾದ. ಇವನ ಸಮಾಧಿ ಈ ನಗರದ ಪುಟ್ನೆವೇಲ್ ಸ್ಮಶಾನಭೂಮಿಯಲ್ಲಿದೆ. (ಎ.ಎಸ್.)

**ಹ್ಯಾರಿಸ್ ಮ್ಯಾಟ್ರಿಕ್ಸ್ ಪದ್ಧತಿ:** ನೋಡಿ– ಪುರಾತತ್ತ್ವ

**ಹ್ಯಾಲ್‌ಸ್ಟಾಟ್ ಸಂಸ್ಕೃತಿ:** ಪ್ರ.ಶ.ಪೂ.ಸು.8–6ನೆಯ ಶತಮಾನದ ಮಧ್ಯ ಯುರೋಪಿನ ಕಬ್ಬಿಣಯುಗದ ಸಂಸ್ಕೃತಿ. ಇದು ಕಂಚಿನಯುಗದ ಅರ್ನ್‌ಫೀಲ್ಡ್ ಸಂಸ್ಕೃತಿ **(ನೋಡಿ)** ಹಾಗೂ ಲಾ ತೆನೆ ಸಂಸ್ಕೃತಿ **(ನೋಡಿ)** ಇವುಗಳ ನಡುವಿನದು. ಇದರಲ್ಲಿ ಎರಡು ಉಪಹಂತಗಳಿವೆ–ಹ್ಯಾಲ್‌ಸ್ಟಾಟ್ ಸಿ ಮತ್ತು ಹ್ಯಾಲ್‌ಸ್ಟಾಟ್ ಡಿ. 1846ರಲ್ಲಿ ಜಿ.ಜಿ.ರಾಮಸೌರ್ ಆಸ್ಟ್ರಿಯದಲ್ಲಿಯ ಸಾಲ್ಸ್‌ಬರ್ಗಿನ ಆಗ್ನೇಯಕ್ಕಿರುವ ಹ್ಯಾಲ್‌ಸ್ಟಾಟ್‌ನಲ್ಲಿ ಒಂದು ಪ್ರಾಗ್ಯೆತಿಹಾಸಿಕ ಸ್ಮಶಾನ ಭೂಮಿಯನ್ನು ಕಂಡುಹಿಡಿದು ಉತ್ಖನನ ಮಾಡಿದರು. ಕ್ರಮೇಣ ಇಲ್ಲಿ 1045 ಶವಕುಣಿಗಳನ್ನು ಅನಾವರಣಗೊಳಿಸಲಾಯಿತು. ಇವುಗಳಲ್ಲಿ ದೊರೆತ ವಸ್ತುಗಳ ಶೈಲಿ ಮತ್ತು ಅಲಂಕರಣ ವಿಶಿಷ್ಟವಾಗಿವೆ. ಈ ಪ್ರದೇಶದ ಜನರು ಉಪ್ಪಿನ ಉದ್ಯಮ ನಡೆಸುತ್ತಿದ್ದರು (ಈಗಿನ ವೆಲ್ಷ್ ಭಾಷೆಯಲ್ಲಿ ಹೇಲನ್ ಎಂದರೆ ಉಪ್ಪು ಎಂದರ್ಥ). ಈ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಕಂಚಿನ ಖಡ್ಗಗಳೊಂದಿಗೆ ಕಬ್ಬಿಣದ ಖಡ್ಗಗಳು ಇರುವುದು. ಹೂಳುವುದು ಮತ್ತು ದಹನ ಕ್ರಿಯೆ ಇವರ ಶವಸಂಸ್ಕಾರ ಪದ್ಧತಿಗಳಾಗಿದ್ದವು. ಎರಡನೆಯ ಉಪಹಂತದ ಶವಕುಣಿಗಳಲ್ಲಿ ಕಠಾರಿಗಳಷ್ಟೆ ಇದ್ದುವು. ಇವೆರಡು ಉಪಹಂತಗಳಲ್ಲಿಯ ಮಣ್ಪಾತ್ರೆ ಮತ್ತು ತಲೆಗೆ ಸಿಕ್ಕಿಸಿಕೊಳ್ಳುವ ಬಿಲ್ಲೆಗಳಲ್ಲಿ ವ್ಯತ್ಯಾಸಗಳಿವೆ.

ಶವಕುಣಿಗಳಲ್ಲಿ ದೊರೆತ ವಸ್ತು ಅವಶೇಷಗಳ ಆಧಾರದ ಮೇಲೆ ಈ ಸಂಸ್ಕೃತಿಯ ಭೌಗೋಳಿಕ ವಿಸ್ತಾರವನ್ನು ಪೂರ್ವ ಮತ್ತು ಪಶ್ಚಿಮ ಭಾಗಗಳೆಂದು ವಿಂಗಡಿಸಲಾಗಿದೆ. ಪೂರ್ವಭಾಗದ ಗಣ್ಯವರ್ಗಕ್ಕೆ ಸೇರಿದ ಶವಕುಣಿಗಳಲ್ಲಿ ಕೊಡಲಿಗಳು ಹಾಗೂ ಸೈನಿಕ ಉಡುಪು ಧರಿಸಿದ ಶವಗಳಿದ್ದರೆ, ಪಶ್ಚಿಮ ಭಾಗದಲ್ಲಿ ಕಠಾರಿ ಇಲ್ಲವೆ ಖಡ್ಗ ಮತ್ತು ರಥಗಳಿದ್ದವು. ಇನ್ನು ಕೆಲವು ಸಮಾಧಿಗಳಲ್ಲಿ ಕುದುರೆ ಜೀನಿನ ಭಾಗಗಳು, ರಥದ ನೊಗ, ಕುಸುರಿ ಕೆಲಸವುಳ್ಳ ಕಂಚು ಮತ್ತು ಚಿನ್ನದ ಆಭರಣಗಳು, ಕಲ್ಲಿನ ಫಲಕಗಳು ಇದ್ದುವು. ರೊಮೇನಿಯದಲ್ಲಿ ದೊರೆತ ಕಂಚಿನ ವಸ್ತುಗಳು ಈ ಸಂಸ್ಕೃತಿಯ ಅತಿ ದೊಡ್ಡ ನಿಕ್ಷೇಪ. ಇವರ ವಾಸ್ತವ್ಯ ನೆಲೆಗಳು ಗುಡ್ಡಗಳ ನೆತ್ತಿಯ ಮೇಲೆ ಇದ್ದುವು. ಇಂಥ ನೆಲೆಗಳಲ್ಲಿ ಡ್ಯಾನ್ಯೂಬ್ ನದಿಯ ಮೇಲ್ದಂಡೆಯ ಹೌನ್‌ಬರ್ಗ್, ಪೂರ್ವ ಫ್ರಾನ್ಸಿನ ಮೊಂಟ್ ಲಸ್ಸೊಯಿ ಮುಂತಾದವು ಪ್ರಮುಖವಾದುವು. ರಕ್ಷಣಾಗೋಡೆಗಳಿಂದ ಸುತ್ತುವರೆಯಲ್ಪಟ್ಟ ಈ ನೆಲೆಗಳಲ್ಲಿ ಕಂಚು, ಬೆಳ್ಳಿ, ಚಿನ್ನದ ಕಸಬುಗಳ ಚಿನಿವಾರರಿದ್ದರು. ಇವರ ವ್ಯಾಪಾರ–ವ್ಯವಹಾರ ಐಬೀರಿಯ ಪರ್ಯಾಯ ದ್ವೀಪ, ಬ್ರಿಟನ್ ಮತ್ತು ಐರ್ಲೆಂಡ್‌ವರೆಗೆ ಹಾಗೂ ದಕ್ಷಿಣದಲ್ಲಿ ಗ್ರೀಸ್ ದೇಶದವರೆಗೆ ಹಬ್ಬಿತ್ತು. (ಎ.ಎಸ್.;ಎನ್.ಎಲ್.)

**ಸುವರ್ಣ ಕರ್ನಾಟಕ ವರ್ಷದ ನೆನಹು**

# ಭಾರತೀಯ ಶಿಲ್ಪಗಳಲ್ಲಿ ಚಿಕಿತ್ಸಾ ವಿಧಾನ

ಚಿತ್ರ: 1. ಆಹಾರ ಪಚನ ಸಂಬಂಧಿ ಚಿಕಿತ್ಸೆ



ಚಿತ್ರ: 1 ಎ. ಮೇಲ್ತುಟಿಯ ಮೇಲೆ ಸೂಜಿಬಿಂದು




ಚಿತ್ರ: 1 ಬಿ. ಪ್ರತಿಕ್ರಿಯಾ ವಿಜ್ಞಾನ ಬಿಂದುಗಳು



ಚಿತ್ರ: 1 ಸಿ. ಪೃಥ್ವಿ ಮುದ್ರೆ



ಚಿತ್ರ: 2ಎ. ಚಿಕಿತ್ಸೆಯ ಕಿವಿ ಬಿಂದು

ಚಿತ್ರ: 2. ಕಿವಿಯ ಬಳಿ ಚಿಕಿತ್ಸಾ ವಿಧಾನವನ್ನು ತೋರಿಸುತ್ತಿರುವ ಅಪ್ಸರೆ

# ಭಾರತೀಯ ಶಿಲ್ಪಗಳಲ್ಲಿ ಚಿಕಿತ್ಸಾ ವಿಧಾನ

ಚಿತ್ರ: ಎದೆಶೂಲೆ ನಿವಾರಿಸುವ ಸೂಜಿ ಬಿಂದುಗಳನ್ನು ತೋರಿಸುತ್ತಿರುವ ಅಪ್ಸರೆ



ಮರ್ಮಸ್ಥಾನ



ಶೂನ್ಯಮುದ್ರೆ



ಚಿತ್ರ: ಬಿ. ಭುಜದ ಮುಂಬದಿಯಲ್ಲಿಯ ಸೂಜಿ ಬಿಂದುಗಳು

ಚಿತ್ರ: 3 ಎ 1





ಅನಾಹತ ಚಕ್ರ

ಮನುಷ್ಯನ ದೇಹದಲ್ಲಿ ಚಕ್ರ ಸ್ಥಾನಗಳು

ಅಪಾನಮುದ್ರೆ

ಚಿತ್ರ: 4. ಶರೀರ ಮತ್ತು ಚಿತ್ತಶುದ್ಧಿಯನ್ನು ತೋರಿಸುತ್ತಿರುವ ಅಪ್ಸರೆ

# ಪಾರಿಭಾಷಿಕ ಪದಗಳು

Abbevillian – ಅಬೆವೀಲ್ ಎಂಬಲ್ಲಿ ದೊರೆತ ಆದಿ ಹಳೆಶಿಲಾಯುಗದ ಮಾದರಿ ಉಪಕರಣ

Absolute Dating – ನಿರಪೇಕ್ಷ ಕಾಲನಿರ್ಣಯ

Acheulian – ಸೇಂಟ್ ಅಶೂಲ್ ಎಂಬಲ್ಲಿ ದೊರೆತ ಆದಿ ಹಳೆಶಿಲಾಯುಗದ ಮಾದರಿ ಉಪಕರಣ

Aerial photography – ವ್ಯೋಮ ಛಾಯಾಗ್ರಹಣ

Agate – ಒಂದು ಬಗೆಯ ಅರೆಪ್ರಶಸ್ತ ಕಲ್ಲು

Akshamala – ಜಪಮಾಲೆ, ಜಪಸರ

Alindo – ಇಕ್ಕೆಲದ ಹಜಾರಗಳು, ಎರಡುಬದಿಯ ಮೊಗಸಾಲೆ

Amalak – ರೇಖಾನಾಗರ, ಪೀಡಾ ಮಾದರಿಗಳ ದೇವಾಲಯದ ಶಿಖರದ ತುದಿಯಲ್ಲಿ ರುವ ನೆಲ್ಲಿಕಾಯಿಯಾಕಾರದ ಭಾಗ

Amphora – ಮಧುಪಾತ್ರೆ / ಮದ್ಯಜಾಡಿ

Andambara – ಹೊಸ್ತಿಲು

Anga – ದೇವಾಲಯದ ಸಮಾನಾಂತರ ಅಥವಾ ಲಂಬಾಕಾರದ ಭಾಗಗಳು; ಭದ್ರ, ಪ್ರತಿರಥ, ಕರ್ಣ ಮುಂತಾದವು

Antarapatta – ಅಲಂಕಾರದ ಪಟ್ಟಿಕೆ ನಡುವಿನ ಹಿನ್‌ಸರಿತದ ಭಾಗ

Antennae sword – ಜಿರಳೆ ಮೀಸೆಯಂತೆ ಇಬ್ಬದಿ ಬಾಗಿದ ಹಿಡಿಕೆಯುಳ್ಳ ಉದ್ದ ಕತ್ತಿ

Anthropomorph – ಮನುಷ್ಯಾಕೃತಿಯ ಕಲ್ಗೊಂಬೆ

Anvil – ಬಡಿಗಲ್ಲು

Apasmara purusa – ಅಜ್ಞಾನದ ಸಾಂಕೇತಿಕ ಕುಬ್ಜರಾಕ್ಷಸ

Appliqué design – ಮಣ್ಣುಮೆತ್ತಿ ಮಾಡಿದ ಅಲಂಕರಣ

Archaeo magnetism – ಪುರಾಕಾಂತೀಯತೆ

Area excavation – ಕ್ಷೇತ್ರ ಉತ್ಖನನ

Arrow head – ಬಾಣದ ಮೊನೆ

Artefact – ಮಾನವ ನಿರ್ಮಿತ ಪ್ರಾಚ್ಯ ವಸ್ತುಗಳು

Ash mound – ಬೂದಿದಿಬ್ಬ

Ashtamangala – ಪ್ರಾಚೀನ ಶಿಲ್ಪ ಫಲಕಗಳಲ್ಲಿಯ 8 ಮಂಗಳ ಚಿಹ್ನೆಗಳು: ಸ್ವಸ್ತಿಕ, ದೀಪ, ಜೋಡಿ ಮೀನು, ಆಸನ, ಶ್ರೀವತ್ಸ, ಶಂಖ, ಗ್ರಂಥಪೀಠ

Assemblage – ಸಮುಚ್ಚಯ / ಸಂಚಯ

Aurex – ಕಾಡೆತ್ತು

Axe with cross ring fastner – ಹುರಿ ಬಿಗಿದ ಕೊಡಲಿ

Ayudhapurusha – ಶಂಖ ಚಕ್ರ ಮೊದಲಾದ ಆಯುಧಗಳ ಮನುಷ್ಯಾಕೃತಿಗಳು

Backed blade – ಬದಿ ಮೊಂಡಾಗಿಸಿದ ಅಲಗು

Bahyashakha – ಹಲವಾರು ಶಾಖೆಗಳಿಂದ ಕೂಡಿದ ದ್ವಾರಬಂಧದ ಅತ್ಯಂತ ಹೊರ ಬದಿಯ ಶಾಖೆ

Balipeeta – ಆಗಮ ಶಾಸ್ತ್ರರೀತ್ಯ ಕಟ್ಟಿದ ದೇವಾಲಯದ ಧ್ವಜಸ್ತಂಭದ ಮುಂದೆ ವಿಶೇಷವಾಗಿ ರೂಪಿಸಿರುವ ಕಟ್ಟೆ

Balustra – ಕೈಪಿಡಿ, ಕಟಾಂಜನ

Barbed arrowhead – ಮುಳ್ಳಿರುವ ಬಾಣದ ಮೊನೆ

Basic map – ಮೂಲನಕ್ಷೆ

Basin – ಬೋಗುಣಿ

Battle axe – ಗಂಡುಗೊಡಲಿ

Baulk – ಅಡ್ಡಗೋಡೆ

Bead making – ಮಣಿಗಾರಿಕೆ

Biface – ದ್ವಿಮುಖ ಉಪಕರಣ

Black and Red ware – ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆ

Blade – ಸಮಾನಾಂತರ ಅಂಚಿನ ನೀಳ ಚಕ್ಕೆ, ಅಲಗು

Bond – ಬಂಧ

Borer – ಕೊರೆಯುಳಿ

Bos namadicus – ನಶಿಸಿಹೋದ ಕಾಡುದನ

Bronze Age – ಕಂಚಿನಯುಗ

Bruising – ಕುಟ್ಟಿ ಮೂಡಿಸಿದ ಚಿತ್ರ

Bulb of percussion – ಶಿಲೋಪಕರಣದ ಒಳಮೈಯಲ್ಲಿ ಹೊಡೆತದಿಂದ ಉಂಟಾದ ಉಬ್ಬು

Burin – ಕೊರೆಯುಳಿ, ಕಲ್ಲುಳಿ

Burnished Gray ware – ಉಜ್ಜಿದ ಬೂದುಬಣ್ಣದ ಮಣ್ಪಾತ್ರೆ

Burrow – ಸಮಾಧಿ ದಿಬ್ಬ

Button seal – ಗುಂಡಿಯಾಕಾರದ ಮುದ್ರೆ

Cairn circle – ಕಲ್ಗುಪ್ಪೆ ವೃತ್ತ

Calibrated date – ಪರಿಷ್ಕೃತ ಕಾಲಮಾನ

Carbon-14 dating – ಇಂಗಾಲ–14 ಕಾಲನಿರ್ಣಯ

Carnelian – ಮಂದಗೆಂಪಿನ ಅರೆಪ್ರಶಸ್ತ ಕಲ್ಲು

Cave Art – ಗವಿಚಿತ್ರ, ಗುಹಾಚಿತ್ರ

Ceramics – ಕುಂಬಾರಿಕೆ, ಮಣ್ಪಾತ್ರೆಕಲೆ

Chalcedony – ಒಂದು ಬಗೆಯ ಅರೆಪ್ರಶಸ್ತ ಕಲ್ಲು

Chalcolithic – ತಾಮ್ರ–ಶಿಲಾಯುಗ

Chandrika – ಶಿಖರದ ಮೇಲಿನ ಕಳಶ ಮತ್ತು ಆಮಲಕದ ನಡುವಿನ ವಾಸ್ತುರಚನೆ

Chapakara – ಕಮಾನು ಗೂಡಿನಾಕಾರದ ವಾಸ್ತು ಮಾದರಿ

Chatushki – ನಾಲ್ಕು ಕಂಬಗಳ ನಡುವಿನ ಭಾಗ

Chauri – ಚಮರೀ ಮೃಗದ ಕೂದಲಿನಿಂದ ಮಾಡಿದ ಚಾಮರ

Chert – ಚಕಮಕಿ ಕಲ್ಲು

Chopper – ಮಚ್ಚು

Cist with cairn – ನೆಲಕೋಣೆ ಸಹಿತವಾದ ಕಲ್ಗುಪ್ಪೆ

Citadel – ದುರ್ಗ

Clactonian – ಆದಿ ಹಳೆಶಿಲಾಯುಗದ ಮಾದರಿ ಉಪಕರಣ

Cleaver – ಸೀಳುಗತ್ತಿ/ಕಡಿಕತ್ತಿ

Colonialism – ವಸಾಹತುಶಾಹಿ ನೀತಿ

Conglomerate – ಹೆಂಟೆಶಿಲೆ

| | | |
|---|---|---|
| Copper hoard | – | ತಾಮ್ರೋಪಕರಣ ಗುಡ್ಡೆ |
| Copper ingots | – | ತಾಮ್ರದ ಗಟ್ಟಿ |
| Cord impressed ware | – | ಹುರಿಯೊತ್ತಿ ಅಲಂಕರಿಸಿದ ಪಾತ್ರೆ |
| Core | – | ತಿರುಳುಗಲ್ಲು, ಮೂಲಶಿಲೆ |
| Crouched burial | – | ಕೈಕಾಲು ಮಡಿಸಿದ ಭಂಗಿಯ ಸಮಾಧಿ |
| Crusades | – | ಧಾರ್ಮಿಕ ಯುದ್ಧಗಳು |
| Cultural overlap | – | ಸಾಂಸ್ಕೃತಿಕ ಸಮ್ಮಿಶ್ರಣ; ಒಂದು ಸಂಸ್ಕೃತಿಯು ಇನ್ನೊಂದು ಸಂಸ್ಕೃತಿಯೊಳಗೆ ವ್ಯಾಪಿಸುವುದು |
| Cultural sequence | – | ಸಾಂಸ್ಕೃತಿಕ ಅನುಕ್ರಮ |
| Culture Sequence dating | – | ಸಂಸ್ಕೃತಿಗಳ ಅನುಕ್ರಮ ವಿಧಾನದ ಕಾಲನಿರ್ಣಯ |
| Cursive script | – | ಮೋಡಿ ಬರವಣಿಗೆ |
| Dead Sea scrolls | – | ಮೃತ ಸರೋವರದ ಸುರುಳಿಗಳು |
| Debitage | – | ತ್ಯಾಜ್ಯ ಚಕ್ಕೆಗಳು |
| Deposit | – | ಸ್ತರ / ಪದರ / ಸಂಚಯನ |
| Devakoshta | – | ದೇವಾಲಯದ ಗರ್ಭಗೃಹ ಮತ್ತು ಸಭಾ ಮಂಟಪದ ಹೊರಗೋಡೆಯ ಮೇಲೆ ಸ್ತಂಭಸಹಿತ ವಿವಿಧ ದೇವತಾ ಮೂರ್ತಿಗಳಿರುವ ಗೂಡು |
| Dictatorship | – | ನಿರಂಕುಶ ಪ್ರಭುತ್ವ |
| Discoid | – | ಚಕ್ರಾಕಾರದ ಕಲ್ಲಿನ ಉಪಕರಣ, ಬಿಲ್ಲೆಯಾಕಾರದ ಉಪಕರಣ |
| Dish-on-stand | – | ಕಾಲಿರುವ ತಟ್ಟೆ |
| Dockyard | – | ಬಂದರುಕಟ್ಟೆ, ಹಡಗುಕಟ್ಟೆ |
| Dolmen | – | ಕಲ್ಮನೆ |
| Dolmenoid cist | – | ಕಲ್ಮನೆ ಕೋಣೆ |
| Drill bits | – | ಬೈರಿಗೆ ಮೊಳೆ |
| Dvarabandha | – | ದೇವಾಲಯದ ಬಾಗಿಲು ಚೌಕಟ್ಟು |
| Early Historical | – | ಆದಿಚಾರಿತ್ರಿಕ, ಆದಿಇತಿಹಾಸ |
| Engraving | – | ಗೀರು ರೇಖಾಚಿತ್ರ |
| Environment | – | ಪರಿಸರ |
| Eolith | – | ಪ್ರಾಕೃತಿಕವಾಗಿ ದೊರೆತ, ಮಾನವ ಬಳಸಿದ ಕಲ್ಲು |
| Epipalaeolithic | – | ಅಂತ್ಯ ಹಳೆಶಿಲಾಯುಗೋತ್ತರ |
| Etched bead | – | ಎಚ್ಚಿದ; ನಿಕ್ಷಾರಿಸಿದ ಮಣಿ/ಕುಂದಣಿಸಿದ |
| Evolution Theory | – | ವಿಕಾಸವಾದ |
| Excavation | – | ಉತ್ಖನನ |
| Exploration | – | ಪುರಾತತ್ತ್ವ ಪರಿಶೋಧನೆ/ಅನ್ವೇಷಣೆ/ ಸರ್ವೇಕ್ಷಣೆ |
| Extended burial | – | ನೇರಭಂಗಿಯಲ್ಲಿರುವ ಸಮಾಧಿ |
| Fertile Crescent | – | ಬಾಲಚಂದ್ರಾಕೃತಿಯ ಭೂಭಾಗ |
| Fish scale design | – | ಉರುಪೆ ವಿನ್ಯಾಸ |
| Flake-Blades | – | ಚಕ್ಕೆ–ಅಲಗುಗಳು |
| Flint | – | ಚಕಮಕಿ ಕಲ್ಲು |
| Fossil wood | – | ವೃಕ್ಷಶಿಲೆ |
| Fossil | – | ಪಳೆಯುಳಿಕೆ, ಜೀವ್ಯವಶೇಷ, ಸಸ್ಯ ಅಥವಾ ಪ್ರಾಣಿ ಅವಶೇಷ |
| Four spouted pot | – | ಪಂಚಮುಖಿ ಪಾತ್ರೆ |
| Funnel shaped lid | – | ಆಲಿಕೆಯಾಕಾರದ ಮುಚ್ಚಳ |
| Gadhadevi | – | ಸ್ತ್ರೀ ಆಕೃತಿಯಲ್ಲಿರುವ ವಿಷ್ಣುವಿನ ಗದೆ |
| Gaja/Hasti Prishta | – | ಗಜ/ಹಸ್ತಿ ಪೃಷ್ಠ, ಹಿಂಬದಿಯಲ್ಲಿ ಆನೆಯ ಹಿಂಬದಿಯಂತೆ ಕಾಣುವ ಅರ್ಧವೃತ್ತಾಕಾರದ ವಿನ್ಯಾಸ |
| Gajatara | – | ಅಧಿಷ್ಠಾನದಲ್ಲಿಯ ಅಡ್ಡಪಟ್ಟಿಕೆಗಳಲ್ಲೊಂದರಲ್ಲಿ ವಿವಿಧ ಭಂಗಿಗಳಲ್ಲಿಯ ಆನೆಗಳ ಸಾಲು ಪಟ್ಟಿಕೆ. ಹೊಯ್ಸಳ ದೇವಾಲಯಗಳಲ್ಲಿ ಇದು ಸಾಮಾನ್ಯ |
| Genocide | – | ಜನಾಂಗ ಹತ್ಯೆ |
| Ghanadwara | – | ಕೆಲವು ದೇವಾಲಯಗಳ (ಗರ್ಭಗುಡಿಯ) ಹೊರಗೋಡೆಗಳಲ್ಲಿ ಉತ್ತರ, ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಮುಖಮಂಟಪದಂತೆ ಇರುವ ಒಂದು ಮಂಟಪ. ಇದರಲ್ಲಿ ಬೃಹತ್ ಶಿಲ್ಪವಿರುತ್ತದೆ |
| Ghanta | – | ಘಂಟೆ |
| Glacial period | – | ಹಿಮಘಟ್ಟ |
| Glazed ware | – | ಮೆರುಗಿನ ಮಣ್ಪಾತ್ರೆ |
| Goblet | – | ಪಾನಪಾತ್ರೆ |
| Godhasana | – | ಉಡದ ಆಸನ, ಪಾರ್ವತಿಯ ಒಂದು ರೂಪ |
| Gopura | – | ದೇವಾಲಯದ ಮಹಾದ್ವಾರದ ಮೇಲ್ಕಟ್ಟಡ |
| Graffiti | – | ಗೀರು ರೇಖಾಚಿತ್ರ |
| Grasa | – | ಘೋರರೂಪಿ ಶಿಲ್ಪ |
| Gravel | – | ಜಲ್ಲಿಕಲ್ಲು |
| Griva | – | ಕತ್ತು, ಶಿಖರಕ್ಕೂ ಮತ್ತು ಆಮಲಕದ ನಡುವಿನ ಭಾಗ |
| Gudha Mantapa | – | ಉತ್ತರ ಭಾರತ ದೇವಾಲಯದ ಗರ್ಭಗುಡಿ ಮತ್ತು ಸಭಾಮಂಟಪದ ನಡುವಿನ ಮುಚ್ಚಿದ ಮಂಟಪ. ದಕ್ಷಿಣ ಭಾರತದ ದೇವಾಲಯದಲ್ಲಿಯ ಈ ಭಾಗವನ್ನು ಅರ್ಧಮಂಟಪ ಅಥವಾ ಕುರುನಾಸಿ ಎಂದು ಕರೆಯಲಾಗಿದೆ |
| Hand axe | – | ಕೈಗೊಡಲಿ |
| Harpoon | – | ಈಟಿಗಾಳ |
| Heritage Tourism | – | ಪರಂಪರೆ ಪ್ರವಾಸೋದ್ಯಮ |
| Hilted arrowhead | – | ತೊಟ್ಟುಳ್ಳ ಬಾಣದ ಮೊನೆ |
| Holocene | – | ಭೂವಿಜ್ಞಾನದಲ್ಲಿ ಈಗಿನ ಯುಗ |
| Hood stone | – | ಹೆಡೆ ಕಲ್ಲು |
| Horizontal excavation | – | ವಿಸ್ತೃತ ಉತ್ಖನನ |
| Implements | – | ಉಪಕರಣ, ಸಲಕರಣೆ, ಸಾಮಗ್ರಿ |
| Infinite series | – | ಅನಂತ ಮಾಲಿಕೆ |
| Intaglio | – | ಉತ್ಕೀರ್ಣ ಮುದ್ರಿಕೆ |
| Jangha | – | (ಉತ್ತರ ಭಾರತ) ದೇವಾಲಯದ ಗೋಡೆ |
| Jasper | – | ಒಂದು ವರ್ಗದ ಅರೆಪ್ರಶಸ್ತ ಕಲ್ಲು |

Jujube – ಬಾರೆಹಣ್ಣು, ಎಲಚಿಹಣ್ಣು
Kadalika Karana – ತ್ರಿಕೋನಾಕಾರದ ಚಾಚುಫಲಕಗಳಿಂದ ಚಾವಣಿಯನ್ನು 2–3 ಸುತ್ತಿನಲ್ಲಿ ಮುಚ್ಚುವ ತಂತ್ರ.
Kakshasana – ದೇವಾಲಯದ ಸಭಾ ಮಂಟಪದ ಅಂಚಿನಲ್ಲಿ ಕುಳಿತುಕೊಳ್ಳುವುದಕ್ಕೆ ಮಾಡಿದ ಒರಗು ಕಟ್ಟೆ
Kalpavalli – ಅಪೇಕ್ಷೆಯನ್ನು ಪೂರೈಸುವ ಬಳ್ಳಿ
Kambhanda – ಉದರದೊಳಗೆ ಮುಖವುಳ್ಳ ಗಣ
Karna – ಮೂಲೆ (ರೇಖಾನಾಗರ ಮಾದರಿ ದೇವಾಲಯ); ಶಿಖರದ ಪ್ರತಿ ಹಂತದ ಮೇಲಂಚಿನ ಮೂಲೆ. ಇಲ್ಲಿ ಸಾಮಾನ್ಯವಾಗಿ ಆಮಲಕವಿರುತ್ತದೆ. ಇದೇ ಕರ್ಣಾಮಲಕ.
Khura – ವೇದಿಬಂಧ ಮಾಧರಿಯ (ಒರಿಸ್ಸ ದೇವಾಲಯ) ಅಧಿಷ್ಠಾನದ ಅತ್ಯಂತ ಕೆಳಗಿನ ಅಡ್ಡ ಪಟ್ಟಿಯನ್ನು ಕುದುರೆಯ ಗೊರಸಿನಂತೆ ಮಾಡಲಾಗಿರುತ್ತದೆ.
Kiln – ಆವಿಗೆ
Kinnara – ದೇವಲೋಕದ ಸಂಗೀತಗಾರ
Kiritamakuta – ಶಂಕುವಿನಾಕೃತಿಯ ಕಿರೀಟ
Kirtimukha – ಗ್ರಾಸಮುಖ
Kudyastambha – ಗೋಡೆಯ ಹೊರಮೈಯಲ್ಲಿಯ ಅಲಂಕಾರಿಕ ಅರ್ಧಗಂಭ
Kumbhaka – ಮಡಕೆಯಾಕೃತಿಯ ಕಂಬದ ಪೀಠ
Lapidary – ಮಣಿಗಾರ
Lapis Lazuli – ನೀಲವರ್ಣದ ಕಲ್ಲು, ವೈಡೂರ್ಯ
Last supper – ಕೊನೆಯ ಭೋಜನ (ಸಂಗಡಿಗರೊಡನೆ ಏಸುಕ್ರಿಸ್ತನ)
Lasuna – ಸ್ತಂಭದ ಬೋದಿಗೆ ಮೇಲಿನ ಕುಂಭದಾಕೃತಿಯ ಭಾಗ
Late Historical – ಉತ್ತರಕಾಲೀನ ಇತಿಹಾಸ ಕಾಲ
Laterite – ಜಂಬಿಟ್ಟಿಗೆ
Latina – ಉತ್ತರ ಭಾರತದ ರೇಖಾನಾಗರ ಮಾದರಿ ದೇವಾಲಯದ ಒಂದು ಪ್ರಕಾರ
Layer – ಪದರ, ಸ್ತರ, ವರಸೆ
Lipped bowl – ಚುಳ್ಳಿ ಇರುವ ಬಟ್ಟಲು
Lower Early Palaeolithic – ಆದಿ ಹಳೆಶಿಲಾಯುಗ
Lower town – ಕೆಳ ನಗರ
Lunate – ಅರ್ಧಚಂದ್ರಾಕೃತಿಯ ಶಿಲೋಪಕರಣ
Lustrous red ware – ಹೊಳಪಿನ ಕೆಂಪು ಪಾತ್ರೆ
Madhyabandha – ಲತಿನ ಶಿಖರದ (ರೇಖಾನಾಗರ) ಮಧ್ಯದ ಊರ್ಧ್ವಪಟ್ಟಿಕೆ
Magnetic survey – ಕಾಂತೀಯ ಸರ್ವೇಕ್ಷಣೆ
Mahadvara – ದೇವಾಲಯ ಸುತ್ತು ವರಿದಿರುವ ಪೌಳಿ ಗೋಡೆಯ ನಾಲ್ಕು ದಿಕ್ಕುಗಳಲ್ಲಿ ಯಾವುದಾದರೂ ಒಂದು ದಿಕ್ಕಿನ ಮಧ್ಯದಲ್ಲಿರುವ ಬೃಹತ್ ಪ್ರವೇಶದ್ವಾರ
Mahanasi – ದೇವಾಲಯದ (ವೇಸರಮಾದರಿ) ಮೇಲ್ಕಟ್ಟಡದ ಮುಂಬದಿಯಲ್ಲಿರುವ ದೊಡ್ಡ ಗಾತ್ರದ ಸುಕನಾಸಿ
Makara Pranala – ಗರ್ಭಗುಡಿಯ ಎಡಬದಿಯ ಹೊರಗೋಡೆಯಲ್ಲಿರುವ ಮೊಸಳೆ ಯಾಕಾರದ ಅಭಿಷೇಕದ ಜಲಧಾರಿ
Makara Torana – ಎದುರು ಬದರಾಗಿರುವ ಮೊಸಳೆಗಳು ಅಲೆಅಲೆಯಾಕಾರದ ಹಾರದ ಎರಡೂ ತುದಿಗಳನ್ನು ಎತ್ತಿಹಿಡಿದಿರುವಂತೆ ತೋರಿಸಿರುವ ತೋರಣ
Malasthana – ಬೋದಿಗೆಯ ಕೆಳಗೆ ಹೂವಿನ ತೋರಣದಿಂದ ಅಲಂಕರಿಸಿದ ಕಂಬದ ಭಾಗ
Mala Vidyadhara – ಹಾರವನ್ನು ಹಿಡಿದು ಆಕಾಶದಲ್ಲಿ ಹಾರುವ ದೇವತೆಗಳ ಒಂದು ವರ್ಗ
Mammoth – ಹಿಮಆನೆ
Manchika – ಶಿಲ್ಪಗಳ ಆಧಾರಕ್ಕೆ ವೇದಿಕೆ ರೀತಿಯ ಪಟ್ಟಿಕೆ
Mandala – ವರ್ತುಲಾಕಾರವಾದ ರೇಖಾ ವಿನ್ಯಾಸ
Mandaraka – ಮುಂಚಾಚಿದ ಅಲಂಕಾರಮಯವಾದ ಕಲ್ಲಿನ ಮಧ್ಯಭಾಗ
Manibandha – ವಜ್ರಾಕೃತಿ ಮತ್ತು ಹೂ ಒಂದಾದ ಅನಂತರ ಒಂದು ಜೋಡಣೆಗೊಂಡಿರುವ ಪಟ್ಟಿಕೆ
Manjari – ಪಿರಿಮಿಡ್ಡಿನಾಕಾರದ ಗೋಪುರದ ಭಾಗ, ಶೃಂಗ
Marine Archaeology – ಸಾಗರ ಪುರಾತತ್ತ್ವ
Medieval – ಮಧ್ಯಯುಗದ, ಮಧ್ಯಯುಗೀನ ಕಾಲದ
Megalith – ಬೃಹತ್ ಶಿಲಾ ಸಮಾಧಿ
Megalithic culture – ಬೃಹತ್ ಶಿಲಾ ಸಂಸ್ಕೃತಿ
Menhir – ನಿಲಸಗಲ್ಲು ಗೋರಿ ಇಲ್ಲವೆ ಸ್ಮಾರಕಶಿಲೆ
Mesolithic – ಸೂಕ್ಷ್ಮ ಶಿಲಾಯುಗ
Metallurgy – ಲೋಹವಿಜ್ಞಾನ
Middle Palaeolithic – ಮಧ್ಯ ಹಳೆಶಿಲಾಯುಗ
Misraka – ಚೌಕಾಕೃತಿಯಿಂದ ವೃತ್ತಾಕಾರದವರೆಗಿನ ಕಂಬದ ಮಾದರಿ
Mithunasakha – ರಸಿಕ ದಂಪತಿಗಳ ಕಿರುಶಿಲ್ಪ ಸಾಲುಳ್ಳ ದ್ವಾರಬಂಧದ ಒಂದು ಪ್ರಕಾರದ ಶಾಖೆ
Mud brick – ಹಸಿ ಇಟ್ಟಿಗೆ
Mukhachatushki – ನಾಲ್ಕು ಕಂಬಗಳುಳ್ಳ ದ್ವಾರಮಂಟಪ
Mulamanjare – ಪ್ರಧಾನ ಶಿಖರ
Murram – ಕೆಂಪು ಗರಸುಮಣ್ಣು
Nabhichhanda – ಸಮಾನಕೇಂದ್ರ ಆಳವಾದ ಪಟ್ಟಿಯಿಂದ ಅಲಂಕೃತವಾದ ಚಾವಣಿ
Nagapasa – ಹೆಣೆದುಕೊಂಡ ಜೋಡಿ ಸರ್ಪಗಳ ವಿನ್ಯಾಸ
Nail parer – ಅರ
Nakulaka – ಒಂದು ಮಾದರಿಯ ಚೀಲ
Nasta'liq – ಅಲಂಕಾರಿಕ ಅರೇಬಿಕ್ ಲಿಪಿ

Neolithic age – ನವಶಿಲಾಯುಗ
Neolithic - Chalcolithic – ನವ ಶಿಲಾ–ತಾಮ್ರಯುಗ
New Archaeology – ನವ ಪುರಾತತ್ತ್ವಶಾಸ್ತ್ರ
Nirandhara – ಪ್ರದಕ್ಷಿಣ ಪಥವಿಲ್ಲದ(ದೇವಾಲಯ)
Northern Black Polished Ware – ಔತ್ತರೇಯ ಮೆರುಗಿನ ಕಪ್ಪು ಪಾತ್ರೆ
Ochre Coloured Pottery – ಕಾವಿಬಣ್ಣದ ಮಣ್ಪಾತ್ರೆ
Painted Grey Ware – ಚಿತ್ರಿತ ಬೂದುಬಣ್ಣದ ಮಣ್ಪಾತ್ರೆ
Palaeontology – ಪ್ರಾಗ್ಜೀವವಿಜ್ಞಾನ, ಪ್ರಾಗ್ಜೀವಶಾಸ್ತ್ರ
Palaeo – economy – ಪುರಾ ಆರ್ಥಿಕತೆ
Palaeo-environment – ಪುರಾ ವಾತಾವರಣ
Palaeolithic – ಹಳೆ ಶಿಲಾಯುಗ
Panjara – ಪಂಜರ, ತುದಿಯಲ್ಲಿ ಗುಚ್ಛವಿರುವ ಅರ್ಧಗೋಲಾಕೃತಿಯ ಸಣ್ಣಗೂಡು
Parasu – ಅರ್ಧಚಂದ್ರಾಕೃತಿಯ ಕೊಡಲಿ
Paricharika – ಸೇವಕಿ
Passage chamber – ಬೃಹತ್ ಶಿಲಾ ಸಂಸ್ಕೃತಿಯ ಹಾದಿ ಕೋಣೆ ಗೋರಿ
Patika – ಚಾಚು ಪೀಠದ ಬೋದಿಗೆ
Peat – ಸಸ್ಯಾಂಗಾರ
Pedya – ದ್ವಾರಬಂಧದ ಶಾಖೆಗಳ ಕೆಳಭಾಗದಲ್ಲಿ ಚಾಮರ ಸೇವಕಿ, ದ್ವಾರಪಾಲ ಮೊದಲಾದವರನ್ನು ತೋರಿಸುವ ಭಾಗ
Period – ಹಂತ, ಅವಧಿ, ಘಟ್ಟ
Phalaka - Abacus – ಕಂಬದ ತುದಿಯಲ್ಲಿ ಅಡ್ಡಲಾಗಿರುವ ಚೌಕಾಕೃತಿಯ ಕಲ್ಲು ಹಲಗೆ
Phamsakara – ಪಿರಮಿಡ್ ಮಾದರಿಯ ಪಟ್ಟಿಗಳು
Phamsakuta – ಗೋಡೆಯಲ್ಲಿರುವ ಪಿರಮಿಡ್ ಮಾದರಿಯ ಗೂಡು
Phase – ಉಪಹಂತ
Pinched design – ಚಿವುಟಿ ಮಾಡಿದ ವಿನ್ಯಾಸ
Pit burial – ಶವಕುಣಿ
Pit hearth – ಗುಳಿ ಒಲೆ
Pit silo – ಧಾನ್ಯ ಸಂಗ್ರಹಣ ಗುಂಡಿ, ಹಗೇವು
Pithika – ವಿಗ್ರಹದ ಪೀಠ
Pleistocene – ಹಿಮಯುಗ
Pluvial – ವರ್ಷಾಕಾಲ
Point – ಮೊನೆ, ಚೂಪು
Pollen analysis – ಪರಾಗ ವಿಶ್ಲೇಷಣೆ, ಸಸ್ಯರೇಣು ವಿಶ್ಲೇಷಣೆ
Portable art – ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಬಹುದಾದ ಕಲಾಕೃತಿ
Port-holed cist – ಕಂಡಿಕೋಣೆ ಗೋರಿ
Post hole – ಕಂಬದ ಗುಳಿ
Pottery yard – ಮಣ್ಪಾತ್ರೆಗಳ ಅಂಕಣ
Pottery – ಮಣ್ಪಾತ್ರೆ
Pounder (muller) – ಕುಟ್ಟಾಣಿ
Prabhamandala – ವಿಗ್ರಹದ ತಲೆಯ ಸುತ್ತಲೂ ತೋರಿಸಿರುವ ದಿವ್ಯ ವೃತ್ತ
Prabhavali – ತೇಜೋವಲಯ, ಪ್ರಕಾಶಬಿಂಬ
Pragriva – ಗರ್ಭಗೃಹದ ಮುಂಚಾಚಿದ ಮುಂಭಾಗ
Prakara – ದೇವಾಲಯವನ್ನು ಆವರಿಸಿದ ಪೌಳಿಗೋಡೆ
Pranala – ಗರ್ಭಗೃಹದಲ್ಲಿರುವ ದೇವತಾ ಮೂರ್ತಿಯ ಅಭಿಷೇಕದ ನೀರು ಎಡ ಬದಿಯ ಗೋಡೆಯ ಮೂಲಕ ಹಾದು ಹೋಗುವಂತೆ ಮಾಡಿರುವ ನಾಳ
Prasada – ದೇವಾಲಯದ ಭವ್ಯ ಸಭಾಂಗಣ
Pratibhadra – ಗೋಡೆಯ ಮಧ್ಯದ ಪಾರ್ಶ್ವದಲ್ಲಿರುವ ಒಂದು ಶಾಖೆ
Pratihara – ದ್ವಾರಪಾಲ
Pratima – ವಿಗ್ರಹ, ಮೂರ್ತಿ
Pratoli – ಕಾವಲು ಮನೆ, ಮಹಾದ್ವಾರದ ಬಳಿಯ ಮನೆ
Prepared core techniqe – ಸಿದ್ಧ ಶಿಲಾತಂತ್ರ (ಮಧ್ಯ ಹಳೆಶಿಲಾಯುಗ)
Pressure technique – ಒತ್ತಡ ಅಥವಾ ಅದುಮಿಕೆ ತಂತ್ರ
Protohistoric – ಪೂರ್ವಭಾವಿ ಇತಿಹಾಸ
Punch marked coin – ಮುದ್ರಾಂಕಿತ ನಾಣ್ಯ, ಆಹತ
Purnakumbha – ಎಲೆ–ಹೂವುಗಳಿಂದ ಅಲಂಕರಿಸಲ್ಪಟ್ಟ ಕುಂಭ
Quadrant excavation – ಚತುರ್ಭಾಗ ಉತ್ಖನನ
Quartz – ಬೆಣಚುಕಲ್ಲು
Quaternary – ಚತುರ್ಥಯುಗ
Radio active – ರೇಡಿಯೋ ವಿಕಿರಣ
Rangamantapa – ತೆರೆದ ಸ್ತಂಭ ಸಭಾಮಂಟಪ
Rathika – ಚೌಕಟ್ಟು ಉಳ್ಳ ಗೋಡೆಯ ಗೂಡು
Relative dating – ಸಾಪೇಕ್ಷ ಕಾಲನಿರ್ಣಯ
Relic casket – ಕರಂಡಿಕೆ
Remote sensing – ದೂರಸಂವೇದನೆ
Ring stone – ಉಂಗುರ ಕಲ್ಲು / ತೂತಿರುವ ವರ್ತುಲಾಕಾರದ ಕಲ್ಲು
Rock art – ಶಿಲಾ ಚಿತ್ರಕಲೆ, ಬಂಡೆಗಲ್ಲು ಚಿತ್ರಕಲೆ
Rock-cut caves – ನೆಲದಡಿಯ ಕಲ್ಲುಗುಹೆಗಳು (ಸಮಾಧಿ ಪ್ರಕಾರ)
Rouletted ware – ರೌಲೆಟ್ ಮಣ್ಪಾತ್ರೆ
Ruchaka – ಚೌಕೋನ ಮಾದರಿಯ ಕಂಬ; ಬ್ರಹ್ಮಕಂಡ
Rudrakantha – ವೃತ್ತಾಕಾರ ಮಾದರಿಯ ಕಂಬ(ದ್ರಾವಿಡ)
Rupasakha – ಅಲಂಕಾರಿಕ ಚಿಕಣಿ ಮೂರ್ತಿಗಳುಳ್ಳ ಪಟ್ಟಿ
Russet-coated painted ware – ಕಾವಿ ಲೇಪನದಡಿ ಬಿಳಿ ಚಿತ್ರವುಳ್ಳ ಮಣ್ಪಾತ್ರೆ
Sala-bhanjika – ಬೃಹತ್ ತೋರಣದಲ್ಲಿ ಬಳ್ಳಿ ಅಥವಾ ಮರವನ್ನು ಹಿಡಿದು ನಿಂತ ಸ್ತ್ರೀವಿಗ್ರಹ
Salilantara – ಚಾವಣಿ ಮೇಲಿನ ನೀರು ಹರಿದು ಹೋಗುವ ನಾಳಗಳ ನಡುವಿನ ಅಂತರ
Samabhanga – ನೆಟ್ಟಗೆ ನಿಂತಿರುವ ಭಂಗಿ. ಇದಕ್ಕೆ ಖಡ್ಗಾಸನವೆಂದೂ ಹೆಸರಿದೆ

Sandhara – ದೇವಾಲಯದ ಗರ್ಭಗುಡಿಯ ಸುತ್ತಲಿರುವ ಮುಚ್ಚಿದ ಪ್ರದಕ್ಷಿಣಾ ಪಥ
Sankhanidhi – ಶಂಖದಿಂದ ಹರಿಯುವ ನಿಧಿ (ರತ್ನಗಳು)
Sankhapurusha – ಮನುಷ್ಯಾಕೃತಿಯ ಶಂಖ
Sarcophagus – ಶವಪೆಟ್ಟಿಗೆ
Sardula – ಘೋರರೂಪದ ಸಿಂಹ
Sarvatobhadra – ಗರ್ಭಗೃಹದಲ್ಲಿರುವ ದೇವತಾ ಮೂರ್ತಿಯನ್ನು ನಾಲ್ಕು ದಿಕ್ಕುಗಳಿಂದಲೂ ನೋಡುವಂತಾಗುವ ವಾಸ್ತು ವಿನ್ಯಾಸ
Scraper – ಹೆರೆಚಕ್ಕೆ
Screw driver – ಬೈರಿಗೆ
Section – ಉತ್ಖನನ ಗುಂಡಿಯ ಒಂದು ಪಾರ್ಶ್ವ
Sedentary site – ಸ್ಥಾಯಿ ನೆಲೆ
Semi-sedentary – ಅರೆವಲಸೆ
Shale – ಜೇಡಿಪದರಗಲ್ಲು
Shikha – ಜುಟ್ಟು/ಗರ್ಭಗೃಹದ ಮೇಲ್ಕಟ್ಟಡದ ತುದಿಯಲ್ಲಿರುವ ಸ್ತೂಪಿ
Shukanasi – ವೇಸರ ಮಾದರಿಯ ದೇವಾಲಯದ ಶಿಖರದ ಮುಂಭಾಗದಿಂದ ಚಾಚಿಕೊಂಡಿರುವ ಭಾಗ ಹಾಗೂ ಇದರ ಕೆಳಗಿನ ಗರ್ಭಗುಡಿಯ ಮುಂಭಾಗ
Simha mukha/lalata – ವಿಗ್ರಹದ ಸ್ತಂಭ ತೋರಣದ ತುದಿಯಲ್ಲಿಯ ಸಿಂಹಮುಖ; ಕೀರ್ತಿಮುಖ
Sirsha, Sirshaka – ಕಂಬದ ಚಾಚುಪೀಠ
Skin rubber – ಮೈಯುಜ್ಜುವ ಬಿಲ್ಲೆ
Sling ball – ಕವಣೆ ಕಲ್ಲು
Sopana – ಮೆಟ್ಟಿಲು
Spear head – ಈಟಿ ಮೊನೆ
Spindle whorl – ಕದಿರಣಿಗೆ / ತಕಲಿ
Split based point – ಸೀಳಿದ ತೊಟ್ಟಿನ ಮೊನೆ
Spouted jar – ಗಿಂಡಿ / ನಳಿಕೆಯುಳ್ಳ ಪಾತ್ರೆ
Sprinkler – ನೀರುದಾನಿ
Srivatsa – ಸಿರಿಸಂಪತ್ತಿನ ಒಂದು ಮಂಗಳ ಚಿಹ್ನೆ
Stone circle – ಕಲ್ಲುವೃತ್ತ ಸಮಾಧಿ
Stone weight – ಕಲ್ಲಿನ ತೂಕದಬಟ್ಟು
Storage bin – ಕಣಜ
Stratigraphy – ಪದರಗಳ ಕ್ರಮ, ಸ್ತರವಿಜ್ಞಾನ
Stupi – ದ್ರಾವಿಡ ವಿಮಾನ ಮಾದರಿಯ ದೇವಾಲಯದ ಗರ್ಭಗುಡಿಯ ಮೇಲ್ಕಟ್ಟಡದ ತುದಿಯಲ್ಲಿರುವ, ಕವುಚಿ ಹಾಕಿದ ಬೋಗುಣಿಯಂತಿರುವ ಭಾಗ
Subsistence economy – ಆಹಾರ ಆರ್ಥಿಕತೆ
Superimposition – ಅಧ್ಯಾರೋಪನ
Surasena, Surasenaka – ಕಟ್ಟಡದ ಮುಂಭಾಗದ ಮೇಲ್ಗಡೆ ಚೈತ್ಯ ಕಿಟಕಿಯ ವಿನ್ಯಾಸ ರಚನೆ
Survey – ಸರ್ವೇಕ್ಷಣೆ
Tala – ದ್ರಾವಿಡ ವಿಮಾನ ಮಾದರಿಯ ದೇವಾಲಯದ ಗರ್ಭಗುಡಿಯ ಮೇಲಿನ (ಅಧಿಷ್ಠಾನ ಹೊರತುಪಡಿಸಿ) ಒಂದು ಅಥವಾ ಒಂದರ ಮೇಲೆ ಒಂದರಂತಿರುವ ಮೇಲ್ಕಟ್ಟಡ
Tell – ಪ್ರಾಚೀನ ಅವಶೇಷಗಳಿಂದಾದ ಕೃತಕ ದಿಬ್ಬ
Temple model – ದೇವಾಲಯ ವಾಸ್ತು ಮಾದರಿ
Terrorism – ಭಯೋತ್ಪಾದನೆ
The Great Hedge – ಬೃಹತ್ ಸುಂಕದ ಬೇಲಿ
Thermoluminescence dating – ಉಷ್ಣತಾದೀಪ್ತಿ ಕಾಲಮಾನ / ಔಷ್ಣದೀಪ್ತಿ
Three Age system – ತ್ರಿಯುಗ ಸಿದ್ಧಾಂತ
Trace elements – ಅಣಿಮ ಧಾತುಗಳು
Transepted cist – ವಿಭಜಿತ ನೆಲಕೋಣೆ
Trapezoid – ವಿಷಮ ಚತುರ್ಭುಜ ಉಪಕರಣ
Tree-ring dating (Dendro chronology) – ವೃಕ್ಷವಾರ್ಧಿಕ ವರ್ತುಲ ಕಾಲಗಣನೆ
Trial trench – ಉತ್ಖನನ ಪೂರ್ವದ ಪರಿಕ್ಷಾಗುಂಡಿ
Tripod – ಮುಕ್ಕಾಲು ಮಣೆ/ ತ್ರಿಪಾದಿ/ ಅಡ್ಡಣಿಗೆ
Tula – ಗೋಡೆಯಿಂದ ಗೋಡೆಗೆ ಹಾಕಿದ ತೊಲೆ ತೂಗುವ ತಕ್ಕಡಿ
Typology – ಆಕೃತಿಗಳ ಅಧ್ಯಯನ
Tyrrany – ಪೀಡಕ ಪ್ರಭುತ್ವ
Tyuere – ಗಾಳಿಗೊಳವೆ
Uchchalaka – ಗ್ರೀಕ್ ಶೈಲಿಯ ಕಂಬ
Upper palaeolithic – ಅಂತ್ಯ ಹಳೆಶಿಲಾಯುಗ
Urn burial – ಅಸ್ಥಿಮಡಕೆ / ಅಸ್ಥಿಪಾತ್ರೆ
Ushnisha – ನೆತ್ತಿಯ ಮೇಲಿನ ಗುಮ್ಮಟ ಅಥವಾ ಬೇಲಿಯ ಕಂಬಗಳ ಮೇಲಿನ ಟೋಪಿ
Utkutikasana – ಸೊಂಟದ ಮೇಲೆ ಕುಳಿತಿರುವ ಭಂಗಿ
Uttaranga – ಬಾಗಿಲ ಮೇಲಿನ ಹಾಸುಗಲ್ಲು, ತೊಲೆ
Vedibandha – ಗೋಡೆಯ ಆಧಾರದ ಪಟ್ಟಿ, ತಳಹದಿಯ ಪಟ್ಟಿ
Venukosa – ಬಿದಿರಿನ ಗಂಟು
Vertical excavation – ಲಂಬ ಉತ್ಖನನ
Visnucchandasikhara – ಅಷ್ಟಕೋನಾಕೃತಿಯ ಶಿಖರದ ಮಾದರಿ (ದ್ರಾವಿಡ)
Vitana – ಗುಮ್ಮಟಾಕಾರದ ಚಾವಣಿಯ ಒಂದು ಪ್ರಕಾರ.
Vyalasakha – ದ್ವಾರಬಂಧದ ವ್ಯಾಳ ಪ್ರಾಣಿ ಶಿಲ್ಪ ಹೊಂದಿರುವ ಊರ್ಧ್ವ ಶಾಖೆ
Wattle and daub – ತಡಿಕೆಗೋಡೆ (ಮಣ್ಣು ಮೆತ್ತಿದ ಬಿದಿರಿನ ಗೋಡೆ)
Wavelength – ಅಲೆದೂರ
Wedge shaped brick – ಬೆಣೆಯಾಕಾರದ ಇಟ್ಟಿಗೆ
Wheel – ತಿಗರಿ
Yogapatta – ಯೋಗದಲ್ಲಿ ಮಂಡಿಯ ಸುತ್ತ ಕಟ್ಟುವ ಉದ್ದನೆಯ ಬಟ್ಟೆ

ಅಗ್ರವಾಲ್, ಡಿ.ಪಿ.; **ಏನ್ಷಿಯೆಂಟ್ ಮೆಟಲ್ ಟೆಕ್ನಾಲಜಿ ಅಂಡ್ ಆರ್ಕಿಯಾಲಜಿ ಆಫ್ ಸೌತ್ ಏಷ್ಯ**, ಆರ್ಯನ್ ಬುಕ್ಸ್ ಇಂಟರ್‌ನ್ಯಾಷನಲ್, ನ್ಯೂ ಡೆಲ್ಲಿ, 2000

ಅಗ್ರವಾಲ್, ಡಿ.ಪಿ. ಮತ್ತು ಚಕ್ರಬರ್ತಿ, ಡಿ.ಕೆ.; **ಎಸ್ಸೇಸ್ ಇನ್ ಇಂಡಿಯನ್ ಪ್ರೋಟೋ ಹಿಸ್ಟರಿ**, ಬಿ.ಆರ್. ಪಬ್ಲಿಷಿಂಗ್ ಹೌಸ್, ಡೆಲ್ಲಿ, 1979

ಅಗ್ರವಾಲ್, ಡಿ.ಪಿ.; **ದಿ ಆರ್ಕಿಯಾಲಜಿ ಆಫ್ ಇಂಡಿಯ**, ಸ್ಕಾಂಡಿನೇವಿಯ ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್; ಸ್ಕಾಂಡಿನೇವಿಯ, ನಂ 46, 1982

ಅಗರ್‌ವಾಲ್, ಜಗನ್ನಾಥ.; **ಇನ್‌ಸ್ಕ್ರಿಪ್ಷನ್ಸ್ ಆಫ್ ಹರಿಯಾಣ, ಹಿಮಾಚಲ ಪ್ರದೇಶ್, ಪಂಜಾಬ್, ಕಾಶ್ಮೀರ್ ಅಂಡ್ ಅಡ್‌ಜಾಯನಿಂಗ್ ಹಿಲ್‌ಟ್ರ್ಯಾಕ್ಟ್ಸ್**, ನ್ಯೂಡೆಲ್ಲಿ, 2001

ಅಗ್ರವಾಲ್, ವಿ.ಎಸ್.; **ಗುಪ್ತ ಆರ್ಟ್**, ಲಕ್ನೋ, 1948

ಅಟ್‌ಕಿನ್ಸ್, ಎಲ್.; **ದಿ ಹ್ಯಾಂಡ್ ಬುಕ್ ಆಫ್ ಬ್ರಿಟಿಷ್ ಆರ್ಕಿಯಾಲಜಿ**, ಕಾನ್‌ಸ್ಟೇಬಲ್, ಲಂಡನ್, 1998

ಅನಂತರಾಮು, ಟಿ.ಆರ್.; **ಸರಸ್ವತೀ ನದಿ; ಪುರಾಣ–ಇತಿಹಾಸ–ವಿಜ್ಞಾನ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2005

ಅನ್ಸಾರಿ, ಝಡ್.ಡಿ. ಮತ್ತು ಧವಳೀಕರ್, ಎಂ.ಕೆ.; **ಎಕ್ಸ್‌ಕವೇಷನ್ ಅಟ್ ಕಯಥ**, ಡೆಕ್ಕನ್ ಕಾಲೇಜ್ ಪೋಸ್ಟ್‌ಗ್ರ್ಯಾಜುಯೇಟ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಡಿಸಿಪಿ–ಆರ್‌ಐ), ಪುಣೆ, 1973

ಅನ್ನಾದಲ್ಲಪಿಕೋಲ (ಸಂ); **ವಿಜಯನಗರ–ಸಿಟಿ ಅಂಡ್ ಎಂಪೈರ್**, ನ್ಯೂ ಕರೆಂಟ್ಸ್ ಆಫ್ ರಿಸರ್ಚ್ (ಸಂಪುಟ–1), ಸ್ಟುಟ್‌ಗರ್ಟ್, 1985

ಅಪರ್ಣ, ಕೂ.ಸ.; **ದೇವಾಲಯ ವಾಸ್ತು ಶಿಲ್ಪ ಪರಿಚಯ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000

ಅಮರೇಂದ್ರನಾಥ್; **ರಾಖಿಗಡಿ ಎ ಹರಪ್ಪನ್ ಮೆಟ್ರೋಪೋಲಿಸ್ ಇನ್ ದಿ ಸರಸ್ವತಿ – ದೃಶದ್ವತಿ ಡಿವೈಡ್**, ಪುರಾತತ್ತ್ವ–28, ಬುಲೆಟಿನ್ ಆಫ್ ದಿ ಇಂಡಿಯನ್ ಆರ್ಕಿಯಲಾಜಿಕಲ್ ಸೊಸೈಟಿ, ನ್ಯೂ ಡೆಲ್ಲಿ, 1997–98

ಅಲೆಕ್ಸಾಂಡರ್, ರೀ.; **ಚಾಲುಕ್ಯನ್ ಆರ್ಕಿಟೆಕ್ಚರ್ ಇನ್‌ಕ್ಲೂಡಿಂಗ್ ಟೆಂಪಲ್ಸ್ ಫಾರ್ಮ್ಸ್, ಬಳ್ಳಾರಿ ಡಿಸ್ಟ್ರಿಕ್ಟ್**, ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ (ಭಾ.ಪು.ಸ.ಇ.), ನವದೆಹಲಿ, 1896

ಅಲ್ತೇಕರ್, ಎ.ಎಸ್.; **ಎಜುಕೇಶನ್ ಇನ್ ಏನ್ಷಿಯೆಂಟ್ ಇಂಡಿಯ**, ವಾರಣಾಸಿ, 1965

ಅಹಮದ್ ನಾಸಿರ್, ಎ.; **ಕಿತಾಬ್–ಎ–ನವರಸ್**, ಭಾರತೀಯ ಕಲಾಕೇಂದ್ರ, ದೆಹಲಿ, 1956

ಆಚಾರ್ಯ, ಪಿ.ಕೆ.; **ಎ ಸಮ್ಮರಿ ಆಫ್ ದಿ ಮಾನಸಾರ**, ಮುನ್ಷಿರಾಮ್ ಮನೋಹರ್‌ಲಾಲ್, ನ್ಯೂಡೆಲ್ಲಿ, 1918

ಅಲ್ಚಿನ್, ಎಫ್.ಆರ್.; **ನಿಯೋಲಿಥಿಕ್ ಕ್ಯಾಟಲ್–ಕೀಪರ್ಸ್ ಆಫ್ ಸೌತ್ ಇಂಡಿಯ**, ಕೇಂಬ್ರಿಜ್ ವಿಶ್ವವಿದ್ಯಾಲಯ, ಕೇಂಬ್ರಿಜ್, 1963

ಅಲ್ಚಿನ್, ಬಿ. ಮತ್ತು ಅಲ್ಚಿನ್, ಎಫ್.ಆರ್.; **ದಿ ರೈಸ್ ಆಫ್ ಸಿವಿಲೈಜೇಷನ್ ಇನ್ ಇಂಡಿಯ ಅಂಡ್ ಪಾಕಿಸ್ತಾನ್**, ಕೇಂಬ್ರಿಜ್ ವಿಶ್ವವಿದ್ಯಾಲಯ, ಕೇಂಬ್ರಿಜ್, 1982

ಅಲ್ಚಿನ್, ಬಿ. ಮತ್ತು ಅಲ್ಚಿನ್, ಎಫ್.ಆರ್.; **ಆರಿಜನ್ಸ್ ಆಫ್ ಎ ಸಿವಿಲೈಜೇಷನ್: ದ ಪ್ರಿಹಿಸ್ಟರಿ ಅಂಡ್ ಆರ್ಕಿಯಲಾಜಿ ಆಫ್ ಸೌತ್ ಏಷ್ಯ**, ಪೆಂಗ್ವಿನ್ ಬುಕ್ಸ್, 1997

ಅಲ್ಚಿನ್, ಎಫ್.ಆರ್.; **ದಿ ಆರ್ಕಿಯಾಲಜಿ ಆಫ್ ಅರ್ಲಿ ಹಿಸ್ಟಾರಿಕ್ ಸೌತ್ ಏಷ್ಯ, ಸಂಪುಟ–2**, ಕೇಂಬ್ರಿಜ್ ವಿಶ್ವವಿದ್ಯಾಲಯ, ಕೇಂಬ್ರಿಜ್, 1995

**ಇನ್ ಪ್ರೈಸ್ ಆಫ್ ಹೊಯ್ಸಳ ಆರ್ಟ್**, ಮಾರ್ಗ್ ಪಬ್ಲಿಕೇಶನ್ಸ್, 1979

ಇಸ್ಮಾಯಿಲ್; **ಕರ್ನಾಟಕ: ಟೆಂಪಲ್ಸ್ ದೇರ್ ರೋಲ್ ಇನ್ ಸೋಷಿಯೋ–ಎಕನಾಮಿಕ್ ಲೈಫ್**, ಸಂದೀಪ್ ಪ್ರಕಾಶನ, ನವದೆಹಲಿ, 1994

ಈಯನ್ ಕ್ಯುಜಿತ್; **ಲೈಫ್ ಇನ್ ನಿಯೋಲಿತಿಕ್ ಫಾರ್ಮಿಂಗ್ ಕಮ್ಯೂನಿಟೀಸ್: ಸೋಷಿಯಲ್ ಆರ್ಗನೈಜೇಷನ್, ಐಡೆಂಟಿಟಿ ಅಂಡ್ ದಿ ಡಿಫರೇಷನ್**, ಸ್ಪಿಂಗರ್ ಪ್ರೆಸ್, 2000

ಎಡ್ವಿನ್ ಬ್ರಿಯಾನ್.; **ದಿ ಕ್ವೆಸ್ಟ್ ಫಾರ್ ದಿ ಆರಿಜನ್ಸ್ ಆಫ್ ವೇದಿಕ್ ಕಲ್ಚರ್, ದಿ ಇಂಡೋ–ಆರ್ಯನ್ ಮೈಗ್ರೇಷನ್ ಡಿಬೇಟ್**, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ, ಆಕ್ಸ್‌ಫರ್ಡ್, 2001

ಎಡ್ವರ್ಡ್ ಎಂ.ಕುಕ್; **ಸಾಲ್ವಿಂಗ್ ದಿ ಮಿಸ್ಟ್ರೀಸ್ ಆಫ್ ದಿ ಡೆಡ್ ಸೀ ಸ್ಕ್ರೋಲ್ಸ್, ನ್ಯೂಲೈಟ್ ಆನ್ ದಿ ಬೈಬಲ್**, ಗ್ರ್ಯಾಂಡ್ ರ್‍ಯಾಪಿಡ್ಸ್, ಜೋರ್ಡಾನ್, 1994

**ಎನ್‌ಸೈಕ್ಲೋಪೀಡಿಯ ಆಫ್ ಇಂಡಿಯನ್ ಆರ್ಕಿಯಾಲಜಿ**, ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ನವದೆಹಲಿ.

**ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ** ಸಂಪುಟಗಳು

## ಪರಾಮರ್ಶನ ಗ್ರಂಥಗಳು

**ಎನ್‌ಸೈಕ್ಲೋಪೀಡಿಯ ಆಫ್ ಪ್ರಿಹಿಸ್ಟರಿ** (8 ಸಂಪುಟಗಳು) ಪೆರಿಗ್ರೇನ್ ಪಿ.ಎನ್. ಮತ್ತು ಎಂಬರ್ ಎಂ.ಎಂ. (ಸಂ), ನ್ಯೂಯಾರ್ಕ್ ಅಕಾಡೆಮಿಕ್ ಪಬ್ಲಿಷರ್ಸ್, 2000

**ಎಪಿಗ್ರಾಫಿಯ ಇಂಡಿಕ** ಸಂಪುಟಗಳು, ಭಾ.ಪು.ಸ.ಇ.

**ಎಪಿಗ್ರಾಫಿಯ ಕರ್ನಾಟಿಕ** ಸಂಪುಟಗಳು 1–14, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಬರ್‌ಹಾರ್ಡ್. ಎ.; **ಎ ಹಿಸ್ಟರಿ ಆಫ್ ಚೈನ**, ಬರ್ಕ್‌ಲಿ, 1977

ಐಕೇನ್ಸ್, ಸಿ.ಎಮ್ ಮತ್ತು ರ್ಹಿಸನ್(ಸಂ).; **ಪೆಸಿಫಿಕ್ ನಾರ್ತ್ ಈಸ್ಟ್ ಏಷ್ಯ ಇನ್ ಪ್ರಿಹಿಸ್ಟರಿ**, ವಾಷಿಂಗ್‌ಟನ್ ವಿಶ್ವವಿದ್ಯಾಲಯ ಪ್ರೆಸ್, ವಾಷಿಂಗ್‌ಟನ್, 1992

**ಕನ್ನಡ ವಿಶ್ವಕೋಶ ಮಾಲಿಕೆ ಸಂಪುಟ 4**: ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಕನ್ನಡ ವಿಶ್ವಕೋಶ**, 14 ಸಂಪುಟಗಳು (1968–2004), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಕರ್ನಾಟಕ**: ಕನ್ನಡ ವಿಷಯ ವಿಶ್ವಕೋಶ (ಪರಿಷ್ಕೃತ ಸಂಪುಟ 1 ಮತ್ತು 2), ಮೈಸೂರು ವಿಶ್ವವಿದ್ಯಾನಿಲಯ, 2007

**ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್** ಸಂಪುಟಗಳು 1–6, ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಲಬುರ್ಗಿ, ಎಂ.ಎಂ. (ಸಂ); **ಕರ್ನಾಟಕದ ಕೈಫಿಯತ್ತುಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ –

ಕಲಬುರ್ಗಿ, ಎಂ.ಎಂ. ಮತ್ತಿತರರು.; **ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ**, ವೀರಶೈವ ಅಧ್ಯಯನ ಸಂಸ್ಥೆ, ಬೆಕ್ಕಿನಕಲ್‌ಮಠ, ಶಿವಮೊಗ್ಗ.

ಕಲಬುರ್ಗಿ, ಎಂ.ಎಂ.(ಸಂ.); **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಬುರ್ಗಿ, ಎಂ.ಎಂ.(ಸಂ.); **ಮಾನಸೋಲ್ಲಾಸ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1998

ಕವಿತಾ, ಆರ್.; **ರೀಜನಲ್ ಹಿಸ್ಟರಿ: ದಿ ಸ್ಟಡಿ ಆಫ್ ನಿಡುಗಲ್ ಚೋಳಾಸ್ ಅಂಡ್ ದೇರ್ ಟೈಮ್ಸ್**, ಚೇತನ ಬುಕ್ ಹೌಸ್, ಮೈಸೂರು, 2006

ಕಾಮತ್, ಜ್ಯೋತ್ಸ್ನಾ.; **ಕರ್ನಾಟಕ ಶಿಕ್ಷಣ ಪರಂಪರೆ**, ಮುಂಬಯಿ, 1988

ಕಾಮತ್, ಸೂರ್ಯನಾಥ, ಯು.; **ಜಿಲ್ಲಾ ಗೆಜೆಟಿಯರ್‌ಗಳು**, ಕರ್ನಾಟಕ ಗೆಜೆಟಿಯರ್ ಡಿಪಾರ್ಟ್‌ಮೆಂಟ್, ಬೆಂಗಳೂರು

ಕ್ಯಾಸಲ್, ಜಿ.ಎಂ.; **ಅಮ್ರಿ**, 2 ಸಂಪುಟಗಳು, ಪ್ಯಾರಿಸ್, 1964

ಕ್ಲಾರ್ಕ್ ಗ್ರಹಾಮ್; **ವರ್ಲ್ಡ್ ಪ್ರಿಹಿಸ್ಟರಿ ಇನ್ ನ್ಯೂ ಪರ್ಸ್‌ಪೆಕ್ಟಿವ್**, ಕೇಂಬ್ರಿಜ್ ವಿಶ್ವವಿದ್ಯಾಲಯ, ಕೇಂಬ್ರಿಜ್, 1977

ಕ್ಲಾರ್ಕ್, ಜೆ.ಡಿ.; **ದಿ ಪ್ರಿಹಿಸ್ಟರಿ ಆಫ್ ಆಫ್ರಿಕ**, ಲಂಡನ್ ಅಂಡ್ ನ್ಯೂಯಾರ್ಕ್, 1970

ಕ್ಲಾರ್ಕ್ ಡೇವಿಡ್; **ಅನಲಿಟಿಕಲ್ ಆರ್ಕಿಯಾಲಾಜಿ**, ಲಂಡನ್, 1968

ಕುಪ್ಪಸ್ವಾಮಿ, ಜಿ.ಆರ್.; **ಎಕನಾಮಿಕ್ ಕಂಡಿಶನ್ಸ್ ಇನ್ ಕರ್ನಾಟಕ** (ಸು.573–1333), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1975

ಕುಮಾರಸ್ವಾಮಿ, ಎ.ಕೆ.; **ಹಿಸ್ಟರಿ ಆಫ್ ಇಂಡಿಯನ್ ಅಂಡ್ ಇಂಡೋನೇಷಿಯನ್ ಆರ್ಟ್**, ನ್ಯೂಯಾರ್ಕ್, 1927

ಕುಮಾರಸ್ವಾಮಿ, ಎ.ಕೆ.; **ದಿ ಯಕ್ಷಾಸ್**, ಐ.ಜಿ.ಎನ್.ಸಿ.ಎ., ದೆಹಲಿ, 1993

ಕುಲಕರ್ಣಿ, ಆರ್.ಎಚ್.; **ಪ್ರಿ ಅಂಡ್ ಅರ್ಲಿ ಚಾಲುಕ್ಯ ಆರ್ಟ್ ಇನ್ ಕರ್ನಾಟಕ**, ಹರ್ಮನ್ ಪಬ್ಲಿಷರ್ಸ್, ನವದೆಹಲಿ, 2009

ಕುಶಾಲಪ್ಪಗೌಡ ಮತ್ತು ಚಿನ್ನಪ್ಪಗೌಡ.; **ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು**, ಧರ್ಮಸ್ಥಳ –

ಕೃಷ್ಣಯ್ಯ, ಡಿ.ಎನ್.; **ಕೊಡಗಿನ ಇತಿಹಾಸ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1975

ಕೃಷ್ಣದೇವ; **ಟೆಂಪಲ್ಸ್ ಆಫ್ ಇಂಡಿಯ**, ಸಂ 1 ಮತ್ತು 2, ಆರ್ಯನ್ ಬುಕ್ಸ್ ಇಂಟರ್ ನ್ಯಾಷನಲ್, ನ್ಯೂಡೆಲ್ಲಿ, 1999

ಕೃಷ್ಣಾನಂದ ಕಾಮತ್; **ಕಾವಿಕಲೆ**, ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು, 1993

ಕೆನೆತ್ ಕೆನಡಿ; **ಗಾಡ್–ಏಪ್ ಅಂಡ್ ಫಾಸಿಲ್‌ಮಾನ್: ಪೇಲಿಯೋ ಆಂಥ್ರೋಪಾಲಜಿ ಆಫ್ ಸೌತ್ ಏಷ್ಯ**, ಯೂನಿವರ್ಸಿಟಿ ಆಫ್ ಮಿಶಿಗನ್, 2003

ಕೆನೋಯರ್, ಜೆ.ಎಮ್.; **ಏನ್ಷಿಯಂಟ್ ಸಿಟೀಸ್ ಆಫ್ ದಿ ಇಂಡಸ್ ವ್ಯಾಲಿ ಸಿವಿಲೈಜೇಷನ್**, ಕರಾಚಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಅಂಡ್ ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಪಾಕಿಸ್ತಾನ್ ಸ್ಟಡೀಸ್, 1998

ಕೋನಾರ್ಡ್ ಸ್ಪಿಂಡ್ಲರ್; **ದಿ ಮ್ಯಾನ್ ಇನ್ ಐಸ್**, ಲಂಡನ್, 1994

ಕೋಲ್ಸ್, ಜಿ.ಎಂ. ಮತ್ತು ಹಾರ್ಡಿಂಗ್, ಎಫ್.; **ದಿ ಬ್ರಾಂಜ್ ಏಜ್ ಇನ್ ಯುರೋಪ್**, ಲಂಡನ್, 1979

ಕೋನ್, ಸಿ.ಎಸ್.; **ಎ ಪ್ರಿಲಿಮಿನರಿ ರಿಪೋರ್ಟ್**, ಸಂಪುಟ 10, ಕಾಬೂಲ್, ಆಫ್ಘಾನಿಸ್ತಾನ್, 1955

ಕೊಯ್ಲೊ, ಡಬ್ಲ್ಯು.; **ದಿ ಹೊಯ್ಸಳ ವಂಶ**, ಇಂಡಿಯನ್ ಹಿಸ್ಟಾರಿಕಲ್ ಇನ್‌ಸ್ಟಿಟ್ಯೂಟ್, ಸೇಂಟ್ ಜೇವಿಯರ್ಸ್ ಕಾಲೇಜ್, ಮುಂಬೈ, 1950

ಕೋಲೆಯರ್ ಕೆಲ್ಲೆಸನ್.; **ದಿ ಹೊಯ್ಸಳ ಆರ್ಟಿಸ್ಟ್ಸ್ ಅಂಡ್ ದೇರ್ ಐಡೆಂಟಿಟಿ**, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಂ, ಮೈಸೂರು, 1990

ಕೋಸಾಂಬಿ, ಡಿ.ಡಿ.; **ಎನ್ ಇನ್‌ಟ್ರೊಡಕ್ಷನ್ ಟು ದಿ ಸ್ಟಡಿ ಆಫ್ ಇಂಡಿಯನ್ ಹಿಸ್ಟರಿ**, ಪೀಪಲ್ಸ್ ಬುಕ್ ಹೌಸ್, ಮುಂಬೈ, 1950

ಕೋಸಾಂಬಿ, ಡಿ.ಡಿ.; **ಮಿಥ್ ಅಂಡ್ ರಿಯಾಲಿಟಿ, ಸ್ಟಡೀಸ್ ಇನ್ ದಿ ಫಾರ್ಮೇಶನ್ ಆಫ್ ಇಂಡಿಯನ್ ಕಲ್ಚರ್**, ಪಾಪ್ಯುಲರ್ ಪ್ರಕಾಶನ, ಮುಂಬೈ, 1962.

ಕೌಲದಿಂಬಿ, ಬಿ.ಕೆ.; **ಕಾರ್ಪಸ್ ಆಫ್ ಶಾರದ ಇನ್‌ಸ್ಕ್ರಿಪ್ಷನ್ಸ್ ಆಫ್ ಕಾಶ್ಮೀರ್**, ಡೆಲ್ಲಿ, 1982

ಕೌಲದಿಂಬಿ, ಬಿ.ಕೆ.; **ಹಿಸ್ಟರಿ ಅಂಡ್ ಕಲ್ಚರ್ ಆಫ್ ಏನ್ಷಿಯಂಟ್ ಗಾಂಧಾರ ಅಂಡ್ ವೆಸ್ಟರ್ನ್ ಹಿಮಾಲಯ**, 1985

ಕೌಲದಿಂಬಿ, ಬಿ.ಕೆ.; **ಶಾರದಾ ಅಂಡ್ ಟಾಕರೀ ಆಲ್ಫಬೆಟ್ಸ್, ಆರಿಜನ್ಸ್ ಅಂಡ್ ಡೆವಲಪ್‌ಮೆಂಟ್**, ಡೆಲ್ಲಿ, 2007

ಖತ್ರಿ, ಜೆ.ಎಸ್. ಮತ್ತು ಆಚಾರ್ಯ, ಎಂ.; **ಕುನಾಲ್ ಎಕ್ಸ್‌ಕವೇಷನ್ಸ್–ನ್ಯೂ ಲೈಟ್ ಆನ್ ದಿ ಆರಿಜಿನ್ ಆಫ್ ಹರಪ್ಪನ್ ಸಿವಿಲೈಜೇಷನ್**, ಆರ್ಯನ್ ಬುಕ್ಸ್ ಇಂಟರ್‌ನ್ಯಾಷನಲ್, ನ್ಯೂ ಡೆಲ್ಲಿ, 2005

ಖಜಾಂಚಿ, ಆರ್.ಎನ್.; **ದಿ ನಿಯೋಲಿಥಿಕ್ ಕಲ್ಚರ್ ಆಫ್ ಕಾಶ್ಮೀರ್, ಎಸ್ಸೇಸ್ ಇನ್ ಇಂಡಿಯನ್ ಪ್ರೋಟೋ ಹಿಸ್ಟರಿ**, ಡಿ.ಪಿ. ಅಗ್ರವಾಲ್ ಮತ್ತು ಡಿ.ಕೆ. ಚಕ್ರಬರ್ತಿ(ಸಂ.) ಬಿ.ಆರ್. ಪಬ್ಲಿಶಿಂಗ್ ಕಾರ್ಪೊರೇಶನ್, ದೆಹಲಿ, 1979

ಖಾನ್, ಎಫ್.ಎ.; **ಎಕ್ಸ್‌ಕವೇಷನ್ಸ್ ಅಟ್ ಕೋಟ್‌ದಿಜಿ**, ಪಾಕಿಸ್ತಾನ್ ಆರ್ಕಿಯಾಲಜಿ, ಇಸ್ಲಾಮಾಬಾದ್, 1965

ಗಣೇಶ್. ಕೆ.ಆರ್. ಮತ್ತಿತರರು; **ಆಂಧ್ರಪ್ರದೇಶದ ಕನ್ನಡ ಶಾಸನಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001

ಗಣಪತಿರಾವ್, ಐಗಳ.; **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ**, ಉಡುಪಿ, 2004

ಗ್ರೀನ್‌ಫಿಲ್ ಮತ್ತು ಹಂಟ್, ಎ. (ಸಂ); **ಆಕ್ಸಿರಿಂಕಸ್ ಪಾಪಿರಸ್**, ಭಾಗ 3, ಲಂಡನ್, 1903

ಗುಂಡಾಜೋಯಿಸ್, ಕೆ; **ಕ್ಯಾಟಲಾಗ್ ಆಫ್ ಏನ್ಷಿಯಂಟ್ ತಿಗಳಾರಿ ಪಾಮ್ ಲೀಫ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ಇಂಡಿಯ**, ಭಾರತ ಸರ್ಕಾರ, ದೆಹಲಿ

ಗುರುರಾಜರಾವ್, ಬಿ.ಕೆ.; **ಮೆಗಲಿಥಿಕ್ ಕಲ್ಚರ್ ಇನ್ ಸೌತ್ ಇಂಡಿಯ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1972

ಗುಲಾಟಿ, ಎ.ಎಸ್., ದೇವ್, ಎಸ್.ಬಿ. ಮತ್ತು ಅನ್ಸಾರಿ, ಜ಼ಡ್.ಡಿ.; **ಚಾಲ್ಕೋಲಿಥಿಕ್ ಚಂದೋಲಿ**, ಡಿಸಿಪಿ–ಆರ್‌ಐ, ಪುಣೆ, 1965.

ಗೆರಾಲ್ಡ್ ಫೊಕುಮ.; **ಚಾಲುಕ್ಯನ್ ಟೆಂಪಲ್ಸ್**, 3 ಸಂಪುಟಗಳು, ಮುನ್ಷಿಲಾಲ್ ಬನಾರಸಿದಾಸ್, ದೆಹಲಿ, 2004

ಗೇಜ಼ವರಮಿಸ್.; **ದಿ ಕಂಪ್ಲೀಟ್ ಡೆಡ್ ಸೀ ಸ್ಕ್ರೋಲ್ಸ್ ಇನ್ ಇಂಗ್ಲಿಷ್**, ಪೆಂಗ್ವಿನ್ ಪಬ್ಲಿಕೇಷನ್ಸ್, ಲಂಡನ್, 1998

ಗೇಟ್ಸ್, ಚಾರ್ಲ್ಸ್.; **ಏನ್ಷಿಯಂಟ್ ಸಿಟೀಸ್, ದಿ ಆರ್ಕಿಯಾಲಜಿ ಆಫ್ ಅರ್ಬನ್ ಲೈಫ್ ಇನ್ ಏನ್ಷಿಯಂಟ್ ನಿಯರ್ ಈಸ್ಟ್ ಅಂಡ್ ಈಜಿಪ್ಟ್**, ಗ್ರೀನ್ ಲೆಂಡ್, ರೋಮ್, 2003

ಗ್ರೋವರ್, ಬಿ.ಎಲ್. ಮತ್ತು ಗ್ರೋವರ್, ಎಸ್.; **ಎನ್ ಔಟ್‌ಲುಕ್ ಆನ್ ಮಾರ್ಡನ್ ಇಂಡಿಯನ್ ಹಿಸ್ಟರಿ**, ಎಸ್.ಚಾಂದ್ ಅಂಡ್ ಕಂಪನಿ, ನ್ಯೂಡೆಲ್ಲಿ, 2007

ಗೋಖಲೆ, ಶೋಭನಾ; **ಇಂಡಿಯನ್ ನ್ಯೂಮರಲ್ಸ್**, ಡಿಸಿಪಿ–ಆರ್‌ಐ, ಪುಣೆ, 1966

# ಪರಾಮರ್ಶನ ಗ್ರಂಥಗಳು


ಗೋರ್ಡನ್, ಡಿ.ಎಚ್ ಮತ್ತು ಗೋರ್ಡನ್, ಎಂ.ಇ.; **ದಿ ಆರ್ಟಿಸ್ಟಿಕ್ ಸೀಕ್ವೆನ್ಸಸ್ ಆಫ್ ದಿ ರಾಕ್ ಪೇಂಟಿಂಗ್ಸ್ ಆಫ್ ಮಹಾದೇವ್ ಹಿಲ್ಸ್**, ಕಲ್ಕತ್ತ, 1939

ಗೋಪಾಲ, ಆರ್.; **ಕಲ್ಚರಲ್ ಸ್ಟಡಿ ಆಫ್ ಹೊಯ್ಸಳ ಇನ್‌ಸ್ಕ್ರಿಪ್ಷನ್ಸ್**, ಡೈರಕ್ಟರೇಟ್ ಆಫ್ ಆರ್ಕಿಯಾಜಿ ಅಂಡ್ ಮ್ಯೂಸಿಯಂ, ಮೈಸೂರು, 2000

ನಾಗರಾಜರಾವ್, ಎಂ.ಎಸ್. (ಸಂ); **ದಿ ಚಾಲುಕ್ಯಾಸ್ ಆಫ್ ಕಲ್ಯಾಣ**, ಮಿಥಿಕ್ ಸೊಸೈಟಿ, ಬೆಂಗಳೂರು, 1983

ಗೋಪಾಲ್, ಬಿ.ಆರ್.; **ಕಾರ್ಪಸ್ ಆಫ್ ಕದಂಬ ಇನ್‌ಸ್ಕ್ರಿಪ್ಷನ್ಸ್** (ಸಂಪುಟ–1), ಕದಂಬ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ಶಿರಸಿ, 1985

ಗೋಪಾಲ್, ಬಿ.ಆರ್.; **ಮೈನರ್ ಡೈನಾಸ್ಟಿಸ್ ಆಫ್ ಸೌತ್ ಇಂಡಿಯ** (ಸಂಪುಟ–1), ನ್ಯೂ ಎರ ಪಬ್ಲಿಕೇಶನ್ಸ್, 1982

ಗೋಪಾಲ್, ಬಿ.ಆರ್.; **ಹಿಸ್ಟರಿ ಆಫ್ ಆಂಧ್ರಪ್ರದೇಶ** (ಸಂಪುಟ–1), ಮೈಥಿಲಿ ಪ್ರಕಾಶನ, 1987

ಗೋಪಾಲಚಾರಿ, ಕೆ.; **ಅರ್ಲಿ ಹಿಸ್ಟರಿ ಆಫ್ ಆಂಧ್ರ ಕಂಟ್ರಿ**, ಚೆನ್ನೈ, 1976

ಗೋಪಾಲರಾವ್, ಎಚ್.ಎಸ್.; **ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ**, ಡೈರಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಂ, ಮೈಸೂರು.

ಗೌರ್, ಆರ್.ಸಿ.; **ಎಕ್ಸ್‌ಕವೇಷನ್ಸ್ ಅಟ್ ಅತ್ರಂಜಿಖೇಡ: ಅರ್ಲಿ ಸಿವಿಲೈಜೇಷನ್ ಆಫ್ ದಿ ಅಪ್ಪರ್ ಗಂಗಾ ವ್ಯಾಲಿ**, ಅಲಿಗಢ್ ಮುಸ್ಲಿಂ ವಿಶ್ವವಿದ್ಯಾಲಯ, 1983

ಗೌಶರ್, ಸಿ. ಮತ್ತು ಲಿಂಡ ವಾಲ್ಟನ್, **ವರ್ಲ್ಡ್ ಹಿಸ್ಟರಿ**, ರೌಟ್‌ಲೆಜ್, 2008

ಘೋಷ್, ಎ.; **ಅಜಂತ ಮ್ಯೂರಲ್ಸ್**, ಭಾ.ಪು.ಸ.ಇ., ನ್ಯೂ ಡೆಲ್ಲಿ, 1967

ಘೋಷ್, ಎ.; **ದಿ ಸಿಟಿ ಇನ್ ಅರ್ಲಿ ಹಿಸ್ಟಾರಿಕಲ್ ಇಂಡಿಯ**, ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಸಿಮ್ಲ, 1973

ಘೋಷ್ ಮನಮೋಹನ್.; **ದಿ ನಾಟ್ಯಶಾಸ್ತ್ರ** (2 ಸಂಪುಟಗಳು), ಮನಿಷ ಪಬ್ಲಿಕೇಶನ್ಸ್, ಕಲ್ಕತ್ತ, 1995

ಚಕ್ರವರ್ತಿ, ಎ. ಮತ್ತು ಎಸ್.ಕೆ. ಬಿಸ್ವಾಲ್; **ಹಿಸ್ಟರಿ ಆಫ್ ಮಾಡರ್ನ್ ಇಂಡಿಯ**, ಅರೈಸ್, ನ್ಯೂಡೆಲ್ಲಿ, 2007

ಚಕ್ರಬರ್ತಿ, ದಿಲೀಪ್, ಕೆ.; **ದಿ ಆರ್ಕಿಯಾಲಜಿ ಆಫ್ ಏನ್ಷಿಯಂಟ್ ಇಂಡಿಯನ್ ಸಿಟೀಸ್**, ಡೆಲ್ಲಿ, 1995

ಚಕ್ರಬರ್ತಿ, ದಿಲೀಪ್, ಕೆ.; **ದಿ ಆಕ್ಸ್‌ಫರ್ಡ್ ಕಂಪ್ಯಾನಿಯನ್ ಟು ಇಂಡಿಯನ್ ಆರ್ಕಿಯಾಲಜಿ**, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಡೆಲ್ಲಿ, 2006

ಚನ್ನಕ್ಕ ಎಲಿಗಾರ್; **ಕರ್ನಾಟಕದ ಪ್ರಾಚೀನ ರಾಣಿಯರು**, ಚನ್ನಗಂಗಾ ಪ್ರಕಾಶನ, ಧಾರವಾಡ

ಚಾಡ್‌ವಿಕ್ ಜಾನ್.; **ದಿ ಡಿಸೈಫರ್‌ಮೆಂಟ್ ಆಫ್ ಲೀನಿಯರ್–ಬಿ**, ಕೇಂಬ್ರಿಜ್ ವಿಶ್ವವಿದ್ಯಾಲಯ, 1990

ಚಾಬ್ರ, ಜಿ.ಎಸ್.; **ಅಡ್ವಾನ್ಸ್‌ಡ್ ಸ್ಟಡಿ ಇನ್ ಹಿಸ್ಟರಿ ಆಫ್ ಮಾರ್ಡನ್ ಇಂಡಿಯ** (ಸಂ.2), ಸ್ಟರ್ಲಿಂಗ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, 2005

ಚಿಟ್ನಿಸ್, ಕೆ.ಎನ್.; **ಮೆಡೀವಲ್ ಇಂಡಿಯನ್ ಹಿಸ್ಟರಿ**, ಸುಜಾತ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, 1995

ಚಿಟ್ನಿಸ್, ಕೆ.ಎನ್.; **ಕೆಳದಿ ಪಾಲಿಟಿ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1974

ಚಿನ್ನಪ್ಪಗೌಡ, ಕೆ.; **ಭೂತಾರಾಧನೆ, ಒಂದು ಜಾನಪದೀಯ ಅಧ್ಯಯನ**, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, 1990

ಚಿದಾನಂದಮೂರ್ತಿ, ಎಂ.; **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನ ಬುಕ್‌ಹೌಸ್, ಬೆಂಗಳೂರು, 2002

ಚೈಲ್ಡ್, ವಿ.ಜಿ.; **ಸೋಶಿಯಲ್ ಎವಲ್ಯೂಶನ್**, ಶೂಮನ್, ಲಂಡನ್, 1951

ಜಗದೀಶ ಶೆಟ್ಟಿ, ಬಿ.; **ತುಳು ಕರ್ನಾಟಕದ ಅರಸು ಮನೆತನಗಳು: ಸೂರಾಲಿನ ತೊಳಹರು**, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2000

ಜಯಸ್ವಾಲ್, ವಿ.; **ಪೇಲಿಯೋ ಹಿಸ್ಟರಿ ಆಫ್ ಇಂಡಿಯ**, ಆಗಮಕಲಾ ಪ್ರಕಾಶನ, ಡೆಲ್ಲಿ, 1984

ಜಾನ್ ಕಾಲಿಸ್; **ದಿ ಯೂರೋಪಿಯನ್ ಐರನ್ ಏಜ್**, ಲಂಡನ್, 1980

ಜಾರಿಜ್, ಜೆ.ಎಫ್.; **ಎಕ್ಸ್‌ಕವೇಷನ್ಸ್ ಅಟ್ ಮೆಹರ್‌ಗಡ್ ದೇರ್ ಸಿಗ್ನಿಫಿಕೆನ್ಸ್ ಫಾರ್ ಅಂಡರ್‌ಸ್ಟ್ಯಾಂಡಿಂಗ್ ದಿ ಬ್ಯಾಕ್‌ಗ್ರೌಂಡ್ ಆಫ್ ದಿ ಹರಪ್ಪನ್ ಸಿವಿಲೈಜೇಷನ್,** ಹರಪ್ಪನ್ ಸಿವಿಲೈಜೇಷನ್ ಇನ್ ರೀಸೆಂಟ್ ಪರ್ಸ್‌ಪೆಕ್ಟಿವ್, (ಸಂ.) ಪೋಶೆಲ್, ಜಿ.ಎಲ್., ಆಕ್ಸ್‌ಫರ್ಡ್– ಐಬಿಎಚ್, 1993

ಜೆ. ಬರ್ಜೆಸ್; **ರಿಪೋರ್ಟ್ ಆನ್ ದಿ ಬುದ್ಧಿಸ್ಟ್ ಕೇವ್ ಟೆಂಪಲ್ಸ್ ಅಂಡ್ ದೇರ್ ಇನ್‌ಸ್ಕ್ರಿಪ್ಷನ್ಸ್,** ಆರ್ಕಿಯಲಾಜಿಕಲ್ ಸರ್ವೇ ಆಫ್ ವೆಸ್ಟರ್ನ್ ಇಂಡಿಯ, ಲಂಡನ್, 1883.

ಜೆಬ್ರೋಸ್ಕಿ ಮಾರ್ಕ್; **ಡೆಕ್ಕನೀ ಪೇಂಟಿಂಗ್ಸ್,** ರೋಲಿ ಬುಕ್ಸ್ ಇಂಟರ್‌ನ್ಯಾಷನಲ್, ನ್ಯೂ ಡೆಲ್ಲಿ, 1983

ಜೈನ್, ಕೆ.ಸಿ.; **ಪ್ರಿಹಿಸ್ಟರಿ ಅಂಡ್ ಪ್ರೋಟೊ ಹಿಸ್ಟರಿ ಆಫ್ ಇಂಡಿಯ,** ಆಗಮ್ ಪ್ರಕಾಶನ, ನ್ಯೂಡೆಲ್ಲಿ, 1979

ಜೋನ್ಸ್‌ಮಾರ್ಟಿನ್; **ದಿ ಮಾಲಿಕ್ಯೂಲ್ ಹಂಟ್: ಆರ್ಕಿಯಾಲಜಿ ಅಂಡ್ ದಿ ಸರ್ಚ್ ಫಾರ್ ಏನ್ಷಿಯಂಟ್ ಡಿ.ಎನ್.ಎ.,** ಆರ್ಕೆಡ್ ಪಬ್ಲಿಷಿಂಗ್, ನ್ಯೂಯಾರ್ಕ್, 2002

ಜೋಶಿ, ಜೆ.ಪಿ. ಮತ್ತು ಆಸ್ಕೊ ಪರ್ಪೋಲ.; **ಕಾರ್ಪಸ್ ಆಫ್ ಇಂಡಸ್ ಸೀಲ್ಸ್ ಅಂಡ್ ಇನ್‌ಸ್ಕ್ರಿಪ್ಷನ್ಸ್,** (3 ಸಂಪುಟಗಳು), ಹೆಲ್ಸಿಂಕಿ, 1987

ಜೋಶಿ, ಎನ್.ಪಿ.; **ಲೈಫ್ ಇನ್ ಏನ್ಷಿಯಂಟ್ ಉತ್ತರಾಪಥ,** ಆತ್ಮರಾಮ್ ಅಂಡ್ ಸನ್ಸ್, ವಾರಣಾಸಿ, 1967

ಜೋಶಿ, ಆರ್.ವಿ.; **ಪ್ಲಿಸ್ಟೋಸೀನ್ ಸ್ಟಡೀಸ್ ಇನ್ ದಿ ಮಲಪ್ರಭಾ ಬೇಸಿನ್,** ಡಿಸಿಪಿ–ಆರ್‌ಐ, ಪುಣೆ – ಧಾರವಾಡ, 1955

ಜೋಶಿ, ಆರ್.ವಿ.; **ಸ್ಟೋನ್‌ಏಜ್ ಕಲ್ಚರ್ಸ್ ಆಫ್ ಸೆಂಟ್ರಲ್ ಇಂಡಿಯ,** ಡಿಸಿಪಿ–ಆರ್‌ಐ, ಪುಣೆ, 1978

ಟೈಲ್‌ಕೋಟ್, ಆರ್.ಎಫ್.; **ಎ ಹಿಸ್ಟರಿ ಆಫ್ ಮೆಟಲರ್ಜಿ,** ಮ್ಯಾನೆ, ಲಂಡನ್, 1979

ಡಗ್ಲಸ್, ಟಿ.; ಪ್ರೈಸ್ ಮತ್ತು ಗ್ಯಾರಿ ಎಫ್. ಫಿನ್‌ಮಾನ್; **ಇಮೇಜಸ್ ಆಫ್ ದಿ ಪಾಸ್ಟ್,** ಮ್ಯಾಗ್ರಹಿಲ್, ನ್ಯೂಯಾರ್ಕ್, 2008

ಡಿಬ್ಬಲ್, ಎಚ್.ಎಲ್.; ದಿ ಇಂಪ್ಲಿಕೇಷನ್ಸ್ ಆಫ್ ಸ್ಟೋನ್ ಟೂಲ್ ಟೈಪ್ಸ್ ಫಾರ್ ದಿ ಪ್ರೆಸೆನ್ಸ್ ಆಫ್ ದಿ ಲಾಂಗ್ವೇಜ್ ಡ್ಯೂರಿಂಗ್ ದಿ ಲೋಯರ್ ಅಂಡ್ ಮಿಡಲ್ ಪೇಲಿಯೋಲಿಥಿಕ್, **ದಿ ಹ್ಯೂಮನ್ ರೆವಲ್ಯೂಷನ್,** (ಸಂ) ಮಿಲ್ಲರ್ಸ್, ಪಿ. ಮತ್ತು ಸ್ಟ್ರಿಂಜರ್, ಸಿ., ಏಡ್‌ಸಂಗ್‌ಬರ್ಗ್ ಯೂನಿವರ್ಸಿಟಿ ಪ್ರೆಸ್, 1989

ಡಿರಿಂಜರ್, ಡಿ.; **ದಿ ಆಲ್ಫಬೆಟ್,** ಲಂಡನ್, 1968

ಡಿರಿಂಜರ್, ಡಿ.; **ರೈಟಿಂಗ್,** ಥೇಮ್ಸ್ ಅಂಡ್ ಹಡ್ಸನ್, ಲಂಡನ್, 1962

ಡರ್ರೆಟ್, ಜೆ. ಮತ್ತು ಡಂಕನ್, ಎಂ.; **ದಿ ಹೊಯ್ಸಳಾಸ್: ಎ ಮೆಡೀವಲ್ ಇಂಡಿಯನ್ ರಾಯಲ್ ಫ್ಯಾಮಿಲಿ,** ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಲಂಡನ್, 1957

ಡೆಲ್ಗಾಡೊ, ಜೆ.ಪಿ.; **ಎನ್‌ಸೈಕ್ಲೊಪೀಡಿಯ ಆಫ್ ಅಂಡರ್‌ವಾಟರ್ ಅಂಡ್ ಮಾರಿಟೈಮ್ ಆರ್ಕಿಯಾಲಜಿ,** ಬ್ರಿಟಿಷ್ ಮ್ಯೂಸಿಯಂ, 1997

ಡೇನಿಯಲ್ ಗ್ಲಿನ್; **ಒನ್‌ಹಂಡ್ರಡ್ ಫಿಫ್ಟಿ ಇಯರ್ಸ್ ಆಫ್ ಆರ್ಕಿಯಾಲಜಿ,** ಹಾರ್ವರ್ಡ್ ಯೂನಿವರ್ಸಿಟಿ, 1976

ಡೇನಿಯಲ್ ಎಲ್ಟನ್.; **ದಿ ಹಿಸ್ಟರಿ ಆಫ್ ಇರಾನ್,** ಗ್ರೀನ್‌ವುಡ್ ಪಬ್ಲಿಷಿಂಗ್ ಹೌಸ್, ವೆಸ್ಟ್‌ಪೋರ್ಟ್, 2000

ತಿಯೋಡರ್, ಎಚ್. ಗ್ಯಾಸ್ಟರ್.; **ದಿ ಡೆಡ್ ಸೀ ಸ್ಕ್ರಿಪ್ಟ್ಸ್,** ಪೀಟರ್ ಸ್ಮಿತ್ ಪಬ್ಲಿಕೇಷನ್, 1976

ತ್ರಿಪಾಠಿ, ವಿಭಾ; **ದಿ ಏಜ್ ಆಫ್ ಐರನ್ ಇನ್ ಸೌತ್ ಏಷ್ಯ: ಲೆಗೆಸಿ ಅಂಡ್ ಟ್ರಡಿಶನ್,** ಆರ್ಯನ್ ಬುಕ್ ಇಂಟರ್‌ನ್ಯಾಷನಲ್, ನ್ಯೂಡೆಲ್ಲಿ, 2001

ತ್ರಿಪಾಠಿ, ವಿಭಾ.; **ದಿ ಪೇಂಟೆಡ್ ಗ್ರೇ ವೇರ್: ಎನ್ ಐರನ್ ಏಜ್ ಕಲ್ಚರ್ ಆಫ್ ನಾರ್ತ್ ಇಂಡಿಯ,** ಕಾನ್ಸೆಪ್ಟ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, 1976

ಥಪ್ಲಿಯಾಲ್, ಕೆ.ಕೆ.; **ವಿಲೇಜ್ ಅಂಡ್ ವಿಲೇಜ್ ಲೈಫ್ ಇನ್ ಏನ್ಷಿಯಂಟ್ ಇಂಡಿಯ,** ನ್ಯೂಡೆಲ್ಲಿ, 2004

ಥಾಪರ್, ಬಿ.ಕೆ.; **ರೀಸೆಂಟ್ ಆರ್ಕಿಯಲಾಜಿಕಲ್ ಡಿಸ್ಕವರೀಸ್ ಇನ್ ಇಂಡಿಯ, ಪ್ಯಾರಿಸ್ ಅಂಡ್ ಟೋಕಿಯೋ,** ದಿ ಯುನೈಟೆಡ್ ನೇಷನ್ಸ್ ಎಜುಕೇಶನಲ್ ಸೈಂಟಿಫಿಕ್ ಅಂಡ್ ಕಲ್ಚರಲ್ ಆರ್ಗನೈಸೇಶನ್ ಅಂಡ್ ದಿ ಸೆಂಟರ್ ಫಾರ್ ಈಸ್ಟ್ ಏಷ್ಯನ್ ಕಲ್ಚರಲ್ ಸ್ಟಡೀಸ್, ಯುನೆಸ್ಕೋ, 1985

ದಾಸಗುಪ್ತ, ಪಿ.ಸಿ.; **ದಿ ಎಕ್ಸ್‌ಕವೇಷನ್ಸ್ ಅಟ್ ಪಾಂಡುರಾಜರ್ ದೀಬಿ, ಪಶ್ಚಿಮಬಂಗಾಳ,** ರಾಜ್ಯ ಪುರಾತತ್ತ್ವ ಇಲಾಖೆ, ಕಲ್ಕತ್ತ, 1964

ದಿವಾರೆ, ಟಿ.ಎನ್.; **ಎ ಶಾರ್ಟ್ ಹಿಸ್ಟರಿ ಆಫ್ ಪರ್ಷಿಯನ್ ಲಿಟರೇಚರ್,** ನವರೋಜಿ ವಾಡಿಯ ಕಾಲೇಜ್, 1961

ದಿಲೀಪ್ ರಾಜ್‌ಗೋರ್; **ಪಂಚ್‌ಮಾರ್ಕ್‌ಡ್ ಕಾಯಿನ್ಸ್ ಆಫ್ ಅರ್ಲಿ ಹಿಸ್ಟಾರಿಕ್ ಇಂಡಿಯ,** ರೀಶಾ ಬುಕ್ಸ್ ಇಂಟರ್‌ನ್ಯಾಷನಲ್, ಕ್ಯಾಲಿಫೋರ್ನಿಯ, 2001

ದೀಕ್ಷಿತ್, ಜಿ.ಎಸ್. ಮತ್ತು ಇತರರು, **ಕರ್ನಾಟಕದಲ್ಲಿ ಕೆರೆ ನೀರಾವರಿ**

# ಪರಾಮರ್ಶನ ಗ್ರಂಥಗಳು


ದೀಕ್ಷಿತ್, ಜಿ.ಎಸ್.; **ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ಮೆಡೀವಲ್ ಕರ್ನಾಟಕ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1964

ದೀಕ್ಷಿತ್, ಜಿ.ಎಸ್.; **ಬೆಳವಡಿ ಅರಸು ಮನೆತನ**, ಸಾರಂಗಶ್ರೀ ಸ್ಮರಣ ಸಂಪುಟ, ಸಿಂದಗಿ, 1996

ದೇಬಲ ಮಿತ್ರ; **ಭುವನೇಶ್ವರ**, ಭಾ.ಪು.ಸ.ಇ., ನ್ಯೂಡೆಲ್ಲಿ, 1978

ದೇವ್, ಎಸ್.ಬಿ.; **ಇಂಡಿಯನ್ ಬೀಡ್ಸ್, ಎ ಕಲ್ಚರಲ್ ಅಂಡ್ ಟೆಕ್ನಲಾಜಿಕಲ್ ಸ್ಟಡಿ**, ಪುಣೆ, 2000

ದೆಗ್ಲೂರ್ಕರ್, ಜೆ.ಬಿ.; **ಟೆಂಪಲ್ ಆರ್ಕಿಟೆಕ್ಚರ್ ಅಂಡ್ ಸ್ಕಲ್ಪ್ಚರ್ ಆಫ್ ಮಹಾರಾಷ್ಟ್ರ**, ನಾಗಪುರ ವಿಶ್ವವಿದ್ಯಾಲಯ, ನಾಗಪುರ, 1974

ದೆಗ್ಲೂರ್ಕರ್, ಜೆ.ಬಿ. ಮತ್ತು ಲಾಡ್.ಜಿ; **ಮೆಗಲಿಥಿಕ್ ರಾಯ್‌ಪುರ್**, ಡಿಸಿಪಿ–ಆರ್‌ಐ, ಪುಣೆ, 1992

ದೆರಣಿಯಂಗಳ, ಎಸ್.ಯು.; **ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್ ಡ್ಯೂರಿಂಗ್ ದಿ ಪ್ಲಿಸ್ಟೋಸೀನ್ ಇನ್ ಶ್ರೀಲಂಕ**, ಶ್ರೀಲಂಕ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆ, 1991

ದೆರಣಿಯಂಗಳ, ಎಸ್.ಯು.; **ದಿ ಪ್ರಿ ಹಿಸ್ಟರಿ ಆಫ್ ಶ್ರೀಲಂಕ: ಎನ್‌ಎಕಲಾಜಿಕಲ್ ಪರ್ಸ್‌ಪೆಕ್ಟಿವ್**, ಶ್ರೀಲಂಕ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆ, ಪುರಾವಿದ್ಯ ಡಿಪಾರ್ಟ್‌ಮೆಂಟ್, 1992

ದೇವರ ಕೊಂಡಾರೆಡ್ಡಿ; **ತಲಕಾಡಿನ ಗಂಗರ ದೇವಾಲಯಗಳು: ಒಂದು ಅಧ್ಯಯನ**, ಕರ್ನಾಟಕ ಶಿಲ್ಪ ಕಲಾ ಅಕಾಡೆಮಿ, ಬೆಂಗಳೂರು, 1995

ದೇವರ ಕೊಂಡಾರೆಡ್ಡಿ; **ಕೊಪ್ಪಳ ಜಿಲ್ಲೆಯ ಶಾಸನ** (ಸಂಪುಟ–2), ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999

ದೇವರ ಕೊಂಡಾರೆಡ್ಡಿ; **ಲಿಪಿಯ ಹುಟ್ಟು ಮತ್ತು ಬೆಳವಣಿಗೆ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002

ದೇವ್, ಎಸ್.ಬಿ.(ಸಂ); **ಎಕ್ಸ್‌ಕವೇಷನ್ ಅಟ್ ಭೋಕರ್ದನ್ – 1973**, ನಾಗಪುರ ವಿಶ್ವವಿದ್ಯಾಲಯ ಮತ್ತು ಭಾ.ಪು.ಸ.ಇ., ನಾಗಪುರ, ಔರಂಗಬಾದ್, 1974

ದೇವ್, ಎಸ್.ಬಿ. ಮತ್ತು ಧವಳೀಕರ್, ಎಂ.ಕೆ.; **ಪೌಣಾರ್ ಎಕ್ಸ್‌ಕವೇಷನ್**, ನಾಗಪುರ ವಿಶ್ವವಿದ್ಯಾಲಯ, ನಾಗಪುರ, 1968

ದೇವ್, ಎಸ್.ಬಿ.; **ಎಕ್ಸ್‌ಕವೇಷನ್ಸ್ ಅಟ್ ತಕಲ್‌ಘಾಟ್ ಅಂಡ್ ಖಾಪ (1966–68)**, ನಾಗಪುರ ವಿಶ್ವವಿದ್ಯಾಲಯ, ನಾಗಪುರ, 1970

ದೇವ್, ಎಸ್.ಬಿ.; **ಮಾರ್ಕಂಡಿ ಟೆಂಪಲ್ಸ್**, ನಾಗಪುರ ವಿಶ್ವವಿದ್ಯಾಲಯ, ನಾಗಪುರ, 1973

ದೇವ್, ಎಸ್.ಬಿ. ಮತ್ತಿತರರು.; **ಎಕ್ಸ್‌ಕವೇಷನ್ಸ್ ಅಟ್ ನಾಯ್‌ಕುಂಡ್**, ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಂ, ಮುಂಬೈ, 1982

ದೇವ್, ಎಸ್.ಬಿ. ಮತ್ತು ಪದ್ದಯ್ಯ, ಕೆ.; (ಸಂ) **ರೀಸೆಂಟ್ ಅಡ್ವಾನ್ಸಸ್ ಇನ್ ಆರ್ಕಿಯಾಲಜಿ**, ಡಿಸಿಪಿ–ಆರ್‌ಐ, ಪುಣೆ, 1985

ದೇವರಾಜ್,ಡಿ.ವಿ. ಮತ್ತಿತರರು.; **ಹೆಗ್ಗಡೆಹಳ್ಳಿ, ಎ ರಿಪೋರ್ಟ್ ಆನ್ ಮೆಗಲಿಥಿಕ್ ಎಕ್ಸ್‌ಕವೇಷನ್**, ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆ, ಮೈಸೂರು, 1995

ದೇಸಾಯಿ, ಪಿ.ಬಿ.; **ಜೈನಿಸಂ ಇನ್ ಸೌತ್ ಇಂಡಿಯ ಅಂಡ್ ಸಮ್ ಜೈನ ಎಪಿಗ್ರಾಫ್ಸ್**, ಸೋಲಾಪುರ, 1957

ದೇಸಾಯಿ, ಪಿ.ಬಿ. ಮತ್ತು ಇತರರು.; **ಹಿಸ್ಟರಿ ಆಫ್ ಕರ್ನಾಟಕ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1970

ಧನಂಜಯಕರ್.; **ಬಿ.ಆರ್.ಅಂಬೇಡ್ಕರ್, ಎ ಸ್ಟಡಿ ಇನ್ ಸೋಶಿಯಲ್ ಡೆಮಾಕ್ರಸಿ**, ಪಾಪ್ಯುಲರ್ ಪ್ರಕಾಶನ, ಮುಂಬೈ, 1977

ಧವಳೀಕರ್, ಎಂ.ಕೆ.; **ಸಾತವಾಹನ ಆರ್ಟ್**, ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 2004

ಧವಳೀಕರ್, ಎಂ.ಕೆ.; **ದಿ ಫಸ್ಟ್ ಫಾರ್ಮರ್ಸ್ ಆಫ್ ದಿ ಡೆಕ್ಕನ್**, ರವೀಶ್ ಪಬ್ಲಿಕೇಷನ್ಸ್, ಪುಣೆ, 1988

ಧವಳೀಕರ್, ಎಂ.ಕೆ.; **ಹಿಸ್ಟಾರಿಕಲ್ ಆರ್ಕಿಯಾಲಜಿ ಆಫ್ ಇಂಡಿಯ**, ಬುಕ್ಸ್ ಅಂಡ್ ಬುಕ್ಸ್, ನ್ಯೂಡೆಲ್ಲಿ, 1999

ಧವಳೀಕರ್, ಎಂ.ಕೆ.; **ಕುಂತಾಸಿ: ಎ ಹರಪ್ಪನ್ ಪೋರ್ಟ್ ಇನ್ ವೆಸ್ಟರ್ನ್ ಇಂಡಿಯ**, ಸೌತ್ ಏಷ್ಯನ್ ಆರ್ಕಿಯಾಲಜಿ, 1989

ಧವಳೀಕರ್. ಎಂ.ಕೆ.; **ಇಂಡಿಯನ್ ಪ್ರೋಟೋ ಹಿಸ್ಟರಿ**, ಬುಕ್ಸ್ ಅಂಡ್ ಬುಕ್ಸ್, ನ್ಯೂಡೆಲ್ಲಿ, 1997

ಧವಳೀಕರ್, ಎಂ.ಕೆ. ಮತ್ತಿತರರು.; **ಎಕ್ಸ್‌ಕವೇಷನ್ಸ್ ಅಟ್ ಇನಾಮ್‌ಗಾಂವ್**, (ಭಾಗ 1 ಮತ್ತು 2), ಡಿಸಿಪಿ–ಆರ್‌ಐ, ಪುಣೆ, 1988

ಢಾಕಿ, ಎಂ.ಎ. ಮತ್ತು ಇತರರು (ಸಂ); **ಎನ್‌ಸೈಕ್ಲೊಪೀಡಿಯ ಆಫ್ ಇಂಡಿಯನ್ ಟೆಂಪಲ್ ಆರ್ಕಿಟೆಕ್ಚರ್**, 6 ಸಂಪುಟಗಳು, ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ದೆಹಲಿ

ನಂದಗೋಪಾಲ್ ಚೂಡಾಮಣಿ; **ಡ್ಯಾನ್ಸ್ ಅಂಡ್ ಮ್ಯೂಸಿಕ್ ಆಸ್ ರೆಪ್ರೆಸೆಂಟೆಡ್ ಇನ್ ಕರ್ನಾಟಕ ಸ್ಕಲ್ಪ್‌ಚರ್ಸ್**, ಆಗಮ್ ಪ್ರಕಾಶನ, ದೆಹಲಿ, 1993

ನರಸಿಂಹಮೂರ್ತಿ, ಎ.ವಿ. (ಸಂ); **ಆರ್ಕಿಯಾಲಜಿ ಆಫ್ ಕರ್ನಾಟಕ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1975

ನರಸಿಂಹಮೂರ್ತಿ.ಎ.ವಿ.; **ಗಡಿಯಾಚೆ ಭಾರತೀಯ ಸಂಸ್ಕೃತಿ**, ಭಾರತೀಯ ವಿದ್ಯಾಭವನ, ಬೆಂಗಳೂರು, 2002

ನರಸಿಂಹಮೂರ್ತಿ, ಸಿ.ಎನ್.; **ಜೈನಿಸಮ್ ಇನ್ ದಿ ಕೆನರ ಕೋಸ್ಟ್**, ಮೈಸೂರು ವಿಶ್ವವಿದ್ಯಾಲಯ, 1983

ನರಸಿಂಹಯ್ಯ, ಬಿ.; **ನಿಯೋಲಿಥಿಕ್ ಅಂಡ್ ಮೆಗಲಿಥಿಕ್ ಕಲ್ಚರ್ಸ್ ಇನ್ ತಮಿಳುನಾಡು**, ಸಂದೀಪ ಪ್ರಕಾಶನ, ಡೆಲ್ಲಿ, 1980

ನರಸಿಂಹನ್, ಎ.ಎಲ್. ಮತ್ತು ಮರಿಶಾಮಾಚಾರ್ (ಸಂ); **ವಿಜಯನಗರ ಕಾಲದ ಶಿಲ್ಪಕಲೆ**, ಶಿಲ್ಪಕಲಾ ಪ್ರಪಂಚ, ಲಲಿತಕಲಾ ಅಕಾಡೆಮಿ, ಬೆಂಗಳೂರು, 1994

ನಾಗಯ್ಯ, ಜೆ.ಎಂ.; **ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ**, ವೀರಶೈವ ಅಧ್ಯಯನ ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾಂವಿ, 1992

ನಾಗರಾಜು, ಎಸ್.; **ಬುದ್ಧಿಸ್ಟ್ ಆರ್ಕಿಟೆಕ್ಚರ್ ಆಫ್ ವೆಸ್ಟರ್ನ್ ಇಂಡಿಯ**, ಆಗಮ್ ಪ್ರಕಾಶನ, ಡೆಲ್ಲಿ, 1981

ನಾಗರಾಜ್, ಎಂ.ಜಿ.; **ಕೊಡಗಿನ ಅರಸರು**, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2003

ನಾಗರಾಜ್, ಎಂ.ಜಿ.; ನಾಯಕರ ಆಡಳಿತ, **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**, ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು, 2004

ನಾಗರಾಜ್, ಎಂ.ಜಿ.; **ಕೊಡಗಿನ ಹಾಲೇರಿ ರಾಜವಂಶ**, ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆ, ಮೈಸೂರು, 2004

ನಾಗರಾಜರಾವ್, ಎಂ.ಎಸ್. ಮತ್ತು ಕೆ.ಸಿ.ಮಲ್ಹೋತ್ರ; **ದಿ ಸ್ಟೋನ್‌ಏಜ್ ಹಿಲ್‌ಡ್ವೆಲರ್ಸ್ ಆಫ್ ತೆಕ್ಕಲಕೋಟ**, ಡಿಸಿಪಿ–ಆರ್‌ಐ, ಪುಣೆ, 1965

ನಾಗರಾಜರಾವ್, ಎಂ.ಎಸ್.; ಗ್ರೇವ್ಸ್ ಆಫ್ ದಿ ಅರ್ಲಿ ಐರನ್–ಯೂಸಿಂಗ್ ಪೀಪಲ್ ಅಟ್ ಕೊಮಾರನಹಳ್ಳಿ – ರೀಸೆಂಟ್ ಎವಿಡೆನ್ಸ್, **ಆರ್ಕಿಯಾಲಜಿ ಆಫ್ ಕರ್ನಾಟಕ,** ಅ.ಸುಂದರ (ಸಂ), ಮೈಸೂರು, 1990

ನಾಗರಾಜರಾವ್, ಎಂ.ಎಸ್.; **ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್**, 1979–83 ಹಾಗೂ 1983–84, ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯ ಇಲಾಖೆ

ನಾಗರಾಜರಾವ್, ಎಂ.ಎಸ್.; **ಪ್ರೋಟೊ ಹಿಸ್ಟಾರಿಕ್ ಕಲ್ಚರ್ಸ್ ಆಫ್ ದಿ ತುಂಗಭದ್ರ ವ್ಯಾಲಿ**, ಧಾರವಾಡ, 1970

ನಾಗಸ್ವಾಮಿ, ಆರ್.; **ದಿ ಆರ್ಟ್ ಆಫ್ ತಮಿಳುನಾಡು**, ಸಂದೀಪ್ ಪ್ರಕಾಶನ, ದೆಹಲಿ, 1972

ನಾರಾಯಣನ್, ಎಂ.ಜಿ.ಎಸ್.; **ಇಂಡೆಕ್ಸ್ ಟು ಚೇರ ಇನ್‌ಸ್ಕ್ರಿಪ್ಷನ್ಸ್**, ಯೂನಿವರ್ಸಿಟಿ ಆಫ್ ಕೇರಳ, ತಿರುವನಂತಪುರ, 1972

ನಿಗಮ್, ಎಂ.ಎಲ್.; **ಸ್ಕಲ್ಪ್‌ಚರಲ್ ಹೆರಿಟೇಜ್ ಆಫ್ ಆಂಧ್ರದೇಶ**, ಬುಕ್‌ಲಿಂಕ್ಸ್ ಕಾರ್ಪೊರೇಷನ್, ಹೈದರಾಬಾದ್, 1975

ನಿಗಮ್, ಎಲ್.ಎಸ್.; **ರಿಡಲ್ ಆಫ್ ಇಂಡಿಯನ್ ಐಕೊನಾಗ್ರಫಿ: ಚೆಟೆಟಿಕ್ ಆನ್ ರೇರ್ ಐಕನ್ ಫ್ರಮ್ ತಾಲಾ**, ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 1999–2000

ನೀಲಕಂಠಶಾಸ್ತ್ರಿ, ಕೆ.ಎ.; **ಎ ಹಿಸ್ಟರಿ ಆಫ್ ಸೌತ್ ಇಂಡಿಯ**, ಆಕ್ಸ್‌ಫರ್ಡ್ ಪಬ್ಲಿಕೇಷನ್ಸ್, ದೆಹಲಿ

ನ್ಯೂಮೇಯರ್, ಇ.; **ಪ್ರಿಹಿಸ್ಟಾರಿಕ್ ಇಂಡಿಯನ್ ರಾಕ್ ಪೇಟಿಂಗ್ಸ್**, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, 1983

ನ್ಯೂಮೇಯರ್, ಇ.; ರಾಕ್ ಆರ್ಟ್ ಇನ್ ಇಂಡಿಯ, **ರಾಕ್ ಆರ್ಟ್ ಇನ್ ದಿ ಓಲ್ಡ್ ವರ್ಲ್ಡ್**, ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ದಿ ಆರ್ಟ್ಸ್, ನ್ಯೂಡೆಲ್ಲಿ, 1992

ನ್ಯೂಮೇಯರ್, ಇ.; **ಲೈನ್ಸ್ ಆನ್ ಸ್ಟೋನ್: ದಿ ಪ್ರಿಹಿಸ್ಟಾರಿಕ್ ರಾಕ್ ಆರ್ಟ್ ಆಫ್ ಇಂಡಿಯ**, ಮನೋಹರ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1993

ಪಂತ್, ಪಿ.ಸಿ.; **ಪ್ರಿಹಿಸ್ಟಾರಿಕ್ ಉತ್ತರ ಪ್ರದೇಶ್, ಎ ಸ್ಟಡಿ ಆಫ್ ಓಲ್ಡ್ ಸ್ಟೋನ್‌ಏಜ್**, ಆಗಮ್ ಕಲಾ ಪ್ರಕಾಶನ, ಡೆಲ್ಲಿ, 1982

ಪದ್ದಯ್ಯ, ಕೆ. ಮತ್ತು ಇ.ಜೆ.ಬ್ರಿಲ್ (ಸಂ): ಇನ್ವೆಸ್ಟಿಗೇಶನ್ಸ್ ಇನ್ ಟು ದಿ ನಿಯೋಲಿಥಿಕ್ ಕಲ್ಚರ್ ಆಫ್ ದಿ **ಶೋರಾಪುರ್ ದೋಆಬ್, ಸೌತ್ ಇಂಡಿಯ,** ಲಿಡನ್, 1973

ಪದ್ದಯ್ಯ, ಕೆ.; **ದಿ ಅಶೂಲಿಯನ್ ಕಲ್ಚರ್ ಆಫ್ ದಿ ಹುಣಸಗಿ ವ್ಯಾಲಿ (ಪೆನಿನ್ಸುಲಾರ್ ಇಂಡಿಯ): ಎ ಸೆಟ್ಲ್‌ಮೆಂಟ್ ಸಿಸ್ಟಮ್ ಪರ್ಸ್‌ಪೆಕ್ಟಿವ್**, ಡಿಸಿಪಿ–ಆರ್‌ಐ, ಪುಣೆ, 1982

# ಪರಾಮರ್ಶನ ಗ್ರಂಥಗಳು

ಪದ್ದಯ್ಯ, ಕೆ.; **ದಿ ನ್ಯೂ ಆರ್ಕಿಯಾಲಜಿ ಅಂಡ್ ಇಟ್ಸ್ ಆಫ್ಟರ್‌ಮತ್**, ರವೀಶ್ ಪಬ್ಲಿಷರ್ಸ್, ಪುಣೆ, 1990

ಪದ್ದಯ್ಯ, ಕೆ.; **ರೀಸೆಂಟ್ ಸ್ಟಡೀಸ್ ಇನ್ ಇಂಡಿಯನ್ ಆರ್ಕಿಯಾಲಜಿ**, ಮುನ್ಷಿರಾಮ್ ಮನೋಹರ್‌ಲಾಲ್ ಪಬ್ಲಿಷರ್ಸ್, ನ್ಯೂಡೆಲ್ಲಿ, 2002

ಪಪ್ಪು, ಆರ್.ಎಸ್.; **ಅಶೂಲಿಯನ್ ಕಲ್ಚರ್ ಇನ್ ಪೆನಿನ್‌ಸುಲಾರ್ ಇಂಡಿಯ: ಎನ್ ಎಕಲಾಜಿಕಲ್ ಪರ್ಸ್‌ಪೆಕ್ಟಿವ್**, ಡಿ.ಕೆ.ಪ್ರಿಂಟ್ ವರ್ಲ್ಡ್, ನ್ಯೂ ಡೆಲ್ಲಿ, 2001

ಪ್ರಕಾಶ್, ಬಿ. ಮತ್ತು ತ್ರಿಪಾಠಿ, ವಿಭ.; **ಐರನ್ ಟೆಕ್ನಾಲಜಿ ಇನ್ ಏನ್ಷಿಯಂಟ್ ಇಂಡಿಯ**, ಮೆಟಲ್ಸ್ ಅಂಡ್ ಮೆಟೀರಿಯಲ್ಸ್, 1986

ಪ್ರಧಾನ್, ಎಸ್.; **ರಾಕ್ ಆರ್ಟ್ ಇನ್ ಒರಿಸ್ಸ**, ಆರ್ಯನ್ ಬುಕ್ಸ್ ಇಂಟರ್‌ನ್ಯಾಷನಲ್, ನ್ಯೂ ಡೆಲ್ಲಿ, 2001

ಪ್ರಭಾಕರ, ಎಂ.ಎಸ್.; **ದೇವಾಲಯ ವಾಸ್ತು ಚಂದ್ರಿಕೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000

ಪರ್ಪೊಲ, ಆಸ್ಕೊ.; **ಡಿಸೈಫರಿಂಗ್ ದಿ ಇಂಡಸ್ ಸ್ಕ್ರಿಪ್ಟ್**, ಕೇಂಬ್ರಿಜ್ ವಿಶ್ವವಿದ್ಯಾಲಯ, ಕೇಂಬ್ರಿಜ್, 1994

ಪರ್ಸಿ ಬ್ರೌನ್, **ಇಂಡಿಯನ್ ಆರ್ಕಿಟೆಕ್ಚರ್ (ಬುದ್ಧಿಸ್ಟ್ ಅಂಡ್ ಹಿಂದು)**, ಮುಂಬೈ, 1942

ಪಾಂಡೆ, ಎಸ್.ಕೆ.; **ಇಂಡಿಯನ್ ರಾಕ್ ಆರ್ಟ್**, ಆರ್ಯನ್ ಬುಕ್ಸ್ ಇಂಟರ್‌ನ್ಯಾಷನಲ್, ನ್ಯೂಡೆಲ್ಲಿ, 1993

ಪಾಂಡೆ, ಎಸ್.ಎನ್.; **ಎಕನಾಮಿಕ್ ಹಿಸ್ಟರಿ ಆಫ್ ಮಾಡರ್ನ್ ಇಂಡಿಯ (1757–1947)**, ರೀಡ್‌ವರ್ದಿ, ಡೆಲ್ಲಿ, 2008

ಪಾಟ್ಸ್, ಡಿ.ಟಿ.; **ಎಕ್ಸ್‌ಕವೇಷನ್ ಅಟ್ ತೆಪೆ–ಯಾಹ್ಯ– ಇರಾನ್, 1967–75**, ಕೇಂಬ್ರಿಜ್, 2001

ಪಾಟೀಲ್, ಸಿ.ಎಸ್.; **ಟೆಂಪಲ್ಸ್ ಆಫ್ ಬಳ್ಳಾರಿ ಅಂಡ್ ರಾಯಚೂರು ಡಿಸ್ಟ್ರಿಕ್ಟ್ಸ್, ಕರ್ನಾಟಕ (1000–1325)**, ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯ ಇಲಾಖೆ, ಮೈಸೂರು, 1992

ಪ್ರಿಂಗಲ್ ಕೆನಡಿ; **ಹಿಸ್ಟರಿ ಆಫ್ ಗ್ರೇಟ್ ಮೊಗಲ್ಸ್**

ಪೀಟರ್ ಎನ್. ಸ್ಟಿಯರ್ನ್ಸ್ (ಸಂ); **ಎನ್‌ಸೈಕ್ಲೊಪೀಡಿಯ ಆಫ್ ವರ್ಲ್ಡ್ ಹಿಸ್ಟರಿ**, ಹಾರ್ಕೋರ್ಟ್, ಹೂಟನ್ ಮಿಫ್ಲಿನ್, 2002

ಪೀಟರ್ ಹಾರ್ಡಿ – **ಹಿಸ್ಟೋರಿಯನ್ಸ್ ಆಫ್ ಮೆಡೀವಲ್ ಇಂಡಿಯ**

ಪುಟ್ಟಣ್ಣ, ಎಂ.ಎಸ್.; **ಗುಮ್ಮನಾಯಕನ ಪಾಳೆಯಗಾರರು**, ಬೆಂಗಳೂರು, 1976

ಪುರುಷೋತ್ತಮ ಬಿಳಿಮಲೆ; **ಕರಾವಳಿ ಜಾನಪದ**, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, 1990

ಪೆಟ್ರಾಗ್ಲಿಯ, ಮೈಕೆಲ್ ಮತ್ತು ಕೋರಿಸೆಟ್ಟರ್, ಆರ್.; **ಅರ್ಲಿ ಹ್ಯೂಮನ್ ಬಿಹೇವಿಯರ್ ಇನ್ ಗ್ಲೋಬಲ್ ಕಾಂಟೆಕ್ಸ್ಟ್**, ರೌಟ್ಲೇ ಪಬ್ಲಿಶರ್ಸ್, ಲಂಡನ್, 1998

ಪೋಸೆಲ್, ಜಿ.ಎಲ್.; **ರೇಡಿಯೊ ಕಾರ್ಬನ್ ಡೇಟ್ಸ್ ಫಾರ್ ಸೌತ್ ಏಷ್ಯನ್ ಆರ್ಕಿಯಾಲಜಿ**, ಪೆನ್ಸಿಲ್‌ವೇನಿಯ ವಿಶ್ವವಿದ್ಯಾಲಯ, ಫಿಲಡೆಲ್ಫಿಯ, 1990

ಪೋಸೆಲ್, ಜಿ.ಎಲ್ ಮತ್ತು ರಿಸಮನ್.; **ಕ್ರೊನಾಲಜೀಸ್ ಇನ್ ಓಲ್ಡ್ ವರ್ಲ್ಡ್ ಆರ್ಕಿಯಾಲಜಿ (ಸಂಪುಟ–1)**, ದಿ ಯೂನಿವರ್ಸಿಟಿ ಆಫ್ ಶಿಕಾಗೊ, ಶಿಕಾಗೊ ಅಂಡ್ ಲಂಡನ್, 1992

ಪೋಸೆಲ್, ಜಿ.ಎಲ್.; **ಹರಪ್ಪನ್ ಸಿವಿಲೈಜೇಷನ್: ಎ ರೀಸೆಂಟ್ ಪರ್ಸ್‌ಪೆಕ್ಟಿವ್**, ಆಕ್ಸ್‌ಫರ್ಡ್ ಅಂಡ್ ಐ.ಬಿ.ಹೆಚ್., ನವದೆಹಲಿ, 1993

ಫುಟ್, ಆರ್.ಬಿ.; **ದಿ ಫುಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರಿಹಿಸ್ಟಾರಿಕ್ ಅಂಡ್ ಪ್ರೋಟೊ ಹಿಸ್ಟಾರಿಕ್ ಆಂಟಿಕ್ವಿಟೀಸ್: ದೇರ್ ಏಜಸ್ ಅಂಡ್ ಡಿಸ್ಟ್ರಿಬ್ಯೂಷನ್ಸ್**, ಗೌರ್ನಮೆಂಟ್ ಮ್ಯೂಸಿಯಂ, ಮದ್ರಾಸ್, 1916

ಫೇರ್ ಸರ್ವಿಸ್ (ಜೂ). ಡಬ್ಲ್ಯು. ಎ.; **ದಿ ರೂಟ್ಸ್ ಆಫ್ ಏನ್ಷಿಯಂಟ್ ಇಂಡಿಯ**, ಯೂನಿವರ್ಸಿಟಿ ಆಫ್ ಶಿಕಾಗೊ, 1975

ಭಟ್‌ಸೂರಿ, ಕೆ.ಜಿ.; **ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಸೌತ್ ಕೆನರ**, (ಪಿಎಚ್.ಡಿ. ಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1987

ಬರ್ಟನ್ ಸ್ಟೀನ್; **ಎ ಹಿಸ್ಟರಿ ಆಫ್ ಇಂಡಿಯ**, ನ್ಯೂಡೆಲ್ಲಿ, 1998

ಬಕ್ಷಿ, ಎಸ್.ಆರ್.; **ಅಡ್ವಾನ್ಸ್ಡ್ ಹಿಸ್ಟರಿ ಆಫ್ ಮೆಡೀವಲ್ ಇಂಡಿಯ(3 ಸಂಪುಟಗಳು)**, ಅನ್‌ಮೋಲ್ ಪಬ್ಲಿಕೇಷನ್ಸ್, ಡೆಲ್ಲಿ, 2003

ಬ್ಯಾಡ್ಜ್. ಎ.ಎ.ಡಬ್ಲ್ಯೂ.; **ದಿ ಹಿಸ್ಟರಿ ಆಫ್ ಅಲೆಗ್ಸಾಂಡರ್ ದಿ ಗ್ರೇಟ್**, ಕೇಂಬ್ರಿಜ್, 1890

ಬಾದ್ರಿ, ಕೆ.ಎಂ.; **ಎ ಕಲ್ಚರಲ್ ಹಿಸ್ಟರಿ ಆಫ್ ನಾರ್ದರನ್ ಇಂಡಿಯ**

ಬೆಲ್‌ವುಡ್ ಪೀಟರ್: **ಫಸ್ಟ್ ಫಾರ್ಮರ್ಸ್: ದಿ ಆರಿಜನ್ಸ್ ಆಫ್ ಅಗ್ರಿಕಲ್ಚರಲ್ ಸೊಸೈಟಿ**, ವಿಲ್ಲಿ, ಬ್ಲಾಕ್‌ವೆಲ್, 2004

ಬ್ಯಾನರ್ಜಿ, ಎನ್.ಆರ್.; **ಐರನ್ ಏಜ್ ಇನ್ ಇಂಡಿಯ**, ಮೋತಿಲಾಲ್ ಬನಾರಸಿದಾಸ್ ಪಬ್ಲಿಷರ್ಸ್, ದೆಹಲಿ, 1965

ಬ್ಯಾನರ್ಜಿ, ಎನ್.ಆರ್.; **ನಾಗ್ದ**, ಭಾ.ಪು.ಸ.ಇ., ನ್ಯೂಡೆಲ್ಲಿ, 1986

ಬಾಲಸುಬ್ರಮಣ್ಯ; **ಮರೆಯಲಾಗದ ಮಹಾಸಾಮ್ರಾಜ್ಯ** (ಅನುವಾದ), ಸೂರ್ಯನಾರಾಯಣರಾವ್. ಬಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000

ಬಿನ್‌ಫರ್ಡ್ ಲೂಯಿಸ್, ಆರ್.; **ಎನ್ ಆರ್ಕಿಯಲಾಜಿಕಲ್ ಪರ್ಸ್‌ಪೆಕ್ಟಿವ್**, ಸೆಮಿನಾರ್ ಪ್ರೆಸ್, ನ್ಯೂಯಾರ್ಕ್, 1972

ಬಿನ್‌ಫರ್ಡ್, ಲೂಯಿಸ್, ಆರ್.; **ಇನ್ ಪರ್ಸ್ಯೂಟ್ ಆಫ್ ದಿ ಪಾಸ್ಟ್**, ಥೇಮ್ಸ್ ಅಂಡ್ ಹಡ್‌ಸನ್, ನ್ಯೂಯಾರ್ಕ್, 1983

ಬ್ರಯಾನ್ ಫಗನ್.; **ಆಕ್ಸ್‌ಫರ್ಡ್ ಕಂಪಾನಿಯನ್ ಟು ಆರ್ಕಿಯಾಲಜಿ**, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಆಕ್ಸ್‌ಫರ್ಡ್, 1996

ಬಿಲೆ, ಟಿ.ಡಬ್ಲ್ಯೂ.; **ಎಕ್ಸ್‌ಕವೇಷನ್ ಅಟ್ ತೆಪೆಯಾಹ್ಯಾ, ಇರಾನ್, ದಿ ಅರ್ಲಿ ಪೀರಿಯಡ್ಸ್ (1967–75)**, ಕೇಂಬ್ರಿಜ್, 1986

ಬಿಷ್ಟ್, ಆರ್.ಎಸ್.; ಸ್ಟ್ರಕ್ಚರಲ್ ರಿಮೇನ್ಸ್ ಅಂಡ್ ಟೌನ್ ಪ್ಲಾನಿಂಗ್ ಆಫ್ ಬನಾವಳಿ, **ಫ್ರಾಂಟಿಯರ್ಸ್ ಆಫ್ ದ ಇಂಡಸ್ ಸಿವಿಲೈಜೇಷನ್**, ಬಿ.ಬಿ. ಲಾಲ್ ಮತ್ತು ಎಸ್.ಪಿ. ಗುಪ್ತ (ಸಂ), ನ್ಯೂಡೆಲ್ಲಿ, 1984

ಬ್ರುವೋಸ್, ಎಸ್.ಎಮ್.; **ದಿ ಬರೀಡ್ ಸಿಟೀಸ್ ಆಫ್ ಸಿಲೋನ್, ಎ ಗೈಡ್‌ಬುಕ್ ಟು ಅನುರಾಧಪುರ ಅಂಡ್ ಪೋಲನ್ನಾರುವ**, 1999

ಬ್ಯೂಲರ್, ಜಿ.; **ಇಂಡಿಯನ್ ಪೇಲಿಯೋಗ್ರಫಿ**, ಮುನ್ಷಿರಾಮ್ ಮನೋಹರ್‌ಲಾಲ್, ನ್ಯೂಡೆಲ್ಲಿ, 2004

ಭೈರವಿ ಪ್ರಸಾದ್; **ಐರನ್ ಅಂಡ್ ಸೋಶಿಯಲ್ ಚೇಂಜ್ ಇನ್ ಅರ್ಲಿ ಇಂಡಿಯ**, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, 2006

ಬ್ರೆಬಿಯ, ಸಿ.ಎ. ಮತ್ತು ಗಂಬಿನ್ (ಸಂ).; **ದಿ ಮಾರಿಟೈಮ್ ಅಂಡ್ ಅಂಡರ್ ವಾಟರ್ ಹೆರಿಟೇಜ್**, ವೆಸೆಕ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸೌಥ್ ಹಾಂಪ್ಟನ್, 2003

ಬೋರ್ಡ್ಸ್, ಎಫ್. (ಸಂ); **ದಿ ಆರಿಜನ್ ಆಫ್ ಹೋಮೋಸೇಪಿಯನ್ಸ್**, ಯುನೆಸ್ಕೊ, ಪ್ಯಾರಿಸ್, 1972

ಬೋರ್ಡ್ಸ್, ಎಫ್.; **ದಿ ಓಲ್ಡ್ ಸ್ಟೋನ್ ಏಜ್**, ಮ್ಯಾಗ್ರಾಹಿಲ್, ಲಂಡನ್–ನ್ಯೂಯಾರ್ಕ್, 1968

ಬೋನರ್, ಆಲೈಸ್.; **ಪ್ರಿನ್ಸಿಪಲ್ಸ್ ಆಫ್ ಕಂಪೋಸಿಷನ್ ಇನ್ ಹಿಂದು ಸ್ಕಲ್ಪ್‌ಚರ್ಸ್**, ಮೋತಿಲಾಲ್ ಬನಾರಸಿದಾಸ್, ದೆಹಲಿ, 1990

ಬೋಸ್, ಡಿ.ಎಮ್. (ಸಂ); **ಎ ಕನ್‌ಸೈಜ್ ಹಿಸ್ಟರಿ ಆಫ್ ಸೈನ್ಸ್ ಇನ್ ಇಂಡಿಯ**, ಡೆಲ್ಲಿ, 1971

ಭಟ್ಟ, ಗುರುರಾಜ, ಪಿ.; **ಸ್ಟಡೀಸ್ ಇನ್ ಹಿಸ್ಟರಿ ಅಂಡ್ ಕಲ್ಚರ್ ಆಫ್ ತುಳುನಾಡು**, ಕಲ್ಯಾಣಪುರ, 1975

ಭಟ್ ಸೂರಿ, ಕೆ.ಜಿ.; **ಗೇರುಸೊಪ್ಪೆಯ ಜೈನ ವಾಸ್ತು ಮತ್ತು ಮೂರ್ತಿ ಶಿಲ್ಪ**, ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆ, ಮೈಸೂರು, 1996

ಮಜುಂದಾರ್, ಬಿ.; **ಎ ಗೈಡ್ ಟು ಸಾರನಾಥ್**, ಭಾ.ಪು.ಸ.ಇ., ನವದೆಹಲಿ, 1937

ಮಜುಂದಾರ್, ಎನ್.ಜಿ.; **ಎಕ್ಸ್‌ಪ್ಲೊರೇಶನ್ಸ್ ಇನ್ ಸಿಂಧ್**, ಮೆಮಾಯರ್ಸ್ ಆಫ್ ದಿ ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯ, ನಂ.48, ನ್ಯೂಡೆಲ್ಲಿ, 1934

ಮಣಿ, ಬಿ.ಆರ್.; **ಥ್ರೆಶೋಲ್ಡ್ ಆಫ್ ದಿ ಓರಿಯೆಂಟ್, ಸ್ಟಡೀಸ್ ಇನ್ ಆರ್ಕಿಯಲಾಜಿಕಲ್ ಇನ್‌ವೆಸ್ಟಿಗೇಶನ್ಸ್**, ಆರ್ಯನ್ ಬುಕ್ಸ್ ಇಂಟರ್‌ನ್ಯಾಷನಲ್, ಡೆಲ್ಲಿ, 1997

ಮಟ್ಪಾಲ್, ವೈ.; **ರಾಕ್ ಆರ್ಟ್ ಇನ್ ಕುಮಾವ್ ಹಿಮಾಲಯ**, ಆರ್ಯನ್ ಬುಕ್ಸ್ ಇಂಟರ್‌ನ್ಯಾಷನಲ್, ನ್ಯೂಡೆಲ್ಲಿ, 1995

ಮರುಳಯ್ಯ, ಸಾ.ಶಿ., **ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ**, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

ಮಹದೇವ, ಸಿ.; **ವಿಜಯನಗರದ ಗಾರೆ ಶಿಲ್ಪಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000

ಮಹದೇವ, ಸಿ. ಮತ್ತು ಇತರರು; **ಕರ್ನಾಟಕ ದೇವಾಲಯಗಳ ಕೋಶ** (ಹಾವೇರಿ ಜಿಲ್ಲೆ), ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999

ಮಹದೇವನ್, ಐ.; **ದ ಇಂಡಸ್ ಸ್ಕ್ರಿಪ್ಟ್ ಟೆಕ್ಸ್ಟ್, ಕನ್‌ಕಾರ್ಡೆನ್ಸ್ ಅಂಡ್ ಟೇಬಲ್ಸ್,** ಭಾ.ಪು.ಸ.ಇ., ನ್ಯೂಡೆಲ್ಲಿ, 1977

ಮಹದೇವನ್, ಐ.; **ಕಾರ್ಪಸ್ ಆಫ್ ದಿ ತಮಿಳ್ ಬ್ರಾಹ್ಮಿ ಇನ್‌ಸ್ಕ್ರಿಪ್ಷನ್ಸ್,** ತಮಿಳುನಾಡು ರಾಜ್ಯ ಪುರಾತತ್ತ್ವ ಇಲಾಖೆ, ಮದ್ರಾಸು, 1966

ಮಹಮ್ಮದ್ ಎಸ್. ಹುಸೇನ್ ಮತ್ತು ನಯನಾರ್.; **ಅರಬ್ ಜಿಯಾಗ್ರಾಫರ್ಸ್: ನಾಲೆಜ್ ಆಫ್ ಸದರ್ನ್ ಇಂಡಿಯ** (ಸಂಪುಟ–6), ಯೂನಿವರ್ಸಿಟಿ ಆಫ್ ಮದ್ರಾಸ್, ಇಸ್ಲಾಮಿಕ್ ಸೀರೀಸ್, ಮದ್ರಾಸ್

ಮಹಾಜನ್, ವಿ.ಡಿ.; **ಇಂಡಿಯ ಸಿನ್ಸ್ 1526,** ಎಸ್.ಚಾಂದ್ ಗ್ರೂಪ್, ಡೆಲ್ಲಿ, 1969

ಮಹಾಲಿಂಗಮ್, ಟಿ.ವಿ.; **ಅರ್ಲಿ ಸೌತ್ ಇಂಡಿಯನ್ ಪೇಲಿಯೋಗ್ರಫಿ,** ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್, 1974

ಮಹಾಲಿಂಗಮ್, ಟಿ.ವಿ.; **ಅಡ್ಮಿನಿಸ್ಟ್ರೇಶನ್ ಅಂಡ್ ಸೊಸೈಟಿ ಅಂಡರ್ ದಿ ವಿಜಯನಗರ (ಸಂಪುಟ–1),** ಯೂನಿವರ್ಸಿಟಿ ಆಫ್ ಮದ್ರಾಸ್, ಮದ್ರಾಸ್, 1969

ಮಹಾಲಿಂಗಮ್, ಟಿ.ವಿ.; **ರಿಪೋರ್ಟ್ ಆಫ್ ದಿ ಎಕ್ಸ್‌ಕವೇಷನ್ ಇನ್ ದಿ ಲೋಯರ್ ಕಾವೇರಿ ವ್ಯಾಲಿ (ತಿರುಕಾಂಪುಲಿಯೂರ್ ಅಂಡ್ ಅಳಗರೈ) 1962–64,** ಯೂನಿವರ್ಸಿಟಿ ಆಫ್ ಮದ್ರಾಸ್, ಮದ್ರಾಸ್, 1970

ಮಾರ್ಕೋಗ್ಲೇನ್, ಇ.; **ದಿ ಫಿನಿಷಿಯನ್ಸ್,** ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯ, 2000

ಮಾರ್ಕೋನಿ, ಸಿ.ಬಿ.ಎಂ.; **ದಿ ಸ್ಟೋನ್ ಏಜ್ ಆಫ್ ನಾರ್ದನ್ ಆಫ್ರಿಕ,** ಪೆಂಗ್ವಿನ್ ಬುಕ್ಸ್, ಹಾರ್ಡ್ಸ್‌ವರ್ಥ್, 1960

ಮಾರ್ಟನ್ ಪ್ರಯಡ್; **ದಿ ಎವಲೂಶನ್ ಆಫ್ ಪೊಲಿಟಿಕಲ್ ಸೊಸೈಟಿ,** ನ್ಯೂಯಾರ್ಕ್, 1967

ಮಾಲತಿ ಮಹಾಜನ್; **ಎ ಗೇಟ್ ಟು ಏನ್ಷಿಯಂಟ್ ಇಂಡಿಯನ್ ಆರ್ಕಿಟೆಕ್ಚರ್,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 2004

ಮ್ಯಾನಿಯ, ಡಿ. ಮತ್ತು ಮ್ಯಾನಿಯ, ಯು.; **ಡೆಲಿಬರೇಟ್ ಎನ್‌ಗ್ರೇವಿಂಗ್ಸ್ ಆನ್ ಬೋನ್ ಆರ್ಟಿಫಾಕ್ಟ್ ಆಫ್ ಹೋಮೋ ಎರೆಕ್ಟಸ್,** ರಾಕ್ ಆರ್ಟ್ ರಿಸರ್ಚ್, 2005

ಮ್ಯಾನಿಯ, ಡಿ. ಮತ್ತು ಮ್ಯಾನಿಯ, ಯು.; **ಹೋಮೋ ಎರೆಕ್ಟಸ್ ಇನ್ ಕಲ್ಚರ್ ಅಂಡ್ ಎನ್‌ವೈರ್ನಮೆಂಟ್,** ಬ್ರಿಟಿಷ್ ಆರ್ಕಿಯಲಾಜಿಕಲ್ ರಿಪೋರ್ಟ್, 2003

ಮಿತ್ರ, ಡಿ.; **ಬುದ್ಧಿಸ್ಟ್ ಮಾನ್ಯುಮೆಂಟ್ಸ್,** ಭಾ.ಪು.ಸ.ಇ., ನವದೆಹಲಿ, 1971

ಮಿಶ್ರ, ವಿ.ಡಿ.; **ಇನ್ವೆಸ್ಟಿಗೇಷನ್ಸ್ ಇನ್ ಟು ದಿ ಮೆಗಾಲಿಥಿಕ್ ಕಲ್ಚರ್ಸ್ ಆಫ್ ಅಲಹಾಬಾದ್ ಡಿಸ್ಟ್ರಿಕ್ಟ್,** ಅಲಹಾಬಾದ್ ವಿಶ್ವವಿದ್ಯಾಲಯ, ಅಲಹಾಬಾದ್, 2000

ಮಿಶ್ರ, ವಿ.ಡಿ.; **ಮೆಸೋಲಿಥಿಕ್ ಇಂಡಿಯ,** ಅಲಹಾಬಾದ್ ವಿಶ್ವವಿದ್ಯಾಲಯ, ಅಲಹಾಬಾದ್, 2002

ಮಿಶ್ರ, ವಿ.ಡಿ.; **ಸಮ್ ಆಸ್ಪೆಕ್ಟ್ಸ್ ಆಫ್ ಇಂಡಿಯನ್ ಆರ್ಕಿಯಾಲಜಿ,** ಪ್ರಭಾತ್ ಪ್ರಕಾಶನ, ಅಲಹಾಬಾದ್, 1977

ಮಿಶ್ರ, ವಿ.ಡಿ.; **ಲೋಯರ್ ಅಂಡ್ ಮಿಡಲ್ ಪೇಲಿಯೋಲಿಥಿಕ್ ಕಲ್ಚರ್ಸ್ ಆಫ್ ನಾರ್ದನ್ ವಿಂಧ್ಯಾಸ್,** ಅಲಹಾಬಾದ್ ವಿಶ್ವವಿದ್ಯಾಲಯ, ಅಲಹಾಬಾದ್, 1980

ಮಿಶ್ರ, ವಿ.ಡಿ.; **ಆರಿಜಿನ್, ಕ್ರೊನಾಲಜಿ ಅಂಡ್ ಟ್ರಾನ್ಸ್‌ಫರ್ಮೇಶನ್ ಆಫ್ ದಿ ಮೆಸೋಲಿಥಿಕ್ ಕಲ್ಚರ್ ಇನ್ ಇಂಡಿಯ,** ಅಲಹಾಬಾದ್ ವಿಶ್ವವಿದ್ಯಾಲಯ, 2002

ಮಿಶ್ರ, ವಿ.ಎನ್.; **ಪ್ರಿ ಅಂಡ್ ಪ್ರೋಟೊ ಹಿಸ್ಟರಿ ಆಫ್ ದಿ ಬೆರಾಚ್ ಬೇಸಿನ್,** ಡಿಸಿಪಿ–ಆರ್‌ಐ, ಪುಣೆ, 1967

ಮಿಶ್ರ, ವಿ.ಎನ್., ಮಟ್ಪಾಲ್, ವೈ. ಮತ್ತು ಮಾಲತಿ ನಾಗರ್.; **ಭೀಂಬೇಟ್ಕ – ಪ್ರಿಹಿಸ್ಟಾರಿಕ್ ಮ್ಯಾನ್ ಅಂಡ್ ಹಿಸ್ ಆರ್ಟ್ ಇನ್ ಸೆಂಟ್ರಲ್ ಇಂಡಿಯ,** ಎಗ್ಸಿಬಿಷನ್ ಸೊವನಿಯರ್, ಪುಣೆ, 1977

ಮಿರಾಶಿ, ವಿ.ವಿ.; **ಲಿಟರರಿ ಅಂಡ್ ಹಿಸ್ಟಾರಿಕಲ್ ಸ್ಟಡೀಸ್ ಇನ್ ಇಂಡಾಲಜಿ,** ಮೋತಿಲಾಲ್ ಬನಾರಸಿದಾಸ್, ಡೆಲ್ಲಿ, 1974

ಮುಗಲ್, ಎಂ.ಆರ್.; **ಎಕ್ಸ್‌ಕವೇಷನ್ಸ್ ಅಟ್ ಜಲೀಲ್‌ಪುರ,** ಪಾಕಿಸ್ತಾನ್ ಆರ್ಕಿಯಾಲಜಿ, ಆರ್ಕಿಯಲಾಜಿಕಲ್ ಸರ್ವೇ ಆಫ್ ಪಾಕಿಸ್ತಾನ್, 1972

ಮುಜಫರ್ ಆಲಮ್ ಮತ್ತು ಸಂಜಯ್ ಸುಬ್ರಮಣ್ಯನ್; **ದಿ ಮೊಗಲ್ ಸ್ಟೇಟ್ 1526–1750,** ಆಕ್ಸ್‌ಫರ್ಡ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998

ಮುಜೀಬ್, ಎಂ. ಮತ್ತು ಮೊಹಿಬುಲ್ ಹಸನ್.; ಹಿಸ್ಟೋರಿಯನ್ಸ್ ಆಫ್ ಮೆಡೀವಲ್ ಇಂಡಿಯ

ಮುನ್‌ಸ್ಲೋ ಅಲನ್; **ದಿ ರೌಟ್‌ಲೆಜ್ ಕಂಪ್ಯಾನಿಯನ್ ಟು ಹಿಸ್ಟಾರಿಕಲ್ ಸ್ಟಡೀಸ್,** ರೌಟ್‌ಲೆಜ್ ಪಬ್ಲಿಕೇಷನ್ಸ್, ಲಂಡನ್, 2000

ಮೂರ್ತಿ, ಯು.ಎಸ್.; **ಮೆಗಲಿಥಿಕ್ ಕಲ್ಚರ್ ಆಫ್ ಸೌತ್ ಇಂಡಿಯ, ಸೋಶಿಯೋ ಎಕನಾಮಿಕ್ ಪರ್ಸ್‌ಪೆಕ್ಟಿವ್ಸ್,** ಗಂಗ ಕಾವೇರಿ ಪಬ್ಲಿಷರ್ಸ್, ವಾರಣಾಸಿ, 1994

ಮೆಹ್ತ, ಆರ್.ಎನ್.; **ಪ್ರಿ ಬುದ್ಧಿಸ್ಟ್ ಇಂಡಿಯ,** ಮುಂಬೈ, 1939

ಮೊಹಾಪಾತ್ರ, ಜಿ.ಸಿ.; **ದಿ ಸ್ಟೋನ್ ಏಜ್ ಕಲ್ಚರ್ಸ್ ಆಫ್ ಒರಿಸ್ಸ,** ಡಿಸಿಪಿ–ಆರ್‌ಐ, ಪುಣೆ, 1962

ರಂಗಾಚಾರ್ಯ ಆದ್ಯ.; **ಭರತಮುನಿ ವಿರಚಿತ ನಾಟ್ಯಶಾಸ್ತ್ರ,** ಅಕ್ಷರ ಪ್ರಕಾಶನ, ಹೆಗ್ಗೋಡು, 2003

ರಮೇಶ್, ಕೆ.ವಿ.; **ತುಳುನಾಡಿನ ಅರಸು ಮನೆತನಗಳು ಮತ್ತು ಧರ್ಮಸಮನ್ವಯ,** ಉಜಿರೆ, 1985

ರಮೇಶ್, ಕೆ.ವಿ.; **ಎ ಹಿಸ್ಟರಿ ಆಫ್ ಸೌತ್ ಕೆನರ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1970

ರಹಮತ್ ತರೀಕೆರೆ.; **ಕರ್ನಾಟಕದಲ್ಲಿ ಸೂಫಿ ಸಂಪ್ರದಾಯಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜನ್, ಕೆ.; **ಆರ್ಕಿಯಲಾಜಿಕಲ್ ಗೆಜೆಟಿಯರ್ ಆಫ್ ತಮಿಳುನಾಡು,** ತಮಿಳು ವಿಶ್ವವಿದ್ಯಾಲಯ, ತಂಜಾವೂರು, 1997

ರಾಜನ್, ಕೆ.; **ಆರ್ಕಿಯಾಲಜಿ ಆಫ್ ತಮಿಳುನಾಡು (ಕೊಂಗು ಕಂಟ್ರಿ),** ಬುಕ್ ಇಂಡಿಯ ಪಬ್ಲಿಷಿಂಗ್ ಕಂಪನಿ, ಡೆಲ್ಲಿ, 1994

ರಾಜುಕಾಲಿದೋಸ್; ಎನ್‌ಸೈಕ್ಲೊಪೀಡಿಯ ಆಫ್ ಹಿಂದು ಐಕೊನಾಗ್ರಫಿ(4 ಸಂಪುಟಗಳು), (ಅರ್ಲಿ–ಮೆಡೀವಲ್ ಪೀರಿಯಡ್)

ರಾಜರಾಮ್ ಹೆಗ್ಗಡೆ (ಸಂ).; **ಮಲೆ ಕರ್ನಾಟಕದ ಅರಸು ಮನೆತನಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜರಾಮ ಹೆಗ್ಡೆ; **ಶುಂಗ ಆರ್ಟ್: ಕಲ್ಚರಲ್ ರಿಫ್ಲೆಕ್ಷನ್ಸ್,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 2001–02

ರಾಜಶೇಖರ್, ಎಸ್.; **ಮಾಸ್ಟರ್ ಪೀಸಸ್ ಆಫ್ ವಿಜಯನಗರ ಆರ್ಟ್,** ಡಿ.ಬಿ.ತಾರಾಪೊರೆವಾಲ ಸನ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಮುಂಬೈ, 1983

ರಾಜೇಂದ್ರವರ್ಮ.; ದಿ ವರ್ಲ್ಡ್ ಆಫ್ ವೇದಿಕ್ ಲೈಫ್ ಅಂಡ್ ಕಲ್ಚರ್

ರಾಧಾಕೃಷ್ಣಮೂರ್ತಿ.; **ಎ ಕಲ್ಚರಲ್ ಸ್ಟಡಿ ಆಫ್ ಶಿವತತ್ವರತ್ನಾಕರ,** ಕೆಳದಿ ವಸ್ತುಸಂಗ್ರಹಾಲಯ, ಕೆಳದಿ.

ರಾಮ್, ಎಸ್. ಮತ್ತು ಆರ್. ಕುಮಾರ್; (ಸಂ) **ಎನ್‌ಸೈಕ್ಲೊಪೀಡಿಯ ಆಫ್ ಗ್ರೇಟ್ ಮೆನ್ ಆಫ್ ಇಂಡಿಯ (20 ಸಂಪುಟಗಳು),** ಕಾಮನ್‌ವೆಲ್ತ್, ನ್ಯೂಡೆಲ್ಲಿ, 2008

ರಾಮಚಂದ್ರ ಮೂರ್ತಿ, ಎನ್.ಎಸ್.; **ಎಕ್ಸ್‌ಕವೇಷನ್ಸ್ ಅಟ್ ಕೋಟಲಿಂಗ, ಕರೀಮ್‌ನಗರ ಡಿಸ್ಟ್ರಿಕ್ಟ್ 1982–83,** ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಮ್ಸ್, ಹೈದರಾಬಾದ್

ರಾಮಚಂದ್ರ ಮೂರ್ತಿ, ಪಿ.; **ಮೆಗಲಿಥಿಕ್ ಕಲ್ಚರ್ ಆಫ್ ದಿ ಗೋದಾವರಿ ಬೇಸಿನ್,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 1999–2000

ರಾಮಚಂದ್ರರಾವ್, ಎಸ್.ಕೆ.; **ಮೂರ್ತಿಶಿಲ್ಪ, ನೆಲೆ–ಹಿನ್ನೆಲೆ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1975

ರಾಮಚಂದ್ರರಾವ್, ಎಸ್.ಕೆ.; **ಪ್ರತಿಮಾ ಕೋಶ ಸಂಪುಟಗಳು** (1–6), ಶ್ರೀ ಸತ್ಯನ್ ಪಬ್ಲಿಕೇಶನ್ಸ್, ದೆಹಲಿ, 2003

ರಾಮಭಟ್ಟ ಉಪ್ಪಂಗಳ.; **ಕನ್ನಡ ವೈಯ್ಯಾಕರಣಿ ಭಟ್ಟಾಕಳಂಕ,** ಅಕಳಂಕ ಪ್ರಕಾಶನ, ಉಡುಪಿ, 1986

ರಾಮಭಟ್ಟ ಬಿ.ಎಸ್.; **ಬೆಳಗುತ್ತಿ ಅರಸೊತ್ತಿಗೆ**

ರಾಮರಾವ್, ಎಂ.; **ಕರ್ನಾಟಕ – ಆಂಧ್ರ ರಿಲೇಶನ್ಸ್,** ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1974

ರಾಯ್, ಟಿ.ಎನ್.; **ದಿ ಗ್ಯಾಂಜೆಸ್ ಸಿವಿಲೈಜೇಷನ್,** ನ್ಯೂಡೆಲ್ಲಿ, 1983

ರಾಯ್‌ಚೌಧರಿ, ಎಚ್.ಸಿ.; **ಪೊಲಿಟಿಕಲ್ ಹಿಸ್ಟರಿ ಆಫ್ ಏನ್ಷಿಯಂಟ್ ಇಂಡಿಯ,** ಕಲ್ಕತ್ತ, 1996

ರಾಯ್ನಲ್, ಜೀನ್–ಪಾಲ್; **ದಿ ಅರ್ಲಿಯೆಸ್ಟ್ ಆಕ್ಯುಪೇಶನ್ ಆಫ್ ಅಟ್ಲಾಂಟಿಕ್ ಮೊರಾಕ್ಕೊ,** ಯುನಿವರ್ಸಿಟಿ ಆಫ್ ಲೀಡನ್, ಲೀಡನ್, 1995

ರಾವ್, ಎಸ್.ಆರ್.; **ದಿ ಡಿಸೈಫರ್‌ಮೆಂಟ್ ಆಫ್ ದಿ ಇಂಡಸ್ ಸ್ಕ್ರಿಪ್ಟ್,** ದಿ ಏಷ್ಯ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 1992

ರಾವ್, ಎಸ್.ಆರ್.; **ಡಾನ್ ಅಂಡ್ ಡೆವಲ್ಯೂಷನ್ ಆಫ್ ದಿ ಇಂಡಸ್ ಸಿವಿಲೈಜೇಷನ್,** ಆದಿತ್ಯ ಪ್ರಕಾಶನ, ನವದೆಹಲಿ, 1991

ರಾವ್, ಎಸ್.ಆರ್.; **ಲೋಥಲ್ ಅಂಡ್ ದಿ ಇಂಡಸ್ ಸಿವಿಲೈಜೇಷನ್,** ಏಷ್ಯ ಪಬ್ಲಿಕೇಶನ್ ಹೌಸ್, ನ್ಯೂಡೆಲ್ಲಿ, 1973

ರಿಜ್ವ, ಎಸ್.ಎ.ಎ.; **ವಂಡರ್ ದಟ್ ವಾಸ್ ಇಂಡಿಯ (2ಸಂ),** ಪಿಕಡಾರ್ ಇಂಡಿಯ, 1996

ರೆನ್‌ಫ್ರ್ಯೂ ಮತ್ತಿತರರು; **ಆರ್ಕಿಯಾಲಜಿ, ಥಿಯರೀಸ್, ಮೆಥೆಡ್ ಅಂಡ್ ಪ್ರಾಕ್ಟಿಸ್,** ಥೇಮ್ಸ್ ಅಂಡ್ ಹಡ್‌ಸನ್, ಲಂಡನ್, 1991

ರೇ, ನಿಹಾರಂಜನ್; **ಮೌರ್‍ಯ ಅಂಡ್ ಶುಂಗ ಆರ್ಟ್,** ಕಲ್ಕತ್ತ, 1947

ರೈಸ್, ಬಿ.ಎಲ್.; **ಎಪಿಗ್ರಾಫಿಯ ಕರ್ನಾಟಿಕ** ಸಂಪುಟಗಳು, ಕರ್ನಾಟಕ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ, ಇಲಾಖೆ, ಮೈಸೂರು, ಪರಿಷ್ಕೃತ ಸಂಪುಟಗಳು 1–14, (ಪ್ರಕಟಣೆ) ಮೈಸೂರು ವಿಶ್ವವಿದ್ಯಾಲಯ, ಮೈಸೂರು

ರೋಜ಼್‌ನೈಪಿ; **ಆರ್ಟ್ ಆಫ್ ಸೌತ್ ಈಸ್ಟ್ ಏಷ್ಯ,** ಥೇಮ್ಸ್ ಅಂಡ್ ಹಡ್‌ಸನ್, ಲಂಡನ್, 1967

ರೋಮಿಲ ಥಾಪರ್; **ಎ ಹಿಸ್ಟರಿ ಆಫ್ ಇಂಡಿಯ**(ಸಂಪುಟ–1), ಪೆಂಗ್ವಿನ್ ಪಬ್ಲಿಕೇಶನ್, 1966

ರೋಮಿಲ ಥಾಪರ್; **ಅಶೋಕ ಅಂಡ್ ಡಿಕ್ಲೈನ್ ಆಫ್ ದಿ ಮೌರ್‍ಯಾಸ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1961

ರೋಮಿಲ ಥಾಪರ್; **ಏನ್ಷಿಯಂಟ್ ಇಂಡಿಯನ್ ಸೋಷಿಯಲ್ ಹಿಸ್ಟರಿ,** ಓರಿಯಂಟ್ ಲಾಂಗ್‌ಮನ್, 1978

ರೋಮಿಲ ಥಾಪರ್; **ಅರ್ಲಿ ಇಂಡಿಯ; ಫ್ರಮ್ ದಿ ಆರಿಜನ್ಸ್ ಟು ಎ.ಡಿ.1300,** ಪೆಂಗ್ವಿನ್, ಡೆಲ್ಲಿ, 2002

ರೌಕ್ಸ್, ಜಾರ್ಜಸ್.; **ಏನ್ಷಿಯಂಟ್ ಇರಾಕ್,** ಪೆಂಗ್ವಿನ್, ನ್ಯೂಯಾರ್ಕ್

ಲಾಲ್. ಬಿ.ಬಿ.; **ದಿ ಸರಸ್ವತಿ ಫ್ಲೋಸ್ ಆನ್,** ಆರ್ಯನ್ ಬುಕ್ಸ್ ಇಂಟರ್‌ನ್ಯಾಶನಲ್, ನ್ಯೂಡೆಲ್ಲಿ, 2002

ಲಾಲ್. ಬಿ.ಬಿ. ಮತ್ತು ಇತರರು.; **ದಿ ಅರ್ಲಿ ಹರಪ್ಪನ್ಸ್,** ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ, ಆಕ್ಸ್‌ಫರ್ಡ್, 2002

ಲಾಲ್, ಬಿ.ಬಿ.; **ದಿ ಅರ್ಲಿಯಸ್ಟ್ ಸಿವಿಲೈಜೇಷನ್ ಆಫ್ ಸೌತ್ ಏಷ್ಯ,** ಆರ್ಯನ್ ಬುಕ್ ಇಂಟರ್‌ನ್ಯಾಷನಲ್, ನ್ಯೂಡೆಲ್ಲಿ, 1997

ಲಾಲ್, ಮಖನ್; **ಸೆಟ್ಲ್‌ಮೆಂಟ್ ಹಿಸ್ಟರಿ ಅಂಡ್ ರೈಸ್ ಆಫ್ ಸಿವಿಲೈಜೇಷನ್ ಇನ್ ಗಂಗ–ಯಮುನ ದೋಆಬ್,** ಡೆಲ್ಲಿ, 1984

ಲಿಲೊ; **ದಿ ಚೈನೀಸ್ ನಿಯೋಲಿಥಿಕ್,** ಕೇಂಬ್ರಿಜ್ ವಿಶ್ವವಿದ್ಯಾಲಯ, ಕೇಂಬ್ರಿಜ್, 2005

ಲೆಶ್‌ನಿಕ್, ಎಲ್.ಎಸ್.; **ಸೌತ್ ಇಂಡಿಯನ್ ಮೆಗಲಿಥಿಕ್ ಬರಿಯಲ್ಸ್, ದಿ ಪಾಂಡುಕಲ್ ಕಾಂಪ್ಲೆಕ್ಸ್,** ವೀಸ್‌ಬೀಡನ್, ಪ್ರಾಂಜ಼್ ಸ್ಟೇನೆಲ್ ವೆರ್‌ಲ್ಯಾಗ್ ಬುಕ್ ಹೌಸ್, 1974

ವತ್ಸ್, ಎಂ.ಎಸ್.; **ಎಕ್ಸ್‌ಕವೇಷನ್ ಅಟ್ ಹರಪ್ಪ (2 ಸಂಪುಟಗಳು),** ಭಾ.ಪು.ಸ.ಇ., ನವದೆಹಲಿ, 1940

ವರ್ಮ, ಕೆ.ಎಂ.; **ಟೆಕ್ನಿಕ್ ಆಫ್ ಗಾಂಧಾರನ್ ಅಂಡ್ ಇಂಡೊ–ಆಫ್ಘನ್ ಸ್ಟಕೊ ಇಮೇಜಸ್,** ಮೋತಿಲಾಲ್ ಬನಾರಸಿದಾಸ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1987

ವಸಂತ, ಆರ್. ಮತ್ತು ಮನ್ನನ್ ಬಾಷ, ಎಂ.ಎ.; **ಇಸ್ಲಾಮಿಕ್ ಆರ್ಕಿಟೆಕ್ಚರ್ ಆಫ್ ಡೆಕ್ಕನ್ (ವಿದ್ ಸ್ಪೆಷಲ್ ಎಂಫಸಿಸ್ ಟು ರಾಯಲ್ ಸೀಮ ರೀಜನ್),** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 2004

ವಸಂತ, ಆರ್. ಮತ್ತು ಪುರುಷೋತ್ತಂ ರೆಡ್ಡಿ, ಪಿ.; **ಸಿಮೆಟ್ರಿ ಅಂಡ್ ಪ್ರೊಪೋರ್ಷನ್ ಇನ್ ಇಂಡಿಯನ್ ವಾಸ್ತು ಅಂಡ್ ಶಿಲ್ಪ,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 2004

ವಸಂತ ಮಾಧವ, ಕೆ.ಜಿ.; **ಪೊಲಿಟಿಕಲ್ ಹಿಸ್ಟರಿ ಆಫ್ ಕೆನರ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1975

ವಸಂತ ಮಾಧವ, ಕೆ.ಜಿ.; **ರಿಲಿಜನ್ಸ್ ಇನ್ ಕೋಸ್ಟಲ್ ಕರ್ನಾಟಕ,** ಇಂಟರ್ ಇಂಡಿಯ, ದೆಹಲಿ, 1985

ವಾಕಣ್‌ಕರ್, ವಿ.ಎಸ್. ಮತ್ತು ಬ್ರೂಕ್ಸ್,ಆರ್.; **ಸ್ಟೋನ್ ಏಜ್ ಪೇಂಟಿಂಗ್ ಇನ್ ಇಂಡಿಯ,** ಡಿ.ಬಿ. ಬುಕ್ಸ್ ಅಂಡ್ ತಾರಾಪೊರೆವಾಲ ಸನ್ಸ್ ಅಂಡ್ ಕಂಪನಿ, ಮುಂಬೈ, 1976

ವಾತ್ಸಾಯನ, ಕಪಿಲ; **ಭರತ ಅಂಡ್ ದಿ ನಾಟ್ಯಶಾಸ್ತ್ರ,** ಸಾಹಿತ್ಯ ಅಕಾಡೆಮಿ, ದೆಹಲಿ, 1996

ವ್ಯಾಡಲ್ ಜಾನ್.; **ದಿ ಪ್ರಿಹಿಸ್ಟಾರಿಕ್ ಆರ್ಕಿಯಾಲಜಿ ಆಫ್ ಐರ್ಲೆಂಡ್,** ಗಿಲವೇ ಯೂನಿವರ್ಸಿಟಿ, 1998

ವಿಜಯವೇಣುಗೋಪಾಲ, ಜಿ.; **ಪ್ರಿ ಹಿಸ್ಟಾರಿಕ್ ಕೇವ್ ಪೇಂಟಿಂಗ್ಸ್ ಇನ್ ಸಿರುಮಲೈ,** ತಮಿಳ್ ಸಿವಿಲೈಜ಼ೇಷನ್

ವಿವೇಕ ರೈ, ಬಿ.ಎ.; **ತುಳು ಜನಪದ ಸಾಹಿತ್ಯ,** ಬೆಂಗಳೂರು, 1985

ವೀಣಾದತ್ತ; **ಚಾಲ್ಕೋಲಿಥಿಕ್ ಪಾಟರಿ ಪೇಂಟಿಂಗ್ಸ್ (ವಿದ್ ಸ್ಪೆಷಲ್ ರೆಫರೆನ್ಸ್ ಟು ಸೆಂಟ್ರಲ್ ಇಂಡಿಯ ಅಂಡ್ ಡೆಕ್ಕನ್),** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 1999–2000

ವುಡ್, ಬಿ.; **ಹ್ಯೂಮನ್ ಎವಲೂಷನ್, ಎ ಶಾರ್ಟ್ ಇಂಟ್ರೊಡಕ್ಷನ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ, ಆಕ್ಸ್‌ಫರ್ಡ್, 2005

ವೈಟ್, ಟಿ.ಡಿ. ಮತ್ತಿತರರು; **ಪ್ಲಿಸ್ಟೋಸೀನ್ ಹೋಮೋ ಸೇಪಿಯನ್ಸ್ ಫ್ರಮ್ ಮಿಡ್ಲ್ ಅವಾಶ್, ಇಥಿಯೋಪಿಯ,** 2003

ವೈಟ್, ಡಬ್ಲ್ಯೂ.ಸಿ.; **ಬ್ರಾಂಜ್ ಏಜ್ ಕಲ್ಚರ್ ಆಫ್ ಏನ್ಷಿಯಂಟ್ ಚೈನ,** ಯೂನಿವರ್ಸಿಟಿ ಆಫ್ ಟೋರಂಟೊ, ಟೋರಂಟೊ, 1956

ವೆಂಕಟೇಶ; **ಸೌತ್ ಇಂಡಿಯನ್ ಫ್ಯುಡೇಟರಿ ಡೈನಸ್ಟೀಸ್,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 1999–2000

ವೆಂಕಟೇಶ ಜೋಯಿಸ್, ಕೆ.; **ಕೆಳದಿ ಶಾಸನ ಸಂಪುಟ,** ಗದಗ ತೋಂಟದಾರ್ಯ ಮಠ, ಗದಗ, 1991

ವೋಗೆಲ್, ಜೆ.ಪಿಎಚ್.; **ದಿ ಯೂಪ ಇನ್‌ಸ್ಕ್ರಿಪ್ಷನ್ ಆಫ್ ಮೂಲವರ್ಮನ್ ಫ್ರಮ್ ಕೋಟೈ,** ಬಿಜ್‌ಡ್ರಜೆನ್ ಟೋಟ್ ದೆ ತಾಲ್, 74, 1918

ಶಂಕರನಾರಾಯಣನ್, ಎಸ್.; **ವಿಷ್ಣುಕುಂಡಿನ್ಸ್ ಅಂಡ್ ದೇರ್ ಟೈಮ್ಸ್**

ಶರ್ಮ, ಎ.ಕೆ.; **ಪ್ರಿಹಿಸ್ಟಾರಿಕ್ ಬರಿಯಲ್ಸ್ ಆಫ್ ಕಾಶ್ಮೀರ್,** ಆಗಮ್ ಕಲಾ ಪ್ರಕಾಶನ್, ದೆಹಲಿ, 1998

ಶರ್ಮ, ಎ.ಕೆ.; **ಅರ್ಲಿ ಮ್ಯಾನ್ ಇನ್ ಜಮ್ಮು ಕಾಶ್ಮೀರ್ ಅಂಡ್ ಲಡಾಕ್,** ಆಗಮ್ ಕಲಾ ಪ್ರಕಾಶನ, ದೆಹಲಿ, 2000

ಶರ್ಮ, ಜಿ.ಆರ್ ಮತ್ತು ಮಿಶ್ರ, ಬಿ.ಬಿ.; **ಎಕ್ಸ್‌ಕವೇಷನ್ ಅಟ್ ಚೋಪನಿಮಾಂಡೊ,** ಅಲಹಾಬಾದ್ ವಿಶ್ವವಿದ್ಯಾಲಯ, ಅಲಹಾಬಾದ್, 1980

ಶರ್ಮ, ಜಿ.ಆರ್.; **ಹಿಸ್ಟರಿ ಟು ಪ್ರಿಹಿಸ್ಟರಿ, ಆರ್ಕಿಯಾಲಜಿ ಆಫ್ ದಿ ಗಂಗಾ ವ್ಯಾಲಿ ಅಂಡ್ ದಿ ವಿಂಧ್ಯಾಸ್,** ಅಲಹಾಬಾದ್ ವಿಶ್ವವಿದ್ಯಾಲಯ, ಅಲಹಾಬಾದ್, 1980

ಶರ್ಮ, ಜಿ.ಆರ್. ಮತ್ತಿತರರು; **ಬಿಗಿನಿಂಗ್ಸ್ ಆಫ್ ಅಗ್ರಿಕಲ್ಚರ್: ಎಪಿಪೇಲಿಯೋಲಿಥಿಕ್ ಟು ನಿಯೋಲಿಥಿಕ್: ಎಕ್ಸ್‌ಕವೇಷನ್ ಅಟ್ ಚೋಪನಿಮಾಂಡೊ, ಮಹದಹ ಅಂಡ್ ಮಹಗರ,** ಅವಿನಾಶ್ ಪ್ರಕಾಶನ, ಅಲಹಾಬಾದ್, 1980

ಶರ್ಮ, ಬಿ.ಎನ್.ಕೆ.; **ಹಿಸ್ಟರಿ ಆಫ್ ದ್ವೈತ ವೇದಾಂತ ಅಂಡ್ ಇಟ್ಸ್ ಲಿಟರೇಚರ್,** ಮೋತಿಲಾಲ್ ಬನಾರಸಿದಾಸ್ ಪ್ರಕಾಶನ, ದೆಹಲಿ, 1981

ಶರ್ಮ, ವೈ.ಡಿ.; **ಡೆಲ್ಲಿ ಅಂಡ್ ಇಟ್ಸ್ ನೈಬರ್‌ಹುಡ್,** ಭಾ.ಪು.ಸ.ಇ., ದೆಹಲಿ, 1994

ಶ್ಯಾಮಶಾಸ್ತ್ರಿ, ಆರ್.; **ಕೌಟಿಲ್ಯನ ಅರ್ಥಶಾಸ್ತ್ರ,** ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1905

ಶಾ,ಯು.ಪಿ. ಮತ್ತು ಧಾಕಿ. ಎಂ.ಎ.; (ಸಂ) **ಆಸ್‌ಪೆಕ್ಟ್ಸ್ ಆಫ್ ಜೈನ ಆರ್ಟ್ ಅಂಡ್ ಆರ್ಕಿಟೆಕ್ಚರ್,** ಸಂಸ್ಮರಣ ಗ್ರಂಥ, ಅಹಮದಾಬಾದ್, 1975

ಶಾಂತಕುಮಾರಿ, ಎಸ್.ಎಲ್.; **ಹಿಸ್ಟರಿ ಆಫ್ ದಿ ಅಗ್ರಹಾರಾಸ್,** ನ್ಯೂಎರ ಪಬ್ಲಿಕೇಷನ್, ಚೆನ್ನೈ, 1986

ಶಾಸ್ತ್ರಿ, ಎ.ಕೆ.; **ಎ ಹಿಸ್ಟರಿ ಆಫ್ ಶೃಂಗೇರಿ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1982

ಶಾಸ್ತ್ರಿ, ಎ.ಎಂ. (ಸಂ); **ದಿ ಏಜ್ ಆಫ್ ದಿ ವಾಕಾಟಕಾಸ್,** ಹರ್ಮನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, 1982

ಶಾಸ್ತ್ರಿ, ಬಿ.ಎಸ್.; **ಸ್ಟಡೀಸ್ ಇನ್ ಇಂಡೊ ಪೋರ್ಚುಗೀಸ್ ಹಿಸ್ಟರಿ,** ಬೆಂಗಳೂರು, 1981

ಶಾಸ್ತ್ರಿ, ಬಿ.ಎಸ್.; **ಕಮರ್ಷಿಯಲ್ ರಿಲೇಶನ್ಸ್ ಬಿಟ್ವೀನ್ ಪೋರ್ಚುಗೀಸ್ ಅಂಡ್ ಸೋಂದಾ ಚೀಫ್ಸ್,** 1989

ಶಾಸ್ತ್ರಿ, ಬಿ.ಎಸ್.; **ಪೋರ್ಚುಗೀಸ್ ಸೋರ್ಸ್ಸ್ ಫಾರ್ ಸ್ಟಡಿ ಆಫ್ ಸ್ವಾದಿ ಹಿಸ್ಟರಿ,** ತೋಂಟದಾರ್ಯ ಶ್ರೀ ಸಿದ್ಧಲಿಂಗೇಶ್ವರ ಮಠ, ಗದಗ, 1990

ಶಾಸ್ತ್ರೀ, ಟಿ.ವಿ.ಜಿ.; **ವೀರಾಪುರಂ–ಎ ಟೈಪ್‌ಸೈಟ್ ಫಾರ್ ಕಲ್ಚರಲ್ ಸ್ಟಡೀಸ್ ಇನ್ ಕೃಷ್ಣ ವ್ಯಾಲಿ,** ಬಿರ್ಲಾ ಇನ್‌ಸ್ಟಿಟ್ಯೂಟ್, ಹೈದರಾಬಾದ್, 1984

ಶಿಂಧೆ, ವಿ.ಎಸ್.; ಪಾದ್ರಿ: ದಿ ಅರ್ಲಿ ಹರಪ್ಪನ್ ಸೈಟ್ ಇನ್ ಗುಜರಾತ್, **ಅರ್ಲಿ ಹರಪ್ಪನ್ಸ್ ಅಂಡ್ ಇಂಡಸ್ ಸರಸ್ವತಿ ಸಿವಿಲೈಜೇಷನ್** (ಸಂ. ಡಿ.ಪಿ.ಶರ್ಮ ಮತ್ತು ಮಾಧುರಿ ಶರ್ಮ), ಕಾವೇರಿ ಬುಕ್ಸ್, ನ್ಯೂಡೆಲ್ಲಿ, 2006

ಶಿವತತ್ವರತ್ನಾಕರ.; ಕನ್ನಡ ಭಾಷಾಂತರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ಪರಾಮರ್ಶನ ಗ್ರಂಥಗಳು


ಶಿವ್ ಗಜ್ರಾನಿ ಮತ್ತು ಎಸ್. ರಾಮ್; (ಸಂ) **ಎನ್‌ಸೈಕ್ಲೊಪೀಡಿಯ ಆಫ್ ಗ್ರೇಟ್ ಮೆನ್ ಆಫ್ ಇಂಡಿಯ (20 ಸಂಪುಟಗಳು)**, ಕಾಮನ್‌ವೆಲ್ತ್, ನ್ಯೂಡೆಲ್ಲಿ, 2008

ಶಿವಣ್ಣ, ಕೆ.ಎಸ್.; **ಆಧುನಿಕ ಚೀನ,** ಸುರುಚಿ ಪ್ರಕಾಶನ, ಮೈಸೂರು, 1974

ಶಿವರಾಮ ಮೂರ್ತಿ, ಸಿ.; **ನಟರಾಜ ಇನ್ ಆರ್ಟ್, ಥಾಟ್ ಅಂಡ್ ಲಿಟರೇಚರ್,** ನ್ಯಾಷನಲ್ ಮ್ಯೂಸಿಯಮ್, ದೆಹಲಿ, 1934

ಶಿವರಾಮಮೂರ್ತಿ, ಸಿ.; **ಇಂಡಿಯನ್ ಸ್ಕಲ್ಪ್‌ಚರ್,** ಅಲೈಡ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1961

ಶಿವರಾಮಮೂರ್ತಿ, ಸಿ.; **ಇಂಡಿಯನ್ ಎಪಿಗ್ರಫಿ ಅಂಡ್ ಸೌತ್ ಇಂಡಿಯನ್ ಸ್ಕ್ರಿಪ್ಟ್ಸ್,** ಸರ್ಕಾರಿ ವಸ್ತು ಸಂಗ್ರಹಾಲಯ, ಮದ್ರಾಸ್, 1948

ಶ್ರೀಕಂಠಶಾಸ್ತ್ರಿ, ಎಸ್.; **ಹೊಯ್ಸಳ ವಾಸ್ತುಶಿಲ್ಪ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1965

ಶ್ರೀಕಂಠಶಾಸ್ತ್ರಿ, ಎಸ್.; **ಭಾರತೀಯ ಪುರಾತತ್ತ್ವ ಶೋಧನೆ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1960

ಶ್ರೀಧರನ್, ಇ.; **ಎ ಟೆಕ್ಸ್ಟ್ ಬುಕ್ ಆಫ್ ಹಿಸ್ಟರಿಯೋಗ್ರಫಿ (500–2000),** ಓರಿಯಂಟ್ ಲಾಗ್‌ಮನ್, ನ್ಯೂಡೆಲ್ಲಿ, 2004

ಶ್ರೀನಿವಾಸ ರಿತ್ತಿ.; **ಇನ್‌ಸ್ಕ್ರಿಪ್ಷನ್ಸ್ ಫ್ರಂ ನಾಂದೇಡ್,** ಯಶವಂತ್ ಮಹಾವಿದ್ಯಾಲಯ, 1968

ಶ್ರೀನಿವಾಸ ರಿತ್ತಿ ಮತ್ತು ಬಿ.ಆರ್. ಗೋಪಾಲ್ (ಸಂ); **ಇನ್‌ಸ್ಕ್ರಿಪ್ಷನ್ಸ್ ಆಫ್ ದಿ ವಿಜಯನಗರ ರೂಲರ್ಸ್,** ಭಾರತೀಯ ಇತಿಹಾಸ ಪರಿಷದ್, ನವದೆಹಲಿ, 2004

ಶ್ರೀನಿವಾಸನ್, ಸಿ.ಆರ್.; **ಕಾಂಚೀಪುರಂ ಥ್ರೂ ದಿ ಏಜಸ್,** ಆಗಮ್ ಕಲಾ ಪ್ರಕಾಶನ, ನ್ಯೂಡೆಲ್ಲಿ, 1979

ಶ್ರೀವಾಸ್ತವ, ವಿ.ಸಿ.; **ದಿ ಪ್ರಿಹಿಸ್ಟಾರಿಕ್ ಆಫ್ಘಾನಿಸ್ತಾನ್, ಎ ಸೋರ್ಸ್ ಬುಕ್,** ಇಂಡಲಾಜಿಕಲ್ ಪಬ್ಲಿಕೇಷನ್, ಅಲಹಾಬಾದ್, 1982

ಶೆಟ್ಟರ್, ಎಸ್.; **ಹೊಯ್ಸಳ ಟೆಂಪಲ್ಸ್,** ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1991

ಶೆಟ್ಟರ್, ಎಸ್. ಮತ್ತು ರವಿ ಕೋರಿಶೆಟ್ಟರ್; **(ಸಂ) ಇಂಡಿಯನ್ ಆರ್ಕಿಯಾಲಜಿ ಇನ್ ರೆಟ್ರೋಸ್ಪೆಕ್ಟ್** (4 ಸಂ), ಐಸಿಎಚ್‌ಆರ್ ಮತ್ತು ಮನೋಹರ, ನ್ಯೂಡೆಲ್ಲಿ, 2002

ಶೇರ್‌ವಾನಿ, ಎಚ್.ಕೆ. ಮತ್ತು ಪಿ.ಎಮ್. ಜೋಶಿ.; **ಹಿಸ್ಟರಿ ಆಫ್ ಮೆಡೀವಲ್ ಡೆಕ್ಕನ್,** ಹೈದರಾಬಾದ್, 1973

ಶೇಷಾದ್ರಿ, ಎಂ.; **ದಿ ಸ್ಟೋನ್ ಯೂಸಿಂಗ್ ಕಲ್ಚರ್ಸ್ ಆಫ್ ಪ್ರಿಹಿಸ್ಟಾರಿಕ್ ಅಂಡ್ ಪ್ರೋಟೊ ಹಿಸ್ಟಾರಿಕ್ ಮೈಸೂರು,** ಲಂಡನ್, 1956

ಷಡಕ್ಷರಯ್ಯ, ರು.ಮ.; **ಉಜ್ಜಯಿನಿ ಸಿದ್ಧಮಠ ಪೀಠದ ಸಾಂಸ್ಕೃತಿಕ ಅಧ್ಯಯನ,** ಉಜ್ಜಯಿನಿ, 2003

ಷೇಕ್ ಅಲಿ ಮತ್ತು ಇತರರು (ಸಂ); **ಕರ್ನಾಟಕ ಚರಿತ್ರೆ ಸಂಪುಟಗಳು(1–7),** ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

ಷೇಕ್ ಅಲಿ, ಬಿ. (ಸಂ).; **ಹೊಯ್ಸಳ ಡೈನಾಸ್ಟಿ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1972

ಷೇಕ್ ಅಲಿ, ಬಿ.; **ಹಿಸ್ಟರಿ: ಇಟ್ಸ್ ಥಿಯರಿ ಅಂಡ್ ಮೆಥೆಡ್,** ಮ್ಯಾಕ್‌ಮಿಲನ್ ಪಬ್ಲಿಕೇಷನ್ಸ್, ದೆಹಲಿ, 1978

ಸರ್ಕಾರ್, ಡಿ.ಸಿ.; **ಇಂಡಿಯನ್ ಎಪಿಗ್ರಫಿ,** ಮೋತಿಲಾಲ್ ಬನಾರಸಿದಾಸ್, ದೆಹಲಿ, 1965

ಸತೀಶ್ ಗಂಜೂ.; **ಡಿಕ್ಷನರಿ ಆಫ್ ಹಿಸ್ಟರಿ,** ಅನ್‌ಮೋಲ್ ಪಬ್ಲಿಕೇಷನ್ಸ್, ನವದೆಹಲಿ, 1992

ಸತೀಶ್‌ಚಂದ್ರ.; **ಮೆಡೀವಲ್ ಇಂಡಿಯ (ಭಾಗ–1), ಡೆಲ್ಲಿ ಸುಲ್ತನೇಟ್, 1206–1526,** ಹರ್ ಆನಂದ್ ಪಬ್ಲಿಕೇಶನ್, ನ್ಯೂಡೆಲ್ಲಿ, 1997

ಸತೀಶ್‌ಚಂದ್ರ.; **ಮೆಡೀವಲ್ ಇಂಡಿಯ (ಭಾಗ–2), ದಿ ಮೊಗಲ್ಸ್ (1526–1748),** ಹರ್ ಆನಂದ್ ಪಬ್ಲಿಕೇಶನ್, ನ್ಯೂಡೆಲ್ಲಿ, 1999

ಸತೀಶ್‌ಚಂದ್ರ.; **ಹಿಸ್ಟರಿ ಆಫ್ ಮೆಡೀವಲ್ ಇಂಡಿಯ,** ಓರಿಯೆಂಟ್ ಲಾಂಗ್‌ಮನ್, ನ್ಯೂಡೆಲ್ಲಿ, 2007

ಸರ್ವಿಸ್, ಎಫ್. ಮತ್ತು ಇತರರು; **ಆರಿಜನ್ ಆಫ್ ಸೆಟಲ್‌ಮೆಂಟ್ಸ್ ಅಂಡ್ ಕ್ರೊನಾಲಾಜಿ ಆಫ್ ಪೇಲಿಯೋಲಿಥಿಕ್ ಕಲ್ಚರ್ಸ್ ಇನ್ ಸೌತ್‌ಈಸ್ಟ್ ಏಷ್ಯ,** ಪ್ಯಾರಿಸ್, 2001

ಸಲೀಮ್ ಮೊಹಮ್ಮದ್.; **ದಿ ಮಿಡಲ್ ಸ್ಟೋನ್ ಏಜ್ ಕಲ್ಚರ್ಸ್ ಆಫ್ ನಾರ್ದನ್ ಪಾಕಿಸ್ತಾನ್,** ಖುದ್ಯೆ, ವಿಆಝಮ್ ಯೂನಿವರ್ಸಿಟಿ, ಇಸ್ಲಾಮಾಬಾದ್, 1986

ಸಾಂಕಳಿಯ, ಎಚ್.ಡಿ. ಮತ್ತು ಇತರರು; **ಎಕ್ಸ್‌ಕವೇಷನ್ಸ್ ಅಟ್ ಅಹಾರ್,** ಡಿಸಿಪಿ–ಆರ್‌ಐ, ಪುಣೆ, 1969

ಸಾಂಕಳಿಯ, ಎಚ್.ಡಿ.; **ರಿಪೋರ್ಟ್ ಆನ್ ದಿ ಎಕ್ಸ್‌ಕವೇಷನ್ಸ್ ಅಟ್ ನಾಸಿಕ್ ಅಂಡ್ ಜೋರ್ವೆ,** ಡಿಸಿಪಿ–ಆರ್ಐ, ಪುಣೆ, 1955

ಸಾಂಕಳಿಯ, ಎಚ್.ಡಿ. ಮತ್ತು ಇತರರು; **ಎಕ್ಸ್‌ಕವೇಷನ್ಸ್ ಅಟ್ ಮಹೇಶ್ವರ್ ಅಂಡ್ ನವ್ದತೋಲಿ (1952–53),** ಪುಣೆ ಮತ್ತು ಬರೋಡ, 1958

ಸಾಂಕಳಿಯ, ಎಚ್.ಡಿ.; **ದಿ ಪ್ರಿಹಿಸ್ಟರಿ ಅಂಡ್ ಪ್ರೋಟೊ ಹಿಸ್ಟರಿ ಆಫ್ ಇಂಡಿಯ ಅಂಡ್ ಪಾಕಿಸ್ತಾನ್,** ಡಿಸಿಪಿ–ಆರ್ಐ ಪುಣೆ, 1974

ಸಾಂಕಳಿಯ, ಎಚ್.ಡಿ. ಮತ್ತು ಇತರರು; **ಫ್ರಮ್ ಹಿಸ್ಟರಿ ಟು ಪ್ರಿಹಿಸ್ಟರಿ ಅಟ್ ನೆವಾಸ, 1954–56,** ಡಿಸಿಪಿ–ಆರ್ಐ, ಪುಣೆ, 1960

ಸಾಂಕಳಿಯ, ಎಚ್.ಡಿ.; **ನ್ಯೂ ಆರ್ಕಿಯಾಲಜಿ: ಇಟ್ಸ್ ಸ್ಕೋಪ್ ಅಂಡ್ ಅಪ್ಲಿಕೇಶನ್ ಇನ್ ಇಂಡಿಯ,** ಎತ್ನೋಗ್ರಾಫಿಕ್ ಅಂಡ್ ಫೋಕ್ ಕಲ್ಚರ್ ಸೊಸೈಟಿ, ಲಕ್ನೊ, 1975

ಸಾಂಕಳಿಯ, ಎಚ್.ಡಿ.; **ಸ್ಟೋನ್ ಏಜ್ ಟೂಲ್ಸ್: ದೇರ್ ಟೆಕ್ನಿಕ್ಸ್, ನೇಮ್ಸ್ ಅಂಡ್ ಪ್ರಾಬಬಲ್ ಫಂಕ್ಷನ್ಸ್,** ಡಿಸಿಪಿ–ಆರ್ಐ, ಪುಣೆ, 1964

ಸಾನ್‌ಸನ್ ಆರ್ಲ್; **ಲಿಥಿಕ್ ಟೆಕ್ನಾಲಜಿ: ಮೇಕಿಂಗ್ ಅಂಡ್ ಯೂಸಿಂಗ್ ಸ್ಟೋನ್ ಟೂಲ್ಸ್,** ದಿ ಹೇಗ್ ಮೌಂಟನ್ ಪಬ್ಲಿಶರ್ಸ್, 1975

ಸಾಲಿ, ಎಸ್.ಎ.; **ದೈಮಾಬಾದ್ 1976–1979,** ಭಾ.ಪು.ಸ.ಇ., ನ್ಯೂಡೆಲ್ಲಿ, 1986

ಸಾಲಿ, ಎಸ್.ಎ.; **ದಿ ಅಪ್ಪರ್ ಪೇಲಿಯೋಲಿಥಿಕ್ ಕಲ್ಚರ್ಸ್ ಅಟ್ ಪಾಟ್ನೆ, ಜಳಗಾಂವ್ ಡಿಸ್ಟ್ರಿಕ್ಟ್, ಮಹಾರಾಷ್ಟ್ರ,** ಡಿಸಿಪಿ – ಆರ್ಐ, ಪುಣೆ.

ಸಾಲೆತೊರೆ, ಬಿ.ಎ.; **ಏನ್ಷಿಯಂಟ್ ಕರ್ನಾಟಕ: ಹಿಸ್ಟರಿ ಆಫ್ ತುಳುವ,** ಪುಣೆ, 1937

ಸಾಹ್ನಿ, ಡಿ.ಆರ್; **ಎಕ್ಸ್‌ಕವೇಷನ್ ಅಟ್ ಬೈರಾಟ್,** ಪಬ್ಲಿಕೇಷನ್ ಸ್ಕೀಮ್, ಜೈಪುರ್, 1999

ಸ್ಕಾಫ್, ಡಬ್ಲ್ಯೂ.ಎಚ್.; **ದಿ ಪೆರಿಪ್ಲಸ್ ಆಫ್ ಎರಿತ್ರಿಯನ್ ಸೀ,** ಫಿಲಡೆಲ್ಫಿಯ, 1912

ಸ್ವಿಶರ್, ಸಿ.ಸಿ.; **ಏಜ್ ಆಫ್ ದಿ ಅರ್ಲಿಯೆಸ್ಟ್ ನೋನ್ ಹೋಮಿನಿಡ್ಸ್ ಇನ್ ಜಾವ, ಇಂಡೊನೇಷ್ಯ,** 1994

ಸಿಂಗ್, ಎಮ್.ಕೆ.; (ಸಂ) **ಎನ್‌ಸೈಕ್ಲೊಪೀಡಿಯ ಆಫ್ ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್,** ಅನ್‌ಮೋಲ್, ನ್ಯೂಡೆಲ್ಲಿ, 2009

ಸಿಂಗ್, ಪುರುಷೋತ್ತಮ್.; **ಎಕ್ಸ್‌ಕವೇಶನ್ ಅಟ್ ನರಹನ್,** ಬನಾರಸ್ ಹಿಂದೂ ಯೂನಿವರ್ಸಿಟಿ, 1994

ಸ್ಮಿತ್, ವಿ.ಎ.; **ದಿ ಅರ್ಲಿ ಹಿಸ್ಟರಿ ಆಫ್ ಇಂಡಿಯ,** ಆಕ್ಸ್‌ಫರ್ಡ್, 1914

ಸುಂದರ, ಎ.; ಇಂಡಿಯನ್ ಮೆಗಲಿಥ್ಸ್ ಅಂಡ್ ಐರನ್, **ಹಿಸ್ಟರಿ ಆಫ್ ಸೈನ್ಸ್, ಫಿಲಾಸಫಿ ಅಂಡ್ ಕಲ್ಚರ್ ಇನ್ ಇಂಡಿಯನ್ ಸಿವಿಲೈಜೇಶನ್,** ಸಂಪುಟ–4, ಸೆಂಟರ್ ಫಾರ್ ಸ್ಟಡೀಸ್ ಇನ್ ಸಿವಿಲೈಜೇಶನ್, ನ್ಯೂ ಡೆಲ್ಲಿ 1999

ಸುಂದರ, ಎ.; **ಅರ್ಲಿ ಚೇಂಬರ್ ಟೂಂಬ್ಸ್ ಆಫ್ ಸೌತ್ ಇಂಡಿಯ,** ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ, 1975

ಸುಸಾನ್, ಎಲ್. ಹಂಟಿಂಗ್‌ಟನ್; **ದಿ ಆರ್ಟ್ ಆಫ್ ಏನ್ಷಿಯಂಟ್ ಇಂಡಿಯ,** ವೆದರ್‌ಹಿಲ್, ನ್ಯೂಯಾರ್ಕ್, 1985

ಸುಂದರ, ಎ.; **ಕರ್ನಾಟಕ: ಪ್ರಾಗಿತಿಹಾಸ ಕಾಲದ ಕಲೆ,** ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, 1994

ಸುಂದರ, ಎ.; **ಕೆಳದಿ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ: ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆ,** ಕರ್ನಾಟಕ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ಇಲಾಖೆ, ಮೈಸೂರು, 1985

ಸುಬೋದ್ ಕಪೂರ್; **ದಿ ಹಿಂದೂಸ್– ಎನ್‌ಸೈಕ್ಲೊಪೀಡಿಯ ಆಫ್ ಹಿಂದೂಯಿಸಂ (5 ಸಂಪುಟಗಳು),** ಕಾಸ್ಮೊ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2000

ಸುಬ್ಬಯ್ಯ, ಕೆ.ಕೆ.; **ಆರ್ಕಿಯಾಲಜಿ ಆಫ್ ಕೂರ್ಗ್: ವಿತ್ ಸ್ಪೆಷಲ್ ರೆಫರೆನ್ಸ್ ಟು ಮೆಗಲಿತ್ಸ್,** ಗೀತಾಬುಕ್ ಹೌಸ್, ಮೈಸೂರು, 1978

ಸುಬ್ಬರಾವ್, ಬಿ.; **ಸ್ಟೋನ್ ಏಜ್ ಕಲ್ಚರ್ ಆಫ್ ಬಳ್ಳಾರಿ,** ಡಿಸಿಪಿ– ಆರ್ಐ, ಪುಣೆ, 1948

ಸುಬ್ರಮಣ್ಯಂ, ಆರ್.; **ಸಾಲಿಹುಂಡಮ್: ಎ ಬುದ್ಧಿಸ್ಟ್ ಸೈಟ್ ಇನ್ ಆಂಧ್ರಪ್ರದೇಶ,** ಹೈದರಾಬಾದ್, ಆರ್ಕಿಯಲಾಜಿಕಲ್ ಸೀರಿಸ್ ನಂ.17, 1964

ಸುಬ್ರಮಣ್ಯಂ, ಆರ್. (ಸಂ.); **ನಾಗಾರ್ಜುನಕೊಂಡ,** 1954–60, ಭಾ.ಪು.ಸ.ಇ., ನ್ಯೂ ಡೆಲ್ಲಿ, 1975

ಸುರೇಶ್ ಚಂದ್ರ ಬ್ಯಾನರ್ಜಿ.; **ಕಲ್ಚರಲ್ ರೆಸಿಪ್ರೊಕೇಷನ್ ಬಿಟ್ವೀನ್ ಇಂಡಿಯ ಅಂಡ್ ದಿ ವರ್ಲ್ಡ್,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 1999–2000

## ಪರಾಮರ್ಶನ ಗ್ರಂಥಗಳು


ಸ್ಟುವರ್ಟ್ ಗಾರ್ಡನ್; **ದಿ ಮರಾಠ,** ಫೌಂಡೇಶನ್ ಬುಕ್ಸ್, ನ್ಯೂಡೆಲ್ಲಿ, 1998

ಸೂರ್ಯನಾಥ ಯು. ಕಾಮತ್ (ಸಂ).; **ಕರ್ನಾಟಕ ಸ್ಟೇಟ್ ಗೆಜೆಟಿಯರ್ಸ್,** ಕರ್ನಾಟಕ ಸರ್ಕಾರ, ಗೆಜೆಟಿಯರ್ ಇಲಾಖೆ, ಬೆಂಗಳೂರು, 1959

ಸೂರ್ಯನಾಥ ಯು. ಕಾಮತ್.; **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಗೀತಾ ಬುಕ್ ಹೌಸ್, ಮೈಸೂರು

ಸೆನವಿರತ್ನೆ, ಎಸ್.; **ಏನ್ಷಿಯೆಂಟ್ ಅನುರಾಧಪುರ, ದಿ ಮೊನಾಸ್ಟಿಕ್ ಸಿಟಿ,** ಆರ್ಕಿಯಲಾಜಿಕಲ್ ಡಿಪಾರ್ಟ್‌ಮೆಂಟ್ ಆಫ್ ಶ್ರೀಲಂಕ, 1994

ಸ್ಟೆಲ್ಲಾ ಕ್ರಾಮ್ರಿಶ್.; **ದಿ ಆರ್ಟ್ ಆಫ್ ಇಂಡಿಯ, ಟ್ರೆಡಿಶನ್ ಆಫ್ ಇಂಡಿಯನ್ ಸ್ಕಲ್ಪ್‌ಚರ್, ಪೇಂಟಿಂಗ್ ಅಂಡ್ ಆರ್ಕಿಟೆಕ್ಚರ್,** ಕಲ್ಕತ್ತ, ವೈ.ಎಂ.ಸಿ.ಎ. ಪಬ್ಲಿಷಿಂಗ್ ಹೌಸ್, 1933

ಸೇಕ್ರಡ್ ಬುಕ್ಸ್ ಆಫ್ ದಿ ಈಸ್ಟ್; ಮಾಲಿಕೆ, 1982

ಸೇಟೊ, ವೈ.ಐ.; **ಆರಿಜನ್ ಆಫ್ ರೈಸ್ ಅಂಡ್ ಇಟ್ಸ್ ಕಲ್ಟಿವೇಷನ್ ಬೇಸ್ಡ್ ಆನ್ ಡಿ.ಎನ್.ಎ. ಅನಾಲಿಸಿಸ್,** ಎನ್.ಎಚ್.ಕೆ. ಬುಕ್ಸ್, ಟೋಕಿಯೋ, 1996

ಸೌಂದರರಾಜನ್, ಕೆ.ವಿ.; **ಇಂಡಿಯನ್ ಟೆಂಪಲ್ ಸ್ಟೈಲ್ (ದಿ ಪರ್ಸನಾಲಿಟಿ ಆಫ್ ಹಿಂದು ಆರ್ಕಿಟೆಕ್ಚರ್),** ಮುನ್ಷಿರಾಮ್ ಮನೋಹರಲಾಲ್, ನ್ಯೂಡೆಲ್ಲಿ, 1972

ಸೌಂದರರಾಜನ್, ಕೆ.ವಿ.; **ದಿ ಆರ್ಟ್ ಆಫ್ ಸೌತ್ ಇಂಡಿಯ–ತಮಿಳ್‌ನಾಡು ಅಂಡ್ ಕೇರಳ,** ಸಂದೀಪ್ ಪ್ರಕಾಶನ, ನ್ಯೂಡೆಲ್ಲಿ, 1978

ಸೌಂದರ ರಾಜನ್, ಕೆ.ವಿ.; **ಕಾವೇರಿಪಟ್ಟಣಂ ಎಕ್ಸ್‌ಕವೇಷನ್ಸ್ (ಎ ಪೋರ್ಟ್ ಸಿಟಿ ಆನ್ ದಿ ತಮಿಳುನಾಡು ಕೋಸ್ಟ್),** ಭಾ.ಪು.ಸ.ಇ., ನವದೆಹಲಿ, 1994

ಸೌಂದರರಾಜನ್, ಕೆ.ವಿ.; **ಮೆಕ್ಯಾನಿಕ್ಸ್ ಆಫ್ ಸಿಟಿ ಅಂಡ್ ವಿಲೇಜ್ ಇನ್ ಏನ್ಷಿಯೆಂಟ್ ಇಂಡಿಯ,** ಸಂದೀಪ್ ಪ್ರಕಾಶನ, ಡೆಲ್ಲಿ, 1986

ಸೌಂದರರಾಜನ್, ಜೆ.; **ನಟರಾಜ ಇನ್ ಸೌತ್ ಇಂಡಿಯನ್ ಆರ್ಟ್,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 2004

ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳು (1 ರಿಂದ 22), ಭಾ.ಪು.ಸ.ಇ., ದೆಹಲಿ

ಸ್ಕರ್ರೆ, ಸಿ (ಸಂ).; **ದಿ ಹ್ಯೂಮನ್ ಪಾಸ್ಟ್,** ಥೇಮ್ಸ್ ಅಂಡ್ ಹಡ್‌ಸನ್, ಲಂಡನ್, 2005

ಹರಿಪಾದ ಚಕ್ರವರ್ತಿ.; **ಹಿಂದು ಇಂಟರ್‌ಕಾಸ್ಟ್ ಮ್ಯಾರೇಜ್ ಇನ್ ಇಂಡಿಯ– ಎನ್ಷಿಯಂಟ್ ಅಂಡ್ ಮಾಡ್ರನ್,** ಶಾರದ ಪಬ್ಲಿಷಿಂಗ್ ಹೌಸ್, ಡೆಲ್ಲಿ, 1999–2000

ಹರಿಶ್ಚಂದ್ರ, ಬಿ.ಡಬ್ಲ್ಯು.; **ದಿ ಸೇಕ್ರೆಡ್ ಸಿಟಿ ಆಫ್ ಅನುರಾಧಪುರ,** ಏಷ್ಯನ್ ಎಜುಕೇಶನಲ್ ಸರ್ವಿಸ್, ನ್ಯೂಡೆಲ್ಲಿ, 1998

ಹಾಲೋ, ಡಬ್ಲ್ಯು. ಮತ್ತು ಸಿಮ್ಸನ್ ಡಬ್ಲ್ಯು.; **ದಿ ಏನ್ಷಿಯೆಂಟ್ ನಿಯರ್ ಈಸ್ಟ್,** ಹಾರ್‌ಕೋರ್ಟ್ ಜೊವಾನ್ವಿಚ್, ನ್ಯೂಯಾರ್ಕ್, 1971

ಹಿರೇಮಠ, ಬಿ.ಆರ್.; **ಶಾಸನಗಳಲ್ಲಿ ಕರ್ನಾಟಕದ ವರ್ತಕರು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1986

ಹುಲ್ಲೂರು ಶ್ರೀನಿವಾಸ ಜೋಯಿಸ; **ಚಿತ್ರದುರ್ಗದ ಬಖೈರು,** ಮೈಸೂರು, 1968

ಹೆಂಡರ್‌ಸನ್, ಜಿ.ಆರ್.; **ದಿ ಕಾಯಿನ್ಸ್ ಆಫ್ ಹೈದರ್ ಅಲಿ ಅಂಡ್ ಟಿಪ್ಪುಸುಲ್ತಾನ್**, ಸರ್ಕಾರಿ ಮುದ್ರಣಾಲಯ, ಮದ್ರಾಸ್, 1921

ಹೆನ್ರಿ ಕಸಿನ್ಸ್; **ದಿ ಚಾಲುಕ್ಯನ್ ಆರ್ಕಿಟೆಕ್ಚರ್ ಆಫ್ ದಿ ಕ್ಯಾನರೀಸ್ ಡಿಸ್ಟ್ರಿಕ್ಟ್,** ಕಲ್ಕತ್ತ, 1926

ಹೆನ್ರಿ ಕಸಿನ್ಸ್; **ದಿ ಬಿಜಾಪುರ್ ಆರ್ಕಿಟೆಕ್ಚರ್,** ಭಾ.ಪು.ಸ.ಇ., 1916

ಹೆನ್ರಿ ರಾಲಿನ್‌ಸನ್; **ದಿ ಲಾಸ್ಟ್ ಲಾಂಗ್ವೇಜಸ್ ಆಫ್ ಬ್ಯಾಬಿಲೋನಿಯ,** ಥಾಮಸ್ ಮನ್ ಬುಕ್ಸ್, 2004

ಎಸ್.ಡಿ.ಶೆಟ್ಟಿ (ಸಂ); **ಕರ್ನಾಟಕ ಅರಸು ಮನೆತನಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹರ್ಲೆ, ಜೆ.ಸಿ.: **ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ದಿ ಇಂಡಿಯನ್ ಸಬ್–ಕಾಂಟಿನೆಂಟ್,** ಪೆಲಿಕಾನ್, 1986

## ಪರಾಮರ್ಶನ ಲೇಖನಗಳು


ಅಂಬೇಡ್ಕರ್, ಬಿ.ಆರ್.; ಕಾಸ್ಟ್ ಇನ್ ಇಂಡಿಯ, ಇಂಡಿಯನ್ ಆಂಟಿಕ್ವೆರಿ, 1917

ಅಮರೇಂದ್ರನಾಥ್.; ಫರ್ದರ್ ಎಕ್ಸ್‌ಕವೇಷನ್ಸ್ ಅಟ್ ರಾಖಿಗಡಿ, ಪುರಾತತ್ತ್ವ 29, 1998–99

ಆನ್ಯುಯಲ್ ರಿಪೋರ್ಟ್ಸ್ ಆಫ್ ಸೌತ್ ಇಂಡಿಯನ್ ಎಪಿಗ್ರಫಿ, ಭಾ.ಪು.ಸ.ಇ., ನವದೆಹಲಿ

ಅಲ್ಚಿನ್, ಎಫ್.ಆರ್.; ದಿ ಸಿಟಿ ಅಂಡ್ ಸ್ಟೇಟ್ ಫಾರ್ಮೇಶನ್ ಇನ್ ಅರ್ಲಿ ಹಿಸ್ಟಾರಿಕ್ ಸೌತ್ ಏಷ್ಯ, ಸೌತ್ ಏಷ್ಯನ್ ಸ್ಟಡೀಸ್, 1–16

ಇಂಡಿಯನ್ ಆರ್ಕಿಯಾಲಜಿ ಎ ರಿವ್ಯೂ 1963–64 ರಿಂದ 2002–03, ಭಾ.ಪು.ಸ.ಇ., ದೆಹಲಿ

ಇತಿಹಾಸ ದರ್ಶನ 20 ಸಂಪುಟಗಳು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಎಟ್ಲರ್‌ಡೆನಿಸ್, ಎ.; ಎ ಫಾಸಿಲ್ ಎವಿಡೆನ್ಸ್ ಫಾರ್ ಹ್ಯೂಮನ್ ಎವಲೂಷನ್ ಇನ್ ಏಷ್ಯ, ಆನ್ಯುಯಲ್ ರಿವ್ಯೂ, ಆಂಥ್ರೋಪಾಲಜಿ 25, 1966

ಓಟ, ಎಸ್.ಬಿ.; ಆರ್ಕಿಯಲಾಜಿಕಲ್ ಇನ್ವೆಸ್ಟಿಗೇಷನ್ಸ್ ಇನ್ ದಿ ಸಬ್‌ಮರ್ಜನ್ಸ್ ಏರಿಯ ಆಫ್ ನರ್ಮದ ಸಾಗರ್ ಡ್ಯಾಮ್, ಮಧ್ಯಪ್ರದೇಶ, ಎ ರೆಕನೈಸ್ಸ್ಯಾನ್ಸ್ ಸರ್ವೇ, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್ XVII(1): 97–103

ಕನ್ನಿಂಗ್‌ಹ್ಯಾಮ್, ಎ.; ಆನ್ಯುಯಲ್ ರಿಪೋರ್ಟ್ಸ್ ಆಫ್ ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯ, ಸಂಪುಟ–1 ಭಾ.ಪು.ಸ.ಇ., ನವದೆಹಲಿ

ಕಮಿಯಡೆ, ಎಲ್.ಎ. ಮತ್ತಿತರರು; ಫ್ರೆಶ್‌ಲೈಟ್ ಆನ್ ದಿ ಸ್ಟೋನ್‌ಏಜ್ ಇನ್ ಸೌತ ಈಸ್ಟ್ ಇಂಡಿಯ, ಆಂಟಿಕ್ವಿಟಿ 4, 1930

ಕಾಕ್, ಎಸ್.; ಇಂಡಸ್ ರೈಟಿಂಗ್, ದಿ ಮ್ಯಾನ್‌ಕೈಂಡ್ ಕ್ವಾಟರ್ಲಿ–30, 1989

ಕಾಕ್, ಎಸ್.; ಎನ್ ಇಂಡಸ್–ಸರಸ್ವತಿ ಸೈನ್‌ಬೋರ್ಡ್, ಕ್ರಿಪ್ಟೋಲಾಜಿಯ 20, 1996

ಕಾಕ್, ಎಸ್.; ಎವಲೂಷನ್ ಆಫ್ ಅರ್ಲಿ ರೈಟಿಂಗ್ ಇನ್ ಇಂಡಿಯ, ಜರ್ನಲ್ ಆಫ್ ಹಿಸ್ಟರಿ ಆಫ್ ಸೈನ್ಸ್–29, 1994

ಕಾಜಳೆ, ಎಂ.ಡಿ.; ಕರೆಂಟ್ ಸ್ಟೇಟಸ್ ಆಫ್ ಇಂಡಿಯನ್ ಪೇಲಿಯೊ ಎತ್ನೋ–ಬಾಟನಿ, ಜೆ. ರೆಸ್ಪಕಿಫ್(ಸಂ) ನ್ಯೂ ಲೈಟ್ ಆನ್ ರೀಸೆಂಟ್ ಡೆವಲಪ್‌ಮೆಂಟ್ಸ್ ಇನ್ ಪೇಲಿಯೋ ಎತ್ನೋ ಬಾಟನಿ, ಎಡಿನ್ ಬರೊ 1991

ಕ್ಲಾರ್ಕ್, ಜೆ.ಜಿ.ಡಿ. ಮತ್ತು ಇತರರು; ಸ್ಟ್ರಾಟಿಗ್ರಾಫಿಕ್, ಕ್ರೊನಲಾಜಿಕಲ್ ಅಂಡ್ ಬಿಹೇವಿಯರಲ್ ಕಾಂಟೆಕ್ಸ್ಟ್ ಆಫ್ ಪ್ಲಿಸ್ಟೋಸೀನ್ ಹೋಮೋ ಸೇಪಿಯನ್ಸ್ ಫ್ರಮ್ ಮಿಡ್ಲ್ ಅವಾಶ್, ಇಥಿಯೋಪಿಯ, ನೇಚರ್–423, 2003

ಕ್ಲಾರ್ಕ್, ಜೆ.ಜಿ.ಡಿ. ಮತ್ತು ವಿಲಿಯಮ್ಸ್ ಎಂ.ಎ.ಜೆ.; ಪ್ರಿಹಿಸ್ಟಾರಿಕ್ ಎಕಾಲಜಿ, ರಿಸೋರ್ಸ್ ಸ್ಟ್ರಾಟೆಜೀಸ್ ಅಂಡ್ ಕಲ್ಚರ್ ಚೇಂಜ್ ಇನ್ ದಿ ಸೋನ್ ವ್ಯಾಲಿ, ನಾರ್ದನ್ ಮಧ್ಯ ಪ್ರದೇಶ್, ಸೆಂಟ್ರಲ್ ಇಂಡಿಯ. ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್ XV(1); 1990

ಕುಮಾರ್, ಜಿ.; ರಾಕ್ ಆರ್ಟ್ ಆಫ್ ಅಪ್ಪರ್ ಚಂಬಲ್ ವ್ಯಾಲಿ, ಸಮ್ ಅಬ್ಸರ್ವೇಶನ್ಸ್, ಪುರಾಕಲಾ, 1991–1992

ಕುಮಾರ್, ಎಂ.; ಅಶೂಲಿಯನ್ ಎಲಿಮೆಂಟ್ಸ್ ಫ್ರಮ್ ಹೊಶಿಯಾರ್‌ಪುರ್ ರೀಜನ್, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್–10, 1986

ಕೃಷ್ಣ, ಎಂ.ಎಚ್.; ದಿ ವಿದ್ಯಾಶಂಕರ ಟೆಂಪಲ್, ಶೃಂಗೇರಿ, ವಿಜಯನಗರ ಸೆಕ್–ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್, ಧಾರವಾಡ–1936 (289–95)

ಕೃಷ್ಣಸ್ವಾಮಿ, ವಿ.ಡಿ.; ಸರ್ವೈವಲ್ ಅಂಡ್ ಕಲ್ಚರ್ ಚೇಂಜಸ್ ಆಫ್ ಪ್ರಿಹಿಸ್ಟಾರಿಕ್ ಮ್ಯಾನ್, ಮದ್ರಾಸ್ ಜಿಯೋಗ್ರಾಫಿಕ್ ಅಸೋಸಿಯೇಷನ್ 13, 1938

ಕೃಷ್ಣಸ್ವಾಮಿ, ವಿ.ಡಿ.; ಮೆಗಲಿಥಿಕ್ ಟೈಪ್ಸ್ ಆಫ್ ಸೌತ್ ಇಂಡಿಯ, ಏನ್ಷಿಯೆಂಟ್ ಇಂಡಿಯ 5, 1945

ಕೆಂಟ್‌ಫ್ಲೆನರಿ.; ದಿ ಆರಿಜಿನ್ಸ್ ಆಫ್ ವಿಲೇಜ್ ಅಂಡ್ ಸೆಟಲ್‌ಮೆಂಟ್ ಟೈಪ್ ಇನ್ ಮೆಸೊಅಮೆರಿಕ ಅಂಡ್ ನಿಯರ್ ಈಸ್ಟ್, ಯುಕೊ, ಆರ್.; ಟ್ರಿಂಗ್ ಹ್ಯಾಮ್ ಮತ್ತು ಜಿ.ಡಬ್ಲ್ಯೂ.ಡಿಂಬಲ್‌ಬೈ (ಸಂ) ಮ್ಯಾನ್, ಸೆಟಲ್‌ಮೆಂಟ್ ಅಂಡ್ ಅರ್ಬನೈಜೇಷನ್, ಲಂಡನ್, 1972

ಕೈಲತ್, ಎ.ಜಿ. ಮತ್ತು ಇತರರು; ಎಲೆಕ್ಟ್ರಾನ್ ಸ್ಪಿನ್ ರೆಸೊನೆನ್ಸ್ ಕ್ಯಾರೆಕ್ಟರೈಜೇಶನ್ ಆಫ್ ಕ್ಯಾಲ್‌ಕ್ರಿಟ್ಸ್ ಫ್ರಮ್ ಥಾರ್ ಡೆಸರ್ಟ್ ಫಾರ್ ಡೇಟಿಂಗ್ ಅಪ್ಲಿಕೇಶನ್ಸ್, ರೇಡಿಯೇಷನ್ ಮೆಶರ್‌ಮೆಂಟ್ಸ್ ನಂ.32–2000

ಕನ್ನಿಂಗ್‌ಹ್ಯಾಮ್, ಆರ್.ಎ.ಇ.; ದಿ ಆರಿಜನ್ಸ್ ಆಫ್ ದಿ ಬ್ರಾಹ್ಮಿ ಸ್ಕ್ರಿಪ್ಟ್ ರಿಕನ್ಸಿಡರ್ಡ್ – ದಿ ನ್ಯೂ ಎವಿಡೆನ್ಸ್ ಫ್ರಂ ಅನುರಾಧಪುರ, ಮಿನರ್ವ, ಸಂಪುಟ–8, ಭಾಗ–2, 1995

ಕೊರ್ವಿನಸ್, ಜಿ.; ಎ ನೋಟ್ ಆನ್ ದಿ ಡಿಸ್ಕವರಿ ಆಫ್ ಹ್ಯಾಂಡ್ ಆ್ಯಕ್ಸಸ್ ಇನ್ ನೇಪಾಲ್, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್–15, 1990

ಕೋಸಾಂಬಿ, ಡಿ.ಡಿ.; ದಿ ಬಿಗಿನಿಂಗ್ ಆಫ್ ಐರನ್ ಏಜ್ ಇನ್ ಇಂಡಿಯ, ದಿ ಜರ್ನಲ್ ಆಫ್ ಎಕನಾಮಿಕ್ ಆಂಡ್ ಸೋಷಿಯಲ್ ಹಿಸ್ಟರಿ ಆಫ್ ದಿ ಓರಿಯಂಟ್ 5: 1963

ಖತ್ರಿ, ಎ.ಪಿ; ಮಹದೇವಿಯನ್ ಅಂಡ್ ಓಲ್ಡೊವಾನ್ ಪೆಬಲ್ ಕಲ್ಚರ್ ಆಫ್ ಇಂಡಿಯ, ಏಷಿಯನ್ ಪರ್ಸ್‌ಪೆಕ್ಟಿವ್ 6, 1962

ಖತ್ರಿ, ಎ.ಪಿ; ಸ್ಟೋನ್‌ಏಜ್ ಕಲ್ಚರ್ಸ್ ಆಫ್ ಮಾಳವ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪುಣೆ ವಿಶ್ವವಿದ್ಯಾಲಯ, 1958

ಗಣಪತಿ ಗೌಡ, ಎಸ್.; ಮೈನರ್ ಡೈನಾಸ್ಟಿಸ್ ಆಫ್ ನಾರ್ತ್ ಕೆನರ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ಯೂನಿವರ್ಸಿಟಿ, ಧಾರವಾಡ, 1993

ಗುಪ್ತ, ಚಂದ್ರಶೇಖರ್.; ಕಲ್ಚರಲ್ ಹಿಸ್ಟರಿ ಆಫ್ ವಿದರ್ಭ (ಪ್ರ.ಶ.ಪೂ.600–ಪ್ರ.ಶ.600), ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ನಾಗಪುರ ವಿಶ್ವವಿದ್ಯಾಲಯ, ನಾಗಪುರ, 1976

ಗುಪ್ತ, ಪಿ.ಎಲ್.; ಅರ್ಲಿ ಬೈಜಾಂಟೀಯನ್ ಸೋಲಿ ಫ್ರಮ್ ಕರ್ನಾಟಕ; ನ್ಯೂಮಿಸ್‌ಮ್ಯಾಟಿಕ್ ಡೈಜೆಸ್ಟ್, 1988

ಗುರವ್, ಆರ್.ಎನ್.; ದಿ ಕದಂಬಾಸ್ ಆಫ್ ಗೋವ ಅಂಡ್ ದೇರ್ ಇನ್ಸ್ಕ್ರಿಪ್ಷನ್ಸ್ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1969

ಗೌಡಿಲ್ಲರ್, ಡಿ.ಎಲ್ ಮತ್ತು ರವಿ ಕೋರಿಶೆಟ್ಟರ್.; ದಿ ಫಸ್ಟ್ ಡಿಸ್ಕವರಿ ಆಫ್ ಅಶೂಲಿಯನ್ ಬೈಫೇಸಸ್ ಇನ್ ಗೋವ, ಇಂಪ್ಲಿಕೇಶನ್ಸ್ ಫಾರ್ ದಿ ಆರ್ಕಿಯಾಲಜಿ ಆಫ್ ದಿ ವೆಸ್ಟ್ ಕೋಸ್ಟ್ ಆಫ್ ಇಂಡಿಯ, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್–18, 1993

ಘೋಷ್, ಎ.ಕೆ.; ಪ್ರಿಹಿಸ್ಟಾರಿಕ್ ರಿಲಿಜನ್ ಫ್ರಮ್ ಇಂಡಿಯನ್ ಮೆಗಲಿಥ್ಸ್, ವಲ್ಕಮೋನಿಕ ಸಿಂಪೋಸಿಯಮ್–72, ಕೆಪೊಡಿ ಪಾಂತೆ, 1975

ಘೋಷ್, ಎನ್.ಸಿ.; ಎಕ್ಸ್‌ಕವೇಷನ್ ಅಟ್ ಸತನಿಕೋಟ 1977–80, ಮೆಮಾಯರ್ಸ್ ಆಫ್ ದಿ ಆರ್ಕಿಯಾಲಜಿಕಲ್ ಸರ್ವೇ ಆಫ್ ಇಂಡಿಯ, ನಂ.82, ನ್ಯೂ ಡೆಲ್ಲಿ, 1986

ಚಂಪಕಲಕ್ಷ್ಮಿ, ಆರ್.; ಆರ್ಕಿಯಾಲಜಿ ಅಂಡ್ ತಮಿಳ್ ಲಿಟರರಿ ಟ್ರಡಿಷನ್, ಪುರಾತತ್ತ್ವ 8:1, 1975–76

ಚಟ್ಟೋಪಾಧ್ಯಾಯ ಪ್ರಣಬ್, ಕೆ., ಆರಿಜಿನ್ ಆಫ್ ಐರನ್ ಟೆಕ್ನಾಲಜಿ ಇನ್ ಈಸ್ಟರ್ನ್ ಇಂಡಿಯ ಅಂಡ್ ಬಾಂಗ್ಲಾದೇಶ್, ಸಂಪುಟ–8, ಜರ್ನಲ್ ಆಫ್ ಬೆಂಗಾಲ್ ಆರ್ಟ್, ದಿ ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಸ್ಟಡಿ ಆಫ್ ಬೆಂಗಾಲ್ ಆರ್ಟ್, ಡಾಕಾ, ಬಾಂಗ್ಲಾದೇಶ, 2003

ಚತುರ್ವೇದಿ, ಎಸ್.ಎಸ್.; ಅಡ್ವಾನ್ಸ್ ಆಫ್ ವಿಂಧ್ಯನ್ ನಿಯೋಲಿಥಿಕ್ ಅಂಡ್ ಚಾಲ್ಕೋಲಿಥಿಕ್ ಕಲ್ಚರ್ಸ್ ಟು ದಿ ಹಿಮಾಲಯ ಟೆರೈನ್ ಎಕ್ಸ್‌ಕವೇಷನ್ ಅಂಡ್ ಎಕ್ಸ್‌ಪ್ಲೊರೇಷನ್ ಇನ್ ದಿ ಸರಯೂಪಾರ ರೀಜನ್ ಆಫ್ ಉತ್ತರ ಪ್ರದೇಶ, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್ 9:101–108, 1985.

ಜಯಸ್ವಾಲ್, ವಿ.; ಎಕ್ಸ್‌ಕವೇಷನ್ ಆಫ್ ಎ ಪೇಂಟೆಡ್ ರಾಕ್ ಶೆಲ್ಟರ್ ಅಟ್ ಲಹರಿಯದಿಹ್, ಮಿರ್ಜಾಪುರ್ ಡಿಸ್ಟ್ರಿಕ್ಟ್ , ಭಾರತಿ–1, 1983

ಜ್ಯು ಆರ್.ಎಕ್ಸ್, ಮತ್ತಿತರರು; ನ್ಯೂ ಎವಿಡೆನ್ಸ್ ಆನ್ ದಿ ಅರ್ಲಿಯಸ್ಟ್ ಹ್ಯೂಮನ್ ಪ್ರೆಸೆನ್ಸ್ ಅಟ್ ಹೈ ನಾರ್ದರ್ನ್ ಲ್ಯಾಟಿಟ್ಯೂಡ್ಸ್ ಇನ್ ನಾರ್ತ್ ಈಸ್ಟ್ ಏಷ್ಯ, ನೇಚರ್ 431, 2004

ಜಾರ್ಜ್ ಮಿಚೆಲ್; ಡೇಟಿಂಗ್ ದಿ ವಿದ್ಯಾಶಂಕರ ಟೆಂಪಲ್ ಅಟ್ ಶೃಂಗೇರಿ, ಶ್ರೀ ನಾಗಾಭಿನಂದನಂ; (ಎಂ.ಎಸ್.ನಾಗರಾಜರಾವ್ ಅಭಿನಂದನ ಗ್ರಂಥ) ಬೆಂಗಳೂರು, 2001

ಜೋನ್ಸ್‌ಮಾರ್ಟಿನ್ ಅಂಡ್ ಟೆರ್ರಿಬ್ರೌನ್; ಅಗ್ರಿಕಲ್ಚರಲ್ ಆರಿಜನ್ಸ್, ದಿ ಎವಿಡೆನ್ಸ್ ಆಫ್ ಮಾಡರ್ನ್ ಅಂಡ್ ಏನ್ಷಿಯಂಟ್ ಡಿ.ಎನ್.ಎ., ಹಾಲೊಸೀನ್ 10, ಭಾಗ–6, 2000

ಟಕ್‌ಸೈ, ಸಿಎಸ್.ಎಂ, ಬ್ರಿಡ್ ಎಂ.ಐ, ಶೇಫಿಲ್ಡ್ ಎಲ್.ಕೆ, ರಾಬರ್ಟ್ ಆರ್.ಜಿ, ಸಿ.ಇ.ಎಂ ಸ್ಮಿತ್ ಮತ್ತು ಇತರರು: ಅರ್ಲಿ ಹ್ಯೂಮನ್ ಆಕ್ಯುಪೇಶನ್ ಅಟ್ ಡೆವಿಲ್ಸ್ ಲೇಕ್, ಸೌತ್ ವೆಸ್ಟರ್ನ್ ಆಸ್ಟ್ರೇಲಿಯ 50,000 ಇಯರ್ ಎಗೊ, ಕ್ವಾಟರ್ನರಿ ರಿಸರ್ಚ್, ಮಧ್ಯಪ್ರದೇಶ್ 2001

ಡುಪ್ರಿ, ಎಲ್.; ಎನ್ ಆರ್ಕಿಯಾಲಾಜಿಕಲ್ ಸರ್ವೇ ಆಫ್ ನಾರ್ತ್ ಆಫ್ಘಾನಿಸ್ತಾನ್ ದಶ್ತ್–ಇ–ನಹಾರ್, ಸಂಪುಟ 15, ಕಾಬೂಲ್, 1960

ಡುಪ್ರಿ, ಎಲ್.; ದಿ ಪ್ರಿಹಿಸ್ಟಾರಿಕ್ ಪೀರಿಯಡ್ ಆಫ್ ಅಫ್ಘಾನಿಸ್ತಾನ್, ದಶ್ತ್–ಇ–ನಹಾರ್, ಸಂಪುಟ 20, ಕಾಬೂಲ್, 1967

ಡುಪ್ರಿ, ಎಲ್. ಮತ್ತಿತರರು; ನ್ಯೂ ಪ್ರಿಹಿಸ್ಟಾರಿಕ್ ಲೊಕಾಲಿಟಿ ಇನ್ ದಶ್ತ್–ಇ–ನಹಾರ್, ಸಂಪುಟ 29, ಕಾಬೂಲ್, 1976

ಡೆನಲ್, ಆರ್.ಡಬ್ಲ್ಯೂ. ಮತ್ತಿತರರು; ಅರ್ಲಿ ಹೋಮಿನಿಡ್ ಲ್ಯಾಂಡ್‌ಸ್ಕೇಪ್ ಇನ್ ನಾರ್ದರ್ನ್ ಪಾಕಿಸ್ತಾನ್: ಇನ್ವೆಸ್ಟಿಗೇಶನ್ಸ್ ಇನ್ ದಿ ಪಬಿಹಿಲ್ಸ್, ಬಿ.ಎ.ಆರ್. ಆಕ್ಸ್‌ಫರ್ಡ್ ಇಂಟರ್‌ನ್ಯಾಷನಲ್ ಸೀರೀಸ್ 1265, 2005

ಡೆನಲ್, ಆರ್.ಡಬ್ಲ್ಯೂ.; ಹೋಮಿನಿಡ್ ಡಿಸ್ಪರ್ಸಲ್ ಅಂಡ್ ಏಷ್ಯನ್ ಬಯೋಜಿಯಾಗ್ರಫಿ ಡ್ಯೂರಿಂಗ್ ದಿ ಲೋಯರ್ ಅಂಡ್ ಅರ್ಲಿ ಮಿಡ್ಲ್ ಪ್ಲಿಸ್ಟೋಸೀನ್, ಏಷ್ಯನ್ ಪರ್ಸ್‌ಪೆಕ್ಟಿವ್ಸ್ – 43, 2004

ಡೆರ್ರಿಕೋರ್ಟ್ ರಾಬಿನ್; ಗೆಟಿಂಗ್ ಔಟ್ ಆಫ್ ಆಫ್ರಿಕ: ಸೀ ಕ್ರಾಸಿಂಗ್, ಲ್ಯಾಂಡ್ ಕ್ರಾಸಿಂಗ್ ಅಂಡ್ ಕಲ್ಚರ್ ಇನ್ ದಿ ಹೋಮಿನಿಡ್ ಮೈಗ್ರೇಶನ್ಸ್, ಜರ್ನಲ್ ಆಫ್ ವರ್ಲ್ಡ್ ಪ್ರಿಹಿಸ್ಟರಿ, 2005

ತಂಗರಾಜ್, ಕೆ. ಮತ್ತಿತರರು.; ಏನ್ಷಿಯಂಟ್ ಡಿ.ಎನ್.ಎ.: ಚಾಲೆಂಜ್ಸ್ ಅಂಡ್ ಯುಟಿಲಿಟೀಸ್, ಇರಾವತಿ ಕರ್ವೆ ಬರ್ತ್‌ಸೆಂಟಿನರಿ ಸೆಮಿನಾರ್, ಆಂಥ್ರೊಪಾಲಜಿ ಫಾರ್ ಆರ್ಕಿಯಾಲಜಿ, ಡಿಸಿಪಿ–ಆರ್‌ಐ, ಪುಣೆ, 2005

ತಿವಾರಿ, ಆರ್. ಮತ್ತಿತರರು.; ಎಕ್ಸ್‌ಕವೇಷನ್ ಅಟ್ ಹುಲಸಖೇಡ 1978–79 – 1986–87 (ಎ ಪ್ರಿಲಿಮಿನರಿ ರಿಪೋರ್ಟ್), ಪ್ರಾಗ್ಧಾರ, ಸಂಪುಟ–6, ಉತ್ತರಪ್ರದೇಶ ಸ್ಟೇಟ್ ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿ, ಲಕ್ನೋ, 1996

ತಿವಾರಿ, ಆರ್.; ಟ್ರಯಲ್ ಎಕ್ಸ್‌ಕವೇಷನ್ಸ್ ಅಟ್ ಮೂಸನಗರ್ 1995, ಪ್ರಾಗ್ಧಾರ, ಸಂಪುಟ–6 1996

ತಿವಾರಿ, ಆರ್.; ಇನ್ ಕ್ವೆಸ್ಟ್ ಆಫ್ ಅರ್ಲಿ ಐರನ್ ಏಜ್ ಸೈಟ್ಸ್ ಇನ್ ಕರ್ಮನಾಶ ವ್ಯಾಲಿ, ಪ್ರಾಗ್ಧಾರ–8, 1998.

ತಿವಾರಿ, ಆರ್. ಮತ್ತಿತರರು.; ಎಕ್ಸ್‌ಕವೇಷನ್ ಅಟ್ ರಾಜಾ ನಲ್ ಕ ಟೀಲ (1996–97) ಡಿಸ್ಟ್ರಿಕ್ಟ್ ಸೋನ್‌ಭದ್ರ, ಯು.ಪಿ: ಪ್ರಿಲಿಮಿನರಿ ಅಬ್ಸರ್ವೇಷನ್, ಪ್ರಾಗ್ಧಾರ, 1997

ತಿವಾರಿ, ಆರ್. ಮತ್ತಿತರರು.; ಎಕ್ಸ್‌ಕವೇಷನ್ಸ್ ಅಟ್ ಮಲ್ಹಾರ್ 1998–99, ಪ್ರಾಗ್ಧಾರ–10, 2000

ತಿವಾರಿ, ಆರ್. ಮತ್ತಿತರರು.; ಎಕ್ಸ್‌ಕವೇಷನ್ಸ್ ಅಟ್ ದಾದುಪುರ್, ಡಿಸ್ಟ್ರಿಕ್ಟ್ ಲಕ್ನೋ 1999–2001 ಪ್ರಾಗ್ಧಾರ–12, 2002

ತಿವಾರಿ, ಆರ್.; ದಿ ಆರಿಜಿನ್ಸ್ ಆಫ್ ಐರನ್–ವರ್ಕಿಂಗ್ ಇನ್ ಇಂಡಿಯ: ನ್ಯೂ ಎವಿಡೆನ್ಸ್ ಫ್ರಮ್ ದಿ ಸೆಂಟ್ರಲ್ ಗಂಗಾ ಪ್ಲೇನ್ ಅಂಡ್ ದಿ ಈಸ್ಟರ್ನ್ ವಿಂಧ್ಯಾಸ್, ಪ್ರಾಗ್ಧಾರ–13, 2003

ತಿವಾರಿ, ಆರ್.; ನಿಯೋಲಿಥಿಕ್ ಸೆರಾಮಿಕ್ಸ್ ಅಟ್ ಲಹುರದೇವ, ಡಿಸ್ಟ್ರಿಕ್ಟ್ ಸಂತ ಕಬೀರ್‌ನಗರ್ 2005 – ಇಂಟರ್ ನ್ಯಾಷನಲ್ ಸಿಂಪೋಸಿಯಂ ಆನ್ ಏನ್ಷಿಯಂಟ್ ಸಿರಾಮಿಕ್ಸ್ ಇಟ್ಸ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಶಾಂಘೈ, ಚೈನ

ತಿವಾರಿ, ಆರ್.; ಎಕ್ಸ್‌ಕವೇಷನ್ ಅಟ್ ಲಹುರದೇವ, ಡಿಸ್ಟ್ರಿಕ್ಟ್ ಸಂತ ಕಬೀರನಗರ್, ಉತ್ತರ ಪ್ರದೇಶ, ಪುರಾತತ್ತ್ವ–32, 2002

ಥಾಪರ್, ಬಿ.ಕೆ.; ಎ ಚಾಲ್ಕೋಲಿಥಿಕ್ ಸೈಟ್ ಇನ್ ತಪತಿ ವ್ಯಾಲಿ, ಏನ್ಷಿಯಂಟ್ ಇಂಡಿಯ–11, ಭಾ.ಪು.ಸ.ಇ., 1995

ದಾನಿ, ಎ.ಹೆಚ್.; ಎಕ್ಸ್‌ಕವೇಷನ್ ಇನ್ ದಿ ಗೋಮಾಲ್ ವ್ಯಾಲಿ, ಏನ್ಷಿಯಂಟ್ ಪಾಕಿಸ್ತಾನ, 1970

ದೀಕ್ಷಿತ್ ಕೆ.ಎನ್. ಮತ್ತು ರಾಮಚಂದ್ರನ್ ಕೆ.ಎಸ್.; ಎ ಹರಪ್ಪನ್ ಮೆಟ್ರೊಪೋಲಿಸ್ ಇನ್ ದಿ ಸರಸ್ವತಿ – ದೃಶದ್ವತಿ ಡಿವೈಡ್, ಪುರಾತತ್ತ್ವ – 28, 1997–98

ದುರಾನಿ, ಎಫ್.ಎ.; ಎಕ್ಸ್‌ಕವೇಷನ್ಸ್ ಇನ್ ಗೋಮಲ್ ವ್ಯಾಲಿ, ರೆಹೆಮಾನ್ ದೇರಿ, ಏನ್ಷಿಯಂಟ್ ಪಾಕಿಸ್ತಾನ, 1988

ದೇವರಾಜ್, ಡಿ.ವಿ. ಮತ್ತು ಇತರರು.; ದಿ ವಟಗಲ್ ಎಕ್ಸ್‌ಕವೇಷನ್ಸ್ ಎನ್ ಇಂಟೆರಿಮ್ ರಿಪೋರ್ಟ್, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, ಸಂಪುಟ 20, ಸಂಖ್ಯೆ 2, 57–74

ನಾಗರಾಜರಾವ್, ಎಂ.ಎಸ್.; ಅರ್ಲಿಯೆಸ್ಟ್ ಐರನ್ ಯೂಸಿಂಗ್ ಪೀಪಲ್ ಇನ್ ಇಂಡಿಯ ಅಂಡ್ ದಿ ಮೆಗಲಿಥ್ಸ್, ರೀಸೆಂಟ್ ರಿಸರ್ಚಸ್ ಇನ್ ಇಂಡಿಯನ್ ಆರ್ಕಿಯಾಲಾಜಿ ಅಂಡ್ ಆರ್ಟ್ ಹಿಸ್ಟರಿ (ಶ್ರೀ ಎಂ.ಎನ್.ದೇಶಪಾಂಡೆ ಫೆಲಿಸಿಟೇಶನ್ ಸಂಪುಟ), ಆಗಮ್ ಪ್ರಕಾಶನ, ನವದೆಹಲಿ, 1981

ನಾರ್ಟನ್, ಸಿ.ಜಿ.; ಮಿಡ್ಲ್ ಪ್ಲಿಸ್ಟೋಸೀನ್ ಹ್ಯಾಂಡ್–ಆ್ಯಕ್ಸಸ್ ಫ್ರಮ್ ದಿ ಕೊರಿಯನ್ ಪೆನಿನ್ಸುಲಾ, ಜರ್ನಲ್ ಆಫ್ ಹ್ಯೂಮನ್ ಎವಲೂಷನ್ 51, 2006

ನೋಟಲ್ಯೆ ಟೋಬರ್ಟ್; ಆನೆಗುಂದಿ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಡಿಸಿಪಿ–ಆರ್‌ಐ, ಪುಣೆ, 2000

ಪಂಚಮುಖಿ, ಆರ್.ಎಸ್.; ಪ್ರೋಗ್ರೆಸ್ ಆಫ್ ಕನ್ನಡ ರೀಸರ್ಚ್ ಇನ್ ಬಾಂಬೆ ಪ್ರಾವಿನ್ಸ್ 1939–40, 41–46 ಮತ್ತು 47–56. ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪಟೇಲ್, ಅಂಬಿಕ; ಕನ್ಸರ್ವೇಷನ್ ಅಂಡ್ ರೆಸ್ಟೋರೇಶನ್ ಆಫ್ ಕಾಪರ್ ಆಬ್ಜೆಕ್ಟ್ಸ್ ಫ್ರಮ್ ಬಗಸ್ರ, ಎ ಮೆಚ್ಯೂರ್ ಹರಪ್ಪನ್ ಸೈಟ್, ಪುರಾತತ್ತ್ವ, 2006

ಪದ್ದಯ್ಯ, ಕೆ.; ಅಶೂಲಿಯನ್ ವರ್ಕ್‌ಶಾಪ್ ಅಟ್ ಇಸಾಂಪುರ್, ಹುಣಸಗಿ ವ್ಯಾಲಿ, ಕರ್ನಾಟಕ, ಎ ಪ್ರಿಲಿಮಿನರಿ ರಿಪೋರ್ಟ್, ಬುಲೆಟಿನ್ ಆಫ್ ಡೆಕ್ಕನ್ ಕಾಲೇಜ್ ಪೋಸ್ಟ್ ಗ್ರಾಜುಯೇಟ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್, 1996–97

ಪದ್ದಯ್ಯ, ಕೆ. ಮತ್ತು ಬ್ಲ್ಯಾಕ್‌ವೆಲ್. ಬಿ.ಎ.ಬಿ.; ರೀಸೆಂಟ್ ಫೈಂಡಿಂಗ್ಸ್ ಆನ್ ದಿ ಅಶೂಲಿಯನ್ ಆಫ್ ದಿ ಹುಣಸಗಿ ಅಂಡ್ ಬೈಚ್‌ಬಾಳ ವ್ಯಾಲೀಸ್, ಕರ್ನಾಟಕ, ವಿತ್ ಸ್ಪೆಷಲ್ ರೆಫರೆನ್ಸ್ ಟು ಇಸಾಂಪುರ್ ಎಕ್ಸ್‌ಕವೇಷನ್ ಅಂಡ್ ಇಟ್ಸ್ ಡೇಟಿಂಗ್, ಕರೆಂಟ್ ಸೈನ್ಸ್–83, 2002

ಪದ್ದಯ್ಯ, ಕೆ.; ದಿ ಟ್ರಾನ್ಸಿಶನ್ ಫ್ರಮ್ ಲೋಯರ್ ಟು ಮಿಡ್ಲ್ ಪೇಲಿಯೋಲಿಥಿಕ್ ಇನ್ ಹುಣಸಗಿ ವ್ಯಾಲಿ, ಪೆನಿನ್ಸುಲರ್ ಇಂಡಿಯ, ಬಿ.ಆರ್. ಇಂಟರ್‌ನ್ಯಾಷನಲ್ ಸೀರಿಸ್. 151, ಆಕ್ಸ್‌ಫರ್ಡ್

ಪದ್ದಯ್ಯ, ಕೆ.; ಜಲ್ದಿಯಾಲ್, ಆರ್.; ಪೇಟ್ರಾಗ್ಲಿಯ, ಎಂ.ಡಿ.; ಎಕ್ಸ್‌ಕವೇಷನ್ ಆಫ್ ಎನ್ ಅಶೂಲಿಯನ್ ವರ್ಕ್‌ಶಾಪ್ ಅಟ್ ಇಸಾಂಪುರ್, ಕರ್ನಾಟಕ, ಇಂಡಿಯ, ಆಂಟಿಕ್ವಿಟಿ 74, 2000

ಪಪ್ಪು, ಎಸ್.; ಎ ಸ್ಟಡಿ ಆಫ್ ನ್ಯಾಚುರಲ್ ಸೈಟ್ ಫಾರ್ಮೇಶನ್ ಪ್ರೋಸೆಸ್ ಇನ್ ದಿ ಕೋರ್ತಲಯಾರ್ ಬೇಸಿನ್, ಜಿಯೋಆರ್ಕಿಯಾಲಜಿ, 1999

ಪಪ್ಪು, ಎಸ್. ಮತ್ತಿತರರು.; ಪ್ರಿಲಿಮಿನರಿ ರಿಪೋರ್ಟ್ ಆನ್ ಎಕ್ಸ್‌ಕವೇಷನ್ಸ್ ಅಟ್ ದಿ ಪೇಲಿಯೋಲಿಥಿಕ್ ಸೈಟ್ ಆಫ್ ಅತ್ತಿರಂಪಾಕಂ, ತಮಿಳುನಾಡು, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, 2004

ಪಪ್ಪು, ಎಸ್.; ಇನ್‌ವೆಸ್ಟಿಗೇಷನ್ ಆಫ್ ದಿ ಪ್ರಿಹಿಸ್ಟಾರಿಕ್ ಆರ್ಕಿಯಲಾಜಿಕಲ್ ರೆಕಾರ್ಡ್ ಇನ್ ದಿ ಕೋರ್ತಲಯಾರ್ ಬೇಸಿನ್, ತಮಿಳುನಾಡು, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, 21(1), 1–23, 1996

ಪ್ರಸಾದ್, ಎ.ಕೆ.; ಇಂಪಾರ್ಟೆಂಟ್ ಡಿಸ್ಕವರೀಸ್ ಆಫ್ ಪ್ರಿಹಿಸ್ಟಾರಿಕ್ ರಾಕ್ ಪೇಂಟಿಂಗ್ಸ್, ಏನ್ಷಿಯಂಟ್ ಇನ್‌ಸ್ಕ್ರಿಪ್ಷನ್ ಅಂಡ್ ಸ್ಟೋನ್ ಏಜ್ ಟೂಲ್ಸ್ ಇನ್ ಸದರ್ನ್ ಬಿಹಾರ್ ಅಂಡ್ ಅಡ್ಜಾಯಿನಿಂಗ್ ಜಾರ್ಖಂಡ್, ಪುರಾತತ್ತ್ವ 34

ಪಾಬೂ, ಎಸ್.; ಮಾಲಿಕ್ಯುಲಾರ್ ಕ್ಲೋನಿಂಗ್ ಆಫ್ ಏನ್ಷಿಯಂಟ್ ಈಜಿಪ್ಷಿಯನ್ ಮಮ್ಮಿ ಡಿ.ಎನ್.ಎ, ನೇಚರ್–312, 1985

ಪಾಲ್, ಜೆ.ಎನ್., ವಿಲಿಯಮ್ಸ್, ಎಂ.ಎ.ಜೆ., ಜಯಸ್ವಾಲ್, ಎಂ., ಸಿಂಘ್ವಿ, ಎ.ಕೆ.; ಇನ್‌ಫ್ರಾರೆಡ್ ಸ್ಟಿಮ್ಯುಲೇಟೆಡ್ ಲೂಮಿನಿಸೆನ್ಸ್ ಏಜಸ್ ಫಾರ್ ಪ್ರಿ ಹಿಸ್ಟಾರಿಕ್ ಕಲ್ಚರ್ಸ್ ಇನ್ ಸೋನ್ ಅಂಡ್ ಬೇಲನ್ ವ್ಯಾಲಿಸ್, ನಾರ್ತ್ ಸೆಂಟ್ರಲ್ ಇಂಡಿಯ, ಜರ್ನಲ್ ಆಫ್ ಇಂಟರ್‌ಡಿಸಿಪ್ಲಿನರಿ ಸ್ಟಡೀಸ್ ಇನ್ ಹಿಸ್ಟರಿ ಅಂಡ್ ಆರ್ಕಿಯಾಲಜಿ, 2004

ಪಾಲ್. ಜೆ.ಎನ್.; ಮೈಕ್ರೋಲಿಥಿಕ್ ಇಂಡಸ್ಟ್ರಿ ಅಟ್ ದಮ್‌ದಮ–ಪ್ರತಾಪಗಡ್, ಉತ್ತರಪ್ರದೇಶ, ಎ ಪ್ರಿಲಿಮಿನರಿ ಅನಾಲಿಸಿಸ್, ಪುರಾತತ್ತ್ವ 16:1–5, 1985–86

ಪಾಲ್.ಜೆ.ಎನ್.; ಮೆಸೋಲಿಥಿಕ್ ಹ್ಯೂಮನ್ ಬರಿಯಲ್ಸ್ ಇನ್ ದಿ ಗಂಗಾವ್ಯಾಲಿ, ನಾರ್ತ್ ಇಂಡಿಯ, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್ –XVII (3): 35–44, 1992

ಪಾಲ್. ಜೆ.ಎನ್.; ಮೆಸೋಲಿಥಿಕ್ ಸೆಟ್ಲಮೆಂಟ್ ಇನ್ ದಿ ಗಂಗಾ ಪ್ಲೇನ್, ಮ್ಯಾನ್ ಅಂಡ್ ಎನ್‌ವೈರ್ನಮೆಂಟ್ XIX (1–2): 91–101, 1994

ಪೆಟ್ರಾಗ್ಲಿಯ ಮೈಕೆಲ್. ಡಿ; ದಿ ಲೋಯರ್ ಪೇಲಿಯೋಲಿಥಿಕ್ ಆಫ್ ದಿ ಅರೇಬಿಯನ್ ಪೆನಿನ್‌ಸುಲ: ಆಕ್ಯುಪೇಶನ್, ಅಡಾಪ್ಟೇಶನ್ಸ್ ಅಂಡ್ ಡಿಸ್ಪೆರ್‌ಸಲ್, ಜರ್ನಲ್ ಆಫ್ ವರ್ಲ್ಡ್ ಪ್ರಿಹಿಸ್ಟರಿ, 2003

ಫಾಸೆಟ್, ಎಫ್.; ನೋಟ್ಸ್ ಆನ್ ದಿ ರಾಕ್ ಕಾರ್ವಿಂಗ್ಸ್ ಇನ್ ದಿ ಎಡಕಲ್ ಕೇವ್, ವೈನಾಡ್, ದಿ ಇಂಡಿಯನ್ ಆಂಟಿಕ್ವೆರಿ, 1901

ಬಾರ್, ಯೂಸುಫ್.; ದಿ ಲೋಯರ್ ಪೇಲಿಯೋಲಿಥಿಕ್ ಆಫ್ ದಿ ನಿಯರ್ ಈಸ್ಟ್, ಜರ್ನಲ್ ಆಫ್ ವರ್ಲ್ಡ್ ಪ್ರಿಹಿಸ್ಟರಿ, 1994

ಬಾಸ, ಕೆ.ಕೆ. ಮತ್ತು ಮೊಹಂತಿ, ಆರ್.ಕೆ.; ಪೇಲಿಯೊ ಡೆಮಾಗ್ರಾಫಿ ಆಫ್ ದ ಮೆಗಲಿಥಿಕ್ ಬರಿಯಲ್ಸ್ ಆಫ್ ಸೌತ್ ಇಂಡಿಯ ಇನ್ ಮೆಗಲಿಥಿಕ್ ಟ್ರೆಡಿಷನ್ ಇನ್ ಎತ್ನೊಗ್ರಾಫಿ ಅಂಡ್ ಆರ್ಕಿಯಾಲಜಿ ಇನ್ ಇಂಡಿಯ (ಸೆಮಿನಾರ್ ಪೇಪರ್ ಆಫ್ ಮೆಗಲಿಥಿಕ್ ಟ್ರೆಡಿಷನ್ಸ್ ಇನ್ ಎತ್ನೊಗ್ರಾಫಿ ಅಂಡ್ ಆರ್ಕಿಯಾಲಜಿ ಇನ್ ಇಂಡಿಯ, ನವೆಂಬರ್, 2005, ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ, ಭೋಪಾಲ್)

ಬಿಷ್ಟ್, ಆರ್.ಎಸ್.; ಬನಾವಳಿ – ಎ ನ್ಯೂ ಹರಪ್ಪನ್ ಸೈಟ್ ಇನ್ ಹರಿಯಾಣ, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, 1978

ಬ್ಯೂಮಾಂಟ್ ಮತ್ತಿತರರು; ಆನ್ ಎ ಟೈಮ್ ಸ್ಕೇಲ್ ಫಾರ್ ದಿ ಫಸ್ಟ್ ಮಿಲಿಯನ್ ಇಯರ್ಸ್ ಆಫ್ ಹ್ಯೂಮನ್ ಹಿಸ್ಟರಿ ಇನ್ ಸೆಂಟ್ರಲ್ ಸೌತ್ ಆಫ್ರಿಕ, ಸೌತ್ ಆಫ್ರಿಕ, ಸೌತ್ ಆಫ್ರಿಕನ್ ಜರ್ನಲ್ ಆಫ್ ಸೈನ್ಸ್, 2006

ಮಣಿ, ಬಿ.ಆರ್.; ಪ್ರಿ ಹರಪ್ಪನ್ ವಿಲೇಜ್ ಸೆಟ್ಲ್‌ಮೆಂಟ್ಸ್ ಅಂಡ್ ಅರ್ಲಿ ಫಾರ್ಮಿಂಗ್ ಕಮ್ಯೂನಿಟಿಸ್ ಇನ್ ನಾರ್ದರ್ನ್ ಸೌತ್ ಏಷ್ಯ, ಪುರಾತತ್ತ್ವ–35, ನ್ಯೂಡೆಲ್ಲಿ, 2005

ಮಣಿ, ಬಿ.ಆರ್.; ರಾಕ್ ಆರ್ಟ್ಸ್ ಆಫ್ ಲಡಾಕ್: ಗ್ಲಿಮ್ಸಸ್ ಆಫ್ ಎಕನಾಮಿಕಲ್ ಅಂಡ್ ಕಲ್ಚರಲ್ ಲೈಫ್, ಪುರಾಕಲಾ 11, ರಾಕ್ ಆರ್ಟ್ ಸೊಸೈಟಿ ಆಫ್ ಇಂಡಿಯ, 2000–2001

ಮಲೂನೆ, ಸಿ.ಟಿ.; ದಿ ಎಫೆಕ್ಟ್ ಆಫ್ ಅರ್ಲಿ ಕೋಸ್ಟಲ್ ಟ್ರಾಫಿಕ್ ಇನ್ ದಿ ಡೆವಲಪ್‌ಮೆಂಟ್ ಆಫ್ ಸಿವಿಲೈಜೇಷನ್ ಇನ್ ಸೌತ್ ಇಂಡಿಯ, ಜರ್ನಲ್ ಆಫ್ ದಿ ಆರ್.ಎ.ಎಸ್. (ಸಿ.ಬಿ), ನ್ಯೂ ಪ್ಯಾರೀಸ್, ಸಂಪುಟ–6

ಮಿಶ್ರ, ಎಸ್.; ದಿ ಏಜ್ ಆಫ್ ದಿ ಅಶೂಲಿಯನ್ ಇನ್ ಇಂಡಿಯ, ಕರೆಂಟ್ ಆಂಥ್ರೋಪಾಲಜಿ 33, 1992

ಮಿಶ್ರ, ಎಸ್. ಮತ್ತಿತರರು.; ಅರ್ಲಿಯೆಸ್ಟ್ ಅಶೂಲಿಯನ್ ಇಂಡಸ್ಟ್ರಿಸ್ ಫ್ರಮ್ ಪೆನಿನ್‌ಸುಲರ್ ಇಂಡಿಯ, ಕರೆಂಟ್ ಆಂಥ್ರೋಪಾಲಜಿ 36, 1995

ಮಿಶ್ರ, ಎಸ್. ಮತ್ತಿತರರು.; ಕ್ರೋನಾಲಜಿ ಆಫ್ ಇಂಡಿಯನ್ ಸ್ಟೋನೇಜ್; ದ ಇಂಪ್ಯಾಕ್ಟ್ ಆಫ್ ರೀಸೆಂಟ್ ಆಬ್‌ಸಲ್ಯೂಟ್ ಡೇಟಿಂಗ್ ಅಟೆಮ್ಟ್ಸ್, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, ಸಂಪುಟ XX, ಸಂಖ್ಯೆ 2, 1995

ಮಿಶ್ರ, ವಿ.ಎನ್.; ಬಾಲಾಥಲ್ ಎ ಚಾಲ್ಕೋಲಿಥಿಕ್ ಸೆಟ್ಲ್‌ಮೆಂಟ್ ಇನ್ ಮೇವಾರ್, ರಾಜಸ್ತಾನ್, ಏಷಿಯನ್ ಸ್ಟಡೀಸ್ 13, 1997

ಮಿಶ್ರ, ವಿ.ಎನ್. ಮತ್ತು ಇತರರು.; ಅಶೂಲಿಯನ್ ಆಕ್ಯುಪೇಶನ್ ಅಂಡ್ ಇವಾಲ್ವಿಂಗ್ ಲ್ಯಾಂಡ್‌ಸ್ಕೇಪ್ ಅರೌಂಡ್ ದಿದ್ವಾನ ಇನ್ ದಿ ಥಾರ್ ಡೆಸರ್ಟ್, ಇಂಡಿಯ, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್ 6, 1982

ಮುಖರ್ಜಿ, ಬಿ.ಎನ್.; ಡಿಸೈಫರ್‌ಮೆಂಟ್ ಆಫ್ ಖರೋಷ್ಠಿ, ಬ್ರಾಹ್ಮಿ ಸ್ಕ್ರಿಪ್ಟ್, ಏಷ್ಯಾಟಿಕ್ ಸೊಸೈಟಿ ಬುಲೆಟಿನ್, ಸಂಪುಟ XVIII, ನಂ.8, 1989

ಮೂರ್ತಿ, ಎಂ.ಎಲ್.ಕೆ.; ಸ್ಟೋನ್ ಏಜ್ ಕಲ್ಚರ್ಸ್ ಆಫ್ ಚಿತ್ತೂರ್ ಡಿಸ್ಟ್ರಿಕ್, ಪಿಎಚ್.ಡಿ. ಮಹಾಪ್ರಬಂಧ, ಯೂನಿವರ್ಸಿಟಿ ಆಫ್ ಪುಣೆ, ಪುಣೆ

ಮೋರ್‌ವುಡ್, ಎಂ.ಜೆ. ಮತ್ತು ಇತರರು.; ಆರ್ಕಿಯಾಲಜಿ ಅಂಡ್ ಏಜ್ ಆಫ್ ದಿ ನ್ಯೂ ಹೋಮಿನಿಡ್ ಫ್ರಮ್ ಫ್ಲೋರೆಸ್ಟ್ ಇನ್ ಈಸ್ಟರ್ನ್ ಇಂಡೋನೇಷ್ಯ, ನೇಚರ್–431, 2004

ಮೋವಿಯಸ್ ಮತ್ತು ಹ್ಯಾಲಮ್, ಎಲ್. (ಜ್ಯೂ).; ದಿ ಲೋಯರ್ ಪೇಲಿಯೋಲಿಥಿಕ್ ಕಲ್ಚರ್ಸ್ ಆಫ್ ಸದರನ್ ಅಂಡ್ ಈಸ್ಟರ್ನ್ ಏಷ್ಯ, ಟ್ರ್ಯಾನ್‌ಸಾಕ್ಷನ್ಸ್ ಆಫ್ ದಿ ಅಮೆರಿಕನ್ ಫಿಲಸಾಫಿಕಲ್ ಸೊಸೈಟಿ, ನ್ಯೂ ಸೀರಿಸ್ – 38, 1948

ಮೊಹಾಪಾತ್ರ, ಜಿ.ಸಿ.; ಸೊಹಾನಿಯನ್, ಅಶೂಲಿಯನ್ ರಿಲೇಶನ್‌ಶಿಪ್, ಬುಲೆಟಿನ್ ಆಫ್ ದಿ ಡೆಕ್ಕನ್ ಕಾಲೇಜ್, ಪೋಸ್ಟ್ ಗ್ರಾಜುಯೆಟ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ 49, 1990

ಮೊಹಾಪಾತ್ರ, ಜಿ.ಸಿ.; ಪ್ರಿಲಿಮಿನರಿ ರಿಪೋರ್ಟ್ ಆಫ್ ಎಕ್ಸ್‌ಪ್ಲೊರೇಷನ್ ಅಂಡ್ ಎಕ್ಸ್‌ಕವೇಷನ್ ಇನ್ ಈಸ್ಟ್ ಪಂಜಾಬ್, ಬುಲೆಟಿನ್ ಆಫ್ ದಿ ಡೆಕ್ಕನ್ ಕಾಲೇಜ್ ರಿಸರ್ಚ್ ಇನ್‌ಸ್ಟಿಟ್ಯೂಟ್, 221–37, 1966

ಯೂಡ್ಲಡ್ ಕಾರ್ಬೂನೆಲ್ ಮತ್ತು ಇತರರು.; ದಿ ಫಸ್ಟ್ ಹ್ಯೂಮನ್ ಸೆಟ್ಲಮೆಂಟ್ ಆಫ್ ಯುರೋಪ್, ಜರ್ನಲ್ ಆಫ್ ಆಂಥ್ರೊಪಲಾಜಿಕಲ್ ರಿಸರ್ಚ್, ನಂ. 52, 1996

ರಾಬರ್ಟ್ ಆರ್.ಎಂ. ಮತ್ತು ಇತರರು.; ಎನ್ ಆಪ್ಟಿಕಲ್ ಅಂಡ್ ರೇಡಿಯೋ ಕಾರ್ಬನ್ ಡೇಟಿಂಗ್ ಅಟ್ ಮಿಮೌ ರಾಕ್ ಶೆಲ್ಟರ್ ಇನ್ ಆಸ್ಟ್ರೇಲಿಯ, ನೇಚರ್ 393:358–62, 1998

ರಾಮಿರೆಡ್ಡಿ ವಿ.; ರಾಕ್ ಪೇಂಟಿಂಗ್ಸ್ ಅಂಡ್ ಬ್ರುಯಿಸಿಂಗ್ಸ್ ಇನ್ ಆಂಧ್ರ ಪ್ರದೇಶ, ದಿ ಈಸ್ಟರ್ನ್ ಆಂಥ್ರೋಪಾಲಜಿಸ್ಟ್–24, 1971

ರಾಯ್ ಬ್ರೋಯಸ್ ವಿಲ್, ಮತ್ತಿತರರು; ದಿ ಅರ್ಲಿಯೆಸ್ಟ್ ಆಕ್ಯುಪೇಶನ್ ಆಫ್ ಯುರೋಪ್: ಎ ಶಾರ್ಟ್ ಕ್ರೊನಾಲಜಿ, ಆ್ಯಂಟಿಕ್ವಿಟಿ, 68, 1994

ರಾಲಿನ್‌ಸನ್, ಹೆನ್ರಿ, ಸಿ.; ದಿ ಪರ್ಷಿಯನ್ ಕ್ಯೂನಿಫಾರ್ಮ್ ಇನ್ಸ್ಕ್ರಿಪ್ಷನ್ ಅಟ್ ಬೆಹಿಸ್ತಾನ್(1846–51), ಬ್ರಿಟಿಷ್ ಮ್ಯೂಸಿಯಂ

ರಾವ್, ಎಸ್.ಆರ್; ಎಕ್ಸ್‌ಕವೇಷನ್ ಅಟ್ ರಂಗಪುರ ಅಂಡ್ ಫರ್ದರ್ ಎಕ್ಸ್‌ಪ್ಲೋರೇಷನ್ ಇನ್ ಗುಜರಾತ್, ಏನ್ಷಿಯಂಟ್ ಇಂಡಿಯ – 18–19, 1962–63

ರಾವ್, ಎಸ್.ಆರ್.; ಎಕ್ಸ್‌ಕವೇಷನ್ ಆಫ್ ದಿ ಲೆಜೆಂಡರಿ ಸಿಟಿ ಆಫ್ ದ್ವಾರಕ ಇನ್ ದಿ ಅರೇಬಿಯನ್ ಸೀ, ಜರ್ನಲ್ ಆಫ್ ಮರೀನ್ ಆರ್ಕಿಯಾಲಜಿ, ಸಂಪುಟ–1, 1990

ರಾವ್, ಎಲ್.ಎಸ್.; ರೀಸೆಂಟ್ ಪ್ರಿಹಿಸ್ಟಾರಿಕ್ ಡಿಸ್ಕವರೀಸ್ ಫ್ರಮ್ ದಿ ವೆಸ್ಟ್ ಕೋಸ್ಟ್ ಆಫ್ ಕರ್ನಾಟಕ, ಪ್ರೊಸೀಡಿಂಗ್ಸ್ ಆಫ್ ಆರ್.ಬಿ. ಘುಟ್ ಮೆಮೋರಿಯಲ್ ನ್ಯಾಶನಲ್ ಸೆಮಿನಾರ್, ಅ.ಸುಂದರ (ಸಂ), ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, 2003

ರಾವ್, ಎಲ್.ಎಸ್.; ನ್ಯೂ ಲೈಟ್ ಆನ್ ದಿ ಎಕ್ಸ್‌ಕವೇಷನ್ ಆಫ್ ಹರಪ್ಪನ್ ಸೈಟ್ ಅಟ್ ಭಿರಡಾಣ, ಪುರಾತತ್ತ್ವ 35, 2004–2005

ರಾವ್, ಎಲ್.ಎಸ್.; ದಿ ಹರಪ್ಪನ್ ಸ್ಪೋಕ್ಡ್ ವೀಲ್ಸ್ ರ‍್ಯಾಟಲ್ಡ್ ಡೌನ್ ಇನ್ ದಿ ಸ್ಟ್ರೀಟ್ಸ್ ಆಫ್ ಭಿರಡಾಣ, ಹರಿಯಾಣ, ಪುರಾತತ್ತ್ವ 36, 2005–06

ರಾವ್, ಎಲ್.ಎಸ್.; ಎನ್ ಅರ್ಲಿ ಹರಪ್ಪನ್ ಸೆಟ್ಲ್‌ಮೆಂಟ್ ಅಟ್ ಭಿರಡಾಣ, ಪುರಾತತ್ತ್ವ 34, 2003–2004

ರಾವ್.ಎಲ್.ಎಸ್. ಮತ್ತಿತರರು.; ಭಿರಡಾಣ ಎಕ್ಸ್‌ಕವೇಷನ್, ಪುರಾತತ್ತ್ವ 36, 2005–06

ರಾವ್, ಎಸ್.ಎನ್.; ಸ್ಟೋನ್ ಏಜ್ ಕಲ್ಚರ್ ಆಫ್ ನಾಲಂದ ಡಿಸ್ಟ್ರಿಕ್, ಪಿಎಚ್.ಡಿ. ಪ್ರಬಂಧ, ಪುಣೆ ವಿಶ್ವವಿದ್ಯಾಲಯ, ಪುಣೆ, 1968–69

ರಾವ್, ಎಸ್.ಎನ್.; ರೀಜನಲ್ ವೇರಿಯೇಷನ್ ಇನ್ ಇಂಡಿಯನ್ ಮಿಡಲ್ ಸ್ಟೋನ್ ಏಜ್ ಕಲ್ಚರ್ ವಿತ್ ಸ್ಪೆಷಲ್ ರೆಫರೆನ್ಸ್ ಟು ನಲ್ಗೊಂಡ ಇನ್ ಆಂಧ್ರಪ್ರದೇಶ, ಪುರಾತತ್ತ್ವ 2, 13–15, 1966

ರಾವ್ ಸುರೇಂದ್ರ, ಬಿ.; ಪ್ರೋಸೆಸಿಂಗ್ ಅಂಡ್ ಅನಾಲಿಸೀಸ್ ಆಫ್ ಡೇಟ, ವಿತ್ ರೆಫರೆನ್ಸ್ ಟು ಹಿಸ್ಟಾರಿಕಲ್ ರಿಸರ್ಚ್, ಓಲಿಂದ ಪಿರಿಯ ಮತ್ತು ಇತರರು (ಸಂ) ರಿಸರ್ಚ್ ಮೆಥಡಾಲಜಿ ಇನ್ ಸೋಷಿಯಲ್ ಸೈನ್ಸ್, ಮಂಗಳೂರು ವಿಶ್ವವಿದ್ಯಾಲಯ, ಪ್ರಸಾರಾಂಗ, 1982

ರಾವ್, ಜೆ.ವಿ.ಪಿ. ಮತ್ತು ಇತರರು; ರಿಪೋರ್ಟ್ ಆನ್ ದಿ 2000 ಸೀಸನ್ ಆಫ್ ಎಕ್ಸ್‌ಕವೇಷನ್ ಅಟ್ ಚಂದೋರ್, ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯ ಮತ್ತು ದಿ ಸೊಸೈಟಿ ಫಾರ್ ಸೌತ್ ಏಷ್ಯನ್ ಸ್ಟಡೀಸ್, 17, 2001

ರೆಂಡಲ್, ಎಚ್.ಎಂ. ಮತ್ತು ಡೆನಲ್ ಆರ್.ಡಬ್ಲ್ಯೂ.; ಡೇಟೆಡ್ ಲೋಯರ್ ಪೇಲಿಯೋಲಿಥಿಕ್ ಆರ್ಟಿಫ್ಯಾಕ್ಟ್ ಫ್ರಮ್ ನಾರ್ದರ್ನ್ ಪಾಕಿಸ್ತಾನ್, ಕರೆಂಟ್ ಆಂಥ್ರೊಪಾಲಜಿ, 26 – 1985

ಲಾಲ್, ಬಿ.ಬಿ.; ಎಕ್ಸ್‌ಕವೇಷನ್ ಅಟ್ ಹಸ್ತಿನಾಪುರ ಅಂಡ್ ಅದರ್ ಎಕ್ಸ್‌ಪ್ಲೋರೇಶನ್ಸ್ ಇನ್ ದ ಅಪ್ಪರ್ ಗಂಗಾ ಅಂಡ್ ದ ಸಟ್ಲೇಜ್ ಬೇಸಿನ್ಸ್ 1950–52, ಏನ್ಷಿಯಂಟ್ ಇಂಡಿಯ ನಂ. 10–11, 1954–55

ಲಾಲ್, ಬಿ.ಬಿ.; ಫರ್ದರ್ ಕಾಪರ್ ಹೋರ್ಡ್ಸ್ ಫ್ರಮ್ ದಿ ಗ್ಯಾಂಜೆಟಿಕ್ ಬೇಸಿನ್ ಅಂಡ್ ಎ ರಿವ್ಯೂ ಆಫ್ ದಿ ಪ್ರಾಬ್ಲಮ್, ಏನ್ಷಿಯಂಟ್ ಇಂಡಿಯ 7, 1951

ಲಾಲ್, ಬಿ.ಬಿ.; ಪೇಲಿಯೋಲಿಥಿಕ್ ಫ್ರಂ ಬಿಯಾಸ್ ಅಂಡ್ ಬನಗಂಗಾ ವ್ಯಾಲಿ, ಏನ್ಷಿಯಂಟ್ ಇಂಡಿಯ, 12, 1956

ಲಾಲ್, ಬಿ.ಬಿ.; ದಿ ಗಂಗಾ–ಬಿಯಾಸ್ ಪೆಲಿಯೋಲಿಥಿಕ್ ಇಂಡಸ್ಟ್ರಿ: ಎ ಲುಕ್–ಬ್ಯಾಕ್, ಪುರಾತತ್ತ್ವ, 11, 1979–80

ವರ್ಮ, ಆರ್.ಕೆ.; ದಿ ಮೆಸೋಲಿಥಿಕ್ ಕಲ್ಚರ್ಸ್ ಆಫ್ ಇಂಡಿಯ, ಪುರಾತತ್ತ್ವ 13 ಮತ್ತು 14, 1981–83

ವರ್ಮ, ಆರ್.ಕೆ.; ಸಬ್ಸಿಸ್ಟೆನ್ಸ್ ಎಕಾನಮಿ ಆಫ್ ದಿ ಮೆಸೋಲಿಥಿಕ್ ಫೋಕ್ ಆಸ್ ರಿಫ್ಲೆಕ್ಟೆಡ್ ಇನ್ ದಿ ರಾಕ್ ಪೇಂಟಿಂಗ್ ಆಫ್ ದಿ ವಿಂಧ್ಯನ್ ರೀಜನ್, ಕಲೋಕ್ವಿಯಂ 33, ಬಯೋ ಆರ್ಕಿಯಾಲಜಿ ಆಫ್ ಮೆಸೋಲಿಥಿಕ್ ಇಂಡಿಯ, ಇಂಟರ್ ನ್ಯಾಷನಲ್ ಯೂನಿಯನ್ ಆಫ್ ಪ್ರಿಹಿಸ್ಟಾರಿಕ್ ಅಂಡ್ ಪ್ರೋಟೋ ಹಿಸ್ಟಾರಿಕ್ ಸೈನ್ಸ್ ಕಾಂಗ್ರೆಸ್, ಫೋರಿ, ಇಟಲಿ, 1996

ವಸಂತ ಶೆಟ್ಟಿ, ಬಿ.; ದಕ್ಷಿಣ ಕನ್ನಡದ ಪ್ರಾಗಿತಿಹಾಸ, ಸಂಶೋಧನೆ: (ಡಾ. ಚಿದಾನಂದಮೂರ್ತಿ ಗೌರವ ಸಂಪುಟ), ಬೆಂಗಳೂರು, 1991

ವಾಕಣಕರ್, ವಿ.ಎಸ್.; ಭೀಂಬೆಟ್ಕ; ದಿ ಪ್ರಿ ಹಿಸ್ಟಾರಿಕ್ ಪ್ಯಾರಡೈಸ್, ಪ್ರಾಚ್ಯಪ್ರತಿಭ, ಸಂಪುಟ 3, 1975

ವ್ಯಾನ್ ರಿಯಟ್ ಲೋವೆ, ಸಿ.; ದಿ ವಾಲ್ ರಿವರ್ ಕ್ರೊನಾಲಜಿ ಎನ್ ಅಪ್ ಟು ಡೇಟ್ ಸಮ್ಮರಿ, ಸೌತ್ ಆಫ್ರಿಕನ್ ಆರ್ಕಿಯಲಾಜಿಕಲ್ ಬುಲೆಟಿನ್, 1952

ವೆಂಕಟೇಶಯ್ಯ, ಎಸ್.ವಿ. ಮತ್ತಿತರರು.; ಎ ನ್ಯೂ ಕಿಂಗ್ ಆಫ್ ಮಹಾರಠಿಸ್ ಫ್ರಮ್ ಮಲಪ್ರಭಾ ವ್ಯಾಲಿ ಆಫ್ ಕೃಷ್ಣಾ ಬೇಸಿನ್, ಕೃಷ್ಣಶರ್ಮ ವಾಲ್ಯೂಮ್, ಗೌರ್ನಮೆಂಟ್ ಆಫ್ ಆಂಧ್ರಪ್ರದೇಶ, ಹೈದರಾಬಾದ್ 2004

ವೋರಾ, ಕೆ.ಎಚ್.; ಎ ನೋಟ್ ಆನ್ ಜಿಯೋಫಿಸಿಕಲ್ ಎಕ್ಸ್‌ಪ್ಲೋರೇಶನ್ಸ್ ಫಾರ್ ಮೆರಿನ್ ಆರ್ಕಿಯಾಲಜಿ ಆಫ್ ತಮಿಳುನಾಡು ಕೋಸ್ಟ್, ಇಂಡಿಯ, ಸಂಪುಟ–16, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ನಾಟಿಕಲ್ ಆರ್ಕಿಯಾಲಜಿ, 1982

ಶರ್ಮ, ಎ.ಕೆ.; ಎಕ್ಸ್‌ಕವೇಶನ್ ಅಟ್ ಗುಫ್‌ಕ್ರಾಲ್ 1981 ಪುರಾತತ್ತ್ವ 11, 1979–80

ಶರ್ಮ, ಜಿ.ಆರ್.; ಸ್ಟೋನ್ ಏಜ್ ಇನ್ ದಿ ವಿಂಧ್ಯಾಸ್ ಅಂಡ್ ದಿ ಗಂಗಾವ್ಯಾಲಿ. ರೇಡಿಯೋಕಾರ್ಬನ್ ಅಂಡ್ ಇಂಡಿಯನ್ ಆರ್ಕಿಯಾಲಜಿ, ಟಾಟ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಮುಂಬೈ, 1973

ಶರ್ಮ, ವೈ.ಡಿ.; ಎಕ್ಸ್‌ಪ್ಲೋರೇಷನ್ ಆಫ್ ಹಿಸ್ಟಾರಿಕಲ್ ಸೈಟ್ಸ್, ಏನ್ಷಿಯಂಟ್ ಇಂಡಿಯ, ಭಾ.ಪು.ಸ.ಇ. ನಂ. 9, 1953

ಶಿಂಧೆ, ವಿ.ಎಸ್.; ಹ್ಯೂಮನ್ ರೆಸ್ಪಾನ್ಸ್ ಟು ಹಾಲೋಸಿನ್ ಕ್ಲೈಮೇಟ್ ಚೇಂಜಸ್, ಎ ಕೇಸ್ ಸ್ಟಡಿ ಆಫ್ ವೆಸ್ಟರ್ನ್ ಇಂಡಿಯ ಬಿಟ್ವೀನ್ 5 ಅಂಡ್ 3 ಮಿಲೆನಿಯ. ಬಿ.ಸಿ., ಮಾನ್‌ಸೂನ್ ಅಂಡ್ ಸಿವಿಲೈಸೇಶನ್ (ಸಂ. ಯೊಶಿನೊರಿ ಯಸುದ ಮತ್ತು ವಸಂತ್ ಶಿಂಧೆ), ರೋಲಿ ಬುಕ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2004

ಶಿವಕುಮಾರ್, ಎಸ್. ಮತ್ತು ಇತರರು.; ಕರೆಂಟ್ ಟ್ರೆಂಡ್ಸ್ ಇನ್ ಏನ್ಷಿಯಂಟ್ ಡಿ.ಎನ್.ಎ ಸ್ಟಡೀಸ್, ಕರೆಂಟ್ ಸೈನ್ಸ್ 76, 1999

ಶಿವತಾರಕ್ ಕೆ.ಬಿ.; ತುಮಕೂರು ಜಿಲ್ಲೆಯ ಪುರಾತತ್ತ್ವ ಕುರುಹುಗಳು – ಒಂದು ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ 1999

ಶುಭ್ರ ಪ್ರಾಮಾಣಿಕ್; ಎಕ್ಸ್‌ಕವೇಶನ್ ಅಟ್ ಜುನಿಕುರಣ್ ಎ ಪ್ರಿಲಿಮಿನರಿ ರಿಪೋರ್ಟ್, ಪುರಾತತ್ತ್ವ 2004

ಶಿಲಾ ತ್ರಿಪಾಠಿ ಮತ್ತಿತರರು.; ಮೆರಿನ್ ಆರ್ಕಿಯಲಾಜಿಕಲ್ ಎಕ್ಸ್‌ಪ್ಲೋರೇಶನ್ಸ್ ಇನ್ ದಿ ಕಾವೇರಿ ಪೂಂಪಟ್ಟಿಣಂ ರೀಜನ್; ಫ್ರೆಶ್ ಲೈಟ್ ಆನ್ ದಿ ಸ್ಟ್ರಕ್ಚರಲ್ ರಿಮೇನ್ಸ್, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, ಸಂಪುಟ 21, 1996

ಶಿಲಾ ತ್ರಿಪಾಠಿ ಮತ್ತಿತರರು.; ಮೆರಿನ್ ಆರ್ಕಿಯಾಲಜಿ ಇನ್ ಇಂಡಿಯ, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, ಸಂಪುಟ 29. 2004

ಶೋಭಾ, ವಿ.; ಅರ್ಲಿ ಹಿಸ್ಟಾರಿಕ್ ಆರ್ಕಿಯಾಲಜಿ ಆಫ್ ದಿ ಅಪ್ಪರ್ ಕಾವೇರಿ ಬೇಸಿನ್ ವಿತ್ ಸ್ಪೆಷಲ್ ರೆಫರೆನ್ಸ್ ಟು ದಿ ಡಿಸ್ಟ್ರಿಕ್ಟ್ ಆಫ್ ಮೈಸೂರು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪುರಾತತ್ತ್ವಶಾಸ್ತ್ರ ವಿಭಾಗ, ಡೆಕ್ಕನ್ ಕಾಲೇಜ್, ಪುಣೆ

ಸಂಗೋಡೆ, ಎಸ್.; ಮ್ಯಾಗ್ನೆಟೋಸ್ಟ್ರಾಟಿಗ್ರಫಿ ಆಫ್ ಕ್ವಾಟರ್ನರಿ ಸೆಡಿಮೆಂಟ್ಸ್ ಅಸೋಸಿಯೇಟೆಡ್ ವಿತ್ ಸಮ್ ತೂಫ ಆಶ್ ಅಂಡ್ ಅಶೂಲಿಯನ್ ಆರ್ಟಿಫ್ಯಾಕ್ಟ್ ಬೇರಿಂಗ್ ಲೊಕಾಲಿಟಿಸ್ ಇನ್ ವೆಸ್ಟರ್ನ್ ಅಂಡ್ ಸೆಂಟ್ರಲ್ ಇಂಡಿಯ, ಗೊಂಡ್ವಾನ ಮ್ಯಾಗ್ಸೈನ್, 2007

ಸಂಪತ್ ಐಯ್ಯಂಗಾರ್, ಪಿ.; ಎ ಪೇಲಿಯೋಲಿಥಿಕ್ ಸೆಟ್ಲ್‌ಮೆಂಟ್ ಅಂಡ್ ಫ್ಯಾಕ್ಟರಿ ಇನ್ ಮೈಸೂರು ಸ್ಟೇಟ್, (ಇಂಡಿಯನ್ ಸೈನ್ಸ್ ಕಾಂಗ್ರೆಸ್) ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್, ಕಲ್ಕತ್ತ, 1924

ಸಾಲೆತೊರೆ, ಬಿ.ಎ.; ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪೈರ್ (ಫ್ರಮ್ 1346 ಇಂದ 1646 ಎ.ಡಿ) ಸಂ.1 ಮತ್ತು 2, ಲಿಯೊನೆಟ್ ದ್ರಾವಿಡ್ ಏಕನಾಥ, ಚೆನ್ನೈ 1933 ಮತ್ತು 1944

ಸಿಂಗ್, ಯು.ಎಸ್.; ಎಕ್ಸ್‌ಕವೇಷನ್ಸ್ ಅಟ್ ಏರಣ್, ಜರ್ನಲ್ ಆಫ್ ಎಂ.ಪಿ. ಇತಿಹಾಸ ಪರಿಷತ್ ನಂ.4. 1962.

ಸಿನ್ಹಾ, ಬಿ.ಕೆ.; ಎಕ್ಸ್‌ಕವೇಷನ್ಸ್ ಅಟ್ ಗೋಲ್‌ಬಾಯ್, ಪುರಿ, ಪುರಾತತ್ತ್ವ 23. 1992–93,

ಸುಂದರ, ಅ.; ವಾರ್ಷಿಕ ವರದಿಗಳು (1885–1905), ಕರ್ನಾಟಕ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ಇಲಾಖೆ, ಕರ್ನಾಟಕ ಸರ್ಕಾರ, ಮೈಸೂರು – 1989

ಸುಂದರ, ಎ.; ಪ್ರಿಹಿಸ್ಟಾರಿಕ್ ಅಂಡ್ ಪ್ರೋಟೊ ಹಿಸ್ಟಾರಿಕ್ ಕಲ್ಚರ್ಸ್ ಆಫ್ ದಕ್ಷಿಣ ಕನ್ನಡ, ಪರ್ಸ್‌ಪೆಕ್ಟಿವ್ಸ್ ಆನ್ ದಕ್ಷಿಣ ಕನ್ನಡ ಅಂಡ್ ಕೊಡಗು, ಡೆಸೀನಿಯಲ್ ಸಂಪುಟ. ಮಂಗಳೂರು ಯೂನಿವರ್ಸಿಟಿ 1991

ಸುಂದರ, ಎ.; ಮಳಖೇಡ್, ದಿ ರಾಷ್ಟ್ರಕೂಟ ಕ್ಯಾಪಿಟಲ್: ಇಟ್ಸ್ ಪ್ರಿ ಹಿಸ್ಟರಿ, ಬಿ.ಆರ್.ಗೋಪಾಲ್ ಕಮೆಮೊರೇಷನ್ ವಾಲ್ಯೂಮ್, ಧಾರವಾಡ, 1998

ಸುಂದರೇಶ್ ಮತ್ತಿತರರು; ಅಂಡರ್‌ವಾಟರ್ ಇನ್‌ವೆಸ್ಟಿಗೇಶನ್ಸ್ ಆಫ್ ಮಹಾಬಲಿಪುರಂ, ತಮಿಳ್‌ನಾಡು, ಇಂಡಿಯ, ಕರೆಂಟ್ ಸೈನ್ಸ್ –86, 2004

ಸೆಮವ್, ಎಸ್.; ದಿ ವರ್ಲ್ಡ್ಸ್ ಓಲ್ಡೆಸ್ಟ್ ಆರ್ಟಿಫ್ಯಾಕ್ಟ್ಸ್ ಇನ್ ಗೋನ, ಇಥಿಯೋಪಿಯ: ದೇರ್ ಇಂಪ್ಲಿಕೇಶನ್ಸ್ ಫಾರ್ ಅಂಡರ್‌ಸ್ಟ್ಯಾಂಡಿಂಗ್ ಸ್ಟೋನ್ ಟೆಕ್ನಾಲಜಿ ಅಂಡ್ ಪ್ಯಾಟರ್ನ್ ಆಫ್ ಹ್ಯೂಮನ್ ಎವಲೂಶನ್ ಬಿಟ್ವೀನ್ 2.6–2.5 ಮಿಲಿಯನ್ ಇಯರ್ ಎಗೋ, ಜರ್ನಲ್ ಆಫ್ ಆರ್ಕಿಯಲಾಜಿಕಲ್ ಸೈನ್ಸ್ 27, 2000

ಸೋನಾವಣೆ, ವಿ.ಎಚ್. ಮತ್ತು ಇತರರು.; ಎಕ್ಸ್‌ಕವೇಷನ್ಸ್ ಅಟ್ ಬಗಸ್ರ: ಎ ಪ್ರಿಲಿಮಿನರಿ ರಿಪೋರ್ಟ್, ಮ್ಯಾನ್ ಅಂಡ್ ಎನ್‌ವಿರಾನ್‌ಮೆಂಟ್, 1996–ಸಂಪುಟ 28, ಭಾಗ–2, 2003

ಹಲಿಮ್, ಎಂ.ಎ.; ಎಕ್ಸ್‌ಕವೇಷನ್ಸ್ ಅಟ್ ಸರ್ರೈ ಕೋಲಾ, ಪಾಕಿಸ್ತಾನ್ ಆರ್ಕಿಯಾಲಜಿ, 7 ಮತ್ತು 8, 1970

ಹ್ಯೂ ಯಾಮಿ ಮತ್ತಿತರರು.; ಮಿಡ್ ಪ್ಲಿಸ್ಟೋಸೀನ್ ಅಶೂಲಿಯನ್ ಲೈಕ್ ಸ್ಟೋನ್ ಟೆಕ್ನಾಲಜಿ ಆಫ್ ದಿ ಬೋಸ್ ಬೇಸಿನ್, ಸೌತ್ ಚೈನ, ಸೈನ್ಸ್ 287,  2000

ಹೇಗ್ಲ್‌ಬರ್ಗ್, ಇ.; ಏನ್ಷಿಯಂಟ್ ಡಿ.ಎನ್.ಎ ಸ್ಟಡೀಸ್, ಎವಲೂಷನ್ ಆಂಥ್ರೊಪಾಲಜಿ, 1993–94

## ಕೃತಜ್ಞತೆಗಳು
## ಛಾಯಾಚಿತ್ರ ಮತ್ತು ರೇಖಾಚಿತ್ರಗಳನ್ನು ಒದಗಿಸಿದವರು

ಅರುಣಿ, ಎಸ್.ಕೆ.
ಸಹಾಯಕ ನಿರ್ದೇಶಕ
ಐ.ಸಿ.ಎಚ್.ಆರ್. ದಕ್ಷಿಣ ಪ್ರಾದೇಶಿಕ ಕೇಂದ್ರ
ಮೈಸೂರು ಬ್ಯಾಂಕ್ ಸರ್ಕಲ್, ಬೆಂಗಳೂರು

ಅಮರೇಶ ಯತಗಲ್
ಅಧ್ಯಾಪಕ, ಸರ್ಕಾರಿ ಪದವಿಪೂರ್ವ  ಕಾಲೇಜು
ಲಿಂಗಸೂರು – 584122

ಚಂದ್ರಶೇಖರ ಗುಪ್ತ
ಪ್ರಾಧ್ಯಾಪಕ (ವಿ)
546/ಎ, ನಂದಭವನ್, ನವಿಸುಕ್ರವರಿ
ನಾಗಪುರ – 440032

ದೇಸಾಯಿ, ಎಚ್.ಆರ್.
ಪುರಾತತ್ತ್ವ ಉಪ ಅಧೀಕ್ಷಕ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ, ಔರಂಗಾಬಾದ್ ವೃತ್ತ,
ಬೀಬಿ–ಕ–ಮಕ್ಬರ, ಔರಂಗಾಬಾದ್ – 431004

ಗುರುಬಾಗಿ
ಸಹಾಯಕ ಪುರಾತತ್ತ್ವಜ್ಞ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಗೋವ ವೃತ್ತ, ಪಣಜಿ – 403001

ಸರ್ವಮಂಗಳ, ಜಿ.
ಅಧ್ಯಾಪಕಿ, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ – 577451

# ಕೃತಜ್ಞತೆಗಳು

ಕಲ್ಲಾಪುರ, ಜಿ.ವಿ.
ಕೆಳದಿ ವಸ್ತುಸಂಗ್ರಹಾಲಯ, ಕೆಳದಿ
ಶಿವಮೊಗ್ಗ ಜಿಲ್ಲೆ – 577401

ಜಯದೇವಪ್ಪ ಜೈನಕೇರಿ
87, ಶಾಂತಲ, ಕುವೆಂಪು ರಸ್ತೆ
ಶಿವಮೊಗ್ಗ – 577201

ಭಟ್‌ಸೂರಿ, ಕೆ.ಜಿ.
ಶಾಸನತಜ್ಞ, ಶಾಸನ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
ಹಂಪಿ – 583276

ಖಂಡೋಬರಾವ್, ಎಚ್.
ಸಹನ, ಗಾಂಧಿನಗರ ಮುಖ್ಯರಸ್ತೆ
ಶಿವಮೊಗ್ಗ

ಲಕ್ಷ್ಮಣಸಿಂಗ್, ಆರ್. ರಾಥೋಡ್
ಅಧ್ಯಾಪಕ, ಅನ್ವಯಕಲೆ ವಿಭಾಗ
ಚಾಮರಾಜೇಂದ್ರ ದೃಶ್ಯಕಲಾ ಕೇಂದ್ರ ಅಕಾಡೆಮಿ
ಮೈಸೂರು – 570001

ರಾವ್, ಎಲ್. ಎಸ್. (ದಿ)
ಪುರಾತತ್ತ್ವ ಅಧೀಕ್ಷಕ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಓಲ್ಡ್ ಹೈಕೋರ್ಟ್ ಬಿಲ್ಡಿಂಗ್ಸ್
ನಾಗಪುರ – 440001

ವಿಶ್ವೇಶ್ವರ, ಎಂ. ವಿ.
ಪುರಾತತ್ತ್ವ ಸರ್ವೇಕ್ಷಣ ಅಧಿಕಾರಿ
ಪುರಾತತ್ತ್ವ ವಸ್ತುಸಂಗ್ರಹಾಲಯ
ಗೋಳಗುಮ್ಮಟ ಆವರಣ, ಬಿಜಾಪುರ

ನಾಗನೂರು, ಎ. ವಿ.
ಪುರಾತತ್ತ್ವ ಸರ್ವೇಕ್ಷಣ ಇಲಾಖೆ
(ಧಾರವಾಡ ವೃತ್ತ), ಆರ್.ಎಸ್. ಶೆಟ್ಟಿ
ಕ್ರೀಡಾಂಗಣ ಹತ್ತಿರ, ಧಾರವಾಡ – 580001

ಕುಲಕರ್ಣಿ, ಆರ್. ಎಚ್.
ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ
ಬೆಂಗಳೂರು – 560001

ಷಡಕ್ಷರಯ್ಯ, ಆರ್. ಎಂ.
ಪ್ರಾಧ್ಯಾಪಕ, ಕನ್ನಡ ಸಂಶೋಧನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ – 580003

ರೇಖಾರಾವ್
13, ಸುರೇಖ, ಎ.ಇ.ಸಿ.ಎಸ್. 2ನೆಯ ಹಂತ
1ನೆಯ ಅಡ್ಡರಸ್ತೆ, ಇಸ್ರೋ ಮುಖ್ಯ ಕಚೇರಿ ಹತ್ತಿರ
ಸಂಜಯನಗರ, ಬೆಂಗಳೂರು – 560094

ಶರಣಬಸಪ್ಪ ಕೋಲ್ಕರ್
ಪ್ರಾಧ್ಯಾಪಕ, ಕೆ.ಎಸ್.ಸಿ. ಕಾಲೇಜು
ಗಂಗಾವತಿ – 583227

ಶೋಭಾ, ಟಿ.
140, 2ನೆಯ ಮುಖ್ಯರಸ್ತೆ
ಶೇಷಾದ್ರಿಪುರಂ, ಬೆಂಗಳೂರು – 560020

ಸುಮತೀಂದ್ರ ನಾಡಿಗ್
ಪತ್ರಿಕಾ ವರದಿಗಾರ
ಸಂತೆಬೆನ್ನೂರು – 577552

ವಾಸುದೇವ ಬಡಿಗೇರ
ಪ್ರವಾಚಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ – 583276

ವೆಂಕಟೇಶಯ್ಯ, ಎಸ್. ವಿ.
ಪುರಾತತ್ತ್ವಜ್ಞ ಅಧೀಕ್ಷಕ
ಭಾರತೀಯ ಸರ್ವೇಕ್ಷಣ ಇಲಾಖೆ
ಭೂಪಾಲ್ ವೃತ್ತ, ಜಿ. ಟಿ. ಬಿ. ಕಾಂಪ್ಲೆಕ್ಸ್
ಬಿ–ಬ್ಲಾಕ್, ನ್ಯೂಮಾರ್ಕೆಟ್, ಟಿ. ಟಿ. ನಗರ
ಭೂಪಾಲ್ – 462003

ಲಲಿತಾ, ಎನ್.
614, ಎಂ. ಐ. ಜಿ.
ಬಾಲಗಣೇಶ ದೇವಾಲಯದ ಹತ್ತಿರ
ಶಾರದಾದೇವಿನಗರ, 3ನೆಯ ಹಂತ
ಮೈಸೂರು – 570022

ನಿರ್ದೇಶಕರು
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಸರ್ಚ್ ಇನ್
ನ್ಯೂಮಿಸ್ ಮ್ಯಾಟಿಕ್ ಸ್ಟಡೀಸ್, ಅಂಜನೇರಿ
ನಾಸಿಕ್, ಮಹಾರಾಷ್ಟ್ರ

ಕೃಷ್ಣದೇವ್
ಟೆಂಪಲ್ಸ್ ಆಫ್ ಇಂಡಿಯ–ಸಂಪುಟ 2
ಆರ್ಯನ್ ಬುಕ್ಸ್ ಇಂಟರ್‌ನ್ಯಾಷನಲ್, ನವದೆಹಲಿ

ಅಪರ್ಣ, ಕೆ. ಎಸ್.
1676, 5ನೆಯ ಅಡ್ಡರಸ್ತೆ
10ನೆಯ ಮುಖ್ಯರಸ್ತೆ, ಬನಶಂಕರಿ 2ನೆಯ ಬ್ಲಾಕ್
ಮೊದಲನೆಯ ಹಂತ, ಬೆಂಗಳೂರು – 560050

ವಸಂತಲಕ್ಷ್ಮಿ, ಕೆ.
1676, 5ನೆಯ ಅಡ್ಡರಸ್ತೆ
10ನೆಯ ಮುಖ್ಯರಸ್ತೆ, ಬನಶಂಕರಿ 2ನೆಯ ಬ್ಲಾಕ್
ಮೊದಲನೆಯ ಹಂತ, ಬೆಂಗಳೂರು – 560050

ಮಾರ್ಗಬಂಧು
16, ವೀನಸ್ ಅಪಾರ್ಟ್‌ಮೆಂಟ್ಸ್
ನ್ಯೂ ರೋಹ್ತಕ್ ರೋಡ್
ಸುಂದರ ವಿಹಾರ್, ನವದೆಹಲಿ

ಎ.ಎ. ಅಪ್ಪಾದೊರೈ, ಎ.
ನಿರ್ದೇಶಕ, ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ್ ಅಫೇರ್ಸ್, ನವದೆಹಲಿ

ಎ.ಎ. ಅಶ್ವಿನಿ ಅಗ್ರವಾಲ್
593, ಸೆಕ್ಟರ್ 18ಬಿ
ಚಂಡೀಗಡ, ಪಂಜಾಬ್ 160014

ಎ.ಎ.ಸಿ. ಅಲ್ಲಯ್ಯನವರಮಠ, ಎ.ಸಿ.
ಶ್ರೀ ಎನ್. ಎ. ಮುತ್ತಣ್ಣ ಸ್ಮಾರಕ ಪೊಲೀಸ್
ಮಕ್ಕಳ ವಸತಿಶಾಲೆ, ಪಿ.ಎಚ್. ಕ್ಯೂ
ಧಾರವಾಡ–580003

ಎ.ಬಿ.ಎಂ. ಮುಖರ್ಜಿ, ಎ.ಬಿ.
ಪ್ರವಾಚಕ, ಭೂಗೋಳವಿಜ್ಞಾನ ವಿಭಾಗ
ಪಂಜಾಬ್ ವಿಶ್ವವಿದ್ಯಾಲಯ, ಚಂಡೀಗಡ

ಎ.ಡಿ. ಅರುಣದಾಸ್
ಭೂಗೋಳವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

ಎ.ಡಿ.ಪಿ. ಪುಸಾಳ್ಕರ್, ಎ.ಡಿ. (ದಿ)
ಸಹಾಯಕ ನಿರ್ದೇಶಕ ಮತ್ತು ಮುಖ್ಯಸ್ಥ
ಪ್ರಾಚೀನ ಭಾರತೀಯ ಇತಿಹಾಸ ವಿಭಾಗ
ಭಾರತೀಯ ವಿದ್ಯಾಭವನ, ಹಂದೇರಿ, ಮುಂಬೈ

ಎ.ಎಚ್.ಎಸ್. ಅನಂತಾಚಾರ್, ಎಚ್.ಎಸ್.
709, ಕತ್ವಾಡಿಪುರ ಅಗ್ರಹಾರ
ಕೆ.ಆರ್.ಮೊಹಲ್ಲ, ಮೈಸೂರು

ಎ.ಕೆ. ಕುಮಾರಸ್ವಾಮಿ, ಎ.
ಪ್ರಾಧ್ಯಾಪಕ(ವಿ), ಭೂಗೋಳವಿಜ್ಞಾನ ವಿಭಾಗ
ಮಹಾರಾಣಿ ಮಹಿಳಾ ಕಲಾ ಕಾಲೇಜು,
ಮೈಸೂರು–570005

ಎ.ಕೆ.ಎಸ್. ಅಪರ್ಣ, ಕೆ.ಎಸ್.
c/o ಕೆ. ವಸಂತಲಕ್ಷ್ಮಿ
1676, 5ನೆಯ ಎ ಅಡ್ಡರಸ್ತೆ
10ನೆಯ ಮುಖ್ಯರಸ್ತೆ, ಬನಶಂಕರಿ 2ನೆಯ ಬ್ಲಾಕ್
ಮೊದಲನೆಯ ಹಂತ, ಬೆಂಗಳೂರು

ಎ.ಕೆ.ಎಸ್ಎಚ್ಎ. ಶಾಸ್ತ್ರಿ, ಎ.ಕೆ.
ಅಧ್ಯಾಪಕ, ಇತಿಹಾಸ ವಿಭಾಗ
ಕಲಾ ಮತ್ತು ವಿಜ್ಞಾನ ಕಾಲೇಜು
ಶಿರಸಿ (ಉತ್ತರ ಕನ್ನಡ)

ಎ.ಎಲ್.ಎಸ್. ಶಿವರುದ್ರಪ್ಪ, ಎ.ಎಲ್.
ಪ್ರವಾಚಕ, ತತ್ತ್ವಶಾಸ್ತ್ರ ವಿಭಾಗ,
ಮಾನಸಗಂಗೋತ್ರಿ, ಮೈಸೂರು–570006

ಎ.ಎಂ. ಮೈಲಾರರಾವ್, ಎ.(ದಿ)
ಮಾನವಿಕ ಸಂಪಾದಕ
ಕನ್ನಡ ವಿಶ್ವಕೋಶ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

ಎ.ಎಂ.ಎ. ಅಣ್ಣಿಗೇರಿ, ಎ.ಎಂ.(ದಿ)
ಪಠ್ಯಪುಸ್ತಕ ಪ್ರಕಾಶನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003

ಎ.ಎಂ.ಆರ್. ರಾಜಶೇಖರಯ್ಯ, ಎ.ಎಂ.
ಪ್ರವಾಚಕ, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ
ವಿಶ್ವವಿದ್ಯಾಲಯ, ಧಾರವಾಡ–580003

ಎ.ಎಂ.ಎಸ್. ಅನಿತ, ಎಂ.ಎಸ್.
ಎ. 01–03, ಎ.ಐ.ಐ.ಎಸ್.ಎಚ್. ಲೇಔಟ್
ಬೋಗಾದಿ 2ನೆಯ ಹಂತ, ಮೈಸೂರು

ಎ.ಎನ್. ಅಶ್ವತ್ಥನಾರಾಯಣ
ಪ್ರವಾಚಕ, ಇತಿಹಾಸ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

ಎ.ಎನ್.ಎಚ್. ಅಪ್ಪಣ್ಣ ನರಸಪ್ಪ ಹಂಜೆ
ಸಂಶೋಧನ ವಿದ್ಯಾರ್ಥಿ, ಪುರಾತತ್ತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003

ಎಆರ್. ಅರುಣರಾಜ್
ಪುರಾತತ್ತ್ವ ಉಪ ಅಧೀಕ್ಷಕ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
9, ಸೇಂಟ್ ಜಾರ್ಜ್ ಫೋರ್ಟ್, ಚೆನ್ನೈ – 600009

ಎ.ಎಸ್. ಅ. ಸುಂದರ
ಹಿಮಶೃಂಗಕೃಪ, ಶಾರದನಗರ, ಶೃಂಗೇರಿ – 577139

ಎ.ಎಸ್.ಕೆ. ಅರುಣಿ, ಎಸ್.ಕೆ.
ಸಹಾಯಕ ನಿರ್ದೇಶಕ
ಐ.ಸಿ.ಎಚ್.ಆರ್. ದಕ್ಷಿಣ ಪ್ರಾದೇಶಿಕ ಕೇಂದ್ರ
ಮೈಸೂರು ಬ್ಯಾಂಕ್ ಸರ್ಕಲ್, ಬೆಂಗಳೂರು

ಎ.ಎಸ್.ಎನ್. ಸತ್ಯನಾರಾಯಣ, ಎ.
ಸಹಾಯಕ ಅಧೀಕ್ಷಕ, ಮ್ಯೂಸಿಯಾಲಜಿಸ್ಟ್
ಪುರಾತತ್ತ್ವ ಸಂಗ್ರಹಾಲಯ, ಹಂಪಿ

ಎ.ಟಿ. ಆಲೋಕ್ ತ್ರಿಪಾಠಿ, ಭಾರತೀಯ ಪುರಾತತ್ತ್ವ
ಸರ್ವೇಕ್ಷಣ ಇಲಾಖೆ, ಮರೀನ್, ಆರ್ಕಿಯಾಲಜಿ
ಬ್ರಾಂಚ್, ಜನಪಥ್, ನವದೆಹಲಿ–110011

ಎ.ವಿ. ಅನುರಾಧ, ವಿ.
c\o ಎಂ.ಎಸ್. ಕೃಷ್ಣಮೂರ್ತಿ
2977/ಬಿ. ರಶ್ಮಿ, 5ನೆಯ ಮುಖ್ಯರಸ್ತೆ
ವಾಣಿವಿಲಾಸಪುರಂ, ಮೈಸೂರು

ಎ.ವಿ.ಎನ್. ನರಸಿಂಹಮೂರ್ತಿ, ಎ.ವಿ.
ಪ್ರಾಧ್ಯಾಪಕ(ವಿ)
ದೇವಗಿರಿ, ಗೋಕುಲಂ ಮುಖ್ಯರಸ್ತೆ
ಜಯಲಕ್ಷ್ಮೀಪುರಂ, ಮೈಸೂರು–570012

ಎ.ವಿ.ಎನ್ಎ. ನಾವಡ, ಎ.ವಿ.
ಪ್ರಾಧ್ಯಾಪಕ
ಕರ್ನಾಟಕ ತಿಯೊಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು–575001

ಎ.ವಿ.ವಿ. ವೆಂಕಟರತ್ನಂ, ಎ.ವಿ.(ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

ಎ.ವೈ. ಅಮರೇಶ ಯತಗಲ್
ಅಧ್ಯಾಪಕ, ಸರ್ಕಾರಿ ಪದವಿ ಪೂರ್ವ ಕಾಲೇಜು
ಲಿಂಗಸೂರು–584122

ಬಿ.ಸಿ.ಎಸ್. ಸುರೇಶ್, ಬಿ.ಸಿ.
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

ಬಿ.ಜಿ.ಎಸ್. ಸಿದ್ದಲಿಂಗಮ್ಮ, ಬಿ.ಜಿ.
ಸಂಶೋಧನ ವಿದ್ಯಾರ್ಥಿನಿ
ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
ಶಿವಮೊಗ್ಗ–577451

ಬಿ.ಎಚ್.ಎಸ್. ಶ್ರೀಧರ, ಬಿ.ಎಚ್. (ದಿ)
ಪ್ರಾಂಶುಪಾಲ, ಮಾರ್ಕೆಟ್‌ಯಾರ್ಡ್
ಶಿರಸಿ, (ಉತ್ತರ ಕನ್ನಡ)

# ಲೇಖಕ ಸೂಚಿ

**ಬಿ.ಕೆ.ಜಿ.** ಗುರುರಾಜರಾವ್, ಬಿ.ಕೆ.
ಪ್ರಾಧ್ಯಾಪಕ (ವಿ)
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಬಿ.ಕೆ.ಕೆ.** ಕೌಲದಿಂಬಿ, ಬಿ.ಕೆ.
ಮಧುರವಿಹಾರ, ನವಾಬಿರಸ್ತೆ
ಹಲ್‌ದ್ವನಿ, ನೈನಿತಾಲ್–203134

**.ಕೆ.ಎಂ.** ಬಾದ್ರಿ, ಕೆ.ಎಂ.
481, ಪರಿಮಳ, 29ನೆಯ ಅಡ್ಡರಸ್ತೆ
ಬಿ ಬ್ಲಾಕ್, 1ನೆಯ ಹಂತ
ಜೆ.ಪಿ. ನಗರ, ಮೈಸೂರು

**ಬಿ.ಎಂ.** ಮುದ್ದಾಚಾರಿ, ಬಿ.(ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಬಿ.ಎನ್.** ನರಸಿಂಹಯ್ಯ, ಬಿ.
ಎ3–ಸಾಯಿಚಂದ್ರ, ಅರ್ಧನಾರೀಶ್ವರ ದೇವಾಲಯ
ಸಮೀಪ, ಜೆ.ಕೆ. ಅಪಾರ್ಟ್‌ಮೆಂಟ್ಸ್, 39ನೆಯ ರಸ್ತೆ
ಪಡುವನಂಗಲ್ಲೂರು, ಚೆನ್ನೈ–600061

**ಬಿ.ಎನ್.ಎಸ್.** ಸರ್ವಮಂಗಳ, ಬಿ.ಎನ್.
ಸಂಶೋಧನ ವಿದ್ಯಾರ್ಥಿನಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಬಿ.ಪಿ.** ಭೋಜರಾಜ ಪಾಟೀಲ್
ಪ್ರಾಂಶುಪಾಲ (ವಿ)
ಹಂಸಬಾವಿ–581109
ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ

**ಬಿ.ಪಿ.ಐ.** ಇಂದಿರಾ, ಬಿ.ಪಿ.
221/ಎ, ಸಮೀರ
12ನೆಯ ಮುಖ್ಯರಸ್ತೆ, ಸರಸ್ವತಿಪುರಂ
ಮೈಸೂರು–570009

**ಬಿ.ಆರ್.ಜಿ.** ಗೋಪಾಲ್, ಬಿ.ಆರ್. (ದಿ)
ದಕ್ಷಿಣ ಭಾರತೀಯ ಅಧ್ಯಯನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

**ಬಿ.ಆರ್.ಎಂ.** ಮಣಿ, ಬಿ.ಆರ್.
ನಿರ್ದೇಶಕರು (ಪ್ರಕಟಣ ವಿಭಾಗ)
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಜನಪತ್ ನವದೆಹಲಿ–110011

**ಬಿ.ಆರ್.ಪಿ.** ಪ್ರಾಣೇಶರಾವ್, ಬಿ.ಆರ್. (ದಿ)
ಅಧ್ಯಾಪಕ, ಶಾರದಾವಿಲಾಸ ಕಾಲೇಜು
ಮೈಸೂರು

**ಬಿ.ಆರ್.ಎಸ್.** ಬಿಷ್ಟ್, ಆರ್.ಎಸ್.
ಅಡಿಷನಲ್ ಡೈರೆಕ್ಟರ್ ಜನರಲ್(ವಿ)
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
9/19, ಸೆಕ್ಟರ್ III, ರಾಜೇಂದ್ರನಗರ
ಶಾಹಿದಾಬಾದ್, ಗಜಿಯಾಬಾದ್–201005

**ಬಿ.ಆರ್.ವಿ.** ವಿಜಯೇಂದ್ರ, ಬಿ.ಆರ್.
ಭಾರತೀಯ ಮಾನವ ವಿಜ್ಞಾನ ಸರ್ವೇಕ್ಷಣ
ಮಾನವ ಭವನ, ಬೋಗಾದಿ, ಮೈಸೂರು

**ಬಿ.ಎಸ್.ಎ.** ಷೇಕ್ ಅಲಿ, ಬಿ.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಬಿ.ಎಸ್.ಎಚ್.** ಶಾಮಸುಂದರ, ಬಿ.
ಕನ್ನಡ ವಿಶ್ವಕೋಶ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

**ಬಿ.ಎಸ್.ಕೆ.** ಕೃಷ್ಣಸ್ವಾಮಿ ಅಯ್ಯಂಗಾರ್, ಬಿ.ಎಸ್.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಬಿ.ಎಸ್.ಎನ್.** ಸುಬ್ಬನರಸಿಂಹಶಾಸ್ತ್ರಿ
ಭಾಸ್ಕರ ಪಂತ್, 227, 5ನೆಯ ಅಡ್ಡರಸ್ತೆ
2ನೆಯ ಬ್ಲಾಕ್, ಜಯನಗರ, ಬೆಂಗಳೂರು

**ಬಿ.ಎಸ್.ಪಿ.** ಪಾಟೀಲ್, ಬಿ.ಎಸ್.
ಅಧ್ಯಾಪಕ, ಇತಿಹಾಸ ವಿಭಾಗ,
ಮಹಾರಾಜ ಕಾಲೇಜು, ಮೈಸೂರು–570005

**ಬಿ.ಎಸ್.ಆರ್.ಆರ್.** ರಾಮರಾವ್, ಬಿ.ಎಸ್.
ಪ್ರಜಾವಾಣಿ, ಮಹಾತ್ಮಗಾಂಧಿ ರಸ್ತೆ, ಮೈಸೂರು

**ಬಿ.ಎಸ್.ಎಸ್.** ಸೀತಾರಾಮಶಾಸ್ತ್ರಿ, ಬಿ.
ಪ್ರವಾಚಕ (ವಿ), ಗಣಿತವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಬಿ.ಟಿ.** ಬುದ್ಧರಕ್ಖಿತಥೇರ
ಅಧ್ಯಕ್ಷ, ಮಹಾಬೋಧಿ ಸೊಸೈಟಿ, ಗಾಂಧಿನಗರ
ಬೆಂಗಳೂರು

**ಬಿ.ವಿ.ಎಸ್.** ಸುಧಾಮಣಿ, ಬಿ.ವಿ.
299, 12ನೆಯ ಅಡ್ಡ ರಸ್ತೆ
ವಿಜಯನಗರ ರೈಲ್ವೆ ಬಡಾವಣೆ
ವಿಜಯನಗರ, ಮೈಸೂರು–570016

**ಸಿ.ಎ.ಜಿ.** ಗುರುದತ್ತ, ಸಿ.ಎ.
2734, 4ನೆಯ ಮುಖ್ಯ ರಸ್ತೆ, ವಿ.ವಿ.ಪುರಂ
ಮೈಸೂರು

**ಸಿ.ಬಿ.ಆರ್.** ರಾಮಚಂದ್ರ, ಸಿ.ಬಿ.
ಅಧ್ಯಾಪಕ, ಇತಿಹಾಸ ವಿಭಾಗ
ಮಹಾರಾಜ ಕಾಲೇಜು, ಮೈಸೂರು–570005

**ಸಿ.ಬಿ.ಟಿ.** ಚಂದ್ರಶೇಖರ, ಬಿ. ತಾಬೋಜಿ.
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಭಾರತ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–580003

**ಸಿ.ಜಿ.** ಚಂದ್ರಶೇಖರ ಗುಪ್ತ
ಪ್ರಾಧ್ಯಾಪಕ (ವಿ)
546/ಎ, ನಂದಭವನ್, ನವಿಸುಕ್ರವರಿ
ನಾಗಪುರ–440032

**ಸಿ.ಜಿ.ಪಿ.** ಪುರುಷೋತ್ತಮ, ಸಿ.ಜಿ.
ಪ್ರವಾಚಕ (ವಿ),
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಹಾರಾಜ ಕಾಲೇಜು, ಮೈಸೂರು–570005

**ಸಿ.ಜಿ.ಎಸ್.** ಗುರುಸಿದ್ದಯ್ಯ, ಸಿ.
ಅಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಸಿಎಚ್.ಪಿ.** ಛಾಯಾಪತಿ
ಕನ್ನಡ ಅಧ್ಯಾಪಕ
ಸೇಂಟ್ ಫಿಲೋಮಿನ ಕಾಲೇಜು, ಮೈಸೂರು

**ಸಿ.ಕೆ.** ಕೃಷ್ಣ, ಸಿ.
ಪುರಾತತ್ತ್ವ ವಿಭಾಗಾಧಿಕಾರಿ, ಟಿ.ಟಿ.ನಗರ
ಭೂಪಾಲ್, ಮಧ್ಯಪ್ರದೇಶ

**ಸಿ.ಕೆ.ಎಂ.** ಕೃಷ್ಣಮೂರ್ತಿ, ಸಿ.
1262, ಗಾನಸುಧಾ, 8ನೆಯ ಬಿ ಅಡ್ಡರಸ್ತೆ
1ನೆಯ 'ಇ' ಮುಖ್ಯರಸ್ತೆ, ಗಿರಿನಗರ, 2ನೆಯ
ಹಂತ, ಬೆಂಗಳೂರು–560085

**ಸಿ.ಕೆ.ಎನ್.** ನಾಗರಾಜರಾವ್, ಸಿ.ಕೆ.
649, 11ನೆಯ ಮುಖ್ಯರಸ್ತೆ, ಜಯನಗರ
5ನೆಯ ಬ್ಲಾಕ್, ಬೆಂಗಳೂರು

**ಸಿ.ಕೆ.ಆರ್.** ರೇಣುಕಾಚಾರ್ಯ, ಸಿ.ಕೆ.
ಪ್ರವಾಚಕ, ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಸಿ.ಕೆ.ವೈ.ಡಿ.** ದೀಕ್ಷಿತ್, ಸಿ.ಕೆ.ವೈ.
ಅಧ್ಯಾಪಕ, ಡಿ.ಆರ್.ಎಂ. ಕಾಲೇಜು, ದಾವಣಗೆರೆ

**ಸಿ.ಎಂ.** ಮಹದೇವ್, ಸಿ.
ಪುರಾತತ್ತ್ವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
ಹಂಪಿ–583276

**ಸಿ.ಎಂ.ಎನ್.** ಚೂಡಾಮಣಿ ನಂದಗೋಪಾಲ್
ಮುಖ್ಯಸ್ಥರು, ಸಾಂಸ್ಕೃತಿಕ ಅಧ್ಯಯನ ವಿಭಾಗ
ಎಂ.ಐ.ಸಿ.ಕ್ಯಾಂಪಸ್, ಮಾಧವ ನಗರ
ಮಣಿಪಾಲ್–576104

**ಸಿ.ಎನ್.ಸಿ.** ಚಂದ್ರಮೌಳಿ, ಎನ್.ಸಿ.
ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಪಾಂಡಿಚೇರಿ ವಿಶ್ವವಿದ್ಯಾಲಯ
ಪಾಂಡಿಚೇರಿ

**ಸಿ.ಪಿ.** ಚೆನ್ನಕ್ಕ ಪಾವಟೆ
ಪ್ರಾಧ್ಯಾಪಕಿ
ಡಾ.ಆರ್.ಸಿ ಹಿರೇಮಠ ಕನ್ನಡ ಅಧ್ಯಯನ ಕೇಂದ್ರ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003

**ಸಿ.ಪಿ.ಕೆ.** ಕೃಷ್ಣಕುಮಾರ್, ಸಿ.ಪಿ.
ಕನ್ನಡ ಪ್ರಾಧ್ಯಾಪಕ (ವಿ)
226/1, ಭಾರತಿ, 6ನೆಯ ಕ್ರಾಸ್, 4ನೆಯ
ಮುಖ್ಯರಸ್ತೆ, ವಿನಾಯಕನಗರ, ಮೈಸೂರು

**ಸಿ.ಆರ್.ಎ.** ರಾಮಾಚಾರಿ, ಸಿ.
ಪ್ರಾಧ್ಯಾಪಕ (ವಿ), ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಸಿ.ಆರ್.ಎಸ್.** ಚುಳಕಿ, ಆರ್.ಎಸ್.
ನಂ.27, ಕೆ.ಎಚ್.ಬಿ. ಕಾಲೋನಿ
ಸೋಲಾಪುರ ರಸ್ತೆ, ಬಿಜಾಪುರ

**ಸಿ.ಎಸ್.ವಿ.** ವಾಸುದೇವನ್, ಸಿ.ಎಸ್.
ಪುರಾತತ್ತ್ವಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ, ಹಂಪಿ–583276

**ಸಿ.ವಿ.ಆರ್.** ರಂಗಸ್ವಾಮಿ, ಸಿ.ವಿ.
ಇತಿಹಾಸ ವಿಭಾಗ, ಜೆ.ಟಿ.ಕಾಲೇಜು
ಇನಾಂದಾರ್ ಕಾಂಪೌಂಡ್, ಗದಗ

**ಡಿ.** ದಯಾಳನ್
ಪುರಾತತ್ತ್ವಜ್ಞ ಉಪ ಅಧೀಕ್ಷಕ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಆಗ್ರ ವೃತ್ತ, 22, ಮಾಲ್ ರಸ್ತೆ, ಆಗ್ರ–282001

**ಡಿಇ.ಕೆ.ಆರ್.** ದೇವರಕೊಂಡರೆಡ್ಡಿ.
C/o ಸ್ಮಿತಾ ರೆಡ್ಡಿ, ಅನುವಾದಕಿ
ಭಾಷಾಂತರ ನಿರ್ದೇಶನಾಲಯ, 3ನೆಯ ಮಹಡಿ
ಎಫ್ ಬ್ಲಾಕ್, ಕಾವೇರಿ ಭವನ
ಬೆಂಗಳೂರು–560009

**ಡಿ.ಎಚ್.ಕೆ.** ಕೂಪ್ಪರ್, ಡಿ.ಎಚ್.
ಕ್ಯೂರೇಟರ್, ಲೇಡಿ ವಿಲ್ಸನ್ ಮ್ಯೂಸಿಯಮ್
ಧರ್ಮಪುರ್, ಸೂರತ್ ಜಿಲ್ಲೆ, ಗುಜರಾತ್

**ಡಿ.ಎಚ್.ಆರ್.** ದೇಸಾಯಿ, ಎಚ್.ಆರ್.
ಉಪ ಅಧೀಕ್ಷಕ ಪುರಾತತ್ತ್ವಜ್ಞ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಔರಂಗಬಾದ್ ವೃತ್ತ, ಬೀಬಿ–ಕ–ಮಕ್ಬರ
ಔರಂಗಬಾದ್–431004, ಮಹಾರಾಷ್ಟ್ರ

**ಡಿ.ಕೆ.ಎನ್.** ದೀಕ್ಷಿತ್, ಕೆ.ಎನ್.
ಜನರಲ್ ಸೆಕ್ರೆಟರಿ, ಇಂಡಿಯನ್
ಆರ್ಕಿಯಲಾಜಿಕಲ್ ಸೊಸೈಟಿ, ಬಿ–17, ಕುತುಬ್
ಇನ್ಸ್‌ಟಿಟ್ಯೂಷನಲ್ ಏರಿಯ
ಸೌತ್ ಆಫ್ ಐ.ಐ.ಟಿ., ನವದೆಹಲಿ–110016

**ಡಿ.ಎಂ.ಜಿಒ.** ಮುತ್ತೇಗೌಡ, ಡಿ.
ಅಧ್ಯಾಪಕ, ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ
ಸಂಜೆ ಕಾಲೇಜು, ಮೈಸೂರು–570005

**ಡಿ.ಎಂ.ಕೆ.** ಧವಳಿಕರ್, ಎಂ.ಕೆ.
33, ಶ್ರೀವತ್ಸ ನವಕೇತನ ಸೊಸೈಟಿ
ಪುಣೆ–411029

**ಡಿ.ಎಂ.ಎಸ್.** ಸವಿತಾಕುಮಾರಿ, ಡಿ.ಎಂ.
ಸಂಶೋಧನ ವಿದ್ಯಾರ್ಥಿನಿ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಡಿ.ಎನ್.** ಧ್ರುವನಾರಾಯಣ
ಎಲ್.ವಿ.ಡಿ. ಕಾಲೇಜು, ರಾಯಚೂರು

**ಡಿ.ಆರ್.ಎ.ಎನ್.** ರಂಗನಾಥ್, ಡಿ.
ಅಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ, ಮಹಾರಾಣಿ
ಮಹಿಳಾ ಕಲಾ ಕಾಲೇಜು, ಮೈಸೂರು–570005

**ಡಿ.ಎಸ್.ಜಿ.** ಗುರುಬಸವಪ್ಪ, ಡಿ.ಎಸ್.
ನಿರ್ದೇಶಕ (ವಿ), ಸರ್ಕಾರಿ ಮುದ್ರಣಾಲಯ
ಬೆಂಗಳೂರು

**ಡಿ.ಎಸ್.ಜೆ.** ಜಯಪ್ಪಗೌಡ, ಡಿ.ಎಸ್.
57, 1ನೆಯ ಅಡ್ಡರಸ್ತೆ, ಟಿ.ಕೆ.ಬಡಾವಣೆ
4ನೆಯ ಹಂತ, ಮೈಸೂರು–570023

**ಡಿ.ಎಸ್ಆರ್.** ಸ್ಮಿತಾರೆಡ್ಡಿ, ಡಿ.
ಅನುವಾದಕಿ, ಭಾಷಾಂತರ ನಿರ್ದೇಶನಾಲಯ
3ನೆಯ ಮಹಡಿ, ಎಫ್ ಬ್ಲಾಕ್
ಕಾವೇರಿಭವನ, ಬೆಂಗಳೂರು–560009

**ಡಿ.ಎಸ್.ಎಸ್.** ಶಿವಪ್ಪ, ಡಿ.ಎಸ್. (ದಿ)
413, ಜಯನಗರ, 5ನೆಯ ಬ್ಲಾಕ್
ಬೆಂಗಳೂರು

**ಡಿ.ಟಿ.** ದಯಾನಂದ ಪಟೇಲ್, ಟಿ.
206, ದಿವ್ಯದೀಪಕ, 9ನೆಯ ಮುಖ್ಯ ರಸ್ತೆ
3ನೆಯ ಹಂತ, ಗೋಕುಲಂ, ಮೈಸೂರು–570002

**ಡಿ.ವಿ.ಡಬ್ಲ್ಯೂ.** ಡಿಸೋಜ ವೆಲೇರಿಯನ್ ವಿಲಿಯಂ
ಅಧ್ಯಾಪಕ, ಕನ್ನಡ ವಿಭಾಗ
ಸೇಂಟ್ ಫಿಲೋಮಿನ ಕಾಲೇಜು, ಮೈಸೂರು

**ಇ.ಎನ್.ಎಸ್.ಜೆ.** ಎಡ್ವರ್ಡ್ ನೊರೋನ್ಹಾ, ಎಸ್.ಜೆ.
ಪ್ರಾಧ್ಯಾಪಕ (ವಿ), ಕುವೆಂಪು ಕನ್ನಡ ಅಧ್ಯಯನ
ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–570006

**ಜಿ.ಎ.** ಅಶ್ವತ್ಥನಾರಾಯಣ, ಜಿ.
ಕನ್ನಡ ಅಧ್ಯಾಪಕ, ಸರ್ಕಾರಿ ಕಾಲೇಜು
ಮಂಡ್ಯ–571401

**ಜಿಬಿ.** ಗುರುಬಾಗಿ
ಸಹಾಯಕ ಪುರಾತತ್ತ್ವಜ್ಞ, ಭಾರತೀಯ
ಪುರಾತತ್ತ್ವ ಸರ್ವೇಕ್ಷಣ ಇಲಾಖೆ, ಗೋವ ವೃತ್ತ
ಪಣಜಿ–403001, ಗೋವ

**ಜಿ.ಸಿ.ಆರ್.** ಗೋವಿಂದರಾಜು, ಸಿ.ಆರ್.
ಪ್ರಾಧ್ಯಾಪಕ, ಇತಿಹಾಸ ವಿಭಾಗ, ಕನ್ನಡ
ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ–583276

**ಜಿ.ಡಿ.** ಗಾಯಿತ್ರಿದೇವಿ
ಗಣಿತವಿಜ್ಞಾನ ವಿಭಾಗ, ಗಾರ್ಡನ್ ಸಿಟಿ ಕಾಲೇಜು
16ನೆಯ ಕೆ.ಎಂ. ಹಳೇ ಮದ್ರಾಸ್‌ರಸ್ತೆ
ಬೆಂಗಳೂರು–560049

**ಜಿ.ಡಿಐ.** ಗ್ರೆಗರಿ, ಡಿಸೋಜ
ಪ್ರವಾಚಕ, ಕ್ರೈಸ್ತತತ್ತ್ವ, ಪುಷ್ಪಾಶ್ರಮ
ಎನ್.ಆರ್.ಮೊಹಲ್ಲ, ಮೈಸೂರು

**ಜಿಜಿ.ಎಸ್.** ಗಣಪತಿಗೌಡ, ಎಸ್.
ಅಧ್ಯಾಪಕ, ಇತಿಹಾಸ ವಿಭಾಗ
ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ಕಾಲೇಜು
ಮಡಿಕೇರಿ–571201

**ಜಿ.ಎಚ್.** ಹನುಮಂತರಾವ್, ಜಿ.
ಪ್ರವಾಚಕ (ವಿ), ಅಧ್ಯಕ್ಷ, ತತ್ತ್ವಶಾಸ್ತ್ರ, ಉಪಸಮಿತಿ
ಕನ್ನಡ ವಿಶ್ವಕೋಶ, ಮೈಸೂರು–570006

**ಜಿ.ಎಚ್.ಆರ್.** ರಾಮರಾವ್, ಜಿ.ಎಚ್. (ದಿ)
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

**ಜಿ.ಎಚ್.ಎಸ್.** ಗೋಪಾಲರಾವ್,ಎಚ್.ಎಸ್.
ಸ್ವಸ್ಥಿಶ್ರೀಸ್ಕಂದ, ಅರಶಿನಕುಂಟೆ–562123
ಬೆಂಗಳೂರು ಜಿಲ್ಲೆ

**ಜಿ.ಎಲ್.** ಲಕ್ಷ್ಮಮ್ಮ, ಜಿ.
ಪ್ರಾಧ್ಯಾಪಕಿ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಜಿ.ಎಂ.** ಮರುಳ ಸಿದ್ದಯ್ಯ, ಜಿ. (ದಿ)
ನಿರ್ದೇಶಕ, ಪ್ರಾಚ್ಯವಿದ್ಯಾಸಂಶೋಧನಾಲಯ
ಮೈಸೂರು

**ಜಿ.ಎಂ.ಎಸ್.** ಶ್ರೀನಿವಾಸಯ್ಯ, ಜಿ.ಎಂ.
ಪ್ರವಾಚಕ, ಇತಿಹಾಸ ವಿಭಾಗ, ಸರ್ಕಾರಿ ಕಾಲೇಜು
ಹಾಸನ

**ಜಿ.ಎನ್.** ನಂಜುಂಡಯ್ಯ, ಜಿ.
23, ನಂದಿದುರ್ಗ ರಸ್ತೆ, ಬೆಂಗಳೂರು

**ಜಿ.ಎನ್.ಕೆ.** ಕುರ್ಡಿ, ಜಿ.ಎನ್. (ದಿ)
ಅಡ್ವೊಕೇಟ್, 67/ಬಿ, ಸರಸ್ವತಿಪುರಂ
ಹೊಸಬಡಾವಣೆ, ಮೈಸೂರು – 570009

**ಜಿ.ಎನ್.ಎಸ್.** ಶರ್ಮಾ, ಜಿ.ಎನ್.
ಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ, ಮರಾಠವಾಡ
ವಿಶ್ವವಿದ್ಯಾಲಯ, ಔರಂಗಬಾದ್

**ಜಿ.ಎನ್.ಎಸ್‌ಆರ್‌ಐ.** ಗೀತಾನಾವಲ್ ಶ್ರೀನಿವಾಸ್
ಪ್ರಾಧ್ಯಾಪಕಿ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ
ದರ್ಜೆ ಕಾಲೇಜು, ಶ್ರೀರಂಗಪಟ್ಟಣ

**ಜಿ.ಆರ್.** ರಾಮನಾಥಭಟ್, ಜಿ.
5, ಜೆ ಬ್ಲಾಕ್, ಸರ್ವಜ್ಞರಸ್ತೆ
ಕುವೆಂಪುನಗರ, ಮೈಸೂರು–570023

**ಜಿ.ಆರ್.ಎ.** ಗೊರೂರು ರಾಮಸ್ವಾಮಿ ಅಯ್ಯಂಗಾರ್ (ದಿ)
ಗೊರೂರು, ಹಾಸನ ಜಿಲ್ಲೆ

**ಜಿ.ಆರ್.ಕೆ.** ಕುಪ್ಪಸ್ವಾಮಿ ಅಯ್ಯಂಗಾರ್, ಜಿ.ಆರ್.
ಕೆನರ ಕಾಲೇಜು, ಕುಮಟ

**ಜಿಆರ್‌ಕೆ.** ಗಿರಿರಾಜ್‌ಕುಮಾರ್
c/o ಕಲಾವಿಭಾಗ
ದಯಾಲ್‌ಭಾಗ್ ಎಜುಕೇಷನಲ್ ಇನ್‌ಸ್ಟಿಟ್ಯೂಟ್
ದಯಾಲ್‌ಭಾಗ್, ಆಗ್ರ–282005

**ಜಿ.ಆರ್.ಆರ್.** ರಂಗಸ್ವಾಮಯ್ಯ, ಜಿ.ಆರ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಜಿ.ಎಸ್.** ಗುರುರಾಜಾಚಾರ್,ಎಸ್.
ನಂ. 87/41, 15ನೆಯ ಮುಖ್ಯರಸ್ತೆ
ಪದ್ಮನಾಭನಗರ, ಬೆಂಗಳೂರು

**ಜಿ.ಎಸ್.ಡಿ.** ದೀಕ್ಷಿತ್, ಜಿ.ಎಸ್.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003

**ಜಿ.ಎಸ್.ಎಂ.** ಸರ್ವಮಂಗಳ, ಜಿ.
ಅಧ್ಯಾಪಕಿ, ಇತಿಹಾಸ ಮತ್ತು ಪುರಾತತ್ತ್ವ
ವಿಭಾಗ, ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ–577451, ಶಿವಮೊಗ್ಗ

**ಜಿ.ಎಸ್.ಎಸ್.ಐ.** ಸಿದ್ಧಲಿಂಗಯ್ಯ, ಜಿ.ಎಸ್.
ಪ್ರಾಂಶುಪಾಲ (ವಿ)
ಮಹಾರಾಣಿ ಕಾಲೇಜು, ಬೆಂಗಳೂರು

**ಜಿ.ಟಿ.ಎಸ್.** ಸೋಮಶೇಖರ್, ಜಿ.ಟಿ.
ಅಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಜಿ.ವಿ.** ವಸಂತರಾವ್, ಜಿ.
ಅಧ್ಯಾಪಕ, ಇತಿಹಾಸ ವಿಭಾಗ, ಆಚಾರ್ಯ
ಪಾಠಶಾಲಾ ಕಾಲೇಜು, ಬೆಂಗಳೂರು

**ಜಿ.ವಿ.ಕೆ.** ಕಲ್ಲಾಪುರ, ಜಿ.ವಿ.
ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ–577401
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

**ಜಿ.ವಿ.ಎನ್.** ನಾರಾಯಣಮೂರ್ತಿ, ಜಿ.ವಿ.
ಪತ್ರಿಕೋದ್ಯಮಿ, ಚಿಕ್ಕನಾಯಕನಹಳ್ಳಿ
ತುಮಕೂರು ಜಿಲ್ಲೆ

**ಜಿ.ವಿ.ಆರ್.** ರಂಗಸ್ವಾಮಿ, ಜಿ.ವಿ.
ಪ್ರಾಂಶುಪಾಲ, ಜಿ.ಟಿ. ಕಾಲೇಜು, ಗದಗ

**ಎಚ್.ಸಿ.ಕೆ.** ಕಪಿನೀಪತಿಭಟ್ಟ, ಎಚ್.ಸಿ.
ಪ್ರಾಂಶುಪಾಲ (ವಿ)
ಎಸ್.ಜೆ. ಪಾಲಿಟೆಕ್ನಿಕ್ ಕಾಲೇಜು, ಬೆಂಗಳೂರು

**ಎಚ್.ಡಿ.ಎಲ್.ಎ.** ಏಬ್ರಹಾಂ, ಎಚ್.ಡಿ.ಎಲ್.
ಚರ್ಚ್ ಆಫ್ ಸೌತ್ ಇಂಡಿಯ, ಬಳ್ಳಾರಿ

**ಎಚ್.ಜಿ.** ಗಣೇಶ ಐತಾಳ್, ಎಚ್.
ಸಹಾಯಕ ಅನುವಾದಕ (ವಿ)
ಅನಿಕೇತನ ರಸ್ತೆ, 7ನೆಯ ಅಡ್ಡರಸ್ತೆ
ಕುವೆಂಪುನಗರ, ಮೈಸೂರು–570023

**ಎಚ್.ಜಿ.ಆರ್.** ರಂಗಸ್ವಾಮಿ ಐಯ್ಯಂಗಾರ್, ಎಚ್.ಜಿ.
ಅಧ್ಯಾಪಕ, ಇತಿಹಾಸ ವಿಭಾಗ, ಸರ್ಕಾರಿ ಕಾಲೇಜು, ಮಂಡ್ಯ

**ಎಚ್.ಜಿ.ಎಸ್.** ಸುಬ್ಬರಾವ್, ಎಚ್.ಜಿ.
2359/16, ಶ್ರೀ ಸಾಯಿಕೃಪ
ಸಿಹಿನೀರು ಕಟ್ಟೆಬೀದಿ
11ನೆಯ ಅಡ್ಡ ರಸ್ತೆ, ಬಸವೇಶ್ವರ ರಸ್ತೆ
ಹಳೇ ಅಗ್ರಹಾರ, ಮೈಸೂರು

**ಎಚ್.ಕೆ.ಬಿ.** ಕೃಷ್ಣಭಟ್ಟ, ಎಚ್.
ಪ್ರಾಧ್ಯಾಪಕ, ಮಾನವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಚ್.ಕೆ.ಆರ್.** ರಾಮಚಂದ್ರಮೂರ್ತಿ, ಎಚ್.ಕೆ.
ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ, ನ್ಯಾಷನಲ್
ಕಾಲೇಜು, ಬೆಂಗಳೂರು

**ಎಚ್.ಕೆ.ಆರ್.ಜಿ.** ರಾಜೇಗೌಡ, ಎಚ್.ಕೆ.
4, ಹನುಮನಹಳ್ಳಿ, ಸಂತೇಬಾಚಹಳ್ಳಿ ಅಂಚೆ
ಮಂಡ್ಯ ಜಿಲ್ಲೆ

**ಎಚ್.ಎಂ.ಎಂ.** ಮರುಳಸಿದ್ದಯ್ಯ, ಎಚ್.ಎಂ.
ಭಾರತೀಯ ಮಾನವ ವಿಜ್ಞಾನ ಸರ್ವೇಕ್ಷಣ
ಮಾನವಭವನ, ಬೋಗಾದಿ, ಮೈಸೂರು

**ಎಚ್.ಎಂ.ಎನ್.ಆರ್.** ನಾಗರಾಜರಾವ್, ಎಚ್.ಎಂ.
ಸಹಾಯಕ ಶಾಸನತಜ್ಞ (ವಿ)
278, ನೆರಳು, 5ನೆಯ ಮುಖ್ಯರಸ್ತೆ
ಎಚ್ ಬ್ಲಾಕ್, ರಾಮಕೃಷ್ಣನಗರ
ಮೈಸೂರು–570022

**ಎಚ್.ಆರ್.** ರಾಮಲಿಂಗಪ್ಪ, ಎಚ್.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಸರ್ಕಾರಿ ಕಾಲೇಜು, ತುಮಕೂರು

**ಎಚ್.ಆರ್.ಡಿ.** ದಾಸೇಗೌಡ, ಎಚ್.ಆರ್.
ಉಪ ಪರೀಕ್ಷಾಧಿಕಾರಿ (ವಿ)
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಚ್.ಆರ್.ಡಿ.ಜಿ.** ದಾಸೇಗೌಡ, ಎಚ್.ಆರ್.
ಪ್ರಾಂಶುಪಾಲ, ವಿದ್ಯೋದಯ ಕಾಲೇಜು
ತುಮಕೂರು

**ಎಚ್.ಆರ್.ಆರ್.ಬಿ.** ರಘುನಾಥಭಟ್ (ದಿ)
c/o ಶಾಲಿನಿ ರಘುನಾಥಭಟ್, ಕನ್ನಡ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–580003

**ಎಚ್.ಆರ್.ಆರ್.ಐ.** ರಂಗಸ್ವಾಮಿ ಐಯ್ಯಂಗಾರ್, ಎಚ್.ಆರ್.
5ನೆಯ ಮುಖ್ಯರಸ್ತೆ, ವಾಣಿವಿಲಾಸ ಮೊಹಲ್ಲ
ಮೈಸೂರು

**ಎಚ್.ಎಸ್.** ಸುಮಿತ್ರ, ಎಚ್.
ಪಾದ್ರಿ, ಚರ್ಚ್ ಆಫ್ ಸೌತ್ ಇಂಡಿಯ, ಬಳ್ಳಾರಿ

**ಎಚ್.ಎಸ್.ಕೆ.** ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್. (ದಿ)
41, 6ನೆಯ ಮುಖ್ಯರಸ್ತೆ, ಸರಸ್ವತಿಪುರಂ
ಮೈಸೂರು–570009

**ಎಚ್.ಎಸ್.ಆರ್.** ರಾಮಚಂದ್ರೇಗೌಡ, ಎಚ್.ಎಸ್.
ನಿರ್ದೇಶಕರು (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

**ಎಚ್.ಎಸ್.ಎಸ್.ಬಿ.** ಶಾರದಾಬಾಯಿ, ಎಚ್.ಎಸ್.
ಅಧ್ಯಾಪಕಿ, ಇತಿಹಾಸ ವಿಭಾಗ
ಎ.ಪಿ.ಎಸ್. ಕಾಲೇಜು, ಬೆಂಗಳೂರು

**ಎಚ್.ವಿ.ಎಂ.** ಮಂಜುನಾಥ್, ಎಚ್.ವಿ.
ಅಧ್ಯಾಪಕ, ಇತಿಹಾಸ ವಿಭಾಗ
ಎಮ್.ಇ.ಎಸ್.ಕಾಲೇಜು, ಮಲ್ಲೇಶ್ವರಂ
ಬೆಂಗಳೂರು–560003

**ಎಚ್.ವಿ.ಎಸ್.ಎಂ.** ಶ್ರೀನಿವಾಸ ಮೂರ್ತಿ, ಎಚ್.ವಿ.
ಅಧ್ಯಾಪಕ (ವಿ), ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಐ.ಕೆ.** ಇಸ್ಮಾಯಿಲ್ ಕಲೆಲು
ಪ್ರಾಧ್ಯಾಪಕ, ಪ್ರಾಚೀನ ಭಾರತೀಯ ಇತಿಹಾಸ
ಸಂಸ್ಕೃತಿ ಮತ್ತು ಪುರಾತತ್ತ್ವ ವಿಭಾಗ
ನಾಗಪುರ ವಿಶ್ವವಿದ್ಯಾಲಯ, ನಾಗಪುರ

**ಐ.ಪಿ.** ಈರಣ್ಣ ಪತ್ತಾರ್
ಪ್ರವಾಚಕ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003

**ಜೆ.** ಜಮುನ
ಪ್ರಾಧ್ಯಾಪಕಿ, ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು

**ಜೆ.ಎಬಿ.** ಜಗದೀಶ್ ಅಗಸಿಬಾಗಿಲು
ಕಾರ್ಯನಿರ್ವಾಹಕ ಅಭಿಯಂತರ
ಹೊಸಮನೆ ಬಡಾವಣೆ, ಶಿವಮೊಗ್ಗ

**ಜೆಎ.ಕೆ.** ಜಾಮ್‌ಖೇಡಕರ್
ಗೌರವ ನಿರ್ದೇಶಕ, ಕೆ.ಜಿ. ಸೋಮಯ್ಯ ದಕ್ಷಿಣ
ಹಾಗೂ ಆಗ್ನೇಯ ಏಷ್ಯ ಅಧ್ಯಯನ ಕೇಂದ್ರ
2ನೆಯ ಮಹಡಿ, ವಿದ್ಯಾವಿಹಾರ, ಮುಂಬೈ–400077

**ಜೆ.ಜೆ.** ಜಯದೇವಪ್ಪ ಜೈನಕೇರಿ
87, ಶಾಂತಲ, ಕುವೆಂಪು ರಸ್ತೆ
ಶಿವಮೊಗ್ಗ–577201

**ಜೆ.ಎಂ.** ಜಯಲಕ್ಷಮ್ಮಣ್ಣಿ, ಎಂ. (ದಿ)
ನಿರ್ದೇಶಕಿ, ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

**ಜೆ.ಎಂ.ಎನ್.** ನಾಗಯ್ಯ, ಜೆ.ಎಂ.
ಪ್ರವಾಚಕ, ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–580003

**ಜೆ.ಎನ್.ಪಿ.** ಪಾಲ್, ಜೆ.ಎನ್.
ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ
ಮತ್ತು ಪುರಾತತ್ತ್ವ ವಿಭಾಗ, ಅಲಹಾಬಾದ್
ವಿಶ್ವವಿದ್ಯಾಲಯ, ಅಲಹಾಬಾದ್, ಉತ್ತರ ಪ್ರದೇಶ

**ಜೆ.ಪಿ.ಪಿ.** ಜೋಗಳೇಕರ್, ಪಿ.ಪಿ.
ಪ್ರಾಧ್ಯಾಪಕ, ಪುರಾತತ್ತ್ವ ವಿಭಾಗ, ಡೆಕ್ಕನ್
ಕಾಲೇಜು, ಪುಣೆ–411006

**ಜೆಆರ್.** ಜೀವನ್‌ರಾವ್
C/o ಒಕ್ಕಲಿಗರ ಪತ್ರಿಕೆ, ಬೆಂಗಳೂರು

**ಜೆ.ಆರ್.ಪಿ.** ಜಯತೀರ್ಥರಾಜ ಪುರೋಹಿತ (ದಿ)
ವಿಶೇಷ ಜಿಲ್ಲಾಧಿಕಾರಿ, ಚಿತ್ರದುರ್ಗ

**ಜೆಎಸ್.ಬಿ .** ಜಗದೀಶಶೆಟ್ಟಿ, ಬಿ.
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಎಂ.ಜಿ.ಎಂ. ಕಾಲೇಜು, ಕುಂಜಿಬೆಟ್ಟು, ಉಡುಪಿ

**ಜೆ.ಎಸ್.ಸಿ.** ಶಶಿಕಲಾ ಚಂದ್ರಶೇಖರ್, ಜೆ.
C/o ದೇ. ಜವರೇಗೌಡ, ಕುಲಪತಿ (ವಿ)
ಜಯಲಕ್ಷ್ಮಿಪುರಂ, ಮೈಸೂರು

**ಜೆ.ಎಸ್.ಪಿ.ಎಂ.** ಪರಶಿವಮೂರ್ತಿ, ಜೆ.ಎಸ್.
ನಿರ್ದೇಶಕ (ವಿ), ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾಲಯ, ಮಾನಸಗಂಗೋತ್ರಿ
ಮೈಸೂರು–570006

**ಜೆ.ಎಸ್.ಎಸ್.** ಸಾಯಿನಾಥ್, ಜೆ.ಎಸ್.
ಸಹಾಯಕ ಗ್ರಂಥಪಾಲಕ (ವಿ)
ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು–570006

**ಜೆ.ವಿ.ಜಿ.** ಗಾಯತ್ರಿ, ಜೆ.ವಿ.
ನಿರ್ದೇಶಕಿ, ಪಾರಂಪರಿಕ ವಿಭಾಗ
ಕರ್ನಾಟಕ ಸರ್ಕಾರ, ಅರಮನೆ ಆವರಣ
ಮೈಸೂರು–570001

**ಕೆ.** ಕೃಷ್ಣ
ಪುರಾತತ್ತ್ವ ಅಧಿಕಾರಿ, ಪುರಾತತ್ತ್ವ ಸರ್ವೇಕ್ಷಣ
ಇಲಾಖೆ, ಕೇಂದ್ರೀಯ ಸದನ, 5ನೆಯ ಮಹಡಿ
ಎಫ್ ಬ್ಲಾಕ್, 17ನೆಯ ಮುಖ್ಯರಸ್ತೆ
ಕೋರಮಂಗಲ, ಬೆಂಗಳೂರು–16

**ಕೆ.ಎ.** ಅನಂತರಾಮಯ್ಯ, ಕೆ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ, ಬೆಂಗಳೂರು

**ಕೆ.ಬಿ.ಆರ್.** ರಾಮಕೃಷ್ಣರಾವ್, ಕೆ.ಬಿ. (ದಿ)
ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಕೆ.ಜಿ.** ಗೋಪಾಲ್, ಕೆ.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಕೆ.ಜಿ.ಬಿ.** ಭಟ್‌ಸೂರಿ, ಕೆ.ಜಿ.
ಶಾಸನ ತಜ್ಞ, ಶಾಸನಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
ಹಂಪಿ–583276

**ಕೆ.ಜಿ.ಜೆ.** ಕೆಳದಿ ಗುಂಡಾಜೋಯಿಸ್
ಕೆಳದಿ ವಸ್ತುಸಂಗ್ರಹಾಲಯ, ಕೆಳದಿ–577401
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

**ಕೆ.ಜಿ.ಕೆ.** ಕೃಷ್ಣನ್, ಕೆ.ಜಿ.
ಅಧೀಕ್ಷಕ ಶಾಸನತಜ್ಞ
ಮುಖ್ಯ ಶಾಸನಶಾಸ್ತ್ರ ಕಚೇರಿ, ಮೈಸೂರು

**ಕೆ.ಎಚ್.** ಖಂಡೋಬರಾವ್, ಎಚ್.
ಸಹನ, ಗಾಂಧಿನಗರ ಮುಖ್ಯರಸ್ತೆ, ಶಿವಮೊಗ್ಗ

**ಕೆ.ಜೆ.** ಜೀವಣ್ಣರಾವ್, ಕೆ.
ಪತ್ರಿಕೋದ್ಯಮಿ, ಬೆಂಗಳೂರು

**ಕೆ.ಕೆ.** ಕೃಷ್ಣಮೂರ್ತಿ, ಕೆ.
ಪ್ರಾಧ್ಯಾಪಕ (ವಿ), ಸಂಸ್ಕೃತ ವಿಭಾಗ, ಕರ್ನಾಟಕ
ವಿಶ್ವವಿದ್ಯಾಲಯ, ಧಾರವಾಡ – 580003

**ಕೆ.ಕೆ.ಕೆ.** ಕೃಷ್ಣ ಕೊಲ್ಹಾರ್ ಕುಲಕರ್ಣಿ
633, ಮಹಿಪತಿ, ಕೀರ್ತಿನಗರ
ಬಿಜಾಪುರ–586101

**ಕೆ.ಕೆ.ಎಂ.** ಮೊಹಮ್ಮದ್, ಕೆ.ಕೆ.
ಅಧೀಕ್ಷಕ, ಭಾರತೀಯ ಪುರಾತತ್ತ್ವ ಸರ್ವೇಕ್ಷಣ
ಇಲಾಖೆ, ಸಫ್‌ದರ್‌ಜಂಗ್ ಟೆಕಾಫ್ ಕಾಂಪ್ಲೆಕ್ಸ್
ನವದೆಹಲಿ–110003

**ಕೆ.ಕೆಎಂ.** ಕೃಷ್ಣಮೂರ್ತಿ, ಕೆ.
ಪ್ರಾಧ್ಯಾಪಕ (ವಿ), ಭಾರತೀಯ ಸಂಸ್ಕೃತಿ
ಶ್ರೀಸತ್ಯಸಾಯಿ ಇನ್‌ಸ್ಟಿಟ್ಯೂಟ್ ಆಫ್ ಹೈಯರ್
ಲರ್ನಿಂಗ್, ಪ್ರಶಾಂತಿ ನಿಲಯ, ಆಂಧ್ರಪ್ರದೇಶ

**ಕೆ.ಕೆ.ಎಸ್‌ಯು.** ಸುಬ್ಬಯ್ಯ, ಕೆ.ಕೆ. (ದಿ)
ಪ್ರವಾಚಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ
ವಿಭಾಗ, ಮಾನಸಗಂಗೋತ್ರಿ
ಮೈಸೂರು–570006

**ಕೆ.ಎಂ.ಬಿ.** ಕೃಷ್ಣಮಂಜಭಟ್ಟ
ಸಹಾಯಕ ಪ್ರಾಧ್ಯಾಪಕ
ಮಹಾರಾಜ ಸಂಸ್ಕೃತ ಪಾಠಶಾಲೆ, ಮೈಸೂರು

**ಕೆ.ಎಂ.ಎನ್.** ಕಡಪಟ್ಟಿ, ಎಂ.ಎನ್.
ಅಧ್ಯಾಪಕ, ಇತಿಹಾಸ ವಿಭಾಗ
ಕ.ರಾ. ಮಹಾವಿದ್ಯಾಲಯ, ಹೊಳೆ ಆಲೂರು
ರೋಣ ತಾಲ್ಲೂಕು, ಗದಗ ಜಿಲ್ಲೆ

**ಕೆ.ಎಂ.ಎಸ್.** ಮಹಮದ್ ಶರೀಫ್, ಕೆ.
ಶಾಸನ ಸಹಾಯಕ (ವಿ), 649, 13ನೆಯ
ಮುಖ್ಯರಸ್ತೆ, 4ನೆಯ ಹಂತ, ಟಿ.ಕೆ. ಬಡಾವಣೆ
ಮೈಸೂರು–570009

**ಕೆ.ಎಂ.ಎಸ್‌ಯು.** ಸುರೇಶ್, ಕೆ.ಎಂ.
ನಿರ್ದೇಶಕ, ಪ್ರಾಚ್ಯವಸ್ತು ಸಂಗ್ರಹಾಲಯ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ,
ಹಂಪಿ–583276

**ಕೆ.ಎಂ.ವಿ.** ಕೃಷ್ಣಪ್ಪ, ಎಂ.ವಿ.
ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಕೆ.ಎನ್.** ನಾಗರಾಜ್, ಕೆ.
ಉಪಸಂಪಾದಕ, ಸುಧಾ ವಾರಪತ್ರಿಕೆ
ಮಹಾತ್ಮಗಾಂಧಿ ರಸ್ತೆ, ಬೆಂಗಳೂರು

**ಕೆ.ಎನ್.ಐ.** ನಾರಾಯಣ ಐಯ್ಯಂಗಾರ್, ಕೆ.
146, 6ನೆಯ ಅಡ್ಡರಸ್ತೆ, ವಿಲ್ಸನ್‌ಗಾರ್ಡನ್
ಬೆಂಗಳೂರು

**ಕೆ.ಎನ್.ಎಸ್.** ಶಿವಪ್ಪ, ಕೆ.ಎನ್.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು

**ಕೆ.ಪಿ.** ಪದ್ಮಾವತಮ್ಮ, ಕೆ.
ಪ್ರಾಧ್ಯಾಪಕಿ (ವಿ), ಇತಿಹಾಸ ವಿಭಾಗ
ಮಹಿಳಾ ಕಾಲೇಜು, ಮಂಡ್ಯ

**ಕೆ.ಆರ್.** ಕಲ್ಯಾಣರಾಮನ್
3, ಟೆಂಪಲ್ ಅವಿನ್ಯೂ, ಶ್ರೀನಗರ
ಕಾಲೋನಿ, ಚೆನ್ನೈ–600015

**ಕೆಆರ್.** ಕ್ಯಾತನಹಳ್ಳಿ ರಾಮಣ್ಣ
ಸಂಶೋಧನ ಸಹಾಯಕ (ವಿ)
111, ಬೋಗಾದಿ ಗ್ರಾಮ, ಮೈಸೂರು

**ಕೆ.ಆರ್.ಎ.** ರಾಜನ್, ಕೆ.
ಪ್ರಾಧ್ಯಾಪಕ, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಪಾಂಡಿಚೇರಿ ವಿಶ್ವವಿದ್ಯಾಲಯ, ಪಾಂಡಿಚೇರಿ

**ಕೆ.ಆರ್.ಬಿ.** ಬಸವರಾಜು, ಕೆ.ಆರ್.
ಪ್ರವಾಚಕ, ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003

**ಕೆ.ಆರ್.ಎಂ.** ಮೆಳವಂಕಿ, ಕೆ.ಆರ್.
ಸವಣೂರ ಬಿಲ್ಡಿಂಗ್, ಸಪ್ತಾಪುರ 1ನೆಯ ಕ್ರಾಸ್
ಧಾರವಾಡ

**ಕೆ.ಆರ್.ಎಸ್.** ಶ್ರೀಕಂಠಮೂರ್ತಿ, ಕೆ.ಆರ್.
ಸಹ ಪ್ರಾಧ್ಯಾಪಕ (ವಿ), ಸರ್ಕಾರಿ ಆಯುರ್ವೇದ
ಕಾಲೇಜು, ಮೈಸೂರು

**ಕೆ.ಎಸ್.** ಶಿವೋತ್ತಮರಾವ್, ಕಲ್ಲೆ
ಪತ್ರಿಕೋದ್ಯಮಿ ಮತ್ತು ಲೇಖಕ, ಬೆಂಗಳೂರು

**ಕೆ.ಎಸ್.ಎ.** ಆಮೂರ್, ಕೆ.ಎಸ್.
ಗಣಿತವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–580003

**ಕೆ.ಎಸ್.ಡಿ.** ಧರಣೇಂದ್ರಯ್ಯ, ಕೆ.ಎಸ್.
ಪ್ರಾಧ್ಯಾಪಕ, ಕನ್ನಡ ವಿಭಾಗ
ಸೇಂಟ್ ಫಿಲೋಮಿನ ಕಾಲೇಜು
ಮೈಸೂರು

**ಕೆ.ಎಸ್‌ಡಿ.** ಸದಾಶಿವ, ಕೆ.
ಅಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಕೆ.ಎಸ್.ಜಿ.ಆರ್.** ಸಂಪತ್‌ಗಿರಿರಾವ್, ಕೆ.
ಮಾಧವನಗರ, ಬೆಂಗಳೂರು

**ಕೆ.ಎಸ್.ಆರ್.ಜಿ.** ರಾಮೇಗೌಡ, ಕೆ.ಎಸ್.
ನಿರ್ದೇಶಕ, ನಗರ ಯೋಜನಾ ವಿಭಾಗ
ಲೋಕೋಪಯೋಗಿ ಇಲಾಖೆ
ಆನಂದರಾವ್ ವೃತ್ತ, ಬೆಂಗಳೂರು

**ಕೆ.ಎಸ್.ಎಸ್.** ಸದಾನಂದ, ಕೆ.ಎಸ್.
ಅಸಿಸ್ಟೆಂಟ್ ಆರ್ಕಿಟೆಕ್ಟ್, ಬೆಂಗಳೂರು

**ಕೆ.ಟಿ.ಎಂ.** ಕೇಶವನ್, ಟಿ.ಎಂ.
ಪುರಾತತ್ತ್ವಜ್ಞ ಉಪ ಅಧೀಕ್ಷಕ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಕಮಲಾಪುರ, ಹೊಸಪೇಟೆ ತಾಲ್ಲೂಕು
ಬಳ್ಳಾರಿ ಜಿಲ್ಲೆ

**ಕೆ.ಟಿ.ಆರ್.** ರಾಮಸ್ವಾಮಿ, ಕೆ.ಟಿ.
ಪ್ರವಾಚಕ (ವಿ), ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

**ಕೆ.ವಿ.** ಕರುಣವಿಜಯೇಂದ್ರ.
64, 2ನೆಯ ಅಡ್ಡರಸ್ತೆ, ಗವಿಪುರಂ
ಬೆಂಗಳೂರು–560019

**ಕೆವಿ** ಕೃಷ್ಣವೇಣಿ
ಶಾಸನ ಸಹಾಯಕಿ (ವಿ)
ಎಪಿಗ್ರಾಫಿಯ ಕರ್ನಾಟಿಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

**ಕೆ.ವಿಇ.** ವೆಂಕಟರಾಜಪ್ಪ, ಕೆ. (ದಿ)
ಶ್ರೀದತ್ತಕೃಪ, 29, ಬಾಲಕೃಷ್ಣರಾವ್ ರಸ್ತೆ
ಚಾಮರಾಜಪುರಂ, ಮೈಸೂರು

**ಕೆ.ವಿ.ಜೆ.** ಕೆಳದಿ ವೆಂಕಟೇಶ ಜೋಯಿಸ್
ಕ್ಯೂರೇಟರ್, ಕೆಳದಿ ವಸ್ತುಸಂಗ್ರಹಾಲಯ
ಕೆಳದಿ–577401, ಶಿವಮೊಗ್ಗ ಜಿಲ್ಲೆ

**ಕೆ.ವಿ.ಆರ್.** ವೀರಭದ್ರರಾವ್, ಕೆ.
ಅಧೀಕ್ಷಕ, ಭಾರತೀಯ ಪುರಾತತ್ತ್ವ ಸರ್ವೇಕ್ಷಣ
ಇಲಾಖೆ, ಔರಂಗಬಾದ್ ವೃತ್ತ, ಬೀಬಿ–ಕ–ಮಕ್ಬರ್
ಔರಂಗಬಾದ್–431004, ಮಹಾರಾಷ್ಟ್ರ

**ಕೆ.ವಿ.ಆರ್‌ವಿ** ರಾಮನ್, ಕೆ.ವಿ.
ಪ್ರಾಧ್ಯಾಪಕ (ವಿ), ಪ್ರಾಚೀನ ಇತಿಹಾಸ ಮತ್ತು
ಪುರಾತತ್ತ್ವ ವಿಭಾಗ, ಮದರಾಸು
ವಿಶ್ವವಿದ್ಯಾಲಯ, ಮದರಾಸು

**ಕೆ.ವಿ.ಆರ್‌ಎಮ್.** ರಮೇಶ್, ಕೆ.ವಿ.
ಮುಖ್ಯ ಶಾಸನತಜ್ಞ (ವಿ)
ಮುಖ್ಯ ಶಾಸನತಜ್ಞರ ಕಚೇರಿ, ಮೈಸೂರು

**ಕೆ.ವಿ.ಎಸ್.ಎಂ.** ಸಾಂಬಮೂರ್ತಿ, ಕೆ.ವಿ.
ಪ್ರಾಚ್ಯ ವಿದ್ಯಾಸಂಶೋಧನಾಲಯ
ಮೈಸೂರು ವಿಶ್ವವಿದ್ಯಾಲಯ
ಮೈಸೂರು–570005

**ಕೆ.ವಿ.ಎಸ್‌ಯು.** ಸುಬ್ಬರಾಯ, ಕೆ.ವಿ.
ಅಧ್ಯಾಪಕ, ಇತಿಹಾಸ ವಿಭಾಗ
ಬಸವೇಶ್ವರ ಕಾಲೇಜು, ಬಾಗಲಕೋಟೆ

**ಕೆವಿಟಿ.** ಕೇಶವನ್ ವೇಲುತಟ್
ಪ್ರಾಧ್ಯಾಪಕ (ವಿ), ಕರತೂರ್
ಕೊಡಕಲ್, ತಿರೂರ್–676108
ಕೇರಳ

**ಕೆ.ವಿ.ವಿ.** ಕೃಷ್ಣಶಾಸ್ತ್ರಿ, ವಿ.ವಿ.
ನಿರ್ದೇಶಕ (ವಿ), ಪುರಾತತ್ತ್ವ ವಿಭಾಗ
ಫ್ಲಾಟ್ ನಂ 2, ಪ್ರಶಾಂತನಗರ
ಸೈದಬಾದ್, ಹೈದರಾಬಾದ್–500059

**ಎಲ್.ಎನ್.ಎಸ್.** ಸ್ವಾಮಿ, ಎಲ್.ಎನ್.
ಅಧ್ಯಾಪಕ, ಇತಿಹಾಸ ವಿಭಾಗ
ಎಸ್.ಡಿ.ಎಂ. ಕಾಲೇಜು, ಉಜಿರೆ
ಮಂಗಳೂರು ಜಿಲ್ಲೆ

**ಎಲ್.ಆರ್.** ರಾಜಶೇಖರಯ್ಯ, ಎಲ್.
ಪ್ರವಾಚಕ, ಕನ್ನಡ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು–570006

**ಎಲ್.ಆರ್.ಕೆ.** ಕುಲಕರ್ಣಿ, ಎಲ್.ಆರ್.
ಬಿ.ವಿ.ವಿ. ಕಾಲೇಜು, ಬೀದರ್

**ಎಲ್.ಆರ್.ಆರ್.** ಲಕ್ಷ್ಮಣಸಿಂಗ್, ಆರ್. ರಾಥೋಡ್
ಅಧ್ಯಾಪಕ, ಅನ್ವಯ ಕಲೆ ವಿಭಾಗ
ಚಾಮರಾಜೇಂದ್ರ ದೃಶ್ಯಕಲಾ
ಅಕಾಡೆಮಿ, ಮೈಸೂರು–570001

**ಎಲ್.ಎಸ್.ಜಿ.** ಸಿದ್ದವೀರೇಗೌಡ, ಎಲ್. (ದಿ)
ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಲ್.ಎಸ್.ಕೆ.** ಲೀಲಾಶಾಂತಕುಮಾರಿ
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–580003

**ಎಲ್.ಎಸ್.ಆರ್.** ರಾವ್.ಎಲ್.ಎಸ್. (ದಿ)
ಪುರಾತತ್ತ್ವ ಅಧೀಕ್ಷಕ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಓಲ್ಡ್ ಹೈಕೋರ್ಟ್ ಬಿಲ್ಡಿಂಗ್ಸ್, ನಾಗಪುರ–440001

**ಎಲ್.ಎಸ್.ಎಸ್.** ಶೇಷಗಿರಿರಾವ್, ಎಲ್.ಎಸ್.
267, ಜ್ಯೋತಿ, 3ನೆಯ ಬ್ಲಾಕ್, ಜಯನಗರ
ಬೆಂಗಳೂರು–560011

**ಎಲ್.ಟಿ.** ಲಕ್ಷ್ಮಣ ತೆಲಗಾವಿ.
ಪ್ರಾಧ್ಯಾಪಕ (ವಿ)
ಇತಿಹಾಸ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ, ಹಂಪಿ–583276

**ಎಂ.** ಮಾರ್ಗಬಂಧು
16, ವಿನಸ್ ಅಪಾರ್ಟ್‌ಮೆಂಟ್ಸ್
ನ್ಯೂ ರೋಹತ್ ರೋಡ್, ಸುಂದರ ವಿಹಾರ್
ಪಿ.ಓ., ನವದೆಹಲಿ

**ಎಂ.ಎ.** ಮಿರ್ಜಿ ಅಣ್ಣಾರಾಯ (ದಿ)
ಶೇಡಬಾಳ, ಬೆಳಗಾಂವಿ ಜಿಲ್ಲೆ

**ಎಂ.ಬಿ.ಆರ್.** ರಾಮಚಂದ್ರರಾವ್, ಎಂ.ಬಿ.
669, 3ನೆಯ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010

# ಲೇಖಕ ಸೂಚಿ

**ಎಂಇ.ಎಸ್.ಕೆ.** ಮೇಲಕಾರ್, ಎಸ್.ಕೆ.
ಮ್ಯೂಜಿಯಂ ಕ್ಯೂರೇಟರ್
ಕನ್ನಡ ಸಂಶೋಧನ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–580003

**ಎಂ.ಜಿ.** ಮಾದೇಗೌಡ
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಂ.ಜಿ.ಬಿ.** ಬಸವರಾಜು, ಎಂ.ಜಿ.
ಪ್ರವಾಚಕ, ಅರ್ಥಶಾಸ್ತ್ರ ವಿಭಾಗ
ಮಂಡ್ಯ ಸ್ನಾತಕೋತ್ತರ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ, ತೂಬಿನಕೆರೆ
ಮಂಡ್ಯ ಜಿಲ್ಲೆ

**ಎಂ.ಜಿ.ಕೆ.ಎಂ.** ಮೂರ್ತಿ, ಎಂ.ಜಿ.ಕೆ.
ಕರಣಿಕ್ ರಸ್ತೆ
ಶಂಕರಪುರಂ, ಬೆಂಗಳೂರು

**ಎಂ.ಜಿ.ಎನ್.** ನಂಜುಂಡಾರಾಧ್ಯ, ಎಂ.ಜಿ.
ಪ್ರಾಧ್ಯಾಪಕ (ವಿ)
ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

**ಎಂ.ಎಚ್.** ಹನುಮಂತರಾವ್, ಎಂ. (ದಿ)
ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ
ಮೈಸೂರು–570012

**ಎಂ.ಎಚ್.ಎ.** ಮುಜಫ್ಫರ್, ಎಚ್. ಆಸಾದಿ
ಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ,
ಮಾನಸಗಂಗೋತ್ರಿ, ಮೈಸೂರು–570006

**ಎಂ.ಕೆ.ಬಿ.** ಕೇಶವಭಟ್, ಎಂ.
ಶುಭದ, 166, ಜಯನಗರ, 5ನೆಯ ಬ್ಲಾಕ್
ಬೆಂಗಳೂರು

**ಎಂ.ಕೆ.ಎಂ.** ಮಾಲತಿ, ಕೆ. ಮೂರ್ತಿ
ಮುಖ್ಯಸ್ಥರು, ಇತಿಹಾಸ ವಿಭಾಗ
ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು
ಉಡುಪಿ–576102

**ಎಂ.ಕೆ.ಆರ್.** ಕೃಷ್ಣಾರೆಡ್ಡಿ, ಎಂ.
ಅಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು,
ಮೈಸೂರು–570005

**ಎಂ.ಕೆ.ಎಸ್.** ಮುನೇಗೌಡ, ಕೆ.ಎಸ್.
ಪ್ರವಾಚಕ(ವಿ), ರಾಜ್ಯಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಂ.ಎಲ್.ಕೆ.ಎಂ.** ಮೂರ್ತಿ, ಎಂ.ಎಲ್.ಕೆ.
8, ಸುನಯನ ಟವರ್
ಏರ್‌ಲೈನ್ಸ್ ಕಾಲೋನಿ, ಬಾಪೂಜಿ ನಗರ
ನ್ಯೂ ಭುವನಪಲ್ಲಿ, ಸಿಕಂದರಾಬಾದ್

**ಎಂ.ಎಂ.ಕೆ.** ಕಲಬುರ್ಗಿ, ಎಂ.ಎಂ.
ಕುಲಪತಿ (ವಿ), ಕಲ್ಯಾಣನಗರ, ಧಾರವಾಡ

**ಎಂ.ಎಂ.ಕೆವಿ.** ಮಾಧವಿ, ಎಂ.ಕೆ.
1125, 6ನೆಯ ಮುಖ್ಯರಸ್ತೆ, ಕೆ. ಬ್ಲಾಕ್
ರಾಮಕೃಷ್ಣನಗರ, ಮೈಸೂರು–570023

**ಎಂ.ಎಂ.ಪಿ.** ಮಹದೇವಯ್ಯ, ಎಂ.ಪಿ.
ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಂ.ಎಂ.ಪಿಆರ್ಎ.** ಪ್ರಭು, ಎಂ.ಎಂ.
ಕದ್ರಿ, ಬಜ್ಪೆ, ಹೊಸರಸ್ತೆ, ಮಂಗಳೂರು

**ಎಂ.ಎನ್.ಕೆ.** ಮಾಧವ ಎನ್. ಕಟ್ಟಿ
ಮುಖ್ಯ ಶಾಸನತಜ್ಞ
ಮುಖ್ಯ ಶಾಸನತಜ್ಞರ ಕಚೇರಿ, ಮೈಸೂರು

**ಎಂ.ಎನ್.ಎಂಎ.** ಮಹಿಷಿ, ಎಂ.ಎನ್.
ಪ್ರಧಾನ ಉಪಸಂಪಾದಕ
ಕಸ್ತೂರಿ ಕನ್ನಡ ಮಾಸಪತ್ರಿಕೆ, ಹುಬ್ಬಳ್ಳಿ

**ಎಂ.ಎನ್.ಎನ್.** ನಂಜುಂಡರಾಜೇ ಅರಸ್, ಎಂ.ಎನ್.
ಅಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು–570006

**ಎಂ.ಎನ್.ವಿ.ಆರ್.** ವೆಂಕಟರಮಣಪ್ಪ, ಎಂ.ಎನ್.
ಮುಖ್ಯಸ್ಥ, ಇತಿಹಾಸ ವಿಭಾಗ
ಸರ್ಕಾರಿ ಕಾಲೇಜು, ಮಡಿಕೇರಿ

**ಎಂ.ಆರ್.ಎಎನ್.** ಆನವಟ್ಟಿ, ಎಂ.ಆರ್.
ಅಧ್ಯಾಪಕ, ಇತಿಹಾಸ ವಿಭಾಗ
ಮಹಾತ್ಮಗಾಂಧಿ ಶತಾಬ್ದಿ ಕಾಲೇಜು
ಸಿದ್ದಾಪುರ (ಉತ್ತರ ಕನ್ನಡ)

**ಎಂ.ಎಸ್.** ಮೀರಾ ಸೆಬಾಸ್ಟಿಯನ್
ಅಧ್ಯಾಪಕಿ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಂ.ಎಸ್.ಬಿ.** ಮುತ್ತೇಗೌಡ, ಎಸ್.ಬಿ. (ದಿ)
ಆಡಳಿತಾಧಿಕಾರಿ, ಮಾನಸಗಂಗೋತ್ರಿ, ಮೈಸೂರು–570006

**ಎಂ.ಎಸ್ಎಚ್ಎ.** ಶಂಕರ್, ಎಂ.
ಸಹಾಯಕ ನಿರ್ದೇಶಕ (ವಿ)
ಆಕಾಶವಾಣಿ ಕೇಂದ್ರ, ಯಾದವಗಿರಿ, ಮೈಸೂರು

**ಎಂ.ಎಸ್.ಕೆ.** ಕೃಷ್ಣಮೂರ್ತಿ, ಎಂ.ಎಸ್.
ಪ್ರಾಧ್ಯಾಪಕ (ವಿ)
2977/1 ಬಿ, ರಶ್ಮಿ, 5ನೆಯ ಮುಖ್ಯರಸ್ತೆ
ವಾಣಿವಿಲಾಸಪುರಂ, ಮೈಸೂರು–570002

**ಎಂ.ಎಸ್.ಎಂ.** ಮುಧೋಳ್, ಎಂ.ಎಸ್.
73, ರಾಸ್‌ಬಿಹಾರ್, I ಪಿ, ಪಟ್‌ಪರ್ ಗಂಜ್
ನವದೆಹಲಿ–110092

**ಎಂ.ಎಸ್.ಎನ್.** ನಾಗರಾಜರಾವ್, ಎಂ.ಎಸ್.
ನಿರ್ದೇಶಕ (ವಿ)
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಗಂಗೋತ್ರಿ ಬಡಾವಣೆ, ಮೈಸೂರು–570009

**ಎಂ.ಟಿ.ಕೆ.** ಕಾಂಬಳೆ, ಎಂ.ಟಿ.
ಪ್ರಾಧ್ಯಾಪಕ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–580003

**ಎಂ.ಯು.** ಉಮಾಪತಿ, ಎಂ.
ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಂ.ವಿ.ಐ.** ಮಾಸ್ತಿವೆಂಕಟೇಶಅಯ್ಯಂಗಾರ್ (ದಿ)
ಸಾಹಿತಿ, 11ನೆಯ ಅಡ್ಡರಸ್ತೆ, ಗವಿಪುರಂ ಬಡಾವಣೆ
ಬೆಂಗಳೂರು–560019

**ಎಂ.ವಿ.ಕೆ.** ಕೃಷ್ಣರಾವ್, ಎಂ.ವಿ. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು–570006

| | |
|---|---|
| **ಎಂ.ವಿ.ಎಸ್.** | ಸೀತಾರಾಮಯ್ಯ, ಎಂ.ವಿ. (ದಿ)<br>ಅರವಿಂದ, 54, 3ನೆಯ ಅಡ್ಡರಸ್ತೆ<br>ಗವೀಪುರಂ ಬಡಾವಣೆ, ಬೆಂಗಳೂರು–560019 |
| **ಎಂ.ವಿ.ಎಸ್ಆರ್.** | ಶ್ರೀನಿವಾಸ್, ಎಂ.ವಿ.<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಸರ್ಕಾರಿ ಕಲಾ ಕಾಲೇಜು, ಬೆಂಗಳೂರು |
| **ಎಂ.ವಿ.ವಿ.** | ವಿಶ್ವೇಶ್ವರ, ಎಂ.ವಿ.<br>ಪುರಾತತ್ತ್ವ ಸರ್ವೇಕ್ಷಣ ಅಧಿಕಾರಿ<br>ಪುರಾತತ್ತ್ವ ವಸ್ತುಸಂಗ್ರಹಾಲಯ<br>ಗೋಳಗುಮ್ಮಟ ಆವರಣ, ಬಿಜಾಪುರ |
| **ಎಂ.ವೈ.** | ಯಾಮುನಾಚಾರ್ಯ, ಎಂ. (ದಿ)<br>ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎಂ.ವೈ.ಎಸ್.** | ಸಾವಂತ್,ಎಂ.ವೈ.<br>ಪ್ರವಾಚಕ, ಇತಿಹಾಸ ವಿಭಾಗ<br>ಕಿಟ್ಟೆಲ್ ಕಾಲೇಜು, ಧಾರವಾಡ |
| **ಎನ್.** | ನಾಗೇಂದ್ರ.<br>ಪ್ರವಾಚಕ, ಇತಿಹಾಸ ವಿಭಾಗ<br>ಗೋವ ವಿಶ್ವವಿದ್ಯಾಲಯ, ಪಣಜಿ, ಗೋವ |
| **ಎನ್.ಎಆರ್.** | ಅನಂತರಂಗಾಚಾರ್ (ದಿ)<br>1ನೆಯ ಮುಖ್ಯರಸ್ತೆ, ಸರಸ್ವತಿಪುರಂ<br>ಮೈಸೂರು–570009 |
| **ಎನ್.ಎ.ವಿ.** | ನಾಗನೂರು, ಎ.ವಿ.<br>ಪುರಾತತ್ತ್ವ ಸರ್ವೇಕ್ಷಣ ಇಲಾಖೆ<br>(ಧಾರವಾಡ ವೃತ್ತ), ಆರ್.ಎಸ್.ಶೆಟ್ಟಿ<br>ಕ್ರೀಡಾಂಗಣ ಹತ್ತಿರ, ಧಾರವಾಡ – 580001 |
| **ಎನ್.ಜಿ.ಎಸ್.** | ಶುಭವಾಣಿ, ಎನ್.ಜಿ.<br>ಅಧ್ಯಾಪಕಿ, ಇತಿಹಾಸ ವಿಭಾಗ<br>ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಿಳಾ ಕಾಲೇಜು<br>ಮಂಡ್ಯ |
| **ಎನ್.ಎಚ್.ಎಂ.** | ಹುಚ್ಚಪ್ಪ ಮಾಸ್ತರ್, ಎನ್.<br>ಚೂರಿಕಟ್ಟೆ, ಹ್ಯಾಲಿಪ್ಯಾಡ್ ಹಿರೇಮನೆ<br>ಸಾಗರ, ಶಿವಮೊಗ್ಗ ಜಿಲ್ಲೆ |
| **ಎನ್ಎ.ಎಚ್.ಎಂ.** | ನಾಗರಾಜು, ಎಚ್.ಎಂ.<br>ಸಂಶೋಧನ ಸಹಾಯಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎನ್.ಎಲ್.** | ಲಲಿತ, ಎನ್.<br>ಎಂ.ಐ.ಜಿ–614, ಬಾಲಗಣೇಶ ದೇವಾಲಯ ಹತ್ತಿರ<br>ಶಾರದಾದೇವಿ ನಗರ, 3ನೆಯ ಹಂತ<br>ಮೈಸೂರು – 570022 |
| **ಎನ್.ಎಲ್.ಆರ್.** | ಲಕ್ಷ್ಮೀನಾರಾಯಣರಾವ್, ಎನ್.<br>ಶಾಸನಾಧಿಕಾರಿ (ವಿ), ರವಿನಗರ, ನಾಗಪುರ |
| **ಎನ್.ಎಂ.ಜಿ.** | ನಾಗರಾಜ್, ಎಂ.ಜಿ.<br>221, 68ನೆಯ ಅಡ್ಡರಸ್ತೆ, 5ನೆಯ ಬ್ಲಾಕ್<br>ರಾಜಾಜಿನಗರ, ಬೆಂಗಳೂರು–560010 |
| **ಎನ್.ಎಂ.ಎಸ್.** | ಮಹದೇವಸ್ವಾಮಿ, ಎನ್.<br>ಅಧ್ಯಾಪಕ, ಇತಿಹಾಸ ವಿಭಾಗ<br>ಜೆ.ಎಸ್.ಎಸ್. ಕಾಲೇಜು, ನಂಜನಗೂಡು |
| **ಎನ್ಆರ್.** | ನಿರ್ಮಲರಾಜು<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು–570005 |
| **ಎನ್.ಆರ್.ಎಂ.** | ನಂಬಿರಾಜನ್, ಎಂ.<br>ಪುರಾತತ್ತ್ವ ಅಧೀಕ್ಷಕ<br>ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ<br>ತ್ರಿಕೂರ್ ವೃತ್ತ, ತ್ರಿಶೂರ್ (ಕೇರಳ) |
| **ಎನ್.ಎಸ್.** | ಸರಸ್ವತಿ, ಎನ್.<br>ಪ್ರವಾಚಕಿ, ಇತಿಹಾಸ ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎನ.ಎಸ್ಎ.** | ಸಾವಿತ್ರಿ, ಎನ್.<br>ಮುಖ್ಯಸ್ಥೆ, ಇತಿಹಾಸ ವಿಭಾಗ<br>ಮರಿಮಲ್ಲಪ್ಪ ಕಾಲೇಜು, ರಮಾವಿಲಾಸ ರಸ್ತೆ<br>ಮೈಸೂರು |
| **ಎನ್.ಎಸ್.ಎಸ್.** | ನಾಯಕ್, ಎಸ್.ಎಸ್.<br>ಉಪ ಅಧೀಕ್ಷಕ<br>ಭಾರತೀಯ ಪುರಾತತ್ತ್ವಸರ್ವೇಕ್ಷಣಾಲಯ<br>ಆರ್.ಎನ್.ಶೆಟ್ಟಿ ಕ್ರೀಡಾಂಗಣ ಹಿಂದೆ<br>ಧಾರವಾಡ–580001 |
| **ಎನ್.ಎಸ್.ಎಸ್.ಪಿ.** | ಶಾರದಾಪ್ರಸಾದ್, ಎನ್.ಎಸ್.<br>ಸಹಾಯಕ ಭಾಷಾಂತರಕಾರ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು–570006 |
| **ಎನ್.ಎಸ್.ಟಿ.** | ತಾರಾನಾಥ್, ಎನ್.ಎಸ್.<br>ಪ್ರಾಧ್ಯಾಪಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು–570006 |
| **ಎನ್.ಎಸ್.ವಿ.** | ವೀರಪ್ಪ, ಎನ್.ಎಸ್. (ದಿ)<br>ಗೌರವ ಸಂಪಾದಕ, ಕನ್ನಡ ವಿಶ್ವಕೋಶ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎನ್.ಯು.ಆರ್.** | ಉಷಾರಾಣಿ, ಎನ್.<br>ಪ್ರಾಧ್ಯಾಪಕಿ, ಪತ್ರಿಕೋದ್ಯಮ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎನ್.ವಿ.ಆರ್.** | ವೆಂಕೋಬರಾವ್, ಎನ್.<br>ಅಧ್ಯಾಪಕ (ವಿ), ಇತಿಹಾಸ ವಿಭಾಗ<br>ಡಿ.ಬನುಮಯ್ಯ ಕಾಲೇಜು, ಮೈಸೂರು |
| **ಎನ್.ವೈ.ಎಚ್.** | ನಾಯಕವಾಡಿ, ವೈ.ಎಚ್.<br>ಅಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಪಿ.ಬಿ.** | ಬೋರೇಗೌಡ, ಪಿ.<br>ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಪಿ.ಬಿ.ಬಿ.** | ಬಡಿಗೇರ, ಪಿ.ಬಿ. (ದಿ)<br>ಪ್ರಾಧ್ಯಾಪಕ, ಜೈನಶಾಸ್ತ್ರ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು–570006 |
| **ಪಿ.ಬಿ.ಡಿ.** | ದೇಸಾಯಿ, ಪಿ.ಬಿ. (ದಿ)<br>ಸಪ್ತಾಪುರ, ಶ್ರೀನಿಕೇತನ, ಧಾರವಾಡ |
| **ಪಿ.ಬಿ.ಕೆ.** | ಪ್ರಮೀಳಾದೇವಿ, ಬಿ.ಕೆ.<br>ಅಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಹೊಳೆನರಸೀಪುರ |
| **ಪಿ.ಸಿ.ಎ.** | ಪದ್ಮನಾಭಶಾಸ್ತ್ರಿ, ಸಿ.ಎ.<br>ಅಧೀಕ್ಷಕ, ಶಾಸನತಜ್ಞ<br>ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ<br>ವಿಜಯನಗರ, ಮೈಸೂರು |

# ಲೇಖಕ ಸೂಚಿ

**ಪಿ.ಸಿ.ಬಿ.** ಪಾಟೀಲ್, ಸಿ.ಬಿ.
ಉಪ ಪುರಾತತ್ತ್ವ ಸರ್ವೇಕ್ಷಣಾಧಿಕಾರಿ
ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಕೇಂದ್ರೀಯ ಸದನ, 5ನೆಯ ಮಹಡಿ
ಎಫ್ ಬ್ಲಾಕ್, 17ನೆಯ ಮುಖ್ಯರಸ್ತೆ
ಕೋರಮಂಗಲ, ಬೆಂಗಳೂರು–560016

**ಪಿ.ಜಿ.ಬಿ.** ಗುರುರಾಜಭಟ್ಟ, ಪಿ. (ದಿ)
ಪ್ರಾಂಶುಪಾಲ, ಮಿಲಾಗ್ರೇಸ್ ಕಾಲೇಜು
ಕಲ್ಯಾಣಪುರ, ಉಡುಪಿ ಜಿಲ್ಲೆ

**ಪಿ.ಜಿಬಿ.** ಗಣಪಯ್ಯಭಟ್, ಪಿ.
ಪ್ರವಾಚಕ, ಇತಿಹಾಸ ವಿಭಾಗ, ಧವಳ ಕಾಲೇಜು
ಮೂಡಬಿದಿರೆ, ಉಡುಪಿ ಜಿಲ್ಲೆ

**ಪಿಎಚ್.** ಪ್ರಮೋದ್ ಹೆಗಡೆ
ಹೆಗ್ಡೆ–ಅಂಚೆ, ಕಡೆಕೇರಿ–581390
ಕುಮಟ ತಾಲ್ಲೂಕು, ಉತ್ತರ ಕನ್ನಡ

**ಪಿ.ಕೆ.** ಪದ್ದಯ್ಯ, ಕೆ.
ಪ್ರಾಧ್ಯಾಪಕ (ವಿ), ಪುರಾತತ್ತ್ವ ವಿಭಾಗ
ಡೆಕ್ಕನ್ ಕಾಲೇಜು, ಪುಣೆ–411006

**ಪಿಎಲ್.** ಪ್ರಮೀಳಲೋಚನ
ಟಿ–63, 34ನೆಯ ಅಡ್ಡರಸ್ತೆ, 16ನೆಯ ಮುಖ್ಯರಸ್ತೆ
4ನೆಯ ಟಿ ಬ್ಲಾಕ್, ಜಯನಗರ
ಬೆಂಗಳೂರು–560041

**ಪಿ.ಎಲ್.ಜಿ.** ಗುರುಮೂರ್ತಿ, ಪಿ.ಎಲ್.
ಉಪಸಂಪಾದಕ, ಪ್ರಜಾವಾಣಿ
16, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001

**ಪಿ.ಎಂ.ಎಲ್.** ಪ್ರಭಾ, ಎಂ.ಎಲ್.
462, 17ಜಿ, ಮುಖ್ಯರಸ್ತೆ, 6ನೆಯ ಬ್ಲಾಕ್
ಕೋರಮಂಗಲ, ಬೆಂಗಳೂರು

**ಪಿ.ಎನ್.ಎನ್.** ನರಸಿಂಹಮೂರ್ತಿ, ಪಿ.ಎನ್.
ಗುರುಕೃಪ, 2031, 10ನೆಯ ಅಡ್ಡರಸ್ತೆ
ಕಲ್ಲಹಳ್ಳಿ, ವಿ.ವಿ.ನಗರ, ಮಂಡ್ಯ–571401

**ಪಿ.ಆರ್.ಟಿ.** ತಿಪ್ಪೇಸ್ವಾಮಿ, ಪಿ.ಆರ್. (ದಿ)
ಕ್ಯೂರೇಟರ್, ಜಾನಪದ ವಸ್ತುಸಂಗ್ರಹಾಲಯ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

**ಪಿ.ಎಸ್.** ಪುಲ್ಲಮತಿ ಶಾಮರಾವ್
ವಕೀಲರು, ಬಳ್ಳಾರಿ

**ಪಿ.ಎಸ್.ಜೆ.** ಜೋಶಿ, ಪಿ.ಎಸ್.
ಪ್ರಾಧ್ಯಾಪಕ (ವಿ), ವಿದಿಶ, 27/7
ದಬನುಕರ್ ಕಾಲೋನಿ, ಕೊತ್‌ರೂಡ್
ಪುಣೆ–411038

**ಪಿ.ಎಸ್.ಎಸ್.** ಶ್ರೀರಾಮನ್, ಪಿ.ಎಸ್.
ಸಹಾಯಕ ಅಧೀಕ್ಷಕ
ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ
ಚೆನ್ನೈ ವೃತ್ತ, 9, ಸೇಂಟ್ ಜಾರ್ಜ್ ಫೋರ್ಟ್
ಚೆನ್ನೈ–600009

**ಆರ್.** ರಾಚಯ್ಯ
ಅಧ್ಯಾಪಕ, ಇತಿಹಾಸ ವಿಭಾಗ
ಮಹಾರಾಜ ಕಾಲೇಜು, ಮೈಸೂರು–570005

**ಆರ್‌ಎಪಿ.** ರಾಧಾಪಟೇಲ್
206, ದಿವ್ಯದೀಪಕ್, 9ನೆಯ ಅಡ್ಡ ರಸ್ತೆ
3ನೆಯ ಹಂತ ಗೋಕುಲಂ, ಮೈಸೂರು

**ಆರ್.ಬಿ.ಎಸ್.** ರಾಮಭಟ್, ಬಿ.ಎಸ್.
ಪದ್ಮಶ್ರೀ, 139 ಇ, 3ನೆಯ ಅಡ್ಡರಸ್ತೆ
ಗೋಪಾಲಗೌಡ ಬಡಾವಣೆ, ಶಿವಮೊಗ್ಗ–577204

**ಆರ್.ಸಿ.** ಚಕ್ರವರ್ತಿ, ಆರ್.
ಬೆಂಗಳೂರು

**ಆರ್.ಸಿ.ಬಿ.** ಭೂಸನೂರಮಠ, ಆರ್.ಸಿ.
ಉಪನಿರ್ದೇಶಕ (ವಿ), ಆಕಾಶವಾಣಿ, ಬೆಂಗಳೂರು

**ಆರ್.ಡಿ.ಆರ್.** ದಿನೇಶ್‌ರಾವ್, ಆರ್.
ಅಧ್ಯಾಪಕ, ಭೂಗೋಳ ವಿಜ್ಞಾನ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು–570005

**ಆರ್‌ಡಿಆರ್.** ರಾಮದಾಸರೆಡ್ಡಿ
ಎಂ.112, 7ನೆಯ ಅಡ್ಡರಸ್ತೆ
ಬೋಗಾದಿ 2ನೆಯ ಹಂತ ದಕ್ಷಿಣ
ಪ್ರಗತಿ ಕಾನ್ವೆಂಟ್ ಹತ್ತಿರ, ಮೈಸೂರು–570023

**ಆರ್.ಇ.** ರೋಹಿತ್ ಈಶ್ವರ್
984, ಇ ಮತ್ತು ಎಫ್ ಬ್ಲಾಕ್, ಪಂಚಮಂತ್ರ
ರಸ್ತೆ, ಕುವೆಂಪುನಗರ, ಮೈಸೂರು–570023

**ಆರ್.ಜಿ.ಎಸ್.** ಶಿವಣ್ಣ, ಆರ್.ಜಿ. (ದಿ)
ಅಧ್ಯಾಪಕ, ಇತಿಹಾಸ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು–570006

**ಆರ್.ಎಚ್.** ರಾಜಾರಾಮ್ ಹೆಗಡೆ
ಮುಖ್ಯಸ್ಥ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ–577451
ಶಿವಮೊಗ್ಗ

**ಆರ್.ಎಚ್.ಕೆ.** ಕುಲಕರ್ಣಿ, ಆರ್.ಎಚ್.
ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ
ಬೆಂಗಳೂರು–560001

**ಆರ್.ಐ.ಟಿ.ಎಸ್.** ರಾಜಗೋಪಾಲ್ ಐಯ್ಯಂಗಾರ್, ಟಿ.ಎಸ್.
ಅಡ್ವೋಕೇಟ್, ಕೃಷ್ಣಕುಟೀರ್
ಸಯ್ಯಾಜಿರಾವ್ ರಸ್ತೆ, ಮೈಸೂರು

**ಆರ್.ಕೆ.** ಕವಿತ, ಆರ್.
ಸಿ.ಎಚ್. 46, 6ನೆಯ ಮುಖ್ಯರಸ್ತೆ
6ನೆಯ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–570009

**ಆರ್‌ಕೆ.** ರವಿಕುಮಾರ್
ಅಧ್ಯಾಪಕ, ಇತಿಹಾಸ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು–570005

**ಆರ್.ಕೆ.ಎಂ.** ಮೊಹಂತಿ, ಆರ್.ಕೆ.
ಪ್ರವಾಚಕ, ಪುರಾತತ್ತ್ವ ವಿಭಾಗ
ಡೆಕ್ಕನ್ ಕಾಲೇಜು, ಪುಣೆ–411006

**ಆರ್‌ಕೆ.ಎಸ್.** ರವಿಕೋರಿ ಶೆಟ್ಟರ್
ಪ್ರಾಧ್ಯಾಪಕ, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003

**ಆರ್.ಎಂ.ಬಿ.** ರಜನಿ, ಎಂ.ಬಿ.
305–ಎ–ಸಂಗೀತ ಅಪಾರ್ಟ್‌ಮೆಂಟ್ಸ್
5ನೆಯ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು–560003

**ಆರ್.ಎಂ.ಕೆ.** ರಾಮಕೃಷ್ಣ, ಆರ್.
ಪ್ರವಾಚಕ, ಭಾಷಾವಿಜ್ಞಾನ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

| | |
|---|---|
| **ಆರ್.ಎಂ.ಎಸ್.** | ಷಡಕ್ಷರಯ್ಯ, ಆರ್.ಎಂ.<br>ಪ್ರಾಧ್ಯಾಪಕ, ಕನ್ನಡ ಸಂಶೋಧನ ಸಂಸ್ಥೆ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580003 |
| **ಆರ್.ಎನ್.ಎಸ್.** | ರಂಗರಾಜು, ಎನ್.ಎಸ್.<br>ಮುಖ್ಯಸ್ಥ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ<br>ವಿಭಾಗ, ಮಾನಸಗಂಗೋತ್ರಿ<br>ಮೈಸೂರು–570006 |
| **ಆರ್‌ಓ.** | ರೋಹಿಣಿಪಾಂಡೆ<br>ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ<br>ಗೋವ ವೃತ್ತ, ಸೇಂಟ್ ಇನೆಝ್ ರಸ್ತೆ<br>ಪಣಜಿ – 403001 |
| **ಆರ್.ಪಿ.** | ರಾಜೇಂದ್ರನ್. ಪಿ.<br>ಸಹ ಪ್ರಾಧ್ಯಾಪಕ, ಇತಿಹಾಸ ಅಧ್ಯಯನ ವಿಭಾಗ<br>ಕೇರಳ ವಿಶ್ವವಿದ್ಯಾಲಯ, ಕರಿವಟ್ಟಂ<br>ಕೇರಳ – 695581 |
| **ಆರ್.ಪಿಎ.** | ಪರಿಮಳ, ಆರ್.<br>ಅಧ್ಯಾಪಕಿ, ಇತಿಹಾಸ ವಿಭಾಗ<br>ಎಂ.ಇ.ಎಸ್. ಕಾಲೇಜು, ಬೆಂಗಳೂರು |
| **ಆರ್.ಆರ್.** | ರಾಜಣ್ಣ, ಆರ್.<br>ಮುಖ್ಯಸ್ಥ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಆರ್‌ಆರ್.** | ರೇಖಾರಾವ್<br>13, ಸುರೇಖ, ಎ.ಇ.ಸಿ.ಎಸ್. 2ನೆಯ ಹಂತ<br>1ನೆಯ ಅಡ್ಡರಸ್ತೆ, ಇಸ್ರೋ ಮುಖ್ಯ ಕಛೇರಿ ಹತ್ತಿರ<br>ಸಂಜಯನಗರ, ಬೆಂಗಳೂರು–560094 |
| **ಆರ್.ಆರ್.ಎ.** | ಆತಗೂರ್, ಆರ್.ಆರ್.<br>ಪ್ರಾಧ್ಯಾಪಕ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ<br>ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ<br>ಧಾರವಾಡ–580003 |
| **ಆರ್.ಎಸ್.** | ರಾಜಶೇಖರಶೆಟ್ಟಿ<br>ಭೂಗೋಳವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಆರ್.ಎಸ್.ಬಿ.** | ಭೂಸನೂರಮಠ, ಆರ್.ಎಸ್.<br>ಪ್ರವಾಚಕ, ಭೌತವಿಜ್ಞಾನ ವಿಭಾಗ<br>ಕರ್ನಾಟಕ ವಿಜ್ಞಾನ ಕಾಲೇಜು, ಧಾರವಾಡ |
| **ಆರ್.ಎಸ್.ಪಿ.** | ಪಂಚಮುಖಿ, ಆರ್.ಎಸ್. (ದಿ)<br>ಬೆಂಗಳೂರು |
| **ಆರ್‌ಎಸ್.ಎಸ್.** | ರಾಜಶೇಖರ್.ಎಸ್.<br>ಶ್ರೀಗಣೇಶ ದೇವಾಲಯದ ಎದುರು<br>ರಾಣಿ ಚೆನ್ನಮ್ಮನಗರ, ಧಾರವಾಡ |
| **ಆರ್.ಟಿ.** | ರಾಕೇಶ್‌ತಿವಾರಿ<br>ನಿರ್ದೇಶಕ, ರಾಜ್ಯ ಪುರಾತತ್ತ್ವ ಇಲಾಖೆ<br>ರೊಶನ್ ಉದ್ ದೌಲಕೋಠಿ, ಕೈಸರ್‌ಭಾಗ್<br>ಲಖನೌ–226001, ಉತ್ತರ ಪ್ರದೇಶ |
| **ಆರ್.ಟಿ.ಎಸ್.** | ರವಿಶಂಕರ್, ಟಿ.ಎಸ್.<br>ಉಪನಿರ್ದೇಶಕ, ಶಾಸನಶಾಸ್ತ್ರ ಕಚೇರಿ, ಭಾರತೀಯ<br>ಪುರಾತತ್ತ್ವ ಸರ್ವೇಕ್ಷಣ ಇಲಾಖೆ, ವಿಜಯನಗರ<br>ಮೈಸೂರು |
| **ಎಸ್.** | ಶೋಭನಗೋಖಲೆ<br>14 ಸಿ, ಅಭಿಜಿತ್, ಅನಿಕೇತನ ಸೊಸೈಟಿ<br>ಸ್ವಾಮಿವಿವೇಕಾನಂದ ರಸ್ತೆ, ಬಿಬ್ವೆವಾಡಿ<br>ಪುಣೆ–411037 |
| **ಎಸ್.ಎ.ಕೆ.** | ಆನಂದಕುಮಾರ್, ಎಸ್.<br>ಕರ್ನಾಟಕ ಥಿಯೊಲಾಜಿಕಲ್ ಕಾಲೇಜು<br>ಬಲ್ಮಠ, ಮಂಗಳೂರು |
| **ಎಸ್‌ಎ.ಕೆ.** | ಸಾವಿತ್ರಿ, ಕೆ.<br>ಕಸ್ತೂರಿನಿವಾಸ, ಕಂಕನಾಡಿ, ಮಂಗಳೂರು–2 |
| **ಎಸ್‌ಎಆರ್ .** | ಸರಸ್ವತಿ<br>ಅಧ್ಯಾಪಕಿ, ರಾಜ್ಯಶಾಸ್ತ್ರ ವಿಭಾಗ<br>ಸರ್ಕಾರಿ ಕಾಲೇಜು, ಮಡಿಕೇರಿ |
| **ಎಸ್.ಬಿ.** | ಸತ್ಯಭಾಮ ಬದರಿನಾಥ್<br>ಪುರಾತತ್ತ್ವ ಅಧೀಕ್ಷಕಿ, ಭಾರತೀಯ ಪುರಾತತ್ತ್ವ<br>ಸರ್ವೇಕ್ಷಣ ಇಲಾಖೆ, ಚೆನ್ನೈ ವೃತ್ತ<br>9, ಸೇಂಟ್ ಜಾರ್ಜ್ ಫೋರ್ಟ್, ಚೆನ್ನೈ–600009 |
| **ಎಸ್‌ಬಿಎಚ್‌ಎ.** | ಶ್ಯಾಮ್‌ಭಟ್<br>ಪ್ರವಾಚಕ, ಇತಿಹಾಸ ವಿಭಾಗ<br>ಗೋವ ವಿಶ್ವವಿದ್ಯಾಲಯ, ಪಣಜಿ, ಗೋವ |
| **ಎಸ್.ಬಿಐ.** | ಶ್ರೀಪಾದ ಬಿಚ್ಚುಗತ್ತಿ<br>ಯಲಸಿ ಗ್ರಾಮ, ಹಳೇ ಸೊರಬ ಅಂಚೆ–577429<br>ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ |
| **ಎಸ್.ಬಿ.ಕೆ .** | ಶರಣಬಸಪ್ಪ ಕೋಲ್ಕರ್<br>ಪ್ರಾಧ್ಯಾಪಕ, ಕೆ.ಎಸ್.ಸಿ<br>ಮಹಿಳಾ ಮಹಾವಿದ್ಯಾಲಯ, ಗಂಗಾವತಿ–583227 |
| **ಎಸ್.ಬಿ.ಎಸ್.** | ಸುಬ್ಬರಾವ್, ಬಿ.ಎಸ್.<br>ಅಕ್ಷಯ ನಿಲಯ, ಮೊದಲನೆಯ ಮಹಡಿ<br>ಹೆಬ್ಬಾಳ್ ಪೋಲಿಸ್ ಸ್ಟೇಷನ್ ಹಿಂದೆ<br>ಹೆಬ್ಬಾಳ್, ಬೆಂಗಳೂರು–560024 |
| **ಎಸ್.ಸಿ.ಎಸ್.** | ಶೇಷಾದ್ರಿ, ಸಿ.ಎಸ್.<br>ಸಹಾಯಕ ಪುರಾತತ್ತ್ವಜ್ಞ, ಭಾರತೀಯ<br>ಪುರಾತತ್ತ್ವ ಸರ್ವೇಕ್ಷಣ ಇಲಾಖೆ, ಕೇಂದ್ರೀಯ<br>ಸದನ, 5ನೆಯ ಮಹಡಿ, ಎಫ್ ಬ್ಲಾಕ್<br>17ನೆಯ ಮುಖ್ಯರಸ್ತೆ, ಕೋರಮಂಗಲ<br>ಬೆಂಗಳೂರು–560016 |
| **ಎಸ್.ಡಿ.ಎಂ.** | ದಕ್ಷಿಣಾಮೂರ್ತಿ, ಎಸ್.<br>ಅಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ<br>ಮಾನಸಗಂಗೋತ್ರಿ, ಮೈಸೂರು–570006 |
| **ಎಸ್.ಜಿ.ಎಂ.** | ಸೈಯದ್ ಘೌಸ್ ಮೊಹಿಯುದ್ದೀನ್<br>ಸಂಪಾದಕ, ಅಲ್‌ಕಲಾಂ, ಕಲಾಸಿಪಾಳ್ಯಂ<br>ಬೆಂಗಳೂರು |
| **ಎಸ್‌ಎಚ್‌ಎ.ಬಿ.** | ಶಶಿಶೇಖರನ್, ಬಿ.<br>ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷನ್<br>ಟೆಕ್ನಾಲಜಿ, ಚೆನ್ನೈ–601302 |
| **ಎಸ್‌ಎಚ್‌ಐ.** | ಶಿವಣ್ಣ<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎಸ್‌ಎಚ್‌ಓ.ಟಿ.** | ಶೋಭ, ಟಿ.<br>140, 2ನೆಯ ಮುಖ್ಯರಸ್ತೆ<br>ಶೇಷಾದ್ರಿಪುರಂ, ಬೆಂಗಳೂರು–560020 |
| **ಎಸ್‌ಎಚ್.ಆರ್.** | ಶೈಲಜ ರಾಯ್<br>2ಬಿ/173, ವಿಂಡರ್‌ಮಿಯರ್<br>ನ್ಯೂ ಲಿಂಕ್ ರೋಡ್, ಓಶಿವಾರ ಪೊಲೀಸ್<br>ಠಾಣೆ ಹತ್ತಿರ, ಆಜ್ಹಾದ್ ನಗರ, ಅಂಧೇರಿ<br>ಮುಂಬಯಿ – 400053 |

**ಎಸ್.ಜೆ.** ಸೆಬಾಸ್ಟಿಯನ್ ಜೋಸೆಫ್
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಸ್.ಜೆವಿ.** ಸೀತಾರಾಮ ಜಾಗೀರದಾರ್
ಸಹಾಯಕ ಶಾಸನತಜ್ಞ (ವಿ)
ಕಲ್ಪ, 406 ಬಿ, 3ನೆಯ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು–570009

**ಎಸ್.ಜೆ.ಎಸ್.** ಸಾಮಕ್, ಎಸ್.ಜೆ.
ಸುಮಿತ್ರ, 3ನೆಯ ಮುಖ್ಯರಸ್ತೆ, 3ನೆಯ ಅಡ್ಡರಸ್ತೆ
ಪ್ರಿಯದರ್ಶಿನಿ ಬಡಾವಣೆ, ಶಿವಮೊಗ್ಗ – 577206

**ಎಸ್.ಜೆ.ಎಸ್ಎ.** ಸಮರ್ಥ, ಎಸ್.ಜೆ.
16, ಮಿಲ್ಲರ್ ರಸ್ತೆ, ಬೆಂಗಳೂರು

**ಎಸ್.ಕೆ.** ಶಿವಾನಂದ ಕುಲಕರ್ಣಿ
ಅಧೀಕ್ಷಕ ಪುರಾತತ್ತ್ವಜ್ಞ
ಬರೋಡ ವೃತ್ತ, ಪುರಾತತ್ತ್ವ ಭವನ, ಮಾಂಡವಿ
ವಡೋದರ–390001, ಗುಜರಾತ್

**ಎಸ್.ಕೆ.ಬಿ.** ಶಿವತಾರಕ, ಕೆ.ಬಿ.
ಮುಖ್ಯಸ್ಥ, ಪ್ರಾಚೀನ ಇತಿಹಾಸ ಮತ್ತು
ಪುರಾತತ್ತ್ವ ವಿಭಾಗ, ಎಸ್.ಎಂ.ಎಸ್. ಕಾಲೇಜು
ಬ್ರಹ್ಮಾವರ–576213

**ಎಸ್.ಕೆ.ಜೆ.** ಜೋಶಿ, ಎಸ್.ಕೆ.
60, ಶ್ರೀಕೃಪ, ಸಿಲ್ವರ್ ಆರ್ಚರ್ಡ್
ಶ್ರೀರಂಗಮಾರ್ಗ (ಕೆಳಗೇರಿ ರಸ್ತೆ), ಧಾರವಾಡ–580001

**ಎಸ್.ಕೆ.ಕೆ.** ಕಿಟ್ಟಮ್ಮ, ಎಸ್.ಕೆ.
ಪ್ರಾಧ್ಯಾಪಕಿ (ವಿ), ಇತಿಹಾಸ ವಿಭಾಗ
ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಂಗಳೂರು

**ಎಸ್.ಕೆಒ.** ಶ್ರೀನಿವಾಸ ಕೊರಟಿ
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಆಚಾರ್ಯ ಪಾಠಶಾಲಾ ಕಾಲೇಜು
ಬೆಂಗಳೂರು

**ಎಸ್.ಕೆ.ಆರ್.** ರಾಮಚಂದ್ರರಾವ್, ಎಸ್.ಕೆ.
12/305, 1ನೆಯ ಬ್ಲಾಕ್, 6ನೆಯ ತಿರುವು
ಜಯನಗರ, ಬೆಂಗಳೂರು

**ಎಸ್.ಕೆ.ಎಸ್.** ಶಿವಣ್ಣ, ಕೆ.ಎಸ್.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

**ಎಸ್.ಎಂ.** ಶೇಷಾದ್ರಿ, ಎಂ. (ದಿ)
ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು
ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ
ಮೈಸೂರು–570006

**ಎಸ್.ಎಂ.ಎ.** ಅಲಿ, ಎಸ್.ಎಂ.
ಮುಖ್ಯಸ್ಥ, ಭೂಗೋಳವಿಜ್ಞಾನ ವಿಭಾಗ
ಸೌಗರ್ ವಿಶ್ವವಿದ್ಯಾಲಯ, ಮಧ್ಯಪ್ರದೇಶ

**ಎಸ್.ಎಂ.ಎಚ್.** ಹುಣಶ್ಯಾಳ, ಎಸ್.ಎಂ.
ಪ್ರಾಂಶುಪಾಲ
ಹಮ್‌ದರ್ದ್ ಹೈಸ್ಕೂಲ್, ರಾಯಚೂರು

**ಎಸ್.ಎಂಐ.** ಶೀಲಾ ಮಿಶ್ರ
ಪ್ರಾಧ್ಯಾಪಕಿ, ಪುರಾತತ್ತ್ವ ವಿಭಾಗ
ಡೆಕ್ಕನ್ ಕಾಲೇಜು, ಪುಣೆ–411006

**ಎಸ್.ಎಂ.ವಿ.** ಶ್ರೀನಿವಾಸ್, ಎಂ.ವಿ.
ಪ್ರಾಂಶುಪಾಲ
ಸರ್ಕಾರಿ ಕಲಾ ಕಾಲೇಜು, ಸಿಂಧನೂರು

**ಎಸ್.ಎನ್.** ನಾಗರಾಜು, ಎಸ್.
ಎ/5, ಸಾಯಿ ಗಣೇಶ ರೆಸಿಡೆನ್ಸ್
39, ರಾಮಾಂಜನೇಯ ಲೇಔಟ್
ಚಿಕ್ಕಸಂದ್ರ, ಬೆಂಗಳೂರು–560061

**ಎಸ್.ಎನ್ಎ.** ಸುಮತೀಂದ್ರ ನಾಡಿಗ್
ಪತ್ರಿಕಾ ವರದಿಗಾರ, ಸಂತೆಬೆನ್ನೂರು–577552

**ಎಸ್.ಎನ್ಎಆರ್.** ನಾರಾಯಣ, ಎಸ್.
ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು–570005

**ಎಸ್.ಎನ್.ಕೆ.** ಕೃಷ್ಣಾ ಜೋಯಿಸ್, ಎಸ್.ಎನ್.
ಸಂಶೋಧನ ಸಹಾಯಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

**ಎಸ್ಎನ್.ಕೆ.** ಸೂರ್ಯನಾಥ ಕಾಮತ್
798, ಕೀರ್ತಿ, 11ನೆಯ ಮುಖ್ಯರಸ್ತೆ
6ನೆಯ ಅಡ್ಡರಸ್ತೆ, ಹನುಮಂತನಗರ
ಬೆಂಗಳೂರು–560019

**ಎಸ್ಎನ್.ಎಸ್.** ಸ್ವಾಮಿನಾಥನ್, ಎಸ್.
ಅಧೀಕ್ಷಕ ಶಾಸನತಜ್ಞ
639, 4ನೆಯ ಅಡ್ಡರಸ್ತೆ, ಐ ಬ್ಲಾಕ್
ರಾಮಕೃಷ್ಣನಗರ, ಮೈಸೂರು–570022

**ಎಸ್.ಪಿ.** ಶಾಂತಿಪಪ್ಪು
ಫ್ಲಾಟ್ ನಂ.2, ಮೋತಿಮಹಲ್ ಬಿಲ್ಡಿಂಗ್
ಆಳಂದಿ ರಸ್ತೆ, ಪುಣೆ–411015

**ಎಸ್.ಪಿ.ಐ.** ಶೆಲ್ವಪಿಳ್ಳೆ ಐಯ್ಯಂಗಾರ್
ಅಧ್ಯಾಪಕ, ಇತಿಹಾಸ ವಿಭಾಗ
ಡಿ.ದೇವರಾಜೇ ಅರಸು ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಹುಣಸೂರು

**ಎಸ್.ಆರ್.** ಶ್ರೀನಿವಾಸರಿತ್ತಿ
ಪ್ರಾಧ್ಯಾಪಕ (ವಿ), ಭಾರತಿ
ನವೋದಯ ನಗರ, ಧಾರವಾಡ–580003

**ಎಸ್.ಆರ್ಎಎನ್.** ರಂಗಾಚಾರ್, ಎಸ್. (ದಿ)
ಸಂಸ್ಕೃತ ಪ್ರಾಧ್ಯಾಪಕ
1040, ಚಾಮರಾಜಪುರಂ, ಮೈಸೂರು

**ಎಸ್ಆರ್ಐ.ಬಿ.** ಶ್ರೀಪಾದಭಟ್ಟ
ಅಧ್ಯಾಪಕ, ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–570006

**ಎಸ್.ಆರ್.ಆರ್ಎ.** ರಾಮಸ್ವಾಮಿ, ಎಸ್.ಆರ್.
8, 4ನೆಯ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು

**ಎಸ್.ಆರ್.ಆರ್.ಐ.** ರಂಗಸ್ವಾಮಿ ಐಯ್ಯಂಗಾರ್, ಎಸ್.ಆರ್.
5ನೆಯ ಮುಖ್ಯರಸ್ತೆ, ವಿ.ವಿ.ಪುರಂ, ಮೈಸೂರು

**ಎಸ್.ಎಸ್.** ಶೆಟ್ಟರ್, ಎಸ್.
ನಿರ್ದೇಶಕರು
ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ
ಜೆ.ಸಿ. ರಸ್ತೆ, ಬೆಂಗಳೂರು

**ಎಸ್.ಎಸ್ಐ.** ಸಿಲ್ವ, ಎಸ್.
ವಕೀಲರು, ಹಿಲ್‌ಸೈಡ್, ಕಾರವಾರ

**ಎಸ್ಎಸ್ಬಿ.** ಸ್ಮಿತಾಸುರೆಬಾನಕರ್
690, 5ನೆಯ ಅಡ್ಡರಸ್ತೆ, ಭಾಗ್ಯನಗರ
ಬೆಳಗಾವಿ–590006

| | |
|---|---|
| **ಎಸ್.ಎಸ್.ಆರ್.** | ಸುಬ್ಬರಾಮನ್, ಎಸ್.<br>2, ಸಾಹುಕಾರ್ ಚನ್ನಯ್ಯರಸ್ತೆ<br>ಗಂಗೋತ್ರಿ ಬಡಾವಣೆ, 2ನೆಯ ಹಂತ<br>ಮೈಸೂರು–570023 |
| **ಎಸ್.ಎಸ್.ಆರ್ಎ.** | ರಾಘವಾಚಾರ್, ಎಸ್.ಎಸ್. (ದಿ)<br>ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎಸ್.ಟಿ.** | ಶೀಲಾ ತ್ರಿಪಾಠಿ<br>ಮೇರಿನ್ ಆರ್ಕಿಯಾಲಜಿ ಸೆಂಟರ್<br>ನ್ಯಾಷನಲ್ ಇನ್ಸ್‌ಸ್ಟಿಟ್ಯೂಟ್ ಆಫ್ ಓಷನೊಗ್ರಾಫಿ<br>ದೋನ ಪೌಲ, ಗೋವ–403004 |
| **ಎಸ್.ಯು.ಡಿ.** | ದೆರಣಿಯಂಗಲ, ಎಸ್.ಯು.<br>ಪುರಾತತ್ತ್ವ ವಿಭಾಗ, ಶ್ರೀಲಂಕ |
| **ಎಸ್‌ಯು.ಎಸ್.** | ಸುಗೀತ ಸುವರ್ಣ<br>ಪ್ರವಾಚಕಿ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಎಸ್.ಎಸ್.ವಿ.** | ಸುನಂದ ಶ್ರೀವಾಸ್ತವ<br>ಪುರಾತತ್ತ್ವಜ್ಞ ಉಪ ಅಧೀಕ್ಷಕ<br>ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ<br>ಜನಪತ್, ನವದೆಹಲಿ–110011 |
| **ಎಸ್.ವಿ.ಡಿ.** | ವೆಂಕಟದೇಶಿಕಾಚಾರ್, ಎಸ್.<br>5, ಕಾರ್ನ್‌ವಾಲೀಸ್ ರಸ್ತೆ, ನವದೆಹಲಿ |
| **ಎಸ್.ವಿ.ಪಿ.** | ಶ್ರೀನಿವಾಸ, ವಿ. ಪಾಡಿಗಾರ<br>ಮುಖ್ಯಸ್ಥ, ಪ್ರಾಚೀನ ಭಾರತೀಯ ಇತಿಹಾಸ<br>ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ<br>ವಿಶ್ವವಿದ್ಯಾಲಯ, ಧಾರವಾಡ–580003 |
| **ಎಸ್.ವಿ.ಪಿ.ಎಚ್.** | ಹಳಕಟ್ಟಿ, ಎಸ್.ವಿ.ಪಿ.<br>ಪುರಾತತ್ತ್ವಜ್ಞ ಅಧೀಕ್ಷಕ<br>ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ<br>ಕೇಂದ್ರೀಯ ಸದನ, 5ನೆಯ ಮಹಡಿ<br>ಎಫ್ ಬ್ಲಾಕ್, 17ನೆಯ ಮುಖ್ಯರಸ್ತೆ<br>ಕೋರಮಂಗಲ, ಬೆಂಗಳೂರು–560016 |
| **ಎಸ್.ವಿ.ಆರ್.** | ರಂಗಣ್ಣ, ಎಸ್.ವಿ. (ದಿ)<br>ಇಂಗ್ಲಿಷ್ ಪ್ರಾಧ್ಯಾಪಕ<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು–570006 |
| **ಎಸ್.ವಿ.ಎಸ್.ಎಲ್.** | ಸ್ವರ್ಣಲತಾ, ಎಸ್.ವಿ.<br>25, ನವೋದಯ ಸಾಹಿತ್ಯ ಮಂದಿರ<br>ಕಾಂತರಾಜೇ ಅರಸ್ ರಸ್ತೆ, ಮೈಸೂರು |
| **ಎಸ್.ವೈ.ಎ.** | ಸೈಯದ್ ಅಜಂ<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ಟಿ.ಎಲ್.ಕೆ.** | ಕಾಂತಮ್, ಟಿ.ಎಲ್.<br>725, 11ನೆಯ ಮುಖ್ಯರಸ್ತೆ<br>ಮಲ್ಲೇಶ್ವರಂ, ಬೆಂಗಳೂರು–560003 |
| **ಟಿ.ಎಸ್.** | ಸತ್ಯಮೂರ್ತಿ, ಟಿ.<br>26/43, ಜಾನಕಿರಾಮನ್ ರಸ್ತೆ<br>ಮಾಂಬಲಂ ಪೂರ್ವ, ಚೆನ್ನೈ–600033 |
| **ಟಿ.ಎಸ್.ಆರ್.ಜಿ.** | ರಾಜಗೋಪಾಲ್, ಟಿ.ಎಸ್.<br>ಇತಿಹಾಸ ವಿಭಾಗ, ಮಿಲಾಗ್ರೆಸ್ ಕಾಲೇಜು<br>ಕಲ್ಯಾಣಪುರ, ಉಡುಪಿ |
| **ಟಿ.ಎಸ್.ಎಸ್.** | ಸುಬ್ಬರಾಯ, ಟಿ.ಎಸ್.<br>ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ<br>ಬೆಂಗಳೂರು |
| **ಟಿ.ಟಿ.ಎಸ್.** | ತಿರುಮಲೆ ತಾತಾಚಾರ್ಯಶರ್ಮ (ದಿ)<br>54, ಶಂಕರವನ, ಶಂಕರಪುರಂ, ಬೆಂಗಳೂರು |
| **ಟಿ.ವಿ.ಜಿಯು.** | ವೆಂಕಣ್ಣಗುಡ್ಡ, ಟಿ. (ದಿ)<br>ಪ್ರವಾಚಕ, ಇತಿಹಾಸ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ<br>ಮಾನಸಗಂಗೋತ್ರಿ, ಮೈಸೂರು–570006 |
| **ಟಿ.ವಿ.ಎಸ್.** | ಶಿವರುದ್ರಪ್ಪ, ಟಿ.ವಿ.<br>ಪ್ರಾಧ್ಯಾಪಕ (ವಿ), ಎಂ.ಐ.ಜಿ. 11, ರವಿನಿಕೇತನ<br>ಗಂಗೋತ್ರಿ ಬಡಾವಣೆ, ಮೈಸೂರು |
| **ಟಿ.ವಿ.ವಿ.** | ವೆಂಕಟಾಚಲಶಾಸ್ತ್ರೀ, ಟಿ.ವಿ.<br>ಪ್ರಾಧ್ಯಾಪಕ (ವಿ), ಬ್ರಾಹ್ಮೀ, ಆಶ್ರಮರಸ್ತೆ<br>ಜಯಲಕ್ಷ್ಮೀಪುರಂ, ಮೈಸೂರು–570012 |
| **ಯು.ಬಿಐ.** | ಉಮೇಶ ಬಿಚ್ಚುಗತ್ತಿ<br>c/o ಶ್ರೀಪಾದ ಬಿಚ್ಚುಗತ್ತಿ, ಯಲಸಿ ಗ್ರಾಮ, ಹಳೇ<br>ಸೊರಬ ಅಂಚೆ–577429, ಸೊರಬ ತಾಲ್ಲೂಕು<br>ಶಿವಮೊಗ್ಗ ಜಿಲ್ಲೆ |
| **ಯು.ಎಸ್.** | ಉದಯಶಾಸ್ತ್ರಿ<br>ಪುರಾತತ್ತ್ವ ಅಧಿಕಾರಿ, ಭಾರತೀಯ ಪುರಾತತ್ತ್ವ<br>ಸರ್ವೇಕ್ಷಣ ಇಲಾಖೆ, ಓಲ್ಡ್ ಹೈಕೋರ್ಟ್ ಕಟ್ಟಡ<br>ನಾಗಪುರ–440001 |
| **ವಿ.ಬಿ.** | ವಾಸುದೇವ ಬಡಿಗೇರ<br>ಪ್ರವಾಚಕ, ಪ್ರಾಚೀನ ಇತಿಹಾಸ ಮತ್ತು<br>ಪುರಾತತ್ತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ<br>ಹಂಪಿ–583276 |
| **ವಿ.ಸಿ.ಕೆ.** | ವಿಶ್ವನಾಥ್, ಸಿ.ಕೆ.<br>ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು<br>ಮೈಸೂರು |
| **ವಿ.ಡಿ.ಎಚ್.** | ಹೆಗಡೆ, ವಿ.ಡಿ.<br>ಪ್ರಾಧ್ಯಾಪಕ (ವಿ), ಹಿಂದಿ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| **ವಿ.ಡಿ.ಎಂ.** | ಮಿಶ್ರ, ವಿ.ಡಿ.<br>39ಸಿ, ಸ್ಟಾನ್‌ಲಿ ರೋಡ್<br>ಅಲಹಾಬಾದ್–211002, ಉತ್ತರಪ್ರದೇಶ |
| **ವಿಇ.ಎಸ್.ವಿ.** | ವೆಂಕಟೇಶಯ್ಯ, ಎಸ್.ವಿ.<br>ಪುರಾತತ್ತ್ವಜ್ಞ ಅಧೀಕ್ಷಕ<br>ಭಾರತೀಯ ಸರ್ವೇಕ್ಷಣ ಇಲಾಖೆ<br>ಭೂಪಾಲ್ ವೃತ್ತ, ಜಿ.ಟಿ.ಬಿ, ಕಾಂಪ್ಲೆಕ್ಸ್<br>ಬಿ–ಬ್ಲಾಕ್, ನ್ಯೂ ಮಾರ್ಕೆಟ್, ಟಿ.ಟಿ. ನಗರ<br>ಭೂಪಾಲ್–462003 |
| **ವಿ.ಜಿ.ಕೆ.** | ಕೃಷ್ಣಮೂರ್ತಿ, ವಿ.ಜಿ. (ದಿ)<br>ಕೃಷ್ಣಾಲಯ, 12ನೆಯ ತಿರುವು<br>ವಾಣಿವಿಲಾಸಪುರಂ, ಮೈಸೂರು |
| **ವಿ.ಎಚ್.** | ವಿಜಯಹರನ್<br>ನಿರ್ದೇಶಕಿ, ಆಕಾಶವಾಣಿ, ಮೈಸೂರು |
| **ವಿ.ಕೆ.** | ವೀರಪ್ಪ, ಕೆ.<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ<br>ಬೆಂಗಳೂರು |

| | |
|---|---|
| ವಿ.ಕೆ.ಜಿ. | ವಸಂತಮಾಧವ, ಕೆ.ಜಿ.<br>ಆರಾಧನ, ಪಾವಂಜೆ, ಹಳೆಯಂಗಡಿ–574148<br>ಮಂಗಳೂರು ತಾಲ್ಲೂಕು ಹಾಗೂ ಜಿಲ್ಲೆ |
| ವಿಎಲ್.ಕೆ. | ವಸಂತಲಕ್ಷ್ಮಿ, ಕೆ.<br>1676, 5ನೆಯ ಎ ಅಡ್ಡರಸ್ತೆ, 10ನೆಯ<br>ಮುಖ್ಯರಸ್ತೆ, 1ನೆಯ ಬ್ಲಾಕ್, ಬನಶಂಕರಿ<br>2ನೆಯ ಹಂತ, ಬೆಂಗಳೂರು–560050 |
| ವಿ.ಎನ್.ಎಸ್. | ಶೇಷಗಿರಿರಾವ್, ವಿ.ಎನ್.<br>ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು–570006 |
| ವಿ.ಎಸ್. | ಶೋಭಾ, ವಿ.<br>ಅಧ್ಯಾಪಕಿ, ಪ್ರಾಚೀನ ಇತಿಹಾಸ ಮತ್ತು<br>ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ<br>ಮೈಸೂರು–570006 |
| ವಿ.ಎಸ್.ಬಿ. | ಬಡಿಗೇರ, ವಿ.ಎಸ್.<br>ಪುರಾತತ್ತ್ವಜ್ಞ ಉಪ ಅಧೀಕ್ಷಕ<br>ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ<br>ಔರಂಗಬಾದ್ ವೃತ್ತ, ಬೀಬಿ–ಕ–ಮಕ್ಬರ<br>ಔರಂಗಬಾದ್–431004 |
| ವಿ.ಎಸ್ಎಚ್. | ವಸಂತ ಶಿಂಧೆ<br>ಪ್ರಾಧ್ಯಾಪಕ, ಪುರಾತತ್ತ್ವ ವಿಭಾಗ<br>ಡೆಕ್ಕನ್ ಕಾಲೇಜು, ಪುಣೆ–411006 |
| ವಿ.ಎಸ್.ಎನ್. | ನಾರಾಯಣರಾವ್, ವಿ.ಎಸ್.<br>ಪ್ರಚಾರಕ, ವಿಚಾರ ಸಾಹಿತ್ಯ, ಬೆಂಗಳೂರು |
| ವಿ.ಎಸ್.ಪಿ. | ಪಾಟೀಲ, ವಿ.ಎಸ್.<br>ಕಲಾ ಮತ್ತು ವಿಜ್ಞಾನ ಕಾಲೇಜು, ಇಳಕಲ್ಲು<br>ಬಾಗಲಕೋಟೆ ಜಿಲ್ಲೆ |
| ವಿ.ಎಸ್.ಎಸ್. | ಸಂಪತ್ಕುಮಾರಾಚಾರ್ಯ, ವಿ.ಎಸ್.<br>1402/ಎ, 8ನೆಯ ತಿರುವು<br>ಕೆ.ಆರ್.ಮೊಹಲ್ಲ, ಮೈಸೂರು |
| ವೈ.ಸಿ.ಬಿ. | ಭಾನುಮತಿ, ವೈ.ಸಿ.<br>ಸಂಶೋಧನ ಸಹಾಯಕಿ, ಕುವೆಂಪು ಕನ್ನಡ<br>ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ<br>ಮೈಸೂರು–570006 |
| ವೈ.ಎಂ. | ಯೋಗೇಶ್, ಎಂ.<br>426, 5ನೆಯ ಮುಖ್ಯರಸ್ತೆ<br>ರೂಪಾನಗರ, ಬೋಗಾದಿ, ಮೈಸೂರು |

# ವಿಷಯ ಸೂಚಿ

## ಈ ಸೂಚಿಯಲ್ಲಿರುವ ಶೀರ್ಷಿಕೆಗಳ ಮುಂದೆ ಇರುವ ಸಂಖ್ಯೆ ಪುಟವನ್ನೂ ಎ, ಬಿಗಳು ಅನುಕ್ರಮವಾಗಿ ಪುಟದ ಎಡಭಾಗ ಮತ್ತು ಬಲಭಾಗವನ್ನೂ ಸೂಚಿಸುತ್ತವೆ


ಅಂಗಡಿ ೧ ಎ
ಅಂಡಮಾನ್ ಮತ್ತು ನಿಕೋಬಾರ್ ೧ ಬಿ
ಅಂತಾರಾಷ್ಟ್ರೀಯ ಸಮ್ಮೇಳನಗಳು ೨ ಎ
ಅಂತಿಚಕ್ ೨ ಬಿ
ಅಂತ್ಯ ಹಳೆ ಶಿಲಾಯುಗ ಸಂಸ್ಕೃತಿ ೨ ಬಿ
ಅಂಬಾರಿ ೫ ಬಿ
ಅಂಬೇಡ್ಕರ್, ಬಿ.ಆರ್. ೬ ಎ
ಅಕಾಲಿ ಚಳವಳಿ ೯ ಬಿ
ಅಕ್ಕಮಹಾದೇವಿ ೯ ಬಿ
ಅಕ್ಕಿ ಆಲೂರು ೧೦ ಎ
ಅಕ್ಬರ್ ೧೦ ಎ
ಅಘೋರಿ ಪಂಥ ೧೨ ಎ
ಅಚ್ಯುತರಾಯ ೧೨ ಎ
ಅಜಂತ ೧೩ ಎ
ಅಜಿಲರು ೧೭ ಎ
ಅಜ಼ಿಲಿಯನ್ ಸಂಸ್ಕೃತಿ ೧೭ ಎ
ಅಟಾಟರ್ಕ್, ಕೆಮಾಲ್ ೧೭ ಎ
ಅಟ್ಲಾಂಟಿಕ್ ಸನ್ನದು ೧೭ ಬಿ
ಅತ್ತಿರಂಪಾಕ್ಕಮ್ ೧೭ ಬಿ
ಅತ್ರಂಜಿಖೇಡ ೧೮ ಎ
ಅಥೆನ್ಸ್ ೧೮ ಬಿ
ಅನಂತಮಾಲಿಕೆ ೧೯ ಬಿ
ಅನಗವಾಡಿ ೧೯ ಬಿ
ಅನುಭವಮಂಟಪ ೨೦ ಎ
ಅನುರಾಧಪುರ ೨೦ ಎ
ಅನ್ಯಾತಿಯನ್ ೨೦ ಬಿ
ಅರ್ನ್‌ಫೀಲ್ಡ್ ಸಂಸ್ಕೃತಿ ೨೦ ಬಿ
ಅನ್ವಯ ಕಲೆ ೨೧ ಬಿ
ಅಪ್ಪುಕಲ್ಲು ೨೨ ಎ
ಅಬುಸಿಂಬೆಲ್ ೨೨ ಎ
ಅಬ್ಬಕ್ಕ ೨೩ ಎ
ಅಬ್ದುಲ್ ಖಾದಿರ್ ಬದೌನಿ ೨೩ ಎ
ಅಬ್ದುಲ್ ರಜ಼ಾಕ್ ೨೩ ಬಿ
ಅಮರಾವತಿ ೨೩ ಬಿ
ಅಮೀರ್ ಖುಸ್ರು ೨೪ ಬಿ
ಅಮೃತ ಮಂಗಳಂ ೨೫ ಎ
ಅಮೃತಸರದ ಒಪ್ಪಂದ ೨೫ ಎ
ಅಮೆರಿಕ ೨೫ ಬಿ
ಅಮೋಘವರ್ಷ I ೨೮ ಎ
ಅಮ್ರೇಲಿ ೨೮ ಬಿ
ಅಯೋಧ್ಯೆ ೨೮ ಬಿ
ಅಯ್ಯಾವೊಳೆ ಐನೂರ್ವರು ೨೮ ಬಿ
ಅರವಿಂದ ಘೋಷ್ ೨೯ ಬಿ
ಅರಿಕಮೇಡು ೩೦ ಎ
ಅರಿಕೇಸರಿ II ೩೧ ಬಿ
ಅರೇಬಿಯ ೩೧ ಬಿ
ಅಲ್ ಖೈದಾ: ನೋಡಿ–ಭಯೋತ್ಪಾದನೆ ೩೫ ಎ
ಅಲಾಉದ್ದೀನ್ ಖಿಲ್ಜಿ ೩೫ ಎ
ಅಲಿಘರ್ ಚಳವಳಿ ೩೫ ಬಿ
ಅಲೆಕ್ಸಾಂಡರ್ ೩೬ ಎ
ಅಲೆಕ್ಸಾಂಡ್ರಿಯ ೩೮ ಎ
ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ೩೮ ಎ
ಅಲ್ತಮೀರ ೩೮ ಬಿ
ಅಲ್ಲಮಪ್ರಭು ೩೮ ಬಿ
ಅಲ್ಚಿನ್, ಎಫ್.ಆರ್. ಮತ್ತು ಬ್ರಿಜೆಟ್ ಅಲ್ಚಿನ್ ೩೯ ಎ
ಅಶೋಕ ೩೯ ಬಿ
ಅಷ್ಟಾಹ್ನಿಕ ಪರ್ವ ೪೨ ಬಿ
ಅಸಹಕಾರ ಚಳವಳಿ ೪೨ ಬಿ
ಅಸುರ್ಗಡ ೪೩ ಎ
ಅಸ್ಸಾಮಿನ ಪುರಾತತ್ತ್ವ ೪೩ ಎ
ಅಸ್ಸೀರಿಯ ೪೪ ಬಿ
ಅಹಲ್ಯಾಬಾಯಿ ಹೋಳ್ಕರ್ ೪೬ ಎ
ಅಹಾರ್ ೪೬ ಎ
ಅಳಗಂಕುಲಂ ೪೭ ಎ
ಅಳಗರೈ ೪೭ ಬಿ
ಆಂಕೋರ್‌ಥಾಮ್ ೪೭ ಎ
ಆಂಕೋರ್‌ವಾಟ್ ೪೮ ಎ
ಆಂಗ್ಲೋಸ್ಯಾಕ್ಸನರು ೫೦ ಎ
ಆಂಟೊನೈನ್ ಸಾಮ್ರಾಟರು ೫೦ ಎ
ಆಂಧ್ರಪ್ರದೇಶ ಶಿಲಾಚಿತ್ರಗಳು: ನೋಡಿ–ಶಿಲಾಚಿತ್ರಗಳು ೫೦ ಬಿ
ಆಂಫಿಕ್ಟಿಯೋನಿ ೫೦ ಬಿ
ಆಕರಗಳು ೫೦ ಬಿ
ಆಕ್ಟ್ ಆಫ್ ಸೆಟ್ಲ್‌ಮೆಂಟ್ ೫೫ ಬಿ
ಆಕ್ಸಸ್ ನಾಗರಿಕತೆ ೫೫ ಬಿ
ಆಕ್ಸಿರಿಂಕಸ್ ಪೆಪಿರಸ್ ೫೬ ಎ
ಆಗ್ಸ್‌ಬರ್ಗ್ ಒಕ್ಕೂಟ ೫೬ ಬಿ
ಆಗ್ನೇಯ ಏಷ್ಯ ೫೬ ಬಿ
ಆಗ್ರ ೬೨ ಎ
ಆಜ಼ಾದ್, ಮೌಲಾನಾ ಅಬ್ದುಲ್ ಕಲಾಂ ೬೨ ಬಿ
ಆಜ್ಟೆಕ್ ಸಂಸ್ಕೃತಿ ೬೩ ಬಿ
ಆಟೋಮನ್ ಚಕ್ರಾಧಿಪತ್ಯ ೬೪ ಎ
ಆಡಮ್ ೬೪ ಬಿ
ಆತ್ಮಬಲಿದಾನ ೬೫ ಎ
ಆದಿ ಇತಿಹಾಸ ಕಾಲದ ಸಂಸ್ಕೃತಿ ೬೬ ಎ
ಆದಿ ಕಬ್ಬಿಣಯುಗ ೬೯ ಎ

ಆದಿಚನ್ನಲೂರು ೭೧ ಎ
ಆದಿಮಾನವ ಕಲೆ ೭೨ ಎ
ಆದಿಲ್‌ಶಾಹಿ ವಂಶ ೭೩ ಎ
ಆದಿವಾಸಿಗಳ ಹೋರಾಟ (ಭಾರತ) ೮೭ ಬಿ
ಆದಿ ಹಳೆಶಿಲಾಯುಗ ೮೮ ಎ
ಆನಂದ ದೇವಾಲಯ ೯೩ ಬಿ
ಆನಂದರು ೯೩ ಬಿ
ಆನಿಬೆಸೆಂಟ್ ೯೩ ಬಿ
ಆನೆಗುಂದಿ ೯೪ ಎ
ಆಫ್ಘಾನಿಸ್ತಾನ ೯೫ ಎ
ಆಫ್ರಿಕ ೯೯ ಎ
ಆಭೀರರು ೧೦೦ ಬಿ
ಆಮಿಯನ್ಸ್ ಒಪ್ಪಂದ ೧೦೦ ಬಿ
ಆಮ್ರಿ ೧೦೦ ಬಿ
ಆರ್ಕಾಟ್ ಮುತ್ತಿಗೆ ೧೦೦ ಬಿ
ಆರ್ಕಿಮಿಡೀಸ್ ೧೦೧ ಎ
ಆರ್ಯಭಟ ೧೦೧ ಬಿ
ಆರ್ಯರು ೧೦೨ ಎ
ಆರ್ಯಸಮಾಜ ೧೦೩ ಬಿ
ಆಲಂಗೀರ್‌ಪುರ ೧೦೪ ಎ
ಆಲ್ಪ್ಸ್ ಪರ್ವತದಲ್ಲಿ 5000 ವರ್ಷದ ಮಾನವ ೧೦೪ ಎ
ಆಲ್ಬುಕರ್ಕ್, ಆಫೊನ್ಸೊ ಡಿ ೧೦೪ ಎ
ಆಲ್ಬೆರೂನಿ ೧೦೪ ಬಿ
ಆಶ್ರಿತ ರಾಜ್ಯಗಳು ೧೦೫ ಎ
ಆಸಫ್‌ಜಾಹಿ ಆಳ್ವಿಕೆ ೧೦೫ ಎ
ಆಸ್ಟರ್ ಲಿಟ್ಸ್ ಕದನ ೧೦೮ ಎ
ಆಸ್ಟ್ರೇಲಿಯ ೧೦೮ ಎ
ಆಳುಪ ವಂಶ ೧೦೮ ಬಿ
ಇಂಕ ೧೧೦ ಎ
ಇಂಗಳದಾಳು ೧೧೨ ಬಿ
ಇಂಗ್ಲೆಂಡ್ ೧೧೩ ಎ
ಇಂಡಿಯನ್ ನ್ಯಾಷನಲ್ ಆರ್ಮಿ ೧೧೭ ಬಿ
ಇಂಡಿಯನ್ ಸಿವಿಲ್ ಸರ್ವಿಸ್ ೧೧೮ ಎ
ಇಂಡೊ–ಚೀನದ ಇತಿಹಾಸ ೧೨೧ ಎ
ಇಂದಿರಾಗಾಂಧಿ ೧೨೩ ಎ
ಇಂಫಾಲ್ ಕದನ ೧೨೪ ಎ
ಇಕ್ಷ್ವಾಕು ವಂಶ ೧೨೪ ಎ
ಇಖ್ತಾಪದ್ಧತಿ ೧೨೫ ಎ
ಇತಿಹಾಸ ೧೨೫ ಎ
ಇನಾಂಗಾಂವ್ ೧೨೬ ಬಿ
ಇಪ್ಸಸ್ ಕದನ ೧೨೮ ಎ
ಇರ್ಫಾನ್ ಹಬೀಬ್ ೧೨೮ ಎ
ಇರಾಕ್ ೧೨೮ ಬಿ
ಇರಾನ್ ೧೩೨ ಬಿ
ಇರ್ವಿನ್ ನಾಲೆ ಚಳವಳಿ ೧೩೪ ಬಿ
ಇಸಾಂಪುರ ೧೩೫ ಎ
ಇಸಿಲ ೧೩೬ ಎ
ಇಸ್ರೇಲ್ ೧೩೬ ಎ
ಇಸ್ಲಾಂ ಧರ್ಮ ೧೩೮ ಎ
ಇಸ್ಲಾಮಿ ವಾಸ್ತುಶಿಲ್ಪ ಕಲೆ ೧೩೮ ಬಿ
ಈಜಿಪ್ಟ್ ೧೪೩ ಎ
ಈಜಿಯನ್ ನಾಗರಿಕತೆ ೧೪೬ ಎ
ಈಶ್ವರಚಂದ್ರ ವಿದ್ಯಾಸಾಗರ ೧೪೭ ಬಿ
ಈಸೂರು ಚಳವಳಿ ೧೪೮ ಬಿ
ಈಸ್ಟ್ ಇಂಡಿಯ ಕಂಪನಿ ೧೪೯ ಎ
ಈಳಂ ೧೫೧ ಬಿ
ಉಗ್ರ ರಾಷ್ಟ್ರಾಭಿಮಾನ ೧೫೩ ಎ
ಉಚ್ಚಂಗಿ ಪಾಂಡ್ಯರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೧೫೩ ಎ
ಉಜ್ಜಯಿನಿ1 ೧೫೩ ಎ
ಉಜ್ಜಯಿನಿ2 ೧೫೫ ಎ
ಉತ್ತರ ಭಾರತ ಶಿಲಾ ಚಿತ್ರಕಲೆ: ನೋಡಿ–ಶಿಲಾ ಚಿತ್ರಗಳು ೧೫೭ ಎ
ಉತ್ತರ ಭಾರತದ ಬೃಹತ್ ಶಿಲಾಯುಗ ಸಂಸ್ಕೃತಿ ೧೫೭ ಎ
ಉತ್ನೂರು ೧೫೯ ಎ
ಉದಯ್ ಪೂರ್ವ ೧೫೯ ಬಿ
ಉದಾಂ ಸಿಂಗ್ ೧೫೯ ಬಿ
ಉದ್ದರೆ ಅರಸರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೧೬೦ ಎ
ಉದ್ಯಾವರ ೧೬೦ ಎ
ಉರ್ ೧೬೦ ಎ
ಉರೈಯೂರ್ ೧೬೦ ಬಿ
ಊಳಿಗಮಾನ್ಯ ಪದ್ಧತಿ ೧೬೧ ಎ
ಋಗ್ವೇದ ೧೬೧ ಎ
ಎಂಟು ಹಿಟ್ಟು ೧೬೬ ಎ
ಎಟ್ರಸ್ಕನ್ ೧೬೭ ಎ
ಎಡಕಲ್ಲು: ನೋಡಿ–ಶಿಲಾಚಿತ್ರಗಳು ೧೬೭ ಬಿ
ಎಲ್.ಟಿ.ಟಿ.ಇ. ೧೬೭ ಬಿ
ಎಲಿಫೆಂಟ ೧೬೭ ಬಿ
ಎಲಿಯಟ್, ಎಚ್.ಎಮ್. ಮತ್ತು ಡೌಸನ್‌ಜಾನ್ ೧೬೯ ಎ
ಎಲಿಯಟ್, ವಾಲ್ಟರ್ ಸರ್ ೧೬೯ ಬಿ
ಎಲ್ಲೋರ ೧೬೯ ಬಿ
ಏರಣ್ ೧೭೦ ಎ
ಏಷ್ಯ ೧೭೦ ಬಿ
ಏಳು ವರ್ಷಗಳ ಯುದ್ಧ ೧೭೭ ಬಿ
ಐಫೆಲ್ ಗೋಪುರ ೧೭೮ ಎ
ಐರೋಪ್ಯ ಕಲೆ ೧೭೮ ಎ
ಐಹೊಳೆ ೧೮೨ ಬಿ
ಒಮನ್ ಪರ್ಯಾಯ ದ್ವೀಪ ೧೮೬ ಎ
ಒರಿಸ್ಸ ಶಿಲಾ ಚಿತ್ರಕಲೆ: ನೋಡಿ–ಶಿಲಾಚಿತ್ರಗಳು ೧೮೬ ಬಿ
ಓಜಿಯಾನ ೧೮೬ ಎ
ಓಲ್ಡುವಾಯ್ ೧೮೬ ಎ
ಓಸ್ವಾಲ್ಡ್ ಸ್ಪೆಂಗ್ಲರ್ ೧೮೭ ಎ
ಔತ್ತರೇಯ ಮೆರುಗಿನ ಕಪ್ಪುಪಾತ್ರೆ ೧೮೭ ಎ
ಕಂಚಿನಯುಗ ೧೮೭ ಎ
ಕಂಚು ಶಿಲ್ಪಕಲೆ (ಕರ್ನಾಟಕ) ೧೮೮ ಬಿ
ಕಂದಾರ್ ೧೯೦ ಎ
ಕಂಪಿಲಿರಾಜ್ಯ ೧೯೦ ಬಿ
ಕದಂಬ ವಂಶ ೧೯೧ ಎ
ಕನ್‌ಫ್ಯೂಷಿಯಸ್ ೨೦೦ ಎ
ಕನಿಷ್ಕ I ೨೦೦ ಬಿ
ಕನೌಜ್ ೨೦೧ ಬಿ
ಕನ್ನಡ ಚಳವಳಿಗಳು ೨೦೨ ಬಿ
ಕಪ್ಪಲವಾಡಿ ೨೦೭ ಎ
ಕಬ್ಬಿಣಯುಗ ೨೦೭ ಎ
ಕಬ್ಬಿಣ ಲೋಹ ತಂತ್ರಗಾರಿಕೆ ೨೦೮ ಬಿ
ಕಯಥ ೨೧೨ ಎ
ಕರ್ನಾಟಕ ಏಕೀಕರಣ ೨೧೩ ಎ
ಕರ್ನಾಟಕದ ಕಿರು ಅರಸು ಮನೆತನಗಳು ೨೧೪ ಬಿ
ಕರ್ನಾಟಕದ ಕೈಫಿಯತ್ತುಗಳು ೨೧೯ ಬಿ
ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗಗಳು ೨೧೯ ಬಿ
ಕರ್ನಾಟಕದಲ್ಲಿ ಕ್ರೈಸ್ತ ಮಿಷನರಿಗಳು ೨೩೧ ಬಿ
ಕರ್ನೂಲ್ ಗುಹೆಗಳು ೨೩೩ ಎ
ಕಲ್ಪನಾ ದತ್ ೨೩೩ ಬಿ
ಕಲ್ಲೂರು ೨೩೩ ಬಿ
ಕಲ್ಹಣ ೨೩೪ ಎ
ಕಸ್ತೂರ ಬಾ ಗಾಂಧಿ ೨೩೪ ಬಿ
ಕಳಚುರಿ ವಂಶ ೨೩೪ ಬಿ
ಕಳಭ್ರರು ೨೩೭ ಎ
ಕಳಲೆ ಅರಸರು: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು ೨೩೭ ಎ
ಕಳಸ–ಕಾರ್ಕಳದ ಅರಸು ಮನೆತನ: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು ೨೩೭ ಎ
ಕಳಿಂಗ ೨೩೭ ಎ
ಕಾಂಡಿವಿಲಿ ೨೩೭ ಬಿ
ಕಾಂಚೀಪುರಂ ೨೩೮ ಎ
ಕಾಕತೀಯರು ೨೩೮ ಬಿ
ಕಾಗೋಡು ಸತ್ಯಾಗ್ರಹ ೨೪೨ ಬಿ
ಕಾಣ್ವ ಮನೆತನ ೨೪೩ ಬಿ
ಕಾರ್ನ್‌ವಾಲಿಸ್ ೨೪೪ ಎ
ಕಾಪಾಲಿಕರು ೨೪೪ ಎ
ಕಾಬ ೨೪೪ ಬಿ
ಕಾಲಿನ್ ರೆನ್‌ಫ್ರ್ಯೂ, ಆಂಡ್ರ್ಯೂ ೨೪೪ ಬಿ
ಕಾಲಿಬಂಗನ್ ೨೪೫ ಎ
ಕಾರ್ಲೆ ೨೪೬ ಎ
ಕಾವಿ ಮಣ್ಪಾತ್ರೆ ಸಂಸ್ಕೃತಿ ೨೪೬ ಎ
ಕಾವೇರಿಪಟ್ಟಣಂ ೨೪೬ ಬಿ
ಕಾಷ್ಠ ಶಿಲ್ಪಗಳು: ನೋಡಿ– ಮೂರ್ತಿಶಿಲ್ಪ ೨೪೭ ಬಿ
ಕಾಸ್ಕರ್ ೨೪೭ ಬಿ
ಕಾಳಾಮುಖ ೨೪೭ ಬಿ
ಕಿಂಗ್, ಮಾರ್ಟಿನ್ ಲೂಥರ್ (ಜೂನಿಯರ್) ೨೪೮ ಎ
ಕಿತಾಬೇನವರಸ್ ೨೪೮ ಬಿ
ಕಿತ್ತೂರು ಚೆನ್ನಮ್ಮ ೨೪೯ ಎ
ಕಿಬ್ಬನಹಳ್ಳಿ ೨೫೦ ಎ
ಕಿಷ್ಕಿಂಧ ೨೫೦ ಎ
ಕುಂತಾಸಿ ೨೫೦ ಬಿ
ಕುರ್ಗನ್ ಸಂಸ್ಕೃತಿ ೨೫೧ ಎ
ಕುಚೈ ೨೫೧ ಬಿ
ಕುಡುತಿನಿ ೨೫೧ ಬಿ
ಕುಣಾಲ್ ೨೫೨ ಎ
ಕುತುಬ್‌ಶಾಹಿ ಮನೆತನ ೨೫೩ ಎ
ಕುನ್ನತ್ತೂರು ೨೫೩ ಬಿ
ಕುಮ್ಮಟರಾಜ್ಯ: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು ೨೫೪ ಎ
ಕುಮ್ರಹಾರ್ ೨೫೪ ಎ
ಕುರುಕ್ಷೇತ್ರ ೨೫೪ ಎ
ಕುಶಿನಗರ ೨೫೫ ಎ
ಕುಷಾಣರು ೨೫೫ ಎ
ಕೃಷ್ಣ, ಎಂ.ಎಚ್. ೨೫೭ ಬಿ

ಕೃಷ್ಣದೇವರಾಯ ೨೫೮ ಎ
ಕೃಷ್ಣರಾಜ ಒಡೆಯರ್ III ೨೫೯ ಎ
ಕೃಷ್ಣರಾಜ ಒಡೆಯರ್ IV ೨೬೦ ಎ
ಕೃಷ್ಣಸ್ವಾಮಿ, ವಿ.ಡಿ. ೨೬೦ ಬಿ
ಕೆಂಪೇಗೌಡ I ೨೬೧ ಎ
ಕೆಳದಿ ಅರಸುಮನೆತನ ೨೬೧ ಬಿ
ಕೇಕಯರು: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು ೨೬೯ ಬಿ
ಕೇರಳದ ವಾಸ್ತುಶಿಲ್ಪ ಮತ್ತು ಕಲೆ ೨೬೯ ಬಿ
ಕೇಸರಿಯ ಸ್ತೂಪ ೨೭೩ ಎ
ಕೊಂಗಾಳ್ವರು: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು ೨೭೩ ಬಿ
ಕೊಂಡಾಪುರ ೨೭೩ ಬಿ
ಕೊಡುಮನಲ್ ೨೭೩ ಬಿ
ಕೊಡೇಕಲ್ಲು ೨೭೪ ಬಿ
ಕೊಣ್ಣೂರು ೨೭೪ ಬಿ
ಕೋಣಾರ್ಕ್ ೨೭೫ ಬಿ
ಕೊಪ್ಪ ೨೭೭ ಎ
ಕೊಪ್ಪಳ ೨೭೭ ಬಿ
ಕೊಮಾರನಹಳ್ಳಿ ೨೭೮ ಎ
ಕೊರಿಯ ೨೭೮ ಬಿ
ಕೊಲಂಬಸ್, ಕ್ರಿಸ್ಟೋಫರ್ ೨೮೦ ಬಿ
ಕೋಟ್‌ದಿಜಿ ೨೮೧ ಎ
ಕೋಟೆಗಳು ೨೮೧ ಎ
ಕೊಡಂಗಲ್ಲೂರು ೨೮೭ ಬಿ
ಕೋಲ್ದಿವ ೨೮೮ ಎ
ಕೋಲ್‌ಬ್ರೂಕ್, ಹೆನ್ರಿ ತಾಮಸ್ ೨೮೮ ಎ
ಕೋಸಾಂಬಿ, ಡಿ.ಡಿ. ೨೮೮ ಬಿ
ಕೌಂಡಿನ್ಯಪುರ ೨೮೯ ಎ
ಕೌಟಿಲ್ಯ ೨೮೯ ಬಿ
ಕೌಶಾಂಬಿ ೨೯೦ ಎ
ಕ್ಯಾಲ್ಡಿಯ ಸಾಮ್ರಾಜ್ಯ ೨೯೨ ಎ
ಕ್ಯುಸಕ್ ೨೯೨ ಬಿ
ಕ್ರಾಂತಿಗಳು ೨೯೨ ಬಿ
ಕ್ರೈಸ್ತಧರ್ಮ ೨೯೩ ಬಿ
ಕ್ಲೈವ್, ರಾಬರ್ಟ್ ೨೯೬ ಬಿ
ಕ್ಷೇಮೇಂದ್ರ ೨೯೭ ಬಿ
ಖಂಬತ್ ಕೊಲ್ಲಿ ೨೯೮ ಎ
ಖಜುರಾಹೊ ೨೯೮ ಬಿ
ಖಾರವೇಲ ೨೯೯ ಬಿ
ಖ್ಯಾಡ್ ೩೦೦ ಬಿ
ಗಂಗವಂಶ ೩೦೦ ಎ
ಗಜಪತಿ ಮನೆತನ ೩೧೪ ಎ
ಗಣೇಶ್ವರ ೩೧೫ ಬಿ
ಗಯ ೩೧೫ ಬಿ
ಗಾಂಧಿ, ಮೋಹನದಾಸ್ ಕರಮಚಂದ್ ೩೧೭ ಎ
ಗಾಂಧಿ–ಇರ್ವಿನ್ ಒಪ್ಪಂದ ೩೨೫ ಎ
ಗಾರಿಬಾಲ್ಡಿ, ಜೋಸೆಪ್ಪೆ ೩೨೫ ಬಿ
ಗಾರೆಶಿಲ್ಪ: ನೋಡಿ– ಮೂರ್ತಿಶಿಲ್ಪ ೩೨೬ ಬಿ
ಗಾಹದ್ವಾಲ ಮನೆತನ ೩೨೬ ಬಿ
ಗಿಡ್ಡಲೂರು ೩೨೭ ಎ
ಗಿಬ್ಬನ್, ಎಡ್ವರ್ಡ್ ೩೨೭ ಬಿ
ಗುಡ್ನಾಪುರ ೩೨೮ ಎ
ಗುತ್ತರು: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು ೩೨೯ ಎ
ಗುಪ್ತ, ಪರಮೇಶ್ವರಿಲಾಲ್ ೩೨೯ ಎ
ಗುಪ್ತವಂಶ ೩೨೯ ಎ
ಗುಫ್‌ಕ್ರಾಲ್ ೩೩೫ ಎ
ಗುರುನಾನಕ್: ನೋಡಿ–ನಾನಕ್, ಗುರು ೩೩೬ ಬಿ
ಗುಲಾಬಿ ಯುದ್ಧಗಳು ೩೩೬ ಬಿ
ಗುಲಾಮಿ ಸಂತತಿ ೩೩೭ ಎ
ಗುಲಿಸ್ತಾನ್ ಒಪ್ಪಂದ ೩೩೮ ಎ
ಗುಲ್ಬರ್ಗ, ಬಿದರೆಯ ಸ್ಮಾರಕಗಳು ೩೩೮ ಬಿ
ಗುಹಾವಾಸ್ತುಶಿಲ್ಪ ೩೪೦ ಬಿ
ಗುಹಿಲರು ೩೪೭ ಬಿ
ಗೂಢಚರ್ಯೆ ೩೪೮ ಬಿ
ಗೂರ್ಜರ ವಂಶ ೩೫೦ ಎ
ಗೆಟಿಸ್‌ಬರ್ಗ್ ಕದನ ೩೫೨ ಎ
ಗ್ಲೈಡಿನ್ಲಿ ೩೫೨ ಬಿ
ಗೊಬೆಕ್ಲಿ ತೆಪೆ ೩೫೩ ಎ
ಗೋಪಾಲಕೃಷ್ಣ ಗೋಖಲೆ ೩೫೩ ಎ
ಗೋಲ್ಕೊಂಡ ೩೫೫ ಎ
ಗೋವ ೩೫೫ ಎ
ಗೋವಿಂದ, ಸಖಾರಾವ್ ಸರ್ದೇಸಾಯಿ ೩೫೮ ಬಿ
ಗೌಡದೇಶ ೩೫೯ ಎ
ಗೌತಮ ಬುದ್ಧ ೩೫೯ ಎ
ಗ್ಲಿನ್, ಎಡ್ಮಂಡ್ ಡೇನಿಯಲ್ ೩೬೧ ಎ
ಗ್ಯಾರಿಸನ್, ವಿಲಿಯಮ್ ಲಾಯ್ಡ್ ೩೬೧ ಎ
ಗ್ವಾಲಿಯರ್ ೩೬೧ ಬಿ
ಗ್ರೀಕ್ ವಾಸ್ತುಶಿಲ್ಪ: ನೋಡಿ– ಯುರೋಪ್ ೩೬೨ ಬಿ
ಗ್ರಹಾಂ ಕ್ಲಾರ್ಕ್ ೩೬೨ ಬಿ
ಘಿಯಾಸುದ್ದೀನ್ ಬಲ್ಬನ್ ೩೬೨ ಎ
ಘೋರಿ ಸುಲ್ತಾನರು ೩೬೩ ಬಿ
ಘೋಷ್, ಅಮಲಾನಂದ ೩೬೪ ಎ
ಚಂಡೀಗಡ ೩೬೪ ಎ
ಚಂದೇಲರು ೩೬೫ ಎ
ಚಂದ್ರಗುಪ್ತ ಮೌರ್ಯ ೩೬೭ ಬಿ
ಚಂದ್ರಪುರ ೩೬೯ ಎ
ಚಂದ್ರವಳ್ಳಿ: ನೋಡಿ–ಚಿತ್ರದುರ್ಗ ೩೬೯ ಬಿ
ಚಂಪನೇರ್– ಪಾವಗಡ ಪುರಾತತ್ತ್ವ ಉದ್ಯಾನವನ ೩೬೯ ಬಿ
ಚಂಪಾರಣ್ ಸತ್ಯಾಗ್ರಹ ೩೭೦ ಎ
ಚರಕ ೩೭೦ ಬಿ
ಚರ್ಚಿಲ್, ವಿನ್‌ಸ್ಟನ್ ೩೭೧ ಎ
ಚಲ್ಲಕೇತನ ಮನೆತನ: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೩೭೨ ಎ
ಚಾಂದ್‌ಬೀಬಿ ೩೭೨ ಎ
ಚಾರ್ವಾಕ ೩೭೨ ಬಿ
ಚಾವುಂಡರಾಯ ೩೭೩ ಎ
ಚಾಳುಕ್ಯ ವಂಶ ೩೭೪ ಎ
ಚಿಚಲಿ ೪೦೫ ಬಿ
ಚಿತ್ತಗಾಂಗ್ ಶಸ್ತ್ರಾಗಾರ ಧಾಳಿ ೪೦೬ ಬಿ
ಚಿತ್ರದುರ್ಗ ೪೦೭ ಎ
ಚಿಯಾ–ಸಿಯಾಂಗ್ ಸೀನ್ ೪೦೮ ಬಿ
ಚಿಯಾಂಗ್ ಕೈಷೇಕ್ ೪೦೮ ಬಿ
ಚೀನ ೪೦೯ ಬಿ
ಚೀನದ ಮಹಾಗೋಡೆ ೪೧೪ ಬಿ
ಚುಂಗ್ಲಿಯಿಮ್ತಿ ೪೧೫ ಎ
ಚೆಂಗಾಳ್ವ ಮನೆತನ ೪೧೫ ಎ
ಚೆಂಗೇಷ್‌ಖಾನ್ (ಜೆಂಗಿಸ್ ಖಾನ್) ೪೧೮ ಬಿ
ಚೆನ್ನಮ್ಮಾಜಿ ೪೧೯ ಎ
ಚೇರಮಾಂಗಾಡು ೪೧೯ ಬಿ
ಚೈಲ್ಡ್, ಗೋರ್ಡನ್ ೪೧೯ ಬಿ
ಚೋಪನಿ–ಮಾಂಡೊ ೪೨೦ ಎ
ಚೋಳರು ೪೨೧ ಎ
ಚೌಟಮನೆತನ (ಪುತ್ತಿಗೆಯ ಚೌಟರು) ೪೨೭ ಎ
ಚೌರಿಚೌರ ೪೨೭ ಬಿ
ಚೌಸಟ್ ಯೋಗಿನಿಯರ ದೇವಾಲಯಗಳು ೪೨೭ ಬಿ
ಜಗನ್ನಾಥ ೪೨೯ ಎ
ಜಟಿಂಗರಾಮೇಶ್ವರ ೪೨೯ ಬಿ
ಜಡಿಗೇನಹಳ್ಳಿ ೪೩೦ ಎ
ಜನಾಂಗಹತ್ಯೆ ೪೩೦ ಎ
ಜಮೀನ್ದಾರಿ ಪದ್ಧತಿ ೪೩೦ ಬಿ
ಜರ್ಮೊ ೪೩೨ ಎ
ಜಯಚಾಮರಾಜ ಒಡೆಯರ್ ೪೩೨ ಎ
ಜಯಪ್ರಕಾಶ್ ನಾರಾಯಣ್ ೪೩೩ ಎ
ಜಯಸ್ವಾಲ್, ಕಾಶಿಪ್ರಸಾದ ೪೩೪ ಎ
ಜರತುಷ್ಟ್ರಧರ್ಮ ೪೩೪ ಬಿ
ಜಮ್ಮು ಮತ್ತು ಕಾಶ್ಮೀರ ೪೩೫ ಎ
ಜಲಿಯನ್‌ವಾಲಾಬಾಗ್ ೪೪೦ ಬಿ
ಜವಾಹರಲಾಲ್ ನೆಹರು ೪೪೧ ಎ
ಜ್ವಾಲಾಪ್ಮರಂ ೪೪೨ ಬಿ
ಜಿನ್ನಾ, ಮೊಹಮ್ಮದ್ ಅಲಿ ೪೪೩ ಎ
ಜಿಯಾವುದ್ದಿನ್ ಬರನಿ ೪೪೩ ಎ
ಜುನಿಕುರಣ ೪೪೩ ಬಿ
ಜುನ್ನರ್ ೪೪೪ ಎ
ಜುಲೈಕ್ರಾಂತಿ ೪೪೪ ಬಿ
ಜೆರುಸಲೇಂ ೪೪೪ ಬಿ
ಜೇವರ್ಗಿ ೪೪೬ ಎ
ಜೇಮ್ಸ್ ಮಿಲ್ ೪೪೬ ಎ
ಜೈನಧರ್ಮ ೪೪೬ ಬಿ
ಜೊನ್ನಗಿರಿ ೪೪೭ ಎ
ಜೋನ್ ಆಫ್ ಆರ್ಕ್ ೪೪೭ ಎ
ಜೋರ್ಡಾನ್ ೪೪೮ ಎ
ಜೋಬ್ ೪೪೯ ಬಿ
ಜೋರ್ವೆ ೪೫೦ ಎ
ಜ್ಯೋತಿ ಬಾ ಫುಲೆ ೪೫೦ ಎ
ಟಾಯ್ನಬಿ, ಆರ್ನಲ್ಡ್ ಜೋಸೆಫ್ ೪೫೦ ಎ
ಟಾಲಮಿ ದೊರೆಗಳು ೪೫೧ ಎ
ಟಾಲ್ಮುಡ್ ೪೫೨ ಬಿ
ಟಿಪ್ಪುಸುಲ್ತಾನ್ ೪೫೩ ಎ
ಟಿಬೆಟ್ ೪೫೪ ಬಿ
ಟಿಳಕ್, ಬಾಲಗಂಗಾಧರ ೪೫೬ ಎ
ಟೀಟೋ, ಜೋಸಿಪ್ ಬ್ರೋಝ್ ೪೫೯ ಎ
ಟೇಕವಾಡ ೪೬೦ ಎ
ಟೇಲರ್, ಮೆಡೋಸ್ ೪೬೦ ಎ
ಟ್ಯಾಸಿಟಸ್, ಕಾರ್ನಲಿಯಸ್ ೪೬೧ ಎ
ಟ್ರಾಯ್ ೪೬೧ ಎ
ಠಾಕೂರ್, ರವೀಂದ್ರನಾಥ ೪೬೨ ಎ
ಡಂಬಾರ್ಟನ್ ಓಕ್ಸ್ ಸಮ್ಮೇಳನ ೪೬೩ ಎ
ಡಾಂಗ್ ಸೋನ್ ೪೬೪ ಎ

ಡಿರೋಜಿಯನ್ ಚಳವಳಿ ೪೬೪ ಎ
ಡೆಲ್ಫಿ ೪೬೪ ಬಿ
ಡೇನಿಯಲ್ ಸಹೋದರರು ೪೬೫ ಎ
ಡೇರಿಯಸ್ I ೪೬೫ ಬಿ
ಡೇಲಾಸ್ ೪೬೬ ಬಿ
ಡೇವಿಡ್ಸ್, ಥಾಮಸ್ ವಿಲಿಯಂ ರೀಸ್ ೪೬೭ ಎ
ಡ್ರೈಯರ್, ರಜಿನಲ್ಡ್ ಎಡ್ವರ್ಡ್ ಹ್ಯಾರಿ ೪೬೭ ಎ
ತಂಜಾವೂರು ೪೬೮ ಎ
ತಂತ್ರಸಮುಚ್ಚಯ: ನೋಡಿ–ವಾಸ್ತುಶಿಲ್ಪ–ಧಾರ್ಮಿಕ ೪೭೦ಎ
ತಕಲ್‌ಘಾಟ್–ಖಾಪ ೪೭೦ ಎ
ತಕ್ಷಶಿಲೆ ೪೭೦ ಎ
ತಡಕನಹಳ್ಳಿ ೪೭೧ ಬಿ
ತರದಿಹ್: ನೋಡಿ–ಗಯ ೪೭೨ ಎ
ತರೈನ್ ಕದನಗಳು ೪೭೨ ಎ
ತಲಕಾಡು ೪೭೨ ಬಿ
ತಾಂಡಿಕುಡಿ ೪೭೫ ಎ
ತಾಜ್‌ಮಹಲ್ ೪೭೫ ಬಿ
ತಾತ್ಯಾಟೋಪಿ ೪೭೬ ಬಿ
ತಾನ್‌ಸೇನ್ ೪೭೭ ಎ
ತಾಮ್ರ–ಶಿಲಾಯುಗ ೪೭೭ ಎ
ತಾಮ್ರೋಪಕರಣ ಗುಡ್ಡೆಗಳು ೪೮೧ ಬಿ
ತಾಮ್‌ಲುಕ್ ೪೮೨ ಎ
ತಾಲಾ ೪೮೨ ಬಿ
ತಾವೋ ತತ್ತ್ವ ೪೮೩ ಎ
ತಾಷ್ಕೆಂಟ್ ಘೋಷಣೆ ೪೮೩ ಬಿ
ತಾಳಗುಂದ ೪೮೪ ಎ
ತಿಯೊಸೊಫಿ ಪಂಥ ೪೮೪ ಬಿ
ತಿರುಕಲ್ಲುಪಟ್ಟಿ ೪೮೫ ಎ
ತಿರುಕಾಂಪುಲಿಯೂರು ೪೮೫ ಬಿ
ತಿರುಮಕೂಡಲು ನರಸೀಪುರ ೪೮೫ ಬಿ
ತಿರುವನಂತಪುರ ೪೮೬ ಬಿ
ತುಗಲಕ್ ವಂಶ ೪೮೭ ಎ
ತುರ್ಕಿ ೪೮೭ ಎ
ತುಲಾಭಾರಶಿಲ್ಪ ೪೮೯ ಎ
ತುಳುನಾಡಿನ ದೇವಾಲಯಗಳು ೪೮೯ ಬಿ
ತೆಕ್ಕಲಕೋಟೆ ೪೯೩ ಎ
ತೆಪೆ ಯಾಹ್ಯಾ ೪೯೩ ಬಿ
ತೇರ್ ೪೯೫ ಎ
ತೇರದಾಳ ೪೯೫ ಬಿ
ತೈಮೂರ್ ಲಂಗ್ ೪೯೬ ಎ
ತೋದರಮಲ್ಲ ೪೯೭ ಬಿ
ತೋರಗಲ್ಲಿನ ಮಹಾಮಂಡಳೇಶ್ವರರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೪೯೭ ಬಿ
ತ್ಯೂಸಿಡೈಡೀಸ್ ೪೯೭ ಬಿ
ತ್ರಿಯುಗ ಸಿದ್ಧಾಂತ ೪೯೮ ಬಿ
ಥಾಪರ್, ಬಿ.ಕೆ.; ನೋಡಿ–ಬಾಲಕೃಷ್ಣ ಥಾಪರ್ ೪೯೮ ಎ
ಥೈಲೆಂಡ್ ೪೯೮ ಎ
ದಕ್ಷಿಣ ಅಮೆರಿಕ ೫೦೧ ಎ
ದತ್ತು ಮಕ್ಕಳ ಹಕ್ಕು ೫೦೨ ಎ
ದರ್ಮ್‌ದಮ ೫೦೨ ಬಿ
ದಯಾನಂದ ಸರಸ್ವತಿ ೫೦೨ ಬಿ
ದರಿಯ ದೌಲತ್: ನೋಡಿ–ಶ್ರೀರಂಗಪಟ್ಟಣ ೫೦೩ ಎ
ದರಿಯಸಾಹೇಬ್ ೫೦೩ ಎ
ದಲಾಯಿಲಾಮಾ ೫೦೩ ಎ
ದಾಖಲಾತಿ ಭಿತ್ತಿಚಿತ್ರಗಳು: ನೋಡಿ–ಭಾರತೀಯ ಚಿತ್ರಕಲೆ ೫೦೩ ಬಿ
ದಾದಾಬಾಯಿ ನವರೋಜಿ ೫೦೩ ಬಿ
ದಾದುಪುರ ೫೦೪ ಬಿ
ದಾರಾಷುಕೊ ೫೦೫ ಎ
ದಾವೊಜಲಿ ಹಡಿಂಗ್ ೫೦೫ ಬಿ
ದೀಪವಂಶ ೫೦೬ ಎ
ದೆಹಲಿಯ ಸುಲ್ತಾನರು ೫೦೬ ಬಿ
ದೇವ್, ಎಸ್.ಬಿ.: ನೋಡಿ–ಶಾಂತಾರಾವು
ಬಾಲಚಂದ್ರದೇವ್ ೫೧೦ ಬಿ
ದೇವಿನ್ ಮೋರಿ ೫೧೦ ಬಿ
ದೇಶಪಾಂಡೆ, ಎಂ.ಎನ್: ನೋಡಿ–ಮಧುಸೂದನ ನರಹರಿ
ದೇಶಪಾಂಡೆ ೫೧೦ ಬಿ
ದೇಸಾಯಿ, ಪಿ.ಬಿ. ೫೧೦ ಬಿ
ದೈಮಾಬಾದ್ ೫೧೧ ಬಿ
ದೊಡ್ಡೇರಿ ೫೧೨ ಎ
ದೌಲತಾಬಾದ್ ೫೧೨ ಎ
ದ್ರಾವಿಡರು ೫೧೩ ಬಿ
ದ್ರುಪದ ಖಿಲಾ ೫೧೪ ಎ
ದ್ವಾರಕ ೫೧೪ ಬಿ
ಧರಣಿಕೋಟ ೫೧೫ ಎ
ಧಾಮ್ನ ೫೧೫ ಎ
ಧಾರ್ಮಿಕ ಯುದ್ಧಗಳು ೫೧೫ ಬಿ
ಧೋಲಾವೀರ ೫೧೬ ಬಿ
ನಂದರು ೫೧೯ ಎ
ನಗರ್ ೫೧೯ ಬಿ
ನಗರಿ ೫೧೯ ಬಿ
ನಗರೀಕರಣ ೫೨೦ ಎ
ನಟುಫಿಯನ್ ಸಂಸ್ಕೃತಿ ೫೨೦ ಬಿ
ನರಸಿಂಹಾಚಾರ್ಯ, ಆರ್. ೫೨೧ ಎ
ನರೇಂದ್ರ ಮಂಡಲ ೫೨೧ ಬಿ
ನವಪುರಾತತ್ತ್ವಶಾಸ್ತ್ರ ೫೨೨ ಎ
ನವಶಿಲಾಯುಗ ೫೨೩ ಎ
ನವಶಿಲಾಯುಗ ಸಂಸ್ಕೃತಿ – ತಮಿಳುನಾಡು ೫೨೩ ಬಿ
ನವ್ದತೋಲಿ ೫೨೩ ಬಿ
ನವಾಬರು ೫೨೪ ಬಿ
ನಾಗದ ೫೨೬ ಬಿ
ನಾಗಾಯಿ ೫೨೬ ಬಿ
ನಾಗಾರ್ಜುನ ೫೨೭ ಎ
ನಾಗಾರ್ಜುನಕೊಂಡ ೫೨೭ ಬಿ
ನಾಗೇಶ್ವರ್ ೫೩೦ ಬಿ
ನಾಟ್ಯಶಾಸ್ತ್ರ: ನೋಡಿ–ಮೂರ್ತಿಶಿಲ್ಪ ೫೩೧ ಎ
ನಾಟ್ಯಶಿವಶಿಲ್ಪಗಳು: ನೋಡಿ–ಮೂರ್ತಿಶಿಲ್ಪ ೫೩೧ ಎ
ನಾಣ್ಯಗಳು ೫೩೧ ಎ
ನಾಥಪಂಥ ೫೩೮ ಬಿ
ನಾನಕ್, ಗುರು ೫೩೮ ಬಿ
ನಾನಾಫಡ್ನವೀಸ್ ೫೩೯ ಎ
ನಾನಾಸಾಹೇಬ್ ೫೪೦ ಎ
ನಾಯ್‌ಕುಂಡ್ ೫೪೦ ಬಿ
ನಾಯಕರು ೫೪೧ ಎ
ನಾಯಿ ಸ್ಮಾರಕಗಳು: ನೋಡಿ–ಮೂರ್ತಿಶಿಲ್ಪ ೫೪೩ ಬಿ
ನಾರಾಯಣಗುರು ೫೪೩ ಬಿ
ನಾರಿಮನ್, ಕುರ್ಷೀದ್ ಫ್ರಾಂಜಿ ೫೪೪ ಬಿ
ನಾಲಂದ ೫೪೫ ಎ
ನಾಲ್ಕುನಾಡು ೫೪೬ ಎ
ನಾಸಿಕ್ ೫೪೬ ಬಿ
ನಿಡುಗಲ್ಲು ಚೋಳರು: ನೋಡಿ – ಕರ್ನಾಟಕದ ಕಿರು ಅರಸು ಮನೆತನಗಳು ೫೪೭ ಎ
ನಿನೆವೆ ೫೪೭ ಎ
ನಿಮ್ರೂಡ್ ೫೪೭ ಬಿ
ನಿರಂಕುಶ ಪ್ರಭುತ್ವ ೫೪೭ ಬಿ
ನಿಲಸಕಲ್ಲು ೫೪೮ ಬಿ
ನೀರಾವರಿ ೫೪೯ ಎ
ನೀಲಕಂಠಶಾಸ್ತ್ರಿ, ಕೆ.ಎ. ೫೫೦ ಬಿ
ನೂರ್‌ಜಹಾನ್ ೫೫೦ ಬಿ
ನೆಪೋಲಿಯನ್ I ೫೫೧ ಎ
ನೆವಾಸ ೫೫೨ ಬಿ
ನೇಪಾಲ ೫೫೩ ಬಿ
ನೈಟಿಂಗೇಲ್, ಫ್ಲಾರೆನ್ಸ್ ೫೫೪ ಎ
ನೈಲ್ ಕದನ ೫೫೫ ಎ
ನೊಳಂಬ ವಂಶ ೫೫೫ ಬಿ
ನೌಕಸೇನ ಬಂಡಾಯ ೫೫೮ ಬಿ
ಪಂಚಶೀಲ ೫೫೯ ಎ
ಪಂಚಾಚಾರ್ಯರು ೫೬೦ ಎ
ಪಟ್ಟದಕಲ್ಲು ೫೬೧ ಬಿ
ಪತಂಜಲಿ ೫೬೩ ಎ
ಪಯ್ಯಂಪಲ್ಲಿ ೫೬೩ ಬಿ
ಪರಂಪರೆ ೫೬೪ ಬಿ
ಪರಮಾರ ೫೬೫ ಎ
ಪರ್ಸೆಪಲಿಸ್ ೫೬೭ ಎ
ಪಲ್ಲವರಂ ೫೬೮ ಎ
ಪಲ್ಲವರು ೫೬೮ ಎ
ಪವಿತ್ರ ರೋಮನ್ ಸಾಮ್ರಾಜ್ಯ ೫೭೨ ಬಿ
ಪಹಾಡಪುರ ೫೭೪ ಎ
ಪಳಯನೂರು ೫೭೪ ಎ
ಪಾಂಡುರಾಜರ್ ಧೀಬಿ ೫೭೪ ಬಿ
ಪಾಂಡ್ಯರು ೫೭೫ ಎ
ಪಾಂಪೆ ೫೭೮ ಎ
ಪಾಕಿಸ್ತಾನ ೫೭೯ ಎ
ಪಾಜೆ ೫೮೧ ಬಿ
ಪಾಟಲಿಪುತ್ರ ೫೮೨ ಎ
ಪಾಟ್ನೆ ೫೮೩ ಬಿ
ಪಾಣಿನಿ ೫೮೪ ಎ
ಪಾಣಿಪತ್ ಕದನಗಳು ೫೮೪ ಬಿ
ಪಾರ್ಸಿಕಲೆ ೫೮೫ ಎ
ಪಾಲ ೫೮೬ ಎ
ಪಾಶುಪತ ೫೮೯ ಎ
ಪಾಳವಾಯ್ ೫೮೯ ಬಿ
ಪಾಳೆಯಗಾರರು ೫೮೯ ಬಿ
ಪಿಟ್, ರಿವರ್ಸ್ ೫೯೫ ಎ
ಪಿಪ್ರಹ್ವ ೫೯೫ ಎ
ಪಿಯತ್ರೊ ಡೆಲ್ಲಾವೆಲ್ಲ ೫೯೫ ಬಿ
ಪಿರಮಿಡ್ಡುಗಳು ೫೯೬ ಎ
ಪಿರಾಕ್ ೫೯೯ ಎ
ಪೀಡಕ ಪ್ರಭುತ್ವ ೫೯೯ ಬಿ
ಪುಣೆ ೫೯೯ ಬಿ

# ವಿಷಯ ಸೂಚಿ


ಪುನ್ನಾಟ *೫೯೯ ಬಿ*
ಪುರಾತತ್ತ್ವ *೬೦೦ ಬಿ*
ಪುರಾನಖಿಲಾ *೬೧೯ ಎ*
ಪುಷ್ಯಭೂತಿ ಮನೆತನ *೬೨೦ ಎ*
ಪೃಥ್ವಿರಾಜ *೬೨೦ ಎ*
ಪೆದ್ದಬಂಕೂರು *೬೨೦ ಬಿ*
ಪೆಲೊಪೊನೇಷ್ಯನ್ ಯುದ್ಧ *೬೨೦ ಬಿ*
ಪೇಷ್ವೆ *೬೨೧ ಎ*
ಪೈಠಣ *೬೨೨ ಎ*
ಪೈಸ್ರ *೬೨೨ ಎ*
ಪೋರ್ಕಳಮ್ *೬೨೨ ಎ*
ಪೋರ್ಚುಗೀಸರು *೬೨೨ ಬಿ*
ಪೌಣ್ಣಾರ್ *೬೨೩ ಬಿ*
ಪೌಣಿ *೬೨೪ ಎ*
ಪ್ಯಾಲಸ್ತೀನ್ *೬೨೪ ಬಿ*
ಪ್ಯೂನಿಕ್ ಯುದ್ಧಗಳು *೬೨೫ ಬಿ*
ಪ್ರಜಾಮಿತ್ರ ಮಂಡಳಿ *೬೨೫ ಬಿ*
ಪ್ರತಾಪಸಿಂಹ, ರಾಣಾ *೬೨೬ ಎ*
ಪ್ರಥಮ ಸ್ವಾತಂತ್ರ್ಯ ಸಮರ – **1857** *೬೨೬ ಬಿ*
ಪ್ರಭಾಸ್ ಪಾಠಣ್ *೬೨೭ ಎ*
ಪ್ರಾಗೈತಿಹಾಸಿಕ ಶಿಲೋಪಕರಣ ತಂತ್ರಜ್ಞಾನ *೬೨೭ ಬಿ*
ಪ್ಲಾಸಿ ಕದನ *೬೩೦ ಎ*
ಪ್ಲಿನಿ *೬೩೦ ಬಿ*
ಪ್ಲೇಟೋ *೬೩೦ ಬಿ*
ಫರ್ಗೂಸನ್, ಜೇಮ್ಸ್ *೬೩೨ ಎ*
ಫರ್ಮಾನ *೬೩೩ ಎ*
ಫಾ–ಹಿಯಾನ್ *೬೩೨ ಬಿ*
ಫಿರ್ದೂಸಿ *೬೩೩ ಬಿ*
ಫಿನಿಷಿಯ *೬೩೪ ಎ*
ಫ್ಲಿಂಡರ್ಸ್ ಪೆಟ್ರಿ, ಸರ್ ವಿಲಿಯಮ್ ಮ್ಯಾಥ್ಯೂ *೬೩೫ ಬಿ*
ಫ್ಲೀಟ್, ಜೆ.ಎಫ್. *೬೩೬ ಎ*
ಘೂಖಾವೊ ಥಾಂಗ್ *೬೩೬ ಬಿ*
ಬಂಗವಾಡಿಯ ಬಂಗರು *೬೩೭ ಎ*
ಬಂಗಾಲದ ವಿಭಜನೆ *೬೩೭ ಬಿ*
ಬಗಸ್ರ *೬೩೮ ಬಿ*
ಬರ್ಟನ್, ಸ್ಟೀನ್ *೬೩೯ ಬಿ*
ಬಡಗಕಜಕಾರು *೬೩೯ ಬಿ*
ಬದನವಾಳು *೬೪೦ ಎ*
ಬನವಾಸಿ *೬೪೦ ಎ*
ಬನಹಳ್ಳಿ *೬೪೨ ಎ*
ಬನಾವಳಿ *೬೪೨ ಬಿ*
ಬಬ್ರುವಾಡ *೬೪೩ ಬಿ*
ಬರೀದ್ ಶಾಹಿ ಆಳ್ವಿಕೆ *೬೪೩ ಬಿ*
ಬರೊರ *೬೪೪ ಬಿ*
ಬಲೂಚಿಸ್ತಾನ *೬೪೫ ಎ*
ಬಸವಕಲ್ಯಾಣ *೬೪೭ ಎ*
ಬಸವಣ್ಣ *೬೪೮ ಬಿ*
ಬಹಮನಿ ವಂಶ *೬೪೯ ಬಿ*
ಬಹಾಯಿ *೬೫೩ ಎ*
ಬಾಂಗ್ಲಾದೇಶ *೬೫೩ ಎ*
ಬಾಕ್ಸರ್ ದಂಗೆ *೬೫೩ ಬಿ*
ಬಾಗಿಮೊಹರಿ *೬೫೪ ಬಿ*
ಬಾಗೋರ್ *೬೫೫ ಎ*
ಬಾಣ *೬೫೬ ಎ*
ಬಾದಾಮಿ *೬೫೬ ಬಿ*
ಬಾನ್ ಚಿಯಾಂಗ್ *೬೫೮ ಬಿ*
ಬಾಬರ್ *೬೫೮ ಬಿ*
ಬಾಮಿಯಾನ್ *೬೫೯ ಎ*
ಬಾರಕೂರು *೬೬೦ ಎ*
ಬಾಲಕೃಷ್ಣ ಥಾಪರ್ *೬೬೧ ಎ*
ಬಾಲಚಂದ್ರಾಕೃತಿಯ ಭೂಭಾಗ *೬೬೦ ಬಿ*
ಬಾಲಾಥಲ್ *೬೬೧ ಎ*
ಬಾರ್ಹುತ್ *೬೬೩ ಎ*
ಬಿಳಗಿ ಅರಸು ಮನೆತನ: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು *೬೬೩ ಬಿ*
ಬಿಜಾಪುರ *೬೬೩ ಬಿ*
ಬಿಪಿನ್‌ಚಂದ್ರ *೬೬೪ ಎ*
ಬಿಲ್ಹಣ *೬೬೪ ಎ*
ಬಿಸ್ಮಾರ್ಕ್, ಆಟೊಫಾನ್ *೬೬೪ ಬಿ*
ಬೀಕರ್ ಸಂಸ್ಕೃತಿ *೬೬೫ ಎ*
ಬೀದರ್ *೬೬೫ ಬಿ*
ಬೀಬಿ–ಕ–ಮಕ್ಬರ *೬೬೭ ಎ*
ಬೀರಬಲ್ *೬೬೭ ಬಿ*
ಬೂದಿದಿಬ್ಬ *೬೬೮ ಎ*
ಬೂದಿಹಾಳ *೬೬೮ ಬಿ*
ಬೂರ್ಜಹೋಮ್ *೬೬೯ ಎ*
ಬೃಹತ್ ಫಲಾಯನ *೬೭೦ ಎ*
ಬೃಹತ್ ಶಿಲಾಯುಗ ಸಂಸ್ಕೃತಿ *೬೭೦ ಎ*
ಬೆಂಗಳೂರು *೬೭೨ ಬಿ*
ಬೆತ್ಲೆಹೆಮ್ *೬೭೫ ಎ*
ಬೆನಗುತ್ತಿ *೬೭೫ ಬಿ*
ಬೆಸ್ನಗರ್ *೬೭೫ ಬಿ*
ಬೆಹಿಸ್ತಾನ್ ಬಂಡೆಶಾಸನ ೬೭೬ ಎ
ಬೆಳಗುತ್ತಿ ಹಾಗೂ ಇತರ ಪ್ರದೇಶಗಳ ಸಿಂಧರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು *೬೭೬ ಬಿ*
ಬೆಳವಡಿ ಸಂಸ್ಥಾನ: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು *೬೭೬ ಬಿ*
ಬೇಲೂರು *೬೭೬ ಬಿ*
ಬೈಜ಼ಾಂಟೀಯನ್ ಸಾಮ್ರಾಜ್ಯ *೬೭೭ ಎ*
ಬೈಬಲ್ *೬೮೦ ಎ*
ಬೋರಬದೂರು *೬೮೧ ಎ*
ಬೋಸ್, ಜಗದೀಶ್ ಚಂದ್ರ *೬೮೧ ಎ*
ಬೋಸ್, ಸುಭಾಷ್ ಚಂದ್ರ *೬೮೨ ಬಿ*
ಬೌದ್ಧಧರ್ಮ *೬೮೪ ಎ*
ಬ್ಯಾಕ್ಟ್ರಿಯ *೬೮೮ ಎ*
ಬ್ಯಾಷಾಂ, ಎ.ಎಲ್. *೬೮೮ ಎ*
ಬ್ಯಾಬಿಲಾನ್ *೬೮೮ ಬಿ*
ಬ್ರಹ್ಮಗಿರಿ *೬೮೯ ಎ*
ಬ್ರಹ್ಮಗುಪ್ತ *೬೯೦ ಬಿ*
ಬ್ರಹ್ಮಪುರಿ *೬೯೦ ಬಿ*
ಬ್ರಹ್ಮಸಮಾಜ *೬೯೧ ಎ*
ಬ್ರಿಟಿಷರ ಆಳಿಕೆ *೬೯೨ ಎ*
ಬ್ರೆಟನ್‌ವುಡ್ಸ್ ಸಮ್ಮೇಳನ *೬೯೬ ಬಿ*
ಭಕ್ತಿಪಂಥ *೬೯೬ ಬಿ*
ಭಗತ್‌ಸಿಂಗ್ *೬೯೭ ಎ*
ಭಟ್ಟಿಪ್ರೋಲು *೬೯೭ ಬಿ*
ಭಯೋತ್ಪಾದನೆ *೬೯೮ ಎ*
ಭರತ್‌ಪುರ *೬೯೯ ಎ*
ಭರೂಚ್ *೬೯೯ ಬಿ*
ಭಾರತ ಸರ್ಕಾರದ ಕಾಯಿದೆ **1935** *೭೦೦ ಎ*
ಭಾರತದ ಪೌರಾಣಿಕ ಇತಿಹಾಸ *೭೦೦ ಬಿ*
ಭಾರತದ ಬೃಹತ್ ಸುಂಕದ ಬೇಲಿ *೭೦೪ ಎ*
ಭಾರತದ ರಾಷ್ಟ್ರಗೀತೆ *೭೦೪ ಬಿ*
ಭಾರತದ ರಾಷ್ಟ್ರಧ್ವಜ *೭೦೫ ಎ*
ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ: ನೋಡಿ – ಸ್ವಾತಂತ್ರ್ಯಹೋರಾಟ –ಭಾರತದಲ್ಲಿ *೭೦೫ ಎ*
ಭಾರತೀಯ ಚಿತ್ರಕಲೆ *೭೦೫ ಎ*
ಭಾರತೀಯ ಶಕೆಗಳು *೭೧೬ ಬಿ*
ಭಾರತೀಯ ಶಾಸನಗಳು *೭೨೧ ಎ*
ಭಾರತೀಯ ಸಂಖ್ಯೆಗಳು *೭೪೩ ಎ*
ಭಾಸ *೭೪೪ ಬಿ*
ಭಾಸ್ಕರಾಚಾರ್ಯ *೭೪೪ ಬಿ*
ಭಿರಡಾಣ *೭೪೫ ಎ*
ಭೀಂಬೇಟ್ಕ *೭೪೭ ಎ*
ಭುವನೇಶ್ವರ *೭೪೮ ಎ*
ಭೂದಾನ ಚಳವಳಿ *೭೫೧ ಎ*
ಭೋಕರ್ಧನ *೭೫೨ ಎ*
ಭೋಜರು: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು *೭೫೨ ಬಿ*
ಭೋನ್ಸ್ಲೆ *೭೫೨ ಬಿ*
ಮಂಗೋಲಿಯ *೭೫೩ ಎ*
ಮಂಚೂ *೭೫೪ ಬಿ*
ಮಂಡಿ *೭೫೫ ಎ*
ಮಂಡೇಲ, ನೆಲ್ಸನ್ *೭೫೬ ಎ*
ಮಂತ್ರಿಪರಿಷತ್ *೭೫೬ ಬಿ*
ಮಗೋಸಿಯನ್ *೭೫೬ ಬಿ*
ಮಥುರ *೭೫೬ ಬಿ*
ಮದುರೈ *೭೫೮ ಬಿ*
ಮಧುಸೂದನ ನರಹರಿ ದೇಶಪಾಂಡೆ *೭೫೯ ಎ*
ಮಧ್ಯ ಹಳೆಶಿಲಾಯುಗ ಸಂಸ್ಕೃತಿ *೭೫೯ ಬಿ*
ಮಧ್ಯಕಾಲೀನ ಇಸ್ಲಾಮಿ ವಾಸ್ತುಶಿಲ್ಪ *೭೬೩ ಎ*
ಮಧ್ವಾಚಾರ್ಯ *೭೬೮ ಎ*
ಮನ್ಸರ್ *೭೬೮ ಬಿ*
ಮಮ್ಮಿ *೭೬೯ ಬಿ*
ಮಲೆನಾಡು ಹೆಚ್ಚೆಯ ಅರಸರು: ನೋಡಿ– ಕರ್ನಾಟಕದ ಕಿರು ಅರಸು ಮನೆತನಗಳು *೭೭೦ ಎ*
ಮಸ್ಕಿ *೭೭೦ ಎ*
ಮಹಾಗರ *೭೭೧ ಎ*
ಮಹದಹ *೭೭೧ ಬಿ*
ಮಹಮ್ಮದ್ ಪೈಗಂಬರ್ *೭೭೨ ಎ*
ಮಹಾಜನಪದಗಳು *೭೭೩ ಬಿ*
ಮಹಾಬಲಿಪುರಂ *೭೭೪ ಬಿ*
ಮಹಾಯುದ್ಧಗಳು *೭೭೬ ಬಿ*
ಮಹಾವೀರ *೭೮೯ ಎ*
ಮಹುರ್ಜರಿ *೭೮೯ ಬಿ*
ಮಳಖೇಡ *೭೯೦ ಎ*
ಮಾಂಟೆಗೊ–ಚೆಲ್ಮ್ಸ್‌ಫರ್ಡ್ ಶಿಕ್ಷಣ ಸುಧಾರಣೆ *೭೯೦ ಎ*
ಮಾಚುಪಿಚ್ಚು *೭೯೦ ಬಿ*
ಮಾಪನ ಪದ್ಧತಿ *೭೯೧ ಎ*
ಮಾಪಿಳ್ಳ ಬಂಡಾಯ *೭೯೨ ಎ*
ಮಾಯಾ *೭೯೩ ಎ*
ಮಾರ್ಕ್ಸ್, ಕಾರ್ಲ್ *೭೯೫ ಬಿ*
ಮಾರ್ಟಿನ್ ಲೂಥರ್ *೭೯೬ ಬಿ*
ಮಾರ್ಷಲ್, ಜಾನ್ *೭೯೭ ಎ*
ಮಾವೋ ತ್ಸೆ ಡುಂಗ್ *೭೯೭ ಬಿ*

ಮಿಟಾನ್ನಿ ಸಾಮ್ರಾಜ್ಯ ೭೯೮ ಬಿ
ಮಿರ್ಜಾನ ೭೯೮ ಬಿ
ಮಿಲ್ಲರ್ ಸಮಿತಿ ವರದಿ: ನೋಡಿ– ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗಗಳು ೭೯೯ ಬಿ
ಮುಜೀಬುರ್ ರೆಹಮಾನ್, ಷೇಕ್ ೭೯೯ ಬಿ
ಮುಧೋಳ ೮೦೦ ಎ
ಮುಸ್ಸೋಲಿನಿ, ಬೆನಿಟೋ ೮೦೦ ಬಿ
ಮೂರ್ತಿಶಿಲ್ಪ ೮೦೧ ಎ
ಮೃತ ಸರೋವರದ ಸುರುಳಿಗಳು ೮೧೭ ಎ
ಮೆಂಫಿಸ್ ೮೧೭ ಬಿ
ಮೆಕ್ಕ ೮೧೭ ಬಿ
ಮೆಕ್ಸಿಕೊ ೮೧೮ ಎ
ಮೆಗಾಸ್ತನೀಸ್ ೮೧೮ ಬಿ
ಮೆಟರ್ನಿಕ್, ಪ್ರಿನ್ಸ್‌ಫಾನ್ ೮೧೯ ಎ
ಮೆರೋಯಿ ೮೧೯ ಎ
ಮೆಸಪೊಟೇಮಿಯ ೮೧೯ ಬಿ
ಮೆಹರ್‌ಗಡ: ನೋಡಿ–ಬಲೂಚಿಸ್ತಾನ ೮೨೨ ಬಿ
ಮೆಹರೋಲಿ ಕಬ್ಬಿಣ ಸ್ತಂಭ ೮೨೨ ಬಿ
ಮೇಡಂ ಬಿಕೈಜೀ ಕಾಮ ೮೨೩ ಎ
ಮೈಕೆಲೆಂಜೆಲೋ ೮೨೩ ಬಿ
ಮೈಕೆಲ್ ಹ್ಯೂಸನ್ ಕ್ರಾಫರ್ಡ್ ೮೨೪ ಬಿ
ಮೈತ್ರಕ ೮೨೪ ಬಿ
ಮೈಸೂರು ಒಡೆಯರು ೮೨೫ ಎ
ಮೊಗಲರು ೮೩೦ ಬಿ
ಮೊಟ್ಟೂರು ೮೩೨ ಬಿ
ಮೊದೇರ ೮೩೩ ಎ
ಮೊಹೆಂಜೋದಾರೊ ೮೩೪ ಎ
ಮೋಸಸ್ ೮೩೫ ಬಿ
ಮೌಂಟ್‌ಬ್ಯಾಟನ್, ಲಾರ್ಡ್ ೮೩೬ ಎ
ಮೌಖರಿ ೮೩೬ ಬಿ
ಮೌರ್ಯ ವಂಶ ೮೩೭ ಎ
ಮ್ಯಾಕ್ಸ್‌ಮುಲರ್, ಫ್ರೆಡ್ರಿಕ್ ೮೪೧ ಬಿ
ಮ್ಯಾಗ್ನಕಾರ್ಟ ೮೪೨ ಎ
ಮ್ಯಾರಥಾನ್ ೮೪೨ ಬಿ
ಮ್ಯಾಸಿಡೋನಿಯ ೮೪೨ ಬಿ
ಯಂಗ್‌ಶಾವೋ ೮೪೩ ಎ
ಯಡಿಯಾಪುರ ೮೪೩ ಎ
ಯಹೂದಿ ೮೪೩ ಎ
ಯಕ್ಷ ೮೪೫ ಎ
ಯಿವೊಸೊ ೮೪೫ ಎ
ಯುರೋಪ್ ೮೪೫ ಎ
ಯುವಾನ್ ಚಾಂಗ್ ೮೫೦ ಬಿ
ಯೇಲೇಶ್ವರಮ್ ೮೫೧ ಎ
ಯೇಸುಕ್ರಿಸ್ತ ೮೫೧ ಎ
ರಜಾಕಾರರ ಚಳವಳಿ ೮೫೩ ಎ
ರಣಜಿತ್ ಗುಹ ೮೫೩ ಬಿ
ರಣಜಿತ್ ಸಿಂಹ ೮೫೩ ಬಿ
ರತ್ನಗಿರಿ ೮೫೪ ಎ
ರಷ್ಯ ೮೫೪ ಬಿ
ರಾಂಕೆ, ಲಿಯೋಪಾಲ್ಡ್‌ವಾನ್ ೮೬೧ ಬಿ
ರಾಖಿಗಡಿ ೮೬೨ ಎ
ರಾಜಗೀರ್ ೮೬೩ ಎ
ರಾಜಗೋಪಾಲಾಚಾರಿ, ಚಕ್ರವರ್ತಿ ೮೬೩ ಬಿ
ರಾಜಘಟ್ಟ ೮೬೪ ಬಿ
ರಾಜನ ಕೋಳೂರು ೮೬೬ ಎ
ರಾಜ ನಲ್ ಕ ಟೀಲ ೮೬೬ ಎ
ರಾಜರಾಮ ಮೋಹನರಾಯ್ ೮೬೬ ಬಿ
ರಾಜೇಂದ್ರಪ್ರಸಾದ್, ಬಾಬು ೮೬೮ ಎ
ರಾಥೋರರು ೮೬೮ ಬಿ
ರಾಧಾಕೃಷ್ಣನ್, ಸರ್ವಪಲ್ಲಿ ೮೬೯ ಬಿ
ರಾಬರ್ಟ್ ಬ್ರೂಸ್‌ಫುಟ್ ೮೭೦ ಬಿ
ರಾಬರ್ಟ್‌ಬ್ರೇಯ್ಡ್‌ವುಡ್ ೮೭೧ ಎ
ರಾಮಕೃಷ್ಣ ಪರಮಹಂಸ ೮೭೧ ಬಿ
ರಾಮಕೃಷ್ಣ ಮಿಷನ್ ೮೭೨ ಬಿ
ರಾಮದಾಸ ೮೭೩ ಬಿ
ರಾಮದುರ್ಗ ೮೭೪ ಎ
ರಾಮಾನುಜಾಚಾರ್ಯ ೮೭೪ ಎ
ರಾಮಾಪುರಂ ೮೭೫ ಎ
ರಾಯ್‌ಪುರ ೮೭೬ ಬಿ
ರಾವ್, ಎಸ್.ಆರ್. ೮೭೬ ಬಿ
ರಾಷ್ಟ್ರಕೂಟವಂಶ ೮೭೭ ಬಿ
ರಾಸ್ಪುಟಿನ್ ೮೮೮ ಎ
ರಿಸ್ಲೆ, ಎಚ್.ಎಚ್. ೮೮೮ ಎ
ರುದ್ರಮಹಾದೇವಿ ೮೮೮ ಬಿ
ರೂಸ್‌ವೆಲ್ಟ್, ಥಿಯೋಡರ್ ೮೮೯ ಎ
ರೆಡ್ ಇಂಡಿಯನ್ನರು ೮೯೦ ಎ
ರೇಣಿಗುಂಟ ೮೯೦ ಎ
ರೈತ ಚಳವಳಿ ೮೯೦ ಬಿ
ರೈಸ್, ಬಿ.ಎಲ್. ೮೯೩ ಎ
ರೈಸ್, ಇ.ಪಿ. ೮೯೪ ಎ
ರೋಜಡಿ ೮೯೪ ಎ
ರೋಪರ್ ೮೯೪ ಬಿ
ರೋಮ್ ೮೯೫ ಬಿ
ರೋಮಿಲ ಥಾಪರ್ ೮೯೮ ಬಿ
ರೋಮ್ಯುಲಸ್ ಮತ್ತು ರೀಮಸ್ ೮೯೮ ಎ
ರೋಸೆಟ ಶಿಲೆ ೮೯೫ ಎ
ರ್‍ಯಾಡ್‌ಕ್ಲಿಫ್ ಗಡಿ ಆಯೋಗ ೮೯೯ ಎ
ರ್‍ಯಾಪ್ಸನ್, ಇ.ಜೆ. ೮೯೮ ಬಿ
ರ್‍ಯಾಮ್ಸೆಸ್ II ೮೯೯ ಎ
ಲಕ್ಕುಂಡಿ ೮೯೯ ಎ
ಲಕ್ಷ್ಮೀನಾರಾಯಣರಾವ್, ಎನ್. ೯೦೧ ಎ
ಲಕ್ಷ್ಮೀಬಾಯಿ, ಝಾನ್ಸಿರಾಣಿ ೯೦೧ ಎ
ಲಜ್ಜಾಗೌರಿ ೯೦೧ ಬಿ
ಲಹುರದೇವ ೯೦೨ ಬಿ
ಲಾಂಗ್‌ನಾಜ್ ೯೦೩ ಬಿ
ಲಾ ತೆನೆ ಸಂಸ್ಕೃತಿ ೯೦೪ ಎ
ಲಾರೆನ್ಸ್, ತಾಮಸ್ ಎಡ್ವರ್ಡ್ ೯೦೪ ಬಿ
ಲಾಲ್‌ಬಹಾದ್ದೂರ್ ಶಾಸ್ತ್ರೀ ೯೦೪ ಬಿ
ಲಾಲ್, ಬಿ.ಬಿ. ೯೦೫ ಬಿ
ಲಾಲಾ ಲಜಪತ ರಾಯ್ ೯೦೬ ಎ
ಲಾವೊತ್ಸೆ ೯೦೬ ಬಿ
ಲಿಂಕನ್, ಅಬ್ರಹಾಮ್ ೯೦೬ ಬಿ
ಲಿಚ್ಛವಿ ಮನೆತನ ೯೦೭ ಎ
ಲಿಪಿಗಳು ೯೦೭ ಬಿ
ಲಿವಿ, ಟೈಟಸ್ ಲಿವಿಯಸ್ ೯೧೭ ಎ
ಲೀಕಿ, ಲೂಯಿ ೯೧೭ ಎ
ಲೀಗ್ ಆಫ್ ನೇಷನ್ಸ್ ೯೧೭ ಎ
ಲೀನಿಯರ್ ಎ ಮತ್ತು ಬಿ: ನೋಡಿ–ಲಿಪಿಗಳು ೯೧೮ ಎ
ಲುಂಬಿನಿ ೯೧೮ ಎ
ಲೆನಿನ್, ಐ.ವಿ. ೯೧೮ ಎ
ಲೋಥಲ್ ೯೧೯ ಎ
ಲೋದಿ ವಂಶ ೯೨೦ ಬಿ
ಲೋಮಥಾಂಗ್ ೯೨೩ ಎ
ಲೋಹವಿಜ್ಞಾನ ೯೨೩ ಬಿ
ಲೋಹಾರ ಮನೆತನ ೯೨೪ ಎ
ಲ್ಯಾಟರೈಟ್ ಬೇಬಿ ೯೨೪ ಬಿ
ವಟಗಲ್ಲು ೯೨೫ ಎ
ವಡಗಾಂವ್–ಮಾಧವಪುರ ೯೨೬ ಎ
ವರಮಿನ್ ೯೨೬ ಬಿ
ವರಾಹಮಿಹಿರ ೯೨೬ ಬಿ
ವರ್ಜಿಲ್ ೯೨೮ ಎ
ವಲ್ಕಮೋನಿಕ ೯೨೮ ಬಿ
ವಲ್ಲಭಭಾಯಿ ಪಟೇಲ್ ೯೨೭ ಎ
ವಸಾಹತು ಕಲೆ ಮತ್ತು ವಾಸ್ತುಶಿಲ್ಪ ೯೩೦ ಎ
ವಸಾಹತು ನೀತಿ ೯೨೯ ಎ
ವಸ್ತು ಸಂಗ್ರಹಾಲಯಗಳು ೯೩೪ ಬಿ
ವಾಕಾಟಕರು ೯೩೭ ಬಿ
ವಾಘೇಲರು ೯೩೯ ಎ
ವಾತ್ಸ್ಯಾಯನ ೯೪೦ ಎ
ವಾಷಿಂಗ್‌ಟನ್, ಜಾರ್ಜ್ ೯೪೦ ಎ
ವಾಸುದೇವ ಶರಣ ಅಗ್ರವಾಲ ೯೪೦ ಬಿ
ವಾಸ್ತುಶಿಲ್ಪ (ದೇವಾಲಯ) ೯೪೧ ಎ
ವಾಸ್ಕೋ ಡ ಗಾಮ ೯೫೮ ಎ
ವಿಂಚಿ, ಲಿಯೊನಾರ್ಡೋ ಡ ೯೫೮ ಬಿ
ವಿಂಟರ್‌ನಿಟ್ಸ್, ಮೋರಿಕ್ ೯೫೯ ಎ
ವಿಕಾಸವಾದ ೯೫೯ ಎ
ವಿಕ್ಟೋರಿಯ ೯೫೯ ಎ
ವಿಜಯನಗರ ಸಾಮ್ರಾಜ್ಯ ೯೬೦ ಎ
ವಿಜಯಲಕ್ಷ್ಮಿ ಪಂಡಿತ್ ೯೮೮ ಬಿ
ವಿಜ್ಞಾನೇಶ್ವರ ೯೮೯ ಬಿ
ವಿದುರಾಶ್ವತ್ಥ ೯೮೯ ಬಿ
ವಿದ್ಯಾರಣ್ಯ: ನೋಡಿ–ವಿಜಯನಗರ ಸಾಮ್ರಾಜ್ಯ ೯೯೦ ಎ
ವಿನೋಬಾ ಭಾವೆ ೯೯೦ ಎ
ವಿಯಟ್ನಾಮ್ ೯೯೦ ಬಿ
ವಿಯನ್ನ ಕಾಂಗ್ರೆಸ್ ೯೯೧ ಎ
ವಿಲಿಯಮ್ಸ್ ಜೇಮ್ಸ್ ಡುರ್‍ಯಾಂಟ್ ೯೯೧ ಬಿ
ವಿಲ್ಕ್ಸ್, ಮಾರ್ಕ್ ಕರ್ನಲ್ ೯೯೧ ಬಿ
ವಿಲ್ಟರ್, ಫೋರ್ಸ್ ವಿಲಿಯಮ್ ೯೯೨ ಎ
ವಿವೇಕಾನಂದ ೯೯೨ ಎ
ವಿಶ್ವ ಪರಂಪರೆ ಸ್ಮಾರಕಗಳು ೯೯೩ ಎ
ವಿಶ್ವಸಂಸ್ಥೆ ೯೯೪ ಬಿ
ವಿಶ್ವೇಶ್ವರಯ್ಯ, ಮೋಕ್ಷಗುಂಡಂ ೯೯೩ ಬಿ
ವಿಷ್ಣುಕುಂಡಿ ೯೯೫ ಬಿ
ವೀಲರ್, ಮಾರ್ಟಿಮರ್ ಸರ್ ೯೯೬ ಎ
ವೆಂಕಟರತ್ನಂ, ಎ.ವಿ. ೯೯೭ ಎ
ವೆಲಸ್ಲಿ, ಲಾರ್ಡ್ ೯೯೭ ಬಿ
ವೈಕಿಂಗರು ೯೯೮ ಬಿ
ವೈದಿಕ ಜನಾಂಗದ ನೆಲೆಗಳು ೯೯೯ ಎ
ವೈದಿಕ ಯಜ್ಞ ೧೦೦೬ ಎ
ವ್ಯಾಂಡಲರು ೧೦೦೮ ಬಿ
ವ್ಯಾಟಿಕನ್ ೧೦೦೯ ಎ
ಶಂಕರಾಚಾರ್ಯ ೧೦೦೯ ಎ
ಶರ್ಮ, ಆರ್.ಎಸ್. ೧೦೧೦ ಬಿ
ಶಾಂತಲದೇವಿ ೧೦೧೦ ಎ
ಶಾಂತಾರಾಮ ಬಾಲಚಂದ್ರ ದೇವ್ ೧೦೧೧ ಎ
ಶಾಮಶಾಸ್ತ್ರಿ, ಆರ್. ೧೦೧೧ ಎ

# ವಿಷಯ ಸೂಚಿ


ಶಾಸನಗಳು: ನೋಡಿ–ಭಾರತೀಯ ಶಾಸನಗಳು ೧೦೧೨ ಎ
ಶಿಲಾಚಿತ್ರಕಲೆ ೧೦೧೨ ಎ
ಶಿಲ್ಪಿಗಳು ೧೦೨೫ ಬಿ
ಶಿವಮಂಡಲ ದೀಕ್ಷೆ ೧೦೨೬ ಬಿ
ಶಿವಾಜಿ ೧೦೨೭ ಎ
ಶಿಶುಪಾಲಗಡ: ನೋಡಿ–ಭುವನೇಶ್ವರ ೧೦೨೮ ಎ
ಶಿಸುಗಲಿಯ ಪಾಂಡ್ಯರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೧೦೨೮ ಎ
ಶುಂಗ–ಕಣ್ವ ಕಲೆ ೧೦೨೮ ಎ
ಶೃಂಗವೇರಪುರ ೧೦೩೦ ಎ
ಶೃಂಗೇರಿ ೧೦೩೧ ಎ
ಶೆಂಬಿಯನ್ ಕಂಡಿಯೂರು ೧೦೩೨ ಬಿ
ಶೆವರಾಯ್ ಬೆಟ್ಟಗಳು ೧೦೩೩ ಎ
ಶೇಷಾದ್ರಿ, ಎಂ. ೧೦೩೩ ಬಿ
ಶೋರ್ತುಘೈ ೧೦೩೪ ಎ
ಶ್ರವಣಬೆಳಗೊಳ ೧೦೩೪ ಎ
ಶ್ರಾವಸ್ತಿ ೧೦೩೬ ಎ
ಶ್ರೀಕಂಠಶಾಸ್ತ್ರೀ, ಎಸ್. ೧೦೩೬ ಬಿ
ಶ್ರೀತತ್ತ್ವನಿಧಿ ೧೦೩೬ ಬಿ
ಶ್ರೀರಂಗಪಟ್ಟಣ ೧೦೩೭ ಬಿ
ಶ್ರೀಲಂಕ ೧೦೩೯ ಬಿ
ಶೋಆ ೧೦೪೨ ಎ
ಷಿಂಟೋ ೧೦೪೨ ಎ
ಷೇಕ್ ಅಲಿ, ಬಿ. ೧೦೪೨ ಬಿ
ಷೋವೆ ೧೦೪೩ ಬಿ
ಸಂಗನಕಲ್ಲು ೧೦೪೩ ಎ
ಸಂಗಂ ಯುಗ ೧೦೪೪ ಎ
ಸಂಘೋಲ್ ೧೦೪೮ ಎ
ಸಂತೆಬೆನ್ನೂರು ೧೦೪೯ ಎ
ಸಂತೆಬೆನ್ನೂರು ನಾಯಕರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೧೦೪೯ ಬಿ
ಸಂಪತ್ತಿನ ಸೋರಿಕೆ ೧೦೪೯ ಬಿ
ಸಂವಿಧಾನ ೧೦೫೧ ಎ
ಸರ್ಕಾರ್, ಜಾದುನಾಥ್ ೧೦೫೨ ಎ
ಸರ್ಕಾರ್, ಡಿ.ಸಿ. ೧೦೫೧ ಬಿ
ಸತನಿಕೋಟ ೧೦೫೨ ಬಿ
ಸತ್ಯಬ್ರತರಾಯ ಚೌಧುರಿ ೧೦೫೩ ಬಿ
ಸನೌಲಿ ೧೦೫೩ ಬಿ
ಸನ್ನತಿ ೧೦೫೪ ಬಿ
ಸಮಾಲ್ ೧೦೫೯ ಬಿ
ಸರಾಯ್–ನಹರ್–ರಾಯ್ ೧೦೬೦ ಎ
ಸವಣೂರು ಸಂಸ್ಥಾನ: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೧೦೬೦ ಬಿ
ಸಾಂಕಳಿಯ, ಎಚ್.ಡಿ. ೧೦೬೦ ಬಿ
ಸಾಂಚಿ ೧೦೬೦ ಬಿ
ಸಾಂತರರು ೧೦೬೧ ಬಿ
ಸಾಕ್ರಟೀಸ್ ೧೦೬೪ ಎ
ಸಾಗರ ಪುರಾತತ್ತ್ವ ೧೦೬೪ ಬಿ
ಸಾಣೂರು ೧೦೬೫ ಎ
ಸಾತವಾಹನರು ೧೦೬೫ ಎ
ಸಾಮಾಜಿಕ ಒಪ್ಪಂದ ಸಿದ್ಧಾಂತ ೧೦೬೭ ಬಿ
ಸಾರನಾಥ ೧೦೬೮ ಎ
ಸಾರಾಭಾಯಿ, ವಿಕ್ರಮ್ ೧೦೬೮ ಬಿ
ಸಾಲಂಕಾಯನರು ೧೦೬೯ ಎ
ಸಾಲಿಹುಂಡಮ್ ೧೦೬೯ ಎ
ಸಾಲೆತೊರೆ, ಬಿ.ಎ. ೧೦೬೯ ಬಿ
ಸಾಲೊಟಗಿ ೧೦೬೯ ಬಿ
ಸಾಲ್ವಡಗಿ ೧೦೭೦ ಎ
ಸಾವನದುರ್ಗ ೧೦೭೦ ಎ
ಸಾವರಕರ, ವಿನಾಯಕ ದಾಮೋದರ ೧೦೭೦ ಬಿ
ಸಾಹ್ನಿ, ಬೀರ್ಬಲ್ ೧೦೭೧ ಎ
ಸಿಂಧೂ–ಸರಸ್ವತಿ ಸಂಸ್ಕೃತಿ ೧೦೭೧ ಬಿ
ಸಿಖ್‌ಧರ್ಮ ೧೦೯೪ ಬಿ
ಸಿದ್ಧಮಾತೃಕಾ ಲಿಪಿ: ನೋಡಿ–ಲಿಪಿಗಳು ೧೦೯೫ ಬಿ
ಸಿಪಾಯಿದಂಗೆ: ನೋಡಿ–ಪ್ರಥಮ ಸ್ವಾತಂತ್ರ್ಯ ಸಂಗ್ರಾಮ–1857 ೧೦೯೫ ಬಿ
ಸಿರಪುರ ೧೦೯೫ ಬಿ
ಸುಬ್ಬರಾವ್, ಬಿ. ೧೦೯೬ ಬಿ
ಸುಮಿತ್ ಸರ್ಕಾರ್ ೧೦೯೭ ಎ
ಸುಮೇರಿಯನ್ ಸಂಸ್ಕೃತಿ ೧೦೯೭ ಎ
ಸುರ್‌ಕೋಟಡ ೧೦೯೯ ಎ
ಸುರೇಂದ್ರನಾಥ ಬ್ಯಾನರ್ಜಿ ೧೦೯೯ ಬಿ
ಸುಲೂರು ೧೧೦೦ ಎ
ಸುಶ್ರುತ ೧೧೦೦ ಎ
ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳು ೧೧೦೦ ಬಿ
ಸೂಫಿಪಂಥ ೧೧೦೪ ಬಿ
ಸ್ಟೆನ್‌ಫನ್ ೧೧೦೫ ಬಿ
ಸೆಲ್ಯೂಕಸ್, ನಿಕೇಟಾರ್ ೧೧೦೫ ಬಿ
ಸೇಂದ್ರಕರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೧೧೦೬ ಎ
ಸೇವುಣ ವಂಶ ೧೧೦೬ ಎ
ಸೈಯದ್ ಅಹಮದ್ ಖಾನ್ ೧೧೧೦ ಬಿ
ಸೋನ್‌ಪುರ ೧೧೧೧ ಎ
ಸೋಲಂಕಿ ಮನೆತನ ೧೧೧೧ ಬಿ
ಸೌಂದರ್‌ರಾಜನ್, ಕೆ.ವಿ. ೧೧೧೨ ಎ
ಸ್ಟೈನ್, ಆರೆಲ್ ೧೧೧೨ ಎ
ಸ್ಟೋನ್ ಹೆಂಜ್ ೧೧೧೨ ಬಿ
ಸ್ಪಾರ್ಟ ೧೧೧೩ ಎ
ಸ್ಪಾರ್ಟಕಸ್ ೧೧೧೪ ಎ
ಸ್ಪಿರಿಟ್ ಕೇವ್ ೧೧೧೪ ಎ
ಸ್ವಾಟ್ ಕಣಿವೆ ಕಲ್ಗೋರಿಗಳು ೧೧೧೪ ಬಿ
ಸ್ವಾತಂತ್ರ್ಯ ಹೋರಾಟ, ಭಾರತದಲ್ಲಿ ೧೧೧೫ ಎ
ಹಂಪಿ ೧೧೨೪ ಎ
ಹತ್ತುಸ ೧೧೨೬ ಎ
ಹತ್ನೋರ ೧೧೨೭ ಎ
ಹಮುರಬಿ ೧೧೨೭ ಎ
ಹಯವದನರಾವ್, ಸಿ. ೧೧೨೭ ಬಿ
ಹರಪ್ಪ ೧೧೨೮ ಎ
ಹರ್ಮನ್ ಮೋಗ್ಲಿಂಗ್ ೧೧೨೯ ಎ
ಹರ್ಷಚರಿತ ೧೧೨೯ ಎ
ಹಸರ್‌ಗುಂಡಿಗಿ ೧೧೨೯ ಬಿ
ಹಸ್ತಿನಾಪುರ ೧೧೩೦ ಎ
ಹಳೇಬೀಡು ೧೧೩೦ ಬಿ
ಹಳ್ಳೂರು ೧೧೩೧ ಬಿ
ಹಾಲೆನ್ ಷಿಡ್ ರ್‍ಯಾಫೆಲ್ ೧೧೩೧ ಬಿ
ಹಾಲೇರಿ ಮನೆತನ ೧೧೩೨ ಎ
ಹಿಂದು ಇಸ್ಲಾಂ ವಾಸ್ತುಶಿಲ್ಪ ೧೧೩೩ ಎ
ಹಿಟ್ಟೈಟರು ೧೧೩೩ ಬಿ
ಹಿಟ್ಲರ್, ಅಡಾಲ್ಫ್ ೧೧೩೩ ಬಿ
ಹಿಯೆನಸ್ ೧೧೩೫ ಎ
ಹಿರೆಬೆನಕಲ್ಲು ೧೧೩೫ ಎ
ಹಿರೋಡಾಟಸ್ ೧೧೩೭ ಎ
ಹಿರೋಷಿಮ ೧೧೩೭ ಎ
ಹುಣಸಗಿ ೧೧೩೭ ಬಿ
ಹುಲ್ಷ್ ೧೧೩೮ ಎ
ಹೆಗ್ಗಡೆಹಳ್ಳಿ ೧೧೩೮ ಬಿ
ಹೆನ್ರಿ, ರಾಲಿನ್‌ಸನ್ ೧೧೩೯ ಎ
ಹೆಮ್ಮಿಗೆ ೧೧೩೯ ಎ
ಹೇಮಾದ್ರಿ ೧೧೩೯ ಬಿ
ಹೇಲಿಯೋಡೋರಸ್‌ನ ಶಾಸನ ೧೧೪೦ ಎ
ಹೇಸ್ಟಿಂಗ್ಸ್, ವಾರನ್ ೧೧೪೦ ಎ
ಹೈಗುಂದ ೧೧೪೦ ಬಿ
ಹೈದರ ಅಲಿ ೧೧೪೦ ಬಿ
ಹೈಹಯರು ೧೧೪೧ ಬಿ
ಹೊದಿಗೆರೆ ೧೧೪೧ ಬಿ
ಹೊನ್ನಾಳಿ ನವಾಬರು: ನೋಡಿ–ಕರ್ನಾಟಕದ ಕಿರು ಅರಸು ಮನೆತನಗಳು ೧೧೪೧ ಬಿ
ಹೊಯ್ಸಳ ವಂಶ ೧೧೪೧ ಬಿ
ಹೊಹೆನ್‌ಜಲರನ್ ೧೧೫೮ ಬಿ
ಹೊಳಪಿನ ಕೆಂಪು ಮಣ್ಪಾತ್ರೆ ಸಂಸ್ಕೃತಿ ೧೧೫೯ ಎ
ಹೋಚೀಮಿನ್ ೧೧೫೯ ಎ
ಹೋಪ್‌ವೆಲ್ ಸಂಸ್ಕೃತಿ ೧೧೫೯ ಬಿ
ಹೋಮ್‌ರೂಲ್ ಚಳವಳಿ ೧೧೬೦ ಎ
ಹೋಮರ್ ೧೧೬೦ ಬಿ
ಹೋವರ್ಡ್, ಕಾರ್ಟರ್ ೧೧೬೧ ಎ
ಹ್ಯಾರಿಸ್ ಮ್ಯಾಟ್ರಿಕ್ಸ್ ಪದ್ಧತಿ: ನೋಡಿ–ಪುರಾತತ್ತ್ವ ೧೧೬೧ ಬಿ
ಹ್ಯಾಲ್‌ಸ್ಟಾಟ್ ಸಂಸ್ಕೃತಿ ೧೧೬೧ ಬಿ

ಭಾರತೀಯ ಶಿಲ್ಪಗಳಲ್ಲಿ ಚಿಕಿತ್ಸಾವಿಧಾನದ ಚಿತ್ರಗಳು ೧೧೬೨–೧೧೬೩
ಭೂಪಟಗಳು ೧೧೬೪–೧೧೭೫
ಪಾರಿಭಾಷಿಕ ಪದಗಳು ೧೧೭೬–೧೧೮೦
ಪರಾಮರ್ಶನ ಗ್ರಂಥಗಳು ೧೧೮೧–೧೧೯೬
ಪರಾಮರ್ಶನ ಲೇಖನಗಳು ೧೧೯೭–೧೨೦೩
ಕೃತಜ್ಞತೆಗಳು ೧೨೦೩–೧೨೦೪
ಲೇಖಕ ಸೂಚಿ ೧೨೦೫–೧೨೧೮
ವಿಷಯ ಸೂಚಿ ೧೨೧೮–೧೨೨೪

## ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಷಯ ವಿಶ್ವಕೋಶ

# ಪ್ರಾಣಿವಿಜ್ಞಾನ

## ಅ

**ಅಂಕುರಣ:** ಜೀವಿಗಳಲ್ಲಿರುವ ನಿರ್ಲಿಂಗ ಸಂತಾನೋತ್ಪತ್ತಿ (ಬಡ್ಡಿಂಗ್). ಜೀವಿಯ ಶರೀರದ ನಿರ್ದಿಷ್ಟ ಭಾಗದಲ್ಲಿ ಅಂಕುರ ಬೆಳೆದು, ಅನಂತರ ಶರೀರದಿಂದ ಬೇರ್ಪಟ್ಟೊ ಅಥವಾ ಬೇರ್ಪಡದೆಯೋ ಸ್ವತಂತ್ರವಾಗಿ ಜೀವಿಸುತ್ತದೆ. ಈ ಕ್ರಿಯೆ ಬಹಳ ತ್ವರಿತಗತಿಯಲ್ಲಿ ಆಗುವುದರಿಂದ ಕಡಿಮೆ ಅವಧಿಯಲ್ಲಿ ಜೀವಿಗಳ ಸಂಖ್ಯೆ ವೃದ್ಧಿಯಾಗುತ್ತದೆ. ವಿಶೇಷವೆಂದರೆ ಈ ಕ್ರಿಯೆಯಲ್ಲಿ ಏಕ ಜನ್ಮದಾತೃವಾಗಿರುವುದರಿಂದ ಸಂತತಿಯಲ್ಲಿ ವೈವಿಧ್ಯತೆ ಉಂಟಾಗುವುದಿಲ್ಲ. ಅಂಕುರಣ ಏಕಕೋಶ ಜೀವಿಗಳಾದ ಪ್ರೊಟೋಜೊವ, ಸ್ಪಂಜು, ಹಾಗೂ ಕುಟುಕುಕಣವಂತುಗಳಲ್ಲಿ  ಕಾಣುವ ಕ್ರಿಯೆ. ಸಸ್ಯಗಳಲ್ಲಿ ಸಹ ಅಂಕುರಣ ರೀತಿಯ ಸಂತಾನ ಕ್ರಿಯೆ ಇದೆ. ಉದಾ: ಗಿಡದ ಕಾಂಡದ ತುದಿ ಅಥವಾ ಗಿಣ್ಣಿನಲ್ಲಿ ಅಂಕುರಣವಾಗುವುದರಿಂದ ಗಿಡವು ಕವಲೊಡೆದು ವಿಸ್ತರಿಸುತ್ತದೆ. ಈ ಅಂಕುರಣವು ಆಕ್ಸಿನ್ ಹಾರ್ಮೋನ್‌ಗಳ ನಿಯಂತ್ರಣಕ್ಕೆ ಒಳಪಟ್ಟಿದೆ. ಸಾಮಾನ್ಯ ಆಂತರಿಕ ಪ್ರಚೋದನೆಯು ಆಕ್ಸಿನ್ಸ್‌ನ್ನಿಂದ ಅಂಕುರದ ಬೆಳೆವಣಿಗೆಯನ್ನು ಪ್ರಾರಂಭಿಸುತ್ತದೆ.

ಅಂಕುರಣದಲ್ಲಿ ಎರಡು ವಿಧ. ಬಹಿರ್ವೃದ್ಧಿಯ ಅಂಕುರಣ (ಎಕ್ಸೊಜಿನಿಯಸ್ ಬಡ್ಡಿಂಗ್) ಮತ್ತು ಅಂತರ್ವೃದ್ಧಿಯ ಅಂಕುರಣ (ಎಂಡೋಜಿನಿಯಸ್ ಬಡ್ಡಿಂಗ್) ಅಂಕುರಗಳು ತಾಯಿಯ ಶರೀರದ ಹೊರಭಾಗದಲ್ಲಾದರೆ, ಬಹಿರ್ವೃದ್ಧಿಯ ಅಂಕುರಣವೆಂದು ತಾಯಿಯ ಶರೀರದ ಒಳಭಾಗದಲ್ಲಾದರೆ ಅದನ್ನು ಅಂತರ್ವೃದ್ಧಿಯ ಅಂಕುರಣವೆಂದು ಕರೆಯುತ್ತಾರೆ.

ಯೀಸ್ಟ್‌ನಲ್ಲಿ ಅಂಕುರಣವು ಬಹಳ ತ್ವರಿತಗತಿಯಲ್ಲಾಗುತ್ತದೆ. ತಾಯಿ ಕೋಶದ ಒಂದು ಭಾಗದಿಂದ ಸಣ್ಣ ಉಬ್ಬು ಉಂಟಾಗಿ, ತಾಯಿ ಕೋಶದ ಕೋಶದ್ರವ್ಯ ಅಂಕುರ ದೊಳಕ್ಕೆ ಪ್ರವೇಶಿಸುತ್ತದೆ. ಅನಂತರ ಕೋಶದ ಜೀವ ಬಿಂದುವು (ನ್ಯೂಕ್ಲಿಯಸ್) ಇಬ್ಭಾಗ (ಮೈಟೊಸಿಸ್) ಆಗಿ ಒಂದು ಅಂಕುರದೊಳಕ್ಕೆ ಪ್ರವೇಶಿಸಿ, ತಾಯಿ ಕೋಶದಲ್ಲೇ ಉಳಿಯುತ್ತದೆ. ಅಂಕುರವು ಪೂರ್ಣ ಬೆಳೆದನಂತರ ತಾಯಿ ಕೋಶದಿಂದ ಬೇರ್ಪಟ್ಟು ಸ್ವತಂತ್ರವಾಗಿ ಜೀವಿಸುತ್ತದೆ. ಈ ರೀತಿ ಅಂಕುರಗಳು ಹೆಚ್ಚು ಸಂಖ್ಯೆಯಲ್ಲಿ ರೂಪುಗೊಳ್ಳುತ್ತವೆ. ಒಂದೇ ಕೋಶದಿಂದ ಒಂದಕ್ಕಿಂತ ಹೆಚ್ಚು ಅಂಕುರಗಳು ಉಂಟಾಗುತ್ತವೆ.

ಪ್ರೊಟೋಜೋವ ಗುಂಪಿನ ಸಕ್ಟೋರಿಯದ ಜೀವ ಪ್ರಭೇದಗಳಲ್ಲಿ ಅಂಕುರಣವು ಸಾಮಾನ್ಯ ರೀತಿಯ ಸಂತಾನೋತ್ಪತ್ತಿ ಕ್ರಿಯೆಯಾಗಿದೆ. ಇದರಲ್ಲಿ ಬಹಿರ್ವೃದ್ಧಿಯ ಹಾಗೂ ಅಂತರ್ವೃದ್ಧಿಯ ಅಂಕುರಣಗಳಿವೆ. ಬಹಿರ್ವೃದ್ಧಿಯ ಅಂಕುರಣದಲ್ಲಿ ಪ್ರಾಣಿಯ ಕೋಶದ ಹೊರ ಭಾಗದಿಂದ ಅನೇಕ ಅಂಕುರಗಳು ಸಣ್ಣ ಉಬ್ಬುಗಳಂತೆ ಉಂಟಾಗುತ್ತವೆ. ಅನಂತರ ಕೋಶದೊಳಗಿರುವ ಸ್ಥೂಲ ಜೀವ ಬಿಂದುವು (ಮ್ಯಾಕ್ರೊನ್ಯೂಕ್ಲಿಯಸ್) ಪ್ರತಿಯೊಂದು

ಅಂಕುರದೊಳಗೆ ವ್ಯಾಪಿಸಿ ಸಾಮಾನ್ಯ ವಿಭಾಗ ಕ್ರಮದಿಂದ (ಅಮೈಟೋಸಿಸ್) ಆವಿಭಜಿಸುತ್ತದೆ. ಸೂಕ್ಷ್ಮಜೀವ ಬಿಂದುವು (ಮೈಕ್ರೊನ್ಯೂಕ್ಲಿಯಸ್) ರೇಖಾವಿಭಾಗಕ್ರಮದಿಂದ (ಮೈಟೊಸಿಸ್) ವಿಭಜಿಸಲ್ಪಟ್ಟು ಪ್ರತಿಯೊಂದು ಅಂಕುರದೊಳಕ್ಕೂ ಸೇರುತ್ತದೆ. ಪೂರ್ಣವಾಗಿ ಬೆಳೆದ ಅಂಕುರಗಳು ತಾಯಿ ಕೋಶದಿಂದ ಬೇರ್ಪಟ್ಟು ಸ್ವತಂತ್ರವಾಗಿ ಬೆಳೆಯುತ್ತವೆ. ಅಂತರ್ವೃದ್ಧಿಯ ಅಂಕುರಣದಲ್ಲಿ ಅಂಕುರಗಳು ಶರೀರದ ಒಳಭಾಗದಲ್ಲಿ ಉಂಟಾಗಿ ಸೂಕ್ಷ್ಮ ಜೀವ ಬಿಂದುಗಳು ವಿಭಜಿಸಿ ಅಂಕುರದೊಳಕ್ಕೆ ಸೇರುತ್ತವೆ. ಅಂಕುರಗಳು ಪುನಃ ವಿಭಜಿಸಿ ಹೊರಗೆ ಬಂದು ಸ್ವತಂತ್ರವಾಗಿ ಬೆಳೆಯುತ್ತವೆ.

ಸ್ಪಂಜು ಪ್ರಾಣಿಯು ಸಹ ಅಂಕುರಣ ರೀತಿಯಿಂದ ಸಂತಾನೋತ್ಪತ್ತಿ ಮಾಡುತ್ತದೆ. ಪೂರ್ಣ ಬೆಳೆದ ಸ್ಪಂಜಿನ ಶರೀರದಿಂದ ಅಂಕುರಗಳು ಸಣ್ಣ ಮೊಗ್ಗುಗಳಂತೆ ಬೆಳೆಯುತ್ತವೆ. ಈ ಅಂಕುರಗಳು ಪೂರ್ಣವಾಗಿ ಬೆಳೆದನಂತರ ತಾಯಿಯ ಶರೀರದಿಂದ ಬೇರ್ಪಟ್ಟು ಸ್ವತಂತ್ರವಾಗಿ ಬೆಳೆದು ದೊಡ್ಡಗಾತ್ರದ ಸ್ಪಂಜುಗಳಾಗುತ್ತವೆ. ಕೆಲವು ಸಾರಿ ಬೇರ್ಪಡದೆ ಹಾಗೆಯೇ ತಾಯಿಯ ಶರೀರದೊಂದಿಗೆ ಉಳಿದುಕೊಂಡು ಬೆಳೆದು ದೊಡ್ಡ ಸಮೂಹವಾಗುತ್ತವೆ. ಇದು ಬಹಿರ್ವೃದ್ಧಿಯ ಅಂಕುರಣ. ಸಿಹಿ ನೀರಿನ ಜಲಾಶಯಗಳಲ್ಲಿ ವಾಸಿಸುವ ಸ್ಪಾಂಜಿಲ್ಲಗಳಲ್ಲಿ ಉಂಟಾಗುವ ಅಂಕುರಾಗ್ರಗಳು (ಜೆಮ್ಯುಲ್ಸ್) ಅಂತರ್ವೃದ್ಧಿಯ ಅಂಕುರಣದಿಂದಾಗುತ್ತವೆ.

ಕುಟುಕು ಕಣವಂತಗಳಲ್ಲಿ ಅಂಕುರಣವು ಸರ್ವೆ ಸಾಮಾನ್ಯ. ಇದರಿಂದ ಸಂತಾನವು ಹೆಚ್ಚಾಗುವುದಲ್ಲದೆ ಸಮುದಾಯ ರಚನೆಯೂ ಸಹ ಅಗುತ್ತದೆ. ಅಂಕುರಗಳು ಸಾಮಾನ್ಯವಾಗಿ ಹೈಡ್ರಾಯಿಡ್ ಪಾಲಿಪ್‌ಗಳ ಕಾಂಡ ಮತ್ತು ಬುಡಗಳಲ್ಲಿ ಬೆಳೆಯುತ್ತವೆ. ಅಂಕುರಣದಲ್ಲಿ ಶರೀರದ ಹೊರ ಮತ್ತು ಒಳಪದರಗಳು ಭಾಗವಹಿಸುತ್ತವೆ. ಈ ಪದರುಗಳು ದುಂಡಾಗಿ ಹೊರಕ್ಕೆ ಚಾಚಲ್ಪಟ್ಟು ಮೊಗ್ಗಾಗಿ ಬೆಳೆಯುತ್ತವೆ. ಇದಾದನಂತರ ಅಂಕುರದ ಮುಂಭಾಗದಲ್ಲಿ ಬಾಯಿಯ ರಂಧ್ರ ಉಂಟಾಗಿ ಅದರ ಸುತ್ತಲೂ ಚಾವಟಿಗಳಂಥ ಸ್ಪರ್ಶಾಂಗಗಳು ಬೆಳೆದು ಒಂದು ಸಣ್ಣ ಹೈಡ್ರಾ ಪಾಲಿಪ್ ಅಗುತ್ತದೆ. ತಾಯಿಯ ಜೀರ್ಣಾವಕಾಶವು ಅಂಕುರದ ಜೀರ್ಣಾವಕಾಶದೊಂದಿಗೆ ಸೇರಿರುತ್ತದೆ. ಕ್ರಮೇಣವಾಗಿ ಅಂಕುರವು ಬೆಳೆಯುತ್ತದೆ. ಬೆಳೆವಣಿಗೆ ಮುಗಿದ ಕೂಡಲೇ ತಾಯಿಯ ಶರೀರಕ್ಕೂ ಮತ್ತು ಅಂಕುರದ ಬುಡಕ್ಕೂ ಮಧ್ಯೆ ಸಂಕುಚಿತವಾಗಿ ಅಂಕುರವು ಬೇರ್ಪಟ್ಟು ಸ್ವತಂತ್ರವಾಗುತ್ತದೆ. ಈ ಕ್ರಿಯೆಯು ಪೂರ್ಣಗೊಳ್ಳಲು ಎರಡು ದಿನಗಳು ಬೇಕು. ಒಂದೇ ಹೈಡ್ರಾ ಪಾಲಿಪ್ ಒಂದಕ್ಕಿಂತ ಹೆಚ್ಚಾಗಿ ಅಂಕುರಗಳನ್ನು ಉಂಟು ಮಾಡಬಲ್ಲದು. ಮೆಡೂಸಗಳಲ್ಲಿಯೂ ಸಹ ಅಂಕುರಣ ನಡೆಯುತ್ತದೆ. ಓಬೀಲಿಯ ಸಮೂಹ ಜೀವಿಯಲ್ಲಿ ನಿರ್ಲಿಂಗ ಬ್ಲಾಸ್ಟೊಸ್ಟೈಲ್ ಪಾಲಿಪ್‌ಗಳು ಅಂಕುರಣದಿಂದ ಲೈಂಗಿಕ ಮೆಡೂಸಗಳನ್ನು ಹುಟ್ಟಿಸುತ್ತವೆ. ಹವಳದ ಪ್ರಾಣಿಗಳಲ್ಲಿಯೂ ಸಹ ಹೆಚ್ಚಾಗಿ ಅಂಕುರಣ ರೀತಿಯ ಸಂತಾನೋತ್ಪತ್ತಿಯಿಂದ ಸಂಖ್ಯೆ ವೃದ್ಧಿಯಾಗಿ ಸಮುದಾಯ ರಚನೆಯುಂಟಾಗುತ್ತದೆ.







ಹೈಡ್ರಾದಲ್ಲಿ ಅಂಕುರಣ

ಕುಟುಕು ಕಣವಂತಗಳ ನಂತರ ಅಂಕುರಣವು ಅನೇಕ ಬಗೆಯ ಅಕಶೇರುಕ ಪ್ರಾಣಿಗಳಲ್ಲಿ ಕಂಡುಬರುವ ಅಪರೂಪದ ಕ್ರಿಯೆ. ಈ ಕ್ರಿಯೆ ಎಂಡೋಪ್ರಾಕ್ಟ ಮತ್ತು ಎಕ್ಟೊಪ್ರಾಕ್ಟಗಳಲ್ಲಿ ಸಾಮಾನ್ಯವಾಗಿದೆ. (ಕೆ.ಪಿ.ಆರ್.)

**ಅಂಕುಶ ಕಪಾಲಿ:** ಮುಳ್ಳು ತಲೆಯ (ಅಕ್ಯಾಂತೋಸೆಫಾಲ) ಮಿಥ್ಯ ದೇಹಾಂತರಾವಕಾಶ (ಸ್ಯೂಡೋಸೀಲೋಮ್) ವಿರುವ, ದ್ವಿಪಾರ್ಶ್ವ ಸಾಮ್ಯ ದೇಹವನ್ನು ಹೊಂದಿರುವ ಆಂತರಿಕ ಪರತಂತ್ರ ಜೀವಿಗಳ ಒಂದು ಅಕಶೇರುಕ ವಂಶ. ಪ್ರೌಢಾವಸ್ಥೆಯಲ್ಲಿ ಮೀನು, ಹಕ್ಕಿ ಮತ್ತು ಸ್ತನಿಗಳ ಕರುಳಿನಲ್ಲಿಯೂ ಲಾರ್ವಾವಸ್ಥೆಯಲ್ಲಿ ಸಂಧಿಪದಿಗಳ ದೇಹದಲ್ಲಿಯೂ ವಾಸಿಸುವ ಹುಳುಗಳನ್ನು ಈ ವಂಶದಲ್ಲಿ ಸೇರಿಸಲಾಗಿದೆ. ಇವುಗಳ ದೇಹದ ಮುಂಭಾಗದಲ್ಲಿ ಒಂದು ಗುಂಡಾದ ಸೊಂಡಿಲು ಇರುತ್ತದೆ. ಅದರ ಮೇಲೆ ಹಿಮ್ಮುಖವಾಗಿ ಬಾಗಿದ ಮುಳ್ಳುಗಳಿರುತ್ತವೆ. ಆದ್ದರಿಂದಲೆ ಈ ವಂಶದ ಪ್ರಾಣಿಗಳಿಗೆ ಮುಳ್ಳುತಲೆಯ ಪ್ರಾಣಿಗಳೆಂದು ಹೆಸರು. ಆಶ್ರಯ ಜೀವಿಯಿಂದ ಹೊರಕ್ಕೆ ತೆಗೆದಾಗ ಇವು ದುಂಡಗೆ ಸೆಟೆದುಕೊಳ್ಳುತ್ತವೆ.

ಅಂಕುಶ ಕಪಾಲಿಗಳ ದೇಹವನ್ನು ಚೂಪಾದ ಮುಳ್ಳುಗಳಿಂದ ಕೂಡಿದ ಸೊಂಡಿಲು, ಕತ್ತು ಮತ್ತು ಮುಂಡ ಎಂದು ಮೂರು ಭಾಗವಾಗಿ ವಿಂಗಡಿಸಬಹುದು. ಸೊಂಡಿಲಿನ ಮೇಲೆ ಕ್ರಮವಾಗಿ ಹಿಂದಕ್ಕೆ ಬಾಗಿದ ಮುಳ್ಳುಗಳು ಹರಡಿವೆ. ಸೊಂಡಿಲು ಒಂದು ಕೋಶದೊಳಗಿದೆ. ಈ ಪ್ರಾಣಿಯು ಸ್ನಾಯುಗಳ ಸಹಾಯದಿಂದ ಸೊಂಡಿಲನ್ನು ಕೋಶದೊಳಕ್ಕೆ ಎಳೆದುಕೊಳ್ಳುತ್ತದೆ ಮತ್ತು ಹೊರಕ್ಕೆ ತಳ್ಳುತ್ತದೆ. ದೇಹ ದುಂಡಾಗಿ ಅಥವಾ ಚಪ್ಪಟೆಯಾಗಿರುತ್ತದೆ. ವಲಯಗಳಾಗಿ ವಿಭಾಗವಾಗಿಲ್ಲ. ಹಿಗ್ಗಲೂಬಹುದು, ಕುಗ್ಗಲೂಬಹುದು. ಹೊರಭಾಗದಲ್ಲಿ ಒಂದು ತೆಳುವಾದ ರಕ್ಷಣಾ ಪೊರೆ (ಕ್ಯುಟಿಕಲ್) ಇದೆ. ಇದು ಹೊರಚರ್ಮದಿಂದ ರೂಪುಗೊಂಡಿದೆ. ನಿರ್ದಿಷ್ಟವಾದ ಕೋಶಾವರಣಗಳಿಲ್ಲದಿರುವುದರಿಂದ ಹೊರಚರ್ಮವನ್ನು ಸಿನ್‌ಸಿಷಿಯಲ್ ಹೊರದರ್ಮವೆನ್ನುತ್ತಾರೆ (ಸಿನ್‌ಸಿಷಿಯಲ್ ಎಪಿಡರ್ಮಿಸ್). ಇದರ ಕೆಳಗೆ ಒಳಚರ್ಮವೂ ಒಳಭಾಗದ ಮಾಂಸ ಪದರಗಳೂ ಇವೆ. ಕತ್ತಿನಲ್ಲಿ ಒಳಚರ್ಮದಿಂದ ರೂಪುಗೊಂಡ ಲಾಡಿಯಂತಿರುವ ಎರಡು ಲೆಮ್‌ನಿಸ್ಕೈ ಎಂಬ ರಚನೆಗಳಿವೆ. ಇವು ದೇಹದ ದೇಹಾಂತರಾವಕಾಶದವರೆಗೂ ಪಸರಿಸಿರುತ್ತವೆ. ಸೊಂಡಿಲಿನಿಂದ ಎರಡು ಸ್ನಾಯುಗಳು ದೇಹದ ಕಡೆಯವರೆಗೂ ಚಾಚಿವೆ. ಈ ಜೀವಿಗಳಲ್ಲಿ ಜೀರ್ಣಾಂಗಗಳಿಲ್ಲ. ಲಾರ್ವ ಮತ್ತು ಪ್ರೌಢಾವಸ್ಥೆಯಲ್ಲಿ ಇವು ಆಹಾರವನ್ನು ಪೋಷಕ ಜೀವಿಯ ಕರುಳಿನಿಂದ ನೇರವಾಗಿ ಹೀರುತ್ತವೆ. ಇವುಗಳಲ್ಲಿ ರಕ್ತ ಪರಿಚಲನೆಯ ಅಂಗಗಳಾಗಲೀ, ಶ್ವಾಸಾಂಗಗಳಾಗಲೀ ಇರುವುದಿಲ್ಲ. ಶುದ್ಧೀಕರಣಾಂಗಗಳು ಕೇವಲ ಎರಡು ಕವಲೊಡೆದ ಪ್ರೋಟೋನೆಫ್ರಿಡಿಯಾಗಳ ರೂಪದಲ್ಲಿವೆ. ಪ್ರೊಟೊನೇಫ್ರಿಡಿಯಾಗಳು ಕೋಶಕೇಂದ್ರರಹಿತ ಉಜ್ವಲ ಜೀವಕೋಶ (ಫ್ಲೇಮ್ ಸೆಲ್)ಗಳಲ್ಲಿ ಕೊನೆಗೊಳ್ಳುತ್ತವೆ. ಸೊಂಡಿಲಿನಲ್ಲಿರುವ ನರಮುಡಿಯಿಂದ ಎರಡು ನರಗಳು ದೇಹದ ಎರಡು ಪಕ್ಕದಲ್ಲಿಯೂ ಸಾಗುತ್ತವೆ.




ಗಂಡು

1. ಹಿಂದಕ್ಕೆ ಬಾಗಿರುವ ಮುಳ್ಳು. 2. ಸೊಂಡಿಲು. 3. ನರಮುಡಿ.
4. ಗುಂಡಾದ ಬೀಜಗಳು. 5. ಸಿಮೆಂಟ್ ಗ್ರಂಥಿ.
6. ಸಿಮೆಂಟ್ ಸಂಗ್ರಹಾಲಯ. 7. ಬರ್ಸ. 8. ಸಿರ್ರಸ್.
9. ಮಧ್ಯಾವಕಾಶ. 10 ಸ್ನಾಯು. 11. ಲೆಮ್ನಿಸ್ಕೈ.




ಹೆಣ್ಣು

1. ಲಿಗಮೆಂಟ್. 2. ತತ್ತಿ. 3. ಭ್ರೂಣ. 4. ಯೋನಿಮಾರ್ಗ

ಗಂಡು ಹೆಣ್ಣಿಗಿಂತ ದೊಡ್ಡದು. ಗಂಡಿನಲ್ಲಿ ಗುಂಡಾದ ಎರಡು ವೃಷಣಗಳಿವೆ. ಇವು ಸ್ನಾಯುಗಳ ನಡುವೆ ಬೆಳೆದಿರುತ್ತವೆ. ಹಿಂಭಾಗಕ್ಕೆ ಒಂದು ನಾಳ ಹೊರಟಿದೆ. ಕೊನೆಯಲ್ಲಿ ಒಂದು ಚೀಲವಿದೆ. ಗಂಡಿನಲ್ಲಿ ಆರರಿಂದ ಎಂಟರವರೆಗೆ ಅಂಟು ದ್ರವವನ್ನು ಸ್ರವಿಸುವ ಸಿಮೆಂಟ್ ಗ್ರಂಥಿಗಳಿವೆ. ಹೆಣ್ಣಿನಲ್ಲಿ, ಮರಿಯಾಗಿದ್ದಾಗ ಮಾತ್ರ, ಅಂಡಾಶಯವು

ಚೆಂಡಿನಂತಿರುತ್ತದೆ. ಇದು ಸ್ನಾಯುಗಳ ಮೇಲೆ ಬೆಳೆದಿರುತ್ತದೆ. ಮುಂದೆ ದೇಹಾಂತರಾವಕಾಶವೆಲ್ಲ ಅಂಡಗಳಿಂದ ತುಂಬುತ್ತದೆ. ಗರ್ಭಾಂಕುರವಾಗುವುದು ಅಲ್ಲಿಯೇ. ಗರ್ಭಕಟ್ಟಿದ ಅನಂತರ ಮೊಟ್ಟೆ ಗೋಳಾಕಾರವನ್ನೋ ಕದಿರಿನಾಕಾರವನ್ನೋ ತಾಳುತ್ತದೆ. ಈ ಮೊಟ್ಟೆಗಳಿಗೆ ಮೂರ್‍ನಾಲ್ಕು ಕವಚಗಳಿರುತ್ತವೆ. ದೇಹದಿಂದ ಹೊರಗೆ ಬರುವಷ್ಟರಲ್ಲಿ ಭ್ರೂಣ ಸಾಕಷ್ಟು ಬೆಳೆದಿರುತ್ತದೆ. ಅನಂತರ ಭ್ರೂಣಸಹಿತವಾದ ಮೊಟ್ಟೆಗಳು ಪೋಷಕಪ್ರಾಣಿಯ ಮಲದೊಂದಿಗೆ ಹೊರಕ್ಕೆ ಬರುತ್ತವೆ. ವಾತಾವರಣದ ವೈಪರೀತ್ಯವನ್ನು ತಡೆಯುವುದಕ್ಕಾಗಿಯೇ ಇವಕ್ಕೆ ರಕ್ಷಣಾಕವಚವಿರುವುದು. ಮಧ್ಯವರ್ತಿ ಸಂಧಿಪದಿಗಳು ಇಂಥ ಮೊಟ್ಟೆಯನ್ನು ನುಂಗಿದರೆ ಮಾತ್ರ ಇದರ ಜೀವಚಕ್ರ ಮುಂದುವರಿಯುತ್ತದೆ. ಮುಂದೆ ಮೊಟ್ಟೆಯನ್ನು ನುಂಗಿದ ಸಂಧಿಪದಿಯನ್ನು ಯಾವುದಾದರೂ ಕಶೇರುಕವು ತಿಂದರೆ, ಈ ಉಪಜೀವಿ ಕಶೇರುಕದ ಕರುಳನ್ನು ಸೇರಿ ದೊಡ್ಡದಾಗುತ್ತದೆ. ಅಲ್ಲಿ, ತನ್ನ ಸೊಂಡಿಲಿನಿಂದ ಪೋಷಕ ಜೀವಿಯ ಕರುಳಿಗೆ ಅಂಟಿಕೊಳ್ಳುತ್ತದೆ.

ಹಿಂದೆ ಈ ಅಂಕುಶ ಕಪಾಲಿಯನ್ನು ದುಂಡು ಹುಳುಗಳ (ನೆಮಟೋಡ) ವಂಶಕ್ಕೆ ಸೇರಿಸಿದ್ದರು. ರಚನೆ, ಜೀವನ ಚರಿತ್ರೆಗಳ ಪೂರ್ಣ ಪರಿಚಯವಾದ ಮೇಲೆ ವಾನ್ ಕ್ಲೀವನ್ (1948) ಇದನ್ನು ಪ್ರತ್ಯೇಕ ವಂಶವೆಂದು ನಿರ್ಧರಿಸಿದನು. ಉದಾ: ಅಕಾಂತೊಸೆಫಾಲಸ್, ಎಕೈನೊರಿಂಕಸ್ (ಸಿ.ಎಂ.ಎಸ್)

**ಅಂಗ ರೂಪಿಕಾ ಕ್ಷೇತ್ರಗಳು:** ಪಕ್ವವಾದ ಮೊಟ್ಟೆ ಅಥವಾ ಮೊದಲ ಹಂತದ ಭ್ರೂಣದಲ್ಲಿನ ಯಾವುದೇ ಒಂದು ಭಾಗವು ಮುಂದೆ ಪ್ರಬುದ್ಧ ಜೀವಿಯ ಯಾವುದೇ ಒಂದು ಅಂಗ ಅಥವಾ ಅಂಗಗಳಾಗಿ ಮಾರ್ಪಡಬಹುದು ಎಂಬ ಅಭಿಪ್ರಾಯವು ಕಾರ್ಲ್ ಅರ್ನ್ಸ್ಟ್ ವಾನ್ ಬೇರ್‌ನಿಂದ (1837) ಬೇರೂರಲು ಪ್ರಾರಂಭಿಸಿತು. ವಾನ್ ಬೇರ್‌ನ ತೌಲನಿಕ ವಿಚಾರ ಹಾಗೂ ಬರಹಗಳು ಭ್ರೂಣಶಾಸ್ತ್ರದ ವಿವಿಧ ಹಂತಗಳ ಬೆಳವಣಿಗೆಗೂ ಕಾರಣವಾಗಿದೆ.

ವಾನ್ ಬೇರ್ ಮಹಾಶಯನ ಈ ಮೇಲಿನ ಬರವಣಿಗೆಯ ತುರುವಾಯ ನಲವತ್ತು ವರ್ಷಗಳ ಅನಂತರ 1874ರಲ್ಲಿ ಅಂಗ ರೂಪಿಕಾ ತತ್ವದ ಬಗ್ಗೆ ವಿಲ್‌ಹೆಲ್ಮ್ ಹಿಸ್‌ನು ತನ್ನ ಅನ್‌ಸೆರೆ ಕೊರ್ಫೆರ್‌ಫಾರ್ಮ್ ಎಂಬ ಪುಸ್ತಕದಲ್ಲಿ ಜೀವಾಂಕುರ ಪದರದ ವಿಷಯವಾಗಿ ಜೀವಾಂಕುರದ ಗುಡ್ಡೆಯು ಅಂಗಾಂಕುರವನ್ನು ಹೊಂದಿದ್ದು ಚಪ್ಪಟೆಯಾದ ತಟ್ಟೆಯಂತೆ ಇರುತ್ತದೆ ಎಂದು ಹೇಳಿದ್ದಾನೆ. ರೇ ಲ್ಯಾಂಕೆಸ್ಟರ್ (1877) ಕೂಡಾ ನಿಷೇಚನಗೊಂಡ ಮೊಟ್ಟೆಯಲ್ಲಿ ಮೊದಲೇ ನಿರ್ಮಿತ ಅಂಗಗಳು ಇರುತ್ತವೆ ಎಂದು ಪ್ರತಿಪಾದಿಸಿದನು. ವಿಟ್‌ಮನ್‌ನು ತನ್ನ ಜಿಗಣೆಯ ಮೇಲಿನ ಸಂಶೋಧನೆಗಳಿಂದ ಪೂರ್ವಭಾವಿ ಅಂಗರೂಪಿಕೆಗಳು ಮೊಟ್ಟೆಗಳಲ್ಲಿ ಇರುತ್ತವೆ ಎಂಬ ನಿರ್ಣಯಕ್ಕೆ ಬಂದನು. ರಾಬ್ಲ, ವಾನ್ ಬೆನೆಡೀನ್ ಮುಂತಾದವರು ಕೂಡ ಇದೇ ತತ್ವವನ್ನು ಎತ್ತಿ ಹಿಡಿದರು. ಲ್ಯಾಂಕೆಸ್ಟರ್ ಮಹಾಶಯನ ಹೇಳಿಕೆಯ ಆಧಾರದ ಮೇಲೆ ನಡೆದ ಮುಂದಿನ ಎಲ್ಲಾ ಸಂಶೋಧನೆಗಳೂ ಭ್ರೂಣಶಾಸ್ತ್ರದ ಇನ್ನೊಂದು ಅಂಗವಾದ ಕೋಶವಂಶಾವಳಿಗಳ ತತ್ವದ ಬೆಳವಣಿಗೆಗೆ ಸಹಕಾರಿಯಾದವು. ಲ್ಯಾಂಕೆಸ್ಟರನು ಜೀವಕೋಶದ ಎಲ್ಲ ಭಾಗಗಳು (ಕೆಲವು ಸೂಕ್ಷ್ಮ ಕಣಗಳನ್ನು ಬಿಟ್ಟರೆ) ಅತಿ ಹೆಚ್ಚು ದರ್ಶನ ಶಕ್ತಿಯುಳ್ಳ ಸೂಕ್ಷ್ಮದರ್ಶಕದಲ್ಲಿ ಕೂಡ ಸಮದ್ರವ ಸ್ಥಿತಿಯಲ್ಲಿದ್ದು, ಪೂರ್ವ ನಿರ್ಮಿತ ಅಂಗಗಳು ಬೇರೆ ಬೇರೆ ರಾಸಾಯನಿಕ ಕಣಗಳ ರೂಪದಲ್ಲಿರುತ್ತವೆ ಎಂದು ಹೇಳಿದ್ದಾನೆ. ವಿಟ್‌ಮನ್ನನ ಜಿಗಣೆಯ ಮೇಲಿನ, ವಿಲ್ಸನ್‌ನ ನೇರೀಸ್ ಮೇಲಿನ, ದುಂಡುಹುಳುಗಳ ಮೇಲೆ ಝುರ್ ಮತ್ತು ಸ್ಟ್ರಾಸ್ಸೆ ಮತ್ತು ಸಮುದ್ರದ ಅರ್ಚಿನ್ ಮೇಲೆ ಹೊರ್‌ಸ್ಟಾಡಿಯಸ್ ನಡೆಸಿದ ಕೋಶವಂಶಾವಳಿಗಳ ಅಧ್ಯಯನದಿಂದ ಇದಕ್ಕೆ ಇನ್ನಷ್ಟು ಪುಷ್ಟಿ ದೊರಕಿತು. ಬ್ಲಾಸ್ಟುಲಾದ ಬೇರೆ ಬೇರೆ ಜೀವಕೋಶಗಳ ಗತಿಯನ್ನು ದರ್ಶಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶ.

ಕೋಶ ವಂಶಾವಳಿಯ ಅಧ್ಯಯನ ಹೆಚ್ಚಿನಂಶ ಅಕಶೇರುಕಗಳ ಮೊಟ್ಟೆಗಳ ಮೇಲೆಯೇ ನಡೆಯಿತು. ಕಾಂಕ್ಲಿನ್ 1905ರಲ್ಲಿ ಸಾಮಾನ್ಯ ಸಮುದ್ರ ಪಿಚಕಾರಿ ಸ್ಟೈಲಿಯಾ ಪಾರ್ಟಿಟಾ ಕೋಶ ವಂಶಾವಳಿಯನ್ನು ಅಧ್ಯಯನ ಮಾಡಿ ತನ್ನ ಕಶೇರುಕ ಭ್ರೂಣ ಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕವೊಂದರಲ್ಲಿ ಮೊಟ್ಟಮೊದಲಿಗೆ ಬರೆದಿದ್ದಾನೆ. ಈ ಅಮರ ಗ್ರಂಥದ ಪ್ರಕಟಣೆಯನಂತರ ಕಶೇರುಕ ಭ್ರೂಣ ಅಂಗರೂಪಿಕಾ ಮತ್ತು ಜೀವಾಂಕುರ ಕ್ಷೇತ್ರಗಳ ಬಗ್ಗೆ ಅಧ್ಯಯನವನ್ನು ಮುಂದುವರೆಸಲಾಯಿತು. ಆದರೆ ಕಶೇರುಕ ಭ್ರೂಣಶಾಸ್ತ್ರದಲ್ಲಿ ಮುಂದೆ ಹೆಚ್ಚಿನ ಬೆಳವಣಿಗೆ ಕಂಡು ಬಂದುದು ಜರ್ಮನ್ ವಿಜ್ಞಾನಿ ವಾಟ್ ಮಹಾಶಯನ ಸಂಶೋಧನೆಗಳನಂತರ.

ವಾಟನು ಉಭಯಜೀವಿಗಳ ಬ್ಲಾಸ್ಟುಲಾದ ನಿರ್ದಿಷ್ಟ ಭಾಗಗಳಿಗೆ ವರ್ಣ ಸಿಂಚನ ಗೊಳಿಸಿ ಮುಂದೆ ಬೆಳೆಯುವ ಭ್ರೂಣದ ಬೇರೆ ಬೇರೆ ಹಂತಗಳಲ್ಲಿ ಜೀವಕೋಶಗಳನ್ನು ಕೊಂದು ಅವುಗಳನ್ನು ಅಭ್ಯಾಸ ಮಾಡಿ ಹಿಂದಿನ ಬ್ಲಾಸ್ಟುಲಾದ ಜೀವಕೋಶಕ್ಕೂ ಭ್ರೂಣದ ಬೆಳವಣಿಗೆಯ ವಿವಿಧ ಹಂತಗಳ ಜೀವಕೋಶಗಳಿಗೂ ಹೋಲಿಕೆ ತೋರಿಸಿದನು. ಇದೇ ರೀತಿ ಬೇರೆ ಬೇರೆ ನಿರ್ದಿಷ್ಟ ಸ್ಥಳಗಳಿಗೆ ವರ್ಣಸಿಂಚನ ಮಾಡಿ ಮುಂದೆ ಬೆಳವಣಿಗೆಯಾಗುವ ಭ್ರೂಣದ ಪ್ರತಿ ಅಂಗವೂ ಬ್ಲಾಸ್ಟುಲಾದ ಯಾವ ಜೀವಕೋಶಗಳಿಂದ ಅಥವಾ ಯಾವ ಭಾಗಗಳಿಂದ ಮಾರ್ಪಾಟಾಯಿತು ಎಂದು ತೋರಿಸಬಹುದು. ಅಥವಾ ಬ್ಲಾಸ್ಟುಲಾದ ಯಾವ ಯಾವ ಜೀವಕೋಶಗಳು ಭ್ರೂಣದ ಯಾವ ಯಾವ ಭಾಗಗಳಾಗಿ ಮಾರ್ಪಾಡಾಗುತ್ತವೆ ಎಂದು ಅಭ್ಯಾಸಿಸಬಹುದು. ಹೀಗೆ ವಾಟನು ಬ್ಲಾಸ್ಟುಲಾದ ಬೇರೆ ಬೇರೆ ಭಾಗಗಳನ್ನು ನಕ್ಷೆಯೋಪಾದಿಯಲ್ಲಿ ಬರೆದು ಇಂತಹ ಭಾಗವೇ ಮುಂದೆ ಭ್ರೂಣದ ನರ ಮಂಡಲವಾಗುತ್ತದೆ ಅಥವಾ ಹೃದಯ ಅಥವಾ ಹೊರಚರ್ಮವಾಗುತ್ತದೆ ಎಂದು ತೋರಿಸುವ ಗತಿ ನಕ್ಷೆ (ಫೇಟ್ ಮ್ಯಾಪ್ಸ್) ಯನ್ನು ರಚಿಸಿದನು. ವಾಟನ ಸಂಶೋಧನೆಗಳು 1925 ಮತ್ತು 1929ರಲ್ಲಿ ಪ್ರಕಟಗೊಂಡವು.

ಇದೇ ಮಾದರಿಯ ಸಂಶೋಧನೆಗಳು ಮುಂದೆ ಅಭಿವೃದ್ಧಿ ಹೊಂದಿ ಕಶೇರುಕಗಳ ಹಲವಾರು ಪ್ರಭೇಧಗಳ ಬ್ಲಾಸ್ಟುಲಾ, ಗ್ಯಾಸ್ಟ್ರುಲಾ ಹಾಗೂ ಭ್ರೂಣರೂಪಿಕಾಕ್ಷೇತ್ರವನ್ನು ಸ್ತನಿಗಳ ಹೊರತಾಗಿ ಎಲ್ಲಾ ಕಶೇರುಕ ಗುಂಪುಗಳಲ್ಲಿಯೂ ಗುರುತಿಸಲಾಯಿತು. ಹಲವಾರು ತಾಂತ್ರಿಕ ತೊಂದರೆಗಳಿಂದ ಅಂಗರೂಪಿಕಾಕ್ಷೇತ್ರವನ್ನು ಸ್ತನಿಗಳಲ್ಲಿ ಗುರುತಿಸಲು ಸಾಧ್ಯವಾಗಲಿಲ್ಲ. ಆದರೂ ಒಂದೇ ರೀತಿಯ ಬೆಳವಣಿಗೆಯು ಎಲ್ಲ ಕಶೇರುಕಗಳಲ್ಲಿಯೂ ಕಂಡುಬರುವುದರಿಂದ ಎಲ್ಲ ಕಶೇರುಕಗಳಲ್ಲಿಯೂ ಒಂದೇ ರೀತಿಯ ಅಂಗರೂಪಿಕಾ ಕ್ಷೇತ್ರಗಳೂ ಇರುವುದರಿಂದ ಸ್ತನಿಗಳಲ್ಲಿಯೂ ಇದೇ ರೀತಿಯ ಅಂಗರೂಪಿಕಾಕ್ಷೇತ್ರವಿರಬಹುದೆಂದು ಭಾವಿಸಲಾಗಿದೆ.




ಕಶೇರುಕಗಳ ಬ್ಲಾಸ್ಟುಲಾದಲ್ಲಿನ ಕೆಲವು ಪ್ರಮುಖ ಪೂರ್ವಭಾವಿ ಅಂಗರೂಪಿಕಾಕ್ಷೇತ್ರಗಳು.

1) ಚರ್ಮದ ಹೊರಪದರವಾಗುವ ಹೊರನೆನೆ ಚರ್ಮ

2) ಪ್ರಾಥಮಿಕ ಅಕ್ಷ ಆಗುವ ಬೆಂಬೀವು ಅಥವಾ ಆನಿಸುವ ಸಲಾಕೆ ಕ್ಷೇತ್ರ.

3) ನರಮಂಡಲವಾಗಿ ಮಾರ್ಪಾಡುವ ಹೊರನೆನೆ ಚರ್ಮದ ಭಾಗ

4) ಮೇಲ್ಭಾಗದ ಬೆಂಬೀವು ಕ್ಷೇತ್ರದ ಅಕ್ಕ ಪಕ್ಕದಲ್ಲಿರುವ ಎರಡು ಕ್ಷೇತ್ರಗಳು ಮುಂದೆ ನಡುನೆನೆ ಚರ್ಮದ ಕ್ಷೇತ್ರವಾಗಿ ಮಾರ್ಪಡುತ್ತವೆ.

5) ಅನ್ನನಾಳವಾಗಿ ಮಾರ್ಪಡುವ ಒಳನೆನೆ ಚರ್ಮದ ಕ್ಷೇತ್ರ (ಇದು ಸಾಧಾರಣವಾಗಿ ಬ್ಲಾಸ್ಟುಲಾದ ಶಾಖಾಧ್ರುವದ ಕಡೆಗಿರುತ್ತದೆ).

6) ಒಳನೆನೆಚರ್ಮ ಮತ್ತು ನಡುನೆನೆ ಚರ್ಮದ ಮಧ್ಯೆ ಇರುವ ಜೀವಾಂಕುರ ದ್ರವವನ್ನು ಒಳಗೊಂಡ ಭಾಗವು ಮುಂದೆ ಪ್ರಾಥಮಿಕ ಜೀವಾಂಕುರ ಕೋಶವಾಗಿ ಪರಿವರ್ತನೆಗೊಳ್ಳುತ್ತದೆ.

7) ಪ್ರಥಮ ಸಲಾಕೆಯ ತಟ್ಟೆ (ಪ್ರಿ ಕಾರ್ಡಲ್ ಪ್ಲೇಟ್) ಎಂಬ ಭಾಗವು ಬೆಂಬೀವು ಕ್ಷೇತ್ರಕ್ಕೆ ಹೊಂದಿಕೊಂಡಿದ್ದು ಎಲ್ಲ ಕಶೇರುಕಗಳಲ್ಲಿ ಬೆಂಬೀವು ಕ್ಷೇತ್ರದ ಹಿಂಭಾಗದಲ್ಲಿರುತ್ತದೆ. ಇದರಿಂದ ಮುಂದೆ ತಲೆಯ ಕೆಲವು ಭಾಗಗಳು ಮತ್ತು ಬಾಯಿಯ ಮೇಲ್ಭಾಗವಾಗಿಯು ಮಾರ್ಪಾಡಾಗುತ್ತದೆ. (ಎಸ್.ಎನ್.ಎಚ್)

**ಅಂಗಾಂಶ:** ಒಂದೇ ಬಗೆಯ ಆಕಾರ, ರಚನೆ ಮತ್ತು ಕಾರ್ಯವನ್ನು ನಿರ್ವಹಿಸಲು ಸಜ್ಜಾಗಿರುವ ಜೀವಕೋಶಗಳ ಗುಂಪು (ಟಿಶ್ಯು). ಏಕಕೋಶ ಜೀವಿಗಳಲ್ಲಿ, ಜೀವಿಯ ಎಲ್ಲಾ ಕ್ರಿಯೆಗಳನ್ನು ಒಂದೇ ಜೀವಕೋಶವು ನಿರ್ವಹಿಸುತ್ತದೆ. ಆದರೆ ಬಹುಕೋಶ ಜೀವಿಗಳಲ್ಲಿ ವಿವಿಧ ಕ್ರಿಯೆಗಳನ್ನು ವಿಶೇಷ ಜೀವಕೋಶಗಳಿರುವ ಅಂಗಾಂಶಗಳು

ನಿರ್ವಹಿಸುತ್ತವೆ. ವಿವಿಧ ಬಗೆಯ ಅಂಗಾಂಶಗಳು ಜೊತೆಗೂಡಿ ಅಂಗಾಂಗಗಳಾಗುತ್ತವೆ. ವಿವಿಧ ಅಂಗಗಳ ಗುಂಪು ಅಂಗ ಸಮೂಹ ಅಥವಾ ಅಂಗಮಂಡಲವಾಗುತ್ತದೆ. ಅಂಗಾಂಶಗಳ ಆಕಾರ ಅಥವಾ ರಚನೆ ಮತ್ತು ಕಾರ್ಯ ನಿರ್ವಹಣೆ ಹಾಗೂ ಅಂಗಗಳಲ್ಲಿ ಅವುಗಳ ರಚನೆಯನ್ನು ತಿಳಿಸುವ ಜೀವವಿಜ್ಞಾನದ ಶಾಖೆ ಅಂಗಾಂಶವಿಜ್ಞಾನ. ಪ್ರಾಣಿಗಳಲ್ಲಿ ಅಂಗಾಂಶಗಳ ರಚನೆ ಮತ್ತು ಕಾರ್ಯನಿರ್ವಹಣೆಯ ವೈಖರಿಯನ್ನು ಆಧರಿಸಿ ನಾಲ್ಕು ವಿಧವಾದ ಅಂಗಾಂಶಗಳನ್ನು ಗುರುತಿಸಲಾಗಿದೆ.

ಮೇಲ್ಪೊರೆಯ ಅಂಗಾಂಶ : (ಎಪಿಥೀಲಿಯಲ್ ಅಂಗಾಂಶ) ಒತ್ತಾಗಿ ಜೋಡಿಸಲ್ಪಟ್ಟ ಜೀವಕೋಶಗಳಿರುವ, ದೇಹದ ಹೊರ ಇಲ್ಲವೇ ಒಳ ಮೇಲ್ಮೈಗಳನ್ನು ಮುಚ್ಚುವ ಅಂಗಾಂಶ. ಅನುಲೇಪಕ ಅಂಗಾಂಶ ಪರ್ಯಾಯ ಹೆಸರು. ದೇಹದ ಮೂರೂ ಮೂಲ ಪ್ರಜನನ ಪದರ (ಹೊರದರ್ಮ, ಮಧ್ಯದರ್ಮ ಮತ್ತು ಒಳದರ್ಮ) ಗಳಿಂದ ಉದ್ಭವಿಸಿದೆ. ಜೀವಕೋಶಗಳು ಒತ್ತಾಗಿ ಬುಡಪಟಲದ ಮೇಲೆ ಜೋಡಿಸಿಕೊಂಡಿದ್ದು, ಜೀವಕೋಶಗಳು ಅತಿವೇಗವಾಗಿ  ವಿಭಜನೆಯಾಗುತ್ತವೆ. ಇದು ಹಾನಿಗೊಂಡಿರುವ ಜೀವಕೋಶಗಳನ್ನು ಪ್ರತಿಸ್ಥಾಪನೆ ಮಾಡಲು ಸಹಕರಿಸುತ್ತದೆ. ಅನುಲೇಪಕ ಅಂಗಾಂಶವನ್ನು, ಸರಳ ಅನುಲೇಪಕ ಅಂಗಾಂಶ ಮತ್ತು ಸ್ತರ ಅಥವಾ ಪದರಾನ್ವಿತ ಅನುಲೇಪಕ ಅಂಗಾಂಶ ಎಂದು ಎರಡು ವಿಧವಾಗಿ ವಿಂಗಡಿಸಲಾಗಿದೆ.

ಸರಳ ಅನುಲೇಪಕ ಅಂಗಾಂಶದಲ್ಲಿ ಜೀವಕೋಶಗಳು ಒಂದೇ ಪದರದಲ್ಲಿರುವುವು. ಇದರಲ್ಲಿ ವಿವಿಧ ವರ್ಗಗಳಿವೆ. ಹಾಸು ಅನುಲೇಪಕ ಅಥವಾ ಶಲ್ಕ ಅನುಲೇಪಕದಲ್ಲಿ ಚಪ್ಪಟೆಯಾದ ಜೀವಕೋಶಗಳಿದ್ದು, ಕೋಶಕೇಂದ್ರವು ಜೀವಕೋಶದ ಮಧ್ಯದಲ್ಲಿದೆ. ಜೀವಕೋಶಗಳು ಪಾದಚಾರಿಗಳು ನಡೆಯುವ ಕಲ್ಲುಹಾಸಿಗೆಯ ಹಾಸುಗಳಂತೆ ಜೋಡಿಸಿಕೊಂಡಿರುವುವು. ಇದು ರಕ್ತನಾಳಗಳ ಒಳಮೈಯಲ್ಲಿ, ಮೂತ್ರಪಿಂಡದ ಬೌಮನ್ನನ ಪುಟಿಕ (ಬೌಮನ್ಸ್ ಕ್ಯಾಪ್ಸೂಲ್) ದಲ್ಲಿ, ದೇಹಾವಕಾಶದ ಹೊರಮೈ (ಅಳ್ಳಪೊರೆ – ಪೆರಿಟೋನಿಯಂ) ಯಲ್ಲಿ ಇರುತ್ತದೆ. ರಕ್ಷಣೆ, ಸಾರಜನಕ ಕಲ್ಮಷಗಳ ಸೋಸುವಿಕೆ, ಪರಾಸರಣ (ಆಸ್ಮೋಸಿಸ್) ಹಾಗೂ ವಿಸರಣ (ಡಿಫ್ಯೂಷನ್) ಈ ಅಂಗಾಂಶದ ಪ್ರಮುಖ ಕ್ರಿಯೆಗಳು.

ಘನಾಕೃತಿ ಅನುಲೇಪಕ ಅಂಗಾಂಶವು ಘನಾಕಾರದ ಜೀವಕೋಶಗಳಿಂದ ಕೂಡಿದೆ. ನೆಫ್ರಾನ್‌ನ ನಾಳ ಭಾಗದಲ್ಲಿ, ಥೈರಾಯಿಡ್ ಗ್ರಂಥಿಯಲ್ಲಿ, ಲಿಂಗಾಣುಗಳನ್ನು ಉತ್ಪತ್ತಿ ಮಾಡುವ ಪ್ರಜನನಾಂಗಗಳಲ್ಲಿ, ಕಂಡುಬರುತ್ತದೆ.

ನೀಳವಾದ ಜೀವಕೋಶಗಳನ್ನು ಹೊಂದಿರುವ ಅನುಲೇಪಕವೇ ಸ್ತಂಭ ಅನುಲೇಪಕ ಅಂಗಾಂಶ. ಕೋಶಕೇಂದ್ರವು ಜೀವಕೋಶದ ಕೆಳಭಾಗದಲ್ಲಿ (ಬುಡಪಟಲದ ಕಡೆಗೆ) ಇರುತ್ತದೆ. ಕೋಶದ್ರವ್ಯ ಕಣರೂಪದಲ್ಲಿರುತ್ತದೆ. ದೇಹದ ಕೆಲವು ಭಾಗಗಳಲ್ಲಿ ಜೀವಕೋಶಗಳು ಬೆರಳಿನಾಕಾರದ ಮೈಕ್ರೋವಿಲ್ಲೈಯನ್ನು ಹೊಂದಿರುತ್ತವೆ. ಇದು ಜೀರ್ಣಾಂಗವ್ಯೂಹದ ವಿವಿಧ ಭಾಗಗಳಲ್ಲಿ, ಕೆಲವು ಬಹಿರ್‌ಸ್ರಾವಕ ಗ್ರಂಥಿಗಳಲ್ಲಿ ಹಾಗೂ ಕೆಲವು ನಾಳಗಳಲ್ಲಿ ಇರುತ್ತದೆ.

ಸ್ತಂಭ ಅನುಲೇಪಕ ಅಂಗಾಂಶವು ದೇಹದ ಕೆಲವು ಭಾಗಗಳಲ್ಲಿ ಲೋಮಾಂಗಗಳನ್ನು ಹೊಂದಿರುತ್ತದೆ. ಹಾಗಾಗಿ ಇದನ್ನು ಲೋಮಪೂರಿತ ಅನುಲೇಪಕ ಅಂಗಾಂಶವೆನ್ನುತ್ತಾರೆ. ಇದು ತಾನಿರುವ ಜಾಗದಲ್ಲಿ ವಸ್ತುಗಳ ಪ್ರವಾಹ ಸೃಷ್ಟಿಸುವುದರಿಂದ ಅವುಗಳ ಪರಿಚಲನೆಯಲ್ಲಿ ಸಹಕರಿಸುತ್ತದೆ. ಅಂಡವಾಹಿನಿ (ಫೆಲೋಪಿಯನ್ ನಾಳ) ಮತ್ತು ಶ್ವಾಸನಾಳ (ಟ್ರೇಕಿಯಾ)ದಲ್ಲಿ ಇದನ್ನು ಕಾಣಬಹುದು.

ಸ್ರಾವಿಕ ಕ್ರಿಯೆಯನ್ನು ನಿರ್ವಹಿಸುವ ಅನುಲೇಪಕಕ್ಕೆ ಗ್ರಂಥಿ ಅನುಲೇಪಕ ಅಂಗಾಂಶ ಎಂದು ಹೆಸರು. ಸ್ತಂಭಾಕೃತಿ ಅಥವಾ ಘನಾಕಾರದ ಜೀವಕೋಶಗಳಿರುವ ಈ ಅನುಲೇಪಕವು ಗ್ರಂಥಿಗಳಲ್ಲಿರುತ್ತದೆ. ಶ್ಲೇಷ್ಮ (ಲೋಳೆ), ಕಿಣ್ವಗಳು ಮತ್ತು ಹಾರ್ಮೋನುಗಳಂತಹ ವಸ್ತುಗಳನ್ನು ಸ್ರವಿಸುವ ಅಂಗಗಳಿಗೆ ಅಥವಾ ಜೀವಕೋಶಗಳಿಗೆ ಗ್ರಂಥಿಗಳೆನ್ನುತ್ತಾರೆ. ಗ್ರಂಥಿಗಳಲ್ಲಿ ಹಲವು ವಿಧ – ಏಕಕೋಶೀಯ ಗ್ರಂಥಿ (ಗೋಬ್ಲೆಟ್ ಜೀವಕೋಶ), ಬಹು ಕೋಶೀಯ ಗ್ರಂಥಿ (ಮೇದೋಜೀರಕಾಂಗ), ಸರಳ ನಳಿಕಾ ಗ್ರಂಥಿ (ಸ್ವೇದ ಗ್ರಂಥಿ), ಕವಲೊಡೆದ ನಳಿಕಾ ಗ್ರಂಥಿ (ಗರ್ಭಕೋಶದ ಗ್ರಂಥಿ), ಕೂಪಿಕಾ ಗ್ರಂಥಿ (ಚರ್ಮದ ಮೇದೋಗ್ರಂಥಿ), ಸಂಯುಕ್ತ ನಳಿಕಾ ಅಥವಾ ಕೂಪಿಕಾ ಗ್ರಂಥಿ (ವೃಷಣ ಗ್ರಂಥಿ, ಸ್ತನಗ್ರಂಥಿ) ಮತ್ತು ಸಂಯುಕ್ತ ನಳಿಕಾ ಕೂಪಿಕಾ ಗ್ರಂಥಿ (ಜೊಲ್ಲು ರಸ ಗ್ರಂಥಿ). ಗ್ರಂಥಿಗಳು ಅಂತಃಸ್ರಾವಕ ಗ್ರಂಥಿಗಳಾಗಿರಬಹುದು ಅಥವಾ ಬಹಿರ್ ಸ್ರಾವಕ ಗ್ರಂಥಿಗಳಾಗಿರಬಹುದು. ಅಂತಃಸ್ರಾವಕ (ನಿರ್ನಾಳ) ಗ್ರಂಥಿಯು ತನ್ನ ಸ್ರವಿಕೆಯನ್ನು ರಕ್ತಕ್ಕೆ ಸುರಿಯುತ್ತದೆ. ಬಹಿರ್ ಸ್ರಾವಕ ಗ್ರಂಥಿಯು ತನ್ನ ಸ್ರವಿಕೆಯನ್ನು ನಾಳದ ಮುಖಾಂತರ ಅದರ ಅವಶ್ಯಕತೆಯಿರುವ ಜಾಗಕ್ಕೆ ಕಳುಹಿಸುತ್ತದೆ. ಗ್ರಂಥಿಗಳು ಸ್ರವಿಸುವ ವಿಧಾನವನ್ನು ಅನುಸರಿಸಿ ಬಹಿರ್ ಸ್ರಾವಕ ಗ್ರಂಥಿಗಳು ಮೂರು ವಿಧ – ಮೀರೋಕ್ರೈನ್ ಸ್ರಾವಕಗಳು (ಜೊಲ್ಲುರಸ ಗ್ರಂಥಿಗಳು), ಅಪೋಕ್ರೈನ್ ಸ್ರಾವಕಗಳು (ಸ್ತನ ಗ್ರಂಥಿಗಳು) ಮತ್ತು ಹೋಲೋಕ್ರೈನ್ ಸ್ರಾವಕಗಳು (ಚರ್ಮದ ಮೇದೋಗ್ರಂಥಿಗಳು).

ಸ್ತರ ಅಥವಾ ಪದರಾನ್ವಿತ ಅನುಲೇಪಕ ಅಂಗಾಂಶದಲ್ಲಿ ಜೀವಕೋಶಗಳು ಒಂದಕ್ಕಿಂತ ಹೆಚ್ಚು ಪದರಗಳಲ್ಲಿರುತ್ತವೆ. ಮೇಲಿನ ಪದರದಲ್ಲಿರುವ ಜೀವಕೋಶಗಳು ನಿರಂತರವಾಗಿ ಗಡುಸಾಗಿ ಸತ್ತಮೇಲೆ ಹೊಸಜೀವಕೋಶಗಳು ಬೆಳೆಯುತ್ತವೆ. ಕೆರಾಟಿನ್‌ಯುಕ್ತ ಸ್ತರ ಅನುಲೇಪಕವು ಮೇಲ್ಚರ್ಮ (ಎಪಿಡರ್ಮಿಸ್) ದಲ್ಲಿರುತ್ತದೆ. ಇದರ ಮೇಲ್ಪದರವು ಕೆರಾಟಿನ್ ಯುಕ್ತವಾಗಿದೆ. ಕೆರಾಟಿನ್‌ರಹಿತ ಅನುಲೇಪಕವು ಅನ್ನನಾಳ (ಈಸೋಫೇಗಸ್) ಮತ್ತು ಬಾಯಂಗಳದಲ್ಲಿರುತ್ತದೆ. ಶ್ವಾಸನಾಳದಲ್ಲಿ ಜೀವಕೋಶಗಳು ಒಂದೇ ಪದರದಲ್ಲಿದ್ದರೂ, ಅವುಗಳ ಅಸಮಾನ ಗಾತ್ರದಿಂದಾಗಿ ಸ್ತರ ಅನುಲೇಪಕದಂತೆ ಗೋಚರಿಸುತ್ತದೆ. ಇದನ್ನು ಹುಸಿ ಸ್ತರ ಅನುಲೇಪಕ ಅಂಗಾಂಶವೆನ್ನುತ್ತಾರೆ.

ರಕ್ಷಣೆ, ಸ್ರವಿಕೆ, ಹೀರುವಿಕೆ, ಸೋಸುವಿಕೆ, ಸಂವೇದನೆ, ಲಿಂಗಾಣು (ಯುಗ್ಮಕ) ಉತ್ಪತ್ತಿ, ಹೀಗೆ ಹಲವು ಕ್ರಿಯೆಗಳಲ್ಲಿ ಅನುಲೇಪಕ ಅಂಗಾಂಶವು ಪಾಲುಗೊಳ್ಳುತ್ತದೆ.

ಸಂಯೋಜಕ (ಕನೆಕ್ಟೀವ್) ಅಂಗಾಂಶ: ಎರಡು ಅಂಗಾಂಶಗಳನ್ನು ಬಂಧಿಸುವ ಅಥವಾ ಆಧಾರ ರಚನೆ ಒದಗಿಸುವ ಅಂಗಾಂಶ. ಇದನ್ನು ಬಂಧಕ ಅಂಗಾಂಶವೆಂತಲೂ ಕರೆಯುತ್ತಾರೆ. ಮಧ್ಯದರ್ಮದಿಂದ ಉದ್ಭವಿಸುತ್ತದೆ. ಮಾತೃಕೆ (ಮ್ಯಾಟ್ರಿಕ್ಸ್) ಯಿಂದ ತುಂಬಿರುವ ಬೃಹತ್ ಜೀವಕೋಶಾಂತರ ಬಿರುಕುಗಳು ಈ ಅಂಗಾಂಶದ ವಿಶೇಷತೆ. ಜೀವಕೋಶ ಬಹಳ ಕಡಿಮೆಯಿದ್ದು ತಂತುಗಳ (ಫೈಬರ್ಸ್) ಸಂಖ್ಯೆ ಜಾಸ್ತಿಯಿರುತ್ತದೆ. ಮೃದುವಾದ ಅಥವಾ ಸಡಿಲವಾದ ಸಂಯೋಜಕ ಅಂಗಾಂಶ ಮತ್ತು ಗಡುಸು ಸಂಯೋಜಕ ಅಂಗಾಂಶ ಎಂಬ ಎರಡು ವಿಧಗಳನ್ನು ಗುರುತಿಸಬಹುದು.

ಸಡಿಲವಾದ ಸಂಯೋಜಕ ಅಂಗಾಂಶದಲ್ಲಿ ಮಾತೃಕೆಯು ಸಾಧಾರಣವಾಗಿ ಮೃದುವಾಗಿರುತ್ತದೆ. ಇದರಲ್ಲಿ ಹಲವು ವಿಧ; ಎರಿಯಾಲಾರ್ ಸಂಯೋಜಕ ಅಂಗಾಂಶದಲ್ಲಿ ಫೈಬ್ರೊಬ್ಲಾಸ್ಟ್ಸ್, ಮ್ಯಾಕ್ರೊಫೇಜ್, ಪ್ಲಾಸ್ಮಾ, ಮಾಸ್ಟ್ ಮತ್ತು ಅಡಿಪೊಸೈಟ್ ಗಳಿರುತ್ತವೆ. ಫೈಬ್ರೋಬ್ಲಾಸ್ಟ್‌ಗಳು ಕೊಲ್ಲಾಜನ್‌ಯುಕ್ತ ಬಿಳಿ ಅಥವಾ ಅಂಟುಜನಕ ತಂತು, ಇಲಾಸ್ಟಿನ್‌ಯುಕ್ತ ಹಳದಿ ತಂತು ಮತ್ತು ರೆಟಿಕ್ಯುಲಿನ್‌ಯುಕ್ತ ಜಾಲರೂಪ ತಂತುಗಳನ್ನು ತಯಾರಿಸುತ್ತವೆ. ಮ್ಯಾಕ್ರೊಫೇಜ್‌ಗಳು ಪರಕೀಯ ವಸ್ತುಗಳನ್ನು ಮತ್ತು ಕ್ರಿಮಿಗಳನ್ನು ನುಂಗುತ್ತವೆ. ಪ್ಲಾಸ್ಮ ಪ್ರತಿಕಾಯಗಳನ್ನು ಉತ್ಪತ್ತಿ ಮಾಡುತ್ತವೆ. ಮಾಸ್ಟ್‌ಕೋಶಗಳು ಅಮೀಬಾರೂಪಿಯಾಗಿದ್ದು ಮಾತೃಕೆಯಲ್ಲಿರುವ ಹೈಯಲೂರಾನಿಕ್ ಆಮ್ಲ ಹಾಗೂ ಹೆಪಾರಿನ್, ಹಿಸ್ಟಮೈನ್ ಮತ್ತು ಸೆರೊಟೋನಿನ್ ಎಂಬ ವಸ್ತುಗಳನ್ನು ಉತ್ಪತ್ತಿ ಮಾಡುತ್ತವೆ. ಅಡಿಪೋಸ್‌ಕೋಶಗಳು ಕೊಬ್ಬನ್ನು ಶೇಖರಿಸಿಡುತ್ತವೆ. ಮಾತೃಕೆಯಲ್ಲಿ ಬೇರೆಲ್ಲಾ ಜೀವಕೋಶಗಳಿಗಿಂತ ಅಡಿಪೋಸ್‌ಕೋಶಗಳೇ ಜಾಸ್ತಿಯಿದ್ದರೆ ಅದನ್ನು ಅಡಿಪೋಸ್ ಅಂಗಾಂಶವೆನ್ನುತ್ತಾರೆ. ಇದು ಸ್ತನಿಗಳಲ್ಲಿ ಚರ್ಮದ ಕೆಳಗೆ, ಮೂತ್ರಜನಕಾಂಗ ಹಾಗೂ ಇನ್ನಿತರ ಅಂಗಗಳ ಹೊರಕವಚವಾಗಿ ಮತ್ತು ದೊಡ್ಡಮೂಳೆಗಳ ಅಸ್ಥಿಮಜ್ಜೆಯಲ್ಲಿರುತ್ತದೆ. ಎರಿಯೊಲಾರ್ ಸಂಯೋಜಕ ಅಂಗಾಂಶವು ವಿವಿಧ ಅಂಗಗಳ ಅಥವಾ ಅಂಗಾಂಶದ ಸುತ್ತಲೂ ಹೊರಕವಚವಾಗಿರುತ್ತದೆ. ತಂತುಗಳು ಹೇರಳವಾಗಿರುವುದರಿಂದ ಸ್ನಾಯುರಜ್ಜು (ಟೆಂಡಾನ್) ಮತ್ತು ಅಸ್ಥಿರಜ್ಜು (ಲಿಗಮೆಂಟು) ಗಳನ್ನು ದಟ್ಟವಾದ ಸಂಯೋಜಕ ಅಂಗಾಂಶವೆಂದು ಗುರುತಿಸುತ್ತಾರೆ. ಸ್ನಾಯುರಜ್ಜು ಬಿಳಿ ತಂತುಗಳು ಹೇರಳವಾಗಿರುತ್ತವೆ. ಇವು ಮಾಂಸಗಳನ್ನು ಮೃದ್ವಸ್ಥಿ ಅಥವಾ ಮೂಳೆಗೆ ಜೋಡಿಸಲು ಸಹಕಾರಿಯಾಗುತ್ತವೆ. ರಜ್ಜೆಗಳಲ್ಲಿ ಹಳದಿ ತಂತುಗಳ ಪ್ರಮಾಣ ಅಧಿಕವಾಗಿರುತ್ತದೆ. ಇದು ಎರಡು ಮೂಳೆಗಳನ್ನು ಜೋಡಿಸುತ್ತದೆ.

ಗಡುಸು ಸಂಯೋಜಕ ಅಂಗಾಂಶ ಕಶೇರುಕಗಳ ಒಳ ಅಸ್ಥಿಪಂಜರದಲ್ಲಿರುತ್ತದೆ. ಇದರಲ್ಲಿ ಮೃದ್ವಸ್ಥಿ ಮತ್ತು ಮೂಳೆ ಎಂದು ಎರಡು ವಿಧ. ಮೃದ್ವಸ್ಥಿ ಅರೆಗಡುಸಾದ ಅಂಗಾಂಶ. ಮಾತೃಕೆಯನ್ನು ಕಾಂಡ್ರಿನ್ ಎನ್ನುತ್ತಾರೆ. ಕಾಂಡ್ರೊಬ್ಲಾಸ್ಟ್‌ಗಳೆಂಬ ಜೀವಕೋಶಗಳು ಮಾತೃಕೆಯ ಬಿಡುತಿ (ಲ್ಯಾಕ್ಯುನ) ಗಳಲ್ಲಿರುತ್ತವೆ. ಮಾತೃಕೆಯಲ್ಲಿ ಕಾಂಡೊಮ್ಯೂಕಾಯಿಡ್ ಮತ್ತು ಕಾಂಡ್ರಾಯಿಟಿನ್ ಸಲ್ಫೇಟ್‌ಗಳಿವೆ. ಬಿಳಿ ತಂತುಗಳೂ ಸಹ ಇರುತ್ತವೆ. ಮೃದ್ವಸ್ಥಿಯ ಸುತ್ತಲೂ ಪೆರಿಕಾಂಡ್ರಿಯಂ ಎಂಬ ದಟ್ಟವಾದ ತಂತು ಪ್ರತ್ಯಾಸ್ಥ ಅಂಗಾಂಶ (ಫೈಬ್ರೊಎಲಾಸ್ಟಿಕ್) ಪದರದ ಹೊದಿಕೆಯಿದೆ. ಮಾತೃಕೆಯ ಸ್ವಭಾವವನ್ನು ಆಧರಿಸಿ ನಾಲ್ಕು ವಿಧವಾದ ಮೃದ್ವಸ್ಥಿಯನ್ನು ಗುರುತಿಸಬಹುದು. ಕಚಾಭ (ಹೈಯಾಲಿನ್) ಮೃದ್ವಸ್ಥಿಯಲ್ಲಿ ತೆಳುನೀಲಿ ಬಣ್ಣದ ಹೊಳಪಿನ ಮಾತೃಕೆಯಿದೆ. ಬಿಡುತಿಯ ಸುತ್ತಲೂ ಮಾತೃಕೆಯು ದಟ್ಟವಾಗಿರುತ್ತದೆ. ಇದು ಶ್ವಾಸನಾಳದ ಉದ್ದವಾದ ಮೂಳೆಗಳ ತುದಿಯಲ್ಲಿ ಮತ್ತು ನಾಸಿಕ ವಿಭಾಜಕ ಭಿತ್ತಿಯಲ್ಲಿರುತ್ತದೆ. ಪ್ರತ್ಯಾಸ್ಥ (ಎಲಾಸ್ಟಿಕ್) ಮೃದ್ವಸ್ಥಿಯಲ್ಲಿ ಹೇರಳವಾದ ಹಳದಿ ತಂತುಗಳಿವೆ. ಇದು ಹೊರಕಿವಿಯಾಲೆ (ಪಿನ್ನಾ), ಧ್ವನಿಪೆಟ್ಟಿಗೆ,

ಎಪಿಗ್ಲಾಟಿಸ್, ಯೂಸ್ಟೇಶಿಯನ್ ನಾಳದ ಭಿತ್ತಿ ಮತ್ತು ನಾಸಿಕದ ತುದಿಯಲ್ಲಿರುತ್ತದೆ. ತಂತು ಮೃದ್ವಸ್ಥಿಯಲ್ಲಿ ದಟ್ಟವಾಗಿ ಹರಡಿರುವ ಬಿಳಿತಂತುಗಳಿವೆ. ಇದು ಕಶೇರುಮಣಿಗಳ ನಡುವಿನ ಫಲಕ (ಇಂಟರ್‌ವರ್ಟಿಬ್ರಲ್ ಡಿಸ್ಕ್) ದಲ್ಲಿರುತ್ತದೆ. ಕ್ಯಾಲ್ಸಿಯಂಭರಿತ ಮೃದ್ವಸ್ಥಿಯ ಮಾತೃಕೆಯಲ್ಲಿ ಕ್ಯಾಲ್ಸಿಯಂ ಲವಣಗಳು ಹೆಚ್ಚಾಗಿರುತ್ತವೆ. ಹಾಗಾಗಿ ಇದು ಸ್ವಲ್ಪ ಗಡುಸಾಗಿರುತ್ತದೆ. ಇದು ಕೆಲವು ಕೆಳವರ್ಗದ ಕಶೇರುಕಗಳ ಒಳಾಸ್ಥಿಪಂಜರದಲ್ಲಿರುತ್ತದೆ.

ಮೂಳೆಯು ಅತಿಗಡುಸಾದ ಅಂಗಾಂಶ. ಮಾತೃಕೆಯನ್ನು ಆಸ್ಸಿನ್ ಎನ್ನುತ್ತಾರೆ. ಆಸ್ಟಿಯೊಬ್ಲಾಸ್ಟ್‌ಗಳೆಂಬ ಜೀವಕೋಶಗಳು ಬಿಡುತಿಗಳಲ್ಲಿರುತ್ತವೆ. ಮೂಳೆಯ ಹೊರಮೈ ಮೇಲೆ ಪೆರಿಆಸ್ಟಿಯಮ್ ಮತ್ತು ಒಳಮೈ ಮೇಲೆ ಎಂಡಾಸ್ಟಿಯಮ್ ಎಂಬ ಸಂಯೋಜಕ ಅಂಗಾಂಶಗಳ ಹೊದಿಕೆಯಿದೆ. ಸ್ತನಿಗಳ ಮೂಳೆಯು ಹೇರಳವಾದ ಹ್ಯಾವರ್ಷಿಯನ್ ವ್ಯವಸ್ಥೆಗಳಿಂದ ಕೂಡಿದೆ. ಪ್ರತಿಯೊಂದು ಹ್ಯಾವರ್ಷಿಯನ್ ವ್ಯವಸ್ಥೆಯ ಮಧ್ಯದಲ್ಲಿ ಹ್ಯಾವರ್ಷಿಯನ್ ನಾಳವಿದ್ದು ಅದರ ಸುತ್ತಲೂ ಅಂತರ್‌ವೃತ್ತಗಳಲ್ಲಿ ಮಾತೃಕೆಯು ವಿತರಿಸಲ್ಪಟ್ಟಿರುತ್ತದೆ. ಇವುಗಳನ್ನು ತೆಳುಪೊರೆ (ಲ್ಯಾಮೆಲ್ಲಾ) ಗಳೆನ್ನುತ್ತಾರೆ. ಆಸ್ಟಿಯೋಬ್ಲಾಸ್ಟ್‌ಗಳು ತೆಳುಪೊರೆಗಳಲ್ಲಿರುವ ಬಿಡುತಿಗಳಲ್ಲಿರುತ್ತವೆ. ಬಿಡುತಿಗಳಿಂದ ಸೂಕ್ಷ್ಮವಾದ ಕೆನಾಲಿಕ್ಯುಲೈ ಎಂಬ ನಾಲೆಗಳು ಹರಡುತ್ತವೆ. ಮೂಳೆಗಳ ಗಡುಸಿಗೆ ಅವುಗಳ ಮಾತೃಕೆಯಲ್ಲಿರುವ ಕ್ಯಾಲ್ಸಿಯಂಯುಕ್ತ ಹೈಡ್ರಾಕ್ಸಿಅಪಟೈಟ್ ಎಂಬ ಸಂಯುಕ್ತವೇ ಕಾರಣ. ಅಸ್ಥೀಕರಣ (ಆಸಿಫಿಕೇಷನ್) ದಿಂದ ಮೂಳೆಗಳು ರೂಪುಗೊಳ್ಳುತ್ತವೆ. ಗಡುಸು ಸಂಯೋಜಕ ಅಂಗಾಂಶಗಳು ತಮ್ಮ ಸುತ್ತ ಇರುವ ಇತರ ಅಂಗಾಂಶಗಳಿಗೆ ಆಧಾರ ಒದಗಿಸುತ್ತವೆ, ಹಾಗೂ ಮೆದುಳು ಮತ್ತು ಕೆಲವು ಇಂದ್ರಿಯಾಂಗಗಳನ್ನು ರಕ್ಷಿಸುತ್ತವೆ. ಉದ್ದವಾದ ಮೂಳೆಗಳಲ್ಲಿ ಕೊಳವೆಯಂತಹ ಖಾಲಿ ಸ್ಥಳ ಅಸ್ಥಿಮಜ್ಜೆ ಎಂಬ ದ್ರವದಿಂದ ತುಂಬಿರುತ್ತದೆ. ಇದರಲ್ಲಿ ವಿವಿಧ ರಕ್ತಕಣಗಳು ಉತ್ಪತ್ತಿಯಾಗುತ್ತವೆ.

ರಕ್ತ ದ್ರವರೂಪದ ಸಂಯೋಜಕ ಅಂಗಾಂಶ. ಸಾಧಾರಣವಾಗಿ ಕೆಂಪಾಗಿರುವ ರಕ್ತದ ಸಾಪೇಕ್ಷ ಸಾಂದ್ರತೆ 1.050 – 1.060 ಹಾಗೂ pH 7.35 – 7.45 ಇರುತ್ತದೆ. ರಕ್ತದ ಮಾತೃಕೆಯನ್ನು ಪ್ಲಾಸ್ಮಾ ಎನ್ನುತ್ತಾರೆ. ಪ್ಲಾಸ್ಮಾದಲ್ಲಿ ನೀರು, ಸಾವಯವ ಹಾಗೂ ನಿರವಯವ ಲವಣಗಳಲ್ಲದೆ ಫೈಬ್ರಿನೋಜನ್, ಪ್ರೋತ್ರಾಂಬಿನ್, ಸೀರಮ್ ಗ್ಲಾಬ್ಯುಲಿನ್ ಮತ್ತು ಸೀರಮ್ ಆಲ್ಬಮಿನ್‌ಗಳಂತಹ ಸಸಾರಜನಕಗಳಿರುತ್ತವೆ. ಪ್ಲಾಸ್ಮಾದಲ್ಲಿರುವ ಜೀವಕೋಶಗಳು ಮೂರು ವಿಧ – ಕೆಂಪು ರಕ್ತಕಣಗಳು, ಬಿಳಿ ರಕ್ತಕಣಗಳು ಮತ್ತು ಪಟ್ಟಿಕೆ (ಪ್ಲೇಟ್ಲೆಟ್)ಗಳು. ಕೆಂಪು ರಕ್ತಕಣಗಳು ಅತಿ ಸಣ್ಣದಾದ ಜೀವಕೋಶಗಳು. ಕಶೇರುಕಗಳ ಕೆಂಪು ರಕ್ತಕಣಗಳಲ್ಲಿ ಹೀಮೋಗ್ಲಾಬಿನ್ ಎಂಬ ವರ್ಣದ್ರವ್ಯವಿರುತ್ತದೆ. ಅಕಶೇರುಕಗಳಲ್ಲಿ ಹೀಮೊಸಯನ್ನಿನ್, ಹೀಮೊಎರಿಥ್ರಿನ್ ವರ್ಣದ್ರವ್ಯಗಳೂ ಸಹ ಇರಬಹುದು. ಸ್ತನಿಗಳ ಕೆಂಪು ರಕ್ತಕಣಗಳು ಕೋಶಕೇಂದ್ರವಿಲ್ಲದ, ದ್ವಿಪೀನವಾಗಿರುವ, ಬಾಗುವ ಹಾಗೂ ಹಿಗ್ಗುವ ತಟ್ಟೆಗಳು. ಮಾನವನಲ್ಲಿ ಸಾಮಾನ್ಯವಾಗಿ ಒಂದು ಘನ ಮಿಲಿಮೀಟರ್ ರಕ್ತದಲ್ಲಿ 4.5 ಮಿಲಿಯದಿಂದ 5.5 ಮಿಲಿಯ ಕೆಂಪು ರಕ್ತಕಣಗಳಿರುತ್ತವೆ. ಇದರ ಆಯಸ್ಸು ಸುಮಾರು 120 ದಿನಗಳು. ಕಶೇರುಕಗಳಲ್ಲಿ ಇದು ಅಸ್ಥಿಮಜ್ಜೆಯಲ್ಲಿ ಉತ್ಪತ್ತಿಯಾಗುತ್ತದೆ. ಆಮ್ಲಜನಕ ಮತ್ತು ಇಂಗಾಲದ ಡೈ ಆಕ್ಸೈಡ್‌ಗಳನ್ನು ಸಾಗಿಸುವುದು ಇವುಗಳ ಕಾರ್ಯ. ಬಿಳಿ ರಕ್ತಕಣಗಳು ದೊಡ್ಡಗಾತ್ರದ, ಕೋಶಕೇಂದ್ರವಿರುವಂತಹ ಜೀವಕೋಶಗಳು. ಇವು ರಕ್ತನಾಳಗಳಲ್ಲಿ ಅಮೀಬಾಗಳ ರೀತಿ ಚಲಿಸುತ್ತವೆ. ಇವುಗಳಲ್ಲಿ ಐದು ವಿಧ – ಇಯೊಸಿನೋಫಿಲ್, ಬೇಸೋಫಿಲ್, ನ್ಯೂಟ್ರೋಫಿಲ್, ಲಿಂಫೊಸೈಟ್ ಮತ್ತು ಮಾನೊಸೈಟ್. ಮನುಷ್ಯನಲ್ಲಿ ಒಂದು ಘನ ಮಿಲಿಮೀಟರ್ ರಕ್ತದಲ್ಲಿ ಸುಮಾರು 5000 ದಿಂದ 9000 ಬಿಳಿ ರಕ್ತಕಣಗಳಿರುತ್ತವೆ. ಇವು ಪರಕೀಯ ವಸ್ತು ಮತ್ತು ಕ್ರಿಮಿಗಳನ್ನು ನಾಶ ಮಾಡಬಲ್ಲವು. ಕೆಲವು ಬಿಳಿ ರಕ್ತಕಣಗಳು ಪ್ರತಿಕಾಯಗಳನ್ನೂ ಉತ್ಪತ್ತಿ ಮಾಡುತ್ತವೆ. ಪಟ್ಟಿಕೆಗಳು ಕೋಶಕೇಂದ್ರವಿಲ್ಲದಂತಹ ಜೀವಕೋಶ ತುಂಡುಗಳು ಅಥವಾ ಫಲಕಗಳು. ಸ್ತನಿಗಳಲ್ಲಿ ಮಾತ್ರ ಇವು ಇರುತ್ತವೆ. ಇದರ ಸಂಖ್ಯೆ ಪ್ರತಿ ಘನ ಮಿಲಿ ಮೀಟರ್ ರಕ್ತದಲ್ಲಿ ಸುಮಾರು 2 ರಿಂದ 3 ಲಕ್ಷ. ಇವು ತ್ರಾಂಬೋಕೈನೇಸ್ (ತ್ರಾಂಬೋಪ್ಲಾಸ್ಟಿನ್) ಎಂಬ ರಕ್ತ ಹೆಪ್ಪುಗಟ್ಟಿಸುವ ಕಿಣ್ವವನ್ನು ಸಂಶ್ಲೇಷಿಸುತ್ತವೆ.

ದುಗ್ಧರಸ (ಲಿಂಫ್) ಕೂಡ ದ್ರವರೂಪದ ಸಂಯೋಜಕ ಅಂಗಾಂಶ. ಇದು ರಕ್ತವನ್ನು ಹೋಲುವ ಆದರೆ ಬಣ್ಣವಿಲ್ಲದ ದ್ರವ. ದುಗ್ಧರಸ ಗ್ರಂಥಿಗಳಲ್ಲಿ ಶೇಖರಣೆಯಾಗಿರುವ ಇದು ದುಗ್ಧನಾಳದ ಮೂಲಕ ರಕ್ತ ಪರಿಚಲನಾ ವ್ಯೂಹಕ್ಕೆ ಸೇರುತ್ತದೆ. ಇದರಲ್ಲಿ ಬಿಳಿಯ ರಕ್ತಕಣಗಳು ಮಾತ್ರ ಇರುತ್ತವೆ.

ಸಂಕೋಚನ ಅಥವಾ ಸ್ನಾಯು ಅಂಗಾಂಶ: ಇದು ಸಂಕುಚನೆಯ ವಿಶೇಷತೆಯನ್ನು ಪಡೆದುಕೊಂಡಿರುವ ಅಂಗಾಂಶ. ಮಧ್ಯದರ್ಮದಿಂದ ಉತ್ಪತ್ತಿಯಾಗುತ್ತದೆ. ಸ್ನಾಯು ಜೀವಕೋಶಗಳಿಗೆ ಸ್ನಾಯುತಂತುಗಳೆಂದು ಹೆಸರು. ಕೋಶದ್ರವ್ಯವನ್ನು ಸಾರ್ಕೊಪ್ಲಾಸಂ ಎಂದೂ, ಕೋಶಪಟಲವನ್ನು ಸಾರ್ಕೊಲೆಮ್ಮಾ ಎಂದೂ ಕರೆಯುತ್ತಾರೆ. ಸ್ನಾಯುತಂತುಗಳಲ್ಲಿ ಮೈಯೊಫೈಬ್ರಿಲ್‌ಗಳೆಂಬ ಅನೇಕ ಸೂಕ್ಷ್ಮತಂತುಗಳಿವೆ. ಇವುಗಳಲ್ಲಿ ಆಕ್ಟಿನ್, ಮೈಯೊಸಿನ್, ಟ್ರೊಪೊನಿನ್, ಟ್ರೊಪೊಮೈಯೊಸಿನ್‌ಗಳೆಂಬ ಸಂಕೋಚನ ಪ್ರೋಟೀನುಗಳಿವೆ. ವಿಸ್ತರಣೆ ಮತ್ತು ಪ್ರತ್ಯಾಸ್ಥೆ (ಹಿಗ್ಗುವಿಕೆ) ಈ ಅಂಗಾಂಶದ ಮುಖ್ಯ ಲಕ್ಷಣಗಳು. ಸ್ನಾಯು ಅಂಗಾಂಶದಲ್ಲಿ ಮೂರು ಬಗೆ – ಪಟ್ಟೆರಹಿತ ಅಥವಾ ಮೃದುಸ್ವಿತ ಸ್ನಾಯುಗಳು, ಪಟ್ಟೆಸಹಿತ ಅಥವಾ ರೇಖಾನ್ವಿತ ಸ್ನಾಯುಗಳು ಮತ್ತು ಹೃದಯ ಸ್ನಾಯುಗಳು.

ಪಟ್ಟೆರಹಿತ ಸ್ನಾಯುಗಳಲ್ಲಿ ಸ್ನಾಯುತಂತುಗಳು ಕದಿರಿನಾಕಾರದಲ್ಲಿವೆ. ದಟ್ಟ ಮತ್ತು ತಿಳಿಯ ಪಟ್ಟೆಗಳಿರುವುದಿಲ್ಲ. ಕೋಶಕೇಂದ್ರವು ಮಧ್ಯದಲ್ಲಿರುತ್ತದೆ. ಸ್ವಯಂ ನಿಯಂತ್ರಕ ನರವ್ಯೂಹದ ನಿಯಂತ್ರಣದಲ್ಲಿರುವುದರಿಂದ ಇವು ಅನೈಚ್ಛಿಕ ಸ್ನಾಯುಗಳು. ಜೀರ್ಣಾಂಗ, ರಕ್ತನಾಳ, ಮೂತ್ರಕೋಶ ಮತ್ತು ಗ್ರಂಥಿನಾಳಗಳಲ್ಲಿ ಪಟ್ಟೆರಹಿತ ಸ್ನಾಯುಗಳು ಕಂಡುಬರುತ್ತವೆ. ಅನ್ನನಾಳ, ಜಠರ ಮತ್ತು ಕರುಳಿನಲ್ಲಿ ನಡೆಯುವ ಪರಿಕ್ರಮಣ ಸಂಕೋಚನ ಕ್ರಿಯೆ (ಪೆರಿಸ್ಟಾಲ್ಸಿಸ್)ಗೆ ಈ ಸ್ನಾಯುವೇ ಕಾರಣ.

ಪಟ್ಟೆಸಹಿತ ಸ್ನಾಯುಗಳಲ್ಲಿ ಉದ್ದವಾದ ಹಾಗೂ ಕೊಳವೆಯಾಕಾರದ ಬಹುಕೋಶ ಕೇಂದ್ರಗಳುಳ್ಳ ಸಂಯುಕ್ತ ಸ್ನಾಯುತಂತುಗಳಿವೆ. ದಟ್ಟ ಮತ್ತು ತಿಳಿ ಪಟ್ಟೆಗಳಿರುತ್ತವೆ. ಸ್ನಾಯುತಂತುಗಳಲ್ಲಿ ಕೋಶಕೇಂದ್ರವು ಸಾರ್ಕೊಲೆಮ್ಮಾದ ಕಡೆಗಿರುತ್ತದೆ. ಈ ಸ್ನಾಯುಗಳ ಸಂಕುಚನ ಕ್ರಿಯೆಯನ್ನು ನಿರ್ವಹಿಸುವ ಮೂಲಘಟಕವನ್ನು ಸಾರ್ಕೊಮಿಯರ್ ಎನ್ನುತ್ತಾರೆ. ಸಾಮಾನ್ಯವಾಗಿ ಮೂಳೆಗಳಿಗೆ ಅಂಟಿಕೊಂಡಿರುವುದರಿಂದ ಇದನ್ನು ಅಸ್ಥಿಸ್ನಾಯು ಅಥವಾ ಕಂಕಾಲ ಸ್ನಾಯು ಎಂದು ಕೂಡ ಹೇಳುತ್ತಾರೆ. ಕೇಂದ್ರನರವ್ಯೂಹದ ನಿಯಂತ್ರಣದಲ್ಲಿರುವುದರಿಂದ ಇವುಗಳ ಸಂಕುಚನೆಯು ವ್ಯಕ್ತಿಯ ಇಚ್ಛೆಗೆ ಒಳಪಟ್ಟಿದೆ. ಆದ್ದರಿಂದ ಇದನ್ನು ಐಚ್ಛಿಕ ಸ್ನಾಯು ಎನ್ನುತ್ತಾರೆ. ಈ ಸ್ನಾಯುವು ಚಲನೆಗೆ ಸಹಾಯ ಮಾಡುತ್ತದೆ.

ಹೃದಯ ಸ್ನಾಯುಗಳು ಹೃದಯದ ಬಡಿತದಲ್ಲಿ ಸಹಕರಿಸುತ್ತವೆ. ಇದು ಪಟ್ಟೆಸಹಿತ ಸ್ನಾಯುಗಳಂತಿದ್ದರೂ, ಸ್ನಾಯುತಂತುಗಳು ಕವಲೊಡೆದು ನೆರೆಯ ಸ್ನಾಯುತಂತುಗಳೊಡನೆ ಸೇರಿಕೊಂಡು ಜಾಲರೂಪದಲ್ಲಿದೆ. ಎರಡು ಸ್ನಾಯುತಂತುಗಳು ಕೂಡಿಕೊಂಡಲ್ಲಿ ಸಾರ್ಕೊಲೆಮ್ಮಾವು ದಟ್ಟವಾಗಿದ್ದು ಇಂಟರ್‌ಕೇಲೇಟಡ್ ಫಲಕ ಎಂಬ ರಚನೆಗೆ ಕಾರಣವಾಗಿದೆ. ಇದು ಪಟ್ಟೆರಹಿತ ಸ್ನಾಯುವಿನಂತೆ ಅನೈಚ್ಛಿಕ ಸ್ನಾಯು.

ನರ ಅಂಗಾಂಶ: ಜೀವಿಗಳ ಮುಖ್ಯವಾದ ಗುಣಲಕ್ಷಣಗಳಲ್ಲೊಂದಾದ ಸಂವೇದನೆ (ಪ್ರಚೇತನ) ಯುಂಟು ಮಾಡುವ ಅಂಗಾಂಶ ಹೊರದರ್ಮದಿಂದ ಉತ್ಪತ್ತಿಯಾಗುತ್ತದೆ. ಪ್ರಾಣಿಗಳ ನರಮಂಡಲದಲ್ಲಿರುತ್ತದೆ. ನರಅಂಗಾಂಶದಲ್ಲಿ ನರಕೋಶ (ನ್ಯೂರಾನ್)ಗಳು ಮತ್ತು ನರಾಂಟುಗಳು (ಗ್ಲಿಯಲ್ ಜೀವಕೋಶಗಳು) ಎಂಬ ಎರಡು ಬಗೆಯ ಜೀವಕೋಶಗಳಿವೆ. ನರಾಂಟುಗಳು ನರಕೋಶಗಳಿಗೆ ನಿರಂತರವಾಗಿ ಪೋಷಕ ವಸ್ತುಗಳನ್ನು ವಿತರಿಸುತ್ತವೆ. ನರಕೋಶಗಳು ನರ ಅಂಗಾಂಶದ ರಚನೆ ಮತ್ತು ಕಾರ್ಯದ ಮೂಲ ಘಟಕಗಳು. ಕೋಶಕೇಂದ್ರವಿರುವ ನರಕೋಶದ ಕೇಂದ್ರ ಭಾಗಕ್ಕೆ ಕೋಶಕಾಯ (ಸೆಲ್ ಬಾಡಿ) ಅಥವಾ ಸೈಟಾನ್ ಎಂದು ಹೆಸರು. ಕೋಶಕಾಯದಲ್ಲಿ ನ್ಯೂರೋಫೈಬ್ರಿಲ್‌ಗಳು ಮತ್ತು ನಿಸಲ್‌ನ ಕಣಗಳೂ ಇರುತ್ತವೆ. ನಿಸಲ್‌ನ ಕಣಗಳಲ್ಲಿ ಸಸಾರಜನಕ ಮತ್ತು ರೈಬೋನ್ಯೂಕ್ಲಿಕ್ ಆಮ್ಲಗಳಿವೆ. ಕೋಶಕಾಯದಿಂದ ಅನೇಕ ಪ್ರವರ್ಧಗಳು ಹೊರಡುತ್ತವೆ. ಗಿಡ್ಡವಾದ ಮತ್ತು ಅತಿಯಾಗಿ ಕವಲೊಡೆದ ಪ್ರವರ್ಧಗಳನ್ನು ಡೆಂಡ್ರೈಟ್‌ಗಳೆನ್ನುತ್ತಾರೆ. ಇವು ಸಂದೇಶಗಳನ್ನು ಕೋಶಕಾಯದ ಕಡೆಗೆ ತರುತ್ತವೆ. ಕೋಶಕಾಯದಿಂದ ಹೊರಡುವ ಅತಿ ಉದ್ದವಾದ ಪ್ರವರ್ಧವನ್ನು ಆಕ್ಸಾನ್ ಎನ್ನುತ್ತಾರೆ. ಆಕ್ಸಾನ್ ತುದಿಯಲ್ಲಿ ಒಂದೆರಡು ಕವಲುಗಳಿರಬಹುದು. ಆಕ್ಸಾನ್‌ನ ಸುತ್ತ ನ್ಯೂರಿಲೆಮ್ಮಾ ಎಂಬ ಏಕಪದರೀಯ ಹೊದಿಕೆಯಿರುತ್ತದೆ. ಇದರಲ್ಲಿರುವ ಜೀವಕೋಶಗಳನ್ನು ಶ್ವಾನ್ ಜೀವಕೋಶ ಗಳೆನ್ನುತ್ತಾರೆ. ಕೆಲವು ನರಕೋಶಗಳ ಆಕ್ಸಾನ್‌ಗಳಲ್ಲಿ, ಕೋಶಪೊರೆಯ (ಆಕ್ಸೊಲೆಮ್ಮ) ಮತ್ತು ನ್ಯೂರಿಲೆಮ್ಮಾದ ಮಧ್ಯದಲ್ಲಿ ಮೈಯಲಿನ್ ಹೊದಿಕೆಯಿರುತ್ತದೆ. ಈ ಹೊದಿಕೆಯಲ್ಲಿ ಮೈಯಲಿನ್ ಎಂಬ ಕೊಬ್ಬಿದೆ. ಇದು ನಿರೋಧಕ ಹೊದಿಕೆಯಂತೆ ವರ್ತಿಸುತ್ತದೆ. ಇಂತಹ ನರಕೋಶಗಳನ್ನು ಮೈಯಲಿನ್‌ಯುಕ್ತ ನರಕೋಶಗಳೆನ್ನುತ್ತಾರೆ. ಇದು ಮೆದುಳಿನ ಶ್ವೇತಭಾಗದಲ್ಲಿರುತ್ತದೆ. ಮೆದುಳಿನ ಕಂದು ಭಾಗದಲ್ಲಿರುವ ನರಕೋಶಗಳಲ್ಲಿ ಮೈಯಲಿನ್ ಕವಚವಿರುವುದಿಲ್ಲ. ಇವುಗಳನ್ನು ಮೈಯಲಿನ್ ರಹಿತ ನರಕೋಶಗಳೆನ್ನುತ್ತಾರೆ. ಮೈಯಲಿನ್ ಕವಚ ಮತ್ತು ನ್ಯೂರಿಲೆಮ ಆಕ್ಸಾನ್‌ನ ಕೆಲವು ಜಾಗಗಳಲ್ಲಿ ಇರುವುದಿಲ್ಲ. ಇವುಗಳನ್ನು ರಾನ್ವಿಯರನ ಗಿಣ್ಣು ಗಳೆನ್ನುತ್ತಾರೆ. ಆಕ್ಸಾನ್‌ಗಳು ಪ್ರೇರಣೆಯನ್ನು ಕೋಶಕಾಯದಿಂದ ಹೊರಗಡೆಗೆ ಕೊಂಡೊಯ್ಯುತ್ತವೆ. ಒಂದು ನರಕೋಶದ ಆಕ್ಸಾನ್ ಮತ್ತು ಇನ್ನೊಂದರ ಡೆಂಡ್ರೈಟ್‌ಗಳ ಮಧ್ಯೆ ಇರುವ ಸಣ್ಣ ಅವಕಾಶವನ್ನು ಸಂಸರ್ಗ (ಸೈನಾಪ್ಸ್) ಎನ್ನುತ್ತಾರೆ.

ಇಲ್ಲಿ ಅಸಿಟೈಲ್ ಕೋಲಿನ್, ಡೋಪಮೈನ್, ನಾರಡ್ರಿನಲಿನ್ ಮುಂತಾದ ರಾಸಾಯನಿಕ ವಸ್ತುಗಳು ಪ್ರೇರಣೆಯನ್ನು ಸಂವಹಿಸುತ್ತವೆ. ಹಲವಾರು ಆಕ್ಸಾನ್ ತಂತುಗಳು ಸೇರಿ ಎಪಿನ್ಯೂರಿಯಮ್ ಎಂಬ ಸಂಯೋಜಕ ಅಂಗಾಂಶದ ಹೊದಿಕೆಯಿಂದ ಆವೃತವಾಗಿ ನರತಂತುಗಳಾಗುವುವು. ಹಾಗೆಯೇ ಕೋಶಕಾಯಗಳು ಕೂಡಿಕೊಂಡು ನರಮುಡಿ (ಗ್ಯಾಂಗ್ಲಿಯ)ಗಳಾಗುವುವು.

ನರಕೋಶದಲ್ಲಿರುವ ಪ್ರವರ್ಧಗಳನ್ನನುಸರಿಸಿ ಮೂರು ವಿಧಗಳನ್ನು ಗುರುತಿಸಬಹುದು – ಏಕಪ್ರವರ್ಧ ನರಕೋಶ (ಬಿಂದು ಪ್ರವರ್ಧ), ದ್ವಿಪ್ರವರ್ಧ ನರಕೋಶ (ಎರಡು ಪ್ರವರ್ಧಗಳು) ಮತ್ತು ಬಹುಪ್ರವರ್ಧ (ಎರಡಕ್ಕು ಹೆಚ್ಚು ಪ್ರವರ್ಧಗಳು). ನರಕೋಶಗಳನ್ನು ಅಭಿವಾಹಿ (ಅಫರೆಂಟ್) ನರಕೋಶ ಮತ್ತು ಅಪವಾಹಿ (ಇಫರೆಂಟ್) ನರಕೋಶಗಳೆಂದೂ ವಿಂಗಡಿಸಬಹುದು. ಅಭಿವಾಹಿ ನರಕೋಶಗಳು ವಿವಿಧ ಗ್ರಾಹಕಾಂಗಗಳಿಂದ ಪ್ರೇರಣೆಯನ್ನು ನರಮಂಡಲಕ್ಕೆ ಕೊಂಡೊಯ್ಯುತ್ತವೆ. ಅಪವಾಹಿ ನರಕೋಶಗಳು ನರಮಂಡಲದಿಂದ ಸಂದೇಶವನ್ನು ಅಭಿವ್ಯಕ್ತಿಸುವ ಅಂಗಗಳಿಗೆ ಕೊಂಡೊಯ್ಯುತ್ತವೆ. ಉನ್ನತ ಮಟ್ಟದಲ್ಲಿ ವಿಕಾಸ ಹೊಂದಿರುವ ನರಮಂಡಲದ ಈ ನರಕೋಶಗಳೇ ಮನುಷ್ಯನ ಆಲೋಚನಾ ಶಕ್ತಿ, ಕ್ರಿಯಾಶೀಲತೆ, ಜ್ಞಾಪಕ ಶಕ್ತಿ, ಇಚ್ಛಾಶಕ್ತಿ ಮುಂತಾದ ವಿಶೇಷ ಗುಣಲಕ್ಷಣಗಳಿಗೆ ಕಾರಣವಾಗಿದೆ. (ಎ.ಎಸ್.ಎಚ್.ಎ.)

**ಅಂಗಾಂಶ ಕೃಷಿ:** ಪ್ರಾಣಿಗಳ ಜೀವಕೋಶಗಳನ್ನು ಅಥವಾ ಅಂಗಾಂಶಗಳನ್ನು ಪ್ರಯೋಗಾಲಯದಲ್ಲಿ, ನಿಯಂತ್ರಿತ ಪರಿಸರದಲ್ಲಿ ನಿರ್ದಿಷ್ಟವಾದ ಮಾಧ್ಯಮದ ಮೇಲೆ ಅಸ್ವಾಭಾವಿಕವಾಗಿ ಬೆಳೆಸುವ ತಂತ್ರ. ಅಂಗಾಂಶ ಕೃಷಿಯಿಂದ ಉತ್ಪತ್ತಿಯಾದ ಎಲ್ಲಾ ಜೀವಕೋಶಗಳು ಒಂದೇ ತರಹದ ಜೀನ್ ನಮೂನೆಯನ್ನು ಹೊಂದಿರುತ್ತವೆ. ಅಂದರೆ, ಅವು ತದ್ರೂಪಿಗಳು (ಕ್ಲೋನ್). ಈ ತಂತ್ರವನ್ನು ಜೀವಕೋಶ ಸಂರಚನೆ, ಅದರ ಪೋಷಣೆ ಮತ್ತು ಚಕ್ರೀಯ ಕ್ರಿಯೆ, ಕೋಶದಲ್ಲಾಗುವ ಚಯಾಪಚಯ ಪ್ರಕ್ರಿಯೆಗಳು, ಭ್ರೂಣದ ಬೆಳವಣಿಗೆ, ಗಂತಿಕೋಶಗಳ ಬೆಳವಣಿಗೆ, ಇವುಗಳ ಅಧ್ಯಯನದಲ್ಲೂ ರೋಗ ಚಿಕಿತ್ಸಕಾ ಪ್ರೊಟೀನುಗಳ ಉತ್ಪಾದನೆಯಲ್ಲೂ ಅಳವಡಿಸಿಕೊಳ್ಳಲಾಗಿದೆ.

ಪ್ರಾಣಿಗಳಲ್ಲಿ ಅಂಗಾಂಶ ಕೃಷಿಯನ್ನು ಪ್ರಾರಂಭಿಸಿದ ಹೆಗ್ಗಳಿಕೆ ಜಾಲಿ (1903)ಗೆ ಸಲ್ಲುತ್ತದೆ. ಆತ ಕಪ್ಪೆಯಲ್ಲಿ ಇದನ್ನು ಪ್ರಯೋಗಿಸಿದನು. ರೋಸ್ ಹ್ಯಾರಿಸನ್ (1907) ಪ್ರನಾಳೀಯವಾಗಿ ಅಂಗಾಂಶ ಕೃಷಿಯನ್ನು ಮಾಡಿದ ಮೊದಲ ವಿಜ್ಞಾನಿ. ಗೊದಮೊಟ್ಟೆಯ ನರಹುರಿಯ ತುಂಡನ್ನು ಕಪ್ಪೆಯ ದುಗ್ಧರಸಕ್ಕೆ ಹಾಕಿ ನರಹುರಿಯ ಜೀವಕೋಶಗಳಿಂದ ನರತಂತುಗಳು (ನರ್ವ್ ಫೈಬರ್) ಮೊಳಕೆಯೊಡೆಯುವುದನ್ನು ತೋರಿಸಿದನು. ಬರೋಸ್ (1911) ವಯಸ್ಕ ನಾಯಿ, ಬೆಕ್ಕು, ಇಲಿ ಹಾಗೂ ಗಿನಿಹಂದಿಗಳಲ್ಲಿ ಇಂತಹ ಪ್ರಯೋಗಗಳನ್ನು ಮಾಡಿದ'ನು. ಡೇವಿಡ್ ಥಾಮ್ಸನ್ (೧೯೧೪) ಕೋಳಿಮರಿಯ ಭ್ರೂಣದ ಬೆರಳು, ಪುಕ್ಕ, ಬಾಲ ಮತ್ತು ದೃಷ್ಟಿ ಮಸೂರವನ್ನು ಉಪಯೋಗಿಸಿ ಅಂಗಾಂಗಗಳನ್ನು ಉತ್ಪಾದಿಸುವಲ್ಲಿ ಯಶಸ್ವಿಯಾದನು. ೧೯೨೨ರಲ್ಲಿ ಎಚ್. ಎಬೆಲಿಂಗ್ ಈ ತಂತ್ರದಿಂದ ಅನುಲೇಪಕ ಜೀವಕೋಶಗಳನ್ನು ಕೃಷಿಮಾಡುವುದರಲ್ಲಿ ಸಫಲನಾದನು. ಆದರೆ, ಈ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಪ್ರಯೋಗಗಳು ನಡೆದದ್ದು ಡಿಎನ್‌ಎ ಯ ರಚನೆ ಮತ್ತು ಅದರ ಕ್ರಿಯಾಚಟುವಟಿಕೆಗಳು ತಿಳಿದ ಮೇಲೆಯೇ. ತದ್ರೂಪಿ ತಂತ್ರಜ್ಞಾನದಲ್ಲೂ ಪ್ರಾರಂಭಿಕ ಹಂತದಲ್ಲಿ ಅಂಗಾಂಶ ಕೃಷಿಯ ಪಾತ್ರ ಮಹತ್ವದ್ದಾಗಿದೆ.

ಪೂತಿರಹಿತ (ಎಸೆಪ್ಟಿಕ್) ಮತ್ತು ನಿಯತಾಂಕ (ಕಾನ್ಸ್‌ಟೆಂಟ್) ಉಷ್ಣತೆ ಹೊಂದಿರುವ ಕೋಣೆ, ಆಟೋ ಕ್ಲೇವ್, ಪಿಎಚ್ ಮಾಪನ, ಡಿಜಿಟಲ್ ತೂಕಮಾಪಕ, ಆಸ್ಮೋಮೀಟರ್, ಕೇಂದ್ರಾಪಕ (ಸೆಂಟ್ರಿಫ್ಯೂಜ್), ಸೂಕ್ಷ್ಮ ಪಿಪೆಟ್‌ಗಳು ಮತ್ತು ಕೃಷಿಕೆ ಮಾಧ್ಯಮ (ಕಲ್ಚರ್ ಮೀಡಿಯಂ)– ಇವುಗಳು ಅಂಗಾಂಶ ಕೃಷಿಗೆ ಅತ್ಯವಶ್ಯಕ. ಕೃಷಿಕೆ ಮಾಧ್ಯಮವು ಕೋಶಗಳ ಬೆಳವಣಿಗೆಗೆ ಅತ್ಯವಶ್ಯವಾದ ಸಾವಯವ (ಆರ್ಗ್ಯಾನಿಕ್) ಮತ್ತು ನಿರವಯವ (ಇನಾರ್ಗ್ಯಾನಿಕ್) ವಸ್ತುಘಟಕಗಳನ್ನು ಹೊಂದಿರುವ ಪೋಷಕ ದ್ರವ. ಸೋಡಿಯಂ, ಪೊಟ್ಯಾಷಿಯಂ, ಕಾಲ್ಸಿಯಂ, ಮೆಗ್ನಿಷಿಯಂ, ರಂಜಕ, ಬೈಕಾರ್ಬೋನೇಟ್ ಮತ್ತಿತರ ಐಯಾನ್‌ಗಳಲ್ಲದೆ ಕಾರ್ಬನ್ (ಇಂಗಾಲ) ನಂತಹ ಇನಾರ್ಗಾನಿಕ್ ಘಟಕಗಳೂ ೮ ಜೀವಸತ್ವಗಳು ಮತ್ತು ೧೪ ಅಮೈನೊ ಆಮ್ಲಗಳು (ಆರ್ಗ್ಯಾನಿಕ್) ಮಾಧ್ಯಮದಲ್ಲಿರುತ್ತವೆ. ಪಿಎಚ್ ಸೂಚಕ ರಾಸಾಯನಿಕವಾದ ಫೀನಾಲ್ ರೆಡ್ ಕೂಡ ಅದರಲ್ಲಿರುತ್ತದೆ.

ಕೃಷಿಕೆ ಮಾಧ್ಯಮದಲ್ಲಿ ಮೂರು ವಿಧ–೧) ಪ್ರಾಣಿಗಳ ಸ್ವಾಭಾವಿಕ ವಸ್ತು ಘಟಕವನ್ನು ಹೊಂದಿರುವ ಮಾಧ್ಯಮ, ೨) ಸಂಕೀರ್ಣ ಮಾಧ್ಯಮ ಮತ್ತು ೩) ಕೃತಕ ಮಾಧ್ಯಮ. ಪ್ಲಾಸ್ಮಾ, ವಸೆ (ಸೀರಮ್) ಮತ್ತು ಭ್ರೂಣದ ಆಹರಿತ ವಸ್ತು (ಎಕ್ಸ್‌ಟ್ರಾಕ್ಟ್) ಇವು ಕೆಲವು ಸ್ವಾಭಾವಿಕ ಕೃಷಿಕೆ ಮಾಧ್ಯಮಗಳು. ಸಂಕೀರ್ಣ ಮಾಧ್ಯಮವು ಸ್ವಾಭಾವಿಕ ಮಾಧ್ಯಮ ಮತ್ತು ಸಮತೋಲ (ಬ್ಯಾಲೆನ್ಸ್‌ಡ್)ವಾದ ಉಪ್ಪಿನ ದ್ರವವನ್ನು ಹೊಂದಿರುತ್ತದೆ. ಹ್ಯಾಂಕ್ಸ್ ಸಿಮ್ಸ್ ಮಾಧ್ಯಮ, ಬೋವೈನ್ ಆಮ್ನಿಯೋಟಿಕ್ ದ್ರವ ಮಾಧ್ಯಮ, ಯೀಸ್ಟ್ ಸಪ್ಲಿಮೆಂಟೆಡ್ ಲ್ಯಾಕ್ಟಾಲ್ಬುಮಿನ್ ಹೈಡ್ರೋಲೈಸಡ್ ಮತ್ತು ಯೀಸ್ಟ್ ಆಹರಿತ ವಸ್ತುಗಳ ಮಾಧ್ಯಮ ಮುಂತಾದುವು ಉದಾಹರಣೆಗಳು. ಕೃತಕ ಮಾಧ್ಯಮಗಳಲ್ಲಿ ಗ್ಲೂಕೋಸ್ (ಶಕ್ತಿ ವರ್ಧಕವಾಗಿ), ಫೀನಾಲ್ ರೆಡ್ (ಪಿ.ಎಚ್ ಸೂಚಕ), ಸೋಡಿಯಂ ಬೈಕಾರ್ಬೋನೇಟ್, ಇನಾರ್ಗ್ಯಾನಿಕ್ ಧಾತುಗಳು, ೮ ಜೀವಸತ್ವಗಳು, ೧೨–೧೪ ಅಮೈನೊ ಆಮ್ಲಗಳು ಮತ್ತು ವಿಶಿಷ್ಟ ಹಾರ್ಮೋನುಗಳು ಇರುತ್ತವೆ. ಬ್ಯಾಕ್ಟೀರಿಯಗಳ ಸೋಂಕನ್ನು ತಡೆಯಲು ಪೆನಿಸಿಲಿನ್ ಮತ್ತು ಸ್ಟ್ರೆಪ್ಟೊಮೈಸಿನ್‌ಗಳನ್ನು ಸೇರಿಸುತ್ತಾರೆ. ಫಿಶರ್ ಮಾಧ್ಯಮ, ಈಗಲ್‌ನ ಮಾಧ್ಯಮ, ಮಾಧ್ಯಮ ನಂ.೧೯೯, ಮಾಧ್ಯಮ ನಂ. ೬೧೨, ಮಾಧ್ಯಮ ನಂ. ೬೩೫, ಮಾಧ್ಯಮ ನಂ.೮೫೮, ಸಿಎಮ್‌ಆರ್‌ಎಲ್ ಮಾಧ್ಯಮ–೧೦೬೬ ಇವು ಕೆಲವು ಕೃತಕ ರಾಸಾಯನಿಕ ಮಾಧ್ಯಮಗಳು.

ಅಂಗಾಂಶ ಕೃಷಿಯಲ್ಲಿ ಪಾಲಿಸಬೇಕಾದ ಅತಿಮುಖ್ಯವಾದ ಅಂಶವೆಂದರೆ ಪೂತಿರಹಿತ ನಿರ್ಬಂಧ (ಸ್ಟರಿಲೈಸಡ್ ಕಂಡಿಷನ್). ಈ ತಂತ್ರದಲ್ಲಿ ಉಪಯೋಗಿಸುವ ಎಲ್ಲಾ ಉಪಕರಣಗಳೂ ಶುಭ್ರವಾಗಿದ್ದು ಪೂತಿ ರಹಿತವಾಗಿರಬೇಕು. ಪ್ರಯೋಗನಿರತ ವ್ಯಕ್ತಿಯೂ ತನ್ನ ಕೈ, ಕಾಲುಗಳನ್ನು ಆಲ್ಕೋಹಾಲ್‌ನಿಂದ ಶುಭ್ರಗೊಳಿಸಿಕೊಂಡಿರಬೇಕು.

ಪ್ರನಾಳೀಯವಾಗಿ ಪ್ರಾಣಿಕೋಶವನ್ನು ಕೃಷಿ ಮಾಡುವ ವಿಧಾನ: ಪ್ರಾಣಿಯ ಅಂಗಾಂಶವನ್ನು ಹೊರನಾಟಿಯಾಗಿ (ಎಕ್ಸ್‌ಪ್ಲಾಂಟ್) ಉಪಯೋಗಿಸಲಾಗುವುದು. ಟ್ರಿಪ್ಸಿನ್ ಮತ್ತು ಇತರ ಕಿಣ್ವಗಳಿರುವ ಮಾಧ್ಯಮಕ್ಕೆ ವರ್ಗಾಯಿಸಿ ಮ್ಯಾಗ್ನೆಟಿಕ್ ಸ್ಟರ್‌ಬಾರ್‌ನಲ್ಲಿ ನಿಕ್ಷೋಭೆ (ಅಜಿಟೇಟ್) ಗೊಳಿಸುವುದರಿಂದ ಕೋಶಗಳನ್ನು ಬೇರ್ಪಡಿಸಬಹುದು. ಅನಂತರ ಕೋಶ ನಿಲಂಬನ (ಸಸ್ಪೆನ್ಷನ್)ವನ್ನು ನೈಲಾನ್ ಬಟ್ಟೆಯಿಂದ ಶೋಧಿಸಿ, ಶೋಧಿತವನ್ನು ಕೇಂದ್ರಾಪಕೀಕರಿಸಿ (ಸೆಂಟ್ರಿಫ್ಯೂಜ್), ಸಾಂದ್ರಯುಕ್ತ ಕೋಶನಿಲಂಬನವನ್ನು ಮಾತ್ರ ಕೋಶಗಳ ಕೃಷಿಗೆ ಉಪಯೋಗಿಸುತ್ತಾರೆ. ನೇರವಾಗಿ ಪ್ರಾಣಿಯ ಕೋಶದಿಂದ ಅಥವಾ ಅಂಗಾಂಶದಿಂದ ಉತ್ಪಾದಿಸಿದ ಕೃಷಿಕೆ (ಕಲ್ಚರ್) ಯನ್ನು ಪ್ರಾಥಮಿಕ ಕೃಷಿಕೆ (ಪ್ರೈಮರಿ ಕಲ್ಚರ್) ಎನ್ನುವರು. ಕೋಶ ನಿಲಂಬನೆಯನ್ನು ಅತಿ ಕಡಿಮೆ ಪ್ರಮಾಣದಲ್ಲಿ ಪೂತಿರಹಿತ ವಾತಾವರಣದಲ್ಲಿ ಪಿಪೆಟ್‌ನ ಮೂಲಕ ಪೋಷಕ ಮಾಧ್ಯಮವಿರುವ ಶಂಕಾಕೃತಿಯ ಫ್ಲಾಸ್ಕ್‌ಗೆ ವರ್ಗಾಯಿಸಲಾಗುವುದು. ಅನಂತರ ೩೭° ಸೆ. ಉಷ್ಣತೆಯಲ್ಲಿ ಕೆಲವು ದಿನ ಕಾವು ಕೊಡಲಾಗುವುದು (ಇಂಕುಬೇಷನ್). ಇಷ್ಟರಲ್ಲಾಗಲೇ ಕೋಶಗಳು ಮೈಟಾಸಿಸ್ ರೀತಿಯ ವಿಭಜನೆ ಹೊಂದಲು ಪ್ರಾರಂಭಿಸಿರುತ್ತವೆ. ಮೊದಲು ಉತ್ಪತ್ತಿಯಾದ ನಿರಂತರ ಕೋಶ ಪದರವನ್ನು ಏಕ ಪದರವೆನ್ನುವರು. ಕೃಷಿಕೆಯಲ್ಲಿ ಕೋಶಗಳ ಬೆಳೆಯುವಿಕೆ ಮತ್ತು ಉಳಿಯುವಿಕೆ ಕೋಶದ ವಿಧವನ್ನು ಅನುಸರಿಸಿ ಭಿನ್ನವಾಗಿರುತ್ತವೆ. ಕೋಶಗಳ ಆಕಾರ ಮತ್ತು ಗಾತ್ರದಲ್ಲಿಯೂ ವೈವಿಧ್ಯತೆಯಿರುತ್ತದೆ. ಇದು ಕೃಷಿಕೆ ಮಾಧ್ಯಮದ ರಾಸಾಯನಿಕ ಸಂಯೋಜನೆಯನ್ನು ಅವಲಂಬಿಸಿರುತ್ತದೆ.

ಪ್ರಾಥಮಿಕ ಕೃಷಿಕೆಯಿಂದ ಬೆಳೆಸಿದ ಕೋಶಗಳನ್ನು ದ್ವಿತೀಯಕ ಕೃಷಿಕೆ (ಸೆಕೆಂಡರಿ ಕಲ್ಚರ್) ಅಥವಾ ಉಪಕೃಷಿಕೆ (ಸಬ್‌ಕಲ್ಚರ್) ಎನ್ನುತ್ತಾರೆ. ಕೃಷಿಕೆ ಫ್ಲಾಸ್ಕಿನ ತಳಭಾಗದಲ್ಲಿ ಅಂಟಿಕೊಂಡಿರುವ ಏಕಪದರವನ್ನು ಟ್ರಿಪ್ಸಿನ್ ಅಥವಾ ಇಡಿಟಿಎ (ಇಥಿಲೀನ್ ಡೈಅಮೈನ್ ಟೆಟ್ರ ಅಸಿಟಿಕ್ ಆಮ್ಲ) ಹಾಕಿ ಬೇರ್ಪಡಿಸಿ, ಚಿಕ್ಕ ಚಿಕ್ಕ ತುಣುಕುಗಳನ್ನು ಮಾಡಿ, ಅದರಲ್ಲಿ ೨–೩ ತುಣುಕುಗಳನ್ನು ಪುನಃ ಪೋಷಕ ಮಾಧ್ಯಮವಿದ್ದ ಇನ್ನೊಂದು ಫ್ಲಾಸ್ಕ್‌ಗೆ ವರ್ಗಾಯಿಸಲಾಗುವುದು. ಇದಕ್ಕೆ ಕಾವು ಕೊಡುವುದರಿಂದ ಮೊದಲು ಏಕಪದರಗಳು ಉತ್ಪತ್ತಿಯಾಗಿ ಅನಂತರ ದ್ವಿಗುಣಗೊಂಡು ಸಂಖ್ಯೆಯಲ್ಲಿ ಹೆಚ್ಚುತ್ತವೆ. ಇದೇ ಉಪಕೃಷಿಕೆ.

ದ್ವಿತೀಯಕ ಅಥವಾ ಉಪಕೃಷಿಕೆಯಲ್ಲಿ ಕೆಲವೊಂದು ಕೋಶಗಳು ಬಾಹ್ಯರಚನೆ, ಬೆಳವಣಿಗೆ ಮತ್ತು ಅನಿರ್ದಿಷ್ಟ ಜೀವನ ಶೈಲಿಯಲ್ಲಿ ಮಿಕ್ಕೆಲ್ಲವುಗಳಿಗಿಂತ ಭಿನ್ನವಾಗಿರುತ್ತವೆ. ಇಂತಹವನ್ನು ಪ್ರತ್ಯೇಕಿಸಿ, ಹೊಸ ಮಾಧ್ಯಮವಿರುವ ಫ್ಲಾಸ್ಕ್‌ಗೆ ವರ್ಗಾಯಿಸಿ, ನಿರ್ದಿಷ್ಟವಾದ ಕೋಶಶ್ರೇಣಿ (ಸೆಲ್ ಲೈನ್) ಆಗಿ ಬೆಳೆಸಬೇಕು. ಈ ತರದ ಕೃಷಿಕೆಯನ್ನು ಸ್ಥಾಪಿತ ಕೋಶಶ್ರೇಣಿ (ಎಸ್ಟಾಬ್ಲಿಷ್‌ಡ್ ಸೆಲ್ ಲೈನ್) ಅಥವಾ ಅನವರತ ಕೋಶಶ್ರೇಣಿ (ಕಂಟಿನ್ಯುಅಸ್ ಸೆಲ್ ಲೈನ್) ಎನ್ನುತ್ತಾರೆ. ಈ ಕೋಶಗಳು ಕ್ರೊಮೋಸೋಮುಗಳಲ್ಲಿ ಭಿನ್ನವಾಗಿದ್ದು ಸಂಬಂಧಿ ಪ್ರಾಣಿಗಳಿಗೆ ವರ್ಗಾಯಿಸಿದಾಗ ಗಂತಿಗಳಾಗಿ ಪರಿವರ್ತನೆಗೊಳ್ಳಬಹುದು. ಸ್ಥಾಪಿತ ಕೋಶಶ್ರೇಣಿಯನ್ನು ಉತ್ಪತ್ತಿ ಮಾಡಲು ಒಂದು ಕೋಶ ಶ್ರೇಣಿಯನ್ನು ೩ ದಿನದ ಅವಧಿಯಲ್ಲಿ ಕನಿಷ್ಠ ೭೦ ಬಾರಿಯಾದರೂ ಉಪಕೃಷಿಕೆ ಮಾಡಬೇಕು. ಹೀಲಾ ಕೋಶಶ್ರೇಣಿ (ಸರ್ವೈಕಲ್ ಗಂತಿಯ ಕೋಶದಿಂದ ಸ್ಥಾಪಿಸಿದ್ದು), ವಿಶ್ (ಗರ್ಭವೇಷ್ಟಿನ–ಆಮ್ನಿಯಾನ್‌ನಿಂದ ಸ್ಥಾಪಿಸಿದ್ದು), ಹೆಪ್–೨ (ಧ್ವನಿ ಪೆಟ್ಟಿಗೆ ಗಂತಿ ಕೋಶದಿಂದ ಸ್ಥಾಪಿಸಿದ್ದು) ಮತ್ತು ಸಿಎಚ್‌ಓ (ಚೀನಿ ಹ್ಯಾಮ್‌ಸ್ಟರ್‌ನ ಅಂಡಾಶಯ ಕೋಶದಿಂದ ಸ್ಥಾಪಿಸಿದ್ದು) ಸ್ಥಾಪಿತ ಕೋಶ ಶ್ರೇಣಿಗೆ ಕೆಲವು ಉದಾಹರಣೆಗಳು. ಈ ಕೋಶಶ್ರೇಣಿಗಳನ್ನು ಘನೀಭವನ ಸ್ಥಿತಿಯಲ್ಲಿ ಬಹಳ ಸಮಯದವರೆಗೆ ಶೇಖರಿಸಿಡಬಹುದು. ಇದನ್ನು ಅತಿಶೈತ್ಯ ಶೇಖರಣೆ

(ಕ್ರೈಯೊಪ್ರಿಸರ್ವೇಷನ್) ಎನ್ನುತ್ತಾರೆ. ಬಿಡಿ ಕೋಶಗಳ ನಿಲಂಬನವನ್ನು ಡೈಮಿಥೈಲ್ ಸಲ್ಫೈಡ್‌ಯುಕ್ತ ಮಾಧ್ಯಮದಲ್ಲಿಟ್ಟು ದ್ರವೀಕರಿಸಿದ ನೈಟ್ರೊಜನ್‌ನಲ್ಲಿ –೧೯೬°ಸೆ. ಉಷ್ಣತೆಯಲ್ಲಿ ಶೇಖರಿಡಿಸಿಡುತ್ತಾರೆ.

ಅಂಗಾಂಶ ಕೃಷಿಯಲ್ಲಿ ಇತ್ತೀಚಿನ ಬೆಳೆವಣಿಗೆಯೆಂದರೆ ಕಾಂಡ ಕೋಶ ಕೃಷಿ (ಸ್ಟೆಮ್‌ಸೆಲ್ ಕಲ್ಚರ್). ಭ್ರೂಣೀಯ ಕಾಂಡ ಕೋಶ (ಎಂಬ್ರಿಯಾನಿಕ್ ಕಾಂಡಕೋಶ) ಅಥವಾ ವಯಸ್ಕ ಕಾಂಡಕೋಶ (ಅಡಲ್ಟ್ ಕಾಂಡಕೋಶ)ವನ್ನುಪಯೋಗಿಸಿ ಅಂಗಾಂಶಗಳನ್ನು ಮತ್ತು ಅಂಗಾಂಗಗಳ ಭಾಗಗಳನ್ನು ಉತ್ಪತ್ತಿ ಮಾಡಲು ಬಳಸುತ್ತಾರೆ.

ಅಂಗಾಂಶಕೃಷಿಯ ಅನ್ವಯಗಳು:

೧. ಅಂಗಾಂಗ ಕೃಷಿ: ಉದಾ–ಕೃತಕ ಚರ್ಮ (ಸುಟ್ಟ ಗಾಯಕ್ಕೆ)

೨. ಲಸಿಕೆ ತಯಾರಿಕೆ: ಕೆಲವು ಕೋಶಶ್ರೇಣಿಗಳಿಂದ ಪೋಲಿಯೋ, ದಡಾರ ಮುಂತಾದ ಕಾಯಿಲೆಗಳಿಗೆ ಲಸಿಕೆಯನ್ನು ತಯಾರಿಸಲಾಗುತ್ತಿದೆ.

೩. ಕೋಶಶ್ರೇಣಿಗಳಿಂದ ಅಂಜಿಯೋಜೆನಿಕ್ ಘಟಕ, ಇಂಟರ್‌ಫೆರಾನ್, ಯೂರೊಕೈನೇಸ್ ಕಿಣ್ವ, ರಕ್ತ ಹೆಪ್ಪುಗಟ್ಟಿಸುವ ಘಟಕ–VIII ಮುಂತಾದ ಮಾನವನಿಗೆ ಉಪಯುಕ್ತವಾದ ಔಷಧೀಯ ವಸ್ತುಗಳನ್ನು ತಯಾರಿಸಲಾಗುತ್ತಿದೆ.

4. ಪ್ರನಾಳೀಯ ನಿಷೇಚನ (ಇನ್‌ವಿಟ್ರೊ ಫರ್ಟಿಲೈಸೇಷನ್): ನಾಶದ ಅಂಚಿನಲ್ಲಿರುವ ಪ್ರಾಣಿಗಳ ಸಂತಾನವೃದ್ಧಿಗೆ ಅಂಡವನ್ನು ಪ್ರನಾಳದಲ್ಲಿ ನಿಷೇಚನ ಹೊಂದುವಂತೆ ಮಾಡಿ ಅದರ ಪ್ರಾರಂಭಿಕ ಬೆಳೆವಣಿಗೆಯಲ್ಲಿ ಈ ತಂತ್ರವೇ ಬಳಕೆಯಾಗುವುದು. ಮಾನವನಲ್ಲೂ ಕೂಡ ಅನ್ವಯಿಸುತ್ತದೆ.

5. ತದ್ರೂಪಿಗಳ ತಯಾರಿಕೆ: ಕಪ್ಪೆ, ಮೀನು, ಕೋಳಿ, ಇಲಿ, ಹಂದಿ ಮುಂತಾದವಲ್ಲಿ ಅಂಗಾಂಶ ಕೃಷಿ ತಂತ್ರವನ್ನು ಉಪಯೋಗಿಸಿ ತದ್ರೂಪಿಗಳನ್ನು ಪಡೆಯಲಾಗಿದೆ. ಸ್ಕಾಟ್‌ಲೆಂಡಿನ ರೋಸಲಿನ್ ಇನ್ಸ್‌ಟಿಟ್ಯೂಟ್‌ನ ಅಯಾನ್ ವಿಲ್ಮಟ್ ಮತ್ತು ಸಹಚರರು ಡಾಲಿ ಎಂಬ ತದ್ರೂಪಿ ಕುರಿಯನ್ನು ಸೃಷ್ಟಿಸಿದ್ದು ಹೀಗೆಯೇ. ತದ್ರೂಪಿ ತಂತ್ರಜ್ಞಾನದಲ್ಲಿ ಮಾರ್ಪಾಟಾದ ಜೀವಕೋಶ (ಅಂಡಾಣು)ದ ಪ್ರಾರಂಭಿಕ ಬೆಳೆವಣಿಗೆ ಅಂಗಾಂಶ ಕೃಷಿ ತಂತ್ರದ ತತ್ವದ ಮೇಲೆಯೇ ನಿಂತಿದೆ, ನೋಡಿ: ತದ್ರೂಪಿ ತಂತ್ರಜ್ಞಾನ; ಕಾಂಡಕೋಶ. (ಜೆ.ಎಸ್.ಎ)

**ಅಂಗಾಂಶ ರಸಾಯನವಿಜ್ಞಾನ:** ಅಂಗಾಂಶಗಳಲ್ಲಿ ಮತ್ತು ಜೀವಕೋಶಗಳಲ್ಲಿರುವ ರಾಸಾಯನಿಕಗಳನ್ನು ಅವುಗಳ ಸ್ವಾಭಾವಿಕ ಸ್ಥಾನದಲ್ಲಿಯೇ ಗುರುತಿಸಿ, ಅವುಗಳ ವಿತರಣೆಯನ್ನು ರಾಸಾಯನಿಕ ವಿಧಾನಗಳಿಂದ ಅಭ್ಯಸಿಸುವ ವಿಜ್ಞಾನ (ಹಿಸ್ಟೋಕೆಮಿಸ್ಟ್ರಿ). ಜೀವಿರಚನೆಗಳಲ್ಲಿ ಅವುಗಳ ಆಕಾರಕ್ಕೂ ಅವು ನಿರ್ವಹಿಸುವ ಕ್ರಿಯೆಗೂ ನೇರ ಸಂಬಂಧವಿದೆ. ಸ್ಥೂಲ ಆಕಾರಗಳನ್ನು ಅಂಗವಿಚ್ಛೇದನೆಯಿಂದ ತಿಳಿದುಕೊಳ್ಳಬಹುದು. ಆದರೆ ಒಂದು ನಿರ್ದಿಷ್ಟ ಕ್ರಿಯೆಯನ್ನು ನಿರ್ವಹಿಸಲು ಒಂದು ಅಂಗ ಹೇಗೆ ನಿರ್ದಿಷ್ಟವಾಗಿ ರಚಿತವಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾದಾಗ ಕೇವಲ ಅದರ ಸ್ಥೂಲರಚನೆಯ ಅಥವಾ ಆಕಾರದ ಜ್ಞಾನವಷ್ಟೆ ಸಾಲದು. ಅದರ ಸೂಕ್ಷ್ಮ ರಚನೆಯನ್ನೂ ಹಾಗೂ ರಾಸಾಯನಿಕ ಗುಣಗಳನ್ನೂ ತಿಳಿದುಕೊಳ್ಳಬೇಕಾಗುತ್ತದೆ.

ಕೆಲವೊಮ್ಮೆ ಕೇವಲ ಅಂಗಾಂಶ ರಚನೆಯ ಜ್ಞಾನವೇ ಒಂದು ಜೀವ ರಚನೆಯ ಕ್ರಿಯಾನಿರ್ವಹಣೆಯ ರೀತಿಯನ್ನು ತಿಳಿದುಕೊಳ್ಳಲು ಸಾಲದು. ಆಗ ಈ ಅಂಗರಚನೆಯಲ್ಲಿ ಒಳಗೊಂಡಿರುವ ವಿವಿಧ ರಾಸಾಯನಿಕ ವಸ್ತುಗಳ ಮತ್ತು ಅವುಗಳ ಕೋಶವಿತರಣೆಯ ಜ್ಞಾನ ನೆರವಾಗಬಹುದು. ಮೊದಲು ಜೀವರಾಸಾಯನಿಕ ವಿಧಾನದಿಂದ ರಚನೆಯಲ್ಲಿರುವ ವಿವಿಧ ರಾಸಾಯನಿಕ ಪದಾರ್ಥಗಳನ್ನು ಗುರುತಿಸಿದ ಅನಂತರ ಅಂಗಾಂಶ ರಾಸಾಯನಿಕ ವಿಧಾನಗಳಿಂದ ಅವುಗಳ ವಿತರಣೆಯ ವಿಧಾನವನ್ನು ತಿಳಿಯಬಹುದು.

ಜೀವವಸ್ತುವಿನಲ್ಲಿರುವ ಮೂರು ವಿಧದ ರಾಸಾಯನಿಕ ಪದಾರ್ಥಗಳು ಪ್ರೊಟೀನು, ಕಾರ್ಬೊಹೈಡ್ರೇಟು ಮತ್ತು ಲಿಪಿಡ್‌ಗಳು. ಇವುಗಳನ್ನು ಬೇರೆ ಬೇರೆಯಾಗಿ ಪತ್ತೆಹಚ್ಚಲು ವಿವಿಧ ವರ್ಣಗಳನ್ನು ಬಳಸಲಾಗುತ್ತದೆ. ಕಾರ್ಬೊಹೈಡ್ರೇಟುಗಳನ್ನೂ, ನ್ಯೂಕ್ಲಿಯೊ ಪ್ರೊಟೀನುಗಳನ್ನೂ ಹೈಡ್ರಾಕ್ಸಿಲೀಕರಣಕ್ಕೆ ಗುರಿಪಡಿಸಿ ಅಥವಾ ಆಮ್ಲಜನಕದೊಂದಿಗೆ ಸಂಯೋಜಿಸುವಂತೆ ಮಾಡಿದಾಗ, ಈ ಕ್ರಿಯೆಯಲ್ಲಿ ಉತ್ಪತ್ತಿಯಾಗುವ ವಸ್ತುಗಳು ನಿರ್ದಿಷ್ಟ ಪತ್ತೆಕಾರಕಗಳೊಂದಿಗೆ (ರಿಏಜೆಂಟ್) ವರ್ತಿಸಿ ನಿರ್ದಿಷ್ಟ ಬಣ್ಣಗಳನ್ನು ಕೊಡುತ್ತವೆ. ಇದೇ ರೀತಿ ಲಿಪಿಡ್‌ಗಳನ್ನು ಗುರುತಿಸಲು ಲಿಪಿಡ್‌ಗಳಲ್ಲಿ ಕರಗುವ ಬಣ್ಣಗಳನ್ನು ಉಪಯೋಗಿಸುತ್ತಾರೆ. ಆಗ ಈ ಬಣ್ಣ ಅಂಗಾಂಶದ ಸೀಳಿಕೆಗಳಲ್ಲಿ ಕೊಬ್ಬಿರುವ (ಲಿಪಿಡ್) ಜಾಗಗಳಲ್ಲಿ ಮಾತ್ರ ನೆಲಸುತ್ತದೆ. ಪ್ರೊಟೀನುಗಳನ್ನು ಗುರುತಿಸಲು ಉಪಯೋಗಿಸುವ ಅಂಗಾಂಶ ರಾಸಾಯನ ವಿಧಾನಗಳು ಪ್ರೊಟೀನಿನ ಘಟಕಗಳಾದ ಅಮೈನೊಆಮ್ಲಗಳನ್ನು ಗುರುತಿಸುವ ತಂತ್ರಗಳಾಗಿವೆ. ಮಿಲ್ಲನ್ ಪ್ರತಿಕ್ರಿಯೆಯಲ್ಲಿ ಟೈರೊಸಿನ್ ಅಮೈನೊಆಮ್ಲವಿರುವ ಪ್ರೊಟೀನುಗಳನ್ನು ಗುರುತಿಸಬಹುದು. ಈ ವಿಧಾನದಲ್ಲಿ ಟೈರೊಸಿನ್ ಅಮೈನೊಆಮ್ಲದಲ್ಲಿರುವ ಹೈಡ್ರಾಕ್ಸಿಫಿನೈಲ್ ಗುಂಪು ಪಾದರಸದ ವಿದ್ಯುದ್ವಾಹಿ ಕಣ (ಅಯಾನ್) ಗಳೊಂದಿಗೆ ವರ್ತಿಸುತ್ತವೆ. ಅನಂತರ ಇವು ನೈಟ್ರೈಟ್ ವಿದ್ಯುದ್ವಾಹಿ ಕಣಗಳೊಂದಿಗೆ ವರ್ತಿಸುವಾಗ ಕೆಂಪು ವರ್ಣವನ್ನು ತಳೆಯುತ್ತವೆ. ಇದೇ ರೀತಿಯಲ್ಲಿ ಪೌಲಿಯ ಡಯಾಜ್ಹೊನಿಯಮ್ ಪ್ರತಿಕ್ರಿಯೆಯನ್ನು ಟೈರೊಸಿನ್, ಟ್ರಿಪ್ಟೊಫಾನ್ ಮತ್ತು ಹಿಸ್ಟಿಡಿನ್ ಅಮೈನೊ ಆಮ್ಲಗಳಿರುವ ಪ್ರೊಟೀನುಗಳನ್ನು ಗುರುತಿಸಲು ಬಳಸುತ್ತಾರೆ. ಇತರ ತಂತ್ರಗಳಲ್ಲಿ ಜ್ಹಾಂಥೊಪ್ರೊಟೀಕ್ ಪ್ರತಿಕ್ರಿಯೆಯನ್ನು ಫಿನೋಲಿಕ್ ಗುಂಪಿನಲ್ಲಿರುವ ಸಂಯುಕ್ತ ವಸ್ತುಗಳನ್ನು ಗುರುತಿಸಲು ಉಪಯೋಗಿಸುತ್ತಾರೆ. ಸಕಾಗುಚಿ ಪ್ರತಿಕ್ರಿಯೆಯನ್ನು ಆರ್ಜಿನಿನ್ ಅಮೈನೊ ಆಮ್ಲವಿರುವ ಪ್ರೊಟೀನನ್ನು ಪತ್ತೆಹಚ್ಚಲು ಬಳಸುತ್ತಾರೆ. ನೈಟ್ರೊಪ್ರುಸ್ಸೈಡ್ ಪರೀಕ್ಷೆಯನ್ನು ಸಲ್ಫ್‌ಹೈಡ್ರಿಲ್ ಗುಂಪಿರುವ ಪ್ರೊಟೀನನ್ನು ಗುರುತಿಸಲು ಉಪಯೋಗಿಸುತ್ತಾರೆ. ಆದರೆ ಈ ವಿಧಾನ ಹೆಚ್ಚು ಬಳಕೆಯಲ್ಲಿಲ್ಲ.

ಸಾಮಾನ್ಯ ಪ್ರೊಟೀನುಗಳನ್ನು ಗುರುತಿಸಲು ಬಳಸುವ ಒಂದು ವಿಧಾನವನ್ನು ಈ ಮುಂದೆ ವಿವರಿಸಿದೆ. ಇದರಲ್ಲಿ ಪಾದರಸದ ಕ್ಲೋರೈಡ್ ಮತ್ತು ಬ್ರೋಮಾಫಿನಾಲ್ ಬ್ಲೂ ಎಂಬ ನೀಲಿ ಬಣ್ಣವನ್ನು ಬಳಸುವುದರಿಂದ ಇದಕ್ಕೆ ಮರ್ಕ್ಯುರಿ ಬ್ರೋಮ್‌ಫಿನಾಲ್ ಬ್ಲೂ ಎಂದು ಹೆಸರು. ಈ ವಿಧಾನದಲ್ಲಿ ಅಂಗಾಂಶ ಸೀಳಿಕೆಗಳನ್ನು ಸು. 2 ಗಂಟೆಗಳ ಕಾಲ ರಂಗಿನ ದ್ರಾವಣದಲ್ಲಿ ಇಡಬೇಕು. ಮರ್ಕ್ಯುರಿಕ್ಲೋರೈಡಿನ (100 ಮಿಲೀ) ಪರ್ಯಾಯ ದ್ರಾವಣದಲ್ಲಿ ಒಂದು ಗ್ರಾಂನಷ್ಟು ಬ್ರೋಮ್‌ಫಿನಾಲ್ ಬ್ಲೂ ರಂಗನ್ನು ಕರಗಿಸಿ ದ್ರಾವಣವನ್ನು ತಯಾರಿಸಲಾಗುತ್ತದೆ. ರಂಗಿನಲ್ಲಿ ಸಂಸ್ಕರಿಸಿದ ಅನಂತರ ಸೀಳಿಕೆಗಳನ್ನು ಟರ್‌ಷಿಯರಿ ಬ್ಯುಟೈಲ್ ಮದ್ಯಸಾರದಲ್ಲಿ ಸ್ವಲ್ಪ ಸಮಯ ಇಟ್ಟರೆ ಸೀಳಿಕೆಯಲ್ಲಿರುವ ಪ್ರೊಟೀನು ಅಂಶಗಳು ಜಡಬಿಂದುವನ್ನು ತರುವ ರಂಗಿನ ನೀಲಿಬಣ್ಣವನ್ನು ಉತ್ಪತ್ತಿ ಮಾಡುತ್ತವೆ.

ಕಾರ್ಬೊಹೈಡ್ರೇಟುಗಳನ್ನು ಪಿಎಎಸ್ (ಪರ್‌ಐಯೋಡಿಕ್ ಆಸಿಡ್ ಶಿಫ್) ಎಂಬ ಒಂದು ಸಾಮಾನ್ಯ ವಿಧಾನದಿಂದ ಗುರುತಿಸುತ್ತಾರೆ. ಇದರಲ್ಲಿ ಪರ್‌ಐಯೋಡಿಕ್ ಆಮ್ಲ ಉತ್ಕರ್ಷಣಕಾರಿಯಾಗಿ ವರ್ತಿಸುತ್ತದೆ (ಆಕ್ಸಿಡೈಜಿಂಗ್ ಏಜೆಂಟ್). ಇದು 1 – 2 ಗ್ಲೈಕಾಲ್ ಗುಂಪುಗಳಲ್ಲಿನ ಕಾರ್ಬನ್ ಬಂಧಗಳನ್ನು (ಸಿ–ಸಿ) ಒಡೆದು ಅವುಗಳನ್ನು ಡೈಆಲ್‌ಡಿಹೈಡ್‌ಗಳಾಗಿ ಪರಿವರ್ತಿಸುತ್ತದೆ. ಈ ಡೈಆಲ್‌ಡಿಹೈಡ್‌ಗಳು ಮೇಲೆ ತಿಳಿಸಿದ ವಿಧಾನದ ಶಿಫ್‌ನೊಂದಿಗೆ ವರ್ತಿಸಿ ನೇರಳೆ (ಮೆಜೆಂಟ) ಬಣ್ಣವನ್ನು ತಾಳುತ್ತವೆ. ಕ್ಷಾರೀಯ ಫುಕ್ಸಿನ್ (ಬೇಸಿಕ್ ಫುಕ್ಸಿನ್) ಎಂಬ ವರ್ಣವನ್ನು ಕಾದ ನೀರಿನಲ್ಲಿ ಕರಗಿಸಿ, ಹೈಡ್ರೊಕ್ಲೋರಿಕ್ ಆಮ್ಲ ಮತ್ತು ಸೋಡಿಯಮ್ ಅಥವ ಪೊಟ್ಯಾಸಿಯಂ ಮೆಟಬೈಸಲ್ಫೈಟ್‌ಗಳನ್ನು ಬೆರೆಸಿದಾಗ ಉತ್ಪತ್ತಿಯಾಗುವ ಸಲ್ಫರ್‌ಡೈಆಕ್ಸೈಡ್‌ನಿಂದ ಅಪವರ್ತಿಸಿ ಈ ವರ್ಣ ದ್ರಾವಣವನ್ನು ತಯಾರಿಸುತ್ತಾರೆ. ಈ ವಿಧಾನದಿಂದ ಮಿಶ್ರ ಕಾರ್ಬೊಹೈಡ್ರೇಟುಗಳಾದ ಹೈಲುರೊನಿಕ್ ಆಮ್ಲ, ಮ್ಯೂಕೊಪ್ರೊಟೀನು, ಗ್ಲೈಕೊಪ್ರೊಟೀನು, ಗ್ಲೈಕೊಲಿಪಿಡ್ ಮತ್ತು ಫೊಸ್ಫೊಟೈಡಗಳನ್ನು ಗುರುತಿಸಬಹುದು. ಈ ಮಿಶ್ರಣಗಳಲ್ಲಿರುವ ಇತರ ಘಟಕಗಳನ್ನು ಪರಿಶಿಷ್ಟ ಪರೀಕ್ಷೆಗಳಿಂದ ನಿರ್ಧರಿಸಿ, ಅಂಗಾಂಶದಲ್ಲಿರುವ ನಿರ್ದಿಷ್ಟ ಕಾರ್ಬೊಹೈಡ್ರೇಟನ್ನು ಪರಿಶೀಲಿಸಬಹುದು.

ಪ್ರಾಣಿಅಂಗಾಂಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಇನ್ನೊಂದು ಕಾರ್ಬೊಹೈಡ್ರೇಟ್ ಎಂದರೆ ಗ್ಲೈಕೊಜನ್. ರಕ್ತಗತವಾದ ಆಹಾರ ಉಪಯುಕ್ತತೆಗಿಂತ ಹೆಚ್ಚಾದಾಗ, ಹೆಚ್ಚುವರಿ ಭಾಗವನ್ನು ಗ್ಲೈಕೊಜನ್ ಆಗಿ ಪರಿವರ್ತಿಸಿ ಯಕೃತ್ತನಲ್ಲಿ ಸಂಗ್ರಹಿಸುತ್ತದೆ. ಇದನ್ನು ವರ್ಣೀಕರಿಸಲು ಬೆಸ್ಟನ ಕಾರ್ಮಿನ್ ವಿಧಾನವನ್ನು ಬಳಸಲಾಗುವದು.

ಪ್ರಾಣಿ ಅಂಗಾಂಶಗಳ ಅನೇಕ ಸ್ರವಿಕೆಗಳಲ್ಲಿ ಲಿಪಿಡ್ ಭಾಗವಹಿಸುತ್ತದೆ. ಉದಾಹರಣೆಗೆ ಸ್ಟಿರಾಯಿಡ್ ಹಾರ್ಮೋನುಗಳು ಸಂಶ್ಲೇಷಣೆಯಾಗುವ ಅಂಗಾಂಶಗಳಲ್ಲಿ ಲಿಪಿಡ್‌ಗಳು ಅಧಿಕ ಮೊತ್ತದಲ್ಲಿರುತ್ತದೆ. ಅಂಗಾಂಶ ರಾಸಾಯನಿಕ ವಿಧಾನಗಳಿಂದ ಲಿಪಿಡ್‌ಗಳ ಮೊತ್ತ ಮತ್ತು ವಿತರಣೆಯ ಅಭ್ಯಾಸ ಅಲ್ಲಿ ನಡೆಯುತ್ತಿರುವ ಸಂಶ್ಲೇಷಣ ಕ್ರಿಯೆಯ ಬಗೆಗೆ ಪರೋಕ್ಷ ಮಾಹಿತಿಯನ್ನು ಒದಗಿಸುತ್ತದೆ. ವೃಷಣ, ಅಡ್ರಿನಲ್ ಗ್ರಂಥಿಯ ಕಾರ್ಟೆಕ್ಸ್ ಭಾಗ ಮುಂತಾದವುಗಳನ್ನು ಈ ವಿಧಾನದಿಂದ ಪರೀಕ್ಷಿಸುತ್ತಾರೆ. ಲಿಪಿಡ್‌ಗಳನ್ನು ವರ್ಣೀಕರಿಸಲು ಸುಡಾನ್ ಬ್ಲಾಕ್ ಬಿ ವಿಧಾನವನ್ನು ಬಳಸಲಾಗುವುದು. ಈ ವಿಧಾನವನ್ನು ಅನುಸರಿಸಿದಾಗ ಅಂಗಾಂಶ ಸೀಳಿಕೆಯಲ್ಲಿ ಲಿಪಿಡ್‌ಗಳಿರುವ ಭಾಗಗಳು ಕಡುನೀಲಿ ಅಥವ ಕಪ್ಪು ವರ್ಣ ತಾಳುತ್ತವೆ. ಇದು ಸಾಮಾನ್ಯವಾಗಿ ಲಿಪಿಡ್‌ಗಳನ್ನು ಗುರುತಿಸಲು ಉಪಯೋಗಿಸುವ ವಿಧಾನ. ಜಡ ಲಿಪಿಡ್‌ಗಳು, ಬಂಧಿತ ಫಾಸ್ಫೊಲಿಪಿಡ್ ಇತ್ಯಾದಿ ವಿವಿಧ ರೀತಿಯ ಲಿಪಿಡ್‌ಗಳನ್ನು ಗುರುತಿಸಲು ಪ್ರತ್ಯೇಕ ವಿಧಾನಗಳಿವೆ. ಫಾಸ್ಫೋಲಿಪಿಡ್‌ಗಳಿಗೆ ಆಸಿಡ್ ಹಿಮ್ಯಾಟಿನ್ ಹಾಗು ಜಡ ಲಿಪಿಡ್‌ಗಳನ್ನು ಗುರುತಿಸಲು ನೈಲ್‌ಬ್ಲೂ ವಿಧಾನಗಳನ್ನು ಅನುಸರಿಸಲಾಗುವುದು.

ಜೀವಕ್ರಿಯಾ ವ್ಯಾಪಾರಗಳಲ್ಲಿ ನಡೆಯುವ ಚಯಾಪಚಯ ಕ್ರಿಯೆಗಳ ಪ್ರತಿಯೊಂದು ಹಂತವನ್ನೂ ನಿರ್ದೇಶಿಸುವ ಮತ್ತು ಒಂದೊಂದು ಹಂತಕ್ಕೂ ನಿರ್ದಿಷ್ಟವಾದ ಕಿಣ್ವಗಳಿವೆ.

ಈ ಕಿಣ್ವಗಳು ವಿಶೇಷ ರೀತಿಯ ಪ್ರೋಟೀನುಗಳು. ಇವುಗಳನ್ನು ಕೂಡ ಅಂಗಾಂಶ ರಾಸಾಯನಿಕ ವಿಧಾನದಿಂದ ಗುರುತಿಸಬಹುದು. ಬಹುಪಾಲು ತಿಳಿದಿರುವ ಎಲ್ಲ ಕಿಣ್ವಗಳಿಗೂ ಅವುಗಳನ್ನು ಗುರುತಿಸುವ ವಿಧಾನಗಳಿವೆ. ಅಂಗಾಂಶ ರಾಸಾಯನಿಕ ವಿಜ್ಞಾನದ ವಿದ್ಯಾರ್ಥಿ ಸಾಮಾನ್ಯವಾಗಿ ಅಭ್ಯಾಸಿಸುವ ಕಿಣ್ವಗಳಿವು; ಫಾಸ್ಫಟೇಸ್‌ಗಳು, ಡಿಹೈಡ್ರೊಜನೇಸ್‌ಗಳು, ಲೈಪೇಸ್‌ಗಳು ಇತ್ಯಾದಿ. ಇದೇ ರೀತಿ ಸ್ಟೀರಾಯಿಡ್ ಸಂಶ್ಲೇಷಣೆಯ ಹಂತಗಳಲ್ಲಿ ಭಾಗವಹಿಸುವ ಕಿಣ್ವಗಳನ್ನೂ ಗುರುತಿಸಿ ಪರೀಕ್ಷಿಸುತ್ತಿರುವ ಅಂಗಾಂಶದಲ್ಲಿ ಸ್ಟಿರಾಯಿಡ್ ಸಂಶ್ಲೇಷಣೆ ನಡೆಯುವುದೇ ಇಲ್ಲವೇ, ನಡೆಯುತ್ತಿದ್ದರೆ ಯಾವ ರೀತಿಯದು ಎಂಬುದನ್ನು ನಿರ್ಧರಿಸಬಹುದು.

ಕಿಣ್ವಗಳನ್ನು ಗುರುತಿಸುವಾಗ ನಿರ್ದಿಷ್ಟ ಕಿಣ್ವಗಳು ನಿರ್ದೇಶಿಸುವ ಕ್ರಿಯೆಯ ಆಧಾರವಸ್ತುಗಳನ್ನು ಒದಗಿಸಿ, ಈ ಪ್ರತಿಕ್ರಿಯೆಯಲ್ಲಿ ಅಗತ್ಯವಾಗುವ ಸಹಘಟಕಗಳನ್ನು ಸೇರಿಸಿ ಪರಿಪಾಕಿಸುತ್ತಾರೆ. ಕಿಣ್ವಗಳನ್ನು ಅಭ್ಯಸಿಸುವಾಗ ಅಂಗಾಂಶಗಳನ್ನು ಯಾವ ರೀತಿಯ ರಾಸಾಯನಿಕ ಸ್ಥಿರೀಕರಣಕ್ಕೂ ಗುರಿಪಡಿಸುವುದಿಲ್ಲ. ಏಕೆಂದರೆ ಈ ಸಂಸ್ಕರಣೆಗಳಿಂದ ಕಿಣ್ವಗಳು ನಾಶವಾಗಬಹುದು. ಈ ಅಂಗಾಂಶಗಳನ್ನು ಘನೀಕರಿಸಿ ಅಂಗಾಂಶ ಮತ್ತು ಅದರಲ್ಲಿರುವ ಕಿಣ್ವಗಳನ್ನು ಸಂರಕ್ಷಿಸಬಹುದು. ಇದರ ಜೊತೆಗೆ ಎನ್‌ಬಿಟಿ (ನೈಟ್ರೊ ಬ್ಲೂ ಟೆಟ್ರಾಜೋಲಿಯಮ್) ಎಂಬ ಒಂದು ಸೂಚಕವಸ್ತುವನ್ನು ಬಳಸಲಾಗುವುದು. ಪರಿಪಾಕಿಸುವ ಕಾಲಕ್ಕೆ ಕಿಣ್ವವು ಮಾಧ್ಯಮದಲ್ಲಿ ಒದಗಿರುವ ಆಧಾರ ವಸ್ತುವಿನ ಮೇಲೆ ವರ್ತಿಸುತ್ತದೆ. ಇದರಿಂದ ರಾಸಾಯನಿಕ ಕ್ರಿಯೆ ನಡೆದು (ಅಪಕರ್ಷಣ ಅಥವ ಉತ್ಕರ್ಷಣ) ಸೂಚಕ ವಸ್ತುವು ಕಿಣ್ವ ಚಟುವಟಿಕೆ ಇರುವ ಭಾಗದಲ್ಲಿ ಬಣ್ಣದ ನಿಕ್ಷೇಪವಾಗಿ ಪ್ರಕ್ಷುಬ್ಧಗೊಳ್ಳುತ್ತದೆ. ಈ ನಿಕ್ಷೇಪ ಇರುವ ಭಾಗವು ಕಿಣ್ವವು ಚಟುವಟಿಕೆ ತೋರುವ ಭಾಗವನ್ನು ಸೂಚಿಸುತ್ತದೆ. ಇದರಲ್ಲಿ ನಿರ್ದಿಷ್ಟ ಶಾಖ, ಮಾಧ್ಯಮ, ಪಿಎಚ್ ಮತ್ತು ಅಪಕರ್ಷಣ ಮತ್ತು ಉತ್ಕರ್ಷಣಗಳಲ್ಲಿ ಭಾಗವಹಿಸುವ ಹೈಡ್ರೋಜನ್ ವಿದ್ಯುದ್ವಾಹಿ ಕಣಗಳನ್ನು ಒದಗಿಸುವ ಅಥವಾ ಸ್ವೀಕರಿಸುವ ಸಹಘಟಕಗಳನ್ನು ಬಳಸಲಾಗುವುದು. ಈ ಮುಂದೆ ಕೆಲವು ಉದಾಹರಣೆಗಳನ್ನು ಕೊಟ್ಟಿದೆ. ಫಾಸ್ಫಟೇಸ್‌ಗಳು ಶಕ್ತಿವಿನಿಯೋಗವಾಗುವ ಚಟುವಟಿಕೆಗಳಲ್ಲಿ ಭಾಗವಹಿಸುತ್ತವೆ. ಸಾಮಾನ್ಯವಾಗಿ ಎಲ್ಲ ಅಂಗಾಂಶಗಳಲ್ಲಿಯೂ ಈ ಕ್ರಿಯೆ ನಡೆಯುವುದರಿಂದ ಫಾಸ್ಫಟೇಸ್ ಕಿಣ್ವಗಳನ್ನು ಎಲ್ಲ ಅಂಗಾಂಶಗಳಲ್ಲಿ ಕಾಣಬಹುದು.

ಕ್ಷಾರೀಯ ಮತ್ತು ಆಮ್ಲೀಯ ಫಾಸ್ಫಟೇಸ್ ಕಿಣ್ವಗಳನ್ನು ಘನೀಕರಿಸಿದ ಅಂಗಾಂಶ ಸೀಳಿಕೆಗಳನ್ನು ಸಂಯೋಜಕ ಅಜ್ಹೊ ವರ್ಣ (ಕಪ್ಲಿಂಗ್ ಅಜ್ಹೊ–ಡೈ ಮೆಥೆಡ್) ವಿಧಾನದಿಂದ ಅಥವ ಗೋಮರಿಯ ಕ್ಯಾಲ್ಸಿಯಂ ಕೊಬಾಲ್ಟ್ ವಿಧಾನ ಬಳಸಿ ಗುರುತಿಸಬಹುದು. ಸಂಯೋಜಕ ಅಜ್ಹೊವರ್ಣ ವಿಧಾನದಲ್ಲಿ ಕ್ಷಾರೀಯ ಫಾಸ್ಫಟೇಸ್‌ನ್ನು ಗುರುತಿಸಲು ನೆಫ್ತಾಲ್ – ಎ–ಎಸ್ ಎಕ್ಸ್ – ಎಮ್ ಎಕ್ಸ್ – ಫಾಸ್ಫೇಟನ್ನು ಆಧಾರ ವಸ್ತುವಾಗಿಯೂ, ಸ್ಥಿರವಾದ ಕೆಂಪು – ನೇರಳೆ ಎಲ್‌ಬಿ ಲವಣ (ಫಾಸ್ಟ್ ರೆಡ್–ವಯಲೆಟ್ ಎಲ್‌ಬಿಸಾಲ್ಟ್) ಎಂಬ ಬಣ್ಣವನ್ನು ಸೂಚಕ ವಸ್ತುವಾಗಿಯೂ ಬಳಸಲಾಗುವುದು. ಆದರೆ ಆಮ್ಲೀಯ ಫಾಸ್ಫಟೇಸ್‌ಗಳ ವಿತರಣೆಯನ್ನು ಅಭ್ಯಾಸ ಮಾಡಬೇಕಾದಲ್ಲಿ ಸೋಡಿಯಂ – ಆಲ್ಫಾ – ನೆಫ್ತಾಲ್ ಫಾಸ್ಫೇಟ್‌ನ್ನು ಆಧಾರವಸ್ತುವಾಗಿಯೂ ಸ್ಥಿರವಾದ ನೇರಳೆ ಬಿ ಲವಣ (ಫಾಸ್ಟ್ ವೈಯಲೆಟ್ ಬಿ ಸಾಲ್ಟ್) ವೆಂಬ ಅಜ್ಹೊ ಬಣ್ಣವನ್ನು ಸೂಚಕವಸ್ತುವಾಗಿಯೂ ಬಳಸಲಾಗುವುದು. ಘನೀಕರಿಸಿದ ಅಂಗಾಂಶದ ಸೀಳಿಕೆಗಳನ್ನು ಶೀತಲವಾದ ಅಸಿಟೋನ್‌ನಲ್ಲಿ ಸ್ಥಿರೀಕರಿಸಲಾಗುವುದು. ಅನಂತರ ನಿರ್ದಿಷ್ಟ ದ್ರಾವಣದಲ್ಲಿ $22^0$ ಸೆ. ಉಷ್ಣತೆಯಲ್ಲಿ ಹಬೆಯಲ್ಲಿ ಪರಿಪಾಕಿಸಿದಾಗ ಕಿಣ್ವ ಚಟುವಟಿಕೆ ಇರುವ ಭಾಗದಲ್ಲಿ ಬಣ್ಣಗಳ ನಿಕ್ಷೇಪಗಳನ್ನು ಗುರುತಿಸಬಹುದು. ಇದೇ ರೀತಿ ಗ್ಲುಕೋಸ್ – 6 – ಫಾಸ್ಫೇಟನ್ನು ಆಧಾರ ವಸ್ತುವಾಗಿ ಬಳಸಿ ಗ್ಲುಕೋಸ್ – 6 – ಫಾಸ್ಫಟೇಸ್ ಕಿಣ್ವದ ಸ್ಥಾನಗಳನ್ನು ಗುರುತಿಸಬಹುದು. 3ಬೀಟ – ಹೈಡ್ರಾಕ್ಸಿಸ್ಟೀರಾಯಿಡ್ ಡಿಹೈಡ್ರೊಜನೇಸ್ ಕಿಣ್ವವನ್ನು ಗುರುತಿಸಲು ಪ್ರೆಗ್ನೆನೊಲೋನ್, ಅಥವಾ ಡಿಹೈಡ್ರೊ ಎಪಿಎಂಡ್ರೊಸ್ಟಿರಾನ್‌ಗಳನ್ನು ಆಧಾರವಸ್ತುವಾಗಿ ಉಪಯೋಗಿಸಲಾಗುವುದು. ಇದನ್ನು ಡಿಮಿಥೈಲ್ ಫಾರ್‌ಮಮೈಡನಲ್ಲಿ ಕರಗಿಸಿ ಟ್ರಿಸ್ ಬಫರ್‌ನೊಂದಿಗೆ ಬೆರಸಲಾಗುವುದು. ಈ ಮಾಧ್ಯಮಕ್ಕೆ ಎನ್‌ಎಡಿ (ನಿಕೋಟಿನ್ ಅಮೈಡ್ ಡೈನ್ಯೂಕ್ಲಿಯೊಟಿಡ್) ಅನ್ನು ಹೈಡ್ರೊಜನ್ ಸ್ವೀಕಾರಕ ಸಹಘಟಕವಾಗಿ ಬಳಸಲಾಗುವುದು. ಮತ್ತು ಎನ್‌ಬಿಟಿ ಯು ಸೂಚಕ ವಸ್ತುವಾಗಿರುತ್ತದೆ. ಕಿಣ್ವದ ಚಟುವಟಿಕೆ ಇರುವ ಅಂಗಾಂಶ ಸೀಳಿಕೆಯ ಭಾಗಗಳಲ್ಲಿ ಸೂಚಕವಸ್ತು ನೀಲಿ ಬಣ್ಣವನ್ನುಂಟುಮಾಡುತ್ತದೆ.

ನ್ಯೂಕ್ಲೀಕ್ ಆಮ್ಲಗಳಾದ ಡಿಆಕ್ಸಿರೈಬೊ ನ್ಯೂಕ್ಲೀಕ್ ಆಸಿಡ್ ಮತ್ತು ರೈಬೊನ್ಯೂಕ್ಲೀಕ್ ಆಸಿಡ್ (ಡಿಎನ್‌ಎ ಮತ್ತು ಆರ್‌ಎನ್‌ಎ) ವಿತರಣೆಯನ್ನು ಪರಿಶೀಲಿಸಲು ಮಿಥೈಲ್ ಗ್ರೀನ್ ಮತ್ತು ಪೈರೊನಿನ್‌ವೈ ಎಂಬ ಬಣ್ಣಗಳ ಸಾಂದ್ರೀಭವಿಸಿದ ನೀರಿನ ದ್ರಾವಣವನ್ನು ಎಸಿಟೇಟ್ ಬಫರ್ (4.8 ಪಿಎಚ್) ನೊಂದಿಗೆ ಉಪಯೋಗಿಸಲಾಗುವುದು. ಈ ವಿಧಾನದಲ್ಲಿ ಮಿಥೈಲ್ ಹಸುರನ್ನು ಕ್ಲೊರೊಫಾರ್ಮನೊಂದಿಗೆ ಬೆರೆಸಿಡಲಾಗುವುದು. ಈ ಬಣ್ಣದಲ್ಲಿ ಬೆರಕೆಯಾಗಿರುವ ಮಿಥೈಲ್ ನೇರಳೆಯನ್ನು ಹೋಗಲಾಡಿಸಲು ಈ ಕ್ರಮವನ್ನು ಅನುಸರಿಸುತ್ತಾರೆ. ಪೈರೊನಿನ್ ವೈ ಎಂಬ ಬಣ್ಣ ಪೈರೊನಿನ್ ಬಿ ಎಂಬ ಬಣ್ಣಕ್ಕಿಂತ ಉತ್ತಮ ಫಲಿತಾಂಶವನ್ನು ನೀಡುತ್ತದೆ. ಅಂಗಾಂಶ ಸೀಳಿಕೆಗಳಿಗೆ ಈ ವಿಧಾನದಿಂದ ಬಣ್ಣ ತೊಡೆದಾಗ, ಡಿಆಕ್ಸಿ ರೈಬೊ ನ್ಯೂಕ್ಲೀಕ್ ಆಸಿಡ್ ಹಸಿರು ಬಣ್ಣವನ್ನೂ ರೈಬೊನ್ಯೂಕ್ಲೀಕ್ ಆಸಿಡ್ ಕೆಂಪು ಬಣ್ಣವನ್ನೂ ತಳೆಯುವುದು.

ಈ ಕ್ರಮದಲ್ಲಿ ಅಂಗಾಂಶದಲ್ಲಿರುವ ರಾಸಾಯನಿಕ ವಸ್ತುಗಳನ್ನು ವಿವಿಧ ರಾಸಾಯನಿಕ ತಂತ್ರಗಳನ್ನು ಬಳಸಿ ಗುರುತಿಸಲಾಗುವುದು. ಕೆಲವೊಮ್ಮೆ ಈ ವಸ್ತುಗಳ ಭೌತಿಕ ಲಕ್ಷಣಗಳನ್ನೂ ಅನುಸರಿಸಬಹುದು. ಉದಾಹರಣೆಗೆ ನ್ಯೂಕ್ಲಿಯೊ ಪ್ರೋಟೀನು ಅಂಗಾಂಶದಲ್ಲಿ ಇರುವಲ್ಲಿಯೇ ಗುರುತಿಸಲು ಅಲ್ಟ್ರಾವೈಲೆಟ್ ಹೀರಿಕೆ (ಅಲ್ಟ್ರಾವೈಲೆಟ್ ಅಬಸಾರ್ಪಷನ್) ವಿಧಾನವನ್ನು ಬಳಸಲಾಗುವುದು. ಸಾಮಾನ್ಯ ಸೂಕ್ಷ್ಮದರ್ಶಕದಲ್ಲಿ ಬಿಡಿಸಿ ತೋರಿಸಲಾಗದ ಮ್ಯಾಕ್ರೊ ಮಾಲೆಕ್ಯೂಲಿಗಳ ಜೋಡಿತ ಸರಣಿಗಳನ್ನು ಧ್ರುವೀಕೃತ ಬೆಳಕನ್ನು ಉಪಯೋಗಿಸಿ (ಪೋಲಾರೈಸ್ಡ್ ಲೈಟ್) ಸೆರೆ ಹಿಡಿಯಬಹುದು. ನಿರ್ದಿಷ್ಟ ಪ್ರೋಟೀನು ಮತ್ತು ಕಾರ್ಬೊಹೈಡ್ರೇಟುಗಳನ್ನು ಅಂಗಾಂಶದಲ್ಲಿ ಇರುವಲ್ಲಿಯೇ ನಿರ್ಧರಿಸಲು ಫ್ಲೋರೊಸೀನ್ ಸಂಲಗ್ನಿತ ಪ್ರತಿಕಾಯಗಳನ್ನು (ಫ್ಲೋರೊಸೀನ್ ಕಾಂಜುಗೇಟೆಡ್ ಆಂಟಿಬಾಡಿಸ್) ಬಳಸಿ ಮತ್ತು ಫ್ಲೂರೊಸೆಂಟ್ ಸೂಕ್ಷ್ಮದರ್ಶಕಗಳ ಮೂಲಕ ಗುರುತಿಸಬಹುದು. ಇದೇ ರೀತಿ ರೇಡಿಯೊ ಐಸೊಟೋಪುಗಳು, ರೇಡಿಯೊ ಸ್ವಚಿತ್ರಮಾಪನ (ರೇಡಿಯೊ ಆಟೊಗ್ರಫಿ) ಬಳಸಿ ತಗಲಿಸಿದ ಅಣುಗಳನ್ನು ಗುರುತಿಸಬಹುದು. (ಎಂ.ಎಸ್)

**ಅಂಗಾಂಶ ರೋಗನಿದಾನ ವಿಜ್ಞಾನ :** ರೋಗ ಪೀಡಿತ ಅಂಗಾಂಶದ ಸೂಕ್ಷ್ಮದರ್ಶಕ ಅಧ್ಯಯನ (ಹಿಸ್ಟೋಪ್ಯಾಥಾಲಜಿ). ಜೀವವಿಜ್ಞಾನದ ಈ ಶಾಖೆ ರೋಗಬಾಧಿತ ಅಂಗಾಂಶಗಳ ರಚನೆಯಲ್ಲಿ ಆಗುವ ಬದಲಾವಣೆಗಳು ಮತ್ತು ರೋಗಗಳ ಸ್ವಭಾವವನ್ನು ತಿಳಿಯಲು ನೆರವಾಗುತ್ತದೆ. ಏಡಿಗಂತಿ (ಕ್ಯಾನ್ಸರ್) ಪೀಡಿತರ ಗಂತಿಗಳ (ಟ್ಯೂಮರ್ಸ್) ಹಾಗೂ ಇತರ ರೋಗಗಳ ರೋಗಲಕ್ಷಣಗಳನ್ನು ಖಚಿತವಾಗಿ ತಿಳಿಯಲು ಇದನ್ನು ಬಳಸುತ್ತಾರೆ. ಇಟಲಿಯ ಅಂಗರಚನಾ ರೋಗನಿದಾನ ವಿಜ್ಞಾನಿಯಾದ ಮಾರ್ಸೆಲ್ಲೊ ಮಾಲ್ಪಿಜಿ (1624–1694) ಮತ್ತು ಫ್ರಾನ್ಸಿನ ರೋಗನಿದಾನ ವಿಜ್ಞಾನಿ ಮೇರಿ ಫ್ರಾಂಕೋಯಿಸ್ ಬಿಚೆಟ್ (1771–1802) ಮತ್ತು ಇತರರ ಅಂಗಾಂಶ ಅಧ್ಯಯನಗಳೇ, ಅಂಗಾಂಶ ರೋಗನಿದಾನ ವಿಜ್ಞಾನವು ಜೀವವಿಜ್ಞಾನದ ಒಂದು ಹೊಸ ಶಾಖೆಯಾಗಲು ಅಡಿಪಾಯ. ಆದರೆ ರೋಗಬಾಧೆಯಿಂದ ಅಂಗಾಂಶಗಳಲ್ಲಿ ಆಗುವ ಬದಲಾವಣೆಗಳನ್ನು ಅಧ್ಯಯನ ಮಾಡಲು ಮೂಲಭೂತ ಪರೀಕ್ಷಾ ವಿಧಾನಗಳಾಗಿ ಅಂಗಾಂಶ ರೋಗನಿದಾನ ವಿಜ್ಞಾನ ಮತ್ತು ಜೀವಕೋಶ ರೋಗನಿದಾನ ವಿಜ್ಞಾನಗಳ ಪಾತ್ರವನ್ನು ಪ್ರಪ್ರಥಮವಾಗಿ ಗುರುತಿಸಿದ ಹೆಗ್ಗಳಿಕೆ ಜರ್ಮನಿಯ ರೋಗನಿದಾನ ವಿಜ್ಞಾನಿ ರುಡಾಲ್ಫ್ ವಿರ್ಶೊ (1821–1905) ಗೆ ಸಲ್ಲುತ್ತದೆ. 1858ರಲ್ಲಿ ರುಡಾಲ್ಫ್ ತನ್ನ ಶ್ರೇಷ್ಠ ಕೃತಿಯಾದ ಡೈ ಸೆಲ್ಯುಲಾರ್ ಪ್ಯಾಥಾಲಜಿಕ್ ಇನ್ ಇನ್‌ಹರ್ ಬಗ್ರುಂಡಂಗ್ ಫಿಸಿಯಾಲಜಿಶ್ಚೆ ಅಂಡ್ ಪ್ಯಾಥಾಲಜಿಶ್ಚೆ ಗೆವೆಬೆರ್ರೆ ಅನ್ನು ಪ್ರಕಟಿಸಿದನು. ರುಡಾಲ್ಫ್ ವಿರ್ಶೊನನ್ನು ಆಧುನಿಕ ರೋಗನಿದಾನ ವಿಜ್ಞಾನದ ಮತ್ತು ಅಂಗಾಂಶ ರೋಗನಿದಾನ ವಿಜ್ಞಾನದ ಪಿತಾಮಹ ಎಂದು ಪರಿಗಣಿಸುತ್ತಾರೆ. ಇತರ ರೋಗನಿದಾನ ವಿಜ್ಞಾನಿಗಳು ಕೂಡ ಈ ಶಾಖೆಗೆ ತಮ್ಮ ಕಾಣಿಕೆಯನ್ನು ನೀಡಿದ್ದಾರೆ. ಹೃದಯಗತಿಯನ್ನು ಪ್ರಪ್ರಥಮವಾಗಿ ಅಧ್ಯಯನ ಮಾಡಿದ ಗಾಸ್ಪರ್ಡ್ ಬೇಯ್ಲ್ (1774–1816), ಕ್ಷಯರೋಗದ ಬಗ್ಗೆ ಸಂಶೋಧನೆಗಳನ್ನು ಮಾಡಿದ ಪಿಯರೆ ಲೂಯಿ (1782–1872), ಮೂಳೆ ಮುರಿತಗಳ ಲಕ್ಷಣಗಳನ್ನು ವಿವರಿಸಿದ ಗಿಲ್ಲೌಮ್ ಡ್ಯುಪೆಟ್ರನ್ (1777–1835) ಮತ್ತು ಆ ಕಾಲದ ದೇಹದ ಅಂಗ ರಚನಾ ರೋಗನಿದಾನ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ತಿಳಿದಿದ್ದ ಎಲ್ಲಾ ವಿವರಣೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ ಜೀನ್ ಕ್ರುಯಲ್ಹೀರ್ (1791–1874) ಅಂತಹವರಲ್ಲಿ ಕೆಲವರು. ಇಂಗ್ಲೆಂಡಿನ ಮ್ಯಾಥ್ಯೂ ಬೆಯ್ಲಿ (1781–1823) ಅಂಗರಚನಾ ರೋಗನಿದಾನ ವಿಜ್ಞಾನದ ಬಗ್ಗೆ ಮೊದಲ ಪಠ್ಯಪುಸ್ತಕವನ್ನು ಪ್ರಕಟಿಸಿದ. ಥಾಮಸ್ ಹಾಡ್ಗ್‌ಕಿನ್, ರಿಚರ್ಡ್ ಬ್ರೈಟ್, ಥಾಮಸ್ ಅಡಿಸನ್, ಜೇಮ್ಸ್ ಪೇಜಟ್, ಜೋಸೆಫ್ ಲಿಸ್ಟರ್, ಕಾರ್ಲ್ ವಾನ್ ರಾಕಿಟಾಸ್ಕಿ, ಎಡ್ವರ್ಡ್ ವಾನ್ ರಿಂಡ್ ಫ್ಲೀಶ್, ಫ್ರೆಡರಿಕ್ ವಾನ್ ರೆಕ್‌ಲಿಂಗ್‌ಹಾಸನ್ ಮತ್ತು ರಾಬರ್ಟ್ ರಾಸ್ಸೆ ಮುಂತಾದವರು ಕೂಡಾ ಗಮನಾರ್ಹ ಕಾಣಿಕೆ ನೀಡಿದ್ದಾರೆ. 19ನೇ ಶತಮಾನದ ಅಂತ್ಯ ಭಾಗದಲ್ಲಿ ರಸಾಯನ ವಿಜ್ಞಾನ, ಭೌತವಿಜ್ಞಾನ ಮತ್ತು ಶರೀರಕ್ರಿಯಾ ವಿಜ್ಞಾನದಲ್ಲಾದ ಮಹತ್ತರ ಪ್ರಗತಿ ಅಂಗಾಂಶ ರೋಗನಿದಾನ ವಿಜ್ಞಾನವು ವಿಸ್ತಾರವಾಗಿ ಬೆಳೆಯಲು ಕಾರಣವಾಯಿತು. ವಿದ್ಯುದಂಶ ಸೂಕ್ಷ್ಮದರ್ಶಕದ ಶೋಧನೆ (ರಸ್ಕಾ ಮತ್ತು ವಾನ್

ಲೋರಿಸ್, 1933), ಜೀವಕೋಶ ಭಿನ್ನೀಕರಣ (ಸೆಲ್ ಫ್ರಾಕ್ಷನೇಶನ್ – ಬೆನ್‌ಸ್ಲೆ ಮತ್ತು ಹೋಯರ್, 1934), ರಾಬರ್ಟ್ ಫಲ್ಗನ್ (1924) ಪ್ರಾರಂಭಿಸಿದ ಹಾಗೂ ಲ್ಯೂಸೀನ್ ಲೈಸರ್ (1936), ಜಾರ್ಜ್ ಗೊಮೋರಿ (1941) ಮತ್ತು ಎ. ಪಿಯರ್ಸ್ (1960) ವಿಸ್ತರಿಸಿದ ಜೀವಕೋಶ ರಸಾಯನ ವಿಜ್ಞಾನ ಮತ್ತು ಅಂಗಾಂಶ ರಸಾಯನ ವಿಜ್ಞಾನಗಳು ಅಂಗಾಂಶ ರೋಗನಿದಾನ ವಿಜ್ಞಾನದ ಅಧ್ಯಯನವನ್ನು ಸರಳವಾಗಿಸಿತು.

ಅಂಗಾಂಶ ರೋಗನಿದಾನ ವಿಜ್ಞಾನದ ಅಧ್ಯಯನದಿಂದ ಅಂಗಾಂಶ ರಚನೆಯಲ್ಲಿ ರೋಗ ಪ್ರಕ್ರಿಯೆಯಿಂದಾಗುವ ಬದಲಾವಣೆಗಳನ್ನು ಕಂಡು ಹಿಡಿಯಬಹುದು. ಇದನ್ನು ತಿಳಿಯುವುದಕ್ಕೋಸ್ಕರ ತುಂಬಾ ತೆಳ್ಳಗಿರುವ ಅಂಗಾಂಶದ ಕೊಯ್ತವನ್ನು ವಿವಿಧ ರಂಗುಗಳಿಂದ ಬಣ್ಣಕಟ್ಟಿ ಪರೀಕ್ಷೆ ಮಾಡಬೇಕಾಗುತ್ತದೆ. ಹಾಗಾಗಿ ಅಂಗಾಂಶಗಳ ಕೊಯ್ತವನ್ನು ಕ್ರಮಾನುಗತಿಯಲ್ಲಿ ಹಲವು ಪ್ರಕ್ರಿಯೆಗಳಿಗೆ ಒಳಪಡಿಸಲಾಗುತ್ತದೆ. ಆ ಪ್ರಕ್ರಿಯೆಗಳು ಈ ಕೆಳಗಿನಂತಿವೆ:

(1) ಸ್ಥಿರೀಕರಣ (ಫಿಕ್ಸೇಷನ್), (2) ನಿರ್ಜಲೀಕರಣ (ಡಿಹೈಡ್ರೇಷನ್), (3) ನಿರ್ಮಲೀಕರಣ (ಕ್ಲಿಯರಿಂಗ್), (4) ಪೂರಿತಗೊಳಿಸುವಿಕೆ (ಇಂಪ್ರೆಗ್ನೇಷನ್), (5) ಹುದುಗಿಸುವಿಕೆ (ಎಂಬೆಡ್ಡಿಂಗ್) ಹಾಗೂ ಅಚ್ಚುಗಟ್ಟುವಿಕೆ (ಬ್ಲಾಕಿಂಗ್), (6) ಪರಿಚ್ಛೇದನ (ಸೆಕ್ಷನಿಂಗ್) ಮತ್ತು (7) ಬಣ್ಣಗಟ್ಟುವಿಕೆ (ಸ್ಟೇಯ್ನಿಂಗ್).

ಜೀವಕೋಶ ಮತ್ತು ಅಂಗಾಂಶಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜೈವಿಕ ಸ್ಥಿತಿಯಲ್ಲಿರುವಂತೆ ರಕ್ಷಿಸುವುದೆ ಸ್ಥಿರೀಕರಣ. ಈ ಪ್ರಕ್ರಿಯೆಯು ಅಂಗಾಂಶಗಳ ಕೊಳೆಯುವಿಕೆಯನ್ನು ತಡೆಯುತ್ತದೆ ಹಾಗೂ ಅವುಗಳು ಗಟ್ಟಿಯಾಗುವಂತೆ ಮಾಡುತ್ತದೆ. ಸ್ಥಿರಕಾರಿಯೆಂಬ ರಾಸಾಯನಿಕ ವಸ್ತುವನ್ನು ಈ ಪ್ರಕ್ರಿಯೆಯಲ್ಲಿ ಉಪಯೋಗಿಸುತ್ತಾರೆ. ಈ ಸ್ಥಿರಕಾರಿಗಳು ಜೀವಕೋಶಗಳಲ್ಲಿರುವ ಸಸಾರಜನಕಗಳ ಅವಕ್ಷೇಪಣ (ಪ್ರೆಸಿಪಿಟೇಷನ್)ಕ್ಕೆ ಕಾರಣವಾಗುವ ಮೂಲಕ ಅಂಗಾಂಶಗಳನ್ನು ಸ್ಥಿರೀಕರೀಸುತ್ತವೆ. ಸೂಕ್ಷ್ಮ ಅಂಗರಚನಾ (ಮೈಕ್ರೊ ಅನಾಟಮಿಕಲ್) ಸ್ಥಿರಕಾರಿಗಳು, ಜೀವಕೋಶೀಯ ಸ್ಥಿರಕಾರಿಗಳು ಮತ್ತು ಅಂಗಾಂಶ ರಾಸಾಯನಿಕ ಸ್ಥಿರಕಾರಿಗಳು ಎಂಬ ಮೂರು ಬಗೆಯ ಸ್ಥಿರಕಾರಿಗಳಿವೆ. ಫಾರ್ಮಾಲಿನ್, ಗ್ಲುಟರಾಲ್ಡಿಹೈಡ್, ಪಿಕ್ರಿಕ್ ಆಮ್ಲ (ಬೋಯಿನ್ನನ ದ್ರವ), ಆಲ್ಕೋಹಾಲ್ (ಕಾರ್‍ನಾಯ್‌ನ ಸ್ಥಿರಕಾರಿ) ಮತ್ತು ಆಸ್ಮಿಯಮ್ ಟೆಟ್ರಾಕ್ಸೈಡ್‌ಗಳು ಇಂಥ ಕೆಲವು ಸ್ಥಿರಕಾರಿಗಳು.

ಜೀವಕೋಶಗಳಿಂದ ಮತ್ತು ಅಂಗಾಂಶಗಳಿಂದ ನೀರಿನ ಅಂಶವನ್ನು ತೆಗೆಯುವುದೇ ನಿರ್ಜಲೀಕರಣ. ಜೀವಕೋಶಗಳಲ್ಲಿ ಮತ್ತು ಅಂಗಾಂಶಗಳಲ್ಲಿ ನೀರಿನಿಂದ ಆಕ್ರಮಿತವಾದ ಜಾಗಗಳನ್ನು ಮುಂದೆ ಪ್ಯಾರಾಫಿನ್ ಮೇಣದಿಂದ ತುಂಬುವುದಕ್ಕೋಸ್ಕರ ಈ ಪ್ರಕ್ರಿಯೆಗೆ ಅಂಗಾಂಶಗಳನ್ನು ಒಳಪಡಿಸುತ್ತಾರೆ. ಅಂಗಾಂಶಗಳನ್ನು ಆರೋಹಿಕ್ರಮದಲ್ಲಿ 70%, 80%, 95% ಮತ್ತು ಪರಿಶುದ್ಧ ಆಲ್ಕೋಹಾಲ್‌ನಲ್ಲಿ ಹಾಯಿಸುವುದರ ಮುಖಾಂತರ ನಿರ್ಜಲೀಕರಿಸಲಾಗುತ್ತದೆ.

ನಿರ್ಜಲೀಕರಿಸಿದ ಅಂಗಾಂಶದಿಂದ ಆಲ್ಕೋಹಾಲ್‌ನ ಅಂಶವನ್ನು ತೆಗೆದು ಅದರ ಜಾಗದಲ್ಲಿ ಮೇಣಕರಗುವ ದ್ರವವನ್ನು ತುಂಬಿಸುವ ಪ್ರಕ್ರಿಯೆಯೇ ನಿರ್ಮಲೀಕರಣ. ನಿರ್ಮಲೀಕರಣದಿಂದ ಅಂಗಾಂಶವು ಪಾರದರ್ಶಕವಾಗುತ್ತದೆ. ಕ್ಸೈಲಿನ್, ಟಾಲ್ವಿನ್, ಬೆಂಝಿನ್, ಕ್ಲೋರೋಫಾರ್ಮ್, ದೇವದಾರು ಮರದ ಎಣ್ಣೆ (ಸೆಡಾರ್ ವುಡ್ ಆಯಿಲ್) ಮುಂತಾದವುಗಳನ್ನು ನಿರ್ಮಲೀಕರಣಕ್ಕೆ ಬಳಸುತ್ತಾರೆ.

ಪೂರಿತಗೊಳಿಸುವಿಕೆಯಲ್ಲಿ, ಜೀವಕೋಶ ಮತ್ತು ಅಂಗಾಂಶಗಳ ನಿರ್ಮಲೀಕರಣದ ಸಮಯದಲ್ಲಿ ತುಂಬಿಸಿದ ದ್ರವಕ್ಕೆ ಪ್ಯಾರಾಫಿನ್ ಮೇಣವನ್ನು ಸೇರಿಸುತ್ತಾರೆ. ಇದು ಅಂಗಾಂಶವನ್ನು ಗಟ್ಟಿಗೊಳಿಸುತ್ತದೆ. ಆಧುನಿಕ ಯುಗದ ಅಂಗಾಂಶ ರೋಗನಿದಾನ ವಿಜ್ಞಾನಿಗಳ ಕೆಲಸವೀಗ ಸ್ವಯಂಚಾಲಿತ ಅಂಗಾಂಶ ಸಂಸ್ಕರಣ ಘಟಕ (ಆಟೋಮೇಟಡ್ ಟಿಶ್ಯು ಪ್ರಾಸೆಸರ್)ದ ಶೋಧನೆಯಿಂದ ಇನ್ನೂ ಸರಳವಾಗಿದೆ. ಸ್ಥಿರೀಕರಣ, ನಿರ್ಜಲೀಕರಣ, ನಿರ್ಮಲೀಕರಣ ಮತ್ತು ಪೂರಿತಗೊಳಿಸುವಿಕೆಗಳನ್ನೆಲ್ಲ ಈ ಯಂತ್ರದ ಸಹಾಯದಿಂದಲೆ ಮಾಡಬಹುದು.

ಅಂಗಾಂಶ ಹುದುಗಿಸುವಿಕೆಯನ್ನು ದ್ರವಿತ ಮೇಣದಲ್ಲಿ ಮಾಡುತ್ತಾರೆ. ದ್ರವಿತ ಮೇಣವನ್ನು ಮೊದಲು ಅಚ್ಚಿನಲ್ಲಿ ಹಾಕಿ ಅದರಲ್ಲಿ ಸಂಸ್ಕರಿಸಿದ ಅಂಗಾಂಶವನ್ನು ಇಡುತ್ತಾರೆ. ಮೇಣವನ್ನು ಘನೀಕರಿಸಲು ಸ್ವಲ್ಪ ಸಮಯ ಹಾಗೆಯೇ ಬಿಡುತ್ತಾರೆ.

ಅಂಗಾಂಶಗಳ ಕೊಯ್ತದ ತೆಗೆಯುವಿಕೆಯನ್ನು ಮೈಕ್ರೊಟೋಮಿ ಎಂದೂ ಹೇಳುತ್ತಾರೆ. ಮೈಕ್ರೊಟೋಮ್ ಎಂಬ ಯಂತ್ರವನ್ನು ಸುಮಾರು 5ಮೈಮೀ – 6ಮೈಮೀ ತೆಳ್ಳಗಿನ ಅಂಗಾಂಶಗಳ ಕೊಯ್ತಗಳನ್ನು ತೆಗೆಯಲು ಬಳಸುತ್ತಾರೆ. ಕೊಯ್ತಗಳನ್ನು ಶುಚಿಯಾದ ಒಂದು ಜಾರುಗಾಜಿಗೆ ವರ್ಗಾಯಿಸುತ್ತಾರೆ. ಈ ಜಾರುಗಾಜನ್ನು ವಿದ್ಯುತ್ ಒಲೆಯ ಮೇಲೋ ಅಥವಾ ಬುನ್ಸನ್ ಜ್ವಾಲಕದ ಮೇಲೋ ಕೆಲವು ಕ್ಷಣ ಹಿಡಿಯುತ್ತಾರೆ. ಇದರಿಂದಾಗಿ ಕೊಯ್ತವು ಜಾರುಗಾಜಿಗೆ ಅಂಟಿಕೊಳ್ಳುವುದಲ್ಲದೆ ಅವೆರಡರ ಮಧ್ಯೆ ಇರುವ ವಾಯುಸೀಮೆ (ಏರ್ ಸ್ಪೇಸ್) ಕೂಡ ಹೋಗುತ್ತದೆ.

ಅಂಗಾಂಶ ಸಿದ್ಧಗೊಳಿಸುವಿಕೆಯ (ಟಿಶ್ಯು ಪ್ರಿಪರೇಷನ್) ಕೊನೆಯ ಹಂತ ಪ್ರಕ್ರಿಯೆ ಬಣ್ಣಗಟ್ಟುವಿಕೆ. ಸಾಧಾರಣವಾಗಿ ಹೆಮಟಾಕ್ಸಿಲಿನ್ ಮತ್ತು ಇಯೊಸಿನ್ ರಂಗುಗಳನ್ನು ಈ ಕಾರ್ಯಕ್ಕೆ ಬಳಸುತ್ತಾರೆ. ಕೊಯ್ತಗಳನ್ನು ಅವರೋಹಿ ಕ್ರಮದಲ್ಲಿ ವಿವಿಧ ವರ್ಗಗಳ ಆಲ್ಕೋಹಾಲ್‌ನಲ್ಲಿ ಕೆಲವು ನಿಮಿಷ ಇಟ್ಟು ಕೊನೆಯಲ್ಲಿ ಅವುಗಳನ್ನು ನೀರಿಗೆ ವರ್ಗಾಯಿಸುತ್ತಾರೆ. ಕೊಯ್ತವನ್ನು ಹೆಮಟಾಕ್ಸಿಲಿನ್‌ನಲ್ಲಿ ಸುಮಾರು 8 – 10 ನಿಮಿಷ ಇಟ್ಟು ಅನಂತರ ನೀರಿನಲ್ಲಿ ತೊಳೆಯುತ್ತಾರೆ. ಕೊಯ್ತದಲ್ಲಿ ಸೇರಲ್ಪಟ್ಟ ಮಿತಿ ಮೀರಿದ ರಂಗನ್ನು 1% ಆಮ್ಲೀಯ ಆಲ್ಕೋಹಾಲ್‌ನಲ್ಲಿ 10 ಸೆಕೆಂಡುಗಳವರೆಗೆ ಇಡುವುದರಿಂದ ತೆಗೆಯುತ್ತಾರೆ. ಅನಂತರ ಕೊಯ್ತವನ್ನು ಸುಮಾರು 2–10 ನಿಮಿಷ ಸೋಡಿಯಂ ಕಾರ್ಬೋನೇಟ್ ಮತ್ತು ಮೆಗ್ನಿಷಿಯಮ್ ಸಲ್ಫೇಟ್‌ಗಳ ಮಿಶ್ರಣದ ದ್ರಾವಣದಲ್ಲಿಡುತ್ತಾರೆ. ಇದಾದ ನಂತರ, ಇಯೊಸಿನ್ ರಂಗಿನಲ್ಲಿ ಸುಮಾರು 1–3 ನಿಮಿಷ ಇಡುತ್ತಾರೆ. ಪುನಃ ನೀರಿನಲ್ಲಿ ತೊಳೆಯುತ್ತಾರೆ. ಕೊನೆಯಲ್ಲಿ ಡಿಪಿಎಕ್ಸ್ (ಡೆಕ್ಸ್‌ಟ್ರಿನ್ ಪಾಲಿಸ್ಟಿರೀನ್ ಕ್ಸೈಲಿನ್) ಅನ್ನು ಹಾಕಿ ಕೊಯ್ತವನ್ನು ಜಾರುಗಾಜಿನ ಮೇಲೆ ಏರಿಸುತ್ತಾರೆ (ಮೌಂಟಿಂಗ್). ಹೆಮಟಾಕ್ಸಿಲಿನ್ ಮತ್ತು ಇಯೊಸಿನ್‌ಗಳಲ್ಲದೆ ಈಗ ಇನ್ನೂ ಇತರ ರಂಗುಗಳನ್ನು ಜೀವಕೋಶಗಳ ವಿವಿಧ ಘಟಕಗಳ ಬಣ್ಣಗಟ್ಟುವಿಕೆಗೆ ಉಪಯೋಗಿಸುತ್ತಾರೆ. ಕೆಲವು ಶಸ್ತ್ರಚಿಕಿತ್ಸೆ ಮುಂಚೆ ಅಂಗಾಂಶದ ತತ್‌ಕ್ಷಣದ ಪರೀಕ್ಷೆಗಾಗಿ ಘನೀಕೃತ ಕೊಯ್ತಗಳನ್ನು (ಫ್ರೊಜನ್ ಸೆಕ್ಷನ್) ಉಪಯೋಗಿಸುತ್ತಾರೆ. ಘನೀಕೃತ ಕೊಯ್ತಗಳ ಪರೀಕ್ಷೆಯಿಂದ ಅಂಗಾಂಶಗಳಲ್ಲಿರುವ ಕೆಲವು ವಿಶಿಷ್ಟ ವಸ್ತುಗಳಾದ ಕೊಬ್ಬು, ಕಿಣ್ವಗಳು, ಮುಂತಾದುವುಗಳನ್ನು ತಿಳಿಯಬಹುದು. ಅಷ್ಟಲ್ಲದೆ, ಈ ವಿಧಾನದಲ್ಲಿ ಅಂಗಾಂಶವು ಅಷ್ಟಾಗಿ ಸಂಕುಚಿತಗೊಳ್ಳುವುದಿಲ್ಲ. ಅಂಗಾಂಶಗಳಲ್ಲಿನ ನಿಶ್ಚಿತ ಸಸಾರಜನಕಗಳನ್ನು ಪ್ರತಿಕಾಯಗಳಿಂದ ಬಣ್ಣ ಕಟ್ಟುವುದು ಇನ್ನೂ ನೂತನವಾದ ಆವಿಷ್ಕಾರ. ಇದನ್ನು ಪ್ರತಿರಕ್ಷಾ ಅಂಗಾಂಶ ರಸಾಯನ ವಿಜ್ಞಾನ (ಇಮ್ಯೂನೊ ಹಿಸ್ಟೊಕೆಮಿಸ್ಟ್ರಿ) ಎನ್ನುತ್ತಾರೆ. ಡಿಜಿಟಲ್ ಕ್ಯಾಮರಾಗಳಿಂದ ಅಂಗಾಂಶ ಕೊಯ್ತಗಳ ಚಿತ್ರವನ್ನು ಸೆರೆ ಹಿಡಿಯುವುದು ಇನ್ನೊಂದು ಸುಧಾರಿತ ಆಧುನಿಕ ತಂತ್ರ.

ರೋಗಪೀಡಿತ ಅಂಗಾಂಶದ ಅಧ್ಯಯನದಲ್ಲಲ್ಲದೆ ಅಂಗಾಂಶ ರೋಗನಿದಾನ ವಿಜ್ಞಾನವನ್ನು ಕ್ಯಾನ್ಸರ್ ಜೀವಕೋಶಗಳನ್ನು ಕಂಡುಹಿಡಿಯುವುದರಲ್ಲೂ ಮತ್ತು ಅಸಹಜ ಸಾವಿನ ಕಾರಣವನ್ನು ತಿಳಿಯಲೂ ಕೂಡ ಬಳಸುತ್ತಾರೆ. ಅಸಹಜ ಸಾವಿನ ಕಾರಣ ತಿಳಿಯಲು ಮರಣೋತ್ತರ ಪರೀಕ್ಷೆಯ ಸಮಯದಲ್ಲಿ ನುರಿತ ವೈದ್ಯ ಆಟಾಪ್ಸಿ ಮಾಡಿ ಅಂಗಾಂಶ ತೆಗೆಯುತ್ತಾನೆ. ಅಂಗಾಂಶ ರೋಗನಿದಾನ ವಿಜ್ಞಾನಿಯು ಅಂಗಾಂಶಗಳಿಂದ ತೆಳ್ಳಗಿನ ಕೊಯ್ತಗಳನ್ನು ತೆಗೆದು ಅದರಲ್ಲಾಗಿರುವ ಬದಲಾವಣೆಗಳನ್ನು ಹಾಗೂ ಅದರ ಕಾರಣಗಳನ್ನು ತಿಳಿಯಲು ಪರೀಕ್ಷೆ ಮಾಡುತ್ತಾನೆ. ಕ್ಯಾನ್ಸರ್ ಪೀಡಿತ ರೋಗಿಗಳಲ್ಲಿ ಬಯಾಪ್ಸಿಯನ್ನು ಮಾಡುತ್ತಾರೆ. ಅವರಲ್ಲಿನ ಅನುಮಾನಾಸ್ಪದ ಅಂಗಾಂಶದ ಸಣ್ಣ ತುಂಡನ್ನು ತೆಗೆದು ಅದರ ಜೀವಕೋಶಗಳಲ್ಲಾಗಿರುವ ಬದಲಾವಣೆಗಳನ್ನು ಅಂಗಾಂಶ ರೋಗನಿದಾನ ಅಧ್ಯಯನದಿಂದ ತಿಳಿಯುತ್ತಾರೆ. (ಎ.ಎಸ್.ಎಚ್.ಎ.)

**ಅಂಗಾಂಶ ವಿಜ್ಞಾನ:** ಸಸ್ಯ ಮತ್ತು ಪ್ರಾಣಿಗಳ ಅಂಗಾಂಶ ರಚನೆ, ರಾಸಾಯನಿಕ ಸಂಯೋಜನೆ ಮತ್ತು ಕಾರ್ಯನಿರ್ವಹಣೆಗಳನ್ನು ಅಧ್ಯಯನ ಮಾಡುವ ಜೀವ ವಿಜ್ಞಾನದ ಶಾಖೆ. ಹಿಸ್ಟಾಲಜಿ ಅಂಗಾಂಶ ವಿಜ್ಞಾನಕ್ಕೆ ಆಂಗ್ಲ ಸಮಾನಾರ್ಥ ಪದ. ಈ ಪದವನ್ನು ಮೊದಲು ಉಪಯೋಗಿಸಿದವನು ಜರ್ಮನಿಯ ಎ. ಮೇಯರ್ (1819). ಆದರೆ 1844ರಲ್ಲಿ ಸಾರ್ವತ್ರಿಕ ಬಳಕೆಗೆ ಶಿಫಾರಸು ಮಾಡಿದವನು ಇಂಗ್ಲೆಂಡಿನ ಪ್ರಸಿದ್ಧ ಪ್ರಾಗ್ಜೀವ ವಿಜ್ಞಾನಿ ಸರ್ ರಿಚರ್ಡ್ ಓವನ್ (1804–1892)

ಎಲ್ಲಾ ಜೀವಿಗಳಲ್ಲಿ ಮೂಲ ರಚನಾ ಮತ್ತು ಕ್ರಿಯಾ ಘಟಕಗಳು ಜೀವಕೋಶಗಳು. ಸಾದೃಶ ರಚನೆ, ಕಾರ್ಯ ನಿರ್ವಹಣೆ ಮತ್ತು ಉಗಮವನ್ನು ಹೊಂದಿದ ಜೀವಕೋಶಗಳ ಗುಂಪನ್ನು ಅಂಗಾಂಶ ಎನ್ನುತ್ತಾರೆ. ಅಂಗಾಂಶ ವಿಜ್ಞಾನದಲ್ಲಿ ಅಂಗಾಂಶದಲ್ಲಿರುವ ಜೀವಕೋಶಗಳ ವಿಶಿಷ್ಟ ಲಕ್ಷಣಗಳನ್ನು ಅಧ್ಯಯನ ಮಾಡುತ್ತಾರೆ. ಹಾಗಾಗಿ, ಅಂಗಾಂಶ ವಿಜ್ಞಾನವನ್ನು ಜೀವಕೋಶ ವಿಜ್ಞಾನದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಅಂಗಾಂಶ ವಿಜ್ಞಾನ ಶಾಖೆಯ ಉಗಮ 1665ರಲ್ಲಿ ರಾಬರ್ಟ್ ಹುಕ್ ಜೀವಕೋಶಗಳನ್ನು ಆವಿಷ್ಕರಿಸಿದಾಗಲೇ ಆಯಿತು.

ಅತಿ ಸೂಕ್ಷ್ಮ ರಚನೆಯ ಕ್ರಮಬದ್ಧವಾದ ವಿವರಣೆಯನ್ನು ಮೊದಲು ನೀಡಿದವನು ಫ್ರಾನ್ಸ್ ದೇಶದ ರೋಗನಿದಾನ ವಿಜ್ಞಾನಿ ಫ್ರಾಂಕೊಯಿಸ್ ಬಿಚೆಟ್ (1771–1802). ರೋಗದಿಂದ ಅಂಗಾಂಶದಲ್ಲಿ ಆಗುವ ಬದಲಾವಣೆಗಳನ್ನು ಅವನು ವಿವರಿಸಿದನು.

ಅಂಗಾಂಶದಲ್ಲಿನ ಎಲ್ಲಾ ವಿಧಗಳನ್ನು ಅಭ್ಯಯಿಸಿ 21 ವಿವಿಧ ರೀತಿಯ ಮೈವಳಿಕೆ (ಟೆಕ್ಸ್ಚರ್) ಗಳನ್ನು ವಿವರಿಸಿದನು. ಆದರೆ ಆಧುನಿಕ ಅಂಗಾಂಶ ವಿಜ್ಞಾನಿಗಳು ಅನುಲೇಪಕ ಅಂಗಾಂಶ, ಸಂಯೋಜಕ ಅಂಗಾಂಶ, ಸಂಕೋಚನ ಅಥವಾ ಸ್ನಾಯು ಅಂಗಾಂಶ, ಮತ್ತು ನರ ಅಂಗಾಂಶ ಎಂಬ ನಾಲ್ಕು ಬಗೆಯ ಅಂಗಾಂಶಗಳನ್ನು ಮಾತ್ರ ಗುರುತಿಸಿದ್ದಾರೆ. ಬಿಚೆಟ್‌ನ ಈ ಅಧ್ಯಯನದ ಪ್ರಾಮುಖ್ಯತೆಯನ್ನು ಗಮನಿಸಿ ಹಲವರು ಇವನನ್ನು ಅಂಗಾಂಶ ವಿಜ್ಞಾನದ ಪಿತಾಮಹ ಎಂದಿದ್ದಾರೆ. ಆದರೆ ಬಿಚೆಟ್‌ನದು ಬೃಹದ್ದರ್ಶಕೀಯ (ಮ್ಯಾಕ್ರೋಸ್ಕೋಪಿಕ್) ಅಧ್ಯಯನವಾಗಿತ್ತು. ಇಟಲಿಯ ಅಂಗರಚನಾ ವಿಜ್ಞಾನಿ ಮಾರ್ಸೆಲ್ಲೊ ಮಾಲ್ಫಿಜಿ (1624–1694) ಬಿಚೆಟ್‌ಗಿಂತ ಮೊದಲೇ ಸೂಕ್ಷ್ಮದರ್ಶಕದ ಮುಖಾಂತರ ಬಹಳಷ್ಟು ಅಂಗಾಂಶಗಳನ್ನು ಅಧ್ಯಯನ ಮಾಡಿದ್ದರಿಂದ ಅವನನ್ನೇ ಈ ಶಾಖೆಯ ಪಿತಾಮಹನೆನ್ನುತ್ತಾರೆ. 1839ರಲ್ಲಿ ಜರ್ಮನಿಯ ಸಸ್ಯಶಾಸ್ತ್ರಜ್ಞ ಮಥಿಯಸ್ ಶ್ಲೇಡನ್ (1804–1881) ಮತ್ತು ಪ್ರಾಣಿ ಶಾಸ್ತ್ರಜ್ಞ ಥಿಯೊಡಾರ್ ಶ್ವಾನ್ (1810–1882) ಪ್ರತಿಪಾದಿಸಿದ 'ಜೀವಕೋಶ ಸಿದ್ಧಾಂತ' ಜೀವಕೋಶ ವಿಜ್ಞಾನ ಹಾಗೂ ಅಂಗಾಂಶ ವಿಜ್ಞಾನಗಳೆರಡಕ್ಕೂ ಅಡಿಪಾಯ. ಜರ್ಮನಿಯ ರೋಗನಿದಾನ ವಿಜ್ಞಾನಿ ರುಡಾಲ್ಫ್ ವಿರ್ಶೊ (1821–1905) ರೋಗಬಾಧೆಯಿಂದ ಅಂಗಾಂಶಗಳಲ್ಲಾಗುವ ಬದಲಾವಣೆಗಳನ್ನು ತೋರಿಸಿದನು. ಎಲ್ಲಾ ಜೀವಿಗಳಲ್ಲಿ ಜೀವಕೋಶಗಳು ಈಗಾಗಲೇ ಇರುವ ಜೀವಕೋಶಗಳಿಂದ ಉತ್ಪತ್ತಿಯಾಗುತ್ತವೆ (ಓಮ್ನಿಸ್ ಸೆಲ್ಯುಲಾ ಇ ಸೆಲ್ಯುಲಾ) ಎಂದು ಪ್ರತಿಪಾದಿಸಿದನು. ಜರ್ಮನಿಯ ಅಂಗರಚನಾ ವಿಜ್ಞಾನದ ಪ್ರಾಧ್ಯಾಪಕ ಜೊಹಾನ್ನಸ್ ಮುಲ್ಲರ್(1801–1852) ಮತ್ತು ಅವನ ಸಮಕಾಲೀನನಾದ ಜುರಿಚ್‌ನ ಅಂಗರಚನಾ ವಿಜ್ಞಾನದ ಪ್ರಾಧ್ಯಾಪಕ ಫ್ರೆಡ್‌ರಿಕ್ ಹೆನ್ಲೆ ಕೂಡ ಅಂಗಾಂಶ ವಿಜ್ಞಾನಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಅಂಗಾಂಶ ಅವಲೋಕನದಲ್ಲಿ ಸೂಕ್ಷ್ಮದರ್ಶಕದ ಮಹತ್ವದ ಬಗ್ಗೆ ಅರಿವು ಮೂಡಿಸಿದವನು ಮುಲ್ಲರ್. ಹೆನ್ಲೆ ಅನುಲೇಪಕ ಅಂಗಾಂಶ ಮತ್ತು ಅಂಗಾಂಶ ವಿಜ್ಞಾನದ ವಿಶಾಲತೆಯ ಬಗ್ಗೆ ಲೇಖನಗಳನ್ನು ಕ್ರಮವಾಗಿ 1837 ಮತ್ತು 1841 ರಲ್ಲಿ ಪ್ರಕಟಿಸಿದನು. ಅದೇ ಸಮಯದಲ್ಲಿ ಜರ್ಮನಿಯ ಅಂಗರಚನಾ ವಿಜ್ಞಾನದ ಪ್ರಾಧ್ಯಾಪಕ ವಿಲ್ಹೆಲ್ಮ್ ವಾಲ್ಡೆಯರ್ ನರಕೋಶಗಳು ವ್ಯೂಹದ ಮೂಲ ಘಟಕಗಳೆಂದು ಮೊದಲ ಬಾರಿಗೆ ತೋರಿಸಿದನು. ಇವನು ಪ್ರಪ್ರಥಮವಾಗಿ ಅಂಗಾಂಶ ಅಭ್ಯಾಸಕ್ಕೆ ನರಕೋಶಗಳ ಆಕ್ಸಾನನ್ನು ನೋಡಲು ಹೆಮಟಾಕ್ಸಿಲಿನ್ ಎಂಬ ರಂಗನ್ನು ಬಳಸಿದರು. ಪ್ಯಾರಿಸ್ ನೀಲಿ ಎಂಬ ಅನಿಲಿನ್ ರಂಗನ್ನು ಮೊದಲು ಬಳಸಿದವನೂ ಇವನೇ. ಅಂಗಾಂಶ ವಿಜ್ಞಾನದ ಮೊದಲ ಪಠ್ಯಪುಸ್ತಕವನ್ನು ಬರೆದ ಹೆಗ್ಗಳಿಕೆ ಸ್ವೀಡನ್ ರಾಷ್ಟ್ರದ ಅಂಗ ರಚನಾ ವಿಜ್ಞಾನದ ಪ್ರಾಧ್ಯಾಪಕ ರುಡಾಲ್ಫ್ ವಾನ್ ಕಾಲಿಕರ್ (1817–1905)ಗೆ ಸಲ್ಲುತ್ತದೆ. ಅವನು 1852ರಲ್ಲಿ ಹ್ಯಾಡ್‌ಬುಕ್ ಡರ್ ಗ್ವೆಬೆಲೆರ್ (ಅಂಗಾಂಶಗಳನ್ನು ಬೋಧಿಸುವ ಪುಸ್ತಕ) ಎಂಬ ಪುಸ್ತಕವನ್ನು ಪ್ರಕಟಿಸಿದನು.

ಸೂಕ್ಷ್ಮದರ್ಶಕಗಳು ಅಂಗಾಂಶ ವಿಜ್ಞಾನದ ಅಧ್ಯಯನದ ಅವಿಭಾಜ್ಯ ಅಂಗಗಳು. ಸಾಮಾನ್ಯವಾದ ಹೊಳೆಯುವ ಬೆಳಕಿನ ಸೂಕ್ಷ್ಮದರ್ಶಕ (ಲೈಟ್ ಮೈಕ್ರೋಸ್ಕೋಪ್), ಸರಿಹಂತ ಬೇಧಗಾಣೆ (ಫೇಸ್ ಕಾಂಟ್ರಾಸ್ಟ್) ಸೂಕ್ಷ್ಮದರ್ಶಕ, ಸೂಸು ಮಿರುಗಣೆ (ಫ್ಲೂರಸೆಂಟ್) ಸೂಕ್ಷ್ಮದರ್ಶಕ, ವಿದ್ಯುದಂಶ (ಎಲೆಕ್ಟ್ರಾನ್) ಸೂಕ್ಷ್ಮದರ್ಶಕ ಮುಂತಾದವನ್ನು ಬಳಸಲಾಗುತ್ತದೆ. ಅಂಗಾಂಶವನ್ನು ಅಧ್ಯಯನ ಮಾಡಲು ಅದರ ತೆಳ್ಳನೆಯ ಕೊಯ್ತವನ್ನು ಮೊದಲು ಸಿದ್ಧಪಡಿಸಬೇಕು. ಬದುಕಿರುವ ಅಥವಾ ಸತ್ತ ಅಂಗಾಂಶವನ್ನಾದರೂ ಉಪಯೋಗಿಸಬಹುದು. ಮೊದಲು ಯಾವ ಯಂತ್ರದ ಸಹಾಯವಿಲ್ಲದೆ ಬರಿಕೈಯಿಂದಲೇ (ಫ್ರಿ ಹ್ಯಾಂಡ್) ತೆಗೆದ ಬದುಕಿರುವ ಅಂಗಾಂಶಗಳ ಕೊಯ್ತಗಳನ್ನು ಬಳಸುತ್ತಿದ್ದರು. ಈಗ ಪ್ಯಾರಾಫಿನ್ ಮೇಣದಲ್ಲಿ ಹುಗಿದ ಅಂಗಾಂಶಗಳ ಕೊಯ್ತವನ್ನು ಮೈಕ್ರೋಟೋಮ್ ಎಂಬ ಯಂತ್ರದಿಂದ ತೆಗೆಯುತ್ತಾರೆ. ಈ ಕೊಯ್ತಗಳು ಸುಮಾರು 5 ಮೈಮೀ – 6 ಮೈಮೀ ನಷ್ಟು ತೆಳ್ಳಗಿರುತ್ತವೆ. ಅಂಗಾಂಶಗಳು ಕೆಡದಂತೆ ಹಾಗೂ ಜೀವಕೋಶಗಳ ರಚನೆಯು ಹಾಳಾಗದಂತೆ ಈ ಕೊಯ್ತಗಳನ್ನು ಸ್ಥಿರಕಾರಿ (ಫಿಕ್ಸೆಟಿವ್)ಗಳಿಂದ ಸ್ಥಿರೀಕರಿಸಲಾಗುತ್ತದೆ (ಫಿಕ್ಸೇಷನ್). ಮೊದಲು ಕ್ರೋಮಿಕ್ ಆಮ್ಲ ಅಥವಾ ಪೊಟಾಸಿಯಮ್ ಡೈಕ್ರೋಮೇಟ್‌ಗಳನ್ನು ಸ್ಥಿರಕಾರಿಗಳಾಗಿ ಬಳಸುತ್ತಿದ್ದರು. ಕ್ಲಾರ್ಕ್‌ನ ಆಲ್ಕೋಹಾಲ್ ಎಂಬ ಒಂದು ಸಂಯುಕ್ತ ಸ್ಥಿರಕಾರಿಯನ್ನು 1851ರಲ್ಲಿ ಮೊದಲ ಬಾರಿ ಉಪಯೋಗಿಸಲಾಯಿತು. 1894ರಲ್ಲಿ ಝೆಂಕರ್‌ನ ದ್ರವವನ್ನು ಪರಿಚಯಿಸಲಾಯಿತು. ಈಗಲೂ ಬಳಕೆಯಲ್ಲಿರುವ ಬೊಯಿನ್ಸ್‌ನ ದ್ರವವನ್ನು 1897ರಲ್ಲಿ ಪ್ರಪ್ರಥಮವಾಗಿ ಉಪಯೋಗಿಸಲಾಯಿತು. ಆದರೂ, ಫಾರ್ಮಲಿನ್ ಈಗಲೂ ಬಳಕೆಯಲ್ಲಿರುವ ಸ್ಥಿರಕಾರಿ. ಇದರ ಸ್ಥಿರಕಾರಿ ಗುಣವನ್ನು ಮೊದಲು ತಿಳಿಸಿದವನು ಜರ್ಮನಿಯ ಕೈಗಾರಿಕಾ ರಸಾಯನ ವಿಜ್ಞಾನಿ ಬ್ಲಮ್. ಸ್ಥಿರೀಕರಿಸಲ್ಪಟ್ಟ ಕೊಯ್ತವನ್ನು ಅಧ್ಯಯನಕ್ಕಾಗಿ ರಂಗಿನಿಂದ ಬಣ್ಣ ಕಟ್ಟಲಾಗುತ್ತದೆ (ಸ್ಟೇಯ್ನಿಂಗ್). ನೈಸರ್ಗಿಕ ರಂಗುಗಳಾದ ಕಾರ್ಮೈನ್ ಮತ್ತು ಕೇಸರಿ (ಸಾಫ್ರಾನ್) ಮೊದಲು ಬಳಕೆಯಲ್ಲಿದ್ದವು. ಇಂಗ್ಲೆಂಡ್‌ನ ರಸಾಯನ ವಿಜ್ಞಾನಿ ಪರ್ಕಿನ್ಸ್ 1856ರಲ್ಲಿ ಪ್ರಪ್ರಥಮವಾಗಿ ಸಂಶ್ಲೇಷಿತ ರಂಗುಗಳನ್ನು ಬಳಸಿದನು. ಈಗ ಅಂಗಾಂಶ ವಿಜ್ಞಾನಿಗಳು ನಾನಾ ಬಗೆಯ ರಂಗುಗಳನ್ನು ಬಳಸುತ್ತಾರೆ.

ಇತ್ತೀಚಿನ ದಶಕಗಳಲ್ಲಿ, ಅಂಗಾಂಶ ವಿಜ್ಞಾನದಲ್ಲಿ ಮಹತ್ತರವಾದ ಬದಲಾವಣೆಗಳಾಗಿವೆ. ಡೆನ್ಮಾರ್ಕಿನ ಅಂಗಾಂಶ ವಿಜ್ಞಾನಿಗಳಾದ ಲಿಂಡರ್‌ಸ್ಟ್ರಾರ್ಮ್ ಲಾಂಗ್ ಮತ್ತು ಮಾರ್ಗನಸೆನ್ 1938ರಲ್ಲಿ ಘನೀಕೃತ ಕೊಯ್ತ (ಫ್ರೋಜನ್ ಸೆಕ್ಷನ್) ಗಳನ್ನು ಮೊದಲ ಬಾರಿಗೆ ಪರಿಚಯಿಸಿದರು. ಈ ತಂತ್ರದಲ್ಲಿ, ಅಂಗಾಂಶದ ಕೊಯ್ತಗಳನ್ನು $180^0$ಸೆ ನಲ್ಲಿ ಸ್ಥಿರೀಕರಿಸುತ್ತಾರೆ. ನಂತರ ನೀರ್ಗಾಳಿ (ವ್ಯಾಕ್ಯೂಮ್)ಯಲ್ಲಿ ಒಣಗಿಸುತ್ತಾರೆ. 1945ರಲ್ಲಿ ಅಮೇರಿಕಾದ ಟೆಕ್ನಿಕಾನ್ ಕಂಪೆನಿಯು ಮೊದಲ ಸ್ವಯಂಚಾಲಿತ ಪ್ಯಾರಾಫಿನ್ ಮೇಣದ ಸಂಸ್ಕರಣ ಘಟಕ (ಪ್ರಾಸೆಸರ್) ವನ್ನು ತಯಾರಿಸಿತು. 1979ರಲ್ಲಿ ಸಕುರಾ ಕಂಪೆನಿ ಮತ್ತು ಮೈಲ್ಸ್ ಕಂಪೆನಿ ಜೊತೆಗೂಡಿ ಗಣಕೀಕೃತ ಕಾರ್ಯಕ್ರಮದ ಸೌಕರ್ಯವನ್ನು ಹೊಂದಿದ ಪರಿಷ್ಕೃತ ಸಂಸ್ಕರಣ ಘಟಕವನ್ನು ಮಾರುಕಟ್ಟೆಗೆ ತಂದುವು. ಈಗ ರಂಗಿನಿಂದ ಬಣ್ಣ ಕಟ್ಟಲು ಅಥವಾ ಜಾರುಗಾಜಿ(ಸ್ಲೈಡ್)ನ ಮೇಲೆ ಮುಚ್ಚುಗಾಜು (ಕವರ್ ಸ್ಲಿಪ್) ಹಾಕಲು ಸ್ವಯಂಚಾಲಿತ ಯಂತ್ರಗಳಿವೆ. ಇಷ್ಟಲ್ಲದೆ, 1939ರಲ್ಲಿ ಗೊಮೊರಿ ಮತ್ತು ಟೆಕಾಮಟ್ಸು ಕಿಣ್ವ ಅಂಗಾಂಶ ರಸಾಯನ ವಿಜ್ಞಾನವನ್ನು (ಎನ್‌ಜೈಮ್ ಹಿಸ್ಟೋಕೆಮಿಸ್ಟ್ರಿ) ಪರಿಚಯಿಸಿದರು. ರಂಗನ್ನು ಉಪಯೋಗಿಸದೆ ಅವರು ಅಂಗಾಂಶದ ಕೊಯ್ತದಲ್ಲಿ ಕ್ಷಾರೀಯ ಫಾಸ್ಫಟೇಸ್ (ಅಲ್ಕಲೈನ್ ಫಾಸ್ಫಟೇಸ್) ಎಂಬ ಕಿಣ್ವ ಇರುವುದನ್ನು ತೋರಿಸಿದರು. 1941ರಲ್ಲಿ ಇಂಗ್ಲೆಂಡಿನ ಆಲ್ಬರ್ಟ್ ಕೂನ್ಸ್, ಕ್ರೀಚ್ ಮತ್ತು ಜೋನ್ಸ್ ಅಂಗಾಂಶ ರೋಗ ವಿಜ್ಞಾನದ ಅಧ್ಯಯನದಲ್ಲಿ ಪ್ರತಿರಕ್ಷಾ ರಸಾಯನ ವಿಜ್ಞಾನದ (ಇಮ್ಯೂನೋಕೆಮಿಸ್ಟ್ರಿ) ಉಪಯುಕ್ತತೆಯನ್ನು ಪರಿಚಯಿಸಿದರು.

ಒಟ್ಟಾರೆ, ಅಂಗಾಂಶ ವಿಜ್ಞಾನ ಅಧ್ಯಯನ ಪ್ರಮುಖ ಕ್ಷೇತ್ರಗಳು ಹೀಗಿವೆ: (1) ಅಂಗಾಂಶದ ಬಾಹ್ಯರೂಪ ರಚನಾ ಅಧ್ಯಯನ (2) ಅಂಗಾಂಶದ ಅಭಿವರ್ಧನ ಅಧ್ಯಯನ ಅಥವಾ ಅಂಗಾಂಶ ಉಗಮ (ಹಿಸ್ಟೋಜೆನೆಸಿಸ್) (3) ಅಂಗಾಂಶ ಕ್ರಿಯಾವಿಜ್ಞಾನ (ಹಿಸ್ಟೊಫಿಸಿಯಾಲಜಿ) ಮತ್ತು ಜೀವಕೋಶ ವಿಜ್ಞಾನ (ಸೈಟೊಫಿಸಿಯಾಲಜಿ) (4) ಅಂಗಾಂಶ ರಸಾಯನ ವಿಜ್ಞಾನ (ಹಿಸ್ಟೊಕೆಮಿಸ್ಟ್ರಿ) ಮತ್ತು ಜೀವಕೋಶ ರಸಾಯನವಿಜ್ಞಾನ (ಸೈಟೊ ಕೆಮಿಸ್ಟ್ರಿ) (5) ಅಂಗಾಂಶದ ಸೂಕ್ಷ್ಮ ಅಥವಾ ಅತಿ ಸೂಕ್ಷ್ಮ ರಚನೆಯ ಅಧ್ಯಯನ (6) ಅಂಗಾಂಶ ರೋಗ ವಿಜ್ಞಾನ (ಹಿಸ್ಟೊಪೆಥಾಲಜಿ) ಮತ್ತು (7) ಪತಿರಕ್ಷಾ ರಸಾಯನ ವಿಜ್ಞಾನ. ಅಂಗಾಂಶ ಕ್ರಿಯಾ ವಿಜ್ಞಾನ ಮತ್ತು ಜೀವಕೋಶ ಕ್ರಿಯಾ ವಿಜ್ಞಾನ ಅಂಗಾಂಶದ ಬಾಹ್ಯರೂಪ ರಚನೆಯಲ್ಲಾಗುವ ಬದಲಾವಣೆ ಮತ್ತು ಅವುಗಳ ಕಾರ್ಯ ನಿರ್ವಹಣೆಯ ನಡುವಿನ ಸಂಬಂಧವನ್ನು ತಿಳಿಸುತ್ತವೆ. ಸೂಕ್ಷ್ಮ ಅಥವಾ ಅತಿ ಸೂಕ್ಷ್ಮದರ್ಶಕದ ಸಹಾಯದಿಂದ ಅಂಗಾಂಶಗಳ ಸೂಕ್ಷ್ಮ ರಚನೆಯು ತಿಳಿಯುತ್ತದೆ. ಅಂಗಾಂಶ ರೋಗ ವಿಜ್ಞಾನ ಅಂಗಾಂಶಗಳನ್ನು ಪರೀಕ್ಷಿಸುವ ಮೂಲಕ ರೋಗವನ್ನು ಕಂಡು ಹಿಡಿಯುವುದರಲ್ಲಿ ಸಹಕರಿಸುತ್ತದೆ. ಪ್ರತಿರಕ್ಷಾ ರಸಾಯನ ವಿಜ್ಞಾನ, ರೋಗ ಪೀಡಿತ ಅಂಗಾಂಶಗಳಲ್ಲಿ ರಾಸಾಯನಿಕ ಬದಲಾವಣೆಗಳನ್ನು ತಿಳಿಸುವುದು ಅಂಗಾಂಶ ರಸಾಯನ ವಿಜ್ಞಾನ ಮತ್ತು ಜೀವಕೋಶ ರಸಾಯನ ವಿಜ್ಞಾನ ಅಂಗಾಂಶಗಳ ಹಾಗೂ ಜೀವಕೋಶಗಳ ರಾಸಾಯನಿಕ ಸಂಯೋಜನೆಯ ಮೇಲೆ ಬೆಳಕು ಚೆಲ್ಲುತ್ತದೆ. ಇವೆಲ್ಲಾ ಕಾರಣಗಳಿಂದ ಅಂಗಾಂಶ ವಿಜ್ಞಾನದ ಅಧ್ಯಯನ ದೇಹದ ಅಂಗಗಳ ಮತ್ತು ಅಂಗಾಂಶಗಳ ಒಟ್ಟಾರೆ ಕಾರ್ಯ ನಿರ್ವಹಣೆ ಮತ್ತು ರಚನಾ ವಿನ್ಯಾಸದ ನಡುವಿನ ಸಂಬಂಧವನ್ನು ತಿಳಿಸುತ್ತದೆ. ಸದೃಶ ಅಂಗಾಂಶಗಳು ಮತ್ತು ಜೀವಕೋಶಗಳ ರಚನೆ ಹಾಗೂ ಕಾರ್ಯಗಳನ್ನು ತಿಳಿಯುವಲ್ಲಿ ಹಾಗೂ ಅವುಗಳ ಮತ್ತು ಅಸದೃಶ ಅಂಗಾಂಶಗಳ ಮತ್ತು ಜೀವಕೋಶಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸುವಲ್ಲಿ ಸಹಕರಿಸುತ್ತದೆ. ಹಲವಾರು ರೋಗಗಳ ರೋಗಸ್ವಭಾವ ನಿರ್ಣಯ (ಡಯಾಗ್ನೊಸಿಸ್)ದಲ್ಲೂ ಇದು ಮುಖ್ಯ ಪಾತ್ರ ವಹಿಸುತ್ತದೆ.

(ಎ.ಎಸ್.ಎಚ್.ಎ.)

**ಅಂಗುಳು:** ಕಶೇರುಕ ಪ್ರಾಣಿಗಳಲ್ಲಿ ಬಾಯಿಯೊಳಗಿನ ಮೇಲ್ಛಾವಣಿ (ಪಾಲಟ್). ತಾಲು ಪರ್ಯಾಯ ಹೆಸರು. ಇದು ಶ್ವಾಸಮಾರ್ಗವನ್ನು ಆಹಾರಮಾರ್ಗದಿಂದ ಬೇರ್ಪಡಿಸುತ್ತದೆ. ಎರಡು ಬಗೆಯ ಅಂಗುಳು ಕಶೇರುಕ ಪ್ರಾಣಿಗಳಲ್ಲಿವೆ.

1) ಪ್ರಾಥಮಿಕ ಅಂಗುಳು (ಪ್ರೈಮರಿ ಪಾಲಟ್)

2) ದ್ವಿತೀಯ ಅಥವಾ ಹುಸಿ ಅಂಗುಳು (ಸೆಕೆಂಡರಿ ಪಾಲಟ್)

ಪ್ರಾಥಮಿಕ ಅಂಗುಳು, ವೋಮರ್ಗಳು ಪ್ಯಾರಾಸ್ಫೀನಾಯಿಡ್, ಪ್ಯಾಲಟೈನ್‌ಗಳು, ಎಂಡೋಟೆರಿಗಾಯಿಡ್, ಎಕ್ಟೊಟೆರಿಗಾಯಿಡ್ ಮತ್ತು ಟೆರಿಗಾಯಿಡ್ ಘಟಕಗಳಿಂದಾಗಿದೆ.

ದ್ವಿತೀಯ ಅಂಗುಳು ಮ್ಯಾಕ್ಸಿಲ್ಲಾ ಮತ್ತು ಪ್ರಮ್ಯಾಕ್ಸಿಲ್ಲಾದ ಪ್ಯಾಲಟೈನ್ ಚಾಚುಗಳು, ಪ್ಯಾಲಟೈನ್‌ನ ಪ್ಯಾಲಟೈನ್ ಚಾಚುಗಳು ಮತ್ತು ಟೆರಿಗಾಯಿಡ್‌ನ ಪ್ಯಾಲಟೈನ್ ಚಾಚುಗಳಿಂದಾಗಿದೆ.




ಮೀನುಗಳು ಮತ್ತು ಉಭಯವಾಸಿಗಳಲ್ಲಿ ಅಂಗುಳು ಕಪಾಲದ ಕೆಳಗಡೆ ಚಪ್ಪಟೆಯಾದ ಪ್ರದೇಶವನ್ನು ಒಳಗೊಂಡಿದೆ. ಸರೀಸೃಪಗಳಾದ ಸ್ಫೀನೋಡಾನ್, ಹಲ್ಲಿಗಳು ಮತ್ತು ಹಾವುಗಳಲ್ಲಿ ಅಂಗುಳು ಚಲಿಸಬಲ್ಲುದು. ಈ ಚಲನೆಗೆ ಕೈನಸಿಸ್ ಎಂದು ಹೆಸರು. ಈ ಕೈನಸಿಸ್ ಶಕ್ತಿಯು ಬಾಯನ್ನು ಅಗಲ ಮಾಡುವುದಕ್ಕೆ ಸಹಾಯ ಮಾಡುತ್ತದೆ. ದ್ವಿತೀಯ ಅಂಗುಳ ಬೆಳವಣಿಗೆಯನ್ನು ಸರೀಸೃಪಗಳಲ್ಲಿ ಪ್ರಥಮವಾಗಿ ಕಾಣಬಹುದು. ಮೊಸಳೆಗಳಲ್ಲಿ ದ್ವಿತೀಯ ಅಂಗುಳು ಬೆಳವಣಿಗೆಯನ್ನು ಸಾಮಾನ್ಯವಾಗಿದ್ದು, ಆಮೆಗಳಲ್ಲಿ ಇದು ಅಪೂರ್ಣವಾಗಿದೆ. ದ್ವಿತೀಯ ಅಂಗುಳು ಪಕ್ಷಿಗಳಲ್ಲಿ ಆಂಶಿಕವಾಗಿ ಬೆಳೆದಿದೆ. ವಿಶೇಷವೆಂದರೆ, ಪಕ್ಷಿಗಳಲ್ಲಿಯೂ ಸಹ ಅಂಗುಳು ಚಲಿಸಬಲ್ಲುದು. ಒಳನಾಸಿಕರಂಧ್ರಗಳು (ಇಂಟರನಲ್ ನೆರಿಸ್) ಪಕ್ಷಿಗಳು ಮತ್ತು ಅನೇಕ ಸರೀಸೃಪಗಳಲ್ಲಿ ಅಂಗುಳದ ಮುಂಭಾಗದಲ್ಲಿವೆ. ಸ್ತನಿಗಳಲ್ಲಿ ಅಂಗುಳು ಈ ಒಳನಾಸಿಕರಂಧ್ರಗಳನ್ನು ಹಿಂಭಾಗಕ್ಕೆ ತಳ್ಳಿ ಶ್ವಾಸಮಾರ್ಗದ ತಳವಾಗಿ ರೂಪಗೊಂಡು ಬಾಯಿಯಿಂದ ಶ್ವಾಸಮಾರ್ಗವನ್ನು ಬೇರ್ಪಡಿಸುತ್ತದೆ. ಸ್ತನಿಗಳು ಏಕಕಾಲದಲ್ಲಿ ಮೆಲ್ಲಬಹುದು ಮತ್ತು ಉಸಿರಾಡಬಹುದು. ಸ್ತನಿಗಳಲ್ಲಿ ದ್ವಿತೀಯ ಅಂಗುಳದ ರಚನೆ ಪರಿಪೂರ್ಣವಾಗಿದೆ. ಬೆಳವಣಿಗೆಯಲ್ಲಿ ಪ್ರಿಮ್ಯಾಕ್ಸಿಲ್ಲ, ಮ್ಯಾಕ್ಸಿಲ್ಲ ಮತ್ತು ಪ್ಯಾಲಟೈನ್‌ಗಳು ಅಡ್ಡನಾದ ಫಟಕಗಳಾಗಿ ಬೆಳೆದು ಮಧ್ಯಭಾಗದಲ್ಲಿ ಕೂಡಿಕೊಳ್ಳುತ್ತವೆ. ಈ ಫಲಕಗಳು ಕೂಡಿಕೊಳ್ಳದಿದ್ದರೆ, ಸೀಳಿದ ಅಂಗುಳು (ಕ್ಲೆಫ್ಟ್ ಪಾಲಟ್) ರಚನೆಯಾಗಿದೆ. ಸ್ತನಿಗಳಲ್ಲಿ ಗಡುಸು ಅಂಗುಳು (ಹಾರ್ಡ್ ಪಾಲಟ್) ಹಿಂಭಾಗಕ್ಕೆ ಮುಂದುವರಿದು ಮೂಳೆಯಿಲ್ಲದ ಮೆದು ಅಂಗುಳು (ಸಾಫ್ಟ್ ಪಾಲಟೆ) ರಚನೆಯಾಗಿದೆ. ಈ ಮೆದು ಅಂಗುಳು ಸ್ತನಿಗಳ ಗಂಟಲ ಕುಳಿಯನ್ನು (ಫ್ಯಾರಿಂಕ್ಸ್) ಮೂರು ವಿಭಾಗಗಳನ್ನಾಗಿ ಮಾಡುತ್ತದೆ.

1) ಬಾಯಿಯ ಗಂಟಲಕುಳಿ (ಓರಲ್ ಫಾರಿಂಕ್ಸ್),

2) ನಾಸದ ಗಂಟಲ ಕುಳಿ (ನೇಸಲ್ ಫಾರಿಂಕ್ಸ್),

3) ಹನಿನಾಳದ ಗಂಟಲ ಕುಳಿ (ಲೆರೈಂಜಿಯಲ್ ಫಾರಿಂಕ್ಸ್),

ಹಕ್ಸ್‌ಲಿ 1857 ರಲ್ಲಿ ಪ್ರಥಮ ಬಾರಿಗೆ ಅಂಗುಳಿನ ರಚನೆಯನ್ನು ಪಕ್ಷಿಗಳ ವರ್ಗೀಕರಣಕ್ಕಾಗಿ ಉಪಯೋಗಿಸಿಕೊಂಡನು. ಪೈಕ್ರಾಫ್ಟ್ ಮತ್ತು ಕಿಂಗ್ಸ್‌ಲಿ (1974) ಸಹ ಅಂಗುಳಿನ ರಚನೆಯ ಆಧಾರದ ಮೇಲೆ ಪಕ್ಷಿಗಳನ್ನು ವರ್ಗೀಕರಿಸಿದ್ದಾರೆ.

(ಎಸ್.ಕೆ.)

**ಅಂಗೋತ್ಪತ್ತಿ:** ಪ್ರಾಣಿಗಳ ಬೆಳವಣಿಗೆಯಲ್ಲಿ ಅಂಗಗಳು ಉತ್ಪತ್ತಿಯಾಗುವ ಅವಸ್ಥೆ (ಆರ್ಗನೊಜೆನೆಸಿಸ್). ನಿಷೇಚಿತ ತತ್ತಿಯ ಸಾಮಾನ್ಯ ವಿಭಜನೆಗಳ ಮೂಲಕ ಚೆಂಡಿನ ಆಕಾರದಲ್ಲಿ ರೂಪುಗೊಂಡು ಉಪ್ಪುನೇರಳೆ ಹಣ್ಣಿನ ಗೊಂಚಲಿನಂತೆ ಕಾಣುವ ಜೀವಕೋಶ ಸಂಗ್ರಹವಾಗಿ ಪರಿವರ್ತನೆಗೊಳ್ಳುತ್ತದೆ. ಅನಂತರ ಈ ಜೀವಕೋಶಗಳು ವ್ಯವಸ್ಥಿತವಾದ ಕ್ರಮದಲ್ಲಿ ವಿಂಗಡಣೆಗೊಂಡು ಬ್ಲಾಸ್ಟೊಸೀಲ್ ಎಂಬ ಅವಕಾಶವನ್ನು ಒಳಗೊಂಡ ಟೊಳ್ಳು ಚೆಂಡಿನ ಆಕಾರವಾಗಿ ರೂಪುಗೊಳ್ಳುತ್ತವೆ. ಈ ವ್ಯವಸ್ಥೆಗೆ ಬ್ಲಾಸ್ಟುಲ ಎಂದೂ ಇದು ರೂಪುಗೊಳ್ಳುವ ವಿಧಾನಕ್ಕೆ ಬ್ಲಾಸ್ಟುಲೀಕರಣ ಎಂದೂ ಹೆಸರು. ಮುಂದಿನ ಬೆಳವಣಿಗೆಯಲ್ಲಿ ನಿರ್ದಿಷ್ಟ ಪದರಗಳ ನಿರ್ಮಾಣದಲ್ಲಿ ಮತ್ತು ಈ ಪದರಗಳಿಂದ ಉತ್ಪತ್ತಿಯಾಗುವ ವಿಶಿಷ್ಟ ಅಂಗಾಂಶಗಳು ಮತ್ತು ಅಂಗಗಳಲ್ಲಿ ಪಾತ್ರವಹಿಸುವ ಜೀವಕೋಶಗಳು ಬ್ಲಾಸ್ಟುಲ ಅವಸ್ಥೆಯಲ್ಲಿಯೇ ಪರಿಣಿತವಾಗಿ ವಿಭೇದೀಕರಣಗೊಂಡಿರುತ್ತವೆ. ಬ್ಲಾಸ್ಟುಲೀಕರಣದ ಅನಂತರ ನಿರ್ದಿಷ್ಟಜೀವಕೋಶಗಳು ನಿಯಮಾನುಸಾರ ಭ್ರೂಣದ ನಿರ್ದಿಷ್ಟ ಸ್ಥಾನಗಳಿಗೆ ಸಾಗಿ ಮುಂದಿನ ಬೆಳವಣಿಗೆಗೆ ಸಿದ್ಧವಾಗುತ್ತವೆ. ಇದೇ ಗ್ಯಾಸ್ಟ್ರುಲೀಕರಣ. ಇದರಿಂದಾಗಿ ರೂಪುಗೊಳ್ಳುವ ಎರಡು ಅಥವಾ ಹೆಚ್ಚು ಪದರಗಳ ಭ್ರೂಣಾವಸ್ಥೆಯನ್ನು ಗ್ಯಾಸ್ಟ್ರುಲ ಎಂದು ಕರೆಯಲಾಗುವುದು. ಈ ಅವಸ್ಥೆಯಲ್ಲಿ ಮುಂದಿನ ನಿರ್ದಿಷ್ಟ ಅಂಗಗಳಾಗುವ ಜೀವಕೋಶ ಸಂಗ್ರಹಗಳು ಒಂದೆಡೆ ಕಲೆತು ಸಂಭಾವ್ಯ ಅಂಗ ನಿರ್ಮಾಣದ ಪ್ರದೇಶಗಳು ನಿರ್ಮಾಣವಾಗುತ್ತವೆ. ಅನಂತರ ಸ್ವಯಂ ಅಥವಾ ಸುತ್ತಲಿನ ಒತ್ತಡಗಳಿಗೆ, ಪ್ರಚೋದನೆಗಳಿಗೆ ಮಣಿದು ಇವು ಅಂಗಗಳಾಗಿ ರೂಪುಗೊಳ್ಳುತ್ತವೆ ಈ ಅವಸ್ಥೆಯವರೆಗೂ ನಡೆಯುವ ಪೂರ್ವಭಾವಿ ಕ್ರಿಯಾವಿಶೇಷಗಳೆಲ್ಲವೂ ಅಂಗೋತ್ಪತ್ತಿಗೆ ಹಿನ್ನೆಲೆಯಾದ ಸಿದ್ಧತೆಗಳು. ಈ ಕ್ರಿಯಾ ವಿಶೇಷವನ್ನು ಕಶೇರುಕಗಳ ಬೆಳವಣಿಗೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಪ್ರಧಾನ ಸಂಪರ್ಕದ ಚಟುವಟಿಕೆಯ ಪ್ರಭಾವದಿಂದಾಗಿ ನರಕೊಳವೆಯು ನಿರ್ಮಾಣವಾಗುತ್ತದೆ. ಇದರ ಅಗ್ರ ತುದಿಯು ಊದಿಕೊಂಡು ಮಿದುಳಿನ ಆರಂಭಕ್ಕೆ ತಳಹದಿ ಹಾಕುತ್ತದೆ. ಇದಾದ ಅನಂತರ ಮಿದುಳಿನ ಎಲ್ಲ ಭಾಗಗಳು ಬೆಳೆಯುತ್ತವೆ ಇದೇ ರೀತಿ ಎಲ್ಲ ಅಂಗ ಸಮೂಹಗಳು ಆದಿಯಲ್ಲಿ ನಳಿಕೆಯ ರೂಪದಲ್ಲಿ ಕಾಣಿಸಿಕೊಂಡು ಅನಂತರ ವಿಭೇದೀಕರಣಗೊಂಡು ಪ್ರತ್ಯೇಕ ಅಂಗಗಳ ನಿರ್ಮಾಣವಾಗುತ್ತದೆ. ಇದನ್ನು ನಳಿಕಾಕರಣ ಎಂದು ಕರೆಯಲಾಗುವುದು.

(ಎಚ್.ಎಚ್.ಎಸ್)

**ಅಂಗೋರ ಆಡಿನ ತುಪ್ಪಟ:** ಈಗಿನ ಟರ್ಕಿ ದೇಶದಲ್ಲಿರುವ ಅಂಗೋರ ಮತ್ತು ಅದರ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಸುಮಾರು ಎರಡು ಸಾವಿರ ವರ್ಷಗಳಿಂದಲೂ ಸಾಕುತ್ತಿರುವ ವಿಶಿಷ್ಟ ಜಾತಿಯ ಮೇಕೆಯ ತುಪ್ಪಟ (ಮೊಹೇರ್). ಎಲ್ಲ ದೇಶಗಳಲ್ಲೂ ಪ್ರಸಿದ್ಧಿ ಪಡೆದಿದೆ. ಎಳೆ 17.5–20 ಸೆಮೀ ಉದ್ದವಿರುತ್ತದೆ. ಅಲ್ಲದೆ, ಕೆಲವು ವಿಶಿಷ್ಟಗುಣಗಳನ್ನೂ ಹೊಂದಿದೆ. ನುಣುಪು, ಗಡಸು ಮತ್ತು ಎಳೆತವನ್ನು ತಡೆಯಬಲ್ಲುದು. ಇತರ ನೂಲುಗಳೊಂದಿಗೆ ಬೆರೆತಾಗ ಅವುಗಳ ಬಣ್ಣ, ಚೆಂದ, ಮೃದುತ್ವ ಮತ್ತು ಹೊಳಪನ್ನು ಹೆಚ್ಚಿಸುತ್ತದೆ. ಕಸದ ಕಣಗಳು ಅದರ ಮೇಲೆ ನಿಲ್ಲುವುದಿಲ್ಲ. ಹಾಕಿದ ಬಣ್ಣವನ್ನು ಶಾಶ್ವತವಾಗಿ ಇಟ್ಟುಕೊಂಡಿರುತ್ತದೆ. ಅದರಿಂದ ತಯಾರಾದ ಬಟ್ಟೆಗಳ ಮೇಲೆ ಅಂದವಾಗಿ ಅಲಂಕಾರಿಕ ಚಿತ್ರಣ ಮಾಡುವುದಕ್ಕೆ ತುಂಬ ಅನುಕೂಲ.

ಆದರೆ ಇಂದು ಮೊಹೇರ್ ನಿಜವಾದ ಅಂಗೋರ ಆಡಿನ ತುಪ್ಪಟವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲೇ ಈ ಕೂದಲಿನ ಉಪಯುಕ್ತತೆಯನ್ನು ಜನ ಅರಿತಿದ್ದರು. ನಾನಾ ದೇಶಗಳಿಂದ ಅದಕ್ಕಾಗಿ ಬೇಡಿಕೆ ಬರತೊಡಗಿತು. ಇದನ್ನು ಪೂರೈಸುವುದಕ್ಕೆ ಅಂಗೋರ ಮತ್ತು ಸಾಮಾನ್ಯ ಆಡುಗಳ ಮಿಶ್ರತಳಿ ಮೇಕೆಗಳನ್ನು ಬೆಳೆಸತೊಡಗಿದರು. ಈ ಮೇಕೆಗಳ ಕೂದಲು ಶುದ್ಧ ಮೊಹೇರ್ ತುಪ್ಪಟಕ್ಕಿಂತ ಕೆಳದರ್ಜೆಯದು. ಮಿಶ್ರತಳಿ ತಯಾರಿಕೆ ಪ್ರಾರಂಭವಾದ ಮೇಲೆ ನಾನಾ ಮಟ್ಟದ ಮೊಹೇರ್ ತುಪ್ಪಟಗಳು ಬರತೊಡಗಿದವು. ಅಮೆರಿಕದ ಸಂಯುಕ್ತ ಸಂಸ್ಥಾನ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮುಂತಾದ ಪ್ರಮುಖ ದೇಶಗಳಿಗೂ ಈ ಮಿಶ್ರತಳಿ ತಯಾರಿಕೆ ಹರಡಿತು.

ಇತರ ತುಪ್ಪಟದಿಂದ ತಯಾರಾಗುವ ವಸ್ತುಗಳಿಗೆ ಅಂಗೋರಾ ತುಪ್ಪಟವನ್ನು ಬೆರೆಸುವುದು ಬಹಳ ಉಪಯುಕ್ತ. ಅವು ಬಹಳ ದಿನ ಬಾಳಿಕೆ ಬರುತ್ತವೆ, ಸುಕ್ಕಾಗುವುದಿಲ್ಲ. ಅವುಗಳನ್ನು ನುಸಿ ಹಿಡಿಯದಂತೆ ಮಾಡುವುದೂ ಸುಲಭ. ಉತ್ಕೃಷ್ಟವಾದ ರತ್ನಗಂಬಳಿಗಳು, ಹೊದೆಯುವ ಕಂಬಳಿ, ಗವುಸುಗಳು, ನಾನಾ ವಿಧದ ಉಡುಪು ಬಟ್ಟೆಗಳು ಇದರಿಂದ ತಯಾರಾಗುತ್ತವೆ.

(ಎ.ಎಂ)

**ಅಂಗ್ವಿಕ್ಯುಲೇಟ:** ಕಶೇರುಕಗಳ ಸ್ತನಿವರ್ಗದ ಆದಿಮ ಗುಂಪು. ಸಿಂಪ್ಸನ್‌ನ ವರ್ಗೀಕರಣದ ಪ್ರಕಾರ ಪ್ಲಾಸೆಂಟಲ್ ಸ್ತನಿಗಳು ಅಥವಾ ಯೂಥೀರಿಯ ಸ್ತನಿಗಳಲ್ಲಿ ಅಂಗ್ವಿಕ್ಯುಲೇಟ, ಗ್ಲೈರ್ಸ್, ಮ್ಯೂಟಿಕ ಮತ್ತು ಫೆರಂಗ್ಯುಲೇಟ ಎಂಬ ಗುಂಪುಗಳಿವೆ. ಯೂಥೀರಿಯದ ಪೂರ್ವಜರಿಗೆ ಬಹಳ ಹತ್ತಿರವಾಗಿದ್ದು, ಈ ಗುಂಪಿಗೆ ಸೇರಿದ ಆಧುನಿಕ ಜೀವಿಗಳು ಈಗಲೂ ಅನೇಕ ಪ್ರಾಚೀನ ಗುಣಲಕ್ಷಣಗಳನ್ನು ಉಳಿಸಿಕೊಂಡಿವೆ.

ಅಂಗ್ವಿಕ್ಯುಲೇಟ ಕ್ರಿಟೇಸಿಯಸ್ ಅವಧಿಯಲ್ಲೇ ಉಗಮವಾದ ಬಗ್ಗೆ ತಜ್ಞರು ವರದಿಸಿದ್ದಾರೆ. ಕ್ರಿಟೇಸಿಯಸ್‌ನಲ್ಲಿ ಸಿಕ್ಕಿದ ಪಳೆಯುಳಿಕೆಗಳಲ್ಲಿ ಕೀಟಾಹಾರಿ (ಇನ್ಸೆಕ್ಟಿವೋರ) ಗಣದ ಸ್ತನಿಗಳು ಹೇರಳವಾಗಿವೆ. ಎಲ್ಲಾ ಯೂಥೀರಿಯನ್‌ಗಳು ಚಿಕ್ಕ ನಿಶಾಚರಿಗಳಾಗಿರಬಹುದಾದ ಕೀಟಾಹಾರಿ ಅಥವಾ ಸರ್ವ ಭಕ್ಷಕ ಪ್ರಾಣಿಗಳಿಂದ ಉದ್ಭವಿಸಿವೆ ಎಂಬ ಬಗ್ಗೆ ಸಾಕ್ಷ್ಯಗಳಿವೆ.

ಸು. 10 ಕೋಟಿ ವರ್ಷ ಹಿಂದಿನ ಈ ಪ್ರಾಣಿಗಳಲ್ಲಿ ಮಾರ್ಸುಪಿಯಲ್ ಮತ್ತು ಪ್ಲಾಸೆಂಟಲ್ ಸ್ತನಿಗಳ ಕೆಲವು ಸಾಮಾನ್ಯ ಗುಣಲಕ್ಷಣಗಳಿದ್ದು, ಇವೇ ಅವುಗಳಿಗೆ ಮೂಲ ಪ್ರಾಣಿಯಾಗಿರಬಹುದೆಂದು ತಜ್ಞರ ಅಭಿಪ್ರಾಯ.

ಈ ರೀತಿ ಉದ್ಭವಿಸಿದ ಇನ್ಸೆಕ್ಟಿವೋರಗಳು ಕ್ರಿಟೇಸಿಯಸ್ ಅವಧಿಯಲ್ಲಿ ಹೇರಳವಾಗಿದ್ದು ಈ ಪ್ರಾಣಿಗಳು ಇಂದಿನವುಗಳಿಗಿಂತ ಭಿನ್ನವಾಗಿದ್ದುವು. ಕ್ರಮೇಣ ಈ ಗಣದಿಂದಲೇ ಇತರ ಯೂಥೀರಿಯನ್ ಗಣಗಳು ಕವಲೊಡೆದ ಬಗ್ಗೆ ವರದಿಗಳಿವೆ. ಪ್ಲೈಯೊಸಿನ್ ಅವಧಿಯಲ್ಲಿ ಕೆಲವು ಪ್ರೈಮೇಟುಗಳ ಪಳೆಯುಳಿಕೆಗಳೂ ದೊರಕಿವೆ.

ಕಪಾಲದ ಹಿಂದಿನ ಅಸ್ಥಿಪಂಜರದಲ್ಲಿರುವ ಕ್ಲಾವಿಕಲ್ ಎಂಬ ಮೂಳೆ ಎರಡೂ ಕಾಲುಗಳಲ್ಲಿ ನಖಗಳಿರುವ ಐದೈದು ಬೆರಳುಗಳು, ಊರುಗಾಲು ಮಾದರಿ ಚಲನೆ ಇವು ಅಂಗ್ವಿಕ್ಯುಲೇಟದ ಲಕ್ಷಣಗಳು. ಈಡೆಂಟೇಟಗಳಲ್ಲಿ ದೇಹದ ಶಾಖ ಸ್ವಲ್ಪ ಕಡಿಮೆಯಾಗಿದ್ದು ವಾತಾವರಣದ ವ್ಯತ್ಯಾಸಗಳಿಗೆ ಅನುಗುಣವಾಗಿ ಬದಲಾಗುತ್ತದೆ. ದಂತಸೂತ್ರ ಪೂರ್ಣವಿದೆ. ಹಲ್ಲುಗಳು ಸರಳವಾಗಿವೆ.

ಕೆಲವು ಗಣಗಳು ನಿರ್ದಿಷ್ಟ ಜೀವನಕ್ಕೆ ಹೊಂದಿಕೊಂಡಿದ್ದು, ಇನ್ನು ಕೆಲವು ವಿಶೇಷ ಲಕ್ಷಣಗಳನ್ನು ಪ್ರದರ್ಶಿಸುತ್ತವೆ. ಕೀಟಾಹಾರಿ ಮತ್ತು ನಿಶಾಚರಿ ಇನ್ಸೆಕ್ಟಿವೋರಾಗಳು, ಹಾರುವ ಬಾವಲಿಗಳು, ಪಿಪೀಲಿಕಾ ಭಕ್ಷಿಗಳು ಮತ್ತು ಮರವಾಸಿ ಪ್ರೈಮೇಟುಗಳು ಅಂಗ್ವಿಕ್ಯುಲೇಟ ಗುಂಪಿಗೆ ಸೇರಿವೆ. ಕೆಲವೇ ಕಾಲ ಬದುಕಿದ್ದು ಅಳಿದು ಹೋದ ಟೀನಿಯೋಡಾಂಟಿಯ ಮತ್ತು ಟಿಲ್ಲೊಡಾಂಟಗಳನ್ನೂ ಅಂಗ್ವಿಕ್ಯುಲೇಟಕ್ಕೆ ಸೇರಿಸಲಾಗಿದೆ. ಗುಂಪಿನಲ್ಲಿ ಈ ಕೆಳಗಿನ ಎಂಟು ಗಣಗಳಿವೆ.

1. ಇನ್ಸೆಕ್ಟಿವೋರ – ಕೀಟಾಹಾರಿಗಳು.
2. ಕೈರಾಪ್ಟೆರ – ಬಾವಲಿಗಳು.
3. ಡರ್ಮಾಪ್ಟೆರ – ಹಾರು ಪಾಪಿಗಳು.
4. ಟೀನಿಯೋಡಾಂಟ
5. ಟಿಲ್ಲೋಂಡಾಟಿಯ– ಅಳಿದ ಜೀವಿಗಳು ಪೇಲಿಯೋಸೀನ್ – ಇಯೋಸಿನ್.
6. ಈಡೆಂಟೇಟ – ಪಿಪೀಲಿಕಾ ಭಕ್ಷಿಗಳು, ಸ್ಲಾತ್‌ಗಳು, ಅರ್ಮಡಿಲ್ಲೋಗಳು.
7. ಫೋಲಿಡಾಟ – ಬೆಪ್ಪಿನ ಪಿಪೀಲಿಕಾ ಭಕ್ಷಿಗಳು, ಚಿಪ್ಪಿನ ಹಂದಿಗಳು.
8. ಪ್ರೈಮೇಟ್ಸ್ – ವಾನರರು, ಮಂಗಗಳು ಮತ್ತು ಮನುಷ್ಯರು.

(ಎಂ.ವಿ.ಸಿ.)

**ಅಂಟಣಿಕ:** ಆರೋಗ್ಯದವರಲ್ಲೂ ಪ್ರಾಣಿಗಳಲ್ಲೂ ರೋಗದೆದುರು ಪ್ರತಿರಕ್ಷಣೆ (ಇಮ್ಯುನೈಜೇಷನ್) ಪಡೆದಿರುವವರಲ್ಲೂ ಇರುವ ರೋಧವಸ್ತುವಿನ (ಆಂಟಿಬಾಡಿ) ಮಾದರಿ (ಅಗ್ಲೂಟಿನಿನ್). ಇವುಗಳ ಎದುರು ವರ್ತಿಸುವ ಏಕಾಣುಜೀವಿಗಳು, ಮುಂಜೀವಿಗಳು (ಪ್ರೊಟೋಜೋವ), ಕೆಂಪು ರಕ್ತಕಣಗಳಂಥ ಮೇಲ್ಮೈಯಲ್ಲಿ ವಿಶಿಷ್ಟ ರೋಧಜನಕಗಳಿರುವ (ಆಂಟಿಜೆನ್) ಕಣಗಳ ಒಂದೇ ಸಮನಾಗಿರುವ ತೂಗಟ್ಟುಗಳೊಂದಿಗೆ (ಸಸ್ಪೆನ್ಷನ್) ಸೇರಿಸಿದಾಗ, ತೂಗಟ್ಟಿಸಿದ ವಸ್ತುಗಳು ಒಂದಕ್ಕೊಂದು ಅಂಟಿಕೊಂಡು ಗರಣೆಗಟ್ಟಿ ತಳಕ್ಕೆ ಬೀಳುವುದರಿಂದ ತೂಗಟ್ಟಿಸುವ ಸಾರಗುಂದಕ (ಡೈಲ್ಯುಯೆಂಟ್) ತಿಳಿದೇರುವುದು. ಅಂಟಣಿಕದ (ಅಗ್ಲೂಟಿನೇಷನ್) ಈ ವರ್ತನೆ ರೋಧಜನಕ ರೋಧವಸ್ತು ನಡುವಣ ಮಾದರಿಯಾದ ಪ್ರತಿಕ್ರಿಯೆ. ಇದು ಒಂದಕ್ಕೊಂದು ತೀರ ವಿಶಿಷ್ಟ. ಇದನ್ನು ಹಿಮ್ಮರಳಿಸಬಹುದು. ಎದುರು ವರ್ತಿಸುವ ಕಿರಿಯ ಗುಂಪುಗಳು ಒಂದೊಂದರ ಮೇಲ್ಮೈಯಲ್ಲೂ ಇರುತ್ತವೆ. ಇದರಿಂದಲೇ ಸರಿಯೆನ್ನಿಸುವ ಸಮಯಗಳಲ್ಲಿ ಒಂದು ಅಂಟಣಿಕಪಡಲಿ (ಪ್ರೆಸಿಪಿಟಿನ್) ಇಲ್ಲವೇ ಬೇರೆ ರೋಧವಸ್ತುವಾಗಿ ವರ್ತಿಸಬಹುದು.

ಸೋಂಕು ತಗುಲಿಯೋ ಬೇರೆ ಪ್ರತಿರಕ್ಷಾವಿಧಾನಗಳಿಂದಲೋ ರಕ್ಷಣೆ ಪಡೆದವರಲ್ಲಿ ಒಂದು ಗೊತ್ತಾದ ರೋಧವಸ್ತು ಹೆಚ್ಚಿರುವುದು. ಈ ಕಾರಣದಿಂದಲೇ ರಸಿಕೆಯಲ್ಲಿ ಅಂಟಣಿಕಗಳು ಇರುವುದನ್ನು ಗುರುತಿಸಲು ಅಂಟಣಿಕವನ್ನು ಬಳಸುವುದು. ಹೀಗೆ ವಿಶಿಷ್ಟ ರೋಧಜನಕದಿಂದಾದ ಪ್ರತಿರಕ್ಷಣೆಯನ್ನೋ ಇಂದಿನ ಇಲ್ಲವೇ ಹಿಂದಿದ್ದ ಸೋಂಕನ್ನೋ ಗುರುತಿಸಲೂ ಇದರಿಂದ ಅನುಕೂಲ. ಇದರ ತಿರುವುಮುರುವಾಗಿ, ಗೊತ್ತಾದ ರೋಧಜನಕಗಳ ಎದುರಿನ ಅಂಟಣಿಕೆಗಳಿರುವ ಲಸಿಕೆಗಳನ್ನು ಕೂಡ, ಗೊತ್ತಾದ ರೋಧಜನಕವಿರುವ ಬೇರೆ ಬೇರೆ ಏಕಾಣುಜೀವಿಗಳು ಕೆಂಪು ರಕ್ತಕಣಗಳು ಮತ್ತಿತರ ವಸ್ತುಗಳನ್ನು ಗುರುತಿಸಲೂ ಬಳಸಬಹುದು.

ಕೆಂಪು ಕಣಗಳನ್ನು ಗರಣೆಗಟ್ಟಿಸುವ ಸರಿರಕ್ತಂಟಣಿಕೆಗಳು (ಐಸೋಹೀಮಗ್ಲೂಟಿನಿನ್) ಮಾನವನಲ್ಲಿವೆ. ಇವುಗಳಲ್ಲಿ ಎರಡು ರೋಧಜನಕಗಳ ಅನುಸಾರವಾಗಿ ರಕ್ತದ ನಾಲ್ಕು ಗುಂಪುಗಳು ವಿಂಗಡವಾಗಿವೆ; ಕೆಂಪು ರಕ್ತಕಣಗಳಲ್ಲಿರುವ A ಮತ್ತು B ; ರಕ್ತದ ರಸಿಕೆಯಲ್ಲಿರುವ ಎರಡು ಸರಿರಕ್ತಂಟಣಿಕೆಗಳಾದ A– ರೋಧಕ, B– ರೋಧಕ, ಇದರಂತೆ. ಮಾನವನಲ್ಲಿ 'O' ಗುಂಪಿನಲ್ಲಿ, ಇವೆರಡು ರೋಧಜನಕಗಳೂ ಇರದೆ, ಎರಡು ಅಂಟಣಿಕಗಳು ಇರುತ್ತವೆ ; A ಗುಂಪಿನಲ್ಲಿ, A – ರೋಧಜನಕ B–ರೋಧಕ ಅಂಟಣಿಕಗಳು ಇರುವುವು ; ಹಾಗೇ B ಗುಂಪಿನಲ್ಲಿ B-ರೋಧಜನಕವೂ B- ರೋಧಕ ಅಂಟಣಿಕವೂ ಇರುತ್ತವೆ; A B ಗುಂಪಿನಲ್ಲಾದರೋ ಎರಡು ರೋಧಜನಕಗಳೂ ಇದ್ದು ಯಾವ ಅಂಟಣಿಕವೂ ಇರದು. ಹುಟ್ಟುತ್ತಲೇ ಇವೆಲ್ಲ ಮೈಯಲ್ಲಿ ಇರುವುದರಿಂದ ಇವು ವಿಶಿಷ್ಟ ದರ್ಶಕಗಳು. ಇವೇ ಅಲ್ಲದೆ, ಮಾನವನ ರಕ್ತದ ಕೆಂಪುಕಣಗಳಲ್ಲಿ D, MN, RHO ನಂಥ ಇನ್ನಷ್ಟು ರೋಧಜನಕಗಳಿರುವುದು ಗೊತ್ತಾಗಿದೆ. ಹಾಗೆ ನೋಡಿದರೆ, ಇಂದು ಗೊತ್ತಿರುವ ರೋಧಜನಕಗಳ ಬೇರೆ ಬೇರೆ ಜೋಡಿಗಳಿಂದ ಕೋಟಿಗಟ್ಟಳೆ ರಕ್ತದ ಗುಂಪುಗಳು ಆಗಬಹುದು.

ಮಾನವತಳಿವಿಜ್ಞಾನ ನ್ಯಾಯ ವೈದ್ಯ, ರಕ್ತಪೂರಣೆ, ಹಸುಗೂಸಿನ ರಕ್ತಕಣಲಯ (ಹೀಮೊಲಿಟಿಕ್) ರೋಗಗಳ ನಿಟ್ಟಿನಿಂದ ರಕ್ತದ ಗುಂಪುಗಳು ಮುಖ್ಯ. ಕೂಸು ಹೆತ್ತವರನ್ನು ಗುರುತಿಸಲೂ, ಅಪರಾಧದಲ್ಲಿ ರಕ್ತಕಲೆ ಯಾರದೆಂದು ನಿರ್ಧರಿಸಲೂ ರಕ್ತದ ಗುಂಪುಗಳು ನೆರವಾಗುತ್ತವೆ. ಒಂದಕ್ಕೊಂದು ಹೊಂದಿಕೊಳ್ಳದ ರಕ್ತಗಳನ್ನು ಕೂಡಿಸುವುದರಿಂದ, ರಕ್ತನಾಳದೊಳಗೆ ಅಂಟಣಿಸುವುದರಿಂದಲೇ ಯಾರಿಗಾದರೂ ರಕ್ತ ಕೊಡಲು, ರಕ್ತದಾನಿಯ ಅಲ್ಲದೆ ಪಡೆದವನ ರಕ್ತದ ಗುಂಪುಗಳನ್ನೂ ಮೊದಲು ಕಂಡುಕೊಳ್ಳಲೇಬೇಕು. ಹಸುಗೂಸಿನಲ್ಲಿ ಕಾಣಬರುವ ರಕ್ತಕೊರೆಗೆ ಬಹುಮಟ್ಟಿನ ಕಾರಣ RHO ಇಲ್ಲವೇ D ಎಂಬ ರೋಧಜನಕವೇ. ಇದು ಬಲು ಅಪರೂಪವಾದರೂ ಮಾರಕ ರೋಗ. ತಂದೆಯಿಂದ ಬಂದು ಕೂಸಿನಲ್ಲಿರುವ ರೋಧಜನಕಗಳೊಂದಿಗೆ, ತಾಯಲ್ಲಿ ತಯಾರಾಗುವ ರೋಧವಸ್ತುಗಳು ಎದುರು ವರ್ತಿಸುವುದೇ ಈ ರೋಗದ ಕಾರಣ.

ನೋಡಿ – ರಕ್ತ ; ರಕ್ತದ ಗುಂಪುಗಳು ; ಪ್ರತಿರಕ್ಷಣೆ ; ಪರತಂತ್ರ (ಪರಪಿಂಡಿ) ಜೀವಶಾಸ್ತ್ರ ; ರೋಗಶಾಸ್ತ್ರ ; ಲಸಿಕೆ ರೋಗ ಚಿಕಿತ್ಸೆ ; ಜೀವವಿಷರೋಧಕ.

(ಡಿ.ಎಸ್.ಎಸ್)

**ಅಂಡ:** ಮೊಟ್ಟೆ ಅಥವಾ ತತ್ತಿ ಎಂಬ ಅರ್ಥ ಬಂದರೂ ವೈಜ್ಞಾನಿಕವಾಗಿ ಅದಕ್ಕೆ ಪಕ್ವವಾದ ಹೆಣ್ಣುಸಂಯೋಗಿಜೀವಾಣು ಎಂಬ ಅರ್ಥವಿದೆ. ಅದರ ರಚನೆ ಸಾಮಾನ್ಯವಾದ ಜೀವಕೋಶದಂತೆಯೇ ಇರುತ್ತದೆ. ಆಹಾರ ಸಂಗ್ರಹಣೆಯಿಂದ ಗಾತ್ರ ಸ್ವಲ್ಪ ದೊಡ್ಡದಾಗಿರಬಹುದು. ಕೆಲವು ಸಾರಿ ಅದರ ಸುತ್ತಲೂ ರಕ್ಷಣೆಗಾಗಿ ಉತ್ಪತ್ತಿಯಾದ ಇತರ ರಚನೆಗಳೂ ಇರಬಹುದು. ಅಂಡದ ಕೋಶಕೇಂದ್ರವನ್ನು ಜರ್ಮಿನಲ್ ವೆಸಿಕಲ್ ಎಂದು ಕರೆಯಲಾಗಿದೆ. ವಿವಿಧ ಪ್ರಾಣಿಗಳ ಅಂಡಗಳ ರಚನೆಯಲ್ಲಿ ವೈವಿಧ್ಯತೆ ಕಾಣುತ್ತದೆ.

ಕಪ್ಪೆಯ ಮೊಟ್ಟೆ ರಚನೆಯಲ್ಲಿ ಬಹಳ ಸರಳ. ಆಕಾರದಲ್ಲಿ ಅದರ ಮೊಟ್ಟೆ ಚೆಂಡಿನಂತೆ ದುಂಡಾಗಿದೆ. ಅದರ ಸುತ್ತಲೂ ಜೆಲ್ಲಿಯ ಹೊದಿಕೆಯಿದೆ. ಅದನ್ನು ತೆಗೆದು ಮೊಟ್ಟೆಯನ್ನು ಪರೀಕ್ಷಿಸಿದರೆ ಎರಡು ಭಾಗಗಳನ್ನು ಕಾಣಬಹುದು. ನೀರಿನಲ್ಲಿ ತೇಲುವಾಗ ಮೇಲ್ಭಾಗದಲ್ಲಿರುವ ಕಪ್ಪು ಛಾಯೆಯ ಭಾಗ–ಅದಕ್ಕೆ ಪ್ರಾಣಿಭಾಗ ಎಂದು ಹೆಸರು. ಇದು ಬೆಳವಣಿಗೆಯಲ್ಲಿ ಪ್ರಾಣಿಯ ರೂಪ ರಚನೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ; ಇನ್ನೊಂದು ನೀರಿನಲ್ಲಿ ಮುಳುಗಿ, ಕೆಳಭಾಗದಲ್ಲಿರುವ ಎದುರು ಭಾಗಕ್ಕೆ ಸಸ್ಯಭಾಗ ಎಂದು ಹೆಸರು. ಇದು ಕಪ್ಪೆಯ ಮೊಟ್ಟೆಯ ಭಂಡಾರದ ದೆಸೆಯಿಂದ ತುಸುಹಳದಿ ಬಣ್ಣವಾಗಿ ಕಾಣುತ್ತದೆ. ಈ ಭಾಗ ನೀರಿನಲ್ಲಿ ಮುಳುಗುವುದಕ್ಕೂ ಈ ಭಂಡಾರದ ಭಾರವೇ ಕಾರಣ. ಇದು ಮೊಟ್ಟೆಯಲ್ಲಿ ತಾಯಿ ಸಂಗ್ರಹಿಸಿದ ಆಹಾರ, ಇದನ್ನು ಉಪಯೋಗಿಸಿಕೊಂಡು ಭ್ರೂಣ ಬೆಳೆಯುತ್ತದೆ. ಜರ್ಮಿನಲ್ ವೆಸಿಕಲ್ ಪ್ರಾಣಿಭಾಗದ ಕಡೆಗಿದೆ. ಮೊಟ್ಟೆಯ ಸುತ್ತಲೂ ವೈಟಲೈನ್ ಪಟಲದ ಹೊದಿಕೆ ಇದೆ.

ಇದಕ್ಕಿಂತಲೂ ರಚನೆಯಲ್ಲಿ ಸ್ವಲ್ಪ ಜಟಿಲವಾದ ಮೊಟ್ಟೆಗಳೆಂದರೆ ಪಕ್ಷಿಗಳ ಮೊಟ್ಟೆಗಳು. ಇವು ಗಾತ್ರದಲ್ಲಿ ದೊಡ್ಡವು. ಆಹಾರ ಭಂಡಾರ ಅತಿಯಾಗಿದ್ದು ಅಲ್ಬುಮಿನ್ ಎನ್ನುವ ಶ್ವೇತಭಾಗವು ಇವುಗಳಲ್ಲಿ ಇದೆ. ಸುತ್ತಲೂ ರಕ್ಷಣೆಗಾಗಿ ಸುಣ್ಣದ ಚಿಪ್ಪಿದೆ.

ಮರಿ ಹಾಕುವ ಪ್ರಾಣಿಗಳಲ್ಲಿ ಬೆಳೆಯುವ ಭ್ರೂಣ ತನಗೆ ಬೇಕಾದ ಆಹಾರ ಮತ್ತು ಆಮ್ಲಜನಕವನ್ನು ತಾಯಿಯ ರಕ್ತದಿಂದ ಪಡೆಯುತ್ತದೆ. ಆದುದರಿಂದ ಸ್ತನಿಗಳ ಅಂಡಗಳಲ್ಲಿ ಆಹಾರದ ಸಂಗ್ರಹ ಇರುವುದಿಲ್ಲ. ಅಂಡದ ಸುತ್ತ ಝೋನ ಪೆಲುಸಿಡ ಎಂಬ ಭಿತ್ತಿಯಿದೆ. ಇದಲ್ಲದೆ, ಅಂಡಾಣುವಿನ ಕೋಶಪೊರೆಯಲ್ಲಿರುವ ಕೆಲವು ಪ್ರೋಟೀನ್‌ಗಳು ನಿಷೇಚನ ಸಮಯದಲ್ಲಿ ವೀರ್ಯಾಣುವಿನ ಸಂಪರ್ಕಕ್ಕೆ ಸಹಾಯಕವಾಗಿವೆ.

ಮೊಟ್ಟೆಗಳು ಆಕಾರದಲ್ಲಿ ವಿವಿಧ ರೂಪವನ್ನು ತಾಳುತ್ತವೆ. ಗಾತ್ರದಲ್ಲೂ ವ್ಯತ್ಯಾಸಗಳುಂಟು. ಇಲಿಯದು ಅತಿ ಚಿಕ್ಕ ಮೊಟ್ಟೆ, (ವ್ಯಾಸ 0.6 ಮಿಮೀ) ಉಷ್ಟ್ರ ಪಕ್ಷಿಯ ಮೊಟ್ಟೆ ಕ್ರಿಕೆಟ್ ಚೆಂಡಿನ ಗಾತ್ರವಿರುತ್ತದೆ (85 ಮಿಮೀ ವ್ಯಾಸ). ಎಷ್ಟೇ ಗಾತ್ರ ವಿರಲಿ ಅದರಲ್ಲಿರುವ ಕೋಶದ್ರವ್ಯ (ಸೈಟೋಪ್ಲಾಸಮ್) ಅಂಶ ಮಾತ್ರ ಎಲ್ಲ

ಮೊಟ್ಟೆಗಳಲ್ಲಿಯೂ ಒಂದೆ. ಗಾತ್ರದ ವ್ಯತ್ಯಾಸ ಅದರೊಳಗೆ ಸಂಗ್ರಹವಾಗಿರುವ ಆಹಾರಾಂಶದ ಪ್ರಮಾಣದ ವ್ಯತ್ಯಾಸದಿಂದ ಉಂಟಾಗುತ್ತದೆ.

ಮೊಟ್ಟೆಯ ಸುತ್ತಲೂ ಪ್ಲಾಸ್ಮಾ ಪೊರೆ ಇದೆ. ಇದರ ಸುತ್ತಲೂ ವೈಟಿಲೈನ್ ಪೊರೆಯಿದೆ. ಗರ್ಭಕಟ್ಟಿದ ಮೊಟ್ಟೆಗಳಲ್ಲಿ ಗರ್ಭಾಧಾನ ಪೊರೆ ಇರುತ್ತದೆ. ಮೊಟ್ಟೆಯ ಒಳಗಿರುವ ವಿವಿಧ ರೀತಿಯ ಆಹಾರಕ್ಕೆ ಡ್ಯೂಟೋಪ್ಲಾಸಮ್ ಎಂದು ಹೆಸರು. ಇದರಲ್ಲಿ ಅನ್ನಾಂಗಗಳು, ಪ್ರೋಟೀನುಗಳು, ಭಂಡಾರ– ಮುಂತಾದುವು ಇರುತ್ತವೆ. ಅನೇಕ ಮೊಟ್ಟೆಗಳು ಬಣ್ಣಬಣ್ಣವಾಗಿರುತ್ತವೆ.

ಮೊಟ್ಟೆಯೊಳಗಣ ಭಂಡಾರದ ಹಂಚಿಕೆ ಅನುಸರಿಸಿ ಮೊಟ್ಟೆಗಳನ್ನು ಮೂರು ರೀತಿಯಾಗಿ ವಿಂಗಡಿಸಬಹುದು. ಮೊಟ್ಟೆಯಲ್ಲಿ ಎಲ್ಲಾ ಭಾಗದಲ್ಲಿಯೂ ಸಮವಾಗಿ ಭಂಡಾರ ಹರಡಿದ್ದರೆ ಹೋಮೋಲೆಸಿತಲ್, ಭಂಡಾರ ಮೊಟ್ಟೆಯ ನಡುಭಾಗದಲ್ಲಿದ್ದು ಅದರ ಸುತ್ತಲೂ ಕೋಶದ್ರವ ಇರುವ ಕೀಟಗಳ ಮೊಟ್ಟೆಗೆ ಸೆಂಟ್ರೋಲಿಸಿತಲ್. ಕಪ್ಪೆಯ ಮೊಟ್ಟೆಯಲ್ಲಿ ಭಂಡಾರ ಪ್ರಾಣಿಭಾಗದಲ್ಲಿ ಕೇಂದ್ರೀಕೃತವಾಗಿರುವದರಿಂದ ಟೀಲೋಲಿಸಿತಲ್, ಎಂದು ಹೆಸರಿಸಲಾಗಿದೆ. ಪಕ್ಷಿಯ ಮೊಟ್ಟೆಗಳಲ್ಲಿ ಭಂಡಾರ ಪೂರ್ಣ ತುಂಬಿದ್ದು ಪ್ರಾಣಿಯಾಗಿ ಬೆಳೆಯುವ ವಸ್ತು ಕೇವಲ ಒಂದು ಚುಕ್ಕಿಯಂತಿರುತ್ತದೆ. ಈ ಮೊಟ್ಟೆಗಳಿಗೆ ಮೆಗಾಲಿಸಿತಲ್ ಎಂತಲೂ ಹೆಸರು. ಈ ಭಂಡಾರ ಕಟ್ಟೆಗಳ ರೂಪದಲ್ಲಿರಬಹುದು ಅಥವಾ ಕಾಳುಗಳ ರೂಪದಲ್ಲಿರಬಹುದು.

ಮೊಟ್ಟೆಯಲ್ಲಿರುವ ಅಥವಾ ಅದರ ಸುತ್ತಲೂ ಇರುವ ಪಟಲಗಳನ್ನು ಅವು ತಾಯಿಯ ದೇಹದಲ್ಲಿ ಉಂಟಾದ ಸ್ಥಳ ಮತ್ತು ರೀತಿಗಳನ್ನನುಸರಿಸಿ ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ.

1. ಪ್ರಥಮ ಪಟಲಗಳು – ಇವು ಮೊಟ್ಟೆಯ ಭಾಗಗಳೆ. ಉದಾ: ವೈಟಿಲೈನ್ ಪಟಲ
2. ದ್ವಿತೀಯ ಪಟಲಗಳು– ಗರ್ಭದಲ್ಲಿ ಮೊಟ್ಟೆಗಳು ಬೆಳೆಯುವ ಕಾಲದಲ್ಲಿ ಫಾಲಿಕಲ್ ಜೀವಕಣಗಳು ಕೆಲವು ಕೀಟಗಳಲ್ಲಿ ಗಟ್ಟಿಯಾದ ಹೊದಿಕೆಗಳನ್ನು ಉಂಟುಮಾಡುತ್ತವೆ.
3. ತೃತೀಯ ಪಟಲಗಳು – ಇವು ಗರ್ಭದಲ್ಲಿ ಉತ್ಪತ್ತಿಯಾಗದೆ, ಮೊಟ್ಟೆ ಗರ್ಭವನ್ನು ಬಿಟ್ಟು ಹೊರಗೆ ಹೋಗುವ ಹಾದಿಯಲ್ಲಿ ಓವಿಡಕ್ಟ್ ನಾಳದಲ್ಲಿ ಉತ್ಪತ್ತಿಯಾಗುತ್ತವೆ. ಉದಾ: ಕೋಳಿ ಮೊಟ್ಟೆ ; ಮೊಟ್ಟೆಯ ಶ್ವೇತಭಾಗ ಮತ್ತು ಚಿಪ್ಪುಗಳು.

ಪ್ರಾಣಿಗಳ ಮೊಟ್ಟೆಗಳನ್ನು ಸಮೀಕ್ಷೆ ಮಾಡಿದರೆ ಒಂದು ರೀತಿಯ ವಿಕಸನ ಕಂಡುಬರುತ್ತದೆ.

ಸಾಮಾನ್ಯವಾಗಿ ನೀರಿನಲ್ಲಿ ಬೆಳೆಯುವ ಮೊಟ್ಟೆಗಳು ಗಾತ್ರದಲ್ಲಿ ದೊಡ್ಡವಲ್ಲ. ಕಾರಣ, ಆಹಾರ ಸಂಗ್ರಹಣೆ ಹೆಚ್ಚು ಇರುವುದಿಲ್ಲ. ಏಕೆಂದರೆ ಸುತ್ತಲಿರುವ ನೀರಿನಿಂದಲೇ ಬೆಳೆಯುತ್ತಿರುವ ಭ್ರೂಣ ತನಗೆ ಬೇಕಾದ ಆಹಾರ ಮತ್ತು ನೀರನ್ನು ಸುಲಭವಾಗಿ ಪಡೆಯುತ್ತದೆ. ಆದುದರಿಂದ ತಾಯಿ ಆಹಾರ ಸಂಗ್ರಹಣೆ ಅಷ್ಟಾಗಿ ಮಾಡುವುದಿಲ್ಲ. ಈ ರೀತಿಯ ಪ್ರಾಣಿಗಳು ಒಂದು ಸಾರಿಗೆ ಸಾವಿರಾರು ಮೊಟ್ಟೆಗಳನ್ನಿಡುತ್ತವೆ. ತಾಯಿ ತಂದೆಗಳು ಮೊಟ್ಟೆಗಳ ಬಗ್ಗೆ ಯಾವ ರೀತಿಯ ಗಮನವನ್ನು ತೆಗೆದುಕೊಳ್ಳುವುದಿಲ್ಲ. ಪ್ರಕೃತಿಯೇ ಇವನ್ನು ಕಾಪಾಡುತ್ತದೆ. ಆದರೂ ಇವುಗಳಲ್ಲಿ ಹೆಚ್ಚಿನ ಮೊಟ್ಟೆಗಳು ಶತ್ರುಗಳಿಗೆ ಆಹಾರವಾಗುತ್ತವೆ. ಬೆಳೆದು ಮರಿಗಳಾಗುವ ಮೊಟ್ಟೆಗಳ ಸಂಖ್ಯೆ ಕಡಿಮೆ.

ನೆಲದ ಮೇಲೆ ಇಡುವ ಮೊಟ್ಟೆಗಳು ಗಾತ್ರದಲ್ಲಿ ದೊಡ್ಡವಾಗಿರುತ್ತವೆ. ನೀರಿನಲ್ಲಿಟ್ಟ ಮೊಟ್ಟೆಗಳಲ್ಲಿ ನೀರೇ ಒಂದು ರೀತಿಯ ರಕ್ಷಣೆಯನ್ನು ಕೊಡುತ್ತದೆ. ಆದರೆ, ನೆಲದ ಮೇಲೆ ಇಟ್ಟ ಮೊಟ್ಟೆಗಳು ಸೂರ್ಯನ ಬಿಸಿಲಿನ ಬೇಗೆ, ಬಿರುಗಾಳಿಯ ಬಿರುಸು ಮುಂತಾದುವನ್ನು ಎದುರಿಸಬೇಕು. ಬಿಸಿಲಿನ ಬೇಗೆಯಿಂದ ರಕ್ಷಿಸಲು ಮೊಟ್ಟೆಗಳಿಗೆ ಸುಣ್ಣದ ಚಿಪ್ಪಿದೆ. ಅದರಿಂದ ಒಳಗಿರುವ ನೀರು ಆವಿಯಾಗಿ ಹೋಗಲಾರದು. ಜೊತೆಗೆ ಅದು ಒಳಗಿರುವ ಭ್ರೂಣವನ್ನು ಬಿಸಿಲಿನ ಬೇಗೆ, ಬಿರುಗಾಳಿಯ ಬಿರುಸಿನಿಂದ ರಕ್ಷಿಸುತ್ತದೆ. ಪ್ರಾಣಿಗಳು ನೀರನ್ನು ಪೂರ್ಣವಾಗಿ ತ್ಯಜಿಸಿ ನೆಲದ ಮೇಲೆ ಜೀವಿಸಲು ಇದು ಮುಖ್ಯವಾಗಿ ಸಹಕಾರಿಯಾಯಿತು.

ನೆಲದ ಮೇಲೆ ನೀರಿನಂತೆ ಆಹಾರ ದೊರಕುವುದಿಲ್ಲ. ಆದ್ದರಿಂದ ಮೊಟ್ಟೆಯಲ್ಲಿಯೇ ಆಹಾರವನ್ನು ಸಂಗ್ರಹಿಸಬೇಕಾಯಿತು. ನೀರಿನಲ್ಲಿ ಬೆಳವಣಿಗೆಯ ಮಧ್ಯೆ, ಪೂರ್ಣವಾಗಿ ಬೆಳೆಯದ ಭ್ರೂಣ ಅಥವಾ ಡಿಂಬ (ಕಪ್ಪೆಯ ಗೋದಮೊಟ್ಟೆ) ಸ್ವತಂತ್ರ ಜೀವನ ನಡೆಸಿ ಆಹಾರಗಳಿಸಿ ಬೆಳೆಯಬಹುದು. ಇದು ನೆಲದಮೇಲೆ ಸಾಧ್ಯವಿಲ್ಲ. ಪೂರ್ಣವಾಗಿ ಮರಿ ಮೊಟ್ಟೆಯ ಚಿಪ್ಪಿನ ಒಳಗೆ ಬೆಳೆಯಬೇಕು. ಹೀಗೆ ಬೆಳೆಯಲು ಕಾಲ ಹೆಚ್ಚುತ್ತದೆ. ಆದುದರಿಂದ ಮೊಟ್ಟೆಗಳ ಗಾತ್ರ ಹೆಚ್ಚುತ್ತದೆ. ಇದರೊಡನೆ ಅವುಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಇಡುವ ಮೊಟ್ಟೆಗಳ ಸಂಖ್ಯೆ ಕಡಿಮೆಯಾದುದರಿಂದ ಈ ಮೊಟ್ಟೆಗಳು ಈ ಪ್ರಾಣಿಗಳಿಗೆ ಬಹಳ ಮುಖ್ಯವಾದುವು. ನೀರಿನ ಪ್ರಾಣಿಗಳಂತೆ ಅವುಗಳನ್ನು ಪ್ರಕೃತಿಯ ಕೃಪಾಕಟಾಕ್ಷಕ್ಕೆ ಬಿಡುವಂತಿಲ್ಲ. ಆದುದರಿಂದ ತಾಯಿ ತಂದೆ ಅವುಗಳ ರಕ್ಷಣೆಯ ಭಾರವನ್ನು ಹೊರುತ್ತವೆ. ಹೀಗೆ ಸ್ವತಃ ಸಾಮರ್ಥ್ಯವನ್ನು ಹೊಂದಿ ಸನ್ನಿವೇಶದಿಂದ ಸ್ವತಂತ್ರವಾಗಿ ಬೆಳೆಯುವ ಮೊಟ್ಟೆಗಳಿಗೆ ಕ್ಲೈಡೋಯಿಕ್ ಮೊಟ್ಟೆಗಳೆಂದು ಹೆಸರು. ಎಲ್ಲಕ್ಕೂ ಸನ್ನಿವೇಶ ಅವಲಂಬಿಸಿರುವ ನೀರಿನ ಮೊಟ್ಟೆಗಳಿಗೆ ನಾನ್ ಕ್ಲೈಡೋಯಿಕ್ ಮೊಟ್ಟೆಗಳೆಂದು ಹೆಸರು. ಇದರಿಂದ ಬಹಳ ಮುಂದುವರಿದ ಪ್ರಾಣಿಗಳಲ್ಲಿ ಹೆಚ್ಚು ಗಾತ್ರದ ಮೊಟ್ಟೆಗಳಿವೆ ಎಂಬುದು ತಿಳಿಯುತ್ತದೆ. ಈಜುವ ಪ್ರಾಣಿಗಳಾದ ಸ್ತನಿಗಳ ಮೊಟ್ಟೆಗಳು ಇದಕ್ಕೆ ಅಪವಾದ. ಈ ಮೊಟ್ಟೆಗಳಲ್ಲಿ ಯಾವ ರೀತಿಯ ಆಹಾರ ಸಂಗ್ರಹಣೆಯೂ ಇಲ್ಲ. ಏಕೆಂದರೆ ತಮಗೆ ಅವಶ್ಯಕವಾದುದೆಲ್ಲವನ್ನೂ ಅವು ತಾಯಿಯ ಗರ್ಭದಿಂದ ಪಡೆಯುತ್ತವೆ.

ಇತ್ತೀಚೆಗೆ ಪ್ರಾಯೋಗಿಕವಾಗಿ ಮೊಟ್ಟೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಕೆಲವು ಮೊಟ್ಟೆಗಳ ಭಾಗಗಳನ್ನು ಆಕಸ್ಮಿಕವಾಗಿಯೋ, ಪ್ರಾಯೋಗಿಕವಾಗಿಯೋ ಕತ್ತರಿಸಿ ತೆಗೆದರೆ ಆಗ ಅದರಿಂದ ಬೆಳೆಯುವ ಭ್ರೂಣದಲ್ಲಿ ಕೆಲವು ಭಾಗಗಳಿರುವುದಿಲ್ಲ. ಇಂಥ ಮೊಟ್ಟೆಗಳಿಗೆ ಮೊಸಾಯಿಕ್ ಮೊಟ್ಟೆಗಳೆಂದು ಹೆಸರು. ಇವುಗಳಲ್ಲಿ ಮೊಟ್ಟೆಯಲ್ಲಿಯೇ ಮುಂದೆ ಬೆಳೆಯಬಹುದಾದ ಅಂಗಾಂಗಗಳ ಭ್ರೂಣ ವಿಂಗಡಣೆ ಇರುತ್ತದೆ. ಇವು ಕಡಿಮೆ (ಉದಾ: ಡೆಂಟೇಲಿಯಂ ಮತ್ತು ಕೀಟಾಪ್ಟರಿಸ್ ಮೊಟ್ಟೆಗಳು). ಮಿಕ್ಕ ಮೊಟ್ಟೆಗಳು ಭಾಗಗಳನ್ನು ಕಳೆದುಕೊಂಡರೂ ಪೂರ್ಣವಾಗಿ ಬೆಳೆಯುತ್ತವೆ. ಇವು ಕಳೆದುಕೊಂಡ ಭಾಗಗಳನ್ನು ಸವರಿಸಿಕೊಂಡು ಬೆಳೆಯುತ್ತವೆ. ಇವಕ್ಕೆ ನಿಯಂತ್ರಿತ (ರೆಗ್ಯುಲೇಟಿವ್) ಮೊಟ್ಟೆಗಳೆಂದು ಹೆಸರು (ನೋಡಿ – ಭ್ರೂಣ ಶಾಸ್ತ್ರ).

ಆಮೆ, ಮೊಸಳೆ, ಸ್ಟರ್ಜನ್ ಎಂಬ ಮೀನು ಮುಂತಾದ ಪ್ರಾಣಿಗಳ ಮತ್ತು ಕೆಲವು ಜಾತಿ ಪಕ್ಷಿಗಳ ಮೊಟ್ಟೆಗಳನ್ನು ಮನುಷ್ಯ ಆಹಾರವಾಗಿ ಸೇವಿಸಿದ್ದುಂಟು. ಕಾಡುಪಕ್ಷಿಗಳ ಗೂಡಿನಿಂದ ತಂದೋ ಪಕ್ಷಿಗಳನ್ನು ಸಾಕಿಯೋ ಮೊಟ್ಟೆ ಪಡೆದು ಅವುಗಳನ್ನು ಸೇವಿಸುತ್ತಿದ್ದ. ಈಗ ಪಕ್ಷಿ ಸಾಕಣೆ ಬಹಳ ಮುಂದುವರಿದಿದೆ. ಇತ್ತೀಚೆಗಂತೂ ಕೋಳಿ ಮೊಟ್ಟೆಯ ಬಳಕೆ ಹೆಚ್ಚಾಗಿದ್ದು, ಅದನ್ನು ಪಡೆಯುವ ಸಲುವಾಗಿಯೇ ಪ್ರಪಂಚದ ನಾನಾ ಭಾಗಗಳಲ್ಲಿ ಕೋಳಿ ಸಾಕಣೆ ಕೇಂದ್ರಗಳು ಅಧಿಕ ಸಂಖ್ಯೆಯಲ್ಲಿ ತೆರೆಯಲ್ಪಟ್ಟಿವೆ. ಇದರಿಂದ ಉತ್ಪತ್ತಿಯಾಗುವ ವರಮಾನವು ಅಧಿಕವಾಗಿದೆ. ಕೋಳಿ ಸಾಕಣೆ, ಅವುಗಳಿಡುವ ಮೊಟ್ಟೆಯ ವರ್ಗೀಕರಣ, ಸಂರಕ್ಷಣೆ ಹಾಗೂ ಸಂಸ್ಕರಣ– ಈ ಮೊದಲಾದ ವಿಧಾನಗಳನ್ನು ಜನರಿಗೆ ತಿಳಿಸಿಕೊಡುವುದಕ್ಕಾಗಿಯೇ ಅನೇಕ ತರಬೇತಿ ಕೇಂದ್ರಗಳು ಸ್ಥಾಪಿತವಾಗಿವೆ. ಇದೇ ರೀತಿ ಬಾತು ಮೊಟ್ಟೆಗಳನ್ನು ಹಲವರು ಸೇವಿಸುತ್ತಾರೆ. ಇಂಥ ಮೊಟ್ಟೆಗಳನ್ನು ಸೇವಿಸುವುದರಿಂದ ದೇಹಪೋಷಣೆಗೆ ಬೇಕಾದ ಪ್ರೋಟೀನು ಮೊದಲಾದ ಪೌಷ್ಟಿಕಾಂಶಗಳು ದೊರಕುತ್ತವೆ ಎಂಬುದು ವೈದ್ಯಶಾಸ್ತ್ರಜ್ಞರ ಅಭಿಪ್ರಾಯ. ನೋಡಿ– ಜೀವಾತುಗಳು.

(ಹೆಚ್.ಬಿ.ಡಿ)

**ಅಂಡಜರತ್ವ:** ಪ್ರಾಣಿಗಳಲ್ಲಿ ಅವುಗಳ ಸಂತಾನೋತ್ಪತ್ತಿ ವಿಧಾನವನ್ನನುಸರಿಸಿ ಎರಡು ರೀತಿಯ ಗುಂಪುಗಳಿವೆ. ಮೊಟ್ಟೆಗಳನ್ನಿಡುವ ಅಂಡಜಗಳು ಮತ್ತು ಮರಿಗಳನ್ನು ಈಯುವ ಜರಾಯುಜಗಳು. ಮೊಟ್ಟೆಯಿಡುವ ಕ್ರಿಯಾವಿಶೇಷವನ್ನು ಅಂಡಜರತ್ವ (ಒವಿಪ್ಯಾರಿಟಿ) ಎಂದು ಕರೆಯಲಾಗಿದೆ. ಬಹುಪಾಲು ಅಕಶೇರುಕಗಳು ಮತ್ತು ಸ್ತನಿಗಳನ್ನುಳಿದು ಉಳಿದ ಕಶೇರುಕಗಳೆಲ್ಲವೂ (ಕೆಲವು ಅಪವಾದಗಳನ್ನು ಹೊರತು ಪಡಿಸಿ) ಅಂಡಜಗಳು. ಆದುದರಿಂದ ಮೊಟ್ಟೆಗಳನ್ನು ಒಡೆದು ಮರಿಗಳು ಹೊರಬರುವುದು ಅಂಡಜರತ್ವದ ಪ್ರಧಾನ ಲಕ್ಷಣ. ಪ್ರಾಣಿಗಳ ಈ ಅಂಡಜರತ್ವ ಲಕ್ಷಣವನ್ನು ಪರಿಗಣಿಸಿದರೆ ಕೆಲವೊಂದು ಮುಖ್ಯ ಅಂಶಗಳನ್ನು ಮನಗಾಣಬಹುದು. ಕಡಲಿನಲ್ಲಿ ಮೊಟ್ಟೆಯಿಡುವ ಬಹುಪಾಲು ಅಕಶೇರುಕಗಳು ಅಸಂಖ್ಯಾತ ಮೊಟ್ಟೆಗಳನ್ನಿಡುತ್ತವೆ. ಅವು ಗಾತ್ರದಲ್ಲಿ ಚಿಕ್ಕದ್ದಾಗಿದ್ದು ಸಾಮಾನ್ಯವಾಗಿ ಅವುಗಳ ಜೀವನ ಚರಿತ್ರೆಯಲ್ಲಿ ಡಿಂಬ (ಲಾರ್ವ) ಅವಸ್ಥೆ ಇರುತ್ತದೆ. ಮೊಟ್ಟೆಗಳಲ್ಲಿ ಬೆಳೆಯುವ ಭ್ರೂಣಕ್ಕೆ ಒದಗಬಹುದಾದ ಸಂಚಿತ ಆಹಾರದ ಸಂಗ್ರಹಣೆ ತುಂಬಾ ಕಡಿಮೆ, ಅಥವಾ ಇಲ್ಲವೇ ಇಲ್ಲ. ಆದುದರಿಂದಲೆ ಅವು ಅಸಂಖ್ಯಾತ ಮೊಟ್ಟೆಗಳನ್ನು ಇಡಲು ಸಾಧ್ಯ. ನೀರಿನಲ್ಲಿ ಈ ಮೊಟ್ಟೆಗಳು ರಕ್ಷಣೆ ಮತ್ತು ಪೋಷಣೆ ಇವೆರಡನ್ನೂ ಪಡೆದು ಬೆಳೆಯುತ್ತವೆ ಮತ್ತು ಅರ್ಧ ಬೆಳೆವಣಿಗೆಯಲ್ಲಿಯೇ ಮೊಟ್ಟೆಯಿಂದ ಹೊರಬಿದ್ದು, ಡಿಂಬ (ಲಾರ್ವ) ರೂಪದಲ್ಲಿ ಅಗತ್ಯವಾದ ಆಹಾರವನ್ನು ಪಡೆದುಕೊಂಡು ಬೆಳೆದು, ರೂಪ ಪರಿವರ್ತನೆಗೊಂಡು ಪ್ರಬುದ್ಧ ಪ್ರಾಣಿಯಾಗಿ ರೂಪುಗೊಳ್ಳುತ್ತವೆ. ಕಶೇರುಕಗಳಲ್ಲಿ ಮೀನುಗಳಿಂದ ಸರೀಸೃಪ ಮತ್ತು ಪಕ್ಷಿಗಳವರೆಗೆ ಪರೀಶೀಲಿಸಿದಾಗ ಮೊಟ್ಟೆಗಳ ಸಂಖ್ಯೆ ಕಡಿಮೆಯಾಗುವುದು ಮತ್ತು ಮೊಟ್ಟೆಗಳ ಗಾತ್ರ ಹೆಚ್ಚಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ತಮ್ಮ ಸಂತತಿಯಲ್ಲಿ ಪ್ರಾಣಿಗಳು ವಹಿಸುತ್ತಿರುವ ಆಸಕ್ತಿ. ಇದರಿಂದಾಗಿ ಅವು ಮೊಟ್ಟೆಗಳಲ್ಲಿ ಹೆಚ್ಚು ಆಹಾರವನ್ನು ಕೂಡಿಟ್ಟು ಮರಿಗಳ ಬೆಳೆವಣಿಗೆಯು ಸುತ್ತಲ ಸನ್ನಿವೇಶದಿಂದ ಸ್ವತಂತ್ರವಾಗುವತ್ತ ನೆರವಾಗುತ್ತವೆ. ಇಲ್ಲಿಯೂ ಕೂಡ ಬೆಳೆವಣಿಗೆಯ ಕಾಲದಲ್ಲಿ ಡಿಂಬ

ಅವಸ್ಥೆ ಇದ್ದು ನೆರವಾಗಬಹುದು. ಹೆಚ್ಚು ಆಹಾರ ಸಂಗ್ರಹಣೆ ಇಲ್ಲದೆ ಪೂರ್ಣವಾಗಿ ಅಥವಾ ಆಂಶಿಕವಾಗಿ ಪರಿಸರವನ್ನೇ ಅವಲಂಬಿಸುವ ತತ್ತಿಗಳನ್ನು ನಾನ್ ಕ್ಲೈಡೋಯಿಕ್ ತತ್ತಿಗಳೆನ್ನುತ್ತಾರೆ. ಕಶೇರುಕಗಳು ನೆಲದ ಮೇಲೆ ವಾಸಿಸ ತೊಡಗಿದಾಗ ತತ್ತಿಗಳಿಗೆ ರಕ್ಷಣೆ ಮತ್ತು ಆಹಾರಗಳೆರಡನ್ನು ಒದಗಿಸುವುದು ಅಗತ್ಯವಾಯ್ತು. ಆದುದರಿಂದಲೇ ನೆಲದ ಮೇಲಿನ ಕಶೇರಕುಗಳಾದ ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ ಮೊಟ್ಟೆಗಳ ಸಂಖ್ಯೆ ಕಡಿಮೆಯಾಗಿ ಅವುಗಳ ಗಾತ್ರ ಹೆಚ್ಚಾಗಿದೆ. ಮೊಟ್ಟೆಗಳ ಸುತ್ತ ಪ್ರಕೃತಿಯ ವಿಕೋಪ ವಾತಾವರಣದಿಂದ ರಕ್ಷಿಸುವ ಸಮರ್ಥ ಚಿಪ್ಪೊಂದಿದ್ದು ಬೆಳವಣಿಗೆಯ ಕಾಲಕ್ಕೆ ಅಗತ್ಯವಾಗುವ ಪೋಷಕಾಂಶಗಳು ಮತ್ತು ನೀರನ್ನು ಪೂರ್ತಿಯಾಗಿ ಮೊಟ್ಟೆಗಳಲ್ಲಿಯೆ ಸಂಗ್ರಹಿಸಿಟ್ಟಿರುತ್ತವೆ ಇದರಿಂದಾಗಿ ಅವುಗಳ ಗಾತ್ರ ದೊಡ್ಡದಾಗುತ್ತದೆ. ಈ ತತ್ತಿಗಳಿಗೆ ಕ್ಲೈಡೋಯಿಕ್ ತತ್ತಿಗಳೆಂದು ಹೆಸರು. ಅವು ಆಮ್ಲಜನಕದ ಅಗತ್ಯದ ವಿನಹ ಉಳಿದೆಲ್ಲ ಅಂಶಗಳಲ್ಲಿ ಪರಿಸರದಿಂದ ಸ್ವತಂತ್ರವಾಗಿ ಬೆಳೆಯುತ್ತವೆ. ಹೀಗೆ ಅಗತ್ಯವನ್ನನುಸರಿಸಿ ಕಂಡುಬರುವ ಹೊಂದಾಣಿಕಾ ಮಾರ್ಪಾಡುಗಳು ಪ್ರತಿಯೊಂದು ಗುಂಪಿನಲ್ಲಿಯೂ ವಿಶಿಷ್ಟವಾಗಿದ್ದು ವಿವಿಧರೂಪ ತಾಳುತ್ತವೆ. ನೀರಿನಿಂದ ಹೊರಬಂದು ಸ್ವತಂತ್ರ ಜೀವನ ಆರಂಭಿಸಿದ ನೆಲದ ಮೇಲಿನ ಕಶೇರುಕಗಳು ಕ್ಲೈಡೊಯಿಕ್ ತತ್ತಿಗಳನ್ನಿಡುವ ಕ್ರಮವನ್ನು ರೂಢಿಸಿಕೊಂಡರೆ ನೆಲದ ಮೇಲಿನ ಜೀವನಕ್ಕೆ ಸಮರ್ಥ ರೀತಿಯಲ್ಲಿ ಹೊಂದಿಕೊಂಡ ಕೀಟಗಳು ಮತ್ತೊಂದು ವಿಧಾನವನ್ನು ಅನುಸರಿಸಿದವು. ಮೊಟ್ಟೆಗಳನ್ನು ಆಹಾರ ದೊರಕುವ ಸ್ಥಳಗಳ ಬಳಿ ಅಥವಾ ಆಹಾರವನ್ನು ಒದಗಿಸಿದ ತತ್ತಿಕೋಶಗಳಲ್ಲಿ ಮೊಟ್ಟೆಗಳನ್ನಿಡುತ್ತವೆ ಮತ್ತು ಕೆಲವೊಮ್ಮೆ ಸಂತಾನಗಳ ರಕ್ಷಣೆಗೂ ತೊಡಗುತ್ತವೆ. ಇದು ಅಂಡಜರತ್ವದ ಪ್ರಭಾವ. (ಎಚ್.ಎಚ್.ಎಸ್.)

**ಅಂಡಜರಾಯತ್ವ:** ಮರಿಗಳನ್ನು ಈಯುವ ಪ್ರಾಣಿಗಳಿಗೆ ಮತ್ತು ಮೊಟ್ಟೆಗಳನ್ನಿಡುವ ಅಂಡಜಗಳಿಗೆ ನಡುವೆ ಮೊಟ್ಟೆ ಉತ್ಪತ್ತಿಮಾಡಿ ಅದನ್ನು ತಕ್ಷಣ ದೇಹದಿಂದ ಹೊರಕ್ಕೆ ಹಾಕದೆ ಪೂರ್ಣವಾಗಿ ಅಥವಾ ಬೆಳವಣಿಗೆಯ ಸ್ವಲ್ಪ ಕಾಲದವರೆಗಾದರೂ ಪಿತೃವಿನ ದೇಹದಲ್ಲಿಯೇ ಉಳಿಸಿಕೊಂಡು ತಮ್ಮ ಸಂತಾನದ ರಕ್ಷಣೆಯ ಕಡೆಗೆ ಗಮನಕೊಡುವ ಬೆಳವಣಿಗೆಯ ವಿಧಾನ (ಅಪ್ಲೆಸಿಂಟಲ್ ವಿವಿಪ್ಯಾರಿಟಿ). ಏರಿಯನ್ ಜೆಲ್ಲ ಎಂಬ ಮೀನು ಮೊಟ್ಟೆಗಳು ಒಡೆದು ಮರಿಗಳಾಗಿ, ಮರಿಗಳು ಸ್ವರಕ್ಷಣೆಗೆ ಸಮರ್ಥವಾಗುವವರೆಗೆ ಮೊಟ್ಟೆ ಮತ್ತು ಎಳೆಯ ಮರಿಗಳನ್ನು ಬಾಯಿಯಲ್ಲಿಟ್ಟುಕೊಂಡು ರಕ್ಷಿಸುತ್ತದೆ. ಸಂತಾನ ರಕ್ಷಣೆಗೆ ಹೆಸರಾದ ಕಡಲು ಕುದರೆ ಮೀನಿನ ಗಂಡುಗಳಲ್ಲಿ ಸಂತಾನ ಸಂಚಿ ಇದ್ದು, ಅವು ಮೊಟ್ಟೆ ಮತ್ತು ಮರಿಗಳನ್ನು ಸಂಚಿಯಲ್ಲಿಟ್ಟುಕೊಂಡು ರಕ್ಷಿಸುತ್ತವೆ. ಶಾರ್ಕ್ ಮೀನುಗಳಲ್ಲಿ ಮೊಟ್ಟೆಗಳು ಅಂಡನಾಳದಲ್ಲಿಯೇ ಉಳಿದು ಬೆಳೆಯುತ್ತವೆ. ಬೆಳವಣಿಗೆಯ ಕಡೆಯ ಹಂತಗಳಲ್ಲಿ ಮೊಟ್ಟೆಗಳಲ್ಲಿದ್ದ ಆಹಾರವೆಲ್ಲ ಮುಗಿದ ಮೇಲೆ ಅಂಡನಾಳದ ಅಂಗಾಂಶದೊಂದಿಗೆ ಒಂದು ರೀತಿಯ ತತ್ಕಾಲದ ಸಂಬಂಧ ಬೆಳೆದು ಆಹಾರ ಪಡೆಯುತ್ತವೆ. ಕಪ್ಪೆಗಳಲ್ಲಿಯೂ ಈ ವಿಧಾನವನ್ನು ಕಾಣಬಹುದು. ಮೊಟ್ಟೆಗಳು ಬೆಳೆದು ಮರಿಗಳಾಗುವವರೆಗೆ ಮೊಟ್ಟೆಗಳ ಸರವನ್ನು ಕಾಲುಗಳ ಸುತ್ತ ಸುತ್ತಿಕೊಂಡು ರಕ್ಷಿಸುವ ಯುರೋಪಿನ ಅಲೈಟಿಸ್ ಅಥವಾ ಸೂಲಗಿತ್ತಿ ಕಪ್ಪೆ ಇದಕ್ಕೊಂದು ಉದಾಹರಣೆ. ಈ ಕಪ್ಪೆಗಳಲ್ಲಿ ಗೊದಮಾವಸ್ಥೆಯೂ ಕೂಡ ತತ್ತಿಕೋಶದ ಒಳಗೆಯೇ ಕಳೆದು ಹೋಗುತ್ತದೆ. ಅಮೇರಿಕಾದ  ಪೈಪಾ ಅಮೇರಿಕಾನ ಕಪ್ಪೆ ಮೊಟ್ಟೆಗಳನ್ನು ತನ್ನ ಬೆನ್ನಮೇಲಿನ ಸಂಚಿಗಳಲ್ಲಿ ಹೊತ್ತು ರಕ್ಷಿಸುತ್ತದೆ. ರೈನೊಡರ್ಮ ಡಾರ್ವಿನಿ ಎಂಬ ಕಪ್ಪೆಯ ಗಂಡುಗಳು ಸ್ವರ ಸಂಚಿಯಲ್ಲಿ ಮೊಟ್ಟೆಗಳನ್ನಿಟ್ಟುಕೊಂಡು ರಕ್ಷಿಸುತ್ತವೆ.

ಸರೀಸೃಪಗಳಲ್ಲಿ ಉತ್ಕೃಷ್ಟ ರೀತಿಯ ಸಿದ್ಧತೆ ಮತ್ತು ವಿಧಾನಗಳನ್ನು ಕಾಣಬಹುದು. ನಿಯಮವೊ ಎಂಬಂತೆ ಎಲ್ಲ ಹಲ್ಲಿ ಜಾತಿಗಳು ಈ ವಿಧಾನವನ್ನು ಪ್ರದರ್ಶಿಸುತ್ತವೆ. ಇದು ಆಮೆ ಹಾವು ಮತ್ತು ಹಲ್ಲಿಗಳಲ್ಲಿಯೂ ಇರುವುದಾಗಿ ಕಂಡು ಬರುತ್ತದೆ. ಹಲ್ಲಿಗಳ ಅಂಡಾಶಯದಿಂದ ಹೊರಬಿದ್ದ ತತ್ತಿಗಳು ಚಿಪ್ಪಿನ ಸಮೇತ ಅಂಡಾನಾಳದಲ್ಲಿ 25 ರಿಂದ 45 ದಿನಗಳವರೆಗೆ ಉಳಿಯುತ್ತವೆ. ಆ ಕಾಲದಲ್ಲಿ ಬೆಳವಣಿಗೆಯ ಬಹುಭಾಗ ಮುಗಿದು ಹೋಗುತ್ತದೆ. ಮೊಟ್ಟೆಯನ್ನು ಹೊರಕ್ಕೆ ಇಟ್ಟ ಕೆಲವಾರು ದಿನಗಳಲ್ಲಿಯೇ ಮೊಟ್ಟೆಗಳು ಒಡೆದು ಮರಿಗಳು ಹೊರಬೀಳುತ್ತವೆ. ಹೀಗೆ ಅನ್ನನಾಳದಲ್ಲಿ ತತ್ತಿಗಳು ಉಳಿಯುವುದನ್ನೂ ಕೂಡ ಗರ್ಭಾವಸ್ಥೆ ಎಂದು ಕರೆಯಲಾಗಿದೆ. ಜರಾಯುಜ ಪ್ರಾಣಿಗಳಾದ ಸ್ತನಿಗಳಲ್ಲಿ ಗರ್ಭಾವಸ್ಥೆಗೆ ಪೂರ್ವಭಾವಿಯಾಗಿ ನಡೆಯುವ ಸಿದ್ಧತೆಗಳು ಮತ್ತು ಗರ್ಭಾವಸ್ಥೆಯ ಕಾಲದಲ್ಲಿ ಕಂಡುಬರುವ ಹೊಂದಾಣಿಕೆಯ ಕ್ರಿಯಾವಿಶೇಷಗಳು ಈ ಸರೀಸೃಪಗಳಲ್ಲಿ ಕಂಡುಬರುತ್ತವೆ. ಇಲ್ಲಿಯೂ ಅಂಡಾಶಯದಿಂದ ಉತ್ಪತ್ತಿಯಾಗುವ ಸ್ಟೀರಾಯಿಡ್ ಹಾರ್ಮೋನುಗಳು ಅಂಡಜರಾಯುತ್ವದ ಯಶಸ್ಸಿಗೆ ಕಾರಣವಾಗುತ್ತವೆ ಮತ್ತು ಪೂರಕವಾಗುತ್ತವೆ. ಅಂಡಜರಾಯುತ್ವ ಎಂದು ಕರೆಯುಬಹುದಾದ ಒಂದು ರೀತಿಯ ವಿಧಾನವು ಚಕ್ರವರ್ತಿ ಪೆಂಗ್ವಿನ್‌ಗಳಲ್ಲಿ ಕಂಡುಬರುತ್ತದೆ. ಇವು ಇಡುವ ಒಂದು ಮೊಟ್ಟೆಯನ್ನು ಪಾದಗಳ ಮೇಲಿಟ್ಟುಕೊಂಡು ಕಾವುಕೊಡುತ್ತವೆ. ಮತ್ತು ಆ ಕಾಲದಲ್ಲಿ ಅಂಡಾಶಯದಲ್ಲಿ ಕಾರ್ಪಸ್‌ಲೂಟಿಯಂ ಎಂಬ ರಚನೆ ಕಾಣಿಸಿಕೊಳ್ಳುತ್ತವೆ. ಹೀಗೆ ಸಂತಾನ ರಕ್ಷಣೆಯ ಆಸಕ್ತಿಯಿಂದಾಗಿ ಪ್ರಾಣಿಗಳಲ್ಲಿ ಅದರಲ್ಲಿಯೂ ಕಶೇರುಕಗಳಲ್ಲಿ ಅಂಡಜರಾಯುಜತ್ವವು ರೂಢಿಗೆ ಬಂದಿದೆ. (ಎಚ್.ಎಚ್.ಎಸ್.)

**ಅಂಡನಾಳ:** ಅಂಡಾಶಯದಲ್ಲಿ ಉತ್ಪತ್ತಿಯಾಗುವ ಅಂಡಾಣುಗಳನ್ನು ಸಾಗಿಸುವ ಹೆಣ್ಣು ಪ್ರಾಣಿಯ ದೇಹಾಂತರ ಅವಕಾಶದಲ್ಲಿರುವ ನಾಳಗಳೇ ಅಂಡನಾಳಗಳು. ಇವು ಕಶೇರುಕಗಳ ಬೆಳವಣಿಗೆಯಲ್ಲಿ ಮುಲ್ಲೆರಿಯನ್ ನಾಳಗಳಿಂದ ರೂಪುಗೊಳ್ಳುತ್ತವೆ. ಅಂಡನಾಳದ ಮುಂಭಾಗವು ಲಾಲಿಕೆಯಂತಿದ್ದು ಆಸ್ಟಿಯಮ್‌ನ ಮೂಲಕ ದೇಹಾಂತರ ಅವಕಾಶಕ್ಕೆ ತೆರೆದಿದೆ. ಇದರ ಹಿಂಭಾಗವು ತೆರಪಿನ ಮೂಲಕ ಕ್ಲೋಯಕಕ್ಕೆ ಇಲ್ಲವೆ ಗರ್ಭಾಶಯಕ್ಕೆ ಜೋಡಣೆಯಾಗಿದೆ. ಸ್ತನಿಗಳನ್ನು ಹೊರತುಪಡಿಸಿ, ಇತರೆ ಕಶೇರುಕ ಪ್ರಾಣಿಗಳಲ್ಲಿ ಅಂಡನಾಳವು ತತ್ತಿಗೆ ಬೆಳೆವಣಿಗೆಯ ಕಾಲಕ್ಕೆ ಬೇಕಾದ ರಕ್ಷಾಕವಚಗಳನ್ನು ಒದಗಿಸುತ್ತದೆ.

ಇಲಾಸ್ಮೊಬ್ರಾಂಕ್‌ಗಳಲ್ಲಿ ಒಂದು ಜೊತೆ ಅಂಡನಾಳಗಳು ಒಂದೇ ಒಂದು ಆಸ್ಟಿಯಮ್‌ನ ಮೂಲಕ ದೇಹಾಂತರ ಅವಕಾಶಕ್ಕೆ ತೆರೆದಿವೆ. ಅಂಡನಾಳವು ಒಂದು ಕಡೆ ಊದಿಕೊಂಡಿದೆ. ಇದು ನಿಡಮೆಂಟಲ್ ಗ್ರಂಥಿ. ಇದು ಕೊಂಬಿನಂತಿರುವ ತತ್ತಿಯ ಚಿಪ್ಪನ್ನು ಉತ್ಪಾದಿಸುತ್ತದೆ. ಇದರ ಮೇಲ್ಭಾಗವು ಆಲ್ಬುಮಿನ್‌ನನ್ನು ಉತ್ಪಾದಿಸುತ್ತದೆ. ಹಲವು ಪ್ರಭೇದಗಳಲ್ಲಿ ಬೆಳವಣಿಗೆಯು ಜರಾಯುಜ ರೀತಿಯದು. ಇವುಗಳಲ್ಲಿ ಅಂಡನಾಳದ ಹಿಂಭಾಗವೇ ಗರ್ಭಕೋಶವಾಗುತ್ತದೆ. ಉದಾ: ಶಾರ್ಕ್ ಮೀನಿನಲ್ಲಿ ಗರ್ಭಕೋಶದ ಭಿತ್ತಿಯು ಭ್ರೂಣದ ಭಂಡಾರ ಸಂಚಿಯೊಂದಿಗೆ ಸಂಪರ್ಕ ಬೆಳೆಸಿ ಭಂಡಾರ ಸಂಚಿಯ ರೀತಿಯ ಜರಾಯು (ಪ್ಲಾಸೆಂಟ) ಬೆಳೆಯುತ್ತದೆ. ಕೆಲವೊಮ್ಮೆ ಒಳಭಿತ್ತಿಯು ಬೆರಳುಗಳಂತಿರುವ ಟ್ರೋಫೋನಿಮೇಟ ರಚನೆಗಳಾಗಿ ಗರ್ಭಕ್ಷೀರವನ್ನು ಉತ್ಪತ್ತಿ ಮಾಡುತ್ತವೆ. ಕೆಲವು ಅಸ್ಥಿ ಮೀನುಗಳಲ್ಲಿ ಅಂಡಾಶಯ ಅವಕಾಶವು ಅಂಡನಾಳಕ್ಕೆ ಸಂಬಂಧಿಸಿದೆ. ಇತರ ಮೀನುಗಳಲ್ಲಿ ದೇಹಾಂತರ ಅವಕಾಶದಿಂದ ಉದರ ರಂಧ್ರಗಳ ಮೂಲಕ ತತ್ತಿಗಳು ಹೊರಗೆ ಹೋಗಬಹುದು.

ದ್ವಿಚರಿಗಳಲ್ಲಿ ಅಂಡನಾಳಗಳು ಬಹಳ ಸುತ್ತಿಕೊಂಡಿರುತ್ತವೆ. ಮೀನುಗಳಂತೆ ಇವುಗಳಲ್ಲಿಯೂ ಅಂಡಾಶಯದೊಡನೆ ನೇರಸಂಪರ್ಕವಿಲ್ಲ. ಉದರಾವಕಾಶಕ್ಕೆ ಬಿಡುಗಡೆಯಾದ ಅಂಡಾಣುಗಳು ಪೆರಿಟೊನಿಯಂನ ಶಿಲಿಕಾಂಗಗಳ ಬಡಿತದ ಸಹಾಯದಿಂದ ಆಸ್ಟಿಯಮ್ ತಲಪುತ್ತವೆ. ಅಂಡನಾಳಗಳ ದಪ್ಪವಾದ ಭಿತ್ತಿಯಲ್ಲಿರುವ ಗ್ರಂಥಿಕೋಶಗಳು ತತ್ತಿಗಳ ಸುತ್ತ ಜೆಲ್ಲಿಯನ್ನು ಸ್ರವಿಸುತ್ತವೆ. ಭಿತ್ತಿಯ ಸ್ನಾಯುತಂತುಗಳು ಮತ್ತು ಶಿಲಿಕಾಂಗಗಳು ತತ್ತಿಗಳ ಸಾಗಣೆಯಲ್ಲಿ ನೆರವೀಯುತ್ತವೆ. ಅಂಡನಾಳದ ಕೆಳತುದಿಯು ಕ್ಲೊಯಕಕ್ಕೆ ತೆರೆಯುವ ಮೊದಲು ಊದಿಕೊಂಡು ಅಂಡಸಂಚಿಯಾಗಿದೆ. ಮೊಟ್ಟೆಗಳನ್ನಿಡುವ ಮೊದಲು ತಾತ್ಕಾಲಿಕವಾಗಿ ಸಂಚಿಗಳಲ್ಲಿ ಅಂಡಗಳು ಸಂಗ್ರಹವಾಗುತ್ತವೆ.

ಸರೀಸೃಪ ಮತ್ತು ಪಕ್ಷಿಗಳ ಅಂಡನಾಳಗಳಲ್ಲಿ ಹಲವು ವಿಶೇಷಗಳನ್ನು ಗುರುತಿಸ ಬಹುದು. ಪಕ್ಷಿಗಳಲ್ಲಿ ಎಡ ಅಂಡಾಶಯದಂತೆ ಎಡ ಅಂಡನಾಳ ಮಾತ್ರ ಬೆಳೆದಿರುತ್ತದೆ. ಬಲಭಾಗದ್ದು ಕ್ಷಯಿಸಿರುತ್ತದೆ. ಮಾಂಸಲವಾದ ಮತ್ತು ಲೋಮಾಂಗಗಳಿರುವ ಲಾಲಿಕೆಯು ತತ್ತಿಯನ್ನು ಗ್ರಹಿಸುತ್ತದೆ ಮತ್ತು ನಾಳದ ಮೂಲಕ ತಳ್ಳುತ್ತದೆ. ಭಿತ್ತಿಯಲ್ಲಿ ಲಂಬಾಕಾರದ ಮತ್ತು ವೃತ್ತಾಕಾರದ ಮಾಂಸಗಳು ಹಾಗೂ ನಳಿಕಾ ರೂಪದ ಗ್ರಂಥಿಗಳಿವೆ. ಅಂಡನಾಳದ ಮೇಲ್ಭಾಗವು ಮೊಟ್ಟೆಯ ಶ್ವೇತಭಾಗವನ್ನು (ಮೀಸಲು ಆಹಾರ) ಮತ್ತು ಕೆಳಗಿನ ಇಸ್ತಮಸ್ ಭಾಗವು ಎರಡು ಚಿಪ್ಪುಪಟಲಗಳನ್ನು ಸ್ರವಿಸುತ್ತವೆ. ಇದಕ್ಕೂ ಕೆಳಗಿನ ಗರ್ಭಕೋಶಭಾಗವು ಪೆಡಸು ಚಿಪ್ಪನ್ನು ಉತ್ಪತ್ತಿ ಮಾಡುತ್ತದೆ. ಕೊನೆಯ ಭಾಗವು ಮೊಟ್ಟೆಯಿಡಲು ಸಹಕರಿಸಲು ಶ್ಲೇಷ್ಮವನ್ನು ಸ್ರವಿಸುತ್ತದೆ.

ಸ್ತನಿಗಳಲ್ಲಿ ಅಂಡನಾಳಗಳನ್ನು ಫೆಲ್ಲೊಪಿಯನ್ ನಾಳಗಳೆನ್ನುತ್ತಾರೆ. ಇದರ ಲಾಲಿಕೆಯ ಬೆರಳಿನಾಕೃತಿಗಳು  ಅಂಡಾಶಯವನ್ನು ಬಳಸಿ ಅಂಡೋತ್ಸರ್ಗವಾದ ತತ್ತಿಗಳನ್ನು ನೇರವಾಗಿ ಫೆಲ್ಲೊಪಿಯನ್ ನಾಳದೊಳಗೆ ತಳ್ಳುತ್ತವೆ. ಇಲ್ಲಿ ನಿಷೇಚನೆ ನಡೆಯುತ್ತದೆ. ಈ ನಾಳಗಳ ಹಿಂಭಾಗವು ಗರ್ಭಕೋಶಗಳಾಗಿವೆ. ಅನಂತರ ಯೋನಿ ಎಂಬ ಒಂದು ರಚನೆಗೆ ತೆರೆಯುತ್ತವೆ. ಸ್ತನಿಗಳಲ್ಲಿ ಗರ್ಭಕೋಶದ ರಚನೆಯನ್ನು ಅನುಸರಿಸಿ ಹಲವು ವಿಧಗಳಿವೆ. ಮೊನೊಟ್ರೀಮ್‌ಗಳಲ್ಲಿ ಎರಡು ಗರ್ಭಕೋಶಗಳು ಪ್ರತ್ಯೇಕವಾಗಿ ಯೋನಿಯಲ್ಲಿ ತೆರೆಯುತ್ತವೆ. ಇದಕ್ಕೆ ಡ್ಯುಪ್ಲೆಕ್ಸ್ ವಿಧವೆನ್ನುತ್ತಾರೆ. ಮಾರ್ಸುಪಿಯಲ್‌ಗಳಲ್ಲಿ ಡ್ಯುಪ್ಲೆಕ್ಸ್ ವಿಧದಲ್ಲಿ ಎರಡು ಗರ್ಭಕೋಶಗಳು ಹೊರಗೆ ಒಂದಕ್ಕೊಂದು ಅಂಟಿಕೊಂಡಿವೆ. ಒಳಗಡೆ ಸಂಪೂರ್ಣ ಬೇರೆಯಾಗಿರುವ ಅವಕಾಶಗಳಿವೆ. ಮೊಲದಲ್ಲೂ ಡ್ಯುಪ್ಲೆಕ್ಸ್ ವಿಧದ ಗರ್ಭಕೋಶಗಳಿವೆ. ಅಂಗುಲೇಟಗಳಲ್ಲಿ (ದನ, ಕುರಿ ಇತ್ಯಾದಿ) ಎರಡು ಕೋಶಗಳ ಕೆಳಭಾಗ ಕೂಡಿಕೊಂಡಿವೆ.

ಆದುದರಿಂದ ಕೆಳಗಡೆ ಒಂದು ಸಾಮಾನ್ಯ ಗರ್ಭಕೋಶ ಮತ್ತು ಎರಡು ಕೊಂಬುಗಳಿವೆ. ಈ ವಿಧಕ್ಕೆ ಬೈಕಾರ್ನುಯೇಟ್ ಎನ್ನುತ್ತಾರೆ. ಈ ಸಾಮಾನ್ಯ ಭಾಗದಲ್ಲಿ ಹ್ಯಾಮ್‌ಸ್ಟರ್‌ಗಳಲ್ಲಿ ಅಡ್ಡಗೋಡೆಯಿರುವುದರಿಂದ ಒಳಗೆ ಎರಡು ಅವಕಾಶಗಳಾಗುತ್ತವೆ. ಈ ವಿಧಕ್ಕೆ ಬೈಪಾರ್ಟೈಟ ಎನ್ನುತ್ತಾರೆ. ಮುಂದುವರಿದ ಸ್ತನಿಗಳಲ್ಲಿ (ಮಂಗ, ಮಾನವ) ಎರಡು ಗರ್ಭಕೋಶಗಳು ಪೂರ್ತಿ ಉದ್ದಕ್ಕೂ ಕೂಡಿರುವುದರಿಂದ ಒಂದೇ ಅವಕಾಶಕ್ಕೆ ಎರಡು ಫೆಲ್ಲೊಪಿಯನ್ ನಾಳಗಳು ಸಂಬಂಧಿಸಿವೆ. ಈ ಅವಸ್ಥೆಗೆ ಸಿಂಪ್ಲೆಕ್ಸ್ ಎನ್ನುತ್ತಾರೆ.

ಗರ್ಭಕೋಶದ ಪದರಗಳಲ್ಲಿ ಭ್ರೂಣದ ಸ್ವಾಗತಕ್ಕೆ ಅಂಡಾಶಯದ ಇಸ್ಟ್ರೊಜೆನ್, ಪ್ರೊಜೆಸಿರಾನ್ ಹಾರ್ಮೋನ್‌ಗಳ ಪ್ರಚೋದನೆಯಿಂದ ಬದಲಾವಣೆಗಳು ನಡೆಯುತ್ತವೆ. ಭ್ರೂಣವು ಅಂಟಿಕೊಳ್ಳದೆ ಹೋದರೆ ಈ ಪದರಗಳು ನಿಗದಿಯಾದ ಕಾಲಾಂತರದಲ್ಲಿ ಕಿತ್ತು ರಕ್ತಸ್ರಾವದ ಜೊತೆ ಹೊರಬರುತ್ತವೆ. ಇದಕ್ಕೆ ಪ್ರೈಮೇಟಗಳಲ್ಲಿ ರಜಸ್ಸು ಎನ್ನಲಾಗಿದೆ. ಭ್ರೂಣವು ಗರ್ಭಕೋಶಭಿತ್ತಿಗೆ ಅಂಟಿಕೊಂಡರೆ ಪ್ಲಾಸೆಂಟ ಎಂಬ ರಚನೆ ರೂಪುಗೊಳ್ಳುತ್ತದೆ. ಇದು ಗರ್ಭಕೋಶಭಿತ್ತಿಯ ಕೆಲವು ಪದರ ಮತ್ತು ಭ್ರೂಣದ ಕೋರಿಯಾನ್ ಸೇರಿ ಉಂಟಾಗುತ್ತದೆ. ಇದು ತಾಯಿಯಿಂದ ಆಮ್ಲಜನಕ ಮತ್ತು ಆಹಾರ ವಸ್ತುಗಳನ್ನು ಭ್ರೂಣಕ್ಕೆ ಒದಗಿಸುತ್ತದೆ. ಭ್ರೂಣದಿಂದ ಸಾರಜನಕ ಮಲಿನವಸ್ತು ಮತ್ತು ಇಂಗಾಲದ ಡೈಆಕ್ಸೈಯಡ್‌ಗಳನ್ನು ತಾಯಿಯ ದೇಹಕ್ಕೆ ಕೊಂಡೊಯ್ಯುತ್ತದೆ. ನಿರ್ನಾಳಗ್ರಂಥಿಯಾಗಿ ಭ್ರೂಣಕ್ಕೆ ಬೇಕಾದ ಹಾರ್ಮೋನ್‌ಗಳನ್ನು ಉತ್ಪತ್ತಿ ಮಾಡುತ್ತದೆ. ಹೀಗೆ ಭ್ರೂಣದ ರಕ್ಷಣೆ, ಪೋಷಣೆಯನ್ನು ಮಾಡುತ್ತದೆ. (ಎಂ.ಎಸ್.)

**ಅಂಡಭಾವುಕರು:** ಮೊಟ್ಟೆಯಲ್ಲಿ ಪೂರ್ವನಿರ್ಮಿತ ಸೂಕ್ಷ್ಮ ಆಕಾರದ ಪ್ರಬುದ್ಧ ಜೀವಿಯನ್ನು ಕಲ್ಪಿಸಿಕೊಂಡ ವಿಜ್ಞಾನಿಗಳು. ಪೂರ್ವ ನಿರ್ಮಾಣ ಸಿದ್ಧಾಂತ ಪ್ರತಿಪಾದಿಸಿದವರ ಒಂದು ಗುಂಪು. ಸೂಕ್ಷ್ಮದರ್ಶಕ ಯಂತ್ರವನ್ನು ಕಂಡುಹಿಡಿದ ತರುವಾಯ ಜೀವದ ಬೆಳವಣಿಗೆಯ ಗುಟ್ಟನ್ನು ತಿಳಿಯುವ ಪ್ರಯತ್ನಗಳು ನಡೆದವು. ಇದರಲ್ಲಿ ಪೂರ್ವನಿರ್ಮಾಣ ಸಿದ್ಧಾಂತ ಒಂದು. ಈ ಸಿದ್ಧಾಂತದ ಪ್ರಕಾರ ಪುರುಷಾಣು ಮೊದಲು ಅಥವ ಅಂಡಾಣು ಮೊದಲು ಎಂಬ ಜಿಜ್ಞಾಸೆ, ಕೆಲವು ವಿಜ್ಞಾನಿಗಳು ಪುರುಷಾಣು (ಸ್ಪರ್ಮ್)ವಿನ ತಲೆಯಲ್ಲಿ ಪೂರ್ಣವಾಗಿ ಬೆಳೆದ ಸೂಕ್ಷ್ಮಗಾತ್ರದಲ್ಲಿರುವ ಪ್ರಬುದ್ಧ ಪ್ರಾಣಿ ಇರುತ್ತದೆ ಎಂಬ ಅಂಶವನ್ನು ಪ್ರತಿಪಾದಿಸಿದರು. ಈ ಪ್ರಬುದ್ಧ ಪ್ರಾಣಿಗೆ ಹೋಮೊಂಕ್ಯುಲಸ್ ಎಂದು ಕರೆದರು. ಇದೇ ರೀತಿ ತತ್ತಿಯಲ್ಲಿಯೂ ಪೂರ್ವನಿರ್ಮಿತ ಸೂಕ್ಷ್ಮ ಆಕಾರದ ಪ್ರಬುದ್ಧ ಪ್ರಾಣಿಯನ್ನು ಕಂಡೆವೆಂದು ಭಾವಿಸಿದವರು ಕೆಲವರು. ಇವರೇ ಅಂಡಭಾವುಕರು. ಇವರು ಸಂತಾನೋತ್ಪತ್ತಿಯಲ್ಲಿ ತತ್ತಿ ಪ್ರಮುಖ ಪಾತ್ರವಹಿಸುತ್ತದೆ ಮತ್ತು ಪುರುಷಾಣು ಕೇವಲ ಆನುಷಂಗಿಕ ಪಾತ್ರವಹಿಸುತ್ತದೆ ಎಂದು ನಂಬಿದ್ದರು. ಆದುದರಿಂದಲೇ ಅನಿಷೇಕ ಜನನದಲ್ಲಿ ಕೇವಲ ತತ್ತಿ ಮಾತ್ರವೆ ಒಂದು ಪೂರ್ಣ ಪ್ರಾಣಿಯಾಗಿ ಬೆಳೆಯುವ ಸಾಮರ್ಥ್ಯ ಪಡೆದಿದೆ ಎಂದು ತೋರಿಸಿದರು. ಆದರೆ ಅನಂತರದ ಅಭ್ಯಾಸಗಳು ತತ್ತಿಯಲ್ಲಾಗಲಿ ಅಥವಾ ಪುರುಷಾಣುವಿನಲ್ಲಾಗಲಿ ಇಂತಹ ಪೂರ್ವ ನಿರ್ಮಿತ ರಚನೆ ಇಲ್ಲವೆಂದು ತೋರಿಸಿಕೊಟ್ಟು ಈ ಸಿದ್ಧಾಂತವನ್ನು ಪರಿಗಣಿಸಲಿಲ್ಲ. (ಎಚ್.ಎಚ್.ಎಸ್.)

**ಅಂಡವೃಷಣ:** ಅಂಡಾಶಯ ಮತ್ತು ವೃಷಣಗಳು ಕ್ರಮವಾಗಿ ಹೆಣ್ಣು ಮತ್ತು ಗಂಡು ಲಿಂಗಾಂಗಗಳಾಗಿದ್ದು ಕ್ರಮವಾಗಿ ಅಂಡಾಣು ಮತ್ತು ವೀರ್ಯಾಣುಗಳನ್ನು ಉತ್ಪತ್ತಿಮಾಡುತ್ತವೆ. ವಿಕಾಸದಲ್ಲಿ ಲಿಂಗ ರೀತಿಯ ಪ್ರಜನನ ಅನುಷ್ಠಾನಕ್ಕೆ ಬಂದಮೇಲೆ ಇವು ಅಸ್ತಿತ್ವಕ್ಕೆ ಬಂದವು. ಆದಿ ಜೀವಿಗಳಲ್ಲಿ ಎರಡೂ ಲಿಂಗಾಂಗಗಳು ಒಂದೇ ಪ್ರಾಣಿಯಲ್ಲಿದ್ದು ಅವು ಉಭಯಲಿಂಗಿಗಳಾಗಿದ್ದುವು. ಆದರೆ ಪ್ರತಿಯೊಂದಕ್ಕೂ ಪರಿಣಿತಿ, ವಿಶೇಷತೆಗಳು ಬೆಳೆದ ಮೇಲೆ ಪ್ರತ್ಯೇಕ ಗಂಡು ಮತ್ತು ಹೆಣ್ಣು ಪ್ರಾಣಿಗಳು ಕಾಣಿಸಿಕೊಂಡು, ಮುಂದುವರಿದ ಪ್ರಾಣಿಗಳಲ್ಲಿ ಹೊರಲಕ್ಷಣಗಳಿಂದ ಅವನ್ನು ಗುರುತಿಸಬಹುದಾದ ಲಿಂಗದ್ವಿರೂಪತ್ವ ಬೆಳೆದಿದೆ. ಕೆಲವು ಅಕಶೇರುಕಗಳಲ್ಲಿ ಒಂದೇ ರೀತಿಯ ಲಿಂಗಾಂಗವಾಗಿದ್ದು ಒಂದು ಕಾಲದಲ್ಲಿ ಅದು ಅಂಡಾಶಯವಾಗಿಯೂ ಇನ್ನೊಂದು ಕಾಲದಲ್ಲಿ ವೃಷಣವಾಗಿಯೂ ವರ್ತಿಸುತ್ತದೆ. ಅಂಡಾಶಯ ಮತ್ತು ವೃಷಣಗಳೆರಡೂ ಕೂಡಿದ ಸಂಯುಕ್ತ ರಚನೆಯೂ ಇರಬಹುದು. ಅದೇ ಅಂಡವೃಷಣ. ಮೀನುಗಳು ಮತ್ತು ಉಭಯಚರಿಗಳಲ್ಲಿ ಅಪರೂಪವಾಗಿ ಅಂಡವೃಷಣಗಳು ಕಾಣಿಸಿಕೊಳ್ಳಬಹುದು. ದಕ್ಷಿಣ ಭಾರತದಲ್ಲಿ ಸಿಗುವ ಕಪ್ಪೆ, ನೆಲಗಪ್ಪೆಗಳಲ್ಲಿ ಈ ರೀತಿಯ ಅಂಡವೃಷಣವನ್ನು ದೇವರಾಜ ಸರ್ಕಾರ ಮತ್ತು ಅವರ ಸಹಾಧ್ಯಾಯಿಗಳು ವರದಿ ಮಾಡಿದ್ದಾರೆ. (ಎಚ್.ಬಿ.ಡಿ.)

**ಅಂಡಾಣು:** ಪರಿಪಕ್ವ ಹೆಣ್ಣು ಲಿಂಗಾಣು. ಪುರುಷಾಣುವಿಗೆ ಹೋಲಿಸಿದರೆ ಅನೇಕ ಸಹಸ್ರಪಟ್ಟು ದೊಡ್ಡದು. ಗಾತ್ರದಲ್ಲಿ ದೊಡ್ಡದಾಗಿದ್ದು, ಮುಂದೆ ಬೆಳೆಯುವ ಭ್ರೂಣಕ್ಕೆ ಬೇಕಾಗುವ ಕೋಶದ್ರವ್ಯವೆಲ್ಲವೂ ಇದರಲ್ಲಿ ಸಂಗ್ರಹವಾಗಿದೆ. ಭ್ರೂಣದ ಬೆಳವಣಿಗೆಯ




ಮಾನವ ಅಂಡಾಣು

ಕಾಲದಲ್ಲಿ ಅದಕ್ಕೆ ಅಗತ್ಯವಾಗುವ ಪೋಷಕಾಂಶಗಳನ್ನು ಒದಗಿಸುವ ಸಂಚಿತ ಆಹಾರವೂ ಇದರಲ್ಲಿದೆ. ಇದರ ಕೋಶಕೇಂದ್ರ (ನ್ಯೂಕ್ಲಿಯಸ್)ಕ್ಕೆ ಜರ್ಮಿನಲ್ ವೆಸಿಕಲ್ ಎಂದು ಹೆಸರು. ಇದರಲ್ಲಿ ತಾಯಿಯಿಂದ ಬರುವ ಕ್ರೊಮೋಸೋಮುಗಳ ವಂಶವಾಹಿ (ಜೀನ್)ಗಳಿರುತ್ತವೆ. ಇದು ಊಸೈಟ್ ಎಂಬ ಮಾತೃ ಜೀವಕೋಶದಿಂದ ರೂಪುಗೊಳ್ಳುತ್ತದೆ. ಒಂದು ಸ್ಪರ್ಮಟೊಸೈಟಿನಿಂದ ನಾಲ್ಕು ಪುರುಷಾಣುಗಳು ಉತ್ಪತ್ತಿಯಾಗುತ್ತವಾದರೂ, ಒಂದು ಊಸೈಟಿನಿಂದ ಕೇವಲ ಒಂದೇ ಒಂದು ಅಂಡಾಣು ಉತ್ಪತ್ತಿಯಾಗುತ್ತದೆ. ಇಲ್ಲಿ ಕೋಶ ವಿಭಜನೆ ನಡೆದು, ಕ್ರೊಮೊಸೋಮುಗಳ ಸಂಖ್ಯೆ ಕ್ಷೀಣವಾಗುತ್ತವೆ. ಎರಡು ವಿಭಜನೆಗಳಿಗೆ ಗುರುತಾಗಿ ಎರಡು ಧ್ರುವಕಾಯಗಳು ಉತ್ಪತ್ತಿಯಾಗುತ್ತವೆ. 65 ಮೈಮೀ ವ್ಯಾಸವಿರುವ ಸುಂಡಿಲಿಯ ಅಂಡಾಣು ಅತ್ಯಂತ ಚಿಕ್ಕದು. ಅತ್ಯಂತ ದೊಡ್ಡ ಅಂಡಾಣುಗಳನ್ನು ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ ಕಾಣಬಹುದು. ಸುದೀರ್ಘ ಅವಧಿಯ ಸ್ವತಂತ್ರ ಬೆಳವಣಿಗೆಯಲ್ಲಿ ಬೃಹತ್ ಪ್ರಮಾಣದ ಭಂಡಾರದಿಂದ (ಯೋಕ್) ಸಂಚಿತ ಆಹಾರವನ್ನು ಕೂಡಿಡುವುದರಿಂದ ಈ ಪ್ರಾಣಿಗಳ ಅಂಡಾಣುಗಳ ಗಾತ್ರ ದೈತ್ಯಾಕಾರ ತಾಳುತ್ತದೆ. ಒಂದು ಅಂಡಾಣು ನಿಷೇಚನಗೊಳ್ಳಬೇಕಾದರೆ ಅನೇಕ ಲಕ್ಷ ಪುರುಷಾಣುಗಳ ಇರುವು ಅಗತ್ಯ. ಅಂಡಾಣುವಿನ ಗಾತ್ರ ಮತ್ತು ಆಕಾರ ಜೀವ ಪ್ರಭೇದಗಳಿಗನುಗುಣವಾಗಿ ವಿಭಿನ್ನವಾಗಿದೆ. (ಎಚ್.ಎಚ್.ಎಸ್.)

**ಅಂಡಾಶಯ:** ಕಶೇರುಕಗಳಲ್ಲಿ ಯಕೃತ್‌ನ ಹಿಂಭಾಗದಲ್ಲಿರುವ ಉದರಾವಕಾಶದಲ್ಲಿರುವ ಅಂಡಾಣುಗಳನ್ನು ಉತ್ಪತ್ತಿಮಾಡುವ, ಒಂದು ಜೊತೆ ಅಂಡಾಕಾರದ ರಚನೆಗಳು (ಸ್ತ್ರೀ ಜನನೇಂದ್ರಿಯಗಳು). ಮಿಸೊವೇರಿಯಮ್ ಎಂಬ ಪೆರಿಟೋನಿಯಂ ಪಟಲದ ಮೂಲಕ ಡಾರ್ಸಲ್ ದೇಹ ಭಿತ್ತಿಗೆ ಅಂಟಿಕೊಂಡಿವೆ.

ಲಿಂಗ ನಿರ್ಧಾರವು ನಿಷೇಚನೆಯ ಕಾಲದಲ್ಲಿಯೆ ನಡೆದರೂ ಬೆಳವಣಿಗೆಯ ಒಂದು ಹಂತದಲ್ಲಿ ಇದು ಅಂಡಾಶಯವೊ ಅಥವ ವೃಷಣವೊ ಎಂದು ಗುರುತಿಸಲಾಗದ ಉಭಯ ಸಾಮಾನ್ಯ ರಚನೆಯೊಂದು ಬೆಳೆಯುತ್ತದೆ. ಇದರಲ್ಲಿ ಹೊರಗಿನ ಕಾರ್ಟೆಕ್ಸ್ ಮತ್ತು ಒಳಗಿನ ಮೆಡುಲ್ಲ ಎಂಬ ಪ್ರತ್ಯೇಕ ಭಾಗಗಳು ರೂಪುಗೊಳ್ಳುತ್ತವೆ. ಅನಂತರ ನಿರ್ಧಾರವಾದ ಪ್ರಾಣಿಯ ಲಿಂಗವು ಪ್ರಕಟಗೊಂಡು ನಿರ್ಧಾರಕ್ಕನುಗುಣವಾಗಿ ಹೆಣ್ಣಾಗಿದ್ದರೆ ಕಾರ್ಟೆಕ್ಸ್ ಮಾತ್ರ ಬೆಳೆದು ಅಂಡಾಶಯವಾಗುತ್ತದೆ. ಗಂಡಾಗಿದ್ದರೆ ಮೆಡುಲ್ಲ ಬೆಳೆದು ವೃಷಣವಾಗುತ್ತದೆ. ಉಳಿದ ಭಾಗಗಳು ನಶಿಸಿ ಹೋಗುತ್ತವೆ.

ಸ್ತನಿಯ ಅಂಡಾಶಯದ ರಚನೆಯನ್ನು, ಅದರ ಅಡ್ಡ ಸೀಳಿಕೆಯಲ್ಲಿ ಅಭ್ಯಸಿಸಿದಾಗ. ಅಂಡಾಶಯವನ್ನು ಹೊರಗಿನ ಕಾರ್ಟೆಕ್ಸ್ ಮತ್ತು ಒಳಗಿನ ಮೆಡುಲ್ಲ ಎಂದು ಪ್ರತ್ಯೇಕಿಸಬಹುದು. ಬೆಳವಣಿಗೆಯ ವಿವಿಧ ಹಂತದಲ್ಲಿರುವ ಅಂಡಾಣುಗಳು ಕಾರ್ಟೆಕ್ಸ್‌ನಲ್ಲಿವೆ. ಒಳಭಾಗದ ಮೆಡುಲ್ಲ ಅಥವ ಸ್ಟ್ರೋಮ ಸಂಯೋಜಕ ಅಂಗಾಂಶ ಮತ್ತು ರಕ್ತನಾಳಗಳಿಂದ ಕೂಡಿದೆ. ಸ್ತನಿಗಳಲ್ಲಿ ಅಂಡಾಣುಗಳ ಸುತ್ತ ರಚನೆ ಮತ್ತು ಕಾರ್ಯದಲ್ಲಿ ಭಿನ್ನವಾಗಿರುವ ಅನೇಕ ಜೀವಕೋಶ ಪದರಗಳಿವೆ. ಈ ಸಂಯುಕ್ತ ರಚನೆಗಳನ್ನು ಫಾಲಿಕಲ್ ಎಂದು ಕರೆಯುತ್ತಾರೆ. ವಯಸ್ಕ ಸ್ತನಿಯ ಅಂಡಾಶಯದಲ್ಲಿ ಫಾಲಿಕಲಗಳು ವಿವಿಧ ಬೆಳವಣಿಗೆಯ

ಹಂತಗಳಲ್ಲಿ ಕಂಡು ಬರುತ್ತವೆ ಮತ್ತು ಬೆಳೆವಣಿಗೆಯ ಆಧಾರದ ಮೇಲೆ, ಪ್ರಥಮ, ದ್ವಿತೀಯ ಮತ್ತು ತೃತೀಯ ಹಂತದ ಫಾಲಿಕಲ್‍ಗಳೆಂದು ವಿಭಜಿಸಲಾಗಿದೆ. ಮೊದಲು ಇವುಗಳನ್ನು ವಿವರಿಸಿದ ರೈನಿಯರ್ ಡಿ. ಗ್ರಾಫ್‍ನ ನೆನಪಿನಲ್ಲಿ ಗರಿಷ್ಟಮಟ್ಟದ ಬೆಳೆವಣಿಗೆ ಹೊಂದಿರುವ ಫಾಲಿಕಲಗಳಿಗೆ ಗ್ರಾಫಿಯನ್ ಫಾಲಿಕಲ್ ಎಂದು ಕರೆಯಲಾಗಿದೆ. ಫಾಲಿಕಲ್ಲಿನಲ್ಲಿರುವ ಆಂಟ್ರಮ್ ಎಂಬ ಅವಕಾಶವು ಲಿಕ್ಕರ್ ಫಾಲಿಕ್ಕುಲಿ ಎಂಬ ದ್ರವದಿಂದ ತುಂಬಿದೆ. ಫಾಲಿಕಲ್ ಗೋಡೆಯು (ಫಾಲಿಕ್ಯುಲಾರ್ ವಾಲ್) ತಂತುರೂಪಕ ಜೀವಕೋಶಗಳಿಂದಾದ ಹೊರ ಪದರ (ತೀಕ ಎಕ್ಸಟರ್ನಾ) ಮತ್ತು ಅನುಲೇಪಕ ಜೀವ ಕೋಶಗಳಿಂದಾದ ಒಳಪದರ (ತೀರ ಇಂಟರ್ನಾ) ಹೊಂದಿದೆ. ಇವುಗಳ ಒಳಗೆ ಮತ್ತು ಆಂಟ್ರಮನ್ನು ಆವರಿಸಿರುವ ಹಲವು ಪದರಗಳಿಗೆ ಮೆಂಬ್ರ್ಯಾನಾ ಗ್ರಾನ್ಯುಲೋಸ ಅಥವ ಗ್ರಾನ್ಯುಲೋಸ ಪಟಲವೆಂದು ಹೆಸರು. ಇದರ ಜೀವಕೋಶಗಳಲ್ಲಿ ಕಣರೂಪದ ಕೋಶದ್ರವ್ಯವಿದೆ. ಅಂಡಾಣು ಇಂತಹ ಜೀವಕೋಶಗಳ ಸಮೂಹದಲ್ಲಿ ಹುದುಗಿದೆ. ಈ ಸಮೂಹಕ್ಕೆ ಕ್ಯುಮುಲಸ್ ಊಫೊರಸ್ ಅಥವ ಡಿಸ್ಕಸ್ ಪ್ರಾಲಿಜೆರಸ್ ಎಂದು ಕರೆಯಲಾಗಿದೆ. ಅಂಡಾಣುವಿನ ಅತಿ ಹತ್ತಿರದಲ್ಲಿರುವ ಜೀವಕೋಶಗಳ ಒಂದು ಪದರ, ಕರೋನ ರೇಡಿಯೇಟ (ಝೋನ ರೇಡಿಯೇಟ). ಇದು ಅಂಡಾಣುವಿನ ಸುತ್ತ ಒಂದು ಭಿತ್ತಿಯನ್ನು ಸ್ರವಿಸುತ್ತದೆ. ಇದಕ್ಕೆ ಝೋನ ಪೆಲ್ಯೂಸಿಡ ಎನ್ನಲಾಗಿದೆ.

ಗ್ರಾಫಿಯನ್ ಫಾಲಿಕಲ್ಲಿನ ಬೆಳೆವಣಿಗೆಯನ್ನು ಪಿಟುಯಿಟರಿ ಗ್ರಂಥಿ ಸ್ರವಿಸುವ ಎಫ್‍ಎಸ್‍ಎಚ್ ಪ್ರಚೋದಿಸುತ್ತದೆ. ತೀಕ ಇಂಟರ್ನಾ ಮತ್ತು ಗ್ರಾನ್ಯುಲೊಸ ಜೀವಕೋಶಗಳ ಸಹಯೋಗದಿಂದ ಇಸ್ಟ್ರೋಜನ್ ಎಂಬ ಹಾರ್ಮೋನು ಸ್ರವಿಸುತ್ತದೆ. ಇದು ಅಂಡವಾಹಿನಿ ಮತ್ತು ಗರ್ಭಕೋಶಗಳನ್ನು ಅಂಡದ ಆಗಮನಕ್ಕೆ ಸಿದ್ಧಗೊಳಿಸುತ್ತದೆ. ಈ ಹಾರ್ಮೋನು ಸ್ರವಿಕೆ ಗರಿಷ್ಟ ಮಟ್ಟ ತಲುಪಿದಾಗ ಪುನರಶನ ಮಾರ್ಗದಿಂದ ಪಿಟುಯಿಟರಿಯು ಎಲ್‍ಎಚ್ ಎಂಬ ಹಾರ್ಮೋನ್ ಸ್ರವಿಸುತ್ತದೆ. ಒಂದು ನಿರ್ದಿಷ್ಟ ಎಫ್‍ಎಸ್‍ಎಚ್–ಎಲ್‍ಎಚ್ ಅನುಪಾತದಲ್ಲಿ ಅಂಡಾಣು ಫಾಲಿಕಲ್‍ನಿಂದ ಹೊರಬೀಳುತ್ತದೆ. ಈ ಕ್ರಿಯೆಗೆ ಅಂಡ ವಿಸರ್ಜನೆ(ಅಂಡೋತ್ಸರ್ಗ, ಒವ್ಯುಲೇಶನ್) ಎಂದು ಹೆಸರು. ಅಂಡೋತ್ಸರ್ಗವಾದ ಮೇಲೆ ಅಂಡಾಶಯದಲ್ಲುಳಿಯುವ ಜೀವ ಕೋಶಗಳು ಎಲ್‍ಎಚ್ ನ ಪ್ರಚೋದನೆಯಲ್ಲಿ ಹಳದಿ ಬಣ್ಣದ ಕಾರ್ಪಸ್ ಲ್ಯೂಟಿಯಮ್ ಎಂಬ ಅಂತಃಸ್ರಾವಕಗ್ರಂಥಿಯಾಗಿ ರೂಪುಗೊಳ್ಳುತ್ತವೆ. ಈ ಅಂತಃಸ್ರಾವಿಕಗ್ರಂಥಿಗಳು ಪ್ರೊಜೆಸ್ಟಿರಾನ್ ಸ್ರವಿಸುತ್ತವೆ. ಇದು ಇಸ್ಟ್ರೋಜೆನ್ ಪ್ರಭಾವಾನ್ವಿತವಾದ ಆನುಷಂಗಿಕ ಅಂಗಗಳನ್ನು ಗರ್ಭಾವಸ್ಥೆಗೆ ಸಿದ್ಧಗೊಳಿಸುತ್ತದೆ ಮತ್ತು ನಿಷೇಚನೆ ನಡೆದರೆ ಭ್ರೂಣವು ಗರ್ಭಕೋಶದಲ್ಲಿ ನೆಲಸಿದಾಗ ಅದನ್ನು ಸಂರಕ್ಷಿಸುತ್ತದೆ. ಇಲ್ಲದೆ ಹೋದರೆ ಕಾರ್ಪಸ್ ಲ್ಯೂಟಿಯಮ್ ಮುದುರಿ ಹೋಗುತ್ತದೆ. ಹಳದಿ ಬಣ್ಣದಿಂದ ಸಂಯೋಜಕ ಅಂಗಾಂಶದ ಬೆಳೆವಣಿಗೆಯೊಂದಿಗೆ ಬಿಳಿಬಣ್ಣಕ್ಕೆ ತಿರುಗುತ್ತದೆ. ಇದನ್ನೀಗ ಕಾರ್ಪಸ್ ಆಲ್ಬಿಕನ್ಸ್ ಎನ್ನುತ್ತಾರೆ. ಹೀಗೆ ಅಂಡಾಶಯವು ಸ್ತ್ರೀಲಿಂಗ ಹಾರ್ಮೋನ್ ಸ್ರವಿಸುವ ಅಂತಃಸ್ರಾವಕ ಗ್ರಂಥಿಯೂ ಆಗಿದೆ. ಬೆಳೆವಣಿಗೆಯನ್ನು ಆರಂಭಿಸಿದ ಅಂಡಾಣುಗಳೆಲ್ಲವೂ ಪಕ್ವವಾಗದಿರಬಹುದು. ಅಂಡಾಶಯದಲ್ಲಿ ಇಂತಹ ಅವನತಿಯನ್ನು ಹೊಂದುತ್ತಿರುವ, ನಶಿಸುತ್ತಿರುವ (ಅಟ್ರೆಟಿಕ್) ಅಂಡಾಣುಗಳನ್ನು ಕಾಣಬಹುದು.

ಇತರ ಕಶೇರುಕಗಳ (ಪಕ್ಷಿಗಳನ್ನುಳಿದು) ಅಂಡಾಶಯದಲ್ಲಿ ಸ್ತನಿಗಳಲ್ಲಿರುವಂತೆ ಗಟ್ಟಿಯಾದ ಸ್ಟ್ರೋಮವಿಲ್ಲ. ಉಭಯಚರಿಗಳಲ್ಲಿ ಅಂಡಾಶಯವು ಚೀಲದಂತಹ ಪೆರಿಟೊನಿಯಂನ ಮಡಿಕೆಗಳಾಗಿದೆ. ಇವುಗಳಲ್ಲೂ ಪ್ರತಿ ಅಂಡಾಣುವಿನ ಸುತ್ತಲೂ ಇರುವ ಆವರಣಕೋಶಗಳು ಹಾರ್ಮೋನುಗಳನ್ನು ಉತ್ಪತ್ತಿ ಮಾಡುವವೆಂದು ತಿಳಿದು ಬಂದಿದೆ. ಪಕ್ಷಿಗಳಲ್ಲಿ ಮೊಟ್ಟೆಗಳ ಗಾತ್ರ ದೊಡ್ಡದಾಗಿರುವುದರಿಂದ ಎಡ ಅಂಡಾಶಯವು ಮಾತ್ರ ಬೆಳೆದಿರುತ್ತದೆ. ಬಲಭಾಗದ ಅಂಡಾಶಯವು ಕ್ಷಯಿಸಿರುತ್ತದೆ. ಸ್ತನಿಗಳನ್ನು ಹೊರತು ಪಡಿಸಿ, ಇತರೆ ಕಶೇರುಕಗಳ ಅಂಡಾಣುಗಳು, ಯೊಕ್ ಎಂಬ ಸಂಯುಕ್ತವನ್ನು ತಮ್ಮ ಕೋಶದ್ರವದಲ್ಲಿ ಶೇಖರಿಸುತ್ತವೆ. ಉದಾ: ಕೋಳಿ ಮೊಟ್ಟೆಯಲ್ಲಿರುವ ಲೋಳೆಯಂತಹ ಬಿಳಿ ಮತ್ತು ಹಳದಿ ದ್ರವ. ಇದು ಭ್ರೂಣದ ಬೆಳೆವಣಿಗೆಗೆ ಆಹಾರದಂತೆ ಉಪಯೋಗವಾಗುತ್ತದೆ. (ಎಂ.ಎಸ್.)

**ಅಂತಃಸ್ರಾವಕ ವಿಜ್ಞಾನ:** ಅಂತಃಸ್ರಾವಕ ಗ್ರಂಥಿಗಳ ರಚನೆ, ನಿಜಗೆಲಸ, ಹಾರ್ಮೋನ್‍ಗಳ ಪ್ರಭಾವಗಳು ಹಾಗು ಕೊರತೆ ಅಥವಾ ಹೆಚ್ಚಿನ ಸ್ರವಿಕೆಯಿಂದ ಉಂಟಾಗುವ ರೋಗಗಳ ಅಭ್ಯಾಸ (ಎಂಡೊಕ್ರೈನಾಲಜಿ), ಒಳ ಸುರಿಕೆ ಶಾಸ್ತ್ರ, ಪರ್ಯಾಯನಾಮ. ತೆಮಡಿಕ (ಪಿಟ್ಯುಟರಿ), ಸುರಿಕೆ ಗುರಾಣಿಕ (ಥೈರಾಯ್ಡ್) ಲೆಂಗರಹೆನ್ಸನ ಪುಟ್ಟ ದ್ವೀಪಗಳು, ಅಡ್ರಿನಲ್, ಬದಿಗುರಾಣಿಕ (ಪ್ಯಾರಥೈರಾಯ್ಡ್), ಅಂಡಾಶಯ (ಓವರಿ), ತರಡು (ಟೆಸ್ಟಿಸ್), ಪೈನಿಯಿಲ್ ಗ್ರಂಥಿ ಹಾಗು ಮಾಸು (ಪ್ಲೆಸೆಂಟ) ಇವಿಷ್ಟು ಮುಖ್ಯವಾದ ಅಂತಃಸ್ರಾವಕ ಗ್ರಂಥಿಗಳು. ಜೊಲ್ಲು ಹಾಗು ಕಣ್ಣೀರು ಗ್ರಂಥಿಗಳು, ಈಲಿ, ಮಾಂಸಲಿ ರಸಗಳನ್ನು ನಾಳಗಳ ಮೂಲಕ ಸುರಿಸುವುದರಿಂದ ಅವು ಬಹಿರ್ ಸ್ರಾವಕ ಗ್ರಂಥಿಗಳು. ಒಳಸುರಿಕೆ ಗ್ರಂಥಿಗಳು ರಸಗಳನ್ನು ನೇರವಾಗಿ ರಕ್ತದೊಳಕ್ಕೆ ಸುರಿಯುತ್ತವೆ. ಇವು ತಯಾರಿಸಿದ ರಾಸಾಯನಿಕಗಳೇ ಹಾರ್ಮೋನುಗಳು. ದೂರದ ಅಂಗಾಂಶ ಕೋಶಗಳ ಮೇಲೆ ಪ್ರಭಾವ ತೋರುವುದರಿಂದ ಇವನ್ನು ರಾಸಾಯನಿಕ ದೂತಗಳು ಎನ್ನಲಾಗಿದೆ. ಇವು ರಕ್ತದಲ್ಲಿ ಸ್ವಲ್ಪ ಪ್ರಮಾಣದಲ್ಲಿದ್ದು ಹಲವಾರು ಅಂಗಗಳ ಇಲ್ಲವೇ ಇಡೀ ದೇಹದ ಮೇಲೆ ಪ್ರಭಾವ ಬೀರುವುವು. ಹಾರ್ಮೋನ್‍ಗಳ ಕ್ರಿಯೆಗಳು (ಎಕ್ಸೆನ್ಸ್) (ನೋಡಿ ಅಂತಃಸ್ರಾವಕ ಗ್ರಂಥಿಗಳು) ದೇಹದೊಳಗಿನ ಆವರಣವನ್ನು ಸಮಸ್ಥಿತಿಯಲ್ಲಿ (ಸಮನಿಲುಮೆ) ಇರಿಸುವುದರಲ್ಲಿ ಮುಖ್ಯ ಪಾತ್ರವಹಿಸುತ್ತವೆ.

ಹಾರ್ಮೋನ್ ಅಥವಾ ಅಂತಃಸ್ರಾವಕ ಗ್ರಂಥಿಗಳ ಬಗ್ಗೆ ಯಾವುದೇ ವೈಜ್ಞಾನಿಕ ಮಾಹಿತಿ ಇರದಿದ್ದರೂ ಹಲವು ಶತಮಾನಗಳಿಂದ ಹಾರ್ಮೋನ್ ಕ್ರಿಯೆಗಳ ಲಾಭ ಪಡೆಯಲಾಗುತ್ತಿತ್ತು. ಉದಾಹರಣೆಗೆ ಗಂಡು ಹುಡುಗರ ವೃಷಣ ತೆಗೆದು ಹಾಕಿ ಅವರನ್ನು ಷಂಡರನ್ನಾಗಿ ಬೆಳೆಸಿ, ರಾಣಿ ವಾಸದ ಕಾವಲುಗಾರರನ್ನಾಗಿ ಉಪಯೋಗಿಸಲಾಗುತ್ತಿತ್ತು. 1905 ರಲ್ಲಿ ಪ್ರಥಮ ಬಾರಿಗೆ ಈ ರಾಸಾಯನಿಕ ದೂತಗಳಿಗೆ ಹಾರ್ಮೋನ್ ಎಂದು ನಾಮಕರಣ ಮಾಡಲಾಯಿತು. ಇತ್ತೀಚಿನ ದಶಕಗಳಲ್ಲಿ ಈ ವಿಜ್ಞಾನದಲ್ಲಿ, ಅಸಾಮಾನ್ಯ ಬೆಳೆವಣಿಗೆಗಳಾಗಿದ್ದು ಮಾನವನ ಆರೋಗ್ಯ ಹಾಗೂ ಆಹಾರ ಪೂರೈಕೆ (ಪ್ರಾಣಿಜನ್ಯ) ವೃದ್ಧಿಸಲು ಅತ್ಯಂತ ಪರಿಣಾಮಕಾರಿಯಾಗಿವೆ.

ಮೊಟ್ಟ ಮೊದಲು ಜೀರ್ಣಾಂಗ ವ್ಯೂಹ ಸ್ರವಿಸುವ ಸಿಕ್ರೆಟಿನ್ ಎಂಬ ರಾಸಾಯನಿಕವನ್ನು ಗುರುತಿಸಿ, ರಾಸಾಯನಿಕ ದೂತಗಳಿಗೆ ಹಾರ್ಮೋನ್ ಎಂದು ಕರೆಯಲಾಯಿತು (1905) ಅನಂತರದ ದಶಕಗಳಲ್ಲಿ ವಿವಿಧ ಅಂತಃ ಸ್ರಾವಕ ಗ್ರಂಥಿಗಳು, ಹಾಗು ಅವುಗಳ ಕಾರ್ಯಗಳು ಹಾಗು ಕೊರತೆಯಿಂದಾಗುವ ರೋಗಗಳನ್ನು ಗುರುತಿಸಲಾಯಿತು. ಮೊದಲಿನ ಕೆಲವು ದಶಕಗಳಲ್ಲಿ ಅಂತಃಸ್ರಾವಕ ಗ್ರಂಥಿಗಳ ರಚನೆ, ಪರಿಣಾಮಗಳನ್ನು ಅಭ್ಯಸಿಸಲಾಯಿತು. ಆಮೇಲೆ ಹೊಸ ಜೀವ ರಾಸಾಯನಿಕ ತಂತುಗಳ ಆವಿಷ್ಕಾರವಾದ ಮೇಲೆ, ಹಾರ್ಮೋನುಗಳ ರಾಸಾಯನಿಕ ಗುಣಗಳು, ಅಂಗಾಂಶಗಳಲ್ಲಿಯ ಅವುಗಳ ಗ್ರಾಹಿಗಳ ಸ್ವಭಾವಗಳು, ರಕ್ತದಲ್ಲಿ ಅಥವಾ ಅಂಗಾಂಶದಲ್ಲಿ ಹಾರ್ಮೋನ್‍ಗಳ ಪ್ರಮಾಣ, ಹಾರ್ಮೋನುಗಳ ರಾಸಾಯನಿಕ ಕ್ರಿಯೆಗಳು, ಮುಂತಾದುವುಗಳನ್ನು ನಿಖರವಾಗಿ ತೆಗೆದುಕೊಳ್ಳಲಾಯಿತು. ಇದಲ್ಲದೇ, ಹಲವು ಹಾರ್ಮೋನುಗಳನ್ನು, ಕೃತಕವಾಗಿ ತಯಾರಿಸಿ, ಸಂಶೋಧನಾ ಕಾರ್ಯಕ್ಕೆ ಹಾಗೂ ಔಷಧಿಗಳಾಗಿ ಬಳಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಅಣುಜೀವಶಾಸ್ತ್ರ ತಂತ್ರಗಳಿಂದ ಜೀವಕೋಶಗಳೊಳಗೆ ಹಾರ್ಮೋನ್‍ಗಳು ಹೇಗೆ ಜೈವಿಕ ಬದಲಾವಣೆಗಳನ್ನು ತರುತ್ತವೆ ಎಂಬುದನ್ನು ಸ್ಪಷ್ಟವಾಗಿ, ನಿಖರವಾಗಿ ತಿಳಿದುಕೊಳ್ಳಲಾಗಿದೆಯಲ್ಲದೆ, ಅನೇಕ ರೋಗಗಳನ್ನು ಗುಣಪಡಿಸಲು ಅಥವಾ ನಿಯಂತ್ರಿಸಲು ಸಾಧ್ಯವಾಗಿದೆ. ಇದಲ್ಲದೆ ಹಾರ್ಮೋನುಗಳು ಜೀನ್‍ಗಳನ್ನು ಪ್ರಚೋದಿಸಿ ಹೇಗೆ ವಿವಿಧ ಪ್ರೊಟೀನುಗಳ ತಯಾರಿಕೆಗೆ ಕಾರಣವಾಗಿವೆ ಎಂಬುದನ್ನು ಅರಿಯಲಾಗಿದೆ. ಮನುಷ್ಯನ ಉಳಿಯುವಿಕೆಗೆ ಅತ್ಯವಶ್ಯಕವಾದ ಕೆಲವು ಹಾರ್ಮೋನುಗಳನ್ನು (ಉದಾ: ಇನ್ಸುಲಿನ್) ಜೈವಿಕ ತಂತ್ರಜ್ಞಾನ ಬಳಸಿಕೊಂಡು, ಸೂಕ್ಷ್ಮಜೀವಿಗಳಲ್ಲಿ ತಯಾರಿಸಿ, ಮನುಷ್ಯರಲ್ಲಿ ಬಳಸಲಾಗುತ್ತಿದೆ.

ಸ್ತನಿಗಳಲ್ಲಿ ಸು. 40 ಹಾರ್ಮೋನುಗಳನ್ನು ಗುರುತಿಸಲಾಗಿದ್ದು ಅವು ಅನೇಕ ದೈಹಿಕ ಕ್ರಿಯೆಗಳನ್ನು ನಿಯಂತ್ರಿಸುತ್ತವೆ. ಇವುಗಳಲ್ಲಿ ಕೆಲವು ಅಂತಃಸ್ರಾವಕ ಗ್ರಂಥಿಗಳಿಂದ ಕೆಲವು ಜೀರ್ಣಾಂಗ ವ್ಯೂಹದಲ್ಲಿರುವ ಕೋಶಗಳಿಂದ, ಕೆಲವು ಮೂತ್ರಕೋಶ, ಈಲಿ, ಹೃದಯ ಮುಂತಾದುವುಗಳಿಂದ ಮತ್ತು ಹಲವು ಸ್ಥಳೀಯವಾಗಿ, ಸಾಮಾನ್ಯ ಜೀವಕೋಶಗಳಿಂದ ಸಂಶ್ಲೇಷಣೆಯಾಗುತ್ತವೆ.

ಯಾವುದೇ ಜೀವಕೋಶ, ಹಾರ್ಮೋನಿನ ಪ್ರಚೋದನೆಗೊಳಗಾಗಬೇಕಾದರೆ, ಆ ಹಾರ್ಮೋನಿನ ಗ್ರಾಹಿಗಳು (ರಿಸೆಪ್ಟರ್ಸ್), ಜೀವಕೋಶದಲ್ಲಿರಬೇಕು. ಹಾರ್ಮೋನು ಗ್ರಾಹಿಗಳು ಕೋಶಪೊರೆಯಲ್ಲಿ ಅಥವಾ ಕೋಶದ್ರವದಲ್ಲಿ ಅಥವಾ ಕೋಶ ಕೇಂದ್ರದಲ್ಲಿರುವಂಥ ನಿರ್ದಿಷ್ಟ ಪ್ರೊಟೀನ್‍ಗಳು. ಗ್ರಾಹಿ ಹಾರ್ಮೋನ್ ಜೊತೆ ಕೂಡಿಕೊಂಡಾಗ ಸರಣಿ ರಾಸಾಯನಿಕ ಕ್ರಿಯೆಗಳಾಗಿ ಹಾರ್ಮೋನ್ ಪರಿಣಾಮ ಉಂಟಾಗುತ್ತದೆ. ಗ್ರಾಹಿ ಹಾರ್ಮೋನು ಕೂಡುವಿಕೆ, ಬೀಗ – ಬೀಗದಕೈ ತರಹ ಬಹಳ ನಿರ್ದಿಷ್ಟವಾಗಿದ್ದು, ಒಂದು ಹಾರ್ಮೋನ್ ತನ್ನ ಗ್ರಾಹಿಯನ್ನು ಬಿಟ್ಟು, ಬೇರೆ ಹಾರ್ಮೋನ್ ಗ್ರಾಹಿಯ ಜೊತೆಗೆ ಕೂಡುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಗ್ರಾಹಿಯ ರಚನೆ, ವರ್ತನೆ ಅವುಗಳ ಉತ್ಪತ್ತಿ ಮುಂತಾದ ವಿಷಯಗಳ ಬಗ್ಗೆ ಅನೇಕ ಸಂಶೋಧನೆಗಳಾಗಿವೆ.

ಹಾರ್ಮೋನ್‍ಗಳ ಸ್ರವಿಕೆ ಆಂತರಿಕ ಅಥವಾ ಬಾಹ್ಯ ಪ್ರಚೋದನೆಗಳಿಂದ ಉಂಟಾಗುತ್ತದೆ. ಬಾಹ್ಯ ಪ್ರಪಂಚದಲ್ಲಾಗುವ ಬದಲಾವಣೆಗಳನ್ನು ಕೇಂದ್ರ ನರಮಂಡಲವು

ಗ್ರಹಿಸಿ ಹೈಪೋಥೆಲಮಸ್ ಮೂಲಕ, ವಿವಿಧ ಅಂತಃಸ್ರಾವಕ ಗ್ರಂಥಿಗಳನ್ನು ಪಿಟ್ಯುಟರಿ ಗ್ರಂಥಿಯ ಮೂಲಕ ಪ್ರಚೋದಿಸುತ್ತದೆ. ಹೈಪೊಥೆಲಮಸ್, ಕೇಂದ್ರ ನರಮಂಡಲದ ಬಹು ವಿಶಿಷ್ಟವಾದ, ಹಾರ್ಮೋನುಗಳನ್ನು ಸ್ರವಿಸುವ, ದೇಹದ ಅನೇಕ ಕಾರ್ಯಗಳನ್ನು ನಿಯಂತ್ರಿಸುವ ಒಂದು ಪುಟ್ಟ ಭಾಗ. ಇದು ಪಿಟ್ಯುಟರಿ ಗ್ರಂಥಿಯ ಚಟುವಟಿಕೆಗಳನ್ನು ಕೆಲವು ಹಾರ್ಮೋನುಗಳನ್ನು (ರಿಲಿಸಿಂಗ ಹಾರ್ಮೋನ್ಸ್) ಸ್ರವಿಸಿ ನಿಯಂತ್ರಿಸುತ್ತದೆ, ಎಂಬುದನ್ನು ಆಳವಾಗಿ ಅಭ್ಯಸಿಸಿ ಈ ಕ್ರಿಯೆಯನ್ನು ವಿಶದವಾಗಿ ಪ್ರಚುರಪಡಿಸಿದ್ದಕ್ಕಾಗಿ ಗ್ಯುಲಿಮನ್ ಮತ್ತು ಶಾಲಿ ಎಂಬ ವಿಜ್ಞಾನಿಗಳಿಗೆ ನೋಬೆಲ್ ಪುರಸ್ಕಾರ ದೊರೆತಿದೆ.

ರಕ್ತ ರಸ (ಪ್ಲಾಸ್ಮ)ದಲ್ಲಿ ಹಾರ್ಮೋನುಗಳು ಅವುಗಳಿಗೆ ನಿರ್ದಿಷ್ಟವಾದ ಪ್ರೊಟೀನ್ ನೊಡನೆ ಸರಳ ಸಂಯೋಗದೊಂದಿಗೆ ಸಾಗುತ್ತವೆ. ಅವು ಪ್ರೊಟೀನೊಂದಿಗೆ ಸೇರಿಕೊಂಡಾಗ ಅವುಗಳ ಅಪಚಯ (ಕೆಟಬಾಲಿಸಂ) ಸಾಧ್ಯವಿಲ್ಲ. ಆದರೆ ಹಾರ್ಮೋನು ತನ್ನ ಗುರಿ ಅಂಗಾಂಶ ಹತ್ತಿರ, ಪ್ರೊಟೀನಿನಿಂದ ಬೇರ್ಪಟ್ಟು, ತನ್ನ ಪ್ರಭಾವವನ್ನು ಆ ಗುರಿ ಕೋಶ/ ಅಂಗಾಂಶಗಳ ಮೇಲೆ ಬೀರುತ್ತದೆ. ಉದಾ: ಎಂಡ್ರೋಜನ್‌ಗಳು ಬೈಂಡಿಂಗ್ ಪ್ರೊಟೀನ್‌ನೊಂದಿಗೆ (ಎಂಡೋಜನ್ ಬೈಂಡಿಂಗ್ ಪ್ರೊಟೀನ್) ಕೂಡಿಕೊಂಡು, ರಕ್ತದಲ್ಲಿ ಸಾಗುತ್ತವೆ. ಎಲ್ಲ ಹಾರ್ಮೋನುಗಳು ರಕ್ತದಲ್ಲಿದ್ದರೂ, ಅವು ಎಲ್ಲ ಅಂಗಾಂಶಗಳ ಮೇಲೆ ಪ್ರಭಾವ ಬೀರದೇ, ತಮ್ಮ ಗುರಿ ಅಂಗಾಂಶಗಳನ್ನು ಮಾತ್ರ ಪ್ರಚೋದಿಸುತ್ತವೆ. ಅಡ್ರಿನಾಲಿನ್, ನಾರಅಡ್ರಿನಾಲಿನ್, ಪ್ರೊಟೀನ್ ಹಾರ್ಮೋನುಗಳು, ಕೋಶ ಪೊರೆಯ ಮೇಲಿರುವ ತಮ್ಮ ಗ್ರಾಹಿಗಳನ್ನು ಕೂಡಿಕೊಂಡು, ಕೋಶದೊಳಗೆ ರಾಸಾಯನಿಕ ಕ್ರಿಯೆಗಳ ಅಲೆಗಳನ್ನು (ಕ್ಯಾಸಕೇಡ) ಪ್ರಚೋದಿಸುತ್ತವೆ. ಈ ಹಾರ್ಮೋನುಗಳು ತಮ್ಮ ಗ್ರಾಹಿಗಳನ್ನು ಸೇರಿಕೊಂಡಾಗ, ಕೋಶದ್ರವದಲ್ಲಿ ಸೈಕ್ಲಿಕ್ ಎಎಮ್‌ಪಿ ಉತ್ಪಾದನೆಯಾಗಿ ಅದು ಹಲವಾರು ಕ್ರಿಯೆಗಳನ್ನು ಪ್ರಾರಂಭಿಸುತ್ತದೆ. ಮುಖ್ಯವಾಗಿ ಹಲವಾರು ಪ್ರೊಟೀನ್‌ಗಳ ಫಾಸ್ಪಾರೀಕರಣವಾಗಿ ಅವು ಕ್ರಿಯಾಶೀಲವಾಗಿ ಕೋಶದೊಳಗೆ ಹಲವಾರು ರಾಸಾಯನಿಕ ಪರಿವರ್ತನೆಗಳಾಗಿ ಅಂತಿಮವಾಗಿ ಆ ಹಾರ್ಮೋನಿನ ಜೈವಿಕ ಪರಿಣಾಮ (ಬಯಾಲಜಿಕಲ್ ಎಫೆಕ್ಟ್ಸ್) ಕಂಡುಬರುತ್ತದೆ. ಇದಲ್ಲದೆ, ಈ ತರಹ ಮಾರ್ಪಾಡಾದ ಪ್ರೊಟೀನುಗಳು ಕೋಶ ಕೇಂದ್ರವನ್ನು ಸೇರಿ, ಜೀನ್‌ಗಳನ್ನು ಪ್ರಚೋದಿಸಿ ಪ್ರೊಟೀನುಗಳ ಉತ್ಪಾದನೆಗೂ ಕಾರಣವಾಗಬಹುದು. ಈ ಪ್ರಕ್ರಿಯೆಯಲ್ಲಿ ಹಾರ್ಮೋನು ಕೋಶವನ್ನು ಪ್ರವೇಶಿಸದೆ, ಹೊರಗಿನಿಂದಲೆ ಸೈಕ್ಲಿಕ್ ಎಎಮ್‌ಪಿ ಮೂಲಕ ಪ್ರಭಾವ ಬೀರುವುದರಿಂದ, ಸೈಕ್ಲಿಕ್ ಎಮ್‌ಪಿ ಯನ್ನು ಎರಡನೆ ದೂತ (ಮೊದಲನೆ ದೂತ ಹಾರ್ಮೋನು) ಎಂದು ಕರೆಯಲಾಗಿದೆ. ಈ ಅಣು ಅಲ್ಲದೆ ಬೇರೆ ಎರಡನೆ ದೂತಗಳು, ಹಾರ್ಮೋನಿನ ಪರಿಣಾಮಗಳಲ್ಲಿ ಭಾಗವಹಿಸುತ್ತವೆ. ಉದಾ: ಇನೊಸಿಟಾಲ್ ಫಾಸಫೇಟ್, ಕ್ಯಾಲ್ಸಿಯಂ, ಪ್ರೊಸ್ಟಾಗ್ಲ್ಯಾಂಡಿನ್ ಮುಂತಾದುವು.

ಸ್ಟಿರಾಯಿಡ ಹಾರ್ಮೋನುಗಳು ( ಎಂಡೋಜನ್ಸ್, ಇಸ್ಟ್ರೋಜನ್ಸ್, ಕಾರ್ಟಿಕಾಯಿಡ್ಸ್) ಮತ್ತು ಗುರಾಣಿಕದ (ಥೈರಾಯಿಡ್) ಹಾರ್ಮೋನು ( ಥೈರೊಕ್ಸಿನ್) ತಮ್ಮ ಗುರಿಕೋಶಗಳ ಪೊರೆಯನ್ನು ದಾಟಿ, ಕೋಶಕೇಂದ್ರವನ್ನು ಪ್ರವೇಶಿಸಿ ಅಲ್ಲಿರುವ ತಮ್ಮ ಗ್ರಾಹಿಗಳನ್ನು ಸೇರಿಕೊಳ್ಳುತ್ತವೆ. ಅನಂತರ ಗ್ರಾಹಕ ಮತ್ತು ಹಾರ್ಮೋನ್ ಸಂಕೀರ್ಣ, ಜೀನ್‌ಗಳ ಮೇಲಿರುವ, ಈ ಗುಂಪಿನ ಪ್ರತಿ ಹಾರ್ಮೋನಿಗೂ ನಿರ್ದಿಷ್ಟವಾದ ಸ್ಥಳದಲ್ಲಿ (ಹಾರ್ಮೋನ್ ರೆಸ್ಪಾನ್ಸ್ ಎಲಿಮೆಂಟ್ಸ್) ಜೀನ್‌ಗಳನ್ನು ಸಂಪರ್ಕಿಸಿ, ಪ್ರೊಟೀನ್ ಉತ್ಪಾದನೆಗೆ ಅವಶ್ಯವಿರುವ ದೂತ ಆರ್‌ಎನ್‌ಎ (ಎಮ್‌ಆರ್‌ಎನ್‌ಎ) ಯ ಉತ್ಪಾದನೆಗೆ ಪ್ರಚೋದಿಸುತ್ತಿವೆ. ಅನಂತರ ದೂತ ಆರ್‌ಎನ್‌ಎ ಕೋಶದ್ರವವನ್ನು ಪ್ರವೇಶಿಸಿ ಪ್ರೊಟೀನು ಉತ್ಪಾದನೆಗೆ ಎಡೆ ಮಾಡಿಕೊಡುತ್ತಿದೆ. ಈ ತೆರನಾಗಿ ಉತ್ಪತ್ತಿಯಾದ ಪ್ರೊಟೀನ್‌ಗಳು ಕಿಣ್ವಗಳಾಗಿರಬಹುದು ಅಥವಾ ಜೈವಿಕ ಕ್ರಿಯೆಗಳಿಗೆ ಅವಶ್ಯಕವಾದ ಇತರೆ ಪ್ರೊಟೀನುಗಳಾಗಿರಬಹುದು. ಒಟ್ಟಿನಲ್ಲಿ ಒಂದು ಹಾರ್ಮೋನಿಗೆ, ಅದರದೇ ನಿರ್ದಿಷ್ಟ ಪ್ರೊಟೀನುಗಳ ಉತ್ಪಾದನೆಯಾಗುತ್ತಿದೆ.

ಪ್ರತಿ ಹಾರ್ಮೋನಿಗೂ ನಿರ್ದಿಷ್ಟವಾದ ಜೀವಿತಕಾಲವಿದ್ದು ಅದನ್ನು ಅರ್ಧ ಜೀವಿತ ಅವಧಿ (ಹಾಫ್ ಲೈಫ್) ಮೂಲಕ ಅಳೆಯಲಾಗುತ್ತದೆ. ಹಾರ್ಮೋನಿನ ಸ್ರವಿಕೆಯಾದ ಮೇಲೆ ಅದು ತನ್ನ ನಿರ್ದಿಷ್ಟ ಕಾರ್ಯವೆಸಗಿದರೂ, ಇಲ್ಲದಿದ್ದರೂ ಈ ಅವಧಿಯಲ್ಲಿ ನಿಷ್ಕ್ರಿಯಗೊಳ್ಳುತ್ತದೆ.

ವಿವಿಧ ಅಂತಃಸ್ರಾವಕ ಗ್ರಂಥಿಗಳ ಸ್ರವಿಕೆಗಳು (ಹಾರ್ಮೋನ್ಸ್) ಅವುಗಳ ಕಾರ್ಯಗಳು ಕೊರತೆಯಿಂದ ಮತ್ತು ಅಧಿಕ ಸ್ರವಿಕೆಯಿಂದ ಉಂಟಾಗುವ ರೋಗಗಳನ್ನು ಪ್ರತಿ ಅಂತಃ ಸ್ರಾವಕ ಗ್ರಂಥಿಯ ವಿವರಣೆಯಲ್ಲಿ ತಿಳಿಸಲಾಗಿದೆ. ನೋಡಿ: ತೆಮೆಡಿಕ, (ಪಿಟ್ಯುಟರಿ), ಗುರಾಣಿಕ, (ಥೈರಾಯಿಡ್) ಬದಿ ಗುರಾಣಿಕ ಪ್ಯಾರಾಥೈರಾಯಿಡ್ ಅಂಡಾಶಯ, ವೃಷಣ, ಅಡ್ರೀನಲ್, ಲೆಂಗರ ಹೆನ್ಸನ ದ್ವೀಪಗಳು, ಪ್ರಜನನಾಂಗಗಳು, ಪೈನಿಯಲ್, ಸ್ಟೆಮ್ಸ್ ಜಠಾಯು.

(ಹೆಚ್.ಎನ್.ವೈ.)

**ಅಂತರ ಅಸ್ಥಿಪಂಜರ:** ಪ್ರಾಣಿಗಳ ದೇಹಕ್ಕೊಂದು ನಿರ್ದಿಷ್ಟ ಆಕಾರ ಮತ್ತು ಆಧಾರ ಕೊಟ್ಟ, ಅಂಗಾಂಗಗಳ ಸಮರ್ಥ ರೀತಿಯ ಚಲನೆಗೆ ಮಾಂಸಖಂಡಗಳು ಅಂಟಿಕೊಳ್ಳಲು ಗಟ್ಟಿಯಾದ ಎಲುಬಿನಿಂದಾದ ರಚನೆ. ಪ್ರಾಣಿಗಳ ದೇಹದ ಗಾತ್ರ ದೊಡ್ಡದಾಗಿ ಬೆಳೆದಂತೆ, ಹೆಚ್ಚು ಜಟಿಲವಾದಂತೆ, ನೀರಿನಿಂದ ನೆಲದ ಮೇಲಕ್ಕೆ ವಲಸೆ ಬಂದಂತೆ ದೇಹದ ರಕ್ಷಣೆಯ ಅಗತ್ಯ ಕಾಣಿಸಿಕೊಂಡಿತು. ಕಾರಣ ಮೃದು ದೇಹದ ಮೃದ್ವಂಗಿಗಳು ಕ್ಯಾಲ್ಸೇರಿಯದ ಚಿಪ್ಪನ್ನು, ಕಂಟಕ ಚರ್ಮಿಗಳು ಮುಳ್ಳು ತುಂಬಿದ ಅಸ್ಥಿಪಂಜರವನ್ನು ಸಂಧಿಪದಿಗಳು ಕೈಟಿನ್ನಿನಿಂದಾದ ಬಹಿರ್ ಅಸ್ಥಿಪಂಜರವನ್ನು ಬೆಳೆಸಿಕೊಂಡವು. ಇದೇ ದೃಷ್ಟಿಯಿಂದ ಆದಿಯಲ್ಲಿ ಕಾಣಿಸಿಕೊಂಡ ಆಸ್ಟ್ರೆಕೊಡರ್ಮಿ ಮೀನುಗಳು ದೇಹದ ಹೊರಗೆ ಮೂಳೆತಟ್ಟೆಗಳಿಂದಾದ ಕವಚ ರೀತಿಯ ಅಸ್ಥಿಪಂಜರವನ್ನು ಪಡೆದಿದ್ದುವು. ಕ್ರಮೇಣ ವಿಕಾಸದಲ್ಲಿ ಈ ಬಹಿರ್ ಅಸ್ಥಿಪಂಜರ ದೇಹದೊಳಗೆ ಮುಳುಗಿ ಅಂತರ್ ಅಸ್ಥಿಪಂಜರವಾಯ್ತು. ಇದರ ಮೂಲ ಉದ್ದೇಶ ದೇಹಕ್ಕೆ ಆಧಾರ ಒದಗಿಸಿ ನಿರ್ದಿಷ್ಟ ಆಕಾರ ನಿರ್ಮಾಣಕ್ಕೆ ದಾರಿಮಾಡಿಕೊಡುವುದು, ಮುಖ್ಯ ಅಂಗಾಂಗಗಳಾದ ಇಂದ್ರಿಯಗಳು, ಮಿದುಳು, ಮಿದುಳು ಬಳ್ಳಿಗಳಿಗೆ ರಕ್ಷಣೆ ಒದಗಿಸುವುದು, ಕೀಲುಗಳು ಸಮರ್ಥ ರೀತಿಯಲ್ಲಿ ಕಾರ್ಯನಿರ್ವಹಿಸಲು ಅನುವು ಮಾಡುವುದು, ಕಿವಿರು ರಂಧ್ರಗಳು ನೀರಿನ ಪ್ರವಾಹಕ್ಕೆ ಸಿಕ್ಕು ನಾಶವಾಗ ತಡೆಯುವುದು, ಹಾಗು ದೇಹದ ಮಾಂಸಖಂಡಗಳು ಅಂಟಿಕೊಳ್ಳಲು ಗಟ್ಟಿ ಪ್ರದೇಶಗಳನ್ನು ಒದಗಿಸುವುದು. ಈ ವಿವಿಧ ಉದ್ದೇಶಗಳಿಗೆ ನಿರ್ಮಾಣವಾದ ಎಲುಬು ಭಾಗಗಳು ಪ್ರತ್ಯೇಕ ಅಸ್ಥಿಭಾಗಗಳಾಗಿ ಉಳಿಯದೆ ಒಂದು ನಿಯೋಜಿತ ರೀತಿಯಲ್ಲಿ ಪರಸ್ಪರ ಕೂಡಿಕೊಂಡು ಉಪಯುಕ್ತವಾದ ಅಸ್ಥಿಪಂಜರ ರೂಪುಗೊಂಡಿತು. ಕಶೇರುಕಗಳ ಈ ಅಸ್ಥಿಪಂಜರ ದೇಹದ ಒಳಗಿರುವುದರಿಂದ ಇದು ಅಂತರ್ ಅಸ್ಥಿಪಂಜರವಾಯ್ತು. ಇದು ಮೃದ್ವಸ್ಥಿ ಮೀನುಗಳಲ್ಲಿರುವಂತೆ ಮೃದ್ವಸ್ಥಿಗಳಿಂದಾಗಿರಬಹುದು ಅಥವಾ ಇತರ ಕಶೇರುಕಗಳಲ್ಲಿರುವಂತೆ ಮೂಳೆಯಿಂದಾಗಿರಬಹುದು.

ಅಂತರ್ ಅಸ್ಥಿಪಂಜರವನ್ನು ಅಕ್ಷೀಯ (ಅಕ್ಸಿಯಲ್) ಹಾಗು ಅನುಬಂಧಿ (ಅಪೆಂಡಿಕ್ಯುಲರ್) ಅಸ್ಥಿಪಂಜರವೆಂದು ವಿಂಗಡಿಸಬಹುದು. ದೇಹದ ಅಗ್ರ ಪಶ್ಚ ಅಕ್ಷದಲ್ಲಿ ಲಂಬಾಕ್ಷದಲ್ಲಿರುವ ಅಸ್ಥಿಪಂಜರವನ್ನು ಅಕ್ಷೀಯ ಅಸ್ಥಿಪಂಜರವೆನ್ನಲಾಗಿದೆ. ತಲೆಬುರುಡೆ ಮತ್ತು ಕಶೇರುಕ ಸ್ತಂಭವು ಅಕ್ಷೀಯ ಅಸ್ಥಿಪಂಜರ. ಕೈ–ಕಾಲುಗಳ ಅಸ್ಥಿಪಂಜರ ಮತ್ತು ಅವುಗಳ ಆಧಾರಪಟ್ಟಿಗಳಾದ ಭುಜಪಟ್ಟಿ ಮತ್ತು ಸೊಂಟಪಟ್ಟಿ ಅನುಬಂಧ ಅಸ್ಥಿಪಂಜರಭಾಗವಾಗುತ್ತವೆ.

ಅಂತರ್ ಅಸ್ಥಿಪಂಜರವು ಕಶೇರುಕಗಳ ವಿವಿಧ ವರ್ಗಗಳಲ್ಲಿ ಮತ್ತು ಗಣಗಳಲ್ಲಿ ರಚನಾ ವೈವಿಧ್ಯತೆಯನ್ನು ಪ್ರದರ್ಶಿಸುತ್ತದೆ. ಮೊದಲಬಾರಿಗೆ ಆಂಫಿಯಾಕ್ಸಸ್‌ನಲ್ಲಿ ಕಾಣಿಸಿಕೊಳ್ಳುವ ನೋಟೊಕಾರ್ಡು ಪೂರ್ಣ ಅಸ್ಥಿಪಂಜರದ ಅಕ್ಷವಾಗುತ್ತದೆ. ಇದೊಂದು ಪ್ರತ್ಯಾಸ್ತ ನಾಳಿಕಾಕಾರದ ರಚನೆ. ವಿಜಾತೀಯವಾದ ಅವಕಾಶಭರಿತ ಕೋಶಗಳಿಂದಾದ ಈ ರಚನೆಯು ಕೀಲಿನಾಕಾರದ ಹೊದಿಕೆಯುಳ್ಳ ರಚನೆ. ಇದರ ಸುತ್ತ ಬಹಿರ್ ಪ್ರತ್ಯಾಸ್ತ ಪಟಲವೊಂದಿದೆ. ಕಶೇರುಕಗಳಲ್ಲಿ ನೋಟೊಕಾರ್ಡು ಬಹುತೇಕವಾಗಿ ಭ್ರೂಣೀಯ ರಚನೆ. ಪ್ರೌಢಾವಸ್ಥೆಯಲ್ಲಿ ಇದು ಮರೆಯಾಗಿ ಅದರ ಜಾಗದಲ್ಲಿ ಬೆನ್ನೆಲುಬು ಬೆಳೆಯುತ್ತದೆ. ನೋಟೊಕಾರ್ಡಿನ ಮುಂಭಾಗದಲ್ಲಿ ತಲೆಬುರುಡೆಯು ಬೆಳೆಯುತ್ತದೆ.

ಮೀನುಗಳ ಜೋಡಿ ಈಜುರೆಕ್ಕೆಗಳಿಗೆ ಉಳಿದೆಲ್ಲ ಈಜುರೆಕ್ಕೆಗಳಂತೆಯೆ, ಕಡ್ಡಿಗಳಂಥ ರಚನೆಯಿಂದಾದ (ಟೆರಿಗ್ಗಿಯೊಫೊರ್) ಅಸ್ಥಿಪಂಜರವಿದೆ. ಈ ಕಡ್ಡಿಗಳು ಬುಡದ ಬಳಿ ಈಜುರೆಕ್ಕೆ ದೇಹವನ್ನು ಸೇರುವ ಬಳಿ ಮೃದ್ವಸ್ಥಿ ಅಥವ ಮೂಳೆಯೊಂದಿಗೆ ಕೀಲಿಕೊಂಡಿವೆ. ಇದು ಈಜುರೆಕ್ಕೆಗಳಿಗೆ ಬಲವನ್ನು ಕೊಡುತ್ತದೆ. ಮೀನುಗಳನ್ನು ಬಿಟ್ಟರೆ ಉಳಿದ ಕಶೇರುಕಗಳಲ್ಲಿ ಜೋಡಿ ಈಜುರೆಕ್ಕೆಗಳ ಸ್ಥಾನವನ್ನು ಐದು ಬೆರಳುಗಳಿರುವ, ಪಂಚಾಂಗುಲೀಯ ಕಾಲುಗಳು ಆಕ್ರಮಿಸಿಕೊಳ್ಳುತ್ತವೆ. ಈ ಕಾಲುಗಳಿಗೆ ಮೂಳೆಗಳ ಆಧಾರವಿದೆ. ಈ ಮೂಳೆಗಳನ್ನು ಮಾರ್ಪಟ್ಟ ಟೆರಿಗಿಯೊ ಫೊರ್‌ಗಳೆಂದು ಹೇಳಬಹುದು. ಇವಕ್ಕೆ ಆಧಾರವಾಗಿ ಕಾಲು ಮೇಖಲೆಗಳು ನಿರ್ಮಾಣವಾಗುತ್ತವೆ. ಕಾಲುಗಳು ಮುಂಡವನ್ನು ಸೇರುವ ಭಾಗದಲ್ಲಿ ಇವು ಬೆಳೆಯುತ್ತವೆ. ಹೀಗೆ ಹಂತಹಂತವಾಗಿ ಕಶೇರುಕಗಳ ಅಂತರ್ ಅಸ್ಥಿಪಂಜರವು ವಿಕಾಸಗೊಂಡಿದೆ.

(ಎಚ್.ಬಿ.ಡಿ.ಎಸ್.)

**ಅಂತಃಸ್ರಾವಕ ಗ್ರಂಥಿಗಳು:** ಪ್ರಾಣಿಗಳಲ್ಲಿ, ರಾಸಾಯನಿಕ ದೂತಗಳನ್ನು (ಹಾರ್ಮೋನ್ಸ್) ತಯಾರಿಸಿ, ನಾಳಗಳ ನೆರವಿಲ್ಲದೆ ನೇರವಾಗಿ ರಕ್ತಕ್ಕೆ ಸುರಿಸಿ, ದೇಹದ ಅನೇಕ ಕ್ರಿಯೆಗಳಲ್ಲಿ ಸಂಯೋಜನೆಯನ್ನು ತರುವ ಗ್ರಂಥಿಗಳು. ನಿರ್ನಾಳಗ್ರಂಥಿಗಳು, ಒಳಸುರಿಕೆ ಗ್ರಂಥಿಗಳು, ಇವು ಪರ್ಯಾಯ ನಾಮಗಳು (ಎಂಡೊಕ್ರೈನ್ ಗ್ಲ್ಯಾಂಡ್ಸ್). ಹಾರ್ಮೊನ್‌ಗಳು ಅಂಗಗಳ ಕ್ರಿಯೆಯ ಗತಿಗಳ ಮೇಲೆ ತೀರ ಕಿರಿಯ ಪ್ರಮಾಣಗಳಲ್ಲೆ ವಿಪರೀತ ಪ್ರಭಾವ ಬೀರುತ್ತವೆ. ಶಸ್ತ್ರಕ್ರಿಯೆಯಿಂದ ಒಂದು ಒಳಸುರಿಕ ಗ್ರಂಥಿಯನ್ನು

ಪ್ರಾಣಿಯಲ್ಲಿ ಕೊಯ್ದು ತೆಗೆದರೆ ಗೊತ್ತಾದ ಕೊರತೆಯ ಸ್ಥಿತಿ ತಲೆದೋರುವುದು. ಆಮೇಲೆ ಆ ಗ್ರಂಥಿಯ ಹಾರ್ಮೋನನ್ನು ಕೊಟ್ಟರೆ ಎಂದಿನ ಸ್ಥಿತಿ ಮರುಕಳಿಸುತ್ತದೆ. ವಿಪುಲ ರಕ್ತ ಪೂರೈಕೆ ಇರುವುದು ಅಂತರ್ ಸ್ರಾವಕ ಗ್ರಂಥಿಗಳ ರಚನೆಯ ಮುಖ್ಯ ಲಕ್ಷಣ.

ತೆಮಡಿಕ (ಪಿಟ್ಯುಟರಿ) ಗ್ರಂಥಿಯ ಮುಂದಣ, ಹಿಂದಣ ಹಾಲೆಗಳು (ಲೋಬ್ಸ್), ಪೈನಿಯಲ್, ಗುರಾಣಿಕ (ತೈರಾಯ್ಡ್), ಬದಿ ಗುರಾಣಿಕಗಳು (ಪ್ಯಾರತೈರಾಯ್ಡ್ಸ್), ಮಾಂಸಲಿಯ ದೀವುಗಳು (ಪ್ಯಾಂಕ್ರಿಯಾಟಿಕ್ ಐಲೆಟ್ಸ್), ಅಡ್ರಿನಲ್ ರಗಟೆ (ಕಾರ್ಟೆಕ್ಸ್), ಅಡ್ರಿನಲ್ ಕುಸುರಿ (ಮೆಡುಲ್ಲ), ಅಂಡಾಶಯ (ಓವರಿ), ತರಡು (ಟೆಸ್ಟಿಸ್) ಇವು ಕಶೇರುಕಗಳ ನಿರ್ನಾಳ ಗ್ರಂಥಿಗಳು. ಇದಲ್ಲದೆ ಕೇಂದ್ರ ನರಮಂಡಲದ ಹೈಪೊತೆಲಮಸ್ ಕೂಡ ಅಂತಃಸ್ರಾವಕ ಗ್ರಂಥಿ (ನರ ಅಂತಃಸ್ರಾವಕ). ಬೆನ್ನೆಲುಬಿರದ ಜೀವಿಗಳಲ್ಲಿ ಬೆಳೆವಣಿಗೆ, ರೂಪಬದಲಿಕೆಗಳಿಗಾಗಿ ಹಾರ್ಮೋನ್ ಸುರಿಸುವ ಒಳಸುರಿಕ ನರ ರಚನೆಗಳು ಇರುತ್ತವೆ. ಅಲ್ಲದೆ ರಚನೆಯಲ್ಲಿ ವಿಶೇಷ ಗ್ರಂಥಿಗಳಂತೆ ತೋರಿದ ಕೆಲವು ಊತಕಗಳು ಕೂಡ ಹಾರ್ಮೋನ್ ಸುರಿಸಬಹುದು. ಇದಲ್ಲದೆ ರಸ ಸುರಿಸುವಂತೆ, ಚಲಿಸುವಂತೆ ಆಹಾರ ನಾಳಿಯನ್ನು ಚೋದಿಸುವ ಹಾರ್ಮೋನ್‌ಗಳನ್ನು ಸುರಿಸುವ, ಕೆಲವು ಜೀವಕಣ ತಂಡಗಳು ಕರುಳಿನಲ್ಲಿವೆ.

ತೆಮಡಿಕ: ಮಾನವನಲ್ಲಿ ಬಟಾಣಿಕಾಳಿನ ಗಾತ್ರದ ಕೇವಲ ಅರ್ಧ ಗ್ರಾಂ ತೂಕವಿರುವ ಈ ಗ್ರಂಥಿ ಮಿದುಳಿನ ತಳದಲ್ಲಿ ನಟ್ಟನಡುವೆ ಒಂದು ಸಣ್ಣ ಗುಳಿಯಲ್ಲಿದೆ. ಅಂಗರಚನೆ, ಬೆಳೆವಣಿಗೆ, ನಿಜಗೆಲಸಗಳಲ್ಲಿ ಏಳು ಹಾರ್ಮೋನುಗಳನ್ನು ಸುರಿಸುವ ಮುಂದಣ ಹಾಲೆ ಇಲ್ಲವೇ ಗ್ರಂಥಿಭಾಗವೂ ಎರಡು ಚೋದನಿಕಗಳನ್ನು ಸುರಿಸುವ ಹಿಂದಣ ಹಾಲೆ ಇಲ್ಲವೆ ನರಭಾಗವೂ ಈ ಗ್ರಂಥಿಯಲ್ಲಿವೆ. ಬಣ್ಣವಸ್ತುಗಳಿಂದ ರಂಗೇರುವ ಗುಣದಿಂದ ಬೇರೆಬೇರೆಯಾಗಿ ವಿಂಗಡಿಸಬಹುದಾದ ಹಾಗೂ ಇಮ್ಯುನೊ ರಾಸಾಯನಿಕಶಾಸ್ತ್ರ ವಿಧಾನಗಳಿಂದ ಜೀವಕಣಗಳನ್ನು ಮುಂದಣ ಹಾಲೆಯಲ್ಲಿ ಗುರುತಿಸಬಹುದು. ಒಂದೊಂದು ಬಗೆಯ ಜೀವಕಣದಿಂದಲೂ ಇಂಥವೇ ಹಾರ್ಮೋನು ಹುಟ್ಟುವುವೆಂದು ಧೃಢಪಟ್ಟಿದೆ.

ಮಿದುಳಿನ ನಡುವಿನಲ್ಲಿ ಸಣ್ಣ ಅಂಕಣದಂತಿರುವ ಕೆಳತಲೆಯರೆ (ಹೈಪೊತ್ಯಾಲಮಸ್) ಯಿಂದ ತೆಮಡಿಕ ಗ್ರಂಥಿಯ ಹಿಂದಣ ಹಾಲೆಗೆ ಹೋಗುವ ನರಗಳು ಆ ಹಾಲೆಯ ಚಟುವಟಿಕೆಗಳನ್ನು ಅಂಕೆಗೊಳಿಸುತ್ತವೆ. ಕೆಳತಲೆಯರೆ ಸ್ರವಿಸುವ ಹಾರ್ಮೋನುಗಳು ರಕ್ತದ ಮೂಲಕ ಸಾಗಿ ಮುಂದಣಹಾಲೆಯ ಸುರಿಕೆಗಳನ್ನು ನಿಯಂತ್ರಿಸುವುವು. ನೋಡಿ– ಕೆಳತಲೆಯರೆ.

ಗುರಾಣಿಕ: ಕೊರಳಲ್ಲಿ ಗೋಮಾಳೆಯ ಕೆಳಗಡೆ, ಉಸಿರ್ನಾಳದ ಎರಡು ಕಡೆಯೂ ಈ ಗ್ರಂಥಿ ಇದೆ. ಇದಕ್ಕೆ ರಕ್ತದ ಸರಬರಾಜು ಹೆಚ್ಚು. ಇದರ ನಡುಭಾಗ ಸಣ್ಣಗಿದ್ದು ಪಕ್ಕಗಳು ರೆಕ್ಕೆಯಾಕಾರದಲ್ಲಿರುವುವು. ನೋಡಿ–ಗುರಾಣಿಕ ಗ್ರಂಥಿ.

ಬದಿಗುರಾಣಿಕಗಳು: ಸಾಮಾನ್ಯವಾಗಿ ಇದರ ನಾಲ್ಕೂ ಗ್ರಂಥಿಗಳೂ ಗುರಾಣಿಕ ಗ್ರಂಥಿಯ ಹಿಂಬದಿಯಲ್ಲೊ ಬದಿಯಲ್ಲೊ ಹುದುಗಿರುತ್ತವೆ. ಕೆಲವುವೇಳೆ ವಿರಳವಾಗಿ ೨–೬ ಗ್ರಂಥಿಗಳಿರಬಹುದು. ಇವು ಗುಲಗಂಜಿ ಗಾತ್ರಕ್ಕಿರುತ್ತವೆ.

ಮಾಂಸಲಿ: ಹೊಟ್ಟೆಯಲ್ಲಿ, ಹಿಂದಣ ಗೋಡೆಯ ಮೇಲೆ ಸಣ್ಣ ಕರುಳಿನ ಮೊದಲನೆಯ ಭಾಗವಾದ ದುರಾರ್ಗರುಳಿನ (ಡುಯೋಡಿನಂ) ತಿರುವಿನಲ್ಲಿ ಈ ಗ್ರಂಥಿಯಿದೆ. ಆಹಾರವನ್ನು ಅರಗಿಸುವ ಈ ಗ್ರಂಥಿಯ ರಸಗಳನ್ನು ನಾಳಗಳ ಮೂಲಕ ಸಣ್ಣ ಕರುಳಿಗೊಯ್ದರೂ ಉಳಿದ ಭಾಗದಲ್ಲಿ ಇನ್ಸುಲಿನ್ ಹಾಗು ಗ್ಲುಕೊಗಾನ ಎಂಬ ಹಾರ್ಮೋನ್‌ಗಳ ಸ್ರವಿಕೆಯಾಗುತ್ತದೆ. ಮೊದಲಿನದು ಹೊರಸುರಿಕ (ಎಕ್ಸೊಕ್ರಿನ್) ಎರಡನೆಯದು ಒಳಸುರಿಕ (ಎಂಡೊಕ್ರೈನ್). ಒಳಸುರಿಕ ಭಾಗ ಒಟ್ಟಾಗಿ ಒಂದೆಡೆಯಲ್ಲಿರದೆ ಅಲ್ಲಲ್ಲಿ ಜೀವಕಣ ತಂಡಗಳಾಗಿ ದ್ವೀಪಗಳಂತಿವೆ. ಇವಕ್ಕೆ ಲ್ಯಾಂಗರ್‌ಹ್ಯಾನ್ಸನ ಪುಟ್ಟ ದ್ವೀಪಗಳು ಎಂದು ಹೆಸರಿಸಿದೆ. ಈ ಜೀವಕಣಗಳಲ್ಲಿ ಆಲ್ಫ, ಬೀಟ, ಗಾಮ ಮತ್ತು ಡೆಲ್ಟಾ ಎಂಬ ನಾಲ್ಕು ವಿಧಗಳು. ನೋಡಿ : ಇನ್ಸುಲಿನ್.

ಅಡ್ರಿನಲ್‌ಗಳು: ಒಂದೊಂದು ಮೂತ್ರಪಿಂಡದ ಮೇಲ್ಗಡೆ ತ್ರಿಭುಜಾಕಾರಿ ಟೋಪಿಯಂತೆ ಅಂಟಿಕೊಂಡಿರುವ ಈ ಸಣ್ಣಗ್ರಂಥಿಗಳ ಪ್ರತಿ ಒಂದರಲ್ಲೂ ಎರಡು ಬೇರೆ ಬೇರೆ ಗ್ರಂಥಿಗಳಿವೆ: ಒಳಗಿನ ಭಾಗ ಕುಸುರಿ (ಮೆಡುಲ) ಹೊರಗಿನ ಭಾಗ ರಗಟೆ (ಕಾರ್ಟೆಕ್ಸ್). ಕುಸುರಿ ಅನುವೇದನಾ ನರಮಂಡಲದ (ಸಿಂಪತಟಿಕ್ ನರ್ವಸ್ ಸಿಸ್ಟಂ) ಮಾರ್ಪಾಡಾದ ನರಗಂಟುಗಳಾಗಿದ್ದು (ಗ್ಯಾಂಗ್ಲಿಯ) ಕ್ರೊಮೆಫಿನ. ಜೀವಕೋಶಗಳನ್ನು ಹೊಂದಿದೆ. ರಗಟೆಯು ಬೇರೆ ತರದ ಕೋಶಗಳಿಂದಾಗಿದ್ದು, ಮೂರು ಭಾಗಗಳನ್ನು ಹೊಂದಿರುತ್ತದೆ. ನೋಡಿ–ಅಡ್ರಿನಲ್ ಗ್ರಂಥಿಗಳು, ಅರ್ಡಿನಲಿನ್, ನಾರ ಅಡ್ರಿನಲಿನ್.

ತರಡುಗಳು: ಸ್ತನಿಗಳ, ತೊಡೆಗಳ ನಡುವಣ ಸಂದಲ್ಲಿ ಇಳಿಬಿದ್ದಿರುವ ಬೀಜಚೀಲದಲ್ಲಿ (ಸ್ಕ್ರೋಟಂ) ಪಕ್ಕಪಕ್ಕದಲ್ಲಿ ಬೇರೆಬೇರೆಯಾಗಿ ಎರಡಿರುತ್ತವೆ. ಮೈಯಕಾವಿಗಿಂತಲೂ ಇವು ತಣ್ಣಗಿರುವುವು. ವೀರ್ಯಾಣುಗಳ ಉತ್ಪಾದನೆಗೆ ಹೀಗೆ ತಣ್ಣಗಿರಲೇಬೇಕು. ರೇತುಸಾಗಿನ ಕಿರುನಾಳಗಳಲ್ಲಿ (ಸೆಮನಿಫೆರಸ್ ಟ್ಯುಬ್ಯೂಲ್ಸ್) ವೀರ್ಯಾಣುಗಳು ಉತ್ಪತ್ತಿಯಾಗುತ್ತವೆ. ಈ ಕಿರುನಾಳಗಳ ನಡುವೆ ಇರುವ ಊತಕಾಂತರ (ಇಂಟರ್‌ಸ್ಟಿಷಿಯಲ್) ಜೀವಕಣ ತಂಡಗಳು ಪುಲ್ಲಿಂಗಿಕಾರಕ (ಟೆಸ್ಟೊಸ್ಟಿರೋನ್) ಹಾರ್ಮೋನ್ ಸುರಿಸುತ್ತವೆ.

ಅಂಡಾಶಯಗಳು: ಕೆಳಹೊಟ್ಟೆಯ ಕಿಳ್ಗುಳಿಯಲ್ಲಿ (ಪೆಲ್ವಿಸ್) ಗರ್ಭಕೋಶದ ಎರಡು ಪಕ್ಕಗಳಲ್ಲಿ ಒಂದೊಂದು ಅಂಡಾಶಯ ಗ್ರಂಥಿ ಇರುವುದು. ಇವುಗಳಲ್ಲಿರುವ ಫಾಲಿಕಲ್‌ಗಳ ಭಿತ್ತಿಯು ಇಸ್ಟ್ರೋಜನ್ ಹಾಗು ಪ್ರೊಜೆಸ್ಟಿರಾನ್ ಹಾರ್ಮೋನ್‌ಗಳನ್ನು ಸ್ರವಿಸುವುದು.

ಮಾಸು: ಬಸುರಿಯ ಗರ್ಭಕೋಶದಲ್ಲಿ ಪಿಂಡಗೂಸು (ಫೀಟಸ್) ಬೆಳೆದಂತೆಲ್ಲ ಅಂಡಾಶಯದ ಒಳಸುರಿಕ ಕೆಲಸವನ್ನು ಇದು ವಹಿಸಿಕೊಳ್ಳುವುದರಿಂದ ಇದೂ ಒಂದು ಒಳಸುರಿಕ ಗ್ರಂಥಿ ಎನ್ನಬಹುದು. ನೋಡಿ: ಜರಾಯು (ಪ್ಲಾಸೆಂಟ)

ಪೈನಿಯಲ್: ಮಿದುಳಿನ ಮೇಲ್ಭಾಗದಲ್ಲಿರುವ, ಹೊರ ಪ್ರಪಂಚದ ಬೆಳಕಿನಲ್ಲಾಗುವ ಬದಲಾವಣೆಗೆ ಸ್ಪಂದಿಸಿ, ಮೆಲಟೊನಿನ್ ಎಂಬ ಹಾರ್ಮೋನ್ ಸ್ರವಿಸುವ ಗ್ರಂಥಿಗಳು.

***

**ಅಂಬಲಿ ಮೀನು:** ತಿಳಿನೀಲಿಬಣ್ಣದ ಕೊಡೆಯಾಕಾರದ ಪ್ರಾಣಿ (ಜೆಲ್ಲಿಫಿಷ್). ಕುಟುಕುಕಣವಂತಗಳ (ಸೀಲೆಂಟರೇಟ) ವಂಶಕ್ಕೆ ಸೇರಿದೆ. 5–7.5 ಸೆಂಮೀ. ಉದ್ದವಾಗಿ ಇರುವುದು. ಕೊಡೆಯ ಅಂಚಿನಲ್ಲಿ ಒಳದರ್ಮದಿಂದ (ಎಂಡೊಡರ್ಮ್) ಆವರಿಸಲ್ಪಟ್ಟ ಟೊಳ್ಳಾದ ಕರಬಳ್ಳಿಗಳ (ಟೆಂಟಕಲ್ಸ್) ಸಹಾಯದಿಂದ ಸ್ವತಂತ್ರವಾಗಿ ಈಜುವುದು. ಕೊಡೆಯ ಅಂಚು ಕೇವಲ ಹೊರದರ್ಮ (ಎಕ್ಟೊಡರ್ಮ್) ದಿಂದ ಆಗಿರದೆ ಒಳದರ್ಮವನ್ನೂ ಒಳಗೊಂಡಿದೆ. ಹೊರ ಮತ್ತು ಒಳದರ್ಮಗಳ ಮಧ್ಯದಲ್ಲಿರುವ–ಅಮೀಬಾದಂಥ ಜೀವಕೋಶಗಳು (ಅಮೀಬೊಸೈಟ್ಸ್) ಮತ್ತು ಕವಲೊಡೆದ ತಂತುಗಳಿರುವ ಮೀಸೊಗ್ಲಿಯ ಎಂಬ ಪದರಗಳುಂಟು. ಇದು ಬಹಳ ದಪ್ಪ. ದೇಹ ಸಂಪೂರ್ಣ ವರ್ತುಲವಾಗಿರದೆ ಎಂಟು ಕಚ್ಚುಗಳಿಂದ ಎಂಟು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ಕಚ್ಚಿನಲ್ಲೂ ಟೆಂಟ್ಯಾಕ್ಯುಲೊಸಿಸ್ಟ್ ಎಂಬ ಜ್ಞಾನೇಂದ್ರಿಯ ಇರುವುದು. ಕೊಡೆಯ ಕೆಳಭಾಗದ ಮಧ್ಯದಲ್ಲಿ ಚಚ್ಚೌಕಾಕಾರದ ಬಾಯಿ ಇದ್ದು, ಕೋನದ ನಾಲ್ಕೂ ಮೂಲೆಗಳು ಬಹಳ ಉದ್ದವಾಗಿ ನೆರಿಗೆಗಳುಳ್ಳ ನಾಲ್ಕು ಬಾಹುಗಳ ಮಧ್ಯದಲ್ಲಿ ಉಸಿರಾಡುವಿಕೆಗೆ ಸಂಬಂಧಿಸಿರಬಹುದಾದ–ಜನನಾಂಗದ ತಳಭಾಗದ ಕುಳಿಗಳು ಕಾಣಿಸುವುವು. ಅದರ ಬಾಯಿಯಿಂದ ಹೊರಟ ಒಂದು ಚಿಕ್ಕ ನಾಳ ಜಠರಾವಕಾಶವನ್ನು ಸೇರುವುದು. ಇಲ್ಲಿಂದ ಉದ್ಭವಿಸಿದ ನಾಲ್ಕು ಸಂಚಿಗಳಿಂದ ನಾಲ್ಕು ತ್ರಿಜ್ಯನಾಳಗಳು ಹೊರಟು ಅಂಚಿನಲ್ಲಿರುವ ವರ್ತುಲನಾಳವನ್ನು ಸೇರುವುವು. ಈ ಕೋಶಗಳಲ್ಲಿ ಕುಟುಕುಕಣಗಳೆಂಬ ಜಠರತಂತುಗಳಿವೆ. ಅಲ್ಲದೆ ನಸುಗೆಂಪು ವರ್ಣದ ನೆರಿಗೆಗಳುಳ್ಳ ಲಾಳಾಕಾರದ ನಾಲ್ಕು ಜನನೇಂದ್ರಿಯಗಳೂ ಇರುವುವು. ಜನನೇಂದ್ರಿಯಗಳು ಒಳದರ್ಮದಿಂದ ಉದ್ಭವಿಸುವುವು. ಏಕಲಿಂಗ ರೂಪಿಗಳಾದ ಇವುಗಳ ಪ್ರಜನನಜೀವಕಣಗಳು ಪಕ್ವವಾದಾಗ ಜಠರದ ಮೂಲಕ ಹೊರಡಲ್ಪಡುತ್ತವೆ. ಇಲ್ಲಿಯೇ ಅಂಡಾಣು ನೀರಿನ ಪ್ರವಾಹದೊಡನೆ ಜಠರವನ್ನು ಪ್ರವೇಶಿಸುವ ಬೇರೊಂದು ಅಂಬಲಿಮೀನಿನ ವೀರ್ಯಾಣುವಿನೊಡನೆ ಸಂಯೋಗವಾಗಿ ನಿಷೇಚಿತ ತತ್ತಿಯಾಗಿ ಬೆಳೆಯುವುದು. ಶಿಲಕೆಗಳುಳ್ಳ ಪ್ಲಾನುಲ ಎಂಬ ಮರಿಯಾಗಿ ರೂಪುಗೊಳ್ಳುವುವು. ಅನಂತರ ಈ ಮರಿ ಅಂಬಲಿಮೀನಿನ ದೇಹದಿಂದ ಹೊರಬಂದು, ನೀರಿನಲ್ಲಿ ಕೆಲಹೊತ್ತು ಈಜಿ ಯಾವುದಾದರೂ ಪದಾರ್ಥಕ್ಕೆ ಅಂಟಿಕೊಂಡು ಪಾಲಿಪ್ ರೂಪ ತಳೆಯುವುದು. ಆಮೇಲೆ ಬಾಯಿ, ಸ್ಪರ್ಶಾಂಗ ಮುಂತಾದುವುಗಳನ್ನು ಹೊಂದಿ ಗೊಂಚಲುರೂಪದ ವಿಶಿಷ್ಟ ಮಾದರಿಯಿಂದ ಮೆಡ್ಯುಸಾವನ್ನು ಹೋಲುವ ಎಫೈರಾ ರೂಪಿಗಳಿಗೆ ಜನ್ಮವೀಯುವುದು. ಹೀಗೆ ಅಂಬಲಿಮೀನಿನ ಜೀವನಚಕ್ರದಲ್ಲಿ ಸ್ವತಂತ್ರವಾಗಿ ಈಜುವ ಮೆಡ್ಯೂಸಾರೂಪಿ ಸ್ಥಾಯಿಯಾದ ಪಾಲಿಪ್‌ರೂಪಿಯನ್ನೂ ಮತ್ತು ಈ ಪಾಲಿಪ್‌ರೂಪಿ ಮತ್ತೆ ಮೆಡ್ಯೂಸಾರೂಪಿಯನ್ನೂ ಹುಟ್ಟಿಸುವುದರಿಂದ ಇಲ್ಲಿ ಪರ್ಯಾಯ ಸಂತಾನೋತ್ಪತ್ತಿಯ ಕ್ರಮವನ್ನು ಕಾಣಬಹುದು. (ಎಸ್.ಎಸ್.ಎಚ್.)

**ಅಂಬು ಮೀನು:** ಪರ್ಸಿಫಾರ್ಮಿಸ್ ವರ್ಗದ ಟಾಕ್ಸಾಟಿಡೆ ಕುಲಕ್ಕೆ ಸೇರಿದ ಒಂದು ಅಸ್ಥಿಮೀನು. ಸಮುದ್ರತೀರ, ಚೌಳುನೀರು ಹಾಗೂ ಸಿಹಿನೀರಿನಲ್ಲಿಯೂ ಸಹ ವಾಸಿಸುವ ಈ ಮೀನು, ಭಾರತದಿಂದ ಫಿಲಿಪೈನ್ಸ್, ಆಸ್ಟ್ರೇಲಿಯ ಹಾಗೂ ಪಾಲಿನೇಶಿಯದವರೆಗೆ ಹರಡಿದೆ. ಟ್ಯಾಕ್ಸಾಟಿಕ್ ಜ್ಯಾಕ್ಯುಲೇಟ್ರಿಕ್ಸ್ ಎಂಬುದು ಇದರ ಶಾಸ್ತ್ರೀಯ ಹೆಸರು. ಆಂಗ್ಲಭಾಷೆಯಲ್ಲಿ ಆರ್ಚರ್‌ಫಿಷ್ ಎನ್ನುತ್ತಾರೆ.

30 ಸೆಂಮೀ ಉದ್ದ ಬೆಳೆಯುವ ಈ ಮೀನಿನ ದೇಹವು ಪೂರ್ಣವಾಗಿದ್ದು, ಸಂಕುಚಿತವಾಗಿದೆ. ಕಣ್ಣುಗಳು ದೊಡ್ಡವು. ತುದಿಯಲ್ಲಿರುವ ಬಾಯಿಯು ದೊಡ್ಡದಾಗಿದೆ. ಕೆಳದವಡೆಯು ಮೇಲ್ದವಡೆಗಿಂತ ಮುಂದಿದ್ದು ಚಾಚಲು ಸಮರ್ಥವಾಗಿದೆ. ಸಾಮಾನ್ಯವಾಗಿ

ಇದು ಈಜುವ ಹಾಗೂ ತೇಲುವ ಸಣ್ಣ ಪ್ರಾಣಿಗಳನ್ನು ತಿನ್ನುತ್ತದೆ. ಆದರೆ ಹಸಿದಾಗ ನೀರಿನ ಮೇಲೆ ತೂಗಾಡುತ್ತಿರುವ ಗಿಡದ ಎಲೆ ಮತ್ತು ಕಾಂಡಗಳ ಮೇಲೆ ತೆವಳುತ್ತಿರುವ ಕೀಟಗಳನ್ನು ಬಾಯಿಯ ನೀರಿನ ಚಿಲುಮೆಯಿಂದ ಹೊಡೆದು ಉರುಳಿಸಿ ತಿನ್ನುತ್ತದೆ. ಸಂಪೂರ್ಣವಾಗಿ ಬೆಳೆದ ದೊಡ್ಡ ಮೀನು ನೀರಿನ ಮೇಲ್ಮೈಯಿಂದ 1.75 ಮೀ ಮೇಲಿರುವ ಕೀಟಗಳನ್ನು ಹೊಡೆಯಲು ಸಾಮರ್ಥ್ಯವುಳ್ಳದ್ದು. ಆಹಾರ ಪ್ರಾಣಿಯನ್ನು ಹಿಡಿಯುವ ಸಮಯದಲ್ಲಿ, ನೀರಿನ ಮೇಲ್ಮೈ ಹತ್ತಿರ ಹೆಚ್ಚು ಕಡಿಮೆ ಲಂಬವಾಗಿದ್ದು, ಮೂತಿಯನ್ನು ಮಾತ್ರ ನೀರಿನಿಂದ ಹೊರಗಿಟ್ಟು, ಒಂದು ಬಲಯುತವಾದ ಹಾಗೂ ವೇಗಯುತವಾದ ನೀರಿನ ಬುಗ್ಗೆಯನ್ನು ಉತ್ಪತ್ತಿಮಾಡಿ, ಗುರಿಯಿಟ್ಟು ಕೀಟವನ್ನು ಹೊಡೆದುರುಳಿಸುತ್ತದೆ.

ಬೆಳೆದ ಮೀನುಗಳು ಹವಳದ ಬಂಡೆ ಅಥವ ಹವಳದ ದಿಬ್ಬಗಳ ಪ್ರದೇಶದಲ್ಲಿ ಮೊಟ್ಟೆ ಇಡುತ್ತವೆ. ಎಳೆಯ ಮರಿಗಳು ಅನಂತರ ಅಲ್ಲಿಂದ ಚೌಳು ನೀರಿಗೆ ಅಥವ ಅಲ್ಲಿಂದಾಚೆ ಸಿಹಿ ನೀರಿಗೂ ಹಿಂತಿರುಗಿಬರುತ್ತವೆ. ಅಂಬು ಮೀನುಗಳು ತುಲನಾತ್ಮಕವಾಗಿ ಬುದ್ಧಿವಂತವುಗಳೆಂಬುದು ಸಾಮಾನ್ಯ ಅಭಿಪ್ರಾಯವಾಗಿದೆ. (ಬಿ.ಎಚ್.ಎಂ.)

**ಅಂಬುಳ:** ಕೀಟೋಗ್ನಾತಾ ವಂಶದ ಸಮುದ್ರಜೀವಿ. ಈ ವಂಶದಲ್ಲಿ 9 ಜಾತಿಗಳು ಮತ್ತು 40 ಪ್ರಭೇದಗಳಿವೆ. ಇವುಗಳಲ್ಲಿ ಸಾಜಿಟ್ಟ ಎಂಬುದು ಇತರ ಪ್ರಭೇದಗಳಿಗಿಂತ ದೊಡ್ಡದು. ಸಮುದ್ರದಲ್ಲಿ ಬೇರೆ ಬೇರೆ ಆಳಗಳಲ್ಲಿ ಜೀವಿಸುವ ಈ ಹುಳು ನೀರಿನ ಮೇಲೆ ಈಜುವುದು. ಕೆಲವು 6,000 ಮೀ ಆಳದಲ್ಲಿಯೂ ಉಳಿದವು ಸಾಧಾರಣವಾಗಿ 200–300 ಮೀ ಆಳದಲ್ಲಿಯೂ ಜೀವಿಸುವುವು. ಸ್ಪಡೆಲ್ಲ ಅತಿ ಆಳದಲ್ಲಿ ಜೀವಿಸುತ್ತದೆ. ಸ್ಪಡೆಲ್ಲ ಪೈಜಾಪ್ಟೆರ ಸೂಕ್ಷ್ಮವಾದ ಬೆರಳಿನಾಕಾರದ ರಚನೆಗಳ ಸಹಾಯದಿಂದ ಇತರ ವಸ್ತುಗಳಿಗೆ ಅಂಟಿರುವುದು. ಇತರ ಜಾತಿಯವು ತೇಲು ಜೀವಿಗಳು. ಹಲವು ಸಮುದ್ರದಲ್ಲಿ ಈಜಿ ಜೀವಿಸುತ್ತವೆ. ಇವು ಮುಖ್ಯವಾಗಿ ಮಾಂಸಾಹಾರಿಗಳು. ಇತರ ಜಾತಿಯ ಸಣ್ಣ ಜೀವಿಗಳೇ ಇವಕ್ಕೆ ಆಹಾರ. ಇದರ ದೇಹ ಪಾರದರ್ಶಕವಾಗಿದೆ. ಪ್ರೌಢಜೀವಿ 12–25 ಮಿಮೀ ಉದ್ದವಿದೆ. ದೇಹ ತಲೆ, ಮೈ ಮತ್ತು ಬಾಲದಿಂದ ಕೂಡಿದೆ. ತಲೆಯ ತಳದಲ್ಲಿರುವ ಬಾಯಿಯ ಸುತ್ತಲೂ ತೆಳುವಾದ ಮುಳ್ಳುಗಳಂತಿರುವ ರಚನೆಗಳಿವೆ. ಮೈಭಾಗದ ಇಕ್ಕೆಡೆಯಲ್ಲಿಯೂ ಈಜುರೆಕ್ಕೆಗಳಿವೆ. ಬಾಲ ಕರಣೆಯಾಕಾರವಾಗಿದೆ. ದೇಹಾಂತರಾವಕಾಶ ವಿಶಾಲವಾಗಿದೆ. ಅದಕ್ಕೆ ಶಿಲಕೆಗಳುಳ್ಳ ಅನುಲೇಪಕ ಕಣಗಳ ಹೊದಿಕೆಯಿದೆ. ಜೀರ್ಣನಾಳದ ಮುಂದಿನ ತುದಿಯಲ್ಲಿ ಬಾಯಿಯೂ ಹಿಂದಿನ ತುದಿಯಲ್ಲಿ ಆಸನವೂ ಇವೆ. ತಲೆಯಲ್ಲಿ ಗಂಟಲಿನ ಮೇಲೆ ನರಮುಡಿ ಇದೆ. ದೇಹಾಂತರಾವಕಾಶ ಅಡ್ಡಗೋಡೆಗಳಿಂದ 3 ಭಾಗಗಳಾಗಿ ವಿಭಾಗವಾಗಿದೆ. ನೀಳ ಅಚ್ಚಿನಲ್ಲಿ ಅದರ ಉದ್ದಕ್ಕೂ ಹರಿಯುವ ತೆಳುವಾದ ಪದರ ಜೀರ್ಣಾಂಗಗಳನ್ನು ದೇಹದ ಗೋಡೆಯಿಂದ ಪ್ರತ್ಯೇಕಿಸಿ, ಅದರ ಸ್ಥಳದಲ್ಲಿರಿಸುವುದು. ಜೊತೆಗೆ ದೇಹಾಂತರಾವಕಾಶದ ವಿಭಾಗಗಳನ್ನು ಎಡಬಲ ಭಾಗಗಳಾಗಿ ವಿಂಗಡಿಸುವುದು. ಈ ಜೀವಿಯಲ್ಲಿ ರಕ್ತಪರಿಚಲನಾಂಗಗಳಿಲ್ಲ. ನಿರ್ದಿಷ್ಟವಾದ ಶುದ್ಧೀಕರಣ ಮಾಡುವ ನೆಫ್ರಿಡೀಯಗಳಿಲ್ಲ. ಶ್ವಾಸಾಂಗಗಳೂ ಇಲ್ಲ.



ಅಂಬುಳ

ಈ ಜೀವಿಗಳು ದ್ವಿಲಿಂಗಿಗಳು. ಜನನೇಂದ್ರಿಯಗಳು ದೇಹಾಂತರಾವಕಾಶದ ಹಿಂಭಾಗದಲ್ಲಿ ಒಂದರ ಹಿಂದೆ ಇನ್ನೊಂದು ಇರುವುವು. ಅಂಡಾಶಯಗಳು ಮೈ ಭಾಗದ ದೇಹಾಂತರಾವಕಾಶದಲ್ಲಿವೆ. ಇವುಗಳ ನಾಳಗಳು ಮೈಭಾಗ ಮತ್ತು ಜಾಲ ಇವೆರಡಕ್ಕೂ ಮಧ್ಯೆ ಹೊರತೆರೆಯುತ್ತವೆ. ಬೀಜಾಶಯಗಳು ಬಾಲದ ದೇಹಾಂತರಾವಕಾಶದಲ್ಲಿವೆ. ಬೀಜಾಶಯನಾಳಗಳ ಒಳತುದಿಯಲ್ಲಿ ಶಿಲಕೆಗಳುಳ್ಳ ಆಲಿಕೆಗಳಿವೆ. ಇವು ಹಿಂದೆ ಬಾಲದ ಮೇಲೆ ಹೊರಕ್ಕೆ ತೆರೆಯುತ್ತವೆ. ಗರ್ಭಾಂಕುರ ಜೀವಿಯ ದೇಹದೊಳಗಾಗುತ್ತದೆ. ಅನಂತರ ತತ್ತಿಗಳು ಬೆಳೆದು ಮರಿಗಳಾಗಿ ಹೊರಬರುವುವು. ಲಾರ್ವಾವಸ್ಥೆ ಇಲ್ಲ. ಮರಿ ಗಾತ್ರದಲ್ಲಿ ಸಣ್ಣದಾದರೂ ಪ್ರೌಢ ಜೀವಿಯನ್ನು ಹೋಲುವುದು. ಬೆಳವಣಿಗೆ ಪ್ರಾರಂಭವಾದ ಅನಂತರ ಸಂಯೋಗಿಕಣ ಎರಡು ಪ್ರಜನನ ಜೀವಕಣಗಳಾಗಿ ಸ್ಫುಟನಾವಸ್ಥೆಯಲ್ಲಿಯೇ ಬೇರ್ಪಡುತ್ತದೆ. ಇವುಗಳಲ್ಲಿ ಒಂದು ಜೀವಕಣ ಅನೇಕ ಬಾರಿ ವಿಭಜನೆಯಾಗಿ ಅಂಡಾಶಯವಾಗಿಯೂ ಎರಡನೆಯ ಜೀವಕಣ ವೃಷಣವಾಗಿಯೂ ರೂಪುಗೊಳ್ಳುವುವು.

ಉದಾ: ಸಜಿಟ್ಟ, ಸ್ಪಡೆಲ್ಲ, ಕ್ರೊಹ್ನಿಯ. ಕೆಲವು ಸ್ವತಂತ್ರ ಏಕಕಣಜೀವಿಗಳೂ ಕೆಲವು ಬಹುಕಣಜೀವಿಗಳೂ ಇವುಗಳಲ್ಲಿ ಉಪಜೀವಿಗಳಾಗಿ ವಾಸಿಸುತ್ತವೆ. ಈ ಜೀವಿಗಳನ್ನು ಸಮುದ್ರದ ನೀರಿನ ಚಲನೆಯ ಅಥವಾ ಪ್ರವಾಹದ ದಿಕ್ಕುಸೂಚಕಗಳಾಗಿ ಉಪಯೋಗಿಸಬಹುದು. ಅಮಿಸ್ಕೂರಿಯ ಎಂಬ ಕೀಟೊಗ್ನಾತಾ ಮಧ್ಯ ಕೇಂಬ್ರಿಯನ್ ಯುಗದ ಬರ್ಗ‌ಸ್‌ಷೇಲಿನಲ್ಲಿ ಪಳೆಯುಳಿಕೆಗಳನ್ನು ಬಿಟ್ಟಿರುವುದನ್ನು ಇತ್ತೀಚೆಗೆ ವಿವರಿಸಿರುವರು. (ಪಿ.ಎ.ಆರ್.)

**ಅಕಶೇರುಕ ಭ್ರೂಣಶಾಸ್ತ್ರ:** ಮೊಟ್ಟೆಯೊಳಗೆ ಬೆಳೆಯುವ ಭ್ರೂಣ ಮರಿಯಾಗಿ ಹೊರಬರುವ ಹಂತಗಳ ಅಭ್ಯಾಸವೇ ಭ್ರೂಣಶಾಸ್ತ್ರ. ಅಕಶೇರುಕ ಭ್ರೂಣದ ಬೆಳವಣಿಗೆಯ ಅಧ್ಯಯನ ಅಕಶೇರುಕ ಭ್ರೂಣಶಾಸ್ತ್ರ.

ಇತಿಹಾಸ: ಜೀವಿಯ ಸೃಷ್ಟಿಯ ಬಗ್ಗೆ ಅನೇಕ ಅವೈಜ್ಞಾನಿಕ ಕಲ್ಪನೆಗಳಿದ್ದುವು. ರಾಬರ್ಟ್ ಹುಕ್ ಜೀವಕೋಶಗಳ ಶೋಧನೆ ಮಾಡಿದ ನಂತರ, 1839 ರಲ್ಲಿ ಮ್ಯಾಥ್ಯೂಸ್ ಜೇಕಬ್ ಶ್ಲೀಡನ್ ಮತ್ತು ಥಿಯೊಡೋರ್ ಶ್ವಾನ್ ಜೀವಕೋಶ ತತ್ವವನ್ನು ಪ್ರತಿಪಾದಿಸಿದರು. ಜೀವಕೋಶಗಳು ಹಿಂದಿದ್ದ ಜೀವಕೋಶಗಳಿಂದಲೇ ಹುಟ್ಟಿವೆ ಅಥವಾ ಜೀವಿಗಳಿಂದಲೇ ಹುಟ್ಟುತ್ತವೆ ಎಂಬುದು ಜೀವಕೋಶ ತತ್ವದ ತಿರುಳು. ಇವೆರಡು ಘಟನೆಗಳ ಅನಂತರ ಅನೇಕ ಜೀವವಿಜ್ಞಾನಿಗಳು ಜೀವೋದ್ಭವವನ್ನು ವಿವಿಧ ರೀತಿಯಲ್ಲಿ ಅರಿಯಲು ಪ್ರಯತ್ನಿಸಿದರು. ಇದರ ಪರಿಣಾಮ ಹಲವಾರು ಸಿದ್ಧಾಂತಗಳು ಸೃಷ್ಟಿಯಾದವು. ಅವುಗಳಲ್ಲಿ ಪೂರ್ವೋದ್ಭವ ತತ್ವ ಮತ್ತು ಜೀವಾಂಕುರ ತತ್ವಗಳು ಮುಖ್ಯವಾದುವು.

ಪೂರ್ವೋದ್ಭವ ತತ್ವದ ಪ್ರಕಾರ ಸ್ತ್ರೀಯ ಅಂಡದಿಂದ ಉತ್ಪತ್ತಿಯಾಗುವ ಮೊಟ್ಟೆಯಲ್ಲಿ ಭವಿಷ್ಯಜೀವಿಯ ಸೂಕ್ಷ್ಮ ಆಕೃತಿ ಇರುತ್ತದೆ. ಈ ಭವಿಷ್ಯ ಜೀವಿಯು ತನ್ನ ಪಿತೃಗಳಂತೆಯೇ ಎಲ್ಲಾ ಅಂಗಾಂಗಗಳನ್ನು ಹೊಂದಿದ್ದು ಪುರುಷನ ರೇತಸ್ಸಿನಿಂದ ಬರುವ ವೀರ್ಯಾಣು ಮೊಟ್ಟೆ ಬೆಳೆಯಲು ಪ್ರಚೋದಿಸುತ್ತದೆ ಎಂದು ವಿಜ್ಞಾನಿಗಳು ನಂಬಿದ್ದರು. ಭವಿಷ್ಯಜೀವಿಯ ಸೂಕ್ಷ್ಮಾಕೃತಿಯು ಪುರುಷನ ವೀರ್ಯಾಣುವಿನಲ್ಲಿರುತ್ತದೆ ಎಂದೂ ಕೆಲವರು ಪ್ರತಿಪಾದಿಸಿದರು. ಇಂತಹ ಕಲ್ಪನೆಗಳು ಪ್ರಾಯೋಗಿಕವಾಗಿದ್ದರೂ ಇವುಗಳ ಅಭ್ಯಾಸದಲ್ಲಿ ಪರಿಪೂರ್ಣವಾದ ಪುರಾವೆಗಳು ದೊರಕದ ಕಾರಣ, ಸರಿಯಾದ ಕಲ್ಪನೆ ಮಾಡಲು ಸಾಧ್ಯವಾಗಲಿಲ್ಲ. ಉದಾ: ಅಂಡದಲ್ಲಿಯೇ ಭವಿಷ್ಯ ಜೀವಿಯಿರುತ್ತದೆ ಎಂದು ಪ್ರತಿಪಾದಿಸಿದ ವಿಜ್ಞಾನಿಗಳು ನಿಷೇಚನಗೊಂಡ ಕೀಟ ಮತ್ತು ಪಕ್ಷಿಗಳ ಮೊಟ್ಟೆಗಳನ್ನು ಅಭ್ಯಸಿಸಿದರಾದರೂ ಅವು ನಿಷೇಚನಗೊಂಡಿವೆ ಎಂದು ತಿಳಿಯಲು ಅವರಿಗೆ ಸಾಧ್ಯವಾಗಲಿಲ್ಲ. ಚಾರ್ಲಸ್ ಬಾಲೆಟ್, ಎಫಿಡ್ ಜಾತಿಯ ಕೀಟಗಳ ಮೊಟ್ಟೆಗಳು ವೀರ್ಯಾಣುವಿನ ಸಹಾಯವಿಲ್ಲದೇ ಬೆಳೆಯಬಲ್ಲವೆಂದು ತೋರಿಸಿದನಾದರೂ ಇದೂ ಒಂದು ಜೀವ ಜಗತ್ತಿನ ನಿಯಮ ಎಂದು ಅರಿಯಲಾರದೇ ಹೋದನು. ಈ ಎಫಿಡ್ ಮೊಟ್ಟೆಗಳು ಅನಿಷೇಕ ಜನನ ಕ್ರಿಯೆಯಿಂದ ಪ್ರಬುದ್ಧ ಜೀವಿಯಾಗಿ ಬೆಳೆಯಬಲ್ಲವು.

ಜೀವಾಂಕುರ ತತ್ವದ ಪ್ರಕಾರ ವೀರ್ಯಾಣುವಿನಲ್ಲಿ ಅಥವಾ ಮೊಟ್ಟೆಯಲ್ಲಿ ಭವಿಷ್ಯ ಜೀವಿಯ ಸೂಕ್ಷ್ಮಾಕೃತಿಯು ಅಡಗಿರುವುದಿಲ್ಲ, ಮೊಟ್ಟೆಯಲ್ಲಿ ಭವಿಷ್ಯಜೀವಿಯ ಬೆಳವಣಿಗೆಯಾಗಲು ಅಥವಾ ಭ್ರೂಣದ ಬೆಳವಣಿಗೆಯಾಗಲು ಬೇಕಾದ ಕೋಶದ್ರವ್ಯ, ಕ್ರೊಮೋಸೋಮುಗಳಿರುತ್ತವೆ. ವೀರ್ಯಾಣುವಿನಿಂದ ಪ್ರಚೋದಿಸಲ್ಪಟ್ಟು ಮೊಟ್ಟೆಗಳು ಮುಂದೆ ಬೆಳವಣಿಗೆ ಹೊಂದಿ ಪ್ರಬುದ್ಧ ಜೀವಿಗಳಾಗಿ ಮಾರ್ಪಡುತ್ತವೆ. ಮೊಟ್ಟೆಗಳು ಗರ್ಭಧರಿಸಿದಾಗ ಅದರಲ್ಲಿ ಭವಿಷ್ಯ ಜೀವಿಯ ಅಂಗವಾಗಲೀ ಅಥವಾ ಅಂಗಕಟ್ಟಾಗಲೀ ಇರುವುದಿಲ್ಲ ಎಂದು ಈ ತತ್ವವು ಪ್ರತಿಪಾದಿಸುತ್ತದೆ. ಪುನಃ ಈ ತತ್ವ ಪ್ರಾಯೋಗಿಕ ಸಾಕ್ಷ್ಯಗಳಿಲ್ಲದೇ ಅಪೂರ್ಣವಾಯಿತು. 1759 ರಲ್ಲಿ ವುಲ್ಫ್ ಈ ತತ್ವವನ್ನು ಪ್ರತಿಪಾದಿಸಿದನು. 1821 ರಲ್ಲಿ ಫ್ರೆಡ್ರಿಕ್ ಮೈಕೆಲ್ ಈ ತತ್ವಕ್ಕೆ ಸಾಕ್ಷ್ಯದೊರಕಿಸಿಕೊಟ್ಟನು. ಅನಂತರ ಈ ವಾದವನ್ನು ನಂಬಲಾಯಿತು.

ಈ ತತ್ವದ ಪ್ರಕಾರ ಪ್ರತಿಯೊಂದು ಜೀವಿ ತನ್ನದೇ ಆದ ಆನುವಂಶೀಯತೆಯನ್ನು ಹೊಂದಿದ್ದು, ಜೀವಿಯ ಎಲ್ಲಾ ಕ್ರಿಯೆಗಳೂ ಆನುವಂಶೀಯತೆಯ ಚೌಕಟ್ಟಿನಲ್ಲಿಯೇ ನಡೆಯುತ್ತದೆ. ಈ ಆನುವಂಶೀಯತೆ ಸಂಪೂರ್ಣ ಸಾಫಲ್ಯ ಪಡೆಯಬೇಕಾದರೆ ಅಥವಾ ಜೀವಿಯ ಬೆಳವಣಿಗೆಯು ಪರಿಪೂರ್ಣವಾಗಬೇಕಾದರೆ ಪರಿಸರವೂ ಮುಖ್ಯ. ಈ ಆನುವಂಶೀಯತೆ ಮತ್ತು ಅದರ ಕಾರ್ಯತತ್ಪರತೆಯನ್ನು ವರ್ಣಿಸುವ ಶಾಸ್ತ್ರ ತಳಿಶಾಸ್ತ್ರ. ನಿಷೇಚನಗೊಂಡ ಮೊಟ್ಟೆಯಲ್ಲಿ ಭವಿಷ್ಯ ಜೀವಿಯು ಬೆಳವಣಿಗೆ ಹೊಂದಿ ಪ್ರಬುದ್ಧವಾಗಲು ಅವಶ್ಯವಿರುವ ಎಲ್ಲಾ ಗುಣಾಧಾರಗಳಿದ್ದು, ಅದರ ಬೆಳವಣಿಗೆಗೆ ಸೂಕ್ತವಾದ ಪರಿಸರವಿದ್ದಾಗ ಬೆಳೆದು ಅದು ತನ್ನ ತಂದೆ–ತಾಯಿ ಹೋಲುವ ಪ್ರಬುದ್ಧ ಜೀವಿಯಾಗಿ ಬೆಳೆಯುತ್ತದೆ.

ಭ್ರೂಣಶಾಸ್ತ್ರದ ಇತಿಹಾಸದಲ್ಲಿ ಹಲವಾರು ತತ್ವಗಳು ಪ್ರತಿಪಾದಿಸಲ್ಪಟ್ಟಿವೆ. ಇಂತಹ ಹಲವಾರು ತತ್ವಗಳಲ್ಲಿ ವ್ಯಾನ್ ಬೇರ್‌ನ್ (1792–1876) ಜರಾಯು ಪದರ ತತ್ವವೂ ಒಂದು. ಕೆಲವು ಸ್ತನಿಗಳು ಮೊಟ್ಟೆಯಿಡುವುದನ್ನು ತಿಳಿದ ವಿಜ್ಞಾನಿಗಳಿಗೆ ಅವುಗಳ ಬೆಳೆವಣಿಗೆಯನ್ನು ಅಭ್ಯಸಿಸುವುದು ಸುಲಭವಾಯಿತು. ಹಲವಾರು ವಿಜ್ಞಾನಿಗಳು ಪ್ರತಿಪಾದಿಸಿದ ತತ್ವಗಳು ಹಾಗೂ ಅವರ ಸಂಶೋಧನೆಗಳನ್ನು ಕ್ರೋಡಿಕರಿಸಿದಾಗ ಭ್ರೂಣಶಾಸ್ತ್ರಕ್ಕೆ ಒಂದು ಹೊಸ ತಳಹದಿ ರೂಪುಗೊಂಡಿತು.

ಜೀವಕೋಶ ತತ್ವದ ಪ್ರತಿಪಾದನೆಯಾದ ಅನಂತರ ಭ್ರೂಣಶಾಸ್ತ್ರಕ್ಕೆ ಸಂಬಂಧಿಸಿದ ಪ್ರಯೋಗಗಳಿಗೆ ಹೊಸ ದಾರಿ ನಿರ್ಮಾಣವಾಯಿತು. ಜೀವಿಯಿಂದ ಉದಯವಾಗುವ ಮೊಟ್ಟೆಯು ಹೆಣ್ಣು ಜೀವಿಯ ವಿಶೇಷ ಅಂಗವಾದ ಅಂಡದಲ್ಲಿರುವ ಕೋಶಗಳಿಂದ ಸಂಖ್ಯಾಕ್ಷೀಣ (ಮಿಯೋಸಿಸ್) ವಿಭಜನೆಗೊಂಡು ಬೆಳೆಯುತ್ತವೆ. ವಾಸ್ತವಿಕವಾಗಿ ಒಂದು ಮೊಟ್ಟೆಯು ಒಂದು ಜೀವಕೋಶ. ಇದು ಫಲಿತವಾಗಬೇಕಾದರೆ ವೀರ್ಯಾಣುವಿನೊಡನೆ ಸಂಯೋಗ ಹೊಂದಬೇಕು. ಇವುಗಳ ಸಂಯೋಗವಾಗುವ ಕ್ರಿಯೆಗೆ ನಿಷೇಕ ಅಥವಾ ನಿಷೇಚನ ಎಂದೂ, ನಿಷೇಚನಗೊಂಡ ಮೊಟ್ಟೆಗೆ ತತ್ತಿ ಅಥವಾ ಜೈಗೋಟ್ ಎಂದೂ ಹೆಸರು, ಈ ತತ್ತಿ ವಿಭಜನೆ ಹೊಂದಿ, ಬೆಳೆದು ಭ್ರೂಣವಾಗುತ್ತದೆ. ತಡೆಯಿಲ್ಲದೆ ನಡೆಯುವ ಕೋಶವಿಭಜನೆ ಮತ್ತು ಕೋಶಗಳ ಸಕಾಲಿಕ ವಿಭೇದೀಕರಣವೇ ಭ್ರೂಣದ ಬೆಳೆವಣಿಗೆ. ಅಂತೆಯೇ ಭ್ರೂಣವು ನಿಷೇಚನಗೊಂಡ ಮೊಟ್ಟೆಯಿಂದ ಪ್ರಾರಂಭವಾಗಿ ಸ್ವತಂತ್ರಜೀವಿಯ ಉದಯದೊಂದಿಗೆ ಕೊನೆಗೊಳ್ಳುತ್ತದೆ.

ಕೆಲವು ಪ್ರಭೇದಗಳಲ್ಲಿ ಭ್ರೂಣವು ನೇರವಾಗಿ ಪ್ರಬುದ್ಧಜೀವಿಯಾಗಿ ಬೆಳೆಯುತ್ತದೆ. ಇವುಗಳ ಬೆಳೆವಣಿಗೆಯನ್ನು ನೇರ ಬೆಳೆವಣಿಗೆ (ಡೈರೆಕ್ಟ್ ಡೆವಲಪ್‌ಮೆಂಟ್) ಎನ್ನುವರು. ಕೆಲವು ಜೀವಿಗಳ ಭ್ರೂಣದಿಂದ ಲೈಂಗಿಕವಾಗಿ ಪೂರ್ಣ ಬೆಳೆವಣಿಗೆ ಹೊಂದಿರದ ಡಿಂಬ (ಲಾರ್ವ)ಗಳು ಹುಟ್ಟುತ್ತವೆ. ಇಂತಹ ಬೆಳೆವಣಿಗೆಯನ್ನು ಅನೇರ ಬೆಳೆವಣಿಗೆ (ಇನ್ ಡೈರೆಕ್ಟ್ ಡೆವಲಪ್‌ಮೆಂಟ್) ಎಂದು ಕರೆಯಲಾಗುತ್ತದೆ.

ಚಾರ್ಲ್ಸ್ ಡಾರ್ವಿನ್‌ನ ವಿಕಾಸವಾದದ ಪ್ರತಿಪಾದನೆ ಭ್ರೂಣಶಾಸ್ತ್ರದ ಬೆಳೆವಣಿಗೆಯಲ್ಲಿ ಮಹತ್ವದ ಹಂತ. ಬಿಡಿಸಲಾಗದ ಒಗಟಾಗಿದ್ದ ಭ್ರೂಣಶಾಸ್ತ್ರದ ಬೆಳೆವಣಿಗೆಯ ಅಧ್ಯಯನಕ್ಕೆ ಹೊಸಹೊಸ ಉಪಕರಣಗಳು, ಛಾಯಾಚಿತ್ರಣ ಸಾಮಗ್ರಿಗಳೂ ಉಪಯುಕ್ತವಾದುವು. ಇಂದು ಭ್ರೂಣಶಾಸ್ತ್ರದ ಅಭ್ಯಾಸಕ್ಕೆ ಆನ್ವಯಿಕ ಮಟ್ಟದಲ್ಲಿ ಉಪಕರಣಗಳು ಲಭ್ಯವಿದೆ. ಶರೀರದಲ್ಲಿ ಬೆಳೆಯುತ್ತಿರುವ ಭ್ರೂಣವನ್ನು ಭ್ರೂಣಕ್ಕಾಗಲೀ ಅಥವಾ ಭವಿಷ್ಯಜೀವಿಗಾಗಲೀ ಯಾವುದೇ ಹಾನಿಯಿಲ್ಲದೇ ಛಾಯಾಚಿತ್ರಣ ಮಾಡಿ ಬೆಳೆವಣಿಗೆಯ ಒಂದೊಂದು ಹಂತವನ್ನು ಕೂಲಂಕಷವಾಗಿ ಅಭ್ಯಸಿಸಬಹುದು.

ಭ್ರೂಣಶಾಸ್ತ್ರದ ಅಭ್ಯಾಸದಲ್ಲಿ ಹಾಗೂ ಜೀವವಿಕಾಸದ ಅಧ್ಯಯನದಲ್ಲಿ ಪರಿಣಾಮಕಾರಿ ಇನ್ನೊಂದು ತತ್ವವೆಂದರೆ ಹೆಕೆಲ್‌ನ ಜೀವಾನುವಂಶೀಯ ತತ್ವ. ಬೆಳೆಯುತ್ತಿರುವ ಭ್ರೂಣವು ತನ್ನ ಬೆಳೆವಣಿಗೆಯ ವಿವಿಧ ಹಂತಗಳಲ್ಲಿ ತನ್ನ ಪೂರ್ವಜರನ್ನು ಹೋಲುತ್ತದೆ ಎಂಬುದು ಈ ತತ್ವದ ತಿರುಳು. ಫೆಟ್ಜ ಮುಲ್ಲರ್ (1821–1897) ಹೆಕೆಲ್‌ನಿಗಿಂತ ಹಿಂದೆಯೇ ಇದನ್ನು ಪ್ರತಿಪಾದಿಸಿದ್ದ. ಈ ತತ್ವವನ್ನು ಪ್ರತಿಪಾದಿಸುವಾಗ ಕ್ರಸ್ಟೇಷಿಯಾ ವರ್ಗದ ಭ್ರೂಣ ಬೆಳೆವಣಿಗೆಯನ್ನು ಕೂಲಂಕಷವಾಗಿ ಅಭ್ಯಸಿಸಲಾಗಿತ್ತು. ಆ ವರ್ಗದ ವಿವಿಧ ಪ್ರಭೇದಗಳ ಭ್ರೂಣದಲ್ಲಿ ವೈವಿಧ್ಯವಿದ್ದರೂ ಅವುಗಳ ಬೆಳೆವಣಿಗೆ ಹಂತದಲ್ಲಿ ನಾಪ್ಲಿಯಸ್ ಡಿಂಬವು ಎಲ್ಲಾ ಪ್ರಭೇಧಗಳಲ್ಲೂ ಒಂದೇ ತೆರನಾಗಿರುತ್ತದೆ. ಪ್ರತಿಯೊಂದು ಪ್ರಭೇಧಗಳಲ್ಲಿಯೂ ಅವುಗಳ ಭ್ರೂಣ ನಾಪ್ಲಿಯಸ್ ಆಗಿ ಬೆಳೆದ ನಂತರವೇ ಬೇರೆ ತರಹದ ಡಿಂಬವಾಗುತ್ತದೆ. ಈ ತತ್ವ ಪ್ರಾಣಿಶಾಸ್ತ್ರಕ್ಕೆ ಒಂದು ಮಹತ್ವದ ಕೊಡುಗೆ.

ಆಸ್ಕರ್ ಹರ್ಟ್‌ವಿಗ್‌ನು ಪ್ರಥಮವಾಗಿ ಜೀವಿಗಳಲ್ಲಿ ನಿಷೇಕವನ್ನು ಕಂಡುಹಿಡಿದನು. ಕಡಲ ಚಿಳ್ಳೆಗಳ (ಸೀ ಅರ್ಚಿನ್) ಮೊಟ್ಟೆಯೊಳಕ್ಕೆ ವೀರ್ಯಾಣು ಪ್ರವೇಶಿಸುವುದನ್ನು ದರ್ಶಿಸಿ, ಮೊಟ್ಟೆ ಮತ್ತು ವೀರ್ಯಾಣುಗಳ ಮಿಲನದಿಂದ ನಿಷೇಕವಾಗುವುದೆಂದು ಪ್ರಕಟಿಸಿದನು. ಈತ ಹಾಗೂ ಇವನ ಸಹೋದರ ರಿಚರ್ಡ್ ಹರ್ಟ್‌ವಿಗ್ ಭ್ರೂಣದ ಬೆಳೆವಣಿಗೆಯ ಕಾಲದಲ್ಲಿ ಉದಯಿಸುವ ಮಧ್ಯ ಚರ್ಮ ಮತ್ತು ದೇಹದೊಳಗಿನ ಅವಕಾಶವಾದ ಸೀಲೋಮುಗಳ ಬಗ್ಗೆ ಸಂಶೋಧನೆ ನಡೆಸಿ ಭ್ರೂಣಶಾಸ್ತ್ರಕ್ಕೆ ಇನ್ನಷ್ಟು ಮಹತ್ತರ ಕೊಡುಗೆಯನ್ನು ನೀಡಿದರು.

ಭ್ರೂಣಶಾಸ್ತ್ರದ ಸಂಶೋಧನೆಗಳಿಗೆ ಹೊಸ ತಿರುವು ಕೊಟ್ಟ ಇನ್ನೊಂದು ತತ್ವ: ಬೆಳೆವಣಿಗೆಯ ಯಾಂತ್ರಿಕ ನಿಯಮ ಬದ್ಧತೆಯ ತತ್ವ. ಇದರಲ್ಲಿ ಭ್ರೂಣದ ಬೆಳೆವಣಿಗೆಯನ್ನು ಪ್ರಯೋಗಕ್ಕೊಳಪಡಿಸಿ ಪ್ರತಿಯೊಂದು ಹಂತವನ್ನು ವೈಜ್ಞಾನಿಕವಾಗಿ ವಿವರವಾಗಿ ಅಭ್ಯಸಿಸುವರು. ಭ್ರೂಣದ ಬೆಳೆವಣಿಗೆ ನಿಯಮ ಬದ್ಧವಾಗಿ ನಡೆಯುವ ಕ್ರಿಯೆ. ಈ ಕ್ರಿಯೆಗಳನ್ನು ಯಾಂತ್ರಿಕ ತತ್ವಗಳ ಮೂಲಕ ವಿವರಿಸಬಹುದು. ಭ್ರೂಣದ ಬೆಳೆವಣಿಗೆಯ ಒಂದು ಹಂತ ಇನ್ನೊಂದು ಅನುಕ್ರಮ ಹಂತದ ನಾಂದಿ. ಈ ಹಂತ ಮುಂದಿನ ಹಂತಕ್ಕೆ ನಾಂದಿ. ಅಂತೆಯೇ ಭ್ರೂಣದ ಬೆಳೆವಣಿಗೆ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಕ್ರಮಬದ್ಧವಾಗಿ ಸಾಗುತ್ತಿರುತ್ತದೆ. ಇದನ್ನು ಬೆಳೆವಣಿಗೆಯ ಯಾಂತ್ರಿಕತೆ ಎನ್ನುತ್ತಾರೆ. ಮೊಟ್ಟೆ ವೀರ್ಯಾಣುವಿನೊಡನೆ ಮಿಲನವಾಗಿ ಯಾಂತ್ರಿಕವಾಗಿ ಬದಲಾಗುತ್ತಾ ಭ್ರೂಣವಾಗಿ ಬೆಳೆದು ಮುಂದೆ ಪ್ರಬುದ್ಧವಾಗಿ ವಿಕಸಿಸಿ ಮತ್ತೆ ತನ್ನ ಅಂಗಾಂಗಗಳಲ್ಲಿ ಲೈಂಗಿಕ ಕೋಶಗಳನ್ನು ಉತ್ಪತ್ತಿ ಮಾಡುತ್ತದೆ. ಮುಂದೆ ಈ ಲೈಂಗಿಕ ಕೋಶಗಳು ಮಿಲನಗೊಂಡು ಮತ್ತೊಂದು ಪ್ರಬುದ್ಧಜೀವಿ ಬೆಳೆಯುತ್ತದೆ. ಇದು ಕೊನೆಯಿಲ್ಲದೆ ಅವ್ಯಾಹತವಾಗಿ ಸಾಗಿದೆ.

ಭ್ರೂಣ ಶಾಸ್ತ್ರದ ಅಧ್ಯಯನದಲ್ಲಿ ಅನುಪಮ ಕೊಡುಗೆ ನೀಡಿದ ಇನ್ನೊಬ್ಬ ವಿಜ್ಞಾನಿ ಆಗಸ್ಟ್ ವೀಸ್‌ಮನ್. ಈತ ಕೀಟವರ್ಗದ ಪ್ರಾಣಿಗಳ ಹಾಗೂ ಇತರ ಅಕಶೇರುಕಗಳ ಮೊಟ್ಟೆಗಳು ಬೆಳೆಯುವ ವಿಧಾನವನ್ನು ಅಭ್ಯಾಸಮಾಡಿದನು. ಈ ಜೀವಿಗಳ ಫಲಿತ ಮೊಟ್ಟೆ ವಿಭಜನೆಯಾಗುವುದನ್ನು ಪರಿಶೀಲಿಸಿದನು. ಆ ವಿಭಜನೆಯಿಂದಾದ ಮರಿಕೋಶಗಳಲ್ಲಿ ಕೆಲವು ಪ್ರಬುದ್ಧ ಜೀವಿಯ ಲಿಂಗಾಂಗಗಳಾಗುತ್ತವೆಯೆಂದು ಕಂಡುಕೊಂಡನು. ಉದಾಹರಣೆಗೆ ಜಂತುಹುಳುಗಳ ತತ್ತಿಯು ಎರಡನೆಯ ಕೋಶ ವಿಭಜನೆ ಹೊಂದಿದಾಗ ಒಂದು ಕೋಶವು ಮತ್ತೆಲ್ಲ ಕೋಶಗಳಿಂದ ಸರಿದು ಮುಂದೆ ಆ ಜೀವಿಯ ಲಿಂಗವಾಗುತ್ತದೆ ಎಂದು ದರ್ಶಿಸಿದನು. ಈ ಲಿಂಗಾಂಗ ಮುಂದೆ ವೃಷಣವಾಗಬಹುದು ಅಥವಾ ಅಂಡವಾಗಬಹುದು. ಇನ್ನುಳಿದ ಜೀವಕೋಶಗಳು ಪ್ರಾಣಿಯ ಶರೀರ ರಚನೆಗೆ ಸಹಾಯ ಮಾಡುತ್ತವೆಯೇ ಹೊರತು ಸಂತಾನೋತ್ಪತ್ತಿಯಲ್ಲಿ ಭಾಗವಹಿಸುವುದಿಲ್ಲ. ಇದರಿಂದ ಈತನು ಜೀವಿಗಳಲ್ಲಿ ಎರಡು ಭಾಗಗಳನ್ನು ಗುರುತಿಸಿದನು. ಮೊದಲನೆಯದು ಸಂತಾನೋತ್ಪತ್ತಿಯಲ್ಲಿ ಭಾಗವಹಿಸುವ ಲಿಂಗಭಾಗ ಹಾಗೂ ಎರಡನೆಯದು ಸಂತಾನೋತ್ಪತ್ತಿ ವಿಭಾಗಕ್ಕೆ ಸಹಾಯ ಮಾಡುವ ಮಿಕ್ಕ ಭಾಗ ಅಥವಾ ಶರೀರ ಭಾಗ (ಕಾಯ ಭಾಗ). ಇವನ ಅಭಿಪ್ರಾಯದಂತೆ ಲಿಂಗ ಭಾಗವು ಕಾಯಭಾಗದ ಉಪಜೀವಿಯದ್ದಂತೆ, ಅಲ್ಲದೆ ಶರೀರವು ಅಮರವಲ್ಲದಿದ್ದರೂ ಈ ಲಿಂಗಭಾಗವು ಅಮರ.

ಭ್ರೂಣಶಾಸ್ತ್ರದ ಬೆಳೆವಣಿಗೆಯಲ್ಲಿ ಬರುವ ಹಲವಾರು ತತ್ವಗಳಲ್ಲಿ ಮೊಸಾಯಿಕ್ ತತ್ವವೂ ಒಂದು. ಬೆಳೆವಣಿಗೆಯ ಪೂರ್ವಾವಸ್ಥೆಯಲ್ಲಿರುವ ಮೊಟ್ಟೆಯೊಳಗಿರುವ ಕೋಶದ್ರವ್ಯದಲ್ಲಿ ವಿವಿಧ ಭಾಗಗಳು ಪದರಗಳಂತಿದ್ದು, ಮುಂದೆ ಆಯಾ ಅಂಗಗಳನ್ನು ಕೊಡುತ್ತವೆ ಎಂಬುದು ಈ ಸಿದ್ಧಾಂತದ ತಿರುಳು. ಮೊಟ್ಟೆ ಇನ್ನೂ ಅಂಡಾಶಯದೊಳಗೆ ಇರುವಾಗಲೇ ಅದರಲ್ಲಿ ಕೆಲವು ವಿಶಿಷ್ಟ ಭಾಗಗಳು ಉದಯವಾಗುತ್ತವೆ ಎಂಬುದು ಈ ತತ್ವದ ವಾದ. ಹೀಸ್ ಎಂಬಾತ ಪ್ರತಿಪಾದಿಸಿದ ಈ ತತ್ವವನ್ನು ವಿಲ್‌ಹೆಲ್ಮ್ ರೂಕ್ಸ್ ಎತ್ತಿ ಹಿಡಿದನು. ರೂಕ್ಸ್‌ನು ಈ ತತ್ವದ ಬೆಳೆವಣಿಗೆಯ ಸಲುವಾಗಿ ಕಶೇರುಕ ಹಾಗೂ ಅಕಶೇರುಕ ಮೊಟ್ಟೆಗಳನ್ನು ಅನೇಕ ವಿಧದ ಪ್ರಯೋಗಗಳಿಗೆ ಒಳಪಡಿಸಿ ಪ್ರತಿಹಂತದಲ್ಲಿಯೂ ಅವುಗಳನ್ನು ಅಭ್ಯಸಿಸಿದನು. ಕಪ್ಪೆಗಳ ಮೊಟ್ಟೆಗಳ ಮೇಲೆ ಸಂಶೋಧನೆ ನಡೆಸಿ ಈತನು ಮೊಟ್ಟೆಗಳನ್ನು ರಾಸಾಯನಿಕವಾಗಿ ಹಾಗೂ ಭೌತಿಕವಾಗಿ ವಿಶ್ಲೇಷಿಸಿ ಅದರಲ್ಲಿ ಪ್ರಾಣಿವಲಯ ಹಾಗೂ ಆಹಾರ ವಲಯಗಳನ್ನು ಗುರುತಿಸಿದನು. ಫಲಿತ ಮೊಟ್ಟೆಯಿಂದ ಉತ್ಪತ್ತಿಯಾದ ಜೀವಕೋಶಗಳ ಜೀವರಸವನ್ನು, ಇತರ ಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಕೋಶ ವಿಭಜನ ಕ್ರಿಯೆ ಮುಂದುವರಿದಂತೆ ಹಿಂದಿದ್ದ ಕೋಶಗಳಿಂದ ಉದಯವಾದ ಹೊಸಕೋಶಗಳು ಚಿಕ್ಕದಾಗಿರುವುದನ್ನು ಹಾಗೂ ಅವುಗಳಲ್ಲಿ ಕೆಲವು ನರಮಂಡಲ, ಕೆಲವು ಮಾಂಸಖಂಡ ಇತ್ಯಾದಿ ಭಾಗಗಳಾಗಿ ಬೆಳೆಯುವುದನ್ನು ಕಂಡುಕೊಂಡ. ಆ ರೀತಿ ಸಮಗ್ರ ಪರಿಶೀಲನೆಯನ್ನು ಹಿಮ್ಮುಖವಾಗಿ ಕೊಂಡೊಯ್ದು ಮೊಟ್ಟೆಯೊಳಗಿನ ಕೋಶದ್ರವ್ಯದ ವಿವಿಧ ಭಾಗಗಳಿಗೆ ಸಂಬಂಧ ಕಲ್ಪಿಸಿದನು.

ಮೊಸಾಯಿಕ್ ತತ್ವವನ್ನು ಪರಿಶೀಲಿಸಲು ಪ್ರಾಣಿ ಪ್ರಪಂಚದ ವಿವಿಧ ಪ್ರಭೇಧಗಳ ಮೊಟ್ಟೆಗಳನ್ನು ಪ್ರಯೋಗಕ್ಕೊಳಪಡಿಸಲಾಯಿತು. ಇದರ ಫಲಿತಾಂಶವೆಂದರೆ ಕೆಲವು ಜೀವಿಗಳ ಮೊಟ್ಟೆಗಳು ಈ ತತ್ವಕ್ಕೆ ಹೊರತಾಗಿದ್ದುವು. ಆದುದರಿಂದ ಮೊಸಾಯಿಕ್ ತತ್ವವನ್ನು ಸಂಪೂರ್ಣವಾಗಿ ಪ್ರಾಣಿ ಪ್ರಪಂಚದ ಎಲ್ಲ ಜೀವಿಗಳಿಗೂ ಅನ್ವಯಿಸುವುದು ಅಸಾಧ್ಯ. ಬಹುತೇಕ ಅಕಶೇರುಕಗಳು ಮೊಸಾಯಿಕ್ ತತ್ತಿಗಳನ್ನು ಹೊಂದಿವೆ. ಇನ್ನುಳಿದವು ಈ ತತ್ವಕ್ಕೆ ಹೊರತಾಗಿವೆ. ಅಂತಹ ತತ್ತಿಗಳನ್ನು ವಿಧಿಬದ್ಧ ಮೊಟ್ಟೆಗಳು ಎನ್ನುತ್ತಾರೆ. ವಿಧಿಬದ್ಧ ಮೊಟ್ಟೆಗಳ ಕೋಶದ್ರವ್ಯದಲ್ಲಿ ಮೊಸಾಯಿಕ್ ಮೊಟ್ಟೆಗಳದರಂತೆ ವಲಯಗಳಿಲ್ಲ. ಈ ವಿಧಿಬದ್ಧ ಮೊಟ್ಟೆಗಳನ್ನು ಮೊದಲ ವಿಭಜನೆ ಅನಂತರ ವಿಂಗಡಿಸಿದರೆ ಎರಡು ಡಿಂಬಗಳಾಗಿಯೂ ಇನ್ನು ಕೆಲವು ಜೀವಿಗಳಲ್ಲಿ ನಾಲ್ಕು ಕೋಶಗಳ ಹಂತದಲ್ಲಿ ವಿಭಾಗಿಸಿದರೂ ನಾಲ್ಕು ಸಂಪೂರ್ಣ ಡಿಂಬಗಳು ಬೆಳೆವಣಿಗೆಯಾದುದು ಕಂಡು ಬಂತು. ಅಂದರೆ ಈ ತತ್ತಿಗಳಲ್ಲಿ ವಿಭಜನೆಯ ಮೊದಲಹಂತದಲ್ಲಿ ಪ್ರತಿಯೊಂದು ಕೋಶದಲ್ಲಿಯೂ ಸಂಪೂರ್ಣ ಜೀವಿಯ ಬೆಳೆವಣಿಗೆ ಅವಶ್ಯವಿರುವ ಎಲ್ಲಾ ಪದಾರ್ಥಗಳೂ ಇವೆಯೆಂದು ಅರ್ಥ.
















ಮೊಸಾಯಿಕ್ ತತ್ತಿಗಳು ಹಾಗಲ್ಲ. ನಿಷೇಕವಾದ ಅನಂತರ ವಿವಿಧ ಭಾಗ ಬೆಳೆದು, ಮುಂದೆ ನಿರ್ದಿಷ್ಟ ಭಾಗವಾಗುವುದು ನಿಷೇಕದ ಜೊತೆಗೇ ನಿಶ್ಚಯವಾಗಿರುತ್ತದೆ. ಮೃದ್ವಂಗಿ ಹಾಗೂ ವಲಯವಂತಗಳ ಮೊಟ್ಟೆಗಳು ಮೊಸಾಯಿಕ್ ತತ್ತಿಗಳಿಗೆ ಉತ್ತಮ ಉದಾಹರಣೆ. ಕಠಿಣಚರ್ಮಿಗಳಾದ ನಕ್ಷತ್ರಮೀನು, ಕಡಲ ಚಿಳ್ಳೆ ವಿಧಿಬದ್ಧ ಮೊಟ್ಟೆಗಳನ್ನು ಹೊಂದಿವೆ. ಕಾಂಕ್ಲಿನ್ ಮೊಟ್ಟೆಗಳ ತತ್ತಿ ಅವಸ್ಥೆಯಲ್ಲಿ ನಡೆಯುವ ವಿಭಜನೆಯನ್ನು ನಿರ್ದಿಷ್ಟ ಹಾಗೂ ಅನಿರ್ದಿಷ್ಟ ಎಂದು ಎರಡು ರೀತಿಯಾಗಿ ವಿಂಗಡಿಸಬಹುದು.

ಹೀಗೆ ಹಲವಾರು ಪ್ರಯೋಗಗಳು ಅವ್ಯಾಹತವಾಗಿ ಸಾಗಿದ್ದರೂ ಇನ್ನೂ ಈ ಮೊಸಾಯಿಕ್ ತತ್ವವು ಜೀವಂತವಾಗಿಯೇ ಉಳಿದಿದೆ. ಇದಕ್ಕೆ ಕಾರಣ ಹೆಚ್ಚಿನ ಅಕಶೇರುಕಗಳ ಪ್ರಬೇಧಗಳಲ್ಲಿ ಈ ಮೊಸಾಯಿಕ್ ತತ್ತಿಗಳು ಕಂಡು ಬರುವುದು. ಮೃದ್ವಂಗಿಗಳ ಮತ್ತು ವಲಯವಂತಗಳ ಮೊಟ್ಟೆಗಳು ಬೆಳೆಯುವಾಗ ಕಂಡುಬರುವ ವೈಶಿಷ್ಟ್ಯಗಳನ್ನು, ಫಲಿತ ಮೊಟ್ಟೆಯಿಂದ ಉದಯವಾದ ಜೀವಕೋಶಗಳ ಬೆಳೆವಣಿಗೆಯನ್ನು, ಅವು ಮುಂದೆ ಬೆಳೆಯುವ ಅಂಗಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗಿದೆ. ಇದನ್ನು ಕೋಶ ವಂಶಾವಳಿ ಎಂದು ಕರೆಯಲಾಗುತ್ತದೆ. ಈ ಕೋಶ ವಂಶಾವಳಿಯ ಅಧ್ಯಯನದಿಂದ ಅಕಶೇರುಕ ಭ್ರೂಣಶಾಸ್ತ್ರ ಪುಷ್ಟಿಗೊಂಡಿತು.

ಫಲಿತ ಮೊಟ್ಟೆಯ ವಿಭಜನೆಯಿಂದ ಹುಟ್ಟಿಬರುವ ಬ್ಲಾಸ್ಟುಲಾ ಹಂತದಲ್ಲಿ ಬರುವ ಜೀವಕೋಶಗಳ ವಿವಿಧ ಭಾಗಗಳು ಮುಂದೆ ಬೆಳೆಯುವ ಪ್ರಬುದ್ಧ ಜೀವಿಯ ನಿರ್ದಿಷ್ಟ ಅಂಗವನ್ನೇ ಕೊಡುತ್ತವೆ ಎಂಬುದನ್ನು ಪತ್ತೆಹಚ್ಚುವುದು ಈಗ ಸಾಧ್ಯವಾಗಿದೆ. ತತ್ತಿಯು ವಿಭಜನೆಯಿಂದ ಉತ್ಪತ್ತಿಯಾಗುವ ಜೀವಕೋಶಗಳ ಪ್ರಾಥಮಿಕ ವಿಭಜನಾ ಹಂತವನ್ನು ಗುರುತಿಸಿ ಹಾಗೂ ಪ್ರಾಥಮಿಕ ಹಂತದಲ್ಲಿದ್ದ ಜೀವಕೋಶಗಳನ್ನು ಗುರುತಿಟ್ಟುಕೊಂಡು ಅವುಗಳ ಬೆಳೆವಣಿಗೆಯನ್ನು ನೇರವಾಗಿ ಪ್ರಬುದ್ಧ ಜೀವಿಯಾಗುವವರೆಗೂ ಪರಿಶೀಲಿಸಿ ಅದು ಕೊನೆಯ ಘಟ್ಟದಲ್ಲಿ ಏನಾಗುತ್ತದೆ ಎಂಬುದನ್ನು ಅರಿಯುವುದು ಕೋಶವಂಶಾವಳಿಯ ಅಭ್ಯಾಸ. ಇದು ಭ್ರೂಣಶಾಸ್ತ್ರಕ್ಕೆ ಮಾತ್ರ ಸೀಮಿತವಲ್ಲ. ಜೀವಕೋಶಶಾಸ್ತ್ರಕ್ಕೂ ಸೇರಿಕೊಂಡಿದೆ. ಇದರ ಅಭ್ಯಾಸದಿಂದಾಗಿ ರೂಕ್ಸನ್ ಮೊಸಾಯಿಕ್ ತತ್ವಕ್ಕೆ ಹೆಚ್ಚಿನ ವೈಜ್ಞಾನಿಕ ಬೆಲೆ ಬಂದು ಪ್ರಾಯೋಗಿಕ ಭ್ರೂಣಶಾಸ್ತ್ರ ಉದಯವಾಯಿತು. ವಲಯವಂತ ಹಾಗೂ ಮೃದ್ವಂಗಿಗಳ ಬೆಳೆವಣಿಗೆಯ ಹಂತದಲ್ಲಿ ಈ ಕೋಶವಂಶಾವಳಿಯನ್ನು ಗುರುತಿಸಲಾಯಿತು. ಅಮೇರಿಕಾದ ಜೀವಕೋಶ ಶಾಸ್ತ್ರಜ್ಞರಾದ ಕಾಕ್ಲಿನ್, ಹ್ಯಾರಿಸನ್, ರೊಯೆಬ್, ಬ್ರಾಷೆ ಹರ್ಟ್‌ವಿಗ್, ವೀಸಮಾನ್ ಮುಂತಾದವರು ರೂಕ್ಸನ ತತ್ವವನ್ನು ಒಪ್ಪಿಕೊಂಡರು. ಇವರು ಅಕಶೇರುಕ ಗುಂಪಿನ ಎಲ್ಲಾ ವಂಶದ ಪ್ರಾಣಿಗಳ ಹಾಗೂ ಕೆಲವು ಕಶೇರುಕಗಳ ಬೆಳೆವಣಿಗೆಯಲ್ಲೂ ಕೋಶವಂಶಾವಳಿಯನ್ನು ಗುರುತಿಸಬಹುದು ಎಂಬ ತೀರ್ಮಾನಕ್ಕೆ ಬಂದರು. ಕೋಶ ವಂಶಾವಳಿಯನ್ನು ಅರಿಯಬೇಕಾದರೆ ಮೊಟ್ಟೆಯೊಳಗೆ ಇರುವ ವಿವಿಧ ವಲಯಗಳನ್ನು ಗುರುತಿಸಿಕೊಳ್ಳಬೇಕು. ವಿವಿಧ ವಲಯಗಳಲ್ಲಿರುವ ರಾಸಾಯನಿಕ ವಸ್ತುಗಳನ್ನು ಅರ್ಥ ಮಾಡಿಕೊಳ್ಳಬೇಕು. ತತ್ತಿಯ ವಿಭಜನೆಯಿಂದ ಹುಟ್ಟಿರುವ ಬ್ಲಾಸ್ಟುಲಾ ಹಾಗೂ ಗ್ಯಾಸ್ಟ್ರುಲಾ ಹಂತಗಳಲ್ಲಿ ಮೊಟ್ಟೆಯ ವಿವಿಧ ವಲಯಗಳಿಂದ ಬೆಳೆದು ಬಂದಿರುವ ಕೋಶಗಳ ಸ್ಥಳಗಳನ್ನು ಗುರುತಿಸಿಕೊಳ್ಳಬೇಕು. ಈ ನಿರ್ದಿಷ್ಟ ಸ್ಥಳಗಳ ಗುರುತಿನಿಂದಾಗಿ ಆ ಸ್ಥಳಗಳಲ್ಲಿರುವ ಜೀವಕೋಶಗಳು ಮುಂದೆ ಯಾವ ಅಂಗವಾಗಿ ಬೆಳೆಯುತ್ತವೆ ಎಂಬುದನ್ನು ಪ್ರಯೋಗಗಳ ಮೂಲಕ ತಿಳಿದು, ಆ ಕೋಶ ಸಂತತಿಯನ್ನೆ ಅಭ್ಯಾಸಿಸಿದರೆ, ಕೊನೆಗೆ ಅದು ಯಾವ ಅಂಗವನ್ನು ಕೊಡುತ್ತದೆಯೆಂದು ಗುರುತಿಸಬಹುದು. ಪ್ರಾಯೋಗಿಕ ಭ್ರೂಣಶಾಸ್ತ್ರ ಈ ಕೆಲಸಗಳನ್ನು ಯಶಸ್ವಿಯಾಗಿ ನೆರವೇರಿಸಿದೆ. ಇಂದು ಯಾವ ಅಕಶೇರುಕ ಜೀವಿಯ ಕೋಶ ವಂಶಾವಳಿಯನ್ನಾದರೂ ಅರ್ಥಮಾಡಿಕೊಳ್ಳಬಹುದು. ಪಾಲಿಗಾರ್ಡಿಯಸ್, ಪಟೆಲ್ಲಾ ಮುಂತಾದ ಜೀವಿಗಳಲ್ಲಿ ಇದನ್ನು ಪೂರ್ಣವಾಗಿ ಅಧ್ಯಯನ ಮಾಡಲಾಗಿದೆ.

ಚೈಲ್ಡ್ ವಿಜ್ಞಾನಿ ಪ್ರಾಣಿವಲಯ (ಅನಿಮಲ್ ಪೋಲ್) ಮತ್ತು ಆಹಾರ ವಲಯ (ವೆಜಿಟಬಲ್ ಪೋಲ್) ಗಳಲ್ಲಿ ನಡೆಯುವ ಜೈವಿಕ ಕ್ರಿಯೆಗಳಲ್ಲಿ ವ್ಯತ್ಯಾಸವಿರುವುದನ್ನು ತೋರಿಸಿದನು. ಇವನ ತತ್ವಕ್ಕೆ ಮೆಟಬಾಲಿಕ್ ಆಕ್ಸಿಯಲ್ ಗ್ರೇಡಿಯಂಟ್ ಎನ್ನುವರು. ಜೈವಿಕ ಕ್ರಿಯೆಗಳ ಕಾರ್ಯರಂಗವನ್ನು ಪ್ರಾಯೋಗಿಕವಾಗಿ ಪರಿಶೀಲಿಸಿ ಚೈಲ್ಡನು ಈ ತತ್ವವನ್ನು ಪ್ರತಿಪಾದಿಸಿದ್ದಾನೆ. ಪ್ರಾಣಿವಲಯದ ಭಾಗಗಳಲ್ಲಿ ಜೈವಿಕ ಕ್ರಿಯೆಗಳ ಪ್ರಮಾಣ ಹೆಚ್ಚು, ಇದರಿಂದಾಗಿ ಅಲ್ಲಿ ಕೋಶವಿಭಜನೆ ತೀವ್ರಗತಿಯಲ್ಲಿ ನಡೆಯುತ್ತದೆ. ಪ್ರಾಣಿವಲಯದಿಂದ ಕೆಳಗೆ ಬಾರದಂತೆ ಈ ಕೋಶವಿಭಜನಾ ಪ್ರಮಾಣದ ಗತಿ ಕಡಿಮೆಯಾಗುತ್ತದೆ. ಇದರಿಂದಾಗಿ ಚೈಲ್ಡನು ಮೊಟ್ಟೆಯಲ್ಲಿ ಮೆಟಬಾಲಿಕ್ ಆಕ್ಸಿಯಲ್ ಗ್ರೇಡಿಯಂಟ್ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ಇರುತ್ತದೆ ಎಂದು ತೀರ್ಮಾನಿಸಿದ. ಈ ಆಕ್ಸಿಯಲ್ ಗ್ರೇಡಿಯಂಟ್ ಸ್ಥಿತಿಗಳು ಮೊಟ್ಟೆಯೊಳಗಿನ ಕೋಶದ್ರವ್ಯದಲ್ಲಿರುವ ವಿವಿಧ ರಾಸಾಯನಿಕ ವಸ್ತುಗಳಿಗೆ ಸಂಬಂಧಿಸಿದುದು ಎಂದೂ ಸೂಚಿಸಿದ. ಚೈಲ್ಡನು ಈ ತತ್ವವನ್ನು ಕಡಲ ಚಿಳ್ಳೆ ಮೊಟ್ಟೆಗಳ ಮೇಲೆ ಪ್ರಯೋಗ ಮಾಡಿ ಕಂಡುಕೊಂಡ. ಇಂದು ಈ ತತ್ವ ಬದಲಾವಣೆಯಾಗಿದೆ.

ನಿಷೇಚನಗೊಂಡ ಮೊಟ್ಟೆಯು ಮುಂದೆ ವಿಭಜನೆ ಹೊಂದುತ್ತಾ ಹೋಗುತ್ತದೆ. ತತ್ತಿಯ ವಿಭಜನೆಯಾಗುವಾಗ ಅದರಲ್ಲಿರುವ ಹಳದಿ ಲೋಳೆ ಆಕ್ಸಿಯಲ್ ಗ್ರೇಡಿಯಂಟನ್ನು ಕಾಯ್ದುಕೊಳ್ಳುತ್ತದೆಯಾದ್ದರಿಂದ, ಅಸಮ ಕೋಶಗಳು ಉದ್ಭವಿಸುತ್ತವೆ. ಹಳದಿ ಲೋಳೆ (ಯೊಕ್) ಇಲ್ಲದ ತತ್ತಿಗಳು ವಿಭಜನೆಹೊಂದಿದಾಗ ಸಮಕೋಶಗಳು ಉದ್ಭವಿಸುತ್ತವೆ. ಕೆಲವು ಕೀಟಗಳಲ್ಲಿ ಹಳದಿ ಲೋಳೆಯು ಮೊಟ್ಟೆಯ ಮಧ್ಯದಲ್ಲಿ ಮಾತ್ರ ಇರುವುದರಿಂದ ವಿಭಜನೆಯು ಮೊಟ್ಟೆಯ ಪರಿಧಿಯಲ್ಲಿ ಮಾತ್ರ ಕಂಡುಬರುತ್ತದೆ. ಕಾರಣ, ತತ್ತಿಯ ವಿಭಜನೆಯಲ್ಲಿ ಹಳದಿ ಲೋಳೆಯು ಪ್ರಮುಖ ಪಾತ್ರವಹಿಸುತ್ತದೆ. ಮುಂದೆ ಈ ಕೋಶಗಳು ಬ್ಲಾಸ್ಟುಲಾ ಆಗಿ ನೇರವಾಗಿ ಡಿಂಬಗಳಾಗಿ ಪರಿವರ್ತನೆಗೊಳ್ಳುತ್ತವೆ. ಬ್ಲಾಸ್ಟುಲಾ ಇನ್ನುಳಿದ ಪ್ರಾಣಿಗಳಲ್ಲಿ ಗ್ಯಾಸ್ಟ್ರುಲಾ, ಅನಂತರ ಭ್ರೂಣವಾಗಿ ಮುಂದೆ ಪ್ರಬುದ್ಧ ಜೀವಿಯಾಗುವುದು.

ಭ್ರೂಣಶಾಸ್ತ್ರ ಗರ್ಭಧರಿಸಿದ ಮೊಟ್ಟೆಯೊಳಗೆ ನಡೆಯುವ ನಾನಾ ಭೌತಿಕ ಹಾಗೂ ರಾಸಾಯನಿಕ ಕ್ರಿಯೆಗಳನ್ನು ಚಾಚೂ ತಪ್ಪದಂತೆ ಕೂಲಂಕಷವಾಗಿ ಅಭ್ಯಾಸಮಾಡಲು ಸಹಾಯಕವಾಗಿದೆ. ಮೊಟ್ಟೆ ಮತ್ತು ವೀರ್ಯಾಣುಗಳ ಮಿಲನದಿಂದ ಆರಂಭವಾಗಿ ಮೊಟ್ಟೆಯಿಂದ ಮರಿ ಹೊರಗೆ ಬರುವವರೆಗೆ ನಡೆಯುವ ಕ್ರಿಯೆಯ ಅಧ್ಯಯನದಿಂದ ಇಂದು ಬಹು ಪ್ರಾಮುಖ್ಯ ಪಡೆದಿರುವ ಸಂತಾನ ಯೋಜನೆ, ಮುಂತಾದುವುಗಳನ್ನು ಕಾರ್ಯಗತಗೊಳಿಸಲು ವಿಕಾಸವಾದದ ಸತ್ಯತೆಯನ್ನು ತಿಳಿಯಲು ಸಾಧ್ಯವಾಗಿದೆ.

(ಎಸ್.ಎನ್.ಎಚ್)

**ಅಕಶೇರುಕಗಳಲ್ಲಿ ವಿಸರ್ಜನೆ:** ಸಾರಜನಕಯುಕ್ತ ತ್ಯಾಜ್ಯಗಳನ್ನು ಶರೀರದಿಂದ ಹೊರದೂಡುವಿಕೆ. ಪ್ರಾಣಿಗಳಲ್ಲಿ ಸಾರಜನಕಯುಕ್ತ ತ್ಯಾಜ್ಯಗಳ ವಿಸರ್ಜನೆಯು ಸಾಮಾನ್ಯವಾಗಿ ಅಭಿಸರಣಾ – ನಿಯಂತ್ರಣದೊಡನೆ ಸಹಯೋಗವಾಗಿದೆ. ಕಾಯದ್ರವಗಳ ಜಲ ಮತ್ತು ಅಯಾನುಗಳ ಸಮತೋಲನ ನಿಯಂತ್ರಣವೇ ಅಭಿಸರಣಾ ನಿಯಂತ್ರಣ.

ಜಲವಾಸಿ ಅಕಶೇರುಕಗಳ ಪ್ರಮುಖ ತ್ಯಾಜ್ಯ ಅಮೋನಿಯಾ. ಅಮೋನಿಯ ವಿಷವಸ್ತು. ಇದರ ವಿಸರ್ಜನೆಗೆ ಸಾಕಷ್ಟು ಜಲಬೇಕು. ನೀರಿನಲ್ಲಿ ವಾಸಿಸುವ ಪ್ರಾಣಿಗಳು ಇದನ್ನು ಜಲಾವರಣದಿಂದಲೇ ಪಡೆಯುತ್ತವೆ. ಈ ಜೀವಿಗಳನ್ನು ಅಮೋನೋಟೆಲಿಕ್ ಎನ್ನುತ್ತಾರೆ. ವಿಸರ್ಜನಾಂಗರಹಿತ ಜೀವಿಗಳಾದ ಸ್ಪಂಜುಗಳು, ನೈಡೇರಿಯಾಗಳು (ಕುಟುಕುಕಣವಂತುಗಳು) ಮತ್ತು ಕಂಟಕಚರ್ಮಿಗಳು ಅಮೋನಿಯಾವನ್ನು ವಿಸರ್ಜನೆ ಮಾಡುತ್ತವೆ. ಅಕಶೇರುಕಗಳಲ್ಲಿ ಯುರಿಯ ಅಪರೂಪದ ತ್ಯಾಜ್ಯವಸ್ತು. ಭೂವಾಸಿ ಅಕಶೇರುಕಗಳು ಯುರಿಕ್ ಆಮ್ಲವನ್ನು ತ್ಯಾಜ್ಯವಾಗಿ ಉತ್ಪಾದಿಸುತ್ತವೆ. ಭೌಮೀಕರಣ (ಟೆರೆಸ್ಟ್ರಿಯಲೈಜೆಶನ್) ಹಾಗೂ ಯುರಿಕ್ ಆಮ್ಲ ಉತ್ಪಾದನೆ ಪ್ರಕ್ರಿಯೆಗಳು ಸಹಯೋಗಿಗಳು. ಭೂವಾಸಿ ಸಂಧಿಪದಿಗಳು ಮತ್ತು ಶಂಕುಹುಳುಗಳು ಯೂರಿಕ್ ಆಮ್ಲ ಉತ್ಪಾದಿಸಲನುವಾಗುವ ಸಂರಚನಾ ಮತ್ತು ಶರೀರ ಕ್ರಿಯಾಕೌಶಲಗಳನ್ನು ವಿಕಸಿಸಿಕೊಂಡಿವೆ. ಆದಾಗ್ಯೂ, ಪ್ರಾಣಿಗಳಲ್ಲಿ ಸಾರಜನಕ ತ್ಯಾಜ್ಯವು ಹಲವಾರು ರೂಪಗಳಲ್ಲಿ ಕಂಡು ಬರುತ್ತದೆ. ನೀರಿನ ಲಭ್ಯತೆಯನ್ನಾಧರಿಸಿ, ಕೆಲ ಪ್ರಾಣಿಗಳು ವಿಸರ್ಜಿಸುವ ಸಾರಜನಕ ತ್ಯಾಜ್ಯಗಳ ಪ್ರಮಾಣವೂ ಬದಲಾಗುತ್ತದೆ. ಭೂವಾಸಿ ಅಕಶೇರುಕಗಳು ನೀರಿನ ಕ್ಷಾಮ ಎದುರಿಸುತ್ತವೆ. ಸಾರಜನಕ ತ್ಯಾಜ್ಯಗಳ ಶಿಥಿಲೀಕರಣಕ್ಕಾಗಿ ಅವು ನೀರನ್ನು ಬಳಸಿ, ದುಂದು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಇವು ಸಾರಜನಕ ತ್ಯಾಜ್ಯಗಳನ್ನು ನಂಜಲ್ಲದ ವಸ್ತುಗಳನ್ನಾಗಿ ಪರಿವರ್ತಿಸುತ್ತವೆ. ಈ ಪದಾರ್ಥಗಳನ್ನು ಪಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ. ಆದರೆ, ಅತಿ ಕಡಿಮೆ ನೀರು ಸಾಕು. ಈ ತ್ಯಾಜ್ಯಗಳನ್ನು ವಿಸರ್ಜನೆಗೆ ಮುನ್ನ ತುಸುಕಾಲ ಶರೀರದಲ್ಲಿ ಸಂಗ್ರಹಿಸಿಟ್ಟುಕೊಳ್ಳಬಹುದು.




ಆದಿಮ ನೆಫ್ರಿಡಿಯಮ್




ಪಾಲಿಕೀಟವೊಂದರ ಆದಿಮ ನೆಫ್ರಿಡಿಯಮ್

ವಿಸರ್ಜನಾಂಗಗಳು: ನೆಫ್ರಿಡಿಯಾ: ಕೆಲವು ಅಕಶೇರುಕಗಳಲ್ಲಿ ವಿಸರ್ಜನಾಂಗಗಳಿಲ್ಲ. ಈ ಜೀವಿಗಳಲ್ಲಿ ಬಾಹ್ಯಚರ್ಮ (ಎಕ್ಟೊಡರ್ಮ್) ಜನ್ಯ ನೆಫ್ರಿಡಿಯಾದಂಥ ವಿಸರ್ಜನಾಂಗ ಅಥವಾ ಅಭಿಸರಣಾ ನಿಯಂತ್ರಣಾಂಗದಂತೆ ಕಾರ್ಯನಿರ್ವಹಿಸುವ ರಚನೆಗಳಿವೆ.

ಅಕಶೇರುಕಗಳಲ್ಲಿ ನೆಫ್ರಿಡಿಯಾದಂತಹ ವಿಸರ್ಜನಾಂಗಗಳು ಚಪ್ಪಟೆ ಹುಳಗಳಲ್ಲಿ ಪ್ರಪ್ರಥಮವಾಗಿ ವಿಕಾಸಗೊಂಡವು. ಆದಿಮ ನೆಫ್ರಿಡಿಯಮ್ ನಂತಹ ವಿಸರ್ಜನಾಕೋಶಗಳು ನಳಿಕೆಯಂತಿವೆ. ಇದರ ಒಂದು ತುದಿ ಶರೀರದ ಹೊರಗೆ ತೆರೆದುಕೊಂಡರೆ, ಇನ್ನೊಂದು ತುದಿ ಒಳಮುಖವಾಗಿ ಏಕಕೋಶ ಘಟಕವಾಗಿ ಮುಚ್ಚಿಕೊಂಡಿರುತ್ತದೆ. ಈ ಘಟಕಗಳ ತುದಿಕೋಶಗಳು ಒಂದು ಅಥವಾ ಸಮೂಹದಲ್ಲಿವೆ. ಪ್ರತಿ ಕೋಶವು ಬಟ್ಟಲಾಕಾರದಲ್ಲಿದ್ದು, ನೆಫ್ರಿಡಿಯಾನಾಳ ಮತ್ತು ನೆಫ್ರಿಡಿಯಾರಂಧ್ರ ಹೊಂದಿವೆ. ಆದಿಮ ನೆಫ್ರಿಡಿಯಾಗಳಲ್ಲಿ ಎರಡು ವಿಧ. 1) ಜ್ವಾಲಾಕೋಶಗಳು (ಫ್ಲೆಮ್ ಸೆಲ್ಸು ಮತ್ತು 2) ಊತಕೋಶಗಳು (ಸೋಲೆನೊಸೈಟ್ಸ್). ಜ್ವಾಲಾಕೋಶದ ಕುಹರದೊಳಗೆ ಬಿರುರೋಮಗಳ ಗುಚ್ಛವೊಂದಿದ್ದರೆ, ಊತಕೋಶಗಳಲ್ಲಿ ಒಂದು ಅಥವಾ ಎರಡು ಕಶೆ (ಫ್ಲಜೆಲ್ಲಾ) ಗಳಿರುತ್ತವೆ. ಊತಕೋಶಿ ಪೂರ್ವಜನಕಗಳಿಂದ ಸ್ವತಂತ್ರವಾಗಿ ಹಲವು ವಿಧದ ಜ್ವಾಲಾಕೋಶಗಳು ನಿಷ್ಪನ್ನವಾಗಿವೆ ಎಂಬುದಕ್ಕೆ ಕೆಲ ಆಧಾರಗಳು ದೊರಕಿದರೂ ನೆಫ್ರಿಡಿಯಾಗಳ ವಿಕಾಸ ವಿವಾದಾಸ್ಪದವಾಗಿದೆ.

ಬಿರುರೋಮ ಅಥವಾ ಕಶೆಗಳು ದ್ರವವನ್ನು ನೆಫ್ರಿಡಿಯಾನಾಳದೆಡೆಗೆ ತಳ್ಳುವುದರಿಂದ ಬಟ್ಟಲಿನ ಕುಹರದಲ್ಲಿ ಒತ್ತಡ ಕಡಿಮೆಯಾಗುತ್ತದೆ. ಇಂಥ ಸ್ಥಿತಿಯಲ್ಲಿ ತ್ಯಾಜ್ಯಯುತ ಕೋಶದ್ರವವು ಕೋಶಪೊರೆಗಳ ಮೂಲಕ ಒಳಗೆಬರುತ್ತದೆ. ಆಯ್ಕೆಯು ಮೂಲತಃ ಅಣುಗಾತ್ರವನ್ನಾಧರಿಸಿದೆ. ಆದಿಮನೆಫ್ರಿಡಿಯಾಗಳು ಅವಕಾಶರಹಿತ ಚಪ್ಪಟೆಹುಳುಗಳಲ್ಲಿ, ರೋಟಿಫೆರಾಗಳಲ್ಲಿ ಮತ್ತು ವಲಯವಂತಗಳಲ್ಲಿ ಸರ್ವೇಸಾಮಾನ್ಯ. ಪ್ರೌಢ ಅವಕಾಶಿಗಳಲ್ಲಿ (ಆಡಲ್ಟ್ ಸಿಲೋಮೆಟ್ಸ್) ವಿರಳ. ಕೆಲವು ಡಿಂಬ (ಲಾರ್ವ)ಗಳಲ್ಲಿ ಸಹ ಇವೆ. ಆದಿಮ ನೆಫ್ರಿಡಿಯಾಗಳು ವಿಸರ್ಜನೆಗಿಂತಲೂ ಅಭಿಸರಣಾನಿಯಂತ್ರಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಅಕಶೇರುಕಗಳಲ್ಲಿರುವ ಇನ್ನೊಂದು ಬಗೆಯ ವಿಸರ್ಜನಾಂಗವೇ ಮಿತನೆಫ್ರಿಡಿಯಾ. ಆದಿಮ ಹಾಗೂ ಮಿತನೆಫ್ರಿಡಿಯಾಗಳ ನಡುವೆ ಸಂರಚನಾ ವ್ಯತ್ಯಾಸವಿದೆ. ಮಿತನೆಫ್ರಿಡಿಯಾಗಳು ಬಹುಕೋಶಿಗಳು. ಒಳತುದಿಯು ಬಿರುರೋಮಯುತ ಲಾಳಿಕೆ (ನೆಫ್ರೋಸ್ಟೊಮ್) ಹೊಂದಿವೆ. ನಾಳಿಕೆಯು ನೀಳವಾಗಿದ್ದು ಸುರುಳಿಯಾಕಾರವಿದೆ. ಸಂಗ್ರಹಣಾಪ್ರದೇಶವನ್ನು ಹೊಂದಿವೆ. ಈ ವಿಸರ್ಜನಾಂಗಗಳು ಹೆಚ್ಚಿನ ಪ್ರಮಾಣದ ಕಾಯದ್ರವವನ್ನು ಲಾಳಿಕಾಮುಖದಿಂದ ಒಳತೆಗೆದುಕೊಂಡು, ಅನಂತರ ತ್ಯಾಜ್ಯಕಣಗಳನ್ನು ಆಯ್ದುಕೊಂಡು, ಉಪಯುಕ್ತ ವಸ್ತುಗಳನ್ನು ಪುನಃ ಕಾಯದ್ರವಕ್ಕೆ ಬಿಡುಗಡೆಮಾಡುತ್ತವೆ.

ಆದಿಮ ಮತ್ತು ಮಿತನೆಫ್ರಿಡಿಯಾಗಳೊಳಗಿನ ರಚನಾತ್ಮಕ ಮತ್ತು ಸಕ್ರಿಯಾತ್ಮಕ ವ್ಯತ್ಯಾಸಗಳನ್ನು ಜೀವಿಯ ದೇಹ ರಚನೆಯೊಂದಿಗೆ ಸಂಯೋಜಿಸಬಹುದು. ಅವಕಾಶರಹಿತ (ಅಸಿಲೊಮೆಟ್ಸ್) ಅಲ್ಪಾವಕಾಶಿ (ಸುಡೋಸಿಲೊಮೆಟ್ಸ್) ಅಥವಾ ಕಿರುಕಾಯದ ಜೀವಿಗಳಿಗೆ ಆದಿಮನೆಫ್ರಿಡಿಯಾಗಳು ಸಮಂಜಸ. ಮುಕ್ತಲಾಳಿಕೆಯುಕ್ತ ಮಿತನೆಫ್ರಿಡಿಯಾಗಳು ಸಮಂಜಸವಾಗಲಾರವು. ಅವು ಸುಅವಕಾಶಿಜೀವಿಗಳಿಗೆ (ಯುಸಿಲೊಮೆಟ್ಸ್) ಹೆಚ್ಚು ಹೊಂದಿಕೊಳ್ಳುತ್ತವೆ. ಆದ್ದರಿಂದ, ಸುಅವಕಾಶಿ ಅಕಶೇರುಕಗಳಾದ ವಲಯವಂತಗಳು, ಮೃದ್ವಂಗಿಗಳು, ಸೈಪಂಕುಲಗಳು ಮತ್ತು ಎಖಿಯುರಾಗಳಲ್ಲಿ ಒಂದು ಅಥವಾ ಅನೇಕ ಜೊತೆ ಮಿತನೆಫ್ರಿಡಿಯಾಗಳಿವೆ. ಇವು ಅವಕಾಶಿನಳಿಕೆ (ಸಿಲೊಮೊಡಕ್ಟ್) ಗಳೊಡನೆ ಹೆಚ್ಚಿನ ಸಂಯೋಜನೆ ಹೊಂದಿವೆ.

ಅವಕಾಶಿನಾಳಿಕೆಗಳು ಮತ್ತು ನೆಫ್ರಿಡಿಯಾಗಳು ಪ್ರಾಥಮಿಕವಾಗಿ ಬೇರೆ ಬೇರೆ ಘಟಕಗಳು. ಆದರೆ, ವಿಕಾಸದ ಆದಿಯಲ್ಲಿ ಅವು ಜೊತೆಗೊಂಡು ನೆಫ್ರೋಮಿಕ್ಸಿಯಾಗಳಾಗಿವೆ. ಇವುಗಳಲ್ಲಿ ಮೂರು ವಿಧ.

1) ಅವಕಾಶನಾಳಿಕೆಯೊಂದು ಆದಿಮನೆಫ್ರಿಡಿಯಾದೊಡನೆ ಸೇರಿಕೊಂಡಾಗ ಸಾಮಾನ್ಯ ನಾಳಿಕೆಯುಂಟಾಗುತ್ತದೆ. ಇಂತಹ ರಚನೆಯನ್ನು ಆದಿನೆಫ್ರೋಮಿಕ್ಸಿಯಮ್ ಎನ್ನುತ್ತಾರೆ.

2) ಅವಕಾಶನಾಳಿಕೆಯೊಂದು ಮಿತನೆಫ್ರಿಡಿಯಾದೊಡನೆ ಸೇರಿದಾಗ, ಸೇರಿಕೊಳ್ಳುವ ರಚನಾವಿಧಾನಕ್ಕನುಗುಣವಾಗಿ ಮಿತನೆಫ್ರೋಮಿಕ್ಸಿಯಮ್ ಅಥವಾ ಮಿಕ್ಸೋನೆಫ್ರಿಡಿಯಮ್ ಉಂಟಾಗುತ್ತದೆ.

3) ಈ ನೆಫ್ರೋಮಿಕ್ಸಿಯಾಗಳು ಮಧ್ಯ ಮತ್ತು ಬಾಹ್ಯಚರ್ಮಜನ್ಯ ಸಂರಚನೆಗಳು. ಏಕೆಂದರೆ, ಅವಕಾಶನಾಳಿಕೆಗಳು ಮಧ್ಯಚರ್ಮದಿಂದ ಸೃಜಿತವಾಗುತ್ತವೆ.

ಅಕಶೇರುಕಗಳ ಇತರೆ ವಿಸರ್ಜನಾಂಗಗಳು: ಮೆಟಾಜೋವಾಗಳೆಲ್ಲಾ ಆದಿಮ ಅಥವಾ ಮಿತನೆಫ್ರಿಡಿಯಾಗಳನ್ನು ಹೊಂದಿರುವುದಿಲ್ಲ. ಉದಾ: ಸ್ಪಂಜುಗಳು ಕಂಟಕಚರ್ಮಿಗಳು (ಯಕಿನೊಡರ್ಮ್ಸ್) ಕಿಟೋಗ್ನಾಥಾಗಳು ನೈಡೇರಿಯಾಗಳಲ್ಲಿ ನಿರ್ದಿಷ್ಟ ವಿಸರ್ಜನಾಂಗಗಳಿಲ್ಲ. ಬಾಹ್ಯ ಮೇಲ್ಮೈ ಅಥವಾ ಕರುಳಿನ ಒಳಮೈಗಳಿಂದಲೇ ತ್ಯಾಜ್ಯವಸ್ತುಗಳ ವಿಸರ್ಜನೆಯಾಗುತ್ತದೆ. ಒಮ್ಮೊಮ್ಮೆ ಅಮೀಬಾರೂಪಿ ಭಕ್ಷಕ ಕೋಶಗಳು ಈ ಕ್ರಿಯೆಗೆ ಸಹಾಯ ಮಾಡುತ್ತವೆ. ಕೆಲಜೀವಿಗಳಲ್ಲಿ ಬಹುವಾಗಿ ಪರಿವರ್ತಿತ ನೆಫ್ರಿಡಿಯಾಗಳು ಅಥವಾ ದ್ವಿತೀಯಕ ಜನ್ಯ ಸಂರಚನೆಗಳುಂಟಾಗಬಹುದು. ಉದಾ: ಕಠಿಣಚರ್ಮಿಗಳ (ಕ್ರಸ್ಟೇಷಿಯ) ಆಂಟೆನಲ್ ಹಾಗೂ ಮ್ಯಾಕ್ಸಿಲ್ಲರಿ ಗ್ರಂಥಿಗಳು ಮಿತನೆಫ್ರಿಡಿಯಾ ಜನ್ಯಗಳು. ಆದರೆ, ಕೀಟ ಹಾಗೂ ಜೇಡಗಳ ಮಾಲ್ಫಿಜಿಯನ್ ನಾಳಿಕೆಗಳು ಸ್ವತಂತ್ರವಾಗಿ ಉದ್ಭವಗೊಂಡಿವೆ. ಚೇಳುಗಳಲ್ಲಿ ಹಸಿರು ಗ್ರಂಥಿಗಳು (ಗ್ರೀನ್ ಗ್ಲಾಂಡ್ಸ್) ವಿಸರ್ಜನಾಂಗಗಳಂತೆ ಕಾರ್ಯನಿರ್ವಹಿಸುತ್ತವೆ.

(ಕೆ.ಎಸ್.)

**ಅಕಶೇರುಕಗಳು:** ಕಶೇರು (ಬೆನ್ನೆಲುಬು) ಇಲ್ಲದ ಪ್ರಾಣಿಗಳು. ಅಕಶೇರುಕವೆಂಬ ಪದದ ಪರಿಮಿತಿಯಲ್ಲಿ ಪ್ರಪಂಚದಲ್ಲಿರುವ ಪ್ರಾಣಿ ಸಾಮ್ರಾಜ್ಯದ ಶೇ. 95ರಷ್ಟು ಪ್ರಾಣಿಗಳು ಸೇರುತ್ತವೆ. ಇವುಗಳಲ್ಲಿ ಹೆಚ್ಚು ಪ್ರಾಣಿಗಳು ಭೂವಾಸಿಗಳು. ಆದರೆ ವೈವಿಧ್ಯದಲ್ಲಿ ಭೂವಾಸಿಗಳಿಗಿಂತ ಜಲವಾಸಿಗಳದೇ ಮೇಲುಗೈ.

ಒಂದು ದಶಲಕ್ಷಕ್ಕಿಂತ ಹೆಚ್ಚಾಗಿರುವ ಈ ಪ್ರಾಣಿ ಪ್ರಭೇದಗಳನ್ನು ವಿಂಗಡಿಸುವುದು ಬಹಳ ಕಷ್ಟ. ಪ್ರಪ್ರಥಮವಾಗಿ ಅರಿಸ್ಟಾಟಲ್ ಪ್ರಾಣಿವರ್ಗವನ್ನು ಎರಡು ಭಾಗಗಳಾಗಿ ವಿಂಗಡಿಸಿದ. ಆತನ ವರ್ಗೀಕರಣದಂತೆ, ಅಕಶೇರುಕಗಳು ರಕ್ತರಹಿತ ಜೀವಿಗಳು. ರಕ್ತರಹಿತ ಹಾಗೂ ರಕ್ತವುಳ್ಳ ಜೀವಿಗಳನ್ನು ಪುನಃ ನಾನಾ ಶಾಖೆಗಳನ್ನಾಗಿ ವಿಭಾಗಿಸಲಾಗಿದೆ. ಲಿನೇಯಸ್ ಎಂಬುವನು ಜೀವಪ್ರಭೇದಗಳನ್ನು ಅಕಶೇರುಕಗಳು ಮತ್ತು ಕಶೇರುಕಗಳು ಎಂದು ವಿಭಾಗಿಸಿ ಅಕಶೇರುಕ ಜೀವಿಗಳನ್ನು ಜಂತುಹುಳುಗಳ ವರ್ಗ, ಕೀಟಗಳ ವರ್ಗ ಎಂದು ಎರಡು ಭಾಗಗಳಾಗಿ ವಿಂಗಡಿಸಿದ. ಹತ್ತೊಂಬತ್ತನೆಯ ಶತಮಾನದಲ್ಲಿ ಲಾಮಾರ್ಕ್ ಅಕಶೇರುಕ ಜೀವಿಗಳನ್ನು ಅವುಗಳ ಬಾಹ್ಯರಚನಾಧಾರಗಳ ಮೇಲೆ ಹತ್ತು ವರ್ಗಗಳಾಗಿ ವಿಂಗಡಿಸಿದ್ದಾನೆ. ಈ ಹತ್ತು ವರ್ಗಗಳೆಂದರೆ 1. ಇನ್‌ಫ್ಯುಸೊರಿಯ 2. ಪಾಲಿಪ್ಸ್ 3. ರೇಡಿಯೇಟ್ಸ್ 4. ವರ್ಮಿಸ್ 5. ವಲಯವಂತಗಳು 6. ಅರಾಖ್ನಿಡ 7. ಕ್ರಸ್ಟೇಷಿಯ 8. ಕೀಟಗಳು 9. ಸಿರ್ರಿಪೀಡಿಯ 10. ಮೃದ್ವಂಗಿಗಳು (ಮೊಲಸ್ಕ). ಲಾಮಾರ್ಕ್‌ನ ಸಮಕಾಲೀನನಾದ ಕುವಿಯರ್ ಪ್ರಾಣಿಪ್ರಪಂಚವನ್ನು ಕಶೇರುಕಗಳು, ಆರ್ಟಿಕ್ಯುಲೇಟ, ಮೃದ್ವಂಗಿಗಳು, ರೇಡಿಯೇಟ ಎಂಬ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದ.

ಕುವಿಯರ್ ಆದಮೇಲೆ ಬಂದ ವಿಜ್ಞಾನಿಗಳು ಅಕಶೇರುಕಗಳ ವರ್ಗೀಕರಣಕ್ಕೆ ಯತ್ನಿಸಿದರು. ಜರ್ಮನಿ ದೇಶದ ಜೀವ ವಿಜ್ಞಾನಿಗಳಾದ ಶೀಬಾಲ್ಡ್ ಮತ್ತು ಲ್ಯುಕರ್ಟ್ ಅವರಲ್ಲಿ ಮುಖ್ಯರು. ಶೀಬಾಲ್ಡ್ ಏಕಕೋಶಿಕ ಜೀವಿಗಳನ್ನು ಕಂಡು ಹಿಡಿದು ಅವುಗಳಿಗಾಗಿಯೇ ಪ್ರೊಟೋಜೋವ ಎಂಬ ವಂಶವನ್ನು ಹೆಸರಿಸುತ್ತಾನೆ. ಜೊತೆಗೆ ಸಂಧಿಪದಿಗಳ ವರ್ಗವನ್ನು ಊರ್ಜಿತಗೊಳಿಸುತ್ತಾನೆ. ಲ್ಯುಕರ್ಟ್ ರೇಡಿಯೇಟ ವಿಭಾಗವನ್ನು ಸೀಲೆಂಟರೇಟ ಮತ್ತು ಎಕೈನೊಡರ್ಮೆಟಾ ಎಂಬ ಎರಡು ಭಾಗಗಳಾಗಿ ವಿಭಾಗಿಸಿದ. ಮುಂದೆ ಬಂದ ವಿಜ್ಞಾನಿಗಳು ಬ್ರಾಕಿಯೊಪೋಡ, ಬ್ರಯೋಜೋವ ಹಾಗು ಟ್ಯುನಿಕೇಟ ವರ್ಗಗಳನ್ನು ಮೃದ್ವಂಗಿಗಳ ಗುಂಪಿನಿಂದ ಬೇರ್ಪಡಿಸಿದರು. ಮಿಲ್ನೇ ಎಡ್ವರ್ಡ್ ಎಂಬವನು ಟ್ಯುನಿಕೇಟ ಜೀವಿಗಳಿಗೆ ಟ್ಯುನಿಕೇಟ ಎಂಬ ಪ್ರತ್ಯೇಕ ವಂಶದ ಅರ್ಹತೆಯನ್ನು ಕೊಟ್ಟ. ಕ್ಲಾಸ್ ಎಂಬ ಜರ್ಮನ್ ವಿಜ್ಞಾನಿ ಪ್ರಾಣಿಪ್ರಪಂಚವನ್ನು 1. ಪ್ರೊಟೋಜೋವ 2. ಸೀಲೆಂಟರೇಟ 3. ಎಕೈನೊಡರ್ಮೆಟಾ 4. ವರ್ಮ್ಸ್ 5. ಆರ್ಥ್ರೋಪೋಡ 6. ಮೃದ್ವಂಗಿಗಳು (ಮೊಲಸ್ಕ) 7. ಮೊಲಸ್ಕಾಯಿಡಿಯ 8. ಟ್ಯುನಿಕೇಟ 9. ಕಶೇರುಕ ಎಂಬ ಒಂಬತ್ತು ವರ್ಗಗಳನ್ನಾಗಿ ವಿಂಗಡಿಸಿದನು. ಮುಂದೆ ಬಂದ ವಿಜ್ಞಾನಿಗಳು ಪೋರಿಫೆರ ಮತ್ತು ಹೆಮಿಕಾರ್ಡೆಟ ವಂಶಗಳನ್ನು ಕ್ಲಾಸ್ ವಿಭಜನೆಗೆ ಕೊಡುಗೆಯಾಗಿ ನೀಡಿದರು. ಮುಂದೆ ವರ್ಮ್ಸ್ ಗುಂಪನ್ನು ವಿಭಜಿಸಿದ್ದಾರೆ. ಪ್ಲಾಟಿಹೆಲ್‌ಮೆನ್‌ಥಿಸ್, ನೆಮರ್‌ಟೈನ್, ಆಸ್ಕಿಹೆಲಮೆನ್‌ಥಿಸ್ ಹಾಗೂ ಖಂಡಗಳುಳ್ಳ ಪ್ರಾಣಿಗಳಾದ ಅನೆಲಿಡ ಎಂಬ ವಂಶಗಳಾಗಿ ವಿಭಜಿಸಿದ್ದಾರೆ. ಅತ್ಯಂತ ಆಧುನಿಕ ಅಭಿಪ್ರಾಯದಂತೆ ಇಂದು ಪ್ರಾಣಿ ಪ್ರಪಂಚದಲ್ಲಿ 20 ರಿಂದ 30 ವಂಶಗಳನ್ನು ಗುರುತಿಸಬಹುದು. ಆದುದರಿಂದ ಈ ವರ್ಗೀಕರಣದಲ್ಲಿ ಎಲ್ಲರಲ್ಲಿಯೂ ಒಂದೇ ರೀತಿಯ ಸಾಮ್ಯವನ್ನು ಹುಡುಕುವುದು ಕಷ್ಟ.

ಇಂದು ಹೈಮನ್ ಎಂಬ ಮಹಿಳಾ ಜೀವವಿಜ್ಞಾನಿಯ ವರ್ಗೀಕರಣ ಪ್ರಚಲಿತವಿದೆ. 1. ಪ್ರೊಟೋಜೋವ 2. ಮಿಸೊಜೋವ 3. ಪೋರಿಫೆರ 4. ನೈಡೇರಿಯ 5. ಟೀನೊಫೋರ 6. ಪ್ಲಾಟಿಹೆಲ್‌ಮನ್‌ಥಿಸ್ 7. ರಿಂಕೊಸೀಲ 8. ಎಂಟೊಪ್ರಾಕ್ಟ 9. ಅಕ್ಯಾಂತೊಸೆಫಾಲಾ 10. ಆಸ್ಕಿಹೆಲ್‌ಮೆನ್‌ಥಿಸ್ 11. ಮೃದ್ವಂಗಿಗಳು (ಮೊಲಸ್ಕ) 12. ಸೈಫನ್‌ಕ್ಯುಲಿಡ 13. ಎಕಿಯುರಾಯ್ಡಿಯ 14. ಅನೆಲಿಡ 15. ಆರ್ಥ್ರೋಪೋಡ 16. ಎಕ್ಟೊಪ್ರಾಕ್ಟ 17. ಫೊರೊನಿಡ 18. ಬ್ರಾಕಿಯೊಪೊಡ 19. ಎಕೈನೋಡರ್‌ಮೆಟ 20. ಪೋಗೊನೊಫೋರ 21. ಕೀಟೋಗ್ನಾಥ ಎಂಬ 21 ವಂಶಗಳಾಗಿ ಆಕೆ

ವರ್ಗೀಕರಿಸಿರುವಳು. ಅಕಶೇರುಕ ಪ್ರಾಣಿಗಳಿಗೆ ಸಂಬಂಧಿಸಿದ ಈ ವರ್ಗೀಕರಣವನ್ನು ಸಾಮಾನ್ಯವಾಗಿ ಇಂದು ಬಹಳ ವಿಜ್ಞಾನಿಗಳು ಒಪ್ಪಿಕೊಳ್ಳುತ್ತಾರೆ.

ಮೇಲ್ಕಂಡ ವರ್ಗೀಕರಣ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಹೆಕೆಲ್ ಎಂಬವನು ಪ್ರಾಣಿಪ್ರಪಂಚವನ್ನು ಎರಡು ಭಾಗಗಳಾಗಿ ವಿಭಾಗಿಸಿದ್ದ. ಈತನ ಪ್ರಕಾರ ಏಕಕೋಶಜೀವಿಗಳೇ ಒಂದು ಪಂಗಡ. ಬಹುಕೋಶ ಜೀವಿಗಳು ಮತ್ತೊಂದು ಪಂಗಡ. ಏಕಕೋಶಜೀವಿಗಳನ್ನು ಪ್ರೊಟೋಜ಼ೋವ ಎಂತಲೂ ಬಹುಕೋಶ ಜೀವಿಗಳನ್ನು ಮೆಟಜ಼ೋವ ಎಂತಲೂ ಆತ ಹೆಸರಿಸಿದ್ದ.

ಮೆಟಜ಼ೋವ ಪಂಗಡವನ್ನು ಅವುಗಳ ಅಂತಸ್ತಿಗೆ ತಕ್ಕಂತೆ ಮೂರು ವಿಭಾಗಗಳಾಗಿ ವಿಂಗಡಿಸಿ ಪ್ರಥಮ ವಿಭಾಗವನ್ನು ಮಿಸೊಜ಼ೋವವೆಂದು ಕರೆಯಲಾಯಿತು. ಇದರಲ್ಲಿ 50 ಪ್ರಭೇದಗಳಿವೆ. ಇವು ಅತ್ಯಂತ ಸೂಕ್ಷ್ಮ ಜೀವಿಗಳಾಗಿದ್ದು ಇವುಗಳ ಶರೀರ ಜೀವಕೋಶಗಳ ಒಂದೇ ಪದರವನ್ನು ಹೊಂದಿದೆ. ಇವುಗಳ ಜೀವಕೋಶ ಏಕಕೋಶ ಜೀವಿಗಳಾದ ಪ್ರೊಟೋಜ಼ೋವಗಳಂತೆ ತಮ್ಮ ಕ್ರಿಯೆಗಳನ್ನು ನಡೆಸುತ್ತವೆ.

ಎರಡನೆಯ ವಿಭಾಗ ಪ್ಯಾರಾಜ಼ೋವ. ಈ ವಿಭಾಗದಲ್ಲಿ 5,000 ಪ್ರಭೇದಗಳಿವೆ. ಇವುಗಳೇ ಸ್ಪಂಜು ಪ್ರಾಣಿಗಳು. ಇವನ್ನು ಪೋರಿಫೆರ ಎಂಬ ವಂಶಕ್ಕೆ ಸೇರಿಸಲಾಗಿದೆ. ಮೂಲಭೂತವಾಗಿ ಈ ಪ್ರಾಣಿಗಳು ಕೆಲವೇ ರೀತಿಯ ಜೀವಕೋಶಗಳನ್ನು ಹೊಂದಿವೆ. ಇವುಗಳಲ್ಲಿ ಅತಿ ಮುಖ್ಯವಾದುವೆಂದರೆ ಅಮಿಬಾಯ್ಡ್ ಕೋಶಗಳು, ಕೊರಳುಪಟ್ಟಿ ಹಾಗು ಶಿಲಕೆಗಳುಳ್ಳ ಕೋಶಗಳು. ಅಮಿಬಾಯ್ಡ್ ಕೋಶಗಳು ಮುಂದೆ ವಿಭೇದೀಕರಣಕ್ಕೊಳಗಾಗಿ ಪ್ರಬುದ್ಧ ಸ್ಪಂಜು ಪ್ರಾಣಿಯ ವಿವಿಧ ಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತವೆ. ಈ ಪ್ರಾಣಿಗಳಲ್ಲಿ ಜೀವಕೋಶಗಳು ಬಹಳ ಕನಿಷ್ಠಮಟ್ಟದಲ್ಲಿ ತಮ್ಮ ಹೊಂದಾಣಿಕೆಯನ್ನು ಪ್ರದರ್ಶಿಸುತ್ತವೆ. ಜೀವಕೋಶಗಳು ಪ್ರಾಣಿಯ ಶರೀರದಿಂದ ಅತಿ ಸುಲಭವಾಗಿ ಬೇರ್ಪಟ್ಟು ಶರೀರದ ಬೇರೆಯೆಡೆಗೆ ಪ್ರವಾಸ ಕೈಗೊಳ್ಳುವುದನ್ನು ಕಾಣಬಹುದು. ಹೀಗಾಗಿ ಈ ಪ್ರಾಣಿಗಳಲ್ಲಿ ನಿಜವಾದ ಅಂಗಾಂಶಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಆದುದರಿಂದ ಇವುಗಳ ಶರೀರವನ್ನು ಜೀವಕೋಶಗಳ ಸಮುದಾಯ ಮಾತ್ರವೆಂದು ಹೇಳಬಹುದು.

ಮೂರನೆಯ ವಿಭಾಗವೇ ಯುಮೆಟಜ಼ೋವ. ಇದರಲ್ಲಿ ಜೀವಪ್ರಭೇದದ ಎಲ್ಲ ವಂಶಗಳೂ ಸೇರುತ್ತವೆ. ಈ ಎಲ್ಲ ವಂಶಗಳಲ್ಲಿಯೂ ಜೀವಕೋಶಗಳು ವಿಭೇದೀಕರಣಕ್ಕೊಳಪಟ್ಟು ಅತ್ಯಂತ ಉನ್ನತ ಹಾಗು ಕ್ಲಿಷ್ಟ ಅವಸ್ಥೆಗಳನ್ನು ತಲುಪಿರುವುದು ಕಂಡುಬರುತ್ತದೆ. ಉದಾಹರಣೆಗೆ, ನರಮಂಡಲದ ಕೋಶಗಳು, ಮಾಂಸಖಂಡದ ಕೋಶಗಳು–ಇತ್ಯಾದಿ. ಈ ಜೀವಕೋಶಗಳು ನಿರ್ದಿಷ್ಟವಾದ ಅಂಗಕಟ್ಟು ಹಾಗೂ ಅಂಗಾಂಗಗಳಾಗಿರುವುದನ್ನು ಕಾಣಬಹುದು. ಯಮೆಟಜ಼ೋವ ಪಂಗಡದ ಅತ್ಯಂತ ಕೆಳ ದರ್ಜೆಯ ವಂಶವೆಂದರೆ ತ್ರಿಜ್ಯ ಸೌಷ್ಠವ (ರೇಡಿಯಲ್ ಸಿಮೆಟ್ರಿ) ವನ್ನು ಹೊಂದಿರುವ ಸೀಲೆಂಟರೇಟ ವಂಶ.

ಈ ಎಲ್ಲ ವಂಶಗಳ ಉದಯಮೂಲ ಇಂದಿಗೂ ಸರಿಯಾಗಿ ತಿಳಿದುಬಂದಿಲ್ಲ. ಜೀವಪ್ರಭೇದದ ಕೆಲವು ಮುಖ್ಯ ವಂಶದ ಜೀವಿಗಳ ಅವಶೇಷಗಳು ಕೇಂಬ್ರಿಯನ್ ಕಾಲದಿಂದ ಸಿಕ್ಕಿವೆ. ಹೀಗೆ ಸಿಕ್ಕಿರುವ ಪಳೆಯುಳಿಕೆಗಳ ಆಧಾರದಿಂದ ನಾವು ಒಂದು ವಂಶದ ಜೀವಿಗಳಿಗೂ ಹಾಗೂ ಮತ್ತೊಂದು ವಂಶದ ಜೀವಿಗಳಿಗೂ ಇರುವ ಸಾಮ್ಯ ಹಾಗು ವ್ಯತ್ಯಾಸಗಳನ್ನು ತಿಳಿದು ಅವುಗಳಿಗಿರುವ ಸಂಬಂಧವನ್ನು ಕಂಡುಕೊಳ್ಳಬೇಕಾಗಿದೆ. ಹ್ಯಾಟ್‌ಚೆಕ್ (1888) ಈ ಜೀವಿಗಳ ವಂಶಾವಳಿಯನ್ನು ಎರಡು ದಾರಿಗಳಲ್ಲಿ ಗುರುತಿಸುತ್ತಾನೆ. ಈ ಎರಡು ದಾರಿಗಳನ್ನು ಮುಖ್ಯವಾಗಿ ಆ ಜೀವಿಗಳ ಕೇಂದ್ರ ನರಮಂಡಲದ ಬೆಳವಣಿಗೆಯ ಸಹಾಯದಿಂದ ಕಂಡುಕೊಳ್ಳಲಾಗಿದೆ. ದ್ವಿಪಾರ್ಶ್ವಸಾಮ್ಯವನ್ನು ಹೊಂದಿರುವ ಮೆಟಜ಼ೋವ ಜೀವಿಗಳಲ್ಲಿ ನರಮಂಡಲ ಎರಡು ರೀತಿಯದಾಗಿದೆ. ಒಂದನೆಯ ರೀತಿಯ ನರಮಂಡಲ ಜೀವಿಯ ಅಧೋಭಾಗದಲ್ಲಿದ್ದರೆ, ಎರಡನೆಯ ರೀತಿಯದು ಜೀವಿಯ ಊರ್ಧ್ವಭಾಗದಲ್ಲಿದೆ. ಈ ರೀತಿಯ ಇಬ್ಬಗೆಯ ಬೆಳವಣಿಗೆಯನ್ನು ಭ್ರೂಣದ ಬೆಳವಣಿಗೆಯ ಪ್ರಥಮ ಹಂತಗಳಲ್ಲಿ ಕಾಣಬಹುದು. ಈ ವ್ಯತ್ಯಾಸಕ್ಕೆ ಬ್ಲಾಸ್ಟೊಪೋರ್ ಎಂಬ ರಂಧ್ರ ಮುಚ್ಚಿಕೊಳ್ಳುವುದೇ ಕಾರಣ. ಈ ರಂಧ್ರ ಯಾವಾಗಲೂ ಭ್ರೂಣದ ಒಂದು ಕೊನೆಯಿಂದ ಮುಚ್ಚಿಕೊಳ್ಳಲಾರಂಭಿಸುತ್ತದೆ. ಕೆಲವು ಪ್ರಾಣಿಗಳಲ್ಲಿ ಇದು ಹಿಂದಿನತುದಿಯ ಭಾಗದಿಂದ ಮುಚ್ಚಿಕೊಳ್ಳಲಾರಂಭಿಸಿ ಮುಂದುವರಿಯುತ್ತ ಬಂದು ಕೊನೆಗೆ ಮುಂಭಾಗದಲ್ಲಿ ಉಳಿದುಕೊಂಡು ಮುಂದೆ ಜೀವಿಯ ಬಾಯಿಯಾಗುತ್ತದೆ. ಈ ರೀತಿಯ ಭ್ರೂಣ ಬೆಳವಣಿಗೆಯನ್ನು ಹೊಂದಿರುವ ಎಲ್ಲ ಜೀವಿಗಳನ್ನೂ ಪ್ರೊಟೊಸ್ಟೋಮಿಯ ಎಂಬ ಗುಂಪಿಗೆ ಸೇರಿಸಲಾಗಿದೆ. ಇಲ್ಲಿ ಬ್ಲಾಸ್ಟೊಪೋರ್ ಪ್ರಬುದ್ಧ ಜೀವಿಯ ಬಾಯಾಗುತ್ತದೆ. ಈ ಜೀವಿಯಲ್ಲಿ ಆಸನದ್ವಾರ ಹೊರದರ್ಮದ ಸಹಾಯದಿಂದ ಮುಂದೆ ಪ್ರತ್ಯೇಕವಾಗಿ ಉದಯವಾಗುತ್ತದೆ. ಪ್ರೊಟೊಸ್ಟೋಮಿಯ ಗುಂಪಿಗೆ ಸೇರಿದ ಜೀವಿಗಳಲ್ಲಿ ಕೆಲವು ತಮ್ಮ ಮೊಟ್ಟೆಗಳಲ್ಲಿ ಬಂಡಾರ (ಯೋಕ್) ಪದಾರ್ಥಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹೊಂದಿವೆ. ಉದಾಹರಣೆಗೆ, ಕೀಟವರ್ಗ ಹಾಗು ಅರಾಕ್ನಿಡ. ಈ ಜೀವಿಗಳಲ್ಲಿ ಒಳದರ್ಮ ಗ್ಯಾಸ್ಟ್ರಲೇಷನ್ನಿನಿಂದ ಉತ್ಪತ್ತಿಯಾಗುವುದಿಲ್ಲ. ಆದುದರಿಂದ ಈ ಜೀವಿಗಳಲ್ಲಿ ಬ್ಲಾಸ್ಟೊಪೋರ್ ಇಲ್ಲ. ಇವುಗಳು ಪ್ರೊಟೊಸ್ಟೋಮಿಯ ಗುಂಪಿಗೆ ಹೇಗೆ ಸೇರಿವೆಯೆಂದರೆ ಅವುಗಳ ಶರೀರದ ಒಳರಚನೆಗೂ ಅನೆಲಿಡ ಜೀವಿಗಳ ಶರೀರದ ಒಳರಚನೆಗೂ ಅತ್ಯಂತ ಹೆಚ್ಚಿನ ಸಾಮ್ಯ ಹಾಗೂ ಸಂಬಂಧವಿದೆ.

ಇನ್ನುಳಿದ ದ್ವಿಪಾರ್ಶ್ವಸಾಮ್ಯವುಳ್ಳ ಜೀವಿಗಳ ಭ್ರೂಣದಲ್ಲಿ ಬ್ಲಾಸ್ಟೊಪೋರ್ ಆ ಜೀವಿಗಳ ಮುಂತುದಿಯ ಕಡೆಯಿಂದ ಮುಚ್ಚಿಕೊಳ್ಳಲಾರಂಭಿಸಿ ಬಾಲದ ಕಡೆಗೆ ಮುಂದುವರಿಯುತ್ತ ಹೋಗುತ್ತದೆ. ಕೊನೆಗೆ ಈ ಜೀವಿಯ ಬ್ಲಾಸ್ಟೊಪೋರ್ ಆಸನದ್ವಾರವಾಗಿ ಉಳಿಯುತ್ತದೆ. ಈ ರೀತಿಯ ಬೆಳವಣಿಗೆಯುಳ್ಳ ಜೀವಿಗಳನ್ನು ಡ್ಯುಟೆರೊಸ್ಟೋಮಿಯ ಎಂದು ಕರೆಯುತ್ತಾರೆ. ಈ ರೀತಿಯ ಬೆಳವಣಿಗೆಯುಳ್ಳ ಜೀವಿಗಳಲ್ಲಿ ನರಮಂಡಲ ಬ್ಲಾಸ್ಟೊಪೋರ್ ಹತ್ತಿರವಿರುವ ಹೊರದರ್ಮದ ಕೋಶಗಳಿಂದ ಬೆಳೆದು ಬರುತ್ತದೆ. ಈ ಬ್ಲಾಸ್ಟೊಪೋರ್ ಮುಚ್ಚಿಕೊಳ್ಳುವಿಕೆಗನುಗುಣವಾಗಿ ನರಮಂಡಲದ ಸ್ಥಾನ ಪ್ರೊಟೊಸ್ಟೋಮಿಯದಲ್ಲಿ ಜೀವಿಯ ಅಧೋಭಾಗಕ್ಕೂ ಡ್ಯುಟೆರೊಸ್ಟೋಮಿಯದಲ್ಲಿ ಊರ್ಧ್ವಭಾಗಕ್ಕೂ ಪಲ್ಲಟಗೊಳ್ಳುತ್ತದೆ. ಆದುದರಿಂದ ಪ್ರೋಟೊಸ್ಟೋಮಿಯ ಜೀವಿಗಳನ್ನು ಅಕಶೇರುಕಗಳೆಂತಲೂ ಡ್ಯುಟೆರೊಸ್ಟೋಮಿಯ ಜೀವಿಗಳನ್ನು ಕಶೇರುಕಗಳೆಂತಲೂ ಭ್ರೂಣ ಬೆಳವಣಿಗೆಯ ಕಾಲದಲ್ಲೇ ಗುರುತಿಸಬಹುದು. ಹೆಮಿಕಾರ್ಡೇಟ ಮತ್ತು ಎಕೈನೊಡರ್‌ಮೇಟ ಇವಕ್ಕೆ ಹೊರತಾಗಿವೆ.

ಮೇಲೆ ಹೇಳಿದ ಎರಡು ವಿಭಾಗಗಳಲ್ಲಿಯೂ ಮಧ್ಯದರ್ಮದ ಬೆಳವಣಿಗೆಯಲ್ಲಿಯೂ ವ್ಯತ್ಯಾಸಗಳನ್ನು ಕಾಣಬಹುದು. ಡ್ಯುಟೆರೊಸ್ಟೋಮಿಯದಲ್ಲಿ ಮಧ್ಯದರ್ಮ ಆರ್‌ಕೆಂಟೆರಾನ್ ಗೋಡೆಯಿಂದ ಬೇರ್ಪಟ್ಟು ಬೆಳೆಯುತ್ತದೆ. ಪ್ರೋಟೊಸ್ಟೋಮಿಯದಲ್ಲಿ ಈ ರೀತಿಯ ಬೆಳವಣಿಗೆ ಇಲ್ಲ. ಪ್ರೋಟೊಸ್ಟೋಮಿಯ ತನ್ನ ಅಸ್ಥಿರಚನೆಗಳನ್ನು ಹೊರದರ್ಮದಿಂದ ಬೆಳೆಸಿಕೊಳ್ಳುತ್ತದೆ. ಆದುದರಿಂದ ಇದರ ಅಸ್ಥಿ ಹೊರಅಸ್ಥಿಯಾಗಿ ಈ ಜೀವಿಯನ್ನು ರಕ್ಷಿಸುತ್ತದೆ. ಡ್ಯುಟೆರೊಸ್ಟೋಮಿಯದಲ್ಲಿ ಕಂಡುಬರುವ ಒಳಅಸ್ಥಿ ಮಧ್ಯದರ್ಮದಿಂದ ಬೆಳೆಯುತ್ತದೆ. ಇನ್ನೂ ಮುಂದುವರಿದು ಹೇಳುವುದಾದರೆ ಕೈಟಿನ್ ಎಂಬ ಪಾಲಿಸ್ಯಾಕರೈಡ್ ರಾಸಾಯನಿಕ ವಸ್ತು ಪ್ರೋಟೊಸ್ಟೋಮಿಯ ಜೀವಿಗಳಲ್ಲಿ ಕಂಡುಬರುತ್ತದೆ. ಈ ಕೈಟಿನ್ ವಸ್ತುವನ್ನು ಉತ್ಪಾದನೆ ಮಾಡುವ ಶಕ್ತಿ ಡ್ಯುಟೆರೊಸ್ಟೋಮಿಯಕ್ಕೆ ಇಲ್ಲ.

ಪ್ರೊಟೊಜ಼ೋವ ವಂಶದ ಜೀವಿಗಳು ಅತ್ಯಂತ ಕೆಳಮಟ್ಟದವು. ಇವು ಕಶಗಳನ್ನು ಹೊಂದಿರುವ ಆಲ್ಗೆ (ಪಾಚಿ) ಗಳಂಥ ಸಸ್ಯಗಳ ವರ್ಗದಿಂದ ಹುಟ್ಟಿಬಂದಿರಬೇಕು. ಏಕೆಂದರೆ, ಕಶಗಳನ್ನು ಹೊಂದಿರುವ ಏಕಕೋಶಕ ಸಸ್ಯಗಳಿಗೂ ಏಕಕೋಶಕ ಪ್ರಾಣಿಗಳಿಗೂ ಬಹಳ ಸಾಮ್ಯವಿದೆ. ಯುಗ್ಲಿನ ಎಂಬುದು ಪ್ರಾಣಿ ಹಾಗು ಸಸ್ಯಗಳೆರಡಕ್ಕೂ ಮಧ್ಯಸ್ಥಜೀವಿಯಾಗಿ ಇಂದಿಗೂ ಇದೆ. ಇಂದು ಪ್ರೊಟೋಜ಼ೋವ ವರ್ಗ 20,000 ಕ್ಕಿಂತಲೂ ಹೆಚ್ಚಿನ ಪ್ರಭೇದಗಳನ್ನು ಹೊಂದಿದೆ. ಈ ವಂಶದಲ್ಲಿ ಅನೇಕ ವರ್ಗಗಳಿವೆ. ಮಿಥ್ಯಪಾದಗಳು, ಕಶಗಳು ಹಾಗು ಶಿಲಕೆಗಳು ಈ ಪ್ರಾಣಿಗಳಲ್ಲಿ ಕಂಡುಬರುವ ವಿಶಿಷ್ಟ ಲಕ್ಷಣ. ಪ್ರೊಟೆರೊಸ್ಪಾಂಜಿಯ ಎಂಬ ಏಕಕೋಶಕ ಜೀವಿ ಅತ್ಯಂತ ಸಾಮಾನ್ಯದರ್ಜೆಯ ಸ್ಪಂಜ್ ಪ್ರಾಣಿಗಳನ್ನು ಹೋಲುತ್ತದೆ. ಪ್ರೊಟೋಜ಼ೋವ ಜೀವಿಗಳಲ್ಲಿ ವೈವಿಧ್ಯ ಹೆಚ್ಚು. ಕಶಗಳುಳ್ಳ ವರ್ಗದಲ್ಲಿ ಬಹಳ ರೀತಿಯ ಹಾಗೂ ಬಹಳ ಪರಿಸರಗಳಲ್ಲಿ ವಾಸಿಸುವ ಜೀವಿಗಳು ಕಂಡುಬಂದಿವೆ. ಇವುಗಳಲ್ಲಿ ಪರತಂತ್ರ ಜೀವಿಗಳು, ಸಹಜೀವನ ನಡೆಸುವ ಜೀವಿಗಳೂ ಇವೆ. ಕಶವುಳ್ಳ ಈ ಏಕಕೋಶಕ ಜೀವಿಗಳೆಲ್ಲವನ್ನೂ ಫ್ಲಾಜೆಲ್ಲೇಟ ಎಂಬ ವರ್ಗಕ್ಕೆ ಸೇರಿಸಲಾಗಿದೆ.

ಸಾರ್ಕೊಡಿನ ಎಂಬ ಇನ್ನೊಂದು ವರ್ಗಕ್ಕೆ ಅಮೀಬ ಹಾಗೂ ಅದರ ಸಂಬಂಧಿಗಳನ್ನು ಸೇರಿಸಲಾಗಿದೆ. ಪರತಂತ್ರ ಜೀವಿಗಳೂ ಈ ವರ್ಗದಲ್ಲಿ ಕಂಡುಬರುತ್ತವೆ. ಸಮುದ್ರವಾಸಿಗಳಾದ ಸಾರ್ಕೊಡಿನ ವರ್ಗದಲ್ಲಿ ಅತ್ಯಂತ ಮನೋಹರವಾದ ರಕ್ಷಾಕವಚಗಳು ಕಂಡುಬರುವುದುಂಟು. ಈ ವರ್ಗದ ಜೀವಿಗಳು ಪೂರ್ವಕೇಂಬ್ರಿಯನ್ ಕಾಲದಿಂದಲೂ ಇದ್ದುವೆಂದು ತಿಳಿದುಬರುತ್ತದೆ.


ಅಮೀಬ

ಮತ್ತೊಂದು ವರ್ಗವಾದ ಸ್ಪೋರೋಜ಼ೋವ ಸಂಪೂರ್ಣವಾಗಿ ಪರತಂತ್ರ ಜೀವಿಗಳನ್ನು ಹೊಂದಿದೆ. ಮಲೇರಿಯಾ

ಕಾಯಿಲೆಯನ್ನು ತರುವ ಪ್ಲಾಸ್‌ಮೋಡಿಯಮ್ ಜೀವಿ ಉತ್ತಮ ಉದಾಹರಣೆ.

ಪ್ರೋಟೋಜ್ಹೋವ ವಂಶದಲ್ಲಿ ಅತ್ಯಂತ ಕ್ಲಿಷ್ಟ ಹಾಗೂ ಉನ್ನತ ಮಟ್ಟದ ಬೆಳೆವಣಿಗೆಯನ್ನು ಹೊಂದಿರುವ ಜೀವಿಗಳೆಂದರೆ ಸೀಲಿಯೇಟ ಎಂಬ ವರ್ಗದವು. ಇವು ಪ್ರೋಟೋಜ್ಹೋವ ವಂಶದಿಂದ ಬೇರ್ಪಡಿಸಿ ಪ್ರತ್ಯೇಕ ವಂಶವನ್ನೇ ಇದಕ್ಕಾಗಿ ಸೃಷ್ಟಿಸಬಹುದಾದ ಮಟ್ಟಿಗೆ ಬೆಳೆದಿವೆ. ಇವುಗಳಲ್ಲಿ ಉತ್ತಮಮಟ್ಟದ ಶರೀರ ಸೌಷ್ಠವ ಕಂಡುಬರುತ್ತದೆ. ಆಹಾರ ಸೇವನೆಗೆ ಪ್ರತ್ಯೇಕವಾದ ಒಂದು ರಂಧ್ರವನ್ನು ಹೊಂದಿದೆ. ಇದನ್ನು ಬಾಯಿ ಎಂದು ಹೇಳಬಹುದು. ಇವುಗಳ ಚಲನಾಂಗಗಳು ಶಿಲಕೆಗಳು. ಈ ಜೀವಿಗಳು ಲೈಂಗಿಕರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಆಧುನಿಕ ತಳಿವಿಜ್ಞಾನಕ್ಕೆ ಈ ಜೀವಿಗಳು ಅದ್ಭುತ ಸಲಹೆಯನ್ನು ನೀಡಿವೆ. ಅನುಬದ್ಧ ಸಂಯೋಗ (ಕಾಂಜುಗೇಷನ್) ಎಂಬ ಒಂದು ವಿಧವಾದ ಲೈಂಗಿಕ ಸಂತಾನೋತ್ಪತ್ತಿ ಈ ಜೀವಿಗಳ ಒಂದು ವೈಶಿಷ್ಟ್ಯ. ಪ್ರಾಣಿಪ್ರಪಂಚದ ಇನ್ನಾವ ಜೀವವರ್ಗಗಳಲ್ಲಿಯೂ ಈ ರೀತಿಯ ಸಂತಾನೋತ್ಪತ್ತಿ ಇಲ್ಲ. ಪ್ಯಾರಮೀಸಿಯಮ್, ವರ್ಟಿಸೆಲ್ಲ ಮುಂತಾದುವುಗಳು ಈ ವರ್ಗದ ಉತ್ತಮ ಉದಾಹರಣೆಗಳು.

ಸೀಲಿಯೇಟ ವರ್ಗಕ್ಕೆ ಹತ್ತಿರದ ಸಂಬಂಧಿಗಳೆಂದರೆ ಸಕ್ಟೋರಿಯ ಜೀವಿಗಳು. ಇವುಗಳ ಯುಗ್ಮಜ (ಜೈಗೋಟ್) ಬೆಳೆವಣಿಗೆಯ ಹಂತದಲ್ಲಿ ಶಿಲಕೆಗಳನ್ನು ಬೆಳೆಸಿಕೊಂಡು ಚಲಿಸಲಾರಂಭಿಸಿ ಕೊನೆಗೆ ಒಂದು ಕಡೆ ನೆಲೆಯಾಗಿ ನಿಂತು ಆ ನೆಲಕ್ಕೆ ಅಂಟಿಕೊಂಡು, ಶಿಲಕೆಗಳನ್ನು ಕಳೆದುಕೊಂಡು ಸಕ್ಟೋರಿಯಾ ಜೀವಿಯಾಗುತ್ತದೆ.

ಪ್ರೋಟೋಜ್ಹೋವ ಪ್ರಾಣಿಗಳನ್ನು ಬಿಟ್ಟರೆ ಅಕಶೇರುಕವರ್ಗದಲ್ಲಿ ಸ್ಪಂಜ್ ಪ್ರಾಣಿಗಳಿಗೆ ಎರಡನೆಯ ಸ್ಥಾನ. ಈ ಪ್ರಾಣಿಗಳನ್ನು ಪೋರಿಫೆರ ಎಂಬ ವಂಶಕ್ಕೆ ಸೇರಿಸಲಾಗಿದೆ. ಇದರಲ್ಲಿ 5,000 ಪ್ರಭೇದಗಳಿವೆ. ಈ ಪ್ರಾಣಿಗಳನ್ನು ಕೆಳದರ್ಜೆಯ ಪ್ರಾಣಿಗಳೆಂದೇ ಪರಿಗಣಿಸಲಾಗಿದೆ. ಕಾರಣವೆಂದರೆ, ಈ ಜೀವಿಗಳ ಶರೀರ ಜೀವಕೋಶಗಳ ಒಂದು ಸಹಕಾರ ಸಂಘದಂತಿದೆ. ಬಹುಕೋಶ ಜೀವಿಗಳಲ್ಲಿ ಕಂಡುಬರುವ ಅಂಗಕಟ್ಟುಗಳ ರಚನೆಯಿಲ್ಲ. ಪ್ರತಿಯೊಂದು ಜೀವಕೋಶವೂ ಸ್ವತಂತ್ರವಾಗಿ ಬದುಕಬಲ್ಲ ಶಕ್ತಿಯನ್ನು ಹೊಂದಿದೆ. ಆದುದರಿಂದ ಈ ಜೀವಿಗಳನ್ನು ವಿಕಾಸತಜ್ಞರು ಇನ್ನೂ ಕನಿಷ್ಠಹಂತದಲ್ಲಿರುವ ಜೀವಿಗಳೆಂದೇ ತೀರ್ಮಾನಿಸುತ್ತಾರೆ. ಈ ಜೀವಿಗಳ ವೈಶಿಷ್ಟ್ಯತೆ ಎಂದರೆ ಅವು ಹೊಂದಿರುವ ಶರೀರದೊಳಗಿನ ಕ್ಲಿಷ್ಟ ಹಾಗೂ ಸಂಯುಕ್ತ ಕಾಲುವೆಗಳು, ಅಲ್ಲದೆ ಅವುಗಳು ಉತ್ಪಾದಿಸುವ ಮುಳ್ಳಿನಂತಿರುವ ಅಸ್ಥಿರಚನೆಗಳು. ಈ ಜೀವಿಗಳು ನಿರ್ಲಿಂಗ ಹಾಗೂ ಲೈಂಗಿಕರೀತಿಯ ಸಂತಾನೋತ್ಪತ್ತಿಯನ್ನು ಮಾಡಬಲ್ಲುವು. ಬಹುಕೋಶಜೀವಿಗಳಿಂದ ಸ್ವಲ್ಪಮಟ್ಟಿಗೆ ದೂರಸರಿದಿರುವ ಈ ಜೀವಿಗಳು ವಿಕಾಸದ ಹಾದಿಯಲ್ಲಿನ ಒಂದು ಕವಲುದಾರಿ. ಇವುಗಳಲ್ಲಿ ವಿಕಾಸದ ಹಿನ್ನಡೆಯನ್ನು ಕಾಣುತ್ತೇವೆ. ವಿಕಾಸ ಇಲ್ಲಿ ತಟಸ್ಥಗೊಂಡಿದೆ.



ಸ್ಪಂಜು ಪ್ರಾಣಿ

ಅಕಶೇರುಕಗಳ ಮೆಸೊಜ್ಹೋವ ವಂಶ ಕೇವಲ 50 ಪ್ರಭೇದಗಳನ್ನು ಹೊಂದಿದೆ. ಅಕಶೇರುಕ ಪ್ರಪಂಚದ ವಿಕಾಸವೃಕ್ಷದಲ್ಲಿ ಈ ಜೀವಿಗಳ ಸರಿಯಾದ ಸ್ಥಾನ ಇನ್ನೂ ನಿರ್ಧಾರವಾಗಿಲ್ಲ. ರಚನಾದೃಷ್ಟಿಯಿಂದ ಇವು ಬಹಳ ಸಾಮಾನ್ಯದರ್ಜೆಯ ಬಹುಕೋಶಜೀವಿಗಳು. ಜೀವಕೋಶಗಳ ಒಂದೇ ಪದರವನ್ನು ಹೊಂದಿದ್ದು ಶರೀರದೊಳಗಡೆ ಸಂತಾನೋತ್ಪತ್ತಿಯನ್ನು ಮಾಡುವ ಶಕ್ತಿಯುಳ್ಳ ಜೀವಕೋಶಗಳಿವೆ. ಈ ಜೀವಿಗಳು ಸೀಲೆಂಟರೇಟ ವಂಶದ ಪ್ಲಾನುಲ ಎಂಬ ಲಾರ್ವವನ್ನು ಹೋಲುತ್ತವೆ. ಮಿಸೊಜ್ಹೋವ ಪರತಂತ್ರ ಜೀವಿಗಳು. ಇವುಗಳು ಸಮುದ್ರ ಜೀವಿಗಳಾದ ಟರ್ಬೆಲೇರಿಯ ಹಾಗೂ ಮತ್ತಿತರ ಜೀವಿಗಳ ಶರೀರದೊಳಗೆ ವಾಸಿಸುತ್ತವೆ. ಡೈಸಿಮ, ಕೊನೋಸಿಮ, ಡೆಕ ಇವುಗಳು ಮಿಸೊಜ್ಹೋವ ವರ್ಗಕ್ಕೆ ಸೇರಿದ ಜೀವಿಗಳು.

ಅಕಶೇರುಕಗಳ ಯುಮೆಟಜ್ಹೋವ ಗುಂಪನ್ನು ಎರಡು ಭಾಗವಾಗಿ ವಿಂಗಡಿಸಿರುತ್ತಾರೆ. ಇದರಲ್ಲಿ ಮೊದಲನೆಯದು ಸೀಲೆಂಟರೇಟ ಮತ್ತು ಎರಡನೆಯದು ಬೈಲಾಟರಿಯ. ಸೀಲೆಂಟರೇಟ ವಿಭಾಗವನ್ನು ನೈಡೇರಿಯ ಹಾಗೂ ಟಿನೊಫೊರ ಎಂಬ ಎರಡು ವಂಶಗಳಾಗಿ ಪ್ರತ್ಯೇಕಿಸುತ್ತಾರೆ.

ನೈಡೇರಿಯ ವರ್ಗದ ಜೀವಿಗಳು ಕೆಳದರ್ಜೆಯ ಯುಮೆಟಜ್ಹೋವ. ನೈಡೇರಿಯ 8,900 ಪ್ರಭೇದಗಳನ್ನು ಹೊಂದಿದೆ. ಇವು ಇಪ್ಪದರ ಜೀವಿಗಳು. ಇವುಗಳ ಶರೀರದಲ್ಲಿ ಮುಖ್ಯವಾಗಿ ಪಾಲಿಪ್ ಮತ್ತು ಮೆಡುಸಾ ಎಂಬ ಎರಡು ಬಗೆಯುಂಟು. ಈ ಪ್ರಾಣಿಗಳಲ್ಲಿ ಕುಟುಕು ಕಣಗಳೆಂಬ (ನೆಮಟೊಸಿಸ್ಟ್ ಅಥವಾ ನೈಡೊಬ್ಲಾಸ್ಟ್) ವಿಶಿಷ್ಟರೀತಿಯ ಜೀವಕೋಶಗಳಿದ್ದು ಈ ಜೀವಿಗಳ ರಕ್ಷಣೆಯ ಕಾರ್ಯಕ್ಕೆ ನೆರವಾಗುತ್ತವೆ. ಸಂತಾನಪರ್ಯಾಯಚಕ್ರ (ಆಲ್ಟರ್ನೇಷನ್ ಆಫ್ ಜನರೇಶನ್ಸ್) ಈ ಜೀವಿಗಳ ವಿಶಿಷ್ಟ ಗುಣ. ಇವುಗಳ ಶರೀರ ಕೊಳವೆಯಾಕಾರಕ್ಕಿದ್ದು ಬಾಯನ್ನು ಮಾತ್ರ ಹೊಂದಿದೆ. ಶರೀರದಲ್ಲಿ ಇನ್ನಾವ ರಂಧ್ರಗಳೂ ಇಲ್ಲ. ಹೈಡ್ರ, ಅರೆಲಿಯ, ಸೀಅನಿಮೋನ್, ಹವಳದ ಪ್ರಾಣಿಗಳು ಇವು ಈ ವಂಶಕ್ಕೆ ಸೇರಿವೆ. ಹವಳದ ಪ್ರಾಣಿಗಳು ಹವಳದ ಗುಡ್ಡಗಳನ್ನು ರಚಿಸುತ್ತವೆ. ಈ ಜೀವಿಗಳು ಅತ್ಯುತ್ತಮ ಪಳೆಯುಳಿಕೆಗಳನ್ನು ಭೂಗರ್ಭದಲ್ಲಿ ಬಿಟ್ಟಿವೆಯಾದ್ದರಿಂದ ಇವುಗಳ ಚರಿತ್ರೆಯನ್ನು ಆರ್ಡೋವೀಸಿಯನ್ ಕಾಲದಿಂದಲೂ ಅಭ್ಯಸಿಸಬಹುದು.

ಟಿನೊಫೊರ 80 ಪ್ರಭೇದಗಳನ್ನು ಹೊಂದಿದೆ. ಎಲ್ಲವೂ ಸಮುದ್ರವಾಸಿಗಳು. ಇವುಗಳನ್ನು ಸಾಮಾನ್ಯವಾಗಿ ಕೂಂಬ್‌ಜೆಲ್ಲಿಗಳು ಎಂದು ಕರೆಯುತ್ತಾರೆ. ಬಾಚಣಿಗೆಯಂತಿರುವ ಶಿಲಕೆಗಳ ತಟ್ಟೆಗಳನ್ನು ಇವುಗಳ ಶರೀರದ ಮೇಲೆ ಕಾಣಬಹುದು. ಇವು ತ್ರಿಜ್ಯ ಅಥವಾ ದ್ವಿಪಾರ್ಶ್ವಸೌಷ್ಠವವನ್ನು ಹೊಂದಿವೆ. ಈ ಜೀವಿಗಳಲ್ಲಿ ಕುಟುಕುಕಣಗಳು ಇಲ್ಲ. ಸಂತಾನಪರ್ಯಾಯಚಕ್ರ ಈ ಪ್ರಾಣಿಗಳಲ್ಲಿಲ್ಲ. ಇವುಗಳು ಪೂರ್ವ ಕೇಂಬ್ರಿಯನ್ ಕಾಲದಿಂದಲೂ ಇದ್ದು ಉಳಿದುಬಂದುವೆಂದು ತಿಳಿದುಬರುತ್ತದೆ. ಪ್ಲುರೋಬೇಕಿಯ, ಹಾರ್ಮಿಫೊರ ಮತ್ತು ಟನೊಪ್ಲಾನ ಬೆರಾಯ ಉತ್ತಮ ಉದಾಹರಣೆಗಳು.

ಯುಮೆಟಜ್ಹೋವದ ಎರಡನೆಯ ವಿಭಾಗವೇ ಬೈಲಾಟರಿಯ. ಬೈಲಾಟರಿಯ ವಿಭಾಗವನ್ನು ಪ್ರೋಟರೊಸ್ಟೋಮಿಯ ಮತ್ತು ಡ್ಯುಟೆರೊಸ್ಟೋಮಿಯ ಎಂದು ಎರಡು ಗುಂಪುಗಳಾಗಿ ವಿಭಾಗಿಸಿದೆ.

ಪ್ರೋಟರೊಸ್ಟೋಮೀಯದಲ್ಲಿ ಎಂಟೊಪ್ರಾಕ್ಟ (60 ಪ್ರಭೇದಗಳನ್ನು ಹೊಂದಿದೆ), ಪ್ರಯಾಪುಲಿಡ (8 ಪ್ರಭೇದಗಳನ್ನು ಹೊಂದಿದೆ), ಆಸ್ಕಿಹೆಲ್‌ಮೆನ್‌ಥಿಸ್ (12,500 ಪ್ರಭೇದಗಳನ್ನು ಹೊಂದಿದೆ) ಎಂಬ ವಂಶಗಳಿವೆ. ಇವುಗಳ ಸ್ಥಾನಮಾನಗಳು ಇನ್ನೂ ಪೂರ್ಣವಾಗಿ ಬಗೆಹರಿದಿಲ್ಲ. ಉಳಿದವಂಶಗಳು ಪ್ಲಾಟಿಹೆಲ್‌ಮನ್‌ಥಿಸ್ (12,400 ಪ್ರಭೇದಗಳನ್ನು ಹೊಂದಿದೆ), ನೆಮರ್ಟೈನ (800 ಪ್ರಭೇದಗಳನ್ನು ಹೊಂದಿದೆ), ಮೊಲಸ್ಕ (1,28,000 ಪ್ರಭೇದಗಳನ್ನು ಹೊಂದಿದೆ), ಸೈಫನ್‌ಕ್ಯುಲಿಡ (250 ಪ್ರಭೇದಗಳನ್ನು ಹೊಂದಿದೆ), ಎಕಿಯುರಾಯ್ಡಿಯ (159 ಪ್ರಭೇದಗಳನ್ನು ಹೊಂದಿದೆ), ಅನೆಲಿಡ (87,000 ಪ್ರಭೇದಗಳನ್ನು ಹೊಂದಿದೆ), ಪೆಂಟಾಸ್ಟೊಮಿಡ (60 ಪ್ರಭೇದಗಳನ್ನು ಹೊಂದಿದೆ), ಟರ್ಡಿಗ್ರಾಡ (200 ಪ್ರಭೇದಗಳನ್ನು ಹೊಂದಿದೆ), ಆರ್ಥ್ರೊಪೋಡ (8,50,000 ಪ್ರಭೇದಗಳನ್ನು ಹೊಂದಿದೆ), ಲೊಫೊಫೊರೇಟ (5000 ಪ್ರಭೇದಗಳನ್ನು ಹೊಂದಿದೆ). ಇವುಗಳ ಮೊದಲಿನ ಏಳು ವಂಶಗಳಲ್ಲಿ ಗರ್ಭಕಟ್ಟಿದ ಮೊಟ್ಟೆಯ ವಿಭಜನೆಯನ್ನು ಸುರುಳಿ (ಸುತ್ತು) ರೀತಿಯ ವಿಭಜನೆಯೆಂದು ಪರಿಗಣಿಸಲಾಗಿದೆ. ಇನ್ನುಳಿದವನ್ನು ಮೆಟಮೆರಿಕ್ ಪ್ರೊಟೊಸ್ಟೋಮಿಯ ಎಂದು ಕರೆಯುತ್ತಾರೆ.

ಮೊಲಸ್ಕ ವಂಶದಲ್ಲಿ 1,28,000 ಪ್ರಭೇದಗಳಿವೆ. ಪ್ರಾಣಿ ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ರಭೇದಗಳನ್ನು



ಹೈಡ್ರಾ



ಚಪ್ಪಟೆ ಹುಳು



ದುಂಡು ಹುಳು

ಹೊಂದಿರುವ ಎರಡನೆಯ ವಂಶವೇ ಇದು. ಈ ಪ್ರಾಣಿಗಳು ಭೂಮಿ, ಸಿಹಿನೀರು, ಸಮುದ್ರದ ನೀರು–ಈ ಎಲ್ಲೆಡೆಯಲ್ಲಿಯೂ ಪಸರಿಸಿವೆ. ಕೇಂಬ್ರಿಯನ್ ಕಾಲದಿಂದಲೂ ಈ ಪ್ರಾಣಿಗಳ ಅವಶೇಷಗಳು ಸಿಕ್ಕಿವೆ. ಆದರೆ ಇವುಗಳ ಅವಶೇಷಗಳ ಅಭ್ಯಾಸದಿಂದ ವಂಶವಂಶಗಳ ಪರಸ್ಪರ ಸಂಬಂಧಗಳ ವಿಷಯದಲ್ಲಿ ಹೆಚ್ಚಿನ ಜ್ಞಾನ ಲಭಿಸಿಲ್ಲ. ಈ ಜೀವಿಗಳ ಶರೀರ 4 ಭಾಗಗಳನ್ನು ಹೊಂದಿದೆ; 1. ಮಾಂಸಖಂಡಗಳಿಂದೊಡಗೂಡಿದ ಪಾದ 2. ಶಿರ 3. ಶರೀರ 4. ಮ್ಯಾಂಟಲ್. ಈ ಮ್ಯಾಂಟಲ್ ಜೀವಿಯ ಶರೀರದ ಮೇಲಿರುವ ಅತ್ಯಂತ ಗಟ್ಟಿಯಾದ ಚಿಪ್ಪನ್ನು ಉತ್ಪಾದನೆ ಮಾಡುತ್ತದೆ. ಮೂಲಭೂತವಾಗಿ ಈ ಜೀವಿಗಳು ಪಾರ್ಶ್ವಸಮರೂಪತೆಯನ್ನು ಹೊಂದಿರುತ್ತವೆ. ಆದರೆ ಪ್ರಬುದ್ಧ ವಯಸ್ಸಿಗೆ ಬಂದ ಮೇಲೆ ಈ ಸಮರೂಪತೆ ವ್ಯತ್ಯಾಸಗೊಳ್ಳುತ್ತದೆ. ಮೃದುವಾದ ಚರ್ಮ ಮುಚ್ಚಿರುವುದರಿಂದ ಇವುಗಳ ದೇಹ ಮೃದುವಾಗಿರುತ್ತದೆ. ಖಂಡಗಳ ಉಂಗುರಗಳ ಜೋಡಣೆ ಈ ಪ್ರಾಣಿಗಳ ಶರೀರದಲ್ಲಿ ಇಲ್ಲವೆಂದು ತಿಳಿಯಲಾಗಿತ್ತು. ಆದರೆ ಇಂದು ಖಂಡಗಳನ್ನೊಳಗೊಂಡಿರುವ ಜೀವಿಗಳೂ ಈ ವಂಶದಲ್ಲಿ ಸೇರಿವೆ. ಖೈಟಾನ್ ಎಂಬ ಮೃದ್ವಂಗಿ ಒಂದು ನಿದರ್ಶನ. ಬಸವನ ಹುಳು, ಕಪ್ಪೆಚಿಪ್ಪಿನ ಹುಳು, ಶಂಖುವಿನ ಹುಳು, ಆಕ್ಟೋಪಸ್, ನಾಟಿಲಸ್ ಮುಂತಾದುವು ಈ ವಂಶಕ್ಕೆ ಸೇರುತ್ತವೆ.



ಎರೆ ಹುಳು

ವಲಯವಂತ ಪ್ರಾಣಿಗಳನ್ನೊಳಗೊಂಡ ವಂಶವನ್ನು ಅನೆಲಿಡ ಎಂದು ಕರೆಯುತ್ತಾರೆ. ಇದು ಪ್ರೊಟೊಸ್ಟೋಮಿಯ ಗುಂಪಿನ ಎರಡನೆಯ ಮುಖ್ಯ ಶಾಖೆ. ಎರೆಹುಳುಗಳು, ನೀರಿಸ್ ಹುಳುಗಳು, ಇತ್ಯಾದಿ ಪ್ರಾಣಿಗಳನ್ನೊಳಗೊಂಡಿರುವ ಈ ವಂಶದಲ್ಲಿ 8,700 ಪ್ರಭೇದಗಳಿವೆ. ಈ ಪ್ರಾಣಿಗಳ ಶರೀರ ಉಂಗುರ ಅಥವಾ ಖಂಡಗಳಿಂದ ಮಾಡಲ್ಪಟ್ಟಿದೆ. ಈ ಖಂಡಗಳ ಜೋಡಣೆ ನಿರ್ದಿಷ್ಟವಾಗಿದೆ. ಇವುಗಳಲ್ಲಿ ಶರೀರಾವಕಾಶ (ಸಿಲೋಮ್) ಅತ್ಯುತ್ತಮವಾಗಿ ಬೆಳೆದಿರುವುದು ಕಂಡು ಬರುತ್ತದೆ. ಈ ಅವಕಾಶ ಜೀರ್ಣಾಂಗಗಳನ್ನು ಮಾಂಸಖಂಡಗಳಿಂದ ಒಳಗೂಡಿದ ಶರೀರದ ಗೋಡೆಯಿಂದ ಬೇರ್ಪಡಿಸುತ್ತದೆ. ಈ ಪ್ರಾಣಿಗಳಲ್ಲಿ ಚೆನ್ನಾಗಿ ವೃದ್ಧಿಯಾದ ನರಮಂಡಲವಿದೆ. ಬೆಳವಣಿಗೆಯಲ್ಲಿ ಟ್ರೊಕೊಫೊರ್ ಎಂಬ ಲಾರ್ವದ ಅವಸ್ಥೆ ಕಂಡುಬರುತ್ತದೆ. ಶರೀರದ ಮೇಲುಗಡೆ ಬಿರುಗೂದಲುಗಳು ಕಂಡುಬರುತ್ತವೆ. ಪಾಲಿಕೀಟ ಎಂಬ ವರ್ಗ ಈ ವಂಶದ ಅತ್ಯಂತ ಕನಿಷ್ಠ ದರ್ಜೆಯ ಪ್ರಾಣಿಗಳನ್ನು ಹೊಂದಿದೆ. ಈ ಪ್ರಾಣಿಗಳಲ್ಲಿ ಬೈರೇಮಸ್ ಪಾದಗಳು ಕಂಡುಬರುತ್ತವೆ. ಅನೆಲಿಡ ವಂಶದಲ್ಲಿ ಹೆಚ್ಚು ವಿಕಾಸ ಹೊಂದಿರತಕ್ಕವು ಎರೆಹುಳುಗಳು. ಇವುಗಳಲ್ಲಿ ಬಿರುಗೂದಲುಗಳಿದ್ದು ಚಲನೆಗೆ ಇವುಗಳಿಂದ ಸಹಾಯ ಒದಗಿದೆ. ಜಿಗಣೆಗಳೂ ಈ ವಂಶಕ್ಕೆ ಸೇರಿವೆ.



ಚೇಳು

ಪ್ರೋಟೊಸ್ಟೋಮಿಯ ವರ್ಗದ ಪ್ರಾಣಿಗಳಲ್ಲೆಲ್ಲ ಅತ್ಯಂತ ಉಚ್ಚಾವಸ್ಥೆ ಮುಟ್ಟಿರುವ ವಂಶವೆಂದರೆ ಆರ್ಥ್ರೊಪೋಡ ವಂಶ (ಸಂಧಿಪದಿಗಳು). ಈ ವಂಶದಲ್ಲಿ 8,50,000 ಪ್ರಭೇದಗಳಿವೆ. ಈ ಪ್ರಾಣಿಗಳ ಪ್ರಭೇದದ ಸಂಖ್ಯೆ ಇಡಿ ಪ್ರಾಣಿಪ್ರಪಂಚದ ಪ್ರಭೇದಗಳ 3/4 ರಷ್ಟಿರುತ್ತದೆ. ಈ ವಂಶ ಹೊಂದಿರುವಷ್ಟು ಭೂವಾಸಿ ಪ್ರಭೇದಗಳನ್ನು ಅಕಶೇರುಕ ಪ್ರಾಣಿ ಪ್ರಪಂಚದ ಇನ್ನಾವ ವಂಶವೂ ಹೊಂದಿಲ್ಲ. ಈ ವಂಶಕ್ಕೆ ಸೇರಿರುವ ಪ್ರಾಣಿಗಳು ಎಲ್ಲ ರೀತಿಯ ಪರಿಸರಗಳಲ್ಲೂ ವಾಸಿಸುತ್ತವೆ.

ಚಿಟ್ಟೆ

ಪ್ರಾಣಿಗಳ ಶರೀರದ ಮೇಲೆ ಕಠಿಣವಾದ ಕರಟದಂಥ (ಕ್ಯುಟಿಕಲ್) ಕವಚವಿದೆ. ಶರೀರ ಹಾಗು ಪಾದಗಳು ಕೀಲುಗಳನ್ನು ಹೊಂದಿವೆ. ಆದುದರಿಂದಲೇ ಇವನ್ನು ಸಂಧಿಪದಿಗಳೆಂದು ಕರೆಯುತ್ತಾರೆ. ಶರೀರದ ಮೇಲಿರುವ ಕ್ಯುಟಿಕಲ್ ಹೊದಿಕೆಯನ್ನು ವಲಯವಂತ ಪ್ರಾಣಿಗಳಿಂದ ಪಡೆದುಕೊಂಡಿವೆ. ಈ ರಕ್ಷಾಕವಚದಿಂದಾಗಿ ಇವುಗಳ ಶರೀರದಿಂದ ಹೊರ ಹೋಗುವ ನೀರಿನ ಅಂಶ ಕಡಿಮೆಯಾಗುತ್ತದೆ. ಇದರಿಂದಾಗಿ ಇವು ಭೂವಾಸಕ್ಕೆ ಹೊಂದಿಕೊಳ್ಳಲು ಬಹಳ ಅನುಕೂಲವಾಯಿತು. ಶರೀರದೊಳಗೆ ಸಿಲೋಮಿಗೆ ಬದಲು ಹೀಮೋಸೀಲ್ ಎಂಬ ದೇಹಾವಕಾಶವಿದೆ. ಈ ಜೀವಿಗಳ ಶರೀರ ಖಂಡಗಳ ಜೋಡಣೆಯಿಂದಲೇ ಆಗಿದೆ. ಈ ಜೋಡಣೆ ಬಾಹ್ಯವಾಗಿ ಅತಿ ಸ್ಪಷ್ಟವಾಗಿ ಕಾಣುತ್ತದೆ. ಏಡಿಗಳು, ಚೇಳುಗಳು, ಜೇಡಗಳು, ನೊಣಗಳು, ಸೊಳ್ಳೆಗಳು, ಜರಿಗಳು ಇತ್ಯಾದಿ ಪ್ರಾಣಿಗಳು ಇದರಲ್ಲಿ ಸೇರಿವೆ. ಪಳೆಯುಳಿಕೆಗಳನ್ನು ಬಿಟ್ಟಿರುವ ಪ್ರಾಚೀನ ಜೀವಿಗಳೂ ಬಹಳ ಉಂಟು. ಇವುಗಳಲ್ಲಿ ಟ್ರೈಲೊಬೈಟ್ ಎಂಬ ವರ್ಗ ಅತಿ ಮುಖ್ಯವಾದದ್ದು. ಆರ್ಥ್ರೊಪೋಡಾ ವಂಶದ ಪ್ರಾಣಿಗಳ ಬಾಹ್ಯರಚನಾಭ್ಯಾಸದಿಂದ ಕ್ರಸ್ಟೇಷಿಯ ವರ್ಗ, ಮಿರಿಯಾಪೋಡ ವರ್ಗ ಹಾಗೂ ಇನ್‌ಸೆಕ್ಟಾ ವರ್ಗ ಒಂದೇ ಪೂರ್ವವಂಶಜರಿಂದ ಹುಟ್ಟಿ ಬಂದಿವೆಯೆಂಬುದು ಅರ್ಥವಾಗುತ್ತದೆ. ಕ್ರಸ್ಟೇಷಿಯ ವರ್ಗ ಪ್ರಾಣಿಗಳಲ್ಲಿ ಶಿರ ಹಾಗು ಎದೆಯ ಭಾಗಗಳು ಕೂಡಿಕೊಂಡು ಶಿರೋವಕ್ಷವಾಗಿರುವುದು ಸಾಮಾನ್ಯ. ಇವು ಜಲವಾಸಿಗಳು. ಕೇಂಬ್ರಿಯನ್ ಕಾಲದಿಂದಲೂ ಈ ಜೀವಿಗಳ ಅವಶೇಷಗಳು ದೊರೆತಿವೆ. ಆರ್ಥ್ರೊಪೋಡಾ ವಂಶದಲ್ಲಿ ಅತ್ಯಂತ ಹೆಚ್ಚಿನ ಪ್ರಭೇದಗಳನ್ನು ಹೊಂದಿರುವ ವರ್ಗವೇ ಕೀಟವರ್ಗ. ಇದರಲ್ಲಿ 6,60,000ಕ್ಕಿಂತ ಹೆಚ್ಚು ಪ್ರಭೇದಗಳಿವೆ. ಅತ್ಯಂತ ಉಚ್ಚಮಟ್ಟದ ವಿಕಾಸವನ್ನು ಹೊಂದಿರುವ ಈ ಪ್ರಾಣಿಗಳು ಭೂಮಿ, ನೀರುಗಳೆರಡನ್ನೂ ಆಕ್ರಮಿಸಿಕೊಂಡಿವೆ. ಅರಕ್ನಿಡಾ ವರ್ಗದಲ್ಲಿ ಚೇಳುಗಳು, ಲಿಮ್ಯುಲಸ್ ಮುಂತಾದವು ಸೇರಿವೆ. ಇವು ಪಳೆಯುಳಿಕೆಗಳನ್ನು ಹೊಂದಿವೆ. ಒಟ್ಟಿನಲ್ಲಿ ಅಕಶೇರುಕ ಪ್ರಾಣಿವರ್ಗದ ಭವ್ಯತೆಯ ಮಜಲನ್ನು ಆರ್ಥ್ರೊಪೋಡ ವಂಶದ ಪ್ರಾಣಿಗಳಲ್ಲಿ ಕಾಣುತ್ತೇವೆ.



ಸೆಪಿಯ



ಬಸವನ ಹುಳು

ಅನೆಲಿಡ ಹಾಗು ಆರ್ಥ್ರೊಪೋಡ ವಂಶಗಳೆರಡಕ್ಕೂ ಮಧ್ಯಸ್ಥಜೀವಿಯಾದ, ಆರ್ಥ್ರೊಪೋಡಾಗಳು ಅನೆಲಿಡ ಜೀವಿಗಳಿಂದಲೇ ಹುಟ್ಟಿ ಬಂದಿವೆಯೆಂಬುದನ್ನು ತೋರಿಸುವ ಜೀವಿ ಪೆರಿಪೆಟಸ್. ಇದು ಒನ್ಯಕೊಫೋರ ವರ್ಗಕ್ಕೆ ಸೇರುತ್ತದೆ. ಇದರಲ್ಲಿ ಆರ್ಥ್ರೊಪೋಡ ಹಾಗು ಅನೆಲಿಡ ಜೀವಿಗಳೆರಡರ ಗುಣಗಳೂ ಇವೆ. ಇದು ಸುಮಾರು 70 ಪ್ರಭೇದಗಳನ್ನು ಹೊಂದಿದೆ. ಈ ಪ್ರಾಣಿ ರೂಪದಲ್ಲಿ ಪಾಲಿಕೀಟ ವರ್ಗದ ಪ್ರಾಣಿಗಳನ್ನು ಹೋಲುತ್ತದೆ. ಇದರ ಶರೀರದ ಮೇಲಿರುವ ಕ್ಯುಟಿಕಲ್ ಪೊರೆ ಅನೆಲಿಡ ಜೀವಿಗಳಲ್ಲಿರುವಂತೆ ತೆಳ್ಳಗಿದೆ. ಮಾಂಸಖಂಡಗಳು ಹಾಗು ಶುದ್ಧೀಕರಣಾಂಗಗಳು ಆ ಪ್ರಾಣಿಯಲ್ಲಿರುವಂತೆಯೇ ಇವೆ. ಇದರ ಜನನಾಂಗದ ನಾಳಗಳು ಶಿಲಕೆಗಳನ್ನು ಹೊಂದಿವೆ. ಆರ್ಥ್ರೊಪೋಡ ವಂಶದಲ್ಲಿ ಈ ಶಿಲಕೆಗಳಿವೆ. ಇದರ ದವಡೆಗಳು ಹಾಗೂ ಹೀಮೋಸೀಲ್ ಮತ್ತು ರಕ್ತಪರಿಚಲನೆ ಆರ್ಥ್ರೊಪೋಡ ವಂಶದ ಪ್ರಾಣಿಗಳನ್ನು ಹೋಲುತ್ತದೆ. ಉಸಿರಾಟದ ಅಂಗಗಳಾದ ಟ್ರೇಕಿಯ ನಾಳಗಳು ಇದನ್ನು ಆರ್ಥ್ರೊಪೋಡವೆಂದು ಸ್ಥಿರಪಡಿಸುತ್ತವೆ. ಆದುದರಿಂದ ಈ ಜೀವಿ ಅನೆಲಿಡ ವಂಶದಿಂದ ಆರ್ಥ್ರೊಪೋಡ ವಂಶಕ್ಕೆ ವಿಕಾಸದ ಹಾದಿಯಲ್ಲಿ ಪ್ರಯಾಣ ಮಾಡುತ್ತಿದೆಯೋ ಎಂಬಂತಿದೆ.

ಪ್ರೋಟೊಸ್ಟೋಮಿಯ ವರ್ಗದಲ್ಲಿ ಮೊದಲೇ ಹೇಳಿರುವ ಮಿಕ್ಕೆಲ್ಲ ವಂಶಗಳು ಅತಿ ಸಾಮಾನ್ಯ ದರ್ಜೆಯ ಜೀವಿಗಳು.

ಡ್ಯುಟೆರೊಸ್ಟೋಮಿಯ ವಿಭಾಗದಲ್ಲಿ ಬರುವ ಅಕಶೇರುಕಗಳೆಂದರೆ ಕೀಟೊಗ್ನಾಥ ವಂಶ, ಪೋಗೊನೋಫೋರ ಮತ್ತು ಎಕೈನೊಡರ್ಮೆಟ ವಂಶಗಳು. ಇವುಗಳಲ್ಲಿ ಗರ್ಭಕಟ್ಟಿದ ಮೊಟ್ಟೆಯ ವಿಭಜನೆ ಪ್ರೋಟೊಸ್ಟೋಮಿಯ ರೀತಿಯ ಪ್ರಾಣಿಗಳಲ್ಲಿರುವಂತಿಲ್ಲ. ಇಲ್ಲಿ ಬ್ಲಾಸ್ಟೋಪೋರ್ ಗುದದ್ವಾರವಾಗಿ, ಬಾಯಿ ಪ್ರತ್ಯೇಕವಾಗಿ ಉದಯವಾಗುತ್ತವೆ. ಕೀಟೊಗ್ನಾಥದಲ್ಲಿ ಒಂದು ವಿಶಿಷ್ಟರೀತಿಯ ಲಾರ್ವ ಜೀವಿ ಕಂಡುಬರುತ್ತದೆ. ಕೀಟೋಗ್ನಾಥ 50 ಪ್ರಭೇದಗಳನ್ನು ಹೊಂದಿದೆ. ಇವುಗಳನ್ನು ಅಂಬುಳಗಳೆಂದು ಕರೆಯುತ್ತಾರೆ. ಈ ಜೀವಿಗಳು ಅಕಶೇರುಕದ ಪ್ರಬುದ್ಧ ವಂಶಗಳಿಗೆ ಹೆಚ್ಚಿನ ಸಂಬಂಧವನ್ನು ಪ್ರದರ್ಶಿಸುವುದಿಲ್ಲ.



ನಕ್ಷತ್ರ ಮೀನು

ಪೋಗೊನೋಫೋರ ವಂಶ 50 ಪ್ರಭೇದಗಳನ್ನು ಹೊಂದಿದೆ. ಇವುಗಳೆಲ್ಲ ಆಳವಾದ ಸಮುದ್ರದಲ್ಲಿ ವಾಸಿಸುತ್ತವೆ. ಇವುಗಳ ಬಗ್ಗೆ ಹೆಚ್ಚಿನ ಸಾಹಿತ್ಯವಿಲ್ಲ. ಇವುಗಳಲ್ಲಿ ಒಂದು ಅಥವಾ ಹೆಚ್ಚು ಟೆಂಟಕಲ್‌ಗಳು ಕಂಡುಬರುತ್ತವೆ. ಇವುಗಳ ಲಾರ್ವಗಳ ಜೀವನ ತಿಳಿದುಬಂದಿಲ್ಲ.

ಎಕೈನೊಡರ್ಮೆಟ ವಂಶ ನಕ್ಷತ್ರಮೀನುಗಳು, ಕಡಲ ಚಿಳ್ಳೆಗಳು (ಸೀ ಅರ್ಚಿನ್), ಸಮುದ್ರದ ಸೌತೆ–ಇತ್ಯಾದಿ ಜೀವಿಗಳನ್ನು ಹೊಂದಿದೆ. ಈ ಪ್ರಾಣಿಗಳು ತ್ರಿಜ್ಯ ಸೌಷ್ಠವವನ್ನು ಹೊಂದಿವೆ. ಆದರೆ ಇವುಗಳ ಲಾರ್ವ ಜೀವಿಗಳು ಮಾತ್ರ ಪಾರ್ಶ್ವ ಸೌಷ್ಠವನ್ನು ಹೊಂದಿರುತ್ತವೆ. ಆದುದರಿಂದ ಈ ಕೇಂದ್ರ ಸೌಷ್ಠವ ಜೀವಿ ಪ್ರಬುದ್ಧಾವಸ್ಥೆಯನ್ನು ತಲುಪಿದ ಮೇಲೆ ಗಳಿಸಿಕೊಂಡದ್ದು ಎಂದು ಧಾರಾಳವಾಗಿ ಹೇಳಬಹುದು. ಎಕೈನೊಡರ್ಮೆಟ ವಂಶದ ಎಲ್ಲ ಪ್ರಾಣಿಗಳೂ ಸಮುದ್ರವಾಸಿಗಳು. ಈ ಪ್ರಾಣಿಗಳ ಪ್ರಾಚೀನ ಇತಿಹಾಸ ಕೇಂಬ್ರಿಯನ್ ಕಾಲದಿಂದಲೂ ತಿಳಿದುಬಂದಿದೆ. ಅತ್ಯಂತ ಮುಖ್ಯವಾದ ವಿಷಯವೆಂದರೆ ಈ ವಂಶದ ಜೀವಿಗಳ ಲಾರ್ವಜೀವಿ ಹೆಮಿಕಾರ್‌ಡೇಟ ವಂಶದ ಲಾರ್ವಜೀವಿಯನ್ನು ಹೋಲುತ್ತದೆ. ಈ ಗುಣದಿಂದಾಗಿ ಈ ವಂಶ ಕಶೇರುಕಗಳ ಉದಯಕ್ಕೆ ದಾರಿ ಮಾಡಿಕೊಟ್ಟಿದೆ ಎಂಬ ತೀರ್ಮಾನಕ್ಕೆ ಬರಲು ಸಹಾಯಮಾಡಿದೆ. ಏಕೆಂದರೆ ಎಕೈನೊಡರ್ಮೆಟ ವಂಶದ ಡೈಪ್ಲುರುಲ ಲಾರ್ವ, ಹೆಮಿಕಾರಡೇಟ ವಂಶದ ಟಾರ್ನೆರಿಯ ಲಾರ್ವಾಕ್ಕೆ ಅತಿ ಹೆಚ್ಚಿನ ಹೋಲಿಕೆಯನ್ನು ತೋರಿಸುತ್ತದೆ. ಎಕೈನೊಡರ್ಮೆಟವಂಶದ ಜೀವಿಗಳ ಶರೀರ ಪಂಚ ಬಾಹುಗಳನ್ನು ಸಾಮಾನ್ಯವಾಗಿ ಹೊಂದಿರುತ್ತವೆ. ಇವುಗಳ ಶರೀರದಲ್ಲಿ ಸುಣ್ಣ ಮಿಶ್ರಿತವಾದ ತಟ್ಟೆಗಳು ರಕ್ಷಾಕವಚದಂತಿವೆ. ಆದುದರಿಂದ ಇವುಗಳನ್ನು ಕಂಟಕ ಚರ್ಮಿಗಳೆನ್ನುತ್ತಾರೆ.

(ಎಲ್.ಎಸ್.ಜಿ.)

**ಅಕ್ಕಿ ಪತಂಗ:** ಶೇಖರಣೆ ಮಾಡಿದ ಆಹಾರ ಧಾನ್ಯಗಳನ್ನು ಹಾಳುಮಾಡುವ ಕೀಟ. ರೈಸ್ ಮಾತ್ ಪರ್ಯಾಯ ನಾಮ. ವೈಜ್ಞಾನಿಕ ಹೆಸರು ಕಾರ್ಸೈರಾ ಕೆಫಲೋನಿಕಾ. ಲೆಪಿಡಾಪ್ಟಿರಾ ಗಣದ ಪೈರಾಲಿಡೆ ಕುಟುಂಬಕ್ಕೆ ಸೇರಿದೆ. ಬಹು ಬಗೆಯ ಆಹಾರ ಪದಾರ್ಥಗಳನ್ನು ಮತ್ತು ಶೇಖರಣೆ ಮಾಡಿದ ಖಾದ್ಯಗಳನ್ನು ತಿಂದು ಜೀವಿಸುತ್ತದೆ. ಉದಾ: ಆಹಾರ ಧಾನ್ಯಗಳು (ನುಚ್ಚು, ತರಿ, ರವೆ, ಹಿಟ್ಟು, ಆಟ್ಟ, ಬೂಸಾ, ಬೇಸಿನ್, ಮೈದಾ, ಇತ್ಯಾದಿ), ಸಾಂಬಾರ ಪದಾರ್ಥಗಳು, ಸೇಂಗಾ ಬೀಜ, ಒಣ ಹಣ್ಣುಗಳು, ಬಿಸ್ಕತ್, ಹಿಂಡಿ, ಕೋಕೋ ತಿಂದು ಹಾನಿಯುಂಟುಮಾಡುತ್ತದೆ. ಈ ಆಹಾರ ಪದಾರ್ಥಗಳಲ್ಲಿ ಅಕ್ಕಿ ಪತಂಗ ಹುಳದ ಹಂತವನ್ನು ಮುಗಿಸಿ, ಕೋಶಾವಸ್ಥೆಯನ್ನು ಸೇರಲು ಎಳೆಗಳಂತಹ ದಟ್ಟವಾದ ಬಲೆ ಕಟ್ಟಿ ಖಾದ್ಯ ವಸ್ತುಗಳ ಗುಣಮಟ್ಟವನ್ನು ಹಾಳುಮಾಡುತ್ತದೆ. ಕಾರಣ, ಇದೊಂದು ಹಾನಿಕಾರಕ ಕೀಟ.

ಪ್ರಾಯದ ಚಿಟ್ಟೆ ಕಂದು ಬಣ್ಣದ್ದು. ರೆಕ್ಕೆಯ ಒಂದು ತುದಿಯಿಂದ ಇನ್ನೊಂದು ತುದಿಗೆ ಇರುವ ಅಳತೆ 1.25–2.5 ಸೆಂಮೀ ಗಂಡು ಚಿಟ್ಟೆ ಹೆಣ್ಣಿಗಿಂತ ಚಿಕ್ಕದು. ಇದು ನಿಶಾಚರಿ ಕೀಟ. ಹಗಲಿನಲ್ಲಿ ಕತ್ತಲು ಆವರಿಸಿದ ಸ್ಥಳ, ಗೋಡೆ, ಚಾವಣಿ, ಧಾನ್ಯ ಸಂಗ್ರಹಿಸಿದ ಮೂಟೆ ಮುಂತಾದ ಜಾಗಗಳಲ್ಲಿ ವಿಶ್ರಾಂತಿ ಪಡೆದು, ರಾತ್ರಿ ಚಟುವಟಿಕೆಯಿಂದ ಹಾರಾಡುತ್ತದೆ. ಹೆಣ್ಣು ಕೀಟ ಸು. 200 ದುಂಡು ತತ್ತಿಗಳನ್ನು ಬಿಡಿ ಬಿಡಿಯಾಗಿ ಆಹಾರ ಪದಾರ್ಥಗಳ ಸಮೀಪ ಇಡುತ್ತದೆ. ಹುಳು ರೇಷ್ಮೆನೂಲಿನಂತಹ ಬಲೆಯಿಂದ ಆಹಾರವನ್ನು ಆವರಿಸಿ, ಒಳಗೆ ತಿನ್ನುತ್ತ ಪ್ರವರ್ಧಮಾನಕ್ಕೆ ಬರುತ್ತದೆ. ಈ ರೀತಿ ಬಲೆಯಿಂದ ಆವರಿಸುವುದಕ್ಕೆ ತೆಂಡೆ ಕಟ್ಟುವುದು ಎನ್ನುತ್ತಾರೆ. ಮರಿ ಹುಳು ನಸು ಹಳದಿಬಣ್ಣದಿಂದ ಕೂಡಿದ್ದು ರೂಪ ಪರಿವರ್ತನೆಯಾಗಿ ಹೊರಬರಲು ಸು. 6 ವಾರ ತೆಗೆದುಕೊಳ್ಳುತ್ತದೆ. ವರ್ಷಕ್ಕೆ 6–8 ಬಾರಿ ಸಂತಾನೋತ್ಪತ್ತಿ ಮಾಡುತ್ತದೆ.



ಅಕ್ಕಿ ಪತಂಗ

(ಡಿ.ಎಸ್.)

**ಅಕ್ಕಿಯ ಸೊಂಡಿಲುಕೀಟ:** ಕೋಲಿಯಾಪ್ಟರ ಗಣದ ಕರ್ಕ್ಯೂಲಿಯಾನಿಡೆ ಕುಟುಂಬದ ಸದಸ್ಯ. ಶೇಖರಿಸಿಟ್ಟ ಕಾಳುಗಳನ್ನು ತಿಂದು ಭಾರಿ ಪ್ರಮಾಣದ ನಷ್ಟವುಂಟು ಮಾಡುತ್ತದೆ. ಸುಸ್ರಿ, ರೈಸ್ ವೀವಿಲ್ ಪರ್ಯಾಯ ಹೆಸರು. *ಸೈಟೊಫೈಲಸ್ (ಕೈಲಾಂಡ್ರ) ಒರೈಜೆ* ವೈಜ್ಞಾನಿಕ ನಾಮ. ತಲೆಯು ಮುಂದೆ ಆನೆ ಸೊಂಡಿಲಿನಂತೆ ಚಾಚಿಕೊಂಡಿರುವ ಮೂತಿ ಇರುವುದರಿಂದ ಈ ಹೆಸರು. ವಾಡೆಹುಳ, ಕುಟ್ಟೆಹುಳ ಎಂದೂ ಸಹ ಕರೆಯಲಾಗುತ್ತದೆ.




ಪ್ರೌಢಾವಸ್ಥೆಯಲ್ಲಿ ಮಾಸಲು ಕೆಂಪು ಅಥವಾ ಕಂದು ಬಣ್ಣದಿಂದ ಕೂಡಿದ್ದು, ಸು. 3–4 ಮಿಮೀ ಉದ್ದವಿರುತ್ತದೆ. ಬೆನ್ನ ಮೇಲೆ ನಾಲ್ಕು ಕಪ್ಪುಚುಕ್ಕೆಗಳಿವೆ. ಜೋಳ, ಗೋದಿ, ಅಕ್ಕಿ, ಬಾಜರ, ಮುಸುಕಿನ ಜೋಳ ಈ ಕೀಟದ ಪ್ರಮುಖ ಆಹಾರ. ಇವುಗಳನ್ನು ಸಂಗ್ರಹಿಸಿಟ್ಟ ಉಗ್ರಾಣ ಜೀವನ ಚಕ್ರ ಮುಂದುವರೆಸಲು ಬಳಸುವ ಪ್ರಮುಖ ತಾಣಗಳು. ರಾಗಿ, ಸಾವೆಯಂತಹ ಸಣ್ಣ ಕಾಳುಗಳಿಗೆ ಮತ್ತು ದ್ವಿದಳ ಧಾನ್ಯಗಳಿಗೆ ಸಾಮಾನ್ಯವಾಗಿ ಮುತ್ತುವುದಿಲ್ಲ. ಈ ಕೀಟ ತನ್ನ ಉದ್ದನೆ ಸೊಂಡಿಲಿನಿಂದ ಕಾಳಿನ ಬಿರುಸು ಸಿಪ್ಪೆಯನ್ನು ಕೊರೆದು ಒಳಗಿನ ಪಿಷ್ಠ ಭಾಗವನ್ನು ತಿನ್ನುತ್ತದೆ. ಸೊಂಡಿಲಿನಿಂದ ಕಾಳಿನಲ್ಲಿ ಕುಳಿತೋಡಿ ಅದರೊಳಗೆ ಒಂದು ತತ್ತಿ ಇಟ್ಟು, ಕುಳಿಯನ್ನು ಅಂಟಿನಿಂದ ಮುಚ್ಚುತ್ತದೆ. ಹೆಣ್ಣುಕೀಟ ಒಂದು ಬಾರಿಗೆ 400 ಮೊಟ್ಟೆಗಳನ್ನಿಡುವುದು. ಒಂದು ಜೀವನ ಚಕ್ರ ಮುಗಿಸಲು 4–6 ವಾರಗಳು ಬೇಕು. ವರ್ಷದಲ್ಲಿ 8–10 ಬಾರಿ ಸಂತತಿ ಪೂರ್ಣಗೊಳಿಸುತ್ತದೆ. ಮೊಟ್ಟೆಯೊಡೆದು ಹೊರ ಬಂದ ಮರಿಹುಳು ಕಾಳಿನೊಳಗಿರುವ ತಿರುಳನ್ನು ತಿಂದು ಬೆಳೆಯುತ್ತವೆ. ಪ್ರಾಯದ ಕೀಟವೂ ಕಾಳನ್ನು ಹೊರಗಿನಿಂದ ಕೊರೆಯುವುದರಿಂದ ಈ ಕೀಟದ ಉಪಟಳ ಉಗ್ರಾಣದಲ್ಲಿ ಶೇಖರಿಸಿಟ್ಟ ಕಾಳುಗಳಿಗೆ ಹೆಚ್ಚು. ಕಾಳಿನ ಮೇಲೆ ಪ್ರೌಢಕೀಟ ಮಾಡಿದ ತೂತುಗಳ ಮೂಲಕ ಮರಿಗಳು ಹೊರಬಂದು ಬೇರೆಕಾಳನ್ನು ತಿನ್ನಲು ಆರಂಭಿಸುತ್ತವೆ.



ಕೆಲವೊಮ್ಮೆ, ಕಾಳಿನ ಗಾತ್ರದ ಮೇಲೆ ಪ್ರೌಢಕೀಟದ ಗಾತ್ರ ನಿರ್ಣಯವಾಗುವುದು. ಸಣ್ಣ ಕಾಳಿನಿಂದ (ಉದಾ: ಬಾಜರ) ಉತ್ಪತ್ತಿಯಾದ ಕೀಟ ದೊಡ್ಡ ಕಾಳಿನಿಂದ (ಉದಾ.

ಮುಸುಕಿನ ಜೋಳ) ಬರುವ ಕೀಟಕ್ಕಿಂತ ಚಿಕ್ಕದು. ಇದರ ಹತ್ತಿರ ಸಂಬಂಧಿಸೈ. *ಗ್ರನೇರಿಯಾ* ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಪ್ರಬಲವಾಗಿದೆ. ಭಾರತದಲ್ಲಿ ಇದರ ಹಾವಳಿ ಕಡಿಮೆ.

ಹುಳಬಿದ್ದ ಕಾಳು ಒಳಗೆ ಸಂಪೂರ್ಣವಾಗಿ ಟೊಳ್ಳಾಗಿ ಬರಿ ಧೂಳಿನಿಂದ ತುಂಬಿರುತ್ತದೆ. ಅಕ್ಕಿ, ಗೋದಿಗಳಿಗಿಂತ ಜೋಳಕ್ಕೆ ಈ ಹುಳುವಿನ ಬಾಧೆ ಹೆಚ್ಚು. ಆಹಾರ ಕಾಳುಗಳನ್ನು ಉಗ್ರಾಣದಲ್ಲಿ ಶೇಖರಿಸುವ ಮುಂಚೆ ಚೆನ್ನಾಗಿ ಒಣಗಿಸಿ, ಸೊಂಡಿಲು ಕೀಟಗಳ ಸುಳಿವಿಲ್ಲದ, ಶುಚಿಯಾದ ಜಾಗದಲ್ಲಿ ದಾಸ್ತಾನು ಮಾಡಿದರೆ ಈ ಕೀಟಗಳಿಂದ ಸಂರಕ್ಷಿಸಬಹುದು. (ಡಿ.ಎಸ್.)

**ಅಕ್ಯಾಂತೊಟೆರಿಜಿಯೈ :** ಮೂಳೆಯ ಮೀನುಗಳಲ್ಲಿ ಮುಂದುವರಿದ ಉಪವರ್ಗ. ಮುಂದಿನ ಈಜುರೆಕ್ಕೆಯ ಕಿರಣಗಳು ಬಿಡುವಾಗಿದ್ದು ಮೊದಲನೆಯದು ಮುಳ್ಳಾಗಿ ಪರಿವರ್ತನೆಹೊಂದಿದೆ. ಮೈಮೇಲಿನ ಹುರುಪೆಗಳು ಸಾಧಾರಣವಾಗಿ ಟಿನಾಯಿಡ್ ರೀತಿಯವು. ಪ್ರೌಢಜೀವಿಗಳಲ್ಲಿ ಅನ್ನನಾಳಕ್ಕೂ ಗಾಳಿಯ ಕೋಶಕ್ಕೂ ಸಂಬಂಧವಿರುವುದಿಲ್ಲ. ಸೊಂಟದ ಈಜು ರೆಕ್ಕೆಗಳು ಮುಂದೆ ಸರಿದು ಎದೆಯ, ಕೊರಳಿನ ಅಥವಾ ಕೆಳದವಡೆಯ ತಳದಲ್ಲಿ ಇರುತ್ತವೆ. ನಡುಕಟ್ಟು ಕ್ಲೈತ್ರಂ ಮೂಳೆಗೆ ಅಂಟಿಕೊಂಡಿರುತ್ತದೆ. ಮೇಲ್ದವಡೆಯ ಮ್ಯಾಕ್ಸಿಲ್ಲ ಮೂಳೆಗಳಲ್ಲಿ ಹಲ್ಲುಗಳಿಲ್ಲ ಮತ್ತು ಅವು ಬಾಯಿಯ ಅಂಚಿಗೆ ಸೇರಿರುವುದಿಲ್ಲ.

ಇವು ಸಾಧಾರಣವಾಗಿ ಸಮುದ್ರ ವಾಸಿಗಳು. ಇವುಗಳಲ್ಲಿ ಸು. 36 ಕುಟುಂಬಗಳಿವೆ. ಹಾರುಮೀನು, ಬಾಸ್, ಗೋಬಿ, ಫ್ಲೌಂಡರ್, ಬಾಂಗಡಮೀನು, ಉಬ್ಬು ಮೀನು, ಮೂರ್ಖಮೀನು, ಸಂದೂಕಮೀನು, ಮುಳ್ಳುಹಂದಿ ಮೀನು, ತಲೆಮೀನು, ಅಳಿಮೀನು ಮುಂತಾದುವು ಈ ಉಪವರ್ಗಕ್ಕೆ ಸೇರಿವೆ.

ಇವುಗಳ ಕೆಲವು ಜಾತಿಗಳು ಕ್ರಿಟೇಶಿಯಸ್ ಯುಗದಲ್ಲಿ ಹುಟ್ಟಿ ಟರ್ಷಿಯರಿ ಯುಗದಲ್ಲಿ ಅಧಿಕವಾಗಿದ್ದುವು. (ಪಿ.ಎ.ಆರ್.)

**ಅಕ್ಯಾಂಥೋಡಿಯೈ:** ಪೇಲಿಯೊಜೋಯಿಕ್ ಯುಗದಲ್ಲಿದ್ದ ಮೀನುಗಳ ಒಂದು ವರ್ಗ. ನಿಜವಾದ ದವಡೆಗಳುಳ್ಳ, ಸರಳರಚನೆಯ ಕಶೇರುಕಗಳಲ್ಲಿ ಇವೇ ಅತಿ ಪ್ರಾಚೀನವಾದುವು. ಸಿಲ್ಯೂರಿಯನ್ ಯುಗದ ಉತ್ತರಾರ್ಧದಲ್ಲಿ ಕಾಣಿಸಿಕೊಂಡು ಪರ್ಮಿಯನ್ ಯುಗದ ಪಶ್ಚಿಮಾರ್ಧದವರೆಗೂ ಬದುಕಿದ್ದುವು. ಅನಂತರ ಕಣ್ಮರೆಯಾದವು.

ಸಿಹಿನೀರಿನ ನದಿ ಮತ್ತು ಸರೋವರಗಳಲ್ಲಿ ವಾಸಿಸುತ್ತಿದ್ದ ಈ ಪ್ರಾಚೀನ ಮೀನುಗಳು ಕೆಲವು ಸೆಂಮೀ ಗಳಷ್ಟು ಮಾತ್ರ ಉದ್ದವಿದ್ದವು. ಆಕೃತಿಯಲ್ಲಿ ಕದಿರಿನಾಕಾರದ ಷಾರ್ಕ್ ಮೀನುಗಳನ್ನು ಹೋಲುತ್ತಿದ್ದವು. ತಲೆ ತುಂಬ ಚಿಕ್ಕದು; ಬಾಯಿ ತಲೆಯ ತುದಿಯಲ್ಲಿತ್ತು. ತಲೆಯ ಮುಂಭಾಗದಲ್ಲಿದ್ದ ಕಣ್ಣುಗಳು ದೊಡ್ಡವು; ಮೇಲಿನ ಮತ್ತು ಕೆಳಗಿನ ದವಡೆಗಳಿದ್ದು ಅನೇಕ ಜಾತಿಗಳಿಗೆ ಹಲ್ಲುಗಳಿರಲಿಲ್ಲ; ಇದ್ದಲ್ಲಿ ಮಾರ್ಪಟ್ಟ ಮೊನೆಗಳುಳ್ಳ ಹುರುಪೆಗಳಂತಿದ್ದವು.

ಮೂಳೆಯಂಥ ವಸ್ತುವಿನಿಂದಾದ ವಜ್ರಾಕಾರದ ಹುರುಪೆಗಳು ದೇಹವನ್ನು ರಕ್ಷಿಸುತ್ತಿದ್ದುವು. ತಲೆಯ ಮೇಲಿನ ಹುರುಪೆಗಳು ದೊಡ್ಡವಾಗಿದ್ದು ನಿರ್ದಿಷ್ಟ ರೀತಿಯಲ್ಲಿ ಹರಡಿದ್ದುವು. ಒಂದು ಅಥವಾ ಎರಡು ಬೆನ್ನಿನ ಈಜುರೆಕ್ಕೆಗಳು, ಬಾಲದ ಈಜುರೆಕ್ಕೆ ಮತ್ತು ಗುದಭಾಗದ ಈಜುರೆಕ್ಕೆ–ಇವು ಒಂಟಿ ಈಜುರೆಕ್ಕೆಗಳು. ಇವು ಸಾಮಾನ್ಯವಾಗಿ ಅಲುಗುತ್ತಿರಲಿಲ್ಲ. ಮುಂಭಾಗದಲ್ಲಿ ಇವಕ್ಕೆ ಒಂದೊಂದು ದೃಢವಾದ ಮುಳ್ಳುಗಳಿದ್ದುವು. ಭುಜದ ಮತ್ತು ಸೊಂಟದ ಜೋಡಿ ಈಜುರೆಕ್ಕೆಗಳು ಸಾಮಾನ್ಯ ರೀತಿಯವು. ಕೆಲವು ಜಾತಿಗಳಲ್ಲಿ ಭುಜದ ಈಜುರೆಕ್ಕೆಗೂ ಸೊಂಟದ ಈಜುರೆಕ್ಕೆಗೂ ಮಧ್ಯೆ ಐದು ಈಜುರೆಕ್ಕೆಗಳ ಸಾಲು ಇತ್ತು. ಕೊನೆಕೊನೆಗೆ ಕಾಣಿಸಿಕೊಂಡವುಗಳಲ್ಲಿ ಅವುಗಳ ಸಂಖ್ಯೆ ಕ್ಷೀಣಿಸಿ ಒಂದೇ ಒಂದು ಈಜುರೆಕ್ಕೆಯಿತ್ತು. ಬಾಲದ ಈಜುರೆಕ್ಕೆ ವಿಷಮವೃತ್ತಾಕಾರದ್ದಾಗಿತ್ತು.

ಕಿವಿರುರಂಧ್ರಗಳು ಬಿಡಿಯಾಗಿ ಹೊರಕ್ಕೆ ತೆರೆಯುತ್ತಿದ್ದುವು. ಕೆಲವು ಜಾತಿಗಳಲ್ಲಿ ಸ್ವಲ್ಪಮಟ್ಟಿಗೆ ಕಿವಿರುಕವಚದಂತಿದ್ದು ಚರ್ಮದ ತುಣುಕಿನಿಂದ ಮುಚ್ಚಿದ್ದುವು. ವಿಸರಲ್ ಆರ್ಚ್ ಸಂಖ್ಯೆ ಒಂದೊಂದರಲ್ಲಿ ಒಂದೊಂದು ರೀತಿಯಿತ್ತು. 3, 4 ಮತ್ತು 5ನೆಯ ಕಿವಿರುಕಮಾನುಗಳು ಒಂದೊಂದೂ ಪಕ್ಕದಲ್ಲಿದ್ದ ಕಿವಿರುಗಳಿಗೆ ಆಧಾರವಾಗಿದ್ದುವು. ಒಳಭಾಗದಲ್ಲಿ ಒಂದೊಂದರಿಂದಲೂ ಹೊರ ಚಾಚಿದ ಕಿವಿರು ಕಡ್ಡಿಗಳು ಆಹಾರವನ್ನು ಶೋಧಿಸಲು ಸಹಕಾರಿಯಾಗಿದ್ದುವು. ಮ್ಯಾಂಡಿಬುಲಾರ್ ಆರ್ಚ್ ತಲೆಬುರುಡೆಗೆ ಆಟೊಸ್ಟೈಲಿಕ್ ರೀತಿಯಲ್ಲಿ ನೇರ ಸಂಪರ್ಕ ಹೊಂದಿತ್ತೆಂದು ತೋರುತ್ತದೆ. ಪೂರ್ವ ಡಿವೋನಿಯನ್ ಕಾಲದಲ್ಲಿ ಜೀವಿಸುತ್ತಿದ್ದ ಕ್ಲೈಮೇಟಿಯಸ್ ಮೀನಿನಲ್ಲಿ ಕೆಳದವಡೆ ಮೂಳೆ ತಲೆಬುರುಡೆಗೆ ನೇರವಾಗಿ ಕೂಡಿಕೊಂಡಿತ್ತು. (ಪಿ.ಎ.ಆರ್.)

**ಅಕ್ರಿಡಿಡೆ:** ಸಂಧಿಪದಿ (ಆರ್ತ್ರೊಪೊಡಾ) ವಂಶದ ಕೀಟಗಳ ಒಂದು ಗಣ. ಮೋಟು ಮೀಸೆಯ ಮಿಡತೆ (ಶಾರ್ಟ್ ಹಾರ್ನ್‌ಡ್ ಗ್ರಾಸ್ ಹಾಪರ್) ಮತ್ತು ದಂಡಿನ ಮಿಡತೆಗಳು (ಲೊಕಸ್ಟ) ಸೇರಿವೆ. ಇಡೀ ಕುಟುಂಬದಲ್ಲಿ 5,000 ಜಾತಿಯ ಮಿಡತೆಗಳಿವೆ.

ಉಷ್ಣ ಮತ್ತು ಶೀತವಲಯದಲ್ಲಿ ವಾಸಿಸುತ್ತವೆ. 1 ಸೆಂಮೀ ನಿಂದ 7.5 ಸೆಂಮೀ ಉದ್ದವಿದ್ದು, ಚಿಕ್ಕ ಕುಡಿಮೀಸೆ, ತಲೆಯಲ್ಲಿ ದೊಡ್ಡದಾದ ಕೂಡುಗಣ್ಣುಗಳು ಮತ್ತು 2–3 ಸರಳ ಕಣ್ಣುಗಳನ್ನು ಹೊಂದಿವೆ. ಬಾಯಿಯೊಳಗೆ ನಾಲ್ಕು ಹಾಲೆಗಳ ಲಿಗುಲಾ ಇದ್ದು, ಆಹಾರ ಕೀಟಗಳನ್ನು ಹಿಡಿದು ತಿನ್ನಲು ಸಹಾಯಕವಾಗಿದೆ. ಎದೆ ಭಾಗದಲ್ಲಿ ನಾಲ್ಕು



ಮೋಟು ಮೀಸೆಯ ಮಿಡತೆ

ರೆಕ್ಕೆಗಳಿವೆ. ಮುಂದಿರುವ ರೆಕ್ಕೆಗಳು ಕಿರಿದಾಗಿದ್ದು ಸ್ವಲ್ಪ ದಪ್ಪ ಇವೆ. ಅವುಗಳ ಬಣ್ಣ ಶರೀರದ ಬಣ್ಣದಂತಿದೆ. ಇನ್ನೊಂದು ಜೊತೆ ರೆಕ್ಕೆಗಳು ತುಂಬಾ ಅಗಲವಾಗಿದ್ದು ಮಡಚಿಕೊಂಡಿರುತ್ತವೆ. ಕೆಲವು ಜಾತಿಯ ಮಿಡತೆಗಳಿಗೆ ರೆಕ್ಕೆಗಳಿಲ್ಲ. ಕೆಲವು ಜಾತಿಯ ಮಿಡತೆಗಳಿಗೆ ರೆಕ್ಕೆಗಳು ಅಪೂರ್ಣವಾಗಿವೆ. ಮಿಡತೆಗಳ ಕಾಲುಗಳು ಉದ್ದವಾಗಿವೆ. ಹಿಂದಿನ ಕಾಲುಗಳ ತೊಡೆ (ಫಿಮರ್) ಮತ್ತು ಮುಂಗಾಲು (ಟಿಬಿಯ) ಉದ್ದವಾಗಿದ್ದು, ಬಲವಾಗಿರುವುದರಿಂದ ನೆಗೆಯಲು ಸಹಾಯಕ. ಕಾಲಿನ ಹರಡುಗಳಲ್ಲಿ ಮೂರು ತುಂಡುಗಳಿವೆ. ಹೊಟ್ಟೆಯ ತುದಿಯಲ್ಲಿ ಒಂದು ಜೊತೆ ತುಂಡಾಗಿರದ ಸರ್ಸಿ ಇರುತ್ತವೆ. ಹೊಟ್ಟೆಯ ಮೊದಲನೆಯ ಸಂದಿಯ ಪಕ್ಕಗಳಲ್ಲಿ ಶ್ರವಣೇಂದ್ರಿಯಗಳಿವೆ. ಹೆಣ್ಣು ಮಿಡತೆಗಳಲ್ಲಿ ಪ್ರಧಾನವಾದ ಅಂಡನಾಳವಿರುತ್ತದೆ.

ಗಂಡುಮಿಡತೆಗಳು ಶಬ್ದ ಮಾಡುವಲ್ಲಿ ಹೆಸರುವಾಸಿ. ಮುಂದಿನ ಮತ್ತು ಹಿಂದಿನ ರೆಕ್ಕೆಗಳನ್ನು ಒಟ್ಟಾಗಿ ಉಜ್ಜಿ ಶಬ್ದ ಮಾಡುತ್ತವೆ. ಕೆಲವು ಜಾತಿ ಮಿಡತೆಗಳು ಹಿಂಗಾಲಿನ ತೊಡೆಯ ಒಳಭಾಗವನ್ನು ಮುಂದಿನ ರೆಕ್ಕೆಗಳ ಹೊರ ಅಂಚಿನ ಮೇಲೆ ಉಜ್ಜಿ ಶಬ್ದ ಮಾಡುತ್ತವೆ. ಹೆಣ್ಣುಗಳಿಗೆ ಈ ಅಂಗಗಳಿಲ್ಲ. ಇವುಗಳ ಜೀವನ ಚಕ್ರ 3 ಹಂತಗಳಿಂದ ಕೂಡಿದೆ. ಕ್ರಮೇಣ ರೂಪಾಂತರವನ್ನು ಹೊಂದುತ್ತವೆ. ಅಪ್ಸರೆಗಳ ಮತ್ತು ಪ್ರೌಢ ಕೀಟಗಳ ಹಂತ. ಪ್ರೌಢ ಹೆಣ್ಣು ಮಿಡತೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಂದ ಹೊರಬಂದ ಅಪ್ಸರೆಗಳು ಐದು ಹಂತಗಳಲ್ಲಿ ರೂಪಾಂತರ ಹೊಂದಿ ಪ್ರಾಯಕ್ಕೆ ಬರುತ್ತವೆ.



ಉದ್ದ ಮೀಸೆಯ ಮಿಡತೆ

ಚಿಕ್ಕ ಕುಡಿಮೀಸೆಯನ್ನು ಹೊಂದಿರುವ ದಂಡಿನ ಮಿಡತೆಗಳು ಲೋಕಸ್ಟಿಡೆ ಕುಟುಂಬದಲ್ಲಿದ್ದುವು. ಇತ್ತೀಚೆಗೆ ಕೀಟಶಾಸ್ತ್ರಜ್ಞರು ಇವುಗಳನ್ನು ಅಕ್ರಿಡಿಡೆ ಕುಟುಂಬಕ್ಕೆ ಸೇರಿಸಿದ್ದಾರೆ. ಈ ದಂಡು ಮಿಡತೆಗಳು ವಲಸೆ ಹೋಗುತ್ತವೆ. ಈ ಮಿಡತೆಗಳು ಉದ್ದವಾಗಿದ್ದು ಅಗಲಕ್ಕಿಂತ ಸ್ವಲ್ಪ ಆಳವಾಗಿವೆ. ತಲೆ ಪ್ರಧಾನವಾಗಿದ್ದು ಕೂಡು ಕಣ್ಣುಗಳಿವೆ. ದೇಹದ ಬಣ್ಣ ಕಪ್ಪಗಿದ್ದು ನಾನಾ ರೀತಿಯ ಗುರುತುಗಳಿವೆ. ಹಗಲಿನಲ್ಲಿ ಇವುಗಳ ಚಟುವಟಿಕೆ. ಕುಡಿ ಮೀಸೆಗಳು ಶರೀರಕ್ಕಿಂತ ಮೋಟಾಗಿರುತ್ತವೆ. ಹರಡಿನಲ್ಲಿ ಮೂರು ತುಂಡುಗಳಿವೆ. ಹೊಟ್ಟೆಯ ಒಂದನೇ ಸಂದಿಯ ಪಕ್ಕದಲ್ಲಿ ಶ್ರವಣೇಂದ್ರಿಯಗಳಿವೆ. ಅಂಡನಾಳದಲ್ಲಿ 4 ಮೋಟಾದ ಪ್ರತ್ಯೇಕ ಬೆರಳಿನಂತಹ ಭಾಗಗಳಿದ್ದು ಮಣ್ಣಿನಲ್ಲಿ ಮೊಟ್ಟೆಗಳನ್ನಿಡಲು ಸಹಾಯ ಮಾಡುತ್ತವೆ. ಈ ಮಿಡತೆಗಳು ಸಾವಿರಾರು ಮೈಲು ವಲಸೆ ಹೋಗಿ ದಾರಿಯಲ್ಲಿ ಸಿಕ್ಕಿದ ಸಸ್ಯಗಳನ್ನು ತಿಂದು ಹಾಳುಮಾಡುತ್ತವೆ. 1928 ರಲ್ಲಿ ಯುವರಾವ್ ಎಂಬ ಕೀಟಶಾಸ್ತ್ರಜ್ಞ

ವಲಸೆ ಕೀಟಗಳ ಜಾತಿಯಲ್ಲಿ ವಲಸೆ ಹೋಗುವ ಅವಸ್ಥೆ (ಗ್ರೆಗರಿಯಸ್ ಫೇಜ಼್) ಮತ್ತು ಏಕಾಂತ ಅವಸ್ಥೆ (ಸೊಲಿಟರಿ ಫೇಜ಼್) ಯ ವಿಭಿನ್ನತೆಯನ್ನು ಗುರುತಿಸಿದ್ದಾನೆ.

ವಲಸೆ ಅವಸ್ಥೆಯಲ್ಲಿ ಮಿಡಿತೆಗಳ ಬಣ್ಣ ಕಪ್ಪು ಹಳದಿ ಅಥವಾ ಕೇಸರಿ. ಪ್ರಾಯದ ಮಿಡತೆಗಳಲ್ಲಿ ಮೊಟಕಾದ ಜೀನು ಆಕಾರದ ಮುನ್ನೆದೆಯ ಚಿಪ್ಪು (ಸ್ಯಾಡ್ಡಲ್ ಶೇಪ್ಡ್ ಪ್ರೊನೋಟಮ್) ಹಾಗೂ ಸ್ವಲ್ಪ ಮೋಟಾದ ಹಿಂದೊಡೆ (ಹೈಂಡ್ ಫಿಮರ್) ಇವೆ. ಈ ಅವಸ್ಥೆಯಲ್ಲಿ ಚುರುಕಾಗಿದ್ದು ಗುಂಪಾಗಿ ವಾಸಿಸುತ್ತವೆ. ಹವಾಮಾನ ಮತ್ತು ಗಾಳಿಯ ಪ್ರಭಾವದಿಂದ ಪ್ರಾಯದ ಅಪ್ಸರೆಗಳು ಸಾವಿರಾರು ಮೈಲು ವಲಸೆ ಹೋಗುತ್ತವೆ. ಏಕಾಂತ ಅವಸ್ಥೆಯಲ್ಲಿರುವ ಮಿಡತೆಗಳ ಬಣ್ಣ ಹಸಿರು, ಬೂದಿ ಅಥವಾ ಕಂದು. ಪ್ರಾಯದ ಮಿಡತೆಗಳು ಉದ್ದ ತುರಾಯಿ (ಕ್ರೆಸ್ಟೆಡ್) ಆಕಾರದ ಮುನ್ನೆಡೆಯ ಚಿಪ್ಪನ್ನು ಪಡೆದಿದೆ. ಹಿಂಗಾಲಿನ ತೊಡೆಯ ಮುಂಭಾಗ ರೆಕ್ಕೆಗಿಂತ ಉದ್ದವಾಗಿದೆ. ಈ ಮಿಡತೆಗಳು ಒಂಟಿ ಜೀವನ ನಡೆಸುತ್ತವೆ. ಪ್ರಪಂಚದಲ್ಲಿರುವ ವಲಸೆ ಮಿಡತೆಗಳ ಪೈಕಿ ಲೋಕಸ್ಟಾ ಮೈಗ್ರಾಟೋರಿಯಾ ಮತ್ತು ಸಿಸ್ಟೋಸಿರ್ಕಾ ಗ್ರಿಗೇರಿಯಾ ಅತಿ ಮುಖ್ಯವಾದುವು.

ಭಾರತ ದೇಶದಲ್ಲಿ ಸಿರ್ಟಾಕಾಂಥಾಕ್ರಿಸ್ ಸಕ್ಸಿನೇಟಾ ಮುಂಬಯಿ ಮಿಡತೆ ಎಂದೇ ಪ್ರಖ್ಯಾತ. ಮೊರಾಕ್ಕೊ ಮಿಡತೆ, ಇಟಲಿ ಮಿಡತೆ, ದಕ್ಷಿಣ ಆಫ್ರಿಕಾದ ಬೂದು ಮಿಡತೆ ಮತ್ತು ಅಮೇರಿಕದ ಮಿಡತೆಗಳೂ ಇವೆ. ಇವುಗಳಲ್ಲಿ ಮರಳು ಗಾಡಿನ ಮಿಡತೆ (ಸಿಸ್ಟೋಸಿರ್ಕಾ ಗ್ರಿಗೇರಿಯಾ) ಅತೀ ಮುಖ್ಯವಾಗಿದ್ದು ಇದರ ದಂಡು ಈಜಿಪ್ಟ್, ಉತ್ತರ ಆಫ್ರಿಕಾ, ಅರೇಬಿಯಾ, ಪರ್ಷಿಯಾ, ಆಫ್ಘಾನಿಸ್ಥಾನ, ಉತ್ತರ ಭಾರತ ಮತ್ತು ಮೆಡಿಟರೇನಿಯನ್ ದ್ವೀಪಗಳಲ್ಲಿ ಹಾವಳಿಮಾಡಿ ಕ್ಷಾಮ ಮತ್ತು ಅನಾವೃಷ್ಟಿ ತಂದ ಬಗ್ಗೆ ವರದಿಗಳಿವೆ. ಈ ಮಿಡತೆ ಸಾವಿರಾರು ಮೈಲು ವಲಸೆ ಹೋಗುತ್ತದೆ. ಉದಾ: 1881 ರಲ್ಲಿ ಸೈಪ್ರಸ್ ದ್ವೀಪದಲ್ಲಿ 1300 ಟನ್ನುಗಳಷ್ಟು ಇದರ ಮೊಟ್ಟೆಗಳನ್ನು ನಾಶಮಾಡಲಾಯಿತು. 1960 ರಲ್ಲಿ ಸುಡಾನಿನಲ್ಲಿ ಸು. 1100 ಟನ್ ವಿಷಮಿಶ್ರಿತ ಆಹಾರವನ್ನು ಉಪಯೋಗಿಸಿ ಈ ಮಿಡತೆ, ಹಾವಳಿಯನ್ನು ತಡೆಗಟ್ಟಲಾಯಿತು. ಎರಡನೆಯದು ಲೋಕಸ್ಟಾ ಮೈಗ್ರಾಟೋರಿಯಾ. ಇದನ್ನು ವಲಸೆ ಮಿಡತೆ ಎನ್ನುವರು. ಇದರ ಹಾವಳಿ ಯುರೋಪ್, ಆಫ್ರಿಕಾ, ಏಷಿಯಾ, ಬನಿಯೋಷಿಯಾ, ಉತ್ತರ ಆಸ್ಟ್ರೇಲಿಯಾ, ನ್ಯೂಝಿಲಾಂಡ್ ಮತ್ತು ಮಡಗಾಸ್ಕರಗಳಲ್ಲಿ ಹೆಚ್ಚು. ಕೆಂಪು ವಲಸೆ ಮಿಡತೆ (ರೆಡ್ಡ್ ಲೊಕಸ್ಟ್) ಯನ್ನು ನೊಮಾಡಿಕ್ರಿಸ್ ಸೆಪ್ಟಿಂಫೆಸಿಯೇಟಾ ಎನ್ನುತ್ತಾರೆ. ಇದರ ಹಾವಳಿ ಉತ್ತರ ರೋಡೇಶಿಯಾ ಮತ್ತು ಟಾಂಗನೀಕ ದೇಶಗಳಲ್ಲಿ ಜಾಸ್ತಿ.

ಈ ಕುಟುಂಬದಲ್ಲಿ ಹತ್ತು ಉಪಕುಟುಂಬಗಳಿವೆ. ಅವುಗಳಲ್ಲಿ ಲೋಕಸ್ಟಿನೇ ಸಿರ್ಟಾಕಾಂಥಾಕ್ರಿಡಿನೆ, ಅಕ್ರಿಡಿನೆ ಮತ್ತು ಒಡಿಯೋಪೋಡಿನೆ ಉಪಕುಟುಂಬದ ಮಿಡತೆಗಳು ಅನೇಕ ಬೆಳೆಗಳನ್ನು ನಾಶಮಾಡುತ್ತವೆ. ಇವು ಮುಖ್ಯವಾಗಿ ಭತ್ತ, ಜೋಳ ಮತ್ತು ಕಾಫಿ ಬೆಳೆಗೆ ಪೀಡೆಕಾರಕವಾಗಿವೆ.

ಭಾರತ ದೇಶದಲ್ಲಿರುವ ಕೆಲವು ಹಾನಿಕಾರಕ ಮಿಡಿತೆಗಳು.

1. ಭತ್ತದ ಮಿಡತೆ: ಹಿರೋಗ್ಲೈಫಿಸ್ ಪ್ರಭೇದದ ಕೀಟ. ಹೀರೋಗ್ಲೈಫಿಸ್ ಬಾನಿಯನ್, ಹೀರೋಗ್ಲೈಫಿಸ್ ನೈಗ್ರೊರಿಪ್ಲೆಟಸ್ ಮತ್ತು ಹೀರೋಗ್ಲೈಫಿಸ್ ಓರೈಝಿಓರಸ್ ಪ್ರಭೇದದ ಮಿಡತೆಗಳಲ್ಲಿ ಬಾನಿಯನ್ ಪ್ರಭೇಧದ ಮಿಡತೆಯ ಹಾವಳಿ ಭತ್ತಕ್ಕೆ ಹೆಚ್ಚು. ಬಾನಿಯನ್ ಪ್ರಭೇಧದ ಮಿಡತೆಗಳ ಬಣ್ಣ ಹಸಿರು. ಬೆನ್ನ ಮೇಲೆ ಮೂರು ಅಡ್ಡ ಕಪ್ಪು ಗೆರೆಗಳಿವೆ. ಹೆಣ್ಣು ಮಿಡತೆಗಳು, 3.5 ಸೆಂಮೀ ದಿಂದ 5.5 ಸೆಂಮೀ ಉದ್ದವಿದ್ದು. ಗಂಡುಗಳು 3 ರಿಂದ 4 ಸೆಂಮೀ ಉದ್ದವಿರುತ್ತವೆ. ವರ್ಷದಲ್ಲಿ ಒಂದು ಹೆಣ್ಣು ಮಿಡತೆ 100 ರಿಂದ 150 ಮೊಟ್ಟೆಗಳನ್ನಿಡುತ್ತದೆ. ಇದು ಭಾರತವು ಸೇರಿದಂತೆ, ಪಾಕಿಸ್ಥಾನ, ಶ್ರೀಲಂಕಾ, ವಿಯಟ್‌ನಾಮ್, ತೈಲಂಡ್ ಮತ್ತು ದಕ್ಷಿಣ ಚೀನಾಗಳಲ್ಲಿ ಭತ್ತದ ಬೆಳೆಗೆ ಹಾವಳಿ ಉಂಟು ಮಾಡುತ್ತದೆ. ಅಕ್ಟೋಬರ್ ಮತ್ತು ನವ್ವಂಬರ್ ತಿಂಗಳುಗಳಲ್ಲಿ ಭತ್ತದ ಗದ್ದೆಯ ಬದುಗಳಲ್ಲಿ 6 ರಿಂದ 8 ಸೆಂಮೀ ಆಳದಲ್ಲಿ ಗುಂಪಾಗಿ ಮೊಟ್ಟೆ ಇಡುತ್ತದೆ. ಮುಂದಿನ ವರ್ಷ ಮಳೆಯಾದ ಮೇಲೆ ಈ ಮೊಟ್ಟೆಗಳಿಂದ ಅಪ್ಸರೆ ಮರಿಗಳು ಹೊರಬಂದು, ಬದುವುಗಳಲ್ಲಿಯ ಹುಲ್ಲನ್ನು ತಿಂದು ಬೆಳೆಯುತ್ತವೆ. ಭತ್ತದ ಸಸಿಗಳ ನಾಟಿಯಾದ ಮೇಲೆ, ಈ ಸಸಿಗಳ ಎಲೆಯನ್ನು ತಿನ್ನಲು ಆರಂಭಿಸುತ್ತವೆ. ಅಪ್ಸರೆಗಳು (ನಿಂಫ್) ಪ್ರೌಢಾವಸ್ಥೆ ತಲುಪಿ ಮಿಡತೆಗಳಾಗುತ್ತವೆ. ಇವು ಎಲೆ ಮತ್ತು ಕಾಂಡದ ಜೊತೆಗೆ ಭತ್ತದ ತೆನೆಯನ್ನು ತಿಂದು ನಷ್ಟ ಮಾಡುತ್ತವೆ. ಈ ಮಿಡತೆ ಭತ್ತದ ಜೊತೆಗೆ ಕಬ್ಬು, ಜೋಳ, ಸಜ್ಜೆ ಮತ್ತು ಇತರ ಹಸಿರು ಹುಲ್ಲಿನ ಪ್ರಭೇಧದ ಸಸ್ಯಗಳನ್ನು ತಿನ್ನುತ್ತವೆ.



ಹೈರೋಗ್ಲೈಫಿಸ್ ಪ್ರಭೇದ (ಭತ್ತದ ಮಿಡತೆ)

2. ಭತ್ತದ ಸಣ್ಣ ಮಿಡತೆ: ಆಕ್ಸಿಯಾ ಚೈನೆನ್ಸಿಸ್ ಇದರ ವೈಜ್ಞಾನಿಕ ಹೆಸರು. ಹೆಣ್ಣು ಮಿಡತೆಗಳು 3 ಸೆಂಮೀ ಮತ್ತು ಗಂಡು ಮಿಡತೆಗಳು 2 ಸೆಂಮೀ ಉದ್ದವಿದ್ದು, ಹಸಿರು ಅಥವಾ ತಿಳಿಕಂದು ಬಣ್ಣದಿಂದಿವೆ. ಈ ಮಿಡತೆಗಳ ಎರಡು ಪಕ್ಕಗಳಲ್ಲಿ ಕಣ್ಣಿನಿಂದ ಎದೆಯವರೆಗೆ ಕಂದು ಬಣ್ಣದ ಗೆರೆಗಳಿರುತ್ತವೆ. ಈ ಮಿಡತೆಗಳು ಚಳಿಗಾಲದಲ್ಲಿ, ಹೂಗಳಲ್ಲಿ 100 ಕ್ಕೂ ಹೆಚ್ಚು ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಯಿಂದ ಹೊರಬಂದ ಅಪ್ಸರೆಗಳು ಪ್ರಾಯಕ್ಕೆ ಬರಲು 100 ದಿನಗಳು ಬೇಕು. ಈ ಮಿಡತೆ ಪ್ರಪಂಚದ ಭತ್ತ ಬೆಳೆಯುವ ನಾನಾ ಭಾಗಗಳಲ್ಲಿ ಹರಡಿವೆ. ಭಾರತ, ಪಾಕಿಸ್ಥಾನ, ಶ್ರೀಲಂಕಾ, ಬರ್ಮಾ, ಇಂಡೋನೇಷಿಯಾ, ಫಿಲಿಫೈಯಿನ್ಸ್, ಕಾಂಬೋಡಿಯಾ, ವಿಯಟ್‌ನಾಮ್, ಜಪಾನ್, ತೈವಾನ್, ಕೊರಿಯಾ, ಚೀನಾ, ನ್ಯೂಗಿನಿ, ಹವಾಯಿ, ಕ್ವೀನ್ಸಲ್ಯಾಂಡ್ ಮತ್ತು ಮಾರಿಷಸ್ ನಲ್ಲಿ ವಾಸಿಸುತ್ತವೆ. ಈ ಮಿಡತೆ ಹೆಚ್ಚಾಗಿ ಜೋಳದ ತೆನೆ, ಮತ್ತು ಹೂಗಳನ್ನು ತಿಂದು ಹಾಳು ಮಾಡುತ್ತದೆ.

3. ರೆಕ್ಕೆಯಿಲ್ಲದ ಮಿಡತೆ: ಕೋಲಮಾನಿಯಾ ಸ್ಫಿನೆರಿಯೋಡಿಸ್ ಇದರ ವೈಜ್ಞಾನಿಕ ಹೆಸರು. ದಕ್ಷಿಣ ಭಾರತದ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಹೆಚ್ಚಾಗಿ ವಾಸಿಸುತ್ತದೆ. ಮುಂಗಾರಿನ ಜೋಳ ಮತ್ತು ಸಜ್ಜೆ ಬೆಳೆಗಳಿಗೆ ಇದರ ಹಾವಳಿ ಹೆಚ್ಚು. ಪ್ರಾಯದ ಮಿಡತೆಗಳಿಗೆ ರೆಕ್ಕೆಗಳಿರುವುದಿಲ್ಲ. ಅವುಗಳ ಬಣ್ಣ ಹಸಿರು ಮಿಶ್ರಿತ ಹಳದಿ, ತಿಳಿಗೆಂಪು ಬಣ್ಣದ ಗೆರೆಗಳು ಶರೀರದ ಎರಡು ಪಕ್ಕದಲ್ಲಿ ಕಣ್ಣಿನಿಂದ ಎದೆಯವರೆಗೂ ಇವೆ. ಕುಡಿಮೀಸೆಗಳ ಬಣ್ಣ ನೀಲಿ ಮಿಶ್ರಿತ ಕಪ್ಪು. ಹೆಣ್ಣು ಮಿಡತೆಯ ಉದ್ದ 2.3 ರಿಂದ 4 ಸೆಂ ಮೀ. ಈ ಮಿಡತೆಗಳು ಮೊಟ್ಟೆಗಳನ್ನು ಗುಂಪಾಗಿ 0.5 ಸೆಂಮೀ ನಿಂದ 1 ಸೆಂಮೀ ಆಳದಲ್ಲಿಡುತ್ತವೆ. ಒಂದು ಹೆಣ್ಣು 100 ಮೊಟ್ಟೆಗಳನ್ನಿಡುತ್ತದೆ. ಈ ಮಿಡತೆ ಒಂದು ವಂಶ (ಜನರೇಷನ್) ಪೂರ್ತಿಯಾಗಲು 10 ರಿಂದ 14 ವಾರಗಳು ಬೇಕು. ಪ್ರಾರಂಭದಲ್ಲಿ ಈ ಮಿಡತೆಯ ಅಪ್ಸರೆಗಳು ಎಲೆಗಳನ್ನು ತಿನ್ನುತ್ತವೆ. ಆದರೆ, ಆಹಾರ ಬೆಳೆಗಳಲ್ಲಿ ತೆನೆಗಳು ಬಂದಂತೆ ಬೆಳೆದ ಅಪ್ಸರೆಗಳು ಮತ್ತು ಮಿಡತೆಗಳು ಹೂ, ಕಾಳುಕಟ್ಟಿದ ತೆನೆಗಳನ್ನು ತಿಂದು ತುಂಬಾ ನಷ್ಟವನ್ನುಂಟುಮಾಡುತ್ತವೆ. ಈ ಮಿಡತೆ ಜೋಳ, ಸಜ್ಜೆ, ನವಣೆ, ರಾಗಿ, ತೊಗರಿ, ಮೆಣಸಿನಗಿಡ, ಹತ್ತಿ ಮತ್ತು ಭತ್ತದ ಬೆಳೆಗಳನ್ನು ತಿನ್ನುತ್ತದೆ. ಬೆಳೆಗಳನ್ನು ಹಾಳುಮಾಡುವ ಈ ಮಿಡತೆಗಳ ಜೊತೆಗೆ ಬೇರೆ ಜಾತಿಯ ಮಿಡತೆಗಳು ಭತ್ತದ ಪಾತಿಗೆ ಹಾವಳಿ ಮಾಡಿ ಹಾನಿಮಾಡುತ್ತವೆ. ಅರ್ಥಾಕ್ರಿಸ್ ಸಿಮುಲಾನ್ಸ್ ರೆಕ್ಕೆಯಿಲ್ಲದ ಮಿಡತೆ ಸಜ್ಜೆ ಮತ್ತು ಹಿಪ್ಪುನೇರಳೆ (ಮಲ್ಬರಿ) ಸಸ್ಯದ ಮೇಲೆ ದಾಳಿ ಇಡುತ್ತದೆ. ಸಿರ್ಟಾಕಾಂಥಾಕ್ರಿಸ್ ರ್‍ಯನೇಸಿಯಾ ದೊಡ್ಡ ಗಾತ್ರದ ಮಿಡತೆ. ಕೆಟಂಟಾಪ್ಸ್ ಅನೆಕ್ಸಸ್ ಸಣ್ಣ ಮಿಡತೆಗಳು ಕೆಲವು ಸಾರಿ ಹತ್ತಿಯ ಬೆಳೆಗೆ ತೊಂದರೆ ಕೊಡುತ್ತವೆ. ಕಾಫಿ ತೋಟಗಳಲ್ಲಿ ಔಲಾರ್ಕಿಸ್ ಮಿಲಿಯೋರಿಸ್ ಮಿಡತೆ ಹಾನಿಯುಂಟು ಮಾಡುತ್ತದೆ. ಈ ಮಿಡತೆಯು ಭಾರತ, ಬರ್ಮಾ, ಶ್ರೀಲಂಕಾ, ಪಾಕಿಸ್ಥಾನ ಮತ್ತು ತೈಲಂಡ್ ದೇಶಗಳಲ್ಲಿ ತೆಂಗಿನ ಗರಿಗಳನ್ನು ತಿನ್ನುತ್ತದೆ. ಇತರೆ ಬೆಳೆಗಳಿಗೆ ಸಹ ಹಾವಳಿ ಮಾಡುತ್ತವೆ. ಕೆಲವು ಮಿಡತೆಗಳು ಹಸಿರು ಗೊಬ್ಬರದ ಗಿಡಗಳ ಮೇಲೆ ದಾಳಿಮಾಡುತ್ತವೆ. ಉದಾ: ಪೊಕಿಲೋಸಿರಸ್ ಪಿಕ್ಟಸ್ ಮಿಡತೆ ಎಕ್ಕ ಗಿಡದ ಎಲೆಗಳನ್ನು ತಿನ್ನುತ್ತದೆ. ಈ ಮಿಡತೆಯು ಅತ್ತಿ, ಕಿತ್ತಳೆ, ಪರಂಗಿ, ಬೆಂಡೆ, ಹರಳು, ಅಲಸಂದಿ, ಬದನೆ ಮತ್ತು ಹತ್ತಿ ಬೆಳೆಗಳನ್ನು ತಿನ್ನುತ್ತದೆ. ಕಾರಣ, ಈ ಎಲ್ಲಾ ಮಿಡತೆಗಳು ಹಾನಿಕಾರಕಗಳು. (ಟಿ.ಎಸ್.ಟಿ.)

**ಅಕ್ಕಿಮೂತಿಹುಳ:** ಅಕ್ಕಿಮೂತಿಹುಳ (ಸೀಡೋಫಿಲಸ್ ಒರೈಝಿ) ವಿಶ್ವವ್ಯಾಪಿ ಕೀಟ. ಇದು ಕೂಡಿಟ್ಟ ಧಾನ್ಯಗಳ ಮೇಲೆ ಹಾವಳಿ ಮಾಡುತ್ತದೆ. ಪ್ರಾಯದ ಹುಳು ಕೆಂಪು ಮಿಶ್ರಿತ ಕಂದು ಬಣ್ಣದಿಂದಿದ್ದು, 4 ಮಿಮೀ ಉದ್ದವಿದೆ. ಎಲೆಟ್ರಾದ ಮೇಲೆ 4 ತಿಳಿಕೆಂಪು ಅಥವಾ ಹಳದಿ ಗುರುತುಗಳಿವೆ. ಇದರ ಹಾವಳಿ ಹೊಲಗಳಲ್ಲಿ ಮತ್ತು ದಾಸ್ತಾನುಗಳಲ್ಲಿ ಹೆಚ್ಚು. ಕೂಡಿಟ್ಟ ಅಕ್ಕಿ ಗೋಧಿ, ಮುಸುಕಿನ ಜೋಳ ಮತ್ತು ಇನ್ನಿತರೆ ಧಾನ್ಯ ಬೆಳೆಗಳಿಗೂ ಬೀಳುತ್ತದೆ. ಪ್ರಾಯದ ಹುಳ ಮತ್ತು ಮರಿಗಳು ಆಹಾರ ಧಾನ್ಯಗಳನ್ನು ತಿಂದು ಉಪಯೋಗಕ್ಕೆ ಬಾರದಂತೆ ಮಾಡುತ್ತವೆ. ಹೆಣ್ಣು ಕಾಳಿನಲ್ಲಿ ರಂಧ್ರ ಮಾಡಿ ಒಂದೊಂದು ಮೊಟ್ಟೆ ಇಟ್ಟು ಮುಚ್ಚುತ್ತದೆ. ಒಂದು ಹೆಣ್ಣು 4 ರಿಂದ 5 ತಿಂಗಳಲ್ಲಿ ಸು. 300–500 ಮೊಟ್ಟೆಗಳನ್ನು ಇಡುತ್ತದೆ. ಇದರ ಜೀವನ ಚರಿತ್ರೆ ಪೂರ್ತಿ ಮಾಡಲು 4 ರಿಂದ 6 ವಾರ ಬೇಕು. ವರ್ಷದಲ್ಲಿ 5 ರಿಂದ 7 ಸಂತತಿಗಳಾಗುತ್ತವೆ. (ಟಿ.ಎಸ್.ಟಿ.)

**ಅಕ್ಷಪ್ರವಣ ಸಿದ್ಧಾಂತ (ಎಕ್ಸಿಯಲ್ ಗ್ರೇಡಿಯಂಟ್ ಥೀಯರಿ):** ಮೊಟ್ಟೆ ಹಾಗೂ ಭ್ರೂಣಗಳು ಬೆಳೆಯುವಾಗ ಮುಂಭಾಗ–ಹಿಂಭಾಗದ ಅಕ್ಷಗಳೆಂದು ನಿರ್ಧಾರವಾಗುವಿಕೆಯನ್ನು ವಿವರಿಸುವ ಸಿದ್ಧಾಂತ. ಬಹುತೇಕ ಕೋಶ ಜೀವಿಗಳು ಮತ್ತು ಕೋಶರಹಿತ ಜೀವಿಗಳು ಮಾದರಿಯಾಗಿ ಧ್ರುವೀಕರಣಗೊಂಡಿವೆ. ಅನೇಕ ಬಹುಕಣ ಜೀವಿ ಮುಂಭಾಗ – ಪಶ್ಚ ಅಕ್ಷವಿದೆ. ಕೆಳಮಟ್ಟದ ಅಂಗಾಂಶ ಮತ್ತು ದೇಹ

ವ್ಯವಸ್ಥೆಯನ್ನು ಪಡೆದ ಹೈಡ್ರಾ ಮತ್ತು ಚಪ್ಪಟೆಹುಳುಗಳು ಪುನರುತ್ಪಾದನೆ ರೀತಿಯ ಸಂತಾನೋತ್ಪತ್ತಿಯನ್ನು ನಡೆಸುತ್ತವೆ. ಹೈಡ್ರಾ ತನ್ನ ದೇಹದ ತುಣುಕೊಂದರಿಂದ ಸಂಪೂರ್ಣ ಜೀವಿಯನ್ನು ಪುನರುತ್ಪಾದಿಸಿಕೊಳ್ಳುವ ಸಾಮರ್ಥ್ಯಪಡೆದಿದೆ. ಅದೇ ಉನ್ನತ ಬಹುಕೋಶಜೀವಿಗಳಲ್ಲಿ ಪುನರುತ್ಪಾದನೆ ಕೇವಲ ಕೋಶ ಅಥವಾ ಅಂಗಾಂಶಗಳ ಬೆಳವಣಿಗೆಗೆ ಸೀಮಿತವಾಗಿದೆ. ಉದಾ: ಹಲ್ಲಿಯಬಾಲ ಪನಃಬೆಳೆಯುವುದು ಅಥವಾ ಮನುಷ್ಯನ ಸಣ್ಣಪುಟ್ಟ ಗಾಯಗಳು ಮಾಯುವುದು, ಇತ್ಯಾದಿ. ಬೆಳೆಯುವ ಅಂಡದಲ್ಲಿ (ಉದಾ: ಕಪ್ಪೆಯ ಮೊಟ್ಟೆ) ಎರಡು ಧ್ರುವಗಳಿವೆ. ಮೇಲಿನ ಧ್ರುವವನ್ನು ಪ್ರಾಣಿ ಧ್ರುವ (ಅನಿಮಲ್ ಪೋಲ್) ಕೆಳಗಿನದನ್ನು ಕಾಯ ಧ್ರುವ (ವೆಜಿಟಲ್ ಪೋಲ್) ಎನ್ನುವರು. ಈ ಧ್ರುವಗಳಿಗೆ ಸಂಬಂಧಿಸಿದಂತೆ ಪ್ರಾಣಿ – ಕಾಯ ಅಕ್ಷವಿದೆ. ಪ್ರಾಣಿಧ್ರುವ ಹೆಚ್ಚು ಜಟಿಲವಾದುದು. ಇಲ್ಲಿ ಹೆಚ್ಚಿನ ಉತ್ಕರ್ಷಣಾ ಚಯಾಪಚಯ ಕ್ರಿಯೆ ನಡೆಯುತ್ತದೆ. ಇಲ್ಲಿಂದ ಕಾಯಧ್ರುವದತ್ತ ಸಾಗಿದಂತೆಲ್ಲ ಉತ್ಕರ್ಷಣ ಚಯಾಪಚಯ ಕ್ರಿಯೆ ಕಡಿಮೆಯಾಗುತ್ತದೆ. ಉಚ್ಚ ಚಯಾಪಚಯವನ್ನುಳ್ಳ ಪ್ರದೇಶ ನೀಚ ಚಯಾಪಚಯ ಕ್ರಿಯೆಯ ಪ್ರದೇಶಕ್ಕಿಂತ ಹೆಚ್ಚು ಪ್ರಧಾನವಾದುದು. ಹೀಗೆ ಪ್ರಾಣಿಗಳಲ್ಲಾಗಲಿ ಅಥವಾ ಅಂಡಗಳಲ್ಲಾಗಲಿ ಕಾಣುವ ಪ್ರಾಣಿ – ಕಾಯ ಅಕ್ಷದ ವ್ಯವಸ್ಥೆಯ ಮಟ್ಟದ ಪ್ರವಣತೆಯನ್ನು ಅಕ್ಷಪ್ರವಣತೆ ಎನ್ನುವರು.

ಕಡಲುಪೋರ (ಸೀ ಅರ್ಚಿನ್) ಜೀವಿಯ ಅಂಡ ಬೆಳವಣಿಗೆಯನ್ನು ಅಕ್ಷ ಪ್ರವಣ ಸಿದ್ಧಾಂತ ವಿವರಣೆಗೆ ಉದಾಹರಣೆಯನ್ನಾಗಿ ತೆಗೆದುಕೊಂಡಿದೆ. ಅಂಡದಲ್ಲಿ ಎರಡು ಧ್ರುವಗಳಿಗೆ ಸಂಬಂಧಿಸಿದಂತೆ ಎರಡು ಅಂಶಗಳಿವೆ. ಇವು ಪರಸ್ಪರ ಪ್ರತೀಕರಿಸುತ್ತವಾದರೂ ಏಕಕಾಲದಲ್ಲಿ ಪರಸ್ಪರ ಪ್ರತಿವರ್ತಿಸುತ್ತವೆ. ಪ್ರತಿ ಅಂಶವು ಮೊಟ್ಟೆಯ ಒಂದೊಂದು ಧ್ರುವದಲ್ಲಿ ತಮ್ಮನ್ನು ಪಟುತ್ವವನ್ನು ಕೇಂದ್ರೀಕರಿಸಿರುತ್ತದೆ. ಈ ಪಟುತ್ವ ಕೇಂದ್ರದಿಂದ ದೂರ ಸಾಗಿದಂತೆಲ್ಲಾ, ಕಡಿಮೆಯಾಗುತ್ತಾ ಪಟುತ್ವ ಪ್ರವಣತೆಯನ್ನುಂಟು ಮಾಡುತ್ತವೆ. ಪ್ರಾಣಿ ಧ್ರುವದ ಪಟುತ್ವವನ್ನು ಪ್ರಾಣಿಕ ಪ್ರವಣತೆ ಮತ್ತು ಕಾಯ ಧ್ರುವದ ಪಟುತ್ವವನ್ನು ಕಾಯಕ ಪ್ರವಣತೆ ಎನ್ನುತ್ತೇವೆ. ಬವೆರಿ (1910), ರಾನ್‌ಸ್ಟ್ರೋಮ್ (1928) ಮತ್ತು ಹೊರ್‌ಸ್ಟಾಡಿಯಸ್ (1928) ಪ್ರಕಾರ ಅಂಡದ ಸಾಮಾನ್ಯ ಬೆಳವಣಿಗೆ ಈ ಎರಡು ಪ್ರವಣತೆಗಳ ಸಮತೋಲನವನ್ನು ಅವಲಂಬಿಸಿದೆ. ಪ್ರಾಣಿಧ್ರುವ ಅಂಶವನ್ನು ದುರ್ಬಲಗೊಳಿಸಿದಲ್ಲಿ ಅಥವಾ ವ್ಯಕ್ತವಾಗದಂತೆ ಮಾಡಿದಾಗ ಕಾಯಧ್ರುವ ಪ್ರಧಾನಗೊಂಡು ಭ್ರೂಣ ಕಾಯೀಕೃತಗೊಳ್ಳುತ್ತದೆ. ಇದರಿಂದ ಕಾಯಪ್ರವಣತೆಗೆ ಸಂಬಂಧಿಸಿದ ಅನ್ನನಾಳದಂತಹ ಭಾಗಗಳು ಮಿತಿಮೀರಿ ಬೆಳೆಯುತ್ತವೆ. ಅದೇ ಕಾಯ ಪ್ರವಣತೆಯನ್ನು ದುರ್ಬಲಗೊಳಿಸಿದಾಗ ಅಥವಾ ವ್ಯಕ್ತವಾಗದಂತೆ ಮಾಡಿದಾಗ ಪ್ರಾಣಿಧ್ರುವ ಪ್ರಧಾನಗೊಂಡು ಭ್ರೂಣವು ಪ್ರಾಣೀಕೃತಗೊಳ್ಳುತ್ತದೆ. ಇದರಿಂದಾಗಿ ಪ್ರಾಣಿ ಪ್ರವಣತೆಗೆ ಸಂಬಂಧಿಸಿದ ಒರಟಾದ ಶಿಲಿಕಾಂಗಗಳ ಶಿಖೆಯಂತಹ ಭಾಗ ಬೆಳೆಯುತ್ತದೆ. ಎರಡು ಪ್ರವಣತೆಗಳು ಸರಿಯಾದ ಸಮತೋಲನೆಯಲ್ಲಿ ಪಟುವಾಗಿದ್ದಾಗ ಶಿಲಿಕೆ ಪಟ್ಟಿ ಹಾಗೂ ಕಂಕಾಲಗಳಂತಹ ಮಾಮೂಲಿನ ಬೆಳವಣಿಗೆಯಲ್ಲಿನ ರಚನೆಗಳು ಬೆಳೆಯುತ್ತವೆ.

ಎರಡು ಪ್ರವಣತೆಗಳ ನಡುವಣ ಸಮತೋಲನವನ್ನು ಅನೇಕ ರೀತಿಯಲ್ಲಿ ಭಂಗಗೊಳಿಸಬಹುದು. ನಿಷೇಚನಗೊಂಡ ಅಂಡವು ವಿದಳನ ಹೊಂದಿ 16 ಕೋಶಗಳ ಅವಸ್ಥೆಯನ್ನು ತಲುಪಿದಾಗ ಅಲ್ಲಿನ ಪ್ರತಿಯೊಂದು ಬ್ಲಾಸ್ಟೊಮಿಯರ್‌ಗಳನ್ನು ಪ್ರತ್ಯೇಕಿಸಿ ಮನಸ್ಸಿಗೆ ಬಂದಂತೆ ಜೋಡಿಸಬಹುದು (ಹೊರ್‌ಸ್ಟಾಡಿಯಸ್, 1935). ಪ್ರತ್ಯೇಕಿಸಿದ ಬ್ಲಾಸ್ಟೊಮಿಯರ್‌ಗಳು ಭ್ರೂಣವಾಗಿ ಬೆಳೆಯುತ್ತವೆ. ಬೆಳೆಯುವಾಗ ಅವು ವಿವಿಧ ಹಂತಗಳ ಪ್ರಾಣೀಕರಣ ಮತ್ತು ಕಾಯೀಕರಣಗಳನ್ನು ತೋರುತ್ತವೆ. ಉದಾ: ಪ್ರಾಣಿ ಪ್ರವಣತೆ ಹಾಗೂ ಪ್ರಾಣೀಕರಣಗಳ ಕಾರಣದಿಂದಾಗಿ ಮೀಸೊಮಿಯರ್‌ಗಳು ಶಿಲಿಕೆಗಳ ಕುಚ್ಚಿನ ಚೀಲವಾಗಿ ಬೆಳೆಯುತ್ತವೆ. ಪ್ರತ್ಯೇಕಿಸಿದ ಮ್ಯಾಕ್ರೊಮಿಯರ್‌ಗಳು ಮತ್ತು ಮೈಕ್ರೊಮಿಯರ್‌ಗಳೂ ಬಹಿರ್‌ವಲನಗೊಂಡ ಅನ್ನನಾಳದೊಂದಿಗೆ ಸಂಪೂರ್ಣವಾಗಿ ಕಾಯೀಕೃತಗೊಂಡ ಭ್ರೂಣವಾಗಿ ಬೆಳೆಯುತ್ತವೆ. ಇದಕ್ಕೆ ಕಾಯಪ್ರವಣತೆ ಮತ್ತು ಕಾಯೀಕರಣಗಳು ಕಾರಣ. ಮೀಸೊಮಿಯರ್ ಮತ್ತು ಮ್ಯಾಕ್ರೊಮಿಯರ್‌ಗಳು ಸಾಮಾನ್ಯ ಭ್ರೂಣವಾಗಿ ಬೆಳೆಯುತ್ತವೆ. ಮ್ಯಾಕ್ರೊಮಿಯರ್‌ಗಳಲ್ಲಿ ಪ್ರಾಣಿ ಪ್ರವಣತೆಯನ್ನು ನಿರೋಧಿಸಿ ಸಮತೆಯನ್ನು ಸಾಧಿಸುವಷ್ಟು ಕಾಯ ಪ್ರವಣತೆಯ ಸಾಮರ್ಥ್ಯವಿದೆ. ಇದರಿಂದಾಗಿ ಮೈಕ್ರೊಮಿಯರ್‌ಗಳ ಅನುಪಸ್ಥಿತಿಯಲ್ಲೂ ಈ ಭ್ರೂಣಗಳಲ್ಲಿ ಮಿಸೆನ್‌ಕೈಮಾ ಮತ್ತು ಕಂಕಾಲಗಳು ಬೆಳೆಯುತ್ತವೆ. ಮೈಕ್ರೊಮಿಯರ್‌ಗಳು ಯಾವ ರೀತಿಯಲ್ಲೂ ಬೆಳೆಯಲಾರವು. ಏಕೆಂದರೆ ಅವು ಜೊತೆಗೂಡದೆ ಬೇರೆ ಬೇರೆಯಾಗಿ ಉಳಿಯುತ್ತವೆ. ಮಿಸೊಮಿಯರ್ (ಹೊರಚರ್ಮ) ಮತ್ತು ಮೈಕ್ರೊಮಿಯರ್‌ಗಳು (ಮೀಸೆನ್‌ಕೈಮಾ) ಸಂಪೂರ್ಣವಾಗಿ ಮಾಮೂಲಿ ಪ್ಲೂಟಿಯಸ್ ಆಗಿ ಬೆಳೆಯುತ್ತವೆ. ಈ ರೀತಿ ಸಂಯೋಜನೆಗೊಳ್ಳುವ ಪ್ರವೃತ್ತಿ ವಿಶೇಷವಾಗಿದೆ. ಸಾಮಾನ್ಯವಾಗಿ ಅನ್ನನಾಳಕ್ಕೆ ಅಗತ್ಯವಾದ ವಸ್ತುವನ್ನು ಸರಬರಾಜು ಮಾಡುವ ಮ್ಯಾಕ್ರೊಮಿಯರ್‌ಗಳ ಅನುಪಸ್ಥಿತಿಯಲ್ಲೂ ಈ ಭ್ರೂಣಗಳಲ್ಲಿ ಅನ್ನನಾಳ ಬೆಳೆಯುತ್ತದೆ. ಮೀಸೊಮಿಯರ್‌ಗಳಲ್ಲಿದ್ದ ಪ್ರಾಣಿಪ್ರವಣತೆ ಮತ್ತು ಮೈಕ್ರೊಮಿಯರ್‌ಗಳಲ್ಲಿದ್ದ ಕಾಯ ಪ್ರವಣತೆಗಳು ಒಟ್ಟಿನಲ್ಲಿರುವುದು ಸಾಮಾನ್ಯ ಬೆಳವಣಿಗೆಗೆ ಅಗತ್ಯವಾದ ಪರಿಸ್ಥಿತಿಗಳನ್ನು ಸೃಷ್ಟಿಸುತ್ತವೆ. ಈ ರೀತಿ ಅಕ್ಷಪ್ರವಣತೆ ಕಡಲುಪೋರ ಅಂಡಗಳಲ್ಲಿ ಮಾತ್ರವಲ್ಲದೆ ಇತರ ಪ್ರಾಣಿ ಅಂಡಗಳಲ್ಲಿ ಇದೆ ಎಂದು ಸಂಶೋಧನೆಗಳ ಮೂಲಕ ಸ್ಪಷ್ಟವಾಗಿದೆ. ಹೀಗೆ ಬೆಳವಣಿಗೆಯಲ್ಲಿನ ಮಾರ್ಪಾಡುಗಳನ್ನು ಸೃಷ್ಟಿಸಲು ಕಾಯ ಅರ್ಧದಿಂದ ಪ್ರಾಣಿ ಅರ್ಧವನ್ನು ಪ್ರತ್ಯೇಕಿಸುವ ಅಗತ್ಯವಿಲ್ಲ. ಅಂಡದ ಪ್ರಾಣಿ, ಕಾಯ ಅಕ್ಷವನ್ನು ನೀಳವಾಗಿ ಹಿಗ್ಗಿಸಿದಾಗ ಅಥವಾ ಅಂಡದ ಸಮಾಭಾಜಕದ ಸುತ್ತಲೂ ರೇಷ್ಮೆದಾರದೆಳೆಯಿಂದ ಬಿಗಿದಾಗ ಭಾಗಶಃ ಪ್ರತ್ಯೇಕಗೊಂಡ ಪ್ರಾಣಿ ಮತ್ತು ಕಾಯ ಧ್ರುವಗಳು ಪೂರ್ಣವಾಗಿ ಪ್ರತ್ಯೇಕಗೊಂಡಂತೆ ಬೆಳೆಯುತ್ತವೆ. ಬೆಳವಣಿಗೆಯಲ್ಲಿ ಹೆಚ್ಚಿನ ಮಾರ್ಪಾಡನ್ನು ವಿವಿಧ ಭೌತಿಕ – ರಾಸಾಯನಿಕ ಅಂಶಗಳಿಂದ ಅಂಡಗಳಲ್ಲಿ ಸಂಸ್ಕರಿಸಬಹುದು.

ರಾನ್‌ಸ್ಟ್ರಾಂ ಲಿಂಡಾಲ್ (1933) ಪ್ರಕಾರ ಪ್ರಾಣೀಕರಣಗೊಳಿಸುವ ಪ್ರಭಾವವು ಪ್ರಾಣಿ ಧ್ರುವದಿಂದ ಕಾಯ ಧ್ರುವದ ಕಡೆಗೆ ಸಾಗಿದಂತೆಲ್ಲ ಕಡಿಮೆಯಾಗುತ್ತದೆ. ಇದು ಪ್ರಾಣೀಕೃತ ವಸ್ತುವಿನ ಪ್ರಮಾಣತೆ ವಿತರಣೆಯಿಂದ ನಡೆಯುತ್ತದೆ. ಇದೇ ರೀತಿ ಕಾಯೀಕರಣಗೊಳಿಸುವ ಪ್ರಭಾವವು ಪ್ರಾಣಿಧ್ರುವದ ಕಡೆಗೆ ಕಾಯಕೃತ ವಸ್ತುವಿನ ಪ್ರವಣತಾ ವಿತರಣೆಯಿಂದ ಕಡಿಮೆಯಾಗುತ್ತವೆ. ರಾನ್‌ಸ್ಟ್ರಾಂ–ಲಿಂಡಾಲ್‌ರ ಈ ಸೈದ್ಧಾಂತಿಕ ಹೇಳಿಕೆಯನ್ನು ಡಾಲ್ಕ್ ಮತ್ತು ಪ್ಯಾಸ್ಟೀಲ್ (1937) ಅನುಮೋದಿಸಿದ್ದಾರೆ. ಈ ದ್ವಿಪ್ರವಣತೆಯ ಸಿದ್ಧಾಂತಕ್ಕೆ ಪ್ರತಿಯಾಗಿ ಚೈಲ್ಡ್ (1940) ಏಕ–ಪ್ರವಣತೆಯು ಕಾಯಧ್ರುವದವರೆಗೆ ಕ್ಷೀಣಿಸುತ್ತಾ ಸಾಗುತ್ತದೆ. ಈ ಎರಡು ಸಿದ್ಧಾಂತಗಳ ಮುಖ್ಯ ವ್ಯತ್ಯಾಸವೆಂದರೆ ಒಂದು ಕಡೆ ಚಯಾಪಚಯ ಕ್ರಿಯೆಯ ಮೇಲೆ ರಾಸಾಯನಿಕ ಸಂಸ್ಕರಣೆಗಳ ನಿರ್ದಿಷ್ಟ ಪರಿಣಾಮವನ್ನು ಅನುಸರಿಸುವುದರ ವಿರುದ್ಧವಾಗಿ ಅಸ್ಪಷ್ಟವಾಗಿ ವಿವರಿಸಿದ ಶಾರೀರ ಕ್ರಿಯಾ ಚಟುವಟಿಕೆಗಳ ಅನಿರ್ದಿಷ್ಟ ನಿರ್ಬಂಧಗಳು, ಅಂದರೆ ಚಯಾಪಚಯ ಕ್ರಿಯೆಗಳ ವಿರುದ್ಧ ಅದರ ಪಟುತ್ವದ ಗತಿಗಳು. ಇತ್ತೀಚೆಗೆ ರುಲಾನ್ (1952) ಪ್ರವಣತಾವಿಧಾನದಲ್ಲಿ ಅಂದರೆ ಪ್ರಾಣಿ–ಕಾಯ ಧ್ರುವ ಪಟುತ್ವದಲ್ಲಿ ಕಿಣ್ವಗಳ ಪಾತ್ರವನ್ನು ತಿಳಿಸಿದ್ದಾನೆ. ಮರಳು ಡಾಲರ್ (ಕಂಟಕಚರ್ಮಿ) ಅಂಡಗಳನ್ನು ಕೆಲವು ನಿರ್ದಿಷ್ಟ ಕಿಣ್ವ ಪ್ರತಿಬಂಧಕಗಳಿಗೆ ಒಳಪಡಿಸಿ ರುಲಾನ್ ತನ್ನ ಹೇಳಿಕೆಯನ್ನು ಸಮರ್ಥಿಸಿದ್ದಾನೆ.

ಬೆಳವಣಿಗೆಯಲ್ಲಿನ ವೈವಿಧ್ಯತೆಗೆ ಚಯಾಪಚಯ ಕ್ರಿಯೆ ಮತ್ತು ಕಿಣ್ವ ಪ್ರಕ್ರಿಯೆಗಳ ಸಂಬಂಧಗಳನ್ನು ವಿಮರ್ಶಿಸುತ್ತ ಹೋಲ್ಟರ್ (1949) ಈ ರೀತಿ ಹೇಳಿದ್ದಾನೆ. ನಿಷೇಚನದಿಂದ ಹಿಡಿದು ಅಂಡವೊಡೆದು ಹೊರಬರುವವರೆಗೂ ಭ್ರೂಣ ಜೀವನದಲ್ಲಿ ನಡೆಯುವ ರಾಸಾಯನಿಕ ಚಯಾಪಚಯ ಕ್ರಿಯೆಗಳ ಹೊನಲಿನಲ್ಲಿ ವಾಸ್ತವವಾಗಿ ನಡೆಯುವ ಸಂರಚನೋತ್ಪತ್ತಿ ಕ್ರಿಯೆಗಳು ಮೇಲ್ಮೈನಲ್ಲಿ ಕಾಣಿಸಿಕೊಳ್ಳುವ ಕಿರುದೆರೆಗಳು ಮಾತ್ರ ಮತ್ತು ಅಲ್ಲಿನ ಪೂರ್ಣ ರಾಸಾಯನಿಕ ಕ್ರಿಯೆಯಲ್ಲಿ ಅವುಗಳ ಪ್ರಮಾಣಾತ್ಮಕ ಪಾಲುದಾರಿಕೆ ತೀರಾ ಅಲ್ಪ. ಒಟ್ಟು ಚಯಾಪಚಯ ಕ್ರಿಯೆ ಮತ್ತು ಕಿಣ್ವಗಳ ಸಾಮಾನ್ಯ ವಿತರಣೆಯನ್ನು ಅಭ್ಯಸಿಸುವುದರಿಂದ ಈ ಕಿರುದೆರೆಗಳಿಗೆ ಕಾರಣವಾಗುವ ಯಾಂತ್ರಿಕತೆಗಳನ್ನು ನಾವು ಬಹಿರಂಗಗೊಳಿಸಬಲ್ಲೆವು ಎಂಬುದು ಸಂಶಯಾತ್ಮಕ ಸಂಗತಿ. ಈಗ ಅಂಡ ಮತ್ತು ಭ್ರೂಣದ ಸಾಮಾನ್ಯ ಜೀವ ರಸಾಯನಶಾಸ್ತ್ರದ ಬಗ್ಗೆ ಗಮನಾರ್ಹ ಫಲಿತಾಂಶಗಳನ್ನು ಪಡೆಯುತ್ತಿದ್ದೇವೆ. ಆದರೆ ಸಂರಚನೋತ್ಪತ್ತಿಯ ನಿರ್ಣಾಯಕಗಳು ಕಿಣ್ವರಸಾಯನ ಶಾಸ್ತ್ರಜ್ಞನಿಗೆ ನಿಲುಕದ ಸಮಸ್ಯೆಯಾಗಬಹುದು. (ಬಿ.ಕೆ.ಜೆ.)

**ಅಗಾಮ:** ಸರಿಸೃಪ ವರ್ಗದ ಅಗಾಮಿಡೆ ಕುಟುಂಬದ ಸದಸ್ಯ. ಇದರ ಸಾಮಾನ್ಯ ಹೆಸರು ಹಲ್ಲಿ. ಗುಂಪಾಗಿ ಜೀವಿಸುವ ಸಂಘ ಜೀವಿ. ಒಂದು ಗುಂಪಿನಲ್ಲಿ 25 ಸದಸ್ಯ ಹಲ್ಲಿಗಳಿರುತ್ತವೆ. ಈ ಗುಂಪಿನ ಒಡೆಯ ಗಂಡು ಅಗಾಮ. ಶರೀರವು ಬಲಿಷ್ಠವಾಗಿದ್ದು ಉದ್ದವಾದ ತಲೆ, ಬಾಲ ಮತ್ತು ಕಾಲುಗಳನ್ನು ಹೊಂದಿದೆ. ದೇಹದಲ್ಲಿ ಹಳದಿ, ಕೆಂಪು ಮಿಶ್ರಿತ ಬಣ್ಣವಿದ್ದು, ತ್ರಿಕೋಣಕಾರದ ತಲೆ ಇದೆ. ತಲೆಯ ಪಕ್ಕದಲ್ಲಿ ಸುಸ್ಪಷ್ಟವಾದ ಕಿವಿಯ ತಮಟೆ ಇದೆ. ಬಾಲದ ತುದಿ ಮೊನಚಾಗಿದೆ. ಇದಕ್ಕೆ ಬಾಲವನ್ನು ಪುನರುತ್ಪಾದಿಸಿ ಕೊಳ್ಳುವ ಸಾಮರ್ಥ್ಯವಿಲ್ಲ. ಅಗಾಮ ಶಿಲಾವೃತ ಮರಳುಗಾಡು ಉಷ್ಣವಲಯದ ಹುಲ್ಲುಗಾವಲುಗಳಲ್ಲಿ ಜೀವಿಸುತ್ತದೆ. ಒಟ್ಟು 60 ಪ್ರಭೇದಗಳನ್ನು ತಜ್ಞರು ಗುರುತಿಸಿದ್ದಾರೆ. ಇದರ ಸಂತತಿ ಪ್ರಮುಖವಾಗಿ ಆಫ್ರಿಕಾ, ದಕ್ಷಿಣ ಪಶ್ಚಿಮ ಏಷ್ಯ, ಯೂರೋಪ್ ದೇಶಗಳಲ್ಲಿ ವ್ಯಾಪಿಸಿವೆ. ಅಗಾಮ ಅಗಾಮ ಮಧ್ಯ ಆಫ್ರಿಕಾದಲ್ಲಿ ವಾಸಿಸುತ್ತದೆ. ದಕ್ಷಿಣ ಆಫ್ರಿಕಾದ ಕಲ್ಲು ಬಂಡೆಗಳ ಮೇಲಿರುವ ಪ್ಲಾನಿಸೆಪ್ಸ್ ಅಗಾಮ ಸಸ್ಯಾಹಾರಿ. ಗಂಡಿನ ತಲೆ ಮತ್ತು ಬಾಲ ಕೆಂಡದಂತೆ ಕೆಂಪಾಗಿದ್ದು ಮುಂಡ ನೀಲಿ ಮಿಶ್ರಿತ ಕಪ್ಪು ಬಣ್ಣದಿಂದ ಕೂಡಿದೆ.

ಬಂಡೆಗಳ ಬುಡದಲ್ಲಿ ಅವಿತಿದ್ದು ಎಳೆಬಿಸಿಲಿನಲ್ಲಿ ಮೈ ಕಾವು ಪಡೆದು ವರ್ಣ ರಂಜಿತವಾಗುತ್ತದೆ. ಕೀಟಾಹಾರಿಯಾದ ಇವು ಒಟ್ಟಾಗಿ ಅಥವಾ ಒಂಟಿಯಾಗಿ ಬೇಟೆಯಾಡುತ್ತವೆ. ಗಂಡಿನಲ್ಲಿ ಬಾಲದ ಮುಂದಿರುವ ಕ್ಲೋಯಕ ರಂಧ್ರದ ಮುಂದೆ ಹುರುಪೆಗಳಿವೆ. ಹೆಣ್ಣು ದೇಹಾಕೃತಿಯಲ್ಲಿ ಭಿನ್ನತೆಯಿಲ್ಲ.

ಹೆಣ್ಣು ಸಣ್ಣ ಕುಳಿಯೊಂದರಲ್ಲಿ 4 ರಿಂದ 6 ಮೊಟ್ಟೆ ಇಡುವುದು. ವಾತಾವರಣದ ತೇವಾಂಶವನ್ನು ಹೀರಿಕೊಂಡ ಮೊಟ್ಟೆಗಳು ಹಿಗ್ಗಿ ಭಾರವಾಗುತ್ತವೆ. 2–3 ತಿಂಗಳ ನಂತರ ಮರಿಗಳು ಮೊಟ್ಟೆಯಿಂದ ಹೊರಬರುತ್ತವೆ. ಸುಮಾರು ಒಂದೂವರೆ ವರ್ಷದಲ್ಲಿ ಪ್ರೌಢಾವಸ್ಥೆ ತಲುಪಿ ನಂತರ ಸ್ವಾವಲಂಬಿಯಾಗಿ ಜೀವನ ನಡೆಸುತ್ತವೆ. (ಟಿ.ವಿ.ಎಚ್.)

**ಅಗೂಟಿ ವರ್ಣ ಮಾದರಿ:** ರಾಡೆನ್ಷಿಯಾ ಗಣದ ಕೇವಿಡೆ ಕುಟುಂಬಕ್ಕೆ ಸೇರಿದ ಮೂಷಿಕದ ಹೆಸರಿನಿಂದ ಈ ವರ್ಣ ಮಾದರಿ ಉದ್ಭವವಾಗಿದೆ. ಈ ವಿನ್ಯಾಸವು ತುಪ್ಪಳದ ಮೇಲಿನ ಕೂದಲುಗಳಲ್ಲಿರುವ ಎರಡು ವರ್ಣಗಳ ಸಂಮಿಶ್ರಣದಿಂದ ಉಂಟಾಗುತ್ತದೆ. ಕೂದಲಿನ ಹೆಚ್ಚಿನ ಭಾಗವು ಕಪ್ಪಾಗಿದ್ದು ತುದಿ ಮಾತ್ರ ಹಳದಿ ವರ್ಣದ್ದಾಗಿರುತ್ತದೆ. ಅಗೂಟಿ ಮಾದರಿಯ ವರ್ಣವು ನಾರ್ವೆ ಇಲಿ, ಅಳಿಲು, ಮೊಲ, ಗಿನೀ ಹಂದಿಗಳು ಪ್ರಾಣಿಗಳಲ್ಲಿ ಕಂಡು ಬರುತ್ತದೆ. ವರ್ಣ ತಂತುಗಳಲ್ಲಿರುವ ‘C’ ಮತ್ತು ‘A’ ಎಂಬ ಎರಡು ಗುಣಾಣುಗಳ ಮಿಶ್ರಣದಿಂದುಂಟಾಗುವ ಈ ವರ್ಣ ವಿನ್ಯಾಸಕ್ಕೆ ‘c’ ಮತ್ತು ‘a’ ಎಂಬ ಅಲೀಲುಗಳಿವೆ. ಪ್ರತಿ ಪ್ರಾಣಿಗಳಲ್ಲಿಯೂ ಈ ಎರಡೂ ಗುಣಾಣುಗಳೂ ಒಟ್ಟಿಗೇ ಇದ್ದು ಕೆಲಸ ನಿರ್ವಹಿಸುತ್ತವೆ. CCaa ಹಾಗೂ Ccaa ಗುಣಾಣುಗಳಿರುವ ಪ್ರಾಣಿ ಕಪ್ಪಾಗಿಯೂ, ccaa, ccAA ಹಾಗೂ ccAa ಗುಣಾಣುಗಳಿದ್ದರೆ ಬಿಳಿಯಾಗಿಯೂ CCAA, CcAA, CcAa ಹಾಗೂ CCAa ಗುಣಾಣುಗಳಿದ್ದರೆ ಅಗೂಟಿ ವರ್ಣವನ್ನೂ ಪಡೆಯುತ್ತವೆ. ಇದು ಅಗೂಟಿ ಮಾದರಿಯ ಗುಣಾಣುಗಳ ಮಿಶ್ರಣ ಕ್ರಿಯೆಗೆ ಉತ್ತಮ ಉದಾಹರಣೆ. CCaa ಕಪ್ಪು ಮತ್ತು ccAA ಬಿಳಿ ಮೂಷಿಕಗಳಿಂದಾಗುವ ತಳಿಗಳು 9:3:4. ಅಂಶಗಳಲ್ಲಿ ಅಗೂಟಿ, ಕಪ್ಪು ಹಾಗು ಬಿಳಿವರ್ಣವನ್ನು ಹೊಂದಿರುತ್ತವೆ. ಮೊಲಗಳಲ್ಲಿ ಈ ವರ್ಣ ಮಾದರಿಗಳು ಮೃತ್ಯುಕಾರಕ ಗುಣಾಣುಗಳಿಗೆ ಉದಾಹರಣೆ. (ಎಸ್.ಎನ್.ಎಚ್.)

**ಅಗೂಟೀ:** ರಾಡೆನ್ಷಿಯ ಗಣದ ಕೇವಿಡೆ ಕುಟುಂಬಕ್ಕೆ ಸೇರಿದ ಮೂಷಿಕ ಸ್ತನಿ. ಗಾತ್ರದಲ್ಲಿ ಮೊಲದಷ್ಟು ದೊಡ್ಡದು. ಬಣ್ಣ ಕಂದು, ಕೂದಲು ಒರಟು, ಬಾಲ ಚಿಕ್ಕದು. ಇದು ನಿಶಾಚರಿ ಪ್ರಾಣಿ. ಅರಣ್ಯದಲ್ಲಿ ಹಗಲು ಹೊತ್ತು ಗಿಡಗಳ ಪೊದರು ಅಥವಾ ಸಣ್ಣ ಗಿಡಗಳ ಮಧ್ಯದಲ್ಲಿ ಕಟ್ಟಿದ ಗೂಡಿನಲ್ಲಿ ಅವಿತುಕೊಂಡಿದ್ದು, ರಾತ್ರಿ ಹೊತ್ತಿನಲ್ಲಿ ಹೊರಬಂದು ಆಹಾರ ಹುಡುಕುತ್ತದೆ. ಇದರ ಆಹಾರ ಬೇರು, ಎಲೆ, ಕಾಯಿ. ಅಗೂಟಿ ಇಲಿ ಟ್ರಿನಿಡಾಡ್ ಮತ್ತು ಗಿನಿ ಪ್ರದೇಶಗಳಲ್ಲಿ ಜೀವಿಸುತ್ತದೆ. ಈ ಭಾಗದಲ್ಲಿ ಬೆಳೆಯುವ ಕಬ್ಬು, ಬಾಳೆ ತೋಟಗಳಿಗೆ ಬಹಳ ಉಪದ್ರವಕಾರಿಯೆನಿಸಿದೆ. ಅಗೂಟಿ ಉತ್ತಮ ಈಜುಗಾರ. ನೀರಿನಲ್ಲಿ ಈಜುತ್ತಾ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡುತ್ತದೆ. (ಎಸ್.ಬಿ.ಎಂ.)

**ಅಗ್ರೋಮೈಸಿಡೆ:** ಕೀಟವರ್ಗದ ಡಿಪ್ಟಿರಾಗಣದ ಒಂದು ಕುಟುಂಬ. ಎಲೆಗಳಲ್ಲಿ ಲಾರ್ವ ಸುರಂಗ ಮಾಡಿಕೊಂಡು ಜೀವಿಸುವುದರಿಂದ ಎಲೆಸುರಂಗದ ನೊಣಗಳು (ಲೀಫ್ ಮೈನರ್ಸ್) ಎಂಬ ಹೆಸರಿದೆ. ಶರೀರ ಸೂಕ್ಷ್ಮವಾಗಿದೆ. ಉದ್ದ ೧.೪ ರಿಂದ ೪.೦ ಮಿಮೀ. ಬಣ್ಣ ಕಪ್ಪು ಅಥವಾ ಹಳದಿ ಲಾರ್ವದ ಶರೀರ ದುಂಡಗಿದ್ದು, ಮುಂಭಾಗದಲ್ಲಿ ಚೂಪಾಗಿ ಉದರದ ಕೊನೆಯ ಖಂಡದ ಕೆಳಭಾಗದಲ್ಲಿ ಹೀರುನಳಿಕೆಯಂಥ ಅಂಗವಿರುತ್ತದೆ. ಮರಿಗಳು, ಎಲೆಗಳಲ್ಲಿ ಮಾಡಿದ ಸುರಂಗದಲ್ಲಿ ಅಥವಾ ಮಣ್ಣಿನಲ್ಲಿ ಕೋಶಾವಸ್ಥೆ ಹಂತ ಪೂರೈಸುತ್ತವೆ. ವಿವಿಧ ಜಾತಿ ಪ್ರಭೇದಗಳನ್ನು ಗುರುತಿಸಲು ಎಲೆಗಳಲ್ಲಿ ಲಾರ್ವ ಮಾಡುವ ಸುರಂಗಗಳ ಮಾದರಿಯನ್ನು ಆಧಾರವಾಗಿಟ್ಟುಕೊಳ್ಳಲಾಗುತ್ತದೆ. ಮರಿಗಳು ವಿವಿಧ ರೀತಿಯ ನುಲಿಕೆಗಳಾಗಿ ಎಲೆಗಳಲ್ಲಿ ಸುರಂಗ ಮಾಡುತ್ತವೆ. ಆದರೆ ತೊಗರಿಕಾಯಿಗೆ ಬೀಳುವ ಅಗ್ರೋಮಿಕ್ಟೋಸ್ ಅಬ್ಟುಸ ನೊಣ ತನ್ನ ಸೂಕ್ಷ್ಮವಾದ ಮೊಟ್ಟೆಗಳನ್ನು ಎಳೆ ತೊಗರಿಕಾಯಿಯೊಳಗೆ ಇಡುತ್ತದೆ. ಈ ಮೊಟ್ಟೆಗಳಿಂದ ಹೊರ ಬಂದ ಲಾರ್ವಗಳು ಕಾಳಿಗೆ ಹೋಗಿ ಅದನ್ನು ತಿಂದು ಜೀವಿಸುತ್ತವೆ. ಕ್ರಿಪ್ಟೋಕೀಟ ಜಾತಿಯ ಲಾರ್ವಗಳು ಕಾಕ್ಸಿಡೆ ಕುಟುಂಬಕ್ಕೆ ಸೇರಿದ ಕೀಟಗಳ ಶರೀರದಲ್ಲಿ ಸೇರಿಕೊಂಡು ಪರತಂತ್ರ ಜೀವನ ನಡೆಸುತ್ತವೆ. ಕ್ರಿಪ್ಟೋಕೀಟಂ ಐಸೆರ್ಯ ನೊಣ ಕಿತ್ತಳೆ ಮತ್ತು ಸರ್ವೆ ಮರಕ್ಕೆ ಹಾನಿ ಮಾಡುವ ಕೀಟ. ಇದು ಐಸೆರ್ಯ ಪರ್ಚೇಸಿ ಎಂಬ ಕಾಕ್ಸಿಡೆ ಕುಟುಂಬದ ಕೀಟಗಳ ಶರೀರದಲ್ಲಿ ಮೊಟ್ಟೆಯಿಡುತ್ತದೆ. ಮರಿಗಳು ಆ ಕೀಟಗಳ ಶರೀರದೊಳಗೆ ಸೇರಿಕೊಂಡು ಪರತಂತ್ರ ಜೀವನ ನಡೆಸುತ್ತವೆ. ಹಾಗೂ ಆಶ್ರಯದಾತ ಕೀಟವನ್ನು ನಾಶಪಡಿಸುತ್ತವೆ. ನೀಲಗಿರಿ ಮತ್ತು ಕೊಡೈಕನಾಲ್ ಪ್ರದೇಶಗಳ ಕಿತ್ತಳೆ ತೋಟಗಳಿಗೆ ಐಸೆರ್ಯ ಪರ್ಚೇಸಿ ಒಂದು ಅಪಾಯಕಾರಿ ಕೀಟವಾಗಿ ಪರಿಣಮಿಸಿದೆ. ಈ ಕೀಟದ ಭಾದೆ ನಿವಾರಿಸಲು ಕ್ರಿಪ್ಟೋಕೀಟಂ ಐಸೆರ್ಯವನ್ನು ರೈತರು ಬಳಸುತ್ತಿರುವ ಬಗ್ಗೆ ವರದಿಗಳಿವೆ. (ಜಿ.ಕೆ.ವಿ.)

**ಅಜಗರ:** ಪೈಥಾನ್ ಪ್ರಭೇದದ ದೈತ್ಯ ಹಾವು. ಹೆಬ್ಬಾವು ಸಾಮಾನ್ಯ ಹೆಸರು. ಏಷ್ಯಾ, ಆಫ್ರಿಕ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ಕಾಡಿನಲ್ಲಿ ಗಿಡಮರಗಳ ರೆಂಬೆಯ ಮೇಲೆ ಇರುತ್ತವೆ. ಗಾತ್ರದಲ್ಲಿ ತುಂಬ ದೊಡ್ಡವಾಗಿದ್ದು, 9 ಮೀ ಉದ್ದ ಬೆಳೆಯುತ್ತವೆ. ಮರವನ್ನು ಹತ್ತಬಲ್ಲವು. ನೀರಿನಲ್ಲಿ ಈಜಬಲ್ಲವು. ಇವು ಬಹುತೇಕ ಅಂಡಜಗಳು. ದೇಹಶಕ್ತಿ ಅಪಾರ. ಸಣ್ಣ ಪುಟ್ಟ ಪ್ರಾಣಿಗಳಾದ ಮೊಲ, ಜಿಂಕೆಗಳನ್ನು ಹಾಗೆಯೇ ನುಂಗಿ, ಅನಂತರ ತಮ್ಮ ದೇಹವನ್ನು ಮರಗಳಿಗೆ ಸುತ್ತಿಕೊಂಡು ತಿಂದ ಪ್ರಾಣಿಗಳನ್ನು ಪುಡಿಮಾಡಿ ಅರಗಿಸಿಕೊಳ್ಳುತ್ತವೆ. ಇವುಗಳ ಅಸಾಧ್ಯ ಶಕ್ತಿ ಮನುಷ್ಯನಿಗೂ ಮಾರಕವಾಗಬಹುದು. ಕೆಲವೊಮ್ಮೆ ಮಕ್ಕಳನ್ನು ನುಂಗಿದ ನಿದರ್ಶನಗಳಿವೆ. ಆದರೂ ಇವು ವಿಷದ ಜಾತಿಯವಲ್ಲ. ದೇಹದ ಬಣ್ಣ ಚೆನ್ನಾಗಿರುತ್ತದೆ. ಭಾರತದಲ್ಲಿ ಪೈಥಾನ್ ಮಾಲುರಸ್ ಎಂಬ ಪ್ರಭೇದ ಕಂಡು ಬಂದಿದೆ. ಇದು 8 ಮೀ ಉದ್ದವಿದ್ದು ತುಂಬ ದಪ್ಪವಾಗಿರುತ್ತದೆ. ನೋಡಿ – ಹೆಬ್ಬಾವು. (ಕೆ.ಎಂ.ಪಿ.)

**ಅಟ್ಲಾಸ್ ಮತ್ತು ಅಕ್ಷ:** ಇವು ಆಮ್ನಿಯೋಟ ಕಶೇರುಕಗಳ, ಕಶೇರು ಸ್ಥಂಭದ ಮೊದಲನೆಯ ಮತ್ತು ಎರಡನೆಯ ಕಶೇರು ಮಣಿಗಳು. ಉಳಿದ ಕಶೇರು ಮಣಿಗಳಿಂದ ಇವು ಭಿನ್ನವಾಗಿದ್ದು ತಮ್ಮದೇ ವಿಶೇಷ ಲಕ್ಷಣಗಳನ್ನು ಪಡೆದಿವೆ. ಗ್ರೀಕ್ ಪುರಾಣ ಕತೆಗಳಲ್ಲಿ ಹರ್‌ಕ್ಯುಲಿಸ್‌ನ ಸಾಹಸಗಳಲ್ಲಿ ಅಟ್ಲಾಸ್ ಎಂಬವನ ಪ್ರಸಂಗ ಬರುತ್ತದೆ. ಆತ ಭೂಮಿಯನ್ನು ತನ್ನ ಭುಜಗಳ ಮೇಲೆ ಹೊತ್ತು ನಿಂತಿದ್ದಾನೆಂಬುದು ಪ್ರತೀತಿ. ಈ ಕಶೇರುಮಣಿಯು ತನ್ನಮೇಲೆ ಬೃಹದ್ ತಲೆಬುರುಡೆಯನ್ನು ಹೊತ್ತು ನಿಂತಿರುವುದು ಅಟ್ಲಾಸ್‌ನ ನೆನಪು ತರುತ್ತದಾದುದರಿಂದ ಇದಕ್ಕೆ ಅಟ್ಲಾಸ್ ಎಂಬ ಹೆಸರು ಬಂದಿತು.

ಇದರ ನರಕಮಾನು, ರಕ್ತಕಮಾನುಗಳು ಮರೆಯಾಗಿವೆ. ಇದು ಉಂಗುರಾಕಾರದ ರಚನೆಯಾಗಿ ಮಾರ್ಪಟ್ಟು ಮುಂದಿನ ಮುಖಭಾಗದಲ್ಲಿ ತಲೆಬುರುಡೆಯ ಗುಳುಪುಗಳೊಂದಿಗೆ ಕೀಲಿಸಿಕೊಳ್ಳಲು ಒಂದು ಅಥವಾ ಎರಡು ತಗ್ಗುಗಳಿರುತ್ತವೆ. ಎರಡನೆಯದಾದ ಅಕ್ಷ ಕಶೇರುಮಣಿಯು ಹೆಚ್ಚು ಮಾರ್ಪಾಟುಗಳನ್ನು ತೋರುವುದಿಲ್ಲ. ಇದರ ಮುಮ್ಮುಖದ ತಳಭಾಗದಲ್ಲಿ ನೇಗಿಲಿನಂತೆ ಬಾಗಿದ ಓಡಂಟಾಯಿಡ್ ಪ್ರವರ್ಧವೊಂದಿದೆ. ಇದರ ಅಕ್ಷದ ಮೇಲೆ ವಾಸ್ತವವಾಗಿ ಅಟ್ಲಾಸ್ ಕಶೇರುಮಣಿಯು ತಿರುಗುತ್ತದೆ. ಓಡಂಟಾಯಿಡ್ ಪ್ರವರ್ಧವು ನಿಜವಾಗಿಯೂ ಅಟ್ಲಾಸ್ ಕಶೇರುಮಣಿಯ ಕೇಂದ್ರಭಾಗ. ತನ್ನ ಕಶೇರುಮಣಿಯಿಂದ ಪ್ರತ್ಯೇಕಗೊಂಡು ಹಿಂದಿದ್ದ ಆಕ್ಸಿಸ್ ಕಶೇರುಮಣಿಗೆ ಕೂಡಿಕೊಂಡಿದೆ. ಅಸ್ಥಿರಜ್ಜುವಿನ ನೆರವಿನಿಂದ ಅಟ್ಲಾಸ್ ಕಶೇರುಮಣಿಯ ಒಳಭಾಗದಲ್ಲಿ ನಿಂತಿದೆ. (ಎಚ್.ಬಿ.ಡಿ.)

**ಅಡಿಸನ್ನನ ರೋಗ:** ಮೂತ್ರಪಿಂಡಗಳ ಮೇಲಿರುವ ನಾಳರಹಿತ ಅಡ್ರಿನಲ್ ಗ್ರಂಥಿಗಳ ರಗಟೆ (ಕಾರ್ಟೆಕ್ಸ್) ಕೆಡುವುದರಿಂದ ಉಂಟಾಗುವ ರೋಗ. ಈ ರೋಗದ ಲಕ್ಷಣಗಳನ್ನು ಮೊದಲು ಥಾಮಸ್ ಅಡಿಸನ್ (1855) ವಿವರಿಸಿದ. ಅಡ್ರಿನಲ್ ರಗಟೆಯ ನಿಜಕೆಲಸದಿಳಿತವೆಂದೂ ಕರೆಯಬಹುದು. ರಕ್ತಕೊರೆ, ಕಂದು ಬಣ್ಣಕ್ಕೇರಿದ ಚರ್ಮ, ಬಾಯೊಳಗೆ ಕಂದು ಕಲೆಗಳು, ಅತಿಯಾದ ಆಲಸಿಕೆ, ನಿತ್ರಾಣ, ಗುಂಡಿಗೆಯ ದುರ್ಬಲ ಬಡಿತ, ರಕ್ತ ಒತ್ತಡದ ಇಳಿವರಿ, ಮನೋದೌರ್ಬಲ್ಯ, ನಿಧಾನವಾಗಿ ಈ ರೋಗದಲ್ಲಿ ಕಾಣಿಸಿಕೊಳ್ಳುತ್ತವೆ. ಹೆಂಗಸರಿಗಿಂತ ಗಂಡಸರಲ್ಲಿ ಹೆಚ್ಚು. ಎಳೆಯರಿಗಿಂತಲೂ 30 ವರ್ಷ ದಾಟಿದವರಲ್ಲಿ ಬರುವುದು ಸಾಮಾನ್ಯ.

ಅಡ್ರಿನಲ್ ಗ್ರಂಥಿಗಳಿಗೆ ಹತ್ತುವ ಕ್ಷಯ, ಕಾರಣವಿಲ್ಲದ ಅನುವಳಿಕೆ, ಗಂತಿ ಬೆಳೆತ ಇಲ್ಲವೇ ಅದರ ಒತ್ತಡ, ಮೈ ತನ್ನ ಅಂಗವನ್ನೇ ಹೊರದೂಡುವ ಕ್ರಿಯೆ–ಇವು ಈ ರೋಗದ ಕಾರಣಗಳು. ಈ ಗ್ರಂಥಿಗಳನ್ನು ತೆಗೆದು ಹಾಕಿದರೂ ಅಷ್ಟೇ. ಈ ರೋಗಕ್ಕೆ ಕ್ಷಯ ಕಾರಣವಾಗಿದ್ದರೆ, ಬೇರೆ ಅಂಗಗಳಲ್ಲೂ ಕ್ಷಯ ಇರುವುದು ಸಾಮಾನ್ಯ. ಮೈಯಲ್ಲಿನ ಸೋಡಿಯಂ, ಪೊಟ್ಯಾಸಿಯಂ, ಕ್ಲೋರೈಡುಗಳ ಹತೋಟಿ, ಮೈಯಲ್ಲಿನ ನೀರಿನ ಸಮತೋಲನ, ಒಟ್ಟು ಕೊಬ್ಬು, ಪ್ರೋಟೀನುಗಳ ಚಯಾಪಚಯ (ಮೆಟಬಾಲಿಸಮ್) ಸಮತೋಲನಗಳಂತಹ ಮುಖ್ಯವಾದ ನಿಜಗೆಲಸಗಳು ಕೆಟ್ಟಿರುವುದರಿಂದ ಹೀಗಾಗುತ್ತದೆ.

ಪೂರಾ ಬಲಿತಿರುವ ರೋಗವನ್ನು ಗುರುತಿಸುವುದು ಕಷ್ಟವಲ್ಲ. ಎಳೆಯದರಲ್ಲಿ ರೋಗವನ್ನು ಗುರುತಿಸಲು ಪ್ರಯೋಗಾಲಯದ ಪರೀಕ್ಷೆಗಳ ನೆರವು ಬೇಕು. ಮೈಚರ್ಮ ವಿಚಿತ್ರ ತೆರನ ಮಂಕುಹಳದಿ ಇಲ್ಲವೇ ಕಂದುಬಣ್ಣಕ್ಕೆ ತಿರುಗುವುದು ಮೊದಲ ಚಿಹ್ನೆಯಾಗಿರಬಹುದು. ಹಿಂದಿನ ಕಾಲದಲ್ಲಿ ಅಡಿಸನ್ನನ ರೋಗದವನ ಪಾಡು ಯಾರಿಗೂ ಬೇಡದಂತಿತ್ತು. ವಿಪರೀತ ಬೆವರಿಕೆ, ವಾಂತಿ, ಉಚ್ಚಾಟ, ಸೋಡಿಯಂ ಕಡಿಮೆಯಿರುವ ಆಹಾರ ಸೇವನೆ, ಹೀಗೆ ಮೈಯಿಂದ ಸೋಡಿಯಂ, ಕ್ಲೋರೈಡುಗಳನ್ನು ಕಳೆಯುವ ಯಾವ ಸ್ಥಿತಿಯಾದರೂ ಸರಿಯೇ, ರೋಗಿಯನ್ನು ಸುಸ್ತುಮಾಡಿ ಸಾಯಿಸುತ್ತಿತ್ತು.

ಮೈದುಡಿತ, ಶಸ್ತ್ರಕ್ರಿಯೆಯ ಒತ್ತಡ, ಅರಿವಳಿಕೆಗಳ (ಅನೀಸ್ತೆಟಿಕ್ಸ್) ಸೇವನೆ ಒಂದೊಂದು ರೋಗಿಗೆ ಗಂಡಾಂತರ ಆಗುತ್ತಿತ್ತು.

ಅಡ್ರಿನಲ್ ರಗಟೆಯ ಕಚ್ಚಾ ಹಾರ್ಮೋನ್ (ರಸದೂತ) ಅನ್ನು 1930ರಲ್ಲಿ ತಯಾರಿಸಿ, ಜೀವಕುತ್ತಿನಲ್ಲಿ ಸಿಕ್ಕಿರುವ ರೋಗಿಗಳಿಗೆ ಕೊಟ್ಟಾಗ ಆಶಾಕಿರಣ ಮೂಡಿತು. ಈ ಹಾರ್ಮೋನ್ ಸುಲಭವಾಗಿ ದೊರೆಯದೆ, ದುಬಾರಿ ಬೆಲೆಯದಾಗಿ ಗುಣದಲ್ಲೂ ನೆಚ್ಚಿಕೊಳ್ಳುವ ಹಾಗಿರಲಿಲ್ಲ. ಅಡಿಗೆ ಉಪ್ಪನ್ನು ಹೇರಳವಾಗಿ ಕೊಟ್ಟರೆ ರೋಗಿ ತುಸು ಚೇತರಿಸಿಕೊಳ್ಳುವನೆಂದು ರಾಬರ್ಟ್ ಲೋಯೆಬ್ (1932) ಕಂಡುಕೊಂಡ. ಮೈಯಲ್ಲಿ ಪೊಟ್ಯಾಸಿಯಂ ಹೆಚ್ಚಾದರೂ ರೋಗ ಹೆಚ್ಚುವುದು (1937) ಗೊತ್ತಾಯಿತು. ಅದೇ ವರ್ಷ ತಯಾರಾದ ಡಿಸಾಕ್ಸಿಕಾರ್ಟಿಕೊಸ್ಟಿರೋನ್ ಮದ್ದಿನಿಂದ ಮೈಯಲ್ಲಿನ ಖನಿಜದ ಚಯಾಪಚಯವನ್ನು ಅಂಕೆಗೊಳಿಸುವಂತಾಗಿ ಅನೇಕ ರೋಗಿಗಳಿಗೆ ಹೆಚ್ಚಿನ ಗುಣ ಕಂಡಿತು. ಆದರೂ ಪೂರ್ತಿ ವಾಸಿ ಮಾಡಲಿಲ್ಲ. ರಕ್ತದಲ್ಲಿನ ಖನಿಜಗಳನ್ನು ಅಂಕೆಗೊಳಿಸುವುದೊಂದೇ ಅಲ್ಲದೆ, ಇನ್ನೂ ಏನೋ ಕೊರತೆ ಇದೆ ಎನ್ನಿಸುತ್ತಿತ್ತು.

ಕೊನೆಯದಾಗಿ 1948ರಲ್ಲಿ ತಯಾರಾದ ಕಾರ್ಟಿಸೋನನ್ನು ಡಿಸಾಕ್ಸಿಕಾರ್ಟಿಕೊಸ್ಟಿರೋನ್‌ನೊಂದಿಗೆ ಸೇರಿಸಿ ದಿನವೂ ರೋಗಿಗೆ ಕೊಟ್ಟಾಗ ರೋಗಿ ಎಂದಿನ ಲವಲವಿಕೆ, ಚಟುವಟಿಕೆಗಳನ್ನು ಮರಳಿ ಪಡೆವಂತಾದ. ಈ ರೋಗಿಗಳಲ್ಲಿ ಕೊರತೆಯಾಗಿರುವ ಕಾರ್ಟಿಸೋನ್ ಮಾತ್ರ ಕೊಟ್ಟರೆ ಮೈಯಿಂದ ಉಪ್ಪು ಹೆಚ್ಚಾಗಿ ಹೊರಬೀಳುವುದರಿಂದ, ಜೊತೆಗೆ ಡಿಸಾಕ್ಸಿಕಾರ್ಟಿಸೋನನ್ನೂ ಕೊಡುತ್ತಿದ್ದರೆ ರೋಗಿ ಆರೋಗ್ಯವಾಗಿರಬಹುದು. ಅಡ್ರಿನಲ್ ರಗಟೆಯ ಅಸಮರ್ಥತೆಯನ್ನು ಹೊರಗಿನಿಂದ ಗ್ಲುಕೋಕಾರ್ಟಿಕಾಯಿಡ್‌ಗಳನ್ನು ನಿರಂತರವಾಗಿ ಕೊಟ್ಟು ಅದರ ಕೊರತೆಯನ್ನು ನೀಗಿಸಿ ರೋಗ ಲಕ್ಷಣಗಳನ್ನು ದೂರ ಮಾಡಿಕೊಳ್ಳಬೇಕು. (ಪಿ.ಎಸ್.ಎಸ್.)

**ಅಡ್ಜುಟೆಂಟ್ ಹಕ್ಕಿ:** ಆಫ್ರಿಕ ಮತ್ತು ಏಷ್ಯ ಖಂಡಗಳ ಕೊಕ್ಕರೆಗಳಲ್ಲಿ ಅತ್ಯಂತ ದೊಡ್ಡದೂ (1.8 – 2.1 ಮೀ.) ವಿಕಾರವೂ ಆದ ಲೆಪ್ಟಾಪ್ಟಿಲಸ್ ಡೂಬಿಯಸ್ ಪ್ರಭೇದದ ಪಕ್ಷಿ. ತಲೆ ನುಣ್ಣಗಿದೆ. ಕೊಕ್ಕು ತುಂಬ ದೊಡ್ಡದು; ಕತ್ತಿನ ಕೆಳಭಾಗದಲ್ಲಿ ಚೀಲ ನೇತಾಡುತ್ತದೆ. ಮಿಲಿಟರಿ ಅಧಿಕಾರಿಗಳಂತೆ ಇದು ಗಂಭೀರವಾಗಿ ನಡೆಯುವುದರಿಂದ ಇದಕ್ಕೆ ಈ ಹೆಸರು ಬಂತು.

ಕೊಕ್ಕು ಗಟ್ಟಿಯಾಗಿ ಬೋಳಾಗಿದೆ. ತಲೆಯನ್ನು ಎಳೆಗೂದಲು ಆವರಿಸಿದೆ. ಗರಿಗಳು ಬಿರುಸಾಗಿವೆ; ನಾಜೂಕಾಗಿಲ್ಲ. ಕಾಲುಗಳು ಉದ್ದ, ಬಲವುಳ್ಳವು; ಅವುಗಳ ಮೇಲೆ ಯಾವ ಹೊದಿಕೆಯೂ ಇಲ್ಲ. ರೆಕ್ಕೆ ಹಗುರವಾಗಿದೆ. ಮನುಷ್ಯರ ವಾಸಸ್ಥಾನಗಳಿಗೆ ಈ ಹಕ್ಕಿ ಹೊಂದಿಕೊಂಡಿದೆ ಮತ್ತು ಹೊಲಸನ್ನು ನಿರ್ಮೂಲ ಮಾಡುವುದರಲ್ಲಿ ಒಳ್ಳೆಯ ಪಾತ್ರವಹಿಸುತ್ತದೆ. ಹಾವುಗಳನ್ನು ತಿನ್ನುತ್ತದಾದರೂ ಹೆಚ್ಚಾಗಿ ಹೆಣಗಳೇ ಇದರ ಆಹಾರ. ಅಲುಗಾಡದೆ ಬೆನ್ನಿಗೆ ಕೊರಳನ್ನು ಚಾಚಿಕೊಂಡು ದೀರ್ಘಕಾಲ ನಿಲ್ಲಬಲ್ಲದು. ಓಡಾಟಗಳೆಲ್ಲ ಹಗಲಿನಲ್ಲೇ. ಉತ್ತರ ಭಾಗದಲ್ಲಿರುವುವು ವಲಸೆಗಾರ ಹಕ್ಕಿಗಳು. ಇಂಡಿಯಾಕ್ಕೆ ಬೇಸಿಗೆಯಲ್ಲಿ ಬರುತ್ತವೆ; ಬೇಸಿಗೆ ಮುಗಿಯುವ ಹೊತ್ತಿಗೆ ಬಂಗಾಳದಲ್ಲಿ ಸಾಧಾರಣವಾಗಿ ಕಾಣಿಸಿಕೊಳ್ಳುತ್ತವೆ. ಇವನ್ನು ಕೊಲ್ಲಬಾರದೆಂದು ಭಾರತ ಸರ್ಕಾರ ಕಾಯಿದೆ ಮಾಡಿದೆ.

ಸಾಮಾನ್ಯವಾಗಿ ಇವು ದೊಡ್ಡ ದೊಡ್ಡ ಹಿಂಡುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಹಾರಾಟ ಅಷ್ಟು ಹಗುರವಲ್ಲ, ರೆಕ್ಕೆಗಳ ಬಡಿತ ಹೆಚ್ಚು; ಆದರೂ ವೇಗವಾಗಿ ತುಂಬ ಎತ್ತರಕ್ಕೂ ಹಾರಬಲ್ಲವು. ಆಫ್ರಿಕದ ಜಾತಿಯ ಹಕ್ಕಿಯ ತಲೆ ಮಾಂಸದಂತೆ ಕೆಂಪಾಗಿದೆ; ಬೆನ್ನಿನ ಬಣ್ಣ ಲೋಹದ ಕಪ್ಪು ಹಸಿರು, ಕೊರಳು ಮತ್ತು ಕೆಳಭಾಗ ಬಿಳಿ. (ಎಂ.ವಿ.ಎ.)

**ಅಡ್ಡಗೂಡಣೆ:** ವೈದ್ಯದಲ್ಲಿ, ಎರಡು ರಕ್ತನಾಳಗಳ (ಧಮನಿಗಳು, ಸಿರಗಳು) ಜಠರ ಕರುಳುಗಳ ಇಲ್ಲವೇ ನರಗಳ ನಡುವೆ ಆಗಿರುವ ಸಂಬಂಧ ಕಲ್ಪನೆ. ಕರುಳಲ್ಲೋ ಜಠರದಲ್ಲೋ, ವಿಷಕಮಗಂತಿ ಹುಣ್ಣಿಗಾಗಿ ಆ ಭಾಗವನ್ನು ಪೂರ್ತಿ ತೆಗೆದು ಹಾಕಿದಾಗ ಆಹಾರ ಮುಂದೆ ಸಾಗಲೀಸುವಂತೆ, ಶಸ್ತ್ರಕ್ರಿಯೆಯಿಂದ ಸಹಜವಾಗಿ ದೂರವಿರುವ ಕರುಳುಗಳಂಥ ಪೊಳ್ಳುಗಳನ್ನೋ ಅಂಗಗಳನ್ನೋ ಕೂಡಿಸುವ ದಾರಿ ಮಾಡುವುದುಂಟು. ಅದೇ ಅಡ್ಡಗೂಡಣೆ (ಅನಾಸ್ಟಮೋಸಿಸ್).

ಧಮನಿಗಳು ಕವಲೊಡೆದು ಕಿರಿಯ ಶಾಖೆಗಳಾಗುತ್ತ ಹೋದಂತೆಲ್ಲ ಪಕ್ಕದವೊಂದಿಗೆ ಕೂಡಿಕೊಳ್ಳುತ್ತವೆ. ಆದರೆ ಫುಪ್ಫುಸ, ತೊರಳೆ, ಮೂತ್ರಪಿಂಡ, ಕಣ್ಣಿನ ಕಣ್ಪಾಲ (ರೆಟೀನ), ಮಿದುಳು, ಗುಂಡಿಗೆಗಳ ಧಮನಿಗಳು ಹೀಗೆ ಒಂದರೊಡನೊಂದು ಕೂಡದಿರುವುದರಿಂದ ಎಲ್ಲಾದರೂ ಒಂದು ಕವಲಿಗೆ ಆತಂಕವಾದರೂ ರಕ್ತ ಮುಂದೆ ಹರಿಯದೆ ಆ ಭಾಗವೇ ಸಾಯುತ್ತದೆ. ಸಿರಗಳಲ್ಲಿ ಹೀಗಾಗದು. ಇವು ಒಂದಕ್ಕೊಂದು ಬಹಳ ಕಡೆಗಳಲ್ಲಿ ಕೂಡುತ್ತವೆ. ಈಲಿಯೊಳಕ್ಕೆ ರಕ್ತ ಸಾಗಿಸುವ ದೊಡ್ಡ ಸಿರ ಮಾತ್ರ ಇದಕ್ಕೆ ಹೊರತು. ಕಿರಿಕಿರಿಯ ಧಮನಿಗಳಿಗೂ ಸಿರಗಳಿಗೂ ನಡುವೆ ಲೋಮನಾಳಗಳು ಮೈಯಲ್ಲಿ ಎಲ್ಲೆಲ್ಲೂ ಅಡ್ಡಗೂಡಿಸುತ್ತವೆ. ಒಂದು ಅಂಗದ ನರ ಕೆಟ್ಟಿದ್ದರೆ, ಪಕ್ಕದಲ್ಲಿರುವ ಬೇರೊಂದು ನರವನ್ನು ಇದಕ್ಕೆ ಅಡ್ಡಗೂಡಿಸಿದರೆ ಅದಕ್ಕೆ ತಗಲಿರುವ ಸ್ನಾಯುಗಳು ಮತ್ತೆ ಚಲಿಸುವಂತಾಗುತ್ತವೆ. (ಡಿ.ಎಸ್.ಎಸ್.)

**ಅಡ್ಡತಳಿಯೆಬ್ಬಿಕೆ:** ಬೇರೆ ಬೇರೆ ತಳಿಗಳ, ಜಾತಿಗಳ ಪ್ರಾಣಿಗಳನ್ನು ಕೂಡಿಸಿ ಬೇರೊಂದು ತಳಿಯನ್ನು ಪಡೆಯುವುದು (ಕ್ರಾಸ್ ಬ್ರೀಡಿಂಗ್). ಸಿಂಧಿ ಹಸುವಿನ ಮೇಲೆ ಜರ್ಸಿ ಹೋರಿಯನ್ನೋ ಇಲ್ಲವೇ ಇದರ ಅದಲುಬದಲನ್ನೋ ಹಾರಿಸುವುದು, ಒಂದೇ ತಳಿಯಲ್ಲಿ ಅಡ್ಡತಳಿಯೆಬ್ಬಿಸುವ ಉದಾಹರಣೆ. ಹೆಣ್ಣು ಕುದುರೆಯೊಂದಿಗೆ ಗಂಡು ಕತ್ತೆಯನ್ನು ಕೂಡಿಸಿದರೆ ಬೇರೆ ಬೇರೆ ಜಾತಿ ಪ್ರಾಣಿಗಳಿಂದ ಅಡ್ಡತಳಿ ಎಬ್ಬಿಸಿದಂತೆ ಆಗುವುದು. ಇಂಥ ಕೂಟಗಳಿಂದ ಹುಟ್ಟಿದವೇ ಅಡ್ಡತಳಿಯ ಪ್ರಾಣಿಗಳು. ಗಂಡುಕತ್ತೆ ಹೆಣ್ಣುಕುದುರೆಯೊಂದಿಗೆ ಕೂಡಿದ ಮೇಲೆ ಹೇಸರಕತ್ತೆ ಹುಟ್ಟುತ್ತದೆ. ಹೆಣ್ಣುಕತ್ತೆಯೊಂದಿಗೆ ಗಂಡುಕುದುರೆ ಕೂಡಿದರೆ ಹುಟ್ಟುವುದೂ ಹೇಸರ ಕತ್ತೆಯೇ (ಹಿನ್ನಿ). ಗಂಡು ಕಾಡುಕೋಣ ಸಾಕಿದ ಹಸುವನ್ನು ಕೂಡಿದರೆ ಕೋಣಸು (ಕ್ಯಾಟಲ್ಲೊ) ಹುಟ್ಟುವುದು. ಹೀಗೆ ಪಟ್ಟೆಕುದುರೆಯೂ (ಜೀಬ್ರ) ಕುದುರೆಯೂ ಸೇರಿದರೆ ಪಟ್ಟೆಕುದುರೆ ತರ (ಜೀಬ್ರಾಯಿಡ್) ಆಗುತ್ತದೆ. ದನಗಳ, ಚಮರೀಮೃಗಗಳ ನಡುವೆ ಹುಟ್ಟುವ ಪ್ರಾಣಿ ದನಚಮರೀ (ಪಿಯೆನ್ ನಿಯೊ). ಬೇರೆ ಬೇರೆ ಜಾತಿಗಳಿಗಿಂತಲೂ ತಳಿಗಳ ನಡುವಣ ಅಡ್ಡತಳಿಯೆಬ್ಬಿಕೆಯೇ ಹೆಚ್ಚು ಬಳಕೆಯಲ್ಲಿದೆ.

| | | | | | |
|---|---|---|---|---|---|
| **ತಳಿ ಅ X ತಳಿ ಬ** | | | **ತಳಿ ಅ X ತಳಿ ಬ** | | |
| ಗಂ. (ಸಿಂಧಿ) | ↓ | (ಜರ್ಸಿ) ಹೆ. | ಹೆ. (ಸಿಂಧಿ) | ↓ | (ಜರ್ಸಿ) ಗಂ. |
| **ಅಡ್ಡತಳಿ** | | | **ಅಡ್ಡತಳಿ** | | |

ಚಿತ್ರ: ಹಸುಗಳಲ್ಲಿ ಅಡ್ಡತಳಿಯೆಬ್ಬಿಕೆ.

ಅಡ್ಡತಳಿಯೆಬ್ಬಿಸುವ ವಿಧಾನಗಳಲ್ಲಿ ಮುಖ್ಯವಾದುವು ಮೂರು; 1. ಅಚ್ಚ ಸಂತತಿಯ ಹೆಣ್ಣಿನೊಂದಿಗೆ ಅದೇ ತಳಿಯ ಇನ್ನೊಂದು ಅಚ್ಚ ಸಂತತಿಯ ಗಂಡನ್ನು ಕೂಡಿಸುವುದು; 2. ಅಡ್ಡತಳಿಯಲ್ಲಿ ಹುಟ್ಟಿದವುಗಳ ಮೇಲೆ ಒಂದಾದ ಮೇಲೊಂದರಂತೆ ಎರಡು ಅಚ್ಚ ತಳಿಯ ಗೂಳಿಗಳನ್ನು ಹಾರಿಸಿ ಅಡ್ಡಡ್ಡ ತಳಿಯೆಬ್ಬಿಸುವುದು; 3. ಎರಡಕ್ಕೂ ಹೆಚ್ಚಿನ ಅಚ್ಚ ತಳಿಯ ಗೂಳಿಗಳನ್ನು ಸರದಿಯಲ್ಲಿ ಅವುಗಳ ಅಡ್ಡ ತಳಿಯ ಕರುಗಳೊಂದಿಗೆ ಕೂಡಿಸುವ, ಸರದಿಯ ಅಡ್ಡತಳಿಯೆಬ್ಬಿಕೆ.

ಪ್ರಾಣಿ ತಳಿಗಾರರಿಗೆ ಬಲು ಉಪಯುಕ್ತವಾದ ವಿಧಾನ ಅಡ್ಡತಳಿಯೆಬ್ಬಿಸುವಿಕೆ. ಇದರಿಂದ ಒಂದೇ ಮಂದೆಯಲ್ಲಿ ಅವವಲ್ಲೇ ತಳಿಯೆಬ್ಬಿಸುವ ಬದಲು ಹೊಸ ಜೀನ್‌ಗಳನ್ನು ಬರಮಾಡಿಕೊಳ್ಳಬಹುದು. ವಿಶೇಷ ಗುಣಗಳುಳ್ಳ ಹೊಸ ತಳಿಗಳನ್ನೂ ಪಡೆಯಬಹುದು. ಮಾರಾಟಕ್ಕೆ ತಕ್ಕ ವಿಶಿಷ್ಟ ಗುಣದ ಪ್ರಾಣಿಗಳನ್ನು ಬೆಳೆಸಬಹುದು. ಬಲುಮೆಯ ಸಂಕರದ (ಹೈಬ್ರಿಡ್) ಫಲವನ್ನೂ ಪಡೆಯಬಹುದು. ತಳಿಯೆಬ್ಬಿಸುವುದರಲ್ಲಿ ಉತ್ತಮಿಕೆಯ ಪರಮ ಮಟ್ಟವನ್ನು ಮುಟ್ಟಿದ ಮೇಲೆ ಅಡ್ಡತಳಿಯ ವಿಧಾನವನ್ನು ಅನುಸರಿಸುವುದು ಒಳ್ಳೆಯದು.

ಹೈನಿನ ದನ, ಮಾಂಸದ ದನ, ಕುರಿಗಳು, ಹಂದಿ, ಕೋಳಿ, ಬಾತುಗಳೇ ಮೊದಲಾದ ಕಾಲ್ನಡೆಗಳ ಎಲ್ಲ ಜಾತಿಗಳಲ್ಲೂ ಅಡ್ಡತಳಿ ಎಬ್ಬಿಸುವ ವಿಧಾನ ಈಗ ಆಚರಣೆಯಲ್ಲಿದೆ. ಸಾಮಾನ್ಯವಾಗಿ, ಯಾವ ಪ್ರಾಣಿಯಲ್ಲೇ ಆಗಲಿ, ಮೂಲ ಸಂತಾನದವಕ್ಕಿಂತಲೂ ಅಡ್ಡತಳಿಯೇ ಎಂದಿಗೂ ಒಳ್ಳೆಯವು. ಹೈನಿನ ದನಗಳಲ್ಲಿ ಅಡ್ಡತಳಿಯವು ಬೇಗನೆ ಬೆದೆಗೆ ಬರುತ್ತವೆ. ಇನ್ನಷ್ಟು ಹಾಲು ಕರೆಯುತ್ತವೆ. ಅಡ್ಡತಳಿಯವುಗಳ ಹಾಲಿನಲ್ಲಿ ಕೊಬ್ಬಿನ ಪ್ರಮಾಣ ಹೆಚ್ಚು. ಮಾಂಸದ ದನಗಳಲ್ಲಿ, ಅಡ್ಡತಳಿಯವು ಅವುಗಳದೇ ಅಚ್ಚತಳಿಯವಕ್ಕಿಂತಲೂ

ಚೆನ್ನಾಗಿ (ಹುಲ್ಲಿನಿಂದಲೇ) ಒಳ್ಳೆಯ ಮಾಂಸವನ್ನು ರೂಪಿಸುತ್ತವೆ. ತೂಕವಾಗಿರುವ ಕರುಗಳನ್ನು ಕೊಡುತ್ತವೆ. ಕರುಗಳು, ಹಾಲು ಬಿಡಿಸುವ ಹೊತ್ತಿಗೆ ಬಲು ಚೆನ್ನಾಗಿ ಬೆಳೆದಿರುವುವಲ್ಲದೆ, ಬೇಗನೆ ಮೈಗೂಡುತ್ತವೆ. ಮುಂಡದ ತೂಕ ಹೆಚ್ಚು. ಹದವಾಗುವ ಅಟ್ಟೆ ಭರ್ಜರಿ. ಹಾಗೇ ಕುರಿಗಳಲ್ಲೂ ಅಚ್ಚತಳಿಯವಕ್ಕಿಂತಲೂ ಅಡ್ಡತಳಿಯವೇ ತೂಕವಾದ ಮರಿಗಳನ್ನು ಹಾಕುತ್ತವೆ. ಬೇಗಬೇಗನೆ ಹೆಚ್ಚು ಹೆಚ್ಚು ತೂಕವೇರುತ್ತವೆ. ಕೋಳಿ, ಬಾತುಗಳಲ್ಲಿ ಕೂಡ ಅಡ್ಡತಳಿಯವೇ ಚೆನ್ನಾಗಿ ತಿಂದು ಬೇಗನೆ ಬೆಳೆಯುತ್ತ ತೂಕದ ಮೊಟ್ಟೆಗಳನ್ನು ಹೆಚ್ಚಾಗಿ ಕೊಡುವುವಲ್ಲದೆ, ಸಾವಿನಂಕಿಯೂ ಕಡಿಮೆ. ಅಡ್ಡತಳಿ ಹಂದಿಗಳು ಒಂದೊಂದು ಸೂಲಿಗೂ ಹೆಚ್ಚು ಮರಿಗಳನ್ನು ಹಾಕುತ್ತವೆ. ಮರಿಗಳು ಹುಟ್ಟುವಾಗಲೇ ಸಾಯುವುದು ಕಡಿಮೆ. ಹಾಲು ಬಿಡಿಸುವ ಹೊತ್ತಿಗೆ ಬಹಳ ಮರಿಗಳು ಬದುಕುಳಿದಿರುತ್ತವೆ. ಅಲ್ಲದೆ ಬೇಗನೆ ಹೆಚ್ಚೆಚ್ಚಾಗಿ ತೂಕವೇರುತ್ತವೆ. ಕತ್ತೆ, ಕುದುರೆಗಳಿಗಿಂತಲೂ ಹೇಸರಕತ್ತೆಗಳು ಇನ್ನಷ್ಟು ಗಟ್ಟಿಮುಟ್ಟಾಗಿ, ಹೆಚ್ಚು ಬುದ್ಧಿ ಚುರುಕಿನವಾಗಿ, ಬಹುಕಾಲ ಬದುಕಿರುತ್ತವೆ.

ಅಚ್ಚತಳಿಗಳಿಗೂ ಅಡ್ಡತಳಿಗಳೇ ಮೂಲತಳಿ. ಕಳೆದ ಕೆಲವು ದಶಕಗಳಿಂದಲೂ ಕಾಲ್ನಡೆಗಳ ಹಲವಾರು ಹೊಸ ತಳಿಗಳು ಬೆಳೆದುಬಂದಿವೆ. ಅಡ್ಡತಳಿಗಳೇ ಮೊದಲ ಹೆಜ್ಜೆ. ಆಮೇಲೆ ಬೇಕಾದುವುಗಳ ಆಯ್ಕೆ, ಒಳತಳಿಯ ಆಯ್ಕೆ ಹೀಗೇ ಹೋಗುತ್ತದೆ.

***

**ಅಡ್ರಿನಲ್ ಗ್ರಂಥಿಗಳ ರೋಗಗಳು:** ಮೂತ್ರಪಿಂಡದ ಮೇಲಿರುವ ನಿರ್ನಾಳಗ್ರಂಥಿಗಳಾದ ಅಡ್ರಿನಲ್ ಗ್ರಂಥಿಗಳಿಗೆ ಸಂಬಂಧಪಟ್ಟ ರೋಗಗಳು. ಇವನ್ನು ಕುಸುರಿಯವೆಂದೂ (ಮೆಡುಲ್ಲ) ರಗಟೆಯವೆಂದೂ (ಕಾರ್ಟೆಕ್ಸ್) ವಿಂಗಡಿಸಬಹುದು. ಕುಸುರಿಯಲ್ಲಿ ಏಳುವ ರೋಗಕ್ಕೆ ಒಂದು ಗಂತಿ (ಮಬ್ಬಣ ಕಣಗಂತಿ, ಫ್ಯಾಗ್ರೆಯೋಸಿಟೋಮ) ಕಾರಣ. ಆಗ ಈ ಗಂತಿಯಿಂದ ಅಡ್ರಿನಲೀನ್, ನಾರಡ್ರಿನಲೀನ್ ವಿಪರೀತ ಸುರಿವುದರಿಂದ, ಕೈಕಾಲುಗಳು ತಣ್ಣಗೆ ನೀಲಿಗಟ್ಟಿ, ಆಗಿಂದಾಗ್ಗೆ ರಕ್ತದ ಒತ್ತಡದೇರಿಕೆ, ಎದೆಯಲ್ಲಿನ ಗುಂಡಿಗೆಯ ಡವಡವಿಕೆ, ಬೆವರಿಕೆ, ಚಿಟ್ಟಿಡಿಸುವ ತಲೆನೋವುಗಳು, ಕಳವಳ, ವಾಕರಿಕೆ, ವಾಂತಿ ಆಗುತ್ತವೆ. ಗಂತಿಯನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕುವುದೇ ವಾಸಿಮಾಡುವ ಉಪಾಯ.

ಅಡ್ರಿನಲ್ ಗ್ರಂಥಿಯ ರಗಟೆಯ ರೋಗವನ್ನು ಅದರ ನಿಜಗೆಲಸ ಏರುಪೇರಾದಂತೆ ವಿಂಗಡಿಸಬಹುದು ; ಅತಿಗೆಲಸ, ಕೆಲಸಗೊರೆ. ಈ ಎರಡನೆಯದಕ್ಕೆ ಅಡಿಸನ್ನನ ರೋಗ (ನೋಡಿ) ಎಂಬ ಹೆಸರಿದೆ.

ಅಡ್ರಿನಲ್ ರಗಟೆಯ ಅತಿಗೆಲಸ ಹುಟ್ಟುತ್ತಲೇ ಬಂದಿರಬಹುದು, ಆಮೇಲೆ ಗಳಿಸಿದ್ದಾಗಿರಬಹುದು. ಹುಟ್ಟುತ್ತಾ ಬಂದಿದ್ದು ಇಕ್ಕೆಡೆಯಲ್ಲೂ ಮಲೆತವಾಗಿ (ಹೈಪರ್‌ಟ್ರೊಫಿ) ಹಿರಿದಾಗಿರಬಹುದು. ಗಳಿಸಿದ್ದಾದರೆ ಗಂತಿಯಿಂದಲೂ ಆಗಿರಬಹುದು. ಹೆಣ್ಣುಕೂಸಿನಲ್ಲಿ ಹುಟ್ಟುತ್ತಲೇ ಹಿರಿದಾಗಿದ್ದರೆ, ಮೈಮೇಲೆಲ್ಲ ಕೂದಲು ಬೆಳೆದು, ಮುಟ್ಟು ನಿಂತು, ಗಂಡಿನ ಲಕ್ಷಣಗಳೊಂದಿಗೆ ಹುಸಿಯಿರ್ಲಿಂಗಿತನ (ಸ್ಯೂಡೋಹರ್ಮಾಫ್ರೊಡೈಟಿಸಮ್) ಕಾಣಿಸಿಕೊಳ್ಳುತ್ತದೆ. ಗಂಡುಕೂಸಿನಲ್ಲಿ ಜನನಾಂಗಗಳ ಮುನ್ನೆರತ (ಫ್ರಿಕೋಸಿಟಿ) ಕಾಣುವುದು. ಸಂತಾನಬಲ ಕಳೆದು ಬೊಜ್ಜು ಮೈ ಬರುವುದು. ಇಬ್ಬರಲ್ಲೂ ಗಂಡುತನದೊಂದಿಗೆ, ಮೈಯಿಂದ ಉಪ್ಪು ಕಳೆವ ಲಕ್ಷಣ ಕೂಟವೂ (ಸಿಂಡ್ರೋಮ್) ಕಾಣಬರುತ್ತದೆ. ಗಳಿಸಿದ ಅಡ್ರಿನಲ್ ರಗಟೆಯ ಅತಿಗೆಲಸಕ್ಕೆ ಮೆಲುಪಿನ (ಬಿನೈನ್) ಇಲ್ಲವೇ ವಿಷಮ (ಮ್ಯಾಲಿಗ್ನೆಂಟ್) ಅಡ್ರಿನಲ್ ಗಂತಿಯೋ, ಅಡ್ರಿನಲ್ ಗ್ರಂಥಿಯ ಮಲೆತವೋ ಕಾರಣವಾಗಿರಬಹುದು. ಗಂತಿಯಾಗದ ಅಡ್ರಿನಲ್ ಗ್ರಂಥಿ ಅತಿಗೆಲಸದಲ್ಲಿ ಗ್ರಂಥಿಗಳು ಹಿರಿದಾಗದೆ ಇರುವುದು ಅಪರೂಪವಲ್ಲ. ಅಂಥದಕ್ಕೆ ಪಿಟ್ಯೂಟರಿ ಗ್ರಂಥಿಯಲ್ಲಿ ಏಳುವ ಗಂತಿ ಕಾರಣ.

ಅಡ್ರಿನಲ್ ರಗಟೆಯ ಗಳಿಸಿದ ಅತಿಗೆಲಸ ಕಷಿಂಗನ (ಕಷಿಂಗ್ಸ್) ಲಕ್ಷಣಕೂಟವಾಗೋ ಅಡ್ರಿನಲ್ ಜನನಾಂಗದ (ಅಡ್ರಿನೊಜೆನೈಟಲ್) ಲಕ್ಷಣಕೂಟವಾಗೋ ಅಥವಾ ಇವೆರಡೂ ಇದ್ದೋ ತೋರಿಬರುತ್ತದೆ. ಕಷಿಂಗನ ಲಕ್ಷಣಕೂಟದಲ್ಲಿ ಹೆಗ್ಗುರುತುಗಳಾಗಿ ಬೊಜ್ಜುತನ, ಎಲುತೂತುಗಳಾಗಿ (ಆಸ್ಟಿಯೊಪೊರೊಸಿಸ್), ಚರ್ಮ ತೆಳುಕಲಾಗಿ ಸುಲಭವಾಗಿ ಬಿರಿಯುವುದರಿಂದ ಬಣ್ಣದ ಪಟ್ಟೆಗಳು, ಸಿಹಿಮೂತ್ರ, ಮೊಗ, ಹೊಟ್ಟೆ, ಕಾಲುಗಳ ಕೆಂಪೇರಿಕೆ, ನಿತ್ರಾಣ, ಹಲವೇಳೆ ಮನೋಬೇನೆಗಳೂ ಇರಬಹುದು. ಹೆಣ್ಣಿನಲ್ಲಿ ಗಂಡಿನ ಲಕ್ಷಣಗಳು ಕಾಣುವುದೂ, ಎಳೆಯವರಲ್ಲಿ ಜನನಾಂಗದ ಮುನ್ನೆರತವೂ, ವಯಸ್ಸಿನಲ್ಲಿ ಹಲಮಟ್ಟದ ಪುಂಸತ್ವ ಕಳೆವುದೇ ಅಡ್ರಿನಲ್ ಜನನಾಂಗದ ಲಕ್ಷಣ ಕೂಟ ಎನಿಸಿಕೊಳ್ಳುತ್ತದೆ.

ಶಸ್ತ್ರಕ್ರಿಯೆಯಿಂದ ತೆಗೆವುದೇ ಅಡ್ರಿನಲ್ ಗಂತಿಯ ಚಿಕಿತ್ಸೆ. ಹುಟ್ಟುತ್ತಬಂದ ಮಲೆತಕ್ಕೆ ಕೊನೆಯ ತನಕವೂ ಕಾರ್ಟಿಸೋನ್ ಇಲ್ಲವೇ ಅದರಂಥ ಕೃತಕ ಸಮಗೂಲಿಗಳನ್ನು (ಅನಲೋಗ್) ಕೊಡುವುದೇ ಚಿಕಿತ್ಸೆ. ಮೈಯಿಂದ ಉಪ್ಪು ಕಳೆದು ಹೋಗುತ್ತಿದ್ದರೆ, ಉಪ್ಪನ್ನು ಉಳಿಸಿಕೊಳ್ಳುವ ಡಿಸಾಕ್ಸಿಕಾರ್ಟಿಕೊಸ್ಟಿರೋನನ್ನೂ ಕೊಡಬೇಕು. ಕಷಿಂಗನ ಲಕ್ಷಣಕೂಟದೊಂದಿಗಿನ ಗಂತಿಯಿಂದೇಳದೆ ಗಳಿಸಿದ ಅಡ್ರಿನಲ್ ಅತಿಗೆಲಸಕ್ಕೆ ಬರುವ ಚಿಕಿತ್ಸೆಗಳಿವು: ಪಿಟ್ಯೂಟರಿ ಗ್ರಂಥಿಯ ವಿಕಿರಣಿಡಿತ (ಇರ್ರೇಡಿಯೇಷನ್) ದೊಂದಿಗೆ ಒಂದು ಅಡ್ರಿನಲ್ ಗ್ರಂಥಿ ತೆಗೆತ; ಅಡ್ರಿನಲ್ ಗ್ರಂಥಿಗಳಲ್ಲಿ ಬಲುಪಾಲು ತೆಗೆತ ; ಪಿಟ್ಯೂಟರಿ ಗ್ರಂಥಿಯ ತೆಗೆತ ; ಅಡ್ರಿನಲ್‌ಗಳನ್ನೋ ಪಿಟ್ಯೂಟರಿ ಗ್ರಂಥಿಯನ್ನೋ ಪೂರ್ತಿ ತೆಗೆದರೆ, ಹಾಳುಮಾಡಿದರೆ, ಅಡ್ರಿನಲ್ ಹಾರ್ಮೋನ್‌ಗಳನ್ನು ಬದಲು ಸೇವಿಕ ಚಿಕಿತ್ಸೆಯಾಗಿ ಕೊಡುತ್ತಿರಬೇಕು.

ಮುಮ್ಮೊದಲ ಆಲ್ಡೋಸ್ಟಿರೋನ್ ವಿಷತೆ (ಪ್ರೈಮರಿ ಅಲ್ಡೋಸ್ಟಿರೋನಿಸಮ್) ಅಡ್ರಿನಲ್ ರಗಟೆಯ ಅತಿಗೆಲಸದ ಒಂದು ಬಗೆ. ಗಂತಿಯಾಗಿರುವುದೇ ಸಾಮಾನ್ಯ ಕಾರಣವಾದರೂ ಗಂತಿಯಿಲ್ಲದೆ ಕೂಡ ಅಲ್ಡೋಸ್ಟಿರೋನ್ ಅತಿಯಾಗಿ ಸುರಿಯಲೂಬಹುದು. ರಕ್ತದ ಏರಿದೊತ್ತಡ, ರಕ್ತರಸಿಕೆಯಲ್ಲಿನ ಪೊಟ್ಯಾಸಿಯಂ ಇಳಿತ, ರಕ್ತದಲ್ಲಿನ ಇಂಗಾಲಾಮ್ಲದ ಏರಿಕೆ, ಮೂತ್ರಪಿಂಡ ಕೆಟ್ಟಿರುವ ಪುರಾವೆಗಳು, ಮೂತ್ರದಲ್ಲಿ ಹೆಚ್ಚಾಗಿ ಪೊಟ್ಯಾಸಿಯಂ ಕಳೆತ, ಮೂತ್ರದಲ್ಲಿ ಬಹುವಾಗಿ ಆಲ್ಡೋಸ್ಟಿರೋನ್ ಹೆಚ್ಚು ಕಳೆತವೂ ಅಂಥ ಲಕ್ಷಣಕೂಟದಲ್ಲಿ ಇರುತ್ತವೆ. ಹಲವೇಳೆ ಎಡೆಸೆಳೆವು (ಟೆಟ್ಯನಿ), ಸ್ನಾಯು ನಿತ್ರಾಣ, ಹೇರಳವಾಗಿ ಮೂತ್ರ ಸುರಿತವೂ ರೋಗಿಯಲ್ಲಿ ಕಂಡುಬರುತ್ತದೆ. ಅಡ್ರಿನಲ್ ಗ್ರಂಥಿ ತೆಗೆದುಹಾಕಿದರೆ ರೋಗ ಲಕ್ಷಣಗಳು ಇಲ್ಲವಾಗುತ್ತವೆ. ನೋಡಿ–ಅಡಿಸನ್ನನ ರೋಗ; ಅಂತಃಸ್ರಾವ ವಿಜ್ಞಾನ; ಅಡ್ರಿನಲ್ ಗ್ರಂಥಿಗಳು; (ಡಿ.ಎಸ್.ಎಸ್.)

**ಅಡ್ರಿನಲ್ ಗ್ರಂಥಿಗಳು:** ಮೂತ್ರಜನಕಾಂಗದ ತುದಿಭಾಗಕ್ಕೆ ಹೊಂದಿಕೊಂಡಿರುವ ತಿಳಿ ಕಿತ್ತಳೆ ಬಣ್ಣದ ಮುಕ್ಕೋನಾಕಾರದ ಅಂತ:ಸ್ರಾವ ಗ್ರಂಥಿಗಳು ಉಚ್ಚವರ್ಗದ ಎಲ್ಲ ಕಶೇರುಕಗಳಲ್ಲಿ ಅಡ್ರಿನಲ್ ಗ್ರಂಥಿಗಳನ್ನು ಕಾಣಬಹುದು. ಅಡ್ರಿನಲ್ ಗ್ರಂಥಿಗಳು ಅನೇಕ ಹಾರ್ಮೋನುಗಳನ್ನು ಉತ್ಪತ್ತಿ ಮಾಡಿ ನೇರವಾಗಿ ರಕ್ತಕ್ಕೆ ಸ್ರವಿಸುತ್ತವೆ. ಪ್ರತಿ ಅಡ್ರಿನಲ್ ಗ್ರಂಥಿಯು ಒಂದು ಅವಿಭಾಜ್ಯ ಅಂಗವಾಗಿ ರೂಪುಗೊಂಡಿದ್ದರೂ, ಅದು ಸ್ವತಂತ್ರವಾಗಿ, ವಿಭಿನ್ನವಾಗಿ ಕಾರ್ಯ ನಿರ್ವಹಿಸಬಲ್ಲ ಮತ್ತು ಬೇರೆ ಬೇರೆ ಭ್ರೂಣ ಅಂಗಾಂಶ ಮೂಲಗಳಿಂದ ಉದ್ಭವವಾದ ಜೀವಕೋಶಗಳಿಂದ ಮಾಡಲ್ಪಟ್ಟಿರುವ ಎರಡು ಭಾಗಗಳನ್ನು ಹೊಂದಿದೆ. ಈ ಎರಡು ಭಾಗಗಳಲ್ಲಿ ಹೊರಗಿನದ್ದು ಹೆಚ್ಚು ದಪ್ಪನಾಗಿದ್ದು (ಗ್ರಂಥಿಯ ಒಟ್ಟು ಗಾತ್ರದಲ್ಲಿ ಶೇಕಡಾ 80 ರಷ್ಟು) ಇಲ್ಲಿ ಜೀವಕೋಶಗಳು ಕಂಬದಾಕಾರದಲ್ಲಿ ಜೋಡಣೆಯಾಗಿವೆ. ಈ ಕೋಶಗಳು ಭ್ರೂಣದ ಮಧ್ಯ ದರ್ಮ (ಮಿಸೊಡರ್ಮ) ಕೋಶಗಳಿಂದ ಅಭಿವೃದ್ಧಿಗೊಂಡಿವೆ. ಈ ಭಾಗವು ದಟ್ಟ ಬಣ್ಣದಿಂದ ಕೂಡಿದ್ದು ಅದನ್ನು ರಗಟೆ ಅಥವಾ ತೊಗಟೆ (ಕಾರ್ಟೆಕ್ಸ್) ಎಂದು ಕರೆಯಲಾಗಿದೆ. ಕಾರ್ಟೆಕ್ಸ್ ನಿಂದ ಆವರಿಸಲ್ಪಟ್ಟಿರುವ ಒಳ ಅಥವಾ ಮಧ್ಯಭಾಗವನ್ನು ತಿರುಳು (ಮೆಡುಲ್ಲ) ಎನ್ನಲಾಗಿದೆ. ತಿರುಳು ಭಾಗವು ನರವ್ಯೂಹದೊಂದಿಗೆ ನಿಕಟ ಸಂಪರ್ಕ ಹೊಂದಿರುತ್ತದೆ. ಈ ಭಾಗದ ಕೋಶಗಳು ಭ್ರೂಣದ ಹೊರದರ್ಮ (ಎಕ್ಟೋಡರ್ಮ) ದಿಂದ ಅಭಿವೃದ್ಧಿ ಹೊಂದಿವೆ. ಈ ಎರಡು ಭಾಗಗಳು ಪ್ರತ್ಯೇಕವಾಗಿ ಬೇರೆ ಬೇರೆ ರೀತಿಯ ಹಾರ್ಮೋನುಗಳನ್ನು ಸ್ರವಿಸುತ್ತವೆ. ಇಷ್ಟೆಲ್ಲ ವಿಭಿನ್ನತೆಗಳಿದ್ದಾಗ್ಯೂ ಆ ಎರಡು ಭಾಗಗಳು ಒಟ್ಟು ಗೂಡಿ ಒಂದು ನಿರ್ದಿಷ್ಟ ಅಂಗವಾಗಿ ಮಾರ್ಪಟ್ಟಿರುವುದರ ಅಗತ್ಯತೆ ಮತ್ತು ಉಪಯುಕ್ತತೆ ಏನೆಂದು ಅರ್ಥೈಸುವುದು ಸುಲಭವಲ್ಲ. ಕೆಲ ಪ್ರಭೇದಗಳಲ್ಲಿ ಈ ಎರಡು ಭಾಗಗಳು ಬೇರೆ ಬೇರೆ ಅಂಗಗಳಾಗಿ ಅಭಿವೃದ್ಧಿ ಹೊಂದಿರುವುದು ಕಂಡು ಬರುತ್ತಿದೆ. ಉದಾ: ಕೆಲ ಜಾತಿಯ ಮೀನುಗಳು ಮತ್ತು ಉಭಯವಾಸಿಗಳು.




ಅಡ್ರಿನಲ್ ಗ್ರಂಥಿಯು ಸಂಯೋಜಕ ಅಂಗಾಂಶದಿಂದ ಮಾಡಲ್ಪಟ್ಟ ಹೊದಿಕೆಯಿಂದ ಆವರಿಸಲ್ಪಟ್ಟಿದ್ದು ಅದು ಭೇದಕ ಗೋಡೆಗಳ (ಸೆಪ್ಟ) ರೂಪದಲ್ಲಿ ಗ್ರಂಥಿಯ ಅಂಗಾಂಶವನ್ನು ಅಲ್ಲಲ್ಲಿ ಭೇದಿಸುತ್ತಿದೆ. ಅಡ್ರಿನಲ್ ಗ್ರಂಥಿಯು ಹೇರಳವಾಗಿ ರಕ್ತನಾಳಗಳ ಮತ್ತು ನರ ತಂತುಗಳ ಸಂಪರ್ಕ ಹೊಂದಿದೆ. ಹಲವಾರು ಮೂಲಗಳಿಂದ ಬಂದ ರಕ್ತನಾಳಗಳು ಗ್ರಂಥಿಯ ಮೇಲ್ಭಾಗದಲ್ಲಿ ಕವಲೊಡೆದು ಗ್ರಂಥಿಯ ಒಳಭಾಗಕ್ಕೆ ಪ್ರವೇಶಿಸುತ್ತವೆ. ಗ್ರಂಥಿಯಿಂದ ಹೊರಬರುವ ರಕ್ತನಾಳಗಳು ಎಲ್ಲವೂ ಒಟ್ಟಾಗಿ ಒಂದೇ ಮುಖ್ಯ ಕೇಂದ್ರ ಅಭಿಧಮನಿಯಾಗಿ ಹೊರಬಂದು ರೀನಲ್ ಅಭಿಧಮನಿಗೆ ಸೇರಿಕೊಳ್ಳುತ್ತದೆ.

ಗ್ರಂಥಿಯ ಅಡ್ಡ ಸೀಳಿಕೆಯ ಪರೀಕ್ಷೆಯಿಂದ ಕಾರ್ಟೆಕ್ಸ್ ಮತ್ತು ಮೆಡುಲ ಭಾಗಗಳನ್ನು ಸುಲಭವಾಗಿ ಗುರುತಿಸಬಹುದು. ಮೆಡುಲ ಭಾಗವು ಸಮಜಾತಿಯ ಕೋಶಗಳಿಂದಾಗಿದೆ. ಕಾರ್ಟೆಕ್ಸ್ ಭಾಗವು ರಚನೆ ಮತ್ತು ಸ್ರವಿಕೆಯಲ್ಲಿ ಭಿನ್ನವಾಗಿರುವ ಮೂರು ಉಪವಲಯಗಳನ್ನು ಹೊಂದಿದೆ. ಆ ಉಪವಲಯಗಳನ್ನು ಈ ಮುಂದಿನಂತೆ ಗುರುತಿಸಿ ಹೆಸರಿಸಲಾಗಿದೆ. 1) ಝೋನ ಗ್ಲಾಮೆರುಲೋಸ: ತೆಳುವಾದ ಹೊರ ವಲಯ. ಇದು ಮಿನಿರಲೋಕಾರ್ಟಿಕಾಯಿಡ್ ಗಳೆಂದು ಕರೆಯಲ್ಪಡುವ ಸ್ಟಿರಾಯಿಡ ಹಾರ್ಮೋನುಗಳನ್ನು ಉತ್ಪತ್ತಿ ಮಾಡುತ್ತದೆ. 2) ಝೋನ ಫ್ಯಾಸಿಕ್ಯುಲೇಟ್: ವಿಶಾಲವಾದ ಮಧ್ಯ ವಲಯ. ಇಲ್ಲಿ ಪ್ರಮುಖವಾಗಿ ಗ್ಲೂಕೊಕಾರ್ಟಿಕಾಯಿಡ್‌ಗಳೆಂಬ ಗುಂಪಿನ ಹಾರ್ಮೋನುಗಳು ಉತ್ಪತ್ತಿಯಾಗುತ್ತವೆ. 3) ಝೋನ ರೆಟಿಕ್ಯುಲಾರಿಸ್: ಇದು ತೆಳುವಾದ ಒಳ ವಲಯ. ಇಲ್ಲಿ ಪ್ರಮುಖವಾಗಿ ಲೈಂಗಿಕ ಹಾರ್ಮೋನುಗಳು (ಮುಖ್ಯವಾಗಿ ಆಂಡ್ರೋಜೆನ್ಸ್) ಮತ್ತು ಅಲ್ಪ ಪ್ರಮಾಣದಲ್ಲಿ ಗ್ಲೂಕೊಕಾರ್ಟಿಕಾಯಿಡ್ ಗಳ ಉತ್ಪತ್ತಿಯಾಗುತ್ತದೆ. ಈ ಲೈಂಗಿಕ ಹಾರ್ಮೋನುಗಳನ್ನು ಗೊನಾಡೊ ಕಾರ್ಟಿಕಾಯಿಡ ಗಳೆಂದು ಕೂಡ ಕರೆಯುತ್ತಾರೆ.

ಒಟ್ಟಿನಲ್ಲಿ ಅಡ್ರಿನಲ್ ಗ್ರಂಥಿಯ ಕಾರ್ಟೆಕ್ಸ್ ಭಾಗವು ಸ್ಟಿರಾಯಿಡ್ ಹಾರ್ಮೋನುಗಳನ್ನು ತಯಾರಿಸುವ ಕಾರ್ಖಾನೆ. ಈ ಎಲ್ಲಾ ಹಾರ್ಮೋನ್‌ಗಳ ಉತ್ಪಾದನೆಗೆ ಅವಶ್ಯಕವಾದ ಮೂಲ ಸ್ಟಿರಾಲ 'ಕೊಲೆಸ್ಟೆರಾಲ್' ನ್ನು ತಾನೇ ತಯಾರಿಸಿಕೊಳ್ಳುತ್ತದೆ ಹಾಗೂ ಜೀವಿಯು ಸೇವಿಸುವ ಆಹಾರ ಮೂಲದಿಂದಲೂ ಪಡೆದುಕೊಳ್ಳುತ್ತದೆ.

ಅಡ್ರಿನಲ್ ಕಾರ್ಟೆಕ್ಸ್‌ನ ಹಾರ್ಮೋನುಗಳು: ಅಡ್ರಿನಲ್ ಕಾರ್ಟೆಕ್ಸ ಭಾಗದ ಅಂಗಾಂಶಗಳು ಹಲವಾರು ಬಗೆಯ ಸ್ಟಿರಾಯಿಡ್ ಹಾರ್ಮೋನುಗಳನ್ನು ಉತ್ಪಾದಿಸುತ್ತವೆ. ಇವುಗಳಲ್ಲಿ ಪ್ರಮುಖವಾದವುಗಳನ್ನು ಮೂರು ಮುಖ್ಯ ಗುಂಪುಗಳಾಗಿ ವಿಂಗಡಿಸಲಾಗಿದೆ ಅವುಗಳೆಂದರೆ

1) ಮಿನಿರಲೊ ಕಾರ್ಟಿಕಾಯ್ಡುಗಳು, ಆಲ್ಡೊಸ್ಟಿರೋನ್ ಈ ಗುಂಪಿನ ಪ್ರಮುಖ ಹಾರ್ಮೋನು

2) ಗ್ಲೂಕೊಕಾಟಿಕಾಯ್ಡುಗಳು, ಕಾರ್ಟಿಸಾಲ್ ಈ ಗುಂಪಿನ ಪ್ರಮುಖ ಹಾರ್ಮೋನು.

3) ಲೈಂಗಿಕ ಹಾರ್ಮೋನುಗಳು, ಟೆಸ್ಟೊಸ್ಟಿರಾನ್ ಮತ್ತು ಇಸ್ಟ್ರೋಜನ್ ಗಳು ಈ ಗುಂಪಿನ ಪ್ರಮುಖ ಹಾರ್ಮೋನುಗಳು.

ಮಿನಿರಲೊಕಾರ್ಟಿಕಾಯ್ಡುಗಳ ಪರಿಣಾಮಗಳು: ಆಲ್ಡೊಸ್ಟಿರೋನ್ ಜೀವಿಯ ದೇಹದಲ್ಲಿನ ಖನಿಜಗಳ ಮುಖ್ಯವಾಗಿ ಸೋಡಿಯಂ ಮತ್ತು ಪೊಟ್ಯಾಸಿಯಂ ಅಯಾನುಗಳ ಮತ್ತು ನೀರಿನ ಸಂತುಲನತೆ ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಈ ಹಾರ್ಮೋನಿನ ನಷ್ಟವಾದಲ್ಲಿ ಜೀವಿಯು ಬದುಕುಳಿಯುವುದು ಅಸಾಧ್ಯ. ಆಲ್ಡೊಸ್ಟಿರೋನ್ ನ ಗುರಿ ಅಂಗಾಂಶ ಮೂತ್ರಜನಕಾಂಗದಲ್ಲಿರುವ ನೆಫ್ರಾನ್‌ನ ದೂರಸ್ಥ ಸುರುಳಿಯಾಕಾರದ ನಳಿಕೆ ಭಾಗ (ಡಿಸ್ಟಲ್ ಕನ್ ವಲ್ಯೂಟೆಟ್ ಟ್ಯೂಬ್ಯೂಲ್). ಇಲ್ಲಿ ಸೋಡಿಯಂ ಮತ್ತು ಪೊಟ್ಯಾಸಿಯಂ ಅಯಾನುಗಳ ವಿನಿಮಯ ನಡೆಯುತ್ತದೆ.

ರಕ್ತದ ಸೋಸುವಿಕೆಯಿಂದುಂಟಾದ ದ್ರವ (ಗ್ಲೊಮೆರುಲಸ ಭಾಗದಲ್ಲಿ) ರಕ್ತದಲ್ಲಿರುವ ಎಲ್ಲ ಸೋಡಿಯಂನ್ನು ಹೊಂದಿರುತ್ತದೆ. ಈ ದ್ರವದಿಂದ ದೇಹಕ್ಕೆ, ಬೇಕಾಗುವ ಸೋಡಿಯಂನ್ನು ಹೀರಿಕೊಳ್ಳುವ ಕ್ರಿಯೆ, ನೆಫ್ರಾನಿನ ದೂರಸ್ಥ ಸುರುಳಿಯಾಕಾರದ ನಳಿಕೆ ಭಾಗದಲ್ಲಿ ಅಲ್ಡೊಸ್ಟಿರೊನ ನಿಯಂತ್ರಣದಲ್ಲಿ ನಡೆಯುತ್ತದೆ. ಈ ಹಾರ್ಮೋನು ಇಲ್ಲಿಯ ಕೋಶಗಳ ಮೇಲೆ ಪ್ರಭಾವ ಬೀರಿ ಸೋಡಿಯಂನ್ನು ಹೀರಿಕೊಳ್ಳುವಂತೆ ಪ್ರಚೋದಿಸುತ್ತದೆ. ಆದ್ದರಿಂದ, ಸೋಡಿಯಂನ ರಕ್ತದ ಪ್ರಮಾಣ ಅಲ್ಡೊಸ್ಟಿರೊನ್ ಸ್ರವಿಕೆ ಅವಲಂಬಿಸಿದೆ. ದೇಹದ್ರವ (ಬಾಡಿ ಫ್ಲುಯಿಡ್ಸ್)ಗಳ ಸೋಡಿಯಂ ಪ್ರಮಾಣ ಕಡಿಮೆಯಾದರೆ ಆಲ್ಡೊಸ್ಟಿರೋನ್ ಸ್ರವಿಕೆ ಜಾಸ್ತಿಯಾಗಿ ಸೋಡಿಯಂನ್ನು ಮೂತ್ರದಿಂದ ಹೀರಿಕೊಂಡು, ರಕ್ತದ ಸೋಡಿಯಂ ಪ್ರಮಾಣ ಹೆಚ್ಚಾಗಿ ಸಮತೋಲನ ಸ್ಥಿತಿ ಮುಟ್ಟುತ್ತದೆ. ಅಲ್ಲದೆ ಆಲ್ಡೋಸ್ಟಿರೋನ್ ಬೆವರು ಗ್ರಂಥಿಗಳು, ಜೊಲ್ಲು ಗ್ರಂಥಿಗಳು ಮತ್ತು ದೊಡ್ಡ ಕರುಳಿನ ಕೊಲಾನ್‌ಗಳ ಮೇಲೂ ಪ್ರಭಾವ ಬೀರಿ ಸೋಡಿಯಂ ಅಯಾನಿನ ಸಂರಕ್ಷಣೆಗೆ ಪ್ರೇರೆಪಿಸುತ್ತದೆ.

ಆಲ್ಡೋಸ್ಟಿರೋನ್ ಸ್ರವಿಕೆಯ ನಿಯಂತ್ರಣ: ಎರಡು ಪ್ರಮುಖ ಅಂಶಗಳು ಆಲ್ಡೋಸ್ಟಿರೋನ್ ಸ್ರವಿಕೆಯನ್ನು ನಿಯಂತ್ರಿಸುತ್ತವೆ.

1) ಕೋಶಬಾಹ್ಯ ದ್ರವದಲ್ಲಿ ಪೊಟ್ಯಾಸಿಯಂ ಅಯಾನಿನ ಮಟ್ಟದಲ್ಲಿ ಅತ್ಯಲ್ಪ ಹೆಚ್ಚಳ.

2) ಮೂತ್ರ ಜನಕಾಂಗವು ಉತ್ಪತ್ತಿ ಮಾಡುವ ರೆನಿನ್ (ಕಿಣ್ವ): ರಕ್ತದ ಸೋಡಿಯಂ ಮಟ್ಟ ಕಡಿಮೆಯಾದಾಗ ಮೂತ್ರಜನಕಾಂಗದ ಜುಸ್ಟಾಗ್ಲೊಮೆರುಲಾ ಸಮುಚ್ಚಯದಿಂದ ರೆನಿನ್ ಸ್ರವಿಕೆಯಾಗಿ ಅದು ರಕ್ತದಲ್ಲಿರುವ ಅಂಜಿಯೊಟೆನ್ಸಿನೊಜೆನ ಎಂಬ ಪ್ರೋಟೀನನ್ನು ಅಂಜಿಯೊಟೆನ್ಸಿನ್ – 1 ಆಗಿ ಪರಿವರ್ತಿಸುತ್ತದೆ, ಅಂಜಿಯೊಟೆನ್ಸಿನ 1 ಕಿಣ್ವದ (ಕನವರ್ಟೆಸ್) ಕ್ರಿಯೆಯಿಂದ ಆಂಜಿಯೊಟೆನ್ಸಿನ್ 2, ಆಗಿ ಪರಿವರ್ತನೆಯಾಗಿ, ಅಡ್ರಿನಲ್ ರಗಟೆಯ ಗ್ಲೊಮೆರುಲೊಸ ಕೋಶಗಳ ಮೇಲೆ ಇದರ ಪ್ರಭಾವದಿಂದ ಅಲ್ಡೊಸ್ಟಿರೋನ ಸ್ರವಿಕೆಯಾಗುತ್ತದೆ.

ಆಲ್ಡೋಸ್ಟಿರೋನ್ ಹಾರ್ಮೋನಿನ ಕೊರತೆಯ ಪರಿಣಾಮ: ಕುಂಠಿತಗೊಂಡ ಆಲ್ಡೋಸ್ಟಿರೋನ್ ಸ್ರವಿಕೆಯಿಂದ ಜೀವಿಯು ದುರ್ಬಲ ಮಾಂಸಖಂಡಗಳು, ಕುಗ್ಗಿದ ರಕ್ತದ ಒತ್ತಡ, ಕುಗ್ಗಿದ ರೋಗ ನಿರೋಧಕ ಶಕ್ತಿ, ಸುಸ್ತು, ಚರ್ಮ ಕಪ್ಪಾಗಿರುವುದು ಇತ್ಯಾದಿಗಳಿಂದ ಬಳಲುತ್ತಾನೆ. ಆ ಸ್ಥಿತಿಯನ್ನು ಹೈಪೊಅಡ್ರಿನೋ ಕಾರ್ಟಿಸಿಸಮ್ ಅಥವಾ ಅಡಿಸನ್ನನ ರೋಗ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಅಡಿಸನ್ನನ ರೋಗ ಲಕ್ಷಣಗಳು ಕಾಣಿಸಿಕೊಂಡಾಗ ಜೀವಿಯು ಗ್ಲೂಕೊ ಕಾರ್ಟಿಕಾಯಿಡ್‌ಗಳ ಕೊರತೆಯನ್ನು ಎದುರಿಸುತ್ತಿರುವುದು ಕಂಡು ಬರುತ್ತದೆ. ಬದಲಿ ಮಿನೆರಲೊಕಾರ್ಟಿಕಾಯ್ಡುಗಳ ಚಿಕಿತ್ಸೆ ನೀಡದಿದ್ದಲ್ಲಿ ಆಲ್ಡೋಸ್ಟಿರೋನ್ ಕೊರತೆಯು ಮರಣಕಾರಕವಾಗುತ್ತದೆ. ಏಕೆಂದರೆ ಆ ಜೀವಿಯಲ್ಲಿ ಅಯಾನುಗಳ ಅಸಮತೋಲನದಿಂದ ರಕ್ತದ ಇಳಿದೊತ್ತಡವಾಗಿ ಹೃದಯ ಸ್ತಂಭನವಾಗುತ್ತದೆ.

ಗ್ಲೂಕೊ ಕಾರ್ಟಿಕಾಯ್ಡುಗಳ ಪರಿಣಾಮಗಳು: ಗ್ಲೂಕೋಸ್ ಚಯಾಪಚಯ (ಮೆಟಬಾಲಿಸಂ) ದಲ್ಲಿ ಇವುಗಳ ಪಾತ್ರವನ್ನು ಮೊದಲು ಗುರುತಿಸಿರುವದರಿಂದ ಇವುಗಳಿಗೆ ಗ್ಲೂಕೋ ಕಾರ್ಟಿಕಾಯ್ಡ್‌ಗಳು ಎಂದು ಹೆಸರಿಸಲಾಯಿತು. ಗ್ಲೂಕೋಕಾರ್ಟಿಕಾಯಿಡ್‌ಗಳು ಮುಖ್ಯವಾಗಿ ಹಿಟ್ಟು ಸಕ್ಕರೆಗಳು, ಪ್ರೋಟೀನುಗಳು, ಕೊಬ್ಬುಗಳ ಬಳಕೆಯನ್ನೂ, ಹಂಚಿಕೆಯನ್ನು ನಿಯಂತ್ರಿಸುತ್ತವೆ. ಗ್ಲೂಕೊಕಾರ್ಟಿಕಾಯ್ಡ್ ಗಳಲ್ಲಿ ಕಾರ್ಟಿಸೋಲ್ ಎಂಬ ಸ್ಟಿರಾಯಿಡ್ ಹಾರ್ಮೋನು ಬಹಳ ಪ್ರಮುಖವಾದುದು. ಶರೀರದಲ್ಲಿ ಗ್ಲೂಕೋ ಕಾರ್ಟಿಕಾಯ್ಡುಗಳ ಗ್ರಾಹಿಗಳನ್ನು ಹೊಂದಿರದ ಜೀವಕೋಶಗಳೆ ವಿರಳ. ಹಾಗಾಗಿ ಗ್ಲೂಕೊ ಕಾರ್ಟಿಕಾಯ್ಡುಗಳು ಅನೇಕ ಶಾರೀರಿಕ ಕ್ರಿಯೆಗಳ ಮೇಲೆ ಪ್ರಭಾವ ಬೀರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಮುಂದೆ ವಿವರಿಸಿದೆ.

1. ಚಯಾಪಚಯದ (ಮೆಟಬಾಲಿಸಂ) ಮೇಲಿನ ಪರಿಣಾಮ: ಜೀವಿಯು ಹಸಿದಿರುವಾಗ ಕಾರ್ಟಿಸೋಲ್ ಹಲವಾರು ಪ್ರಕ್ರಿಯೆಗಳಿಗೆ ಚಾಲನೆ ನೀಡಿ, ಅವುಗಳ ಒಟ್ಟು ಪರಿಣಾಮವಾಗಿ ರಕ್ತದಲ್ಲಿ ಗ್ಲೂಕೋಸ್ ಮಟ್ಟ ಹೆಚ್ಚುವುದಲ್ಲದೆ ಅಪೇಕ್ಷಿತ ಸಾಮಾನ್ಯ ಮಟ್ಟ ಕಾಪಾಡಲು ಕಾರಣವಾಗುತ್ತದೆ. ಈ ಉದ್ದೇಶಕ್ಕಾಗಿ ಕಾರ್ಟಿಸೋಲ್ ಬಳಸುವ ಕಾರ್ಯತಂತ್ರಗಳೆಂದರೆ,

ಅ) ಪಿತ್ತಜನಕಾಂಗದಲ್ಲಿ ಅಸಹಜ ಗ್ಲೂಕೋಸ್ ಮೂಲ ಪದಾರ್ಥಗಳನ್ನು (ಉದಾ:ಅಮೈನೊ ಆಮ್ಲಗಳು ಮತ್ತು ಲಿಪಿಡ್ ಗಳು) ಬಳಸಿ ಗ್ಲೂಕೋಸ್ ಉತ್ಪಾದನೆಗೆ ಪ್ರಚೋದನೆ ನೀಡುವುದು. ಇದು ಮಾಂಸಾಹಾರಿ ಪ್ರಾಣಿಗಳಲ್ಲಿ ಹೆಚ್ಚು ಪ್ರಸ್ತುತ ಮತ್ತು ಉಪಯುಕ್ತ.

ಆ) ಪಿತ್ತ ಜನಕಾಂಗದ ಹೊರಗಿನ ಅಂಗಾಂಶ ಮೂಲಗಳಿಂದಲೂ ಅಮೈನೋ ಆಮ್ಲ ಅಣುಗಳು ಪಿತ್ತಜನಕಾಂಗಕ್ಕೆ ಬಂದು ಸೇರುವಂತೆ ಮಾಡಿ ಅದರಿಂದ ಗ್ಲೂಕೋಸ್ ಉತ್ಪಾದನೆಯಾಗುವಂತೆ ಮಾಡುವುದು.

ಇ) ಸ್ನಾಯು ಮತ್ತು ಕೊಬ್ಬು ಅಂಗಾಂಶಗಳು ಗ್ಲೂಕೋಸ್ ಬಳಸುವುದನ್ನು ನಿರ್ಬಂಧಿಸಿ ಗ್ಲೂಕೋಸ್‌ನ್ನು ಸಂರಕ್ಷಿಸುವುದು.

ಈ) ಕೊಬ್ಬು ಅಂಗಾಂಶದಲ್ಲಿನ ಕೊಬ್ಬು ಗ್ಲಿಸರಾಲ್ ಆಗಿ ಪರಿವರ್ತನೆ ಹೊಂದಿ ತನ್ಮೂಲಕ ಗ್ಲಿಸರಾಲ್ ನಿಂದ ಗ್ಲೂಕೋಸ್ ತಯಾರಿಕೆಗೆ ಪ್ರಚೋದಿಸುವುದು. ಈ ಎಲ್ಲ ವಿಧಾನಗಳಿಂದ ಜೀವಿಯ ರಕ್ತದಲ್ಲಿನ ಗ್ಲೂಕೋಸ್ ಮಟ್ಟದ ಸಮತೋಲನಕ್ಕೆ ಸಹಾಯಕವಾಗಿದೆ.

ಪ್ರೊಟೀನ್ ಚಯಾಪಚಯ (ಮೆಟಬಾಲಿಸಂ) ಕ್ರಿಯೆಯಲ್ಲೂ ಕಾರ್ಟಿಸೋಲ್ ಅಥವಾ ಹೈಡ್ರೋಕಾರ್ಟಿಸೋನ್ ಗಳು ಪ್ರಭಾವಬೀರಿ ದೇಹ ಪ್ರೊಟೀನ್ ಬಳಕೆಯನ್ನು ನಿಯಂತ್ರಿಸುತ್ತವೆ. ಅಗತ್ಯ ಬಿದ್ದಾಗ ಪ್ಲಾಸ್ಮಾ ಪ್ರೊಟೀನ್ ಒಡೆಯುವಿಕೆಯನ್ನು ಉತ್ತೇಜಿಸಿ, ಪಿತ್ತಜನಕಾಂಗದಲ್ಲಿ ಕಿಣ್ವಗಳ ತಯಾರಿಕೆಗೆ ಹೆಚ್ಚು ಅಮೈನೋ ಆಮ್ಲಗಳು ಲಭ್ಯವಾಗುವಂತೆ ಮಾಡುವುದು ಹಾಗೆಯೇ ಗ್ಲೂಕೋಸ್ ತಯಾರಿಕೆಗೂ ಅಮೈನೋ ಆಮ್ಲಗಳನ್ನು ಒದಗಿಸಲು ಶಕ್ತವಾಗಿರುತ್ತದೆ. ಈ ರೀತಿ ಪ್ರೊಟೀನ್ ಚಯಾಪಚಯವನ್ನು ಕಾರ್ಟಿಸೋಲ್ ನಿಯಂತ್ರಿಸುತ್ತದೆ.

2. ಕಾರ್ಟಿಸೋಲ್ (ಹೈಡ್ರೊಕಾರ್ಟಿಸೋನ್) ಹೆಚ್ಚು ಪರಿಣಾಮಕಾರಿಯಾದ ಜ್ವಲನ ನಿರೋಧಕ ಮತ್ತು ರೋಗ ನಿರೋಧಕತೆಯನ್ನು ತಗ್ಗಿಸುವ (ಇಮ್ಯುನೊಸಪ್ರೆಸ್ಸೆಂಟ್ಸ) ಗುಣಗಳನ್ನು ಹೊಂದಿದೆ. ಔಷಧಗಳ ರೂಪದಲ್ಲಿ ಗ್ಲೂಕೊಕಾರ್ಟಿಕಾಯ್ದುಗಳನ್ನು ಯಥೇಚ್ಛವಾಗಿ ಬಳಸುತ್ತಾರೆ. ಸಂಧಿವಾತ, ಚರ್ಮೋದ್ರೇಕ, ಅಲರ್ಜಿ (ಒಗ್ಗದಿರುವಿಕೆ), ಆಸ್ತಮ ರೋಗಗಳಿಗೆ ಚಿಕಿತ್ಸೆ ನೀಡಲು ಬೇರೆ ರಾಸಾಯನಿಕಗಳೊಂದಿಗೆ ಸಂಯುಕ್ತ ರೂಪದಲ್ಲಿ ಕಾರ್ಟಿಸೋಲ್ ಬಳಸುತ್ತಾರೆ. ಜೀವಿಯಲ್ಲಿ ಕಸಿಮಾಡಿದ ಅಂಗ ತಿರಸ್ಕೃತವಾಗದಂತೆ ಮಾಡಲು ಕಾರ್ಟಿಸೋಲ್ ಹಾರ್ಮೋನನ್ನು ಇಮ್ಯುನೋ ಸಪ್ರೆಸ್ಸೆಂಟ ಆಗಿ ಬಳಸುತ್ತಾರೆ. ಭ್ರೂಣಾವಸ್ಥೆಯಲ್ಲಿ ಕೂಡ ಗ್ಲೂಕೋ ಕಾರ್ಟಿಕಾಯ್ಡುಗಳು ಭ್ರೂಣದ

ಅಭಿವೃದ್ಧಿಗೆ ಸಹಾಯಕಾರಿಗಳಾಗಿ ವರ್ತಿಸುತ್ತವೆ. ಉದಾ: ಭ್ರೂಣದ ಶ್ವಾಸಕೋಶ ಪಕ್ವವಾಗುವಂತೆ ಉತ್ತೇಜಿಸುವುದು ಇತ್ಯಾದಿ.

ಗ್ಲೂಕೋಕಾರ್ಟಿಕಾಯ್ಡಗಳನ್ನು ಅನಿಯಮಿತ ಪ್ರಮಾಣ, ಅನಿರ್ದಿಷ್ಟ ಅವಧಿಗೆ ಬಳಸಿದರೆ ಅನೇಕ ಶಾರೀರಿಕ ಕ್ರಿಯೆಗಳ ಮೇಲೆ ವ್ಯತಿರಿಕ್ತ ಪರಿಣಾಮವಾಗುತ್ತದೆ. ಉದಾ: ಮೂಳೆಗಳ ಬೆಳವಣಿಗೆ ಸ್ಥಗಿತಗೊಳ್ಳುವುದು, ಕ್ಯಾಲ್ಷಿಯಂ ಲವಣಗಳ ಹೀರುವಿಕೆ ಕುಂಠಿತಗೊಳ್ಳುವುದು, ಗಾಯಗಳು ಬೇಗನೆ ಮಾಯವಾಗದಿರುವುದು ಇತ್ಯಾದಿ. ಈ ಎಲ್ಲ ಅಂಶಗಳೂ ಗ್ಲೂಕೋಕಾರ್ಟಿಕಾಯ್ಡಗಳ ಬಹು ಪರಿಣಾಮಗಳಿಗೆ ಸಾಕ್ಷಿಯಾಗಿವೆ.

3. ಪ್ರಜನನಾಂಗಗಳ ಕಾರ್ಯದ ಮೇಲೆ ಪ್ರಭಾವ ಬೀರುವುದರ ಮೂಲಕ ನೇರವಾಗಿ ಹಾಗೂ ಪ್ರಜನನ ಕ್ರಿಯೆಗೆ ಸಂಬಂಧಿಸಿದಂತೆ ಹೆಚ್ಚಿನ ಶಕ್ತಿಯನ್ನು ಒದಗಿಸಲು ಚಯಾಪಚಯ ಕ್ರಿಯೆಯ ಮೇಲಿನ ಪ್ರಭಾವದಿಂದ ಪರೋಕ್ಷವಾಗಿಯೂ ಪ್ರಜನನ ಕ್ರಿಯೆಯ ಮೇಲೆ ಪರಿಣಾಮ ಬೀರುತ್ತವೆ. ಹೆಚ್ಚಿನ ಹಾರ್ಮೋನ್ ಸ್ರವಿಕೆಯಾಗಲು ಅಥವಾ ಕುಗ್ಗಿದ ಹಾರ್ಮೋನ್ ಸ್ರವಿಕೆ ಎರಡೂ ಸ್ಥಿತಿಗಳು, ಇತ್ತೀಚಿನ ಸಂಶೋಧನೆಗಳು ಲೈಂಗಿಕ ಪ್ರೌಢತೆ (ಸೆಕ್ಸುಯಲ್ ಮೆಚ್ಯುರಿಟಿ) ಬಸಿರು, ಋತುಚಕ್ರಗಳು, ಇವುಗಳಿಗೆ ಗ್ಲೂಕೊಕಾರ್ಟಿಕಾಯ್ಡಗಳ ಅವಶ್ಯಕತೆಯನ್ನು ತೋರಿಸಿವೆ.

4. ಮಿದುಳಿನ ಬೆಳೆವಣಿಗೆಯಲ್ಲಿ ಮತ್ತು ಅದರ ಕಾರ್ಯಶೀಲತೆ ಕಾಪಾಡಿಕೊಳ್ಳಲು ಈ ಹಾರ್ಮೋನುಗಳು ಅವಶ್ಯಕ.

5. ಒತ್ತಡ ಪರಿಸ್ಥಿತಿಗಳಲ್ಲಿ (ಸ್ಟ್ರೆಸ್ ಸಿಚುವೇಷನ್ಸ್) ಈ ಹಾರ್ಮೋನು ಹೆಚ್ಚಿನ ಪ್ರಮಾಣದಲ್ಲಿ ಸ್ರವಿಕೆಯಾಗಿ, ಜೀವಿಯು ಈ ಪರಿಸ್ಥಿತಿಯನ್ನು ಎದುರಿಸಲು ಸಹಾಯಕವಾಗಿದೆ. ಆದರೆ, ಅತಿಯಾದ ಒತ್ತಡದಿಂದ, ಅತಿಯಾದ ಸ್ರವಿಕೆಯಾಗಿ ಅನೇಕ ದುಷ್ಪರಿಣಾಮಗಳು (ಉದಾ: ಮಧುಮೇಹ, ರಕ್ತದೊತ್ತಡ) ಉಂಟಾಗುವ ಸಾಧ್ಯತೆಯಿದೆ.

ಗ್ಲೂಕೊಕಾರ್ಟಿಕಾಯ್ಡಗಳ ಸ್ರವಿಕೆಯ ನಿಯಂತ್ರಣ:– ಪಿಟ್ಯುಟರಿ ಗ್ರಂಥಿಯ ಮುಂಭಾಗದ ಹಾಲೆ ಸ್ರವಿಸುವ ಅಡ್ರಿನಲ್‌ರಗಟೆ ಪ್ರಚೋದಕ ಹಾರ್ಮೋನಿನ (ಅಡ್ರಿನೊ ಕಾರ್ಟಿಕೊ ಟ್ರೋಫಿಕ್ ಹಾರ್ಮೋನು, ಎಸಿಟಿಚ್) ಪ್ರಚೋದನೆಗೆ ಪ್ರತಿಕ್ರಿಯೆಯಾಗಿ ಅಡ್ರಿನಲ್‌ರಗಟೆಯಿಂದ ಕಾರ್ಟಿಸೋಲ್ ಮತ್ತು ಇತರೆ ಗ್ಲೂಕೊ ಕಾರ್ಟಿಕಾಯ್ಡಗಳ ಸ್ರವಿಕೆ ಆಗುತ್ತದೆ. ಎಸಿಟಿಎಚ್, ಹೈಪೊಥೆಲಮಸ್ ಸ್ರವಿಸುವ ಸಿಆರ್‌ಹೆಚ್ (ಕಾರ್ಟಿಕೊ ಟ್ರೋಪಿನ್ ರಿಲೀಸಿಂಗ್ ಹಾರ್ಮೋನ್) ನ ನಿಯಂತ್ರಣದಲ್ಲಿದೆ.

ಜೀವಿಯು ದೈಹಿಕ ಅಥವಾ ಮಾನಸಿಕ ಒತ್ತಡಗಳನ್ನು ಎದುರಿಸುವ ಸಂದರ್ಭಗಳಲ್ಲಿ ರಕ್ತದಲ್ಲಿರುವ ಕಾರ್ಟಿಸೋಲ್ ಪ್ರಮಾಣದಲ್ಲಿ ಹೆಚ್ಚಳ ಉಂಟಾಗುತ್ತದೆ. ಇದಕ್ಕೆ ಕಾರಣ ಹೈಪೊಥಲಾಮಸ್‌ನಿಂದ ಸಿಆರ್‌ಹೆಚ್ ಸ್ರವಿಕೆಯಲ್ಲಿ ಹೆಚ್ಚಳವಾಗಿರುವುದು. ರಕ್ತದಲ್ಲಿನ ಕಾರ್ಟಿಸೋಲ್ ಮಟ್ಟ ಒಂದು ಮಿತಿಯನ್ನು ತಲುಪಿದಾಗ ಆ ಶಾರೀರಿಕ ಸ್ಥಿತಿಯನ್ನೇ ಹೈಪೊಥಲಾಮಸ್ ಋಣಾತ್ಮಕ ಸಂಕೇತವಾಗಿ ಗ್ರಹಿಸಿ ಸಿಆರ್‌ಎಚ್ ನ ಸ್ರವಿಕೆಯನ್ನು ನಿರ್ಬಂಧಿಸುತ್ತದೆ. ಪರಿಣಾಮವಾಗಿ ಪಿಟ್ಯುಟರಿಯಿಂದ ಎಸಿಟಿಎಚ್ ನ ಸ್ರವಿಕೆ ಕಡಿಮೆಯಾಗಿ. ಆ ಮೂಲಕ ಅಡ್ರಿನಲ್ ಕಾರ್ಟೆಕ್ಸ್ ನಿಂದ ಕಾರ್ಟಿಸೋಲ್ ನ ಉತ್ಪಾದನೆ ಕುಂಠಿತಗೊಳ್ಳುತ್ತದೆ. ಈ ರೀತಿ ರಕ್ತದಲ್ಲಿನ ಕಾರ್ಟಿಸೋಲ್ ಪ್ರಮಾಣವೇ ಸಿಆರ್‌ಎಚ್ ಸ್ರವಿಕೆಗೆ ಪ್ರಚೋದನೆಯಾಗಿ ತನ್ಮೂಲಕ ತನ್ನ ಪ್ರಮಾಣವನ್ನು ನಿಯಂತ್ರಿಸಿಕೊಳ್ಳುತ್ತದೆ. ಈ ರೀತಿ ಅಡ್ರಿನಲ್ ಕಾರ್ಟೆಕ್ಸ್ ನಿಂದ ಗ್ಲೂಕೊಕಾರ್ಟಿಕಾಯ್ಡಗಳ ಸ್ರವಿಕೆಯು ಪರೋಕ್ಷವಾಗಿ ಕೇಂದ್ರ ನರಮಂಡಲದ ನಿಯಂತ್ರಣದಲ್ಲಿದೆ.

ಗ್ಲೂಕೋಕಾರ್ಟಿಕಾಯ್ಡಗಳ ಅತಿ ಸ್ರವಿಕೆ ಕೂಡ ಒಳ್ಳೆಯದಲ್ಲ. ಏಕೆಂದರೆ ಅದು ಆ ಜೀವಿಯಲ್ಲಿ ಕುಶಿಂಗನ ರೋಗ ಲಕ್ಷಣಗಳನ್ನುಂಟುಮಾಡುತ್ತದೆ. ಬೊಜ್ಜು, ಸಿಹಿಮೂತ್ರ, ಮೈಮೇಲೆಲ್ಲಾ ಹೆಚ್ಚು ಕೂದಲು ಬೆಳೆಯುವುದು, ಹೆಚ್ಚಾದ ರಕ್ತದ ಒತ್ತಡ, ಇತ್ಯಾದಿಗಳು ಕುಶಿಂಗ್ ನ ರೋಗ ಲಕ್ಷಣಗಳಾಗಿರುತ್ತವೆ. ಎಸಿಟಿಎಹೆಚ್ ನ ಅತಿಸ್ರವಿಕೆ, ಚಿಕಿತ್ಸೆ ಉದ್ದೇಶದಿಂದ ಹೆಚ್ಚು ಗ್ಲೂಕೋ ಕಾರ್ಟಿಕಾಯ್ಡುಗಳನ್ನು ಬಳಸುವುದು ಇತ್ಯಾದಿ ಕುಶಿಂಗನ ರೋಗಕ್ಕೆ ಮೂಲವಾಗಬಹುದು.

ಲೈಂಗಿಕ ಹಾರ್ಮೋನುಗಳು: ಅಡ್ರಿನಲ್ ಕಾರ್ಟೆಕ್ಸ್ ಸ್ರವಿಸುವ ಮತ್ತೊಂದು ಗುಂಪಿನ ಸ್ಟಿರಾಯಿಡ್ ಹಾರ್ಮೋನುಗಳಾದ, ಪುರುಷ ಹಾರ್ಮೋನುಗಳು (ಆಂಡ್ರೋಜನ್ಸ್), ಮತ್ತು ಸ್ತ್ರೀ ಹಾರ್ಮೋನುಗಳು (ಇಸ್ಟ್ರೋಜನ್ಸ್) ಇವು ಗಂಡು ಮತ್ತು ಹೆಣ್ಣು ಜೀವಿಗಳೆರಡರಲ್ಲೂ ಸ್ವಲ್ಪ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ. ವೃಷಣ ಮತ್ತು ಅಂಡಾಶಯಗಳಿಂದ ಉತ್ಪತ್ತಿಯಾಗುವ ಹೆಚ್ಚಿನ ಪ್ರಮಾಣದ ಲೈಂಗಿಕ ಹಾರ್ಮೋನುಗಳು ಇವುಗಳ ಪ್ರಭಾವವನ್ನು ಮರೆಮಾಡುತ್ತವೆ. ಕಾರ್ಟೆಕ್ಸ್ ಉತ್ಪತ್ತಿಮಾಡುವ ಆಂಡ್ರೋಜನ್ಸಗಳು ಜೀವಿಯ ಪುರುಷ ಲಕ್ಷಣಗಳ ಅಭಿವೃದ್ಧಿಗೆ ಕನಿಷ್ಠ ಪರಿಣಾಮ ಬೀರುತ್ತವೆ. ಸ್ತ್ರೀಯರಲ್ಲಿ ಅಡ್ರಿನಲ್ ಕಾರ್ಟೆಕ್ಸ್‌ನಿಂದ ಆಂಡ್ರೋಜನ್ ಸ್ರವಿಕೆ ಅತಿಯಾದಲ್ಲಿ, ದೇಹದ ಮೇಲೆ ಪುರುಷರಂತೆ ರೋಮಗಳು, ಋತುಚಕ್ರ ನಿಲ್ಲುವಿಕೆ ಇತ್ಯಾದಿ ಪರಿಣಾಮಗಳುಂಟಾಗುತ್ತವೆ. ಸ್ತ್ರೀಯರಲ್ಲಿ ಆಂಡ್ರೋಜನ್ ಗಳ ಪ್ರಭಾವ (ಪುರುಷ ಲಕ್ಷಣಗಳು) ಎದ್ದು ಕಾಣುತ್ತದೆ ಕಾರಣ ಆ ಹಂತದಲ್ಲಿ ಅಂಡಾಶಯದ ಇಸ್ಟ್ರೋಜನ್ ಪ್ರಮಾಣ ಕುಗ್ಗಿರುವುದು.

ತಿರುಳು (ಮೆಡುಲ್ಲ): ಅಡ್ರಿನಲ್ ಕಾರ್ಟೆಕ್ಸ್ ನಿಂದ ಆವರಿಸಲ್ಪಟ್ಟಿರುವ ಅಡ್ರಿನಲ್ ಗ್ರಂಥಿಯ ಕೇಂದ್ರ ಭಾಗವನ್ನು ಅಡ್ರಿನಲ್ ಮೆಡುಲ್ಲ ಎನ್ನುತ್ತಾರೆ. ಅಡ್ರಿನಲ್ ಗ್ರಂಥಿಯ ಈ ಭಾಗಕ್ಕೆ ಹೇರಳವಾದ ರಕ್ತ ಸರಬರಾಜು ಮತ್ತು ನರ ಸಂಪರ್ಕವಿರುತ್ತದೆ. ಮೆಡುಲಾ ಭಾಗದಲ್ಲಿನ ಜೀವಕೋಶಗಳು ಅನುವೇದನಾ ನರಮಂಡಲಕ್ಕೆ ಸೇರಿದ, ಮಾರ್ಪಾಡು ಹೊಂದಿದ ನರಕೋಶಗಳೇ ಆಗಿರುತ್ತವೆ, ಮತ್ತು ಈ ವಿಶೇಷ ನರಕೋಶಗಳು ತಾವು ಉತ್ಪತ್ತಿ ಮಾಡಿದ ನರಪ್ರೇಷಕಗಳನ್ನು ಸೈನಾಪ್ಸ್ ನಲ್ಲಿ ಸ್ರವಿಸುವ ಬದಲು ನೇರವಾಗಿ ರಕ್ತಕ್ಕೆ ಸೇರಿಸುತ್ತವೆ. ಈ ಕಾರಣಕ್ಕಾಗಿ ಅಡ್ರಿನಲ್ ಮೆಡುಲ್ಲ ನರವ್ಯೂಹದ ಭಾಗವೇ ಆಗಿದ್ದರೂ, ಅದನ್ನು ನಿರ್ನಾಳ ಗ್ರಂಥಿಯೆಂದು ಪರಿಗಣಿಸಲಾಗಿದೆ. ಅಡ್ರಿನಲ್ ಮೆಡುಲ್ಲವು ಅನುವೇದನಾ ನರಮಂಡಲದ ಕ್ರಿಯೆಯನ್ನು ವರ್ಧಿಸುವಂತೆಯಷ್ಟೇ ಕೆಲಸ ಮಾಡುವುದರಿಂದ ಜೀವಿಯು ಅಡ್ರಿನಲ್ ಮೆಡುಲಾದ ಹೊರತಾಗಿಯೂ ಬದುಕಿರಬಹುದು.

ಅಡ್ರಿನಲ್ ಮೆಡುಲ ಸ್ರವಿಸುವ ಹಾರ್ಮೋನುಗಳು: ಅಡ್ರಿನಲ್ ಮೆಡುಲ್ಲ ಪ್ರಚೋದನೆಗೊಂಡಾಗ (ಜೀವಿಯು ಭೌತಿಕ ಅಥವಾ ಮಾನಸಿಕ ಒತ್ತಡ ಎದುರಿಸುವ ಸಂದರ್ಭದಲ್ಲಿ ಅನುವೇದನಾ ನರಮಂಡಲ ಅಡ್ರಿನಲ್ ಗ್ರಂಥಿಯು ಮೆಡುಲ ಭಾಗವನ್ನು ಪ್ರಚೋದಿಸುತ್ತದೆ) ಅಡ್ರಿನಲೀನ್ ಮತ್ತು ನಾರಅಡ್ರಿನಲೀನ್ (ನಾರೆಪಿನೇಫ್ರೀನ್) ಎಂಬ ಹಾರ್ಮೋನುಗಳನ್ನು ಕ್ರಮವಾಗಿ 4:1 ರ ಅನುಪಾತ ಪ್ರಮಾಣದಲ್ಲಿ ಉತ್ಪತ್ತಿ ಮಾಡಿ ಸ್ರವಿಸುತ್ತದೆ. ಈ ಹಾರ್ಮೋನುಗಳು ಟೈರೋಸೀನ್ ಎಂಬ ಅಮೈನೊ ಆಮ್ಲ ಬಳಸಿಕೊಂಡು ಉತ್ಪತ್ತಿಯಾದುವು, (ನೋಡಿ– ಅಡ್ರಿನಲೀನ್, ನಾರ ಅಡ್ರಿನಲಿನ್). (ಕೆ.ಎಲ್.ಎಸ್.)

**ಅಡ್ರಿನಲೀನ್:** ಮೂತ್ರಜನಕಾಂಗಕ್ಕೆ ಹೊಂದಿಕೊಂಡಿರುವ ಅಡ್ರಿನಲ್ ಗ್ರಂಥಿಯ ಕುಸರಿ (ಮೆಡುಲ್ಲ) ಸ್ರವಿಸುವ ಪ್ರಮುಖ ಹಾರ್ಮೋನ್. ಇದರ ಅಣುಸೂತ್ರ ಮತ್ತು ವಿನ್ಯಾಸ ಕೆಳಗಿನಂತಿದೆ.

$C_9\ H_{13}\ O_3\ N$




ಅಣುಸೂತ್ರ ಅಡ್ರಿನಲೀನ್ ಅಣುವಿನ್ಯಾಸ

ಬಯೋಜೆನಿಕ್ ಅಮೈನ್ಸ್ ಗಳೆಂಬ ಗುಂಪಿನ ನರವಾಹಕಗಳಲ್ಲಿ ಕೆಟಕೊಲಮೈನ್ ಪಂಗಡಕ್ಕೆ ಅಡ್ರಿನಲೀನ್ ಮತ್ತು ನಾರ್ ಅಡ್ರಿನಲೀನ್ ಸೇರಿವೆ. ಅಡ್ರಿನಲೀನ್ ರಾಸಾಯನಿಕವಾಗಿ ಆರೋಮ್ಯಾಟಿಕ್ ಅಮೈನೊ ಆಮ್ಲಗಳಾದ ಟ್ರಿಪ್ಟೋಫೇನ್ ಮತ್ತು ಟೈರೋಸೀನ್ ಗಳಿಂದ ಉತ್ಪತ್ತಿಯಾಗುತ್ತದೆ. ಡೋಪಮೈನ್ ಎಂಬ ಇನ್ನೊಂದು ರಾಸಾಯನಿಕವು ಕೆಟಕೊಲಮೈನ್ ಪಂಗಡಕ್ಕೆ ಸೇರಿದ್ದು, ಅದು ಅಡ್ರಿನಲೀನ್ ನ ಸಂಶ್ಲೇಷಣೆಗೆ (ಉತ್ಪಾದನೆಗೆ) ಪೂರ್ವಗಾಮಿ ಪದಾರ್ಥವಾಗಿ ಬಳಕೆ ಆಗುತ್ತದೆ. ಅಡ್ರಿನಲೀನ್ ಹಾರ್ಮೋನಿನ ತಯಾರಿಕೆ ಮುಖ್ಯವಾಗಿ ಅಡ್ರಿನಲ್ ಗ್ರಂಥಿಯ ಮೆಡುಲ್ಲಾ ಭಾಗದಲ್ಲಿರುವ ಕ್ರೋಮೋಫೆನ್ ಕೋಶಗಳಲ್ಲಿ ನಡೆಯುತ್ತದೆ. ಹಲವು ಬಗೆಯ ಒತ್ತಡಗಳಿಂದ (ಉದಾ: ವ್ಯಾಯಾಮದಿಂದ ರಕ್ತದಲ್ಲಿ ಕುಗ್ಗಿದ ಗ್ಲೂಕೋಸ್, ಗಾಯ, ನೋವು, ಹೆದರಿಕೆ ಇತ್ಯಾದಿ) ಪ್ರಚೋದನೆಗೊಂಡು ಮೆಡುಲ್ಲಾ ಭಾಗದ ಕ್ರೋಮೋಫೆನ್ ಕೋಶಗಳು ಅಡ್ರಿನಲೀನ್ ನ್ನು ಉತ್ಪತ್ತಿ ಮಾಡಿ ರಕ್ತಕ್ಕೆ ಸ್ರವಿಸುತ್ತವೆ.

ಅಡ್ರಿನಲ್ ಗ್ರಂಥಿಯ ಮೆಡುಲ್ಲಾ ಭಾಗವು ಅನುವೇದನ ನರಮಂಡಲಕ್ಕೆ ಸೇರಿದ ನರಕೋಶಗಳಿಂದಲೇ ಮಾಡಲ್ಪಟ್ಟಿದ್ದರೂ ಈ ನರಕೋಶಗಳು ಇತರೆ ನರಕೋಶಗಳಂತೆ ತಮ್ಮ ಸ್ರವಿಕೆಯನ್ನು ಸೈನಾಪ್ಸ್ ಭಾಗದಲ್ಲಿ ಸ್ರವಿಸದೆ, ನೇರವಾಗಿ ರಕ್ತಕ್ಕೆ ಸ್ರವಿಸುತ್ತವೆ. ಈ ಕಾರಣಕ್ಕಾಗಿಯೇ ಮೆಡುಲ್ಲಾದ ಭಾಗವನ್ನೂ ಗ್ರಂಥಿ (ನಿರ್ನಾಳ ಗ್ರಂಥಿ) ಯೆಂದು ಪರಿಗಣಿಸಲಾಗಿದೆ. ಮೆಡುಲ್ಲಾ ಸ್ರವಿಸುವ ಇನ್ನೊಂದು ಹಾರ್ಮೋನು ನಾರ್‌ಅಡ್ರಿನಲೀನ್ ಅಥವ ನಾರ್ ಎಪಿನೆಫ್ರೀನ್. ಮಾನವನಲ್ಲಿ, ಅಡ್ರಿನಲ್ ಗ್ರಂಥಿಯ ಮೆಡುಲ್ಲಾದಿಂದ ಉತ್ಪತ್ತಿಯಾಗುವ ಅಡ್ರಿನಲೀನ್ ಮತ್ತು ನಾರ್ ಅಡ್ರಿನಲೀನ್ ಹಾರ್ಮೋನುಗಳ ಪ್ರಮಾಣವು ಕ್ರಮವಾಗಿ 4:1 ರ ಅನುಪಾತದಲ್ಲಿರುತ್ತದೆ. ಬೆಕ್ಕು, ಕೋಳಿ ಇತರೆ ಪ್ರಾಣಿಗಳಲ್ಲೂ ಕೂಡ ಈ ಅನುಪಾತ ಸು. ಅಷ್ಟೇ ಇರುತ್ತದೆ. ನಾರ್ ಅಡ್ರಿನಲೀನ್ ಹಾರ್ಮೋನನ್ನು ಪ್ರಮುಖವಾಗಿ ಸ್ರವಿಸುವ ಅನುವೇದನಾ ನರವ್ಯೂಹದ ನರಕೋಶಗಳ ಕೊನೆಯಲ್ಲಿ, ಅಡ್ರಿನಲೀನ್ ಹಾರ್ಮೋನು ಅಲ್ಪ ಪ್ರಮಾಣದಲ್ಲಿ ಮಾತ್ರ ಉತ್ಪತ್ತಿಯಗುತ್ತದೆ. ಅಡ್ರಿನಲೀನ್

ಹೃದಯದ ಸ್ನಾಯುಗಳ ಮೇಲೆ ಪ್ರಮುಖವಾಗಿ ಮತ್ತು ದೇಹದ ಇತರೆ ಎಲ್ಲ ಅಂಗಾಂಗಗಳ ಮೇಲೆ ಪ್ರಭಾವ ಬೀರಿ, ದೇಹವು ದೈಹಿಕ ಹಾಗೂ ಮಾನಸಿಕ ಒತ್ತಡಗಳಿಗೆ (ಉದಾ: ಭಯ, ಸಿಟ್ಟು, ಕಾದಾಟ, ನೋವು, ಉದ್ರೇಕ, ಕಿರಿ ಕಿರಿ ಅನುಭವ ಇತ್ಯಾದಿ) ಸಿಲುಕಿ, ತತ್‌ಕ್ಷಣ ಪ್ರತಿಕ್ರಿಯೆ ನೀಡಬೇಕಾದ ಸಂದರ್ಭದಲ್ಲಿ ಸಹಕಾರಿಯಾಗುತ್ತದೆ. ಈ ಕಾರಣಕ್ಕಾಗಿ ಅಡ್ರಿನಲೀನ್ ಹಾರ್ಮೋನನ್ನು ತುರ್ತು ಪರಿಸ್ಥಿತಿಯ ಹಾರ್ಮೋನು ಎಂದು ಕೂಡ ಕರೆಯುತ್ತಾರೆ.

ಪರಿಣಾಮಗಳು: ಹೃದಯ ಬಡಿತದ ವೇಗ, ತನ್ಮೂಲಕ ಹೃದಯದಿಂದ ಹೊರಬರುವ ರಕ್ತದ ಪ್ರಮಾಣ ಹಾಗೂ ರಕ್ತದ ಒತ್ತಡವನ್ನೂ ಹೆಚ್ಚಿಸುವುದು. ಚರ್ಮದಲ್ಲಿನ ಮತ್ತು ಜೀರ್ಣಾಂಗದಲ್ಲಿನ ಸೂಕ್ಷ್ಮರಕ್ತ ನಾಳಗಳು ಸಂಕುಚಿತಗೊಳ್ಳುವಂತೆ ಮಾಡುವುದು. ಹೃದಯ ಮತ್ತು ಐಚ್ಛಿಕಸ್ನಾಯುಗಳಲ್ಲಿನ ಅಪಧಮನಿಗಳು ವಿಕಸಿಸಿ ಹೆಚ್ಚಿನ ಪ್ರಮಾಣದ ರಕ್ತ ಈ ಅಂಗಗಳಿಗೆ ಲಭ್ಯವಾಗುವಂತೆ ಮಾಡುವುದು. ಯಕೃತ್ತಿನಲ್ಲಿ ಸಂಗ್ರಹವಾಗಿರುವ ಗ್ಲೈಕೊಜನನ್ನು ಗ್ಲುಕೋಸ್‌ಗೆ ಪರಿವರ್ತಿಸಿ ಅದು ರಕ್ತವನ್ನು ಸೇರಿ ರಕ್ತದ ಗ್ಲುಕೋಸ್ ಪ್ರಮಾಣ ಹೆಚ್ಚಿಸುವುದು, ಇವೆಲ್ಲ ಅಡ್ರಿನಲೀನ್‌ನಿಂದ ಪ್ರಚೋದಿತವಾಗುವ ಕ್ರಿಯೆಗಳು.

ದೇಹದಲ್ಲಿ ವಿವಿಧ ಅಂಗಗಳಲ್ಲಿ ನಡೆಯುವ ಸಕ್ಕರೆ ಮತ್ತು ಮೇದಸ್ಸಿನ ಚಯಾಪಚಯದ (ಮೆಟಬಾಲಿಸಂ) ಮೇಲೆ ಕೂಡ ಎಡ್ರಿನಲೀನ್ ಪರಿಣಾಮ ಬೀರುತ್ತದೆ ಹಾಗು ಶ್ವಾಸಕೋಶದ ಭಾಗವಾದ ಬ್ರಾಂಕಿಯೋಲ್‌ಗಳು ವಿಸ್ತರಣೆಯಾಗುವಂತೆ ಮಾಡಿ ದೇಹಕ್ಕೆ ಅಗತ್ಯವಿರುವ ಆಮ್ಲಜನಕ ಹೆಚ್ಚು ಲಭ್ಯವಾಗಲು ಸಹಾಯಕವಾಗುತ್ತದೆ.

ಕಣ್ಣಿನ ಪಾಪೆ (ಪ್ಯೂಪಿಲ್) ವಿಸ್ತರಣೆಯಾಗುವಂತೆ ಮಾಡಿ ಜೀವಿಯು ಮಂದಬೆಳಕಿನಲ್ಲೂ ಕಾರ್ಯ ಪ್ರವೃತ್ತವಾಗಲು ಸಾಧ್ಯವಾಗಿಸುತ್ತದೆ. ಅನುವೇದನಾ ನರತಂತುಗಳ ಕೊನೆಗಳಲ್ಲಿ ಉತ್ಪತ್ತಿಯಾಗಿ ಸೈನಾಪ್ಸ್ ಭಾಗದಲ್ಲಿ ಸ್ರವಿಸಲ್ಪಟ್ಟು ಆ ಭಾಗದಲ್ಲಿ ನರ ಆವೇಗಗಳ ಸಾಗಾಣಿಕೆಗೆ ವಾಹಕವಾಗಿದೆ. ಅಡ್ರಿನಲೀನ್‌ನ ಪರಿಣಾಮಗಳು ಪ್ರಚೋದನೆಗೊಂಡ ಅನುವೇದನಾ ನರಮಂಡಲದ ಪರಿಣಾಮಗಳನ್ನೇ ಹೋಲುತ್ತವೆ.

ಕಾರ್ಯವಿಧಾನ: ಅಡ್ರೀನಲೀನ್ ಹಾರ್ಮೋನು ಕೂಡ ಇತರೆ ಪೆಪ್ಟೈಡ್ ಹಾರ್ಮೋನುಗಳಂತೆ ಕೋಶ ಪೊರೆಯ ಮೇಲಿರುವ ನಿರ್ದಿಷ್ಟ ಗ್ರಾಹಿ (ರಿಸೆಪ್ಟಾರ್ ಸೈಟ್ಸ್) ಗಳಿಗೆ ಬಂಧಿಸಿಕೊಳ್ಳುವುದರ ಮೂಲಕವೆ ತನ್ನ ಕಾರ್ಯವನ್ನು ಸಾಧಿಸುತ್ತದೆಯೆ ವಿನಃ ಅದು ಜೀವಕೋಶದೊಳಗೆ ಪ್ರವೇಶಿಸುವುದಿಲ್ಲ. ಅಂದರೆ ತನ್ನ ಪ್ರತಿನಿಧಿ ಎಂಬಂತೆ ಎರಡನೆ ಸಂದೇಶವಾಹಕವನ್ನು ಉತ್ಪತ್ತಿ ಮಾಡುವುದರ ಮೂಲಕ ಕೋಶದೊಳಗೆ ನಡೆಯಬೇಕಾದ ಹಲವಾರು ಕಿಣ್ವ ನಿಯಂತ್ರಿತ ಜೈವಿಕ ಕ್ರಿಯೆಗಳನ್ನು ಪ್ರಾರಂಭಿಸುತ್ತದೆ. ಅಡ್ರಿನಲೀನ್ ಕೋಶಭಿತ್ತಿಗೆ ಸಂಪರ್ಕ ಪಡೆದು ಅಲ್ಲಿ ಪ್ರತೀಕ್ಷಕ ಗ್ರಾಹಿ ಅಣುವಿನ (ರಿಸೆಪ್ಟಾರ್ ಪ್ರೊಟೀನ್ ಮಾಲಿಕ್ಯೂಲ್) ಮೂಲಕ ಅಡಿನೈಲ್ ಸೈಕ್ಲೇಸ್ ಕಿಣ್ವವನ್ನು ಚುರುಕುಗೊಳಿಸುತ್ತದೆ. ಅಡಿನೈಲ್ ಸೈಕ್ಲೇಸ್ ಕಿಣ್ವವು ಎಟಿಪಿ (ಅಡಿನೋಸಿನ್ ಟ್ರೈ ಫಾಸ್ಫೇಟ್, ಎಟಿಪಿ)ಯನ್ನು ಸೈಕ್ಲಿಕ್ ನ್ಯೂಕ್ಲಿಯೋಟೈಡ್ (ಸೈಕ್ಲಿಕ್ ಎಎಮ್‌ಪಿ) ಆಗಿ ಪರಿವರ್ತಿಸುತ್ತದೆ. ಸೈಕ್ಲಿಕ್ ಎಎಮ್‌ಪಿ ಅಣುವು ಜೀವಕೋಶದೊಳಗೆ ಹಲವು ಬಗೆಯ (ಗುರಿ ಅಂಗಾಂಗ ಯಾವುದಾಗಿರುತ್ತದೋ ಅದಕ್ಕೆ ಸಂಬಂಧಿಸಿದಂತೆ) ಜೀವ ರಾಸಾಯನಿಕ ಕ್ರಿಯೆಗಳಿಗೆ ಚಾಲನೆ ನೀಡುತ್ತದೆ. ತತ್ಪರಿಣಾಮವಾಗಿ ಆ ಗುರಿ ಅಂಗಾಂಶ ಅಥವಾ ಕೋಶದಿಂದ ಉದ್ದೇಶಿತ ಪದಾರ್ಥದ ಉತ್ಪಾದನೆಯಾಗುತ್ತದೆ ಅಥವಾ ಉದ್ದೇಶಿತ ಕ್ರಿಯೆ ನೆರವೇರುತ್ತದೆ. ಉದಾ: ಪಿತ್ತಜನಕಾಂಗದಲ್ಲಿ ಗ್ಲೈಕೋಜಿನ್ ವಿಘಟನೆಗೊಂಡು ಗ್ಲೂಕೋಸ್ ಆಗಿ ಪರಿವರ್ತನೆಗೊಂಡು ರಕ್ತಕ್ಕೆ ಸೇರುವುದು.

ಪ್ರಾಣಿಗಳ ಗ್ರಂಥಿಗಳ ಸಾರಕವಾಗಿ ಮತ್ತು ಕೃತಕವಾಗಿ ತಯಾರಾದ ಅಡ್ರಿನಲೀನ್ ನ್ನು ಹೊಂದಿರುವ ಅನೇಕ ಸಂಯುಕ್ತಗಳು, ಔಷಧಿಯ ರೂಪದಲ್ಲಿ ಇಂದು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಅವುಗಳನ್ನು ಅಗತ್ಯಕ್ಕೆ ತಕ್ಕಂತೆ ಹಲವಾರು ರೋಗಗಳಿಗೆ ಚಿಕಿತ್ಸೆ ನೀಡಲು ಬಳಸುತ್ತಾರೆ. ಉದಾ:ಷಾಕ್ ನಿಂದಾಗಿ (ಆಘಾತ) ನಾಡಿ ಬಡಿತ ಸ್ಥಗಿತಗೊಂಡು ಸುಸ್ತಾಗಿರುವಾಗ, ಅಡ್ರಿನಲೀನ್ ಚುಚ್ಚುಮದ್ದು ನೀಡಿದರೆ ರಕ್ತದ ಒತ್ತಡ ಏರುವಂತೆ ಮಾಡುತ್ತದೆ ಮತ್ತು ಹೃದಯ ಕುಗ್ಗುವ ವೇಗ ಮತ್ತು ಬಲಗಳೆರಡೂ ಹೆಚ್ಚುವುದಲ್ಲದೆ ಸುತ್ತಂಚಿನ ರಕ್ತನಾಳಗಳೂ ಕುಗ್ಗುತ್ತವೆ. ಅಡ್ರಿನಲೀನನ್ನು ಗೂರಲು ರೋಗ (ಆಸ್ತಮ)ದ ವ್ಯಕ್ತಿಗೆ ನೀಡಿದರೆ ಫುಪ್ಪುಸ (ಶ್ವಾಸಕೋಶ)ದಲ್ಲಿನ ನವಿರಾದ ಉಸಿರ್ನಾಳಗಳನ್ನು (ಬ್ರಾಂಕಿಯೋಲ್ಸ್) ಹಿಗ್ಗಿಸುವುದರ ಮೂಲಕ ಉಸಿರಾಟ ಸರಾಗವಾಗುವಂತೆ ಮಾಡುತ್ತದೆ. ಅಡ್ರಿನಲೀನ್, ಚರ್ಮದಲ್ಲಿನ ಸೂಕ್ಷ್ಮ ರಕ್ತನಾಳಗಳನ್ನು ಕುಗ್ಗಿಸುವ ಗುಣ ಹೊಂದಿರುವುದರಿಂದ, ತಾವಿನ ಅರಿವಳಿಕೆಗಳ (ಲೋಕಲ್ ಅನಸ್ತೇಸಿಯ) ಪ್ರಭಾವವು ಹೆಚ್ಚುಕಾಲ ಇರುವಂತೆ ಮಾಡಲು ಅರಿವಳಿಕೆ ಔಷಧದೊಡನೆ ತುಸು ಅಡ್ರಿನಲೀನ್ ನ್ನು ಸೇರಿಸಿ ಬಳಸುತ್ತಾರೆ. ಹಲವಾರು ಬಗೆಯ ಒಗ್ಗದಿರುವಿಕೆಯ ಬೇನೆ (ಅಲರ್ಜಿ) ಗಳಲ್ಲಿ ಅಡ್ರಿನಲೀನ್ ನ ಬಳಕೆ ಮಿತಿ ಮೀರದಂತೆ ಎಚ್ಚರವಹಿಸಬೇಕು ಕಾರಣ ಮಿತಿ ಮೀರಿದ ಅಡ್ರಿನಲೀನ್ ಬಳಕೆಯು ಮೆದುಳಿನಲ್ಲಿ ರಕ್ತನಾಳ ಒಡೆದು (ರಕ್ತದ ಒತ್ತಡದ ಅತಿ ಹೆಚ್ಚಳದಿಂದಾಗಿ) ರಕ್ತ ಸುರಿಯುವಂತೆ ಮಾಡುವುದಲ್ಲದೆ ಹೃದಯದ ಬಡಿತವನ್ನು ಏರುಪೇರು ಮಾಡಿ ಜೀವ ಹಾನಿಯಾಗುವ ಸಾಧ್ಯತೆಯಿರುತ್ತದೆ. (ಕೆ.ಎಲ್.ಎಸ್.)

**ಅಣಿಮೀನು:** ಚೇಳುಮೀನಿನ (ಕ್ಲಾರಿಯಸ್ ಬ್ಯೂಟ್ರಾಕಸ್) ಜಾತಿಗೆ ಸೇರಿದ ಮೀನು. ಅದರ ವರ್ಣನೆಯೇ ಇದಕ್ಕೂ ಅನ್ವಯಿಸುತ್ತದೆ. ಬೆನ್ನಿನ ಈಜು ರೆಕ್ಕೆ ಬಹಳ ಉದ್ದವಾಗಿದ್ದು 62 ರಿಂದ 76 ಕದಿರುಗಳಿವೆ. ತೋಳಿನ ಈಜುರೆಕ್ಕೆಯಲ್ಲಿ ಒಂದು ಬಲವಾದ ಮುಳ್ಳು ಮತ್ತು 8 ರಿಂದ 11 ಕದಿರುಗಳಿವೆ. ನಡುವಿನ ಈಜು ರೆಕ್ಕೆಯಲ್ಲಿ 6, ಆಸನದ ಈಜು ರೆಕ್ಕೆಯಲ್ಲಿ 45 ರಿಂದ 58, ಬಾಲದ ಈಜು ರೆಕ್ಕೆಯಲ್ಲಿ 15 ರಿಂದ 17 ಕದಿರುಗಳಿವೆ. 4 ಜೊತೆ ಮೀಸೆಗಳಿವೆ. ಇದರ ಬೆನ್ನಿನ ಈಜುರೆಕ್ಕೆ ಇತರ ಯಾವ ಜಾತಿಯ ಮೀನಿನಲ್ಲೂ ಇಲ್ಲದಷ್ಟು ಉದ್ದವಾಗಿದೆ. ದೇಹ ತಲೆಗಿಂತ 5 ರಿಂದ 6 ಪಟ್ಟು ಉದ್ದವಾಗಿದೆ. ಇದರ ಬಣ್ಣ ಕೆಂಪು ಮಿಶ್ರಿತ ಕಂದು ಅಥವಾ ಬೂದು ಮಿಶ್ರಿತ ಕಪ್ಪು. ಸುಮಾರು 30 ಸೆಂಮೀ ಉದ್ದ ಬೆಳೆಯುತ್ತದೆ.

ಈ ಮೀನು ದೇಶದ ಎಲ್ಲ ಭಾಗಗಳಲ್ಲೂ ಸಿಗುತ್ತದಾದರೂ ಚೇಳುಮೀನಿನಂತೆ ವಿಶೇಷವಾಗಿ ಸಿಕ್ಕುವುದಿಲ್ಲ. ಇದು ಆಹಾರ ದೃಷ್ಟಿಯಿಂದ ಹೆಚ್ಚು ಪ್ರಸಿದ್ಧಿಯಾಗಿದ್ದು ಬಹು ಬೆಲೆಯುಳ್ಳದ್ದಾಗಿದೆ.

ಸೀಗಡಿ (ಪ್ರಾನ್ಸ್), ನೀರಿನ ಕೀಟ, ಪಾಚಿಯವಸ್ತು, ಮರಳು ಮತ್ತು ಮಣ್ಣನ್ನು ಇದು ಆಹಾರವಾಗಿ ಬಳಸುತ್ತದೆ. ವಂಶಾಭಿವೃದ್ಧಿ ಏಪ್ರಿಲ್–ಜೂನ್ ತಿಂಗಳುಗಳಲ್ಲಿ. ಮರಿಗಳನ್ನು ಕೆರೆಯ ಅಂಚಿನ ಪ್ರದೇಶದಲ್ಲಿ ಹುಲ್ಲು ಬೆಳೆದಿರುವ ಜೌಗುಗಳಲ್ಲಿ ಶೇಖರಿಸಬಹುದು. ಇದರ ಜೀವನ ಚರಿತ್ರೆಗೆ ಸಂಬಂಧಿಸಿದ ವಿವರಗಳು ಅಷ್ಟಾಗಿ ಸಂಗ್ರಹವಾಗಿಲ್ಲ.

(ಬಿ.ಎಸ್.)

**ಅಣು ಜೀವವಿಜ್ಞಾನ:** ಜೈವಿಕ ಕ್ರಿಯೆಗಳನ್ನು ಅಣುವಿಕ (ಮಾಲಿಕ್ಯುಲಾರ್) ಹಂತದಲ್ಲಿ ಅಧ್ಯಯಿಸುವ ವಿಜ್ಞಾನ. ಬಾಹ್ಯರೂಪದಲ್ಲಿ ಸರಳವಾಗಿರುವ ಜೈವಿಕ ಕ್ರಿಯೆಗಳಿಗೆ ಇಲ್ಲಿ ಅಣುವಿಕ ಕಾರಣಗಳನ್ನು ನೀಡಲಾಗುತ್ತದೆ. ಜೀವಿಯು ಸರಿಯಾದ ರೀತಿಯಲ್ಲಿ ಅದರ ಕ್ರಿಯೆಗಳನ್ನು ಪೂರ್ಣಗೊಳಿಸಬೇಕಾದರೆ ಕೋಶಗಳ ಪಾತ್ರ ಮಹತ್ವದ್ದಾಗಿರುತ್ತದೆ. ಹಾಗಾಗಿ ಕೋಶಗಳನ್ನು ಜೀವಿಗಳ ಮೂಲಭೂತ ಸತ್ವಗಳೆಂದು ಕರೆಯಲಾಗುತ್ತದೆ. ಕೋಶಗಳು ತಮ್ಮ ಕಾರ್ಯವನ್ನು ಸಮರ್ಪಕವಾಗಿ ಮಾಡಬೇಕಾದರೆ ಅವುಗಳ ಕ್ರೋಮೋಸೋಮುಗಳಲ್ಲಿರುವ ಜೀನ್‌ಗಳೇ ಕಾರಣ. ಯಾವುದೇ ಜೈವಿಕ ಕ್ರಿಯೆ (ಉದಾ : ಮೂತ್ರ ಉತ್ಪಾದನೆ, ಪಚನಕ್ರಿಯೆ, ಕಿಣ್ವೋತ್ಪಾದನೆ) ನಡೆಯಬೇಕಾದಲ್ಲಿ ಜೀನ್‌ಗಳ ನಿಯಂತ್ರಣ ಬಹು ಮುಖ್ಯ. ಈ ಕೋಶ ಹಾಗು ಕ್ರೋಮೋಸೋಮುಗಳ ನಡುವಿನ ಪ್ರತಿವರ್ತನೆಗಳನ್ನು (ಇಂಟರ್‌ಆಕ್ಷನ್) ವಿಶ್ಲೇಷಿಸುವುದೇ ಅಣು ಜೀವವಿಜ್ಞಾನದ ಸಾರವಾಗಿದೆ. ಹಲವು ಸೂಕ್ಷ್ಮಾಣುಜೀವಿಗಳು ಕೇವಲ ಒಂದು ಅಥವಾ ಎರಡು ಕೋಶಗಳಿಂದ ಕೂಡಿದ್ದು ಇನ್ನೂ ಕೆಲವು ಕೇವಲ ಒಂದೇ ಒಂದು ಕೋಶಗಳನ್ನು ಹೊಂದಿರುತ್ತವೆ. ಈ ಜೀವಿಗಳ ಅಧ್ಯಯನವನ್ನು ಕೋಶಗಳ ಹಂತದಲ್ಲಿ ಮಾಡದೆ ಅಣುವಿಕ ಹಂತದಲ್ಲಿ ಮಾಡುವುದೇ ಸೂಕ್ತವಾಗಿರುತ್ತದೆ. ಏಕೆಂದರೆ ಅಣುವಿಕ ಹಂತದಲ್ಲಿ ಮಾಡುವ ಅಧ್ಯಯನ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ತಿಳಿಸುವಲ್ಲಿ ಸಹಕಾರಿಯಾಗಿದೆ. ಅಂದರೆ ಕೋಶದ ಎಲ್ಲಾ ಕ್ರಿಯೆಗಳು ಅಣುವಿಕ ಹಂತದಲ್ಲಿ ನಿರ್ಧರಿಸಲಾಗುತ್ತದೆ.

ಅಣು ಜೀವವಿಜ್ಞಾನ ಹಾಗೂ ತಳಿವಿಜ್ಞಾನ ಈ ಎರಡೂ ವಿಷಯಗಳೂ ಒಂದೇ ವೇಗದಲ್ಲಿ ಬೆಳೆದಂತ ಹಾಗು ಒಂದರ ಮೇಲೆ ಇನ್ನೊಂದು ಅವಲಂಬಿತವಾಗಿರುವ ವಿಷಯಗಳಾಗಿವೆ. ಅಣು ಜೀವವಿಜ್ಞಾನದ ಹುಟ್ಟು ಅರಿಸ್ಟಾಟಲ್‌ನ ಕಾಲದಿಂದಲೇ ಬಂದುದಾಗಿದೆ. ಮೆಂಡಲ್‌ನ ಆನುವಂಶೀಯತೆಯ ವಾದ, ಚಾರ್ಲ್ಸ್ ಡಾರ್ವಿನ್‌ನ ನೈಸರ್ಗಿಕ ಆಯ್ಕೆ ಸಿದ್ಧಾಂತ ಇವೆಲ್ಲವೂ ಕೂಡ ಒಂದಲ್ಲ ಒಂದು ರೀತಿಯಾಗಿ ಅಣು ಜೀವವಿಜ್ಞಾನದ ಬೆಳವಣಿಗೆಗೆ ಕಾರಣವಾಗಿದೆ. ಈ ಎಲ್ಲಾ ಬೆಳವಣಿಗೆ ಆಗುತ್ತಿರುವಾಗಲೆ ಕೋಶ ವಿಜ್ಞಾನವೂ ಅಷ್ಟೇ ವೇಗದಿಂದ ಮುಂದುವರಿಯುತ್ತಿತ್ತು. ಸ್ಕ್ಲೀಡನ್ ಹಾಗೂ ಶ್ವಾನ್‌ರ ಕೋಶ ಸಿದ್ಧಾಂತ ಈ ಬೆಳವಣಿಗೆಗೆ ಮೊದಲ ಹೆಜ್ಜೆಯಾಗಿತ್ತು. ಕೋಶ ಸಿದ್ಧಾಂತಕ್ಕೆ ಹೊಂದಿಕೊಂಡಂತೆ ಕೋಶಗಳಲ್ಲಿರುವಂತಹ ಕೋಶ ಭಾಗಗಳನ್ನು ಕಂಡುಹಿಡಿಯಲಾಯಿತು. 1903 ರಲ್ಲಿ ಸಟ್ಟನ್ ಎಂಬ ವಿಜ್ಞಾನಿ ಕ್ರೋಮೋಸೋಮುಗಳನ್ನು ಸೂಕ್ಷ್ಮದರ್ಶಕದಲ್ಲಿ ಮೊದಲಬಾರಿಗೆ ಅಧ್ಯಯಿಸಿದನು. ಮೆಂಡಲನ ಸಿದ್ಧಾಂತದ ಮರು ಅನ್ವೇಷಣೆಯೂ ಕೂಡ ಅಣು ಜೀವವಿಜ್ಞಾನದ ಬೆಳವಣಿಗೆಗೆ ಪರಿಣಾಮಕಾರಿಯಾದ ಕಾರಣವಾಯಿತು.

ಮುಂದಿನ ಬೆಳೆವಣಿಗೆಯಲ್ಲಿ ಡ್ರಾಸೋಫಿಲಾ ಮೆಲನೋಗ್ಯಾಸ್ಟರ್ ನೊಣದ ಉಪಯೋಗ ಬಹಳ ಮಹತ್ವಪೂರ್ಣವಾಗಿತ್ತು. ಕ್ರೊಮೋಸೋಮುಗಳ ಕಾರ್ಯವೈಖರಿ, ಜೀನ್‌ಗಳ ನಿಯಂತ್ರಣ ಇವೆಲ್ಲವು ಕೂಡ ಬಹಳ ಆಳವಾಗಿ ಅಧ್ಯಯಿಸುವಲ್ಲಿ ಈ ಜೀವಿ ಸಹಕಾರಿಯಾಯಿತು. ಪ್ರಾಣಿಯ ಲಿಂಗವನ್ನು ನಿರ್ಧರಿಸುವಂತಹ ಕ್ರೊಮೋಸೋಮುಗಳು ಹಾಗೂ ಅವುಗಳ ಸಂಲಗ್ನತೆ (ಲಿಂಕೇಜ್) ಮತ್ತು ತಳಿಗುಣ ಭೂಪಟ (ಜನೆಟಿಕ್ ಮ್ಯಾಪಿಂಗ್) ಎಂಬ ವಿಧಾನಗಳನ್ನು ಈ ಹುಳುವಿನಲ್ಲಿ ಮೊದಲಬಾರಿಗೆ ಅಳವಡಿಸಲಾಯಿತು.

ಅಣು ಜೀವವಿಜ್ಞಾನದ ಬೆಳೆವಣಿಗೆಗೆ ಜೀವರಸಾಯನ ವಿಜ್ಞಾನದ ಕೊಡುಗೆ ಮಹತ್ವಪೂರ್ಣವಾದದ್ದು. ಯೀಸ್ಟ್ ಜೀವಿಯ ಕೋಶರಹಿತ ಕಿಣ್ವದ ಕ್ರಿಯೆಗೆ (ಸೆಲ್‌ಫ್ರೀ ಫರ್ಮೆಂಟೇಶನ್) ಬೇಕಾದ ಕಿಣ್ವಗಳು, ಅದರ ರಾಸಾಯನಿಕ ಕ್ರಿಯೆಗಳು, ಕಿಣ್ವನ ಕ್ರಿಯೆಯಲ್ಲಿ ಆಗುವ ವಿವಿಧ ಕೋಶ ಬದಲಾವಣೆಗಳ ಅಧ್ಯಯನ ಅಣು ಜೀವವಿಜ್ಞಾನದ ಬೆಳೆವಣಿಗೆಗೆ ಸಹಕಾರಿಯಾದವು.

ಇವೆಲ್ಲ ಬೆಳೆವಣಿಗೆಗಳಾದರೂ ಕ್ರೊಮೋಸೋಮುಗಳ ರಾಸಾಯನಿಕ ಸಂಯೋಜನೆ ಗೊತ್ತಿಲ್ಲವಾದುದ್ದು ಅಣು ಜೀವವಿಜ್ಞಾನದ ಬೆಳೆವಣಿಗೆಗೆ ಅಪೂರ್ಣತೆಯ ಕಂದರವಾಗಿತ್ತು. 1989 ರಲ್ಲಿ ಫ್ರೆಡರಿಕ್ ಮಿಷರ್‌ನ ಮುಖಾಂತರ ಈ ಕಂದರವು ಕೂಡ ಮುಚ್ಚಲಾಯಿತು. ಈತ ಕೀವು ಕೋಶಗಳ ಸಹಾಯದಿಂದ ಡಿಎನ್‌ಎ, ಆರ್‌ಎನ್‌ಎ ಎಂಬ ಎರಡು ನ್ಯೂಕ್ಲಿಯಿಕ್ ಆಮ್ಲಗಳನ್ನು ಕಂಡುಹಿಡಿದನು. ಈ ಸಾಧನೆ ಅಣು ಜೀವವಿಜ್ಞಾನಕ್ಕೆ ಅತ್ಯದ್ಭುತ ಕೊಡುಗೆಯಾಗಿತ್ತು. ಡಿಎನ್‌ಎ ಅಥವಾ ಆರ್‌ಎನ್‌ಎ ನ್ಯೂಕ್ಲಿಯೋಟೈಡ್ ಸರಣಿಯಿಂದ ಕೂಡಿದ್ದು ಹಾಗೂ ಅದರಲ್ಲಿರುವ ಗ್ವಾನಿನ್ (ಜಿ) ಮತ್ತು ಅಡಿನಿನ್ (ಎ) ಪ್ರಮಾಣವು ಸೈಟೊಸಿನ್ (ಸಿ) ಮತ್ತು ಥೈಮಿನ್ (ಟಿ) ಪ್ರಮಾಣಕ್ಕೆ ಸಮವಾಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸಲಾಯಿತು (ಚಾರ್ಗಾಫ್ ಸಿದ್ಧಾಂತ).

ಇವಿಷ್ಟು ಕೂಡ ಅಣು ಜೀವವಿಜ್ಞಾನಕ್ಕೆ ಹೊಂದಿಕೊಂಡಿರುವ ಮಹತ್ವಪೂರ್ಣ ಬೆಳೆವಣಿಗೆಗಳಾಗಿವೆ. ನ್ಯೂಕ್ಲಿಯಿಕ್ ಆಮ್ಲದ ಅನ್ವೇಷಣೆ ಈ ಎಲ್ಲಾ ಬೆಳೆವಣಿಗೆಗಳಲ್ಲಿ ಕೇಂದ್ರಸ್ಥಾನವನ್ನು ಪಡೆಯುತ್ತದೆ. ಅಣು ಜೀವವಿಜ್ಞಾನದ ಎಲ್ಲಾ ತಂತ್ರಜ್ಞಾನದಲ್ಲಿ ಡಿಎನ್‌ಎಯೇ ಮೂಲ ವಸ್ತುವಾಗಿದೆ. ಡಿಎನ್‌ಎ ಅನ್ನು ಅವಲಂಬಿಸಿ ಕೋಶಕ್ರಿಯೆಗೆ ಸಂಬಂಧಿಸಿದ ಎಷ್ಟೋ ಸತ್ಯಗಳನ್ನು ಹೊರಗೆಳೆಯಲಾಗುತ್ತಿದೆ.

ಅಣು ಜೀವವಿಜ್ಞಾನದ ಈಗಿನ ಬೆಳೆವಣಿಗೆಗಳಾದ ತದ್ರೂಪಿ ತಂತ್ರಜ್ಞಾನ (ಜೀನ್ ಕ್ಲೋನಿಂಗ್), ಕ್ಯಾರಿಯೊಟೈಪಿಂಗ್, ನ್ಯೂಕ್ಲಿಯಿಕ್ ಆಮ್ಲ ಶ್ರೇಣೀಕರಣ (ಸೀಕ್ವೆನ್ಸಿಂಗ್), ತಳಿಗುಣ ಪ್ರತ್ಯೇಕಿಸುವಿಕೆ (ಜೀನ್ ಐಸೊಲೇಷನ್), ಜೀನ್ ಚಿಕಿತ್ಸೆ (ಜೀನ್ ಥೆರಪಿ) ಇವುಗಳೆಲ್ಲವಲ್ಲೂ ಡಿಎನ್‌ಎಯೇ ಮೂಲ ವಸ್ತುವಾಗಿರುತ್ತದೆ. ಹಾಗಾಗಿ ಡಿಎನ್‌ಎಯು ಹೊಂದಿರುವಂತಹ ಅಂಶಗಳನ್ನು, ಅದರ ಕಾರ್ಯಕ್ಷಮತೆ ಹಾಗು ಅದರ ನಿಯಂತ್ರಣವನ್ನು ತಿಳಿಯುವುದೇ ಅಣು ಜೀವವಿಜ್ಞಾನದ ಮೂಲ ಉದ್ದೇಶವಾಗಿದೆ.

ಅಣು ಜೀವವಿಜ್ಞಾನ (ಮಾಲಿಕ್ಯುಲಾರ್ ಬಯಾಲಜಿ) ಎಂಬ ಪದವನ್ನು ಮೊದಲು ಹುಟ್ಟುಹಾಕಿದ್ದು ವಿಲಿಯಮ್ ಆಸ್ಟ್‌ಬರಿ (1945). ಆ ಹೊತ್ತಿಗೆ ಅಣು ಜೀವವಿಜ್ಞಾನದಲ್ಲಿ ಎಷ್ಟೋ ಸಾಧನೆಗಳಾಗಿದ್ದರೂ ಕೂಡ ಇವೆಲ್ಲ ಸಾಧನೆಗಳಿಗೆ ಒಂದು ನಿರ್ದಿಷ್ಟ ಸ್ಥಾನಮಾನ ಕೊಟ್ಟ ಹಿರಿಮೆ ಇವನದಾಗಿತ್ತು. ಅಷ್ಟರ ಹೊತ್ತಿಗೆ ಪ್ರೊಟೀನ್‌ಗಳ ರಚನೆ, ಅದರ ಕಾರ್ಯಗಳೆಲ್ಲವೂ ತಿಳಿಯಲಾಗಿತ್ತು. ಪ್ರೊಟೀನ್‌ಗಳು ಹಾಗು ಡಿಎನ್‌ಎ ಗಿರುವ ಸಂಬಂಧಗಳ ಬಗೆಗಿನ ಸತ್ಯ ಬಯಲಾಗತೊಡಗಿತ್ತು. ಡಿಎನ್‌ಎ ಯೇ ಆನುವಂಶೀಯತೆಗೆ ಕಾರಣ ಎಂಬುದನ್ನು ಕೂಡ ತಿಳಿಯಲಾಗಿತ್ತು.

ಇನ್ನೊಂದು ಕಡೆ ಗ್ರಿಫಿತ್ ನ್ಯುಮೋನಿಯಾಗೆ ಕಾರಣವಾದಂತ ಡಿಪ್ಲೊಕಾಕಸ್ ನ್ಯುಮೋನಿಯೇ ಮೇಲೆ ಪರಿವರ್ತನಾ (ಟ್ರಾನ್ಸ್‌ಫಾರ್ಮೇಷನ್) ಪ್ರಯೋಗಗಳನ್ನು ಮಾಡುತ್ತಿದ್ದನು. ಈತನ ಪ್ರಯೋಗದಲ್ಲಿ ವಿಷಯುಕ್ತ ನ್ಯುಮೋಕಾಕಸ್ (ವಿರ್ಯುಲೆಂಟ್ ನ್ಯುಮೊಕಾಕಸ್) ಬ್ಯಾಕ್ಟೀರಿಯ ವಿಷರಹಿತ ಬ್ಯಾಕ್ಟೀರಿಯಾಗಳನ್ನು ವಿಷಯುಕ್ತ ಬ್ಯಾಕ್ಟೀರಿಯಾಗಳಾಗಿ ಮಾಡುತ್ತಿದ್ದ ಅಂಶ ಯಾವುದೆಂದು ತಿಳಿಯಲು ಸಾಧ್ಯವಾಗಿರಲಿಲ್ಲ. ಆದರೆ ಅವೆರಿ, ಮೆಕ್‌ಲಿಯಾಡ್ ಮತ್ತು ಮೆಕಾರ್ಟಿ ಈ ಸತ್ಯವನ್ನು ಕೂಡ ಬಯಲಿಗೆಳೆದರು. ವಿಷಯುಕ್ತ ಬ್ಯಾಕ್ಟೀರಿಯಾದಲ್ಲಿರುವ ಡಿಎನ್‌ಎ ಈ ಮಾರ್ಪಾಟಿಗೆ ಕಾರಣ ಎಂದು ಕಂಡುಹಿಡಿದರು.

1953 ರಲ್ಲಿ ಡಿಎನ್‌ಎ ಬಾಹ್ಯರೂಪ ಮತ್ತು ರಚನೆಯ ವರ್ಣನೆಯಾಯಿತು. ಈ ಹಿರಿಮೆ ಜೆ. ಡಿ. ವಾಟ್ಸನ್, ಫ್ರಾನ್ಸಿಸ್ ಕ್ರಿಕ್, ಎಮ್.ಎಫ್.ಎಚ್. ವಿಲ್ಕಿನ್ಸ್ ಮತ್ತು ರೋಸಲಿಂಡ್ ಫ್ರ್ಯಾಂಕ್‌ಲಿನ್‌ಗೆ ಸೇರಿದುದಾಗಿದೆ. 1950–1970 ರ ಕಾಲದಲ್ಲಿ ಅಣು ಜೀವವಿಜ್ಞಾನ ಬಹಳ ವೇಗದಿಂದ ಮುಂದುವರಿಯಿತು. ತಳಿಗುಣ ಸಂಕೇತದ (ಜನೆಟಿಕ್ ಕೋಡ್) ವಿಸ್ತಾರ ರೂಪ ಪ್ರಕಟಿಸಲಾಯಿತು. 1958 ರಲ್ಲಿ ಡಿಎನ್‌ಎ ದ್ವಿಪ್ರತೀಕರಣ ಕಂಡು ಹಿಡಿಯಲಾಯಿತು. ಅದೇ ವರ್ಷದಲ್ಲಿ ಕೋರ್ನ್‌ಬರ್ಗ್ ತಮ್ಮ ಪ್ರಯೋಗಾಲಯದಲ್ಲಿ ಮೊದಲಬಾರಿಗೆ ಕೃತಕವಾಗಿ ಡಿಎನ್‌ಎ ಕಣವನ್ನು ಉತ್ಪಾದಿಸುವಲ್ಲಿ ಸಫಲರಾದರು. ಇದಾದ ಕೆಲವು ವರ್ಷಗಳಲ್ಲಿ ಕೋಶದಲ್ಲಿ ಡಿಎನ್‌ಎ ಉತ್ಪಾದನೆಗೆ ಕಾರಣವಾದಂತಹ ಡಿಎನ್‌ಎ ಪಾಲಿಮರೇಸ್ ಕಿಣ್ವವನ್ನು ಸಂಸ್ಕರಿಸಿ ಶುದ್ಧೀಕರಿಸಲಾಯಿತು.

ಅದೇ ಹಂತದ ಬೆಳೆವಣಿಗೆಯಲ್ಲಿ ಗ್ರುನ್‌ಗರ್ಗ್ ಮುನಾಗೋ ಹಾಗು ಸೆವೆರೋ ಒಕಾವಾ ಎಂಬ ಇಬ್ಬರು ವಿಜ್ಞಾನಿಗಳು ಪಾಲಿನ್ಯೂಕ್ಲಿಯೋಟೈಡ್ ಫಾಸ್ಫಾರಿಲೇಸ್ ಎಂಬ ಆರ್‌ಎನ್‌ಎ ಉತ್ಪಾದನೆಗೆ ಸಹಾಯವಾಗುವಂತಹ ಕಿಣ್ವವೊಂದನ್ನು ಅನ್ವೇಷಣೆ ಮಾಡುವಲ್ಲಿ ಸಫಲರಾದರು. ಈ ಅನ್ವೇಷಣೆಯು ತಳಿಗುಣ ಸಂಕೇತವನ್ನು ವರ್ಣಿಸುವಲ್ಲಿ (ತರ್ಜುಮೆ ಮಾಡುವಲ್ಲಿ) ಬಹಳ ಸಹಕಾರಿಯಾಯಿತು. ವೀಸ್ ಎಂಬಾತ 1950 ರಲ್ಲಿ ಆರ್‌ಎನ್‌ಎ ಉತ್ಪಾದನೆಗೆ ನೇರವಾಗಿ ಹಾಗು ಬಹುಮುಖ್ಯವಾಗಿ ಬೇಕಾದಂತಹ ಆರ್‌ಎನ್‌ಎ ಪಾಲಿಮರೇಸ್ ಎಂಬ ಕಿಣ್ವವನ್ನು ಪತ್ತೆಹಚ್ಚುವಲ್ಲಿ ಸಫಲನಾದನು.

ಡಿಎನ್‌ಎ ಅನ್ವೇಷಣೆ, ಡಿಎನ್‌ಎ ಪಾಲಿಮರೇಸ್ ಕಿಣ್ವದ ಕಾರ್ಯವೈಖರಿ, ಡಿಎನ್‌ಎ ರೂಪ ಮತ್ತು ರಚನೆ, ಆರ್‌ಎನ್‌ಎ ಹಾಗೂ ಆರ್‌ಎನ್‌ಎ ಪಾಲಿಮರೇಸ್ ಕಿಣ್ವದ ಕಾರ್ಯವೈಖರಿಯ ತಿಳುವಳಿಕೆಯಿಂದ ಕೋಶದಲ್ಲಾಗುವ ಪ್ರೊಟೀನ್ ಉತ್ಪಾದನೆಯ ತಂತ್ರಗಾರಿಕೆಯ ಪೂರ್ಣ ಪರಿಚಯವಾದಂತಾಯಿತು. ಈ ಪ್ರೊಟೀನ್ ಉತ್ಪಾದನೆಯನ್ನು ನಾವು ಅಣು ಜೀವವಿಜ್ಞಾನದ ಮೂಲತತ್ವ (ಸೆಂಟ್ರಲ್ ಡಾಗ್ಮ ಆಫ್ ಮಾಲಿಕ್ಯುಲಾರ್ ಬಯಾಲಜಿ) ಎಂದು ಕರೆಯುತ್ತೇವೆ. ಅವನ್ನು ಹೀಗೆ ಚಿತ್ರಿಸಬಹುದು;

ಟ್ರಾನ್ಸ್‌ಕ್ರಿಪ್‌ಷನ್ ಟ್ರಾನ್ಸ್ಲೇಷನ್

ದ್ವಿಪ್ರತೀಕರಣ → ಡಿ.ಎನ್.ಎ → ಆರ್.ಎನ್.ಎ → ಪ್ರೊಟೀನ್

ಪ್ರೊಟೀನ್ ಉತ್ಪಾದನೆಯ ಕಾರ್ಯವೈಖರಿ ತಿಳಿಯುವುದರಿಂದ ಹೊರಬಂದ ಇನ್ನೊಂದು ಸತ್ಯವೆಂದರೆ ಡಿಎನ್‌ಎ ಮತ್ತು ಆರ್‌ಎನ್‌ಎ ನಡುವೆ ಇರುವ ಸಂಬಂಧ ಹಾಗೂ ಇವೆರಡು ಪ್ರೊಟೀನ್‌ಗಳಿಗೆ ಹೇಗೆ ಸಂಬಂಧಿಸಿವೆ ಎಂಬುದು. ಈ ಮೂಲತತ್ವದ ಸಹಾಯದಿಂದ ಪ್ರಾಣಿಯ ದೇಹದಲ್ಲಾಗುವ ಸಂಕೀರ್ಣ ಕ್ರಿಯೆಗಳಾದ ಮಾಂಸಖಂಡ ಹಾಗು ನರಗಳ ಕಾರ್ಯವೈಖರಿ, ಕೋಶ ಪದರದ ಸ್ವರೂಪ, ಕೋಶದ ಬೆಳೆವಣಿಗೆ, ಜೀವರೋಧಕಗಳು ಹಾಗು ಮಾತ್ರೆಗಳು ದೇಹದಲ್ಲಿ ಮಾಡಬಹುದಾದಂತಹ ಬದಲಾವಣೆಗಳನ್ನು ಸೂಕ್ಷ್ಮವಾಗಿ ಅಧ್ಯಯಿಸುವಂತಾಯಿತು.

ಮೇಲೆ ತಿಳಿಸಿದಂತಹ ವಿಚಾರಗಳೆಲ್ಲವು ಅಣು ಜೀವವಿಜ್ಞಾನದ ಮೊದಲನೇ ಹಂತದ ಬೆಳೆವಣಿಗೆಗಳಾಗಿದ್ದವು. ಈ ನಂತರದ ಬೆಳೆವಣಿಗೆ ಅಂದರೆ 1970 ರ ದಶಕದ ಅನಂತರ ಏನೆಲ್ಲ ಬೆಳೆವಣಿಗೆಗಳಾದವೋ ಅವೆಲ್ಲವೂ ಕೂಡ ಆನ್ವಯಿಕವಾಗಿದ್ದವು. 1970 ರ ದಶಕದ ತನಕವೂ ಕೂಡ ಕೋಶದ ಆಕಾರ ಹಾಗೂ ಕಾರ್ಯಕ್ಷಮತೆ, ಅದರಲ್ಲಿರುವ ಸಂಯೋಜಕಗಳು, ಡಿಎನ್‌ಎ, ಅದರ ರೂಪ ಹಾಗೂ ರಚನೆ, ಕಾರ್ಯವೈಖರಿ, ನಿಯಂತ್ರಣ, ಅದರ ಉತ್ಪಾದನೆಗೆ ಸಹಾಯಕವಾಗುವಂತಹ ಕಿಣ್ವಗಳು, ಆರ್‌ಎನ್‌ಎ, ಆರ್‌ಎನ್‌ಎ ಪಾಲಿಮರೇಸ್ ಹಾಗು ಆರ್‌ಎನ್‌ಎ ಉತ್ಪಾದನೆಯಾಗುವ ವೈಖರಿಯನ್ನು ಅರಿಯಲಾಯಿತು. ಈ ಎಲ್ಲಾ ಮಾಹಿತಿಗಳಿಂದ ಜೀವಸಂಕುಲಕ್ಕೆ ಅಥವಾ ಬಹುಮುಖ್ಯವಾಗಿ ಮಾನವನಿಗೆ ಆಗಬಹುದಾದಂತಹ ಉಪಯೋಗಗಳ ಬಗೆಗೆ ಚಿಂತಿಸಲಾಯಿತು.

ಇವೆಲ್ಲದಕ್ಕೆ ಹೊಂದಿಕೊಂಡಂತೆ ಟೆಮಿನ್ ಮತ್ತು ಬಾಲ್ಟಿಮೋರ್ ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಎಂಬ ಕಿಣ್ವವನ್ನು ಅನ್ವೇಷಿಸಿದರು. ಸಾಧಾರಣವಾಗಿ ಆರ್‌ಎನ್‌ಎ ಪಾಲಿಮರೇಸ್ ಕಿಣ್ವವು ಡಿಎನ್‌ಎ ಇಂದ ಆರ್‌ಎನ್‌ಎ ಅನ್ನು ತಯಾರಿಸುತ್ತದೆ. ಇದೇ ಕಿಣ್ವಕ್ಕೆ ಆರ್‌ಎನ್‌ಎ ಇಂದ ಡಿಎನ್‌ಎ ಅನ್ನು ತಯಾರಿಸಲಾಗುವುದಿಲ್ಲ. ಆದರೆ ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಕಿಣ್ವಕ್ಕೆ ಇದು ಸಾಧ್ಯವಾಗುತ್ತದೆ. ಈ ಕಿಣ್ವದ ಅನ್ವೇಷಣೆ ಬ್ಯಾಕ್ಟೀರಿಯ ಹಾಗು ವೈರಸ್‌ನಲ್ಲಿ ಮಾಡಬಹುದಾದಂತಹ ಪ್ರಯೋಗಕ್ಕೆ ನಾಂದಿಯಾಯಿತು.

ಪ್ಲಾಸ್ಮಿಡ್‌ಗಳು ಬ್ಯಾಕ್ಟೀರಿಯಾಗಳಲ್ಲಿ ಇರುವಂತಹ ವಿಶಿಷ್ಟ ಹಾಗು ಸ್ವತಂತ್ರವಾಗಿರುವ ಸುರುಳಿ ಡಿಎನ್‌ಎ ಕಣಗಳು. ಈ ಪ್ಲಾಸ್ಮಿಡ್‌ಗಳ ಅನ್ವೇಷಣೆ ಲೆಡರ್‌ಬರ್ಗ್ ಹಾಗು ಟಾಟಮ್ (1946) ರಿಂದ ಸಾಧ್ಯವಾಯಿತು. ಪ್ಲಾಸ್ಮಿಡ್‌ಗಳ ಸಹಾಯದಿಂದ ತದ್ರೂಪಿ ಜೀನ್‌ಗಳ ಉತ್ಪಾದನೆ, ಜೀನ್‌ಗಳ ವರ್ಗಾವಣಾ ತಂತ್ರಜ್ಞಾನಗಳು ಸಾಧ್ಯವಾಗಿವೆ.

ರೆಸ್ಟ್ರಿಕ್ಷನ್ ಎಂಡೋನ್ಯೂಕ್ಲಿಯೇಸ್ ಎಂಬ ಕಿಣ್ವದ ಅನ್ವೇಷಣೆ ಅಣು ಜೀವವಿಜ್ಞಾನದ ಬೆಳೆವಣಿಗೆಗೆ ಒಂದು ಮೈಲಿಗಲ್ಲಾಗಿ ಪರಿಣಮಿಸಿತು. ರೆಸ್ಟ್ರಿಕ್ಷನ್ ಎಂಡೋನ್ಯೂಕ್ಲಿಯೇಸ್ ಕಿಣ್ವವನ್ನು ಅಮೇರಿಕ ಸಂಯುಕ್ತ ಸಂಸ್ಥಾನದ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ

ಹ್ಯಾಮಿಲ್ಟನ್ ಸ್ಮಿತ್ (1970) ಕಂಡುಹಿಡಿದನು. ಈ ಕಿಣ್ವ ಡಿಎನ್‌ಎ ಅನ್ನು ನಿರ್ದಿಷ್ಟ ಜಾಗದಲ್ಲಿ ಕತ್ತರಿಸುವಲ್ಲಿ ಸಮರ್ಥವಾಗಿದೆ. ಆದರೆ ರೆಸ್ಟ್ರಿಕ್ಷನ್ ಎಂಡೋನ್ಯೂಕ್ಲಿಯೇಸ್ ಕಿಣ್ವವು ತಾನಿರುವ ಜೀವಿಯ ಡಿಎನ್‌ಎ ಕಣಗಳನ್ನು ತುಂಡರಿಸುವುದಿಲ್ಲ. ಏಕೆಂದರೆ ಇದನ್ನು ನಿಯಂತ್ರಿಸಲು ಕೋಶಗಳಲ್ಲಿ ಬೇರೆ ರೀತಿಯಾದ ವ್ಯವಸ್ಥೆ ಇರುತ್ತದೆ. ಅದನ್ನೇ ನಾವು ರೆಸ್ಟ್ರಿಕ್ಷನ್ ಮಿಥೈಲೇಶನ್ ವ್ಯವಸ್ಥೆ ಎಂದು ಕರೆಯುತ್ತೇವೆ.

ಪ್ಲಾಸ್ಮಿಡ್ ಹಾಗು ರೆಸ್ಟ್ರಿಕ್ಷನ್ ಎಂಡೋನ್ಯೂಕ್ಲಿಯೇಸ್ ಸಹಾಯದಿಂದ ಸಸ್ಯ ಹಾಗು ಪ್ರಾಣಿಗಳ ಉತ್ತಮ ತಳಿಗಳನ್ನು ತಯಾರಿಸುವುದು ಸಾಧ್ಯವಾಗಿದೆ. ಇದೆಲ್ಲವುದಕ್ಕಿಂತ ಮುಖ್ಯವಾಗಿ ಜೀನ್ ಚಿಕಿತ್ಸೆಯೆಂಬ ಹೊಸ ವೈದ್ಯಕೀಯ ಚಿಕಿತ್ಸೆ ಪ್ಲಾಸ್ಮಿಡ್ ಮತ್ತು ರಿಸ್ಟ್ರಿಕ್ಷನ್ ಎಂಡೋನ್ಯೂಕ್ಲಿಯೇಸ್‌ನಿಂದ ಸಾಧ್ಯವಾಗಿದೆ. ಹೀಗೆ ಈ ಎರಡು ಹಂತದ ಬೆಳವಣಿಗೆಯು ಅಣು ಜೀವವಿಜ್ಞಾನದ ಪೂರ್ಣ ನಿಲುವಿಗೆ ಕಾರಣವಾಗಿದೆ. ಅಣು ಜೀವವಿಜ್ಞಾನವು ಜೀವವಿಜ್ಞಾನದಲ್ಲಿ ಅತ್ಯಂತ ಮಹತ್ವಪೂರ್ಣ ಹಾಗು ವಿಸ್ಮಯಕಾರಿ ತಂತ್ರಜ್ಞಾನವಾಗಿ ಬೆಳೆದಿದೆ. ವೈಜ್ಞಾನಿಕ ಬೆಳವಣಿಗೆಗಳು ಎಷ್ಟೇ ಹಂತದಲ್ಲಾದರು ಕೂಡ ಕೊನೆಗೆ ಅದರ ಯಶಸ್ಸಿನ ಮಾಪನ ಮಾಡುವುದು ಅದರ ಉಪಯೋಗತ್ವದ ಮೇಲೆ. ಅಣು ಜೀವವಿಜ್ಞಾನಕ್ಕೂ ಅದು ಅಷ್ಟೇ ಸತ್ಯ. ಅಣು ಜೀವವಿಜ್ಞಾನವು ವೈಯುಕ್ತಿಕವಾಗಿ ಬೆಳೆದಂತಹ ವಿಷಯವಲ್ಲ. ಆನುವಂಶೀಯ ವಿಜ್ಞಾನ, ರಸಾಯನ ವಿಜ್ಞಾನ, ಜೀವಕೋಶ ವಿಜ್ಞಾನ, ಭೌತ ವಿಜ್ಞಾನ ಹಾಗು ಇನ್ನೂ ಹಲವು ವಿಷಯಗಳನ್ನು ಆಧರಿಸಿ ಬೆಳೆಯುವಂತದ್ದು. ಹಾಗಾಗಿ ಬೆಳವಣಿಗೆಯ ಹಂತದಲ್ಲೇ ಹಲವಾರು ವಿಷಯಗಳನ್ನು ತಿಳಿಯಬಲ್ಲದ್ದಾಗಿದೆ.

ಈಗಿನ ಹಂತದಲ್ಲಿ ಅಣು ಜೀವವಿಜ್ಞಾನದ ಸಾಧನೆ ಕೇವಲ ಜೈವಿಕ ಕ್ರಿಯೆಗಳಿಗೆ ಅಣುವಿಕ ಕಾರಣಗಳನ್ನು ಕೊಡುವ ಮಾಧ್ಯಮವಾಗಿ ಮಾತ್ರ ಸೀಮಿತವಾಗಿರದೆ ಹಲವು ಬಗೆಯ ವೈಜ್ಞಾನಿಕ ವಿಷಯಗಳಿಗೆ ದಾರಿಮಾಡಿಕೊಟ್ಟಿದೆ. ತಳಿ ತಂತ್ರಜ್ಞಾನ (ಜೆನೆಟಿಕ್ ಇಂಜಿನಿಯರಿಂಗ್) ಹಾಗೂ ಜೈವಿಕ ತಂತ್ರಜ್ಞಾನ (ಬಯೋಟೆಕ್ನಾಲಜಿ) ಎರಡು ಉದಾಹರಣೆಗಳು. ತಳಿ ತಂತ್ರಜ್ಞಾನದಲ್ಲಿ ಡಿಎನ್‌ಎ ಕಣಗಳನ್ನು ಉಪಯೋಗಿಸಿಕೊಂಡು ಹಲವು ಪ್ರಯೋಗಗಳನ್ನು ಮಾಡಲಾಗುತ್ತದೆ. ತದ್ರೂಪಿ ಜೀನ್‌ಗಳು ಈ ಪ್ರಯೋಗಗಳ ಒಂದು ಫಲಿತಾಂಶ. ಇವು ಒಂದು ಸಣ್ಣ ಡಿಎನ್‌ಎ ತುಂಡಿನಿಂದ ಉತ್ಪತ್ತಿಯಾದ ಅದೇ ರೀತಿಯ ಹಲವು ಪ್ರತಿಗಳು. ತದ್ರೂಪಿ ಜೀನ್‌ಗಳನ್ನು ಮಾಡುವುದರಿಂದ ವಿಶಿಷ್ಟ ರೀತಿಯ ಹಾಗು ಅತಿ ಹೆಚ್ಚು ಉಪಯೋಗವಿರುವ ಸಸ್ಯ ಹಾಗು ಪ್ರಾಣಿಗಳನ್ನು ಸೃಷ್ಟಿಸಬಹುದು. ಇವೆಲ್ಲದರ ಜೊತೆಗೆ ಅಣು ಜೀವವಿಜ್ಞಾನವು ನಮಗೆ ಡಿಎನ್‌ಎ ಹಾಗು ಆರ್‌ಎನ್‌ಎ ಗಳ ಸ್ವರೂಪ, ಅದರ ನಿಯಂತ್ರಣ ವೈಖರಿಯ ಸಹಾಯದಿಂದ ಆನುವಂಶೀಯತೆಯ ವೈಖರಿಯನ್ನು ತಿಳಿದುಕೊಳ್ಳುವ ಸಾಧನವಾಗಿದೆ. ಅದಲ್ಲದೆ ಡಿಎನ್‌ಎ ದ್ವಿಪ್ರತೀಕರಣ, ಆರ್‌ಎನ್‌ಎ ಯು ಡಿಎನ್‌ಎ ಇಂದ ತಯಾರಿಸಲ್ಪಡುವ ರೀತಿ ಇವೆಲ್ಲವನ್ನು ನಾವು ಅಣು ಜೀವವಿಜ್ಞಾನದ ಸಹಾಯದಿಂದ ತಿಳಿಯಬಹುದು.

ಪ್ರೋಟೀನ್ ಬಹಳ ಮುಖ್ಯವಾದ ಜೈವಿಕ ಕಣಗಳು. ಅನೇಕ ಜೈವಿಕ ಚಟುವಟಿಕೆಗಳು ಪ್ರೋಟೀನ್‌ಗಳ ಸಹಾಯದಿಂದಾಗುತ್ತದೆ. ಪ್ರೋಟೀನ್‌ಗಳು ಅಮೈನೋ ಆಮ್ಲದಿಂದ ಕೂಡಿರುತ್ತವೆ. ಡಿಎನ್‌ಎ ಗಳಲ್ಲಿ ಇರುವಂತಹ ಮಾಹಿತಿ ಪ್ರೋಟೀನ್‌ಗಳ ರೂಪದಲ್ಲಿ ಹೊರಬರುತ್ತದೆ. ಇಂತಹ ಹಲವು ಪ್ರೋಟೀನ್‌ಗಳ ಸಮೂಹವು ಕೋಶದಲ್ಲಿ ನಡೆಯುವಂತಹ ಕ್ರಿಯೆಗಳಿಗೆ ಸಹಾಯಕವಾಗಿರುತ್ತದೆ. ಈ ಸಮೂಹದಲ್ಲಿ ಯಾವುದಾದರೂ ಒಂದು ಪ್ರೋಟೀನ್ ಕಣ ಅಥವಾ ಅಮೈನೋ ಆಮ್ಲ ಕೊಂಡಿ ತಪ್ಪಿತೆಂದರೆ ಆ ಕ್ರಿಯೆ ಅಲ್ಲೇ ನಿಂತಂತೆ. ಇಂತಹ ಒಂದು ತಪ್ಪು ಕೂಡ ಪ್ರಾಣಾಪಾಯಕಾರಿಯಾಗಿ ಪರಿಣಮಿಸಬಹುದೆನ್ನುವುದು ಆಶ್ಚರ್ಯವಲ್ಲ. ಈ ಮಾಹಿತಿಗಳ ತಿಳುವಳಿಕೆ ಅಣು ಜೀವವಿಜ್ಞಾನದ ಸಹಾಯದಿಂದ ಮಾತ್ರ ಸಾಧ್ಯ. ಇಷ್ಟಲ್ಲದೆ ಈ ಪ್ರೋಟೀನ್‌ಗಳ ಸಮೂಹ ಕೋಶದ ಯಾವ ಭಾಗದಲ್ಲಿ ತನ್ನ ಕೆಲಸ ನಿರ್ವಹಿಸುತ್ತದೆ, ಆ ಸಮೂಹದಲ್ಲಿರುವ ಪ್ರೋಟೀನ್‌ಗಳ ಹೊಂದಾಣಿಕೆ ಹೇಗಿರುತ್ತದೆ ಎಂಬುದನ್ನು ಅಣು ಜೀವವಿಜ್ಞಾನದ ಸಹಾಯದಿಂದ ತಿಳಿದುಕೊಳ್ಳಬಹುದು. ಇವೆಲ್ಲವುದಕ್ಕಿಂತ ಮುಖ್ಯವಾಗಿ ಈ ಪ್ರೋಟೀನ್‌ಗಳು ಕೋಶಗಳಲ್ಲಿ ಉತ್ಪಾದನೆಯಾಗುವ ರೀತಿ, ಅಂದರೆ ಭಾಷಾಂತರ (ಟ್ರಾನ್ಸ್‌ಲೇಷನ್) ಕ್ರಿಯೆಯ ಕೂಲಂಕಷ ಅಧ್ಯಯನ ಅಣು ಜೀವವಿಜ್ಞಾನದಿಂದ ಸಾಧ್ಯ. ರೈಬೋಸೋಮ್‌ಗಳ ಕಾರ್ಯವೈಖರಿ, ಎಮ್–ಆರ್‌ಎನ್‌ಎ ಯಲ್ಲಿರುವ ನ್ಯೂಕ್ಲಿಯೋಟೈಡ್ ಸರಣಿಯನ್ನು ಅಮೈನೋ ಆಮ್ಲದ ಮಾಲೆಯನ್ನಾಗಿಸಿ ಹೊರದಬ್ಬುವ ಅತ್ಯದ್ಭುತ ಕ್ರಿಯೆಯ ಅಧ್ಯಯನ ಅಣು ಜೀವವಿಜ್ಞಾನದ ಕೊಡುಗೆ.

ಜೀನ್‌ಗಳ ನಿಯಂತ್ರಣ ಈ ಪ್ರೋಟೀನ್‌ಗಳಿಂದಲೇ ಆಗುತ್ತದೆ. ಜೀನ್ ಅನ್ನು ನಿಯಂತ್ರಿಸುವ ಪ್ರೋಟೀನ್‌ಗಳನ್ನು ಟ್ರಾನ್ಸ್‌ಕ್ರಿಪ್ಷನ್ ಗುಣ್ಯಕ (ಟ್ರಾನ್ಸ್‌ಕ್ರಿಪ್ಷನ್ ಫ್ಯಾಕ್ಟರ್) ಎಂದು ಕರೆಯಲಾಗುತ್ತದೆ. ಇವುಗಳು ಜೀನ್ ಅನ್ನು ನಿಯಂತ್ರಿಸುವ ವಿಧಾನ ಬಹಳ ಸೂಕ್ಷ್ಮವಾದುದ್ದು. ಒಂದೊಂದು ಟ್ರಾನ್ಸ್ಕ್ರಿಪ್ಷನ್ ಗುಣ್ಯಕವೂ ವಿಭಿನ್ನ ರೀತಿಯಲ್ಲಿ ಜೀನ್ ಅನ್ನು ನಿಯಂತ್ರಿಸುತ್ತದೆ. ಒಂದು ಪ್ರೋಟೀನ್ ಗುಣ್ಯಕ ಜೀನ್ ಅನ್ನು ಕಾರ್ಯಪ್ರವೃತ್ತಗೊಳಿಸಬಹುದು ಅಥವಾ ಕಾರ್ಯಸ್ಥಗಿತಗೊಳಿಸಬಹುದು. ಜೀನ್‌ನಲ್ಲಾಗುವ ಈ ಅತಿಸೂಕ್ಷ್ಮ ಬದಲಾವಣೆಗಳೆಲ್ಲವು ಅಣು ಜೀವವಿಜ್ಞಾನದ ಸಹಾಯದಿಂದ ಅಧ್ಯಯಿಸಬಹುದು. ಆದರೆ ಇಂದಿನ ಕಾಲಕ್ಕೆ ಅಣು ಜೀವವಿಜ್ಞಾನದ ಹೆಜ್ಜೆ ತಳಿ ತಂತ್ರಜ್ಞಾನ ಹಾಗು ಜೈವಿಕ ತಂತ್ರಜ್ಞಾನ ಕ್ಷೇತ್ರಕ್ಕೆ ಕಾಲಿಡುತ್ತಿದೆ.

ಜೀನ್‌ಗಳ ಕ್ಷೇತ್ರದಲ್ಲಿ ಬಹುಮುಖ್ಯ ಪಾಲುಗಾರಿಕೆ ತದ್ರೂಪಿ ಜೀನ್‌ಗಳ ತಂತ್ರಜ್ಞಾನ, ಜೀನ್‌ಗಳ ಶ್ರೇಣೀಕರಣ (ಜೀನ್ ಸೀಕ್ವೆನ್ಸಿಂಗ್), ಜೀನ್‌ಗಳ ಪ್ರತ್ಯೇಕಿಸುವಿಕೆ (ಜೀನ್ ಐಸೋಲೇಷನ್), ಜೀನ್ ಚಿಕಿತ್ಸೆ ಎಂಬ ಮುಂತಾದ ತಂತ್ರಜ್ಞಾನಗಳಿದ್ದು, ಇವೆಲ್ಲವೂ ಕೂಡ ಒಂದಲ್ಲ ಒಂದು ರೀತಿ ಅದರದೇ ಆದ ವಿಶಿಷ್ಟತೆಗಳನ್ನು ಪಡೆದಿರುತ್ತವೆ. ಇವೆಲ್ಲ ಡಿ.ಎನ್.ಎ. ಕಣವನ್ನು ಮೂಲವಸ್ತುವಾಗಿ ಬಳಸಿಕೊಳ್ಳುತ್ತವೆ. ಈ ತಂತ್ರಜ್ಞಾನಗಳ ಸಹಾಯದಿಂದ ನಮಗೆ ಬೇಕಾದ ಹಾಗು ಉಪಯುಕ್ತವಾದ ಜೀನ್ ಅನ್ನು ಆಯ್ಕೆ ಮಾಡಿ, ಅದನ್ನು ಬೇರೆ ಇನ್ನಾವುದೋ ಪ್ರಾಣಿಯ ಡಿಎನ್‌ಎ ಕಣಕ್ಕೆ ಸೇರಿಸಿ, ಆ ಪ್ರಾಣಿಯಲ್ಲಿ ಈ ಜೀನ್ ಕಾರ್ಯಪ್ರವೃತ್ತವಾಗುವಂತೆ ಮಾಡಿ, ಅದಕ್ಕೆ ಅದರದೇ ಆದ ವೈಶಿಷ್ಟ್ಯತೆಯನ್ನು ಕೊಡಬಹುದು. ಇಂಥ ಪ್ರಾಣಿಗಳನ್ನು ನಾವು ಟ್ರಾನ್ಸ್‌ಜೆನಿಕ್ ಪ್ರಾಣಿಗಳೆಂದು ಕರೆಯುತ್ತೇವೆ. ಸಸ್ಯಗಳಾಗಿದ್ದಲ್ಲಿ ಇಂತಹವನ್ನು ಟ್ರಾನ್ಸ್‌ಜೆನಿಕ್ ಸಸ್ಯಗಳೆನ್ನುವರು.

ಅಣು ಜೀವಾವಿಜ್ಞಾನದ ಸೇವೆ ಬರೀ ಇಷ್ಟಕ್ಕಲ್ಲದೆ ವೈದ್ಯಕೀಯ ನ್ಯಾಯ ವಿಜ್ಞಾನಕ್ಕೂ (ಫೊರೆನ್ಸಿಕ್) ಪಸರಿಸಿದೆ. ಡಿಎನ್‌ಎ ಬೆರಳಚ್ಚು (ಫಿಂಗರ್ ಪ್ರಿಂಟಿಂಗ್) ತಂತ್ರಜ್ಞಾನದ ಪರಿಣಾಮದಿಂದಾಗಿ ಹಲವು ಅಪರಾಧಗಳನ್ನು ಬಹಳ ನಿರ್ದಿಷ್ಟವಾಗಿ ಪತ್ತೆಹಚ್ಚಬಹುದಾಗಿದೆ. ಇದು ಹಲವು ಪಿತ್ರಾರ್ಜಿತ ವಿವಾದಗಳು, ಕೊಲೆ ಹಾಗೂ ಅತ್ಯಾಚಾರಗಳ ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ಬಹಳ ನಂಬಿಕಾರ್ಹ ತಂತ್ರಜ್ಞಾನವಾಗಿದೆ. ಈ ತಂತ್ರಜ್ಞಾನದ ಸಹಾಯದಿಂದ ಅಪರಾಧ ನಡೆದ ಸ್ಥಳದಲ್ಲಿ ಒಂದು ಸಣ್ಣ ಕೂದಲು, ಉಗುಳಿದ ಕಣ, ರಕ್ತದ ಕಲೆ ಮುಂತಾದ ಸಾಕ್ಷಿಗಳಿಂದ ಡಿಎನ್‌ಎ ಗಳನ್ನು ಪಡೆದುಕೊಂಡು ಪಿಸಿಆರ್ (ಪಾಲಿಮರೇಸ್ ಚೇನ್ ರಿಯಾಕ್ಷನ್) ಎಂಬ ಇನ್ನೊಂದು ತಂತ್ರಜ್ಞಾನದಿಂದ ಆ ಸ್ವಲ್ಪ ಪ್ರಮಾಣದ ಡಿಎನ್‌ಎ ಕಣವನ್ನು ಅಧಿಕ ಪ್ರಮಾಣಕ್ಕೆ ವೃದ್ಧಿ ಮಾಡಿ, ಅದರ ಸಹಾಯದಿಂದ ಡಿಎನ್‌ಎ ಸರಣಿಗಳನ್ನು ಪತ್ತೆಮಾಡಿ, ಅಪರಾಧಿಗಳ ಡಿಎನ್‌ಎ ಸರಣಿಗಳಿಗೆ ಹೊಂದಾಣಿಕೆ ಮಾಡಿ, ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ಸಹಕಾರಿಯಾಗಿದೆ. ಈ ಎಲ್ಲಾ ಬೆಳವಣಿಗೆಗಳು ಅಣು ಜೀವವಿಜ್ಞಾನದ ವಿಶಿಷ್ಟ ಕೊಡುಗೆ.

ಡಿಎನ್‌ಎ ಸರಣಿಶೋಧದ ಮುಖಾಂತರ ನಾವು ಡಿಎನ್‌ಎ ಗಳಲ್ಲಿ ಇರುವ ನ್ಯೂಕ್ಲಿಯೋಟೈಡ್ ಸರಣಿಯನ್ನು ಅನ್ವೇಷಿಸಬಹುದು. ಈ ರೀತಿ ದೊರಕಿದ ನ್ಯೂಕ್ಲಿಯೋಟೈಡ್ ಸರಣಿಯನ್ನು ನಾವು ಬೇರೆ ಜಾತಿಯ ಹಾಗು ಪ್ರಭೇದದ ಪ್ರಾಣಿಗಳಿಗೆ ಹೋಲಿಕೆ ಮಾಡಿ ಇವೆರಡರ ಮಧ್ಯೆ ಇರಬಹುದಾದಂತಹ ವಿಕಾಸ ಸನ್ನಿಹಿತೆಯನ್ನು ಗುರುತಿಸಬಹುದು. ಇದರಿಂದಾಗಿ ಬೇರೆ ಬೇರೆ ಪ್ರಭೇದದ ಪ್ರಾಣಿಗಳು ವಿಕಾಸದ ಹಾದಿಯಲ್ಲಿ ಬೆಳೆದುಬಂದ ಹಾದಿಯನ್ನು ತಿಳಿಯಬಹುದಾಗಿದೆ. ಇಷ್ಟೇ ಅಲ್ಲದೆ ಡಿಎನ್‌ಎ ಸರಣಿಗಳನ್ನು ತಿಳಿಯುವುದರ ಮುಖಾಂತರ ಇತ್ತೀಚೆಗೆ ಕೃತಕ ಡಿಎನ್‌ಎ ಗಳನ್ನು ತಯಾರಿಸಲಾಗುತ್ತದೆ. ಇದು ಅಣು ಜೀವವಿಜ್ಞಾನದ ಮುಖಾಂತರ ಸಾಧ್ಯವಾದ ವಿಸ್ಮಯಕಾರಿ ಬೆಳವಣಿಗೆಯಾಗಿದೆ.

ಜೀನ್ ಚಿಕಿತ್ಸೆ ಅಣು ಜೀವವಿಜ್ಞಾನದ ಇನ್ನೊಂದು ಕೊಡುಗೆ. ನ್ಯೂನತೆಯುಳ್ಳ ಜೀನ್‌ಗಳನ್ನು ಪತ್ತೆಮಾಡಿ ಅದರ ಜಾಗಕ್ಕೆ ಸರಿಯಾಗಿರುವಂತಹ ಅಂದರೆ ಸರಿಯಾದ ಪ್ರೋಟೀನ್‌ಗಳನ್ನು ಉತ್ಪಾದಿಸುವಂತಹ ಜೀನ್‌ಗಳನ್ನು ಜೋಡಿಸಲಾಗುತ್ತದೆ. ಈ ಚಿಕಿತ್ಸೆ ಅಷ್ಟರಮಟ್ಟಿಗೆ ಸಫಲತೆ ಪಡೆಯದೆ ಇದ್ದರೂ ಇದನ್ನು ಒಂದು ಪರಿಣಾಮಕಾರಿ ಚಿಕಿತ್ಸೆಯಾಗಿಸಲು ಅಣು ಜೀವವಿಜ್ಞಾನಿಗಳು ಪ್ರಯೋಗಗಳನ್ನು ನಡೆಸುತ್ತಲೇ ಇದ್ದಾರೆ. ಈಗ ಸದ್ಯಕ್ಕೆ ಕುಸುಮರೋಗಕ್ಕೆ (ಹಿಮೋಫಿಲಿಯಾ) ಕಾರಣವಾದಂತಹ ಜೀನ್‌ಗೆ ಚಿಕಿತ್ಸೆ ಕಂಡು ಹಿಡಿದಿದ್ದಾರೆ. ಅದೇ ರೀತಿ ಸಿಕಲ್‌ಸೆಲ್ ಅನೀಮಿಯ, ಲೆಕ್‌ನಿಹಾನ್ ಸಿಂಡ್ರೋಮ್‌ಗಳಿಗೂ ಜೀನ್ ಚಿಕಿತ್ಸೆಯನ್ನು ಕಂಡುಹಿಡಿಯುವಲ್ಲಿ ಸಫಲತೆಯನ್ನು ಪಡೆದಿದ್ದಾರೆ.

ಜೈವಿಕ ತಂತ್ರಜ್ಞಾನವೂ ಜೀನ್‌ಗಳ ತಂತ್ರಜ್ಞಾನದಂತೆಯೇ ಒಂದು ಆನ್ವಯಿಕ ವಿಜ್ಞಾನ. ಇದು ಸಸ್ಯ ಪ್ರಪಂಚ, ಪ್ರಾಣಿ ಪ್ರಪಂಚ, ಆಹಾರ ವಿಜ್ಞಾನ, ಔಷಧೀಯ ವಿಜ್ಞಾನ, ಕಿಣ್ವನ ತಂತ್ರಜ್ಞಾನ (ಫರ್ಮಂಟೇಷನ್ ಟೆಕ್ನಾಲಜಿ) ಕೈಗಾರಿಕೆ, ಅಂಗಾಂಶ ಕೃಷಿ ಹೀಗೆ ಹತ್ತು ಹಲವು ಕ್ಷೇತ್ರಗಳಿಗೆ ತನ್ನ ಬಾಹುವನ್ನು ಚಾಚಿದೆ.

ಈಗ ದೊರಕುತ್ತಿರುವ ಸಸ್ಯಗಳನ್ನು ಹೆಚ್ಚು ಪೌಷ್ಠಿಕವಾಗಿಯೂ ರುಚಿಕರವಾಗಿಯೂ ರೋಗ ನಿರೋಧಕವಾಗಿಯೂ ಮಾಡುವಲ್ಲಿ ಅಣು ಜೀವವಿಜ್ಞಾನದ ಪಾತ್ರ ಮಹತ್ತರವಾಗಿದೆ. ರಾಗಿ, ಗೋಧಿ, ಭತ್ತ ಮುಂತಾದ ಆಹಾರ ಸಸ್ಯಗಳಲ್ಲಿ ಹೆಚ್ಚು ಫಸಲು ಬರುವಂತಹ ಮಾರ್ಪಾಡುಗಳನ್ನು ಮಾಡಿ ಎಕರೆಗೆ ಮೊದಲು ಉತ್ಪಾದಿಸುವುದಕ್ಕಿಂತ ಜಾಸ್ತಿ ಉತ್ಪಾದನೆಯಾಗುವಂತೆ ಮಾಡಲಾಗುತ್ತಿದೆ. ಪ್ರಾಣಿ ಪ್ರಪಂಚಕ್ಕೆ ಸಂಬಂಧಪಟ್ಟಂತೆ ಹಲವು ಸಾಧನೆಗಳು ಹಾಲು ಉತ್ಪಾದನಾ ಕ್ಷೇತ್ರಕ್ಕೆ ಸೇರಿದುದಾಗಿದೆ. ಕುಲಾಂತರಿ ತಂತ್ರಜ್ಞಾನದ ಸಹಾಯದಿಂದ ಹಾಗು ಕಸಿ ತಂತ್ರಜ್ಞಾನದ ಸಹಾಯದಿಂದ ಹೆಚ್ಚು ಹಾಲು ಉತ್ಪಾದನೆ ಸಾಧ್ಯ. ಮಾಂಸಕ್ಕೋಸ್ಕರವೆ ಬೆಳೆಸುವಂತಹ ಕುರಿ, ಕೋಳಿ, ಹಂದಿಗಳಂತಹ ಪ್ರಾಣಿಗಳನ್ನು ಅಧಿಕ ಬೆಳವಣಿಗೆಯಾಗುವಂತೆ ಮಾಡಿ ಹೆಚ್ಚು ಮಾಂಸ ಉತ್ಪಾದಿಸಲು ಸಾಧ್ಯವಾಗಿದೆ.

ಔಷಧೀಯ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಹಲವು ವಿಸ್ಮಯಕಾರಿ ಅನ್ವೇಷಣೆ ಹಾಗು ಉತ್ಪಾದನೆಯ ಶ್ರೇಯಸ್ಸು ಅಣು ಜೀವವಿಜ್ಞಾನಕ್ಕೆ ಸೇರಿದುದಾಗಿದೆ. ಕೆಲವು ಮಾರಕ ರೋಗಗಳಿಗೆ ಬೇಕಾದಂತಹ ಪ್ರತಿರೋಧಕಗಳು (ಪೆನ್ಸಿಲಿನ್ ಮುಂತಾದವು), ಹೃದಯ ರೋಗಕ್ಕೆ ಸಂಬಂಧಿಸಿದ ಔಷಧಿಗಳಾದ ಟಿ.ಪಿ.ಎ (ಟಿಷ್ಯು ಪ್ಲಾಸ್ಮಿನೋಜನ್ ಆಕ್ಟಿವೇಟರ್), ಕ್ಯಾನ್ಸರ್ ರೋಗಕ್ಕೆ ಸಂಬಂಧಪಟ್ಟ ಔಷಧಿಗಳಾದ ಇಂಟರ್‌ಲ್ಯುಕಿನ್‌ಗಳು, ಸಕ್ಕರೆ ಕಾಯಿಲೆಗೆ ಔಷಧಿಯಾದ ಇನ್ಸುಲಿನ್ ಇನ್ನೂ ಮುಂತಾದ ಜೀವಕ್ಕೆ ಮಾರಕವಾದ ರೋಗಗಳಿಗೆ ಔಷಧಿಯನ್ನು ಉತ್ಪಾದಿಸುವಲ್ಲಿ ಯಶಸ್ವಿಯಾಗಿದೆ. ನಾವು ಬಳಸುವ ಹಲವು ಔಷಧಗಳು ಸಸ್ಯಮೂಲದವು ಅಥವಾ ಪ್ರಾಣಿಮೂಲದವು. ಈ ರೀತಿ ಯಾವುದಾದರು ಜೀವಿಯಿಂದ ಉತ್ಪಾದಿತವಾದ ಯಾವುದೆ ವಸ್ತುವು ಸಾಧಾರಣವಾಗಿ ಪ್ರೊಟೀನ್ ಕಣವೇ ಆಗಿರುತ್ತದೆ. ಹಾಗಾಗಿ ಈ ಪ್ರೊಟೀನ್‌ಗಳನ್ನು ಉತ್ಪಾದಿಸುವ ಜೀನ್ ಅನ್ನು ಮೊದಲು ಪ್ರತ್ಯೇಕಿಸಲಾಗುತ್ತದೆ. ಈ ರೀತಿ ಪ್ರತ್ಯೇಕಿಸಿದ ಜೀನ್ ಅನ್ನು ಅಧಿಕ ಪ್ರಮಾಣದಲ್ಲಿ ಪ್ರಜನನಗೊಳ್ಳುವ ಜೀವಿಗಳಾದ ಬ್ಯಾಕ್ಟೀರಿಯ ಅಥವಾ ವೈರಸ್‌ಗಳ ಡಿಎನ್‌ಎ ಗೆ ಜೋಡಿಸಲಾಗುತ್ತದೆ. ಹಾಗಾಗಿ ನಮಗೆ ಬೇಕಾದಂತಹ ಪ್ರೊಟೀನ್‌ಗಳು ಅತ್ಯಂತ ಕಡಿಮೆ ಸಮಯದಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತದೆ. ಈ ರೀತಿ ಉತ್ಪಾದನೆಯಾದಂತಹ ಪ್ರೊಟೀನ್‌ಗಳನ್ನು ಶುದ್ಧೀಕರಿಸಿ ಔಷಧ ರೂಪದಲ್ಲಿ ಬಳಸಲಾಗುತ್ತದೆ. ಇದೇ ರೀತಿಯಲ್ಲಿ ಜಾಂಡೀಸ್, ಪೋಲಿಯೋ ಮುಂತಾದ ಮಾರಕ ರೋಗಗಳಿಗೆ ಔಷಧಗಳನ್ನು ಉತ್ಪಾದಿಸಲಾಗುತ್ತಿದೆ. ಹೀಗೆ ಉತ್ಪಾದಿಸಲಾದ ಮೊದಲ ವಸ್ತು ಸಕ್ಕರೆ ಕಾಯಿಲೆಗೆ ಬೇಕಾದ ಇನ್ಸುಲಿನ್ ಹಾರ್ಮೋನ್. ಇ.ಲಿಲಿ ಅಂಡ್ ಕಂ. ಎಂಬ ಕಂಪನಿಯು ಮೊದಲಬಾರಿಗೆ 1982 ರಲ್ಲಿ ಇದನ್ನು ಉತ್ಪಾದಿಸಿತು.

ಬ್ಲಡ್ ಫ್ಯಾಕ್ಟರ್ – VIII (ರಕ್ತ ಹೆಪ್ಪುಗಟ್ಟುವಿಕೆಗೆ ಬೇಕಾಗುವ ಒಂದು ವಸ್ತು; ಹಿಮೋಫಿಲಿಯ ರಕ್ತಸ್ರಾವವನ್ನು ತಡೆಗಟ್ಟುವ ಶಕ್ತಿ ಇಲ್ಲದಿರುವ ರೋಗಿಗಳನ್ನು ಗುಣಪಡಿಸಲು ಉಪಯೋಗಿಸಲಾಗುತ್ತದೆ), ಕಾಲೋನಿ ಸ್ಟಿಮುಲೇಟಿಂಗ್ ಫ್ಯಾಕ್ಟರ್ (ಬಿಳಿರಕ್ತ ಕಣಗಳನ್ನು ಉತ್ಪಾದಿಸುವಲ್ಲಿ ಸಹಾಯಕವಾಗಿರುತ್ತದೆ), ಎರಿತ್ರೊಪೊಯಿಟಿನ್ (ಕೆಂಪುರಕ್ತಕಣಗಳನ್ನು ಉತ್ಪಾದಿಸುವಲ್ಲಿ ಸಹಾಯಕವಾಗಿರುತ್ತದೆ), ಮಾನವ ಬೆಳವಣಿಗೆ ಹಾರ್ಮೋನ್ (ಬೆಳವಣಿಗೆಗೆ ಸಹಾಯಕವಾಗಿರುತ್ತದೆ), ಇಂಟರ್‌ಫೆರಾನ್ (ಕ್ಯಾನ್ಸರ್ ರೋಗಕ್ಕೆ ಕಾರಣವಾದ ವೈರಸ್‌ಗಳ ಅಭಿವೃದ್ಧಿಯನ್ನು ತಡೆಗಟ್ಟುತ್ತದೆ) ಇತ್ಯಾದಿ ವಸ್ತುಗಳನ್ನು ಕೂಡ ಈ ತಂತ್ರಜ್ಞಾನದಿಂದ ಈಗ ತಯಾರಿಸಲಾಗುತ್ತಿದೆ.

ಅಣು ಜೀವವಿಜ್ಞಾನದ ಬೆಳೆವಣಿಗೆಯಲ್ಲಿ ಸೂಕ್ಷ್ಮಜೀವಿಗಳ ಪಾತ್ರ ಬಹಳ ಮಹತ್ತರವಾದದ್ದು. ಬ್ಯಾಕ್ಟೀರಿಯ ಹಾಗು ಶಿಲೀಂಧ್ರಗಳನ್ನು ಹೆಚ್ಚಾಗಿ ಈ ವಿಜ್ಞಾನದ ಶಾಖೆಯಲ್ಲಿ ಬಳಸಲಾಗುತ್ತದೆ. ಆದರೆ ಇವೆರಡಕ್ಕು ಹೊರತಾಗಿ ಇನ್ನೊಂದು ಬಗೆಯ ಜೀವಿಗಳನ್ನೂ ಬ್ಯಾಕ್ಟೀರಿಯಾಗಳಷ್ಟೇ ಪ್ರಧಾನವಾಗಿ ಬಳಸಲಾಗುತ್ತಿದೆ. ಅವೇ ಫೇಜ್ ಹಾಗು ವೈರಸ್‌ಗಳು. ಈ ಜೀವಾಣುಗಳ ಜೀವನ ಚಕ್ರ ಹಾಗು ಪ್ರಜನನ ಬೇರೆ ಕೋಶಗಳ ಮೇಲೆ ಅವಲಂಬಿತವಾಗಿರುತ್ತವೆ. ಅವಲಂಬಿತವಾಗಿರುವ ಕೋಶಕಣಗಳನ್ನು ಉಪಯೋಗಿಸಿಕೊಂಡು ತಮ್ಮ ಬೆಳೆವಣಿಗೆಯನ್ನು ಹಾಗು ಕ್ರಿಯೆಗಳನ್ನು ಪೂರೈಸಿಕೊಳ್ಳುತ್ತವೆ. ಹಾಗಾಗಿ ತಾವು ಅವಲಂಬಿತವಾಗಿರುವ ಕೋಶಕ್ಕೆ ಕೆಡುಕಾಗಿ ಪರಿಣಮಿಸುತ್ತವೆ. ಬ್ಯಾಕ್ಟೀರಿಯಾಗಳಂತಹ ಪ್ರೊಕ್ಯಾರ್ಯೋಟಿಕ್ ಜೀವಿಗಳ ಡಿಎನ್‌ಎ ರಚನೆ, ಜೀನ್ ನಿಯಂತ್ರಣ ಹಾಗು ಜೀನ್ ರೂಪ ಮತ್ತು ರಚನೆಯಲ್ಲಿ ಇರುವಂತಹ ಸರಳತೆಯ ಕಾರಣದಿಂದಲೇ ಅವನ್ನು ಅಣು ಜೀವವಿಜ್ಞಾನದಲ್ಲಿ ಬಳಸಲಾಗುತ್ತದೆ.

ಸಾಮಾನ್ಯವಾಗಿ ಅಣು ಜೀವತಂತ್ರಜ್ಞಾನದಲ್ಲಿ ಆರ್‌ಎನ್‌ಎ ವೈರಸ್‌ಗಳಾದ ರಿಟ್ರೊವೈರಸ್‌ಗಳನ್ನೂ $\lambda$ (ಲ್ಯಾಂಬ್ಡ) ಫೇಜ್, ಎಂಐ3 ಫೇಜ್ ಮತ್ತಿತರ ಬ್ಯಾಕ್ಟೀರಿಯೋಫೇಜ್‌ಗಳನ್ನೂ ಬಳಸಲಾಗುತ್ತದೆ. ಆರ್‌ಎನ್‌ಎ ವೈರಸ್‌ಗಳಲ್ಲಿ ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಕಿಣ್ವವಿದ್ದು ಇದು ಆರ್‌ಎನ್‌ಎ ಇಂದ ಡಿಎನ್‌ಎ ಉತ್ಪಾದನೆ ಮಾಡುವ ಸಾಮರ್ಥ್ಯವುಳ್ಳದಾಗಿರುತ್ತದೆ. ವೈರಸ್‌ಗಳು ಹಾಗು ಬ್ಯಾಕ್ಟೀರಿಯೋಫೇಜ್‌ಗಳು ಸ್ವಪ್ರಜನನದ ಶಕ್ತಿ ಹೊಂದಿರುತ್ತವೆ. ತಾವು ಸೋಂಕು ತಗುಲಿಸಿರುವಂತಹ ಕೋಶಗಳಲ್ಲಿರುವ ಪ್ರೊಟೀನ್‌ಗಳು ಹಾಗು ಸ್ವಪ್ರತೀಕರಣಕ್ಕೆ ಬೇಕಾದ ಎಲ್ಲಾ ಕಣಗಳನ್ನು ಉಪಯೋಗಿಸಿಕೊಂಡು ತಮ್ಮಲ್ಲಿರುವ ನ್ಯೂಕ್ಲಿಯಿಕ್ ಆಮ್ಲವನ್ನು ದ್ವಿಗುಣಗೊಳಿಸುತ್ತವೆ. ಕೆಲವೇ ನಿಮಿಷಗಳಲ್ಲಿ ಹಲವು ನೂರು ಆರ್‌ಎನ್‌ಎ ಪ್ರತಿಗಳನ್ನು ತಯಾರಿಸುತ್ತವೆ. ಹಾಗಾಗಿ ಈ ವೈರಸ್‌ಗಳನ್ನು ತದ್ರೂಪಿ ಜೀನ್ ತಂತ್ರಜ್ಞಾನದಲ್ಲಿ ಬಳಸಲಾಗುತ್ತದೆ. ಈ ತಂತ್ರಜ್ಞಾನದಲ್ಲಿ ನಮಗೆ ಬೇಕಾದ ಜೀನ್ ಅನ್ನು (ಎಸ್‌ಎಸ್–ಡಿಎನ್‌ಎ) ವೈರಸ್‌ಗಳ ಆರ್‌ಎನ್‌ಎ ಗೆ ಜೋಡಿಸಲಾಗುತ್ತದೆ. ಅನಂತರ ಈ ವೈರಸ್‌ಗಳನ್ನು ಯಾವುದಾದರು ಬ್ಯಾಕ್ಟೀರಿಯಗಳಿಗೆ ಸೋಂಕು ತಗಲುವಂತೆ ಮಾಡುತ್ತಾರೆ. ಹೀಗೆ ಸೋಂಕು ತಗುಲಿಸಿದ ವೈರಾಣುಗಳು ಸಾವಿರೋಪಾದಿಯಲ್ಲಿ ಪ್ರಜನನಗೊಳ್ಳುತ್ತವೆ. ಈ ಸಂದರ್ಭದಲ್ಲಿ ಅದರಲ್ಲಿರುವ ಆರ್‌ಎನ್‌ಎ ಕಣವು ಕೂಡ ದ್ವಿಗುಣಗೊಂಡಿರುತ್ತದೆ. ಹಾಗಾಗಿ ಇದರ ಜೊತೆಗೆ ನಾವು ಜೋಡಿಸಿದ ಡಿಎನ್‌ಎ ಕಣ ಅಥವಾ ಜೀನ್ ಕೂಡ ದ್ವಿಗುಣಗೊಳ್ಳುತ್ತದೆ. ತದ್ರೂಪಿ ಜೀನ್ ತಂತ್ರಜ್ಞಾನಕ್ಕೆ ಬಳಸಲಾಗುವಂತಹ ವೈರಸ್ ಹಾಗು ಬ್ಯಾಕ್ಟೀರಿಯೋಫೇಜ್‌ಗಳನ್ನು ಆತಿಥೇಯ (ಕ್ಲೋನಿಂಗ್ ಹೋಸ್ಟ್) ಎಂದು ಕರೆಯಲಾಗುತ್ತದೆ. ವೈರಸ್ ಹಾಗೂ ಬ್ಯಾಕ್ಟೀರಿಯೋಫೇಜ್‌ಗಳನ್ನು ಉಪಯೋಗಿಸಿಕೊಂಡು ಸುಮಾರು 400 ಕಿಲೋಬೇಸ್ ಡಿಎನ್‌ಎ ತುಂಡಿನ ತದ್ರೂಪಿಗಳನ್ನು ಉತ್ಪತಿಮಾಡಬಹುದು.

ಬ್ಯಾಕ್ಟೀರಿಯಾಗಳು ಸರಳ ಹಾಗೂ ಸ್ವತಂತ್ರವಾಗಿ ಜೀವಿಸುವ ಏಕಕೋಶ ಪ್ರೊಕ್ಯಾರ್ಯೋಟಿಕ್ ಜೀವಿಗಳು. ಇವುಗಳಲ್ಲೂ ಕೂಡ ಇತರೆ ಪ್ರೋಕಾರ್ಯೋಟ್‌ಗಳಂತೆ ಡಿಎನ್‌ಎ ಕಣವು ಯಾವುದೇ ರೀತಿಯ ಪೊರೆಯಿಂದ ಸುತ್ತುವರೆದಿರುವುದಿಲ್ಲ. ಅದರಲ್ಲಿರುವ ಡಿಎನ್‌ಎ ರೂಪ ಹಾಗು ರಚನೆ ಯಾವುದೇ ಪ್ರೊಟೀನ್‌ಗಳನ್ನೊಳಗೊಳ್ಳದೆ ಬಹಳ ಸರಳವಾಗಿರುತ್ತದೆ. ಇದಲ್ಲದೆ ಬ್ಯಾಕ್ಟೀರಿಯಾಗಳನ್ನು ಬಹಳ ಸುಲಭವಾಗಿ ಹಾಗು ಬಹಳ ಕಡಿಮೆ ಸಮಯದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಅಭಿವೃದ್ಧಿಗೊಳಿಸಬಹುದು. ಪ್ರತಿ 20 ನಿಮಿಷಕ್ಕೊಮ್ಮೆ ದ್ವಿಗುಣಗೊಳ್ಳುವ ಶಕ್ತಿಯನ್ನು ಹೊಂದಿರುತ್ತವೆ. ಈ ಗುಣಗಳಿಂದ ಇವುಗಳನ್ನು ಅಣು ಜೀವವಿಜ್ಞಾನದ ಪ್ರಯೋಗಕ್ಕೆ ಬಳಸಲು ಸಮರ್ಪಕವಾಗಿವೆ. ಎಶ್ಚಿರೀಷಿಯ ಕೋಲಿ ಎಂಬ ಬ್ಯಾಕ್ಟೀರಿಯ ಪ್ರಭೇದವನ್ನು ಅಣು ಜೀವವಿಜ್ಞಾನದ ಪ್ರಯೋಗಗಳಿಗೆ ಅತಿ ಹೆಚ್ಚು ಬಳಸಲಾಗಿದೆ. ಈ ಬ್ಯಾಕ್ಟೀರಿಯ ಪ್ರಭೇದವು ಸಾಧಾರಣವಾಗಿ ಎಲ್ಲಾ ಪ್ರಾಣಿಗಳ ಕರುಳಿನಲ್ಲಿ ಕಂಡುಬರುತ್ತದೆ. ಇದರಿಂದ ಪ್ರಾಣಿಗೆ ಯಾವುದೇ ರೀತಿಯ ಅಪಾಯವಿರುವುದಿಲ್ಲ. ಇದರ ಕ್ರೊಮೋಸೋಮು ವರ್ತುಲಾಕಾರದಲ್ಲಿದ್ದು ಡಿಎನ್‌ಎ ಅನ್ನು ಹೊಂದಿರುತ್ತದೆ. ಇದಲ್ಲದೆ ಸಣ್ಣ, ಸುರುಳಿ ಆಕಾರದ, ಸ್ವತಂತ್ರ ಡಿಎನ್‌ಎ ಕಣಗಳೂ ಇರುತ್ತವೆ. ಅವುಗಳೇ ಪ್ಲಾಸ್ಮಿಡ್‌ಗಳು.

ಬ್ಯಾಕ್ಟೀರಿಯಾಗಳನ್ನು ಜೈವಿಕ ತಂತ್ರಜ್ಞಾನದಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ. ಯಾವುದಾದರು ಜೀನ್ ಅನ್ನು ಬೇರೆ ಪ್ರಾಣಿಯ ಕ್ರೊಮೋಸೋಮಿಗೆ (ಡಿಎನ್‌ಎ) ಸೇರಿಸಬೇಕಾದರೆ ಬ್ಯಾಕ್ಟೀರಿಯಾಗಳ ಮೂಲಕ ಅದನ್ನು ಸಾಧ್ಯವಾಗುವಂತೆ ಮಾಡಬಹುದು. ಇದನ್ನೇ ಕುಲಾಂತರೀಕರಣ (ಟ್ರಾನ್ಸ್‌ಜೆನಿಸಿಟಿ) ಎನ್ನುವುದು. ತದ್ರೂಪಿ ಜೀನ್‌ಗಳ ಉತ್ಪತ್ತಿಯಲ್ಲೂ ಇವುಗಳನ್ನು ಬಳಸಲಾಗುತ್ತದೆ. ಇವೆಲ್ಲವುದರ ಜೊತೆಗೆ ಬ್ಯಾಕ್ಟೀರಿಯಾಗಳನ್ನು ಔಷಧೀಯ ತಂತ್ರಜ್ಞಾನದಲ್ಲಿ ಬಹಳ ಹೇರಳವಾಗಿ ಬಳಸಲಾಗುತ್ತದೆ. ಹಲವು ರೋಗಗಳಿಗೆ ಔಷಧಿಗಳಾಗುವಂತಹ ಪ್ರೊಟೀನ್‌ಗಳನ್ನು, ಕಿಣ್ವವನ್ನು, ಹಾರ್ಮೋನ್‌ಅನ್ನು ಉತ್ಪಾದಿಸುವಲ್ಲಿ ಬ್ಯಾಕ್ಟೀರಿಯಗಳು ಬಹಳ ಉಪಯೋಗಕಾರಿ. ಉದಾಹರಣೆಗೆ, ಇನ್ಸುಲಿನ್ ತಯಾರಿಸುವಂತಹ ಜೀನ್ ಅನ್ನು ಪ್ರತ್ಯೇಕಿಸಿ ಅದನ್ನು ಬ್ಯಾಕ್ಟೀರಿಯಾಗಳ ಪ್ಲಾಸ್ಮಿಡ್‌ಗಳಿಗೆ ಸೇರಿಸಲಾಗುತ್ತದೆ. ಮಾರ್ಪಾಡಾದ ಈ ಪ್ಲಾಸ್ಮಿಡ್‌ನಿಂದ (ಪುನಃಸಂಯೋಜಿತ ಡಿಎನ್‌ಎ – ರಿಕಾಂಬಿನೆಂಟ್ ಡಿಎನ್‌ಎ) ಬ್ಯಾಕ್ಟೀರಿಯ ಇನ್ಸುಲಿನ್ ಅನ್ನು ಉತ್ಪಾದಿಸುತ್ತದೆ. ಅನಂತರ ಈ ಇನ್ಸುಲಿನ್ ಅನ್ನು ಬ್ಯಾಕ್ಟೀರಿಯ ಕೃಷಿಯಿಂದ ಪ್ರತ್ಯೇಕಿಸಿ, ಶುದ್ಧೀಕರಿಸಿ ಚುಚ್ಚುಮದ್ದಿನ ರೂಪದಲ್ಲಿ ಕೊಡಲಾಗುತ್ತದೆ. ಬ್ಯಾಕ್ಟೀರಿಯಾದಲ್ಲಿ ಉತ್ಪಾದಿಸಿದಂತಹ ಇನ್ಸುಲಿನ್ ರೂಪ ಹಾಗು ಅಮೈನೊ ಆಮ್ಲದ ಸರಣಿ ಮಾನವನಲ್ಲಿ ಅದರ ಸಹಜ ಪರಿಸರದಲ್ಲಿ ಉತ್ಪಾದಿಸಿದಂತಹ ಇನ್ಸುಲಿನ್‌ಗೆ ಸಮನಾಗಿರುತ್ತದೆ. ಹಾಗಾಗಿ ಈ ಇನ್ಸುಲಿನ್ ಅನ್ನು ಉಪಯೋಗಿಸುವಲ್ಲಿ ಯಾವುದೇ ರೀತಿಯ ಕೆಟ್ಟ ಪರಿಣಾಮಗಳು ಇರುವುದಿಲ್ಲ.

ಇನ್ಸುಲಿನ್ ಮಾತ್ರವಲ್ಲದೆ ಮಾನವನಿಗೆ ಅತ್ಯವಶ್ಯಕವಾದ ಹಾಗು ರೋಗನಿರೋಧಕ ಶಕ್ತಿಯುಳ್ಳ ಹಲವು ವಸ್ತುಗಳನ್ನು ಬ್ಯಾಕ್ಟೀರಿಯಾಗಳ ಮೂಲಕವೇ ಉತ್ಪಾದಿಸಲಾಗುತ್ತದೆ. ಇದೇ ರೀತಿ ಶಿಲೀಂದ್ರವನ್ನು ಕೂಡ ಜೈವಿಕ ತಂತ್ರಜ್ಞಾನದಲ್ಲಿ ಬಳಸಲಾಗುತ್ತಿದೆ.

ಉದಾಹರಣೆಗೆ, ಕಿಣ್ವನ ತಂತ್ರಜ್ಞಾನ. ಈ ರೀತಿಯ ತಂತ್ರಜ್ಞಾನದ ಸಹಾಯದಿಂದ ಬಿಯರ್, ಆಲ್ಕೋಹಾಲ್ ಮುಂತಾದ ಮದ್ಯಸಾರ ಪಾನೀಯಗಳನ್ನು ಉತ್ಪಾದಿಸಲಾಗುತ್ತದೆ. ಈ ತಂತ್ರಜ್ಞಾನದಲ್ಲಿ ಬಹಳ ಅಧಿಕವಾಗಿ ಉಪಯೋಗಿಸಲಾಗುವಂಥ ಶಿಲೀಂಧ್ರವೆಂದರೆ ಯೀಸ್ಟ್. (ಎಚ್.ಆರ್.ಎಚ್.)

**ಅತಿಕೂದಲ ಕಿವಿಯಾಲೆ**: ಹೊರಕಿವಿಯ ಅಂಚಿನ ಭಾಗದಲ್ಲಿ ಉದ್ದವಾದ ಕೂದಲು ಬೆಳೆದಿರುವ ಒಂದು ಪುರುಷ ಲಕ್ಷಣ. ಕಿವಿಯ ಹೈಪರ್ ಟ್ರೈಖೋಸಿಸ್ (ಹೇರಿ ಪಿನ್ನ). ಈ ಕೂದಲುಗಳು ಹೊರಕಿವಿಯ ಮೇಲಿನಿಂದ ಕೆಳಗಿನವರೆಗೆ ಅಥವಾ ಕೆಳಗಡೆ ಭಾಗದಲ್ಲಿ ಮಾತ್ರ ಬೆಳೆಯುತ್ತವೆ. ಕೂದಲ ಸಂಖ್ಯೆಗಳು ಮತ್ತು ಅದರ ರಚನಾ ವಿನ್ಯಾಸವು ಬಹಳವಾಗಿ ಬದಲಾಯಿಸುತ್ತದೆ. ಟೊಮ್ಮಸಿ (1907) ಅತಿಕೂದಲ ಕಿವಿಯಾಲೆಯ ವಂಶವೃಕ್ಷವನ್ನು ಮೊಟ್ಟಮೊದಲ ಬಾರಿಗೆ ಬಹಿರಂಗ ಪಡಿಸಿದನು. ಗೇಟ್ಸ್ (1957) ಎಂಬ ವಿಜ್ಞಾನಿಯು ಭಾರತೀಯರಲ್ಲಿ ಇದು ಕಂಡುಬರುವುದನ್ನು ಮೊದಲ ಬಾರಿಗೆ ತೋರ್ಪಡಿಸಿದನು. ಕಿವಿಯ ಮೇಲೆ ಕೂದಲು ಬೆಳೆಯುವಿಕೆಯು ಗಂಡಸರಲ್ಲಿ ಮಾತ್ರ ಕಂಡುಬರುತ್ತದೆ ಮತ್ತು ತಂದೆಯಿಂದ ಮಗನಿಗೆ ಈ ಲಕ್ಷಣವು ವರ್ಗಾವಣೆಯಾಗುತ್ತದೆ. ಹೆಂಗಸರಲ್ಲಿ ಅಥವಾ ಮಗಳಲ್ಲಿ ಕಂಡುಬರುವುದಿಲ್ಲ ಮತ್ತು ಅವರು ಇಂಥ ಒಂದು ಲಕ್ಷಣದ ಜೀನ್ ಅನ್ನು ತಮ್ಮ ಗಂಡು ಮಕ್ಕಳಿಗೆ ಸಾಗಿಸುವುದೂ ಇಲ್ಲ. ಇದಕ್ಕೆ ಹೊಲ್ಯಾಂಡ್ರಿಕ್ ಆನುವಂಶೀಯತೆ (ಗ್ರೀಕ್ ಮೂಲ– ಹೊಲೋಸ್:ಪೂರ್ತಿ, ಆಂಡ್ರೋಸ್:ಗಂಡು) ಎಂಬ ಹೆಸರನ್ನು ಎನ್‌ರಿಕೆ(1922) ಎಂಬಾತನು ಕೊಟ್ಟಿದ್ದಾನೆ. ಅಂದರೆ, ಇದು ಗಂಡು ಲಿಂಗದಲ್ಲಿ Y– ವರ್ಣ ತಂತುವಿನ ಮೂಲಕ ವರ್ಗಾಯಿಸಲ್ಪಡುತ್ತದೆ. ದ್ರೋಣಮ್‌ರಾಜು (1965) ಬಹಳ ವಾಸ್ತವವಾದ ವಂಶವೃಕ್ಷಗಳ ಮೂಲಕ ಇಂಥ ಒಂದು ವಂಶಾನುಕ್ರಮದ ಮಾದರಿಯನ್ನು ವ್ಯಕ್ತಪಡಿಸಿದ್ದಾನೆ. ಈ ಹೊಲ್ಯಾಂಡ್ರಿಕ್ ಆನುವಂಶೀಯತೆ ಗಂಡಸರಲ್ಲಿ ಕಂಡುಬರುವ Y– ವರ್ಣತಂತುವಿನ ಜೀನ್‌ಗಳ ಹತೋಟಿಯಲ್ಲಿರುತ್ತದೆ. ಯಾವಾಗ ಈ Y – ವರ್ಣತಂತುವು ತಂದೆಯಿಂದ ಗಂಡು ಮಕ್ಕಳಿಗೆ ವಂಶಾನುಕ್ರಮವಾಗಿ ಹೋಗುತ್ತದೊ ಆಗ Y – ವರ್ಣತಂತುವಿನಲ್ಲಿರುವ ಇಂಥ ಲಕ್ಷಣದ ಜೀನ್‌ಗಳ ಹೊರಸುರಿಸುವಿಕೆಯ ಪ್ರಭಾವದಿಂದ ಈ ಅತಿಕೂದಲು ಕಿವಿಯೋಲೆ ಮೇಲೆ ಕಂಡುಬರುತ್ತದೆ. ಇಂಥ ಒಂದು Y – ವರ್ಣತಂತುವಿನ ಸಂಬಂಧದಲ್ಲಿ ಇರುವ ಜೀನ್‌ಗಳನ್ನು ಇನ್ನೂ ಸ್ಪಷ್ಟವಾಗಿ ವ್ಯಕ್ತಪಡಿಸಬೇಕೆಂದು ಕೆಲವು ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. (ಕೆ.ಆರ್.ಕೆ)

**ಅದಿರುಜೋಗರಿಕೆ:** ಮಿದುಳಿನ ಅರೆಗೋಳಗಳ ನಡುವೆ ಇರುವ ಓಕ್ಕಾಯಿ ಗಾತ್ರದ, ತಳದ ನರಗಂಟುಗಳಲ್ಲಿನ (ಬೇಸಲ್ ಗ್ಯಾಂಗ್ಲಿಯ) ನರಕಣಗಳು ಅನುವಳಿದಿರುವುದರಿಂದ ಹೊರಗಾಣುವ, ಕೈಕಾಲುಗಳು ಅದುರುವ, ಮೈ ಬಿಗುಪಿನ ಬೇನೆ (ಪಾರ್ಕಿನ್ಸನ್ನನ ಬೇನೆ). ಮೈಯೆಲ್ಲ ಸೆಡೆತುಕೊಂಡು ಅದುರುವುದು ರೋಗದ ಮುಖ್ಯ ಗುರುತು.

ಕಾಲನ್ನು ಎಳೆದೆಳೆವ ನಡಿಗೆ, ಕಾಲು ಭಾರವೆನಿಸಿ, ಕೈ ಮೆಲ್ಲಗೆ ನಡುಗಿದಂತೆ ಕಾಣುವುದೇ ಅದಿರುಜೋಗರಿಕೆಯ ಮೊದಮೊದಲ ಲಕ್ಷಣಗಳು. ಉಳಿದುವು ಒಂದಾದ ಮೇಲೆ ಒಂದರಂತೆ ನಿಧಾನವಾಗಿ ಬರುತ್ತವೆ. ಬರೆವಣಿಗೆ ಕಿರಿದಾಗುವುದು. ಇನ್ನಿತರ ಕೈಚಳಕಗಳು ಇಲ್ಲವಾಗುತ್ತವೆ. ಮಾತು ತೊಡರುತ್ತದೆ. ನುಂಗಣೆ, ಆಹಾರ ಅಗಿಯುವುದೂ ಬಲು ಕಷ್ಟದ ಕೆಲಸವಾಗುತ್ತದೆ. ಸ್ನಾಯುಗಳ ನಿತ್ರಾಣ, ಬಿಗಿತಗಳಿಂದ ನಡಿಗೆ ಇನ್ನೂ ತ್ರಾಸಕರವಾಗುತ್ತದೆ. ಸಮತೋಲ ತಪ್ಪಿ ಬಿದ್ದುಬಿಡುವ ಸಂಭವ ಹೆಚ್ಚು. ಅಡ್ಡಾಡುವುದು ತೀರ ಪೇಚಾಟಕ್ಕಿಟ್ಟುಕೊಂಡು. ಕೊನೆಗೆ ಕುರ್ಚಿಯಲ್ಲಿ ಕುಳಿತಲ್ಲಿಂದ, ಹಾಸಿಗೆಯಲ್ಲಿ ಮಲಗಿದಲ್ಲಿಂದ ಏಳುವುದೂ ಆಮೇಲೆ ನಡೆಯುವುದೂ ಶ್ರಮಕರವಾಗುತ್ತದೆ.

ಭಾವತೋರದ ಮುಖ, ಮೊಗವಾಡ ಹಾಕಿದಂತಿರುವುದು. ಹುಬ್ಬುಗಳು ಎತ್ತಿಕೊಂಡಿರುತ್ತವೆ. ಬೆನ್ನು ಗೂನಾಗುತ್ತದೆ. ಮೈ ಮುಂದೆ ಕೈದೋಳುಗಳು ತೂಗುಬಿದ್ದಿರುವುವು. ಕೈಗಳ ಹೆಬ್ಬೆರಳು ತೋರುಬೆರಳು ಯಾವಾಗಲೂ ಗುಳಿಗೆ ಮಾಡುತ್ತಿರುವಂತೆ, ಸುರುಳಿ ಸುತ್ತುತ್ತಿರುವಂತೆ ಆಡುತ್ತಿರುತ್ತವೆ. ಬರುಬರುತ್ತ ಇದು ಕೈ, ತೋಳು, ಕಾಲುಗಳಿಗೂ ಹಬ್ಬುತ್ತದೆ. ಹೆಜ್ಜೆ ಹಾಕಬೇಕೆಂದರೆ ರೋಗಿ ಮುಂದಕ್ಕೆ ತಳ್ಳಿಸಿಕೊಂಡವನಂತೆ ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತ ನಿಧಾನವಾಗಿ ನಡೆವನು. ರೋಗ ಬಲಿತಿರುವಾಗ, ಏನು ಮಾಡಬೇಕೆಂದರೂ ಶ್ರಮ. ಕೈಕಾಲುಗಳು ತೀರ ಕುಸಿದು ಬೀಳದಿದ್ದರೂ ತನಗೆ ಬೇಕೆನಿಸಿದ್ದನ್ನು ಮಾಡಲು ಕೈಲಾಗದ ಹೆಳವನಾಗುತ್ತಾನೆ. ಆದರೂ ಸರಕ್ಕನೆ ಇದ್ದಕ್ಕಿದ್ದಂತೆ ಉದ್ವೇಗದಿಂದ ಕೆಲವು ಕೆಲಸಗಳನ್ನು ಸುಲಭವಾಗಿ ಮಾಡಿಬಿಡುವನು. ಪ್ರಾರಂಭದಲ್ಲಿ ಅರಿವೂ ಬುದ್ಧಿಯೂ ಚೆನ್ನಾಗಿಯೇ ಇದ್ದರೂ ರೋಗಿ ಚಿಂತೆಯಿಂದ ಖಿನ್ನನಾಗುತ್ತಾನೆ. ಈ ಬೇನೆಯನ್ನು ಮೊದಲು ವಿವರಿಸಿದವನು ಜೇಮ್ಸ್ ಪಾರ್ಕಿನ್ಸನ್ (1817).

ಸಾಮಾನ್ಯವಾಗಿ ವಯಸ್ಸಿಗೆ ಬಂದ ಮೇಲೆ ಈ ರೋಗ ಕಾಣಿಸಿಕೊಂಡರೂ ಮೂರನೆಯ ಹಂತದಲ್ಲೂ ತಲೆಹಾಕಬಹುದು. ಹೆಂಗಸರಿಗಿಂತ ಗಂಡಸರಲ್ಲಿ ಸಾಮಾನ್ಯ. ರೋಗದ ಲಕ್ಷಣಗಳು ಒಂದು ದಿನ ಇದ್ದಂತೆ ಇನ್ನೊಂದು ದಿನ ಇರವು. ಆದರೂ ಬೇರೂರಿರುವ ಈ ರೋಗ ಎಷ್ಟು ಚೆನ್ನಾಗಿ ತೋರುವುದೆಂದರೆ, ಒಂದು ಬಾರಿ ಸುಮ್ಮನೆ ನೋಡಿದರೂ ಗುರುತಿಸಬಹುದು. ರೋಗ 10–20ವರ್ಷಗಳಲ್ಲಿ ಬಲಿಯುತ್ತದೆ. ಕೆಲವು ತಲೆಮಾರಿನವರಲ್ಲಿ ಒಬ್ಬರಿಗಿಂತಲೂ ಹೆಚ್ಚು ಮಂದಿಗೆ ಇದೇ ರೋಗ ಕಾಡಬಹುದು.

ನಿಜವಾದ ಕಾರಣ ತಿಳಿದಿಲ್ಲವಾದರೂ ಈಗ ಗೊತ್ತಿರುವಂತೆ, ಈ ಬೇನೆಗೆ ಮೂರು ಕಾರಣಗಳನ್ನು ಹೇಳಬಹುದು; ವಯಸ್ಸಾದವರಲ್ಲಿ ಮಿದುಳಿನ ತಳದ ನರಗಂಟುಗಳಿಗೆ ರಕ್ತ ಒದಗಿಸುವ ರಕ್ತನಾಳಗಳು ಪೆಡಸುಗಟ್ಟುವುದು; ಎಳೆಯರಲ್ಲಿ, ಈಗ ಬಹುಮಟ್ಟಿಗೆ ಮರೆತುಹೋಗಿರುವ ಮಿದುಳುರಿತಾನಂತರದ (ಪೋಸ್ಟ್–ಎಂಕೆಫಾಲಿಟಿಕ್) ವಿಷಕಣದ ಸೋಂಕು; ವಯಸ್ಸಿನ ಮಿತಿಯಿಲ್ಲದೆ, ಸರ್ಪಗಂಧ, ಫೀನೊತಯಜೀನಿನಂಥ ಮದ್ದುಗಳ ಸೇವನೆ. ಈ ಕಾರಣಗಳಲ್ಲಿ ಕೊನೆಯದನ್ನು ಮಾತ್ರ ಚೆನ್ನಾಗಿ ಗುಣಪಡಿಸಬಹುದು. ಏಕೆಂದರೆ, ಮದ್ದುಗಳ ಸೇವನೆ ನಿಂತರೆ, ರೋಗ ಲಕ್ಷಣಗಳು ಮರೆಯಾಗುತ್ತವೆ. ಅದಿರುಜೋಗರಿಕೆಯ ಕೆಲವು ಬಗೆಗಳು ಉಂಟಾಗಲು ಜೀನ್ (ಗುಣಾಣು)ಗಳು ಕಾರಣವಿರಬಹುದೆ ಎಂದು ಇತ್ತೀಚಿನ ಸಂಶೋಧನೆಗಳು ಸೂಚಿಸಿವೆ. ಅಪರೂಪವಾದ ಆನುವಂಶೀಯವೆಂಬಂತೆ ಕೆಲವು ಕುಟುಂಬಗಳಲ್ಲಿ ಹಲವು ತಲೆಮಾರಿನಲ್ಲಿ ಕಾಣಿಸುವ ಅದಿರುಜೋಗರಿಕೆಗೆ ಕಾರಣವಿರಬಹುದಾದ ಎಸ್‌ಎನ್‌ಸಿಎ ಮತ್ತು ಪಾರ್ಕಿನ್ ಎನ್ನುವ ಎರಡು ಜೀನ್‌ಗಳನ್ನು ಗುರುತಿಸಲಾಗಿದೆ. ರೋಗಿಗಳ ಸಂಬಂಧಿ ಮಕ್ಕಳಲ್ಲಿ ಈ ಜೀನ್‌ಗಳ ವಿಕೃತ ಅಲೀಲುಗಳನ್ನು ಪತ್ತೆ ಹಚ್ಚಲಾಗಿದೆ.

ಪರಿಸರ ಮಾಲಿನ್ಯವುಂಟು ಮಾಡುವ ಕೆಲವು ವಿಷವಸ್ತುಗಳಿಂದಲೂ ಅದಿರು ಜೋಗರಿಕೆಯುಂಟಾಗಬಹುದೆಂಬ ಅನುಮಾನವಿದೆ. ಈ ವಿಷವಸ್ತುಗಳನ್ನು ನಿರ್ವಿಷಗೊಳಿಸುವ ಸಿವೈಪಿ ವರ್ಗಕ್ಕೆ ಸೇರಿದ ಆರು ಜೀನ್‌ಗಳ ವಿಕೃತ ರೂಪಗಳು ರೋಗವುಂಟಾದವರಲ್ಲಿ ಕಾಣಬಂದಿವೆ.

ಮೈಬಿಗಿತ, ನಡುಕಗಳ ಚಿಕಿತ್ಸೆಗಾಗಿ ಹಲವಾರು ಮದ್ದುಗಳಿವೆ. ಟ್ರೈಹೆಕ್ಸಿಫನಿಡಿಲ್ ಹೈಡ್ರೋಕ್ಲೋರೈಡ್, ಲಿವೋಡೋಪ, ಕಾರ್ಬಿಡೋಪ, ಅಮಾಂಟಡಿನ್ ಇತ್ಯಾದಿ. ವೈದ್ಯರ ಮಾರ್ಗದರ್ಶನದಲ್ಲಿ ಜೀವನಪರ್ಯಂತ ಔಷಧಿಯನ್ನು ಸೇವಿಸಬೇಕು. ರೋಗಿ ಆದಷ್ಟು ಸ್ವಾವಲಂಬಿಯಾಗಿ ಸಕ್ರಿಯವಾಗಿ ಕೆಲಸ ಮಾಡಲು ಪ್ರೋತ್ಸಾಹಿಸಬೇಕು. ಖಿನ್ನತೆ ತೀವ್ರವಾಗಿದ್ದರೆ ಖಿನ್ನತೆ ನಿವಾರಕ ಔಷಧಗಳೂ, ಆಪ್ತಸಮಾಲೋಚನೆಯೂ ಬೇಕಾಗಬಹುದು.

ನರಗಂಟುಗಳಲ್ಲಿ ಅನುವಳಿದಿರುವ ನರಕೋಶಗಳ ಸ್ಥಾನದಲ್ಲಿ ಹೊಸ ನರಕೋಶಗಳನ್ನು ಕಸಿ ಮಾಡಿ ರೋಗವನ್ನು ಗುಣಪಡಿಸಲು ವೈದ್ಯರು ಪ್ರಯತ್ನಿಸುತ್ತಿದ್ದಾರೆ. ಇದಲ್ಲದೆ ನರಕಾಂಡ ಕೋಶಗಳನ್ನು ಕಸಿ ಮಾಡಿ ಸ್ವಸ್ಥಾನದಲ್ಲಿ ಹೊಸ ನರಕೋಶಗಳು ಮೊಳೆಯುವಂತೆ ಮಾಡುವ ಆಲೋಚನೆಗಳೂ ಇವೆ. ಪ್ರಾಣಿಗಳಲ್ಲಿ ಇಂತಹ ಪ್ರಯೋಗಗಳು ಉತ್ತೇಜನಕಾರಿ ಫಲಿತಾಂಶಗಳನ್ನು ನೀಡಿರುವುವು. ಭವಿಷ್ಯದಲ್ಲಿ ಅದಿರುಜೋಗರಿಕೆಗೆ ಕಾಂಡಕೋಶಗಳ ಕಸಿ ಚಿಕಿತ್ಸೆ ಸಾಧ್ಯವಾಗಬಹುದು. (ಡಿ.ಎಸ್.ಎಸ್.)

**ಅನಪ್ಲಾಸಿಯ:** ಜೀವಕೋಶಗಳು ಪುನರ್ ವಿಭೇದನೆ ಹೊಂದಿ ಭ್ರೂಣದ ಜೀವಕೋಶಗಳಂತೆ ಮಾರ್ಪಾಡಾಗುವಿಕೆ (ಹುಟ್ಟುಮರ). ಕ್ಯಾನ್ಸರ್‌ರೋಗಕ್ಕೆ ಇದನ್ನು ಹೋಲಿಸಬಹುದು. ಪುನರ್ ವಿಭೇದನೆಯ ಮಟ್ಟ ಕ್ಯಾನ್ಸರ್ ಹುಣ್ಣಿನ ಕೊನೆಯ ಹಂತಗಳಿಗೆ ಸರಿಸಮನಾಗಿರುತ್ತದೆ. (ಎಸ್.ಎನ್.ಎಚ್.)

**ಅನಾಫಿಲೀಸ್ ಸೊಳ್ಳೆ:** ಸಂಧಿಪದಿ ವಂಶದ ಕೀಟವರ್ಗದ ಕುಲಿಸಿಡೆ ಕುಟುಂಬದ ಸದಸ್ಯ. ಸೊಳ್ಳೆಗಳಲ್ಲಿ ಒಂದು. ಪ್ರಪಂಚದ ಎಲ್ಲ ಭಾಗಗಳಲ್ಲೂ ಇವೆ. ಸೊಳ್ಳೆಗಳಲ್ಲಿ ಮೂರು ಪಂಗಡಗಳಿವೆ. ( ಉದಾ: ಅನಾಫಿಲೀಸ್, ಕ್ಯೂಲೆಕ್ಸ್ ಮತ್ತು ಮೆಗರೈನ್) ಅನಾಫಿಲೀಸ್ ಸೊಳ್ಳೆ ಡಿಪ್ಟಿರಾ ಗಣದ ಸದಸ್ಯ. ನಿಂತಿರುವ ನೀರು ಅಥವಾ ನಿಧಾನವಾಗಿ ಹರಿಯುವ ಸ್ವಚ್ಛವಾದ ನೀರಿನಲ್ಲಿ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆ 10–12 ದಿನಗಳಲ್ಲಿ ಎರಡು ಹಂತಗಳನ್ನು ಪೂರ್ಣಗೊಳಿಸುತ್ತವೆ. ಲಾರ್ವ ಮತ್ತು ಕೋಶಾವಸ್ಥೆಯ ಹಂತ ಮುಗಿಸಿ, ಪ್ರೌಢಾವಸ್ಥೆ ಸೇರುತ್ತವೆ. ಬೆಳೆದು ದೊಡ್ಡದಾಗಿ ಹಳದಿ ಜ್ವರ,



ಅನಾಫಿಲೀಸ್ ಸೊಳ್ಳೆ

ಮಲೇರಿಯ ಜ್ವರ ಹರಡುವಿಕೆಗೆ ಸಹಕಾರಿಯಾಗಿವೆ. ಗಂಡು ಸಸ್ಯಾಹಾರಿ. ಹೆಣ್ಣುಸೊಳ್ಳೆಗಳು ಮಾತ್ರ ಮನುಷ್ಯನ ಅಥವಾ ಪ್ರಾಣಿಗಳ ರಕ್ತವನ್ನು ಹೀರುತ್ತವೆ. ಈ ರಕ್ತದಲ್ಲಿರುವ ಪ್ರೊಟೀನ್ ಅಂಶವನ್ನು ಬೆಳೆಯುವ ಭ್ರೂಣ, ಮತ್ತು ಮೊಟ್ಟೆಗಳ ಉತ್ಪತ್ತಿಯಲ್ಲಿ ಬಳಸುತ್ತವೆ. ರೋಗ ಹರಡುವಿಕೆಯಲ್ಲಿ ಹೆಣ್ಣು ಸೊಳ್ಳೆ ಪ್ರಮುಖ ಪಾತ್ರವಹಿಸುತ್ತದೆ.

ಪ್ರಪಂಚದಲ್ಲಿ ಸು. 400 ಕ್ಕೂ ಹೆಚ್ಚು ಜಾತಿಯ ಅನಾಫಿಲೀಸ್ ಸೊಳ್ಳೆಗಳಿವೆ. ಅವುಗಳಲ್ಲಿ 56 ಜಾತಿಯ ಸೊಳ್ಳೆಗಳು ಭಾರತದಲ್ಲಿವೆ. 26 ಜಾತಿಯ ಅನಾಫಿಲಿಸ್ ಸೊಳ್ಳೆಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಬಗ್ಗೆ ತಜ್ಞರು ವರದಿಸಿದ್ದಾರೆ. 54 ಜಾತಿಯ ಅನಾಫಿಲಿಸ್ ಸೊಳ್ಳೆಗಳು ಮಾತ್ರ ಪ್ರಪಂಚದಲ್ಲಿ ಮಲೇರಿಯ ರೋಗ ಹರಡಲು ಕಾರಣವಾಗಿವೆ. ಅವುಗಳಲ್ಲಿ ಅ. ಕ್ಯುಲಿಸಿಫೇಸಿಸ್, ಅ. ಫ್ಲೂವಿಯಾಟಿಲಿಸ್ ಮತ್ತು ಅ. ಸ್ಟಿಫೆನ್ಸಿ ಪ್ರಭೇದದ ಸೊಳ್ಳೆಗಳು ಕರ್ನಾಟಕದಲ್ಲಿ ಮಲೇರಿಯ ರೋಗವನ್ನು ಹರಡುವ ಪ್ರಮುಖ ಸೊಳ್ಳೆಗಳು.

ಈ ಸೊಳ್ಳೆಗಳು ಒಂದು ರೀತಿಯ ಕಪ್ಪು ಮತ್ತು ಬಿಳಿ ಚುಕ್ಕೆಗಳನ್ನು ದೇಹದ ಮೇಲೆ ಹೊಂದಿವೆ. ರೆಕ್ಕೆಗಳ ಮಧ್ಯಭಾಗದಲ್ಲಿ, ಬೆನ್ನು ಅರ್ಧ ಚಂದ್ರಾಕಾರವಾಗಿ ಬಾಗಿದೆ. ರಕ್ತವನ್ನು ಹೀರುವ ಹೀರುನಳಿಕೆಯ (ಪ್ರೊಬೊಸಿಸ್) ಪಕ್ಕದಲ್ಲಿರುವ ಪ್ಯಾಲ್ಪ್ಸ್‌ಗಳು ಹೆಣ್ಣಿನಲ್ಲಿ ಉದ್ದನಾಳದಂತೆಯೂ ಗಂಡಿನಲ್ಲಿ ಅದರ ತುದಿ ಗದೆಯ ರೂಪದಲ್ಲೂ ಇರುತ್ತದೆ.

(ಟಿ.ಎಸ್.ಆರ್.)

**ಅನಾಸ್ತ್ರಕ:** ಸಂಧಿಪದಿ ವಂಶ, ಕಠಿಣ ಚರ್ಮಿ ವರ್ಗ, ಬ್ರಾಂಕಿಯೋಪೋಡ ಉಪವರ್ಗದ ಗಣ. ಅನಾಸ್ತ್ರಕ ಎಂದರೆ ಚಿಪ್ಪುರಹಿತ ಜೀವಿಗಳೆಂದು ಹೆಸರು. ಸ್ಟ್ರೆಪ್ಟೋಸಿಫಾಲಿಸ್ ಈ ಗಣದ ಜೀವಿಗಳಲ್ಲಿ ಅತಿಮುಖ್ಯವಾದುದು. ಇದನ್ನು ಶ್ರಿಂಫ್ ಎನ್ನುವರು. ಬ್ರಾಂಕಿಯೋಪ್ರೋಡ ಉಪವರ್ಗದ ಜೀವಿಗಳು ಸಿಹಿನೀರಿನಲ್ಲಿ ವಾಸಿಸುತ್ತವೆ. ಸ್ಟ್ರೆಪ್ಟೋಸಿಫಾಲಿಸ್ ಜೀವಿಯು ಸಿಹಿನೀರಿನ ಕೆರೆ, ಕುಂಟೆಗಳಲ್ಲಿ ವಾಸಿಸುವುದು. ಇವುಗಳ ದೇಹವು ಆಕರ್ಷಕ ಬಣ್ಣದಿಂದಾಗಿದೆ. ಇವು ಏಕಲಿಂಗಗಳಾಗಿದ್ದು, ಗಂಡು 3.75 ಸೆಂಮೀ ಉದ್ದವಿದೆ. ಹೆಣ್ಣು ಗಂಡಿಗಿಂತ ಸ್ವಲ್ಪ ಚಿಕ್ಕದು. ಇವು ನೀರಿನ ಮೇಲ್ಭಾಗದಲ್ಲಿ ಬೆನ್ನಿನಭಾಗದಿಂದ ಈಜುವಾಗ ತೆಳುವಾದ ಉಪಾಂಗಗಳು ಒಂದೇ ಸಮನೆ ಬಡಿಯುತ್ತಿರುತ್ತವೆ. ಈಜುವಾಗ ತೊಂದರೆ ಪಡಿಸಿದರೆ ಕೂಡಲೆ ಮಣ್ಣಿನಲ್ಲಿ ಇಲ್ಲವೇ ಜೊಂಡಿನ ಮಧ್ಯೆ ಅಡಗಿಕೊಳ್ಳುತ್ತವೆ.

ನೀಳವಾದ ದೇಹವನ್ನು ತಲೆ, ಎದೆ ಮತ್ತು ಉದರವೆಂದು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ತಲೆ ಭಾಗದಲ್ಲಿ ಒಂದು ಜೊತೆ ಕುಡಿಮೀಸೆ (ಅಂಟಿನೂಲ್ಸ್), ಒಂದು ಜೊತೆ ಆಂಟೆನಾ ಒಂದು ಜೊತೆ ದವಡೆ (ಮಂಡಿಬಲ್ಸ್) ಮತ್ತು ಎರಡು ಜೊತೆ ಮ್ಯಾಕ್ಸಿಲ್ಲಾಗಳಿವೆ. ಕುಡಿಮೀಸೆಗಳು ಉದ್ದವಾಗಿದ್ದು, ತುದಿಯಲ್ಲಿ ಅನೇಕ ಶಿಲಿಕೆಗಳನ್ನು ಹೊಂದಿವೆ. ಗಂಡು ಮತ್ತು ಹೆಣ್ಣಿನಲ್ಲಿ ಕುಡಿಮೀಸೆಗಳ ವ್ಯತ್ಯಾಸ ಕಾಣಬಹುದು. ಹೆಣ್ಣಿನಲ್ಲಿ ಇವು ಚಿಕ್ಕದಾಗಿದ್ದು ಚಪ್ಪಟೆಯಾಗಿದ್ದರೆ, ಗಂಡಿನಲ್ಲಿ ನೀಳವಾಗಿದ್ದು ಸಂಭೋಗಕಾಲದಲ್ಲಿ ಹೆಣ್ಣನ್ನು ಆಲಿಂಗಿಸಲು ನೆರವಾಗುತ್ತವೆ. ದವಡೆಗಳ ಮಧ್ಯ ಬಾಯಿ ರಂಧ್ರವಿದೆ. ದವಡೆಗಳು ಆಹಾರ ಸೇವನೆಯಲ್ಲಿ ಮತ್ತು ಹಿಡಿದ ಆಹಾರವನ್ನು ಕಡಿದು ಬಾಯಿಗೆ ನೂಕುವುದರಲ್ಲಿ ನೆರವಾಗುತ್ತವೆ. ತಲೆಯ ಮೇಲ್ಭಾಗದಲ್ಲಿ ಇಕ್ಕಡೆಯ ತೊಟ್ಟುಕಣ್ಣುಗಳ (ಸ್ಟಾಕ್ಡ್ ಐಸ್) ಜೊತೆಗೆ ಒಂದು ಮಧ್ಯೆ ಕಣ್ಣು ಮತ್ತು ಕಂಠಾಂಗವಿದೆ. ಎದೆಭಾಗದಲ್ಲಿ 19 ಖಂಡಗಳಿವೆ. ಇವುಗಳಲ್ಲಿ ಮೊದಲ 11 ಖಂಡಗಳು ಒಟ್ಟು 11 ಜೊತೆ ಉಪಾಂಗಗಳನ್ನು ಹೊಂದಿರುತ್ತವೆ. ಈ ಉಪಾಂಗಗಳ ಹೊರಭಾಗವು ಮೊನಚಾಗಿರುತ್ತದೆ. ಈ ಉಪಾಂಗಗಳು ಅಗಲವಾಗಿ ತೆಳುವಾಗಿರುವುದರಿಂದ ಫಿಲ್ಲೋಪೋಡಿಯಂಗಳೆಂದು ಕರೆಯುತ್ತಾರೆ. ಇವು ದ್ವಿಶಾಖಾ ಉಪಾಂಗಗಳಿಗಿಂತ (ಬೈರಮಸ್) ಭಿನ್ನವಾಗಿರುತ್ತವೆ. ಉದಾ: ಸೀಗಡಿ ದೇಹದ ದ್ವಿಶಾಖ ಉಪಾಂಗಗಳಿಗೆ ಸ್ಟೆನೋಪೋಡಿಯಾಗಳೆಂದು ಹೆಸರು. ಈ ಫಿಲ್ಲೋಪೋಡಿಯಂಗಳ ಹೊರಕವಚದಲ್ಲಿ ರಕ್ತಹರಿಯುವುದರಿಂದ ಉಸಿರಾಟ ಕ್ರಿಯೆಯಲ್ಲಿಯೂ ಭಾಗವಹಿಸುತ್ತವೆ.

ಈ ಉಪಾಂಗಗಳು ನೀರಿನಲ್ಲಿ ಈಜುವುದಕ್ಕೂ ಆಹಾರ ಸಂಗ್ರಹಕ್ಕೂ ಸಹಾಯ ಮಾಡುತ್ತವೆ. ಜನನೇಂದ್ರಿಯ ದ್ವಾರವು 12ನೆ ಖಂಡದ ಅಡಿಯಲ್ಲಿದೆ. ಇದರ ಹಿಂಭಾಗದ ಖಂಡಗಳೆ ಉದರದ ಖಂಡಗಳು. ಇದರಲ್ಲಿ ಉಪಾಂಗಗಳಿಲ್ಲ. ಉದರದ ಕೊನೆ ಖಂಡದಲ್ಲಿ ಟೆಲ್ಸನ್ ಮತ್ತು ಒಂದು ಜೊತೆ ಬಾಲದ ತೆಳುವಾದ ಫಲಕಗಳಿವೆ. ಟೆಲ್ಸನ್, ಮುಂಭಾಗದಲ್ಲಿ ಆಸನದ್ವಾರವಿದೆ. ಇವುಗಳ ಜೀರ್ಣಾಂಗಗಳಲ್ಲಿ ಇತರ ಜೀವಿಗಳಲ್ಲಿರುವಂತೆ ಬಾಯಿ, ಗಂಟಲು, ಜಠರ, ಕರುಳು ಭಾಗಗಳನ್ನು ಕಾಣಬಹುದು. ಗಂಟಲು ಮತ್ತು ರೆಕ್ಟೆಮ್ ಭಾಗಗಳ ಆಂತರ್ಯವು ಹೊರಚರ್ಮಕೋಶಗಳಿಂದ ಆವೃತವಾಗಿದ್ದರೆ, ಕರಳು ಮತ್ತು ಜಠರಗಳಲ್ಲಿ ಒಳಚರ್ಮದಕೋಶಗಳಿವೆ. ಒಂದು ಜೊತೆ ಜೀರ್ಣಗ್ರಂಥಿಗಳು ಜಠರವನ್ನು ಸೇರಿವೆ. ಶುದ್ಧೀಕರಣ ಕ್ರಿಯೆಯು ಮ್ಯಾಕ್ಸಿಲರಿ ಗ್ರಂಥಿಗಳ ನೆರವಿನಿಂದ ಆಗುತ್ತದೆ. ಇವು ಮಧ್ಯಚರ್ಮದಿಂದ ರೂಪುಗೊಂಡು, ಸುರುಳಿಯಾಕಾರದಲ್ಲಿದ್ದು ತಲೆಯ ಹಿಂಭಾಗದಲ್ಲಿ ನೆಲೆಸಿವೆ. ನರವ್ಯೂಹವು ಸರಳವಾಗಿದೆ. ಮಿದುಳು ಮತ್ತು ಎರಡು ಪೂರ್ಣ ಬೇರ್ಪಟ್ಟ ನರಹುರಿಗಳು, ಗ್ಯಾಂಗ್ಲಿಯಗಳು ಮತ್ತು ವಿವಿಧ ಖಂಡಗಳಲ್ಲಿ ಕಾಣುವ ನರಗಳೇ ನರವ್ಯೂಹದ ಮುಖ್ಯರಚನೆಗಳು. ನರಹುರಿಗಳೂ ಅಡ್ಡ ನರಗಳಿಂದ ಸೇರಿ ಸಂಪರ್ಕವನ್ನು ಹೊಂದಿವೆ.

ಗಂಡು ಜೀವಿಗಳಲ್ಲಿ ಒಂದುಜೊತೆ ಬೀಜಾಶಯಗಳು (ಟೆಸ್ಟಿಸ್) ಉದರದ ಭಾಗದಲ್ಲಿವೆ. ಹೆಣ್ಣಿನಲ್ಲಿ ಒಂದು ಜೊತೆ ಅಂಡಾಶಯಗಳಿದ್ದು ಗರ್ಭಧಾರಣೆ ದೇಹಾಂತರದಲ್ಲಿ ನಡೆಯುವುದು. ಗರ್ಭಧಾರಣೆಯ ನಂತರ ಪ್ರತಿಯೊಂದು ಸಂಯುಕ್ತ ಕೋಶ ಒಡೆದು ನಾಪ್ಲಿಯಸ್ ಲಾರ್ವ ಹೊರಬರುತ್ತದೆ. ಈ ಲಾರ್ವ ರೂಪಾಂತರ ಹೊಂದಿ ನಂತರ, ಪ್ರೌಢಜೀವಿಯಾಗಿ ಬೆಳೆಯುತ್ತದೆ.

(ಎಸ್.ಎಂ.)

**ಅನಿಷೇಚನ ಜನನ:** ಗರ್ಭಧಾರಣೆ ಅಗದೇ ಬೀಜಾಣು ಮರಿಯಾಗುವ ಜೈವಿಕ ಪುನರುತ್ಪತ್ತಿ ಕ್ರಿಯೆ (ಪಾರ್ಥಿನೊ ಜೆನೆಸಿಸ್). ಏಕಲಿಂಗ ಪುನರುತ್ಪತ್ತಿ ಇದರ ಮತ್ತೊಂದು ಹೆಸರು. ಎಲ್ಲಾ ಪ್ರಮುಖ ಅಕಶೇರುಕ ಗುಂಪುಗಳಲ್ಲಿ ಕಂಡುಬರುವುದು. ಕೆಲವು ಜೀವಿಗಳಲ್ಲಿ ದ್ವಿಲಿಂಗ ಪುನರುತ್ಪತ್ತಿ ಮತ್ತು ಅನಿಷೇಚನ ಜನನಗಳು ಪರ್ಯಾಯವಾಗಿಯೂ ಕಂಡುಬರುತ್ತದೆ. ಗಂಡು ಸಂತಾನವೇ ಇಲ್ಲದಿರುವ ಕೆಲವು ಪ್ರಭೇದಗಳಲ್ಲಿ ಅನಿಷೇಚನ ಜನನದಿಂದಲೇ ಪುನರುತ್ಪತ್ತಿಯಾಗುತ್ತದೆ. ಅನಿಷೇಚನ ಜನನ ಮತ್ತು ದ್ವಿಲಿಂಗ ಪುನರುತ್ಪತ್ತಿ ಪರ್ಯಾಯವಾಗಿ ಕಂಡು ಬರುವ ಪ್ರಭೇದಗಳಲ್ಲಿ, ಈ ಕ್ರಿಯೆ ಜನನ ಸಾಂದ್ರತೆ, ಆಹಾರದ ಲಭ್ಯತೆ ಅಥವಾ ಬೇರೆ ಪರಿಸರದ ಸ್ಥಿತಿಯನ್ನವಲಂಬಿಸಿರುತ್ತದೆ.

ರೊಟಿಫೆರಾ ಗುಂಪಿಗೆ ಸೇರಿದ ಪ್ರಾಣಿಗಳು ಅನಿಷೇಚನ ಜನನ ಪುನರುತ್ಪತ್ತಿಗೆ ಉತ್ತಮ ಉದಾಹರಣೆ. ಕೆಲವು ಜಾತಿಗಳಲ್ಲಿ ಗಂಡುಗಳ ಅಸ್ತಿತ್ವವೇ ಇಲ್ಲದಿದ್ದರೆ, ಇನ್ನು ಕೆಲವುಗಳಲ್ಲಿ ಅವುಗಳ ಜನನ ಸಾಂದ್ರತೆ ಋತುಗಳನ್ನು ಅವಲಂಬಿಸಿ, ಅತಿ ಕಡಿಮೆ ಕಾಲಾವಧಿಯಲ್ಲಿ ಕಾಣಬರುತ್ತದೆ. ಹೆಣ್ಣುಗಳು ಪ್ರಬಲ ಸ್ಥಿತಿಯಲ್ಲಿದ್ದು ಅಥವಾ ಏಕಲಿಂಗಿಯಾಗಿದ್ದು, ವರ್ಷವಿಡೀ, ಜನ ಸಂದಣಿಯಲ್ಲಿ ಇರುತ್ತವೆ. ಮೊಟ್ಟೆಗಳು ಪಕ್ವವಾಗುವಾಗ ಮಿಯಾಸಿಸ್ ಆಗುವುದಿಲ್ಲ. ಮೊಟ್ಟೆಗಳಲ್ಲಿ ವರ್ಣತಂತುಗಳು ದ್ವಿಪ್ರತಿಯಲ್ಲಿರುತ್ತವೆ (ಡಿಪ್ಲಾಯಿಡ್). ಆದರೆ ಅವು ಸಂಪೂರ್ಣ ಸಂಖ್ಯೆಯ ವರ್ಣತಂತುಗಳನ್ನು ಹೊಂದಿರುತ್ತವೆ. ಹೊಸ ಡಿಪ್ಲಾಯಿಡ್ ಅನಿಷೇಚನ ಜನಿತ ಮರಿಯು ಪುರುಷ ಬೀಜಾಣುವಿನ ವರ್ಣತಂತುಗಳ ಕೊಡುಗೆ ಇಲ್ಲದೆಯೇ ಉತ್ಪತ್ತಿಯಾಗುತ್ತದೆ. ಈ ಕ್ರಿಯೆಗೆ (ಡಿಪ್ಲಾಯಿಡ್ ಅನಿಷೇಚನ ಜನನ) ಎಂದು ಹೆಸರು. ಗಂಡುಗಳಿದ್ದರೂ ಕೂಡಾ ಮೊಟ್ಟೆಗಳು ಮೊದಲೇ ಡಿಪ್ಲಾಯಿಡ್ ಆಗಿರುವುದರಿಂದ ಅವುಗಳನ್ನು ನಿಷೇಚನಗೊಳಿಸಲು ಸಾಧ್ಯವಾಗುವುದಿಲ್ಲ. ಋತು ಕಾಲದಲ್ಲಿ ಬದಲಾವಣೆ ಕಂಡು ಬಂದಾಗ ಆಗುವ ಒತ್ತಡದಿಂದಾಗಿ ಕೆಲವು ಮೊಟ್ಟೆಗಳು ಮಿಯಾಸಿಸ್ ಹೊಂದಿ, ಏಕಪ್ರತಿ (ಹ್ಯಾಪ್ಲಾಯಿಡ್) ವರ್ಣತಂತುಗಳನ್ನು ಹೊಂದುತ್ತವೆ. ಇಂತಹ ಮೊಟ್ಟೆಗಳು ನಿಷೇಚನ ಕ್ರಿಯೆಯಿಂದ ಬೆಳೆದು ಹೆಣ್ಣಾಗುತ್ತವೆ. ಹೆಣ್ಣು ಲೈಂಗಿಕವಾಗಿ ಬೆಳೆದು ನಿಂತಾಗ, ಬಹುಶಃ ಅನಿಷೇಚನ ಕ್ರಿಯೆಯಿಂದಲೇ ಸಂತಾನ ವೃದ್ಧಿ ಮಾಡುತ್ತವೆ. ಆದರೆ ಅಂತಹ ಪ್ರಾಣಿ ಸಂದಣಿಯಲ್ಲಿ ಗಂಡೇ ಇಲ್ಲದಿದ್ದರೆ, ಹ್ಯಾಪ್ಲಾಯಿಡ್ ಮೊಟ್ಟೆಗಳು ಹ್ಯಾಪ್ಲಾಯಿಡ್ ಗಂಡುಗಳಿಗೆ ಜನ್ಮ ನೀಡುವುದಲ್ಲದೆ, ದ್ವಿಲಿಂಗ ಪ್ರಜನನ (ಬೈ ಸೆಕ್ಷುಯಲ್ ರಿಪ್ರೊಡಕ್ಷನ್) ದಲ್ಲೂ ಭಾಗವಹಿಸುತ್ತವೆ. ಈ ಕ್ರಿಯೆಯನ್ನು ಹ್ಯಾಪ್ಲಾಯಿಡ್ ಅನಿಷೇಚನ ಜನನ (ಹ್ಯಾಪ್ಲಾಯಿಡ್ ಪಾರ್ಥಿನೋಜೆನಿಸಿಸ್) ಎಂದು ಕರೆಯುತ್ತಾರೆ. ದ್ವಿಲಿಂಗ ಕ್ರಿಯೆಯಲ್ಲಿ ಉತ್ಪತ್ತಿಯಾದ ಮೊಟ್ಟೆಗಳಿಗೆ ದಪ್ಪನಾದ ಕವಚವಿದ್ದು ಅದು ಭ್ರೂಣವನ್ನು ವಾತಾವರಣದ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಸಂರಕ್ಷಿಸುತ್ತದೆ. ಇಂತಹ ಮೊಟ್ಟೆಗಳನ್ನು ಚಳಿಗಾಲದ ಮೊಟ್ಟೆಗಳು (ವಿಂಟರ್ ಎಗ್ಸ್) ಎಂದು ಕರೆಯುತ್ತಾರೆ. ಬೇಸಿಗೆಯ ಮೊಟ್ಟೆಗಳು ತೆಳು ಕವಚವನ್ನು ಹೊಂದಿದ್ದು ಅನಿಷೇಚನ ಜನನ ಕ್ರಿಯೆಯಿಂದ ಉದ್ಭವಿಸುತ್ತವೆ. ಅದರಿಂದ ಪ್ರಭೇದದ ಉಳಿವಿಗಾಗಿ ಆಗಾಗ ದ್ವಿಲಿಂಗ ಪ್ರಜನನವಾಗುತ್ತದೆ.

ಕೆಲವು ಮಣ್ಣಿನ ದುಂಡುಹುಳುಗಳಲ್ಲಿ (ಡೈಸಿಯಸ್ ನಿಮಟೋಡ್ಸ್) ಗೈನೊಜೆನೆಸಿಸ್ ಎಂಬ ಅನಿಷೇಚನ ಕ್ರಿಯೆಯನ್ನು ಕಾಣಬಹುದು. ಈ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಹುಟ್ಟಿದ ಬೀಜಾಣುಗಳು ಹ್ಯಾಪ್ಲಾಯಿಡ್ ಮೊಟ್ಟೆಗಳೊಂದಿಗೆ ಕೂಡಿಕೊಳ್ಳದೆ ಅವುಗಳನ್ನು ಕೇವಲ ಪ್ರಚೋದಿಸುತ್ತವೆ. ಇದರ ಫಲವಾಗಿ ಹ್ಯಾಪ್ಲಾಯಿಡ್ ಹೆಣ್ಣುಗಳು ಜನನವಾಗುತ್ತವೆ.

ಅನಿಷೇಚನ ಜನನ ವಲಯವಂತ (ಅನೆಲಿಡ್ಸ್) ಮತ್ತು ಮೃದ್ವಂಗಿಗಳಲ್ಲಿ ಕೆಲವೇ ಪ್ರಾಣಿಗಳಲ್ಲಿ ಆಗುವುದು. ಆದರೆ ಸಂಧಿಪದಿಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಕಂಡು ಬರುತ್ತದೆ. ಕ್ಲಾಡೊಸಿರಾ ಗುಂಪಿಗೆ ಸೇರಿದ ನೀರು ಕೀಟಗಳಲ್ಲಿ ಪರಿಸರದಲ್ಲಿ ಸಮಾನ ಸ್ಥಿತಿಯದ್ದು ಆಹಾರ ಸಾಕಷ್ಟು ಇದ್ದಾಗ ಡಿಪ್ಲಾಯಿಡ್ ಅನಿಷೇಚನ ಜನನದಿಂದ ಹೆಣ್ಣುಗಳು ಜನಿಸುತ್ತವೆ. ಪರಿಸರದಲ್ಲಿ ಅಸಮಾನ ಸ್ಥಿತಿಯಿದ್ದರೆ ಗಂಡುಗಳು ಕಾಣಿಸಿಕೊಂಡು ದ್ವಿಲಿಂಗ ಪ್ರಜನನ ಮುಂದುವರಿಯುತ್ತದೆ. ಆದರೆ ಗಂಡುಗಳು ಹೇಗೆ ಹುಟ್ಟುತ್ತವೆ ಎಂಬುದರ ಬಗ್ಗೆ ಇನ್ನು ಸರಿಯಾದ ತಿಳುವಳಿಕೆಯಿಲ್ಲ. ನಿಷೇಚನಗೊಂಡ ಮೊಟ್ಟೆಗಳು ಪ್ರಬಲ ನಿರೋಧಕ

ಹೊದಿಕೆಯನ್ನು ಹೊಂದಿದ್ದು ಎಫಿಪಿಯಮ್ ಎಂಬ ವಿಶ್ರಾಂತ ಸ್ಥಿತಿಯನ್ನು ಪ್ರವೇಶಿಸುತ್ತವೆ ಅಲ್ಲದೆ ಸಹಿಸಲಸಾಧ್ಯವಾದ ಉಷ್ಣತಾಮಾನವನ್ನು ತಡೆದು ಕೊಳ್ಳುತ್ತವೆ. ಸಮಾನ ಸ್ಥಿತಿ ಪರಿಸರದಲ್ಲಿ ಬರುವುದರೊಂದಿಗೆ ಅನಿಷೇಚನ ಜನನ ಪುನಃ ಪ್ರಾರಂಭವಾಗುತ್ತದೆ. ಈ ವಿರಾಮ ಸ್ಥಿತಿ ಪ್ರಾಣಿಗಳ ಸಾಂದ್ರತೆಯನ್ನು ನಿಯಂತ್ರಿಸುತ್ತದೆ. ಆಹಾರದ ಕೊರತೆಯಿದ್ದಾಗ ಹೆಚ್ಚು ಹೆಣ್ಣುಗಳು ಸತ್ತು ಕೇವಲ ಎಫಿಪಿಯಮ್‌ಗಳು ಉಳಿದಿದ್ದರೂ ಇವೇ ಪ್ರಾಣಿ ಸಂಖ್ಯೆಯನ್ನು ಉಳಿಸುತ್ತವೆ.

ಕೀಟಗಳು ಅನಿಷೇಚನ ಜನನಕ್ಕೆ ಉತ್ತಮ ಉದಾಹರಣೆ. ಆ ಗುಂಪಿನಲ್ಲಿ ಅನೇಕ ವೈವಿಧ್ಯತೆ ಹಾಗೂ ವ್ಯತ್ಯಾಸಗಳಿವೆ. ಜೇನು ನೊಣ ಇದಕ್ಕೆ ಉತ್ತಮ ಉದಾಹರಣೆ. ಇವುಗಳಲ್ಲಿ ನಿಷೇಚನಗೊಳ್ಳದ ಮೊಟ್ಟೆಗಳಿಂದ ಗಂಡುಗಳು (ಡ್ರೋನ್ಸ್) ಜನಿಸುತ್ತವೆ. ನಿಷೇಚನಗೊಂಡ ಮೊಟ್ಟೆಗಳು ಕೆಲಸಗಾರ ಹೆಣ್ಣುಗಳಾಗುತ್ತವೆ. ಇವು ಗರ್ಭಧಾರಣ ಶಕ್ತಿಯುಳ್ಳ ರಾಣಿ ಜೇನು (ಕ್ವೀನ್) ಸ್ರವಿಸಿದ ಕೆಲವು ವಸ್ತುಗಳಿಂದ ಬಂಜೆಯಾಗಿ ಮಾರ್ಪಾಡಾಗಿರುತ್ತವೆ. ರಾಣಿ ಜೇನು ನಿಷೇಚನಗೊಂಡ ಮೊಟ್ಟೆಯಿಂದ ಉದ್ಭವಿಸುತ್ತದೆ.

ಹೊಮಾಪ್ಟಿರ ಮತ್ತು ಡಿಪ್ಟಿರಗಳ ಜೀವನ ಚಕ್ರದಲ್ಲಿ ಅನಿಷೇಚನ ಹಾಗೂ ದ್ವಿಲಿಂಗ ಪ್ರಜನನ ಎರಡರ ಪರ್ಯಾಯ ಕಂಡು ಬರುತ್ತದೆ. ಎಫಿಡ್ಸ್‌ಗಳಲ್ಲಿ ಋತುಚಕ್ರವಿದ್ದು ಬೇಸಗೆಯಲ್ಲಿ ಅನಿಷೇಚನ ಜನನವೂ ಉಳಿದ ಋತುಗಳಲ್ಲಿ ನಿಷೇಚನ ಜನನವೂ ಕಂಡುಬರುತ್ತದೆ. ಕೆಲವು ಪ್ರಭೇದಗಳು ಪ್ರತಿ ಅವಸ್ಥೆಗಳಲ್ಲಿ ಬೇರೆ ಬೇರೆ ಆತಿಥೇಯ ಸಸ್ಯಗಳ ಮೇಲೆ ಇರುತ್ತವೆ. ಉಷ್ಣತೆಯಲ್ಲಿ ಬದಲಾವಣೆ, ಹಗಲು ರಾತ್ರಿಗಳ ಕಾಲಾವಧಿ ಮತ್ತು ಆಹಾರದ ಲಭ್ಯತೆ ಈ ಅವಸ್ಥೆಗಳನ್ನು ಆರಂಭ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಿಡ್ಜ್ ಎಂಬ ನೊಣಗಳಲ್ಲಿ ಪ್ರಬುದ್ಧ ನೊಣಗಳಲ್ಲಿ ದ್ವಿಲಿಂಗ ಪ್ರಜನನವೂ ಲಾರ್ವಗಳಲ್ಲಿ ಅನಿಷೇಚನ ಜನನವೂ ಕಂಡುಬರುತ್ತದೆ. ಇದಕ್ಕೆ ಬಾಲ್ಯ ಪ್ರಜನನ ಎನ್ನುವರು. ಪ್ರಾಪ್ತ ವಯಸ್ಕ ಹೆಣ್ಣು ಮಿಡ್ಜ್ ನೊಣ ನಿಷೇಚನ ಗೊಂಡ ಮೊಟ್ಟೆಗಳನ್ನು ಇಡುತ್ತದೆ. ಈ ಮೊಟ್ಟೆಗಳಿಂದ ಹೊರ ಬಂದ ಲಾರ್ವಗಳ ಅಂಡಾಶಯ ಬೆಳೆವಣಿಗೆಯಾಗಿ ಅವುಗಳಿಂದಲೇ ಮೊಟ್ಟೆ ಬಿಡುಗಡೆಯಾಗುತ್ತವೆ. ಹೀಗೆ ಲಾರ್ವ ಅಂಡಾಶಯದಿಂದ ಬಿಡುಗಡೆ ಹೊಂದಿದ ಮೊಟ್ಟೆಗಳು ಲಾರ್ವದ ಹಿಮೋಸಿಲ್‌ನ್ನು ಸೇರಿ ಬೆಳೆವಣಿಗೆ ಹೊಂದುತ್ತಾ ಲಾರ್ವ ಅಂಗಾಂಶಗಳನ್ನೆ ಭಕ್ಷಿಸುತ್ತವೆ. ಅವು ಸಂಪೂರ್ಣ ಬೆಳೆವಣಿಗೆ ಹೊಂದಿ ಅನಿಷೇಚನ ಜನನದಿಂದ ಜನಿಸಲ್ಪಟ್ಟು ತಮ್ಮನ್ನೇ ಹೋಲುವಂತಹ ಲಾರ್ವಗಳನ್ನಾಗಲೀ ಅಥವಾ ಗಂಡು ಮತ್ತು ಹೆಣ್ಣು ಮಿಡ್ಜ್ ನೊಣಗಳಾಗಿ ದ್ವಿಲಿಂಗ ಪ್ರಜನನ ಆರಂಭಿಸುವುದಕ್ಕೆ ಶಕ್ಯವಾಗುವಂತಹ ಲಾರ್ವಗಳನ್ನಾಲೀ ಉತ್ಪತ್ತಿಮಾಡುತ್ತವೆ.

ಕೆಲವು ಪ್ರಾಣಿ ಪ್ರಭೇಧಗಳಲ್ಲಿ ನಿಷೇಚನ ಹೊಂದದ ಮೊಟ್ಟೆಗಳು ಕೆಲವು ರಾಸಾಯನಿಕ ಅಥವಾ ಭೌತಿಕ ವಸ್ತುಗಳಿಂದ ಸ್ಪರ್ಶಗೊಂಡಾಗ ತಮ್ಮ ಬೆಳೆವಣಿಗೆಯನ್ನು ಪ್ರಾರಂಭಿಸುತ್ತವೆ. ನಿಷೇಚನ ಹೊಂದದ ಎಲ್ಲಾ ಪ್ರಮುಖ ಪ್ರಾಣಿ ಗುಂಪಿನ ಮೊಟ್ಟೆಗಳನ್ನು ಕೃತಕವಾಗಿ ಪ್ರಚೋದಿಸಿ ಕ್ರಮಬದ್ಧ ಬೆಳೆವಣಿಗೆಯನ್ನು ಉಂಟುಮಾಡುವುದಕ್ಕೆ ಹಲವಾರು ಶೋಧನೆಗಳು ಪರಿಣಾಮಕಾರಿಯಾಗಿ ನಡೆದಿವೆ. ಆದರೆ ಸಂಸ್ಕರಣದ ಮಾದರಿ ಮಾತ್ರ ಬೇರೆ ಬೇರೆ ಪ್ರಭೇದಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಕೃತಕ ಅನಿಷೇಚನ ಜನನದ ಆಧ್ಯಯನಕ್ಕೆ ಸಮುದ್ರ ವಾಸಿ ಪ್ರಾಣಿಗಳನ್ನು ಬಹುಮುಖ್ಯವಾಗಿ ಕಂಟಕ ಚರ್ಮಿಗಳು ಮೃದ್ವಂಗಿಗಳು ಹಾಗೂ ಹುಳುಗಳನ್ನು ಹೆಚ್ಚು ಉಪಯೋಗಿಸಿಕೊಳ್ಳಲಾಗಿದೆ. ಕೆಲವು ಕೀಟಗಳು, ಮೀನುಗಳು, ಕಪ್ಪೆ ಮತ್ತು ಸ್ತನಿಗಳ ಮೊಟ್ಟೆಗಳನ್ನು ಈ ಪ್ರಯೋಗಗಳಲ್ಲಿ ಉಪಯೋಗಿಸಿ ಕೊಳ್ಳಲಾಗಿದೆ. ಸೋಜಿಗದ ಸಂಗತಿ ಎಂದರೆ, ಈ ಪ್ರಯೋಗಗಳಲ್ಲಿ ವೈವಿಧ್ಯಮಯ ಸಂಸ್ಕರಣ ಬಹು ಪರಿಣಾಮಕಾರಿಯಾಗಿರುತ್ತದೆ. ಒಂದೇ ಪ್ರಭೇದದ ಮೊಟ್ಟೆಗಳು ಬಹಳ ನಿಯೋಗಿಗಳಲ್ಲಿ ಯಾವುದೇ ಒಂದನ್ನು ಉಪಯಾಗಿಸಿದರೂ ಪ್ರಚೋದನೆಗೊಳ್ಳುತ್ತವೆ. ಅರಬೇಷಿಯ ಎಂಬ ಕಡಲ ಅರ್ಚಿನ್‌ನ ಮೊಟ್ಟೆಯನ್ನು ಆಮ್ಲ, ಕ್ಷಾರ ಹಾಗೂ ತಟಸ್ಥ ಉಪ್ಪು ದ್ರಾವಣ, ಕೆಲವು ಸಸ್ಯಕ್ಷಾರ, ಕೊಬ್ಬಿನ ದ್ರಾವಕ, ಉಷ್ಣ, ಚಳಿ ಹಾಗೂ ಅತಿನೇರಳೆ (ಅಲ್ಟ್ರಾ ವಾಯಿಲೆಟ್)ವಿಕಿರಣ ಮುಂತಾದವುಗಳಲ್ಲಿ ಯಾವುದಾದರೂ ಒಂದರಿಂದ ಪ್ರಚೋದಿಸಬಹುದು. ಆದರೆ ಈ ಎಲ್ಲಾ ನಿಯೋಗಿಗಳು ಒಂದೇ ರೀತಿಯ ಪರಿಣಾಮ ನೀಡುವುದಿಲ್ಲ. ಬೇರೆ ಬೇರೆ ಪ್ರಭೇದಗಳ ಮೊಟ್ಟೆಗಳು ಬೇರೆ ಬೇರೆ ವಿಧದ ನಿಯೋಗಿಗಳಿಗೆ ಹೆಚ್ಚು ಪರಿಣಾಮಕಾರಿಯಾದ ಫಲಿತಾಂಶಗಳನ್ನು ನೀಡಬಹುದು. ಉಷ್ಣ ಮತ್ತು ದುರ್ಬಲ ಆಮ್ಲ ಮುಂತಾದ ನಿಯೋಗಿಗಳು ಒಂದೇ ರೀತಿಯ ಪರಿಣಾಮ ನೀಡುವುದಿಲ್ಲ. ಉಷ್ಣ ಮತ್ತು ದುರ್ಬಲ ಆಮ್ಲ ಮುಂತಾದ ನಿಯೋಗಿಗಳು ಬಹಳ ಪ್ರಭೇದಗಳಲ್ಲಿ ಪರಿಣಾಮಕಾರಿಯಾಗಿದ್ದರೂ ಅವುಗಳ ಪರಿಣಾಮದಲ್ಲಿ ಹೆಚ್ಚು ಕಡಿಮೆಯಾಗಬಹುದು.

ಲಾಯಿಬ್ ಅನಿಷೇಚನ ಜನನ ಪ್ರಚೋದನೆಗಾಗಿ ಕಡಲ ಅರ್ಚಿನ್ ಮೊಟ್ಟೆಗಳನ್ನು ಹೈಪರ್ ಟಾನಿಕ್ ದ್ರಾವಣದಲ್ಲಿ ತೆರೆದಿಟ್ಟ. ಆತ ಅನಂತರ ಎರಡು ಸಂಸ್ಕರಣವನ್ನು ಕಂಡುಹಿಡಿದು ಅದು ಹೆಚ್ಚು ಫಲಕಾರಿಯಾಗಿ ಶೇಕಡವಾರು ಹೆಚ್ಚು ಮೊಟ್ಟೆಗಳ ಬೆಳೆವಣಿಗೆಯಾಗುವುದಕ್ಕೆ ಸಾಧ್ಯವೆಂದು ತೋರಿಸಿದ. ಇದರಲ್ಲಿ ಮೊಟ್ಟೆಗಳನ್ನು ಮೊದಲು ಸಮುದ್ರದ ನೀರಿನಿಂದ ಬ್ಯೂಟರಿಕ್ ಆಮ್ಲದ ದುರ್ಬಲ ದ್ರಾವಣ ತಯಾರಿಸಿ ಮೂರು ನಿಮಿಷಗಳವರೆಗೆ ಅದ್ದಿ, ಮತ್ತೆ 15 ನಿಮಿಷಗಳ ಅನಂತರ ಸಮುದ್ರದ ನೀರಿನಲ್ಲಿ ಇನ್ನಷ್ಟು ಉಪ್ಪನ್ನು ಕರಗಿಸಿದ ದ್ರಾವಣದಲ್ಲಿ ಅರ್ಧ ಗಂಟೆಯವರೆಗೆ ಇಡಲಾಯಿತು. ಇ. ಇ. ಜೆಸ್ಟ್ ಎಂಬಾತ ಒಂದೇ ಸಂಸ್ಕರಣದಲ್ಲಿ ಮೊಟ್ಟೆಗಳನ್ನು ಸ್ವಲ್ಪ ಪ್ರಬಲ ಉಪ್ಪಿನ ದ್ರಾವಣದಲ್ಲಿ 10 ನಿಮಿಷಗಳವರೆಗೆ ಇಡುವುದರಿಂದ ಹೆಚ್ಚೂ ಕಡಿಮೆ ಇದೇ ಫಲಿತಾಂಶ ದೊರಕುವುದೆಂದು ತೋರಿಸಿದ.

ಲೈಂಗಿಕ ಪ್ರಭೇದಗಳಲ್ಲಿ ಆಕಸ್ಮಿಕವಾಗಿ ಉಂಟಾಗುವ ವಿಕೃತಿಗಳಿಂದ (ಮ್ಯುಟೇಷನ್) ಉಂಟಾದ ಕ್ರಿಯೆ. ಕೃತಕ ಅನಿಷೇಚನ ಜನನದಿಂದ ಇದು ಒಂದೇ ಹಂತದಲ್ಲಿ ಉದ್ಭವಿಸಿತೆಂದು ಗೊತ್ತಾಗುತ್ತದೆ.

ಜೀವ ವಿಕಾಸದಲ್ಲಿ ಅನಿಷೇಚನ ಜನನ ಕ್ರಿಯೆಯ ಪಾತ್ರ ಅತಿ ಚಿಕ್ಕದು. ಆದರೆ ಹೆಣ್ಣು ಅನಿಷೇಚನ ಜನನ ಕ್ರಿಯೆಯಿಂದ ಸಂತಾನಾಭಿವೃದ್ಧಿ ಮಾಡತಕ್ಕ ಜೀವಿಗಳು ತಮ್ಮ ಉಳಿಯುವಿಕೆಯ ಸಾಧ್ಯತೆಯನ್ನು ಹೆಚ್ಚಿಸಿ ಕೊಳ್ಳುತ್ತವೆ. (ಎಚ್.ಎಸ್.ಪಿ.)

**ಅನುಕಂಪೀನರಮಂಡಲ:** ಪ್ರಾಣಿಯ ಶರೀರದಲ್ಲಿರುವ ಸ್ವಯಂ ನರಮಂಡಲದ (ಆಟೊನಾಮಿಕ್ ನರಮಂಡಲ) ಒಂದು ಭಾಗ. ಸ್ವಯಂ ನರಮಂಡಲದ ಇನ್ನೊಂದು ಭಾಗವಾದ, ಪಾರ್ಶ್ವ ಅನುಕಂಪೀನರಮಂಡಲ (ಪ್ಯಾರಾಸಿಂಪತೆಟಿಕ್ ನರಮಂಡಲ) ದೊಂದಿಗೆ ಸೇರಿಕೊಂಡು ಶರೀರದಲ್ಲಿರುವ ಅಂಗಾಂಗಗಳ ಕಾರ್ಯಗಳನ್ನು ನಿಯಂತ್ರಿಸುತ್ತದೆ. ಅನುಕಂಪೀನರಮಂಡಲವು ಅಂಗಾಂಗಗಳನ್ನು ಪ್ರಚೋದನೆ ಮಾಡಿ ಕಾರ್ಯಗಳನ್ನು ಮಾಡಿಸಿದರೆ, ಪಾರ್ಶ್ವ ಅನುಕಂಪೀನರಮಂಡಲವು ಆ ಕಾರ್ಯಗಳನ್ನು ತಡೆಯುತ್ತದೆ. ಇದರ ಕೇಂದ್ರಗಳು ಮಿದುಳು ಬಳ್ಳಿಯ ಮಧ್ಯಭಾಗದಲ್ಲಿರುತ್ತವೆ.

ನಿಮ್ನ ಕಶೇರುಕಗಳಲ್ಲಿ ಅನುಕಂಪೀನರಮಂಡಲವು ಅಷ್ಟು ದೃಢವಾಗಿ ಬೆಳೆದಿರುವುದಿಲ್ಲ. ಮೀನುಗಳಲ್ಲಿ ಸ್ವಲ್ಪ ಮಟ್ಟಿಗೆ ಬೆಳೆದಿರುತ್ತದೆ. ಕಪ್ಪೆಗಳು, ಸರಿಸೃಪಗಳು ಹಾಗೂ ಪಕ್ಷಿಗಳಲ್ಲಿ ಚೆನ್ನಾಗಿ ಬೆಳೆದಿರುತ್ತದೆ. ಸ್ತನಿಗಳಲ್ಲಿ (ಮಾನವನನ್ನು ಸೇರಿಸಿಕೊಂಡು) ಈ ನರಮಂಡಲವು ಬಹಳ ದೃಢವಾಗಿರುವುದು.

ಶರೀರದ ಬೆನ್ನು ಮೂಳೆಯ ಎರಡು ಕಡೆಗಳಲ್ಲೂ ಉದ್ದವಾದ ಅನುಕಂಪೀ ಕಾಂಡವಿದೆ. ಕಾಂಡದ ನಡುವೆ ಅನೇಕ ಉಬ್ಬಿದ ನರಗ್ರಂಥಿಗಳಿದ್ದು (ಗ್ಯಾಂಗ್ಲಿಯ) ಇವುಗಳನ್ನು ನರಗ್ಯಾಂಗಲಿಯ ಸರಪಣಿಯೆಂದು ಕರೆಯುತ್ತಾರೆ. ಮುಂಭಾಗದಲ್ಲಿ ಅನೇಕ ನರಗ್ರಂಥಿಗಳು ಗುಂಪುಗೂಡಿ ಮೂರು ದೊಡ್ಡ ಕತ್ತಿನ ಗ್ಯಾಂಗಲಿಯಗಳಾಗಿವೆ. ನರಗ್ರಂಥಿಗಳ ಮುಂಭಾಗದ ನರಗಳು ಮಿದುಳು ಬಳ್ಳಿಯನ್ನು ಎದೆ ಅಭಿದಮನಿ ಭಾಗದಲ್ಲಿ ಸೇರುವುದರಿಂದ ಇದಕ್ಕೆ ಎದೆ ಅಭಿದಮನಿ ಹೊರಹರಿತವೆಂದು ಹೆಸರು. ಎದೆ ಮತ್ತು ಹೊಟ್ಟೆಯೊಳಗಿರುವ ಅಂಗಗಳ ಕವಲುಗಳು, ಮೊದಲನೆಯ, ಎರಡನೆಯ ಮತ್ತು ಮೂರನೆಯ ಆಭಿದಮನಿ ಮಿದುಳು ಬಳ್ಳಿಯ ನರಗಳು, ಇದರ ಜೊತೆಗಿರುವ ಸರಪಣಿ ನರಗ್ರಂಥಿಗಳೊಂದಿಗೆ ಸೇರಿಕೊಂಡು ನಂತರ ಆನೈಚ್ಛಿಕ ಅಂಗಾಂಗಗಳು ಮತ್ತು ಗ್ಯಾಂಗಲೀಯಗಳೊಂದಿಗೆ ಕೊನೆಗೊಳ್ಳುತ್ತವೆ.

ಅನುಕಂಪೀನರಗಳು ಚರ್ಮದಲ್ಲಿರುವ ರಕ್ತನಾಳಗಳನ್ನು ಕುಗ್ಗಿಸುತ್ತವೆ. ರೋಮದ ಮಾಂಸಗಳನ್ನು ಸಂಕುಚಿತಗೊಳಿಸಿ ರೋಮನಿಮಿರುವಿಕೆಯನ್ನು ಅಂದರೆ ರೋಮಾಂಚನವನ್ನು ಉಂಟುಮಾಡುತ್ತದೆ. ಬೆವರಿನ ಗ್ರಂಥಿಗಳಿಂದ ಹೆಚ್ಚಾಗಿ ಬೆವರನ್ನು ಉತ್ಪತ್ತಿಮಾಡಿಸುತ್ತದೆ. ಕಣ್ಣಿನಲ್ಲಿರುವ ಪಾಪೆಯನ್ನು ಹಿಗ್ಗಿಸಿ ಹೆಚ್ಚು ಬೆಳಕು ಕಣ್ಣಿನೊಳಕ್ಕೆ ಪ್ರವೇಶಿಸುವಂತೆ ಮಾಡುತ್ತದೆ. ಬಾಯಿಯಲ್ಲಿರುವ ಜೊಲ್ಲು ಗ್ರಂಥಿಗಳಿಂದ ಉತ್ಪತ್ತಿಯಾಗುವ ಜೊಲ್ಲುರಸವನ್ನು ಕಡಿಮೆಮಾಡುತ್ತದೆ. ಹೃದಯದ ಬಡಿತವನ್ನು ಹೆಚ್ಚಿಸುತ್ತದೆ. ಶ್ವಾಸನಾಳಗಳನ್ನು ಹಿಗ್ಗಿಸಿ ಹೆಚ್ಚು ಗಾಳಿ ಫುಪ್ಫುಸದೊಳಕ್ಕೆ ಪ್ರವೇಶಿಸುವಂತೆ ಮಾಡುತ್ತದೆ. ಅನ್ನನಾಳದ ಮಾಂಸಖಂಡಗಳ ಸಡಿಲಿಕೆಯನ್ನು ತಡೆಹಿಡಿದು ಅದರ ಪರಿಕ್ರಮ ಸ್ನಾಯುಸಂಕೋಚನವನ್ನು ತಾತ್ಕಾಲಿಕವಾಗಿ ನಿಲ್ಲಿಸುತ್ತದೆ. ಮೂತ್ರಚೀಲದ ಸ್ನಾಯುಗಳನ್ನು ಸಡಿಲಿಸುತ್ತದೆ ಮತ್ತು ಮೂತ್ರಚೀಲದ ಉಂಗುರದಾಕಾರದ ಸ್ನಾಯುಗಳನ್ನು ಕುಗ್ಗಿಸುತ್ತದೆ. ರಕ್ತದಲ್ಲಿರುವ ಸಕ್ಕರೆಯ ಅಂಶವನ್ನು ಹೆಚ್ಚಿಸುತ್ತದೆ. ರಕ್ತದ ಒತ್ತಡವನ್ನು ಸಹ ಹೆಚ್ಚಿಸುತ್ತದೆ. ರಕ್ತದಲ್ಲಿರುವ ಕೆಂಪುರಕ್ತಕಣಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ. ರಕ್ತವು ಹೆಪ್ಪುಗಟ್ಟುವ ಕಾಲದ ಅವಧಿಯನ್ನು ಕಡಿಮೆಮಾಡುತ್ತದೆ. ಈ ರೀತಿಯಾಗಿ ಅನುಕಂಪೀನರಮಂಡಲವು ಅನೇಕ ಕಾರ್ಯಗಳಲ್ಲಿ ಭಾಗವಹಿಸುತ್ತದೆ. ಪಾರ್ಶ್ವ ಅನುಕಂಪೀನರಮಂಡಲವು ಮೇಲೆ ಹೇಳಿದ ಕಾರ್ಯಗಳಿಗೆ ವಿರುದ್ಧವಾಗಿ ಕೆಲಸಮಾಡುತ್ತದೆ. ಆದುದರಿಂದ ಅನುಕಂಪೀ ಮತ್ತು ಪಕ್ಕದ ಅನುಕಂಪೀ ನರಮಂಡಲಗಳೆರಡೂ ಒಂದಕ್ಕೊಂದು ವ್ಯತಿರಿಕ್ತವಾಗಿ ಕಾರ್ಯನಿರ್ವಹಣೆ ಮಾಡುತ್ತವೆ.

ಮಿದುಳಿನ ಮಧ್ಯಭಾಗವಾದ ಡೈಎನ್‌ಸೆಫಲಾನ್‌ನಲ್ಲಿರುವ ಹೈಪೊಥಲಾಮಸ್ ಅನುಕಂಪೀನರಮಂಡಲದ ಚಟುವಟಿಕೆಗಳನ್ನು ಹಿಡಿತದಲ್ಲಿಟ್ಟಿರುವ ಮುಖ್ಯಕೇಂದ್ರ.




ಮಾನವನ ಅನುಕಂಪೀ ನರಮಂಡಲ

ಮಾನವನನ್ನೂ ಒಳಗೊಂಡು ಪ್ರಾಣಿಗಳಲ್ಲಿ ಉದ್ರೇಕಗೊಂಡಾಗ ಶರೀರದಲ್ಲಾಗುವ ಕೆಲವು ಬದಲಾವಣೆಗಳಿಗೆ ಅಂದರೆ ಹೃದಯದ ಬಡಿತ, ರಕ್ತದ ಒತ್ತಡ, ರಕ್ತದಲ್ಲಿರುವ ಸಕ್ಕರೆಯ ಅಂಶದ ಹೆಚ್ಚಳ, ಬೆವರುವಿಕೆ, ರೋಮಾಂಚನ, ನಿದ್ದೆಯಿಲ್ಲದಿರುವಿಕೆ ಇತ್ಯಾದಿ ಈ ನರಮಂಡಲದ ಪ್ರಚೋದನೆಯಿಂದಲೇ ಆಗತಕ್ಕವು. ಆದುದರಿಂದಲೇ ಇವುಗಳನ್ನು ಉಪಶಮನಗೊಳಿಸುವ ಔಷಧಿಗಳನ್ನು ಉಪಯೋಗಿಸಿದ ಕೂಡಲೇ ಈ ಕ್ರಿಯೆಗಳೆಲ್ಲವೂ ಸ್ವಲ್ಪ ಇಳಿಮುಖವಾಗಿ ಶರೀರವು ಯಥಾಸ್ಥಿತಿಗೆ ಬರುತ್ತದೆ. ಹೀಗೆ ಮುಖ್ಯ ನರಮಂಡಲದ ಜೊತೆಗೆ, ಈ ನರಮಂಡಲವೂ ಪ್ರಾಣಿಗಳಿಗೆ ಮತ್ತು ಮಾನವನಿಗೆ ಸಹಾಯಕ. (ಕೆ.ಪಿ.ಆರ್.)

**ಅನುಕರಣೆ:** ಶತ್ರು ಆಕ್ರಮಣದಿಂದ ನಾಶವಾಗದಂತೆ ಕಾಪಾಡಿಕೊಳ್ಳಲು ಪ್ರಾಣಿಗಳಿಗೆ ಪ್ರಕೃತಿ ಅಳವಡಿಸಿರುವ ರಕ್ಷಣಾತಂತ್ರ (ಮಿಮಿಕ್ರಿ). ಪ್ರಾಸಂಗಿಕವಾಗಿ ಆಹಾರ ಸಂಪಾದನೆಗಾಗಿ ಬೇಟೆಯಾಡುವ ಪ್ರಾಣಿಗಳಿಗೂ ಇದರಿಂದ ಅನುಕೂಲವುಂಟು. ಆಹಾರ ಸಂಪಾದನೆ, ಆತ್ಮಸಂರಕ್ಷಣೆ ಮತ್ತು ಸಂತಾನೋತ್ಪತ್ತಿ ಎಂಬ ಮೂರು ಮುಖ್ಯ ಉದ್ದೇಶಗಳ ಪೂರೈಕೆಗಾಗಿ ಪ್ರಾಣಿಜೀವನದಲ್ಲಿ ನಿರಂತರ ಹೋರಾಟ ನಡೆದೇ ಇದೆ. ಜೀವನದ ಈ ಹೋರಾಟದಲ್ಲಿ ಪ್ರಾಣಿಗಳು ಅಳಿಯದೆ ಉಳಿಯಬೇಕಾದರೆ ಅವು ತಮ್ಮ ದೇಹರಚನೆ, ಜೀವನಕ್ರಮ ಮತ್ತು ರೀತಿನೀತಿಗಳನ್ನು ಬದಲಾಯಿಸುವ ಪರಿಸ್ಥಿತಿಗೆ ಸರಿಯಾಗಿ ಹೊಂದಿಸಿಕೊಳ್ಳಬೇಕು. ಯಾವ ಪ್ರಾಣಿಗೆ ಈ ಬಗೆಯ ಶಕ್ತಿ ಇರುವುದಿಲ್ಲವೋ ಅದು ಹೋರಾಟದಲ್ಲಿ ಅಳಿಯುವುದಲ್ಲದೆ ಅದರ ವಂಶವೇ ನಾಶವಾಗುವ ಸಂಭವವೂ ಇರುತ್ತದೆ. ಇದು ಡಾರ್ವಿನ್ನನ ವಿಕಾಸವಾದದ ತತ್ತ್ವಗಳ ಸಾರಾಂಶಗಳಲ್ಲಿ ಒಂದು. ಅಳಿವು–ಉಳಿವಿನ ಈ ಸಮರದಲ್ಲಿ ಯಶಸ್ವಿಯಾಗಿ ಹೊಂದಾಣಿಕೆಯಿಂದ ಉಳಿದು ಬಾಳಲು ಪ್ರಾಣಿಗಳಲ್ಲಿ ಮತ್ತು ಅವುಗಳ ಜೀವನದಲ್ಲಿ ಕ್ರಮಬದ್ಧವಾದ ಬದಲಾವಣೆಗಳು ನಿರಂತರವೂ ನಡೆಯುತ್ತಲೇ ಇರುತ್ತವೆ.

ಪ್ರಾಣಿಗಳು ತಮ್ಮ ಆಕೃತಿ (ಸ್ವರೂಪ), ಬಣ್ಣ ಅಥವಾ ವರ್ತನೆಯಿಂದ ಇತರ ಪ್ರಾಣಿಗಳನ್ನಾಗಲಿ ಸಸ್ಯಭಾಗಗಳನ್ನಾಗಲಿ ನಿರ್ಜೀವವಸ್ತುಗಳನ್ನಾಗಲಿ ಅನುಕರಿಸುವ ಕಾರ್ಯಕ್ಕೆ ಅನುಕರಣೆ ಎಂದು ಹೆಸರು. ಈ ಅನುಕರಣೆಯನ್ನು ಪ್ರದರ್ಶಿಸುವ ಪ್ರಾಣಿಯೇ ಅನುಕರಣಜೀವಿ (ಮಿಮಿಕ್, ಮಿಮೆಟಿಕ್ ಫಾರ್ಮ್). ಇದು ಅನುಕರಿಸುವ ವಸ್ತು ಅಥವಾ ಪ್ರಾಣಿ ಅನುಕರಣಮಾದರಿ.

ಕೆಲವು ದುರ್ಬಲಪ್ರಾಣಿಗಳಿಗೆ ತಮ್ಮನ್ನು ಆಹಾರವಾಗಿ ಹಿಡಿದು ತಿನ್ನುವ ಪ್ರಬಲ ಪ್ರಾಣಿಗಳ ಭಯವಿರುವುದರಿಂದ ಅವು ತಮ್ಮ ಶತ್ರುಗಳ ದೃಷ್ಟಿಯಿಂದ ಮರೆಮಾಚಿಕೊಳ್ಳಲು ನಿರ್ಜೀವವಸ್ತುಗಳನ್ನು ಅಥವಾ ಸಸ್ಯಗಳನ್ನು ಅನುಕರಿಸಬಹುದು. ಕೆಲವು ಮಾಂಸಾಹಾರಿ ಪ್ರಾಣಿಗಳು ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ಮೋಸಗೊಳಿಸಿ ಬೇಟೆಯಾಡಲು ಅದೇ ರೀತಿಯಲ್ಲಿ ಮರೆಮಾಚಿಕೊಳ್ಳುವುದೂ ಉಂಟು. ವಿಷೋತ್ಪಾದನೆಯಿಂದ, ದುರ್ನಾತವನ್ನು ಸೂಸುವುದರಿಂದ ಅಥವಾ ಎಚ್ಚರಿಕೆಯ ಕೃತಕಸಂಕೇತಗಳಿಂದ ಶತ್ರುಗಳನ್ನು ದೂರವಿಡಬಲ್ಲವು. ಒಳ್ಳೆಯ ಭಕ್ಷ್ಯವೆನಿಸಿದ ಕೆಲವು ಪ್ರಾಣಿಗಳು ರುಚಿಕರವಲ್ಲದ ಪ್ರಾಣಿಗಳನ್ನು ಅನುಕರಿಸುವುದರಿಂದ ಶತ್ರುಗಳನ್ನು ಮೋಸಗೊಳಿಸಬಲ್ಲವು. ಹೀಗೆ ತಮ್ಮನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಾಣಿಗಳು ವಿಧವಿಧವಾದ ಅನುಕರಣತಂತ್ರಗಳನ್ನು ಅನುಸರಿಸುತ್ತವೆ.

ಒಣಗಿರುವ ರೆಂಬೆಯನ್ನಾಶ್ರಯಿಸಿರುವ ಕಡ್ಡಿಹುಳೂ
ಚಿತ್ರದಲ್ಲಿ ನಾಲ್ಕು ಕಡ್ಡಿಹುಳುಗಳು ಇವೆ.

ಉದ್ದೇಶದ ಆಧಾರದ ಮೇಲೆ ಮುಖ್ಯವಾಗಿ ಎರಡುಬಗೆಯ ಅನುಕರಣೆಗಳನ್ನು ವಿವರಿಸಬಹುದು. ಒಂದು ರಕ್ಷಣೆಯ ಅನುಕರಣೆ, ಮತ್ತೊಂದು ಆಕ್ರಮಣಕಾರೀ ಅನುಕರಣೆ. ರಕ್ಷಣೆಯ ಅನುಕರಣೆಯನ್ನು ಮರೆಮಾಚಿಕೊಳ್ಳುವ ಅನುಕರಣೆ ಮತ್ತು ಎಚ್ಚರಿಸುವ ಅನುಕರಣೆ ಎಂದು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಹೀಗೆಯೇ ಆಕ್ರಮಣಕಾರೀ ಅನುಕರಣೆಯನ್ನು ಮರೆಮಾಚಿಕೊಳ್ಳುವ ಮತ್ತು ಮರುಳುಮಾಡುವ ವಿಧಗಳನ್ನಾಗಿ ವಿಂಗಡಿಸಲಾಗಿದೆ. ಪುನಃ ಅನುಕರಣ ಜೀವಿಗಳು ತೋರಿಸುವ ಚಟುವಟಿಕೆಯನ್ನು ಆಧರಿಸಿ ಅನುಕರಣೆಯನ್ನು ಎರಡು ವಿಧವಾಗಿ ವಿವರಿಸಲಾಗಿದೆ. ಚಟುವಟಿಕೆಯೇ ಇಲ್ಲದೆ ಕೇವಲ ಆಕಾರ ಮತ್ತು ಬಣ್ಣಗಳಿಂದ ಅನುಕರಿಸುವುದು ತಟಸ್ಥ ರೀತಿಯ ಅನುಕರಣೆ; ಬುದ್ಧಿಪೂರ್ವಕವಾದದ್ದು ಸಕ್ರಿಯಾನುಕರಣೆ.

ಮರೆಮಾಚಿಕೊಳ್ಳುವ ಉದ್ದೇಶದಿಂದ ರಕ್ಷಣೆಯ ಅನುಕರಣೆಯನ್ನು ಬೆಳೆಸಿಕೊಳ್ಳುವ ಪ್ರಾಣಿಗಳ ಸಂಖ್ಯೆ ಹೆಚ್ಚು. ಈ ರೀತಿಯ ಅನುಕರಣೆಯಲ್ಲಿ ತನ್ನ ವಾತಾವರಣದಲ್ಲಿ ಮರೆಮಾಚಿಕೊಳ್ಳುವ ಬಣ್ಣವನ್ನು ಬೆಳೆಸಿಕೊಳ್ಳುವುದರ ಜೊತೆಗೆ ಅನುಕರಣಮಾದರಿಯ ಸ್ವರೂಪವನ್ನು ಅನುಸರಿಸುವುದು ಬಹಳ ಮುಖ್ಯವಾದದ್ದು. ಈ ಎರಡು ಮುಖಗಳಲ್ಲೂ ಅನುಕರಣ ಸಾಮರ್ಥ್ಯವನ್ನು ಸಮರಸವಾಗಿ ಪರಿಪಕ್ವವಾಗಿ ಬೆಳೆಸಿಕೊಂಡ ಪ್ರಾಣಿಗಳು ಅತ್ಯಂತ ಯಶಸ್ವಿಯಾಗಿ ಆತ್ಮರಕ್ಷಣೆ ಮಾಡಿಕೊಳ್ಳಬಲ್ಲುವು. ಮರೆಮಾಚಿಕೊಳ್ಳುವ ಉದ್ದೇಶದಿಂದ ರಕ್ಷಾನುಕರಣೆಯನ್ನು ಬೆಳೆಸಿಕೊಂಡಿರುವ ಪ್ರಾಣಿಗಳಲ್ಲಿ ಕ್ರಿಪ್ಟೋಲಿತೋಡಸ್ ಎಂಬ ಒಂದು ಜಾತಿಯ ಏಡಿ ಒಳ್ಳೆಯ ಉದಾಹರಣೆ. ನುಣುಪಾಗಿ ಗುಂಡಾಗಿರುವ ಇದರ ಬಿಳಿಯ ಕವಚದ ದೇಹ ಸಮುದ್ರದಡದಲ್ಲಿ ಬಿದ್ದಿರುವ ಬೆಣಚುಗಲ್ಲುಗಳನ್ನು ಹೋಲುತ್ತದೆ. ಏಡಿಗಳನ್ನು ಕಲ್ಲು ಎಂದು ಭ್ರಮಿಸಿ ಇದರ ಶತ್ರುಗಳು ಬಿಟ್ಟುಬಿಡುವುವು. ಆದರೆ ಅನೇಕ ವೇಳೆ ದೊಡ್ಡ ಪ್ರಾಣಿಗಳ ತುಳಿತಕ್ಕೆ ಸಿಕ್ಕಿ ಅವು ಪುಡಿಯಾಗುವ ಸಂಭವವುಂಟು. ಈ ಏಡಿ ಬೆಳೆಸಿಕೊಂಡಿರುವ ಅನುಕರಣೆ ಅನಭಿಜ್ಞವಾದ ಅನುಕರಣೆ. ಚಲನೆಯಿಂದ ಅನುಕರಣೆಯ ಧ್ಯೇಯ ಭಂಗವಾಗುವುದರಿಂದ ಜಡತೆಯಿಂದ ಅದು ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುತ್ತದೆ. ಮತ್ತೊಂದು ಜಾತಿಯ ಏಡಿ ಸತ್ತ ಹವಳಗಳನ್ನು ಹೋಲುತ್ತದೆ. ಅದು ಶತ್ರುಗಳಿಂದ ಮರೆಮಾಚಿಕೊಳ್ಳುವ ಅನುಕರಣೆಯಿಂದ ಎರಡು ಬಗೆಯ ಲಾಭವನ್ನು ಪಡೆಯುತ್ತದೆ. ಶತ್ರುವಿನಿಂದ ಪಾರಾಗುವುದರ ಜೊತೆಗೆ ಮೋಸಗೊಳಿಸಿ ಇತರ ಸಣ್ಣ ಪುಟ್ಟ ಪ್ರಾಣಿಗಳನ್ನು ಹಿಡಿದು ಆಹಾರವಾಗಿ ಬಳಸುತ್ತದೆ.

ಜಿಯೋಮೆಟ್ರಿಡೆ ಕುಟುಂಬದ ಪತಂಗಹುಳುಗಳಿಗೆ (ಲಾರ್ವ) ಮರೆಮಾಚಿಕೊಳ್ಳುವ ರಕ್ಷಣಾನುಕರಣೆಯಲ್ಲಿ ತುಂಬ ನೈಪುಣ್ಯವುಂಟು. ದೇಹದ ಬಣ್ಣದಲ್ಲೂ ಚರ್ಮದ ರಚನೆಯಲ್ಲೂ ಅವು ಸಸ್ಯಭಾಗಗಳನ್ನು ಅನುಕರಿಸಬಲ್ಲವು. ಅವುಗಳ ಚರ್ಮ ಗಿಡಗಳ ನುಣುಪಾದ ತೊಗಟೆಯನ್ನು ಹೋಲುತ್ತದೆ. ಈ ಕಾರಣದಿಂದಲೆ ಅವು ಅನೇಕ ವೇಳೆ ರೆಂಬೆಗಳನ್ನೂ ಕವಲು ರೆಂಬೆಗಳನ್ನೂ, ಅನುಕರಿಸಬಲ್ಲುವು. ಸೆಲಿನಿಯಾ ಟೆಟ್ರಾಲುನೇರಿಯ ಎಂಬ ಪತಂಗದ ಹುಳು ಮರೆಮಾಚಿಕೊಳ್ಳಲು ಕೆಲವು ಸಾಹಸ ಕೃತ್ಯಗಳನ್ನು ಮಾಡುತ್ತದೆ. ಬರ್ಚ್ ಜಾತಿಯ ಗಿಡದ ರೆಂಬೆಯನ್ನು ತನ್ನ ಹಿಂದಿನ ಎರಡು ಹುಸಿಗಾಲುಗಳಿಂದ (ಪ್ರೊಲೆಗ್ಸ್) ಹಿಡಿದುಕೊಂಡು ರೆಂಬೆಯ ಒಂದು ಪಕ್ಕಕ್ಕೆ ಬಾಗಿ, ದೇಹವನ್ನು ಗಡಸುಮಾಡಿಕೊಂಡು ತಾನೂ ಒಂದು ರೆಂಬೆಯಂತೆಯೇ ನಟಿಸುತ್ತದೆ. ಇಂಥ ಜಡಸ್ಥಿತಿಯಲ್ಲಿ ದೇಹದ ಬಣ್ಣ ಮತ್ತು ರಚನೆಗಳಲ್ಲಿ ಗಿಡದ ಮತ್ತೊಂದು ರೆಂಬೆಯೊ ಎಂಬಂತೆ ಅನುಕರಿಸಬಲ್ಲ ಈ ಹುಳು ಅದರ ಶತ್ರುಗಳ ದೃಷ್ಟಿಗೆ ಸುಲಭವಾಗಿ ಬೀಳಲಾರದು. ದೇಹದ ಬಣ್ಣ ಮತ್ತು ಆಕಾರಗಳಲ್ಲಲ್ಲದೆ ಕೆಲವು ವರ್ತನೆಗಳಿಂದ ಸಸ್ಯದ ಇತರ ಭಾಗಗಳನ್ನೂ ಅನುಕರಿಸಬಲ್ಲ ಕೀಟಗಳು ಈ ಕುಟುಂಬದಲ್ಲಿವೆ. ರೆಂಬೆಯ ಕುಡಿಯ ಎಲೆ ಮೊಗ್ಗುಗಳನ್ನು ಅನುಕರಿಸುವ ಕೆಲವು ಕೀಟಗಳಿವೆ. ಸಸ್ಯಕಾಂಡದ ಅಥವಾ ರೆಂಬೆಯ ಕೊನೆಯ ತುದಿಮೊಗ್ಗುಗಳನ್ನು ಕೆಲವು ಕೀಟಗಳು ಅನುಕರಿಸಬಲ್ಲುವು. ಇದು ಮನುಷ್ಯನನ್ನೂ ಮೋಸಗೊಳಿಸಬಲ್ಲ ಪರಿಣಾಮಕಾರಿಯಾದ ರಕ್ಷಣಾತಂತ್ರ. ಪತಂಗಗಳು ದೇಹದ ಬಣ್ಣ ಮತ್ತು ಆಕಾರದಲ್ಲಿರುವ ಹೋಲಿಕೆಗಳಿಂದ ಸಾಧಿಸುವ ಅನುಕರಣೆ ಜಡರೀತಿಯದಾದರೂ, ರೆಂಬೆಗಳು ಮತ್ತು ಅದರ ಭಾಗಗಳನ್ನು ಅನುಕರಿಸಲು ಕೆಲವು ವರ್ತನೆಗಳು ಅನಿವಾರ್ಯವಾಗುತ್ತದೆ. ಆದ್ದರಿಂದ ಅದನ್ನು ಬುದ್ಧಿಪೂರ್ವಕವಾದ ಸಕ್ರಿಯಾನುಕರಣೆ ಎಂದು ಕರೆಯಬಹುದು.

ಜಿಯೋಮೆಟ್ರಿಡೆ ಕುಟುಂಬದ ಕ್ರೈಸೂರಾ ಮ್ಯೂಕ್ರಾನಿಸ್ ಜಾತಿಯ ಪತಂಗದಲ್ಲಿ ಹುಳುವಲ್ಲದೆ ಬೆಳೆದ ಪತಂಗವೂ ಅನುಕರಣ ತಂತ್ರಗಳನ್ನು ಅನುಸರಿಸುತ್ತದೆ. ಹುಳು ಚರ್ಮದ ರಚನೆ ಮತ್ತು ಬಣ್ಣದಲ್ಲಿ ಒರಟಾದ ತೊಗಟೆಯನ್ನು ಹೋಲುತ್ತದೆ. ಇದು ಜಡರೀತಿಯ ಅನುಕರಣೆ. ಬೆಳೆದ ಪತಂಗ ತನ್ನ ರೆಕ್ಕೆಗಳನ್ನು ಹೊಟ್ಟೆಯ ತಳಭಾಗಕ್ಕೆ ಜೋಡಿಸಿ ತಲೆಯನ್ನು ಕೆಳಭಾಗಕ್ಕೆ ಬಾಗಿಸಿ ದೇಹವನ್ನು ಗಡಸುಮಾಡಿಕೊಳ್ಳುವುದರಿಂದ ಗಿಡದ ತೊಗಟೆಯನ್ನು ಅನುಕರಿಸಬಲ್ಲುದು. ಇದು ಬುದ್ಧಿಪೂರ್ವಕವಾದ ಅನುಕರಣೆ.

ಕಪಟರೂಪಧಾರಣೆಯಲ್ಲಿ ಆರ್ಥಾಪ್ಟೆರ ಉಪವರ್ಗದ ಕೀಟಗಳು ಬಹಳ ಪ್ರಸಿದ್ಧಿ ಪಡೆದಿವೆ. ಅವು ಕಡ್ಡಿಗಳನ್ನೂ, ರೆಂಬೆ ಮತ್ತು ತೊಗಟೆಗಳನ್ನೂ ಅನುಕರಿಸಬಲ್ಲುವು. ಈ ಉಪವರ್ಗದ ಫಾಸ್‌ಮಿಡೆ ಕುಟುಂಬಕ್ಕೆ ಸೇರಿದ ನಡೆಯುವ ಕಡ್ಡಿಕೀಟಗಳು ಒಣಗಿದ ಕಡ್ಡಿಗಳಂಥ ನೀಳವಾದ ದೇಹ ಮತ್ತು ಕೃಶವಾದ ಕಾಲುಗಳನ್ನು ಹೊಂದಿದ್ದು ಮೆಳೆಗಳನ್ನು ಅನುಕರಿಸಬಲ್ಲುವು. ಕೆಲವು, ದೇಹವನ್ನು ಗಡಸುಮಾಡಿಕೊಂಡು ಕಾಲುಗಳನ್ನು ಅವಶ್ಯವಾದಂತೆ ಚಾಚಿ, ಹೆಚ್ಚು ಯಶಸ್ವಿಯಾಗಿ ಅನುಕರಣೆಯನ್ನು ಪ್ರದರ್ಶಿಸಬಲ್ಲುವು. ಕೆಲವು ವೇಳೆ ಹಸಿರು, ಕಂದು ಮತ್ತು ಬೂದು ಬಣ್ಣದ ಕಾಲುಗಳಿಂದ ಮೆಲ್ಲಗೆ ಸಾಗಿ ಮನುಷ್ಯರ ದೃಷ್ಟಿಗೆ ಬಿದ್ದರೂ, ಚಲಿಸದೇ ನಿಂತಾಗ ಅದೃಶ್ಯವಾಗಬಲ್ಲುವು. ಒಂದು ಜಾತಿಯ ಕಡ್ಡಿಯ ಕೀಟ ನಿಂತಕೂಡಲೇ ತನ್ನ ಕಾಲುಗಳನ್ನು ಹರಡಿಕೊಳ್ಳುತ್ತದೆ. ಆಗ ಅದು ಬೂಷ್ಟು ಹಿಡಿದ ಸತ್ತ ರೆಂಬೆಯ ಕಡ್ಡಿಯಂತೆ ಭಾಸವಾಗುತ್ತದೆ. ಪೊದೆಗಳ ಮೇಲೆ ಕುಳಿತಾಗ ಮೆಲ್ಲಗೆ ತೂಕಡಿಸಿಕೊಂಡು ಹೆಜ್ಜೆ ಹಾಕುವ ಅವುಗಳ ಚಲನೆ ಕಣ್ಣಿಗೆ ಬೀಳುವುದು ಅಪರೂಪ.

ಗಿಡದ ರೆಂಬೆಯನ್ನಾಶ್ರಯಿಸಿರುವ ಹಸಿರು ಹುಳು.
ಚಿತ್ರದಲ್ಲಿ ಅಂಥವು ನಾಲ್ಕು ಇವೆ.

ಉಷ್ಣವಲಯದಲ್ಲಿ ಮತ್ತು ಸಮಶೀತೋಷ್ಣವಲಯಗಳಲ್ಲಿ ಫಾಸ್‌ಮಿಡೆ ಕುಟುಂಬಕ್ಕೆ ಸೇರಿದ 600 ಪ್ರಭೇದಗಳಿವೆ. ಅವುಗಳಲ್ಲಿ ಬಹುಸಂಖ್ಯಾತ ಕೀಟಗಳು ರಕ್ಷಣೆಯ ಚತುರೋಪಾಯಗಳನ್ನು ಹೂಡಬಲ್ಲುವು. ನಡೆಯುವ ಎಲೆ ಎಂದು ಹೆಸರು ಗಳಿಸಿರುವ ಫಿಲಿಯಂ ಎಂಬುದರ ದೇಹ ಮತ್ತು ಕಾಲುಗಳು ಚಪ್ಪಟೆಯಾಗಿ ಅಗಲವಾಗಿರುತ್ತವೆ. ರೆಕ್ಕೆಯೂ ಅಗಲವಾಗಿ ಹರಡಿಕೊಂಡಿರುತ್ತದೆ. ದೇಹ, ಕಾಲು ಮತ್ತು ರೆಕ್ಕೆಗಳ ಬಣ್ಣ ಹಸಿರಾಗಿದ್ದು ಅಲ್ಲಲ್ಲಿ ಮಚ್ಚೆಗಳನ್ನು ಹೋಲುವ ಗುರುತುಗಳಿರುತ್ತವೆ. ಈ ಎಲ್ಲ ಗುಣಗಳಿಂದ ಅದು ತನ್ನ ಹೆಸರಿಗೆ ಅನ್ವರ್ಥವಾಗಿದೆ. ಇದೇ ಕುಟುಂಬದಲ್ಲಿ ಕೆಲವು ಹಸಿರು ಬಣ್ಣವಾಗಿದ್ದು ಎಲೆಗಳ ಮಧ್ಯೆ ಮರೆಮಾಚಿಕೊಳ್ಳಬಲ್ಲುವು; ಮತ್ತೆ ಕೆಲವು ಅಗಲವಾದ ಉಬ್ಬುತಗ್ಗುಗಳಿಂದ ಕೂಡಿದ ದೇಹ, ಅದರ ಮೇಲೆ ನರಗಳ ಬಲೆಗಟ್ಟು ಛಿದ್ರವಾಗಿ ಒಡೆದು ಗುರುತುಗಳು– ಈ ಲಕ್ಷಣಗಳಿಂದ ಅವು ಹೂಗಳನ್ನು ಹೋಲುತ್ತವೆ. ಒಂದು ಜಾತಿಯ ಕೀಟ ಸತ್ತ ಒಣ ಎಲೆಯನ್ನು ಅನುಕರಿಸುತ್ತದೆ; ಇನ್ನೊಂದು ಜಾತಿ ಆರ್ಕಿಡ್ ಹೂಗಳನ್ನು ಅನುಕರಿಸುತ್ತದೆ. ಅರಳಿದ ಹೂವಿನ ಮೇಲೆ ಕುಳಿತಾಗ, ಅದರೊಡನೆ ಸಮರಸವಾಗುವುದರಿಂದ ಸುರಕ್ಷಿತವಾಗಿರಬಲ್ಲುದು. ಅದರ ಅಗಲವಾಗಿರುವ ತೊಡೆಯಭಾಗ ಹೂವಿನ ದಳವನ್ನು ಹೋಲುತ್ತದೆ. ದೇಹದ ಹಿಂಭಾಗದ ಮೇಲೆ ಲಘುವಾದ ಗೆರೆಗಳಿದ್ದು ಹೂವಿನ ಮಧ್ಯಭಾಗದಂತೆ ಕಾಣುತ್ತದೆ. ಮರೆಮಾಚಿಕೊಂಡು ಹೂವಿನ ಮೇಲೆ ಕುಳಿತಾಗ ತನ್ನ ಶತ್ರುಗಳಿಂದ ಪಾರಾಗುವುದಲ್ಲದೆ, ಇತರ ಸಣ್ಣ ಕೀಟಗಳನ್ನು ಹಿಡಿದು ತಿನ್ನಲೂ ಅನುಕೂಲವಾಗುತ್ತದೆ.

ಲೆಪಿಡಾಪ್ಟೆರ ಉಪವರ್ಗಕ್ಕೆ ಸೇರಿದ ಅನೇಕ ಕೀಟಜಾತಿಗಳಲ್ಲೂ ಅನುಕರಣೆ ಕಂಡುಬರುತ್ತದೆ. ಕೆಲವು ಹಸಿರು ಎಲೆಗಳನ್ನು ಅನುಕರಿಸುತ್ತವೆ. ಕೆಲವು ಉದುರಿದ ಒಣ ಎಲೆಗಳನ್ನು ಕೇವಲ ಛಾಯೆಯಲ್ಲಿ ಮಾತ್ರವಲ್ಲದೆ ದೇಹರಚನೆಯಲ್ಲೂ ಅನುಕರಿಸುತ್ತವೆ. ಬೊಲಿವಿಯಾ ದೇಶದ ಸಿನೊಫ್ಲೇಬಿಯಾ ಅರ್ಕಿಡೋನ ಎಂಬ ಚಿಟ್ಟೆಯ ಮುಂದಿನ ಜೋಡಿ ರೆಕ್ಕೆಗಳ ಹೊರ ಅಂಚು ಕಾಂಡ ಅಥವಾ ಎಲೆಯನ್ನು ಹೋಲುತ್ತದೆ. ಭಾರತದ ಕಲ್ಲಿಮಾ ಪ್ಯಾಲೆಕ್ಟ ಎಂಬ ಚಿಟ್ಟೆಯ ಅನುಕರಣೆ ಬಹಳ ಪ್ರಸಿದ್ಧ. ಇದರ ರೆಕ್ಕೆಗಳು ಕಾಂಡ ಮತ್ತು ಎಲೆಯನ್ನು ಏಕಕಾಲದಲ್ಲಿ ಅನುಕರಿಸಬಲ್ಲುವು. ರೆಕ್ಕೆಗಳ ಮೇಲಿನ ಮತ್ತು ಕೆಳಗಿನ

ವರ್ಣವಿನ್ಯಾಸದಲ್ಲಿ ಗಮನಾರ್ಹವಾದ ವ್ಯತ್ಯಾಸವಿರುತ್ತದೆ. ರೆಕ್ಕೆಯ ಮೇಲ್ಭಾಗ ಮುಗ್ಧಗೊಳಿಸುವ ಬಣ್ಣಗಳಿಂದ ಕೂಡಿರುತ್ತದೆ. (ನೀಲಗಪ್ಪಿನ ಮೇಲೆ ಹಳದಿಗೆಂಪಿನ ಮತ್ತು ನೀಲಿಬಿಳುಪಿನ ಬರೆಗಳು ಆ ಪ್ರಭೇದದ ಗುರುತಿನ ಚಿಹ್ನೆಗಳು). ಆದರೆ ರೆಕ್ಕೆಗಳ ತಳಭಾಗ ಬಣ್ಣದಲ್ಲಿ ಒಣಗಿದ ಎಲೆಯನ್ನು ಹೋಲುತ್ತದೆ. ಕೆಂಪು ಮತ್ತು ಕಂದು ಬಣ್ಣಗಳ ಪರ್ಯಾಯವಾಗಿರುವ ಚುಕ್ಕೆಗಳು, ಅದರ ಮಧ್ಯೆ ಇರುವ ಪೊರೆಗಳು (ಸ್ಕೇಲ್) ಎಲೆಯ ಮೇಲೆ ಬಿದ್ದಿರುವ ಮಂಜಿನ ಹನಿಗಳಂತೆ ಕಾಣುತ್ತವೆ. ಇದಲ್ಲದೆ ಎಲೆಯ ಮೇಲೆ ಕಾಣುವಂತೆ ನರಗಳ ಬಲೆಗಟ್ಟೂ ಬೂಷ್ಟುಹಿಡಿದ ಗುರುತುಗಳೂ ಇರುತ್ತವೆ. ಈ ಕಾರಣದಿಂದಾಗಿ ಇದು ಹಾರಾಡುವಾಗ ತನ್ನ ಮೋಹಕ ಬಣ್ಣದಿಂದ ಆಕರ್ಷಿಸುತ್ತದೆ; ಕುಳಿತೊಡನೆ ತನ್ನ ರೆಕ್ಕೆಗಳನ್ನು ದೇಹದ ಮೇಲಕ್ಕೆ ಜೋಡಿಸಿ ಒಣಗಿದ ಎಲೆಯನ್ನು ಅನುಕರಿಸಿ ಆತ್ಮರಕ್ಷಣೆ ಮಾಡಿಕೊಳ್ಳುತ್ತದೆ.

ಪ್ರಮುಖಾನುಕರಣೆಯ ತಂತ್ರಗಳು ಎಚ್ಚರಿಕೆ ನೀಡತಕ್ಕ ಮಾದರಿಗೆ ಸೇರಿವೆ. ತಿಂದರೆ ವಿಷವಾಗಿ ಪರಿಣಮಿಸುವ ವಿಷಯುಕ್ತ ಪ್ರಾಣಿಗಳನ್ನು ಅವು ಅನುಕರಿಸುತ್ತವೆ. ಸಾಮಾನ್ಯವಾಗಿ ಅನುಕರಣೀಯ ವಸ್ತು ಅಥವಾ ಪ್ರಾಣಿಗಳು ಆಕರ್ಷಕ ಬಣ್ಣಗಳನ್ನು ಹೊಂದಿರುವುದರಿಂದ ತಾವೂ ಪ್ರಕಾಶಮಾನವಾದ ಬಣ್ಣಗಳನ್ನು ಪಡೆದಿರುತ್ತವೆ. ಇಲಾಪಿಡೆ ಕುಟುಂಬಕ್ಕೆ ಸೇರಿದ ಅನೇಕ ಹಾವುಗಳು ವಿಷಪೂರಿತವಾದುವು. ಅಮೆರಿಕದ ಹವಳದ ಹಾವುಗಳೂ (ಕೋರಲ್ ಸ್ನೇಕ್ಸ್) ಇದೇ ಕುಟುಂಬಕ್ಕೆ ಸೇರಿದುವು. ಆ ವಿಷದ ಹಾವುಗಳೆಲ್ಲ ಅತಿ ಪ್ರಕಾಶಮಾನವಾದ ಬಣ್ಣ ಹೊಂದಿರುತ್ತವೆ. ಸಾಮಾನ್ಯವಾಗಿ ಅವುಗಳ ದೇಹದ ಮೇಲೆ ಪರ್ಯಾಯವಾಗಿ ಕೆಂಪು ಮತ್ತು ಕಪ್ಪು ಬಣ್ಣದ ಪಟ್ಟೆಗಳಿರುತ್ತವೆ. ವಿಷವಿಲ್ಲದ ಹಾವುಗಳು ಹವಳದ ಹಾವುಗಳನ್ನು ಅನುಕರಿಸುತ್ತವೆ. ವಿಷದ ಹಾವಿನ ಮೇಲಿರುವ ಗುರುತನ್ನು ಅಷ್ಟು ಚೆನ್ನಾಗಿ ಹೋಲದಿದ್ದರೂ ದೂರಕ್ಕೆ ಹವಳದ ಹಾವಿನಂತೆಯೇ ತೋರುವ ಈ ಹಾವುಗಳು ವಿಷದ ಹಾವುಗಳಂತೆಯೇ ತಮ್ಮ ಶತ್ರುಗಳನ್ನು ಹೆದರಿಸಬಲ್ಲುವು. ಆದರೆ ವಿಷದ ಹಾವಿನ ಭಯದಿಂದ ಮನುಷ್ಯ ಈ ವಿಷವಿಲ್ಲದ ಹಾವುಗಳನ್ನೂ ಕೊಲ್ಲಬಹುದಾದ್ದರಿಂದ ಆ ಅನುಕರಣೆ ಸ್ವಲ್ಪಮಟ್ಟಿಗೆ ಅದಕ್ಕೆ ಅಪಾಯಕಾರಿಯೂ ಆಗಬಲ್ಲುದು. ಈ ರೀತಿಯ ಅನುಕರಣೆ ಜಡರೀತಿಯ ಮಾದರಿಗೆ ಸೇರಿದ್ದು. ವಿಷವಿಲ್ಲದ ಹಂದಿಮೂತಿಯ ಹಾವುಗಳು ಬಣ್ಣದಲ್ಲಿ ಬಹು ಪರಿಪಕ್ವವಾಗಿ ವಿಷದ ಹಾವುಗಳಂತೆ ನಟಿಸಬಲ್ಲುವು. ತಮ್ಮ ತಲೆಯನ್ನು ಅಗಲಿಸಿ, ಬುಸುಗುಟ್ಟಿ ಮತ್ತೆ ಕೆಲವು ವೇಳೆ ತಲೆಯನ್ನು ನೆಲಕ್ಕೆ ಹೊಡೆದು ತಾವು ಕೂಡ ವಿಷದ ಹಾವಿನಷ್ಟೇ ಅಪಾಯಕಾರಿ ಎಂಬ ಭಾವನೆಯನ್ನು ಮೂಡಿಸಿ ಶತ್ರುಗಳಿಂದ ಪಾರಾಗಬಲ್ಲುವು. ಹೆಟೆರೋಡಾನ್ ಎಂಬ ಹಾವು ಇದರಲ್ಲಿ ಪ್ರಸಿದ್ಧವಾದುದು. ಈ ಹಾವುಗಳ ಅನುಕರಣೆಯಲ್ಲಿ ಕ್ರಿಯಾತ್ಮಕ ವರ್ತನೆಗಳಿರುವುದರಿಂದ ಇದು ಬುದ್ಧಿಪೂರ್ವಕವಾದ ಅನುಕರಣೆ.

ಎಚ್ಚರಿಕೆಯನ್ನು ನೀಡುವ ಅನುಕರಣತಂತ್ರವನ್ನು ಪ್ರದರ್ಶಿಸುವ ಕೀಟಗಳೂ ಇವೆ. ಕೂದಲಿಂದ ಆವೃತವಾದ ಆಕರ್ಷಣೀಯವಾದ ಬಣ್ಣವುಳ್ಳ ಕೆಲವು ಹೂ ಚಿಗಟಗಳು (ಫ್ಲವರ್ ಫ್ಲೈ) ಕುಟುಕಬಲ್ಲ ಜೇನುನೊಣ ಮತ್ತು ಕಣಜಗಳನ್ನು (ವಾಸ್ಪ್) ಅನುಕರಿಸಬಲ್ಲುವು. ಶತ್ರುಗಳು ಸಾಮಾನ್ಯವಾಗಿ ಕುಟುಕುವ ಕೀಟಗಳ ಗೋಜಿಗೆ ಹೋಗದಿರುವುದರಿಂದ ಹೂ ಚಿಗಟಗಳು ಶತ್ರುಗಳಿಂದ ಪಾರಾಗಬಲ್ಲುವು. ದರೋಡೆನೊಣಕ್ಕೆ (ರಾಬರ್ ಫ್ಲೈ) ಕುಟುಕುವ ಅಂಗವಿಲ್ಲ. ಆದರೆ ಅದು ಬಣ್ಣ ಮತ್ತು ಆಕಾರದಲ್ಲಿ ಜೇನುನೊಣವನ್ನು ಅನುಕರಿಸುತ್ತದೆ. ಕೀಟಾಹಾರಿ ಬುಲ್ ಜಾತಿಯ ಕಪ್ಪೆ ಜೇನನ್ನು ನಾಲಗೆಯಿಂದ ಹಿಡಿಯಲು ಪ್ರಯತ್ನಿಸಿದಾಗ ಈ ಜೇನು ಕಟುವಾಗಿ ಕಚ್ಚುತ್ತದೆ. ಪದೇ ಪದೇ ಆದ ಆ ಅನುಭವದಿಂದ ಕಪ್ಪೆ ಜೇನಿನ ಬಣ್ಣವನ್ನು ಅದರ ಕಡಿತದೊಡನೆ ಸಮೀಕರಿಸಿಕೊಳ್ಳುತ್ತದೆ. ಮುಂದೆ ಅದು ಆ ಜೇನಿನ ಬಣ್ಣದ ಯಾವ ಕೀಟದ ಗೋಜಿಗೂ ಹೋಗುವುದಿಲ್ಲ. ಈ ಕಾರಣದಿಂದಲೆ ದರೋಡೆನೊಣ ತನ್ನ ಈ ಅನುಕರಣಶಕ್ತಿಯಿಂದ ರಕ್ಷಣೆ ಪಡೆಯುತ್ತದೆ.

ಕೆಲವು ಜಾತಿಯ ಚಿಟ್ಟೆಗಳು ತಿನ್ನಲು ರುಚಿಯಾಗಿರುವುದಿಲ್ಲ. ಸಾಮಾನ್ಯವಾಗಿ ಅವು ಪ್ರಕಾಶಮಾನವಾದ ಬಣ್ಣಗಳಿಂದ ಕೂಡಿರುತ್ತವೆ. ಶತ್ರುಪ್ರಾಣಿಗಳು ಅಭ್ಯಾಸ ಬಲದಿಂದ ಆ ಬಣ್ಣದ ಕೀಟಗಳು ರುಚಿಯಿಲ್ಲದವೆಂದುಕೊಂಡು ಅವುಗಳ ಗೋಜಿಗೆ ಹೋಗುವುದಿಲ್ಲ. ಇಂಥ ವರ್ಣಪ್ರದರ್ಶನಕ್ಕೆ ರಕ್ಷಣಾ ವರ್ಣತಂತ್ರ ಎಂಬ ಹೆಸರಿದೆ. ಈ ಎಚ್ಚರಿಕೆಯ ವರ್ಣಪ್ರದರ್ಶನದಿಂದ ಆ ಕೀಟಗಳು ರಕ್ಷಣೆ ಪಡೆಯುತ್ತವೆ. ಕೆಲವು ಜಾತಿಯ ರುಚಿಯಾದ ಚಿಟ್ಟೆಗಳು ರುಚಿಯಿಲ್ಲದ ಆ ಕೀಟಗಳನ್ನು ಅನುಕರಿಸಿ ಶತ್ರುಗಳಿಂದ ಪಾರಾಗುತ್ತವೆ. ಬೆಸಿಲಾರ್ಕಿಯ ಆರ್ಕಿಪಸ್ ಎಂಬ ವೈಸರಾಯ್ ಪಂಗಡದ ಚಿಟ್ಟೆ, ಪಕ್ಷಿಗಳಿಗೆ ಬಹಳ ರುಚಿಕರವಾದ ಆಹಾರ. ಆ ಚಿಟ್ಟೆ ಅನೋಸಿಯ ಪ್ಲೆಕ್ಸಿಪಸ್ ಎಂಬ ತಿನ್ನಲಾಗದ ಮಾನಿಟರ್ ಚಿಟ್ಟೆಯನ್ನು ತೀವ್ರವಾಗಿ ಅನುಕರಿಸಿ ರಕ್ಷಣೆ ಪಡೆಯುತ್ತದೆ.

ಕೆಲವು ವೇಳೆ ಹೆಣ್ಣುಚಿಟ್ಟೆ ಮಾತ್ರ ಅಬಾಧಿತ ಮೂರ್ತಿಯನ್ನು (ಇಮ್ಯೂನ್ ಮಾಡೆಲ್) ಅನುಕರಿಸಬಲ್ಲುದು. ಅದೇ ಪ್ರಭೇದದ ಗಂಡು ಯಾವ ಅನುಕರಣೆಯನ್ನೂ ತೋರಿಸುವುದಿಲ್ಲ. ಕೆಲವು ವೇಳೆ ಅದು ವಾಸಿಸುವ ಪ್ರದೇಶದಲ್ಲಿರುವ ಬೇರೆ ಬೇರೆ ಶತ್ರುಗಳನ್ನು ಅನುಕರಿಸಲು ಬಗೆ ಬಗೆಯ ರೂಪಾಂತರಗಳನ್ನು ಹೊಂದಿರುತ್ತದೆ. ಆಫ್ರಿಕದ ಪ್ಯಾಪಿಲಿಯೊ ಮಿರೋಪ್ ಎಂಬ ಒಂದು ಪ್ರಭೇದದ ಚಿಟ್ಟೆ ಬಹಳ ರುಚಿಕರವಾದದ್ದು. ಅದೇ ದೇಶದ ಡಾನಾಯ್ಡ್ ಜಾತಿಯ ಚಿಟ್ಟೆಗಳು ರುಚಿಯಿಲ್ಲದುವು. ಗಂಡು ಪ್ಯಾಪಿಲಿಯೊ ನೈಜವಾದ ರೂಪವನ್ನು ಇಟ್ಟುಕೊಂಡಿರುತ್ತದೆ; ಹೆಣ್ಣು ಪ್ಯಾಪಿಲಿಯೊಗಳು ಡಾನಾಯ್ಡ್ ಚಿಟ್ಟೆಗಳನ್ನು ಹೊರರೂಪದಲ್ಲಿ ಅಣಕಿಸುತ್ತವೆ. ಡಾನಾಯ್ಡ್ ಜಾತಿಯಲ್ಲೇ ಅನೇಕ ಪ್ರಭೇದಗಳಿವೆ. ಆಯಾ ಪ್ರದೇಶದಲ್ಲಿರುವ ಡಾನಾಯ್ಡ್ ಪ್ರಭೇದವನ್ನು ಹೆಣ್ಣು ಪ್ಯಾಪಿಲಿಯೊ ಅನುಕರಿಸುವುದರಿಂದ, ಹೆಣ್ಣು ಪ್ಯಾಪಿಲಿಯೊಗಳು ಬಹುರೂಪಾಂತರಗಳನ್ನು ತೋರಿಸುತ್ತವೆ. ಒಟ್ಟು ನಾಲ್ಕು ರೀತಿಯ ರೂಪಾಂತರ ಹೊಂದಿದ ಹೆಣ್ಣು ಪ್ಯಾಪಿಲಿಯೊ ಮಿರೋಪ್‌ಗಳು ಆಫ್ರಿಕದಲ್ಲಿ ಕಂಡುಬಂದಿವೆ. ಈ ನಾಲ್ಕು ರೀತಿಯವು ಒಂದೇ ಪ್ರದೇಶದಲ್ಲಿರಬಹುದು ಅಥವಾ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿರಬಹುದು. ಗಂಡು ಪ್ಯಾಪಿಲಿಯೊವಿನಂತೆ ತನ್ನ ನೈಜವಾದ ಮೂಲರೂಪವನ್ನು ಇಟ್ಟುಕೊಂಡಿರುವ ಹೆಣ್ಣು ಪ್ಯಾಪಿಲಿಯೊಗಳು ಅಬಿಸೀನಿಯದಲ್ಲಿ ಮಾತ್ರ ಇವೆಯೆಂದು ತಿಳಿದುಬಂದಿದೆ. ಕೆಲವು ವೇಳೆ ಒಂದು ಉಪವರ್ಗದ ಬೇರೆ ಬೇರೆ ಪ್ರಭೇದಗಳು ಕೂಡ ಹೀಗೆ ಅನುಕರಿಸಬಲ್ಲುವು. ಮಿಣುಕುಹುಳುವಿನ ಹತ್ತಿರ ಸಂಬಂಧಿಯಾದ ಲೈಸಿಡ್ ಜೀರುಂಡೆಗಳು, ರುಚಿಯಿಲ್ಲದ ಹುಳುಗಳು. ಆ ಜೀರುಂಡೆಯನ್ನು ಬೇರೆ ಜಾತಿಯ ಜೀರುಂಡೆಗಳಲ್ಲದೆ ತಗಣೆಗಳೂ, ಕೀಟಗಳೂ ಅನುಕರಿಸುತ್ತವೆ.

ರುಚಿಯಿಲ್ಲದ ಪ್ರಭೇದಗಳನ್ನು, ರುಚಿಕರವಾದ ಪ್ರಭೇದಗಳು ಅನುಕರಿಸುವುದನ್ನು ಬೇಟ್ಸಿಯನ್ ಅನುಕರಣೆ ಎಂದು ಕರೆಯುವರು. ಕೆಲವು ವೇಳೆ ರುಚಿಯಿಲ್ಲದ ಚಿಟ್ಟೆಯನ್ನು ಮತ್ತೊಂದು ರುಚಿಯಿಲ್ಲದ ಪ್ರಾಣಿ ಅನುಕರಿಸುವುದೂ ಉಂಟು; ಅಂದರೆ ಅನುಕರಿಸಲ್ಪಡುವ ಪ್ರಾಣಿಗಳೂ ಅನುಕರಿಸುವ ಪ್ರಾಣಿಗಳೂ ಅರುಚಿಗಳಾಗಿರುತ್ತವೆ. ಆ ರೀತಿಯ ಅನುಕರಣೆಯನ್ನು ಮುಲ್ಲೇರಿಯನ್ ಅನುಕರಣೆ ಎನ್ನುವರು.

ಆಕ್ರಮಣಕಾರಿ ಅನುಕರಣೆಯನ್ನು ಮಾಂಸಾಹಾರಿಗಳಲ್ಲಿ ಕಾಣಬಹುದು. ಕೀಟಗಳನ್ನು ತಿಂದು ಬದುಕುವ ಕೆಲವು ಜಾತಿ ಹಳದಿಬಣ್ಣದ ಜೇಡಗಳು ಗೋಲ್ಡನ್‌ರಾಡ್ ಮತ್ತು ಇತರ ಹೂಗಳ ಮೇಲೆ ಕುಳಿತಾಗ ಹೂವಿನ ಬಣ್ಣದೊಡನೆ ಸಮರಸವಾಗುವುದರಿಂದ ಕೀಟಗಳಿಂದ ಮರೆಯಾಗಿರುತ್ತವೆ. ಕೀಟಗಳು ಮಕರಂದಕ್ಕಾಗಿ ಹೂವಿಗೆ ಬಂದೊಡನೆ ವಂಚನೆಯಿಂದ ಅವುಗಳ ಮೇಲೆ ಎರಗುತ್ತವೆ. ಆಕ್ರಮಣಕಾರೀ ಅನುಕರಣೆಯಲ್ಲಿ ಇದು ಮರೆಮಾಚಿಕೊಳ್ಳುವ ಮಾದರಿಗೆ ಸೇರಿದೆ. ಮಾನ್ಟಿಡೆ ಕುಟುಂಬದ ಕೀಟಗಳೂ ಈ ರೀತಿಯ ಅನುಕರಣೆಯನ್ನು ತೋರಿಸುತ್ತವೆ.

ಕೆಲವುಜಾತಿ ಜೇಡಗಳು ಆರ್ಕಿಡ್ ಹೂಗಳನ್ನು ಬಣ್ಣ ಮತ್ತು ಆಕಾರದಲ್ಲಿ ಅನುಕರಿಸಿ ಹೂವಿನಂತೆ ಮೋಹಗೊಳಿಸುವ ಅಥವಾ ಪ್ರಚಾರಮಾಡುವ ಬಣ್ಣಗಳಿಂದ ಕೂಡಿದ್ದು ಕೀಟಗಳನ್ನು ಆಕರ್ಷಿಸುತ್ತವೆ; ಮಕರಂದಕ್ಕಾಗಿ ಬರುವ ಕೀಟಗಳ ಮೇಲೆ ಎರಗುತ್ತವೆ. ಇದು ಆಕ್ರಮಣಕಾರೀ ಅನುಕರಣೆಯಲ್ಲಿ ಮರುಳುಮಾಡುವ ಬಗೆಗೆ ಸೇರಿದೆ. ಆಫ್ರಿಕದ ಒಂದು ಜಾತಿ ಓತಿಕೇತ (ಹೆಂಟೆಗೊದ್ದ, ಊಸರವಳ್ಳಿ) ರಕ್ಷಣೆಯ ಬಣ್ಣವನ್ನು ಹೊಂದಿದ್ದು ಬಾಯ ಅಂಚುಗಳಲ್ಲಿ ಆಕರ್ಷಕವಾದ ಹೂವನ್ನು ಹೋಲುವ ಬಣ್ಣವನ್ನು ಹೊಂದಿರುತ್ತದೆ. ಆ ಬಣ್ಣ ಕೀಟಗಳನ್ನು ಮೋಹಗೊಳಿಸುವುದರಿಂದ ಅವು ಓತಿಯ ಬಾಯಿಗೆ ಬಂದು ಬೀಳುತ್ತವೆ.

ಆರ್ಥಾಪ್ಟೆರ ಉಪವರ್ಗದ ಮಾನ್ಟಿಡ್ ಕುಟುಂಬಕ್ಕೆ ಸೇರಿದ ಹೈಮಿನಾಪಸೆ ಕರೋನೇಟಸ್ ಎಂಬ ಪ್ರಭೇದದ ಕೀಟ ಹಿಂದೆ ಹೇಳಿದ ಅನೇಕ ರೀತಿಯ ಅನುಕರಣೆಗಳನ್ನು ತನ್ನ ಜೀವನಚರಿತ್ರೆಯಲ್ಲಿ ಪ್ರದರ್ಶಿಸುತ್ತದೆ. ಈ ಹುಳು ಸಾಮಾನ್ಯವಾಗಿ ಪ್ರಕಾಶಮಾನವಾದ ಎಳೆಗೆಂಪಿನಿಂದ ಕೂಡಿರುತ್ತದೆ. ಚಲಿಸದೆ ರೆಂಬೆಗಳ ಮೇಲೆ ಕುಳಿತಾಗ ತನ್ನ ದೇಹದ ಹಿಂಭಾಗವನ್ನು ಬೆನ್ನಿನಮೇಲೆ ತಿರುಗಿಸಿಟ್ಟುಕೊಂಡು ಅಗಲವಾದ ದಳಗಳನ್ನು ಹೋಲುವ ಕಾಲುಗಳನ್ನು ಚಾಚುವುದರಿಂದ ಹೂವನ್ನು ಅನುಕರಿಸಿ ಶತ್ರುಪಕ್ಷಿಗಳಿಂದ ಮರೆಮಾಚಿಕೊಳ್ಳುತ್ತದೆ. ಇದಲ್ಲದೆ ಹೂವೆಂದು ಭ್ರಮಿಸಿ ಸಣ್ಣ ಕೀಟಗಳು ಜೇನಿಗಾಗಿ ಬಂದಾಗ, ಅವುಗಳ ಮೇಲೆರಗಿ ಕಬಳಿಸುತ್ತದೆ. ರೂಪಾಂತರ ಹೊಂದಿದ ಮೇಲೆ ಹೊರಬರುವ ಎಳೆಯ ಕೀಟ ಕಪ್ಪುಚುಕ್ಕೆಗಳುಳ್ಳ ಕೆಂಪುಬಣ್ಣದಿಂದ ಕೂಡಿದ್ದು, ಸಸ್ಯಗಳ ಮೇಲೆ ವಾಸಿಸುವ ಅರುಚಿಯಾದ ಒಂದು ಜಾತಿ ತಿಗಣೆಯನ್ನು (ಪ್ಲಾಂಟ್‌ಬಗ್) ಅಣಕಿಸಿ ಶತ್ರುಪ್ರಾಣಿಗಳಿಂದ ಪಾರಾಗುತ್ತದೆ. ಅದು ಬೆಳೆದಂತೆ ಕೊನೆಯ ಪೊರೆ (ಮೋಲ್ಟ್) ಬಿಟ್ಟ ಅನಂತರ ದೇಹ ಮತ್ತು ಬಣ್ಣದಿಂದ ಹೂವನ್ನು ಅಣಕಿಸಿ ಆಕ್ರಮಣ ಕೃತ್ಯದ ಜೀವನವನ್ನು ತಾನೇ ಅನುಸರಿಸುತ್ತದೆ.

ಬುದ್ಧಿಪೂರ್ವಕವಾದ ಅನುಕರಣೆಯ ಗುಂಪಿಗೆ ಸೇರಿಸಬಹುದಾದ ಮತ್ತೊಂದು ಬಗೆಯೆಂದರೆ ಸಾವಿನ ಅಣಕ. ಅಮೆರಿಕದ ಒಪಾಸಮ್ ಎಂಬ ಸ್ತನಿ ತನ್ನ ಮೇಲೆ

ಯಾವುದಾದರೂ ಶತ್ರು ಎರಗಿದಾಗ ಸತ್ತಂತೆ ನಟಿಸಿ ಸಾವಿನ ದವಡೆಯಿಂದ ಪಾರಾಗುವುದು. ಅದನ್ನು ಒಪಾಸಮ್ ನಟನೆ ಎಂದು ನಾಣ್ಣುಡಿಯಾಗಿ ಕರೆಯುವುದುಂಟು. ಈ ನಟನೆ ಬುದ್ಧಿಪೂರ್ವಕವಾದ ಅನುಕರಣೆ ಎಂದು ಕೆಲವರ ಅಭಿಪ್ರಾಯ : ನಟನೆಯಲ್ಲ, ಅದು ಕೇವಲ ಭಯದಿಂದ ಒದಗಿದ ಮೂರ್ಛೆ ಎಂದು ಕೆಲವರ ಅಭಿಪ್ರಾಯ. ಗಡಸುದೇಹದ ದುಂಬಿಗಳು ಕೂಡ ಇಂಥ ಅನುಕರಣೆಯನ್ನು ತೋರಿಸುತ್ತವೆ. ಅವು ಕೆಳಗೆ ಬಿದ್ದಾಗ ಅಷ್ಟಾಗಿ ದೇಹಕ್ಕೆ ಗಾಯವಾಗುವುದಿಲ್ಲ. ಯಾವುದಾದರೂ ಪ್ರಾಣಿ ಅದನ್ನು ಹಿಡಿಯಲು ಹೋದಾಗ ಕೆಳಕ್ಕೆ ಬಿದ್ದು ಕಲ್ಲಿನ ಚೂರಿನಂತೆ ನಿಶ್ಚೇಷ್ಟಿತವಾಗುತ್ತವೆ. ಬೇಟೆಯ ಪ್ರಾಣಿಗಳು ಎಲೆ ಹುಲ್ಲುಗಳ ಮಧ್ಯೆ ಅವಕ್ಕಾಗಿ ಹುಡುಕಿ ವಿಫಲವಾಗಿ ಹಿಂತಿರುಗುತ್ತವೆ.

ಆಲ್ಫ್ರೆಡ್ ರಸೆಲ್ ವ್ಯಾಲೇಸ್ ಎಂಬ ವಿಜ್ಞಾನಿ ರಕ್ಷಣೆಯ ಅನುಕರಣೆ ಪ್ರಕೃತಿಯಲ್ಲಿ ಸಂಭವಿಸಬೇಕಾದರೆ ಇರಬೇಕಾದ ಕೆಲವು ಅಂಶಗಳನ್ನು ಪಟ್ಟಿಮಾಡಿದ್ದಾನೆ. 1. ಅನುಕರಿಸುವ ಪ್ರಾಣಿಯ ಪ್ರಭೇದ ಮತ್ತು ಅನುಕರಿಸಲ್ಪಡುವ ಪ್ರಾಣಿಯ ಪ್ರಭೇದಗಳು ಒಂದೇ ಪ್ರದೇಶದಲ್ಲಿರಬೇಕು; 2. ಅನುಕರಿಸುವ ಪ್ರಾಣಿಗಳು ಯಾವಾಗಲೂ ರಕ್ಷಣೆಯಿಲ್ಲದುವು; 3. ಅನುಕರಿಸುವ ಪ್ರಾಣಿಗಳು ಯಾವಾಗಲೂ ಹೆಚ್ಚು ಸಂಖ್ಯೆಯಲ್ಲಿರುತ್ತವೆ; 4. ಅನುಕರಣೆ ಕೇವಲ ಪ್ರಾಣಿಯ ಬಾಹ್ಯ ರೂಪಕ್ಕೆ ಸಂಬಂಧಪಟ್ಟಿರುತ್ತದೆಯೇ ಹೊರತು ಒಳರಚನೆಯಲ್ಲಿ ಯಾವ ಬದಲಾವಣೆಯನ್ನೂ ಉಂಟುಮಾಡುವುದಿಲ್ಲ.

ಅನುಕರಿಸುವ ಜೀವಿಗಳು ಹೇಗೆ ವಿಕಾಸಗೊಂಡವು ಎಂಬುದರ ಬಗ್ಗೆ ಅನೇಕ ವಾದ ವಿವಾದಗಳಿವೆ. ಡಾರ್ವಿನ್ ಪ್ರತಿಪಾದಿಸಿದ ನೈಸರ್ಗಿಕ ಆಯ್ಕೆಯೇ ಅದಕ್ಕೆ ಕಾರಣ ಎಂಬುದು ವೀಸ್‌ಮನ್ ಎಂಬುವನ ಅಭಿಪ್ರಾಯ. ಅದರಂತೆ, ಪ್ರಾರಂಭದಲ್ಲಿ ಒಂದು ಪ್ರಭೇದದ ಪ್ರಾಣಿಗಳು ತಾವು ಅನುಕರಿಸಬೇಕಾದ ಮಾದರಿಯನ್ನು ಅಷ್ಟಾಗಿ ಹೋಲಲಾರವು. ಆದರೆ ಒಂದು ಸಂತತಿಯಲ್ಲಿ ಆ ಮಾದರಿಯನ್ನು ಆದಷ್ಟು ಹೆಚ್ಚಾಗಿ ಹೋಲುವ ಪ್ರಾಣಿಗಳು ಜೀವನ ಸಂಗ್ರಾಮದಲ್ಲಿ ಉಳಿಯುತ್ತವೆ. ಮಿಕ್ಕವು ಅಳಿಯುತ್ತವೆ. ಉಳಿದ ಪ್ರಾಣಿಗಳು ಮಾತ್ರ ತಮ್ಮ ಸಂತತಿಯನ್ನು ಮುಂದುವರಿಸುತ್ತವೆ. ಹೀಗೆ ಪ್ರತಿಯೊಂದು ಸಂತತಿಯಲ್ಲೂ ಹೆಚ್ಚು ಹೆಚ್ಚು ಹೋಲಿಕೆಯನ್ನು ತೋರಬಲ್ಲ ಪ್ರಾಣಿಗಳನ್ನು ಮಾತ್ರ ಪ್ರಕೃತಿ ಆಯ್ದು ಉಳಿಸಿ ಬೆಳೆಸುತ್ತದೆ. ಕೊನೆಯಲ್ಲಿ ಚೆನ್ನಾಗಿ ಅನುಕರಿಸಬಲ್ಲ ಪ್ರಾಣಿ ಜಾತಿಗಳು ವಿಕಸಿಸುತ್ತವೆ. ಈ ವಾದ ನಿಜವಾದರೆ, ಒಂದು ಮಾದರಿಯನ್ನು ಅಸ್ಪಷ್ಟವಾಗಿ ಹೋಲುವ, ಅನುಕರಿಸುವ ಪ್ರಾಣಿಗಳು ಇಂದಿಗೂ ಹೇರಳವಾಗಿವೆ. ಇವು ಪ್ರಕೃತಿಯ ಆಯ್ಕೆಯ ವಾದಕ್ಕೆ ಸಮಸ್ಯೆಯನ್ನು ತಂದೊಡ್ಡುತ್ತವೆ. ಅಬಾಧಿತವಾಗಲು ರುಚಿಯಿರದ ಬೇರೆಯ ಜಾತಿಗಳನ್ನು ಅನುಕರಿಸುತ್ತ ಪ್ರಾಣಿಗಳು ವಿಕಸಿಸಿವೆ ಎನ್ನುವುದಾದರೆ ಒಂದು ರುಚಿಯಿರದ ಪ್ರಾಣಿಯನ್ನು ಮತ್ತೊಂದು ರುಚಿಯಿರದ ಪ್ರಾಣಿ ಅಣಕಿಸುವ ಮುಲ್ಲೇರಿಯನ್ ಅನುಕರಣೆಯೂ ಅಂಥದೇ ಸಮಸ್ಯೆಯನ್ನು ಒಡ್ಡುತ್ತದೆ. ಅನುಕರಿಸಲ್ಪಡುವ ಮಾದರಿಗಳು ಹೇರಳವಾಗಿರುವ ಪ್ರದೇಶದಲ್ಲಿ ಅನುಕರಿಸಲು ಯತ್ನಿಸುವ ಪ್ರಾಣಿಗಳ ಸಂಖ್ಯೆ ಬಹಳ ವಿರಳ. ಅನುಕರಿಸಲ್ಪಡುವ ಮಾದರಿಗಳು ವಿರಳವಾಗಿರುವ ಪ್ರದೇಶದಲ್ಲಿ ಅನುಕರಿಸುವ ಪ್ರಾಣಿಗಳ ಸಂಖ್ಯೆ ಬಹಳ ಹೇರಳವಾಗಿರುತ್ತದೆ. ಇದೂ ಒಂದು ವೈಪರೀತ್ಯ. ಈ ಸಮಸ್ಯೆ ಪ್ರಕೃತಿಯಲ್ಲಿ ಅನುಕರಿಸುವ ಪ್ರಾಣಿಗಳ ವಿಕಾಸಕ್ಕೆ ವಿಕೃತಿ (ಮ್ಯುಟೇಷನ್) ಯೆ ಕಾರಣವಿರಬಹುದೆ ಎಂಬ ವಾದಕ್ಕೆ ಅವಕಾಶವೀಯುತ್ತದೆ. ಅನುಕರಿಸುವ ಜೀವಿಗಳ ವಿಕಾಸಕ್ಕೆ ನಿರ್ದಿಷ್ಟವಾದ ಕಾರಣ ಇದೇ ಎಂಬುದಾಗಿ ಹೇಳಲು ಅನೇಕ ಎಡರುತೊಡರುಗಳಿವೆ. ಆದರೂ ಪ್ರಕೃತಿಯ ಆಯ್ಕೆ ಅದಕ್ಕೆ ಪ್ರಮುಖ ಕಾರಣ ಎಂಬ ವಾದಕ್ಕೆ ಹೆಚ್ಚಿನ ಪುರಸ್ಕಾರವಿದೆ.

ಮನುಷ್ಯನಿಗೆ ತೋರ್ಪಡುವ ಪ್ರಾಣಿಯ ಅನುಕರಣೆ ಇತರ ಪ್ರಾಣಿಗಳಿಗೆ ದೃಷ್ಟಿಗೋಚರವೆ ಎಂಬುದು ಒಂದು ಕುತೂಹಲಕಾರಿ ಪ್ರಶ್ನೆ. ಮನುಷ್ಯನ ಕಣ್ಣಿಗೆ ಬೀಳುವ ವರ್ಣವಿನ್ಯಾಸಗಳು ಪ್ರಾಣಿಗಳ ಕಣ್ಣಿಗೆ ಅದೇ ರೀತಿಯಲ್ಲಿ ಬೀಳಲಾರವು ಎಂಬುದು ಕೆಲವರ ಅಭಿಪ್ರಾಯ. ಈ ವಿಷಯವಾಗಿ ಅನೇಕ ಪ್ರಯೋಗಗಳು ನಡೆಯುತ್ತಿವೆ. ಒಂದು ಪಂಜರದಲ್ಲಿ ಮರೆಮಾಚಿಕೊಳ್ಳುವ ಬಣ್ಣಗಳುಳ್ಳ ಕೀಟಗಳೊಡನೆ ಬೇರೆ ಬೇರೆ ವರ್ಣವಿನ್ಯಾಸಗಳಿದ್ದ ಕೀಟಗಳನ್ನೂ, ಅದೇ ಪಂಜರದಲ್ಲಿ ಕೀಟಾಹಾರಿಪಕ್ಷಿಗಳನ್ನೂ ಓತಿಕೇತಗಳನ್ನೂ ಬಿಟ್ಟಾಗ ಅವು ಪ್ರಕಾಶಮಾನವಾದ ವರ್ಣವಿನ್ಯಾಸಗಳಿದ್ದ ಕೀಟಗಳ ಗೋಜಿಗೆ ಹೋಗದೆ ಮರೆಮಾಚಿಕೊಳ್ಳುವ ಬಣ್ಣಗಳಿದ್ದ ಕೀಟಗಳನ್ನು ಹಿಡಿದು ತಿಂದುವು. ಆಕ್ರಮಣಕಾರೀ ಪ್ರಾಣಿಗಳು ತಮ್ಮ ಆಹಾರವನ್ನು ವಾಸನೆಯಿಂದ ಆರಿಸಿಕೊಳ್ಳುತ್ತವೆಯೇ ವಿನಾ ದೃಷ್ಟಿಬಲದಿಂದಲ್ಲ ಎಂಬುದು ಆ ಪ್ರಯೋಗದ ತೀರ್ಮಾನ.

ಪ್ರಾಣಿಗಳ ದೃಷ್ಟಿಸಾಮರ್ಥ್ಯದ ಮೇಲೆ ಸಾಕಷ್ಟು ಪ್ರಯೋಗಗಳು ನಡೆಯುವವರೆಗೂ ಪ್ರಾಣಿಗಳ ಅನುಕರಣತಂತ್ರದ ನಿಜಸ್ವರೂಪ ಮತ್ತು ಪ್ರಭಾವಗಳ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಕಷ್ಟ. (ಎಚ್.ವಿ.ಕೆ.)

**ಅನೆಲಿಡಾ:** ಅಕಶೇರುಕ ಗುಂಪಿನ ವಲಯವಂತ ಪ್ರಾಣಿಗಳ ವಂಶ. ಈ ವಂಶದಲ್ಲಿ ಆರ್ಕಿಅನೆಲಿಡಾ, ಪಾಲಿಕೀಟ, ಆಲಿಗೋಕೀಟ ಮತ್ತು ಹಿರುಡೀನಿಯ ಎಂಬ ನಾಲ್ಕು ವರ್ಗಗಳು. ಈ ವಿಭಾಗದ ಹುಳುಗಳು ಅಥವಾ ಜಂತುಗಳು ಎಲ್ಲೆಡೆ ಜೀವಿಸುವುವು. ಎರೆಹುಳು, ನೀರೀಸ್ ಮತ್ತು ಜಿಗಣೆಗಳು ಈ ಗುಂಪಿಗೇ ಸೇರಿದುವು. ಆರ್ಕಿಅನೆಲಿಡಾ ಮತ್ತು ಪಾಲಿಕೀಟ ವರ್ಗದ ಹುಳುಗಳು ಸಮುದ್ರವಾಸಿಗಳು; ಆಲಿಗೋಕೀಟ ಮತ್ತು ಹಿರುಡೀನಿಯ ವರ್ಗದುವು ತೇವಭರಿತ ಪ್ರದೇಶ ಮತ್ತು ಸಿಹಿನೀರಿನಲ್ಲಿ ಮಾತ್ರ ಸಿಗುವುವು; ಹಿರುಡೀನಿಯ ಗುಂಪಿನ ಜಿಗಣೆಗಳು ಬೇರೆ ಜೀವಿಯ ರಕ್ತವನ್ನು ಹೀರಿ ಅರೆಪರತಂತ್ರ ಜೀವನ ನಡೆಸುತ್ತವೆ.

ಅನೆಲಿಡಾ ವಂಶದಲ್ಲಿ ಸುಮಾರು 5000ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಗಾತ್ರದ ಪರಿಮಿತಿ ಬಹು ವಿಚಿತ್ರ. ಅಲೋಸೋಮ ಕೇವಲ ಒಂದು ಮಿಮಿ. ಗಿಂತ ಪುಟ್ಟದು; ಸಮಭಾಜಕ ವೃತ್ತ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿ 2 ಮೀ ಗಿಂತ ದೊಡ್ಡ ಮತ್ತು ದೈತ್ಯ ಎರೆಹುಳುಗಳು ಇವೆ; ಕ್ಯಾಲಿಫೋರ್ನಿಯಾ ಕಡಲಿನಲ್ಲಿ 1.65ಮೀ ಉದ್ದದ ನಿಯಾಂಥಸ್, ಇನ್ನು ಕೆಲವೆಡೆ 3 ಮೀ ಉದ್ದದ ಇಯುನೀಸ್ ದೊರಕುತ್ತವೆ. ಜಿಗಣೆಗಳಲ್ಲಿಯೂ ಅತ್ಯಂತ ಚಿಕ್ಕವು ಅತ್ಯಂತ ದೊಡ್ಡವೂ ಇವೆ.

ಅನೆಲಿಡಾ ವಿಭಾಗದ ಹುಳುಗಳಲ್ಲಿ ಸಾಮಾನ್ಯವಾಗಿ ಕಾಣುವುದು – ಮೃದುವಾದ, ದುಂಡಾದ ಮತ್ತು ಉದ್ದನೆಯ ಶರೀರ; ಇಡೀ ಶರೀರವು ನೂರಾರು ಖಂಡಗಳಿಂದ ಜೋಡಿಸಿದಂತಿರುವುದು; ಈ ಖಂಡ ಅಥವಾ ವಲಯಗಳು ಹೊರ ಮತ್ತು ಒಳ ಭಾಗಕ್ಕೆ ಸೀಮಿತವಾಗಿರುವುದು; ಎಲ್ಲ ವಲಯಗಳ ಅಂಗರಚನೆಯ ಮಾಟ ಒಂದೇ ರೂಪದ್ದಾಗಿರುವುದು; ಮುಪ್ಪದರಿನ ದೇಹ; ದ್ವಿಪಾರ್ಶ್ವ ಸೌಷ್ಠ; ದೇಹಾಂತರಾವಕಾಶ ಮತ್ತು ಬೆಳವಣಿಗೆ ಟ್ರೊಕೊಫೊರ್ ಮರಿಹಂತದ ಮೂಲಕ, ಮುಂತಾದವು ಕೆಲವು ಲಕ್ಷಣಗಳು.

ಅನೆಲಿಡಾದ ವಿಶೇಷ ಗುಣಗಳು: ಇವುಗಳಲ್ಲಿ ಅಂಗ ಸೌಷ್ಠ – ದ್ವಿಪಾರ್ಶ್ವ ಸೌಷ್ಠ; ದೇಹ ಮುಪ್ಪದರಿನದು; ಚಲನೆ ಬಿರುಗೂದಲಿಂದ ಅಥವಾ ಇವನ್ನೊಳಗೊಂಡ ಪಾರ್ಶ್ವಪಾದಗಳಿಂದ; ದೇಹವು ಎರಡು ಕೊಳವೆ ಮಾದರಿಯದು. ಹೊರಕೊಳವೆ ದೇಹದ ಗೋಡೆ, ಒಳಗೊಳವೆ ಜೀರ್ಣಾಂಗದ ಗೋಡೆ. ಇವೆರಡರ ನಡುವಿನಲ್ಲಿ ದೇಹಾಂತರಾವಕಾಶ. ಇದರಲ್ಲಿರುವುದು ವಿಶೇಷ ದ್ರವ.

ದೇಹದ ಹೊರಗೋಡೆ ಕ್ರಮವಾಗಿ ಕ್ಯುಟಿಕಲ್ ಪೊರೆ, ಇದರಡಿಯಲ್ಲಿ ಎಪಿಡರ್ಮಿಸ್ ಪದರು, ಅನಂತರದಲ್ಲಿ ಸ್ನಾಯುಗಳಿಂದಾಗಿದೆ. ಹಾಗೆಯೇ ಜೀರ್ಣಾಂಗ ಗೋಡೆಯಲ್ಲಿ ಸ್ನಾಯು ಪದರು ಮತ್ತು ಗಟ್‌ಎಪಿಥೀಲಿಯಂ ಇರುವುವು. ಕ್ಯುಟಿಕಲ್ ಪೊರೆ ಆಗಿಂದಾಗ್ಗೆ ಪೊರೆಬಿಡುವುದು. ಇದರಡಿ ಇರುವ ಎಪಿಡರ್ಮಿಸ್ ಈ ಪೊರೆಯನ್ನು ಉತ್ಪನ್ನ ಮಾಡುವುದು.

ಜೀರ್ಣಾಂಗ ಒಂದು ಉದ್ದನೆಯ ಕೊಳವೆ. ಇದರ ಒಂದು ತುದಿಯಲ್ಲಿ ಬಾಯಿ ಇನ್ನೊಂದೆಡೆ ಗುದದ್ವಾರವಿದೆ. ರಕ್ತಪರಿಚಲನಾ ವ್ಯೂಹವು ಅನೇಕ ಉದ್ದ ಮತ್ತು ಅಡ್ಡ ನಾಳಗಳಿಂದ ಕೂಡಿದೆ. ರಕ್ತ ವರ್ಣಸಹಿತ ದ್ರವ. ರಕ್ತಕಣಗಳು ವರ್ಣರಹಿತ. ಇವು ತೇವಭರಿತ ಹೊರಪದರುಗಳಿಂದ ಮಾತ್ರ ಉಸಿರಾಡುವುವು. ಆದರೆ ನಾಳಜೀವಿಗಳು ಕಿವಿರಿಂದ ಉಸಿರಾಡುತ್ತವೆ.

ನರಮಂಡಲ ಒಂದು ಜೊತೆ ನರಹುರಿಗಳಿಂದಾಗಿ, ಇದು ಇಡೀ ಶರೀರದಲ್ಲಿನ ದೇಹಾಂತರಾವಕಾಶದಲ್ಲಿ ಜೀರ್ಣಾಂಗದಡಿಯಲ್ಲಿ ಉದ್ದಕ್ಕೆ ಚಾಚಿರುತ್ತದೆ. ದೇಹದ ಮುಂಭಾಗದಲ್ಲಿ ಇವೆರಡು ನರಹುರಿಗಳು ಜೀರ್ಣಾಂಗದ ಮೇಲ್ಭಾಗದಲ್ಲಿ ಎರಡು ಗಂಟುಗಳಾಗಿ ಮಾಡಲ್ಪಟ್ಟಿವೆ. ಇದೇ ಮೆದುಳು. ಇದರಿಂದ ಹಲವಾರು ನರತಂತುಗಳು ಹೊರಡುತ್ತವೆ. ಈ ಜೋಡಿನರಹುರಿ ಪ್ರತಿಯೊಂದು ಖಂಡದಲ್ಲಿಯೂ ನರಗಂಟನ್ನು ಹೊಂದಿರುವುದು. ಈ ಕಾರಣಕ್ಕಾಗಿ ಈ ರಚನೆಯನ್ನು ವಲಯಾಂಗವೆಂದು ಪರಿಗಣಿಸಿರುವುದು.

ಇವು ದ್ವಿಲಿಂಗಿಗಳು. ಕೆಲವು ಏಕಲಿಂಗಿಗಳು ಕೂಡ. ಆದರೆ ವಿರಳ. ಬೆಳವಣಿಗೆಯಲ್ಲಿ ಸಾಮಾನ್ಯವಾಗಿ ಕೆಲವು ಮರಿಹಂತದ ಮೂಲಕ ಬೆಳೆದರೆ, ಕೆಲವು ಭ್ರೂಣಾವಸ್ಥೆಯಿಂದ ಬೆಳೆಯುತ್ತವೆ. ಮರಿಹಂತವನ್ನು ಟ್ರೊಕೋಫೊರ್ ಹಂತವೆನ್ನಲಾಗಿದೆ.

ಅನೆಲಿಡಾ ವಂಶದ ವರ್ಗೀಕರಣ:

ಸಾಮಾನ್ಯವಾಗಿ ಅನೆಲಿಡಾ ವಂಶವನ್ನು ಈ ಕೆಳಕಂಡಂತೆ ವರ್ಗೀಕರಿಸುತ್ತಾರೆ;

1) ವರ್ಗ ಆರ್ಕಿಅನೆಲಿಡಾ : ಉದಾ – ಪಾಲಿಗಾರ್ಡಿಯಸ್

2) ವರ್ಗ ಆಲಿಗೋಕೀಟ : ಉದಾ – ಫೆರೆಟಿಮ (ಎರೆಹುಳು)

3) ವರ್ಗ ಪಾಲಿಕೀಟ : ಉದಾ – ನೀರಿಸ್
4) ವರ್ಗ ಹಿರುಡಿನಿಯ : ಉದಾ – ಹಿರುಡಿನೇರಿಯ (ಜಿಗಣೆ)




ಕೆಲವು ವಲಯವಂತಗಳು

ಈ ವಂಶದ ಜೀವಿಗಳು ಇಡೀ ಜಗತ್ತಿನ ಜೀವರಾಶಿಗಳಲ್ಲಿ ಮಹತ್ತರವಾದ ಸ್ಥಾನವನ್ನು ಸಂಪಾದಿಸಿವೆ. ಇದಕ್ಕೆ ಕಾರಣ ಇವುಗಳಲ್ಲಿ ಬೆಸೆದು ಬಂದ ಉಚ್ಚ ಮಟ್ಟದ ರಚನಾ ಮಾದರಿ. ಈ ರಚನಾ ಮಾದರಿಯ ಬುನಾದಿಯಿಂದಲೆ ಹಲವಾರು ಅಕಶೇರುಕಗಳು ಮತ್ತು ಕಶೇರುಕಗಳು ವಿಕಾಸವಾಗಿವೆ. ಇವುಗಳಲ್ಲಿ ಕಾಣಬರುವ ಮಾದರಿಯ ರಚನಾಂಗಗಳು – ವಲಯವಂತಿಕೆ, ದೇಹಾಂತರಾವಕಾಶ, ಅವಕಾಶನಳಿಕೆಗಳು, ಉತ್ಪತ್ತಿ ಅಂಗಗಳು ಅಲ್ಲದೆ ಇವುಗಳಲ್ಲಿ ಕಾಣಬರುವ ಹೊಂದಾಣಿಕೆ ಬಹುಮುಖ್ಯ.

1) ವಲಯವಂತಿಕೆ: ಮೂಲತಃ ವಲಯವಂತಿಕೆ ಈ ಗುಂಪಿನಲ್ಲಿ ಮೊದಲಿಗೆ ಕಾಣಬರುವುದು. ಈ ವಲಯವಂತಿಕೆ ಇನ್ನು ಉಚ್ಚವಿಕಾಸಿಗಳಾದ ಸಂಧಿಪದಿಗಳಲ್ಲಿ ಮತ್ತು ಕಶೇರುಕಗಳಲ್ಲಿ ವಿಸ್ತಾರವಾಗಿರುವುದು ಒಂದು ಮುಖ್ಯ ಅಂಶ. ವಲಯವಂತಗಳಲ್ಲಿ ಖಂಡಗಳು ಹೊರ ಮತ್ತು ಒಳ ಭಾಗಕ್ಕೂ ಸೀಮಿತವಾಗಿರುವುದರಿಂದ ಇವು ಸಂಪೂರ್ಣ ವಲಯವಂತಗಳು.

ವಲಯವಂತಿಕೆ ಹೇಗೆ ಮೂಲತಃ ಸಾಧನೆಯಾಗಿರಬಹುದೆಂಬ ಪ್ರಶ್ನೆಗೆ ದ್ವಂದ್ವ ಸಿದ್ಧಾಂತಗಳಿವೆ – ಕೆಲವರ ಪ್ರಕಾರ ಹುಳುವಿನಂತಹ ಜೀವಿ, ಅಲಿಂಗರೀತಿಯಲ್ಲಿ ಮೊಗ್ಗೆಯೊಡೆದು, ಮೊಗ್ಗೆಗಳು ಬೇರ್ಪಡದೆ, ನೂರಾರು ಒಂದಕ್ಕೊಂದು ಬೆಸೆದು ರಚನಾತ್ಮಕವಾಗಿಯೂ ಮತ್ತು ಜೈವಿಕವಾಗಿಯೂ ಏಕಜಂತುವಾಯಿತು ಎಂದು ಒಂದು ವಾದ; ಉಳಿದವರ ವಾದ – ಹುಳುವಿನಂತಹ ಜೀವಿ, ಕಾರಣಾಂತರದಿಂದ ತನ್ನಲ್ಲಿನ ವಿವಿಧ ಅಂಗಾಂಗಗಳನ್ನು ಪದೇ ಪದೇ ದ್ವಿಗುಣಗೊಳಿಸುತ್ತಾ ಹೋಗಿ, ದ್ವಿಗುಣಗೊಂಡ ಅಂಗಾಂಗಗಳು ಒಂದೊಂದು ವಲಯಕ್ಕೆ ವಿಸ್ತರಗೊಂಡಿರುವುದರಿಂದ, ಇಂತಹ ಜೀವಿಯ ದೇಹ ಅನೇಕ ವಲಯಗಳಿಂದಾಗಿದೆ ಎಂದು. ಈ ಎರಡು ವಾದಗಳಲ್ಲಿ ಯಾವುದು ಸಹಜವಾದದ್ದು ಎಂದು ಹೇಳುವುದು ಕಷ್ಟವಾದ ಸಂಗತಿ.

ವಲಯವಂತಗಳಲ್ಲಿ ಮುಂಭಾಗದ ಕೆಲವು ಖಂಡಗಳು ಪ್ರಬಲ ಸಂಯೋಜನಾ ಶಕ್ತಿಯನ್ನು ಹೊಂದಿವೆ. ಇದಕ್ಕೆ ಕಾರಣ, ಈ ಭಾಗದಲ್ಲಿಯೆ ನರಗಂಟು ಮತ್ತು ಅನೇಕ ನರತಂತುಗಳು ಇರುವುದು. ಈ ಭಾಗವು ಕೆಲವು ಜೀವಿಗಳಲ್ಲಿ ವಿಶೇಷವಾಗಿ ಮಾರ್ಪಾಟಾಗಿದೆ. ನೀರೀಸ್ ಎಂಬ ಸಮುದ್ರದ ಹುಳುವಿನಲ್ಲಿ ಕೆಲವು ಖಂಡಗಳು ದೇಹದ ಮುಂಭಾಗದಲ್ಲಿ ಸಂಯುಕ್ತವಾಗಿ ರುಂಡವಾಗಿದೆ. ಈ ರುಂಡ ಸಂವೇದನೀ ತಂತುಗಳನ್ನು, ಕಣ್ಣುಗಳನ್ನು ಮತ್ತು ಬಾಯಿಯ ಅನೇಕ ಅಂಗಗಳನ್ನು ಪಡೆದು ವಿವಿಧರೀತಿಯಲ್ಲಿ ಮಾರ್ಪಾಟಾಗಿರುವುದು. ಸಂಧಿಪದಿಗಳಲ್ಲಿಯೂ ಕೆಲವು ಖಂಡಗಳು ಸಂಯುಕ್ತವಾಗಿ ಬೆಸೆದು ರುಂಡವಾಗಿರುವುದು. ರುಂಡಾಂಗಗಳು ವಿಧವಿಧವಾಗಿ ಮಾರ್ಪಾಟಾಗಿರುವುವು. ಆದ್ದರಿಂದ ವಲಯವಂತಗಳಲ್ಲಿ ಕಾಣಬರುವ ಶಿರಸ್ಸೀಕರಣ (ಸೆಫಲೈಸೇಷನ್) ಮತ್ತು ಇದರಿಂದಾಗಿ ಆಗಿರುವ ವಿಕಾಸ ಮಹತ್ತರವಾದದ್ದು.




ಜಿಗಣೆ

2) ಅನೆಲಿಡಾದಲ್ಲಿನ ದೇಹಾಂತರಾವಕಾಶ: ದೇಹಾಂತರಾವಕಾಶವನ್ನು ಪಡೆದ ಮೂಲಜೀವಿಗಳೆಂದರೆ ಅನೆಲಿಡಾ ವಿಭಾಗದವು. ದೇಹಾಂತರಾವಕಾಶ ಕೇವಲ ಅನೆಲಿಡಾಕ್ಕೆ ಸೀಮಿತವಾಗಿರದೆ ಉಚ್ಚಮಟ್ಟದ ಅಕಶೇರುಕ ಮತ್ತು ಎಲ್ಲಾ ಕಶೇರುಕ ಜೀವಿಗಳಲ್ಲಿ ಹಾಸುಹೊಕ್ಕಿದೆ. ವಲಯವಂತಗಳು ಮುಪ್ಪದರಿನ ಜೀವಿಗಳು. ಇವುಗಳಲ್ಲಿನ ಮಧ್ಯದರ್ಮ ಸೀಳಿ ಒಂದು ಭಾಗ ಹೊರ ಪದರಿಗೂ ಇನ್ನೊಂದು ಒಳ ಪದರಿಗೂ ಸೇರಿದೆ. ಮಧ್ಯದರ್ಮದ ಸೀಳುವಿಕೆಯಿಂದಾಗಿ ಉದ್ಭವಿಸಿದ ಅವಕಾಶವೇ ದೇಹಾಂತರಾವಕಾಶ ಆಗಿರುವುದು. ಈ ಅವಕಾಶವನ್ನು ಬಂಧಿಸಿರುವ ಪೊರೆಯನ್ನು ದೇಹಾಂತರಾವಕಾಶ ಪೊರೆ ಅಥವಾ ಸೀಲೋಮಿಕ್ ಎಪಿಥೀಲಿಯಂ ಎನ್ನುವರು. ದೇಹಾಂತರಾವಕಾಶವು ಪ್ರತಿಖಂಡಕ್ಕೂ ಸೀಮಿತವಾಗಿ, ಖಂಡಾಂತರಾವಕಾಶಗಳು ಅಡ್ಡಪೊರೆ ಅಥವಾ ಸೆಪ್ಟಗಳಿಂದ ಬೇರ್ಪಟ್ಟಿರುವುದು. ಈ ಅಡ್ಡಪೊರೆ ರಂಧ್ರರಹಿತವಾಗಿರುವುದರಿಂದ ಖಂಡಗಳ ಅವಕಾಶಗಳಲ್ಲಿ ನೇರ ಸಂಪರ್ಕವಿರುವುದು.

ಮಧ್ಯಾಂತರ ಪೊರೆ ಕೇವಲ ದೇಹಾಂತರಾವಕಾಶಕ್ಕೆ ಅಲ್ಲದೆ ದೇಹಕ್ಕೆ ಬೇಕಾದ ಸ್ನಾಯು, ರಕ್ತ, ವಿಸರ್ಜನಾಂಗ ಮತ್ತು ಪ್ರಜನನ ಅಂಗಾಂಗಳ ಮೂಲವಸ್ತುಕೂಡ.

ದೇಹಾಂತರಾವಕಾಶದ ಕಾರ್ಯವ್ಯಾಪ್ತಿ ನಾನಾ ಬಗೆಯದು. ಮಧ್ಯದರ್ಮದಿಂದಾದ ಅನೇಕ ಅಂಗಾಂಗಗಳು ಈ ಅವಕಾಶದಲ್ಲಿಯೇ ಅಡಗಿರುವುವು. ಅನೆಲಿಡಾಕ್ಕೂ ಹಿಂದುಳಿದ ಜೀವಿಗಳಲ್ಲಿ ನಿಜ ದೇಹಾಂತರಾವಕಾಶವಿರುವುದಿಲ್ಲ.

3) ಅನೆಲಿಡಾದಲ್ಲಿನ ವಿಸರ್ಜನಾ ಮತ್ತು ಅವಕಾಶನಳಿಕೆಗಳು: ಅನೆಲಿಡಾ ಜೀವಿಗಳ ಪ್ರತಿ ಖಂಡದಲ್ಲಿಯೂ ನಾಳಗಳಿರುವುದರಿಂದ ಇವನ್ನು ವಲಯಾಂಗಗಳೆಂದಿರುವುದು. ವಲಯಗಳಲ್ಲಿನ ನಳಿಕೆಗಳಲ್ಲಿ ಎರಡು ವಿಧ – ನೆಫ್ರೀಡಿಯ (ವಿಸರ್ಜನಾನಳಿಕೆಗಳು)




ಎರೆಹುಳುವಿನ ಅಡ್ಡಸೀಳಿಕೆ ನೋಟ:

1. ಮೇಲುರಂಧ್ರ, 2. ಕ್ಯೂಟಿಕಲ್, 3. ಹೊರಚರ್ಮ, 4. ವೃತ್ತಾಕಾರದ ಮಾಂಸ ಖಂಡಗಳು, 5. ನೀಳಾಕಾರದ ಮಾಂಸಖಂಡಗಳು, 6. ಸಿಲೊಮಿನ ಎಪಿಥೀಲೀಯಂ, 7. ಕರುಳೊನಎಪಿಲಿಥೀಲಿಯಂ, 8. ದೇಹಾಂತರವಕಾಶ (ಸೀಲೂಂ), 9. ರಿಟ್ರ್ಯಾಕ್ಟಾರ್ ಮಾಂಸಖಂಡದ ಪೊರೆ, 10. ಸೀಟಿಯ ಚೀಲ, 11. ಸೀಟಿಗಳು, 12. ಖಂಡಕ್ಕೆ ಬಂದಿರುವ ನರಗಳು, 13. ನರದ ಪಕ್ಕದಲ್ಲಿರುವರಕ್ತನಾಳ, 14. ನರದತಳದಲ್ಲಿರುವ ರಕ್ತನಾಳ, 15. ಕರುಳಿನಿಂದ ನರಹುರಿ, 16. ನೆಫ್ರೀಡಿಯದ ಆಲಿಕೆ, 17. ನೆಫ್ರೀಡಿಯ ರಂಧ್ರ 18. ತಳಭಾಗದ ರಕ್ತನಾಳ, 19. ನೆಫ್ರೀಡಿಯ ನಾಳಗಳು, 20. ಕರುಳು, 21. ನೆಫ್ರೀಡಿಯ ಚೀಲ, 22.ಟಿಫ್ಲೊಸೋಲ್, 23. ಮೇಲುಭಾಗದ ರಕ್ತನಾಳ, 24. ನೀಳಾಕಾರದ ಮಾಂಸಖಂಡಗಳು, 25. ಸ್ಪರ್ಶೇಂದ್ರಿಯ, 26. ಚರ್ಮಗ್ರಂಥಿ.

ಮತ್ತು ಸೀಲಮೋಡಕ್ಟ್‌ಗಳು. ಈ ನಳಿಕೆಗಳು ದೇಹಾಂತರಾವಕಾಶದಿಂದ ದೇಹದ ಹೊರಭಾಗಕ್ಕೆ ತೆರವಾಗುತ್ತವೆ. ನೆಫ್ರೀಡಿಯೋಡಕ್ಟ್‌ಗಳು ಹುಟ್ಟುವರಿಯಲ್ಲಿ ಹೊರದರ್ಮದಲ್ಲಿ ನಾಳಗಳಾಗಿ ಮಾರ್ಪಟ್ಟು ಒಂದು ಭಾಗ ದೇಹಾಂತರಾವಕಾಶದಲ್ಲಿ ತೆರವಾಗುವುವು. ಈ ಭಾಗದ ತುದಿಯು ಲಾಲಿಕೆಯಂತಿರುವುದು. ಇಡೀ ನಾಳ ಶಿಲಕೆಗಳನ್ನೊಡಗೊಂಡಿರುವುದು. ಈ ನಾಳಗಳು ವಿಸರ್ಜನಾಂಗಗಳಾಗಿ ಕೆಲಸವೆಸಗುತ್ತವೆ. ಸೀಲಮೋಡಕ್ಟ್ ಅಥವಾ ದೇಹಾಂತರಾವಕಾಶನಳಿಕೆ ಮಧ್ಯದರ್ಮದಿಂದ ಉದ್ಭವವಾಗಿ, ಇದರ ಇನ್ನೊಂದು ಭಾಗ ದೇಹದ ಹೊರಗೆ ತೆರವಾಗುತ್ತದೆ. ಈ ನಾಳಗಳು ವಿಸರ್ಜನಾಕ್ರಿಯೆ ಮತ್ತು ಪ್ರಜನನ ಜೀವಕೋಶಗಳಿಗೆ ಮಾರ್ಗವಾಗಿರುತ್ತವೆ. ಕೆಲವೊಮ್ಮೆ ಕೇವಲ ಪ್ರಜನನ ಜೀವಕೋಶಗಳಿಗೆ ಮಾತ್ರ ಮಾರ್ಗವಾಗಿರುತ್ತವೆ.

4) ಅನೆಲಿಡಾದಲ್ಲಿನ ಸಂತಾನೋತ್ಪತ್ತಿ: ಪ್ರಜನನಾಂಗಗಳು ಮಧ್ಯದರ್ಮದಿಂದಾದುವು. ಒಂದೇ ದೇಹದಲ್ಲಿ ಎರಡು ಲಿಂಗಗಳ ಅಂಗಾಂಶಗಳು ಇರುವುದರಿಂದ ಅಂತಹವನ್ನು ದ್ವಿಲಿಂಗಿಗಳೆಂದೂ, ಲಿಂಗಗಳು ಬೇರೆ ಬೇರೆಯಾಗಿದ್ದ ಜೀವಿಗಳನ್ನು ಏಕಲಿಂಗಿಗಳೆಂದು ಕರೆಯಲಾಗಿದೆ. ದ್ವಿಲಿಂಗಿಗಳಲ್ಲಿ ಸಾಮಾನ್ಯವಾಗಿ ಒಂದು ಜೊತೆ ಅಂಡಾಶಯಗಳು ಮತ್ತು ಜೊತೆ ಜೊತೆಯಾಗಿರುವ ವೃಷಣಗಳು ಮತ್ತು ಅವಕ್ಕೆ ಸಂಬಂಧಿಸಿದ ಬೀಜನಾಳಗಳು ಇರುವುವು. ಎರಡೂ ಲಿಂಗಗಳ ದ್ವಾರಗಳು (ಏಕಲಿಂಗಿಯಲ್ಲಿ) ಒಂದಕ್ಕಿಂತ ಇನ್ನೊಂದು ದೂರದಲ್ಲಿ ಇರುವುದರಿಂದ ಸ್ವಯಂಗರ್ಭದಾರಣೆಯಾಗುವುದಿಲ್ಲ. ಸಂತಾನಕ್ರಿಯೆ ವರ್ಷದ ಕೆಲವು ಮಾಸಗಳಲ್ಲಿ ಮಾತ್ರ ಜರುಗುವುದು. ಕೆಲವು ಜಾತಿಯ ಅನೆಲಿಡಾಗಳು ಒಂದು ತೆರನಾದ ಲೋಳೆಚೀಲಗಳನ್ನು ಕಡಗದಂತೆ ಧರಿಸಿ ಅದರಲ್ಲಿ ಅಂಡಗಳನ್ನು ಇಟ್ಟು ಗರ್ಭಧರಿಸುವ ಕ್ರಿಯೆಯನ್ನು ಎಸಗುತ್ತವೆ. ಈ ಲೋಳೆ ಸಂಚಿಯನ್ನು ಕಕೂನ್ ಎನ್ನುತ್ತಾರೆ. ಇಂತಹವನ್ನು ಭೂಮಿಯಲ್ಲಿ ಅಡಿಗಿಸುತ್ತವೆ. ಇವುಗಳಲ್ಲಿ ಯುಗ್ಮ ಬೆಳೆಯುವುದು (ಎರೆಹುಳುಗಳಲ್ಲಿ ಮತ್ತು ಜಿಗಣೆಗಳಲ್ಲಿ). ಇನ್ನು ಕೆಲವು ಜಾತಿಯಲ್ಲಿ ಬೀಜಾಣುಗಳು ಮತ್ತು ಅಂಡಗಳು ದೇಹಾಂತರಾವಕಾಶದಿಂದ, ಹೊರಗೋಡೆಯನ್ನು ಸೀಳಿಯಾಗಲಿ ಅಥವಾ ನಾಳಗಳ ಮೂಲಕವಾಗಲಿ ಹೊರಬರುವುವು. ಇವು ನೀರಿನಲ್ಲಿ ನಿಷೇಚನಗೊಂಡು ಯುಗ್ಮಗಳಾಗುತ್ತವೆ. ಟ್ರೋಕೋಫೊರ್ ಹಂತದಿಂದ ದೊಡ್ಡವಾಗುತ್ತವೆ (ನೀರಿಸ್ ಎಂಬ ಕಡಲಹುಳುವಿನಲ್ಲಿ).

5) ಅನೆಲಿಡಾದಲ್ಲಿನ ಹೊಂದಾಣಿಕೆ: ಅನೆಲಿಡಾವಂಶಕ್ಕೆ ಸೇರಿದ ಜೀವಿಗಳಲ್ಲಿ ಹೊಂದಾಣಿಕೆಯನ್ನು ವಿವಿಧ ರೂಪದಲ್ಲಿ ಕಾಣಬಹುದು. ಹೊಂದಾಣಿಕೆ ಅಂದರೆ ಪರಿಸರಕ್ಕೆ ಹೊಂದಿಕೊಂಡು ಅದಕ್ಕೆ ಬೇಕಾದ ಅಂಗಾಂಗಗಳನ್ನು ಮಾರ್ಪಾಟುಮಾಡಿಕೊಂಡು ಜೀವಿಸುವ ಕ್ರಮ. ವಿಕಾಸದ ಹಾದಿಯಲ್ಲಿ ಮುಂದುವರಿದ ಅನೆಲಿಡಾ ವಂಶಜರು ಕೊನೆಗೆ ಅನೇಕ ಕವಲು ರಸ್ತೆ ಸೇರಿ ವಿವಿಧ ಪರಿಸರಗಳನ್ನು ತಲುಪಿ ಅಲ್ಲಿಗೆ ಹೊಂದಿಕೊಂಡು ವಿಕಾಸವಾಗಿರುವುದು ಈ ಗುಂಪಿನ ಹಿರಿಮೆ. ಮುಖ್ಯವಾಗಿ ಪಾಲಿಕೀಟಕ್ಕೆ ಸೇರಿದ ಹುಳುಗಳು ಸಮುದ್ರವಾಸಿಗಳು. ದೇಹದ ಮುಂಭಾಗದಲ್ಲಿ ರುಂಡದಂತಹ ರಚನೆ ಹೊಂದಿದ್ದು ಬಾಯಲ್ಲಿ ವಿವಿಧ ಅಂಗಗಳನ್ನು ಪಡೆದು, ಕತ್ತರಿಯಂತಹ ರಚನೆಯಿಂದ ಕ್ರಿಮಿಕೀಟಗಳನ್ನು ಹಿಡಿದು ತಿನ್ನುತ್ತವೆ. ಚಲಿಸಲು ಬಳಸುವ ಪಾರ್ಶ್ವಪಾದಗಳು ಸಹ ಹೊಂದಾಣಿಕೆಯಿಂದಲೇ. ಇದೇ ಗುಂಪಿಗೆ ಸೇರಿದ ನಳಿಕೆ ಹುಳುಗಳು ತಾವೇ ನಿರ್ಮಿಸಿದ ನಳಿಕೆಗಳಲ್ಲಿ ಜೀವಿಸುವುದರಿಂದ ನೀರನ್ನು ಮತ್ತು ಆಹಾರವನ್ನು ನಳಿಕೆಯೊಳಗೆ ಎಳೆಯಲು ಮತ್ತು ತ್ಯಾಜ್ಯವಸ್ತುಗಳನ್ನು ಹೊರಹಾಕಲು ವಿವಿಧ ಬಗೆಯ ರಚನೆಗಳನ್ನು ಹೊಂದಿವೆ. ಅಲ್ಲದೇ ಆಲಿಗೋಕೀಟಕ್ಕೆ ಸೇರಿದ ಎರೆಹುಳುಗಳು ಬರೀಮಣ್ಣನ್ನು ತಿಂದು ಜೀವಿಸುವುದು ಒಂದು ವಿಚಿತ್ರವೇ ಸರಿ. ಇದರ ಶರೀರವು ಈ ದಿಕ್ಕಿನಲ್ಲಿ ಮಾರ್ಪಾಟಾಗಿದೆ. ಕೊನೆಯದಾಗಿ ಹಿರುಡೀನಿಯ ಗುಂಪಿಗೆ ಸೇರಿದ ವಿವಿಧ ಬಗೆಯ ಜಿಗಣೆಗಳು ಸಸ್ಯದ ಜೀವದ್ರವ್ಯವನ್ನಾಗಲೀ ಪ್ರಾಣಿಗಳ ರಕ್ತವನ್ನಾಗಲಿ ಹೀರಿ ಜೀವಿಸುತ್ತವೆ. ಇವು ಚಲಿಸಲು ಎರಡು ಹೀರು ಬಟ್ಟಲುಗಳನ್ನು ಮತ್ತು ಚರ್ಮವನ್ನು ಕೊರೆದು ಅಥವಾ ಸೀಳಿ ರಕ್ತ ಹೀರಲು ಮೂರು ಗರಗಸದಂತಹ ಹಲ್ಲುಗಳನ್ನು ಬಳಸುತ್ತವೆ. ರಕ್ತವನ್ನು ದೇಹದಲ್ಲಿ ಮೂರು ನಾಲ್ಕು ತಿಂಗಳು ಬೇಕಾದರೂ ಶೇಖರಿಸಿಡುತ್ತವೆ. ಇಲ್ಲಿ ರಕ್ತ ಹೆಪ್ಪುಕಟ್ಟುವುದಿಲ್ಲ. ಕಾರಣ ಹಿರುಡಿನ್ ಎಂಬ ರಸವನ್ನು ಇದು ಹೊಂದಿರುತ್ತದೆ. ಆಹಾರ ಸಿಗದೇ ಇದ್ದರೆ ಸುಮಾರು ಆರು ತಿಂಗಳು ಉಪವಾಸವಿರಬಲ್ಲುದು. (ಜಿ.ಎಂ.ಬಿ.)

**ಅಪವಾಹಿಕಮಾನುಗಳು (ಕಾಲಿನಿಕ / ತುಲನಾತ್ಮಕ):** ಕೆಳಮಹಾಧಮನಿಯನ್ನು ಮೇಲು ಮಹಾಧಮನಿಯ ಜೊತೆ ಕೂಡಿಸುವ ರಕ್ತನಾಳಗಳು. ಕಶೇರುಕ ಪ್ರಾಣಿಯಲ್ಲಿ ಆರು ಅಪವಾಹಿಕಮಾನುಗಳಿವೆ. ಅಪವಾಹಿಕಮಾನುಗಳು ಘುಪ್ಪುಸಗಳ ಸಂದುಗಳಲ್ಲಿ ಬೆಳೆವುದರಿಂದ, ಇವುಗಳನ್ನು ಆಧಾರವಾಗಿಟ್ಟುಕೊಂಡು, ಅಂತ್ರದ ಮೂಳೆಗಳ ಅನುರೂಪದ ಘುಪ್ಪುಸ ಕಮಾನುಗಳ ಆಧಾರದ ಮೇಲೆ ಅಪವಾಹಿಕಮಾನುಗಳನ್ನು ಹೆಸರಿಸಿಲಾಗಿದೆ. ಒಂದನೆಯ ಜೊತೆ ಅಪವಾಹಿಕಮಾನಿಗೆ ಮ್ಯಾಂಡಿಬುಲಾರ್, 2ನೆಯದಕ್ಕೆ ಹೈಯಾಯಿಡ್, 3, 4, 5 ಮತ್ತು 6 ನೆಯವುಗಳಿಗೆ ಕ್ರಮವಾಗಿ 1, 2, 3 ಮತ್ತು 4ನೇ ಕ್ಲೋಮಕಮಾನು ಅಥವಾ 1, 2, 3, 4, 5 ಮತ್ತು 6ನೇ ಅಪವಾಹಿಕಮಾನುಗಳೆನ್ನುವರು. ಉದಾ: ಮೀನುಗಳಲ್ಲಿ ರಕ್ತನಾಳಗಳು ಜಲಘುಪ್ಪುಸಗಳಿಂದ ಮತ್ತು ಜಲಘುಪ್ಪುಸಗಳ ಕಡೆಗೆ ರಕ್ತವನ್ನು ಕೊಂಡೊಯ್ಯುವ ಧಮನಿಗಳಾಗಿ ಅಭಿವರ್ಧಿಸುತ್ತವೆ.

ಬ್ರಾಂಕಿಯೋಸ್ಟೊವು ಅಥವಾ ಆಂಫಿಯಾಕ್ಸಸ್‌ನಲ್ಲಿ 60 ಜೊತೆ ಅಪವಾಹಿಕಮಾನುಗಳಿರುತ್ತವೆ. ಮೂಲ ರೂಪದ ಮೀನುಗಳಾದ ಸೈಕ್ಲೋಸ್ಟೋಮಗಳಲ್ಲಿ ಅವುಗಳ ಸಂಖ್ಯೆಯು ಕಾರ್ಯನಿರತ ಜಲಫುಪ್ಫುಸ ಸಂದುಗಳಷ್ಟೇ ಸಂಖ್ಯೆಯಲ್ಲಿವೆ. ಉದಾ: ಪೆಟ್ರೊಮೈಜಾನ್‌ನಲ್ಲಿ 8 ಜೊತೆ ಅಪವಾಹಿಕಮಾನುಗಳಿವೆ. 4 ಜೊತೆ ಕವಲೊಡೆದ ಕೆಳ ಮಹಾಕಮಾನಿನಿಂದ ಹೊರಡುತ್ತವೆ. ಉಳಿದ 4 ಜೊತೆ, ಕವಲೊಡೆಯದ ಕೆಳ ಮಹಾಧಮನಿಯಿಂದ ಹೊರಡುತ್ತವೆ. ಬೆಲೆಡುಸ್ಟೊವುದಲ್ಲಿ 15 ಜೊತೆ ಅಪವಾಹಿಕಮಾನಿಗಳಿವೆ. ಮೀನುಗಳಲ್ಲಿ ಅಪವಾಹಿಕಮಾನುಗಳು ಐದು. ಆದರೆ, ಹೆಪ್ಟಾಂಕಸ್ ಮೀನಿನಲ್ಲಿ 7 ಜೊತೆ ಮತ್ತು ಹೆಕ್ಸಾಂಕಸ್‌ನಲ್ಲಿ 6 ಜೊತೆ ಇವೆ.

ಚತುರ್ಪಾದಿಗಳಲ್ಲಿ (ದ್ವಿಚರಿಗಳು, ಸರೀಸೃಪಗಳು, ಪಕ್ಷಿಗಳು ಮತ್ತು ಸ್ತನಿಗಳು) ಮುಂದಿನ ಎರಡು ಜೊತೆಯ ರಕ್ತನಾಳಗಳಿಲ್ಲ. ಮೂರನೆಯ ಜೊತೆಯು ಕೆರೋಟಿಡ್ ಧಮನಿಗಳ ಕೆಳಭಾಗವನ್ನು ರಚಿಸುತ್ತದೆ. ನಾಲ್ಕನೆಯ ಜೊತೆಯು ಸಿಸ್ಟಮಿಕ್ ಕಮಾನಾಗಿ ಆಕೃತಿಗೊಳ್ಳುತ್ತದೆ (ಪಕ್ಷಿಗಳು ಮತ್ತು ಸ್ತನಿಗಳಲ್ಲಿ ಒಂದೇ ಬದಿಯಲ್ಲಿರುತ್ತದೆ). ಐದನೆಯ ಜೊತೆಯು ಅದೃಶ್ಯವಾಗಿರುತ್ತದೆ ಮತ್ತು 6 ನೆ ಜೊತೆಯು ಪಲ್ಮನರಿಧಮನಿಗಳ ಭಾಗವನ್ನು ರಚಿಸುತ್ತದೆ. ಶ್ವಾಸಕೋಶಗಳ ಮೂಲಕ ಉಸಿರಾಡುವ ಮೇಲ್ಮಟ್ಟದ ಪ್ರಾಣಿಗಳಲ್ಲಿ ಫುಪ್ಫುಸಗಳಿಲ್ಲ. ಕೆಳಮಹಾಧಮನಿಯ ಕವಲುಗಳು ರಕ್ತವಾಹಿನಿಗಳಾಗಿ ಚದುರಿ ಹೋಗದೆ, ನೇರವಾಗಿ ಮೇಲು ಮಹಾಧಮನಿಯ ಕಡೆಗೆ ಹೋಗಿ, ಜೊತೆಗೂಡಿ ಅಪವಾಹಿಕಮಾನುಗಳನ್ನು ರಚಿಸುತ್ತವೆ.

ಕಶೇರುಕ ಪ್ರಾಣಿಗಳ ಭ್ರೂಣಾವಸ್ಥೆಯಲ್ಲಿ 6 ಜೊತೆ ಅಪವಾಹಿಕಮಾನುಗಳಿವೆ. ಇವು ಪ್ರೌಢಾವಸ್ಥೆಯಲ್ಲಿ ನಾನಾರೀತಿ ಮಾರ್ಪಾಟಾಗುತ್ತವೆ. ಮೊದಲನೆ ಜೊತೆಯು ಬಾಯಿ ಮತ್ತು ಮೊದಲನೆಯ ಫುಪ್ಫುಸಗುಳಿಗಳ ಮಧ್ಯೆ ಪವಡಿಸಿರುತ್ತದೆ ಮತ್ತು ಕೊನೆ ಜೊತೆಯು ಕೊನೆಯ ಫುಪ್ಫುಸ ರಂಧ್ರದ ಮುಂದೆ ಇರುತ್ತದೆ. ಮೀನುಗಳಲ್ಲಿ ಮೊದಲನೆಯ ಎರಡು ಜೊತೆ ನಶಿಸಿ ಹೋಗಿವೆ. ಎಲ್ಲಾ ಚತುಷ್ಪಾದಿಗಳಲ್ಲಿ ಮೊದಲನೆ ಎರಡು ಜೊತೆ ಅಪವಾಹಿಕಮಾನುಗಳು ಭ್ರೂಣಾವಸ್ಥೆಯಲ್ಲಿ ಇರುವುದಿಲ್ಲ. ಆದ್ದರಿಂದ ಪ್ರೌಢಾವಸ್ಥೆಯಲ್ಲಿ ಕಾಣಿಸುವುದಿಲ್ಲ.

ಅಪವಾಹಿಕಮಾನುಗಳು (3,4,5 ಮತ್ತು 6 ನೆ ಜೊತೆಗಳು) ಕ್ಲೋಮಕಮಾನುಗಳಾಗಿ ಮುಂದುವರಿಯುತ್ತವೆ ಮತ್ತು ಇವುಗಳ ಅಭಿವಾಹಿ ಮತ್ತು ಅಪವಾಹಿ ಭಾಗಗಳು ಫುಪ್ಫುಸಗಳ ಸೂಕ್ಷ್ಮರಕ್ತವಾಹಿನಿಗಳ ಜಾಲದ ಹತ್ತಿರ ಸೇರಿಕೊಂಡಿವೆ. ದ್ವಿಚರ ಗುಂಪಿನ ಯುರೋಡಿಲ ವರ್ಗದ ಪ್ರಾಣಿ (ಬಾಲವಿರುವ ದ್ವಿಚರಿ)ಗಳಲ್ಲಿ ಮೊದಲನೆ ಎರಡು ಜೊತೆ ಅಪವಾಹಿಕಮಾನುಗಳು ಬೆಳವಣಿಗೆಯ ಹಂತದಲ್ಲೆ ಅದೃಶ್ಯವಾಗಿವೆ. ಉಳಿದ 4 ಜೊತೆಗಳು ಮುಂದುವರೆದಿರುತ್ತವೆ. ಬಾಹ್ಯ ಜಲಫುಪ್ಫುಸ ಅಥವಾ ಶ್ವಾಸಾಂಗಗಳಿರುವಿಕೆಗೆ ಸಂಬಂಧಿಸಿದಂತೆ ಅಪವಾಹಿಕಮಾನುಗಳಿಂದ ಬಾಹ್ಯ ಜಲಫುಪ್ಫುಸಗಳ ಕಡೆಗೆ ಕೆಲವು ಗಂಟು ರಕ್ತನಾಳಗಳು ಬಡಾಯಿಸಿರುತ್ತವೆ. ಮೂರನೆ ಜೊತೆ ಅಪವಾಹಿಕಮಾನುಗಳು ಮೊದಲನೆ ಎರಡು ಜೊತೆ ಕಮಾನುಗಳ ಉಳಿಕೆಯ ಜೊತೆ ಕೂಡಿಕೊಂಡು ಕೆರೋಟಿಡ್ ಧಮನಿಗಳನ್ನು ರಚಿಸುತ್ತದೆ. 4 ಮತ್ತು 5ನೆ ಜೊತೆ ಕಮಾನುಗಳು ಮುಂದುವರೆದು, ಒಂದಕ್ಕೊಂದು ಸೇರಿಕೊಂಡು, ಮೇಲು ಮಹಾಧಮನಿಗೆ ಆಕಾರಕೊಡುತ್ತವೆ. ನಾಲ್ಕನೆಯ ಜೊತೆಯ 5 ನೆಯದಕ್ಕಿಂತ ದೊಡ್ಡದು. 6ನೆ ಜೊತೆಯು ಪಲ್ಮೋಕ್ಯುಟೇನಿಯಸ್ ಕಮಾನಾಗುತ್ತದೆ. 3 ಮತ್ತು 4ನೆ ಜೊತೆ ಕಮಾನುಗಳನ್ನು ಜೊತೆಗೂಡಿಸುವ ಪಾರ್ಶ್ವ ಮೇಲು ಧಮನಿಯ ಭಾಗವು ಕೆರೋಟಿಡ್ (ಡಕ್ಟಸ್‌ಕೆರೋಟಿಕಸ್) ನಾಳವಾಗಿ ಉಳಿಯುತ್ತದೆ. ಪಲ್ಮೋಕ್ಯುಟೇನಿಯಸ್ ಕಮಾನಿಗೆ ಮೇಲುಗಡೆ ಇರುವ ಆ ಭಾಗದ 6ನೆ ಜೊತೆ ಅಪವಾಹಿಕಮಾನು ಎರಡು ಕಡೆಯು ಡಕ್ಟಸ್ ಬೊಟಲ್ಲೈ ಅಥವಾ ಡಕ್ಟಸ್ ಆರ್ಟೀರಿಯೋಸಸ್ ಆಗಿ ಮುಂದುವರಿಯುತ್ತದೆ.

ದ್ವಿಚರ ಪ್ರಾಣಿಗಳ ಗುಂಪಿನ ಮತ್ತೊಂದು ವರ್ಗದಿಂದ ಆನೂರದ ಪ್ರೌಢಾವಸ್ಥೆಯ ಪ್ರಾಣಿಗಳಲ್ಲಿ ಜಲಫುಪ್ಫುಸಗಳಿರುವುದಿಲ್ಲ. ಆದ್ದರಿಂದ ಬೇರೆ ಚತುಷ್ಪಾದಿಗಳಂತೆ ಇವುಗಳಲ್ಲಿ ಕ್ಲೋಮನಾಳಗಳ ಜಾಲವಿರುವುದಿಲ್ಲ. 3ನೆ ಜೊತೆಯ ಅಪವಾಹಿಕಮಾನುಗಳ ಕೆರೋಟಿಡ್ ಧಮನಿಗಳ ಬುಡವನ್ನು ರಚಿಸುತ್ತವೆ. 4ನೆ ಜೊತೆಯು ಸಿಸ್ಟಮಿಕ್ ಕಮಾನಾಗುತ್ತದೆ. ಎರಡು ಕಡೆಯ ಸಿಸ್ಟಮಿಕ್ ಕಮಾನುಗಳ ನಾಳಗಳು ಒಂದುಗೂಡಿ ಮಧ್ಯಂತರ ಮೇಲು ಧಮನಿಯಾಗಿ ಆಕೃತಿಗೊಳ್ಳುತ್ತವೆ. 5ನೆ ಜೊತೆಗಳು ಕಾಣಿಸುವುದಿಲ್ಲ. ಕೊನೆ ಜೊತೆಯ ಕಮಾನುಗಳು ಪಲ್ಮೋಕ್ಯುಟೇನಿಯಸ್ ಧಮನಿಗಳಾಗಿ ಆಕೃತಿಗೊಳ್ಳುತ್ತವೆ ಮತ್ತು ಮೇಲು ಮಹಾಧಮನಿಯ ಜೊತೆ ಇರುವ ಅವುಗಳ ಸಂಬಂಧವನ್ನು ಕಳೆದುಕೊಳ್ಳುತ್ತವೆ.

ಸರೀಸೃಪಗಳಲ್ಲಿ ಅಪವಾಹಿಕಮಾನುಗಳ ವ್ಯವಸ್ಥೆಯು ಅನೂರದಲ್ಲಿರುವಂತೆಯೆ ಇರುತ್ತದೆ. ಅಂದರೆ 3 ನೆ ಜೊತೆಯು ಕೆರೋಟಿಡ್ ಧಮನಿಗಳನ್ನು ಕೊಡುತ್ತದೆ. 4 ನೆ ಜೊತೆಯು ಸಿಸ್ಟಿಮಿಕ್‌ಕಮಾನಿನಲ್ಲಿ ರಚಿಸುತ್ತದೆ. 5 ನೇ ಜೊತೆ ಕಾಣಿಸುವುದಿಲ್ಲ ಮತ್ತು ಕೊನೆಯ ಜೊತೆಯ ಪಲ್ಮನರಿ ರಕ್ತನಾಳವು ಕೆಲವು ಪರಿಸ್ಥಿತಿಯಲ್ಲಿ ಡಕ್ಟಸ್‌ಬೊಟಾಲ್ಲೆ ಅಥವಾ ಡಕ್ಟಸ್ ಆರ್ಟೀರಿಯೋಸಸ್ ಮೂಲಕ ಸೇರಿಕೊಂಡಿರುತ್ತವೆ.

ಪಕ್ಷಿಗಳಲ್ಲಿ 4 ನೆ ಬಲಗಡೆಯ ಅಪವಾಹಿಕಮಾನು ಸಿಸ್ಟಮಿಕ್ ಕಮಾನಾಗಿ ಮುಂದುವರಿದು, ಅದಕ್ಕೆ ಸಂಬಂಧಿಸಿದ ಎಡಗಡೆಯ ಅಪವಾಹಿಕಮಾನು ಎಡಗಡೆಯ ಸಬ್ ಕ್ಲೇವಿಯನ್ ಆಗಿ ಆಕೃತಿಗೊಳ್ಳುತ್ತದೆ ಮತ್ತು 5 ನೆ ಜೊತೆ ಇಲ್ಲ. 6 ನೆ ಜೊತೆ ಪಲ್ಮನರಿ ಧಮನಿಯಾಗುತ್ತದೆ.

ಸ್ತನಿಗಳಲ್ಲಿ ಅಪವಾಹಿಕಮಾನುಗಳ ಸ್ಥಿತಿಯು ಪಕ್ಷಿಗಳಲ್ಲಿರುವ ಸ್ಥಿತಿಯನ್ನು ಹೋಲುತ್ತದೆ. ಆದರೆ ಇವುಗಳಲ್ಲಿ ಬಲಗಡೆಯದಕ್ಕೆ ಬದಲಾಗಿ ಎಡಗಡೆಯ 4ನೆ ಅಪವಾಹಿಕಮಾನು ಸಿಸ್ಟಮಿಕ್ ಕಮಾನಾಗುತ್ತದೆ ಮತ್ತು ಅದರ ಜೊತೆಯ ಬಲಗಡೆಯ ಕಮಾನು ಬಲಗಡೆಯ ಸಬ್‌ಕ್ಲೇವಿಯನ್ ಆಗಿ ಆಕೃತಿಗೊಳ್ಳುತ್ತದೆ. 5 ನೆ ಜೊತೆ ಇರುವುದಿಲ್ಲ ಮತ್ತು 6 ನೆ ಜೊತೆ ಪಲ್ಮನರಿ ಧಮನಿಗಳಾಗಿ ಬೆಳೆಯುತ್ತವೆ. (ವಿ.ಕೆ.)

**ಅಪಾರದರ್ಶಿ ಕ್ಷೇತ್ರ:** ಕೋಳಿ ಮೊಟ್ಟೆಯ ಬೆಳವಣಿಗೆಯ ಸಮಯದಲ್ಲಿ ಬ್ಲಾಸ್ಟೊಡರ್ಮ್‌ನಲ್ಲಿ ಕಂಡುಬರುವ ಒಂದು ಪ್ರದೇಶ. ಏರಿಯಾ ಒಪೇಕಾ ಎಂದೂ ಹೆಸರು. ಕೋಳಿ ಮೊಟ್ಟೆಯ ಬೆಳವಣಿಗೆಯಲ್ಲಿ ವಿದಳನದ ನಂತರ ಬ್ಲಾಸ್ಟೊಡರ್ಮ್ ರೂಪುಗೊಳ್ಳುತ್ತದೆ. ಈ ಬ್ಲಾಸ್ಟೊಡರ್ಮ್ ಗ್ಯಾಸ್ಟ್ರುಲಾ ಆಗುವ ಮೊದಲು ಅನೇಕ ಪ್ರಾದೇಶಿಕ ವ್ಯತ್ಯಾಸವನ್ನು ತೋರುತ್ತದೆ. ತನ್ನ ಕೆಳಗಿರುವ ಭಂಡಾರದಿಂದ ಪ್ರತ್ಯೇಕಿಸಿ ಸಿದ್ಧಪಡಿಸಿದ ಬ್ಲಾಸ್ಟೊಡರ್ಮನ್ನು ಸೂಕ್ಷ್ಮದರ್ಶಕದಡಿಯಲ್ಲಿ ವೀಕ್ಷಿಸಿದಾಗ ಅದರ ಬಾಹ್ಯ ಪರಿಧಿ ಪ್ರದೇಶವು ಕೇಂದ್ರ ಪ್ರದೇಶಕ್ಕಿಂತ ಹೆಚ್ಚು ದಟ್ಟವಾಗಿರುತ್ತದೆ. ಪ್ರಾಯಶಃ ಹೀಗೆ ಪ್ರತ್ಯೇಕಿಸುವಾಗ ಬ್ಲಾಸ್ಟೊಡರ್ಮ್ ಮತ್ತು ಭಂಡಾರ ಸಂಧಿ ವಲಯವು (ಝೋನ್ ಆಫ್ ಜಂಕ್ಷನ್) ಹರಿದು ಬಂದಿರುವುದೇ ಇದಕ್ಕೆ ಕಾರಣವಿರಬಹುದು. ಹೀಗಾಗಿ ಭಂಡಾರದ ಬಹುಭಾಗವು ಅದರ ಪರಿಧಿಯ ಸುತ್ತಲೂ ಅಂಟಿಕೊಂಡಿರಬಹುದು.

ಬ್ಲಾಸ್ಟೊಸೀಲ್ ಮೂಲಕ ಭಂಡಾರದಿಂದ ಪ್ರತ್ಯೇಕಗೊಂಡ ಕೇಂದ್ರಕೋಶಗಳು ಪಾರದರ್ಶಕವಾಗಿ ನಿರಭ್ರವಾಗುಳಿಯುತ್ತವೆ. ಆದ್ದರಿಂದ ಈ ಕ್ಷೇತ್ರವನ್ನು ಪೆಲುಸಿಡ ಕ್ಷೇತ್ರವೆನ್ನುತ್ತಾರೆ. ಅದೇ ಪರಿಧಿ ಪ್ರದೇಶದ ಕೋಶಗಳು ಬಂಡಾರದ ಮೇಲೆ ನೇರವಾಗಿರುವುದರಿಂದ ಅಪಾರದರ್ಶಕವಾಗಿರುತ್ತವೆ. ಆದ್ದರಿಂದ ಇದಕ್ಕೆ ಅಪಾರದರ್ಶಿ ಕ್ಷೇತ್ರವೆಂದು ಹೆಸರು. ಆರಂಭ ಹಂತದಲ್ಲಿ ಕಿರಿದಾದ ಅಪಾರದರ್ಶಿ ಕ್ಷೇತ್ರವು ನಂತರ ತೀರಾ ಭಿನ್ನವಾಗುತ್ತದೆ. ಅದರ ತೀರಾ ಹೊರಗಿನ ಪರಿಧಿಕೋಶಗಳು ವೇಗವಾಗಿ ಬೆಳೆದು ಭಾಗಶಃ ಬಂಡಾರದಿಂದ ಮೇಲೆ ಉಬ್ಬಿ ಮಿತಿಮೀರಿ ಪರಿವೃದ್ಧಿಗೊಂಡ ಅಂಚನ್ನು (ಮಾರ್ಜಿನ್ ಆಫ್ ಓವರ್‌ಗ್ರೋತ್) ರೂಪಿಸುತ್ತದೆ. ಬ್ಲಾಸ್ಟೊಡರ್ಮ್ ಗಾತ್ರದಲ್ಲಿ ಹೆಚ್ಚಿದಂತೆ ಸಂಧಿವಲಯವು ಇನ್ನೂ ಹೊರಗಡೆಗೆ ತಳ್ಳಲ್ಪಡುವುದರಿಂದ ಪೆಲುಸಿಡ ಕ್ಷೇತ್ರದ ಹರವಿಗೆ ಕೋಶಗಳು ಬಿಡುಗಡೆಗೊಳ್ಳುತ್ತವೆ.

ಇಪ್ಪತ್ತನಾಲ್ಕು ಗಂಟೆಯ ಭ್ರೂಣದಲ್ಲಿ ಅಪಾರದರ್ಶಿ ಕ್ಷೇತ್ರ ಮತ್ತು ಪೆಲುಸಿಡ ಕ್ಷೇತ್ರಗಳು ಆರಂಭದ ಹಂತಗಳಲ್ಲಿದ್ದ ಮೂಲಭೂತ ಸಂಬಂಧವನ್ನೇ ಉಳಿಸಿಕೊಂಡಿವೆ. ಆದರೆ ಭ್ರೂಣಪ್ರದೇಶ ಹಾಗೂ ಮಧ್ಯದರ್ಮದ ಪರಿವೃದ್ಧಿಯು ಭಾಗಶಃ ಪೆಲುಸಿಡ ಕ್ಷೇತ್ರದ ನಿರ್ದಿಷ್ಟ ಪರಿಮಿತಿಯನ್ನು ಮಸುಕುಗೊಳಿಸುತ್ತದೆ. ಇದು ಅಪಾರದರ್ಶಿ ಕ್ಷೇತ್ರಕ್ಕೆ ಹೆಚ್ಚಿನ ರೀತಿಯಲ್ಲಿ ಅನ್ವಯಿಸುತ್ತದೆ. ಪೆಲುಸಿಡ ಕ್ಷೇತ್ರವು ಮಾತ್ರ ಭ್ರೂಣ ದೇಹರಚನೆಗೆ ಅಗತ್ಯವಾದ ವಸ್ತುವನ್ನು ಮತ್ತು ಅಪಾರದರ್ಶಿ ಕ್ಷೇತ್ರ ಕೋಶಗಳು ಕೆಳಗಿರುವ ಬಂಡಾರವನ್ನು ವಿಭಜಿಸಿ ಭ್ರೂಣಕ್ಕೆ ಅಪರೋಕ್ಷವಾಗಿ ಆಹಾರವಸ್ತುಗಳನ್ನು ಸರಬರಾಜು ಮಾಡುತ್ತವೆ.

ಪೆಲುಸಿಡ ಕ್ಷೇತ್ರಕ್ಕೆ ಸಮೀಪದಲ್ಲಿ ಮತ್ತು ಅದನ್ನು ಅತಿಕ್ರಮಿಸಿದ ಅಪಾರದರ್ಶಿಕ್ಷೇತ್ರದ ಪಶ್ಚಅರ್ಧದಲ್ಲಿ ಕಲೆ ಮತ್ತು ಕರೆಗಳಿಂದ ಕೂಡಿದ ಭಿನ್ನಪ್ರದೇಶವೊಂದು ರೂಪುಗೊಳ್ಳುತ್ತದೆ. ಇದಕ್ಕೆ ಅಪಾರದರ್ಶಿ ರಕ್ತಪರಿಚಲನಾ ಕ್ಷೇತ್ರ (ಏರಿಯಾ ಒಪೆಕಾ ವ್ಯಾಸ್ಕುಲೋಸ) ಅಥವಾ ಅಪಾರದರ್ಶಿ ಕ್ಷೇತ್ರ ರಕ್ತ ಪರಿಚಲನಾಂಗ ಮಂಡಲವೆನ್ನುತ್ತಾರೆ. ಇದು ಬಹಿರ್‌ಭ್ರೂಣೀಯ ರಕ್ತ ಪರಿಚಲನಾಂಗದ ಬಹುಭಾಗವನ್ನು ರೂಪಿಸುತ್ತದೆ. ಮುಂದಿನ ಹಂತಗಳಲ್ಲಿ ಇದು ಭ್ರೂಣವನ್ನು ಸಂಪೂರ್ಣವಾಗಿ ಸುತ್ತುವರಿಯುತ್ತದೆ. ರಕ್ತ ಪರಿಚಲನಾಂಗ ಕ್ಷೇತ್ರವು ಅಪಾರದರ್ಶಿಕ್ಷೇತ್ರವನ್ನು ಸಂಪೂರ್ಣವಾಗಿ ಆಕ್ರಮಿಸುವುದಿಲ್ಲ. ಆರಂಭದಲ್ಲಿ ಪೆಲುಸಿಡ ಕ್ಷೇತ್ರದ ಪಕ್ಕದ ಭಾಗಕ್ಕೆ ಸೀಮಿತವಾಗಿರುತ್ತದೆ. ರಕ್ತ ಪರಿಚಲನಾಂಗ ಕ್ಷೇತ್ರದಾಚೆಯ ಅಪಾರದರ್ಶಿ ಕ್ಷೇತ್ರವು ಕಲೆ ಮತ್ತು ಕರೆಗಳಿಂದ ಮುಕ್ತವಾಗಿದೆ. ಈ ಪರಿಧಿ ಪ್ರದೇಶಕ್ಕೆ ಅಪಾರದರ್ಶಿ ಕ್ಷೇತ್ರ ವೈಟಲಿನ ಎಂದು ಹೆಸರು. (ಬಿ.ಕೆ.ಜೆ.)

**ಅಪೊಡ:** ತೆಳುವಾದ ಶರೀರದ, ಪಾದಗಳಿಲ್ಲದ, ಹುಳುವಿನಂತೆ ಕಾಣಿಸುವ, ಚರ್ಮದೊಳಗೆ ಹುರುಪೆಗಳನ್ನು ಹೊಂದಿರುವ, ಸರ್ವೇ ಸಾಮಾನ್ಯವಾಗಿ ಉಷ್ಣವಲಯಗಳಲ್ಲಿ ಕಾಣಿಸಿಕೊಳ್ಳುವ ದ್ವಿಚರ ಪ್ರಾಣಿಗಳ ಒಂದು ವರ್ಗ. ಜಿಮ್ನೊಫಿಯಾನ ಅಥವಾ ಸಿಸಿಲಿಯ

ಎಂಬ ಹೆಸರುಗಳೂ ಇವೆ. ಈಗ ಜೀವಂತವಾಗಿರುವ ಸ್ಫಿಗೋಸೆಫಾಲಿ ಗುಂಪಿನ ಏಕಮೇವ ಪ್ರತಿನಿಧಿಗಳು. ಇವು ಉಷ್ಣವಲಯ ದೇಶಗಳಾದ ಭಾರತ, ಸಿಲೋನ್, ಆಫ್ರಿಕ ಮತ್ತು ಅಮೆರಿಕ ದೇಶಗಳಲ್ಲಿ ಕಾಣಸಿಗುತ್ತವೆ. ಸಾಮಾನ್ಯವಾಗಿ ಬೇರೆ ಜೀವಂತವಾಗಿರುವ ದ್ವಿಚರ ಪ್ರಾಣಿಗಳಿಗಿಂತ ಭಿನ್ನವಾಗಿರುತ್ತವೆ.

ಈ ಗುಂಪಿನ ಪ್ರಾಣಿಗಳು ಮೂಳೆಗಳಿಂದ ಹೊದ್ದಿಸಿದ ನಿಬಿಡವಾದ ತಲೆ ಬುರುಡೆಯನ್ನು ಹೊಂದಿರುತ್ತವೆ. ಪಕ್ಕೆಲುಬುಗಳು ಉದ್ದನಾಗಿರುತ್ತವೆ. ಚರ್ಮವು ಮೃದುವಾಗಿರುತ್ತವೆ ಮತ್ತು ಶ್ಲೇಷ್ಮ ಮತ್ತು ಸ್ಕ್ವಿಡ್ ಗ್ರಂಥಿಗಳನ್ನು ಹೊಂದಿರುತ್ತವೆ. ಕಣ್ಣು ಮತ್ತು ನಾಸಿಕ ರಂಧ್ರಗಳ ಮಧ್ಯದಲ್ಲಿ, ಮ್ಯಾಕ್ಸಿಲ್ಲಾದ ಕೋಡಿನಲ್ಲಿ ಚಿಕ್ಕದಾಗಿ ಹೊರಚಾಚಿಕೊಂಡಿರುವ, ಗುಂಡಾಗಿರುವ ಅಥವಾ ಗೋಳಾಕೃತಿಯ, ಇಂದ್ರಿಯ ಸಂಬಂಧವಾದ ಒಂದು ವಿಚಿತ್ರವಾದ ಸಲಕರಣೆಯನ್ನು ಹೊಂದಿವೆ. ಇದಕ್ಕೆ ಗ್ರಹಣಾಂಗ ಸಲಕರಣೆ (ಟೆಂಟಾಕ್ಯುಲರ್ ಆಪರೇಟಸ್) ಎಂದು ಹೆಸರು. ಕಣ್ಣುಗಳಿಗೆ ರೆಪ್ಪೆಗಳಿರುವುದಿಲ್ಲ. ಬಾಲವು ಅತಿ ಚಿಕ್ಕದಾಗಿರುತ್ತದೆ. ಗಂಡು ಪ್ರಾಣಿಗಳು ಒಂದು ವಿಶಿಷ್ಟವಾದ ಹೊರ ಚಾಚಿಕೊಂಡಿರುವ ಸಂಭೋಗನಾಂಗ (ಕಾಪುಲೇಟರಿ ಅಂಗ) ವನ್ನು ಹೊಂದಿವೆ.

ನಮಗೆ ತಿಳಿದಿರುವ ಯಾವ ಪಳಿಯುಳಿಕೆಗಳೂ ಈ ಗುಂಪಿನಲ್ಲಿಲ್ಲ. ಈ ವರ್ಗ ಸು. 55 ನೂತನ ಜೀವ ಜಾತಿಗಳನ್ನು ಹೊಂದಿದೆ. ಇವುಗಳ ಗಾತ್ರವು 10 ಸೆಂಮೀ ನಿಂದ ಅನೇಕ ಮಿ ಗಳಷ್ಟಿರುತ್ತದೆ. ಇವುಗಳ ಮರಿಗಳಲ್ಲಿ ಹೊರ ಘುಪ್ಪುಸಗಳಿವೆ.

ಉದಾ: ಇಕ್ತಿಯೋಫಿಸ್, ಗೆಗೆನೊಫಿಸ್, ಯೂರಿಯೋಟಿಪ್ಲಸ್, ಸೈಫೊನಾಡ್ಸ್, ಜಿಮ್ನೊಫಿಸ್ ಮುಂತಾದುವು.

ಇಕ್ತಿಯೋಫಿಸ್ ಗ್ಲುಟಿನೋಸ ಎಂಬ ಒಂದು ಪ್ರಭೇದ ಉಷ್ಣವಲಯದ ಪ್ರದೇಶಗಳಾದ ಭಾರತದಿಂದ ಫಿಲಿಪೈನ್ಸ್, ಬೋರ್ನಿಯ ಜಾವ, ಸೆಶೆಲ್ಸ್‌ವರೆಗೂ, ಪೂರ್ವ ಮತ್ತು ಪಶ್ಚಿಮ ಆಫ್ರಿಕ, ಮೆಕ್ಸಿಕೊದಿಂದ ಅರ್ಜೆಂಟಿನವರೆಗೂ ಕಾಣಸಿಗುತ್ತವೆ. (ವಿ.ಕೆ.)

**ಅಪ್ಸರೆಕೀಟ:** ಮೊಟ್ಟೆಯಿಂದ ಹೊರಕ್ಕೆ ಬಂದು ಅಪೂರ್ಣ ರೂಪಾಂತರ ಹೊಂದಿ, ಕೊನೆಯ ಸಲ ಪೊರೆ ಬಿಟ್ಟು, ಪ್ರಾಯಕ್ಕೆ ಬರುವ ಕೀಟದ ಮರಿಯ ಹೆಸರು (ನಿಂಫ್). ಮಿಡತೆ, ತಿಗಣೆ, ಕೊಡತಿ ಹುಳು (ಡ್ರ್ಯಾಗನ್ ಫ್ಲೈ) ಮುಂತಾದ ಕೀಟಗಳ ಮರಿಗಳನ್ನು ಈ ಹೆಸರಿನಿಂದ ಕರೆಯುತ್ತಾರೆ. ಈ ಮರಿಗಳು ಮೊಟ್ಟೆಗಳಿಂದ ಹೊರಕ್ಕೆ ಬಂದಾಗ ಅವುಗಳ ಶರೀರರಚನೆ ಸ್ವಲ್ಪಮಟ್ಟಿಗೆ ಪ್ರಾಯದ ಅವಸ್ಥೆಯಲ್ಲಿದ್ದಂತೆಯೇ ಇರುತ್ತವೆ. ಆದರೆ ರೆಕ್ಕೆಗಳು ಮತ್ತು ಬಾಹ್ಯಜನನೇಂದ್ರಿಯ ಪೂರ್ತಿ ಬೆಳೆದಿರುವುದಿಲ್ಲ. ಬಾಯಿಭಾಗಗಳು, ಸಂಯುಕ್ತ ನೇತ್ರಗಳು ಪ್ರಾಯದ ಕೀಟಗಳಲ್ಲಿದ್ದಂತೆಯೇ ಇರುತ್ತವೆ. ಮರಿ ಪ್ರಾಯಕ್ಕೆ ಬರುವವರೆಗಿನ ಬೆಳವಣಿಗೆ ಸರಳವಾಗಿದ್ದು ಕೋಶಾವಸ್ಥೆ ಇರುವುದಿಲ್ಲ. ಮರಿ ಮತ್ತು ಪ್ರಾಯದ ಕೀಟಗಳ ನಡತೆ ಒಂದೇ. ಅವು ಒಟ್ಟಿಗೆ ಸೇರಿ ತಿನ್ನುತ್ತವೆ. ಮರಿಗಳು ಬೆಳೆದಂತೆಲ್ಲ ಪ್ರಾಯದ ಕೀಟಗಳನ್ನು ಹೆಚ್ಚುಹೆಚ್ಚಾಗಿ ಹೋಲುತ್ತವೆ.

ಮಿಡತೆ: ಮಿಡತೆಯ ಅಪ್ಸರೆ ಹುಟ್ಟಿದಾಗ ಸಾಮಾನ್ಯರೂಪಿನಲ್ಲಿ ತಾಯಿ ಮಿಡತೆಯನ್ನು ಹೋಲುತ್ತದೆ. ಆದರೆ ದವಡೆ, ಕಣ್ಣು, ಕಾಲು, ರೆಕ್ಕೆ ಇವು ತಾಯಿಗಿರುವಂತೆ ಇರುವುದಿಲ್ಲ. ಮೈಮೇಲಿನ ಗುರುತುಗಳೂ ಬೇರೆಯಾಗಿರಬಹುದು. ಕುಡಿಮೀಸೆ ಸರಳ ರೀತಿಯದು. 4–7 ಸಾರಿ ಪೊರೆಬಿಟ್ಟು, ಹಂತಗಳಲ್ಲಿ ಬೆಳೆದು ಕೊನೆಯ ಸಲ ಪ್ರಾಯಕ್ಕೆ ಬರುತ್ತದೆ. 2–3ನೆ ಯ ಹಂತಗಳಲ್ಲಿ ಎದೆಯ 2 ಮತ್ತು 3ನೆಯ ಖಂಡಗಳಮೇಲೆ ರೆಕ್ಕೆಗಳು ಕಾಣಿಸಿಕೊಂಡು ಅಪ್ಸರೆ ಬೆಳೆದಂತೆಲ್ಲ ರೆಕ್ಕೆಗಳು ದೊಡ್ಡವಾಗುತ್ತವೆ. ಹೆಣ್ಣು ಗಂಡಿನ ವ್ಯತ್ಯಾಸಗಳು ಸಹ ಮೊದಲೇ ಕಂಡುಬಂದು ಅಪ್ಸರೆ ಬೆಳೆದಂತೆಲ್ಲ ವ್ಯಕ್ತವಾಗುತ್ತವೆ.

ತಿಗಣೆ: ಮಿಡತೆಯ ಅಪ್ಸರೆಯಂತೆಯೆ. ಬಣ್ಣದಲ್ಲಿ ಬದಲಾವಣೆ ತೋರುತ್ತದೆ. ಬೆಳೆದ ಹಾಗೆ ಕುಡಿಮೀಸೆ ಮತ್ತು ಕಾಲಿನ ಕೊನೆಯ ತುಂಡುಗಳಲ್ಲೂ ವ್ಯತ್ಯಾಸ ಕಂಡುಬರುತ್ತವೆ. ಆ ತುಂಡುಗಳೆಲ್ಲ ಮೂಡಬೇಕಾದರೆ ಅಪ್ಸರೆ ಪ್ರಾಯಕ್ಕೆ ಬರಬೇಕು. ತಲೆ ಮತ್ತು ಎದೆಯ ಆಕಾರ ಪ್ರತಿ ಹಂತದಲ್ಲೂ ಬದಲಾಯಿಸುತ್ತದೆ. 3ನೆಯ ಹಂತದಲ್ಲಿ ರೆಕ್ಕೆಗಳ ಮೊಗ್ಗುಗಳು ಸ್ವಲ್ಪ ಕಂಡು 4ನೆಯ ಹಂತದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತವೆ. ಅದರ ಬೆಳವಣಿಗೆಯ ಹಂತಗಳ ಸಂಖ್ಯೆಯಲ್ಲಿ ವ್ಯತ್ಯಾಸವುಂಟು. ಹೆಚ್ಚೆಂದರೆ ಏಳು ಹಂತಗಳಿವೆ. ತಾಯಿ ಮತ್ತು ಅಪ್ಸರೆಗಳು ಜೊತೆಯಲ್ಲೆ ಇದ್ದು ಆಹಾರ ಸೇವಿಸುತ್ತವೆ.

ಕೊಡತಿ ಹುಳು: ಮರಿ ಮೊಟ್ಟೆಯಿಂದ ಹೊರಕ್ಕೆ ಬಂದಾಗ ಪೂರ್ವಅಪ್ಸರೆ ಸ್ಥಿತಿಯಲ್ಲಿದ್ದು (ಪ್ರೊನಿಂಫ್.), ಪೊರೆ ಬಿಟ್ಟು 2ನೆಯ ಹಂತದಲ್ಲಿ ಅಪ್ಸರೆಯಾಗುತ್ತದೆ. ಇದು ಜಲವಾಸಿ, ಕೀಟಾಹಾರಿ. ಉಸಿರಾಡುವ ವಿಧಾನದ ಮೇಲೆ ಅವುಗಳಲ್ಲಿ ಎರಡು ಬಗೆಯವನ್ನು ಕಾಣಬಹುದು: ಒಂದರ ಶರೀರದ ಕೊನೆಯಲ್ಲಿ 3 ಭಾಗಗಳಿದ್ದು ಅವು ಮುಚ್ಚಿಕೊಂಡಾಗ ಗೋಪುರಾಕೃತಿಯಾಗುತ್ತದೆ; ಆಸನದ್ವಾರ ಗೋಪ್ಯವಾಗುತ್ತದೆ. ಗುದನಾಳದಲ್ಲಿರುವ ಕಿವಿರುಗಳಿಂದ ಉಸಿರಾಟ ನಡೆಯುತ್ತದೆ. ಇನ್ನೊಂದರಲ್ಲಿ ಶರೀರದ ಕೊನೆಯ 3 ಭಾಗಗಳು ದೊಡ್ಡವಾಗಿದ್ದು, ವಿಶೇಷ ರೀತಿಯ ಆಸನಕಿವಿರುಗಳಾಗಿ (ಏನಲ್ ಗಿಲ್ಸ್) ಉಸಿರಾಟದ ಅಂಗಗಳಾಗುತ್ತವೆ. ಗುದನಾಳದ ಕಿವಿರುಗಳಿರುವುದಿಲ್ಲ. 11–15 ಸಾರಿ ಪೊರೆ ಬಿಡುತ್ತದೆ. ಪೂರ್ತಿ ಬೆಳೆಯಲು 1–2 ವರ್ಷಗಳು ಬೇಕು. ಇದರ ಬಾಯ ಭಾಗಗಳಲ್ಲಿ ಒಂದು ಮುಸುಕಿದೆ. ಇದೇ ಮಾರ್ಪಾಟಾದ ಕೆಳದುಟಿ. ಕೀಟಗಳನ್ನು ಹಿಡಿದುಕೊಳ್ಳುವ ಈ ಅಂಗವನ್ನು ಮಿಂಚಿನಂತೆ ಚಾಚಿ ಕೀಟವನ್ನು ಹಿಡಿದು, ಹಿಂದಕ್ಕೆ ಎಳೆದುಕೊಳ್ಳುತ್ತದೆ.

ಅಪ್ಸರೆಯ ಮುನ್ನೆದೆ ಉದ್ದ. ಎದೆಯ ಉಳಿದೆರಡು ಭಾಗಗಳು ಒಂದುಗೂಡಿವೆ. ಕಾಲುಗಳು ಬಹಳ ಉದ್ದ. ತೊಡೆಯ ಖಂಡ (ಫೀಮರ್) – ಟ್ರೊಕಾಂಟರ್ ಸಂಧಿ ಸುಲಭವಾಗಿ ಬಗ್ಗುತ್ತದೆ. ಈ ಉಪಾಯದಿಂದ ಅದು ಶತ್ರುವಿನ ಹಿಡಿತದಿಂದ ತಪ್ಪಿಸಿಕೊಳ್ಳುತ್ತದೆ. ದೇಹದಲ್ಲಿ 10 ಖಂಡಗಳಿವೆ, ಕೊನೆಯಲ್ಲಿ 3 ದೊಡ್ಡ ಬಿರುಗೂದಲುಗಳಿವೆ. ಕೆಲವು ಜಾತಿಗಳಲ್ಲಿ ಇವು ಕಿವಿರುಗಳಾಗುತ್ತವೆ. 4–5ನೆಯ ಹಂತದಲ್ಲಿ ಜನನಾಂಗಗಳು ಕಾಣಿಸಿಕೊಳ್ಳುತ್ತವೆ. (ಎಂ.ಪಿ.)

**ಅಭಿವಾಹಿ ಕ್ಲೋಮನಾಳಗಳು:** ಕಶೇರುಕ ಪ್ರಾಣಿಗಳ ಘುಪ್ಪುಸ (ಶ್ವಾಸಾಂಗ) ಗಳ ಕಡೆಗೆ ಹಾದು ಹೋಗುವ ರಕ್ತನಾಳಗಳು. ಕಶೇರುಕ ಪ್ರಾಣಿಗಳ ಹೃದಯದ ಹೃತ್ಕುಕ್ಷಿ ಅಥವಾ ಕೋನಸ್ ಆರ್ಟೀರಿಯೋಸಿಸ್‌ನಿಂದ ಹೊರಟು ಘುಪ್ಪುಸಗಳ ಕೆಳಗಡೆ ಮಧ್ಯಭಾಗದಲ್ಲಿ ನೇರವಾಗಿ ಮುಂದಕ್ಕೆ ಹಾದು ಹೋಗುವ ಅತಿದೊಡ್ಡದಾದ ಮಂದ ಗೋಡೆಯ ಸ್ಥಿತಿಸ್ಥಾಪಕ ರಕ್ತನಾಳವೇ ಕೆಳ ಮಹಾಧಮನಿ. ಈ ಕೆಳ ಮಹಾಧಮನಿಯು ಅದರ ಆರಂಭದಲ್ಲಿ ವಿಸ್ತರಿಸಿ ಒಂದು ಬಲ್ಬಸ್ ಆರ್ಟೀರಿಯೋಸಿಸ್ ಆಗಿ ಮಾರ್ಪಡುತ್ತದೆ. ಇದು ರಕ್ತವನ್ನು ಒಂದು ಮಾರ್ಗದಲ್ಲಿ ಹರಿಯಲು ಬಿಡುತ್ತದೆ. ಅಂದರೆ ಹೃತ್ಕುಕ್ಷಿಯಿಂದ ಮಹಾಧಮನಿಯ ಕಡೆಗೆ. ಅನಂತರ ಕೆಳ ಮಹಾಧಮನಿಯು ಮುಂದುವರಿದು ಹೈಯಾಯಿಡ್ ಕಮಾನಿನ ಹಿಂಭಾಗದ ಎಲ್ಲೆಯವರೆಗೆ ವಿಸ್ತೃತಗೊಂಡಿರುತ್ತದೆ. ಅಲ್ಲಿ ಅದರ ಎರಡು ಕಡೆಯೂ ಒಂದು ಸರಣಿಯ ಜೊತೆಯಾದ ಅಕಿವಾಸಿ ಕಬ್ಬಿಣದ ಬಳೆಯಂತಿರುವ ಅಡ್ಡ ಮಗ್ಗುಲಿನ ರಕ್ತನಾಳಗಳನ್ನು ಒಂದು ಘುಪ್ಪುಸಕ್ಕೆ ಒಂದರಂತೆ ಕೊಡುತ್ತದೆ. ಈ ಅಡ್ಡ ಮಗ್ಗುಲಿನ ಘುಪ್ಪುಸಗಳ ಕಡೆಗೆ ಹಾದುಹೋಗುವ ರಕ್ತನಾಳಗಳೇ ಅಭಿವಾಹಿ ಕ್ಲೋಮನಾಳಗಳು ಸಾಂಕೇತಿಕವಾಗಿ ಮೀನುಗಳಲ್ಲಿ 6 ಜೊತೆ. ಅಭಿವಾಹಿ ಕ್ಲೋಮನಾಳಗಳಿರುತ್ತವೆ. ಆದರೆ ಶಾರ್ಕ್ ಮೀನುಗಳಲ್ಲಿ 5 ಜೊತೆ, ಮುಲ್ಲೆಟ್ ಮೀನುಗಳಲ್ಲಿ 4 ಜೊತೆ ಅಭಿವಾಹಿ ಕ್ಲೋಮನಾಳಗಳಿರುತ್ತವೆ.

ಅಭಿವಾಹಿ ಕ್ಲೋಮನಾಳಗಳು ವ್ಯಾಪಕವಾಗಿ ಕವಲೊಡೆದಿರುತ್ತವೆ ಮತ್ತು ಅವುಗಳ ಅಂತಿಮ ಕವಲುಗಳು ಒಂದು ಸೂಕ್ಷ್ಮರಕ್ತವಾಹಿನಿಗಳ ಜಾಲದಲ್ಲಿ ತೆರೆಯುತ್ತವೆ. ಇವುಗಳ ಗೋಡೆಗಳು ಸರಳ ಅನುಲೇಪಕ ಅಂಗಾಂಶದಿಂದ ಮಾಡಲ್ಪಟ್ಟಿವೆ.

ಹೃದಯದ ಸಂಕುಚನೆಯಿಂದ ಹೃದಯದಿಂದ ಹೊರದೂಡಿದ ರಕ್ತವು ಕೆಳಮಹಾಧಮನಿಗೆ ಬರುತ್ತದೆ. ಅಲ್ಲಿಂದ ರಕ್ತವು ಸೂಕ್ಷ್ಮ ರಕ್ತವಾಹಿನಿಗಳ ಜಾಲಕ್ಕೆ ತಳ್ಳಲ್ಪಡುತ್ತದೆ ಮತ್ತು ಅಲ್ಲಿಂದ ಅನಿಲಗಳ ವರ್ಗಾವಣೆ ನಡೆಯುತ್ತದೆ. ಆಮ್ಲಜನಕವು ಹೀರಲ್ಪಟ್ಟು ಇಂಗಾಲಾಮ್ಲವು ಬಿಡುಗಡೆಯಾಗುತ್ತದೆ. ನಂತರ ರಕ್ತವು ಸೂಕ್ಷ್ಮರಕ್ತವಾಹಿನಿಗಳಿಂದ ಮತ್ತೊಂದು ಸರಣಿಯ ರಕ್ತನಾಳಗಳಿಗೆ ಬರುತ್ತದೆ. ಈ ರಕ್ತನಾಳಗಳು ಒಂದಕ್ಕೊಂದು ಸೇರಿಕೊಂಡು ದೊಡ್ಡದಾದ ರಕ್ತನಾಳಗಳಾಗುತ್ತವೆ. ಕೊನೆಯಲ್ಲಿ ಅವುಗಳೆಲ್ಲವು ಘುಪ್ಪುಸದಲ್ಲಿ ಒಟ್ಟುಗೂಡಿ ಅಪವಾಹಿಕ್ಲೋಮನಾಳಗಳಾಗುತ್ತವೆ. ಆದ್ದರಿಂದ ಅಪವಾಹಿ ಕ್ಲೋಮನಾಳಗಳು ಘುಪ್ಪುಸಗಳಿಂದ ಹೊರಡುತ್ತವೆ.

ಅಭಿವಾಹಿ ಕ್ಲೋಮನಾಳಗಳಲ್ಲಿ ಹರಿಯುವ ರಕ್ತವು ಮಲಿನರಕ್ತವಾಗಿರುತ್ತದೆ. ಅದೇ ಅಪವಾಹಿ ಕ್ಲೋಮನಾಳಗಳಲ್ಲಿ ಹರಿಯುವ ರಕ್ತವು ಶುದ್ಧರಕ್ತವಾಗಿರುತ್ತದೆ. 1 ನೇ ಅಭಿವಾಹಿ ಕ್ಲೋಮನಾಳಗಳು ಹೈಯಾಯಿಡ್ ಕಮಾನಿಗೂ, 2ನೇಯವು ಮೊದಲನೆ ಕ್ಲೋಮ ಕಮಾನಿಗೂ, 3, 4, 5ನೇಯವು ಕ್ರಮವಾಗಿ 2, 3, 4 ನೇ ಕ್ಲೋಮ ಕಮಾನುಗಳಿಗೂ ರಕ್ತವನ್ನು ಒದಗಿಸುತ್ತವೆ. (ವಿ.ಕೆ.)

**ಅಮಟಿಡಿಯಮ್:** ಸಂಧಿಪದಿಗಳ ಸಂಯುಕ್ತ ಕಣ್ಣಿನಲ್ಲಿರುವ (ಕಾಂಪೌಂಡ್ ಐ) ಬಿಡಿಬಿಡಿಯಾದ ಕಣ್ಣುಗಳು. ಪ್ರತಿ ಸಂಯುಕ್ತ ಕಣ್ಣಿನಲ್ಲಿ ಸಾವಿರಾರು ಅಮಟಿಡಿಯಗಳು ಇರುತ್ತವೆ. ಉದಾ: ಜಿರಲೆ ಕಣ್ಣಿನಲ್ಲಿ 2000, ನೊಣದ ಕಣ್ಣಿನಲ್ಲಿ 4000 ಮತ್ತು ಏರೋಪ್ಲೇನ್ ಚಿಟ್ಟೆಯ ಕಣ್ಣಿನಲ್ಲಿ 20,000. ಸಂಯುಕ್ತ ಕಣ್ಣಿನ ರಚನೆ ಸಂಕೀರ್ಣವಾದದ್ದು. ಕಣ್ಣಿನ ಹೊರ ಭಾಗದಲ್ಲಿ ಒಂದು ಪಾರದರ್ಶಕ ಪೊರೆ ಇದೆ. ಇದನ್ನು ಕಣ್ಣಿನ ಕಾರ್ನಿಯ ಎನ್ನುವರು. ಈ ಕಾರ್ನಿಯ ಅಥವಾ ಗುಡ್ಡೆಯನ್ನು ಕತ್ತರಿಸಿ ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದಾಗ ಅಮಟಿಡಿಯಮ್‌ಗೆ ಸೇರಿದ ಹೊರ ಭಾಗ ಕಾಣುತ್ತದೆ.

ಅತ್ಯಂತ ಹೊರಭಾಗದಲ್ಲಿ ಕಾರ್ನಿಯಲ್ ಮುಖ ಇದ್ದು ದ್ವಿಪೀನ ಮಸೂರ (ಬೈಕಾನ್‌ವೆಕ್ಸ್ ಲೆನ್ಸ್) ಹಿಂಭಾಗದಲ್ಲಿ ಒಂದು ಜೊತೆ ಕಾರ್ನಿಯಲ್ ಕೋಶಗಳು ಇದರ ಹಿಂಭಾಗದಲ್ಲಿ ಎರಡು ಜೊತೆ ಕೋನ್ ಕೋಶಗಳಿವೆ. (ಕೋನ್ ಸೆಲ್ಸ್). ಈ ಕೋಶಗಳು ಮುಂಭಾಗದಲ್ಲಿ ದಪ್ಪ ಮತ್ತು ಹಿಂಭಾಗದಲ್ಲಿ ತೆಳುವಾಗಿದ್ದು ಉದ್ದವಾಗಿವೆ. ಈ ಕೋಶಗಳ ಕಟ್ಟಿನ ನಡುವಿನಲ್ಲಿರುವ ಅವಕಾಶದಲ್ಲಿ ಪಾರದರ್ಶಕ ದ್ರವ ತುಂಬಿರುತ್ತದೆ. ಇವೆಲ್ಲವುಗಳ ಹಿಂಭಾಗದಲ್ಲಿ ನಾರಿನಂತೆ ತೀಡಿದ ಮತ್ತು ಉದ್ದವಾದ ಏಳು (ರೆಟಿನೂಲರ್) ಅಕ್ಷಿಪಟ ಕೋಶಗಳಿವೆ. ಈ ಕಟ್ಟನ್ನು ರಾಬ್‌ಡೋಮ್ ಎನ್ನಲಾಗುತ್ತದೆ. ಇದರ ಸುತ್ತಲೂ ವರ್ಣದ್ರವ್ಯ (ಪಿಗ್‌ಮೆಂಟ್) ಕವಚವಿದೆ. (ಪಿಗ್‌ಮೆಂಟ್) ರಾಬ್‌ಡೋಮಿನ ಅತ್ಯಂತ ಹಿಂಭಾಗದ ತುದಿ ಸೂಕ್ಷ್ಮವಾದ ತಂತುವಿನಿಂದ ನೇತ್ರ ನರವನ್ನು ಸೇರುತ್ತದೆ. ವಿವಿಧ ಅಮಟೇಡಿಯಮ್‌ಗಳ ಅತ್ಯಂತ ಹಿಂಭಾಗದ ತಂತುಗಳು ಒಟ್ಟಾರೆ ನೇತ್ರ ನರವನ್ನು ಸೇರುತ್ತವೆ. ಪ್ರತಿ ರಾಬ್ ಡೋಮ್ ಕವಚದಂತಿರುವ ವರ್ಣ ದ್ರವ್ಯವನ್ನು ಎರಡು ಬಗೆಯಲ್ಲಿ ಗುರುತಿಸಲಾಗಿದೆ. ಅಂದರೆ ರಾಬಡೊಮ್ ಮುಂತುದಿಯಲ್ಲಿರುವ ದ್ರವ್ಯವನ್ನು ರೆಟಿನಲ್ ವರ್ಣ ದ್ರವ್ಯವೆಂದೂ ಹಿಂತುದಿಯಲ್ಲಿರುವ ದ್ರವ್ಯವನ್ನು ಐರಿಸ್ ವರ್ಣ ದ್ರವ್ಯವೆಂದೂ ಈ ಎರಡೂ ಬಗೆಯ ವರ್ಣ ದ್ರವ್ಯಗಳು ಬೆಳಕಿನ ತೀಕ್ಷ್ಣತೆಗೆ ಅನುಗುಣವಾಗಿ ಬಿಂಬವನ್ನು ಪಡೆಯಲು ಶ್ರಮಿಸುತ್ತವೆ. ಬೆಳಕಿನ ತೀಕ್ಷ್ಣತೆ ಹೆಚ್ಚಿದ್ದಾಗ ವರ್ಣ ದ್ರವ್ಯಗಳು ಚದುರುವುವು. ಕ್ಷೀಣ ಬೆಳಕಿನಲ್ಲಿ ಇವು ಸಂಪೂರ್ಣವಾಗಿ ರಾಬ್‌ಡೋಮ್‌ನ ಹಿಂಭಾಗಕ್ಕೆ ಸರಿದು ಬಿಂಬವನ್ನು ರೂಪಿಸಲು ಅನುವಾಗುತ್ತವೆ.





ಅಮಟೇಡಿಯಮ್

ಸಂಯುಕ್ತ ಕಣ್ಣಿನಲ್ಲಿ ಸಾವಿರಾರು ಅಮಟಿಡಿಯಮ್‌ಗಳಿರುವುದರಿಂದ ಅಲ್ಲಿ ಮೂಡುವ ವಸ್ತುವಿನ ಬಿಂಬ ಅಖಂಡವಾಗಿರದೆ ಛಿದ್ರ ಛಿದ್ರವಾಗಿ ಈ ಅಮಟಿಡಿಯಮ್‌ಗಳಲ್ಲಿ ಹಂಚಿ ಹೋಗುವುದು. ಈ ಬಗೆಯ ಬಿಂಬವನ್ನು ಶಬಲ ಬಿಂಬ (ಮೊಸಾಯಿಕ್ ವಿಷನ್) ಎನ್ನಬಹುದು.

ಬೆಳಕಿನ ತೀಕ್ಷ್ಣತೆ ಹೆಚ್ಚಾದಾಗ ಅಮಟಿಡಿಯಮ್ ಸುತ್ತಲೂ ಇರುವ ವರ್ಣ ದ್ರವ್ಯ ಇದರುದ್ದಕ್ಕೆ ಕವಚದಂತೆ ಆವರಿಸಿ ಅಕ್ಕ ಪಕ್ಕದಲ್ಲಿರುವ ಅಮಟಿಡಿಯಮ್‌ಗಳಿಗೆ ಸಂಪರ್ಕವಿಲ್ಲದಂತೆ ಮಾಡುವುದು. ಈ ಸಿದ್ಧತೆಯಲ್ಲಿ ಬಿದ್ದ ಬಿಂಬ ಕೇವಲ ಒಂದು ಅಮೆಟಿಡಿಯಮ್‌ಗೆ ಮಾತ್ರ ಸೀಮಿತ ವಾಗುವುದು.

ಬೆಳಕಿನ ತೀಕ್ಷ್ಣತೆ ಇಲ್ಲದಿರುವಾಗ ಅಥವಾ ಮಬ್ಬು ಬೆಳಕಿನಲ್ಲಿ ಅಮಟಿಡಿಯಗಳ ಸುತ್ತಲೂ ಇರುವ ವರ್ಣ ದ್ರವ್ಯ ಸಂಪೂರ್ಣ ಹಿಂದಕ್ಕೆ ಸರಿದು ಅಕ್ಕ ಪಕ್ಕದಲ್ಲಿರುವ ಅಮಟಿಡಿಯಗಳ ಸಂಪರ್ಕವಾಗುವುದು. ಅಂದರೆ ಬೆಳಕಿನ ಕಿರಣಗಳು ಒಂದು ಅಮೆಟಿಡಿಯನಲ್ಲಿ ಬಿದ್ದರೂ ಅಕ್ಕ ಪಕ್ಕದ ಅಮೆಟಿಡಿಯಗಳಿಗೂ ಹಾದು ಹೊಗುವುದರಿಂದ, ಒಂದು ಬಿಂಬ ಒಂದು ಅಮಟಿಡಿಯಗೆ ಮಾತ್ರ ಸೀಮಿತವಾಗಿರದೆ ಅಕ್ಕ ಪಕ್ಕದಲ್ಲಿರುವ ಅಮಟಿಡಿಯಗಳಿಗೂ ಬಿಂಬದ ಮೇಲೆ ಬಿಂಬ ರೂಪುಗೊಳ್ಳುವುದು. ಈ ಬಗೆಯ ಬಿಂಬವನ್ನು ಸೂಪರ್ ಇಂಪೊಝಿಷ್ಡ್ ಇಮೇಜ್ ಎನ್ನುವರು. (ಜಿ.ಎಮ್.ಬಿ.)

**ಅಮೀಬ:** ಹೊಂಡ, ಮಡುಗಳಲ್ಲೂ ಕೆಸರು, ಎಲೆ ಮುಂತಾದ ಪದಾರ್ಥಗಳ ಮೇಲೂ ಹರಿದಾಡುವ ಬಹುಸೂಕ್ಷ್ಮಜೀವಿ. ಪ್ರೊಟೊಝೋವ ವಂಶದ ಸಾರ್ಕೊಡಿನ ವರ್ಗಕ್ಕೆ ಸೇರಿದೆ. ವ್ಯಾಸ ಸುಮಾರು 0.025 ಸೆಂಮೀ ದೇಹರಚನೆ ಅತ್ಯಂತ ಸರಳ. ಜೀವರಸದ ಹೊರ ಆವರಣ (ಎಕ್ಟೊಪ್ಲಾಸಂ) ತಿಳಿಯಾಗಿ ಪಾರದರ್ಶಕವಾಗಿದ್ದು ಒಳಾವರಣ (ಎಂಡೊಪ್ಲಾಸಂ) ಕಣಕಣವಾಗಿ ಹೆಚ್ಚು ದ್ರವರೂಪಿಯಾಗಿದೆ. ಒಳರಸದಲ್ಲಿ ಒಂದು ಕೋಶಕೇಂದ್ರ (ನ್ಯೂಕ್ಲಿಯಸ್), ವರ್ತುಲಾಕಾರದ ಒಂದು ಸಂಕೋಚನಾವಕಾಶ (ಕಾಂಟ್ರ್ಯಾಕ್ಟೈಲ್ ವ್ಯಾಕ್ಯುಯೊಲ್) ಹಾಗೂ ಆಹಾರದಿಂದ ತುಂಬಿದ ಹಲವು ಆಹಾರ ಕುಹರಗಳೂ ಇವೆ. ಸೂಕ್ಷ್ಮದರ್ಶಕ ತೋರುವಂತೆ ಜೀವಂತ ಅಮೀಬಕ್ಕೆ ಯಾವುದೇ ನಿರ್ದಿಷ್ಟ ಆಕಾರವಿಲ್ಲ; ಕ್ಷಣಕ್ಷಣಕ್ಕೂ ಅದರ ಆಕಾರ ಬದಲಾಗುತ್ತಿರುತ್ತದೆ. ಅದರ ದೇಹದಿಂದ ಆಗಾಗ ನೂಕಲ್ಪಡುತ್ತಿರುವ ಕೋಡುಗಳಂತಿರುವ ಮಿಥ್ಯಾಪಾದಗಳೆಂಬ (ಸುಡೊಪೋಡಿಯ) ಅಂಗಗಳೇ ಇದಕ್ಕೆ ಕಾರಣ. ಇವು ಅದರ ಚಲನಾಂಗಗಳು. ಅಮೀಬ ತನ್ನ ಇಚ್ಛೆಯಂತೆ ಮಿಥ್ಯಾಪಾದಗಳನ್ನು ನೀಡಬಲ್ಲುದು. ಅವನ್ನು ಬೇಡವಾದಾಗ ನಾಶಪಡಿಸಲೂ ಬಲ್ಲುದು. ಆದ್ದರಿಂದ ಅವು ಸದಾಕಾಲ ಕಂಡರೂ ಶಾಶ್ವತಾಂಗಗಳಲ್ಲ. ಮಿಥ್ಯಾಪಾದಗಳು ಎಲ್ಲ ದಿಕ್ಕುಗಳಲ್ಲೂ ಹುಟ್ಟುವುದರಿಂದ ಅಮೀಬ ಬೇಕಾದ ದಿಕ್ಕಿನಲ್ಲಿ ಚಲಿಸಬಲ್ಲುದು. ಆದರೂ ಅದೊಂದು ಮಂದಗಾಮಿ ಪ್ರಾಣಿ. ವೇಗ ಮಿನಿಟಿಗೆ 0.6 ಸೆಂಮೀ ಮಾತ್ರ. ಎಲ್ಲ ಪ್ರಾಣಿಗಳಂತೆ ಅದರ ಚಲನೆಯೂ ಉದ್ದೇಶಪೂರ್ವಕವಾದುದು. ಹೆಚ್ಚು ಪ್ರಕಾಶವಿರುವ ಸ್ಥಳವನ್ನು ತ್ಯಜಿಸಿ, ಆಹಾರವಿರುವ ದಿಕ್ಕಿಗೆ ಚಲಿಸುವುದು ಅದರ ಸ್ವಭಾವ. ಆಹಾರ ಸಿಕ್ಕಾಗ ಅದರ ಸುತ್ತಲೂ ಮಿಥ್ಯಾಪಾದಗಳನ್ನು ಪಸರಿಸಿ ಅದನ್ನು ಪೂರ್ತಿಯಾಗಿ ಆವರಿಸುವುದು. ಹೀಗೆ ಆವರಿಸಲ್ಪಟ್ಟ ಆಹಾರ ಒಳಜೀವರಸವನ್ನು ಸೇರಿ, ತನ್ನೊಡನೆ ಸೇರಿದ ನೀರು, ಸ್ರಾವಗಳನ್ನೊಳಗೊಂಡು ಆಹಾರಕುಹರವಾಗಿ ರೂಪುಗೊಳ್ಳುವುದು. ಹೀಗೆ ಬಂಧಿತವಾದ ಆಹಾರ ಮೇದೋಜೀರಕರಸದಿಂದ ಪಚನವಾಗಿ ಒಳಜೀವರಸದಲ್ಲಿ ಲೀನವಾಗಿ ಅಮೀಬದ ಬೆಳೆವಣಿಗೆಗೆ ಕಾರಣವಾಗುವುದು. ಅಮೀಬ ಶ್ವಾಸೋಚ್ಛ್ವಾಸ ಕ್ರಿಯೆಗಾಗಿ ತನ್ನ ಸುತ್ತಮುತ್ತಲಿರುವ ನೀರಿನಲ್ಲಿ ಬೆರೆತ ಆಮ್ಲಜನಕವನ್ನೇ ಉಪಯೋಗಿಸುವುದು. ಆಮ್ಲಜನಕ ದೇಹವನ್ನು ಪ್ರವೇಶಿಸಿ ಆಹಾರದ್ರವ್ಯಗಳ ಮೇಲೆ ಪ್ರತಿಕ್ರಿಯೆ ಮಾಡಿ, ನೀರು ಮತ್ತು ಶಕ್ತಿಯನ್ನು ಹೊರಹೊಮ್ಮಿಸುವುದು. ಈ ಶಕ್ತಿಯಿಂದಲೇ ಅಮೀಬ ತನ್ನ ಚಟುವಟಿಕೆಗಳನ್ನೆಲ್ಲ ನಡೆಸುವುದು. ಈ ಕ್ರಿಯೆಯಲ್ಲಿ ಹುಟ್ಟಿದ ಇಂಗಾಲದ ಡೈ ಆಕ್ಸೈಡ್ ದೇಹದಿಂದ ನೇರವಾಗಿ ಹೊರಗೆ ಹೋಗುವುದು, ಇಲ್ಲವೆ ಸಂಕೋಚನಕುಹರದಲ್ಲಿ ಸಂಗ್ರಹವಾಗುವುದು. ಇವುಗಳ ಜೊತೆಗೆ ದೇಹದಲ್ಲಿ ಸದಾಕಾಲ ಪ್ರವೇಶಿಸುತ್ತಿರುವ ಹೊರಗಿನ ನೀರೂ ಸಂಕೋಚನಕುಹರವನ್ನು ಸೇರುವುದು. ಸಂಕೋಚನಕುಹರ ಹೀಗೆ ತುಂಬಿಕೊಳ್ಳುತ್ತ ಬಹಳ ದೊಡ್ಡದಾಗಿ ಒಮ್ಮೆಲೇ ಸಂಕೋಚಹೊಂದಿ ಒಳಗಿನ ಪದಾರ್ಥಗಳನ್ನೆಲ್ಲ ಹೊರಗೆ ಎಸೆಯುವುದು. ಹೀಗೆ ಜಲನಿಯಂತ್ರಣ ಸಂಕೋಚನಕುಹರದ ಕಾರ್ಯ. ಈ ಜಲ ಪರಿಕ್ರಮಣ ಶ್ವಾಸೋಚ್ಛ್ವಾಸ ಹಾಗೂ ವಿಸರ್ಜನ ಕ್ರಿಯೆಗಳಲ್ಲಿ ಅಪ್ರತ್ಯಕ್ಷವಾಗಿ ಭಾಗವಹಿಸುವುದು.

ಅಮೀಬ ಪೂರ್ಣ ಬೆಳೆವಣಿಗೆ ಹೊಂದಿದಮೇಲೆ ನಿರ್ಲಿಂಗರೀತಿಯ ವಂಶಾಭಿವೃದ್ಧಿಗೆ ಸಿದ್ಧವಾಗುವುದು. ಈ ಕ್ರಿಯೆಯಲ್ಲಿ ಕೋಶಕೇಂದ್ರ ಸರಿಯಾಗಿ ಎರಡು ಸೀಳಾಗುವುದು. ಜೀವರಸ ಎರಡು ಭಾಗವಾಗುವುದು. ಪರಿಣಾಮವಾಗಿ ಎರಡು ಚಿಕ್ಕ ಅಮೀಬ ಪ್ರಾಣಿಗಳು ಉತ್ಪತ್ತಿಯಾಗುವುವು. ಇವು ಕೂಡ ತಮ್ಮ ತಾಯಿಯಂತೆ ಚಲಿಸುತ್ತ, ಆಹಾರವನ್ನು ಸೇವಿಸುತ್ತ ಬೆಳೆದು ದೊಡ್ಡವಾಗಿ ಸಂತಾನ ಪಡೆಯುವುವು. ಇಂಥ ಸಂತಾನೋತ್ಪತ್ತಿ

ಮಾದರಿಗೆ ದ್ವಿದಳನ (ಬೈನರಿ ಫಿಷನ್) ಎಂದು ಹೆಸರು. ಇಲ್ಲಿ ತಾಯಿಯೇ ಒಡೆದು ಎರಡಾಗುವುದರಿಂದ ಅದು ಇಲ್ಲವಾಗುವುದಾದರೂ ತನ್ನ ಸಂತಾನರೂಪದಲ್ಲಿ




ಅಮೀಬ ದೇಹರಚನೆ
1. ಹೊರ ಆವರಣ (ಎಕ್ಟೊಪ್ಲಾಸಂ) 2. ಒಳ ಆವರಣ (ಎಂಡೊಪ್ಲಾಸಂ) 3. ಆಹಾರಕುಹರ. 4. ನಡುಬೀಜ (ನ್ಯೂಕ್ಲಿಯಸ್) 5. ಸಂಕೋಚನಾವಕಾಶ (ಕಂಟ್ರ್ಯಾಕ್ಟೈಲ್ ವ್ಯಾಕ್ಯೂಲ್)

ಮುಂದುವರಿಯುವುದರಿಂದ ಅದು ಅಮರವೆಂದೇ ಹೇಳಬೇಕು. ಅಮೀಬ ಸೂಕ್ಷ್ಮ ಪ್ರಾಣಿಯಾದರೂ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಬಲ್ಲುದು. ನೀರು ಬತ್ತಿದಾಗ ಇಲ್ಲವೆ ಅತಿ ಚಳಿಯಾದಾಗ, ತನ್ನ ಮಿಥ್ಯಾಪಾದಗಳನ್ನು ಒಳಸೇದಿಕೊಂಡು, ದುಂಡಗಾಗಿ, ತನ್ನ ಸುತ್ತಲೂ ಸಂರಕ್ಷಕ ಕವಚವನ್ನು ನಿರ್ಮಿಸಿಕೊಳ್ಳುವುದು. ಅನುಕೂಲ ಪರಿಸ್ಥಿತಿ ಒದಗಿದೊಡನೆ ರಕ್ಷಾ ಕವಚವನ್ನು ಒಡೆದು ಅಮೀಬ ಹೊರಬಂದು, ಮೊದಲಿನಂತೆ ಜೀವಿಸಲು ತೊಡಗುವುದು. ಕೆಲವು ವೇಳೆ ಈ ಅವಸ್ಥೆಯಲ್ಲಿಯೇ ಅದರ ಕೋಶಕೇಂದ್ರ ಎಷ್ಟೋಸಲ ವಿಭಾಗವಾಗುವುದು. ಪ್ರತಿಯೊಂದು ರಕ್ಷಾಕವಚ ಒಡೆದಾಗ ಹೊರಬರುವ ಪ್ರತಿಯೊಂದು ಬೀಜಕಣವೂ ಚಿಕ್ಕ ಚಿಕ್ಕ ಅಮೀಬ ರೂಪತಾಳುವುದು. ಇಂಥ



ಅಮೀಬ ವಿಭಜನೆಯ ವಿವಿಧ ಹಂತಗಳು

ಸಂತಾನೋತ್ಪತ್ತಿಕ್ರಮಕ್ಕೆ ಬಹುದಳನ (ಮಲ್ಟಿಪಲ್ ಫಿಷನ್) ಎಂದು ಹೆಸರು. ಈ ಮಾದರಿಯಲ್ಲಿ ಒಂದುಸಾರಿಗೆ ಸುಮಾರು 500ರ ವರೆಗೆ ಚಿಕ್ಕ ಮರಿಗಳು ಹುಟ್ಟಿಕೊಳ್ಳುತ್ತವೆ. (ಎಸ್.ಬಿ.ಎಂ.)

**ಅಮೆಂಡಲೀಯ ಆನುವಂಶೀಯತೆ:** ಮೆಂಡಲೀಯ ನಿಯಮಕ್ಕೆ ಅಪವಾದ (ನಾನ್ ಮೆಂಡೀಲಿಯನ್ ಇನ್‌ಹೆರಿಟೆನ್ಸ್). ಮೆಂಡಲನ ನಿಯಮದ ಪರಿಧಿಯಲ್ಲಿ ಬಾರದಿರುವ ಎಲ್ಲಾ ರೀತಿಯ ಅಂಶಗಳನ್ನೂ ಅಮೆಂಡೆಲಿಯ ಎಂದು ಪರಿಗಣಿಸಬಹುದಾದರೂ ಈ ಎಲ್ಲಾ ಆನುವಂಶೀಯತೆಗಳಿಗೆ ಅವುಗಳದೇ ಆದ ನಿಯಮಗಳಿರುತ್ತವೆ. ಈ ನಿಯಮಗಳು ಮೆಂಡಲಿನ ನಿಯಮಕ್ಕೆ ಅಪವಾದ ಎನ್ನಿಸಿಕೊಳ್ಳುವುದಿಲ್ಲ. ಹೀಗಾಗಿ ಆನುವಂಶೀಯತೆಯ ಕೆಲವೇ ರೀತಿಗಳನ್ನು ಮಾತ್ರ ಅಮೇಂಡೆಲೀಯವೆನ್ನಲಾಗುತ್ತದೆ. ಕೋಶದ್ರವ್ಯ ಆನುವಂಶೀಯತೆ ಮತ್ತು ಬಾಹ್ಯ ವರ್ಣತಂತು ಆನುವಂಶೀಯತೆಯನ್ನು ಸಾಮಾನ್ಯವಾಗಿ ಅಮೆಂಡಲೀಯ ಆನುವಂಶೀಯತೆಗೆ ಸೇರಿಸಲಾಗುವುದು. ಕೋಶದ್ರವ್ಯ ಆನುವಂಶೀಯತೆಯನ್ನು 1908 ರಲ್ಲಿ ಮೊದಲಬಾರಿ ಜರ್ಮನಿಯ ಕಾರ್ಲ್ ಕೊರೆನ್ಸ್ ಎಂಬ ಮಹಾ ವಿಜ್ಞಾನಿಯು ಪರಿಚಯಿಸಿದ.

ಅಮೆಂಡಲೀಯ ಆನುವಂಶೀಯತೆಯು ಸಾಮಾನ್ಯವಾಗಿ ಚಿಕ್ಕ ಪ್ರಾಣಿಗಳಲ್ಲಿ ಮತ್ತು ಗಿಡಗಳಲ್ಲಿ ಕಂಡು ಬರುತ್ತದೆ. ಈ ರೀತಿಯ ಆನುವಂಶೀಯತೆಗೆ ನಾನಾ ಕಾರಣಗಳಿವೆ;

1) ಕೋಶದ್ರವ್ಯದಲ್ಲಿ ಇರುವ ದ್ರವ್ಯ ಜೀನ್‌ಗಳು (ಪ್ಲಾಸ್ಮಾಜೀನ್‌ಗಳು)

2) ಕ್ರೊಮೋಸೋಮುಗಳಂತೆ ದ್ರವ್ಯ ಜೀನ್‌ಗಳು ವಿಕೃತಿ (ಮ್ಯುಟೇಷನ್) ಹೊಂದುವುದು.

3) ಕ್ರೊಮೋಸೋಮುಗಳಂತೆ ದ್ರವ್ಯ ಜೀನ್‌ಗಳು ಸ್ವಪ್ರತೀಕರಣ (ರೆಪ್ಲಿಕೇಷನ್) ಹೊಂದುವುದು.

4) ದ್ರವ್ಯ ಜೀನ್‌ಗಳು ಕೋಶದ್ರವ್ಯ ವಿಭಜನೆಗೊಳ್ಳುವ ಸಮಯದಲ್ಲಿ ಹಾಗೂ ಅನುಬಂಧನ ಸಮಯದಲ್ಲಿ ಸ್ಥಳಾಂತರಗೊಳ್ಳುವುವು.

ಕೋಶದ್ರವ್ಯ ಆನುವಂಶೀಯತೆಗೆ ಉತ್ತಮ ಉದಾಹರಣೆ ಪ್ಯಾರಾಮೀಸಿಯಂ. ಪ್ಯಾರಮೀಸಿಯಂನಲ್ಲಿ ಸಾಮಾನ್ಯವಾಗಿ ಎರಡು ಬಗೆ; ಒಂದು ಕೊಲ್ಲುವ (ಕಿಲ್ಲರ್) ಮತ್ತು ಇನ್ನೊಂದು ಸಂವೇದಿ (ಸೆನ್ಸಿಟಿವ್). ಕೊಲ್ಲುವ ಬಗೆಯು ಸಂವೇದಿಯನ್ನು ಕೊಲ್ಲುವ ಕೆಲವು ರಾಸಾಯನಿಕಗಳನ್ನು (ಪ್ಯಾರಮಿಸಿನ್) ಉತ್ಪತ್ತಿಮಾಡುತ್ತದೆ. ಈ ವಿಷ ಪದಾರ್ಥವನ್ನು ಉತ್ಪತ್ತಿಮಾಡುವುದು ಕೋಶದ್ರವ್ಯದಲ್ಲಿರುವ ಕಪ್ಪಾ ಕಣಗಳು (ಕಪ್ಪಾ ಪಾರ್ಟಿಕಲ್ಸ್). ಕಪ್ಪಾ ಕಣಗಳು ಕೋಶದ್ರವ್ಯ ಆನುವಂಶೀಯತೆಯಿಂದ ಬರುತ್ತದೆ. ಇದನ್ನು 1968 ರಲ್ಲಿ ಬರ್ನ್ ಮತ್ತು ಗಾರ್ಡನರ್ ಎಂಬ ವಿಜ್ಞಾನಿಗಳು ಕಂಡು ಹಿಡಿದರು.

ಕೋಶದ್ರವ್ಯ ಆನುವಂಶೀಯತೆ ವಿಭಾಗದಲ್ಲಿ ಬಾರದ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ. ಎಶ್ಚಿರೀಶಿಯ ಕೋಲಿ ಬ್ಯಾಕ್ಟೀರಿಯಾದಲ್ಲಿ ಲಿಂಗ ನಿರ್ಧಾರಕ ಘಟಕವಾದ ಎಫ್ ಘಟಕವು ಕೇವಲ ಗಂಡುಗಳಲ್ಲಿ ಮಾತ್ರ ಇರುತ್ತದೆ. ಈ ಗಂಡುಗಳು ನೈಸರ್ಗಿಕವಾಗಿ ಎಫ್ ಘಟಕವನ್ನು ಕಳೆದುಕೊಂಡು ಹೆಣ್ಣಾಗಿ ಪರಿವರ್ತನೆಗೊಳ್ಳುತ್ತವೆ. ಆದರೆ ಹೆಣ್ಣುಗಳಿಂದ ಗಂಡುಗಳು ಸೃಷ್ಟಿಯಾಗುವುದಿಲ್ಲ. ಈ ಎಫ್ ಘಟಕವು ಕ್ರೋಮೋಸೋಮಿನಿಂದ ಹೊರಗಡೆ ಇದ್ದು ಅನುಬಂಧನ ಕ್ರಿಯೆಯಾಗುವಾಗ ಬೇರೆ ಕೋಶಕ್ಕೆ ಸಾಗಿಸಲ್ಪಟ್ಟು ಗಂಡುಗಳು ಹೆಣ್ಣಾಗಿ ಪರಿವರ್ತನೆಗೊಳ್ಳುತ್ತವೆ.

ಕ್ಲಾಮಿಡೊಮೊನಾಸ್ ಪಾಚಿಗಳ ಗುಂಪಿಗೆ ಸೇರಿದ ಏಕಕೋಶಜೀವಿ. ಏಕಗುಣಿತ (ಹ್ಯಾಪ್ಲಾಯಿಡ್) ಜೀವಿಯೂ ಹೌದು. ಈ ಪ್ರಭೇಧದಲ್ಲಿ ಎಮ್‌ಟಿ$^{+}$ ಮತ್ತು ಎಮ್‌ಟಿ$^{-}$ ಎಂಬ ಎರಡು ವಿಧದ ಸಂಭೋಗ ಮಾದರಿಗಳಿರುತ್ತವೆ. ದ್ವಿಗುಣಿತ ಯುಗ್ಮಜಗಳು ಎಮ್‌ಟಿ$^{+}$ ಮತ್ತು ಎಮ್‌ಟಿ$^{-}$ ಎರಡು ಗುಣಾಣುಗಳನ್ನೂ ಹೊಂದಿದ್ದು ಸಂಖ್ಯಾಕ್ಷೀಣ ವಿಭಜನೆಯಾದಾಗ 1:1 ಪ್ರಮಾಣದಲ್ಲಿ ಎಮ್‌ಟಿ$^{+}$ ಮತ್ತು ಎಮ್‌ಟಿ$^{-}$ ತಳಿಗಳನ್ನು ವೃದ್ಧಿಸುವುದರಿಂದ ಈ ಗುಣಾಣುಗಳು ಕ್ರೋಮೋಸೋಮುಗಳ ಮೇಲಿರುತ್ತವೆ ಎಂದು ಹೇಳಬಹುದು. ಇವುಗಳನ್ನು ರುತ್ ಸಾಗರ್ 1954 ರಲ್ಲಿ ಕಂಡು ಹಿಡಿದರು. ಪರಿಸರದಲ್ಲಿರುವ ಸಾಮಾನ್ಯ ಕ್ಲಾಮಿಡೊಮೊನಾಸ್ ಬಗೆಯು ಸ್ಟ್ರೆಪ್ಟೋಮೈಸಿನ್ ಯುಕ್ತ ಮಾಧ್ಯಮದ ಮೇಲೆ ಬೆಳೆಯುವುದಿಲ್ಲ. ಇದನ್ನು ಸಂವೇದಿ (ಎಸ್‌ಎಸ್) ಎನ್ನುವರು. ಇನ್ನೂ ಕೆಲವು ಸ್ಟ್ರೆಪ್ಟೋಮೈಸಿನ್ ಇಲ್ಲದೆ ಬೆಳೆಯುವುದೇ ಇಲ್ಲ. ಇವನ್ನು ಸ್ಟ್ರೆಪ್ಟೊಮೈಸಿನ್ ಅವಲಂಬಿತ (ಎಸ್‌ಡಿ) ಎಂದು ಕರೆಯುತ್ತಾರೆ. ಎಸ್‌ಡಿಎಮ್‌ಟಿ$^{+}$ ಕೋಶಗಳನ್ನು ಎಸ್‌ಎಸ್‌ಎಮ್‌ಡಿ$^{+}$ ಕೋಶಗಳೊಂದಿಗೆ ಸಂಕರಗೊಳಿಸಿದರೆ 1:1 ಪ್ರಮಾಣದಲ್ಲಿ ಎಮ್‌ಟಿ$^{+}$ ಮತ್ತು ಎಮ್‌ಟಿ$^{-}$ ಗುಣಾಣುಗಳು ಬೇರ್ಪಡುತ್ತವಾದರೂ ಎಲ್ಲಾ ಕೋಶಗಳೂ ಅವಲಂಬಿತವಾಗಿಯೇ ಇರುತ್ತವೆ. ಆದರೆ ಇದರ ಪಾರಸ್ಪರಿಕ ಸಂಕರದಲ್ಲಿ ಎಲ್ಲಾ ಕೋಶಗಳೂ ಸಂವೇದಿಗಳಾಗಿಯೇ ಇರುತ್ತವೆ. ಇದು ಸ್ಟ್ರೆಪ್ಟೋಮೈಸಿನ್ ಆನುವಂಶೀಯತೆ ಹಾಗೂ ಸಂಭೋಗ ಮಾದರಿ ಗುಣಾಣುಗಳನ್ನು ಅವಲಂಬಿಸಿರುವ ಏಕಪಿತ್ರ ಆನುವಂಶೀಯತೆ ಎಂದು ಗೊತ್ತಾಗುತ್ತದೆ.

ಇದೇ ರೀತಿ ಸಂತತಿಯಲ್ಲಿ ಬಾಹ್ಯ ಗುಣಗಳನ್ನು (ಫೀನೊಟೈಪ್) ಹೆಣ್ಣಿನ ವಂಶಸೂಚಕ ಗುಣಗಳು ನಿಶ್ಚಯ ಮಾಡುವುದನ್ನು ಮಾತೃಕೀಯ ಆನುವಂಶೀಯತೆ ಎಂದು ಕರೆಯುತ್ತಾರೆ.

ಇದನ್ನು ಏಕಮಾತೃ ಆನುವಂಶೀಯತೆ ಎಂದೂ ಕರೆಯುತ್ತಾರೆ. ಇಂತಹ ಆನುವಂಶೀಯತೆಯನ್ನು ಶಂಖು ಹುಳುವಿನ ಚಿಪ್ಪಿನ ರಚನೆಯಲ್ಲಿ ಕಾಣಬಹುದು. ಶಂಖು ಹುಳುವಿನ ದೇಹ ರಚನೆಯನ್ನು ಸಾಮಾನ್ಯವಾಗಿ ಮಾತ್ರ ಜೀನ್‌ಗಳು ನಿರ್ಧರಿಸುತ್ತವೆ.

ಬಾಹ್ಯ ಸಂಕರ ತಳಿಯ ಮೂಷಿಕಗಳಲ್ಲಿ ಕೆಲವನ್ನು ಬಹಳ ಕಾಲದವರೆಗೆ ಅಂತರ್ ಸಂಕರಗೊಳಿಸಿದಾಗ ಎಲ್ಲಾ ಹೆಣ್ಣುಗಳೂ ಸ್ತನ ಕ್ಯಾನ್ಸರ್ ಹೊಂದಿದ್ದನ್ನು ಬಿಟ್ನರ್ ಎಂಬ ವಿಜ್ಞಾನಿ ಕಂಡು ಹಿಡಿದನು. ಇದು ಮಾತೃವಿನಿಂದ ಸಾಗಣೆಯಾಗುತ್ತದೆ. ಕ್ಯಾನ್ಸರ್‌ರಹಿತ ತಳಿಯಿಂದ ಜನಿಸಿದ ಮೂಷಿಕ ಕ್ಯಾನ್ಸರ್‌ಯುಕ್ತ ತಳಿಯ ತಾಯಿಯ ಸ್ತನ್ಯಪಾನ ಮಾಡಿದ್ದರಿಂದ ತಾಯಿಯ ಹಾಲಿನ ಮೂಲಕ ಸಾಗಣೆಯಾಗುತ್ತದೆ ಎಂದು ಕಂಡು ಹಿಡಿಯಲಾಯಿತು. ಹಾಲಿನ ಘಟಕ(ಮಿಲ್ಕ್ ಫ್ಯಾಕ್ಟರ್)ವೆಂದೇ ಹೆಸರಿಸಲಾದ ಇದು ಒಂದು ವೈರಾಣು ಎಂದು ಭಾವಿಸಲಾಗಿದೆ.

ಡ್ರಾಸಾಫಿಲಾದಲ್ಲಿ ಇಂಗಾಲದ ಡೈಆಕ್ಸೈಡ್ ಸಂವೇದಿ ತಳಿಯೊಂದಿದೆ ಎಂದು ಹೆರಿಟಿಯರ್ ಮತ್ತು ಟಿಸ್ಸಿಯರ್ ಎಂಬ ವಿಜ್ಞಾನಿಗಳು ಕಂಡು ಹಿಡಿದರು. ಸಾಮಾನ್ಯ ನೊಣಗಳೊಡನೆ ಈ ಇಂಗಾಲದ ಡೈಆಕ್ಸೈಡ್ ಸಂವೇದಿ ನೊಣಗಳನ್ನು ಪಾರಸ್ಪರಿಕ ಸಂಕರಗೊಳಿಸಿದಾಗ ಸಂವೇದಿ ತಾಯಿಯಿಂದ ಸಂವೇದಿ ತಳಿಗಳೂ ಸಾಮಾನ್ಯ ಹೆಣ್ಣುಗಳಿಂದ ಸಾಮಾನ್ಯ ಹೆಣ್ಣುಗಳೂ ಜನಿಸಿದವು. ಸಂವೇದಿ ಗಂಡುಗಳು ಅಪರೂಪವಾಗಿ ಸಂವೇದಿ ತಳಿಗಳಿಗೂ ಹಾಗೆಯೇ ಸಾಮಾನ್ಯ ಗಂಡುಗಳು ಅಪರೂಪವಾಗಿ ಸಾಮಾನ್ಯ ತಳಿಗಳಿಗೂ ಜನ್ಮವೀಯುತ್ತವೆ. ಸಂವೇದಿ ಹೆಣ್ಣಿನ ಒಂದೊಂದೇ ಕ್ರೊಮೋಸೋಮುಗಳನ್ನು ಸಾಮಾನ್ಯ ಹೆಣ್ಣಿನ ಕ್ರೊಮೋಸೋಮುಗಳೊಂದಿಗೆ ಬದಲಾಯಿಸಿದಾಗ ಕೂಡ ಸಂವೇದಿ ತಳಿಗಳೇ ಉದ್ಭವವಾದವು. ಆದ್ದರಿಂದ ಈ ಸಂವೇದಿತ್ವ ಕ್ರೊಮೋಸೋಮಿನ ಹೊರಗೆ ಇರುವ ಯಾವುದೋ ವಸ್ತುವಿನಿಂದ ನಿರ್ಧರಿಸಲ್ಪಡುತ್ತದೆ ಎಂದು ತಿಳಿಯುತ್ತದೆ. ಈ ವಸ್ತುವನ್ನು ಪ್ರತ್ಯೇಕಿಸಿ ಅದು ಉಷ್ಣದಿಂದ ಪತನಗೊಳ್ಳುತ್ತದೆ ಎಂದೂ ಅದನ್ನು ಸಿಗ್ಮ ಘಟಕ ಎಂದು ಹೆಸರಿಸಲಾಯಿತು. ಇದು ಅಂಡಾಣುವಿನ ಕೋಶದ್ರವ್ಯದ ಮೂಲಕ ಸಾಗಣೆಗೊಳ್ಳುವುದಾದರೂ ಅದನ್ನು ಗರ್ಭಧಾರಣೆಯ ಸಮಯದಲ್ಲಿ ಬೇರ್ಪಡಿಸಬಹುದು ಎಂದೂ ಕಂಡು ಹಿಡಿಯಲಾಯಿತು. (ಬಿ.ಆರ್.ಜಿ.)

**ಅಮೈನೊ ಆಮ್ಲ:** ಅಮೈನೊ ಆಮ್ಲಗಳು ವಿವಿಧ ರಸಾಯನಿಕ ಗುಂಪುಗಳನ್ನೊಳಗೊಂಡ ಏಕಾಂಶಗಳು. ಪ್ರತಿ ಅಮೈನೊ ಆಮ್ಲದಲ್ಲಿ ಅಮೈನ್ ಗುಂಪು (ಎನ್‌ಹೆಚ್–2) ಕಾರ್ಬಾಕ್ಸಿಲಿಕ್ ಗುಂಪು (ಸಿಓಓಹೆಚ್) ಜಲಜನಕ (ಹೈಡ್ರೋಜನ್) ಮತ್ತು ಆರ್ ಗುಂಪು ಇರುತ್ತದೆ. ಪ್ರಕೃತಿಯಲ್ಲಿ (ಉದಾ: ಜೀವಿಗಳಲ್ಲಿ ) ದೊರಕುವ ಎಲ್ಲ ಪ್ರೊಟೀನುಗಳಲ್ಲಿ ಒಟ್ಟು 21 ಬಗೆಯ ಅಮೈನೊ ಆಮ್ಲಗಳಿವೆ. ಜೀವಿಗಳಲ್ಲಿರುವ ಅಮೈನೊ ಆಮ್ಲಗಳು ಆಲ್ಫ ಅಮೈನೊ ಆಮ್ಲಗಳು. ಅಮೈನೊ ಆಮ್ಲಗಳ ಮೂಲ ರಚನೆ ಒಂದೇ ಇದ್ದರು, ಪಕ್ಕ ಸರಣಿ (ಸೈಡ್ ಚೈನ್) 'ಆರ್' ಗುಂಪು ಭಿನ್ನವಾಗಿರುತ್ತದೆ. ಅಮೈನೊ ಆಮ್ಲದ ಮೂಲ ರಚನೆ,



'R'ಇರುವ ಕಡೆ ಪಕ್ಕ ಸರಣಿ ಇದೆ.

ಅಮೈನೊ ಆಮ್ಲಗಳಾದ ಗ್ಲೈಸಿನ್ ಅಲನಿನ್, ವೇಲಿನ್, ಲ್ಯೂಸಿನ್, ಐಸೊಲ್ಯೂಸಿನ್, ಸೆರಿನ್, ಥ್ರಿಯೊನಿನ್, ಆಸ್ಪಾರ್ಟಿಕ್ ಆಮ್ಲ, ಆಸ್ಪರಜಿನ್, ಗ್ಲುಟಾಮಿಕ್ ಆಮ್ಲ, ಗ್ಲುಟಾಮಿನ್, ಲೈಸಿನ್, ಆರ್ಜಿನಿನ್, ಮಿಥಿಯೊನಿನ್, ಸಿಸ್ಟೀನ್, ಸಿಸ್ಟೈನ್, ಫೀನೈಲ ಅಲನಿನ್, ಟೈರೊಸಿನ್, ಟ್ರಿಪ್ಟೋಫಾನ್, ಹಿಸ್ಟಿಡಿನ್, ಪ್ರೊಲಿನ್ ಮತ್ತು ಹೈಡ್ರಾಕ್ಸಿಪ್ರೋಲಿನ್ ಜೀವಿಗಳಲ್ಲಿರುವ ಪ್ರೊಟೀನುಗಳಲ್ಲಿವೆ.

ಗ್ಲೈಸಿನ್ ಮೊಟ್ಟಮೊದಲು ಕಂಡು ಹಿಡಿದ ಅಮೈನೊ ಆಮ್ಲ. ಇದರ ರಚನೆ ಸರಳ. ಈ ಅಮೈನೊ ಆಮ್ಲದ ಅಣುವಿನ ಕೇಂದ್ರದಲ್ಲಿ ಒಂದು ಇಂಗಾಲದ (ಕಾರ್ಬನ್) ಪರಮಾಣುವಿದೆ. ಈ ಇಂಗಾಲದ ಪರಮಾಣುವಿನ ನಾಲ್ಕು ಬಂಧನಗಳಲ್ಲಿ (ಬಾಂಡ್ಸ್) ಒಂದಕ್ಕೆ ಅಮೈನ್ ($-NH_2$) ಗುಂಪು, ಇನ್ನೊಂದಕ್ಕೆ ಕಾರ್ಬಾಕ್ಸಿಲಿಕ್ ($-COOH$) ಗುಂಪು, ಮತ್ತೆರಡು ಜಲಜನಕ (ಹೈಡ್ರೋಜನ್) ಪರಮಾಣುಗಳು ಬಂಧಿತವಾಗಿವೆ.



ಗ್ಲೈಸಿನ್

ಅಮೈನೊ ಆಮ್ಲಗಳಲ್ಲಿರುವ ಪಕ್ಕ ಸರಣಿ R ಗುಂಪಿನ ಸಾಮಾನ್ಯ ಲಕ್ಷಣಗಳ ಆಧಾರದ ಮೇಲೆ ಈ ಕೆಳಕಂಡಂತೆ ವಿಂಗಡಿಸಲಾಗಿದೆ.

1) ಹೈಡ್ರೊಕಾರ್ಬನ್ ಗುಂಪಿನಲ್ಲಿರುವ ಅಮೈನೊ ಆಮ್ಲಗಳು:



ಅಲನಿನ್



ವೇಲಿನ್.



ಲ್ಯೂಸಿನ್



ಐಸೊಲ್ಯೂಸಿನ್

2) ಹೈಡ್ರಾಕ್ಸಿಲ್ ಗುಂಪಿನಲ್ಲಿರುವ ಅಮೈನೊ ಆಮ್ಲಗಳು:



ಸೆರಿನ್



ಥ್ರಿಯೊನಿನ್

3) ಕಾರ್ಬಾಕ್ಸಿಲ್ ಗುಂಪಿನಲ್ಲಿರುವ ಅಮೈನೊ ಆಮ್ಲಗಳು:



ಆಸ್ಪಾರ್ಟಿಕ್ ಆಮ್ಲ



ಗ್ಲುಟಾಮಿಕ್ ಆಮ್ಲ

4) ಎರಡು ಅಮೈನ್ ಗುಂಪುಗಳಿರುವ ಅಮೈನೊ ಆಮ್ಲಗಳು:



ಆಸ್ಪರಜಿನ್



ಗ್ಲುಟಾಮಿನ್



ಲೈಸಿನ್



ಆರ್ಜಿನಿನ್

5) ಗಂಧಕ ಪರಮಾಣುಗಳನ್ನೊಳಗೊಂಡ ಅಮೈನೊ ಆಮ್ಲಗಳು:



ಮಿಥಿಯೊನಿನ್



ಸಿಸ್ಟೀನ್



ಸಿಸ್ಟೈನ್

6) ಬೆಂಜಿನ ವರ್ತುಲಗಳನ್ನೊಳಗೊಂಡ ಅಮೈನೊ ಆಮ್ಲಗಳು:



ಫೀನೈಲ್ ಅಲನಿನ್



ಟೈರೊಸಿನ್



ಟ್ರಿಪ್ಟೊಫಾನ್



ಹಿಸ್ಟಿಡಿನ್

7) ವಿಜಾತೀಯ ರಚನೆಯ ಎರಡು ಅಮೈನೊ ಆಮ್ಲಗಳಾದ ಪ್ರೊಲಿನ್ ಮತ್ತು ಹೈಡ್ರಾಕ್ಸಿ ಪ್ರೊಲಿನ್ ಪಕ್ಕ ಸರಣಿಗಳು ಹಿಂದಕ್ಕೆ ತಿರುಗಿ ಅಮೈನೊ ಆಮ್ಲದ ಕೇಂದ್ರ ಇಂಗಾಲ ಪರಮಾಣುವಿನೊಂದಿಗೆ ಸಂಯೋಗಗೊಂಡಿವೆ.



ಪ್ರೊಲಿನ್



ಹೈಡ್ರಾಕ್ಸಿ ಪ್ರೊಲಿನ್

ಅಮೈನೊ ಆಮ್ಲಗಳು ಸಂಯೋಗಗೊಂಡು ಪ್ರೊಟೀನು ಉತ್ಪತ್ತಿಯಾಗುತ್ತದೆ. ಇದನ್ನು ಮೊದಲು ಅಭ್ಯಾಸ ಮಾಡಿದ್ದು ಜರ್ಮನಿಯ ರಸಾಯನ ವಿಜ್ಞಾನಿ ಎಮಿಲ್ ಫಿಶರ್. ಎರಡು ಅಮೈನೊ ಆಮ್ಲಗಳು ಸಂಯೋಗಗೊಳ್ಳುವಾಗ ಒಂದು ಅಮೈನೊ ಆಮ್ಲದ ಕಾರ್ಬಾಕ್ಸಿಲಿಕ್ ಗುಂಪು ಇನ್ನೊಂದು ಅಮೈನೊ ಆಮ್ಲದ ಅಮೈನ್ ಗುಂಪಿಗೆ ಸಂಯೋಗ ಗೊಳ್ಳುತ್ತದೆ.

ಉದಾ:



ಗ್ಲೈಸಿನ್ ಗ್ಲೈಸಿನ್

ನೀರು

ಗ್ಲೈಸಿ ಗ್ಲೈಸಿನ್

ಎರಡು ಅಮೈನೊ ಆಮ್ಲಗಳು ಸಂಯೋಗವಾದಾಗ, ಒಂದು ನೀರಿನ ಅಣು ಕಳೆದುಕೊಂಡು -CONH - ಪೆಪ್ಟೈಡ್ ಬಂಧನ ಉಂಟಾಗುತ್ತದೆ. ಈ ರೀತಿ ಪೆಪ್ಟೈಡ್‌ಗಳಿಂದಾಗಿ ಪ್ರೊಟೀನುಗಳು ಉತ್ಪತ್ತಿಯಾಗುತ್ತವೆ. ಇಪ್ಪತ್ತು ಅಮೈನೊ ಆಮ್ಲಗಳು ವಿವಿಧ ರೀತಿಯಲ್ಲಿ ಸೇರಿ ಪೆಪ್ಟೈಡ್ ಸರಪಣಿಯಾಗುತ್ತದೆ. ಪೆಪ್ಟೈಡ್ ಸರಣಿಯಲ್ಲಿರುವ ಅಮೈನೋ ಆಮ್ಲಗಳ ಸಂಖ್ಯೆ ಮತ್ತು ಸ್ಥಾನ ನಿರ್ದಿಷ್ಟವಾಗಿರುತ್ತದೆ. ಇದೇ ಪ್ರತಿಯೊಂದು ಪ್ರೊಟೀನಿನಲ್ಲಿರುವ ವಿಶಿಷ್ಟತೆ.

ಪ್ರೊಟೀನುಗಳ ಮಹತ್ವ: ಪ್ರೊಟೀನುಗಳು ದೇಹದ ಬೆಳೆವಣಿಗೆಗೆ ಬೇಕಾದ ಅತಿ ಮುಖ್ಯವಸ್ತುಗಳು. ಇವು ಅಂಗಾಶದ ಬೆಳೆವಣಿಗೆಗೆ ಹಾಗೂ ಶರೀರದೊಳಗೆ ಸಂಶ್ಲೇಷಣೆಗೊಳ್ಳುವ ವಿವಿಧ ಪ್ರೊಟೀನುಗಳಿಗೆ ಬೇಕಾದ ಅಮೈನೊ ಆಮ್ಲಗಳನ್ನು

ಒದಗಿಸುತ್ತವೆ. ಕಿಣ್ವಗಳಾಗಿ (ಎನ್‌ಜೈಮ್ಸ್) ಚೋದಕ (ಹಾರ್ಮೋನ್ಸ್) ಗಳಾಗಿ, ಪ್ರೋಟೀನುಗಳು ಕೆಲಸ ಮಾಡುತ್ತವೆ. ಜೀವಿಯ ದೇಹದಲ್ಲಿ (ಉದಾ: ಮನುಷ್ಯ) ಕೆಲವು ಅಮೈನೊ ಆಮ್ಲಗಳು ಉತ್ಪತ್ತಿಯಾಗುತ್ತವೆ. ಶರ್ಕರ ಮತ್ತು ಕೊಬ್ಬು ರಾಸಾಯನಿಕ ಕ್ರಿಯೆಗೊಳಗಾಗಿ ವಿಭಜನೆಗೊಂಡಾಗ ಈ ವಿಭಜನೆಗೊಂಡ ವಸ್ತುಗಳಿಗೆ ಅಮೋನಿಯವನ್ನು ಸೇರಿಸಿ ಕೆಲವು ಅಮೈನೊ ಆಮ್ಲಗಳು ತಯಾರಾಗುತ್ತವೆ. ಆದರೆ, ದೇಹದೊಳಗೆ ಅತ್ಯಗತ್ಯವಾಗಿ ಬೇಕಾದ ಅವಶ್ಯಕ ಅಮೈನೊ ಆಮ್ಲಗಳಾದ, ಮಿತಿಯೊನಿನ್, ಆರ್ಜಿನಿನ್, ಟ್ರಿಪ್ಟೊಫಾನ್, ಥ್ರಿಯೊನಿನ್, ವೇಲಿನ್, ಐಸೊಲ್ಯೂಸಿನ್, ಲ್ಯೂಸಿನ್, ಫೀನೈಲ ಅಲನಿನ್, ಹಿಸ್ಟಿಡಿನ್ ಮತ್ತು ಲೈಸಿನ್ ಉತ್ಪತ್ತಿಯಾಗುವುದಿಲ್ಲ. ಕಾರಣ, ಈ ಅಮೈನೊ ಆಮ್ಲಗಳನ್ನು ಆಹಾರದ ಮೂಲಕ ದೇಹಕ್ಕೆ ನೀಡಬೇಕು. (ಎಸ್.ಆರ್.ಆರ್.ಎ.)

**ಅಯಾನ್ ವಿಲ್ಮಟ್:** ಕ್ಲೋನಿಂಗ್ ತಂತ್ರಜ್ಞಾನದ ಮುಖಾಂತರ ಕುರಿಯ ತದ್ರೂಪಿಯೊಂದನ್ನು ಸೃಷ್ಟಿಸಿದ ವಿಜ್ಞಾನಿ. ಜನ್ಮಸ್ಥಳ – ಇಂಗ್ಲೇಂಡಿನ ಹ್ಯಾಂಪ್ಟನ್ ಲ್ಯೂಸಿ, ದಿನಾಂಕ 9 ಸೆಪ್ಟಂಬರ್ 1944; ನೊಟಿಂಗ್‌ಹ್ಯಾಂ ವಿಶ್ವವಿದ್ಯಾನಿಲಯದ ಸ್ನಾತಕ ಪದವಿ, ವರಾಹದ ವೀರ್ಯ ದ್ರವದ ಶೈತ್ಯೀಕರಣ ಮಹಾ ಪ್ರಬಂಧಕ್ಕೆ 1971ರಲ್ಲಿ ಕೇಂಬ್ರಿಜ್ಞ ವಿಶ್ವವಿದ್ಯಾನಿಲಯದ ಡಾರ್ವಿನ್ ಮಹಾವಿದ್ಯಾಲಯದಿಂದ ಪಿ. ಹೆಚ್. ಡಿ. ಪದವಿ. 1973ರಲ್ಲಿ ಶೈತೀಕೃತ ಭ್ರೂಣದಿಂದ ಕರುವೊಂದನ್ನು ಸೃಷ್ಟಿಸಿ ಅದಕ್ಕೆ ಫ್ರಾಸ್ಟಿ ಎಂಬ ನಾಮಕರಣ ಮತ್ತು 1974ರಲ್ಲಿ ರೊಸಿಲಿನ್ ಸಂಸ್ಥೆಯಲ್ಲಿ ಪ್ರಾಣಿ ಸಂಶೋಧನಾ ಪ್ರಜನನ ವಿಭಾಗದಲ್ಲಿ ಹಿರಿಯ ವಿಜ್ಞಾನಿಯಾಗಿ ಕೆಲಸಕ್ಕೆ ನೇಮಕ ಇವು ವಿಲ್ಮಟ್‌ನ ಪ್ರಮುಖ ಸಾಧನೆಗಳು. 1993ರಲ್ಲಿ ಜರ್ನಲ್ ಆಫ್ ರಿಪ್ರೊಡಕ್ಷನ್ ಅಂಡ್ ಫರ್ಟಿಲಿಟಿ ಎಂಬ ಪತ್ರಿಕೆಯ ಸಂಪಾದಕನಾದ. 1980ರ ಬಳಿಕ ತನ್ನ ಸಂಶೋಧನೆಯನ್ನು ಅಂಕುರಣ (ಕ್ಲೊನಿಂಗ್) ಕ್ಷೇತ್ರಕ್ಕೆ ಬದಲಾಯಿಸಿದ.

ಸ್ಕಾಟ್ಲ್ಯಾಂಡ್‌ನ ಎಡಿನ್‌ಬರ್ಗ್ ಸಮೀಪದಲ್ಲಿರುವ ರೊಸೆಲಿನ್ ಇನ್ಸ್‌ಟಿಟ್ಯೂಟ್‌ನಲ್ಲಿ ಜೀನ್ ಅಭಿವ್ಯಕ್ತಿ ಮತ್ತು ಅಭಿವರ್ಧನೆ ವಿಭಾಗದ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುತ್ತಿರುವ ಅಯಾನ್ ವಿಲ್ಮಟ್ ಕುರಿ ಡಾಲಿಯ ಬೌದ್ಧಿಕ ಪಿತಾಮಹ. 1996ರಲ್ಲಿ ಕ್ಲೋನಿಂಗ್ ಮೂಲಕ ಸೃಷ್ಟಿಸಿದ ಕುರಿ ಡಾಲಿಯ ಸಂಶೋಧನಾ ಯೋಜನೆಯ ನಾಯಕ. ಪ್ರೌಢ ಜೀವಕೋಶವನ್ನು ಕ್ಲೋನಿಂಗ್ ತಂತ್ರಜ್ಞಾನದಿಂದ ಕುರಿ ಡಾಲಿಯನ್ನು ಪಡೆದು, ಈಗ ಕ್ಲೋನಿಂಗ್ ತಾಂತ್ರಿಕತೆಯಲ್ಲಿ ಅಂತರ್‌ರಾಷ್ಟ್ರಿಯ ಮನ್ನಣೆ ಗಳಿಸಿದ್ದಾನೆ.

ಪ್ರಸಕ್ತ ವಿಲ್ಮಟ್ ಮಾನವ ಭ್ರೂಣಗಳ ಕ್ಲೋನಿಂಗ್ ಬಗ್ಗೆ ಸಂಶೋಧನಾ ನಿರತನಾಗಿದ್ದಾನೆ. ಈ ಭ್ರೂಣಗಳಿಂದ ಮೂಲ ಜೀವಕೋಶಗಳನ್ನು (ಸ್ಟೆಮ್‌ಸೆಲ್ಸ್) ಉತ್ಪಾದಿಸಿ, ಅವುಗಳನ್ನು, ಮಧುಮೇಹ, ಪಾರ್ಕಿನ್‌ಸನ್ ಕಾಯಿಲೆಗಳನ್ನು ಗುಣಪಡಿಸಲು ಬಳಸಿಕೊಳ್ಳುವತ್ತ ಸಂಶೋಧನೆ ನಡೆದಿದೆ. ಈ ಕುರಿತು ಹಲವಾರು ಉಪನ್ಯಾಸಗಳನ್ನು ನೀಡಿ. ಚರ್ಚೆಗಳಲ್ಲಿ ಭಾಗವಹಿಸಿದ್ದಾನೆ.

ಸ್ಕಾಟ್ಲ್ಯಾಂಡಿನ ರಾಯಲ್ ಸೊಸೈಟಿ ಆಫ್ ಎಡಿನ್‌ಬರೋ ದ ಫೆಲೋ ಅಗಿ 2000ವರ್ಷದಲ್ಲಿ ಅಯ್ಕೆ, ರಾಣಿ ಎಲಿಜಬೆತ್ ರಿಂದ ಬ್ರಿಟಿಶ್ ಸಾಮ್ರಾಜ್ಯದ ಆರ್ಡರ್‌ನ ಸದಸ್ಯರಾಗಿ ನೇಮಕವು ಸೇರಿದಂತೆ, ವೈದ್ಯಕೀಯ ವಿಜ್ಞಾನ ಅಕಾಡೆಮಿಯ ಫೆಲೋಷಿಪ್, ಲಾರ್ಡ್ ಲಾಯಿಬ್ ಆಫ್ ಕಿಲ್ಗೆರೆನ್ ಪಾರಿತೋಷಕ, ಸೊಸೈಟಿ ಫಾರ್ ದಿ ಸ್ಟಡಿ ಆಫ್ ಫರ್ಟಿಲಿಟಿಯ ಸರ್ ಜಾನ್ ಹಮ್ಮಂಡ್ ಮೆಮೋರಿಯಲ್ ಪಾರಿತೋಷಕ, ರಾಯಲ್ ಹೈಲ್ಯಾಂಡ್ ಮತ್ತು ಅಗ್ರಿಕಲ್ಚರಲ್ ಸೊಸೈಟಿ ಆಫ್ ಸ್ಕಾಟ್ಲಂಡ್‌ನ ಸರ್ ವಿಲಿಯಂ ಯಂಗ್ ಅವಾರ್ಡ್ ಮತ್ತು ರಾಯಲ್ ಅಗ್ರಿಕಲ್ಚರಲ್ ಸೊಸೈಟಿ ಆಫ್ ಇಂಗ್ಲೆಂಡ್‌ನ ಸಂಶೋಧನಾ ಪದಕಗಳು ಅಯಾನ್ ವಿಲ್ಮಟ್‌ಗೆ ಸಂದಿವೆ.

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಶೋಧನಾ ಪತ್ರಿಕೆಗಳಲ್ಲಿ ಹಲವಾರು ಲೇಖನಗಳು ಪ್ರಕಟವಾಗಿವೆ. ಟೈಮ್ಸ್, ನ್ಯೂಸೈಂಟಿಸ್ಟ್, ಸೈಂಟಿಫಿಕ್ ಅಮೇರಿಕನ್ ಪತ್ರಿಕೆಗಳಲ್ಲಿ ಕ್ಲೋನಿಂಗ್ ಬಗ್ಗೆ ಜನಪ್ರಿಯ ಲೇಖನಗಳು, ದ ಸೆಕೆಂಡ್ ಕ್ರಿಯೇಷನ್ ಎಂಬ ಕೃತಿ 2000ರಲ್ಲಿ ಪ್ರಕಟವಾಗಿವೆ.

ವಿಲ್ಮಟ್ ಪತ್ನಿಯ ಹೆಸರು ವಿವಿಯನ್ ಮೇರಿ. ಹೆಲೆನ್, ನೋಮಿ ಹಾಗೂ ಡೀನ್ ವಿಲ್ಮಟ್–ಮೇರಿ ದಂಪತಿಗಳ ಮಕ್ಕಳು. (ಬಿ.ಕೆ.ಎಂ.)

**ಅಯೋರ್ಟ:** ತನ್ನ ಶಾಖೋಪಶಾಖೆಗಳಿಂದ ದೇಹಾದ್ಯಂತ ಆಮ್ಲಜನಕಯುಕ್ತ ರಕ್ತವನ್ನು ಪೂರೈಕೆ ಮಾಡುವ, ದೇಹದ ಅತಿ ದೊಡ್ಡ ರಕ್ತನಾಳ. ಹೃದಯದ ಎಡಹೃತ್ಕುಕ್ಷಿಯಿಂದ ಹೊರಡುತ್ತದೆ. ಆ ಸ್ಥಳದಲ್ಲಿ ಹೃದಯಕ್ಕೂ ಇದಕ್ಕೂ ನಡುವೆ ಎಡ ಅರ್ಧ ಚಂದ್ರಾಕಾರ ಕವಾಟ (ಲೆಫ್ಟ್ ಸೆಮಿಲ್ಯೂನಾರ್ ವಾಲ್ವ್) ಎಂಬ ತ್ರಿದಳಕವಾಟ ಉಂಟು (ಅಯೋರ್ಟದ ಕವಾಟ). ಇದು ಹೃದಯದಿಂದ ಅಯೋರ್ಟಕ್ಕೆ ರಕ್ತಪ್ರವಹಿಸುವುದಕ್ಕೆ ಅಡಚಣೆ ಮಾಡಿದರೂ, ಹೃದಯ ಮಿಡಿತಗಳ ನಡುಗಾಲಗಳಲ್ಲಿ ರಕ್ತ ಅಯೋರ್ಟದಿಂದ ವಾಪಸು ಎಡಹೃತ್ಕುಕ್ಷಿಗೆ ಬರುವುದಕ್ಕೆ ಆಸ್ಪದ ಕೊಡದು. ವರ್ಣನೆಗಾಗಿ ಮಾತ್ರ ಅಯೋರ್ಟವನ್ನು ಏರುಭಾಗ (ಅಸೆಂಡಿಂಗ್ ಪಾರ್ಟ್), ಕಮಾನುಭಾಗ (ಅಯೋರ್ಟಿಕ್ ಆರ್ಚ್), ಎದೆಯಲ್ಲಿರುವ ಇಳಿಭಾಗ (ಡಿಸೆಂಡಿಂಗ್ ಥೊರಾಸಿಕ್ ಅಯೋರ್ಟ), ಉದರಭಾಗ (ಅಬ್ಡಾಮಿನಲ್ ಅಯೋರ್ಟ) ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಿದೆ. ವಾಸ್ತವವಾಗಿ ಈ ಭಾಗಗಳಲ್ಲಿ ಯಾವ ರಚನಾ ವ್ಯತ್ಯಾಸವೂ ಇಲ್ಲ. ಹೆಸರೇ ಹೇಳುವಂತೆ ಏರುಭಾಗ ಎಡ ಹೃತ್ಕುಕ್ಷಿಯಿಂದ ಏರಿ ಶಿರದ ದಿಕ್ಕಿನಲ್ಲಿ ದೇಹದ ಮಧ್ಯರೇಖೆಯಿಂದ ಸ್ವಲ್ಪ ಬಲಕ್ಕೆ ಮುಂದುವರಿಯುತ್ತದೆ. ಈ ಭಾಗ ಪಲ್ಮನರಿ ಅಪಧಮನಿಯ ಹಿಂದಿದೆ. ಅಯೋರ್ಟಿಕ್ ಕವಾಟದ ಕದಗಳಿಂದ ಮುಂದಕ್ಕೆ ಈ ಭಾಗದ ಎಡ ಬಲಗಳಿಂದ ಎರಡು ಕಾರೊನರಿ ಅಪಧಮನಿಗಳು ಹೊರಡುತ್ತವೆ. ಸ್ವತಃ ಹೃದಯದ ಪೂರೈಕೆಗೆಂದೇ ಮೀಸಲಾದ ಈ ಅಪಧಮನಿಗಳು ಅಯೋರ್ಟದ ಮೊತ್ತಮೊದಲ ಕವಲುಗಳು. ಅಯೋರ್ಟದ ಕಮಾನುಭಾಗ ಎದೆಯ ಮೂಳೆಯ ಮೇಲ್ಭಾಗದ ಹಿಂದುಗಡೆ ಬಲದಿಂದ ಎಡಕ್ಕೆ ಕಮಾನಾಗಿ ಬಾಗಿ ಮುಂದುವರಿದಿದೆ. ಕಮಾನು ಎಡ ಪುಪ್ಪುಸದ ಬುಡವನ್ನು ಭಾಗಶಃ ಸುತ್ತಿಕೊಂಡಿದೆ. ಅಯೋರ್ಟದ ಕಮಾನಿನಿಂದ ಮೂರು ದೊಡ್ಡ ಕವಲುಗಳು ಹೊರಟು ತಲೆ, ಕುತ್ತಿಗೆ ಹಾಗೂ ಎಡ ಮತ್ತು ಬಲಗೈಗಳಿಗೆ ರಕ್ತಪೂರೈಕೆ ಮಾಡುತ್ತವೆ. ಎದೆಯಲ್ಲಿ ಇರುವ ಅಯೋರ್ಟದ ಇಳಿಭಾಗ ಕಮಾನಿನ ಮುಂದುವರಿದ ಭಾಗವಾಗಿ ಎದೆಭಾಗದ 4 ನೆಯ ಬೆನ್ನುಮೂಳೆಯ ಮಟ್ಟದಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿಂದ ಎದೆಭಾಗದ 12 ನೆಯ ಬೆನ್ನು ಮೂಳೆಯವರೆಗು ಕೆಳಮುಖವಾಗಿ ಬೆನ್ನು ಮೂಳೆಯ ಮುಂದೆ ಸ್ವಲ್ಪ ಎಡಗಡೆ ಮುಂದುವರಿಯುತ್ತ ಕೊನೆಗೆ ದೇಹದ ಮಧ್ಯದ ರೇಖೆಯಲ್ಲಿ ವಪೆಯನ್ನು ತೂರಿ ಉದರ ಭಾಗವಾಗುತ್ತದೆ. ಈ ಭಾಗದಿಂದ ಹೊರಡುವ ಕವಲುಗಳು ಎದೆಗೂಡಿನ ಭಿತ್ತಿ, ಅನ್ನನಾಳ, ಶ್ವಾಸನಾಳಕವಲುಗಳು ಮುಂತಾದ ನೆರೆ ಅಂಗಗಳಿಗೆ ಪೂರೈಕೆ ಆಗುತ್ತವೆ. ಉದರಭಾಗ ದೇಹ ಮಧ್ಯದಲ್ಲಿ ಬೆನ್ನೆಲುಬಿನ ಮುಂದುಗಡೆ ಉದರದ 4 ನೆಯ ಬೆನ್ನೆಲುಬಿನ ಮಟ್ಟದ ತನಕ ಇಳಿದು ಅಲ್ಲಿ ಎರಡು ಅಂತ್ಯಕವಲಾಗಿ ಕೊನೆಗೊಳ್ಳುತ್ತದೆ. ಉದರಭಾಗದ ಕವಲುಗಳು ಉದರ ಭಿತ್ತಿ, ಜೀರ್ಣಾಂಗಗಳು, ಮೂತ್ರಜನಕಾಂಗಗಳು ಹಾಗೂ ಪ್ರಜನನಾಂಗಗಳಿಗೂ ಅಂತ್ಯ ಕವಲುಗಳು ಕಿಬ್ಬೊಟ್ಟೆ ಮತ್ತು ಕಾಲುಗಳಿಗೂ ಪೂರೈಕೆ ಆಗುತ್ತವೆ.

ಅಯೋರ್ಟ ಅತ್ಯಂತ ದೊಡ್ಡ ಅಪಧಮನಿ ಮಾತ್ರವಲ್ಲ ; ಅತ್ಯಂತ ಹೆಚ್ಚು ಪುಟಿತತೆ ಇರುವ ಧಮನಿ ಕೂಡ. ದೇಹದ ಎಲ್ಲ ಧಮನಿಗಳಿಗಿಂತಲೂ ರಕ್ತದ ಒತ್ತಡ ಅಯೋರ್ಟದಲ್ಲಿ ಅಧಿಕವಾಗಿರುವುದರಿಂದ ಅಷ್ಟು ಒತ್ತಡವನ್ನು ತಡೆದುಕೊಳ್ಳಲು ಅಯೋರ್ಟದ ಭಿತ್ತಿ ಬಹು ದಪ್ಪವಾಗಿದೆ. ಇಷ್ಟು ದಪ್ಪವಾದ ಭಿತ್ತಿಯ ಪೂರೈಕೆಗೆಂದೇ ಅನೇಕ ಸಣ್ಣ ಅಪಧಮನಿಗಳು ಅಯೋರ್ಟದ ಉದ್ದಕ್ಕೂ ಇವೆ. ಅನೇಕ ನರಗಳೂ ಅಯೋರ್ಟದ ಭಿತ್ತಿಗೆ ಪೂರೈಕೆ ಆಗುತ್ತವೆ. ಇವುಗಳಲ್ಲಿ ಕಮಾನಿನ ಭಾಗದ ನರಗಳು ಬಹು ಮುಖ್ಯ.

ಮೀನು, ದ್ವಿಚರಿ, ಸರೀಸೃಪಗಳಲ್ಲಿ ಅಯೋರ್ಟ ಎಡ ಹೃತ್ಕುಕ್ಷಿಯಿಂದ ಹೊರಟ ಮೇಲೆ ಎಡ ಬಲಕಮಾನುಗಳಾಗಿ ಕವಲಾಗುತ್ತವೆ. ಪಕ್ಷಿಗಳಲ್ಲಿ ಸ್ತನಿಗಳಂತೆಯೆ ಅಯೋರ್ಟದ ಕಮಾನು ಒಂದೆ ಆಗಿದ್ದರೂ ಬಾಗಿರುವ ಕಮಾನು. (ಕೆ.ಕೆ.ಎಸ್.ಡಬ್ಲ್ಯೂ.)

ಅಪ ಮತ್ತು ಅಭಿ–ಧಮನಿಗಳ ಭಿತ್ತಿ ರಚನೆ : ಈ ಒಳಮೈ ಅಪಧಮನಿ ಅಭಿಧಮನಿಗಳಲ್ಲಿ ವಾಸ್ತವವಾಗಿ ಅವುಗಳ ಭಿತ್ತಿಯ ಒಳಭಾಗದ ಒಳಕವಚದ (ಟ್ಯೂನಿಕ ಇನ್‌ಟರ್ನ, ಟ್ಯೂನಿಕ ಇನ್‌ಟಿಮ) ಮೇಲ್ಮೈ, ಎಂಡೊಥೀಲಿಯಮ್ ಎಂಬ ನುಣುಪಾದ ಕೋಶಗಳ ಒಂದೇ ವರಸೆಯಿಂದ ರಚಿತವಾದುದು. ಇದರ ಅಡಿಯಲ್ಲಿ ಹಳದಿ ನಾರೆಳೆಗಳಿಂದ ಆದ ರಂಧ್ರಯುಕ್ತ ಪೊರೆ ರಕ್ತನಾಳದ ಒಳಕವಚವನ್ನು ನಡುಕವಚದಿಂದ (ಟ್ಯೂ. ಮೀಡಿಯ) ಬೇರ್ಪಡಿಸುತ್ತದೆ. ಮಧ್ಯಂತರ ಅಪಧಮನಿಗಳ ಅತಿ ತೆಳುವಾದ ಅಡ್ಡಕೊಯ್ತ ಬಿಲ್ಲೆಗಳ (ಥಿನ್ ಕ್ರಾಸ್ ಸೆಕ್ಷನ್) ಸೂಕ್ಷ್ಮದರ್ಶಕ ವೀಕ್ಷಣೆ ಮಾಡಿದಾಗ ಈ ಪೊರೆಯನ್ನು ಬಹುಸ್ಪಷ್ಟವಾಗಿ ಗುರುತಿಸಬಹುದು. ಅಭಿಧಮನಿ ಅಪಧಮನಿಗಳ ಭಿತ್ತಿಯ ಇನ್ನೆರಡು ಕವಚಗಳೆಂದರೆ ನಡುಕವಚ ಮತ್ತು ಹೊರಕವಚ (ಟ್ಯೂ. ಎಕ್ಸ್‌ಟರ್ನ, ಟ್ಯೂ. ಅಡ್‌ವೆನ್‌ಷಿಯ). ಸುಮಾರು ಒಂದೆರಡು ಮಿಮೀ ವ್ಯಾಸವಿರುವ ಮಧ್ಯಂತರ ಅಪಧಮನಿಗಳಲ್ಲಿ ಇವು ಮೂರು ಕವಚಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಲ್ಲದೆ ಅವು ಹೆಚ್ಚು ಕಡಿಮೆ ಒಂದೇ ಗಾತ್ರದವಾಗಿರುತ್ತವೆ.

ಧಮನಿಯ ನಡುಕವಚ : ಉಂಗುರಗಳಂತೆ ಅಥವಾ ಸುತ್ತುಬಳ್ಳಿಯಂತೆ ಜೋಡಿಸಲ್ಪಟ್ಟಿರುವ ಅನೈಚ್ಛಿಕ ಸ್ನಾಯುಗಳು ಮತ್ತು ಹಳದಿ ನಾರೆಳೆಗಳಿಂದ ಇದರ ರಚನೆ ಆಗಿದೆ. ಹೆಚ್ಚು ಗಾತ್ರದ ಮಧ್ಯಂತರ ಅಪಧಮನಿಗಳಲ್ಲಿ ಹಳದಿ ನಾರೆಳೆ ಅಂಶ ಹೆಚ್ಚು. ಕಡಿಮೆ ಗಾತ್ರದ ಮಧ್ಯಂತರ ಅಪಧಮನಿಯಲ್ಲಿ ಅನೈಚ್ಛಿಕ ಸ್ನಾಯುವಿನ ಅಂಶ ಹೆಚ್ಚು. ಕಿರಿ ಅಪಧಮನಿಯಲ್ಲಿ ಸ್ನಾಯುವಿನ ಅಂಶವೆ ಪ್ರಧಾನ. ಮಹಾಪಧಮನಿಗಳಲ್ಲಿ ಹಳದಿನಾರೆಳೆಯ ಅಂಶ ಪ್ರಧಾನ ಅಲ್ಲದೆ ನಡುಕವಚವೆ ಭಿತ್ತಿಯ ಪ್ರಧಾನ ಭಾಗ. ಅಭಿಧಮನಿಗಳಲ್ಲಿ ಸ್ನಾಯುವಿನ ಅಂಶ ಮತ್ತು ಹಳದಿ ನಾರೆಳೆ ಎರಡೂ ಅತ್ಯಲ್ಪ. ನಡುಕವಚದ ಹಳದಿ ನಾರೆಳೆಗಳು ಅದರ ಹೊರಭಾಗದಲ್ಲಿ ಒಂದಕ್ಕೊಂದು ಹೆಣೆದುಕೊಂಡು ಒಂದು

ಪೊರೆಯಂತಾಗಿ ಅದನ್ನು ರಕ್ತನಾಳದ ಹೊರಕವಚದಿಂದ ಬೇರ್ಪಡಿಸಿರುವಂತೆ ಕಾಣಬಹುದು. ಸಣ್ಣ ಮಧ್ಯಂತರ ಅಪಧಮನಿಗಳಲ್ಲಿ ಈ ಸ್ಥಿತಿ ಚೆನ್ನಾಗಿ ವ್ಯಕ್ತವಾಗುತ್ತದೆ. ಅಪಧಮನಿಗಳ ನಡುಕವಚದ ಅನೈಚ್ಛಿಕ ಸ್ನಾಯುಗಳಿಗೆ ಅನುವೇದಕ (ಸಿಂಪಥೆಟಿಕ್) ಎಂಬ ನರವ್ಯೂಹದಿಂದ ನರಪೂರೈಕೆ ಆಗುತ್ತದೆ. ಈ ನರಗಳು ಒಯ್ಯುವ ಪ್ರಚೋದನೆಯಿಂದ ಆ ಸ್ನಾಯುಗಳು ಸಂಕುಚಿಸುತ್ತವೆ. ತತ್ಫಲವಾಗಿ ಅಪಧಮನಿಯ ವ್ಯಾಸ ಕುಗ್ಗುತ್ತದೆ. ನರಗಳ ಮೂಲಕ ನಿರಂತರವಾಗಿ ಅಲ್ಪಪ್ರಚೋದನೆ ಒಯ್ಯಲ್ಪಡುತ್ತಲೆ ಇರುವುದರಿಂದ ಅಪಧಮನಿ ಸ್ವಲ್ಪಮಟ್ಟಿಗೆ ಸಂಕುಚಿಸಿದಂತೆಯೆ ಇರುತ್ತದೆ. ಪ್ರಚೋದನೆ ಹೆಚ್ಚಾದರೆ ಅಪಧಮನಿ ಇನ್ನೂ ಸಂಕುಚಿಸಿ ಕಿರಿದಾಗುತ್ತದೆ. ಪ್ರಚೋದನೆ ಕಡಿಮೆ ಆದರೆ ಅಪಧಮನಿ ಹಿಗ್ಗಿ ದಪ್ಪ ನಾಳವಾಗುತ್ತದೆ. ಅಪಧಮನಿ ಹಿಗ್ಗಿದಾಗ ಅದು ಒಯ್ಯುವ ರಕ್ತಪ್ರಮಾಣ ಹೆಚ್ಚೆನ್ನುವುದು ವ್ಯಕ್ತ. ಒಂದು ಅಂಗಕ್ಕೆ ಅಥವಾ ದೇಹಭಾಗಕ್ಕೆ ಹೆಚ್ಚುರಕ್ತದ ಅಗತ್ಯ ಉಂಟಾದಾಗ ಆ ಸ್ಥಳಕ್ಕೆ ಪೂರೈಕೆ ಆಗುವ ಅಪಧಮನಿ ಅನೈಚ್ಛಿಕವಾಗಿ ನಿಯಂತ್ರಿತವಾದ ನರ ಪ್ರಚೋದನೆಯಿಂದ ಹಿಗ್ಗಿ ಅಗತ್ಯಕ್ಕೆ ತಕ್ಕಷ್ಟು ಹೆಚ್ಚು ರಕ್ತ ಒದಗುವಂತಿದೆ. ಇಂಥ ಹೆಚ್ಚುವರಿ ರಕ್ತ ದೇಹದಲ್ಲಿ ರಕ್ತದ ಅಗತ್ಯ ಕಡಿಮೆ ಇರುವ ಸ್ಥಳಗಳಾದ ಚರ್ಮ, ಉದರ ಮುಂತಾದ ಸ್ಥಳಗಳಿಂದ ಒದಗುತ್ತದೆ. ಈ ಸ್ಥಳಗಳಲ್ಲಿ ಮೇಲಿನ ರೀತಿಯ ಅನೈಚ್ಛಿಕ ನರನಿಯಂತ್ರಣದಿಂದಲೆ ಅಪಧಮನಿಗಳು ಕುಗ್ಗಿ ಅಲ್ಲೆಲ್ಲ ಪ್ರವಹಿಸುವ ರಕ್ತಪ್ರಮಾಣ ಕಡಿಮೆ ಆಗುತ್ತದೆ. ಇದರಿಂದ ಉಳಿಕೆ ಆಗುವ ರಕ್ತ ಅಗತ್ಯವಾದ ಕಡೆಗೆ ದೊರೆಯುವಂತೆ ಆಗುತ್ತದೆ. ಈ ರೀತಿ ನಿಯಂತ್ರಿತವಾದ ರಕ್ತಹಂಚಿಕೆಗೆ ಒಂದು ಉದಾಹರಣೆಯನ್ನು ಕೊಡಬಹುದು. ಊಟವಾದ ಬಳಿಕ ಸ್ವಲ್ಪ ಹೊತ್ತು ಚಳಿಯಾಗುವುದು ಅನೇಕರ ಅನುಭವ. ಇದಕ್ಕೆ ಕಾರಣ ರಕ್ತದ ನಿಯಂತ್ರಿತ ಹಂಚಿಕೆ. ಊಟವಾದ ಮೇಲೆ ಜಠರದಲ್ಲಿ ಪಚನಕ್ರಿಯೆ ಆರಂಭವಾಗುತ್ತದೆ. ಜಠರದ ಚಟುವಟಿಕೆ ಹೆಚ್ಚಿ ಅದಕ್ಕೆ ರಕ್ತಪೂರೈಕೆ ಅಧಿಕವಾಗಬೇಕಾದ ಅಗತ್ಯ ಕಂಡುಬರುತ್ತದೆ. ಆದ್ದರಿಂದ ಅಲ್ಲಿ ಅಪಧಮನಿಗಳು ಹಿಗ್ಗುತ್ತವೆ. ಜಠರಕ್ಕೆ ಹೆಚ್ಚು ರಕ್ತ ಒದಗಿಸಲು ಚರ್ಮದ ಅಡಿಯ ಅಪಧಮನಿಗಳು ಕುಗ್ಗುತ್ತವೆ. ಇದರಿಂದ ಚರ್ಮದಲ್ಲಿ ಪ್ರವಹಿಸುವ ರಕ್ತದ ಪ್ರಮಾಣ ಕಡಿಮೆ ಆಗಿ ಸಾಕಷ್ಟು ಬಿಸಿ ದೊರೆಯದೆ ಚಳಿ ಎನ್ನಿಸುತ್ತದೆ. ಮುಖ ಕೆಂಪೇರುವುದಕ್ಕೂ ಇಂಥ ಅನೈಚ್ಛಿಕ ನರನಿಯಂತ್ರಣ ಕಾರಣ. ಈ ಸಂದರ್ಭದಲ್ಲಿ ಮುಖದ ಅಪಧಮನಿಗಳು ಹಿಗ್ಗಿ ಅಲ್ಲಿ ಪ್ರವಹಿಸುವ ರಕ್ತದ ಪ್ರಮಾಣ ಹೆಚ್ಚಿ ಮುಖ ಕೆಂಪಡರುತ್ತದೆ. ಅತಿಯಾದ ಭೀತಿ ಮುಂತಾದ ಇನ್ನಿತರ ಭಾವಾಧಿಕ್ಯ ಸಂದರ್ಭಗಳಲ್ಲಿ ಮುಖ ಬಿಳಿಚಿಕೊಳ್ಳುವುದು ಅಲ್ಲಿನ ಅಪಧಮನಿಗಳು ಅನೈಚ್ಛಿಕ ನರನಿಯಂತ್ರಣದಿಂದ ಕುಗ್ಗಿ ಪ್ರವಹಿಸುವ ರಕ್ತದ ಪ್ರಮಾಣ ಕಡಿಮೆ ಆಗುವುದರಿಂದಲೆ. ಅಪಧಮನಿಗಳ ಅನೈಚ್ಛಿಕ ಸ್ನಾಯುಗಳು ದೇಹದಲ್ಲಿ ವ್ಯಾಪಕವಾಗಿ ಏಕಕಾಲಿಕವಾಗಿ ಸಂಕುಚಿಸುವುದರಿಂದ ರಕ್ತದ ಒತ್ತಡ ಹೆಚ್ಚುತ್ತದೆ. ಕೆಲವು ಸಂದರ್ಭಗಳಲ್ಲಿ ರಕ್ತ ಒತ್ತಡದ ಆಧಿಕ್ಯ ರೋಗಕ್ಕೆ ಇದೇ ಕಾರಣ. ಸ್ನಾಯು ಅಂಶ ಅಧಿಕವಾಗಿರುವುದರಿಂದಲೇ ಅಪಧಮನಿಗಳು ಘಾತದಿಂದ ಹರಿದಾಗ ಅಥವಾ ಅವನ್ನು ಕೊಯ್ದಾಗ ಗಾಯರಂಧ್ರ ತಾನಾಗಿಯೆ ಶೀಘ್ರದಲ್ಲಿ ಕಿರಿದಾಗಿ ರಕ್ತಸ್ರಾವ ಕಡಿಮೆ ಆಗುತ್ತದೆ. ಇದಕ್ಕೆ ಕಾರಣ ಸ್ನಾಯುಗಳು ತಾವಾಗಿಯೆ ಸಂಕುಚಿಸಿ ಆ ಸ್ಥಳದಲ್ಲಿ ಅಪಧಮನಿಯನ್ನು ಕಿರಿದಾಗಿಸಿ ರಂಧ್ರವೂ ಕಿರಿದಾಗುವಂತೆ ಮಾಡುವುದು. ರಕ್ತಸ್ರಾವ ಕಡಿಮೆ ಆದ ಮೇಲೆ ಆ ಸ್ಥಳದಲ್ಲಿ ರಕ್ತ ಗರಣೆ ಕಟ್ಟಿಕೊಂಡು ಆದ ಗಾಯ ಮುಚ್ಚಿಕೊಂಡು ರಕ್ತಸ್ರಾವ ಪೂರ್ಣವಾಗಿ ನಿಂತುಕೊಳ್ಳುತ್ತದೆ. ಸ್ನಾಯುವಿನ ಅಂಶ ಅತ್ಯಲ್ಪವಾಗಿರುವ ನಾಳಗಳಾದ ಅಭಿಧಮನಿಗಳಲ್ಲಿ ಹೀಗಾಗುವುದಿಲ್ಲ. ಗಾಯದಿಂದ ಅವು ಹರಿದಾಗ ಆ ರಂಧ್ರ ತೆರೆದೆ ಇರುವುದರಿಂದ ರಕ್ತಸ್ರಾವ ಬಹುಕಾಲ ಮತ್ತು ಅಗಾಧವಾಗಿ ಆಗುವುದು.

ಧಮನಿಯ ಹೊರಕವಚ : ಇದು ಬಿಳಿ ನಾರೆಳೆಗಳಿಂದಾದುದು. ದಪ್ಪ ರಕ್ತನಾಳಗಳ ಭಿತ್ತಿಗೆಂದೇ ಪೂರೈಕೆ ಆಗುವ ಅತಿ ಸಣ್ಣ ರಕ್ತನಾಳಗಳು, ನರಗಳು ಈ ಕವಚದಲ್ಲಿ ಹುದುಗಿರುತ್ತವೆ. ಪೆಟ್ಟು, ಹಿಗ್ಗಿಸುವಿಕೆ (ಸ್ಟ್ರೆಚಿಂಗ್)–ಗಳಿಂದ ರಕ್ತನಾಳ ಹರಿದುಹೋಗದಂತೆ ರಕ್ಷಣೆ ಒದಗಿಸುವುದೆ ಅಲ್ಲದೆ ಈ ಕವಚ ರಕ್ತನಾಳವನ್ನು ನೆರೆಯ ಊತಕಕ್ಕೆ ಬಂಧಿಸಿ ನಾಳದ ಸ್ಥಾನಪಲ್ಲಟವಾಗದಂತೆ ನೋಡಿಕೊಳ್ಳುತ್ತದೆ. ಅಪಧಮನಿಗಿಂತಲೂ ಅದಕ್ಕೆ ಸಂವಾದಿಯಾದ ಅಭಿಧಮನಿಯಲ್ಲಿ ಹೊರಕವಚ ಹೆಚ್ಚು ಗಾತ್ರವಾಗಿರುತ್ತದೆ. ಮಹಾಪಧಮನಿಗಳಲ್ಲೂ ಮಹಾಭಿಧಮನಿಗಳಲ್ಲೂ ಹೊರಕವಚದ ಗಾತ್ರ ಹೆಚ್ಚು. ಅಲ್ಲದೆ ಅದರಲ್ಲಿ ಅನೈಚ್ಛಿಕ ಸ್ನಾಯುಗಳೂ ಇರಬಹುದು. ಅವನತ ಮಹಾಭಿಧಮನಿಯಲ್ಲಿ ಇದು ಒಂದು ವಿಶಿಷ್ಟ ಲಕ್ಷಣ.

ಅಪಧಮನಿಗಳೂ ಅಭಿಧಮನಿಗಳೂ ಅನುಕ್ರಮವಾಗಿ ತಮ್ಮ ನೆರೆಯ ಅಪಧಮನಿಗಳೊಡನೆ ಅಥವಾ ಅಭಿಧಮನಿಗಳೊಡನೆ ಕವಲುಗಳ ಮೂಲಕ ಸಂಪರ್ಕ ಹೊಂದಿರುವುದು ಸಾಮಾನ್ಯ. ಇಂಥ ಸಂಪರ್ಕಗಳು ಅಭಿಧಮನಿಗಳಲ್ಲಿ ಹೆಚ್ಚು. ಈಗ ಯಾವುದೇ ಕಾರಣದಿಂದ ಒಂದು ಅಪಧಮನಿಯಲ್ಲೊ ಅಭಿಧಮನಿಯಲ್ಲೊ ರಕ್ತಪ್ರವಾಹಕ್ಕೆ ಅಡಚಣೆ ಉಂಟಾದಾಗ ಸಾಮಾನ್ಯವಾಗಿ ಯಾವ ತೊಂದರೆಯೂ ಉದ್ಭವಿಸದು. ಏಕೆಂದರೆ ಅಡಚಣೆ ಉಂಟಾದರೂ ಆ ಭಾಗಕ್ಕೆ ರಕ್ತಪೂರೈಕೆ ಅಥವಾ ಅಲ್ಲಿಂದ ರಕ್ತದ ವಾಪಸಾತಿ ಸಂಪರ್ಕ ರಕ್ತ ನಾಳಗಳಿಂದ ಸಾಧ್ಯ. ಆದರೆ ಕೆಲವು ಸ್ಥಳಗಳಲ್ಲಿ–ಉದಾಹರಣೆಗೆ ಫುಪ್ಫುಸ, ಗುಲ್ಮ, ಮಿದುಳು, ಹೃದಯ–ಕಿರಿ ಅಪಧಮನಿಗಳು ತಮ್ಮ ನೆರೆಯ ಕಿರಿ ಅಪಧಮನಿಗಳೊಡನೆ ಸಂಪರ್ಕವಾಗುವುದು ಅಪ್ಪಷ್ಟೆ ಇಂಥ ಅಪಧಮನಿಗಳಿಗೆ ಅಂತ್ಯಾಪಧಮನಿಗಳೆಂದು (ಎಂಡ್ ಆರ್ಟರಿ) ಹೆಸರು. ಈ ಅಪಧಮನಿ ಒಂದರಲ್ಲಿ ರಕ್ತಪ್ರವಾಹಕ್ಕೆ ಅಡಚಣೆ ಉಂಟಾದರೆ ಅದು ಪೂರೈಸುವ ಅಂಗ ಭಾಗಕ್ಕೆ ರಕ್ತದ ಕೊರತೆ ಸಹಜ. ಆ ಭಾಗದ ಕೋಶಗಳು ವಾಸ್ತವವಾಗಿ ಸತ್ತೇಹೋಗಬಹುದು. ಇದರಿಂದ ಆ ಅಂಗದ ಕ್ರಿಯೆಗೆ ಧಕ್ಕೆ ಆಗಬಹುದು. ಇಂಥ ಸತ್ತ ಸ್ಥಳಗಳಿಗೆ ಇನ್‌ಫಾರ್ಕ್ಟ್ ಎಂದು ಹೆಸರು.

ಲೋಮನಾಳಗಳು : ಇವು ಕೂದಲಿಗಿಂತ ಸಪುರ ನಾಳಗಳು. ಕೆಲವಂತೂ 6 – 8 μ (μ = 0.001 ಮಿಮೀ) ವ್ಯಾಸದ್ದಾಗಿದ್ದು ಅವುಗಳ ಮೂಲಕ ರಕ್ತದ ಕೆಂಪು ಕಣಗಳು ಸಾಲುಹಿಡಿದು ಒಂದರ ಹಿಂದೆ ಒಂದು ಸಾಗಬೇಕಾಗುತ್ತದೆ. ಹಾಗೆ ಸಾಗುವಾಗಲೂ ಸುಲಭವಾಗಿ ಸಾಗಲಾರದೆ ಚಪ್ಪಟೆಯಾಗಿ ನುಸುಳಿಕೊಂಡು ಹೋಗಬೇಕಾದ ಸಂದರ್ಭಗಳೂ ಉಂಟು. ಅಗತ್ಯಕ್ಕೆ ತಕ್ಕಂತೆ ಸಂಕುಚಿಸಿಕೊಂಡಿರುವ ಸಾಮರ್ಥ್ಯ ಲೋಮನಾಳಗಳಿಗೆ ನೈಸರ್ಗಿಕವಾಗಿ ಲಭಿಸಿದೆ. ಕೆಲವು ವೇಳೆ ಕೆಲವು ಲೋಮನಾಳಗಳು ಸಂಕುಚಿಸಿಕೊಂಡಿದ್ದು ಕೆಲಕಾಲದಮೇಲೆ ಹಿಗ್ಗಿ ರಕ್ತ ಪ್ರವಾಹಕ್ಕೆ ಅವಕಾಶ ಮಾಡಿಕೊಡಬಹುದು. ಇಂಥ ಕಾಲದಲ್ಲಿ ಮೊದಲು ರಕ್ತ ಪ್ರವಹಿಸುತ್ತಿದ್ದ ಲೋಮನಾಳಗಳು ತಾವಾಗಿಯೆ ಸಂಕುಚಿಸಿಕೊಂಡು ತಮ್ಮಲ್ಲಿ ರಕ್ತಪ್ರವಾಹವನ್ನು ನಿರ್ಬಂಧಿಸುತ್ತವೆ. ಈ ರೀತಿ ಒಂದು ಭಾಗದ ಲೋಮನಾಳಗಳು ಟಪ್ಪೆಯಾಗಿ (ರಿಲೇ) ಕಾರ್ಯನಿರ್ವಹಣೆ ಮಾಡುವುದು ಸಾಮಾನ್ಯ. ಸ್ಥಳೀಯ ಸನ್ನಿವೇಶಗಳು – ಉದಾಹರಣೆಗೆ ಸ್ಥಳೀಯವಾಗಿ ಉಷ್ಣತಾಧಿಕ್ಯ, ಇಂಗಾಲದ ಡೈಆಕ್ಸೈಡ್ ಆಧಿಕ್ಯ, ಕೆಲವು ವಿಶಿಷ್ಟ ರಾಸಾಯನಿಕಗಳು ಸ್ಥಳೀಯವಾಗಿ ಬಿಡುಗಡೆ ಆಗುವಿಕೆ ಇತ್ಯಾದಿ – ಲೋಮನಾಳಗಳ ಸಂಕೋಚನ ಸಾಮರ್ಥ್ಯದ ಮೇಲೆ ಪ್ರಭಾವ ಬೀರುತ್ತವೆ. ಲೋಮನಾಳಗಳು ಕವಲುಗಳಾಗಿ ಅದೇ ಕವಲುಗಳು ಪುನಃ ಸೇರಿಕೊಳ್ಳುವುದು ಅವುಗಳ ಒಂದು ವಿಶಿಷ್ಟ ಲಕ್ಷಣ. ಎಲ್ಲೆಲ್ಲೂ ಲೋಮನಾಳಗಳ ಜಾಲವೆ ಉಂಟು. ಒಂಟಿ ಲೋಮನಾಳ ಇರುವ ಸ್ಥಳವೇ ಇಲ್ಲವೆನ್ನಬಹುದು. ಅಪಧಮನಿ ಅಭಿಧಮನಿಗಳಲ್ಲಿ ಕವಲುಗಳು ತಾಯಿನಾಳಕ್ಕಿಂತ ಯಾವಾಗಲೂ ಕಿರಿದಾಗಿಯೆ ಇರುತ್ತವೆ., ಲೋಮನಾಳದ ಕವಲುಗಳು ತಾಯಿನಾಳದಷ್ಟೆ ವ್ಯಾಸವುಳ್ಳವು. ಲೋಮನಾಳದ ಭಿತ್ತಿ ಬಲು ತೆಳು. ವಾಸ್ತವವಾಗಿ ಒಂದೇ ವರಸೆ ಎಂಡೊಥೀಲಿಯಮ್ ಕೋಶಗಳಿಂದ ರಚಿಸಲ್ಪಟ್ಟಿದೆ. ಕೋಶಗಳ ನಡುವೆ ಅಲ್ಲಲ್ಲಿ ಅತಿ ಸಣ್ಣ ರಂಧ್ರಗಳೂ (ಬಹುಶಃ ಹತ್ತರಲ್ಲಿ ಒಂದು μ ಗಿಂತ ಸಣ್ಣವು) ಇರುವುದುಂಟು. ಲೋಮನಾಳಗಳ ಭಿತ್ತಿ ಹೀಗೆ ಅತಿ ತೆಳುವಾಗಿ ರಂಧ್ರಯುಕ್ತವಾಗಿರುವುದರಿಂದ ಒಳಗೆ ಪ್ರವಹಿಸುವ ರಕ್ತದ ದ್ರವಭಾಗ ಜರಡಿಯಿಂದ ಶೋಧಿಸಲ್ಪಟ್ಟು ಹೊರಗೆ ಬರುವಂತೆ ಭಿತ್ತಿಯ ಹೊರಗೆ ಸೋರುತ್ತಲೇ ಇರುತ್ತದೆ. ರಕ್ತದಲ್ಲಿ ಕರಗಿರುವ ಪೂರ್ಣ ಲೀನಕಾರಿ ವಸ್ತುಗಳೆಲ್ಲ (ಕ್ರಿಸ್ಟಲಾಯ್ಡ್) ಅದೇ ಪ್ರಮಾಣದಲ್ಲಿ ಈ ದ್ರವದಲ್ಲೂ ಇರುತ್ತವೆ. ಈ ದ್ರವಕ್ಕೆ ಕೋಶಾವರಣ ದ್ರವವೆಂದು (ಇನ್‌ಟರ್‌ಸೆಲ್ಯೂಲರ್ ಫ್ಲೂಯಿಡ್) ಹೆಸರು. ಲೋಮನಾಳಗಳ ಸುತ್ತಮುತ್ತ ಇರುವ ಕೋಶಗಳ ಮೈಮೇಲೆಲ್ಲ ಇದು ಪಸರಿಸುವುದರಿಂದ ಇದರೊಡನೆ ಕೋಶಗಳು ವಸ್ತುವಿನಿಮಯ ಮಾಡಿಕೊಳ್ಳುತ್ತವೆ. ಹೀಗಾಗಿ ಪೌಷ್ಟಿಕ ಮತ್ತು ಇತರ ಉಪಯುಕ್ತ ವಸ್ತುಗಳು ಕೋಶಗಳಿಗೆ, ಅವು ದೇಹದ ಯಾವ ಸಂದಿಮೂಲೆಯಲ್ಲಿದ್ದರೂ ದೊರೆಯುತ್ತವೆ. ಅಂತೆಯೆ ಕೋಶಗಳಿಂದ ವಿಸರ್ಜಿತ ವಸ್ತುಗಳು, ಕೋಶಗಳು ಉತ್ಪಾದಿಸಿ ದೇಹದ ಬೇರೆಡೆಯಲ್ಲಿ ಉಪಯುಕ್ತವಾಗಬಹುದಾದ ವಸ್ತುಗಳು ಕೋಶದಿಂದ ಹೊರ ಬಂದು ಈ ದ್ರವದಲ್ಲಿ ಲೀನವಾಗುತ್ತವೆ. ಕೋಶಕ್ಕೆ ಅಗತ್ಯವಾದ ಆಕ್ಸಿಜನ್ ಪೂರೈಕೆಯೂ ಕೋಶಕ್ರಿಯೆಗಳಿಂದ ಉದ್ಭವಿಸಿದ ಇಂಗಾಲದ ಡೈಆಕ್ಸೈಡಿನ ವಿಸರ್ಜನೆಯೂ ಇದೇ ರೀತಿ ಜರುಗುತ್ತವೆ. ಹೀಗೆ ಕೋಶಾವರಣದ್ರವ ಕೋಶಗಳಿಗೂ ಲೋಮನಾಳಗೊಳಗಿನ ರಕ್ತಕ್ಕೂ ಸಂಬಂಧ ಕಲ್ಪಿಸುವ ಒಂದು ಅತ್ಯಗತ್ಯ ವಸ್ತುವಾಗಿ ಪರಿಣಮಿಸಿದೆ. ಲೋಮನಾಳಗಳ ಒಂದು ಕಿರಿ ಅಪಧಮನಿಯ ಕೊನೆಯಿಂದ ಉಗಮಿಸಿ ಜಾಲದಂತೆ ವಿನ್ಯಾಸಗೊಂಡು ಪುನಃ ಎಲ್ಲ ಸೇರಿ ಅನುಗುಣವಾದ ಕಿರಿ ಅಭಿಧಮನಿಯಾಗುವುದಷ್ಟೆ. ಈ ಅಂತರದಲ್ಲಿ ಲೋಮನಾಳದ ಪೂರ್ವಾರ್ಧದಲ್ಲಿ ಕೋಶಾವರಣ ದ್ರವ ಭಿತ್ತಿಯ ಮೂಲಕ ಶೋಧಿಸಲ್ಪಟ್ಟು ಹೊರಬರುತ್ತದೆ. ಲೋಮನಾಳದ ಅಂತ್ಯಾರ್ಧದಲ್ಲಿ ಇದು ಪುನಃ ಒಳಕ್ಕೆ ಹೀರಲ್ಪಡುತ್ತದೆ. ಉಳಿಕೆ ದ್ರವ ಏನಾದರೂ ಇದ್ದರೆ ಅದು ದುಗ್ಧರಸನಾಳದೊಳಹೊಕ್ಕು ದುಗ್ಧರಸ ಎನ್ನಿಸಿಕೊಂಡು ಅದರೊಳಗೇ ಪ್ರವಹಿಸುತ್ತ ಅಂತಿಮವಾಗಿ ಅದೂ ರಕ್ತವನ್ನು ಸೇರುತ್ತದೆ. ಲೋಮನಾಳದ ಪೂರ್ವಾರ್ಧ ಭಾಗದಲ್ಲಿ ಕೋಶಾವರಣ ದ್ರವ ಹೊರಬರುವುದಕ್ಕೂ ಅಂತ್ಯಾರ್ಧಭಾಗದಲ್ಲಿ ಒಳಕ್ಕೆ ಹೀರಲ್ಪಡುವುದಕ್ಕೂ ಕಾರಣವಿಷ್ಟೆ. ಲೋಮನಾಳದೊಳಗೆ

ಪ್ರವಹಿಸುತ್ತಿರುವ ರಕ್ತ ತಕ್ಕಷ್ಟು ಒತ್ತಡಕಾರಕ. ಈ ಒತ್ತಡದ ಪರಿಣಾಮವಾಗಿ ಬಹು ತೆಳುವಾದ ಲೋಮನಾಳ ಭಿತ್ತಿಯನ್ನು ತೂರಿ ನೀರು ಅದರೊಳಗೆ ಪೂರ್ಣವಾಗಿ ಕರಗಿರುವ ವಸ್ತುಗಳು ಹೊರಬರುತ್ತವೆ. ಆದ್ದರಿಂದ ಈ ಒತ್ತಡಕ್ಕೆ ಶೋಧನ ಒತ್ತಡ (ಫಿಲ್ಟ್ರೇಷನ್ ಪ್ರೆಷರ್) ಎಂಬ ಹೆಸರಿದೆ. ಶೋಷಿತವಾಗಿ ಕೋಶಾವರಣ ದ್ರವ ಹೊರಬರುವ ಪ್ರವೃತ್ತಿಗೆ ವ್ಯತಿರಿಕ್ತವಾದದ್ದು ನೀರು (ಆದ್ದರಿಂದ ಅದರಲ್ಲಿ ಕರಗಿರುವ ವಸ್ತುಗಳು). ಇದು ಲೋಮನಾಳದ ಭಿತ್ತಿಯ ಮೂಲಕ ಹೊರಗಿನಿಂದ ಒಳಸೇರುವುದು. ನೀರನ್ನು ಹೀಗೆ ಒಳಕ್ಕೆ ಆಕರ್ಷಿಸುವುದು ರಕ್ತದ್ರವದಲ್ಲಿರುವ ಪ್ರೋಟೀನ್ ಅಂಶ. ಪ್ರೋಟೀನುಗಳು ಪೂರ್ಣವಾಗಿ ಲೀನವಾಗದೆ ರಕ್ತ ದ್ರವದಲ್ಲಿ ತೇಲುತ್ತಿರುವ (ಸಸ್‌ಪೆಂಡೆಡ್) ವಸ್ತುಗಳು. ಇವು ಲೋಮನಾಳ ಭಿತ್ತಿಯಲ್ಲಿ ತೂರಲಾರದಷ್ಟು ಗಾತ್ರದ ಬೃಹದಣುಗಳಿಂದಾದವು. ಕೋಶಾವರಣ ದ್ರವ ಲೋಮನಾಳದಿಂದ ಹೊರಬರುವಾಗ ಇವು ಲೋಮನಾಳದೊಳಗೇ ಉಳಿದುಕೊಳ್ಳುತ್ತದೆ ಮತ್ತು ತಮ್ಮ ಪ್ರಮಾಣಕ್ಕೆ ಅನುಸಾರವಾಗಿರುವಷ್ಟು ಒತ್ತಡದಿಂದ ನೀರನ್ನು ಆಕರ್ಷಿಸುತ್ತದೆ. ಮಾನವರ ಲೋಮನಾಳಗಳಲ್ಲಿ ಈ ಆಕರ್ಷಣೆ ಸುಮಾರು 30 ಮಿಮೀ ಪಾದರಸದಷ್ಟು ಉಂಟು. ಲೋಮನಾಳಗಳ ಪೂರ್ವಾರ್ಧದಲ್ಲಿ ಶೋಧನ ಒತ್ತಡ ಸುಮಾರು 40 ಮಿಮೀ ಪಾದರಸದಷ್ಟು ಇದೆ. ಅಂದರೆ ಪ್ರೋಟೀನ್ ಬೃಹದಣುಗಳ ಆಕರ್ಷಕ ಒತ್ತಡಕ್ಕಿಂತ ಹೆಚ್ಚು. ಆದ್ದರಿಂದ ಈ ಸ್ಥಳದಲ್ಲಿ ಶೋಧನೆಯೆ ಪ್ರಧಾನವಾಗಿ ಕೋಶಾವರಣ ದ್ರವ ಹೊರಬರುತ್ತವೆ. ಲೋಮನಾಳಗಳ ಅಂತ್ಯಾರ್ಧದಲ್ಲಿ ಶೋಧನ ಒತ್ತಡ ಸುಮಾರು 10 ಮಿಮೀ ಪಾದರಸದಷ್ಟು ಉಂಟು. ಆದ್ದರಿಂದ ಈ ಸ್ಥಳದಲ್ಲಿ ಪ್ರೋಟೀನ್ ಬೃಹದಣುಗಳು ನೀರನ್ನು ಆಕರ್ಷಿಸುವ ಒತ್ತಡವೆ ಹೆಚ್ಚು ಮತ್ತು ನೀರಿನ ಆಕರ್ಷಣೆಯೆ ಪ್ರಧಾನಕ್ರಿಯೆ. ಹೀಗಾಗಿ ಈ ಸ್ಥಳದಲ್ಲಿ ಕೋಶಾವರಣದ್ರವ ಪುನಃ ಲೋಮನಾಳದ ಒಳಹೋಗುತ್ತದೆ. ದ್ರವ ಹೊರಬರುವ ಮತ್ತು ಒಳಹೋಗುವ ಕ್ರಿಯೆಗಳಲ್ಲಿ ವ್ಯತ್ಯಾಸವಾದರೆ ಈ ದ್ರವದ ಪ್ರಮಾಣ ಹೆಚ್ಚುಕಡಿಮೆ ಆಗುತ್ತದೆ. ಹೆಚ್ಚಾದರೆ ಅದೆ ಊತಪರಿಸ್ಥಿತಿ (ಇಡೀಮ). ಕಡಿಮೆ ಆದರೆ ಕೋಶಗಳಿಗೆ ಅಗತ್ಯವಸ್ತುಗಳ ಖೋತ ಆಗಿ ಕೋಶನಾಶವಾಗುವ ಪ್ರಮೇಯ ಉಂಟು. ಆಘಾತ (ಷಾಕ್) ಸಂದರ್ಭಗಳಲ್ಲಿ ಲೋಮನಾಳಗಳ ಗಾತ್ರದ ಸ್ವನಿಯಂತ್ರಣ ನಾಶವಾಗಿ ದೇಹದಲ್ಲಿ ಲೋಮನಾಳಗಳು ವ್ಯಾಪಕವಾಗಿ ಹಿಗ್ಗುವುದರಿಂದ ದೇಹರಕ್ತದ ಬಹುಪಾಲು ಅಲ್ಲೆ ಶೇಖರವಾಗಿ ಹೃದಯಕ್ಕೆ ರೇಚಿಸಲು ತಕ್ಕಷ್ಟು ರಕ್ತವಿಲ್ಲದೆ ರಕ್ತದ ಒತ್ತಡ ಅಗಾಧವಾಗಿ ಕುಸಿದು ಮರಣ ಸಂಭವಿಸಬಹುದು. ಆದ್ದರಿಂದ ಇದನ್ನು ಯಾವಾಗಲೂ ತುರ್ತುಪರಿಸ್ಥಿತಿಯಾಗಿ ಗಣಿಸಿ ತಕ್ಕ ಚಿಕಿತ್ಸೆಯನ್ನು ಕೂಡಲೆ ಕೈಗೊಳ್ಳಬೇಕಾಗುತ್ತದೆ.

ಧಮನಿಗಳ ವಿಶೇಷ ವಿನ್ಯಾಸಗಳು : ಅಪಧಮನಿಗೂ ಅಭಿಧಮನಿಗೂ ನಡುವೆ ಲೋಮನಾಳ ಜಾಲದ ಸಂಪರ್ಕವಿರುವುದೆ ದೇಹದಲ್ಲಿರುವ ಸರ್ವ ಸಾಧಾರಣ ಏರ್ಪಾಡು. ಕೆಲವು ಕಡೆ ಈ ಜಾಲದ ಜೊತೆಗೆ ಅಪಧಮನಿಯನ್ನು ನೇರವಾಗಿ ಅಭಿಧಮನಿಗೆ ಸಂಪರ್ಕಿಸುವ ಒಂದು ಧಮನಿ ಇರುತ್ತದೆ. ಇದರ ಭಿತ್ತಿಯ ರಚನೆ ಅಪಧಮನಿಗೂ ಲೋಮನಾಳಕ್ಕೂ ಮಧ್ಯಸ್ಥವಾಗಿರುವುದು. ಈ ಧಮನಿ ಸಂಕುಚಿಸಿಕೊಂಡು ರಕ್ತ ಲೋಮನಾಳಜಾಲದ ಮೂಲಕವೇ ಪ್ರವಹಿಸುವಂತೆ ಮಾಡಬಲ್ಲದು. ಇಲ್ಲವೇ ಹಿಗ್ಗಿದ ಸ್ಥಿತಿಯಲ್ಲಿದ್ದು, ರಕ್ತ ಲೋಮನಾಳಜಾಲದಲ್ಲಿ ಪ್ರವಹಿಸುವುದನ್ನು ಪೂರ್ಣವಾಗಿ ತಪ್ಪಿಸಿ ಅದು ಅಪಧಮನಿಯಿಂದ ನೇರವಾಗಿ ಅಭಿಧಮನಿಯನ್ನು ಸೇರುವಂತೆ ಮಾಡಬಲ್ಲದು. ಇಂಥ ಏರ್ಪಾಡಿನಿಂದ ಹಲವು ಅನುಕೂಲತೆಗಳುಂಟು. ಅಪರೂಪವಾಗಿ ಒಂದೊಂದು ಕಡೆ ಲೋಮನಾಳ ಜಾಲ ಪೂರ್ಣವಾಗಿ ಲೋಪವಾಗಿ ಇಂಥ ಸಂಪರ್ಕನಾಳ ಮಾತ್ರ ಇರುವುದುಂಟು.

ದೇಹದ ಕೆಲವು ಅಂಗಗಳೊಳಗೆ ಲೋಮನಾಳದಂತಿರುವ ಧಮನಿ ಉದ್ದಕ್ಕೂ ಒಂದೇ ಸಮನಾದ ವ್ಯಾಸವುಳ್ಳ ನಾಳವಾಗಿರುವುದಿಲ್ಲ. ಭಿತ್ತಿಯ ರಚನೆ ಹೆಚ್ಚು ಕಡಿಮೆ ಲೋಮನಾಳದಂತಿದ್ದರೂ ಕಂಡಿಯ ವ್ಯಾಸ ಕೆಲವು ಕಡೆ ಹೆಚ್ಚು, ಕೆಲವು ಕಡಿಮೆ ಆಗಿದ್ದು ಅಡ್ಡಾದಿಡ್ಡಿ ಆಗಿರುತ್ತದೆ. ಇಂಥ ಧಮನಿಗಳಿಗೆ ಸೈನ್ಯುಸಾಯ್ಡುಗಳೆಂದು ಹೆಸರು. ಯಕೃತ್ತು, ಗುಲ್ಮ, ಅಡ್ರಿನಲ್ ಮತ್ತು ಪಿಟ್ಯುಟರಿ ಗ್ರಂಥಿಗಳು, ಮಜ್ಜೆ ಇತ್ಯಾದಿ ಸ್ಥಳಗಳಲ್ಲಿ ಸೈನ್ಯುಸಾಯ್ಡುಗಳು ಕಂಡುಬರುತ್ತದೆ. ಸ್ವಲ್ಪವೇ ವ್ಯತ್ಯಾಸವಾದ ಇಂಥದೆ ವಿನ್ಯಾಸ ದೇಹದ ನಿಮಿರಬಲ್ಲ ಅಂಗಗಳಲ್ಲಿ (ಇರೆಕ್ಟೈಲ್ ಆರ್ಗನ್ಸ್) ಇದೆ. ಇವೆಲ್ಲ ಆಯಾ ಅಂಗಗಳ ವಿಶೇಷ ಕ್ರಿಯೆಗಳಿಗೆ ಅನುಕೂಲವಾಗಲೆಂದೆ ಲೋಮನಾಳಜಾಲಗಳ ಬದಲು ಸೈನ್ಯುಸಾಯ್ಡುಗಳಿರುವುದು.

ಇನ್ನು ಕೆಲವು ಕಡೆ ಅಪಧಮನಿ ಒಂದು ಸಲ ಲೋಮನಾಳಜಾಲವಾಗಿ ವಿನ್ಯಾಸಗೊಂಡು ಅನಂತರ ಎಲ್ಲ ಸೇರಿ ಆದ ಧಮನಿ ಪುನಃ ಇನ್ನೊಂದು ಅಂಗದಲ್ಲಿ ಎರಡನೆಯ ಸಲ ಲೋಮನಾಳ ಜಾಲವಾಗುತ್ತದೆ. ಮೊದಲನೆಯ ಲೋಮನಾಳ ಜಾಲವಿರುವ ಸ್ಥಳದಲ್ಲಿ ಕೋಶಾವರಣ ದ್ರವದ ಮೂಲಕ ರಕ್ತಗತವಾಗುವ ವಸ್ತುಗಳನ್ನು ಎರಡನೆಯ ಲೋಮನಾಳಜಾಲವಿರುವ ಸ್ಥಳದಲ್ಲಿ ಒದಗಿಸಿ ಅಲ್ಲಿ ಸೂಕ್ತ ಪರಿಣಾಮ ಉಂಟಾಗುವಂತೆ ಅನುಕೂಲ ಮಾಡಿಕೊಡಲು ಆದ ಸೈಸರ್ಗಿಕ ಏರ್ಪಾಡು ಇದು. ಲೋಮನಾಳದಿಂದ ಉದ್ಭವಿಸಿ ಇನ್ನೊಂದು ಲೋಮನಾಳಜಾಲದಲ್ಲಿ ಕೊನೆಗೊಳ್ಳುವ ಈ ವಿನ್ಯಾಸಕ್ಕೆ ಪೋರ್ಟಲ್ ವ್ಯವಸ್ಥೆ (ಸಿಸ್ಟಮ್) ಎಂದು ಹೆಸರು. ಜಠರ, ಕರುಳು, ಗುಲ್ಮ ಇಲ್ಲಿರುವ ಲೋಮನಾಳಜಾಲಗಳಿಂದ ಉದ್ಭವಿಸಿದ ಧಮನಿಗಳು ಸೇರಿ ಒಂದು ದೊಡ್ಡ ಧಮನಿಯಾಗಿ (ಇದನ್ನು ಪೋರ್ಟಲ್ ಅಭಿಧಮನಿ ಎಂದೇ ಕರೆಯಲಾಗಿದೆ) ಯಕೃತ್ತನ್ನು ಸೇರಿ ಅಲ್ಲಿ ಕವಲೊಡೆದು ಧಮನಿಜಾಲವಾಗುತ್ತದೆ. ಇದರಿಂದ ಜೀರ್ಣಾಂಗಗಳಿಂದ ಆಹಾರ ಜೀರ್ಣಿಸಲ್ಪಟ್ಟು ರಕ್ತಗತವಾದ ಪೌಷ್ಟಿಕ ವಸ್ತುಗಳು ಯಕೃತ್ತಿನ ಕೋಶಗಳಿಗೆ ದೊರಕಿ ಅಲ್ಲಿ ತಕ್ಕ ಪರಿಣಾಮ ಉಂಟಾಗುತ್ತದೆ. ಇದೇ ರೀತಿ ಹೈಪೊಥೆಲಮಸ್ ಎಂಬ ಮಿದುಳಿನ ಭಾಗದ ಲೋಮನಾಳಜಾಲಗಳು ಸೇರಿ ಒಂದು ಧಮನಿಯಾಗಿ ಅದು ನೆರೆಯಲ್ಲಿರುವ ಪಿಟ್ಯುಟರಿ ಗ್ರಂಥಿಯನ್ನು ಹೊಕ್ಕು ಅಲ್ಲಿ ಲೋಮನಾಳಜಾಲವಾಗಿ ವಿನ್ಯಾಸಗೊಳ್ಳುತ್ತದೆ. ಈ ಏರ್ಪಾಡಿನಿಂದ ಹೈಪೊಥೆಲಮಸ್ಸಿನಲ್ಲಿ ಉತ್ಪತ್ತಿಯಾದ ರಾಸಾಯನಿಕಗಳು ಪಿಟ್ಯುಯಿಟರಿ ಗ್ರಂಥಿಗೆ ಒಯ್ಯಲ್ಪಟ್ಟು ಅಲ್ಲಿ ನಿರ್ದಿಷ್ಟ ಪರಿಣಾಮಗಳು ಫಲಿಸುವುದು ಸಾಧ್ಯವಾಗಿದೆ. ಮೂತ್ರಜನಕಾಂಗದ ಎರಡುತುದಿಗಳಲ್ಲೂ ಲೋಮನಾಳಗಳಲ್ಲಿರುವ ಧಮನಿಗಳು ಲಕ್ಷಾಂತರ ಇವೆ. ಇಂಥ ವಿನ್ಯಾಸದಿಂದ ಮೂತ್ರಜನಕಾಂಗದಲ್ಲಿ ಅಗತ್ಯವಾದ ರೀತಿಯಲ್ಲಿ ಮೂತ್ರೋತ್ಪತ್ತಿ ಆಗಲು ಸಾಧ್ಯವಾಗಿದೆ.

(ಎಸ್.ಆರ್.ಆರ್.)

ಧಮನಿಗಳ ರೋಗಗಳು : 1 ಅನ್ಯೂರಿಸಮ್: ಅಪಧಮನಿಯ ಒಂದು ರೋಗಸ್ಥಿತಿ. ಈ ಸ್ಥಿತಿಯಲ್ಲಿ ಅಪಧಮನಿ ಸಾಮಾನ್ಯವಾಗಿ ಸ್ಥಳೀಯವಾಗಿ ಉಬ್ಬಿಕೊಂಡಿರುತ್ತದೆ. ಉಬ್ಬರ ಅಪರೂಪವಾಗಿ ಅಪಧಮನಿಯ ಉದ್ದಕ್ಕೂ ಸ್ವಲ್ಪದೂರ ಕಂಡುಬರಬಹುದು. ಅಪಧಮನಿಯ ಮೈ ಸುತ್ತಲು ಒಂದೇ ಸಮನಾಗಿ ಉಬ್ಬಿರಬಹುದು ಇಲ್ಲವೆ ಒಂದು ಪಕ್ಕದಲ್ಲಿ ಮಾತ್ರ ಉಬ್ಬಿಕೊಂಡಿರಬಹುದು. ಅಪಧಮನಿಯ ಪೆಡಸುರೋಗ (ಆರ್ಟೀರಿಯೋಸ್ಕ್ಲೀರೋಸಿಸ್, ಅಥಿರೋಮ), ಸಿಫಿಲಿಸ್, ಮತ್ತು ಇನ್ನು ಕೆಲವು ವೈರಾಣು ಸೋಂಕುಗಳು ಇಂಥ ಸ್ಥಿತಿಗಳಲ್ಲಿ ಅಪಧಮನಿಯ ಭಿತ್ತಿ ಶಿಥಿಲಗೊಂಡಿರುವಾಗ ಆ ಸ್ಥಳದಲ್ಲಿ ನಾಡಿಮಿಡಿತ ಉಂಟಾದ ಪ್ರತಿಸಲ ಅದು ಕೊಂಚಕೊಂಚ ಹಿಗ್ಗಿಸಲ್ಪಡುತ್ತ ಅಪಧಮನಿಯ ಉಬ್ಬರ ಉಂಟಾಗುತ್ತದೆ. ಇದು ಅಪಧಮನಿಯ ನಿಜವಾದ ಉಬ್ಬರ (ಟ್ರೂ ಅನ್ಯೂರಿಸಮ್) ವಿಶೇಷವಾಗಿ ಎದೆ ಅಥವಾ ಉದರದಲ್ಲಿ ಅಯೋರ್ಟ ಎಂಬ ಮಹಾಪಧಮನಿಯ ಇಳಿಭಾಗದಲ್ಲಿ ಸ್ಥಳೀಯವಾಗಿ ಕಂಡುಬರುತ್ತದೆ. ಅಪರೂಪವಾಗಿ ಭಿತ್ತಿಸೀಳಿ ಎರಡು ಪದರವಾಗಿ ರಕ್ತ ಈ ಎರಡು ಪದರಗಳ ನಡುವೆಯೂ ಪ್ರವಹಿಸುತ್ತ ಉಬ್ಬರವನ್ನು ಉಂಟುಮಾಡಬಹುದು. ಇದಕ್ಕೆ ಸೀಳು ಉಬ್ಬರ (ಡಿಸೆಕ್ಟಿಂಗ್ ಅನ್ಯೂರಿಸಮ್) ಎಂದು ಹೆಸರು. ರಕ್ತ ಒತ್ತಡದ ಆಧಿಕ್ಯ ರೋಗದಲ್ಲಿ (ಹೈಪರ್‌ಟೆನ್‌ಷನ್, ಹೈಬ್ಲಡ್‌ಪ್ರೆಶರ್) ಇಂಥ ಉಬ್ಬರ ಕಂಡುಬರುವ ಸಾಧ್ಯತೆ ಹೆಚ್ಚು, ಬಂದೂಕಿನೇಟು, ಚೂರಿ ತಿವಿತ ಮುಂತಾದ ನೇರ ಘಾತಗಳಿಂದ ಅಪಧಮನಿಯ ನೆರೆಯಲ್ಲಿ ಡೊಗರುಂಟಾಗಿ ಅದು ಅಪಧಮನಿಯ ಭಿತ್ತಿಯ ಹರಕಿನ ಮೂಲಕ ಅಪಧಮನಿಯೊಡನೆ ಏಕವಾಗಿರುತ್ತದೆ ಮತ್ತು ಸಹಜವಾಗಿಯೇ ರಕ್ತ ಇಲ್ಲದೆ ರಕ್ತದ ಹೆಪ್ಪಿನಿಂದ ತುಂಬಿಕೊಂಡಿರುತ್ತದೆ. ಇದಕ್ಕೆ ನಕಲಿ ಉಬ್ಬರ (ಫಾಲ್ಸ್ ಅನ್ಯೂರಿಸಮ್) ಎಂದು ಹೆಸರು. ಒಂದೊಂದು ಹೃದಯ ಮಿಡಿತದಲ್ಲೂ ಅನ್ಯೂರಿಸಮ್ ಇರುವ ಸ್ಥಳ ಕೂಡ ನಾಡಿಮಿಡಿತವನ್ನು ತೋರುವುದರಿಂದ ಮುಂಚೆಯೇ ಶಿಥಿಲವಾಗಿರುವ ಭಿತ್ತಿ ಬರಬರುತ್ತ ಹಿಗ್ಗುತ್ತಲೇ ಹೋಗಿ ತೆಳ್ಳಗಾಗಿ ಕೊನೆಗೆ ಹರಿದುಹೋಗಬಹುದು. ಪರಿಣಾಮ ಅಗಾಧ ಆಂತರಿಕ ರಕ್ತಸ್ರಾವ ಮತ್ತು ಮರಣ. ಮಿದುಳಿನಲ್ಲಿ ಇಂಥ ಸಣ್ಣ ಉಬ್ಬರಗಳು ಒಡೆದು ರಕ್ತಸ್ರಾವವಾಗುವುದರಿಂದ ಜ್ಞಾನ ತಪ್ಪುವಿಕೆ. ಪಕ್ಷಾಘಾತ ಮುಂತಾದುವು ಉಂಟಾಗುತ್ತವೆ. ಇವು ಸಾಮಾನ್ಯವಾಗಿ ಮಾರಕಸ್ಥಿತಿಗಳು, ಉಬ್ಬರಗಳು ನೆರೆ ಅಂಗಗಳ ಮೇಲೆ ಒತ್ತುತ್ತ ನೋವು ಉಂಟುಮಾಡುವುವಲ್ಲದೆ ಒಂದೊಂದು ಮಿಡಿತದಲ್ಲೂ ಆ ಸ್ಥಳದಲ್ಲಿ ಘರ್ಷಣೆ ಆಗುವುದರಿಂದ ಊತಕ ನಾಶವಾಗಬಹುದು. ಮಾಂಸಖಂಡ ಮುಂತಾದ ಮೃದುಭಾಗಗಳಲ್ಲದೆ ಎದೆ ಮೂಳೆ ಬೆನ್ನುಮೂಳೆಗಳೂ ಇಂಥ ನಿರಂತರ ಘರ್ಷಣೆಯಿಂದ ಸವೆದುಹೋಗಬಹುದು. ಅಯೋರ್ಟದ ಉಬ್ಬರ ಶ್ವಾಸನಾಳದ ಮೇಲೆ ಒತ್ತುತ್ತಿರುವಾಗ ಉಸಿರಾಡುವುದು ಕಷ್ಟವೆನಿಸಬಹುದು. ಸ್ವರನರಗಳ ಮೇಲಣ ಒತ್ತುವಿಕೆಯಿಂದ ಧ್ವನಿ ಅಡಗಿ ಪಿಸುಮಾತಾಗಬಹುದು. ದೇಹದ ಹೊರಗೆ ವ್ಯಕ್ತವಾಗುವ ಲಕ್ಷಣಗಳಿಂದ ಉಬ್ಬರದ ಪತ್ತೆ ಆಗಬಹುದು. ಸ್ಟೆಥಸ್ಕೋಪಿನ (ಎದೆಯಾಲಿಕೆ) ಮೂಲಕ ಆಲಿಸಿದರೆ ಸುರ್ ಸುರ್ ಎಂಬ ಶಬ್ದ ಒಂದೊಂದು ಹೃದಯ ಮಿಡಿತದ ವೇಳೆಯಲ್ಲೂ ಕೇಳಿಬರುವುದು ಅಪಧಮನಿ ಉಬ್ಬರದ ವಿಶೇಷ ಲಕ್ಷಣ. ಶಸ್ತ್ರಕ್ರಿಯೆಯಿಂದ ಉಬ್ಬರವನ್ನು ಕೊಯ್ದು ಅಪಧಮನಿಯ ಕೊಯ್ದು ಎರಡು ತುದಿಗಳನ್ನೂ ಸೇರಿಸಿ ಸೂಕ್ಷ್ಮ ಅಚ್ಚುಕಟ್ಟು ಹಾಗೂ

ಪರಿಣಾಮಕಾರಿಯಾಗುವ ಹೊಲಿಗೆ ಹಾಕುವುದು ರೂಢಿಯಾದ ಚಿಕಿತ್ಸೆ. ಈಚೆಗೆ ಉಬ್ಬರ ಸ್ಥಳವನ್ನು ತೆಗೆದು ಆ ಸ್ಥಳದಲ್ಲಿ ಕೃತಕ ಅಪಧಮನಿಯನ್ನು ಅಳವಡಿಸಿ ಇಲ್ಲವೆ ಬೇರೆ ಬೇರೆ ಜೀವಂತ ಅಪಧಮನಿಯನ್ನು ನಾಟಿ ಹಾಕಿ ಚಿಕಿತ್ಸೆ ನಡೆಸಲಾಗುತ್ತಿದೆ. (ಎಂ.ಡಿ.)

ಅಪಧಮನಿಯ ಪೆಡಸಣೆ : ಅಪಧಮನಿಯ ಭಿತ್ತಿ ಗಡಸಾಗುವ ಒಂದು ರೋಗ ಸ್ಥಿತಿ (ಆರ್ಟೀರಿಯೊ ಸ್ಕ್ಲೀರೋಸಿಸ್) ಮಾನವರಲ್ಲಿ ಅಪಧಮನಿ ಪೆಡಸುಗೊಳ್ಳುವಿಕೆ ತೀರ ಸಾಮಾನ್ಯವಾಗಿ ಗೋಚರಿಸುವ ವ್ಯತ್ಯಯವಾಗಿವೆ. ಅದು ನಾಗರಿಕತೆಯ ಫಲವೆಂದು ಅನೇಕ ವಿಜ್ಞಾನಿಗಳ ಅಭಿಪ್ರಾಯ. ಪ್ರಾಚೀನ ಕಾಲದಲ್ಲಿ ಸಹ ಅದನ್ನು ಗುರುತಿಸಿದ ಬಗ್ಗೆ ಪುರಾವೆಗಳುಂಟು. ತೆಳ್ಳಗೂ ನಯವಾಗಿಯೂ ಇರುವ ಅಪಧಮನಿಯ ಒಳಪದರ ರಕ್ತಪ್ರವಾಹದೊಂದಿಗೆ ನಿರಂತರವಾಗಿ ಘರ್ಷಿಸುವುದರಿಂದ ಅಲ್ಲಿ ಪೆಡಸುತನ ಬಲು ಸಾಮಾನ್ಯವಾಗಿ ಗೋಚರಿಸುತ್ತದೆ. ಮಹಾಪಧಮನಿ (ಅಯೋರ್ಟ), ಹೃದಯ ಮತ್ತು ಮಿದುಳಿಗೆ ರಕ್ತ ಪೂರೈಸುವ ಕಾರೋನರಿ ಮತ್ತು ಕೆರೋಟಿಡ್ ಅಪಧಮನಿಗಳು ಹಾಗೂ ವಿಲ್ಲಿಸ್‌ನ ವೃತ್ತದ ಅಪಧಮನಿಗಳು ಈ ವ್ಯತ್ಯಯವನ್ನು ತೋರ್ಪಡಿಸುತ್ತವೆ. ಅವು ಅಂತ್ಯಾಪಧಮನಿಗಳಾದುದರಿಂದ (ಎಂಡ್ ಆರ್ಟರಿ) ಜೀವಾಳ ಅಂಗಭಾಗಗಳ ರಕ್ತ ಪೂರೈಕೆಗೆ ಅಡ್ಡಿಯನ್ನು ಉಂಟುಮಾಡಿ ಹೃದಯಾಘಾತ ಹಾಗು ಮಿದುಳ ರಕ್ತಸ್ರಾವ ಮತ್ತು ಅಂತರಿಕ ಗರಣೆ ಕಟ್ಟುವಿಕೆ (ಇಂಟರ್‌ನಲ್ ಕ್ಲಾಟಿಂಗ್) ಗಳಿಗೆ ಅವಕಾಶ ಮಾಡಿಕೊಟ್ಟು ಮರಣಕ್ಕೆ ಆಹ್ವಾನವನ್ನು ನೀಡುತ್ತವೆ. ಪ್ರಾರಂಭದಲ್ಲಿ ಮೇದಸ್ಸಿನ ಅಂಶಗಳು ಮತ್ತು ಕೊಲೆಸ್ಟಿರಾಲ್ ಅಪಧಮನಿ ಭಿತ್ತಿಯ ಒಳಪದರದೊಳಗೆ ಮತ್ತು ಅದರಡಿಯಲ್ಲಿ ಸಂಗ್ರಹಣೆಗೊಂಡು ಅಲ್ಲಲ್ಲಿ ಗೀರೆಳೆ ಇಲ್ಲವೆ ಚಕ್ಕೆಯಂತೆ ಉಬ್ಬುಗಳು ಏಳುತ್ತವೆ. ಅನಂತರ ಅವು ಮೃದುವಾಗಿ ಅಂಬಲಿಯಂಥ ವಸ್ತುವನ್ನು ಒಸರಿ ವ್ರಣವನ್ನು ಉಂಟುಮಾಡಿ ಅಲ್ಲಿ ರಕ್ತದಿಂದ ಬಂದ ಕಿರುಫಲಕಗಳು ಮತ್ತು ಕಂತುಕದ ಕೂಡ್ಗರಣೆಗೆ ಸಹಾಯಕವಾಗುವುವು. ಅಪಧಮನಿಯ ಭಿತ್ತಿ ಅಂಬಲಿಯಂಥ ವಸ್ತು ಶೇಖರಣೆಯಿಂದಾಗಿ ಒರಟಾಗುವ ಈ ಕ್ರಿಯೆಗೆ ಅಂಬಲಿ ಪೆಡಸಣೆ ಎಂಬ ಹೆಸರಿದೆ. ಕೂಡ್ಗರಣೆಯಿಂದಾಗಿ ಅಪಧಮನಿ ಗಾತ್ರ ಕಿರಿದಾಗಿ ರಕ್ತಪೂರೈಕೆ ಕಡಿಮೆ ಆಗಬಹುದು. ಇಲ್ಲವೆ ಸಂಪೂರ್ಣ ನಿಲುಗಡೆ ಆಗಬಹುದು. ಇಲ್ಲವೆ ಕೂಡ್ಗರಣೆಯ ಚೂರುಗಳು ಕಳಚಿ ರಕ್ತಪ್ರವಾಹದೊಂದಿಗೆ ಕೊಂಡೊಯ್ಯಲ್ಪಡಬಹುದು. ರಕ್ತದಲ್ಲಿನ ಮೇದಸ್ಸಿನ ಅಂಶಗಳಾದ ಲಿಪಿಡುಗಳು ಮತ್ತು ಕೊಲೆಸ್ಟರಾಲ್ ಪ್ರಾಣಿಜನ್ಯ ಸಂತೃಪ್ತಿ ಮೇದೋಆಮ್ಲಗಳು ಮತ್ತು ಲೈಂಗಿಕ ಹಾರ್ಮೋನುಗಳು ಅಪಧಮನಿ ಭಿತ್ತಿಯ ತಳಪಾಯದಲ್ಲಿನ ಲೋಳೆಸಕ್ಕರೆಯ ಮಾರ್ಪಾಡಿನಿಂದ ಪೆಡಸಣೆಗೆ ಪ್ರಚೋದನೆ ನೀಡುತ್ತವೆಂದು ಭಾವಿಸಲಾಗಿದೆ.

ಮಾಂಕೆಬರ್ಗ್‌ನ ಪೆಡೆಸಣೆ ಮತ್ತೊಂದು ಬಗೆಯದಾಗಿದ್ದು ಅಲ್ಲಿ ಮಧ್ಯಮ ಗಾತ್ರದ ಅಪಧಮನಿಗಳ ಮಧ್ಯ ಸ್ನಾಯುಪದರಲ್ಲಿ ಕ್ಯಾಲ್ಸಿಯಮ್ ಲವಣಗಳು ಸಂಗ್ರಹಗೊಂಡು ಅಪಧಮನಿಯನ್ನು ಎರಕದ ಕೊಳವೆಯಂತೆ ಮಾರ್ಪಡಿಸಿ ಕಾಲು, ತೋಳು ಮತ್ತು ಕಪೋಲದಲ್ಲಿ ಅಪಧಮನಿಗಳು ಎದ್ದು ತೋರುವಂತೆ ಮಾಡುತ್ತದೆ. ವೃದ್ಧರಲ್ಲಿ ಕಾಣಿಸಿಕ್ಕುವ ಈ ವ್ಯತ್ಯಯದಲ್ಲಿ ರಕ್ತಪ್ರವಾಹಕ್ಕೆ ಅಡ್ಡಿಇಲ್ಲದಿರುವುದರಿಂದ ಮೇಲೆ ಹೇಳಿರುವ ಅಥಿರೋಮರಲ್ಲಿ ಉಂಟಾಗುವ ದುಷ್ಪರಿಣಾಮವಿಲ್ಲ. ಆದರೆ ರಕ್ತದ ಒತ್ತಡ ಹೆಚ್ಚಿ ರಕ್ತಸ್ರಾವವಾಗುವುದೂ ಹೃದಯ ಸೋಲುವುದೂ ಕಂಡುಬರುವುದು. (ಪಿ.ಎಸ್.ಎಸ್.)

ಅಪಧಮನಿಗಳ ರೋಗಗಳು : ಧಮನಿ ರೋಗಗಳಲ್ಲಿ ಅಪಧಮನಿ ರೋಗಗಳು ಮುಖ್ಯ. ಅವುಗಳಲ್ಲಿಯೂ ಅಂಬಲಿ ಪೆಡಸಣೆಯೇ (ಅಥಿರೋಸ್ಕ್ಲೀರೋಸಿಸ್) ತೀರ ಸಾಮಾನ್ಯ ರೋಗ, ಇದರಲ್ಲಿ ಎಂದಿನಂತೆ ಮೆತ್ತಗಿರುವ ಅಪಧಮನಿಗಳು ಗಡಸಾಗಿ ಇರುತ್ತವೆ. ಅಪಧಮನಿಗಳ ಒಳಮೈ ತಳದಲ್ಲಿ ಮೊದಲು ಕೊಬ್ಬಿನಂಥ ವಸ್ತು ಸೇರಿರುತ್ತವೆ. ಬರಬರುತ್ತ ಸುಣ್ಣಾಂಶವು ಇದಕ್ಕೆ ಸೇರಿ ಅಪಧಮನಿಗಳು ಗಡಸಾಗಿ ಬೇಕಾದಾಗ ಹಿಗ್ಗಿ ಕುಗ್ಗಿದಂತಾಗುತ್ತದೆ. ಯಾವ ಅಪಧಮನಿಯಲ್ಲಿ ಎಷ್ಟುಮಟ್ಟಿಗೆ ಹೀಗಾಗಿದೆ ಎನ್ನುವುದಕ್ಕೆ ತಕ್ಕಂತೆ ರೋಗಿಯ ಆರೋಗ್ಯ ಕೆಡುವುದು. ಹೃದಯದ ಸ್ನಾಯುವಿಗೆ ರಕ್ತವನ್ನು ಒದಗಿಸುವ ಕಾರೊನರಿ ಅಪಧಮನಿಗಳಲ್ಲಿ ಒಂದು ಅಥವಾ ಹೆಚ್ಚಿನವು ಈ ರೋಗಕ್ಕೆ ಈಡಾಗಿದ್ದರೆ ಹೃದಯದ ರಕ್ತಪೊರೈಕೆಗೆ ಅಡ್ಡಿಯಾಗಿ ಹೃದಯಕ್ಕೆ ರಕ್ತದ ಕೊರೆ ಆಗಬಹುದು. ಆಗ ಮುಖ್ಯವಾಗಿ ಎದೆಶೂಲೆ ಬಂದು ತೋಳಿನುದ್ದಕ್ಕೂ ಅಥವಾ ಕೊರಳಿಗೂ ಹೋಗುತ್ತದೆ. ಮಿದುಳಿನ ಅಪಧಮನಿಗಳಲ್ಲಿ ಈ ರೋಗ ತಲೆ ದೋರಿದರೆ ಹಾಗೆ ದುರ್ಬಲವಾದ ಅಪಧಮನಿ ಒಡೆದುಕೊಂಡು ಮಿದುಳೊಳಕ್ಕೆ ರಕ್ತ ಸುರಿಯಬಹುದು. ಒರಟಾಗಿರುವ ಅಪಧಮನಿಯ ಒಳಮೈಮೇಲೆ ರಕ್ತ ಹೆಪ್ಪುಗಟ್ಟಿ, ರಕ್ತ ಪೂರೈಕೆಗೆ ಅಡ್ಡಿ ಆಗಬಹುದು. ಇವುಗಳ ಫಲವಾಗಿ ಇಡೀ ಮೈಯ ಒಂದು ಪಕ್ಕದಲ್ಲಿ ಇಲ್ಲವೇ ಒಂದು ಭಾಗದಲ್ಲಿ ಲಕ್ವ (ಅರನಾರಿ) ಹೊಡೆಯುತ್ತದೆ. ಅಪರೂಪವಾಗಿ ಮೂತ್ರಪಿಂಡಗಳಿಗೆ ರಕ್ತಪೂರೈಕೆ ಸಾಲದಾಗಿ ಮೈಯಲ್ಲಿನ ವಿಸರ್ಜನ ವಸ್ತುಗಳು ಹೊರಬೀಳದೆ ಒಳಗೆ ಉಳಿದುಬಿಡುತ್ತವೆ. ಅವಯವಗಳಲ್ಲಿ ಅದರಲ್ಲೂ ಕಾಲುಗಳ ಅಪಧಮನಿಗಳಲ್ಲಿ ಹೀಗಾದಾಗ ನಡೆದಾಗ ನೋವಾಗಿ ಕುಂಟುವಂತಾಗುವುದು. ಇಲ್ಲವೆ, ರಕ್ತವಿಲ್ಲವಾದ ಭಾಗ ಸತ್ತು ಹೋಗುವುದರಿಂದ ಅದನ್ನು ಕತ್ತರಿಸಿ ಹಾಕಬೇಕಾಗುತ್ತದೆ. ತಪ್ಪಿಸಲಾರದಂಥ ಕೇವಲ ವಯಸ್ಸಿನ ಪ್ರಭಾವದಿಂದ ಈ ರೋಗ ಉಂಟಾಗುವುದಿಲ್ಲವೆಂದು ಪ್ರಯೋಗಾಲಯಗಳ ಪ್ರಾಣಿಗಳ ಮೇಲೆ ನಡೆಸಿದ ಸಂಶೋಧನೆಗಳಿಂದ ಗೊತ್ತಾಗಿವೆ. ಈ ರೋಗವನ್ನು ಎಳಸಿನಲ್ಲೇ ಮುಂಗಾಣಬಹುದಲ್ಲದೆ ಬಾರದಂತೆ ತಡೆಯುವುದೂ ಸಾಧ್ಯ. ಇದನ್ನು ಕೆಲವು ಸಂದರ್ಭಗಳಲ್ಲಿ ಹೋಗಲಾಡಿಸಬಹುದೆನಿಸಿದೆ. ಶೋಧನೆಗಳಲ್ಲಿ ಮುಖ್ಯವಾದವು ಆಹಾರಕ್ಕೆ ಅದರಲ್ಲೂ ಹೆಚ್ಚಿನದಾಗಿ ಕೊಬ್ಬುಗಳಿಗೆ ಸಂಬಂಧಿಸಿವೆ. ಈ ರೋಗ ಬೆಳೆಯುವುದರಲ್ಲಿ ಬಗೆಬಗೆಯ ಹಾರ್ಮೋಣುಗಳ ಪಾತ್ರ, ಈಗಿನ ಕಾಲದ ಒತ್ತಡ ಮುಂತಾದ ಎಷ್ಟೊ ಅಂಶಗಳನ್ನು ಪರಿಶೀಲಿಸಿದ್ದಾಗಿದೆ.

ರಕ್ತ ಒತ್ತಡದ ಆಧಿಕ್ಯದ ರೋಗದಿಂದ ಕೊನೆಗೆ ಸಣ್ಣ ಅಪಧಮನಿಗಳ ಗೋಡೆಗಳಲ್ಲಿ ಬದಲಾವಣೆಗಳಾಗುತ್ತವೆ. ಇದರಿಂದಲೂ ಹೃದಯದ, ಮಿದುಳಿನ ಮತ್ತು ಮೂತ್ರಪಿಂಡಗಳ ರಕ್ತಪೂರೈಕೆಗೆ ಅಡ್ಡಿ ಆಗಬಹುದು. ಬಲುಮಟ್ಟಿಗೆ ರೋಗದ ನಿಕಟ ಕಾರಣ ಗೊತ್ತಿಲ್ಲ. ಯಾವುದೇ ತೆರನ ರೋಗ ಲಕ್ಷಣಗಳೂ ಇಳಿ ವಯಸ್ಸಿನ ತನಕ ಕಾಣಿಸಿಕೊಳ್ಳದೆಯೆ ರೋಗಿಗಳು ಬಹು ಕಾಲ ಬದುಕಿ ಬಾಳಬಹುದು. ಉದಾಹರಣೆಗೆ ಮೂತ್ರಪಿಂಡದ ಉರಿಯೂತದಲ್ಲಿ (ನೆಫ್ರೈಟಿಸ್) ಅಲ್ಲಿನ ಸಣ್ಣ ಅಪಧಮನಿಗಳ ಸ್ಥಿತಿ. ಆದರೆ ಅದರ ಒಂದು ಬಗೆಯಲ್ಲಿ ಮಾತ್ರ ರೋಗ ಬಲುಬೇಗನೆ ಉಲ್ಬಣಿಸಿ ರೋಗಿಯನ್ನು ಶೀಘ್ರವಾಗಿ ಬಲಿ ತೆಗೆದುಕೊಳ್ಳುತ್ತದೆ.

ಇನ್ನೊಂದು ಅಪಧಮನಿಯ ರೋಗವೆಂದರೆ ಮಹಾಪಧಮನಿಯ ಉಪದಂಶ. ಪೆನಿಸಿಲಿನ್‌ಪೂರ್ವ ಯುಗದಲ್ಲಿ ಮುಖ್ಯವಾಗಿದ್ದರೂ ಈಗೀಗ ಈ ರೋಗ ಅಪರೂಪವಾಗುತ್ತಿದೆ. ಮಹಾಪಧಮನಿ ಉಪದಂಶದಿಂದ ಮೂರು ರೀತಿಗಳಲ್ಲಿ ಕೆಡಬಹುದು: ಅಪಧಮನಿಯ ಗೋಡೆ ದುರ್ಬಲಗೊಳ್ಳುವುದರಿಂದ ಅದು ಹಿಗ್ಗಿ ಬುಡ್ಡೆಯ ಹಾಗೆ ಅಗಲುಬ್ಬು (ಅನ್ಯೂರಿಸಮ್) ಆಗಬಹುದು; ಮಹಾಪಧಮನಿಯ ಕವಾಟಗಳನ್ನು ಹಾಳುಮಾಡಬಹುದು; ಕಾರೊನರಿ ಅಪಧಮನಿಗಳ ಬಾಯಿಗಳ ಬಳಿಯಲ್ಲಿ ಉರಿತ ಕಂಡುಬಂದು ಹೃದಯದ ರಕ್ತಪೂರೈಕೆಗೆ ಅಡ್ಡಿಪಡಿಸಬಹುದು. ಉಪದಂಶ ರೋಗ ಆರಂಭವಾದಾಗಲೇ ಒಡನೆ ಪರಿಣಾಮಕಾರೀ ಚಿಕಿತ್ಸೆ ಕೈಗೊಂಡರೆ ಈ ಹಾನಿಗಳನ್ನು ತಪ್ಪಿಸಬಹುದು. ಆ ಮೇಲೂ ಸರಿಯಾದ ಚಿಕಿತ್ಸೆಯಿಂದ ರೋಗವನ್ನು ಯಾವ ಹಂತದಲ್ಲಾದರೂ ತಡೆಗಟ್ಟಬಹುದು. ಮೈಯಲ್ಲಿ ಎಲ್ಲಾದರು ಒಂದೆಡೆಯಲ್ಲಿ ರಕ್ತಗರಣೆಗಟ್ಟಿ ಅದರ ಚೂರು ಅಲ್ಲಿಂದ ಕಿತ್ತುಕೊಂಡು ಬೇರೊಂದೆಡೆಗೆ ರಕ್ತನಾಳದ ಮೂಲಕ ಹೋಗುವುದಕ್ಕೆ ಅಡಚು (ಎಂಬೊಲಸ್) ಎಂದು ಹೆಸರಿದೆ. ರಕ್ತಗರಣೆ ಮೊದಲು ಮೈಯಲ್ಲಿನ ಅಭಿಧಮನಿಗಳಲ್ಲೊ ಹೃದಯದ ಬಲಭಾಗದಲ್ಲೊ ಕಂಡುಬಂದು ಅದರ ಚೂರು ಪುಪ್ಪುಸದ ಅಪಧಮನಿಗಳ ಒಂದು ಕವಲಿಗೆ ಸಾಗಬಹುದು. ಪುಪ್ಪುಸದ ಅಪಧಮನಿಗೆ ಹೋದಾಗ ರಕ್ತದ ಹರಿವಿಗೆ ಅಡಚಣೆಯಾಗಿ ಆ ಭಾಗದ ಪುಪ್ಪುಸವನ್ನು ಸಾಯಿಸುವುದರಿಂದ ಇದ್ದಕ್ಕಿದ್ದ ಹಾಗೆ ಎದೆ ನೋವು, ಕೆಮ್ಮು, ರಕ್ತದ ಉಗುಳು ಕಾಣಿಸಿಕೊಳ್ಳುತ್ತವೆ.

ಪುಪ್ಪುಸವನ್ನು ಬಿಟ್ಟು ಮೈಯಲ್ಲಿನ ಇತರ ಅಪಧಮನಿಗಳಲ್ಲಿ ರಕ್ತದ ಗರಣೆ ಹೊಕ್ಕಾಗ ಅದು ಹೊಗುವ ಭಾಗಕ್ಕೆ ತಕ್ಕಂತೆ ರೋಗಲಕ್ಷಣಗಳೂ ಬೇರೆ ಬೇರೆಯಾಗಿರುತ್ತವೆ. ಇದು ಮಿದುಳನ್ನು ಹೊಕ್ಕರೆ ಲಕ್ವ ಹೊಡೆಯುತ್ತದೆ. ಮೂತ್ರಪಿಂಡವನ್ನು ಹೊಕ್ಕರೆ, ಪಕ್ಕೆ ಬೆನ್ನು ನೋವಾಗಿ ಮೂತ್ರದಲ್ಲಿ ರಕ್ತ ಹೋಗುವುದು. ಅದು ಗುಲ್ಮವನ್ನು ಹೊಕ್ಕರೆ ಹೊಟ್ಟೆಯ ಎಡಪಕ್ಕದ ಮೇಲ್ಗಡೆ ನೋವು ತೋರುತ್ತದೆ. ಕೈಕಾಲುಗಳನ್ನು ಸೇರಿದರೆ ಆ ಅವಯವ ತಣ್ಣಾಗಿ ನಾಡಿ ಇಲ್ಲವಾಗಿ ಸರಿಯಾಗಿ ಚಿಕಿತ್ಸೆ ಮಾಡದೆ ಹೋದರೆ ಕೊಳೆತೆ ಹೊಗಬಹುದು. ಮಾಡಬಹುದಾದ ಜಾಗಗಳಲ್ಲಿ ತಡಮಾಡದೆ ನಡೆಸಿದ ಶಸ್ತ್ರ ವೈದ್ಯದಿಂದ ಹೊಸದಾಗಿ ಬಂದು ಸೇರಿದ ರಕ್ತಗರಣೆಯನ್ನು ತೆಗೆದುಹಾಕಿದರೆ ಗುಣ ಕಾಣುತ್ತದೆ.

ಇನ್ನೂ ಕೆಲವು ಅಪರೂಪದ ಧಮನಿ ಬೇನೆಗಳಿವೆ: ಧಮನಿ ಗೋಡೆಗಳ ಉರಿತ; ಧಮನಿ ಭಿತ್ತಿಗೆ ರಕ್ತವನ್ನು ಪೂರೈಸುವ ಪುಟಾಣಿ ರಕ್ತ ನಾಳಗಳು ಒಡೆದುಕೊಂಡು ಧಮನಿ ಗೋಡೆಯೊಳಕ್ಕೆ ರಕ್ತಸುರಿತ; ಹಾಗು ಅಪಧಮನಿ ಸುತ್ತುವರಿದ ಗಂಟು ಕಟ್ಟುವಿಕೆ (ಪೆರಿಯಾರ್ಟರೈಟಿಸ್ ನೋಡೋಸ) ಮುಂತಾದುವು.

ಶ್ರವಣಾತೀತ ತರಂಗದ ಶಬ್ದಗಳಿಂದ ಉತ್ಪತ್ತಿಯಾಗುವ ಚಿತ್ರ ಧಮನಿಗಳ ರಚನೆ, ಧಮನಿಗಳ ರೋಗಗಳನ್ನು ಅಭ್ಯಸಿಸಲು, ತಿಳಿದುಕೊಳ್ಳಲು ಬಹಳ ಸಹಕಾರಿಯಾಗಿದೆ. ಇದಕ್ಕೆ ಕಲರ್ ಡಾಪ್ಲರ್ ಎಂದು ಕರೆಯುತ್ತಾರೆ. ಧಮನಿಯ ಒಳ ಆಳ ಕಡಿಮೆಗೊಂಡಿದ್ದು, ರಕ್ತಗರಣೆಗೊಂಡಿದ್ದು ಇದರಿಂದ ತಿಳಿಯಬಹುದು ಆದ್ದರಿಂದ ಇದು ಚಿಕಿತ್ಸೆ ನೀಡುವ ವೈದ್ಯನಿಗೆ ಅತ್ಯಂತ ಉಪಯುಕ್ತವಾಗಿದೆ. (ಡಿ.ಎಸ್.ಎಸ್.)

**ಅರಗು:** ಲ್ಯಾಕ್ಕಿಫರ್ ಲ್ಯಾಕ್ ಎನ್ನುವ ವೈಜ್ಞಾನಿಕ ಹೆಸರಿನ ಅರಗು ಕೀಟಗಳು ಸ್ರವಿಸುವ ದ್ರವವೇ ಅರಗು. ಆಂಗ್ಲಭಾಷೆಯಲ್ಲಿ, ಲ್ಯಾಕ್ ಎನ್ನುವ ಅರಗು ಲಕ್ಷ ಎಂಬ ಸಂಖ್ಯೆಯ ಸೂಚಕವಾಗಿದ್ದು, ಲಕ್ಷಾಂತರ ಕೀಟಗಳ ಮೇಳ ಎಂಬರ್ಥದಿಂದ ಬಂದಿದೆ. ಇದು ಒಂದು ರಾಳ (ರೆಸಿನ್). ಪೋಷಣೆ ಮತ್ತು ಶಾಯ್ತನಗಳ ಹೊರತು ಜೀವನದಲ್ಲಿ ಬೇರೆ ಯಾವ ಆಕಾಂಕ್ಷೆಯೂ ಇಲ್ಲದ ಅರಗು ಹೆಣ್ಣುಕೀಟಗಳು ಅರಗು ಉತ್ಪಾದನೆ ಮಾಡುತ್ತವೆ. ತಮ್ಮ ಚರ್ಮ ಅಥವಾ ಚರ್ಮದ ಮೇಲುಭಾಗದಲ್ಲಿರುವ ಸ್ರಾವಕಗ್ರಂಥಿಗಳಿಂದ ಅಂಟಿನಂತಿರುವ ಅರಗನ್ನು ಜಿನುಗಿಸುತ್ತವೆ. ಗಟ್ಟಿಪದರ ಕಡ್ಡಿಗಳ ಮೇಲೆ ಸ್ರವಿಸುವ ಅರಗನ್ನು, ಅಂಟು ಅರಗು (ಶೆಲ್ಲಾಕ್) ಎನ್ನುವರು. ಇದರಲ್ಲಿರುವ ಕಡ್ಡಿ ಮತ್ತು ರಾಳ ಪದಾರ್ಥಗಳನ್ನು ಪ್ರತ್ಯೇಕಿಸಿದ ನಂತರ ಇದನ್ನು ಅರ್ಧಗೋಳಾಕಾರದ ತೊಟ್ಟಿಗಳಲ್ಲಿ ತೊಳೆಯುತ್ತಾರೆ. ಮುಂದೆ ಕಡಾಯಿಗಳಲ್ಲಿ ಕರಗಿಸಿ, ಶೋಧಿಸಿದ ಮೇಲೆ ಚಕ್ಕೆಯ ಆಕಾರಕ್ಕೆ ರೂಪಿಸುತ್ತಾರೆ.

ಅರಗಿನ ಉಪಯೋಗ ಹಲವು: ಗ್ರಾಮಫೋನ್ ತಟ್ಟೆಗಳ ತಯಾರಿಕೆ, ಲೋಹಗಳನ್ನು ಅಲೋಹಗಳೊಡನೆ ಬೆಸೆಯುವಿಕೆಯಲ್ಲಿ, ಫ್ರೆಂಚ್ ಮೆರುಗೆಣ್ಣೆ ಮತ್ತು ವಿದ್ಯುನ್ನಿರೋಧಕ ಮೆರುಗೆಣ್ಣೆಯ ತಯಾರಿಕೆಯಲ್ಲಿ, ಮೊಹರಿನ ಮೇಣದ ತಯಾರಿಕೆ, ಪೆಟ್ರೋಲ್ ನಿರೋಧಕ ವಸ್ತುವಾಗಿ ಮತ್ತು ಸಾಮಾನ್ಯವಾಗಿ ಘರ್ಷಣೆ ಕಡಿಮೆ ಮಾಡಲು ಉಪಯೋಗಿಸುವ ಮೃದುಚಾಲಕ ತೈಲಗಳು, ಜಿಡ್ಡುಗಳು, ಕೊಬ್ಬುಗಳು ತಯಾರಿಕೆಯಲ್ಲಿ ಮತ್ತು ಮದ್ಯಸಾರದಲ್ಲಿ ಕರಗಿಸಿ ಬಂದ ಮಿಶ್ರಣಕ್ಕೆ ಅನುಕೂಲವಾದ ಬಣ್ಣ ಸೇರಿಸಿ ಅರಗಿನ ಮೆರುಗನ್ನು ತಯಾರಿಸಿ ಲೋಹಪದಾರ್ಥಗಳಿಗೆ ಬಣ್ಣಕಟ್ಟಲು ಶುದ್ಧ ಅರಗನ್ನು ಬಳಸುತ್ತಾರೆ. ಅರಗಿನಿಂದ ಚುನಾವಣೆಗಳಲ್ಲಿ ಬಳಸಲಾಗುವ ಅಳಿಸಲಾಗದ ಮಸಿಯನ್ನು ತಯಾರಿಸುತ್ತಾರೆ. ಮೈಸೂರಿನಲ್ಲಿ ಮಸಿ ತಯಾರಿಕಾ ಘಟಕವಿದೆ.

ಅರಗು ಬಣ್ಣ : ಭಾರತ ಮತ್ತು ಪರ್ಷಿಯ ದೇಶಗಳಲ್ಲಿ ಹೊಳಪಾದ ಕೆಂಪು, ಕೇಸರಿಬಣ್ಣಗಳನ್ನು ಉಣ್ಣೆಯ ಮೇಲೆ ತರಲು ಅರಗುಬಣ್ಣವನ್ನು ಉಪಯೋಗಿಸುತ್ತಿದ್ದರು. ಬ್ರಿಟನ್ನಿನಲ್ಲಿ ಈ ಬಣ್ಣ ಬಳಕೆಗೆ ಬಂದದ್ದು 18ನೆಯ ಶತಮಾನದ ಅಂತ್ಯದಲ್ಲಿ. ಅರಗುಬಣ್ಣ ತಯಾರಿಕೆ ಒಂದು ಕಾಲಕ್ಕೆ ಪ್ರಮುಖ ಉದ್ಯಮವಾಗಿತ್ತು. ಶೆಲ್ಲಾಕ್ ಅದರ ಒಂದು ಉಪೋತ್ಪನ್ನ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಗ್ರಾಮಫೋನಿನ ತಟ್ಟೆಗಳ ತಯಾರಿಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅರಗನ್ನು ಬಳಸಲಾಗುತ್ತಿತ್ತು. ಅರಗನ್ನು ವಿದ್ಯುನ್ನಿರೋಧಕ ಮೆರುಗೆಣ್ಣೆಯ ಉತ್ಪಾದನೆಯಲ್ಲಿ ಸಹ ಬಳಸುತ್ತಾರೆ. ಮರಗೆಲಸದ ಉದ್ಯೋಗದಲ್ಲಿ ಅರಗನ್ನು ಇನ್ನೂ ಬೃಹತ್ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ. ಅರಗಿನ ಜಿಗಟು ಮತ್ತು ಬೆಸೆಯುವ ಬಂಧಕ ಗುಣ ಇದಕ್ಕೆ ಕಾರಣ. ಅರಗನ್ನು ಸಂದಿಮುಚ್ಚುವ ಸಿಮೆಂಟ್ ತಯಾರಿಸಲೂ ಲೋಹಗಳನ್ನು ಲೋಹಗಳ ಮತ್ತು ಅಲೋಹಗಳ ಜೊತೆ ಸೇರಿಸಲು ಅಗತ್ಯವಾದ ಬಂಧಕ ಸಿಮೆಂಟಿನ ತರಹ ಉಪಯೋಗಿಸುತ್ತಾರೆ. ತಾಮ್ರ, ಸೀಸ ಹಾಗೂ ಇತರ ಭಾರವಾದ ಲೋಹಗಳನ್ನು ಜೊತೆಗೂಡಿಸುವ ಅರಗಿನ ಸಂಲಗ್ನತ್ವ ಗುಣ (ಅಡ್ಹೆಸಿವ್ ಪವರ್) ಬಹಳ ಉಪಯುಕ್ತ.

***

**ಅರಗು ಕೀಟಗಳು:** ಲ್ಯಾಕ್ಕಿಫರ್ ಲ್ಯಾಕ್ ಎಂಬ ಪ್ರಭೇದದ, ಹೊಮೊಪ್ಟೆರಾ ಗಣದ ಕಾಕ್ಸಿಡೆ ಕುಟುಂಬದ (ಲ್ಯಾಕ್ ಇನ್ಸೆಕ್ಟ್) ಸದಸ್ಯ. ಹೆಣ್ಣು ಕೀಟಗಳು ಗಟ್ಟಿಯಾದ ರಾಳಮಯ ಕೋಶದ ಒಳಗಡೆ ವಾಸಿಸುತ್ತವೆ. ದೇಹ ಅನಿಯಮಿತ ದುಂಡಾಕಾರವಿದ್ದು ಕಾಲುಗಳಿರುವುದಿಲ್ಲ. ಗಂಡು ಕೀಟಗಲ್ಲಿ ಎರಡು ಪ್ರಕಾರವಿದ್ದು, ಮೊದಲನೆ ಸಂತತಿಯ ಕೀಟಗಳು ರೆಕ್ಕೆ ಹೊಂದಿವೆ. ಎರಡನೆ ಬಗೆಯ ಸಂತತಿಗೆ ರೆಕ್ಕೆ ಇಲ್ಲ. ತಾಯಿ ಕೋಶದಲ್ಲಿರುವ ಅಂಡಗಳಿಂದ ಹೊರಬರುವ ಸೂಕ್ಷ್ಮವಾದ ಕೆಂಪು ವರ್ಣದ ಮರಿಕೀಟಗಳು 0.5 ಮಿಮಿ ಉದ್ದವಾಗಿವೆ. ಅತಿಥೇಯ ಗಿಡದ ಮೇಲೆ ತಿರುಗಾಡುವ ಅರಗು ಕೀಟಗಳು ಸಸ್ಯ ರಸವನ್ನು ಹೀರುತ್ತ, ದೇಹದ ಚರ್ಮದ ಕೆಳಗಿರುವ ಗ್ರಂಥಿಯಿಂದ ರಾಳದಂತಹ ಅರಗನ್ನು ಸ್ರವಿಸುತ್ತವೆ. ರಾಳವು ಗಾಳಿಯ ಸಂಪರ್ಕದಿಂದ ಗಟ್ಟಿಯಾಗಿ, ಬೆಳೆಯುವ ಮರಿಗಳಿಗೆ

ಸುರಕ್ಷಿತ ಕವಚವಾಗುವುದು. ಮರಿಕೀಟಗಳು ಬೆಳೆಯುತ್ತ, ಹೆಚ್ಚೆಚ್ಚು ಅರಗನ್ನು ಸ್ರವಿಸುತ್ತ, ಸು. 8 ವಾರಗಳಲ್ಲಿ ಪ್ರೌಢಾವಸ್ಥೆ ತಲುಪುತ್ತವೆ. ಆವರೆಗೆ ಮೂರು ಸಲ ಪೊರೆ ಕಳಚುತ್ತವೆ. ಹೆಣ್ಣು ಕೀಟ ಗೋಲಾಕಾರವಿದ್ದು, ಗಿಡದ ಟೊಂಗೆಗೆ ಭದ್ರವಾಗಿ ಅಂಟಿಕೊಂಡರೆ, ಗಂಡು ಉದ್ದವಾಗಿದ್ದು, ರೆಕ್ಕೆಗಳನ್ನು ಹೊಂದಿದೆ. ಗಂಡು ರಾಳಯುಕ್ತ ಕವಚದಿಂದ ಹೊರಬಂದು, ಹೆಣ್ಣಿನೊಡನೆ 3–4 ದಿನಗಳವರೆಗೆ ಸಂಭೋಗ ಹೊಂದಿ, ಕೊನೆಯಲ್ಲಿ ಸಾವನ್ನಪ್ಪುತ್ತದೆ. ಗರ್ಭ ಧರಿಸಿದ ಹೆಣ್ಣು ಮಾತ್ರ ಅರಗು ಕವಚದೊಳಗೆ ಟೊಂಗೆಗೆ ಅಂಟಿಕೊಂಡು, ಬೆಳೆಯುತ್ತ, ಅರಗನ್ನು ಸ್ರವಿಸುತ್ತ, ತತ್ತಿಗಳನ್ನಿಡಲು ಆರಂಭಿಸುವುದು.



ಅರಗು ಕೀಟಗಳು

ಒಂದು ಹೆಣ್ಣು ಸರಾಸರಿ 300 ಮರಿಗಳಿಗೆ ಜನ್ಮ ನೀಡುತ್ತದೆ. ಇವುಗಳಲ್ಲಿ ಶೇ 33 ರಷ್ಟು ಗಂಡು ಕೀಟಗಳಾಗುತ್ತವೆ. ಅನಂತರ ಹೆಣ್ಣು ಕೀಟ ರೂಪಾಂತರಗೊಂಡು, ತನ್ನ ಕಾಲು, ಕುಡಿಮೀಸೆ (ಆಂಟೆನ) ಹಾಗೂ ಕೀಟದ ಆಕಾರವನ್ನು ಕಳೆದುಕೊಂಡು ಒಂದು ಚೀಲದಂತೆ ಮಾರ್ಪಾಡಾಗುತ್ತದೆ. ಗಂಡು ಕೀಟಗಳ ಆಯುಷ್ಯ ಹೆಣ್ಣುಕೀಟಗಳ ಆಯುಷ್ಯದ ಅರ್ಧದಷ್ಟು ಮಾತ್ರ. ಅಲ್ಲದೆ ಗಂಡುಕೀಟಗಳಿಂದ ದೊರೆಯುವ ಅರಗು ತೀರ ಕಡಿಮೆ. ಅರಗು ಕೀಟದ ಜೀವನ ಚಕ್ರ ಸು. 6 ತಿಂಗಳು. ಅದರಿಂದ ಪ್ರತಿ ವರ್ಷ 2 ಜೀವನ ಚಕ್ರಗಳನ್ನು ಪೂರ್ತಿಗೊಳಿಸಿ ಎರಡು ಅರಗು ಬೆಳೆಗಳನ್ನು ಕೊಡುವುವು.




ಅರಗು ಕೀಟಗಳು ಉತ್ಪಾದಿಸುವ ಅರಗಿನಿಂದ ಶೆಲ್ಯಾಕ್ ತಯಾರಿಸುತ್ತಾರೆ. ಭಾರತದಲ್ಲಿ ಅರಗು ತಯಾರಿಕೆ ಪ್ರಾಚೀನವಾದುದು. ಸಾವಿರಾರು ವರ್ಷಗಳ ಹಿಂದೆಯೇ ಸಂಸ್ಕೃತ ಲೇಖನಗಳಲ್ಲಿ ಅರಗನ್ನು ಕುರಿತು ಉಲ್ಲೇಖಿಸಲಾಗಿದೆ. ಕೌರವರು ಅರಗಿನ ಅರಮನೆ ಕಟ್ಟಿ, ಪಾಂಡವರನ್ನು ಅದರೊಳಗೆ ಆಕರ್ಷಿಸಿ ಕೊಲ್ಲಲು ನಡೆಸಿದ ಸಂಚು ಮಹಾಭಾರತದಲ್ಲಿದೆ. ಅರಗಿನ ಉದ್ಯಮದ ಮಹತ್ವ ತಿಳಿಯುವ ಮೊದಲು ಭಾರತದ ಮಹಿಳೆಯರು ಕೀಟಗಳ ದೇಹದಲ್ಲಿರುವ ಕೆಂಪು ವರ್ಣಕವನ್ನು ತಮ್ಮ ಅಂಗಾಲುಗಳಿಗೆ ಸೌಂದರ್ಯ ವರ್ಧಕಗಳಾಗಿ ಲೇಪಿಸಿಕೊಳ್ಳುತ್ತಿದ್ದರು. ಅಲ್ಲದೆ ಈ ವರ್ಣಕವನ್ನು ಕೆಂಪು ಅರಿವೆ ಸಿದ್ಧಪಡಿಸಲು ಉಪಯೋಗಿಸಲಾಗುತ್ತಿತ್ತು. ಅರಗಿನ ಮಹತ್ವ ರೋಮನ್, ಗ್ರೀಕ್ ಮತ್ತು ಚೈನಾ ಜನ ಅರಿತಿದ್ದರೂ ಭಾರತವೇ ಅರಗಿನ ತವರು ಮನೆ. 1890 ರಲ್ಲಿ ಅನಿಲಿನ ವರ್ಣಕಗಳನ್ನು ಪಾಶ್ಚಿಮಾತ್ಯ ಜಗತ್ತಿಗೆ ಶೆಲ್ಯಾಕ್ ಒಂದು ಅವಶ್ಯವಾದ ವಸ್ತುವಾಯಿತು. ಎಡಿಸನ್ ಅವರ ಗ್ರಾಮೊಫೋನ್ ಸಂಶೋಧನೆ ಅನಂತರ ಅದರ ರೆಕಾರ್ಡ್ ಸಿದ್ಧಪಡಿಸುವಲ್ಲಿ ಶೆಲ್ಯಾಕ್‌ದ ಮಹತ್ವ ಮನೆಮಾತಾಯಿತು. ಅಲ್ಲದೆ ಶೆಲ್ಯಾಕನ್ನು ವಾರ್ನಿಶ್, ಪಾಲಿಶ್, ಹ್ಯಾಟ್, ಲಿಥೊಗ್ರಾಫಿಕ್, ಮಸಿ, ಮೊಹರು, ಮೇಣ, ವಿದ್ಯುತ್ ವಸ್ತು, ವಿಮಾನ, ಲಿನೊಲಿಯಂ, ಗುಂಡಿ, ಬೂಟ್ ಪಾಲಿಶ್, ಮಡಕೆ, ಆಟಿಗೆ ಸಾಮಾನು,

ಆಭರಣ, ಕೃತಕ ಹೂವು ಮತ್ತು ಹಣ್ಣು ಮುಂತಾದವುಗಳನ್ನು ತಯಾರಿಸಲೂ ಉಪಯೋಗಿಸಲಾಗುತ್ತಿದೆ.

ಅರಗು ಕೀಟವು ಉಷ್ಣ ಹಾಗೂ ಸಮಶೀತೋಷ್ಣ ಪ್ರದೇಶಗಳಲ್ಲಿ ಮಾತ್ರ ಕಂಡುಬರುವುದು. ಭಾರತ, ಬರ್ಮಾ, ಥೈಲಾಂಡ ದೇಶಗಳ ಸು. 30 ಜಾತಿಯ ಗಿಡಗಳ ಮೇಲೆ ವಾಸಿಸುವುದು. ಜಗತ್ತಿನ ಶೆಲ್ಯಾಕ್ ಉತ್ಪಾದನೆಯ ಶೇ 90 ರಷ್ಟು ಭಾರತದಲ್ಲಿಯೇ ಆಗುವುದು. 2000–2001 ರಲ್ಲಿ ಸು. 60 ದಶಲಕ್ಷ ಡಾಲರ್ ಬೆಲೆಯ ಶೆಲ್ಯಾಕ್‌ನ್ನು ಭಾರತ ರಫ್ತು ಮಾಡಿದೆ. ಅಮೇರಿಕ, ರಷ್ಯಾ, ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಪಶ್ಚಿಮ ಜರ್ಮನಿ, ಜಪಾನ್, ಆಸ್ಟ್ರೇಲಿಯ ಮತ್ತು ಬ್ರಜಿಲ್ ಅರಗನ್ನು ಬಳಸುವ ರಾಷ್ಟ್ರಗಳು.

ಕೀಟಗಳನ್ನು ವೈರಿ ಹಾಗೂ ಪ್ರತಿಕೂಲ ಹವಾಮಾವದಿಂದ ರಕ್ಷಿಸುವುದು ಅರಗಿನ ಕಾರ್ಯ. ಕೀಟ ಸ್ರವಿಸಿದ ರಾಳದಂತಹ ಪದಾರ್ಥ ಗಾಳಿಯ ಸಂಪರ್ಕದಿಂದ ಕಲ್ಲಿನಂತೆ ಬಿರುಸಾಗಿ ಗಿಡದ ಟೊಂಗೆಗಳ ಸುತ್ತಲೂ ಪದರಿನಂತೆ ಆವರಿಸುವುದು. ಇದಕ್ಕೆ ಕಟ್ಟಿಗೆ ಅರಗು ಎಂದು ಹೆಸರು. ಪ್ರತಿ ವರ್ಷ ಸು. 35– 40 ದಶಲಕ್ಷ ಕಿಗ್ರಾ ಕಟ್ಟಿಗೆ ಅರಗು ಉತ್ಪಾದನೆಯಾಗುವುದು ಎಂದು ಅಂದಾಜು. ಒಂದು ಕಿಗ್ರಾ ಅರಗು ಸಿದ್ಧವಾಗಲು 3 ಲಕ್ಷ ಕೀಟಗಳು ಶ್ರಮವಹಿಸಬೇಕು.

ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಲ, ಮಹಾರಾಷ್ಟ್ರ ಮತ್ತು ಗುಜರಾತ್ ಭಾರತದಲ್ಲಿ ಅರಗನ್ನು ಉತ್ಪಾದಿಸುವ ಮುಖ್ಯ ರಾಜ್ಯಗಳು. ಕುಸುಮ, ಪಾಲಾಸ, ಬೆರ, ಘೋಂಟ ಹಾಗೂ ಅರ್ಹಾರ, ಇವು ಅರಗು ಕೀಟದ ಮುಖ್ಯ ಅತಿಥೇಯ ಗಿಡಗಳು. ಅರಗು ಕೀಟದಲ್ಲಿ ಕುಸುಮಿ, ರಂಗೀನಿ ಎಂಬ ಎರಡು ತಳಿಗಳಿವೆ. ಕುಸುಮಿಯು ಕುಸುಮದ ಮೇಲೆ ವಾಸಿಸಿದರೆ, ರಂಗೀನಿ ಇನ್ನುಳಿದ ಅತಿಥೇಯ ಗಿಡಗಳ ಮೇಲೆ ವಾಸಿಸುತ್ತದೆ. ಎರಡೂ ತಳಿಗಳು ಪ್ರತಿ ವರುಷ 2 ಬಾರಿ ಸಂತಾನೋತ್ಪತ್ತಿ ನಡೆಸುವುವು. ಆದ್ದರಿಂದ ನಾಲ್ಕು ಅರಗು ಬೆಳೆಗಳು ಲಭ್ಯವಾಗುತ್ತವೆ. ಕುಸುಮಿ ತಳಿ ಅಘನಿ ಮತ್ತು ಜೆತ್ವಿ ಎಂಬ ಹೆಸರಿನ ಬೆಳೆಗಳನ್ನು ಕೊಡುವುದು. ಮೊದಲನೆಯದು ಮುಖ್ಯ ಬೆಳೆಯಾಗಿದ್ದು, ಎರಡನೆಯದು ಪೀಳಿಗೆ ಅರಗು. ಭೈಸಾಖಿ ಮತ್ತು ಕಾತ್ಕಿ ರಂಗೀನಿಯ ಎರಡು ಬೆಳೆಗಳು. ಭೈಸಾಖಿ ಪ್ರಮುಖ ಬೆಳೆಯಾಗಿದ್ದು, ಕಾತ್ಕಿಯು ಉಪಬೆಳೆ.

ಔದ್ಯಮಿಕ ಮಹತ್ವ ಪಡೆದ ಶೆಲ್ಯಾಕ್‌ನ್ನು ಉತ್ಪಾದಿಸಲು ಕಟ್ಟಿಗೆ ಅರಗನ್ನು ಟೊಂಗೆಗಳಿಂದ ಸವರಿ ಬೇರ್ಪಡಿಸಿ ಸಂಸ್ಕರಿಸಲಾಗುವುದು. ಕಟ್ಟಿಗೆ ಅರಗು ಶೇ 5 ರಷ್ಟು ವರ್ಣಕ, 6 ರಷ್ಟು ಮೇಣ ಮತ್ತು 25 ರಷ್ಟು ರಾಳವನ್ನು ಒಳಗೊಂಡಿದೆ. ಶೆಲ್ಯಾಕನ್ನು ಕೈಯಿಂದ ಬೇರ್ಪಡಿಸಿ ಮಾರಾಟಕ್ಕೆ ಸಿದ್ಧಪಡಿಸಲಾಗುವುದು. ಕೆಲವೇಳೆ ಉಸುಕು, ಕಬ್ಬಿಣದ ಹುಡಿಯನ್ನು ಶೆಲ್ಯಾಕ್‌ದಲ್ಲಿ ಕೂಡಿಸಿ ಕಲಬೆರಕೆ ಮಾಡಿದ ಉದಾಹರಣೆಗಳು ಉಂಟು. ಕಟ್ಟಿಗೆ ಅರಗನ್ನು ಮೆಲ್ಲಗೆ ಜಜ್ಜಿ, ನೀರಿನಲ್ಲಿ ತೊಳೆದು ಮಲಿನ ಪದಾರ್ಥಗಳನ್ನು ಹೊರಹಾಕಿ ಅದನ್ನು ಒಣಗಿಸಿದರೆ ಚೌರಿ ಇಲ್ಲವೆ ಬೀಜ ಅರಗು ಎಂಬ ಕಂದು ವರ್ಣದ ಪದಾರ್ಥ ದೊರೆಯುವುದು. ಆನಂತರ ಚೌರಿಯನ್ನು 12 ಮಿ ಉದ್ದದ ಅರಿವೆ ಚೀಲಗಳಲ್ಲಿ ಪ್ಯಾಕ್ ಮಾಡಿ, ಇದ್ದಲಿ ಬೆಂಕಿಯ ಮೇಲೆ ಕಾಯಿಸಲಾಗುತ್ತದೆ. ಅರಗು ಕರಗಿ, ಅರಿವೆಯ ರಂಧ್ರಗಳ ಮೂಲಕ ಪ್ರವಹಿಸಿ, ಕಿರಿ ಎಂಬ ಮಲಿನತೆಗಳು ಅರಿವೆಯಲ್ಲಿ ಉಳಿಯುತ್ತವೆ. ಹೀಗೆ ಶುದ್ಧವಾಗಿ ದೊರೆತ ಅರಗನ್ನು ತಂಪು ಸ್ಥಳದಲ್ಲಿ ಸುರಿದಾಗ ಅದು ಗಟ್ಟಿಯಾಗಿ ಶೆಲ್ಯಾಕ್ ಸಿದ್ಧವಾಗುವುದು.

ಅರಗು ಕೀಟಗಳಿಗೆ ವೈರಿಗಳ ಕಾಟ ಜಾಸ್ತಿ. ಕೆಲವು ಪರೋಪಜೀವಿ ಕೀಟಗಳು ಅರಗು ಕೀಟದ ಮರಿಗಳಾದ ಶ್ವೇತ ಪತಂಗ ಮತ್ತು ಕರಿ ಪತಂಗ ಭಕ್ಷಕಗಳಾಗಿದ್ದು ಅರಗು ಬೆಳೆಯ ಶೇ 30–40 ರಷ್ಟನ್ನು ಹಾಳುಗೆಡುಹುತ್ತವೆ. ಈ ಪತಂಗಗಳು ಕಟ್ಟಿಗೆ ಅರಗಿನ ಮೇಲೆ ತತ್ತಿ ಇಡುತ್ತವೆ. ತತ್ತಿಗಳಿಂದ ಹೊರಬಂದ ಮರಿಗಳು ಅರಗನ್ನು ತಿನ್ನುತ್ತ ಅದರಲ್ಲಿ ಸುರಂಗ ಕೊರೆಯುತ್ತವೆ. (ಎಸ್.ಬಿ.ಎಮ್.)

**ಅರಗುರೆಕ್ಕೆ ಹಕ್ಕಿ:** ರೆಕ್ಕೆಯ ಗರಿಗಳ ಕೊನೆ ಅರಗಿನಂತೆ ಕೆಂಪಗಿರುವುದರಿಂದ ಈ ಹೆಸರು (ವ್ಯಾಕ್ಸ್‌ವಿಂಗ್). ಬಾಂಬಿಸಿಲ್ಲ ಗಾರ್ರುಲಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಇದು ಪಾಸರೈನ್ ಪಕ್ಷಿವರ್ಗದ ಬಾಂಬಿಸಿಲಿಡೆ ಕುಟುಂಬಕ್ಕೆ ಸೇರಿದೆ. ತಲೆಯ ಮೇಲೆ ಗರಿಗಳಿಂದಾದ ಒಂದು ಜುಟ್ಟು ಇದೆ. ಹಕ್ಕಿ ನೋಡುವುದಕ್ಕೆ ಬಲುಸುಂದರ. ಸೈಬೀರಿಯ ಮತ್ತು ಜಪಾನ್ ದೇಶಗಳಲ್ಲಿ ಗರಿಗಳ ತುದಿ ಮಾತ್ರವಲ್ಲದೆ ಬಾಲದ ಪುಕ್ಕಗಳೂ ಕೆಂಪು ಅರಗಿನ ಹೊಳಪನ್ನು ಹೊಂದಿರುತ್ತವೆ. ಕೆಲವು ಜಾತಿಯವು ಸಿಡಾರ್ (ದೇವದಾರು) ಮರವನ್ನು ಅವಲಂಬಿಸಿರುವುದರಿಂದ ಅವನ್ನು ಸಿಡಾರ್ ಹಕ್ಕಿಗಳೆಂದೂ ಕರೆಯುವುದುಂಟು.

ಇವು ಉತ್ತರ ಅಮೆರಿಕದಲ್ಲಿ ಹೇರಳ. ಚಳಿಗಾಲ ಸಮೀಪಿಸಿದಂತೆ ತಂಡೋಪತಂಡವಾಗಿ ಮಧ್ಯ ಮತ್ತು ದಕ್ಷಿಣ ಯೂರೋಪ್ ಖಂಡಗಳಿಗೆ ವಲಸೆಹೋಗುತ್ತವೆ. ಹಿಂದಿನ ಕಾಲದಲ್ಲಿ ಇವುಗಳು ಬರವನ್ನು ಅಷ್ಟಾಗಿ ಸಹಿಸುತ್ತಿರಲಿಲ್ಲ. ಅದು ಮುಂಬರುವ ಮಹಾ ಅಪಘಾತದ ಸೂಚನೆ ಎಂದು ನಂಬಿದ್ದರು. (ಜಿ.ಎಂ.ಬಿ.)

**ಅರಮೀನು:** ಇದು (ಮೋನಕಾಂತಿಡೇ) ಮತ್ತು ಟ್ರಿಗರ್ ಮೀನುಗಳು (ಬ್ಯಾಲಿಸ್ಟಿಡೆ) ಒಂದೇ ಗುಂಪಿಗೆ ಸೇರಿದವು. ಉಷ್ಣ ಮತ್ತು ಉಪೋಷ್ಣ ಸಮುದ್ರಗಳಲ್ಲಿ ಅಂದರೆ ಅಟ್ಲಾಂಟಿಕ್, ಪೆಸಿಫಿಕ್, ಹಿಂದೂ ಮಹಾಸಾಗರದ ಉಷ್ಣವಲಯದ ಭಾಗಗಳಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ 60 ಸೆಂಮೀ ಉದ್ದ ಬೆಳೆಯುತ್ತವೆ. ಬಣ್ಣ ಹಳದಿ, ಕೆಂಪು ಮತ್ತು ನೀಲಿ.

ಬ್ಯಾಲಿಸ್ಟಿಡೆ ಕುಟುಂಬದ ಮೀನುಗಳಲ್ಲಿ ಬೆನ್ನುರೆಕ್ಕೆಯ ಮೊದಲನೆಯ ಮುಳ್ಳು ಸೆಟೆದು ನಿಲ್ಲಲು ಹಿಂದಿರುವ ಸಣ್ಣ ಮುಳ್ಳು ನೆರವಾಗುತ್ತದೆ. ಅದಕ್ಕಾಗಿಯೇ ಈ ಮೀನುಗಳಿಗೆ ಟ್ರಿಗ್ಗರ್ ಮೀನುಗಳು ಎಂದು ಹೆಸರು. ಅರಮೀನುಗಳಲ್ಲಿ ಎರಡನೆಯ ಸಣ್ಣ ಮುಳ್ಳು ದೇಹದಲ್ಲಿ ಹುದುಗಿಹೋಗಿರಬಹುದು.

ಇವೆರಡಕ್ಕೂ ಚೂಪಾದ, ಬಲವಾದ ಬಾಚಿಹಲ್ಲುಗಳಿವೆ. ಇವುಗಳಿಂದ ಹವಳದ ಚೂರುಗಳನ್ನು ಕಡಿದು ತಿನ್ನಲು, ಮೃದ್ವಂಗಿಗಳ ಚಿಪ್ಪನ್ನು ಒಡೆದು ಒಳಗಿನ ಮಾಂಸವನ್ನು ತಿನ್ನಲು ಸಾಧ್ಯವಾಗಿದೆ. ಈ ಕಾರಣದಿಂದ ಮುತ್ತಿನ ಮತ್ತು ಮುತ್ತಿನ ಚಿಪ್ಪುಗಳ ವ್ಯವಸಾಯಕ್ಕೆ ಈ ಮೀನುಗಳಿಂದ ಹೆಚ್ಚು ನಷ್ಟ. ಈ ಗುಂಪಿನ ಕೆಲವು ಮೀನುಗಳ ಮಾಂಸ ವಿಷಪೂರಿತವಾದದ್ದು. (ಸಿ.ಜಿ.ಕೆ.)

**ಅರಿಸ್ಟಾಟಲ್ (ಕ್ರಿಪೂ 384–322):** ಗ್ರೀಸ್ ದೇಶದ ಪ್ರಸಿದ್ಧ ತಾತ್ತ್ವಿಕ. ಥ್ರೇಸಿನ ರೇವುಪಟ್ಟಣವಾದ ಸ್ಟಗಿರದಲ್ಲಿ ಜನಿಸಿದ, ತಂದೆ ನೈಕೊಮ್ಯಕಸ್. ಮ್ಯಸಿಡಾನಿನ ದೊರೆ ಎರಡನೆಯ ಅಮಿನ್‌ಟಾಸ್‌ನ ಆಸ್ಥಾನ ವೈದ್ಯನಾಗಿದ್ದ.

ಅರಿಸ್ಟಾಟಲನಿಗೆ ಬಾಲ್ಯದಿಂದ ಜೀವವಿಜ್ಞಾನದಲ್ಲಿ ಅತಿಶಯವಾದ ಆಸಕ್ತಿ ಇತ್ತು. ತಂದೆ ವೈದ್ಯನಾಗಿದ್ದುದೂ ಪ್ರಾಣಿವಿಜ್ಞಾನಿಯಾದ ಅಸ್‌ಕ್ಲಿಪಿಯಸ್ ಬಾಲ್ಯದಲ್ಲೆ ಪರಿಚಯವಾದದ್ದೂ ಆಸಕ್ತಿ ಬೆಳೆಯಲು ಕಾರಣವಿರಬಹುದು. ಪ್ರಾಣಿಗಳನ್ನೂ ಅವುಗಳ ಎಲುಬುಗಳನ್ನೂ ಚಿಪ್ಪುಗಳನ್ನೂ ಸಾವಧಾನದಿಂದ ನಿರಂತರವಾಗಿ ಕಣ್ಣಿಟ್ಟು ಪರೀಕ್ಷಿಸಿ ಕ್ರಮವರಿತು ವಿಂಗಡಿಸಿ, ವರ್ಗೀಕರಿಸಿ, ಅನುಗಮನದ ಆಧಾರದ ಮೇಲೆ ರಚಿಸಿದ ಶಾಸ್ತ್ರವಿದು. ಮದುವೆ ಮಾಡಿಕೊಂಡು ತನ್ನ ಹೆಂಡತಿಯೊಡನೆ ವಿಹಾರಾರ್ಥವಾಗಿ ಲೆಸ್‌ಬಾಸ್ ದ್ವೀಪಕ್ಕೆ ಹೋದಾಗ ಎರಡು ವರ್ಷಗಳ ಕಾಲ ಸಸ್ಯಗಳ ಮಾದರಿಗಳನ್ನೂ ಸಮುದ್ರದ ಪ್ರಾಣಿಗಳ ಎಲುಬುಗಳನ್ನೂ ಚಿಪ್ಪುಗಳನ್ನೂ ಸಂಗ್ರಹಿಸುವುದೊಂದೇ ಅವನ ಮುಖ್ಯ ಕೆಲಸವಾಗಿತ್ತು. ಇವನು ವಿವಿಧ ವಿಷಯಗಳ ಮೇಲೆ ನಾಲ್ಕುನೂರು ಗ್ರಂಥಗಳನ್ನು ಬರೆದಿದ್ದನೆಂದು ತಿಳಿದಿದೆ. ಆದರೆ ಅವುಗಳಲ್ಲಿ ಹೆಚ್ಚು ಭಾಗ ನಷ್ಟವಾಗಿದೆ. ಉಳಿದಿರುವುವುಗಳಲ್ಲಿ ಮುಖ್ಯವಾದುವನ್ನು ಆರು ಭಾಗಗಳಾಗಿ ವಿಂಗಡಿಸಬಹುದು.

ಅರಿಸ್ಟಾಟಲ್

1. ತರ್ಕಶಾಸ್ತ್ರ: ಕೆಟಗೊರಿಯ, ಡಿ ಇಂಟರ್‌ಪ್ರಿಟೇಷನಿ, ಅನಲಿಟಿಕ ಪ್ರಿಯೋರ, ಅನಲಿಟಿಕ ಪಾಟೇರಿಯೋರ, ಟಾಪಿಕ, ಡಿ ಸೋಫಿಸ್ಟಿಕ ಮತ್ತು ಎಲೆಂಕಿಸ್

2. ಭೌತಶಾಸ್ತ್ರ: ಫಿಸಿಕ, ಡಿ ಕೋಲೊ, ಡಿ ಜನರಾಸಿಯೋನಿ, ವಿಟ್‌ಕರಪ್ಷನಿ ಮತ್ತು ನೀಟಿಯೊರೊಲಾಜಿಕ.

3. ಜೀವಶಾಸ್ತ್ರ: ಹಿಸ್ಟೋರಿಯ ಅನಿಮೇಲಿಯಂ. ಡಿ ಪಾರ್ಟಿಬಸ್‌ಅನಿಮೇಲಿಯಂ, ಡಿ ಅನಿಮಾ ಮತ್ತು ಪಾರ್ವಾನ್ಯಟುರಾಲಿಯ.

4. ಪ್ರಥಮ ತತ್ತ್ವಗಳು; ಮೆಟಫಿಸಿಕ.

5. ನೀತಿಶಾಸ್ತ್ರ ಮತ್ತು ರಾಷ್ಟ್ರಶಾಸ್ತ್ರ, ಎಥಿಕ ನೈಕೊಮ್ಯಕಿಯ, ಎಥಿಕ ಈಡೆಮಿಯ, ಮ್ಯಗ್ನಾ ಮೊರೇಲಿಯ, ಪೊಲಿಟಿಕ ಮತ್ತು ಎಕನಾಮಿಕ.

6. ಅಲಂಕಾರ ಶಾಸ್ತ್ರ ಮತ್ತು ಕಾವ್ಯ ಮೀಮಾಂಸೆ: ರ್‍ಹೆಟೊರಿಕ, ಪೊಯೆಟಿಕ.

ಅರಿಸ್ಟಾಟಲನು ಅಲೆಕ್ಸಾಂಡರ್‌ನ ಗುರುವಾಗಿದ್ದ ಕಾಲದಲ್ಲಿ (ಕ್ರಿ. ಪೂ. 343 ರಿಂದ ಕ್ರಿ. ಪೂ. 325 ರವರೆಗೆ) ಸಂಶೋಧನೆಗೆ ಬೇಕಾದ ಸಸ್ಯಗಳನ್ನೂ, ಪ್ರಾಣಿಗಳನ್ನೂ ಅವುಗಳ ಅವಶೇಷಗಳನ್ನೂ ರಾಜಭಟರು ಒದಗಿಸುತ್ತಿದ್ದರು. ಅಲೆಕ್ಸಾಂಡರ್ ತನ್ನ

ಜೈತ್ರಯಾತ್ರೆಯ ಕಾಲದಲ್ಲಿ ವಿದೇಶಗಳಲ್ಲಿ ದೊರೆತ ಚಿತ್ರವಿಚಿತ್ರ ಪ್ರಾಣಿಗಳ ಮಾದರಿಗಳನ್ನು ತಿಳಿಯುವುದು ಎಷ್ಟು ಮಹತ್ತ್ವದ ಕೆಲಸ, ಅದನ್ನು ತಿಳಿಯಲು ಯಾವ ವಿಶೇಷ ವಿಧಾನಗಳನ್ನು ಅನುಸರಿಸಬೇಕು ಎಂಬುದನ್ನು ಅರಿಸ್ಟಾಟಲ್ ತನ್ನ ಪಾರ್ಟಿಬಸ್ ಅನಿಮೇಲಿಯಂ ಗ್ರಂಥದಲ್ಲಿ ಆಧುನಿಕರನ್ನು ಅಚ್ಚರಿಗೊಳಿಸುವಷ್ಟು ಚೆನ್ನಾಗಿ ವಿವರಿಸಿದ್ದಾನೆ, ವೈಜ್ಞಾನಿಕ ವರ್ಗೀಕರಣ ವಿಧಾನಕ್ಕೆ ಭದ್ರವಾದ ಬುನಾದಿಯನ್ನು ಏರ್ಪಡಿಸಿದ ಯಶಸ್ಸು ಅರಿಸ್ಟಾಟಲನಿಗೆ ಸಲ್ಲಬೇಕು.

ಅರಿಸ್ಟಾಟಲ್ ಪರಿಣಾಮವಾದವೆಂದು ಹೇಳುವುದುಂಟು. ಪ್ರಕೃತಿಯಲ್ಲಿ ಕ್ರಮವಾದ ಬೆಳೆವಣಿಗೆ ಇದೆ. ಕೆಳಮಟ್ಟದ ಪ್ರಕೃತಿಯ ಪರಿಣಾಮಗಳು ಮೇಲ್ಮಟ್ಟದ ಪ್ರಕೃತಿಯ ಪರಿಣಾಮಗಳಿಗೆ ತಳಹದಿಯಾಗಿದೆ, ಎಂದು ಮಾತ್ರ ಅರಿಸ್ಟಾಟಲ್ ತಿಳಿದಿದ್ದ. ಈಚಿನ ಪರಿಣಾಮಗಳಂತೆ ಮಾನವಜಾತಿಯೂ ಕಪಿಜಾತಿಯೂ ಒಂದೇ ಮೂಲದಿಂದ ವಿಕಾಸಗೊಂಡವೆಂದು ಆತ ತಿಳಿದಿರಲಿಲ್ಲ. ಅವನ ಪರಿಣಾಮವಾದ ಮುಖ್ಯವಾಗಿ ತಾತ್ತ್ವಿಕ ವಿಚಾರಧಾರೆ, ವೈಜ್ಞಾನಿಕವಲ್ಲ.

ಅರಿಸ್ಟಾಟಲನ ತತ್ತ್ವಶಾಸ್ತ್ರ ಸಿದ್ಧಾಂತಗಳಲ್ಲಿ ಅವನು ಜೀವಿಗಳ ಮೇಲೆ ನಡೆಸಿದ ಅಧ್ಯಯನಗಳ ವಿಚಾರಗಳು ಹಾಸು ಹೊಕ್ಕಾಗಿವೆ. ಪ್ರಾಣಿಗಳಲ್ಲುಂಟಾಗುವ ಪರಿವರ್ತನೆಗಳು, ಬೆಳೆವಣಿಗೆ, ಪ್ರಾಣಿಪ್ರಪಂಚದಲ್ಲಿ ಮಾನವನ ಸ್ಥಾನಮಾನ ಇತ್ಯಾದಿಗಳ ಕುರಿತು ಅರಿಸ್ಟಾಟಲ್ ಬರೆದಿದ್ದಾನೆ. ಈತನ ವಿಚಾರಗಳಲ್ಲಿ ಜೀವಿಗಳ ಪ್ರಕೃತಿಯ ಜೊತೆಗೆ ನಿರ್ಜೀವ ಪ್ರಕೃತಿಯ ವಿಚಾರಗಳು ಮೇಳೈಸಿರುವುದನ್ನು ಕಾಣಬಹುದು.

ಮಾನವನ ಕುರಿತು ಅರಿಸ್ಟಾಟಲ್‌ನ ವಿಚಾರಧಾರೆ ಹೀಗಿದೆ. ಮಾನವನೇ ಎಲ್ಲಕ್ಕೂ ಮೇಲಿನವನಲ್ಲ. ಈ ಭೂಮಿಯಿಂದ ಆಚೆ ಮಾನವನಿಗಿಂತ ಉತ್ತಮವಾದ ವಸ್ತುಗಳಿವೆ ಎನ್ನುವುದು ಅರಿಸ್ಟಾಟಲನ ಭಾವನೆ. ಸೂರ್ಯ ಚಂದ್ರಾದಿಗಳು, ನಕ್ಷತ್ರಗಳು ಮಾನವನಿಗಿಂತ ಭಿನ್ನವಾದ ಕ್ವಿಂಟಸೆನ್ಸ್ ಅಂದರೆ ಶುದ್ಧಸತ್ತ್ವದಿಂದ ಕೂಡಿದುವು. ಸೂರ್ಯಚಂದ್ರಾದಿಗಳು ದಿವ್ಯಮೂರ್ತಿಗಳು ಎಂಬುದು ಗ್ರೀಕರ ನಂಬಿಕೆ. ಅರಿಸ್ಟಾಟಲ್ ಕೂಡ ಆ ನಂಬಿಕೆಯಲ್ಲಿ ಭಾಗಿ. ನಕ್ಷತ್ರಗಳಿಗಿಂತಲೂ ಆಚೆ ಅಂದರೆ ಆಕಾಶದ ಮಿತಿಯನ್ನು ಮೀರಿ ಇರುವಂಥಾದ್ದು, ಎಲ್ಲಕ್ಕಿಂತಲೂ ಪರಿಪೂರ್ಣವಾದದ್ದು. ಪರಮ ಚೈತನ್ಯ, ಈಶ್ವರ.

ಪ್ರಕೃತಿಯಲ್ಲಿ ಹಂತ, ಹಂತವಾಗಿ ವಸ್ತುಗಳು ಪರಿಣಾಮಗೊಳ್ಳುತ್ತವೆಂದು, ಪ್ರತಿಯೊಂದು ವಸ್ತುವೂ ಸಂಪೂರ್ಣವಾಗಿ ಪರಿಣಮಿಸಲು ಅರಿಸ್ಟಾಟಲ ನಾಲ್ಕು ಕಾರಣಗಳನ್ನು ತಿಳಿಸುತ್ತಾನೆ. ಈ ಕಾರಣಗಳು ಮಾನವನ ಪರಿಣಾಮಕ್ಕಲ್ಲದೆ ಎಲ್ಲ ವಸ್ತುಗಳ ಪರಿಣಾಮಕ್ಕೂ ಅನ್ವಯಿಸುತ್ತವೆ. ಉದಾ: ಒಂದು ಗಿಡಕ್ಕೆ ಬೀಜ ಉಪಾದಾನ ಕಾರಣ. ವೃಕ್ಷತ್ವ ಅದರ ಭಾವ ಅಥವಾ ರೂಪಕರಣ. ಬೀಜ ಮೊಳೆತು, ಬೆಳೆಯುವುದಕ್ಕೆ ಮಣ್ಣು, ನೀರು, ಗಾಳಿ, ಬೆಳಕು – ಇವೆಲ್ಲ ಸೇರಿ ನಿಮಿತ್ತ ಕಾರಣ. ಫಲಭರಿತವಾಗುವುದು ಅದರ ಗುರಿ. ಅದು ಅದರ ಅಂತಿಮಕಾರಣ. ಈ ಕಾರಣ ಚತುಷ್ಟಯದಲ್ಲಿ ಯಾವುದೊಂದಿಲ್ಲದಿದ್ದರೂ ಯಾವುದೊಂದು ವಸ್ತುವೂ ವಿಕಾಸವಾಗಲಾರದು ಎಂಬ ನಂಬಿಕೆ ಅರಿಸ್ಟಾಟಲ್‌ನದ್ದು. (ಜಿ.ಎಚ್.)

**ಅರೀಢಕ ಸಂಧಿಗಳು:** ಬ್ರೇಕಿಯೊಪೋಡ ವಂಶದಲ್ಲಿ ಒಂದು ಉಪ ವರ್ಗ. ಟ್ರೆಸ್ಪಿಕಾರ್ಡೈನ್‌ಗಳೆಂದು ಇನ್ನೊಂದು ಹೆಸರು (ಆರ್ಟಿಕ್ಯುಲೇಟ). ಈ ವರ್ಗದ ಪ್ರಾಣಿಗಳು ಸಮುದ್ರ ಜೀವಿಗಳು ಹಾಗೂ ಸಮುದ್ರದ ತಳದಲ್ಲಿರುವ ಬಂಡೆಗೊ ಅಥವಾ ಇತರ ವಸ್ತುಗಳಿಗೊ ಭದ್ರವಾಗಿ ಅಂಟಿಕೊಂಡಿರುವ ತಟಸ್ಥ ಜೀವಿಗಳು. ಪ್ರಪಂಚದ ಎಲ್ಲಾ ಸಮುದ್ರಗಳಲ್ಲೂ ಮತ್ತು ಎಲ್ಲಾ ಆಳದಲ್ಲಿಯೂ ವಾಸಿಸುತ್ತವೆ. ಸಾಮಾನ್ಯವಾಗಿ ಬಂಡೆಗೆ ತೊಟ್ಟಿನಿಂದ ಅಂಟಿಕೊಂಡಿರುತ್ತವೆ.

ಶರೀರವನ್ನು ಚಿಪ್ಪು ಆವರಿಸಿದೆ. ಚಿಪ್ಪಿನಲ್ಲಿ ಎರಡು ಕವಾಟಗಳಿವೆ. ಒಂದು ಊರ್ಧ್ವಭಾಗದಲ್ಲೂ ಮತ್ತೊಂದು ಅಧೋ ಭಾಗದಲ್ಲೂ ಇವೆ. ಅಧೋಭಾಗದ ಕವಾಟವು ದೊಡ್ಡದಾಗಿರುತ್ತದೆ ಮತ್ತು ಊರ್ಧ್ವಭಾಗದ ಕವಾಟಕ್ಕಿಂತ ಉದ್ದವಾಗಿದ್ದು ಕೊಕ್ಕಿನಂತೆ ಇರುತ್ತದೆ. ಈ ಕೊಕ್ಕಿನಲ್ಲಿರುವ ಅಂಡಾಕೃತಿಯ ರಂಧ್ರದಿಂದ ತೊಟ್ಟು ಹೊರ ಬಂದು ತಳಕ್ಕೆ ಅಂಟಿಕೊಂಡಿರುತ್ತದೆ. ಎರಡು ಕವಾಟಗಳು ಪಾರ್ಶ್ವಸೌಷ್ಠವುಳ್ಳವು ಮತ್ತು ಹಿಂಭಾಗದಲ್ಲಿ ಕೀಲಿ(ಹಿಂಜ್) ನಿಂದ ಸೇರಿಸಲ್ಪಟ್ಟಿವೆ. ಇದರಲ್ಲಿ ಕೀಲು ಹಲ್ಲುಗಳು ಮತ್ತು ಕುಳಿ ಜೋಡಣೆ ಇದೆ. ಈ ಕೀಲಿನ ಸಹಾಯದಿಂದ ಕವಾಟಗಳು ತೆರೆಯಲು ಮತ್ತು ಮುಚ್ಚಲು ಸಾಧ್ಯವಾಗುತ್ತವೆ. ಇದರಿಂದಲೇ ಈ ವರ್ಗಕ್ಕೆ ಅರೀಢಕ ಸಂಧಿಗಳು ಅಥವಾ ಆರ್ಟಿಕ್ಯುಲೇಟ ಎಂದು ಹೆಸರು. ಕವಾಟಗಳ ಮೇಲ್ಭಾಗದಲ್ಲಿ ಬೆಳೆವಣಿಗೆಯನ್ನು ಸೂಚಿಸುವ ರೇಖೆಗಳಿವೆ. ಚಿಪ್ಪಿನ ಹೊರಗಡೆ ತೆಳುವಾದ ಪೆರಿಆಸ್ಟ್ರಕಮ್ ಎಂಬ ಕವಚವಿದೆ. ಕವಚ ಕೈಟಿನ್ ಪದಾರ್ಥದಂತ ಸಾವಯವ ವಸ್ತುವಿನಿಂದಾಗಿದೆ. ಇದರದಲ್ಲಿರುವ ಮುಖ್ಯವಾದ ನಿರವಯವ ವಸ್ತುವು ಸುಣ್ಣ.

ಶರೀರವು ಚಿಪ್ಪಿನ ಹಿಂಭಾಗದಲ್ಲಿರುತ್ತದೆ. ಮ್ಯಾಂಟಲ್ ಕವಚವು ಶರೀರವನ್ನು ಆವರಿಸಿಕೊಂಡಿದೆ. ಈ ಕವಚವು ಎರಡು ಹಾಳೆಗಳಂತಿದೆ. ಒಂದೊಂದು ಹಾಳೆಯೂ ಒಂದೊಂದು ಕವಾಟದ ಸಂವಾದಿ. ಚಿಪ್ಪನ್ನು ರಚಿಸುವುದು ಕವಚದ ಜೀವಕೋಶಗಳೇ. ಮ್ಯಾಂಟಲ್ ಅವಕಾಶದೊಳಗೆ ಪ್ರಾಣಿಯ ಶರೀರವಿರುತ್ತದೆ. ಇದರಲ್ಲಿ ಹೆಚ್ಚು ಭಾಗವು ದೊಡ್ಡದಾದ ಲೋಪೊಫೊರ್‌ನಿಂದ ತುಂಬಿರುತ್ತದೆ. ಈ ಲೋಪೊಫೊರ್ ಶರೀರದ ಗೋಡೆಯ ಮುಂಭಾಗದ ಚಾಚುವಿಕೆ. ಊರ್ಧ್ವಕವಾಟವು ಲೋಪೊಫೊರ್‌ಗೆ ಸಂಬಂಧಪಟ್ಟಿದೆ. ಇದು ಬ್ರೆಕಿಡಿಯಂ ಎಂಬ ಒಳ ಅಸ್ಥಿಯಿಂದ ಆಸರೆಯನ್ನು ಪಡೆದಿದೆ. ಬ್ರೆಕಿಡಿಯಂನಲ್ಲಿ ಒಂದು ಜೊತೆ ಕ್ರೂರ ಎನ್ನುವ ಕವಲುಗಳಿವೆ. ಈ ಕ್ರೂರಗಳು ಲೋಪೊಫೊರ್ ಒಳಗಡೆ ಹಾಗೂ ಮುಂಭಾಗದಲ್ಲಿ ಕುಣಿಕೆಯಾಕಾರದಲ್ಲಿದೆ. ಆದರೆ ಇದು ಕವಾಟಕ್ಕೆ ಅಂಟಿಕೊಂಡಿಲ್ಲ.

ಶರೀರದ ಹೊರಭಾಗ ಏಕಪದರದ ಹೊರಚರ್ಮದಿಂದ ಆವರಿಸಿದೆ. ಈ ಚರ್ಮದಲ್ಲಿರುವ ಜೀವಕೋಶಗಳ ಮಧ್ಯದಲ್ಲಿ ಗ್ರಂಥಿಕೋಶಗಳಿವೆ. ಹೊರಚರ್ಮದ ತಳಭಾಗದಲ್ಲಿ ಸಂಯೋಜಕ ಕಣಧಾತುವಿನ ಪದರವಿದೆ. ಒಳಭಾಗದಲ್ಲಿ ತೆಳ್ಳಗಿರುವ ಶಿಲಕೆಗಳಿರುವ ಪೆರಿಟೋನಿಯಂ ಇದೆ. ಪೆರಿಟೋನಿಯಂನ ಒಳಭಾಗಕ್ಕೆ ಸ್ನಾಯು ಪದರವಿದೆ. ಸ್ನಾಯುಗಳಲ್ಲಿ ಮೂರು ಜೊತೆ ವಿಶೇಷವಾಗಿವೆ; ಅಡಕ್ಟರ್ ಸ್ನಾಯು ಮತ್ತು ಡಿಡಕ್ಟರ್ ಸ್ನಾಯು. ಸ್ನಾಯುಗಳು ಕವಾಟಗಳನ್ನು ತೆರೆಯಲು ಮತ್ತು ಮುಚ್ಚಲು ಸಹಾಯ ಮಾಡುತ್ತವೆ. ತೊಟ್ಟಿನಲ್ಲಿರುವ ತೊಟ್ಟುಸ್ನಾಯುಗಳು ತೊಟ್ಟಿನ ಚಲನೆಯನ್ನು ನಿಯಂತ್ರಿಸುತ್ತವೆ. ಶರೀರಾಂತರಾವಕಾಶವು ವಿಶಾಲವಾಗಿದ್ದು ಮುಂಭಾಗದ ಪ್ರೋಟೊಸಿಲ್, ಮಧ್ಯದ ಮೀಸೋಸಿಲ್ ಮತ್ತು ಹಿಂಭಾಗದ ಮೇಟಾಸಿಲ್ ಎಂಬ ಮೂರು ಭಾಗಗಳಾಗಿವೆ. ಮೀಸೋಸಿಲ್‌ನಿಂದ ಲೋಪೊಫೊರ್‌ಗೆ ಉದ್ದನೆಯ ತೋಳುಗಳು ಪ್ರವೇಶಿಸುತ್ತವೆ. ಮೇಟಾಸಿಲ್ ಶರೀರದ ಮುಖ್ಯ ಶರೀರಾಂತರಾವಕಾಶವಾಗುತ್ತದೆ. ಇದರಲ್ಲಿ ಜೀರ್ಣನಾಳದ ಮುಖ್ಯ ಭಾಗ, ಕವಾಟ ಸ್ನಾಯುಗಳು, ಶುದ್ಧೀಕರಣಾಂಗಗಳು ಹಾಗೂ ಜನನೇಂದಿಯಗಳಿರುತ್ತವೆ. ಅವಕಾಶವು ಅನೇಕ ರೀತಿಯ ಕೋಶಗಳುಳ್ಳ ದ್ರವದಿಂದ ತುಂಬಿದೆ.

ಲೋಪೊಫೊರ್ ಮಧ್ಯದಲ್ಲಿ ಬಾಯಿಯು ಒಂದು ಅಡ್ಡ ಸೀಳಿಕೆಯಂತಿದೆ. ಇದು U ಆಕಾರದ ಜೀರ್ಣನಾಳವನ್ನು ಪ್ರವೇಶಿಸುತ್ತದೆ. ಬಾಯಿಯ ನಂತರ ಇರುವ ಅನ್ನನಾಳವು ದೊಡ್ಡ ಹೊಟ್ಟೆಯನ್ನು ಪ್ರವೇಶಿಸುತ್ತದೆ. ಈ ಹೊಟ್ಟೆಯೊಳಕ್ಕೆ ದೊಡ್ಡ ಪಿತ್ತಜನಕಾಂಗವು ತನ್ನ ನಾಳಗಳಿಂದ ತೆರೆಯಲ್ಪಟ್ಟಿದೆ.

ಉಸಿರಾಡುವುದಕ್ಕೆ ವಿಶೇಷ ಅಂಗಗಳಿಲ್ಲ. ಕುದುರೆಯ ಲಾಳದ ಆಕಾರದಂತಿರುವ ಲೋಪೊಫೊರ್ ತನ್ನ ಶಿಲಕೆಗಳ ಚಲನೆಯಿಂದ ನೀರಿನಲ್ಲಿ ಸುಳಿಯನ್ನು ಉಂಟುಮಾಡುತ್ತದೆ. ನೀರಿನ ಸುಳಿಯಲ್ಲಿರುವ ಸೂಕ್ಷ್ಮಜೀವಿಗಳು ಪ್ರಾಣಿಗೆ ಆಹಾರವಾಗುತ್ತವೆ ಮತ್ತು ಪ್ರಾಣಿಯು ತನಗೆ ಬೇಕಾಗಿರುವ ಆಮ್ಲಜನಕವನ್ನು ಸಹ ನೀರಿನಿಂದಲೇ ಪಡೆಯುತ್ತದೆ. ಲೋಪೊಫೊರ್‌ನಲ್ಲಿರುವ ಸ್ಪರ್ಶಾಂಗಗಳ ಒಳಗಿರುವ ಸೀಲೊಮಿಕ್ ದ್ರವವು ಅನಿಲಗಳ ವಿನಿಮಯದಲ್ಲಿ ಸಹಾಯ ಮಾಡುತ್ತವೆ.

ಶರೀರದಲ್ಲಿ ಹರಿಯುತ್ತಿರುವ ರಕ್ತವು ಬಣ್ಣ ಹಾಗೂ ಕೋಶರಹಿತವಾಗಿರುವ ದ್ರವ. ಹೊಟ್ಟೆಯ ಹಿಂಭಾಗಕ್ಕೆ ಅಂಟಿಕೊಂಡಿರುವ ಹಾಗೆ ಗುಂಡಗೆ, ಸಂಕುಚಿತ ಕೋಶದಂತಿರುವ ಹೃದಯವಿದೆ. ರಕ್ತವು ದೊಡ್ಡ ದೊಡ್ಡ ತೆರೆಯಲ್ಪಟ್ಟ ಅವಕಾಶಗಳಲ್ಲಿ ಹರಿಯುತ್ತದೆ.

ಶುದ್ಧೀಕರಣಾಂಗಗಳು ಕೊಳವೆಯಂತಿರುವ ಜೋಡಿ ನೆಫ್ರೀಡಿಯಗಳು. ಶರೀರಾಂತರಾವಕಾಶದೊಳಕ್ಕೆ ಆಲಿಕೆಯಂತಿರುವ ನೆಫ್ರೋಸ್ಟೋಮ್ ತೆರೆದಿದೆ. ನೆಫ್ರೀಡಿಯವು ನೆಫ್ರೀಡಿಯೋಪೋರ್ ಮೂಲಕ ಹೊರತೆರೆದಿರುತ್ತದೆ.

ಅನ್ನ ನಾಳದ ಸುತ್ತಲೂ ಒಂದು ನರ ಉಂಗುರವಿದೆ. ಉಂಗುರದ ಮೇಲ್ಭಾಗದಲ್ಲಿ ಸಣ್ಣ ನರ ಗಂಟು ಹಾಗೂ ಕೆಳಭಾಗದಲ್ಲಿ ದೊಡ್ಡ ನರ ಗಂಟುಗಳಿವೆ. ಈ ನರಗಂಟುಗಳಿಂದ ನರಗಳು ಶರೀರದ ಇತರ ಅಂಗಗಳಿಗೆ ಪ್ರಸರಿಸುತ್ತವೆ.

ಅರೀಢಕ ಸಂಧಿಗಳು ಏಕಲಿಂಗ ಪ್ರಾಣಿಗಳು. ಎರಡು ಜೊತೆ ಜನನಾಂಗಗಳಿವೆ. ಒಂದು ಊರ್ಧ್ವ ಭಾಗದಲ್ಲೂ ಮತ್ತೊಂದು ಅಧೋ ಭಾಗದಲ್ಲೂ ಇವೆ. ಗರ್ಭಕಟ್ಟುವುದು ಶರೀರದ ಹೊರ ಭಾಗದಲ್ಲಿ ಅಂದರೆ ಸಮುದ್ರದ ನೀರಿನಲ್ಲಿ. ಗರ್ಭ ಕಟ್ಟಿದ ತತ್ತಿಯು ಬೆಳೆದು ಶಿಲಕೆಗಳಿರುವ ಮರಿಯಾಗುತ್ತದೆ. ಇದು ಟ್ರೋಕೋಫೊರ್ ಮರಿಯನ್ನು ಹೋಲುತ್ತದೆ. ಈ ಮರಿಯು ನೀರಿನಲ್ಲಿ ಸ್ವಲ್ಪ ಕಾಲ ಸ್ವೇಚ್ಛೆಯಾಗಿ ಈಜಾಡಿದ ಅನಂತರ ತಳಕ್ಕೆ ಸೇರಿ, ಅಂಟಿಕೊಂಡು, ರೂಪಪರಿವರ್ತನೆಯ ಅನಂತರ ಪ್ರಬುದ್ಧ ಜೀವಿಯಾಗುತ್ತದೆ. ಮ್ಯಾಗಲೇನಿಯ, ಟೆರಿಬ್ರಾಟುಲಾ, ಆರ್ಜಿಯೋಪಿ ಮತ್ತು ಸಿಸ್ಸೆಲ್ಲ ಈ ವರ್ಗಕ್ಕೆ ಸೇರಿರುವ ಕೆಲವು ಪ್ರಾಣಿಗಳು. (ಕೆ.ಪಿ.ಆರ್.)

**ಅರೆನೀಡ:** ಸಂಧಿಪದಿ ವಂಶದ, ಅರ್ಯಾಕ್ನಿಡ ವರ್ಗದ ಯುಅರ್ಯಾಕ್ನಿಡ ಉಪವರ್ಗದಲ್ಲಿ ಒಂದು ಗಣ. ಅರೇನೆ ಎಂದು ಇನ್ನೊಂದು ಹೆಸರು. ಈ ಗಣದ ಅರ್ಯಾಕ್ನಿಡಗಳನ್ನು

ಜೇಡಗಳೆಂದು ಕರೆಯುತ್ತಾರೆ. 38 ಕುಟುಂಬಗಳಿರುವ ಈ ಗಣದಲ್ಲಿ ಸುಮಾರು 30,000 ಪ್ರಭೇದಗಳಿವೆ.

ಅರೇನೀಡಗಳು ಹೆಚ್ಚಾಗಿ ಉಷ್ಣವಲಯದಲ್ಲಿ ವಾಸಿಸುವ ಭೂವಾಸಿಗಳು. ಜಲವಾಸಿಗಳಿಲ್ಲ. ಶರೀರದಲ್ಲಿ ಎರಡು ಭಾಗ; ಮುಂಭಾಗದ ಶಿರೋರ (ಪ್ರೋಸೋಮ) ಮತ್ತು ಹಿಂಭಾಗದ ಉದರ. ಶಿರೋರಭಾಗವು ತಲೆ ಮತ್ತು ಎದೆಯ ಭಾಗಗಳ ಒಕ್ಕೂಟ. ಇದರ ಮೇಲ್ಭಾಗದಲ್ಲಿ ಒಂದು ಟರ್ಗಲ್ ರಕ್ಷಣಾ ಕವಚವಿದೆ. ಇದರಲ್ಲಿ ಸುಮಾರು ಆರು ಅಥವಾ ಎಂಟು ಅಡ್ಡ ಸಾಲಿನಲ್ಲಿ ಜೋಡಿಸಲ್ಪಟ್ಟ ಸರಳ ರಚನೆಯ ಕಣ್ಣುಗಳಿವೆ. ಉದರವು ಪೂರ್ವೋದರ (ಮೀಸೋಸೋಮ) ಮತ್ತು ಉತ್ತರೋದರ (ಮೆಟಾಸೋಮ)ಗಳ ಸಂಯೋಗದಿಂದ ಮಾಡಲ್ಪಟ್ಟಿದೆ. ಇದು ಮೃದುವಾಗಿದ್ದು ಖಂಡಗಳ ರಚನೆ ಹೊಂದಿರುವುದಿಲ್ಲ. ನೀಳವಾಗಿ ಸಣ್ಣ ತೊಟ್ಟಿನಂತಿರಬಹುದು ಅಥವಾ ಕಡ್ಡಿಯಂತಿರಬಹುದು ಅಥವಾ ದುಂಡಗಿರಬಹುದು ಅಥವಾ ಬೇರೆ ಬೇರೆ ಆಕಾರದಲ್ಲಿರಬಹುದು. ಉದರದ ಕೊನೆಯಲ್ಲಿ ನೂಲುವ ಅಂಗಗಳಿರುವುದೇ ಇವುಗಳ ವಿಶೇಷ ಗುಣ.



ಜೇಡ

ಶಿರೋರ ಭಾಗದಲ್ಲಿ ಕುಡಿಮೀಸೆಗಳಿಲ್ಲ. ಒಟ್ಟು ಆರು ಜೊತೆ ಉಪಾಂಗಗಳಿವೆ. ಮೊದಲನೆಯ ಜೊಡಿ ಕೆಲಿಸೆರೆ. ಎರಡನೆಯದು ಪೆಡಿಪಾಲ್ಪ್. ಮೂರು, ನಾಲ್ಕು, ಐದು ಮತ್ತು ಆರನೇ ಜೊಡಿಗಳು ನಡೆಯುವ ಕಾಲುಗಳು. ಕೆಲಿಸೆರೆಯಲ್ಲಿ ಎರಡು ಕೀಲುಗಳಿವೆ. ಕೊನೆಯ ಕೀಲು ಕುಡುಗೋಲಿನಾಕಾರದ ಉಗುರನ್ನು ಹೊಂದಿದೆ. ಉಗುರಿನ ತುದಿಯಲ್ಲಿ ವಿಷಗ್ರಂಥಿಯ ನಾಳದ ಹೊರರಂಧ್ರವಿದೆ. ಆದುದರಿಂದ ಅರೇನೀಡಗಳು ಬೇಟೆಯನ್ನು ಹಿಡಿದಾಗ ಈ ಉಗುರಿನಿಂದ ಚುಚ್ಚಿ, ವಿಷವನ್ನು ಬೇಟೆಯ ಪ್ರಾಣಿಯ ಶರೀರದೊಳಕ್ಕೆ ಬಿಟ್ಟು ಅದನ್ನು ಕೊಲ್ಲುತ್ತದೆ ಅಥವಾ ನಿಶ್ಚೇತನಗೊಳಿಸುತ್ತದೆ. ಪೆಡಿಪಾಲ್ಪ್‌ಗಳಲ್ಲಿ ಕಾಕ್ಸ, ಟ್ರೊಕ್ಯಾಂಟರ್, ಫೀಮರ್, ಪಟೆಲ್ಲಾ, ಟಿಬಿಯ ಮತ್ತು ಟಾರ್ಸಸ್ ಎಂಬ ಆರು ಕೀಲುಗಳಿವೆ. ಗಂಡಿನಲ್ಲಿ, ಪೆಡಿಪಾಲ್ಪ್‌ನಲ್ಲಿರುವ ತುದಿಯು (ಟಾರ್ಸಸ್) ಪಾಲ್ಪಲ್ ಅಂಗವಾಗಿ ಮಾರ್ಪಾಡಾಗಿರುತ್ತದೆ. ಈ ಅಂಗವು ಸಂಭೋಗನಾಂಗವಾಗಿ ಉಪಯೋಗಿಸಲ್ಪಡುತ್ತದೆ. ಎಂಟು ಕಾಲುಗಳಲ್ಲೂ ಕಾಕ್ಸ, ಟ್ರೊಕ್ಯಾಂಟರ್, ಫೀಮರ್, ಪಟೆಲ್ಲಾ, ಟಿಬಿಯ, ಪ್ರೋಟಾರ್ಸಸ್ ಮತ್ತು ಟಾರ್ಸಸ್ ಎಂಬ ಏಳು ಕೀಲುಗಳಿವೆ. ಟಾರ್ಸಸ್‌ನಲ್ಲಿ ಎರಡು ಅಥವಾ ಮೂರು ಚೂಪಾದ ಉಗುರುಗಳಿವೆ. ನಾಲ್ಕನೇ ಕಾಲಿನ ಮೇಟಾಟಾರ್ಸಸ್‌ನಲ್ಲಿ ಕೆಲಾಮಿಸ್ಟ್ರಂ ಎಂಬ ಬಿರುಗೂದಲಿನ ಕುಂಚದಂತಿರುವ ರಚನೆಯಿದೆ.

ಉದರದ ಹಿಂಭಾಗದಲ್ಲಿ ನೂಲುವ ಅಂಗಗಳ ಒಂದು ಗುಂಪಿದೆ. ಇದರಲ್ಲಿ ಆರು ಅಥವಾ ಎಂಟು ಅಂಗಗಳಿವೆ – ಎರಡು ಮುಂದೆ, ಎರಡು ಮಧ್ಯೆ ಮತ್ತು ಎರಡು ಹಿಂದೆ. ಈ ಅಂಗಗಳು ಬದಲಾವಣೆಯಾಗಿರುವ ಉದರದ ಖಂಡದ ಉಪಾಂಗಗಳಿರಬಹುದು. ಪ್ರತಿಯೊಂದು ನೂಲಿನ ಅಂಗದಲ್ಲಿ ಎರಡು ಕೀಲುಗಳು ಮತ್ತು ತುದಿಯಲ್ಲಿ ಅನೇಕ ಸಣ್ಣರಂಧ್ರಗಳಿರುತ್ತವೆ. ಈ ರಂಧ್ರಗಳ ಮುಖಾಂತರ ಒಂದು ರೀತಿಯ ಅಂಟು ದ್ರವವು ಹೊರಬರುತ್ತದೆ. ಈ ದ್ರವವು ಗಾಳಿಯಲ್ಲಿ ಗಟ್ಟಿಯಾಗಿ ರೇಷ್ಮೆಯ ದಾರದಂತಾಗುತ್ತದೆ. ಉದರದೊಳಗಿರುವ ಅನೇಕ ರೀತಿಯ ನೂಲಿನ ಗ್ರಂಥಿಗಳಿಂದ ದ್ರವವು ಉತ್ಪತ್ತಿಯಾಗುತ್ತದೆ. ಕೆಲವು ಅರೇನೀಡಗಳಲ್ಲಿ ನೂಲುವ ಅಂಗಗಳ ಜೊತೆಗೆ ಅವುಗಳ ಮುಂಭಾಗದಲ್ಲಿ ರಂಧ್ರಗಳುಳ್ಳ ಕ್ರಿಬೆಲ್ಲಂ ಎಂಬ ದ್ವಿತಟ್ಟೆಯಿದೆ. ಇದರಿಂದಲೂ ಸಹ ರೇಷ್ಮೆದ್ರವವು ಹೊರಬರುತ್ತದೆ. ಇವು ಕಟ್ಟುವ ಬಲೆಗಳು ಹೆಚ್ಚು ಸಂಖ್ಯೆಯಲ್ಲಿರುವುದಲ್ಲದೆ, ವಿವಿಧ ರೀತಿಯಲ್ಲಿರುತ್ತವೆ. ಬಲೆಗಳಿಂದ ಬೇಟೆಗಳನ್ನು ಹಿಡಿಯುವುದಲ್ಲದೆ, ಶತ್ರುಗಳಿಂದಲೂ ರಕ್ಷಿಸಿಕೊಳ್ಳುತ್ತವೆ. ಕೆಲವು ಬಲೆಗಳನ್ನು ರಚಿಸುವುದಿಲ್ಲ.

ಅರೇನೀಡಗಳು ದ್ರವರೂಪದ ಆಹಾರವನ್ನು ಮಾತ್ರ ತೆಗೆದುಕೊಳ್ಳುತ್ತವೆ. ಬಾಯಿಯಿಂದ ನೀಳವಾದ ಅನ್ನನಾಳವು ಊರ್ಧ್ವಭಾಗದಲ್ಲಿ ಸಾಗಿ ದೊಡ್ಡ ಹೀರುವ ಹೊಟ್ಟೆಯನ್ನು ಪ್ರವೇಶಿಸುತ್ತದೆ. ಹೊಟ್ಟೆಯಿಂದ ನೀಳವಾದ ಕರುಳಿದೆ. ದೊಡ್ಡದಾದ ಯಕೃತ್ತಿದೆ. ಇದರ ನಾಳಗಳು ಕರುಳನ್ನು ಸೇರುತ್ತವೆ.

ಉಸಿರಾಡಲು ಎರಡು ಪುಸ್ತಕ ಪುಪ್ಪುಸ (ಬುಕ್ ಲಂಗ್) ಗಳಿವೆ. ಇವು ಉದರದ ಅಧೋಭಾಗದಲ್ಲಿ ಶ್ವಾಸರಂಧ್ರಗಳಿಂದ ತೆರೆಯಲ್ಪಟ್ಟಿವೆ. ಹೃದಯವು ಹೊಟ್ಟೆಯ ಮೇಲ್ಭಾಗದಲ್ಲಿದೆ. ಇದು ಪೆರಿಕಾರ್ಡಿಯಂನಿಂದ ಆವರಿಸಲ್ಪಟ್ಟಿದೆ. ಹೃದಯದಲ್ಲಿ ಮೂರು ಕೋಣೆಗಳಿವೆ. ಅಪಧಮನಿ ಮತ್ತು ಅಭಿದಮನಿ ರಕ್ತನಾಳಗಳಿವೆ. ಆದರೆ ಲೋಮನಾಳಗಳಿಲ್ಲ. ರಕ್ತವು ಬಣ್ಣರಹಿತವಾಗಿದೆ. ನರಮಂಡಲದಲ್ಲಿ ಒಂದೇ ಒಂದು ನರಗ್ರಂಥಿಯಿದೆ. ಇದು ಅನ್ನನಾಳದ ಮೇಲ್ಭಾಗದಲ್ಲಿದೆ. ಇಲ್ಲಿಂದ ಕೆಲಿಸೆರೆ ಮತ್ತು ಕಣ್ಣುಗಳಿಗೆ ನರಗಳು ಹೊರಡುತ್ತವೆ. ಅನ್ನನಾಳದ ಕೆಳಗೆ ನಕ್ಷತ್ರಾಕಾರದ ಇನ್ನೊಂದು ನರಗ್ರಂಥಿಯಿದೆ. ಇದು ಶರೀರದ ಇತರ ಭಾಗಗಳಿಗೆ ನರಗಳನ್ನು ಒದಗಿಸುತ್ತದೆ. ವಿಸರ್ಜನಾಂಗಗಳು ಕಾಕ್ಸಲ್ ಗ್ರಂಥಿಗಳು.

ಅರೇನೀಡಗಳು ಏಕಲಿಂಗ ಪ್ರಾಣಿಗಳು. ಗಂಡು ಹೆಣ್ಣಿಗಿಂತ ಗಾತ್ರದಲ್ಲಿ ಚಿಕ್ಕದಾಗಿರುತ್ತದೆ. ಜನನಾಂಗಗಳು ಯಕೃತ್ತಿನ ಕವಲುಗಳೊಳಗೆ ಸೇರಿಕೊಂಡಿರುತ್ತವೆ. ಗಂಡು ಮೊದಲು ವೀರ್ಯಾಣುವನ್ನು ಬಲೆಯ ಮೇಲೆ ಚೆಲ್ಲಿ, ನಂತರ ಪಾಲ್ಪಲ್ ಅಂಗದೊಳಕ್ಕೆ ಸೆಳೆದುಕೊಳ್ಳುತ್ತದೆ. ಸಂಭೋಗದ ಕಾಲದಲ್ಲಿ ಹೆಣ್ಣಿನ ಜನನೇಂದ್ರಿಯದೊಳಕ್ಕೆ ಪಾಲ್ಪಲ್ ಅಂಗವನ್ನು ತೂರಿಸಿ ವೀರ್ಯಾಣುವನ್ನು ವಿಸರ್ಜಿಸುತ್ತದೆ. ಸಂಭೋಗದ ನಂತರ ಗಂಡು ಹೆಣ್ಣಿನಿಂದ ಭಕ್ಷಿಸಲ್ಪಡುತ್ತದೆ. ಹೆಣ್ಣು ಮೊಟ್ಟೆಯಿಡುವಾಗ ತನ್ನ ಗೂಡನ್ನು ತಾನೇ ರಚಿಸಿ, ಅದರಲ್ಲಿ ಮೊಟ್ಟೆಯಿಟ್ಟು, ಮೊಟ್ಟೆಯೊಡೆದು ಮರಿ ಹೊರ ಬರುವತನಕ ರಕ್ಷಿಸುತ್ತಿರುತ್ತದೆ. ಇಲ್ಲಿ ರೂಪಪರಿವರ್ತನೆಯಿಲ್ಲ. (ಕೆ.ಪಿ.ಆರ್.)

**ಅರೇಟಿಡೆ:** ಚಿಟ್ಟೆಗಳ ಕುಲ. ಹುಲಿಪಟ್ಟೆ ಚಿಟ್ಟೆಗಳು (ಟೈಗರ್ ಮಾತ್ಸ್), ಪದಾತಿ ಚಿಟ್ಟೆಗಳು (ಫುಟ್‌ಮನ್ ಮಾತ್ಸ್) ಈ ಕುಲಕ್ಕೆ ಸೇರಿವೆ. ಇವು ಸಣ್ಣದರಿಂದ ಮಧ್ಯಮಗಾತ್ರದವರೆಗಿನ ಸ್ಥೂಲ ಶರೀರದುವು. ಎದ್ದು ಕಾಣುವ ಪ್ರಕಾಶಮಾನವಾದ ಚುಕ್ಕೆ ಅಥವಾ ಪಟ್ಟೆಗಳನ್ನು ಹೊಂದಿವೆ. ರೆಕ್ಕೆಗಳು ತಕ್ಕ ಮಟ್ಟಿಗೆ ಅಗಲವಾಗಿದ್ದು ಚಿಟ್ಟೆ ಕುಳಿತಾಗ ಮನೆಯ ಛಾವಣಿ ರೀತಿಯಲ್ಲಿ ಹೊಟ್ಟೆಯ ಮೇಲೆ ಕವುಚಿಕೊಳ್ಳುತ್ತದೆ. ಒಂದೆರಡು ಜಾತಿಗಳನ್ನು ಬಿಟ್ಟರೆ, ಸಾಮಾನ್ಯವಾಗಿ ಈ ಚಿಟ್ಟೆಗಳ ಹಾರಾಟ ರಾತ್ರಿಯ ಕಾಲದಲ್ಲಿ. ದೀಪದ ಬೆಳಕು ಇವನ್ನು ಆಕರ್ಷಿಸುತ್ತದೆ. ಪ್ರಪಂಚದ ಎಲ್ಲ ಭಾಗಗಳಲ್ಲಿದ್ದರೂ ಉಷ್ಣದೇಶಗಳಲ್ಲಿ ಇವುಗಳ ಸಂಖ್ಯೆ ಹೆಚ್ಚು. ಈ ಕುಲದ ಚಿಟ್ಟೆಗಳು ಹೆಚ್ಚಾಗಿ ನಾಕ್ಟುಯಿಡೆ ಕುಲದವನ್ನು ಹೋಲಿದರೂ ಇವುಗಳ ಹಿಂಭಾಗದ ರೆಕ್ಕೆಗಳಲ್ಲಿ ಕ್ಯುಬಿಟಸ್ ನರ ನಾಲ್ಕು ಕವಲಾಗಿದೆ. ನಾಕ್ಟುಯಿಡೆ ಕುಲದ ಚಿಟ್ಟೆಗಳ ಹಿಂದಿನ ರೆಕ್ಕೆಗಳಲ್ಲಿ ಕ್ಯುಬಿಟಸ್ ನರ ಮೂರು ಕವಲಾಗಿದೆ. ಕೆಲವು ಜಾತಿಯ ಆರ್ಕ್ಟೈಯಿಡ್ ಚಿಟ್ಟೆಗಳು ಶಬ್ದವನ್ನುಂಟುಮಾಡಬಲ್ಲುವು. ಚಿಟ್ಟೆಗಳ ಪ್ರಭೇದಗಳ ಸಂಖ್ಯೆ 3,500 ಕ್ಕಿಂತಲೂ ಹೆಚ್ಚು. ಮರಿಗಳ ಮೈಮೇಲೆ ತುಂಬ ಕೂದಲು ಇದೆ. ತೆಳ್ಳನೆಯ ಕೀಟಕೋಶದಲ್ಲಿ ಮರಿಗಳ ಕೆಲವು ಕೂದಲು ಕೋಶವಾಗುತ್ತವೆ. ಅರೇಟಿಡೆ ಕುಲದ ಉಪಕುಲಗಳು: 1 ಲಿಥೋಸಿನಿ; 2 ನಿಕ್ಟಿಯೋಲಿನಿ, 3 ಆರ್ಕ್ಟೈಯಿನಿ.

ಲಿಥೋಸಿನಿ ಉಪಕುಲಕ್ಕೆ ಸೇರಿದ ಪದಾತಿ ಚಿಟ್ಟೆಗಳು ಗಾತ್ರದಲ್ಲಿ ಸಣ್ಣ; ಶರೀರ ನೀಳವಾಗಿದ್ದು ಮಂಕು ಬಣ್ಣದ್ದಾಗಿದೆ. ಮುಂಬೆಳಕಿನಲ್ಲಿ ಮತ್ತು ಬೆಳಗಿನ ಕಾಲದಲ್ಲಿ ಈ ಚಿಟ್ಟೆಗಳು ಹಾರಾಡುತ್ತವೆ. ಮುಂದಿನ ರೆಕ್ಕೆಗಳು ಉದ್ದ ಮತ್ತು ನೀಳವಾಗಿವೆ. ಈ ಉಪಕುಲದ ಚಿಟ್ಟೆಯ ಮರಿಗಳಿಗೆ ಸರಳ ಕಣ್ಣು ಇಲ್ಲ. ಮೈಮೇಲೆ ಕೂದಲು ಕಡಿಮೆ. ಮರಗಳ ಮತ್ತು ಬಂಡೆಗಳ ಮೇಲೆ ಬೆಳೆಯುವ ಕಲ್ಲು ಹೂವುಗಳೇ (ಲೈಕೆನ್ಸ್) ಮರಿಗಳಿಗೆ ಆಹಾರ. ನಿಕ್ಟಿಯೋಲಿನಿ ಉಪಕುಲಕ್ಕೆ ಸೇರಿದ ಚಿಟ್ಟೆಗಳ ಬಣ್ಣ ಸಾಮಾನ್ಯವಾಗಿ ಹಸಿರು. ಇವುಗಳ ಮರಿಗಳ ಮೈಮೇಲೆ ಕೂದಲು ಬಲು ಕಡಿಮೆ. ಕೀಟಕೋಶಗಳು ದೋಣಿಯ ಆಕಾರವಾಗಿರುತ್ತವೆ. ಬೆಂಡೆಕಾಯಿಗೆ ಬೀಳುವ ಈರಿಯಸ್, ಫೇಬಿಯಾ ಮತ್ತು ಈರಿಯಾಸ್ ಇನ್ಸುಲಾನ ಎಂಬ ಚಿಟ್ಟೆಗಳು ಒಳ್ಳೆಯ ಉದಾಹರಣೆ. ಉಪಕುಲ ಆರ್ಕ್ಟೈಯಿನಿಗೆ ಸೇರಿದ ಚಿಟ್ಟೆಗಳು ಪ್ರಕಾಶಮಾನವಾದ ನಾನಾ ಮಾದರಿಯ ಬಣ್ಣದಿಂದ ಕೂಡಿವೆ. ಇವುಗಳನ್ನು ಹುಲಿಪಟ್ಟೆ ಚಿಟ್ಟೆಗಳೆಂದು ಕರೆಯಲು ಇದೇ ಕಾರಣ. ಮರಿಗಳಿಗೆ ಮೈತುಂಬ ಕೂದಲು. ಸರಳ ಕಣ್ಣುಗಳಿವೆ. ಈ ಚಿಟ್ಟೆಗಳ ಮರಿಗಳು ಮರಗಿಡಗಳ ಎಲೆಗಳನ್ನೂ ಬೆಳೆಗಳನ್ನೂ ತಿಂದು ಹಾಳುಮಾಡುತ್ತವೆ. ಪ್ರಪಂಚದ ನಾನಾ ಭಾಗಗಳಲ್ಲಿ ಕಂಡು ಬಂದಿರುವ ಯುಟಿಥೀಸಿಯ ಪಲ್‌ಚೆಲ್ಲಾ ಚಿಟ್ಟೆಯ ಮರಿ ಭಾರತದಲ್ಲಿ ಅಪಸೆಣಬು (ಸನ್‌ಹೆಂಪ್) ಗಿಡದ ಎಲೆಗಳನ್ನು ತಿಂದು ಹಾಳು ಮಾಡುತ್ತವೆ. ಇದರ ಮುಂದಿನ ರೆಕ್ಕೆಗಳು ಬೂದು ಬಿಳುಪಾಗಿದ್ದು ಸಣ್ಣ ಕಪ್ಪು ಮತ್ತು ಕೆಂಪು ಮಚ್ಚೆಗಳನ್ನು ಹೊಂದಿವೆ. ಹಿಂದಿನ ರೆಕ್ಕೆಗಳು ನೀಲಿ ಮಿಶ್ರವಾದ ಬಿಳುಪಾಗಿದ್ದು ಅಲ್ಲಲ್ಲಿ ದೊಡ್ಡ ಕಪ್ಪು ಮಚ್ಚೆಗಳಿವೆ. ಭಾರತದಲ್ಲಿ ಈ ಉಪಕುಲಕ್ಕೆ ಸೇರಿದ ಮತ್ತೆ ಕೆಲವು ಜಾತಿಯ ಚಿಟ್ಟೆಗಳು ಧಾನ್ಯದ ಬೆಳೆಗಳನ್ನೂ, ಎಣ್ಣೆ ಬೀಜಗಳ ಬೆಳೆಗಳನ್ನೂ ಹಾಳುಮಾಡುತ್ತವೆ. ಅಮ್‌ಸೆಕ್ಟ ಆಲ್ಬಿಸ್ಟ್ರೈಗಾ ಕಡಲೆಕಾಯಿ, ತೊಗರಿ, ಜೋಳ ಮುಂತಾದ ಬೆಳೆಗಳಿಗೂ, ಡೈಯಾಕ್ರಿಸಿಯಾ ಒಬ್ಲಿಕ್ವ ಮತ್ತು ಎಸ್ಟಿಗ್ಮೀನ್ ಲಾಕ್ಟೀನಿಯ ರಾಗಿ ಬೆಳೆಗೂ, ಪೆರಿಕೆಲಿಯಾ ರಿಸಿನ ಹರಳು ಮತ್ತು ಬಾಳೆಯ ಗಿಡಕ್ಕೂ ಅಂಟಿಕೊಂಡು ವಿಪರೀತ ಹಾನಿಯನ್ನುಂಟುಮಾಡುತ್ತವೆ. (ಟಿ.ಎಸ್.ಟಿ.)

**ಅರ್ಕಿಅನೆಲಿಡಾ:** ಅಕಶೇರುಕಗಳ ಅನೆಲಿಡಾ ವಂಶದ ಆದಿಮಗುಂಪು. ಸಮುದ್ರತೀರದಲ್ಲಿನ ಮಣ್ಣಿನಲ್ಲಿ ಬಿಲ ತೋಡಿಕೊಂಡು ವಾಸಮಾಡುತ್ತವೆ. ಆಹಾರ ಸಾರಜನಕಯುಕ್ತ ಮಣ್ಣು. ಹತ್ತು ಜಾತಿಯ 45 ಪ್ರಭೇದಗಳಿವೆ. ಅವುಗಳಲ್ಲಿ ಪಾಲಿಗಾರ್ಡಿಯಸ್,

ಪ್ರೊಟೋಡ್ರಿಲ್ಲಸ್, ನೆರಿಲ್ಲಾ, ಸಾಕ್ಕೊಸಿರ್ರಸ್, ಡೈನೊಫಿಲಸ್, ಡಿಟ್ರಿಡ್ರಿಲಸ್ ಮುಖ್ಯವಾದುವು. ರಚನೆ ಸರಳವಾಗಿದೆ. ಯುರೋಪ್, ಜಪಾನ್ ಮತ್ತು ಭಾರತದ ಪೂರ್ವಕಡಲಿನಲ್ಲಿ ವಾಸಿಸುತ್ತವೆ. ಪ್ರಸಾರ ವಿಚ್ಛಿನ್ನ. ದೇಹ ರಚನೆಯಲ್ಲಿ ವೈವಿದ್ಯ ಇದೆ. ಅನೆಲಿಡಾ ವಂಶದ ಜೀವ ಪ್ರಭೇದಗಳಿಗೂ ಮತ್ತು ಅರ್ಕಿಅನೆಲಿಡಾ ಉಪವಂಶ ಜೀವಿಗಳಿಗೂ ವಿವಿಧ ರಚನೆಯಲ್ಲಿ ಪರಿಗಣಿಸುವಂತಹ ವ್ಯತ್ಯಾಸವಿರುವುದರಿಂದ ಈ ಗುಂಪಿನ ಜೀವಿಗಳನ್ನು ವರ್ಗವಾಗಿ ಪರಿಗಣಿಸಲಾಗಿದೆ.

ಅರ್ಕಿಅನೆಲಿಡಾ ಪ್ರಾಣಿಗಳು ಬಹು ವಿರಳ. ಇವು ದಾರದಂತಹ ಹುಳುಗಳು. ಗಾತ್ರ ಚಿಕ್ಕದು. ಈ ಜೀವಿಗಳ ವಿಕಾಸದಿಂದಾಗಿ ಅನೆಲಿಡಾದ ವಿವಿಧ ವರ್ಗಗಳಾಗಿರಬೇಕೆಂದು ಅನೇಕರ ವಾದ. ಆದರೆ ಅನೆಲಿಡಾಕ್ಕೆ ಮೂಲ ಜೀವಿಗಳಾಗಲಾರವು. ಅನೆಲಿಡಾದ ವಿವಿಧ ವರ್ಗಗಳಂತೆ ಇವೂ ಸಹ ವಿಕಾಸಹೊಂದಿದ ಉಗಮಿಗಳು, ಕಾಲಕಳೆದಂತೆ ಇವುಗಳಲ್ಲಿನ ಕ್ಲಿಷ್ಟ ರಚನಾಕ್ರಮ ಅವನತಿ ಹೊಂದಿ ಈ ಸರಳತೆಯನ್ನು ಪಡೆದಿವೆ ಎಂಬ ವಾದ ಈಗ ಪ್ರಚಲಿತವಾಗಿದೆ. ಬೆಳವಣಿಗೆ ಹಂತದಲ್ಲಿ ಲಾರ್ವ ಟ್ರೊಕೋಫೊರ್‌ನ್ನು ಬಹಳವಾಗಿ ಹೋಲುವುದು ಇದಕ್ಕೆ ಮುಖ್ಯಕಾರಣ.

ಕೆಲವು ಹುಳುಗಳು 3–10 ಸೆಂಮೀ ಉದ್ದವಿರುತ್ತವೆ. ಇಡೀ ದೇಹವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಬಾಹ್ಯದಲ್ಲಿ ಖಂಡಗಳು ಮಸಕಾಗಿರುವುವು ಅಥವಾ ಇರುವುದಿಲ್ಲ. ಕೆಲವು ಪ್ರಭೇದದ ಹುಳುಗಳಲ್ಲಿ ದೇಹದ ಮುಂಭಾಗ ಖಂಡಗಳು ಕಾಣಿಸದು. ಹಿಂಭಾಗ ಮಾತ್ರ ಮಸಕಾಗಿ ಕಾಣುವುವು. ಇನ್ನು ಕೆಲವದರಲ್ಲಿ ದೇಹದುದ್ದಕ್ಕೆ ಖಂಡಗಳ ಗುರುತಿರುವ ಸ್ಥಳದಲ್ಲಿ ವರ್ತುಲಾಕಾರವಾಗಿ ಶಿಲಕೆಗಳಿರುತ್ತವೆ. ದೇಹದ ಮುಂಭಾಗ ಒಂದು ಪ್ರೊಸ್ಟೊಮಿಯಂ, ಅದಕ್ಕೆ ಲಗತ್ತಾಗಿ ಒಂದು ಜೊತೆ ಸಂವೇದನೀಕೋಡುಗಳು (ಟೆಂಟಕಲ್), ದೇಹದ ಹಿಂಭಾಗದ ತುದಿಯಲ್ಲಿ ಅಸನ ದ್ವಾರ, ಸುತ್ತಲೂ ಜಿಗುಟಿನ ತೊಟ್ಟು ಮತ್ತು ವೃತ್ತಾಕಾರವಾಗಿ ದೇಹಕ್ಕೆ ಅಂಟಿದಂತಿರುವ ಮೊನಚಾದ ರಚನೆ ಇವೆ. ದೇಹದ ಬಾಹ್ಯದಲ್ಲಿನ ಹೊರಪೊರೆ ಶಿಲಕೆಗಳನ್ನು ಅಡಕಗೊಂಡಿದೆ.

ಇವುಗಳಲ್ಲಿ ದೇಹದ ಗೋಡೆಯಲ್ಲಿ ಆವೃತ್ತ ಸ್ನಾಯುಗಳು ಇಲ್ಲದಿರುವುದು ಮುಖ್ಯ ಗುಣ, ಬಾಯಂಗಳವನ್ನು ಹೊರ ಚಾಚುವ ಶಕ್ತಿಯನ್ನು ಪಡೆದಿವೆ. ದೇಹದಲ್ಲಿನ ದೇಹಾಂತರಾವಕಾಶ ಅಖಂಡವಾಗಿರದೆ ಅಡ್ಡಪೊರೆಯಿಂದ ವಿಭಾಗವಾಗಿದೆ. ದೇಹಾಂತರಾವಕಾಶ ಅಂತಸ್ಥಿತ. ಅದರೂ ಇವುಗಳನ್ನು ಸಮಾನಸಿಯ ವಲಯ ತಂತುಗಳೆಂದೇ ಪರಿಗಣಿಸಿದ್ದಾರೆ. ಈ ಅಂತಸ್ಥಿತ ದೇಹಾಂತರಾವಕಾಶ ಪ್ರತಿ ಖಂಡದಲ್ಲಿ ಮೇಲ್ ಪೊರೆ ಮತ್ತು ಕೆಳ ಪೊರೆ (ಜೀರ್ಣನಾಳದ ಮೇಲ್ ಭಾಗದಲ್ಲಿ ಕೆಳಭಾಗದಲ್ಲಿ) ಇರುವುದರಿಂದ ಎಡ ಮತ್ತು ಬಲ ಅವಕಾಶಗಳಾಗಿವೆ. ರಕ್ತ ಪರಿಚಲವ್ಯೂಹವು ಅಡ್ಡ ರಕ್ತನಾಳಗಳಿಂದಾಗಿದೆ, ರಕ್ತವು ಕೆಂಪು, ಹಳದಿ, ಮತ್ತು ಹಸಿರು ಬಣ್ಣದಿಂದ ಕೂಡಿದೆ. ಕೆಲವು ಪ್ರಭೇದಗಳಲ್ಲಿ ವರ್ಣರಹಿತವಾಗಿದೆ. ನರವ್ಯೂಹ ಪ್ರೊಸ್ಟೊಮಿಯಂನಲ್ಲಿರುವ ನರಗಂಟು, ಇದರಿಂದ ಹೊರ ಬಂದ ನರ ಹುರಿ ಕೆಲವಲ್ಲಿ ಒಂದು: ಉದಾ: ಪಾಲಿಗಾರ್ಡಿಯಸ್ ಇನ್ನು ಕೆಲವಲ್ಲಿ ಎರಡು ಉದಾ: ಪ್ರೊಟೋಡ್ರಿಲ್ಲಸ್ ಒಳಗೊಂಡಿದೆ. ನರಹುರಿ ಖಂಡಾಂತರ ನರ ಗಂಟುಗಳನ್ನು ಹೊಂದಿಲ್ಲದಿರುವುದೂ ವಿಶೇಷ ಗುಣ. ನರಹುರಿ ಹೊರಚರ್ಮ ಪೊರೆಯಲ್ಲಿದೆ. ಪ್ರತಿ ಖಂಡಗಳಲ್ಲಿ ಒಂದೊಂದು ಜೊತೆ ವಿಸರ್ಜನಾ ನಾಳಗಳಿವೆ. ದೇಹಾಂತಾರವಕಾಶದಲ್ಲಿ ಉತ್ಪತ್ತಿ ಅಂಗಗಳು ಇವೆ. ಇವುಗಳಿಗೆ ನಳಿಕೆಗಳಿಲ್ಲದಿರುವುದರಿಂದ ಉತ್ಪತ್ತಿ ಜೀವಕೋಶಗಳು ದೇಹದ ಗೋಡೆಯನ್ನು ಒಡೆದು ಹೊರಬರುವುವು. ಇವುಗಳಲ್ಲಿ ಕೆಲವು ಏಕಲಿಂಗಗಳು ಇನ್ನು ಕೆಲವು ದ್ವಿಲಿಂಗಿಗಳು. ಬೆಳವಣಿಗೆ ಹಂತದಲ್ಲಿ ಲೋವೆಸ್ ಲಾರ್ವವಿದೆ. ಇದು ಟ್ರೊಕೊಫೋರ್ ಹಂತವನ್ನು ಎಲ್ಲಾ ವಿಧದಲ್ಲಿಯೂ ಹೋಲುತ್ತದೆ. ಈ ಗುಂಪಿನ ಜೀವಿಗಳಲ್ಲಿ ಖಿಟೋಪೊಡ ಗುಂಪಿನಲ್ಲಿ ಕಾಣುವ ಬಿರುಗೂದಲುಗಳಾಗಲಿ ಅಥವಾ ಪಾರ್ಶ್ವ ಪಾದಗಳಾಗಲಿ ಇಲ್ಲ.

ಪಾಲಿಗಾರ್ಡಿಯಸ್: ಮೆಡಟರೇನಿಯನ್ ಸಮುದ್ರದ ದಡಗಳಲ್ಲಿ ವಾಸಿಸುತ್ತವೆ. ದೇಹದ ವಲಯಗಳ ಅಸ್ಪಷ್ಟತೆ ಬಾಹ್ಯದಲ್ಲಿ ಮಾತ್ರ. ದೇಹದ ಮುಂಭಾಗದಲ್ಲಿ ಒಂದು ಪ್ರೊಸ್ಟೊಮಿಯಂ, ಒಂದು ಜೊತೆ ಕೋಡುಗಳು, ದೇಹದ ಹೊರಗೋಡೆಯಲ್ಲಿ ಪಾರದರ್ಶಕ ಕೂಟಿಕಲ್ ಇವೆ. ವರ್ತುಲಸ್ನಾಯುವಿಲ್ಲ. ದೇಹಾಂತರಾವಕಾಶ ಅಡ್ಡಪೊರೆಯಿಂದಾಗಿ ಆಂತರ್ಯಖಂಡಗಳನ್ನು ಸೂಚಿಸುವುದು. ನರ ಮಂಡಲದಲ್ಲಿ ಒಂದು ನರಹುರಿ ಇದೆ. ಬೆಳವಣಿಗೆ ಹಂತದಲ್ಲಿ ಲೊವೆನ್ಸ್ ಲಾರ್ವವಿದೆ.

ಪ್ರೊಟೋಡ್ರಿಲಸ್: ಪಾರೊ ಹತ್ತಿರವಿರುವ ಲೊಸ್ಸುಯಿನಿ ಸಮುದ್ರದಡದಲ್ಲಿ ಕಾಣಸಿಗುತ್ತವೆ. 3 ರಿಂದ 5 ಸೆಂಮಿ ಉದ್ದ ಬೆಳೆಯುತ್ತವೆ. ಪ್ರೊಸ್ಟೊಮಿಯಂ (ಒಂದು ಜೊತೆ) ಕೋಡುಗಳು ಉದ್ದವಾಗಿವೆ. ದೇಹದ ಖಂಡ ಅಸ್ಪಷ್ಟ. ಆದರೆ, ಶಿಲಕೆಗಳು ದೇಹದುದ್ದಕ್ಕು ಗಿಣ್ಣುಗಳಂತೆ ಆವರಿಸಿವೆ. ನರಹುರಿ ಒಂದು ಜೊತೆ. ಉತ್ಪತ್ತಿ ಅಂಗಗಳು ದೇಹದ ಮುಂಭಾಗದ ಕೆಲವು ಖಂಡಗಳಲ್ಲಿ ಅಂಡಾಶಯಗಳನ್ನು ಅವುಗಳ ಹಿಂಭಾಗದಲ್ಲಿ ಖಂಡಗಳ ಬೀಜಾಶಯಗಳನ್ನು ಹೊಂದಿರುವುದರಿಂದ ಇವು ದ್ವಿಲಿಂಗಿಗಳು, ಲಾರ್ವ ಅವಸ್ಥೆ ಇಲ್ಲ.

ಡೈನೋಫಿಲಸ್: ದೇಹ ಚಪ್ಪಟೆಯಾಗಿದ್ದು, 5 ರಿಂದ 8 ಖಂಡಗಳಿವೆ. ದೇಹದ ತುದಿಯಲ್ಲಿ ಪ್ರೊಸ್ಟೊಮಿಯಾ, ಇದಕ್ಕೆ ಹೊಂದಿಕೊಂಡು ಒಂದು ಜೊತೆ ಕಣ್ಣು, ಪ್ರತಿ ಖಂಡಗಳಲ್ಲಿ ಒಂದು ಜೊತೆ ವೃತ್ತಾಕಾರವಾಗಿ ಶಿಲಕೆಗಳಿವೆ. ಆಸನದ ಹಿಂಭಾಗದಲ್ಲಿ ಚಿಕ್ಕ ಬಾಲದಂತಹ ರಚನೆ ಇದೆ. ಇವು ಎರಡು ಬಗೆಯ ತತ್ತಿಗಳನ್ನು ಇಡುತ್ತವೆ, ದೊಡ್ಡ ತತ್ತಿಗಳು ಹೆಣ್ಣು ಹುಳವಾಗಿ, ಸಣ್ಣ ತತ್ತಿಗಳು ಗಂಡು ಹುಳವಾಗಿ ಬೆಳೆಯುವುವು. ಇವು ಏಕಲಿಂಗಿಗಳು.

ಸಾಕ್ಕೂಸಿರ್ರಸ್: ಇವು ಒಂದು ಸೆಂಮೀ. ಉದ್ದ ಇವೆ. ಇವುಗಳಲ್ಲಿ ಬಿರುಗೂದಲು ಇರುತ್ತವೆ ನರಹುರಿ ಎರಡು ಇದ್ದು, ಒಂದಕ್ಕೊಂದು ಬಹಳ ದೂರದಲ್ಲಿವೆ. ಆಸನದ ಹತ್ತಿರ ಅಂಟು ತೊಟ್ಟು ಇರುತ್ತದೆ. ಇವು ಚನ್ನೈನ ಕಡಲಿನಲ್ಲಿ ವಾಸಿಸುತ್ತವೆ.

ಹಿಸ್ಟ್ರಿಕ್ರಿಲಸ್: ಇವು ಪರತಂತ್ರ ಜೀವಿಗಳು. ಲಾಬ್‌ಸ್ಟಾರ್ ತತ್ತಿಗಳಲ್ಲಿ ವಾಸ. ಕೊನೆಯ ಖಂಡದಲ್ಲಿ ಮಾತ್ರ ಬಿರುಗೂದಲು ಇವೆ. ಏಕ ಲಿಂಗಿಗಳು. ತಜ್ಞರು ಇವುಗಳನ್ನು ಹಿರುಡೀಸಿಯ ಗುಂಪಿಗೆ ಸೇರಿಸಿದ್ದಾರೆ. (ಜಿ.ಎಂ.ಬಿ.)

**ಅರ್ಬೇಸಿಯ:** ಕಂಟಕಚರ್ಮಿ (ಎಕೈನೊಡರ್ಮಾಟ) ವಂಶದ ಎಕೈನಾಯ್ಡಿಯ ವರ್ಗದ ಸಮುದ್ರ ಪ್ರಾಣಿ. ಎಕಿನಸ್ ಜೊತೆ ಸೇರಿಸಿ ಸಮುದ್ರ ಅರ್ಚಿನ್ ಎಂದೂ ಕರೆಯಲಾಗುತ್ತದೆ. ಇದು ಚಿಕ್ಕದಾದ ಗೋಳಾಕಾರ ಅಥವಾ ಅರ್ಧಶಂಕುವಿನಾಕೃತಿಯ ಚಿಪ್ಪು ಹೊಂದಿದ ಪ್ರಾಣಿ. ಅರ್ಬೇಸಿಯ ಪಂಕ್ಚುಲೇಟ ಕೆನ್ನೀಲಿ ಅಥವಾ ಕೆಂಪು ಮಿಶ್ರಿತ ಕಂದುವರ್ಣದ್ದಿರುವುದರಿಂದ ಕೆನ್ನೀಲಿ ಅರ್ಚಿನ್ ಎಂದು ಕರೆಯಲಾಗುತ್ತದೆ. ಕೇಪ್ ಕಾಡ್ ನಿಂದ ದಕ್ಷಿಣ ಮೆಡಿಟರೇನಿಯನ್ ಸಮುದ್ರಗಳಲ್ಲಿ ಕಾಣಬಹುದು. ಇದರ ಚಿಪ್ಪು 3 ರಿಂದ 5 ಸೆಂಮೀ. ವ್ಯಾಸವುಳ್ಳದ್ದಾಗಿದ್ದು 15 ರಿಂದ 25 ಮಿಮೀ. ಎತ್ತರವಿರುತ್ತದೆ. ಈ ಪ್ರಾಣಿಯ ಮೈಮೇಲೆ 15 ಮಿಮೀ. ಉದ್ದದ ಮುಳ್ಳುಗಳಿವೆ. ಸತ್ತ ಅನಂತರ ಈ ಮುಳ್ಳುಗಳಿಂದಾಗಿ ಹೊರಚರ್ಮ ಕ್ಷಯಿಸುತ್ತದೆ. ಹೀಗಾಗಿ ಅಸ್ಥಿಪಂಜರವನ್ನು ಸಂಪೂರ್ಣ ಸ್ಥಿತಿಯಲ್ಲಿ ತೆಗೆಯುವುದು ಕಷ್ಟ. ಆಂಬುಲಾಕ್ರಾದ ತಟ್ಟೆಗಳು ಸಾಮಾನ್ಯವಾಗಿ ಅರ್ಬೇಸಿಯ ಮಾದರಿಯಲ್ಲಿದ್ದು ಪೆರಿಪ್ರಾಕ್ಟ 4 ಅಥವಾ 5 ಅರ್ಧ ಸಮತಟ್ಟೆಗಳನ್ನು ಹೊಂದಿರುತ್ತದೆ. ಪಾದಿಗಳು ಹೀರುತಟ್ಟೆಗಳನ್ನು ಹೊಂದಿರುವುದಿಲ್ಲ. ಆಕ್ಯುಲಾದ ತಟ್ಟೆಗಳು ದ್ವಿರಂಧ್ರವನ್ನು ಹೊಂದಿರುತ್ತವೆ.

ಈ ಪ್ರಾಣಿಯನ್ನು ಆಹಾರವಾಗಿಯೂ ಉಪಯೋಗಿಸಲಾಗುತ್ತದೆ. ಇದರ ಮಾಂಸ ರುಚಿಕರ ಎನ್ನಲಾಗಿದೆ. (ಎಸ್.ಎನ್.ಎಚ್.)

**ಅಲಕಪಾದಿಗಳು:** ಆರ್ತ್ರೋಪೊಡ (ಸಂಧಿಪದಿಗಳು) ವಂಶದ ಕ್ರಸ್ಟೇಷಿಯ ವರ್ಗದ ಒಂದು ಉಪವರ್ಗ (ಕುರುಳುಪಾದಿಗಳು). ಬಾರ್ನಕಲ್ಸ್ (ಚಿಪ್ಪುಳ್ಳ ಪ್ರಾಣಿಗಳು), ಸಿರ್ರಿಪೀಡಿಯ ಎಂದೂ ಕರೆಯುತ್ತಾರೆ. ಇವು ಸಾಮಾನ್ಯವಾಗಿ ಸಮುದ್ರದಲ್ಲಿ ತೇಲುವ ಮರದ ದಿಮ್ಮಿಗಳಿಗೂ ಹಡಗಿನ ತಳಕ್ಕೂ ಅಂಟಿಕೊಂಡು ಬದುಕುತ್ತವೆ. ಬಾರ್ನಕಲ್‌ಗಳ ಪ್ರಭೇದಗಳಲ್ಲಿ ಸಾಮಾನ್ಯವಾಗಿ ಹಡಗುಗಳಿಗೆ ಅಂಟಿಕೊಂಡಿರುವ ಪ್ರಾಣಿಗೆ ಲೆಪಾಸ್ ಎಂದು ಹೆಸರು; ಇನ್ನೊಂದು ಹೆಸರು ಬಾತುಕೋಳಿ ಬಾರ್ನಕಲ್ (ಗೂಸ್ ಬಾರ್ನಕಲ್). ಇದು ಕ್ರಸ್ಟೇಷಿಯ ವರ್ಗದ ಯಾವ ಪ್ರಾಣಿಯನ್ನೂ ಹೋಲುವುದಿಲ್ಲ. ಉದ್ದವಾದ ಮಾಂಸಖಂಡಗಳ ತೊಟ್ಟಿನಿಂದ ಮರಕ್ಕೆ ಅಂಟಿ ಕೊಂಡಿರುತ್ತದೆ. ತೊಟ್ಟಿನ ತುದಿಯಲ್ಲಿ ಒಂದರೊಡನೊಂದು ಬೆಸುಗೆ ಹಾಕಿದಂತೆ ಸೇರಿರುವ ಕಠಿಣವಾದ ಐದು ತಟ್ಟೆಗಳ ಚಿಪ್ಪು ಇದೆ. ಚಿಪ್ಪಿನ ಒಂದು ತುದಿಯಲ್ಲಿ ಸೀಳಿನಂತಿರುವ ಒಂದು ರಂಧ್ರವಿದೆ. ಪ್ರಾಣಿ ರಂಧ್ರದ




1. ಪಾರ್ಶ್ವದ ಚಿಪ್ಪು (ಸ್ಕೂಟಮ್)
2. (ಪಾರ್ಶ್ವದ ಚಿಪ್ಪು (ಟರ್ಗಮ್)
3. ಮಧ್ಯದ ಬೆನ್ನು ಚಿಪ್ಪು (ಕೆರೈನ)
4. ಸ್ಪರ್ಶಾಂಗ (ಆಂಟನ್ಯೂಲ್)

ಲಿಪಾಸ್ ಲಾರ್ವ

ಮೂಲಕ ಸುರುಳಿಯಂತಿರುವ ತನ್ನ ಆರು ಜೊತೆ ಕುರುಳು ಕಾಲುಗಳನ್ನು ಬೇಕೆಂದಾಗ ಹೊರಚಾಚಬಲ್ಲದು, ಒಳಗೆ ಎಳೆದುಕೊಳ್ಳಬಲ್ಲದು. ಈ ಕಾಲುಗಳು ಅತ್ಯಂತ ಕಠಿಣವಾದ ಮತ್ತು ಒಂದರೊಡನೊಂದು ಭದ್ರವಾಗಿ ಹೆಣೆದುಕೊಂಡಿರುವ ರೋಮಗಳಂತಿರುವ ರಚನೆಗಳನ್ನು ಹೊಂದಿವೆ. ಲೆಪಾಸ್ ಪ್ರಾಣಿ ಅದರ ಕಾಲುಗಳನ್ನು ಹೊರಚಾಚಿ ಪೂರ್ಣವಾಗಿ ಬಿಡಿಸಿದಾಗ ಈ ರೋಮಗಳಂಥ ರಚನೆಗಳು ಒಂದು ರೀತಿಯ ಬಲೆಯಂತೆ ಕಾಣುತ್ತವೆ. ಇದರ ಸಹಾಯದಿಂದ ಅದು ನೀರನ್ನು ಶೋಧಿಸಿ ಅದರೊಳಗಿರುವ ಸೂಕ್ಷ್ಮಜೀವಿಗಳನ್ನು ಹಿಡಿದು ಆಹಾರವಾಗಿ ಸೇವಿಸುತ್ತದೆ; ಹಿಡಿದ ಮೇಲೆ ಕಾಲುಗಳನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುತ್ತದೆ. ಲೆಪಾಸ್ ಅಂಟಿಕೊಂಡಿರುವ ತೊಟ್ಟು ಮುಂದಲೆ, ಬಲು ಉದ್ದವಾಗಿದೆ. ಒಂದು ಜೊತೆ ಕುಡಿಮೀಸೆಗಳು ಈ ತೊಟ್ಟು ಉತ್ಪತ್ತಿ ಮಾಡುವ ಅಂಟಾದ ವಸ್ತುವಿನೊಳಗೆ ಅಡಗಿದೆ. ಹಕ್ಸ್‌ಲೆ ಈ ಪ್ರಾಣಿಯನ್ನು ತಲೆಯ ಮೇಲೆ ನಿಂತು ಕಾಲಿನಿಂದ ಆಹಾರವನ್ನು ಬಾಯಿಗೆ ಬೀಳುವಂತೆ ಒದೆಯುವ ಪ್ರಾಣಿ ಎಂದಿದ್ದಾನೆ. ಬಲಾನಸ್ ಅಲಕಪಾದಿಗಳ ಗುಂಪಿಗೆ ಸೇರಿದ ಮತ್ತೊಂದು ಪ್ರಾಣಿ. ರಚನೆಯಲ್ಲಿ ಲೆಪಾಸನ್ನೇ ಹೋಲುತ್ತದೆ. ಆದರೆ ಇದಕ್ಕೆ ಲೆಪಾಸ್‌ನಂತೆ ಉದ್ದವಾದ ತೊಟ್ಟು ಇಲ್ಲ. ಈ ಪ್ರಾಣಿ ತ್ರಿಕೋಣಾಕಾರದ, ಗಟ್ಟಿ ಪದಾರ್ಥಕ್ಕೆ ಅಂಟಿಕೊಂಡಿರುವ ಗಟ್ಟಿಯಾದ ಚಿಪ್ಪಿನೊಳಗಿರುತ್ತದೆ. ಚಿಪ್ಪಿನ ಮೇಲುಭಾಗದಲ್ಲಿ ಒಂದು ದೊಡ್ಡ ರಂಧ್ರವಿದೆ. ಇದನ್ನು ಬಾಗಿಲುಗಳಂಥ ಕವಾಟವುಳ್ಳ ಒಂದು ಜೊತೆ ಚಿಪ್ಪುಗಳು ಮುಚ್ಚಿಕೊಂಡಿವೆ. ಚಿಪ್ಪುಗಳ ರಂಧ್ರದ ಮೂಲಕ ಪ್ರಾಣಿ ತನ್ನ ಪಾದಗಳನ್ನು ಹೊರಚಾಚಬಲ್ಲುದು.



ನಾಪ್ಲಿಯಸ್ ಲಾರ್ವ

ವರ್ಗೀಕರಣ ಶಾಸ್ತ್ರಜ್ಞರು ಬಾರ್ನಕಲ್ ಪ್ರಾಣಿಗಳನ್ನು ಮೃದ್ವಂಗಿಗಳ ವಂಶಕ್ಕೆ ಮೊದಲು ಸೇರಿಸಿದ್ದರು. ಕಾರಣ, ಮೃದ್ವಂಗಿಗಳ ಶರೀರದ ಮೇಲೆಯೂ ಬಾರ್ನಕಲ್ ಪ್ರಾಣಿಗಳಿಗಿರುವಂತೆಯೇ ಚಿಪ್ಪಿದೆ. ಜೆ. ವಿ. ಥಾಮ್‌ಸನ್ ಎಂಬ ನೌಕಾಪಡೆಯ ವೈದ್ಯ ಈ ಬಾರ್ನಕಲ್ ಪ್ರಾಣಿಗಳಿಂದ ಹುಟ್ಟಿಬಂದ ಲಾರ್ವಾ ಜೀವಿಗಳನ್ನು ಕಾರ್ಕ್ ಎಂಬಲ್ಲಿ ಕಂಡುಹಿಡಿದ (1830). ಈ ಲಾರ್ವಾ ಜೀವಿಗಳು ಕ್ರಸ್ಟೇಷಿಯ ವರ್ಗದ ಲಾರ್ವ ಜೀವಿಗಳನ್ನು ಹೋಲುತ್ತಿದ್ದವು. ಆದ್ದರಿಂದ ಕುತೂಹಲಗೊಂಡ ಆ ವೈದ್ಯ ಬಾರ್ನಕಲ್ ಜೀವಿಯ ಮೊಟ್ಟೆಗಳನ್ನು ಭ್ರೂಣ ಬೆಳವಣಿಗೆಯ ಪ್ರಥಮ ಹಂತದಲ್ಲಿ ಪರೀಶೀಲಿಸಿದ. ಈ ಎರಡು ರೀತಿಯ ಮೊಟ್ಟೆಗಳಿಂದಲೂ ಒಂದೇ ರೀತಿ ಇರುವ ಲಾರ್ವಾ ಜೀವಿಗಳು ಹೊರಬಂದುವು. ಇವುಗಳನ್ನು ನಾಪ್ಲಿಯಸ್ ಲಾರ್ವಾಗಳೆನ್ನುತ್ತಾರೆ. ಬಾರ್ನಕಲ್‌ನ ನಾಪ್ಲಿಯಸ್ ಲಾರ್ವಾಗಳಿಗೂ ಕ್ರಸ್ಟೇಷಿಯದ ನಾಪ್ಲಿಯಸ್ ಲಾರ್ವಾಗಳಿಗೂ ಕೇವಲ ಕೆಲವೇ ಸೂಕ್ಷ್ಮ ರಚನೆಗಳಲ್ಲಿ ಭಿನ್ನತೆಯಿದೆ. ನಾಪ್ಲಿಯಸ್ ಲಾರ್ವಾ ನೀರಿನಲ್ಲಿ ಈಸಿ ಬೆಳೆದು ಮುಂದೆ ಸೈಪ್ರಿಸ್ ಎಂಬ ಮತ್ತೊಂದು ರೀತಿಯ ಲಾರ್ವ ಜೀವಿಯಾಗಿ ಪರಿವರ್ತನೆಗೊಳ್ಳುತ್ತದೆ. ಈ ಸೈಪ್ರಿಸ್ ಸಂಧಿಪದಿಗಳ ಆಸ್ಟ್ರಕೋಡ ಗುಂಪಿನ ಲಾರ್ವಾ ಜೀವಿಗಳನ್ನು ಹೋಲುತ್ತದೆ. ಈ ಲಾರ್ವ ತನ್ನ ಶರೀರವನ್ನು ಎರಡು ಚಿಪ್ಪುಗಳಿಂದ ಮುಚ್ಚಿಕೊಂಡಿರುತ್ತದೆ. ಶರೀರದ ಮುಂಭಾಗದಲ್ಲಿ ಒಂದು ಜೊತೆ ವಿಚಿತ್ರ ರೀತಿಯ ಕುಡಿಮೀಸೆಗಳಿರುತ್ತವೆ. ಈ ಜೀವಿಗೆ ಆರು ಜೊತೆ ಪಾದಗಳಿರುತ್ತವೆ. ಅದರ ಕುಡಿಮೀಸೆಗಳಲ್ಲಿ ಅಂಟುಸಿಂಬಿಗಳಿದ್ದು ಸಕಾಲದಲ್ಲಿ ಯಾವುದಾದರೊಂದು ಗಟ್ಟಿ ಪದಾರ್ಥಕ್ಕೆ ಅಂಟಿಕೊಳ್ಳಲು ಸಹಾಯ ಮಾಡುತ್ತವೆ. ಸಂಪೂರ್ಣವಾಗಿ ಅಂಟಿಕೊಂಡ ಮೇಲೆ ಅದರ ಶರೀರದ ಎರಡು ಚಿಪ್ಪುಗಳನ್ನು ವಿಸರ್ಜಿಸಿ ಮುಂದೆ ವಯಸ್ಕ ಜೀವಿಗಳಲ್ಲಿರುವ ರಚನೆಯನ್ನು ಪಡೆಯುತ್ತದೆ.

ಬಾರ್ನಕಲ್ ಪ್ರಾಣಿ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ದಂತಕಥೆಗಳು ಪ್ರಚಾರದಲ್ಲಿವೆ. ಕೆಲವರು ಇವೇ ಹೇಗೆ ಬದಲಾಗಿ ಮುಂದೆ ಸಮುದ್ರದ ಬಾತುಕೋಳಿಯಾದುವೆಂದು ಕಥೆಯ ರೂಪದಲ್ಲಿ ಹೇಳುತ್ತಾರೆ. ಇವೆಲ್ಲ ಕಾಲ್ಪನಿಕ ಕಥೆಗಳು. ಬಾತುಕೋಳಿಗೂ ಬಾರ್ನಕಲ್ ಪ್ರಾಣಿಗಳಿಗೂ ಯಾವ ಸಂಬಂಧವೂ ಇಲ್ಲ. ಚಳಿಗಾಲದಲ್ಲಿ ಬಾರ್ನಕಲ್ ಸಮುದ್ರ ತೀರಗಳಿಗೆ ಪ್ರವಾಸ ಬರುತ್ತದೆ.

ಅಲಕಪಾದಿಗಳ ವಿಭಾಗದಲ್ಲಿ ಆಶ್ಚರ್ಯಕರವಾದ ಪರತಂತ್ರಜೀವಿಗಳೂ ಇವೆ. ಇವುಗಳಿಗೂ ಬಾರ್ನಕಲ್ ಪ್ರಾಣಿಗಳಿಗೂ ಮತ್ತಿತರ ಸಂಧಿಪದಿಗಳಿಗೂ ಬಾಹ್ಯವಾಗಿ ಯಾವ ರೀತಿಯಲ್ಲಿಯೂ ಹೋಲಿಕೆ ಇಲ್ಲ. ಕೆಲವು ಏಡಿಗಳಲ್ಲಿ, ಅವುಗಳ ಉದರದ ತಳಭಾಗದಲ್ಲಿ ಒಂದು ರೀತಿಯ ಮಾಂಸದ ಮುದ್ದೆಯಂತಿರುವ ಮೃದುವಾದ ಗಡ್ಡೆಯನ್ನು ಕಾಣಬಹುದು. ಈ ಗಡ್ಡೆ ತನ್ನ ನೈಜರೂಪವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ಒಂದು ಅಲಕಪಾದಿ. ಇದೊಂದು ಪರತಂತ್ರಜೀವಿ. ಇದರ ಹೆಸರು ಸಾಕ್ಯುಲೈನ. ಗಡ್ಡೆ ಏಡಿಯ ಶರೀರಕ್ಕೆ ತನ್ನ ಒಂದು ಚಿಕ್ಕ ತೊಟ್ಟಿನಂತಿರುವ ರಚನೆಯಿಂದ ಅಂಟಿಕೊಂಡಿದೆ. ಮುಂದೆ ಇದು ಸೂಕ್ಷ್ಮದಾರಗಳಂತಿರುವ ಬೇರುಗಳಂಥ ರಚನೆಗಳನ್ನು ಏಡಿಯ ಶರೀರದ ಎಲ್ಲ ಭಾಗಗಳಿಗೂ ಕಳಿಸುತ್ತದೆ. ಈ ರೀತಿಯ ರಚನೆಗಳು ಏಡಿಯ ಕಾಲಿನ ತುದಿಯವರೆಗೂ ಹರಡಿರುವುದನ್ನು ಕಾಣಬಹುದು. ಬೇರುಗಳಂಥ ಈ ರಚನೆಗಳಿಂದ ಸಾಕ್ಯುಲೈನ ಜೀವಿ ಏಡಿಯ ಶರೀರದಿಂದ ತನಗೆ ಬೇಕಾದ ಆಹಾರ ಪದಾರ್ಥಗಳನ್ನು ಹೀರಿಕೊಳ್ಳುತ್ತದೆ. ಅದಕ್ಕೆ ಆಹಾರವನ್ನು ಅಗಿಯಲು ದವಡೆಗಳಿಲ್ಲ; ಜೀರ್ಣಿಸಿಕೊಳ್ಳಲು ಜೀರ್ಣಾಂಗಗಳಿಲ್ಲ; ಚಲನೆಗೆ ಕಾಲುಗಳಿಲ್ಲ; ವಿವರಿಸಲು ಸರಿಯಾದ ರೂಪೇ ಇಲ್ಲ! ಈ ರೀತಿಯಲ್ಲಿರುವ ಸಂಪೂರ್ಣ ಅಂಗವಿಕಾರವನ್ನು ಹೊಂದಿರುವ ಈ ಜೀವಿ ಪ್ರಾಪ್ತ ವಯಸ್ಸಿಗೆ ಬಂದಾಗ ಮೊಟ್ಟೆಯ ಚೀಲದಂತಿರುತ್ತದೆ. ವಯಸ್ಕ ಜೀವಿಯಾಗಿರುವಾಗ ಕುರುಳುಪಾದಿ ಎನ್ನುವುದಕ್ಕಾಗಲಿ ಅಥವಾ ಸಂಧಿಪದಿಯೆನ್ನುವುದಕ್ಕಾಗಲಿ ಯಾವ ಆಧಾರವೂ ಇಲ್ಲ. ಆದರೆ ಇದರ ಭ್ರೂಣ ಬೆಳವಣಿಗೆಯ ಅಧ್ಯಯನದಿಂದ ಇದು ಕುರುಳುಪಾದಿ ವಿಭಾಗಕ್ಕೆ ಸೇರಿದ್ದೆಂದು ಸ್ಥಿರಪಡಿಸಿದ್ದಾರೆ. ಇದರ ಮೊಟ್ಟೆಗಳಿಂದ ನಾಪ್ಲಿಯಸ್ ಲಾರ್ವಾ ಹೊರಬರುತ್ತದೆ. ಇದು ಮುಂದೆ ಸೈಪ್ರಿಸ್ ಲಾರ್ವಾ ಆಗಿ ಪರಿವರ್ತನೆಗೊಳ್ಳುತ್ತದೆ. ಸಾಕ್ಯುಲೈನ ಪ್ರಾಣಿಯಿಂದ ಹುಟ್ಟಿ ಬರುವ ಸೈಪ್ರಿಸ್ ಲಾರ್ವಾಗೂ ಇತರ ಬಾರ್ನಕಲ್ ಪ್ರಾಣಿಗಳ ಸೈಪ್ರಿಸ್‌ಗಳಿಗೂ ವ್ಯತ್ಯಾಸವೇನಿಲ್ಲ. ಆದರೆ ಈ ಪ್ರಾಣಿಯ ಸೈಪ್ರಿಸ್ ಲಾರ್ವಾಕ್ಕೆ ಅನ್ನನಾಳ, ಬಾಯಿಗಳಿರುವುದಿಲ್ಲ. ಈ ಸೈಪ್ರಿಸ್ ಯಾವುದಾದರೊಂದು ಏಡಿಯ ಉದರಕ್ಕೆ ಅಂಟಿಕೊಂಡು ಬೆಳೆದು ದೊಡ್ಡದಾಗಿ ಸಾಕ್ಯುಲೈನ ಜೀವಿಯಾಗಿ ಪರಿವರ್ತನೆಗೊಳ್ಳುತ್ತದೆ. ಸಾಕ್ಯುಲೈನ ಪ್ರಾಣಿ ತನ್ನ ಆತಿಥೇಯ ಪ್ರಾಣಿಯಾದ ಏಡಿಯ ಅಂಗಾಂಶಗಳನ್ನು ಹಾಳು ಮಾಡುವುದಲ್ಲದೆ ಅದರ ಲಿಂಗ ಪರಿವರ್ತನೆಗೂ ಕಾರಣವೆನಿಸುತ್ತದೆ. (ಎಲ್.ಎಸ್.ಜಿ)

**ಅಲರ್ಜಿ:** ಮನುಷ್ಯನ ಪರಿಸರದಲ್ಲಿಯ ಅಪಾಯವಲ್ಲದ ಕೆಲವು ವಸ್ತುಗಳು ಉಂಟುಮಾಡುವ ಅಲ್ಪವ್ಯತ್ಯಾಸಗಳಿಗೂ ತೋರುವ ಹೆಚ್ಚು ಸಂವಾದಿಯಾದ ಪ್ರತಿಕ್ರಿಯೆ (ಹೈಪರ್ ಸೆನ್ಸಿಟಿವಿಟಿ). ವಾನ್‌ಪಿಕ್ವೆಟ್ ಈ ಪ್ರತಿಕ್ರಿಯೆಯನ್ನು 1906 ರಲ್ಲಿ ವಿವರಿಸಿದ. ಇದಕ್ಕೆ ಅಲರ್ಜಿ ಎಂದು ನಾಮಕರಣ ಮಾಡಿದ.

ಸಾಮಾನ್ಯವಾಗಿ ಈ ಪ್ರತಿಕ್ರಿಯೆಗೆ ಪ್ರೋಟೀನುಗಳು ಕಾರಣ. ಅಲ್ಲದೆ ಕೆಲವು ಔಷಧಿಗಳು ಅಥವಾ ರಾಸಾಯನಿಕ ವಸ್ತುಗಳು ದೇಹದ ಪ್ರೋಟೀನುಗಳೊಂದಿಗೆ ಸಂಯೋಜಿತಗೊಂಡು ಈ ಪ್ರತಿಕ್ರಿಯೆಗೆ ಕಾರಣವಾಗಬಹುದು. ಅಲರ್ಜಿಯನ್ನು ಉಂಟುಮಾಡುವ ವಸ್ತು ಅಲರ್ಜೆನ್. ಧೂಳು, ಪುಷ್ಪಪರಾಗ, ಶಿಲೀಂಧ್ರ ಸಸ್ಯಗಳ ಸ್ಪೋರುಗಳು, ಪ್ರಾಣಿಗಳ ಚರ್ಮದಿಂದ ಬೀಳುವ ಹೊಟ್ಟು ಸಾಮಾನ್ಯ ಅಲರ್ಜೆನ್‌ಗಳು. ಕೆಲವು ಔಷಧಿಗಳು ಉದಾಹರಣೆಗಾಗಿ ಪೆನಿಸಿಲಿನ್, ಸ್ಟ್ರೆಪ್ಟೊಮೈಸಿನ್, ಆಸ್ಪಿರಿನ್ ಮುಂತಾದವುಗಳು, ಕೆಲವು ರಾಸಾಯನಿಕಗಳು, ಅಲಂಕಾರ ಸಾಮಗ್ರಿಗಳಾದ ಲಿಪ್‌ಸ್ಟಿಕ್, ಕ್ರೀಮ್, ಕೇಶಾಲಂಕಾರ ತೈಲಗಳು ಮುಂತಾದವುಗಳು ಕೂಡ ಅಲರ್ಜಿಗೆ ಕಾರಣವಾಗಬಹುದು.

ಅಲರ್ಜಿಗಳಲ್ಲಿ ಅನೇಕ ಬಗೆ. ಅವು ಯಾವುದಾದರೂ ನಿರ್ದಿಷ್ಟ ಅಂಗಾಂಗಗಳಿಗೆ ಸೀಮಿತವಾಗಿರುತ್ತವೆ. ಅಂತಹ ಅಂಗಾಂಗಗಳಲ್ಲಿ ಪ್ರತಿಕ್ರಿಯೆ ಪ್ರಚೋದಿಸಲು ನಿರ್ದಿಷ್ಟವಾದ ಅಲರ್ಜೆನ್ ಬೇಕಾಗುತ್ತದೆ. ಉದಾಹರಣೆಗಾಗಿ ಧೂಳು ಅಥವಾ ಪುಷ್ಪಪರಾಗವು ಶ್ವಾಸನಾಳ ಮತ್ತು ಅವುಗಳ ಕವಲುಗಳನ್ನು ಪ್ರವೇಶಿಸಿ ಪ್ರತಿಕ್ರಿಯೆ ಪ್ರಚೋದಿಸಿದಾಗ ಅಸ್ತಮಾ ತಲೆದೋರುತ್ತದೆ. ಅಲರ್ಜಿಯ ಪ್ರತಿಕ್ರಿಯೆಯನ್ನು ಎಡಬಿಡದೆ ಸೀನುವುದು, ಮೂಗಿನಲ್ಲಿ ಸೋರುವಿಕೆ, ಕಣ್ಣು ತುರಿಕೆ ಮುಂತಾದವುಗಳಿಂದ ಗುರುತಿಸಬಹುದು.

ಅಲರ್ಜೆನ್‌ನಿಂದ ಪ್ರಚೋದಿತಗೊಂಡ ಜೀವಕೋಶಗಳಲ್ಲಿ ನಡೆಯುವ ನಿರೋಧ ಜನಕ (ಅಂಟಿಜೆನ್) ನಿರೋಧಕ (ಅಂಟಿಬಾಡಿ) ಕ್ರಿಯೆಯಿಂದ ಈ ಕೋಶಗಳು ಹಿಸ್ಟಮಿನ್ ರೀತಿಯ ವಸ್ತುಗಳನ್ನು ಹೊರ ಹಾಕುತ್ತವೆ. ಈ ವಸ್ತುಗಳು ಅಲರ್ಜಿಯಾದಾಗ ಬಾಹ್ಯವಾಗಿ ಕಾಣಿಸಿಕೊಳ್ಳುವ ಗುಣಲಕ್ಷಣಗಳಿಗೆ ಕಾರಣ.

ಸಾಮಾನ್ಯವಾಗಿ ಯಾವುದೇ ವಿಷಾಣು ಅಥವಾ ಹೊರಗಿನ ವಸ್ತು ರಕ್ತವನ್ನು ಪ್ರವೇಶಿಸುತ್ತಿದ್ದಂತೆ ಅವು ರಕ್ತದಲ್ಲಿ ಪ್ರತಿವಿಷವಸ್ತುವನ್ನು ತಯಾರಿಸಲು ಪ್ರಚೋದಿಸುತ್ತವೆ. ಈ ಪ್ರತಿವಿಷವಸ್ತುವಿನಿಂದ ವಿಷಜನಕವು ಆಕ್ರಮಣಗೊಂಡು ಅದು ನಾಶವಾಗುತ್ತದೆ. ಕೆಲವು ವ್ಯಕ್ತಿಗಳಲ್ಲಿ ಪ್ರತಿವಿಷವಸ್ತುಗಳು ದೇಹವನ್ನು ವಿಷಜನಕಗಳಿಂದ ರಕ್ಷಿಸದೆ, ಕೆಲವು ಅಲರ್ಜನಗಳಿಗೆ ಸಹಾಯಕವಾಗಿ ಅಲರ್ಜಿಯನ್ನುಂಟುಮಾಡುತ್ತವೆ.

ಅಲರ್ಜಿಯಿಂದ ಉಂಟಾಗುವ ಹಲವು ರೋಗಗಳೆಂದರೆ, ಆಸ್ತಮ, ಹೇಜ್ವರ, ಶೀತ, ಅನೇಕ ಬಗೆಯ ಚರ್ಮರೋಗಗಳು, ಮೈಗ್ರೈನ್ ಎಂಬ ತಲೆ ಸಿಡಿತ ಮುಂತಾದವುಗಳು.

ಹಲವು ರೋಗಗಳು ಅತಿರೇಕವಾದಾಗ ಸಾವು ಸಂಭವಿಸುವುದೂ ಉಂಟು. (ಎಸ್.ಆರ್.ಆರ್.)

**ಅಲಾಂಟೊಯಿಸ್:** ಬೆಳೆಯುತ್ತಿರುವ ಭ್ರೂಣಕ್ಕೆ ರಕ್ಷಣೆಯನ್ನೂ, ಆಹಾರವನ್ನೂ ಒದಗಿಸುವ ಪಟಲ. ಸರೀಸೃಪಗಳು, ಪಕ್ಷಿಗಳು ಮತ್ತು ಸ್ತನಿಗಳು ಬೆಳೆವಣಿಗೆಯ ಕಾಲದಲ್ಲಿ ಭ್ರೂಣಕ್ಕೆ ರಕ್ಷಣೆ ಒದಗಿಸಲು, ಮೊಟ್ಟೆಯೊಳಗೆ ಕೂಡಿಟ್ಟ ಜಟಿಲ ಆಹಾರವನ್ನು ಸರಳ ಆಹಾರವಾಗಿ ಪರಿವರ್ತಿಸಿ ಭ್ರೂಣಕ್ಕೆ ಒದಗಿಸಲು ಅಥವಾ ತಾಯಿಯಿಂದ ಪಡೆದ ಆಹಾರ ಒದಗಿಸಲು, ಉಸಿರಾಟ ಮತ್ತು ವಿಸರ್ಜನೆಗಳಲ್ಲಿ ನೆರವಾಗಲು ಕೆಲವು ಪಟಲಗಳನ್ನು ಬೆಳೆಸಿಕೊಳ್ಳುತ್ತವೆ. ಇವುಗಳನ್ನು ತತ್ತಿ ಪಟಲಗಳೆಂದು ಕರೆಯಲಾಗಿದೆ. ಬೆಳವಣಿಗೆಯ ಹಂತಗಳಲ್ಲಿ ನಿರ್ದಿಷ್ಟ ಕ್ರಿಯೆಗಳನ್ನು ಪೂರೈಸಲು ವಿಶೇಷತೆಯನ್ನು ಪಡೆದ ಭ್ರೂಣ ಅಂಗಾಂಶಗಳನ್ನು ಅವು ಪ್ರತಿನಿಧಿಸುತ್ತವೆ. ಅಲಾಂಟಾಯಿಸ್ ಇಂತಹದೊಂದು ರಚನೆ. ಅಮ್ನಿಯಾನ್ ಮತ್ತು ಕೊರಿಯಾನ್ ಇತರ ಪಟಲಗಳು.

ಅಲಾಂಟೊಯಿಸ್ ಬೆಳವಣಿಗೆಯಲ್ಲಿ ಅನ್ನನಾಳದ ಹಿಂದಿನ ತುದಿಯಿಂದ ಪ್ರವರ್ಧದ ರೂಪದಲ್ಲಿ ಹುಟ್ಟುತ್ತದೆ. ಇದು ಕಪ್ಪೆಗಳಲ್ಲಿ ರೂಪುಗೊಳ್ಳುವ ಮೂತ್ರಕೋಶಕ್ಕೆ ಸಂವಾದಿಯಾದ ರಚನೆ. ಇದು ದ್ರವ ಭರಿತ ಕೋಶ ಅಥವಾ ಕೊಳವೆಯಾಕಾರದ ಪಟಲವಾಗಿದ್ದು ಒಳಗಿನ ಆಮ್ನಿಯಾನ್ ಹಾಗು ಬಾಹ್ಯ ಕೋರಿಯನ್ ಮತ್ತು ಭಂಡಾರ ಸಂಚಿಯ ನಡುವೆ ಬೆಳೆಯುತ್ತದೆ. ಅಂತಿಮವಾಗಿ ಬಹುತೇಕ ಪ್ರಾಣಿಗಳಲ್ಲಿ ಈ ಪ್ರದೇಶ ಗಾಳಿ ತುಂಬಿದ ಬಲೂನಿನಂತೆ ಹಿಗ್ಗಿ ಬಹಿರ್ ಭ್ರೂಣ ಅವಕಾಶವನ್ನು ತುಂಬಿಕೊಳ್ಳುತ್ತದೆ. ಇದಕ್ಕೆ ಹೊರಗೆ ಮಧ್ಯದರ್ಮ ಮತ್ತು ಒಳಗೆ ಒಳದರ್ಮವಿದೆ. ಬೆಳವಣಿಗೆಯಾದಂತೆ ಪಶ್ಚ ಅನ್ನನಾಳದೊಂದಿಗೆ ಕಿರಿದಾದ ತೊಟ್ಟಿನಿಂದ ಸಂಪರ್ಕ ಪಡೆದಿರುತ್ತದೆ. ಭ್ರೂಣದ ಸುತ್ತಲೂ ಹೊರಗೆ ಹೊರದರ್ಮ ಮತ್ತು ಒಳಗೆ ಮಧ್ಯದರ್ಮವಿರುವ ಕೋರಿಯಾನ್ ಎಂಬ ಮತ್ತೊಂದು ಬಹಿರ್ ಭ್ರೂಣಪಟಲವಿದೆ. ಇದು ಒಳಗಿನ ಭ್ರೂಣಕ್ಕೆ ರಕ್ಷಣೆಯನ್ನು ನೀಡುತ್ತದೆ ಮತ್ತು ಒಂಬತ್ತನೆಯ ದಿನದ ಹೊತ್ತಿಗೆ ಅಲಾಂಟೋಯಿಸ್ ಕೋರಿಯಾನ್‌ನೊಂದಿಗೆ ಸೇರಿ ಕೋಳಿ ಬೆಳವಣಿಗೆಯಲ್ಲಿ ಕೋರಿಯೊಅಲಾಂಟೊಯಿಸ್ ಎಂಬ ಸಂಯುಕ್ತ ರಚನೆಯನ್ನು ಉತ್ಪತ್ತಿಮಾಡುತ್ತದೆ. ಮೊಲದ ಭ್ರೂಣ ಬೆಳವಣಿಗೆಯ ಕಾಲದಲ್ಲಿ ಅಲಾಂಟೊಯಿಸ್ ಕೋಳಿಯ ಮೊಟ್ಟೆಯಲ್ಲಿ ಬೆಳೆದಂತೆಯೇ ಬೆಳೆದು ಕೋರಿಯನ್ ಜೊತೆ ಕೂಡಿಕೊಂಡು ಕೋರಿಯೊ ಅಲಾಂಟೊಯಿಸ್ ಆಗುತ್ತದೆ. ಇದು ಅನಂತರ ಪ್ಲಾಸೆಂಟದ ಬೆಳವಣಿಗೆಯಲ್ಲಿ ಭಾಗವಹಿಸುತ್ತದೆ.

ಆಲಾಂಟೊಯಿಸ್‌ನ ಮಧ್ಯದರ್ಮದಲ್ಲಿ ಅಭಿದಮನಿ ಮತ್ತು ಅಪದಮನಿಗಳ ಮೂಲಕ ಭ್ರೂಣ ರಕ್ತಪರಿಚಲನೆಯೊಂದಿಗೆ ಸಂಪರ್ಕಪಡೆಯುತ್ತದೆ. ಇದು ಉಸಿರಾಟದಲ್ಲಿ ಭ್ರೂಣಕ್ಕೆ ಸಹಕರಿಸುತ್ತದೆ, ಅಂದರೆ ಭ್ರೂಣದ ರಕ್ತಕ್ಕೆ ಆಮ್ಲಜನಕವನ್ನು ಸರಬರಾಜು ಮಾಡಿ ಅಲ್ಲಿಂದ ಕಾರ್ಬನ್ ಡೈ ಆಕ್ಸೈಡನ್ನು ತೆಗೆಯುವ ಕೆಲಸವನ್ನು ಮಾಡುತ್ತದೆ. ಕೋರಿಯೊ ಅಲಾಂಟೊಯಿಸ್ ತುಂಬಾ ರಕ್ತ ಸಂಚಿತವಾಗಿರುವುದರಿಂದ ಪ್ರಾಯೋಗಿಕ ಭ್ರೂಣಶಾಸ್ತ್ರದಲ್ಲಿ ಅಂಗಾಂಗಗಳ ಬೆಳವಣಿಗೆ ವಿಭೇದೀಕರಣಗಳನ್ನು ಅಭ್ಯಸಿಸಲು ಅವನ್ನು ಈ ಭಾಗದಲ್ಲಿ ಕಸಿ ಮಾಡುತ್ತಾರೆ.

ಉಸಿರಾಟದಲ್ಲಿ ಆಮ್ಲಜನಕ ಮತ್ತು ಕಾರ್ಬನ್ ಡೈಆಕ್ಸೈಡ್‌ಗಳ ವಿನಿಮಯದ ಜೊತೆಗೆ ಭ್ರೂಣ ಬೆಳವಣಿಗೆಯಲ್ಲಿ ಪ್ರೋಟೀನುಗಳ ಚಯಾಪಚಯ ಕ್ರಿಯೆಯೂ ನಡೆಯುತ್ತದೆ. ಚಯಾಪಚಯ ಕ್ರಿಯೆಯಲ್ಲಿ ಯೂರಿಯಾ ಮತ್ತು ಯೂರಿಕ್ ಆಮ್ಲಗಳು ಉತ್ಪತ್ತಿಯಾಗುತ್ತವೆ. ಚಿಪ್ಪಿನ ಪರಿಮಿತಿಯಲ್ಲಿ ಬೆಳೆಯುತ್ತಿರುವ ಭ್ರೂಣದ ಈ ತ್ಯಾಜ್ಯ ವಸ್ತುಗಳು ಸಂಗ್ರಹಗೊಳ್ಳುತ್ತಿದ್ದರೆ ವಿಷಕಾರಿ ಪರಿಣಾಮಗಳನ್ನು ಬೀರುತ್ತವೆ. ಇದನ್ನು ತಪ್ಪಿಸಲು ಅಲಾಂಟೊಯಿಸ್ ಪ್ರಮುಖ ಪಾತ್ರವಹಿಸುತ್ತದೆ. ಬೆಳವಣಿಗೆಯ ಆರಂಭ ಹಂತಗಳಲ್ಲಿ ಕೋಳಿ ಬಹುವಾಗಿ ಯೂರಿಯಾವನ್ನು ವಿಸರ್ಜಿಸುತ್ತದೆ. ಅನಂತರದ ವಿಸರ್ಜಿತ ವಸ್ತುವು ಯೂರಿಕ್ ಆಮ್ಲವಾಗಿರುತ್ತದೆ. ಇದೊಂದು ಪ್ರಮುಖ ಬದಲಾವಣೆ ಏಕೆಂದರೆ ಯೂರಿಯಾ ಸಾಪೇಕ್ಷೀಯವಾಗಿ ವಿಲೀನಕಾರಿ ವಸ್ತು ಮತ್ತು ಯೂರಿಯಾವನ್ನು ವಿಷಕಾರಿ ವಸ್ತುವಾಗದಂತೆ ಹಿಡಿದಿಡಲು ಹೆಚ್ಚಿನ ಮೊತ್ತದ ನೀರು ಅಗತ್ಯ. ಈ ಸಮಸ್ಯೆಯನ್ನು ಅಲಾಂಟೊಯಿಸ್ ತ್ಯಾಜ್ಯವಸ್ತುಗಳ ಸಂಗ್ರಹಣಾಲಯವಾಗಿ ಬಗೆಹರಿಸುತ್ತದೆ. ಅಲ್ಲದೆ ಇಲ್ಲಿ ಉತ್ಪಾದಿಸಿದ ತಾಜ್ಯವಸ್ತುಗಳ ಮೊತ್ತವು ಇತರ ಭ್ರೂಣಗಳಿಗಿಂತ ಕಡಿಮೆ ಮೊತ್ತದಲ್ಲಿರುತ್ತದೆ. ಕಾವು ಕೊಡುವ ವೇಳೆ ಪೂರ್ತ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಿಟ್ಟು ಕೊಳ್ಳ ಬೇಕಾದುದರಿಂದ ಅಲಾಂಟೊಯಿಸ್ ಸಾಕಷ್ಟು ಗಾತ್ರದವರೆಗೆ ಹಿಗ್ಗುತ್ತಲೇ ಇರುತ್ತದೆ. ಮೊಟ್ಟೆಯೊಡೆದು ಮರಿಹೊರಬರುವಾಗ ಕೃಶವಾದ ಅಲಾಂಟೊಯಿಸ್ ತೊಟ್ಟು ಕಳಚಿಕೊಂಡು ಅಲಾಂಟೊಯಿಸ್ ಪಶ್ಚ ಭಾಗವು ತನ್ನಲ್ಲಿರುವ ತಾಜ್ಯವಸ್ತುವಿನೊಂದಿಗೆ ಒಡೆದ ಚಿಪ್ಪಿಗೆ ಅಂಟಿಕೊಂಡ ಸುರುಟಿದ ಪಟಲವಾಗುಳಿಯುತ್ತದೆ.

ಸ್ತನಿಗಳಲ್ಲಿ ಕೋರಿಯಾನ್ ಅಲಾಂಟೋಯಿಸ್ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಭಂಡಾರದ ಗೈರು ಹಾಜರಿಯಲ್ಲಿ ಸ್ತನಿಗಳ ಭ್ರೂಣವು ತನ್ನ ಪೋಷಕಾಂಶವನ್ನು ಅಲಾಂಟೊಯಿಕ್ ಪರಿಚಲನೆಯ ಮೂಲಕ ಪಡೆಯುತ್ತದೆ. ಇಲ್ಲಿ ತಾಯಿ ಮತ್ತು ಭ್ರೂಣದ ನಡುವೆ ಚಯಾಪಚಯ ವಿನಿಮಯ ಕ್ರಿಯೆ ಮತ್ತು ಪ್ಲಾಸೆಂಟ ರಚನೆಯಲ್ಲಿಯೂ ಅಲಾಂಟೊಯಿಸ್ ಪಾತ್ರವಹಿಸುತ್ತದೆ. ಮನುಷ್ಯ ಮತ್ತು ಇತರ ಕೆಲವು ಸ್ತನಿಗಳಲ್ಲಿ ಇದೊಂದು ಅವಶೇಷ ಅಂಗವಾಗುಳಿಯುತ್ತದೆ. ಇಲ್ಲಿ ಕೋರಿಯನ್ ಅದರ ಕಾರ್ಯವನ್ನು (ವಿಸರ್ಜನೆ ಮತ್ತು ಉಸಿರಾಟ) ನಡೆಸುತ್ತದೆ. (ಬಿ.ಕೆ.ಜಿ.)

**ಅಲಿ ಸಲಿಂ (1896–1987):** ಭಾರತದ ಸುಪ್ರಸಿದ್ಧ ಪಕ್ಷಿ ವಿಜ್ಞಾನಿ. ಪಕ್ಷಿಗಳ ಅಧ್ಯಯನಕ್ಕಾಗಿ ಜೀವಮಾನವನ್ನೇ ಮುಡಿಪಾಗಿಟ್ಟ ವ್ಯಕ್ತಿ. ಅನ್ವೇಷಕ ಪರಿಸರ ತಜ್ಞ, ಉತ್ತಮ ಬರಹಗಾರ. ಸಲಿಂ ಮುಜದ್ದೀನ್ ಅಬ್ದುಲ್ ಅಲಿ ಪೂರ್ಣ ಹೆಸರು. ಮುಂಬಯಿಯ ಶ್ರೀಮಂತ ಕುಟುಂಬದಲ್ಲಿ 1896 ರಲ್ಲಿ ಜನನ. ಬಾಲ್ಯದಲ್ಲಿಯೆ ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥನಾದ. ಚಿಕ್ಕಪ್ಪ ಅಮೀರುದ್ದೀನ್ ತ್ಯಬ್ಜಿ ಈ ಬಾಲಕನ ಜವಾಬ್ದಾರಿ ಹೊತ್ತರು. ಬಾಲ್ಯದಲ್ಲಿ ಈತ ಒಬ್ಬ ಕ್ರೀಡಾ ಪಟುವಾಗಿದ್ದ. ಚಿಕ್ಕಪ್ಪ ಒಂದು ಬಂದೂಕು ಕೊಡಿಸಿದ್ದರು. ಹುಡುಗ ಒಂದು ದಿನ ಕಣ್ಣಿಗೆ ಬಿದ್ದ ಅಪರೂಪದ ಪಕ್ಷಿಯನ್ನು ಕೊಂದ. ಅದನ್ನು ಚಿಕ್ಕಪ್ಪನಿಗೆ ತೋರಿಸಿ, ಪ್ರಶ್ನೆಗಳ ಸರಮಾಲೆಯನ್ನು ಹಾಕಿದ. ಅವನ ಜ್ಞಾನತೃಷೆಯನ್ನು ತೀರಿಸಲಾಗಲಿಲ್ಲ. ಚಿಕ್ಕಪ್ಪ ಹುಡುಗನ ಜ್ಞಾನದಾಹ ಕಂಡು ಬೆರಗಾಗಿ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಮ್ಯೂಸಿಯಂನಲ್ಲಿ ಮಾಹಿತಿ ದೊರೆಯುವುದೆಂದು ತಿಳಿಸಿದರು. ಸಲಿಂ ಮ್ಯೂಸಿಯಂಗೆ ಹೋಗಿ ಅಲ್ಲಿದ್ದ ಎಲ್ಲ ಪಕ್ಷಿಗಳ ಪರಿಚಯ ಮಾಡಿಕೊಂಡ. ಸಲಿಂನ ವಿದ್ಯಾಭ್ಯಾಸದ ದಿನಗಳು ಕಷ್ಟಕರವಾಗಿದ್ದುವು. ಗಣಿತ ಆತನಿಗೆ ಕಬ್ಬಿಣದ ಕಡಲೆಯಾಗಿತ್ತು. ಆಸಕ್ತಿ ಓದಿನೆಡೆಗಿರದೆ ಬೇರೆಡೆಗೆ ಕೇಂದ್ರೀಕೃತವಾಗಿತ್ತು.

ಬರ್ಮ ದೇಶದಲ್ಲಿ ಮರದ ವ್ಯಾಪಾರಿಯಾಗಿದ್ದ ಅಣ್ಣ ಓದು ರುಚಿಸದ ಹುಡುಗನನ್ನು ತನ್ನ ಸಹಾಯಕ್ಕಾಗಿ ಕರೆದೊಯ್ದರು. ಮರಗಳ ಆಯ್ಕೆಗಾಗಿ ಕಾಡಿಗೆ ಹೋಗುತ್ತಿದ್ದ ಸಲಿಂ ಅಲ್ಲಿನ ಪಕ್ಷಿಗಳ ಬಗ್ಗೆ ಆಕರ್ಷಿತರಾಗಿ ಅಲ್ಲಿನ ಪಕ್ಷಿ ಪ್ರಾಣಿಗಳ ಬಗ್ಗೆ ವಿಚಾರ ಮಾಡತೊಡಗಿದ.ಇದರಿಂದಾಗಿ ಸಹೋದರನಿಗೆ ವ್ಯಾಪಾರದಲ್ಲಿ ನಷ್ಟವುಂಟಾಗಿ ಸಲಿಂನನ್ನು ಮುಂಬೈಗೆ ವಾಪಸ್ಸು ಕಳಿಸಲಾಯಿತು. ಅನಂತರ ತೆಹಮನಿಯ ಎಂಬ ಮಹಿಳೆಯೊಂದಿಗೆ ವಿವಾಹವಾಯಿತು.

1927 ರಲ್ಲಿ ಜೀವನೋಪಾಯಕ್ಕಾಗಿ ಸಲಿಂ ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿ ಮಾರ್ಗದರ್ಶಿಯಾದ. ಮುಂದೆ ಬರ್ಲಿನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಎರ್‌ವಿನ್ ಸ್ಟ್ರೆಸ್‌ಮನ್‌ರವರ ಮಾರ್ಗದರ್ಶನದಲ್ಲಿ ಪಕ್ಷಿ ವಿಜ್ಞಾನದ ಅಧ್ಯಯನದಲ್ಲಿ ತೊಡಗಿದ. ಅಧ್ಯಯನ ಮುಗಿಸಿ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ ಮಾರ್ಗದರ್ಶಿ ಉಪನ್ಯಾಸಕನಾಗಿ ಸೇವೆ ಸಲ್ಲಿಸುವ ಉತ್ಸುಕತೆಯಿಂದ ಬಂದರೆ ಪದವಿಗಳಿಸಿರದಿದ್ದ ಸಲಿಂಗೆ ಅವಕಾಶ ದೊರೆಯಲಿಲ್ಲ. ತೆಹಮನಿಯಗಳೊಂದಿಗೆ ಮುಂಬಯಿನ ಕರಾವಳಿಯ ಕುಟೀರವೊಂದರಲ್ಲಿ ವಾಸಿಸತೊಡಗಿದ. ಪಕ್ಷಿಗಳನ್ನು ಸಾಕಿ ಅವುಗಳ ಚಲನವಲನಗಳನ್ನು ವೀಕ್ಷಿಸತೊಡಗಿದ.

ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನ ಅಧಿಕಾರಿಗಳನ್ನು ಮತ್ತೆ ಸಂಪರ್ಕಿಸಿ ನನಗೆ ಸಂಬಳ ಸಾರಿಗೆ ಬೇಕಿಲ್ಲ, ಆದರೆ ಸಂಸ್ಥೆಯ ವತಿಯಿಂದ ನನಗೆ ಪಕ್ಷಿ ಅಧ್ಯಯನಕ್ಕೆ ಅನುಮತಿ ಬೇಕೆಂಬ ಬೇಡಿಕೆಯನ್ನು ಮುಂದಿಟ್ಟ. ಸ್ವಇಚ್ಛೆಯ ಈ ಕಾರ್ಯಕ್ಕೆ ಮ್ಯೂಸಿಯಂ ಒಪ್ಪಿತು. 20 ವರ್ಷ ಸತತ ಪಕ್ಷಿ ಅಧ್ಯಯನದಲ್ಲಿ ತೊಡಗಿದ ಸಲಿಂ ಕಛ್‌ನಿಂದ ಸಿಕ್ಕಿಂವರೆಗೆ, ಆಫ್ಘಾನಿಸ್ಥಾನದಿಂದ ಕೇರಳದವರೆಗೆ ಅಡ್ಡಾಡಿದ. ಪಕ್ಷಿಗಳ ಕುರಿತ ತಮ್ಮ ವಿಚಾರಗಳನ್ನು ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನ ಪತ್ರಿಕೆಗಳಲ್ಲಿ ಪ್ರಕಟಿಸಿದ. ಈ ಲೇಖನಗಳನ್ನು ಮೆಚ್ಚಿ ಅಂದಿನ ಕ್ಯೂರೇಟರ್ ಆಗಿದ್ದ ಮೇಯರ್‌ರವರು ಮುಕ್ತ ಕಂಠದ ಪ್ರಶಂಸೆ ನೀಡಿದರು. ಇದು ಸಲಿಂಗೆ ಪ್ರೇರಕ ಶಕ್ತಿಯಾಯಿತು.



1941 ರಲ್ಲಿ ಸಲಿಂ ಅವರ ಬುಕ್ ಆಫ್ ಇಂಡಿಯನ್ ಬರ್ಡ್ಸ್ ಪ್ರಕಟವಾಯಿತು. ಈ ಗ್ರಂಥವು ಅವರಿಗೆ ಕೀರ್ತಿ, ಹಣ ದೊರಕಿಸಿ ಕೊಟ್ಟಿತು. ಮುಂದೆ 1974 ರಲ್ಲಿ ಎಸ್.ಡಿ.ರಿಪ್ಲಿಯರವರೊಂದಿಗೆ ಹ್ಯಾಂಡ್ ಬುಕ್ ಆಫ್ ದಿ ಬರ್ಡ್ಸ್ ಆಫ್ ಇಂಡಿಯ ಅಂಡ್ ಪಾಕಿಸ್ತಾನ್ ಎಂಬ ಹೊತ್ತಿಗೆಯನ್ನು ಸಂಪುಟಗಳಲ್ಲಿ ಪ್ರಕಟಿಸಿದ. ದಿ ಬರ್ಡ್ಸ್ ಆಫ್ ಕಛ್, ಇಂಡಿಯನ್ ಹಿಲ್ ಬರ್ಡ್ಸ್, ಬರ್ಡ್ಸ್ ಆಫ್ ಕೇರಳ, ಬರ್ಡ್ಸ್ ಆಫ್ ಸಿಕ್ಕಿಂ, ಫೀಲ್ಡ್‌ಗೈಡ್ ಟುದ ಬರ್ಡ್ಸ್ ಆಫ್ ಈಸ್ಟರ್ನ್ ಹಿಮಾಲಯಾಸ್, ಇವು ಸಲಿಂ ಅವರ ಇತರ ಕೃತಿಗಳು. ಭರತ್‌ಪುರ ಮತ್ತು ಕರ್ನೂಲ್ ಪಕ್ಷಿಧಾಮಗಳ ಸ್ಥಾಪನೆಯಲ್ಲಿ ಇವರ ಪಾತ್ರ ಹಿರಿದು. ಭರತ್‌ಪುರ ಪಕ್ಷಿಧಾಮ, ಕಿಯೊಲ್ ದೇವ್ ರಾಷ್ಟ್ರೀಯ ಉದ್ಯಾನ ಹಾಗೂ ಸೈಲಂಟ್ ವ್ಯಾಲಿಗಳನ್ನು ಉಳಿಸುವುದರಲ್ಲಿ ಮುಖ್ಯ ಪಾತ್ರವಹಿಸಿದ್ದಾರೆ. 1976 ರಲ್ಲಿ ತಮಗೆ ದೊರೆತ 50,000 ಡಾಲರ್ ಹಣವನ್ನು ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂಗೆ ಸಂಶೋಧನೆಗಾಗಿ ನೀಡಿದ ಉದಾತ್ತ ಮನೋಭಾವದ ಈ ವ್ಯಕ್ತಿ 1987 ರಲ್ಲಿ ನಿಧನರಾದರು.

(ಎಸ್.ಡಿ.)

**ಅಲಿಗೇಟರ್:** ದಪ್ಪ ಮತ್ತು ಉದ್ದಮೂತಿಯ ದುಂಡಾದ ದೈತ್ಯ ಸರೀಸೃಪ. ಮೊಸಳೆಗಳನ್ನೊಳಗೊಂಡ ಕ್ರೋಕೋಡೀಲಿಯಾ ಗಣದಲ್ಲಿ ಅಲಿಗೇಟರಿಡೆ ಕುಟುಂಬದ ನಾಲ್ಕು ಗುಂಪುಗಳಲ್ಲಿ ಒಂದು. ಉತ್ತರ ಅಮೇರಿಕಾದ ಮಿಸಿಸಿಪ್ಪಿಯ ಅಲಿಗೇಟರ್ ಮತ್ತು ಚೈನಾದ ಯಾಂಗ್‌ಶಿಕಿಯಾಂಗ್ ನದಿಯಲ್ಲಿರುವ ಸೈನೆನ್ಸಿಸ್ ಅಲಿಗೇಟರ್ ಎಂಬ ಎರಡು ಪ್ರಭೇದಗಳಿವೆ.

ಚಿಕ್ಕತಲೆ ಅಗಲವಾಗಿದ್ದು ತುದಿಯಲ್ಲಿ ದುಂಡು ಹಾಗೂ ಮೊಂಡು ಮೂತಿಯಿದೆ. ಚರ್ಮದ ಮೇಲೆ ಗಟ್ಟಿಯಾದ ಫಲಕಗಳಿವೆ. ಉದ್ದುದ್ದವಾಗಿ 6–8 ಪಂಕ್ತಿಯಲ್ಲಿರುವ ಫಲಕಗಳು ಬೆನ್ನಿನ ರಕ್ಷಾಕವಚವಾಗಿವೆ. ಎರಡು ಜೊತೆ ಫಲಕಗಳು ಕುತ್ತಿಗೆಯನ್ನು ಮುಚ್ಚಿವೆ. ಅರೆಜಲಪಾದದಿಂದಾವೃತವಾದ 5 ಕೈ ಬೆರಳುಗಳನ್ನೂ, ನಾಲ್ಕು ಕಾಲ್ಬೆರಳುಗಳನ್ನೂ ಗಮನಿಸಬಹುದು. ಶಕ್ತಿಯುತ ಬಾಲ ಪಾರ್ಶ್ವವಾಗಿ ಚಪ್ಪಟೆಯಾಗಿದೆ. ನಾಸಿಕ ನಾಳವನ್ನು ಮೂಳೆಯ ಗೋಡೆಯೊಂದು ಇಬ್ಭಾಗ ಮಾಡಿರುವುದು. ದವಡೆಯಲ್ಲಿ ಮ್ಯಾಂಡಿಬ್ಯುಲಾರ್‌ಗಳ ಜೋಡಣೆ 5ನೇ ಹಲ್ಲಿನಿಂದ ಮುಂದಕ್ಕಿಲ್ಲ. ಅಸಮವಾದ ಹಲ್ಲುಗಳಲ್ಲಿ ಕೆಳದವಡೆಯ ನಾಲ್ಕನೇ ಮತ್ತು ಐದನೇ ಹಲ್ಲು ಮೇಲ್ದವಡೆಯ ಕುಳಿಗಳಿಗೆ ಸೇರುತ್ತವೆ.

ಮರಿ ಅಲಿಗೇಟರ್ ಕೀಟಾಹಾರಿಯಾದರೆ ಮಾಂಸಾಹಾರಿಯಾದ ಅಲಿಗೇಟರ್ ಪಕ್ಷಿ, ಆಮೆಗಳನ್ನು ತಿನ್ನುತ್ತದೆ. ಬಲಿತ ದೊಡ್ಡ ಅಲಿಗೇಟರುಗಳು ಮಕ್ಕಳನ್ನು ಹಿಡಿದು ಕೊಂದು ಹಾಕಿರುವುದೂ ಉಂಟು; ಜೀರ್ಣವಾಗದೆ ಉಳಿದ ತ್ಯಾಜ್ಯವನ್ನು ಉಂಡೆಯಾಗಿ ಉಗುಳುತ್ತವೆ.



ಸಾಮಾನ್ಯವಾಗಿ ಹೆಚ್ಚು ಆಳವಿಲ್ಲದ ನೀರಿನಲ್ಲಿ, ಕೇವಲ ಕಣ್ಣು ಮತ್ತು ನಾಸಿಕ ರಂಧ್ರಗಳನ್ನು ಮೇಲಿರುವಂತೆ ನೀರಿನಲ್ಲಿ ಮುಳುಗಿರುವುದು. ನೀರಿನಲ್ಲಿ ಈಜುವಾಗ ಅದರ ಬಾಲದ ಚಲನೆ ಸಶಬ್ದಬಾಗಿರುತ್ತದೆ. ಕದಲಿಸಿದರೆ ಅಪಾಯ ತೋರಿದಾಗ ನೀರಿನ ಒಳಗೆ ಮಣ್ಣಿನಲ್ಲಿ ಅವಿತುಕೊಳ್ಳುವುದು.

ಅಗೇಟರ್ ಎಲೆ, ಮರಳಿನ ಪದರಗಳಿಂದಾದ ಗೂಡಿನಲ್ಲಿ ಸುಮಾರು 20ರಿಂದ 30 ಮೊಟ್ಟೆಗಳನ್ನು ಇಡುವುದು. ಸುಮಾರು 3 ತಿಂಗಳು ಕಾವು ಕೊಟ್ಟಮೇಲೆ ಮೊಟ್ಟೆ ಒಡೆದು ಮರಿಹೊರಬರುವುದು. ಮರಿಗಳ ವಿಷಯದಲ್ಲಿ ಕೋಮಲ ಸ್ವಭಾವದ ತಾಯಿ ನಿಗಾವಹಿಸಿ ಮೀನು, ಆಮೆ ಮುಂತಾದ ಶತ್ರುಗಳಿಂದ ಮರಿಗಳನ್ನು ಸಂರಕ್ಷಿಸುವುದು.

ಅಲಿಗೇಟರ್ ಸಾಮಾನ್ಯವಾಗಿ ಅಪಾಯಕಾರಿ ಪ್ರಾಣಿಯಾದ್ದರಿಂದ ಬೇಟೆಗೀಡಾಗಿ ಇವುಗಳ ಸಂಖ್ಯೆ ಕ್ಷೀಣಿಸಿದೆ. ಸಾಧಾರಣವಾಗಿ 5–6 ಮೀ ಉದ್ದವಿದ್ದು, 7 ಮೀ ಉದ್ದದವರೆಗೆ ಬೆಳೆದ ದಾಖಲೆ ಇದೆ. ಅಪಾಯಕಾರಿಯಾದರೂ ಇದರ ಮಾಂಸವನ್ನು ತಿನ್ನುವುದಕ್ಕೂ, ಚರ್ಮವನ್ನು ಕೈಚೀಲಗಳಂತಹ ಸಾಮಾನುಗಳನ್ನು ತಯಾರಿಸಲೂ ಬಳಸುವರು. (ಟಿ.ವಿ.ಎಚ್.)

**ಅಲಿಗೋಕೀಟ:** ಅನೆಲಿಡಾ (ವಲಯವಂತ) ವಂಶದ ಒಂದು ವರ್ಗ. ಎರಡು ಗಣಗಳನ್ನೊಳಗೊಂಡಿದೆ. ಆರ್ಕಿಅಲಿಗೋಕೀಟ (ಉದಾ: ಟ್ಯೂಬಿಫೆಕ್ಸ್ ಮತ್ತು ಅಯಿಲೋಸೋಮ) ಮತ್ತು ನಿಯೊಅಲಿಗೋಕೀಟ (ಉದಾ: ಫೆರಿಟಿಮ ಮತ್ತು ಮೆಗಸ್ಕೊಲೆಕ್ಸ್). ಈ ಜೀವಿಗಳಲ್ಲಿ ವಲಯವಂತಿಕೆ, ದೇಹದಲ್ಲಿ ಮಧ್ಯಾಂತರ ಅವಕಾಶ (ಸೀಲೊಮ್), ವಲಯಗಳ ಮಧ್ಯೆ ಅಡ್ಡಪೊರೆ (ಸೆಪ್ಟ), ನರವ್ಯೂಹ, ರಕ್ತಪರಿಚಲನಾವ್ಯೂಹ, ಪ್ರತಿವಲಯದಲ್ಲಿಯೂ ವಿಸರ್ಜನೆನಾಳಗಳು, ಉತ್ಪತ್ತಿಅಂಗಗಳು ಮತ್ತು ಮೃದುವಾದ ಉದ್ದನೆಯ ಖಂಡಗಳಿಂದಾದ ದೇಹ, ಮುಂತಾದ ಗುಣಗಳಿವೆ. ಬಿರುಗೂದಲುಗಳು (ಸಿಟೇ) ಪ್ರತಿವಲಯದಲ್ಲಿಯೂ ಬಿಡಿಬಿಡಿಯಾಗಿ ದೇಹದಗೋಡೆಯಲ್ಲಿ ಅಡಕವಾಗಿದ್ದು, ಚಲನೆಗೆ ಸಹಾಯಕವಾಗಿವೆ.

ಮುಖ್ಯ ಲಕ್ಷಣ: ತೇವಭರಿತ ಭೂಮಿಯಲ್ಲಿ ಅಥವಾ ಕೆಲವು ಸಿಹಿನೀರಿನಲ್ಲಿ ವಾಸ. ನಿಖರವಾದ ತಲೆ, ಕಣ್ಣು ಮತ್ತು ರುಂಡ ತಂತುಗಳಿಲ್ಲ ಚಲನಾಂಗಗಳು (ಪರಾಪೊಡಿಯ) ಬಿರುಗೂದಲು, ಪಾರ್ಶ್ವಪಾದಗಳು; ದೇಹದ ಮುಂಭಾಗದಲ್ಲಿ ಒಂದು ಪಟ್ಟಿ ಕೈಟೆಲಂ– ಅಥವ ಕಡಗದಂತಹ ರಚನೆ ಇದೆ. ದವಡೆಯಲ್ಲಿ ಹಲ್ಲಿನಂತ ರಚನೆ ಇಲ್ಲ. ಇವು ಏಕಲಿಂಗಿಗಳು, ಗರ್ಭಧರಿಸಿದ ತತ್ತಿಗಳು ಲೋಳೆಸಂಚಿಯಲ್ಲಿ (ಕಕೂನ್) ಮರಿಹಂತವನ್ನು ತಲುಪದೆ ನೇರ ಬೆಳೆಯುತ್ತವೆ.

1) ಆರ್ಕಿಅಲಿಗೋಕೀಟ: ಈ ಗಣದಲ್ಲಿರುವ ಜೀವಿಗಳು ಸಿಹಿನೀರು ವಾಸಿಗಳು. ದೇಹದಲ್ಲಿ ಖಂಡಗಳ ಸಂಖ್ಯೆ ಕಡಿಮೆ. ಕೈಟಿಲಂ ಅಥವ ಪಟ್ಟಿ ಅಸ್ಪಷ್ಟ, ಜೀರ್ಣಾಂಗದಲ್ಲಿ ಗಿಜರ್ಡ್ ಇಲ್ಲ. ಪುರುಷ ಜನನೇಂದ್ರಿಯ, ಸ್ತ್ರೀಜನನೇಂದ್ರಿಯದ ಮುಂಭಾಗದಲ್ಲಿ ಇದೆ. ಸಂತಾನಕ್ರಿಯೆ ಅಲಿಂಗ ಮತ್ತು ಲಿಂಗ ರೀತಿಯಲ್ಲಿ ನಡೆಯುತ್ತದೆ. ಈ ಗಣಕ್ಕೆ ಸೇರಿದ ಮುಖ್ಯ ಜೀವಿಗಳು – ಟ್ಯೂಬಿಫೆಕ್ಸ್, ಅಯಿಲೋಸೋಮ, ಕೀಟೊಗ್ಯಾಸ್ಟರ್, ಬ್ರಾಂಕಿಯೊಡ್ರಿಲಸ್, ಕ್ರಿಸ್ಪಿನಾ ಮುಂತಾದುವು.

ಟೂಬಿಫೆಕ್ಸ್ – ಸಿಹಿನೀರಿನ ತಳದಲ್ಲಿ ಮಣ್ಣು ಮತ್ತು ಲೋಳೆಯಿಂದ ನಳಿಕೆ ಯಂತಹ ಗೂಡುಗಳಲ್ಲಿ ವಾಸಮಾಡುತ್ತದೆ. ತೊಟ್ಟಿಯ ತಳದಲ್ಲಿ (ಬಹಳ ದಿವಸ ನಿಂತ ನೀರಿನಲ್ಲಿ) ಒಂದು ಇಂಚಿನ ವಕ್ರ ವಕ್ರವಾಗಿ ಅಂಟಿಕೊಂಡ ಗೂಡುಗಳಲ್ಲಿ ಟೂಬಿಫೆಕ್ಸ್ ಹುಳು ಜೀವಿಸುತ್ತದೆ. ಇದರ ಉದ್ದ 3–4 ಸೆಂಮೀ. ಇವು ಕೆಂಪು ಬಣ್ಣದಿಂದಿರುವುದರಿಂದ ಬ್ಲಡ್‌ವರ್ಮ್ಸ್ (ರಕ್ತದಹುಳು) ಎಂದು ಗ್ರಹಿಕೆ ಇದೆ. ಕೈಟಲಂ 11–12ನೇ ವಲಯದಲ್ಲಿದೆ. ಗಂಡು ಜನನೇಂದ್ರಿಯ 11ನೇ ವಲಯದಲ್ಲಿ ಮತ್ತು ಹೆಣ್ಣು ಜನನೇಂದ್ರಿಯ 12ನೇ ವಲಯದಲ್ಲಿದೆ. ನೋಡಲು ಎರೆಹುಳುವಿನಂತೆ ಕಾಣುವುದು. ಬಿರುಗೂದಲು ದೇಹದ ಮೇಲ್ಭಾಗ ಮತ್ತು ಕೆಳಭಾಗಕ್ಕೆ ಗುಂಪು ಗುಂಪಾಗಿ ಅಂಟಿಕೊಂಡಿವೆ. ಪ್ರತಿಯೊಂದು ಬಿರುಗೂದಲಿನ ತುದಿ ಕವಲೊಡೆದಿರುವುದು. ಸಂತಾನ ಲಿಂಗರೀತಿಯಲ್ಲಿದೆ. ಈ ಹುಳುಗಳನ್ನು ಮೀನು ಸಾಕುವವರು ಮೀನಿನ ಆಹಾರವನ್ನಾಗಿ ಉಪಯೋಗಿಸುತ್ತಾರೆ.

ಅಯಿಲೋಸೋಮ: ಸಿಹಿನೀರ ವಾಸಿ. ಜಲಸಸ್ಯಗಳ ಮತ್ತು ಕೆಲವು ಜಾತಿಯ ಶಂಕುಹುಳಗಳಿಗೆ ಅಂಟಿಕೊಂಡಿರುತ್ತದೆ. ದೇಹ ಪಾರದರ್ಶಕವಾಗಿದ್ದು, ಚಪ್ಪಟೆಯಾಗಿದೆ. ಮುಂಭಾಗದಲ್ಲಿ ಒಂದು ತುಟಿ (ಪ್ರೊಸ್ಟೊಮಿಯಂ) ಇದೆ. ದೇಹವು ಸು. 8–10 ಖಂಡಗಳನ್ನೊಳಗೊಂಡಿದೆ. ಬಿರುಗೂದಲು ಗುಂಪು ಗುಂಪಾಗಿ ಎಲ್ಲಾ ಖಂಡಗಳಲ್ಲಿವೆ. ಕೈಟಿಲಂ ದೇಹದ ತಳಭಾಗ 5–7 ಖಂಡಗಳಲ್ಲಿವೆ. ಇವುಗಳಲ್ಲಿನ ನರವ್ಯೂಹ ಅಸ್ಪಷ್ಟವಾಗಿದೆ. ಆದರೆ, ನರತಂತುಗಳು ಪ್ರಸರಿಸಿರುವುವು. ಇವು ನಿರ್ಲಿಂಗ ರೀತಿಯಲ್ಲಿ, ದೇಹವನ್ನು ಆಗಿಂದಾಗ್ಗೆ ಅಡ್ಡವಾಗಿ ಸೀಳಿ ದ್ವಿಗುಣವಾಗುತ್ತವೆ. ಲಿಂಗರೀತಿಯಿಂದಲೂ ಸಂತಾನ ಕೈಗೊಳ್ಳುತ್ತವೆ.

2) ನಿಯೊಅಲಿಗೋಕೀಟ: ತೇವಭರಿತಭೂಮಿಯಲ್ಲಿ ವಾಸಿಸುತ್ತದೆ. ಮಣ್ಣುಹುಳು ಎನ್ನುವರು. ದೇಹ ಗುಂಡಾಗಿದ್ದು, ಅನೇಕ ವಲಯಗಳಿಂದಾಗಿದೆ. ಉದ್ದ 3–30 ಸೆಂಮೀ ಬಿರುಗೂದಲು ಎಲ್ಲಖಂಡಗಳಿಗೂ ಸೀಮಿತವಾಗಿ ಬಿಡಿಬಿಡಿಯಾಗಿವೆ. ಕೈಟೆಲಂ ಮಣ್ಣು ಹುಳಗಳಲ್ಲಿ ಕೆಲವು ಖಂಡಗಳು ಸೇರಿ ಕಡಗದಂತೆ ಸ್ಪಷ್ಟವಾಗಿರುವುದು ( 14 ರಿಂದ 16 ಅಥವಾ 17ನೇ ಖಂಡಗಳಲ್ಲಿ ಮಾತ್ರ ಇವೆ). ಹೆಣ್ಣು ಜನನೇಂದ್ರಿಯವು ಕೈಟೆಲಂ ಕೆಳಭಾಗದಲ್ಲಿದೆ. ಗಂಡು ಜನನೇಂದ್ರಿಯ ಕೈಟೆಲಂ ಹಿಂಭಾಗದಲ್ಲಿದೆ. ಗಂಡು ಜನನೇಂದ್ರಿಯದಲ್ಲಿ ತಳ ಸಂತಾನಕ್ರಮ ಲಿಂಗಗಳಿಂದ ಮಾತ್ರ. ನಿರ್ಲಿಂಗ ರೀತಿಯ ಸಂತಾನ ಇಲ್ಲ.

ಈ ಗಣದಲ್ಲಿ ವಿವಿಧ ಎರೆಹುಳುಗಳಿವೆ. ಉದಾ: ಫೆರಿಟಿಮಾ, ಮೆಗಸ್ಕೊಲೆಕ್ಸ್, ಲುಂಬ್ರಿಕಸ್. ಭೂಮ್ಯಾಂತರ್ಗತದಲ್ಲಿ ತಾವೇ ತೋಡಿದ ಬಿಲಗಳಲ್ಲಿ ಇವುಗಳ ವಾಸ. ಇವುಗಳನ್ನು ರೈನ್‌ವರ್ಮ್ಸ್ (ಮಳೆಹುಳು) ಎನ್ನುವರು. ಕಾರಣ, ಮಳೆ ಬಂದನಂತರ ಇವು ಭೂಮಿಯಿಂದ ಹೊರಬರುತ್ತವೆ. ಮಣ್ಣು ಹುಳುಗಳು ತೇವಭರಿತ ಪ್ರದೇಶದಲ್ಲಿ, ಗದ್ದೆಗಳಲ್ಲಿ, ತೋಟಗಳಲ್ಲಿ ಅಧಿಕವಾಗಿ ಸಿಗುತ್ತವೆ. ಇವುಗಳ ಆಹಾರ ಮಣ್ಣು. ಮಣ್ಣನ್ನು ತಿನ್ನುತ್ತಾ ನೆಲಕೊರೆದು ಬಿಲಮಾಡಿಕೊಳ್ಳುತ್ತವೆ. ತಿಂದ ಮಣ್ಣಿನಲ್ಲಿ ದೊರಕಬಹುದಾದ ಪೋಷಕಾಂಶಗಳನ್ನು ಹೀರಿ ಅಸನದ ಮೂಲಕ ಕುಪ್ಪಲು ಮಣ್ಣನ್ನು ಬಿಲದಿಂದ ಹೊರಹಾಕುತ್ತವೆ. ಈ ರೀತಿ ಎರೆಹುಳುಗಳು ಭೂಮಿಯನ್ನು ಸಡಿಲಿಸಿ, ಗಾಳಿಬೆಳಕಿಗೆ ನಿಲುಕುವಂತೆ ಮಾಡಿ ಬೆಳೆ ಫಲವತ್ತಾಗುವಂತೆ ಮಾಡುತ್ತವೆ. ತಿಂದ ಮಣ್ಣನ್ನು ದೇಹದಿಂದ ಹೊರಹಾಕುತ್ತವೆ. ಆದ್ದರಿಂದ ಈ ಹುಳಗಳನ್ನು ರೈತನ ಬಂಧು ಎನ್ನುವರು.

ಭಾರತದಲ್ಲಿ ಎರಡು ಜಾತಿಗೆ ಸೇರಿದ ಮಣ್ಣುಹುಳುಗಳಿವೆ. ಮೆಗಸ್ಕೊಲೆಕ್ಸ್ ಮತ್ತು ಫೆರಿಟಿಮಾ.

ಮೆಗಸ್ಕೊಲೆಕ್ಸ್ – ಬಿರುಗೂದಲು (ಸಿಟೇ) ಎಲ್ಲ ಖಂಡಗಳಲ್ಲಿ ವರ್ತುಲಾಕಾರಾವಾಗಿ ಅಂಟಿರುತ್ತವೆ. ಕೈಟೆಲಂ 14, 15, 16, 17ನೇ ಖಂಡಗಳ ಸಂಘಟಿತದಿಂದಾಗಿದೆ. ವಿಸರ್ಜನಾನಾಳಗಳು (ನೆಫ್ರಿಡಿಯಾಗಳು) ಮೆಗನೆಫ್ರಿಡಿಯ, ಮೈಕ್ರೊನೆಫ್ರಿಡಿಯಾ ಫ್ಯಾರಿಂಜಿಯಲ್ ನೆಫ್ರಿಡಿಯಾ ಇವೆ. ರಕ್ತ ಪರಿಚಲನಾವ್ಯೂಹದಲ್ಲಿ ಪಕ್ಕೆ ಹೃದಯಗಳು 8 ಜೊತೆ ಇವೆ. ಇವು 6 ರಿಂದ 13 ನೇ ವಲಯಗಳಲ್ಲಿ ಇವೆ.ರೇತಸ್ಸಿನ ಸಂಚಿ 9 ರಿಂದ 12 ನೇ ಖಂಡಗಳಲ್ಲಿ ಒಂದೊಂದು ಜೊತೆ ಇವೆ. ಪ್ರಾಸ್ಟ್ರೇಟ್ ಗ್ರಂಥಿ ಒಂದು ಜೊತೆ, ಇವು 18/19 ನೇ ಖಂಡಗಳಿಗೆ ಸೀಮಿತ. ಸಂತಾನೋತ್ಪತ್ತಿ ಕಾಲದಲ್ಲಿ ಎರಡು ಹುಳುಗಳು ಹಿಂದುಮುಂದಾಗಿ ಸಂಭೋಗ ನಡೆಸಿ ವೀರ್ಯಾಣುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತವೆ. ಅನಂತರ ಕೈಟಿಲಂ ಸುತ್ತ ಲೋಳೆಕಡಗವನ್ನು ಉತ್ಪತ್ತಿ ಮಾಡಿಕೊಂಡು ಅದನ್ನು ಮುಂದಕ್ಕೆ ಸರಿಸುತ್ತಾ ಹೋಗುವಾಗ, ಇದರಲ್ಲಿಟ್ಟ ತತ್ತಿಗಳು, ಈ ಕಡಗ 9,8,7,6 ವಲಯಗಳ ಮೂಲಕ ಹೋಗುವಾಗ ರೇತಸ್ಸಿನ ಸಂಚಿಗಳಿಂದ ವಿರ್ಯಾಣುಗಳು ಹೊರಬಿದ್ದ ನಂತರ ಅಂಡಸಂಚಿ (ಕಕೂನ್) ಯಲ್ಲಿ ಬಿಲದಲ್ಲಿಡಲಾಗುವುದು. ಇದರಿಂದ ಎರೆಹುಳು ಮಳೆಗಾಲಕ್ಕೆ ಸರಿಯಾಗಿ ಬೆಳೆದು ಹೊರಬರುತ್ತವೆ.

ಫೆರಿಟಿಮಾ: ಬಿರುಗೂದಲು ಎಲ್ಲ ಖಂಡಗಳಲ್ಲಿಯೂ ವರ್ತುಲಾಕಾರವಾಗಿ ಅಂಟಿರುತ್ತವೆ. ಕೈಟೆಲಂ 14–16ನೇ ಖಂಡಗಳಿಗೆ ಮಾತ್ರ ಸೀಮಿತ. ವಿಸರ್ಜನಾನಾಳಗಳು ಇಂಟೆಗುಮೆಂಟರೀನೆಫ್ರಿಡಿಯಾ, ಸೆಪ್ಟಲ್ ನೆಫ್ರಿಡಿಯಾ ಮತ್ತು ಫ್ಯಾರಿಂಜಿಯಲ್ ನೆಫ್ರಿಡಿಯಾ ಮುಂತಾದುವು ಹೇರಳವಾಗಿವೆ. ರಕ್ತ ಪರಿಚಲನಾವ್ಯೂಹದಲ್ಲಿ ಕೇವಲ 4 ಜೊತೆ ಪಕ್ಕೆ ಹೃದಯಗಳಿವೆ. ಇವು 7,9,12 ಮತ್ತು 13 ನೇ ಖಂಡಗಳಲ್ಲಿವೆ. ರೇತಸ್ಸಿನ ಸಂಚಿಗಳೂ ನಾಲ್ಕು ಜೊತೆ 6,7,8,9ನೇ ಖಂಡಗಳಲ್ಲಿವೆ. ಪ್ರಾಸ್ಟ್ರೇಟ್‌ಗ್ರಂಥಿ 16/17 ರಲ್ಲಿದೆ. ಅಂಡಸಂಚಿ (ಕಕೂನ್) ಯಿಂದ ಹುಳುಗಳು ಬೆಳೆದು ಹೊರಬರುತ್ತವೆ.

ಲುಂಬ್ರಿಕಸ್ಸ್: ಇವು ಇಂಗ್ಲೆಂಡ್ ದೇಶದಲ್ಲಿ ಸಿಗುತ್ತವೆ. ಬಿರುಗೂದಲು ಪ್ರತಿಖಂಡದಲ್ಲಿ ನಾಲ್ಕು ಜೊತೆ ಇವೆ. ಕೈಟಲಂ 33 ರಿಂದ 38 ಖಂಡಗಳಿಗೆ ಸೀಮಿತ. ವಿಸರ್ಜನಾಂಗಗಳು ಪ್ರತಿಖಂಡಗಳಲ್ಲಿ ಇಲ್ಲ. ರೇತಸ್ಸಿನ ಸಂಚಿ ಎರಡು ಜೊತೆ 9 ಮತ್ತು 10 ನೇ ಖಂಡಗಳಲ್ಲಿವೆ. ಗಂಡು ಜನನೇಂದ್ರಿಯ 15 ನೇ ಖಂಡದಲ್ಲಿದೆ. ಸ್ತ್ರೀಜನನೇಂದ್ರಿಯ 14ನೇ ಖಂಡದಲ್ಲಿದೆ. ಇವುಗಳ ಪ್ರಜನನ ಮೆಗಸ್ಕೊಲಕ್ಸ್‌ನಲ್ಲಿರುವಂತೆಯೇ ಇದೆ.

ದೈತ್ಯ ಎರೆಹುಳುಗಳು: ಈಕ್ವೇಡರ್ ಮತ್ತು ಆಸ್ಟ್ರೇಲಿಯ ದೇಶದಲ್ಲಿ 8–10 ಅಡಿ ಉದ್ದದ ದೈತ್ಯ ಎರೆಹುಳುಗಳು ಇವೆ. ಇವುಗಳು ಹೊರಹಾಕುವ ಕುಪ್ಪಲುಮಣ್ಣು ನಕಲಿ ಅಗ್ನಿಪರ್ವತಗಳಂತೆ ಕಾಣುವುವು. ಇವುಗಳನ್ನು ಎರೆಹುಳುವೆನ್ನದೆ ಹಾವುಗಳೆಂದು ಬಹಳಕಾಲ ಅಲ್ಲಿಯ ಜನ ನಂಬಿದ್ದರು. ಇವು ಸಾಧು ಜೀವಿಗಳು. ಇವುಗಳು ರಚನೆ ಮತ್ತು ಸಂತಾನಕ್ರಿಯೆಗಳಲ್ಲಿ ಅಧಿಕ ಕ್ಲಿಷ್ಟತೆಯನ್ನು ತೋರಿಸುವುವು. (ಜಿ.ಎಂ.ಬಿ.)

**ಅಲೀಲ್:** ಜೀನ್ (ಗುಣಾಣು)ಗಳ ಎರಡು ಅಥವಾ ಹೆಚ್ಚು ರೂಪಗಳು 1909ರಲ್ಲಿ ಜೋಹಾನ್ಸನ್ ಇವುಗಳನ್ನು ಅಲಿಲೋಮಾರ್ಫ್ ಎಂದು ಕರೆದ. ಅನಂತರ ಇದಕ್ಕೆ ಅಲೀಲ್ ಎಂಬ ಪದವನ್ನು ಬಳಸಲಾಯಿತು. ಎರಡು ಅಲೀಲುಗಳು ಯಾವಾಗಲೂ ಒಂದೇ ಲಿಂಗಾಣುವಿನಲ್ಲಿರುವುದಿಲ್ಲ. ಸಾಧಾರಣವಾಗಿ ಹೆಚ್ಚು ಹೆಚ್ಚು ಅಲೀಲುಗಳು ಉದ್ಭವಿಸುವದಕ್ಕೆ ಜೀನ್‌ಗಳ ವಿಕೃತಿ (ಮ್ಯುಟೇಷನ್) ಕಾರಣ. ಬಟಾಣಿ ಕಾಳಿನಲ್ಲಿ ಗುಂಡು ಮತ್ತು ಸುರುಟಿಕೊಂಡ ಕಾಳುಗಳು, ಬೀಜದ ಪ್ರಕೃತಿಯನ್ನು ನಿರ್ಧರಿಸುವ ಗುಣಾಣುವಿನ ಎರಡು ಅಲೀಲುಗಳಿಗೆ ಉದಾಹರಣೆ.

ಒಂದೇ ರೀತಿಯ ಅಲೀಲುಗಳನ್ನು ಹೊಂದಿರುವ ದ್ವಿಯಾಂಶಿ (ಡಿಪ್ಲಾಯ್ಡ್) ಪ್ರಾಣಿ ಅಥವಾ ಸಸ್ಯವನ್ನು ಸಮಯುಗ್ಮ (ಹೋಮೊಜೈಗಸ್) ಸ್ಥಿತಿ ಎಂದೂ, ಒಂದೇ ಗುಣಾಣುವಿನ ಬೇರೆ ಬೇರೆ ಅಲೀಲುಗಳನ್ನು ಹೊಂದಿದ್ದರೆ ಭಿನ್ನಯುಗ್ಮ (ಹೆಟ್ರೋಜೈಗಸ್) ಸ್ಥಿತಿ ಎಂದೂ ಕರೆಯಲಾಗುವುದು. ಸಾಮಾನ್ಯವಾಗಿ ಭಿನ್ನಯುಗ್ಮ ಸ್ಥಿತಿಯಲ್ಲಿರುವ ಗುಣಾಣುವಿನ ಎರಡು ಅಲೀಲುಗಳ ಪೈಕಿ ಒಂದೇ ಅಲೀಲು ಪ್ರಾಣಿಯ ತೋರು ಮಾದರಿ (ಫೀನೊಟೈಪ್) ಯಲ್ಲಿ ಕಾಣಿಸುತ್ತದೆ. ಇಂತಹ ಅಲೀಲನ್ನು ಪ್ರಬಲ ಅಲೀಲು ಎಂದೂ ತೋರು ಮಾದರಿಯಲ್ಲಿ ಕಾಣಿಸದ ಅಲೀಲನ್ನು ದುರ್ಬಲ ಅಥವಾ ಹಿಂಜರಿಕ ಅಲೀಲು ಎಂದೂ ಕರೆಯಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅಸಂಪೂರ್ಣ ಪ್ರಬಲತೆ (ಇನ್‌ಕಂಪ್ಲೀಟ್ ಡಾಮಿನೆನ್ಸ್) ಕಂಡುಬರುತ್ತದೆ. ಶಂಖಪುಷ್ಪ ಸಸ್ಯದ ಹೂಗಳ ವರ್ಣವನ್ನು ನಿರ್ಧರಿಸುವ ಗುಣಾಣುಗಳು ಇದಕ್ಕೆ ಉದಾಹರಣೆ. ಈ ಸಸ್ಯದ ಹೂಗಳಲ್ಲಿ ಕೆಂಪುವರ್ಣದ ಅಲೀಲುಗಳು ಸಮಯುಗ್ಮ ಸ್ಥಿತಿಯಲ್ಲಿದ್ದರೆ ಹೂಗಳು ಕೆಂಪಾಗಿಯೂ ಬಿಳಿ ಅಲೀಲುಗಳು ಸಮಯುಗ್ಮ ಸ್ಥಿತಿಯಲ್ಲಿದ್ದರೆ ಹೂವು ಬಿಳಿವರ್ಣದ್ದಾಗಿರುತ್ತದೆ. ಆದರೆ ಕೆಂಪು ಮತ್ತು ಬಿಳಿ ವರ್ಣದ ಗುಣಾಣುಗಳು ಭಿನ್ನಯುಗ್ಮ ಸ್ಥಿತಿಯಲ್ಲಿದ್ದರೆ ಮಧ್ಯಮ ವರ್ಣವಾದ ತಿಳಿ ನೀಲಿ ಹೂಗಳು ಉಂಟಾಗುತ್ತವೆ. ಅಲೀಲುಗಳಲ್ಲಿ ಪ್ರಬಲತೆ ಇಲ್ಲದಾಗ ಅವುಗಳ ಆನುವಂಶೀಯತೆ ಮೆಂಡಲನ ಮೊದಲನೆಯ ನಿಯಮದ ಪ್ರಕಾರ 3:1 ಅನುಪಾತವನ್ನು ಅನುಸರಿಸುವುದಿಲ್ಲ.

ಅಲೀಲುಗಳಲ್ಲಿ ಸರ್ವೆ ಸಾಮಾನ್ಯವಾಗಿ ಕಾಣಬರುವ ಅಲೀಲನ್ನು ಕಾಡು ಮಾದರಿ ಎಂದು ಕರೆಯಲಾಗುತ್ತದೆ. ಇದು ಮೊಟ್ಟ ಮೊದಲು ವಿಕಾಸವಾದ ಅಲೀಲು ಎಂದು ನಂಬಲಾಗಿದೆ. ಈ ಕಾಡು ಮಾದರಿಯ ವಿಕೃತಿಯಿಂದ ಉಂಟಾಗುವ ಇನ್ನಿತರ ಅಲೀಲುಗಳನ್ನು ವಿಕೃತ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಕಾಡು ಮಾದರಿಯ ಅಲೀಲು ವಿಕೃತ ಅಲೀಲುಗಳ ಮೇಲೆ ಪ್ರಬಲವಾಗಿರುತ್ತದೆ. ಆದರೆ ಇದೇನೂ ನಿಯಮವಲ್ಲ. ವಿಕೃತ ಪ್ರಬಲ ಅಲೀಲುಗಳೂ ಇವೆ.

ಕೋಳಿ ಜುಟ್ಟಿನ (ಶಿಖೆಯ) ಪ್ರಕೃತಿಯನ್ನು ನಿರ್ಧರಿಸುವಲ್ಲಿ ಎರಡು ಗುಣಾಣುಗಳ ಅಲೀಲುಗಳೂ ಒಟ್ಟಿಗೆ ಕೂಡಿ ಅವುಗಳ ಪ್ರತಿಕ್ರಿಯೆಯಿಂದ ತೋರು ಮಾದರಿ ಮಾರ್ಪಡುತ್ತದೆ. ಇಂತಹ ಅಲೀಲುಗಳ ಸಂಯೋಗ ಕ್ರಿಯೆಗೆ ಕಾರಣವಾದ ಪೂರಕತ್ವ, ಅಲೀಲುಗಳ ಅಭಿಸ್ತಂಭನ, ಅಧಃಸ್ತಂಭನ, ದ್ವಿಗುಣ ಗುಂಪುಗಳು ಇತ್ಯಾದಿಗಳೂ ಕೂಡ ಮೆಂಡಲನ ಸಾಮಾನ್ಯ ಅನುಪಾತವನ್ನು ವ್ಯತ್ಯಯಗೊಳಿಸುತ್ತವೆ.

ಅಲೀಲುಗಳ ಅಧ್ಯಯನದಲ್ಲಿ ಅತಿ ಮುಖ್ಯವಾದುದೆಂದರೆ ಬಹು ಅಲೀಲುಗಳು (ಮಲ್ಟಿಪಲ್ ಅಲೀಲ್ಸ್). ಮೊಲಗಳಲ್ಲಿ ಕಾಡು ಮಾದರಿಯವು ಕಂದು ಬಣ್ಣದ್ದಾಗಿದ್ದು ಅದನ್ನು ಅಗೂಟಿ ಮಾದರಿ ಎಂದು ಕರೆಯಲಾಗುತ್ತದೆ. ಬಿಳಿ ಇದರ ಇನ್ನೊಂದು ಅಲೀಲು. ಅಗೂಟಿ ಮತ್ತು ಬಿಳಿ ಮೊಲಗಳ ಸಂಕರದಲ್ಲಿ ಎರಡನೆಯ ತಳಿಯಲ್ಲಿ ಮೆಂಡಲನ 3:1 ಅನುಪಾತದಲ್ಲಿ ಮರಿಗಳು ಜನಿಸಿ ಅಗೂಟಿಯ ಪ್ರಬಲತೆಯನ್ನು ತೋರಿಸುತ್ತದೆ. ಹಿಮಾಲಯ ಎಂಬ ಮಾದರಿಯಲ್ಲಿ ಕಂದುಬಣ್ಣದ ಶರೀರವೇ ಇದ್ದು ಕಾಲು, ಬಾಲ, ಕಿವಿ ಮತ್ತು ಮೂಗುಗಳ ತುದಿಯಲ್ಲಿ ಬೆಳ್ಳಗಿರುತ್ತದೆ. ಕಣ್ಣುಗಳು ನೀಲಿ ಬಣ್ಣದ್ದಾಗಿರುತ್ತವೆ. ಅಗೂಟಿ ಹಿಮಾಲಯದ ಮಾದರಿಯ ಮೇಲೆ ಪ್ರಬಲತೆಯನ್ನು ತೋರಿದರೆ, ಹಿಮಾಲಯ ಮಾದರಿ ಬಿಳಿಚಿತ್ವದ ಮೇಲೆ ಪ್ರಬಲತೆಯನ್ನು ತೋರಿಸುತ್ತದೆ. ಈ ಪರಿಣಾಮಕ್ಕೆ ಬಹು ಅಲೀಲುಗಳೇ ಕಾರಣ. ಬಹು ಅಲೀಲುಗಳು ಒಂದು ಗುಣಾಣುವಿನಲ್ಲಿ ಒಂದರ ಅನಂತರ ಇನ್ನೊಂದರಂತೆ ಉಂಟಾಗುವ ವಿಕೃತಿಗಳಿಂದಾಗಿ ಉಂಟಾಗುತ್ತದೆ. ಮನುಷ್ಯನ, ಎ,ಬಿ,ಒ. ರಕ್ತದ ಗುಂಪುಗಳನ್ನು ನಿರ್ಧರಿಸುವ ಗುಣಾಣುಗಳು, ಡ್ರೊಸೋಫಿಲಾದ ಕಣ್ಣಿನ ವರ್ಣವನ್ನು ನಿರ್ಧರಿಸುವ ಗುಣಾಣುಗಳು ಬಹು ಅಲೀಲುಗಳಿಗೆ ಉದಾಹರಣೆಗಳು. (ಎಸ್.ಎನ್.ಎಚ್.)

**ಅಲೈಟಿಸ್:** ಇದು ಒಂದು ನೆಲಗಪ್ಪೆ (ಟೋಡ್). ಸೂಲಗಿತ್ತಿ ಕಪ್ಪೆ (ಮಿಡ್‌ವೈಫ್ ಟೋಡ್) ಎಂದೂ ಹೆಸರಿದೆ. ಡೀಮಾರ್ಸ್ ಎಂಬ ವಿಜ್ಞಾನಿ (1724) ಈ ಕಪ್ಪೆಯ ವಿವರ ನೀಡಿದ್ದಾನೆ. ತಮ್ಮ ತತ್ತಿಗಳನ್ನು ರಕ್ಷಿಸುವುದರಲ್ಲಿ ಅಧಿಕ ಆಸಕ್ತಿ ವಹಿಸುವ ಈ ದ್ವಿಚರಪ್ರಾಣಿಗೆ ಸೂಲಗಿತ್ತಿ ಕಪ್ಪೆ ಎಂಬ ಹೆಸರು ಉಚಿತವಾಗಿದೆ. ಇದರ ಉದ್ದ ಸುಮಾರು 5 ಸೆಂಮೀ ದೇಹಾಕೃತಿ ಸ್ವಲ್ಪಮಟ್ಟಿಗೆ ಗುಂಡು. ಮೈಮೇಲಿನ ಮಾಸಲು ಬೂದುಬಣ್ಣದ ಚರ್ಮ ಸದಾ ತೇವಯುತ. ಅಗಲವಾದ ಕಣ್ಣುಗಳು, ನೆಟ್ಟಗೆ ನಿಂತಿರುವ ಕಣ್ಣುಪಾಪೆ, ಬಾಯಿಯ ಮೇಲು ದವಡೆ ಮತ್ತು ಮೇಲಂಗುಳಗಳಲ್ಲಿ ಹಲ್ಲುಗಳು ಮತ್ತು ಗುಂಡಾದ ಅಂಟುಳ್ಳ ನಾಲಗೆ ಇದರ ಕೆಲವು ವಿಶಿಷ್ಟ ಲಕ್ಷಣಗಳು. ಈ ಕಪ್ಪೆ ಮಂದಗಮನದ ನಿಶಾಚರ ಪ್ರಾಣಿ. ಕೆಲವು ಸ್ತನಿಗಳು ಭೂಮಿಯ ಮೇಲೆ ರಚಿಸಿದ ಬಿಲಗಳನ್ನು ಈ ಕಪ್ಪೆ

ಹಗಲಲ್ಲಿ ತನ್ನ ಏಕಾಂತವಾಸಕ್ಕೆ ಆರಿಸುತ್ತದೆ. ಸಂಜೆಯ ಹೊತ್ತಿಗೆ ಸಿಳ್ಳು ಹಾಕುವ ಧ್ವನಿ ಮಾಡಿಕೊಂಡು ಹೊರಬರುತ್ತದೆ. ಗಂಡು ಹೆಣ್ಣು ಕಪ್ಪೆಗಳು ಕೂಡಿದ ಮೇಲೆ ಹೆಣ್ಣು ಕಪ್ಪೆ ಗರ್ಭಕಟ್ಟಿದ ತತ್ತಿಗಳನ್ನು ಭೂಮಿಯ ಮೇಲೆ ಇಡುತ್ತದೆ. ಇದರ ಕಾಲ ವಸಂತ ಮತ್ತು ಗ್ರೀಷ್ಮಋತುಗಳು. ಹಳದಿ ಬಣ್ಣದ ದೊಡ್ಡ ತತ್ತಿಗಳು ಮಣಿಗಳಂತೆ ಎರಡು ಮೂಲೆಗಳಲ್ಲಿ ಕೂಡಿರುತ್ತವೆ. ತತ್ತಿಗಳ ರಕ್ಷಣೆಗೆ ಅವುಗಳ ಸುತ್ತ ಒಂದು ಲೋಳೆ ಆವರಿಸಿರುತ್ತದೆ. ಗರ್ಭಕಟ್ಟಿದ ಅನಂತರ ಗಂಡುಕಪ್ಪೆ ತತ್ತಿಗಳ ಮಾಲೆಯನ್ನು ತನ್ನ ಹಿಂದಿನ ಕಾಲುಗಳ ಮಧ್ಯೆ ಹೆಣೆದುಕೊಳ್ಳುತ್ತದೆ. ತತ್ತಿಗಳಲ್ಲಿ ಭ್ರೂಣ ಮೂರು ವಾರಗಳಲ್ಲಿ ಬೆಳೆಯುತ್ತದೆ. ಲೋಳೆಯಿಂದ ಆವೃತವಾದ ಕೋಶಗಳಿಂದ ಕಪ್ಪೆಯ ಮರಿಗಳು ಹೊರಬರುವ ವೇಳೆಗೆ ಗಂಡುಕಪ್ಪೆ ನೀರನ್ನು ಪ್ರವೇಶಿಸುತ್ತದೆ. ಅನಂತರ ಗೊದಮೊಟ್ಟೆಗಳು ಅಥವಾ ಮರಿಗಳು (ಟ್ಯಾಡ್‌ಪೋಲ್ ಲಾರ್ವ) ನೀರಿನಲ್ಲೇ ಜೀವಿಸುತ್ತ ರೂಪಾಂತರ ಹೊಂದಿ ಪ್ರೌಢ ಜೀವಿಗಳಾಗುತ್ತವೆ. (ಎಚ್.ಎಸ್.ಎನ್.)

ಅಲೈಟಿಸ್

**ಅಲ್ಪಾಕ:** ಈಕ್ವೆಡರ್ ಮತ್ತು ಪೆರುದೇಶಗಳಿಂದ ಪೆಟಗೋನಿಯ ಬಯಲುಗಳವರೆಗೆ ಹಬ್ಬಿರುವ ದಕ್ಷಿಣ ಅಮೆರಿಕದ ಕಾಡಿನಲ್ಲಿ ನೆಲೆಸಿರುವ ಗ್ವಾನೂಕೋ ಎಂಬ ಮೃಗ ಸಂತತಿಗೆ ಸೇರಿದ ಪ್ರಾಣಿ. ಲಾಮ ಪಕೋಸ್ ವೈಜ್ಞಾನಿಕ ಹೆಸರು. ಇದು ಒಂಟೆಯ ವಂಶಕ್ಕೆ ಸೇರಿದೆ. ಆ ಜಾತಿಗಳಿರುವಂತೆಯೇ ನೀಳವಾದ ಕತ್ತಿದೆ; ಆದರೆ ಕೊಂಕಾಗಿಲ್ಲ. ಇದಕ್ಕೆ ಡುಬ್ಬವೂ ಇಲ್ಲ. ಇವು ಲಾಮಗಳಿಗಿಂತಲೂ ಸಣ್ಣವು. ಅಲ್ಪಾಕ ನೋಡಲು ವಿಕಾರ. ಒರಗುವ ಕುರ್ಚಿಗೆ ಕಂಬಳಿ ಹೊದಿಸಿ ಅದಕ್ಕೆ ಒಂಟೆಯಂಥ ಉದ್ದನೆಯ ಕತ್ತನ್ನು ಜೋಡಿಸಿದಂತೆ ಇದರ ಆಕಾರ.



ಏಷ್ಯಾ ಖಂಡದಲ್ಲಿ ಒಂಟೆಗಳು ಹಿಂದಿನಿಂದ ಉಪಯುಕ್ತವಾಗಿರುವಷ್ಟೇ ಬಹು ಪ್ರಾಚೀನ ಕಾಲದಿಂದ ದಕ್ಷಿಣ ಅಮೆರಿಕದ ಜನರಿಗೆ ಅಲ್ಪಾಕಗಳು ಉಪಯುಕ್ತವಾಗಿವೆ. ಮತ್ಯಾವ ಮೃಗವೂ ಏರಲಾರದ ಎತ್ತರದಲ್ಲಿ 50 ಕಿಗ್ರಾಂ ಗಳಿಗೂ ಹೆಚ್ಚಿನ ತೂಕವನ್ನು ಇವು ಹೊರಬಲ್ಲುವು. ಇದರ ಹಾಲು ಕುಡಿಯಬಹುದು, ಆದರೆ ಅಷ್ಟು ರುಚಿಯಾಗಿಲ್ಲ; ಮಾಂಸ ತಿನ್ನಬಹುದು. ಹೆಣ್ಣು ಅಲ್ಪಾಕ ಹನ್ನೊಂದು ತಿಂಗಳು ಗರ್ಭಧರಿಸಿ ಒಂದೇ ಒಂದು ಕರು ಈಯುತ್ತದೆ. ತುಂಬ ನವಿರಾಗಿಯೂ ಬಲವಾಗಿಯೂ ಇರುವ ಉಣ್ಣೆಗಾಗಿ ಅಲ್ಪಾಕಗಳು ಪ್ರಖ್ಯಾತ. ಪೆರುವಿಯನ್ ಜನ ಇವನ್ನು ಸಹಸ್ರಾರು ವರ್ಷಗಳಿಂದ ಪಳಗಿಸಿಕೊಂಡು ಸಾಕುತ್ತಿದ್ದಾರೆ. ಈ ಉಣ್ಣೆ ಹೊಳೆಗೆಂಪಿನಿಂದ ಕಪ್ಪಿನವರೆಗೆ, ಬಿಳುಪಿನಿಂದ ಬಲು ಬಗೆಯ ಕಂದು ಬಣ್ಣಗಳವರೆಗೆ ಅನೇಕ ತರದ ಬಣ್ಣಗಳಲ್ಲಿ ದೊರೆಯುತ್ತದೆ. ಉಣ್ಣೆ ತುಂಬ ಉದ್ದವಾಗಿ ಜಡೆಗಟ್ಟಿರುತ್ತದೆ. ಬೊಲೀವಿಯ ಮತ್ತು ದಕ್ಷಿಣ ಪೆರುವಿನ ಪ್ರಸ್ಥಭೂಮಿಗಳಲ್ಲಿ, 4500 ಮೀ ಗಳಿಗೂ ಹೆಚ್ಚಿನ ಎತ್ತರದಲ್ಲಿ ಇವುಗಳನ್ನು ವರ್ಷಾದ್ಯಂತ ದೊಡ್ಡ ದೊಡ್ಡ ದೊಡ್ಡಿಗಳಲ್ಲಿ ಸಾಕುತ್ತಾರೆ. ಉಣ್ಣೆಯಿಳಿಸುವ ಕಾಲದಲ್ಲಿ ಪ್ರತಿವರ್ಷವೂ ಇವುಗಳನ್ನು ಹಳ್ಳಿಗಳಿಗೆ ಹೊಡೆಯುತ್ತಾರೆ. ಅದರ ಉಣ್ಣೆಯಲ್ಲಿ ಎರಡು ವಿಧವುಂಟು. ಹವಾಸ್ಕ ಎಂಬುದು ಉದ್ದವೂ ಒರಟೂ ಆದ ಉಣ್ಣೆ; ಅದಕ್ಕಿಂತ ನವಿರಾಗಿಯೂ ಸಣ್ಣದಾಗಿಯೂ ಇರುವ ಉಣ್ಣೆಗೆ ಕುಂಬಿ ಎಂದು ಹೆಸರು. ಇಂಗ್ಲೆಂಡ್ ದೇಶ ಅಲ್ಪಾಕದ ಉಣ್ಣೆಯನ್ನು ತರಿಸಿಕೊಂಡು (1808) ಇದರಿಂದ ದಾರ ತೆಗೆಯಲು ಪ್ರಾರಂಭಿಸಿತು. ಈ ಉಣ್ಣೆಯನ್ನು ಹತ್ತಿಯ ನೂಲಿನೊಡನೆ ಮಿಶ್ರಿಸಿ ಹೊಳಪುಳ್ಳ ನಯವಾದ ಹಲವು ತರಹದ ನೂಲು ತಯಾರಿಸುತ್ತಾರೆ. ಅಲ್ಪಾಕ ಉಣ್ಣೆಯಿಲ್ಲದಿರುವ ಕೆಲವು ಬಟ್ಟೆಗಳಿಗೂ ಈ ಗುಣವಿರುವ ಕಾರಣ ಅಲ್ಪಾಕವೆಂದೇ ಹೆಸರು ಬಂದಿದೆ. (ಎ)

**ಅಲ್ಯೂರೊಡಿಡೆ:** ಹೆಮಿಪ್ಟರ ಗಣದ ಕುಟುಂಬ. ಬಿಳಿನೊಣ ಸಾಮಾನ್ಯ ಹೆಸರು. ಇವು ನೊಣಗಳಲ್ಲ. ಸಿಲ್ಲಡೆ ಮತ್ತು ಏಫಿಡಿಡೆ ಜಾತಿಗೆ ಸಂಬಂಧಿಸಿವೆ. ಏಫಿಡಿಡೆಯ ಸಸ್ಯ ಹೇನುಗಳಿಗೂ ಮತ್ತು ಬಿಳಿನೊಣಗಳಿಗೂ ಇರುವ ವ್ಯತ್ಯಾಸ, ಮೈ ಮತ್ತು ರೆಕ್ಕೆಗಳ ಮೇಲಿರುವ ಬಿಳಿ ಪುಡಿ. ಪ್ರಾಯದ ಕೀಟಗಳೆಲ್ಲಕ್ಕೂ ರೆಕ್ಕೆಗಳಿವೆ. ರೆಕ್ಕೆಗಳ ಅಗಲ ಒಂದು ತುದಿಯಿಂದ ಇನ್ನೊಂದು ತುದಿಗೆ 3 ಮಿಮೀ ಮೊದಲನೆ ಹಂತದ ಅನಂತರ ಚಪ್ಪಟೆ, ಶಲ್ಕಗಳಂತೆ. ನಿಂಫ್‌ಗಳಿಗೆ ಚಿಪ್ಪಿಲ್ಲ. ಪೊರೆ ಬಿಟ್ಟ ನಂತರ ಕಾಲು, ಕುಡಿಮೀಸೆಗಳನ್ನು ಕಳೆದುಕೊಳ್ಳುತ್ತವೆ. ಮೈ ಸುತ್ತ ಸೂಕ್ಷ್ಮವಾದ ಮೇಣದ ತಂತುಗಳಿವೆ. ಪ್ರಾಯದ ಕೀಟಗಳು ಚಿಕ್ಕ ಬಿಳಿ ಪತಂಗಗಳಂತೆ ಕಾಣುತ್ತವೆ. ಸರಳಗಣ್ಣುಗಳೆರಡು (ಸಿಂಪಲ್ ಐಸ್). ಕುಡಿ ಮೀಸೆಗಳು (ಆಂಟೆನ) 7 ಖಂಡಗಳಿಂದಾಗಿವೆ. ಗಂಡು ಹೆಣ್ಣುಗಳೆರಡೂ ಹಾನಿಕರ. ಹೊಟ್ಟೆಯ ತುದಿಯ ಮೇಲೆ ತೆರೆಯುವ ಹೂದಾನಿಯಂತ ರಂಧ್ರವೊಂದಿದೆ. ಅದಕ್ಕೊಂದು ಮುಚ್ಚಳವಿದೆ (ಆಪರ್ ಕ್ಯೂಲಮ್). ಅದು ರಂಧ್ರದೊಳಗಿದೆ. ಮುಚ್ಚಳದ ಕೆಳಗೆ ಅಂಗುಲವೆಂಬ ಪಟ್ಟಿಯಾಕಾರದ ಅಂಗವಿದ್ದು, ಅದರ ಕೆಳಗೆ ಗುದ ತೆರೆಯುತ್ತದೆ. ಅಂಗುಲ ಕೆಲವುಗಳಲ್ಲಿ ಹೊರಕ್ಕೆ ಚಾಚಿರಬಹುದು. ಇದು ಬಿಳಿನೊಣಗಳ ವಿಶಿಷ್ಟ ಅಂಗ. ಹೂದಾನಿ ರಂಧ್ರವೇ ನಾಳ ರಂಧ್ರ. ಇದು ವರ್ಗೀಕರಣದಲ್ಲಿ ಮುಖ್ಯ. ಈ ಕೀಟಗಳಲ್ಲಿ ನಿರ್ಲಿಂಗ ಜನನ ಸಾಮಾನ್ಯ. ಉದಾ: ಟ್ರೈಅಲ್ಯೂರೋಡಿಸ್ ವ್ಯಾಪೊರೇರಿಯೋರಂನ ಒಂದು ಬಗೆಯಲ್ಲಿ ಗಂಡುಗಳು ಮಾತ್ರ. ಈ ಕೀಟಗಳು ಮೊಟ್ಟೆಗಳನ್ನು ಎಲೆಗಳಿಗೆ ಒಂದೆರಡು ಸಾಲುಗಳಲ್ಲಿ ಅಂಟಿಸುತ್ತವೆ. ಮೊಟ್ಟೆಗಳಿಂದ ಲಾರ್ವ ಹೊರಬರುತ್ತದೆ. ಲಾರ್ವ 3 ಹಂತಗಳಲ್ಲಿ ಬೆಳೆದು, ಕೋಶದ ಹಂತಕ್ಕೆ ಬರುತ್ತದೆ. ಮೈಮೇಲೆ ಮಯಣದ ತಂತು, ಕಡ್ಡಿಗಳಂತಹ ರಚನೆಗಳಿವೆ. ಈ ಹಂತದಲ್ಲಿ ಮೊದಲು ಆಹಾರವನ್ನು ತಿನ್ನುತ್ತಿದ್ದು, ಕಡ್ಡಿ, ಎಲೆಗಳಿಗೆ ಅಂಟಿಕೊಂಡು ಅಚಲಿತವಾಗುತ್ತದೆ. ಕೋಶಾವಸ್ಥೆ ಮುಗಿದ ಮೇಲೆ T–ಆಕಾರದ ಬಿರುಕಿನ ಮೂಲಕ ಪ್ರಾಯದ ಕೀಟ ಹೊರ ಬರುತ್ತದೆ. ಇವು ಸಸ್ಯ ರಸವನ್ನು ಹೀರಿ ಹಾನಿ ಮಾಡುತ್ತವೆ. ಕಬ್ಬು, ಕಿತ್ತಳೆ, ಹರಳು, ನೇರಳೆ, ದಾಳಿಂಬ, ಮಲ್ಲಿಗೆ, ಟೊಮ್ಯಾಟೊ ಮೊದಲಾದ ಸಸ್ಯಗಳಿಗೆ ಹಾನಿಕರ.



ಟ್ರೈಅಲ್ಯೂರೋಡಿಸ್
ವ್ಯಾಪೊರೇರಿಯೋರಂ

ಕಬ್ಬಿನ ಬಿಳಿ ನೊಣಗಳು ಅಲ್ಯೂರೊಲೋಬಸ್ ಬ್ಯಾರೊಡೆನ್ಸಿಸ್ ಮತ್ತು ನಿಯೊಮಾಸ್ಕೆಲಿಯ ಬರ್ಗೈ. ಇವು ಕಬ್ಬಿನ ಗರಿಗಳ ರಸವನ್ನು ಹೀರಿ ಬದುಕುತ್ತವೆ. ಇವುಗಳ ರೆಕ್ಕೆಗಳ ಮೇಲೆ ಬಿಳಿಪುಡಿಯಂತಹ ಪದಾರ್ಥವಿದೆ. ಹಾರಬಲ್ಲವು.

ಜಂಬೀರ ಜಾತಿ ಗಿಡಗಳ (ಸಿಟ್ರಸ್) ಬಿಳಿನೊಣಗಳು: ಅಲ್ಯೂಕೊಕ್ಯಾಂತಸ್ ಸ್ಪೈನಿಫೆರಸ್ ಮತ್ತು ಡೈಅಲ್ಯೂರೊಡಿಸ್ ಸಿಟ್ರೈ. ಮೊದಲನೆಯದು ಕಬ್ಬಿನ ಬಿಳಿನೊಣಗಳನ್ನು ಹೋಲುತ್ತದೆ.

ಹರಳಿನ ಬಿಳಿನೊಣ ಟ್ರೈಅಲ್ಯೂರೋಡಿಸ್ ರಿಸಿನಿ ಹುಳದ ಹಂತಗಳಲ್ಲಿ ಎಲೆಗಳ ಕೆಳಗೆ ನೂರಾರು ಸಂಖ್ಯೆಯಲ್ಲಿ ಒಟ್ಟಿಗಿರುತ್ತವೆ. ಟ್ರೈ. ವೇಪೋರೆರಿಯೋರಂ, ಪೋರೇರಿಯೋರಂ, ಗಾಜಿನಮನೆ ಸಸ್ಯಗಳ ಬಿಳಿನೊಣಗಳು, ಟೊಮ್ಯಾಟೊ, ಸೌತೆ ಗಿಡಗಳ ಎಲೆಗಳ ಕೆಳಗೆ ವಾಸಿಸುತ್ತವೆ.

ಬೆಮೆಸಿಯ ಗಾಸಿಪಿಪರ್ಡ್ಯೆ ಹತ್ತಿ ಬಿಳಿನೊಣ ಸಣ್ಣ ಬಿಳಿ ಪತಂಗದಂತಿದೆ. ಈ ಕೀಟ ಅನೇಕ ಬಗೆ ನಂಜುರೋಗಗಳನ್ನು ಹರಡುತ್ತದೆ. ಟೊಮ್ಯಾಟೊ ಎಲೆ ಕಿರಿದಾಗಿ ಮುದುಡುವ ನಂಜುರೋಗವನ್ನು ಹರಡುವುದು ಇದರಿಂದಲೇ.

ಬಿಳಿನೊಣಗಳ ಮೊಟ್ಟೆಗಳ ಮೇಲೆ ಎನ್‌ಕಾರ್ಸಿಯ ಬಗೆ ಪರೋಪಜೀವಿಗಳಿವೆ. ಅವು ವಿಶೇಷವಾಗಿದ್ದರೆ ಕೀಟನಾಶಕಗಳನ್ನು ಸಿಂಪಡಿಸಬಾರದು. ಇಲ್ಲದಿದ್ದರೆ ಇವುಗಳ

ಹತೋಟಿಗೆ ಯಾವುದಾದರೂ ಸಸ್ಯಾಂತರ್ಗತ ಅಥವ ಸ್ಪರ್ಶ ಕೀಟನಾಶಕವನ್ನು ಆಗಾಗ್ಗೆ ಸಿಂಪಡಿಸಬೇಕು. (ಎಂ.ಪಿ.)

**ಅಲ್ಯೂಷಿಯನ್ ರೋಗ:** ಒಂದು ಆನುವಂಶೀಯ ರೋಗ. ದುರ್ಬಲ ಅಲ್ಯೂಷಿಯನ್ ಗುಣಾಣುಗಳಿರುವ ಮಿಂಕ್ ಎಂಬ ದಂಶಕ ಪ್ರಾಣಿಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಮನುಷ್ಯನಲ್ಲಿಯೂ ಈ ರೋಗ ಬರುವ ಸಾಧ್ಯತೆಯಿದೆ. ಈ ರೋಗ ತಗುಲಿದರೆ ರಕ್ತ ಸಾರದಲ್ಲಿ ಗ್ಲಾಬುಲೀನ್ ಪ್ರೊಟೀನು ಪ್ರಮಾಣ ಶೇ 6.4 ಕ್ಕೆ ಏರುತ್ತದೆ. ಈ ರೋಗವು ಶೇ 0.3 ಫಾರ್ಮಾಲಿನ್ ದ್ರಾವಣದ ನಿರೋಧ ಶಕ್ತಿಯುಳ್ಳ ಒಂದು ರೀತಿಯ ಶೋಧಿಸಬಲ್ಲ ಘಟಕದಿಂದ ಉಂಟಾಗುತ್ತದೆ. ರೋಗ ಉಂಟಾದಾಗ ರೋಗಿಯಲ್ಲಿ ಹಸಿವು, ಅತಿಸಾರ, ತೂಕದಲ್ಲಿ ಕಡಿತ ಕಾಣಿಸಿಕೊಳ್ಳುತ್ತವೆ. ಕೊನೆಗೆ ರೋಗಿ ಮರಣವನ್ನಪ್ಪುತ್ತಾನೆ. ಈ ರೋಗದಿಂದ ಬಳಲುವವರು ಹಾಲನ್ನು ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಕಳೆದು ಕೊಳ್ಳುತ್ತಾರೆ. (ಎಸ್.ಎನ್.ಎಚ್.)

**ಅವಯವ ಮೇಖಲೆಗಳು:** ಕಶೇರುಕಗಳ ಉಪಾಂಗಗಳು ಕಳಚಿಹೋಗದಂತೆ ಆಧಾರ ನೀಡಲು ಶರೀರದೊಳಗೆ ಬೆಳೆದ ಅಂಗಗಳು. ಕಶೇರುಕಗಳ ಕಂಕಾಲವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಕಪಾಲ ಮತ್ತು ಕಶೇರು ಸ್ತಂಭಗಳನ್ನೊಳಗೊಂಡ ಅಕ್ಷಿಕಂಕಾಲ ಹಾಗೂ ಕಾಲುಗಳ ಮತ್ತು ಅವುಗಳ ಆಧಾರಪಟ್ಟಿಗಳನ್ನೊಳಗೊಂಡ ಅನುಬಂಧಿ ಕಂಕಾಲ. ಕಶೇರುಕಗಳು ನೀರಿನಿಂದ ಭೂ ಪ್ರದೇಶದಲ್ಲಿ ಜೀವಿಸುವಾಗ, ನೀರಿನಲ್ಲಿದ್ದಾಗ ಸಂಚಲನೆಯಲ್ಲಿ ನೆರವಾಗುತ್ತಿದ್ದ ಜೋಡಿ ಈಜುರೆಕ್ಕೆಗಳು ಕಾಲುಗಳಾಗಿ ಮಾರ್ಪಟ್ಟವು. ಈಜುರೆಕ್ಕೆಗಳು ಮತ್ತು ಕಾಲುಗಳು ಜೋಡು ರಚನೆಗಳಾದುದರಿಂದ ಇವುಗಳನ್ನು ಜೋಡು ಉಪಾಂಗಗಳೆಂದರು. ಮೀನುಗಳು ಮತ್ತು ಚತುಷ್ಪಾದಿಗಳಲ್ಲಿ ಎರಡು ಜೊತೆ ಈಜುರೆಕ್ಕೆಗಳು ಹಾಗೂ ಎರಡು ಜೊತೆ ಕಾಲುಗಳು ಸದೃಶ ಅಂಗಗಳು ಮತ್ತು ಜೋಡು ಈಜುರೆಕ್ಕೆಗಳಿಂದಲೇ ಚತುಷ್ಪಾದಿಗಳ ಜೋಡು ಕಾಲುಗಳು ಉದ್ಭವಿಸಿದ ಬಗ್ಗೆ ಸಾದರಪಡಿಸಿ ಶತಮಾನವೇ ಕಳೆದಿದೆ. ಆದರೂ ಮೀನುಗಳ ಜೋಡು ಈಜುರೆಕ್ಕೆಗಳು ಉದ್ಭವಿಸಿದ್ದು ಹೇಗೆ ಎಂಬ ವಿಷಯದಲ್ಲಿ ಜಿಜ್ಞಾಸೆ ಇದೆ. ಕಶೇರುಕ ಪೂರ್ವಜನಲ್ಲಿ ಇದ್ದಿರಬಹುದಾದ ಈಜುರೆಕ್ಕೆ ಮಡಿಕೆಗಳಂತಹ ರಚನೆಗಳಿಂದ ಜೋಡು ಉಪಾಂಗಗಳು ಉದ್ಭವಿಸಿರಬಹುದು ಎನ್ನಲು ಪ್ರಾಗೈತಿಹಾಸ ಆಧಾರಗಳು, ಸಂರಚನೀಯ ಪುರಾವೆಗಳು ಹಾಗೂ ಭ್ರೂಣಶಾಸ್ತ್ರೀಯ ಸಾಕ್ಷ್ಯಗಳು ದೊರಕಿವೆ. ಈ ಸಿದ್ಧಾಂತ ಇನ್ನೂ ಬಹುಸಮ್ಮತ ಆಗಿಲ್ಲ. ಇದೇ ರೀತಿ ಜೋಡು ಉಪಾಂಗಗಳು ರೂಪುಗೊಂಡ ಮೇಲೆ ಪ್ರಾಣಿಗೆ ಉಪಯುಕ್ತವಾಗುವಂತೆ ಮಾಡಲು ಸುಲಭವಾಗಿ ಕಳಚಿಕೊಂಡು ಹೋಗದೆ ದೇಹಭಿತ್ತಿಯ ಒಳಗಿರುವ ಆಧಾರ ರಚನೆಯೊಂದಕ್ಕೆ ಕೀಲಿಸಿಕೊಳ್ಳುವಂತೆ ಕೆಲವು ಆಧಾರ ರಚನೆಗಳೂ ಉದ್ಭವಿಸಿದವು. ಇವೇ ಅವಯನ ಮೇಖಲೆಗಳು. ಮುಂಗಾಲುಗಳಿಗೆ ಮತ್ತು ಹಿಂಗಾಲುಗಳಿಗೆ ಪ್ರತ್ಯೇಕವಾದ ಹಾಗೂ ವೈಯುಕ್ತಿಕವಾದ ಆಧಾರಪಟ್ಟಿಗಳಿವೆ. ಮುಂಗಾಲುಗಳ ಆಧಾರಪಟ್ಟಿಯೂ ದೇಹದ ಅಗ್ರಪಶ್ವ ಅಕ್ಷದಲ್ಲಿ ಮುಂಡದ ಮುಂದಿನ ತುದಿಯಲ್ಲಿದ್ದು ಅದಕ್ಕೆ ಭುಜಪಟ್ಟಿ ಅಥವಾ ಅಂಸಮೇಖಲಾ ಎಂದು ಹೆಸರು. ಹಿಂಗಾಲುಗಳ ಆಧಾರ ಪಟ್ಟಿಯು ಪಶ್ಚತುದಿಯಲ್ಲಿದ್ದು ಸೊಂಟಪಟ್ಟಿ ಅಥವಾ ಶ್ರೋಣಿ ಮೇಖಲಾ ಎಂದು ಹೆಸರು.

ಈ ರಚನೆಗಳು ಆದಿಕಶೇರುಕಗಳಲ್ಲಿ ಆದಿಮ ಅವಸ್ಥೆಯಲ್ಲಿ ದೇಹ ಭಿತ್ತಿಯ ಒಳಗೆ ಅಧೋಪಾರ್ಶ್ವಭಾಗಗಳಲ್ಲಿ ಹರಡಿದಂತೆ ಲಾಳಾಕಾರದ, ಕಂಕಾಲರಚನೆಗಳಾಗಿದ್ದವು. ಇವು ಆದಿಮ ಮೂಳೆ ಮೀನುಗಳಲ್ಲಿ ವಿವಿಧ ಮೂಳೆಗಳಿಂದ ರಚಿತವಾದ ಸಂಯುಕ್ತ ರಚನೆಗಳಾಗಿ ರೂಪುಗೊಂಡವು. ಇವುಗಳನ್ನು ವಿವಿಧ ಗುಂಪುಗಳಲ್ಲಿ ಅಭ್ಯಸಿಸುವುದರಿಂದ ಅವುಗಳ ವಿಕಾಸವನ್ನು ಅರ್ಥಮಾಡಿಕೊಳ್ಳಬಹುದು.

ಚೆನ್ನಾಗಿ ರೂಪುಗೊಂಡ ಅಂಸಮೇಖಲೆಯನ್ನು ಅಕ್ಯಾಂಥೊಡಿಯನ್ ಮೀನುಗಳ ಪಳೆಯುಳಿಕೆಗಳಲ್ಲಿ ಕಾಣಬಹುದು. ಕಾಂಡ್ರಿಕ್ತಿಸ್ ಉಪವರ್ಗಕ್ಕೆ ಸೇರಿದ ಮೃದ್ವಸ್ಥಿ ಮೀನುಗಳ ಮಾದರಿ ಅವಸ್ಥೆಯನ್ನು ಶಾರ್ಕನಲ್ಲಿ ಕಾಣಬಹುದು. ಇದರಲ್ಲಿ ಅಧೋಮಧ್ಯಭಾಗದಲ್ಲಿ ಕೂಡಿದ ಎರಡು ಕೊಂಬಿನಂತಹ ರಚನೆಗಳಿವೆ. ಇದರ ಬುಡದ ಭಾಗವನ್ನು ಕೋರಾಕಾಯಿಡ್ ಮೃದ್ವಸ್ಥಿ ಎಂದು, ಊರ್ಧ್ವತುದಿಯ ಭಾಗವನ್ನು ಸ್ಕ್ಯಾಪುಲ ಮೃದ್ವಸ್ಥಿ ಎಂದು ಗುರುತಿಸಿದೆ. ಕೋರಾಕಾಯಿಡ್ ಮೃದ್ವಸ್ಥಿಯ ಹೊರ ಪಾರ್ಶ್ವಭಾಗದಲ್ಲಿ ಭುಜದ ಈಜುರೆಕ್ಕೆಯ ಬುಡದ ಮೃದ್ವಸ್ಥಿಗಳು ಕೀಲಿಕೊಳ್ಳುತ್ತವೆ. ಟೀಲಿಯಸ್ಟೋಮಿ ಮೀನುಗಳಲ್ಲಿ ಇದು ಸ್ವಲ್ಪ ಸಂಕೀರ್ಣ ರಚನೆಯನ್ನು ತೋರುತ್ತದೆ. ಇದರಲ್ಲಿ ಎರಡು ಪಾರ್ಶ್ವ ಅರ್ಧಭಾಗಗಳಿದ್ದು, ಇವು ಪರಸ್ಪರ ಸಂಧಿಸುವುದಿಲ್ಲ. ಪ್ರತಿ ಅರ್ಧದಲ್ಲಿಯೂ ಊರ್ಧ್ವ ಭಾಗದ ಸ್ಕ್ಯಾಪುಲ ಮತ್ತು ಅಧೋಭಾಗದ ಕೋರಾಕಾಯಿಡ್ ಎಂಬ ಎರಡು ಮೂಳೆಗಳಿವೆ. ಎರಡೂ ಮೂಳೆಗಳು ಸೇರುವಲ್ಲಿ ಭುಜದ ಈಜುರೆಕ್ಕೆಯ ಮೂಳೆಗಳು ಕೀಲಿಕೊಳ್ಳುವ ಗ್ಲೀನಾಯಿಡ್ ಕೋಟರವಿದೆ. ಈ ಮೀನುಗಳಲ್ಲಿ ಈ ಎರಡು ಮೂಳೆಗಳ ಜೊತೆಗೆ ಅನೇಕ ಡರ್ಮಲ್ ಮೂಳೆಗಳು ಸೇರಿವೆ. ಪೋಸ್ಟ್ ಟೆಂಪೊರಲ್, ಕ್ಲೈತ್ರಮ್ ಅಥವಾ ಕ್ಲಾವಿಕಲ್, ಸೂಪ್ರಕ್ಲಾವಿಕಲ್ ಮತ್ತು ಪೋಸ್ಟ್‌ಕ್ಲೈತ್ರಮ್ ಇವೆ ಆ ಮೂಳೆಗಳು. ಇವು ಸ್ಕ್ಯಾಪುಲಾದ ಮುಂಭಾಗದಲ್ಲಿ ಕಂಡುಬರುತ್ತವೆ. ಪೋಸ್ಟ್‌ಕ್ಲೈತ್ರಮ್‌ನ ಮೇಲೆ ಅಭಿವ್ಯಾಪಿಸಿದಂತೆ ಸೂಪ್ರಟೆಂಪೊರಲ್ ಮೂಳೆ ಕಂಡುಬರುತ್ತದೆ.

ಉಭಯಚರಿಗಳಲ್ಲಿ ಅಂಸಮೇಖಲೆಯು ದೇಹಭಿತ್ತಿಯಲ್ಲಿ ಹುದುಗಿ ತಲೆಯ ಮುಂಭಾಗವನ್ನು ಆವರಿಸಿದ ಕಮಾನಿನಂತಿದೆ. ಇದು ಮುಂಗಾಲುಗಳನ್ನು ಹೃದಯ ಮತ್ತು ಫುಪ್ಪುಸಗಳನ್ನು ರಕ್ಷಿಸುತ್ತದೆ. ಅಧೋಭಾಗದ ನಡುವೆ ಎರಡೂ ಅರ್ಧಗಳು ಕೂಡಿವೆ. ಪ್ರತಿಯೊಂದು ಅರ್ಧದ ಮೇಲು ತುದಿಗಳು ಒಳಕ್ಕೆ ಬಾಗಿ ಮೊದಲಿನ ನಾಲ್ಕು ಕಶೇರುಮಣಿಗಳನ್ನು ಮುಚ್ಚಿ ಸ್ನಾಯುಗಳಿಂದ ಅವಕ್ಕೆ ಅಂಟಿಕೊಂಡಿವೆ. ಪ್ರತಿಯೊಂದು ಅರ್ಧದ ಊರ್ಧ್ವಭಾಗದಲ್ಲಿ ಸೂಪ್ರಸ್ಕ್ಯಾಪುಲ ಎಂಬ ಚಪ್ಪಟೆಯಾಗಿರುವ ತ್ರಿಕೋಣಾಕಾರದ ಫಲಕವಿದೆ. ಈ ಫಲಕ ಅರ್ಧ ಮೂಳೆಯಿಂದ ಮತ್ತು ಅರ್ಧ ಅಸ್ಥಿಕರಣಗೊಂಡ ಮೃದ್ವಸ್ಥಿಯಿಂದಾಗಿದೆ. ಈ ಸೂಪ್ರಸ್ಕ್ಯಾಪುಲಕ್ಕೆ ಅಂಟಿಕೊಂಡಂತೆ ಅಧೋಭಾಗದ ಕಡೆಗೆ ಹರಡಿದ ಸ್ಥೂಲವಾದ ಸ್ಕ್ಯಾಪುಲ ಮೂಳೆ ಇದೆ. ಸ್ಕ್ಯಾಪುಲದ ಕೆಳ ತುದಿಯಿಂದ ದೇಹದ ನಡುಭಾಗದ ಕಡೆ ಹರಡಿದಂತೆ ಕ್ಲಾವಿಕಲ್ ಮತ್ತು ಕೋರಾಕಾಯಿಡ್ ಎಂಬ ಎರಡು ಮೂಳೆಗಳಿವೆ. ಇವು ನಡುಭಾಗದಲ್ಲಿ ಎಪಿಕೋರಕಾಯಿಡ್ ಎಂಬ ಮೃದ್ವಸ್ಥಿ ಚೂರಿನ ಮೂಲಕ ಸಂಧಿಸುತ್ತವೆ. ಕ್ಲಾವಿಕಲ್ ಮತ್ತು ಕೋರಕಾಯಿಡ್‌ಗಳ ನಡುವೆ ಕೋರಕಾಯಿಡ್ ಗವಾಕ್ಷಿ ಎಂಬ ಅಗಲವಾದ ಜಾಗವಿದೆ. ಕ್ಲಾವಿಕಲ್‌ನ ಕೆಳಗೆ ಪ್ರಿಕೋರಕಾಯಿಡ್ ಎಂಬ ಮೃದ್ವಸ್ಥಿ ಚೂರಿದೆ. ಕೋರಕಾಯಿಡ್, ಕ್ಲಾವಿಕಲ್ ಮತ್ತು ಸ್ಕ್ಯಾಪುಲಗಳು ಸಂಧಿಸುವ ಬಳಿ ಬಟ್ಟಲಿನಾಕಾರದ ಗ್ಲೀನಾಯಿಡ್ ಕೋಟರ ಇದೆ. ಈ ಬಟ್ಟಲಿನ ಕೋಟರಕ್ಕೆ ತೋಳಿನ ಮೂಳೆಯ ತಲೆಯು ಜೋಡಿಸಿಕೊಂಡಿದೆ. ಕ್ಲಾವಿಕಲ್ ಒಂದರ ವಿನಾ ಭುಜಪಟ್ಟಿಯ ಮೂಳೆಗಳೆಲ್ಲವೂ ಮೃದ್ವಸ್ಥಿ ಮೂಳೆಗಳು. ಅಂಸಮೇಖಲೆಯ ರಚನೆಯಲ್ಲಿ ಕೂಡಿದಂತೆ ಊರೋಸ್ಥಿಯ ಮೂಳೆಗಳು ಸೇರಿವೆ. ಇವು ಕೆಳಗೆ ನಡುಭಾಗದಲ್ಲಿ ನೇರವಾಗಿ ಹರಡಿವೆ. ಇದರಲ್ಲಿ ನಾಲ್ಕು ಚೂರುಗಳಿವೆ. ಮುಂದೆ ಎರಡು ಮತ್ತು ಹಿಂದೆ ಎರಡು. ಅಗ್ರಭಾಗದಲ್ಲಿ ಎಪಿಸ್ಟರ್ನಮ್ ಮತ್ತು ಓಮೋಸ್ಟರ್ನಮ್‌ಗಳಿವೆ. ಮುಂದಿನ ತುದಿಯಲ್ಲಿರುವ ಎಪಿಸ್ಟರ್ನಮ್ ವೃತ್ತಾಕಾರದ ಮೃದ್ವಸ್ಥಿಪಟಲ, ಓಮೋಸ್ಟರ್ನಮ್, ಎಪಿಸ್ಟರ್ನಮ್ ಮತ್ತು ಎಪಿಕೋರಕಾಯಿಡ್‌ಗಳ ನಡುವೆ ಹರಡಿದ ಸರಳಿನಾಕಾರದ ಮೂಳೆ ಪಾರ್ಶ್ವಭಾಗದಲ್ಲಿ ಮೀಸೊಸ್ಟರ್ನಮ್ ಮತ್ತು ಕ್ಸೈಫಿಸ್ಟರ್ನಮ್‌ಗಳಿವೆ. ಮೀಸೊಸ್ಟರ್ನಮ್ ಎಪಿಕೋರಕಾಯಿಡ್ ಹಿಂದಿರುವ ಮೂಳೆಸರಳು. ಕ್ಸೈಫೀಸ್ಟರ್ನಮ್ ಚಪ್ಪಟೆಯಾದ ಹಿಂದಿನ ತುದಿಯ ಮೃದ್ವಸ್ಥಿ ಪಟ್ಟಿ. ಕಪ್ಪೆಯಲ್ಲಿ ಪಕ್ಕೆಲುಬುಗಳಿಲ್ಲ.

ಸರೀಸೃಪಗಳ ಅಂಸಮೇಖಲೆಯಲ್ಲಿ 2 ಅನುರೂಪವಾದ ಅರ್ಧಭಾಗಗಳಿದ್ದು, ಉಭಯಚರಿಗಳಲ್ಲಿ ಕಂಡುಬಂದ ಒಳ ಕ್ಲಾವಿಕಲ್ ಎಂಬ ಪಟಲ ಅಸ್ಥಿಯು ಇಕ್ಕೆಡೆಗಳಲ್ಲಿ ಹರಡಿದೆ. ಪ್ರತಿ ಅರ್ಧಭಾಗದಲ್ಲಿಯೂ ಕೋರಕಾಯಿಡ್, ಸ್ಕ್ಯಾಪುಲ, ಸೂಪ್ರಸ್ಕ್ಯಾಪುಲ ಮತ್ತು ಕ್ಲಾವಿಕಲ್ ಎಂಬ ಮೂಳೆಗಳಿವೆ. ಗ್ಲೀನಾಯಿಡ್ ಕೋಟರ ನಿರ್ಮಾಣದಲ್ಲಿ ಕೋರಕಾಯಿಡ್ ಮತ್ತು ಸ್ಕ್ಯಾಪುಲಗಳು ಭಾಗವಹಿಸುತ್ತವೆ. ಕೋರಕಾಯಿಡ್ ಮೂಳೆಯು




ಕಪ್ಪೆಯ ಮುಂಗಾಲು

ಚಿಕ್ಕದಾಗಿದೆ. ಇದನ್ನು ಅಗ್ರಭಾಗದ ಪ್ರೊಕೋರಕಾಯಿಡ್ ಎಂದೂ ಮತ್ತು ಪಾರ್ಶ್ವಭಾಗದ ಕೋರಕಾಯಿಡ್ ಎಂದೂ ಪ್ರತ್ಯೇಕಿಸುತ್ತಾರೆ. ಈ ಎರಡೂ ಭಾಗಗಳು ಸಂಧಿಸುವ ಪ್ರದೇಶದಲ್ಲಿ ಕೋರಕಾಯಿಡ್ ರಂಧ್ರವಿದೆ. ಈ ರಂಧ್ರದ ಮೇಲೆ ಎಪಿಕೋರಕಾಯಿಡ್ ಎಂಬ ಅಕ್ರಮ ಮೃದ್ವಸ್ಥಿಯೊಂದು ಹರಡಿದೆ. ಇದು ಇಂಟರ್ ಕ್ಲಾವಿಕಲ್ ಮೂಳೆಯ ಉದ್ದಕ್ಕೂ ವಿಸ್ತರಿಸಿ ಊರೋಸ್ಥಿಯ ಅಗ್ರಪಾರ್ಶ್ವಭಾಗಗಳನ್ನು ಮುಚ್ಚುತ್ತದೆ. ಕೋರಕಾಯಿಡ್ ಮೂಳೆಯು ಅಧೋಭಾಗದಲ್ಲಿ ಊರೋಸ್ಥಿಯೊಂದಿಗೆ ಕೀಲಿಕೊಂಡಿದೆ. ಸ್ಕ್ಯಾಪುಲ ಮೂಳೆಯು ಚತುರಾಸ್ತ್ರಾಕಾರದ ಮೂಳೆ. ಇದರ ಒಂದು ತುದಿಯು ಅಗಲವಾಗಿದ್ದು ಆ ತುದಿಯಲ್ಲಿ ಸೂಪ್ರಸ್ಕ್ಯಾಪುಲ ಮೃದ್ವಸ್ಥಿಯು ಅಂಟಿಕೊಂಡಿದೆ. ಗ್ಲೀನಾಯಿಡ್ ಕೋಟರದ

ಎದಿರು ಭಾಗದಿಂದ ಸ್ಕ್ಯಾಪುಲದ ಅಗ್ರತುದಿಗೆ ತಾಗಿದಂತೆ ಮೀಸೊಸ್ಕ್ಯಾಪುಲ ಎಂಬ ರಚನೆಯು ಹುಟ್ಟುತ್ತದೆ. ಇದು ಸಂಪೂರ್ಣವಾಗಿ ಅಸ್ಥೀಕೃತವಾದ ರಚನೆ. ಇಂಟರ್ ಕ್ಲಾವಿಕಲ್ ಅಥವಾ ಎಪಿಸ್ಟರ್ನಮ್ ಲಂಗರು ಆಕಾರದಲ್ಲಿದೆ. ಇದರ ಬುಡವು ಹಿಂಭಾಗದಲ್ಲಿ ಯೂರೋಸ್ಥಿಗೆ ತಾಗಿದಂತಿದೆ, ಮತ್ತು ಅಡ್ಡಕವಲುಗಳು ಕ್ಲಾವಿಕಲ್‌ನ ಹಿಂಭಾಗದಲ್ಲಿವೆ. ಈ ಅಡ್ಡಕವಲುಗಳು ಚಪ್ಪಟೆಯಾಗಿದ್ದು ಮಧ್ಯದಲ್ಲಿ ಪರಸ್ಪರ ಸಂಧಿಸುತ್ತವೆ. ಇವುಗಳಿಗೆ ತಾಗಿದಂತೆ ಹೊರಭಾಗದಲ್ಲಿ ಸ್ಕ್ಯಾಪುಲ ಕೀಲಿಕೊಳ್ಳುತ್ತದೆ.



ಕಪ್ಪೆಯ ಭುಜಪಟ್ಟಿ



ಕಪ್ಪೆಯ ಸೊಂಟ ಪಟ್ಟಿ

ಕಪ್ಪೆಯ ಸೊಂಟಪಟ್ಟಿ
(ಪಾರ್ಶ್ವ ನೋಟ)




CL:ಕ್ಲೆವಿಕಲ್, CO:ಕೊರಕಯಿಡ್, EL:ಎಪಿಕೊರಕಯಿಡ್. ES:ಎಪಿಸ್ಟ್ರಮ್, MS:ಮಿಸೊಸ್ಟ್ರಮ್. OS:ಒಮ್‌ಸ್ಟ್ರನಮ್. PC:ಪ್ರೀಕರಕಯಿಡ್. SC.ಸ್ಕಪುಲ. SSC:ಸುಪುಸ್ಕ ಪುಲ. XS:ಜಿಫಿಸ್ಟ್ರಮ್. A:ಅಸಿಟಬುಲಮ್, AR:ಅರ್ಟಕುಲಾರ್ ಭಾಫ.ಜ IL:ಇಲಿಯಂ IS: ಇಶ್ಚಿಯಂ, P:ಪುಬಿಸ್.

ಪಕ್ಷಿಗಳ ಭುಜಪಟ್ಟಿಯು ಉಳಿದೆಲ್ಲ ಕಶೇರುಕಗಳ ಭುಜಪಟ್ಟಿಯಿಂದ ಗಮನಾರ್ಹವಾಗಿ ಮಾರ್ಪಟ್ಟಿದೆ. ಇಲ್ಲಿಯೂ ಭುಜಪಟ್ಟಿಯನ್ನು ಎರಡು ಅರ್ಧಭಾಗಗಳಾಗಿ ವಿಂಗಡಿಸಬಹುದು. ಪ್ರತಿ ಅರ್ಧದಲ್ಲಿಯೂ ಕೋರಕಾಯಿಡ್, ಸ್ಕ್ಯಾಪುಲ ಮತ್ತು ಕ್ಲಾವಿಕಲ್ ಮೂಳೆಗಳಿವೆ. ಕೋರಕಾಯಿಡ್‌ಗಳು ಸ್ಥೂಲವಾದ ಕಂಬದಂತಹ ರಚನೆಗಳು. ಇವು ಒಂದು ತುದಿಯಲ್ಲಿ



ಪಕ್ಷಿಯ ಕೀಲು ಭಾಗ

ಯೂರೋಸ್ಥಿಯ ಅಗ್ರಂಚಿಗೆ ಕೀಲಿಕೊಂಡಿವೆ. ಪ್ರತಿ ಕೋರಕಾಯಿಡ್ ಮೂಳೆಯ ಊರ್ಧ್ವತುದಿಗಳು ಆಕ್ರೋಕೋರಕಾಯಿಡ್ ಪ್ರವರ್ಧಗಳಾಗಿ ಚಾಚಿಕೊಂಡಿವೆ. ಈ ಪ್ರವರ್ಧಗಳ ಕೆಳಗೆ ಕೋರಕಾಯಿಡ್‌ಗಳಿಗೆ ಪಾರ್ಶ್ವದಲ್ಲಿ ಅಸ್ಥಿರಜ್ಜುಗಳಿಂದ ಅಂಟಿಕೊಂಡ ಹುಡುಕತ್ತಿಯಾಕಾರದ ಹಿಮ್ಮುಖವಾಗಿ ಪಕ್ಕೆಲುಬುಗಳ ಮೇಲೆ ವಿಸ್ತರಿಸಿದ ಸ್ಕ್ಯಾಪುಲಗಳಿವೆ. ಇವು ಕೋರಕಾಯಿಡ್‌ಗಳೊಂದಿಗೆ ಒಂದು ತೀಕ್ಷ್ಣಕೋನದಲ್ಲಿ ಅಂಟಿಕೊಂಡಿವೆ. ಕೋರಕಾಯಿಡ್‌ಗಳ ಹೊರಮೇಲ್ಮೈನಲ್ಲಿ ಗ್ಲೀನಾಯಿಡ್ ಕೋಟರವಿದೆ. ಸ್ಕ್ಯಾಪುಲದ ಒಳ ಮುಖದಲ್ಲಿ ಆಕ್ರೋಮಿಯನ್ ಪ್ರವರ್ಧವಾಗಿ ಚಾಚಿಕೊಂಡಿದೆ. ಕೋರಕಾಯಿಡ್‌ನ ಮುಂದೆ 'V' ಆಕಾರದ ಫರ್ಕುಲಾ ಮೂಳೆ ಇದೆ. ಇದರ ಕೂಡು ತುದಿಯು ಯೂರೋಸ್ಥಿಯನ್ನು ತಾಗುತ್ತದೆ. ಆದರೆ, ಇದರ ಎರಡೂ ಪಾರ್ಶ್ವಕವಲಿನ ತುದಿಗಳು ಅಸ್ಥಿರಜ್ಜುಗಳ ಸಹಾಯದಿಂದ ತಮ್ಮ ಭಾಗದ ಆಕ್ರೋಮಿಯನ್ ಮತ್ತು ಆಕ್ರೋಕೋರಕಾಯಿಡ್ ಪ್ರವರ್ಧಗಳಿಗೆ ಒಂದು ರಂಧ್ರವನ್ನು ಬಿಡುವಂತೆ ಅಂಟಿಕೊಂಡಿವೆ. ಈ ರಂಧ್ರಕ್ಕೆ ಫೋರಾಮೆನ್ ಟ್ರೈಯೋಸಮ್ ಎಂದು ಹೆಸರು. ಕ್ಲಾವಿಕಲ್ ಮತ್ತು ಇಂಟರ್ ಕ್ಲಾವಿಕಲ್ ಮೂಳೆಗಳು ಕೂಡಿಕೊಂಡು ಫರ್ಕುಲ ರಚನೆ ಉಂಟಾಗಿದೆ. ರೆಕ್ಕೆಗಳನ್ನು ಮೇಲೆತ್ತುವ ಮಾಂಸಗಳ ಸ್ನಾಯುರಜ್ಜುಗಳು ಈ ಫೊರಾಮೆನ್ ಟ್ರೈಯೋಸಮ್ ಮೂಲಕ ಹಾದು ಹೋಗುತ್ತವೆ.



ಪಕ್ಷಿಯ ಅಸ್ಥಿಪಂಜರ

ಪಕ್ಷಿಗಳ ಕಂಕಾಲದಲ್ಲಿ ಊರೋಸ್ಥಿಯು ಒಂದು ಗಮನಾರ್ಹವಾದ ರಚನೆ. ಇದೊಂದು ಅಗಲವಾದ ಮೂಳೆ. ತಳಭಾಗದಲ್ಲಿ ಅಡಿಗಟ್ಟಿನ ರೀತಿಯಲ್ಲಿ ಚಾಚಿಕೊಂಡಿದೆ. ಈ ಭಾಗದಲ್ಲಿ ಹಾರಲು ನೆರವಾಗುವ ಪೆಕ್ಟೊರಲ್ ಸ್ನಾಯುಗಳು ಅಂಟಿಕೊಂಡಿವೆ. ಇದಕ್ಕೆ ಪಕ್ಕೆಲುಬುಗಳು ಅಂಟಿಕೊಂಡು ಊರ್ಧ್ವಭಾಗದಲ್ಲಿ ಕಶೇರು ಸ್ತಂಭವಿದ್ದು ಎದೆಯ ಗೂಡಿನಲ್ಲಿ ಕಂಡುಬರುವ ಪ್ರಮುಖ ಅಂಗಗಳಾದ ಪುಪ್ಪುಸಗಳು ಮತ್ತು ಹೃದಯಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.

ಸ್ತನಿಗಳ ಮೇಖಲೆಯಲ್ಲಿರುವ ಮೂಳೆಗಳ ಅಂಶಗಳು ಕಪ್ಪೆಯ ಅಂಗಮೇಖಲೆಗೆ ಹೋಲಿಸಿದರೆ ಬಹಳ ಕಡಿಮೆ. ಈ ಮೂಳೆಗಳು ಪಕ್ಕೆಲುಬು ಪಂಜರದ ಚೌಕಟ್ಟಿನ ಹೊರಗಿವೆ ಮತ್ತು ಸ್ನಾಯು ಹಾಗು ಅಸ್ಥಿರಜ್ಜುಗಳಿಂದ ಕೇಂದ್ರ ಅಸ್ಥಿಪಂಜರಕ್ಕೆ ಅಂಟಿಕೊಂಡಿವೆ. ಅಗಲವಾದ, ತೆಳುವಾದ ಮತ್ತು ತ್ರಿಕೋನಾಕಾರವಾದ ಒಂದು ಜೊತೆ ಸ್ಕ್ಯಾಪುಲಗಳಿವೆ. ಈ ಸ್ಕ್ಯಾಪುಲದ ಬುಡದಲ್ಲಿ ಅಥವ ಕಶೇರುಸ್ತಂಭದ ಕಡೆಗಿರುವ ತುದಿಯಲ್ಲಿ ಒಂದು ಸಿಗುರು ಮೃದ್ವಸ್ಥಿಯು ಅದಕ್ಕೆ ಅಂಟಿದಂತೆ ಅವಿಚ್ಛಿನ್ನವಾಗಿದೆ. ಅದೇ ಸೂಪ್ರ ಸ್ಕ್ಯಾಪುಲಾರ್ ಮೃದ್ವಸ್ಥಿ. ಸ್ಕ್ಯಾಪುಲದ ಹೊರ ಅಂಚಿನಲ್ಲಿ ಒಂದು ಏಣು ಹರಡಿದೆ. ಅದನ್ನು ಕಂಟಕ ಎನ್ನುತ್ತಾರೆ. ಈ ಕಂಟಕದ ಕೆಳಗಿನ ತುದಿಯಲ್ಲಿ ಒಂದು ಉದ್ದವಾದ ಆಕ್ರೋಮಿಯಾನ್ ಪ್ರವರ್ಧವಿದೆ. ಈ ಪ್ರವರ್ಧದಿಂದ ಹಿಂಭಾಗದಲ್ಲಿ ಮೆಟಕ್ರೊಮಿಯಾನ್ ಎಂಬ ಪ್ರವರ್ಧ ಹುಟ್ಟುತ್ತದೆ. ಕಂಟಕದ ಮುಂಭಾಗದಲ್ಲಿರುವ ಸ್ಕ್ಯಾಪುಲದ ಹೊರಮೈಗೆ ಪ್ರಿಕಂಟಕ ಅಥವಾ ಪ್ರಿಸ್ಕ್ಯಾಪುಲಾರ್‌ಖಾತ ಎಂದು ಹೆಸರು. ಹಾಗೆ ಹಿಂದಿರುವ ಭಾಗವೇ ಪೋಸ್ಟ್‌ಕಂಟಕ ಅಥವಾ ಪೋಸ್ಟ್‌ಸ್ಕ್ಯಾಪುಲಾರ್‌ಖಾತ. ಸ್ಕ್ಯಾಪುಲಾದ ಇಕ್ಕಟ್ಟಾದ ತುದಿಯಲ್ಲಿ ಗ್ಲೀನಾಯಿಡ್ ಕುಳಿ ಎಂಬ ಅವತಲ ಪ್ರದೇಶವಿದೆ. ಈ ಕುಳಿಗೆ ಹ್ಯೂಮರಸ್ ಮೂಳೆಯ ತಲೆ ಕೂರುತ್ತದೆ. ಈ ಕುಳಿ ಮುಂಭಾಗದಲ್ಲಿ ಒಳಕ್ಕೆ ಬಾಗಿದ ಕೋರಕಾಯಿಡ್ ಪ್ರವರ್ಧ ಎಂಬ ರಚನೆ ಇದೆ. ಪ್ರಿಸ್ಟರ್ನಮ್‌ಗೂ, ಸ್ಕ್ಯಾಪುಲಕ್ಕೂ ನಡುವಿನ ಭಾಗದಲ್ಲಿ ಕ್ಲಾವಿಕಲ್ ಎಂಬ ತೆಳುವಾದ ಸರಳಿನಂತಿರುವ ಮೂಳೆ ಹರಡಿದೆ. ಪ್ರಬುದ್ಧಾವಸ್ಥೆಯಲ್ಲಿ ನಾರು

ಅಂಗಾಂಶದಿಂದ ಈ ಕ್ಲಾವಿಕಲ್ ಇತರ ಅಸ್ಥಿಪಂಜರದ ರಚನೆಗಳಿಗೆ ಅಂಟಿಕೊಂಡಿರುತ್ತದೆ. ಇದಕ್ಕೆ ಕಾಲರ್ ಮೂಳೆ ತಟ್ಟೆಯಾಗಿ ಕಂಡುಬರುತ್ತದೆ. ಈ ರಚನೆಯನ್ನು ಬದುಕಿರುವ ಕೆಲವು ಉಭಯಚರಿಗಳು ಮತ್ತು ಸರೀಸೃಪಗಳಲ್ಲಿ ಕಾಣಬಹುದು.

ಶ್ರೋಣಿಮೇಖಲಾ: ಶಾರ್ಕ್ ಮೀನಿನಲ್ಲಿ ಶ್ರೋಣಿ ಮೇಖಲೆಯು ಅಡ್ಡವಾಗಿ ಹರಡಿದೆ. ಇದು ಚಪ್ಪಟೆ ಪಟ್ಟಿಯಂತಿರುವ ಮೃದ್ವಸ್ಥಿರೂಪದಲ್ಲಿದೆ. ಇದನ್ನು ಇಸ್ಕಿಯೊ ಪ್ಯೂಬಿಕ್ ಎಂದು ಕರೆಯುವರು. ಇದು ಕ್ಲೋಯಾಕಾದ ಮುಂಭಾಗದಲ್ಲಿದೆ. ಇದರ ಎರಡು ಪಾರ್ಶ್ವ ತುದಿಗಳಲ್ಲಿ ಸೊಂಟದ ಜೋಡಿ ಈಜುರೆಕ್ಕೆಯ ಬುಡದ ಕಂಕಾಲ ಅಂಶಗಳು ಕೀಲಿಕೊಳ್ಳುತ್ತವೆ. ಮೂಳೆ ಮೀನುಗಳಲ್ಲಿಯೂ ಶ್ರೋಣಿ ಮೇಖಲೆಯು ಒಂದೇ ಒಂದು ಮೂಳೆಯನ್ನು ಪಡೆದಿದೆ. ಇವಕ್ಕೆ ಬೇಸಿಟೆರಿಜಿಯಮ್ ಎಂದು ಹೆಸರು. ಇದು ಮುಂಭಾಗದಲ್ಲಿ ಇಬ್ಭಾಗವಾಗಿದೆ.




1. ಮೀನಿನ ಪೆಲ್‌ವಿಕ್ ಗರ್ಡಲ್




2. ಮೀನಿನ ಪೆಕ್ಟೊರಲ್ ಗರ್ಡಲ್

PVG - ಪೆಲ್‌ವಿಕ್ ಗರ್ಡಲ್
HR - ಮುಳ್ಳಿನಂತಹ ಕಡ್ಡಿಗಳು.
BP - ಬೆಸಿಟೆರಿಜಿಯಂ
CO - ಕೊರಕಾಯಿಡ್
MT - ಮೆಟರೆರಿಜಿಯಂ
PT - ಪ್ರೊಟೆರಿಜಿಯಂ
SC - ಸ್ಕಪುಲ
RC - ರೇಡಿಯಲ್ ಕಾರ್ಟಿಲೇಜ್
MS - ಮಿಸೊಟೆರಿಜಿಯಂ
GF - ಗ್ಲಿನಾಯಿಡ್ ಫೆಸಿಟ್ಸ್

ಉಭಯಚರಿಗಳಲ್ಲಿ ಶ್ರೋಣಿಮೇಖಲೆಯು ಕಶೇರುದಂಡಕ್ಕೆ ನೇರವಾಗಿ ಅಂಟಿಕೊಂಡಿದೆ. 'U' ಆಕಾರದಲ್ಲಿದೆ. ಈ 'U' ನ ಎರಡು ಬಾಹುಗಳ ಅಗ್ರತುದಿಯಲ್ಲಿ ಒಂಬತ್ತನೆಯ ಕಶೇರುಮಣಿಯ ಪಾರ್ಶ್ವ ಪ್ರವರ್ಧಗಳಿಗೆ ಅಂಟಿಕೊಂಡಿವೆ. ಈ ಎರಡು ಬಾಹುಗಳು ಹಿಂಭಾಗದಲ್ಲಿ ಕೂಡಿಕೊಂಡಿವೆ. ಆ ಭಾಗಕ್ಕೆ ಯೂರೊಸ್ಟೈಲ್ ಬಂದು ಸೇರುತ್ತದೆ. ಕೂಡಿದ ಈ ಭಾಗ ತಟ್ಟೆಯ ಆಕಾರದಲ್ಲಿದ್ದು ಎರಡೂ ಪಕ್ಕಗಳಲ್ಲಿ ತೊಡೆಯ ಮೂಳೆಯು ಕೀಲಿಕೊಳ್ಳಲು ಅಸಿಟಾಬುಲಮ್ ಎಂಬ ಬಟ್ಟಲಿನಾಕಾರದ ರಚನೆಗಳಿವೆ. ತಟ್ಟೆ ಇಲಿಯಮ್, ಇಶ್ಚಿಯಮ್ ಮತ್ತು ಪ್ಯೂಬಿಸ್ ಎಂಬ ಮೂರುಮೂಳೆ ಮತ್ತು ಮೃದ್ವಸ್ಥಿಗಳಿಂದಾಗಿದೆ. ಇಲಿಯಮ್ ಮತ್ತು ಇಶ್ಚಿಯಮ್ ಮೂಳೆಗಳು ಹಾಗೂ ಪ್ಯೂಬಿಸ್ ಅಸ್ಥೀಕರಣವಾದ ಮೃದ್ವಸ್ಥಿ. ಈ ಮೂರು ಅಂಶಗಳು ಮಧ್ಯಭಾಗದಲ್ಲಿ ಕೂಡುವುದೇ ಪ್ಯೂಬಿಸ್ ಸಂಘಾನ. ಉದ್ದನಾದ ಬಾಹುಗಳಾಗಿ ಪಾರ್ಶ್ವಪ್ರವರ್ಧಗಳನ್ನು ಸೇರುವ ಭಾಗ ಇಲಿಯಮ್‌ನಿಂದಾಗಿದೆ. ಇಲಿಯಮ್ ಅಸಿಟಾಬ್ಯುಲಮ್‌ನ ಊರ್ಧ್ವಭಾಗವಾಗುತ್ತದೆ. ಪ್ಯೂಬಿಸ್ ವೆಂಟ್ರಲ್ ಭಾಗವಾಗುತ್ತದೆ ಮತ್ತು ಇಶ್ಚಿಯಮ್ ಪರ್ಶ್ವವೆಂಟ್ರಲ್ ಭಾಗವಾಗಿದೆ. ಈ ಮೂರು ಅಂಶಗಳು ಬೆಳವಣಿಗೆಯ ಕಾಲದಲ್ಲಿ ಪ್ರತ್ಯೇಕವಾಗಿದ್ದು ಪ್ರಬುದ್ಧಾವಸ್ಥೆಯಲ್ಲಿ ಕೂಡಿಕೊಂಡು ಆಸ್ ಇನ್ನಾಮಿನೇಟಮ್ ಆಗಿದೆ. ಇದರಲ್ಲಿ ಪ್ಯೂಬಿಸ್ ಮತ್ತು ಇಶ್ಚಿಯಮ್ ಸೇರಿ ತಟ್ಟೆಯಾಗಿದೆ ಮತ್ತು ಇಲಿಯಗಳು ಬಿಡಿಯಾಗಿವೆ. ಈ ರೀತಿಯ ಕೂಡಿಕೆಯಲ್ಲಿ ಮೂಳೆಗಳ ನಡುವೆ ಸ್ವಲ್ಪ ಮೃದ್ವಸ್ಥಿ ಉಳಿಯುತ್ತದೆ. ಈ ರೀತಿ ಮೃದ್ವಸ್ಥಿ ಮಧ್ಯಸ್ತಿಕೆಯಿಂದ ಎರಡು ಮೂಳೆಗಳು ಕೂಡಿಕೊಳ್ಳುವುದಕ್ಕೆ ಸಂಘಾನ (ಸಿಂಫೈಸಿಸ್) ಎಂದು ಹೆಸರು. ಆದುದರಿಂದ ಕಪ್ಪೆಯಲ್ಲಿ ಪ್ಯೂಬಿಕ್ ಮತ್ತು ಇಶ್ಚಿಯಾಟಿಕ್ ಸಂಘಾನಗಳು ಉಳಿದಿವೆ.

ಸರೀಸೃಪಗಳಲ್ಲಿ ಶ್ರೇಣಿಮೇಖಲೆಯು ಎರಡು ಸಮ ಅರ್ಧಗಳಿಂದ ಉಂಟಾಗಿದೆ. ಈ ಸಮರ್ಧಗಳಿಗೆ ಆಸ್ ಇನ್ನಾಮಿನೇಟ್ ಎಂದು ಹೆಸರು. ಪ್ರತಿ ಅರ್ಧವು ತ್ರಿಜ್ಯರೂಪದಲ್ಲಿದ್ದು ಇಲಿಯಮ್, ಇಶ್ಚಿಯಮ್ ಮತ್ತು ಪ್ಯೂಬಿಸ್ ಎಂಬ ಮೂರು ಮೂಳೆಗಳು ಕೂಡಿಕೊಂಡುದರಿಂದ ಉತ್ಪತ್ತಿಯಾಗುತ್ತದೆ. ಇಲಿಯಗಳು ಮೇಲಕ್ಕೂ ಮತ್ತು ಹಿಂದಕ್ಕೂ ಚಾಚಿಕೊಂಡು ಸೊಂಟದ ಕಶೇರುಮಣಿಗಳೊಂದಿಗೆ ಕೀಲಿಕೊಂಡಿವೆ. ಪ್ಯೂಬಿಸ್ ಮುಂದಕ್ಕೂ ಕೆಳಕ್ಕೂ ಚಾಚಿಕೊಂಡು ಇನ್ನೊಂದು ಅರ್ಧದ ಪ್ಯೂಬಿಸ್‌ನ್ನು ಸಂಧಿಸಿ ಪ್ಯೂಬಿಸ್ ಸಂಘಾನವನ್ನು ಉತ್ಪತ್ತಿಮಾಡುತ್ತವೆ. ಇದರ ಅಗ್ರತುದಿಯು ಎಪಿಪ್ಯೂಬಿಸ್ ಎಂದು ಕ್ಯಾಲ್ಸೀಕೃತ ಗೋಲಿಯೊಂದಿಗೆ ಕೂಡಿಕೊಂಡಿದೆ. ಮೂರು ಮೂಳೆಗಳೂ ಅಸಿಟಾಬ್ಯುಲಮ್ ಕೋಟರವನ್ನು ಉತ್ಪತ್ತಿಮಾಡುವುದರಲ್ಲಿ ಸಮ ಪಾತ್ರವಹಿಸುತ್ತವೆ. ಅಸಿಟಾಬ್ಯುಲಮ್ ಕೋಟರದ ತುದಿಯಲ್ಲಿ ಪ್ಯೂಬಿಸ್‌ನಲ್ಲಿ ಒಂದು ಸಣ್ಣರಂಧ್ರವಿದ್ದು ಅದಕ್ಕೆ ಆಬ್ಟುರೇಟರ್ ರಂಧ್ರ ಎಂದು ಹೆಸರು. ಇದರ ಮೂಲಕ ಆಬ್ಟುರೇಟರ್ ನರವು ನಿಷ್ಕ್ರಮಿಸುತ್ತದೆ. ಎರಡೂ ಅರ್ಧದ ಇಶ್ಚಿಯಮ್ ಮೂಳೆಗಳ ಒಳಮುಖವಾಗಿ ಚಾಚಿಕೊಂಡು ಪರಸ್ಪರ ಸಂಧಿಸಿ ಇಶ್ಚಿಯಾಟಿಕ್ ಸಂಘಾನವನ್ನು ಉತ್ಪತ್ತಿಮಾಡುತ್ತವೆ. ಈ ಸಂಘಾನದಿಂದ ಹಿಂದಕ್ಕೆ ಚಾಚಿಕೊಂಡು ಕ್ಲೋಯಾಕಾದ ಭಿತ್ತಿಗೆ ಆಧಾರವಾಗುವಂತೆ ಹೈಪೊಇಶ್ಚಿಯಮ್ ಎಂಬ ಒಂದು ಸಣ್ಣ ಮೂಳೆ ಇದೆ. ಎರಡೂ ಅರ್ಧದ ಪ್ಯೂಬಸ್ ಮತ್ತು ಇಶ್ಚಿಯಮ್‌ಗಳು ಒಂದು ಅಗಲವಾದ ಗವಾಕ್ಷವನ್ನು ಒಳಗೊಂಡಿವೆ. ಇದಕ್ಕೆ ಇಶ್ಚಿಯೊಪ್ಯೂಬಿಸ್ ಗವಾಕ್ಷ ಅಥವಾ ಆಬ್ಟುರೇಟರ್ ಗವಾಕ್ಷ ಎಂದು ಹೆಸರು. ಪ್ಯೂಬಿಸ್ ಮತ್ತು ಇಶ್ಚಿಯಾಟಿಕ್ ಸಂಘಾನಗಳ ನಡುವೆ ವಿಸ್ತರಿಸಿದ ಒಂದು ಅಸ್ಥಿರಜ್ಜು ಈ ಗವಾಕ್ಷವನ್ನು ಎರಡು ಭಾಗವಾಗಿ ವಿಭಾಗಿಸುತ್ತದೆ. ಹಿಂಗಾಲಿನ ತೊಡೆಯ ಮೂಳೆಯಾದ ಫೀಮರ್‌ನ ತಲೆಯು ಅಸಿಟಾಬ್ಯುಲಮ್ ಕೋಟರಕ್ಕೆ ಅನುವಾಗಿ ಕೀಲಿಕೊಳ್ಳುತ್ತದೆ.

ಪಕ್ಷಿಗಳ ಶ್ರೋಣಿಮೇಖಲೆಯು ಒಂದು ವಿಶೇಷ ಆಕಾರವನ್ನು ತಾಳುತ್ತದೆ. ಇಲಿಯಮ್ ಮೂಳೆಯು ವಿಸ್ತಾರವಾಗಿದ್ದು ತಂತುಗಳ ನೆರವಿನಿಂದ ಸಿನ್‌ಸೇಕ್ರಂ ಎಂಬ ರಚನೆಗೆ ಅಂಟಿಕೊಂಡಿದ್ದು, ಕೊನೆಯ ಹಂತದಲ್ಲಿ ಕೂಡಿಕೊಳ್ಳುತ್ತದೆ. ಇಲಿಯಮ್ ಮೂಳೆಯ ವ್ಯಾಪನೆಯನ್ನು ಅಸಿಟಾಬ್ಯುಲಾರ್ ಕೋಟರದ ಇರುವಿಕೆಯಿಂದ ಅಸಿಟಾಬ್ಯುಲಾರ್ ಪೂರ್ವ (ಪ್ರಿಅಸಿಟಾಬ್ಯುಲಾರ್) ಮತ್ತು ಅಸಿಟಾಬ್ಯುಲಾರ್ ಪಶ್ಚಭಾಗಗಳೆಂದು ವಿಭಾಗಿಸಬಹುದು. ಅಸಿಟಾಬ್ಯುಲಮ್ ಕೋಟರದ ಪಶ್ಚ ಅಂಚಿನಲ್ಲಿ ಈ ಮೂಳೆಯು ಆಂಟಿಟ್ರೊಕ್ಯಾಂಟರ್ ಪ್ರವರ್ಧವಾಗಿ ಚಾಚಿಕೊಂಡಿದೆ. ಇದು ಫೀಮರ್ ತೊಡೆ ಮೂಳೆಯ ಟ್ರೊಕ್ಯಾಂಟರ್‌ಗೆ ವಿರುದ್ಧವಾಗಿ ವರ್ತಿಸುತ್ತದೆ. ಇಶ್ಚಿಯಮ್ ಮೂಳೆಯು ಬಹಳ ಅಗಲವಾಗಿದೆ. ಹಿಂಭಾಗದಲ್ಲಿ ಇಲಿಯಮ್‌ನೊಂದಿಗೆ ಕೂಡಿಕೊಂಡಿದೆ ಮತ್ತು ಮುಂಭಾಗದಲ್ಲಿ ಇಶ್ಚಿಯಾಟಿಕ್ ರಂಧ್ರದ ಇರುವಿಕೆಯಿಂದಾಗಿ ಇಲಿಯಮ್‌ನಿಂದ ಬೇರ್ಪಟ್ಟಿದೆ. ಪ್ಯೂಬಿಸ್ ಮೂಳೆಯು ಬಹಳ ನವಿರಾದ, ಬಾಗಿದ, ಸರಳಿನಂತಿರುವ ಮೂಳೆ. ಇದು ಇಶ್ಚಿಯಮ್ ಮೂಳೆಯ ಅಧೋ ಅಂಚಿಗೆ ಸಮಾಂತರವಾಗಿ ಹರಡಿದೆ, ಮತ್ತು ಇಶ್ಚಿಯಮ್‌ನಿಂದ ಆಬ್ಟುರೇಟರ್ ಕಚ್ಚು ಮೂಲಕ ರಂಧ್ರೀಕೃತವಾಗಿದೆ. ಪಕ್ಷಿಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ ಇಶ್ಚಿಯಮ್ ಅಥವಾ ಪ್ಯೂಬಿಸ್‌ಗಳಾವುವು ಮತ್ತೊಂದು ಅರ್ಧದ ಮೂಳೆಯೊಂದಿಗೆ ಕೂಡಿಕೊಂಡು ಸಂಘಾನವನ್ನು ನಿರ್ಮಿಸುವುದಿಲ್ಲ.

ಸ್ತನಿಗಳ ಶ್ರೋಣಿಮೇಖಲಾದಲ್ಲಿ ಎರಡು ಅರ್ಧಗಳಿವೆ. ಒಂದೊಂದು ಅರ್ಧದಲ್ಲಿಯೂ ಇಲಿಯಮ್, ಇಶ್ಚಿಯಮ್ ಮತ್ತು ಪ್ಯೂಬಿಸ್ ಎಂಬ ಮೂರು ಮೂಳೆಗಳಿವೆ. ಈ ಮೂರು ಮೂಳೆಗಳೂ ಕೂಡಿಕೊಂಡು ಆಸ್ ಇನ್ನಾಮಿನೇಟಮ್ ಎಂಬ ಒಂದು ಮೂಳೆಯಾಗಿದೆ. ಎರಡೂ ಆಸ್ ಇನ್ನಾಮಿನೇಟಮ್‌ಗಳು ನಡುಗಾಲಿನಲ್ಲಿ, ವೆಂಟ್ರಲ್ ಭಾಗದಲ್ಲಿ ಸಂಘಾನದಿಂದ ಕೂಡಿಕೊಂಡಿವೆ. ಇದರ ಹೊರ ಮುಖದಲ್ಲಿ, ಒಂದೊಂದು ಪಕ್ಕದಲ್ಲಿ ಒಂದೊಂದರಂತೆ ಅಸಿಟಬ್ಯುಲಮ್ ಕುಳಿಗಳಿವೆ. ಇಲಿಯಮ್ ಮೂಳೆ ಊರ್ಧ್ವಭಾಗದಲ್ಲಿದ್ದು ಅಸಿಟಾಬ್ಯುಲಮ್‌ನ ಮುಂಭಾಗದಲ್ಲಿದೆ ಇದರ ಅಗ್ರಭಾಗದಲ್ಲಿ ರೆಕ್ಕೆಗಳ ರೀತಿ ಹರಡಿಕೆ ಇದೆ. ಈ ರಚನೆಯ ಒಳಮುಖದಲ್ಲಿ ಸೊಂಟಭಾಗದ ಮೊದಲನೆಯ ಕಶೇರುಮಣಿಯ ಪಾರ್ಶ್ವಪ್ರವರ್ಧಗಳು ಕೀಲಿಕೊಳ್ಳಲು ಒರಟಾದ ಮುಖವಿದೆ. ಇಶ್ಚಿಯಮ್ ಆಸ್ ಇನ್ನಾಮಿನೇಟಮ್‌ನ ಪಶ್ಚ ಮತ್ತು ಊರ್ಧ್ವಭಾಗವಾಗುತ್ತದೆ. ಇದು ಕೆಳಗೆ ವಿಸ್ತರಿಸಿ ಪ್ರತಿ ಅರ್ಧದ ಅದೇ ರೀತಿಯ ವಿಸ್ತರಣೆಯೊಂದಿಗೆ ಸೇರಿ ಇಶ್ಚಿಯಾಟಿಕ್ ಸಂಘಾನವಾಗಿದೆ. ಈ ಮೂರು ಮೂಳೆಗಳಲ್ಲಿಯೂ ಬಹಳ ಸಣ್ಣದೆಂದರೆ ಪ್ಯೂಬಿಸ್. ಇದು ಅಗ್ರಭಾಗದಲ್ಲಿದ್ದು ಕೆಳಮುಖವಾಗಿ ಹರಡಿದೆ. ಇದಕ್ಕೂ ಇಶ್ಚಿಯಮ್‌ಗೂ ನಡುವೆ ಆಬ್ಟುರೇಟಾರ್ ಗವಾಕ್ಷಿ

ಇದ್ದು ಎರಡನ್ನೂ ಪ್ರತ್ಯೇಕಿಸುತ್ತದೆ. ಎರಡೂ ಅರ್ಧದ ಪ್ಯೂಬಿಸ್‌ಗಳು ಅಧೋಭಾಗದಲ್ಲಿ ಒಂದಕ್ಕೊಂದು ಕೂಡಿಕೊಂಡು ಪ್ಯೂಬಿಕ್ ಸಂಘಾನವಾಗಿದೆ. ಅಸಿಟಾಬ್ಯುಲಮ್ ಕುಳಿಯ ಅಧೋಭಾಗದ ಅಂಚಿನಲ್ಲಿ ಕಾಟಿಲಾಯಿಡ್ ಅಸ್ಥಿ ಇದೆ.

ಶ್ರೋಣಿ ಮೇಖಲೆಯ ವಂಶ ಇತಿಹಾಸವು ಅಂಸಮೇಖಲೆಗಿಂತ ಸ್ಪಷ್ಟವಾಗಿ ಕಂಡುಬರುತ್ತದೆ. ಇದಕ್ಕೆ ಆಧಾರವಾಗಿ ಅನೇಕ ಪಳೆಯುಳಿಕೆ ಮೀನುಗಳ ಸಾಕ್ಷ್ಯವು ಕಾಣಿಸಿಕೊಂಡಿರಬಹುದಾದ ಮತ್ತು ಅವು ನಿರ್ವಹಿಸಬಹುದಾದ ಕ್ರಿಯೆಯ ವಿಧಾನವನ್ನು ನಿರೂಪಿಸಲು ನೆರವಾಗುತ್ತದೆ. ಮೀನುಗಳಲ್ಲಿ ಶ್ರೋಣಿ ಮೇಖಲೆಯು ಕಶೇರುಸ್ತಂಭದಿಂದ ಸ್ವತಂತ್ರವಾಗಿದೆ. ಆದರೆ ಚತುಷ್ಪಾದಿಗಳಲ್ಲಿ ಕಾಲುಗಳು ದೇಹದ ಭಾರವನ್ನು ಹೊರಬೇಕಾದುದರಿಂದ ಅದು ಕಶೇರುಸ್ತಂಭದೊಂದಿಗೆ ಸಂಪರ್ಕವನ್ನು ಬೆಳೆಸಿಕೊಂಡಿದೆ. (ಎಚ್.ಬಿ.ಡಿ.)



ಸ್ತನಿ (ಮೊಲ) ಸ್ಕಪುಲ ಮತ್ತು ಮುಂಗಾಲು

**ಅವಯವಶೇಷಗಳು:** ಶರೀರದಲ್ಲಿರುವ ಸಾಪೇಕ್ಷವಾಗಿ ಕ್ಷೀಣರೂಪದಲ್ಲಿದ್ದು ಒಂದು ನಿರ್ದಿಷ್ಟವಾದ ಕಾರ್ಯವಿಲ್ಲದ ಕೆಲವು ಅಂಗಗಳು (ವೆಸ್ಟೀಜಿಯಲ್ ಆರ್ಗನ್ಸ್). ಜೀವವಿಕಾಸವಾದವನ್ನು ಸಮರ್ಥಿಸುವುದರಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಇವೇ ಅವಯವಗಳು ಕೆಲವು ಪ್ರಾಣಿಗಳಲ್ಲಿ ಪ್ರಧಾನವಾಗಿ ಬೆಳೆದಿದ್ದು, ಪ್ರತ್ಯೇಕ ಕಾರ್ಯವನ್ನು ವಹಿಸಿಕೊಂಡಿರುತ್ತವೆ. ಈ ಪ್ರಾಣಿಗಳ ಅಂತಹ ಅಂಗ ಅವಯವಶೇಷವಾಗಿರುವ ಪ್ರಾಣಿಗಳಿಗೆ ಹತ್ತಿರವಾಗಿದ್ದು ಅವುಗಳ ಪೂರ್ವಜ ಮರಕ್ಕೆ ಸೇರಿದವುಗಳೆಂದು ಹೇಳಬಹುದು. ಈ ಅವಯವ ಶೇಷಗಳು ಜೀವವಿಕಾಸದ ಹಾದಿಯಲ್ಲಿ ಬೆಳೆದು, ಒಂದು ಮುಖ್ಯವಾದ ಕಾರ್ಯವನ್ನು ವಹಿಸಿಕೊಂಡಿದ್ದು, ಕ್ರಮೇಣ ಕೆಲವು ಜೀವಿಗಳಲ್ಲಿ ಪೂರ್ತಿಯಾಗಿ ನಾಶವಾಗದೆ ಉಳಿದುಕೊಂಡಿವೆ.

ಮನುಷ್ಯನಲ್ಲಿಯೇ ಇಂತಹ ಸುಮಾರು 100 ಅವಯವ ಶೇಷಗಳಿವೆ ಎಂದು ವೀಡರ್‌ಶೀಮ್ ಎಂಬ ಜೀವ ವಿಜ್ಞಾನಿಯ ಅಭಿಪ್ರಾಯ. ಅಪೆಂಡಿಕ್ಸ್ ಒಂದು ಉತ್ತಮವಾದ ಮತ್ತು ಪರಿಚಿತವಾದ ಉದಾಹರಣೆ. ಇದು ಸಣ್ಣ ಹುಳದಂತಿದ್ದು ದೊಡ್ಡ ಮತ್ತು ಸಣ್ಣ ಕರುಳುಗಳ ನಡುವಿನಲ್ಲಿ ಹೊರಚಾಚಿದಂತಿರುತ್ತದೆ. ದೊಡ್ಡ ಕರುಳಿನ ಒಂದು ಸಣ್ಣ ಭಾಗವಾದ ಸೀಕಂಗೆ ಹೊಂದಿಕೊಂಡ ಇದು ಬೇರೆ ಭಾಗಗಳಿಗೆ ಮುಂದುವರಿಯದೆ ಹಾಗೆಯೇ ಕೊನೆಗೊಳ್ಳುತ್ತದೆ. ಈ ಅಪೆಂಡಿಕ್ಸ್ ವಾಸ್ತವವಾಗಿ ಯಾವ ಕೆಲಸವನ್ನು ಮಾಡದೆ ಕೆಲವು ರೋಗಗಳಿಗೆ ಕಾರಣವಾಗುತ್ತದೆ. ಆದುದರಿಂದ ಮನುಷ್ಯನಿಗೆ ಇದರಿಂದ ಹಾನಿಯೇ ಹೆಚ್ಚು.

ಇತರ ಸ್ತನಿಗಳಲ್ಲಿಯೂ ಇದು ಇದೆ. ಮಾಂಸಾಹಾರಿ ಸ್ತನಿಗಳಲ್ಲಿ ಸೀಕಂ ಮತ್ತು ಅಪೆಂಡಿಕ್ಸ್‌ನ ರಚನೆ ಮನುಷ್ಯನಲ್ಲಿರುವುದರ ಹಾಗೆಯೇ ಇದೆ. ಆದರೆ ಕೆಲವು ಪ್ರಾಣಿ (ಉದಾ: ಬೆಕ್ಕು)ಗಳಲ್ಲಿ ಅಪೆಂಡಿಕ್ಸ್ ಇರುವುದಿಲ್ಲ. ಸಸ್ಯಾಹಾರಿ ಪ್ರಾಣಿಗಳಲ್ಲಿ ಸೀಕಂ ತುಂಬಾ ವಿಶಾಲವಾಗಿದ್ದು ಜೀರ್ಣಾಂಗವ್ಯೂಹದ ಪ್ರಮುಖ ಅಂಗವಾಗಿರುತ್ತದೆ. ಇದು ಒಂದು ದೊಡ್ಡ ಚೀಲದಂತಿದ್ದು ಅದರ ಉದ್ದಳತೆಯ ಮೊಲದಲ್ಲಿಯೇ ಸುಮಾರು 45



ಸ್ತನಿಯ ಪೆಲ್‌ವಿಕ್ ಗರ್ಡಲ್



C.ಕೆಳದವಡೆಯ ಹೊರನೋಟ D.ಕೆಳದವಡೆಯ ಒಳನೋಟ.



A
ಮೇಲ್ಭಾಗದನೋಟ.



B
ಕೆಳಭಾಗದ ನೋಟ

AC. ಆಡಿಟರಿ ಕೆನ್ನಾಲೆ, AL. ಆಲಿಸ್ಫಿನಾಯಿಡ್ ಭಾಗ ,AP.F. ಅಂಟೆರಿಯರ್ ಪಲಟಲ್ ಫೋರಮೆನ್, B.OC. ಬೆಸಿ ಅಸಿಪೆಟಲ್ BS. ಬೆಸ್ಫಿನಾಯಿಡ್, CC. ಕರಡಿಡ್ ಕೆನ್ನಾ, Con. ಕಂಡೈಲ್, E.OC. ಎಕ್ಸ್ ಆಸಿಪಿಟಲ್, FLA. ಫೋರಮೆನ್ ಲಕ್ರ್ತ ಆಂಟ್ರೆಯಸ್, FLM. ಫೋರಮೆನ್ ಲಕ್ತ್ರಂ ಮಿಡಿಯಸ್, FLP. ಫೋರಮನ್ ಲಕ್ರಂ ಪೊಸ್ಟೀರಿಯಸ್, FLM. ಫೋರಮೆನ್ ಲಕ್ರಂ ಮಡಿಯಸ್, FO. ಫೋರಮನ್ ಓವಲೆ, Fr. ಫ್ರಾಂಟಲ್, In. ಇನ್‌ಸಿರ್ಸ್, IOF. ಇನ್‌ಫ್ರಾ ಆರ್ಬಿಟಲ್ ಫಿಸ್ಸುರ್. IP. ಇಂಟರ್ ಪೆರಿಯೆಟಲ್, Lc. ಲಕ್ರಿಮಲ್. Ma. ಮೊಲರ್, Mx. ಯಾಕ್ಕಿಲ್ಲಾ, N. ನಾಸ್ಟ್ರಿಲ್, Pa. ಪರ್ರೈಟಲ್, Pal. ಪಲಟೈನ್, Par.pr. ಪರೋಟಿಕ್, ಪ್ರೊಸಿಸ್, Per. ಪರ್‌ಒಟಿಕ್, Na. ನೆಸಲ್, S.OC. ಸುಪ್ರಸಿಪಟಲ್, S.Mf.ಸ್ಟೈಲೊಮಸ್ಟಯಿಡ್‌ಫೋರಮೆನ್, Sq. ಸ್ಕ್ವಾಮಸಲ್, TV. ಟರ್‌ಬಿನೆಟ್, Ty. ಟಿಮ್‌ಪಾನಿಕ್ ಬುಲ್ಲ. Zy. ಜೈನೊಮೊಟಿಕ್ ಪ್ರೊಸಸ್, AS. ಅರ್ಟಿಕುಲೆಟಿಂಗ್ ಭಾಗ, COR. ಕೊರೊನಯಿಡ್ ಪ್ರೊಸಸ್, CON. ಕಾಂಡೈಲಾಯಿಡ್ ಪ್ರೊಸಸ್, MEN.F. ಮೆಂಟಲ್ ಫೋರಮೆನ್

ಸೆಂಮೀ ಗಳಷ್ಟಿರುತ್ತದೆ. ಈ ಚೀಲದ ಮೊದಲ ಭಾಗವು ತೆಳು ಭಿತ್ತಿಯನ್ನು ಹೊಂದಿದ್ದು ಒಳಭಾಗದಲ್ಲಿರುವ ಸುರುಳಿಯಾದ ಮಡಿಕೆಯು ಅದರ ವಿಶಾಲತೆಯನ್ನು ಹೆಚ್ಚಿಸುತ್ತದೆ. ಅದರ ಕೊನೆಯ ಭಾಗವೇ ಮಾನವನಲ್ಲಿರುವ ಅಪೆಂಡಿಕ್ಸ್ ಅನ್ನು ಹೋಲುತ್ತದೆ ಮತ್ತು ಇದರ ಭಿತ್ತಿಯು ದಪ್ಪವಾಗಿದ್ದು ಅದರಲ್ಲಿ ಸುರುಳಿಯಾದ ಮಡಿಕೆಯಿರುವುದಿಲ್ಲ. ಸೀಕಂನಲ್ಲಿ ಅಧಿಕ ಪ್ರಮಾಣದಲ್ಲಿ ಅಣುಜೀವಿಗಳು ವಾಸಿಸಿರುತ್ತವೆ. ವಿಶಾಲವಾದ ಸೀಕಂನಲ್ಲಿ ಅರೆಜೀರ್ಣವಾದ ಆಹಾರವು ಸಂಗ್ರಹಗೊಂಡು ಅಣುಜೀವಿಗಳ ಸಹಾಯದಿಂದ ಜೀರ್ಣಕ್ರಿಯೆಯನ್ನು ಪೂರ್ಣಗೊಳಿಸಿಕೊಳ್ಳುತ್ತದೆ. ಸಸ್ಯಗಳಲ್ಲಿರುವ ಸೆಲ್ಯುಲೋಸ್ ಎಂಬ ಪದಾರ್ಥವನ್ನು ಈ ಅಣುಜೀವಿಗಳಿಂದ ಮಾತ್ರ ಜೀರ್ಣಿಸಿಕೊಳ್ಳಲು ಸಾಧ್ಯ. ಆದುದರಿಂದ ಸಸ್ಯಾಹಾರಿ ಪ್ರಾಣಿಗಳು ಇವುಗಳನ್ನೇ ಅವಲಂಬಿಸಿವೆ. ಮಾನವನಲ್ಲಿ ಮತ್ತು ಮಾಂಸಾಹಾರಿ ಸ್ತನಿಗಳಲ್ಲಿ ಇದರ ಅಗತ್ಯವಿಲ್ಲ. ಆದರೂ ಅವು ಕಾಣಸಿಗುವುದಕ್ಕೆ ನಮ್ಮ ಪೂರ್ವಜ ಪ್ರಾಣಿಗಳು ಸಸ್ಯಾಹಾರಿಗಳಾಗಿದ್ದವು ಎಂಬ ಕಾರಣವನ್ನು ಕೊಡಬಹುದು. ಜೀವವಿಕಾಸದ ಹಾದಿಯಲ್ಲಿ ಪೂರ್ವಜರು ಆಹಾರ ವಸ್ತುವನ್ನು ಬದಲಾಯಿಸಿದ ಮೇಲೂ ಕ್ಷೀಣ ರೂಪದಲ್ಲಿ ಸೀಕಂ ಮತ್ತು ಅಪೆಂಡಿಕ್ಸ್ ಉಳಿದುಕೊಂಡು ಬಂದಿವೆ. ಆದರೆ ಅವುಗಳ ಪ್ರಾಮುಖ್ಯತೆ ಮತ್ತು ಕಾರ್ಯನಿರ್ವಹಣಶಕ್ತಿಯನ್ನು ಕಳೆದುಕೊಂಡಿವೆ.

ಮಾನವನ ಕಣ್ಣಿನ ಒಳತುದಿಯಲ್ಲಿ ಸಣ್ಣ ಮಾಂಸದ ಪೊರೆಯಿದೆ. ಇದನ್ನು ಅರ್ಧಚಂದ್ರಾಕಾರದ ಮಡಿಕೆ ಅಥವಾ ಸೆಮಿಲೂನಾರ್ ಫೋಲ್ಡ್ ಎನ್ನುತ್ತಾರೆ. ಇದು ಬೇರೆ ಪ್ರಾಣಿಗಳಲ್ಲಿರುವ ಮೂರನೆಯ ಅಕ್ಷಿಪಟಲ ಅಥವಾ ನಿಮೇಷಕ ಪಟಲವನ್ನು ಹೋಲುತ್ತದೆ. ಇತರ ಕಶೇರುಕಗಳಲ್ಲಿ ಮತ್ತು ಸ್ತನಿಗಳಲ್ಲಿ ಇದನ್ನು ಕಾಣಬಹುದು (ಉದಾ: ಕಪ್ಪೆ, ಗೂಬೆ, ಕುದುರೆ ಇತ್ಯಾದಿ). ಮನುಷ್ಯನಲ್ಲಿ ಇದು ಯಾವ ಕಾರ್ಯವನ್ನೂ ನಿರ್ವಹಿಸುವುದಿಲ್ಲ.

ಇತರ ಸ್ತನಿಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಬಾಲವು ಮನುಷ್ಯನಿಗೆ ಮಾತ್ರ ಇಲ್ಲ. ಆದರೆ ಬಾಲದ ಕಶೇರುಮಣಿಗಳು ಸಂಕುಚಿತವಾಗಿ, ಒಂದಕ್ಕೊಂದು ಕೂಡಿಕೊಂಡು ಕಾಕ್ಸಿಕ್ಸ್ ಎಂಬ ರಚನೆಯಾಗಿ ಪೆಲ್ವಿಕ್ ಪಟ್ಟಿಯ ಹಿಂದೆ ಅಂಟಿಕೊಂಡಿದೆ. ಸ್ತನಿಗಳಲ್ಲಿ ಕಿವಿ ಮತ್ತು ತ್ವಚೆಯನ್ನು ಅಲುಗಾಡಿಸಲು ಸ್ನಾಯುಗಳಿರುತ್ತವೆ. ಮನುಷ್ಯನಲ್ಲಿಯೂ ಇವು ಇರುತ್ತವಾದರೂ ಸಾಮಾನ್ಯವಾಗಿ ಕಾರ್ಯನಿರ್ವಾಹಕ ಶಕ್ತಿಯನ್ನು ಕಳೆದುಕೊಂಡಿರುತ್ತವೆ. ಆದರೆ ಕೆಲವರಲ್ಲಿ ಕಿವಿಯನ್ನು ಅಲುಗಾಡಿಸುವ ಶಕ್ತಿ ಇರುವುದುಂಟು.

ಇತರ ಪ್ರಾಮುಖಿ (ಪ್ರೈಮೇಟ್) ಗಳಲ್ಲಿ ಪೂರ್ಣವಾಗಿ ಬೆಳೆದಿದ್ದು, ದಂತಸಮೂಹದಲ್ಲಿ ಬೇರೆ ಹಲ್ಲುಗಳೊಡನೆಯೇ ಬೆಳೆಯುವ ಮೂರನೆಯ ದವಡೆ ಹಲ್ಲು ಮನುಷ್ಯನಲ್ಲಿ ಕೆಲವು ಬಾರಿ ಬೆಳೆಯದೆ ಇರುವುದುಂಟು. ಬೆಳೆದರೂ ಅದು ಸಾಮಾನ್ಯವಾಗಿ ತಡವಾಗಿ ಹೊರಬಂದು ಬೇಗನೆ ಎಲ್ಲಾ ತರದ ದಂತರೋಗಕ್ಕೆ ತುತ್ತಾಗುತ್ತದೆ. ಇದಕ್ಕೆ ಜ್ಞಾನದಂತ (ವಿಸ್‌ಡಮ್ ಟೂತ್) ಎಂದು ಹೆಸರಿದೆ. ಈ ರೀತಿ ಯಾವಾಗಲೋ ಕಾಣಿಸಿಕೊಂಡು ಕೆಲವು ಸಲ ಬೆಳೆಯದೇ ಇರುವುದರಿಂದಲೂ ಇದನ್ನು ಅವಯವಶೇಷವೆಂದೇ ಪರಿಗಣಿಸಬಹುದು.

ಮಾನವನಲ್ಲಿ ಮಾತ್ರವಲ್ಲದೆ ಇತರ ಪ್ರಾಣಿಗಳಲ್ಲಿಯೂ ಇಂತಹ ಅನೇಕ ಅವಯವ ಶೇಷಗಳಿವೆ. ಹಾವುಗಳಲ್ಲಿ ಸಾಮಾನ್ಯವಾಗಿ ಕಾಲುಗಳಿರುವುದಿಲ್ಲವಾದರೂ ಹೆಬ್ಬಾವು ಮತ್ತು ಬೋವಾಗಳಲ್ಲಿ ಕಾಲು ಮತ್ತು ಪೆಲ್ವಿಕ್ ಪಟ್ಟಿಯ ಮೂಳೆಗಳು ಅವಯವಶೇಷಗಳಾಗಿ ಕಾಣಸಿಗುತ್ತವೆ. ತಿಮಿಂಗಿಲಗಳಲ್ಲೂ ಇದನ್ನು ಕಾಣಬಹುದು.

ಹಕ್ಕಿಗಳ ಪ್ರಮುಖ ಲಕ್ಷಣ ಹಾರುವ ಸಾಮರ್ಥ್ಯ. ಹಾರಲಾರದ ಹಕ್ಕಿಗಳೂ ಕೆಲವಿವೆ. ಕಿವಿ ಎಂಬ ನ್ಯೂಜಿಲೆಂಡ್ ದೇಶದ ಹಕ್ಕಿಯು ಹಾರಲಾಗದಿದ್ದರೂ ರೆಕ್ಕೆಯ ಕೆಲವು ಅವಶೇಷಗಳನ್ನುಳಿಸಿಕೊಂಡಿದೆ. ಕುದುರೆಯಲ್ಲಿರುವ ಕ್ಯಾನನ್ ಮೂಳೆಗೆ ಅಂಟಿಕೊಂಡು ಎರಡು ತೆಳುವಾದ ಸ್ಪ್ಲಿಂಟ್ ಮೂಳೆಗಳು ಎರಡನೆ ಮತ್ತು ನಾಲ್ಕನೆ ಬೆರಳುಗಳ ಮೆಟಕಾರ್ಪಲ್‌ಗಳನ್ನು ಪ್ರತಿನಿಧಿಸುತ್ತವೆ.

ಈ ಅವಯವಗಳು ಸಂಕುಚಿತಗೊಂಡು ಅವುಗಳ ಮೊದಲಿನ ಆಕಾರವನ್ನೂ ನಿರ್ದಿಷ್ಟ ಕೆಲಸವನ್ನೂ ಕಳೆದುಕೊಂಡಾಗ ಅವುಗಳನ್ನು ಕೆಲಸಕ್ಕೆ ಬಾರದವುಗಳೆಂದೂ ಪರಿಗಣಿಸಲಾಗುತ್ತದೆ. ಆದರೆ ಸಿಂಪ್ಸನ್‌ನ ಪ್ರಕಾರ ಇದು ಯಾವಾಗಲೂ ನಿಜವಲ್ಲ. ಇವು ಬೇರೆ ಕಾರ್ಯಗಳನ್ನು ನಿರ್ವಹಿಸಲು ಸಹಕರಿಸಬಹುದು. ಉದಾಹರಣೆಗಾಗಿ, ಪೆಂಗ್ವಿನ್ ಪಕ್ಷಿಯ ರೆಕ್ಕೆಗಳು ಕ್ಷೀಣವಾಗಿದ್ದು ಇದು ಹಾರಲಾರದ ಪಕ್ಷಿಯಾಗಿದೆ. ಆದರೆ ಇವುಗಳು ಈಜುವಾಗ ಈ ಅವಯವಗಳು ಒಳ್ಳೆಯ ಹುಟ್ಟುಗಳಾಗಿ ಸಹಾಯ ಮಾಡುತ್ತವೆ. ಆಸ್ಟ್ರಿಚ್ ಮತ್ತು ರಿಯಾಗಳಂತಹ ಓಡುವ ಪಕ್ಷಿಗಳಲ್ಲೂ ರೆಕ್ಕೆಗಳು ಕ್ಷೀಣವಾಗಿವೆ. ಆದರೆ ಸಿಂಪ್ಸನ್‌ನ ಹೇಳಿಕೆಯಂತೆ ರಿಯಾ ಗಳು ಓಡುವಾಗ ಈ ರೆಕ್ಕೆಗಳನ್ನು ಬಿಚ್ಚಿ ಅವುಗಳ ಸಮತೋಲನವನ್ನು ಕಾಪಾಡಿಕೊಳ್ಳುತ್ತವೆ. ಇವು ಇತರ ಓಡುವ ಪಕ್ಷಿಗಳಲ್ಲೂ ಇದೇ ಕಾರ್ಯ ನಿರ್ವಹಿಸಬಹುದು. ಅಂತೆಯೇ ಪೀನಿಯಲ್ ಗ್ರಂಥಿಯನ್ನು ಇದೇ ರೀತಿ ಉದಾಹರಣೆಗಾಗಿ ತೆಗೆದುಕೊಳ್ಳಬಹುದು.

ಈ ಚಿಕ್ಕ ಗ್ರಂಥಿಯು ಮಿದುಳಿನ ಮುಂಭಾಗದಿಂದ ಬೆಳೆಯುತ್ತದೆ. ಇದು ಗ್ರಂಥಿಗಳಿಂದಲೂ, ನರವ್ಯೂಹದಿಂದಲೂ ರಚಿತವಾಗಿದೆ. ಲ್ಯಾಂಪ್ರೆ ಮತ್ತು ಹಲವು ಸರೀಸೃಪಗಳಲ್ಲಿ (ಪ್ರಾಚೀನ ಲಕ್ಷಣವನ್ನೊಳಗೊಂಡ ನ್ಯೂಜಿಲೆಂಡ್ ದೇಶದ ಸ್ಫಿನೋಡಾನ್ ಅನ್ನೂ ಒಳಗೊಂಡು) ಇದು ಮೂರನೆಯ ಕಣ್ಣನ್ನು ಹೊಂದಿದೆ. ಇದು ಕಪಾಲದ ಮೇಲ್ಭಾಗದಲ್ಲಿರುತ್ತದೆ. ಪಳೆಯುಳಿಕೆಗಳ ಸಾಕ್ಷ್ಯದಂತೆ ಕ್ರಾಸೋಪ್ಟೆರಿಜಿಯನ್ ಎಂಬ ಮೀನಿನ ಗುಂಪಿನಲ್ಲಿಯೂ ಇವು ಕಾಣಸಿಗುತ್ತವೆ. ಇವೇ ನೆಲದ ಮೇಲಿನ ಕಶೇರುಕಗಳಿಗೆ ಪೂರ್ವಜರು ಎಂದು ಹೇಳಲಾಗುತ್ತದೆ. ಆದುದರಿಂದ ಪೀನಿಯಲ್ ಗ್ರಂಥಿಯನ್ನು ಹೊಂದಿರುವುದು ಒಂದು ಪ್ರಾಚೀನ ಗುಣಲಕ್ಷಣವಾಗಿದೆ. ಇತರ ಕಶೇರುಕಗಳಲ್ಲಿ ಇವುಗಳ ಅಸ್ತಿತ್ವವಿರುವುದರಿಂದ ಇದನ್ನು ಮೂರನೆಯ ಕಣ್ಣಿನ ಅವಯವಶೇಷವೆಂದೇ ಹೇಳಬಹುದು. ಆದರೆ ಇದನ್ನು ಒಂದು ಮುಖ್ಯವಾದ ನಿರ್ನಾಳಗ್ರಂಥಿಯೆಂದು ಪರಿಗಣಿಸಿರುವುದರಿಂದ ಬೇರೆ ರೀತಿಯ ಹೊಸ ಕಾರ್ಯವನ್ನು ವಹಿಸಿಕೊಂಡಿದೆಯೆಂದೂ ಹೇಳುತ್ತಾರೆ.

ಆದರೆ ಇಂತಹ ರಚನೆಗಳೆಲ್ಲವನ್ನೂ ಅವಯವಶೇಷಗಳೆಂದೇ ಪರಿಗಣಿಸಲು ಆಗದೆಂದು ಕೆಲ ವಿಜ್ಞಾನಿಗಳ ಅಭಿಪ್ರಾಯ. ಉದಾಹರಣೆಗೆ, ತಿಮಿಂಗಿಲದಲ್ಲಿ ಕಾಣಸಿಗುವ ಚಿಕ್ಕ ಚಿಕ್ಕ ಮೂಳೆಗಳು ಕಾಲಿನ ಅವಯವಶೇಷವೆಂದು ಸಾಮಾನ್ಯ ಅಭಿಪ್ರಾಯ. ಆದರೆ ಇವಕ್ಕೆ ಜೀರ್ಣಾಂಗ ವ್ಯೂಹದ ಗುದದ್ವಾರದ ಭಿತ್ತಿಯನ್ನು ಬಿರುಸುಮಾಡುವ ಕಾರ್ಯವಿದ್ದು ಇವು ಅವಯವಶೇಷಗಳಲ್ಲವೆಂದೂ ಕೆಲವರ ಹೇಳಿಕೆ. ಆದರೆ ಇದನ್ನು ಬೆಂಬಲಿಸುವ ವಿಜ್ಞಾನಿಗಳು ಕಡಿಮೆ.

ಜೀವ ವಿಕಾಸವಾದವನ್ನು ಸಮರ್ಥಿಸುವುದರಲ್ಲಿ ಅವಯವಶೇಷಗಳ ಕೊಡುಗೆ ಅಪಾರ ಎಂಬುದನ್ನು ಮಾತ್ರ ಅಲ್ಲಗಳೆಯಲು ಸಾಧ್ಯವಿಲ್ಲ. ಒಂದು ಗುಂಪಿನ ಪ್ರಾಣಿಗಳು ಇತರ ಗುಂಪುಗಳಿಗೆ ಎಷ್ಟು ನಿಕಟವಾಗಿವೆ ಮತ್ತು ಅವುಗಳ ಪೂರ್ವಜ ವಂಶ ಯಾವುದು ಎಂಬುದನ್ನು ನಿಶ್ಚಯಿಸಲು ಅವಯವಶೇಷಗಳ ಸಹಾಯ ಬಹಳ ಮುಖ್ಯವಾದದ್ದು. ಭ್ರೂಣದ ಬೆಳವಣಿಗೆಯಾಗುವಾಗ ಪಕ್ಷಿಗಳಲ್ಲೂ, ಸ್ತನಿಗಳಲ್ಲೂ ಕಿವಿರುರಂಧ್ರಗಳು ಕಂಡುಬರುತ್ತವೆ. ಆದುದರಿಂದ ಮೀನುಗಳಿಂದಲೇ ಈ ಪ್ರಾಣಿಗಳು ಉದ್ಭವವಾಗಿವೆ ಎಂದು ನಿರ್ಣಯಿಸಬಹುದು. (ಎಂ.ವಿ.ಸಿ)

**ಅವರ್ಣಕ ಉಪಕರಣ:** ಕೋಶಾಂಗಗಳಾದ ಸೆಂಟ್ರಿಯೋಲ್‌ನ್ನು ಸುತ್ತುವರಿದ ತಾರಮಂಡಲ (ಆಸ್ಟರ್) ಮತ್ತು ಕದಿರು (ಸ್ಪಿಂಡಲ್) ಗಳೆಲ್ಲವನ್ನು ಅವರ್ಣಕ ಉಪಕರಣವೆನ್ನುವರು (ಆಕ್ರೊಮಾಟಿಕ್ ಆಪರೇಟಸ್).




ಅವರ್ಣಕ ಉಪಕರಣ

ಜೀವಕೋಶದ ವಿಭಜನೆಯ ಕಾಲದಲ್ಲಿ ಈ ಅವರ್ಣಕ ಉಪಕರಣವು ಮರಿಜೀವಕೋಶಗಳ ನಡುವೆ ಕ್ರೊಮೋಸೋಮುಗಳ ಸ್ಥಾನವಿನ್ಯಾಸ, ಸಾಲುಗೂಡಿಕೆ ಮತ್ತು ಪ್ರತ್ಯೇಕತೆಯನ್ನು ನಿರ್ಧರಿಸುತ್ತದೆ. ಈ ಕಾರ್ಯವು ಪೂರ್ಣಗೊಂಡನಂತರ ಅವರ್ಣಕ ಉಪಕರಣವು ನಶಿಸಿ ಹೋಗುತ್ತದೆ.

ಸೆಂಟ್ರಿಯೋಲು: ಪ್ರಾಣಿ ಮತ್ತು ಕೆಲವು ಕೆಳಮಟ್ಟದ ವಿಕಸನ ಹೊಂದಿದ ಸಸ್ಯಜೀವಕೋಶಗಳಲ್ಲಿ ವಿಭಜನಾಕದಿರಿನ ಕೊನೆಗಳಲ್ಲಿ ವಿಶಿಷ್ಟವಾದ ಸ್ಥಳದ ಮಧ್ಯೆ ಅಥವಾ ಹತ್ತಿರ ಒಂದು ಅಥವಾ ಎರಡು ಸೆಂಟ್ರಿಯೋಲುಗಳಿವೆ. ಇವು ಯಾವಾಗಲೂ ನಿಗದಿಯಾದ ಸ್ಥಳದಲ್ಲೇ ಇರುತ್ತವೆ. ಸೆಂಟ್ರಿಯೋಲಿನ ಸುತ್ತ ಸೆಂಟ್ರೋಸೋಮ್ ಎಂಬ ತಿಳಿವಲಯವೂ, ಸೆಂಟ್ರೋಸ್ಫಿಯರ್ ಎಂಬ ದಟ್ಟವಲಯವೂ ಇದೆ. ಸೆಂಟ್ರೋಸ್ಫಿಯರ್ ವಲಯದಿಂದ

ಆಸ್ಟರ್ ಎಂಬ ಕಿರಣಗಳಂತಿರುವ, ತಂತು ರೂಪದ ರಚನೆಗಳು ಪ್ರಸರಿಸುತ್ತವೆ. ಜೀವಕೋಶ ವಿಭಜನೆಯ ಪ್ರೋಫೇಸ್ ಹಂತದಲ್ಲಿ ಸೆಂಟ್ರಿಯೋಲುಗಳು ಧ್ರುವಗಳ ಕಡೆಗೆ ಬೇರ್ಪಟ್ಟಾಗ ಸೆಂಟ್ರೋಸೋಮ್ ವಲಯವು ಸೆಂಟ್ರೋಡೆಸ್ಮಸ್ ಎಂಬ ಉದ್ದವಾಗಿರುವ ಭಾಗವನ್ನು ರಚಿಸುತ್ತದೆ. ಈ ಸೆಂಟ್ರೋಡೆಸ್ಮಸ್‌ನಿಂದಲೇ ವಿಭಜನಾ ಕದಿರು ಉದಯಿಸುತ್ತದೆ.

ಇಲೆಕ್ಟ್ರಾನ್ ಸೂಕ್ಷ್ಮದರ್ಶಕದ ಮೂಲಕ ಸೆಂಟ್ರಿಯೋಲುಗಳನ್ನು ಪರಿಶೀಲಿಸಿದಾಗ ಅವು 1200 ರಿಂದ 1500 Å ವ್ಯಾಸವುಳ್ಳ, 300 ರಿಂದ 2000Å ಉದ್ದವಾದ ಕೊಳವೆಗಳಂತೆ ಗೋಚರಿಸುತ್ತವೆ. ಅದರ ಹೊರಗಿನ ಭಿತ್ತಿಯ ಕ್ರಮಬದ್ಧವಾದ ಒಂಬತ್ತು ಗುಂಪು ಕಿರುನಾಳ (ನಳಿಕೆ) ಗಳಿಂದ ರಚಿತವಾಗಿದೆ. ಪ್ರತಿಗುಂಪಿನಲ್ಲಿಯೂ ಮೂರು ನಳಿಕೆಗಳಿದ್ದು, ಅವು ಕೇಂದ್ರದ ಕಡೆಗೆ ಓರೆಯಾಗಿ ವ್ಯವಸ್ಥೆಗೊಂಡಿವೆ. ಪ್ರತಿ ನಳಿಕೆಯ ವ್ಯಾಸ ಸು. 250Å ಹಾಗೂ ಅದರ ಭಿತ್ತಿಯು ಸು. 45 Å ದಪ್ಪವಾಗಿದೆ.

ಸೆಂಟ್ರಿಯೋಲುಗಳು ಹಿಂದಿದ್ದವುಗಳ ವಿಭಜನೆಯಿಂದ ಉದ್ಭವಿಸುತ್ತವೆಂದು ತಿಳಿಯಲಾಗಿದೆ. ಅವು ಆಸ್ಟರಿನ ನಳಿಕೆಗಳ ರಚನೆ ಮತ್ತು ವ್ಯವಸ್ಥೆಗೆ ಕಾರಣವಾಗಿವೆ. ಕೆಲವು ಜೀವಕೋಶಗಳ ನಿಯಮಿತ ಕಾರ್ಯಕ್ಕೆ ಅಗತ್ಯವಾದ ಚಲನಾಶಕ್ತಿಯುಳ್ಳ ಉಪಕರಣವನ್ನು ಸೆಂಟ್ರಿಯೋಲುಗಳು ಉತ್ಪತ್ತಿಮಾಡುತ್ತವೆ. ಉದಾಹರಣೆಗೆ ಸೆಂಟ್ರಿಯೋಲುಗಳು ನೇರವಾಗಿ ಅಥವಾ ಸ್ವಲ್ಪ ಬದಲಾವಣೆಗೊಂಡು ಶಿಲಕೆ ಮತ್ತು ಕಶಾಂಗಗಳ ಉಗಮಾಂಗಗಳಾಗಿ ಸಹಾಯಮಾಡುತ್ತವೆ. ಶಿಲಕೆಗಳು ಉತ್ಪತ್ತಿಯಾಗುವ ಸಮಯದಲ್ಲಿ ಸೆಂಟ್ರಿಯೋಲುಗಳು ಅನೇಕ ಬಾರಿ ವಿಭಜನೆಗೊಳ್ಳುತ್ತವೆ.

ಜೀವವಿಕಾಸ ಸೆಂಟ್ರಿಯೋಲುಗಳ ಸ್ಥಾನವನ್ನು ಕದಿರಿನ ಧ್ರುವಗಳಿಗೇ ನಿಯತಗೊಳಿಸಿ ಕೋಶ ವಿಭಜನೆಯ ಅನಫೇಸ್ ಹಂತದಲ್ಲಿ ಇವು ವಿಂಗಡನೆಗೊಂಡು ಹಂಚಿಕೆಗೊಳ್ಳುವಂತೆ ಮಾಡಿದೆ.

ಆಸ್ಟರ್: ಸೆಂಟ್ರಿಯೋಲುಗಳ ಸುತ್ತ ಇರುವ ಆಸ್ಟರ್‌ನಲ್ಲಿ ಸೆಂಟ್ರೋಸ್ಫಿಯರ್, ಕಿರ್ನಾಳಗಳು, ಪದರುಗಳು, ಮೈಟೋಕಾಂಡ್ರಿಯ ಸಾಲುಗಳು ಮತ್ತು ವರ್ಣಕಗಳಿವೆ.

ಆಸ್ಟರ್‌ಗಳು ಪ್ರಾಣಿಜೀವಕೋಶಗಳಲ್ಲಿ ಕಂಡುಬರುತ್ತವೆ. ಮೇಲ್ಮಟ್ಟದ ಸಸ್ಯಗಳಲ್ಲಿ ಆಸ್ಟರ್‌ಗಳು ಇರುವುದಿಲ್ಲ. ಆಸ್ಟರ್‌ಗಳು, ಚಲಿಸಬಲ್ಲ ಲಿಂಗಾಣುಗಳು ಮತ್ತು ಸೆಂಟ್ರಿಯೋಲು ಅಥವಾ ಬ್ಲೆಫೆರೋಪ್ಲಾಸ್ಟ್‌ಗಳನ್ನು ಹೊಂದಿರುವ ಸಸ್ಯ ಜೀವಕೋಶಗಳಲ್ಲಿವೆ. ಆದರೆ ಈ ಆಸ್ಟರ್‌ನ ರಚನೆಯು ಪ್ರಾಣಿಗಳ ಜೀವಕೋಶಗಳಲ್ಲಿರುವ ಆಸ್ಟರ್‌ನ ರಚನೆಗಿಂತ ಭಿನ್ನವಾಗಿದೆ.

ಆಸ್ಟರಿನ ರಚನೆ ಜೀವಿಗಳಲ್ಲಿ ವಿಭಿನ್ನವಾಗಿದೆ. ಕೆಲವು ರೀತಿಯ ಆಸ್ಟರ್‌ಗಳಿಗೆ ಸೆಂಟ್ರಿಯೋಲುಗಳಿಲ್ಲ. ಸೆಂಟ್ರಿಯೋಲುಗಳು ಇದ್ದಾಗ ಅವು ಸಾಮಾನ್ಯವಾಗಿ ಆಸ್ಟರ್‌ನ ಮಧ್ಯಭಾಗವನ್ನು ಆಕ್ರಮಿಸಿರುತ್ತದೆ. ಆಸ್ಟರ್‌ನ ರಚನೆ ಮತ್ತು ಅಭಿವೃದ್ಧಿಯಲ್ಲಿ ಸೆಂಟ್ರೋಸೋಮುಗಳು ಮುಖ್ಯ ಪಾತ್ರವಹಿಸುತ್ತವೆ. ಕೆಲವು ಆಸ್ಟರ್‌ಗಳಲ್ಲಿ ನಳಿಕೆಗಳು ಸೆಂಟ್ರಿಯೋಲುಗಳ ಸನಿಹದಿಂದ ಪ್ರಸರಿಸುತ್ತವೆ. ಕೆಲವು ಆಸ್ಟರ್‌ಗಳಲ್ಲಿ ನಳಿಕೆಗಳು ಮಧ್ಯೆ ವ್ಯವಸ್ಥಿತವಾದ ದೊಡ್ಡ ಸೆಂಟ್ರೋಸ್ಫಿಯರಾಗಿ ಕಾಣಬಹುದು. ಆಸ್ಟರ್‌ನ ಕಿರುನಾಳಗಳ ಉದ್ದ ವ್ಯತ್ಯಾಸವಾಗುತ್ತದೆ ಮತ್ತು ಅವು ಸೆಂಟ್ರೋಸ್ಫಿಯರ್‌ನಿಂದ ಬೆಳೆಯಲಾರಂಭಿಸುತ್ತವೆ.

ಸೆಂಟ್ರಿಯೋಲುಗಳನ್ನು ಸುತ್ತುವರಿಯುವುದರಿಂದ ಸೆಂಟ್ರಿಯೋಲುಗಳ ಸ್ಥಾನವನ್ನು ಕದಿರಿನ ಧ್ರುವಗಳಲ್ಲಿ ಭದ್ರಪಡಿಸಿ, ಅವುಗಳ ಹಂಚಿಕೆಯನ್ನು ಸರಾಗಗೊಳಿಸಿ, ಅವುಗಳಿಗೆ ತಟ್ಟಬಹುದಾದ ಆಕಸ್ಮಿಕ ಹಾನಿಯನ್ನು ತಡೆಗಟ್ಟುವುದೇ ಆಸ್ಟರಿನ ಮುಖ್ಯವಾದ ಕಾರ್ಯ. ಕೆಲವು ಜೀವಕೋಶಗಳ ವಿಭಜನೆಯಲ್ಲಿ ಆಸ್ಟರ್‌ಗಳು ಕ್ರೋಮೋಸೋಮುಗಳ ಕಾರ್ಯರೀತಿ ಮತ್ತು ಅವುಗಳ ಹಂಚಿಕೆಯಲ್ಲಿ ಮುಖ್ಯಪಾತ್ರವಹಿಸುತ್ತವೆ. ಆಸ್ಟರ್‌ಗಳು ಜೀವಕೋಶಗಳ ವಿಭಜನೆಯ ಸಮತೋಲನವನ್ನು ಮತ್ತು ಕದಿರಿನ ಧ್ರುವತೆಯನ್ನು ನಿರ್ಧರಿಸುತ್ತವೆ. ಆಸ್ಟರ್‌ಗಳ ಸಂಖ್ಯೆಯು ಕದಿರಿನ ಧ್ರುವಗಳ ಸಂಖ್ಯೆಯನ್ನು ನಿರ್ಧರಿಸುತ್ತದೆ. ಆಸ್ಟರ್‌ಗಳ ಕದಿರಿನ ಸಂರಚನೆಯನ್ನು ಸಹ ಬದಲಾಯಿಸಬಹುದು. ಆದ್ದರಿಂದ ಆಸ್ಟರ್‌ಗಳು ಕ್ರೋಮೋಸೋಮುಗಳ ಚಲನೆಯ ಪಥದ ಮೇಲೆ ಪ್ರಭಾವ ಬೀರುತ್ತವೆ.

ಕದಿರು (ಸ್ಪಿಂಡಲ್): ಆಸ್ಟರ್ ಮತ್ತು ಸೆಂಟ್ರಿಯೋಲುಗಳಿರುವ ಕದಿರು ಪ್ರಾಣಿಜೀವಕೋಶಗಳಲ್ಲಿದೆ. ಕದಿರು ಕೆಲವು ಕೆಳಮಟ್ಟದ ಸಸ್ಯಗಳಲ್ಲಿ ಹೆಚ್ಚಾಗಿ ಮಿಯೋಸಿಸ್ ಮತ್ತು ಮೈಟೋಸಿಸ್ ಕಾಲದಲ್ಲಿ ಕಂಡುಬರುತ್ತದೆ. ಕದಿರು ರೂಪುಗೊಳ್ಳುವುದಕ್ಕೆ ಮುಂಚೆ ಸೆಂಟ್ರಿಯೋಲುಗಳು ವಿಭಜನೆ ಹೊಂದಿ, ಎರಡು ಜೋಡಿ ಸೆಂಟ್ರಿಯೋಲುಗಳು, ಎರಡು ಧ್ರುವಗಳ ಕಡೆಗೆ ಚಲಿಸಲು ಆರಂಭಿಸುತ್ತವೆ. ಅವುಗಳನ್ನು ಆವರಿಸುವ ಆಸ್ಟರ್‌ಗಳು ಬೆಳೆಯುತ್ತವೆ. ನಂತರ ಆಸ್ಟರ್‌ಗಳು ತೀವ್ರಗತಿಯಲ್ಲಿ ಬೇರ್ಪಟ್ಟು ಅವುಗಳ ಮಧ್ಯೆ ನ್ಯೂಕ್ಲಿಯಸ್‌ನ ಒಂದು ಪಕ್ಕದಲ್ಲಿ ಕದಿರು ರೂಪುಗೊಳ್ಳುತ್ತದೆ. ಈ ಸಮಯದಲ್ಲಿ ನ್ಯೂಕ್ಲಿಯಸ್‌ನ ಪಟಲವು ಇನ್ನೂ ಛಿದ್ರವಾಗಿರುವುದಿಲ್ಲ.

ಕದಿರು ಕೆಲವು ಪ್ರೋಟಿಸ್ಟಾಗಳಲ್ಲಿ ಹಾಗೂ ಪ್ರಾಣಿಗಳ ಅಂಡಗಳಲ್ಲಿದೆ. ನ್ಯೂಕ್ಲಿಯಸ್‌ನ ಪಟಲವು ಛಿದ್ರವಾಗುವುದಕ್ಕೆ ಮುಂಚಿತವಾಗಿ ಈ ರೀತಿಯ ಕದಿರಿನ ನಿರ್ಮಾಣವನ್ನು ಕಾಣಬಹುದು. ಈ ಕದಿರು ನ್ಯೂಕ್ಲಿಯಸ್‌ನ್ನು ಆವರಿಸುವ ಒಂದು ಸ್ಪಷ್ಟವಲಯದಲ್ಲಿ ಕಂಡುಬರುತ್ತದೆ. ನ್ಯೂಕ್ಲಿಯಸ್‌ನ ವಿರುದ್ಧ ದಿಕ್ಕುಗಳಲ್ಲಿ ಎರಡು ಧ್ರುವಗಳು ಗೋಚರವಾಗುತ್ತವೆ. ಎರಡೂ ಧ್ರುವಗಳ ಮಧ್ಯದಲ್ಲಿ ಕದಿರು ನಿರ್ಮಾಣವಾಗುತ್ತದೆ.

ನ್ಯೂಕ್ಲಿಯಸ್‌ನ ಪಟಲವು ಛಿದ್ರವಾದ ನಂತರ ಎರಡು ಧ್ರುವಗಳ ಮಧ್ಯದ ಸ್ಪಷ್ಟವಲಯದಲ್ಲಿ ಅವ್ಯವಸ್ಥಿತವಾಗಿರುವ ಸೂಕ್ಷ್ಮ ನಳಿಕೆಗಳು ಗೋಚರವಾಗುತ್ತವೆ. ಕ್ರಮೇಣ ಈ ನಳಿಕೆಗಳ ಸಂಖ್ಯೆ ಹೆಚ್ಚಾಗಿ ಅವು ಒಂದಕ್ಕೊಂದು ಸಮಾನಾಂತರವಾಗಿ ವ್ಯವಸ್ಥೆಗೊಳ್ಳುತ್ತವೆ. ಪ್ರೋಫೇಸ್ ಹಂತವನ್ನು ತಲುಪುವುದರೊಳಗಾಗಿ ಈ ಕದಿರಿನ ನಳಿಕೆಗಳು ಕದಿರಿನ ಎಳೆಗಳಾಗಿ ಮಾರ್ಪಡುತ್ತವೆ. ವಿವಿಧ ಬಗೆಯ ಕದಿರಿನ ಎಳೆಗಳಿವೆ. ಕ್ರೋಮೋಸೋಮಿನ ಎಳೆಗಳು ಕ್ರೋಮೋಸೋಮುಗಳಿಗೆ ಜೋಡಣೆಯಾಗಿವೆ. ಅವಿಚ್ಛಿನ್ನ ಕದಿರಿನ ಎಳೆಗಳು ಎರಡು ಧ್ರುವಗಳ ನಡುವೆ ವ್ಯಾಪಿಸುತ್ತವೆ. ಕದಿರಿನ ಎಳೆಗಳು ಕ್ರೋಮೋಸೋಮಿನ ಸೆಂಟ್ರೋಮಿಯರ್ ಭಾಗಕ್ಕೆ ಜೋಡಣೆಯಾಗಿವೆ. ಇವಕ್ಕೆ ಕೈನೆಟೋಕೋರ್ ಕದಿರಿನ ಎಳೆಗಳು ಎಂದು ಹೆಸರು. ಸೆಂಟ್ರೋಮಿಯರ್ ಭಾಗವನ್ನು ಬಿಟ್ಟು ಉಳಿದ ಕ್ರೋಮೋಸೋಮುಗಳ ಭಾಗಕ್ಕೆ ಜೋಡಣೆಯಾಗಿರುವ ತಂತುಗಳಿಗೆ ನಿಯೋಸೆಂಟ್ರಿಕ್ ಕದಿರಿನ ಎಳೆಗಳು ಎನ್ನುವರು. ಟಿಲೋಫೇಸ್ ಹಂತದಲ್ಲಿ ಅವಿಚ್ಛಿನ್ನ ಕದಿರಿನ ಎಳೆಗಳ ಶೇಷಭಾಗಗಳನ್ನು ಅಂತರವಲಯ ಕದಿರಿನ ಎಳೆಗಳು ಎಂದು ಕರೆಯುತ್ತಾರೆ. ಕದಿರಿನ ಎಳೆಗಳ ಸ್ಥಾನ ವಿನ್ಯಾಸಕ್ಕೆ ಮೂರು ಕೇಂದ್ರಗಳು ಕಾರಣ. ಸೆಂಟ್ರಿಯೋಲು, ಸೆಂಟ್ರೋಮಿಯರ್ ಮತ್ತು ಕೋಶಫಲಕ (ಸೆಲ್ ಪ್ಲೇಟ್). ಜೀವಕೋಶ ವಿಭಜನೆಯ ಚಕ್ರಗತಿಯಲ್ಲಿ ಈ ಕದಿರಿನ ಎಳೆಗಳ ಸ್ಥಾನವಿನ್ಯಾಸವು ಒಂದು ಕೇಂದ್ರದಿಂದ ಮತ್ತೊಂದು ಕೇಂದ್ರಕ್ಕೆ ಬದಲಾಯಿಸುತ್ತದೆ.

ಪ್ರತಿ ಕದಿರಿನ ಎಳೆಯು ಸೂಕ್ಷ್ಮನಳಿಕೆಗಳ ಕಂತೆಯಿಂದ ನಿರ್ಮಾಣವಾಗಿದೆ. ಈ ಸೂಕ್ಷ್ಮನಳಿಕೆಗಳು ಉದ್ದವಾದ, ನೇರವಾದ ಉರುಳೆಗಳಂತೆ ಕಾಣುತ್ತವೆ. ಇದರ ವ್ಯಾಸವು ಸು. 250Å. ಈ ಸೂಕ್ಷ್ಮನಳಿಕೆಗಳು ಒಂದಕ್ಕೊಂದು ಸಮಾನಾಂತರವಾಗಿ ಅಥವಾ ಸ್ವಲ್ಪ ಬಾಗಿವೆ. ಈ ನಳಿಕೆಗಳ ಸಂಖ್ಯೆ 15 ರಿಂದ 500. ಈ ನಳಿಕೆಗಳಲ್ಲಿ ಪಾರ್ಶ್ವಶಾಖೆಗಳು ಇರುತ್ತವೆ. ಈ ನಳಿಕೆಗಳು ಪರಸ್ಪರ ಸಂಬಂಧವನ್ನು ಕಲ್ಪಿಸುತ್ತವೆಂದೂ ತೋರಿಸಲಾಗಿದೆ. ಈ ನಳಿಕೆಗಳ ಭಿತ್ತಿಯು ಪ್ರೋಟೀನಿನ ಏಕಮಾನಗಳಿಂದ ಮಾಡಲ್ಪಟ್ಟಿದೆಯೆಂದು ಅಲ್ಟ್ರಾಸೆಂಟ್ರಿಫ್ಯಾಗೇಶನ್ ಮತ್ತು ಇಲೆಕ್ಟ್ರೋಫೊರೆಸಿಸ್ ಪ್ರಯೋಗಗಳಿಂದ ಸ್ಪಷ್ಟವಾಗಿದೆ. ಈ ಪ್ರೋಟೀನಿನ ಗಾತ್ರವು ಸು. 22S ಮತ್ತು ಅದರ ಅಣುತೂಕ 880,000. ಈ ಪ್ರೋಟೀನಿನಲ್ಲಿರುವ –SH ಮತ್ತು -S-S- ಬಂಧನಗಳು ಕದಿರಿನ ಎಳೆಗಳ ನಿರ್ಮಾಣದಲ್ಲಿ ಮುಖ್ಯ ಪಾತ್ರವಹಿಸಬಹುದೆಂದು ಊಹಿಸಲಾಗಿದೆ.

ಎರಡಕ್ಕಿಂತ ಹೆಚ್ಚು ಧ್ರುವಗಳಿಗಿರುವ ಅವರ್ಣಕ ಉಪಕರಣವು ಕ್ರೋಮೋಸೋಮುಗಳ ಅವ್ಯವಸ್ಥಿತ ಹಂಚಿಕೆಯನ್ನು ಉಂಟುಮಾಡಿ ಜೀವಕೋಶದ ವಿನಾಶಕ್ಕೆ ಕಾರಣವಾಗುವುದರಿಂದ, ವಿಭಜನೆಯ ಸಮಯದಲ್ಲಿ, ಎರಡು ಧ್ರುವಗಳಿರುವ ಕದಿರು ಜೀವಕೋಶಗಳ ಪ್ರಜನನಕ್ಕೆ ಬಹು ಅವಶ್ಯಕ. ಈ ರೀತಿಯ ಎರಡು ಧ್ರುವಗಳಿರುವ ಕದಿರನ್ನು ಬೈಪೋಲಾರ್ ಸ್ಪಿಂಡಲ್ ಎನ್ನುವರು. ಎರಡಕ್ಕಿಂತ ಹೆಚ್ಚು ಧ್ರುವಗಳಿರುವ ಕದಿರನ್ನು ಮಲ್ಟಿ ಪೋಲಾರ್ ಸ್ಪಿಂಡಲ್ ಎನ್ನುವರು. ಈ ರೀತಿಯ ಕದಿರು ಕ್ಯಾನ್ಸರ್ ಜೀವಕೋಶಗಳಲ್ಲಿ ಕಂಡುಬರುತ್ತವೆ. ಮೆಟಫೇಸ್ ಹಂತದಲ್ಲಿ ಜೀವಕೋಶವನ್ನು ಧ್ರುವದ ಕಡೆಯಿಂದ ವೀಕ್ಷಿಸಿದಾಗ ಕ್ರೋಮೋಸೋಮುಗಳು ಕದಿರಿನ ಹೊರಮೈಯಲ್ಲಿ ಮಾತ್ರ ಕಂಡುಬಂದರೆ ಅಂತಹ ಕದಿರನ್ನು ಹಾಲೋ ಸ್ಪಿಂಡಲ್ (ಟೊಳ್ಳು ಕದಿರು) ಎನ್ನುವರು. ಈ ತರಹದ ಕದಿರು ಕೆಲವು ಮಿಡಿತೆಗಳಲ್ಲಿವೆ (ಅಕ್ರಿಡಿಡೆ ಕುಟುಂಬ). ದೊಡ್ಡ ಕ್ರೋಮೋಸೋಮುಗಳು ಕದಿರಿನ ಹೊರಮೈಯಲ್ಲಿ, ಸಣ್ಣ ಕ್ರೋಮೋಸೋಮುಗಳು ಕದಿರಿನ ಮಧ್ಯದಲ್ಲಿದ್ದರೆ, ಅದನ್ನು ಸಾಲಿಡ್ ಸ್ಪಿಂಡಲ್ ಎನ್ನುವರು. ಈ ತರಹದ ಕದಿರು ಕೆಲವು ಮಿಡಿತೆಗಳಲ್ಲಿ (ಟೆಟ್ಟಿಗೋನಿಡೆ ಕುಟುಂಬ), ಸ್ತನಿಗಳಲ್ಲಿ, ಆಂಬ್ಲಿಸ್ಟೋಮಾದಲ್ಲಿವೆ.

ಕ್ರೋಮೋಸೋಮುಗಳ ಚಲನೆಯಲ್ಲಿ ಅವರ್ಣಕ ಉಪಕರಣದ ಪಾತ್ರ ವಿಶೇಷವಾಗಿದೆ. ಈಸ್ಟರ್‌ಗ್ರನ್ ಎಂಬ ವಿಜ್ಞಾನಿ ಕ್ರೋಮೋಸೋಮುಗಳ ಚಲನೆಯಲ್ಲಿ ಮುಖ್ಯ ಪಾತ್ರವಹಿಸುವ ಸು. 15 ಅಂಶಗಳನ್ನು ಪಟ್ಟಿಮಾಡಿದ್ದಾನೆ. ಅವುಗಳಲ್ಲಿ 3 ಅಂಶಗಳು ಬಹು ಮುಖ್ಯವಾದವು. ಸೆಳೆಯುವಿಕೆ, ವಿಸರ್ಜನೆ (ಎಲಿಮಿನೇಶನ್) ಮತ್ತು ನಿಯೋಸೆಂಟ್ರಿಕ್ ಚಟುವಟಿಕೆ.

ಧ್ರುವಕ್ಕೆ ಸಮೀಪವಾಗಿರುವ ಕೈನೆಟೋಕೋರ್ ಎಳೆಗಳ ಮೊಟಕಾಗುವಿಕೆ (ಸಂಕೋಚನವಲ್ಲ) ಮತ್ತು ಏಕಕಾಲಿಕವಾಗಿ ಧ್ರುವಕ್ಕೆ ದೂರವಾಗಿರುವ ಕದಿರಿನ ಎಳೆಗಳ ಲಂಬನದ ಪರಸ್ಪರ ಸಂಬಂಧದಿಂದಾಗಿ ಕೈನೆಟೋಕೋರ್ ಭಾಗದಲ್ಲಿ ಸೆಳೆಯುವಿಕೆಯುಂಟಾಗುತ್ತದೆ. ಈ ಕೈನೆಟೋಕೋರ್‌ಗಳ ಸೆಳೆಯುವಿಕೆಯ ಜೊತೆಯಲ್ಲಿ ಕ್ರೋಮೋಸೋಮುಗಳು ವಿಸರ್ಜನೆಯ ಬಲಕ್ಕೆ ಒಳಪಡುತ್ತವೆ. ಕದಿರಿಗೆ ಅಂಟಿಕೊಂಡಿಲ್ಲದ

ಸಣ್ಣ ಕಣಗಳ, ಕೈನೆಟೋಕೋರ್ ಇಲ್ಲದ ಕ್ರೊಮೋಸೋಮುಗಳ ಚಲನೆಯಲ್ಲಿ ವಿಸರ್ಜನೆಯ ಬಲವು ಸ್ಪಷ್ಟವಾಗಿದೆ.

ಕದಿರಿನ ಎಳೆಗಳು ಕ್ರೊಮೋಸೋಮಿನ ಕೈನೆಟೋಕೋರ್ ಭಾಗವನ್ನು ಬಿಟ್ಟು ಉಳಿದ ಭಾಗಕ್ಕೆ ಅಂಟಿಕೊಳ್ಳುವ ಪ್ರಕ್ರಿಯೆಗೆ ನಿಯೋಸೆಂಟ್ರಿಕ್ ಚಟುವಟಿಕೆ ಎನ್ನುತ್ತಾರೆ. ಕ್ರೋಮೋಸೋಮುಗಳು ಸುರಕ್ಷಿತವಾಗಿ ಆಯಾ ಧ್ರುವಗಳನ್ನು ಸೇರಲು ಇದು ಸಹಾಯ ಮಾಡುತ್ತದೆ. ಈ ಎಲ್ಲ ಚಟುವಟಿಕೆಗಳ ಹೊಂದಾಣಿಕೆಯಿಂದ ಕ್ರೊಮೋಸೋಮುಗಳ ಕೈನೆಟೋಕೋರ್ ಭಾಗವು ಅನಫೇಸ್ ಹಂತದ ಆದಿಯಲ್ಲಿ ಕದಿರಿನ ಮಧ್ಯಭಾಗವನ್ನು ಆಕ್ರಮಿಸುತ್ತವೆ ಮತ್ತು ಕ್ರೊಮೋಸೋಮುಗಳ ಬಾಹುಗಳು ಕದಿರಿನ ಅಕ್ಷಕ್ಕೆ ಸಮಾನಾಂತರವಾಗಿ ಅಥವಾ ಕದಿರಿನ ಹೊರಗೆ ವಿಸರ್ಜಿಸುತ್ತವೆ.

ವಿಸರ್ಜನಾ ಕಾಲದಲ್ಲಿ ಕ್ರೋಮೋಸೋಮುಗಳ ನಿಯತವಾದ ಚಲನೆಗಳಿಗೆ ಕದಿರಿನ ಎಳೆಗಳ ಸೂಕ್ಷ್ಮ ನಳಿಕೆಗಳ ಸಂಕೋಚನ ಮತ್ತು ವಿಕಸನವೇ ಕಾರಣ. ಕದಿರಿನ ಎಳೆಗಳ ಉದ್ದದಲ್ಲಿ ಆಗುವ ಅಂತಹ ಬದಲಾವಣೆಗೆ ಈ ಎಳೆಗಳ ಘಟಕಗಳು ನಿರ್ದಿಷ್ಟವಾಗಿ ಧ್ರುವದ ಕಡೆಯಿಂದ ನಿಧಾನವಾಗಿ ಕಳಚಲ್ಪಟ್ಟು ಕದಿರಿನ ಎಳೆಗಳ ಉದ್ದವು ಕಡಿಮೆಯಾಗುವುದರಿಂದ ಕ್ರೊಮೋಸೋಮುಗಳಿಗೆ ಜೋಡಿಸಲ್ಪಟ್ಟ ಎಳೆಗಳು ಸಂಕುಚಿತಗೊಂಡು ಕ್ರೊಮೋಸೋಮುಗಳು ಧ್ರುವಗಳ ಕಡೆಗೆ ಎಳೆಯಲ್ಪಡುತ್ತವೆ.

ಈಸ್ಪರ್‌ಗ್ರನ್ ಕ್ರೊಮೋಸೋಮುಗಳ ಚಲನೆಗೆ ಕಾರಣವಾದ ಬಲದ ಗುಣಗಳನ್ನು ವಿಶ್ಲೇಷಣೆ ಮಾಡಿದ್ದಾನೆ. ಅವನ ಪ್ರಕಾರ ಕೈನೆಟೋಕೋರ್ ಮೇಲಿನ ಬಲವು (ಸೆಳೆತ ಅಥವಾ ಆಕರ್ಷಣೆ) ಕೈನೆಟೋಕೋರ್ ಮತ್ತು ಧ್ರುವಗಳ ದೂರವು ಹೆಚ್ಚಾದಂತೆ ಹೆಚ್ಚಾಗುತ್ತದೆ. ಪ್ರೋಮೆಟಫೇಸ್ ಹಂತದಲ್ಲಿ ಕದಿರಿನಲ್ಲಿ ಸಾಗಣಿಕೆಯ ಚಟುವಟಿಕೆಯಿರುವುದರಿಂದ ಉದ್ದವಾದ ವಸ್ತುಗಳು ಗಾಳಿಯಲ್ಲಿರುವ ಕಿರಿದಾದ ಬಾವುಟಗಳಂತೆ ವರ್ತಿಸುತ್ತವೆ. ಈ ಸಾಗಣೆಯ ಚಟುವಟಿಕೆಯನ್ನು ಈಸ್ಪರ್‌ಗ್ರನ್ನನು ಮಾಲೆಕ್ಯುಲಾರ್ ವಿಂಡ್ ಅಥವಾ ಮಾಲೆಕ್ಯೂಲಾರ್ ಪಂಪ್ ಪರಿಕಲ್ಪನೆ ಎಂದು ಕರೆದನು. ಬೋಲಾರ್ ಎಂಬ ವಿಜ್ಞಾನಿಯು ಕ್ರೊಮೋಸೋಮುಗಳ ಚಲನೆಗೆ ಜಾರುವ ಪರಿಕಲ್ಪನೆ ಯನ್ನು ಮುಂದಿಟ್ಟನು. ಇವನ ಪ್ರಕಾರ ಕದಿರು ಮೂಲವಾಗಿ ಎರಡು ಅಥವಾ ಹೆಚ್ಚು ಘಟಕಗಳಿಂದಾಗಿದೆ. ಒಂದು ಆಧಾರವಾಗುತ್ತದೆ, ಮತ್ತೊಂದು ಅದರೊಂದಿಗೆ ಜಾರುತ್ತದೆ. ಅಲ್ಲದೆ ವರ್ಣತಂತುಗಳ ಚಲನೆಗೆ ಹೆಚ್ಚು ಶಕ್ತಿಯನ್ನು ಹೊಂದಿರುವ ಎಟಿಪಿ ಅಣುಗಳು ಸಹ ಕಾರಣ.

ಹೀಮ್ಯಾಂತಸ್ ಕ್ಯಾಥರೀನೆ ಎಂಬ ಗಿಡದ ಎಂಡೋಸ್ಪರ್ಮ್ ಅರ್ವಣಕ ಉಪಕರಣದ ರಚನೆ ಮತ್ತು ಕ್ರೊಮೋಸೋಮುಗಳ ಕಾರ್ಯರೀತಿಯನ್ನು ಅರಿಯಲು ಉತ್ತಮವಾದ ವಸ್ತು. ಅರ್ವಣಕ ಉಪಕರಣದ ರಚನೆ ಮತ್ತು ಕಾರ್ಯದ ಬಗ್ಗೆ ಇಲ್ಲಿಯವರೆಗೆ ನಡೆದಿರುವ ವಿಷಯ ಸಂಗ್ರಹಕ್ಕೆ ಬೇಜರ್ ಮತ್ತು ಮೋಲ್ ಬೇಜರ್, ಈಸ್ಪರ್‌ಗ್ರನ್, ಡೈಟ್ಜ್, ಪಿಕೆಟ್–ಹೀಪ್ಸ್ ಮುಂತಾದ ಜೀವ ವಿಜ್ಞಾನಿಗಳ ಕೊಡುಗೆ ಅಪಾರವಾದುದು. (ಎಸ್.ಕೆ.ಎ.)

**ಅವಳಿಗಳು:** ಒಂದೇ ತಾಯಿಯ ಗರ್ಭದಿಂದ ಜೊತೆಯಾಗಿ ಜನಿಸಿದ ಜೋಡಿ ಅಥವಾ ಹೆಚ್ಚು ಮಕ್ಕಳು ಒಂದೇ ಗರ್ಭದಲ್ಲಿ ಬೆಳೆದು ಜನನವಾಗುವುದು. ಸಾಧಾರಣವಾಗಿ ಹುಟ್ಟಿದ ಅವಳಿಗಳಲ್ಲಿ ಒಂದೇ ರೂಪ, ಒಂದೇ ಗುಣ ಮತ್ತು ಒಂದೇ ಸಾಮ್ಯವಿರುತ್ತದೆ ಎಂಬ ನಂಬಿಕೆ ಇದೆ. ಆದರೆ ವೈಜ್ಞಾನಿಕವಾಗಿ ತಪಾಸಣೆ ನಡೆಸಿದರೆ ತಿಳಿಯಬರುವ ವಿಷಯವೇ ಬೇರೆ. ಅವಳಿಗಳು ಸಕಲವಿಧದಲ್ಲಿಯೂ ಹೋಲಬಹುದು, ಅಥವಾ ಹೋಲದಿರಬಹುದು.

ಅವಳಿಗಳಲ್ಲಿ ಎರಡು ವಿಧ. ಅನುರೂಪ ಅವಳಿಗಳು (ಹೋಮೋಜೈಗೋಟಿಕ್ ಟ್ವಿನ್ಸ್) ಮತ್ತು ಭಿನ್ನರೂಪ ಅವಳಿಗಳು (ಹೆಟಿರೋಜೈಗೋಟಿಕ್ ಟ್ವಿನ್ಸ್) ಅನುರೂಪ ಅವಳಿಗಳು ರೂಪ, ರೀತಿಯಲ್ಲಿ ಒಂದಿನ್ನೊಂದರ ಪ್ರತಿಬಿಂಬದಂತಿರುತ್ತವೆ. ಅಲ್ಲದೇ ಇವೆರಡೂ ಒಂದೇ ಲಿಂಗ. ಇದಕ್ಕೆ ಕಾರಣವೇನೆಂದರೆ ತಾಯಿಯಲ್ಲಿ ಉತ್ಪನ್ನವಾದ ಅಂಡ ಗರ್ಭ ಧರಿಸಿದ ಅನಂತರ ಯುಗ್ಮವಾಗಿ ತದನಂತರ ಎರಡು ಕೋಶಗಳಾಗಿ ವಿಭಜನೆಯಾಗುತ್ತದೆ. ಇವೆರಡೂ ಕೋಶಗಳು ಬೇರ್ಪಟ್ಟ ಎರಡು ಭ್ರೂಣಗಳಾಗಿ ಒಂದೇ ಭ್ರೂಣಪೊರೆಯಲ್ಲಿ ಬೆಳೆಯುತ್ತದೆ. ಈ ಬಗೆಯ ಅವಳಿಗಳನ್ನು ಅನುರೂಪ ಅವಳಿಗಳೆಂದು ಕರೆದಿರುವರು.

ಭಿನ್ನರೂಪ ಅವಳಿಗಳು, ಹುಟ್ಟಿನಿಂದಲೇ ಭಿನ್ನ ಗುಣಗಳನ್ನು ಪಡೆದಿರುತ್ತವೆ. ಅಣ್ಣ, ತಮ್ಮ ಅಥವಾ ಅಕ್ಕ ತಂಗಿ ಅಥವಾ ಅಣ್ಣ ತಂಗಿಯರಲ್ಲಿ ಸಾಮಾನ್ಯವಾಗಿ ಕಾಣ ಬರುವ ಭೇದಗಳು ಭಿನ್ನರೂಪಿಗಳಲ್ಲಿವೆ. ಈ ಭಿನ್ನತೆಗೆ ಕಾರಣ ತಾಯಿಯ ಒಂದು ಜೊತೆ ಅಂಡಗಳು ಏಕಕಾಲದಲ್ಲಿ ಗರ್ಭಧರಿಸಿ, ಏಕಕಾಲದಲ್ಲಿ ಬೇರೆ ಬೇರೆ ಜರಾಯು ಮತ್ತು ಭ್ರೂಣ ಪೊರೆಗಳಲ್ಲಿ ಬೆಳೆದು ಜನಿಸುತ್ತವೆ. ಇವೆರಡೂ ಅಂಡಗಳ ಆನುವಂಶೀಯ ಗುಣಗಳಲ್ಲಿ ಭಿನ್ನತೆ ಸಾಮಾನ್ಯ. ಅಲ್ಲದೆ ಈ ಪ್ರಕಾರ ಜನಿಸುವ ಶಿಶುಗಳು ಎರಡೂ ಒಂದೇ ಲಿಂಗವನ್ನು ಅಥವಾ ವಿವಿಧ ಲಿಂಗಗಳನ್ನು ಪಡೆದಿರಬಹುದು (ಎರಡೂ ಗಂಡು, ಅಥವಾ ಎರಡೂ ಹೆಣ್ಣು ಅಥವಾ ಒಂದು ಗಂಡು ಒಂದು ಹೆಣ್ಣು) ಭಿನ್ನರೂಪದ ಅವಳಿಗಳನ್ನು ಭ್ರಾತ್ರೀಯ ಅವಳಿಗಳು ಫ್ರೆಟರ್ನಲ್‌ಟ್ವಿನ್ಸ್ ಎಂದೂ ಹೆಸರಿಸಲಾಗಿದೆ.

ಬೆರ್‌ಟಿಲಾನ್ ಎಂಬಾತ ನಡೆಸಿದ ವ್ಯಾಪಕ ಅಧ್ಯಯನಗಳು ಅನುರೂಪ ಅವಳಿಗಳು ರೂಪದಲ್ಲಿಯೂ ಭೌತಕ, ಮಾನಸಿಕ, ಬುದ್ಧಿಶಕ್ತಿ ಮನೋವಿಕಾರ, ರಕ್ತಗಣ (ಬ್ಲಡ್ ಗ್ರೂಪ್ಸ್) ಕೂದಲು ಮತ್ತು ಚರ್ಮದ ಬಣ್ಣ ಮತ್ತು ಕಾಂತಿ, ಬೆರಳೊತ್ತು ಮುಂತಾದ ಭೌತಿಕ ಗುಣಗಳಲ್ಲಿ ಸಾಮ್ಯತೆ ಇರುತ್ತದೆ ಎಂದು ತೋರಿಸಿಕೊಟ್ಟಿವೆ.

ಸರ್ ಫ್ರಾನ್ಸಿಸ್ ಗಾಲ್‌ಟನ್ 1875ರಷ್ಟು ಹಿಂದೆಯೇ ಅನುರೂಪ ಮತ್ತು ಭಿನ್ನರೂಪ ಅವಳಿಗಳಲ್ಲಿ ವ್ಯತ್ಯಾಸವನ್ನು ಮತ್ತು ಆನುವಂಶೀಯವಾಗಿರಬಹುದಾದ ಭಿನ್ನತೆಯನ್ನು ವಿವರಿಸಿದ್ದನು. ಪ್ರಾಯೋಗಿಕವಾಗಿ ಇವುಗಳಲ್ಲಿರಬಹುದಾದ ಭಿನ್ನತೆಯನ್ನು ಗುರುತಿಸಲು ನಂತರದಲ್ಲಿ ಬಹು ಜನರು ಶ್ರಮಿಸಿದರು. ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿನ ಪ್ರಾಣಿ ವಿಜ್ಞಾನಿ ನ್ಯೂಮ್ಯಾನ್ ಮನೋವಿಜ್ಞಾನಿ ಫ್ರೀಮ್ಯಾನ್ ಮತ್ತು ಸಂಖ್ಯಾಶಾಸ್ತ್ರಜ್ಞ ಹಾಲ್ ಜಿಂಗರ್ ಇವರುಗಳ ಪರಿಶ್ರಮ ಅದ್ವಿತೀಯವಾದದ್ದು, ಇವರ ಮುಖ್ಯ ಅಭ್ಯಾಸ ಯಾವ ರೀತಿ ಆನುವಂಶೀಯತೆ ಆಯುಷ್ಯದ ಬಗ್ಗೆ ವ್ಯಕ್ತವಾಗಿರುವುದು ಎಂದು. ಇವರಿತ್ತಿರುವ ಒಂದು ಉದಾಹರಣೆ ಬಹಳ ಸೊಗಸಾಗಿದೆ. ಅನುರೂಪ ಅವಳಿ ಸ್ತ್ರೀಯರಲ್ಲಿ ಒಬ್ಬಳು ರೈತನನ್ನು ಮದುವೆಯಾದಳು, ಕೆಲವು ಮಕ್ಕಳನ್ನು ಹೆತ್ತಳು, ಇನ್ನೊಬ್ಬಳು ಮದುವೆಯಾಗದೆ ಕುಮಾರಿಯಾಗಿದ್ದು ಒಂದು ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕಿದ್ದಳು. ಇವರಿಬ್ಬರೂ ಒಂದೇ ದಿವಸ ಕಣ್ಣಿನ ಬೇನೆಗೆ ತುತ್ತಾಗಿ ಕುರುಡರಾದರು, ಅನಂತರ ಶ್ರವಣ ಬೇನೆಗೆ ತುತ್ತಾಗಿ ಕಿವುಡರಾದರು. ಕೆಲವಾರು ವರ್ಷಗಳಾದ ನಂತರ ಒಂದೇ ಕಾಲಕ್ಕೆ ಇಬ್ಬರೂ ರಕ್ತದ ಒತ್ತಡಕ್ಕೆ ತುತ್ತಾದರು. ಕೊನೆಗೆ ಒಂದೇ ದಿವಸ ಇಬ್ಬರಿಗೂ ಲಕ್ವ ಸಹ ಹೊಡೆಯಿತು. ಕೊನೆಯದಾಗಿ ಇಬ್ಬರೂ ಒಂದೆರಡು ದಿವಸದ ಅಂತರದಲ್ಲಿ ಅವರ 69ನೇ ವಯಸ್ಸಿನಲ್ಲಿ ಸತ್ತರು! ಈ ಉದಾಹರಣೆಯಿಂದ ಅರಿಯಬೇಕಾದ್ದು ವಿಭಿನ್ನ ಪರಿಸರದಲ್ಲಿ ಇದ್ದಾಗ್ಯೂ ಅನುರೂಪ ಅವಳಿಗಳು ಕೆಲವು ವಿಷಯದಲ್ಲಿ ತೋರುವ ಸಾಮ್ಯ ಜೈವಿಕ ಮತ್ತು ಆನುವಂಶೀಯ ಕೈವಾಡದ್ದಾಗಿರುತ್ತದೆ. ಭಿನ್ನ ರೂಪದ ಅವಳಿಗಳಲ್ಲಿ ಈ ಸಾಮ್ಯವನ್ನು ಅವರು ಕಂಡಿಲ್ಲ.

ಅನುರೂಪ ಮತ್ತು ಭಿನ್ನರೂಪದ ಅವಳಿಗಳೇ ಅಲ್ಲದೆ ವಿರೂಪ ಅವಳಿಗಳೂ ಜನಿಸುತ್ತವೆ (ಟೆರಟಲಾಜಿಕಲ್ ಟ್ವಿನ್ಸ್). ಇಂತಹವನ್ನು ಸಯಮೀಸ್ ಅವಳಿಗಳು ಎಂದು ಕರೆಯುತ್ತಾರೆ. ಇಂತಹ ಅವಳಿಗಳು ಒಂದಕ್ಕೊಂದು ಅಂಟಿಕೊಂಡಿರುತ್ತವೆ. ವಿರೂಪ ಅವಳಿಗಳ ವಿಚಿತ್ರವನ್ನು ವೈಜ್ಞಾನಿಕವಾಗಿ ಇಟೀನ್ನಿ ಜಿಯೋಫ್ರೇ ಸೈಂಟ್ ಹಿಲೇರಿ ಮತ್ತು ಅನಂತರ ಆತನ ಮಗ ಐಸಿಡೋರಿ ಜಿಯಾಫ್ರೇ ಸೈಂಟ್ ಹಿಲೇರಿ ಅಭ್ಯಾಸ ಮಾಡಿ ವಿವಿಧ ಅಂಕಿ ಅಂಶಗಳನ್ನು ಕೊಟ್ಟಿರುವರು. ಚಾಂಗ್ ಮತ್ತು ಇಂಗ್ ಹೀಗೆ ಒಂದುಗೊಂಡು ಅಂಟಿಕೊಂಡಿದ್ದ ಜಪಾನೀ ವಿರೂಪ ಅವಳಿಗಳು. ಇವರಿಬ್ಬರೂ ಸೊಂಟದಲ್ಲಿ ಅಕ್ಕ ಪಕ್ಕಕ್ಕೆ ಅಂಟಿಕೊಂಡಿದ್ದ ಹುಡುಗರು. ಪ್ರಾಪ್ತ ವಯಸ್ಸಿಗೆ ಬಂದಾಗ ಇಬ್ಬರು ಅಕ್ಕ ತಂಗಿಯರನ್ನೇ ಮದುವೆಯೂ ಆದರು. ಇಬ್ಬರಿಗೂ ಮಕ್ಕಳಾದವು. ಈ ರೀತಿ ಸುಖದ ಬಾಳ್ವೆಯನ್ನು ನಡೆಸುತ್ತಿದ್ದಾಗ 63ನೇ ವಯಸ್ಸಿನಲ್ಲಿ ಒಂದು ದಿನ ಚಾಂಗ್ ಸತ್ತ. ಕೆಲವು ಘಂಟೆಗಳ ನಂತರ ಇಂಗ್ ಸಹ ಸತ್ತ! ಜೆಕೋಸ್ಲೋವಾಕಿಯ ದೇಶದ ರೋಸ–ಜೋಸೆಫಾ ಅವರೂ ಸಹ ಪಕ್ಕೆಯಲ್ಲಿ ಅಂಟಿಕೊಂಡಿದ್ದರು. ಇವರಿಬ್ಬರೂ ಎಲ್ಲ ರೀತಿಯಿಂದಲೂ ಬೇರೆ ಬೇರೆಯಾಗಿದ್ದು ಅವರವರ ಅಂಗಾಂಗಗಳನ್ನು ಬೇರೆ ಬೇರೆಯೇ ಹೊಂದಿದ್ದರು. ಆದರೆ ಈ ಇಬ್ಬರು ಸ್ತ್ರೀಯರು, ಒಂದೇ ಆಸನ ದ್ವಾರ ಮತ್ತು ಯೋನಿ ಮಾರ್ಗವನ್ನು ಪಡೆದಿದ್ದರು. ಇವರು ಮದುವೆಯಾಗಿ ಒಬ್ಬಳು ಮಾತ್ರ ಗರ್ಭವತಿಯಾದಳು ಮತ್ತು ಹಡೆದಳು, ಅನಂತರ ಇಬ್ಬರೂ ಸ್ತ್ರೀಯರ ಸ್ತನಗಳೂ ಹಾಲನ್ನು ಉತ್ಪತ್ತಿ ಮಾಡ ತೊಡಗಿದವು ಎಂದು ವಿವರಿಸಿದ್ದಾರೆ. ಹೀಗೆ ವಿವಿಧ ರೂಪದ ವಿರೂಪ ಅವಳಿಗಳು ಜನಿಸಿರುವುದರ ದಾಖಲೆಗಳಿವೆ. ಶೀತ ದೇಶಗಳಲ್ಲಿ ಅವಳಿಗಳ ಜನನ ಹೆಚ್ಚು. ಸ್ಕಾಂಡಿನೇವಿಯ ದಲ್ಲಿ 1.4% ಅವಳಿಗಳು ಜನನವಾಗುವುದರಿಂದ ಈ ದೇಶದಲ್ಲಿಯೇ ಹೆಚ್ಚು. ಹಾಗೆಯೇ ಅವಳಿ ಜನನ ಪ್ರಮಾಣ ಜರ್ಮನಿಯಲ್ಲಿ, ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿ 1.25% ಗ್ರೀಸ್‌ನಲ್ಲಿ 0.80%, ಜಪಾನ್ ದೇಶದಲ್ಲಿ 0.5% ಇದೆ. ಭಾರತದಲ್ಲಿಯೂ ಇಂತಹ ಅವಳಿಗಳು ಅಪರೂಪವಾಗಿ ಜನಿಸಿದ್ದಿದೆ. (ಜಿ.ಯು.ಬಿ.)

**ಅವಿಯೋಜನೆ (ನಾನ್‌ಡಿಸ್‌ಜಂಕ್ಷನ್):** ಮಿಯಾಸಿಸ್‌ನಲ್ಲಿ ಸಾದೃಶದ (ಹೊಮೊಲಗಸ್) ಕ್ರೊಮೋಸೋಮ್‌ಗಳು ಮೈಟಾಸಿಸ್‌ನಲ್ಲಿ ಸೋದರಿ ಕ್ರೊಮೋಸೋಮ್‌ಗಳು ಬೇರ್ಪಡುವುದು ವಿಫಲವಾಗುವಿಕೆ. ಸಿ. ಬಿ. ಬ್ರಿಡ್ಜಸ್ ಮೊಟ್ಟ

ಮೊದಲ ಬಾರಿಗೆ 1916ರಲ್ಲಿ ಡ್ರೊಸಾಫ಼ಿಲ ಮೇಲೆ ಪ್ರಯೋಗ ನಡೆಸಿದಾಗ ಈ ಪದವನ್ನು ಬಳಸಿದನು.

ಅವಿಯೋಜನೆಯಲ್ಲಿ ಒಂದು ಜೋಡಿ ಕ್ರೊಮೋಸೋಮಿನ ಪ್ರತಿ ಘಟಕವು ಮರಿ ಜೀವಕೋಶಗಳಿಗೆ (ಡಾಟರ್ ಸೆಲ್ಸ್) ಹೋಗುವುದಕ್ಕೆ ಬದಲಾಗಿ, ಸೆಂಟ್ರೋಮಿಯರ್‌ಗೆ ಕೂಡಿಕೊಂಡು ಒಂದೇ ಧ್ರುವದ ಕಡೆಗೆ ಹೋಗುತ್ತದೆ. ಆದ್ದರಿಂದ ಒಂದು ಮರಿ–ಜೀವಕೋಶವು ಕ್ರೊಮೋಸೋಮ್‌ನ್ನು ಪಡೆಯದೆಯೇ ನಾಶವಾಗುತ್ತದೆ. ನೈಜ ಪ್ರಜನನ ಕೋಶದಲ್ಲಿ (ಜರ್ಮ್ ಸೆಲ್ಸ್) (ಮಿಯಾಟಿಕ್ ವಿಭಜನೆ) ನಡೆಯುವ ಅವಿಯೋಜನೆಗೆ ಪ್ರಾಥಮಿಕ ಅವಿಯೋಜನೆ (ಪ್ರೈಮರಿ ನಾನ್‌ಡಿಸ್‌ಜಂಕ್ಷನ್) ಎಂದು ಹೆಸರು. ಇದರಿಂದ ಉತ್ಪತ್ತಿಯಾಗುವ ತ್ರಿತಂತು (ಟ್ರೈಸೊಮಿ) ಜೀವಿಯು ಪ್ರಜನನ ನಡೆಸುವಾಗ (ಮೈಟಾಸಿಸ್) ಅವಿಯೋಜನೆಯು ಸಂಭವಿಸಿದರೆ ಪ್ರಜನನ ಕೋಶದಲ್ಲಿ ಅನೂಪ್ಲಾಯ್ಡಿ ಉತ್ಪತ್ತಿಯಾಗುತ್ತದೆ. ಇದನ್ನು ದ್ವಿತೀಯ ಅವಿಯೋಜನೆ (ಸೆಕೆಂಡರಿ ನಾನ್‌ಡಿಸ್ ಜಂಕ್ಷನ್) ಎನ್ನುತ್ತಾರೆ. ಅವಿಯೋಜನೆಯಿಂದ ಅಂಗರಚನಾತ್ಮಕ ಮತ್ತು ಕ್ರಿಯಾತ್ಮಕ ಅಸಮತೆಗಳು ಉಂಟಾಗುವುದರಿಂದ ಅದು ಜೀವಿಗಳಿಗೆ ಮಾರಕವಾಗಿ ಪರಿಣಮಿಸುತ್ತದೆ.

ಅವಿಯೋಜನೆಯು ಇತರ ಎಲ್ಲಾ ಜೀವಿಗಳಲ್ಲಿಯೂ ಸಂಭವಿಸುತ್ತದೆ. ಎ. ಎಫ್. ಬ್ಲಕೇಸ್ಲೀ ಉಮತ್ತಿಗಿಡ (ದತ್ತೂರ ಸ್ಟ್ರಾಮೊನಿಯಂ) ದಲ್ಲಿ ಕಂಡುಬರುವ ಅವಿಯೋಜನೆಯನ್ನು ಅಭ್ಯಸಿಸಿ, ಪರಿಪೂರ್ಣ ಮಾಹಿತಿ ಒದಗಿಸಿದ್ದಾರೆ. ಮಿಯಾಸಿಸ್‌ಲ್ಲಿ ಮನುಷ್ಯನ 21 ನೇ ಆಟೋಸೋಮ್ ಅವಿಯೋಜನೆಯಿಂದ ತ್ರಿತಂತು ಸ್ಥಿತಿ ಉತ್ಪತ್ತಿಯಾಗಿ ಡೌನ್ ಸಿಂಡ್ರೋಮ್ ಕಾಣಿಸಿಕೊಳ್ಳುತ್ತದೆ. ಡೌನ್ ಸಿಂಡ್ರೋಮ್ ಇರುವ ವ್ಯಕ್ತಿಗಳಲ್ಲಿ ಲಿಂಗ ಪ್ರೌಢತನ (ಸೆಕ್ಸುವಲ್ ಮೆಚುರಿಟಿ) ಇರುವುದಿಲ್ಲ ಮತ್ತು ಬೌದ್ಧಿಕ ಬೆಳವಣಿಗೆಯೂ ಕಡಿಮೆಯಾಗಿರುತ್ತದೆ. (ವಿ.ವಿ)

**ಅಷ್ಟಪಾದಿ:** ಆಕ್ಟೋಪಸ್ ಮೃದ್ವಂಗಿಗಳ (ಮೊಲಸ್ಕ) ವಂಶಕ್ಕೂ, ಶಿರಪಾದಿಗಳ (ಸೆಫಲೊಪೋಡ) ವರ್ಗಕ್ಕೂ ಸೇರಿದ ಒಂದು ಜಲಚರ. ಎಂಟು ಕರ (ಪಾದ) ಗಳಿರುವುದರಿಂದ ಅಷ್ಟಪಾದಿಗಳ (ಆಕ್ಟೊಪೋಡ) ಉಪಕುಟುಂಬಕ್ಕೂ ಸೇರಿದೆ. ಆಕ್ಟೋಪಸ್ ವಲ್ಗಾರಿಸ್ ಎಂಬುದು ಶಾಸ್ತ್ರೀಯ ಹೆಸರು.

ಇವು ಸಾಗರವಾಸಿಗಳು. ದೇಹ ದುಂಡಗೆ ಮಾಂಸಯುತವಾಗಿದೆ. ಎಂಟು ಉದ್ದವಾದ ಕರಗಳಿವೆ. ಈ ಕರಬಳ್ಳಿಗಳ (ಟೆಂಟಕಲ್) ಒಳಮೈಮೇಲೆ ಹೀರುಬಟ್ಟಲುಗಳಿವೆ. ಎಲ್ಲ ಶಿರಪಾದಿಗಳಿಗಿರುವಂತೆ ಲಾಲಿಕೆಯಾಕಾರದ ಕೊಳವೆಯೂ ಇದೆ. ಇದರ ಸಹಾಯದಿಂದ ಚಲಿಸಲಾರದಾದರೂ ಉದ್ದವಾದ ಕರಗಳ ಸಹಾಯದಿಂದ ಕಡಲತಳದಲ್ಲಿ ಓಡಾಡುತ್ತದೆ. ಕೆಲವೊಮ್ಮೆ ಈಜಲೂಬಹುದು. ಇವು ಕೆಲವಾರು ಸೆಂಮೀ ಗಳ ಗಾತ್ರದಿಂದ 8.5 ಮೀ ಗಳವರೆಗೆ ಬೆಳೆಯುತ್ತವೆ. ಸಾಮಾನ್ಯವಾಗಿ ಬಂಡೆಗಳಿಂದೊಡಗೂಡಿದ ಕಡಲ ತಡಿಗಳಲ್ಲೂ ಸುಮಾರು 3000 ಮೀ ಗಳ ಆಳದಲ್ಲೂ ವಾಸಿಸುತ್ತವೆ. ಕಡಲಸ್ನಾನಕ್ಕೆ ಹೋದವರನ್ನು ಕೆಲವೊಮ್ಮೆ ಹಿಡಿದ ನಿದರ್ಶನಗಳಿವೆ. ಹೀರುಬಟ್ಟಲುಗಳಿರುವ ಕರಗಳು, ಬಲವಾದ ದವಡೆಗಳು, ಜಾರುವ ದೇಹ, ವಿಕಾರವಾದ ರಾಕ್ಷಸಾಕಾರ ಎಂಥವರಿಗೂ ಭಯ ಹುಟ್ಟಿಸುತ್ತವೆ. ಜೊಲ್ಲುರಸ ಗ್ರಂಥಿಗಳಲ್ಲಿ ಉತ್ಪತ್ತಿಯಾದ ವಿಷದಿಂದ ಕಡಲ ಏಡಿಗಳನ್ನು ಕೊಂದು ತಿನ್ನುತ್ತವೆ. ಇವನ್ನು ಹಿಡಿದು ಬೋನುಗಳಲ್ಲಿಟ್ಟಾಗ, ಹೇರಳವಾದ ಆಹಾರವಿದ್ದರೂ ಮುಟ್ಟುವುದಿಲ್ಲ. ಇವು ಅಂಡಜಗಳು. ದ್ರಾಕ್ಷಿಹಣ್ಣಿನ ಗೊಂಚಲಿನಂತಿರುವ ಮೊಟ್ಟೆಗಳನ್ನಿಡುತ್ತವೆ. ಅನೇಕ ದೇಶಗಳಲ್ಲಿ ಒಣಗಿಸಿಯೋ ಹಸಿಯಾಗಿಯೋ ಇವನ್ನು ಆಹಾರವಾಗಿ ಉಪಯೋಗಿಸುತ್ತಾರೆ. ನೇಪಲ್ಸ್ ಪಟ್ಟಣದವರಿಗೆ ಅಷ್ಟಪಾದಿ ಬಹಳ ಇಷ್ಟವಾದ ಆಹಾರ. (ಎಚ್.ಬಿ.ಡಿ.)

ಅಷ್ಟಪಾದಿ

**ಅಸಮತಾಪಿಗಳು:** ಸ್ಥಿರವಾದ ದೇಹದ ಉಷ್ಣತೆ ಹೊಂದಿರದೆ, ವಾತಾವರಣದ ಉಷ್ಣತೆಗೆ ತಕ್ಕಂತೆ ತಮ್ಮ ದೇಹದ ಉಷ್ಣತೆಯನ್ನು ಬದಲಿಸುವ ಪ್ರಾಣಿಗಳು (ಪೊಯಿಕಿಲೊಥರ್ಮ್ಸ್). ದೇಹದ ಉಷ್ಣತೆಯ ಆಧಾರದ ಮೇಲೆ ಪ್ರಾಣಿಗಳನ್ನು ಸಮತಾಪಿಗಳು ಮತ್ತು ಅಸಮತಾಪಿಗಳೆಂದು ವಿಂಗಡಿಸಲಾಗಿದೆ. ಸಮತಾಪಿಗಳು ತಮ್ಮ ದೇಹದ ಉಷ್ಣತೆಯನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿ ಸ್ಥಿರವಾಗಿ ಕಾಯ್ದುಕೊಳ್ಳುವುವು. ಅಸಮತಾಪಿಗಳು ದೇಹದ ಶಾಖವನ್ನು ಸ್ಥಿರವಾಗಿ ಕಾಪಾಡಿಕೊಳ್ಳಲಾರವು. ಇವುಗಳ ದೇಹದ ಶಾಖವು ಉತ್ಕರ್ಷಣದಿಂದ (ಆಕ್ಸಿಡೇಶನ್)ದಿಂದ ಪಡೆದುದಾಗಿರದೆ, ಪರಿಸರದಿಂದ ಪಡೆದ ಶಾಖವಾಗಿರುತ್ತದೆ. ಆದ್ದರಿಂದ ಇವುಗಳ ದೇಹದ ಶಾಖವು ಪರಿಸರದ ಶಾಖಕ್ಕೆ ಅನುಗುಣವಾಗಿರುತ್ತದೆ. ಇವುಗಳನ್ನು ಎಕ್ಟೊಥರ್ಮಿಕ್ ಪ್ರಾಣಿಗಳೆಂದೂ ಕರೆಯಲಾಗಿದೆ. ಸ್ತನಿಗಳು ಮತ್ತು ಪಕ್ಷಿಗಳನ್ನುಳಿದು ಮಿಕ್ಕೆಲ್ಲ ಪ್ರಾಣಿಗಳು ಈ ಗುಂಪಿಗೆ ಸೇರುತ್ತವೆ. ಶಾಖವು ಕಡಿಮೆಯಿದ್ದಲ್ಲಿ ಇವುಗಳ ಚಟುವಟಿಕೆಗಳು ಮಂದವಾಗಿ, ಶಾಖವು ಅತಿ ಹೆಚ್ಚಾಗಿದ್ದಲ್ಲಿ ನಿಯಂತ್ರಿಸಿಕೊಳ್ಳಲಾಗದೆ ಸಾಯುತ್ತವೆ. ಅಸಮತಾಪಿಗಳ ದೇಹದ ಶಾಖಕ್ಕೆ ಮುಖ್ಯವಾದ ಆಧಾರ, ಸೂರ್ಯನ ಕಿರಣಗಳು ಮತ್ತು ವಿಕಿರಣತೆ. ಪರಿಸರದ ವಿಪರೀತ ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಅಸಮತಾಪಿಗಳು ವಿವಿಧ ವರ್ತನೆಗಳನ್ನು ಹಾಗೂ ಜೀವರಸಾಯನಿಕ ಹೊಂದಾಣಿಕೆಗಳನ್ನು ಹೊಂದಿವೆ. ಕೀಟಗಳು ತಮ್ಮ ಹಾರಾಟದಲ್ಲಿ ಸ್ನಾಯುಗಳ ಸಂಕೋಚನದಿಂದ ಸಾಕಷ್ಟು ಶಾಖವನ್ನು ಉತ್ಪಾದಿಸಿಕೊಳ್ಳಬಲ್ಲವು ಮತ್ತು ದೇಹದ ಮೇಲಿರುವ ವಿಶಿಷ್ಟ ಹೊದಿಕೆಯ (ಕ್ಯುಟಿಕಲ್) ಮೂಲಕ ಶಾಖವನ್ನು ದೇಹದಲ್ಲಿ ಶೇಖರಿಸಬಲ್ಲವು. ಅನೇಕ ಸಂಘಜೀವಿ ಹೈಮಿನಾಪ್ಟಿರಗಳು ತಮ್ಮ ರೆಕ್ಕೆಗಳನ್ನು ಬೀಸುವುದರ ಮೂಲಕ, ಗೂಡುಗಳ ದ್ವಾರವನ್ನು ಮುಚ್ಚುವುದು ಮತ್ತು ತೆಗೆಯುವುದರ ಮೂಲಕ ಶಾಖವನ್ನು ನಿಯಂತ್ರಿಸಿಕೊಳ್ಳುತ್ತವೆ. ಸರೀಸೃಪಗಳು ಶಾಖವನ್ನು ಪಡೆಯಲು ಮುಂಜಾವಿನ ಸೂರ್ಯನ ಕಿರಣಗಳಿಗೆ ಮೈಯೊಡ್ಡುತ್ತವೆ. ತಮ್ಮ ಮೈ ಬಣ್ಣದ ಬದಲಾವಣೆಯಿಂದಲೂ ಸಹ ಇವು ದೇಹದ ಶಾಖವನ್ನು ನಿಯಂತ್ರಿಸಿಕೊಳ್ಳಬಲ್ಲವು. ರಾತ್ರಿ ಇವುಗಳು ಸುರಕ್ಷಿತ ಸ್ಥಳಗಳಲ್ಲಿ ಅಡಗಿ ಮರುದಿನ ಮುಂಜಾವಿನ ಕಿರಣಗಳು ಬೀಳುವವರೆಗೆ ಜಡವಾಗುತ್ತವೆ. ಅನಾವೃತ ಪ್ರದೇಶಗಳಲ್ಲಿ ಚಳಿಗಾಲವನ್ನು ಕಳೆಯುವ ಕೀಟಗಳು ಶೀತಲ ಗಡುಸಿನ ಸ್ಥಿತಿ ಹೊಂದುತ್ತವೆ. ಈ ಸ್ಥಿತಿಯಲ್ಲಿ ಇವುಗಳ ಅಂಗಾಂಶಗಳ ದ್ರವದ ಉಷ್ಣತೆ ಹಿಮಕ್ಕಿಂತಲೂ ಕಡಿಮೆಯಾದರೂ ಯಾವುದೇ ಹಾನಿಯಿಲ್ಲದೆ ಚಳಿಗಾಲವನ್ನು ಕಳೆಯುತ್ತವೆ. ಏಕಾಣು ಪ್ರಾಣಿಗಳ ಕಂಕೋಶಗಳು, ಕೊಳದ ಜೀವಿಗಳ ಮತ್ತು ಸಂಧಿಪದಿಗಳ ಚಳಿಗಾಲದ ಮೊಟ್ಟೆಗಳಲ್ಲಿ ಅತಿ ಕಡಿಮೆ ಶಾಖದಿಂದ ಬೆಳವಣಿಗೆಯ ನಿಲುಗಡೆಯಾಗುತ್ತದೆ. ಇದನ್ನು ಡೈಯಾಪಾಸ್ ಎನ್ನುತ್ತಾರೆ. ಚಲಚಕ್ರ ಕಣಗಳು (ರಾಟಿಫರ್) ಟಾರ್ಡಿಗ್ರೇಡುಗಳು, ಕೀಟಗಳು ಮುಂತಾದ ಅಕಶೇರುಕಗಳು ಮತ್ತು ಅನೇಕ ಮೊಟ್ಟೆಗಳು ಪ್ರತಿಕೂಲ ಪರಿಸ್ಥಿತಿಯಲ್ಲಿ ತಮ್ಮ ಜೈವಕ್ರಿಯೆಯನ್ನು $0^0$ ಸೆಂ. ಗೆ ಇಳಿಸಿಕೊಳ್ಳುತ್ತವೆ. ಇದಕ್ಕೆ ಅನಬಯಾಸಿಸ್ ಎಂದು ಹೆಸರು. ಕೆಲವು ಪ್ರಾಣಿಗಳು ಚಳಿಗಾಲದಲ್ಲಿ ಅತಿಕಡಿಮೆ ಉಷ್ಣತೆಯಿಂದಾಗುವ ಜೀವದ್ರವಗಳ ಘನೀಕರಣವನ್ನು ತಪ್ಪಿಸಲು, ಪ್ರತಿಘನೀಕರಣ ವಸ್ತುಗಳನ್ನು ತಯಾರಿಸುತ್ತವೆ. ಉದಾ: ಟ್ರೆಮಾಟೊಮಾಸ್ ಮೀನು. ಇದಲ್ಲದೇ ಕಡಿಮೆ ಉಷ್ಣತೆಯಲ್ಲೂ ಕೂಡ ಕ್ರಿಯಾಶೀಲವಾಗಿರುವ ಕಿಣ್ವಗಳ ಪ್ರತಿರೂಪಗಳನ್ನು ಉತ್ಪಾದಿಸಿ, ಕಡಿಮೆ ಉಷ್ಣತೆಯಲ್ಲಿ ಜೀವಿಸುವ ಸಾಮರ್ಥ್ಯ ಹೊಂದಿವೆ. ಕೆಲವು ಅಸಮತಾಪಿಗಳು, ದೇಹದ ಉಷ್ಣತೆಯನ್ನು ಹೆಚ್ಚಿಸಿಕೊಂಡು, ಅದನ್ನು ಸ್ವಲ್ಪ ಸಮಯದವರೆಗೆ ಉಳಿಸಿಕೊಳ್ಳುವ ಸಾಮರ್ಥ್ಯ ಪಡೆದಿವೆ. ಉದಾ: ಟ್ಯುನಾ ಮೀನು, ಹೆಬ್ಬಾವು. (ಎಸ್.ಕೆ.ಆರ್.)

**ಅಸರ್ವ ಸಂಶ್ಲೇಷಿ:** ಆಹಾರಕ್ಕೆ ಸಂಬಂಧಿಸಿದ ವಿಕೃತ ಬ್ಯಾಕ್ಟೀರಿಯಾ ಮತ್ತು ಇತರ ಸೂಕ್ಷ್ಮ ಜೀವಿಗಳು (ಆಕ್ಸೊಟ್ರಾಫ್ಸ್). ಪಿತೃಜೀವಿಗಳಿಗೆ ಅಗತ್ಯವಿಲ್ಲದ ಪೋಷಕಾಂಶಗಳನ್ನು ಸೇರಿಸಿರುವ ಕನಿಷ್ಠ ಮಾಧ್ಯಮದಲ್ಲಿ ಬೆಳೆಯುತ್ತವೆ. ನಿರ್ದಿಷ್ಟ ಪೋಷಕಾಂಶಗಳ ಅಗತ್ಯವಿಲ್ಲದ, ಕನಿಷ್ಠ ಮಾಧ್ಯಮದಲ್ಲಿ ಬೆಳೆಯುವ ಪಿತೃಜೀವಿಗಳನ್ನು ಆದಿಸಂಶ್ಲೇಷಿಗಳೆನ್ನುವರು (ಪ್ರೊಟೋಟ್ರಾಫ್). ಆದಿ ಸಂಶ್ಲೇಷಿಗಳು ವಿಕೃತಕಾರಕ ವಸ್ತುಗಳಿಂದ ಅಥವಾ ಆಕಸ್ಮಿಕ ಆನುವಂಶಿಕ ಬದಲಾವಣೆಗಳಿಂದ ವಿಕೃತಗೊಂಡ ಬ್ಯಾಕ್ಟೀರಿಯಾಗಳು. ಈ ಬ್ಯಾಕ್ಟೀರಿಯಾಗಳು ಪೋಷಕ ವಸ್ತುಗಳಿಂದ ಅಮೈನೋ ಆಮ್ಲಗಳನ್ನು ತಯಾರಿಸಲು ಅಸಮರ್ಥವಾಗಿರುತ್ತವೆ. ಜಾರ್ಜ್ ಡಬ್ಲು ಬೀಡ್ಲ್ ಮತ್ತು ಎಡ್ವರ್ಡ್ ಎಲ್. ಟೆಟಮ್ ನ್ಯೂರೋಸ್ಪರಾ ಕ್ರಾಸ್ಸಾ ಶಿಲೀಂಧ್ರದಲ್ಲಿ ವಿಕೃತಿಗಳಿಂದ ಆಹಾರ ಕ್ರಮದ ಬದಲಾವಣೆಯಾಗುವ ಕ್ರಿಯೆ ನಿರ್ದಿಷ್ಟ ಜೀವರಸಾಯನಿಕ ಹಂತ ಮತ್ತು ಕಿಣ್ವದ ಬಗ್ಗೆ ಅಭ್ಯಾಸಿಸಿದ್ದಾರೆ. ಪೋಷಕಾಂಶ ಕೊರತೆಯನ್ನು ತೋರುವ ಇಂತಹ ಅನೇಕ ವಿಕೃತ ಬ್ಯಾಕ್ಟೀರಿಯಾಗಳನ್ನು ಜೀವ ರಸಾಯನಿಕ ಮತ್ತು ತಳಿವಿಜ್ಞಾನದ ಅಧ್ಯಯನಕ್ಕೆ ಬಳಸಲಾಗಿದೆ.

ಈ ಸೂಕ್ಷ್ಮಾಣುಗಳ ಜೀವದ್ರವ (ಪ್ರೋಟೊಪ್ಲಾಮ್) ಪ್ರಮುಖ ಕಿಣ್ವಗಳ ಸಂಶ್ಲೇಷಣ ಸಾಮರ್ಥ್ಯ ಕಳೆದು ಕೊಂಡಿವೆ.

ಜೀವರಸಾಯನಿಕ ಕ್ರಿಯೆ ಅನೇಕ ಹಂತಗಳಲ್ಲಿ ಪೂರ್ಣಗೊಳ್ಳುವುದು. ಉದಾ: ಗ್ಲೂಕೋಸ್ (ಸಕ್ಕರೆ) ಅಥವಾ ಗ್ಲುಟಾಮಿಕ್ ಅಮ್ಯೆನೋ ಆಮ್ಲದಿಂದ ಆರ್ನಿಥಿನ್, ಸಿಟ್ರುಲಿನ್ ಆಮ್ಲಗಳಾಗಿ ಆರ್ಜಿನಿನ್ ಅಮ್ಯೆನೋ ಆಮ್ಲವಾಗುವುದು. ವಿಕೃತಿಗಳಿಂದ ಯಾವುದೇ ಹಂತಕ್ಕೆ ತೊಂದರೆಯಾದರೆ, ಮುಂದಿನ ವಸ್ತು ಆಗಲಾರದು, ಹಾಗೆಯೇ ಇಲ್ಲಿ ಮೂರು ಹಂತಗಳನ್ನು ಗುರುತಿಸಿದರೆ, ಅಂತಿಮ ಘಟ್ಟದಲ್ಲಿ ಸಿಟ್ರುಲಿನ್ ಅನ್ನು ಆರ್ಜಿನಿನ್ ಆಗಿ ಬದಲಾಯಿಸುವ ಸಾಮರ್ಥ್ಯಕೊಂಡ ಒಂದು ಗುಂಪು, ಆರ್ನಿಥಿನ್ ಸಿಟ್ರಿಲಿನ್ ಆಗಿ ಪರಿವರ್ತಿಸಲಾರದ ಎರಡನೇ ಗುಂಪು, ಗ್ಲುಟಾಮಿಕ್ ಅಮ್ಲದಿಂದ ಆರ್ನಿಥಿನ್ ತಯಾರಿಸಲಾರದ ಮೂರನೇ ಗುಂಪು, ಹೀಗೆ ಆಯಾ ಮಟ್ಟದಲ್ಲಿ ವಿಕೃತಿಗಳಿಂದ ತಡೆ ಹಿಡಿಯಲ್ಪಡುವುದು.

ಗ್ಲುಟಾಮಿಕ್ ಅಮ್ಲ →(1) ಆರ್ನಿಥಿನ್ →(2) ಸಿಟ್ರುಲಿನ್ →(3) ಆರ್ಜಿನಿನ್.

ಬ್ಯಾಕ್ಟೀರಿಯಾಗಳು ಈ ಮೂರು ಹಂತಗಳಲ್ಲಿ ವಿಕೃತಗೊಂಡಿರಬಹುದು. ಈ ಮೂರು ಹಂತಗಳಲ್ಲಿ ಗ್ಲುಟಾಮಿಕ್ ಆಮ್ಲ ಆರ್ಜಿನಿನ್ ಆಗುವುದು. ಇದನ್ನು ಮೂರು ತಳಿಗುಣಗಳು ನಿಯಂತ್ರಿಸಿವೆ ಎಂದು ಭಾವಿಸಿದರೆ ಒಂದು ಜೀನ್ ವಿಕೃತಗೊಂಡಾಗ ಆ ಕ್ರಿಯೆಗೆ ಬೇಕಾದ ಕಿಣ್ವ ಉಂಟಾಗದೆ ಆಹಾರ ನಿಲ್ಲುವುದು. ಹಾಗೆಯೇ ಮೂರು ಹಂತಗಳೂ ಸಹ.

| | A ಯಿಂದ B ವಸ್ತು ಕ್ರಿಯೆ 1 | | B ಯಿಂದ C ವಸ್ತು ಕ್ರಿಯೆ 2 | | C ಯಿಂದ D ವಸ್ತು ಕ್ರಿಯೆ 3 | |
|---|---|---|---|---|---|---|
| ಗ್ಲುಟಾಮಿಕ್ ಆಮ್ಲ A | → | ಆರ್ನಿಥಿನ್ B | → | ಸಿಟ್ರುಲಿನ್ C | → | ಆರ್ಜಿನಿನ್ D |
| | ↑ | | ↑ | | ↑ | |
| | ಕಿಣ್ವ a | | ಕಿಣ್ವ b | | ಕಿಣ್ವ c | |
| | ↑ | | ↑ | | ↑ | |
| | ಜೀನ್A | | ಜೀನ್B | | ಜೀನ್C | |

ಒಂದು ಜೀನ್–ಒಂದು ಕಿಣ್ವ–ಒಂದು ಕ್ರಿಯೆ ನಡೆಯುವ ರೀತಿ. ಇಲ್ಲಿ ಮೂರು ಬ್ಯಾಕ್ಟೀರಿಯಾಗಳೂ ಒಂದೇ ಗುಂಪಿನ ಪಿತೃಜೀವಿಗಳಿಂದ ಬಂದಿವೆ. ತಳಿಗುಣದ ವಿಕೃತಿಯಿಂದ ನಿರ್ದಿಷ್ಟ ಕಿಣ್ವ ತಯಾರಾಗದೆ ಆ ಹಂತ ತಡೆ ಹಿಡಿಯಲ್ಪಟ್ಟು ಅಂತಹ ವಸ್ತು ತಯಾರಿಸಲಾಗದೆ ಅವುಗಳಿಗೆ ಹೊರಗಿನಿಂದ ಕನಿಷ್ಟ ಮಾಧ್ಯಮದಲ್ಲಿ (ಹಾರ್ಮ್‌ಸ್) ಆ ವಸ್ತುವನ್ನು ನೀಡಬೇಕಾಗುವುದು.

ಲೀಡರ್ ಬರ್ಗ್ ಮತ್ತು ಟೆಟಮ್ (1946) ಎಸ್ಚೆರಿಶಿಯಾ ಕೋಲಿ (ಈ. ಕೋಲಿ) ಬ್ಯಾಕ್ಟಿರೀಯಗಳು ಕೆಲವು ನಿರ್ದಿಷ್ಟ ವಸ್ತುಗಳಿಗೆ ಆದಿ ಸಂಶ್ಲೇಷಿಯಾಗಿದ್ದು ಮತ್ತೆ ಕೆಲವಕ್ಕೆ ಅಸರ್ವಸಂಶ್ಲೇಷಿಯಾದ ವೈ 10, ಹಾಗೂ ವೈ 24 ತಳಿಗಳನ್ನು ಅಡ್ಡಾಯಿಸಿ ಲಿಂಗ ರೀತಿಯ ಪ್ರಜನನ ಮತ್ತು ಜೀನ್‌ಕ್ರಿಯೆ ಪತ್ತೆ ಹಚ್ಚಿದ್ದಾರೆ.

ಅಸರ್ವಸಂಶ್ಲೇಷಿ:– Y ವೈ 10 ತಳಿ ವೈ24 ತಳಿ

$$T^- L^- B_1^- B^+ P^{h+} C^+ \times T^+ L^+ B_1^+ B^- P^{h-} C^-$$

↓

$$T^+ L^+ B^+ B^+ P^{h+} C^+$$

ಆದಿಸಂಶ್ಲೇಷಿ

| ಪೋಷಕಾಂಶ | ಅಸರ್ವಸಂಶ್ಲೇಷಿ | ಆದಿಸಂಶ್ಲೇಷಿ |
|---|---|---|
| 1) ತ್ರಿಯೋನಿನ್ | $T^-$ | $T^+$ |
| 2) ಲ್ಯೂಸಿನ್ | $L^-$ | $L^+$ |
| 3) ಥೈಮೀನ್ | $B^-$ | $B_1^+$ |
| 4) ಬಯೋಟಿನ್ | $B^-$ | $B^+$ |
| 5) ಫಿನೈಲ್‌ಅಲನಿನ್ | $P^{h-}$ | $P^{h+}$ |
| 6) ಸಿಸ್ಟಿನ್ | $C^-$ | $C^+$ |

ಇಲ್ಲಿ ಅಸರ್ವಸಂಶ್ಲೇಷಿಗಳಿಂದ ಬರುವ ಸಂಕರ ಆದಿ ಸಂಶ್ಲೇಷಿಯಾಗಿರುವುವು.

ನೇರಳೆ ಕಿರಣಗಳು (ಯು ವಿ ), ನೈಟ್ರಸ್ ಆಕ್ಸೈಡ್ ಮುಂತಾದ ವಿಕೃತಕಾರಕ ವಸ್ತುಗಳಿಂದ ಹೆಚ್ಚು ವಿಕೃತ ಬ್ಯಾಕ್ಟೀರಿಯಾಗಳನ್ನು ಪಡೆಯಬಹುದು. ಅವಿಕೃತ ಬ್ಯಾಕ್ಟೀರಿಯಾಗಳನ್ನು ಜ಼ಿಂಡರ್, ಲೀಡರ್‌ಬರ್ಗ್, ಡೇವಿಸ್ (1948) ಪೆನಿಸಿಲಿನ್ ಮಾಧ್ಯಮದಲ್ಲಿ ಸಾಯಿಸಿ ವಿಕೃತ ಬ್ಯಾಕ್ಟೀರಿಯಾಗಳನ್ನು ಪಡೆಯುವ ಬಗೆಯನ್ನು ಕಂಡುಹಿಡಿದಿದ್ದಾರೆ. ಬ್ಯಾಕ್ಟೀರಿಯಾ ವಿನಾಶಿ ಪರಿಣಾಮಕ್ಕೆ ಒಳಗಾಗದ ವಿಕೃತ ಬ್ಯಾಕ್ಟೀರಿಯಾಗಳನ್ನೂ ತಳಿವಿಜ್ಞಾನದ ಅಧ್ಯಯನಕ್ಕೆ 'ಸಂಜ್ಞೆ'ಗಳಾಗಿ ಬಳಸುವರು. ವಿವಿಧ ಹಂತದ ಜೀನ್ ವಿಕೃತಿಗಳನ್ನು ತಳಿಗುಣಗಳ ಕ್ರಿಯೆಯಿಂದ ತಿಳಿಯಬಹುದು. ಕಾಲ ಕ್ರಮದಲ್ಲಿ ಹಿಮ್ಮುಖ ವಿಕೃತಿ ನಡೆಯುವುದರಿಂದ ವಿಕೃತಕಾರಕ ವಸ್ತುಗಳ ಪ್ರಭಾವವನ್ನು ತಿಳಿಯಲು ಸಹಕಾರಿ. ಆರ್ನಿಥಿನ್, ಸಿಟ್ರುಲಿನ್ ಆರ್ಜಿನಿನ್ ಕ್ರಿಯೆ ಒಂದು ತಳಿಗುಣ, ಒಂದು ರಸಾಯನ ಕ್ರಿಯೆಯ ನಿಯಂತ್ರಕ. ಇದು ನಿರ್ದಿಷ್ಟವಾಗಿದ್ದು ಒಂದು ಕಿಣ್ವದ ಮೂಲಕ ನಡೆಯುತ್ತದೆ. ಒಂದು ತಳಿಗುಣದ ಕ್ರಿಯೆ ಕಿಣ್ವ ಮಾಧ್ಯಮದ ಮೂಲಕ ನಿಯಂತ್ರಿಸುವುದು. ಜೀನ್–ಕಿಣ್ವ–ರಸಾಯನಿಕ ಕ್ರಿಯೆ ಈ ಸಂಬಂಧವನ್ನು ಒಂದು ಜೀನ್– ಒಂದು ಕಿಣ್ವ ಸಿದ್ಧಾಂತ ಎನ್ನುವರು, ಈ ಸಿದ್ಧಾಂತಕ್ಕಾಗಿಯೇ ಬೀಡ್ಲ್ ಮತ್ತು ಟೆಟಮ್ ರವರಿಗೆ ನೋಬೆಲ್ ಪಾರಿತೋಷಕ (1959)ದೊರೆಯಿತು. ಅಸರ್ವಸಂಶ್ಲೇಷಿಗಳ ಬಳಕೆಯಿಂದ ಇಂತಹ ನೂರಾರು ತಳಿವೈಜ್ಞಾನಿಕ ಅನ್ವೇಷಣೆ ಫಲಪ್ರದವಾಗಿದೆ. (ಟಿ.ವಿ.ಎಚ್.)

**ಅಸಿಲಿಡೆ:** ಸಂಧಿಪದಿಗಳ ವಂಶದ ಕೀಟಗಳ ವರ್ಗದ ಡಿಪ್ಟೆರ ಗಣ ಹಾಗೂ ಬ್ರಾಕಿಸಿರ ಉಪಗಣಕ್ಕೆ ಸೇರಿದ ಕುಟುಂಬ. ಈ ಕುಟುಂಬಕ್ಕೆ ಸೇರಿದ ನೊಣಗಳನ್ನು ದರೋಡೆ ನೊಣ (ರಾಬರ್ ಫ್ಲೈ) ಗಳೆಂದು ಕರೆಯುವುದುಂಟು. ಬೇರೆ ಕೀಟಗಳ ಮೇಲೆ ಎರಗಿ ಅವುಗಳನ್ನು ಹಿಡಿಯುವುದರಿಂದಲೇ ಈ ಹೆಸರು. ಕಣಜ, ಜೇನುಹುಳು, ಕೊಡತಿಹುಳು, ಮಿಡತೆಗಳು ಹಾಗೂ ಇತರ ನೊಣಗಳನ್ನು ಹಿಡಿಯುತ್ತವೆ. ಈ ನೊಣಗಳ ಗಾತ್ರದಲ್ಲಿ ವ್ಯತ್ಯಾಸವಿದ್ದು ಕೃಶ ಶರೀರವನ್ನು ಹೊಂದಿರುತ್ತವೆ. ಹೆಚ್ಚಾಗಿ ಬಂಬಲ್ ಜೇನು ಹುಳು (ಬಂಬಲ್ ಬೀ) ಗಳನ್ನು ಹೋಲುತ್ತವೆ. ಇವುಗಳ ಬಣ್ಣ ಕಂದುಮಿಶ್ರಿತ ಬೂದು ಅಥವಾ ಕಪ್ಪು. ಕೆಲವಕ್ಕೆ ಕೆಂಪು ಅಥವಾ ಹಳದಿ ಮೃದುಗೂದಲುಗಳಿರುತ್ತವೆ. ತಲೆಯು ಅಗಲವಾಗಿದ್ದು ಮೋಟಾಗಿರುತ್ತದೆ. ಕತ್ತು ಸಣ್ಣ. ಮುಂಭಾಗದಲ್ಲಿ ಕೂಡುಗಣ್ಣುಗಳ ಮಧ್ಯ ತಗ್ಗು ಇರುತ್ತದೆ. ಸರಳ ಕಣ್ಣುಗಳುಂಟು. ಕುಡಿಮೀಸೆಗಳು ಮೋಟಾಗಿದ್ದು ಮೂರು ತುಂಡುಗಳಿರುತ್ತವೆ. ತುದಿಯಲ್ಲಿ ಸರಳು ಅಥವಾ ಅರಿಷ್ಟ ಇರುತ್ತದೆ. ಬಾಯಿಯ ಭಾಗಗಳು ಚುಚ್ಚಿ ಹೀರುವುದಕ್ಕೆ ಮಾರ್ಪಾಟನ್ನು ಹೊಂದಿ ಚೂಪು ಮತ್ತು ಗಟ್ಟಿಯಾಗಿರುತ್ತದೆ. ಆದರೆ ಉದ್ದ ಕಡಿಮೆ. ಹೊಟ್ಟೆಯು ಕೃಶ ಹಾಗೂ ಹಿಂಭಾಗ ಚೂಪಾಗಿದ್ದು ರೆಕ್ಕೆಗಳಿಗಿಂತ ಉದ್ದವಾಗಿರುತ್ತದೆ. ಕಾಲುಗಳು ದಪ್ಪ ಮತ್ತು ಉದ್ದ. ಸಾಕಷ್ಟು ಬಿರುಗೂದಲುಗಳಿರುತ್ತವೆ. ಪೊರೆಯಂತಿರುವ ಸಣ್ಣ ರೆಕ್ಕೆಗಳ ಮೇಲೆ ನರದಿಂಡು(ನರ್ವ್ಯೂರ್)ಗಳು ಎದ್ದು ಕಾಣುತ್ತವೆ. ರೆಕ್ಕೆಗಳ ಬಣ್ಣ ಬೂದು.

ಈ ನೊಣಗಳು ಸಾಧಾರಣ ಗಾತ್ರದಿಂದ ಹೆಚ್ಚುಗಾತ್ರದವುಗಳಾಗಿರುತ್ತವೆ. ಎಲ್ಲಾ ಜಾಗದಲ್ಲಿ ಕಂಡು ಬಂದರೂ ಹೆಚ್ಚಾಗಿ ಬಿಸಿಲುಗಾಲದಲ್ಲಿ ಬಯಲು ಮತ್ತು ಕೂಳೆ ಹೊಲದಲ್ಲಿ ಜಾಸ್ತಿ. ಅವುಗಳಿಗೆ ತೊಂದರೆಯಾದಾಗ ಅಥವಾ ಬಲಿಕೀಟಗಳನ್ನು ಹಿಡಿಯುವಾಗ ಸ್ವಲ್ಪ ದೂರ ಶಬ್ದ ಮಾಡುತ್ತಾ ಹಾರಿಹೋಗಿ ಅವುಗಳ ಮೇಲೆ ಎರಗುತ್ತವೆ. ಅನಂತರ ತಮ್ಮ ಬಾಯಿಭಾಗಗಳಿಂದ ಚುಚ್ಚಿ ಚುಚ್ಚಿ ಸಾಯಿಸುತ್ತವೆ. ಮರಿಗಳು ಕೊಳೆಯುತ್ತಿರುವ ಜೈವಿಕ ವಸ್ತು, ಕಸ–ಕಡ್ಡಿ ಅಥವಾ ಮಣ್ಣಿನಲ್ಲಿದ್ದು ಅಲ್ಲಿರುವ ಹುಳಗಳ ಮರಿಗಳನ್ನು ಕೊಳ್ಳೆ ಹೊಡೆಯುತ್ತವೆ. ಕೋಶಗಳಿಗೆ ಪ್ಯೂಪೇರಿಯಂ ಎಂಬ ರಕ್ಷಾಕವಚವಿಲ್ಲ; ಮುಳ್ಳುಗಳಿರುತ್ತವೆ. ಮರಿಗಳ ಶರೀರ ಸಣ್ಣ ಮತ್ತು ದುಂಡು; ಬಣ್ಣ ಕಪ್ಪು; ತಲೆ ಚೂಪಾಗಿರುತ್ತದೆ. ಮರಿಯ ಬಾಯಿ ಭಾಗದಲ್ಲಿ ಕೊಕ್ಕೆಯಾಕಾರದ ಮೇಲ್ದುಟಿಯಿದ್ದು ದವಡೆಗಳು ಚಾಕುವಿನಂತಿರುತ್ತವೆ. ಕುಡಿಮೀಸೆಗಳು ತುಂಬಾ ಸಣ್ಣವಾಗಿದ್ದು ಕಣ್ಣುಗಳಿರುವುದಿಲ್ಲ. ಹೊಟ್ಟೆಯಲ್ಲಿ 10 ರಿಂದ 11 ಖಂಡಗಳಿರುತ್ತವೆ. ಲೆಪ್ಟೋಗ್ಯಾಸ್ಟರ್ ಮತ್ತು ಲಾಫ್ರಿಯಾ ಈ ಕೀಟಗಳಿಗೆ ಉದಾಹರಣೆಗಳು. (ವಿ.ಎಸ್.ಟಿ.)

**ಅಸ್ಟ್ರಲೋಪಿತಕಸ್:** ಸು. 4 ರಿಂದ 20 ಲಕ್ಷ ವರ್ಷಗಳ ಹಿಂದೆ ಪ್ಲಿಯಿಸ್ಟೊಸೀನ್ ಮೊದಲ ಭಾಗದಲ್ಲಿ, ದಕ್ಷಿಣ ಮತ್ತು ಪೂರ್ವ ಆಫ್ರಿಕದ ಬಯಲುಗಳಲ್ಲಿ ಹರಡಿದ್ದ ಒಂದು ವಾನರ ಜಾತಿ. ಮಾನವ ವಿಕಾಸದ ಮೊದಲ ಪಳೆಯುಳಿಕೆ. ದ್ವಿಪಾದಿ. ತಲೆಬುರುಡೆಯ ರಚನೆ, ಹಲ್ಲಿನ ಜೋಡಣೆ ರಚನೆಯಲ್ಲಿ ಅಸ್ಟ್ರಲೋಪಿತಕಸ್ ಮಾನವ ಜಾತಿಗೆ ಸಮೀಪದಲ್ಲಿರುವುದರಿಂದ ಇದನ್ನು ಮಾನವನ ಸಮೀಪ ಸಂಬಂಧಿ ಎಂದು ಪ್ರಾಗ್ಜೀವ ವಿಜ್ಞಾನಿಗಳು ಕರೆಯುತ್ತಾರೆ. ಈ ಸಂತತಿಯ ಕಪಿಗಳು ಒರಟು ಶಿಲಾಯುಧಗಳನ್ನು ಉಪಯೋಗಿಸುತ್ತಿದ್ದ ಬಗ್ಗೆ ಡಾ॥ ಲೀಕಿಯವರ ಸಂಶೋಧನೆಗಳಿಂದ ಗೊತ್ತಾಗಿದೆ.

ಡಾ॥ ಡಾರ್ಟ್ 1924ರಲ್ಲಿ ಆಫ್ರಿಕ ದೇಶದ ಬೆಕುವಾನ ಲ್ಯಾಂಡ್‌ನಲ್ಲಿನ ಟಾನ್ಸ್ ಸುಣ್ಣಕಲ್ಲಿನಲ್ಲಿ ಈ ಗುಂಪಿಗೆ ಸೇರಿದ ತಲೆ ಬುರುಡೆಯ ಪಳೆಯುಳಿಕೆಯನ್ನು ಕಂಡು ಹಿಡಿದು. ಅದಕ್ಕೆ ಅಸ್ಟ್ರಲೋಪಿತಕಸ್ ಎಂದು ನಾಮಕರಣ ಮಾಡಿದರು. 1936–51ರಲ್ಲಿ ಡಾ॥ ರಾಬರ್ಟ್ ಬ್ರೂಂ ಟ್ರಾನ್ಸ್‌ವಾಲ್‌ನಲ್ಲಿ ಕೆಲವು ತಲೆಬುರುಡೆ ಪಳೆಯುಳಿಕೆಗಳನ್ನು ಕಂಡುಹಿಡಿದರು. ಡಾಕ್ಟರ್ ಮತ್ತು ಶ್ರೀಮತಿ ಲೀಕಿಯವರು ಟಾಂಗನೀಕದ ಓಲ್ಡುವೈ ಕಣಿವೆಯಲ್ಲಿ 1956ರಲ್ಲಿ ಕಂಡುಹಿಡಿದ ಜಿಗಾಂತ್ರೊಪಸ್ ತಲೆಬುರುಡೆಯೂ ಇದೇ ಗುಂಪಿಗೆ ಸೇರಿದುದೆಂದು ಅನೇಕ ವಿಜ್ಞಾನಿಗಳು ವರದಿಸಿದ್ದಾರೆ.

ಮಿದುಳು 600 ರಿಂದ 700 ಘಸೆಂಮೀ ಇದ್ದು (ಬಾಲವಿಲ್ಲದ ಮಂಗಗಳಿಗೆ ಇಷ್ಟೇ ಗಾತ್ರದ ಮಿದುಳಿರುತ್ತದೆ), ಜಿಗಾಂತ್ರೊಪಸ್ ಕಲ್ಲಿನ ಆಯುಧಗಳನ್ನು ಮಾಡುವ ಶಕ್ತಿಯನ್ನು ಹೊಂದಿತ್ತು. ಇದಕ್ಕೆ ಪುಷ್ಟಿ ನೀಡುವಂತಹ ಸಾಕ್ಷಿಯನ್ನು ಡಾ॥ ಲೀಕಿಯವರು ಇದರ ತಲೆಬುರುಡೆಯ ಪಳೆಯುಳಿಕೆಯ ಜೊತೆಯಲ್ಲಿ ಸಿಕ್ಕಿದ ಕಲ್ಲಿನ ಆಯುಧಗಳ ರೂಪದಲ್ಲಿ ಶೇಖರಿಸಿದರು. ಅಸ್ಟ್ರಲೋಪಿತಕಸ್ ಗುಂಪು ಮೈದಾನದಲ್ಲಿ ಮರವನ್ನು ತ್ಯಜಿಸಿ ಮಾನವನಂತೆ ಎರಡು ಕಾಲುಗಳ ಮೇಲೆ ನೆಟ್ಟಗೆ ನಡೆಯುತ್ತಿದ್ದುದರಿಂದ ಅವು ತಮ್ಮ ಆಹಾರಕ್ಕಾಗಿ ಬಬೂನ್‌ಗಳು ಮೊಲದಂತಹ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದುವು. ಕಾಲಾಂತರದಲ್ಲಿ ಇವುಗಳು ನಶಿಸಿ ಹೋದ ಬಗ್ಗೆ ತಜ್ಞರು ಅಭಿಪ್ರಾಯ ಪಡುತ್ತಾರೆ. (ಎಸ್.ಎಂ.)

**ಅಸ್ಥಿ:** ಮೂಳೆ. ದೇಹಕ್ಕೆ ಆಕಾರ, ಆಧಾರ ನೀಡುವ ಮತ್ತು ಚಲನೆಯಲ್ಲಿ ಸಹಕರಿಸುವ ಅಂಗಾಂಶ. ದೇಹದ ಒಟ್ಟಾರೆ ತೂಕದ ಹೆಚ್ಚಿನ ಭಾಗ ಮೂಳೆಗಳಿಂದಾಗಿದೆ. ಕೆಲವು ಜೈವಿಕಕ್ರಿಯೆಗಳಲ್ಲೂ ಸಕ್ರಿಯ ಪಾತ್ರವಹಿಸುತ್ತದೆ. ಇದು ಹಗುರ. ಆದರೆ ಸಮತೂಕದ ಕಬ್ಬಿಣದ ಸರಳಿಗಿಂತ ಐದು ಪಟ್ಟು ಗಟ್ಟಿಯಾಗಿರುತ್ತದೆ. ಮೂಳೆ ಅಂಗಾಂಶದ ಮಾತೃಕೆಯು ಕೊಲ್ಲಾಜನ್ ತಂತುಗಳು, ಪ್ರೊಟೀನ್‌ಗಳು, ಕ್ಯಾಲ್ಸಿಯಂ ಫಾಸ್ಫೇಟ್, ಸೋಡಿಯಂ ಮತ್ತು ಮೆಗ್ನೀಸಿಯಂಗಳ ಕ್ಲೋರೈಡ್‌ಗಳು ಮುಂತಾದ ಲವಣಗಳಿಂದ ಕೂಡಿದೆ. ದೇಹದ ತೂಕ ಮತ್ತು ಒತ್ತಡವನ್ನು ತಡೆಯಲು ಈ ಕ್ಯಾಲ್ಸಿಯಂ ಯುಕ್ತ ಮಾತೃಕೆಯೇ ಕಾರಣ. ಮಾತೃಕೆಯಲ್ಲಿ ಸಾವಿರಾರು ಅಸ್ಥಿ ಕಣಗಳಾದ ಆಸ್ಟಿಯೋಬ್ಲಾಸ್ಟ್‌ಗಳಿವೆ.

ಉದ್ದವಾದ ಮೂಳೆಗಳಲ್ಲಿ ಕೊಳವೆಯಂತಹ ಖಾಲಿ ಸ್ಥಳದಲ್ಲಿ ಅಸ್ಥಿಮಜ್ಜೆ ಎಂಬ ದ್ರವ ತುಂಬಿರುತ್ತದೆ. ಅಸ್ಥಿಮಜ್ಜೆಯು ಕೊಬ್ಬು ಮತ್ತು ರಕ್ತ ಜೀವಕಣಗಳನ್ನು ಉತ್ಪತ್ತಿಮಾಡುವ ಸಂಯೋಜಕ ಅಂಗಾಂಶ. ಕ್ಯಾಲ್ಸಿಯಂ ಲವಣವನ್ನು ಶೇಖರಿಸಿಟ್ಟುಕೊಳ್ಳುವುದೂ ಇದರ ಕೆಲಸ. ಮೂಳೆಯಲ್ಲಿ ಮಾತೃಕೆ ಮತ್ತು ಕೊಲ್ಲಾಜನ್ ತಂತುಗಳು ಲ್ಯಾಮೆಲ್ಲಗಳೆಂಬ ತೆಳು ಅಂತವೃತ್ತ ಫಲಕಗಳ ರೀತಿಯಲ್ಲಿ ವ್ಯವಸ್ಥಿತವಾಗಿವೆ. ಅಡಕವಾದ ಮೂಳೆಯಲ್ಲಿ ಮೂರು ವಿಧದ ಲ್ಯಾಮೆಲ್ಲಗಳಿವೆ;

1) ಪರಿಧೀಯ ಲ್ಯಾಮೆಲ್ಲಗಳೆಂಬ ಮೂಳೆಯ ಹೊರ ಮೇಲ್ಮೈಗೆ ಸಮಾನಾಂತರವಾಗಿ ಜೋಡಿಸಿದ ಲ್ಯಾಮೆಲ್ಲಾಗಳು

2) ಹ್ಯಾವರ್ಷಿಯನ್ ನಾಳಗಳ ಸುತ್ತಲೂ ಏಕಕೇಂದ್ರೀಯವಾಗಿ ಹರಡಿದ ಹ್ಯಾವರ್ಷಿಯನ್ ಲ್ಯಾಮೆಲ್ಲಗಳು

3) ಪರಿಧೀಯ ಲ್ಯಾಮೆಲ್ಲ ಮತ್ತು ಹ್ಯಾವರ್ಷಿಯನ್ ಲ್ಯಾಮೆಲ್ಲಗಳ ನಡುವೆ ಇರುವ ಅಂತರ ಜಾಗಗಳನ್ನು ತುಂಬುವ ಇಂಟರ್‌ಸ್ಪಿಷಿಯಲ್ ಅಥವಾ ಮೂಲ ಲ್ಯಾಮೆಲ್ಲಗಳು.

ಈ ಲ್ಯಾಮೆಲ್ಲಗಳ ನಡುವೆ ಕದಿರಿನಾಕಾರದ ಬಿಡುತಿ (ಲ್ಯಾಕುನ)ಗಳಿವೆ. ಈ ಬಿಡುತಿಗಳಲ್ಲಿ ಆಸ್ಟಿಯೋಸೈಟ್‌ಗಳೆಂಬ ಜೀವ ಕೋಶಗಳಿವೆ. ಆಸ್ಟಿಯೋಸೈಟ್‌ಗಳು ಉದ್ದವಾದ ಪ್ರವರ್ಧಗಳಿರುವ, ಕವಲೊಡೆದ ಮಾದರಿಯ ಜೀವಕೋಶಗಳು. ಬಿಡುತಿಗಳಿಂದ ಸೂಕ್ಷ್ಮವಾದ ತ್ರಿಜ್ಯರೂಪದಲ್ಲಿ ಹರಡಿದ ಕೆನಾಲಿಕ್ಯುಲೈ ಎಂಬ ನಾಳೆಗಳಿವೆ. ಆಸ್ಟಿಯೋಸೈಟ್‌ಗಳ ಉದ್ದ ಪ್ರವರ್ಧಗಳು ಈ ಕೆನಾಲಿಕುಲೈಗಳಿಗೆ ಹರಡುತ್ತವೆ.

ಲ್ಯಾಮೆಲ್ಲಾಗಳು, ಬಿಡುತಿಗಳು ಮತ್ತು ಹ್ಯಾವರ್ಷಿಯನ್ ನಾಳೆಗಳು ಸೇರಿ ಹ್ಯಾವರ್ಷಿಯನ್ ವ್ಯೂಹವಾಗುತ್ತದೆ. ಹ್ಯಾವರ್ಷಿಯನ್ ನಾಳೆಗಳಲ್ಲಿ ರಕ್ತನಾಳಗಳಿರುತ್ತವೆ. ಈ ಹ್ಯಾವರ್ಷಿಯನ್ ನಾಳಗಳ ಸುತ್ತಲೂ ಬಿಡುತಿಗಳು ಏಕಕೇಂದ್ರೀಯ ಉಂಗುರಗಳಂತೆ ಹರಡಿವೆ. ಕೆನಾಲಿಕ್ಯುಲೈಗಳು ಒಂದು ಲ್ಯಾಮೆಲ್ಲದಿಂದ ಇನ್ನೊಂದು ಲ್ಯಾಮೆಲ್ಲಕ್ಕೆ ಮಾತೃಕೆಯ ಮೂಲಕ ಹರಡುತ್ತವೆ.

ಅಸ್ಥೀಕರಣವೆಂಬ ಕ್ರಿಯೆಯಿಂದ ಮೂಳೆ ರೂಪುಗೊಳ್ಳುತ್ತದೆ. ಭ್ರೂಣದ ಬೆಳವಣಿಗೆಯ ಕಾಲದಲ್ಲಿ ಮೂಳೆಗಳು ಎರಡು ವಿಧಾನಗಳಲ್ಲಿ ಉದ್ಭವಿಸುತ್ತವೆ;

1) ಪಟಲಾಂತರ ಅಸ್ಥೀಕರಣ: ವಿಭೇದೀಕೃತವಾಗಿರುವ ಮಿಸಂಕೈಮದಲ್ಲಿ ರೂಪಗೊಳ್ಳುವುದು.

2) ಮೃದ್ವಸ್ಥಿ ಪ್ರತಿಸ್ಥಾಪನೆ: ಮೊದಲೇ ಇರುವ ಮೃದ್ವಸ್ಥಿಯ ಅಸ್ಥೀಕರಣದಿಂದ ರೂಪುಗೊಳ್ಳುವುದು. ಮೊದಲನೆಯ ರೀತಿಯ ಮೂಳೆಗಳಿಗೆ ಪಟಲೀಯ ಮೂಳೆ ಅಥವಾ ವೇಷ್ಟನಾಸ್ಥಿ (ಇನ್ವೆಸ್ಟಿಂಗ್ ಅಸ್ಥಿ) ಎಂದೂ ಎರಡನೆಯ ವಿಧದ ಮೂಳೆಗಳಿಗೆ ಮೃದ್ವಸ್ಥಿ ಮೂಳೆ ಅಥವಾ ಪ್ರತಿಸ್ಥಾಪಿ ಮೂಳೆ (ರಿಪ್ಲೇಸಿಂಗ್ ಅಸ್ಥಿ) ಎಂದೂ ಹೆಸರು.

ಮೂಳೆಯ ಪೋಷಣೆ: ಮೂಳೆಯ ಪೋಷಣೆಯು ಸಾಮಾನ್ಯವಾಗಿ ರಕ್ತನಾಳ ಮತ್ತು ಲಿಂಪ್ಫಿಕ್ ಗ್ರಂಥಿಗಳಿಂದ ಆಗುತ್ತದೆ.

ಮಾನವನ ಪ್ರೌಢಾವಸ್ಥೆಯಲ್ಲಿ ದೇಹದ ಅಸ್ಥಿಪಂಜರದಲ್ಲಿ 206 ಮೂಳೆಗಳು ಹಾಗೂ ಬಾಲ್ಯಾವಸ್ಥೆಯಲ್ಲಿ 290–300 ಮೂಳೆಗಳು ಕಂಡುಬರುತ್ತವೆ. ಇವುಗಳಲ್ಲಿ ಬೆನ್ನು ಮೂಳೆಯಲ್ಲಿ 26, ತಲೆಬುರುಡೆಯಲ್ಲಿ 8, ಕಿವಿಯ ಆಸಿಕಲ್‌ನಲ್ಲಿ 6, ಪಕ್ಕೆಯಲ್ಲಿ ಮತ್ತು ಎದೆಪಕ್ಕೆಯಲ್ಲಿ 26, ಮುಂಭಾಗದ ಕೊನೆಯಲ್ಲಿ 68, ಕೊನೆಯಲ್ಲಿ 63 ಇರುತ್ತದೆ.

ಫೀಮರ್ ಎಂಬ ತೊಡೆ ಮೂಳೆಯು ಮಾನವನ ದೇಹದಲ್ಲಿ ಅತ್ಯಂತ ಗಟ್ಟಿ ಮತ್ತು ಉದ್ದವಾದ ಮೂಳೆ. ಕಿವಿಯಲ್ಲಿ ಇರುವ ಸ್ಟೇಪಿಸ್ ಎಂಬ ಮೂಳೆಯು ಅತ್ಯಂತ ಸಣ್ಣ ಮೂಳೆಯಾಗಿರುತ್ತದೆ. (ಬಿ.ಆರ್.ಜಿ.)

**ಅಸ್ಥಿಕವಚದ ಮೀನುಗಳು:** ಆದಿಮೀನುಗಳ ಗುಂಪಿಗೆ ಸೇರಿದ ಜಲಚರಗಳು (ಆಸ್‌ಟ್ರಾಕೊಡರ್ಮ). ಇವುಗಳ ಪಳೆಯುಳಿಕೆಗಳು ಜೀವಿಗಳ ಇತಿಹಾಸದ ಪ್ರಾಚೀನ ಜೀವಕಲ್ಪದ ಸೈಲೂರಿಯನ್ ಮತ್ತು ಡೆವೋನಿಯನ್ ಯುಗಗಳ ವೈಶಿಷ್ಟ್ಯಗಳಾಗಿವೆ. ಪ್ರಾಚೀನ ಕಶೇರುಕ ಪ್ರಾಣಿಗಳಲ್ಲೆಲ್ಲ ಈ ಜೀವಿಗಳ ಪಳೆಯುಳಿಕೆಗಳು ಉತ್ತಮಸ್ಥಿತಿಯಲ್ಲಿ ಉಳಿದುಕೊಂಡು ಬಂದಿವೆ. ನಿರ್ದಿಷ್ಟವಾದ ಬೆನ್ನು ಹುರಿಗಳು ಇಲ್ಲದಿದ್ದ ಈ ಜಲಚರಗಳ ರಚನೆಯ ಆಧಾರದ ಮೇಲೆ ಅವನ್ನು ಅಸ್ಥಿಕವಚದ ಮೀನುಗಳೆಂದು ಕರೆಯುತ್ತಾರೆ. ಆದರೆ ಆ ಮೀನುಗಳು ಈಗಿನವುಗಳಂತೆ ಇರಲಿಲ್ಲ. ಮೀನಿನಾಕಾರದ ಶರೀರ, ಬಾಲ ಮತ್ತು ಜಡವಾದ ಎಲುಬಿನ ಕವಚವುಳ್ಳ ತಲೆಯ ಭಾಗಗಳನ್ನು ಹೊಂದಿರುವ ವಿಜಾತೀಯ ಪ್ರಾಣಿಗಳಾಗಿದ್ದವು. ಕೆಲವು ಮೀನುಗಳಲ್ಲಿ ಸಾಕಷ್ಟು ಸ್ಪಷ್ಟವಾದ ಬೆನ್ನುಹುರಿ ರೂಪುಗೊಂಡಿತ್ತು. ಈ ಗುಂಪಿಗೆ ಸೇರಿದ ಇತರ ಕೆಲವು ಮೀನುಗಳಲ್ಲಿ ತಲೆಯ ಮೇಲ್ಭಾಗ ಮಾತ್ರ ಎಲುಬಿನ ಕವಚವನ್ನು ಹೊಂದಿ, ಒಳದೇಹದಲ್ಲಿ ಮೃದ್ವಸ್ಥಿ ಇತ್ತು. ಪಕ್ಕೆಯ ಮತ್ತು ಕೆಳಬದಿಯ ಈಜುರೆಕ್ಕೆಗಳ ಬದಲು ವಿಚಿತ್ರಾಕಾರದ ಜೋಡಿಮುಳ್ಳಿನಂಥ ಅಥವಾ ರೆಕ್ಕೆಯಂಥ ಪದರುಗಳು ಕಿವಿರುಗಳ ಹಿಂಭಾಗದಲ್ಲಿದ್ದುವು. ದವಡೆರಹಿತವಾದ ಬಾಯಿ ತಲೆಯ ಮುಂತುದಿಯಲ್ಲಿತ್ತು. ತಲೆಯ ಮೇಲ್ಭಾಗದ ನಡುವಿನಲ್ಲಿ ಒಂಟಿ ಮೂಗಿನ ಹೊಳ್ಳೆ ಇತ್ತು. ದೇಹದ ಮೇಲೆ ಚರ್ಮಕ್ಕೆ ಸಂಬಂಧಿಸಿದಂತೆ ಅನೇಕ ತಗಡು ಪಟ್ಟಿಯಾಕಾರದ (ಪ್ಲಕಾಯಿಡ್) ಹುರುಪೆಗಳಿದ್ದವು.

ಸಮುದ್ರದ ಕೊಲ್ಲಿ ಅಥವಾ ತಿಳಿನೀರಿನ ನದೀಮುಖಗಳೇ ಇವುಗಳ ವಾಸಸ್ಥಾನಗಳಾಗಿದ್ದುವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ವೈವಿಧ್ಯದಿಂದ ಕೂಡಿ ವಿಕಾಸ ಹೊಂದಿದ್ದ ಈ ಮೀನುಗಳ ಸಮುದಾಯಗಳು ಡೆವೋನಿಯನ್ ಯುಗದಲ್ಲಿ ಹೇರಳವಾಗಿದ್ದುವು. ಈ ವಿಚಿತ್ರ ಮೀನುಗಳ ಸಂತತಿ ಕ್ರಮೇಣ ಕ್ಷೀಣಿಸಿ ಡೆವೋನಿಯನ್ ಯುಗದ ಅಂತ್ಯದಲ್ಲಿ ಪೂರ್ಣವಾಗಿ ಅಳಿದು ಹೋದುದು ಮೀನುಗಳ ಇತಿಹಾಸದಲ್ಲೇ ಒಂದು ಮುಖ್ಯ ಘಟನೆ. ಈ ವಿಚಿತ್ರ ಜಲಚರಗಳ ಪಳೆಯುಳಿಕೆಗಳು ಮೀನುಗಳ ಇತಿಹಾಸದ ಕುರುಹುಗಳನ್ನು ತೋರಿಸುವುದೇ ಅಲ್ಲದೆ ಇವು ಕಶೇರುಕ ಪ್ರಾಣಿವರ್ಗದ ಪೂರ್ವಜರ ಹತ್ತಿರ ಸಂಬಂಧಿಗಳೆಂದು ಸೂಚಿಸುತ್ತವೆ.

ಸೆಫಲಾಸ್ಪಿಸ್ ಎಂಬುದು ಈ ಮೀನುಗಳಲ್ಲೆಲ್ಲ ಉತ್ತಮ ಉದಾಹರಣೆ. ಇದರ ಪಳೆಯುಳಿಕೆಗಳು ಈಗಿನ ಮೀನಿನ ವಿಶೇಷ ಗುಣಗಳನ್ನು ತೋರಿಸುತ್ತವೆ. ಇದರ ಬಾಲದ ಮತ್ತು ಬೆನ್ನಿನ ರೆಕ್ಕೆಗಳು ಸೊರ ಮೀನಿನಲ್ಲಿರುವಂತೆ ಇದ್ದುವು; ತಲೆಯ ಮೇಲೆ ಮಂದವಾದ ಅಸ್ಥಿಕವಚವಿತ್ತು. ದೇಹದ ಮುಂಭಾಗದಲ್ಲಿ ಅಡ್ಡಲಾಗಿ ಹುರುಪೆಗಳು ಪಟ್ಟಿಗಳಂತಿದ್ದುವು. ಟೆರಾಸ್‌ಪಿಸ್ ಮತ್ತು ಸಿಫಲಾಸ್‌ಪಿಸ್ ಎಂಬುವು ತಿಳಿನೀರಿನ ಸರೋವರ ಅಥವಾ ಸಮುದ್ರದ ತಳಭಾಗದ ಶಾಂತ ವಾತಾವರಣಕ್ಕೆ ಹೊಂದಿಕೊಂಡಿದ್ದುವು. ಬ್ರಾತ್ರಿಯೊಲೆಪಿಸ್ ಎಂಬುದು ಡೆವೋನಿಯನ್ ಯುಗದ ಅಂತ್ಯದಲ್ಲಿದ್ದು ಸಾಮಾನ್ಯ ಮೀನಿನ ಅನೇಕ ಗುಣಗಳನ್ನು ಹೊಂದಿತ್ತು. ದೇಹದ ಮೇಲ್ಭಾಗದಲ್ಲಿ ಸಾಲು ಸಾಲಾಗಿ ಎಲುಬಿನ ತಟ್ಟೆಗಳಂತಿರುವ ಹರುಪೆಗಳಿದ್ದುವು. ಈ ಮೀನು ತಿಳಿನೀರಿನ ಸರೋವರ ಅಥವಾ ಕೆರೆಗಳಲ್ಲಿ ವಾಸಿಸುತ್ತಿತ್ತು. (ಆರ್.ಎಲ್.)

**ಅಸ್ಥಿಪಂಜರ:** ದೇಹಕ್ಕೆ ಆಕಾರ ಮತ್ತು ಆಧಾರವನ್ನು ನೀಡುವ ಹಾಗೂ ಅದರ ಸಮಗ್ರತೆಯನ್ನು ಕಾಪಾಡುವ ರಚನೆ. ಬಹುತೇಕ ಪ್ರಾಣಿಗಳಲ್ಲಿ ಸ್ನಾಯುಗಳಿಗೆ ಮತ್ತು ಇಡೀ ದೇಹಕ್ಕೆ ಗಟ್ಟಿ ಮುಟ್ಟಾದ ಅಸ್ಥಿಪಂಜರ ಆಸರೆಯಾಗಿದ್ದು ರೂಪ, ಆಕಾರಕ್ಕೆ ಕಾರಣವಾಗಿ, ಚಲನೆಗೂ ಸಹಕಾರಿಯಾಗಿದೆ.

ದೃಢತೆಗೆ ನೆರವಾಗುವ ಪ್ರಾಣಿಗಳ ಅಸ್ಥಿಮಂಡಲ ನಾನಾ ರೀತಿಯ ವಸ್ತುಗಳಿಂದಾಗಿದೆ. ಇವುಗಳಲ್ಲಿ ಮೂರು ಪ್ರಮುಖ ರೀತಿಗಳನ್ನು ಗುರುತಿಸಬಹುದು. ಸುಣ್ಣ ವಸ್ತು ಉಳ್ಳ

ಸುಣ್ಣೀಕೃತ ಆಸರೆಗಳು ಒಂದು ಗುಂಪು, ಬೆಣಚು ವಸ್ತುಪಡೆದ ಸಿಲಿಕಾ ಅಥವಾ ಸಿಲಿಶಿಯಸ್ ರಚನೆಗಳು ಮತ್ತೊಂದು ಗುಂಪು, ವಿಭಿನ್ನ ಸಂರ್‍ರಚನೆಯಿಂದಾದ ದಂತ ಮತ್ತು ಕೊಂಬು (ಹಾರ್‍ನ್) ವಸ್ತುಗಳಿಂದ ಕೂಡಿದ ಮೂರನೆಯ ಗುಂಪು. ದೇಹದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ವಸ್ತುಗಳಿರಬಹುದು ಅಥವಾ ಇಡೀ ದೇಹದ ಆಸರೆ ಬಹುಪಾಲು ಇವುಗಳಲ್ಲಿ ಒಂದು ಪ್ರಧಾನವಾಗಿರುವುದರಿಂದ ಆಗಿರಬಹುದು.

ವಿಧಗಳು:– ಇಡೀ ಅಸ್ಥಿಪಂಜರ ಒಳಭಾಗದಲ್ಲಿದ್ದು ತನ್ಮೂಲಕ ಆಸರೆ ಕೊಟ್ಟರೆ ಅದನ್ನು ಒಳಾಸ್ಥಿಪಂಜರ ಎನ್ನಲಾಗುವುದು. ಮೃದ್ವಸ್ಥಿ ಮತ್ತು ಮೂಳೆಗಳ ವ್ಯವಸ್ಥೆ ಕಶೇರುಕಗಳಲ್ಲಿ ಒಳಾಸ್ಥಿಪಂಜರ. ಸಮುದ್ರದ ನೊರೆ ಎಂದು ಪ್ರಸಿದ್ಧವಾದ ಸೆಪಿಯಾದ ಚಿಪ್ಪು ಒಳಭಾಗದಲ್ಲಿರುವುದು. ಬಹುತೇಕ ಪ್ರಾಣಿಗಳಲ್ಲಿ ದೇಹದ ಹೊರಭಾಗವೇ ಗಟ್ಟಿಯಾಗಿದ್ದು ಹೊರಾಸ್ಥಿಪಂಜರವಾಗಿದೆ. ಬಸವನ ಹುಳುವಿನ ಚಿಪ್ಪು ಭಾಗಶಃ ಅಥವಾ ಸಂಪೂರ್ಣವಾಗಿ ಪ್ರಾಣಿಯನ್ನು ಮುಚ್ಚಿದ್ದು ಹೊರಾಸ್ಥಿಯಾಗಿ ಆಸರೆಯನ್ನೊದಗಿಸುವುದು. ಸಾಮಾನ್ಯವಾಗಿ ಒಳಾಸ್ಥಿ ಉಳ್ಳ ಪ್ರಾಣಿಗಳಲ್ಲಿಯೂ ಮೈ ಮೇಲೆ ಹುರುಪೆ, ಉಗುರು, ಕೂದಲು ಮುಂತಾದ ಹೊರಾಸ್ಥಿಯನ್ನು ಕಾಣುತ್ತೇವೆ. ಕೇವಲ ಹೊರಾಸ್ಥಿ ಒಂದೇ ಇಡೀ ಶರೀರಕ್ಕೆ ಬೇಕಾದ ಆಸರೆ ಮತ್ತು ರಕ್ಷಣೆ ಒದಗಿಸಲಾರದು. ಆದ್ದರಿಂದ ಕೇವಲ ಹೊರಾಸ್ಥಿ ಮಾತ್ರ ಪಡೆದಿರುವ ಪ್ರಾಣಿಗಳು ಚಿಕ್ಕ ಶರೀರಗಳನ್ನು ಪಡೆದಿವೆ. ಗಾತ್ರ ಹೆಚ್ಚಿದಂತೆಲ್ಲಾ ಕೇವಲ ಹೊರಾಸ್ಥಿ ಸಾಕಾಗದೆ ಒಳಾಸ್ಥಿ ಬೆಳೆದು ದೈತ್ಯಶರೀರವನ್ನು ಉಂಟುಮಾಡಿರಬಹುದು.

ಏಕಕೋಶಜೀವಿಗಳಿಂದ ಹಿಡಿದು ಸ್ತನಿಗಳವರೆಗೆ ಎಲ್ಲಾ ಪ್ರಾಣಿಗಳಲ್ಲೂ ನಾನಾ ರೀತಿಯ ಆಧಾರ ರಚನೆ ಇರುವುದು. ಕೆಳದರ್ಜೆಯ ಪ್ರಾಣಿಗಳಲ್ಲಿ ಸರಳ ಕವಚ ಅಥವಾ ಸೂಜಿಯಂತೆ ಇರಬಹುದು. ಆದರೆ ಮುಂದುವರೆದ ಪ್ರಾಣಿಗಳಲ್ಲಿ ಆಯಾಯ ಭಾಗಗಳಿಗೆ ತಕ್ಕಂತೆ ನಿರ್ದಿಷ್ಟ ಅಸ್ಥಿಪಂಜರ ಆಸರೆಯಾಗಿದೆ. ಆದಿ ಜೀವಿಗಳ ವಿಭಿನ್ನ ರಕ್ಷಾಕವಚಗಳನ್ನು ಮೂಲತಃ ಆಧಾರ ಕ್ರಿಯೆ ಇಲ್ಲದಿದ್ದರೂ ಸಾಮಾನ್ಯವಾಗಿ ಅಸ್ಥಿಪಂಜರವೆನ್ನುವುದು ರೂಢಿಯಾಗಿದೆ. ರೇಡಿಯೋಲೇರಿಯನ್‍ಗಳಲ್ಲಿ ಸಿಲಿಕಾವಸ್ತುವಿನಿಂದಾದ ದಂಡ, ಮುಳ್ಳುಗಳು, ಚಿಪ್ಪುಗಳು ಆಕರ್ಷಕವಲ್ಲದೆ ವೈವಿಧ್ಯಮಯವಾಗಿವೆ. ಫೊರಾಮಿನಿಫೆರಗಳಲ್ಲಿ ಸುಣ್ಣವಸ್ತುವಿನಿಂದಾದ ಶರೀರದ ಮೇಲೆ ಪೆಟ್ಟಿಯಂತೆ ರಕ್ಷಾಕವಚಗಳಾಗಿವೆ. ಕೆಲವು ಮಿಥ್ಯಾಪಾದಿಗಳಲ್ಲಿ ಖೈಟಿನ್ ವಸ್ತುವಿನ ಕವಚಗಳಿರಬಹುದು. ನೀರಿನಲ್ಲಿ ಸುಣ್ಣ ವಸ್ತುವಾದ ಕ್ಯಾಲ್ಸಿಯಂ ಕಾರ್ಬೋನೇಟು ಮತ್ತು ಭೂಮಿಯಲ್ಲಿ ಸಿಲಿಕಾ ಅಸ್ಥಿಪಂಜರಕ್ಕೆ ಕಚ್ಚಾವಸ್ತುಗಳಾಗಿ ಹೇರಳವಾಗಿ ದೊರೆಯುತ್ತವೆ. ಕೈಟಿನ್ ಎಂಬುದು ಸೆಲ್ಯೂಲೋಸ್ ರೀತಿಯ ಹೆಚ್ಚು ಅಣು ತೂಕವಿರುವ ಬಹುಸಕ್ಕರೆ. ಕೈಟಿನ್ ಅನ್ನು ಜೀವಿಗಳು ಸಂಶ್ಲೇಷಿಸಿ ಕೊಳ್ಳಬೇಕು. ನಾನ್‍ಕಾರ್ಡೇಟುಗಳಲ್ಲಿ ಕೈಟಿನ್ ಪದಾರ್ಥವಿದೆ. ಪ್ಲಾಸ್ಟಿಕ್ ರೀತಿಯಲ್ಲಿ ಕವಲೊಡೆಯದ ಸಮಾನ ಸರಳಗಳಲ್ಲಿ ಮೂಲ ಮಾನೋಮರ್‌ಗಳು ಕೂಡಿ ರಚಿತವಾದ ಕೈಟಿನ್ ವಸ್ತುವಿಗೆ ಉಕ್ಕಿಗಿಂತಲೂ ಬಲಿಷ್ಠವಾದ ದೃಢತೆ ಇದೆ.

ಪ್ರಾಣಿಗಳ ಬೃಹತ್ ಗುಂಪಾದ ಸಂಧಿಪದಿಗಳಲ್ಲಿ ಕೈಟಿನ್ ವಸ್ತುವಿನಿಂದಾದ ಒಳಾಸ್ಥಿ ಮತ್ತು ಹೊರಾಸ್ಥಿಗಳಿವೆ. ಗಟ್ಟಿಯಾದ ಹೊರಮೈ, ಕೀಲುಗಳಿಂದಾದ ಕಾಲು ಮತ್ತು ಶರೀರ ನೀರನ್ನು ಎಣ್ಣೆಯಂತೆ ಸೇರಿಸವು. ಈ ವ್ಯವಸ್ಥೆ ಸುಲಭ ಚಲನೆಗೆ ಅವಕಾಶ ನೀಡಿದೆ. ಇದರಿಂದಲೇ ಸಂಧಿಪದಿಗಳು ಸಂಖ್ಯಾ ಬಾಹುಳ್ಯವಲ್ಲದೆ ವಿಶಾಲ ವ್ಯಾಪ್ತಿಯನ್ನು ಪಡೆದಿವೆ. ಸಂಧಿಪದಿಗಳ ಕೈಟಿನ್ ಕವಚವನ್ನು ಚರ್ಮದ ಮೇಲೆ, ಅನ್ನನಾಳ, ವಿಸರ್ಜನ ನಾಳಗಳು, ಟ್ರೇಖಿಯಾಗಳಲ್ಲೂ ಗಮನಿಸಬಹುದು. ಅಲ್ಲದೆ ಮೃದುವಾದ ಒಳಾಂಗಗಳು ಗಟ್ಟಿಯಾದ ಚಿಪ್ಪಿನಂತಹ ಚರ್ಮದಿಂದ ರಕ್ಷಿಸಲ್ಪಟ್ಟಿವೆ. ಈ ಪ್ರಾಣಿಗಳು ಬೆಳೆದಾಗ ಹೊರ ಭಾಗದ ಚರ್ಮವನ್ನು ಪೊರೆ ಬಿಡುವುದರ ಮೂಲಕ ಕಳಚಿ, ಬೆಳೆವಣಿಗೆಗೆ ನೆರವಾಗುತ್ತದೆ. ತನ್ಮೂಲಕ ಆಕಾರ ಮತ್ತು ಗಾತ್ರ ಬದಲಾವಣೆ ಸಾಧ್ಯ.

ಬಹುತೇಕ ಸ್ಪಂಜು ಪ್ರಾಣಿಗಳಲ್ಲಿ ಮುಳ್ಳಿನಂತಹ ಸುಣ್ಣ ಅಥವಾ ಸಿಲಿಕಾ ವಸ್ತುಗಳ ಸ್ಪಿಕ್ಯೂಲ್‌ಗಳೆಂಬ ಅಸ್ತಿಪಂಜರವಿದೆ. ಇವುಗಳ ರಚನೆ, ಆಕಾರ, ಗಾತ್ರ. ಬೆಳವಣಿಗೆಯ ರೀತಿ ಸ್ಪಂಜು ಪ್ರಾಣಿಗಳ ವರ್ಗೀಕರಣಕ್ಕೆ ಅನುಕೂಲ. ಇವುಗಳನ್ನು ಸ್ಪಂಜು ಎಳೆಗಳು ಹೆಣೆದಿರುತ್ತವೆ. ಎಲ್ಲಾ ವರ್ಗದ ಕುಟುಕುಕಣವಂತಗಳಲ್ಲಿ, ಅದರಲ್ಲೂ ಮುಖ್ಯವಾಗಿ ಆಂಥೋಜೋವಾಗಳಲ್ಲಿ ಸುಣ್ಣ ವಸ್ತುವುಳ್ಳ ಹೊರಾಸ್ಥಿ – ಹವಳವನ್ನು ಅಸ್ಥಿ ಪಂಜರವಾಗಿ ಪಡೆದಿವೆ. ಹವಳ ಸ್ರವಿಕಾಕ್ರಿಯೆ ಸಾಗರಗಳನ್ನು ಭೂಮಿಯಾಗಿಸುವುದರಲ್ಲಿ ಪ್ರಮುಖವಾದುದು (ಹವಳದ ದಿಬ್ಬ). ಹುಳುಗಳಲ್ಲಿ ಪ್ರೌಢಜೀವಿಗಳು ಅಸ್ಥಿಪಂಜರವನ್ನು ಸಾಮಾನ್ಯವಾಗಿ ಪಡೆದಿರಲಾರವು. ಆದರೂ ಲಾರ್ವಗಳು ಚಿಪ್ಪಿನಂತಹ ವಸ್ತುಗಳನ್ನು ರಕ್ಷಾಕವಚವಾಗಿ ಪಡೆದಿರುತ್ತವೆ. ಮೃದ್ವಂಗಿಗಳ ಚಿಪ್ಪು ಸುಣ್ಣವಸ್ತುವಿನಿಂದಾದುವು. ಮ್ಯಾಂಟಲ್‌ನ ಹೊರಪೊರೆ ಕೊಳವೆಯಾಕಾರದ, ಚಪ್ಪಲಿಯಾಕಾರದ ಒಂದು ಅಥವಾ ಎರಡು ಚಿಪ್ಪುಗಳನ್ನು ಸ್ರವಿಸುವುದು. ಸೆಪಿಯಾದ ಚಿಪ್ಪು ಒಳಗಿದ್ದು ಸಮುದ್ರದ ನೊರೆ ಎಂದು ಪ್ರಸಿದ್ಧವಾಗಿದೆ. ಕಪ್ಪೆಚಿಪ್ಪುಗಳಲ್ಲಿ ಕೀಲುಗಳಿದ್ದರೆ, ನಾಟಿಲಸ್ ಚಿಪ್ಪಿನಲ್ಲಿ ಗೂಡುಗಳಿರುತ್ತವೆ.

ಕಂಟಕಚರ್ಮಿಗಳಲ್ಲಿ ಸುಣ್ಣವಸ್ತುವಿನಿಂದಾದ ಚಿಪ್ಪುಗಳು ಅಥವಾ ಮುಳ್ಳುಗಳು ಮೈಮೇಲಿವೆ. ಅಲ್ಲದೆ ಕಶೇರುಕಗಳ ಒಳಾಸ್ಥಿಗೆ ಸಮಾನಾದ ಆಸಿಕಲ್‌ಗಳೆಂಬ ರಚನೆಗಳೂ ಇವುಗಳಲ್ಲಿವೆ.

ಆದಿಕಾರ್ಡೇಟುಗಳಲ್ಲಿ ಸರಳವಾದ ನೋಟೊಕಾರ್ಡ್ ಎಂಬ ಸುಣ್ಣವಸ್ತುವಿನಿಂದ ರಚಿತವಾದ ಒಳಾಸ್ಥಿಯಿದೆ. ಅನುಮಾನಾಸ್ಪದ ರೀತಿಯ ಬಕಲ್ ಡೈವರ್ಟಿಕ್ಯುಲಮ್ ಎಂಬ ರಚನೆ ನೋಟೊಕಾರ್ಡ್ ಎಂದು ಪರಿಗಣಿಸಿದರೂ ಬೆಲನೋಗ್ಲಾಸಸ್‌ನಲ್ಲಿ ಇದ್ದೂ ಇಲ್ಲದಂತಿದೆ. ಆಂಫಿಯಾಕ್ಸಸ್‌ನಲ್ಲಿ ತಲೆಯಿಂದ ಬಾಲದವರೆಗೆ ಹಬ್ಬಿದ್ದರೆ, ಅಸಿಡಿಯ ಗುಂಪಿನಲ್ಲಿ ಕೇವಲ ಲಾರ್ವದ ಬಾಲ ಭಾಗದಲ್ಲಿ ಮಾತ್ರ ಕಂಡು ಬರುವುದು.

ಕಶೇರುಕಗಳ ಅಸ್ಥಿಪಂಜರ:– ಅತಿ ಜಯಶೀಲಿ ಗುಂಪುಗಳಲ್ಲಿ ಒಂದಾದ ಕಶೇರುಕಗಳಲ್ಲಿ ಬೆಳೆಯಬಲ್ಲ ಮತ್ತು ಬದಲಾಗಬಲ್ಲ ಒಳಾಸ್ಥಿಪಂಜರವನ್ನು ಗಮನಿಸುತ್ತೇವೆ. ಅಲ್ಲದೆ ಮೈಮೇಲೆ ಹುರುಪೆ, ಪುಕ್ಕ, ಕೂದಲು, ಉಗುರು, ಗೊರಸು, ಕೊಂಬು ಮುಂತಾದ ವೈವಿಧ್ಯಮಯ ಹೊರಾಸ್ಥಿ ರಚನೆಗಳೂ ಇವೆ. ಮೃದ್ವಸ್ಥಿಮೀನುಗಳ ಇಡೀ ಅಸ್ಥಿ ಪಂಜರ, ಕಿವಿಯ ಆಲೆ, ಶ್ವಾಸನಾಳ, ಮೂಳೆಗಳ ತುದಿಯಲ್ಲಿ ಮೃದ್ವಸ್ಥಿ ಇದೆ. ಇದರ ಖಾಂಡ್ರಿನ್ ಮಾತೃಕ ಗಾಜಿನಂತಿರುವ ಹಯಲೈನ್, ದಾರದಂತಿರುವ ಎಳೆಗಳು, ಸ್ಥಿತಿ ಮೂಳೆಗಳ ತುದಿಗಳು ಮತ್ತು ಕೆಲವು ವಿಶೇಷ ಭಾಗಗಳು (ಉದಾ: ಕಿವಿಯ ಆಲೆ) ಬಿಟ್ಟರೆ ಇಡೀ ಅಸ್ಥಿಪಂಜರ ಮೂಳೆಯಿಂದ ರಚಿತವಾಗಿರುವುದು. ಇದರ ಮಾತೃಕ ಸುಣ್ಣವಸ್ತುವಿನಿಂದ ಗಟ್ಟಿಯಾಗಿದೆ. ಇದು ಸಡಿಲವಾಗಿದ್ದು ಸ್ಪಂಜು ಮೂಳೆಯಾಗಿ ಒತ್ತಾಗಿದ್ದು ಒತ್ತುಮೂಳೆ ರೂಪುಗೊಂಡಿರುವುದು. ಮೂಳೆ ಹ್ಯಾವರ್ಷಿಯನ್ ಮಂಡಲಗಳೆಂಬ ಮೂಲ ರಚನೆಗಳನ್ನು ಪಡೆದಿದೆ. ಇಂತಹ ಮಂಡಲ ವರ್ತುಲಾಕಾರದ ಲ್ಯಾಮೆಲ್ಲಗಳನ್ನೂ, ಒಳಭಾಗದ ಹ್ಯಾವರ್ಷಿಯನ್ ನಾಳವನ್ನೂ, ಮೂಳೆಕೋಶಗಳೂ, ಕೆನಾಲಿಕ್ಯುಲೈಗಳನ್ನೂ ಪಡೆದಿರುವುದು. ಒಂದು ಮಾದರಿ ಮೂಳೆ ಟೊಳ್ಳಾಗಿದ್ದು ಎರಡು ಕಡೆಗಳಲ್ಲಿ ಎಪಿಫೈಸಿಸ್ ಎಂಬ ಉಬ್ಬುಗಳಿಂದಾಗಿರುವುದು. ಮೃದ್ವಸ್ಥಿಯಿಂದಾದ ಈ ಉಬ್ಬುಗಳು ಮೂಳೆಗಳು ಸವೆಯದಂತೆ ನೋಡಿಕೊಳ್ಳುವುದಲ್ಲದೆ ಬೆಳವಣಿಗೆಗೆ ಮತ್ತು ಚಲನೆಗೆ ಅವಕಾಶ ನೀಡುತ್ತವೆ. ಎಪಿಫೈಸಿಸ್‌ನ ಮೃದ್ವಸ್ಥಿಯ ಕೆಳಗೆ ಸ್ಪಂಜು ಮೂಳೆ ಇದ್ದು ಅದರ ಮುಂದೆ ಒತ್ತು ಮೂಳೆ ಇರುವುದು. ಟೊಳ್ಳು ಭಾಗ ಒತ್ತು ಮೂಳೆಯಿಂದಾವೃತವಾಗಿದ್ದು ಮೆಡುಲ್ಲರಿ ನಾಳ ಎನಿಸಿದೆ. ಈ ನಾಳದಲ್ಲಿ ಕೆಂಪು ರಕ್ತಕಣ ಉತ್ಪಾದಕ, ಅನೇಕ ವಸ್ತುಗಳಿಂದಾದ ಮಜ್ಜ ಅಥವಾ ಮ್ಯಾರೋ ಎಂಬ ವಸ್ತು ಇದೆ. ಇಡೀ ಮೂಳೆಯನ್ನು ಸುತ್ತುವರೆದಿರುವ ಪೊರೆಗೆ ಪೆರಿಆಸ್ಟಿಯಮ್ ಎಂದು ಹೆಸರು.

ಭ್ರೂಣಗಳಲ್ಲಿ ಅಸ್ಥಿಕೋಶಗಳು ಕ್ರಮವಾಗಿ ನೋಟೊಕಾರ್ಡ್, ಮೃದ್ವಸ್ಥಿ ಮೂಳೆ ಆಗಿ ಬೆಳೆಯುತ್ತವೆ. ಮೃದ್ವಸ್ಥಿ ರೂಪದ ಭ್ರೂಣ ಮೂಳೆ ಕ್ರಮೇಣ ಬೆಳೆದು ಗಟ್ಟಿಯಾಗುವುದು. ಮೃದ್ವಸ್ಥಿಯಲ್ಲಿ ಮೂಳೆಯಾಗುವ ಭಾಗವನ್ನು ಡಯಫೈಸಿಸ್ ಎನ್ನುವರು. ಇಲ್ಲಿ ಹೆಚ್ಚು ಸುಣ್ಣವಸ್ತು ಸೇರಿ ವಿಶಾಲವಾಗುವುದು. ಮಧ್ಯದಲ್ಲಿ ಸ್ವಲ್ಪ ಭಾಗ ಖಾಲಿಯಾಗಿ ಮಜ್ಜ ಪಡೆದ ಮೆಡುಲ್ಲರಿ ನಾಳ ಆಗುವುದು. ಭ್ರೂಣದಲ್ಲಿ ನಡೆಯುವ ಈ ಕ್ರಿಯೆ ಪ್ರೌಢಜೀವಿಯಲ್ಲೂ ಮುಂದುವರೆಯುವುದು. ಆದರೆ ಪ್ರೌಢ ಜೀವಿಯಲ್ಲಿ ಎಪಿಫೈಸಿಸ್ ಭಾಗದಲ್ಲಿ ಬೆಳವಣಿಗೆ ಉಂಟಾಗುವುದು. ಮೃದ್ವಸ್ಥಿಯು ಮೂಳೆ ಆಗುವುದರಿಂದ ಅಂತಹ ಮೂಳೆಗಳಿಗೆ ಮೃದ್ವಸ್ಥಿ ಮೂಳೆ ಅಥವಾ ಬದಲಾವಣೆ ಮೂಳೆ ಎನ್ನಲಾಗುವುದು. ಆದರೆ ತಲೆ, ಭುಜಕಟ್ಟು, ಸೊಂಟಕಟ್ಟಿನ ಕೆಲವು ಮೂಳೆಗಳು ಚರ್ಮಭಾಗದಿಂದ ಬೆಳೆಯುತ್ತವೆ. ಇವುಗಳೆ ಪಟಲ ಮೂಳೆ ಅಥವಾ ಸಹಯೋಗಿ ಮೂಳೆಗಳು ಒಟ್ಟಾಗಿ ಒಂದು ಪ್ರೌಢ ಕಶೇರುಕದ ಅಸ್ಥಿಪಂಜರ ಮೂರು ಗುಂಪಾಗಿದೆ;

1) ತಲೆ ಬುರುಡೆ ಮತ್ತು ಕಶೇರುಕ ಸ್ಥಂಭಗಳಿಂದ ಕೂಡಿದ ಅಕ್ಷ ಅಸ್ಥಿಪಂಜರ

2) ದವಡೆಗಳು, ಶ್ವಾಸನಾಳ, ಧ್ವನಿಪೆಟ್ಟಿಗೆ, ಗಂಟಲಿನ ಮೂಳೆ, ಸಸ್ಪೆನ್ಸೋರಿಯಂನಿಂದಾದ ದವಡೆ ಅಸ್ಥಿ

3) ಕೈಕಾಲು, ಭುಜಾಸ್ಥಿ, ಕಟ್ಯಾಸ್ಥಿ ಮೂಳೆಗಳ ಪಾರ್ಶ್ವ ಅಸ್ಥಿಪಂಜರ.

ಮೀನಿನಿಂದ ಮಾನವನವರೆಗೆ ಆಯಾಯ ಸ್ಥಿತಿಗನುಗುಣವಾಗಿ ಅಸ್ಥಿಪಂಜರ ಸಾಕಷ್ಟು ಬದಲಾವಣೆಗೆ ಒಳಗಾಗಿದೆ. ಮೀನುಗಳ ಕಿವಿರಾಸ್ಥಿ, ದವಡೆ, ಶ್ವಾಸನಾಳ ಮೂಳೆಗಳಾಗಿರಬಹುದು. ಈಜು ರೆಕ್ಕೆಗಳ ಅಸ್ಥಿಪಂಜರ ಬದಲಾಗಿ ಪಂಚಾಂಗುಲಿ ಚಲನಾಂಗದ ಅಸ್ಥಿಪಂಜರ ಆಗಿರುವುದು; ಹಾಗೆಯೇ ನರಗಳಿಗಾಗಿ ನಾನಾ ರೀತಿಯ ರಂಧ್ರಗಳು, ಸ್ನಾಯುಗಳಿಗಾಗಿ ತಗ್ಗುಗಳೂ ಬೆಳೆದಿವೆ. ಒಂದು ಮೂಳೆ ಮತ್ತೊಂದು ಮೂಳೆಗೆ ಸೇರಲು ರಚಿತವಾದ ಉಬ್ಬುಗಳು ಕಾಂಡೈಲ್‌ಗಳೆಂದೂ, ಮೃದ್ವಸ್ಥಿ ಮೂಲಕ ಮೂಳೆಗಳು ಬೆಸೆದುಕೊಂಡಿರುವುದಕ್ಕೆ ಸಿಂಫೈಸಿಸ್ (ಉದಾ: ಪ್ಯೂಬಿಕ್ ಸಿಂಫೈಸಿಸ್) ಎಂದೂ, ಹೊಲಿಗೆ ಅಥವಾ ಸಂದುಗಳ ರೂಪದಲ್ಲಿ ಮೂಳೆಗಳು ಸೇರಿರುವುದಕ್ಕೆ

(ಉದಾ: ತಲೆಯಮೂಳೆಗಳು) ಸೂಚರ್‌ಗಳೆಂದೂ ಹೆಸರು. ಇಡೀ ಮೂಳೆಮಂಡಲದ ಅಧ್ಯಯನ ಆಸ್ಟಿಯಾಲಜಿ (ಮೂಳೆ ವಿಜ್ಞಾನ).




ಬೆನ್ನೆಲುಬಿನ ಕಂಬದ ಮೂರು ನೋಟಗಳು

ಅಕ್ಷ ಅಸ್ಥಿಪಂಜರ:– ಶರೀರ ಮಧ್ಯದ ಅಕ್ಷದಲ್ಲಿ ಬರುವ ಅಸ್ಥಿಪಂಜರ ಅಕ್ಷ ಅಸ್ಥಿಪಂಜರ. ನೋಟೊಕಾರ್ಡ್ ವೃದ್ಧಿಯಾಗಿ ತಲೆಬುರುಡೆ ಮತ್ತು ಕಶೇರುಸ್ತಂಭ ಆಗಿದೆ. ಕಾರ್ಡೇಟುಗಳ ಪ್ರಮುಖ ಲಕ್ಷಣಗಳಲ್ಲಿ ಒಂದಾದ ನೋಟೊಕಾರ್ಡ್ ಆದಿಕಾರ್ಡೇಟುಗಳಲ್ಲಿ ಜೀವನ ಪೂರ್ತಿ ಉಳಿದು ಪ್ರಮುಖ ಆಸರೆಯಾಗಿದೆ. ಆದರೆ ಕಶೇರುಕಗಳ ಪ್ರೌಢಜೀವಿಗಳಲ್ಲಿ ಮೃದ್ವಸ್ಥಿ ಅಂಶ ಕಶೇರುಮಣಿಗಳ ಮೃದ್ವಸ್ಥಿ ಪಟ್ಟಿಗಳಾಗಿ ಮಾತ್ರ ಉಳಿಯುವುದು.

ತಲೆಬುರುಡೆ:– ಕಶೇರುಕದ ತಲೆಭಾಗದ ಆಸರೆ; ಅಕ್ಷ ಅಸ್ಥಿಪಂಜರದ ಮೊದಲ ಭಾಗವೇ ತಲೆಬುರುಡೆ. ಇದು ಮೆದುಳಿಗೆ ಪೆಟ್ಟಿಗೆಯಾಗಿ, ದವಡೆಗಳಿಗೆ ಆಸರೆಯಾಗಿ, ಕಿವಿ, ಕಣ್ಣು ಮೂಗು ಮುಂತಾದ ಜ್ಞಾನೇಂದ್ರಿಯಗಳಿಗೆ ರಕ್ಷಕ ಬಟ್ಟಲುಗಳಾಗಿ ಕಾರ್ಯನಿರ್ವಹಿಸುವುದು. ಪಕ್ಕಗಳಲ್ಲಿ ಜೋಡಿಮೂಳೆಗಳಿಂದ ತಲೆಬುರುಡೆ ರಚಿತವಾಗಿದೆ.

ದುಂಡುಬಾಯಿಯ, ದವಡೆರಹಿತ ಸೈಕ್ಲೋಸ್ಟೋಮುಗಳಲ್ಲಿ, ಮೃದ್ವಸ್ಥಿ ಮೀನುಗಳಾದ ಎಲಾಸ್ಮೊಬ್ರಾಂಖೈಗಳಲ್ಲಿ ಕಾಂಡ್ರೊಕ್ರೇನಿಯಂ ಎಂಬ ಪೆಟ್ಟಿಗೆಯಾಗಿರುವುದು. ಪ್ರಿಕಾರ್ಡಲ್ಸ್ ಮೂಗು,ಕಣ್ಣು, ಕಿವಿಗಳ ಬಟ್ಟಲುಗಳಾಗಿ ಆರಂಭಗೊಳ್ಳುವುದು. ಕ್ರಮೇಣ ಮೆದುಳನ್ನು ಆವರಿಸದಂತೆ ಬೆಳೆಯುವುದು. ಮೆದುಳುಬಳ್ಳಿಗೆ ಹಿಂಭಾಗದಲ್ಲಿ ಫೊರಾಮನ್ ಮ್ಯಾಗ್ನಮ್ ಎಂಬ ದೊಡ್ಡ ರಂಧ್ರವನ್ನು ಬಿಟ್ಟಿರುವುದು. ಇದರ ಬುಡದಲ್ಲಿ ಕಶೇರುಸ್ತಂಭಕ್ಕೆ ಸೇರಲು ಒಂದು ಅಥವಾ ಎರಡು ಆಕ್ಸಿಪಿಟಲ್ ಕಾಂಡೈಲ್‌ಗಳನ್ನು ಪಡೆದಿರುವುದು.

ಉನ್ನತ ಕಾರ್ಡೇಟುಗಳಲ್ಲಿ ಒಳಭಾಗದಲ್ಲಿ ಮೃದ್ವಸ್ಥಿ ಮೂಳೆಗಳೂ, ಹೊರಭಾಗಕ್ಕೆ ಪಟಲ ಮೂಳೆಗಳೂ ಬೆಳದೂ ಒಂದಕ್ಕೊಂದು ಬೆಸೆದುಕೊಂಡಿರುತ್ತವೆ. ಮೃದ್ವಸ್ಥಿ ಮೀನುಗಳಲ್ಲಿ ಸಮಗ್ರವಾದ ಪೆಟ್ಟಿಗೆಯ ರೂಪದಲ್ಲಿರುವ ತಲೆಬುರುಡೆ, ಮೂಳೆ ಮೀನುಗಳಲ್ಲಿ ಹತ್ತಾರು ಮೂಳೆಗಳನ್ನು ಬೆಳೆಸಿಕೊಂಡಿರುವುದು.

ದ್ವಿಚರಿಗಳ ತಲೆಬುರುಡೆಯಲ್ಲಿ ಮಧ್ಯದ ಮೆದುಳು ಪೆಟ್ಟಿಗೆ, ಜ್ಞಾನೇಂದ್ರಿಯ ಬಟ್ಟಲುಗಳು ಮತ್ತು ದವಡೆ ಭಾಗಗಳನ್ನು ಗುರುತಿಸಬಹುದು. ಬಾಯಂಗಳದ ಮಧ್ಯದ ಮೇಲ್ಛಾವಣಿ ಪ್ಯಾರಾಸ್ಫಿನಾಯ್ಡ್ ಎಂಬ ಮೂಳೆಯಿಂದಾಗಿದೆ. ಇದರ ಮೇಲ್ಭಾಗ ಫ್ರಾಂಟೋಪೆರೈಟಲ್ಸ್ ಎಂಬ ಕೂಡು ಮೂಳೆಯಿಂದ ರಚಿತವಾಗಿದೆ. ಪಕ್ಕದಲ್ಲಿ ಸ್ಫಿನೆತ್ಮಾಯ್ಡ್, ಮುಂಭಾಗದಲ್ಲಿ ನೇಸಲ್ಸ್, ಹಿಂಭಾಗದಲ್ಲಿ ಎಕ್ಸಾಕ್ಸಿಪಿಟಲ್ ಮೂಳೆಗಳು ಒಟ್ಟಾಗಿ ನ್ಯೂರೋಕ್ರೇನಿಯಂ ಅಥವಾ ಮೆದುಳುಪೆಟ್ಟಿಗೆ ಎನಿಸಿಕೊಂಡಿವೆ. ನೇಸಲ್ಸ್ ಮೂಳೆಗಳ ಕೆಳಗೆ ವೋಮರ್ ಮೂಳೆಗಳೂ, ಪಕ್ಕಗಳಲ್ಲಿ ಪ್ಯಾಲಟೈನ್ ಮೂಳೆಗಳೂ ಸೇರಿವೆ. ಆರಂಭದಲ್ಲಿ ಮೃದ್ವಸ್ಥಿಯಾಗಿದ್ದ ದವಡೆ ಪ್ರಿಮ್ಯಾಕ್ಸಿಲ್ಲಾ ಮತ್ತು ಮ್ಯಾಕ್ಸಿಲ್ಲಾ ಎಂಬ ಜೋಡಿ ಮೂಳೆಗಳನ್ನು ಇಕ್ಕೆಡೆಗಳಲ್ಲಿ ಪಡೆದಿದೆ. ಮುಂಭಾಗದಲ್ಲಿ ಪ್ಯಾಲಟೈನ್ ಮೆದುಳುಪೆಟ್ಟಿಗೆಯನ್ನು ದವಡೆಗೆ ಸೇರಿಸುವಂತೆ ಹಿಂಭಾಗದ ಮೇಲ್ಗಡೆ T ಆಕಾರದ ಸ್ಕ್ವಾಮೋಸಲ್ ಮೂಲಕವೂ, ಕೆಳಗಡೆ ಟೆರಿಗಾಯ್ಡ್ ಮೂಲಕವೂ ಸೇರಿಸಿರುವುದು. ತಲೆಯಲ್ಲಿ ಕಣ್ಣುಗಳಿಗೆ ಎರಡು ದೊಡ್ಡ ಖಾಲಿಜಾಗಗಳಿವೆ. ಹಾಗೆಯೇ ಮೂಗಿನ ರಂಧ್ರಗಳಿಗೆ ಸೇರಿದಂತೆ ಘ್ರಾಣೇಂದ್ರಿಯ ಬಟ್ಟಲು ನೇಸಲ್ ಮೂಳೆಗಳ ಕೆಳಗಿವೆ. ಫ್ರಾಂಟೋಪೆರೈಟಲ್, ಸ್ಕ್ವಾಮೋಸಲ್, ಎಕ್ಸಾಕ್ಸಿಪಿಟಲ್‌ಗಳ ನಡುವೆ, ಕಿವಿಗೆ ತಕ್ಕ ಪ್ರೊಆಟಿಕ್ ಮೂಳೆಗಳಿವೆ. ಕಪ್ಪೆಯಲ್ಲಿ ಎತ್ಮಾಯ್ಡ್, ಪ್ಯಾರಾಸ್ಫೀನಾಯ್ಡ್, ಸ್ಕ್ವಾಮೊಸಲ್, ಎಕ್ಸಾಕ್ಸಿಪಿಟಲ್, ಮ್ಯಾಕ್ಸಿಲ್ಲಾ ಮೃದ್ವಸ್ಥಿ ಮೂಳೆಗಳಾದರೆ ಉಳಿದವುಗಳು ಪಟಲ ಮೂಳೆಗಳು.

ಸರೀಸೃಪದ ತಲೆಬುರುಡೆಯಲ್ಲಿ ಅಗಿಯಲು ನೆರವಾಗುವಂತೆ ತಗ್ಗುಗಳಿವೆ. ಅವುಗಳನ್ನು ಕಮಾನು ಅಥವಾ ಆರ್ಕೇಡ್‌ಗಳೆಂದು ಕರೆಯಲಾಗಿದೆ. ಅನೇಕಕಡೆ ಮೂಳೆಗಳು ಒತ್ತಲ್ಪಟ್ಟು ಸ್ನಾಯುಗಳು ಅಧಿಕವಾಗಿ ಕೇವಲ ಪಟ್ಟಿಯಂತಹ ಆರ್ಕೇಡುಗಳು, ಅವುಗಳನಡುವೆ ಉಂಟಾದ ಫಾಸ್ಸಾ ಅಥವಾ ರಂಧ್ರಗಳನ್ನು ಗಮನಿಸಬಹುದು. ಇದರ ಆಧಾರದ ಮೇಲೆ ಅನಾಪ್ಸಿಡ್, ಪಾರಾಪ್ಸಿಡ್, ಸೈನಾಪ್ಸಿಡ್, ಡಯಾಪ್ಸಿಡ್ ತಲೆಬುರುಡೆಗಳನ್ನು ಗುರುತಿಸುತ್ತಾರೆ.

ಹಗುರವಾದ ಪಕ್ಷಿಯ ತಲೆಬುರುಡೆಯ ಮೂಳೆಗಳು ಒಟ್ಟಾಗಿ ಕೂಡಿಕೊಂಡಂತಿವೆ. ಅಲ್ಲದೆ ದವಡೆಗಳು ಕೊಕ್ಕುಗಳಾಗಿ ಮುಂಚಾಚಿವೆ. ಹಲ್ಲುಗಳಿಲ್ಲದ ಹಕ್ಕಿಯ ತಲೆಬುರುಡೆ ಹಲವಾರು ದೃಷ್ಟಿಗಳಿಂದ ವಿಶಿಷ್ಟವಾದುದು.

ದಪ್ಪಕಣ್ಣು, ಕಿವಿ, ಮೂಗು, ಹಲ್ಲುಗಳಿಗೆ ತಕ್ಕಂತೆ ಸ್ತನಿಯ ತಲೆಬುರುಡೆ ದೊಡ್ಡದಾಗಿದ್ದು ಸರಳ ಎನಿಸಿದರೂ ಕ್ರಿಯಾತ್ಮಕವಾಗಿ ಸಂಕೀರ್ಣ ರಚನೆಯಿಂದಾಗಿದೆ. ಮೆದುಳಿಗೆ ದಪ್ಪತಲೆ ಇರುವಂತೆ ಬಾಯಂಗಳದಲ್ಲಿ ಅಂಗಳು ಮೂಳೆ ಭಾಗಶಃ ಪ್ಯಾಲಟೈನ್, ವೋಮರ್, ಮ್ಯಾಕ್ಸಿಲ್ಲಾ ಮೂಳೆಗಳಿಂದಾಗಿದೆ. ಇದರಿಂದ ಶ್ವಾಸ ಮತ್ತು ಆಹಾರ ಮಾರ್ಗಗಳು ಪ್ರತ್ಯೇಕವಾಗಲು ಹಿಂಭಾಗದಲ್ಲಿ ವಿಶಾಲವಾದ ಖಾಲಿ ಜಾಗವಾಗಿದೆ. ಈ ಭಾಗಕ್ಕೆ ನಾಸಿಕರಂಧ್ರಗಳು ನೇರವಾಗಿ ತೆರೆಯುತ್ತವೆ. ಸೂಚರ್‌ಗಳಿಂದ ಕೂಡಿಕೊಂಡ ತಲೆಬುರುಡೆ ಮೂಳೆಗಳು ಮುಖಭಾಗದ ಕಣ್ಣು, ಮೂಗುಗಳಿಗೆ, ಪಕ್ಕದ ಕಿವಿಗಳಿಗೆ ರಕ್ಷಣೆ ಒದಗಿಸುತ್ತವೆ. ಅಲ್ಲದೆ ಅನೇಕ ಸೂಕ್ಷ್ಮಮೂಳೆಗಳೂ, ರಂಧ್ರಗಳೂ ಇರುವ ಸಂಕೀರ್ಣಗಳು ರಚಿತವಾಗಿದ್ದು ವಿಶಿಷ್ಟವಾಗಿದೆ. ತಲೆಬುರುಡೆಯ ಹಿಂಭಾಗದಲ್ಲಿ ಆಕ್ಸಿಪಿಟಲ್ ಸಂಕೀರ್ಣ, ಮೇಲೆ ಸ್ಫಿನಾಯ್ಡ್ ಸಂಕೀರ್ಣ, ಕೆಳಪಾರ್ಶ್ವದಲ್ಲಿ ಎತ್ಮಾಯ್ಡ್ ಸಂಕೀರ್ಣಗಳಿವೆ. ಉದಾ: ಬೇಸಿಸ್ಫೀನಾಯ್ಡ್, ಅಲಿಸ್ಫೀನಾಯ್ಡ್, ಆರ್ಬೈಟೋಸ್ಫೀನಾಯ್ಡ್ ಒಟ್ಟಾಗಿ ಸ್ಫಿನಾಯ್ಡ್ ಸಂಕೀರ್ಣ ಆಗಿರುವುದರಿಂದ ಸೆಲ್ಲಾಟರ್ಸಿಕಾ ಎಂಬ ವಿಶೇಷ ಭಾಗ ರಚಿತವಾಗಿದ್ದು ಪಿಟ್ಯೂಟರಿಗ್ರಂಥಿಯನ್ನು ರಕ್ಷಿಸುತ್ತವೆ. ಜೋಡಿಮೂಳೆಗಳಾದ ನೇಸಲ್, ಫ್ರಾಂಟಲ್, ಟೆಂಪೋರಲ್, ಪೆರೈಟಲ್, ಆಕ್ಸಿಪಿಟಲ್ ಕ್ರಮವಾಗಿ ಮೂಗು, ಹಣೆ, ಕೆನ್ನೆ, ನೆತ್ತಿ, ತಲೆಯ ಹಿಂಭಾಗವಾಗಿವೆ. ಪ್ರಿಮ್ಯಾಕ್ಸಿಲ್ಲಾ ಮತ್ತು ಮ್ಯಾಕ್ಸಿಲ್ಲಾದಿಂದಾದ ದವಡೆಯನ್ನು ಜೈಗೋಮ್ಯಾಟಿಕ್ ಕಮಾನಿನ ಮೂಲಕ ತಲೆಗೆ ಸೇರಿಸಲಾಗಿದೆ. ಸ್ಕ್ವಾಮೋಸಲ್ ಮತ್ತು ಜೂಗಲ್ ಮೂಳೆಗಳು ಕಣ್ಣುಗಳ ಕೆಳಭಾಗಕ್ಕೆ ವಿಶೇಷ ರಕ್ಷಣೆ ಕೊಡುವುದೇ ಅಲ್ಲದೆ ಅಗಿಯುವ ಸ್ನಾಯುಗಳು ಸೇರಲು ಅವಕಾಶ ಮಾಡಿಕೊಟ್ಟಿವೆ. ಅನೇಕ ಉಬ್ಬುಗಳು ಸ್ತನಿಗಳ ತಲೆಬುರುಡೆಯಲ್ಲಿವೆ. ಕೆಲವು ಕಿವಿ ಮೂಳೆಗಳನ್ನು ಒಳಗೊಂಡ ಟಿಂಪ್ಯಾನಿಕ್ ಬುಲ್ಲ, ಜೂಗಲ್ ಮತ್ತು ಮ್ಯಾಸ್ಟಾಯ್ಡ್ ಪ್ರವರ್ಧಗಳು, ಲೆಂಬಾಯ್ಡ್‌ಲ್ ಪ್ರವರ್ಧಗಳು ಸ್ನಾಯುಗಳು ಸೇರಲು ಗೂಟಗಳಂತಿದ್ದು ಅಗಿಯಲು ಸಹಕಾರಿ.

ಸು. 23 ಕ್ಕಿಂತ ಅಧಿಕ ರಂಧ್ರಗಳು ತಲೆಬುರುಡೆಯಲ್ಲಿವೆ. ಇವುಗಳ ಮೂಲಕ ನರಗಳು ಹೊರಬರಲು ಅನುಕೂಲ. ಮೆದುಳುಬಳ್ಳಿಯ ಮಾರ್ಗ ಫೊರಾಮನ್ ಮ್ಯಾಗ್ನಮ್ ಅತಿ ದೊಡ್ಡ ರಂಧ್ರ. ಟಿಂಪ್ಯಾನಿಕ್ ಬುಲ್ಲಾದೊಂದಿಗಿರುವ ಬಾಹ್ಯ ಆಡಿಟರ್ ಮೀಟಸ್ ಕಿವಿಯ ನಾಳವಾಗಿದೆ. ಇನ್ಫ್ರಾ (ಕೆಳ) ಆರ್ಬೈಟಲ್ ರಂಧ್ರ ಕಪಾಲನರ ಮಾರ್ಗಗಳಿಗೆ ಪ್ರಮುಖವಾದುದು. ಮೂಳೆಗಳಲ್ಲಿರುವ ಜಾಗಗಳನ್ನು ಸೈನಸಸ್‌ಗಳೆಂದು ಕರೆಯುವರು. ಫ್ರಾಂಟಲ್, ಎತ್ಮಾಯ್ಡ್, ಸ್ಫಿನಾಯ್ಡ್, ಮ್ಯಾಕ್ಸಿಲ್ಲರಿ ಮೂಳೆಗಳಲ್ಲಿರುವ ಇಂತಹ ಸೈನಸಸ್‌ಗಳು ನಾಸಿಕನಾಳಗಳಿಗೆ ಸೇರಿ ಶಬ್ದಾಧಿಕ್ಯಕ್ಕೆ ಸಹಕಾರಿ. ಹುಟ್ಟುವಾಗ ನೆತ್ತಿಯ ಮೂಳೆ ಬೆಳೆದಿರುವುದಿಲ್ಲ. ಈ ಭಾಗದಲ್ಲಿ ಖಾಲಿಯ ರಂಧ್ರ ಫಾಂಟನಲ್ಸ್ ಎಂಬ ಪಟಲ ಭಾಗವಾಗಿರುವುದು. ಇದು ದಪ್ಪತಲೆಯ ಮಗು ಜನನ ಮಾರ್ಗದಲ್ಲಿ ಕುಗ್ಗಿ ಹೊರಬರಲು ಅನುಕೂಲ. ಸ್ತನಿಯ ತಲೆಬುರುಡೆಯ ಮೂಳೆ ಒಂದಕ್ಕೊಂದು ಸೂಚರ್‌ಗಳೆಂಬ ಬೆಸುಗೆಗಳ ಮೂಲಕ ಸೇರಿರುತ್ತವೆ.

ದವಡೆ ಅಸ್ಥಿಪಂಜರ:– ಕಶೇರುಕಗಳ ದವಡೆಗಳು, ಕಿವಿ, ಮೂಳೆ, ಗಂಟಲು, ನಾಲಗೆ, ಶ್ವಾಸಾಂಗಗಳ ಅಸ್ಥಿಪಂಜರವನ್ನು ಒಟ್ಟಾಗಿ ದವಡೆ ಅಸ್ಥಿಪಂಜರ ಎನ್ನುವರು.

ಏಕೆಂದರೆ, ಇವುಗಳೆಲ್ಲ ಮೂಲತಃ ಕಿವಿರು ಅಸ್ಥಿಪಂಜರದಿಂದ ಬೆಳೆಯುತ್ತವೆ. ಒಟ್ಟು ಏಳು ಜೊತೆ ಕಮಾನುಗಳ ರೂಪದಲ್ಲಿ ಕಿವಿರು ಅಸ್ಥಿಪಂಜರ ಆರಂಭಗೊಳ್ಳುವುದು. ಮೊದಲನೆ ಕಮಾನು ಇಭಾಗವಾಗಿ ಮೇಲವಡೆ (ಪ್ಯಾಲಟೋಕ್ವಾಡ್ರೇಟ್) ಮತ್ತು ಕೆಳದವಡೆ




ಮಾನವನ ಎಲುಗಟ್ಟು

(ಮೆಕೆಲ್ ಮೃದ್ವಸ್ಥಿ) ಆಗುವುದು. ಎರಡನೆಯ ಕಮಾನು ಹಯೋಮ್ಯಾಂಡಿಬುಲಾರ್ ಭಾಗಶಃ ದವಡೆಗೆ, ದವಡೆಯನ್ನು ತಲೆಬುರುಡೆಗೆ ಸೇರಿಸಲು ಮತ್ತು ನಾಲಗೆಯ ಅಸ್ಥಿ ಹಯಾಯ್ಡ್ ಎಂಬ ರಚನೆಗಳಾಗುವುದು. ಉಳಿದ ಐದು ಕಮಾನುಗಳು ಮೀನುಗಳಲ್ಲಿ ಕಿವಿರು ಕಮಾನುಗಳಾಗಿದ್ದು ಮುಂದುವರೆದ ಕಶೇರುಕಗಳಲ್ಲಿ ಶ್ವಾಸನಾಳ, ಗಂಟಲಿನ ಆಸರೆಯಾಗಿ ಉಳಿಯುತ್ತವೆ. ಬಹುತೇಕ ಕಶೇರುಕಗಳಲ್ಲಿ ಪಟಲ ಮೂಳೆಗಳೊಂದಿಗೆ ತಲೆಬುರುಡೆಯಲ್ಲಿ ಮೊದಲನೆಯ ಕಿವಿರು ಕಮಾನು ಲೀನಗೊಳ್ಳುವುದು. ಸ್ತನಿಗಳಲ್ಲಿ ಸಂಪೂರ್ಣವಾಗಿ ಮಾಯವಾಗುವುದು (ಹೀರಿಕೆಯಾಗುವುದು). ಮೊದಲ ಕಿವಿರುಕಮಾನಿನ ಸ್ವಲ್ಪಭಾಗ ಕಿವಿಯ ರಿಕಾಪು ಮತ್ತು ಸುತ್ತಿಗೆ ಮೂಳೆಗಳಾಗುತ್ತವೆ. ಎರಡನೇ ಕಿವಿರುಕಮಾನಿನ ಭಾಗ ಮೂರನೆಯ ಮೂಳೆಯಾದ ಅಡಿಗಲ್ಲು ಮೂಳೆಯಾಗಿ ಭಾಗಶಃ ರೂಪುಗೊಳ್ಳುವುದು. ಎರಡನೆಯ ಕಿವಿರು ಕಮಾನು ಮತ್ತು ಮೂರನೆಯ ಕಿವಿರು ಕಮಾನುಗಳು ಸೇರಿ ನಾಲಗೆಯ ಆಸರೆ ಹಯಾಯ್ಡ್ ರಚನೆಯಾಗಿ ಬೆಳೆಯುತ್ತವೆ. ನಾಲ್ಕು ಮತ್ತು ಐದನೆ ಕಮಾನುಗಳು ಧ್ವನಿಪೆಟ್ಟಿಗೆಗೆ ಆಸರೆಯಾದರೆ, ಉಳಿದವು ಎಪಿಗ್ಲಾಟಿಸ್ ಮತ್ತು ಶ್ವಾಸನಾಳದ ಉಂಗುರ ಮೃದ್ವಸ್ಥಿಗಳಾಗಿ ಉಳಿಯುತ್ತವೆ. ಇದರಲ್ಲಿ ಎರಡನೆಯ ಕಮಾನು ಮೃದ್ವಸ್ಥಿ ಮೀನುಗಳಲ್ಲಿರುವಂತೆ ದವಡೆಗಳನ್ನು ತಲೆಬುರುಡೆಗೆ ಸೇರಿಸುವ ಸಂಯೋಜಕ ಆಗುವುದು. ಇದನ್ನು ಹಯೋಸ್ಟೈಲಿಕ್ ಸಸ್ಪೆನ್ಸೋರಿಯಂ ಎಂದು ಕರೆಯುವರು. ಕಪ್ಪೆ, ಸ್ತನಿ ಮುಂತಾದುವುಗಳಲ್ಲಿ ದವಡೆಗಳೇ ನೇರವಾಗಿ ಸೇರಿ ಆಟೋಸ್ಟೈಲಿಕ್ ಅಥವಾ ಕ್ರೇನಿಯೋಸ್ಟೈಲಿಕ್ ಸಸ್ಪೆನ್ಸೋರಿಯಂ ಎನಿಸಿಕೊಂಡಿವೆ.

ಕಶೇರುಸ್ತಂಭ:– ಬೆನ್ನು ಮೂಳೆ, ಮೃದ್ವಸ್ಥಿ ಮತ್ತು ಕಶೇರು ತುಂಡುಗಳಾದ ಕಶೇರುಮಣಿಗಳ ಜೋಡಣೆಯಿಂದ ತಲೆ ಬುರುಡೆಯಿಂದ ಬಾಲದ ತುದಿಯವರೆಗೆ ಹಬ್ಬಿರುವುದನ್ನು ಕಶೇರುಸ್ತಂಭ ಎನ್ನಲಾಗುವುದು. ಕಶೇರುಗಳಲ್ಲಿ ವಲಯರಚನೆಯನ್ನು ಉಳಿಸಿಕೊಂಡಿರುವ ಏಕೈಕ ರಚನೆ ಕಶೇರುಸ್ತಂಭ. ಇದು ಶರೀರದ ಪ್ರಧಾನ ಅಸ್ಥಿಯಾಗಿರುವುದು. ಸ್ನಾಯುಗಳ ಜೋಡಣೆಗೆ ಅನುಗುಣವಾಗಿ, ಮೆದುಳು ಬಳ್ಳಿಯನ್ನು ರಕ್ಷಿಸಿ, ಬಾಗುಚಲನೆಗೆ ಕಾರಣವಾಗಿದೆ. ಆಂಫಿಯಾಕ್ಸಸ್ ರೀತಿಯ ಆದಿಕಾರ್ಡೇಟುಗಳಲ್ಲಿ ಕೇವಲ ನೋಟೋಕಾರ್ಡ್ ಇರುವುದು. ದುಂಡುಬಾಯಿ ಸೈಕ್ಲೋಸ್ಟೋಮುಗಳಲ್ಲಿ ಆರ್ಕ್ಯುಯೇಲಿಯ ಎಂಬ ವಲಯಗಳಾಗಿರುವ ಮತ್ತು ಮೃದ್ವಸ್ಥಿ ಮೀನುಗಳಲ್ಲಿ ಮೃದ್ವಸ್ಥಿ ಕಶೇರುಮಣಿಗಳಿಂದ, ಮುಂದುವರೆದ ಕಶೇರುಕಗಳಲ್ಲಿ ಮೂಳೆಯಾದ ಕಶೇರುಸ್ತಂಭ ಗಮನಿಸುತ್ತೇವೆ. ಮೃದ್ವಸ್ಥಿ ಮೀನುಗಳಲ್ಲಿ ನೋಟೋಕಾರ್ಡ್ ಮೃದ್ವಸ್ಥಿಯೊಂದಿಗೆ ಸೆಂಟ್ರಮ್ ಎಂಬ ಕಶೇರುಮಣಿಯ ಪ್ರಧಾನ ಭಾಗವಾಗುವುದು. ಉಳಿದವುಗಳಲ್ಲಿ ಸಂಪೂರ್ಣ ಮೂಳೆ ಆಗಿ ಕಶೇರುಮಣಿಗಳ ನಡುವೆ ಸ್ವಲ್ಪ ಭಾಗ ಮಾತ್ರ ಮೃದ್ವಸ್ಥಿ ಕಂಡುಬರುವುದು.

ಕಶೇರುಸ್ತಂಭ ಅಥವಾ ಬೆನ್ಮೂಳೆಯ ಘಟಕಗಳನ್ನು ಕಶೇರುಮಣಿ ಎನ್ನುವರು. ಪ್ರತಿಯೊಂದು ಕಶೇರುಮಣಿಯೂ ಮಧ್ಯದಲ್ಲಿ ನೋಟೋಕಾರ್ಡ್ ಭಾಗವನ್ನು ಪ್ರತಿನಿಧಿಸುವ ಸೆಂಟ್ರಮ್ ಎಂಬ ಭಾಗವನ್ನು ಪಡೆದಿದೆ. ಇದರ ಮೇಲ್ಭಾಗಕ್ಕೆ ಮೆದುಳು ಬಳ್ಳಿಯನ್ನು ಆವರಿಸಲು ಎರಡೂ ಪಕ್ಕಗಳಿಂದ ನರಕಮಾನುಗಳು ಬೆಳೆದಿವೆ. ಎರಡೂ ನರಕಮಾನು ಮಧ್ಯದಲ್ಲಿ ನರಮುಳ್ಳಿಗೆ ಸೇರಿ ಅವಿಚ್ಛಿನ್ನವಾದ ನರಕೊಳವೆ ಆಗುವುದು. ಇದರಲ್ಲಿ ಮೆದುಳು ಬಳ್ಳಿ ಹುದುಗಿರುತ್ತದೆ. ಸೆಂಟ್ರಮ್‌ನಿಂದ ನರಕಮಾನುಗಳಲ್ಲದೆ ಪಾರ್ಶ್ವ ಪ್ರವರ್ಧಕಗಳಿರುತ್ತವೆ. ಇವುಗಳಿಗೆ ಸ್ನಾಯುಗಳು ಜೋಡಣೆ ಆಗಿರುತ್ತವೆ. ಒಂದು ಕಶೇರುಮಣಿ ಮತ್ತೊಂದು ಕಶೇರುಮಣಿಯೊಂದಿಗೆ ಸೇರಲು ಮುಂಭಾಗ, ಹಿಂಭಾಗ ಎರಡೂ ಕಡೆಗಳಲ್ಲಿ ಜೈಗಪೊಫೈಸಿಸ್ ಎಂಬ ರಚನೆಗಳಿರುತ್ತವೆ. ಹಿಂಭಾಗದ ಜೈಗಪೊಫೈಸಿಸ್‌ನ ಕೆಳತುದಿ ಮುಂಭಾಗದ ಜೈಗಪೊಫೈಸಿಸ್‌ನ ಮೇಲ್ತುದಿಯೊಂದಿಗೆ ಉಜ್ಜುವುದು. ಹೀಗಾಗಿ ಪ್ರತಿಯೊಂದು ಕಶೇರುಮಣಿಯಲ್ಲಿ ನಾಲ್ಕು ಸೇರಿಸುವ ಮೈಗಳಿರುತ್ತವೆ. ಇವುಗಳಲ್ಲಿ ಎರಡು ಮತ್ತೊಂದು ಕಶೇರುಮಣಿಯ ಉಳಿದೆರಡು ಮೈಗಳೊಂದಿಗೆ ಸೇರಿರುತ್ತವೆ. ಇದರಿಂದ ಬಾಗುಚಲನೆ ಸಾಧ್ಯ. ಈ ಮೂಲ ವ್ಯವಸ್ಥೆ ವಿವಿಧ ಗುಂಪುಗಳ ಪ್ರಾಣಿಗಳಲ್ಲಿ ಮತ್ತು ಒಂದೇ ಪ್ರಾಣಿಯ ವಿವಿಧ ಭಾಗಗಳಲ್ಲಿ ಮಾರ್ಪಾಡಾಗಿರುತ್ತವೆ. ಸೆಂಟ್ರಮ್‌ನ ಹೊರ ಮೈಯ ಸಮತಲದ ಆಧಾರದ ಮೇಲೆ ವಿವಿಧ ಕಶೇರುಮಣಿಗಳನ್ನು ಗುರುತಿಸಬಹುದು. ಎರಡೂ ಕಡೆಗಳಲ್ಲಿ ನಿಮ್ನವಾಗಿದ್ದರೆ ಕಶೇರುಮಣಿ ಆಂಫಿಸೀಲಸ್ ಎನಿಸುವುದು. ಮುಂಭಾಗ ನಿಮ್ನವಾಗಿರುವ ಕಶೇರುಮಣಿ ಪ್ರೋಸೀಲಸ್ ಎಂದೂ, ಹಿಂಭಾಗ ನಿಮ್ನವಾಗಿರುವುದನ್ನು ಒಫಿಸ್ತೊಸೀಲಸ್ ಎಂದೂ ಎರಡು ಕಡೆಗಳಲ್ಲಿ ಚಪ್ಪಟೆಯಾದುವನ್ನು ಆಂಫಿಪ್ಲಾಟಿಯಸ್ ಎಂದೂ, ಪಕ್ಕಗಳಲ್ಲಿ ಉಬ್ಬು ತಗ್ಗುಗಳಿರುವುದನ್ನು (ಪಕ್ಷಿಗಳು) ಹೆಟಿರೋಸೀಲಸ್ ಎಂದೂ ಹೆಸರಿಸಲಾಗಿದೆ. ಅದೇ ರೀತಿ ಕುತ್ತಿಗೆ, ಎದೆ, ಲಂಬಾರ್, ಸೊಂಟ, ಬಾಲದ ಕಶೇರುಮಣಿಗಳಲ್ಲಿ ವೈವಿಧ್ಯತೆಯನ್ನು ಗಮನಿಸುತ್ತೇವೆ.

ಕುತ್ತಿಗೆಯ ಕಶೇರುಮಣಿಗಳು ಸ್ತನಿಗಳಲ್ಲಿ ನಿರ್ದಿಷ್ಟ ಸಂಖ್ಯೆ (7) ಯಲ್ಲಿರುತ್ತವೆ. ಮೊದಲೆರಡು ತಲೆಯೊಂದಿಗೆ ಸೇರಲು ಸೂಕ್ತ ಮಾರ್ಪಾಡಾಗಿದ್ದು ಉಂಗುರದ ರೀತಿಯಲ್ಲಿವೆ. ಮೊದಲ ಕಶೇರು ಮಣಿ ಅಥವಾ ಅಟ್ಲಾಸ್ ಉಂಗುರದಂತಿದ್ದು ಎರಡು ತಗ್ಗುಗಳನ್ನು

ಪಡೆದಿರುವುದರಿಂದ ತಲೆಯ ಕಾಂಡೈಲ್‌ಗಳು ಕೂಡಲು ಸಾಧ್ಯ. ಎರಡನೆಯದು ಆಕ್ಸಿಸ್ ಕಶೇರುಮಣಿ. ಹೆಚ್ಚು ಬಲಿಷ್ಠವಾದ ಸೆಂಟ್ರಮ್ ಮತ್ತು ಗೂಟದಂತಹ ದಂತಪ್ರವರ್ಧ ಇರುವುದರಿಂದ ತಲೆಯನ್ನು ಇಕ್ಕೆಡೆಗಳಿಗೆ ಆಡಿಸಲು ಸಾಧ್ಯ. ಎದೆಯ ಕಶೇರುಮಣಿಗಳು ಕುತ್ತಿಗೆಯ ಕಶೇರುಮಣಿಗಳಿಗೆ ತದ್ವಿರುದ್ಧವಾಗಿ ಕಡಿಮೆ ಚಲನೆ ಉಳ್ಳವು. ಅಲ್ಲದೆ ಬಲಹೀನ ಸ್ನಾಯುಗಳು, ನರಮುಳ್ಳುಗಳು ಮತ್ತು ಪಕ್ಕದ ಪ್ರವರ್ಧಗಳು ತುಲನಾತ್ಮಕವಾಗಿ ಚಿಕ್ಕವು. ವಿಶೇಷವಾಗಿ ಪಕ್ಕದ ಪ್ರವರ್ಧಗಳು ಉಬ್ಬುಗಳಾಗಿದ್ದು Y ಆಕಾರದ ಪಕ್ಕೆಲುಬುಗಳ ತುದಿಗಳು ಸೇರಲು ಅನುಕೂಲ. ಹೊಟ್ಟೆಯ ಭಾಗಕ್ಕಿರುವ, ಎದೆಯ ನಂತರದ ಭಾಗ ಲಂಬಾರ್ ಕಶೇರುಮಣಿಗಳಿಂದಾಗಿದೆ. ಬಲಿಷ್ಠ ಸ್ನಾಯುಗಳು ಇರುವದರಿಂದ ಪಕ್ಕದ ಮತ್ತು ನರಪ್ರವರ್ಧಗಳು ಚೆನ್ನಾಗಿ ಬೆಳೆದಿವೆ. ಸ್ತನಿಗಳಲ್ಲಿ ಈ ಭಾಗ ಹೆಚ್ಚು ಹೊಡೆತಕ್ಕೆ ಸಿಕ್ಕಿರುವುದರಿಂದ ಜೈಗಪೋಫೈಸಿಸ್ ಉದ್ಭವಾಗಿರುತ್ತವೆ. ಸೊಂಟದ ಕಶೇರುಮಣಿಗಳು ಕೂಡಿ ಸೊಂಟ ಆಗಿರುತ್ತವೆ. ಇದು ಹಿಂಗಾಲಿನ ಕಟ್ಯಾಸ್ಥಿಯನ್ನು ಸೇರಿಸಿಕೊಂಡಿರುವುದು. ಇವು ಸೇರಿಕೊಂಡಿದ್ದರೂ ಕಶೇರುಮಣಿಗಳ ನಡುವಿನ ನರರಂಧ್ರಗಳಿಂದ ಗುರುತಿಸಬಹುದು. ಬಾಲದ ಕಶೇರು ಮಣಿಗಳ ಸಂಖ್ಯೆ ನಿರ್ದಿಷ್ಟವಾಗಿರದು. ಮನುಷ್ಯನಲ್ಲಿ ಕೇವಲ ಸೆಂಟ್ರಾಗಳನ್ನು ಪಡೆದ ಶಿಥಿಲ ಮೂಳೆ ಕಾಕ್ಸಿಕ್ಸ್ ಎಂಬ ರಚನೆ ಬಾಲದ ಮಣಿಗಳನ್ನು ಪ್ರತಿನಿಧಿಸುವುದು. ಪಕ್ಷಿಗಳಲ್ಲಿ ಕುತ್ತಿಗೆಯ ಭಾಗ ಉದ್ದವಾಗಿದ್ದು ಕಶೇರುಮಣಿಗಳು ಎದೆಯ ಭಾಗದಲ್ಲಿ, ಮುಖ್ಯವಾಗಿ ಸೊಂಟ ಭಾಗದಲ್ಲಿ ಸಿನ್‌ಸೇಕ್ರಮ್ ಕೂಡು ಮೂಳೆಯೂ ಬಾಲದಲ್ಲಿ ಪೈಗೋಸ್ಟೈಲ್ ಕೂಡು ಮೂಳೆಯೂ ಆಗಿವೆ.

ಪಕ್ಕೆಲುಬುಗಳು (ಎದೆಯ ಪೆಟ್ಟಿಗೆ): ಸರೀಸೃಪಗಳ ನಂತರ ಎದೆಯ ಕಶೇರುಮಣಿಗಳು ಮತ್ತು ಎದೆ ಮೂಳೆ ಪಕ್ಕದಲ್ಲಿ ಪಕ್ಕೆಲುಬುಗಳಿಂದ ಸೇರಿಸಲ್ಪಟ್ಟು ಎದೆಯ ಪೆಟ್ಟಿಗೆ (ಎದೆ ಗೂಡು) ರಚಿತವಾಗಿದೆ. ಇದು ಹೃದಯ, ಶ್ವಾಸಕೋಶ, ದೊಡ್ಡ ರಕ್ತನಾಳಗಳಿಗೆ ರಕ್ಷಣೆ ಒದಗಿಸುವುದು. ಹಾಗೂ ಉಸಿರಾಟದ ಚಲನೆಗೆ ಅನುಕೂಲವಾಗಿದೆ.

ಪಕ್ಕೆಲುಬು ಒಂದು ಚಪ್ಪಟೆಯಾದ, ಉದ್ದವಾದ ಬಾಗು ಮೂಳೆ. ಮೇಲೆ–ಕೆಳಗೆ ಚಲಿಸಲು ಒಂದು ಕಡೆ ತಲೆ ಮತ್ತು ಟ್ಯುಬರ್ಕಲ್ ಎಂಬ ಎರಡು ರಚನೆಗಳನ್ನು ಪಡೆದಿರುವುದು. ತಲೆಯ ಭಾಗ ಕಶೇರುಮಣಿಯ ನಡುವೆಯೂ ಟ್ಯುಬರ್ಕಲ್ ಪಕ್ಕದ ಪ್ರವರ್ಧಗಳ ನಡುವೆಯೂ ಸೇರಿರುತ್ತವೆ. ಇವುಗಳ ನಡುವಿನ ಭಾಗವೇ ಕುತ್ತಿಗೆ. ಪಕ್ಕೆಲುಬಿನ ಪ್ರಧಾನ ಭಾಗಕ್ಕೆ ಶಾಫ್ಟ್ ಎಂದು ಹೆಸರು. ಪಕ್ಕೆಲುಬುಗಳ ಬುಡಭಾಗ ಎದೆ ಮೂಳೆಗೆ ಸೇರಿರುತ್ತವೆ. ಮನುಷ್ಯನಲ್ಲಿ ಇಂತಹ 12 ಜೊತೆ ಪಕ್ಕೆಲುಬುಗಳಿವೆ. 7 ಜೊತೆ ಪಕ್ಕೆಲುಬುಗಳು ಎರಡು ಕಡೆ ಕಶೇರುಮಣಿ ಮತ್ತು ಎದೆಯ ಮೂಳೆಗೆ ಸೇರಿದ್ದು ನಿಜವಾದ ಪಕ್ಕೆಲುಬುಗಳೆನಿಸಿವೆ. ಉಳಿದ ಮೂರು ಜೊತೆ ನಿಜವಾದ ಪಕ್ಕೆಲುಬುಗಳಿಗೆ ಸೇರಿರುತ್ತವೆ. ಆದರೆ ಕೊನೆ ಎರಡು ಜೊತೆ ಎದೆಯ ಮೂಳೆಗೆ ಸೇರದೆ ಬಿಡುವಾಗಿರುವುದರಿಂದ ತೇಲು ಪಕ್ಕೆಲುಬುಗಳೆಂದು ಕರೆಯಲ್ಪಡುತ್ತವೆ. ಪಕ್ಕೆಲುಬುಗಳ ನಡುವಿನ ಅಂತರಕಾಸ್ಟಲ್ ಸ್ನಾಯುಗಳಿಂದಲೇ ಉಸಿರಾಟದ ಚಲನೆಗಳು ಸಾಧ್ಯವಾಗಿರುವುದು.

ಪ್ರತಿಯೊಂದು ಪಕ್ಕೆಲುಬು ಇಳಿಜಾರು ರೀತಿಯಲ್ಲಿ ಕೆಳಕ್ಕೆ ಹೊರ ಚಾಚಿದಂತೆ ಬಾಗಿರುವುದರಿಂದ ಎದೆಯ ಗೂಡು ಹಿಂಭಾಗಕ್ಕೆ ವಿಶಾಲವಾಗಿಯೂ ಮುಂಭಾಗಕ್ಕೆ ಕಿರಿದಾಗಿಯೂ ಇದೆ. ಎದೆ ಮೂಳೆ ಎದೆಯ ಮಧ್ಯದ ಪಟ್ಟಿಯಂತಿದೆ. ಪಕ್ಕೆಲುಬುಗಳನ್ನು ಸೇರಿಸುವ ಈ ರಚನೆ ಸ್ಟರ್ನೆಬ್ರೇ ಎಂಬ ತುಂಡುಗಳಿಂದಾಗಿದ್ದರೂ ಮನುಷ್ಯನಲ್ಲಿ ಗ್ಲಾಡಿಯೋಲಸ್ ಎಂಬ ಒಂಟಿ ರಚನೆಯಾಗಿದೆ. ಇದರಲ್ಲಿ ಹೊರ ಭಾಗಕ್ಕೆ ಮ್ಯಾನುಬ್ರಿಯಂ ಎಂದೂ ಒಳಭಾಗಕ್ಕೆ ಕ್ಸಿಫಾಯ್ಡ್ ಎಂದೂ ಹೆಸರು. ಕಪ್ಪೆಯಲ್ಲಿ ಇದನ್ನು ಮೇಲ್ಭಾಗದಿಂದ ಕ್ರಮವಾಗಿ ಎಪಿಸ್ಟರ್ನಮ್, ಓಮೊಸ್ಟರ್ನಮ್ ಮತ್ತು ಕ್ಸಿಫಿಸ್ಟರ್ನಮ್ ಎಂದು ಕರೆಯಲಾಗಿದೆ.

ಪಾರ್ಶ್ವ ಅಸ್ಥಿಪಂಜರ:– ಕಶೇರುಕಗಳ ಚಲನಾಂಗಗಳ ಅಸ್ಥಿಪಂಜರವನ್ನು ಪಾರ್ಶ್ವ ಅಸ್ಥಿಪಂಜರ ಎನ್ನುವರು. ಚಲನಾಂಗಗಳ ಅಸ್ಥಿಪಂಜರ ಕಶೇರುಸ್ತಂಭದೊಂದಿಗೆ ಭುಜಾಸ್ಥಿವಲಯದಿಂದ ಮುಂಗಾಲುಗಳಿಗೂ, ಕಟ್ಯಾಸ್ಥಿವಲಯದಿಂದ ಹಿಂಗಾಲುಗಳಿಗೂ ಸೇರಿರುತ್ತದೆ. ಇವುಗಳು ಜೋಡಿ ಮೂಳೆಗಳಿಂದಾಗಿರುತ್ತವೆ.

ಭುಜಾಸ್ಥಿ ವಲಯ ಮತ್ತು ಮುಂಗಾಲುಗಳು:– ಮೀನುಗಳಲ್ಲಿ ಭುಜಾಸ್ಥಿವಲಯ ಆರಂಭದಲ್ಲಿ U-ಆಕಾರದ ಮೃದ್ವಸ್ಥಿ ರಚನೆ. ಮುಂಭಾಗದ ಈಜುರೆಕ್ಕೆಗಳು ಇದಕ್ಕೆ ಸೇರಿದ್ದು ಸ್ಕ್ಯಾಪುಲೋಕೋರಕಾಯ್ಡ್ ಎಂದು ಕರೆಯಲಾಗಿದೆ. ಶಾರ್ಕ್‌ಮೀನುಗಳಲ್ಲಿ ಕ್ಲಾವಿಕಲ್‌ಗಳೆಂಬ ರಚನೆಗಳಿದ್ದು ತಲೆಬುರುಡೆಗೆ ಕ್ಲೈತ್ರಂ ಎಂಬ ಭಾಗದಿಂದ ಸೇರಿರುತ್ತವೆ. ದ್ವಿಚರಿಗಳಲ್ಲಿ ಭುಜಾಸ್ಥಿವಲಯ ಬಲಹೀನವಾಗಿದೆ. ಸೂಪ್ರಸ್ಕ್ಯಾಪುಲ, ಸ್ಕ್ಯಾಪುಲ, ಪ್ರಿಕೋರಕಾಯ್ಡ್ ಮತ್ತು ಕೋರಕಾಯ್ಡ್ ಎಂಬ ಮೂಳೆಗಳು ಎರಡು ಪಕ್ಕಗಳಿಂದ ಮಧ್ಯದ ಎದೆಯ ಮೂಳೆಗೆ ಸೇರಿವೆ. ಬಲಹೀನವಾದ ಭುಜಾಸ್ಥಿವಲಯ ಚಲನೆಗೆ ಉತ್ತಮವಾಗಿಲ್ಲ. ಪಕ್ಷಿಗಳ ಭುಜಾಸ್ಥಿವಲಯ ಹಾರಾಟಕ್ಕೆ ತಕ್ಕಂತೆ ಮಾರ್ಪಟ್ಟಿದೆ. ಬ್ಲೇಡ್ ರೀತಿಯ ಸ್ಕ್ಯಾಪುಲ, ಪ್ರಿಕೋರಕಾಯ್ಡ್, ಕೋರಕಾಯ್ಡ್‌ಗಳು ಎರಡೂ ಕಡೆಗಳಲ್ಲಿವೆ. ಆದರೆ ಮಧ್ಯದಲ್ಲಿ ಕ್ಲಾವಿಕಲ್ ಅಂತರಕ್ಲಾವಿಕಲ್‌ಗೆ ಸೇರಿ U-ಆಕಾರದ ಫರ್ಕುಲ ಎಂಬ ರಚನೆಯಾಗಿದೆ. ಇದು ದೋಣಿಯಾಕಾರದ ಎದೆಯ ಮೂಳೆಗೆ ಸೇರಿದೆ. ಮಾನೋಟ್ರಿಮಗಳನ್ನು ಬಿಟ್ಟು ಉಳಿದ ಸ್ತನಿಗಳಲ್ಲಿ ಸ್ಕ್ಯಾಪುಲ ಪ್ರಧಾನವಾಗಿದ್ದು ಭುಜಮೂಳೆಯಾಗಿದೆ. ಮಧ್ಯದಲ್ಲಿ ಮುಳ್ಳು ಕೊನೆಗೆ ಆಕ್ರೋಮಿಯನ್ ಪ್ರವರ್ಧವಾಗುವುದು. ಭುಜಾಸ್ಥಿವಲಯಕ್ಕೆ ಮುಂಗಾಲುಗಳು ಗ್ಲೀನಾಯ್ಡ್ ಬಟ್ಟಲಿನಲ್ಲಿ ಸೇರಿರುತ್ತವೆ.

ಮುಂಗಾಲು : ಗ್ಲೀನಾಯ್ಡ್ ರಂಧ್ರಕ್ಕೆ ಸೇರಿದ ಭುಜಮೂಳೆಯನ್ನು ಹ್ಯೂಮರಸ್ ಎಂದು ಕರೆಯುತ್ತಾರೆ. ಇದರ ಇನ್ನೊಂದು ಭಾಗ ರೇಡಿಯಸ್–ಅಲ್ನಾ ಎಂಬ ಮೂಳೆಗೆ ಸೇರಿರುವುದು. ಮುಂದುವರೆದ ಪ್ರಾಣಿಗಳಲ್ಲಿ ರೇಡಿಯಸ್–ಅಲ್ನಾ ಕೂಡಿದಂತಿರುತ್ತವೆ. ಮಣಿಕಟ್ಟಿನ ಭಾಗದಲ್ಲಿ ಕಾರ್ಪಲ್ ಎಂಬ ಮೂಳೆಗಳಿವೆ. ಮೂರು ಸಾಲುಗಳ ಕಾರ್ಪಲ್‌ಗಳು ವಿಭಿನ್ನ ಸಂಖ್ಯೆಯಲ್ಲಿರುತ್ತವೆ (3:2:5). ಹಸ್ತದ ಭಾಗದಲ್ಲಿ 5 ಮೆಟಾಕಾರ್ಪಲ್‌ಗಳಿವೆ. ಇವುಗಳ ಮುಂದೆ 5 ಬೆರಳುಗಳಿಗೆ ತಕ್ಕಂತೆ ಫೆಲಂಜಸ್ ಎಂಬ ಮೂಳೆತುಂಡುಗಳಿರುತ್ತವೆ 2:3:3:3:3 ಸಂಖ್ಯೆಯ ಫೆಲಂಜುಗಳು ಕ್ರಮವಾಗಿ ಹೆಬ್ಬೆರಳಿನಿಂದ ಗಮನಿಸಬಹುದು. ಪಕ್ಷಿಗಳಲ್ಲಿ ಮುಂಗಾಲುಗಳು ಮಾರ್ಪಟ್ಟು ರೆಕ್ಕೆಗಳಾಗಿವೆ. ಮಣಿಕಟ್ಟಿನ ಕಾರ್ಪಲ್‌ಗಳು ಮೆಟಾಕಾರ್ಪಲ್‌ಗಳೊಂದಿಗೆ ಸೇರಿ ಕಾರ್ಪೋಮೆಟಾಕಾರ್ಪಸ್ ಎಂಬ ರಚನೆ ಆಗಿವೆ. ಅಲ್ಲದೆ ಬೆರಳುಗಳೂ ಮೊನಚಾದ ರೀತಿಯಲ್ಲಿ ಕ್ಷೀಣಿಸಿರುತ್ತವೆ. ವಾಸಸ್ಥಳಕ್ಕೆ ತಕ್ಕಂತೆ ವಿವಿಧ ರೀತಿಯ ಕಶೇರುಕಗಳಲ್ಲಿ ಮುಂಗಾಲುಗಳು ಮಾರ್ಪಟ್ಟಿರುತ್ತವೆ.

ಕಟ್ಯಾಸ್ಥಿವಲಯ ಮತ್ತು ಹಿಂಗಾಲು:– ಹಿಂಗಾಲುಗಳನ್ನು ಕಶೇರುಸ್ತಂಭಕ್ಕೆ ಸೊಂಟದ ಭಾಗದಲ್ಲಿ ಸೇರಿಸುವ ಮೂಳೆ ಸಮುದಾಯ ಕಟ್ಯಾಸ್ಥಿವಲಯ. ಇದು ಸೇಕ್ರಲ್ ಕಶೇರುಮಣಿಗಳೊಂದಿಗೆ ಕೂಡಿರುವುದು. ಇದರ ಪ್ರತಿ ಅರ್ಧಭಾಗದಲ್ಲಿ ಈಲಿಯಂ, ಇಶ್ಚಿಯಂ ಮತ್ತು ಪ್ಯೂಬಿಸ್ ಎಂಬ ಮೂಳೆಗಳಿವೆ. ಅವುಗಳು ಸೇರುವ ಕಡೆ ಅಸಿಟ್ಯಾಬುಲಂ ಎಂಬ ಬಟ್ಟಲಿದ್ದು ಇದು ಹಿಂಗಾಲಿಗೆ ಸೇರಲು ಅವಕಾಶವಿರುತ್ತದೆ. ಮೀನುಗಳಲ್ಲಿ U-ಆಕಾರದ ಕಟ್ಯಾಸ್ಥಿವಲಯ ಹಿಂಗಾಲು ಈಜುರೆಕ್ಕೆಗಳ ಆಸರೆ. ದ್ವಿಚರಿಗಳಲ್ಲಿ ಇದು ಮಾದರಿಯಾಗಿದ್ದು, ಸರೀಸೃಪಗಳಲ್ಲಿ ವಿವಿಧ ರೀತಿಯ ಜೀವನಕ್ರಮಕ್ಕೆ ತಕ್ಕಂತೆ ಮಾರ್ಪಟ್ಟಿದೆ. ದ್ವಿಪಾದ ಚಲನೆಗೆ ಪಕ್ಷಿಗಳ ಕಟ್ಯಾಸ್ಥಿವಲಯ ಬಲಿಷ್ಠವಾಗಿದ್ದು ಇಶ್ಚಿಯಂ ಸಮನಾಗಿ, ಪ್ಯೂಬಿಸ್ ಸಣ್ಣ ಕಡ್ಡಿಯಂತಿದೆ. ಅಸಿಟ್ಯಾಬುಲರ್ ರಂಧ್ರವುಳ್ಳ ಅಸಿಟ್ಯಾಬುಲಮ್ ಮೂರು ಮೂಳೆಗಳಿಂದಾಗಿದೆ. ತ್ರಿದಳ ವ್ಯವಸ್ಥೆ ತೋರುವಂತೆ ಸ್ತನಿಗಳ ಕಟ್ಯಾಸ್ಥಿವಲಯ ಸೇರಿಕೊಂಡಿದೆ. ವಿವಿಧ ರೀತಿಯ ಜೀವನಕ್ರಮಕ್ಕೆ ಮಾರ್ಪಾಟನ್ನು ಕಟ್ಯಾಸ್ಥಿವಲಯದಲ್ಲೂ ಗಮನಿಸಬಹುದು.



ರೊಂಡಿಯೆಲುಬುಗಳೂ ಪಾವನಿಯೂ ಕೂಡಿ ಆಗಿರುವ ಕಿಳ್ಗುಳಿಗಳು. ಮೇಲಿನದು ಗಂಡಸಿನದು, ಕೆಳಗಿನದು ಹೆಂಗಸಿನದು.

ಮುಂಗಾಲುಗಳಂತೆ ಹಿಂಗಾಲುಗಳೂ ಸಹ ಅದೇ ರೀತಿಯ ಮೂಳೆಗಳಿಂದಾಗಿರುತ್ತವೆ. ಇವು ಹೆಚ್ಚು ಬಲಿಷ್ಠವಾಗಿರುತ್ತವೆ. ತೊಡೆಯ ಮೂಳೆ ಫೀಮರ್ ಅಸಿಟ್ಯಾಬುಲಮ್‌ಗೆ ಸೇರಿದ್ದು ಮುಂಭಾಗದಲ್ಲಿ ಟಿಬಿಯೋಫಿಬುಲಾ, ಅನಂತರ ಟಾರ್ಸಲ್, ಮೆಟಾಟಾರ್ಸಲ್‌ಗಳು. ಬೆರಳುಗಳು ಫೆಲಂಜುಗಳನ್ನು ಪಡೆದಿವೆ.

ದ್ವಿಚರಿಗಳಲ್ಲಿ ಮಾದರಿಯಾದ ಹಿಂಗಾಲುಗಳಿವೆ. ಸರೀಸೃಪಗಳಲ್ಲಿ ಟಿಬಿಯಾ ಫಿಬುಲಕ್ಕಿಂತ ಉದ್ದವಾಗಿದೆ. ಪಕ್ಷಿಗಳಲ್ಲಿ ಟಾರ್ಸಲ್‌ಗಳು ಮೆಟಾಟಾರ್ಸಲ್‌ಗಳೊಂದಿಗೆ ಸೇರಿ ಟಾರ್ಸೊಮೆಟಾಟಾರ್ಸಸ್ ಆಗಿರುತ್ತವೆ. ಬೆರಳುಗಳು ನಾಲ್ಕಕ್ಕಿಂತ ಹೆಚ್ಚಿರದೆ ಸಾಮಾನ್ಯವಾಗಿ ಎರಡು ಅಥವಾ ಮೂರು ಬೆರಳುಗಳು ಮಾತ್ರ ಇರುತ್ತವೆ. ಸ್ತನಿಗಳ ಫೀಮರ್ ಟ್ರೊಖ್ಯಾಂಟರ್ ಪ್ರವರ್ಧದಿಂದ ಬಲಿಷ್ಠಸ್ನಾಯುಗಳಿಗೆ ಅನುಕೂಲವಾಗಿದೆ. ಇದರ ಮುಂದಿನ ಎರಡು ಉಬ್ಬುಗಳ ಮೇಲೆ ಮಂಡಿಚಿಪ್ಪು ಪಟೆಲ್ಲ ಎಂಬ ರಚನೆ ಇರುವುದು. ಟಾರ್ಸಲ್‌ಗಳು ಅಕ್ಕಪಕ್ಕದಲ್ಲಿರದೆ ಹಿಮ್ಮಡಿಯಾಗಿ ಅದನ್ನು ಕ್ಯಾಲ್ಕೇನಿಯಂ ಮತ್ತು ಅದರ ಮುಂದೆ ಆಸ್ಟ್ರಗಾಲಸ್ ಸೇರಿರುತ್ತವೆ. ಕ್ಯಾಲ್ಕೇನಿಯಂ ಉದ್ದವಾಗಿರುವುದು ಹಿಮ್ಮಡಿಯಾಗಲು ಕಾರಣ. ಉಳಿದಂತೆ ಐದು ಬೆರಳುಗಳಿರಬಹುದು ಅಥವಾ ವಿವಿಧ ರೀತಿಯಲ್ಲಿ ಮಾರ್ಪಟ್ಟಿರಬಹುದು.

ಮೀನುಗಳ ಈಜುರೆಕ್ಕೆಗಳಿಂದ ಆರಂಭವಾಗುವ ಜೋಡಿ ಚಲನಾಂಗಗಳು ವಾಸಕ್ರಮಕ್ಕೆ ತಕ್ಕಂತೆ ಭಿನ್ನವಾಗಿದ್ದರೂ ಮೂಲಭೂತವಾದ ರಚನೆಯನ್ನು ತೋರುತ್ತವೆ.

ಹೊರಾಸ್ಥಿಪಂಜರ:– ಕಾರ್ಡೇಟುಗಳು ಹುರುಪೆಗಳು, ಕೂದಲು, ಪುಕ್ಕ, ಗೊರಸು, ಕೊಂಬು, ಮುಳ್ಳುಗಳನ್ನು ಹೊರಾಸ್ಥಿ ಪಂಜರದಲ್ಲಿ ಸೇರಿಸಲಾಗಿದೆ. ಹುರುಪೆಗಳು ಕೆರಾಟಿನ್ ಎಂಬ ವಸ್ತು ಅಥವಾ ದಂತ ವಸ್ತುವಿನಿಂದ ರಚಿತವಾಗಿರುತ್ತವೆ. ಹೊರಭಾಗದಿಂದ ಅಥವಾ ಒಳಭಾಗದಿಂದ ಚರ್ಮದಲ್ಲಿ ಬೆಳೆದಿರುತ್ತವೆ. ಆಮೆಯ ಚಿಪ್ಪು ಮೂಳೆಗಳಿಂದಾದ ಒಳಹುರುಪೆಗಳು. ಮೀನು ಮತ್ತು ಸರೀಸೃಪಗಳಲ್ಲಿ ವಿಭಿನ್ನ ರೀತಿಯ ಹುರುಪೆಗಳನ್ನು ಕಾಣುತ್ತೇವೆ. ಪಕ್ಷಿಗಳಲ್ಲಿ ಕೆರಾಟಿನ್ ವಸ್ತುವಿನಿಂದಾದ ಪುಕ್ಕಗಳಿವೆ. ಬೆರಳುಗಳ ತುದಿಯಲ್ಲಿ ಕೆರಾಟಿನ್ ವಸ್ತುವಿನಿಂದಾದ ಉಗುರು (ಗೊರಸು)ಗಳನ್ನು ಸರೀಸೃಪಗಳಿಂದ ಹಿಡಿದು ಸ್ತನಿಗಳವರೆಗಿನ ಪ್ರಾಣಿಗಳು ಪಡೆದಿರುತ್ತವೆ. ಸ್ತನಿಗಳ ಚರ್ಮದಲ್ಲಿ ಕೆರಾಟಿನ್ ವಸ್ತುವಿನ ಕೂದಲಿನ ಹೊದಿಕೆ ಇದೆ. ಕೂದಲು ಅಥವಾ ಕೊಂಬಿನ ವಸ್ತುಗಳಿಂದಾದ ಕೊಂಬುಗಳು ಅಥವಾ ಮುಳ್ಳು ಹಂದಿ ರೀತಿಯ ಮುಳ್ಳುಗಳು, ಆರ್ಮಡಿಲ್ಲೊ ರೀತಿಯ ಹುರುಪೆಗಳೂ ಹೊರಾಸ್ಥಿಗಳೆನಿಸಿಕೊಂಡಿವೆ. (ನೋಡಿ: ಹೊರಾಸ್ಥಿಪಂಜರ) (ಟಿ.ವಿ.ಹೆಚ್.)

**ಅಸ್ಥಿಮಜ್ಜೆ :** ರಕ್ತಕಣಗಳು, ಚಪ್ಪಟಿಕಗಳು (ಪ್ಲೇಟ್‌ಲೆಟ್) ಜನನವಾಗುವ ಮೂಳೆಗಳ ಒಳಗಿನ ಪೊಳ್ಳುಗಳಲ್ಲಿರುವ ರಚನೆ. ಒಂದು ಬಗೆಯ ಮೆತುವಾದ ಊತಕ (ಅಂಗಾಂಶ) ಹಸುಗೂಸಿನ ತೂಕದಲ್ಲಿ ಸುಮಾರು ೨.೩ ಪ್ರತಿಶತದಷ್ಟು ಅಸ್ಥಿಮಜ್ಜೆ ಇರುತ್ತದೆ. ಬೆಳೆದಿರುವವರಲ್ಲಿ ಇದು ಎರಡು ಪಟ್ಟು ಹೆಚ್ಚಾಗುತ್ತದೆ. ಮಗುವಿನಲ್ಲಿ ಅಸ್ಥಿಮಜ್ಜೆಯ ಘನ ಅಳತೆ ೬೫ ಮಿಲೀ ನಷ್ಟಿದ್ದು, ದೊಡ್ಡವರಲ್ಲಿ ೧.೬ ರಿಂದ ೩.೨ ಲೀ.ಗಳಷ್ಟಾಗುತ್ತದೆ.

ಮಜ್ಜೆಯಲ್ಲಿ ಕೊಬ್ಬಿನ ಊತಕ ಹೆಚ್ಚಾಗಿದ್ದರೆ ಹಳದಿಯಾಗಿ, ರಕ್ತ ತಯಾರಿಕ ಅಂಗಾಂಶ ಹೆಚ್ಚಾಗಿದ್ದರೆ ಕೆಂಪಾಗಿ ತೋರುವುದು. ಬೆಳೆದವರ ತಲೆಬುರುಡೆ, ಎದೆ ಚಕ್ಕೆ, ಪಕ್ಕೆಲುಗಳು, ಕೊರಳೆಲುಗಳು, ಬೆನ್ನುಗಂಬ, ತೊಡೆಮೂಳೆ ಅಲ್ಲದೆ ತೋಳಿನ ಮೇಲ್ತೊಳೆಗಳಲ್ಲಿ ಮಾತ್ರ ಕೆಂಪು ಮಜ್ಜೆ ಇದೆ. ಅವಶ್ಯಕತೆಯ ಹಲವು ತುರ್ತಿನ ಹೊತ್ತುಗಳಲ್ಲಿ ಹಳದಿ ಮಜ್ಜೆ ಕೆಂಪಾಗುತ್ತದೆ. ಯಾವುದೇ ಕಾರಣದಿಂದಾಗಿ ರಕ್ತ ತಯಾರಿಕೆಯ ಚಟುವಟಿಕೆ ಹೆಚ್ಚಿದಾಗಲೂ ಹಳದಿ ಮಜ್ಜೆ ಕೆಂಪಾಗುತ್ತದೆ.

ಅಸ್ಥಿಮಜ್ಜೆಯ ತುಂಬೆಲ್ಲ ರೆಟಿಕ್ಯುಲಾರ್ ತಂತುಗಳು ಮತ್ತು ರೆಟಿಕ್ಯುಲಾರ್ ಜೀವಕೋಶಗಳಿವೆ. ರೆಟಿಕ್ಯುಲಾರ್ ಜೀವಕೋಶಗಳಲ್ಲಿ ಎರಡು ಬಗೆ: ೧) ಬೃಹದ್ಭಕ್ಷಿಗಳು (ಮ್ಯಾಕ್ರೋಫೇಜ್) ಮತ್ತು ೨) ಮೂಲರೂಪದ ರೆಟಿಕ್ಯುಲಾರ್ ಜೀವಕೋಶಗಳು. ಬೃಹದ್ಭಕ್ಷಿಗಳು ರಕ್ತದ ಹರಿವಿನಿಂದ ಸಣ್ಣಪುಟ್ಟ ಚೂರುವಸ್ತುಗಳನ್ನು ಎತ್ತಿಕೊಂಡು ಕಬಳಿಸುತ್ತವೆ. ಮೂಲರೂಪದ ರೆಟಿಕ್ಯುಲಾರ್ ಜೀವಕೋಶಗಳು ಬೃಹದ್ಭಕ್ಷಿಗಳಾಗಿ ಬದಲಾಗಬಲ್ಲವು. ಇಲ್ಲವೇ ಸಾಧಾರಣ ರಕ್ತದ ಕಣಗಳಾಗಿ ಬೆಳೆಯಬಲ್ಲವು. ಬಲಿತ ಕೆಂಪುರಕ್ತಕಣಗಳು, ಹರಳುಗೂಡಿದ ಬಿಳಿರಕ್ತದ ಕಣಗಳಾಗಿ (ಗ್ರಾನ್ಯುಲೋಸೈಟ್ಸ್) ಬೆಳೆಯಬಲ್ಲವು. ಅಸ್ಥಿಮಜ್ಜೆಯ ಮೂಲಕಣಗಳಿಗೆ ಹೀಮೋಸೈಟೋಬ್ಲಾಸ್ಟ್ ಎಂದು ಕರೆಯುತ್ತಾರೆ.

ಅಸ್ಥಿಮಜ್ಜೆ ಮೂಲಕಣ ಕೆಂಪು ರಕ್ತಕಣವಾಗಿ ಬೆಳೆದಂತೆಲ್ಲ ಅದರ ಕೋಶದ್ರವ್ಯದಲ್ಲಿ ರಕ್ತ ಬಣ್ಣಕ (ಹೀಮೋಗ್ಲಾಬಿನ್) ಕೂಡಿಕೊಳ್ಳುತ್ತದೆ. ಕೆಲವು ರಕ್ತಕಣದ ತಾಯಿಕಣದಲ್ಲಿ ನ್ಯೂಕ್ಲಿಯಿಕ್‌ಆಮ್ಲ ಮತ್ತು ರಕ್ತ ಬಣ್ಣಕಗಳಿರುತ್ತವೆ. ಆದರೆ ಬರುಬರುತ್ತ ನ್ಯೂಕ್ಲೀಯಿಕಾಮ್ಲದ ಬದಲಾಗಿ ರಕ್ತ ಬಣ್ಣಕವೆ ತುಂಬಿಕೊಳ್ಳುತ್ತದೆ. ಆಗ ತಾಯಿಕಣ ದುಂಡಾಗಿ ನಾರ್ಮೊಬ್ಲಾಸ್ಟ್ ಆಗುತ್ತದೆ. ಇದರೊಳಗಿರುವ ಕೋಶಕೇಂದ್ರ ಕರಗಿ ಸಹಜವಾದ ಕೋಶಕೇಂದ್ರರಹಿತ ಕೆಂಪು ರಕ್ತಕಣವಾಗುತ್ತದೆ.

ಅಸ್ಥಿಮಜ್ಜೆಯ ಮೂಲಕಣದ ಕೋಶದ್ರವ್ಯದಲ್ಲಿ ಹರಳುಗಳು ಹುಟ್ಟಿಕೊಂಡು ಕೋಶಕೇಂದ್ರದಲ್ಲೂ ಒಂದಿಷ್ಟು ಬದಲಾವಣೆಗಳಾಗಿ ಹರಳುಕಣಗಳು ಜನ್ಮ ತಾಳುತ್ತವೆ. ಅಂತ್ಯದಲ್ಲಿ ತಯಾರಾಗುವ ರಕ್ತದ ಬಿಳಿಕಣದ ಗುಣಲಕ್ಷಣಗಳಿಗೆ ತಕ್ಕಂತೆ ಅದರ ಹರಳುಗಳು ಇಯೋಸಿನೊಫಿಲ್, ಬೇಸೊಫಿಲ್ ಕಣಗಳಾಗುವವು. ಇವೆರಡೂ ಕಣಗಳು ಮಯಲೋಸೈಟ್‌ಗಳಿಂದ ರಚನೆಗೊಂಡಿರುತ್ತವೆ.

ರಕ್ತದ ಜೀವಕಣಗಳ ಮತ್ತು ಕೊಬ್ಬಿನ ಜೀವಕಣಗಳ ನಡುವೆ ಮೆಗಾಕ್ಯಾರಿಯೋಸೈಟ್ಸ್‌ಗಳಿವೆ. ಬಹಳ ದೊಡ್ಡಗಾತ್ರದ ಈ ಜೀವಕಣಗಳ ಜೀವರಸ (ಪ್ರೋಟೊಪ್ಲಾಸ್ಮ)ದ ಸಣ್ಣ ಸಣ್ಣ ತುಣುಕುಗಳೇ ರಕ್ತದ ಚಪ್ಪಟಿಕ (ಪ್ಲೇಟ್‌ಲೆಟ್) ಗಳಾಗುತ್ತವೆ.

ಹೊಸದಾಗಿ ತಯಾರಾದ ಜೀವಕಣಗಳುಳ್ಳ ರಕ್ತ ಧಮನಿಗಳ ಮೂಲಕ ಅಸ್ಥಿಮಜ್ಜೆ ಸೇರುತ್ತದೆ. ಅಲ್ಲಿಂದ ಮುಂದೆ ತೆಳುಗೋಡೆ ಹೊಂದಿದ ದೊಡ್ಡ ಸೈನುಸಾಯ್ಡ್‌ಗಳ ಮೂಲಕ ಅಭಿದಮನಿಗಳೊಳಕ್ಕೆ ರಕ್ತ ಹರಿಯುತ್ತದೆ. ಈ ಸೈನುಸಾಯ್ಡ್‌ಗಳ ಒಳಪೊರೆಯಲ್ಲಿ ಬೃಹದ್ಭಕ್ಷಿಗಳಂತೆ ಕಬಳಿಸುವ ರೆಟಿಕ್ಯುಲಾರ್ ಜೀವಕೋಶಗಳಿರುತ್ತವೆ. ಈ ಜೀವಕೋಶಗಳು ಇಲ್ಲಿಂದ ದುಂಡಾಗಿ, ಬಿಡಿಯಾದ ಬೃಹದ್ಭಕ್ಷಿಗಳಾಗಿ ಸೈನುಸಾಯ್ಡ್‌ಗಳಿಗೆ ಸೇರಿಕೊಳ್ಳಬಲ್ಲವು.

ಪರ್ವತಗಳ ಎತ್ತರದ ಏರಿನಲ್ಲಿ ಆಗುವಂತೆ ಉಸಿರಲ್ಲಿ ಆಮ್ಲಜನಕದ ಪ್ರಮಾಣ ತಗ್ಗಿದರೆ ಕೆಂಪುರಕ್ತ ಕಣಗಳು ಹೆಚ್ಚು ಹೆಚ್ಚಾಗಿ ತಯಾರಾಗುತ್ತವೆ. ಕೋಬಾಲ್ಟ್ ತರದ ಕೆಲವು ರಾಸಾಯನಿಕಗಳಿಂದಲೂ ಹೀಗಾಗುವುದು. ಕೆಲವು ರೋಗಗಳಲ್ಲಿ ಅಸ್ಥಿಮಜ್ಜೆಯಲ್ಲಿ ವಿಶಿಷ್ಟ ಬದಲಾವಣೆಗಳಾಗುವದು. ಇದನ್ನು ಕಂಡುಕೊಳ್ಳಲು ಎದೆ ಚಕ್ಕೆಯಲ್ಲಿ (ಸ್ಟರ್ನಂ) ತೂತು ಕೊರೆದು, ಸೂಜಿಯಿಂದ ಎಲುಬೊಳಗಿರುವ ಮಜ್ಜೆ ಹೀರಿ ತೆಗೆದು ಪರೀಕ್ಷಿಸುತ್ತಾರೆ.

ಎಕ್ಸ್–ಕಿರಣಗಳು, ಪರಮಾಣುಬಾಂಬ್ ಸಿಡಿತದಿಂದಾಗುವ ವಿಕಿರಣತೆಯಿಂದ ಅಸ್ಥಿಮಜ್ಜೆಗೆ ಹಾನಿಯಾಗುತ್ತದೆ. ರಕ್ತದ ಜೀವಕಣಗಳ ಜನನ ಕುಂಠಿತಗೊಳ್ಳುತ್ತದೆ. ಇಂತಹ ಸಂದರ್ಭಗಳಲ್ಲಿ ಅಸ್ಥಿಮಜ್ಜೆ ಪೂರಣ (ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟ್) ಮಾಡಿದರೆ ಮಜ್ಜೆ ಚೇತರಿಸಿಕೊಂಡು ಮೊದಲಿನಂತಾಗುತ್ತದೆ. ಅಸ್ಥಿಮಜ್ಜೆಯಲ್ಲಿ ಕಾಣುವ ಕಾಂಡಕಣ (ಸ್ಟೆಮ್ ಸೆಲ್ಸ್) ಗಳನ್ನು ದಾನಿಗಳಿಂದ ಪಡೆದು ಸಂರಕ್ಷಿಸಿ, ಶೇಖರಿಸಿಟ್ಟು ಅನಂತರ ಕೆಲವು ವಿಶಿಷ್ಟ ಚಿಕಿತ್ಸೆಯಲ್ಲಿ ಪೂರಣ ಮಾಡಿ ಸಂತಸದಾಯಕ ಫಲಪಡೆಯುವಲ್ಲಿ ವಿಜ್ಞಾನಿಗಳು ಯಶಸ್ಸು ಪಡೆದಿದ್ದಾರೆ. (ಡಿ.ಎಸ್.ಎಸ್.)

**ಅಸ್ಥಿಮತ್ಸ್ಯಗಳು:** ಈಗ ಜೀವಂತವಾಗಿರುವ ಬಹುಸಂಖ್ಯಾತ ಮೂಳೆಮೀನುಗಳನ್ನು ಒಳಗೊಂಡ ವರ್ಗ (ಆಸ್ಟಿಯಿಕ್‌ತಿಸ್). ಇವುಗಳ ಉಗಮ ಭೂವಿಜ್ಞಾನ ಇತಿಹಾಸದಲ್ಲೇ ಆಕಸ್ಮಿಕ. ಸೈಲೂರಿಯನ್ ಕಾಲದಲ್ಲಿ ಈ ಗುಂಪಿನ ಸುಳಿವೇ ಕಂಡಿಲ್ಲ. ಡೆವೋನಿಯನ್ ಕಾಲದ ಪೂರ್ವಾರ್ಧದಲ್ಲಿ ಕೇವಲ ಕೆಲವು ಭಿನ್ನ ಭಿನ್ನ ಅವಶೇಷಗಳು ಮಾತ್ರ ಗೋಚರಿಸಿವೆ. ಇವು ಎಲ್ಯಾಸ್ಮೊಬ್ರಾಂಕೈ ವರ್ಗಕ್ಕಿಂತ ಹಿಂದಿನವು. ಬಹುಶಃ ಆಸ್ಟ್ರಾಕೊಡರ್ಮಿ ಬುಡಕಟ್ಟಿನಿಂದ ಇವುಗಳ ಉಗಮವಾಗಿದ್ದಿರಬಹುದು. ಇವು ಸಿಹಿನೀರಿನೆಡೆಯಿಂದ ಎಂದರೆ, ನದಿ, ಜೌಗು ಹಾಗೂ ಹೊಂಡಗಳಿಂದ ಬಂದುವು. ಮಧ್ಯ ಡೆವೋನಿಯನ್ ಕಾಲಕ್ಕೆ ಕ್ರಾಸಾಪ್ಟೆರಿಜಿಯೈ, ಡಿಪ್ನಾಯ್ಸ್ ಮತ್ತು ಆಕ್ಟಿನೊಪ್ಟೆರಿಜಿಯೈ ಎಂಬ ಮೂರು ಬೃಹತ್ ಗುಂಪುಗಳಾಗಿ ವಿಕಾಸಗೊಂಡವು.

ಇವುಗಳಲ್ಲಿ ಬಹುಪಾಲು ಮೀನುಗಳು ಮೃದುವಾದ ಸೈಕ್ಲಾಯಿಡ್ ಮತ್ತೆ ಕೆಲವು ಗ್ಯಾನಾಯಿಡ್ ಹುರುಪೆಗಳನ್ನು ಹೊಂದಿವೆ. ಅಸ್ಥಿಪಂಜರ ಎಲುಬಿನಿಂದ ಗಡುಸಾಗಿದೆ. ಬಾಯಿ ತುದಿಯಲ್ಲಿದೆ. ಬಾಲದ ಈಜುರೆಕ್ಕೆ ಪೂರ್ಣವೃತ್ತಾಕಾರದ (ಡಿಫಿಸರ್ಕಲ್) ಅಥವಾ ಸಮವೃತ್ತಾಕಾರದ (ಹೋಮೊಸರ್ಕಲ್) ರೀತಿಯವು. ಈಜುರೆಕ್ಕೆಯ ಕದಿರುಗಳು ಮೂಳೆಯಿಂದಾದವುಗಳು. ಕಿವಿರುಕವಚ ಕಿವಿರು ರಂಧ್ರಗಳನ್ನು ಮುಚ್ಚುತ್ತದೆ. ಕಿವಿರುಗಳ ಮಧ್ಯ ತಡಿಕೆ (ಇಂಟರ್‌ಬ್ರಾಂಕಿಯಲ್ ಸೆಪ್ಟಾ) ಕಿರಿದು; ಕಿವಿರುಗಳಲ್ಲಿ ತಂತುಗಳಿವೆ. ಕೆಳದವಡೆಯಲ್ಲಿ ಅನೇಕ ಮೂಳೆಗಳಿವೆ. ಗಾಳಿ ಚೀಲ (ಏರ್ ಬ್ಲಾಡರ್) ಇರುವುದು ಸಾಮಾನ್ಯ. ಗಾಳಿಯ ಕೋಶಗಳಿವೆ. ಅಂಡಾಶಯನಾಳಗಳು ಅಂಡಾಶಯಕ್ಕೆ ನೇರ ಸಂಪರ್ಕ ಹೊಂದಿವೆ. ದೇಹದ ಹೊರಗೆ ನೀರಿನಲ್ಲಿ ಮೊಟ್ಟೆಗಳು ಗರ್ಭಕಟ್ಟುತ್ತವೆ. ಆಸ್ಟಿಯಿಕ್ತಿಸ್ ಮೀನುಗಳಲ್ಲಿ ಕೊಯನಿಕ್ತಿಸ್ ಮತ್ತು ಆಕ್ಟಿನೋಪ್ಟೆರಿಜಿಯೈ ಎಂಬ ಎರಡು ಉಪವರ್ಗಗಳುಂಟು. ಕೊಯನಿಕ್ತಿಸ್ ಮೀನುಗಳು ಶ್ವಾಸಕೋಶದ ಉಸಿರಾಡುವಿಕೆಗೆ ಸಂಬಂಧಿಸಿರುವ ಒಳನಾಸಿಕ ರಂಧ್ರಗಳನ್ನು ಹೊಂದಿವೆ. ಈ ಗುಂಪಿನಿಂದ ದ್ವಿಚರಪ್ರಾಣಿಗಳು ವಿಕಸಿಸಿವೆ. ಯಾವ ಕಾಲದಲ್ಲಿಯೂ ಹೆಚ್ಚಿನ ಪ್ರಸಾರ ಪಡೆಯಲಿಲ್ಲ. ಇತ್ತೀಚೆಗೆ ಕಂಡುಹಿಡಿಯಲ್ಪಟ್ಟ ಸೀಲೊಕ್ಯಾಂತ್ ಜಾತಿಯ ಲ್ಯಾಟಿಮೇರಿಯ (ಗಣ– ಕ್ರಾಸಾಪ್ಟೆರಿಜಿಯೈ)




ಮತ್ತು ಡಿಪ್ನಾಯ್ ಗುಂಪಿನ ಕೆಲವು ಪ್ರಭೇದಗಳಿಗೆ ಮಾತ್ರ ಒಳಪಟ್ಟಿವೆ. ಈ ಮೀನುಗಳು ಡೆವೋನಿಯನ್ ಕಾಲದಿಂದ ಕೇವಲ ಅಲ್ಪ ಬದಲಾವಣೆಯಿಂದ ಉಳಿದು ಬಂದ ವಿಶಿಷ್ಟ ಗುಂಪು. ಡೆವೋನಿಯನ್ ಕಾಲದಲ್ಲಿ ಕ್ರಾಸಾಪ್ಟೆರಿಜಿಯ್ಯೆ ಮೀನುಗಳು ವಿಶೇಷವಾಗಿದ್ದುದುಂಟು. ಅವು ಕಾಸ್ಮಾಯಿಡ್ ಬಗೆಯ ಹುರುಪೆಗಳನ್ನು ಹೊಂದಿದ್ದವು. ಅವಕ್ಕೆ ಸ್ಪೈರಕಲ್ ಮತ್ತು ಪೈನಿಯಲ್ ರಂಧ್ರ ಇದ್ದವು. ಚಕ್ರವ್ಯೂಹ ರಚನೆಯ ಹಲ್ಲುಗಳಿದ್ದವು. ಈಜುರೆಕ್ಕೆಯ ಬುಡದಲ್ಲಿ ಮಾಂಸಭರಿತವಾದ ಭಾಗವಿದ್ದು, ಅದು ಎಲುಬಿನ ಪಂಜರದಿಂದ ದೃಢತೆ ಹೊಂದಿದೆ. ಮೊದಲ ಕ್ರಾಸಾಪ್ಟೆರಿಜಿಯ್ಯೆ ಮೀನುಗಳು ಮಾಂಸಾಹಾರಿಗಳು ಮತ್ತು ಸಿಹಿನೀರಿನ ವಾಸಿಗಳು. ನೀರು ಬತ್ತಿದ್ದ ಕಾಲದಲ್ಲಿ ಗಾಳಿಯ ಉಸಿರಾಡುವಿಕೆಗೆ ಒಳನಾಸಿಕ ರಂಧ್ರಗಳು ಬಹುಶಃ ಸಹಾಯವಾಗಿದ್ದಿರಬಹುದು. ಕ್ರಾಸಾಪ್ಟೆರಿಜಿಯನ್‌ಗಳ ಒಂದು ವಿಭಾಗವಾದ ಸೀಲೊಕ್ಯಾಂತಿನಿಗಳು ಸಮುದ್ರಜೀವನವನ್ನು ಅವಲಂಬಿಸಿದವು. ಇತ್ತೀಚೆಗೆ ಕಂಡುಹಿಡಿದಿರುವ ಲ್ಯಾಟಿಮೇರಿಯ ಜೀವಂತ ಲುಪ್ತಜೀವಿಗಳ ರೀತಿಯಲ್ಲಿವೆಯೆನ್ನಬಹುದು. ಡೆವೋನಿಯನ್ ಮತ್ತು ಕಾರ್ಬೋನಿಫೆರಸ್ ಕಾಲಗಳಲ್ಲಿ ಕಾಣಿಸಿದ ಆಸ್ಟಿಯೋಲೆಪಿಡ್ ಮೀನುಗಳು ವಿಶೇಷವಾಗಿ ಹಿಂದುಳಿದ ಜೀವಿಗಳು. ಆದರೆ ಅವು ಪ್ರಾಚೀನ ದ್ವಿಚರ ಪ್ರಾಣಿಗಳನ್ನು ಹೋಲುತ್ತಿದ್ದವು.

ಕ್ರಾಸಾಪ್ಟೆರಿಜಿಯನ್ ಬುಡದಿಂದ ಡೆವೋನಿಯನ್ ಕಾಲದಲ್ಲಿ ಹೊರಬಂದ ಗುಂಪು ಡಿಪ್ನಾಯ್ ಮೀನುಗಳದು. ಇದಕ್ಕೆ ಸೇರಿದ ಮೀನುಗಳು ಕಿವಿರು ಹಾಗೂ ಶ್ವಾಸಕೋಶಗಳನ್ನು ಹೊಂದಿದ್ದು ಜೌಗು ಮತ್ತು ಸಿಹಿ ನೀರಿನಲ್ಲಿ ವಾಸಿಸುತ್ತವೆ. ಡಿಪ್ನಾಯ್ ಮೀನುಗಳು ಈಗಲೂ ಉಳಿದಿದ್ದು ಅವನತಿ ಹೊಂದಿರುವ ಹಾಗು ಸಂಕೀರ್ಣತೆ ಪಡೆದ ಮೂರು ಜಾತಿಗಳಾಗಿವೆ. ನಿಯಾಸಿರಟೋಡಸ್, ಲೆಪಿಡೋಸೈರನ್ ಮತ್ತು ಪ್ರೊಟಾಪ್ಟರಸ್ – ಇವೇ ಆ ಮೂರು ಜಾತಿಯ ಉದಾಹರಣೆಗಳು. ಇವು ಪ್ರಥಮವಾಗಿ ಡೆವೋನಿಯನ್ ಮಧ್ಯಕಾಲದಲ್ಲಿ ಕಾಣಿಸಿಕೊಂಡು ಪರ್ಮಿಯನ್ ಮತ್ತು ಟ್ರೈಯಾಸಿಕ್ ಕಾಲಗಳಲ್ಲಿ ಸ್ವಲ್ಪ ವೃದ್ಧಿಯಾಗಿ ಅನಂತರ ವಿರಳವಾದವು. ಈ ಮೀನುಗಳು ಈಗ ಕ್ವೀನ್ಸ್‌ಲೆಂಡ್, ದಕ್ಷಿಣ ಅಮೆರಿಕ ಮತ್ತು ಆಫ್ರಿಕಗಳ ಸಿಹಿನೀರುಗಳಲ್ಲಿ ಜೀವಂತವಾಗಿವೆ. ಇದು ಪರಿಮಿತ ಪ್ರಸರಣಕ್ಕೆ ಒಂದು ಉದಾಹರಣೆ.

ಆಕ್ಟಿನೋಪ್ಟೆರಿಜಿಯ್ಯೆ ಮೀನುಗಳಲ್ಲಿ ಒಳನಾಸಿಕ ರಂಧ್ರಗಳಿಲ್ಲ. ಇವು ಕದಿರುಳ್ಳ ಈಜುರೆಕ್ಕೆಗಳ ಮೀನುಗಳು. ಜೋಡಿ ಈಜುರೆಕ್ಕೆಗಳ ತಳದಲ್ಲಿ ಮಾಂಸವಿಲ್ಲ. ಈಜುರೆಕ್ಕೆಯ ಪೊರೆಗಳಿಗೆ ಕೊಂಬಿನ (ಹಾರ್ನಿ) ಕದಿರುಗಳು ಆಧಾರವಾಗಿವೆ. ದೇಹದ ಹೊದಿಕೆ ಗ್ಯಾನಾಯಿಡ್ ಬಗೆಯ ಹುರುಪೆಗಳಿಂದ ಕೂಡಿದೆ. ಇದರ ಉಪ್ಪುನೀರಿನ ಪ್ರಭೇದಗಳಲ್ಲಿ ಕಾಡ್, ಸೋಲ್, ಹೆರ್ರಿಂಗ್ ಮತ್ತು ಈಲ್‌ಗಳಲ್ಲದೆ ಇನ್ನಿತರ ಬಗೆಯವೂ ಸೇರಿವೆ. ಇವು ಎಲ್ಲ ದೇಶಗಳ ಸರೋವರ ಮತ್ತು ಹೊಳೆಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಕೆಲವು ವಿಚಿತ್ರವಾದ ಮತ್ತು ಪ್ರಾಚೀನ ಕಾಲದಿಂದ ಉಳಿದು ಬಂದಿರುವ ಸ್ಟರ್ಜಿಯನ್, ಗಾರ್‌ಪೈಕ್, ಬೌಫಿನ್ ಹಾಗೂ ಇತರ 20,000ಕ್ಕೂ ಹೆಚ್ಚಾದ ಮೂಳೆಯ ಮೀನುಗಳ ಪ್ರಭೇದಗಳೂ ಸೇರಿವೆ.

ಅತಿ ಹಿಂದಿನಿಂದ ಕಂಡುಬಂದ ಆಕ್ಟಿನೋಪ್ಟೆರಿಜಿಯನ್ ಮೀನುಗಳು ಮಧ್ಯ ಡೆವೋನಿಯನ್ ಕಾಲದ ಸಿಹಿ ನೀರಿನಿಂದ ಬಂದುವಲ್ಲದೆ ಕ್ರಾಸಾಪ್ಟೆರಿಜಿಯನ್ ಮೀನುಗಳಿಗಿಂತ ಬಹು ವಿರಳವಾದವು. ಆದರೆ ಅವು ಈಗ ಸಾಧಾರಣವಾಗಿ ಕಾಣಸಿಗುವ ಮೀನುಗಳು. ಪೇಲಿಯೋಜೋಯಿಕ್ ಕಾಲದಲ್ಲಿಯೇ ಪುನಃ ಪ್ರವೇಶಿಸಿದ್ದುಂಟು. ಟ್ರೈಯಾಸಿಕ್‌ನಲ್ಲಿ ಉಪ್ಪುನೀರಿನ ಒಂದು ಬೃಹತ್ ಪ್ರಸರಣ ಆಯಿತು. ಈಗಿನ ಬಹುಸಂಖ್ಯಾತ ಸಿಹಿನೀರಿನ ಮೂಳೆಯ ಮೀನುಗಳು ನದಿಗಳು ಮತ್ತು ಸರೋವರಗಳಿಗೆ ಮೊದಲ ಮರು ಪ್ರವೇಶದಿಂದ ವಿಕಾಸಗೊಂಡಿವೆ. ಈ ಉಪವರ್ಗ ಕಾಂಡ್ರಾಸ್ಟಿಯೈ, ಹಾಲಾಸ್ಟಿಯೈ ಮತ್ತು ಟೀಲಿಯಾಸ್ಟಿಯೈ ಎಂಬ ಮೂರು ವಿಶೇಷ ಪಂಗಡಗಳಾಗಿ (ಸೂಪರ್ ಆರ್ಡರ್ಸ್) ವಿಭಾಗಿಸಲ್ಪಟ್ಟಿದೆ. ಕಾಂಡ್ರಾಸ್ಟಿಯೈ ಮೀನುಗಳು ಪೇಲಿಯೋಜೊಯಿಕ್ ಯುಗದಲ್ಲಿ ಪೇಲಿಯೋನಿಸ್ಕಿಡ್ ಮೀನುಗಳಿಂದ ಪ್ರತಿನಿಧಿಸಲ್ಪಟ್ಟಿವೆ. ಇತರ ಪ್ರಾಣಿಗಳನ್ನು ಕೊಂದು ತಿನ್ನುವ ಸಣ್ಣ ಮೀನುಗಳಿಗೆ ವಿಷಮವೃತ್ತಾಕಾರ ರೂಪದ ಬಾಲದ ಈಜುರೆಕ್ಕೆಯೂ, ಗ್ಯಾನಾಯಿಡ್ ಹುರುಪೆಗಳೂ, ಮೃದ್ವಸ್ಥಿಯಿಂದ ಮಾಡಿದ ಅಸ್ಥಿಪಂಜರವೂ ಇದ್ದುವು. ಅಸಿಪೆನ್ಸರ್, ಸ್ಕಾಫಿರಿಂಕಸ್, ಪಾಲಿಯೋಡಾನ್, ಕ್ರಾಸೊಫೋಲಿಸ್, ಸೆಫ್ಯುರಸ್ ಎಂಬ ಅವನತಮುಖವಾದ ಸಂಕೀರ್ಣತೆ ಹೊಂದಿದ ಐದು ಪ್ರಭೇದಗಳನ್ನುಳಿದು ಮಿಕ್ಕವೆಲ್ಲ ಬಹುವಾಗಿ ಅಳಿದುಹೋದವು. ಹಾಲಾಸ್ಟಿಯೈ ಗುಂಪಿನಲ್ಲಿ ಕದಿರಿನ ಈಜುರೆಕ್ಕೆಗಳುಳ್ಳ ಮೀನುಗಳಿವೆ. ಮೈಮೇಲೆ ಹುರುಪೆಗಳುಳ್ಳ ಮೂಳೆಯ ಒಳ ಅಸ್ಥಿಪಂಜರವುಳ್ಳ ಅಮಿಯ ಮತ್ತು ಲೆಪಿಡಾಸ್ಟಿಯಸ್ ಜಾತಿಗಳು ಈ ಗುಂಪನ್ನು ಪ್ರತಿನಿಧಿಸುತ್ತವೆ. ಮೂಳೆಯ ಮೀನುಗಳ ವಿಕಾಸಕ್ಕೆ ಇವು ಎಡೆ ಕೊಡುವುದರಿಂದ ಪ್ರಾಮುಖ್ಯ ಪಡೆದಿವೆ.

ಮೂಳೆ ಮೀನುಗಳು: ಇವು ಆಧುನಿಕ ಕಾಲದ ಮೀನುಗಳು. ಈಗ ಜೀವಂತವಾಗಿರುವ 90% ಭಾಗದಷ್ಟು ಮೀನುಗಳು ಈ ವರ್ಗದಲ್ಲಿವೆ. ಅವು ಬೇಗ ವೃದ್ಧಿಯಾಗಿ ಸಿನೋಜೋಯಿಕ್ ಕಾಲದಲ್ಲಿ ವಿಸ್ತಾರವಾದ ಪ್ರದೇಶಗಳಿಗೆ ಹರಡಿಕೊಂಡವು. ದೇಹದ ರಚನೆಯಲ್ಲಿ ಸಂಕೀರ್ಣತೆಯನ್ನು ತಾಳಿರುವುದಲ್ಲದೆ ಅನೇಕ ಪರಿವರ್ತನೆಗಳನ್ನೂ ಹೊಂದಿದವು. ಅವು ಸಿಹಿ ನೀರಿನಲ್ಲಿಯೂ, ಉಪ್ಪುನೀರಿನಲ್ಲಿಯೂ, ಜೌಗುಗಳಲ್ಲಿಯೂ ವಾಸಿಸುತ್ತವೆ. 35 ಕುಟುಂಬಗಳಲ್ಲಿ ಈಗ ಬದುಕಿರುವ ಮೂಳೆಯಮೀನುಗಳ ಸುಮಾರು 20,000 ಪ್ರಭೇದಗಳು ಸೇರಿವೆ. ಮಾನವರು ಆಹಾರಕ್ಕಾಗಿ ಈ ಮೀನುಗಳನ್ನು ಅವಲಂಬಿಸಿರುವರು. ಜೊತೆಗೆ ದೊಡ್ಡ ದೊಡ್ಡ ಕೈಗಾರಿಕೆಗಳು ಈ ಮೂಲಕ ಸ್ಥಾಪಿತವಾಗಿವೆ. ನೋಡಿ– ಮೀನುಗಳು.

(ಪಿ.ಎ.ಆರ್)

**ಅಳಿಲು:** ಸ್ತನಿವರ್ಗದ, ರೊಡೆನ್ಸಿಯ ಉಪವರ್ಗದ ಸ್ಕ್ವಿರಿಡೆ ಕುಟುಂಬದ ಸದಸ್ಯ (ಸ್ಕ್ವಿರಲ್). ಸಾಮಾನ್ಯವಾಗಿ ಗಿಡಮರಗಳಲ್ಲಿ ವಾಸಿಸುವುದು. ಇಣಚಿ ಇದರ ಸಾಮಾನ್ಯ ಹೆಸರು. ಅಳಿಲು ಆಸ್ಟ್ರೇಲಿಯಾ ಮತ್ತು ಮಡಗಾಸ್ಕರಗಳನ್ನು ಬಿಟ್ಟು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ವಾಸಿಸುವುದು. ಭಾರತದಲ್ಲಿ ವಾಸಿಸುವ ಅಳಿಲಿನ ಬೆನ್ನ ಮೇಲೆ ಮೂರು ಬಿಳಿ ಬಣ್ಣದ ಪಟ್ಟೆಗಳಿವೆ. ಇದರ ಬಣ್ಣ ವಿಭಿನ್ನವಾಗಿದ್ದು, ತಿಳಿಬೂದು ಬಣ್ಣದಿಂದ ಕೂಡಿದೆ. ಗಾತ್ರದಲ್ಲಿ ಇಲಿಯಷ್ಟು ಚಿಕ್ಕದು, ಬೆಕ್ಕಿನಷ್ಟು ದೊಡ್ಡದು ಇರಬಹುದು. ಶಕ್ತಿಯುತವಾದ ಸ್ನಾಯುಗಳಿಂದ ಕೂಡಿದ ದೇಹ ಬಾಗಿಕೊಂಡ, ಚೂಪಾದ ನಖ, ದೊಡ್ಡ ಕಣ್ಣು, ದಪ್ಪ ಕಿವಿ, ಉದ್ದವಾದ ಕೂದಲುಳ್ಳ ಗಡುತರವಾದ ಚಪ್ಪಟೆ ಬಾಲವನ್ನು ಹೊಂದಿದೆ. ಇದು ತನ್ನ ಗೂಡನ್ನು ಕಡ್ಡಿ ಮತ್ತು ಎಲೆಗಳಿಂದ ಕಟ್ಟುವುದು. ಗಿಡದ ಚಿಗುರು, ಎಲೆ, ಬೀಜ, ಹಣ್ಣು, ಇಲಿ, ಸಣ್ಣ ಪಕ್ಷಿ, ಕೀಟಗಳು ಇದರ ಆಹಾರ. ಹೆಣ್ಣು ಅಳಿಲು ವರ್ಷದಲ್ಲಿ ಎರಡು ಬಾರಿ ಮರಿ ಹಾಕುತ್ತದೆ. ಪ್ರತಿಬಾರಿ 2–6 ಮರಿಗಳಿಗೆ ಜನ್ಮ ನೀಡುತ್ತದೆ. ಮರಿಗಳು ಕೂದಲಿಲ್ಲದ, ಕಣ್ಣು ತೆರೆಯದ ಅಸಹಾಯಕ ಪ್ರಾಣಿಗಳಾಗಿರುತ್ತವೆ. ಮರಿ ಓಡಾಡಲು ಶಕ್ತವಾಗುವವರೆಗೆ ತಾಯಿ ಮೊಲೆಯುಣಿಸಿ ಸಾಕುತ್ತದೆ. ಮರಿಗಳು ಬೆಳೆದು ಪ್ರೌಢಾವಸ್ಥೆಗೆ ಬಂದನಂತರ ತಾಯಿಯನ್ನು ತೊರೆದು ಸ್ವಾವಲಂಬಿಗಳಾಗುತ್ತವೆ. (ಎಸ್.ಬಿ.ಎಂ)

ಅಳಿಲು

**ಅಳಿಲು ಮೀನು:** ಮತ್ಸ್ಯ (ಫಿಶ್) ವರ್ಗದ, ಹೋಲೋಸೆಂಟ್ರಿಡೆ ಕುಟುಂಬದ ಸದಸ್ಯ. ಇಂಡೋನೇಷಿಯ ಹವಾಯ್ ಮತ್ತು ಪಶ್ಚಿಮ ಇಂಡೀಸ್ ದೇಶದ ಸುತ್ತಲಿನ ಸಮುದ್ರಗಳಲ್ಲಿ ವಾಸಿಸುವ ಈ ಮೀನುಗಳಲ್ಲಿ ಸು. 70 ಜಾತಿಗಳಿವೆ. ಹವಳದ ಗುಡ್ಡಗಳಲ್ಲಿ ವಾಸಿಸುವ ಉಷ್ಣವಲಯದ ಸಮುದ್ರದ ಮೀನನ್ನು ಸಿಪಾಯಿ ಮೀನು (ಸೋಲ್ಜರ್ ಫಿಶ್) ಎನ್ನುವರು. ಮೀನುಗಳ ದೇಹದ ಮೇಲೆ ಹೊಳಪಾದ ಕೆಂಪು ಮತ್ತು ಹಳದಿ ಬಣ್ಣಗಳ ಉದ್ದವಾದ ಪಟ್ಟೆಗಳು ಇವೆ. ಇದು ಸು 30 ಸೆಂಮೀ ಉದ್ದ ಬೆಳೆಯುತ್ತದೆ. ಈ ಮೀನುಗಳಲ್ಲಿ ಕಿವಿರು, ಕವಚ, ಮೂಳೆಯ ಕೆಳಗೆ ಹಿಂಚಾಚಿದಂತೆ ಒಂದು ಬಲವಾದ ಕಂಟಕವಿದೆ. ಬೆನ್ನಿನ ಮೇಲೆ ಎರಡು ಈಜುರೆಕ್ಕೆಗಳಿವೆ. ಬಾಲದ ಈಜು ರೆಕ್ಕೆ ಕವಲೊಡೆದಿದೆ. ದೇಹದ ಮೇಲೆ ಬಿರುಸಾದ ದೊಡ್ಡ ಹುರುಪೆಗಳಿವೆ. ಮೈಮೇಲಿನ ಪಟ್ಟೆ ಅಳಿಲು ದೇಹದ ಮೇಲಿನಂತಿರುವುದರಿಂದ ಈ ಮೀನುಗಳಿಗೆ ಅಳಿಲು ಮೀನುಗಳೆಂದು ಹೆಸರಿಸಲಾಗಿದೆ. (ಸಿ.ಜಿ.ಕೆ.)

**ಅಳಿವೆ ಪ್ರಾಣಿಕೂಟ:** ನದಿಗಳು ಸಾಗರವನ್ನು ಸೇರುವಲ್ಲಿ ಉಂಟಾಗುವ ಪ್ರದೇಶವೇ ಅಳಿವೆ. ಆ ಪ್ರದೇಶಗಳಲ್ಲಿ ಬದುಕುವ ಪ್ರಾಣಿ ಸಂಕುಲವೇ ಅಳಿವೆ ಪ್ರಾಣಿಕೂಟ. ಈ ಪ್ರದೇಶ ಭೌತಿಕ, ರಸಾಯನಿಕ ಹಾಗೂ ಜೈವಿಕ ಪರಿಸ್ಥಿತಿಗಳಿಂದ ವಿಶಿಷ್ಟವಾಗಿದೆ. ಇಲ್ಲಿ ನೆಲೆಸುವ ಪ್ರಾಣಿಗಳು ಈ ಮೂರು ಪರಿಸ್ಥಿತಿಯನ್ನೆದುರಿಸಲು ಶಕ್ತವಿರುತ್ತವೆ. ಸಮುದ್ರದ ಅಲೆಗಳ ಏರಿಳಿತಗಳಾಗಲೀ, ವಿವಿಧ ಋತುವಿನಲ್ಲಾಗಲಿ, ಸಿಹಿ ನೀರು ಅಧಿಕವಾಗಿ ಹರಿದು ಉಪ್ಪಿನ ಅಂಶವನ್ನು ಕಡಿಮೆಯಾಗುವ ಅಥವಾ, ಸಮುದ್ರದ ನೀರು ಅಳಿವೆಯನ್ನು ಪ್ರವೇಶಿಸಿ ಅಲ್ಲಿಯ ನೀರಿನ ಉಪ್ಪಿನ ಅಂಶವನ್ನು ಹೆಚ್ಚಿಸುವ ಸಾಧ್ಯತೆ ಸದಾಕಾಲ ಇರುತ್ತದೆ. ಇಲ್ಲಿ ವಾಸಿಸುವ ಪ್ರಾಣಿಕೂಟಗಳು ಲವಣಾಂಶಗಳ ಪ್ರಮಾಣದ ಏರುಪೇರುಗಳನ್ನು ಸಹಿಸಲು ಹೊಂದಿಕೊಂಡಿರಬೇಕು. ಆದುದರಿಂದ ಹೆಚ್ಚಾಗಿ ಯುರಿಹೆಲೈನ್ ಪ್ರಭೇದಗಳು ಮಾತ್ರ ಶಾಶ್ವತವಾಗಿ ಅಥವಾ ಸ್ವಲ್ಪಕಾಲ ಇಲ್ಲಿ ವಾಸಿಸಲು ಸಾಧ್ಯ. ನೀರಿನಲ್ಲಿ ಕೆಸರಿನ ಕಣಗಳು (ಟರ್‌ಬಿಡಿಟಿ), ಪ್ರವಾಹದ ವೇಗ, ನೀರಿನ ಸಾಂದ್ರತೆ, ಉಷ್ಣತೆಯಂತಹ ವೈಪರೀತ್ಯವನ್ನು ಸಹಿಸಿಕೊಳ್ಳಬಲ್ಲ ಪ್ರಾಣಿಗಳು ಮಾತ್ರ ಇಲ್ಲಿ ವಾಸಿಸುತ್ತವೆ. ಈ ವೈಪರೀತ್ಯಗಳನ್ನು ಸಹಿಸಿಕೊಳ್ಳಲು ಈ ಪ್ರಾಣಿಗಳ ದೇಹದಲ್ಲಿ ವಿಶೇಷ ಮಾರ್ಪಾಟು ಮಾಡಿಕೊಳ್ಳುತ್ತವೆ.

ಅಳಿವೆಯಲ್ಲಿ ವಾಸಿಸುವ ಪ್ರಾಣಿಗಳನ್ನು ಮೂರು ಗುಂಪುಗಳನ್ನಾಗಿಸುತ್ತಾರೆ. 1) ಅಳಿವೆಯ ವಾತಾವರಣಕ್ಕೆ ಹೊಂದಿಕೊಳ್ಳಲು ಬೇಕಾಗಿರುವ ಹೊಂದಾಣಿಕೆಗಳುಳ್ಳ ಪ್ರಾಣಿ ಪ್ರಭೇದಗಳು. 2) ಉಪ್ಪಿನ ಅಂಶದ ಏರುಪೇರನ್ನು ಸಹಿಸಿಕೊಂಡು ಬದುಕಲು ಶಕ್ತವಾದ ಕಡಲ ಪ್ರಭೇದಗಳು ಮತ್ತು 3) ಹೆಚ್ಚು ಲವಣಾಂಶಗಳಿದ್ದರೂ ಸಹಿಸಿಕೊಳ್ಳಬಲ್ಲ ಸಿಹಿನೀರಿನ ಪ್ರಭೇದಗಳು. ಈ ಪೈಕಿ ಸಿಹಿನೀರಿನ ಪ್ರಭೇದಗಳಿಗಿಂತ ಅಧಿಕವಾಗಿ ಕಡಲ ಪ್ರಭೇದಗಳು ಅಳಿವೆ ಪ್ರದೇಶದಲ್ಲಿ ಕಡಲಿನಿಂದ ನದಿಗೆ (ಸಿಹಿನೀರಿಗೆ) ಮತ್ತು ನದಿಯಿಂದ ಕಡಲಿಗೆ ವಲಸೆಹೋಗುವ ಪ್ರಾಣಿಗಳು ಮತ್ತು ಸಾಗರದಿಂದ ಅಳಿವೆಗೆ ಮೊಟ್ಟೆಯಿಡಲು ಆಗಮಿಸುವ ಪ್ರಾಣಿಗಳು ಇಲ್ಲಿ ಸಂದರ್ಭಾನುಸಾರ ಲಭ್ಯ. ಅಂತಹ ಪ್ರಾಣಿಗಳಲ್ಲಿ ಶರೀರ ಕ್ರಿಯೆ ಮತ್ತು ಹಾರ್ಮೋನುಗಳ ಹೊಂದಾಣಿಕೆಗಳಿವೆ.

ಅಳಿವೆ ಪ್ರಭೇದ ಪ್ರಾಣಿಗಳನ್ನು ಸಿಹಿನೀರಿನ ಮೂಲದ ಲಿಮ್ನೊಜೆನಿಕ್ ಮತ್ತು ಸಾಗರಮೂಲ ತಲಸೋಜೆನಿಕ್ ಎನ್ನುವರು. ಕಡಲ ಪ್ರಾಣಿಗಳು ಸಿಹಿನೀರಿನ ಪ್ರಾಣಿಗಳಿಗಿಂತ ಸುಲಭವಾಗಿ ದೇಹದ ನೀರು ಮತ್ತು ಲವಣಾಂಶವನ್ನು ನಿಯಂತ್ರಿಸಲು ಶಕ್ತವಾಗಿವೆ. ಆದುದರಿಂದ ಅವುಗಳ ಸಂಖ್ಯೆ ಅಳಿವೆಯಲ್ಲಿ ಹೆಚ್ಚು.

ಅಳಿವೆ ಪ್ರದೇಶದಲ್ಲಿ ಹೆಚ್ಚು ಪೋಷಕಗಳಿರುವುದರಿಂದ ಇಲ್ಲಿ ಉತ್ಪಾದನೆ ಅಧಿಕ. ಅಧಿಕ ಉತ್ಪಾದನಾ ಸಾಮರ್ಥ್ಯವಿರುವ ಈ ಪ್ರದೇಶದಲ್ಲಿ ಜಲವ್ಯವಸಾಯದ ಮೂಲಕ ಆಹಾರೋತ್ಪಾದನೆ ಮಾಡಲಾಗುತ್ತಿದೆ.

ಅಳಿವೆ ಪ್ರದೇಶದಲ್ಲಿ ಪ್ಲಾಂಕ್ಟಾನು (ತೇಲುಜೀವಿ) ಗಳಲ್ಲಿ ಲುಸಿಫೆರ ಹೆಸ್‌ಸಿನ, ಪೆಲೋಯಾನ್ ರೂಡಿಸ್, ಅನೇಕ ಡೆಕಾಪೋಡ್ ಪ್ಲಾಂಕ್ಟಾನುಗಳು, ಕ್ಲಾಡೊಸೀರಗಳು, ಮೈಸಿಡುಗಳು ಸಾಮಾನ್ಯವಾಗಿವೆ. ಈಲೊಪ್ಸಿಡೆ ಕ್ಲುಪಿಡೆ, ಎನ್‌ಗ್ರಾಲಿಡೆ, ಪರ್ಸಿಡೆ, ಗೋಬಿಡೆ, ಮ್ಯುಜಿಲ್ಲಿಡೆ, ಪೋಲಿನಿಮಿಡೆ, ಹೆಮಿರ್‍ಹಾಂಫಿಡೆ ಮತ್ತು ಪ್ಲುರೊನೆಕ್ಟಿಡೆ ಕುಟುಂಬಗಳಿಗೆ ಸೇರಿದ ಮತ್ಸ್ಯಗಳು ಅಳಿವೆಯಲ್ಲಿ ಜೀವಿಸುತ್ತವೆ. ಸಿಹಿನೀರಿನ ಮೀನುಗಳ ಪೈಕಿ, ಸೈಲೂರಿಡ್‌ಗಳು ಮತ್ತು ಸಿಕ್ಲಿಡೆಗಳು ಅಳಿವೆಯಲ್ಲಿವೆ.

ಭಾರತದ ಅಳಿವೆಗಳಲ್ಲಿರುವ ಪ್ರಾಣಿಗಳ ಪೈಕಿ, ಫೈಟೊಸೀಟಸ್, ಪೀಲೊಸೀಟಸ್, ಸ್ಟೆಫನ್‌ಸೊನೆಕ್ಟಸ್, ಹೂಳುವ ಅನಿಮಾಸ್‌ಗಳು ಮಣ್ಣಿನಲ್ಲಿ ಹೂತು ಕೊಂಡಿರುತ್ತವೆ. ಅಕ್ರೊಮೈಟಸ್ ಎಂಬ ಸ್ಕೈಫೊಜೋವ, ನೀರಿಸ್ ನಂತಹ ಪೋಲಿಕೀಟ ಹುಳುಗಳು, ಕೊರೊಫಿಯಂ ಎಂಬ ಆಂಫಿಪಾಡ್ (ಮಣ್ಣಿನ ಕೊಳವೆಯಲ್ಲಿ ಜೀವಿಸುವ) ಪ್ರಾಣಿಗಳು ಅಳಿವೆಯಲ್ಲಿವೆ. ಪೀನಿಯಸ್ ಮತ್ತು ಮೆಟಾಪೀನಿಯಸ್, ಪೀನಿಡ್‌ಸಿಗಡಿ ಮೀನುಗಳು ಲಿಯಾಂಡರ್ ಪ್ರಭೇದಗಳು, ಪೆಲೆಮೋನಿಡ್, ಸಿಗಡಿ ಮೀನುಗಳು, ಜಿಲಾಸಿಮಸ್, ಕಾರ್ಡಿಯೊಸೋಮ, ಸಿಸಾರ್ಮ, ಮೆಟಾಸಿಸಾರ್ಮ, ಸೈಲ್ಲ, ನೆಪ್ಚುನಸ್, ಮುಂತಾದ ಏಡಿಗಳು ಅಳಿವೆಯಲ್ಲಿ ಜೀವಿಸುವ ಡೆಕಾಪೋಡಗಳು. ಮೃದ್ವಂಗಿಗಳ ಪೈಕಿ ಮೆರಿಟ್ರಿಕ್ಸ್, ಟೇಪಿಸ್, ಮೋಡಿಯೋಲಸ್, ವಿಲ್ಲೊರಿಟ, ಕಟಲಿಷಿಯಾ ಜಾತಿಯ ಪ್ರಾಣಿಗಳಿವೆ.

ಭಾರತದ ಕರಾವಳಿಯಲ್ಲಿ ಹೂಗ್ಲಿಮಾಟ್ಲ ಅಳಿವೆ ಮುಖ ಸು. 3,100 ಚಮೀ ಗಳಷ್ಟಿದ್ದು ಅತ್ಯಂತ ದೊಡ್ಡ ಅಳಿವೆಯಾಗಿದೆ. ಗಂಗಾ, ಬ್ರಹ್ಮಪುತ್ರದ ಕುದುರು ಪ್ರದೇಶವನ್ನು ಇದು ಆವರಿಸಿದೆ. ಇಲ್ಲಿ ಕಶಾಂಗಧಾರಿಗಳಾದ ಯುಗ್ಲಿನ, ಸಿರಾಶಿಯಂ, ಪೆರಿಡಿನಿಯಂ, ನೊಕ್ಟಿಲ್ಯುಕ ಆದಿಜೀವಿಗಳಾದ ಡಿಫ್ಲ್ಯುಜಿಯಾ, ಆರ್ಸಿಲ್ಲ, ವೊರ್ಟಿಸೆಲ್ಲ ಪ್ರಾಣಿಗಳು ಹೆಚ್ಚಾಗಿವೆ. ಬ್ರಾಕಿಯೊನಸ್, ಕೆರಟೆಲ್ಲ, ಆಸ್ಪ್‌ಪ್ಲಾಂಕ್ನ ರೊಟಿಫೇರಗಳು, ಡಯಾಪ್ಟೋನಸ್, ಸ್ಯುಡೊಡಯಾಪ್ಟೋನಸ್, ಕೋಪಿಪಾಡ್‌ಗಳೂ, ಬೊಸ್ಮೀನ್, ಬೊಸ್ಮಿನೊಪ್‌ಸಿಸ್, ಸರಿಯಡಾಫ್ನಿಯಾ, ಮೊಯಿನಾ ಮುಂತಾದ ಕ್ಲಾಡೊಸೀರಗಳು, ಐಸೊಪಾಡ್‌ಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಮೇಲಿನ ಪ್ರಾಣಿಗಳು ಪ್ಲಾಂಕ್ಟಾನುಗಳಾದರೆ, ಅಂಟುಜೀವಿಗಳಾಗಿ ವಲಯವಂತ ಟ್ಯುಬಿಫೆಕ್ಸ್, ಕೈರೊನೊಮಿಡ್‌ಗಳು, ಗೆಸ್ಟ್ರೊಪಾಡ್‌ಗಳೂ ಇವೆ.

ಅಳಿವೆ ಪ್ರದೇಶ ಅತ್ಯುತ್ತಮವಾದ ಮತ್ಸ್ಯೋತ್ಪನ್ನ ಪ್ರದೇಶ. ವಲಸೆ ಹೋಗುವ ಮೀನುಗಳು ಅಳಿವೆಯಲ್ಲಿ ಬಹಳ ಕಾಲ ಜೀವಿಸುತ್ತವೆ. ವಾಣಿಜ್ಯೋದ್ಯಮ ಪ್ರಾಮುಖ್ಯತೆ ಪಡೆದ ಮೀನುಗಳಾದ ಹಿಲ್ಸಾ, ಕ್ಲುಪಿಡುಗಳು, ಹರ್ಪೊಡಾನ್, ಮುಲ್ಲೆಟು, ಮೀಸೆಮೀನು, ಸಿಗಡಿ ಮೀನುಗಳು ಇಲ್ಲಿ ಜೀವಿಸುತ್ತವೆ.

ಅಡ್ಯಾರ್ ಅಳಿವೆಯಲ್ಲಿ ಫೈಟೊಸೀಟಸ್‌ರಮನ್ನಿ, ಸ್ಟಿಫನ್‌ಸೊನೆಟಿಸ್ ಓರ್‌ನೇಟಸ್ ಸಮುದ್ರ ಎನಿಮಾನ್‌ಗಳು ವಿಫುಲವಾಗಿವೆ. ಅಕ್ರೊಮೈಟಸ್, ಫ್ಲೇಜಲ್ಲೇಟಸ್, ಲೋಳೆ ಮೀನು, ಸಾಮಾನ್ಯವಾಗಿ ವಾಸಿಸುವ ಪ್ರಾಣಿಗಳು. ಸನ್ಯಾಸಿ ಏಡಿಗಳಾದ ಕ್ಲೈಬನೇರಿಸ್, ಓಲಿವೇಸಿಯಸ್, ಕ್ಲೈ. ಪಡವಸ್‌ಸಿಸ್‌ಗಳು ಇವೆ. ನೀರ ಹಾವು ನಟ್ರಿಕ್ಸ್ ಪಿಸ್‌ಕೇಟರ್ ಸರ್‌ಬ್ರೀಸ್ ರ್‍ಹಿನೊಯಿಸ್ ಅಳಿವೆಯಲ್ಲಿ ಕಾಣಸಿಗುತ್ತವೆ.

ಕೆಲವು ಅಳಿವೆಗಳಲ್ಲಿ ಗಾಲಪಾಗೋಸ್ ಇಗ್ವಾನಾದಂತಹ ಕಡಲಹಲ್ಲಿ, ಮನಾಟಿ, ಡೊಲ್ಫಿನ್ ಸಹ ವಾಸಿಸುವುದು ಅಳಿವೆ ಪ್ರಾಣಿಕೂಟದ ವೈವಿಧ್ಯತೆಗೆ ಸಾಕ್ಷಿ. (ಎಂ.ಎನ್.ಎಂ.)

# ಆ

**ಆಂಕೈಲೋಸಾರಿಯ:** ಮೀಸೊಜೋಯಿಕ್ ಕಾಲದಲ್ಲಿ ವಾಸಿಸುತ್ತಿದ್ದ ಬೃಹತ್‌ದೇಹಿ ಚತುಷ್ಪಾದಿ. ಕ್ರಿಟೇಸಿಯಸ್ ಕಾಲದಲ್ಲಿದ್ದ ಈ ಜೀವಿಗಳು ಕವಚ ಹೊಂದಿದ್ದು, ಸ್ಟೀಗೋಸಾರ್‌ಗಳಷ್ಟು ಆಶ್ಚರ್ಯಕಾರಿ ಶರೀರವನ್ನು ಹೊಂದಿಲ್ಲದಿದ್ದರೂ ಇವು ಕವಚದಿಂದಾಗಿ ಹೆಚ್ಚು ರಕ್ಷಣೆಯನ್ನು ಪಡೆದಿದ್ದವು. ಕವಚಗಳು ತಟ್ಟೆಗಳಂತಿದ್ದು, ಕೊಂಬಿನಂತಹ ವಸ್ತುವಿನಿಂದ ಹೊದಿಸಲ್ಪಟ್ಟ ಎಲುಬಿನ ರಚನೆ ಇತ್ತು. ಈ ಕವಚವು ತಲೆಯಿಂದ ಬಾಲದವರೆಗೆ ಸಂಪೂರ್ಣ ಶರೀರವನ್ನು ಆರ್ಮಡಿಲ್ಲೊ ರೀತಿಯಲ್ಲಿ ಮುಚ್ಚಿತ್ತು. ಶಾರೀರಿಕವಾಗಿ ಬಹಳ ಬಲಿಷ್ಠವಾಗಿತ್ತು. ತಲೆ ಬುರುಡೆಯು ಅಗಲವಾಗಿದ್ದು ಕವಚದ ತಟ್ಟೆಗಳಿಂದಾವೃತವಾಗಿತ್ತು. ಬಾಗಿದ ಬೆನ್ನು ಮಧ್ಯೆ ಕೂಡ ಕೂಡಿಕೊಂಡಿರುವ ತಟ್ಟೆಗಳಿದ್ದುವು. ಭಾರವಾದ, ಬಲಿಷ್ಠ ಮತ್ತು ಗಟ್ಟಿಯಾದ ಬಾಲದ ತುದಿಯಲ್ಲಿ ದುಂಡನೆಯ ಗದೆಯಂತಹ ಆಕೃತಿಯಿತ್ತು.

ಕ್ರಿಟೇಸಿಯಸ್ ಕಾಲದಲ್ಲಿ ಈ ಪ್ರಾಣಿಗಳು ಗಣನೀಯ ಸಂಖ್ಯೆಯಲ್ಲಿದ್ದುವು. ಇವು ಮಾಂಸಾಹಾರಿ ಪ್ರಾಣಿಗಳಾದ ಟಿರಾನೋಸಾರಸ್‌ಗಳಿಗೆ ಅಷ್ಟಾಗಿ ಹೆದರುತ್ತಿದ್ದಿಲ್ಲ. ಕಾರಣ, ಇವುಗಳ ದೇಹದ ಮೇಲಿದ್ದ ಕವಚವು ಎಲ್ಲಾ ರೀತಿಯ ಆಕ್ರಮಣಗಳಿಂದಲೂ ಸಾಕಷ್ಟು ರಕ್ಷಣೆ ನೀಡುತ್ತಿತ್ತು. ಜೊತೆಗೆ ಉದ್ದನೆಯ ಚಾವಟಿಯೋಪಾದಿಯ ಬಾಲ ಮತ್ತು ಅದರ ತುದಿಯಲ್ಲಿದ್ದ ಗದೆಯಾಕಾರದ ದೇಹ ರಕ್ಷಿಸಿ ಕೊಳ್ಳುತ್ತಿತ್ತು. ಕ್ರಿಟೇಸಿಯಸ್ ಕಾಲದ ಇನ್ನಿತರ ಕವಚಯುಕ್ತ ಪ್ರಾಣಿಗಳು ಆಂಕೈಲೋಸಾರಸ್‌ನಂತೆಯೇ ಇದ್ದುವು. ಉದಾ: ಪೆಲಿಯೋಸಿಂಕಸ್ ಮತ್ತು ನೋಡೋಸಾರಸ್. (ಎಸ್.ಎನ್.ಹೆಚ್)

**ಆಂಗ್ವಿಲ:** ಕಾರ್ಡೇಟಾ ವಂಶದ ಮೀನುಗಳಲ್ಲಿ ಟೇಲೀಯೋಸ್ಟೋಮೈ ವರ್ಗದ ಆಂಗ್ವಿಲಿಫಾರ್ಮಿಸ್ ಗಣಕ್ಕೆ ಸೇರಿರುವ ಆಂಗ್ವಿಲಿಡೆ ಕುಟುಂಬದ ಏಕೈಕ ಜಾತಿ. ಸಿಹಿನೀರಿನ ಈಲ್ ಎಂದೂ ಹೆಸರಿದೆ. ಇದರ ಹದಿನಾರು ಪ್ರಭೇದಗಳು ಯೂರೋಪ್, ಅಮೇರಿಕಾ, ಜಪಾನ್, ಭಾರತದ ನದಿ ಮತ್ತು ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ.

ಹಾವಿನಂತೆ ದುಂಡಾದ 1 ರಿಂದ 1.3 ಮೀ. ಉದ್ದದ ಶರೀರದಲ್ಲಿ ಅಧಿಕ ಸಂಖ್ಯೆಯ ಕಶೇರುಮಣಿಗಳಿವೆ. ಕ್ಷೀಣಿಸಿದಂತಿರುವ ಹುರುಪೆಗಳು ಚರ್ಮದಲ್ಲಿ ಹುದುಗಿರುವುವು. ನುಣುಪಾದ ಮತ್ತು ಉದ್ದವಾದ ಮೇಲ್ಭಾಗದ ಹಾಗೂ ಗುದ ಈಜುರೆಕ್ಕೆಗಳು ಮಾಯವಾಗಿವೆ. ಮುಳ್ಳುಗಳಿಲ್ಲದ ಈಜುರೆಕ್ಕೆಗಳಿಗೆ ಫಿನ್‌ರೇಗಳ ಆಧಾರವಿರುವುದು. ಕಿವಿರು ರಂಧ್ರ ಇಕ್ಕಟ್ಟಾಗಿವೆ. ಗಾಳಿಯ ಚೀಲಕ್ಕೆ ವಾಯು ನಾಳ ಇರುವುದು. ಗಾಳಿ ಮತ್ತು ನೀರುಗಳೆರಡರಲ್ಲೂ ಚರ್ಮವು ಶ್ವಾಸಾಂಗದಂತೆ ಕಾರ್ಯನಿರ್ವಹಿಸುವುದು. ಇದರಿಂದ ಭೂಮಿಯ ಮೇಲೂ ತೆವಳಬಲ್ಲುದು. ಅಂಡವಾಹಿಗಳು ನಶಿಸಿರುವುದರಿಂದ ಜನನ ರಂಧ್ರಗಳ ಮೂಲಕ ಅಂಡಾಣುಗಳು ಹೊರಬರುತ್ತವೆ.



ಈಲ್ ಮೀನು

ಪೋಷಕ ಕೇಂದ್ರಗಳಾದ ನದಿಗಳಿಂದ ಮೊಟ್ಟೆ ಇಡುವ ಕೇಂದ್ರಗಳಿಂದ ಸಾಗರಗಳಿಗೆ ಕೆಟಡ್ರೋಮಸ್ ರೀತಿಯ ವಲಸೆ ಹೋಗುವುವು. ಅದರಲ್ಲೂ ಜಗತ್ಪ್ರಸಿದ್ಧ ಅಮೇರಿಕಾ ಮತ್ತು ಯೂರೋಪಿನ ಈಲ್‌ಮೀನುಗಳ ವಲಸೆ ಬಗ್ಗೆ ಹಲವಾರು ಅನ್ವೇಷಣೆ ಮತ್ತು ಸಂಶೋಧನೆಗಳು ಜರುಗಿವೆ. ಶಾಖದ ಏರುಪೇರು; ನೀರು ಲವಣಾಂಶ, ಬೆಳಕು, ಒತ್ತಡ, ರಕ್ತದಲ್ಲಿ ಬದಲಾವಣೆಗಳು, ಹಾರ್ಮೋನುಗಳು, ಪ್ರೌಢಸ್ಥಿತಿಯ ಪ್ರೇರಕಗಳಿಂದ ನಿಂತಲ್ಲಿ ನಿಲ್ಲದ ಈಲ್‌ಗಳು ಪ್ರಯಾಣ ಸನ್ನದ್ಧವಾಗುತ್ತವೆ. ದೇಹದಲ್ಲಿ ಸಂಗ್ರಹಗೊಂಡ ಕೊಬ್ಬು ಮಾರ್ಗಯಾನಕ್ಕೆ ಬುತ್ತಿಯಾಗುವುದು. ಸಮುದ್ರಕ್ಕೆ ತಲುಪಿದ ವರ್ಷಾನಂತರ ಮಾರ್ಚ್–ಏಪ್ರಿಲ್‌ನಲ್ಲಿ ಹೆಣ್ಣು ಸುಮಾರು 20 ಮಿಲಿಯನ್ ಮೊಟ್ಟೆ ಇಡುವುದು. ಈ ಕಾಲದಲ್ಲಿ ಬೆಳ್ಳಿಬಣ್ಣಕ್ಕೆ ತಿರುಗಿ ಬೆಳ್ಳಿ ಈಲ್‌ಗಳೆಂದು ಪ್ರಸಿದ್ಧಿಯಾಗಿವೆ. ಜೀವನದಲ್ಲಿ ಒಮ್ಮೆ ಮೊಟ್ಟೆ ಇಟ್ಟ ಸಂತೃಪ್ತಿಯಿಂದಲೇ ಗಂಡುಹೆಣ್ಣುಗಳೆರಡೂ ಮೃತ್ಯುವನ್ನಪ್ಪುತ್ತವೆ. ಸ್ವಲ್ಪಕಾಲ ನೀರಿನಲ್ಲಿ ತೇಲುವ ಮೊಟ್ಟೆಗಳು ಲೆಪ್ಟೋಕೆಫ್ಯಾಲಸ್ ಎಂಬ ಡಿಂಬಗಳಾಗುತ್ತವೆ. ಇವಕ್ಕೆ ಗಾಜುಈಲ್ ಎಂದು ಹೆಸರು. ಇವು ಎಲೆಯಂತೆ ತೆಳುವಾಗಿದ್ದು ಪಾರದರ್ಶಕವಾಗಿರುವುವು. ಉದ್ದ ಹಲ್ಲುಗಳು ಸೂಜಿಯಂತೆ ಮೊನಚಾಗಿವೆ. ಸುಮಾರು ಮೂರು ವರ್ಷಗಳ ಕಾಲ ತೇಲುತ್ತಿದ್ದು 7–7½ ಸೆಂ.ಮೀ. ವರೆಗೂ ಬೆಳೆದು ರೂಪಪರಿವರ್ತನೆಗೊಳ್ಳುತ್ತವೆ. ಅಗಲವಾದ ಹಲ್ಲುಗಳ, ದುಂಡನೆಯ ಶರೀರದ ಎಲ್ವರ್ ಈಲ್ ಗಳೆಂಬ ಈ ಹಂತದಿಂದ ತಮ್ಮ ಪೋಷಕ ಕೇಂದ್ರ, ನದಿಗಳಿಗೆ ಹಿಂತಿರುಗಲು ಆರಂಭಿಸುತ್ತವೆ. ಸುವ್ಯವಸ್ಥಿತ ಮೆರವಣಿಗೆಯಂತಿರುವ ಈ ಪ್ರಯಾಣದಲ್ಲಿ ಮುಂದಾಳುಗಿರುವ ಹೆಣ್ಣುಗಳನ್ನು ಗಂಡುಗಳನ್ನು ಹಿಂಬಾಲಿಸುತ್ತವೆ. ಹಳದಿ ಈಲ್‌ಗಳಾಗಿ ಮುಂದುವರೆಯುವಾಗ ಕ್ರಮೇಣ ಹಿಂಜರಿವ ಗಂಡು ಈಲ್‌ಗಳ ಬೆಳವಣಿಗೆಯೂ ಸ್ತಬ್ಧವಾಗುವುದು. ಆದರೆ ಪ್ರಯಾಣ ಮುಂದುವರೆಸುವ, ಹೆಣ್ಣುಗಳು ದೊಡ್ಡವಾಗಿ ಬೆಳೆಯುತ್ತವೆ. ಸುಮಾರು ಹತ್ತು–ಹದಿನೈದು ವರ್ಷಗಳ ನಂತರ ಕಪ್ಪು ಈಲ್‌ಗಳಾಗಿ ವಲಸೆಹೋಗುತ್ತವೆ.

ಆರ್ಥಿಕವಾಗಿಯೂ ಪ್ರಸಿದ್ಧಿಯಾಗಿವೆ. 1966 ರಲ್ಲಿ ಸುಮಾರು 17,000 ಟನ್‌ಗಳಷ್ಟು ಆಂಗ್ವಿಲವನ್ನು ಇಂಗ್ಲೆಂಡಿನಲ್ಲಿ ಹಿಡಿಯಲಾಗಿತ್ತು. ಇಂಗ್ಲೆಂಡಿನ ಸೆವೆರ್ನ್‌ನಲ್ಲಿರುವ ಎಪ್ನಿ ಎಂಬುದು ಹೆಸರುವಾಸಿಯಾದ ಆಂಗ್ವಿಲ ಮೀನು ಹಿಡಿಯುವ ಸ್ಥಾನ. ಅಷ್ಟೇನೂ ಗಮನಾರ್ಹವಲ್ಲದ ಅಮೇರಿಕಾ ಆಂ. ರೋಸ್ಟ್ರೇಟಾ ಸಹ 2000 ಟನ್‌ಗಳಷ್ಟು ಮೀನು ಒದಗಿಸಿತ್ತು. ಇದೇ ವರ್ಷ ಜಪಾನಿನಲ್ಲಿ (ಆಂ. ಜಪಾನಿಕ) 20,000 ಟನ್ ಮೀನು ಉತ್ಪಾದನೆಯಾಗಿತ್ತು. ಒಂದೇ ರೀತಿಯ ಈ ಮೂರು ದೇಶದ ಈಲ್‌ಗಳೂ ಒಂದು ಪ್ರಭೇದದ ಮೂರು ಉಪಪ್ರಭೇದಗಳೆಂದು ಕೆಲವರ ವಾದ. ಭಾರತದಲ್ಲಿಯೂ ಆಂಗ್ವಿಲಾ ವುಲ್ಗ್ಯಾರಿಸ್ ಗಂಗಾ ನದೀಮುಖಗಳಲ್ಲಿ, ಬಂಗಾಳಕೊಲ್ಲಿ, ಇಂಡೋಫೆಸಿಫಿಕ್ ಸಾಗರಮುಖಗಳಲ್ಲಿ ದೊರೆಯುವುದು. (ಟಿ.ವಿ.ಹೆಚ್.)

**ಆಂಟೆನೂಲ್:** ಸಂಧಿಪದಿ ವಂಶದ ಮ್ಯಾನ್‌ಡಿಬುಲೇಟ ಉಪವಿಭಾಗದಲ್ಲಿರುವ ಕೆಲವು ಜೀವಿಗಳ ಶಿರಭಾಗದಲ್ಲಿರುವ ಮೊದಲ ಜೊತೆ ಅನುಬಂಧಕಾಂಗಗಳು. ನಾಪ್ಲಿಯಸ್ ಡಿಂಬಾವಸ್ಥೆಯಲ್ಲಿ ಮತ್ತು ಮ್ಯಾನ್‌ಡಿಬುಲೇಟ್ ಉಪ ವಿಭಾಗದ ವಿವಿಧ ಬಗೆಯ ಜೀವಿಗಳಲ್ಲಿ ಈ ಅನುಬಂಧಕಾಂಗಗಳು ಏಕಶಾಖಾಂಗಗಳು. ಆದರೆ ಮಲಕಾಸ್ತ್ರಕಾದ ಜೀವಿಗಳಲ್ಲಿ ದ್ವಿಶಾಖಾಂಗಗಳು. ಇನ್ನು ಕೆಲವು ಜಾತಿಯಲ್ಲಿ ತ್ರಿಶಾಖಾಂಗಗಳು. ಆಂಟೆನೂಲ್‌ಗಳು ಶಿರಕ್ಕೆ ಸಂಬಂಧಿಸಿದ ಅನುಬಂಧಕಾಂಗಗಳು. ಮಿದುಳಿಂದ ಹೊರಟ ನರಗಳು ನೇರವಾಗಿ ಇವುಗಳಲ್ಲಿ ಆವರಿಸಿರುತ್ತವೆ. ಇವು ಸಾಮಾನ್ಯವಾಗಿ ಸ್ಪರ್ಶಾಂಗಗಳು, ಕೆಲವಲ್ಲಿ ಸಂವೇದನಾಂಗಗಳು, ಇನ್ನು ಕೆಲವಲ್ಲಿ ಬಂಧನಾಂಗಗಳು, ಮತ್ತು ಕೆಲವು ಜಾತಿಯ ಜೀವಿಗಳಲ್ಲಿ ಅಲಿಂಗನಾಂಗಗಳಾಗಿಯೂ ಪರಿವರ್ತಿತಗೊಂಡಿವೆ.

ಇದರ ತುದಿಯಲ್ಲಿರುವ ಎರಡನೆಯ ಜೊತೆ ಅನುಬಂಧಕಾಂಗಗಳೇ ಆಂಟೆನಾಗಳು. ಬಾಯಿಯ ಅಕ್ಕ–ಪಕ್ಕ ಇರುವುದರಿಂದ ಸಿಗುವ ಆಹಾರವನ್ನು ಬಾಯತ್ತ ನೂಕುತ್ತವೆ. ಹಾಗಾಗಿ ಮ್ಯಾಂಡಿಬಲ್‌ಗಳು (ದವಡೆಗಳು) ಆಹಾರವನ್ನು ಅಗಿಯಲು ಸಹಾಯಕವಾಗಿವೆ. ಮರಿಗಳಲ್ಲಿ ಇವು ಬಾಯಿಯ ಹಿಂಭಾಗದಲ್ಲಿ ಉದ್ಭವಿಸಿದಂತಿದ್ದರೂ ಬೆಳವಣಿಗೆಯಾದಂತೆ ಇವು ಬಾಯಿಯ ಮುಂಭಾಗಕ್ಕೆ ಜರಗುತ್ತವೆ. ಡಿಂಬಾವಸ್ಥೆಯಿಂದ ಪ್ರೌಢಾವಸ್ಥೆಯವರೆಗೂ ಇವು ದ್ವಿಶಾಖಾಂಗಗಳ ಅನುಬಂಧಕಾಂಗಗಳು. ಚಲನೆಯಲ್ಲಿ, ಆಲಿಂಗನದಲ್ಲಿ ಮತ್ತು ಬಂಧನಕ್ರಿಯೆಯಲ್ಲಿ ಭಾಗವಹಿಸುತ್ತವೆ. ಮಲಕಾಸ್ತ್ರಕಾ ಗುಂಪಿನಲ್ಲಿ ಇವು ಸಂವೇದನಕ್ರಿಯೆಯಲ್ಲಿ ತೊಡಗಿದ್ದರೆ ಪರಾವಲಂಬಿಗಳಲ್ಲಿ ಇವು ಚಾಟಿಯಂತೆ ಉದ್ದನೆಯ ಅಂಗಗಳಾಗಿವೆ.

ಡೆಕಪೋಡ್ ವರ್ಗದಲ್ಲಿ ಮೊದಲೆರಡು ಜೊತೆ ಉಪಾಂಗಗಳೇ ಆಂಟೆನೂಲ್ ಮತ್ತು ಆಂಟನಾಳಗಳಾಗಿವೆ. ಇವುಗಳ ಕಾರ್ಯ ಸ್ಪರ್ಶ, ಸಂವೇದನೆ, ಸಮತೋಲನ, ಸಂರಕ್ಷಣೆ ಮತ್ತು ಘ್ರಾಣ ಕ್ರಿಯೆ. ಸಾಮಾನ್ಯವಾಗಿ ಆಂಟೆನೂಲ್‌ಗಳು ಮೂರು ಪಾದಖಂಡಗಳಿಂದಾಗಿವೆ. ಮೊದಲ ಪಾದಖಂಡದಲ್ಲಿ (ಪ್ರಿಕಾಕ್ಸ) ಸಂತುಲನಾಕೋಶ, ಅದರ ಹೊರ ಅಂಚಿನಲ್ಲಿ ಮುಳ್ಳಿನಂತಹ ಅನೇಕ ಸ್ಟೈಲೋಸೆರೈಟ್ ಎಂಬ ಪಾದ ಇದೆ. ನಿರಡೆಯ ಪಾದಖಂಡ ಮೊಂಡಾ ಮತ್ತು ದುಂಡನೆಯ ಕಾಕ್ಸ. ಇದರ ಮುಂಭಾಗದಲ್ಲಿರುವ ಬೇಸಿಸ್ ಎಂಬ ಮೂರನೇ ಪಾದ ಖಂಡದ ತುದಿಯಲ್ಲಿ ಅನೇಕ ತುಂಡುಗಳಿಂದಾದ ಕುಡಿಮೀಸೆಗಳು ಇರುತ್ತವೆ. ಎರಡನೆಯ ಜೊತೆ ಆಂಟನಾಗಳು 5 ಪಾದ ಖಂಡಗಳಿಂದಾಗಿವೆ. ಇವುಗಳಲ್ಲಿ ಎಲೆ ಮಾದರಿಯ ಹೊರಪಾದಾಂಗ ಮತ್ತು ಚಾಟಿಯಂತಹ

ಒಳಪಾದಾಂಗಗಳಲ್ಲದೆ, ವಿಸರ್ಜನಾ (ರೀನಲ್) ರಂಧ್ರವಿದೆ. ಆಂಟೆನೇರಿ ಅಥವಾ ಹಸಿರು ಗ್ರಂಥಿಗಳನ್ನು ಆಂಟೆನೂಲ್‌ಗಳಲ್ಲಿ ಕಾಣಬಹುದು. (ಜಿ.ಎಮ್.ಬಿ.)

**ಆಂಟೆನೇಟ:** ಸಂಧಿಪದಿಗಳ ಒಂದು ಗುಂಪು. ಆಂಟೆನೇಟ ಮತ್ತು ಮ್ಯಾಂಡಿಬುಲೇಟ ಪರ್ಯಾಯ ಪದಗಳು. ಮ್ಯಾಂಡಿಬುಲೇಟ ಸಂಧಿಪದಿ ವಂಶದ ಒಂದು ಉಪವಿಭಾಗ. ಇದರಲ್ಲಿ ಕ್ರಸ್ಟೇಸಿಯಾ, ಇನ್‌ಸೆಕ್ಟ ಮತ್ತು ಮಿರಿಯೋಪೋಡ ವರ್ಗಗಳಿವೆ. ಮ್ಯಾಂಡಿಬುಲೇಟ ಉಪವಿಭಾಗಕ್ಕೆ ಸೇರಿರುವ ಸಂಧಿಪದಿಗಳಲ್ಲಿ ಒಂದು ಅಥವಾ ಎರಡು ಜೊತೆ ಆಂಟೆನಾಗಳು ಮತ್ತು ಒಂದು ಜೊತೆ ಮ್ಯಾಂಡಿಬಲ್‌ಗಳು ಇರುವುದರಿಂದ ಈ ಗುಂಪನ್ನು ಆಂಟೆನೇಟ ಅಥವಾ ಮ್ಯಾಂಡಿಬುಲೇಟ ಎನ್ನುವರು. ಆಂಟೆನಾಗಳು ಮತ್ತು ಮ್ಯಾಂಡಿಬಲ್‌ಗಳು ಜೊತೆಯಾಗಿರುವ ಅಂಗಾಂಗಗಳು. ಇವು ವಲಯಕ್ಕೆ ಸೀಮಿತವಾದ ಅನುಬಂಧಕಾಂಗಗಳು. ಮೊದಲ ಜೊತೆಯನ್ನು ಆಂಟೆನೂಲ್‌ಗಳೆಂದೂ, ಎರಡನೆ ಜೊತೆಯನ್ನು ಆಂಟೆನಾಗಳೆಂದೂ ಕರೆಯಲಾಗುತ್ತದೆ. ಇವೆರಡರ ಕಾರ್ಯ ಸ್ಪರ್ಶ, ಸಂವೇದನೆ, ಸಮತೋಲನ, ಸಂರಕ್ಷಣ ಮುಂತಾದುವು. ಮೂರನೆ ಜೊತೆ ಅನುಬಂಧಕಾಂಗಗಳೇ ಮ್ಯಾಂಡಿಬಲ್‌ಗಳು. ಇವು ಬಾಯಿಯ ಅಕ್ಕ ಪಕ್ಕ ಇವೆ. ಆಹಾರವನ್ನು ಅಗಿಯಲು ಸಹಾಯ ಮಾಡುತ್ತವೆ. ಕೆಲವು ಸಂಧಿಪದಿಗಳಲ್ಲಿ ಕೇವಲ ಒಂದೇ ಜೊತೆ ಆಂಟೆನಾ ಇರುವುದು. ಆಂಟೆನಾಗಳು ಮತ್ತು ಮ್ಯಾಂಡಿಬಲ್‌ಗಳು ವಿವಿಧ ಗುಂಪಿನಲ್ಲಿ ಅವಶ್ಯಕತೆಗೆ ತಕ್ಕಂತೆ ಮಾರ್ಪಾಟಾಗಿರುವುದನ್ನು ಕಾಣಬಹುದು. ಸೀಗಡಿ, ಏಡಿ, ಪತಂಗ ಜಿರಲೆ, ಒನಕೆಮಂಡಿ ಮತ್ತು ಜರಿ ಮ್ಯಾಂಡಿಬುಲೇಟಕ್ಕೆ ಉದಾಹರಣೆಗಳು. (ಜಿ.ಎಮ್.ಬಿ.)

**ಆಂಡ್ರೊಗ್ಯಾಮೋನು:** ವೀರ್ಯಾಣುವಿನ (ಸ್ಪರ್ಮಟೊಝೋವ) ಒಂದು ರೀತಿಯ ಹಾರ್ಮೋನು. (ಆಂಡ್ರೋ:ಗಂಡು ಗ್ಯಾಮೋನ್, ಕೂಡಿಗೆ ಮದುವೆ) ಗಂಡಿನಲ್ಲಿ ವೀರ್ಯಾಣು ಮತ್ತು ಹೆಣ್ಣಿನಲ್ಲಿ ಅಂಡಾಣುಗಳು ಪ್ರಜನನ ಕಣಗಳಾಗಿ ಬಿಡುಗಡೆಯಾಗುತ್ತವೆ. ಇವುಗಳ ಸೇರುವಿಕೆಯಿಂದ ನಿಷೇಚನವಾಗಿ ಫಲಿತ ಅಂಡಾಣು ಆಗುವುದು. ಅನಂತರ ಫಲಿತ ಅಂಡಾಣು ವಿದಳನಗೊಂಡು ಭ್ರೂಣವಾಗಿ ಮರಿಯಾಗುವುದು. ನಿಷೇಚನದಲ್ಲಿ ಅಂಡಾಣು ಮತ್ತು ವೀರ್ಯಾಣು ಸಂಧಿಸಲು ಕಾಲಾವಧಿ ಮತ್ತು ಅಗತ್ಯಗಳ ಪೂರೈಕೆ ಆಗಬೇಕು. ಇದಕ್ಕಾಗಿ ವೀರ್ಯಾಣು ಉತ್ಪತ್ತಿಯಾದ ಅನಂತರ ಬಹುಕಾಲ ಉಳಿದಿರಬೇಕಾಗಬಹುದು. ಈ ಕಾಲದಲ್ಲಿ ಅವುಗಳು ತಟಸ್ಥವಾಗಿಟ್ಟಿರಬೇಕು. ಇದಕ್ಕಾಗಿ ಪ್ರಜನನ ಕಣಗಳಲ್ಲೇ ಕೆಲವು ವಸ್ತುಗಳಿವೆ. ಅಂಡಾಣು ಮತ್ತು ವೀರ್ಯಾಣುಗಳೆರಡರಲ್ಲೂ, ಹಾರ್ಮೋನುಗಳಿಗೆ ಸಮನಾದ ಗ್ಯಾಮೋನ್‌ಗಳೆಂಬ ವಸ್ತುಗಳಿವೆ. ವೀರ್ಯಾಣುವಿನಲ್ಲಿರುವ ಗ್ಯಾಮೋನ್ ಅಂಡ್ರೋಗ್ಯಾಮೋನ್ ಅಂಡಾಣುವಿನದು ಗೈನೋಗ್ಯಾಮೋನ್ ಅಕಾಲಿಕ ವೀರ್ಯಾಣು ಚಟುವಟಿಕೆಗಳಿಂದ ಶಕ್ತಿಯ ವ್ಯಯವಾಗದಂತೆ ನಿಯಂತ್ರಿಸುವುದು ಮತ್ತು ಅಂಡಾಣುವಿನ ಲೋಳೆ ಪಟಲವನ್ನು ಭೇದಿಸುವುದಕ್ಕೆ ಅಂಡ್ರೊಗ್ಯಾಮೋನ್ ಸಹಕಾರಿಯಾಗಿದೆ. (ಕೆ.ವಿ.ಎಚ್.)

**ಆಂಡ್ರೊಜೆನ್:** ಮುಖ್ಯವಾಗಿ ವೃಷಣಗಳಲ್ಲಿ ಉತ್ಪತ್ತಿಯಾಗಿ, ಗಂಡು ಆನುಷಂಗಿಕ ಲಿಂಗಾಂಗಗಳನ್ನು ಹಾಗು ಬಾಹ್ಯ ಲಕ್ಷಣಗಳನ್ನು ನಿಯಂತ್ರಿಸುವ ಗಂಡು ಸ್ಟಿರಾಯಿಡ್ ಹಾರ್ಮೋನ್‌ಗಳ ಸಾಮಾನ್ಯ ನಾಮ. ಇದರಲ್ಲಿ 18 ಮತ್ತು 19 ನೆಯ ಸ್ಥಾನಗಳಲ್ಲಿ ಮಿಥಾಯಿಲ್ ಗುಂಪುಗಳಿದ್ದು, ಮೂರನೆಯ ಸ್ಥಾನದಲ್ಲಿ ಕೀಟೋನ್ ಗುಂಪು ಮತ್ತು 17ನೆಯ ಸ್ಥಾನದಲ್ಲಿ ಹೈಡ್ರಾಕ್ಸಿಲ್ ಗುಂಪು ಇರುವುದು. ಇದರ ವೈಶಿಷ್ಟ್ಯ. 4 ಮತ್ತು 5ನೆ ಸ್ಥಾನಗಳ ನಡುವೆ ಜೋಡು ಬಂಧನ ಇರುತ್ತದೆ. ಆಂಡ್ರೊಜೆನ್ ಎಂಬ ಹೆಸರು ಗಂಡು ಹಾರ್ಮೋನಾಗಿ ವರ್ತಿಸುವ ಸ್ಟೀರಾಯಿಡ್ ಗುಂಪಿನ ಹೆಸರು. ಆಂಡ್ರೊಸ್ಟೀರೋನ್, ಡಿ ಹೈಡ್ರೊ ಎಪಿ ಆಂಡ್ರೊಸ್ಟೀರೋನ್, ಮತ್ತು ಟೆಸ್ಟೊಸ್ಟೀರೋನ್ ಎಂಬವು ಮೂರು ಮುಖ್ಯ ಆಂಡ್ರೋಜೆನ್‌ಗಳು. ಇವುಗಳಲ್ಲಿ ಸಮರ್ಥವಾದ ಆಂಡ್ರೋಜೆನ್ ಎಂದರೆ ಟೆಸ್ಟೊಸ್ಟೀರೋನ್. ವೃಷಣದಲ್ಲಿ ವೀರ್ಯಾಣುಜನಕ ನಾಳಗಳ ನಡುವೆ ಇರುವ ಲೀಡಿಗ್‌ನ ಜೀವಕೋಶಗಳಲ್ಲಿ ಉತ್ಪತ್ತಿಯಾಗುತ್ತವೆ.

ಆಂಡ್ರೊಜೆನ್ ಸಂಶ್ಲೇಷಣೆಯ ಮುಖ್ಯ ಹಂತಗಳಲ್ಲಿ ಪ್ರಮುಖ ಪಾತ್ರವಹಿಸುವ 3–$\beta$ ಮತ್ತು 17–$\beta$ ಹೈಡ್ರಾಕ್ಸಿ ಸ್ಟೀರಾಯಿಡ್ ಡಿಹೈಡ್ರೊಜಿನೇಸ್ (ಕಿಣ್ವ)ಗಳನ್ನು ಅಂಗಾಂಶ ರಾಸಾಯನಿಕ ವಿಧಾನದಿಂದ ಅಭ್ಯಸಿಸುವುದರ ಮೂಲಕ ಈ ಹಾರ್ಮೋನು ಸಂಶ್ಲೇಷಣೆಯ ಕ್ಷೇತ್ರಗಳನ್ನು ಗುರುತಿಸಬಹುದು. ಕೊಲೆಸ್ಟಿರಾಲ್ ಎಲ್ಲ ಸ್ಟಿರಾಯ್ಡಿ ಹಾರ್ಮೋನುಗಳ ಜನಕ. ಕಿಣ್ವಗಳಿಂದ ಪ್ರೇರೇಪಿತವಾದ ಹಲವು ರಾಸಾಯನಿಕ ಕ್ರಿಯೆಗಳ ಮೂಲಕ ಕೊಲೆಸ್ಟಿರಾಲ್‌ನಿಂದ ಆಂಡ್ರೋಜೆನ್ ಉತ್ಪತ್ತಿಯಾಗುತ್ತದೆ. ಉತ್ಪತ್ತಿಯ ಅನಂತರ ಇದು ರಕ್ತ ಪರಿಚಲನೆ ಸೇರಿ ಅನೇಕ ಅಂಗಾಂಶಗಳನ್ನು ಪ್ರಚೋದಿಸುತ್ತದೆ.

ಆನುಷಂಗಿಕ ಲಿಂಗಾಂಗಗಳ ಜೊತೆಗೆ ಗಡ್ಡ ಬೆಳೆಯುವುದು, ಧ್ವನಿ ಗಡಸಾಗುವುದು ಬಾಹ್ಯಲಿಂಗ ಲಕ್ಷಣಗಳ ಅಭಿವ್ಯಕ್ತಿಯನ್ನು ಆಂಡ್ರೊಜೆನ್‌ಗಳು ನಿಯಂತ್ರಿಸುತ್ತವೆ. ಹುಂಜಗಳಲ್ಲಿ ಕಂಡುಬರುವ ಜುಟ್ಟು (ಕೂಂಬ್) ಬೆಳವಣಿಗೆಯು ಆಂಡ್ರೋಜೆನ್ ನಿಯಂತ್ರಣೆಗೆ ಒಳಪಟ್ಟಿದೆ. ವಾಸ್ತವವಾಗಿ ಈ ಅಂಶವನ್ನು ಆಂಡ್ರೊಜೆನ್ ಹಾರ್ಮೋನಿನ ಜೀವ ವಿಶ್ಲೇಷಣೆ (ಬಯೊಆಸ್ಸೆ) ವಿಧಾನವಾಗಿ ಬಳಸುತ್ತಾರೆ. ಆಂಡ್ರೊಜೆನ್ ಹಾರ್ಮೋನು ವೀರ್ಯಾಣುಗಳ ಉತ್ಪಾದನೆಯಲ್ಲಿ ಪಾಲುಗೊಳ್ಳುತ್ತದೆ. ಈ ಹಾರ್ಮೋನುಗಳು ಅಗತ್ಯವೆನಿಸಿದಾಗ ಉತ್ಪತ್ತಿಯಾಗಿ ನಿರ್ದಿಷ್ಟ ಕ್ರಿಯೆಗಳನ್ನು ನಿರ್ವಹಿಸಿ ಅನಂತರ ಈಲಿ (ಲಿವರ) ಯಲ್ಲಿ ವಿಭಜನೆಗೊಂಡು ಮೂತ್ರದ ಮೂಲಕ ವಿಸರ್ಜನೆಗೊಳ್ಳುತ್ತವೆ.

ಆಂಡ್ರೊಜನ್‌ಗಳ ಒಂದು ಮುಖ್ಯವಾದ ಕಾರ್ಯ, ಜೀನ್ ನಿಯಂತ್ರಿತ ವಿಧಾನದಿಂದ ಪ್ರೊಟೀನುಗಳ ಉತ್ಪಾದನೆಯನ್ನು ಪ್ರಚೋದಿಸುವುದು. ಕಾರಣ ಗಂಡಸರಲ್ಲಿ ಬಲವಾದ ಮಾಂಸಖಂಡಗಳಿರುತ್ತವೆ. ಇತ್ತೀಚಿಗೆ, ಆಂಡ್ರೋಜನ್‌ಯುಕ್ತ ಸ್ಟೀರಾಯಿಡ್‌ಗಳನ್ನು ಸೇವಿಸಿ, ಅಂಗಾಂಗಗಳ ಶಕ್ತಿ–ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವ ಪ್ರವೃತ್ತಿ ಹಲವು ಅಂತಾರಾಷ್ಟ್ರೀಯ ಕ್ರೀಡಾಪಟುಗಳಲ್ಲಿ ಕಂಡುಬರುತ್ತದೆ. ಆದರೆ ಈ ರೀತಿಯಿಂದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಕಾನೂನು ಬಾಹಿರವಾಗಿದೆಯಲ್ಲದೆ, ಇವುಗಳ ಅತಿಯಾದ ಸೇವನೆಯಿಂದ ಅನೇಕ ದುಷ್ಪರಿಣಾಮಗಳಾಗಬಹುದು. ಉದಾ: ಹೆಣ್ಣು ಕ್ರೀಡಾಪಟುಗಳಲ್ಲಿ ಅತಿಯಾದ ಆಂಡ್ರೊಜನ್ ಸೇವನೆಯಿಂದ, ಧ್ವನಿಗಡಸಾಗುವುದು, ಮೈಮೇಲೆ ಕೂದಲು ಬೆಳೆಯುವುದು, ಮುಂತಾದ ದುಷ್ಪರಿಣಾಮಗಳಾಗಬಹುದು. (ಎಚ್.ಎಚ್.ಎಸ್.)

**ಆಂಥೋಜೋವ:** ಸಿಲೆಂಟರೇಂಟ ವಂಶಕ್ಕೆ ಸೇರಿದ ಒಂದು ಮುಖ್ಯ ವರ್ಗ. ಸಂಪೂರ್ಣವಾಗಿ ಕಡಲು ಜೀವಿಗಳು. ಒಂಟಿಯಾಗಿ ಅಥವಾ ಸಾಮೂಹಿಕವಾಗಿ, ಆಧಾರವಸ್ತುವಿಗೆ ಅಂಟಿಕೊಂಡು ಜೀವಿಸುತ್ತವೆ. ಪ್ರಾಣಿಗಳು ಪಾಲಿಪ್ ರೂಪಿಗಳಾಗಿವೆ. ಇವು ಪಾಲಿಪ್ ಅವಸ್ಥೆಯಲ್ಲಿಯೇ ಇರುತ್ತವೆ. ಇವುಗಳ ಜೀವನ ಚರಿತ್ರೆಯಲ್ಲಿ ಮಿಡ್ಯೂಸ ಅಥವಾ ಮಿಡ್ಯೂಸದಂತಹ ಹಂತ ಕಂಡು ಬರುವುದಿಲ್ಲ. ದೇಹವು, ಸಾಮಾನ್ಯವಾಗಿ ಕೊಳವೆಯಾಕಾರದಲ್ಲಿರುತ್ತದೆ. ಇವು ಬಾಹ್ಯನೋಟಕ್ಕೆ ಷಡ್ ತ್ರಿಜ್ಯ , ಅಷ್ಟ ತ್ರಿಜ್ಯ ಅಥವಾ ಬಹುತ್ರಿಜ್ಯ ಸಮಮಿತಿಯನ್ನು ತೋರುತ್ತವೆ. ಆದರೆ ಆಂತರಿಕವಾಗಿ ದ್ವಿತ್ರಿಜ್ಯ ಸಮಮಿತಿಯನ್ನು ಪ್ರದರ್ಶಿಸುತ್ತವೆ.

ಆಧಾರ ವಸ್ತುವಿಗೆ ಅಂಟಿಕೊಂಡಿರುವ ದೇಹದ ಭಾಗವನ್ನು ಬುಡ ತಟ್ಟೆಯೆಂದು (ಪಾದ ಫಲಕ) ಮುಂಭಾಗವನ್ನು ತುದಿಯೆಂದೂ ಕರೆಯುತ್ತಾರೆ. ತುದಿಯಲ್ಲಿ ದುಂಡಗೆ ತಟ್ಟೆಯಾಕಾರದ ವದನ ಫಲಕವಿದೆ. ಇದರ ನಡುವೆ ಸೀಳಿದಂತಹ ಬಾಯಿ ಇದೆ. ವದನ ಫಲಕದ ಅಂಚಿನಲ್ಲಿ, ಬಾಯಿಯ ಸುತ್ತಲೂ ಅದರಿಂದ ಹಲವು ನೂರು ಕರಬಳ್ಳಿಗಳು (ಟೆಂಟಾಕಲ್ಸ್) ಅನೇಕ ವರ್ತುಲಗಳಲ್ಲಿ ವ್ಯವಸ್ಥಿತವಾಗಿವೆ. ಕರಬಳ್ಳಿಗಳು ಟೊಳ್ಳಾಗಿದ್ದು, ಇವುಗಳ ಅವಕಾಶವು ಜಠರ ಪರಿಚಲನ, ಅವಕಾಶಕ್ಕೆ ಸಂಬಂಧಿಸಿವೆ. ಬಾಯಿಯು ಗಂಟಲು ಅಥವಾ ಸ್ಟೊಮೊಡಿಯಮ್ ಎಂಬ ಕೊಳವೆಯ ಮೂಲಕ ಜಠರ ಪರಿಚಲನ ಅವಕಾಶಕ್ಕೆ ತೆರೆಯುತ್ತದೆ. ವದನ ಫಲಕದ ಹೊರದರ್ಮ ಭಿತ್ತಿಯು ಅಂತರ್ ವಲಿಸಿ ಕೆಳಮುಖನಾಗಿ ನೇತು ಬೀಳುವುದರಿಂದ ಗಂಟಲು ಭಾಗ ನಿರ್ಮಾಣವಾಗಿದೆ. ಗಂಟಲಿನ ಲಂಬ ವ್ಯಾಸದ ಒಂದು ಅಥವಾ ಎರಡೂ ತುದಿಗಳಲ್ಲಿ, ಒಳ ಮೇಲ್ಮೈಯಲ್ಲಿ ಸೈಫನೊಗ್ಲಿಫ್‌ಗಳೆಂಬ ನಯವಾದ ಶಿಲಿಕಾ ಜಾಡುಗಳಿವೆ. ಇದರ ಮೂಲಕ ಗ್ಯಾಮೆಟುಗಳು ದೇಹದಿಂದ ಹೊರಕ್ಕೆ ಹೋಗಬಹುದು.

ಜಠರ ಪರಿಚಲನ ಅವಕಾಶವು ಮೀಸೆಂಟರಿ ಅಥವಾ ಅಡ್ಡ ತಡಿಕೆಗಳೆಂಬ ನೀಳ ಗೋಡೆಗಳ ಬೆಳವಣಿಗೆಯಿಂದ ವಿಭಾಗವಾಗಿದೆ. ಒಳದರ್ಮ ಮೂಲಕ ಈ ಮೀಸೆಂಟರಿಗಳು ದೇಹಭಿತ್ತಿಯಿಂದ ಗಂಟಲಿನವರೆಗೂ ಹರಡಿರಬಹುದು. ಇಂತಹ ಪೂರ್ಣ ಮೀಸೆಂಟರಿಗಳಿಗೆ ಪ್ರಾಥಮಿಕ ಮೀಸೆಂಟರಿಗಳೆನ್ನುವರು. ದೇಹಭಿತ್ತಿಯಿಂದ ಅರ್ಧದಾರಿಯವರೆಗೆ ಹರಡಿರುವುವು ಅಪೂರ್ಣ ಮೀಸೆಂಟರಿಗಳು. ಇವುಗಳಿಗಿಂತಲೂ ಚಿಕ್ಕದಾಗಿರುವ ಮೂರನೆಯ ವಿಧದವುಗಳಿರಬಹುದು. ಇವು ತೃತೀಯಕ ಮೀಸೆಂಟರಿಗಳು. ಇವುಗಳಿಂದಾಗಿ ಜಠರ ಪರಿಚಲನ ಅವಕಾಶವು ಅಂತರ ಮೀಸೆಂಟರಿ ಕೋಣೆಗಳಾಗಿ ವಿಭಾಗವಾಗಿದೆ. ಪ್ರತಿ ಮೀಸೆಂಟರಿಯ ಮೇಲ್ಭಾಗದಲ್ಲಿ ಒಂದು ಅಥವಾ ಎರಡು ಆಸ್ಟಿಯಮ್ ಎಂಬ ರಂಧ್ರಗಳು ಇರುತ್ತವೆ. ಇವುಗಳ ಮೂಲಕ ವಿವಿಧ ಅಂತರ್ ಮೀಸೆಂಟರಿ ಕೋಣೆಗಳ ನಡುವೆ ಗಂಟಲಿನ ಭಾಗದಲ್ಲೂ ಸಂಪರ್ಕ ಉಂಟಾಗುತ್ತದೆ. ಪ್ರತಿ ಮೀಸೆಂಟರಿಯ ಒಳಗಿನ ಬಿಡಿ ಅಂಚು ಮಂದವಾಗಿ ತುಂಬಾ ನುಲಿದುಕೊಂಡು ಹುರಿಯಂತಹ ಮೀಸೆಂಟರಿ ತಂತು ನಿರ್ಮಾಣವಾಗಿದೆ. ಪ್ರತಿ ತಂತುವಿನ ಕೆಳಗಿನ ತುದಿಯು ಸಾಮಾನ್ಯವಾಗಿ ಅಕಾನ್ಷಿಯಮ್ ಎಂಬ ಉದ್ದವಾದ ನವಿರು ದಾರವಾಗಿದೆ. ಮೀಸೆಂಟರಿಗಳ ಮೇಲೆ ಕುಟುಕು ಕಣಗಳ ಅನಂತರ ಈ ಲಾರ್ವ ಆಧಾರ ವಸ್ತುವಿಗೆ ಅಂಟಿಕೊಂಡು ಪ್ರಬುದ್ಧಾವಸ್ಥೆಗೆ ರೂಪ ಪರಿವರ್ತನೆಗೊಳ್ಳುತ್ತದೆ.

ಈ ವರ್ಗದಲ್ಲಿ ಸುಮಾರು 6,100 ಪ್ರಭೇದಗಳಿವೆ. ಕಡಲು ತಾವರೆಗಳು, ಸಮುದ್ರ ಬೀಸಣಿಗೆಗಳು, ಸಮುದ್ರ ಪೆನ್‌ಗಳು, ಹವಳದ ಪ್ರಾಣಿಗಳು, ಸಮುದ್ರದ ಗರಿಗಳಿವೆ. ಬಹುಪಾಲು ಜೀವಿಗಳು ತಮ್ಮ ದೇಹದ ಸುತ್ತ ರಕ್ಷಣೆಗಾಗಿ ಕೊಂಬಿನ ಅಥವಾ ಕ್ಯಾಲ್ಸಿಯಂ

ಕಾರ್ಬೋನೇಟಿನ ಬಹಿರ್ ಕಂಕಾಲವನ್ನು ಸೃಷ್ಟಿಸಿಕೊಳ್ಳುತ್ತವೆ. ಕೆಲವೊಮ್ಮೆ ಅಂತ: ಕಂಕಾಲವು ಕಂಡು ಬರಬಹುದು. ಕಂಕಾಲವನ್ನು ಸಾಮಾನ್ಯವಾಗಿ ಎಪಿಡರ್ಮಿಸ್ ಸ್ರವಿಸುತ್ತದೆ. ಹಲವೊಮ್ಮೆ ಎಪಿಡರ್ಮಿಸ್ ಮೂಲದ ಮೀಸೊಗ್ಲಿಯದಲ್ಲಿರುವ ಸ್ಕ್ಲಿರೊಬ್ಲಾಸ್ಟ್ ಎಂಬ ಜೀವಕೋಶಗಳು ಸ್ರವಿಸುವುದುಂಟು.

ಆಂಥೋಜೋವಗಳನ್ನು ಎರಡು ಉಪವರ್ಗಗಳಾಗಿ ವಿಂಗಡಿಸಲಾಗಿದೆ. ಅಷ್ಟತ್ರಿಜ್ಯ ಸಮ ಮಿತಿಯನ್ನು ತೋರುವ ಪ್ರಾಣಿಗಳು ಮೊದಲನೆಯ ಉಪವರ್ಗದ ಆಲ್ಸಿಯೊನೇರಿಯ (ಆಕ್ಟೋರೇಡಿಯೇಟ) ಅಥವಾ ಆಕ್ಟೊಕೊರೇಲ್ಲಿಯಕ್ಕೆ ಸೇರಿವೆ. ಷಡ್ ತ್ರಿಜ್ಯ ಸಮಮಿತಿಯನ್ನು ತೋರುವ ಅಂತೋಜೋವಗಳು ಎರಡನೆಯ ಉಪವರ್ಗವಾದ ಜುಅಂತೇರಿಯ (ಹೆಕ್ಸಾರೇಡಿಯೇಟ) ಅಥವಾ ಹೆಕ್ಸಾಕೊರೇಲ್ಲಿಯಕ್ಕೆ ಸೇರಿವೆ.

ಉಪವರ್ಗ 1 ಆಲ್ಸಿಯೊನೇರಿಯ: ಈ ಉಪವರ್ಗದಲ್ಲಿ ಸುಮಾರು 2500 ಪ್ರಭೇದಗಳಿವೆ. ಇವು ಸಂಪೂರ್ಣವಾಗಿ ಕಡಲುವಾಸಿಗಳು. ಬಹುಪಾಲು ಜೀವಿಗಳು ಹೊಳೆಯುವ ಬಣ್ಣಗಳನ್ನು ಹೊಂದಿವೆ ಮತ್ತು ಜೀವ ಸಂದೀಪ್ತಿಯನ್ನು ಪ್ರದರ್ಶಿಸಬಹುದು. ಕ್ಲಾವುಲೇರಿಯ, ಟ್ಯುಬಿಪೋರ, ಟೆಲೆಸ್ಟೊ, ಆಲ್ಸಿಯೊನಿಯಂ, ಹೀಲಿಯೊಪೋರ, ಗಾರ್ಗೊನಿಯ, ಕೊರ್ಯಾಲಿಯಂ, ಪೆನ್ನಾಟುಲ ರೆನಿಲ್ಲ ಜೀವಿಗಳೂ ಈ ಗುಂಪಿಗೆ ಸೇರಿವೆ. ಪಾಲಿಪ್ ಅವಸ್ಥೆಯಲ್ಲೇ ಇರುವ ಈ ಜೀವಿಗಳಲ್ಲಿ 8 ಟೊಳ್ಳಾದ ಕರಬಳ್ಳಿಗಳು ಮತ್ತು ಜಠರ ಪರಿಚಲನ ಅವಕಾಶದಲ್ಲಿ 8 ಮೀಸೆಂಟರಿಗಳಿವೆ. ಕರಬಳ್ಳಿಗಳ ಇಕ್ಕೆಡೆಗಳ ಸಾಲಿನಲ್ಲಿ ಚಿಕ್ಕ ಚಿಕ್ಕ ಪತ್ರ ಅಥವಾ ಪಿನ್ಯುಲ್‌ಗಳಿವೆ. ಇವುಗಳಲ್ಲಿ ಹಿಗ್ಗುವ ಮತ್ತು ಕುಗ್ಗುವ ಸಾಮರ್ಥ್ಯವನ್ನು ಕಾಣಬಹುದು. ದೇಹದ ಬಿಡಿ ತುದಿಯಲ್ಲಿರುವ ಬಾಯಿಯು ಹೊರದರ್ಮದಿಂದ ಲೇಪಿತ ಫ್ಯಾರಿಂಕ್ಸ್ (ಗಂಟಲು) ಎಂಬ ಚಪ್ಪಟೆ ನಾಳದ ಮೂಲಕ ಜಠರ ಪರಿಚಲನ ಅವಕಾಶಕ್ಕೆ ತೆರೆಯುತ್ತದೆ. ಗಂಟಲಿನಲ್ಲಿ ಶಿಲಿಕಾಂಗಭರಿತ ಲಂಬಸ್ಥ ಜಾಡುವಾದ ಸೈಫನೊಗ್ಲಿಫ್ ಇದೆ. ಆಲ್ಸಿಯೊನೇರಿಯಗಳ ಈ ಏಕ ಸೈಪನೊಗ್ಲಿಫ್‌ಗೆ ಸಲ್ಕಸ್ ಎಂದು ಹೆಸರು. ಇದರ ಸ್ಥಾನ ದೇಹದ ವೆಂಟ್ರಲ್ ಭಾಗವನ್ನು ಸೂಚಿಸುತ್ತದೆ. ಎದುರಿನ ದೇಹದ ಭಾಗವನ್ನು ಎಸಲ್ಕಟ್ ಅಥವ ಸಲ್ಕ್ಯುಲಾರ್ ಭಾಗವೆಂದು ಕರೆಯುತ್ತಾರೆ.

ಜಠರ ಪರಿಚಲನ ಅವಕಾಶವು ಪೂರ್ಣ ಮೀಸೆಂಟರಿಗಳಿಂದ 8 ಅಂತರ್ ಮೀಸೆಂಟರಿ ಕೋಣೆಗಳಾಗಿ ವಿಭಾಗವಾಗಿದೆ. ಫ್ಯಾರಿಂಕ್ಸ್ ನ ಕೆಳಗಡೆ ಮೀಸೆಂಟರಿಯ ಬಿಡಿ ಅಂಚು ಮೀಸೆಂಟರಿಯಲ್ ತಂತುವಾಗಿ ಬತೇರಿ ಮತ್ತು ಗ್ರಂಥಿಕೋಶಗಳಿವೆ. ಅಕಾನ್ಷಿಯಗಳನ್ನು ಬಾಯಿ ಮತ್ತು ಸಿಂಕ್ಲಿಸ್ ಎಂಬ ಸ್ತಂಭದ ಮೇಲ್ಮೈಯಲ್ಲಿರುವ ರಂಧ್ರಗಳ ಮೂಲಕ ಹೊರಗೆ ಚಾಚಬಹುದು. ಕುಟುಕು ಕಣಗಳು ಆಹಾರ ಜೀವಿಯನ್ನು ಕೊಲ್ಲಲು ಮತ್ತು ಗ್ರಂಥಿಕೋಶಗಳ ಸ್ರವಿಕೆಯು ಇದರ ಜೀರ್ಣಕ್ರಿಯೆಯಲ್ಲಿ ನೆರವಾಗುತ್ತದೆ.

ಕರಬಳ್ಳಿಗಳು, ವದನ ಫಲಕ, ಸ್ತಂಭ ಮತ್ತು ಪಾದ ಫಲಕಗಳಿಗೆ ಹೊರದರ್ಮ ಮತ್ತು ಒಳದರ್ಮದ ಲೇಪನವಿದೆ. ದೇಹಭಿತ್ತಿಯಲ್ಲಿ ಈ ಎರಡು ಪದರಗಳ ನಡುವೆ ಸ್ನಾಯು ತಂತುಗಳು ಮತ್ತು ಅಮೀಬ ರೂಪಿ ಜೀವಕೋಶಗಳಿರುವ ಜೆಲ್ಲಿಯಂತಹ ಮಿಸೊಗ್ಲಿಯವಿದೆ. ಹೊರದರ್ಮ ಲೇಪಿತ ಗಂಟಲು (ಸ್ಟೊಮೊಡಿಯಮ್) ಈ ವರ್ಗದ ಪ್ರಾಣಿಗಳ ಮುಖ್ಯ ಲಕ್ಷಣ. ಅಂತರ್ ಮೀಸೆಂಟರಿ ಕೋಣೆಗಳಭಿಮುಖವಾಗಿರುವ ಹೊರ ಮೇಲ್ಮೈಗೆ ಒಳದರ್ಮದ ಲೇಪನವಿದೆ. ಪ್ರತಿ ಮೀಸೆಂಟರಿಗೂ ಎರಡು ಪಕ್ಕಗಳಲ್ಲಿ ಒಳದರ್ಮವಿದ್ದು ನಡುವೆ ಮೀಸೊಗ್ಲಿಯದ ಆಧಾರ ಫಲಕವಿದೆ.

ಸ್ನಾಯುಮಂಡಲವು ಚೆನ್ನಾಗಿ ರೂಪುಗೊಂಡಿದೆ. ಮೀಸೆಂಟರಿಗಳ ಮುಖದ ಮೇಲೆ ಲಂಬಸ್ಥ ಸ್ನಾಯುಗಳಿವೆ. ಇವು ಸಂಕುಚಿಸಿದಾಗ ದೇಹದ ಉದ್ದವು ಕಡಿಮೆಯಾಗುತ್ತದೆ. ಪೆರೈಟಲ್ ಸ್ನಾಯುಗಳು ಮೀಸೆಂಟರಿಯ ಮೇಲಿನ ಮತ್ತು ಕೆಳಗಿನ ಕೋನಗಳಲ್ಲಿ ಉದ್ದಕ್ಕೂ ಹರಡಿವೆ. ಇವುಗಳ ಸಂಕುಚನವು ಸ್ತಂಭವನ್ನು ಬುಡದ ಕಡೆಗೆ ಸೆಳೆಯುತ್ತದೆ. ಅಡ್ಡಸ್ನಾಯುಗಳು, ಲಂಬಸ್ಥ ಸ್ನಾಯುಗಳಿಗೆ ಸಮಕೋನದಲ್ಲಿವೆ. ಇವುಗಳ ಸಂಕುಚನದಿಂದ ಸ್ತಂಭದ ವ್ಯಾಸವು ಕಡಿಮೆಯಾಗುತ್ತದೆ. ವೃತ್ತೀಯ ಸ್ನಾಯುಗಳು ವದನ ಫಲಕವು ಸ್ತಂಭವನ್ನು ಸಂಧಿಸುವ ಭಾಗದಲ್ಲಿವೆ. ಇವು ವದನ ಫಲಕವನ್ನು ದೇಹದೊಳಗೆ ಸೆಳೆದುಕೊಳ್ಳಲು ನೆರವಾಗುತ್ತವೆ.

ನರಮಂಡಲವು ನರತಂತುಗಳ ಜಾಲದಂತಿದೆ. ಇದು ಹೊರದರ್ಮ ಮತ್ತು ಸ್ನಾಯುಪದರಗಳ ನಡುವೆ ಇದೆ. ಇದೇ ರೀತಿ ಒಳದರ್ಮದಲ್ಲೂ ನರಜಾಲವಿದೆ. ವದನ ಫಲಕ ಮತ್ತು ಕರಬಳ್ಳಿಗಳ ವಲಯದಲ್ಲಿ ನರಕೋಶಗಳು ಹೇರಳವಾಗಿವೆ. ಮಿಡ್ಯೂಸಗಳಲ್ಲಿರುವಂತೆ ನಿರ್ದಿಷ್ಟ ಕೇಂದ್ರೀಕರಣೆ ಇಲ್ಲಿಲ್ಲ.

ಅಂಕುರಣದಿಂದ ಸಮೂಹವು ವೃದ್ಧಿಸುತ್ತದೆ ಮತ್ತು ಪ್ರಜನನವೂ ನಡೆಯಬಹುದು. ಇವುಗಳಲ್ಲಿ ಲಿಂಗರೀತಿಯ ಸಂತಾನೋತ್ಪತ್ತಿ ಸಾಮಾನ್ಯ. ಇವು ಏಕಲಿಂಗಿಗಳು, ಜನನೇಂದ್ರಿಯಗಳು ಒಳದರ್ಮದಿಂದ ಬೆಳೆಯುತ್ತವೆ. ಇವು ಮೀಸೆಂಟರಿಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಪಕ್ವವಾದ ಮೇಲೆ ಒವ (ತತ್ತಿ) ಮತ್ತು ಶುಕ್ರಾಣಿಗಳನ್ನು ಜಠರ ಪರಿಚಲನ ಅವಕಾಶಕ್ಕೆ ಬಿಡುಗಡೆ ಮಾಡುತ್ತವೆ. ನಿಷೇಚನವು ಹೊರಗೆ ನಡೆಯುತ್ತದೆ. ನಿಷೇಚಿತ ತತ್ತಿಯ ವಿದಳನ ನಡೆದು ಪ್ಲಾನುಲ ಎಂಬ ಲಾರ್ವ ಬೆಳೆಯುತ್ತದೆ. ಇದರ ಮೇಲ್ಮೈಯಲ್ಲಿ ಶಿಲಿಕಾಂಗಗಳಿವೆ. ಇವುಗಳ ಬಡಿತದ ಸಹಾಯದಿಂದ ಲಾರ್ವ ಸ್ವಲ್ಪ ಹೊತ್ತು ಸ್ವತಂತ್ರ ಜೀವನ ನಡೆಸುತ್ತದೆ. ಇವುಗಳಲ್ಲಿ ಎರಡು ಎಸಲ್ಕಲ್ ತಂತುಗಳನ್ನು ಬಿಟ್ಟು ಉಳಿದ ಆರು ತಂತುಗಳಲ್ಲಿ ಗ್ರಂಥಿಕೋಶಗಳಿವೆ. ಈ ಕೋಶಗಳು ಜೀರ್ಣ ಕಿಣ್ವವನ್ನು ಸ್ರವಿಸುತ್ತವೆ. ಎಸಲ್ಕಲ್ ತಂತುಗಳಲ್ಲಿರುವ ಉದ್ದವಾದ ಶಿಲಿಕಾಂಗಗಳು ನೀರಿನ ಪ್ರವಾಹವು ಜಠರ ಪರಿಚಲನ ಅವಕಾಶದಿಂದ ನೀರು ಹೊರಗೆ ಹರಿಯಲು ನೆರವಾಗುತ್ತದೆ. ಸಲ್ಕಸ್‌ನಲ್ಲಿರುವ ಶಿಲಿಕಾಂಗಗಳು ನೀರನ್ನು ದೇಹದೊಳಗೆ ಹರಿಯುವಂತೆ ಮಾಡುತ್ತವೆ. ನೀರಿನ ಪ್ರವಾಹದ ಮುಖ್ಯ ಕ್ರಿಯೆ ಉಸಿರಾಟ ಎಸಲ್ಕಲ್ ತಂತುಗಳು ಗಂಟಲಿನ ಹೊರದರ್ಮದಿಂದಲೂ ಸಲ್ಕಲ್ ತಂತುಗಳು ಭ್ರೂಣದ ಒಳದರ್ಮದಿಂದಲೂ ರೂಪುಗೊಳ್ಳುತ್ತವೆ. ಆಲ್ಸಿಯೋನೇರಿಯಗಳಲ್ಲಿ ಮೀಸೆಂಟರಿಯ ಸಲ್ಕಲ್ ಮುಖದಲ್ಲಿ ಬುಡದಿಂದ ತುದಿಯವರೆಗೆ ಕಿರಿದಾದ ಪ್ರತಿಕರ್ಷಕ ಸ್ನಾಯು ಲಂಬಸ್ಥ ಪಟ್ಟಿಯಂತೆ ಹರಡಿಕೊಂಡಿವೆ. ಇವು ಪಾಲಿಪ್ಪಿನ ಸಂಕುಚನೆಗೆ, ಮೀಸೆಂಟರಿಯನ್ನು ಮೋಟು ಮಾಡಲು, ಬಾಯಿಯಿರುವ ಬಿಡಿತುದಿಯನ್ನು ಬುಡದ ಕಡೆಗೆ ಸೆಳೆಯಲು ನೆರವಾಗುತ್ತವೆ.

8 ಕರಬಳ್ಳಿಗಳು ಮತ್ತು 8 ಮೀಸೆಂಟರಿಗಳಿಂದಾಗಿ ಆಲ್ಸಿಯೊನೇರಿಯಗಳು ಬಾಹ್ಯನೋಟಕ್ಕೆ ಅಷ್ಟತ್ರಿಜ್ಯ ಸಮಮಿತಿಯನ್ನು ಹೊಂದಿದಂತೆ ಕಂಡು ಬಂದರೂ, ಆಂತರಿಕವಾಗಿ ಸೀಳಿನಂತಹ ಉದ್ದ ಬಾಯಿ, ಏಕ ಸೈಫನೊಗ್ಲಿಫ್ ದೆಸೆಯಿಂದಾಗಿ ದ್ವಿಪಾರ್ಶ್ವ ತ್ರಿಜ್ಯ ಸಮಮಿತಿಯನ್ನು ತೋರುತ್ತವೆ.

ಸಾಮಾನ್ಯವಾಗಿ ಇವು ಗುಂಪುಜೀವಿಗಳು. ಚಿಕ್ಕ ಗಾತ್ರದ ಸಮೂಹಗಳು ವಿವಿಧಾಕಾರಗಳಲ್ಲಿ ಬೆಳೆಯುತ್ತವೆ. ಇದರ ಬಹುಭಾಗವು ಮಾಂಸಲವಾದ ಮೀಸೊಗ್ಲಿಯದಿಂದ ಆಗಿದೆ. ಇದಕ್ಕೆ ಸೀನನ್ ಖೈಮ್ ಎಂದು ಹೆಸರು. ಇದರಲ್ಲಿರುವ ಅಮೀಬ ರೀತಿಯ ಜೀವಕೋಶಗಳು ಉತ್ಪಾದಿಸುವ ಸ್ಪಿಕ್ಯುಲ್ ಮತ್ತು ಸಿಮೆಂಟಿನಂತಹ ವಸ್ತುಗಳಿಂದಾದ ಕಂಕಾಲ ಸಮೂಹವನ್ನು ರಕ್ಷಿಸುತ್ತದೆ. ಈ ಕಂಕಾಲಕ್ಕೆ ಹೊರಧರ್ಮದ ಭಿತ್ತಿ ಇರುತ್ತದೆ. ಸಮೂಹದ ಮೇಲ್ಮೈಯಲ್ಲಿ ಪಾಲಿಪ್‌ಗಳು ನಕ್ಷತ್ರಗಳಂತೆ ಕಾಣುತ್ತವೆ. ಅವುಗಳ ದೇಹದ ದೂರಸ್ಥ ತುದಿಯು ಮಾತ್ರ ಹೊರಗಿದ್ದು ಉಳಿದ ಭಾಗ ಸೀನನ್ ಖೈಮ್‌ನಲ್ಲಿ ಹುದುಗಿದೆ. ಪಾಲಿಪ್‌ಗಳ ಜಠರ ಪರಿಚಲನ ಅವಕಾಶಗಳು ಸೀನನ್ ಖೈಮದಲ್ಲಿರುವ ಸೊಲನಿಯ ಎಂಬ ಒಳದರ್ಮ ನಾಲೆಗಳ ಮೂಲಕ ಸಂಬಂಧಿಸಿವೆ. ಪಾಲಿಪ್‌ಗಳ ದೂರಸ್ಥ ತುದಿಗೆ ಆಂಥೊಕೊಡಿಯಮ್ ಎಂದು ಹೆಸರು. ಸ್ವಲ್ಪ ಅಡಚಣೆಯಾದರೂ ಇವು ಸಂಕುಚಿಸಿ ಸಮೂಹದಲ್ಲಿ ಹುದುಗುತ್ತವೆ.

ಕೆಲವು ಆಲ್ಸಿಯೊನೇರಿಯಗಳು ದ್ವಿರೂಪಿಗಳು, ಉದಾ: ಪೆನ್ನಾಟುಲ. ಇವುಗಳಲ್ಲಿ ಪೋಷಕ ರೂಪಿಗಳಾದ ಆಟೋಜೂಯಾಡ್‌ಗಳು 8 ಕರಬಳ್ಳಿ ಮೀಸೆಂಟರಿ ಹಾಗೂ ಲಿಂಗಾಂಗಗಳನ್ನು ಹೊಂದಿವೆ. ಗಾತ್ರದಲ್ಲಿ ಚಿಕ್ಕದಾಗಿರುವ ಸೈಫನೊಜೂಯಾಯಿಡ್‌ಗಳಲ್ಲಿ ಕರಬಳ್ಳಿ, ಮೀಸೆಂಟರಿ ಮತ್ತು ಲಿಂಗಾಂಗಗಳು ಕ್ಷಯಿಸಿದೆ. ಆದರೆ ಸೈಫನೊಗ್ಲಿಫ್‌ಗಳು ವಿಸ್ತಾರವಾಗಿದ್ದು ಸೊಲಿನಿಯಗಳ ಮೂಲಕ ನೀರಿನ ಪರಿಚಲನೆಗೆ ಸಹಕರಿಸುತ್ತವೆ. ಸಾಮಾನ್ಯವಾಗಿ ಆಲ್ಸಿಯೊನೇರಿಯ ಪಾಲಿಪ್ ಗಳಲ್ಲಿ ಹಿಗ್ಗುವ, ಕುಗ್ಗುವ ಸಾಮರ್ಥ್ಯವಿದೆ. ಕೆಲವು ಜೀವಿಗಳಲ್ಲಿ ಈ ಸಾಮರ್ಥ್ಯ ಇರುವುದಿಲ್ಲ.

ಹೊರದರ್ಮದಲ್ಲಿರುವ ಅತ್ಯಂತ ಚಿಕ್ಕ ಕುಟುಕು ಕಣಗಳು ಎಟ್ರೈಕಸ್ ಐಸ್ರೈಜ಼ಗಳು. ಇವು ಮೀಸೊಗ್ಲಿಯದ ನರತಂತುಗಳ ಜಾಲ ಮತ್ತು ಅಮೀಪ ರೂಪಿ ಕೋಶಗಳಿವೆ. ರಕ್ಷಣೆಗೆ ಬೇಕಾದ ಲವಣ ಮಿಶ್ರಿತ ಕಂಕಾಲವನ್ನು ರಚಿಸುವ ಕೋಶಗಳಿವೆ. ಸ್ಕಿರೊಬ್ಲಾಸ್ಟ್‌ಗಳೆಂದು ಹೆಸರು. ನರಕೋಶಗಳು ಹೊರದರ್ಮದ ತಳದಲ್ಲಿ ಪಸರಿಸಿವೆ. ಬಾಯಿಯ ಸುತ್ತ, ಕರಬಳ್ಳಿಗಳಲ್ಲಿ ಮತ್ತು ಮೀಸೆಂಟರಿಗಳಲ್ಲಿ ನರತಂತುಗಳ ಬೆಳವಣಿಗೆ ಅಧಿಕವಾಗಿದೆ.

ಲಿಂಗರೀತಿಯ ಸಂತಾನೋತ್ಪತ್ತಿ ಸಾಮಾನ್ಯ. ಜನನೇಂದ್ರಿಯಗಳು ಮೀಸೆಂಟರಿಗಳ ಮೇಲೆ ಬೆಳೆಯುತ್ತವೆ. ಪೆನ್ನಾಟುಲಗಳ ಅಟೊಜೂಯಾಯಿಡ್‌ಗಳಲ್ಲಿ ಮಾತ್ರ ಇವು ಬೆಳೆಯುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಕೊರೇಲಿಯ, ಪ್ಯಾರಗಾರ್ಗಿಯಗಳಲ್ಲಿ ಸೈಫನೊಜೂಯಾಯಿಡ್‌ಗಳಲ್ಲಿ ಮಾತ್ರ ಜನನೇಂದ್ರಿಯಗಳು ಬೆಳೆಯುತ್ತವೆ. ಇವು ಏಕಲಿಂಗಿಗಳು. ಪಕ್ವವಾದ ಒವ (ತತ್ತಿ) ಮತ್ತು ಶುಕ್ಲಾಣುಗಳು ಜಠರ ಪರಿಚಲನ ಅವಕಾಶದಿಂದ ಬಾಯಿಯ ಮೂಲಕ ಹೊರಗೆ ಹೋಗುತ್ತವೆ. ನಿಷೇಚನ ಹೊರಗೆ ನಡೆಯುತ್ತದೆ. ಸ್ವತಂತ್ರ ಜೀವನ ನಡೆಸಿದ ಮೇಲೆ ಪ್ಲಾನುಲ ಲಾರ್ವ ಆಧಾರ ವಸ್ತುವಿಗೆ

ಅಂಟಿಕೊಂಡು ಪ್ರಬುದ್ಧಾವಸ್ಥೆಗೆ ರೂಪ ಪರಿವರ್ತನೆಗೊಳ್ಳುತ್ತದೆ. ಸಮೂಹವು ಅಂಕುರಣ ವಿಧಾನದಿಂದ ವೃದ್ಧಿಸುತ್ತದೆ.

ಆಲ್ಸಿಯೋನೇರಿಯ ಉಪವರ್ಗದಲ್ಲಿ ಆರು ಗಣಗಳಿವೆ. 1) ಸ್ಟೊಲೊನಿಫೆರ 2) ಟೆಲಿಸ್ಟೆಸಿಯ 3) ಆಲ್ಸಿಯೋನೇಸಿಯ 4) ಸೀನೋಥಿಕೆಲಿಯ 5) ಗಾರ್ಗೋನೇಸಿಯ 6) ಪೆನ್ನಾಟುಲೇಸಿಯ

ಗಣ 1 ಸ್ಟೊಲೊನಿಫೆರ:– ಪಾಲಿಪ್‌ಗಳು ಕೂಡಿಕೊಂಡಿಲ್ಲ, ಬುಡದ ಸ್ಟೊಲಾನಿನಿಂದ ಸ್ವತಂತ್ರವಾಗಿ ಹುಟ್ಟುತ್ತವೆ. ಈ ಸ್ಟೊಲಾನಿನಿಂದ ಅಥವ ಬುಡದ ಚಾಪೆಯಿಂದ ಒಂದಕ್ಕೊಂದು ಅಂಟಿಕೊಂಡಿರಬಹುದು. ಪ್ರತ್ಯೇಕ ಸ್ಪಿಕ್ಯುಲ್‌ಗಳಿಂದಾದ ಕಂಕಾಲವಿದೆ. ಕೆಲವೊಮ್ಮೆ ಸ್ಪಿಕ್ಯೂಲ್ಗಳು ಕೂಡಿಕೊಂಡು ಕೊಳವೆಯಾಕಾರದ ಕಂಕಾಲವನ್ನು ನಿರ್ಮಿಸುತ್ತವೆ. ಉದಾ: ಟ್ಯುಬಿಪೋರ ಕ್ಲಾವುಲೇರಿಯ.

ಗಣ 2 ಟೆಲಿಸ್ಟೆಸಿಯ: ಸಮೂಹದಲ್ಲಿ ಉದ್ದವಾದ ಅಕ್ಷೀಯ ಪಾಲಿಪ್ ಇದೆ. ಇದು ಪಕ್ಕದ ಕಮುಗಳಂತೆ ಪಾರ್ಶ್ವ ಪಾಲಿಪ್‌ಗಳನ್ನು ಧರಿಸಿರುತ್ತದೆ. ಉದಾ:ಟೆಲಿಸ್ಟೊ.

ಗಣ 3 ಆಲ್ಸಿಯೊನೇಸಿಯ:– ಇವು ಮೃದು ಹವಳಗಳು. ಪಾಲಿಪ್‌ಗಳ ತಳಭಾಗಗಳು ಕೂಡಿಕೊಂಡು ಒಂದು ಮಾಂಸದ ಮುದ್ದೆಯಂತಿದೆ. ಇದರಿಂದ ಪಾಲಿಪ್‌ಗಳ ಮುಖ ತುದಿಗಳು ಮಾತ್ರ ಹೊರ ಚಾಚುತ್ತವೆ. ಪಾಲಿಪ್‌ಗಳು ದ್ವಿರೂಪಕಗಳಾಗಿರಬಹುದು. ಕಂಕಾಲದಲ್ಲಿ ಪ್ರತ್ಯೇಕ ಕ್ಯಾಲ್ಸಿಯಂ ಸ್ಪಿಕ್ಯೂಲ್‌ಗಳಿವೆ. ಉದಾ: ಆಲ್ಸಿಯೊನಿಯಂ

ಗಣ 4 ಸೀನೋಥಿಕೆಲಿಯ: ಇವು ನೀಲಿ ಹವಳಗಳು, ಬೃಹದ್ ಗಾತ್ರದ ಬಹಿರ್ ಕಂಕಾಲವಿದೆ. ಈ ಕಂಕಾಲವು ಸ್ಪಿಕ್ಯೂಲ್‌ಗಳು ಕೂಡಿ ಉಂಟಾದುದಲ್ಲ. ಹರಳಿನ ರೂಪದ ಕ್ಯಾಲ್ಸಿಯಂ ತಂತುಗಳಿಂದ ಉಂಟಾಗಿವೆ. ಕಂಕಾಲದಲ್ಲಿ ಪಾಲಿಪ್‌ಗಳಿಗಾಗಿ ನೇರವಾದ ಕೊಳವೆಯಾಕಾರದ ಅವಕಾಶಗಳಿವೆ. ಇಲ್ಲಿ ದೊಡ್ಡ ಸೊಲಿನಿಯಲ್ ಕೊಳವೆಗಳಿವೆ. ಉದಾ: ಹಿಲಿಯೊಪೋರ

ಗಣ 5 ಗಾರ್ಗೋನೇಸಿಯ: ಕೊಂಬು ಹವಳಗಳು, ಕಡಲು ಬೀಸಣಿಗೆಗಳು, ಕಡಲು ಗರಿಗಳು ಇತ್ಯಾದಿ ಕ್ಯಾಲ್ಸಿಯಂ ಸ್ಪಿಕ್ಯೂಲ್‌ಗಳು ಅಥವಾ ಗಾರ್ಗೊನಿನ್ (ಕೊಂಬಿನಂತಹ ಪ್ರೊಟೀನು ವಸ್ತು) ಅಥವಾ ಈ ಎರಡು ವಸ್ತುಗಳ ಮಿಶ್ರಣದಿಂದ ಉಂಟಾದ ಅಕ್ಷೀಯ ಕಂಕಾಲವಿದೆ. ಪಾಲಿಪ್‌ಗಳು ತುಂಬ ಸ್ಥೂಲವಾಗಿದ್ದು ಕಂಕಾಲದ ಅಕ್ಷದ ಪಕ್ಕದಲ್ಲಿರುತ್ತವೆ. ಇವುಗಳಲ್ಲಿ ಸೈಫನೊಗ್ಲಿಫ್ ಇರುವುದಿಲ್ಲ. ಕೆಲವೊಮ್ಮೆ ದ್ವಿರೂಪಕಗಳು ಉದಾ: ಗಾರ್ಗೊನಿಯ, ಕೊರ್‍ಯಾಲಿಯಂ ಇತ್ಯಾದಿ.

ಗಣ 6 ಪೆನ್ನಾಟುಲೇಸಿಯ: ಕಡಲು ಲೇಖನಿಗಳು. ಈ ಸಮೂಹದಲ್ಲಿ ತುಂಬಾ ಉದ್ದವಾದ ಅಕ್ಷೀಯ ಪಾಲಿಪ್ ಒಂದು ಇದ್ದು ಅದು ತನ್ನ ಪಕ್ಕಗಳಲ್ಲಿ ಪಾರ್ಶ್ವ ಪಾಲಿಪ್‌ಗಳನ್ನು ಧರಿಸುತ್ತದೆ. ಅಕ್ಷೀಯ ಪಾಲಿಪ್‌ನ ಪಾಲಿಪ್ ಗಳಿಲ್ಲದ ತಳಭಾಗವು ಮಣ್ಣಿನಲ್ಲಿ ಹೂತಿರುತ್ತದೆ. ಪ್ರತ್ಯೇಕ ಕ್ಯಾಲ್ಸಿಯಂ ಸ್ಪಿಕ್ಯೂಲ್‌ಗಳು ಸೇರಿ ಕಂಕಾಲ ನಿರ್ಮಾಣವಾಗಿದೆ. ಪಾರ್ಶ್ವ ಪಾಲಿಪ್‌ಗಳು ಯಾವಾಗಲೂ ದ್ವಿರೂಪಕಗಳು ಉದಾ: ಪೆನ್ನಾಟುಲ, ರೆನಿಲ್ಲ ಮುಂತಾದುವು.

ಉಪವರ್ಗ 2 ಜುಆಂತೇರಿಯ: ಈ ಉಪವರ್ಗದಲ್ಲಿ ಸುಮಾರು 4000 ಪ್ರಭೇದಗಳಿವೆ. ಇವುಗಳು ಒಂಟಿ ಅಥವ ಸಾಮೂಹಿಕ ಜೀವಿಗಳು. ಕಡಲು ವಾಸಿಗಳು ಪಾಲಿಪ್‌ನ ಬಿಡಿ ತುದಿಯು ವದನ ಫಲಕ. ಇದರ ಅಂಚಿನಲ್ಲಿ ಕರಬಳ್ಳಿಗಳು ಒಂದರಿಂದ ಹಲವು ವೃತ್ತಗಳಲ್ಲಿವೆ. ಈ ಟೊಳ್ಳು ಕರಬಳ್ಳಿಗಳು ಸರಳವಾಗಿರಬಹುದು. ಅಪರೂಪವಾಗಿ ಕವಲೊಡೆದಿರಬಹುದು (ಉದಾ: ಆಕ್ಟಿನೊಡೆಂಡ್ರಾನ್). ಇವುಗಳ ಸಂಖ್ಯೆ ಆರರಿಂದ ಹಲವು ನೂರುಗಳು. ಆದರೆ ಆಲ್ಸಿಯೋನೇರಿಯಗಳಂತೆ 8 ಇರುವುದಿಲ್ಲ ಮತ್ತು ಇಕ್ಕಡೆಗಳಿಲ್ಲ. ಚಿಕ್ಕ ಚಿಕ್ಕ ಪತ್ರಗಳು ಇರುವುದಿಲ್ಲ. ದೇಹವು ಬುಡ ಭಾಗದಲ್ಲಿ ನೆಲಕ್ಕೆ ಅಥವಾ ಆಧಾರ ವಸ್ತುವಿಗೆ ಅಂಟಿಕೊಂಡಿರುತ್ತದೆ. ಬುಡ ಮತ್ತು ತುದಿಯ ಮಧ್ಯದಲ್ಲಿರುವ ಶರೀರವನ್ನು ಕಾಲಮ್ ಎಂದು ಕರೆಯುತ್ತಾರೆ. ವದನ ಫಲಕದ ನಡುವೆ ಇರುವ ಬಾಯಿಯು ಫ್ಯಾರಿಂಕ್ಸ್ (ಗಂಟಲು ) ಮೂಲಕ ಜಠರ ಪರಿಚಲನ ಅವಕಾಶಕ್ಕೆ ತೆರೆಯುತ್ತದೆ. ಫ್ಯಾರಿಂಕ್ಸ್‌ನ ಒಂದು ತುದಿಯಲ್ಲಿ ಸೈಫನೊಗ್ಲಿಫ್ ಇರಬಹುದು. ಆಲ್‌ಸಿಯೋನೇರಿಯಗಳಲ್ಲಿರುವಂತೆ ಇದರ ಸ್ಥಾನ ದೇಹದ ವೆಂಟ್ರಲ್ ಭಾಗವನ್ನು ಸೂಚಿಸುತ್ತದೆ. ಆದರೆ ಸೆರಿಯಾಂಥೇರಿಯಗಳಲ್ಲಿರುವ ಒಂದು ಸೈಫನೊಗ್ಲಿಫ್ ಡಾರ್ಸಲ್ ಭಾಗವನ್ನು ಸೂಚಿಸುತ್ತದೆ. ಕೆಲವು ಜೀವಿಗಳಲ್ಲಿ ಎರಡು ಸೈಫನೊಗ್ಲಿಫ್‌ಗಳು ಇವೆ. ಎರಡರಲ್ಲಿ ಒಂದನ್ನು ಸಲ್‌ಕಸ್ (ವೆಂಟ್ರಲ್) ಭಾಗದ ಮತ್ತು ಇನ್ನೊಂದನ್ನು ಸಲ್‌ಕುಲಸ್ (ದೇಹದ ಡಾರ್ಸಲ್ ಭಾಗ ಸೂಚಿಸುತ್ತದೆ) ಎಂದು ಕರೆಯುತ್ತಾರೆ. ನೀರಿನ ಪ್ರವಾಹವು ಸಲ್ಕಸ್ ಮೂಲಕ ದೇಹವನ್ನು ಪ್ರವೇಶಿಸಿ ಸಲ್ಕುಲಸ್ ಮೂಲಕ ಹೊರಗೆ ಹರಿಯುತ್ತದೆ. ಪ್ರವಾಹದಲ್ಲಿರುವ ಸೂಕ್ಷ್ಮ ಜೀವಿಗಳು ಈ ಪ್ರಾಣಿಗಳ ಆಹಾರ. ಹಾಗೂ ನೀರಿನಲ್ಲಿರುವ ಆಮ್ಲಜನಕ ಉಸಿರಾಟ ಕ್ರಿಯೆಗೆ ನೆರವಾಗುತ್ತದೆ. ಕೆಲವು ಪ್ರಾಣಿಗಳಲ್ಲಿ ಸೈಫನೊಗ್ಲಿಫ್‌ಗಳಿಲ್ಲ.

ಜಠರ ಪರಿಚಲನ ಅವಕಾಶವು ಪೂರ್ಣ ಮತ್ತು ಅಪೂರ್ಣ ಮೀಸೆಂಟರಿಗಳಿಂದ ವಿಭಾಗವಾಗಿದೆ. ಮೀಸೆಂಟರಿಗಳನ್ನು ಗಾತ್ರದ ಮೇಲೆ ಹೊಂದಿ ಮೈಕ್ರೊ ಮತ್ತು ಮ್ಯಾಕ್ರೊ ಸೆಪ್ಟಾಗಳೆಂದು ಕರೆಯಬಹುದು. ಇವು ಜೊತೆಯಲ್ಲಿ ಮತ್ತು ಆರು ಅಥವ ಆರರ ಗುಣಕದಲ್ಲಿರುತ್ತವೆ. ಸಮುದ್ರದ ತಾವರೆಗಳಲ್ಲಿ ಆರು ಜೊತೆ ಪೂರ್ಣ ಪ್ರಾಥಮಿಕ ಮೀಸೆಂಟರಿಗಳು, ಆರು ಜೊತೆ ಅಪೂರ್ಣ ದ್ವಿತೀಯಕಗಳು, ಹನ್ನೆರಡು ಜೊತೆ ಅಪೂರ್ಣ ತೃತೀಯಕಗಳು ಮತ್ತು ಇಪ್ಪತ್ತನಾಲ್ಕು ಜೊತೆ ಚತುರ್ಥಕಗಳು ಇರುತ್ತವೆ. ಇವುಗಳಲ್ಲಿ ಎರಡು ಸೈಫನೊಗ್ಲಿಫ್‌ಗಳಿರುವುದರಿಂದ ದೇಹವು ದ್ವಿತ್ರಿಜ್ಯ ಸಮಮಿತಿಯನ್ನು ತೋರಿಸುತ್ತದೆ. ಒಂದೇ ಸೈಫನೊಗ್ಲಿಫ್ ಇದ್ದಲ್ಲಿ ಸಮಮಿತಿಯು ದ್ವಿಪಾರ್ಶ್ವವಾಗುತ್ತದೆ. ಒಂದು ಜೊತೆ ಮೀಸೆಂಟರಿಯ ನಡುವಿನ ಕಿರಿದಾದ ಕೋಣೆಯನ್ನು ಅಂತಃಮೀಸೆಂಟರಿ ಕೋಣೆ (ಎಂಟೊಸೀಲ್ ಅಥವ ಎಂಡೋಸೀಲ್) ಎಂದು ಕರೆಯುತ್ತಾರೆ. ಎರಡು ನೆರೆಯ ಜೊತೆಗಳ ನಡುವಿನ ಕೋಣೆಯನ್ನು ಅಂತರ ಮೀಸೆಂಟರಿ ಕೋಣೆ ( ಎಕ್ಸೋಸೀಲ್) ಎಂದು ಕರೆಯುತ್ತಾರೆ. ಪ್ರತಿ ಮೀಸೆಂಟರಿಯಲ್ಲಿಯೂ ಮೂರು ವಿಧದ ಸ್ನಾಯುಗಳಿವೆ, ಪ್ರತಿ ಕರ್ಷಕ ಅಥವ ಲಂಬಸ್ಥ ಸ್ನಾಯುಗಳು, ಪರಿಧಿಯ ಸ್ನಾಯುಗಳು (ಪೆರ್‍ಯೆಟಲ್) ಮತ್ತು ಅಡ್ಡ ಸ್ನಾಯುಗಳು. ಪ್ರತಿ ಜೊತೆ ಮೀಸೆಂಟರಿಯಲ್ಲಿ ಲಂಬಸ್ಥ ಸ್ನಾಯುಗಳು ಪರಸ್ಪರ ಅಭಿಮುಖವಾಗಿವೆ. ಆದರೆ ಎರಡು ಜೊತೆ ಡೈರೆಕ್ಟಿವ್ ಮೀಸೆಂಟರಿಗಳಲ್ಲಿ (ಸೈಫನೊಗ್ಲಿಫ್‌ಗೆ ಸಂಬಂಧಿಸಿರುವ ಪ್ರಾಥಮಿಕ ಮೀಸೆಂಟರಿಗಳು) ಈ ಸ್ನಾಯುಗಳು ಎಂಡೋಸೀಲ್ ಕಡೆಗೆ ಇರದೆ, ಎಕ್ಸೋಸೀಲ್‌ಗೆ ಮುಖ ಮಾಡಿರುವುದರಿಂದ ಪರಸ್ಪರ ವಿರುದ್ಧ ದಿಕ್ಕಿನಲ್ಲಿವೆ. ಆದರೆ ಆಲ್ಸಿಯೋನೇರಿಯಗಳಲ್ಲಿ ಈ ಸ್ನಾಯುಗಳು ಪ್ರತಿ ಮೀಸೆಂಟರಿಯ ಸಲ್ಕಲ್ ಮುಖದಲ್ಲಿರುವುದರಿಂದ ಸಲ್ಕುಲಾರ್ ಜೊತೆಯಲ್ಲಿ ಇವು ಪರಸ್ಪರ ಅಭಿಮುಖವಾಗಿವೆ.

ಸ್ನಾಯು ಮಂಡಲವು ಚೆನ್ನಾಗಿ ಬೆಳೆದಿದೆ. ಹೊರದರ್ಮ ಮತ್ತು ಒಳದರ್ಮದಲ್ಲಿ ಅಲ್ಲಲ್ಲಿ ಸ್ನಾಯು ಕೋಶಗಳನ್ನು ಕಾಣಬಹುದು. ನರಮಂಡಲವು ಇತರ ಸೀಲೆಂಟರೇಟಗಳ ಮಾದರಿಯನ್ನು ಹೊಂದಿದೆ. ಹೊರದರ್ಮದ ನರಕೋಶಗಳು ನರತಂತುಗಳ ಜಾಲವನ್ನು ನಿರ್ಮಿಸಿವೆ. ಒಳದರ್ಮದಲ್ಲಿಯೂ ಇಂತಹದೇ ನರಜಾಲವಿದೆ. ಇದು ಮೀಸೆಂಟರಿಗಳ ಮೇಲೆ ಅಧಿಕವಾಗಿದೆ. ಜನನೇಂದ್ರಿಯಗಳು ಮೀಸೆಂಟರಿಗಳಿಗೆ ಅಂಟಿಕೊಂಡಿವೆ. ಇವು ಒಳದರ್ಮದಿಂದ ರೂಪುಗೊಳ್ಳುತ್ತವೆ. ಬಹುಪಾಲು ಜೀವಿಗಳು ಏಕಲಿಂಗಿಗಳು. ಗಂಡು ಪ್ರಾಣಿಯಲ್ಲಿ ಉಂಟಾದ ಶುಕ್ಲಾಣುಗಳು ಬಾಯಿ ಅಥವಾ ಕಾಲಮ್ ಮೇಲಿರುವ ರಂಧ್ರಗಳ ಮೂಲಕ ಹೊರ ಬರುತ್ತವೆ. ಇವು ಹೆಣ್ಣಿನ ಶರೀರವನ್ನು ಪ್ರವೇಶಿಸಿ ನಿಷೇಚನೆ ನಡೆಯುತ್ತದೆ. ನಿರ್ಲಿಂಗ ರೀತಿಯ ಸಂತಾನೋತ್ಪತ್ತಿಯು ನಡೆಯಬಹುದು. ಪ್ರಾಣಿಯ ಶರೀರ ಲಂಬ ಸೀಳಿಕೆಯಿಂದ ಇಬ್ಭಾಗವಾಗಿ ಎರಡು ಜೀವಿಗಳು ರೂಪುಗೊಳ್ಳುತ್ತವೆ.

ಕೆಲವು ಗಣಗಳ (ಮ್ಯಾಡ್ರಿಪೊರೇರಿಯ ಮತ್ತು ಆಂಟಿಪಥೇರಿಯ) ಪ್ರಾಣಿಗಳು ದೇಹ ರಕ್ಷಣೆಗೆ ಕಂಕಾಲವನ್ನು ಸ್ರವಿಸುತ್ತವೆ. ಆಲ್ಸಿಯೋನೇರಿಯಗಳಂತೆ ಇದು ಮೀಸೊಗ್ಲಿಯದ ಸ್ಪಿಕ್ಯೂಲ್‌ಗಳಿಂದ ನಿರ್ಮಿತವಾದುದಲ್ಲ. ಮ್ಯಾಡ್ರಿಪೊರೇರಿಯಗಳಲ್ಲಿ ಗಟ್ಟಿಯಾದ ಕ್ಯಾಲ್ಸಿಯಂನ ಬಹಿರ್ ಕಂಕಾಲವನ್ನು ಹೊರದರ್ಮ ಸ್ರವಿಸುತ್ತದೆ. ಆಂಟಿಪಥೇರಿಯಗಳಲ್ಲಿ ಗಾರ್ಗೊನಿಯಗಳಲ್ಲಿರುವಂತೆ ಕೊಂಬಿನಂತಹ ವಸ್ತುವಿನ ಅಕ್ಷೀಯ ಕಂಕಾಲವಿದೆ.

ಈ ಉಪವರ್ಗವನ್ನು ಐದು ಗಣಗಳಾಗಿ ವಿಂಗಡಿಸಬಹುದು. 1) ಆಕ್ಟಿನೇರಿಯ 2) ಮ್ಯಾಡ್ರಿಪೊರೇರಿಯ 3) ಜುಆಂತಿಡಿಯ 4) ಆಂಟಿಪಥೇರಿಯ 5) ಸೆರಿಯಾಂಥೇರಿಯ.

1) ಗಣ ಆಕ್ಟಿನೇರಿಯ:– ಕಡಲು ತಾವರೆಗಳು. ಇವು ದೊಡ್ಡ ಗಾತ್ರದ ಪ್ರಾಣಿಗಳು ಮತ್ತು ಒಂಟಿ ಜೀವಿಗಳು. ಪ್ರಕಾಶಕ ಬಣ್ಣ ಧರಿಸಿರುತ್ತವೆ. ಕರಬಳ್ಳಿಗಳು ಮತ್ತು ಮೀಸೆಂಟರಿಗಳು ಆರರ ಗಣಕಗಳಲ್ಲಿರುತ್ತವೆ. ಸಾಮಾನ್ಯವಾಗಿ ಕಂಕಾಲವಿಲ್ಲ. ಶರೀರದಲ್ಲಿ ಪಾದಫಲಕ, ಕಾಲಮ್ ಮತ್ತು ವದನ ಫಲಕಗಳೆಂಬ ಮೂರು ಭಾಗಗಳಿವೆ. ಒಂದು ಅಥವಾ ಎರಡು ಸೈಫನೊಗ್ಲಿಫ್‌ಗಳಿವೆ. ಉದಾ: ಮೆಟ್ರಿಡಿಯಮ್, ಎಡ್ವರ್ಡ್‌ಸಿಯ, ಅಡಾಮ್‌ಸಿಯ, ಇತ್ಯಾದಿ

2) ಗಣ ಮ್ಯಾಡ್ರಿಪ್ರೇರಿಯ: ಇವು ನಿಜವಾದ ಅಥವ ಶಿಲಾ ಹವಳಗಳು. ಇವಕ್ಕೆ ಅಡಕವಾದ ಕ್ಯಾಲ್ಸಿಯಂನ ಬಹಿರ್ ಕಂಕಾಲವಿದೆ. ಈ ಪ್ರಾಣಿಗಳಲ್ಲಿ ಸೈಫನೊಗ್ಲಿಫ್ ಇರುವುದಿಲ್ಲ. ಸಾಮಾನ್ಯವಾಗಿ ಇವುಗಳು ಸಮೂಹ ಜೀವಿಗಳು. ಕೆಲವು ಒಂಟಿ ಜೀವಿಗಳಾಗಿರಬಹುದು. ಬಹಳ ಚಿಕ್ಕ ಪಾಲಿಪ್‌ಗಳು ಕಂಕಾಲದ ಬಟ್ಟಲಿನಂತಹ ಅವಕಾಶಗಳಿರುತ್ತವೆ. ಉದಾ: ಆಸ್ಟ್ರಿಯ, ಫಂಜಿಯ, ಮ್ಯಾಡ್ರಿಪೋರ, ಫೇವಿಯ, ಮಿಯಾಂಡ್ರಿನ್ ಇತ್ಯಾದಿ.

3) ಗಣ ಜುಆಂತಿಡಿಯ: ಒಂಟಿ ಜೀವಿಗಳು ಅಥವಾ ಸಾಮೂಹಿಕ ಜೀವಿಗಳು.

ಸಾಮಾನ್ಯವಾಗಿ ಆದಿಜಂತುಕಗಳು. ಇವುಗಳಲ್ಲಿ ಪಾದ ಫಲಕ ಮತ್ತು ಕಂಕಾಲಗಳಿಲ್ಲ. ಒಂದು ವೆಂಟ್ರಲ್ ಸೈಫನೊಗ್ಲಿಫ್ ಇದೆ. ಮೀಸೆಂಟರಿಗಳು ಜೋಡಿಗಳಲ್ಲಿವೆ. ಪ್ರತಿ ಜೋಡಿಯಲ್ಲಿ ಒಂದು ಪೂರ್ಣ ಮತ್ತೊಂದು ಅಪೂರ್ಣವಾಗಿರುತ್ತದೆ. ಉದಾ: ಜುಅಂತಸ್.

4) ಗಣ ಆಂಟಿಪಥೇರಿಯ (ಆಂಟಿಪಥಿಡಿಯ) ಇವು ಕಪ್ಪು ಹವಳಗಳು. ಇವು ಸಾಮೂಹಿಕ ಜೀವಿಗಳು. 6–24 ಕರಬಳ್ಳಿಗಳು ಮತ್ತು ಮೀಸೆಂಟರಿಗಳಿರುತ್ತವೆ. ಎರಡು ಸೈಫನೊಗ್ಲಿಫ್‌ಗಳಿವೆ. ಸಮೂಹವು ಕೈಟಿನ್‌ನಂತಹ ಅಕ್ಷ ಕಂಕಾಲದಿಂದ ಆಧರಿಸಲ್ಪಟ್ಟಿದೆ. ಉದಾ: ಆಂಟಿಪಥೇಸ್

5) ಗಣ ಸೆರಿಯಾಂಥೇರಿಯ:– ಉದ್ದವಾದ ಪಾದಫಲಕರಹಿತ ಕಡಲು ತಾವರೆ ಆಕಾರದ ಒಂಟಿಜೀವಿಗಳು. ಅನೇಕ ಸರಳ ರೀತಿಯ ತಾವರೆ ಆಕಾರದ ಒಂಟಿಜೀವಿಗಳು. ಅನೇಕ ಸರಳ ರೀತಿಯ ಕರಬಳ್ಳಿಗಳಿವೆ. ಇವು ಮುಖ ಮತ್ತು ಅಂಚಿನ ಕರಬಳ್ಳಿಗಳೆಂದು ಎರಡು ವೃತ್ತಗಳಲ್ಲಿ ವ್ಯವಸ್ಥಿತವಾಗಿವೆ. ಒಂದು ಡಾರ್ಸಲ್ ಸೈಫನೊಗ್ಲಿಫ್ ಮಾತ್ರ ಇದೆ. ಅನೇಕ ಪೂರ್ಣ ಒಂಟಿ ಮೀಸೆಂಟರಿಗಳಿವೆ. ಇವುಗಳಿಗೆ ರಕ್ಷಕ ಕಂಕಾಲವಿಲ್ಲ. ಉದಾ: ಸೆರಿಯಾಂಥಸ್. ***

**ಆಂಫಿನ್ಯೂರ:** ಜಲಚರಿ ಮೃದ್ವಂಗಿಗಳ ಒಂದು ವರ್ಗ. ಆಪ್ಲಾಕೋಫೋರ (ಕವಚ ಫಲಕಗಳಿರದ ಕೀಟ ರೂಪದ ಪ್ರಾಣಿಗಳು) ಮತ್ತು ಪಾಲಿಪ್ಲಾಕೋಫೋರ (ಬೆನ್ನ ಮೇಲೆ ಎಂಟು ಕವಚ ಫಲಕಗಳಿರುವ ಚಪ್ಪಟೆ ದೀರ್ಘವೃತ್ತರೂಪದವು) ಇದರ ಎರಡು ಉಪವರ್ಗಗಳು. ಸಮನಾದ ಎರಡು ಜೊತೆ ನರತಂತುಗಳಿರುವುದರಿಂದ ಲ್ಯಾಟಿನ್ನಿನಲ್ಲಿ ಆಂಫಿನ್ಯೂರ ಎಂಬ ಹೆಸರು ಬಂದಿದೆ (ಉಭಯನರಹುರಿಗಳು). ಪ್ರಾಣಿಯ ಲಕ್ಷಣವಿಷ್ಟು—ಕಣ್ಣು, ಕರಬಳ್ಳಿಗಳು (ಟೆಂಟಕಲ್) ಇರದ ಅಸ್ಪಷ್ಟವಾದ ತಲೆ; ಅದರ ಕೆಳಭಾಗದಲ್ಲಿ ಚಲಿಸಲು ಉಪಯುಕ್ತವಾದ ಮಾಂಸಖಂಡಗಳಿಂದ ತುಂಬಿದ ದಪ್ಪ ತೆವಳುಪಾದ; ಮೇಲ್ಭಾಗ ಮತ್ತು ಪಕ್ಕಗಳನ್ನು ಆವರಿಸಿರುವ ಮ್ಯಾಂಟಲ್ ಹೊದಿಕೆ; ಹೊದಿಕೆಯ ಹೊರಭಾಗದಲ್ಲಿ ಒಂದು ಅಥವಾ ಎರಡು ಫಲಕಗಳಿರುವ, ಸ್ರವಿಸುವ ಸುಣ್ಣದ ಚಿಪ್ಪು. ಕೆಲವು ಪ್ರಾಣಿಗಳಿಗೆ ಚಿಪ್ಪಾಗಲಿ, ಕಾಲುಗಳಾಗಲಿ ಇರುವುದಿಲ್ಲ. ಬಾಯಿ ಮತ್ತು ಆಸನದ್ವಾರ ದೇಹದ ಕೆಳಭಾಗದಲ್ಲಿ ಎರಡು ತುದಿಗಳಲ್ಲಿ ಇವೆ. ಅನ್ನನಾಳ ನೆಟ್ಟಗಿದೆ. ಬಾಯ ಅಂಗುಳದಲ್ಲಿ ಹಲ್ಲುಗಳನ್ನೊಳಗೊಂಡ ರ್‍ಯಾಡ್ಯುಲಾ ಎಂಬ ಉಜ್ಜುವ ಅಂಗವೂ, ಲಾಲಾಗ್ರಂಥಿಗಳೂ ಇವೆ. ಸಮಗಾತ್ರವಾದ ಒಂದು ಜೊತೆ ಕಿವಿರುಗಳು ಹೊರ ಹೊದಿಕೆಯ ಪದರದಲ್ಲಿವೆ. ಉಭಯ ನರಹುರಿ ಪ್ರಾಣಿಗಳು ಸಮುದ್ರಗಳಲ್ಲು, ತೀರಕ್ಕೆ ಸಮೀಪವಾಗಿ ಆಳವಿಲ್ಲದ ಭಾಗಗಳಲ್ಲು ವಾಸಿಸುತ್ತವೆ. ಬಂಡೆ, ಹವಳ, ಸಮುದ್ರಸಸ್ಯಗಳು ಮುಂತಾದುವುಗಳ ಮೇಲೆ ತೆವಳುತ್ತ ಅಲ್ಲಿ ಬೆಳೆದಿರುವ ಪಾಚಿ ಮುಂತಾದ ಸಸ್ಯಗಳನ್ನು ತಿಂದು ಬದುಕುವುವು.

ಪಾಲಿಪ್ಲಾಕೋಫೋರ (ಬಹುಫಲಕಿಗಳು): ಈ ಉಪವರ್ಗದ ಕೈಟಾನುಗಳನ್ನು ಕೆಲವರು ಗ್ಯಾಸ್ಟ್ರೊಪೋಡ ವರ್ಗದಲ್ಲಿ ಲೋರಿಕೇಟ ಎಂಬ ಪ್ರತ್ಯೇಕವಾದ ಒಂದು ಉಪವರ್ಗಕ್ಕೆ ಸೇರಿಸಿರುವರು. ಕೈಟಾನುಗಳ ದೇಹ ಸ್ವಲ್ಪ ಉದ್ದ ಮತ್ತು ಚಪ್ಪಟೆ. ಇವು ಅತಿ ದೊಡ್ಡದಾಗಿ ಬೆಳೆಯುವುದಿಲ್ಲ. ಇವುಗಳಲ್ಲಿರುವ ಎಂಟು ಫಲಕಗಳಲ್ಲಿ ಮೊದಲನೆಯ ಮತ್ತು ಕೊನೆಯ ಫಲಕಗಳು ಅರ್ಧ ಗೋಳಾಕಾರವಾಗಿಯೂ ಮಿಕ್ಕವು ಆಯಾಕಾರವಾಗಿಯೂ ಇವೆ. ಫಲಕಗಳು ಒಂದರ ಹಿಂದೊಂದು ಮನೆಯ ಹೆಂಚುಗಳಂತೆ ಜೋಡಣೆಯಾಗಿವೆ. ಹೀಗಿರುವುದರಿಂದ ಈ ಪ್ರಾಣಿಗಳು ಯಾವುದಾದರೂ ವೈರಿಗಳು ಹೆದರಿಸಿದಾಗ ತಮ್ಮ ಮೈಯ್ಯನ್ನು ಆರ್ಮಡಿಲ್ಲೊ ಇಲ್ಲವೇ ಮರಹೇನುಗಳ ಹಾಗೆ ಸುತ್ತಿಕೊಳ್ಳುತ್ತವೆ. ಕ್ರಿಪ್ಟೊಕೈಟಾನಿನಂಥ ಪ್ರಾಣಿಗಳಿಗೆ ಮುಳ್ಳುಗಳಿಂದ ಆವೃತವಾದ ಚಿಪ್ಪಿನ ಹೊದಿಕೆ ಇದೆ. ತೊನಿಸಿಯ ಎಂಬುದರಲ್ಲಿ ಇವು ಹೆಚ್ಚು ಸಂಖ್ಯೆಯಲ್ಲಿವೆ. ಈ ಪ್ರಾಣಿಗಳಿಗೆ ಲಾಲಾಗ್ರಂಥಿ, ರ್‍ಯಾಡ್ಯುಲ ಮತ್ತು ಪಿತ್ತಜನಕಾಂಗಗಳೂ ಇವೆ. ತಲೆಯ ಭಾಗದಲ್ಲಿ ಗಂಟಲಿನ ಸುತ್ತ ನರವ್ಯೂಹವಿದೆ. ಅದರಿಂದ ಎರಡು ಜೊತೆ ನರಗಳು ಪಾದಕ್ಕೂ ಹೊರ ಹೊದಿಕೆಗೂ ಸಾಗಿವೆ. ಪ್ರಾಣಿಯ ದೇಹದ ಹಿಂಭಾಗದ ಮಧ್ಯದಲ್ಲಿ ಹೃದಯವಿದೆ. ಅದನ್ನು ಪೆರಿಕಾರ್ಡಿಯಂ ಕವಚ ಆವರಿಸಿದೆ. ಮಧ್ಯದಲ್ಲಿರುವ ಒಂದೇ ಒಂದು ಹೃತ್ಕುಕ್ಷಿಯ ಎರಡು ಪಕ್ಕಗಳಲ್ಲೂ ಹೃತ್ಕರಣಗಳಿವೆ. ಮೂತ್ರ ಜನಕಾಂಗಗಳ ಒಳ ತುದಿಗಳು ಹೃತ್ಕವಚದಲ್ಲೂ ಹೊರತುದಿಗಳು ಆಸನದ್ವಾರದ ಪಕ್ಕದಲ್ಲೂ ಹೊರಗಡೆಗೆ ತೆರೆಯುತ್ತವೆ. ಇವು ಏಕಲಿಂಗಿಗಳು. ಇವುಗಳ ಜನನದ್ವಾರಗಳೂ ಸೋಲೆನೋಗ್ಯಾಸ್ಟ್ರಗಳಲ್ಲಿದ್ದ ಹಾಗೆ ಹೃತ್ಕವಚದೊಳಕ್ಕೆ ತೆರೆಯುವುದಿಲ್ಲ. ಜನನನಾಳಗಳ ಮೂಲಕ ಲಿಂಗಾಣುಗಳು ಹೊರಬರುತ್ತವೆ. ಇವುಗಳ ಜೀವನ ಚರಿತ್ರೆಯಲ್ಲಿ ಟ್ರೋಕೋಫೋರ್ ಎಂಬ ಲಾರ್ವದ ಅವಸ್ಥೆ ಕಂಡುಬರುತ್ತದೆ. 4-80 ಸಮಗಾತ್ರದ ಕಿವಿರುಗಳು ಹೊರಹೊದಿಕೆಯ ಮಡಿಕೆಯಲ್ಲಿವೆ. ವೆಸ್ಟ್‌ಇಂಡೀಸ್ ಮತ್ತು ಇತರ ದೇಶಗಳಲ್ಲಿ ಕೈಟಾನಿನ ಕಾಲುಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ.

ಮಾನೋಪ್ಲಾಕೋಫೋರ (ಏಕಫಲಕಿಗಳು): ಚಿಪ್ಪಿನಲ್ಲಿ ಒಂದು ಫಲಕ ಮಾತ್ರ ಇದೆ. ರ್‍ಯಾಡ್ಯುಲಾದಲ್ಲಿ ಆರುಸಾಲು ಹಲ್ಲು ಕೂಡಿವೆ. ಚಿಪ್ಪಿನ ಅಗ್ರಭಾಗದ ಅಡಿಯಲ್ಲಿ ಹೊಟ್ಟೆ ಇದೆ. ಸಮಗಾತ್ರದ ಎರಡು ಪಿತ್ತಜನಕಾಂಗಗಳು ಅನ್ನನಾಳದ ಜೊತೆಗೆ ಕೂಡಿಕೊಂಡಿವೆ. ವಿಶಾಲವಾದ ಕಾಲು ಐದು ಜೊತೆ ಕಿವಿರುಗಳ ನಡುವೆ ಇದೆ. ಪ್ರತಿಯೊಂದು ಕಿವಿರಿನ ಜೊತೆಗೂ ಒಂದೊಂದು ಮೂತ್ರಾಂಗವು ಕೂಡಿದೆ. ನರವ್ಯೂಹ ಕೈಟಾನಿನಲ್ಲಿರುವ ಹಾಗೆಯೇ ಇದೆ. ದೇಹಾವಕಾಶ ಚೆನ್ನಾಗಿ ರೂಪುಗೊಂಡಿದೆ. ಮೂತ್ರಾಂಗಗಳು



ಕೈಟಾನಿನ ಮೇಲ್ಭಾಗ ಕೈಟಾನಿನ ಕೆಳಭಾಗ

1. ಬಾಯಿ, 2. ಕಿವಿರು, 3. ಕಾಲು, 4. ಆಸನದ್ವಾರ.



ನಿಯೋಪಿಲೈನ ಪ್ರಾಣಿಯ ತಳಭಾಗ

(ನೆಫ್ರೀಡಿಯಗಳು) ಕಿವಿರಿನ ಅಡಿಯಲ್ಲಿ ತೆರೆಯುತ್ತವೆ. ಅಂಗಾಂಗಗಳಿಂದ ಉತ್ಪತ್ತಿಯಾದ ವಿಸರ್ಜನ ಪದಾರ್ಥಗಳು ಕೆಲವು ನೆಫ್ರೀಡಿಯಗಳ ಮೂಲಕ ಹೊರಬರುತ್ತವೆ. ಇವುಗಳೆಲ್ಲ ಏಕಲಿಂಗಿಗಳು. (ಕೆ.ಎಂ.ಜಿ.)

**ಆಂಫಿಪೋಡ:** ಸಂಧಿಪದಿ ವಂಶದ ಕ್ರಸ್ಟೇಷಿಯ ವರ್ಗದ ಮ್ಯಾಲಕೋಸ್ಟ್ರಾಕ ಉಪವರ್ಗಕ್ಕೆ ಸೇರಿದ ಒಂದು ಗಣ. ಇವುಗಳ ಶರೀರ ಅಕ್ಕಪಕ್ಕದಲ್ಲಿ ಚಪ್ಪಟೆಯಾಗಿದೆ. ತಲೆಯ ಹೊರಹೊದಿಕೆ (ಕ್ಯಾರಾಪೇಸು) ಚಿಪ್ಪು ಆಗಿಲ್ಲ. ಆದರೆ ಎದೆಯ ಮೊದಲನೆಯ ಖಂಡ ಮತ್ತು ಕೆಲವು ವೇಳೆ ಎರಡನೆಯ ಖಂಡ ತಲೆಯೊಂದಿಗೆ ಸೇರಿಕೊಂಡಿದೆ. ಕಣ್ಣುಗಳು ನಿವೃಂತವಾಗಿರುತ್ತವೆ. ತೊಟ್ಟುಗಳಿದ್ದರೂ ಅವು ಚಲಿಸಲಾಗುವುದಿಲ್ಲ. ಕುಡಿಮೀಸೆಗಳು ಕವಲೊಡೆದಿರುವುದಿಲ್ಲ. ಒಂದು ಸಣ್ಣ ಎಕ್ಸಾಪೊಡೈಟ್ ಅನ್ನು ಹೊಂದಿರುತ್ತದೆ. ಎದೆಯ ಕಾಲುಗಳಲ್ಲಿ ಎಕ್ಸಾಪೊಡೈಟ್ ಇರುವುದಿಲ್ಲ. ಎದೆಯ ಮೊದಲನೆಯ ಜೊತೆ ಕಾಲುಗಳು ಮ್ಯಾಕ್ಸಿಲ್ಲಿಪಿಡುಗಳಾಗಿ ಮಾರ್ಪಟ್ಟಿವೆ. ಉಳಿಕೆ ಕಾಲುಗಳು ಒಂದೇ ತೆರನಾಗಿವೆ. 2ನೇ ಮತ್ತು 3ನೇ ಜೊತೆ ಎದೆಯ ಉಪಾಂಗಗಳು ಹಿಡಿದುಕೊಳ್ಳುವ ಭಾಗಗಳಾಗಿ ಮಾರ್ಪಟ್ಟಿವೆ. ಕೆಲವು ಎದೆಯ ಕಾಲುಗಳ ಬುಡದಲ್ಲಿ ಗುಳ್ಳೆಯಾಕಾರದ ಅಥವಾ ಚಪ್ಪಟೆಯಾದ ಕಿವಿರುಗಳು (ಬ್ರಾಂಕೈ) ಇವೆ. ಉದರಭಾಗದ ಕಾಲುಗಳು ಯಾವಾಗಲೂ ಬೈರಾಮಸ್ ಆಗಿರುತ್ತವೆ. ಅದರ ಕವಲು (ರ್‍ಯಾಮೈ) ಗಳು ಕಿವಿರುಗಳಾಗಿ ಕಾರ್ಯನಿರ್ವಹಿಸುತ್ತವೆ. ಉದರಭಾಗದ ಕಾಲುಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಮೊದಲನೆಯ 3 ಜೊತೆ ಅನೇಕ ಕೀಲುಗಳಿಂದುಂಟಾದ ಕವಲುಗಳು. ಹಿಂದಿನ ಮೂರು ಜೊತೆ ಕೀಲುಗಳಿಲ್ಲದ ನೀಳವಾದ ಕವಲುಗಳಾಗಿವೆ. ಆರ್ಖಿಸ್ಟಿಯ, ಗಾಮ್ಮಾರಸ್, ಹೈಪೇರಿಯ, ಕಾಪ್ರೆಲ್ಲ, ಸೈಯಾಮಸ್ ಕೆಲವು ಉದಾಹರಣೆಗಳು. (ಬಿ.ಎನ್.)

**ಆಂಫಿಯಾಕ್ಸಸ್:** ಬ್ರ್ಯಾಂಖಿಯೋಸ್ಟೋಮ ಲ್ಯಾನ್ಸ್‌ಲೆಟ್ ಎಂಬ ಹೆಸರಿನ ಈ ಪ್ರಾಣಿ ಸೆಫ್ಯಾಲೋಕಾರ್ಡೇಟ ಉಪವಂಶಕ್ಕೆ ಸೇರಿದೆ. ಸಣ್ಣ ಮೀನಿನಂತೆ ಗುರಾಣಿಯಾಕಾರದ ಪಾರದರ್ಶಕ ಸಮುದ್ರ ಪ್ರಾಣಿ. ಪ್ರಪಂಚದ ಎಲ್ಲ ಸಮುದ್ರಗಳಲ್ಲಿ ಹಂಚಿರುವ ಇದರ 28 ಪ್ರಭೇದಗಳಿವೆ. ಪಲ್ಲಾಸ್ ಎಂಬುವನು 1778 ರಲ್ಲಿ ಇದನ್ನು ಕಂಡುಹಿಡಿದು ಲೈಮಾಕ್ಸ್ ಲ್ಯಾನ್ಸಿಯೋಲೇಟಸ್ ಎಂದು ಹೆಸರಿಸಿದನು. 1836ರಲ್ಲಿ ಯೂರೆಲ್ ಎಂಬುವನು ಆಂಫಿಯಾಕ್ಸಸ್ ಪದ ಬಳಸಿದನು. ಆದರೆ ಈ ಮುಂಚೆ 1834 ರಲ್ಲಿ ಕಾಸ್ಟ ಕೊಟ್ಟ ಬ್ರಾಂಖಿಯೋಸ್ಟೋಮ ಹೆಸರೇ ಇದಕ್ಕೆ ಹೆಚ್ಚು ಸೂಕ್ತವಾದುದು.

ವಾಸಸ್ಥಳ ಮತ್ತು ಸ್ವರೂಪ: ಸಮುದ್ರದಲ್ಲಿ ಆಂಫಿಯಾಸಸ್ ದ್ವಿಮುಖ ಜೀವನ ಸಾಗಿಸುವುದೆಂದು ಭಾವಿಸಲಾಗಿದೆ. ಬಹುಕಾಲ ಅದರಲ್ಲೂ ಕತ್ತಲಿರುವಾಗ ಮರಳಿನಲ್ಲೇ ಹುದುಗಿದ್ದು ಸ್ಥಾಯಿಜೀವಿಯಾಗಿ ಜೀವಿಸುವುದು. ಹೀಗಿರುವಾಗ ಉಸಿರಾಟ ಮತ್ತು ಆಹಾರ ಸೇವನೆಗೆ ಅನುವಾಗುವ ಹಾಗೆ ತಲೆಯನ್ನು ಮರಳಿನಮೇಲೆ ಕಾಣುವಂತೆ ಇಟ್ಟಿರುವುದು.

3–5 ಸೆಂ.ಮೀ. ಉದ್ದದ ಭರ್ಜಿಯಾಕಾರದ ಪಾರ್ಶ್ವವಾಗಿ ಒತ್ತಲ್ಪಟ್ಟ ಶರೀರ ಮೀನಿನಂತಿರುವುದು. ಆದರೆ ಮೀನಿನ ಹಾಗೆ ನಿರ್ದಿಷ್ಟ ತಲೆ, ದವಡೆಗಳು, ಹೃದಯ, ಜ್ಞಾನೇಂದ್ರಿಯಗಳು, ವಿಶಿಷ್ಟರೀತಿಯ ಮೆದುಳು, ಹುರುಪೆಗಳು ಇವ್ಯಾವುವೂ ಇಲ್ಲ. ಈಜು ರೆಕ್ಕೆಗಳಿಂದಾವೃತವಾದ ಶರೀರ ಎರಡೂ ತುದಿಗಳಲ್ಲಿ ಭರ್ಜಿಯಂತೆ ಮೊನಚಾಗಿರುವುದರಿಂದಲೇ ಇದಕ್ಕೆ ಲ್ಯಾನ್ಸ್‌ಲೆಟ್ ಎಂಬ ಹೆಸರೂ ಉಂಟು. ಬೆನ್ನಿನಮೇಲೆ ಹಿಂಭಾಗಕ್ಕೆ ಮುಂದುವರೆಯುವ ಮೇಲ್ಭಾಗದ ಈಜುರೆಕ್ಕೆ ಬಾಲದಲ್ಲಿ ಅಗಲವಾಗಿ ಕೆಳಭಾಗಕ್ಕೂ ಮುಂದುವರೆದಿದೆ. ಆದರೆ ಬಾಲದ ಈಜುರೆಕ್ಕೆಗೆ ಫಿನ್‌ರೇಗಳ ಆಧಾರ ಇಲ್ಲ. ಮುಂಭಾಗದ ಮೂರನೇ ಎರಡು (2/3) ಭಾಗದ ಎರಡೂ ಪಕ್ಕಗಳು ಮೆಟಪ್ಲೂರಲ್ ಮಡಿಕೆಗಳು ಎಂಬ ಪಟಲಗಳಾಗಿವೆ.

ಮೂತಿಯ ಕೆಳಗೆ ಮಧ್ಯಭಾಗದಲ್ಲಿ ಬಾಯಿ ಕುಂಚಿಗೆ (ಓರಲ್ ಹುಡ್) ಇದೆ. ಬಾಯಿಕುಂಚಿಗೆಯ ಅಂಚಿನಲ್ಲಿ ಲೋಮಾಂಗಗಳುಳ್ಳ ಕೋಡುಗಳ ರಚನೆಯನ್ನು ಬಾಯಿ ಪ್ರತಾನ (ಸಿರೈ) ಎನ್ನುವರು. ಬಾಯಿ ಕುಂಚಿಗೆಯ ನಡುವೆ ಆಲಿಕೆಯಂತಹ ವೆಸ್ಟಿಬ್ಯೂಲ್ ಇದ್ದು, ಅದರ ಬುಡದಲ್ಲಿ, ವೀಲಮ್ ಎಂಬ ಪೊರೆಯ ನಡುವೆ ಬಾಯಿ ರಂಧ್ರವಿದೆ. ಬಾಯಿಯ ಅಂಚಿನಲ್ಲಿ ಗಂಟಲಿನ ಕಡೆಗೆ ಬಾಗಿರುವ ವೇಲಾರ್ ಕೋಡುಗಳಿವೆ. ಬಾಯಿಕುಂಚಿಗೆಯ ಒಳಭಾಗದ ಎಪಿಥೀಲಿಯಂ ಅನೇಕ ಲೋಮಾಂಗಗಳುಳ್ಳ ಬೆರಳಿನಂತಹ ಮಡಿಕೆಗಳಾಗಿದೆ. ಇವುಗಳ ಚಲನೆ ಬಾಯಿಯ ಕಡೆಗೆ ನೀರಿನ ಸುಳಿಯನ್ನು ಉಂಟುಮಾಡುವುದು. ಆದ್ದರಿಂದ ಇದನ್ನು ಚಕ್ರಾಂಗ ಎನ್ನುವರು. ವೆಸ್ಟಿಬ್ಯುಲ್‌ನ ಮೇಲ್ಛಾವಣಿಯಲ್ಲಿರುವ ಲೋಮಾಂಗ ಕಾಲುವೆಯೊಂದನ್ನು ಹ್ಯಾಚೆಕ್ ಅಂಗ ಎಂದು ಕರೆಯುವರು. ಬಾಯಿಕುಂಚಿಗೆಯು ಮೆಟಾಪ್ಲೂರಲ್ ಮಡಿಕೆಗಳವರೆಗೆ ಮುಂದುವರೆದಿದೆ. ಈ ಮೆಟಾಪ್ಲೂರಲ್ ಮಡಿಕೆಗಳು ಬಾಲದ ಈಜುರೆಕ್ಕೆಯ ಮುಂದಿರುವ ಪರಿಕೋಷ್ಠ ರಂಧ್ರದವರೆಗೂ ಹಬ್ಬಿವೆ. ಪರಿಕೋಷ್ಠ ರಂಧ್ರದ ಎಡಭಾಗಕ್ಕೆ ಆಸನದ್ವಾರವಿದೆ.

ದೇಹಭಿತ್ತಿ ಪಾರದರ್ಶಕ ಹಾಗೂ ಮೃದು. ಯಾವುದೇ ಹೊರಾಸ್ಥಿಯಿಲ್ಲ. ಇದರಲ್ಲಿ ಹೊರಚರ್ಮ ಮತ್ತು ಡರ್ಮಿಸ್ ಎಂಬ ಎರಡು ಪದರಗಳಿವೆ. ದೇಹದ ಎರಡೂ ಪಕ್ಕಗಳಲ್ಲಿ V ಆಕಾರದ ಮಯೋಟೋಮುಗಳೆಂಬ ಸ್ನಾಯುಗಳಿವೆ. ಅವುಗಳ ನಡುವೆ ಮಯೋಕಾಮೆಟ್ ಎಂಬ ತಟಿಕೆಗಳಿವೆ. ಸ್ನಾಯುಗಳು ಈಜಲು ಸಹಕರಿಸುತ್ತವೆ. ಜೀವಿಯ ಅಕ್ಷದಲ್ಲಿ ಆಧಾರ ಸ್ಥಂಭದಂತಿರುವ ಅಸ್ಥಿ ಪಟ್ಟಿ ತಲೆಯಿಂದ ಬಾಲದವರೆಗೂ ಹಬ್ಬಿದೆ. ಇದರ ಮೇಲೆ ಉದ್ದಕ್ಕೂ ಟೊಳ್ಳಾದ ನರಬಳ್ಳಿ ಇದೆ. ನರಬಳ್ಳಿಯ ಉದ್ದಕ್ಕೂ ನರಜ್ವಾಲವಿದ್ದು ತಲೆಯಲ್ಲಿ ಮಸ್ತಿಷ್ಕ ಕೋಶಕ ಎಂಬ ಸರಳ ಮೆದುಳಾಗಿ ರೂಪುಗೊಂಡಿದೆ. ಅಸ್ಥಿಪಟ್ಟಿ ಅಲ್ಲದೇ ಬಾಯಿಕುಂಚ, ಕಿವಿರುಗಳು, ಈಜುರೆಕ್ಕೆಗಳಿಗೆ ಪ್ರತ್ಯೇಕ ಆಧಾರಾಸ್ಥಿಗಳಿವೆ.

ಆಹಾರಸೇವನೆ: ಆಂಫಿಯಾಕ್ಸಸ್ ಶೋಧಿಸಿ ಉಣ್ಣುವ ಪ್ರಾಣಿ. ನೀರಿನಲ್ಲಿರುವ ಸೂಕ್ಷ್ಮಸಾವಯವ ವಸ್ತುಗಳೇ ಇದರ ಆಹಾರ. ಬಾಯಿಯ ಮೂಲಕ ಗಂಟಲಿಗೆ ನುಗ್ಗುವ ನೀರು, ಆಹಾರ ಮತ್ತು ಆಮ್ಲಜನಕವನ್ನು ಒದಗಿಸುವುದು. ವೆಸ್ಟಿಬ್ಯೂಲ್‌ನ ಮುಂದಕ್ಕೆ ಪೀಪಾಯಿ ಆಕಾರದ ರಂಧ್ರಮಯ ಗಂಟಲಿದೆ. ಇದರಲ್ಲಿ ಮೇಲ್ಕೆಳಮುಖವಾಗಿ ಇಳಿಜಾರಿನಂತಿರುವ ಸುಮಾರು 50 ರಿಂದ 230 ಕಿವಿರು ರಂಧ್ರಗಳಿವೆ. ಈ ರಂಧ್ರಗಳಿಗೆ ಉದ್ದುದ್ದವಾಗಿ ಪ್ರಾಥಮಿಕ ಮತ್ತು ದ್ವಿತೀಯಕ ಕಿವಿರುದಂಡಗಳೆಂಬ ಆಸರೆಗಳೂ ಮತ್ತು ಅಡ್ಡಡ್ಡವಾಗಿ ಸೈನಾಪ್ಟಿಕ್ಯುಲೇ ಅಸ್ಥಿಗಳೂ ಇವೆ. ಕಿವಿರುರಂಧ್ರಗಳು ಪರಿಕೋಷ್ಠದಲ್ಲಿ ತೆರೆಯುತ್ತವೆ. ಗಂಟಲಿನ ತಳಭಾಗದ ಮಧ್ಯೆ ಉದ್ದಕ್ಕೂ ಗ್ರಂಥಿ ಮತ್ತು ಶಿಲಿಕೆಗಳಿಂದಾದ ಎಂಡೋಸ್ಟೈಲ್ ಎಂಬ ಅಂಗವಿದೆ. ಇದೇ ರೀತಿ ಗಂಟಲಿನ ಕೆಳಭಾಗದ ಉದ್ದಕ್ಕೂ ಒಳಗಡೆ ಹೈಪರ್‌ಫೆರಿಂಜಿಯಲ್ ಕಾಲುವೆಯಿದ್ದು ಇದರಲ್ಲಿರುವ ಶಿಲಿಕೆಗಳು ಹಿಂಭಾಗಕ್ಕೆ ಬೀಸುತ್ತವೆ. ಇವೆರಡನ್ನೂ ಪೆರಿಫೆರಿಂಜಿಯಲ್ ಕಾಲುವೆಗಳು ಸೇರಿಸುತ್ತವೆ. ಗಂಟಲು ಅನ್ನನಾಳವಾಗಿ ಕರುಳನ್ನು ಸೇರುವುದು. ಕರುಳಿನಲ್ಲಿ ಪಿತ್ತಜನಕಾಂಗಕ್ಕೆ ಹೆಪ್ಯಾಟಿಕ್ ಡೈವರ್ಟಿಕುಲಂ ಎನ್ನುವರು. ಅಂತಿಮವಾಗಿ ಕರುಳು ಆಸನದ್ವಾರವಾಗುವುದು.

ಆಂಫಿಯಾಕ್ಸಸ್ ಆಹಾರಕ್ಕಾಗಿ ಅಂಡಲೆಯದೆ ಬಾಯಿಕುಂಚವನ್ನು ಮರಳ ಮೇಲಿಟ್ಟು ಅವಿತಿರುವಂತೆಯೇ ಆಹಾರಸೇವಿಸುವುದು. ಶಿಲಿಕಾಂಗಗಳ ಬಡಿತದಿಂದ ನೀರಿನ ಸುಳಿಯುಂಟಾಗಿ ಬಾಯಿಯ ಮೂಲಕ ಸತತವಾಗಿ ನೀರು ನುಗ್ಗಿ ಪರಿಕೋಷ್ಠ ರಂಧ್ರದಿಂದ ಹೊರಬರುವುದು. ಸಮುದ್ರದ ನೀರು ಗಂಟಲೊಳಗೆ ಬಂದಾಗ ಎಂಡೋಸ್ಟೈಲ್ ಸ್ರವಿಸುವ ಲೋಳೆಯಲ್ಲಿ ಸಿಕ್ಕಿಬೀಳುವ ಸೂಕ್ಷ್ಮ ಜೀವಿಗಳನ್ನು ಶಿಲಿಕೆಗಳ ಹಿಮ್ಮಲ ಬಡಿತದಿಂದ ಪೆರಿಫೆರಿಂಜಿಯಲ್ ಕಾಲುವೆಗೆ ಸೇರಿ ಅನ್ನನಾಳಕ್ಕೆ ಬೀಳುತ್ತವೆ. ವೇಲಾರ್ ಕೋಡುಗಳು ಮರಳು ಕಸಕಡ್ಡಿಗಳನ್ನು ಶೋಧಿಸುತ್ತವೆ.

ಭಾಗಶಃ ಕಣಾಂತರ ಮತ್ತು ಕಣಮಧ್ಯ ಪಚನಕ್ರಿಯೆ ಆಂಫಿಯಾಕ್ಸಸ್‌ನಲ್ಲಿದೆ. ಹೆಪ್ಯಾಟಿಕ್ ಡೈವರ್ಟಿಕುಲಂ ಸುರಿಸುವ ಜೀರ್ಣರಸಗಳು ಪಚನಕ್ರಿಯೆಗೆ ನೆರವಾಗುತ್ತವೆ.

ಪರಿಕೋಷ್ಠ: ಕಿವಿರು ರಂಧ್ರಗಳು ನೇರವಾಗಿ ಹೊರ ತೆರೆಯದೆ ಪರಿಕೋಷ್ಠ ಎಂಬ ವಿಶೇಷ ಅವಕಾಶಕ್ಕೆ ತೆರೆಯುತ್ತವೆ. ಪರಿಕೋಷ್ಠವು ಪರಿಕೋಷ್ಠರಂಧ್ರದ ಮೂಲಕ ಹೊರತೆರೆಯುವುದು. ಇದರಲ್ಲಿ ನಿರ್ದಿಷ್ಟ ಕಾರ್ಯವಿಲ್ಲದ ಏಟ್ರಿಯೋಸಿಲೋಮಿಕ್ ಕಾಲುವೆಗಳಿವೆ. ಈ ಅವಕಾಶ ಇರುವುದರಿಂದ ದೇಹಾವಕಾಶ ಕ್ಷೀಣಿಸಿದೆ. ಇವುಗಳು ಉದ್ದ ಮತ್ತು ಅಡ್ಡಡ್ಡವಾಗಿವೆ. ದೇಹವನ್ನು ಪ್ರವೇಶಿಸುವ ನೀರು ಉಸಿರಾಟದ ಅನಿಲ ವಿನಿಮಯಕ್ಕೆ ಅನುಕೂಲವಾಗಿದೆ.



ಆಂಫಿಯಾಕ್ಸಸ್

ಮೂಲತಃ ಕಶೇರುಕ ರಚನೆಯ ಆಂಫಿಯಾಸಸ್ ರಕ್ತಪರಿಚಲನೆ ತೀರಾ ಸರಳವಾಗಿದೆ. ನಿರ್ದಿಷ್ಟ ಹೃದಯ, ರಕ್ತವರ್ಣಕಗಳಿಲ್ಲದಿದ್ದರೂ ಹಲವಾರು ನಾಳಗಳು ರಕ್ತಸಂಚಲನೆಗೆ ನೆರವಾಗುತ್ತವೆ. ಮಿಡಿಯಬಲ್ಲ ಕೆಳ ಅಯೋರ್ಟಾ ಎಂಬ ನಾಳ ಎಂಡೋಸ್ಟೈಲ್ ಕೆಳಗಡೆ ಇದೆ. ಇದು ಮೂತಿಯಲ್ಲಿ ಅಯೋರ್ಟಾವಾಗಿ ಕವಲೊಡೆಯುವುದು. ಆದ್ದರಿಂದ ಎಡಬಲ ಪಕ್ಕಗಳಲ್ಲಿ ಜೋಡಿಯಾದ ಅಪವಾಹಿ ರಕ್ತನಾಳಗಳಾಗಿವೆ. ಪ್ರಾಥಮಿಕ ಕಿವಿರುದಂಡಗಳ ಬುಡದಲ್ಲಿ ಇವು ರಕ್ತಸಂಚಲನೆಗೆ ಕಾರಣವಾದ ಬಲ್ಬಿಲ್‌ಗಳೆಂಬ ಉಬ್ಬುಗಳಾಗಿವೆ. ಇತರ ಕವಲುಗಳು ಉಳಿದೆಡೆಗೂ ಹಬ್ಬಿವೆ. ಅಭಿವಾಹಿರಕ್ತನಾಳಗಳು ಕಿವಿರುಗಳಿಂದ ಸಂಗ್ರಹಿಸಿದ ರಕ್ತವನ್ನು ಮಧ್ಯದ ಮೇಲಿನ ಅಯೋರ್ಟಕ್ಕೆ ತಂದು ಹಿಮ್ಮುಖವಾಗಿ ವಿಸರ್ಜನಾಂಗಗಳಿಗೆ, ಕರುಳಿಗೆ ರಕ್ತಹರಿಯುವುದು. ಹಿಂದೆ ಪಿತ್ತಜನಕಾಂಗದಲ್ಲಿ ಹೆಪ್ಯಾಟಿಕ್ ಪೋರ್ಟಲ್ ಮಂಡಲವಾಗಿ ಅಲ್ಲಿಂದ ಹೆಪ್ಯಾಟಿಕ್ ಅಭಿಧಮನಿಯು ಕೆಳ ಅಯೋರ್ಟವನ್ನು ಸೇರುವುದು. ಅನ್ನನಾಳದ ಪಕ್ಕದಲ್ಲಿರುವ ಕಾರ್ಡಿನಲ್ ಅಭಿಧಮನಿಗಳು ಕ್ಯುವೇರಿಯನ್ ನಾಳಗಳ ಮೂಲಕ ಕೆಳ ಅಯೋರ್ಟಕ್ಕೆ ಸೇರಿವೆ.

ವಿಸರ್ಜನ ಮಂಡಲ ಕೆಳದರ್ಜೆಯದು. ಗಂಟಲಿನ ಇಕ್ಕೆಡೆಗಳಲ್ಲಿ ಕಿವಿರುರಂಧ್ರಗಳ ಜೋಡಿಗೆ ಸಮನಾಗಿ ಪಂಕ್ತಿಗಳಾಗಿರುವ ನೆಫ್ರೀಡಿಯಾಗಳಿವೆ. ಕುಡಿಕೋಶಗಳಿಂದಾದ ಇವುಗಳು ಹೊರಚರ್ಮದಿಂದ ಬೆಳೆಯುತ್ತವೆ. ಬಾಗಿದ ಕೊಳವೆಯಂತಿರುವ ನೆಫ್ರೀಡಿಯಾಗಳ ಒಂದು ತುದಿ ಪ್ರಾಥಮಿಕ ಕಿವಿರುದಂಡದ ಸೀಲೋಮಿನಲ್ಲೂ ಮತ್ತೊಂದು ತುದಿ ಕಿವಿರುರಂಧ್ರದ ಮೇಲಂಚಿನಲ್ಲಿದ್ದು ನೆಫ್ರೀಡಿಯೋ ಪೋರ್ ಮೂಲಕ ಏಟ್ರಿಯಂಗೆ ತೆರೆಯುವುದು. ಇದರಲ್ಲಿ ಗದೆಯಾಕಾರದ ಅನೇಕ ಕುಡಿಕೋಶಗಳ ಗುಂಪುಗಳಿವೆ. ಕಂದುಬಣ್ಣದ ಕಾಲುವೆಗಳೆರಡು ಪರಿಕೋಷ್ಠದಲ್ಲಿ ಹುಟ್ಟಿ ಬೆನ್ನಿನ ಸೀಲೋಮ್‌ನಾಳಕ್ಕೆ ತೆರೆದು ವಿಸರ್ಜನೆಗೆ ನೆರವಾಗುವುದು ಎಂದು ಭಾವಿಸಲಾಗಿದೆ. ಇದೇ ರೀತಿ ಗಂಟಲಿನ ಮೇಲ್ಛಾವಣಿಯಲ್ಲಿ ಗಂಟಲಿಗೆ ಹ್ಯಾಚೆಕ್‌ರ ನೆಫ್ರೀಡಿಯಾವಿದೆ. ಕುಡಿಕೋಶಗಳು ಕಶಾಂಗದ ನೆರವಿನಿಂದ ಸಂಗ್ರಹಿಸಿದ ತ್ಯಾಜ್ಯಗಳನ್ನು ಏಟ್ರಿಯೋಪೋರ್ ಮೂಲಕ ಹೊರದೂಡುವುದು.

ನರಮಂಡಲ: ಅಸ್ಥಿಪಟ್ಟಿ ಮೇಲಿರುವ ನರಬಳ್ಳಿ ಮತ್ತು ನರಗಳು ನರಮಂಡಲಕ್ಕೆ ಸೇರಿವೆ. ನರಬಳ್ಳಿಯು ಶಿರೋಭಾಗದಲ್ಲಿ ಮಸ್ತಿಷ್ಕ ಕೋಶಕ ಎಂಬ ಸರಳ ಮೆದುಳಾಗಿರುವುದು. ಇದು ನ್ಯೂರೋಪೋರ್ ಇನ್‌ಫಂಡಿಬುಲ ಮತ್ತು ಆಲ್ಫಾಕ್ಟರಿ ರಂಧ್ರಗಳನ್ನು ಪಡೆದಿದೆ. ಸೆರೆಬ್ರಲ್ ವೆಸಿಕಲ್‌ನಿಂದ ಎರಡು ಜೊತೆ ಜ್ಞಾನವಾಹಿ ಸೆರೆಬ್ರಲ್ ನರಗಳು ತಲೆಗೆ ಪಸರಿಸಿವೆ. ನರಬಳ್ಳಿಯಿಂದ ಮಯೋಟೊಮುಗಳಲ್ಲಿ ಏಕಮೂಲವುಳ್ಳ ಮೇಲ್ಭಾಗದ ಮಿಶ್ರ ನರಗಳು, ಚರ್ಮ ಮತ್ತು ಇತರ ಭಾಗಗಳಲ್ಲಿ ಕ್ರಿಯಾವಾಹಿ ನರಗಳೂ

ಅಲ್ಲಲ್ಲಿ ಇವೆ. ಅಲ್ಲದೆ ಬೆಳಕುಗ್ರಾಹಿ ಮತ್ತು ರಸಗ್ರಾಹಿ ಜ್ಞಾನ ಕೋಶಗಳೂ ಇರುವುವೆಂದು ತಿಳಿದುಬಂದಿದೆ.

ಪ್ರಜನನ: ಬಾಹ್ಯವಾಗಿ ಲಿಂಗ ಗುರುತುಗಳಿಲ್ಲದ ಏಕಲಿಂಗ ಆಂಫಿಯಾಕ್ಸಸ್. 25–15 ಜೊತೆ ಜನನಾಂಗಗಳು ಗಂಟಲಿನ ಇಕ್ಕೆಡೆಗಳ ವಲಯಗಳಲ್ಲಿವೆ. ಇವುಗಳಿಗೆ ಪ್ರತ್ಯೇಕ ನಾಳಗಳಿಲ್ಲದಿರುವುದರಿಂದ ವಸಂತ ಮತ್ತು ಬೇಸಿಗೆಯಲ್ಲಿ ಪ್ರಜನನಕಣಗಳು ಪರಿಕೋಷ್ಠದ ಹೊರಬರುತ್ತವೆ. ಸಾಮಾನ್ಯವಾಗಿ ಸಾಯಂಕಾಲ ಮತ್ತು ರಾತ್ರಿವೇಳೆ ಮೊಟ್ಟೆ ಇಡುವಾಗ ಬಿರುಸಿನಿಂದ ಈಜಾಡುತ್ತವೆ. ಮೊಟ್ಟೆಗಳು ಸಮುದ್ರದ ನೀರಿನಲ್ಲಿ ನಿಷೇಚನೆ ಗೊಳ್ಳುತ್ತವೆ. ಅಲ್ಪಭಂಡಾರ ಯುಕ್ತ ಮೈಕ್ರೊಲೆಸಿತಲ್ ಮೊಟ್ಟೆಗಳು ಪೂರ್ಣವಿದಳನಗೊಂಡು ವಿಭಿನ್ನರೀತಿಯ ಮೈಕ್ರೋ ಮತ್ತು ಮ್ಯಾಕ್ರೋಮಿಯರ್‌ಗಳು ಉಂಟಾಗುತ್ತವೆ. ಬ್ಲಾಸ್ಟುಲಾವು ಚಪ್ಪಟೆಯಾಗಿ ಜೀವಕೋಶಗಳು ಒಳಸರಿಯುವ ಎಂಬೊಲಿ ಎಂಬ ವಿಧಾನದಿಂದ ಗ್ಯಾಸ್ಟ್ರುಲಾ ಆಗುವುದು. ಇದರಲ್ಲಿ ಹೊರ–ಮಧ್ಯ–ಒಳದರ್ಮಗಳಿಂದ ವಿವಿಧ ರಚನೆಗಳು ಬೆಳೆಯುತ್ತವೆ. ಅಪೂರ್ಣವಾಗಿ ಬೆಳೆದ ಭ್ರೂಣ ಲಾರ್ವವಾಗುವುದು. 2 ಸೋಮೈಟ್‌ಗಳುಳ್ಳ ಲಾರ್ವಕ್ಕೆ ಬಾಯಿ ಗುದರಂಧ್ರಗಳೇನೂ ಇರುವುದಿಲ್ಲ. ಹೊರಬಂದ ಕೆಲವಾರು ಗಂಟೆಗಳಲ್ಲೇ ಎಡಗಡೆಗೆ ಬಾಯಿ ಮತ್ತು ಗುದರಂಧ್ರ ಮತ್ತು ಬಲಭಾಗಕ್ಕೆ ಕಿವಿರುರಂಧ್ರಗಳು ಮೂಡುತ್ತವೆ. ಕ್ರಮೇಣ ಗಂಟಲನ್ನಾವರಿಸಿ ಪರಿಕೋಷ್ಠ ಬೆಳೆಯುವುದು. ಈ ಲಾರ್ವ ಪ್ರೌಢಜೀವಿಗಿಂತ ಹೆಚ್ಚು ಚಟುವಟಿಕೆಯಿಂದಿರುವುದು. ರೂಪಪರಿವರ್ತನೆಯಿಂದ ಲಾರ್ವ ಕ್ರಮೇಣ ಪ್ರೌಢಜೀವಿಯಾಗುವುದು.

ಆಂಫಿಯಾಕ್ಸಸ್ ಒಂದು ಮಾದರಿ ಕಾರ್ಡೇಟು ಎನಿಸಿದರೂ ವಾಸ್ತವವಾಗಿ ಇದರಲ್ಲಿ ಅನೇಕ ಕೆಳದರ್ಜೆಯ, ಕ್ಷೀಣಿಸಿದ ಮತ್ತು ವಿಶೇಷ ಸಮ್ಮಿಶ್ರ ಲಕ್ಷಣಗಳಿವೆ. ಆದ್ದರಿಂದ ಇದರ ಸ್ಥಾನ ಚರ್ಚಾರ್ಹವಾಗಿದೆ.

ಕೆಳದರ್ಜೆಯ ಲಕ್ಷಣಗಳು: 1) ಮೂತಿಯವರೆಗೂ ಇರದ ನೋಟೊಕಾರ್ಡ್ 2) ಸರಳ ಏಕಪದರದ ಎಪಿಡರ್ಮಿಸ್ 3) ವಲಯಗಳುಳ್ಳ ಮಯೋಟೋಮುಗಳು. 4) ಮಡಿಕೆಗಳಿಲ್ಲದ ಕರುಳು 5) ಪಿತ್ತಜನಕಾಂಗದ ಸರಳ ಹೆಪ್ಯಾಟಿಕ್ ಡೈವರ್ಟಿಕ್ಯುಲಂ 6) ದವಡೆಗಳಿಲ್ಲದಿರುವುದು 7) ಜೋಡಿಯಲ್ಲದ ಈಜುರೆಕ್ಕೆಗಳು 8) ಶಿಲಿಕೆಗಳಿಂದ ಆಹಾರಸೇವನೆ. 9) ಸರಳ ಹೃದಯ ರಹಿತ ರಕ್ತ ಪರಿಚಲನಾಮಂಡಲ 10) ಜೋಡಿ ನೆಫ್ರೀಡಿಯಾಗಳು 11) ನಾಳವಿಲ್ಲದ ಜನನಾಂಗಗಳು 12) ಅಲ್ಪ ಭಂಡಾರಯುಕ್ತ ಸಣ್ಣಮೊಟ್ಟೆಗಳು 13) ಎಂಬೋಲಿಕ್ ಗ್ಯಾಸ್ಟ್ರುಲೇಶನ್ 14) ಸ್ಪೈನಲ್ ನರಗಳಿಗೆ ಪ್ರತ್ಯೇಕ ಡಾರ್ಸಲ್ ಮತ್ತು ವೆಂಟ್ರಲ್ ನರಮೂಲಗಳು.

ಕ್ಷೀಣಿಸಿದ ಲಕ್ಷಣಗಳು: 1) ಸ್ಥಾಯಿ ಜೀವನದಿಂದ ನಶಿಸಿದ ಮೆದುಳು ಮತ್ತು ಜ್ಞಾನೇಂದ್ರಿಯಗಳು.

2) ಮಸ್ತಿಷ್ಕ ಕೋಶಕ್ಕೆ ಸೇರಿರುವ ಅಕ್ಷಿಪಟ್ಟಿ ಕಂಡುಬರುತ್ತವೆ. ಇವುಗಳಿಗೆ ಪೂರಕವಾಗಿ ಸುವ್ಯವಸ್ಥಿತ ವೇಲಮ್ ಮತ್ತು ಬಾಯಿಕುಂಚ ಅಗಲವಾದ ಗಂಟಲು 3) ಅಸಂಖ್ಯ ಕಿವಿರುರಂಧ್ರಗಳು 4) ಸೀಲೋಮಿನ ಸ್ಥಾನ ಆಕ್ರಮಿಸಿ ಬೆಳೆದಿರುವ ಪರಿಕೋಷ್ಠ ಇವುಗಳು ವಿಶೇಷ ಲಕ್ಷಣಗಳಾಗಿವೆ.

ಈ ಕಾರಣಗಳಿಂದ ಪಲ್ಲಾಸ್ (1778) ಕಂಡುಹಿಡಿದಾಗ ಇದನ್ನು ಮೃದ್ವಂಗಿ ವಂಶದ ಗ್ಯಾಸ್ಟ್ರೋಪೋಡ ವರ್ಗಕ್ಕೆ ಸೇರಿಸಿದ್ದ, ಕಾಸ್ಟಾ (1834) ಮೀನುಗಳ ಜೊತೆ ಸೇರಿಸಿದ್ದ. ಆದರೆ ತಲೆಬುರುಡೆ ಮೆದುಳು, ಹೃದಯ, ರಕ್ತ, ಮೂತ್ರಪಿಂಡಗಳು, ಏಟ್ರಿಯಂ ಮೀನುಗಳಂತಿಲ್ಲ. ಇದರಿಂದ ಮೀನಿನ ಗುಂಪಿಗೂ ಸೇರುವಂತಿಲ್ಲ.

ರಂಧ್ರಮಯ ಗಂಟಲು, ಏಟ್ರಿಯಂಗೆ ತೆರೆಯುವ ಕಿವಿರಂಧ್ರಗಳು, ಎಂಡೋಸ್ಟೈಲ್, ಹೊರಮಂಡಲದಿಂದ ಬೆಳೆಯುವ ನರಮಂಡಲ, ಒಳದರ್ಮದ ಪರಕೋಷ್ಠ ಯೂರೋಕಾರ್ಡೇಟ್‌ನಂತಿವೆ. ಆದರೆ ಅಸೀಡಿಯಾಗಳಲ್ಲಿರುವಂತೆ ಸ್ಥಿರವಾಸ, ಕವಚ, ಹೃದಯ, ಜನನಾಂಗನಾಳ, U ಆಕಾರದ ಅನ್ನನಾಳ, ವಲಯರಾಹಿತ್ಯ ನೆಫ್ರೀಡಿಯಂ, ಪ್ರೌಢಾವಸ್ಥೆಯಲ್ಲಿ ಸೀಲೋಮ್ ಕ್ಷೀಣಿಸಿರುವುದು, ದ್ವಿಲಿಂಗತೆ ಆಂಫಿಯಾಕ್ಸಸ್‌ನಲ್ಲಿ ಇಲ್ಲ. ಆದ್ದರಿಂದ ಇದು ಯೂರೋಕಾರ್ಡೇಟೂ ಅಲ್ಲ.

ಕೆಲವು ಪ್ರಾಣಿವಿಜ್ಞಾನಿಗಳು ಇದನ್ನು ದವಡೆಗಳಿಲ್ಲದ ಚಕ್ರಾಸ್ಯಗಳಿಗೆ ಹೋಲಿಸುವರು. ಚಕ್ರಾಸ್ಯಗಳ ಕ್ಷೀಣಲಕ್ಷಣದಿಂದ ಮಾರ್ಪಟ್ಟು ಕಿವಿರುರಂಧ್ರಗಳು, ಮಯೋಮಿಯರ್‌ಗಳು, ಅಸಮಾಂಗಸೌಷ್ಠವ ಜಟಿಲವಾದ ಜೀವನಚಕ್ರ ವಿಶೇಷವಾದ ಮೆದುಳು, ಜ್ಞಾನೇಂದ್ರಿಯಗಳು, ಕುಡಿಕೋಶಗಳುಳ್ಳ ನೆಫ್ರೀಡಿಯಾ ಮುಂತಾದವು ಕುಂದಿದ ಲಕ್ಷಣಗಳು. ಇದರಿಂದ ಪ್ರಾಣಿಪ್ರಪಂಚದಲ್ಲಿ ಇದರ ಪೂರ್ಣಬೆಳೆದ ಅಸ್ಥಿಪಟ್ಟಿ, ಕಿವಿರುರಂಧ್ರಗಳು, ಕೊಳವೆಯಂಥ ನರಬಳ್ಳಿ ಕಶೇರು ರಚನೆಯ ಮೂಲಸ್ವರೂಪ. ಇದರ ಸ್ಥಾನ ಅನಿರ್ದಿಷ್ಟವಾದರೂ ಕಶೇರುಕಗಳ ಅನೇಕ ಲಕ್ಷಣಗಳುಳ್ಳ ಆಂಫಿಯಾಕ್ಸಸ್ ಕಶೇರುವಿಕಾಸಕ್ಕೆ ಮೂಲವಾಗಿ ಸೆಫ್ಯಾಲೋಕಾರ್ಡೇಟ ಅಧ್ಯಯನಕ್ಕೆ ತುಂಬಾ ಸಹಕಾರಿ ಎಂಬುದು ನಿರ್ವಿವಾದ ಅಂಶ. ಆದ್ದರಿಂದಲೇ ಏನೋ ಪ್ರಾಣಿವಿಜ್ಞಾನಿಗಳ ಗಮನಸೆಳೆದು ಹೆಚ್ಚು ಪರೀಕ್ಷೆ ಮತ್ತು ಪ್ರಯೋಗಗಳಿಗೆ ಈಡಾಗಿದೆ.

ಮಾನವನ ದೃಷ್ಟಿಯಿಂದಲೂ ಇದು ಗಮನಾರ್ಹವಾದುದು. ಆಂಫಿಯಾಕ್ಸಸ್‌ನ ಲಾರ್ವಾದ ಎಂಡೋಸ್ಟೈಲ್‌ನಂತಹ ಅಂಗ ಮನುಷ್ಯ ಭ್ರೂಣದಲ್ಲಿ ತೈರಾಯ್ಡ್ ಗ್ರಂಥಿಯಾಗುವುದು. ಇದೇ ರೀತಿ ಚಕ್ರಾಂಗದಿಂದ ಪಿಟ್ಯೂಟರಿ ಬೆಳೆದಿರಬಹುದು. ಇದರ ಆಹಾರಾಭ್ಯಾಸ ಮತ್ತು ಕಿವಿರುಗಳೂ ಹೆಚ್ಚು ಕಡಿಮೆ ಮೀನಿನ ರೀತಿಯವು. ಮಾನವನನ್ನೂ ಒಳಗೊಂಡ ಕಶೇರುಕಗಳಲ್ಲಿ ಕಿವಿರುಗಳು ಮಧ್ಯಕಿವಿಯಾಗುವುವು. ತೈರಾಯ್ಡ್, ಪಿಟ್ಯೂಟರಿಗ್ರಂಥಿಗಳ ಬೆಳವಣಿಗೆ ಕಶೇರುಕಗಳ ಅಧ್ಯಯನಕ್ಕೆ ಸಹಕಾರಿ. ಅನೇಕ ಮೆಡಿಟರೇನಿಯನ್ ದೇಶಗಳಲ್ಲಿ ಇದನ್ನು ಆಹಾರವಾಗಿಯೂ ಬಳಸುವರು. ಇದನ್ನು ಒಣಗಿಸಿ, ಉಪ್ಪು ಹಾಕಿ ದುಬಾರಿ ಬೆಲೆಗೆ ಮಾರುವರು. (ಟಿ.ವಿ.ಎಚ್.)

**ಆಂಬ್ಲಿಪೋಡ:** ಪುರಾತನ ಕಾಲದ ಪಾಂಟೊಲಾಂಬ್ಡ ಕುರಿಯ ತರಹದ ಸ್ತನಿ. ಪೇಲಿಯೋಸೀನ್ ಕಾಲದಲ್ಲಿ ಮೊದಲು ಕಾಣಿಸಿಕೊಂಡ ಈ ಪ್ರಾಣಿಗೆ ಚಿಕ್ಕಕಾಲು ಮತ್ತು ಅಗಲವಾದ ಪಾದಗಳಿದ್ದುವು. ನಡಿಗೆ ತುಂಬಾ ನಿಧಾನ. ಈ ಪ್ರಾಣಿಗೆ ದೊಡ್ಡ ಕೋರೆದಾಡೆಗಳೂ V– ಆಕಾರದ ಮೊನೆಗಳಿದ್ದ ತ್ರಿಕೋಣಾಕಾರದ ಮೇಲಿನ ದವಡೆ ಹಲ್ಲುಗಳೂ ಇದ್ದುವು.

ಪೇಲಿಯೊಸೀನ್ ಅಂತ್ಯದಲ್ಲಿ ಮತ್ತು ಪ್ರಾಚೀನ ಇಯೊಸೀನ್ ಕಾಲದಲ್ಲಿ ಜೀವಿಸಿದ್ದ ಆಂಬ್ಲಿಪೋಡಗಳು ದೈತ್ಯಾಕಾರದ, ವಿಕಾರರೂಪದ ಏಕಖುರ ಸ್ತನಿಗಳಾಗಿದ್ದುವು. ಪೇಲಿಯೊಸೀನ್ ಕಾಲದ ಅಂತಿಮದಲ್ಲಿ ಸ್ವರಾಟ್‌ಕೊಲ್ಯಾಂಬ್ದ ಪಾಂಟೊಲ್ಯಾಂಬ್ದ ಜೀವಿಗಿಂತ ೨.೫ ರಷ್ಟು ದೊಡ್ಡದಾಗಿದ್ದವು. ಇವುಗಳ ಆಹಾರ ಮರದ ಬೇರು. ಬೇರನ್ನು ಕಿತ್ತು ತಿನ್ನುತ್ತಿದ್ದುದರಿಂದ ಏಕಖುರ ಸ್ತನಿಗಳಲ್ಲಿ ಬಲವಾದ ಕೋರೆದಾಡೆಗಳೂ, ಉಗುರುಳ್ಳ ಬೆರಳುಗಳೂ ಇದ್ದುವು. ಬೇರಿಲ್ಯಾಂಬ್ದ ಎಂಬ ಆಂಬ್ಲಿಪೋಡ ೮ ಅಡಿ ಎತ್ತರವಿತ್ತು. ಇದಕ್ಕೆ ಅಗಲವಾದ ಶರೀರ, ಭಾರವಾದ ಕಾಲುಗಳು, ಬಾಲ, ಚಿಕ್ಕ ತಲೆಬುರುಡೆ ಮತ್ತು ಸಣ್ಣ ಕೋರೆದಾಡೆಗಳಿದ್ದುವು.

ಪ್ರಾಚೀನ ಇಯೊಸೀನ್ ಕಾಲದ ಕೋರಿಫೊಡಾನ್ ಪ್ರಾಣಿಯ ವ್ಯಾಪ್ತಿ ಉತ್ತರ ಅಮೆರಿಕದಿಂದ ಯೂರೋಪಿನವರೆಗೂ ಇತ್ತು. ಇದು ಬೇರಿಲ್ಯಾಂಬ್ದದಂತೆ ಇದ್ದರೂ, ಅದಕ್ಕಿಂತ ವಿಭಿನ್ನವಾಗಿತ್ತು. ಇದರ ಶರೀರ ಅತಿ ಉದ್ದವಾಗಿದ್ದು ಬಾಲ ಸಣ್ಣದು. ಮುಖ ಅಗಲವಾಗಿದ್ದು ತಲೆಬುರುಡೆ ದೊಡ್ಡದಾಗಿತ್ತು. ದವಡೆಯಲ್ಲಿ ಸ್ವಲ್ಪ ಸ್ಥಳ ಬಿಟ್ಟು ಮೃದುವಾದ ಆಹಾರವನ್ನು ತಿನ್ನಲು ಅನುಕೂಲವಾದ ತ್ರಿಕೋಣಾಕಾರದ ೪೪ ಹಲ್ಲುಗಳಿದ್ದುವು. ಕೋರೆಹಲ್ಲುಗಳು ಉದ್ದವಾಗಿದ್ದುವು. ಕಾಲಿನ ಮೂಳೆಗಳು ಒಂದೇ ನೇರದಲ್ಲಿದ್ದುವು. ದೇಹದ ಭಾರವನ್ನು ಹೊರಲನುಕೂಲವಾದ ಬಲವಾದ ಮೋಟು ಕಾಲ್ಬೆರಳುಗಳಿದ್ದುವು. ಆದರೆ ಈ ಗುಂಪಿಗೆ ಸೇರಿದ ಇತರ ಪ್ರಾಣಿಗಳ್‌ಲ್ಲಿ ವ್ಯತ್ಯಾಸವಿತ್ತು. ಕೋರಿಫೊಡಾನ್‌ಗೆ, ಟ್ಯಾಪೀರ್ ಮಾದರಿ ಗೊರಸುಗಳಿದ್ದರೆ ಇದರ ಸಂಬಂಧಿ ಟೈಟನಡಾಯಸ್‌ಗೆ ನೆಲ ಅಗೆಯುವ ಉಗುರುಗಳಿದ್ದುವು. ಉತ್ತರ ಅಮೆರಿಕದ ಆಂಬ್ಲಿಪೋಡಗಳಲ್ಲಿ ಇದೇ ಕೊನೆಯದು. ಆದರೆ ಏಷ್ಯ ಖಂಡದಲ್ಲಿ ಕೊರಿಫೊಡಾನ್‌ಗೆ ಅತಿ ಸಮೀಪ ಸಂಬಂಧಿಗಳಾದ ಪ್ರಾಣಿಗಳು ಇಯೊಸೀನ್ ಮತ್ತು ಆಲಿಗೊಸೀನ್ ಕಾಲದಲ್ಲಿ ವಾಸಿಸುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಮಧ್ಯ ಆಲಿಗೊಸೀನ್ ಯುಗದಲ್ಲಿ ಈ ಪ್ರಾಣಿಗಳು ಸಂಪೂರ್ಣ ನಾಶವಾದುವು.

ಉತ್ತರ ಅಮೆರಿಕದ ಆಂಬ್ಲಿಪೋಡ, ಪುರಾತನಕಾಲದ ಐದು ಬೆರಳುಗಳನ್ನೊಳಗೊಂಡ ಸಣ್ಣ ಏಕಪಾದದ ಗೊರಸುಳ್ಳ ಸ್ತನಿ. ಪೆರಿಟೈಕಸ್ ಮತ್ತು ಪ್ಯಾಂಟೊಲಾಂಬ್ದ ಎರಡೂ ಒಂದೇ ಕುಟುಂಬಕ್ಕೆ ಸೇರಿದವು. ಎರಡಕ್ಕೂ ೪೪ ಹಲ್ಲುಗಳಿದ್ದುವು. ಆದರೆ ಮೇಲಿನ ದವಡೆಗಳ ಆಕಾರ ವ್ಯತ್ಯಾಸವಾಗಿತ್ತು. ಪಾಂಟೊಡಾಂಟದಲ್ಲಿ, ಪಾಂಟೊಲಾಂಬ್ಡೆ, ಬೇರಿಲಾಂಬ್ಡೆ ಮತ್ತು ಕೋರಿಫೊಡಾಂಟಿಡೆ ಕುಟುಂಬಗಳು ಸೇರಿವೆ. ಪಾಂಟೊಲಾಂಬ್ದ ಪೇಲಿಯೊಸೀನ್ ಕಾಲದಲ್ಲಿ ಜೀವಿಸಿದ್ದ ಪ್ರಾಣಿ. ಇದೇ ಕೋರಿಫೊಡಾನ್‌ದ ಉಗಮಕ್ಕೆ ಮೂಲಜೀವಿ.

ಇನ್ಯಾಟೊತೇರಿಯಂ, ಇಯೊಸೀನ್ ಕಾಲದ ಪ್ರಾಣಿ. ಇದನ್ನು ಕೆಲವರು ಟಿಮೊಸೆರಸ್ ಇನ್ಯಾಟ ಎಂದು ಬೇರ್ಪಡಿಸಿದ್ದಾರೆ. ಇದಕ್ಕೆ ಐದು ಬೆರಳುಗಳುಳ್ಳ ಸಣ್ಣ ಕಂಬದಂಥ ದಪ್ಪ ಕಾಲುಗಳಿದ್ದುವು. ಕಿರಿದಾದ ತಲೆ, ಅತಿ ಚಿಕ್ಕ ಮೆದುಳು, ನೀಳವಾದ ಮುಖ ಇದ್ದುವು. ದೊಡ್ಡ ಖಡ್ಗಮೃಗದಂತಹ ಶರೀರಕ್ಕೆ ಚಿಕ್ಕದಾದ ಮಿದುಳು ಇತ್ತು. ತಲೆಯಮೇಲೆ ಮೂರು ಚಿಕ್ಕ ಕೊಂಬುಗಳಿದ್ದುವು. ಹಿಂಭಾಗದ ಕೊಂಬು ಬೇರೆ ಕೊಂಬುಗಳಿಗಿಂತ ದೊಡ್ಡದಾಗಿತ್ತು. ಬಾಯಲ್ಲಿ ೪೪ ಹಲ್ಲುಗಳಿದ್ದುವು. ಮೇಲಿನ ಕೋರೆದಾಡೆಗಳು ಉದ್ದವಾದ

ಕತ್ತಿಯಂತೆ ಆಯುಧೋಪಾದಿಯಲ್ಲಿದ್ದುವು. ಅವುಗಳನ್ನು ಮುಚ್ಚುವುದಕ್ಕೆ ಎರಡು ಕೆಳದವಡೆಯಲ್ಲೂ ಮಾಂಸದ ಹೊದಿಕೆಯಿತ್ತು.

ಪಾಂಟೊಡಾಂಟ ಮತ್ತು ಡೈನೊಸೆರಾಟ ಜಾತಿಗೆ ಸೇರಿದ ಪ್ರಾಣಿಗಳನ್ನು ಕೆಲವು ವೇಳೆ ಆಂಬ್ಲಿಪೋಡ ಗುಂಪಿಗೆ ಸೇರಿಸಲಾಗಿತ್ತು. ಆದರೆ, ಅವೆರಡು ವರ್ಗದ ಪ್ರಾಣಿಗಳ ಹಲ್ಲಿನ ರಚನೆಯಲ್ಲಿ ವ್ಯತ್ಯಾಸವಿದ್ದುದರಿಂದ ಅವುಗಳನ್ನು ಬೇರೆ ಮಾಡಲಾಗಿದೆ. ಎರಡೂ ಕಾಂಡೈಲಾರ್ಥಸ್ ಬುಡಕಟ್ಟಿನಿಂದ ಬಂದಿದ್ದರೂ ಕಾಲು ಮತ್ತು ಹಲ್ಲುಗಳ ಆಕಾರದ ವ್ಯತ್ಯಾಸದಿಂದ ಅವನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಲಾಗಿದೆ.

ಡೈನೊಸೆರಾಟ, ಭಾರವುಳ್ಳ ಮೋಟುಗಾಲಿನ ದೈತ್ಯಾಕಾರದ ಪ್ರಾಣಿ. ತಲೆಯ ಮೇಲೆ ಮೂರು ಜೊತೆಯ ಕೊಂಬುಗಳಿದ್ದುವು. ಮೇಲಿನ ದವಡೆ ಹಲ್ಲುಗಳು ಕೋರಿಫೊಡಾನ್ ರೀತಿಯಲ್ಲಿದ್ದರೂ ಮಧ್ಯದಲ್ಲಿ ಎರಡು ಕಟ್ಟೆಗಳಿದ್ದುವು. ಇಯೊಸೀನ್ ಯುಗದ ಕಡೆಯ ದಿನಗಳಲ್ಲಿ ಡೈನೊಸೆರಾಟಗಳ ವಂಶ ಅಳಿದುಹೋಯಿತು.

(ಎಸ್.ಎನ್.ಕೆ)

**ಆಕ್ ಹಕ್ಕಿ:** ಈಜುವುದರಲ್ಲಿ ನಿಸ್ಸೀಮವಾದ ಆಲ್ಸಿಡೆ ಕುಟುಂಬಕ್ಕೆ ಸೇರಿದ ಹಕ್ಕಿ. ಉತ್ತರ ಧ್ರುವದಲ್ಲಿ ಹೇರಳವಾಗಿದೆ. ಚಳಿಗಾಲದಲ್ಲಿ ಹಿಮವನ್ನು ಸಹಿಸಲಾರದೆ ಅಮೆರಿಕದ ಪೂರ್ವ, ಪಶ್ಚಿಮ ಸಮುದ್ರ ತೀರಕ್ಕೆ ವಲಸೆ ಹೋಗುತ್ತದೆ. ನೀರಿನ ಮೇಲೆ ಸೊಗಸಾಗಿ ತೇಲುತ್ತದೆ, ಈಜುತ್ತದೆ, ಸಬ್‌ಮೆರಿನ್‌ಗಳಂತೆ ಬಹಳ ಆಳಕ್ಕೆ ಹೋಗುತ್ತದೆ. ನೀರಿನಲ್ಲಿ ಮುಳುಗಿದಾಗಲೂ ರೆಕ್ಕೆ ಹೊಡೆದು ಈಜುತ್ತದೆ. ಸಮುದ್ರ ತೀರದಲ್ಲಿ ವಾಸಮಾಡುವುದರಿಂದ ಅಲ್ಲಿ ಸಿಗುವ ಮೀನನ್ನೂ ತೇಲುವ ಅನೇಕ ಜಾತಿಯ ಕೀಟಗಳನ್ನೂ ತಿಂದು ಜೀವನ ಸಾಗಿಸುತ್ತದೆ. ಹಿಮದಲ್ಲಿ ಮತ್ತು ಜಲದಲ್ಲಿ ವಾಸಮಾಡುವುದರಿಂದ ಮೈತುಂಬ ದಟ್ಟವಾದ ಪುಕ್ಕಗಳು ಇವೆ. ಎಸ್ಕಿಮೊಗಳು ರೆಡ್ ಇಂಡಿಯನ್ನರಂತೆ ಶರೀರಾಲಂಕಾರಕ್ಕೆ ಇದರ ಪುಕ್ಕಗಳನ್ನು ಬಳಸುತ್ತಾರೆ. ಈ ಜಾತಿಯ ಪಕ್ಷಿಗಳಿಗೆ ಬಹಳ ಬಲವಾದ ರೆಕ್ಕೆಗಳು ಇವೆ. ಕಾಲುಗಳು ಚಿಕ್ಕವಾಗಿ ಶರೀರದ ಹಿಂಭಾಗದಲ್ಲಿ ಇವೆ. ನೆಲದ ಮೇಲೆ ನಿಂತಾಗ ಮನುಷ್ಯ ಕೂತಂತೆ ಕಾಣುತ್ತದೆ. ಪ್ರತಿಯೊಂದು ಕಾಲಿನಲ್ಲೂ ಮೂರು ಬೆರಳುಗಳಿವೆ. ಬೆರಳ ಸಂದಿಯಲ್ಲಿ ಚರ್ಮ ಆವರಿಸಿ ಜಾಲಪಾದವಾಗಿರುವುದರಿಂದ ನೀರನಲ್ಲಿ ಈಜಲು ಅನುಕೂಲ. ಆಕ್ ಹಕ್ಕಿಗಳ ಪುಕ್ಕ ಬಿಳಿ ಮತ್ತು ಕಪ್ಪು. ಕೊಕ್ಕು ಮಾತ್ರ ವಿಚಿತ್ರ. ಇವು ಭೂಮಿಯ ಮೇಲಿದ್ದಾಗ ನೋಡಲು ಬಹು ವಿಕಾರ. ಇವಕ್ಕೆ ಗೂಡು ಕಟ್ಟುವ ಕಲೆ ಬಾರದು. ಆದ್ದರಿಂದ ಮೊಟ್ಟೆ ಇಡುವ ಕಾಲ ಬಂದಾಗ ಸಾವಿರಾರು ಪಕ್ಷಿಗಳು ಸಮುದ್ರತೀರದಲ್ಲಿ ಬಿರುಕುಗಳನ್ನು ಹುಡುಕಿ ಅಲ್ಲಿ ತಮ್ಮ ಮೊಟ್ಟೆ ಇಡುತ್ತವೆ.

ಗಿಲೆಮೊಟ್ಸ್, ವೆರಿಸ್, ಪಫಿನ್– ಇವೇ ಮುಂತಾದ ಪಕ್ಷಿಗಳು ಈ ಗುಂಪಿಗೆ ಸೇರಿವೆ. ಗಿಲೆಮೋಟ್ಸ್, ೩೫ ಸೆಂಮೀ. ಉದ್ದ ಇವೆ. ಶರೀರದ ಎಲ್ಲ ಪುಕ್ಕಗಳೂ ಕಪ್ಪಾಗಿದ್ದು ರೆಕ್ಕೆಯಲ್ಲಿ ಬಿಳಿಯ ಮಚ್ಚೆಗಳಿವೆ. ಚಳಿಗಾಲದಲ್ಲಿ ಮಾತ್ರ ರೆಕ್ಕೆ ಮತ್ತು ಬಾಲದ ಪುಕ್ಕಗಳು ಕಪ್ಪಾಗಿ ಬೇರೆಲ್ಲ ಪುಕ್ಕಗಳು ಬಿಳಿಯ ಬಣ್ಣಕ್ಕೆ ತಿರುಗುತ್ತವೆ. ಇವು ಒಂದು ಸಾರಿಗೆ ಎರಡು ಮೊಟ್ಟೆಗಳನ್ನು ಇಡುತ್ತವೆ.

ಪಫಿನ್ ಕೂಡ ೩೫ ಸೆಂಮೀ ಉದ್ದವಾಗಿದ್ದು ಕೆಂಪು ಮಿಶ್ರಿತ ಹಳದಿ ಬಣ್ಣದ ಪುಕ್ಕಗಳನ್ನು ಹೊಂದಿದೆ. ಇದೇ ಗುಂಪಿಗೆ ಸೇರಿದ ಗ್ರೇಟ್ ಆಕ್ ಪಕ್ಷಿಗಳು ೧೮೪೪ ರಿಂದ ಕಾಣದಾಗಿವೆ. ಇವುಗಳ ಅಳಿಯುವಿಕೆಗೆ ಮನುಷ್ಯನ ಅವಿವೇಕದ ಬೇಟೆಯೇ ಕಾರಣ. ಇವು ೭೫ ಸೆಂಮೀ ಉದ್ದವಿರುವ ಬಹಳ ದೊಡ್ಡದಾದ ಪಕ್ಷಿಗಳು. ಇಷ್ಟು ದೊಡ್ಡ ಪಕ್ಷಿಗಳಿಗೆ ಬಹಳ ಸಣ್ಣ ರೆಕ್ಕೆಗಳಿದ್ದ ಕಾರಣ ಅವು ಹಾರಲಾರದ ಪಕ್ಷಿಗಳಾಗಿದ್ದುವು. ಗಿರಿಜನರು, ನಾವಿಕರು ಇವನ್ನು ಹೇರಳವಾಗಿ ಕೊಂದು ತಿನ್ನುತ್ತಿದ್ದರು. ಕೊಲ್ಲುವುದಕ್ಕೆ ಮದ್ದುಗುಂಡಿನ ಅಗತ್ಯವಿರಲಿಲ್ಲ. ಹಾರಲಾರದ ಇವನ್ನು ದೊಣ್ಣೆಗಳಿಂದ ಹೊಡೆದು ಕೊಲ್ಲುತ್ತಿದ್ದರು. ಸಾಮಾನ್ಯ ಮುಕ್ರಿ (ಯೂರಿಯ ಆಲ್ಗೆ), ಗ್ರೇಟ್ ಆಕ್ (ಪಿಂಗ್ವಿನಿಸ್ ಇಂಪೆನ್ನಿಸ್) ಮತ್ತು ಅಟ್ಲಾಂಟಿಕ್ ಪಫಿನ್ (ಫ್ರಾಟರ್‍ಕ್ಯುಲ್ ಆರ್ಕ್ಟಿಕ) ಈ ಗುಂಪಿಗೆ ಸೇರಿವೆ. (ಜಿ.ಎಂ.ಬಿ)

**ಆಕಳು:** ಸ್ತನಿ ಗುಂಪಿನ ಬೊವಿಡೆ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ನಾಮ ಬಾಸ್ ಇಂಡಿಕಸ್ (ಎತ್ತು). ವೇದ ಪುರಾತನ ಕಾಲದಿಂದಲೂ ಆಕಳು ಅಥವಾ ಗೋವು ಹಿಂದುಗಳಿಗೆ ಪೂಜ್ಯನೀಯವಾದುದು. ಆಕಳನ್ನು ಗೋಮಾತೆ, ದೇವಿ, ಅತಿಥಿ ಮುಂತಾದ ಹೆಸರುಗಳಿಂದ ಪೂಜಿಸುತ್ತಿದ್ದರು.

ಹೈನುಗಾರಿಕೆಯು ದೇಶದ ವಾಣಿಜ್ಯ ಬೆಳವಣಿಗೆಯನ್ನು ನಿರ್ಧರಿಸುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಪಂಚದ ಪಶುಗಳ ಸಂಖ್ಯೆಯಲ್ಲಿ ಭಾರತದ ಪ್ರಮಾಣ ಶೇ 20–25. ಡೆನ್ಮಾರ್ಕ, ನೆದರ್‌ಲ್ಯಾಂಡ್, ಅಮೆರಿಕಾ, ಮುಂತಾದ ದೇಶಗಳು ಉತ್ತಮ ತಳಿಯ ರಾಸುಗಳಿಗೆ ಹೆಸರುವಾಸಿಯಾಗಿವೆ. ಈ ದೇಶಗಳಲ್ಲಿ ಪ್ರತಿ ಹಸು ವರ್ಷಕ್ಕೆ ಸರಾಸರಿ 5000 ಲೀಟರ್ ಹಾಲು ನೀಡುತ್ತದೆ. ಇದು ಭಾರತದ ಹಸುವಿನ 10 ಪಟ್ಟು ಹೆಚ್ಚಿನದು. ಕಾರಣ ಆ ದೇಶಗಳಲ್ಲಿ ಪಶುಸಂಗೋಪನೆಯನ್ನು ವೈಜ್ಞಾನಿಕ ವಿಧಾನಗಳಿಂದ ನಡೆಸಲಾಗುತ್ತದೆ (ನೋಡಿ ಸಾಕುಪ್ರಾಣಿಗಳು). ಆಕಳು ಬಹು ಉಪಯುಕ್ತ ಜೀವಿ. ಹೈನುಗಾರಿಕೆಯ ಉತ್ಪನ್ನಗಳಾದ ಹಾಲು, ಮೊಸರು, ಬೆಣ್ಣೆ ಮುಂತಾದವುಗಳು ಮಾನವನ ಆಹಾರದ ಒಂದು ಭಾಗವಾಗಿದೆ. ಭಾರತವು ಕೆಲವೊಂದು ವಿಶಿಷ್ಟ ತಳಿಗಳನ್ನು ಹೊರದೇಶಗಳಿಂದ ಆಮದು ಮಾಡಿಕೊಂಡಿದೆ. ಹೆಚ್ಚು ಹಾಲು ಕೊಡುವ ಹೊರದೇಶದ ತಳಿಗಳನ್ನು ಸ್ಥಳೀಯ ತಳಿಗಳೊಂದಿಗೆ ಸೇರಿಸಿ ಇನ್ನು ಉತ್ತಮ ತಳಿಗಳನ್ನು ಪಡೆಯಲಾಗಿದೆ. ಅವುಗಳಲ್ಲಿ ಮುಖ್ಯವಾದವು ರೆಡ್‌ಡೇನ್, ಜರ್ಸಿ ಹೊಲ್ಸ್ಟೈನ್, ಫ್ರೀಸಿಯನ್, ಬ್ರಾಹ್ಮನ್ ಮುಂತಾದವುಗಳು. ಇವುಗಳ ಪರಿಣಾಮ ದೇಶದಲ್ಲಿ ಹಾಲಿನ ಕ್ರಾಂತಿಯುಂಟಾಯಿತು. ವಾಹನ ಸೌಕರ್ಯವಿಲ್ಲದ ಹಳ್ಳಿಗಳು, ಗುಡ್ಡಗಾಡು ಪ್ರದೇಶಗಳಲ್ಲಿ ಸಾಗಾಣಿಕೆಗಾಗಿ ಹಸುಗಳನ್ನು ಬಳಸಿಕೊಳ್ಳಲಾಗುತ್ತದೆ. ಆಕಳ ಸಗಣಿಯಿಂದ ಉತ್ಪಾದಿಸುವ ಕೊಟ್ಟಿಗೆ ಗೊಬ್ಬರ ಸಸ್ಯಗಳ ಬೆಳವಣಿಗೆಗೆ ಅತಿ ಅವಶ್ಯಕವಾದುದು. ಕಾರಣ ಕೊಟ್ಟಿಗೆ ಗೊಬ್ಬರದಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಸೂಕ್ತ ಪ್ರಮಾಣದಲ್ಲಿದ್ದು ಸಸ್ಯಗಳ ಬೆಳವಣಿಗೆಗೆ ಅನುಕೂಲಕರವಾದ ವಾತಾವರಣವನ್ನು ನೀಡುತ್ತದೆ. ಅಲ್ಲದೇ ಈ ಕೊಟ್ಟಿಗೆ ಗೊಬ್ಬರಕ್ಕೆ ಮಣ್ಣಿನಲ್ಲಿರುವ ನೀರಿನಂಶವನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯಿರುವುದರಿಂದ ಇವುಗಳ ಬಳಕೆ ಅಗತ್ಯವಾಗಿದೆ. ಕೊಟ್ಟಿಗೆ ಗೊಬ್ಬರದ ಬಳಕೆಯಿಂದಾಗಿ ನಾವು ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡುವುದರಿಂದ ಜಲ ಮಾಲಿನ್ಯ , ವಾಯು ಮಾಲಿನ್ಯ, ಮುಂತಾದ ಪರಿಸರ ಮಾಲಿನ್ಯವನ್ನು ತಡೆಗಟ್ಟಬಹುದು. ಹಸುವಿನ ಸಗಣಿಯನ್ನು ಅಡಿಗೆ ಅನಿಲ ಉತ್ಪತ್ತಿ ಮಾಡಲು ಬಳಸುವರು. ಹಸುಗಳ ಚರ್ಮವನ್ನು ಚರ್ಮೋದ್ಯಮದಲ್ಲಿ ಕಚ್ಚಾ ವಸ್ತುವಾಗಿ ಬಳಸಲಾಗುತ್ತದೆ.

(ಎಸ್.ಎಸ್.ಎಂ)

ಆಕಳ ತಳಿಗಳು: ಸಾಮಾನ್ಯ ಬಳಕೆಯಲ್ಲಿದ್ದರೂ ಈ ಪದದ ಖಚಿತ ಅರ್ಥ ಹೇಳುವುದು ಸುಲಭವಲ್ಲ. ಒಂದೇ ತೆರನ, ಇಲ್ಲವೆ ಅದನ್ನು ಬಹುವಾಗಿ ಹೋಲುವ, ಬಹಳ ಕಾಲದಿಂದಲೂ ತಳಿ ಇಳಿಸಿದ, ಅದರ ಕರುಗಳಲ್ಲೂ ತೋರುವ ತಲೆಮಾರಿನ ಲಕ್ಷಣಗಳಿರುವ ಒಂದು ಗೊತ್ತಾದ ಮಾದರಿಯ ಆಕಳಿಗೆ ಹೇಳುವದು ಸಾಮಾನ್ಯ. ಆದರೆ ಎಷ್ಟೋ ಹಿಂದಿನ ಕಾಲದಿಂದ ಬೆಳೆಸಿದ ತಳಿಗಳಲ್ಲೂ ಇದ್ದಕ್ಕಿದ್ದ ಹಾಗೆ ಆ ತೆರನ ಗೊತ್ತಾದ ಲಕ್ಷಣಗಳು ಇರುವುದು, ಹುಟ್ಟುವುದು ಅಪೂರ್ವವಲ್ಲ. ಅಂಥವನ್ನು ತೆಗೆದು ಹಾಕಿದರೆ ತೀರಿತು, ತಳಿಗಳ ಚೊಕ್ಕತೆಗೆ ಊನವಿಲ್ಲ. ತಾಯಿಯಂತೆ ಮಗು ಎಂಬಂತೆ, ತಲೆತಲಾಂತರಗಳಿಂದಲೂ ತಳಿಕಾರರು ಒಳ್ಳೆಯ ಅಚ್ಚ ತಳಿಗಳನ್ನು ಬೆಳೆಸಿ ಉಳಿಸಿಕೊಂಡು ಬಂದಿದ್ದಾರೆ.

ಸಾಕಿದ ಪ್ರಾಣಿಗಳಲ್ಲಿ ಯಾವೊಂದು ಗುಣವು ವಿಶೇಷವಾಗಿರದೆ ಸಾಧಾರಣವಾಗಿರುತ್ತದೆ. ತನಗೆ ಬೇಕೆನಿಸಿದ ಹೆಚ್ಚಿನ ಗುಣಲಕ್ಷಣಗಳು ಇರುವಂತೆ ಬೆಳೆಯಲು ತಳಿಯೆತ್ತುವದು ಸಾಕುವವನ ಕೆಲಸ. ಹೀಗೆ ತಳಿಯೆತ್ತಿ ಸಾಕಿಯೇ ಒಂದೊಂದು ಬಳಕೆಗೂ ವಿಶೇಷವಾಗಿ ಒದಗುವ ಹಲವು ತಳಿಗಳು ಬೆಳೆದಿವೆ. ಒಂದೇ ಪ್ರಾಣಿಯಿಂದ ಎಲ್ಲ ತೆರನ ಗುಣಗಳನ್ನು ಪಡೆಯಬೇಕೆಂದರೆ ತಳಿ ಮುಂದುವರಿಯದು.

ಕೆಲಸದ ರಾಸುಗಳೇ ಒಂದು ಬಗೆ, ಹೈನಿಕ ಆಕಳೇ ಬೇರೆ, ಮಾಂಸದವೆ ಬೇರೆ. ಒಂದೊಂದರ ಮೈಕಟ್ಟೂ ಬೇರೆಯೆ. ಹೈನಿನ ತಳಿಯ ಆಕಳ ಮೈಯನ್ನು ಮೇಲಿಂದ ನೋಡಿದರೆ, ಬೆನ್ನಿಂದ ಹೊಟ್ಟೆ ಕಡೆಗೂ ಹಿಂಬದಿಯಿಂದ ಮುಂದಕ್ಕೂ ಸಣ್ಣಗಾಗುತ್ತ ಬೆಣೆಯಾಕಾರದಲ್ಲಿ ಇರುವದು. ತೆಳ್ಳನೆಯ ಮೈಯಲ್ಲಿ ಸ್ನಾಯುಗಳು ತುಂಬಿಕೊಂಡು, ಕಡಿಮೆ ಕೊಬ್ಬು ಇರುವುದು. ಆದರೆ ಮಾಂಸದ ಆಕಳ ಮೈಕಟ್ಟು ಚಚ್ಚೌಕನೆಯ ಪೆಟ್ಟಿಗೆಯಂತೆ ಕೊಬ್ಬು ತುಂಬಿಕೊಂಡಿರುವುದು.

ಒಳ್ಳೆಯ ತಳಿಯ ಆಕಳು ಬೇಗನೆ ಬೆದೆಗೆ ಬರುತ್ತದೆ. ಹೈನಿಕ ತಳಿ ಆಕಳು ಈಗ ೨೪–೨೬ ತಿಂಗಳಿಗೆಲ್ಲ ಮೊದಲ ಕರು ಹಾಕುತ್ತದೆ. ಭಾರತದವು ೨೮–೩೦ ತಿಂಗಳಿನಲ್ಲಿ ಬೆದೆಗೆ ಬರುತ್ತವೆ. ಎಲ್ಲಕ್ಕೂ ಹೆಚ್ಚಿನ ಸಾಧನೆ ಹೈನಿನ ತಳಿಗಳದು. ಸಾಕಿದವನಿಗೆ ಬಹಳ ಹಾಲನ್ನು, ಅದರಲ್ಲಿ ಹೆಚ್ಚು ಬೆಣ್ಣೆಯನ್ನು ಕೊಡುವ ತಳಿಗಳೆದ್ದಿವೆ. ಹಾಲ್‌ಸ್ಟೀನ್ ಆಕಳೆಂದರೆ ಹಾಲು ಸರಬರಾಜಿನ ಯಂತ್ರ ಎನ್ನುವಂತಿದೆ. ಈ ಹಸು ದಿನಕ್ಕೆ ೩೫ – ೩೭ ಕಿಗ್ರಾಂ ಹಾಲು ಕೊಡಬಲ್ಲುದು. ಮುಂದುವರಿದ ನಾಡುಗಳಲ್ಲಿ ಇದರ ಏಳಿಗೆ ಅಗಾಧವಾಗಿದೆ.

ಅಚ್ಚ ತಳಿ ಬೆಳವಣಿಗೆ: ಅನೇಕ ಆಕಳ ತಳಿಗಳೂ ಉಪತಳಿಗಳೂ ಪ್ರಪಂಚದಲ್ಲಿ ಎಲ್ಲೆಲ್ಲೂ ಪ್ರಸಿದ್ಧವಾಗಿವೆ. ಯುರೋಪದಲ್ಲಿ ೪೦–೫೦ ವಿಶಿಷ್ಟವಾದ ತಳಿಗಳಿವೆ. ಇಂಗ್ಲೆಂಡು ತೌರಾದ ೧೧ ತಳಿಗಳು ಹೊರದೇಶಗಳಿಗೂ ಹೋಗಿವೆ. ಇಂಗ್ಲೆಂಡಿನಲ್ಲಿ ಹೀಗೆ ಆರಿಸಿದ ತಳಿಗಳ ಬೆಳವಣಿಗೆಯನ್ನು ಜಾರಿಗೆ ತಂದ ರಾಬರ್ಟ ಬೇಕ್‌ವೆಲ್ (೧೭೭೦) ಚೆನ್ನಾದ ಹೊಸ ತಳಿಗಳನ್ನು ಸಾಕಿದ್ದಲ್ಲದೆ, ಅವುಗಳ ಪೀಳಿಗೆಯನ್ನು ಪಟ್ಟಿಗಳಲ್ಲಿ ಬರೆದಿಡುತ್ತ ಬಂದ. ಇತರರು ಕೆಲವು ಅಚ್ಚ ತಳಿಗಳನ್ನು ಹೀಗೆ ಏಳಿಗೆಗೆ ತಂದರು. ಇವರ ವಿಧಾನಗಳೇ

ಈಗ ಪ್ರಪಂಚದಲ್ಲಿ ಜಾರಿಯಲ್ಲಿವೆ. ಅಚ್ಚ ತಳಿಗಳಿಗಾಗಿ ಬೇಡಿಕೆಗಳು ಹೆಚ್ಚಿ ಆಯಾ ದೇಶದ ತಳಿಗಳೂ ಉತ್ತಮಗೊಂಡವು.

ಇಂಗ್ಲೆಂಡಿನಲ್ಲಿ ತಳಿಗಳನ್ನು ಬರೆದಿಡುವ ದಾಖಲೆಗಳಲ್ಲಿ ತಳಿಗಳ ಕೆಲವೇ ಗೊತ್ತಾದ ಲಕ್ಷಣಗಳಿರುವ ಎಲ್ಲ ಆಕಳನ್ನೂ ಸೇರಿಸಿಕೊಳ್ಳುತ್ತಿದ್ದರು. ಅಮೆರಿಕದಲ್ಲಿ ಹೀಗಿರಲಿಲ್ಲ. ಆಕಳು ಸಾಕುವವರು ಯಾವಾಗಲು ತಳಿಗಳು ಇನ್ನೂ ಚೆನ್ನಾಗುವಂತೆ ಯತ್ನಿಸುತ್ತಿರುವರು. ಒಂದು ಅಚ್ಚ ತಳಿ ಪ್ರಾಣಿ ಚೆನ್ನಾಗಿದ್ದರೆ ಆ ತಳಿ ಇನ್ನೂ ಉತ್ತಮವಾಗಲು ಅದೂ ಒಂದು ಪಾತ್ರ ವಹಿಸುತ್ತದೆ. ಒಂದು ತಳಿ ಚೆನ್ನಾಗಿದೆ ಎನ್ನಲು ಅದರ ಕರುಗಳು ಅಷ್ಟೇ ಚೆನ್ನಾಗಿ ಬರುವುದೇ ಮುಖ್ಯ ಕಾರಣ. ದಾಖಲೆಯಾದ ತಳಿಗಳಲ್ಲಿ ಕರುವಿಗಾಗಲಿ ಮಾಂಸಕ್ಕಾಗಲಿ ತಕ್ಕವಾದವುಗಳೆಂದು ತಿಳಿಯಲು ಹಲವಾರು ಪರೀಕ್ಷೆಗಳಿವೆ.

ಕೇವಲ ಕಣ್ಣರಿಕೆಯ ಅನುಭವದಿಂದ ತಳಿಗಳ ಬೆಳವಣಿಗೆಗೆ ನಿರ್ಣಯಕಲೆಯಾಗಿದ್ದುದು ಈಚೀಚೆಗೆ ಮೆಂಡೆಲನ ತಳಿಸೂತ್ರ ಅಲ್ಲದೆ ಜನಸಂದಣಿಯ ತಳಿವಿಜ್ಞಾನ ತತ್ವಗಳ ವಿಜ್ಞಾನವಾಗುತ್ತಿದೆ.

ಮೊದಮೊದಲು ತಳಿಯೆಬ್ಬಿಸಿದವರು ಇರಿಸಿಕೊಂಡಿದ್ದ ಗೊತ್ತಾದ ಲಕ್ಷಣಗಳ ಹೋರಿ ಮಾದರಿಗಳೂ ಆಮೇಲೆ ತಳಿಯೆಬ್ಬಿಸಲು ಸರಿಯಾದ ಆಕಳನ್ನೆ ಆರಿಸಿಕೊಂಡಿದ್ದು ಇಂದಿನ ತಳಿಗಳಿಗೆ ಮುಖ್ಯ ಕಾರಣ. ಪ್ರಪಂಚದಲ್ಲಿ ಸಾಮಾನ್ಯ ಆಕಳುಗಳೆಲ್ಲ ಬರುಬರುತ್ತ ಉತ್ತಮವಾಗಲು ಕಾರಣ, ಅಚ್ಚ ತಳಿಯ ಹೋರಿಗಳನ್ನು ಸಾಮಾನ್ಯ ಹಸುಗಳೊಂದಿಗೆ ಜೊತೆಗೂಡಿಸಿದ್ದು. ಇಲ್ಲೂ ಆಕಳ ಆಯ್ಕೆ ಚೆನ್ನಾಗಿದ್ದು ಒಳ್ಳೆಯ ತಳಿಯ ಹೋರಿ ಸಿಕ್ಕಿದರೆ ಉತ್ತಮ ಫಲ ದೊರೆವುದು.

ಒಂದೊಂದು ತಲೆಮಾರಿಗೂ ಹಲವಾರು ವರ್ಷಗಳು ಹಿಡಿಯುವುದರಿಂದಲೂ, ಆಕಳ ಈತ ಕಡಿಮೆ ಆಗುವುದರಿಂದಲೂ ಆಕಳ ತಳಿ ಉತ್ತಮಗೊಳ್ಳಲು ಬಹುಮಟ್ಟಿಗೆ ಅತ್ಯುತ್ತಮ ಹೋರಿಗಳನ್ನು ಆರಿಸಲೇಬೇಕು. ಕೃತಕ ಗರ್ಭಾಧಾನ (ಆರ್ಟಿಫಿಷಿಯಲ್ ಇನ್ಸೆಮಿನೇಷನ್) ಜಾರಿಗೆ ಬಂದು ಎಲ್ಲೋ ಇರುವ ಒಂದೇ ಹೋರಿಯಿಂದ ನೂರಾರು ಆಕಳು ಫಲಿಸಿ ಬೇಗನೆ ಉತ್ತಮವಾಗುತ್ತವೆ. ಸಾಮಾನ್ಯವಾಗಿ ಒಂದು ಹೋರಿ ಒಂದು ವರ್ಷದಲ್ಲಿ ೩೦-೪೦ ಆಕಳಿಗೆ ಗರ್ಭಾದಾನ ಮಾಡಿದರೆ, ಕೃತಕ ವಿಧಾನದಲ್ಲಿ ಸರಾಸರಿ ಸುಮಾರು ೨,೦೦೦ ಆಕಳಿಗೆ ಮಾಡಬಹುದು. ಅಂಥ ಬೀಜದ ಹೋರಿಯ ತಳಿ ಎಷ್ಟು ಚೆನ್ನಾಗಿ ಇರಬೇಕೆಂದು ಇದರಿಂದ ಗೊತ್ತಾಗುವದು. ಸರಿಯಾದ ಹೋರಿಯನ್ನು ಆರಿಸುವಾಗ ಹಲವಾರು ಪರೀಕ್ಷೆಗಳನ್ನು ಮಾಡಬಹುದು. ಕರಾವಿಗಾಗಿ ಆಕಳನ್ನು ಪಡೆವಾಗ, ಸರಾಸರಿಯಾಗಿ ಎಷ್ಟು ಬಾರಿ ಹೆಣ್ಣುಗರುಗಳು ಇಳಿಯುತ್ತವೆಂದು ಲೆಕ್ಕ ಹಾಕುವುದು ಒಂದು ವಿಧಾನ. ಆದರೆ ದನದ ಮಾಂಸಕ್ಕಾಗಿ ಪಡೆವಾಗ ಬಲು ದುಬಾರಿ ಪರೀಕ್ಷೆಗಳಾಗಬೇಕು. ಕೃತಕ ಗರ್ಭಾಧಾನದಲ್ಲಿ ಹೋರಿಯ ತಳಿಗಿಂತಲೂ ಕರಾವೂ, ದೊರಕುವ ಮಾಂಸವೂ ಮುಖ್ಯ.

ಆಕಳಿಗೆ ತೀರ ಹತ್ತಿರದ ಸಂಬಂಧದ ಹೋರಿ ಕೂಡಿಸಿದಾಗ ಕೆಲವೇಳೆ ಬಲು ಒಳ್ಳೆಯ ತಳಿಗಳು ಬಂದರೆ, ಹಲವೇಳೆ ಕೆಡುವುದುಂಟು. ಈಗಿನ ಶತಮಾನದಲ್ಲಿ ಅದರ ಸಮನಾದ ಇಲ್ಲವೇ ಇನ್ನೂ ಯೋಗ್ಯವಾದ್ದನ್ನು ಪಡೆಯುವುದು ಕಷ್ಟವಾಗುವಷ್ಟು ಇಲ್ಲವೆ ಅಸಾಧ್ಯವಾಗುವಷ್ಟು ಉತ್ತಮತಮ ಹೋರಿಯನ್ನು ಬಳಸಿ ಈ ತಳಿ ವಿಧಾನವನ್ನು ತಳಿಗಾರರು ಬಳಸುತ್ತಿರುವರು. ಆಕಳು, ಹೋರಿ ಎರಡರಲ್ಲೂ ಬಲು ಒಳ್ಳೆಯ ಗುಣಲಕ್ಷಣಗಳು ಇದ್ದರೆ ಮಾತ್ರ ಇದನ್ನು ನಡೆಸಿಕೊಂಡು ಬರಬಹುದು. ಚೆನ್ನಾಗಿ ಗೊತ್ತಿರುವ ಎರಡೋ ಹೆಚ್ಚಿಗೋ ಜಾತಿಗಳನ್ನು ಅಡ್ಡ ಹಾರಿಸಿ ಹೊಸ ತಳಿಗಳನ್ನು ಪಡೆದುದುಂಟು. ವಿವಿಧ ಜಾತಿಯವುಗಳ ಒಳ್ಳೆಯ ಗುಣಲಕ್ಷಣಗಳು ಕೂಡಿದ ತಳಿಯನ್ನು ಪಡೆಯುವುದು ಇದರ ಮುಖ್ಯ ಉದ್ದೇಶ. ಆದರೆ ಹೀಗೆ ಮಾಡಲು ವರ್ಷಗಳೇ ಹಿಡಿಯುವುದು. ಅಲ್ಲದೆ ಆಕಳ ದೊಡ್ಡ ಮಂದೆಯನ್ನೇ ಸಾಕಿರಬೇಕು. ಪೋಲ್ಡ್ ಹೆರಿಫರ್ಡ್, ಪೋಲ್ಡ್ ಷಾರ್ಟ್‌ಹಾರ್ನ್, ಇತ್ಯಾದಿ ತಳಿಗಳನ್ನು, ಈ ವಿಧಾನವನ್ನೇ ಅನುಸರಿಸಿ ಪಡೆಯಲಾಗಿದೆ. ಮಾಂಸಕ್ಕಾಗಿ ಮಾರಾಟವಾಗುವುವನ್ನೂ ಕರಾವಿನ ಆಕಳನ್ನೂ ಪಡೆಯಲು, ಕೆಲವೇಳೆ ಅಚ್ಚ ತಳಿಯ ಹೋರಿಯನ್ನೇ ಇನ್ನೊಂದು ಅಚ್ಚ ತಳಿಯ ಆಕಳಿಗೆ ಕೊಡಿಸುವುದುಂಟು. ಇಂಥ ಜೋಡಿಯಿಂದ ಬಂದ ಅಡ್ಡತಳಿಗಳು ಬಲಶಾಲಿಗಳಾಗಿರುತ್ತವೆ. ಒಟ್ಟಿನಲ್ಲಿ ಅಚ್ಚ ತಳಿಯ ಹೋರಿ, ಆಕಳಿಗಿಂತಲೂ ಅಡ್ಡತಳಿಯವು ಇನ್ನೂ ಬಲವಾದುವು.

ವಿದೇಶಿ ತಳಿಗಳು: ಯೂರೋಪಿನಲ್ಲಿ ಹಿಂದಿನ ಕಾಲದಿಂದಲೂ ಬೆಳೆಸುತ್ತಿರುವ ತಳಿಗಳ ಲಕ್ಷಣಗಳು ಖಚಿತವಾಗಿ ಹೆಸರಾಗಿದೆ. ಫ್ರಾನ್ಸಿನ ಚಾರೋಲೇ, ನಾರ್ಮಂಡಿ ಬೆಲ್ಜಿಯಮ್ಮಿನ ಹಾಲ್‌ಸ್ಟೀನುಗಳು ಮುಂತಾದುವು. ಆದರೆ ಮಾಂಸಕ್ಕಾಗಿ ಸಾಕುವ ತಳಿಗಳ ಮೇಲೆ ಬಲು ಪ್ರಭಾವ ಬೀರುವ ಬ್ರಿಟನ್ನಿನವು ಇವಕ್ಕಿಂತ ಮುಖ್ಯವಾದುವು. ತಳಿಗಳನ್ನು ಮಾಂಸಕ್ಕಾಗೋ ಕರಾವಿಗಾಗೋ ಬೆಳೆಸಬಹುದು. ಮಾಂಸಕ್ಕಾಗಿ ಸಾಕಿದವಲ್ಲಿ, ಷಾರ್ಟ್‌ಹಾರ್ನ, ಹೆರಿಫರ್ಡ್, ಅಂಗಸ್, ಡೆವಾನ್, ಗ್ಯಾಲೋವೆ, ರೆಡ್‌ಪೋರ್, ಆಫ್ರಿಕಾಂಡರ್, ಭಾರತದ ಬ್ರಾಹ್ಮಣ ತಳಿಗಳೂ ಇವುಗಳ ಅಡ್ಡ ತಳಿಗಳೂ ಹೆಸರಾಗಿವೆ. ಕರಾವಿಗಾಗಿ ಸಾಕಿದವಲ್ಲಿ ಹಾಲ್ ಸ್ಟೀನ್-ಫ್ರೀಸಿಯನ್, ಜರ್ಸಿ, ಗ್ವೆರ್ನಸಿ, ಬ್ರೌನ್‌ಸ್ವಿಸ್, ಬ್ರಿಟನ್ನಿನದೇ ಆದ ಅರ್ಯಷೈರ್-ಇವು ಲೋಕಪ್ರಸಿದ್ಧ.

ಭಾರತದ ತಳಿಗಳು: ಭಾರತದಲ್ಲೂ ಅವುಗಳ ಹುಟ್ಟಿನಲ್ಲೇ ಅನೇಕ ಗೊತ್ತಾದ ಗುಣಲಕ್ಷಣಗಳಿಂದ ಗುರುತು ಸಿಗುವ, ಆಕಳ ತಳಿಗಳು ಹಲವಾರಿವೆ. ಹುಟ್ಟುಗುಣಗಳಲ್ಲಿ ಈ ತಳಿಗಳು ಯೂರೋಪಿನವಕ್ಕಿಂತ ಏನು ಕಡಿಮೆಯಿಲ್ಲ. ಕೆಲವು ಪಂಗಡದ ಜನ ಕೆಲವು ಸೊಗಸಾದ ತಳಿಗಳನ್ನು ಸಾಕುತ್ತ ಬಂದಿರುವುದರಿಂದ ಹಾಗೂ ಇನ್ನೂ ಹಲವರು ಆಕಳ ಸಾಕಾಣಿಕೆಯನ್ನೆ ಹುಟ್ಟು ಕೆಲಸವಾಗಿಟ್ಟುಕೊಂಡು ಚೆನ್ನಾಗಿ, ಒಳ್ಳೆಯ ತಳಿಯನ್ನೇ ಬೆಳೆಸುತ್ತಿರುವುದರಿಂದ ಇದು ಸಾಧ್ಯವಾಗಿದೆ. ಭಾರತದ ಆಕಳ ತಳಿಗಳಲ್ಲಿ ನಾಲ್ಕು ಮೂಲ ಪಂಗಡಗಳಿವೆ: ಉತ್ತರದ ದೊಡ್ಡ ಬಿಳಿಯ ಆಕಳು; ತಲೆ ಕೊಂಬುಗಳ ವಿಶೇಷ ಲಕ್ಷಣಗಳಿರುವ ದಕ್ಷಿಣದ ಮೈಸೂರಿನವು; ಪಡುವಣದ ಕಾಠೇವಾಡದ ಗಿರ್ ದನಗಳು; ಭಾರತದ ಗುಡ್ಡಗಾಡುಗಳಲ್ಲಿ ಇರುವ ಕಪ್ಪು, ಕೆಂಪು, ಬೆರಕೆ ಬಣ್ಣದ ಸಣ್ಣ ದೇಹದವು.

ಮುಂದುವರಿದ ದೇಶಗಳಲ್ಲಿ ಇದ್ದಂತೆ ಭಾರತದಲ್ಲೂ ತಳಿ ಎನ್ನಿಸಿಕೊಳ್ಳುವವು ನಿಖರವಾಗಿಲ್ಲದಿದ್ದರೂ ಕೆಲವು ಮುಖ್ಯ ತಳಿಗಳ ಲಕ್ಷಣಗಳನ್ನು ಗುರುತಿಸಬಹುದು. ಇಲ್ಲಿನ ದನಗಳ ಬೇರೆ ಬೇರೆ ಬಗೆಗಳ ಮೂಲ ಹೊರಗಿಂದ ದಾಳಿಯಿಟ್ಟು ಬಂದ ಜನರ ವಲಸೆಗೆ ಸಂಬಂಧಿಸಿದೆ. ಅವರೊಂದಿಗೆ ಬಂದ ರಾಸುಗಳ ಮಂದೆಗಳು ನಾಡಿನ ಆಗಿನ ತಳಿಗಳೊಂದಿಗೆ ಬೆರೆತು ಹೊಸ ತಳಿಗಳು ಎದ್ದಿರಬೇಕು.

ಉತ್ತರ ಭಾರತದ ಬೂದು, ಬಿಳಿ ಬಣ್ಣದ ರಾಸುಗಳ ಪಂಗಡದಲ್ಲಿ ಎರಡು ತಂಡಗಳು ಎದ್ದು ಕಾಣುತ್ತವೆ. ಪಡುವಲದ ಕಾಂಕ್ರೇಜಿ ದನ ಒಂದು. ಇದರ ಹಣೆ ಅಗಲ, ಕೊಂಬು ದಪ್ಪ. ಆರ್ಯರು ವಲಸೆ ಬಂದರೆಂಬ ಪಡುವಲದ ಕರಾವಳಿಯ ಮೂಲಕ ಸಿಂಧು, ಗುಜರಾತ್, ರಾಜಪುಟಾಣಗಳಲ್ಲಿ ಈ ತಳಿಯೇ ಹೆಚ್ಚಾಗಿ ಕಾಣುವುದು. ಎರಡನೆಯ ತಂಡದಲ್ಲಿ ಬಿಳಿಯ ಬಣ್ಣದ, ಅಗಲವಿರದ ಹಣೆಯ, ಗಿಡ್ಡ ಕೊಂಬಿನ, ಭಗನಾರಿ, ಹರಿಯಾನ, ರೂತ್, ಗಾವ್ಲೊ, ಓಂಗೋಲ್ ರಾಸುಗಳನ್ನು ಚೆನ್ನಾಗಿ ಗುರುತಿಸಬಹುದು. ಹಾಗೆಯೇ ಮಧ್ಯಪ್ರದೇಶ, ದಕ್ಷಿಣ ಭಾರತಗಳಲ್ಲೂ ಇವು ಅಲ್ಲಲ್ಲಿ ಕಾಣಬರುತ್ತವೆ. ಇವೆರಡು ತಂಡಗಳ ತಳಿಗಳ ಬೆರಕೆ ಅಪರೂಪವಲ್ಲ. ರಾಜಪುಟಾಣದ ಮಾಳ್ವಿ ದನಗಳು ಕಾಂಕ್ರೇಜಿಗಳನ್ನು ಹೋಲುತ್ತವೆ. ಬಿಳಿಯ ರಾಸುಗಳಿಗೆ ಕಾಲುಕಂಬ ಎತ್ತರ, ಮೈಕಟ್ಟು ಕಿರಿದು, ತೂಕವು ಅಷ್ಟಿಲ್ಲ. ಬೂದು ಆಕಳು ತೂಕದವು, ಚೆನ್ನಾಗಿ ಕರೆಯುತ್ತವೆ. ಇವೆರಡರ ಅಡ್ಡ ತಳಿಗಳೂ ಚೆನ್ನಾಗಿ ಹಾಲು ಕೊಡುತ್ತವೆ. ಹರಿಯಾನ, ಹಳ್ಳಿಕಾರ್, ಓಂಗೋಲ್ ಆಕಳು ಇಂಥವು. ಇವುಗಳೊಂದಿಗೆ ಕೃಷ್ಣಾಕಣಿವೆಯ ತಳಿ, ಕಾಂಗ್ಯಾಮ್ (ಕೊಯಮತ್ತೂರು ತಳಿ), ಡೋಸಿ (ಹೈದರಾಬಾದ್ ತಳಿ)-ಇವೂ ಹೈನಿಗೆ ಪ್ರಸಿದ್ಧವಾಗಿವೆ.

ಕೊಂಬುಗಳ ತಲೆಗಳ ವಿಶಿಷ್ಟ ಹೆಗ್ಗುರುತಿನವು ಮೈಸೂರು ತಳಿ. ಹಳ್ಳಿಕಾರ್, ಅಮೃತಮಹಲ್ ರಾಸುಗಳಲ್ಲಿ ಇದರ ಲಕ್ಷಣಗಳಿವೆ. ಆಂಧ್ರ, ಮದರಾಸು, ಉತ್ತರ ಕರ್ನಾಟಕಗಳ ರಾಸುಗಳೂ ಅಷ್ಟೆ.

ಕಾಠೇವಾಡದ ಲಕ್ಷಣದವು ಗಿರ್ ತಳಿ ದನಗಳು. ಇವು ಕಛ್‌ನಿಂದ ಆಂಧ್ರದ ತನಕ ಹರಡಿಕೊಂಡಿವೆ. ಭಾರತದ ಎಲ್ಲೆಡೆಗಳಲ್ಲೂ ಇರುವ ಸಣ್ಣ ರಾಸುಗಳ ಬಣ್ಣ ಮೈಕಟ್ಟು ಹೀಗೆ ಅನ್ನುವಂತಿಲ್ಲ. ಅಂತೂ ಒಂದೇ ತಳಿಯ ಲಕ್ಷಣಗಳು ಅಷ್ಟಾಗಿಲ್ಲ.

ಅಮೃತಮಹಲ್: ಮೈಸೂರು ಸರಕಾರದ ನೆರವಿನಿಂದ ವೈಜ್ಞಾನಿಕವಾಗಿ ಬೆಳೆಸಿ ಕಾಪಾಡಿರುವ ಹೆಸರಾದ ತಳಿಯಿದು. ಈ ತಳಿಯ ಹೋರಿಯನ್ನು ನಾಡಿನಲ್ಲಿ ಹಂಚಲಾಗಿದೆ. ಆಕಳು ಹೆಚ್ಚಾಗಿ ಹಾಲು ಕರೆಯವು. ಆದರೆ ಎತ್ತುಗಳು ಚುರುಕು, ರೋಷದವು. ದುಡಿಯುವುದಲ್ಲದೆ, ಕಷ್ಟವನ್ನೂ ತಡೆಯಬಲ್ಲವು.

ಹಳ್ಳಿಕಾರ್: ಇದು ಸಾಧುವಾದ ಆಕಳು. ಈ ಮೈಸೂರು ತಳಿ ಕರಾವಿಗೆ ಹೆಸರಾಗಿದೆ. ಕರಾವಿನ ೨೯೬ ದಿನಗಳಲ್ಲಿ ೧೯೮೭ ಕಿಗ್ರಾಂ ಹಾಲು ಕೊಟ್ಟಿದೆ. ಜೀವಾತುಗಳಿರುವ ಇದರ ಹಾಲು ಹಳದಿಯಾಗಿರುವುದು ಇದರ ಹೆಚ್ಚಳಿಕೆ.

ಗಿರ್: ಕಾಠೇವಾಡದ ಗಿರ್ ಕಾಡುಗಳಲ್ಲಿ ಅಲ್ಲಲ್ಲಿ ಈ ತಳಿ ಚೊಕ್ಕವಾಗಿ ಉಳಿದಿವೆ. ಕರುಗಳಲ್ಲಿ ಗಿರ್ ತಳಿಯ ಲಕ್ಷಣ ಚೆನ್ನಾಗಿ ಇಳಿದು ಬಂದಿರುವದರಿಂದ ದೂರ ದೂರದ ಪ್ರದೇಶಗಳಲ್ಲೂ ಈ ಲಕ್ಷಣಗಳನ್ನು ಗುರುತಿಸಬಹುದು. ಈ ಆಕಳು ಸಾಧು; ಚೆನ್ನಾಗಿ ಹಾಲು ಕೊಡುತ್ತದೆ. ನಿದ್ದೆಗಣ್ಣು, ದೊಡ್ಡ ಹಣೆ, ಬಾಗಿದ ಕೊಂಬುಗಳು, ಉದ್ದನೆಯ ಜೋಲುಗಿವಿಗಳು, ಚಿವುಟಿದಂತಿರುವ ಕಿವಿ ತಿದಿಗಳು ಇದರ ಲಕ್ಷಣಗಳು. ಬಿಳಿ, ಕೆಂಪು, ಕಂದು ಮಚ್ಚೆಗಳ ಮೈ. ತೂಕವಾಗಿ ಬಲವಾಗಿರುವ ಎತ್ತು ಮಾಂಸದ ತಳಿ.

ಕಾಂಕ್ರೇಜ್: ಕಛ್ ಕೊಲ್ಲಿ, ಸಿಂಧು ಪ್ರಾಂತ್ಯ, ಅಹಮದಾಬಾದು ಈ ಚೊಕ್ಕ ತಳಿಯ ತವರು. ಈ ತಳಿಯನ್ನು ಅಮೇರಿಕಾದಲ್ಲಿ ಅಲ್ಲಿನವೊಂದಿಗೆ ಕೂಡಿಸಿ ಮಾಂಸದ ಒಳ್ಳೆಯ ತಳಿಗಳನ್ನು ತೆಗೆದಿರುವರು. ಈ ತಳಿಯ ಆಕಳು ಚೆನ್ನಾಗಿ ಹಾಲು ಕೊಡುತ್ತದೆ. ಒಂದು

ಕರಾವಿನ ಕಾಲದಲ್ಲಿ ೩,೩೦೦ ಕಿಗ್ರಾ ಹಾಲು ಕೊಟ್ಟಿದ್ದುಂಟು. ಬಿಳಿ, ಬೂದು ಬಣ್ಣದವೂ, ಕಪ್ಪಿನ ಮೇಲಿನ ಬೂದು ಬಣ್ಣದವೂ ಹೇರಳ.

ಓಂಗೋಲ್: ಆಂಧ್ರಪ್ರದೇಶದ ನೆಲ್ಲೂರು, ಗುಂಟೂರುಗಳಲ್ಲಿ ಈ ತಳಿ ಹೆಚ್ಚು. ಪುಷ್ಟವಾಗಿ ಬೆಳೆಯುವುದಲ್ಲದೆ ಹೆಚ್ಚು ನಿರೋಧಶಕ್ತಿಯಿದೆ. ನಸು ಬಿಳಿ ಬಣ್ಣದ ಈ ತಳಿಯ ಎತ್ತುಗಳು ಕೆಲಸಕ್ಕೂ ಆಕಳು ಕರಾವಿಗೂ ಹೆಸರಾಗಿವೆ. ಒಂದು ಕರಾವಿನಲ್ಲಿ ೩,೨೬೨ ಕಿಗ್ರಾಂ ಹಾಲು ಕೊಟ್ಟಿವೆ.

ಹರಿಯಾಣ: ಹಳೆಯ ಪಂಜಾಬು, ದೆಹಲಿ ಪ್ರದೇಶಗಳ ಈ ತಳಿ ರಾಜಸ್ಥಾನ ಪ್ರಾಂತ್ಯದಲ್ಲಿ ಹೆಸರಾಗಿ ಬಳಕೆಯಲ್ಲಿದೆ. ಎತ್ತುಗಳು ದುಡಿಮೆಗೂ ಆಕಳು ಕರಾವಿಗೂ ಚೆನ್ನಾಗಿ ಬರುತ್ತವೆ. ಕರಾವಿನ ಕಾಲದಲ್ಲಿ ೮,೪೨೬ ಕಿಗ್ರಾಂ ಹಾಲು ಕೊಟ್ಟುದುಂಟು. ಈ ತಳಿಗಳು ಬೆಳ್ಳಗೆ ಮಾಟವಾಗಿ ಬೆಳೆದು ನೋಡಲು ಅಂದವಾಗಿರುತ್ತವೆ. ಈ ತಳಿಯನ್ನು ಪಂಜಾಬು ಸರಕಾರ ಚೆನ್ನಾಗಿ ಬೆಳೆಸಿದೆ.

ಸಿಂಧಿ: ಸಿಂಧೂ ಪ್ರಾಂತ್ಯದ ಗುಡ್ಡದ ಸೀಮೆಯ ತಳಿ ಇದರ ಬಲು ಚೊಕ್ಕವಾದ ತಂಡಕ್ಕೆ ಲಾಸಬೆಲಾ ಎಂದಿದೆ. ಈ ತಳಿಯವು ಹೊಸ ಪರಿಸರಕ್ಕೆ ಚೆನ್ನಾಗಿ ಹೊಂದಿಕೊಂಡು ಕಷ್ಟ, ರೋಗಗಳನ್ನು ತಡೆದುಕೊಳ್ಳುತ್ತವೆ. ಅಚ್ಚಗೆಂಪಿನ ಕೆಂಪು ಈ ತಳಿಯ ಬಣ್ಣವಾದರೂ ಬೆರಕೆ ಹಳದಿಯಿಂದ ಕರಿ ಕಂದಿನ ತನಕ ಇರಬಹುದು. ಮೊಗದ ಮೇಲೆ ಬಿಳಿ ಗುರುತು. ಮೈಕಟ್ಟು ಬಿಗುವಾಗಿ ಸಮನಾಗಿರುತ್ತವೆ. ಎತ್ತುಗಳು ಸಣ್ಣವಾದರೂ ಬಲವಾದುವು, ಯೂರೋಪಿನಲ್ಲಿ ಜರ್ಸಿ ತಳಿ ಇರುವಂತೆ, ಭಾರತದಲ್ಲಿ ಹಾಲಿನ ತಳಿಯೆಂದರೆ ಸಿಂಧಿಯೇ. ಕರಾವಿನ ಕಾಲದಲ್ಲಿ ೫,೪೪೪ ಕಿಗ್ರಾಂ ಹಾಲು ಕೊಟ್ಟಿರುವುದುಂಟು. ಹಾಲು ಜಿಡ್ಡೂ ಹೆಚ್ಚು. ಸಾಧುವಾಗಿ, ಸಾಕಲೂ ಸುಲಭ. ಈ ತಳಿ ಪರದೇಶಗಳಿಗೂ ಹೋಗಿವೆ.



ಹಾಲಿನ ತಳಿ – ಕೆಂಪು ಸಿಂಧಿ

ಸಹಿವಾಲ್: ಪಂಜಾಬಿನ ಮಾಂಟ್ಗೊಮರಿ ಜಿಲ್ಲೆ ಈ ತಳಿಯ ತವರು. ಮುಖ್ಯವಾಗಿ ಇದು ಹಾಲಿನ ತಳಿ. ಒಂದು ರಾಸು ಒಂದು ಕರಾವಿಗೆ ೬,೩೫೦ ಕಿಗ್ರಾಂ ಕೊಟ್ಟಿರುವದು ಉಂಟು. ಸರಿಯಾಗಿ ಬೆಳೆಸಿದರೆ, ವಿಶಿಷ್ಟ ಗುಣಗಳಲ್ಲಿ ಯೂರೋಪಿನವಕ್ಕೂ ಭಾರತದವು ಕೀಳಲ್ಲವೆಂದು, ಇತ್ತೀಚಿನ ಈ ತಳಿ ಚೆನ್ನಾಗಿ ತೋರಿಸಿಕೊಟ್ಟಿದೆ. ಸಾಧಾರಣವಾಗಿ ಇದರ ಬಣ್ಣ ಕೆಂಪು; ಅಚ್ಚಗೆಂಪೂ, ಕಂದೂ ಇರಬಹುದು. ಈ ತಳಿಯ ದಾಖಲೆಗಳನ್ನು ಚೆನ್ನಾಗಿ ಇಟ್ಟಿರುವದರಿಂದ ತಳಿಯ ಚೊಕ್ಕತೆ ಚೆನ್ನಾಗಿದೆ. (ಡಿ.ಎಸ್.ಎಸ್.)

**ಆಕ್ಟಿನಾಪ್ಟಿರಿಜಿ:** ಅಂತಸ್ಥ ಭಾಗದ ಈಜುರೆಕ್ಕೆಗಳುಳ್ಳ ಮೀನುಗಳ ಗುಂಪು. ಇದರಲ್ಲಿ ಅಸ್ಥಿ ಮೀನುಗಳಿವೆ. ಮಧ್ಯ ಡಿವೋನಿಯನ್ ಯುಗದ ಶಿಲೆಗಳಲ್ಲಿ ಮೊದಲು ಕಾಣಿಸಿಕೊಂಡವು. ಅಲ್ಲಿಂದೀಚೆಗೆ ಇವುಗಳು ಪೇಲಿಯೋಸೋಯಿಕ್, ಮೀಸೋಸೋಯಿಕ್‌ನ ಕಾಲದಲ್ಲಿ ಜೀವಿಸಿ, ಮುಂದಿನ ಸೀನೋಸೋಯಿಕ್ ಶಕಗಳ ಮುಖಾಂತರ ಸಂತತಿಯನ್ನು ರಕ್ಷಿಸಿಕೊಂಡು ವೈವಿಧ್ಯಮಯ ಪರಿಸರದಲ್ಲಿ ದೃಢವಾಗಿ ಜೀವಿಸುತ್ತಿವೆ. ಅಸ್ಥಿಮೀನುಗಳು ಸಾಗರ ಮತ್ತು ಭೂಖಂಡದ ಮೇಲಿನ ನೀರಿನಲ್ಲಿ ಜೀವಿಸುತ್ತಿವೆ. ಆಧುನಿಕ ಮೀನುಗಳಲ್ಲಿ ಶೇ. 97 (16,000 ಜಾತಿಯ) ಮೀನುಗಳಿರುವ ಬಗ್ಗೆ ತಜ್ಞರು ವರದಿಸಿದ್ದಾರೆ. ಪೇಲಿಯೋಸೋಯಿಕ್‌ನ ಪೇಲಿಯೋನಿಸ್ಕಾಯ್ಡ್‌ಗಳು ಪುರಾತನ ಆಕ್ಟಿನಾಪ್ಟಿರಿಜಿಗಳು. ಬಹುತೇಕ ಪೂರ್ಣ ಮೃದ್ವಸ್ಥಿಯ ಅಂತರಿಕ ಅಸ್ಥಿಪಂಜರಗಳು, ಪ್ರಾಚೀನ ಹಾಗೂ ಶಾರ್ಕ್‌ಮಾದರಿಯ ಈಜುರೆಕ್ಕೆಗಳು ಹಾಗೂ ಕ್ಷೀಣಿಸಿದ ಶಲ್ಕಗಳಿಂದೊಡಗೂಡಿದ ಸ್ಟರ್ಜನ್‌ಗಳು ಮತ್ತು ಪ್ಯಾಡಲ್ ಮೀನುಗಳಂಥ ಕೆಲವು ವೈಶಿಷ್ಟ್ಯವುಳ್ಳ ಅವನತಿ ಹೊಂದಿದ ಪ್ರಭೇದಗಳೇ ಪೇಲಿಯೋನಿಸ್ಕಾಯ್ಡ್‌ಗಳ ಆಧುನಿಕ ಪ್ರತಿನಿಧಿಗಳು. ಗ್ರಾರ್ ಮತ್ತು ಬೋಫಿನ್‌ಗಳು ಮೀಸೋಸೋಯಿಕ್ ಪಿತೃವರ್ಗದ ಆಕ್ಟಿನಾಪ್ಟಿರಿಜಿಯನ್‌ಗಳು. ಲೆಪಿಸಾಸ್ಟಿಯಸ್ ಹಾಗೂ ಏಮಿಯ ಜಾತಿಯ ಮೀನುಗಳು ಈಗ ದೃಢವಾಗಿವೆ. ಪೇಲಿಯೋನಿಸ್ಕಾಯ್ಡ್ ಪೀಳಿಗೆಯು ಎರಡು ಮಧ್ಯವರ್ತಿ ಅವಸ್ಥೆಗಳ ಮೂಲಕ ಸಾಗಿ ಈಗಿನ ನೈಜ ಅಸ್ಥಿ ಮೀನುಗಳ ಮಹತ್ವದ ವಿಕಾಸಕ್ಕೆ ಕಾರಣವಾಗಿವೆ.

ಸೈಕ್ಲಾಯಿಡ್ ಶಲ್ಕ

ಗ್ಯಾನಾಯ್ಡ್ ಶಲ್ಕ

ಇವುಗಳಲ್ಲಿ, ಬಲವಾದ ಅಂತರಿಕ ಅಸ್ಥಿಪಂಜರದ ಮೂಲವಸ್ತುಗಳನ್ನೊಳಗೊಂಡ, ಒಂದು ನಿಶ್ಚಿತವಾದ ಹಾಲೆಯ, ಮಾಂಸದ, ಶಲ್ಕಗಳ ತಳವಿಲ್ಲದ, ಜೊತೆಯಾದ ಈಜುರೆಕ್ಕೆಗಳಿವೆ. ಉಪ ಈಜುರೆಕ್ಕೆಗಳಿದ್ದಾಗ, ಒಂದು ಈಜು ರೆಕ್ಕೆಮುಳ್ಳಿಗಲ್ಲದೆ, ದೇಹಕ್ಕೆ ಅವು ಅಂತಸ್ಥ ಭಾಗಗಳಿಂದ ಜೋಡಿಸಲ್ಪಟ್ಟಿರುತ್ತವೆ. ದೇಹಕ್ಕೆ ಹೆಚ್ಚಾಗಿ ಗ್ಯಾನಾಯ್ಡ್, ಸೈಕ್ಲಾಯ್ಡ್ ಅಥವಾ ಕೆಲವು ವೇಳೆ ಟಿನಾಯ್ಡ್ ಶಲ್ಕಗಳ ಹೊದಿಕೆಯಿದೆ.

ಈ ಮೀನುಗಳಲ್ಲಿ ಶ್ವಾಸರಂಧ್ರವಿಲ್ಲ. ಮಧ್ಯಮ ಕಿವಿರು ಮುಚ್ಚಳದ ಮೂಳೆಯ (ಇಂಟರ್ ಓಪ್ರೀಕಲ್) ಹಾಗೂ ಬ್ರಾಂಖಿಯೋಸ್ಟೀಗಲ್‌ನ ಅಂತಸ್ಥ ಭಾಗಗಳು ಕಂಡುಬರುತ್ತವೆ. ಮೂಗಿನ ಹೊಳ್ಳೆಗಳು ತಲೆಯ ಮೇಲ್ಭಾಗದಲ್ಲಿವೆ. ಅಂತಸ್ಥ ಮೂಗಿನ ಹೊಳ್ಳೆಗಳು ಇವುಗಳಲ್ಲಿಲ್ಲ. ಗಂಟಲಿನ ಫಲಕವೂ ಇಲ್ಲ. ಈ ಮೀನುಗಳಲ್ಲಿ ಭುಜದ ರೇಡಿಯಲ್‌ಗಳು ಸ್ಕಾಪುಲೋಕೋರ ಕಾಯ್ಡ್‌ನ ಸಂಕೀರ್ಣ ರಚನೆಗೆ ಸೇರಿವೆ. ಬದುಕಿರುವ ಆಕ್ಟಿನಾಪ್ಟಿರಿಜಿಗಳನ್ನು ಕಾಂಡ್ರಾಸ್ಟಿ, ಹೋಲಾಸ್ಟಿ ಹಾಗೂ ಟೀಲಿಯಾಸ್ಟಿ ಎಂದು ವರ್ಗೀಕರಿಸಿದ್ದಾರೆ. (ಬಿ.ಹೆಚ್.ಎಮ್.)

**ಆಕ್ನಿಡೊಸ್ಪೋರಿಡಿಯ:** ಪ್ರೋಟೋಜ಼ೋವ ವಂಶ, ಸ್ಪೋರೋಜ಼ೋವ ವರ್ಗ ಮತ್ತು ನಿಯೊಸ್ಪೋರಿಡಿಯ ಉಪವರ್ಗಕ್ಕೆ ಸೇರಿದ ಗಣ. ಈ ಉಪವರ್ಗದ ಪ್ರಾಣಿಗಳ ವಿಶೇಷ ಲಕ್ಷಣವೆಂದರೆ ಪ್ರಬುದ್ಧಾವಸ್ಥೆಯಲ್ಲಿ ಒಂದಕ್ಕಿಂತ ಹೆಚ್ಚು ಕೋಶಕೇಂದ್ರಗಳನ್ನು ಹೊಂದಿರುವುದು. ಆದ್ದರಿಂದ ಅವು ಸಿನ್‌ಸಿಶಿಯಮ್ ರೂಪವನ್ನು ಪ್ರದರ್ಶಿಸುತ್ತವೆ. ಇವು ಉತ್ಪತ್ತಿಮಾಡುವ ಸ್ಪೋರ್‌ಗಳಿಗೆ ಧ್ರುವಸಂಪುಟಿಕ ಇಲ್ಲದಿರುವುದು ಈ ಗಣದ ವಿಶೇಷ. ಪ್ರಬುದ್ಧಾವಸ್ಥೆಯ ಸಿನ್‌ಸಿಶಿಯಮ್ ರೂಪವು ತನ್ನಲ್ಲಿಯೇ ಅವಿಚ್ಛಿನ್ನವಾಗಿ ಸ್ಪೋರ್‌ಗಳನ್ನು ಉತ್ಪಾದಿಸುತ್ತದೆ. ಸ್ಪೋರ್‌ಕೋಶಗಳು ಸಾಮಾನ್ಯವಾಗಿ ಜಟಿಲರಚನೆಗಳು ಮತ್ತು ಅವುಗಳಲ್ಲಿ ಒಂದೇ ಒಂದು ಕೋಶಕೇಂದ್ರ ಇರುತ್ತದೆ. ಈ ಗಣವನ್ನು ಎರಡು ಉಪಗಣಗಳಾಗಿ ವರ್ಗೀಕರಿಸಿದೆ.

ಉಪಗಣ 1: ಹ್ಯಾಪ್ಲೊಸ್ಪೋರಿಡಿಯ – ಈ ಉಪಗಣಕ್ಕೆ ಸೇರಿದ ಸ್ಪೋರ್‌ಗಳಿಗೆ ಮುಚ್ಚಳವಿರುವ ಕೋಶಗಳಿರುತ್ತವೆ. ಧ್ರುವಸಂಪುಟಿಕಗಳಿಲ್ಲ. ಜಲಚರಿ ಅಕಶೇರುಕಗಳಲ್ಲಿ ಜೀವಿಸುವ ಪರತಂತ್ರ ಜೀವಿಗಳು. ವಲಯವಂತಗಳಲ್ಲಿ ಪರತಂತ್ರ ಜೀವಿಯಾಗಿ ಜೀವಿಸುವ ಹ್ಯಾಪ್ಲೊಸ್ಪೋರಿಡಿಯಮ್ ಇದಕ್ಕೆ ಉದಾಹರಣೆ.

ಉಪಗಣ 2: ಸಾರ್ಕೊಸ್ಪೋರಿಡಿಯ – ಸ್ಪೋರ್‌ಗಳಿಗೆ ಕೋಶಗಳಾಗಲೀ ಅಥವಾ ಧ್ರುವಸಂಪುಟಿಕಗಳಾಗಲೀ ಇಲ್ಲ. ಇವು ನಳಿಕಾಕಾರದ ಸಿನ್‌ಸಿಶಿಯ ರೂಪಿಗಳು. ಬಹಿರ್ ಪ್ರದ್ರವ್ಯವು ತ್ರಿಜ್ಯಾಕಾರವಾಗಿ, ರೇಖಾನ್ವಿತವಾಗಿದೆ. ಸ್ತನಿಗಳ ಮಾಂಸಗಳಲ್ಲಿ ಪರತಂತ್ರ ಜೀವಿಗಳಾಗಿ ಜೀವಿಸುತ್ತವೆ. ಸ್ಪೋರ್‌ಗಳು ಕುಡುಗೋಲು ಆಕಾರದಲ್ಲಿರುತ್ತವೆ. ಸಾರ್ಕೊಸಿಸ್ಟಿಸ್ ಉದಾಹರಣೆ. (ಎಚ್.ಎಸ್.ಎಸ್.)

**ಆಕ್ಸಿಟೋಸಿನ್:** ಪಿಟ್ಯುಟರಿ ಗ್ರಂಥಿಯ ನ್ಯೂರೊಹೈಪೊಫೈಸಿಸ್ ಭಾಗದಲ್ಲಿ ಉತ್ಪತ್ತಿಯಾಗುವ ಪಾಲಿಪೆಪ್ಟೈಡ್ ಹಾರ್ಮೋನು. ಆಕ್ಸಿಟೋಸಿನ್ ಹಾರ್ಮೋನನ್ನು ದನ ಮತ್ತು ಹಂದಿಗಳ ಪಿಟ್ಯುಟರಿ ಗ್ರಂಥಿಯ ಸಾರದಲ್ಲಿ ಮೊದಲು ಗುರುತಿಸಲಾಯಿತು. ನಂತರ 1953 ರಲ್ಲಿ ಕೃತಕವಾಗಿ ಇದನ್ನು ಉತ್ಪಾದಿಸಲಾಯಿತು. ಈ ಹಾರ್ಮೋನು ಗರ್ಭಕೋಶದ ಮೃದುನ್ವಿತ ಸ್ನಾಯುಗಳ ಸಂಕುಚನೆಗಳನ್ನು ಪ್ರಚೋದಿಸುತ್ತದೆ. ಸ್ತನಗಳಲ್ಲಿ ಆಲ್ವಿಯೊಲೈಗಳ ಸುತ್ತ ಇರುವ ಸ್ನಾಯು ಅನುಲೇಪನ ಜೀವಕೋಶಗಳ ಸಂಕುಚನೆಯನ್ನು ಪ್ರಚೋದಿಸಿ ಹಾಲು ಹೊರಬೀಳಲು ನೆರವಾಗುತ್ತದೆ. ಆಕ್ಸಿಟೋಸಿನ್‌ನಲ್ಲಿ, ಸಿಸ್ಟೀನ್, ಟೈರೊಸೀನ್, ಐಸೊಲ್ಯೂಸಿನ್, ಲ್ಯೂಸಿನ್, ಗ್ಲುಟಾಮಿನ್, ಆಸ್ಪರ್ಜಿನ್, ಪ್ರೊಲೀನ್ ಮತ್ತು ಗ್ಲೈಸಿನ್ ಅಮೈನೊ ಆಮ್ಲಗಳಿವೆ. ಇದು ಗರ್ಭಕೋಶದ ಸಂಕುಚನೆಗಳನ್ನು ಉತ್ತೇಜಿಸುತ್ತದೆ. ಈ ಹಾರ್ಮೋನು ಮಾಡುವುದರಿಂದ ಸ್ತನಿಗಳಲ್ಲಿ ಶಿಶುವಿನ ಜನನಕ್ಕೆ ನೆರವಾಗುತ್ತದೆ. ಈ ಹಾರ್ಮೋನು

ಸ್ತನಿಗಳಲ್ಲದೆ ಇತರ ಕಶೇರುಕಗಳಲ್ಲಿಯೂ ಉತ್ಪತ್ತಿಯಾಗುತ್ತಿರುವ ಬಗ್ಗೆ ವರದಿಗಳಿವೆ. ವಿವಿಧ ಪ್ರಾಣಿಗಳಲ್ಲಿ ಉತ್ಪತ್ತಿಯಾಗುವ ಆಕ್ಸಿಟೋಸಿನ್ ಹಾರ್ಮೋನ್ ಕ್ರಿಯೆಯ ಬಗ್ಗೆ ಸಂಶೋಧಕರು ಅಧ್ಯಯನ ನಡೆಸಿದ್ದಾರೆ. ಉದಾ: ಮೀನುಗಳ ಪಿಟ್ಯುಟರಿ ಗ್ರಂಥಿಯಲ್ಲಿ ಇಕ್ತಿಯೊಟೋಸಿನ್ ಅಥವಾ ಐಸೊಟೋಸಿನ್ ಎಂಬ ಆಕ್ಸಿಟೋಸಿನ್ ಅಪಭ್ರಂಶವೊಂದನ್ನು ಕಂಡುಹಿಡಿಯಲಾಗಿದೆ. ಅದೇ ರೀತಿ ಉಭಯವಾಸಿಗಳು, ಸರೀಸೃಪಗಳು ಮತ್ತು ಪಕ್ಷಿಗಳ ದೇಹದಲ್ಲಿ ಉತ್ಪತ್ತಿಯಾಗುವ ಆಕ್ಸಿಟೋಸಿನ್ ಬಗ್ಗೆ ಉಲ್ಲೇಖಗಳಿವೆ. ಉದಾ: ಪಕ್ಷಿಗಳಲ್ಲಿ ಈ ಹಾರ್ಮೋನ್ ರಕ್ತದ ಒತ್ತಡವನ್ನು ನಿಯಂತ್ರಿಸುತ್ತದೆ. (ಎಚ್.ಎಚ್.ಎಸ್.)

**ಆಕ್ಸೊಲಾಟಲ್:** ಸಾಲಮಾಂಡರ್ ಎಂಬ ದ್ವಿಚರಪ್ರಾಣಿಯ ಮರಿ (ಲಾರ್ವ). ಎಳೆ ವಯಸ್ಸಿನಲ್ಲಿಯೇ ಸಂತಾನೋತ್ಪತ್ತಿ ಶಕ್ತಿಯನ್ನು ಪಡೆದಿರುವದು ಇದರ ವಿಶೇಷ ಗುಣ. ಪ್ರಾಣಿಗಳಲ್ಲಿ ಕಂಡುಬರುವ ಇಂಥ ಗುಣವನ್ನು ಕನ್ಯಾಸಂತಾನ (ಪೀಡೋಜನಿಸಿಸ್) ಎಂದು ಕರೆಯುವರು. ಆಂಬಿಸ್ಟೋಮ ಜಾತಿಯ ಸಾಲಮಾಂಡರಿನ ಮರಿಗೆ ಆಕ್ಸೊಲಾಟಲ್ ಎಂದು ಹೆಸರಿಟ್ಟವರು ಮೆಕ್ಸಿಕೊ ದೇಶದವರು. ಈ ಪ್ರಾಣಿ ತನ್ನ ಕಿವಿರುಗಳನ್ನು ಕಳೆದುಕೊಳ್ಳದೆ ವರ್ಷಗಟ್ಟಲೆ ಕನ್ಯಾವಸ್ಥೆಯಲ್ಲಿ ಬದುಕಿ, ಆ ಅವಸ್ಥೆಯಲ್ಲೇ ಪುನರುತ್ಪಾದಿಸುವುದರಿಂದ ಬೇರೇನಾದರೂ ಜಾತಿ ಆಗಿರಬಹುದೆಂದು ಅನುಮಾನಿಸಲಾಗಿತ್ತು. ಉತ್ತರ ಅಮೇರಿಕಾದ ಬಹು ಭಾಗದಲ್ಲಿ ಪರಿಚಯವಿದ್ದ ಆಂಬಿಸ್ಟೋಮ ಜಾತಿಯ ಸಾಲಮಾಂಡರ್‌ನ ಮರಿಯೇ ಇದು ಎಂಬುದನ್ನು ಕಡೆಗೆ ನಿರ್ಧರಿಸಲಾಯಿತು. ಮೆಕ್ಸಿಕೊದಲ್ಲಿ ಇದನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಮಿತವಾಗಿ ಉದ್ದವಿರುವ ೨೮ ಸೆಂಮೀ ಪುಷ್ಟದೇಹ ಇದರದು. ಬಾಲ ತುಂಡು; ವಿಶಾಲವಾದ ದೊಡ್ಡ ತಲೆಯಲ್ಲಿ ರೆಪ್ಪೆಗಳಿಲ್ಲದ ಸಣ್ಣ ಕಣ್ಣುಗಳಿವೆ. ಬಿಡುವಾಗಿ ಬೆರಳುಳ್ಳ ಚೆನ್ನಾಗಿ ಬೆಳೆದ ಎರಡು ಜೊತೆ ಕಾಲುಗಳಿವೆ. ಮತ್ತೊಂದು ವೈಶಿಷ್ಟ್ಯವೆಂದರೆ, ತಲೆ ಹಿಂದಿನ ಅಕ್ಕ ಪಕ್ಕದಲ್ಲಿರುವ ಮೂರು ಜೊತೆ ಉಪಾಂಗಗಳ ಅಂಚುಗಳು ರೋಮಗಳಿಂದ ಕೂಡಿವೆ. ಇವೇ ಬಾಹ್ಯ ಕಿವಿರುಗಳು. ಇವುಗಳಿಂದಲೇ ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ಸೇವಿಸುವುದು. ದವಡೆಗಳಲ್ಲಿ ಸಾಲುಸಾಲಾದ ಹಲ್ಲುಗಳಿವೆ. ಪ್ರಾಣಿಯ ಬಣ್ಣ ಕಪ್ಪು ಅಥವಾ ಕಂದು. ಗುಂಡಾದ ಕಪ್ಪುಕಲೆಗಳು ಇರುತ್ತವೆ.



ಆಕ್ಸೊಲಾಟಲ್

ರೂಪಪರಿವರ್ತನೆಯ ಕೊನೆಯ ಘಟ್ಟದಲ್ಲಿ ಕಿವಿರುಗಳು ನಷ್ಟವಾದ ಮೇಲೆ ನೀರಿನಿಂದ ಹೊರಬರುತ್ತದೆ. ಇದು ಆಂಬಿಸ್ಟೋಮ ಟೈಗ್ರಿನಂ ಆಗಿ ರೂಪ ಬದಲಿಸುತ್ತದೆಂದು ತಿಳಿದು ಬಂದಿದೆ. ಒಂದು ವರ್ಷದ ಅನಂತರ ಕಿವಿರುಗಳನ್ನು ಕಳೆದುಕೊಂಡು ಪ್ರಾಯಕ್ಕೆ ಬರುತ್ತದೆ. ಒಮ್ಮೆ ಇದು ಪ್ರೌಢಾವಸ್ಥೆಗೆ ಬಂದಮೇಲೆ ರೂಪ ಬದಲಾವಣೆಯಿಲ್ಲ. ಆದರೆ ಇದರ ಪೂರ್ವಜರ ವಿಕಾಸದ ರೀತಿ ಸ್ಪಷ್ಟವಾಗಿ ಕಂಡುಬಂದಿಲ್ಲ. (ಎಚ್.ಎಸ್.ಎನ್.)

**ಆಟೋಸೋಮ್:** ಕೋಶಕೇಂದ್ರಗಳಲ್ಲಿ ಲಿಂಗನಿರ್ಧಾರಕ್ಕೆ ಸಂಬಂಧಿಸಿಲ್ಲದ ವರ್ಣತಂತು. ಬ್ಯಾಕ್ಟೀರಿಯಾಗಳಿಗಿಂತ ಉನ್ನತವಾದ ಜೀವಿಗಳಲ್ಲಿ ಬಣ್ಣವನ್ನು ಗ್ರಹಿಸುವ ಸಂಕೀರ್ಣ ರಚನಾ ವ್ಯವಸ್ಥೆಯುಳ್ಳ ದಾರದಂತಹ ರಚನೆಯ ಕ್ರೊಮೋಸೋಮು (ವರ್ಣತಂತು)ಗಳಿವೆ. ಕ್ರೊಮೋಸೋಮುಗಳಲ್ಲಿ ಆಟೋಸೋಮ್ ಮತ್ತು ಲಿಂಗ ಕ್ರೊಮೋಸೋಮ್‌ಗಳೆಂದು ಎರಡು ವಿಧ. ಆಟೋಸೋಮ್ ಎಂಬ ಪದವನ್ನು ಪ್ರಥಮ ಬಾರಿಗೆ ಉಪಯೋಗಿಸಿದವರು ಮಾಂಟೆಗೊಮೆರಿ (1900). ಸಾಮಾನ್ಯವಾಗಿ ಲಿಂಗ ರೀತಿಯಲ್ಲಿ ಪ್ರಜನನ ನಡೆಸುವ ಎಲ್ಲಾ ಉನ್ನತ ಪ್ರಾಣಿಗಳಲ್ಲಿ ಹಾಗೂ ಕೆಲವು ಸಸ್ಯಗಳಲ್ಲಿ ಒಂದು ಜೊತೆ ಕ್ರೊಮೋಸೋಮುಗಳೂ ಜೀವಿಯ ಲಿಂಗವನ್ನು ನಿರ್ಧರಿಸುವುವು. ಇವುಗಳಿಗೆ ಲಿಂಗ ಕ್ರೊಮೋಸೋಮುಗಳೆಂದು ಹೆಸರು. ಮಿಕ್ಕ ಕ್ರೊಮೋಸೋಮುಗಳನ್ನು ಒಟ್ಟಾಗಿ ಆಟೋಸೋಮ್‌ಗಳೆಂದು ಕರೆಯುವರು. ಆಟೋಸೋಮುಗಳಲ್ಲಿ ಜೀವಿಯ, ಲಿಂಗ ನಿರ್ಧಾರಕ ಗುಣಗಳನ್ನು ಹೊರತು, ಮಿಕ್ಕೆಲ್ಲ ಗುಣಗಳಿಗೆ ಕಾರಣವಾದ ಜೀನ್‌ಗಳಿರುವುವು. ಆಟೋಸೋಮ್‌ಗಳು ಯಾವಾಗಲೂ ಜೋಡಿಯಾಗಿರುವುವು. ನಿರ್ದಿಷ್ಟ ಜೋಡಿಯ ಆಕಾರ, ಉದ್ದ, ಗಾತ್ರ ಮತ್ತು ಜೀನ್‌ಗಳು ಸಂಖ್ಯೆಯಲ್ಲಿ ಒಂದೇ ಆಗಿರುತ್ತದೆ. ಆದುದರಿಂದ ಅವನ್ನು ಸದೃಶ ಕ್ರೊಮೋಸೋಮುಗಳೆಂದೂ ಹೇಳುತ್ತಾರೆ. ಮನುಷ್ಯನ ಜೀವಕೋಶಗಳಲ್ಲಿ ಒಟ್ಟು 46 ಕ್ರೊಮೋಸೋಮುಗಳಿವೆ. ಇವುಗಳಲ್ಲಿ ಒಂದು ಜೊತೆ ಲಿಂಗ ಕ್ರೊಮೋಸೋಮುಗಳು. ಮಿಕ್ಕ 44 ಆಟೋಸೋಮುಗಳು. (ಎನ್.ವಿ.ಎ.)

**ಆಡರ್ ಹಾವು:** ಕೆಲವು ಮಂಡಲದ ಹಾವುಗಳು. ಶರೀರ ಬಲಿಷ್ಠವಾಗಿದ್ದು ತ್ರಿಕೋಣಾಕಾರದ ತಲೆಯ ಮೇಲೆ ಹುರುಪೆಗಳಿವೆ. ಕಣ್ಣು ಪಾಪೆಗಳು ಲಂಬವಾಗಿವೆ. ಬಾಲ ಚಿಕ್ಕದಾಗಿದೆ. ಗಂಡಿನಲ್ಲಿ ಇಬ್ಭಾಗವಾದ ಸಂಭೋಗಾಂಗ (ಬೈಫಿಡ್ ಪೆನಿಸ್) ಇದೆ.

ಯೂರೋಪ್ ಮತ್ತು ಉತ್ತರ ಏಷ್ಯಾದ ಮಂಡಲ ಹಾವು ವೈಪರ್ ಬೀರಸ್ ಎಂಬುದು ಸಾಮಾನ್ಯ ಆಡರ್. ಹಾವುಗಳಲ್ಲೇ ಅತಿ ತಣ್ಣನೆಯ ಹವಾಗುಣ ಸಹಿಸುವುದರಿಂದ ಇದು ಆರ್ಕ್‌ಟಿಕ್ ವೃತ್ತದ ದಕ್ಷಿಣದ ಒಳಭಾಗದಲ್ಲಿ ವಾಸಿಸುವ ಏಕೈಕ ಹಾವು. ದೇಹ 42–75 ಸೆಂಮೀ ಉದ್ದವಾಗಿದೆ. ವೈವಿಧ್ಯಮಯ ಬಣ್ಣದ ಜೊತೆ ಬೆನ್ನಿನ ಮೇಲೆ ಡೊಂಕುಡೊಂಕಾದ ಕೆಂಪು ಪಟ್ಟಿಗಳಿವೆ. ಹಲ್ಲಿಗಳು ಮತ್ತು ಸಣ್ಣ ಸ್ತನಿಗಳನ್ನು ಸೇವಿಸುವುದಾದರೂ ಇದರಿಂದ ಮಾನವನಿಗೆ ಪ್ರಾಣಾಪಾಯ ತೀರಾ ಕಡಿಮೆ. ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಸಂತಾನಾಭಿವೃದ್ಧಿ ನಡೆಯುತ್ತದೆ. 6 ರಿಂದ 20 ಮರಿಗಳಿಗೆ ಜನ್ಮ ನೀಡುತ್ತವೆ.

ಚಿರಪರಿಚಿತ ಮತ್ತು ಕುತೂಹಲಕಾರಿ ಪಫ್ ಆಡರ್ (ಬೈಟಿಸ್ ಏರಿಯಟನ್ಸ್) ದೈತ್ಯ ಹಾಗೂ ಅಪಾಯಕಾರಿ. ಇದರಲ್ಲಿ ಹಲವಾರು ಬಗೆ. ಕೊಂಬುಪಫ್ ಆಡರ್‌ನ ತಲೆಯಲ್ಲಿ ಹುರುಪೆಯಿಂದಾದ ಕೊಂಬು ಇದೆ. ಸಣ್ಣ ಕೋಮಲ ಶರೀರ ದಕ್ಷಿಣ ಆಫ್ರಿಕಾದ ರಾತ್ರಿ ಆಡರ್ (ಕಾಸಸ್ ರೊಂಬಿಟಿಕಸ್) ನಿಶಾಚರಿ ಮತ್ತು ಹೆಚ್ಚು ಅಪಾಯಕಾರಿಯಲ್ಲ.

ಆಡರ್‌ನಂತೆಯೇ ಇರುವ ಆಸ್ಟ್ರೇಲಿಯದ ಸಾವು ಆಡರ್‌ಗೆ (ಅಕ್ಯಾಂಥೋಫಿಸ್ ಅಂಟಾರ್ಟಿಕಸ್), ಮಂಡಲದಂತಹ ತಲೆ ಮತ್ತು ಶರೀರ ಇದೆ. ಎಲಾಪಿಡೇ ಕುಟುಂಬಕ್ಕೆ ಸೇರಿದ ಇದು ತುಂಬಾ ಅಪಾಯಕಾರಿ. ಬಾಲದಿಂದ ಕಚ್ಚುವುದೆಂಬ ಭೀತಿ ಆಸ್ಟ್ರೇಲಿಯನ್ನರಲ್ಲಿದೆ.

ಪ್ರಾಯಶಃ ಹಾವುಗಳಲ್ಲೇ ಆಕರ್ಷಕ ಮತ್ತು ವಂಚಕವಾದುದು ಹಬ್ಬು ಆಡರ್. ಇದರ ಹತ್ತಿರ ಯಾರಾದರೂ ಸುಳಿದರೆ ನಾಗರಹಾವಿನಂತೆ ಹೆಡೆ ಬಿಚ್ಚುವುದು. ಗಾಳಿಯನ್ನು ರಭಸವಾಗಿ ಬಾಯಿಯಿಂದ ನೂಕಿ ಬುಸುಗುಟ್ಟುವುದು. ಇದರಿಂದ ಯಾವುದೇ ಸಂದರ್ಭದಲ್ಲಿ ಕಚ್ಚಬಹುದೆಂಬ ಭಯವಾಗುವುದು. ಆದರೆ ದವಡೆಗಳಲ್ಲಿ ಹಲ್ಲುಗಳಿಲ್ಲದಿರುವುದರಿಂದ ಬಾಯಿಗೆ ಬೆರಳಿಟ್ಟರೂ ಇದು ಕಡಿಯಲಾರದು. ಇದು ಸುತ್ತಿಕೊಂಡು ಹತ್ತಿರವಿದ್ದವರು ದೂರ ಸರಿಯುವವರೆಗೂ ಸತ್ತಂತೆ ಬಿದ್ದುಕೊಳ್ಳುವುದು. (ಟಿ.ವಿ.ಹೆಚ್.)

**ಆಡು:** ದನ ಕುರಿಗಳ ಹಾಗೆ ಟೊಳ್ಳು ಕೊಂಬಿನ ಸೀಳುಗೊರಸಿನ, ಮೆಲಕು ಹಾಕುವ, ದನದ ಕುಟುಂಬಕ್ಕೆ (ಬೋವಿಡೆ) ಸೇರಿದ ಸ್ತನಿ. ಕ್ಯಾಪ್ರ ಹಿರ್ಕಸ್ ವೈಜ್ಞಾನಿಕನಾಮ. ಆಂಗ್ಲಭಾಷೆಯಲ್ಲಿ ಗೋಟ್ ಎನ್ನುವರು. ಇಬೆಕ್ಸ್, ಮಾರ್ಕ್‌ಹಾರ್, ಟಾರ್, ರಾಕಿ ಪರ್ವತದ ಆಡು, ಕಾಡು ಆಡುಗಳೂ ಇದೇ ಜಾತಿಯವು. ಆಡು ಕುರಿಯ ನಿಕಟ ಸಂಬಂಧಿ. ಇವೆರಡಕ್ಕೂ ತೀರ ಹತ್ತಿರದ ಹೋಲಿಕೆಗಳೂ ಕೆಲವು ವ್ಯತ್ಯಾಸಗಳೂ ಇವೆ. ಬಳಕೆಯಲ್ಲಿ ಹೆಣ್ಣು ಆಡನ್ನು ಮೇಕೆಯೆಂದು, ಗಂಡನ್ನು ಹೋತವೆಂದು ಹೇಳುವುದುಂಟು. ಆಡುಗಳಿಗೆ ಗದ್ದದ ಕೆಳಗಡೆ ಉದ್ದನೆಯ ದಾಡಿ ಇರುತ್ತದೆ: ಹೋತದಲ್ಲಿ ಇದು ಎದ್ದು ಕಾಣುತ್ತದೆ. ಹೋತದಲ್ಲಿ ಅದರಲ್ಲೂ ಬೆದೆ ಹತ್ತುವ ಕಾಲದಲ್ಲಿ ತಡೆಯಲಾಗದ ಹೊಲಸು ನಾತ ಬಡಿಯುವುದು. ಆಡಿನ ಹಣೆ ಉಬ್ಬಿದ್ದರೆ, ಕುರಿಯದು ತಗ್ಗು. ಆಡಿನ ಮೋಟು ಬಾಲ ಎತ್ತಿಕೊಂಡಿರುತ್ತದೆ; ಕುರಿಯದು ಇಳಿಬಿದ್ದಿರುವುದು. ಕುರಿಗಿಂತ ಮೇಕೆ ಚುರುಕು. ತನ್ನ ಮೇವನ್ನು ಆಡು ಚಟುವಟಿಕೆಯಿಂದ ಹುಡುಕಿ ತಿನ್ನುತ್ತದೆ. ಕುರಿ ಹಿಂಡನ್ನು ನಡೆಸಿಕೊಂಡು ಅವು ಒಂದೆಡೆಯಿಂದ ಇನ್ನೊಂದಕ್ಕೆ ಹೋಗುತ್ತಿರುವಂತೆ, ಮೇವು ತಿನ್ನುವಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತದೆ. ಕುರಿಯಂತೆ ಮೇಕೆ ಬಿಸಿಲಿಗೆ ಬಳಲುವುದಿಲ್ಲ. ಮೇಕೆ ಇಲ್ಲದಿದ್ದರೆ ಕುರಿ ಹಿಂಡುಗಳನ್ನು ನಡೆಸುವುದು ಕಷ್ಟ. ಇದರಿಂದಲೇ ಕುರಿಗಳ ಮಂದೆಯಲ್ಲಿ ಮೇಕೆ ಇದ್ದೇ ಇರುತ್ತದೆ.

ಆಡುಗಳ ತೌರುಮನೆ ನೈರುತ್ಯ ಏಷ್ಯ. ಇವು ಬಹುವಾಗಿ ಮೂಡಲ ದೇಶಗಳವು. ಪರ್ಷಿಯ ಮೂಲನಿವಾಸ ಆಗಿದ್ದಿರಬಹುದೆಂದು ಪುರಾತನ ದಾಖಲೆಗಳಿವೆ. ೮–೯ ಸಾವಿರ ವರುಷಗಳ ಹಿಂದೆ ಮಾನವ ಮೊದಲು ಆಡುಗಳನ್ನು ಪಳಗಿಸಿ ತನ್ನ ನಿತ್ಯಜೀವನದಲ್ಲಿ ಬಳಕೆಗೆ ತಂದಿರಬಹುದು. ಹೀಗೆ ಪಳಗಿಸಿದ ಜಾತಿಗಳಿಂದ ಆಡಿನ ಇಂದಿನ ಅನೇಕ ತಳಿಗಳಾಗಿವೆ. ಕಾಡು ಆಡುಗಳು ಪಶ್ಚಿಮದಲ್ಲಿ ಸ್ಪೇನ್ ದೇಶದಿಂದ ಹಿಡಿದು ಮೂಡಲದಲ್ಲಿ ಭಾರತದವರೆಗೆ, ಉತ್ತರದಲ್ಲಿ ಮಂಗೋಲಿಯ, ಸೈಬೀರಿಯ ದೇಶಗಳಲ್ಲಿ ಹರಡಿವೆ. ಮಾರ್ಕ–ಹಾರ್ ಕಾಡು ಆಡುಗಳು ಆಫ್ಘನಿಸ್ತಾನ, ಪಾಕಿಸ್ತಾನ, ಕಾಶ್ಮೀರ, ಪಡುವಣ ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ವಾಸಿಸುತ್ತವೆ. ಈಜಿಪ್ಟ್, ಅಬಿಸೀನಿಯ, ಅರೇಬಿಯ, ಗ್ರೀಕ್ ದ್ವೀಪಗಳಲ್ಲೂ ಆಡುಗಳು ವನ್ಯ ಜೀವಿಗಳು.

ಸಾಮಾನ್ಯವಾಗಿ ಆಡುಗಳು ಹಳ್ಳತಗ್ಗಿನ ಕಾಡುಗಳ ಪರ್ವತ ಶ್ರೇಣಿಗಳಲ್ಲಿ ವಾಸಿಸುತ್ತವೆ. ಹಳ್ಳತಿಟ್ಟುಗಳು ಇವುಗಳಿಗೆ ಇಷ್ಟ. ಕಡಿದಾದ ಜಾಗ ಇವಕ್ಕೆ ಎಲ್ಲಿಲ್ಲದ ಚುರುಕೂ, ಜಾಣ್ಮೆ

ಹುಟ್ಟಿಸುತ್ತದೆ. ಆಡು ಮುಟ್ಟದ ಸೊಪ್ಪಿಲ್ಲ. ಆಡು ಹೋದ ಕಾಡು ಹಾಳು ಎಂಬ ನಾಣ್ನುಡಿ ಪ್ರಸಿದ್ಧ.

೫–೧೦ ಆಡುಗಳು ಮಂದೆಯಲ್ಲಿ ಓಡಾಡುತ್ತವೆ. ವಯಸ್ಸಾದ ಮೇಕೆ ಮಂದೆಯ ಮುಂದಾಳು. ಎಳೆಯ ಕುಡಿಗಳನ್ನು ಕುರುಕಿ, ಮರದ ತೊಗಟೆ ಸುಲಿದು ಹಾಳು ಕೆಡವುತ್ತ, ಮೇಯುವುದೆಂದರೆ ಆಡಿಗೆ ಬಲು ಇಷ್ಟ. ಹೀಗೆ ಬೇಸಾಯಗಾರನ ಶತ್ರು ಆಗಿದ್ದರಿಂದ ಪಾಕಿಸ್ತಾನದಲ್ಲಿ ಆಡುಗಳನ್ನು ಒಂದು ರೀತಿಯಲ್ಲಿ ಹೇಳ ಹೆಸರಿಲ್ಲದಂತೆ ಮಾಡುವ ಯೋಜನೆ ಉಂಟಾಗಿದೆ.

ದನದ ಬಳಗಕ್ಕೆ ಸೇರಿದ ಇತರ ಪ್ರಾಣಿಗಳಂತೆ, ಆಡುಗಳಲ್ಲೂ ಮೇಲ್ದವಡೆಯ ಮುಂದುಗಡೆ ಹಲ್ಲುಗಳಿಲ್ಲ. ಹಲ್ಲುಗಳ ಅಂಕಿ, ಜೋಡಣೆ ಮಾತ್ರ ದನಗಳಲ್ಲಿ ಇದ್ದಂತಿರುವುವು. ಜಠರದಲ್ಲಿ ನಾಲ್ಕು ಚೀಲಗಳಿವೆ. ಮುಂಗಾಲು ಹಿಂಗಾಲುಗಳು ಒಂದೇ ಉದ್ದವಿಲ್ಲ. ಆಡುಗಳು ೧.೩–೧.೪ ಮೀ. ಗಳಷ್ಟು ಉದ್ದವಾಗೂ, ೦.೭೫–೧.೦ ಮೀ. ನಷ್ಟು ಎತ್ತರವಾಗೂ ಬೆಳೆಯಬಹುದು. ಮೇಕೆ ೫೦.–೫೫ ಕಿಗ್ರಾಂ. ಹೋತ ೭೫–೧೨೦ ಕಿಗ್ರಾಂ ತೂಗುತ್ತವೆ. ಕೊಂಬು ಒಂದು ಸುರಳಿ ಸುತ್ತಿರುವುದು ಸಾಮಾನ್ಯ. ಕೆಲವು ಆಡುಗಳಲ್ಲಿ ಕೊಂಬು ಒಂದು ಮೀಟರಿನಷ್ಟು ಉದ್ದ ಇರುತ್ತದೆ. ಆಡುಗಳು ೮–೧೨ ವರ್ಷ ಬದುಕಿರುತ್ತದೆ. ೧೮ ವರ್ಷ ಜೀವಿಸಿದ ದಾಖಲೆಯೂ ಇದೆ.

ಗರ್ಭಕ್ಕಾಗಿ ಮೈಕಟ್ಟು ಚೆನ್ನಾಗಿ ಬೆಳೆಯ ಬೇಕಾದ್ದರಿಂದ, ಮೇಕೆಗೆ ೧೫ ಮಾಸಗಳು ಕಳೆದ ಮೇಲೆ ಹೋತ ಕೂಡಿಸಬೇಕು. ಹೋತಕ್ಕೆ ವರ್ಷ ಕಳೆಯುವ ತನಕ ಅಷ್ಟಾಗಿ ಇದಕ್ಕಾಗಿ ಬಳಸಬಾರದು. ಮರಿ ಹಾಕಿದ ಮೇಲೆ ಮೇಕೆ ಯಾವಾಗಲಾದರೂ ಬೆದೆಗೆ ಬರಬಹುದು. ಮಾಗಿಕಾಲದಲ್ಲಿ ಬೆದೆ ೩ ದಿನಗಳೂ, ವಸಂತದಲ್ಲಿ ೨ ದಿನಗಳೂ, ಉಳಿದ ಕಾಲದಲ್ಲಿ ಒಂದು ದಿನವೂ ಇರುತ್ತದೆ. ಬೆದೆಗೆ ಬಂದಾಗ ವಿಪರೀತ ಚಡಪಡಿಸುತ್ತ ಜೋರಾಗಿ ಬಾಲ ಅಲುಗಾಡಿಸುತ್ತ ಒಂದೇ ಸಮನೆ ಅರಚುತ್ತಿರುತ್ತದೆ. ಕರಾವು ಸರ್ರನೆ ಇಳಿಯುತ್ತದೆ. ಹಸಿವುಗೆಟ್ಟು ಮೇವು ಮುಟ್ಟದಿರುವುದು. ಗರ್ಭಕಟ್ಟಿದ ೧೪೭–೧೫೪ ದಿನಗಳಾದ ಮೇಲೆ ಮರಿ ಹಾಕುತ್ತದೆ. ಒಂದು ಸಲಕ್ಕೆ ಅವಳಿ ಮರಿಗಳನ್ನು ಈಯುವುದೇ ಸಾಮಾನ್ಯ. ಗಂಡು ಮರಿ ೮–೧೨ ತಿಂಗಳುಗಳಲ್ಲಿ ಹರೆಯಕ್ಕೆ ಬರುತ್ತದೆ.

ಪಳಗಿಸಿದ ಆಡುಗಳು ಪ್ರಪಂಚದಲ್ಲಿ ಎಲ್ಲೆಲ್ಲೂ ಹರಡಿವೆ. ಉಳಿದೆಲ್ಲ ಪ್ರಾಣಿಗಳೂ ಬದುಕಲಾರದ ಎಡೆಗಳಲ್ಲೂ ಆಡನ್ನು ಚೆನ್ನಾಗಿ ಸಾಕಬಹುದು. ಮುಖ್ಯವಾಗಿ, ಹಾಲು, ಮಾಂಸ, ಕೂದಲು, ತೊಗಲು, ಗೊಬ್ಬರಗಳಿಗಾಗಿ ಇವನ್ನು ಸಾಕುವರು. ಹಾಲು ಕರೆವ ಮೇಕೆ ಬಡವನ ಆಕಳು. ಆಕಳನ್ನು ಸಾಕುವುದಕ್ಕಿಂತ ಆಡನ್ನು ಸಾಕುವುದು ಸುಲಭ. ಒಂದು ಸಂಸಾರಕ್ಕೆ ಸಾಕಾಗುವಷ್ಟು ಹಾಲನ್ನು ಒಂದೆರಡು ಮೇಕೆಗಳು ಒದಗಿಸಬಲ್ಲುವು. ಆಡಿನ ಹಾಲಿನಿಂದ ಗಟ್ಟಿ ಗಿಣ್ಣು (ಚೀಸ್) ತಯಾರಾಗುತ್ತದೆ. ಅಲ್ಲದೆ, ಬೆಚ್ಚನೆಯ ತುಪ್ಪುಟ ಒದಗಿಸಿ, ಗೊಬ್ಬರ ಕೊಟ್ಟು, ಆಮೇಲೆ ಪುಷ್ಟಿಕರ ಮಾಂಸಾಹಾರವಾಗಿ ಕೊನೆಗೆ ನುಣುಪಾದ ತೊಗಲನ್ನು ಕೊಡುವುದರಿಂದ, ಆಡು ಅರ್ಥಿಕವಾಗಿಯೂ ಮಾನವನಿಗೆ ಲಾಭದಾಯಕ.

ಹಸುವಿನ ಹಾಲಿಗಿಂತಲೂ ಮೇಕೆ ಹಾಲು ಪುಷ್ಟಿಕರ. ಆಕಳ ಹಾಲನ್ನು ಕುಡಿದ ಮೇಲೆ ಹೊಟ್ಟೆಯಲ್ಲಿ ದಪ್ಪನಾಗಿ ಹೆಪ್ಪುಗಟ್ಟಿ ಕರಗದ ಹಾಲೊಡಕಗಳಾಗುತ್ತವೆ; ಆದರೆ ಆಡಿನ ಹಾಲು ಮಾನವನ, ಕತ್ತೆಯ ಹಾಲಿನಂತೆ ತೀರ ಸಣ್ಣ, ಕರಗುವ ತೆಳುವಾದ ಚಕ್ಕೆಗಳಾಗುತ್ತದೆ. ಹಸುವಿನ ಹಾಲನ್ನು ಅರಗಿಸಿಕೊಳ್ಳಲು ೨ ದಿನಗಳು ಹಿಡಿದರೆ, ಮೇಕೆ ಹಾಲು ಒಂದೇ ದಿನದಲ್ಲಿ ಅರಗುವುದು. ಆಡಿನ ಹಾಲಿನ ರಚನೆ, ಅರಗಣೆ ತಾಯಿ ಹಾಲಿನಂತೆ ಇರುತ್ತವೆ. ಇದರಿಂದಲೇ ಕೂಸಿಗೆ ತಾಯಿಹಾಲು ಇಲ್ಲದಾಗ ಆಕಳ ಹಾಲಿಗಿಂತ ಮೇಕೆ ಹಾಲು ಒಳ್ಳೆಯದು. ಇದಕ್ಕಾಗಿ ಯೂರೋಪಿನಲ್ಲಿ ಆಡನ್ನು ಹಾಲೂಡಿಸುವ ದಾದಿ ಎನ್ನುವರು. ಹಸುವಿನ ಹಾಲು ಒಗ್ಗದವರಿಗೆ ಇದು ಸರಿಬೀಳಬಹುದು. ಆಕಳ ಹಾಲಿಗಿಂತಲೂ (೩.೧೫%) ಆಡಿನ ಹಾಲಿನಲ್ಲಿ (೩.೫%–೫.೧೪%) ಕೊಬ್ಬು ಹೆಚ್ಚು. ಆಕಳಿಗೆ ಕ್ಷಯವಿದ್ದರೆ ಅದರ ಹಾಲಿನ ಮೂಲಕ ಜನರಿಗೆ ಹತ್ತಬಹುದು. ಆಡಿಗೆ ಕ್ಷಯ ಹತ್ತದು. ಆಕಳ ಹಾಲು ಆಮ್ಲವಾಗಿದ್ದರೆ, ಆಡಿನದು ಕ್ಷಾರವಾಗಿರುವುದು. ಆಕಳ ಹಾಲಿಗಾಗಿ ಸಾಕಣೆಯ ಖರ್ಚು ದುಬಾರಿ. ಆಡಿನದು ತೀರ ಅಗ್ಗ, ಸುಲಭ. ಬಡವರೂ ಸಾಕುವ ಪ್ರಾಣಿ ಆಡು. ಮೇಕೆಯ ಹಾಲು ಮಹಾತ್ಮ ಗಾಂಧೀಜಿಯವರ ದಿನಬಳಕೆಯ ಅಚ್ಚು ಮೆಚ್ಚಿನ ಆಹಾರವಾಗಿತ್ತು. ಅರಬ್ಬೀ ಜನರಿಗೆ ಮೇಕೆಯ ಹಾಲನ್ನು ಬಿಟ್ಟರೆ ಬೇರೆ ಹಾಲೇ ಸಿಗುವುದಿಲ್ಲ. ಅವರ ಒಂದೊಂದು ಸಂಸಾರವೂ ಆಡಿನ ಮಂದೆಯನ್ನು ಸಾಕಿರುತ್ತದೆ. ಭಾರತ, ಚೀನಾ, ಪಾಕಿಸ್ತಾನ, ಟಿಬೆಟ್, ಯೂರೋಪ್, ಬ್ರಿಟಿಷ್ ದ್ವೀಪಗಳು, ಅಮೆರಿಕ, ಕೆನಡ ದೇಶಗಳಲ್ಲೂ ಕರಾವಿನ ಆಡುಗಳನ್ನು ಸಾಕುತ್ತಾರೆ.

ಆಡಿನ ಬಗೆಗಳು : ನಾಲ್ಕು ಬಗೆಗಳನ್ನು ಗುರುತಿಸಬಹುದು.

೧. ನಿಗುರಿದ ಮೋಟು ಕಿವಿಗಳ, ಕೊಂಬಿರದ, ಮಾಂಸದ ತಳಿಯಾದ ಸಾಮಾನ್ಯ ಆಡು. ೨. ಉದ್ದನಾಗಿ ಅಗಲಕ್ಕೆ ಜೋಲುಬಿದ್ದ ಕಿವಿಗಳ, ಕರಾವಿನ, ಸಿರಿಯಾ ದೇಶದ ನುಬಿಯನ್, ಇಲ್ಲವೇ ಈಜಿಪ್ಟಿನ ಆಡು. ೩. ಜೋಲು ಕಿವಿಗಳ, ಗುಂಗುರುಗೂದಲ ತುಪ್ಪುಳಿನ, ಕುರಿ ಮೊಗದ ಟಿಬೆಟಿನ ಅಂಗೋರ ಆಡು. ೪. ಅರೆಬರೆ ಜೋಲುಬಿದ್ದ ಕಿವಿಗಳ, ಮೋಟು ತುಪ್ಪುಳುಗೂದಲ, ಹಿಮಾಲಯ ಪರ್ವತಗಳ ಕಾಶ್ಮೀರಿ ಆಡು.

ಕರಾವಿನ ಆಡುಗಳು : ಇವುಗಳ ಲಕ್ಷಣಗಳಿವು: ಅಚ್ಚುಕಟ್ಟಾದ ಉದ್ದನೆಯ ತಲೆಯಲ್ಲಿ ಅಗಲದ ಹಣೆಯಂತೆ ಬರುಬರುತ್ತ ಚೂಪಾಗುವ ಮುಸುಡಿ; ತೆಳುವಾಗಿ ಮೋಟಾದ ಚೂಪು ಕೊಂಬುಗಳು; ಹೊಳೆವ ದೊಡ್ಡ ಕಣ್ಣುಗಳು; ಉದ್ದನೆಯ ದಪ್ಪ ಮೈಕಟ್ಟು; ಚಿಕ್ಕ ಎದೆ; ಚಾಚಿದ ರೊಂಡಿ ಮೂಳೆಗಳು; ಸಡಿಲವಾದ ಮೆತು ಚರ್ಮ; ನುಣುಪಾದ ತೆಳುಗೂದಲು; ದೂರದೂರವಿದ್ದು ಮುಂಬಾಗಿದ ಮೊಲೆ ತೊಟ್ಟುಗಳಿರುವ, ಮುಟ್ಟಲು ಸ್ಪಂಜಿನಂತೆ ಮೆತುವಾದ, ದೊಡ್ಡ ದುಂಡಾದ ಕೆಚ್ಚಲು.

ಕರಾವಿನ ಆಡುಗಳಲ್ಲಿ ಬಗೆಬಗೆಯ ತಳಿಗಳಿವೆ. ಸ್ವಿಸ್ (ಆಲ್ಪೈನ್), ನುಬಿಯನ್ ಆಡುಗಳು ಮುಖ್ಯವಾದುವು. ಸ್ವಿಸ್ ಆಡಿಗೆ ಮೊನಚಾದ, ನೇರವಾದ ಕಿವಿಗಳಿರುತ್ತವೆ. ಇಂದಿಗೂ ಹೆಸರಾದ ಹೊಸ ತಳಿಗಳು ಸ್ವಿಸ್ ತಳಿಯಿಂದ ಮೂಡಿವೆ; ಇವುಗಳಲ್ಲಿ ಟಾಗೆನ್‌ಬರ್ಗ, ಸಾನೆನ್ (ಕಣಿವೆಯ) ತಳಿಗಳು ಹೆಸರಾಗಿವೆ. ಇಂಗ್ಲೆಂಡಿನಲ್ಲಿ ಒಂದು ಸಾನೆನ್ ಆಡು ವರ್ಷಕ್ಕೆ ೨೯೦೦ ಕಿಗ್ರಾ ಹಾಲು ಕರೆದ ದಾಖಲೆಯಿದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಜನಪ್ರಿಯವಾದ ಟಾಗೆನ್‌ಬರ್ಗ ಬಣ್ಣ ಕಪ್ಪು. ಸಾನೆನ್ ಆಡಿನ ಬಣ್ಣ ಬಿಳಿ ಇಲ್ಲವೇ ಹಾಲಿನ ಕೆನೆಯ ಹಳದಿ ಬಿಳುಪು. ಮಾಲ್ಟಾದ ಆಡುಗಳಲ್ಲಿ ಮೂಡಣ ನಾಡುಗಳ ರಕ್ತವಿದೆ. ನುಬಿಯನ್ ಆಡು ಉತ್ತರ ಆಫ್ರಿಕಕ್ಕೆ, ಮುಖ್ಯವಾಗಿ ಈಜಿಪ್ಟಿಗೆ ಸೇರಿದ್ದು. ಎಲ್ಲ ಆಡುಗಳಿಗಿಂತಲೂ ಗಾತ್ರದಲ್ಲಿ ಇದೇ ಭಾರಿ. ಬೆಣ್ಣೆಗಾಗಿನ ಕರಾವಿನಲ್ಲಿ ನುಬಿಯನ್ ತಳಿಯ ಆಡನ್ನು ಮೀರಿಸಿದ್ದು ಇನ್ನೊಂದಿಲ್ಲ. ಇಂಗ್ಲೆಂಡಲ್ಲಿ ಒಂದು ವರ್ಷದಲ್ಲಿ ಇಂಥದೊಂದು ೧೯೨೫ ಕಿಗ್ರಾ ಹಾಲು ಕರೆದಿದೆ. ಬೆಣ್ಣೆ ಕೂಡ ಹೆಚ್ಚಾಗಿರುವುದು. ನೀಳವಾಗಿ ಅಗಲವಾಗಿ ಜೋಲು ಬೀಳುವ ಕಿವಿಗಳು ಇದರ ಲಕ್ಷಣ. ಇಸ್ರೇಲ್, ಸಿರಿಯಾಗಳ ಆಡುಗಳಿಗೆ ದೊಡ್ಡ ಜೋಲು ಕಿವಿಗಳೂ, ಕೂದಲೂ ಇರುತ್ತವೆ. ಇವು ಕಪ್ಪಾಗಿರುವುದೇ ಸಾಮಾನ್ಯ. ನುಬಿಯನ್ ಮತ್ತಿತರ ಜೋಲು ಕಿವಿಗಳ ತಳಿಗಳು ಇಂಗ್ಲೆಂಡಿಗೆ ೧೮೫೦ರಿಂದೀಚೆಗೆ ಬೇರೆ ಬೇರೆ ದಾರಿಗಳಿಂದ ಸಾಗಿಹೋದುವು. ಪರ್ಷಿಯದವು, ಭಾರತದವು, ಸಿರಿಯಾದವು ಎಂಬ ಈ ಆಡುಗಳು ಇಂಗ್ಲೆಂಡಿನಲ್ಲಿ ದಾಖಲೆಯಾಗಿರುವ ಆಂಗ್ಲೋ ನುಬಿಯನ್ ಹೊಸ ತಳಿಯ ಹುಟ್ಟಿಗೆ ಕಾರಣವಾಗಿದೆ. ಇದೇ ತಳಿ ಅಮೇರಿಕದಲ್ಲಿ ನುಬಿಯನ್ ಎಂದೇ ಜನರ ಮೆಚ್ಚಿಕೆಯಾಗಿದೆ.

ಗದ್ದಿ, ಮಧ್ಯಪ್ರದೇಶ, ಮಲಬಾರ್, ಕಂಚಿ, ಜಮುನಾಪುರಿ ಗದ್ದಿ, ಗದ್ದಿ ಅಂಗೋರಗಳ ಅಡ್ಡ ತಳಿ, ಸೂರತಿ ಈ ತಳಿಗಳು ಭಾರತದಲ್ಲಿ ಹೆಸರಾದುವು. ಬಂಗಾಳ, ಯಮುನಾ ನದಿಯ ತೀರಪ್ರದೇಶಗಳಿಂದ ಬಂದ ಜಮುನಾಪುರಿ ಭಾರತದ ಮೇಕೆ ತಳಿಗಳಲ್ಲೆಲ್ಲ ಭಾರಿಯಾದದ್ದು. ಸರಾಸರಿ ೪೫–೭೦ ಕಿಗ್ರಾ ತೂಗುತ್ತದೆ. ಸುಲಭವಾಗಿ ಎಲ್ಲೆಡೆ ಒಗ್ಗಿಕೊಳ್ಳುತ್ತದೆ. ಇದರ ಬೆಲೆ ಹೆಚ್ಚು. ಉದ್ದನೆಯ ಗಿಳಿಮೂಗು, ಜೋಲು ಬಿದ್ದ ನೀಳ ಕಿವಿಗಳು, ಈ ತಳಿಯ ಲಕ್ಷಣಗಳು. ಬಿಳಿ, ಕರಿ ಪಟ್ಟೆಗಳಿರುವ ಮೈಬಣ್ಣ. ಒಂದು ಬಾರಿಗೆ ಈಯುವುದು ಒಂದೇ ಮರಿ. ಕರಾವಿನಲ್ಲಿ ಅಷ್ಟು ಹೆಸರಾಗಿಲ್ಲ.

ಗುಜರಾತಿನ ಸೂರತ್ ಜಿಲ್ಲೆಯ, ಸಣ್ಣದಾಗಿ ಅಡಕವಾದ ಮೈಯ ಸೂರತಿ ತಳಿ ಆಡನ್ನು ಅಷ್ಟಿಷ್ಟು ಹಾಲು ಕೊಡುವುದಕ್ಕಾಗಿ ಸಾಕುವುದುಂಟು. ಬಣ್ಣ ಬಿಳಿ, ಕೊಂಬಿಲ್ಲ. ಒಂದು ಬಾರಿಗೆ ಎರಡು, ಮೂರು, ಐದು ಮರಿಗಳನ್ನು ಹಾಕುವುದುಂಟು. ದಕ್ಷಿಣ ಭಾರತದ ವಿಶೇಷ ತಳಿ, ಮಲಬಾರ್. ಸಾಧಾರಣ ಮೇಕೆಗಿಂತ ಹೆಚ್ಚು ಹಾಲು ಕೊಡುತ್ತದೆ. ಕರಾವು, ಮಾಂಸಗಳಿಗಾಗಿ ಸಾಕುವ ಇನ್ನೊಂದು ಮೇಕೆ ತಳಿ ಕಂಚಿ.

ಭಾರತದ ಕಾಶ್ಮೀರಿ, ತುರ್ಕಿಯ ಅಂಗೋರಾ ಜಿಲ್ಲೆಯ ಅಂಗೋರಾ ತಳಿಗಳು ಮುಖ್ಯವಾಗಿ ತುಪ್ಪುಟಕ್ಕಾಗಿ ಸಾಕುವ ಆಡುಗಳು; ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಅಮೇರಿಕ ಸಂಯುಕ್ತಸಂಸ್ಥಾನಗಳು, ಕೆನಡಾಗಳಲ್ಲಿ ಅಂಗೋರಾಗಳನ್ನು ಸಾಕುವರು. ಇವು ಹಾಲು ಕರೆಯುವುದು ಕಡಿಮೆ. ಇವಕ್ಕೆ ಒಣ ಹವೆ ಒಗ್ಗಿದರೂ, ಚಳಿಯನ್ನು ತಡೆಯಬಲ್ಲುವು. ಕೊಂಬುಗಳು ಚಪ್ಪಟೆಯಾಗಿ, ಹಿಂಬಾಗಿ, ಸುರುಳಿಯಾಗಿರುತ್ತವೆ. ಕೂದಲು ಅಚ್ಚ ಬಿಳುಪು, ರೇಷ್ಮೆಯಷ್ಟು ಮೆತು, ನುಣುಪು; ಮುಕ್ಕಾಲು ಭಾಗ ಕಾಲುಗಳು, ಹಾಗೂ ಮೈಯ ತುಂಬ ಗುಂಗುರು ಗುಂಗುರಾಗಿ ಬೆಳೆದಿರುತ್ತವೆ. ೧೦–೧೬ ಸೆಂಮೀ ಉದ್ದ ಬೆಳೆವ ತುಪ್ಪುಳವನ್ನು ಆರು ತಿಂಗಳಿಗೊಮ್ಮೆ ಕತ್ತರಿಸಿ ತೆಗೆಯುವರು. ವರ್ಷದ ಕೊನೆಯ ತನಕ ಕತ್ತರಿಸದಿದ್ದರೆ, ೨೦–೨೪ ಸೆಂಮೀ ಉದ್ದ ಬೆಳೆಯುತ್ತದೆ. ವಸಂತ ಕಾಲದಲ್ಲಿ ತುಪ್ಪುಳವನ್ನು ಕತ್ತರಿಸದಿದ್ದರೆ ಬೇಸಗೆಯಲ್ಲಿ ತಾನಾಗಿಯೇ ಉದುರಿಹೋಗುತ್ತದೆ, ಅಂಗೋರಾ ಆಡಿನ ಹೊಳಪಿನ ಕೂದಲ ನೂಲಿಗೆ ಮೊಹೇರ್ ಎಂದು ಹೆಸರು. ಇದರಿಂದ ಬೇಸಗೆಯಲ್ಲಿ

ತೊಡುವ ತೆಳುವಾದ ಉಣ್ಣೆಯ ಉಡುಪನ್ನು ತಯಾರಿಸುತ್ತಾರೆ. ನೀಳ ಕೂದಲುಗಳಿಂದ ನಾಟಕ ಶಾಲೆಯ ಚೌರಿ, ಕೃತಕ ತಲೆಗೂದಲು, ಟೋಪಿ ಮುಂತಾದ ವೇಷ, ಅಲಂಕಾರಗಳ ವಸ್ತುಗಳು ತಯಾರಾಗುತ್ತವೆ.

ಕಾಶ್ಮೀರದ ಶಾಲಿಗೆ ಹೆಸರಾಗಿರುವ ಕಾಶ್ಮೀರಿ ಆಡು, ಉಣ್ಣೆಯನ್ನು ಒದಗಿಸುವ ಇನ್ನೊಂದು ಬಗೆಯ ಆಡು. ಇದು ಅಂಗೋರಾಕ್ಕಿಂತ ಸಾಮಾನ್ಯ ಆಡನ್ನು ಹೋಲುತ್ತದೆ. ಬೇರೆ ಯಾವ ನಾಡಿನಲ್ಲೂ ಈ ತಳಿಯ ಸಾಕಣೆ ಕೈಗೂಡಿಲ್ಲ. ಕಾಶ್ಮೀರದಲ್ಲಿ ಹಿಮಾಲಯದ ಇಳಿಜಾರು ತಪ್ಪಲುಗಳಲ್ಲಿ ಕಾಣಬರುತ್ತವೆ. ಅಲ್ಲಿ ಮಾತ್ರ ಇವನ್ನು ಸಾಕಬಹುದು. ಅಂಗೋರಾ ಆಡನ್ನು ಹೋಲುವ, ಇವುಗಳ ಕೂದಲು ಕೆಲಸಕ್ಕೆ ಬಾರದುವು; ಅವುಗಳ ಬುಡದಲ್ಲಿ ಬೆಳೆವ ಪಾಷಂ ಎಂಬ ಬಲು ನುಣುಪಿನ ತೆಳುವಾದ ತುಪ್ಪಳ ಬಲು ಬೆಲೆಯಾದ್ದು. ಈ ಪಾಷಂನಿಂದಲೇ ಬೆಲೆ ಬಾಳುವ ಸುಂದರವಾದ ಕಾಶ್ಮೀರಿ ಶಾಲುಗಳು ತಯಾರಾಗುವುದು. ಒಂದು ವರ್ಷಕ್ಕೆ ಒಂದು ಆಡಿನಿಂದ ದೊರೆಯುವ ಉಣ್ಣೆಯ ಸರಾಸರಿ ತೂಕ ಸುಮಾರು ೧ ಕಿಗ್ರಾ ಒಂದು ಸೊಗಸಾದ ಶಾಲನ್ನು ತಯಾರಿಸಲು ಮೂವರು ನೇಯ್ಗೆಯವರಿಗೆ ೩ ತಿಂಗಳು ಹಿಡಿಯುತ್ತದೆ.

ಆಡಿನ ತೊಗಲನ್ನು ಹದ ಮಾಡಿ, ಜೋಡು, ಕೈಗವುಸು ಮುಂತಾದ ಅನೇಕ ಬಗೆಯ ವಸ್ತುಗಳನ್ನು ತಯಾರಿಸುತ್ತಾರೆ. ಮೊರಾಕೊ ತೊಗಲು ಹೆಸರುವಾಸಿ.

ಸಾಕಣೆ: ಆಡನ್ನು ಕಟ್ಟುವೆಡೆ ಚಾವಣಿ, ಗೋಡೆ, ನೆಲಗಳಲ್ಲಿ ಇನಿತೂ ತೇವ ಕೂಡಬಾರದು. ಚೆನ್ನಾಗಿ ಗಾಳಿಯಾಡುತ್ತಿದ್ದರೆ ಆಡುಗಳಿಗೆ ಆರೋಗ್ಯ. ಬಿರುಗಾಳಿ ತಂಗಾಳಿ ಬೀಸುವಂತಿರಬಾರದು. ಆಡುಗಳು ತಂಗುವ ಜಾಗದಲ್ಲಿ ಕೆಳಗೆ ಒಣಹುಲ್ಲು ಹಾಸಿರಬೇಕು. ಕಟ್ಟುವ ಜಾಗವನ್ನು ಬದಲಾಯಿಸುತ್ತಿದ್ದರೆ, ಹುಳುಗಳು ಹತ್ತವು. ಆಡುಗಳ ಕೊಟ್ಟಿಗೆ ದನಗಳದಷ್ಟು ದೊಡ್ಡದಿರಬೇಕಿಲ್ಲ. ಮೇವೂ ಕಡಿಮೆ. ಕಾಳುಗಳು (೧೫%), ಸೊಪ್ಪು, ಹುಲ್ಲು, ಒಳ್ಳೆಯ ಮೇವು. ಉಪ್ಪು ನೀರು ಸಾಕಷ್ಟು ಕೊಡಬೇಕು.

ಆಡಿನ ರೋಗಗಳು : ತೇವ, ಚಳಿಗಳಿಗೆ ಒಡ್ಡಿದಾಗ ಬರುವುದು ಫುಪ್ಫುಸದುರಿತ (ನ್ಯುಮೋನಿಯ). ಆಡಿಗೂ ಒಂದು ತೆರನಾದ ಸಿಡುಬು ಹತ್ತುವುದು. ಸೋಂಕು ಹತ್ತಿಸಿ ಮೈಯಿಳಿಸುವ (ಬ್ರೂಸೆಲ್ಲ ಬೇನೆ; ಬ್ರೂಸೆಲ್ಲೋಸಿಸ್) ಆಡಿನ ಜ್ವರ. ಉಳಿದವು: ವಿಷಕಣದಿಂದಾಗುವ ಕುಂಟುವಂತೆ ಮಾಡುವ ಕಾಲು ಜಿರಸು (ಫುಟ್‌ರಾಟ್); ಕಣ್ಣುನೋವಿನ ಸೋಂಕು; ಅಂಟುರೋಗವಾದ ಆಡುಕಜ್ಜಿ; ಮೈಮೇಲೆ ಕೂರೆಗಳು, ಉಣ್ಣೆಗಳು; ಕರುಳ ಹುಳು; ಲಾಡಿಹುಳು; ಈಲಿ ಚಪ್ಪಟೆಕ್ರಿಮಿ (ಲಿವರ್ ಫ್ಲೂಕ್). (ಕೆ.ಎಂ.ಕೆ.;ಎಚ್.ಆರ್.ಸಿ.)

ಆಡುಗಳಿಗೆ ಬರುವ ಅಂಟುರೋಗಗಳಲ್ಲಿ ಬೊಬ್ಬೆರೋಗ, ದೊಡ್ಡ ರೋಗ, ನೆರಡಿರೋಗ ಮೊದಲಾದುವು ಮುಖ್ಯವಾದುವು. ಇವು ಬಹು ಸೂಕ್ಷ್ಮವಾದ ಸಾಂಕ್ರಾಮಿಕ ರೋಗಾಣುಗಳಿಂದ ಬರುತ್ತವೆ. ಸಕಾಲದಲ್ಲಿ ಚುಚ್ಚುಮದ್ದು ಕೊಟ್ಟು ರೋಗ ಬಾರದಂತೆ ತಡೆಯಬಹುದು. ರೋಗ ತಗುಲಿದ ಅನಂತರ ಔಷಧೋಪಚಾರ ಪರಿಣಾಮಕಾರಿಯಲ್ಲ. ಅವಕ್ಕೆ ಬರುವ ಸಾಮಾನ್ಯ ರೋಗಗಳಲ್ಲಿ ಜೀರ್ಣಾಂಗಗಳಿಗೆ ಸಂಬಂಧಿಸಿದ ಅಜೀರ್ಣ, ಹೊಟ್ಟೆಯುಬ್ಬರ, ಭೇದಿ, ರಕ್ತಭೇದಿ, ಮೊದಲಾದವೂ ಶ್ವಾಸಕಾಂಗಗಳಿಗೆ ಸಂಬಂಧಪಟ್ಟ ಕೆಮ್ಮು, ಫುಪ್ಫುಸರೋಗಗಳೂ ಮುಖ್ಯವಾದುವು. ಸಕಾಲದಲ್ಲಿ ಚಿಕಿತ್ಸೆ ಮಾಡುವುದರಿಂದ ಇವು ಗುಣವಾಗುತ್ತವೆ. ಇನ್ನು ಪರೋಪಜೀವಿಗಳಿಂದ ಉಂಟಾಗುವ ಕಾರಲು ರೋಗ ಮತ್ತು ಚರ್ಮ ರೋಗಗಳನ್ನು ಯುಕ್ತ ಚಿಕಿತ್ಸೆಯಿಂದ ಗುಣಪಡಿಸಿ ಅವುಗಳಿಂದಾಗುವ ಹಾನಿಗಳನ್ನು ತಪ್ಪಿಸಬಹುದು. (ಪಿ.ಎ.)

**ಆಡ್ರಿಯನ್, ಎಡ್ಗರ್ ಡೋಗ್ಲಾನ್**(1889): ಇಂಗ್ಲೆಂಡಿನ ಜೀವಶಾಸ್ತ್ರಜ್ಞ. ಜನನ ಲಂಡನ್ನಿನಲ್ಲಿ. ಕೇಂಬ್ರಿಜ್ ಮತ್ತು ಬಾರ್ಥೊಲೋಮಿಯಗಳಲ್ಲಿ ಶಿಕ್ಷಣ ಪಡೆದ. 1929ರಲ್ಲಿ ರಾಯಲ್ ಸೊಸೈಟಿಯ ಸಂಶೋಧನಾ ಪ್ರಾಧ್ಯಾಪಕನಾದ. 1937ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಶರೀರಶಾಸ್ತ್ರದ ಪ್ರಾಧ್ಯಾಪಕನಾದ. 1923ರಲ್ಲಿ ಈತನಿಗೆ ಎಫ್.ಆರ್.ಎಸ್. ಗೌರವ ದೊರೆಯಿತು. 1946ರಲ್ಲಿ ಕೋಪ್ಲಿ ಪದಕವನ್ನು ಗಳಿಸಿದ. ನರಕೋಶಗಳ (ನ್ಯೂರನ್) ನಿಜಗೆಲಸಗಳ ಬಗ್ಗೆ ನಡೆಸಿದ ಕೆಲಸಕ್ಕೋಸ್ಕರ ವೈದ್ಯವಿಭಾಗದ ನೊಬೆಲ್ ಪಾರಿತೋಷಕ ಇವನಿಗೂ ಷೆರ್ರಿಗ್‌ಟನ್‌ನಿಗೂ ದೊರೆಯಿತು. ನರಮಂಡಲವ್ಯವಸ್ಥೆಯ ಬಗ್ಗೆ ಮಹತ್ವದ ಸಂಶೋಧನೆ ನಡೆಸಿದ ಪ್ರಮುಖರಲ್ಲಿ ಒಬ್ಬ. ಈ ವಿಷಯಕ್ಕೆ ಸಂಬಂಧಿಸಿದಂತೆ ದಿ ಫಿಜಿಕಲ್ ಬೇಸಿಸ್ ಆಫ್ ಪರ್ಸೆಪ್ಷನ್ (1947) ಮುಂತಾದ ಹಲವಾರು ಪುಸ್ತಕಗಳನ್ನೂ ಪ್ರೌಢ ಪ್ರಬಂಧಗಳನ್ನೂ ಬರೆದಿದ್ದಾನೆ. ಮಿದುಳಿನ ತರಂಗಗಳ ಮೇಲೆ ನಡೆಸಿದ ಪರೀಕ್ಷೆಗಳ ಬಗ್ಗೆ ಈತ ನಡೆಸಿದ ಸಂಶೋಧನೆಗಳು ಈ ವಿಷಯವನ್ನು ಪ್ರಚಲಿತಗೊಳಿಸಿವೆ. ಇದರ ಬಗ್ಗೆ ಇರುವ ಅಪಾರ ಮಹತ್ವವನ್ನು ಅರಿತ ಮೊದಲಿಗರಲ್ಲಿ ಈತನೂ ಒಬ್ಬ.

***

**ಆದಿಜೀವಯುಗ:** ಭೂವಿಜ್ಞಾನದಲ್ಲಿ ಸುಮಾರು ೬೦೦ ದಶಲಕ್ಷ ವರ್ಷಗಳಿಂದ ೧೮೫೦ ದಶಲಕ್ಷ ವರ್ಷಗಳವರೆಗಿನ ಹಿಂದಿನಕಾಲ (ಪ್ರೊಟೆರೊ ಜೋಯಿಕ್ ಈರಾ). ಆರ್ಷೆಯ (ಆರ್ಕಿಯನ್)ಮತ್ತು ಪುರಾತನ ಜೀವ ಯುಗಗಳ (ಪೇಲಿಯೊಜೋಯಿಕ್ ಈರಾ) ನಡುವಿನಯುಗ. ಆದಿಜೀವಯುಗ ಕೊನೆಗೊಂಡೊಡನೆ (ಅಂದರೆ ಸುಮಾರು ೬೦೦ ದಶಲಕ್ಷ ವರ್ಷಗಳ ಹಿಂದೆ) ಪುರಾತನ ಜೀವಯುಗದ ಕೇಂಬ್ರಿಯನ್ ಕಲ್ಪ (ಇಪಕ್) ಪ್ರಾರಂಭವಾಯಿತು. ಆಗ ರೂಪಗೊಂಡ ಶಿಲಾಶ್ರೇಣಿಗಳ ತಳದಲ್ಲಿರುವ ಅಗಾಧ ಶಿಲಾಸಮುದಾಯಕ್ಕೆ ಪ್ರೀ ಕೇಂಬ್ರಿಯನ್ ಶಿಲಾಸಮುದಾಯವೆಂದು ಹೆಸರು. ಇದು ಭೂಮಿಯ ಇತಿಹಾಸ ಕಾಲದ ಸುಮಾರು ಮುಕ್ಕಾಲು ಭಾಗವನ್ನು ನಿರೂಪಿಸುತ್ತದೆ. ಈ ಶಿಲಾಸಮುದಾಯ ಸಂಪೂರ್ಣವಾಗಿ ಜೀವಾವಶೇಷರಹಿತವಾಗಿದೆ. ಇವುಗಳ ಮೇಲೆ ಸಂಚಯನಗೊಂಡಿರುವ ಶಿಲಾರಾಶಿಗಳಿಂದ ಕಾಲವನ್ನು ಸುಲಭವಾಗಿ ಗುರುತಿಸಬಹುದು. ಪ್ರೀ ಕೇಂಬ್ರಿಯನ್ ಶಿಲಾರಾಶಿಯನ್ನು ಕೆಳಭಾಗ ಮತ್ತು ಮೇಲ್ಭಾಗ ಎಂದು ಎರಡು ಭಾಗಗಳನ್ನಾಗಿ ವಿಭಜಿಸಬಹುದು. ಕೆಳಭಾಗ ಮುಖ್ಯವಾಗಿ ಗ್ರಾನೈಟ್ ಮತ್ತು ನೈಸ್ ಮುಂತಾದ ಅಗ್ನಿಶಿಲೆಗಳಿಂದಲೂ ರೂಪಾಂತರ ಪಡೆದ ಜಲಜಶಿಲೆಗಳಿಂದಲೂ ಕೂಡಿದೆ. ಮೇಲ್ಭಾಗ ಬಹುಭಾಗ ಜಲಜಶಿಲೆಗಳಿಂದ ಆಗಿದೆ. ಈ ಜಲಜಶಿಲೆಗಳು ನೊರಜುಶಿಲೆ, ಪೆಂಟು ಶಿಲೆ, ಮರಳ ಶಿಲೆ, ಜೇಡು ಶಿಲೆ ಮತ್ತು ಸುಣ್ಣ ಶಿಲೆಗಳಾಗಿವೆ. ಇವುಗಳಲ್ಲಿ ಪ್ರವಾಹ ಪದರ, ನಕಲ ಪದರ ಮುಂತಾದ ಸಾಗರ ಶಿಲೆ ರಚನೆಗಳನ್ನು ಕಾಣಬಹುದು. ಈ ಶಿಲಾಸಮುದಾಯಗಳಲ್ಲಿ ಕೆಳಭಾಗಕ್ಕೆ ಆರ್ಷೇಯ ಶಿಲಾಸಮುದಾಯವೆಂದೂ, ಮೇಲ್ಭಾಗಕ್ಕೆ ಪ್ರೀ ಕೇಂಬ್ರಿಯನ್ ಶಿಲಾಸಮುದಾಯವೆಂದೂ ಹೆಸರು. ಇದು ಅಮೆರಿಕ ದೇಶದ ಅಲ್‌ಗಾಂಕಿಯನ್ ಸಮುದಾಯಕ್ಕೆ ಸಮವಾದುದು. ಕಡಪ ಮತ್ತು ವಿಂಧ್ಯಾ ಶಿಲಾವರ್ಗಗಳು ಈ ಸಮುದಾಯದ ಭಾಗಗಳು. ಇದು ಆದಿ ಜೀವಯುಗದ ಶಿಲಾಸಮುದಾಯ. ಆದಿ ಜೀವಯುಗದ ಶಿಲಾಸ್ತೋಮ ಆದರ್ಶ ಜಲಜ ಶಿಲೆಗಳಿಂದ ಕೂಡಿ ಸಾವಿರಾರು ಅಡಿಗಳಷ್ಟು ಎತ್ತರವಿರುವ ಶಿಲಾಪದರಗಳ ಗುಂಪು. ಇವಕ್ಕೂ ಮತ್ತು ಆರ್ಷೇಯ ಯುಗದ ಶಿಲಾಸಮುದಾಯಗಳಿಗೂ ಮಧ್ಯದಲ್ಲಿ ದೊಡ್ಡ ಅನನುರೂಪತೆ ಇದೆ. ಇದಕ್ಕೆ ಈವಾರ್ಕೀಯನ್ ಅನನುರೂಪತೆಯೆಂದೂ ಹೆಸರು. ಈ ಕಾಲದ ಶಿಲಾರಾಶಿಯಲ್ಲಿ ಅನೇಕ ದೊಡ್ಡ ಮತ್ತು ಚಿಕ್ಕ ಅನನುರೂಪತೆಗಳಿವೆ. ಶಿಲಾನಿಕ್ಷೇಪದ ಕಾರ್ಯಗಳು ಅನೇಕ ಬಾರಿ ಪುನರಾವರ್ತಿಸಿರುವುದು ತಿಳಿಯುತ್ತದೆ. ಈ ಯುಗದ ಶಿಲೆಗಳು ವರ್ತಮಾನ ಕಾಲದಲ್ಲಿ ನಡೆಯುತ್ತಿರುವ ಶಿಥಿಲೀಕರಣ ಮತ್ತು ಶಿಲಾಸಂಚಯನ ಕಾರ್ಯಗಳಿಂದಲೇ ರೂಪುಗೊಂಡುವು. ಆದರೆ ಇವು ಜೀವಾವಶೇಷ ರಹಿತ. ಈ ಕಾಲದಲ್ಲಿ ಜೀವಿಗಳು ಇದ್ದುವು ಎಂಬುದಕ್ಕೆ ಸಹಜವಾದ ಸಾಕ್ಷ್ಯಗಳಿಲ್ಲ. ಆದರೆ ಅಪ್ರತ್ಯಕ್ಷ ಸಾಕ್ಷ್ಯಗಳಿಂದ ಇಂಥ ಜೀವಿಗಳಿದ್ದುವೆಂದು ಪುಷ್ಟೀಕರಿಸಬಹುದು.

ಶಿಲಾನಿಕ್ಷೇಪರಾಶಿಯನ್ನು ವರ್ತಮಾನಕಾಲದ ಭೂ ಇತಿಹಾಸದ ಆದಿಯವರೆಗೆ ಸ್ಥೂಲವಾಗಿ ಅವಲೋಕಿಸಿದರೆ ಜೀವವೃಕ್ಷ ಕೇಂಬ್ರಿಯನ್ ಕಾಲದ ಆದಿಯವರೆಗೆ ನಿರಾತಂಕವಾಗಿ ಬೆಳೆದಿರುವುದನ್ನು ಕಾಣಬಹುದು. ಆದರೆ ಇದಕ್ಕೆ ಹಿಂದಿನ ಕಾಲದಲ್ಲಿ ರೂಪಗೊಂಡ ಶಿಲೆಗಳಲ್ಲಿ ಜೀವಾವಶೇಷದ ಕುರುಹೇ ಇಲ್ಲ. ಕೇಂಬ್ರಿಯನ್ ಯುಗದ ಪ್ರಾರಂಭದಲ್ಲಿ ಸಿಕ್ಕಿರುವ ಜೀವಾವಶೇಷಗಳು ಜೀವವೃಕ್ಷದ ಪ್ರಾರಂಭ ಕಾಲದವಲ್ಲ ಎಂಬುದು ನಮಗೆ ವ್ಯಕ್ತವಾಗುತ್ತದೆ. ಏಕೆಂದರೆ ಕೇಂಬ್ರಿಯನ್ ಕಾಲದ ಜೀವರಾಶಿ ಬಹು ಮುಂದುವರಿದಿದ್ದು ಬೆನ್ನೆಲುಬಿಲ್ಲದ ಎಲ್ಲ ಪ್ರಾಣಿಗಳಿಂದಲೂ ಪ್ರತಿನಿಧಿಸಲ್ಪಟ್ಟಿದೆ. ಆ ಮಟ್ಟವನ್ನು ಮುಟ್ಟಲು ಜೀವಿ ಬಹುಕಾಲದವರೆಗೆ ಸತತವಾಗಿ ವಿಕಾಸಹೊಂದಿದ ಅನಂತರವೇ ಸಾಧ್ಯ. ಅಂದರೆ ಕೇಂಬ್ರಿಯನ್ ಯುಗದಿಂದ ಈಗಿನವರೆಗೆ ಕಾಲಾವಧಿಯ ಪ್ರಮಾಣ ಎಷ್ಟೇ ಆದರೂ ಜೀವರಾಶಿ ಕೇಂಬ್ರಿಯನ್ ಕಾಲಕ್ಕಿಂತ ಬಹಳ ಮುಂಚಿತವಾಗಿ ಇದ್ದು ಅಧಿಕ ವಿಕಾಸಹೊಂದಿರಬೇಕು ಎಂಬುದನ್ನು ಶಾಸ್ತ್ರಜ್ಞರು ನಿರ್ಧರಿಸುವರು.

ಭೂ ಇತಿಹಾಸದ ಅನೇಕ ಘಟನೆಗಳ ವಿಚಾರದಲ್ಲಿ ನಾವು ಅಜ್ಞರು. ಅವುಗಳಲ್ಲಿ ಆದಿಜೀವಿಗಳ ವಿಚಾರದಲ್ಲಿ ನಮ್ಮ ಅಜ್ಞಾನ ಹೆಚ್ಚು. ಆ ಕಾಲದ ಶಿಲಾಪರಂಪರೆಗಳು ಅಂದಿನ ಜೀವಾವಶೇಷಗಳನ್ನು ಕಾದಿರಿಸಲು ಅಸಮರ್ಥವಾಗಿದ್ದುದೇ ಇದರ ಕಾರಣ. ಇದಕ್ಕೆ ವಿವರಣೆ ನೀಡಲು ಅನೇಕ ವಿಜ್ಞಾನಿಗಳು ಪ್ರಯತ್ನಿಸುವರು. ಅವುಗಳನ್ನು ಈ ರೀತಿ ವರ್ಗೀಕರಿಸಬಹುದು : ೧. ಆದಿ ಸಾಗರ; ಈಗಿನ ಸಾಗರಕ್ಕಿಂತ ಬಹು ಭಿನ್ನವಾಗಿತ್ತು. ಆದ್ದರಿಂದ ಆ ಕಾಲದಲ್ಲಿ ನಿಕ್ಷೇಪಗೊಂಡ ಶಿಲೆಗಳು ಜೀವಾವಶೇಷಗಳನ್ನು ಕಾಪಾಡಿ ಕಾದಿರಿಸಲು ಅಸಮರ್ಥವಾಗಿದ್ದುವು. ೨. ಆ ಕಾಲದ ಜೀವರಾಶಿ ಬಹಳ ಪುರಾತನವಾಗಿದ್ದುದರಿಂದ ಅವುಗಳಲ್ಲಿ ಗಟ್ಟಿ ಭಾಗಗಳಿರಲಿಲ್ಲ. ಆದ್ದರಿಂದ ಅವುಗಳ ಅವಶೇಷಗಳು ಶಿಲೆಗಳಲ್ಲಿ ಉಳಿಯಲಿಲ್ಲ. ೩. ಆ ಕಾಲದ ಸಾಗರಗಳ ನೀರಿನಲ್ಲಿ ವಿಲೀನಗೊಂಡ ಕ್ಯಾಲ್ಸಿಯಂ ಕಾರ್ಬೊನೇಟ್, ಸಿಲಿಕ ಮತ್ತು ಇತರ ಅಗತ್ಯವಾದ ವಸ್ತುಗಳಿರಲಿಲ್ಲ. ಆದ್ದರಿಂದ ಅಂದಿನ ಜೀವಿಗಳಿಗೆ ಗಟ್ಟಿ ಭಾಗಗಳನ್ನು ರಚಿಸಿಕೊಳ್ಳಲಾಗಲಿಲ್ಲ. ೪. ಆದಿಜೀವಯುಗದ

ಶಿಲೆಗಳು ಬಹಳ ಪುರಾತನ. ಅವು ಬಹುವಾಗಿ ರೂಪಾಂತರ ಹೊಂದಿ ಒಂದು ಪಕ್ಷ ಅವುಗಳಲ್ಲಿ ಜೀವಾವಶೇಷಗಳಿದ್ದರೂ ಅವೆಲ್ಲ ಈ ಕಾರಣದಿಂದ ನಾಶವಾಗಿ ಹೋಗಿವೆ.

ಈ ವಿವರಣೆಗಳನ್ನು ಪರೀಕ್ಷಿಸೋಣ. ಆದಿಜೀವಯುಗದ ಶಿಲೆಗಳು ಅವುಗಳ ಅನಂತರ ಸಂಚಯನಗೊಂಡ ಶಿಲೆಗಳಂತೆಯೇ ಸಾಗರಜನಿತ ಶಿಲೆಗಳು. ಇವುಗಳಲ್ಲಿ ಅನೇಕ ಶಿಲೆಗಳು, ಅದರಲ್ಲಿಯೂ ಭಾರತದ ಕಡಪ ಮತ್ತು ವಿಂಧ್ಯ ಕಾಲದ ಶಿಲೆಗಳು ಸೂಕ್ಷ್ಮಕಣ ಶಿಲೆಗಳಾಗಿದ್ದು ಜೀವಾವಶೇಷಗಳನ್ನು ಕಾದಿರಿಸಲು ಬಹಳ ಯೋಗ್ಯವಾಗಿವೆ. ಆದ್ದರಿಂದ ಈ ಕಾಲದ ಶಿಲೆಗಳು ಜೀವಾವಶೇಷಗಳನ್ನು ಕಾದಿರಿಸಲು ಅಸಮರ್ಥವಾದುವು ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇನ್ನು ಆದಿಜೀವಿ ಕಾಲದ ಜೀವಿಗಳ ದೇಹಗಳ ಗಟ್ಟಿ ಭಾಗಗಳನ್ನು ಕುರಿತ ವಾದ. ಈ ಯುಗ ಮುಗಿದೊಡನೆ ಬರುವ ಕೇಂಬ್ರಿಯನ್ ಕಲ್ಪದ ಪ್ರಾರಂಭದಲ್ಲೇ ಜೀವಿಗಳಿಗೆ ಗಟ್ಟಿ ಭಾಗ ಉಂಟಾದದ್ದು ಹೇಗೆ ? ಅಂಥ ಸನ್ನಿವೇಶ ಹೇಗೆ ಉಂಟಾಯಿತು ? ಈ ಆಕ್ಷೇಪಗಳಿಗೆ ಸಮರ್ಥ ವಿವರಣೆ ಇಲ್ಲ. ಆದ್ದರಿಂದ ಈ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮೂರನೆಯ ವಾದ ಜೀವಾವಶೇಷಗಳು ರೂಪಾಂತರ ಪಡೆದು ನಾಶವಾಗಿವೆ ಎಂದು. ಇದನ್ನು ಎಲ್ಲ ಪ್ರದೇಶದ ಶಿಲಾ ಸಮುದಾಯಕ್ಕೂ ಅನ್ವಯಿಸಲಾಗುವುದಿಲ್ಲ. ಏಕೆಂದರೆ ಭಾರತದ ಕಡಪ ಮತ್ತು ವಿಂಧ್ಯ ಶಿಲಾಸಮುದಾಯಗಳು ಹೆಚ್ಚು ಚಲನೆಗೂ ರೂಪಾಂತರಕ್ಕೂ ಒಳಗಾಗಿಲ್ಲ. ಇವುಗಳಿಂದ ಆದಿಜೀವಯುಗದ ಶಿಲಾಸಮುದಾಯಗಳು ಜೀವಾವಶೇಷರಹಿತವಾಗಿರುವುದು ಒಂದು ದೊಡ್ಡ ಆಶ್ಚರ್ಯಕರ ಸಂಗತಿ. ಈ ಸಮಸ್ಯೆಯನ್ನು ಪರಿಹರಿಸಲು ವಿಜ್ಞಾನಿಗಳಿಗೆ ಇನ್ನೂ ಸಾಧ್ಯವಾಗಿಲ್ಲ.

ಆದರೂ ಆದಿಜೀವಯುಗದಲ್ಲಿ ಜೀವಿಗಳು ಇದ್ದುವೆಂಬುದನ್ನು ಸ್ಥಿರಪಡಿಸುವುದಕ್ಕೆ ನಮಗೆ ಸಾಕಾದಷ್ಟು ಆಧಾರ ದೊರಕಿದೆ. ಅತ್ಯಧಿಕ ಪ್ರಮಾಣದಲ್ಲಿ ಸುಣ್ಣಶಿಲೆ ನಿಕ್ಷೇಪ, ಗ್ರಾಫೈಟ್, ಇಂಗಾಲಾಂಶ, ಗ್ಲಾಕೊನೈಟ್ ಪಟ್ಟಿಯಿರುವ ಕಬ್ಬಿಣದ ಅದುರು ನಿಕ್ಷೇಪ ಮತ್ತು ಲ್ಯಾಟರೈಟ್ ಮುಂತಾದ ನಿಕ್ಷೇಪಗಳು ಜೀವಿಗಳು ಇರುವುದನ್ನು ಸಾರುತ್ತವೆ. ಇವೆಲ್ಲ ಅಪ್ರತ್ಯಕ್ಷ ಪ್ರಮಾಣಗಳು. ಈ ಕಾಲದ ಸುಣ್ಣ ಶಿಲೆಯಲ್ಲಿ ಕೆಲವು ಭಾಗವಾದರೂ, ಜೀವಿಗಳ ಅದರಲ್ಲೂ ಆಲ್ಗೇ ಎಂಬ ಸಸ್ಯಗಳ ಕಾರ್ಯಾಚರಣೆಯಿಂದ ಆದಂಥವು ಎಂದು ಕೆಲವರ ವಾದ. ಆದರೆ ಈ ಸುಣ್ಣ ಶಿಲೆಗಳಲ್ಲಿ ಆಲ್ಗೇಗಳ ಅವಶೇಷಗಳಿಲ್ಲ. ಆದ್ದರಿಂದ ಅವು ಜೀವಿಗಳ ಕಾರ್ಯಾಚರಣೆಯಿಂದ ಆದಂಥವೋ ಅಥವಾ ರಾಸಾಯನಿಕ ಕ್ರಿಯೆಯಿಂದ ಆದಂಥವೋ ಎಂಬ ಶಂಕೆ ಇನ್ನೂ ವಿಜ್ಞಾನಿಗಳನ್ನು ಕಾಡಿಸುತ್ತಿದೆ.

ಗ್ರಾಫೈಟ್ ಶಿಲೆ ಬಳ್ಳಿ ಬಳ್ಳಿಯಾಗಿಯೂ ಕಣವಾಗಿಯೂ ಸಿಗುತ್ತದೆ. ಕೆನಡ ದೇಶದ ಭೂವಿಜ್ಞಾನಿ ಜೆ. ಡಬ್ಲ್ಯು. ಡಾಸನ್ ಗ್ರಾಫೈಟ್ ಪದರವನ್ನು ಕಾರ್ಬ್‌ನಿಫೆರಸ್ ಕಾಲದ (ಇಂಗಾಲಯುಗ) ಕಲ್ಲಿದ್ದಲು ಪದರಗಳಿಗೆ ಹೋಲಿಸಿ ಇಷ್ಟು ಪ್ರಮಾಣದ ಇಂಗಾಲಾಂಶ ಜೀವಿಗಳ ಮೂಲಕ ಮಾತ್ರ ಸಾಧ್ಯವೆಂದು ಅಭಿಪ್ರಾಯಪಟ್ಟಿರುವನು. ಆದರೆ ಗ್ರಾಫೈಟ್ ಶಿಲೆ ಯಾವುದನ್ನು ತೆಗೆದುಕೊಂಡರೂ ಅದು ಜೀವಿಜನಿತವೆಂದು ನಿಖರವಾಗಿ ಪ್ರತಿಪಾದಿಸಲಾಗುವುದಿಲ್ಲ. ಹಾಗೆಯೇ ಪದರವಿರುವ ಕಬ್ಬಿಣದ ಅದುರು, ಮ್ಯಾಂಗನೀಸ್ ಅದುರು ಮತ್ತು ಲ್ಯಾಟರೈಟ್‌ಗಳೂ ಬ್ಯಾಕ್ಟೀರಿಯ ಜೀವಿಗಳ ಕಾರ್ಯಾಚರಣೆಯಿಂದ ನಿಕ್ಷೇಪಗೊಂಡವೆಂದು ಕೆಲವರ ಅಭಿಪ್ರಾಯ. ಆದರೆ ಯಾವ ನಿಕ್ಷೇಪವೂ ನಿರ್ದಿಷ್ಟವಾಗಿ ಹೀಗೆಯೇ ಆದುದು ಎಂದು ಸಮರ್ಥಿಸಲು ಸಾಧ್ಯವಿಲ್ಲ. ಅವು ರಾಸಾಯನಿಕವಾಗಿಯೂ ರೂಪಗೊಳ್ಳಲು ಸಾಧ್ಯ.

ಆದಿಜೀವಯುಗದ ಶಿಲಾಸಮೂಹಗಳಲ್ಲಿ ಜೀವಾವಶೇಷಗಳನ್ನು ಹುಡುಕಲು ಕೆಲವು ಭೂವಿಜ್ಞಾನಿಗಳಿಂದ ಬಹಳ ಪ್ರಯತ್ನ ನಡೆದಿದೆ. ೧೮೫೮ರಲ್ಲಿ ಲೋಗಾನ್, ಕೆನಡದ ಲಾರೆನ್ಷಿಯನ್ ನೈಸೆ ಶಿಲೆಯಲ್ಲಿ ಒಂದು ಕುತೂಹಲಕರ ಖನಿಜ ಶೇಖರಣೆಯನ್ನು ಕಂಡುಹಿಡಿದ. ಅದರಲ್ಲಿ ಕ್ಯಾಲಸೈಟ್ ಮತ್ತು ಸರ್‌ಪೆಂಟೈನ್ ಎಂಬ ಖನಿಜಗಳು ಒಂದರ ಮೇಲೊಂದರಂತೆ ಅನೇಕ ಪಟ್ಟಿಗಳಾಗಿ ನಿಕ್ಷೇಪಗೊಂಡಿದ್ದುವು. ಕ್ಯಾಲಸೈಟ್ ಪ್ರಧಾನವಾಗಿಯೂ ಸರ್‌ಪೆಂಟೈನ್ ಗೂಡುಗಳನ್ನು ತುಂಬಿದಂತೆಯೂ ಇದ್ದುವು. ಇಂಥ ರಚನೆ ಖನಿಜದಲ್ಲಿರುವುದು ಬಹಳ ವಿರಳ. ಆದುದರಿಂದ ಇದಕ್ಕೆ ಜೀವಿ ಸಂಬಂಧವಿರಬೇಕೆಂದು ಲೋಗನ್ ನಿರ್ಧರಿಸಿದುದಲ್ಲದೆ ಇದಕ್ಕೆ ಒಂದು ಹೊಸ ಹೆಸರನ್ನೂ ಕೊಟ್ಟ (ಇಯೋಜೋವನ್ ಕೆನಡನ್ಸೀಸ್). ಇದರ ವಿಚಾರವಾಗಿ ಇನ್ನೂ ಹೆಚ್ಚು ವಿವರಗಳನ್ನು ಡಬ್ಲ್ಯು. ಬಿ. ಕಾರ್ಪೆಂಟರ್ ವರದಿ ಮಾಡಿದ. ಆದರೆ ಇತರ ವಿದ್ವಾಂಸರು ಇಯೋಜೋವನ್‌ಕೆನಡನ್ಸೀಸ್ ಜೀವಿಜನ್ಯವಾದುದಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಖನಿಜ ಪ್ರಪಂಚದಲ್ಲಿ ಇಯೋಜೋವನ್‌ಕೆನಡನ್ಸೀಸ್‌ನಂಥ ರಚನೆಯಿರುವುದು ಎಲ್ಲೂ ಕಂಡುಬಂದಿಲ್ಲ. ಆದರೆ ಇಷ್ಟು ಚಲನೆಗೂ ರೂಪಾಂತರಕ್ಕೂ ಒಳಗಾದ ಶಿಲಾಸಮೂಹಗಳಲ್ಲಿ ಜೀವಾವಶೇಷಗಳನ್ನು ಕಾದಿರಿಸುವುದೂ ಅಸಂಭವ. ಅದ್ದರಿಂದ ನಿಖರವಾದ ಜೀವಿಸಂಬಂಧ ವಸ್ತುಗಳನ್ನಲ್ಲದೆ ಬೇರಾವುದನ್ನೂ ಅಂಗೀಕರಿಸುವುದು ಸಾಧುವಲ್ಲ.




ಯುಗ-ಕಲ್ಪ-ಜೀವವಿಕಾಸ ತೋರಿಸುವ ರೇಖಾಚಿತ್ರ.

ನಡುವಿನ ಸ್ತಂಭ ಯುಗಗಳನ್ನೂ ಬಲಗಡೆಯ ಸ್ತಂಭ ಯುಗಗಳಿಗೆ ಹೊಂದಿದಂತೆ ಕಲ್ಪಗಳ ವಿತರಣೆಯನ್ನೂ ಎಡಗಡೆಯಸ್ತಂಭ ಯುಗ-ಕಲ್ಪಗಳಿಗೆ ಹೊಂದಿದಂತೆ ಜೀವವಿಕಾಸವನ್ನೂ ಸೂಚಿಸುತ್ತವೆ. ಸ್ತಂಭಗಳ ಶಿಖರ ಆಧುನಿಕ ಕಾಲ. ಕೆಳಗಿಳಿದಂತೆ ಒಂದೊಂದು ಸಂಖ್ಯೆಯೂ ಅಷ್ಟಷ್ಟು ದಶಲಕ್ಷವರ್ಷ ಭೂತಕಾಲವನ್ನು ಸೂಚಿಸುವುದು.

೧೮೮೫ರಲ್ಲಿ ಜೇಮ್ಸ್ ಹಾಲ್ ಅದಿಜೀವಯುಗದ ಶಿಲೆಗಳಲ್ಲಿ ಎಳೆಕೋಸಿನಂಥ ರಚನೆಯನ್ನು ಪ್ರಾಣಿಯ ಅವಶೇಷವೆಂದು ಅಭಿಪ್ರಾಯಪಟ್ಟು ಅದನ್ನು ಕ್ರಿಪ್ಟೋಜೋವನ್ ಎಂದು ಹೆಸರಿಸಿದ. ಇದೇ ರೀತಿಯ ರಚನೆ ಗ್ರೀನ್‌ಲ್ಯಾಂಡ್ ಮತ್ತು ಗೋಬಿ ಮರುಭೂಮಿ ಪ್ರದೇಶಗಳಲ್ಲಿ ಇರುವುದು ಎಂದು ವರದಿಯಾಗಿದೆ. ಈ ರಚನೆಗಳು ಆಲ್ಗೆ ಎಂಬ ಸಸ್ಯದ ಅವಶೇಷವೆಂದು ವಾದಿಸಲಾಗಿದೆ. ವಾಲ್‌ಕಾಟ್ ಈ ಕಾಲದ ಶಿಲಾಸಮುದಾಯಗಳಲ್ಲಿ ಅನೇಕ ರೀತಿಯ ರಚನೆಗಳನ್ನು ವರದಿ ಮಾಡಿದ್ದಾನೆ. ಇತ್ತೀಚೆಗೆ ಭಾರತದ ಕಡಪ ಶಿಲೆಗಳಲ್ಲಿರುವ ಸುಣ್ಣ ಶಿಲೆಗಳಲ್ಲಿ ಎಂ. ಆರ್. ಶ್ರೀನಿವಾಸ್‌ರಾಯರು ಈ ರೀತಿಯ ರಚನೆಯನ್ನು ವರದಿ ಮಾಡಿದ್ದಾರೆ. ಆದರೆ ಜೀವಕಣ ರಚನೆಗಳು ಇಲ್ಲದಿರುವುದರಿಂದ ಇವುಗಳನ್ನು ಜೀವಾವಶೇಷಗಳೆಂದು ಪರಿಗಣಿಸುವುದು ಬಹಳ ಕಷ್ಟ. ಅಲ್ಲದೆ ಪ್ರಯೋಗಶಾಲೆಗಳಲ್ಲಿ ಇದೇ ರೀತಿಯ ರಚನೆಗಳನ್ನು ರಾಸಾಯನಿಕ ವಿಧಾನಗಳಿಂದ ಉತ್ಪತ್ತಿ ಮಾಡಬಹುದೆಂದು ಲೆನಿಗಾಂಗ್ ತೋರಿಸಿದ್ದಾನೆ. ವಿಂಧ್ಯ ಶಿಲಾಸಮುದಾಯದಲ್ಲಿ ರಾಮಪುರದ ಹತ್ತಿರ ಕೊಂಬು ವಸ್ತುವಿನ ಇಂಗಾಲಾಂಶದ ಅವಶೇಷಗಳನ್ನು ಹೆಚ್. ಸಿ. ಜೋನ್ಸ್ ವರದಿ ಮಾಡಿದ್ದಾರೆ. ಆದರೆ ಇದನ್ನು ವರ್ಗೀಕರಿಸುವುದು ಬಹಳ ಕಷ್ಟ. ಇವುಗಳ ಜೊತೆಗೆ ಎಂ. ಆರ್. ಸಹನೀಯವರು ಕೆಲವು ಹುಳುಗಳ ಜಾಡುಗಳು ಮತ್ತು ಅಚ್ಚನ್ನು ವರದಿ ಮಾಡಿರುತ್ತಾರೆ. ಹೀಗೆ ವಿಂಧ್ಯ ಮತ್ತು ಇತರ ಪ್ರೀ ಕೇಂಬ್ರಿಯನ್ ಕಾಲದಲ್ಲಿ ಜೀವಿಗಳಿದ್ದುವೆಂಬುದಕ್ಕೆ ಅಸ್ಪಷ್ಟ ಅವಶೇಷಗಳು ಅಪ್ರತ್ಯಕ್ಷ ಪ್ರಮಾಣಗಳೂ ದೊರೆತಿವೆ ಎಂಬುದರಲ್ಲಿ ಸಂಶಯವಿಲ್ಲ. (ಎಂ.ಆರ್.ಎಸ್.)

**ಆದಿಮಾನವ:** ಮಾನವನ ಉಗಮ ಹತ್ತು ಲಕ್ಷ ವರ್ಷಗಳ ಹಿಂದೆಯೇ ಆಗಿರಬೇಕೆಂದು ಊಹಿಸಿರುತ್ತಾರೆ. ಆದರೆ ಮಾನವ ಈಗಿನ ರೂಪಿನಲ್ಲೇ ಉದಿಸಲಿಲ್ಲ. ಆತ ಹಲವು ಅವಸ್ಥಾಂತರಗಳನ್ನು ಪಡೆದಿರಬೇಕು. ಅವನ ಪೂರ್ವಜರು ಯಾರು, ಅವನ ಮೂಲ ಸ್ವರೂಪ ಹೇಗಿತ್ತು ಎಂಬುವು ಜಟಿಲ ಪ್ರಶ್ನೆಗಳಾಗಿವೆ. ಡಾರ್ವಿನ್ನನ ಪರಿಣಾಮವಾದದ ಫಲವಾಗಿ ಕಾಲಕಾಲಕ್ಕೆ ಜೀವಿಗಳು ಬದಲಾವಣೆ ಹೊಂದುತ್ತ ಹೋಗುತ್ತವೆ ಎಂಬುದನ್ನು ಒಪ್ಪಿಕೊಂಡಮೇಲೆ ಮಾನವನ ಪೂರ್ವಜರು ಕಪಿಕುಲದವರಾಗಿರಬೇಕೆಂದು ಒಂದು ವಾದವಿತ್ತು. ಕಪಿ, ಮಾನವನ ತೀರ ಸಮೀಪ ಬಂಧುವಾಗಿರುವುದೇ ಇದಕ್ಕೆ ಕಾರಣ. ಆದರೆ ಮಾನವ ನೇರವಾಗಿ ಕಪಿಕುಲದಿಂದ ಅವಸ್ಥಾಂತರ ಹೊಂದಲಿಲ್ಲವೆಂದೂ, ಮಾನವನಿಗೂ ಕಪಿಗೂ ಮೂಲ ಈಗ ಅಳಿದು ಹೋಗಿರುವ ಬೇರೆ ಒಂದು ಪ್ರಾಣಿಯಾಗಿರಬೇಕೆಂದೂ ತಜ್ಞರ ಮತವಾಗಿದೆ. ಪ್ರಾಣಿ ಮಾಲೆಯಲ್ಲಿ ಮಾನವನನ್ನು ಸೇರ್ಪಡಿಸಿರುವ ಆ ಕೊಂಡಿಯನ್ನು (ಮಿಸ್ಸಿಂಗ್ ಲಿಂಕ್) ಅರಸುವುದರಲ್ಲಿ ವಿಜ್ಞಾನಿಗಳು ಪೂರ್ಣಪ್ರಯತ್ನ ನಡೆಸಿದ್ದಾರೆ.

ಆದಿಮಾನವ ಮೊದಲು ಕಾಣಿಸಿಕೊಂಡಿದ್ದು ಎಲ್ಲಿ ಎಂಬ ಬಗ್ಗೆ ಅಭಿಪ್ರಾಯ ಭೇದವಿದೆ. ಅವನು ಹುಟ್ಟಿದುದು ಮಧ್ಯ ಏಷ್ಯದಲ್ಲಿ ಎಂದು ಊಹಿಸಲಾಗಿತ್ತು. ಆದರೆ ಕೆಲವು ವಿಜ್ಞಾನಿಗಳು ಈ ಉಗಮ ಆಫ್ರಿಕಾದಲ್ಲಾಗಿರಬೇಕೆಂದೂ (ಮಿಯೋಸೀನ್ ಕಾಲದಲ್ಲಿ ಪೂರ್ವ ಮತ್ತು ಮಧ್ಯ ಆಫ್ರಿಕಾದಲ್ಲಿ ಪ್ರೋಕನ್‌ಸಲ್ ಎಂಬ ಜೀವಿಯೊಂದಿತ್ತು; ಇದು ಎರಡು ಅಡಿ ಎತ್ತರವಿದ್ದು, ಕಾಲುಗಳಿಂದ ಮಾತ್ರ ನಡೆದು ಕೈಗಳನ್ನು ಕೆಲಸಕ್ಕೆ ಮಾತ್ರ ಉಪಯೋಗಿಸಿತು; ತೋಳುಗಳು ತುಂಡಾಗಿದ್ದುವು; ಮಿದುಳು ಕೋತಿಗಳ ಮಿದುಳಿಗಿಂತ ಉತ್ತಮಗೊಂಡಿತ್ತು) ಮತ್ತೆ ಕೆಲವರು ಯೂರೋಪಿನಲ್ಲಾಗಿರಬೇಕೆಂದೂ ವಾದಿಸಿದ್ದಾರೆ. ಆದರೆ ಮಾನವನ ಉಗಮ ಒಂದೇ ಕಡೆಯಲ್ಲಾಯಿತೆ ಅಥವಾ ಬೇರೆ ಕಡೆ ಸ್ವತಂತ್ರವಾಗಿ, ಏಕಕಾಲದಲ್ಲಿ ನಡೆಯಿತೆ ಎಂದು ನಿರ್ಧರಿಸುವುದು ಕಷ್ಟ. ಅದು ಹೇಗಿದ್ದರೂ ಮಾನವ ಜನಿಸಿದುದು ಪೂರ್ವಾರ್ಧಗೋಳದಲ್ಲಿಯೆ ಹೊರತು ಪಶ್ಚಿಮಾರ್ಧಗೋಳದಲ್ಲಲ್ಲ ಎಂಬುದು ನಿರ್ಧಾರವಾಗಿದೆ.

ಮಾನವ ನೇರವಾಗಿ ನಿಂತು ತನ್ನ ಎರಡು ಪಾದಗಳಿಂದಲೇ ನಡೆಯಬಲ್ಲ ಮತ್ತು ಓಡಬಲ್ಲ–ಇದುವೆ ಕಪಿಗೂ ಮಾನವನಿಗೂ ಇರುವ ಮೂಲ ವ್ಯತ್ಯಾಸ. ಮಾನವನ ಕಾಲಿನ ಹೆಬ್ಬೆರಳುಗಳು ಇತರ ಬೆರಳುಗಳನ್ನು ಮುಟ್ಟಲಾರವು. ಪಾದ ಸಂಪೂರ್ಣವಾಗಿ ನೆಲಕ್ಕೂರುತ್ತದೆ. ದವಡೆಗಳು ಹಗುರವಾಗಿ ದುಂಡಗಿವೆ. ಹಲ್ಲುಗಳು ವಿಶಾಲವಾದ ಕಮಾನಿನಲ್ಲಿ ಜೋಡಿಸಿಕೊಂಡಿವೆ. ನೆಟ್ಟಗೆ ಎದೆ ಚಾಚಿ ನಡೆಯುವ ಅವನ ನಿಲುವಿಗೆ ತಕ್ಕಂತೆ ತಲೆಯ ಬುರುಡೆಯ ಕಾಂಡೈಲ್ ಮತ್ತು ಬೆನ್ನುಮೂಳೆ ಮಾರ್ಪಟ್ಟಿವೆ. ಬೆನ್ನುಮೂಳೆ ೮ ಆಕಾರಕ್ಕಿರುವುದರಿಂದ ಶರೀರದ ಪೂರ್ಣಭಾರ ನೇರವಾಗಿ ಕಾಲುಗಳ ಮೇಲೆ ಬೀಳುತ್ತದೆ. ಇದೆಲ್ಲಕ್ಕಿಂತ ಮಿಗಿಲಾಗಿ ಮಿದುಳಿನ ಬೆಳೆವಣಿಗೆ, ಒಂದು ಕಪಿಯ ಮಿದುಳುಪೆಟ್ಟಿಗೆ ಸುಮಾರು ೩೫೦–೫೦೦ ಘನ ಸೆಂಮೀ ನಷ್ಟು ದೊಡ್ಡದು. ಮಾನವನದಾದರೊ ಸರಾಸರಿ ೧,೩೫೦ ಮತ್ತು ೧,೫೦೦ ಘನ ಸೆಂಮೀ ನಷ್ಟು ದೊಡ್ಡದು. ಹಣೆ ಮತ್ತು ಗಲ್ಲದ ಬೆಳೆವಣಿಗೆ ಮಾನವನಲ್ಲಾಗಿದೆ. ಮಂಗಗಳಲ್ಲಿ ಹಣೆ ಮತ್ತು ಗಲ್ಲಗಳಿಲ್ಲ. ಕಪಿಯೂ ಕೆಲವು ವೇಳೆ ಹಿಂದಿನ ಕಾಲಿನಮೇಲೆ ನಿಲ್ಲಬಲ್ಲುದಾದರು ಅದು ನೇರ ನಿಲ್ಲುವಲ್ಲಿ ಮತ್ತು ಓಡುವಾಗ ಕೈಗಳ ಸಹಾಯವನ್ನು ಪಡೆದೆ ಪಡೆಯುತ್ತವೆ. ಈ ದೃಷ್ಟಿಯಿಂದ ನೋಡಿದಾಗ ಮಾನವನ ಪೂರ್ವಜರಿಗೂ ನೇರ ನಿಲುವು ಇದ್ದಿರಬೇಕು. ಅವರು ಎರಡು ಕಾಲುಗಳಿಂದಲೇ ನಡೆಯುತ್ತಿದ್ದಿರಬೇಕು ಎಂದು ಸ್ಪಷ್ಟವಾಗುತ್ತದೆ. ಇದರೊಂದಿಗೆ ತಲೆ ಬುರುಡೆಯಲ್ಲಿನ ಮಿದುಳುಕೋಶ, ಆತ ಉಪಯೋಗಿಸಿರಬಹುದಾದ ಉಪಕರಣಗಳು ಆದಿಮಾನವನನ್ನು ಕಂಡುಕೊಳ್ಳಲು ಸಹಾಯ ಒದಗಿಸುತ್ತದೆ. ಪ್ರಾಚೀನ ಕಾಲದ ಅವಶೇಷಗಳನ್ನು ಶೋಧಿಸುವಾಗ ಲಕ್ಷಾಂತರ ವರ್ಷಗಳ ಹಿಂದೆಯೇ ಇದ್ದಿರಬಹುದಾದ ಪ್ರಾಣಿಗಳ ಪಳೆಯುಳಿಕೆಗಳು ಅನೇಕ ಕಡೆ ದೊರೆತಿವೆ. ಇವುಗಳ ಕಾಲವನ್ನೂ ಬೇರೆ ಬೇರೆ ಆಧಾರಗಳಿಂದ ನಿರ್ಧರಿಸಲಾಗಿದೆ. ಇಂಥ ಪಳೆಯುಳಿಕೆಗಳಲ್ಲಿ ಮೇಲೆ ತಿಳಿಸಿದ ಲಕ್ಷಣಗಳುಳ್ಳ ತಲೆಬುರುಡೆಗಳೂ ಇತರ ಅಸ್ಥಿಗಳೂ ಅಲ್ಲಲ್ಲಿ ದೊರೆತಿವೆ.

ಇದುವರೆಗೆ ದೊರೆತಿರುವ ಇಂಥ ಅಸ್ಥಿಗಳಲ್ಲಿ ಅತ್ಯಂತ ಪ್ರಾಚೀನವಾದುವು ದಕ್ಷಿಣ ಮತ್ತು ಪೂರ್ವ ಆಫ್ರಿಕಾದ ಕೆಲವು ಗವಿಗಳಲ್ಲಿ ದೊರೆತಂತಹವು. ಮಾನವನದೆಂಬಂತೆ ಕಾಣುವ ಇಲ್ಲಿನ ಕಲ್ಲಾದ (ಫಾಸಿಲೈಸ್ಡ್) ಮೂಳೆಗಳು ಈ ಪ್ರಾಣಿ ನೇರವಾಗಿ ನಿಲ್ಲಬಲ್ಲದಾಗಿತ್ತು ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಅವು ನೇರವಾಗಿ ನಡೆಯಬಲ್ಲುವಾಗಿದ್ದುವು ಎಂದೂ ಊಹಿಸಬಹುದು. ಆಕಾರದಲ್ಲಿ ಕಿರಿದಾಗಿದ್ದ ಈ ಪ್ರಾಣಿಗಳು ಹತ್ತು ಲಕ್ಷ




ಮಾನವ ಪಳೆಯುಳಿಕೆಗಳು

ವರ್ಷಗಳಿಗೂ ಹಿಂದೆಯೇ ಇದ್ದುವೆಂದು ನಿರ್ಧರಿಸಿದ್ದಾರೆ. ಇವುಗಳ ಮಿದುಳು ಮಾತ್ರ ಕಪಿಯ ಮಿದುಳಿಗಿಂತ ದೊಡ್ಡದಾಗಿರಲಿಲ್ಲ. ಇವುಗಳನ್ನು ಆಸ್ಟ್ರಲೋಪಿತಕಸ್ (ನೋಡಿ–ಕಪಿ–ಮಾನವ) ಎಂದು ಕರೆದಿದ್ದಾರೆ. ಪ್ಲೀಸ್ಟೊಸೀನ್ ಕಾಲದ ಆದಿಭಾಗದಲ್ಲಿ ಆಸ್ಟ್ರಲೋಪಿತಕಸ್ ಜೀವಿಗಳ ಉದಯವಾಯಿತು. ಇದರ ತಲೆಯ ಬುರುಡೆಯ ಕಾಂಡೈಲ್ ಮುಂದೆ ಸರಿದಿದೆ. ಸೊಂಟ ಅಗಲವಾಗಿದೆ. ಬೆನ್ನೆಲುಬು S ಬಾಗುಗಳನ್ನು ಹೊಂದಿದೆ. ಇದು ೧.೨ ಮೀ. ಎತ್ತರವಿತ್ತು. ಭೂಮಿಯ ಮೇಲೆ ನೆಟ್ಟಗೆ ನಡೆಯಿತು.

ಆಸ್ಟ್ರಲೊಪಿತಕಸ್ ಮಂಗನ ದವಡೆಗಳು ಬಹಳ ಗಾತ್ರವಿದ್ದು ಶಕ್ತಿಯುತವಾಗಿದ್ದುವು. ಹಲ್ಲುಗಳು ಮನುಷ್ಯನ ಹಲ್ಲಿನಂತೆಯೆ ಇದ್ದುವು. ಕೋರೆ ಹಲ್ಲು ಚಿಕ್ಕದಾಗಿತ್ತು. ಗೊರಿಲ್ಲದ ಹಲ್ಲಿನಂತೆ ಉದ್ದವಾಗಿ ಬಾಗಿರಲಿಲ್ಲ. ಹಲ್ಲುಗಳು ವಿಸ್ತಾರವಾದ ಕಮಾನಿನಲ್ಲಿ ಜೋಡಿಸಿಕೊಂಡಿದ್ದುವು. ಇಷ್ಟಾದರೂ ಇದರ ಮಿದುಳುಪೆಟ್ಟಿಗೆ ಬಹಳ ಚಿಕ್ಕದು. ಕಣ್ಣಿನ ಮೇಲುಭಾಗದಲ್ಲಿ ಹಾಗು ತಲೆಯ ಬುರುಡೆಯ ಹಿಂಭಾಗದಲ್ಲಿ ಅಡ್ಡವಾದ ಅತಿ ಮಂದವಾದ ಏಣುಗಳಿದ್ದುವು. ಇದರಿಂದಾಗಿ ತಲೆಯ ಚಿಪ್ಪು ಮಂದವಾಗಿ ಭಾರವಾಗಿತ್ತು. ಇದರ ಮಿದುಳುಪೆಟ್ಟಿಗೆ ೬೦೦ ಘನ ಸೆಂಮೀ ನಷ್ಟಿತ್ತು. ಅಂದರೆ ಗೊರಿಲ್ಲ ಮಿದುಳುಪೆಟ್ಟಿಗೆಗಿಂತ ಸ್ವಲ್ಪ ದೊಡ್ಡದಾಗಿತ್ತು. ಓಲ್ಡುವೈ ಮುಂತಾದ ಕಡೆ ಈ ಮೂಳೆಗಳ ಜೊತೆಯಲ್ಲಿಯೆ ಕೆಲವು ಅತಿ ಪ್ರಾಚೀನ ಉಪಕರಣಗಳು ದೊರೆತಿದ್ದರೂ ಆಸ್ಟ್ರಲೋಪಿತಕಸ್ ಪ್ರಾಣಿಯೆ ಅವುಗಳನ್ನು ತಯಾರಿಸಿ ಉಪಯೋಗಿಸುತ್ತಿತ್ತೆ ಎನ್ನುವುದು ಸಂದೇಹ. ಆದರೂ ಇವು ಕಪಿ ಕುಲಕ್ಕಿಂತ ಮಾನವ ವರ್ಗಕ್ಕೆ ಹೆಚ್ಚು ಹತ್ತಿರ ಬರುವುದರಿಂದ ಮಾನವನ ಪೂರ್ವಜರ ಸ್ವರೂಪ ಹೇಗಿದ್ದಿರಬಹುದೆಂಬುದನ್ನು ಇವುಗಳಿಂದ ಊಹಿಸಬಹುದು.

ಇದರಂತೆಯೆ ಚೀನದಲ್ಲಿ ದೊರೆತ ಕೆಲವು ದೊಡ್ಡ ಹಲ್ಲುಗಳು ಬೃಹದಾಕಾರದ ಕಪಿಮಾನವನಕುಲಕ್ಕೆ ಸೇರಿದವುಗಳಾಗಿರಬಹುದೆಂದು ಊಹಿಸಿದ್ದಾರೆ. ಇದೇ ರೀತಿಯ ದೊಡ್ಡ ಹಲ್ಲುಗಳುಳ್ಳ ದವಡೆಗಳು ಜಾವದಲ್ಲೂ ದೊರೆತಿವೆ. ಇವು ರೂಪ, ಗುಣ, ಆಕಾರಗಳಲ್ಲಿ ಮಾನವ ಕುಲದ ಕಡೆಗೆ ವಾಲಿವೆಯೇ ಅಥವಾ ಕಪಿಕುಲದ ಕಡೆಗೇ ಎನ್ನುವುದು ನಿರ್ಧಾರವಾಗಿಲ್ಲ.

ಜಾವದಲ್ಲಿ ಪ್ರಾಚೀನಮಾನವನ ಬೇರೆ ಬೇರೆ ಜಾತಿಯ ಮೂಳೆಗಳೂ ದೊರೆತಿವೆ. ಇವುಗಳಲ್ಲಿ ತುಂಬ ಪ್ರಾಚೀನವಾದುವು ದೊಡ್ಡ ಗೊರಿಲ್ಲ ಗಾತ್ರದ ಮಾನವನಿಗೆ ಸೇರಿದುವು. ಇದರ ಮೂಳೆಗಳು ಹಾಂಕಾಂಗ್‌ನಲ್ಲಿ ಸಿಕ್ಕಿವೆ. ಇದನ್ನು ಜೈಗಾಂಟೊಪಿಥಿಕಸ್ ಎಂಬ ಜಾತಿಗೆ ಸೇರಿಸಲಾಗಿದೆ. ವೈಡನ್ ರೀಚ್ ಎಂಬುವನು ಇದನ್ನು ಪಿಥೆಕ್ಯಾಂಥ್ರೊಪಸ್‌ಗಳ ಜನಕನೆಂದು ತೀರ್ಮಾನಿಸುತ್ತಾನೆ. ಇದು ಬಹಳ ಕೆಳದರ್ಜೆಯ ಜೀವಿಯೆಂದು ತೀರ್ಮಾನಿಸಲಾಗಿದೆ. ಏಕೆಂದರೆ ಇದರ ದವಡೆ ಗೊರಿಲ್ಲ ದವಡೆಗಿಂತಲೂ ದೊಡ್ಡದು; ಹಲ್ಲುಗಳು ಗೊರಿಲ್ಲ ಹಲ್ಲುಗಳನ್ನೆ ಹೆಚ್ಚು ಹೋಲುತ್ತವೆ.

ಪಿಥೆಕ್ಯಾಂಥ್ರೊಪಸ್ ಅಥವಾ ಜಾವ ಮಾನವ ಎಂದು ಕರೆಯಲ್ಪಡುವ ಕಪಿ ಮಾನವನ (ಪ್ಲೀಸ್ಟೋಸೀನ್ ಅಂತ್ಯದಲ್ಲಿದ್ದವ) ಮೂಳೆಗಳನ್ನು ಡುಬಾಯಿಸ್ ಡಚ್ ಡಾಕ್ಟರ್ ಜಾವದಲ್ಲಿ ಮೊದಲು ಪತ್ತೆ ಮಾಡಿದ. ಜಾವ ಮಾನವ ಸುಮಾರು ೧.೬೫ ಮೀ. ಎತ್ತರವಿದ್ದ. ನೇರವಾಗಿ ನಡೆಯಬಲ್ಲವನಾಗಿದ್ದರೂ ತಲೆ ಅಷ್ಟು ನೇರವಾಗಿ ಎತ್ತಲಾಗುತ್ತಿರಲಿಲ್ಲ. ತಲೆಯ ಚಿಪ್ಪು ತುಂಬ ದಪ್ಪ ಮತ್ತು ಭಾರವಾಗಿತ್ತು. ಕಪಿಯ ಮಿದುಳಿಗೂ ಈಗಿನ ಮಾನವನ ಮಿದುಳಿಗೂ ನಡುವಿನ ಗಾತ್ರದ ಮಿದುಳಿತ್ತು (೭೭೮–೧,೧೦೦ ಘನ ಸೆಂಮೀ). ದಪ್ಪ ಹಲ್ಲು, ದೊಡ್ಡ ದವಡೆ, ಕಿರುಹಣೆ. ಅತಿಯಾಗಿ ಮುಂಚಾಚಿದ ಹುಬ್ಬುಮೂಳೆ, ಕಿರುಕದಪು–ಇದು ಅವನ ಮುಖದ ಆಕಾರ. ಈ ಜಾವ ಮಾನವ ಉಪಯೋಗಿಸಿರಬಹುದಾದ ಉಪಕರಣಗಳು ಅವನ ಮೂಳೆಗಳೊಂದಿಗೆ ದೊರೆತಿಲ್ಲ.

ಸುಮಾರು ಇವನ ಕಾಲಕ್ಕೇ ಸೇರಿದ್ದು ಇವನನ್ನೇ ಕೆಲಮಟ್ಟಿಗೆ ಹೋಲುವ ಚೀನ ಮಾನವ (ಸಿನಾನ್‌ಥ್ರೊಪಸ್ ಪಿಕಿಸಿನ್‌ನೆಸ್) ಪೀಕಿಂಗ್ ಬಳಿಯ ಚುಕೊಟಿನ್ ಗವಿಗಳಲ್ಲಿ ವಾಸಮಾಡುತ್ತಿದ್ದ. ಇವನು ಜಾವ ಮಾನವನಷ್ಟು ಎತ್ತರವಾಗಿಲ್ಲದಿದ್ದರೂ ಧಡೂತಿಯಾಗಿದ್ದ. ಅವನಿಗಿಂತ ತಲೆಬುರುಡೆಯನ್ನೇ ಹೋಲುತ್ತಿದ್ದರೂ ಮಿದುಳುಕೋಶ ಸ್ವಲ್ಪ ದೊಡ್ಡದಾಗಿತ್ತು, (೧,೩೦೦ ಘನ ಸೆಂಮೀ). ಮುಖ ಜಾವ ಮಾನವನಷ್ಟು ರೂಕ್ಷವಾಗಿರಲಿಲ್ಲ. ಮೊದಲಬಾರಿಗೆ ಆದಿಮಾನವ ವಾಸ ಮಾಡುತ್ತಿದ್ದ ನೆಲೆಯಲ್ಲಿಯೆ ಅವನ ಮೂಳೆಗಳು, ಉಪಯೋಗಿಸುತ್ತಿದ್ದ ಉಪಕರಣಗಳು, ಇತರ ಸಲಕರಣೆಗಳು ದೊರೆತಿರುವುದರಿಂದ ಅವನ ಜೀವನ ವಿಧಾನ, ಆಹಾರ ಮುಂತಾದುವು ಬೆಳಕಿಗೆ ಬಂದಿವೆ. ಆತ ಬೆಂಕಿಯ ಉಪಯೋಗವನ್ನು ಕಂಡುಕೊಂಡಿದ್ದ. ಆಹಾರ ಬೇಯಿಸುವುದನ್ನೂ ತಿಳಿದಿದ್ದ. ಕಲ್ಲನ್ನು ಚಕ್ಕೆ ಎಬ್ಬಿಸಿ ಆಯುಧಗಳನ್ನು ಮಾಡಿಕೊಳ್ಳುತ್ತಿದ್ದ. ಗವಿಗಳಲ್ಲಿ ತೋಳ, ಕಾಡುನಾಯಿ, ನರಿ, ಕರಡಿಗಳ ಮೂಳೆಗಳೂ ದೊರೆತಿವೆ. ಅವುಗಳು ಆಗಾಗ ಅವನಮೇಲೆ ಮುತ್ತಿಗೆ ಹಾಕುತ್ತಿದ್ದುವೊ ಅಥವಾ ಆಹಾರಕ್ಕಾಗಿ ಅವನ್ನು ಬೇಟೆಯಾಡುತ್ತಿದ್ದನೊ ತಿಳಿಯದು. ಜಿಂಕೆ, ಕುರಿ, ಎಮ್ಮೆ, ಕಾಡುಕೋಣ, ಒಂಟೆ, ರೈನೋ, ಉಷ್ಟ್ರಪಕ್ಷಿ, ಆನೆ ಮುಂತಾದುವುಗಳ ಮೂಳೆಗಳನ್ನು ಸೀಳಿ ಹಾಕಿರುವುದರಿಂದ ಆತ ಅವುಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದುದು ಖಚಿತ. ಮನುಷ್ಯನ ಮೂಳೆಗಳೂ ಸೀಳಿ ಬಿದ್ದಿರುವುದನ್ನು ನೋಡಿದರೆ ಆತ ನರಭಕ್ಷಕನೂ ಆಗಿದ್ದನೇ ಎಂಬ ಸಂದೇಹ ಬರುತ್ತದೆ. ಆತನಂಥವರೇ ಮುಂದೆ ವಿಕಾಸಗೊಂಡು ಆಧುನಿಕ ಮಂಗೋಲ್ ಬುಡಕಟ್ಟಿಗೆ ಸೇರಿದ ಚೀನ ಮಾನವರಾದರೇ? ಹೇಳುವುದಕ್ಕಾಗುವುದಿಲ್ಲ.

ಇವರೆಲ್ಲ ಸುಮಾರು ನಾಲ್ಕೈದು ಲಕ್ಷ ವರ್ಷಗಳಷ್ಟು ಹಿಂದೆ ಇದ್ದ ಆದಿಮಾನವರು. ಯೂರೋಪಿನಲ್ಲೂ ಸರಿ ಸುಮಾರು ಈ ಕಾಲದಲ್ಲಿದ್ದ ಆದಿಮಾನವರ ಎಲುಬುಗಳು ದೊರೆತಿವೆ. ಜರ್ಮನಿಯ ಹಿಡೆಲ್‌ಬರ್ಗ್‌ನಲ್ಲಿ ದೊರೆತ ಬೃಹದ್ಗಾತ್ರದ ದವಡೆಯೇ ಯೂರೋಪಿನಲ್ಲಿದ್ದ ಮಾನವನ ಅತ್ಯಂತ ಪ್ರಾಚೀನ ಕುರುಹು. ಇದು ಪೀಕಿಂಗ್ ಮಾನವನಿಗಿಂತಲೂ ಸ್ವಲ್ಪ ಪ್ರಾಚೀನವಿದ್ದರೂ ಇರಬಹುದು. ಇದಕ್ಕಿಂತ ಈಚಿನದಾದ ಬಹುಶಃ ಪೀಕಿಂಗ್ ಮಾನವನ ಸಮಕಾಲಕ್ಕೆ ಬರಬಹುದಾದ ಮತ್ತೊಂದು ತಲೆ ಬುರುಡೆ ಹಂಗೆರಿಯ ವಿರ್ಟೆಸ್ಸೊಲೊಸ್‌ನಲ್ಲಿ ದೊರೆತಿದೆ. ಇದು ಕಪಿಮಾನವನದೇ ಇಲ್ಲವೆ ಪೂರ್ಣ ಮಾನವನದೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಆಫ್ರಿಕದ ಓಲ್ಡುವೈನಲ್ಲಿ ಡಾ॥ ಲೀಕಿಯವರು ಕಂಡುಹಿಡಿದ ಚೆಲ್ಲಿಯನ್ ತಲೆ ಬುರುಡೆಯೂ ಪೀಕಿಂಗ್ ಮಾನವನ ಕಾಲಕ್ಕೇ ಸೇರಿರಬಹುದು. ಆಫ್ರಿಕದ ವಾಯುವ್ಯ ಭಾಗದಲ್ಲಿ ಟರ್ನಿಫೈನ್‌ನಲ್ಲಿ ದೊರೆತ ಟರ್ನಿಫೈನ್ ಮಾನವನ ದವಡೆಯ ಕೆಲಭಾಗಗಳೊಂದಿಗೆ ಚಿಕ್ಕ ಮಗುವೊಂದರ ಬುರುಡೆಯ ಪಳೆಯುಳಿಕೆಗಳು, ಆಷುಲಿಯನ್ ಶಿಲಾಯುಧಗಳೂ ಸಿಕ್ಕಿವೆ. ಇವುಗಳ ಕಾಲ ಪ್ಲೀಸ್ಟೋಸೀನ್ ಮಧ್ಯಭಾಗವಿರಬಹುದೆಂದು ಊಹಿಸಲಾಗಿದೆ.

ಜರ್ಮನಿಯ ಸ್ಟೈನ್ ಹೀಮ್‌ನಲ್ಲಿ ಸಿಕ್ಕಿರುವ ತಲೆಬುರುಡೆಯ ಚೂರು ದಪ್ಪ ಚಿಪ್ಪುಳ್ಳದ್ದು; ಹಿಂಭಾಗ ತೀರ ತಗ್ಗಾಗಿಲ್ಲ. ಹಣೆ ಹುಬ್ಬಿನ ಭಾಗದಲ್ಲಿ ಹೆಚ್ಚು ಮುಂಚಾಚಿದ್ದರೂ ಮುಖದ ರಚನೆ ತೀರ ಪ್ರಾಚೀನವೆನ್ನಲಾಗದು. ಇಂಗ್ಲೆಂಡಿನ ಸ್ವಾನ್ಸ್‌ಕೂಂಬ್‌ನಲ್ಲಿ ದೊರೆತ ತಲೆಬುರುಡೆಯ ಭಾಗವೂ ಹೆಚ್ಚು ಪರಿವರ್ತಿತವಾದುದೆಂದು ಊಹಿಸುತ್ತಾರೆ. ಈತನ ಮಿದುಳಿನ ಪ್ರಮಾಣ ೧,೩೨೫ ಘನ ಸೆಂಮೀ ನಷ್ಟಿತ್ತು. ಈತ ಕಲ್ಲು ಕೊಡಲಿಗಳನ್ನು ಉಪಯೋಗಿಸುತ್ತಿದ್ದ. ಈ ಕೊಡಲಿಗಳು ಗಟ್ಟಿಯಾಗಿ ಚೂಪಾಗಿದ್ದುವು. ಹಾಗೆಯೇ ಫ್ರಾನ್ಸಿನ ಫಾನ್ಟೆಷವಾಡೆ ಬಳಿಯ ಗವಿಯಲ್ಲಿ ಎರಡು ತಲೆಬುರುಡೆಗಳು ದೊರೆತಿವೆ. ಇವುಗಳ ಮೇಲ್ಭಾಗ ಬೆಳವಣಿಗೆ ಹೊಂದಿದೆ. ಹುಬ್ಬು ಮೂಳೆ ಅಷ್ಟು ದಪ್ಪನಾಗಿಲ್ಲ. ಪೂರ್ಣ ಮಾನವರೆಂದು ಕರೆಸಿಕೊಳ್ಳಲು ಇವರೆಲ್ಲ ಅರ್ಹರಾಗಿದ್ದರೇ ಎಂಬುದು ಇನ್ನೂ ನಿರ್ಧಾರವಾಗಬೇಕಾಗಿದೆ. ಈ ಮೇಲೆ ತಿಳಿಸಿರುವ ಪಂಗಡಗಳೆಲ್ಲ ಸುಮಾರು ಐದು ಲಕ್ಷ ವರ್ಷಗಳಿಂದ ಒಂದು ಲಕ್ಷ ವರ್ಷಗಳಷ್ಟು ಹಿಂದಿನವೆಂದು ಸ್ಥೂಲವಾಗಿ ಹೇಳಬಹುದು. ೧೯೧೧ ರಲ್ಲಿ ಇಂಗ್ಲೆಂಡಿನ ಪಿಲ್ಟ್ ಡೌನ್ ಬಳಿ ಪ್ರಥಮ ಹಿಮಯುಗದ ಶಿಲಾ ಸಂಪುಟಗಳಲ್ಲಿ ಮಾನವನ ಒಂದು ಪ್ರಾಚೀನ ಅವಶೇಷವನ್ನು ಕಂಡು ಹಿಡಿಯಲಾಯಿತು. ಇದನ್ನು ಪಿಲ್ಟ್ ಡೌನ್ ಮಾನವನೆಂದು ಕರೆಯಲಾಯಿತು. ತದನಂತರ ನಡೆದ ವೈಜ್ಞಾನಿಕ ಸಂಶೋಧನೆಗಳಿಂದಾಗಿ ಇದೊಂದು ಮೋಸವೆಂದು ಸ್ಪಷ್ಟವಾಗಿದೆ.

ಇನ್ನೂ ಮುಂದೆ ಬಂದರೆ ನಮಗೆ ಕಾಣಸಿಗುವ ಮುಖ್ಯವಾದ ಪಂಗಡ ನಿಯಾಂಡರ್‌ತಲ್ ಮಾನವರದು. ಜರ್ಮನಿಯ ನಿಯಾಂಡರ್ ಕಣಿವೆಯಲ್ಲಿ ಇವರ ಮೂಳೆಗಳು ದೊರೆತುದರಿಂದ ಇವರಿಗೆ ಈ ಹೆಸರು ಬಂದಿದೆ. ಸ್ಪೇನ್, ಫ್ರಾನ್ಸ್, ಬೆಲ್ಜಿಯಂ, ರಷ್ಯ, ಚೆಕೊಸ್ಲೊವಾಕಿಯ, ಯುಗೋಸ್ಲಾವಿಯ ಇಟಲಿಗಳಲ್ಲೂ ಇವರ ಅವಶೇಷಗಳು ದೊರೆತಿವೆ. ಒರಟು ಮುಖದ ಈ ಪ್ರಾಣಿಗೆ ಇಳಿಜಾರು ಹಣೆ, ಉದ್ದ ಮತ್ತು ಅಗಲವಾಗಿ ಹರಡಿದ ಮೂಗು, ದೊಡ್ಡ ದವಡೆ, ಅತಿ ಕಿರಿದಾದ ಗಲ್ಲ ಇತ್ತು. ಸ್ವಲ್ಪ ಬಗ್ಗಿ ನಡೆಯುತ್ತಿದ್ದ ಈ ಕುಳ್ಳ ವ್ಯಕ್ತಿಗೆ ಭುಜ ವಿಸ್ತಾರ, ಎದೆ ದಪ್ಪ, ಕಾಲುಗಳು ಗಿಡ್ಡ. ಸುಮಾರು ಎಪ್ಪತ್ತೈದು ಸಾವಿರ ವರ್ಷಗಳ ಹಿಂದೆ ಹಿಮಯುಗದಲ್ಲಿ ಯೂರೋಪಿನ ಈ ಭಾಗಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಈ ವ್ಯಕ್ತಿ ರೂಕ್ಷನಾಗಿದ್ದುದರಲ್ಲಿ ಆಶ್ಚರ್ಯವಿಲ್ಲ. ಇವನ ಮಿದುಳು ಕೋಶ ೧,೪೫೦ ಘನ ಸೆಂಮೀ ನಷ್ಟಿದೆ. ಆಧುನಿಕ ಮಾನವನ ಮಿದುಳುಕೋಶದಷ್ಟೇ ಇದೆ. ಹಿಮಯುಗದ ಅತಿಶೀತವನ್ನೆದುರಿಸಲು ಈತ ಗವಿಗಳನ್ನಾಶ್ರಯಿಸಿದ್ದ. ಆದರೆ ಇದೇ ಆಶ್ರಯಕ್ಕಾಗಿಯೇ ಧಾವಿಸುತ್ತಿದ್ದ ಬೃಹತ್ಕರಡಿಗಳನ್ನೂ ಉದ್ದ ಕೋರೆಯ ಹುಲಿಗಳನ್ನೂ ಅವನು ಎದುರಿಸಬೇಕಾಗಿತ್ತು. ಆಹಾರಕ್ಕಾಗಿ ಬೇಟೆಯಾಡಬೇಕಾಗಿತ್ತು. ಆದ್ದರಿಂದ ಉಪಕರಣಗಳನ್ನು ತಯಾರಿಸುವುದರಲ್ಲಿ ಹೆಚ್ಚು ಮುಂದುವರಿದಿದ್ದ. ಕಲ್ಗೊಡಲಿ, ಕಲ್ಲನ್ನು ಚಕ್ಕೆ ಎಬ್ಬಿಸಿ ಮಾಡಿಕೊಂಡ ಹರಿತವಾದ ಚಾಕು, ಕೊರೆಯುವ, ಹೆರೆಯುವ ಸಲಕರಣೆ ಮೊದಲಾದುವನ್ನು ತಯಾರಿಸಿದ್ದ. ಬೇಟೆಯಲ್ಲಿ ನಿಷ್ಣಾತನಾಗಿದ್ದು ಆನೆಯಂಥ ಭಾರಿ ಪ್ರಾಣಿಯನ್ನೂ ಕಂದರದಲ್ಲಿ ಕೆಡವಿ ದಪ್ಪ ಬಂಡೆಗಳಿಂದ ಬಡಿದು ಸಾಯಿಸಬಲ್ಲ

ಸಾಹಸಿಗನಾಗಿದ್ದ. ಚಳಿಯಿಂದಲೂ ಮೃಗಗಳಿಂದಲೂ ರಕ್ಷಿಸಿಕೊಳ್ಳಲು ಬೆಂಕಿಯನ್ನು ಉಪಯೋಗಿಸುತ್ತಿದ್ದ. ಪ್ರಾಣಿಗಳ ಚರ್ಮವನ್ನು ಸುಲಿದು ಜೋಡಿಸಿ ಉಡುಪು ತಯಾರಿಸಿಕೊಳ್ಳುತ್ತಿದ್ದ. ಬೇಟೆಗಾಗಿ ಆಹಾರಕ್ಕಾಗಿ ಪ್ರಾಣಿಗಳನ್ನು ಹಿಂಬಾಲಿಸಬೇಕಾಗಿದ್ದುದರಿಂದ ಅಲೆಮಾರಿಯಾಗಿದ್ದ.

ಹಿಮಪ್ರಪಾತದ ನೀರ್ಗಲ್ಲುಗಳ ಕೊರೆತ ಕಷ್ಟಗಳ ನಡುವೆ ಸಿಕ್ಕಿಹಾಕಿಕೊಂಡು ಅದರಲ್ಲಿಯೇ ಈಜಿ ಜಯಿಸಿದ. ಈ ಒರಟು ಮಾನವ ಯೂರೋಪಿನ ಭಾಗಗಳಲ್ಲಿದ್ದ ಕಾಲದಲ್ಲಿಯೇ ಬೇರೆಡೆಗಳ ಆದಿಮಾನವ ವ್ಯತ್ಯಸ್ತವಾಗುತ್ತ ಬೆಳೆದು ಹೆಚ್ಚು ಹೆಚ್ಚು ಆಧುನಿಕನಾಗುತ್ತಿದ್ದ. ಈ ಬೆಳೆವಣಿಗೆಯನ್ನೇ ಜಾವ, ಆಸ್ಟ್ರೇಲಿಯ ಪ್ರದೇಶಗಳಲ್ಲಿ ಕಂಡುಬಂದಿರುವ ಸೋಲೋ ಮಾನವನಲ್ಲೂ, ಆಫ್ರಿಕದ ರೊಡೇಷಿಯ ಮಾನವನಲ್ಲೂ ಗುರುತಿಸಬಹುದು. ಇವರೂ ಸರಿಸುಮಾರು ನಿಯಾಂಡರ್‌ಥಾಲ್ ಮಾನವನ ಕಾಲಕ್ಕೇ ಇದ್ದವರಾದರೂ ಅವರಿಗಿಂತ ವಿಭಿನ್ನರೀತಿಯ ವ್ಯಕ್ತಿಗಳಾಗಿದ್ದರು.

ಹಿಮಯುಗದ ಹಿಂಜರಿತದಿಂದ ಯೂರೋಪಿನಲ್ಲಿ ಶಾಖ ಹರಡುತ್ತಿದ್ದಂತೆ ಪ್ರಪಂಚದ ಬೇರೆ ಭಾಗಗಳಿಂದ ನಿಯಾಂಡರ್‌ತಲ್ ಮಾನವನಿಗಿಂತಲೂ ಮುಂದುವರಿದ ಮಾನವಪಂಗಡ ಇಲ್ಲಿಗೆ ವಲಸೆಬಂದು ನಿಯಾಂಡರ್‌ತಲ್ ಮಾನವರನ್ನು ಕೊಂದು ನಾಶ ಮಾಡಿರಬೇಕೆಂದು ಒಂದು ವಾದ. ಆದರೆ ಅದು ಹಾಗಾಗದೆ ಕಾಲಕ್ರಮೇಣ ಇವರು ಹೊಸ ಜನಾಂಗದೊಂದಿಗೆ ಬೆರೆತು ಒಂದಾಗಿ ಹೋಗಿರುವ ಸಂಭವವೇ ಹೆಚ್ಚು. ಪ್ಯಾಲೆಸ್ಟೈನಿನ ಮೌಂಟ್ ಕಾರ್ಮೆಲ್ ಗವಿಗಳಲ್ಲಿ ದೊರೆತ ಮೂಳೆಗಳು ಇದಕ್ಕೆ ಪುಷ್ಟಿ ಕೊಡುತ್ತವೆ.

ಯೂರೋಪಿನಲ್ಲಿ ಹಿಮಯುಗ ಕಳೆದು ನೀರ್ಗಲ್ಲುಗಳು ಕರಗಿದ ಕಾಲಕ್ಕೆ ಅಲ್ಲಿ ಬೇರೆ ಜನಾಂಗ ವಾಸ ಮಾಡುತ್ತಿದ್ದುದಕ್ಕೆ ಹಲವೆಡೆ ಆಧಾರಗಳು ದೊರೆತಿವೆ. ಫ್ರಾನ್ಸಿನ ಕ್ರೋಮಾಗ್ನಾನ್ ಗವಿಗಳಲ್ಲಿ ಇವರ ಅವಶೇಷಗಳು ಹೆಚ್ಚಾಗಿ ದೊರೆತು ಈ ಮಾನವನಿಗೆ ಕ್ರೋಮಾಗ್ನಾನ್ ಮಾನವನೆಂಬ ಹೆಸರು ಬಂದಿದೆ. ಇವರು ಪೂರ್ಣವಾಗಿ ಬೆಳೆವಣಿಗೆ ಹೊಂದಿ ಹೋಲಿಕೆಯಲ್ಲಿ ಆಧುನಿಕ ಮಾನವನಿಗೆ ಹತ್ತಿರವಾಗಿದ್ದಾರೆ. ದೀರ್ಘದೇಹಿಗಳಾಗಿದ್ದ ಇವರಿಗೆ ದೊಡ್ಡದಾದ ಉದ್ದುದ್ದ ತಲೆಯಿದ್ದು ಆಧುನಿಕ ಮಾನವನಿಗಿಂತ ದಪ್ಪ ಮಿದುಳಿತ್ತು. ತೆಳುಮೂಗು, ತುಂಬುಗಲ್ಲಗಳಿದ್ದುವು. ಕಲ್ಲಿನ ಹಲವು ರೀತಿಯ ಆಯುಧಗಳನ್ನು ತಯಾರಿಸುವುದರಲ್ಲಿ ಇವರು ನಿಷ್ಣಾತರಾಗಿದ್ದರು. ಮೂಳೆ, ಪ್ರಾಣಿಗಳ ಚರ್ಮಗಳನ್ನು ಉಪಯೋಗಿಸಿ ಬೀಸಿ ಹೊಡೆಯಬಲ್ಲ ಆಯುಧಗಳು ಇವರಿಗೆ ಗೊತ್ತಿದ್ದುವು. ಚಿಕ್ಕ ಕಲ್ಲಿನ ಚಕ್ಕೆಗಳನ್ನೆಬ್ಬಿಸಿ ಬಾಣದ ತುದಿಗೆ ಸೇರಿಸುತ್ತಿದ್ದರು. ಕೊಕ್ಕೆಯಾಕಾರದಲ್ಲಿ ಮೂಳೆಗಳನ್ನು ಕೊರೆದು ಪ್ರಾಣಿಗಳ ಮಾಂಸಖಂಡವನ್ನು ಚುಚ್ಚಿ ಹಿಡಿಯಬಲ್ಲಂತೆ ಮಾಡಿಕೊಂಡಿದ್ದರು. ಪ್ರಾಣಿಗಳನ್ನು ಹಿಡಿಯಲು ಮಂತ್ರ ಮಾಟಗಳನ್ನೂ ನಡೆಸುತ್ತಿದ್ದಂತೆ ತಿಳಿದುಬರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಇವರು ಚತುರ ಕಲಾವಿದರಾಗಿದ್ದರು. ಗವಿಗಳ ಗೋಡೆಗಳಮೇಲೆ ಚಿತ್ರಿಸಿರುವ ಆ ಕಾಲದ ಪ್ರಾಣಿಗಳ ಚಿತ್ರಗಳು ಅದ್ಭುತವಾಗಿವೆ. ಯೂರೋಪಿನಲ್ಲಿ ಇವರು ಕಾಣಿಸಿಕೊಂಡ ಕಾಲ ಸುಮಾರು ನಲವತ್ತು ಸಾವಿರ ವರ್ಷಗಳ ಹಿಂದೆ. ಇವರ ಕಾಲದಲ್ಲಿಯೇ ಪ್ರಪಂಚದ ಇತರ ಕಡೆಗಳಲ್ಲೂ ಆಧುನಿಕ ಮಾನವ ಕಾಣಿಸಿಕೊಳ್ಳುತ್ತಾನೆ. ಒಟ್ಟಿನಲ್ಲಿ ಸುಮಾರು ಹತ್ತು ಲಕ್ಷ ವರ್ಷಗಳ ಹಿಂದೆ ಕಾಣಿಸಿಕೊಂಡ ಮಾನವಕಪಿ ವಿಕಾಸ ಹೊಂದುತ್ತ ಐದು ಲಕ್ಷ ವರ್ಷಗಳ ಹಿಂದೆ ಆದಿಮಾನವನಾಗಿ ಬೆಳೆದು ಸುಮಾರು ನಲವತ್ತು ಸಾವಿರ ವರ್ಷಗಳ ಹಿಂದೆ ಆಧುನಿಕ ಮಾನವನಾಗಿ ಪೂರ್ಣವಾಗಿ ಬೆಳೆದನೆಂದು ಹೇಳಬಹುದು.

(ಎಲ್.ಎಸ್.ಜಿ.;ಎಂ.ಎಚ್.)

**ಆದಿಸಹಕಾರ ಜೀವನ:** ಪ್ರಕೃತಿಯಲ್ಲಿ ಎರಡು ಪ್ರಭೇದಗಳ ಸಮುದಾಯಗಳೊಳಗೆ ಜೀವಿಗಳು ಒಂದರೊಡನೊಂದು ಪರಸ್ಪರ ಸಹಕಾರದಿಂದ ವರ್ತಿಸುವಿಕೆ. ಈ ವರ್ತನೆಯಲ್ಲಿ ಅವುಗಳೆರಡಕ್ಕೂ ಯಾವುದಾದರೊಂದು ರೀತಿಯಲ್ಲಿ ಉಪಯೋಗವಿದೆ. ಆದರೆ ಈ ಸಹಕಾರ ಜೀವನವು ಆ ಎರಡು ಜೀವಿಗಳಿಗೆ ಬಂಧಕವಲ್ಲ. ಅಲ್ಲೀ ಎಂಬಾತನ ಅಭಿಪ್ರಾಯದಂತೆ, ಪ್ರಕೃತಿಯ ಎಲ್ಲೆಡೆಯಲ್ಲಿಯೂ ಆದಿಸಹಕಾರ ಜೀವನದ ಆರಂಭವನ್ನು ನಾವು ಕಾಣಬಹುದು. ಉದಾಹರಣೆಗೆ ಕಡಲಲ್ಲಿ ಏಡಿಗಳು ಮತ್ತು ಸಿಲೆಂಟರೇಟ ಕಡಲ ಎನಿಮೊನ್‌ಗಳು ಸಾಮಾನ್ಯವಾಗಿ ಎರಡು ಪ್ರಾಣಿಗೂ ಉಪಯೋಗವಾಗುವ ರೀತಿಯಲ್ಲಿ ಸಂಬಂಧವೇರ್ಪಡಿಸಿಕೊಂಡಿವೆ. ಏಡಿಯ ಬೆನ್ನ ಮೇಲೆ ಕಡಲ ಎನಿಮೊನ್‌ಗಳು ಬೆಳೆದು ಭ್ರಮೆಹುಟ್ಟಿಸಿ ಏಡಿಗೆ ರಕ್ಷಣೆಯನ್ನು ಕೊಡುತ್ತವೆ. ಅದರ ಬದಲು ಸಿಲೆಂಟರೇಟಗಳಿಗೆ ಏಡಿಯಿಂದಾಗಿ ಚಲನೆ ಮತ್ತು ಏಡಿಗಳು ತಿಂದುಳಿದ ಆಹಾರಗಳು ದೊರಕುವುದು. ಏಡಿ ಮತ್ತು ಕಡಲ ಎನಿಮೊನ್‌ಗಳು ಒಂದಕ್ಕೊಂದು ಅವಶ್ಯವೇ ಅಲ್ಲ. ಆದರೆ ಮೇಲಿನ ವ್ಯವಸ್ಥೆಯಲ್ಲಿ ಎರಡು ಪ್ರಾಣಿಗಳಿಗೂ ಅನುಕೂಲವುಂಟು.

ಆದಿಸಹಕಾರ ಜೀವನವು ಒಂದು ಉಪಯುಕ್ತವಾದ ಪರಸ್ಪರ ಸಹಕಾರಿ ವರ್ತನೆ. ಈ ವರ್ತನೆಯಲ್ಲಿ ಎರಡು ಪ್ರಭೇದಗಳಿಗೂ ಉಪಯುಕ್ತ ಪರಿಣಾಮಗಳಿದ್ದುದರಿಂದ ಬೆಳೆವಣಿಗೆ ಸಮೀಕರಣ (ಗ್ರೋಥ್ ಈಕ್ವೇಷನ್) ಲಾಭದಾಯಕವಾಗಿ ಜೀವಿಸಮುದಾಯಗಳು ಬೆಳೆದು ಸಮೃದ್ಧಿಯಾಗಿ ಸಮತೋಲನ ಮಟ್ಟವನ್ನು ತಲುಪುತ್ತವೆ. ಇದರಿಂದ ಎರಡು ಜೀವ ಸಮುದಾಯಗಳಿಗೂ ಉಪಯೋಗ ಉಂಟು. ಈ ಲಾಭದಾಯಕ ಪರಿಣಾಮಗಳು ಕೇವಲ ಸಮುದಾಯದ ಗಾತ್ರ ಅಥವಾ ಬೆಳೆವಣಿಗೆ ಪರಿಮಾಣ (ಗ್ರೋಥ್ ರೇಟ್) ವನ್ನು ಮಾತ್ರ ವೃದ್ಧಿಸುತ್ತದೆ. ಅಲ್ಲದೆ, ಜೀವಿಯ ಬೆಳೆವಣಿಗೆ ಅಥವಾ ಅದು ಬದುಕಿ ಉಳಿಯಲು ಅಗತ್ಯವಿಲ್ಲ.

(ಎಮ್.ಎನ್.ಎಮ್.)

**ಆದ್ಯಜೀರ್ಣಾಂಗ (ಆದ್ಯ ಜೀರ್ಣನಾಳ):** ಹಲವಾರು ಕ್ರಿಯೆಗಳನ್ನು ನಿರ್ವಹಿಸಿ, ಪ್ರಾಣಿಗಳ ಭ್ರೂಣದ ಬೆಳೆವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುವ ಭ್ರೂಣದ ರಚನೆ. ಪ್ರಾಣಿಗಳ ಬೆಳೆವಣಿಗೆಯಲ್ಲಿ ನಿಷೇಚಿತ ಅಂಡಾಣು ವಿದಲನಗೊಂಡು ಜೀವಕೋಶಗಳ ಚೆಂಡೊಂದು ಉತ್ಪತ್ತಿಯಾಗುತ್ತದೆ. ಈ ಜೀವಕೋಶಗಳ ರಾಶಿಯಲ್ಲಿ ಅವಕಾಶವೊಂದು ಕಾಣಿಸಿಕೊಂಡು ಇದು ಬ್ಲಾಸ್ಟುಲ ಆಗುತ್ತದೆ. ಅಂಡಾಣು ರಚನೆಯನ್ನನುಸರಿಸಿ ಹಾಗು ಅದರಲ್ಲಿರುವ ಭಂಡಾರದ ಮೊತ್ತವನ್ನು ಅವಲಂಬಿಸಿ ಬ್ಲಾಸ್ಟುಲ್ ರೂಪವೂ ಕೂಡ ಬದಲಾಗುತ್ತದೆ. ಆಂಫಿಯಾಕ್ಸಸ್‌ನಂತಹ ಆದಿ ಕಶೇರುಕ ಪ್ರಾಣಿಯ ಬೆಳೆವಣಿಗೆಯಲ್ಲಿ ಟೊಳ್ಳಾದ ಚೆಂಡಿನಂತಿರುವ ಬ್ಲಾಸ್ಟುಲ ಕಾಣಿಸಿಕೊಳ್ಳುತ್ತದೆ. ನಡುವೆ ಇರುವ ಅವಕಾಶ ಬ್ಲಾಸ್ಟೋಸೀಲ್. ಗ್ಯಾಸ್ಟ್ರುಲೀಕರಣ ಕಾಲದಲ್ಲಿ ನಡೆಯುವ ಜೀವಕೋಶಗಳ ವ್ಯಾಪಕ ವಲಸೆ ಮತ್ತು ಚಲನೆಗಳಿಗೆ ಈ ಬ್ಲಾಸ್ಟೋಸೀಲ ಅವಕಾಶವು ಸ್ಥಳವನ್ನು ಒದಗಿಸುತ್ತದೆ. ಹೀಗೆ ಟೊಳ್ಳಾಗಿರುವ ಬ್ಲಾಸ್ಟುಲಾವು ಒಂದು ತುದಿಯಲ್ಲಿ ಒಳಕ್ಕೆ ಮಡಿಚಿಕೊಂಡು ಎರಡು ಪದರದ ಬಟ್ಟಲಿನ ಆಕಾರವನ್ನು ತಾಳಬಹುದು. ಇಲ್ಲಿ ಮಡಿಕೆಯು ಒಳಗೆ ತೂರಿ ಇನ್ನೊಂದು ತುದಿಯಲ್ಲಿರುವ ಪದರವನ್ನು ತಲುಪಿದಂತೆ ಬ್ಲಾಸ್ಟೋಸೀಲ್ ಅವಕಾಶವು ಕಣ್ಮರೆಯಾಗುವುದಾದರೂ ಬಟ್ಟಲಿನ ನಡುವೆ ಹೊಸದೊಂದು ಅವಕಾಶವು ಕಾಣಿಸಿಕೊಳ್ಳುತ್ತದೆ. ಇದೇ ಗ್ಯಾಸ್ಟ್ರೋಸೀಲ್ ಅಥವಾ ಆದ್ಯಜೀರ್ಣಾಂಗ. ಗ್ಯಾಸ್ಟ್ರುಲಾದಲ್ಲಿ ಕಾಣಿಸಿಕೊಳ್ಳುವ ಅವಕಾಶವಾದುದರಿಂದ ಗ್ಯಾಸ್ಟ್ರೋಸೀಲ್ ಎಂದೂ, ಮುಂದಿನ ಬೆಳೆವಣಿಗೆಯಲ್ಲಿ ಈ ಅವಕಾಶವೇ ಅನ್ನನಾಳದ ಅವಕಾಶವಾಗುವುದರಿಂದ ಆದ್ಯಜೀರ್ಣಾಂಗವೆಂದೂ ಹೆಸರು ಬಂದಿದೆ. ಈ ವಿಧಾನದಲ್ಲಿ ಆದ್ಯ ಜೀರ್ಣಾಂಗವು ಅಂತರ್ವಲನ ವಿಧಾನದಿಂದ ಕಾಣಿಸಿಕೊಳ್ಳುತ್ತದೆ. ಕಪ್ಪೆಯಲ್ಲಿಯೂ ಇದೇ ವಿಧಾನದಲ್ಲಿ ಅದು ಕಾಣಿಸಿಕೊಳ್ಳುತ್ತದೆ. ಆದರೆ ಹೈಡ್ರ ಮುಂತಾದ ಜಠರಾಂಶ ಜೀವಿ ಪ್ರಾಣಿಗಳ ಬೆಳೆವಣಿಗೆಯಲ್ಲಿ ಗ್ಯಾಸ್ಟ್ರುಲೀಕರಣ ವಿಧಾನವು ಭಿನ್ನವಾಗಿದೆ. ತತ್ಪರಿಣಾಮವಾಗಿ ಆದ್ಯಾಜೀರ್ಣಾಂಗ ಕಾಣಿಸಿಕೊಳ್ಳುವ ವಿಧಾನವು ಭಿನ್ನವಾಗಿದೆ. ಇಲ್ಲಿಯೂ ಬ್ಲಾಸ್ಟುಲ ಟೊಳ್ಳಾದ ಚೆಂಡಿನಂತಿದ್ದು ನಡುವೆ ಬ್ಲಾಸ್ಟೋಸೀಲ್ ಅವಕಾಶವಿರುತ್ತದೆ. ಬ್ಲಾಸ್ಟೋಸೀಲ್ ಅವಕಾಶವನ್ನು ಸುತ್ತುವರಿದ ಜೀವಕೋಶ ಪದರದಿಂದ ಹೊಸ ಜೀವಕೋಶಗಳು ಅಂಕುರಿಸಿ ಕಳಚಿಕೊಂಡು ಬ್ಲಾಸ್ಟೋಸೀಲ್ ಅವಕಾಶದಲ್ಲಿ ತುಂಬಿಕೊಳ್ಳುತ್ತವೆ. ಹೀಗಾಗಿ ಅದು ಅಳಿಸಿ ಹೋಗುತ್ತದೆ. ಈಗ ಈ ತುಂಬಿಕೊಂಡ ಜೀವಕೋಶಗಳ ನಡುವೆ ಬಿರುಕೊಂದು ಕಾಣಿಸಿಕೊಂಡು ಕ್ರಮೇಣ ವಿಸ್ತರಿಸುತ್ತದೆ ಮತ್ತು ಆ ಕೋಶಗಳು ಹೊರಪದರದ ಒಳಗೆ ಎರಡನೆಯ ಪದರವಾಗಿ ವ್ಯವಸ್ಥೆಗೊಳ್ಳುತ್ತವೆ. ಹೀಗೆ ನಡುವೆ ಕಾಣಿಸಿಕೊಳ್ಳುವ ಹೊಸ ಅವಕಾಶವೇ ಆದ್ಯಜೀರ್ಣಾಂಗ.

ಭಂಡಾರ ಅಧಿಕವಾಗಿರುವ ಪಕ್ಷಿಯ ಮೊಟ್ಟೆಯ ಬೆಳೆವಣಿಗೆಯಲ್ಲಿ ಬ್ಲಾಸ್ಟುಲ ಒಂದು ಫಲಕದಂತೆ ಕಾಣಿಸಿಕೊಳ್ಳುತ್ತದೆ. ಈ ಫಲಕದ ಹೊರ ಅಂಚಿನ ಬಳಿ ಜೀವಕೋಶಗಳು ಅಂತರ್ವಲಿಸಿ ಅದಕ್ಕೆ ಸಮಾನಾಂತರವಾಗಿ ಇನ್ನೊಂದು ಪದರ ಕಾಣಿಸಿಕೊಳ್ಳುತ್ತದೆ. ಇವು ಒಂದರ ಕೆಳಗೆ ಇನ್ನೊಂದು ಇರುತ್ತವೆ. ಮೇಲಿನ ಪದರವನ್ನು ಎಪಿಬ್ಲಾಸ್ಟ್ ಎಂದೂ, ಕೆಳಗಿನದನ್ನು ಹೈಪೊಬ್ಲಾಸ್ಟ್ ಎಂದೂ ಕರೆಯುತ್ತಾರೆ. ಇಲ್ಲಿ ಬ್ಲಾಸ್ಟೋಸೀಲ್ ಮತ್ತು ಆದ್ಯಜೀರ್ಣಾಂಗಗಳು ಕಾಣಿಸಿಕೊಳ್ಳುವ ಬಗೆಯ ವಿಷಯದಲ್ಲಿ ಜಿಜ್ಞಾಸೆ ಇದ್ದರೂ, ಈ ಎರಡೂ ಪದರಗಳ ನಡುವಿನ ಸಂದು ಆದ್ಯಜೀರ್ಣಾಂಗವನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದು. ಕಪ್ಪೆ ಆಂಫಿಯಾಕ್ಸ್ ನಂತಹ ಪ್ರಾಣಿಗಳ ಗ್ಯಾಸ್ಟ್ರುಲಾದಲ್ಲಿ ಆದ್ಯಜೀರ್ಣಾಂಗವು ಬ್ಲಾಸ್ಟೋಪೋರ್ ಎಂಬ ತೆರಪಿನ ಮೂಲಕ ಹೊರಕ್ಕೆ ತೆರೆಯುತ್ತದೆ. ಈ ಬ್ಲಾಸ್ಟೋಪೋರಿನ ಅಂಚುಗಳು ಮುಂದಿನ ಬೆಳೆವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಮಧ್ಯದರ್ಮ ಮತ್ತು ಸೀಲೋಮ್(ದೇಹಾಂತರವಕಾಶ)ಗಳು ಉತ್ಪತ್ತಿಯಾಗುವುದರಲ್ಲಿಯೂ ಆದ್ಯಜೀರ್ಣಾಂಗವು ಪ್ರಧಾನ ಪಾತ್ರವಹಿಸುತ್ತದೆ. ಇದರಿಂದ ಮಡಿಕೆಗಳಂತೆ ಉದ್ಭವಿಸಿದ ರಚನೆಗಳು ತದನಂತರದಲ್ಲಿ ಅದರಿಂದ ಪ್ರತ್ಯೇಕಗೊಂಡು ಮಧ್ಯದರ್ಮವನ್ನು ಮತ್ತು ಅದರ ನಡುವೆ ಇರುವ ಅವಕಾಶವು ಸೀಲೋಮ್ ದೇಹಾಂತರಾವಕಾಶವನ್ನು ಉತ್ಪತ್ತಿ ಮಾಡುತ್ತವೆ. ಈ ರೀತಿ ಆದ್ಯಜೀರ್ಣಾಂಗದಿಂದ ಸೀಲೋಮ್ ಉತ್ಪತ್ತಿಯಾಗುವ ವಿಧಾನವನ್ನು ಎಂಟರೊಸೀಲಸ್ ವಿಧಾನ ಎಂದು ಕರೆಯುತ್ತಾರೆ. ಇದು ಮುಂದುವರಿದ ಅಕಶೇರುಕಗಳು

ಮತ್ತು ಕಶೇರುಕ ವಂಶದ ಪ್ರಾಣಿಗಳ ಲಕ್ಷಣ. ಇದೇ ರೀತಿ ಕಶೇರುಕಗಳಲ್ಲಿ ನೊಟೊಕಾರ್ಡ್ ಕೂಡ ಆದ್ಯಜೀರ್ಣಾಂಗದ ನಡುಮೇಲ್ಭಾಗದಲ್ಲಿ ಕಾಣಿಸಿಕೊಂಡು ಬೆಳೆಯುತ್ತದೆ. ಹೀಗೆ ಆದ್ಯಜೀರ್ಣಾಂಗ ನಾಳವು ಪ್ರಾಣಿಗಳ ಬೆಳೆವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿ ಹಲವಾರು ಕ್ರಿಯೆಗಳನ್ನು ನಿರ್ವಹಿಸಿ ಭ್ರೂಣ ಬೆಳೆವಣಿಗೆಯಲ್ಲಿ ಸಂರಚನಾ ನಿಯಂತ್ರಕವಾಗಿ ವರ್ತಿಸುತ್ತದೆ. (ಎಚ್.ಎಚ್.ಎಸ್.)

**ಆಧಾರ ಭಾವನೆ:** ಪ್ರೋಟೀನು ಸಂಶ್ಲೇಷಣೆಯಲ್ಲಿ ಟಿಆರ್‌ಎನ್‌ಎ. ಅಮೈನೋ ಆಮ್ಲವನ್ನು ಅಂಟಿಸಿಕೊಂಡು ಸಂಶ್ಲೇಷಣಾ ವೇದಿಕೆಗೆ ಸಾಗಿಸುವುದು ಹಾಗೂ ಪ್ರೋಟೀನು ತಯಾರಿಕೆಯಲ್ಲಿ ಅವುಗಳನ್ನು ಜೋಡಿಸುವುದರ ವಿವರಣೆ. ಅಡಾಪ್ಟರ್ ನಿಯಮವೆಂದೂ ಹೆಸರಿದೆ. ಟಿಆರ್‌ಎನ್‌ಎ ಅಥವಾ ಎಸ್‌ಆರ್‌ಎನ್‌ಎ ಅಥವಾ ಅಡ್ಯಾಪ್ಟರ್‌ಆರ್‌ಎನ್‌ಎ ಪ್ರೋಟೀನ್ ಸಂದಶ್ಲೇಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅಮೈನೊ ಆಮ್ಲವನ್ನು ಸಾಗಿಸುವುದು ಮತ್ತು ಎಮ್‌ಆರ್‌ಎನ್‌ಎ ಯಿಂದ ನಿರ್ದಿಷ್ಟಗೊಳಿಸಿದ ಒಪ್ಪುವ ಕ್ರಮದಲ್ಲಿ ಟಿಆರ್‌ಎನ್‌ಎ ಗಳನ್ನು ರೈಬೊಸೋಮ್‌ಗಳಿಗೆ ಅಂಟಿಸುವುದು ಇದರ ಕೆಲಸ. ಏಕೆಂದರೆ, ಅಮೈನೊ ಆಮ್ಲಗಳು ನೇರವಾಗಿ ಆರ್‌ಎನ್‌ಎ ಅಚ್ಚುಗಳಿಗೆ ಅಂಟಿಕೊಳ್ಳುವುದಿಲ್ಲ. ಅವು ಮೊದಲು ನಿರ್ದಿಷ್ಟವಾದ ಅಡ್ಯಾಪ್ಟರ್ ಅಣುಗಳ (ಟಿಆರ್‌ಎನ್‌ಎ) ಜೊತೆಯಲ್ಲಿ ಸೇರಿ ಎಎ ~ ಅಡ್ಯಾಪ್ಟರ್ ಸಂಯೋಜನೆಯನ್ನು ಮಾಡುತ್ತವೆ. ಎಲ್ಲಾ ಅಡ್ಯಾಪ್ಟರ್ ಟಿಆರ್‌ಎನ್‌ಎ ಅಣುಗಳ ತೂಕ ~ 25000. ಅನಂತರ ಪ್ರತಿಯೊಂದು ಅಮೈನೊ ಆಮ್ಲವು ತನ್ನದೇ ಆದ ಅಡ್ಯಾಪ್ಟರ್‌ಗೆ ಅಂಟಿಕೊಂಡು ರೈಬೊಸೋಮ್‌ನಲ್ಲಿ ಎಮ್‌ಆರ್‌ಎನ್‌ಎ ಮೇಲೆ ಸಾಲುಗೂಡುತ್ತವೆ. ಈ ರೀತಿ ನಿರ್ದಿಷ್ಟವಾದ ಅಡ್ಯಾಪ್ಟರ್‌ಗಳು ಪ್ರೋಟೀನ್ ಸಂಶ್ಲೇಷಣೆಯಲ್ಲಿ ಭಾಗವಹಿಸುವ ಬಗ್ಗೆ ವಿಜ್ಞಾನಿಗಳು ನೀಡಿದ ವರದಿ ಆಧಾರಿಸಿ ಪ್ರತಿಪಾದಿಸಿದ ಕ್ರಿಕ್ ವಿಜ್ಞಾನಿಯ ಕಲ್ಪನೆ ಅಡ್ಯಾಪ್ಟರ್ ಆಧಾರ ಭಾವನೆಗೆ ನಾಂದಿಯಾಯಿತು. (ಕೆ.ಆರ್.ಕೆ.)

**ಆಧುನಿಕ ಜೀವಯುಗ:** ಭೂ ವಿಜ್ಞಾನದಲ್ಲಿ ೬೫ ದಶಲಕ್ಷ ವರ್ಷಗಳಿಂದ ಈಚೆಗಿನ ಕಾಲ (ಸೀನೋಜ಼ೋಯಿಕ್ ಈರಾ). ಅದರ ಹಿಂದಿನ ಉರಗ ಯುಗದ (ಮೀಸೊಜ಼ೊಯಿಕ್ ಈರಾ) ಕೊನೆಯ ಭಾಗವಾದ ಕ್ರಿಟೇಷಿಯಸ್ ಕಲ್ಪದ (ಇಪಕ್) ಅನಂತರ ಮಹಾಪ್ರಳಯವಾಗಿ ಮಹತ್ತರ ಬದಲಾವಣೆಗಳಾದುವು. ಅದರ ಪ್ರಭಾವ ಜೀವಕೋಟಿಯಲ್ಲಿ ಅತಿಶಯವಾಗಿ ಎದ್ದು ಕಾಣುತ್ತದೆ. ಉರಗ ಯುಗದಲ್ಲಿ (ಮಧ್ಯಜೀವ ಯುಗ) ಭೂಸ್ವಾಮ್ಯ ಹೊಂದಿದ್ದ ಪ್ರಾಣಿವರ್ಗವಾದ ಸರೀಸೃಪಗಳ ಅನೇಕ ಶಾಖೆಗಳು ಸಂಪೂರ್ಣ ನಿರ್ವಂಶವಾದುವು. ಬೆನ್ನೆಲುಬಿಲ್ಲದ ಪ್ರಾಣಿವರ್ಗಗಳಲ್ಲಿ ಅಮ್ಮೊನೈಟ್ ಮತ್ತು ಬೆಲಿಮ್ನೈಟ್ ಎಂಬ ಪ್ರಾಣಿಗಳು ಅಂದಿನ ಸಾಗರಗಳಲ್ಲಿ ಅಸಂಖ್ಯಾತವಾಗಿದ್ದುವು. ಅವೆಲ್ಲ ಗತಕಾಲದ ಕುರುಹುಗಳಾದುವು. ಸಸ್ಯವರ್ಗಗಳಲ್ಲಿ ಎಲ್ಲೆಲ್ಲಿಯೂ ತಾನೇ ತಾನಾಗಿ ಬೀಡು ಬಿಟ್ಟಿದ್ದ ಸೈಕಾಸ್ ಮತ್ತು ಕೋನಿಫರ್ ಎಂಬ ಹೂಬಿಡದ ಆದರೆ ಬೀಜಗಳಿಂದ ಕೂಡಿದ್ದ ಜಿಮ್ನೊಸ್ಪರ್ಮ ಜಾತಿಯ ಸಸ್ಯವರ್ಗ ಅನೇಕ ಅತಿ ಮುಖ್ಯವಾದ ವಂಶಶಾಖೆಗಳನ್ನು ಕಳೆದುಕೊಂಡು ಹೇಗೋ ಉಳಿಯಿತು. ಸರೀಸೃಪಗಳ ಸ್ಥಾನವನ್ನು ಸ್ತನಿಗಳು ಆಕ್ರಮಿಸಿದುವು. ಅವು ಆಧುನಿಕ ಜೀವಕಲ್ಪದ ಆದಿಯಲ್ಲಿ ಸಾಮಾನ್ಯ ಜಾತಿಯವು. ಆದರೆ ಅವು ವಿವಿಧ ವಾತಾವರಣಕ್ಕನುಸಾರವಾಗಿ ಸಿಕ್ಕಿದ ಆಹಾರ ಮತ್ತು ಅನುಕೂಲಗತಿಗಳ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಬಹು ಬೇಗನೆ ವೃದ್ಧಿಹೊಂದಿ ಅನೇಕ ವಿಧದ ಸ್ತನಿಗಳಾದುವು. ಸಾಗರದಲ್ಲಿ ಶಂಖಗಳು, ಕಪ್ಪೆಚಿಪ್ಪು ಮತ್ತು ಮುತ್ತಿನ ಚಿಪ್ಪಿನ ಪ್ರಾಣಿಗಳು ಅಮ್ಮೊನೈಟ್ ಸ್ಥಾನವನ್ನು ಪಡೆದುವು. ಹೂಬಿಡುವ ಸಸ್ಯವರ್ಗ ಮಧ್ಯ ಜೀವಕಲ್ಪದ ಅಂತ್ಯದಲ್ಲಿಯೇ ಕಾಣಿಸಿಕೊಂಡಿತಾದರೂ ಅದು ವೃದ್ಧಿಹೊಂದಿದುದು ಆಧುನಿಕ ಜೀವಯುಗದಲ್ಲಿ. ಆದ್ದರಿಂದ ಈ ಭೂತಕಾಲವನ್ನು ಆಧುನಿಕ ಜೀವಯುಗ ಎಂದು ಕರೆದಿರುವುದು ಸಮಂಜಸವಾಗಿದೆ.

ಪ್ರಳಯಕಾಲದಲ್ಲಿ ಪ್ರಾರಂಭವಾದ ಅಗಾಧವಾದ ಭೂಚಲನೆಯ ಪರಿಣಾಮವಾಗಿ ಹೊಸ ಪರ್ವತಸ್ತೋಮಗಳ ಉದಯವಾಯಿತು. ಮೊದಲೇ ಇದ್ದ ಪರ್ವತಸ್ತೋಮಗಳು ಹೊಸ ರೂಪ ತಾಳಿದುವು. ಈಗಿನ ಮೇಲ್ಮೈಲಕ್ಷಣಗಳೆಲ್ಲ ಬಹುತೇಕ ಆಗ ಆದುವುಗಳೇ. ಅದುವರೆಗೂ ಒಂದಾಗಿದ್ದ ಗೊಂಡವಾನ ಭೂಭಾಗ ಈಗಿನ ಇಂಡಿಯಾ ಪರ್ಯಾಯದ್ವೀಪ ಭಾಗ. ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್‌ಟಿಕಾ ಎಂಬ ಖಂಡಗಳಾಗಿ ಬೇರ್ಪಟ್ಟಿತು. ಬೇರ್ಪಟ್ಟ ಭೂಭಾಗಗಳಲ್ಲೆಲ್ಲ ಹಿಂದೆಂದೂ ಕಂಡರಿಯದಷ್ಟು (ಆರ್ಷೇಯ ಯುಗವನ್ನುಳಿದು) ಶಿಲಾರಸ ಹೊರ ಹೊಮ್ಮಿತು. ಇಂಡಿಯಾದ ಡೆಕ್ಕನ್ ಟ್ರ್ಯಾಪ್ ಶಿಲಾವರ್ಗ, ಆಫ್ರಿಕದ ಸ್ಟ್ರಾಂಬರ್ಗ್ ಮತ್ತು ದ. ಅಮೆರಿಕದ ಸೆರ್ರಾಗೆರಾಲ್ ಜ್ವಾಲಾಮುಖಜಶಿಲೆಗಳು ಆ ಕಾಲದಲ್ಲಿ ಹೊರಹೊಮ್ಮಿದ ಶಿಲಾರಸದಿಂದ ಆದುವು. ಈ ಖಂಡಗಳ ಮಧ್ಯೆ ಇದ್ದ ಅಲ್ಪಸ್ವಲ್ಪ ಭೂಭಾಗಗಳು ಸಮುದ್ರಗಳ ಅಡಿಯಲ್ಲಿ ಮುಳುಗಿರಲೂ ಸಾಧ್ಯ. ಮೆಡಗಾಸ್ಕರ್ ಮತ್ತು ಇಂಡಿಯಾಗಳ ನಡುವೆ ಸೇತುವೆಯಂತಿದ್ದ ಲೆಮೂರಿಯ ಮುಳುಗಿಹೋಗಿ ಈಗಿನ ಅರಬ್ಬೀ ಸಮುದ್ರ ರೂಪುಗೊಂಡಿತು. ಇಂಡಿಯಾ ಪರ್ಯಾಯದ್ವೀಪದ ತೀರಗಳು ಆ ಕಾಲದಲ್ಲಿಯೇ ರೂಪುಗೊಂಡುವು. ಹೀಗೆ ಬೇರ್ಪಟ್ಟ ಖಂಡಗಳ ಚಲನೆಯಿಂದ, ಆ ಕಾಲದ ಭೂಮಧ್ಯ ಪ್ರದೇಶದಲ್ಲಿ ಬಹುಕಾಲದಿಂದಲೂ ಇದ್ದ ಟೆತಿಸ್ ಎಂಬ ಸಾಗರ ಪ್ರದೇಶ ಮಾಯವಾಗಿ ಅದರಡಿಯಲ್ಲಿ ನಿಕ್ಷೇಪಗೊಂಡಿದ್ದ ಜಲಜಶಿಲಾರಾಶಿ ಭೂಚಲನೆಗಳ ಒತ್ತಡಕ್ಕೆ ಸಿಕ್ಕಿ ಅಟ್ಲಾಸ್, ಪಿರನೀಸ್, ಆಲ್ಪ್ಸ್ ಮತ್ತು ಹಿಮಾಲಯ ಪರ್ವತಸ್ತೋಮಗಳಾಗಿ ಮೇಲೊಗೆಯಲ್ಪಟ್ಟುವು. ಮಾರುತಗಳ ಬಡಿತಕ್ಕೆ ಸಿಕ್ಕಿ ಸವೆದಿದ್ದ ರಾಕೀಸ್ ಮತ್ತು ಆಂಡೀಸ್ ಪರ್ವತಸ್ತೋಮಗಳು ಸಹ ಈಗಿನ ಎತ್ತರಕ್ಕೆ ಮೇಲೊಗೆಯಲ್ಪಟ್ಟುವು.

ಟಿಬೆಟ್ಟಿಗೂ ಇಂಡಿಯಾ ಪರ್ಯಾಯದ್ವೀಪಕ್ಕೂ ಮಧ್ಯೆ ಇದ್ದ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡ ಕಾಲದಲ್ಲೇ ಪ್ರಾರಂಭವಾಗಿ ಸಾಗರಪ್ರದೇಶಗಳಲ್ಲೆಲ್ಲ ಆಳ ಕಡಿಮೆಯಾಗಿ ಅಲ್ಲಿ ಫ್ಲಿಷ್ ನಿಕ್ಷೇಪವಾಯಿತು. ಈ ಕಾಲದ ನಿಜವಾದ ಆರಂಭ ಇಯೊಸೀನ್ ಕಾಲದ ಅಂತ್ಯ ಭಾಗದಲ್ಲಿ ಆಯಿತು. ಇದೇ ಹಿಮಾಲಯ ಪರ್ವತಗಳ ಉದಯದ ಮೊದಲನೆಯ ಹಂತ. ಇದರ ಪರಿಣಾಮವಾಗಿ ಟೆತಿಸ್ ಸಾಗರದ ನೀರು ಮುಕ್ಕಾಲುಭಾಗ ಪ್ರದೇಶದಿಂದ ನಿರ್ಗಮಿಸಿ ಪಶ್ಚಿಮದಲ್ಲಿ ಸಿಂಧ್ ಮತ್ತು ಬಲೂಚಿಸ್ತಾನ್ ಕೊಲ್ಲಿಗಳ, ಪೂರ್ವದಲ್ಲಿ ಅಸ್ಸಾಂ ಮತ್ತು ಬರ್ಮ ಕೊಲ್ಲಿಗಳ ರೂಪದಲ್ಲಿಯೂ ಹಿಮಾಲಯ ಪ್ರದೇಶದಲ್ಲಿ ಕ್ಯಾಸ್ಪಿಯನ್ ಸಮುದ್ರದ ಹಾಗೆ ದೊಡ್ಡ ಸರೋವರಗಳಾಗಿಯೂ ಉಳಿದು ಕೊಂಡಿತು. ಈ ಪ್ರದೇಶದ ಜಲಜಶಿಲಾನಿಕ್ಷೇಪ ಮೇಲ್ಭಾಗಕ್ಕೆ ಒಗೆಯಲ್ಪಟ್ಟಿತು. ಅನಂತರ ಪರಿಸ್ಥಿತಿ ಶಾಂತವಾಗಿತ್ತು. ಮತ್ತೆ ಮಿಯೊಸೀನ್ ಕಾಲದ ಮಧ್ಯಭಾಗದಲ್ಲಿ ಈ ಚಲನೆ ಅತಿ ತೀವ್ರಗೊಂಡಿತು. ಹಿಮಾಲಯ ಪರ್ವತಗಳು ಹೆಚ್ಚು ಕಡಿಮೆ ಈಗಿನ ರೂಪಕ್ಕೆ ಬಂದುದು ಈ ಚಲನೆಯ ಅನಂತರವೇ. ಆಗಲೇ ಟೆತಿಸ್ ಸಾಗರದ ಪೂರ್ಣನಿರ್ಗಮನವೂ ಆಯಿತು. ಆದರೆ ಜಾಗದಲ್ಲಿ ಮಧ್ಯೆ ಮಧ್ಯೆ ನದೀಕಣಿವೆ ಮತ್ತು ಕೆಸರು ಪ್ರದೇಶಗಳಿಂದ ಕೂಡಿದ ಪರ್ವತಗಳ ಉದಯವಾಯಿತು. ಅಷ್ಟೇ ಅಲ್ಲದೆ, ಮೇಲೇಳುತ್ತಿರುವ ಹಿಮಾಲಯ ಪರ್ವತಗಳಿಗೂ ಪರ್ಯಾಯದ್ವೀಪಕ್ಕೂ ಮಧ್ಯೆ ಬಹು ಆಳವಾದ, ಅಗಲದಲ್ಲಿ ಕಿರಿದಾದ ತಗ್ಗು ಪ್ರದೇಶ ಉಂಟಾಯಿತು. ಇಂಥ ಪ್ರದೇಶ ಹಿಮಾಲಯ ಪರ್ವತಸ್ತೋಮದ ಉದ್ದಕ್ಕೂ ಇದೆ. ಈ ತಗ್ಗು ಪ್ರದೇಶದಲ್ಲಿ ಮುಖ್ಯವಾಗಿ, ಹಿಮಾಲಯ ಪರ್ವತದಿಂದ ಹರಿದು ಬರುವ ನದಿಗಳು ತಂದ ಮೆಕ್ಕಲು ಮಣ್ಣು ನಿಕ್ಷೇಪಗೊಳ್ಳುತ್ತ ಬಂತು. ಪರ್ಯಾಯದ್ವೀಪದ ಕಡೆಯಿಂದಲೂ ನದಿಗಳು ಮೆಕ್ಕಲು ಮಣ್ಣನ್ನು ತಂದು ಈ ತಗ್ಗನ್ನು ತುಂಬಿದುವು. ಪ್ಲಿಯೊಸೀನ್ ಕಾಲದ ಅಂತ್ಯ ಅಥವಾ ಪ್ಲಿಸ್ಟೊಸೀನ್ ಕಾಲದ ಆದಿಯಲ್ಲಿ ಮತ್ತೆ ಈ ಪ್ರದೇಶದಲ್ಲಿ ಭೂಚಲನೆ ಆಯಿತು. ಇದರ ಪರಿಣಾಮವಾಗಿ, ಹಿಮಾಲಯ ಪರ್ವತಗಳು ತಗ್ಗು ಪ್ರದೇಶದಲ್ಲಿ ನಿಕ್ಷೇಪಗೊಂಡ ನದಿ ಮೆಕ್ಕಲು ನಿಕ್ಷೇಪಕ್ಕೂ ತಗುಲಿತು. ಅವೂ ಮೇಲೊಗೆಯಲ್ಪಟ್ಟುವು. ಅಲ್ಲದೆ ಮಡಿಕೆ ಮಡಿಕೆಗಳಾಗಿ ಮಾರ್ಪಟ್ಟು ಸ್ತರಭಂಗಗಳನ್ನು ಹೊಂದಿ ಹಲವಾರು ಕಡೆ ಶಿಲಾಸ್ತರಗಳ ಕ್ರಮ ತಲೆ ಕೆಳಗಾಗಿ ಅದಲು ಬದಲಾಯಿತು. ಈ ಶಿಲಾರಾಶಿಯನ್ನೇ ನಾವು ಶಿವಾಲಿಕ್ ಶಿಲಾಸಮುದಾಯವೆಂದು ಕರೆಯುವುದು. ಇವು ಖಂಡಾಂತರ ಜಲಜ ಮತ್ತು ಭೂನಿಕ್ಷೇಪಗಳು. ಇವಕ್ಕೂ ಮತ್ತು ಈಗಿನ ಸಿಂಧೂ ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಬಯಲುಗಳಲ್ಲಿರುವ ಮೆಕ್ಕಲು ನಿಕ್ಷೇಪಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಶಿವಾಲಿಕ್‌ಶಿಲೆಗಳು ವಯಸ್ಸಿನಲ್ಲಿ ಹಿರಿದಾಗಿ, ಭೂ ಚಲನೆಯ ಪರಿಣಾಮವಾಗಿ ಮಡಿಕೆಗಳಾಗಿ ಅನೇಕ ರೀತಿ ಬದಲಾವಣೆಗಳನ್ನು ಹೊಂದಿ, ತಾವು ನಿಕ್ಷೇಪಗೊಂಡ ಮಟ್ಟಕ್ಕಿಂತ ಮೇಲ್ಮಟ್ಟಕ್ಕೆ ತಳ್ಳಲ್ಪಟ್ಟಿವೆ. ಆದರೆ ಗಂಗಾ ಬ್ರಹ್ಮಪುತ್ರ ನದಿಗಳ ಮೆಕ್ಕಲು ನಿಕ್ಷೇಪ ಹಾಗಾಗಿಲ್ಲ.

ಈ ಬದಲಾವಣೆಯಾದ ಸ್ವಲ್ಪ ಕಾಲದಲ್ಲಿಯೇ ವಾಯುಗುಣದಲ್ಲಿ ಮಹತ್ತರ ವ್ಯತ್ಯಾಸ ಕಂಡುಬಂದಿತು. ತೀವ್ರ ಶೀತವಾಯುಗುಣ ಎಲ್ಲೆಲ್ಲಿಯೂ ಅದರಲ್ಲಿಯೂ, ಉತ್ತರಾರ್ಧ ಗೋಳದಲ್ಲಿ ಆವರಿಸಿಕೊಂಡಿತು. ಶಿವಾಲಿಕ್ ಕಾಲದಲ್ಲಿ ಹಿಮಾಲಯ ಪರ್ವತಗಳ ಕಾಡಿನಲ್ಲಿ ವಾಸವಾಗಿದ್ದ ಅಸಂಖ್ಯಾತ ಸ್ತನಿಗಳು ಈ ಶೀತ ವಾಯುಗುಣದ ಅತಿ ಶೈತ್ಯವನ್ನು ತಾಳಲಾರದೆ ಗತವಂಶಿಗಳಾದುವು. ಹಿಮಾಲಯ ಪರ್ವತಗಳ ಕೊನೆಯ ಮೇಲೇರಿಕೆಯನ್ನೂ ಶೀತವಾಯುಗುಣವನ್ನೂ ಮಾನವ ಅವಲೋಕಿಸಿರುವುದು ಸಾಧ್ಯ. ಹೀಗೆ ಹಿಮಾಲಯ ಪರ್ವತಗಳೂ ದೀರ್ಘ ಪ್ರಶಾಂತ ಕಾಲಗಳಿಂದ ಬೇರ್ಪಡಿಸಲ್ಪಟ್ಟು ಮೂರು ಅಥವಾ ನಾಲ್ಕು ಹಂತಗಳಲ್ಲಿ ಮೇಲೆ ಬಂದಿವೆ.

ಆಧುನಿಕ ಜೀವಯುಗವನ್ನು ಆರು ಭಾಗಗಳಾಗಿ ವಿಭಜಿಸುತ್ತಾರೆ. ವರ್ತಮಾನ ಕಾಲದಿಂದ ಭೂತಕಾಲದೆಡೆಗೆ (ಆವರಣದಲ್ಲಿರುವ ಸಂಖ್ಯೆ ದಶಲಕ್ಷ ವರ್ಷಗಳ ಕಾಲ ಸೂಚಿಸುವುದು) : ಪ್ಲಿಸ್ಟೊಸೀನ್ (೧.೦ ± ೦.೫); ಪ್ಲಿಯೊಸೀನ್ (೧೩ ± ೧ );

ಮಯೊಸೀನ್ (೨೫ ± ೧); ಆಲಿಗೊಸೀನ್(೩೬ ± ೨); ಇಯೊಸೀನ್ (೫೮ ± ೨); ಪೆಲಿಯೊಸೀನ್ (೬೩ ± ೨); (ನೋಡಿ: ಆದಿಜೀವಯುಗ.) ಆರ್ಷೇಯ ಯುಗ; ಯುಗ ಮತ್ತು ಕಲ್ಪ; (ಡಿ.ಆರ್.)

**ಆನಿಕೋಫೋರ:** ಸಂಧಿಪದಿ ವಂಶದ ಒಂದು ವರ್ಗ. ಈ ವರ್ಗದ ಹುಳು ಪೆರಿಪ್ಯಾಟಸ್. 80 ಪ್ರಭೇದಗಳನ್ನು ಗುರುತಿಸಲಾಗಿದೆ. ಹಲವು ರಚನೆಗಳಲ್ಲಿ ಸಂಧಿಪದಿಗಳಿಗೆ ಹೋಲಿಕೆಯಿದ್ದರೂ ಹಲವಾರು ಗುಣಲಕ್ಷಣಗಳಲ್ಲಿ ಅವುಗಳನ್ನು ಹೋಲುವುದಿಲ್ಲ. ಕೆಲವು ಗುಣಲಕ್ಷಣಗಳು ವಲಯವಂತಗಳದ್ದು. ಹಾಗಾಗಿ ಕೆಲವರು ಇದನ್ನು ಬೇರೆಯೇ ವಂಶವೆಂದು ಪರಿಗಣಿಸುತ್ತಾರೆ. ವಲಯವಂತಗಳಿಗೂ ಸಂಧಿಪದಿಗಳಿಗೂ ಈ ಗುಂಪಿನ ಪ್ರಾಣಿಗಳು ಕೊಂಡಿ ಅಥವಾ ಸೇತುವೆ. ಪೆರಿಪ್ಯಾಟಸ್ ಒಂದು ಜೀವಂತ ಪಳೆಯುಳಿಕೆ.

ದವಡೆಗಳಲ್ಲಿ ಕೀಲುಗಳು; ಪ್ರತಿ ವಲಯದಲ್ಲೂ ಸಂಚಿಯಂತಿರುವ, ಟೊಳ್ಳಾದ ನಾಳದಂತಿರುವ ಹೃದಯ; ದೇಹಾಂತರಾವಕಾಶದಲ್ಲಿ ರಕ್ತ; ಶ್ವಾಸನಾಳಗಳು (ಟ್ರೇಕಿಯಾ); ಪ್ರತಿ ವಲಯದಲ್ಲೂ ಒಂದು ಜೊತೆ ಕಾಲುಗಳು; ದೇಹಕ್ಕೆ ಕ್ಯುಟಿಕಲ್‌ನ ರಕ್ಷಾಕವಚ – ಇವೆಲ್ಲವೂ ಸಂಧಿಪದಿಗಳನ್ನು ಹೋಲುವ ಗುಣಗಳು.

ವಲಯವಂತಗಳನ್ನು ಹೋಲುವ ಗುಣಗಳು – ಕೋಮಲವಾದ ಚರ್ಮ; ಒಂದೇ ಜೊತೆ ದವಡೆಗಳು; ಮೃದುವಾದ ದರ್ಮದ ಸ್ನಾಯುಗಳು; ಟೊಳ್ಳಾದ ಚಲನಾಂಗಗಳು; ವಲಯವಾರು ನೆಫ್ರೀಡಿಯಾಗಳು. ಆದರೆ ವಲಯವಂತಗಳಿಗಿಂತ ಸಂಧಿಪದಿಗಳ ಉತ್ತಮ ಗುಣಗಳಿರುವುದರಿಂದ ಇವಗಳು ಸಂಧಿಪದಿಗಳ ವಂಶದಲ್ಲಿ ಸೇರ್ಪಡೆಯಾಗಿವೆ.

ಈ ಗುಂಪಿನ ಹುಳುಗಳಲ್ಲಿ ಇಂದ್ರಿಯಗಳು ಬಹಳ ತೀಕ್ಷ್ಣ. ಒಂದು ಜೊತೆ ವಜ್ರಕವನ್ನು ಹೋಲುವ ಕಣ್ಣುಗಳು; ಬಾಯಿಯ ಇಕ್ಕೆಡೆಗಳಲ್ಲಿ ಒಂದು ಜೊತೆ ನರೋಲಿಯಂತಹ ತೊಟ್ಟು; ಇವುಗಳಿಂದ ಲೋಳೆಯನ್ನು ಒಂದು ಅಡಿ ದೂರಕ್ಕೆ ಚಿಲ್ಲಿ ಶತ್ರುಗಳನ್ನು ಬಂಧಿಸುವುದೇ ಅಲ್ಲದೆ ತಮಗೆ ಬೇಕಾದ ಆಹಾರವನ್ನು ಹಿಡಿಯುತ್ತವೆ. ಪ್ರೊಫೆಸರ್ ಆಡಂ ಸೆಡ್ಜ್‌ವಿಕ್ ಪ್ರಕಾರ ಪೆರಿಪ್ಯಾಟಸ್ ಅತಿಸುಂದರವಾದ ಒಂದು ಸೃಷ್ಟಿ. ಇವುಗಳಲ್ಲಿ ಒಂದು ಜೊತೆ ಮಿತಿಮೀರಿದ ಶ್ರೀಘ್ರವೇದಿ ಕೊಂಬುಗಳು; ತುಂಬಿದ ದೇಹ; ತಲೆಯ ಮೇಲೆ ಒಂದು ಜೊತೆ ವಜ್ರವನ್ನು ಹೋಲುವ ಕಣ್ಣುಗಳು; ಮೃದುವಾದ ಕಾಲುಗಳು; ಮಖಮಲ್ಲಿನಂತಹ ಕೋಮಲ ಚರ್ಮ; ಮೈಬಣ್ಣ ಪಚ್ಚೆ ಹಸಿರು – ಇವೆಲ್ಲಾ ಇವೆ.

ಪೆರಿಪ್ಯಾಟಸ್ ಕಂಬಳಿ ಹುಳುವಿನಾಕಾರದ ಹುಳು. ದೇಹವು ಹಲವಾರು ವಲಯಗಳಿಂದಾದದ್ದು. ವಲಯಗಳ ಸಂಖ್ಯೆ ನಿಖರ. ಮೃದುವಾದ ಚರ್ಮ ಸುಕ್ಕಿರುವುದರಿಂದ ವಲಯಗಳ ಸಂಖ್ಯೆ ಮಿತಿಮೀರಿ ಇರುವಂತೆ ಭಾಸವಾಗುವುದು. ಮರಿಗಳಾಗಿದ್ದಾಗ ಇದ್ದ ವಲಯಗಳ ಸಂಖ್ಯೆ ಜೀವನಪರ್ಯಂತ ಅಷ್ಟೇ ಇರುತ್ತದೆ. ದೇಹದ ಮುಂಭಾಗದಲ್ಲಿ ಒಂದು ಜೊತೆ ನರೋಲಿಯಂತಹ ಕೋಡುಗಳು, ಬಾಯಿ ಮತ್ತು ಅದರಲ್ಲಿ ಎರಡು ದವಡೆಗಳು ಮತ್ತು ಒಂದು ಜೊತೆ ಕಣ್ಣುಗಳು ಸೇರಿದಂತೆ ರುಂಡಭಾಗ ಇದೆ. ಇನ್ನುಳಿದ ದೇಹವು ವಲಯಗಳಿಂದಾಗಿರುವುದು. ಪ್ರತಿವಲಯದಲ್ಲಿ ಒಂದು ಜೊತೆ ಶಂಕುವಿನಾಕಾರದ ಕಾಲು, ಅವುಗಳ ತುದಿಯಲ್ಲಿ ಮೊನಚಾದ ಕೊಂಡಿಗಳಿವೆ. ಗುದದ್ವಾರ ಮತ್ತು ಜನನೇಂದ್ರಿಯ ರಂಧ್ರವು ಕೊನೆಯ ವಲಯದಲ್ಲಿ ಎರಡು ಕಾಲುಗಳ ಮಧ್ಯೆ ಇರುವುದು. ಕೋಮಲವಾದ ಚರ್ಮದ ಬಣ್ಣ ಸಾಮಾನ್ಯವಾಗಿ ಪಚ್ಚೆ ಹಸಿರಿದ್ದರೆ ಕೆಲವಲ್ಲಿ ನೀಲಿ, ತಿಳಿನೀಲಿ ಅಥವಾ ಕಂದುಬಣ್ಣದ್ದಾಗಿರಬಹುದು. ಇದರಡಿಯಲ್ಲಿನ ಚರ್ಮದಲ್ಲಿ ವರ್ಣ ದ್ರವ್ಯವಿರುವುದರಿಂದಲೇ ಈ ಮೆರುಗಿನ ಬಣ್ಣ. ಇಡೀ ದೇಹ ಕ್ಯುಟಿಕಲ್‌ನಿಂದ ರಕ್ಷಿಸಲ್ಪಟ್ಟಿರುವುದು.

ಪೆರಿಪ್ಯಾಟಸ್‌ಗಳಲ್ಲಿ ಜೀರ್ಣಾಂಗವ್ಯೂಹ ಬಹಳ ಸರಳವಾಗಿದ್ದು ಬಾಯಿಯ ಸುತ್ತಲೂ ವೃತ್ತಾಕಾರದ ತುಟಿ, ಇದರ ಹಿಂಬದಿಯಲ್ಲಿ ಬಾಯಂಗುಳ, ಇದರಲ್ಲಿ ಒಂದು ಜೊತೆ ದವಡೆ ಮತ್ತು ಗ್ರಂಥಿದ್ವಾರಗಳನ್ನು ಪಡೆದಿರುವುವು. ಇನ್ನುಳಿದ ಜೀರ್ಣಾಂಗ ವ್ಯೂಹವನ್ನು ಗಂಟಲು, ಜಠರ, ಕರುಳು ಮತ್ತು ಗುದದ್ವಾರ ಎಂದು ವಿಂಗಡಿಸಬಹುದು. ಕೀಟಗಳನ್ನು ಮತ್ತು ಸತ್ತು ಹೋದ ಸಣ್ಣಪುಟ್ಟ ಜೀವಿಗಳನ್ನು ತಿಂದು ಜೀವಿಸುತ್ತವೆ.

ವ್ಯವಸ್ಥಿತ ಕೇಂದ್ರ ನರಮಂಡಲವಿದೆ. ಮುಖ್ಯವಾದ ಶ್ರೇಷ್ಠ ನರಗ್ರಂಥಿ ತಲೆಯಲ್ಲಿ ಅಡಕವಾಗಿದ್ದು ಮೆದುಳನ್ನು ಹೋಲುವುದು. ಇದರಿಂದ ಕವಲೊಡೆದ ಎರಡು ನರಗಳು ಅನ್ನನಾಳವನ್ನು ಸುತ್ತುವರಿದು ಅಡಿಯಲ್ಲಿ ಸಂಗಮಿಸುವುವು. ಒಂದು ಜೊತೆ ನರಹುರಿಗಳು ಜೀರ್ಣಾಂಗದ ಉದ್ದಕ್ಕೂ ಮುಂಭಾಗದಿಂದ ಹಿಂಭಾಗದವರೆಗೂ ದೇಹಾಂತರಾವಕಾಶದಲ್ಲಿ ಚಾಚಿರುತ್ತದೆ. ಆದರೆ ಪೆರಿಪ್ಯಾಟಸ್‌ನಲ್ಲಿ ವಲಯವಾರು ನರಗಂಟುಗಳು ಸ್ಪಷ್ಟವಾಗಿಲ್ಲದಿರುವುದು ಒಂದು ವಿಶೇಷ.

ಇವುಗಳಲ್ಲಿ ಶ್ವಾಸಮಂಡಲವಿದೆ. ಶ್ವಾಸದ್ವಾರಗಳು ಪ್ರತಿ ವಲಯದಲ್ಲಿರುವ ಅನೇಕ ದಿಂಡುಗಳ ಮಧ್ಯೆ ಇರುತ್ತದೆ. ದೇಹಾಂತರಾವಕಾಶದಲ್ಲಿ ಶ್ವಾಸನಾಳಗಳಿವೆ. ಸಂಧಿಪದಿಗಳಲ್ಲಿ ಇರುವಂತೆ ಶ್ವಾಸನಾಳಗಳು ವ್ಯವಸ್ಥಿತವಾಗಿರುವುದು ಒಂದು ವಿಶೇಷತೆ.

ಪೆರಿಪ್ಯಾಟಸ್‌ನಲ್ಲಿ ಒಂದು ರಕ್ತನಾಳ ದೇಹಾಂತರಾವಕಾಶದಲ್ಲಿ ಜೀರ್ಣಾಂಗದ ಮೇಲೆ ದೇಹದುದ್ದಕ್ಕೂ ಇರುವುದು. ಇದು ಪ್ರತಿ ವಲಯಕ್ಕೆ ಸೇರಿದಂತೆ ಒಂದು ಜೊತೆ ರಂಧ್ರಗಳನ್ನು ಮತ್ತು ಉದ್ದಕ್ಕೂ ಅನೇಕ ಸಂಚಿಗಳನ್ನು ಹೊಂದಿದೆ. ಕೀಟ ಹೃದಯವನ್ನು ಹೋಲುತ್ತದೆ. ಹೃದಯದಲ್ಲಿನ ರಕ್ತ ನೇರವಾಗಿ ದೇಹಾಂತರಾವಕಾಶಕ್ಕೂ ಅಲ್ಲಿಂದ ಹೃದಯಕ್ಕೂ ಚಲಿಸುವುದು. ಇದನ್ನು ಹೊರತು ಸಂಧಿಪದಿಗಳಂತೆ ಬೇರೆ ಯಾವ ರಕ್ತನಾಳಗಳೂ ಕಾಣಬರುವುದಿಲ್ಲ.

ವಲಯವಂತಗಳಲ್ಲಿರುವಂತೆ ಪ್ರತಿವಲಯಕ್ಕೆ ಸೀಮಿತವಾಗಿ ಒಂದು ಜೊತೆ ವಿಸರ್ಜನಾಂಗಗಳು (ನೆಫ್ರೀಡಿಯ) ಇರುತ್ತವೆ. ಮುಂಭಾಗದ ಒಂದು ಜೊತೆಕಾಲುಗಳನ್ನು ಬಿಟ್ಟು ಇನ್ನುಳಿದವುಗಳಲ್ಲಿ ಕ್ರೂರಲ್ ಗ್ರಂಥಿಗಳಿರುವುವು. ಇವುಗಳ ಕ್ರಿಯೆಯ ಬಗ್ಗೆ ಇಂದಿಗೂ ನಿರ್ದಿಷ್ಟವಾದ ಅಭಿಪ್ರಾಯವಿಲ್ಲ.

ಪೆರಿಪ್ಯಾಟಸ್‌ಗಳಲ್ಲಿ ಲಿಂಗಭೇದವಿರುವುದರಿಂದ ಗಂಡು ಮತ್ತು ಹೆಣ್ಣು ಹುಳುಗಳನ್ನು ಗುರುತಿಸಬಹುದು. ಗಂಡಿನಲ್ಲಿ ಒಂದು ಜೊತೆ ಬೀಜಾಶಯನಾಳಗಳು ಹಿಂಬದಿಯಲ್ಲಿ ಸಂಗಮಿಸಿ ಪುರುಷ ಜನನೇಂದ್ರಿಯದಲ್ಲಿ ತೆರವಾಗುವುದು. ಹೆಣ್ಣು ಹುಳುವಿನಲ್ಲಿ ಕೊಳವೆಗಳಂತಹ ಒಂದು ಜೊತೆ ಅಂಡಾಶಯಗಳು, ಅವುಗಳಿಗೆ ಲಗತ್ತಾಗಿ ಅಂಡನಾಳಗಳು ಇರುತ್ತವೆ. ಪ್ರತಿ ಅಂಡನಾಳವೂ ಹಿಗ್ಗಿ ಗರ್ಭಕೋಶಗಳಾಗಿ, ಇವುಗಳು ಸ್ತ್ರೀಜನನೇಂದ್ರಿಯದಲ್ಲಿ ತೆರವಾಗುವುವು. ಅಂಡನಾಳಕ್ಕೆ ಹೊಂದಿಕೊಂಡಂತೆ ಪುರುಷಾಣುಕೋಶಗಳಿರುತ್ತವೆ. ಇವುಗಳಲ್ಲಿ ಒಂದು ವಿಚಿತ್ರವೆಂದರೆ ಪುರುಷಾಣುಗಳು ಅಂಡದ ಹೊರಭಾಗದಲ್ಲಿ ಸಾಲುಗಟ್ಟಿ ಅಂಟಿಕೊಂಡಿರುತ್ತವೆ. ಈ ಸ್ಥಿತಿ ಬೇರೆ ಯಾವ ಜೀವಿಯಲ್ಲೂ ಕಾಣಬರುವುದಿಲ್ಲ.

ಪೆರಿಪ್ಯಾಟಸ್ ಸಾಮಾನ್ಯವಾಗಿ ಮರಿಗಳನ್ನು ಹಾಕುವುವು. ಆದರೆ ಆಸ್ಟ್ರೇಲಿಯಾ ದೇಶದ ಕೆಲವು ಪ್ರಭೇದಗಳಲ್ಲಿ ಮೊಟ್ಟೆ ಇಡುವ ಕ್ರಮವನ್ನು ಕಾಣಬಹುದು. ತತ್ತಿಗಳಲ್ಲಿ ಪೌಷ್ಟಿಕಾಂಶ ವಿಶೇಷವಾಗಿರುವುದು. ಗರ್ಭಧರಿಸಿದ ತತ್ತಿಗಳು ಗರ್ಭಕೋಶದಲ್ಲಿಯೇ ಬೆಳೆಯುತ್ತವೆ. ಪೆರಿಪ್ಯಾಟಸ್ ಕೆಪೆನ್‌ಸಿಸ್ ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಮರಿ ಹಾಕುತ್ತದೆ. ಹುಟ್ಟಿದ ಮರಿಗಳು 10 ರಿಂದ 15 ಮಿಮೀ ಉದ್ದ ಇದ್ದು ಬಣ್ಣ ರಹಿತವಾಗಿರುತ್ತವೆ. ಕೋಡುಗಳು ಮಾತ್ರ ಹಸಿರು ಬಣ್ಣ. ಒಂದು ಬಾರಿಗೆ 30 ರಿಂದ 40 ಮರಿಗಳನ್ನು ಹಾಕಬಲ್ಲವು. ಈ ಮರಿಗಳು ಗರ್ಭದಲ್ಲಿ ಸುಮಾರು 13 ತಿಂಗಳು ಬೆಳೆಯುವುದಾಗಿ ತಿಳಿದುಬಂದಿದೆ. ಮರಿಗಳನ್ನು ಪ್ರಸವಿಸಲು ಹಲವಾರು ದಿವಸಗಳೇ ಬೇಕೆಂದು ತಿಳಿದು ಬಂದಿದೆ. ಮರಿಗಳು ಹುಟ್ಟಿದ ತಕ್ಷಣವೇ ಚಟುವಟಿಕೆಯಿಂದ ಓಡಾಡಬಲ್ಲವು.

ಇವುಗಳಲ್ಲಿ ಲೈಂಗಿಕ ಜೀವನ (ಮೈಥುನ) ಇರುವುದು ಕಂಡು ಬಂದಿಲ್ಲ. ಬೆದೆಬರುವ ಸಮಯದಲ್ಲಿ (ಜುಲೈ ಮತ್ತು ಜನವರಿ ತಿಂಗಳಲ್ಲಿ) ಗಂಡು ವಿವೇಚನೆ ಇಲ್ಲದೆ ಹೆಣ್ಣು ಪೆರಿಪ್ಯಾಟಸ್ ಮೈಮೇಲೆ ವೀರ್ಯವನ್ನು ಬಳಿಯುತ್ತದೆ. ವೀರ್ಯಾಣುಗಳು ದೇಹದ ಚರ್ಮವನ್ನು ತೂರಿ ಅಂಡಾಶಯದಲ್ಲಿನ ಅಂಡಗಳನ್ನು ಗರ್ಭ ಕಟ್ಟಬಹುದೆಂದು ಶಂಕಿಸಲಾಗಿದೆ. ಹೀಗಾಗಿ ಪೆರಿಪ್ಯಾಟಸ್‌ಗಳು ಇಡೀ ಪ್ರಾಣಿ ಜಗತ್ತಿನಲ್ಲಿ ಒಂದು ಬಗೆಯ ವಿಚಿತ್ರ ಜೀವಿಗಳು. (ಜಿ.ಎಮ್.ಬಿ.)

**ಆನುಷಂಗಿಕ ಲಿಂಗ ಲಕ್ಷಣಗಳು:** ಜೀವಿಗಳಲ್ಲಿ ಮುಖ್ಯವಾಗಿ ಹೆಣ್ಣು ಮತ್ತು ಗಂಡು ಎಂಬ ಎರಡು ಲಿಂಗಗಳಿದ್ದು ಇವು ತಮ್ಮ ಲಿಂಗ ಲಕ್ಷಣಗಳಲ್ಲಿ ಭಿನ್ನತೆಯನ್ನು ತೋರಿಸುತ್ತವೆ. ಮೊದಲನೆಯದಾಗಿ ಕಾಣುವ ಲಿಂಗ ಲಕ್ಷಣಗಳನ್ನು ಪ್ರಧಾನ ಲಿಂಗಲಕ್ಷಣ (ಪ್ರೈಮರಿ ಸೆಕ್ಸ್ ಕ್ಯಾರಕ್ಟರಿಸ್ಟಿಕ್ಸ್)ಗಳೆಂದು ಕರೆಯಲಾಗಿದೆ. ಇವು ಶರೀರದಲ್ಲಿರುವ ಲಿಂಗವರ್ಣತಂತುಗಳು, ಜೀನ್‌ಗಳು, ಜನನ ಗ್ರಂಥಿಗಳು ಹಾಗು ಜನನಾಂಗಗಳು. ಈ ಗುಣಗಳನ್ನು ಬಿಟ್ಟು ಹೆಣ್ಣು–ಗಂಡುಗಳಲ್ಲಿ ಕಂಡುಬರುವ ಲಕ್ಷಣಗಳಲ್ಲಿ ಆನುಷಂಗಿಕ ಲಿಂಗ ಲಕ್ಷಣಗಳು (ಸೆಕಂಡರಿ ಸೆಕ್ಸ್ ಕ್ಯಾರಕ್ಟರಿಸ್ಟಿಕ್ಸ್). ಈ ಗುಣಗಳು ನೇರವಾಗಿ ಸಂತಾನೋತ್ಪತ್ತಿಯಲ್ಲಿ ಭಾಗವಹಿಸದೆ ಇದ್ದರೂ, ಪ್ರಜನನ ಕ್ರಿಯೆಯಲ್ಲಿ ಸಹಾಯಕವಾಗಿವೆ. ಈ ಲಕ್ಷಣಗಳು ಅನೇಕ ಸಾರಿ ಶೀಘ್ರವಾಗಿ ಮತ್ತು ಸುಲಭವಾಗಿ ಜೀವಿಯ ಲಿಂಗವನ್ನು

ಗುರುತಿಸಲು ಸಹಾಯಕವಾಗಿರುತ್ತವೆ. ಆದುದರಿಂದ ಈ ಲಕ್ಷಣಗಳನ್ನು ಲಿಂಗಲಾಂಛನ(ಸೆಕ್ಸ್ ಬ್ಯಾಡ್ಜಸ್)ಗಳೆಂದು ಕರೆಯುತ್ತಾರೆ. ಈ ರೀತಿಯಾಗಿ ಹೆಣ್ಣು ಗಂಡುಗಳ ಭಿನ್ನತೆಗೆ ಲಿಂಗ ದ್ವಿರೂಪತ್ವ ಅಥವಾ ಲೈಂಗಿಕ ದ್ವಿರೂಪತ್ವ (ಸೆಕ್ಸುವಲ್ ಡೈಮಾರ್ಫಿಸಂ) ಎಂದು ಕರೆಯಲಾಗಿದೆ.

ಆನುಷಂಗಿಕ ಲಿಂಗಲಕ್ಷಣಗಳನ್ನು ಸಸ್ಯ ಹಾಗೂ ಪ್ರಾಣಿ ವರ್ಗಗಳಲ್ಲಿ ಕಾಣಬಹುದು. ಸಸ್ಯಗಳಲ್ಲಿ ಸಸ್ಯವು ಪೂರ್ಣವಾಗಿ ಬೆಳೆದು ಪ್ರಾಯಕ್ಕೆ ಬಂದಾಗ ಈ ಲಕ್ಷಣಗಳು ಕಂಡುಬರುತ್ತವೆ. ಬ್ರಯೋಫೈಟದಲ್ಲಿ ಬರುವ ಮಾರ್‌ಕ್ಯಾನ್‌ಷಿಯಾದಲ್ಲಿ ಗಂಡು ಸಸ್ಯದ ಮೇಲ್ಭಾಗದಲ್ಲಿ ದುಂಡಗೆ, ಚಪ್ಪಟೆಯಾಗಿರುವ ಕಂದು ಬಣ್ಣದ ಪಾಲಿಯಂತಿರುವ ಭಾಗವು ಬೆಳೆದಿರುತ್ತದೆ. ಹೆಣ್ಣು ಸಸ್ಯದ ಮೇಲ್ಭಾಗದಲ್ಲಿ ಹಸಿರು ಬಣ್ಣದ ನುಣುಪಾದ ಹಾಗೂ ಹಲವು ಭಾಗಗಳಾಗಿ ವಿಂಗಡಿಸಲ್ಪಟ್ಟ ತಟ್ಟೆಯಕಾರದ ಭಾಗವು ಬೆಳೆದಿರುತ್ತದೆ. ಸ್ಪಿರೋಕಾರ್‌ಪೋಸ್‌ನಲ್ಲಿ ಗಂಡು ಸಸ್ಯವು ಗಾತ್ರದಲ್ಲಿ ಹೆಣ್ಣು ಸಸ್ಯಕ್ಕಿಂತ ಬಹಳ ಸಣ್ಣದಾಗಿದ್ದು ಹೂಜಿಯಾಕಾರದ ಉಪಪತ್ರಗಳನ್ನು ಹೊಂದಿರುತ್ತದೆ. ಹೆಣ್ಣು ಸಸ್ಯವು ದೊಡ್ಡದಾಗಿದ್ದು ದುಂಡಗಿರುವ ಉಪಪತ್ರಗಳನ್ನು ಪಡೆದಿರುತ್ತದೆ. ಪಾಚಿ (ಮಾಸ್) ಗಳಲ್ಲಿ ಹೆಣ್ಣು ಗಾತ್ರದಲ್ಲಿ ದೊಡ್ಡದಾಗಿರುವುದಲ್ಲದೆ ಅನೇಕ ಎಲೆಗಳಿರುತ್ತವೆ. ಗಂಡು ಚಿಕ್ಕದಾಗಿದ್ದು ಒಂದು ಎಲೆಯನ್ನು ಮಾತ್ರ ಪಡೆದಿರುತ್ತದೆ. ಸೈಕಾಸನಲ್ಲಿ ಹೆಣ್ಣು ಮತ್ತು ಗಂಡು ಗಿಡಗಳು ಬೇರೆ ಬೇರೆಯಾಗಿರುತ್ತವೆ. ಗಂಡುಗಿಡದಲ್ಲಿ ಕಾಂಡದ ತುದಿಯಲ್ಲಿ ಶಂಕುವಿನಾಕಾರದ ಆಕೃತಿ ಬೆಳೆದು ಇದರ ಅಕ್ಷಿಯ ಸುತ್ತಲೂ ಆನೇಕ ಕೇಸರಗಳು ಇರುತ್ತವೆ. ಪ್ರತಿಯೊಂದು ಕೇಸರವೂ ಕೆಳಭಾಗದಲ್ಲಿ ಸಂಕುಚಿತವಾಗಿಯೂ, ಮೇಲ್ಭಾಗದಲ್ಲಿ ಅಗಲವಾಗಿಯೂ ಇರುತ್ತದೆ. ಹೆಣ್ಣು ಗಿಡದಲ್ಲಿ ಶಂಕುವಿನಾಕಾರದ ಆಕೃತಿ ಇರುವುದಿಲ್ಲ ಆದರೆ ಸುಮಾರು 6 ರಿಂದ 12 ಅಂಗುಲ ಉದ್ದವಿರುವ ಶಲಾಕಾ ಕೋಶಗಳು ವೃತ್ತಾಕಾರದಲ್ಲಿ ಎಲೆಗಳ ಜೊತೆಯಲ್ಲಿ ಒಂದಾದ ಮೇಲೆ ಮತ್ತೊಂದರಂತೆ ವರಸೆಯಾಗಿ ಜೋಡಿಸಲ್ಪಟ್ಟಿರುತ್ತವೆ. ಇವುಗಳು ಅಗಲವಾಗಿರುತ್ತವೆ.

ಸಸ್ಯಗಳಿಗಿಂತ ಪ್ರಾಣಿಗಳಲ್ಲಿ ಸ್ಪಷ್ಟವಾಗಿ ಆನುಷಂಗಿಕ ಲಿಂಗ ಲಕ್ಷಣಗಳನ್ನು ಕಾಣಬಹುದು. ಅಕಶೇರುಕಗಳಲ್ಲಿ ಚಪ್ಪಟೆಹುಳುಗಳ (ಪ್ಲಾಟಿಹೆಲ್ಮಿಂತ್ಸ್) ವಂಶದಿಂದ ಮೃದ್ವಂಗಿ (ಮೊಲ್ಲುಸ್ಕಾ) ವಂಶಗಳ ತನಕ ಅನೇಕ ಉದಾಹರಣೆಗಳಿವೆ.

ಚಪ್ಪಟೆಹುಳುಗಳ ವಂಶದಲ್ಲಿ ಬರುವ ರಕ್ತ ಸಪಾಟಿ (ಬ್ಲೆಡ್ ಫ್ಲುಕ್), ಷಿಸ್ಟೋಸೋಮ ಹೀಮಟೊಬಿಯಂ ಮಾನವನ ರಕ್ತದಲ್ಲಿ ವಾಸಿಸುವ ಪರೋಪಜೀವಿ. ಇಲ್ಲಿ ಹೆಣ್ಣು ಬಹಳ ಉದ್ದವಾಗಿಯೂ, ತೆಳುವಾಗಿಯೂ ಇರುತ್ತದೆ. ಗಂಡು ಮೊಟಕಾಗಿಯೂ ಮತ್ತು ದಪ್ಪವಾಗಿಯೂ ಇರುತ್ತದೆ. ದುಂಡುಹುಳುಗಳ ವಂಶದ ಜಂತುಹುಳು, ಆನೆಕಾಲುಹುಳು, ಕೊಕ್ಕೆಹುಳು, ನಾರುಹುಣ್ಣಿನ ಹುಳು ಇವುಗಳಲ್ಲಿ ಹೆಣ್ಣು ಉದ್ದ ಹಾಗೂ ದಪ್ಪವಾಗಿ ಇರುತ್ತದೆ. ಜೊತೆಗೆ ಶರೀರದ ಹಿಂಭಾಗವು ನೆಟ್ಟಗೆ ಮೊಂಡಾಗಿರುವುದಲ್ಲದೆ ಗುದದ್ವಾರವನ್ನು ಹೊಂದಿರುತ್ತದೆ. ಜನನೇಂದ್ರಿಯ ದ್ವಾರವು ಬೇರೆಯಾಗಿ ಹೆಚ್ಚು ಕಡಿಮೆ ಶರೀರದ ಮಧ್ಯದಲ್ಲಿರುತ್ತದೆ. ಗಂಡು ಚಿಕ್ಕದಾಗಿದ್ದು ತೆಳುವಾಗಿರುತ್ತದೆ. ಹಿಂಭಾಗವು ಕೊಕ್ಕೆಯಂತೆ ಸ್ವಲ್ಪ ಬಾಗಿದ್ದು ಅಲ್ಲಿ ಕ್ಲೋಯೇಕ ಎಂಬ ಒಂದೇ ಒಂದು ದ್ವಾರವಿರುತ್ತದೆ. ಇದರ ಜೊತೆಗೆ ಜನನೇಂದ್ರಿಯ ಸೂಚ್ಯಂಗಗಳಿರುತ್ತವೆ.

ಬೊನಿಲೀಯಾ ಎಂಬ ಸಮುದ್ರಹುಳುವಿನಲ್ಲಿ ಲಿಂಗ ದ್ವಿರೂಪತ್ವದ ಪರಮಾವಧಿಯನ್ನು ಕಾಣಬಹುದು. ಹೆಣ್ಣಿನ ಶರೀರವು ಅಂಡಾಕೃತಿಯಲ್ಲಿದ್ದು ಹಸಿರು ಬಣ್ಣವಿರುತ್ತದೆ. ಸುಮಾರು 2 ಸೆಂಮೀ ಉದ್ದವಿರುತ್ತದೆ. ಇದಕ್ಕೆ ಸು. 1 ರಿಂದ 2 ಮಿಮೀ ಉದ್ದವಿರುವ ಮುಸುಡಿ (ಪ್ರೋಬೊಸಿಸ್) ಇದ್ದು, ಅದು ಮುಂಭಾಗದಲ್ಲಿ ಇಬ್ಭಾಗವಾಗಿ ತೋಳುಗಳಂತಿರುತ್ತದೆ. ಗಂಡು ಹುಳುವು ಅತಿ ಸಣ್ಣದಾಗಿರುತ್ತದೆ. ಅಂದರೆ ಸುಮಾರು 1 ಮಿಮೀ ನಷ್ಟಿರುತ್ತದೆ. ಮುಸುಡಿ, ಬಾಯಿ ಅಥವಾ ಗುದದ್ವಾರ ಯಾವುದೂ ಇರುವುದಿಲ್ಲ.

ಸಂಧಿಪದಿಗಳ ವಂಶಕ್ಕೆ ಬಂದರೆ ಸಮುದ್ರವಾಸಿ ಹೆಣ್ಣು ಸೀಗಡಿಯ ಉದರಭಾಗದಲ್ಲಿರುವ ಮೊದಲನೆ ಪ್ಲಿಯೋಪಾಡ್‌ನ ಒಳಭಾಗವುಕ್ಷೀಣವಾಗಿರುತ್ತದೆ. ಗಂಡಿನಲ್ಲಿ ಈ ಭಾಗವು ಅಗಲವಾಗಿರುವುದಲ್ಲದೆ, ಇಕ್ಕೆಡೆಗಳ ಎರಡು ಭಾಗಗಳು ಮಧ್ಯಅಕ್ಷದಲ್ಲಿ ಸೇರಿ ಪೆಡಾಸ್ಮ ಎಂಬ ಉಪಾಂಗವಾಗಿರುತ್ತದೆ. ಈ ಪೆಡಾಸ್ಮವು ಸಂಭೋಗ ಕ್ರಿಯೆಯಲ್ಲಿ ಭಾಗವಹಿಸುತ್ತದೆ. ಸಿಹಿನೀರಿನಲ್ಲಿ ವಾಸಿಸುವ ಸೀಗಡಿಯಲ್ಲಿ ಗಂಡು ದೊಡ್ಡದಾಗಿರುತ್ತದೆ, ಉದರವು ಕಿರಿದಾಗಿರುತ್ತದೆ, ನಡೆಯುವ ಕಾಲುಗಳು ಬಹಳ ಒತ್ತಾಗಿರುತ್ತವೆ, ಎರಡನೆಯ ಕಾಲು ಬಲವಾಗಿ ಬೆಳೆದು ಅದರಲ್ಲಿ ಅನೇಕ ಮುಳ್ಳುಗಳಿರುತ್ತವೆ. ಎರಡನೆಯ ಪ್ಲಿಯೋಪಾಡ್‌ನಲ್ಲಿ ಅಪೆಂಡಿಕ್ಸ್ ಮ್ಯಾಸ್ಕ್ಯುಲೈನ ಎಂಬ ಅಂಗಪುಚ್ಛವಿರುತ್ತದೆ. ಹೆಣ್ಣು ಸೀಗಡಿ ಸಣ್ಣದಾಗಿರುತ್ತದೆ. ಉದರವು ಅಗಲವಾಗಿರುತ್ತದೆ. ನಡೆಯುವ ಕಾಲುಗಳು ಒತ್ತಾಗಿರುವುದಿಲ್ಲ, ಎರಡನೆಯ ಕಾಲು ಸುಮಾರಾಗಿ ಬೆಳೆದು ಅದರಲ್ಲಿ ಸ್ವಲ್ಪ ಮುಳ್ಳುಗಳಿರುತ್ತವೆ, ಎರಡನೆಯ ಪ್ಲಿಯೋಪಾಡ್‌ನಲ್ಲಿ ಅಪೆಂಡಿಕ್ಸ್ ಮ್ಯಾಸ್ಕ್ಯುಲೈನ ಇರುವುದಿಲ್ಲ. ಆದರೆ 2, 3, 4 ಮತ್ತು 5ನೆ ಪ್ಲಿಯೋಪಾಡ್‌ಗಳಲ್ಲಿರುವ ಅಪೆಂಡಿಕ್ಸ್ ಇಂಟರ್ನಾಗಳು ಒಂದಾಗಿ ಸೇರಿ ಬುಟ್ಟಿಯಾಕಾರವಾಗಿ ಮೊಟ್ಟೆಗಳನ್ನು ಒಯ್ಯುತ್ತವೆ. ಏಡಿಗಳಲ್ಲಿ ಹೆಣ್ಣಿನ ಉದರಭಾಗವು ಅಗಲವಾಗಿರುತ್ತದೆ. ಮತ್ತು ನಾಲ್ಕು ಜೊತೆ ಪ್ಲಿಯೋಪಾಡ್‌ಗಳಿರುತ್ತವೆ. ಇವುಗಳ ಕವಲುಗಳು ತಮ್ಮ ಕೂದಲಿನಾಕಾರದಂತಿರುವ ನಾಳಗಳು ಒಂದಕ್ಕೊಂದು ಸೇರಿಕೊಂಡು ಬುಟ್ಟಿಯಂತಾಗಿ, ಅದರಲ್ಲಿ ಮೊಟ್ಟೆಗಳನ್ನು ಒಯ್ಯಲು ಸಹಾಯಕವಾಗಿರುತ್ತವೆ. ಗಂಡು ಏಡಿಯಲ್ಲಿ ಉದರಭಾಗವು ಕಿರಿದಾಗಿದ್ದು, ಎರಡು ಪ್ಲಿಯೋಪಾಡ್‌ಗಳಿದ್ದು ಸಂಭೋಗ ಕ್ರಿಯೆಯಲ್ಲಿ ಭಾಗವಹಿಸುತ್ತವೆ. ಜಿಲಾಸಿಮಸ್ ಎಂಬ ಏಡಿಯಲ್ಲಿ ಗಂಡಿನ ಮೊದಲನೆಯ ಎಡಗಾಲು ಮಾತ್ರ ದೊಡ್ಡದಾಗಿ ಬಲವಾಗಿ ಇಕ್ಕಳಂದತಿರುತ್ತದೆ. ಇದು ನೋಡಲು ಪಿಟೀಲು ತರಹ ಇರುವುದರಿಂದ ಈ ಏಡಿಯನ್ನು ಪಿಟೀಲು ಏಡಿ (ಫಿಡ್ಲೆರ್ ಕ್ರ್ಯಾಬ್) ಎಂದು ಕರೆಯುವುದುಂಟು. ಹೆಣ್ಣಿನಲ್ಲಿ ಎರಡು ಕಾಲುಗಳು ಒಂದೇ ಸಮನಾಗಿರುತ್ತವೆ.

ಸಹಸ್ರಪಾದಿ (ಮಿಲಿಪಿಡ್) ಗಳಲ್ಲಿ ಗಂಡಿನ ಶರೀರದ ಏಳನೆ ಖಂಡದಲ್ಲಿ ಕಾಲುಗಳಿರುವುದಿಲ್ಲ. ಇದಕ್ಕೆ ಬದಲಾಗಿ ಒಂದು ಜೊತೆ ಸಹಾಯುಕ ಸಂಭೋಗಾಂಗಗಳಿರುತ್ತವೆ. ಮೊದಲನೆಯ ಕಾಲುಗಳು ಸಂಭೋಗಕ್ಕಾಗಿ ಮಾರ್ಪಾಟಾಗಿರುತ್ತವೆ. ಹೆಣ್ಣಿನಲ್ಲಿ ಈ ರೀತಿಯ ಬದಲಾವಣೆಗಳಾವುವು ಇರುವುದಿಲ್ಲ. ಕೀಟಗಳಲ್ಲಿಯೂ ಸಹ ಆನುಷಂಗಿಕ ಲಿಂಗಲಕ್ಷಣಗಳನ್ನು ಕಾಣಬಹುದು. ಎಲ್ಲರಿಗೂ ಚಿರಪರಿಚಿತವಾಗಿರುವ ಜಿರಲೆಗಳಲ್ಲಿ ಗಂಡು ಜಿರಲೆಯ ಉದರಭಾಗವು ನೀಳವಾಗಿದ್ದು, ಕಿರಿದಾಗಿರುತ್ತದೆ ಮತ್ತು ಉದರದ ಹಿಂಭಾಗದಲ್ಲಿ 9ನೆಯ ಖಂಡದಲ್ಲಿ ಒಂದು ಜೊತೆ ಆಸನಕುಡಿ (ಆನಲ್ ಸ್ಟೈಲ್ಸ್) ಗಳಿರುತ್ತವೆ. ಹೆಣ್ಣುಜಿರಲೆಯಲ್ಲಿ ಉದರಭಾಗವು ಮೊಟಕಾಗಿ, ಅಗಲವಾಗಿ, ಚಪ್ಪಟೆಯಾಗಿ ಇದ್ದು ಆಸನ ಕುಡಿಗಳನ್ನು ಹೊಂದಿರುವುದಿಲ್ಲ. ಉದರದ 7ನೆಯ ಖಂಡದ ಫಲಕಗಳು ಒಂದಾಗಿ ಹಡಗಿನ ಕೆಳಭಾಗದಂತಿದ್ದು ಮೊಟ್ಟೆಯ ಕೋಶವನ್ನು ಒಯ್ಯಲು ಸಹಾಯಕವಾಗಿರುತ್ತದೆ. ಮಿಡತೆಗಳಲ್ಲಿ ಗಂಡು ಗಾತ್ರದಲ್ಲಿ ಹೆಣ್ಣಿಗಿಂತ ಚಿಕ್ಕದಾಗಿರುತ್ತದೆ ಮತ್ತು ಇದರ ಉದರವು ನೀಳವಾಗಿ ಸ್ವಲ್ಪ ಚೂಪಾಗಿರುತ್ತದೆ. ಶಬ್ದಮಾಡುವ ಅಂಗಗಳು ಸಹ ಇರುತ್ತವೆ. ಹೆಣ್ಣಿನ ಉದರವು ದೊಡ್ಡದಾಗಿರುವುದಲ್ಲದೆ ಅದರ ಹಿಂಭಾಗದಲ್ಲಿ ಮೊಟ್ಟೆಯನ್ನು ಸಾಗಿಸುವ ನಾಳಾಂಗ (ಓವಿಪೊಸ್ಟರ್) ವಿರುತ್ತದೆ. ಶಬ್ದ ಮಾಡುವ ಅಂಗಗಳಿರುವುದಿಲ್ಲ. ತೆಂಗಿನ ಮರಗಳನ್ನು ಕೊರೆದು ನಾಶಮಾಡುವ ಘೇಂಡಾಮೃಗ ಹೆದ್ದುಂಬಿ (ರೈನೋಸಾರಸ್ ಬೀಟಲ್) ಯಲ್ಲಿ ಗಂಡಿನ ತಲೆ ಮತ್ತು ಬೆನ್ನಿನ ಮೇಲೆ ಉದ್ದವಾಗಿ ಮತ್ತು ಚೂಪಾಗಿರುವ ಕೊಂಬಿರುತ್ತವೆ. ಹೆಣ್ಣಿನಲ್ಲಿ ಅತಿ ಚಿಕ್ಕದಾಗಿರುತ್ತದೆ. ಚಿಮಂಡೆ (ಕ್ರಿಕೇಟ್) ಮತ್ತು ಸೀಕಾಡಗಳಲ್ಲಿ ಶಬ್ದ ಮಾಡುವ ಅಂಗಗಳು ಗಂಡು ಕೀಟಗಳಲ್ಲಿ ಮಾತ್ರ ಇರುತ್ತವೆ. ಕವಲುದವಡೆ ಜೀರುಂಡೆಯಲ್ಲಿ ಸಾರಂಗದ ಕವಲುಗೊಂಬಿನಂತೆ ಕವಲೊಡೆದಿರುವ ದವಡೆಭಾಗಗಳು ಗಂಡಿನಲ್ಲಿ ಮಾತ್ರ ಪ್ರಧಾನವಾಗಿ ಕಾಣುತ್ತವೆ. ಶಲ್ಕಕೀಟ (ಸ್ಕೇಲ್ ಇನ್ಸೆಕ್ಟ್) ಗಳಲ್ಲಿ ಹೆಣ್ಣಿನ ಶರೀರ ಶಲ್ಕದಂತಿರುತ್ತದೆ. ಗಂಡು ಇತರ ಕೀಟಗಳಂತೆ ಎರಡು ರೆಕ್ಕೆಗಳುಳ್ಳ ದೃಢ ಶರೀರವನ್ನು ಪಡೆದಿರುತ್ತದೆ. ಸಾಮಾನ್ಯವಾಗಿ ಇರುವ ಎರಡು ಕಣ್ಣುಗಳ ಜೊತೆಗೆ ಇನ್ನೆರಡು ಕಣ್ಣುಗಳು ತಲೆಯ ಕೆಳಭಾಗದಲ್ಲಿರುತ್ತವೆ. ಹೆಣ್ಣುಜೇನು ಮತ್ತು ಕಣಜಗಳಲ್ಲಿ ಕುಟುಕು ಮುಳ್ಳಿರುತ್ತದೆ. ಗಂಡಿನಲ್ಲಿ ಇರುವುದಿಲ್ಲ. ಗಂಡು ಸೊಳ್ಳೆಯ ಕುಡಿಮೀಸೆಗಳಲ್ಲಿ ದಟ್ಟವಾದ ರೋಮಗಳಿದ್ದು ಪೊದೆಯಂತಿರುತ್ತವೆ ಮತ್ತು ಬಾಯಿಯ ಉಪಾಂಗಗಳು ಗಿಡಗಳ ರಸವನ್ನು ಹೀರಲು ಸಹಾಯುಕವಾಗಿರುತ್ತವೆ. ಹೆಣ್ಣು ಸೊಳ್ಳೆಯ ಕುಡಿಮೀಸೆಗಳಲ್ಲಿ ದಟ್ಟವಾದ ರೋಮಗಳಿಲ್ಲದಿರುವುದರಿಂದ ಅವು ಸಾಮಾನ್ಯವಾಗಿರುತ್ತವೆ ಮತ್ತು ಬಾಯಿಯ ಉಪಾಂಗಗಳು ಇತರ ಪ್ರಾಣಿಯ ಶರೀರವನ್ನು ಚುಚ್ಚಿ, ಅನಂತರ ರಕ್ತವನ್ನು ಹೀರಲು ಸಹಾಯಕವಾಗಿರುತ್ತವೆ. ಗಂಡು ರೇಷ್ಮೆಪತಂಗಗಳಲ್ಲಿ ತಲೆಯಲ್ಲಿರುವ ಕುಡಿಮೀಸೆಗಳು ದಟ್ಟವಾದ ಪುಕ್ಕದಂತಿರುತ್ತವೆ. ಹೆಣ್ಣಿನಲ್ಲಿ ಈ ರೀತಿ ಇರುವುದಿಲ್ಲ ಸಾಧಾರಣವಾಗಿರುತ್ತವೆ.

ಚೇಳುಗಳಲ್ಲಿ ಗಂಡಿನ ಉದರವು ಕಿರಿಯದಾಗಿದ್ದು, ಪೆಡಿಪಾಲ್ಪ್ ಗಳು ಬಲವಾಗಿರುತ್ತವೆ. ಶಿರೋಮುಂಡ (ಸಿಫೆಲೊಥೋರಕ್ಸ್)ದಲ್ಲಿರುವ ಜನನೇಂದ್ರಿಯ ಮುಚ್ಚಳ (ಜೆನಿಟಲ್ ಒಪ್ರಿಕ್ಯುಲಂ)ಗಳು ಎರಡು ಭಾಗವಾಗಿ ಸೀಳಿರುತ್ತವೆ. ಆದುದರಿಂದ ಅವುಗಳನ್ನು ಪ್ರತ್ಯೇಕಿಸಬಹುದು. ಹೆಣ್ಣು ಚೇಳಿನಲ್ಲಿ ಉದರವು ಅಗಲವಾಗಿದ್ದು ಪೆಡಿಪಾಲ್ಪ್‌ಗಳು ಅಷ್ಟು ಬಲವಾಗಿರುವುದಿಲ್ಲ ಮತ್ತು ಜನನೇಂದ್ರಿಯ ಮುಚ್ಚಳಗಳು ಸೀಳದೆ ಪೂರ್ಣವಾಗಿರುವುದರಿಂದ ಅವುಗಳನ್ನು ಪ್ರತ್ಯೇಕಿಸಲಾಗುವುದಿಲ್ಲ. ಇದರ ಜೊತೆಗೆ ಶರೀರದ ಎರಡನೆಯ ಖಂಡದ ಸ್ಟರ್ನಂ ಫಲಕದ ಮೇಲೆ ಬಾಚಣಿಗೆಯ ಹಲ್ಲುಗಳಂತಿರುವ ಪೆಕ್ಟೈನ್ ಎಂಬ ಅಂಗದಲ್ಲಿ ಹಲ್ಲುಗಳ ಸಂಖ್ಯೆಯು ಗಂಡು ಚೇಳಿನಲ್ಲಿ ಹೆಚ್ಚಾಗಿರುತ್ತದೆ, ಹೆಣ್ಣು ಚೇಳಿನಲ್ಲಿ ಕಡಿಮೆ ಇರುತ್ತದೆ. ಜೇಡದಲ್ಲಿ ಹೆಣ್ಣು ಗಾತ್ರದಲ್ಲಿ ದೊಡ್ಡದಾಗಿರುತ್ತದೆ. ಗಂಡು ಚಿಕ್ಕದಾಗಿರುತ್ತದೆ. ಮತ್ತು ಗಂಡಿನ ಪೆಡಿಪಾಲ್ಪ್‌ಗಳು ಸಂಭೋಗಕ್ಕಾಗಿ ಮಾರ್ಪಾಡಾಗಿರುತ್ತವೆ. ರಾಜಏಡಿ (ಕಿಂಗ್ ಕ್ರ್ಯಾಬ್)ಗಳಲ್ಲಿ ಗಂಡು ಗಾತ್ರದಲ್ಲಿ ಹೆಣ್ಣಿಗಿಂತ

**ಪ್ರಾಣಿಗಳಲ್ಲಿ ಆನುಷಂಗಿಕ ಲಿಂಗ ಲಕ್ಷಣಗಳು.**



ಚಿಕ್ಕದಾಗಿರುತ್ತದೆ ಮತ್ತು ಎರಡು ಹಾಗೂ ಮೂರನೆ ಶಿರೋ ಮುಂಡದ ಅಂಗಮುಚ್ಚಗಳ ಕೊನೆಯ ಭಾಗದಲ್ಲಿ ಕೊಕ್ಕೆಗಳಿರುತ್ತವೆ. ಇದರಿಂದ ಹೆಣ್ಣನ್ನು ಸಂಭೋಗ ಕಾಲದಲ್ಲಿ ಭದ್ರವಾಗಿ ಹಿಡಿದುಕೊಳ್ಳಲು ಅನುಕೂಲವಾಗಿರುತ್ತದೆ.

ಮೃದ್ವಂಗಿಗಳ ವಂಶದ ಸೆಪಿಯಾ ಮತ್ತು ಆಕ್ಟೊಪಸ್ ಗಳಲ್ಲಿ ಗಂಡಿನಲ್ಲಿರುವ ಒಂದು ತೋಳು ಸಂಭೋಗಕ್ಕಾಗಿ ಮಾರ್ಪಾಡಾಗಿರುತ್ತದೆ. ಇದನ್ನು ಹೆಕ್ಟೋಕಾಟಿಲೈಸಡ್ ತೋಳೆಂದು ಕರೆಯಲಾಗಿದೆ. ಆರ್ಗೊನಾಟ ಎಂಬ ಅಷ್ಟ ಪಾದಿಯಲ್ಲಿ ಗಂಡು ಸಣ್ಣಗಿರುತ್ತದೆ. ಹೆಣ್ಣು ಬಹಳ ದೊಡ್ಡದಾಗಿರುತ್ತದೆ ಮತ್ತು ಹೊರ ಚಿಪ್ಪು ಇರುತ್ತದೆ. ಹೆಣ್ಣಿನ ಮೇಲ್ಭಾಗದಲ್ಲಿರುವ ಎರಡು ತೋಳುಗಳು ವೈಶಿಷ್ಟ್ಯವುಳ್ಳವುವಾಗಿ ಚಿಪ್ಪಿನ ಹೊರಭಾಗಕ್ಕೆ ಸೇರಿ ಕೊಂಡಿರುತ್ತವೆ. ತೋಳುಗಳ ತುದಿಭಾಗವು ಅಗಲವಾಗಿ ತಟ್ಟೆಯಂತಿರುತ್ತವೆ. ಹೊರ ಚಿಪ್ಪು ಮೊಟ್ಟೆಗಳನ್ನು ಸಾಗಿಸಲು ಉಪಯೋಗಕರವಾಗಿದೆ.

ಕಶೇರುಕಗಳಲ್ಲಿಯೂ ಸಹ ಮೀನಿನಿಂದ ಮಾನವನ ತನಕ ಆನುಷಂಗಿಕ ಲಿಂಗಲಕ್ಷಣಗಳನ್ನು ಕಾಣಬಹುದು. ಸೋರಾಮೀನು. ಚಟ್ಟಿಮೀನುಗಳಲ್ಲಿ ಗಂಡಿನ ಉದರದ ಹೊರಭಾಗದಲ್ಲಿ ಒಂದು ಜೊತೆ ಕ್ಲಸ್ಪರ್ ಗಳಿರುತ್ತವೆ. ಇವುಗಳು ಸಂಭೋಗಕ್ರಿಯೆಯಲ್ಲಿ ಹೆಣ್ಣನ್ನು ಭದ್ರವಾಗಿ ಹಿಡಿದುಕೊಳ್ಳಲು ಸಹಾಯ ಮಾಡುವುದಲ್ಲದೆ, ರೇತಸ್ಸನ್ನು ಹೆಣ್ಣಿನ ಜನನೇಂದ್ರಿಯದೊಳಕ್ಕೆ ಸಾಗಿಸಲು ಸಹಾಯಕವಾಗಿರುತ್ತವೆ. ಹೆಣ್ಣು ಮೀನಿನಲ್ಲಿ ಕ್ಲಸ್ಪರ್‌ಗಳು ಇರುವುದಿಲ್ಲ. ಕುದುರೆ ಮೀನು, ನಾಳದ ಮೀನುಗಳಲ್ಲಿ ಗಂಡಿನ ಉದರಭಾಗದಲ್ಲಿ ಎದ್ದು ಕಾಣುವಂತಹ ಪೋಷಣೆಯ ಚೀಲವಿರುತ್ತದೆ (ಬ್ರೂಡ್ ಪೌಚ್) ಹೆಣ್ಣಿನಲ್ಲಿ ಇರುವುದಿಲ್ಲ. ಈ ಚೀಲದಲ್ಲಿ ಹೆಣ್ಣು ಮೊಟ್ಟೆಗಳನ್ನು ಇಟ್ಟಾಗ ಅದರ ರಕ್ಷಣೆ ಮತ್ತು ಪಾಲನೆಯನ್ನು ಗಂಡು ನೋಡಿಕೊಳ್ಳುತ್ತದೆ. ಲಿಬೀಸ್ಟಸ್ ಗಂಡು ಮೀನಿನಲ್ಲಿ ಬೆನ್ನಿನ ಮೇಲಿರುವ ಈಜು ರೆಕ್ಕೆಯಲ್ಲಿ ದೊಡ್ಡದಾದ ಕಪ್ಪು ಚುಕ್ಕಿಯಿರುತ್ತದೆ. ಹೆಣ್ಣು ಮೀನಿನಲ್ಲಿ ಈ ಚುಕ್ಕೆ ಇರುವುದಿಲ್ಲ. ಇತರ ಮೀನುಗಳಲ್ಲಿ ಸಾಮಾನ್ಯವಾಗಿ ಗಂಡು ಮೀನುಗಳು ಹೊಳೆಯುವ ನೀಲಿ, ಕೆಂಪು, ಹಸಿರು ಮತ್ತು ಕಪ್ಪು ಬಣ್ಣವುಳ್ಳವಾಗಿರುತ್ತವೆ. ಹೆಣ್ಣು ಮೀನುಗಳಲ್ಲಿ ಶರೀರದ ಬಣ್ಣ ಅಷ್ಟಾಗಿ ಕಂಡುಬರುವುದಿಲ್ಲ. ಗಂಡು ಕಪ್ಪೆಗಳಲ್ಲಿ ತಲೆಯ ಕೆಳಭಾಗದಲ್ಲಿ ಎರಡು ಕಡೆಯೂ ಒಂದೊಂದು ಧ್ವನಿ ಚೀಲವಿರುತ್ತದೆ (ವೊಕಲ್ ಸ್ಯಾಕ್) ಮತ್ತು ಕೈಯ ಹೆಬ್ಬೆರಳು ಬಹಳ ದಪ್ಪವಾಗಿ ಮೆತ್ತೆಯಂತಿರುತ್ತದೆ. ಇದನ್ನು ನಪ್ಷುವಲ್ ಮೆತ್ತೆ ಎಂದು ಕರೆಯುವುದುಂಟು. ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡುಕಪ್ಪೆ ಹೆಣ್ಣನ್ನು ಆಹ್ವಾನಿಸಲು ತನ್ನ ಧ್ವನಿಚೀಲಗಳಿಂದ ಶಬ್ದಮಾಡುತ್ತದೆ ಮತ್ತು ಹೆಣ್ಣನ್ನು ಭದ್ರವಾಗಿ ಹಿಡಿದುಕೊಳ್ಳಲು ನಪ್ಷುವಲ್ ಮೆತ್ತೆಗಳನ್ನು ಉಪಯೋಗಿಸುತ್ತದೆ. ಸರೀಸೃಪಗಳಲ್ಲಿ ಗಂಡಿಗೆ ಒಂದು ಅಥವಾ ಎರಡು ಶಿಶ್ನಗಳು ಇರುತ್ತವೆ. ಹೆಂಟೆಗೊದ್ದಗಳಲ್ಲಿ ಗಂಡಿನ ಕತ್ತಿನ ಬಳಿ ಅತಿ ಕೆಂಪು ಅಥವಾ ಕರ್‍ರಗಿರುವ ಬಣ್ಣವಿರುತ್ತದೆ ಮತ್ತು ಅದರ ಬಾಲದ ಗಾತ್ರವು ಸಹ ದೊಡ್ಡದಾಗಿರುತ್ತದೆ.

ಪಕ್ಷಿಗಳಲ್ಲಿ ಆನುಷಂಗಿಕ ಲಿಂಗಲಕ್ಷಣಗಳು ಬಹಳವಾಗಿ ಶರೀರದ ಪುಕ್ಕಗಳು, ಬಣ್ಣ, ಶಿಖೆ, ಚುಚ್ಚು ಮುಳ್ಳು, ಗಾತ್ರ, ನಡೆ, ಹಾಡುವಿಕೆ ಹಾಗೂ ಲೈಂಗಿಕ ನಡತೆ ಇವುಗಳಲ್ಲಿ ಕಂಡು ಬರುತ್ತವೆ. ಕೋಳಿಗಳಲ್ಲಿ ಹುಂಜದ ತಲೆಯ ಮೇಲ್ಭಾಗದಲ್ಲಿ ದೊಡ್ಡದಾದ, ಅಗಲವಾದ ಶಿಖೆಯಿರುತ್ತದೆ. ಬಾಲದ ಪುಕ್ಕಗಳು ಉದ್ದವಾಗಿಯೂ, ಹೆಚ್ಚು ಹೊಳಪಾಗಿಯೂ ಇರುತ್ತವೆ. ಕಾಲಿನಲ್ಲಿ ಚೂಪಾದ ದೊಡ್ಡಗಾತ್ರದ ಚುಚ್ಚುಮುಳ್ಳು ಇರುತ್ತದೆ. ಠೀವಿಯ ನಿಲುವು ಮತ್ತು ಕೂಗುವಿಕೆಯೂ ಉಚ್ಚಸ್ಥಾಯಿಯಲ್ಲಿರುತ್ತದೆ. ನವಿಲುಗಳಲ್ಲಿ ಗಂಡು ಬಹಳ ನೀಳವಾದ ಉಜ್ವಲವರ್ಣದ ಬಾಲದ ಪುಕ್ಕಗಳನ್ನು ಪಡೆದಿರುತ್ತದೆ. ಮತ್ತು ಈ ಪುಕ್ಕಗಳನ್ನು ಬೀಸಣಿಗೆಯಂತೆ ಅಗಲವಾಗಿ ಕೆದರಿಕೊಂಡು ನೃತ್ಯಮಾಡುತ್ತದೆ. ಜೊತೆಗೆ ನಡೆಯು ಸಹ ಗಂಭೀರವಾಗಿರುತ್ತದೆ. ಗಂಡು ನವಿಲಿನ ಕೂಗು ಕರ್ಕಶವಾಗಿರುತ್ತದೆ. ಹೆಣ್ಣು ನವಿಲಿನಲ್ಲಿ ಈ ಗುಣಗಳು ಕಾಣುವುದಿಲ್ಲ. ಗಂಡು ಟರ್ಕಿಯಲ್ಲಿ ನಡೆಯು ಸೆಡೆತುಕೊಂಡಿರುತ್ತದೆ. ಗಂಡುಕೋಗಿಲೆಯ ಶರೀರದ ಬಣ್ಣ ನೀಲಿ ಹಸಿರು ಹೊಳಪುಮಿಶ್ರಿತ ಕಪ್ಪು, ಆದರೆ ಹೆಣ್ಣು ಕೋಗಿಲೆಯ ಶರೀರದ ಬಣ್ಣ ಬಿಳಿ ಚುಕ್ಕೆಗಳುಳ್ಳ ಕಂದು ಬಣ್ಣ, ರೆಕ್ಕೆ, ಎದೆ, ಬಾಲ ಮತ್ತು ಉದರಗಳು ಮಾತ್ರ ಬಿಳುಪು. ಗಂಡು ಗುಬ್ಬಚ್ಚಿಯ ಕತ್ತಿನ ಬಳಿ ಒಂದು ಅಗಲವಾದ ಕಪ್ಪುಚಿಹ್ನೆ ಇರುತ್ತದೆ. ಹೆಣ್ಣಿನಲ್ಲಿ ಈ ಚಿಹ್ನೆ ಇರುವುದಿಲ್ಲ. ವಿವಿಧ ರೀತಿಯ ದಿವ್ಯಪಕ್ಷಿಗಳಲ್ಲಿ (ಬರ್ಡ್ಸ್ ಆಫ್ ಪ್ಯಾರಡೈಸ್) ಕಾಮನಬಿಲ್ಲಿನ ಎಲ್ಲಾ ಬಣ್ಣಗಳು, ಪ್ರಜ್ವಲಿಸುವ ಬಿಳುಪು. ಮಂದವಾದ ಕಂದುಬಣ್ಣ, ಕಪ್ಪು ಮತ್ತು ಇತರ ಮಿಶ್ರ ಬಣ್ಣಗಳ ಪುಕ್ಕಗಳು ಶರೀರಕ್ಕಿಂತ ಎರಡು ಅಥವಾ ಮೂರರಷ್ಟು ಉದ್ದವಾಗಿರುತ್ತವೆ. ತಲೆಯ ಮೇಲ್ಭಾಗದಿಂದ ಆರುಪುಕ್ಕಗಳು ಕೆಳಕ್ಕೆ ಜೋತಾಡುತ್ತಿರುತ್ತವೆ. ಇನ್ನೊಂದು ಗಂಡು ಪಕ್ಷಿಯಲ್ಲಿ ತಲೆಯ ಮೇಲ್ಭಾಗದಿಂದ ಎರಡು ಪುಕ್ಕಗಳು ಸುಮಾರು 1–1/2 ಮೀ. ಉದ್ದವಾಗಿದ್ದು ಶರೀರದ ಹಿಂಭಾಗಕ್ಕೆ



ಚಾಚಿಕೊಂಡಿರುತ್ತವೆ. ತೀರ ಪ್ರದೇಶಗಳಲ್ಲಿ ವಾಸಿಸುವ ರಫ್ ಪಕ್ಷಿಗಳಲ್ಲಿ ಗಂಡಿನ ಕತ್ತಿನ ಸುತ್ತಲು ಕಂಠಾಭರಣದಂತೆ ಎದ್ದು ಕಾಣುವ ಕತ್ತಿನ ಪುಕ್ಕಗಳೂ ಮತ್ತು ಕಿವಿ ಜುಟ್ಟು ಇರುತ್ತವೆ. ಪಕ್ಷಿಗಳಲ್ಲಿ ಮೇಲೆ ಹೇಳಿರುವ ಆನುಷಂಗಿಕ ಲಿಂಗಲಕ್ಷಣಗಳೆಲ್ಲವು ಬಾಹ್ಯ ರಚನೆಗೆ ಸಂಬಂಧಪಟ್ಟವು. ಇದರ ಜೊತೆಗೆ ಕೆಲವು ಶರೀರದ ಒಳಭಾಗಕ್ಕೆ ಸಂಬಂಧಪಟ್ಟ ಗುಣಗಳು ಸಹ ಇರುತ್ತವೆ. ಪಾರಿವಾಳ ಮತ್ತು ಕೋಳಿಗಳಲ್ಲಿ ಹೃದಯದ ಗಾತ್ರವು ಗಂಡಿನಲ್ಲಿ ದೊಡ್ಡದಾಗಿದ್ದು ಹೆಣ್ಣಿನಲ್ಲಿ ಚಿಕ್ಕದಾಗಿರುತ್ತದೆ. ಕೆಂಪುರಕ್ತಕಣಗಳ ಸಂಖ್ಯೆಯು ಗಂಡಿನಲ್ಲಿ ಹೆಚ್ಚಾಗಿರುತ್ತದೆ, ಹೆಣ್ಣಿನಲ್ಲಿ ಕಡಿಮೆಯಿರುತ್ತದೆ.

ಸ್ತನಿಗಳಲ್ಲಿಯೂ ಸಹ ಆನುಷಂಗಿಕ ಲಿಂಗಲಕ್ಷಣಗಳು ಹೆಚ್ಚಾಗಿ ಕಂಡುಬರುತ್ತವೆ. ಪ್ರಥಮವಾಗಿ ಗಂಡು ಪ್ರಾಣಿಯಲ್ಲಿ ಮಾತ್ರ ಶಿಶ್ನ ಹಾಗೂ ವೃಷಣಗಳಿರುತ್ತವೆ. ಆನಂತರ ಪ್ರಾಣಿ ಬೆಳೆಯುತ್ತ ಬಂದಾಗ ಇತರ ಲಕ್ಷಣಗಳು ಕಂಡುಬರುತ್ತವೆ. ವಿವಿಧ ರೀತಿಯ ಶಾರೀರಿಕ ಬೆಳವಣಿಗೆ, ಕೂದಲಿನ ವಿನ್ಯಾಸ, ಧ್ವನಿ ಬದಲಾವಣೆಗಳು, ಶಾರೀರಿಕಶಕ್ತಿ, ಸಹನೆ, ಮಾಂಸಖಂಡಗಳ ಬೆಳವಣಿಗೆ, ಅಸ್ಥಿಯ ಬದಲಾವಣೆ, ಚರ್ಮದ ಕೆಳಭಾಗದಲ್ಲಿ ಶೇಖರಿಸಲ್ಪಡುವ ಕೊಬ್ಬಿನಲ್ಲಿ ವ್ಯತ್ಯಾಸ, ಸ್ತನಗಳ ಬೆಳವಣಿಗೆಯಲ್ಲಿ ಎದ್ದುಕಾಣುವ ವ್ಯತ್ಯಾಸಗಳು, ಚರ್ಮದ ಬಣ್ಣದಲ್ಲಿ ಬದಲಾವಣೆ ಇತ್ಯಾದಿಗಳನ್ನು ಕಾಣಬಹುದು. ಸಿಂಹಗಳಲ್ಲಿ ಗಂಡಿಗೆ ಒತ್ತಾಗಿ ಬೆಳೆದಿರುವ ಕೇಸರವು ಕತ್ತಿನ ಬಳಿ ಇರುತ್ತದೆ. ಹೆಣ್ಣು ಸಿಂಹಕ್ಕೆ ಈ ಕೇಸರವಿರುವುದಿಲ್ಲ. ಟಗರುಗಳಲ್ಲಿ ಕೆಳಕ್ಕೆ ಬಾಗಿರುವ ಬಲವಾದ ಕೊಂಬುಗಳಿರುತ್ತವೆ. ಗಂಡಾನೆಯಲ್ಲಿ ನೀಳವಾದ ದಂತಗಳಿರುತ್ತವೆ, ಇದರ ಉದ್ದ ಸುಮಾರು ಎಂಟು ಅಡಿ ಇರುತ್ತದೆ. ಹೆಣ್ಣಾನೆಯಲ್ಲಿ ಬಹಳ ಸಣ್ಣದಾದ ದಂತಗಳಿರುತ್ತವೆ. ಗಂಡು ಕಾಡು ಹಂದಿಯಲ್ಲಿ ಬಲವಾದ ಕೋರೆಹಲ್ಲುಗಳಿರುತ್ತವೆ. ಗಂಡು ಜಿಂಕೆ, ಕಡವೆ, ಸಾರಂಗ ಇವುಗಳಲ್ಲಿ ಬಲವಾಗಿ ಬೆಳೆದಿರುವ ಕೊಂಬುಗಳಿರುತ್ತವೆ. ಈ ಕೊಂಬುಗಳು ಕವಲೊಡೆದಿರಬಹುದು ಅಥವಾ ಸುರುಳಿಯಾಕಾರದಲ್ಲಿರಬಹುದು. ಸೀಲ್ ಪ್ರಾಣಿಗಳಲ್ಲಿ ಗಂಡು ಗಾತ್ರದಲ್ಲಿ ಹೆಣ್ಣಿಗಿಂತ ಬಹಳ ದೊಡ್ಡದಾಗಿದ್ದು ಶರೀರದ ಬಣ್ಣ ಬಹಳಗಾಢವಾಗಿರುತ್ತದೆ. ಹೆಣ್ಣು ಚಿಕ್ಕದಾಗಿದ್ದು ತೆಳುವಾದ ಬಣ್ಣವನ್ನು ಪಡೆದಿರುತ್ತದೆ. ಹೆಣ್ಣು ಕಾಂಗರೂನಲ್ಲಿ ಹೊಟ್ಟೆಯ ಬಳಿ ಪೋಷಣೆಯ ಚೀಲವಿರುತ್ತದೆ, ಗಂಡಿನಲ್ಲಿ ಈ ಚೀಲವಿರುವುದಿಲ್ಲ. ಮಾನವನಲ್ಲಿ ಪ್ರಾಯಕ್ಕೆ ಬಂದ ಗಂಡಿಗೆ ಮುಖದ ಮೇಲೆ ಕೂದಲು ಬೆಳೆದು ಗಡ್ಡ ಮೀಸೆಗಳು ಬರುತ್ತವೆ. ಎದೆ, ಕಂಕುಳು ಮತ್ತು ಜನನೇಂದ್ರಿಯದ ಸುತ್ತಲೂ ರೋಮಗಳು ಬೆಳೆಯುತ್ತವೆ, ಧ್ವನಿ ಮತ್ತು ನಡೆಯಲ್ಲಿ ಬದಲಾವಣೆ ಕಾಣುತ್ತದೆ. ಸ್ತನಗಳ ಬೆಳವಣಿಗೆ ಇರುವುದಿಲ್ಲ. ಹೆಣ್ಣಿನಲ್ಲಿ ಮುಖದ ಮೇಲೆ, ಎದೆಯ ಮೇಲೆ ಕೂದಲು ಬೆಳೆಯುವುದಿಲ್ಲ. ಆದರೆ ಕಂಕುಳು ಮತ್ತು ಜನನೇಂದ್ರಿಯದ ಸುತ್ತಲೂ ರೋಮಗಳು ಬೆಳೆಯುತ್ತವೆ, ಕಟಿಪ್ರದೇಶವು ಅಗಲವಾಗಿರುತ್ತದೆ, ಇಲ್ಲಿರುವ ಅಸ್ಥಿಯು ಸಹ ಅಗಲವಾಗಿರುತ್ತದೆ, ಎದೆಯಲ್ಲಿ ಸ್ತನಗಳು ಎದ್ದು ಕಾಣುತ್ತಿರುತ್ತವೆ. ನಡುವು ಸಣ್ಣದಾಗಿ, ಪೃಷ್ಠಗಳಲ್ಲಿ ಕೊಬ್ಬಿನ ಶೇಖರಣೆಯು ಹೆಚ್ಚಾಗುವುದರಿಂದ, ನಡಿಗೆಯಲ್ಲಿ ಒನಪು, ವಯ್ಯಾರಗಳು ಕಂಡುಬರುತ್ತವೆ, ಧ್ವನಿಯು ಉಚ್ಛಸ್ಥಾಯಿಯಲ್ಲಿರುತ್ತದೆ. ಶರೀರವು ಅತಿ ಕೋಮಲವಾಗಿ, ಸುಂದರವಾಗಿ ಇರುತ್ತದೆ.

ಪ್ರಾಣಿಗಳಲ್ಲಿ ಕಾಣುವ ಆನುಷಂಗಿಕ ಲಿಂಗಲಕ್ಷಣಗಳಿಗೆ ಮುಖ್ಯಕಾರಣ ಜನನ ಗ್ರಂಥಿಗಳು ಸ್ರವಿಸುವ ಲೈಂಗಿಕ ಹಾರ್ಮೋನ್‌ಗಳು. ಪುರುಷರ ಶರೀರದಲ್ಲಿರುವ ವೃಷಣಗಳು ಆಂಡ್ರೋಜನ್ ಹಾರ್ಮೋನ್‌ನನ್ನು ಸ್ರವಿಸುತ್ತವೆ. ಈ ಹಾರ್ಮೋನ್ ಗಂಡಿನಲ್ಲಿ ಕಾಣುವ ಪುರುಷ ಆನುಷಂಗಿಕ ಲಿಂಗ ಲಕ್ಷಣಗಳಿಗೆ ಕಾರಣವಾಗಿರುವುದರಿಂದ ಇದನ್ನು ಪುರುಷ ಹಾರ್ಮೋನ್ (ಮೇಲ್ ಸೆಕ್ಸ್ ಹಾರ್ಮೋನ್) ಎಂದು ಕರೆಯುವುದುಂಟು. ಇದೇ ರೀತಿಯಾಗಿ ಸ್ತ್ರೀಯರ ಶರೀರದಲ್ಲಿರುವ ಅಂಡಾಶಯಗಳು ಇಸ್ಟ್ರೋಜನ್ ಹಾರ್ಮೋನ್‌ಅನ್ನು ಸ್ರವಿಸುತ್ತವೆ. ಈ ಹಾರ್ಮೋನ್ ಹೆಣ್ಣಿನಲ್ಲಿ ಕಾಣುವ ಸ್ತ್ರೀ ಆನುಷಂಗಿಕ ಲಿಂಗಲಕ್ಷಣಗಳಿಗೆ ಕಾರಣವಾಗಿರುವುದರಿಂದ ಇದನ್ನು ಸ್ತ್ರೀ ಹಾರ್ಮೋನ್ (ಫೀಮೆಲ್ ಸೆಕ್ಸ್ ಹಾರ್ಮೋನ್)ಎಂದು ಕರೆಯುವುದುಂಟು. ಪ್ರಯೋಗ ಶಾಲೆಗಳಲ್ಲಿ ಈ ಲಿಂಗ ಹಾರ್ಮೋನ್‌ಗಳ ಕ್ರಿಯೆಗಳ ಬಗ್ಗೆ ವಿವಿಧ ರೀತಿಯ ಪ್ರಯೋಗಗಳನ್ನು, ಅನೇಕ ಪ್ರಾಣಿಗಳ ಮೇಲೆ ಮಾಡಿ, ಆನುಷಂಗಿಕ ಲಿಂಗಲಕ್ಷಣಗಳಿಗೂ ಹಾಗೂ ಲಿಂಗ ಹಾರ್ಮೋನ್‌ಗಳಿಗೂ



ಇರುವ ನಿಕಟ ಸಂಬಂಧವನ್ನು ವಿಷದಪಡಿಸಿದ್ದಾರೆ. ಶಸ್ತ್ರ ಚಿಕಿತ್ಸೆಯಿಂದ ಬೆಳೆಯುತ್ತಿರುವ ಗಂಡಿನಲ್ಲಿ ವೃಷಣಗಳನ್ನು ಮತ್ತು ಹೆಣ್ಣಿನಲ್ಲಿ ಅಂಡಾಶಯಗಳನ್ನು ತೆಗೆದರೆ, ಅಥವಾ ಬೇರೆ ವಿಧಾನದಿಂದ ನಾಶ ಪಡಿಸಿದರೆ, ಆನುಷಂಗಿಕ ಲಿಂಗ ಲಕ್ಷಣಗಳು ಮಾಯವಾಗುತ್ತವೆ. ಬೀಜವೊಡೆದ ಗಂಡು ಪ್ರಾಣಿಗೆ ಇಸ್ಟ್ರೋಜನ್ ಹಾರ್ಮೋನ್‌ಗಳನ್ನು ಚುಚ್ಚುಮದ್ದಾಗಿ ಕೊಟ್ಟರೆ ಸ್ವಲ್ಪ ಕಾಲದ ಅನಂತರ ಆ ಪ್ರಾಣಿಯಲ್ಲಿ ಹೆಣ್ಣು ಆನುಷಂಗಿಕ ಲಕ್ಷಣಗಳು ಕಂಡುಬರುತ್ತವೆ. ಇದೇ ರೀತಿಯಾಗಿ ಅಂಡಾಶಯ ತೆಗೆದ ಹೆಣ್ಣು ಪ್ರಾಣಿಗೆ ಆಂಡ್ರೋಜನ್ ಚುಚ್ಚು ಮದ್ದಾಗಿ ಕೊಟ್ಟರೆ ಸ್ವಲ್ಪ ಕಾಲದ ಅನಂತರ ಗಂಡು ಆನುಷಂಗಿಕ ಲಕ್ಷಣಗಳು ಕಾಣುತ್ತವೆ. ಮಾನವನಲ್ಲಿಯೂ ಸಹ ಈ ಲೈಂಗಿಕ ಹಾರ್ಮೋನ್‌ಗಳಿಂದ ಪುರುಷರಲ್ಲಿ ಸ್ತ್ರೀ ಲಕ್ಷಣಗಳನ್ನು, ಸ್ತ್ರೀಯರಲ್ಲಿ ಪುರುಷ ಲಕ್ಷಣಗಳನ್ನು ಉಂಟುಮಾಡಬಹುದು.

ಮೇಲೆ ವಿವರಿಸಿದ ಆನೇಕ ರೀತಿಯ ಆನುಷಂಗಿಕ ಲಿಂಗಲಕ್ಷಣಗಳನ್ನು ಆರು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು.

1) ಸಂಭೋಗಕ್ಕಾಗಿ ವಿಶೇಷ ಅಂಗಗಳು – ಕ್ಲಸ್ಪರ್‌ಗಳು, ಹೆಬ್ಬೆರಳಿನ ಮೆತ್ತೆಗಳು, ಹೆಕ್ಟೋಕಾಟಿಲೈಸಡ್ ತೋಳು, ಇತ್ಯಾದಿ.

2) ಪೋಷಣೆಯ ಅಂಗಗಳು – ಕುದುರೆ ಮೀನುಗಳು, ನಾಳದ ಮೀನು, ಕಾಂಗರೂಗಳಲ್ಲಿ ಕಾಣುವ ಪೋಷಣೆಯ ಚೀಲಗಳು.

3) ವಿಶೇಷ ಜ್ಞಾನಾಂಗಗಳು ಮತ್ತು ಶಬ್ದ ಉತ್ಪತ್ತಿಮಾಡುವ ಅಂಗಗಳು – ಪತಂಗಗಳ ಕುಡಿಮೀಸೆಗಳು, ಧ್ವನಿಚೀಲಗಳು ಇತ್ಯಾದಿ.

4) ವಿಶೇಷ ಉಪಯೋಗಾಂಗಗಳು – ಕೊಂಬುಗಳು, ದಂತಗಳು, ಕೋಡುಗಳು ಇತ್ಯಾದಿ.

5) ಹೆಣ್ಣನ್ನು ಆರ್ಕಷಿಸುವ ಮತ್ತು ಪ್ರಚೋದಿಸುವ ವಿಶೇಷ ಗುಣಗಳು – ಗಂಡು ನವಿಲಿನ ಉಜ್ವಲ ವರ್ಣದ ಬಾಲದ ಪುಕ್ಕಗಳು, ನಡೆ, ಕರ್ಕಶ ಕೂಗು, ಮಾನವನಲ್ಲಿ ಗಡ್ಡ, ಇತ್ಯಾದಿ.

6) ಪೂರ್ವಪಿತೃ ಗುಣಗಳು – ಗಂಡಿನ ರೋಮದ ಎದೆ, ಹೆಚ್ಚು ಶರೀರ ಶಕ್ತಿ ಇತ್ಯಾದಿ.

ಆನುಷಂಗಿಕ ಲಿಂಗ ಲಕ್ಷಣಗಳು ನಿಸರ್ಗದ ಆಯ್ಕೆಯ ಪ್ರಭಾವದಿಂದ ಆಗಿರಬಹುದೆಂದು ಹೇಳಬಹುದು, ಏಕೆಂದರೆ ಇವುಗಳು ಜೀವಿಗಳ ಉಳಿಯುವಿಕೆಯ ಹೋರಾಟದಲ್ಲಿ ಸಹಾಯಕವಾಗಿರುತ್ತವೆ ಮತ್ತು ಲೈಂಗಿಕ ಆಯ್ಕೆ (ಸೆಕ್ಷುಯಲ್ ಸೆಲೆಕ್ಷನ್) ಯಲ್ಲಿಯೂ ಸಹ ಮುಖ್ಯ ಪಾತ್ರವನ್ನು ವಹಿಸುತ್ತವೆ. (ಕೆ.ಪಿ.ಆರ್.)

**ಆನೆ:** ಪ್ರೊಬಾಸಿಡಿಯಾ ಕುಟುಂಬದ ಸದಸ್ಯ. ಭೂವಾಸಿ ಪ್ರಾಣಿಗಳಲ್ಲಿ ಅತಿ ದೊಡ್ಡ ದೇಹದ ಸ್ತನಿ. ಆಸ್‌ಬಾರನ್‌ರ 24 ವರ್ಷದ ಬೃಹತ್ ಸಂಶೋಧನೆಯ ಫಲವಾಗಿ ಸೃಷ್ಟಿಸಲಾದ ಪ್ರೊಬಾಸಿಡಿಯಾ ಎಂಬ 1,600 ಪುಟಗಳ ಪುಸ್ತಕದಲ್ಲಿ 300ಕ್ಕೂ ಹೆಚ್ಚು ವಿಧದ ಆನೆ ಮತ್ತು ಅವುಗಳ ಸಂಬಂಧಿಗಳ ವಿವರ ನೀಡಲಾಗಿದೆ. ಪುರಾತನ ಕಾಲದಲ್ಲಿ ಪ್ರಪಂಚದ ಅನೇಕ ಭಾಗಗಳಲ್ಲಿ ಹರಡಿದ್ದ ಆನೆ ಸಂತತಿ ಈಗ ಆಫ್ರಿಕ ಮತ್ತು ಏಷ್ಯಾದ ಕೆಲ ಭಾಗಗಳಲ್ಲಿ ಉಳಿದಿದೆ. ಈಗ ಉಳಿದಿರುವುದು ಎಲಿಫ್ಯಾಂಟಿಡಿ ಜಾತಿಯ ಆಫ್ರಿಕಾದ ಆನೆ, ಲೋಕ್ಸೊಡಾಂಟ ಆಫ್ರಿಕಾನ ಮತ್ತು ಏಷ್ಯದ ಆನೆ, ಎಲಿಫಾಸ್ ಮ್ಯಾಕ್ಸಿಮಸ್ ಎಂಬ ಎರಡು ಪ್ರಭೇದಗಳು ಮಾತ್ರ. ಇವುಗಳ ಗಾತ್ರ, ಕಿವಿ ಮತ್ತು ದಂತ ರಚನೆಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಏಷ್ಯದ ಆನೆಗಳು ಭಾರತ, ಬರ್ಮ, ಮಲಯ, ದಕ್ಷಿಣ ವಿಯೆಟ್ನಾಂ, ಶ್ರೀಲಂಕ, ಸುಮಾತ್ರಗಳಲ್ಲಿ ವಾಸಿಸುತ್ತವೆ. ಆಫ್ರಿಕಾದ ಆನೆಗಳು ಸಹರಾ ಮರುಭೂಮಿಯ ದಕ್ಷಿಣಕ್ಕಿರುವ ಆಫ್ರಿಕ ಖಂಡದ ಕಾಡುಪ್ರದೇಶ, ಹುಲ್ಲುಗಾವಲು, ಕಣಿವೆ ಪ್ರದೇಶಗಳಲ್ಲಿ ವಾಸಿಸುತ್ತವೆ.

ಆನೆಯ ಪೂರ್ವ ಚರಿತ್ರೆ : ಆನೆಯ ಪಳೆಯುಳಿಕೆಗಳು ಅಲಿಗೋಸೀನ್ ಕಾಲದಿಂದಲೂ ದೊರೆತಿವೆ. ಆ ಕಾಲದಲ್ಲಿ ಫಿಯೋಮಿಯ ಪ್ರಾಣಿಯ ಪಳೆಯುಳಿಕೆ ಆಫ್ರಿಕ ಖಂಡದಲ್ಲಿತ್ತು. ಇದರ ಮೇಲು ದವಡೆಯ ಕೋರೆ ಹಲ್ಲುಗಳು ಉದ್ದವಾಗಿದ್ದು, ಸೊಂಡಿಲು ಬೆಳೆದಿತ್ತು. ಮಯೋಸೀನ್ ಕಾಲದಲ್ಲಿ ಟ್ರೈಲೊಫೊಡಾನ್ ಪ್ರಾಣಿಯ ಪಳೆಯುಳಿಕೆ ಸಿಕ್ಕಿದೆ. ಇದು ಫಿಯೋಮಿಯಾ ತರಹದ ಜೀವಿಗಳಿಂದ ಹುಟ್ಟಿರಬೇಕೆಂದು ತಜ್ಞರ ಅಭಿಪ್ರಾಯ. ಅದಕ್ಕೆ ಇಂದಿನ ಆನೆಯಂತೆ ದೇಹ ರಚನೆಗಳಿದ್ದವು. ಆದರೆ ಕೆಳದವಡೆ ಬಹಳ ದೊಡ್ಡದು.

ಫಿಯೋಮಿಯಾದಿಂದ ಹುಟ್ಟಿಬಂದ ಜೀವಿಗಳು ಪರಿಸರದ ಪ್ರಭಾವಕ್ಕೊಳಗಾಗಿ ವಿಕಾಸ ಹೊಂದಿ ಪ್ಲಿಯೊಸೀನ್ ಕೊನೆಯ ಭಾಗದಲ್ಲಿ ಸ್ಟೀಗೋಡಾಂಟ ಎಂಬ ಜೀವಿಗಳಾದವು. ಈ ಸ್ಟೀಗೋಡಾಂಟಗಳಿಂದಲೇ ಇಂದಿರುವ ಆಫ್ರಿಕದ ಆನೆಗಳು ಮತ್ತು ಏಷ್ಯದ ಆನೆಗಳು ಹುಟ್ಟಿದುವು. ಇವೆರಡರ ಜೊತೆಯಲ್ಲಿಯೇ ಹುಟ್ಟಿದ ಮ್ಯಾಮಾತ್ಸ್ ಗಜಗಳು ಪ್ಲೀಸ್ಟೊಸೀನ್ ಕೊನೆಯ ಭಾಗದಲ್ಲಿಯೇ ನಾಶವಾದುವು (ಆನೆಯ ವಿಕಾಸ ನೋಡಿ). ಆಫ್ರಿಕಾದಲ್ಲಿ ಸುಲಭವಾಗಿ ಗುರುತಿಸಬಲ್ಲ ಎರಡು ಉಪ ಪ್ರಭೇದಗಳಿವೆ. ಪೊದೆಗಾಡಿನ ಬುಷ್ ಆನೆ (ಲೋಕ್ಸೊಡಾಂಟ ಆಫ್ರಿಕಾನ್) ಮತ್ತು ಕಾಡು ಪ್ರದೇಶದ ಫಾರೆಸ್ಟ್ ಆನೆ (ಲೋ. ಆಫ್ರಿಕಾನ್ ಸೈಕ್ಲೋಟಿಸ್).

ಎಲಿಫಾಸ್ ಮಾಕ್ಸಿಮಸ್ (ಏಷ್ಯಾದ ಆನೆ)



ಲೊಕ್ಸೊಡಾಂಟ ಆಫ್ರಿಕಾನ್ಸ್ (ಆಫ್ರಿಕದ ಆನೆ)




ಜೀವಂತ ಆನೆಗಳ ಹಂಚಿಕೆ.

ಏಷ್ಯಾದ ಆನೆ: ಇದು ಆಫ್ರಿಕದ ಆನೆಗಿಂತ ಚಿಕ್ಕದು. ನಡೆಯುವಾಗ ತಲೆ ಸ್ವಲ್ಪ ತಗ್ಗಿರುತ್ತದೆ. ಹಣೆಯಲ್ಲಿ ಎರಡು ಉಬ್ಬಿದ ಭಾಗಗಳಿವೆ. ತಲೆಯ ಹಿಂಭಾಗದಲ್ಲಿ ತಗ್ಗು, ಕಿವಿ ಮತ್ತು ದಂತ ಆಫ್ರಿಕ ಆನೆಗಿಂತ ಚಿಕ್ಕದು. ಸೊಂಡಿಲಲ್ಲಿ ಸುಕ್ಕುಗಳು ಕಡಿಮೆಯಾದ್ದರಿಂದ ನುಣುಪಾಗಿದೆ. ಇದರ ತುದಿಯಲ್ಲಿ ಒಂದು ಚಾಚು (ಲೋಬ್) ಮಾತ್ರ ಇದೆ. ಹೆಣ್ಣಾನೆಗಳಲ್ಲಿ ದಂತ ತೀರ ಸಣ್ಣದು. ಕೆಲವು ಹೆಣ್ಣಾನೆಗಳಲ್ಲಿ ದಂತ ತುಟಿಗಿಂತ ಮುಂದೆ ಬೆಳೆಯುವುದಿಲ್ಲ. ಮೋಲಾರ್ ಹಲ್ಲುಗಳಲ್ಲಿ ಅಡ್ಡ ಏಣುಗಳ ಸಂಖ್ಯೆ ಹೆಚ್ಚು. ಮುಂಗಾಲಿನಲ್ಲಿ 5 ಮತ್ತು ಹಿಂಗಾಲಿನಲ್ಲಿ 4 ಉಗುರುಗಳಿವೆ. ಇವು ತೀಕ್ಷ್ಣ ಬೆಳಕಿಗೆ ಅಂಜುತ್ತವೆ. ಮುಪ್ಪಿನಲ್ಲಿ

ಇವುಗಳ ತಲೆ ಮತ್ತು ಕಿವಿಗಳ ಮೇಲೆ ಬಿಳಿಯ ಮಚ್ಚೆಗಳು ಉಂಟಾಗುತ್ತವೆ. 'ಮಸ್ತು' ಎಂಬುದು ಏಷ್ಯಾ ಆನೆಗಳ ವಿಶೇಷ ಗುಣ.

ಏಷ್ಯಾದ ಆನೆಗಳಲ್ಲೂ ಅನೇಕ ವ್ಯತ್ಯಾಸಗಳುಳ್ಳ ಹಲವು ವಿಧದ ಆನೆಗಳಿವೆ. ಇವುಗಳನ್ನು ಕೆಲವರು ಉಪ ಪ್ರಭೇದಗಳೆಂದು ಭಾವಿಸಿದ್ದಾರೆ. ಇವು ಭಾರತ, ಅಸ್ಸಾಂ, ಬರ್ಮ, ಶ್ರೀಲಂಕ, ಸಯಾಂ, ಮಲಯಾ, ಸುಮಾತ್ರಾ ಮತ್ತು ಬೋರ್ನಿಯೋ ಕಾಡು ಪ್ರದೇಶಗಳಲ್ಲಿ ಹರಡಿವೆ.

ಭಾರತದ ಆನೆಗಳ ತಲೆ ದೊಡ್ಡದು. ಕಿವಿ ಮತ್ತು ಕಣ್ಣುಗಳು ಚಿಕ್ಕವು. ಸೊಂಡಿಲು ಬುಡದಲ್ಲಿ ದಪ್ಪನಾಗಿದ್ದು, ತುದಿಯಲ್ಲಿ ಚಿಕ್ಕದಾಗಿದೆ. ಕೆಲವು ಗಂಡು ಆನೆಗಳಿಗೂ ಕೋರೆಗಳಿಲ್ಲ. ಅಂಥವನ್ನು ಮಕ್ನ ಎನ್ನುವರು. ಭಾರತದಲ್ಲಿರುವ ಆನೆಗಳಿಗೆ ಬೆನ್ನು ಮಧ್ಯೆ ಉಬ್ಬಿದೆ. ಕಪ್ಪು ಮಿಶ್ರಿತ ಬೂದಿ ಬಣ್ಣ ಇದೆ. ಅಸಹಜವಾದ ಬಿಳುಪು ಬಣ್ಣದ ದೇಹವುಳ್ಳ (ಆಲ್ಬಿನೋಸ್) ಆನೆಗಳು ಸಹ ಇವೆ. ಇಂಥ ಆನೆಗಳನ್ನು ಬರ್ಮ ಮತ್ತು ಸಯಾಂ ದೇಶಗಳಲ್ಲಿ ಬಹಳ ಪವಿತ್ರವೆಂದು ಪರಿಗಣಿಸುತ್ತಾರೆ.

ಗಂಡು ಆನೆಗಳ ಎತ್ತರ ೨.೬–೩.೨೫ ಮೀ ಹೆಣ್ಣು ಆನೆಗಳ ಎತ್ತರ ೨.೨೫–೨.೫ ಮೀ ೨.೫೫ ಮೀ ಗಿಂತ ಎತ್ತರವಿರುವ ಹೆಣ್ಣು ಆನೆಗಳು ಬಹಳ ವಿರಳ. ಗಂಡು ಆನೆಯ ಭಾರ ಸು. ೩ ಟನ್. ಕೆಲವು ಆನೆಗಳ ಭಾರ ೪ ರಿಂದ ೬.೫ ಟನ್.

ಗಂಡು ಆನೆಗಳು ಪ್ರಾಯಕ್ಕೆ ತಲುಪಲು ಕನಿಷ್ಠ ೨೫ ವರ್ಷಗಳಾಗಬೇಕು. ಆದರೆ ಹೆಣ್ಣು ಆನೆಗಳಿಗೆ ೨೦ ವರ್ಷಗಳು ಸಾಕು. ಸಾಧಾರಣವಾಗಿ ಆನೆ ೧೦೦–೧೧೦ ವರ್ಷಗಳ ಕಾಲ ಜೀವಿಸುತ್ತದೆ.

ಆಫ್ರಿಕದ ಬುಷ್ ಆನೆ: (ಉಪ ಪ್ರಭೇದ, ಆಫ್ರಿಕಾನ್ಸ್): ಇವುಗಳಲ್ಲಿ ಎರಡು ವಿಧಗಳಿವೆ. ಅವುಗಳಲ್ಲಿ ಬುಷ್ ಆನೆಯೇ ದೊಡ್ಡದು, ಗಂಡು 3.1 ಮೀ ಮತ್ತು ಹೆಣ್ಣು 2.5 ಮೀ ಎತ್ತರ ಇವೆ. ಪ್ರಾಯದ ಗಂಡಾನೆ ತೂಕ 4.5–5.3 ಟನ್ ಮತ್ತು ಹೆಣ್ಣಾನೆ ತೂಕ 2.7–3.5 ಟನ್. ಗಂಡಾನೆಯು ಸೊಂಡಲಿನ ತುದಿಯಿಂದ ಬಾಲದ ತುದಿಯವರೆಗೆ 9 ಮೀ ಉದ್ದವಿದೆ. ಕಾಡಾನೆಗಿಂತ ಬುಷ್ ಆನೆಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಇವು ಆಫ್ರಿಕದ ಹೆಚ್ಚು ಭಾಗಗಳಲ್ಲಿ ಹರಡಿವೆ.

ಆಫ್ರಿಕದ ಕಾಡಾನೆ (ಉಪ ಪ್ರಭೇದ ಸೈಕ್ಲೋಟಿಸ್): ಇದು ಆಫ್ರಿಕದ ಮಧ್ಯ ಭಾಗದಲ್ಲಿ ಮಾತ್ರ ವಾಸಿಸುತ್ತದೆ. ಇದರ ಸಂಖ್ಯೆ ಕಡಿಮೆ. ಬುಷ್ ಆನೆಗಿಂತ ೬೦ ಸೆಂಮೀ ಚಿಕ್ಕದು. ಕೂದಲು ಕಡಿಮೆ, ಕಿವಿ ಸಣ್ಣದಾಗಿದ್ದು, ಏಷ್ಯಾದ ಆನೆಯಂತೆ ಇದರ ಮುಂಗಾಲಿನಲ್ಲಿ ೫ ಮತ್ತು ಹಿಂಗಾಲಿನಲ್ಲಿ ೪ ಉಗುರುಗಳಿವೆ. ಗಂಡು ಮತ್ತು ಹೆಣ್ಣಾನೆಗಳಲ್ಲಿ ವ್ಯತ್ಯಾಸಗಳು ಕಡಿಮೆ.

ಆಫ್ರಿಕ ಆನೆಗಳ ಮುಖ್ಯ ಲಕ್ಷಣಗಳು: ಏಷ್ಯಾದ ಆನೆಗಿಂತ ದೊಡ್ಡವು, ೩.೫ ಟನ್‌ಗಿಂತ ಹೆಚ್ಚು ತೂಕ, ತಲೆ ನೆಟ್ಟಗೆ ಎತ್ತಿದಂತಿರುತ್ತದೆ, ಕಿವಿ ಬಹು ವಿಶಾಲ (೯೦x೧೫೦) ಸೆಂಮೀ (1.8 – 2.4 ಮೀ) ಉದ್ದ ದಂತ. ಸೊಂಡಿಲ ಮೇಲೆ ಅನೇಕ ಸುಕ್ಕುಗಳಿವೆ. ಸೊಂಡಿಲ ತುದಿಯಲ್ಲಿ ಬೆರಳುಗಳಂತಿರುವ ಎರಡು ಚಾಚು (ಲೋಬ್ಸ್)ಗಳಿವೆ. ಮೋಲಾರ್ ಹಲ್ಲಿನಲ್ಲಿ ಅಡ್ಡ ಏಣುಗಳು (ರಿಡ್ಜ್ಸ್) ಕಡಿಮೆ, ಏಷ್ಯಾದ ಆನೆಯಂತೆ ಇದು ತೀಕ್ಷ್ಣ ಬೆಳಕಿಗೆ ಅಂಜುವುದಿಲ್ಲ.

ಆಫ್ರಿಕದ ಆನೆಗಳು ಭಾರತದ ಆನೆಗಳಿಗಿಂತ ಬಹಳ ಎತ್ತರ. ಅವುಗಳ ಕಿವಿಗಳು ತುಂಬ ಅಗಲವಾಗಿವೆ. ಹಣೆ ಉಬ್ಬಿಕೊಂಡಿರುತ್ತದೆ. ಕಣ್ಣುಗಳು ದೊಡ್ಡವು ಮತ್ತು ಸೊಂಡಿಲ ತುದಿಯಲ್ಲಿ ಎರಡು ಬೆರಳುಗಳು ಹಿಂದೊಂದು ಮುಂದೊಂದು ಇವೆ. ಈ ಆನೆಗಳ ಬೆನ್ನಿನ ಮಧ್ಯಭಾಗ ತಗ್ಗಾಗಿದೆ. ಹಿಂದಿನ ಕಾಲುಗಳಲ್ಲಿ ನಾಲ್ಕು ಉಗುರುಗಳಿಗೆ ಬದಲಾಗಿ ಮೂರು ಉಗುರುಗಳಿವೆ. ಗಂಡು ಮತ್ತು ಹೆಣ್ಣು ಆನೆಗಳೆರಡಕ್ಕೂ ದಂತದ ಕೋರೆಗಳಿವೆ. ಇವು ಭಾರತದ ಆನೆಗಳ ಕೋರೆಗಳಿಗಿಂತ ಬಹಳ ದೊಡ್ಡದಾಗಿ ಮತ್ತು ದಪ್ಪನಾಗಿ ಇವೆ. ಪೂರ್ವ ಮತ್ತು ಉತ್ತರ ಅಬಿಸೀನಿಯ ದೇಶಗಳಲ್ಲಿರುವ ಆನೆಗಳಿಗೆ ಕೋರೆಗಳೇ ಇಲ್ಲ.

ಆಫ್ರಿಕದ ಕೆಲವು ಕಾಡು ಪ್ರದೇಶಗಳಲ್ಲಿ ವಾಸಿಸುವ ಆನೆಗಳ ಶರೀರದ ಬೆಳೆವಣಿಗೆ, ಆಕೃತಿ, ಕೊಂಬುಗಳ ಬೆಳೆವಣಿಗೆ ಮತ್ತು ಕಿವಿಗಳ ಆಕಾರದಲ್ಲೂ ವ್ಯತ್ಯಾಸ ಇದೆ. ಆಫ್ರಿಕದ ಆನೆಗಳ ಎತ್ತರ ೩–೩.೫ ಮೀ. ೩ ಮೀ. ಎತ್ತರದ ಆನೆಯ ಭಾರ ೪.೫ ಟನ್. ೩.೫ ಮೀ ಎತ್ತರದ ಆನೆಯ ಭಾರ ೬.೫ ಟನ್. ಸೂಡಾನ್ ದೇಶದ ಆನೆಗಳ ದಂತದ ಕೊಂಬುಗಳ ಭಾರ ೬೦ ಕಿಗ್ರಾ ಉದ್ದ ೩ ಮೀ. ಬುಡದ ಸುತ್ತಳತೆ ೫೫ ಸೆಂಮೀ ಕೆಲವು ಆನೆಗಳ ದಂತದ ಕೊಂಬಿನ ಭಾರ, ೪೫ ಕಿಗ್ರಾಂ. ಸುತ್ತಳತೆ ೫೫ ಸೆಂಮೀ ಉದ್ದ ೩.೨ ಮೀ ಇರುವ ಕೊಂಬುಗಳ ಭಾರ ೧೧೦ ಕಿಗ್ರಾಂ.

ಆನೆ ಶಾಕಾಹಾರಿ. ಗಿಡಮರಗಳ ಎಲೆ, ಎಳೆಸಾದ ಕೊಂಬೆಗಳು, ಬಿದಿರು, ಜೊಂಡಿನಂಥ ಹುಲ್ಲು ಮತ್ತು ಹಣ್ಣುಗಳು ಇದರ ಆಹಾರ. ಆನೆಗೆ ಆಹಾರ ಅಧಿಕಪ್ರಮಾಣದಲ್ಲಿ ಬೇಕು. ಆದ್ದರಿಂದ, ಇವು ಆಹಾರಕ್ಕಾಗಿ ಬಹು ದೂರ ಸಂಚರಿಸುತ್ತವೆ. ಒಂದು ಗಂಟೆಗೆ ಸು. ೧೫ ಮೈಲಿ ವೇಗದಲ್ಲಿ ನಡೆಯುತ್ತವೆ. ನದಿಗಳನ್ನೂ, ಕೆರೆಗಳನ್ನೂ ಈಜಿ ದಾಟುತ್ತವೆ. ಕಾಲು ವಿಶಾಲವಾದ ಮೆತ್ತೆಯಂಥ ಹಿಗ್ಗುವ ಪಾದಗಳಿಂದ ಕೂಡಿದೆ. ಆದ್ದ'ರಿಂದ ಮೈ ಭಾರವನ್ನು ಚೆನ್ನಾಗಿ ಹೊರುತ್ತವೆ. ಮಿಕ್ಕ ಪ್ರಾಣಿಗಳಲ್ಲಿರುವಂತೆ ಆನೆಗೆ ಕಾಲಿನ ಹರಡಿನಲ್ಲಿ ಕೀಲು ಇಲ್ಲ. ಮಂಡಿಯನ್ನು ಮಾತ್ರ ಇದು ತಗ್ಗಿಸಬಲ್ಲದು. ಇತರ ಸ್ತನಿಗಳಲ್ಲಿ ಇರುವುದಕ್ಕಿಂತ ಆನೆಯಲ್ಲಿ ಹಲ್ಲುಗಳ ಸಂಖ್ಯೆ ಕಡಿಮೆ. ಇದರ ದಂತ ಸೂತ್ರ ಬಾಚಿಹಲ್ಲು ೧/೦, ಕೋರೆಹಲ್ಲು ೦/೦, ದವಡೆ ಹಲ್ಲು ೬/೬=೨೬.

ಮೇಲುದವಡೆಯಲ್ಲಿ ನೀಳವಾಗಿ ಬೆಳೆದ ಬಾಚಿ ಹಲ್ಲುಗಳೇ ಆನೆಯ ದಂತಗಳು. ದಂತಗಳು ಸವೆದ ಹಾಗೆಲ್ಲಾ ಹಿಂದಿನಿಂದ ಬೆಳೆಯುತ್ತಲೇ ಇರುತ್ತವೆ.

ಆನೆಗಳು ಯಾವಾಗಲೂ ಹಿಂಡುಹಿಂಡಾಗಿ ಸಂಚರಿಸುತ್ತವೆ. ಒಂದು ಹಿಂಡಿನಲ್ಲಿ ಸು. ೧೫–೩೦ ವಿವಿಧ ವಯಸ್ಸಿನ ಪ್ರಾಣಿಗಳಿರುತ್ತವೆ. ವಯಸ್ಸಾದ ಹೆಣ್ಣು ಆನೆ ಹಿಂಡಿನ ಮುಂದಾಳತ್ವ ವಹಿಸುತ್ತದೆ. ಕೆಲವೊಮ್ಮೆ ಗಂಡು ಆನೆ (ಸಲಗ) ಮದವೇರಿದಾಗ ರೊಚ್ಚಿಗೆದ್ದು ಅಪಾಯಕಾರಿಯಾಗಬಲ್ಲದು. ಅಂಥ ಮದಗಜ ಹಿಂಡಿನಿಂದ ಹೊರದೂಡಲ್ಪಡುತ್ತದೆ. ಹೆಣ್ಣು ಆನೆ ೬೦೭–೬೧೪ ದಿವಸಗಳ ಗರ್ಭಧಾರಣೆಯ ನಂತರ ಒಂದು ಮರಿಗೆ ಜನ್ಮ ನೀಡುತ್ತದೆ. ಮರಿ ೨ ವರ್ಷಗಳವರೆಗೆ ತಾಯಿಯ ಪೋಷಣೆಯಲ್ಲಿರುತ್ತದೆ. ಮುಂಗಾಲುಗಳ ಹಿಂದಿರುವ ಇರುವ ಎರಡು ಸ್ತನಗಳಿಂದ, ಆನೆ ಮರಿ, ಸೊಂಡಿಲನ್ನು ಪಕ್ಕಕ್ಕೆ ಸರಿಸಿ ಬಾಯಿಂದ ಹಾಲು ಕುಡಿಯುತ್ತದೆ.

ಏಷ್ಯಾದ ಆನೆಗಳು ಬಹಳ ಹಿಂದಿನಿಂದಲೂ ಮನುಷ್ಯನಿಗೆ ಉಪಯುಕ್ತ ಪ್ರಾಣಿಯೆನಿಸಿವೆ. ಕಾಡಾನೆಗಳನ್ನು ಪಳಗಿಸಿ ಮಠ ಮಾನ್ಯಗಳಲ್ಲಿ ಅರಮನೆಯಲ್ಲಿ ಗೌರವ ಸಂಕೇತವಾಗಿ ಸಾಕಲಾಗುತ್ತಿತ್ತು. ರಣರಂಗದಲ್ಲಿ ಆನೆಗಳ ದಳವನ್ನೇ ಬಳಸುತ್ತಿದ್ದರು. ಈಗಲೂ ಕಾಡುಗಳಲ್ಲಿ ಮರದ ದಿಮ್ಮಿಗಳನ್ನು ಎಳೆಸಲು ಆನೆಯನ್ನು ಬಳಸುತ್ತಾರೆ. ಆನೆಗಳನ್ನು ಹಿಡಿದು, ಪಳಗಿಸುವುದು ಒಂದು ದೊಡ್ಡ ವಿದ್ಯೆ. ಇದು ಕೆಲವು ಜನಾಂಗಕ್ಕೆ ಕುಲಕಸುಬು. ಭಾರತದಲ್ಲಿ ಮುಸಲ್ಮಾನರು ಮತ್ತು ಕಾಡುಕುರುಬರು, ಬರ್ಮದಲ್ಲಿ ಕರೆನ್ಸ, ತಲ್ಮೆಸ್ ಮತ್ತು ಲೇಯಾನ್ ಎಂಬ ಜನಗಳು, ಶ್ರೀಲಂಕದಲ್ಲಿ ಮೂರ್ ಜನಗಳು ಆನೆಗಳನ್ನು ಹಿಡಿದು ಪಳಗಿಸುವಲ್ಲಿ ಸಿದ್ಧರು.

ಆನೆಗಳನ್ನು ಹಿಡಿಯುವುದರಲ್ಲಿ ಮೂರು ವಿಧಾನಗಳಿವೆ. ಮೊದಲನೆಯದು ಖೆಡ್ಡಾ ಮಾಡಿ ಹಿಡಿಯುವುದು. ಆನೆಗಳಿರುವ ಕಾಡಿನ ಮಧ್ಯದಲ್ಲಿ ನೀರಿನ ಮತ್ತು ಮರಗಳ ನೆರಳಿನ ಅನುಕೂಲವಿರುವ ಸ್ಥಳವನ್ನು ಹುಡುಕಿ ಆ ಸ್ಥಳದ ಸುತ್ತಲೂ ೨.೧–೨.೪ ಮಿ ಅಗಲ, ೩ ಮಿ ಆಳವಿರುವ, ತ್ರಿಕೋಣಾಕಾರದ ಗುಂಡಿಯನ್ನು ತೆಗೆಸಿ, ಒಂದು ಕಡೆ ಬಾಗಿಲನ್ನಿಟ್ಟು ಆನೆಗಳ ಹಿಂಡನ್ನು ಈ ಬಾಗಿಲ ಮುಖಾಂತರ ಒಳಗೆ ಸೇರಿಸುವುದಕ್ಕೆ ಖೆಡ್ಡಾ ಎನ್ನುವರು (ಖೆಡ್ಡಾ ನೋಡಿ). ಈ ವಿಧಾನದಲ್ಲಿ ಆನೆಗಳನ್ನು ಹಿಡಿಯಲು ಸಾವಿರಾರು ಜನರು, ೪೦ ಅಥವಾ ೫೦ ಪಳಗಿದ ಸಹಾಯಕ ಆನೆಗಳು ಬೇಕಾಗುತ್ತವೆ. ಎರಡನೆಯದು ಆನೆಗಳು ಸಂಚಾರ ಮಾಡುವ ಮಾರ್ಗದಲ್ಲಿ ದೊಡ್ಡ ಗುಂಡಿಗಳನ್ನು (೩ ಮಿ ಉದ್ದ, ೩ ಮಿ ಅಗಲ ಮತ್ತು ೩ ಮಿ ಆಳ) ತೆಗೆದು, ಅವು ಯಾರಿಗೂ ಗೋಚರವಾಗದಂತೆ ಸೊಪ್ಪುಸೌದೆಗಳ ಹೊದಿಕೆ ಹಾಕಿ ಆನೆಗಳನ್ನು ಅದರಲ್ಲಿ ಕೆಡವಿ ಹಿಡಿಯುತ್ತಾರೆ. ಈ ವಿಧಾನದಲ್ಲಿ ಒಂದು ಅಥವಾ ಎರಡು ಆನೆಗಳನ್ನು ಹಿಡಿಯಲು



ಆನೆಯ ಹಲ್ಲು

ಸಾಧ್ಯ. ಬಯಲು ಶಿಕಾರಿಯಿಂದ ಹಿಡಿಯುವುದು ಮೂರನೆಯ ವಿಧಾನ. ಇದರಲ್ಲಿ ಒಂಟಿ ಆನೆಯನ್ನು ಮಾತ್ರ ಪಳಗಿದ ಆನೆಗಳ ಸಹಾಯದಿಂದ ಹಿಡಿಯುತ್ತಾರೆ. ಹೀಗೆ ಹಿಡಿದ ಆನೆಗಳನ್ನು ಪಳಗಿಸುವುದು ಆನೆ ಹಿಡಿಯುವವರಿಗೆ ಒಂದು ದೊಡ್ಡ ಕೆಲಸ. ಚಿಕ್ಕ ಮರಿಗಳಾದರೆ ಬಹಳ ಬೇಗ ಪಳಗುತ್ತವೆ. ದೊಡ್ಡ ಆನೆಗಳಾದರೆ ಬಹಳ ದಿವಸಗಳು ಬೇಕು. ಇದಕ್ಕೆ ೬ ತಿಂಗಳಿನಿಂದ ಹಿಡಿದು ಒಂದು ವರ್ಷವಾದರೂ ಬೇಕು. ಪಳಗಿದ ಆನೆಗಳ ಸಹಾಯದಿಂದ ಈ ರೀತಿ ಹಿಡಿದ ಆನೆಗಳನ್ನು ಪಳಗಿಸುತ್ತಾರೆ.

(ಕೆ.ಎಂ.ಕೆ.;ಡಿ.ಎಸ್.ಇ.)

ಆನೆಗಳ ರೋಗಗಳು ಮತ್ತು ಚಿಕಿತ್ಸೆ : ಅನೆಗಳು ಕಾಯಿಲೆಗೆ ತುತ್ತಾಗುವುದು ವಿರಳ. ಕಾಯಿಲೆಯಿಂದಿರುವ ಆನೆಗಳ ಚಿಕಿತ್ಸೆ ಕಷ್ಟ. ಸಾಧಾರಣವಾಗಿ ಆನೆಗಳು ಅಂಜುಬುರುಕ ಮತ್ತು ಅನುಮಾನದ ಪ್ರಾಣಿಗಳು. ಕಾರಣ, ಔಷಧಿ ತಿನ್ನಿಸಬೇಕಾದರೆ, ನಂಬಿಕೆ ಹುಟ್ಟಿಸಿ, ಅವು ತಿನ್ನುವ ರುಚಿಕರವಾದ ಅಹಾರದಲ್ಲಿ ಸೇರಿಸಿ ಕೊಡಬೇಕು.

ಆನೆ ಆರೋಗ್ಯವಾಗಿದ್ದಾಗ ಲವಲವಿಕೆಯಿಂದ, ಸೊಂಡಿಲು, ಕಿವಿಗಳು ಮತ್ತು ಬಾಲ ಇವುಗಳನ್ನು ಅಲ್ಲಾಡಿಸುತ್ತಿರುತ್ತದೆ. ಕಾಲಿನ ಉಗುರುಗಳ ಬುಡದ ಸುತ್ತಲೂ ಬೆವರಿನಿಂದ ಕೂಡಿದ ತೇವವಿರಬೇಕು, ಮತ್ತು ಯಾವಾಗಲೂ ಅಹಾರ ತಿನ್ನುತ್ತಿರಬೇಕು. ಮಂಕಾಗಿ, ಯಾವ ತರಹದ ಲವಲವಿಕೆ ಇಲ್ಲದಿರುವುದು, ಆಹಾರದ ಮೇಲೆ ಆಸಕ್ತಿ ತೋರದಿರುವುದು ಅನಾರೋಗ್ಯದ ಚಿಹ್ನೆಗಳು. ಜ್ವರ ಕಾಣಿಸಿಕೊಂಡಾಗ ದೇಹದ ಉಷ್ಣತೆ ೩೬.೨°.೪° ಸೆ. ೯೮° ಸೆ. ಇರುತ್ತದೆ.

ಆನೆಯ ಅನಾರೋಗ್ಯದ ಲಕ್ಷಣಗಳು ಕಂಡಕೂಡಲೆ ಅದಕ್ಕೆ ವಿಶ್ರಾಂತಿ ಕೊಟ್ಟು, ತಕ್ಷಣ ಅಕ್ಕಿ, ಭತ್ತ ಮುಂತಾದ ಆಹಾರಗಳನ್ನು ನಿಲ್ಲಿಸಿ, ಯಥೇಚ್ಛವಾಗಿ ಹಸಿ ಹುಲ್ಲನ್ನೂ ಮತ್ತು ಸ್ವಚ್ಛ ನೀರನ್ನೂ ಕೊಡಬೇಕು. ರೋಗ ತಿಳಿದ ಕೂಡಲೆ ಅದಕ್ಕೆ ಸರಿಯಾದ ಚಿಕಿತ್ಸೆ ಮಾಡಬೇಕು. ಸ್ವಲ್ಪ ಗುಣಮುಖ ಕಂಡಕೂಡಲೆ ಅವು ಸ್ವೇಚ್ಛೆಯಾಗಿ, ಇಷ್ಟ ಬಂದ ಆಹಾರವನ್ನು ಹುಡುಕಿಕೊಂಡು ತಿನ್ನುವುದಕ್ಕೆ ಕಾಡಿನಲ್ಲಿ ಬಿಡಬೇಕು. ಹೀಗೆ ಮಾಡುವುದರಿಂದ ಕೆಲವು ರೋಗಗಳು ಶೀಘ್ರವಾಗಿ ಗುಣವಾಗುತ್ತವೆ.

ಆನೆಗಳಿಗೆ ಬರುವ ರೋಗಗಳು: ೧. ಜಹೀರ್ ಅಥವಾ ಜಲೋದರ ರೋಗ. ದೀರ್ಘಕಾಲ ಪುಷ್ಟಿಕರ ಆಹಾರದ ಅಭಾವ ಇದಕ್ಕೆ ಕಾರಣ. ಗಂಟಲಿನ ಕೆಳಭಾಗ, ಕತ್ತಿನ ಕೆಳಭಾಗ ಮತ್ತು ಕಾಲುಗಳಲ್ಲಿ ನೀರು ತುಂಬಿಕೊಂಡು ಬಾವು ಬರುತ್ತದೆ. ಕ್ರಮೇಣ ದಿನದಿನಕ್ಕೆ ನಿಶ್ಯಕ್ತಿ ಹೊಂದಿ ಆನೆ ಸತ್ತು ಹೋಗುತ್ತದೆ. ಈ ರೋಗದ ಪ್ರಾರಂಭದಲ್ಲಿ ಅಂದರೆ ಬಾವು ಕಾಣಿಸಿಕೊಳ್ಳುವ ದಿನಗಳಲ್ಲಿ ಚಿಕಿತ್ಸೆ ಮಾಡಿದರೆ ಈ ರೋಗವನ್ನು ಗುಣಪಡಿಸಲು ಸಾಧ್ಯ. ಪುಷ್ಟಿಕರವಾದ ಆಹಾರ, ಗೋಧಿರೊಟ್ಟಿ, ತುಪ್ಪ, ಬೆಲ್ಲ ಮತ್ತು ಜೊತೆಗೆ ಭಗಿನಿ ಮರದ ತಿರುಳು ಮತ್ತು ಈಚಲ ಮರದ ಸುಳಿಗಳನ್ನು ಕೊಟ್ಟರೆ ಗುಣ ಹೊಂದುತ್ತದೆ. ಚೆನ್ನಾಗಿ ಹುಲ್ಲು ಮತ್ತು ಬಿದಿರು ಸೊಪ್ಪು ಬೆಳೆದಿರುವ ಕಾಡಿನಲ್ಲಿ ಆನೆಗಳನ್ನು ತಿನ್ನಲು ಬಿಡಬೇಕು. ೨. ಕೆಲವು ಹುಳುಗಳ ರೋಗ. ಹುಳುಗಳು ಕರುಳಿನಲ್ಲಿ ಮತ್ತು ಪಿತ್ತಕೋಶದಲ್ಲಿ ಇರುತ್ತವೆ. ಹುಳುಗಳು ಹೆಚ್ಚಾದಾಗ ಆನೆಗಳು ಸ್ವಾಭಾವಿಕವಾಗಿ, ಕಾಡಿನಲ್ಲಿ ಒಂದು ತರಹ ಕೆಂಪು ಮಣ್ಣನ್ನು ತಿಂದು ಚೆನ್ನಾಗಿ ಭೇದಿ ಮಾಡಿಕೊಂಡು ಶಮನ ಪಡೆಯುತ್ತವೆ. ೩. ಅಂಟುರೋಗಗಳಾದ: i. ನರಡಿ ರೋಗ; ii. ಮೇಟ್ರಾಗಟ್ಟು iii. ಸರ್‍ರಾ; iv. ಉಣ್ಣಿಗಳಿಂದ ಹರಡುವ ರೋಗ; v. ಕಾಲು ಜ್ವರ ಬಾಯಿಜ್ವರ ಇತ್ಯಾದಿ. ಈ ರೋಗಗಳನ್ನು ಪ್ರಾರಂಭದಲ್ಲಿಯೇ ಕಂಡುಹಿಡಿದು ಚಿಕಿತ್ಸೆ ಮಾಡಿದರೆ, ಆನೆಗಳು ಗುಣಹೊಂದುತ್ತವೆ.

ಆನೆಯ ಅಂಗರಚನೆ: ಗತಕಾಲದ ಡೈನೋಸಾರ್ (೫೦ ಟನ್) ಮತ್ತು ಇಂದಿನ ತಿಮಿಂಗಲ (೧೫೦ ಟನ್) ಗಳನ್ನು ಬಿಟ್ಟರೆ, ತೂಕದಲ್ಲಿ ಆನೆಯೇ (೭ ಟನ್) ಅತಿ ದೊಡ್ಡ ಪ್ರಾಣಿ. ಗಾತ್ರಕ್ಕೆ ಹೋಲಿಸಿದರೆ, ಇದರ ಬಾಯಿ ಸಣ್ಣ; ಕೆಳತುಟಿ ಚಿಕ್ಕದು, ನಾಲಿಗೆ ವೆಲ್ವೆಟ್ಟಿ (ಮೆತ್ತನೆಯ ಹಾಸಿಗೆ) ನಂತಿದೆ. ಆನೆಯ ಮೇಲ್ತುಟಿ ಮತ್ತು ಮೂಗು, ಇವೆರಡೂ ಕೂಡಿ ಬೆಳೆದ ಉದ್ದವಾದ ಸೊಂಡಿಲು ಇದೆ. ಆನೆಯು ತನ್ನ ಸೊಂಡಿಲನ್ನು ಅನೇಕ ರೀತಿಯಲ್ಲಿ ಬಳಸುತ್ತದೆ. – ವಸ್ತುಗಳ ಪರಿಶೀಲನೆ, ಕಾಲುಗಳನ್ನೂರದೆಯೇ ನೆಲದ ಮೇಲಿರುವ ಆಹಾರ ಮತ್ತು ನೀರನ್ನು ಬಾಯಿಗೆ ಸೇರಿಸುವುದು, ಎತ್ತರದ ಮರದಿಂದ ಎಲೆ, ಕಾಯಿಗಳನ್ನು ಕೀಳುವುದು, ಮರದ ರೆಂಬೆಯನ್ನು ಮುರಿಯುವುದು ಮತ್ತು ತನ್ನ ಭಾವನೆಗಳನ್ನು ಮಾವುತನಿಗೆ ತಿಳಿಸುವುದು ಮುಂತಾದ ಕಾರ್ಯಗಳಲ್ಲಿ ಬಳಸುತ್ತದೆ. ನೆಲದ ಮೇಲಿರುವ ಅತಿ ಸಣ್ಣ ವಸ್ತುವನ್ನು ಕೂಡ ಸೊಂಡಿಲಿನಿಂದ ಸುಲಭವಾಗಿ ಎತ್ತಬಲ್ಲದು. ತನ್ನ ದೇಹದ ಮೇಲೆ ನೀರು ಮತ್ತು ಮಣ್ಣನ್ನು ಎರಚಿಕೊಳ್ಳಲೂ ಸೊಂಡಿಲನ್ನು ಉಪಯೋಗಿಸುತ್ತದೆ.

ಆನೆಯ ಕಣ್ಣು ಸಣ್ಣದಾಗಿವೆ. ನೋಟ ಮಂದ, ಕಿವಿ ಅಗಲ, ಅಷ್ಟೇ ಚುರುಕು. ಮೇಲ್ದವಡೆಯ ಎರಡು ಬಾಚಿ ಹಲ್ಲುಗಳು ನೀಳವಾಗಿ ಬೆಳೆದು ದಂತವಾಗಿವೆ. ದಂತವು ೩–೪ ವರ್ಷ ವಯಸ್ಸಿನಲ್ಲಿ ಕಾಣಿಸಿಕೊಳ್ಳುತ್ತದೆ. ಹೆಚ್ಚು ಭಾಗ ಡೆಂಟೈನ್ ನಿಂದ ಕೂಡಿದ್ದು. ಸು. ೨ ಅಂಗುಲದಷ್ಟು ಎನಾಮಲ್‌ನ ಕವಚವನ್ನು ಹೊಂದಿರುತ್ತದೆ. ಕ್ರಮೇಣ ಎನಾಮೆಲ್ ಸವೆದುಹೋಗಿ ದಂತವು ಡೆಂಟೈನ್‌ನಿಂದಲೆ ಕೂಡಿರುತ್ತದೆ. ಪೂರ್ಣ ಜೀವಾವಧಿವರೆಗೂ ದಂತ ಬೆಳೆಯುತ್ತಲೇ ಇರುತ್ತದೆ. ಪ್ರತಿ ವರ್ಷ ೩ ೧/೨ – ೪ ೧/೨ ಇಂಚು ಬೆಳೆಯುತ್ತದೆ. ಸವೆಯುವಿಕೆಯಿಂದಾಗಿ ಪೂರ್ಣ ಬೆಳವಣಿಗೆ ಕಂಡುಬರುವುದಿಲ್ಲ. ಮುದಿಯಾದ ಗಂಡಾನೆಯಲ್ಲಿ ೨.೫ ಮೀ ಉದ್ದ ಮತ್ತು ಹೆಣ್ಣಾನೆಯಲ್ಲಿ ೧.೬ ಮೀ ಉದ್ದವಿರುತ್ತದೆ. ದಂತದ ತೂಕ ಗಂಡಾನೆಯಲ್ಲಿ ೧೮೯ ಕಿಗ್ರಾಂ ಮತ್ತು ಹೆಣ್ಣಾನೆಯಲ್ಲಿ ೧೮ ಕಿಗ್ರಾಂ ವಿಶ್ವದಾಖಲೆ: ಗಂಡಾನೆಯ ಒಂದು ದಂತ ೧೦೭ ಕಿಗ್ರಾಂ ಮತ್ತು ಹೆಣ್ಣಾನೆಯಲ್ಲಿ ೨೫ ಕಿಗ್ರಾಂ ದಂತದ ೧/೩ ಭಾಗವು ದವಡೆಯ ಮತ್ತು ತಲೆ ಬುರುಡೆಯ ಅಸ್ಥಿಯಲ್ಲಿರುತ್ತದೆ. ಕೋರೆ ಹಲ್ಲುಗಳಿರುವುದಿಲ್ಲ. ಮೋಲಾರ್ ಹಲ್ಲುಗಳು ಒಟ್ಟು ೨೪. ಆದರೆ ಇವಷ್ಟೂ ಒಮ್ಮೆಗೇ ಇರುವುದಿಲ್ಲ. ಒಮ್ಮೆ ದವಡೆಯ ಪ್ರತಿ ಅರ್ಧಭಾಗದಲ್ಲಿ ಕೇವಲ ಒಂದು ಹಲ್ಲು ಮಾತ್ರ ಇರುತ್ತದೆ. ಈ ಹಲ್ಲುಗಳು ಸವೆದಂತೆ ಇದರ ಸ್ಥಾನದಲ್ಲಿ ಉಳಿದ ಮೋಲಾರ್ ಹಲ್ಲುಗಳು ಅನುಕ್ರಮವಾಗಿ ಬೆಳೆಯುತ್ತವೆ. ಈ ಹಲ್ಲುಗಳ ಮೇಲೆ ಆಹಾರವನ್ನು ಅರೆಯುವ ಅಡ್ಡ ಏಣುಗಳು ಇರುತ್ತವೆ. ಇವು ಆಫ್ರಿಕ ಆನೆಗಳಲ್ಲಿ ಕಡಿಮೆ (ಸು. ೧೦) ಮತ್ತು ಏಶಿಯದ ಆನೆಗಳಲ್ಲಿ ಹೆಚ್ಚು (ಸು. ೨೦).

ಮಸ್ತು ಗ್ರಂಥಿಗಳು: ಏಶಿಯ ಆನೆಗಳಲ್ಲಿರುವ ವಿಶೇಷ ಲಕ್ಷಣ. ಇದು ಬೆವರಿನ ಗ್ರಂಥಿಯಿಂದ ಮಾರ್ಪಾಟಾಗಿದ್ದು, ಕಣ್ಣು ಮತ್ತು ಕಿವಿಗಳ ನಡುವೆ ಇದೆ. ಇದರ ಗಾತ್ರ ಗಂಡು ಮತ್ತು ಹೆಣ್ಣಾನೆಗಳಲ್ಲಿ ವಿಭಿನ್ನವಾಗಿದೆ. ಪ್ರಾಯದ ಗಂಡಾನೆಯಲ್ಲಿ ಮೊದಲು ಕಾಣಿಸಿಕೊಳ್ಳುತ್ತದೆ. ಇದರಿಂದ ಎಣ್ಣೆಯಂತ ಕಪ್ಪಾದ ದ್ರವ ಸ್ರವಿಸುತ್ತದೆ. ಈ ಗ್ರಂಥಿಯು ಸ್ರವಿಸಲು ತೊಡಗಿದಾಗ ಆನೆಯು ಹೆಚ್ಚು ಪ್ರಚೋದಕವಾಗುತ್ತದೆ. ಹಲವು ವೇಳೆ ಆನೆ ಮಂಕಾಗಿರುತ್ತದೆ. ಈ ಗ್ರಂಥಿಯ ಸ್ರವಿಕೆಗು ಮತ್ತು ಆನೆಯ ಲೈಂಗಿಕ ಚಟುವಟಿಕೆಗೂ ಸಂಬಂಧವಿರುವ ಬಗ್ಗೆ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಆನೆಯ ಚರ್ಮ ಒಂದು ಇಂಚಿನಷ್ಟು ದಪ್ಪವಾಗಿದ್ದರೂ ಇದರಲ್ಲಿ ಕೊಬ್ಬು ಬಹು ಕಡಿಮೆ. ದೇಹದ ಮೇಲೆ ಕೂದಲು ಕಡಿಮೆ. ಬಾಲದ ತುದಿಯಲ್ಲಿ ಕೂದಲ ಕುಚ್ಚವಿದೆ. ಕಾಲುಗಳು ಕಂಬದಂತಿದ್ದು ದೊಡ್ಡ ಗಾತ್ರದ ದೇಹಕ್ಕೆ ಆಧಾರವಾಗಿವೆ. ವಿವಿಧ ಭಂಗಿಯಲ್ಲಿ ಮಡಿಸಲೂ ಮತ್ತು ನೆಗೆಯಲೂ ಆನೆಗೆ ಸಾಧ್ಯವಿಲ್ಲ. ಕೇವಲ ೭ ಅಡಿ ಅಗಲವಿರುವ ಕಾಲುವೆಯನ್ನೂ ಸಹ ದಾಟಲು ಅಸಾಧ್ಯ! ಇದರ ವೇಗ, ಗಂಟೆಗೆ ೧೫ ಮೈಲು. ಬೆಟ್ಟವನ್ನು ಹತ್ತಲೂ, ಇಳಿಜಾರಿನಲ್ಲಿ ಇಳಿಯಲೂ ಬಹು ಜಾಗರೂಕತೆಯಿಂದ ಚಲಿಸಲು ಇವುಗಳಿಗೆ ಸಾಧ್ಯ. ಆನೆ ಸುಲಭವಾಗಿ ಈಜಬಲ್ಲದು ನೀರಿನಲ್ಲಿ ದೇಹವು ಸಂಪೂರ್ಣವಾಗಿ ಮುಳುಗಿದಾಗ ಸೊಂಡಿಲನ್ನು ಮಾತ್ರ ನೀರಿನ ಮೇಲಕ್ಕೆತ್ತಿ ಉಸಿರಾಡುತ್ತಲೇ ಈಜುತ್ತದೆ. ಸು. ೬ ಘಂಟೆಯ ಕಾಲ ಒಂದೇ ಸಮನೆ ಈಜುವ ಶಕ್ತಿ ಪಡೆದಿದೆ. ಇದರ ವೃಷಣ ದೇಹದೊಳಗೆಯೇ ಅಡಗಿರುವುದರಿಂದ ಹೊರಗೆ ಕಾಣಿಸುವುದಿಲ್ಲ. ಹೆಣ್ಣು ಆನೆಯ ಯೋನಿಯು ಆಸನದ್ವಾರದ ಕೆಳಭಾಗದಲ್ಲಿದೆ. ಇದಕ್ಕೆ ಮೊಲೆಗಳು ಎರಡು, ಇವು ಮುಂಗಾಲುಗಳ ನಡುವೆ ಇವೆ.

ಆಹಾರ: ಬೆಳೆದ ಆನೆ ದಿನ ಒಂದಕ್ಕೆ ೪೫.೩೬ ಕಿ.ಗ್ರಾಂ. ಆಹಾರವನ್ನು ತಿನ್ನುತ್ತದೆ. ೩೦ ರಿಂದ ೫೦ ಗ್ಯಾಲನ್‌ಗಳಷ್ಟು ನೀರು ಕುಡಿಯುತ್ತದೆ. ಆಹಾರವನ್ನು ಹೆಚ್ಚು ಅಗಿಯುವುದಿಲ್ಲ. ಜೀರ್ಣ ಶಕ್ತಿ ಕಡಿಮೆ. ತಿಂದ ಹುಲ್ಲಿನ ಶೇ. ೪೪ ಭಾಗ ಮಾತ್ರ ಜೀರ್ಣಿಸಿಕೊಳ್ಳುತ್ತದೆ. ಆನೆಯ ಆಹಾರ: ಹುಲ್ಲು, ಎಲೆ, ಹಣ್ಣು, ಕಾಯಿ, ಗೆಡ್ಡೆಗೆಣಸು, ಮರದ ತೊಗಟೆ, ಬೇರು ಮುಂತಾದವು. ಕಬ್ಬು, ಬೆಲ್ಲ ಮತ್ತು ತೆಂಗಿನಕಾಯಿ ಇವಕ್ಕೆ ಹೆಚ್ಚು ಪ್ರಿಯ. ಮಾದಕ ಪಾನೀಯಗಳನ್ನು ಸೇವಿಸಿದಾಗ ಮನುಷ್ಯನಂತೆಯೇ ಮತ್ತೇರುವುದುಂಟು.

ಆನೆ ಹೆಚ್ಚು ನಿದ್ರಿಸುವುದಿಲ್ಲ. ಬೆನೆಡಿಕ್ಟ್‌ನ ಸಂಶೋಧನೆಯ ಪ್ರಕಾರ ಆನೆಯು ದಿನಕ್ಕೆ ಸರಾಸರಿ ೧ ೧/೨ ಘಂಟೆಯಿಂದ ೩ ೩/೪ ಘಂಟೆ ನಿದ್ರಿಸುತ್ತದೆ.

ಪ್ರಣಯ ಮತ್ತು ಸಂತಾನೋತ್ಪತ್ತಿ: ಆನೆಯು ೧೩ ವರ್ಷದ ಅನಂತರ ಪ್ರಾಯಕ್ಕೆ ಬರುತ್ತದೆ. ಪ್ರಣಯ ಕಾಲದಲ್ಲಿ ಗಂಡು ಮತ್ತು ಹೆಣ್ಣು ಆನೆಗಳು ಪರಸ್ಪರ ಪ್ರೀತಿಯಿಂದ ಪ್ರಣಯ ಚೇಷ್ಟೆಗಳಲ್ಲಿ ತೊಡಗುತ್ತವೆ. ಹೆಣ್ಣಾನೆ ಗಂಡಾನೆಯನ್ನು ಸೊಂಡಲಿನಿಂದ ತಿಕ್ಕಿ, ಆಡಿ, ಕಾಡಿ ಪ್ರಚೋದಿಸುತ್ತದೆ. ಪ್ರಣಯ ಕ್ರೀಡೆಯು ಅಂತ್ಯದಲ್ಲಿ ಸಂಭೋಗಾವಸ್ಥೆಯನ್ನು ಮುಟ್ಟುತ್ತದೆ. ಈ ಕ್ರಿಯೆಯು ನಿಶ್ಯಬ್ಧ ವಾತಾವರಣದಲ್ಲಿ ಜರುಗುತ್ತದೆ. ಜನ ಸಾಮಾನ್ಯರು ತಿಳಿದಂತೆ ಇದರ ಸಂಭೋಗಕ್ರಿಯೆಯು ನೀರಿನಲ್ಲಾಗದೆ ನೆಲದ ಮೇಲೆಯೇ ಜರುಗುತ್ತದೆ. ಇತರ ಚತುಷ್ಪಾದಿಗಳಂತೆ ಇದೂ ಕೂಡ ಹಿಂಬದಿಯಿಂದ ಬೆನ್ನೇರಿ ಸಂಭೋಗಿಸುತ್ತದೆ.

ಇದರ ಅವಧಿ ಹೆಚ್ಚೆಂದರೆ ನಾಲ್ಕು ನಿಮಿಷ ಮಾತ್ರ. ಗರ್ಭಧರಿಸಿ, ಇಪ್ಪತ್ತೆರಡು ತಿಂಗಳ ಅನಂತರ ಸುಲಭವಾಗಿ ಮರಿಗಳ ಪ್ರಸವವಾಗುತ್ತದೆ. ರೋಮಮಯವಾದ ೩ ಅಡಿ ಎತ್ತರದ ೨೦೦ ಪೌಂಡುಗಳಷ್ಟು ತೂಕದ ಆನೆಯ ಮರಿಯು ತಾಯಿಯ ಮೊಲೆ ಹಾಲನ್ನು ಬಾಯಿಂದಲೇ ಹೀರುತ್ತದೆ. ೪–೫ ದಿನಗಳಲ್ಲಿ ತಾಯಿಯೊಂದಿಗೆ ಸಣ್ಣ ಪ್ರಮಾಣದಲ್ಲಿ ಸುಲಭವಾಗಿ ಓಡಾಡುವ ಶಕ್ತಿಯನ್ನು ಪಡೆದಿರುತ್ತದೆ. ನಡೆಯುವಾಗ ತಾಯಿಯು ತನ್ನ ಮರಿಯನ್ನು ಸುರಕ್ಷಿತವಾಗಿ ತನ್ನ ಕಾಲುಗಳ ನಡುವೆ ಕರೆದೊಯ್ಯುತ್ತದೆ. ಇಷ್ಟು ಜಾಗರೂಕತೆಯಿಂದಿದ್ದರೂ ಶೇ. ೨೫ ಮರಿಗಳು ಹುಲಿ ಅಥವಾ ಸಿಂಹಗಳಿಂದ ಸಾವಿಗೊಳಗಾಗುತ್ತವೆ.

ಕುಟುಂಬ ಜೀವನ: ಆನೆಯ ಕುಟುಂಬ ಸಣ್ಣ–ಸಣ್ಣ ಗುಂಪುಗಳಿಂದಾಗಿದೆ. ಒಂದು ಗುಂಪು ಅಥವಾ ಹಿಂಡಿನಲ್ಲಿ ೬ ಆನೆಗಳಿರುತ್ತವೆ. ಒಂದು ವಯಸ್ಸಾದ ಆನೆ, ಬೆಳೆದು ಪ್ರಾಯದಲ್ಲಿರುವ ಹೆಣ್ಣು ಆನೆಗಳು ಮತ್ತು ಮರಿಗಳಿರುತ್ತವೆ. ಹಿಂಡು ಚಲಿಸುವಾಗ ಮುದಿಯಾನೆ ಮುಂದಿರುತ್ತದೆ. ಹಿಂಡಿನಲ್ಲಿ ಗಂಡಾನೆ ಇದ್ದ ಪಕ್ಷದಲ್ಲಿ ಅದು ಹಿಂಡಿಗೆ ಯಾವುದಾದರೂ ಅಪಾಯ ಒದಗಿದಾಗ ಮಾತ್ರ ಮುಂದಕ್ಕೆ ಧಾವಿಸುತ್ತದೆ. ಗಂಡಾನೆಗಳು ಪ್ರಾಯಕ್ಕೆ ಬಂದಕೂಡಲೆ ಹಿಂಡನ್ನು ತೊರೆಯುತ್ತವೆ. ಕೆಲವು ಪ್ರತ್ಯೇಕವಾಗಿಯೂ ಮತ್ತೆ ಕೆಲವು ಸಣ್ಣ ಹಿಂಡುಗಳಲ್ಲಿ ಜೀವಿಸುತ್ತವೆ. ಹಲವಾರು ಸಣ್ಣ ಹಿಂಡುಗಳು ತಾತ್ಕಾಲಿಕವಾಗಿ ಒಟ್ಟುಗೂಡಿ ೧೦೦ ಕ್ಕಿಂತ ಹೆಚ್ಚು ಸಂಖ್ಯೆಯುಳ್ಳ ದೊಡ್ಡ ಹಿಂಡಾಗಬಹುದು. ಹೆಚ್ಚು ಸಂಖ್ಯೆಯ ದೊಡ್ಡ ಹಿಂಡುಗಳು ಆಫ್ರಿಕ ಆನೆಗಳಲ್ಲಿ ಸಹಜ.

ಅನ್ಯ ಪ್ರಾಣಿಗಳೊಂದಿಗೆ ಹೊಂದಾಣಿಕೆ: ಆನೆಗಳು ಸಹಜವಾಗಿ ಬೇರಾವ ಪ್ರಾಣಿಗಳ ತಂಟೆಗೂ ಹೋಗುವುದಿಲ್ಲ, ಅಂತೆಯೇ ಹೆದರುವುದೂ ಇಲ್ಲ. ಕಪ್ಪು ಘೇಂಡಾಮೃಗವನ್ನು ಕಂಡರೆ ಆನೆಗಳಿಗೆ ಆಗದು. ನೀರಾನೆಗಳು ತಾವು ವಾಸಿಸುವ ಪ್ರದೇಶದಲ್ಲಿ ಈ ಆನೆಗಳೊಂದಿಗೆ ಹಂಚಿಕೊಳ್ಳಲು ಇಚ್ಛಿಸುವುದಿಲ್ಲ. ಹುಲಿ ಮತ್ತು ಸಿಂಹಗಳಿಗೂ ಆನೆಗಳು ಹೆದರುವುದಿಲ್ಲ. ಆದರೂ ಅಸಹಾಯಕವಾದ ಮತ್ತು ಗಾಯಗೊಂಡ ಆನೆಗಳ ಮೇಲೂ, ಮರಿಗಳ ಮೇಲೂ ಹುಲಿ, ಸಿಂಹಗಳು ಎರಗಿ ಕೊಲ್ಲುವುದುಂಟು. ಹಾವುಗಳಿಂದ ಆನೆಗೆ ಹಾನಿಯಿಲ್ಲ. ಹಾವಿನ ವಿಷವು ದೊಡ್ಡ ಗಾತ್ರದ ದೇಹವುಳ್ಳ ಆನೆಯನ್ನು ಕೊಲ್ಲುವಷ್ಟು ತೀಕ್ಷ್ಣವಲ್ಲ. ಇಷ್ಟಾದರೂ ಆನೆಗಳಿಗೆ ಇರುವೆ, ಸೊಳ್ಳೆ ಮತ್ತು ನೊಣಗಳ ಕಾಟವನ್ನು ಸಹಿಸಲಾಗದು. ಇವುಗಳ ಕಾಟದಿಂದ ಪಾರಾಗಲು ಆನೆ ತನ್ನ ಮೈಮೇಲೆ ನೀರು, ಮಣ್ಣು, ಕೆಸರು ಅಥವಾ ಒಣಗಿದ ಹುಲ್ಲನ್ನು ಆಗಾಗ ಎರಚಿಕೊಳ್ಳುತ್ತದೆ. ಬೇಲಿಯನ್ನು ಕಂಡರೆ ಆನೆಗಳಿಗೆ ಅತಿ ಸಂಶಯ.

ಒಂಟಿ ಸಲಗವು ಬಹಳಷ್ಟು ಅಪಾಯಕಾರಿ. ಇವಕ್ಕೆ ಒಮ್ಮೊಮ್ಮೆ ಮದವೇರುವುದುಂಟು. 'ಮಸ್ತು' ಗ್ರಂಥಿ ತೀವ್ರ ಚಟುವಟಿಕೆಯಲ್ಲಿದ್ದ ಸಮಯದಲ್ಲಿ ಇವು ಪ್ರಚೋದಿತಗೊಂಡರೂ ಮದವೇರುವುದಕ್ಕೆ ಕಾರಣ ಇವು ಅನುಭವಿಸುತ್ತಿರುವ ಯಾವುದಾದರೊಂದು ಬಾಧೆಯೇ ಕಾರಣವಾಗಿರುತ್ತದೆ. ಎರಗುವ ಮುನ್ನ ಇವು ತಮ್ಮ ಸೊಂಡಿಲನ್ನು ಮೇಲಕ್ಕೆತ್ತಿ ಘೀಳಿಟ್ಟು ಕಿವಿಯನ್ನಗಲಿಸಿ, ಮುಂಗಾಲನ್ನು ನೆಲಕ್ಕೆ ಊರುತ್ತಾ ಕೋಪವನ್ನು ವ್ಯಕ್ತಪಡಿಸುತ್ತವೆ.

ರೋಗಗಳು: ಆನೆಯ ಜೀವಿತಾವಧಿ ೬೦ ರಿಂದ ೧೦೦ ವರ್ಷಗಳು. ಜೆಸ್ಸಿ ಎಂಬ ಭಾರತದ ಹೆಣ್ಣಾನೆ ಸಿಡ್ನಿ ಮೃಗಾಲಯದಲ್ಲಿ ೬೯ ವರ್ಷ ಬದುಕಿತ್ತು. ಮನುಷ್ಯನಂತೆ ಇವುಗಳಿಗೂ ಮುದಿತನದಲ್ಲಿ ಅನೇಕ ರೋಗಗಳು ಕಾಡುತ್ತವೆ. ಹಲ್ಲುಗಳು ಸವೆದು ಆಹಾರವನ್ನು ಅರೆಯಲಾಗದೆ ಜೀರ್ಣ ಶಕ್ತಿಯು ಕುಂದುತ್ತದೆ. ಇದಕ್ಕೆ ಅಂಟುವ ಮುಖ್ಯ ರೋಗಗಳೆಂದರೆ: ಸಾಮಾನ್ಯ ಶೀತ, ಅಜೀರ್ಣ, ದೊಡ್ಡ ಕರುಳಿನ ಉಬ್ಬಸ, ನಿಮೋನಿಯಾ, ಡೈಯಾಬೆಟಿಸ್ ಮತ್ತು ಬಾವು (ಮಮ್ಸ್). ಆಫ್ರಿಕ ಜನಾಂಗದಲ್ಲಿ ಕಂಡುಬರುವ ಟ್ರಿಪನ ಸೋಮಿಯಾಸಿಸ್ ಕಾಯಿಲೆ ಇವಕ್ಕೂ ಬರುತ್ತದೆ. ಆನೆಯ ರೋಗಗಳಲ್ಲಿ ಅತಿ ಭಯಂಕರ ರೋಗ ನೆರಡಿ. ಇದು ಬಹು ವೇಗದಿಂದ ಹರಡುವ ರಕ್ತದ ಅಂಟುರೋಗ. ಬ್ಯಾಸಿಲಸ್ ಆಂತ್ರಾಸಿಸ್ ಎಂಬ ಬ್ಯಾಸಿಲೈಯಿಂದ ಉಂಟಾಗುತ್ತದೆ. ಈ ರೋಗ ಅಂಟಿದ ಕೇವಲ ಒಂದೆರಡು ಗಂಟೆಯಲ್ಲಿ ಆನೆಯು ಈ ರೋಗಕ್ಕೆ ಬಲಿಯಾಗುತ್ತದೆ. ಈ ರೀತಿ ಮೃತ ಹೊಂದಿದ ಸ್ಥಳದಲ್ಲಿ ಹಲವಾರು ವರ್ಷಗಳ ನಂತರವೂ ಈ ರೋಗದ ಕ್ರಿಮಿಗಳು ಜೀವಂತವಾಗಿರುವ ಬಗ್ಗೆ ತಜ್ಞ ಕ್ಯಾಪ್ಟನ್ ಸಿ.ಆರ್.ಎಸ್. ಪಿಟ್‌ಮನ್ ವರದಿಸಿದ್ದಾರೆ. ನೆರಡಿ ರೋಗ ಬಾಧೆ ಪಡುವ ಆನೆಗೂ, ಅದನ್ನು ವೀಕ್ಷಿಸುತ್ತಿರುವ ಜನರಿಗೂ ಅಸಹನೀಯವಾಗಿರುತ್ತದೆ. ದೇಹ ಭಯಂಕರವಾಗಿ ನಡುಗುತ್ತದೆ. ದೇಹವು ಉಷ್ಣಾಂಶ ಕ್ರಮೇಣವಾಗಿ $36.2^0$ ರಿಂದ $38.8^0$ ಸೆಲ್ಸಿಯಸ್‌ಗೆ ಶೀಘ್ರ ಕಾಲದಲ್ಲಿ ಏರುತ್ತದೆ; ಬಾಯಿ ಮತ್ತು ಬಾಯಿಯ ಅಂಗಳದ ಮೇಲ್ಭಾಗದಲ್ಲಿ ನಸು ಗೆಂಪು ಮಚ್ಚೆಗಳು ಕಾಣುತ್ತವೆ; ಬಾಯಿ, ಮೂತ್ರದ್ವಾರ ಮತ್ತು ಆಸನ ದ್ವಾರಗಳಿಂದ ರಕ್ತ ಒಸರುತ್ತದೆ; ದೇಹದ ಮೇಲೆ ಗಂಟುಗಂಟಾದ ಊತಗಳಾಗುತ್ತದೆ; ಕೊನೆಗೆ, ಶ್ವಾಸಕೋಶಗಳ ಕಟ್ಟುವಿಕೆಯಿಂದ ಉಸಿರಾಟನಿಲ್ಲುತ್ತದೆ.

ಗಾಯಗೊಂಡು ನರಳುತ್ತಿರುವ ಆನೆಗೆ ಮತ್ತೊಂದು ತೊಂದರೆಯೆಂದರೆ ನೊಣಗಳ ಕಾಟ. ಗಾಯದ ಮೇಲೆ ನೊಣ ಮೊಟ್ಟೆಯಿಟ್ಟು ಮರಿಮಾಡುತ್ತದೆ. ಹುಳುಗಳಂತಿರುವ ನೊಣದ ಮರಿಗಳು ಗಾಯದಲ್ಲಿನ ಮಾಂಸವನ್ನು ತಿಂದು ಬೆಳೆಯುತ್ತವೆ. ಇವುಗಳ ಕೆರೆತವನ್ನು ಸಹಿಸಲಾರದೆ ಆನೆಯು ಹುಚ್ಚು ಹಿಡದಂತೆ ಒದ್ದಾಡುತ್ತದೆ.

ಬುದ್ಧಿಶಕ್ತಿ: ಆನೆಯ ಬುದ್ಧಿವಂತಿಕೆ ಮತ್ತು ಜ್ಞಾಪಕ ಶಕ್ತಿಯ ಬಗ್ಗೆ ಸಾಕಷ್ಟು ಉತ್ಪ್ರೇಕ್ಷೆಗಳುಂಟು. ಸಾಕಿದ ಆನೆ ಬಹು ಬೇಗ ಸಾಕಿದವನ ಸೂಚನೆಗಳನ್ನು ಕಲಿಯುತ್ತದೆ ಮತ್ತು ಅವನಲ್ಲಿ ಅತ್ಯಂತ ವಿಧೇಯತೆಯಿಂದಿರುತ್ತದೆ. ಪ್ರಾಣಿಗಳನ್ನು ಪಳಗಿಸುವುದರಲ್ಲಿ ಪ್ರಸಿದ್ಧನಾದ ಜರ್ಮನಿಯ ಕಾರ್ಲ್ ಹೇಗೆನ್‌ಬೆಕ್ ಆಫ್ರಿಕದ ಆರು ಆನೆಗಳನ್ನು ಎರಡೇ ದಿನಗಳಲ್ಲಿ ಪಳಗಿಸಿದ ಬಗ್ಗೆ ಉಲ್ಲೇಖಗಳಿವೆ. ಆದರೂ ಆನೆಗೆ ಚಿಂತಿಸುವ ಶಕ್ತಿ ಕಡಿಮೆ. ಇದರ ದೇಹಕ್ಕೆ ಹೋಲಿಸಿದರೆ ಆನೆಯ ಮೆದುಳು ಸಣ್ಣ. ಹೆಚ್ಚೆಂದರೆ ಆನೆಯ ಬುದ್ಧಿ ಶಕ್ತಿಯನ್ನು ಕುದುರೆಯ ಬುದ್ಧಿಶಕ್ತಿಗೆ ಹೋಲಿಸುತ್ತಾರೆ. ಮನುಷ್ಯನ ಮತ್ತು ಸ್ಥಳಗಳ ನೆನಪನ್ನು ಬಹುಕಾಲ ಉಳಿಸಿಕೊಳ್ಳುತ್ತದೆ. ಇಷ್ಟಾದರೂ ತೊಂದರೆಗೊಳಗಾದಾಗ ಜಾಣ್ಮೆಯಿಂದ ಎದುರಿಸಿ, ತಪ್ಪಿಸಿಕೊಳ್ಳದೆ ಹೆದರಿ ಓಡುತ್ತದೆ.

ಪ್ರಾಕೃತಿಕ ಪ್ರವೃತ್ತಿ: ಆನೆಗಳ ವಾಸ ಹೆಚ್ಚು ಮರಗಳುಳ್ಳ ದಟ್ಟವಾದ ಕಾಡುಗಳಲ್ಲಿ. ತಂಪಾದ ವೇಳೆಯನ್ನು ಬಯಲು ಪ್ರದೇಶಗಳಲ್ಲಿ ಸಂಚರಿಸುತ್ತವೆ. ದಿನಕ್ಕೆ ೬ ಗಂಟೆ ಆಹಾರ ತಿನ್ನುವುದರಲ್ಲಿ ಮಗ್ನ. ಸಂಜೆಯಾದಾಗ ನೀರಿರುವ ಸ್ಥಳವನ್ನು ಸೇರುತ್ತವೆ. ನೀರು ಕುಡಿದು ದಣಿವಾರಿದ ಅನಂತರ ನೀರಿನಲ್ಲಿ ಮುಳುಗಿ ಆಟವಾಡುತ್ತವೆ. ಬಹು ಪಾಲು ರಾತ್ರಿ ವೇಳೆಯಲ್ಲಿ ಆಹಾರ ಸೇವನೆಯಲ್ಲಿ ನಿರತ. ಹೆಚ್ಚು ಬಿಸಿಲಿದ್ದಾಗ ಮರದ ನೆರಳಲ್ಲಿ ವಿಶ್ರಾಂತಿ ಹೊಂದುತ್ತದೆ.

ಇತ್ತೀಚೆಗೆ ಕಾಡುಗಳ ನಿರ್ಮೂಲನ, ಕಾಡಿನಲ್ಲಿ ಮಾನವನ ಚಟುವಟಿಕೆಗಳು ಹೆಚ್ಚಾದ್ದರಿಂದ ಆನೆಗಳ ಶಾಂತಿಯುತ ಜೀವನಕ್ಕೆ ಧಕ್ಕೆ ಉಂಟಾಗಿದೆ. ಮನುಷ್ಯನ ಮೋಜಿನ ಕ್ರೀಡೆಗೂ ಮತ್ತು ದಂತದ ಮೋಹಕ್ಕೂ ಆನೆಗಳು ಬಲಿಯಾಗುತ್ತಿವೆ. ಈ ರೀತಿ ಆನೆಗಳ ಸಂತತಿಯು ನಿರ್ಮೂಲವಾಗದಂತಿರಲು ಆನೆಗಳನ್ನು ಕೊಲ್ಲುವುದು ಮತ್ತು ಬೇಟೆಯಾಡುವುದನ್ನು ಕಾನೂನಿಂದ ತಡೆಗಟ್ಟಲಾಗಿದೆ. ರಾಷ್ಟ್ರೀಯ ಅರಣ್ಯಧಾಮ ಮತ್ತು ಅಭಯಾರಣ್ಯಗಳಲ್ಲಿ ಆನೆಗಳನ್ನು ರಕ್ಷಿಸಿ ಅವುಗಳ, ಸಂತತಿಯನ್ನು ಅಭಿವೃದ್ಧಿಗೊಳಿಸಲಾಗಿದೆ.

(ಡಿ.ಎಸ್.ಇ)

**ಆನೆದೊಗಲು:** ಫೈಲೇರಿಯ ಎಂಬ ಪರತಂತ್ರ ಹುಳುವಿನಿಂದುಂಟಾಗುವ ರೋಗ. ವೈಜ್ಞಾನಿಕವಾಗಿ ಎಲಿಫಂಟಿಯಾಸಿಸ್ ಎನ್ನುವರು. ಆನೆಕಾಲುರೋಗ ಪರ್ಯಾಯ ಹೆಸರು. ಈ ರೋಗವು ಪರತಂತ್ರ ಜೀವಿಗಳಿಂದ ಸೊಳ್ಳೆಗಳ ಮೂಲಕ ಮನುಷ್ಯರಲ್ಲಿ ಬರುತ್ತದೆ. ಈ ರೋಗದಿಂದ ಬಳಲುವ ಅಂಗಾಂಗಗಳು ಆನೆಯ ಚರ್ಮದಂತೆ ದಪ್ಪವಾಗುತ್ತದೆ. ಕಾರಣ, ಈ ಲಕ್ಷಣವನ್ನೊಳಗೊಂಡ ರೋಗಕ್ಕೆ ಆನೆದೊಗಲು ಎನ್ನುವರು. ಕೈಕಾಲುಗಳು ಯೋನಿದುಟಿಗಳು (ಲೇಬಿಯ), ಬೀಜಚೀಲ (ಸ್ಕ್ರೋಟಂ) ಚರ್ಮದಡಿಯ ಊತಕಗಳು ಈ ರೋಗಕ್ಕೆ ತುತ್ತಾಗುತ್ತವೆ. ಈ ಅಂಗಾಂಗಗಳು ದಪ್ಪವಾಗುತ್ತದೆ. ಈ ರೋಗ ಕಾಲುಗಳಿಗೆ ಹೆಚ್ಚಾಗಿ ಬರುವುದರಿಂದ ಆನೆಗಾಲು, ಹುತ್ತಗಾಲು ಎನ್ನುವರು. ಇದು ಮಲಿನ ರಕ್ತನಾಳಗಳು (ವೇನ್ಸ್) ಅಥವಾ ಹಾಲ್ರಸ (ಲಿಂಫ್ಯಾಟಿಕ್ಸ್) ನಾಳಗಳಲ್ಲಿ ಬೆಳೆಯುತ್ತಿರುವ ಪರತಂತ್ರ ಜೀವಿಗಳು ಸಿಕ್ಕಿಕೊಂಡು ತಡೆಯುಂಟು ಮಾಡಿದರೆ, ಹೀಗಾಗುತ್ತದೆ. ಈ ತಡೆಗೆ ಕಾರಣ ದುಂಡುಹುಳುದಂತಿರುವ ಪರತಂತ್ರ ಜೀವಿ. ಗಂಡು ಹುಳುಗಳು ಬೆಳೆವ ಹಂತದಲ್ಲಿ ಮಾನವನ ರಕ್ತ, ಹಾಲ್ರಸ ನಾಳಗಳೊಳಕ್ಕೆ ನುಗ್ಗಿ ದ್ರವ ಹರಿಯದಂತೆ ಅಂಟಿಕೊಳ್ಳುತ್ತವೆ. ಹೀಗಾಗುವ ಮುನ್ನಾ ಚರ್ಮದಡಿಯ ಊತಕಗಳ ಉರಿತವಾಗಿ ಮೇಲಿಂದ ಮೇಲೆ ಚಳಿ ಜ್ವರ ಬರುತ್ತದೆ. ಸೊಳ್ಳೆಗಳಿಂದ ಬರುವ ಈ ರೋಗದಿಂದಲ್ಲದೆ ಪಟ್ಟು, ಗಾಯ, ಬೇರೆ ಕಾರಣಗಳ ಉರಿತ, ನವೆ (ವಿಷಮ) ಗಂತಿಗಳಿಂದಲೂ ಹೀಗಾಗುತ್ತದೆ. (ಡಿ.ಎಸ್.ಎಸ್)

**ಆನೆಯ ವಿಕಾಸ:** ಆಲಿಗೊಸೀನ್ ಅವಧಿಯಲ್ಲಿ ಬದುಕಿದ್ದ ಫಿಯೊಮಿಯ ಮೀರೊಥೀರಿಯಂ ಎಂಬ ಆದಿ ಜೀವಿಯಿಂದ ಇಂದಿನ ಆನೆ ವಿಕಾಸವಾದ ಬಗೆಯ ಅಧ್ಯಯನ.

ಆನೆಯ ವಿಕಾಸದಲ್ಲಿ ಕಂಡು ಬರುವ ಮುಖ್ಯ ಬದಲಾವಣೆಗಳು.

1) ಕ್ರಮೇಣ ದೊಡ್ಡದಾದ ದೇಹ.
2) ದೇಹ ಭಾರವನ್ನು ಹೊರಲು ಬಲಿಷ್ಟ ಕಾಲುಗಳು.
3) ಸಣ್ಣ ಕತ್ತು.
4) ಹಲ್ಲುಗಳ ಸಂಖ್ಯೆ ಕ್ರಮೇಣ ಕಡಿಮೆಯಾಗಿ ಸಸ್ಯಾಹಾರವನ್ನು ಅಗಿಯಲು ಬೇಕಾಗುವ ಬದಲಾವಣೆಗಳು.

5) ಮೇಲ್ದವಡೆಯ ಬಾಚಿ ಹಲ್ಲುಗಳು ಕೊಂಬಿನಂತಾಗಿ ಆತ್ಮರಕ್ಷಣೆಗೆ ಸಹಕರಿಸುವುದು.

6) ಮೂಗು, ಮೇಲ್ತುಟಿ ಸೊಂಡಿಲಾಗಿ ಪರಿಣಮಿಸುವುದು ಇತ್ಯಾದಿ.

ಈಗಿನ ಆನೆಯ ಪೂರ್ವಜರೆನಿಸಿಕೊಂಡಿರುವ ಪ್ರಾಣಿಗಳ ಪಳೆಯುಳಿಕೆಗಳು ಇಯೋಸೀನ್, ಮಯೋಸೀನ್ ಮತ್ತು ಪ್ಲಯೋಸೀನ್ ಯುಗಗಳಿಗೆ ಸೇರುತ್ತವೆ.

ಪಳೆಯುಳಿಕೆಗಳನ್ನು ಪರೀಕ್ಷಿಸಿದಾಗ ಗತಿಸಿದ ಆನೆಯ ಪೂರ್ವಜರನ್ನು ಮುಖ್ಯವಾಗಿ ಮೀರಿಥೀರಿಡೇ, ಗಾಂಫೋಥೀಡೆ, ಮ್ಯೂಮೊಟಿಡೆ, ಡೈನೋಥೀರಿಡೆ ಮತ್ತು ಬ್ಯಾರಿಥೀರಿಡೆ ಎಂಬ ಐದು ಕುಟುಂಬಗಳಾಗಿ ವಿಂಗಡಿಸಲಾಗಿದೆ. ಒಂದು ಕುಟುಂಬಕ್ಕೂ ಮತ್ತೊಂದಕ್ಕೂ ದಂತ ಜೋಡಣೆ ಮತ್ತು ದವಡೆ ಹಲ್ಲಿನ ಜೋಡಣೆಯಲ್ಲಿ ವ್ಯತ್ಯಾಸಗಳಿವೆ.

ಮೀರೋಥೀರಿಯಂ ಹಂದಿ ಗಾತ್ರದ, ಈಯೋಸೀನ್ ಕಾಲದ ಪ್ರಾಣಿ. ಇದೇ ಆನೆಗಳ ಸಂತತಿಯ ಮೂಲ ಪ್ರಾಣಿ.. ಟಪೀರ್‌ನಷ್ಟು 2–3 ಅಡಿ ಎತ್ತರವಿತ್ತು. ಇಯೋಸೀನ್ ಮತ್ತು ಆಲಿಗೋಸೀನ್‌ಗಳಲ್ಲಿ ಕಂಡು ಬರುವ ಈ ಪ್ರಾಣಿಯ ಸೊಂಡಿಲು ಚಿಕ್ಕದಾಗಿತ್ತು. ತಲೆ ಬುರುಡೆ ನೀಳವಾಗಿತ್ತು. ಮೂಗಿನ ಹೊಳ್ಳೆಗಳು ತಲೆಯ ಸ್ವಲ್ಪ ಮೇಲ್ಭಾಗಕ್ಕೆ ಸರಿದಿದ್ದುವು. ಹಲ್ಲುಗಳು ಮಾತ್ರ ಮುಂದೆ ಬರುವ ಪ್ರಾಣಿಗಳಲ್ಲಿದ್ದಂತೆ ಅಗಲವಾಗಿದ್ದು ಕೆಲವು ಮಾರ್ಪಾಡುಗಳನ್ನು ಹೊಂದಿದ್ದವು. ಏಕೆಂದರೆ ಆಗಲೇ ಕೊಂಬಿನಂತಹ ಹಲ್ಲು ಮತ್ತು ಡಯಾಸ್ಟಿಮಾ ಅವಕಾಶ ಕಂಡು ಬರುತ್ತವೆ. ಮೊದಲನೆಯ ಪ್ರಿಮೋಲಾರ್, ಕೆಳದವಡೆಯ ಕೋರೆ ಹಲ್ಲು, ಪಕ್ಕದ ಬಾಚಿ ಹಲ್ಲುಗಳು ನಷ್ಟವಾಗಿದ್ದುವು. ದವಡೆ ಹಲ್ಲುಗಳು ಬೈಲೋಫೊಡಾಂಟ್ ರೀತಿಯದಾಗಿದ್ದು ಮೂರನೇ ದವಡೆ ಹಲ್ಲು ಮಾತ್ರ ಮೂರನೆ ದಿಂಡಿನ (ರಿಡ್ಜ್) ಅಂಕುರವನ್ನು ತೋರಿಸುತ್ತಿತ್ತು. ಇದರ ದಂತ ಸೂತ್ರ: 3/2, 1/0, 3/3, 3/3, = $36^0$ ಇದು ಜವುಗು ಪ್ರದೇಶದಲ್ಲಿ ವಾಸಿಸುತ್ತಿದ್ದ ಬಗ್ಗೆ ವರದಿಗಳಿವೆ. ಸಣ್ಣ ಕೊಂಬಿನಂತಿದ್ದ ಹಲ್ಲುಗಳು ಗೆಡ್ಡೆಗೆಣಸುಗಳನ್ನು ಅಗಿಯಲು ಸಹಾಯಕವಾಗಿದ್ದುವು.

ಫಿಯೊಮ: ಈಜಿಪ್ಟಿನಲ್ಲಿ ಆಲಿಗೋಸೀನ್‌ನಲ್ಲೂ ಇಂಡಿಯಾದ ಶಿವಾಲಿಕ್ ಪದರದಲ್ಲಿ ದೊರೆಯುವ ಈ ಪ್ರಾಣಿ ಮೀರೋಥೀರಿಯಂನ ಎರಡರಷ್ಟಿದ್ದಿತಲ್ಲದೆ ಅದರ ಕಾಲುಗಳು ಕಂಬದಂತೆ ಇಂದಿನ ಆನೆಯ ಕಾಲನ್ನು ಹೋಲುತ್ತಿದ್ದುವು. ಎರಡು ದವಡೆಗಳಲ್ಲೂ ಕೊಂಬುಗಳಿದ್ದವು. ದವಡೆ ಹಲ್ಲುಗಳು ಟ್ರೈಲೋಫೋಡಾಂಟ್ ವ್ಯವಸ್ಥೆಯನ್ನು ಹೊಂದಿದ್ದುವು.



ಮೀರಿಯೋ ತೀರಿಯಂ

ಗಾಂಫೊಥೀರಿಡೆಯ ಪ್ರಾಣಿಗಳು ಆಲಿಗೋಸೀನ್‌ನಿಂದ ಪ್ಲೀಸ್ಟೋಸೀನ್‌ವರೆಗೆ ಜೀವಿಸಿದ್ದುವು. ಉತ್ತರ ಮತ್ತು ದಕ್ಷಿಣ ಅಮೆರಿಕ, ಯೂರೇಷ್ಯಗಳಲ್ಲಿ ಸಿಗುವ ಗಾಂಫೊಥೀರಿಯಾದ ದೊಡ್ಡದಾದ ಕೊಂಬು (ಟಸ್ಕ್) ಗಳು ಸ್ವಲ್ಪ ಕೆಳಕ್ಕೆ ಬಾಗಿದ್ದವು. ದವಡೆಹಲ್ಲುಗಳಲ್ಲಿದ್ದ ದಿಂಡು (ರಿಡ್ಜ್) ಗಳ ಸಂಖ್ಯೆ ಹೆಚ್ಚು ವ್ಯತ್ಯಾಸಗಳನ್ನು ತೋರಿಸುತ್ತಿದ್ದುವು. ಆದರೆ ಇಂದಿನ ಆನೆಯ ದಿಂಡಿನಷ್ಟು ಎತ್ತರವಿರಲಿಲ್ಲ. ಉದಾ: ಈಜಿಪ್ಟಿನ ಪೇಲಿಯೋ ಮ್ಯಾಸ್ಟೋಡಾನ್ ಮತ್ತು ಪ್ಲೀಸ್ಟೋಸೀನ್ ಕಾಲದ ಸ್ಟೀಗೋಮ್ಯಾಸ್ಟೋಡಾನ್.

ಮ್ಯಾಮ್ಯೂಟಿಡೆಯ ಮ್ಯೂಮ್ಮಟ್ ಯೂರೋಪು, ಅಮೆರಿಕ ಮತ್ತು ಏಷ್ಯಗಳಲ್ಲಿ ಕೆಳ ಮಯೋಸೀನ್‌ನಿಂದ ಪ್ಲೀಸ್ಟೋಸೀನ್‌ವರೆಗೂ ಬದುಕಿದ್ದವು. ಪ್ರಾಯಶಃ ಪೇಲಿಯೋ ಮ್ಯಾಸ್ಟೋಡಾನ್‌ನಿಂದ ಜನಿಸಿದ ಇದರಲ್ಲಿ ದೊಡ್ಡ ಮೇಲ್ಭಾಗದ ಕೊಂಬು ಮತ್ತು ಸರಳವಾದ ದವಡೆಹಲ್ಲುಗಳಿದ್ದುವು.

ಡೈನೋಥೀರಿಯಂ: ಯೂರೇಷ್ಯದ ಮಯೋಸೀನ್ ಮತ್ತು ಪ್ಲಯೋಸೀನ್ ಕಾಲದಲ್ಲಿ ಕಂಡು ಬರುತ್ತದೆ. ಇದರಲ್ಲಿ ಕೆಳಗಿನ ಕೊಂಬುಗಳು ಚೆನ್ನಾಗಿ ಕೆಳಮುಖವಾಗಿ ಬೆಳೆದಿದ್ದು ಮೇಲಿನ ದವಡೆಯ ಕೊಂಬುಗಳು ಕಾಣದಾಗಿವೆ. ಇದು ದೊಡ್ಡ ಶರೀರದ ಪ್ರಾಣಿ. ದವಡೆ ಹಲ್ಲುಗಳು ಸ್ವಲ್ಪ ಭಾಗ ಬೈಲೋಫೊಡಾಂಟ್ ಮತ್ತು ಮಿಕ್ಕ ಭಾಗ ಟ್ರೈಲೋಫಡಾಂಟ್ ರಚನೆಯನ್ನು ತೋರಿಸುತ್ತವೆ.



ಫೈಯೋಮಿಯಾ

ಬ್ಯಾರಿಥೀರಿಯಂ: ಈಜಿಪ್ಟಿನ ಇಯೋಸೀನ್ ಕಾಲದ ಈ ಪ್ರಾಣಿಯ ಹಲ್ಲುಗಳು ಮುಖ್ಯವಾಗಿ ಡೈನೋಥೀರಿಯಂನಲ್ಲಿದ್ದಂತೆಯೇ ಇದ್ದುವು.



ಮಾಸ್ಟೊಡಾನ್

ಮ್ಯಾಸ್ಟೋಡಾನ್‌ಗಳು: ಇವು ಗತಿಸಿದ್ದರೂ ಟರ್ಷಿಯರಿ ಯುಗದಲ್ಲಿ ತೀರ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಈಗಿನ ಆನೆಗೂ ಮ್ಯಾಸ್ಟೋಡಾನ್‌ಗಳಿಗೂ ಮುಖ್ಯವಾದ ವ್ಯತ್ಯಾಸವಿದ್ದುದು ಅವುಗಳ ದಂತ ರಚನೆಯಲ್ಲಿ. ಏಕೆಂದರೆ ಇವುಗಳ ಹಲ್ಲುಗಳ ವಸಡಿನಮೇಲೆ ಕಾಣುವ ಭಾಗವು ಹೆಚ್ಚು ಎತ್ತರವಿರಲಿಲ್ಲ. ಹಾಗೂ ಎಲ್ಲಾ ದವಡೆ ಹಲ್ಲುಗಳೂ ಏಕಕಾಲದಲ್ಲಿ ಜೋಡಣೆಯಾಗಿದ್ದುವು. ಆಫ್ರಿಕದಲ್ಲಿ ಆಲಿಗೋಸೀನ್‌ನಿಂದ ಮಯೋಸೀನ್ ಕಾಲದವರೆಗೂ,



ಲಾಕ್ಸಾಡಾಂಟ

ಉತ್ತರ ಅಮೆರಿಕ, ದಕ್ಷಿಣ ಅಮೆರಿಕ ಮತ್ತು ಯುರೇಷ್ಯದಲ್ಲಿ ಮೇಲಿನ ಪ್ಲೀಸ್ಟೋಸೀನ್‌ವರೆಗೂ ಇವುಗಳು ಜೀವಿಸಿದ್ದವು. ಈಗಿನ ಆನೆ ಗಾತ್ರವನ್ನೇ ಪಡೆದಿದ್ದ ಇವುಗಳಲ್ಲಿ ಒಂದು ಜೊತೆ ಬಾಚಿ ಹಲ್ಲುಗಳು ಕೊಂಬಿನಂತೆ ಚೆನ್ನಾಗಿ ಬೆಳೆದಿದ್ದುವು.

ಮ್ಯಾಸ್ಟೋಡಾನ್‌ಗಳಿಗೂ ಮತ್ತು ವ್ಯೂತ್ಪನ್ನವಲ್ಲದ ಆನೆಗಳಿಗೂ ಮಧ್ಯಾವಸ್ಥೆಯಲ್ಲಿರುವ, ಮುಂದುವರಿದ ಪ್ರಾಣಿಯೇ ಸ್ಟೀಗೋಡಾನ್. ಇದು ಇಂದಿನ ಆನೆಯ ಮುಖ್ಯ ಪ್ರತಿನಿಧಿ. ಗಾಂಫೋಥೀರಿಯಂನ ನಿಕಟ ಸಂಬಂಧಿ. ದಕ್ಷಿಣ ಅಮೆರಿಕದಲ್ಲಿ ಕ್ರಿ.ಶ. 200 ವರೆಗೂ ಜೀವಿಸಿತ್ತು. ಆದರೆ ಅವು ಕಂಡದ್ದು ಪ್ಲಯೋಸೀನ್‌ನ ಕೊನೆಯ ಭಾಗದಲ್ಲಿ. ಇವುಗಳಿಗೆ ಕೆಳದವಡೆಯ ಕೊಂಬುಗಳಿರದೆ ಕೆಳದವಡೆಯು ಚಿಕ್ಕದಾಗಿತ್ತು. ಮೇಲಿನ ದವಡೆಯ ಕೊಂಬುಗಳು ಚೆನ್ನಾಗಿ ಬೆಳೆದ್ದಿದ್ದುವು.

ಮ್ಯಾಮತ್‌ಗಳು: ಮ್ಯಾಮತ್ ಸೈಬೀರಿಯದ ಮಂಜುಗಡ್ಡೆಯಲ್ಲಿ ರಕ್ಷಿಸಲ್ಪಟ್ಟ ಕಾರಣ, ಯಾವ ಬದಲಾವಣೆಯೂ ಆಗದಿದ್ದುದರಿಂದ ಅದನ್ನು ಪರಿಶೀಲಿಸಲು ಸುಲಭವಾಯಿತು. ಶೀತವನ್ನು ಸಹಿಸಲು ಇದಕ್ಕೆ ಹೆಚ್ಚು ಕೂದಲುಗಳಿದ್ದುವು. ಪ್ಲಯೋಸೀನ್ ಕಾಲದಲ್ಲಿ ಇವುಗಳು ಉತ್ತರ ಯುರೇಷ್ಯ ಮತ್ತು ಉತ್ತರ ಅಮೆರಿಕದಲ್ಲಿ ವಾಸವಾಗಿದ್ದುವು.

ಪ್ಲೀಸ್ಟೋಸೀನ್ ಕಾಲದಲ್ಲಿ ಸ್ಟೀಗೋಡಾನ್‌ಗಳು ಎರಡು ರೀತಿಯ ಅಂದರೆ ಆಫ್ರಿಕದ ಆನೆ ಅಥವ ಎಲಿಫಾಸ್ ಲೋಕ್ಸೋಡಾಂಟ ಮತ್ತು ಏಷ್ಯದ ಆನೆ ಅಥವ ಎಲಿಫಾಸ್ ಮ್ಯೂಕ್ಸಿಮ ಆನೆಗಳ ಮೂಲವಾದವು.

ಆಫ್ರಿಕದ ಆನೆಯ ಗಾತ್ರ, ಬಾಗಿದ ಕೊಂಬು ಮತ್ತು ಕಿವಿಗಳು ಏಷ್ಯದ ಆನೆಯ ಭಾಗಗಳಿಗಿಂತ ದೊಡ್ಡದಾಗಿವೆ. ಆದರೆ ಇದರ ದವಡೆ ಹಲ್ಲುಗಳು ಹೆಚ್ಚು ಎತ್ತರವಾಗಿರದೆ,



ವುಲ್ಲಿ ಮೇಮತ್

ಕೆಲವೇ ದಿಂಡುಗಳನ್ನು ಪಡೆದಿವೆ. ಈ ಆನೆಯ ಹಣೆಯ ಭಾಗ ತಗ್ಗಿದಂತೆ ಕಾಣುವುದು. ಇಂಡಿಯದ ಆನೆಯ ತಲೆ ಬುರುಡೆ ಚಿಕ್ಕದಾಗಿದ್ದು ಹಲ್ಲುಗಳು ಹೆಚ್ಚು ಅಗಲವಾಗಿರುವುದಲ್ಲದೆ ಹೆಚ್ಚು ಸಂಖ್ಯೆಯಲ್ಲಿ ದಿಂಡುಗಳನ್ನು ಪಡೆದಿವೆ. ನೋಡಿ: ಆನೆ. (ಎಂ.ಎಸ್.ಎಚ್.)

**ಆನ್ಸರಿಫಾರ್ಮಿಸ್:** ಪಕ್ಷಿವರ್ಗದ ಒಂದು ಗಣ. ಈ ಗಣಕ್ಕೆ ಸೇರಿದ ಪಕ್ಷಿಗಳು ಜಲವಾಸಿಗಳು. ಇವುಗಳನ್ನು ಆನ್‌ಹಿಮಿಡೆ ಮತ್ತು ಆನಾಟಿಡೆ ಎಂಬ ಎರಡು ಕುಟುಂಬಗಳಾಗಿ ವಿಂಗಡಿಸಬಹುದು. ಆನ್‌ಹಿಮಿಡೆ ಕುಟುಂಬದ ಹಕ್ಕಿಗಳು ಪ್ರಪಂಚದ ನಾನಾ ಕಡೆ ಸಿಗುತ್ತವೆ. ಆದರೆ ಅನಾಟಿಡೆ ಕುಟುಂಬಕ್ಕೆ ಸೇರಿದವು ಉತ್ತರ ಮತ್ತು ದಕ್ಷಿಣ ಅಮೇರಿಕಾಕ್ಕೆ ಮಾತ್ರ ಸೀಮಿತವಾಗಿವೆ. ಸ್ಕ್ರಿಮರ್ಸ್ ಎಂಬ ಪಕ್ಷಿಗಳು ಕೇವಲ ಉತ್ತರ ಮತ್ತು ದಕ್ಷಿಣ ಅಮೆರಿಕಾಕ್ಕೆ ಸೀಮಿತವಾಗಿದ್ದು ಆನ್‌ಹಿಮಿಡೆ ಕುಟುಂಬಕ್ಕೆ ಸೇರಿವೆ. ಬಾತು, ಹೆಬ್ಬಾತು ಮತ್ತು ಹಂಸಗಳು ಪ್ರಪಂಚದ ಎಲ್ಲೆಡೆ ಉಷ್ಣವಲಯದಲ್ಲಿ ಸಿಗುತ್ತವೆ.

ಆನ್‌ಹಿಮಿಡೆ ಕುಟುಂಬದ ಸ್ಕ್ರಿಮರ್ ಪಕ್ಷಿಗಳು ರೂಪದಲ್ಲಿ ಬಾತುಗಳನ್ನು ಅಥವಾ ಹಂಸಗಳನ್ನು ಬಾಹ್ಯದಲ್ಲಿ ಹೋಲದೇ ಇದ್ದರೂ ತುಲನಾತ್ಮಕವಾಗಿ ಹೋಲುತ್ತವೆ. ಇವುಗಳ ಕಾಲು ಬೆರಳುಗಳ ಸಂದಿನಲ್ಲಿ ಪೊರೆ ಇರುವುದಿಲ್ಲ ಮತ್ತು ಕೊಕ್ಕು ಬಾತುಗಳಲ್ಲಿರುವಂತೆ ಚಪ್ಪಟ್ಟೆಯಾಗಿಯೂ ಇರುವುದಿಲ್ಲ. ರೆಕ್ಕೆಗಳಲ್ಲಿ ಮೊನಚಾದ ಮುಳ್ಳಿನಂತೆ ರಚನೆ ಇರುವುದು. ಇವು ನಿಂತ ನೀರಿನಲ್ಲಿ ಕೆರೆಕಟ್ಟೆಗಳಲ್ಲಿ ಜೊಂಡು ಬೆಳೆದಿರುವ ಸ್ಥಳದಲ್ಲಿ ಗೂಡು ಮಾಡಿಕೊಂಡು ಜೀವಿಸುತ್ತವೆ. ದಕ್ಷಿಣ ಅಮೆರಿಕೆಯ ಕೆರೆ ಕಟ್ಟೆ, ಸಾಗರ, ಸರೋವರಗಳ ಬದಿಯಲ್ಲಿ ಜೀವಿಸುವುವು.

ಅನಾಟಿಡೆ ಕುಟುಂಬ ಬಾತು; ವರಟೆ (ಹೆಬ್ಬಾತು) ಮತ್ತು ಹಂಸಗಳು ಸೇರಿವೆ. ಈ ಕುಟುಂಬದಲ್ಲಿ ಸುಮಾರು ನಲವತ್ತಾರು ಜಾತಿಗಳು ಅಡಕವಾಗಿವೆ. ಇವುಗಳನ್ನು ಡಿಲಾಕಾರ್ ಮತ್ತು ಮೇಯರ್ಸ್‌ರವರ ಪ್ರಕಾರ ಹತ್ತು ಪಂಗಡಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯವಾಗಿ ಈ ಕುಟುಂಬಕ್ಕೆ ಸೇರಿದ ಬಾತುಗಳಲ್ಲಿ ಕೆಳಕಂಡ ಗುಣಗಳಿವೆ. ಚಪ್ಪಟೆಯಾದ ಮತ್ತು ಉದ್ದವಾದ ಕೊಕ್ಕು, ಉದ್ದನೆಯ ಮತ್ತು ಮಾಟವಾದ ಕತ್ತು, ಮಾಸಲು ಬಣ್ಣದ ಪುಕ್ಕಗಳು. ರೆಕ್ಕೆ ಪುಕ್ಕಗಳು (ಹಾರುಪುಕ್ಕಗಳು) ಪ್ರತಿವರ್ಷವೂ ಬಿದ್ದು ಹುಟ್ಟುವುವು, ಪುಕ್ಕಗಳು ಬಿದ್ದಾಗ ಇವು ಹಾರಲಾರದೆ ಸದಾ ನೀರಿನಲ್ಲಿ ಈಜುತ್ತಾ ಕಾಲಕಳೆಯುವುವು, ಪುಕ್ಕಗಳು ಮರಳಿದಾಗ ಲೀಲಾಜಾಲವಾಗಿ ದಿಗಂತದ ಕಡೆಗೆ ಹಾರಿ ಹೋಗುವವು, ಮೊಟ್ಟೆಯೊಡೆದು ಮರಿಹೊರಬಂದ ಮರುಕ್ಷಣದಲ್ಲಿ ಸ್ವತಂತ್ರವಾಗಿ ಚಲಿಸುತ್ತವೆ. ಆದ್ದರಿಂದ ಇವನ್ನು ನಿಡಿಫುಗೊಸ್ ಎಂದಿರುವರು. ಮರಿಗಳಲ್ಲಿ ಉದುರುಪುಕ್ಕ ಬಿದ್ದನಂತರ ವಿವಿಧ ಪುಕ್ಕಗಳು ಬೆಳೆದು ಅನಂತರದಲ್ಲಿ ಇವು ಹಾರುತ್ತವೆ. ಕೊಕ್ಕು ಅಗಲವಾಗಿ ಮತ್ತು ಉದ್ದವಾಗಿರುವುದೇ ಅಲ್ಲದೇ ಒಳಭಾಗದಲ್ಲಿ ಗೆರೆಗಳಿರುವುದರಿಂದ ಕೆಸರನ್ನು ಕೆದಕಿ ಹುಳುಗಳನ್ನು ಹುಡುಕಿ ಹಿಡಿಯಲು ಸಹಾಯವಾಗುವುದು, ನಾಲಿಗೆ ಇಕ್ಕೆಡೆಗಳಲ್ಲಿ ರುಚಿಗ್ರಂಥಿಗಳಿರುತ್ತವೆ ಮತ್ತು ನಾಲಿಗೆಯಿಂದ ಇವು ನೀರಿನ್ನು ಹೀರಬಲ್ಲವು.

ಇವುಗಳ ನಡಿಗೆ ಮಂದ. ಕಾಲಿನ ಬೆರಳುಗಳು ಸಂದು ಪೊರೆಯಿಂದ ಬಂಧಿತವಾಗಿರುವುದರಿಂದ ನೀರಿನಲ್ಲಿ ಚಲಿಸಲು ಸಾಧ್ಯ. ಇದೊಂದು ಅನುಕೂಲಕರ ಮಾರ್ಪಾಟು, ಈ ಕಾರಣಕ್ಕಾಗಿ ಇವು ನೀರಿನಲ್ಲಿ ಲೀಲಾಜಾಲವಾಗಿ ಈಜಾಡಬಲ್ಲವು. ಇವು ನೀರಿನಲ್ಲಿ ಬೆಂಡಿನಂತೆ ತೇಲುವುದೇ ಅಲ್ಲದೆ ಸೀಸ ದಂತೆ ಬಹಳಕಾಲ ನೀರಿನಲ್ಲಿ ಮುಳುಗಬಲ್ಲವು. ಪೃಷ್ಠ ಭಾಗದಲ್ಲಿ ಒಂದು ಜಿಡ್ಡಿನ ಗ್ರಂಥಿ ಇದೆ, ಇದರಿಂದ ಜಿಡ್ಡನ್ನು ಹೊರತೆಗೆದು ಪುಕ್ಕಗಳಿಗೆ ಸವರಿ ನೀರಿನಲ್ಲಿ ಪುಕ್ಕಗಳನ್ನು ಬಡಿಯುವುದರಿಂದ ಸ್ವಚ್ಛವಾಗುವುದೇ ಅಲ್ಲದೆ ಗರಿಗಳು ತೋಯುವುದಿಲ್ಲ. ಈ ಗ್ರಂಥಿ ರೋಗಗ್ರಸ್ಥವಾಗಿದ್ದರೆ ಗರಿಗಳು ನೀರಿನಲ್ಲಿ ತೋಯ್ದು ಪಕ್ಷಿಗಳು ರೇಷಿಮೆ ಖಾಯಿಲೆಗೆ ತುತ್ತಾಗುತ್ತವೆ. ಬೆಳವಣಿಗೆ ಹಂತದಲ್ಲಿ ನೀರಿನಲ್ಲಿ ಈಜುತ್ತವೆ. ಹಾರುವ ಪುಕ್ಕಗಳು ಬಂದೊಡನೆ ಹಾರುವುದನ್ನು ಕಲಿತು ವಲಸೆ ಹೋಗುವುವು. ಹಾರುವ ರೀತಿಯಲ್ಲಿ ಮತ್ತು ವೇಗದಲ್ಲಿ ಬೇರೆ ಪಕ್ಷಿಗಳಿಗೆ ಹಿಂದಾಗುವುದಿಲ್ಲ. ಚಲಿಸುವಾಗ, ಹಾರುವಾಗ ಮತ್ತು ವಲಸೆ ಹೋಗುವಾಗ ಗುಂಪು ಗುಂಪಾಗಿ ಸಾಗುವುವು.

ಅನಾಟಿಡೇ ವಂಶಕ್ಕೆ ಸೇರಿದ ವಿವಿಧ ಪಂಗಡಗಳು:– ಪಂಗಡ (1) ಆನ್‌ಸಿರಾನಾಟಿನಿ; ಉದಾ: ಮಗ್‌ಪೈ ಗೂಸ್ (ವರಟೆಗಳು) ಪಂಗಡ (2) ಡೆನ್‌ಡ್ರೊಸ್ಯೆಗ್ನಿನಿ; ಉದಾ: ಡೆನ್‌ಡ್ರೊಸ್ಯೆಗನಾ (ಹಂಸಗಳು); ಪಂಗಡ (3) ಆನ್‌ಸರಿನಿ ಉದಾ: ಕೋಸ್‌ಕೋರೊಬಸ್ವಾನ್ (ಹಂಸಗಳು); ಪಂಗಡ (4) ಟಡಾರ್‍ನಿ (ಉದಾ:– ಕಾಮನ್ ಸೆಲ್‌ಡಕ್) ಈಜಿಪ್ಷಿಯನ್ ಗೂಸ್; ಪಂಗಡ (5) ಅನಾಟಿನಿ; ಉದಾ: ಟೀಲ್ಸ್, ಮಲ್ಲಾರ್ಡ್ಸ್ (ಬಾತುಗಳು); ಪಂಗಡ (6) ಆ್ಯಥಿನಿ; ಉದಾ: ಕ್ಯಾನ್‌ವಾಸ್ ಬ್ಯಾಕ್, ಟಫ್‌ಟೆಡ್‌ಡಕ್ಸ್; ಪಂಗಡ (7) ಕ್ಯಾರಿನಿನಿ; ಉದಾ: ಬಾರ್‌ಬಾರೀಡಕ್, ಮ್ಯನ್‌ಡರಿನ್ ಡಕ್; ಪಂಗಡ (8) ಸಾಮಾಟಿರ್‍ನಿ; ಉದಾ: ಕಾಮನ್ ಐಡರ್, ಕಿಂಗ್ ಐಡರ್; ಪಂಗಡ (9) ಮರ್‌ಜಿನಿ; ಉದಾ: ಕಾಮನ್ ಮರ್‌ಗ್‌ಆನ್ಸರ್, ರೆಡ್‌ಬ್ರೆಸ್ಟೆಡ್ ಮರ್‌ಗ್‌ಆನ್ಸರ್; ಪಂಗಡ (10) ಓಕ್ಸಿಯಾರಿನಿ; ಉದಾ: ರಕ್ಡಿಡಕ್. (ಜಿ.ಎಂ.ಬಿ.)

**ಆನ್ಸರೆಸ್ ಬಾತು:** ಆನ್ಸರಿಫಾರ್ಮಿಸ್ ಗಣಕ್ಕೆ ಸೇರಿದ ಹಕ್ಕಿ. ಪ್ರಪಂಚದ ಸಿಹಿನೀರಿನ ಜಲಾಶಯಗಳಲ್ಲೆಲ್ಲ ವಾಸಿಸಬಲ್ಲುದು. ಅಗಲವಾಗಿ ಚಪ್ಪಟೆಯಾಗಿರುವ ಇದರ ಕೊಕ್ಕು ಮುಖ್ಯವಾಗಿ ನೀರಿನಲ್ಲಿರುವ ಸಣ್ಣ ಸಣ್ಣ ಜೀವಿಗಳನ್ನು ಹಿಡಿದು ತಿನ್ನಲು ಅನುಕೂಲಿಸುವಂತಿದೆ. ಕೆಲವು ಬಾತುಗಳು ಸಸ್ಯಾಹಾರಿಗಳು; ಕೆಲವು ನೀರಿನಲ್ಲಿರುವ ಆಹಾರವನ್ನು ಜಾಲಿಸಿ ತಿನ್ನಬಲ್ಲವು. ಮತ್ತೆ ಕೆಲವು ಮೃದ್ವಂಗಿಗಳನ್ನು ಅಥವಾ ಮೀನುಗಳನ್ನು ಹಿಡಿದು ತಿನ್ನುವುವು. ಹೆಬ್ಬೆಟ್ಟು ಮೊಟಕಾಗಿದೆ. ಇತರ ಬೆರಳುಗಳ ಮಧ್ಯೆ ಚರ್ಮ ಆವರಿಸಿ ಜಲಪಾದ ಏರ್ಪಟ್ಟು ನೀರಿನಲ್ಲಿ ಈಜಲು ಅನುಕೂಲವಾಗಿದೆ. ನಾಲಗೆ ದಪ್ಪವಾಗಿಯೂ ಮಾಂಸಭರಿತವಾಗಿಯೂ ಇದೆ. ಹಾರುವ ಹಕ್ಕಿಗಳಲ್ಲಿಲ್ಲದ ಒಳಹೊರಗಾಗುವ ಶಿಶ್ನವಿರುವುದು. ಹೆಣ್ಣುಬಾತುಗಳು ಬಹು ಸಂಖ್ಯೆಯಲ್ಲಿ ಬಿಳಿಯ ಮೊಟ್ಟೆಗಳನ್ನಿಡುತ್ತವೆ. ನೆಲದ ಮೇಲೆ ಗೂಡುಗಳನ್ನು ಕಟ್ಟುತ್ತವೆ. ಒಂದೇ ಜೊತೆ ಗಂಡು ಹೆಣ್ಣು ಬಾತು ಹಕ್ಕಿಗಳು ಒಟ್ಟಾಗಿ ದೀರ್ಘಕಾಲ ದಾಂಪತ್ಯ ಜೀವನ ನಡೆಸುವುವು. ಹೆಚ್ಚು ವೇಳೆ ಜಲಾಶಯಗಳಲ್ಲಿರುವ ಮುಳುಗುವ ಹಕ್ಕಿ ಆನ್ಸರ್ ಇಂಡಿಕಸ್ ಎಂಬುದು ನಮ್ಮ ದೇಶದ ಬಾತು (ನೀರು ಕೋಳಿ).

(ಪಿ.ಎ.ಆರ್.)

**ಆಪ್ಟೆರಿಕ್ಸ್:** ಕೀವೀ ಎಂಬ ಹಾರಲಾಗದ ಪಕ್ಷಿ ಕುಟುಂಬದ ಹೆಸರು (ಆಪ್ಟೆರಿಜಿಡೆ). ನ್ಯೂಜಿಲೆಂಡಿನ ಮೂಲನಿವಾಸಿ. ರೆಕ್ಕೆ ಬಹಳ ಮೊಟಕು; ಪುಕ್ಕದ ಗರಿಗಳು ಬಿಡಿಬಿಡಿ. ಪೃಷ್ಠಭಾಗ ಬಹಳ ನಶಿಸಿರುವುದರಿಂದ ಮೊಟಕಾಗಿ ಕಾಣುತ್ತದೆ. ಇವನ್ನು ಮಾಂಸಕ್ಕೆಂದು ಕೊಲ್ಲಲಾಗುತ್ತದೆ. ಕೂಗು ಕೀವೀ ಎಂದು ದನಿಸುವುದರಿಂದ ಅದೇ ಹೆಸರು ರೂಢವಾಗಿದೆ.

ಕೀವೀ ಗಾತ್ರದಲ್ಲಿ ದೊಡ್ಡ ಕೋಳಿಯನ್ನು ಹೋಲುವುದು. ಕೊಕ್ಕು ಅತಿ ಉದ್ದವಾಗಿ ಬಾಗಿದೆ. ಕೊಕ್ಕಿನ ತುದಿಯಲ್ಲಿ ನಾಸಿಕ ರಂಧ್ರಗಳು ಇವೆ. ಈ ಪಕ್ಷಿಗಳ ಗ್ರಹಣ ಮತ್ತು ಶ್ರವಣ ಶಕ್ತಿ ಅತಿ ಚುರುಕು; ಆದರೆ ದೃಷ್ಟಿ ಸ್ವಲ್ಪ ಮಂದ. ಕಾಲುಗಳು ಬಹಳ ದಪ್ಪ; ಪ್ರತಿ



ಕಾಲಿನಲ್ಲೂ ನಾಲ್ಕು ಬೆರಳುಗಳಿವೆ, ಪ್ರತಿ ಬೆರಳಿನಲ್ಲಿಯೂ ಮೊನಚಾದ ಒಂದು ಉಗುರು. ನಾಲ್ಕು ಬೆರಳುಗಳಲ್ಲಿ ಒಂದು ಮಾತ್ರ ಹಿಂದಕ್ಕೆ ತಿರುಗಿದೆ. ರೇಗಿಸಿದಾಗ ಇವು ಮೈಮೇಲೆ ಬೀಳಲು ಹಿಂಜರಿಯುವುದಿಲ್ಲ. ದಟ್ಟವಾದ ಕಾಡುಗಳಲ್ಲಿ ವಾಸಿಸುತ್ತವೆ. ಇದು ರಾತ್ರಿ ಸಂಚಾರಿ (ನಿಶಾಚಾರಿ). ಈ ಹಕ್ಕಿ ತನ್ನ ಉದ್ದವಾದ ಕೊಕ್ಕಿನಿಂದ ಇರುವೆ, ಗೆದ್ದಲುಹುಳು ಮತ್ತು ಎರೆಹುಳುಗಳನ್ನು ಗೂಡುಗಳಿಂದ ಎಳೆದು ತಿನ್ನುತ್ತದೆ.

ಬೆಳದಿಂಗಳ ರಾತ್ರಿಯಲ್ಲಿ ಗರಿಗಳು ಥಳಥಳ ಹೊಳೆಯುತ್ತವೆ. ಆದ್ದರಿಂದ ಒಂದು ಕಂಪನಿಯವರು ತಾವು ತಯಾರಿಸುವ ಬೂಟ್‌ಪಾಲಿಷ್‌ಗೆ ಕೀವೀ ಪಾಲಿಷ್ ಎಂದೇ ಹೆಸರಿತ್ತಿದ್ದಾರೆ. ಈ ಜಾತಿಯ ಪಕ್ಷಿಗಳಲ್ಲಿ ಗಂಡಿಗೆ ಶಿಶ್ನವಿದೆ; ಕೀವೀ ಪಕ್ಷಿಯ ತತ್ತಿ ಬಹು ದೊಡ್ಡದು. ತಂದೆ ತಾಯಿ ಪಕ್ಷಿಗಳು ಮೊಟ್ಟೆಗಳನ್ನು ಜೋಪಾನವಾಗಿ ಕಾಪಾಡಿ, ಮರಿಗಳಾದ ಮೇಲೆ ಆನಂದದಿಂದ ಅವುಗಳ ಸಂಗಡ ನಲಿಯುತ್ತವೆ.

ಈ ಪಕ್ಷಿಜಾತಿಯಲ್ಲಿ ಮೂರು ಜಾತಿಗಳು ಮಾತ್ರ ಉಳಿದಿವೆ. ಅವೆಲ್ಲ ಬಹುಮಟ್ಟಿಗೆ ಒಂದನ್ನೊಂದು ಹೋಲುತ್ತವೆ. ಅವುಗಳಲ್ಲಿ ಕೀವೀ ಎಂದು ಕರೆಯುವ ಆಪ್ಟೆರಿಕ್ಸ್ ಆಸ್ಟ್ರೇಲಿಕ್ಸ್ ಎಂಬುದೇ ದೊಡ್ಡ ಪಕ್ಷಿ. (ಜಿ.ಎಂ.ಬಿ.)

**ಆಪ್ಟೆರಿಗೋಟಾ:** ರೆಕ್ಕೆ ರಹಿತ ಕೀಟಗಳನ್ನೊಳಗೊಂಡ ಉಪವರ್ಗ. ಆಪ್ಟೆರಿಗೋಟಾಗಳು ಪ್ರಪಂಚದಲ್ಲೆಲ್ಲ ಹರಡಿವೆ. ಶರೀರ ರಚನೆ ಬಹುತೇಕ ಒಂದೇ ತರಹ. ಕೀಟವರ್ಗವನ್ನು ಎರಡು ಉಪವರ್ಗಗಳಾಗಿ ವಿಂಗಡಿಸಲಾಗಿದೆ. ಉಪವರ್ಗ ೧. ಆಪ್ಟೆರಿಗೋಟ ಪ್ರಾಚೀನಕೀಟಗಳು, ರೆಕ್ಕೆರಹಿತ ಮತ್ತು ರೂಪಾಂತರವಿಲ್ಲದವು. ಉಪವರ್ಗ ೨. ಪ್ಟೆರಿಗೋಟ, ರೆಕ್ಕೆಗಳಿವೆ ಅಥವಾ ಇಲ್ಲ, ರೂಪಾಂತರ ಅಪೂರ್ಣ ಅಥವ ಪೂರ್ಣ.

ಕೀಟವರ್ಗದ ಉಗಮ ಹಂತದಲ್ಲಿ ರೆಕ್ಕೆಗಳಿರಲಿಲ್ಲವೆಂಬುದು ಸ್ಪಷ್ಟ. ಈ ಪ್ರಾಚೀನ ಅಥವ ಮೊದಲ ಹಂತದ ಕೀಟಗಳ ಸಮುದಾಯವೇ ಆಪ್ಟೆರಿಗೋಟ. ಇವುಗಳಲ್ಲಿ ರೂಪಾಂತರ ಇಲ್ಲವಾದ್ದರಿಂದ ಎಮೆಟಬೋಲ ಎನ್ನುವರು.

ಆಪ್ಟೆರಿಗೋಟದಲ್ಲಿ ಸಣ್ಣಗಾತ್ರದ ಸೂಕ್ಷ್ಮರಚನೆಯ, ರೆಕ್ಕೆಯಿಲ್ಲದ ಕೀಟಗಳು ಇವೆ. ಇವುಗಳ ಉದ್ದ ಸು. ೦.೫ ರಿಂದ ೧೫ ಸೆಂಮೀ. ಇವು ಭೂವಾಸಿಗಳು. ಸಾಮಾನ್ಯವಾಗಿ ಕಲ್ಲು, ಒಣಎಲೆಗಳ ಕೆಳಗಿನ ಜೌಗುಜಾಗಗಳಲ್ಲಿ ವಾಸಿಸುತ್ತವೆ. ಕೊಳೆಯುತ್ತಿರುವ ಸಸ್ಯಾವಶೇಷಗಳೇ ಇವುಗಳ ಆಹಾರ. ಇವುಗಳ ಚರ್ಮ ಮೆದು; ಕೂದಲು ಅಥವ ಫಲಕಗಳಿಂದ ಕೂಡಿದೆ. ಬಾಯಿ ಭಾಗಗಳು ಕಡಿದು ಅಗಿಯುವಂತವು. ಕೆಲವು ಜಾತಿಯ ಕೀಟಗಳಲ್ಲಿ ಚುಚ್ಚಿ ಹೀರುವ ವದನಾಂಗಗಳಿವೆ.

ಪ್ರೊಟುರನ್

ಎಲ್ಲಾ ಆಪ್ಟೆರಿಗೋಟಗಳಲ್ಲಿಯೂ ಉದರ ಭಾಗದ ತಳದಲ್ಲಿ ಫಲಕದಂಥ ಕಾಲುಗಳಿವೆ. ಉದರ ಭಾಗದ ಕಾಲುಗಳ ಅವಶೇಷಗಳೆಂದು ಇವುಗಳನ್ನು ಪರಿಗಣಿಸಲಾಗಿದೆ. ಈ ಫಲಕಗಳ ಹಿಂದಿನ ಅಂಚಿನಲ್ಲಿ ಒಂದೊಂದು ಚುಚ್ಚು ಸೂಚಿ (ಸ್ಟೈಲ್ಸ್) ಇದೆ.

ಆಪ್ಟೆರಿಗೋಟಾ ಕೀಟಗಳನ್ನು ನಾಲ್ಕು ಗಣಗಳನ್ನಾಗಿ ವಿಂಗಡಿಸಲಾಗಿದೆ. ಪ್ರೊಟೂರ, ಕೊಲೆಂಬೊಲ, ಥೈಸನ್ಯೂರ ಮತ್ತು ಡೆಪ್ಲೂರ.

ಪ್ರೊಟೂರ ಗಣದ ಕೀಟಗಳು ಚಿಕ್ಕವು. ಬಣ್ಣ ಹಳದಿ ಮತ್ತು ಬೂದು. ಕುಡಿ ಮೀಸೆಗಳಿಲ್ಲ. ಬಾಯಿ ತಲೆಯ ಮುಂಭಾಗದಲ್ಲಿದೆ. ದೇಹವು ೧೨ ಖಂಡಗಳಿಂದಾಗಿದ್ದು, ಉಂಗುರದಂಥ ರಚನೆ ಉದರದಲ್ಲಿ ಇವೆ. ೩ ಜೊತೆ ಕಾಲುಗಳಿವೆ. ಕೊಳಕು ವಸ್ತುಗಳ ಕೆಳಗಿನ ಮಣ್ಣಿನಲ್ಲಿ ಇವುಗಳ ವಾಸ. ಕೆಲವು ವೇಳೆ ಮರದ ತೊಗಟೆ ಕೆಳಗೆ ವಾಸಿಸುತ್ತವೆ. ಉದಾ: ಟುರನ್ಸ್.

ಕೊಲೆಂಬೊಲ: ಭೂವಾಸಿ ಕೀಟಗಳು. ಕುಡಿ ಮೀಸೆ ಇವೆ. ಉದರದ ತುದಿಯಲ್ಲಿ ಸ್ಪ್ರಿಂಗ್‌ನಂತಹ ಜಿಗಿಬಾಲ (ಉದ್ದ ೧–೫ ಮಿಮೀ) ಇದೆ. ವಾಸ ಕೊಳೆಯುತ್ತಿರುವ ಸಸ್ಯಗಳಡಿ, ತೊಗಟೆಗಳ ಕೆಳಗೆ ಮತ್ತು ಇರುವೆ ಗೂಡುಗಳಲ್ಲಿ. ಬಾಯಿ ತಲೆ ಮುಂಭಾಗದಲ್ಲಿದೆ.



ಸ್ಪ್ರಿಂಗ್ ಟೈಲ್

ಉದರದಲ್ಲಿ ೬ ಖಂಡಗಳಿವೆ. ಮೊದಲನೆಯ ಖಂಡದ ಮೇಲೆ ಮಧ್ಯದ ಉಪಾಂಗಗಳಿವೆ. ೩ನೆಯ ಖಂಡದ ಮೇಲೆ ಮಾರ್ಪಟ್ಟ ಚಿಕ್ಕ ಉಪಾಂಗಗಳಿವೆ. ಉಸಿರಾಡಲು ಶ್ವಾಸನಾಳಗಳಿವೆ. ಈ ಕೀಟಗಳು ಸಸ್ಯ ಮತ್ತು ಮಾಂಸಹಾರಿಗಳು. ದೇಹದ ಬಣ್ಣ ಕಪ್ಪು, ಬೂದು, ನೀಲಿ. ಹೆಣ್ಣು ಗಂಡುಗಳು ದೇಹಾಕೃತಿಯಲ್ಲಿ ಒಂದೇ ತರಹ ಇವೆ. ಉದಾ: ಕೊಲೆಂಬೊಲ.



ಲೆಪಿಸ್ಮ

ಥೈಸನೂರ : ಕೊಳೆತ ಎಲೆ, ಮರದ ತೊಗಟೆಗಳ ಕೆಳಗೆ, ಕಲ್ಲುಗಳ ಕೆಳಗೆ, ಮಣ್ಣಿನಲ್ಲಿ, ಇರುವೆ, ಗೆದ್ದಲು ಗೂಡುಗಳಲ್ಲಿ ಈ ಕೀಟಗಳ ವಾಸ, ಕುಡಿಮೀಸೆ ಇವೆ. ಉದರದಲ್ಲಿ ೧೦–೧೧ ಖಂಡಗಳು ಇವೆ. ಕೆಳಗಡೆಯ ಉಪಾಂಗಗಳು ಜೊತೆಯಾಗಿವೆ. ಉದರದ ತುದಿಯಲ್ಲಿ ಬಿರುಗೂದಲು (ಬ್ರಿಸಲ್ ಟೈಲ್ಸ್) ಇದೆ. ಶ್ವಾಸನಾಳವ್ಯೂಹ ನಾಲ್ಕು ಜೊತೆ ಶ್ವಾಸರಂಧ್ರಗಳನ್ನು ಹೊಂದಿದೆ. ಕೊಳೆತ ಸಸ್ಯ, ಪುಸ್ತಕಗಳಿಗೆ ಲೇಪಿಸಿದ ಗಂಜಿ ಇವುಗಳ ಆಹಾರ. ಕೆಲವು ಪ್ರಭೇದದ ಕೀಟಗಳು ಮಾಂಸಾಹಾರಿಗಳು. ಉದಾ: ಲೆಪಿಸ್ಮ.

ಡೈಪ್ಲೂರ : ಹಲವಾರು ಖಂಡಗಳಿಂದ ಕೂಡಿದ ಕುಡಿಮೀಸೆಗಳಿವೆ. ಬಾಯಿಯ ಒಂದು ಭಾಗ ತಲೆಯಲ್ಲಿ ಹುದುಗಿದೆ. ಕುರುಡು. ೧೧ ಖಂಡಗಳಿರುವ ಉದರ. ಉದರದ ತುದಿಯಲ್ಲಿ ಚಿಮಟದಂಥ ಎರಡು ಉದ್ದನೆಯ ರಚನೆಗಳು. ಉದಾ: ಡೈಪ್ಲೊರನ್ಸ್. (ಪಿ.ಎಂ.)

**ಆಪ್ಲಾಕೋಫೋರ:** ಮೃದ್ವಂಗಿಗಳ ವಂಶದ ಆಂಫಿನ್ಯೂರ ವರ್ಗದ ಸೊಲೆನೊಗ್ಯಾಸ್ಟರ್‌ಗಳೆಂದು ಪ್ರಚಲಿತವಿರುವ ಒಂದು ಗಣ. ಕೆಲವರು ಇದನ್ನು ಪ್ರತ್ಯೇಕ ವರ್ಗವನ್ನಾಗಿ ಪರಿಗಣಿಸಿದ್ದಾರೆ. ಈ ಗುಂಪಿನಲ್ಲಿ ತೀರಾ ಸರಳವಾದ ಕಡಲ ಮೃದ್ವಂಗಿಗಳಿವೆ. ದೇಹ ನೀಳವಾಗಿದ್ದು ಸಮಮಿತಿಯಲ್ಲಿದೆ. ಹುಳುವಿನಂತಿರುವ ದೇಹವನ್ನು ಕ್ಯುಟಿಕಲ್ ಆವರಿಸಿದೆ. ಕ್ಯಾಲ್ಕೇರಿಯಾಯುಕ್ತ ಸೂಚ್ಯಂಗಗಳಿವೆ. ನಿರ್ದಿಷ್ಟವಾದ ಶಿರ, ಪಾದ ಮತ್ತು ಚಿಪ್ಪುಗಳು ಇವುಗಳಲ್ಲಿಲ್ಲ. ಅಧೋಭಾಗದಲ್ಲಿರುವ ಹಳ್ಳದ ಮಧ್ಯದ ಏಣು ಪಾದವನ್ನು ಸ್ವಲ್ಪಮಟ್ಟಿಗೆ ಪ್ರತಿನಿಧಿಸುತ್ತದೆ. ಗೌಸು ಸಾಕಷ್ಟು ವಿಸ್ತಾರವಾಗಿದೆ. ಬಾಯಿ ಮತ್ತು ಗುದದ್ವಾರಗಳು ಪರಸ್ಪರ ಎರಡು ಕೊನೆಗಳಲ್ಲಿವೆ. ಪಶ್ಚದ ಗುದದ್ವಾರವು ಪ್ರಾಯಶಃ ಗೌಸಿನ ಕೋಣೆಯನ್ನು ಪ್ರತಿನಿಧಿಸುತ್ತದೆ. ಕರುಳು ಸುರುಳಿಗೊಂಡಿಲ್ಲ. ರ್‍ಯಾಡುಲಾವಿದೆ. ವೃಕ್ಕಗಳು ಇಲ್ಲ. ರಕ್ತಪರಿಚಲನಾ ಮಂಡಲವು ಕ್ಷೀಣಗೊಂಡಿದೆ. ಆದಿಮವಾದ ನರವಂಡಲದಲ್ಲಿ ಎರಡು ಪೀಡಲ್ ಮತ್ತು ಎರಡು ಪ್ಲೂರಲ್ ನರಹುರಿಗಳಿವೆ. ಇವು ಮುಂಭಾಗದಲ್ಲಿರುವ ಅನ್ನನಾಳದ ನರ ಉಂಗುರದೊಂದಿಗೆ ಸಬಂಧ ಪಡೆದಿವೆ. ಸೆರೆಬ್ರಲ್ ನರಮುಡಿ ಒಂಟಿಯಾಗಿರಬಹುದು ಅಥವಾ ಜೋಡಿಯಾಗಿರಬಹುದು. ಒಂದು ಜೊತೆ ದೇಹಾಂತರಾವಕಾಶ ನಳಿಕೆಗಳು ಜನನಾಂಗ ನಳಿಕೆಗಳಾಗಿ ಮಾರ್ಪಟ್ಟು ಕರುಳಿನ ಪಶ್ಚಕ್ಕೆ ತೆರೆಯುತ್ತವೆ ಅಥವಾ ಮುಕ್ತವಾಗಿ ಪಶ್ಚದಲ್ಲಿ ತೆರೆಯಬಹುದು. ಕಿವಿರುಗಳಿರಬಹುದು ಅಥವಾ ಇಲ್ಲದಿರಬಹುದು.

ಇವು ವಲಯವಂತಗಳ ಅನೇಕ ಲಕ್ಷಣಗಳನ್ನು ಪಡೆದಿದ್ದರೂ ಅವುಗಳಿಂದ ಭಿನ್ನವಾಗಿವೆ. ವಲಯವಂತಗಳಂತೆ ಖಂಡಜೋಡಣೆ ಇಲ್ಲ. ಪೆರಿಕಾರ್ಡಿಯ, ಪ್ರಜನನಾಂಗದ ಅವಕಾಶ ಮತ್ತು ವೃಕ್ಕನ ಅವಕಾಶಗಳಲ್ಲಿ ಮೃದ್ವಂಗಿಗಳನ್ನು ಹೋಲುತ್ತವೆ. ರ್‍ಯಾಡುಲಾವಿದೆ ಮತ್ತು ಯಕೃತ್ತು ಇತರ ಮೃದ್ವಂಗಿಗಳಂತಿದೆ. ಬಾಯಿ, ಗಂಟಲು, ಕುಹರ ಅನಂತರ ಜಠರಕ್ಕೆ ನೇರವಾಗಿ ತೆರೆಯುತ್ತದೆ. ಅನಾವೃತ ರಕ್ತಪರಿಚಲನಾ ಮಂಡಲವಿದ್ದರೂ ಹೀಮೊಗ್ಲೋಬಿನ್ ಪಡೆದ ಕೋಶಗಳಿರಬಹುದು. ನಿಯೊಮೆನಿಯೊಯ್ಡಿಯ (ಉದಾ: ಪ್ರೊನಿಯೊಮೇನಿಯ,

ಲೆಪಿಡೊಮೇನಿಯ) ಮತ್ತು ಕೀಟೋಡರ್ಮಟಾಯ್ಡಿಯ (ಉದಾ: ಕೀಟೊಡರ್ಮ, ಪ್ರೊಕೀಟೊಡರ್ಮ) ಈ ಗಣದ ಎರಡು ಉಪಗಣಗಳು.

ಪಾಲಿಪ್ಲಾಕೋಫೋರಾದ ಕ್ರಿಪ್ಟೊಪ್ಲಾಕ್ಸ್ ತನ್ನ ಚಿಪ್ಪು ಕಳೆದುಕೊಂಡಿರುವುದು ಆಪ್ಲಾಕೋಫೋರಾದ ಉಗಮಕ್ಕೆ ಆಧಾರವನ್ನು ನೀಡುತ್ತದೆ. (ಬಿ.ಕೆ.ಜೆ.)

**ಆಮೆ:** ಸರೀಸೃಪಗಳ ವರ್ಗಕ್ಕೆ ಸೇರಿದ ಅನಾಪ್ಸಿಡ ಉಪವರ್ಗದ ಕೀಲೋನಿಯ ಗಣದ ಪ್ರಾಣಿ. ಇಂಗ್ಲಿಷಿನಲ್ಲಿ ಟಾರ್ಟಾಯಿಸ್, ಟರ್ಟಲ್, ಟೆರ್ರಾಪಿನ್ ಎಂಬ ಹೆಸರುಗಳಿವೆ; ಸಂಸ್ಕೃತದಲ್ಲಿ ಕೂರ್ಮ. ಮೊದಲನೆಯ ಪದ ಟಾರ್ಟಸ್ ಎಂದರೆ ಫ್ರೆಂಚ್ ಭಾಷೆಯಲ್ಲಿ ತಿರುಚಿದ್ದು ಎಂದರ್ಥ. ಈ ಪ್ರಾಣಿಯ ಕಾಲುಗಳು ವಿಚಿತ್ರವಾಗಿ ಬಗ್ಗಿರುವುದರಿಂದ ಈ ಹೆಸರು ಅನ್ವಯಿಸುತ್ತದೆ. ಟರ್ಟಲ್ ಎಂಬುದು ಈ ಪದದ ಇಂಗ್ಲಿಷ್ ಸಮಾನಾರ್ಥಕ. ಟೆರ್ರಾಪಿನ್ ಎಂಬುದು ೧೬ನೆಯ ಶತಮಾನದ ನಾವಿಕರು ಉಷ್ಣವಲಯದ, ಅದರಲ್ಲೂ ಅಮೆರಿಕಾ ದೇಶದ ಸೀ ನೀರಿನ ಆಮೆಗಳಿಗಿಟ್ಟ ಹೆಸರು. ಟಾರ್ಟಾಯಿಸ್ ಎಂಬ ಹೆಸರು ಭೂಚರ ಆಮೆಗಳಿಗೂ, ಟರ್ಟಲ್ ಎಂಬುದು ಸಮುದ್ರದಲ್ಲಿರುವ ಅಥವಾ ಹೆಚ್ಚು ಕಾಲವನ್ನು ಸೀನೀರಿನಲ್ಲಿ ಕಳೆಯುವ ಆಮೆಗಳಿಗೂ ಅನ್ವಯಿಸುತ್ತವೆ. ಇವು ಹಲ್ಲಿಲ್ಲದ ಸರೀಸೃಪಗಳು. ಚೆನ್ನಾಗಿ ಬೆಳೆದಿರುವ ಕಾಲುಗಳೂ, ಮೂಳೆಯ ಹಲಗೆಗಳಿಂದ ನಿರ್ಮಿತವಾದ ಬೆನ್ನಿನ ಮತ್ತು ಹೊಟ್ಟೆಯ ಕಡೆ ಚಿಪ್ಪುಗಳೂ, ದೊಡ್ಡದಾದ ಮತ್ತು ಅಲುಗಾಡದಂತೆ ಕುಳಿತಿರುವ ಕ್ವಾಡ್ರೇಟ್ ಮೂಳೆಯೂ ಇವೆ. ಗುದದ್ವಾರ ಉದ್ದನಾಗಿದೆ. ಮಿಥುನಾಂಗ ದ್ವಂದ್ವವಾಗಿಲ್ಲ.

ಇಡೀ ಚಿಪ್ಪು ಬೆನ್ನುಕಡೆ ಉಬ್ಬಿದ ಕ್ಯಾರಾಪೇಸ್ ಮತ್ತು ಹೊಟ್ಟೆಕಡೆ ಚಪ್ಪಟೆಯಾದ ಪ್ಲಾಸ್ಟ್ರಾನ್‌ನಿಂದ ಕೂಡಿದೆ. ಕ್ಯಾರಾಪೇಸ್ (ಸ್ಪಾರ್ಗಿಸ್‌ನಲ್ಲಿ ಹೊರತು) ಕ್ರಮವಾದ ಪಂಕ್ತಿಗಳಾಗಿ ಜೋಡಿಸಲ್ಪಟ್ಟ ಚರ್ಮದಲ್ಲಿನ ಎಲುಬುಗಳಿಂದ ಮಾಡಲ್ಪಟ್ಟಿದೆ. ಅಸ್ಥಿಮಯ ಚಿಪ್ಪು, ದೊಡ್ಡ ದೊಡ್ಡ ತುಂಡುಗಳಾಗಿ ವಿಭಜಿಸಲ್ಪಟ್ಟ ಗಟ್ಟಿಯಾದ ಪಟಲಗಳಿಂದ ಆವರಿಸಲ್ಪಟ್ಟಿದೆ. ಇದೇ ಆಮೆಯ ಚಿಪ್ಪು. ಕೊಂಬಿನ ಈ ಪಟಲಗಳು ಕೆಳಗಿರುವ ಎಲುಬುಗಳಿಗೆ ಸಂಖ್ಯೆಯಲ್ಲಾಗಲೀ ವಿಸ್ತಾರದಲ್ಲಾಗಲೀ ಹೊಂದಿಕೊಂಡಿಲ್ಲ. ಆದರೂ ಜೋಡಣೆಗಳಲ್ಲಿ ಕೊಂಚ ಮಟ್ಟಿಗೆ ಹೋಲಿಕೆಯುಂಟು. ಒಂದು ಬೆನ್ನೆಲುಬಿನ ಸಾಲು, ಒಂದು ಜೋಡಿ ಪಕ್ಕೆಗಳ ಸಾಲು ಮತ್ತು ಒಂದು ಜೋಡಿ ಅಂಚಿನ ಸಾಲು–ಈ ರೀತಿ ಹೊಂದಿಕೊಂಡಿವೆ. ತಲೆ, ಕತ್ತು, ಬಾಲ ಮತ್ತು ಕಾಲುಗಳ ಚರ್ಮ ಮೆತ್ತಗೂ ನುಣುಪಾಗಿಯೂ ಇದೆ. ಪೊರೆಗಳು, ಗುಳ್ಳೆಗಳು, ಅಸ್ಥಿಮಯ ಕೇಂದ್ರಗಳೂ ಇರುತ್ತವೆ.

ಕೀಲೋನಿಯಾಗಳಲ್ಲಿ ಸುಮಾರು ೨೦೦ ಪ್ರಭೇದಗಳಿವೆ. ಅವುಗಳಲ್ಲಿ ಸೀ ನೀರಿನ ಪ್ರಾಣಿಗಳೇ ಹೆಚ್ಚು. ಉಷ್ಣವಲಯದ ತೀರವಿರುವ ಪ್ರದೇಶಗಳಲ್ಲಿ ಇರುವುದು ಹೆಚ್ಚು. ಸಮುದ್ರದ ಆಮೆಗಳೂ ಉಷ್ಣವಲಯದಲ್ಲಿಯೇ ವಾಸಿಸುವುವು. ಬಂಜರು ಪ್ರದೇಶಗಳಲ್ಲೂ ಅತಿ ಎತ್ತರ ಜಾಗಗಳಲ್ಲೂ ಅವು ಬದುಕಲಾರವು.

ಆಮೆಗಳ ಜೀವನರೀತಿಯಲ್ಲಿ ವೈವಿಧ್ಯ ಕಂಡುಬರುತ್ತದೆ. ಕೆಲವು ಯಾವಾಗಲೂ ಭೂಮಿಯ ಮೇಲೆ ವಾಸಿಸುವುವು; ಅವುಗಳ ಕಾಲುಗಳು ಮೊಂಡಾಗಿದ್ದು ಮೊಂಡಾದ ನಖಗಳುಂಟು. ಇನ್ನು ಕೆಲವು ನೆಲದ ಮೇಲೂ ನೀರಿನಲ್ಲೂ ವಾಸಿಸಬಲ್ಲವು. ಮತ್ತೆ ಕೆಲವು ಯಾವಾಗಲೂ ನೀರಿನಲ್ಲಿ, ಸಿಹಿನೀರಿರುವ ಸಮುದ್ರದಲ್ಲಿ ಇರುವುವು. ಸಿಹಿ ನೀರಿನ ಪ್ರಾಣಿಗಳ ಕಾಲು ನಖಗಳನ್ನು ಹೊಂದಿದ್ದು ಪರೆಯಿಂದ ಕೂಡಿ ಜಾಲಪಾದದಂತಿವೆ.

ಕೀಲೋನಿಯಗಳು ಹಗಲಲ್ಲಿ ಸಂಚರಿಸುವುವು. ಮೊಟ್ಟೆಯಿಡುವಾಗ ರಾತ್ರಿಯೂ ಓಡಾಡುತ್ತವೆ. ಭೂಚರ ಆಮೆಗಳು ಮಂದಗಾಮಿಗಳು; ಸಾಮಾನ್ಯವಾಗಿ ನೀರಿನಲ್ಲಿ ವಾಸಮಾಡುವುವು. ಆಹಾರ ಹುಡುಕುವಾಗಲೂ ಶತ್ರುಗಳು ಬಂದಾಗಲೂ ಬಹಳ ವೇಗವಾಗಿ ಚಲಿಸಬಲ್ಲವು. ಕೀಲೋನಿಯಗಳು ಸಾಧಾರಣವಾಗಿ ಒಂದೇ ಪ್ರದೇಶದಲ್ಲಿ ವಾಸಿಸುವವು. ಸಮುದ್ರ ಪ್ರಾಣಿಗಳು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುವು. ಶೀತವಲಯದ ಪ್ರಾಣಿಗಳು ಶಿಶಿರ ನಿದ್ರೆ ಮಾಡುತ್ತವೆ.

ಭೂಚರ ಆಮೆಗಳೂ ಕೆಲವು ಸಿಹಿನೀರಿನ ಆಮೆಗಳೂ ಕೆಲವು ಸಮುದ್ರದ ಆಮೆಗಳೂ ಸಸ್ಯಾಹಾರಿಗಳು; ಮಿಕ್ಕವು ಮೀನು, ಕಪ್ಪೆ, ಮೃದ್ವಂಗಿ ಮತ್ತಿತರ ಜಲಚರ ಪ್ರಾಣಿಗಳನ್ನು ತಿನ್ನುತ್ತವೆ.

ಆಮೆ ಅಂಡಜ. ಮೊಟ್ಟೆಯ ಚಿಪ್ಪು ಗಟ್ಟಿಯಾಗಿದ್ದು ಕೊಂಚ ಉದ್ದನಾಗಿರುತ್ತದೆ; ಸಮುದ್ರದ ಆಮೆಯ ಮೊಟ್ಟೆ ದುಂಡಗಿರುತ್ತದೆ.

ಗರುಡ ಮೂಗಿನ (ಹಾಕ್ಸ್‌ಬಿಲ್) ಆಮೆ ಮತ್ತು ಅಮೆರಿಕಾದ ಟೆರ್ರಾಪಿನ್ (ವರ್ಣರಂಜಿತ) ಆಮೆ ಎರಡು ಉದಾಹರಣೆಗಳು.

ಗರುಡ ಮೂಗಿನ ಆಮೆಯ ವೈಜ್ಞಾನಿಕ ಹೆಸರು ಎರಿಟ್ಮೊಕೆಲೈಸ್ ಇಂಬ್ರಿಕೇಟಾ. ಕಾಲು ಎರಡು ನಖಗಳಿಂದ ಕೂಡಿದ್ದು ಬೆನ್ನು ಫಲಕಗಳು ನಾಡು ಹೆಂಚುಗಳ ಹಾಗೆ ಜೋಡಣೆಯಾಗಿವೆ. ಇದು ಮಾಂಸಾಹಾರಿ. ಈ ಪ್ರಾಣಿಯ ಚಿಪ್ಪು ಮಾರುಕಟ್ಟೆಯಲ್ಲಿ ಬಹಳ ಆಕರ್ಷಣೀಯ ವಸ್ತು.

ವರ್ಣರಂಜಿತ ಆಮೆ (ಅಮೇರಿಕದ ಟೆರ್ರಾಪಿನ್) ಯ ವೈಜ್ಞಾನಿಕ ಹೆಸರು ಕ್ರೈಸೆಮಿಸ್ ಪಿಕ್ಟಾ. ಚಿಪ್ಪು ಬಹಳ ನಯವಾಗಿದ್ದು ಸ್ವಲ್ಪ ಮಟ್ಟಿಗೆ ಚಪ್ಪಟೆಯಾಗಿದೆ. ಮೇಲ್ಮೈ ಬಣ್ಣ ಕಪ್ಪು ಮಿಶ್ರಿತ ಕಂದು. ಬೆನ್ನು ಮತ್ತು ಪಾರ್ಶ್ವಗಳಲ್ಲಿರುವ ಫಲಕಗಳ ಮೇಲೆ ಪೀತವರ್ಣದ ರೇಖೆಗಳನ್ನು ಕಾಣಬಹುದು. ೩–೪ ಕಪ್ಪು ಬಣ್ಣದ ಅಡ್ಡ ಪಟ್ಟಿಗಳು ಇವೆ. ದೇಹದ ಒಳಭಾಗಗಳೂ ಕೂಡ ವರ್ಣ ವಿನ್ಯಾಸವನ್ನು ಹೊಂದಿವೆ. ತಲೆಯಲ್ಲಿ ಕಣ್ಣಿನ ಹಿಂಬದಿಯಲ್ಲಿ ಎರಡು ಹಳದಿ ಬಣ್ಣದ ಚುಕ್ಕೆಗಳಿವೆ. (ಎಂ.ಡಿ.ಪಿ.)

**ಆಮೆಯ ಚಿಪ್ಪು:** ಆಮೆಚಿಪ್ಪುಗಳು ಸಮುದ್ರ ವಾಸಿ, ಕೀಲೋನಿ ಇಂಬ್ರಿಕೇಟಾ ಜಾತಿ ಆಮೆಯ ಬೆನ್ನಿನ ಮೇಲಿರುವ ಹಲಗೆಗಳು. ಇವು ಒಂದರ ಮೇಲೊಂದು ಹೊದಿಕೆಯಂತೆ ಇವೆ. ಪ್ರತಿ ಹಲಗೆಗಳು ೪೫x೩೩ ಸೆಂಮೀ ಇದ್ದು ೨೫೦ ಗ್ರಾಂ ತೂಕವಿರುತ್ತದೆ. ಹಲಗೆ ಗಟ್ಟಿ ಮತ್ತು ಪೆಡಸಾಗಿದ್ದು, ಬಹುಬಗೆಯ ಬಣ್ಣವಿನ್ಯಾಸ ಹೊಂದಿದೆ. ಆಮೆ ಚಿಪ್ಪು ಉಷ್ಣವಲಯದ ಎಲ್ಲ ಸಮುದ್ರಗಳಲ್ಲಿ ದೊರಕುತ್ತದೆ. ಸೆಲಿಬಿಸ್ ದ್ವೀಪದಿಂದ ನ್ಯೂಗಿನಿಯ ಸಾಗರದಲ್ಲಿ ಸಿಗುವ ಚಿಪ್ಪುಗಳು ಉತ್ಕೃಷ್ಟವಾದವು. ಚಿಪ್ಪುಗಳಿಂದ ಪೆಟ್ಟಿಗೆ, ನಶ್ಯದ ಡಬ್ಬಿ, ಕನ್ನಡಕದ ಕಟ್ಟು, ಬಾಚಣಿಗೆಯಂತಹ ಸಾಮಾನುಗಳನ್ನು ತಯಾರಿಸುತ್ತಾರೆ.

ಎರಿಮೋಕೆಲಿಸ್ ಜಾತಿಯ ಆಮೆ ಚಿಕ್ಕದಾಗಿದ್ದು, ಇದರ ಹೊರಚಿಪ್ಪು ಗಟ್ಟಿಯಾಗಿದ್ದು ನಾನಾ ಬಣ್ಣಗಳಿಂದಾಗಿದೆ. ಈ ಆಮೆಚಿಪ್ಪುಗಳು ಉತ್ತಮ ಗುಣಮಟ್ಟದಾಗಿರುವುದರಿಂದ, ಸೆಲಿಬಸ್, ನ್ಯೂಗಿನೀ, ವೆಸ್ಟ್ ಇಂಡೀಸ್ ಮತ್ತು ಬ್ರೆಜಿಲ್ ದೇಶಗಳಿಂದ ಬೇರೆ ದೇಶಗಳಿಗೆ ಆಮದಾಗುತ್ತವೆ. (ಎಂ.ಡಿ.ಪಿ)

**ಆಮ್ನಿಯಾನ್:** ಸರೀಸೃಪ, ಪಕ್ಷಿ ಮತ್ತು ಸ್ತನಿಗಳ ಭ್ರೂಣದ ಸುತ್ತಲು ಇರುವ ಪಟಲ ಸಂಚಿ. ಕಶೇರುಕಗಳಲ್ಲಿ ಮೀನು ಮತ್ತು ದ್ವಿಚರಿಗಳು ಸಂತಾನಾಭಿವೃದ್ಧಿ ಕಾರ್ಯಕ್ಕಾಗಿ ನೀರನ್ನು ಆಶ್ರಯಿಸುತ್ತವೆ. ಜಲದಿಂದ ನೆಲಕ್ಕೆ ಪಾದಾರ್ಪಣ ಮಾಡಿದ ದ್ವಿಚರಿಗಳು ನೀರಿಲ್ಲದೆ ನೆಲವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಬದುಕುವುದರಲ್ಲಿ ವಿಫಲವಾದವು. ಇದಕ್ಕೆ ಮುಖ್ಯ ಕಾರಣ ಅವುಗಳ ಸಂತಾನಾಭಿವೃದ್ಧಿ ಕ್ರಿಯೆ. ಮೀನು ಮತ್ತು ದ್ವಿಚರಿಗಳು ತಮ್ಮ ತತ್ತಿಗಳನ್ನು ನೀರಿನಲ್ಲಿಡುತ್ತವೆ. ತತ್ತಿಯ ಸುತ್ತಲಿನ ಈ ದ್ರವ ಮಾಧ್ಯಮವೇ ಸುಪ್ಪತ್ತಿಗೆಯ ತೊಟ್ಟಿಲಾಗಿ ಮುಕ್ತ ಬೆಳವಣಿಗೆ ನಡೆಸಲು ಅನುಕೂಲ ಮಾಡಿಕೊಡುತ್ತದೆ. ದ್ವಿಚರಿಗಳು ನೆಲ ಜೀವನಕ್ಕೆ ತಳಪಾಯ ಹಾಕಿದರೂ ನೆಲದ ಮೇಲೆ ವಾಸಿಸುವುದರಲ್ಲಿ ಯಶಸ್ಸುಗಳಿಸಿದ ಕೀರ್ತಿ ಸರೀಸೃಪಗಳಿಗೆ ಸೇರುತ್ತದೆ. ಇವುಗಳ ಯಶಸ್ಸಿಗೆ ಅವುಗಳ ಮೊಟ್ಟೆಗಳೇ ಕಾರಣ; ನೀರನ್ನು ಬಿಟ್ಟು ನೆಲದ ಮೇಲೆ ಅವು ಬೆಳೆಯ ಬಲ್ಲವು. ಬೆಳವಣಿಗೆಗೆ ಅಗತ್ಯವಾಗಿ ಬೇಕಾದ ದ್ರವಮಾಧ್ಯಮವನ್ನು ಭ್ರೂಣಕ್ಕೆ ಒದಗಿಸುತ್ತವೆ. ಆಮ್ನಿಯಾನ್ ಎಂಬ ಬಹಿರ್ ಭ್ರೂಣ ಪಟಲವು ಬೆಳವಣಿಗೆಗೆ ಅಗತ್ಯವಾದ ದ್ರವಮಾಧ್ಯಮವನ್ನು ತನ್ನಲ್ಲಡಗಿಸಿಕೊಂಡು ಭ್ರೂಣಕ್ಕೆ ಕೃತಕ ಈಜುಕೊಳವನ್ನೊದಗಿಸುತ್ತದೆ. ಈ ಆಮ್ನಿಯಾನ್ ಸರೀಸೃಪ, ಪಕ್ಷಿ ಮತ್ತು ಸ್ತನಿಗಳಲ್ಲಿರುವುದರಿಂದ, ಈ ಗುಂಪಿಗೆ ಆಮ್ನಿಯೋಟಗಳೆಂದು ಕೆಳದರ್ಜೆಯ ಕಶೇರುಕಗಳಾದ ಮೀನು ಮತ್ತು ದ್ವಿಚರಿಗಳಲ್ಲಿ ಆಮ್ನಿಯಾನ್ ಇಲ್ಲದಿರುವುದರಿಂದ ಅವಕ್ಕೆ ಅನಾಮ್ನಿಯೋಟಗಳೆಂದು ಕರೆಯಲಾಗಿದೆ.

ಮಾದರೀಯವಾಗಿ ಆಮ್ನಿಯಾನ ಭಿತ್ತಿಯು ರಕ್ತನಾಳ ರಹಿತ ಪಾರದರ್ಶಕ ಒರಟು ಪಟಲ. ಇದರಲ್ಲಿ ಎರಡು ಪದರಗಳಿವೆ; ಒಳಗಿನದು ಒಂದು ಕೋಶದಪ್ಪನಾದ ಪದರ, ಹೊರಗಿನ ಸಂಯೋಜಕ ಹಾಗು ವಿಶೇಷ ರೀತಿಯ ಮೃದು ಸ್ನಾಯು ಅಂಗಾಂಶದ ಹೊದಿಕೆ. ಆಮ್ನಿಯಾನ್ ಸಾಮಾನ್ಯವಾಗಿ ಎರಡುರೀತಿಯಲ್ಲಿ ರೂಪುಗೊಳ್ಳುತ್ತದೆ. ಮೊದಲನೆಯದಾಗಿ, ಸರೀಸೃಪ, ಪಕ್ಷಿ ಮತ್ತು ಕೆಲವು ಸ್ತನಿಗಳಲ್ಲಿ ಬಹಿರ್ ಭ್ರೂಣದ ಹೊರದರ್ಮವು ತನ್ನ ತಳಗಡೆ ನಿಕಟವಾಗಿರುವ ಮಧ್ಯದರ್ಮದೊಂದಿಗೆ ಭ್ರೂಣದೇಹದ ಮೇಲೆ ಮಡಿಕೆಗೊಳ್ಳುವ ಕ್ರಿಯೆಯಿಂದ ರೂಪುಗೊಳ್ಳುತ್ತದೆ. ಈ ಎರಡು ಭಿತ್ತಿಗಳನ್ನು (ಹೊರದರ್ಮ ಮತ್ತು ಮಧ್ಯದರ್ಮ) ಒಟ್ಟಾಗಿ ಸೊಮ್ಯಾಟೊಪ್ಲುರಾ ಎನ್ನಲಾಗಿದೆ. ಬೆಳವಣಿಗೆಯ ಕಾಲದಲ್ಲಿ ಕೋಳಿ ಮೊಟ್ಟೆಯಲ್ಲಿ ಮೂರನೆಯ ದಿನದ ಹೊತ್ತಿಗೆ ತಲೆಯ ಮುಂಭಾಗದಲ್ಲಿ ಸ್ಪಷ್ಟವಾದ ಅರ್ಧಚಂದ್ರಾಕಾರದ ಪ್ರೊಆಮ್ನಿಯಾನ್ ಎಂಬ ಭಾಗವನ್ನು ಗುರುತಿಸಬಹುದು. ಅಲ್ಲಿಂದ ಕೋಶಗಳು ಮೇಲಕ್ಕೆ ಉಬ್ಬಿಕೊಂಡು ಮಡಿಕೆಯಂತೆ ರೂಪುಗೊಳ್ಳುತ್ತವೆ. ಇದು ತಲೆಯ ಮಡಿಕೆ. ಇದು ಶಿರದ ಊರ್ಧ್ವಭಾಗದಲ್ಲಿ ಹಿಂದಕ್ಕೆ ಹೆಡೆಯೋಪಾದಿಯಲ್ಲಿ ಬಾಗುತ್ತದೆ. ಕ್ರಮೇಣವಾಗಿ ಭ್ರೂಣದ ಪಕ್ಕಗಳಿಂದಲೂ ಇದೇ ರೀತಿಯ ಮಡಿಕೆಗಳು ರೂಪುಗೊಳ್ಳುತ್ತವೆ ಇವು ಪಾರ್ಶ್ವ ಮಡಿಕೆಗಳು. ಇವು ಭ್ರೂಣದ ಮೇಲೆ ಕೂಡಿಕೊಂಡನಂತರ ಶಿರಮಡಿಕೆಗಳೊಡನೆ ಕೂಡಿಕೊಳ್ಳುತ್ತವೆ. ಕೊನೆಯಲ್ಲಿ ಭ್ರೂಣದ ಪಶ್ಚದಿಂದಲೂ ಮಡಿಕೆಯೊಂದು ರೂಪುಗೊಂಡು ಮೇಲಿನ ಮಡಿಕೆಗಳನ್ನು ಕೂಡಿಕೊಳ್ಳುತ್ತದೆ. ಹೀಗೆ ಶಿರಮಡಿಕೆ, ಪಾರ್ಶ್ವಮಡಿಕೆಗಳು ಮತ್ತು ಬಾಲದ ಮಡಿಕೆಗಳು

ಭ್ರೂಣದ ಬೆನ್ನಿನ ಮೇಲೆ ಪರಸ್ಪರ ಸಂಧಿಸಿ ಬೆರೆಯುತ್ತವೆ. ಬೆರೆತಾಗ ಎರಡು ಪ್ರತ್ಯೇಕ ರೀತಿಯ ಪಟಲಗಳು ರೂಪುಗೊಳ್ಳುತ್ತವೆ. ಭ್ರೂಣದ ಸುತ್ತಲೂ ಹೊರಗೆ ರೂಪುಗೊಳ್ಳುವ ಒಂದು ಪಟಲಕ್ಕೆ ಹೊರಗೆ ಹೊರದರ್ಮ ಮತ್ತು ಒಳಗೆ ಮಧ್ಯದರ್ಮವಿರುತ್ತದೆ. ಇದೇ ಕೋರಿಯಾನ್. ಕೆಲವು ಭ್ರೂಣಶಾಸ್ತ್ರಜ್ಞರು ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ ಈ ಪಟಲಕ್ಕೆ ಸಿರೋಸಾ ಎನ್ನುತ್ತಾರೆ. ಕೋರಿಯಾನ್ ಪದವನ್ನು ಸ್ತನಿಗಳಲ್ಲಿ ಮಾತ್ರ ಬಳಸುತ್ತಾರೆ. ಇದು ಒಳಗಿನ ಭ್ರೂಣಕ್ಕೆ ರಕ್ಷಣೆಯನ್ನು ನೀಡುತ್ತದೆ. ಒಂಬತ್ತನೆಯ ದಿನದ ಹೊತ್ತಿಗೆ ಅಲಾಂಟೋಯಿಸ್ ಜೊತೆಸೇರಿಕೊಂಡು ಕೋಳಿ ಬೆಳೆವಣಿಗೆಯಲ್ಲಿ ಕೋರಿಯೋ ಅಲಾಂಟೋಯಿಸ್ ಎಂಬ ರಚನೆ ಉಂಟಾಗುತ್ತದೆ. ಸ್ತನಿಗಳಲ್ಲಿ (ಮೊಲಗಳಲ್ಲಿ) ಈ ಕೋರಿಯಾನ್ ಗರ್ಭಕೋಶದ ಭಿತ್ತಿಗೆ ಅಂಟಿಕೊಂಡು ಪ್ಲಾಸೆಂಟ ರೂಪುಗೊಳ್ಳಲು ಕಾರಣವಾಗುತ್ತದೆ.

ತಲೆಯ, ಬಾಲದ ಮತ್ತು ಪಾರ್ಶ್ವ ಮಡಿಕೆಗಳು ಸಂಧಿಸಿ ಸೇರಿಕೊಂಡಾಗ ಒಳಗೆ ಭ್ರೂಣದ ಸುತ್ತಲೂ ಮತ್ತೊಂದು ಪಟಲ ರೂಪುಗೊಳ್ಳುತ್ತದೆ. ಇದಕ್ಕೆ ಹೊರಗೆ ಮಧ್ಯದರ್ಮ ಮತ್ತು ಒಳಗೆ ಹೊರದರ್ಮವಿರುತ್ತದೆ. ಇದೇ ಆಮ್ನಿಯಾನ್. ಭ್ರೂಣಕ್ಕೂ ಈ ಪಟಲದ ನಡುವೆ ಆಮ್ನಿಯಾಟಿಕ್ ಅವಕಾಶವಿದೆ. ಆರಂಭದಲ್ಲಿ ಈ ಅವಕಾಶವು ಕಿರಿದಾಗಿದ್ದು ಕ್ರಮೇಣವಾಗಿ ಹಿಗ್ಗುತ್ತ ಹೋಗುತ್ತದೆ. ಇದರಲ್ಲಿ ಆಮ್ನಿಯಾಟಿಕ್ ದ್ರವವಿರುತ್ತದೆ.

ಆಮ್ನಿಯಾನ್ ರೂಪುಗೊಳ್ಳುವಿಕೆಯ ಎರಡನೆಯ ವಿಧಾನದಲ್ಲಿ ಆಮ್ನಿಯನ್ ಕುಳಿಗೊಳ್ಳುವ (ಕ್ಯಾವಿಟೇಷನ್) ಪ್ರಕ್ರಿಯೆಯಿಂದ ರೂಪುಗೊಳ್ಳುತ್ತವೆ. ಜೀವ ಕೋಶಗಳ ರಾಶಿಯ ಮಧ್ಯೆ ಒಂದು ಕುಳಿ ಏರ್ಪಟ್ಟು ಕೋಶಗಳನ್ನು ಭ್ರೂಣೀಯ ಮತ್ತು ಬಹಿರ್ ಭ್ರೂಣೀಯ ಕೋಶಗಳನ್ನಾಗಿ ಪ್ರತ್ಯೇಕಿಸುತ್ತದೆ. ಭ್ರೂಣದೇಹವನ್ನು ರೂಪಿಸುವ ಕೋಶಗಳ ಮೇಲಿನ ಈ ಕುಳಿ ಅಥವಾ ಅವಕಾಶವು ಭ್ರೂಣದ ಮೇಲೆ ಹಾಗೂ ಸುತ್ತಲೂ ವಿಸ್ತರಿಸಿ ಹೊಕ್ಕಳ ಹುರಿಯ ಬೆಳೆಯುವ ಭಾಗದವರೆಗೂ ವಿಸ್ತರಿಸುತ್ತದೆ. ಈ ಎರಡನೆಯ ವಿಧಾನ ಕೆಲವು ಸ್ತನಿಗಳಲ್ಲಿ ಕಂಡು ಬರುತ್ತದೆ.

ಹೀಗೆ ಆಮ್ನಿಯಾನ್ ಒಂದು ಚೀಲದ ರೀತಿಯ ಹೊದಿಕೆಯಾಗಿ ಭ್ರೂಣವನ್ನು ಆವರಿಸುತ್ತದೆ. ಆಮ್ನಿಯಾಟಿಕ್ ಅವಕಾಶದಲ್ಲಿ ತುಂಬಿರುವ ಆಮ್ನಿಯಾಟಿಕ್ ದ್ರವವು ಭ್ರೂಣದ ಸುತ್ತಲೂ ದ್ರವ ಆವರಣವನ್ನು ಸೃಷ್ಟಿಸಿ ರಕ್ಷಣೆಯನ್ನು ಕೊಡುತ್ತದೆ. ಸಂಪೂರ್ಣವಾಗಿ ನೆಲದ ಮೇಲಾಗಲಿ ಅಥವಾ ತಾಯಿಯಗರ್ಭ ಕೋಶದಲ್ಲಾಗಲಿ ಭ್ರೂಣಕ್ಕೆ ಈ ದ್ರವ ಆವರಣವು ಸಾಕಷ್ಟು ಚಲನೆಗೆ ಅನುವುಮಾಡಿಕೊಡುತ್ತದೆ. ತನ್ನ ಆಕಾರವನ್ನು ಹಾಗು ಸ್ಥಾನವನ್ನು ಈ ಸೀಮಿತ ಆವರಣದಲ್ಲಿ ಬದಲಿಸಲು ಅವಕಾಶವಿದೆ. ಆಮ್ನಿಯಾನ್‌ನಲ್ಲಿರುವ ಮೃದು ಸ್ನಾಯು ತಂತುಗಳು ತಮ್ಮ ಸಂಕೋಚನದಿಂದ ಆಮ್ನಿಯಾಟಿಕ್ ದ್ರವವನ್ನು ಅಳ್ಳಾಡಿಸಿ ಮಂದಗತಿಯಲ್ಲಿ ಭ್ರೂಣವನ್ನು ಉಯ್ಯಾಲೆಯಂತೆ ತೂಗಾಡಿಸುತ್ತದೆ. ಭ್ರೂಣದ ಅಂಗಾಂಗಗಳು ಮುಕ್ತವಾಗಿ ಬೆಳೆಯಲು ಇದರಿಂದ ಅನುಕೂಲ. ಅಂಗಾಂಗಗಳು ಪರಸ್ಪರ ಅಂಟಿಕೊಳ್ಳುವುದರಿಂದ ಉಂಟಾಗಬಹುದಾದ ಅಂಗವಿಕಲತೆಯನ್ನು ಆಮ್ನಿಯಾನ್ ತಪ್ಪಿಸುತ್ತದೆ. ಜೊತೆಗೆ ಭ್ರೂಣಕ್ಕೆ ಒದಗಬಹುದಾದ ಯಾವುದೇ ರೀತಿಯ ಆಘಾತಗಳನ್ನು ಆಮ್ನಿಯಾನ್ ತಪ್ಪಿಸಿ ರಕ್ಷಣೆಯನ್ನು ನೀಡುತ್ತದೆ.

**ಆಮ್ನಿಯೋಟ:** ಸರೀಸೃಪ, ಪಕ್ಷಿ ಮತ್ತು ಸ್ತನಿಗಳನ್ನೊಳಗೊಂಡ ಒಂದು ಗುಂಪು. ಕಶೇರುಕಗಳನ್ನು ಆಮ್ನಿಯೋಟ ಮತ್ತು ಅನಾಮ್ನಿಯೋಟ ಎಂದು ಎರಡು ಮುಖ್ಯ ಗುಂಪುಗಳಾಗಿ ವಿಭಾಗಿಸಬಹುದು. ಆಮ್ನಿಯೋಟದ ಮುಖ್ಯ ಲಕ್ಷಣವೆಂದರೆ ಬೆಳೆವಣಿಗೆಯ ಕಾಲದಲ್ಲಿ ಭ್ರೂಣದ ಸುತ್ತಲೂ ಆಮ್ನಿಯಾನ್ ಎಂಬ ಪಟಲಸಂಚಿಯ ಬೆಳೆವಣಿಗೆ. ಇದರಿಂದಾಗಿ ಈ ಪಟಲಸಂಚಿ ಬೆಳೆಯುವ ಪ್ರಾಣಿಗಳೆಲ್ಲವೂ ಆಮ್ನಿಯೋಟ ಗುಂಪಿಗೆ ಸೇರುತ್ತವೆ. ಪಟಲಸಂಚಿ ಭ್ರೂಣವನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುತ್ತದೆ. ಇದರಲ್ಲಿ ಆಮ್ನಿಯಾಟಿಕ್ ದ್ರವವೂ ಇರುತ್ತದೆ. ಇದರಿಂದ ಬೆಳೆಯುತ್ತಿರುವ ಭ್ರೂಣಕ್ಕೆ ಹೊರಗಿನ ಒತ್ತಡಗಳಿಂದ ರಕ್ಷಣೆ ಒದಗುತ್ತದೆ. ಅನಾಮ್ನಿಯೋಟಗಳು ಪೂರ್ಣ ಜಲವಾಸಿಗಳಾಗಿರಲಿ ಇಲ್ಲದಿರಲಿ, ಬೆಳವಣಿಗೆಯ ಕಾಲದಲ್ಲಿಯಾದರೂ ನೀರಿನಲ್ಲಿರುತ್ತವೆ. ಆದುದರಿಂದ ನೀರೇ ಇವುಗಳು ಎದುರಿಸಬೇಕಾಗಬಹುದಾದ ಒತ್ತಡದ ಹೊಡೆತಗಳನ್ನು ನಿವಾರಿಸಿ ಮೊಟ್ಟೆಗಳನ್ನು ರಕ್ಷಿಸುತ್ತದೆ. ಆದರೆ ಆಮ್ನಿಯೋಟಗಳಲ್ಲಿ ಭ್ರೂಣದ ಬೆಳೆವಣಿಗೆ ನೀರಿನಿಂದ ಹೊರಗೆ ತತ್ತಿಯ ಚಿಪ್ಪಿನೊಳಗೆ (ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ) ಅಥವಾ ತಾಯಿಯ ದೇಹದೊಳಗೆ (ಸ್ತನಿಗಳಲ್ಲಿ) ನಡೆಯುತ್ತದೆ. ಆದ್ದರಿಂದ ಆಮ್ನಿಯಾನ್ ಸುತ್ತಲೂ ಇರುವ ದ್ರವಾವರಣ ಭ್ರೂಣವನ್ನು ರಕ್ಷಿಸುತ್ತದೆ. ಈ ಆಮ್ನಿಯಾನ್ ರಚನೆಯಲ್ಲಿ ಹೊರಗೆ ಮಧ್ಯ ದರ್ಮವೂ (ಮೀಸೊಡರ್ಮ್) ಮತ್ತು ಒಳಗೆ ಹೊರಚರ್ಮ (ಎಕ್ಟೊಡರ್ಮ್) ಇರುತ್ತವೆ. ಈ ಗುಂಪಿನ ಪ್ರಾಣಿಗಳ ಬೆಳೆವಣಿಗೆಯಲ್ಲಿ ಇದೊಂದೇ ಅಲ್ಲದೆ ಅಲ್ಲಂಟಾಯಿಸ್ ಮತ್ತು ಭಂಡಾರ ಸಂಚಿ ಎಂಬ ಪಟಲಗಳೂ ಬೆಳೆಯುತ್ತವೆ. ಆಮ್ನಿಯಾನನ್ನು ಕೆಲವು ಸಾರಿ ಭ್ರೂಣದ ಸ್ವಂತ ಈಜುಕೊಳ ಎಂದು ವಿವರಿಸುವುದೂ ಉಂಟು. ನೋಡಿ: ಆಮ್ನಿಯಾನ್.

(ಎಚ್.ಬಿ.ಡಿ.)

**ಆರ್‌ಎನ್‌ಎ:** ರೈಬೋಸ್ ನ್ಯೂಕ್ಲಿಯಿಕ್ ಆಮ್ಲ. ಕೋಶಕೇಂದ್ರದಲ್ಲಿ ಡಿಎನ್‌ಎ ಇಂದ ಟ್ರಾನ್ಸ್‌ಕ್ರಿಪ್‌ಷನ್ ಪ್ರಕ್ರಿಯೆಯಿಂದ ಉತ್ಪತ್ತಿಯಾಗಿ ಕೋಶದ್ರವ್ಯಕ್ಕೆ ರವಾನೆಯಾಗುವ ಜಟಿಲ ಕಾರ್ಬನಿಕ ರಾಸಾಯನಿಕ ಸಂಯುಕ್ತ. ಪ್ರೋಟೀನುಗಳ ಸಂಶ್ಲೇಷಣೆಯಲ್ಲಿ ಅತ್ಯವಶ್ಯ. ಕೆಲವು ವೈರಸ್ ಗಳಲ್ಲಿ (ಎಚ್.ಐ.ವಿ, ಟೊಬಾಕೊಮೊಸಾಯಿಕ್ ವೈರಸ್ ಇತ್ಯಾದಿ) ಆನುವಂಶೀಯ ವಸ್ತುವೂ ಹೌದು.

ಡಿಎನ್‌ಎ ಅಂತೆ ಆರ್‌ಎನ್‌ಎ ಕೂಡ ಪಾಲಿನ್ಯೂಕ್ಲಿಯೊಟೈಡ್ ಸರಪಣಿ. ಆದರೆ ಸಾಮಾನ್ಯವಾಗಿ ಒಂದೇ ಎಳೆಯಿರುತ್ತದೆ. ಪ್ರತಿ ನ್ಯೂಕ್ಲಿಯೊಟೈಡ್ ನಲ್ಲೂ ರೈಬೋಸ್ ಶರ್ಕರ, ನೈಟ್ರೋಜನ್ ಪ್ರತ್ಯಾಮ್ಲ ಮತ್ತು ಫಾಸ್ಫಾರಿಕ್ ಆಮ್ಲವಿರುತ್ತವೆ. ಅಡಿನಿನ್ (ಎ) ಮತ್ತು ಗುವಾನಿನ್ (ಜಿ)ಗಳು ಪ್ಯೂರಿನ್‌ಗಳು. ಸೈಟೋಸಿನ್ (ಸಿ) ಮತ್ತು ಯುರಾಸಿಲ್ (ಯು) ಪಿರಿಮಿಡಿನ್‌ಗಳು. ಡಿಎನ್‌ಎ ಯಲ್ಲಿರುವ ಥೈಮಿನ್ ಬದಲು ಆರ್‌ಎನ್‌ಎ ಯಲ್ಲಿ ಯುರಾಸಿಲ್ ಇರುತ್ತದೆ. ನ್ಯೂಕ್ಲಿಯೊಟೈಡ್ ಗಳ ಮಧ್ಯೆ ಡಿಎನ್‌ಎ ಯಲ್ಲಿರುವಂತೆ ಫಾಸ್ಫೊಡೈ ಎಸ್ಟರ್ ಬಂಧನಗಳಿರುತ್ತವೆ. ರೈಬೋಸ್ ಅಡಿನಿಲಿಕ್ ಆಮ್ಲ, ರೈಬೋಸ್ ಗ್ವಾನಿಲಿಕ್ ಆಮ್ಲ, ರೈಬೋಸ್ ಸೈಟಿಡಿಲಿಕ್ ಆಮ್ಲ ಮತ್ತು ರೈಬೋಸ್ ಯುರಿಡಿಲಿಕ್ ಆಮ್ಲ ಆರ್‌ಎನ್‌ಎ ಯಲ್ಲಿರುವ ನಾಲ್ಕು ಬಗೆಯ ನ್ಯೂಕ್ಲಿಯೊಟೈಡ್‌ಗಳು. ನ್ಯೂಕ್ಲಿಯೊಟೈಡ್‌ನಿಂದ ಫಾಸ್ಫೇಟ್ ಅನ್ನು ಪ್ರತ್ಯೇಕಿಸಿದಾಗ ನ್ಯೂಕ್ಲಿಯಸೈಡ್ ಉಳಿಯುತ್ತದೆ. ರೈಬೋಸ್ ಅಡಿನೋಸಿನ್, ರೈಬೋಸ್ ಗುವಾನೋಸಿನ್, ರೈಬೋಸ್ ಸೈಟಿಡಿನ್ ಮತ್ತು ರೈಬೋಸ್ ಯುರಿಡಿನ್, ಈ ನಾಲ್ಕು ನ್ಯೂಕ್ಲಿಯೊಸೈಡ್‌ಗಳು.

ಆರ್‌ಎನ್‌ಎ ರಚನೆ: ಆರ್‌ಎನ್‌ಎ ಒಂದೇ ಎಳೆಯ ಪಾಲಿನ್ಯೂಕ್ಲಿಯೊಟೈಡ್ ಸರಪಣಿ. ಆದರೆ ಕೆಲವು ಭಾಗಗಳಲ್ಲಿ ಮಡಿಚಿಕೊಳ್ಳುವುದರಿಂದ ಆ ಭಾಗದಲ್ಲಿ ಜೋಡಿಯಂತಿರಬಹುದು. ಇಂತಹ ಭಾಗಗಳಲ್ಲಿ ಪ್ರತ್ಯಾಮ್ಲಗಳ ನಡುವೆ ಹೈಡ್ರೋಜನ್ ಬಂಧಗಳೂ ರೂಪುಗೊಳ್ಳಬಹುದು. ಹೀಗೆ ಆದಾಗ ಆರ್‌ಎನ್‌ಎ ಯು ಮಿಥ್ಯ ಜೋಡಿ ಸುರುಳಿ ರಚನೆಯನ್ನು ತೋರಬಹುದು. ಡಿಎನ್‌ಎ ಗೆ ಹೋಲಿಸಿದರೆ ಆರ್‌ಎನ್‌ಎ ಯಲ್ಲಿ ಬಹಳ ಕಡಿಮೆ ನ್ಯೂಕ್ಲಿಯೊಟೈಡ್ ಗಳಿವೆ (3000–3500 ರವರೆಗೆ). ಫಾಸ್ಫೇಟ್ ಅಂಶವು ಒಂದು ನ್ಯೂಕ್ಲಿಯೊಟೈಡ್ ನ ಮೂರನೆಯ (3') ಕಾರ್ಬನ್ ಪರಮಾಣುವಿಗೂ ಮುಂದಿನ ನ್ಯೂಕ್ಲಿಯೊಟೈಡ್ ನ ಐದನೆಯ (5') ಕಾರ್ಬನ್ ಪರಮಾಣುವಿಗೂ ಬಂಧಿಸಿಕೊಂಡಿದೆ.

ಆರ್‌ಎನ್‌ಎ ಸಂಶ್ಲೇಷಣೆ: ಆರ್‌ಎನ್‌ಎ ಸಂಶ್ಲೇಷಣೆ ಡಿಎನ್‌ಎ ಯಿಂದಾಗುತ್ತದೆ. ಸಂಶ್ಲೇಷಣೆಯ ಸಮಯದಲ್ಲಿ ಜೋಡಿ ಎಳೆಗಳ ಡಿಎನ್‌ಎ ಸುರುಳಿ ಬಿಚ್ಚಿಕೊಳ್ಳುತ್ತದೆ. ಒಂದು ಎಳೆಯು ಮೂಲ ಅಚ್ಚಾಗಿ ಕಾರ್ಯನಿರ್ವಹಿಸುತ್ತದೆ. ಈ ಎಳೆಯಲ್ಲಿರುವ ನ್ಯೂಕ್ಲಿಯೊಟೈಡ್ ಗಳಿಗನುಗುಣವಾಗಿ ಅನುರೂಪವಾದ ಪ್ರತ್ಯಾಮ್ಲಗಳನ್ನು ಹೊಂದಿದ ನ್ಯೂಕ್ಲಿಯೊಟೈಡ್ ಗಳು ಜೋಡಣೆಗೊಳ್ಳುತ್ತವೆ. ನ್ಯೂಕ್ಲಿಯೊಟೈಡ್ ಗಳ ಈ ಪಾಲಿಮರೀಕರಣಕ್ಕೆ ಆರ್‌ಎನ್‌ಎ ಪಾಲಿಮರೇಸ್ ಕಿಣ್ವ ಅತ್ಯವಶ್ಯಕ. ಪಾಲಿಮರೀಕರಣ 5' – 3' ದಿಕ್ಕಿನಲ್ಲಿ ಆಗುತ್ತದೆ. 1950 ರ ದಶಕದ ಕೊನೆಯ ಭಾಗದಲ್ಲಿ ಜೆರಾರ್ಡ ಹುರವಿಟ್ಜ್, ಸ್ಯಾಮ್ಯುಯಲ್ ಬಿ.ವೀಸ್ ಮತ್ತು ಆಡ್ರೆ ಸ್ಟೀವನ್ಸ್ ಸ್ವತಂತ್ರವಾಗಿ ನಡೆಸಿದ ಸಂಶೋಧನೆ ಆರ್‌ಎನ್‌ಎ ಸಂಶ್ಲೇಷಣೆಯ ಪೂರ್ಣ ವಿವರವನ್ನು ತಿಳಿಯುವಲ್ಲಿ ಸಹಕಾರಿಯಾಯಿತು.

ಆರ್‌ಎನ್‌ಎ ಯಲ್ಲಿ ವಿಧಗಳು: ವಿಶಾಲವಾಗಿ ಆರ್‌ಎನ್‌ಎ ಯನ್ನು ನಾಲ್ಕು ವಿಧಗಳಾಗಿ ವರ್ಗೀಕರಿಸಬಹುದು –ಆನುವಂಶೀಯ ಆರ್‌ಎನ್‌ಎ (ಜೆನೆಟಿಕ್ ಆರ್‌ಎನ್‌ಎ), ಎಮ್‌ಆರ್‌ಎನ್‌ಎ, ಟಿಆರ್‌ಎನ್‌ಎ ಮತ್ತು ಆರ್‌ಆರ್‌ಎನ್‌ಎ.

1) ಆನುವಂಶೀಯ ಆರ್‌ಎನ್‌ಎ: ಇದು ಕೆಲವು ಜೀವಿಗಳಲ್ಲಿ ಆನುವಂಶೀಯ ವಸ್ತುವಾಗಿರುವ ಆರ್‌ಎನ್‌ಎ. ಏಡ್ಸ್ ರೋಗಕ್ಕೆ ಕಾರಣವಾದ ಎಚ್‌ಐವಿ, ಟಿಎಮ್‌ವಿ (ಟೊಬ್ಯಾಕೊ ಮೊಸಾಯಿಕ್ ವೈರಸ್), ಸಾರ್ಕೋಮ ವೈರಸ್ ಇತ್ಯಾದಿಯಲ್ಲಿ ಆನುವಂಶೀಯ ವಸ್ತುವಾಗಿ ಕಂಡು ಬರುತ್ತದೆ. ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಸಹಾಯದಿಂದ, ಈ ಜೀವಿಗಳಲ್ಲಿ ಡಿಎನ್‌ಎ ಅನ್ನು ಉತ್ಪಾದಿಸಿ ತನ್ಮೂಲಕ ತನ್ನ ಸ್ವಪ್ರತೀಕರಣದ ಸಾಮರ್ಥ್ಯವನ್ನು ಪಡೆದಿದೆ.

2. ಎಮ್‌ಆರ್‌ಎನ್‌ಎ (ಸಂದೇಶವಾಹಕ ಆರ್.ಎನ್.ಎ): ಡಿಎನ್‌ಎ ಯಲ್ಲಿನ ಪ್ರೋಟೀನು ಸಂಶ್ಲೇಷಣೆಗೆ ಬೇಕಾದ ಮಾಹಿತಿಯನ್ನು ತಳಿ ಸಂಕೇತ ಭಾಷೆಯ ರೂಪದಲ್ಲಿ ಹೊತ್ತ ಆರ್‌ಎನ್‌ಎ ವಿಧ. ಮೆಸೆಂಜರ್ ಆರ್‌ಎನ್‌ಎ ಎಂದು ಹೆಸರು. ಎಶ್ಚರೀಷಿಯ ಕೋಲಿ ಬ್ಯಾಕ್ಟೀರಿಯಾದಲ್ಲಿ ಇದನ್ನು ವೋಲ್ಕಿನ್ ಮೊದಲು ಕಂಡು ಹಿಡಿದಿದ್ದು.

ಎಮ್‌ಆರ್‌ಎನ್‌ಎ ಎಂಬ ನಾಮಕರಣ ಮಾಡಿದ್ದು ಜಾಕೊಬ್ ಮತ್ತು ಮೊನಾಡ್ (1961). ಏಕ ಎಳೆಯ ಅಣು. ಜೀವಕೋಶದಲ್ಲಿನ ಒಟ್ಟು ಆರ್‌ಎನ್‌ಎ ಅಂಶದಲ್ಲಿ ಶೇ.3–5 ಭಾಗ ಎಮ್.ಆರ್.ಎನ್.ಎ ಆಗಿರುತ್ತದೆ. ನ್ಯೂಕ್ಲಿಯೊಟೈಡ್‌ಗಳ ಸಂಖ್ಯೆಯಲ್ಲಿ ವ್ಯತ್ಯಾಸವಿರಬಹುದು. ಎಶ್ಚರೀಷಿಯ ಕೋಲಿಯಲ್ಲಿ 900–1500 ನ್ಯೂಕ್ಲಿಯೊಟೈಡ್‌ಗಳಿರುತ್ತವೆ. ಕೋಶಕೇಂದ್ರದಲ್ಲಿ ಸಂಶ್ಲೇಷಿತಗೊಂಡನಂತರ ಕೋಶದ್ರವ್ಯಕ್ಕೆ ರವಾನೆಯಾಗುತ್ತದೆ. ಪ್ರೊಕ್ಯಾರಿಯೋಟಗಳಲ್ಲಿ ಪಾಲಿಸಿಸ್ಟ್ರೊನಿಕ್ ಎಮ್‌ಆರ್‌ಎನ್‌ಎ ಇರುತ್ತದೆ. ಇದು ಒಂದಕ್ಕಿಂತ ಹೆಚ್ಚು ಪ್ರೋಟೀನುಗಳ ಸಂಶ್ಲೇಷಣೆಗೆ ಮಾಹಿತಿಯನ್ನು ಹೊಂದಿರುತ್ತದೆ. ಒಂದೇ ಪ್ರೋಟೀನ್ ನ ಸಂಶ್ಲೇಷಣೆಗೆ ಸಂಕೇತ ಭಾಷೆಯಿರುವ ಎಮ್‌ಆರ್‌ಎನ್‌ಎ ಅನ್ನು ಮಾನೊಸಿಸ್ಟ್ರೋನಿಕ್ ಎಮ್‌ಆರ್‌ಎನ್‌ಎ ಎನ್ನುತ್ತಾರೆ. ಇದು ಯುಕ್ಯಾರಿಯೋಟಗಳಲ್ಲಿರುತ್ತದೆ. ಎಮ್‌ಆರ್‌ಎನ್‌ಎ ಯ 5' ತುದಿಯಲ್ಲಿ ರೈಬೋಸೋಮಿಗೆ ಕೂಡಿಕೊಳ್ಳುವಲ್ಲಿ ಕ್ಯಾಪ್ ವಲಯವಿದೆ. ಇದಾದ ಅನಂತರ ಪ್ರೊಟೀನ್ ಸಂಶ್ಲೇಷಣೆ ಪ್ರಾರಂಭವಾಗುವುದಕ್ಕೆ ಬೇಕಾದ ಇನಿಷಿಯೇಟರ್ ಕೊಡಾನ್ ಇರುತ್ತದೆ. ಇದಾದ ಅನಂತರ ಅನುಕ್ರಮವಾಗಿ ತುದಿಯ ಕಡೆಗೆ ಪ್ರೊಟೀನ್ ಸಂಶ್ಲೇಷಣೆಗೆ ಬೇಕಾದ ಸಂಕೇತ ಭಾಷೆ, ಟರ್ಮಿನೇಟರ್ ಕೊಡಾನ್ ಮತ್ತು ಪಾಲಿ 'ಎ' (ಪಾಲಿ ಅಡಿನಿಲೇಟ್) ಬಾಲವಿರುತ್ತದೆ. ಆದರೆ ಪ್ರೋಕ್ಯಾರಿಯೋಟಗಳಲ್ಲಿ 3 ತುದಿಯಲ್ಲಿ ಈ ಪಾಲಿ 'ಎ' ಬಾಲವಿರುವುದಿಲ್ಲ. ಬಹಳಷ್ಟು ಎಮ್‌ಆರ್‌ಎನ್‌ಎ ಗಳ ಜೀವಾವಧಿ ಅತ್ಯಲ್ಪ. ಬ್ಯಾಕ್ಟೀರಿಯಾಗಳಲ್ಲಿ ಇದು ಐದು ನಿಮಿಷಕ್ಕಿಂತ ಕಡಿಮೆ.

ವರ್ಗಾವಣಾ ಆರ್‌ಎನ್‌ಎ (ಟ್ರಾನ್ಸ್ ಫರ್ ಆರ್‌ಎನ್‌ಎ): ಟಿ.ಆರ್‌ಎನ್‌ಎ ಎಂದೂ ಕರೆಯುತ್ತಾರೆ. ಮ್ಯಾಹ್ಲೋನ್ ಹೋಗ್‌ಲ್ಯಾಂಡ್ ಮತ್ತು ಪಾಲ್ ಜಾಮೆನಿಕ್ (1957) ಆವಿಷ್ಕರಿಸಿದ್ದು. ಆದರೆ ರಚನೆಯನ್ನು ಮೊದಲು ವಿವರಿಸಿದ್ದು ಆರ್.ಡಬ್ಲ್ಯು ಹಾಲಿ (1964). ಆತ ಯೀಸ್ಟ್ ನ ಅಲನೈಲ್ ಟಿ.ಆರ್‌ಎನ್‌ಎ ಯ ರಚನೆಯನ್ನು ವಿವರಿಸಿದ. ಜೀವಕೋಶದ ಒಟ್ಟು ಅರ್‌ಎನ್‌ಎ ಅಂಶದ ಶೇ 10–15 ರಷ್ಟು ಟಿಆರ್‌ಎನ್‌ಎ ಆಗಿರುತ್ತದೆ. ಇರುವ ಆರ್‌ಎನ್‌ಎ ಗಳಲ್ಲೆಲ್ಲಾ ಬಹಳ ಸಣ್ಣದು. ಸುಮಾರು 80 ರಿಂದ 100 ನ್ಯೂಕ್ಲಿಯೋಟೈಡ್ ಗಳಿರುತ್ತವೆ. ಡಿಎನ್‌ಎ ಯಿಂದ ಕೋಶಕೇಂದ್ರದಲ್ಲಿ ಸಂಶ್ಲೇಷಿತವಾಗಿ ಕೋಶದ್ರವ್ಯಕ್ಕೆ ರವಾನೆಯಾಗುತ್ತದೆ. ಪ್ರೊಟೀನ್ ಸಂಶ್ಲೇಷಣೆಯ ಸಮಯದಲ್ಲಿ ಟಿ.ಆರ್.ಎನ್.ಎ ನಿಗದಿತ ಅಮೈನೊ ಆಮ್ಲಗಳನ್ನು ರೈಬೋಸೋಮಿಗೆ ತರುತ್ತದೆ. ಪ್ರೊಟೀನ್ ಸಂಶ್ಲೇಷಣೆಗೆ ಬೇಕಾಗುವ ಪ್ರತಿಯೊಂದು ಅಮೈನೊ ಆಮ್ಲಕ್ಕೂ (20) ಕನಿಷ್ಠ ಒಂದು ಟಿಆರ್‌ಎನ್‌ಎ ಅಣುವಿರುತ್ತದೆ. ಕೆಲವು ಅಮೈನೊ ಆಮ್ಲಗಳಿಗೆ 2–6 ಟಿಅರ್‌ಎನ್‌ಎ ಗಳಿರುತ್ತವೆ.




ಟಿಆರ್‌ಎನ್‌ಎ ಯ ರಚನೆ (ಕ್ಲೋವರ್ ಎಲೆ ಮಾದರಿ)

ಆರ್‌ಡಬ್ಲ್ಯು ಹಾಲಿ ವಿವರಿಸಿದಂತೆ ಅಲನೈಲ್ ಟಿಆರ್‌ಎನ್‌ಎ ಯ ರಚನೆ ಹೀಗಿದೆ: ಹಾಲಿ ಪ್ರತಿಪಾದಿಸಿದ ಮಾದರಿಗೆ ಕ್ಲೋವರ್ ಎಲೆ ಮಾದರಿಯೆಂದು ಹೆಸರು. ಇದರಂತೆ ಟಿಆರ್‌ಎನ್‌ಎ ಮಡಿಕೆಯನ್ನು ಹೊಂದಿದೆ. ಮೂರು ಕುಣಿಕೆಗಳಿವೆ (ಲೂಪ್). 3' ತುದಿ ಸಿಸಿಎ ಪ್ರತ್ಯಾಮ್ಲಗಳಿಂದ ಕೊನೆಗೊಳ್ಳುತ್ತದೆ. ನಿಗದಿತ ಅಮೈನೊ ಆಮ್ಲ ಈ ಜಾಗದಲ್ಲಿಯೇ ಜೋಡಿಸಿಕೊಳ್ಳುವುದು. 5' ತುದಿಯಲ್ಲಿ ಜಿ ಪ್ರತ್ಯಾಮ್ಲವಿರುತ್ತದೆ. ಒಂದು ಕುಣಿಕೆಯಲ್ಲಿ ಅತಿ ಮುಖ್ಯವಾದ ಪ್ರತಿ ಸಂಕೇತ (ಆ್ಯಂಟಿ ಕೊಡಾನ್–ನೊಡಾಕ್) ಇದೆ. ಇದು ಎಮ್‌ಆರ್‌ಎನ್‌ಎ ಯಲ್ಲಿರುವ ಟ್ರಿಪ್ಲೆಟ್ ಕೊಡಾನ್ ಗೆ ಅನುರೂಪವಾದ ಮೂರು ಪ್ರತ್ಯಾಮ್ಲಗಳನ್ನು ಹೊಂದಿದೆ. ಈ ಭಾಗವೇ ಪ್ರೊಟೀನ್ ಸಂಶ್ಲೇಷಣೆಯ ಸಮಯದಲ್ಲಿ ಎಮ್‌ಆರ್‌ಎನ್‌ಎ ಗೆ ಬಂಧಿಸಿಕೊಳ್ಳುವುದು. ಇನ್ನೊಂದು ಸೂಡೊಯುರಿಡಿನ್ ಕುಣಿಕೆ. ಇದರಲ್ಲಿ ಕೆಲವು ಮಾರ್ಪಾಡು ಹೊಂದಿದ ಪ್ರತ್ಯಾಮ್ಲಗಳಿರುತ್ತವೆ. ಪ್ರೊಟೀನ್ ಸಂಶ್ಲೇಷಣೆಯ ಸಮಯದಲ್ಲಿ ರೈಬೋಸೋಮಿನೊಂದಿಗೆ ಬಂಧಿಸಿಕೊಳ್ಳುವುದರಲ್ಲಿ ಸಹಕಾರಿಯಾಗಿದೆ. ಮೂರನೆಯ ಕುಣಿಕೆಯನ್ನು ಡೈಹೈಡ್ರೊಯುರಿಡಿನ್ ಕುಣಿಕೆ ಎನ್ನಲಾಗುವುದು. ಇದು ಅಮೈನೊ ಆಮ್ಲವನ್ನು ಕ್ರಿಯಾಶೀಲಗೊಳಿಸುವ ಕಿಣ್ವಕ್ಕೆ ಬೇಕಾದ ಬಂಧನದ ವಲಯವಾಗಿದೆ.

3. ರೈಬೋಸೋಮಲ್ ಆರ್‌ಎನ್‌ಎ: ರೈಬೋಸೋಮಿನಲ್ಲಿರುತ್ತದೆ (ಆರ್‌ಆರ್‌ಎನ್‌ಎ). ಅದರಲ್ಲಿನ ಪ್ರೊಟೀನ್‌ಗಳ ಮಧ್ಯೆಯೂ ಅವುಗಳ ಸುತ್ತಲೂ ಸುರುಳಿ ಸುತ್ತಿಕೊಂಡಿರುತ್ತದೆ. ಸೆಡಿಮೆಂಟೇಷನ್ ಸಹಾಂಕ (ಕೊಎಫಿಷಿಯೆಂಟ್) ವನ್ನಾಧರಿಸಿ ಯುಕ್ಯಾರಿಯೋಟಗಳಲ್ಲಿ 28 ಎಸ್ 18ಎಸ್ 5.8 ಎಸ್ ಮತ್ತು 5 ಎಸ್ ಎಂಬ ನಾಲ್ಕು ಬಗೆಯ ಆರ್‌ಆರ್‌ಎನ್‌ಎ ಗಳಿವೆ. ಪ್ರೊಕ್ಯಾರಿಯೋಟಗಳಲ್ಲಿ 23 ಎಸ್ ಮತ್ತು 16 ಎಸ್ ಬಗೆಯವು ಮಾತ್ರ ಇವೆ. ಜೀವಕೋಶದ ಒಟ್ಟು ಆರ್‌ಎನ್‌ಎ ಅಂಶದಲ್ಲಿ ಶೇ 70–80 ಆರ್‌ಆರ್‌ಎನ್‌ಎ ಯಾಗಿರುತ್ತದೆ. ಪ್ರೊಟೀನ್ ಸಂಶ್ಲೇಷಣೆಯ ಸಂದರ್ಭದಲ್ಲಿ ಇದು ಟಿಆರ್‌ಎನ್‌ಎ ಮತ್ತು ಎಮ್‌ಆರ್‌ಎನ್‌ಎ ಗಳು ರೈಬೋಸೋಮುಗಳಿಗೆ ಬಂಧಿತವಾಗುವುದರಲ್ಲಿ ಸಹಕರಿಸುತ್ತದೆ.

4. ಆನುವಂಶೀಯ ಆರ್‌ಎನ್‌ಎ: ಆನುವಂಶೀಯ ವಸ್ತುವಾಗಿ ಕಾರ್ಯನಿರ್ವಹಿಸುವ ಆರ್‌ಎನ್‌ಎ ಯೇ ಆನುವಂಶೀಯ ಆರ್‌ಎನ್‌ಎ. ಕೆಲವು ವೈರಸ್ ಗಳಲ್ಲಿ ಕಂಡು ಬರುತ್ತದೆ. ಟಿಎಮ್‌ವಿ, ಎಚ್‌ಐವಿ, ಇನ್‌ಫ್ಲೂಯೆಂಜಾ ವೈರಸ್ ಮುಂತಾದವುಗಳಲ್ಲಿ ಒಂಟಿ ಎಳೆಯಾಗಿರುತ್ತದೆ. ರಿಯೊವೈರಸ್ ಮತ್ತು ವೂಂಡ್ ಟ್ಯೂಮರ್ ವೈರಸ್ ಗಳಲ್ಲಿ ಜೋಡಿ ಎಳೆಯ ರೂಪದಲ್ಲಿರುತ್ತದೆ. ವೈರಸ್ ಗಳಲ್ಲಿ ಇದು ಪ್ರೊಟೀನ್‌ನ ರಕ್ಷಾ ಕವಚ ಹೊಂದಿದೆ. ಆದರೆ ವೈರಾಯಿಡ್‌ಗಳಲ್ಲಿ ಒಂಟಿ ಎಳೆಯಾದ ಆರ್‌ಎನ್‌ಎ ಗೆ ರಕ್ಷಣಾ ಕವಚವಿರುವುದಿಲ್ಲ.

ಇವುಗಳಲ್ಲದೆ ವಿಜಾತೀಯ ಕೋಶಕೇಂದ್ರೀಯ ಆರ್‌ಎನ್‌ಎ (ಹೆಟರೊಜೀನಿಯಸ್ ನ್ಯೂಕ್ಲಿಯರ್ ಆರ್‌ಎನ್‌ಎ– ಎಚ್‌ಎನ್‌ಆರ್‌ಎನ್‌ಎ), ಸಣ್ಣ ಕೋಶಕೇಂದ್ರೀಯ ಆರ್‌ಎನ್‌ಎ (ಸ್ಮಾಲ್ ನ್ಯೂಕ್ಲಿಯರ್ ಆರ್‌ಎನ್‌ಎ – ಎಸ್‌ಎನ್‌ಆರ್‌ಎನ್‌ಎ), ಸಣ್ಣ ಕೋಶದ್ರವೀಯ ಆರ್‌ಎನ್‌ಎ (ಸ್ಮಾಲ್ ಸೈಟೊಪ್ಲಾಸ್ಮಿಕ್ ಆರ್‌ಎನ್‌ಎ–ಎಸ್‌ಸಿಆರ್‌ಎನ್‌ಎ.) ಎಂಬ ಬಗೆಗಳೂ ಇವೆ.

ರಿವರ್ಸ್ ಟ್ರಾನ್ಸ್‌ಕ್ರಿಪ್‌ಷನ್: ಆರ್‌ಎನ್‌ಎ ಅಣುವು ಡಿಎನ್‌ಎ ಅನ್ನು ಅರ್‌ಎನ್‌ಎ ಪಾಲಿಮರೇಸ್ ಕಿಣ್ವದ ಸಹಾಯದಿಂದ ಸಂಶ್ಲೇಷಿಸುವುದೇ ರಿವರ್ಸ್ ಟ್ರಾನ್ಸ್ ಕ್ರಿಪ್‌ಷನ್. ಇದನ್ನು ಪ್ರತಿಪಾದಿಸಿದವರು ಟೆಮಿನ್ ಮತ್ತು ಬಾಲ್ಟಿಮೋರ್ (1970).

ಜೀವಿಗಳಲ್ಲಿ ಆರ್‌ಎನ್‌ಎ ಪಾತ್ರ: ಆರ್‌ಎನ್‌ಎ ಯ ಪ್ರಮುಖ ಕೆಲಸ ಪ್ರೊಟೀನ್ ಸಂಶ್ಲೇಷಣೆ. ಡಿಎನ್‌ಎ ಯಲ್ಲಿರುವ ಮಾಹಿತಿಯು ಟ್ರಿಪ್ಲೆಟ್ ಕೊಡಾನ್‌ಗಳ (ತಳಿ ಸಂಕೇತ ಭಾಷೆ) ರೂಪದಲ್ಲಿ ಎಮ್‌ಆರ್‌ಎನ್‌ಎ ಗೆ ವರ್ಗಾವಣೆಯಾಗುತ್ತದೆ. ಟಿಆರ್‌ಎನ್‌ಎ ಮತ್ತು ಆರ್‌ಆರ್‌ಎನ್‌ಎ ಗಳ ಸಹಾಯದಿಂದ ಈ ಸಂಕೇತ ಭಾಷೆಯು ಅಮೈನೊ ಆಮ್ಲ ಭಾಷೆಯಾಗಿ ಪರಿವರ್ತನೆ ಹೊಂದಿ ಪ್ರೊಟೀನ್ ಗಳ ಉತ್ಪಾದನೆಯಾಗುತ್ತದೆ. ಕೆಲವು ವೈರಸ್ ಗಳಲ್ಲಿ ಮತ್ತು ವೈರಾಯಿಡ್‌ಗಳಲ್ಲಿ ಆರ್‌ಎನ್‌ಎ ಯು ಆನುವಂಶೀಯ ವಸ್ತುವಾಗಿ ಕಾರ್ಯನಿರ್ವಹಿಸುತ್ತದೆ. ಇಷ್ಟಲ್ಲದೆ, ಕೆಲವು ಕಿಣ್ವಗಳು ಆರ್‌ಎನ್‌ಎ ಯುಕ್ತವಾಗಿದೆ. ರೈಬೊಜೈಮ್ ಮತ್ತು ರೈಬೊನ್ಯೂಕ್ಲಿಯೇಸ್ ಉದಾಹರಣೆಗಳು. ಇವು ಆರ್‌ಎನ್‌ಎ ಸಂಸ್ಕರಣೆಯಲ್ಲಿ (ಆರ್‌ಎನ್‌ಎ ಪ್ರಾಸೆಸಿಂಗ್) ಸಹಕರಿಸುತ್ತವೆ. ನೋಡಿ:ನ್ಯೂಕ್ಲಿಯಿಕ್ ಆಮ್ಲ. (ಸಿ.ಕೆ)

**ಆರ್‌ಎನ್‌ಎಏಸ್:** ರೈಬೋನ್ಯೂಕ್ಲಿಯೇಸ್ ಪ್ರೋಟೀನುಯುಕ್ತ ಕಿಣ್ವ (ಆರ್‌ಎನ್‌ಏಸ್), ಆರ್‌ಎನ್‌ಎಏಸ್, ಆರ್‌ಎನ್‌ಏಸ್ ಪರ್ಯಾಯ ಹೆಸರುಗಳು. ಇದು ಆರ್‌ಎನ್‌ಎ ಯನ್ನು ಜೀರ್ಣಿಸುವ ಶಕ್ತಿಯನ್ನು ಹೊಂದಿದೆ. ಪ್ರತಿ ಆರ್‌ಎನ್‌ಎ ಗೂ ಪ್ರತ್ಯೇಕವಾದ ರೈಬೋನ್ಯೂಕ್ಲಿಯೆಸ್ ಕಿಣ್ವ ಇದೆ. ಕೆಲವು ರೈಬೋನ್ಯೂಕ್ಲಿಯೇಸ್‌ಗಳು ನಿರ್ದಿಷ್ಟ ಸಾರಜನಕಯುಕ್ತ ಕ್ಷಾರಗಳನ್ನೇ ಆರ್‌ಎನ್‌ಎ ಸರಪಣಿಯಿಂದ ಬೇರ್ಪಡಿಸುತ್ತವೆ. ಉದಾ: ಪಿತ್ತಜನಕಾಂಗದ ಆರ್‌ಎನ್‌ಏಸ್ ಎಂಬುದು ಸಾಧಾರಣವಾಗಿ ಪಿರಮಿಡೀನ್ ಕ್ಷಾರಗಳನ್ನು ಬೇರ್ಪಡಿಸುತ್ತದೆ. ಆರ್‌ಎನ್‌ಎಸ್ ನಲ್ಲಿರುವ ಅಮೈನೋ ಆಮ್ಲದ ಸರಣಿ ಹಾಗೂ ನಿರ್ದಿಷ್ಟ ಅಂಕೆ ಸಂಖ್ಯೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ತಜ್ಞರು ವರದಿಸಿದ್ದಾರೆ. (ಎಸ್.ಎನ್.ಎಚ್.)

**ಆರ್‌ಎಚ್ ಘಟಕ:** ಮಾನವನ ರಕ್ತದಲ್ಲಿರುವ ಘಟಕ. ಲ್ಯಾಂಡಸ್ಟೇನರ ಮತ್ತು ಅವನ ಸಹೋದ್ಯೋಗಿಗಳು ಈ ಘಟಕದ ಆನುವಂಶೀಯತೆಯನ್ನು ಕಂಡು ಹಿಡಿದರು. ನ್ಯೂಯಾರ್ಕ್ ಪಟ್ಟಣದಲ್ಲಿ ಶೇ. 85 ಜನರ ಕೆಂಪುರಕ್ತಕಣಗಳು, ಮೊಲಗಳ ರಕ್ತದೊಂದಿಗೆ ರ್‍ಹೀಸಸ್ ಕೋತಿಗಳ ರಕ್ತವನ್ನು ಸೇರಿಸಿ (ಇಮ್ಯುನೈಸೇಷನ್) ತಯಾರಿಸಿದ ರಕ್ತವನ್ನು ಕೂಡಿಸಿದಾಗ, ಗುಂಪುಗೂಡುತ್ತವೆ ಎಂದು ಮೊಟ್ಟ ಮೊದಲು ಕಂಡು ಹಿಡಿಯಲಾಯಿತು. ಈ ಜನರ ರಕ್ತವನ್ನು ಆರ್‌ಎಚ್ ಧನಾತ್ಮಕ ಎಂದು ಕರೆದರು. ಈ ಗುಂಪು ಗೂಡುವಿಕೆಯು ಆಂಟಿಜಿನ್ ಮತ್ತು ಆಂಟಿಬಾಡಿಗಳ ನಡುವಿನ ಕ್ರಿಯೆಯಿಂದ ಉಂಟಾಗುತ್ತದೆ. ಈ ಆರ್‌ಎಚ್‌ಧನಾತ್ಮಕ ಪರಿಣಾಮವನ್ನುಂಟು ಮಾಡುವ ಆಂಟಿಜನ್‌ನನ್ನು ಆರ್‌ಎಚ್ ಘಟಕ ಎಂದೂ ಕರೆಯಲಾಯಿತು. ಈ ಘಟಕಗಳ ನಿಯಂತ್ರಣ ಆರ್ ಎಂಬ ಗುಣಾಣು (ಜೀನ್) ಮಾಡುತ್ತದೆ.

ಲೆವಿನ ಎಂಬ ವಿಜ್ಞಾನಿ ನವಜಾತ ಶಿಶುಗಳಲ್ಲಿ ಎರಿತ್ರೊಬ್ಲಾಸ್ಟೋಸಿಸ್ ಎಂಬ ರಕ್ತ ಹೀನತೆ ಕಂಡುಬರುವುದೆಂದು ಕಂಡುಹಿಡಿದ. ಇಂತಹ ರಕ್ತಹೀನತೆಯಿಂದ ಬಳಲುವ ಶಿಶುಗಳು ಆರ್‌ಎಚ್ ಧನಾತ್ಮಕವಾಗಿದ್ದು, ಅವುಗಳ ತಂದೆ ಆರ್‌ಎಚ್ ಧನಾತ್ಮಕವಾಗಿಯೂ, ತಾಯಿ ಆರ್‌ಎಚ್ ಋಣಾತ್ಮಕವಾಗಿ ಇರುತ್ತಾರೆ. ಆರ್‌ಎಚ್ ಋಣಾತ್ಮಕ ತಾಯಿಯ ಗರ್ಭದಲ್ಲಿ ಬೆಳೆಯುತ್ತಿರುವ ಆರ್‌ಎಚ್ ಧನಾತ್ಮಕ ಭ್ರೂಣವು ತಾಯಿಯ ರಕ್ತದಲ್ಲಿ ಆರ್‌ಎಚ್ ಆಂಟಿಬಾಡಿಗಳನ್ನು ನಿರ್ಮಿಸುತ್ತವೆ. ಪ್ರತಿ ಬಸಿರಿನಲ್ಲಿಯೂ ಉಂಟಾಗುವ ಈ ಪ್ರತಿಕಾಯಗಳು ಪ್ರತಿಯೊಂದು ಗರ್ಭದ ಅನಂತರವೂ ಹೆಚ್ಚುತ್ತ ಹೋಗುತ್ತದೆ. ಮೊದಲ ಮಗುವಿನ ಜನನದ ನಂತರದ ಗರ್ಭದಲ್ಲಿ ತಾಯಿಯ ರಕ್ತದಲ್ಲಿರುವ ಆಂಟಿಬಾಡಿಗಳನ್ನು ಇನ್ನೂ ಗರ್ಭದಲ್ಲಿಯೇ ಇರುವ ಮಗುವಿನ ಕೆಂಪುರಕ್ತಕಣಗಳಿಗೆ ಮಾರಕವಾಗಿ ರಕ್ತಹೀನತೆಯನ್ನುಂಟುಮಾಡುತ್ತದೆ. ಈ ಸ್ಥಿತಿ ಹೆಚ್ಚಾದಾಗ ಮಗು ಹುಟ್ಟಿದ ತಕ್ಷಣ ಸಾಯುತ್ತದೆ ಅಥವಾ ಗರ್ಭಪಾತವಾಗುತ್ತದೆ. ಕೆಲವು ದಂಪತಿಗಳಲ್ಲಿ ಸದಾ ಗರ್ಭಪಾತವಾಗಲು ಇದೇ ಕಾರಣ.

ಎರಿತ್ರೊಬ್ಲಾಸ್ಟೋಸಿಸ್ ಶಿಶುಗಳನ್ನು ಹೊಂದಿರುವ ತಾಯಿಯ ರಕ್ತಸಾರವನ್ನು ಆರ್‌ಎಚ್ ಧನಾತ್ಮಕ ಅಥವಾ ಋಣಾತ್ಮಕ ವ್ಯಕ್ತಿಗಳನ್ನು ಗುರುತಿಸಲು ಉಪಯೋಗಿಸಬಹುದು. ಈ ರೀತಿ ರಕ್ತಸಾರವನ್ನು ಉಪಯೋಗಿಸಿ ಬೇರೆ ಬೇರೆ ವಿಧದ ಆರ್‌ಎಚ್‌ಧನಾತ್ಮಕ ಮತ್ತು ಋಣಾತ್ಮಕ ವ್ಯಕ್ತಿಗಳಿರುವ ಬಗ್ಗೆ ಕಂಡು ಹಿಡಿಯಲಾಯಿತು. ಒಂದಕ್ಕಿಂತ ಹೆಚ್ಚು ಆರ್‌ಎಚ್‌ಆಂಟಿಜನ್ ಇರುವುದನ್ನೂ ಪ್ರತಿಯೊಂದಕ್ಕು ಬೇರೆ ಬೇರೆ ರಕ್ತಸಾರಗಳಿರುವುದನ್ನು ಕಂಡು ಹಿಡಿಯಾಲಾಯಿತು. ಆರ್‌ಎಚ್ ಧನಾತ್ಮಕ ಮಗುವಿನಿಂದ ಆರ್‌ಎಚ್ ಋಣಾತ್ಮಕ ಹೆಂಗಸಿನ ರಕ್ತದಲ್ಲಿ ಆರ್‌ಎಚ್ ಋಣಾತ್ಮಕ ಕೆಂಪುರಕ್ತಕಣಗಳನ್ನು ಗುಂಪುಗೊಳಿಸುವ ಶಕ್ತಿ ಇದೆ. ಗರ್ಭಪಾತದ ಆಯ್ಕೆ ಮಾಡಿ ಅದರಿಂದ ಎರಡು ರೀತಿಯ ಆಂಟಿಬಾಡಿ ಶೋಧಿಸಬಹುದು. ಅದರಲ್ಲಿ ಆರ್‌ಎಚ್ ಧನಾತ್ಮಕ ಕೆಂಪುಕಣಗಳನ್ನು ಗುಂಪುಗೊಳಿಸುವ ಆಂಟಿಬಾಡಿಯನ್ನೂ ಆಂಟಿ ಡಿ ಎಂದೂ ಕೆಲವೇ ಕೆಲವು ಋಣಾತ್ಮಕ ಕಣಗಳನ್ನು ಗುಂಪುಗೊಳಿಸುವ ಇನ್ನೊಂದು ಪ್ರತಿಕಾಯವನ್ನು ಆಂಟಿ C ಎಂದೂ ಕರೆಯುತ್ತಾರೆ. C ಪ್ರತಿಕಾಯಗಳಿಗೆ ನಿರ್ದಿಷ್ಟ ಪ್ರತಿಜನಕಗಳಿರುತ್ತವೆ. ಆದರೆ ಪ್ರತಿಕಾಯಗಳಿಗೆ ಪ್ರತಿಜನಕಗಳಿರುವುದಿಲ್ಲ. ಇದನ್ನು Cd ಎಂದೂ ಪ್ರತಿ c ರಕ್ತಸಾರದಿಂದ ಆರು ರೀತಿಯ ಆರ್‌ಎಚ್. ರಕ್ತದ ಗುಂಪುಗಳನ್ನು ಗುರುತಿಸಲಾಗಿದೆ. ಪಿತೃಗಳ ಹಾಗೂ ಮಕ್ಕಳ ರಕ್ತದ ಅಧ್ಯಯನದಿಂದ Cc ವ್ಯಕ್ತಿಗಳಲ್ಲಿ C ಅಲೀಲು ಭಿನ್ನಯುಗ್ಮ ಸ್ಥಿತಿಯಲ್ಲಿದ್ದು C ಪ್ರತಿಜನಕವನ್ನು, CC ವ್ಯಕ್ತಿಗಳು ಸಮಯುಗ್ಮ ಸ್ಥಿತಿಯಲ್ಲಿದ್ದು C ಪ್ರತಿಜನಕವನ್ನು cc ಸಮಯುಗ್ಮ ಸ್ಥಿತಿಯಲ್ಲಿರುವ ವ್ಯಕ್ತಿಗಳಲ್ಲಿ c ಪ್ರತಿಜನಕವನ್ನು ಹೊಂದಿರುತ್ತಾರೆ. A,B,O ರಕ್ತಗುಂಪಿನಂತೆ ಆರ್‌ಎಚ್‌ಗುಂಪಿನಲ್ಲಿ ಕೂಡಾ ಯಾವುದೇ ಗುಣಾಣುವಿನ ಪ್ರಬಲತೆಯಿಲ್ಲದಿರುವುದು ಕಂಡುಬರುತ್ತದೆ. d ಪ್ರತಿಜನಕವನ್ನು ಗುರುತಿಸುವ ಯಾವುದೇ ಪ್ರತಿರಕ್ತಸಾರ ಇಲ್ಲ. D ಧನಾತ್ಮಕ ವ್ಯಕ್ತಿಗಳು ಸಮ ಅಥವಾ ಭಿನ್ನಯುಗ್ಮ ಸ್ಥಿತಿಯಲ್ಲಿ ಅವುಗಳ ಗುಣಾಣುಗಳನ್ನು ಹೊಂದಿರುತ್ತಾರೆ. ಇಂಥವ್ಯಕ್ತಿಗಳ ಗುಣಾಣುಗಳನ್ನು ಆ ವ್ಯಕ್ತಿಗಳ ತಳಿಯನ್ನು ಅಧ್ಯಯನ ಮಾಡುವುದರಿಂದ ಗುರುತಿಸಬಹುದು. ಉದಾಹರಣೆಗೆ D ಧನಾತ್ಮಕ ವ್ಯಕ್ತಿಗಳು d ಋಣಾತ್ಮಕ ಮಗುವನ್ನು ಹೊಂದಿದ್ದರೆ ಧನಾತ್ಮಕ ವ್ಯಕ್ತಿಗಳಲ್ಲಿ ಗುಣಾಣುಗಳು Dd ಭಿನ್ನಯುಗ್ಮ ಸ್ಥಿತಿಯಲ್ಲಿರುತ್ತದೆ. (ಎಸ್.ಎನ್.ಎಚ್.)

**ಆರ್ಕಿಟೆರಿಜಿಯಮ್:** ಮೀನುಗಳನ್ನು ಹೊರತು ಪಡಿಸಿ ಉಳಿದೆಲ್ಲ ಕಶೇರುಕಗಳಲ್ಲಿ ಎರಡು ಜೊತೆ ಕಾಲುಗಳಿವೆ. ಈಜಲು, ಓಡಲು, ಹಾರಲು, ನಡೆಯಲು, ಹತ್ತಲು ಮುಂತಾದ ವಿವಿಧ ರೀತಿಯ ಚಟುವಟಿಕೆಗಳಿಗೆ ಅವು ಮಾರ್ಪಟಾಗಿದ್ದರೂ ಮೂಲತಃ ರಚನೆಯಲ್ಲಿ ಅವು ಒಂದೇ. ಇವು ಮೀನುಗಳ ಜೋಡಿ ಈಜುರೆಕ್ಕೆಗಳಿಂದ ವಿಕಾಸಗೊಂಡ ರಚನೆಗಳೆನ್ನುವುದು ಸಿದ್ಧಾಂತ. ಜೋಡು ಈಜುರೆಕ್ಕೆಗಳನ್ನು ಟೆರಿಜಿಯ ಎಂದು ಕರೆಯಲಾಗಿದೆ. ಭೂವಾಸಿ ಕಶೇರುಕಗಳ ಕೀಲುಗಳ ಈಜು ರೆಕ್ಕೆಗಳಂತಹದ ರಚನೆಯ ವಿಕಾಸದ ಮೂಲ ಹಂತದಲ್ಲಿದ್ದು, ವಿಕಾಸಕ್ಕೆ ಅನುವುಮಾಡಿ ಕೊಟ್ಟ ರಚನೆಯನ್ನು ಆರ್ಕಿಟೆರಿಜಿಯಂ ಎಂದು ಕರೆಯುತ್ತಾರೆ. ಇದು ಗೆಗೆನ್‌ಬಾರ್‌ನ ಆರ್ಕಿಟೆರಿಜೆಯಲ್ ಸಿದ್ಧಾಂತ ಎಂದೇ ಪ್ರಖ್ಯಾತಿ ಪಡೆದಿದೆ. ಇದು ಸಿರೆಟೋಡಸ್ ಮೀನಿನ ಜೋಡು ಈಜುರೆಕ್ಕೆ ರಚನೆಯಂತಿತ್ತೆಂಬುದು ಗೆಗೆನ್‌ಬಾರನ ಭಾವನೆಯಾಗಿತ್ತು. ಇದರಲ್ಲಿ ಮುಖ್ಯ ಅಸ್ಥಿಪಂಜರದ ರಚನೆಯ ನಡುವೆ ಅಕ್ಷದಲ್ಲಿ ಉದ್ದಕ್ಕೂ ವ್ಯವಸ್ಥೆಗೊಂಡಿದ್ದು ಈಜುರೆಕ್ಕೆಯ ಹರಡು ಭಾಗಕ್ಕೆ ಆಧಾರ ಒದಗಿಸುವ ಎಲುಬು ರಚನೆಗಳು ಎರಡು ಶ್ರೇಣಿ ರಚನೆಯಲ್ಲಿವೆ. ಈ ಮೂಲ ರಚನೆಯ ಆರ್ಕಿಟೆರಿಜಿಯಂನಿಂದ ಎಲ್ಲ ಕಾಲುಗಳು ಮತ್ತು ಈಜು ರೆಕ್ಕೆಗಳು ಉದ್ಭವಿಸಿವೆ ಎಂಬುದು ವಾದ. (ಎಚ್.ಬಿ.ಡಿ.)

**ಆರ್ಕಿಯಾರ್ನಿಸ್:** ಮಧ್ಯ ಪ್ರಾಗ್‌ಯುಗದ ಜುರಾಸಿಕ್ ಅವಧಿಯಲ್ಲಿ ಬದುಕಿದ್ದು ಅಳಿದುಹೋದ ಪಕ್ಷಿಯ ಪಳೆಯುಳಿಕೆ. ಆರ್ಕಿಯಾರ್ನಿಸ್ ಸೈಮೆನ್ಸಿ ಜೈವಿಕ ಹೆಸರು. ಆರ್ಕಿಯಾರ್‌ನಿತೆಸ್ ಉಪವರ್ಗಕ್ಕೆ ಸೇರಿದ ಆರ್ಕಿಯಾಪ್ಟೆರಿಕ್ಸ್ ಎಂಬ ಇನ್ನೊಂದು ಅತ್ಯಂತ ಪೂರ್ವಕಾಲದ ಪಕ್ಷಿಗೆ ಇದು ಹತ್ತಿರದ ಸಂಬಂಧಿ. ಪಶ್ಚಿಮ ಜರ್ಮನಿಯ, ಬವೇರಿಯಾದಲ್ಲಿರುವ ಜುರಾಸಿಕ್ ಕಾಲದ ಸುಣ್ಣದ ಕಲ್ಲಿನ ಪದರಗಳಲ್ಲಿ ಹುದುಗಿದ್ದ ಇದರ ಅಸ್ಥಿಪಂಜರದ ಪಳೆಯುಳಿಕೆಯನ್ನು ಹೊರಗೆ ತೆಗೆದ ನಂತರ ಈ ಪಕ್ಷಿಯ ಶರೀರ ರಚನೆಯನ್ನು ಅಧ್ಯಯನ ಮಾಡಲಾಯಿತು.

ಸಾಧಾರಣ ಕಾಗೆಗಿಂತ ಸ್ವಲ್ಪ ದೊಡ್ಡದಿರಬಹುದು. ಶರೀರದ ತುಂಬ ಪುಕ್ಕಗಳಿದ್ದುವು. ತಲೆ ದುಂಡಗಿದ್ದು, ಕೊಕ್ಕು ಚೆನ್ನಾಗಿ ಬೆಳೆದಿತ್ತು. ಮೇಲಿನ ದವಡೆಯಲ್ಲಿ ಹದಿಮೂರು ಜೊತೆ ಬುಗುರಿಯಾಕಾರದ ಹಲ್ಲುಗಳೂ ಕೆಳಗಿನ ದವಡೆಯಲ್ಲಿ ಮೂರು ಜೊತೆ ಹಲ್ಲುಗಳೂ ಇದ್ದುವು. ಮುಂಗಾಲುಗಳು ರೆಕ್ಕೆಗಳಾಗಿ ಮಾರ್ಪಾಡಾಗಿದ್ದುವು. ಪ್ರತಿಯೊಂದು ರೆಕ್ಕೆಯಲ್ಲೂ ಪುಕ್ಕಗಳಿದ್ದುವು. ಮೂರು ಬೆರಳುಗಳೂ, ಅವುಗಳಲ್ಲಿ ಚೂಪಾದ ಉಗುರುಗಳೂ ಇದ್ದುವು. ಹಿಂಗಾಲುಗಳು ಬಲವಾಗಿದ್ದು ಪಾದಗಳಲ್ಲಿ ನಾಲ್ಕು ಬೆರಳುಗಳಿದ್ದುವು. ದೊಡ್ಡಬೆರಳು ಹಿಂದಕ್ಕೆ ಬಾಗಿದ್ದು ಮಿಕ್ಕವು ಮುಂದಕ್ಕೆ ಬಾಗಿದ್ದವು. ಎಲ್ಲಾ ಬೆರಳುಗಳಲ್ಲಿ ಚೂಪಾದ ಉಗುರುಗಳಿದ್ದುವು. ಬಾಲವು ಉದ್ದವಾಗಿದ್ದು, ಎರಡು ಕಡೆಗಳಲ್ಲೂ ಸಾಲಾಗಿ ಪುಕ್ಕಗಳಿವೆ.

ರುಂಡದ ಹಿಂಭಾಗದಲ್ಲಿ ಒಂದೇ ಒಂದು ಅಕ್ಸಿ ಪೆಟಲ್ ಕಾಂಡೈಲ್ ಇದೆ. ಬೆನ್ನೆಲುಬುಗಳ ಎರಡು ಕಡೆಯೂ ಹಳ್ಳದಂತಿವೆ. ಪಕ್ಕೆಲುಬುಗಳಲ್ಲಿ ಕೊಕ್ಕೆಯಾಕಾರದ ಮೂಳೆಗಳಿಲ್ಲ. ಬಾಲದ ಕಶೇರುಕ ಮಣಿಗಳ ಸಂಖ್ಯೆ 18 ರಿಂದ 20. ಹಿಂಭಾಗದಲ್ಲಿರುವ ಮೂಳೆಗಳು ಚೂಪಾಗಿವೆ. ಪೈಗೋಸ್ಟೈಲ್ ಇಲ್ಲ. ಹೊಟ್ಟೆಯಲ್ಲೂ ಸಹ ಪಕ್ಕೆಲುಬುಗಳಿದ್ದವು. ಎದೆಯೆಲುಬು ಚಪ್ಪಟ್ಟೆಯಾಗಿದ್ದು ಅಡ್ಡಿಗಪ್ಪಿಲ್ಲ (ಕೀಲ್) ಸಂಯುಕ್ತ ತ್ರಿಕಾಸ್ಥಿ ಇಲ್ಲ. ತ್ರಿಕಾಸ್ಥಿಯಲ್ಲಿ 6 ಬೆನ್ನೆಲುಬುಗಳಿವೆ.

ಪಕ್ಷಿಗಳು ಹಾಗೂ ಸರೀಸೃಪಗಳ ಗುಣಗಳಿದ್ದುದರಿಂದ ಪಕ್ಷಿಗಳಿಗೂ ಮತ್ತು ಸರೀಸೃಪಗಳಿಗೂ ಸಂಬಂಧವಿದೆಯೆಂತಲೂ ಮತ್ತು ಸರೀಸೃಪಗಳಿಂದ ಪಕ್ಷಿಗಳು ವಿಕಾಸಗೊಂಡಿವೆಯಂತಲೂ ಈ ಪಕ್ಷಿಯ ಪಳೆಯುಳಿಕೆಯ ಅಧ್ಯಯನದಿಂದ ತಿಳಿದು ಬರುತ್ತದೆ. (ಕೆ.ಪಿ.ಆರ್.)

**ಆರ್ಕಿಯಾಪ್ಟೆರಿಕ್ಸ್:** ಮೀಸೊಜೋಯಿಕ್ ಅಥವಾ ಉರಗ ಯುಗದ ಜುರಾಸಿಕ್ ಅವಧಿಯಲ್ಲಿ (ಸು.೧೮೧ ದಶಲಕ್ಷ ವರ್ಷಗಳಷ್ಟು ಹಿಂದೆ) ಇದ್ದ ಉರಗ ಮತ್ತು ಪಕ್ಷಿ ಲಕ್ಷಣಗಳೆರಡನ್ನೂ ಹೊಂದಿದ ಪ್ರಾಣಿಯ ಪಳೆಯುಳಿಕೆ. ಜರ್ಮನಿಯ ಬವೇರಿಯ ಪ್ರಾಂತದಲ್ಲಿ ಸೋಲೆನ್ ಹಾಪನ್ ಸುಣ್ಣ ಶಿಲೆಯಲ್ಲಿ ಎರಡು ಪಕ್ಷಿ ಅಸ್ಥಿ ಪಂಜರಗಳು ದೊರೆತಿವೆ. ಇವೇ ಅತ್ಯಂತ ಪ್ರಾಚೀನ ಪಕ್ಷಿ ಅಸ್ಥಿಪಂಜರಗಳು. ಅವುಗಳಲ್ಲಿ ಒಂದನ್ನು ಆರ್ಕಿಯಾಪ್ಟೆರಿಕ್ಸ್ ಎಂದೂ ಇನ್ನೊಂದನ್ನು ಆರ್ಕಿಯಾರ್ನಿಸ್ ಎಂದೂ ಕರೆಯಲಾಗಿದೆ. ಆರ್ಕಿಯಾಪ್ಟೆರಿಕ್ಸ್ ಬಹು ಚಿಕ್ಕ ಪಕ್ಷಿ; ಗಾತ್ರದಲ್ಲಿ ಕಾಗೆಯಷ್ಟಿತ್ತು. ಪಕ್ಷಿಗಳಿಗಿಂತಲೂ ಹೆಚ್ಚು ಆರ್ಕಿಯೋಸಾರಿಯನ್ ಸರೀಸೃಪಗಳನ್ನು ಹೋಲುತ್ತಿತ್ತು. ಅಂದರೆ ತಲೆಯ ಬುರುಡೆಯಲ್ಲಿ ಎರಡು ಕಪೋಲ ರಂಧ್ರಗಳಿವೆ. ದವಡೆಯಲ್ಲಿ ಹಲ್ಲುಗಳಿದ್ದು ಅವು ಗುಳಿಗಳಲ್ಲಿವೆ. ಬೆನ್ನೆಲುಬುಗಳು ಆಂಫಿಸೀಲಸ್ ಮಾದರಿಯಲ್ಲಿವೆ. ಎದೆ ಎಲುಬು ಚಿಕ್ಕದಾಗಿದೆ. ಅಂಗೈನಲ್ಲಿ ಪಂಜಗಳಿಂದ ಕೂಡಿದ ಮೂರು ಬೆರಳುಗಳಿವೆ. ಬಾಲ ದೇಹಕ್ಕಿಂತ ಉದ್ದ. ಇವೆಲ್ಲ ಸರೀಸೃಪದ ಲಕ್ಷಣಗಳು. ಆರ್ಕಿಯಾಪ್ಟೆರಿಕ್ಸ್‌ನಲ್ಲಿ ಪಕ್ಷಿ ಜಾತಿಯ ಕೆಲವು ಲಕ್ಷಣಗಳನ್ನೂ ಕಾಣಬಹುದು. ದೊಡ್ಡ ಕಣ್ಣು ಗೂಡುಗಳು ಇರುವುದರಿಂದ ಇದರ ತಲೆಬುರುಡೆ ಪಕ್ಷಿಗಳ ತಲೆ ಬುರುಡೆಯನ್ನು ಹೋಲುತ್ತದೆ. ರೆಕ್ಕೆ ಪುಕ್ಕಗಳು ಈಗಿನ ಪಕ್ಷಿಗಳ ರೆಕ್ಕೆ ಪುಕ್ಕಗಳಂತೆಯೇ ಇವೆ. ಹೀಗೆ ಆರ್ಕಿಯಾಪ್ಟೆರಿಕ್ಸ್ ಎಂಬ ಆದಿಪಕ್ಷಿ ಸರೀಸೃಪ ಮತ್ತು ಪಕ್ಷಿ ಜಾತಿಗಳೆರಡರ ಲಕ್ಷಣಗಳನ್ನು ಅಳವಡಿಸಿಕೊಂಡಿದ್ದ ಜೀವಿ. ಇದಕ್ಕೆ ರೆಕ್ಕೆ ಪುಕ್ಕಗಳಿದ್ದರೂ ಹೆಚ್ಚು ಹಾರಲು ಅಸಮರ್ಥವಾಗಿದ್ದಂತೆ ತೋರುವುದು. ಆದರೆ ಇದು ವೇಗವಾಗಿ ಓಡಬಲ್ಲುದಾಗಿತ್ತು.

ಕ್ರಿಟೇಷಿಯಸ್ ಯುಗದ (ಸು.೬೩ ದಶಲಕ್ಷ ವರ್ಷಗಳ ಹಿಂದೆ) ಪಕ್ಷಿಗಳು ಆರ್ಕಿಯಾಪ್ಟೆರಿಕ್ಸ್ ಮತ್ತು ನಿಜಪಕ್ಷಿ ವರ್ಗಗಳ ಮಧ್ಯವರ್ತಿಗಳಾಗಿದ್ದುವು. ಆರ್ಕಿಯಾಪ್ಟೆರಿಕ್ಸ ಹಾಗೆ ಹಲ್ಲುಗಳನ್ನು ಹೊಂದಿದ್ದರೂ ಉಳಿದ ಲಕ್ಷಣಗಳಲ್ಲಿ ಪಕ್ಷಿ ಜಾತಿಯ ಕಡೆಗೆ ದಿಟ್ಟ ಹೆಜ್ಜೆ ಇಟ್ಟಿದ್ದುವು.

ಆರ್ಕಿಯಾಪ್ಟೆರಿಕ್ಸ್

ಬಾಲ ಚಿಕ್ಕದಾಗಿತ್ತು. ಎಲುಬುಗಳು ಟೊಳ್ಳಾಗಿದ್ದು, ಗಾಳಿಯಿಂದ ತುಂಬಿಕೊಂಡಿದ್ದವು. ಕಪೋಲ ರಂಧ್ರ, ಪಾದಗಳು ಮತ್ತು ಟೊಂಕದ ಎಲುಬು ಮುಂತಾದವುಗಳು ಪಕ್ಷಿಯಲ್ಲಿರುವಂತೆಯೇ ಇದ್ದವು. ಕ್ರಿಟೇಷಿಯಸ್ ಯುಗದಲ್ಲಿ ಎರಡು ಬಗೆಯ ಪಕ್ಷಿಗಳಿದ್ದವು. ಒಂದು ದೊಡ್ಡದು, ಮತ್ತೊಂದು ಚಿಕ್ಕದು. ದೊಡ್ಡದು ಕನ್ಸಾಸ್ ಪ್ರಾಂತ್ಯದ ನಿಯೋಬ್ರಾರ ಶಿಲೆಗಳಲ್ಲಿ ಸಿಕ್ಕಿರುವ ಹೆಸ್ಪರಾರ್ನಿಸ್. ಇದು ಹಾರಲು ಅಸಮರ್ಥವಾಗಿತ್ತು. ಚಿಕ್ಕದಾದ ಇಕ್ತಿಯಾರ್ನಿಸ್ ದೊಡ್ಡ ರೆಕ್ಕೆಗಳನ್ನು ಹೊಂದಿದ್ದು ಹಾರಬಲ್ಲದಾಗಿತ್ತು. ಇವೆರಡೂ ಜಲ ಪಕ್ಷಿಗಳು. ಆಧುನಿಕ ಜೀವಕಲ್ಪದ ಆದಿಯ ವೇಳೆಗೆ ಈಗಿನ ಪಕ್ಷಿಗಳ ಅವತರಣಿಕೆ ಆಗಿರುವ ಪ್ರಯುಕ್ತ, ಅವುಗಳಿಗೂ ಈಗಿನ ಪಕ್ಷಿಗಳಿಗೂ ಅಷ್ಟು ವ್ಯತ್ಯಾಸ ಕಾಣುವುದಿಲ್ಲ.

(ಡಿ.ಆರ್.)

**ಆರ್ಕಿಯಾಪ್ಟೆರಿಜಿಫಾರ್ಮಿಸ್:** ಮಧ್ಯಪ್ರಾಗ್ಯುಗದ ಜುರಾಸಿಕ್ ಅವಧಿಯಲ್ಲಿ ಬದುಕಿ ಅಳಿದುಹೋದ ಆರ್ಕಿಯಾರ್ನಿಥಿಸ್ ಎಂಬ ಉಪವರ್ಗದ ಪಕ್ಷಿಗಳ ಗಣ. ಸರೀಸೃಪ ಹಾಗೂ ಪಕ್ಷಿಗಳ ನಡುವೆ ಸೇತುವೆಯಂತಿದ್ದ ಪಳೆಯುಳಿಕೆಗಳು. 18–20 ಕಶೇರುಮಣಿಗಳಿರುವ ಬಾಲವಿದ್ದು ಪಕ್ಷಿಗಳಲ್ಲಿ ಕಂಡುಬರುವ ಪೈಗೊಸ್ಟೈಲ್ ಇರಲಿಲ್ಲ. ಬಾಲದ ಎರಡೂ ಕಡೆ ಸಾಲಾಗಿ ಜೋಡಿಸಿದ ಬಾಲದ ಗರಿಗಳಿದ್ದುವು. ತಲೆ ಪಕ್ಷಿಗಳಂತೆ ಇತ್ತು. ಮೆದುಳು ಪೆಟ್ಟಿಗೆ ದುಂಡಗಿದ್ದು ಪಾರ್ಶ್ವದಲ್ಲಿ ಮೃದುವಾದ ಎಲುಬುಗಳ ಕುಳಿಯಲ್ಲಿ ಕಣ್ಣುಗಳು ಅಳವಡಿಸಿಕೊಂಡಿದ್ದುವು.

ಈ ಗಣದಲ್ಲಿ ಕೇವಲ ಎರಡು ಜಾತಿಯ ಪಕ್ಷಿಗಳು ದೊರಕಿದ್ದು. ಎರಡೂ ಜಾತಿಯಲ್ಲಿ ಒಂದೊಂದೇ ಪ್ರಭೇದಗಳಿವೆ. 1850ರ ಸುಮಾರಿಗೆ ಹರ್‌ಮನ್ ವಾನ್ ಮೇಯರ್ ಎಂಬಾತ ಕಂಡುಹಿಡಿದ ಆರ್ಕಿಯಾಪ್ಟೆರಿಕ್ಸ್ ಲಿಥೋಸಾರಸ್ ಹಾಗೂ 1861 ರಲ್ಲಿ ವಾರ್ನರ್ ಎಂಬಾತನು ಕಂಡುಹಿಡಿದ ಆರ್ಕಿಯಾರ್ನಿಸ್ ಸೈನೆನ್ಸಿಸ್ ಇವೇ ಆ ಎರಡು ಪ್ರಭೇದಗಳು. ಬವೇರಿಯದ ಸೊಲೆನ್‌ಹೊಫೆನ್‌ನ ಸುಣ್ಣಕಲ್ಲಿನ ಶಿಲಾಪದರಗಳಲ್ಲಿ ಈ ಪಳೆಯುಳಿಕೆಗಳು ದೊರಕಿವೆ. ಇವೆರಡೂ ಪ್ರಭೇದಗಳು ಕಾಗೆಯ ಗಾತ್ರವಿರಬಹುದೆಂದು ಅಂದಾಜಿಸಲಾಗಿದೆ. ಟೊಂಕದಲ್ಲಿ ಆರು ಕಶೇರುಮಣಿಗಳಿದ್ದು ಆರ್ನಿಥಾಡ್ ಡೈನೊಸಾರ್‌ಗಳ ಟೊಂಕವನ್ನು ಹೋಲುತ್ತಿತ್ತು. ಕುತ್ತಿಗೆಯಿಂದ ಎದೆಯ ವರೆಗಿನ ಪಕ್ಕೆಲುಬುಗಳ ಜೊತೆಗೆ ಮೊಸಳೆ ಹಾಗೂ ಸ್ಫಿನೊಡಾನ್ ಎಂಬ ಸರೀಸೃಪಗಳಲ್ಲಿರುವಂತೆ ತೆಳುವಾದ ಪಕ್ಕೆಲುಬುಗಳಿದ್ದುವು. ದವಡೆಗಳು ಬಲವಾಗಿದ್ದು ಅವುಗಳಲ್ಲಿ ಬುಗುರಿಯಾಕಾರದ ಒಂದು ಸಾಲು ಹಲ್ಲುಗಳಿದ್ದುವು. ದವಡೆ ಮೂಳೆಗಳು ಪಕ್ಷಿಯ ಕಣ್ಣುಗಳನ್ನು ಹೋಲುತ್ತಿದ್ದುವು. ಕೊರಾಕಾಯಿಡ್ ಮೂಳೆಯು ಸಣ್ಣದಾಗಿತ್ತು. ಸ್ಕಾಪುಲ ತೆಳುವಾದ ಬಗ್ಗಿದ ಮೂಳೆಯಾಗಿತ್ತು. ಹಕ್ಕಿಗಳಲ್ಲಿರುವಂತೆ ಕ್ಲಾವಿಕಲ್‌ಗಳ ಬೆಸುಗೆಯಿಂದ ರಚಿತವಾದ ಒಂದು V ಆಕಾರದ ಫರ್ಕುಲ ಎಂಬ ಮೂಳೆಯಿತ್ತು. ಮೂಳೆಗಳಲ್ಲಿ ಗಾಳಿ ಅವಕಾಶವಿರಲಿಲ್ಲ. ಮುಂಗಾಲುಗಳು ರೆಕ್ಕೆಗಳಾಗಿ ಮಾರ್ಪಾಡಾಗಿದ್ದುವು. ಮುಂಗೈ ಮೂಳೆ ಹಿಂಗಾಲಿನ ಮೂಳೆಯಷ್ಟೆ ಗಾತ್ರವಿತ್ತು. ಮುಂಗೈ ಮೂಳೆಗಳು ಬಲಿಷ್ಠವಾಗಿದ್ದವು. ಮಣಿಕಟ್ಟು ಹಾಗೂ ಬೆರಳುಗಳ ಭಾಗದಲ್ಲಿ ಮೂಳೆಗಳು ಸ್ವತಂತ್ರವಾಗಿದ್ದವು. ಬೆರಳ ಮೂಳೆಗಳು ಸರೀಸೃಪಗಳಂತಿದ್ದುವು. ಸೊಂಟ ಹಾಗೂ ಹಿಂಗಾಲುಗಳು ಸರೀಸೃಪ ಹಾಗೂ ಪಕ್ಷಿಗಳೆರಡನ್ನೂ ಹೋಲುತ್ತಿದ್ದುವು. ಮೆದುಳು ಪಕ್ಷಿಗಳಿಗಿಂತ ಸರೀಸೃಪಗಳನ್ನೇ ಹೆಚ್ಚು ಹೋಲುತ್ತಿದ್ದುವು. ಈ ಪಕ್ಷಿಗಳಲ್ಲಿ ಹಾರಾಟ ಪರಿಪೂರ್ಣವಾಗಿ ಬೆಳೆದಿರಲಿಲ್ಲ. ಆದರೂ ರೆಕ್ಕೆಗಳ ಬೆಳವಣಿಗೆ ಶರೀರ ರಚನೆಗಳಲ್ಲಿ ಪಕ್ಷಿಗಳನ್ನು ಹೋಲುತ್ತಿದ್ದುದರಿಂದ ಇವುಗಳನ್ನು ಪಕ್ಷಿಗಳೆಂದೇ ಗುರುತಿಸಲಾಗುತ್ತದೆ. ನೋಡಿ –ಆರ್ಕಿಯಾಪ್ಟೆರಿಕ್ಸ್.

(ಎಸ್.ಎನ್.ಹೆಚ್.)

**ಆರ್ಕೊಸಾರಿಯ:** ಸರೀಸೃಪ ವರ್ಗದ ಒಂದು ಉಪವರ್ಗ. ಇದರಲ್ಲಿ ವೈವಿಧ್ಯತೆಯಿಂದ ಕೂಡಿದ ಮೊಸಳೆಗಳು (ಕ್ರೊಕೊಡೈಲ್ಸ್) ಮತ್ತು ಪಕ್ಷಿಗಳಿವೆ. ಇವುಗಳ ವಂಶಜರು ಜುರಾಸಿಕ್ ಕಾಲದವರು.

ಆರ್ಕೊಸಾರಿಯ ಉಪವರ್ಗಕ್ಕೆ ಸೇರಿದ (ಡಯಾಪ್ಸಿಡ) ಪ್ರಾಣಿಗಳಲ್ಲಿ ಇಂಟರ್‌ಪೆರೈಟಲ್ ಟೂಬುಲಾರ್ ಮೂಳೆಗಳು (ಟ್ಯೂಬುಲಾರ್ ಬೋನ್ಸ್) ಅಥವಾ ಪೆರಾಯಿಟಲ್ ರಂಧ್ರ ಇಲ್ಲ. ಇವುಗಳು ತೀಕೋಡಾಂಷಿಯದ ವಂಶಜರು. ಆರ್ಕೊಸಾರಿಯ ಸರೀಸೃಪಗಳು ಲೆಪಿಡೋಸಾರಿಯ ಈಸಾಜಿಯ, ರಿಂಖೋಸೆಫಾಲಿಯ ಮತ್ತು ಸ್ಕೋಮಾಟಗಳಿಂದ ವಿಭಿನ್ನವಾಗಿವೆ. ಕೆಲವು ಆರ್ಕೊಸಾರಿಯಗಳ ನಡುಪಟ್ಟಿ ಮಾರ್ಪಾಟು ಹೊಂದಿ ದ್ವಿಪಾದಿಗಳಾಗಿವೆ. ಹಿಂದಿನ ಕಾಲುಗಳು ಉದ್ದವಾಗಿದ್ದವು ಮತ್ತು ಬಹಳ ಬಲದಾಗಿದ್ದವು. ಇವು ಶರೀರದ ಕೆಳಗೆ ನೇರವಾಗಿ ನಿಂತಿವೆ. ಕೆಲವು ಹಿಂದುಳಿದ ಪ್ರಾಣಿಗಳನ್ನು ಬಿಟ್ಟರೆ ಉಳಿದ ಆರ್ಕೊಸಾರಿಯಾದಲ್ಲಿ ಬಾಯಿ ಅಂಗಳ (ಸಲಟ್) ಇಲ್ಲ. ಕೆಲವು ಪ್ರಭೇದದ ಪ್ರಾಣಿಗಳಲ್ಲಿ ದವಡೆಗಳು ಕೊಕ್ಕಾಗಿ ಮಾರ್ಪಟ್ಟಿರುವುದರಿಂದ ಹಲ್ಲುಗಳು ಪೂರ್ತಿಯಾಗಿ ಕಾಣೆಯಾಗಿವೆ. ಕೆಳದವಡೆಯ ಹೊರಭಾಗದಲ್ಲಿ, ಡೆಂಡರಿ, ಸಬ್ ಅಂಗ್ಯುಲಾರ ಮತ್ತು ಅಂಗ್ಯುಲಾರ ಮಧ್ಯೆ ಒಂದು ತೆರವು (ವ್ಯಾಕುಟಿ) ಇರುತ್ತದೆ. ಎಲ್ಲಾ ಆರ್ಕೊಸಾರಿಯಗಳಲ್ಲೂ ಕಣ್ಣು ಕುಳಿಯ ಮುಂದೆ ಒಂದು ಅಂಟಾರಟೈಟಲ್ ತೆರವು ಇತ್ತು.

ಆರ್ಕೊಸಾರಿಯ ಉಪವರ್ಗವನ್ನು ಐದು ಗಣಗಳಾಗಿ ವಿಂಗಡಿಸಲಾಗಿದೆ.

1) ಥಿಕೋಡಾಂಷಿಯಾ
2) ಮೊಸಳೆಗಳು (ಕ್ರೊಕೊಡಾಯಿಲ್ಸ್)
3) ಸಾರಿಶ್ಚಿಯ
4) ಆರ್ನಿತಿಶ್ಚಿಯ

ಇಂದು ಮೊಸಳೆಗಳ ಗಣಗಳನ್ನು ಬಿಟ್ಟು ಉಳಿದ ಥಿಕೋಡಾಂಷಿಯಾ, ಸಾರಿಶ್ಚಿಯ, ಆರ್ನಿರೆಶ್ಚೆಯಗಳು ಅಳಿದು ಹೋಗಿವೆ.

(ಬಿ.ಎನ್.)

**ಆರ್ಕ್‌ಟಿಕ್ ಟರ್ನ್:** ಸ್ಟರ್ನಾ ಎಂಬ ಜಾತಿಯ ಉತ್ತರ ಧ್ರುವದ ಪಕ್ಷಿ. ನೀಯೊರ್ನಿತೇಸ್ ಉಪವರ್ಗದ, ನೀಯೊಗ್ನಾತೇ ಅಧಿ ಗಣದ, ಚಾರಡ್ರಿಫಾರ್‌ಮೆಸ್ ಗಣದ, ಸ್ಟರ್ನೈನೆ ಗುಂಪಿಗೆ ಸೇರುತ್ತದೆ. ಶರೀರದ ಗಾತ್ರ ಪಾರಿವಾಳದಷ್ಟಿರುತ್ತದೆ. ಕೊಕ್ಕು ತೆಳುವಾಗಿಯೂ ಮತ್ತು ಉದ್ದವಾಗಿಯೂ ಇದೆ. ಇದರಿಂದ ನೀರಿನಲ್ಲಿ ಮುಳುಗಿ ಮೀನುಗಳನ್ನು ಹಿಡಿಯಲು ಸಹಾಯಕವಾಗಿದೆ. ರೆಕ್ಕೆಗಳು ಉದ್ದವಾಗಿರುವುದರಿಂದ ಇದು ಒಂದು ಒಳ್ಳೆಯ ಹಾರುವ ಪಕ್ಷಿ. ಬಾಲವು ಕವಲೊಡೆದಿದೆ. ಕಾಲುಗಳು ಗಿಡ್ಡಗಿವೆ. ಪಾದಗಳು ಚಿಕ್ಕದಾಗಿದ್ದು, ಬೆರಳುಗಳ ನಡುವೆ ಬಲೆ ಇದೆ. ಇದರಿಂದ ನೀರಿನಲ್ಲಿ ಈಜಾಡಲು ಸಹಾಯಕವಾಗಿವೆ. ಶರೀರದ ಬಣ್ಣಬಿಳುಪು ಅಥವಾ ಬೂದು. ಇದರ ಆಹಾರ ಬರಿ ಮೀನುಗಳು ಮಾತ್ರ. ನೀರಲ್ಲಿ ಮುಳುಗಿ ಮೀನುಗಳನ್ನು ಹಿಡಿದು ಮೇಲಕ್ಕೆ ತಂದ ನಂತರವೇ ಅವನ್ನು ತಿನ್ನುವ ಸ್ವಭಾವ. ಉತ್ತರದ ಸಮಶೀತೋಷ್ಣವಲಯದಲ್ಲಿ ಸಂತಾನವೃದ್ಧಿಮಾಡುತ್ತವೆ. ಸಮುದ್ರದ ಮರಳಿನ ತೀರಗಳಲ್ಲಿ ಮಾಡಿದ ಬರಿಯ ಪೊಟರೆಗಳಲ್ಲಿ ಹೆಣ್ಣು ಒಂದೇ ಒಂದು ಮೊಟ್ಟೆಯನ್ನು ಇಡುತ್ತದೆ. ಮರಿಗಳು ಮೊಟ್ಟೆಯಿಂದ ಹೊರಬಂದ ಕೂಡಲೆ ದೊಡ್ಡಪಕ್ಷಿಗಳ ಸಹಾಯದಿಂದ ಆಹಾರವನ್ನು ಪಡೆಯುತ್ತ ಬೆಳೆಯುತ್ತವೆ. ಇವುಗಳ ಬೆಳವಣಿಗೆ ವಾತಾವರಣವನ್ನು ಅವಲಂಬಿಸಿರುತ್ತದೆ. ಸ್ವಚ್ಛ ವಾತಾವರಣದಲ್ಲಿ ಹೆಚ್ಚು ತೂಕವನ್ನು ಪಡೆಯುತ್ತವೆ. ಆದರೆ ಮಂಜುಕವಿದ ದಿನಗಳಲ್ಲಿ ದೊಡ್ಡ ಪಕ್ಷಿಗಳು ಮರಿಗಳಿಗೆ ಹೆಚ್ಚು ಆಹಾರವನ್ನು ಕೊಡದೆ ಇರುವುದರಿಂದ ತೂಕ ಕಳೆದುಕೊಳ್ಳುತ್ತವೆ.

ಆದುದರಿಂದಲೇ ಈ ಪಕ್ಷಿಗಳು ಸೈಬೀರಿಯಾದ ಬೇರಿಂಗ್ ಸಮುದ್ರತೀರದಲ್ಲಿ ಹೆಚ್ಚಾಗಿ ವಾಸಿಸುವುದಿಲ್ಲ, ಕಾರಣ ಅಲ್ಲಿ ಆಗಾಗ ಹೆಚ್ಚು ಮಂಜು ಕವಿದಿರುತ್ತದೆ.



ಟರ್ನ್

ಅತಿ ದೂರದ ವಲಸೆ ಹೋಗುವುದರಲ್ಲಿ ಪ್ರಸಿದ್ಧವಾದ ಪಕ್ಷಿ. ಚಳಿಗಾಲದಲ್ಲಿ ಉತ್ತರ ಧ್ರುವದಿಂದ ಅಂಟ್ಲಾಟಿಕ್ ಸಾಗರದ ಮೇಲೆ ಹಾರಿ ತಂಪಾಗಿರುವ ಹಾಗೂ ಹೆಚ್ಚು ಆಹಾರ ಸಿಗುವ ಯೂರೋಪಿನ ಪಶ್ಚಿಮ ತೀರವನ್ನು ಸೇರುತ್ತದೆ. ಇಲ್ಲಿ ಗೂಡುಗಳನ್ನು ಕಟ್ಟಿ ಸಂತಾನವೃದ್ಧಿಯನ್ನು ಮಾಡುತ್ತದೆ. ಇಲ್ಲಿಂದ ದಕ್ಷಿಣ ಅಂಟ್ಲಾಟಿಕ್ ಸಾಗರವನ್ನು ಹಾರಿ ದಕ್ಷಿಣ ಧ್ರುವವನ್ನು ಸೇರುತ್ತದೆ. ಪುನಃ ತನ್ನ ಮೊದಲಿನ ವಾಸಸ್ಥಾನವಾದ ಉತ್ತರಧ್ರುವಕ್ಕೆ ಹಿಂತಿರುಗುತ್ತದೆ. ಇದು ಈ ಹಕ್ಕಿಯ ಇನ್ನೊಂದು ವಿಶೇಷಗುಣ. ಈ ರೀತಿಯಾಗಿ ಪ್ರತಿವರ್ಷವು ಸುಮಾರು 18,000 ಕಿಮೀ ದೂರದ ಎರಡೆರಡು ಪಯಣಗಳನ್ನು ಮಾಡಿದಂತಾಗುತ್ತದೆ. ಇದಕ್ಕೆ ತನ್ನ ಬಳಗದ ಮೇಲೆ ಅತಿಶಯವಾದ ಮಮತೆ. ಏಕೆಂದರೆ ತನ್ನ ಬಳಗದಲ್ಲಿ ಯಾವ ಪಕ್ಷಿಗಾದರೂ ಗಾಯವಾಗಿ ನೋವಾದರೆ ಗುಂಪಿನ ಇತರ ಹಕ್ಕಿಗಳು ಇದರ ಸಹಾಯಕ್ಕೆ ಬರುತ್ತವೆ. ಹಿಂದೆ ಈ ಹಕ್ಕಿಯ  ಪುಕ್ಕಗಳ ಮೇಲಿನ ಆಸೆಯಿಂದ ಇವುಗಳನ್ನು ಅಧಿಕ ಸಂಖ್ಯೆಯಲ್ಲಿ ಕೊಲ್ಲಲಾಗುತ್ತಿತ್ತು. ಈಗ ಈ ಪಕ್ಷಿಗಳನ್ನು ಕೊಲ್ಲುವುದು ಅಪರಾಧವೆಂದು ಶಾಸನ ಮಾಡಿರುವುದರಿಂದ ಇವುಗಳ ನಾಶ ಕಡಿಮೆಯಾಗಿದೆ.

ಸ್ವರ್ನ ಪರಾಡಿಸೆಯ ಮತ್ತು ಸ್ವರ್ನ ಮೆಕ್ರುರಾ ಮುಖ್ಯ ಪ್ರಭೇದಗಳು.

(ಕೆ. ಪಿ. ಆರ್.)

**ಆರ್ಗೋನಾಟ್:** ಇದು ವಲ್ಕವಂತ ಮೃದ್ವಂಗಿ. ಸಮುದ್ರದಲ್ಲಿ ವಾಸಿಸುವ ಚಿಪ್ಪಿನ ಪ್ರಾಣಿ. ಎಂಟು ಶಿರಪಾದಗಳಿವೆ. ಅವುಗಳಲ್ಲಿ ಎರಡು ವಿಸ್ತಾರವಾಗಿ ಮಾರ್ಪಾಟಾಗಿವೆ.



ಚಿಪ್ಪು ಇತರ ಮೃದ್ವಂಗಿಗಳಂತೆ ಮ್ಯಾಂಟಲ್‌ದಿಂದ ಸ್ರವಿಸಿದ್ದಲ್ಲ. ಗಂಡು ಚಿಪ್ಪನ್ನು ಹೊಂದಿಲ್ಲ, ಆದರೆ ಹೆಣ್ಣು ಸುಂದರವಾದ ಚಿಪ್ಪನ್ನು ಹೊಂದಿದೆ. ಮೊಟ್ಟೆ ಮತ್ತು ಮರಿಗಳಿಗೆ ಚಿಪ್ಪು ತೊಟ್ಟಿಲಿನಂಥ ರಕ್ಷಣೆ ನೀಡುತ್ತದೆ. ಹತ್ತು ಹನ್ನೆರಡು ದಿವಸಗಳಲ್ಲಿ ಬೆಳೆಯುವ ಮರಿ ಪ್ರಾಣಿಯಲ್ಲಿ ಚಿಪ್ಪು ರೂಪಗೊಳ್ಳುತ್ತದೆ. ದೇಹ ಬೆಳೆದಂತೆಲ್ಲ ಚಿಪ್ಪು ಕ್ರಮವಾಗಿ ಬೆಳೆಯುವುದು. ಚಿಪ್ಪಿನ ಬೆಳವಣಿಗೆಗೆ ಎರಡು ಕೈಗಳೂ ಸ್ರವಿಸುವ ದ್ರವವೇ ಕಾರಣ. ಚಿಪ್ಪು ೨೫ ಮಿಮಿ ಉದ್ದವಿರುತ್ತದೆ. ಇದರ ದೇಹ ಚಿಕ್ಕದಾಗಿದ್ದು, ದುಂಡಾಗಿರುವ ತಳಭಾಗವನ್ನು ಹೊಂದಿದೆ. ಹೀರು ಬಟ್ಟಲುಗಳಲ್ಲಿ ಮಾಂಸಭರಿತವಾದ ಉಂಗುರಗಳಿಲ್ಲ. ಹೆಣ್ಣು ಸಮುದ್ರದ ಆಳದಲ್ಲಿ ವಾಸಿಸುತ್ತ ಮೊಟ್ಟೆ ಇಡುವ ಕಾಲದಲ್ಲಿ ಮಾತ್ರ ಮೇಲಕ್ಕೆ ಬರುತ್ತದೆ. ಇವುಗಳಲ್ಲಿ ಸೈಡಮೆಂಟಲ್ ಗ್ರಂಥಿಗಳು ಇಲ್ಲ. ಹೆಣ್ಣು ಆರ್ಗೋನಾಟನ್ನು ಪೇಪರ್ ನಾಟಿಲಸ್ ಎಂದು ಕರೆಯುವರು.

(ಪಿ.ಎ.ಆರ್.)

**ಆರ್ಟಿಯೊಡ್ಯಾಕ್ಟೈಲ:** ಸಾಮಾನ್ಯವಾಗಿ ಸೀಳುಗೊರಸುಳ್ಳ ನೀರಾನೆ, ಒಂಟೆ, ಲಾಮ, ಜಿಂಕೆ, ಜಿರಾಫೆ, ಎರಳೆ, ಕುರಿ, ಆಡು, ದನ ಮುಂತಾದ ಪ್ರಾಣಿಗಳನ್ನೊಳಗೊಂಡ ಸ್ತನಿಗಳ ವರ್ಗದ ಒಂದು ಗಣ (ಆರ್ಟಿಯೊ=ಜೊತೆ, ಡ್ಯಾಕ್ಟುಲಸ್=ಬೆರಳು). ಈ ಗುಂಪಿಗೆ ಸೇರಿದ ಪ್ರಾಣಿಗಳು ಹುಲ್ಲು, ಸೊಪ್ಪು ಹಾಗೂ ಇತರ ಸಸ್ಯಗಳನ್ನು ತಿಂದು ಜೀವಿಸುವ ಶಾಕಾಹಾರಿಗಳು. ಹಿಂದಿನ ಪಾದದಲ್ಲಿ ಮೂರು ಕಾಲ್ಬೆರಳುಗಳನ್ನುಳ್ಳ ವರಾಹಗಳನ್ನು (ಪೆಕ್ಯಾರಿಸ್) ಬಿಟ್ಟರೆ, ಈ ಗುಂಪಿನ ಜೀವಿಸಿರುವ ಎಲ್ಲ ಪ್ರಾಣಿಗಳಲ್ಲೂ ಮುಂದಿನ ಮತ್ತು ಹಿಂದಿನ ಪಾದಗಳಲ್ಲಿ ಎರಡು ಅಥವಾ ನಾಲ್ಕು ಸಮಸಂಖ್ಯೆಯ ಕಾಲ್ಬೆರಳುಗಳಿರುತ್ತವೆ. ಕಾಲುಗಳ ಮುಖ್ಯ ಅಕ್ಷ (ಆಕ್ಸಿಸ್) ಮೂರು ಮತ್ತು ನಾಲ್ಕನೆಯ ಕಾಲ್ಬೆರಳುಗಳ ಮಧ್ಯೆ ಸಾಗಿರುತ್ತದೆ. ಪ್ರತಿಯೊಂದು ಕಾಲ್ಬೆರಳೂ ಚೆನ್ನಾಗಿ ಬೆಳೆದಿದ್ದು, ಹೆಚ್ಚು ಕಡಿಮೆ ಒಂದೇ ಗಾತ್ರದವು. ಸಾಮಾನ್ಯವಾಗಿ ಎರಡನೆಯ ಮತ್ತು ಐದನೆಯ ಅಥವಾ ಹೊರಗಿನ ಕಾಲ್ಬೆರಳುಗಳು ಚಿಕ್ಕದಾಗಿರುತ್ತವೆ. ಕೆಲವು ವೇಳೆ ಅವು ಪೂರ್ಣವಾಗಿ ಇರುವುದಿಲ್ಲ. ಬದುಕಿರುವ ಈ ಪ್ರಾಣಿಗಳಲ್ಲಿ ಮೊದಲನೆಯ ಕಾಲ್ಬೆರಳು ಇಲ್ಲವಾದರೂ ಹಂದಿಯಂತಿದ್ದ ಕೆಲವು ಪ್ರಾಚೀನ ಪ್ರಾಣಿಗಳ ಮುಂದಿನ ಪಾದದಲ್ಲಿ ಅದು ಉಳಿದುಕೊಂಡಿತ್ತು.

ಪ್ರತಿಯೊಂದು ಪಾದದ ನಾಲ್ಕು ಕಾಲ್ಬೆರಳುಗಳು ನೆಲವನ್ನು ಮುಟ್ಟುವ ನೀರಾನೆಯನ್ನು (ಹಿಪೊಪೊಟ್ಯಾಮಸ್) ಬಿಟ್ಟರೆ, ಮಿಕ್ಕ ಪಾಣಿಗಳಲ್ಲಿ, ನಡೆಯುವಾಗ ಪ್ರತಿಯೊಂದು ಪಾದ ಮಧ್ಯದ ಎರಡು ಕಾಲ್ಬೆರಳುಗಳ ತುದಿಯ ಮೇಲೆ ಆಧಾರವಾಗಿರುತ್ತದೆ. ಕಾಲ್ಬೆರಳುಗಳು ಗೊರಸುಗಳಲ್ಲಿ ಅಳವಟ್ಟಿವೆ. ಆದರೆ ಒಂಟೆಗಳಲ್ಲಿ, ಮಧ್ಯದ ಎರಡು ಕಾಲ್ಬೆರಳುಗಳು ಪಾದದ ಅಂಗಾಲೆನಿಸಿರುವ ಒಂದು ಅಗಲವಾದ ಸಿಂಬಿಯಲ್ಲಿ ಸೇರಿದೆ. ಉತ್ತರ ಅಮೇರಿಕಾದ ಅಳಿದುಹೋದ ಅಗ್ರಿಯೊಖೀರಸ್‌ನ ಗೊರಸುಗಳು ಮೊನಚಾದ ಉಗುರುಗಳಂತಿದ್ದವು. ಜೀವಿಸಿರುವ ಈ ಪ್ರಾಣಿಯ ಸಂಬಂಧಿಗಳಲ್ಲಿ ಪಾದಗಳ ಮೂಳೆಗಳ ಮಾರ್ಪಾಡಿನೊಂದಿಗೆ, ಮುಂಗಾಲಿನ ಅಲ್ನ ಕ್ಷೀಣಿಸಿಹೋಗಿದೆ ಮತ್ತು ಅದು ತ್ರಿಜ್ಯ (ರೇಡಿಯಸ್)ಕ್ಕೆ ಕೂಡಿ ಹೋಗಿದೆ. ಶೆವ್ರೋಟೇನ್ ಎಂಬ ಸಣ್ಣ ಕಸ್ತೂರಿ ಮೃಗಗಳ ಹೊರತು ಬದುಕಿರುವ ಇನ್ನಿತರ ಆರ್ಟಿಯೊಡ್ಯಾಕ್ಟೈಲಗಳ ತೋಳು ಮೂಳೆಗಳಲ್ಲಿ ಎಂಟೆಪಿಕಾಂಡೈಲಾರ್ ರಂಧ್ರಗಳಿರುವುದಿಲ್ಲ. ಆದರೆ ಹಿಂಗಾಲಿನಲ್ಲಿ ಫಿಬ್ಯುಲ ಅವಶೇಷವಾಗಿ ಉಳಿದುಕೊಂಡರೂ ತೊಡೆ ಮೂಳೆಯ (ಫೀಮರ್) ಮೂರನೆಯ ಟ್ರೊಕ್ಯಾಂಟರ್ ಸಂಪೂರ್ಣವಾಗಿ ಇಲ್ಲವಾಗಿದೆ.

ಬಹು ಸಂಖ್ಯೆಯ ಆರ್ಟಿಯೊಡ್ಯಾಕ್ಟೈಲಗಳು ತಮ್ಮ ತಲೆಯ ಮುಂಭಾಗದಲ್ಲಿ ಜೋಡಿ ಕೊಂಬುಗಳನ್ನು ಪಡೆದಿವೆ. ಆದರೆ ಅಳಿದುಹೋದ ಹಲವು ಪ್ರಾಚೀನ ಕಾಲದ ಜಿಂಕೆಗಳಲ್ಲಿ ಒಂದು ಮೂರನೆಯ ಕೊಂಬು ಇತ್ತು. ಇವುಗಳಲ್ಲಿ ಗಂಡು ಪ್ರಾಣಿಗಳಲ್ಲಿ ಮಾತ್ರ ಕೊಂಬುಗಳು ಇವೆ. ಇಂದಿನ ಕುರಿಗಳಲ್ಲೂ ಈ ವೈಶಿಷ್ಟ್ಯತೆಯಿದೆ. ಆರ್ಟಿಯೊಡ್ಯಾಕ್ಟೈಲಗಳ ಮೂತಿ ಉದ್ದ. ಬುರುಡೆಯ ಪಟ್ಟಿ ಚಿಕ್ಕದು. ಮೂಗಿನ ಮೂಳೆಗಳು ಹಿಂದಕ್ಕೆ ವಿಸ್ತರಿಸಿಲ್ಲ. ಕಣ್ಣಿನ ಗೂಡು ಮೂಳೆಯಿಂದ ಸಂಪೂರ್ಣವಾಗಿ ಆವರಿಸಿದೆ. ಕತ್ತಿನ ಕೆಳಗಣ ಅಡ್ಡೆಲುಬು (ಕ್ಲಾವಿಕಲ್) ಇರುವುದಿಲ್ಲ. ಜಿರಾಫೆಯನ್ನೂ ಒಳಗೊಂಡು ಇವುಗಳೆಲ್ಲದರಲ್ಲೂ ಕತ್ತಿನಲ್ಲಿ ಏಳು ಕಶೇರುಮಣಿಗಳಿರುವುವು. ಎದೆಯ ಕಶೇರುಮಣಿಗಳ ಸಂಖ್ಯೆ ಒಂಟೆಯಲ್ಲಿ ೧೨ ಇದ್ದರೆ, ನೀರಾನೆಯಲ್ಲಿ ೧೫ ಅಥವಾ ೧೬ರವರೆಗೆ ಇರುತ್ತದೆ. ಜೀವಿಸಿರುವ ಆರ್ಟಿಯೊಡ್ಯಾಕ್ಟೈಲಗಳಲ್ಲಿ ಎದೆಯ ಹಾಗೂ ನಡುವಿನ ಕಶೇರುಮಣಿಗಳ ಒಟ್ಟು ಸಂಖ್ಯೆ ೧೯ನ್ನು ಮೀರುವುದಿಲ್ಲ. ಇವುಗಳಲ್ಲಿ ಐದು ಲಾಂಗೂಲ ಕಶೇರುಮಣಿಗಳಿರುತ್ತವೆ. ಬಾಲದ ಕಶೇರುಮಣಿಗಳ ಸಂಖ್ಯೆ ವ್ಯತ್ಯಾಸ ತೋರುತ್ತದೆ.

ಹಲ್ಲುಗಳ ಸಂಖ್ಯೆ ಒಂದು ಮೂಲಭೂತ ತತ್ವವನ್ನು ಅನುಸರಿಸುತ್ತದೆ. ಮೇಲಿನ ದವಡೆ ಹಾಗೂ ಕೆಳದವಡೆಯ ಪ್ರತಿಯೊಂದು ಪಾರ್ಶ್ವದಲ್ಲಿರುವ ಮೂರು ಬಾಚಿಹಲ್ಲುಗಳೂ ಒಂದು ಕೋರೆಹಲ್ಲೂ ನಾಲ್ಕು ಮುಂದವಡೆ ಹಲ್ಲುಗಳೂ ಮೂರು ಹಿಂದವಡೆ ಹಲ್ಲುಗಳೂ ಸೇರಿ ಒಟ್ಟು ನಲವತ್ನಾಲ್ಕು ಹಲ್ಲುಗಳಿವೆ. ಬಹುಸಂಖ್ಯೆಯ ಮೆಲುಕು ಪ್ರಾಣಿಗಳಲ್ಲಿ ಮೇಲಿನ ಕೋರೆ ಹಲ್ಲುಗಳೂ ಮೊದಲಿನ ಮುಂದವಡೆ ಹಲ್ಲುಗಳೂ ಸಾಮಾನ್ಯವಾಗಿ ಇರುವುದಿಲ್ಲ. ಇವುಗಳಲ್ಲಿ ಮುಂದಿನ ಬಾಚಿ ಹಲ್ಲುಗಳಲ್ಲೊಂದು ಉದ್ದವಾದ ದಂತವಾಗಿ ಬೆಳೆಯಬಹುದಾದರೂ ಕೆಲವು ವೇಳೆ ಅದು ಇರುವುದೇ ಇಲ್ಲ. ಹಂದಿ ಮತ್ತು ನೀರಾನೆಗಳಲ್ಲಿಯ ಕೆಳಗಿನ ಕೋರೆಹಲ್ಲು ಚೆನ್ನಾಗಿ ಬೆಳೆದಿರುವುದುಂಟು. ಆದರೆ ಮೆಲುಕು ಪ್ರಾಣಿಗಳಲ್ಲಿ ಅದು ಕ್ಷೀಣಿಸಿರುತ್ತದೆ. ಹಲವು ವೇಳೆ ಅದು ಬಾಚಿ ಹಲ್ಲಿನಂತೆ ಮಾರ್ಪಟ್ಟಿರುವುದುಂಟು.

ದವಡೆ ಹಲ್ಲುಗಳ ರಚನೆಯಲ್ಲಿ ಎರಡು ವಿಧಗಳುಂಟು. ಬ್ರಾಕಿಯೋಡಾಂಟ್ ವಿಧದ ದವಡೆ ಹಲ್ಲುಗಳು ತಗ್ಗಿದ ಶಿಖರವನ್ನುಳ್ಳವು. ಆದರೆ ಡಿಪ್ಸೊಡಾಂಟ್ ಎಂಬ ವಿಧದ ದವಡೆ ಹಲ್ಲುಗಳು ಎತ್ತರದ ಶಿಖರವನ್ನು ಪಡೆದಿರುವುವು. ಈ ದವಡೆ ಹಲ್ಲುಗಳ ಶೃಂಗವನ್ನು (ಕಸ್ಪ್) ನಿರೂಪಿಸುವ ಮಿನಾಯಿಯ (ಎನಾಮಲ್) ಪದರಗಳ ತಳಗಳು ಅರೆಯುವ

ಹೊರಭಾಗದಿಂದ ಕಾಣಿಸುವುದಿಲ್ಲ. ಬ್ರಾಕಿಯೋಡಾಂಟ್ ದವಡೆ ಹಲ್ಲುಗಳ ಮೂರು ಇಲ್ಲವೆ ನಾಲ್ಕು ಮುಖ್ಯ ಶೃಂಗಗಳು ಸಾಮಾನ್ಯವಾಗಿ ಶಂಖದ ರೀತಿಯಲ್ಲಿವೆ. ಈ ರೀತಿ ಇದ್ದಾಗ ಇವುಗಳನ್ನು ಬ್ಯೂನೊಡಾಂಟ್ ಎಂದು ಕರೆಯುತ್ತಾರೆ. ಶೃಂಗಗಳ ಇನ್ನೊಂದು ವಿಧದ ರಚನೆ ಹಿಪ್ಸೊಡಾಂಟ್ ದವಡೆ ಹಲ್ಲುಗಳಲ್ಲಿದೆ. ಇವುಗಳಲ್ಲಿ ಮುಖ್ಯ ಶೃಂಗಗಳು ಅರ್ಧಚಂದ್ರಾಕೃತಿಯಲ್ಲಿವೆ. ಇಂಥ ದವಡೆ ಹಲ್ಲುಗಳನ್ನು ಸೆಲೆನೊಡಾಂಟ್ ಎನ್ನುತ್ತಾರೆ. ಆದರೆ ಮಧ್ಯಮ ಎತ್ತರದ ದವಡೆ ಹಲ್ಲಿನ ಶಿಖರಗಳಲ್ಲಿ ಒಂದು ಪಾರ್ಶ್ವದ ಶೃಂಗಗಳು ಬ್ಯೂನೊಡಾಂಟ್ ಆಗಿದ್ದು ಎದುರು ಪಾರ್ಶ್ವದ ಶೃಂಗಗಳು ಸೆಲಿನೊಡಾಂಟ್ ಆಗಿರುವದೂ ಉಂಟು. ಈ ಮಾದರಿಯ ದವಡೆ ಹಲ್ಲನ್ನು ಬ್ಯೂನೊಸೆಲಿನೊಡಾಂಟ್ ಎಂದು ಕರೆಯುತ್ತಾರೆ. ಆರ್ಟಿಯೊಡ್ಯಾಕ್ಟೈಲಗಳ ವರ್ಗೀಕರಣದಲ್ಲಿ ದವಡೆ ಹಲ್ಲುಗಳ ಹಾಗೂ ಕೈ, ಕಾಲು ಮೂಳೆಗಳ ರಚನೆ ಉಪಯುಕ್ತ ಆಧಾರಗಳು.

ಸಸ್ಯಾಹಾರಿಗಳಾಗಿದ್ದುದರಿಂದ, ಹೆಚ್ಚಿನ ಪ್ರಮಾಣದಲ್ಲಿ ಆಹಾರ ತೆಗೆದುಕೊಳ್ಳುವುದರಿಂದ ಜೀರ್ಣಾಂಗ ದೀರ್ಘವಾಗಿಯೂ ವಿಸ್ತಾರವಾಗಿಯೂ ಇದೆ. ಮೆಲುಕು ಹಾಕುವ ಆರ್ಟಿಯೊಡ್ಯಾಕ್ಟೈಲಗಳು ಆಹಾರವನ್ನು ಜೀರ್ಣಿಸಲು ನೆರವಾಗುವ ವಿಶಿಷ್ಟ ಅಂಗರಚನೆಯನ್ನು ಪಡೆದುಕೊಂಡಿವೆ. ಜಠರ ಸಾಧಾರಣವಾಗಿ ನಾಲ್ಕುಗೂಡು (ಭಾಗ) ಗಳಾಗಿ ವಿಭಾಗವಾಗಿರುತ್ತದೆ. ಒಮ್ಮೆ ನುಂಗಿದ ಆಹಾರವನ್ನು ಬಾಯಿಗೆ ಮತ್ತೆ ತೆಗೆದುಕೊಂಡು ಅಗಿದು ನುಂಗಲು ಅನುಕೂಲಿಸುವಂತಿದೆ. ಜಠರದ ಮೊದಲಿನ ಎರಡು ಗೂಡುಗಳಲ್ಲಿ ಆಹಾರ ಸೂಕ್ಷ್ಮ ಜೀವಿಗಳಿಂದ ವಿಭಜನೆಯಾಗುವುದುಂಟು. ಹಂದಿ ಮತ್ತು ನೀರಾನೆಗಳಲ್ಲಿ ಜಠರ ಸರಳವಾಗಿದ್ದು ಮೆಲುಕಾಡುವುದಕ್ಕೆ ಅನುಕೂಲವಿಲ್ಲ. ಒಂದು ಅಂಧಾಂತ್ರವನ್ನೂ (ಸೀಕಂ) ಒಂದು ಪಿತ್ತಕೋಶವನ್ನೂ ಪಡೆದಿವೆ.

ಇವುಗಳಲ್ಲಿ ಕೆಲವೇ ಸ್ತನ್ಯಗ್ರಂಥಿಗಳಿವೆ. ಅವು ಹೊಟ್ಟೆ ಮತ್ತು ತೊಡೆಯ ನಡುವಿನ ತನಕದ ತಗ್ಗಿನ ಭಾಗದಲ್ಲಿರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅವು ಹೊಟ್ಟೆಯ ಭಾಗದಲ್ಲಿರುವುವು. ಗರ್ಭಕೋಶ ಇಭಾಗವಾಗಿರುತ್ತದೆ. ನೀರಾನೆಯ ವಿನಾ ಎಲ್ಲಾ ಆರ್ಟಿಯೊಡ್ಯಾಕ್ಟೈಲಗಳಲ್ಲಿ ವೃಷಣಗಳು ವೃಷಣಕೋಶದಲ್ಲಿ ಇಳಿದಿರುವುದುಂಟು. ನೀರಾನೆಯಲ್ಲಿ ಹಾಗೆ ಇಳಿಯದೆ ಉದರದಲ್ಲೇ ಉಳಿದಿದೆ. ವಿವಿಧ ನಮೂನೆಯ ಜರಾಯುಗಳಿವೆ.

ಚರ್ಮಗ್ರಂಥಿಗಳು ಚೆನ್ನಾಗಿ ವೃದ್ಧಿಯಾಗಿವೆ. ಇವುಗಳಲ್ಲಿ ಸ್ತನ್ಯಗ್ರಂಥಿಗಳು ಮರಿಗಳಿಗೆ ಹಾಲುಣಿಸಲು ಸಹಕರಿಸುತ್ತವೆ. ಹೊಟ್ಟೆ, ತೊಡೆಯ ಮಧ್ಯದಭಾಗ, ಉದರದ ಭಾಗಗಳು, ಬೆನ್ನಿನ ಮಧ್ಯಭಾಗ, ಕಣ್ಣಿನ ಮುಂಭಾಗ, ಹಣೆ, ಪಾದ ಮುಂತಾದ ದೇಹದ ಅನೇಕ ಭಾಗಗಳಲ್ಲಿ ವಾಸನೆಯ (ಓಡರಿಫೆರಸ್) ಗ್ರಂಥಿಗಳಿವೆ. ಇವಕ್ಕೆ ಘ್ರಾಣೇಂದ್ರಿಯ ತೀರ ಪಟುವಾಗಿದೆ. ಈ ಪ್ರಾಣಿಗಳ ಶ್ರವಣ ಶಕ್ತಿಯೂ ಚುರುಕು. ಆದರೆ ದೃಷ್ಟಿಶಕ್ತಿ ಅಷ್ಟೇನೂ ಚೆನ್ನಾಗಿ ವೃದ್ಧಿಯಾಗಿಲ್ಲ. ಅಧಿಕ ಸಂಖ್ಯೆಯ ಆರ್ಟಿಯೊಡ್ಯಾಕ್ಟೈಲಗಳು ನಿಶಾ ಸಂಚಾರಿಗಳು. ಈ ಕಾರಣದಿಂದಲೇ ಅವು ಆಹಾರವನ್ನು ಆಯ್ದು ತೆಗೆದುಕೊಳ್ಳುವುದಕ್ಕೂ ಹಾಗೂ ಸ್ವಂತ ಮತ್ತು ಇತರ ಕುಲಗಳ ಪ್ರಾಣಿಗಳನ್ನು ಗುರುತಿಸುವುದಕ್ಕೂ ವಾಸನೆಯನ್ನೇ ಅವಲಂಬಿಸಿವೆ. ಹಗಲಿನಲ್ಲಿ ಹಾಗೂ ಬಯಲಿನಲ್ಲಿ ವಾಸಿಸುವ ಆರ್ಟಿಯೊಡ್ಯಾಕ್ಟೈಲಗಳು, ತಾವು ಬದುಕಿ ಉಳಿಯಲು ದೃಷ್ಟಿಗಿಂತ ವಾಸನೆ ಮತ್ತು ಧ್ವನಿಗಳ ಸಹಾಯವನ್ನು ಅವಲಂಬಿಸಿವೆ. ವಾಸನೆ ಇವುಗಳಲ್ಲಿ ಸಂಘಜೀವನವನ್ನು ಉತ್ತೇಜಿಸುವದೂ ಅಲ್ಲದೆ ಅದಕ್ಕೆ ಮಾರ್ಗದರ್ಶನವನ್ನೂ ನೀಡುವುದು.

ಆರ್ಟಿಯೊಡ್ಯಾಕ್ಟೈಲಗಳು ನೆಲದ ಮೇಲೆ ವಾಸಿಸುವ ಪ್ರಾಣಿಗಳು. ಆದರೆ ಮೇಕೆಗಳಂತೆ ಕೆಲವು ಮೇಲೆ ಹತ್ತಬಹುದು. ನೀರಾನೆಯಂತೆ ನೀರಿನ ವಸತಿಯಲ್ಲಿರಬಹುದು. ಬದುಕಿರುವ ಯಾವ ಆರ್ಟಿಯೊಡ್ಯಾಕ್ಟೈಲವೂ ವೃಕ್ಷಜೀವಿಯಲ್ಲ. ಸಂಪೂರ್ಣವಾಗಿ ಜಲವಾಸಿಯೂ ಅಲ್ಲ. ಎಲ್ಲವೂ ಸಾಮಾನ್ಯವಾಗಿ ಸಸ್ಯಾಹಾರಿಗಳು. ಆದರೆ ಹಂದಿಗಳು ಮಾತ್ರ ಸರ್ವಭಕ್ಷಕಗಳು. ಹೆಚ್ಚಿನ ಆರ್ಟಿಯೊಡ್ಯಾಕ್ಟೈಲಗಳು ಹಿಂಡುಜೀವಿಗಳು. ಕೆಲವು ಜಾತಿಗಳು, ಗಮನಾರ್ಹವಾಗಿ ಹಲವು ಎರಳೆಗಳು (ಆಂಟಿಲೋಪ್), ಕಾಟಿಗಳು (ಬೈಸನ್), ಕ್ಯಾರಿಬೊ ಹಾಗೂ ಬೆಳ್ದುಟಿಯ ಪೆಕ್ಯಾರಿಸ್‍ಗಳು ನೂರು ಇಲ್ಲವೆ ಸಾವಿರಾರು ಸಂಖ್ಯೆಯ ಮಂದೆಗಳಲ್ಲಿ ಜೀವಿಸುತ್ತವೆ.

ಗಂಡು ಮತ್ತು ಹೆಣ್ಣುಗಳು ಋತುಕಾಲದಲ್ಲಿ ಬೆರೆಯುವುದನ್ನು ಬಿಟ್ಟರೆ, ಯಾವಾಗಲೂ ಪ್ರತ್ಯೇಕವಾಗಿಯೇ ಜೀವಿಸುತ್ತವೆ. ಗಂಡುಗಳು ಹೆಣ್ಣುಗಳ ಮೇಲಿನ ಪ್ರಭುತ್ವಕ್ಕೋಸ್ಕರ ಒಂದರೊಡನೊಂದು ಹೋರಾಡುವುದುಂಟು. ಸಾಮಾನ್ಯವಾಗಿ ಸಮಶೀತೋಷ್ಣವಲಯದ ಪ್ರಾಣಿಗಳಲ್ಲಿ ಕಾಮೋದ್ರೇಕ ಮಾಗಿಕಾಲದಲ್ಲಿ ಉಂಟಾದರೆ ಉಷ್ಣವಲಯದ ಪ್ರಾಣಿಗಳಲ್ಲಿ ವರ್ಷದ ವಿವಿಧ ಕಾಲಗಳಲ್ಲಿ ಸಂಭವಿಸಬಹುದು. ಗರ್ಭಧಾರಣೆಯ ಕಾಲ ಸಣ್ಣ ಆರ್ಟಿಯೊಡ್ಯಾಕ್ಟೈಲಗಳಿಗಿಂತ ದೊಡ್ಡವುಗಳಲ್ಲಿ ದೀರ್ಘವಾಗಿರುತ್ತದೆ. ಸಮಶೀತೋಷ್ಣ ವಲಯದಲ್ಲಿರುವ ಮೆಲುಕುಪ್ರಾಣಿಗಳಿಗೆ ವಸಂತಕಾಲದಲ್ಲೂ ಉಷ್ಣವಲಯಗಳಲ್ಲಿರುವ ಪ್ರಾಣಿಗಳಿಗೆ ಮಳೆಗಾಲದ ಪ್ರಾರಂಭದ ಸರಿ ಸುಮಾರಿಗೂ ಒಂದು, ಎರಡು ಇಲ್ಲವೆ ಅಪೂರ್ವವಾಗಿ ಮೂರು ಮರಿಗಳು ಹುಟ್ಟುವುದುಂಟು. ಸಾಕಿದ ಹಂದಿಗಳು ಒಂದು ಸೂಲಿಗೆ ಸಾಮಾನ್ಯವಾಗಿ ಹದಿನಾಲ್ಕರವರೆಗೆ ಮರಿಗಳನ್ನು ಹಾಕಬಹುದು. ಗೊರಸುಳ್ಳ ಈ ಎಳೆಯ ಸ್ತನಿಗಳು ಹುಟ್ಟಿದ ಕೆಲವೇ ಗಂಟೆಗಳೊಳಗೆ ತಮ್ಮ ತಾಯಿಯನ್ನು ಹಿಂಬಾಲಿಸುವುವು.

ಆಸ್ಟ್ರೇಲಿಯ, ಅಂಟಾರ್ಕ್‍ಟಿಕ ಪ್ರದೇಶಗಳನ್ನು ಬಿಟ್ಟರೆ ಆರ್ಟಿಯೊಡ್ಯಾಕ್ಟೈಲಗಳು ಎಲ್ಲ ಭೂಖಂಡಗಳಲ್ಲೂ ವಾಸಿಸುತ್ತವೆ. ಹಂದಿ, ಜಿಂಕೆ ಮತ್ತು ಎಮ್ಮೆಗಳು, ನ್ಯೂಗಿನಿ, ನ್ಯೂಜಿಲೆಂಡ್, ಟಾಸ್ಮೇನಿಯ ಹಾಗೂ ಅಂಟಾರ್ಕ್‍ಟಿಕ ಪ್ರದೇಶದ ದ್ವೀಪಗಳನ್ನು ಬಿಟ್ಟರೆ, ಹಲವು ದೊಡ್ಡ ದ್ವೀಪಗಳಲ್ಲೂ ಸಾಕುಪ್ರಾಣಿಗಳಾಗಿ ಜೀವಿಸುತ್ತವೆ. ಬೇಸಾಯ ಹಾಗೂ ಬೇಟೆಯ ಆರ್ಟಿಯೊಡ್ಯಾಕ್ಟೈಲಗಳನ್ನು ಮಾನವ ಸರಿಯಾಗಿ ಮೇವು ದೊರಕುವ ಎಲ್ಲ ಭಾಗಗಳಿಗೂ ತಂದು ಸಾಕುತ್ತಿದ್ದಾನೆ.

ಆರ್ಟಿಯೊಡ್ಯಾಕ್ಟೈಲಗಳ ವರ್ಗೀಕರಣ: ಬದುಕಿರುವ ಹಾಗೂ ಅಳಿದು ಹೋದ ಆರ್ಟಿಯೊಡ್ಯಾಕ್ಟೈಲಗಳನ್ನು ಸೂಯಿಫಾರಮ್‍ಗಳು, ಟೈಲೊಪೋಡಗಳು ಮತ್ತು ರೂಮಿನೆನ್ಷಿಯ ಎಂಬ ಮೂರು ಉಪಗಣಗಳಲ್ಲಿ (ಸಬ್ ಆರ್ಡರ್) ವಿಂಗಡಿಸಿದ್ದಾರೆ.

ಸೂಯಿ ಫಾರಮ್‍ಗಳು: ಹಂದಿ, ಪೆಕ್ಯಾರಿಸ್, ನೀರಾನೆ ಇವಕ್ಕೆ ಉದಾಹರಣೆಗಳು. ಇವುಗಳ ಜಠರಗಳು ಹೆಚ್ಚು ಕಡಿಮೆ ವಿಶೇಷ ಭಾಗಗಳಾಗಿ ಪುನರ್‌ವಿಭಾಗಿಸಲ್ಪಟ್ಟಿದ್ದರೂ ಇವುಗಳೇನೂ ಮೆಲಕುಹಾಕುವುದಿಲ್ಲ. ಇವುಗಳಲ್ಲಿ ಸಾಮಾನ್ಯವಾಗಿ ಒಂದರಿಂದ ಮೂರರವರೆಗೆ ಮೇಲ್ದವಡೆಯ ಪ್ರತಿ ಪಾರ್ಶ್ವದಲ್ಲೂ ಬಾಚಿ ಹಲ್ಲುಗಳಿವೆ. ಕೆಳಗಿನ ಬಾಚಿ ಹಲ್ಲುಗಳು ಮುಂದಕ್ಕೆ ಚಾಚಿಕೊಂಡಿವೆ. ಕೋರೆಹಲ್ಲುಗಳು ಚೆನ್ನಾಗಿ ಬೆಳೆದಿದ್ದು ದಾಡಿಯಂತಿರುತ್ತವೆ. ಕೋರೆ ಹಲ್ಲುಗಳು ಯಾವಾಗಲೂ ಬೆಳೆಯುತ್ತಿರುತ್ತವೆ. ದವಡೆಗಳು ಬ್ಯೂನೋಡಾಂಟ್ ರೀತಿಯವು. ಕಣ್ಣಿನ ಗೂಡು ಟೆಂಪೊರಲ್ ಫಾಸದಿಂದ ಬೇರ್ಪಟ್ಟಿಲ್ಲ. ಕೊಂಬುಗಳಿಲ್ಲ. ಅಲ್ನ ಹಾಗೂ ಫಿಬ್ಯುಲ ವಿಶೇಷವಾಗಿ ಕಾಣಿಸಿಲ್ಲವೆಂದೇ ಹೇಳಬಹುದು.

ಹಂದಿಗಳು ಯೂರೋಪಿನಲ್ಲಿ ಸುಮಾರು ೨೫,೦೦೦,೦೦೦ – ೩೦,೦೦೦,೦೦೦ ವರ್ಷಗಳ ನಡುಗಾಲದ ಪೂರ್ವದಲ್ಲಿ ಕಾಣಿಸಿಕೊಂಡವು. ಆಲಿಗೊಸೀನಿನ ಕೊನೆಗಾಲದಲ್ಲಿದ್ದ ಪೆಲಿಯೋಖೀರಸ್ ಸೂಯಿಡೆ ಎಂಬ ನೈಜ ಹಂದಿಯ ಬಳಗದ ಮೂಲ ಪ್ರಾಣಿಮಾದರಿ. ಏಷ್ಯಾದ ಪಿಗ್ಮಿ ಹಂದಿ (ಪೋರ್ಕುಲ), ಈಸ್ಟ್ ಇಂಡಿಯಾದ ಬ್ಯಾಬಿರುಸ್ಸ, ಆಫ್ರಿಕಾದ ನದಿಹಂದಿ (ಪೋಟಮೋಖೀರಸ್) ಹಾಗೂ ಫ್ರೆಷ್ ಹಂದಿ, ಹೈಲೋಖಿರಸ್ ಮುಂತಾದವುಗಳೇ ಹಂದಿಯ ಬಳಗದ ಬದುಕಿರುವ ಇನ್ನಿತರ ಪ್ರತಿನಿಧಿಗಳು.

ಟಯಸ್ಸೂಯಿಡೆ ಬಳಗದ ನೈಜ ಪೆಕ್ಕರಿಗಳು ಅಮೆರಿಕಾದ ಉಷ್ಣವಲಯದಲ್ಲಿರುವ ಕೇವಲ ಎರಡು ಜಾತಿಗಳಿಂದ ಪ್ರತಿನಿಧಿಸಲ್ಪಟ್ಟಿವೆ–ಕೊರಳುಪಟ್ಟಿಯ ಪೆಕ್ಕರಿ (ಪಕ್ಕರಿ ಜಾಕು) ಹಾಗೂ ದೊಡ್ಡದಾದ ಬೆಳ್ದುಟಿಯ ಪೆಕ್ಕರಿ (ಟಯಸ್ಸು ಪೆಕ್ಕರಿ).

ನೀರಾನೆಗಳ ಬಳಗ ಮೂರು ಕುಲಗಳನ್ನೊಳಗೊಂಡಿದೆ. ಇವುಗಳಲ್ಲೊಂದು ಕುಲವಾದ ಹೆಕ್ಸಪ್ರೋಟೋಡಾನ್ ಮಾತ್ರ ನಿರ್ನಾಮವಾಗಿ ಹೋಗಿದೆ. ಹಿಪ್ಪೊಪೊಟ್ಯಾಮಸ್ ಆಂಫೀಬಿಯಸ್ ಎನ್ನುವ ನೀರಾನೆ ಈಗ ಆಫ್ರಿಕಾದಲ್ಲಿ ಸಹಾರಾದ ದಕ್ಷಿಣಕ್ಕೆ ಮಿತಿಗೊಳಿಸಲ್ಪಟ್ಟಿದೆ. ನದಿಯ ಕುದುರೆ ಎಂದು ಕರೆಸಿಕೊಳ್ಳುವ ನೀರಾನೆ ಸುಮಾರು ೩.೬ ಮೀ. ಉದ್ದವಿರುವುದುಂಟು. ಇದು ಚೆನ್ನಾಗಿ ಈಜಬಲ್ಲದು. ಈ ಬಳಗದ ಮೂರನೆಯ ಪ್ರತಿನಿಧಿ ಪಶ್ಚಿಮ ಆಫ್ರಿಕಾದ ಗಿಡ್ಡ ನೀರಾನೆಯಾದ ಖಿರೋಪ್ಸಿಸ್ ಲೈಬೀರಿಯಾನ್ಸಿಸ್. ಸ್ಥಲಜಲ ಸಂಬಂಧಿಯಾದ ನೀರಾನೆ ಸಾಮಾನ್ಯವಾಗಿ ನಾಲ್ಕು ಟನ್‍ಗಳಷ್ಟು ಭಾರಕ್ಕೆ ಬೆಳೆಯುವದು.

ಟೈಲೊಪೋಡ : ಟೈಲೊಪೋಡ ಉಪಕ್ರಮ ಕ್ಯಾಮಿಲಿಡೆ ಮತ್ತು ಕ್ಸಿಫೋಡಾಂಟಿಡೆ ಎಂಬ ಎರಡು ಬಳಗಗಳಿಂದ ಕೂಡಿದೆ. ಕ್ಯಾಮಿಲಿಡೆ ಒಂಟೆಗಳನ್ನು ಹಾಗೂ ಲಾಮಗಳನ್ನು ಒಳಗೊಂಡಿದೆ. ಆದರೆ ಕ್ಸಿಫೋಡಾಂಟಿಡೆ ಬಳಗ ಕೆಲವು ಅಳಿದುಹೋದ ಪ್ರಾಣಿಗಳಿಂದ ಕೂಡಿದೆ. ಸಿಂಬಿಯಿರುವ ಕಾಲ್ಬೆರಳುಗಳು, ಮೆಲುಕಾಡಲು ಅನುಗೊಳಿಸಿರುವ ಜಠರ, ಗಟ್ಟಿಯಾದ ವಪೆ, ಅಂಡಾಕಾರದ ಕೆಂಪುರಕ್ತಕಣಗಳು, ಬಾಚಿಹಲ್ಲುಗಳಿಂದ ಭಿನ್ನವಾಗಿರುವ ಕೋರೆಹಲ್ಲುಗಳು ಮತ್ತು ಸೆಲಿನೋಡಾಂಟ್ ಹಾಗೂ ಹಿಪ್ಸೊಡಾಂಟ್ ರೀತಿಯ ದವಡೆ ಹಲ್ಲುಗಳು ಒಂಟೆಗಳ ವೈಶಿಷ್ಟ್ಯ. ಒಂಟೆಗಳ ಹೊಟ್ಟೆಯಾಗಲಿ ಡುಬ್ಬವಾಗಲಿ ಜನಸಾಮಾನ್ಯರು ಹೇಳುವಂತೆ ನೀರಿನ ಕೋಶವಾಗಿ ಉಪಯೋಗವಾಗುವುದಿಲ್ಲ.

ಒಂಟೆಗಳಲ್ಲಿ ಎರಡು ಪ್ರಭೇದಗಳಿವೆ. ಅರೇಬಿಯದ ಒಂದು ಡುಬ್ಬವುಳ್ಳ ಕ್ಯಾಮೆಲಸ್ ಡ್ರೊಮೆಡೇರಿಯಸ್ ಎನ್ನುವದು ಒಂದು. ತುರ್ಕಿಸ್ತಾನದಲ್ಲಿ ವನ್ಯಮೃಗವಾಗಿರುವ ಎರಡು ಡುಬ್ಬವುಳ್ಳ ಕ್ಯಾಮೆಲಸ್ ಬ್ಯಾಕ್ಟ್ರಿಯಾನಸ್ ಎನ್ನುವುದು ಮತ್ತೊಂದು. ದಕ್ಷಿಣ ಅಮೆರಿಕಾಕ್ಕೆ ಸೀಮಿತವಾಗಿರುವ ಲಾಮ ಎನ್ನುವ ಪ್ರಾಣಿ ಕ್ಯಾಮಿಲಿಡೆ ಬಳಗಕ್ಕೆ ಸೇರಿದ ಇನ್ನೊಂದು

ಜೀವಿ. ಒಂಟೆಗಿಂತ ಗಾತ್ರದಲ್ಲಿ ಚಿಕ್ಕದು. ಒಂಟೆಗಿರುವಂತೆ ಡುಬ್ಬವಿಲ್ಲ. ತುಪ್ಪಟವನ್ನು ಹೊಂದಿರುವ ಈ ಲಾಮ ದಕ್ಷಿಣ ಅಮೆರಿಕಾದ ಹೇರು ಹೊರುವ ಪ್ರಾಣಿ.

ಯೂರೋಪಿನ ಇಯೋಸೀನ್‌ನ ನಡುಗಾಲ ಹಾಗೂ ಆಲಿಗೋಸೀನ್‌ನ ಕೊನೆಗಾಲಗಳಲ್ಲಿದ್ದ, ಪ್ರಾಚೀನ ಪ್ರಾಣಿಗಳೆನಿಸಿದ ಚಂದ್ರ–ದಂತ ಪ್ರಾಣಿಗಳು (ಸೆಲಿನೊಡಾಂಟ್) ಕ್ಸಿಫೊಡಾಂಟಿಡೆ ಬಳಗಕ್ಕೆ ಸೇರಿದ ಜೀವಿಗಳು. ಒಂಟೆಗಳಿಗೆ ಬಹು ಸಮೀಪವಾಗಿ ಕಂಡರೂ ಪೂರ್ವಿಕರಲ್ಲ. ಟೈಲೊಪೋಡಗಳಿಗೆ ಕೊಂಬಿಲ್ಲದಿರುವುದೇ ವೈಶಿಷ್ಟ್ಯ.

ರೂಮಿನೆನ್ಷಿಯ: ಮೆಲಕು ಹಾಕುವ, ಗೊರಸುಳ್ಳ ಪ್ರಾಣಿ ಸಮೂಹ. ಸಸ್ಯಾಹಾರಿಗಳು. ರೂಮಿನೆನ್ಷಿಯ ಎಂಬ ಹೆಸರು ಇವುಗಳ ಮೆಲುಕಾಡುವ ಸ್ವಭಾವಕ್ಕೆ ಅನ್ವಯಿಸುತ್ತದೆ. ಜಠರ ಪರಸ್ಪರ ಸಂಬಂಧವಿರುವ ನಾಲ್ಕು ಕೋಣೆಗಳಾಗಿದ್ದು ಮೆಲುಕಾಡುವುದಕ್ಕೆ ಸಾಧಕವಾಗಿದೆ. ಅವಸರದಲ್ಲಿ ತಿಂದ ಆಹಾರವನ್ನು, ಅನಂತರ ಪುನಃ ಹೊಟ್ಟೆಯಿಂದ ಬಾಯಿಗೆ ತೆಗೆದುಕೊಂಡು ಹಲ್ಲುಗಳಿಂದ ಅಗಿದು ತಿನ್ನುವುದೇ ಮೆಲುಕಾಡುವುದು. ಆಹಾರವನ್ನು ನುಂಗಿದಾಗ, ಮೊದಲು ರೂಮೆನ್ ಎಂಬ ಮೊದಲಿನ ಕೋಣೆಗೆ ಬರುತ್ತದೆ. ಆಹಾರ ಇಲ್ಲಿ ಹುಳಿಯುವಿಕೆಯಿಂದ (ಫರ್ಮೆಂಟೇಷನ್) ಮೃದುವಾಗುತ್ತದೆ. ಅನಂತರ ಜೇನುಗೂಡಿನಂತಿರುವ ರೆಟಿಕ್ಯುಲಮ್ ಎಂಬ ಎರಡನೆಯ ಕೋಣೆಯನ್ನು ಪ್ರವೇಶಿಸುತ್ತದೆ. ಆಹಾರ ಮತ್ತಷ್ಟು ಹುಳಿಯುತ್ತದೆ. ಆಹಾರ ಉಂಡೆಗಳ ರೂಪದಲ್ಲಿ ಪುನಃ ಬಾಯಿಗೆ ಬರುತ್ತದೆ. ಪ್ರತಿಯೊಂದು ಉಂಡೆಯನ್ನೂ ಅದು ಪೂರ್ಣವಾಗಿ ಜಗಿದು ಮತ್ತೆ ನುಂಗುತ್ತದೆ. ದ್ರವ ರೂಪದ ಆಹಾರ ರೆಟಿಕ್ಯುಲಮ್ ಒರಟು ಭಾಗಗಳ ಮೂಲಕ ಸೋಸಲ್ಪಟ್ಟು, ಸಾಲ್ಟೇರಿಯಮ್ ಎಂಬ ಮೂರನೆಯ ಹಾಗೂ ಅಬೋಮೇಸಮ್ ಎಂಬ ನಾಲ್ಕನೆಯ ಕೋಣೆಗಳಲ್ಲಿ ಜೀರ್ಣಕ್ರಿಯೆ ಮುಂದುವರಿಯುತ್ತದೆ.

ಮೆಲಕುಹಾಕುವ ಪ್ರಾಣಿಗಳ ಐದು ಉಪಶ್ರೇಣಿಗಳಿವೆ. ಅತ್ಯಂತ ಪ್ರಾಚೀನವಾದವುಗಳೇ ಟ್ರಾಗುಲಿಡೆ ಬಳಗದ ಶೆವ್ರೊಟೇನ್‌ಗಳು. ಇವುಗಳ ಪಳೆಯುಳಿಕೆಗಳನ್ನು ಮಯೋಸೀನ್ ಕಾಲದವರೆಗೆ ಗುರುತಿಸಬಹುದು. ಇನ್ನೂ ಪ್ರಾಚೀನವೆನ್ನಬಹುದಾದ ಇಯೋಸೀನ್‌ನ ಪ್ರಾರಂಭದಲ್ಲಿದ್ದ ಜಿಲೋಸಿಡೆ ಎಂಬ ಗುಂಪಿನಿಂದ ಇದು ವಿಕಾಸಗೊಂಡಿದೆ.

ಸೆರ್‌ವಿಡೆ ಬಳಗ ಜಿಂಕೆಗಳನ್ನೊಳಗೊಂಡಿದೆ. ಈ ಸೆರ್‌ವಿಡೆ ಬಳಗ ಆಲಿಗೋಸೀನ್‌ನ ನಡುಗಾಲದಲ್ಲಿದ್ದ ಮುಂಚಿನ ಟ್ರಾಗುಲಾಯಸಿಗಳಿಂದ ವಿಕಾಸ ಪಡೆದಿದೆ. ಜಿಂಕೆಗಳಿಗೆ ಕಾಲಕಾಲಕ್ಕೆ ಉದುರಿ ಪುನಃ ಬೆಳೆಯುವಂಥ ಗಟ್ಟಿಯಾದ ಕೊಂಬುಗಳಿರುತ್ತವೆ. ಗಂಡು ಜಿಂಕೆಗಳಿಗೆ ಮಾತ್ರ ಕೊಂಬುಗಳಿರುತ್ತವೆ. ಜಿಂಕೆಯ ವರ್ಗಕ್ಕೆ ಸೇರಿದ ಇನ್ನಿತರ ಪ್ರಾಣಿಗಳಲ್ಲಿ ಚಿತ್ರಾಂಗ (ಸ್ಪಾಟೆಡ್ ಡೀರ್), ಸಾಂಬಾರ್ ಕಡವೆ (ಸ್ಟಾಗ್), ಹಿಮ ಸಾರಂಗ (ರೇನ್‌ಡೀರ್), ಮೂಸ್, ಕ್ಯಾರಿಬೂ ಮತ್ತು ಎಲ್ಕ್ ಮುಖ್ಯವಾದವು.

ಜಿರಾಫೆಯ ಬಳಗ ಏಷ್ಯಾದಲ್ಲಿ ಮಯೋಸೀನ್ ಕಾಲದಲ್ಲಿ ಕಾಣಿಸಿಕೊಂಡಿತು. ಅನಂತರ ಯೂರೋಪ್ ಹಾಗೂ ಆಫ್ರಿಕಕ್ಕೂ ವ್ಯಾಪಿಸಿತು. ಸೆರ್‌ವಿಡೆ ಮತ್ತು ಬೋವಿಡೆ ಬಳಗಗಳಿಗೆ ಸಮೀಪ ಬಾಂಧವ್ಯವನ್ನು ಪಡೆದಿದೆ. ಸೆರ್‌ವಿಡೆಗೆ ತುಂಬಾ ಹತ್ತಿರವಾಗಿದೆ. ಜಿರಾಫೆ ಸುಮಾರು ೬ ಮೀ. ಎತ್ತರಕ್ಕೆ ಬೆಳೆಯಬಲ್ಲದು. ಗಂಡು ಹಾಗೂ ಹೆಣ್ಣು ಜಿರಾಫೆಗಳ ಹಣೆಯ ಮೇಲ್ಭಾಗದಲ್ಲಿ ಒಂದು ಜೊತೆ ಗಿಡ್ಡವಾದ ಕೊಂಬುಗಳಿರುವುದುಂಟು. ಈಗ ಆಫ್ರಿಕಾಕ್ಕೆ ಮಾತ್ರ ಸೀಮಿತವಾಗಿದೆ. ಜಿರಾಫೆಗಳು (ಜಿರಾಫ ಜಾತಿ) ಹಾಗೂ ಒಕಾಪಿಗಳು (ಒಕಾಪಿ ಜಾತಿ) ಇವೇ ಈಗ ಜೀವಂತವಾಗಿರುವ ಜಿರಾಫೆಯ ಬಳಗದ ಕುಲಗಳು. ನೀಳ್ಗತ್ತಿನ ಸ್ತನಿಗಳಾದ ಜಿರಾಫೆಗಳು ನಡೆಯುವಾಗ ಒಂದು ಪಾರ್ಶ್ವದ ಮುಂಗಾಲು ಹಾಗೂ ಹಿಂಗಾಲು ಒಟ್ಟಿಗೆ ಚಲಿಸುತ್ತವೆ.

ಉತ್ತರ ಅಮೆರಿಕಾದಲ್ಲಿ ಆರ್ಟಿಲೊಕ್ಯಾಪ್ರಿಡೆ ಬಳಗ ಮಯೋಸೀನ್ ಕಾಲದಲ್ಲಿ ಕಂಡುಬಂದಿತು. ಈ ಬಳಗದ ಜೀವಿಯಾದ ಪ್ರಾಂಗ್‌ಹಾರ್ನ್‌ನ ಕೊಂಬುಗಳು, ಜಿಂಕೆಗಳಲ್ಲಿದ್ದಂತೆ ಎರಡಾಗಿ ಕವಲೊಡೆದಿವೆ. ಇವುಗಳ ಕೊಂಬಿನ ಹೊರಹೊದಿಕೆ ವರ್ಷಂಪ್ರತಿ ಉದುರಿ ಬೀಳುತ್ತದೆ. ನೈಜ ಎರಳೆಗಳಲ್ಲಿರುವಂತೆ ಇವುಗಳಲ್ಲಿ ಪ್ರತಿಯೊಂದು ಕೊಂಬಿನಲ್ಲಿರುವ ಮಧ್ಯಭಾಗದ ಅಸ್ಥಿ ಏನೇ ಆದರೂ ತಲೆಬುರುಡೆಗೆ ಸ್ಥಿರವಾಗಿ ನಾಟಿಕೊಂಡಿರುತ್ತದೆ. ಮೊದಲು ಈ ಬಳಗದಲ್ಲಿ ವಿಲಕ್ಷಣವಾದ ಕೊಂಬುಗಳನ್ನುಳ್ಳ ಹಲವು ಪ್ರಾಣಿಗಳು ಹುಟ್ಟಿದ್ದವು. ಆದರೆ ಈಗ ಪ್ರಾಂಗ್‌ಹಾರ್ನ್ ಎರಳೆಯ ಒಂದು ಜಾತಿ ಮಾತ್ರ ಜೀವಂತವಾಗಿದೆ.

ಮೆಲಕುಹಾಕುವ ಪ್ರಾಣಿಗಳಲ್ಲಿ ಅತ್ಯಂತ ವಿಶೇಷವಾದ ವೈಶಿಷ್ಟ್ಯವನ್ನುಳ್ಳದ್ದೂ ವೈವಿಧ್ಯವನ್ನುಳ್ಳದ್ದೂ ಬೋವಿಡೆ ಬಳಗ. ಈ ಬಳಗದ ಪ್ರಾಣಿಗಳನ್ನು ಟೊಳ್ಳುಗೊಂಬಿನ ಮೆಲಕುಹಾಕುವ ಪ್ರಾಣಿಗಳೆಂದು ಕರೆಯುವುದುಂಟು. ಈ ಬಳಗ ಏಷ್ಯಾದಲ್ಲಿ ಮಯೋಸೀನ್‌ನ ಕಾಲಾವಧಿಯಲ್ಲಿ ಕಾಣಿಸಿಕೊಂಡಿತು. ಅನಂತರ ಇದು ಯೂರೋಪ್, ಆಫ್ರಿಕಾ ಮತ್ತು ಹೊಸ ಪ್ರಪಂಚಕ್ಕೂ ಹರಡಿತು. ಈ ಬಳಗದ ಜೀವಿಸಿರುವ ಪ್ರತಿನಿಧಿಗಳೆಂದರೆ– ಸಾಕಿದ ದನಕರುಗಳು, ಆಡುಗಳು, ಕುರಿಗಳು, ಎರಳೆಗಳು, ನೀಲಗಾಯಿಗಳು(ನೀಲ್ಗೇಸ್), ಚಿಗರಿಗಳು, ಆಫ್ರಿಕಾದ ಪ್ರಾಣಿಗಳು ಹಾಗೂ ಟೊಳ್ಳಾದ ಕೊಂಬನ್ನುಳ್ಳ ಇನ್ನಿತರ ಮೆಲಕುಹಾಕುವ ಪ್ರಾಣಿಗಳು. ಸಾಮಾನ್ಯವಾಗಿ ಗಂಡು ಮತ್ತು ಹೆಣ್ಣುಗಳೆರಡರಲ್ಲೂ ಒಂದು ಜೊತೆ ಟೊಳ್ಳು ಕೊಂಬುಗಳಿರುತ್ತವೆ. ಇವುಗಳಲ್ಲಿ ಕವಲೊಡೆಯುವ ಕೊಂಬುಗಳು ಉದುರಿಬೀಳುವುದಿಲ್ಲ. (ಬಿ.ಎಚ್.ಎಂ.)

**ಆರ್ಡ್‌ವಾಕ್:** ಈಡೆಂಟೇಟಾ ಗಣದ ಆರಿಕ್ಟೆರೊಪೋಡಿಡೆ ಕುಟುಂಬಕ್ಕೆ ಸೇರಿದ ಒಂದು ಸ್ತನಿ. ಇದು ದಕ್ಷಿಣ ಆಫ್ರಿಕ ಖಂಡಕ್ಕೆ ಮಾತ್ರ ಮೀಸಲಾಗಿದೆ.

ಪ್ಲಿಯೋಸೀನ್ ಕಾಲದ ಕಡೆಯ ಭಾಗದಿಂದಲೂ ಇದರ ಉತ್ತಮ ಅವಶೇಷಗಳು ದೊರೆತಿವೆ. ಅತ್ಯಂತ ದೊಡ್ಡ ಶರೀರ, ಉದ್ದವಾದ ಮೂತಿ. ಶರೀರದ ಮೇಲೆ ತೆಳುವಾಗಿ ರೋಮಗಳು ಹರಡಿಕೊಂಡಿವೆ. ಕಿವಿಗಳು ಉದ್ದ. ಬೆನ್ನು ಕಮಾನಿನಂತೆ ಬಾಗಿದೆ. ಮುಂದಿನ ಕಾಲಿನಲ್ಲಿ ೪ ಬೆರಳು, ಹಿಂದಿನ ಕಾಲಿನಲ್ಲಿ ೫ ಬೆರಳು. ಹಲ್ಲುಗಳಿಗೆ ಬೇರುಗಳಿಲ್ಲ. ಮೇಲುದವಡೆಯಲ್ಲಿ ೮–೧೦ ಹಲ್ಲುಗಳು ಇವೆ. ಹಗಲು ವೇಳೆಯಲ್ಲಿ ಚಿಕ್ಕ ಚಿಕ್ಕ ಗುಹೆಗಳಲ್ಲಿ ನಿದ್ರಿಸಿದ್ದು ರಾತ್ರಿಯ ಕಾಲದಲ್ಲಿ ಮಾತ್ರ ಹೊರಗೆ ಬಂದು ಗೆದ್ದಲು ಹುಳು ಮತ್ತು ಇರುವೆಗಳನ್ನು ತಿಂದು ಬದುಕುತ್ತದೆ. ಇತ್ತೀಚೆಗೆ ಇವುಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. (ಎಲ್.ಎಸ್.ಜಿ.)

**ಆರ್ಡ್‌ವುಲ್ಫ್ :** ಒಂದು ಸ್ತನಿ. ದಕ್ಷಿಣ ಮತ್ತು ಪೂರ್ವ ಆಫ್ರಿಕ ದೇಶಗಳಲ್ಲಿ ವಾಸಿಸುತ್ತದೆ. ಆಕಾರದಲ್ಲಿ ತೋಳದಷ್ಟು ದೊಡ್ಡದು. ಆದರೆ ಹಿಂಗಾಲುಗಳು ಎತ್ತರವಾಗಿರುವುದರಿಂದ ತೋಳಕ್ಕಿಂತ ಎತ್ತರವಾಗಿ ನಿಲ್ಲುತ್ತದೆ.

ಅದರ ಕೂದಲು ಹಳದಿ ಅಥವಾ ಕೆಂಪುಮಿಶ್ರ ಕಂದುಬಣ್ಣದಿಂದ ಕೂಡಿದ್ದು, ಒರಟಾಗಿ ಉಣ್ಣೆಯಂತಿರುತ್ತದೆ. ಎರಡು ಪಕ್ಕದಲ್ಲೂ ಆರು ಪಟ್ಟೆಗಳಿವೆ. ಬಾಲ ಸುಮಾರು ಉದ್ದವಾಗಿ ದಪ್ಪವಾಗಿರುತ್ತದೆ. ಕತ್ತಿನ ಮತ್ತು ಬೆನ್ನಿನ ಮೇಲೆ ಕೇಸರಿ ಕೂದಲು ಇದೆ. ನೋಡುವುದಕ್ಕೆ ಚಿಕ್ಕ ಕತ್ತೆ ಕಿರುಬದಂತೆ ಕಾಣುತ್ತದೆ. ಆದರೆ ಕತ್ತೆಕಿರುಬಕ್ಕಿಂತ ಇದರ ದವಡೆಗಳು ಬಲಹೀನವಾಗಿವೆ; ಮುಸುಡಿ ಮೊನಚಾಗಿದೆ; ಕಿವಿಗಳು ಇನ್ನೂ ಉದ್ದವಾಗಿವೆ, ಇದರ ಮುಖ್ಯ ಆಹಾರ ಗೆದ್ದಲು ಹುಳು, ನೊಣಗಳು, ಮರಿಹುಳುಗಳು ಮತ್ತು ಹಣ್ಣು. ನೆಲದಲ್ಲಿ ಹಳ್ಳತೋಡಿ ಅದರಲ್ಲಿ ವಾಸಿಸುತ್ತದೆ. ಇತರ ಹಳ್ಳವಾಸಿಗಳಂತೆ ಆರ್ಡ್‌ವುಲ್ಫ್ ತುಂಬ ಭಯಸ್ತ ಮತ್ತು ಹೇಡಿಯಾದ ಪ್ರಾಣಿ. ರಾತ್ರಿ ಸಂಚಾರಿಯಾದುದರಿಂದ ಇದು ಸಾಧಾರಣವಾಗಿ ಕಣ್ಣಿಗೆ ಬೀಳುವುದಿಲ್ಲ. (ಎಸ್.ಎನ್.ಕೆ.)

**ಆರ್ತ್ರೊಪೊಡ :** ಪ್ರಾಣಿ ಪ್ರಪಂಚದಲ್ಲೇ ಅತ್ಯಂತ ಬೃಹತ್ ಸಂಖ್ಯೆಯ, ವೈವಿಧ್ಯತೆಯ ಜೀವ ಪ್ರಭೇದಗಳನ್ನು ಹೊಂದಿರುವ ಗುಂಪು (ಸಂಧಿಪದಿಗಳು). ಜಗತ್ತಿನಲ್ಲಿ ವಾಸಿಸುವ ಶೇ. 80ರಷ್ಟು ಪ್ರಭೇದಗಳು ಈ ಗುಂಪಿನಲ್ಲಿವೆ. ಸಂಧಿಪದಿಗಳ ಹೊರಚರ್ಮ (ಕ್ಯೂಟಿಕಲ್) ಕೈಟಿನ್‌ನಿಂದಾಗಿದೆ. ಕ್ಯುಟಿಕಲ್ ಒಂದು ರಕ್ಷಣಾ ರಚನೆ. ಇದು ಬಾಹ್ಯಾಸ್ಥಿಪಂಜರದಂತೆ (ಎಕ್ಸೋಸ್ಕೆಲೆಟಾನ್) ಇದ್ದು, ಸ್ನಾಯುಗಳನ್ನು ಬಲವಾಗಿ ಹಿಡಿದಿಡಲು ಸ್ಥಳವನ್ನು ಒದಗಿಸುತ್ತದೆ. ಸಂಧಿಪದಿಗಳಲ್ಲಿ ಸಂಧಿಗಳುಳ್ಳ ಶರೀರ ಮಾಂಡಿಬ್ಯುಲೇಟದಲ್ಲಿ 6 ಸಂಧಿಗಳುಳ್ಳ

ತಲೆ, ಕೀಲುಗಳುಳ್ಳ ಕೈಟಿನ್ನಿನ ಅನುಬಂಧಗಳು ಹಲವು ವಿಶೇಷ ಇಂದ್ರಿಯಗಳು, ಹೋಮೊಸೀಲ್ ರಕ್ತ ಸಂಚಾರ, ಕುಹರಗಳುಳ್ಳ ರಕ್ತ ಪರಿಚಲನೆ, ಮತ್ತು ದ್ವಿಪಾರ್ಶ್ವ ಸಮಮಿತಿ ಇದೆ.

ಸು. 9,25,000ಕ್ಕಿಂತ ಹೆಚ್ಚು ಸಂಧಿಪದಿ ಪ್ರಭೇದಗಳನ್ನು ಗುರುತಿಸಿ, ಅಧ್ಯಯನ ಮಾಡಲಾಗಿದೆ. ಇವುಗಳಲ್ಲಿ ಶೇ.90 ಕೀಟಗಳು. ಅವನ್ನು ಮೂರು ಉಪ ವಂಶ (ಸಬ್ ಫೈಲಂ) ಗಳನ್ನಾಗಿ ವಿಭಾಗಿಸಲಾಗಿದೆ. ಟ್ರೈಲೊಬೈಟೊಮಾರ್ಫ (ಲುಪ್ತಟ್ರೈಲೊಬೈಟ್‌ಗಳು ಮಾತ್ರ), ಮ್ಯಾಂಡಿಬ್ಯುಲೇಟ (ಅಗಿಯುವ ದವಡೆಗಳುಳ್ಳವು), ಮತ್ತು ಕೆಲಿಸೆರೇಟ. ಮ್ಯಾಂಡಿಬ್ಯುಲೇಟದಲ್ಲಿ ಜಲಚರಿಗಳಾದ ವಲ್ಕವಂತಗಳು (ಕ್ರಸ್ಟೇಷಿಯ) ಮತ್ತು ಭೂಚರಿ ಕೀಟಗಳು (ಇನ್ಸೆಕ್ಟಾ), ಡಿಪ್ಲೊಪೊಡ ಅಥವ ಸಹಸ್ರಪದಿಗಳು (ಮಿಲ್ಲಿಪಿಡ್ಸ್), ಕೈಲೊಪೊಡ ಅಥವ ಶತಪದಿಗಳು (ಸೆಂಟಿಪಿಡ್ಸ್), ಮತ್ತು ಸಿಂಫೈಲಗಳಿಗೆ ಅನ್ವಯಿಸುವ, ಒಟ್ಟುಗೂಡಿದ ಹೆಸರಿನ ಮಿರಿಯಪೊಡ (ಬಹುಪಾದಿಗಳು)ಗಳಿವೆ. ಕೆಲಿಸೆರೇಟದಲ್ಲಿ ಸಮುದ್ರದ ವರ್ಗ ಮೀರೊಸ್ಟೊಮೇಟ (ಜಿಫೊಸೂರಿಡ್‌ಗಳು ಮತ್ತು ಯೂರಿಪ್ಟೆರಿಡ್‌ಗಳು), ವರ್ಗ ಅರ್ಯಾಕ್ನಿಡ (ಚೇಳುಗಳು, ಜೇಡಗಳು, ನುಶಿಗಳು, ಒಪಿಲಿಯೊನಿಡ್‌ಗಳು) ಮತ್ತು ಕಡಲಿನ ವರ್ಗ ಪಿಕ್ನೊಗೋನಿಡಿ (ಸಮುದ್ರದ ಜೇಡಗಳು)ಗಳು ಸೇರಿವೆ. ಟಾರ್ಡಿಗ್ರೇಡ್, ಪೆಂಟಸ್ಟೋಮಿಡ್ ಮತ್ತು ಓನಿಕೊಫೋರ್‌ಗಳನ್ನು ಕೆಲವು ವಿಜ್ಞಾನಿಗಳು ಸಂಧಿಪದಿಗೇ ಸೇರಿಸುತ್ತಾರಾದರೂ ಅವುಗಳ ಸಂಬಂಧ ಅನಿಶ್ಚಿತ.

ವಾಸ: ಸಂಧಿಪದಿಗಳು ಭೂಮಿಯ ಮೇಲೆ, ಸಮುದ್ರ ಮತ್ತು ಸಿಹಿನೀರುಗಳಲ್ಲಿ ವಾಸಿಸುತ್ತವೆ. ಸಮುದ್ರದಲ್ಲಿ ತೇಲುವ ಪ್ರಭೇದದ ಪ್ರಾಣಿ, ಅಕಶೇರುಕಗಳ, ಮೀನುಗಳ ಮತ್ತು ತಿಮಿಂಗಲಗಳಿಗೆ ಪ್ರಮುಖ ಆಹಾರ. ಭೂವಾಸಿ ಕೀಟಗಳು ಆರ್ಥಿಕ ಬೆಳೆಗಳಿಗೆ ಪೀಡೆಗಳಾಗಿ ಮತ್ತು ಪರಾಗ ದಾನಿಗಳಾಗಿ ಆರ್ಥಿಕ ಪ್ರಾಮುಖ್ಯತೆಯನ್ನು ಹೊಂದಿವೆ. ಜೇಡಗಳು, ನುಶಿಗಳು, ಚೇಳುಗಳು ಮತ್ತು ಇತರ ಅರ್ಯಾಕ್ನಿಡ್‌ಗಳೂ ಸಹ ಭೂವಾಸಿಗಳು. ಶತಪದಿಗಳು, ಸಹಸ್ರಪದಿಗಳು, ಸಿಂಫೈಲಿಡ್‌ಗಳು, ಮತ್ತು ಪೌರೊಪಾಡ್‌ಗಳು, ತೇವಾಂಶಯುಕ್ತ ಪ್ರದೇಶದಲ್ಲಿ ವಾಸಿಸುತ್ತವೆ. ಸು. 2,80,000,000 ವರ್ಷಗಳ ಹಿಂದೆ ಪರ್ಮಿಯನ್ ಯುಗದಲ್ಲೇ ಅಳಿದುಹೋದ ಟ್ರೈಲೊಬೈಟ್‌ಗಳು, ಆದಿ ಪೇಲಿಯೊಜೋಯಿಕ್ ಸಮುದ್ರಗಳಲ್ಲಿ (550,000,000 ವರ್ಷಗಳ ಹಿಂದೆ) ಪ್ರಮುಖ ಸಂಧಿಪದಿಗಳಾಗಿದ್ದವು. ಲೋಯರ್ ಕೇಂಬ್ರಿಯನ್ ಬಂಡೆಗಳ ತಳದಲ್ಲಿ ಸಿಕ್ಕಿದ ಇವುಗಳ ಆದಿ ಪಳೆಯುಳಿಕೆ ಅವಶೇಷಗಳು 570,000,000 ವರ್ಷಗಳಷ್ಟು ಹಳೆಯವು.

ಗಾತ್ರ ಮತ್ತು ರಚನಾ ವೈವಿಧ್ಯತೆ: ಸಂಧಿಪದಿಗಳ ಗಟ್ಟಿಯಾದ ಬಾಹ್ಯಾಸ್ಥಿ ಪಂಜರ (ಎಕ್ಸೋಸ್ಕೆಲೆಟಾನ್) ಅವುಗಳ ಗರಿಷ್ಟ ಗಾತ್ರದ ಮೇಲೆ ಪ್ರಭಾವ ಬೀರಿದೆ. ಜಲವಾಸಿಗಳ ಗಾತ್ರವೇ ಗಣನೀಯ, ಏಕೆಂದರೆ, ಅವುಗಳ ಶರೀರಕ್ಕೆ ಸುತ್ತಲೂ ನೀರಿನ ರಕ್ಷಣೆ ಇದೆ. ಉದಾ: ಟ್ರೈಲೋಬೈಟ್‌ಗಳು 1.8 ಮೀ ಉದ್ದವಾಗಿದ್ದುವು. ಯೂರಿಪ್ಟೆರಿಡ್‌ಗಳು ಮತ್ತು ಈಗಿನ ಕೆಲವು ವಲ್ಕವಂತಗಳು (ಕಠಿಣ ಚರ್ಮಿಗಳು) ಅದರ ಎರಡರಷ್ಟು ಗಾತ್ರ ಬೆಳೆಯುತ್ತವೆ. ರಾಕ್ಷಸ ಜೇಡ, ನಳ್ಳಿಗಳು 6.4 ಕಿಗ್ರಾಂ ತೂಗುತ್ತವೆ 3.8 ಮೀ ಉದ್ದ ಇವೆ. ವಲ್ಕವಂತಗಳ ಸುಣ್ಣ ಸೇರಿರುವ ಶರೀರದ ಕವಚಗಳು, ನೀರಿನ ತಳದಲ್ಲಿ ವಾಸಿಸುವುವುಗಳಿಗೆ ಅನುಕೂಲವಾಗುವಂತೆ ತೂಕವನ್ನು ನೀಡುತ್ತವೆ.

ಸಂಧಿಪದಿಗಳ ಗಾತ್ರವನ್ನು ಮಿತಿಗಳೊಳಿಸುವಲ್ಲಿ ಪೊರೆಯುರ್ಚಿನ ಪಾತ್ರವೂ ಇದೆ. ಹದ ಮಾಡಿದ ಚರ್ಮದಂತೆ ಭೂವಾಸಿ ಸಂಧಿಪದಿಗಳ ಕ್ಯೂಟಿಕಲ್ ಗಟ್ಟಿ ಮತ್ತು ಬಿರುಸಾಗಿದ್ದು, ಹಗುರವಾಗಿದೆ. ಇಂಥ ಬಿರುಸಾದ ಬಾಹ್ಯಾಸ್ಥಿಪಂಜರದೊಳಗಿರುವ ಪ್ರಾಣಿಗಳು (ದೇಹದ ಹೊರಕವಚ) ಪೊರೆ ಕಳಚಿ ಬೆಳೆಯಬೇಕಾಗಿದೆ. ನಿಯತವಾದ ಗಾತ್ರ ತಲುಪಿದ ಅನಂತರ ಅವುಗಳ ಉದ್ದ, ಅಳತೆ ಪೊರೆಯುರ್ಚುಗಳ ಅಂತರಂಗ ಸ್ವಲ್ಪಮಾತ್ರ ಹೆಚ್ಚುತ್ತದೆ. ಪೊರೆ ಬಿಡುವುದರ ಉದ್ದೇಶ ಅವುಗಳ ಗಾತ್ರವನ್ನು ಹೆಚ್ಚಿಸುವುದು.

ಭೂವಾಸಿ ಸಂಧಿಪದಿಗಳು ಬಹಳ ದೊಡ್ಡ ಗಾತ್ರದ ದೇಹದವಲ್ಲ. ಅತ್ಯಂತ ದೊಡ್ಡ ಕೀಟಗಳು, ಜೇಡಗಳು 100ಗ್ರಾಂಗಿಂತ ಹೆಚ್ಚು ಭಾರವಿಲ್ಲ. ಗೋಲಿಯಾತಸ್ ರೀಜಿಯಸ್ ದುಂಬಿಯ ಉದ್ದ 15 ಸೆಂಮೀ ಅಗಲ 10 ಸೆಂಮೀ ಸೊಲೊಮನ್ ದ್ವೀಪಗಳ ಚಿಟ್ಟೆಗೆ– ಆರ್ನಿತಾಪ್ಟೆರ ವಿಕ್ಟೋರಿಯಿ, 30 ಸೆಂಮೀ ಗಿಂತ ಹೆಚ್ಚು ಅಡ್ಡಗಲ ರೆಕ್ಕೆಗಳಿವೆ. ಅತ್ಯಂತ ಉದ್ದವಾದ ಕೀಟಗಳಲ್ಲಿ ಫ್ಯಾಸ್ಮಿಡ್–ಫಾರ್ನೇಸಿಯ ಸೆರಾಟಿಪೆಸ್, 33 ಸೆಂಮೀ ಉದ್ದ ಇದೆ. ಭೂವಾಸಿ ಆರ್ತ್ರೋಪೊಡಗಳ ಗಾತ್ರದ ಮಿತಿಗೆ, ಬಾಹ್ಯಾಸ್ಥಿಪಂಜರದ ತೂಕ ಮತ್ತು ಶತ್ರುಗಳ ಆಕ್ರಮಣವನ್ನು ತಡೆಯುವ ಶಕ್ತಿ ಇರಬೇಕು ಎಂಬುದು ಕಾರಣವಿರಬಹುದು ಎಂದು ತಜ್ಞರ ಅಭಿಪ್ರಾಯ. ಕಶೇರುಕ ಶತ್ರುಗಳಿಂದ ತಪ್ಪಿಸಿಕೊಳ್ಳಲು, ಚೇಳು ಮತ್ತು ಸೋಲಿಫ್ಯೂಜಿಗಳ ನಿಶಾಚರ (ನಾಕ್ಟರ್‌ನಲ್ ಹ್ಯಾಬಿಟ್) ನಡತೆ ಈ ಸಂಬಂಧ ಗಮನಾರ್ಹವಾಗಿದೆ.

ಅತ್ಯಂತ ಸಣ್ಣ ಸಂಧಿಪದಿಗಳಲ್ಲಿ ಪರೋಪಜೀವಿ ಕಣಜಗಳು, ಟೈಲಿಡೆ ದುಂಬಿಗಳು, ಮತ್ತು ನುಶಿಗಳು ಸೇರಿವೆ. ಇವುಗಳ ರಚನೆ ಜಟಿಲವಾಗಿದ್ದರೂ, 0.25 ಮಿಮೀ. ಚಿಕ್ಕವು. 1.5 ಸೆಂಮೀ. ಉದ್ದವಿರುವ ಇರುವೆಗಳು, ಒಂದು ಗ್ರಾಂ ಕಡಿಮೆ ಭಾರವಿರುತ್ತವೆ.

ವ್ಯಾಪ್ತಿ ಮತ್ತು ಯಥೇಷ್ಟತೆ: ಕೀಟಗಳು ಪ್ರಧಾನವಾಗಿಲ್ಲದ ಜಾಗ ಸಮುದ್ರ ಮಾತ್ರ. ಬಹುಶಃ ಕೀಟಗಳು ಹುಟ್ಟುವ ಮುನ್ನ ಉಳಿದ ಸಂಧಿಪದಿಗಳು, ವಲ್ಕವಂತಗಳು, ಸೂಕ್ತವಾದ ಎಲ್ಲ ಸನ್ನಿವೇಶಗಳಲ್ಲೂ ತುಂಬಿಕೊಂಡಿರಬೇಕು. ಯುತಿಸಿನ ಅಬಿಸ್ಸಿಕೋಲ ಏಡಿ, 4000 ಮೀ. ಆಳದಲ್ಲಿ ವಾಸಿಸುವುದು. ಕೊಲೆಂಬೋಲ ಮತ್ತು ನೆಗೆಯುವ ಜೇಡಗಳು (ಸಾಲ್ಟಿಸೈಡಿ) 6700 ಮೀ ಎತ್ತರದಲ್ಲಿ ವಾಸಿಸುತ್ತವೆ. ಕೊಲೆಂಬೋಲ ಮತ್ತು ಓರೊಬ್ಯಾಟಿಡ್ ನುಶಿಗಳು, ಅಂಟಾರ್ಟಿಕ ದ ಖಾಯಂ ನಿವಾಸಿಗಳು. ಹಲವು ಆರ್ತ್ರೋಪೊಡಗಳು ಬೇರೆ ಪ್ರಾಣಿಗಳಲ್ಲಿ ಅಥವ ಅವುಗಳ ಮೇಲೆ ಪರೋಪಜೀವಿಗಳಾಗಿವೆ.

ಪ್ರಾಮುಖ್ಯತೆ: ಆರ್ತ್ರೋಪೊಡಗಳಿಗೆ, ಆರ್ಥಿಕ ಮತ್ತು ವೈದ್ಯಕೀಯ ಪ್ರಾಮುಖ್ಯತೆ ಹೆಚ್ಚಾಗಿದೆ. ಶಕ್ತಿಯುತ ಪೀಡೆನಾಶಕಗಳನ್ನು ಉತ್ಪತ್ತಿ ಮಾಡಿದ್ದರೂ, ಕೀಟಗಳು, ಉಣ್ಣಿಗಳು, ಮತ್ತು ಕೆಲವು ನುಶಿಗಳು ಪ್ರಪಂಚದಲ್ಲೆಲ್ಲಾ ಮಾನವ ಮತ್ತು ಇತರ ಪ್ರಾಣಿಗಳಿಗೆ, ಅಪಾಯಕರ ರೋಗಗಳನ್ನು ಹರಡುವ ಭಯವಿದೆ. ಮನುಷ್ಯರಿಗೆ, ಆರ್ತ್ರೋಪೊಡಗಳು ಹರಡುವ ರೋಗಗಳೆಂದರೆ, ಮಲೇರಿಯ, ಹಳದಿ ಜ್ವರ, ರಿಕೆಟ್ಸಿಯ, ಪ್ಲೇಗ್, ಫೈಲೇರಿಯಾಸಿಸ್ (ಆನೆಕಾಲು) ರೋಗಗಳು. ಆರ್ತ್ರೋಪೊಡಗಳು, ತಮ್ಮ ವಿಷಕರ ಕೊಂಡಿಗಳಿಂದ ಚುಚ್ಚಿ, ಕಚ್ಚಿ, ಅನೇಕ ಪದಾರ್ಥಗಳನ್ನು ನಾಶ ಮಾಡಿ, ತೊಂದರೆ ಮಾಡುತ್ತವೆ.

ಕಠಿಣ ಚರ್ಮಿಗಳು, ಬಹುಪಾದಿಗಳು, ಕೀಟಗಳು ಮತ್ತು ಜಿಗಿಬಾಲಗಳು, ಮಣ್ಣಿನ ಆರ್ತ್ರೋಪೊಡಗಳು, ಕೊಳೆಯುತ್ತಿರುವ ಎಲೆ ಕಸಗಳಿಂದ, ಗೊಬ್ಬರವನ್ನು ಮಾಡುತ್ತವೆ. ವಲ್ಕವಂತಗಳು, ಮನುಷ್ಯರಿಗೂ, ಇತರ ಪ್ರಾಣಿಗಳಿಗೂ, ಆಹಾರ.

ಪ್ರಜನನ ಮತ್ತು ಜೀವನ ಚರಿತ್ರೆ: ಬಹುತೇಕ ಪ್ರಬೇಧಗಳಲ್ಲಿ ಲಿಂಗಗಳು ಬೇರೆ ಬೇರೆ ಇವೆ. ಪ್ರತಿಯೊಂದು ಲಿಂಗದ ಜೋಡಿ ಲಿಂಗಾಂಗಗಳಿಗೂ ಲಿಂಗಾಣುನಾಳಗಳಿವೆ. ಈ ನಾಳಗಳು ದೇಹದ ಹೊರಕ್ಕೆ ತೆರೆದಿರುತ್ತವೆ. ಉದಾ: ಜರಿ ಮತ್ತು ಕೀಟಗಳು ಉದರದಲ್ಲಿ, ವಲ್ಕವಂತಗಳು ಎದೆಯ ಹಿಂಭಾದಗದಲ್ಲಿ, ಸಹಸ್ರಪದಿಗಳು, ಪೌರೋಪೊಡ್‌ಗಳು ಮತ್ತು ಸಿಂಫೈಲಗಳಲ್ಲಿ ತಲೆಯ ಸಮೀಪ, ಅರ್ಯಾಕ್ನಿಡಗಳಲ್ಲಿ ಶರೀರದ ಮಧ್ಯಭಾಗದಲ್ಲಿ ಗೋನೊರಂಧ್ರಗಳಿವೆ. ಮೊಟ್ಟೆಗಳು, ಎರಡನೆ ಖಂಡದ ರಂಧ್ರಗಳಿಂದ ಹೊರಕ್ಕೆ ಬರುತ್ತವೆ.

ಆರ್ತ್ರೋಪೊಡಗಳಲ್ಲೆಲ್ಲ, ರೇತ್ರಾಣುಗಳು, ಶುಕ್ರಾಣುಧರಗಳಲ್ಲಿ ಕಟ್ಟುಗಳಾಗಿ, ಹೆಣ್ಣುಗಳ ದೇಹದೊಳಕ್ಕೆ ಸೇರುತ್ತವೆ. ಈ ವರ್ಗಾವಣೆಯಲ್ಲಿ ಜಲಚರಿಗಳ ಸುತ್ತಲಿರುವ ನೀರಿನಿಂದ ಅವು ನಿಸ್ಸಾರವಾಗುವುದಿಲ್ಲ ಅಥವ ಭೂಮಿಯ ಮೇಲೆ ಅವು ಒಣಗುವುದಿಲ್ಲ. ಪ್ರಣಯಾಚರಣೆಯಿಂದ, ಸಂಯೋಗ ತಡವಾಗುವ ಜರಿಗಳಲ್ಲಿ (ಖೈಲೊಪೊಡಾ) ಮತ್ತು ಅರ್ಯಾಕ್ನಿಡಗಳಲ್ಲಿ ಶುಕ್ರಾಣುಧರಗಳು ವಿಶಿಷ್ಟವಾಗಿವೆ. ಅವು ಕೆಲವು ಕೀಟಗಳ ಗುಂಪುಗಳಲ್ಲಿ ಉದಾ: ಆರ್ಥಾಪ್ಟೆರ (ಮಿಡತೆ, ಜೀರುಂಡೆಗಳು), ಡಿಕ್ಟಿಯಾಪ್ಟೆರ (ಜಿರಲೆ, ಮ್ಯಾಂಟಿಡ್‌ಗಳು) ಲೆಪಿಡಾಪ್ಟೆರ (ಚಿಟ್ಟೆ, ಪತಂಗಳು), ಕೋಲಿಯಾಪ್ಟೆರ (ದುಂಬಿಗಳು, ಮೂತಿ ಹುಳುಗಳು), ಮತ್ತು ಟ್ರೈಕಾಪ್ಟೆರ (ಕ್ಯಾಡಿಸ್ ನೊಣಗಳು)ಗಳಲ್ಲಿವೆ. ಡಿಪ್ಟೆರ (ನೊಣಗಳು), ಕೆಲವು ಹೆಟಿರಾಪ್ಟೆರ (ತಿಗಣೆಗಳು), ಡಿಪ್ಲೊಪೊಡ (ಸಹಸ್ರಪದಿಗಳು), ಒಪಿಲಿಯೊನಿಸ್ ಮತ್ತು ಕೆಲವು ನುಶಿಗಳಲ್ಲಿ ರೇತ್ರಾಣುಗಳು ಬಿಡಿ ಬಿಡಿಯಾಗಿ, ವರ್ಗಾಯಿಸಲ್ಪಡುತ್ತವೆ.

ಸೋಲಿಫ್ಯುಜಿ, ರಿಸಿನ್ಯುಕ್ಲಿಯೈ ಮತ್ತು ಕೆಲವು ಅಕರೈನಗಳಂತ ಅರ್ಯಾಕ್ನಿಡಗಳಲ್ಲಿ ಶುಕ್ರಾಣುಧರ ಅತ್ಯಂತ ಸರಳ, ರೇತ್ರಾಣುಗಳುಳ್ಳ ಅಂಟು ಮುದ್ದೆ, ಅದನ್ನು ಗಂಡು ತನ್ನ ಕೆಲಿಸೆರಿ, ಪೆಡಿಪಾಲ್ಪ್ ಅಥವ ಕಾಲುಗಳಿಂದ ಹೆಣ್ಣಿನ ದೇಹದೊಳಕ್ಕೆ ಸೇರಿಸುತ್ತದೆ. ಉಳಿದ ಅರ್ಯಾಕ್ನಿಡಗಳಲ್ಲಿ (ಸ್ಕಾರ್ಪಿಯೊನಿಡ–ಹುಸಿ ಚೇಳುಗಳು, ಆಂಬ್ಲಿಪೈಗಿ, ಥೆಲಿಫೋನಿಡಿ, ಪೈಜೊಮಿಡ ಮತ್ತು ಕೆಲವು ಅಕರೈನ) ಜಟಿಲವಾದ, ದಂಡದಂತ ಶುಕ್ರಾಣುಧರವನ್ನು ಗಂಡು ನೆಲದ ಮೇಲಿಡುತ್ತದೆ. ಪ್ರಣಯ ನರ್ತನದಲ್ಲಿ ಹೆಣ್ಣಿನ ಪ್ರಜನನ ತೆರಪಿನೊಳಕ್ಕೆ ರೇತ್ರಾಣುಗಳು ಸೇರುವಂತೆ ಗಂಡು ಅದನ್ನು ಕೌಶಲದಿಂದ ನಿಯೋಜಿಸುತ್ತದೆ. ಜೇಡಗಳಲ್ಲಿ (ಅರೇನಿಡ) ಗಂಡಿನ ಪ್ರೊಸೋಮಕ್ಕೆ ಸೇರಿದ ಪಾಲ್ಪಾಂಗಗಳಿಂದ, ರೇತ್ರಾಣುಗಳನ್ನು ಹೆಣ್ಣಿನೊಳಕ್ಕೆ ಸೇರಿಸುತ್ತದೆ. ರಿಸಿನ್ಯೂಕ್ಲಿಯೈಗಳಲ್ಲಿ ಈ ಉದ್ದೇಶಕ್ಕೆ ಮೂರನೆ ಜತೆ ಕಾಲುಗಳ ಟಾರ್ಸಲ್ ಮತ್ತು ಮೆಟಟಾರ್ಸಲ್ ಖಂಡಗಳು ಮಾರ್ಪಟ್ಟಿವೆ.

ಆರ್ತ್ರೋಪೊಡಗಳಲ್ಲಿ, ಲಿಂಗಾಣುರಹಿತ ಜನನ (ಪಾರ್ಥಿನೋಜನಿಸಿಸ್)– ಅಂದರೆ ರೇತ್ರಾಣು ಸೇರಿಲ್ಲದ ಮೊಟ್ಟೆಗಳಿಂದ ಸಂತಾನ, ಜರಾಯುಜ (ವಿವಿಪ್ಯಾರಿಟಿ)– ಅಂದರೆ ನೇರವಾಗಿ ಮರಿಗಳಿಗೆ ಜನ್ಮ ನೀಡುವುದು. ಬಹು ಭ್ರೂಣತ್ವ (ಪಾಲಿಯೆಂಬ್ರಿನಿ)– ಅಂದರೆ, ರೇತ್ರಾಣು ಸಂಯೋಜಿಸಿದ ಒಂದೇ ಮೊಟ್ಟೆಯಿಂದ ಹಲವು ಭ್ರೂಣಗಳ ಉತ್ಪತ್ತಿ ಮುಂತಾದ ಅಸಾಧಾರಣ ಪ್ರಜನನವೂ ಇದೆ. ಆರ್ತ್ರೋಪೊಡಗಳ ಮೊಟ್ಟೆಗಳಲ್ಲಿ ಹಳದಿದ್ರವ (ಯೋಕ್) ಕಡಿಮೆ ಇದೆ.

ಅನೇಕ ವಲ್ಕವಂತಗಳ ಮತ್ತು ಬಹುಪಾದಿಗಳ ಭ್ರೂಣಗಳಲ್ಲಿ ಶರೀರ ಖಂಡಗಳು ಪ್ರಾಯದವುಗಳಿಗಿಂತ ಕಡಿಮೆ. ಉದಾ: ಕೆಲವು ವಲ್ಕವಂತಗಳ, ಸ್ವತಂತ್ರವಾಗಿ ಈಜಾಡುವ ಸೂಕ್ಷ್ಮ ಲಾರ್ವದ ಹಂತದಲ್ಲಿ (ನಾಪ್ಲಿಯಸ್) ಮೂರು ಖಂಡಗಳು ಮತ್ತು ಮುಂಭಾಗದ ಎಕ್ರಾನ್ ಭಾಗ ಮಾತ್ರ ಇದೆ. ಪೊರೆ ಬಿಟ್ಟಾಗ ಪ್ರತಿ ಸಲ, ಅಧಿಕ ಖಂಡಗಳು ಬೆಳೆಯುತ್ತವೆ.

ಇದಕ್ಕೆ ಪ್ರತಿಯಾಗಿ, ಹಲವು ಕೆಲಿಸೆರೇಟ ಮತ್ತು ಕೀಟಗಳಲ್ಲಿ ಮೊಟ್ಟೆಯೊಳಗಿನ ಭ್ರೂಣದಲ್ಲೇ ಬಹುಮಟ್ಟಿಗೆ ಎಲ್ಲ ಖಂಡಗಳು ಬೆಳೆದಿರುತ್ತವೆ.

ಚಲನೆ: ಆರ್ತ್ರೋಪೊಡ ವರ್ಗಗಳಲ್ಲಿ ಚಲಿಸುವ ಅನುಬಂಧಗಳ ಸಂಖ್ಯೆಯಲ್ಲಿ ವ್ಯತ್ಯಾಸ ಮತ್ತು ವೈವಿಧ್ಯತೆ ಇದೆ. ಉದಾ:ಬಿರುಕುಗಳೊಳಕ್ಕೆ ನುಗ್ಗುವ ಸಹಸ್ರಪದಿಗಳು, ಮಣ್ಣಿನೊಳಗೆ ಚಲಿಸುವ ಶತಪದಿಗಳು, ಕೀಟಗಳು ಮುಂತಾದವುಗಳಲ್ಲಿ ವೇಗವಾಗಿ ಚಲಿಸುವ ಶಕ್ತಿಗೂ, ಅಂಗಗಳ ಸಂಖ್ಯೆಗೂ ಮತ್ತು ಶರೀರದ ಗಾತ್ರಕ್ಕೂ ಸಂಬಂಧವಿದೆ. ಇದು ಅರ್ಯಾಕ್ನಿಡ್‍ಗಳಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ಅವುಗಳಿಗೆ ನಾಲ್ಕು ಜೊತೆ ಕಾಲುಗಳು, ಮತ್ತು ಕೀಟಗಳಲ್ಲಿ ಮೂರು ಜೊತೆ ಕಾಲುಗಳಿವೆ. ಅತ್ಯಂತ ವೇಗವಾಗಿ ಓಡುವ ಸೋಲಿಫ್ಯೂಜಿ ಅರ್ಯಾಕ್ನಿಡ್‍ಗಳು, ಮುಂದಿನ ಜತೆ ಕಾಲುಗಳನ್ನು ಭೂಮಿ ಮೇಲಿಂದ ಎತ್ತಿ ಹಿಡಿದು, ಕಡೆಯ ಮೂರು ಜತೆ ಕಾಲುಗಳಿಂದ ಓಡುವುವು.

ಭದ್ರವಾಗಿ ಓಡಾಡಲು ಒಂದು ಕೀಟ ಕೊನೆ ಪಕ್ಷ ಮೂರು ಕಾಲುಗಳನ್ನಾದರೂ ನೆಲದ ಮೇಲಿಡಬೇಕು. ಮುಂಗಾಲನ್ನಾಗಲೀ, ಅಥವ ಮಧ್ಯದ ಕಾಲನ್ನಾಗಲೀ, ಅದರ ಹಿಂದಿನ ಕಾಲು ಭದ್ರವಾಗಿ ನಿಲ್ಲುವವರೆಗೂ, ಎತ್ತಲಾಗುವುದಿಲ್ಲ. ಪ್ರತಿ ಕಾಲು, ಅದೇ ಖಂಡದ ಅನುರೂಪವಾಗಿರುವ ಕಾಲಿನೊಡನೆ, ಒಂದಾದ ಮೇಲೆ ಮತ್ತೊಂದರಂತೆ ವರಸೆಯಾಗಿ ಬದಲಾಯಿಸುತ್ತದೆ. ಕಾಲುಗಳು, ಒಂದು ನಿರ್ದಿಷ್ಟ ಕ್ರಮಾನುಗತಿಯಲ್ಲಿ ಮುಂಗಾಲು, ಮಧ್ಯದ ಕಾಲು, ಮತ್ತು ಹಿಂಗಾಲುಗಳಿಂದ ಚಲಿಸುತ್ತವೆ. ಕಾಲಿನ ಖಂಡದ (ಟಾರ್ಸಸ್) ಉಗುರುಗಳ ಸಹಾಯದಿಂದ ಒರಟು ಜಾಗದಲ್ಲಿ ನಡೆಯುತ್ತವೆ. ಟಾರ್ಸಸ್ ಮೇಲಿನ (ಕಾಲಿನ ಹರಡು) ಅಂಟಿಕೊಳ್ಳುವ ಮೆತ್ತೆಯಂತ ಅಂಗಗಳಿಂದ (ಅರೊಲಿಯಮ್) ಮೃದು ಜಾಗಗಳಲ್ಲಿ ಚಲಿಸುತ್ತವೆ. ನೆಗೆಯುವ ಕೀಟಗಳು (ಮಿಡತೆ, ಚಿಕ್ಕಟ) ಹಿಂಗಾಲುಗಳ ನಾಲ್ಕನೆ ಖಂಡಗಳನ್ನು (ಟಿಬಿಯಲ್) ಇದ್ದಕ್ಕಿದ್ದಂತೆ ಮೀಟಿ ನೆಗೆಯುತ್ತವೆ. ಅದಕ್ಕೆ ವ್ಯತಿರಿಕ್ತವಾಗಿ, ಕುಪ್ಪಳಿಸುವ ಜೇಡಗಳಲ್ಲಿ (ಸಾಲ್ಟಿಡಿ) ಎಲ್ಲ ಕಾಲುಗಳು ಒಟ್ಟಾಗಿ, ರಕ್ತದ ಒತ್ತಡವನ್ನು ಹೆಚ್ಚು ಮಾಡಿ ನೀಡುತ್ತವೆ.

ಹಾರಾಟ: ಕೀಟಗಳ ರೆಕ್ಕೆಗಳು ಪಕ್ಷಿ, ಬಾವಲಿ, ಪ್ಟೀರೊಡಾಕ್ಟೈಲ್ ಹಾರುವ ಕಪ್ಪೆ ಮತ್ತು ಹಾರುವ ಮೀನುಗಳಲ್ಲಿದ್ದಂತೆ,  ಅಂಗಗಳ ಮಾರ್ಪಾಟಿನಿಂದಾಗಿಲ್ಲ. ಕೀಟಗಳ ರೆಕ್ಕೆಗಳು ವಿಶೇಷವಾಗಿ ಬೆಳೆದಿವೆ.

ತಜ್ಞರ ಪ್ರಕಾರ, ದೊಡ್ಡ ಕೀಟಗಳು ಅವುಗಳ ಶತ್ರುಪೂರ್ವಜ ಮೈಗಾಲೊಮಾರ್ಫ್ ಜೇಡಗಳಿಂದ ತಪ್ಪಿಸಿಕೊಳ್ಳಲು ರೆಕ್ಕೆಗಳನ್ನು ಪಡೆದುವು. ಈ ಊಹೆಯ ಪ್ರಕಾರ, ಜೇಡಗಳು, ತಮ್ಮ ಕೊಳ್ಳೆ ಹಾರಲು ಪ್ರಾರಂಭಿಸಿದಾಗ, ಗಾಳಿಯಲ್ಲಿ ಬಲೆಯನ್ನು ಹೆಣೆಯುವ ಶಕ್ತಿಯನ್ನು ಪಡೆದುವು. ಇನ್ನೊಂದು ಊಹೆಯಂತೆ, ರೆಕ್ಕೆಗಳು ಮೊದಲು, ಗಾಳಿಯಲ್ಲಿ ಚಲಿಸುವ ಪ್ರಾಣಿಗಳಾಗಿದ್ದ ಆದಿ ಕೀಟಗಳಲ್ಲುಂಟಾದುವು.

ಹಲವು ಹಾರುವ ಕೀಟಗಳಲ್ಲಿ (ಓಡೊನೇಟ, ಕೊಡತಿ ಕೀಟಗಳ ಹೊರತು) ರೆಕ್ಕೆ ಸ್ನಾಯುಗಳು, ರೆಕ್ಕೆಗಳ ಚಲನೆಗೆ ಶಕ್ತಿ ನೀಡುತ್ತವೆ. ಡಿಕ್ಟಿಯಾಪ್ಟಿರದಲ್ಲಿ ರೆಕ್ಕೆಗಳನ್ನು ಚಲಿಸುವ ಸ್ನಾಯುಗಳು ಕಾಲುಗಳನ್ನೂ ಚಲಿಸುತ್ತವೆ.

ಹಲವು ಪ್ರಭೇದದ ಕೀಟಗಳಲ್ಲಿ ಎರಡು ಜತೆ ರೆಕ್ಕೆಗಳು, ಒಟ್ಟಿಗೆ ಕೆಲಸ ಮಾಡುತ್ತವೆ. ಕೆಲವು ಕೀಟಗಳಲ್ಲಿ ಎರಡು ಪಕ್ಕಗಳಲ್ಲೂ, ಬಿರುಗೂದಲು ಮತ್ತು ಹಾಲೆಗಳು, ಮುಂದು–ಹಿಂದಿನ ಎರಡು ರೆಕ್ಕೆಗಳನ್ನು ಒಟ್ಟುಗೂಡಿಸುತ್ತವೆ. ಕೆಲವು ಕೀಟಗಳಲ್ಲಿ, ಒಂದು ಜತೆ, ಹಾರಾಟದ ಬದಲು ಬೇರೆ ಕಾರ್ಯವನ್ನು ನಿರ್ವಹಿಸುತ್ತವೆ. ಉದಾ: ನೊಣಗಳಲ್ಲಿ ಹಿಂದಿನ ರೆಕ್ಕೆಗಳು ಹಾಲ್ಟಿಯರ್‍ಗಳಂತೆ ಮಾರ್ಪಟ್ಟು, ಹಾರಾಟವನ್ನು ಹತೋಟಿಗೊಳಿಸುತ್ತವೆ.

ಮರ ಹೇನು ಮತ್ತು ಭೂವಾಸಿ ಏಡಿಗಳನ್ನು ಹೊರತುಪಡಿಸಿ, ವಲ್ಕವಂತಗಳು, ಉಪ್ಪು ನೀರು ಅಥವ ಸಿಹಿನೀರಿನಲ್ಲಿ ವಾಸಿಸುತ್ತವೆ. ತೇಲು ಪ್ರಾಣಿ ಸಮೂಹದಲ್ಲಿ ಅವು ಪ್ರಧಾನವಾಗಿವೆ. ಉಳಿದ ದವಡೆಗಳುಳ್ಳ ಆರ್ತ್ರೋಪೊಡಗಳು: ಬಹುಪಾದಿಗಳು ಮತ್ತು ಕೀಟಗಳು ಮುಖ್ಯವಾಗಿ ಭೂವಾಸಿಗಳು: ಕೆಲವು ಶತಪದಿಗಳು ಮತ್ತು ಕೀಟಗಳು ತೀರ ಪ್ರದೇಶದಲ್ಲಿ ನೀರಿನ ಅಲೆಗಳ ಬಂದು ಹೋದ ಜಾಗಗಳಲ್ಲಿರುತ್ತವೆ (ಲಿಟ್ಟೊರಲ್). ಕೋಲಿಯಾಪ್ಟಿರ, ಡಿಪ್ಟೀರ, ಹೈಮೆನಾಪ್ಟಿರ, ಲೆಪಿಡಾಪ್ಟಿರ, ಹೆಟಿರಾಪ್ಟಿರ ಗಣದ ಕೆಲವು ಪ್ರಭೇದಗಳು, ದ್ವಿತೀಯಕವಾಗಿ ಜಲಚರಿಗಳಾಗಿವೆ, ಇವು ಸಿಹಿನೀರಿನಲ್ಲಿ ವಾಸಿಸುತ್ತವೆ. ಕೀಟಗಳಲ್ಲಿ ಗಾಳಿ, ಸ್ಪೈರಕಲ್ ಎಂಬ ಶ್ವಾಸರಂಧ್ರಗಳ ಮೂಲಕ, ಶ್ವಾಸನಾಳಗಳಿಗೆ (ಟ್ರಾಕಿಯ) ಸೇರುತ್ತದೆ. ಉಳಿದ ಕೀಟಗಳಲ್ಲಿ ಶ್ವಾಸನಾಳಗಳಿಗೆ ಶ್ವಾಸರಂಧ್ರಗಳಿಲ್ಲ. ಇದು ಮುಚ್ಚಿದ ಉಸಿರಾಟದ (ಅನೂಸ್ಟಿಕ್) ವ್ಯವಸ್ಥೆ. ಆಮ್ಲಜನಕ ಸುತ್ತುವರಿದ ಮಾಧ್ಯಮದ ಮೂಲಕ ಒಳಸೇರುತ್ತದೆ. ಇದರಲ್ಲಿ ಶ್ವಾಸನಾಳ ಮತ್ತು ಶ್ವಾಸರಂಧ್ರಗಳ ಕಿವಿರುಗಳು ಸೇರಿವೆ. ನೀರಿನ ಮಟ್ಟ ಹೆಚ್ಚು ಕಡಿಮೆಯಾಗುವ ನದಿಗಳಲ್ಲಿ ನೀರಿನ ಮೇಲೆ, ಕೆಳಗೆ ಉಸಿರಾಡಲು, ಶ್ವಾಸರಂಧ್ರ ಕಿವಿರುಗಳಿವೆ. ಕುದುರೆ ಲಾಳದ ಏಡಿಗಳು (ಕ್ಸೈಫೊಸುರ), ಪಿಕ್ನೊಗೋನಿಡ್‍ಗಳು (ಸಮುದ್ರ ಜೇಡಗಳು), ಮತ್ತು ಕೆಲವು ಕೀಟಗಳಂತೆ ದ್ವಿತೀಯವಾಗಿ ಜಲಚರಿಗಳಾಗಿರುವ ಕೆಲವು ಜೇಡಗಳು ಮತ್ತು ನುಶಿಗಳ ಹೊರತು, ಚಾಲ್ತಿ ಕೆಲಿಸೆರೇಟ್‍ಗಳು ಭೂಚರಿಗಳು. ಭೂವಾಸಿ ಆರ್ತ್ರೋಪೊಡಗಳಿಗೂ, ಅವುಗಳ ಸಮುದ್ರವಾಸಿಗಳಿಗೂ ವ್ಯತ್ಯಾಸ ಕಡಿಮೆ. ಆರ್ತ್ರೋಪೊಡಗಳು, ನೀರಿನಲ್ಲಾಗಲಿ, ಭೂಮಿಯ ಮೇಲಾಗಲೀ ಚೆನ್ನಾಗಿರುತ್ತವೆ. ಜಲಚರಿ ಮತ್ತು ಭೂಚರಿಗಳ ಅಂಗರಚನೆಯಲ್ಲಿ ಮುಖ್ಯ ವ್ಯತ್ಯಾಸಗಳಿವೆ.

ಮಣ್ಣು, ಗೊಬ್ಬರ ಮತ್ತು ಎಲೆ ಕಸಗಳಲ್ಲಿ ವಾಸಿಸುವ ಹಲವು ಪುರಾತನ ಆರ್ತ್ರೋಪೊಡಗಳು ಜಲಚರಿ ಮತ್ತು ಭೂಚರಿ ನಡತೆಗಳ ನಡುವೆ ಮಧ್ಯವರ್ತಿಗಳು. ಉದಾ: ಟಾರ್ಡಿಗ್ರೇಡ್‍ಗಳು (ವಾಟರ್ ಬೇರ್ಸ್) ಆಗಾಗ ಪಾಚಿಯಲ್ಲಿರುತ್ತವೆ. ಕೆಲವು ವಲ್ಕವಂತಗಳು–ಕೋಪಿಪಾಡ್‍ಗಳು, ಆಸ್ಟ್ರಕಾಡ್‍ಗಳು–ಬಹುಪಾದಿಗಳು, ಜಿಗಿಬಾಲಗಳು, ಗೆದ್ದಲು, ಇರುವೆಗಳು, ನೊಣಗಳು ಮತ್ತು ನುಶಿಗಳು ಮಣ್ಣಿನಲ್ಲಿರುತ್ತವೆ.

ಮಣ್ಣಿನ ಪ್ರಾಣಿಗಳಿಗೆ ರಕ್ಷಣೆ ಇದೆ. ಅವುಗಳಿಗೆ ಸಾಕಷ್ಟು ಆಮ್ಲಜನಕ ದೊರಕುತ್ತದೆ. ಅವು ಒಣಗುವುದಿಲ್ಲ. ಯಾವುದಾದರೂ  ವಸ್ತುಗಳ ಕೆಳಗೆ ವಾಸಿಸುವ ಪುರಾತನ ಆರ್ತ್ರೋಪೊಡಗಳಲ್ಲಿ (ಕ್ರಿಪ್ಟೊಜ಼ೋಯಿಕ್ ಆರ್‍ತ್ರಪೊಡ್ಸ್) ಪೌರೊಪೊಡ, ಸಿಂಫೈಲ, ಕೆಲವು ಅರ್ಯಾಕ್ನಿಡ್‍ಗಳು (ಪಾಲ್ಪಿಗ್ರೇಡಿ, ರಿಸಿನ್ಯೂಕ್ಲಿಯೈ) ಸೇರಿವೆ. ವರ್ಣದ್ರವ್ಯ (ಪಿಗ್ಮೆಂಟೇಷನ್) ಇಲ್ಲ. ಆವಿಯಿಂದ ಕಳೆದು ಹೋಗುವ ನೀರನ್ನು ತಡೆದುಕೊಳ್ಳಲು ಪರಿಣಾಮಕಾರಿ ಉಸಿರಾಡುವ ರಚನೆ ಇಲ್ಲದಿರುವ ಕ್ರಿಪ್ಟೊಜ಼ೋಯಿಕ್ ಆರ್ತ್ರೋಪೊಡಗಳಲ್ಲಿ ನೇತ್ರೇಂದ್ರಿಯಗಳು ಇಲ್ಲ. ಆದರೆ, ಸ್ಪರ್ಶೇಂದ್ರಿಯ ಮತ್ತು ರಸನೇಂದ್ರಿಯಗಳು ಚೆನ್ನಾಗಿವೆ. ಕ್ರಿಪ್ಟೊಜೋವ ಜೀವಮಾನದಲ್ಲೆಲ್ಲಾ ಪೊರೆ ಬಿಡುತ್ತಿದ್ದರೂ, ಬೆಳೆವಣಿಗೆ ಇರುವುದಿಲ್ಲ. ಈ ಮಣ್ಣಿನ ಆರ್ತ್ರೋಪೊಡಗಳಿಗೆ ವಿಸ್ತಾರವಾದ ಪಳಿಯುಳಿಕೆ ಚರಿತ್ರೆ ಇದೆ. ಮಣ್ಣಿನ ರಚನೆಯಲ್ಲಿ ಇವು ಪ್ರಮುಖ ಪಾತ್ರವಹಿಸುತ್ತವೆ.

ಆರ್ತ್ರೋಪೊಡಗಳಲ್ಲಿ ಹಲವು ಬಗೆಯ ಪರೋಪಜೀವಿಗಳಿವೆ. ಪೆಂಟಾಸ್ಟೋಮಿಡ ಪರೋಪಜೀವಿಗಳು, ಕೆಲವು ವಲ್ಕವಂತಗಳು, ಸಿರ್ರಿಪಿಡ್‍ಗಳು, ಕೊಪೆಪಾಡ್‍ಗಳು ಮತ್ತು ಐಸೊಪಾಡ್‍ಗಳಲ್ಲಿ ಪರೋಪಜೀವಿ ಹೊಂದಾಣಿಕೆಗಳಿವೆ. ಉದಾ: ಸ್ಯಾಕ್ಯುಲೈನ್ ಏಡಿಗಳ ಮೇಲೆ ಪರೋಪಜೀವಿಯಾಗಿರುವ ಸಿರ್ರಿಪಿಡ್ ಕೀಟಗಳಲ್ಲಿ,  ತೈರಾಪ್ಟಿರ (ಚಿಕ್ಕಟಗಳು), ಮಲ್ಲಾಫಗ (ಬೈಟಿಂಗ್ ಲೈಸ್) ಮತ್ತು ಅನೊಪ್ಲೂರ (ಸಕ್ಕಿಂಗ್ ಲೈಸ್) ಗಳು ಪರೋಪಜೀವಿಗಳಾಗಿವೆ. ಹಲವು ಹೆಟಿರಾಪ್ಟಿರ (ಬಗ್ಸ್), ಡಿಪ್ಟಿರ (ಫ್ಲೈಸ್) ಮತ್ತು ಹೈಮೆನಾಪ್ಟಿರ (ವ್ಯಾಸ್ಪ್ಸ್)ಗಳು, ಜೀವನಚರಿತ್ರೆಯಲ್ಲಿ ಯಾವುದಾದರೊಂದು ಹಂತದಲ್ಲಿ ಪರೋಪಜೀವಿಗಳಾಗಿವೆ. ಡಿಪ್ಟಿರ ಮತ್ತು ಹೈಮನಾಪ್ಟಿರಗಳ ಪರೋಪಜೀವಿಗಳು, ಶತ್ರುಕೀಟಗಳ ಹತೋಟಿಯಲ್ಲಿ ಮುಖ್ಯ. ಹಲವು ಅರ್ಯಾಕ್ನಿಡ್‍ಗಳು ಮಾಂಸಾಹಾರಿಗಳಾದರೂ, ಹಲವು ನುಶಿಗಳು, ಪರೋಪಜೀವಿಗಳು. ಉದಾ: ಸುಗ್ಗಿ ನುಶಿಗಳು (ಹಾರ್ವೆಸ್ಟ್ ಮೈಟ್ಸ್ – ಟ್ರಾಂಬಿಕುಲಿಡೆ), ಕಜ್ಜಿ ನುಶಿ (ಸಾರ್ಕೊಪ್ಟೆಸ್ ಸ್ಕಾಬಿಯೈ) ರೋಮ ಕೂಪದ ನುಶಿಗಳು (ಫೂಲಿಕಲ್ ಮೈಟ್ಸ್ – ಡಿಮೊಡೆಕ್ಸ್) ಮತ್ತು ಉಣ್ಣೆಗಳು (ಐಕ್ಸೊಡಿಡೆ).

ರಚನೆ ಮತ್ತು ಕಾರ್ಯ: ಆರ್ತ್ರೋಪೊಡಗಳ ಮರಿಗಳ ರೂಪ ಮತ್ತು ನಡತೆ ಬಹಳ ವೈವಿಧ್ಯಮಯವಾಗಿದೆ. ಬೆಳೆವಣಿಗೆಯಲ್ಲಿ ಲಾರ್ವ ಹಂತ, ಪ್ರಾಯದ ಜೀವಿಗಳೊಡನೆ ಸ್ಪರ್ಧಿಸುವುದಿಲ್ಲವಾದ್ದರಿಂದ, ಈ ಪ್ರಭೇದದ ಜೀವಿಗೆ ಅನುಕೂಲಕರ. ಅನಾನುಕೂಲವೆಂದರೆ, ಅವು ಪರಭಕ್ಷಕಗಳಿಗೆ ತುತ್ತಾಗುತ್ತವೆ. ಪ್ರಾಣಿ ಹೊರಕ್ಕೆ ಬರಲು, ಬೆಳೆವಣಿಗೆಯ ಹಂತ, ಮೊಟ್ಟೆಯಲ್ಲಿರುವ ಭಂಡಾರ (ಯೋಕ್) ಪ್ರಮಾಣವನ್ನವಲಂಬಿಸಿದೆ. ಭ್ರೂಣದ ಬೆಳೆವಣಿಗೆ ನೇರವಾಗಿದ್ದು, ಲಾರ್ವದ ಹಂತ ಇರುವುದಿಲ್ಲ. ಮರಿಗಳು, ಪ್ರೌಢ ಪ್ರಾಣಿಗಳಂತೆ ಇದ್ದರು, ಸಂತಾನಶಕ್ತಿ ಇರುವುದಿಲ್ಲ.

ಟ್ರೈಲೊಬೈಟಗಳು ಲಾರ್ವದ ಆಕಾರಗಳಿದ್ದುವು. ವಲ್ಕವಂತಗಳು (ಕ್ರಸ್ಟೇಸಿಯನ್ಸ್) ಸಣ್ಣ, ಖಂಡಗಳಿಲ್ಲದ, ಮೂರು ಜತೆ ಅನುಬಂಧಗಳುಳ್ಳ ಮತ್ತು ಒಂದು ಮಧ್ಯದ ಕಣ್ಣುಳ್ಳ ನಾಪ್ಲಿಯಸ್ ಲಾರ್ವಗಳಂತೆ ಹುಟ್ಟುತ್ತವೆ. ಕೆಲವು ಪ್ರಭೇದದ ಜೀವಿಗಳಲ್ಲಿ ನಾಪ್ಲಿಯಸ್ ಹಂತ ಮೊಟ್ಟೆಯಲ್ಲಿ ಮುಗಿಸಿ, ಚೆನ್ನಾಗಿ ಬೆಳೆದ ಮೆಟನಾಪ್ಲಿಯಸ್ ಲಾರ್ವ ಹುಟ್ಟುತ್ತದೆ. ಆದರೆ, ಪ್ರಾಯಕ್ಕೆ ಬಂದಿರುವುದಿಲ್ಲ. ಹಲವು ವಲ್ಕವಂತ ಗುಂಪುಗಳಲ್ಲಿ, ವಿಶೇಷ ತರಹದ ಲಾರ್ವದ ಹಂತಗಳಿವೆ. ಉದಾ: ಸಿರ್ರಿಪಿಡಿಯದಲ್ಲಿ ಸೈಪ್ರಿಸ್ ಲಾರ್ವ, ಕೋಪೆಪಾಡ್‍ಗಳಲ್ಲಿ ಸೈಕ್ಲಾಪ್ಸ್ ಲಾರ್ವ, ಮಾಲಕಾಸ್ಟ್ರಕದಲ್ಲಿ ಜ಼ೋಯ ಲಾರ್ವ.

ಪೌರಪಾಡ ಗುಂಪಿನ ಪ್ರಾಣಿಗಳ ಮೊಟ್ಟೆಯಿಂದ 2 ಜೊತೆ ಕಾಲುಗಳುಳ್ಳ ಲಾರ್ವ ಹೊರಬರುತ್ತದೆ. ಪೊರೆ ಬಿಟ್ಟ ನಂತರ, 3 ಜೊತೆ ಕಾಲುಗಳುಳ್ಳ, 6 ಖಂಡಗಳುಳ್ಳ ಲಾರ್ವವಾಗುತ್ತದೆ. ಸಹಸ್ರಪದಿಗಳಲ್ಲಿ 7 ಖಂಡಗಳಿರುತ್ತವೆ. 2, 3, 4ನೆ ಖಂಡಗಳಲ್ಲಿ ಒಂದೊಂದು ಜೊತೆ ಕಾಲುಗಳಿವೆ. 5 ಮತ್ತು 6 ರಲ್ಲಿ 2 ಜೊತೆ ಕಾಲುಗಳ ಅಂಕುರಗಳಿವೆ. ಕೆಲವು ಶತಪದಿಗಳ ಮರಿ (ಸ್ಕೊಲೊಪೆಂಡ್ರೊಮಾರ್ಫ)ಗಳಲ್ಲಿ ಎಪಿಮಾರ್ಫಿಕ್ ಬೆಳೆವಣಿಗೆ

ಇದೆ. ಉಳಿದ ಶತಪದಿಗಳು, (ಲೈಥೊಬೈಯೊಮಾರ್ಫ ಮತ್ತು ಸ್ಕೂಟಿಜೆರೊಮಾರ್ಫ) ಪ್ರೋಟೂರ ಗುಂಪಿನ ಪೌರೊಪೊಡ, ಡಿಪ್ಲೊಪೊಡ, ಸಿಂಫೈಲ ಮತ್ತು ಕೀಟಗಳಲ್ಲಿ ಕಡಿಮೆ ಸಂಖ್ಯೆ ಖಂಡಗಳು ಮತ್ತು ಕಾಲುಗಳನ್ನೊಳಗೊಂಡು ಹುಟ್ಟುತ್ತವೆ. ಇದನ್ನು ಅನಮಾರ್ಫ್ರಿಕ್ ಬೆಳೆವಣಿಗೆ ಎನ್ನುವರು.

ಕೆಲವು ಕೀಟಗಳು ಮೊಟ್ಟೆಯಿಂದ ನಿಂಫ್ ಆಗಿ ಹೊರಬರುತ್ತವೆ. ಇವು ಬಾಹ್ಯವಾಗಿ ತಂದೆ ತಾಯಿಯನ್ನು ಹೋಲುತ್ತವೆ (ಉದಾ: ಎಕ್ಸೊಪ್ಟೆರಿಗೊಟ). ಎಂಡಾಪ್ಟೆರಿಗೊಟ್‌ಗಳು ಪ್ರಾಯಕ್ಕೆ ಬರುವ ಮುನ್ನ ವಿವಿಧ ಹಂತಗಳನ್ನು ಮುಗಿಸಿ ಪ್ರೌಢಾವಸ್ಥೆ ಸೇರುತ್ತವೆ. ಲಾರ್ವ, ಪ್ಯೂಪದ ಪತಂಗಗಳು, ಎಂಡೊಪ್ಟೆರಿಗೋಟ ಗುಂಪಿನ ಚಿಟ್ಟೆಗಳು, ಲಾರ್ವ (ಉದಾ: ಕ್ಯಾಟರ್‌ಪಿಲ್ಲರ್‌ಗಳು, ಮ್ಯಾಗಟ್‌ಗಳು, ಗ್ರಬ್ಸ್‌ಗಳು) ಪ್ರಾಯದ ಕೀಟಗಳಿಗಿಂತ ಬಹಳ ವಿಭಿನ್ನವಾಗಿವೆ. ಇವುಗಳ ಆಕಾರ ಮತ್ತು ನಡತೆಯಲ್ಲಿ ವಿಭಿನ್ನತೆ ಇದೆ. ಎಕ್ಸಾಪ್ಟೆರಿಗೊಟ (ಬಾಹ್ಯ ರೆಕ್ಕೆಗಳುಳ್ಳ ಕೀಟಗಳು) ಲಾರ್ವ ಮತ್ತು ತಾಯಿ ಕೀಟಗಳ ಮಧ್ಯದ ವ್ಯತ್ಯಾಸಗಳು ಕಡಿಮೆ ಇರುವುದರಿಂದ ಅವಶ್ಯಕವಾದ ಬದಲಾವಣೆ ರೂಪಾಂತರವಿಲ್ಲದೆ (ಮೆಟಮಾರ್ಫಸಿಸ್) ನಡೆಯುತ್ತದೆ.

ಅರ್ಯಾಕ್ನಿಡ್ ಗಣದ ಕೀಟಗಳ ಬೆಳೆವಣಿಗೆ ನೇರವಾಗಿದೆ. ಚೇಳು, ಆಂಬ್ಲಿಪೈಗಿ, ಮತ್ತು ತೋಳ ಜೇಡಗಳಲ್ಲಿ ಮರಿಗಳು ಹುಟ್ಟಿದ ಕೂಡಲೇ ತಾಯಿಯ ಬೆನ್ನ ಮೇಲೆ ಹರಿದಾಡುತ್ತವೆ. ಕೆಲವು ಚೇಳುಗಳಲ್ಲಿ, ಭಂಡಾರ ಹೆಚ್ಚಾಗಿರುವ ಮೊಟ್ಟೆಗಳು, ತಾಯಿ ಗರ್ಭದೊಳಗೆ ಬೆಳೆಯುತ್ತವೆ. ಆದರೆ, ಸ್ಕಾರ್ಕಿಪಿಯೊನಿಡಿ ಜಾತಿಯಲ್ಲಿ ಗರ್ಭಧರಿಸಿದ ಮೊಟ್ಟೆಯಲ್ಲಿ ಭಂಡಾರ ಕಡಿಮೆ ಆದ್ದರಿಂದ, ತಾಯಿ ಕರುಳಿನ ಪೋಷಕ ದ್ರವ್ಯಗಳಿಂದ, ಪೋಷಿಸಲ್ಪಡುತ್ತದೆ. ಹುಸಿ ಚೇಳುಗಳಲ್ಲಿ ಅಂಡಾಶಯ (ಓವರಿ) ಗಳಿಂದ ಮೊಟ್ಟೆಗಳಲ್ಲಿ ಭ್ರೂಣಗಳ ಆಹಾರಕ್ಕೆ ಒಂದು ಪೋಷಕ ದ್ರವ್ಯವನ್ನು ಸ್ರವಿಸುತ್ತದೆ. ಹುಸಿಚೇಳುಗಳ ಮರಿಗಳು ನಿಂಫಗಳಾಗಿ ಜನಿಸುತ್ತವೆ. ಪ್ರೋಟೊನಿಂಫ್‌ಗಳು, ಡ್ಯುಟೊನಿಂಫ್, ಟ್ರಯಟೊನಿಂಫ್‌ಗಳೆಂಬ ಹಲವು ಹಂತಗಳಲ್ಲಿ ಬೆಳೆಯುತ್ತವೆ.

ಓನಿಕೊಫೊರ ಮತ್ತು ದವಡೆಗಳುಳ್ಳ ಆರ್ತ್ರೊಪೊಡಗಳಲ್ಲಿ ತಲೆಯ ಹಿಂದೆ ಮುಂಡದ ಭಾಗವಿದೆ. ಇದು ವಲ್ಕವಂತಗಳಲ್ಲಿ ಮತ್ತು ಕೀಟಗಳಲ್ಲಿ ಎದೆ ಮತ್ತು ಹೊಟ್ಟೆಯಾಗಿ ವಿಭಾಗಿಸಿದೆ. ಅರ್ಯಾಕ್ನಿಡ್‌ಗಳಲ್ಲಿ ಮುಂದಿನ ಭಾಗಕ್ಕೆ ಪ್ರೋಸೊಮ ಅಥವ ಸೆಫಾಲೊತೊರಾಕ್ಸ್ ಎಂದು ಹೆಸರು. ಇದರಲ್ಲಿ ಕಾಲುಗಳು ಮತ್ತು ತಿನ್ನಲು ಉಪಯೋಗಿಸುವ ಉಪಾಂಗಗಳಿವೆ, ಶರೀರದ ಹಿಂಭಾಗದ ಭಾಗಗಳನ್ನು ಓಪಿಸ್ತೊಸೋಮ ಅಥವ ಹೊಟ್ಟೆಯೆನ್ನುತ್ತಾರೆ. ಇದನ್ನು ಮೀಸೊಸೋಮ ಮತ್ತು ಮೆಟಸೊಮ ಅಥವ ಬಾಲಗಳನ್ನಾಗಿ ವಿಂಗಡಿಸಲಾಗಿದೆ. ಆರ್ತ್ರೊಪೊಡ ವಂಶದ ಪ್ರಾಣಿಗಳ ಕೊನೆಯ ಖಂಡಗಳಲ್ಲಿರುವ ಭಾಗವನ್ನು ಟೆಲ್ಸನ್ ಎನ್ನುವರು. ತಲೆ ಮತ್ತು ಎದೆ ಅಥವ (ಸೆಫಾಲೊತೊರಾಕ್ಸ್) ಶಿರೋವಕ್ಷ, ಒಂದು ರಕ್ಷಣಾ ಕವಚ (ಕಾರಾಪೇಸ್) ದೊಳಗಿರುತ್ತದೆ.

ಆರ್ತ್ರೊಪೊಡದ ವಿವಿಧ ವರ್ಗಗಳಲ್ಲಿನ ಪ್ರಾಣಿಗಳ ತಲೆಯಲ್ಲಿರುವ ಖಂಡಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಉದಾ: ಟ್ರೈಲೊಬೈಟ್‌ಗಳಲ್ಲಿ 2 ವಲ್ಕವಂತಗಳು, ಬಹುಪಾದಿಗಳು ಮತ್ತು ಕೀಟಗಳಲ್ಲಿ 6 ಅರ್ಯಾಕ್ನಿಡದ ಶಿರೋವಕ್ಷ ಅಥವ ಪ್ರೊಸೋಮದಲ್ಲಿ 7 ಖಂಡಗಳಿವೆ. 2ನೆ ಮತ್ತು 3ನೆ ಖಂಡಗಳಲ್ಲಿ ಉಪಾಂಗಗಳಾದ ಕೆಲಿಸೆರಿ ಮತ್ತು ಪೆಡಿಪಾಲ್ಪಗಳಿವೆ (ಚೆಲಿಸೆರ ಮತ್ತು ಪಾಡಿಪಲ್ಪ್). ಉಳಿದ ನಾಲ್ಕು ಖಂಡಗಳಲ್ಲಿ ಕಾಲುಗಳಿವೆ.

ಆರ್ತ್ರೊಪೊಡಗಳ ಅವಯವ ಆಕಾರ ಮತ್ತು ಗಾತ್ರದಲ್ಲಿ ಬದಲಾವಣೆಗಳಾಗಿ ವಿವಿಧ ರೂಪ ಮತ್ತು ಕಾರ್ಯಗಳನ್ನಾಚರಿಸುವ ಅಂಗಗಳಾಗಿವೆ. ಈಜಲು, ನಡೆಯಲು, ಉಸಿರಾಡಲು, ಪ್ರಜನನವಾಗಲು, ಜ್ಞಾನೇಂದ್ರಿಯಗಳಾಗಲೂ ಅಥವ ಬಾಯಿಯ ವದನಾಂಗಗಳಾಗಲು ಅವಯುವಗಳು ಮಾರ್ಪಟ್ಟಿವೆ. ಉದಾ: ಜೇಡಗಳ ತಂತುಕಗಳು (ಸ್ಪಿನರೆಟ್) ಮಾರ್ಪಟ್ಟ ಹೊಟ್ಟೆ ಅವಯವಗಳು. ಆದಿ ಕೀಟಗಳ ಬಾಯಿ ವದನಾಂಗಗಳು (ಉದಾ: ಜಿರಲೆಗಳು) ವಲ್ಕವಂತಗಳ ಅವಯವಗಳನ್ನು ಹೋಲುತ್ತವೆ. ಕೆಳದವಡೆಯ ಭಾಗಗಳು, ಏಡಿಯ ಕೆಳದವಡೆಗಳಂತಿವೆ. ಜಿರಲೆಗಳು, ಕರ್ಣಕೀಟಗಳು, ಶಲಭಗಳು ಮತ್ತು ದುಂಬಿಗಳ ಆದಿ ಬಾಯಿ ವದನಾಂಗಗಳು ವಿವಿಧ ಮಾರ್ಪಾಟುಗಳಿಂದ ಚುಚ್ಚು ಹೀರುವ ಅಂಗಗಳಾಗಿವೆ. ಉದಾ: ತಿಗಣೆಗಳು, ಜೇನುಹುಳು, ಚಿಕ್ಕಟ ಮತ್ತು ಚಿಟ್ಟೆಗಳು.

ಬಾಹ್ಯಾಸ್ಥಿಪಂಜರ: ಶರೀರದ ಪ್ರತಿ ಖಂಡವನ್ನು ಆವರಿಸಿರುವ ಬಾಹ್ಯಾಸ್ಥಿಪಂಜರದಲ್ಲಿ ಮೂಲವಾಗಿ ನಾಲ್ಕು ಫಲಕಗಳಿವೆ. ಮೇಲ್ಗಡೆ ಟರ್ಗಮ್, ಕೆಳಗಡೆ ಸ್ಟರ್ನಮ್, ಮತ್ತು ಎರಡು ಪಕ್ಕಗಳ ಪ್ಲೊರೈಟ್ ಖಂಡಗಳ ಮಧ್ಯೆ ಒಳಗಡೆ ಸ್ನಾಯುಗಳಿಂದ ಸಂಬಂಧಿಸಿವೆ.

ಸಂಧಿಪದಿಗಳು ವಿವಿಧ ಆಹಾರ ಪದಾರ್ಥಗಳನ್ನು ತಿಂದು ಜೀವಿಸುತ್ತವೆ. ಕೆಲವು ಪ್ರಭೇದದ ಕೀಟಗಳ ಅನ್ನಾಂಗದಲ್ಲಿ ಸಹಜೀವಿಗಳಾದ ಬ್ಯಾಕ್ಟೀರಿಯ ಅಥವ ಪ್ರೊಟೊಝೋವಗಳು ಪಚನ ಕ್ರಿಯೆಗೆ ಸಹಾಕಯಕವಾಗಿವೆ. ಅನ್ನಾಂಗದಲ್ಲಿ, ಕೈಟಿನ್ ಒಳಪದರದ ಮುಂದಿನ ಭಾಗ (ಫೋರ್‌ಗಟ್) ಮತ್ತು ಹಿಂಭಾಗ (ಹಿಂಡ್‌ಗಟ್) ಮತ್ತು ಮಧ್ಯದ (ಮಿಡ್‌ಗಟ್) ಕರುಳು ಅಥವ  ಮೀಸೆಂಟರಾನ್  ಭಾಗಗಳಿವೆ. ಲಾಲಾಗ್ರಂಥಿಗಳು, ಬಾಯಿ ಅಥವ ಮುಂಭಾಗದಲ್ಲಿ ತೆರೆಯುತ್ತವೆ. ಪಚನ ಗ್ರಂಥಿಗಳು ಮಿಸೆಂಟರಾನಿನಲ್ಲಿ ತೆರೆಯುತ್ತವೆ. ಹಿಂಭಾಗದ ಕೊನೆಯಲ್ಲಿ ಗುದ ಟೆಲ್ಸನ್ನಿನ ಕೆಳಗಿದೆ. ಜಲಚರಿಗುಂಪುಗಳಲ್ಲಿ ವಿಸರ್ಜನಾಂಗಗಳಾದ ಕಾಕ್ಸಲ್ ಅಥವ ಗ್ರೀನ್ ಗ್ರಂಥಿಗಳಿವೆ. ಇವು ಕೆಲವು ಖಂಡಗಳ ಉಪಾಂಗಗಳ ಬುಡದಲ್ಲಿವೆ. ಭೂವಾಸಿ ಆರ್ತ್ರೊಪೊಡ ಮತ್ತು ಆಂಫಿಪೊಡ (ಕ್ರಸ್ಟೇಸಿಯ) ಕಠಿಣ ಚರ್ಮಿಗಳಲ್ಲಿ (ಕೊಲೆಂಬೋಲ ಕೀಟಗಳನ್ನು ಬಿಟ್ಟು) ಸಾರಜನಕವಿರುವ ಕಲ್ಮಷವನ್ನು ವಿಸರ್ಜಿಸುವ ಅಂಗಗಳಾದ ಮಾಲ್ಫಿಜಿಯನ್ ನಾಳಗಳಿವೆ. ಇದರಿಂದ ವಿಸರ್ಜಿಸುವ ವಸ್ತು ಯೂರಿಕ್ ಆಮ್ಲ. ಜೇಡ ಗುವಾನಿನ್ ವಿರ್ಸಜಿಸುತ್ತದೆ.

ರಕ್ತ ಪರಿಚಲನಾವ್ಯೂಹವು ನಾಳದಂತ ಹೃದಯ ಹೊಂದಿದೆ. ರಕ್ತದಲ್ಲಿ ಹೀಮೊಸೈಯನಿನ್ ಎಂಬ ಉಸಿರಾಟದ ವರ್ಣದ್ರವವಿದೆ. ಟ್ರೇಕಿಯಗಳಿಂದ ಉಸಿರಾಡುವ ಆರ್ತ್ರೊಪೊಡಗಳಲ್ಲಿ ವಾಹಕವಿಲ್ಲ. ಏಕೆಂದರೆ, ಆಮ್ಲಜನಕ ನೇರವಾಗಿ ಅತಿ ಸೂಕ್ಷ್ಮ ನಾಳಗಳ ಮೂಲಕ (ಟ್ರಾಕಿಯೊಲ್) ಅಂಗಾಂಶಗಳಲ್ಲಿನ ಸೈಟೊಕ್ರೋಮ್ ಎಂಬ ವರ್ಣದ್ರವ್ಯಕ್ಕೆ ಸೇರುತ್ತದೆ.

ನರಮಂಡಲದಲ್ಲಿ ಖಂಡಗಳುಳ್ಳ ನರಗಂಟು (ಗ್ಯಾಂಗ್ಲಿಯ) ಗಳಿವೆ. ಇವು ಭ್ರೂಣದ ಬೆಳೆವಣಿಗೆಯಲ್ಲಿ ಸಂಯುಕ್ತವಾಗಿ ದೊಡ್ಡ ಗಂಟುಗಳಾಗುತ್ತವೆ. ಸೆರೆಬ್ರಲ್ ಮತ್ತು ಸಬ್ ಇಸೊಫೆಜಿಯಲ್ ಗ್ಯಾಂಗ್ಲಿಯ (ಮಿದುಳಿನ ಮತ್ತು ಅನ್ನನಾಳದ ಕೆಳಗಿನ ಗಂಟುಗಳು). ಕಾರ್ಯ ನರಗಳಿಗೆ ಮತ್ತು ನರ ಸ್ರವಣಕ್ಕೆ (ನ್ಯೂರೊಸೆಕ್ರಿಷನ್) ಸಂಬಂಧಿಸಿದೆ.

ಹಲವು ಆರ್ತ್ರೊಪೊಡಗಳಲ್ಲಿ ಜನನ ಗ್ರಂಥಿಗಳಿಗೆ (ಗೊನಾಡ್ಸ್) ಖಂಡಗಳಿಲ್ಲ. ಹಲವು ಗುಂಪುಗಳಲ್ಲಿ ಎಡ–ಬಲದ ಗೋನಾಡ್‌ಗಳು ಸಂಯುಕ್ತವಾಗಿವೆ. ಗೊನಾಡ್‌ಗಳಿರುವ ಕುಹರಗಳು, ಆದಿ ಶರೀರದ ಕುಹರವನ್ನು (ಸೀಲಮ್) ಬಿಂಬಿಸುತ್ತವೆ.

ಬಾಹ್ಯಾಸ್ಥಿಪಂಜರದ ಚರ್ಮ ಆಥವ ಕ್ಯುಟಿಕಲ್‌ನಲ್ಲಿ ಒಂದು ತೆಳುವಾದ, ಅವ್ಯಾಪ್ಯವಾದ (ಇಂಪರ್‌ಮೀಯಬಲ್), ಕೈಟಿನ್ ಇಲ್ಲದ ಹೊರಪದರ (ಎಪಿಕ್ಯುಟಿಕಲ್) ಮತ್ತು ಒಂದು ಮಂದವಾದ ಪದರ ಪದರವಾಗಿರುವ (ಲೈಮೆಲ್ಲಾರ್) ಒಳ ಪದರ (ಎಂಡೊಕ್ಯುಟಿಕಲ್) ಇವೆ. ಒಳ ಪದರದಲ್ಲಿ ಬಹುಮಟ್ಟಿಗೆ ಸಾರಜನಕಯುಕ್ತ ಕೈಟಿನ್ ಇದೆ. ಇದರ ಹೊರ ಪದರಗಳು ಗಡುಸು ವಸ್ತುವಿನಿಂದ ಗಟ್ಟಿಯಾಗಿವೆ. ಕ್ಯಾಲ್ಸಿಯಂ ಕಾರ್ಬೊನೇಟ್ ಲವಣದ ಸಂಚಯದಿಂದ ಇದು ಗಟ್ಟಿಯಾಗಿದೆ. ಪೊರೆ ಬಿಡುವುದನ್ನು ಹಾರ್ಮೋನ್‌ಗಳು ಹತೋಟಿಗೊಳಿಸುತ್ತವೆ. ಕ್ಯೂಟಿಕಲ್‌ನ ಗಟ್ಟಿಯಾದ ಹೊರ ಪದರ ಕಳಚುವ ಮೊದಲು, ಒಳ ಪದರಗಳು ಒಂದು ಕಿಣ್ವದಿಂದ ಜೀರ್ಣಿಸುತ್ತವೆ. ನೀರು ಅಥವ ಗಾಳಿಯ ಸೇವನೆಯಿಂದ ಒತ್ತಡವನ್ನುಂಟುಮಾಡುತ್ತದೆ. ಒತ್ತಡ, ಹೀಮೊಸೀಲ್‌ಗಳಿಂದ ಶರೀರದ ಎಲ್ಲ ಭಾಗಗಳಿಗೂ ವ್ಯಾಪಿಸುತ್ತದೆ. ಹೊರ ಚರ್ಮ (ಕ್ಯುಟಿಕಲ್) ಗಟ್ಟಿಯಾಗುವವರೆಗೂ ಶರೀರ ಊದಿರುತ್ತದೆ.

ಭೂವಾಸಿ ಆರ್ತ್ರೊಪೊಡಗಳ ಚರ್ಮ ರಕ್ಷಣೆ ಕೊಡುತ್ತದೆ. ದೇಹದೊಳಗಿನಿಂದ ನೀರು ಆವಿಯಾಗದಂತೆ ತಡೆಯುತ್ತದೆ. ಮರಹೇನು, ಬಹುಪಾದಿಗಳು, ಕೊಲೆಂಬೋಲಗಳಂತ ಕ್ರಿಪ್ಟೊಝೋಯಿಕ್ ಪ್ರಾಣಿಗಳು, ಕಲ್ಲು, ಎಲೆ, ತೊಗಟೆ ಮತ್ತು ಮಣ್ಣಿನ ಬಿರುಕುಗಳಲ್ಲಿ, ತೇವಾಂಶಯುಕ್ತ ಜಾಗಗಳಲ್ಲಿರುತ್ತವೆ. ಅರ್ಯಾಕ್ನಿಡ್‌ಗಳ ದೇಹದ ಹೂರ ಕವಚದಲ್ಲಿ ಎಪಿಕ್ಯೂಟಿಕಲ್ ಇರುವುದರಿಂದ ನೀರು ಆವಿಯಾಗದಂತೆ ತಡೆಯುತ್ತದೆ. ಯೂರಿಕ್ ಆಮ್ಲ ಮತ್ತು ಗುವಾನಿನ್‌ಗಳು, ಭೂವಾಸಿ ಆರ್ತ್ರೊಪೊಡಗಳ ಪೊರೆಯುಚ್ಚು ಅಂತರಗಳಲ್ಲಿ ಕೇಂದ್ರೀಕರಿಸಿ, ನೀರನ್ನು ಎಳೆದುಕೊಂಡು, ಹಿಕ್ಕೆಗಳೊಡನೆ ವಿಸರ್ಜಿಸುತ್ತವೆ.

ಆರ್ತ್ರೊಪೊಡದ ಪ್ರೇರಕಗಳು, ಬಣ್ಣದ ಬದಲಾವಣೆ, ಕಣ್ಣಿನ ವರ್ಣದ್ರವ್ಯದ ವಲಸೆ, ಬೆಳೆವಣಿಗೆ, ಪೊರೆಯುಚ್ಚು, ರೂಪಾಂತರ, ಮತ್ತು ಲೈಂಗಿಕ ಬೆಳೆವಣಿಗೆಗಳನ್ನು ಹತೋಟಿಗೊಳಿಸುತ್ತವೆ,

ಆರ್ತ್ರೊಪೊಡಗಳಲ್ಲಿ ವಿವಿಧ ಕಾರ್ಯಗಳಿಗೆ ಸಂಬಂಧಿಸಿದ ವಿಷಗ್ರಂಥಿಗಳಿವೆ. ಶತಪದಿಗಳು, ಚೇಳುಗಳು, ಹುಸಿ ಚೇಳುಗಳು, ಮತ್ತು ಜೇಡಗಳಲ್ಲಿ, ಆಹಾರ ಜೀವಿಯನ್ನು ಹಿಡಿದು, ಜೀರ್ಣಿಸಿಕೊಳ್ಳಲು ವಿಷಗ್ರಂಥಿಗಳು ಸಹಾಯಕ. ಕಣಜಗಳಂತೆ ಹೈಮನಾಪ್ಟೆರ ಕೀಟಗಳಲ್ಲಿ ವಿಷಗ್ರಂಥಿಗಳು, ಮೊಟ್ಟೆಗಳನ್ನಿಡುವ ಅಂಗಗಳಾದ ಓವಿಪಾಸಿಟರ್ ಅಥವ ಮುಳ್ಳುಕೊಂಡಿಗೆ ಸಂಬಂಧಿಸಿವೆ. ಚಿಟ್ಟೆಗಳ ಡಿಂಬಗಳಲ್ಲಿ ಅವು ಮುಳ್ಳು ಅಥವ ಬಿರುಗೂದಲುಗಳಿಗೆ ಸೇರಿವೆ. ಅಂಥ ರಚನೆಗಳು ಮುರಿದಾಗ ನವೆಯುಂಟುಮಾಡುವ ದ್ರವ ಹೊರಸೂಸುತ್ತದೆ. ಮರಹೇನು, ಸಹಸ್ರಪದಿಗಳು, ಸುಗ್ಗಿ ಜೇಡಗಳು ಮುಂತಾದವುಗಳಲ್ಲಿ ರಕ್ಷಣೆಗಾಗಿ ಅಸಹ್ಯ ವಾಸನೆಯನ್ನುಂಟುಮಾಡುವ ಸ್ರಾವಕಗಳ ಕೆಲವು ಗ್ರಂಥಿಗಳಿವೆ.

ಸರಳ ಅಥವ ಸಂಯುಕ್ತ ಕಣ್ಣುಗಳಲ್ಲದೆ, ಉಳಿದ ಜ್ಞಾನೇಂದ್ರಿಯಗಳಾದ (ಸೆನ್ಸಿಲ್ಲಾ) ಸ್ಪರ್ಶಕೂದಲು, ಘ್ರಾಣೇಂದ್ರಿಯಗಳು, ರಸನೇಂದ್ರಿಯಗಳು, ಶ್ರವಣೇಂದ್ರಿಯಗಳು ಇವೆ. ಕುಡಿಮೀಸೆಗಳ ಮೇಲೆ ಕೀಮೊಟ್ಯಾಕ್ಟೈಲ್‌ಗಳಿವೆ. ಶಂಕುಗಳಿವೆ ಮತ್ತು ತೇವಾಂಶ ಶಾಖಗಳನ್ನು ಗ್ರಹಿಸುವ ರಚನೆಗಳಿವೆ. ಶಬ್ದವನ್ನು ಗ್ರಹಿಸಲು ಶ್ರವಣಾಂಗಗಳ ಮೇಲೆ ಕಾರ್ಡೊಟೋನಲ್ ಸೆನ್ಸಿಲ್ಲಗಳಿವೆ. ರೆಕ್ಕೆಗಳ ಬಳಿ ಚರ್ಮದ ಬಿಗಿತವನ್ನು ಗೊತ್ತುಮಾಡುವ ಪ್ರೊಪ್ರಿಯೊ ರಿಸೆಪ್ಟಿವ್ ಕಂಪಾನಿಫಾರಂ ಸೆನ್ಸಿಲ್ಲಗಳಿವೆ. ಜೇಡರ ಬಲೆಯ ಮೇಲೆ, ಗಂಡಿನ ಎಳೆತದಿಂದ, ಕೊಳ್ಳೆ ಎಳೆದಾಡುವ ಕಂಪನವನ್ನು ವ್ಯತ್ಯಾಸಗೊಳಿಸಿ ತಿಳಿಸುವ, ಲೈರಿಫಾರಂ ಅಂಗಗಳು ಕಾಲುಗಳ ಮೇಲಿವೆ.

ವಿಕಸನೆ: ಆರ್ತ್ರೋಪೊಡಗಳಿಗೂ, ಪಾಲಿಖೀಟವರ್ಗದ ಅನೆಲಿಡ್ (ವಲಯವಂತಗಳು) ಗಳಿಗೂ ಸಂಬಂಧವಿದೆ. ಇವೆರಡು ಗುಂಪುಗಳು ಒಂದೇ ಮೂಲದಿಂದ ಬಂದಿವೆ ಎಂಬುದಕ್ಕೆ ಪುರಾವೆಗಳಿವೆ. ಆರ್ತ್ರೋಪೊಡಗಳ ವೈಶಿಷ್ಟ್ಯಗಳಿಗೆ ಕಾರಣ: ಕ್ಯೂಟಿಕಲ್‌ನಿಂದ, ಕೀಲುಗಳುಳ್ಳ ಬಾಹಾಸ್ಥಿಪಂಜರವಾಗಿರುವುದು. ಇದರಿಂದ ಖಂಡಗಳುಳ್ಳ ಅನುಬಂಧಗಳಾಗಿ ವಿವಿಧ ಕಾರ್ಯಗಳಿಗೆ ಹೊಂದಿಕೊಂಡಿವೆ. ಉದಾ: ಆಹಾರ ಸೇವನೆ, ಚಲನೆ, ಉಸಿರಾಡುವುದು, ಜ್ಞಾನಗ್ರಾಹ್ಯ ಮತ್ತು ಪ್ರಜನನ. ಸ್ನಾಯುಗಳುಳ್ಳ ಅಂಗಗಳ ಬೆಳೆವಣಿಗೆಗೆ ಸಂಬಂಧಿಸಿದಂತೆ ಸೀಲೋಮ್, ಹೀಮೊಸೀಲ್ ಆಗಿ ಮಾರ್ಪಾಟಾಗಿದ್ದು, ಶರೀರದ ಎಲ್ಲ ಅಂಗಗಳಿಗೂ ರಕ್ತ ಸಂಚರಿಸುತ್ತದೆ. ನರವ್ಯೂಹ ವಲಯವಂತಗಳಲ್ಲಿರುವಂತೆ ಇದೆ.

ಟ್ರೈಲೊಬೈಟ್‌ಗಳು ಮತ್ತು ಚೇಳಿನಂತ ಯೂರಿಪ್ಟೆರಿಡಗಳು, ಪುರಾತನ ಆರ್ತ್ರೋಪೊಡಗಳು, ವಲ್ಕವಂತಗಳು ಬಹುಮಟ್ಟಿಗೆ ಜಲಚರಿಗಳು. ಆದರೂ, ಭೂವಾಸಿ ಅಕಶೇರುಕಗಳು ವಿಶೇಷವಾಗಿ ಆರ್ತ್ರೋಪೊಡಗಳಲ್ಲಿವೆ.

ಆರ್ತ್ರೋಪೋಡಗಳ ಪಳೆಯುಳಿಕೆಗಳು, 570,000,000 ವರ್ಷಗಳ ಹಿಂದಿನ ಪ್ರಿಕೇಂಬ್ರಿಯನ್ ಬಂಡೆಗಳಲ್ಲಿ ಕಂಡಿದ್ದರೂ, ಖಚಿತವಾಗಿಲ್ಲ. ಕೆಲವು ಟ್ರೈಲೊಬೈಟ್‌ಗಳು, ಬ್ರಾಕಿಯೊಪೊಡ, ಕ್ರಸ್ಟೇಸಿಯ ಮತ್ತು ಮೀರೊಸ್ಟೋಮ್‌ಗಳ ಪಳಿಯುಳಿಕೆಗಳು 550,000,000 ವರ್ಷಗಳ ಹಿಂದಿನ ಆದಿ ಕೇಂಬ್ರಿಯನ್ ಯುಗದಿಂದ ಕಂಡಿರುವುದರಿಂದ, ಆರ್ತ್ರೋಪೊಡಗಳು ಬಹಳ ಕಾಲ ಪ್ರಿಕೇಂಬ್ರಿಯನ್ ಯುಗದಲ್ಲಿದ್ದಿರಬೇಕು. ಆಗ, ಅವು, ವಲಯವಂತ ಪೂರ್ವಜಗಳಿಂದ ಮಾರ್ಪಟ್ಟು ವಿವಿಧ ರೀತಿಯಲ್ಲಿ ವಿಕಸನಗೊಂಡಿವೆ. ಬಹಳ ಮುಂಚೆ ಗೊತ್ತಾಗಿರುವ ಅರ್‍ಯಾಕ್ನಿಡ್ ಪಳಿಯುಳಿಕೆಗಳು, 400,000,000 ವರ್ಷಗಳ ಹಿಂದಿನ ಆರಂಭದ ಸೈಲೂರಿಯನ್ ಪದರದಲ್ಲಿ ಕಂಡಿವೆ. ಕೊಲೆಂಬೋಲ, ಕೀಟಗಳು, ಸಹಸ್ರಪದಿಗಳು ಮತ್ತು ಡಿವೊನಿಯನ್ ವ್ಯೂಹದ ಮೇಲ್ಭಾಗದಲ್ಲಿ ಕಂಡಿವೆ. ಟಾರ್ಡಿಗೇಡ, ಪೆಂಟಾಸ್ಟೊಮಿಡಗಳ ಪಳಿಯುಳಿಕೆಗಳು ಕಂಡಿಲ್ಲ.

ವರ್ಗೀಕರಣ: ಆರ್ತ್ರೋಪೊಡ ವಂಶವನ್ನು ತುಲನಾತ್ಮಕ ದೇಹರಚನೆ, ಭ್ರೂಣ ವಿಜ್ಞಾನ ಮತ್ತು ಕಾರ್ಯಗಳ ಆಧಾರದ ಮೇಲೆ ವರ್ಗೀಕರಿಸಿದ್ದಾರೆ. ನಡತೆಗಳ ವ್ಯತ್ಯಾಸ ಭೂವಾಸಿ ಗುಂಪುಗಳ ವಿಕಸನಾ ವ್ಯತ್ಯಾಸಗಳಲ್ಲಿ ಪ್ರಮುಖ ಮಾರ್ಪಾಟು ತೋರಿಸುತ್ತದೆ. ಶರೀರದ ಖಂಡಗಳ ಸಂಖ್ಯೆ ಮತ್ತು ಅನುಬಂಧಗಳು ಮುಂಭಾಗದ ಕುಡಿಮೀಸೆ ಮತ್ತು ಬಾಯಿಭಾಗಗಳ ಉದಯ, ಗೋನೊರಂಧ್ರ, (ಗೋನೋಪೋರ್) ತಲೆ ರಚನೆ, ನಿಶ್ವಾಸೋಚ್ಛ್ವಾಸ ಮತ್ತು ಶುದ್ಧಿಕರಣಾಂಗಗಳ ಹೊಂದಾಣಿಕೆಗಳನ್ನು ಸಂಧಿಪದಿಗಳ ವರ್ಗೀಕರಣದಲ್ಲಿ ಪರಿಗಣಿಸಲಾಗಿದೆ.

ಆರ್ತ್ರೋಪೊಡ ವಂಶ: ದ್ವಿಪಾರ್ಶ್ವ ಸಮ ಮಿತಿಯುಳ್ಳ ಬಾಹ್ಯಾಸ್ಥಿಪಂಜರ, ನಿರ್ದಿಷ್ಟ ಕಾರ್ಯಗಳಿಗೆ ವೈಶಿಷ್ಟ್ಯವಾದ ಅನುಬಂಧಗಳು ಹೊರಚರ್ಮ ಸ್ರವಿಸಿದ ಕ್ಯೂಟಿಕಲ್, ಮಂದವಾದ ಎಂಡೊಕ್ಯೂಟಿಕಲ್‌ನಿಂದಾದ ಸ್ಕ್ಲೀರೈಟ್‌ಗಳು ಭೂಚರಗಳಲ್ಲಿ ನೀರಿನ ನಷ್ಟವನ್ನು ಕಡಿಮೆ ಮಾಡಲು ಮೇಣದ ವಸ್ತುಗಳು, ಪೊರೆಯುರ್ಚು ಶರೀರದ ಸ್ನಾಯುಗಳ ಜಟಿಲತೆ, ಆಗಾಗ, ವೈಶಿಷ್ಟ್ಯವಾಗಿರುವುದು. ಹಾರಾಟ, ಶಬ್ದೋತ್ಪತ್ತಿ, ಸಿಲೊಮ್ ಕಡಿಮೆಯಾಗಿ ಹೀಮಾಸೀಲ್‌ನಿಂದ ಬದಲಾಗಿವೆ. ನರಮಂಡಲದಲ್ಲಿ ಮೇಲಿನ ಮಿದುಳು ಮತ್ತು ಕೆಳಗಿನ ಜತೆ ನರಹುರಿ ಕಶಾಂಗ ಇಲ್ಲ. ಹಳದಿ ಲೋಳೆ (ಭಂಡಾರ) ಹೆಚ್ಚಾಗಿರುವ ಮೊಟ್ಟೆಗಳಿಂದ, ಬೆಳೆವಣಿಗೆ ವಿಶೇಷವಾಗಿ ಮಾರ್ಪಟ್ಟಿದೆ.

ಉಪವಂಶ: ಟ್ರೈಲೊಬೈಟೊಮಾರ್ಫ. ಇವು ಅಳಿದುಹೋದ ಆರ್ತ್ರೋಪೊಡಗಳು. ತಲೆಯಲ್ಲಿ 5 ಖಂಡಗಳು, ಸಂಧಿಗಳುಳ್ಳ ಕುಡಿಮೀಸೆ, ಸಂಯುಕ್ತ ಕಣ್ಣುಗಳು, ಶರೀರ 3 ಭಾಗಗಳು: ಸೆಫ಼ಲಾನ್, ಎದೆ ಮತ್ತು ಪೈಗಿಡಿಯಂ ಇದೆ.

ವರ್ಗ ಟ್ರೈಲೊಬೈಟ್ 500,000,000–570,000,000 ವರ್ಷಗಳ ಹಿಂದಿನ ಕೇಂಬ್ರಿಯನ್ ಮತ್ತು 395,000,000–430,000,000 ವರ್ಷಗಳ ಹಿಂದಿನ ಸೈಲೂರಿಯನ್ ಯುಗಗಳಲ್ಲಿ ವಿಶೇಷವಾಗಿದ್ದು, ಮೀಸೊಝೋಯಿಕ್ ಯುಗದಲ್ಲಿ ಅಳಿದು ಹೋದವು. ಇವು ಸಮುದ್ರವಾಸಿಗಳು. ತಲೆ ಮತ್ತು ಪೈಗಿಡಿಯಂ ಟರ್ಗೈಟ್‌ಗಳು ಸಂಯೋಜಿಸಿ, ದ್ವಿಶಾಖೆ ಉಪಾಂಗಗಳನ್ನು ಹೊಂದಿವೆ. ಮೊಟ್ಟೆಗಳು ಪ್ರೊಟಾಸ್ಪಿಸ್ ಲಾರ್ವಗಳಾಗಿ ಒಡೆಯುತ್ತವೆ. ಉದ್ದ 3.5–75 ಸೆಂಮೀ 4000ಕ್ಕಿಂತ ಹೆಚ್ಚು ಪಳಿಯುಳಿಕೆ ದೊರೆತಿವೆ.

ಉಪವಂಶ: ಮ್ಯಾಂಡಿಬ್ಯುಲೇಟ. ತಲೆಯ ಮೇಲೆ ಕುಡಿ ಮೀಸೆ, ದವಡೆಗಳು ಮತ್ತು ಕೆಳದವಡೆಗಳು (ಮ್ಯಾಕ್ಸಿಲ್ಲ) ಇವೆ. ಎದೆಯ ಮೇಲೆ, ಏಕ ಅಥವ ದ್ವಿಶಾಖೆ ಅನುಬಂಧಗಳಿವೆ. ಇವು ಬಾಯಿ ಭಾಗಗಳಿಗೆ ಸಂಬಂಧಿಸಿವೆ. ಹೊಟ್ಟೆ, ಎದೆಯಿಂದ ಪ್ರತ್ಯೇಕವಾಗಿಲ್ಲ. ಎದೆಯಿಂದ ಪ್ರತ್ಯೇಕ ಅನುಬಂಧಗಳಿರುತ್ತವೆ.

ವರ್ಗ: ಕ್ರಸ್ಟೇಸಿಯ (ವಲ್ಕವಂತಗಳು) ಬಹುಮಟ್ಟಿಗೆ ಜಲಚರಗಳು. ಉಸಿರಾಟದ ಕಿವಿರುಗಳಿವೆ. ಬಲವಾದ ಬಾಹ್ಯಾಸ್ಥಿಪಂಜರ ಇದೆ. 2, 3 ನೆ ಖಂಡಗಳ ಮೇಲೆ ಕುಡಿಮೀಸೆ ಇದೆ. 4ನೆ ಖಂಡದಲ್ಲಿ ಒಂದು ಜತೆ ದವಡೆಗಳು ಇವೆ. ಕ್ಯಾರಪೇಸ್ (ಮೇಲ್ ಚಿಪ್ಪು) ಇದೆ. ಕೆಲವು ಪರೋಪಜೀವಿಗಳೂ. ಇವುಗಳ ಗಾತ್ರ 0.5 ಮಿಮೀ ನಿಂದ 2 ಮೀ 25000ಕ್ಕಿಂತ ಹೆಚ್ಚು ಪ್ರಭೇದಗಳಿವೆ.

ವರ್ಗ ಪೌರೊಪೊಡ. ಇವು ಸಣ್ಣ ಬಹುಪಾದಿಗಳು. 2 ಜೊತೆ ಅನುಬಂಧಗಳು ಬಾಯಿಭಾಗಗಳಾಗಿ ಮಾರ್ಪಟ್ಟಿವೆ 8–11 ಜೊತೆ ಕಾಲುಗಳಿವೆ. ಕುಡಿಮೀಸೆ 4 ಖಂಡಗಳಿಂದಾಗಿವೆ. ಇವಕ್ಕೆ ಚಿಕ್ಕದಾದ ಶಾಖೆಗಳಿವೆ. ಇವು ಉದ್ದವಾದ ಬಹು ಕೀಲುಗಳುಳ್ಳ ಕಶಾಂಗ (ಫ್ಲಾಜೆಲ್ಲಾ) ಗಳು. ಇವುಗಳ ಉದ್ದ 1.9 ಮಿಮೀ ಸು. 180 ಜಾತಿಗಳಿವೆ.

ವರ್ಗ: ಡಿಪ್ಲೊಪೊಡ (ಸಹಸ್ರಪಾದಿಗಳು). ಇವು ಉದ್ದವಾದ ಬಹುಪಾದಿಗಳು ಹೊಟ್ಟೆಯ ಮೇಲೆ ಅಪರಿಚಿತ ಖಂಡದ್ವಯಗಳು ಇವೆ. ಪ್ರತಿಯೊಂದರಲ್ಲೂ 2 ಜತೆ ಕಾಲುಗಳು ಮತ್ತು ಶ್ವಾಸರಂಧ್ರಗಳಿವೆ. ತಲೆಯಲ್ಲಿ ದವಡೆಗಳು ಮತ್ತು ಕೆಳ ದವಡೆಗಳು ಸಂಯೋಜಿಸಿ ಗ್ನೇತೊಕೈಲೇರಿಯಂ ಆಗಿದೆ. ಸರಳ ಕಣ್ಣುಗಳು (ಒಸೆಲ್ಲಿ) ಮತ್ತು ಮೋಟಾದ ಗದೆಯಾಕಾರದ ಕುಡಿಮೀಸೆಗಳು ಎದೆಯಲ್ಲಿ 4 ಖಂಡಗಳು, 3ನೆ ಯದರಮೇಲೆ ಗೋನೊರಂಧ್ರ (ಪ್ರೊಗೊನೀಟ್) ಇದೆ. ಉದ್ದ 3 ಮಿಮೀ 28 ಸೆಂಮೀ ಸು. 8000 ಪ್ರಭೇದಗಳಿವೆ.

ವರ್ಗ: ಕೈಲೊಪೊಡ (ಶತಪದಿಗಳು). ಉದ್ದವಾದ ಬಹುಪಾದಿಗಳು, ಹಲವು ಪ್ರತ್ಯೇಕ ಹೊಟ್ಟೆ ಖಂಡಗಳು ಇವೆ. ಪ್ರತಿಯೊಂದರ ಮೇಲೂ ಒಂದೊಂದು ಜತೆ ಕಾಲು, ತಲೆಯ ಮೇಲೆ ಸರಳ ಕಣ್ಣುಗಳಿವೆ. ಕುಡಿಮೇಸೆ, ದವಡೆಗಳು, 1 ಮತ್ತು 2ನೆ ಮಾಕ್ಸಿಲ್ಲ ಇವೆ. ಹೊಟ್ಟೆಯ ಮೊದಲನೆ ಖಂಡದ ಕಾಲುಗಳು ವಿಷಕೊಂಡಿಗಳಾಗಿ ಮಾರ್ಪಟ್ಟಿವೆ. ಕೊನೆ ಖಂಡದ ಮೇಲೆ ಗೋನೊರಂಧ್ರ (ಆಪಿಸ್ಥಿಸ್ತೋನೇಟ್) ಇದೆ. 5 ಮಿಮೀ 26.5 ಸೆಂಮೀ ಸು. 2800 ಜಾತಿ ಪ್ರಭೇದಗಳನ್ನು ಗುರುತಿಸಲಾಗಿದೆ.

ವರ್ಗ: ಸಿಂಫೈಲ. ಸಣ್ಣ ಬಹುಪಾದಿಗಳು. 3 ಜತೆ ಬಾಯಿ ವದನಾಂಗಗಳಿವೆ. 12 ಜತೆ ನಡಿಗೆ ಕಾಲು, ಹಿಂಭಾಗದಲ್ಲಿ ಒಂದು ಜತೆ ನೂಲುವ ತಂತುಕಗಳಿವೆ. 4ನೆ ಖಂಡದ ಮೇಲೆ ಗೋನರಂಧ್ರ ಇದೆ. ಉದ್ದ 8 ಮಿಮೀ ಸು. 120 ಜಾತಿಯ ಪ್ರಭೇದಗಳನ್ನು ಗುರುತಿಸಲಾಗಿದೆ.

ವರ್ಗ: ಕೊಲೆಂಬೋಲ (ಸ್ಪ್ರಿಂಗ್‌ಟೈಲ್ಸ್). ಬಹುವ್ಯಾಪ್ತಿಯ ಸಣ್ಣ ಕೀಟಗಳು. ಒಪಿಸ್ತೊಗೋನಿಯೇಟ್ ಆರ್ತ್ರೋಪೊಡಗಳು. ಹೊರದವಡೆಗಳ (ಎಕ್ಟೊಗ್ನಾತಸ್) ಬಾಯಿ ಭಾಗಗಳು. ಕುಡಿಮೇಸೆಯಲ್ಲಿ 4 ಖಂಡ, ಕಣ್ಣುಗಳು ಸರಳ ರೀತಿಯವು. 3 ಜತೆ ಕಾಲುಗಳುಳ್ಳ ಎದೆ ಖಂಡಗಳು. ಹೊಟ್ಟೆ 6 ಖಂಡಗಳು, ಎಗರುವ ಕವಲುಳ್ಳ ಅಂಗವಿದೆ. ಶ್ವಾಸನಾಳಗಳು ಸಾಮಾನ್ಯವಾಗಿ ಇಲ್ಲ. ಮಾಲ್ಪಿಜಿಯನ್ ನಾಳಗಳಿಲ್ಲ. ಉದ್ದ 5 ಮಿಮೀ ಸು. 1500 ಪ್ರಭೇದಗಳಿವೆ.

ವರ್ಗ: ಕೀಟಗಳು (ಹೆಕ್ಸಪೊಡ ಇನ್ಸೆಕ್ಟ): ದವಡೆಗಳುಳ್ಳ ಆರ್ತ್ರೋಪೊಡಗಳು. 3 ಜತೆ ಅನುಬಂಧಗಳು ಬಾಯಿಭಾಗಗಳಾಗಿ ಮಾರ್ಪಟ್ಟಿವೆ. ತಲೆಯಲ್ಲಿ 6 ಖಂಡಗಳು, ಒಂದು ಜತೆ ಕಶಾಂಗಗಳುಳ್ಳ ಕುಡಿಮೇಸೆ, ಮಧ್ಯದ ಮತ್ತು ಪಕ್ಕದ ಕಣ್ಣುಗಳಿವೆ. ಎದೆಯಲ್ಲಿ 3 ಖಂಡಗಳಿವೆ. ಪ್ರತಿಯೊಂದರ ಮೇಲೂ, ಒಂದೊಂದು ಜತೆ ಕಾಲುಗಳು; 2ನೆ, 3ನೆ ಖಂಡಗಳಲ್ಲಿ ರೆಕ್ಕೆಗಳಿವೆ. ಹೊಟ್ಟೆಯ ಭಾಗದಲ್ಲಿ 11 ಖಂಡಗಳಿವೆ. ಉದ್ದ 33 ಸೆಂಮೀ ಸು. 750,000 ಪ್ರಭೇದಗಳಿವೆ.

ಉಪವಂಶ: ಕೆಲಿಸೆರೇಟ. ಪ್ರೋಸೋಮದಲ್ಲಿ ಕುಡಿಮೀಸೆಗಳಿಲ್ಲ. ಚಿಮ್ಮಟಗಳಂತಹ ಕೆಲಿಸೆರಿಗಳು ಮತ್ತು ಪೆಡಿಪಾಲ್ಪ್‌ಗಳಿವೆ. ಎದೆ ಖಂಡಗಳ ಮೇಲೆ ಏಕಶಾಖೆ ನಡಿಗೆ ಕಾಲುಗಳು, ಹೊಟ್ಟೆಯ ಮೇಲೆ ಅನುಬಂಧಗಳಿದ್ದರೆ ಅವು ಬಹಳ ಮಾರ್ಪಟ್ಟಿವೆ.

ವರ್ಗ: ಮೀರೊಸ್ಟೊಮೇಟ: ದೊಡ್ಡ ಸಮುದ್ರವಾಸಿಗಳು. ಪುಸ್ತಕ ಕಿವಿರುಗಳಿವೆ. ಪೊಸೋಮ ಕ್ಯಾರಪೇಸಿನಿಂದ ಪೂರ್ತಿ ಮುಚ್ಚಿದೆ. ಒಪಿಸ್ತೊಸೋಮದ ಮೇಲೆ ಒಂದು

ಉದ್ದವಾದ ಮುಳ್ಳಿದೆ. ಎರಡೇ ತರಗತಿಗಳು,–ಜಿಫೊಸೂರದಲ್ಲಿ 4 ಪ್ರಭೇದಗಳಿವೆ. ಯೂರಿಪ್ಟೆರಿಡದಲ್ಲಿ 200 ಪಳಿಯುಳಿಕೆಗಳಿವೆ. ಅತ್ಯಂತ ಉದ್ದವಾದದ್ದು 1.8 ಮೀ.

ವರ್ಗ: ಅರ್‍ಯಾಕ್ನಿಡ: ಇದು ಕೆಲಿಸೆರೇಟ್ ಆರ್ತ್ರೊಪೊಡ. ಶರೀರ ಪ್ರೋಸೋಮ ಮತ್ತು ಒಪಿಸ್ತೊಸೋಮಗಳಾಗಿ ವಿಂಗಡಿಸಿದೆ. ಆಗಾಗ ಇವೆರಡರ ಮಧ್ಯೆ ಒಂದು ಕಿರಿದಾದ ಕಿವಿರು ತೊಟ್ಟಿದೆ. ಪ್ರೋಸೋಮದ ಮೇಲೆ ಕೆಲಿಸೆರಿ, ಪೆಡಿಪಾಲ್ಪ್‌ಗಳು, 4 ಜತೆ ಕಾಲುಗಳು ಇವೆ. ಒಪಿಸ್ತೊಮದಲ್ಲಿ ಅನುಬಂಧಗಳಿಲ್ಲ. ಉಸಿರಾಟ, ಶ್ವಾಸ ಪುಸ್ತಕಗಳಿಂದ, ಶ್ವಾಸನಾಳಗಳಿಂದ ಅಥವ ಎರಡರಿಂದಲೂ ನಡೆಯುತ್ತದೆ. ಅವು ಒಪಿಸ್ತೊಸೋಮದ ಮೇಲೆ ತೆರೆಯುತ್ತವೆ. ಗೋನೊರಂಧ್ರ, ಒಪಿಸ್ತೊಸೋಮದ 2ನೆ ಖಂಡದ ಕೆಳಭಾಗದಲ್ಲಿದೆ. ಉದ್ದ 0.25 ಮಿಮೀ –18 ಸೆಂಮೀ ಸು. 60,000 ಪ್ರಭೇದಗಳಿವೆ.

ವರ್ಗ: ಪಿಕ್ನೊಗೋನಿಡ (ಪ್ಯಾಂಟೊಪೋಡ): ಸಮುದ್ರ ಜೇಡಗಳು. ಶರೀರ ಕೆಫಲಾನ್ ಮುಂಡ ಮತ್ತು ಹೊಟ್ಟೆಗಳಾಗಿ ವಿಂಗಡಿಸಿದೆ. ಕೆಫಲಾನ್‌ನಲ್ಲಿ ಮೂತಿನಾಳವಿದೆ. 3 ಜೊತೆ ಅನುಬಂಧಗಳಿವೆ. ತಲೆ ಬಹಳ ಚಿಕ್ಕದು. 4 ಖಂಡಗಳಿವೆ. ಪ್ರತಿಯೊಂದರಲ್ಲೂ ಒಂದೊಂದು ಜತೆ ಕೀಲುಕಾಲುಗಳಿವೆ. ಹೊಟ್ಟೆ ಗೋಳಾಕಾರವಾಗಿದೆ. ಉಸಿರಾಟದ ಅಂಗಗಳಿಲ್ಲ. ವಿಸರ್ಜನಾಂಗಗಳಿಲ್ಲ. ಉದ್ದ 2 ಮಿಮೀ – 6 ಸೆಂಮೀ ಸು. 600 ವಂಶಗಳಿವೆ.

ವರ್ಗ: ಪೆಂಟಾಸ್ಟೊಮಿಡ (ಲಿಂಗ್ಯುಟುಲಿಡ). ಉದ್ದವಾದ ಹುಳದಂಥ ಪರೋಪಜೀವಿಗಳು. ಬಾಯಿ ಪಕ್ಕಗಳಲ್ಲಿ 2 ಜತೆ ಮೊನೆಯುಗುರುಗಳಿವೆ. ಉಸಿರಾಟ, ರಕ್ತ ಸಂಚಾರದ ವ್ಯವಸ್ಥೆ ಇಲ್ಲ. ಉರುಗ, ಪಕ್ಷಿ, ಮತ್ತು ಸ್ತನಿಗಳ ಶ್ವಾಸಕೋಶ, ಅನ್ನನಾಳ ಮತ್ತು ಸಿಲೊಮ್‌ಗಳಲ್ಲಿರುತ್ತವೆ. ಲಾರ್ವ ಸ್ವತಂತ್ರ ಅಥವ ಮಧ್ಯಸ್ಥ ಆಸರೆ (ಮೀನು)ಯಲ್ಲಿ ಕೋಶವಾಗಿರುತ್ತವೆ (ಎನ್‌ಸಿಸ್ಟ್). ಉದ್ದ 9 ಸೆಂಮೀ ವರೆಗೂ ಸು. 70 ಜಾತಿಗಳಿವೆ.

ವರ್ಗ: ಟಾರ್ಡಿಗ್ರೇಡ. ಸಣ್ಣ ಬಹುವ್ಯಾಪ್ತಿ ಜೀವಿಗಳು. 4 ಜತೆ ಚಿಕ್ಕ ಕಾಲುಗಳು; ತುದಿಯಲ್ಲಿ ಮೊನೆಯುಗುರು ಬಾಯಿಯಲ್ಲಿ ಕೊರೆತಕಂಬಿಗಳು (ಸ್ಟೈಲೆಟ್ಸ್) ಮತ್ತು ಹೀರಿಕೊಳ್ಳುವ ಫ್ಯಾರಿಂಕ್ಸ್ ಇದೆ. ನಿರ್ದಿಷ್ಟ ಉಸಿರಾಟದ ಅಥವ ಶುದ್ಧೀಕರಣಾಂಗಗಳಿಲ್ಲ. ಉದ್ದ 1 ಮಿಮೀ ಗಿಂತ ಕಡಿಮೆ. ಸು. 350 ಪ್ರಭೇದಗಳಿವೆ.

ವರ್ಗ: ಅನಿಕೊಫೆರ. ಹುಳುಗಳಂತಹ ಪ್ರಾಣಿಗಳು ಚರ್ಮ ಮೃದು ಮುಂಭಾಗದಲ್ಲಿ ಒಂದು ಜತೆ ಕಣ್ಣುಗಳು. ಒಂದು ಜತೆ ಕುಡಿಮೀಸೆಗಳು ಮತ್ತು ಶ್ಲೇಷ್ಮವನ್ನು ಸ್ರವಿಸುವ ಗ್ರಂಥಿಗಳಿವೆ. ಹಿಂಭಾಗದಲ್ಲಿ ಒಂದು ಜತೆ ಗ್ರಂಥಿಗಳಿವೆ. ನಖಗಳಿರುವ ಕಾಲುಗಳು ಇವೆ. ಅವುಗಳ ಕೀಲುಗಳು ಅಸಮರ್ಪಕ ಶ್ವಾಸನಾಳಗಳು ಶರೀರ ಖಂಡಗಳಲ್ಲಿವೆ. ಜೋಡಿ ನೆಫ್ರಿಡಿಯಗಳಿವೆ. ಜರಾಯುಜಗಳು. ಉದಾ: ಪೆರಿಪೆಟಸ್.



ಪೆರಿಪೆಟಸ್

ಇವನ್ನು ಆರ್ತ್ರೊಪೊಡ ವರ್ಗಕ್ಕೆ ಸೇರಿಸಲಾಗಿದೆ. ಈ ವರ್ಗದಲ್ಲಿ 70 ಪ್ರಭೇದಗಳಿವೆ. ಉದ್ದ 15 ಸೆಂಮೀ. ಇವು ವಲಯವಂತ, ಸಂಧಿಪದಿ ಮತ್ತು ಮೃದ್ವಂಗಿಗಳ ಲಕ್ಷಣಗಳನ್ನು ಹೊಂದಿದ್ದು, ತಮ್ಮದೇ ಆದ ವಿಶೇಷ ಲಕ್ಷಣಗಳನ್ನು ಹೊಂದಿವೆ. ಇದು ಬಹಳ ಪ್ರಾಚೀನ ಗುಂಪು. ಮಧ್ಯಕೇಂಬ್ರಿಯನ್ ಯುಗದಲ್ಲಿ ದೊರಕಿದೆ. ಇದನ್ನು ವಲಯ ವಂತಗಳಿಗೂ ಸಂಧಿಪದಿಗಳಿಗೂ ಮಧ್ಯೆ ಅಂತರವರ್ತಿ ಗುಂಪೆಂದು ಗುರುತಿಸಿದ್ದಾರೆ.

ವಲಯವಂತ ಲಕ್ಷಣಗಳು: ಒಳಗಡೆ ಖಂಡಗಳಲ್ಲಿ ನೆಫ್ರಿಡಿಯ, ನವಿರು ಚರ್ಮ, ತಲೆ ಭಾಗವಿಲ್ಲ, ಕಣ್ಣುಗಳು ಪಾಲಿಖೀಟ್ ಹುಳುಗಳಲ್ಲಿದ್ದಂತೆ ಟೊಳ್ಳಾದ ಅನುಬಂಧಗಳು.

ಸಂಧಿಪದಿ ಲಕ್ಷಣಗಳು: ದವಡೆಗಳು ಹೃದಯದ ಇಕ್ಕೆಲಗಳಲ್ಲಿ ಆಸ್ಟಿಯ ರಂಧ್ರಗಳು, ಹೀಮೊಸೀಲ್, ಶ್ವಾಸಾಂಗನಾಳಗಳು. ಕ್ಯುಟಿಕಲ್ ಮತ್ತು ಪೊರೆ ಬಿಡುವುದು.

ಮೃದ್ವಂಗಿ ಲಕ್ಷಣಗಳು: ಬಸವನ ಹುಳುವಿನಾಕಾರ ಮೃದ್ವಂಗಿಗಳಂತಿರುವ ನರಮಂಡಲ.

ಅನಿಕೋಫೊರದ ಲಕ್ಷಣಗಳು: ಹೆಚ್ಚು ಸಂಖ್ಯೆಯ ಸ್ಪಿಗ್ಮೆಟಗಳು, ಒಂದು ಜತೆ ದವಡೆಗಳು. ಮುಂದಿನಿಂದ ಹಿಂದಕ್ಕೆ ಚಲಿಸುವುದು. ಚರ್ಮ ಮೃದು. ಒಂದೇ ಬಗೆ ಶರೀರದ ಖಂಡಗಳು ಎರಡು ನರಹುರಿಗಳು. ಸರಳ ಕಣ್ಣುಗಳು.

ಈ ರೀತಿ ವಿವಿಧ ಗುಂಪಿನ ಜೀವಪ್ರಭೇದಗಳ ಲಕ್ಷಣಗಳನ್ನು ಹೊಂದಿರುವುದರಿಂದ ಈ ಗುಂಪಿನ ಪ್ರಾಣಿಗಳನ್ನು ನಿರ್ದಿಷ್ಟ ಗುಂಪಿನಲ್ಲಿಡುವುದು ಕಷ್ಟ.

ಇಂಥ ಅನಿರ್ದಿಷ್ಟ ಪ್ರಾಣಿಗಳಿರುವ ಆರ್ತ್ರೊಪೊಡವನ್ನು ವರ್ಗೀಕರಿಸುವುದೇ ಕಷ್ಟ. ಟಾರ್ಡಿಗ್ರೇಡ, ಪೆಂಟಾಸ್ಟೊಮಿಡಗಳ ಸಂಬಂಧಗಳೂ ಅನಿಶ್ಚಿತ. ಆರ್ತ್ರೊಪೊಡಕ್ಕೂ ಅನೆಲಿಡಕ್ಕೂ ಹತ್ತಿರವಾದ ವಿಕಸನಾ ಸಂಬಂಧಗಳು ಕಂಡರೂ, ಆರ್ತ್ರೊಪೊಡ ಒಂದೇ ಮೂಲದಿಂದ ಬಂದಿರುವುವು ಅಥವಾ ವಿವಿಧ ಅನೆಲಿಡಾದ ಮೂಲದಿಂದ ಉದ್ಭವಿಸಿ ವಿಕಾಸವಾಗುವಾಗ ಪ್ರತ್ಯೇಕವಾದುವೊ ಎಂಬ ವಿಷಯದಲ್ಲಿ ತಜ್ಞರ ಒಮ್ಮತವಿಲ್ಲ.

(ಎಂ.ಪಿ.)

**ಆರ್ಥಾಪ್ಟಿರ:** ಮಿಡತೆ, ಜೀರುಂಡೆ, ಕ್ರಿಕೆಟ್‌ಗಳನ್ನೊಳಗೊಂಡ ಕೀಟ ಗಣ. ಸು. 10,000 ಕ್ಕೂ ಹೆಚ್ಚು ಜಾತಿಯ ಕೀಟಗಳಿವೆ. ಉದ್ದ ಒಂದು ಸೆಂಮೀ ನಿಂದ 12 ಸೆಂಮೀ. ಅಗಿಯುವ ಬಾಯಿ, ಎದೆಯಲ್ಲಿ 2 ಜೊತೆ ರೆಕ್ಕೆಗಳಿವೆ. ಮುಂದಿನ ರೆಕ್ಕೆಗಳು ಚಿಕ್ಕವು ಮತ್ತು ಚರ್ಮದಂತೆ ದಪ್ಪ. ಹಿಂದಿನ ರೆಕ್ಕೆಗಳು ತೆಳುವಾಗಿದ್ದು ಅಗಲವಾಗಿವೆ. ಅವುಗಳು ಮಡಿಸಿಕೊಂಡಿರುತ್ತವೆ. ಸಾಮಾನ್ಯವಾಗಿ ಹಿಂಗಾಲಿನ ತೊಡೆ ದಪ್ಪ. ರೂಪಾಂತರ ಸಾಮಾನ್ಯ.

ಆರ್ಥಿಕ ದೃಷ್ಟಿಯಿಂದ ಇವು ಬಹಳ ಹಾನಿಕಾರಕ. ವಿವಿಧ ಆರ್ಥಿಕ ಬೆಳೆಗಳ ಶತ್ರುಗಳು. ಮಿಡತೆ (ಗ್ರಾಸ್ ಹಾಪರ್) ಪ್ರಪಂಚದಲ್ಲೆಲ್ಲ ಹೆಸರುವಾಸಿ. ನೂರಾರು ಮೈಲಿ ಗುಂಪು ಗುಂಪಾಗಿ ಹಾರಬಲ್ಲವು. ಹಲವಾರು ಜಾತಿ ಮಿಡತೆಗಳು ನಾನಾ ತರಹದ ಬೆಳೆಗಳನ್ನು ತಿಂದು ನಾಶಪಡಿಸುತ್ತವೆ. ಕ್ರಿಕೆಟ್ಸ್ ರಾತ್ರಿ ಹೊತ್ತು ಕರ್ಕಶವಾದ ಶಬ್ದಮಾಡುತ್ತದೆ. ಈ ಉಪಗಣದ ಕೀಟಗಳು ಪ್ರಪಂಚದಲ್ಲೆಲ್ಲಾ ವಾಸಿಸಿದರೂ, ಉಷ್ಣವಲಯದಲ್ಲಿ ಹೇರಳವಾಗಿವೆ. ಹೆಚ್ಚಿನ ಪ್ರಭೇದಗಳು ಭೂಮಿಯ ಮೇಲೆಯೇ ವಾಸಿಸಿ, ಸಸ್ಯಗಳ ಮೇಲೆ ಅವಲಂಬಿತವಾಗಿವೆ.

ಕರ್ನಾಟಕವನ್ನೊಳಗೊಂಡು ದಕ್ಷಿಣ ಭಾರತದಲ್ಲಿ ಕೊಲ್‌ಮ್ಯಾನಿಯ ಎಂಬ ಮಿಡತೆ ಕೆಲವು ವರ್ಷಗಳಿಗೊಮ್ಮೆ ಯಥೇಚ್ಛವಾಗಿ ಅಭಿವೃದ್ಧಿಯಾಗಿ ಸಾವಿರಾರು ಎಕರೆ ಪೈರನ್ನು ಕೆಲವೇ ದಿನಗಳಲ್ಲಿ ತಿಂದು ನಾಶಪಡಿಸುತ್ತದೆ. ಈ ಜಾತಿಯ ಪ್ರಾಯದ ಮಿಡತೆಗೆ ರೆಕ್ಕೆ ಇಲ್ಲ. ಹೀರೊಗ್ಲೈಫಸ್ ಪ್ರಭೇದದ ಕೀಟ ಬತ್ತಕ್ಕೆ ಹಾನಿ ಉಂಟುಮಾಡುತ್ತದೆ. ಬಾಂಬೆಲೋಕಸ್ಟ ಮೈಗ್ರೇಟರಿ ಲೋಕಸ್ಟ್, ಗ್ರಿಗೇರಿಯಸ್ ಲೋಕಸ್ಟ್ ಮಿಡತೆಗಳು ಆಗಾಗ್ಗೆ ಭಾರತದ ಅನೇಕ ಪ್ರದೇಶದಲ್ಲಿ ಬೆಳೆಗಳನ್ನು ನಾಶಪಡಿಸುತ್ತವೆ. (ಜಿ.ಕೆ.ವಿ.)



ಎಲೆ ಜೀರುಂಡೆ



ಉದ್ದ ಕುಡಿಮೀಸೆ ಜೀರುಂಡೆ



ಲೇಡಿಬರ್ಡ್ ಜೀರುಂಡೆ



ಡರ್ಮಸ್ಟಿಡ್ ಜೀರುಂಡೆ


ಲೆಪಿಸ್ಮ


ಕೊಂಡಿ ಕೀಟ


ಪುಸ್ತಕ ಹೇನು

ಮೋಲ್ ಕ್ರಿಕೆಟ್


ಮೋಟು ಮೀಸೆಯ ಮಿಡತೆ


ಕಡ್ಡಿ ಕೀಟ


ಮಾನವದೇಹದ ಹೇನು


ತಲೆ ಹೇನು


ಲೋಕಸ್ಟ್


ಕ್ರಿಕೆಟ್

**ಆರ್ಥಾಪ್ಟಿರಾಯ್ಡ:** ಒಂಬತ್ತು ಕೀಟಗಣಗಳನ್ನೊಳಗೊಂಡ ದೊಡ್ಡ ಗುಂಪು. ಈ ಗುಂಪಿನಲ್ಲಿ ಪ್ಲೆಕಾಪ್ಟಿರ ಗ್ರಿಲ್ಲೊಬ್ಲೆಟಾಡಿಯ, ಆರ್ಥಾಪ್ಟಿರ, ಫಾಸ್‍ಮಿಡ, ಡರ್ಮಾಪ್ಟಿರ, ಎಂಬಿಯಾಪ್ಟಿರ, ಡಿಕ್ಟಿಯಾಪ್ಟಿರ, ಐಸಾಪ್ಟಿರ ಮತ್ತು ಜೊರಾಪ್ಟಿರಾ ಗಣಗಳಿವೆ. ಇವೆಲ್ಲಕ್ಕೂ ಇರುವ ಒಂದೇ ಲಕ್ಷಣವೆಂದರೆ, ಬಾಯಿಯ ವದನಾಂಗಗಳು ಅಗಿದು ಜಗಿಯಲು ಅನುಕೂಲವಾಗುಂತೆ ಮಾರ್ಪಟ್ಟಿರುವುದು ಮತ್ತು ಸರಳ ರೂಪಾಂತರ ಮುಂದಿನ ರೆಕ್ಕೆಗಳು ಚರ್ಮದೋಪಾದಿಯಲ್ಲಿ ದಪ್ಪವಾಗಿವೆ. (ಜಿ.ಕೆ.ವಿ.)

**ಆರ್ಥೊಡೈರ:** ಮೀನುಗಳ ವರ್ಗಕ್ಕೆ ಸೇರಿದ ತಟ್ಟೆಯಂಥ ಮೂಳೆಯ ಹೊದಿಕೆಯನ್ನು ಹೊಂದಿದ ಪ್ಲ್ಯಾಕೊಡರ್ಮ, ಪುರಾತನ ಪ್ರಾಣಿ. ಡಿವೋನಿಯನ್ ಯುಗದ ಉತ್ತರಾರ್ಧದಲ್ಲಿ ಇವು ಹೇರಳವಾಗಿದ್ದುವು. ಅಮೆರಿಕ ಸಂಯುಕ್ತ ಸಂಸ್ಥಾನದ ಕ್ಲೀವ್‍ಲಂಡ್ ಪ್ರದೇಶದಲ್ಲಿ ಇವುಗಳ ಪಳೆಯುಳಿಕೆಗಳನ್ನು ಪತ್ತೆಹಚ್ಚಲಾಗಿದೆ. ಆರ್ಥೊಡೈರಗಳಲ್ಲಿ ಡೈನಿಕ್ತಿಸ್ ಎಂಬ ಮೀನು ೯೦ ಸೆಂಮೀ. ಉದ್ದವಿತ್ತು. ಎದೆ ಮತ್ತು ಕತ್ತಿನ ಭಾಗಗಳಲ್ಲಿ ಬಲವಾದ ಮೂಳೆಯ ಹೊದಿಕೆಯಿತ್ತು. ತಲೆ ಮತ್ತು ಎದೆಯ ಹೊದಿಕೆಗಳು ಚಲಿಸಬಹುದಾದ ರೀತಿಯಲ್ಲಿ ಕತ್ತಿನಂಥ ಒಂದು ಸಂಧಿಯ ಮೂಲಕ ಕೂಡಿ ಕೊಂಡಿದ್ದುವು. ಆದ್ದರಿಂದಲೇ ಈ



ಟ್ರೈಲೋಬೈಟ

ಗುಂಪಿನ ಮೀನುಗಳಿಗೆ ‘ಸಂಧಿಕಂಠಿ’ (ಆರ್ಥೋ=ಸಂಧಿ: ಡೈರ=ಕಂಠ) ಎಂಬ ಹೆಸರು. ಈ ಮೀನಿನ ಡಿವೋನಿಯನ್ ಕಾಲದ ಪೂರ್ವಜರಲ್ಲಿ ದೇಹ ಚಪ್ಪಟೆಯಾಗಿದ್ದು ವಿಶಾಲವಾದ ಮೂಳೆಯ ಹೊದಿಕೆಯಿತ್ತು. ಅವುಗಳ ದೇಹ ತೀರ ಸಣ್ಣಗಿದ್ದು ಜೊತೆ ರೆಕ್ಕೆಗಳು ಇನ್ನೂ ಮೂಡಿರಲಿಲ್ಲ. ಅವುಗಳ ಸ್ಥಳದಲ್ಲಿ ಬಾಗಿದ ದೀರ್ಘವಾದ ಮುಳ್ಳುಗಳು ಮಾತ್ರ ಇದ್ದುವು.

ಆರ್ಥೋಡೈರ ಗುಂಪಿನ ಹಲವಾರು ಜಾತಿಯ ಮೀನುಗಳ ಪಳೆಯುಳಿಕೆಗಳು ದೊರೆತಿವೆ. ಆಂಟಿಯಾರ್ಕ್ ಪಂಗಡದ ಸಿಹಿನೀರಿನ ಮೀನುಗಳಲ್ಲಿ ಬೋತ್ರಿಯೊಲೆಪಿಸ್ ಜಾತಿಯ ಮೀನುಗಳು ಹೇರಳವಾಗಿದ್ದುವು. ಅವುಗಳ ಮೈಮೇಲಿನ ಮೂಳೆಯ ಕವಚ ಸಾಮಾನ್ಯ ಆರ್ಥೋಡೈರ್ ಮೀನುಗಳ ಕವಚದಂತೆ ಇತ್ತು. ಭುಜದ ಭಾಗದಲ್ಲಿ ಪಾರ್ಶ್ವದ ಮೂಳೆಯ ಚಿಪ್ಪುಗಳಿದ್ದುವು. ಅವು ಚಲಿಸಲು ಅನುಕೂಲವಾಗುವ ರೀತಿಯಲ್ಲಿ ಕೂಡಿಕೊಂಡಿದ್ದುವು.

ಜೆಮುಂಡಿನ ಎಂಬುದು ಸಾಗರದಲ್ಲಿ ವಾಸಿಸುತ್ತಿದ್ದ ಆರ್ಥೋಡೈರಾ ಮೀನು. ಆ ಮೀನಿನಲ್ಲಿ ಎರಡು ಜೊತೆ ರೆಕ್ಕೆಗಳಿದ್ದುವು. ಅವುಗಳಲ್ಲಿ ಮುಂದಿನ ಜೊತೆ ರೆಕ್ಕೆಗಳು ಚೆನ್ನಾಗಿ ಅಭಿವೃದ್ಧಿಯಾಗಿದ್ದುವು. ಮೂಳೆಯ ಕವಚ ಕ್ಷೀಣಿಸುತ್ತ ಬರುತ್ತಿತ್ತು. ಬಹುಶಃ ಈ ಮೀನುಗಳು ಕ್ರಮ ಕ್ರಮವಾಗಿ ನಾಯಿತಲೆ ಮೀನುಗಳ (ಶಾರ್ಕ್‌ಮೀನು) ರೂಪಕ್ಕೆ ವಿಕಾಸವಾಗಿವೆ. (ಎನ್.ಎಸ್.ವಿ.)

**ಆರ್ಮಡಿಲ್ಲೊ:** ಕವಚಧಾರಿ ಅದಂತಿ (ಈಡೇಂಟೇಟು). ಹೆಗ್ಗಣದಂತೆ ನೆಲಕೊರೆಯುವ ಒಂದು ಜಾತಿಯ ಪ್ರಾಣಿ. ಈ ಜಾತಿಯ ಪ್ರಾಣಿಗಳೆಲ್ಲ. ದಕ್ಷಿಣ ಅಮೆರಿಕದ ನಿವಾಸಿ. ಕವಚಧಾರಿ ಅದಂತಿಗಳು. ಇವುಗಳ ಹಲವಾರು ಮೂಳೆಚಿಕ್ಕೆಗಳು ಹೆಚ್ಚು ಕಡಿಮೆ ಮೈಯನ್ನೆಲ್ಲ ಪೂರ್ಣವಾಗಿ ಮುಚ್ಚುವ ಕವಚದಂತಿದೆ. ಹೆಗಲಿನಲ್ಲಿ ಒಂದು ಮೂಳೆಯ ಗುರಾಣಿ ಇದೆ. ಸೊಂಟದಲ್ಲಿ ಮತ್ತೊಂದಿದೆ. ಇವುಗಳ ನಡುವೆ ಚಲಿಸುವಂಥ ಹಲವಾರು ಮೂಳೆಯ ಒಡ್ಯಾಣ ಅಥವಾ ಚುಕ್ಕೆಗಳು ಇದ್ದು ಮೈ ಬಾಗಿ ಬಳುಕಲು ಸಾಕಷ್ಟು ಅವಕಾಶವಿದೆ. ತಲೆಯಮೇಲೆ ಮತ್ತೊಂದು ಮೂಳೆಯ ಗುರಾಣಿ ಇದೆ. ಬಾಲದುದ್ದಕ್ಕೂ ಚಿಕ್ಕ ಮೂಳೆಗಳಿವೆ. ಇವನ್ನು ಬಿಟ್ಟರೆ ಚರ್ಮದ ಮೇಲೆ ಮೂಳೆಪಟ್ಟಿಗಳ ಲೆಕ್ಕವನ್ನವಲಂಬಿಸಿದೆ. ಉದಾಹರಣೆಗೆ, ಮೂರು ಪಟ್ಟೆ, ಆರುಪಟ್ಟೆ, ಒಂಬತ್ತುಪಟ್ಟೆ ಇತ್ಯಾದಿ. ಹೊರ ಕವಚ ಬಹಳ ಬಲವಾಗಿರುವುದಲ್ಲದೆ ಅದರೊಳಕ್ಕೆ ಪ್ರಾಣಿ ತನ್ನ ತಲೆಯನ್ನೂ ಬಾಲವನ್ನೂ ಎಳೆದುಕೊಂಡು ಒಂದು ದುರ್ಭೇದ್ಯವಾದ ಚೆಂಡಿನಂತೆ ಗುಂಡಾಗಿ ಉರುಳುತ್ತಿರಬಲ್ಲುದು.



ಇದು ಸ್ಲಾತ್ ಎಂಬ ಪ್ರಾಣಿಯ ಗುಂಪಿಗೆ ಸೇರಿದೆ. ಸ್ಲಾತ್ ಮರದ ರೆಂಬೆಗಳನ್ನು ಆಶ್ರಯಿಸಿದ್ದರೆ, ಇದು ತನ್ನ ಕವಚವನ್ನೂ ತೋಡುವ ಸಾಮರ್ಥ್ಯವನ್ನೂ ಅವಲಂಬಿಸಿ ನೆಲವನ್ನು ಆಶ್ರಯಿಸಿದೆ. ಇದಕ್ಕೆ ಒಳ್ಳೆಯ ಬಲವಾದ ಉಗುರುಗಳಿರುವುದರಿಂದ ನೆಲವನ್ನು ಬೇಗನೆ ತೋಡಿ ನೆಟ್ಟನೆ ಒಳಕ್ಕಿಳಿದು ಕಣ್ಮರೆಯಾಗಬಲ್ಲದು. ಕವಚದ ರಕ್ಷಣೆಯ ಜೊತೆಗೆ ಇದು ವೇಗವಾಗಿ ಓಡಲೂಬಲ್ಲದು; ಚುರುಗುಟ್ಟುವಂತೆ ಕಡಿಯಲೂ ಬಲ್ಲದು. ಸಾಮಾನ್ಯವಾಗಿ ಇದು ದುಷ್ಟ ಜಂತುವಲ್ಲ. ಬೆದೆಗಾಲದಲ್ಲಿ ಹೊರತು, ಮಿಕ್ಕ ಸಮಯಗಳಲ್ಲಿ ಒಂಟಿಯಾಗಿಯೇ ಇರುತ್ತದೆ. ತಗ್ಗು ಏರು ಇಲ್ಲದ ಬಯಲು ಕಾಡುಗಳಲ್ಲೂ ನೆಲಗಳಲ್ಲೂ ಇರಲು ಇದಕ್ಕೆ ಇಷ್ಟ. ಇರುವೆ, ಹುಳು ಹುಪ್ಪಟೆ, ಸಸ್ಯ, ಕೊಳೆತ ಮಾಂಸ ಇವು ಇದರ ಆಹಾರ. ನಸು ಹಳಸಿದ ಮಾಂಸವೆಂದರೆ ಅದಕ್ಕೆ ತುಂಬ ಪ್ರೀತಿ. ಕೆಲವು ಆರ್ಮಡಿಲ್ಲೊಗಳು ಹಾವುಗಳನ್ನು ತಿನ್ನುತ್ತವೆ. ರೋಮಭರಿತ ಆರ್ಮಡಿಲ್ಲೊ ತಿನ್ನದ ವಸ್ತುವಿಲ್ಲ.

ಇವು ರಾತ್ರಿಯಲ್ಲಿ ತಮ್ಮ ಗೂಡುಗಳಿಂದ ಹೊರಬಿದ್ದು ಹುಳು ಹುಪ್ಪಟೆ, ಸಣ್ಣ ದಂಶಕ ಪ್ರಾಣಿಗಳು ಮತ್ತು ಸತ್ತ ಪ್ರಾಣಿಗಳನ್ನು ಹುಡುಕಿಕೊಂಡು ಹೊರಡುತ್ತವೆ.

ತಲೆಯಿಂದ ಬಾಲದ ಕೊನೆಯವರೆಗೆ ಐದು ಅಡಿಗಳಷ್ಟಿರುವ ರಾಕ್ಷಸ ಆರ್ಮಡಿಲ್ಲೊ ಈ ಜಾತಿಯಲ್ಲಿ ಅತ್ಯಂತ ದೊಡ್ಡ ಪ್ರಾಣಿ. ಒಂಬತ್ತು ಪಟ್ಟೆಗಳುಳ್ಳ ಆರ್ಮಡಿಲ್ಲೊ ಒಂದೇ ದಕ್ಷಿಣ ಟೆಕ್ಸಾಸ್, ಅರಿಝೋನ, ಅಲ್ಲಿಂದ ದಕ್ಷಿಣಕ್ಕೆ ಬ್ರೆಜಿಲ್‌ವರೆಗೂ ಅರ್ಜಂಟೀನದ ಬಯಲು ಕಾಡಿನಿಂದ ಹಿಡಿದು ಪನಾಮಾದವರೆಗೂ ದಕ್ಷಿಣ ಅಮೆರಿಕದ ಎಲ್ಲೆಡೆಯಲ್ಲೂ ಹರಡಿದೆ.

ಮನುಷ್ಯರ ಕೈಗೆ ಸಿಕ್ಕು ಬಾಳಬೇಕಾಗಿ ಬಂದಾಗ ಇವುಗಳಲ್ಲಿ ಅನೇಕವು ಕೊಚ್ಚಿದ ಮಾಂಸ, ಕೋಳಿ ಮೊಟ್ಟೆ, ಅನ್ನವನ್ನು ತಿಂದು ಬದುಕಬಲ್ಲವು. (ಎ.)

**ಆರ್‍ಯಾಕ್ನಿಡ:** ಆರ್‍ಯಾಕ್ನಿಡವು ಪ್ರಾಣಿಸಾಮ್ರಾಜ್ಯದ ಸಂಧಿಪದಿ (ಆರ್ತ್ರೋಪೊಡಾ)ಗಳ ವಂಶ (ಫೈಲಮ್)ದಲ್ಲಿ ಒಂದು ಮುಖ್ಯವಾದ ದೊಡ್ಡ ವರ್ಗ. ಈ ವರ್ಗದ ಪ್ರಾಣಿಗಳಿಗೆ ಎಂಟು ಕಾಲುಗಳಿದ್ದು ಜೇಡನನ್ನು ಹೋಲುವುದರಿಂದ ಇದಕ್ಕೆ ಆರ್‍ಯಾಕ್ನಿಡ ಎಂಬ ಹೆಸರು ಕೊಡಲಾಗಿದೆ. (ಗ್ರೀಕ್ ಭಾಷೆಯಲ್ಲಿ ಆರ್‍ಯಾಕ್ನಿಡ ಎಂಬುದು ಜೇಡಕ್ಕೆ ಸಂಬಂಧಪಟ್ಟ ಹೆಸರು). ಇದರಲ್ಲಿ ಮೂರು ಉಪವರ್ಗಗಳಿದ್ದು, ಸುಮಾರು ಒಂಬತ್ತು ಗಣಗಳಿವೆ. ಕೀಟವರ್ಗಕ್ಕಿಂತ ಹೆಚ್ಚು ವೈವಿಧ್ಯತೆಯಿರುವ ವರ್ಗ. ಕೆಲವು ಗಣಗಳಲ್ಲಿರುವ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿದ್ದರೂ, ಜೇಡ ಮತ್ತು ಮೈಟ್‌ಗಳು ಅಧಿಕ ಸಂಖ್ಯೆಯಲ್ಲಿವೆ.

ಈ ವರ್ಗದ ಪ್ರಾಣಿಗಳು ಉಷ್ಣವಲಯದಲ್ಲಿ ವಾಸಿಸುತ್ತವೆ. ಹೆಚ್ಚಾಗಿ ಭೂವಾಸಿಗಳು, ಕೆಲವು ಜಲವಾಸಿಗಳು. ಲಿಮ್ಯುಲಸ್ ಅಥವಾ ರಾಜ ಏಡಿ (ಕಿಂಗ್ ಕ್ರಾಬ್) ಸಮುದ್ರವಾಸಿ. ಬಹು ಸಂಖ್ಯೆಯ ಆರ್‍ಯಾಕ್ನಿಡಗಳು ಸ್ವತಂತ್ರಜೀವಿಗಳು. ಆದರೆ ಕೆಲವು ಮಾತ್ರ ಪರತಂತ್ರಜೀವಿಗಳು. ಉದಾ: ಉಣ್ಣಿ (ಟಿಕ್), ಮೈಟ್‌ಗಳು. ಇವುಗಳಿಂದ ಇತರ ಪ್ರಾಣಿಗಳಿಗೆ ಮತ್ತು ಸಸ್ಯಗಳಿಗೆ ಹಾನಿಯುಂಟಾಗುತ್ತದೆ. ಈ ವರ್ಗದ ಇತರ ಪ್ರಾಣಿಗಳಾದ ಚೇಳು, ಜೇಡ ಇವುಗಳ ವಿಷದಿಂದ ಮಾನವನಿಗೆ ಸಹ ಹಾನಿ ಆಗುತ್ತದೆ. ಹೆಚ್ಚು ಸಂಖ್ಯೆಯಲ್ಲಿ ಈ ಪ್ರಾಣಿಗಳು ಒಂದೇ ಕಡೆ ವಾಸವಾಗಿದ್ದರೂ, ಇವುಗಳಲ್ಲಿ ಕೀಟಗಳಲ್ಲಿರುವಂತೆ ಸಮೂಹ ಜೀವನ ಕಂಡು ಬರುವುದಿಲ್ಲ.

ಶರೀರವು ಕೈಟಿನ್ ನಿಂದಾದ ಹೊರಕವಚದಿಂದ ಆವರಿಸಿದೆ. ದೇಹದಲ್ಲಿ ನಿಗದಿತ ಸಂಖ್ಯೆಯ ಖಂಡ (ಸೆಗ್‌ಮೆಂಟ್)ಗಳಿವೆ. ಸ್ಥೂಲವಾಗಿ ದೇಹವನ್ನು ಶಿರೋವಕ್ಷ (ಸೆಫಲೊಥೊರಾಕ್ಸ್) ಮತ್ತು ಉದರ (ಅಬ್ಡಮನ್) ಎಂದು ವಿಭಾಗಿಸಬಹುದು. ಜನನೇಂದ್ರಿಯವನ್ನು ಹೊಂದಿರುವ ಖಂಡದ ಮುಂಭಾಗದಲ್ಲಿರುವ ಎಲ್ಲಾ ಖಂಡಗಳು ಶಿರೋವಕ್ಷದಲ್ಲಿ ಸೇರುತ್ತವೆ. ಇದರಲ್ಲಿ ಸುಮಾರು ಆರು ಖಂಡಗಳಿರುತ್ತವೆ. ಶಿರೋವಕ್ಷದ ಹಿಂಭಾಗದಲ್ಲಿರುವ ಇತರ ಖಂಡಗಳು ಸುಮಾರು ಹನ್ನೆರಡು (12) ಇದೇ ಉದರ. ಇದನ್ನು ಪುನಃ ಆರು ಖಂಡಗಳ ಪೂರ್ವೋದರ (ಮೆರೊಸೋಮ) ಮತ್ತು ಆರು ಖಂಡಗಳ ಉತ್ತರೋದರ (ಮೆಟಸೋಮ) ಎಂಬ ಎರಡು ಭಾಗಗಳಾಗಿ ವಿಂಗಡಿಸಬಹುದು. ಬೇರ್ಪಡುವಿಕೆಯಲ್ಲಿ ವ್ಯತ್ಯಾಸಗಳಿವೆ. ಉದಾ: ಜೇಡ, ಉಣ್ಣಿ ಮತ್ತು ಮೈಟ್‌ಗಳಲ್ಲಿ ಉದರದ ಭಾಗಗಳು ಕಾಣುವುದಿಲ್ಲ. ಆದರೆ ಚೇಳಿನಲ್ಲಿ ಚೆನ್ನಾಗಿ ಕಾಣುತ್ತವೆ.

ತಲೆ ಮತ್ತು ಎದೆಯ ಭಾಗಗಳ ಒಕ್ಕೂಟವೇ ಶಿರೋವಕ್ಷ. ಇದರ ಮೇಲ್ಭಾಗದಲ್ಲಿ ಕ್ಯಾರಪೇಸ್ ಎಂಬ ರಕ್ಷಣಾ ಫಲಕವಿದೆ. ಇದರ ಮೇಲೆ ಸರಳರಚನೆಯ ಕಣ್ಣುಗಳಿರುತ್ತವೆ. ಕೆಲವು ಮೈಟ್‌ಗಳಿಗೆ ಕಣ್ಣಿರುವುದಿಲ್ಲ. ಕೀಟಗಳಲ್ಲಿರುವಂತೆ ತಲೆಯಲ್ಲಿ ಕುಡಿಮೀಸೆ (ಆಂಟೆನಾ)ಗಳಿಲ್ಲ. ಒಟ್ಟು ಆರು ಜೊತೆ ಉಪಾಂಗಗಳಿವೆ. ಮೊದಲನೆಯದು ಚೆಲಿಸಿರಾ. ಇದು ಬಾಯಿಯ ಇಕ್ಕೆಡೆಗಳಲ್ಲಿರುತ್ತವೆ. ಚೆಲಿಸಿರಾವು ಆಹಾರವನ್ನು ಬಿಗಿಯಾಗಿ ಹಿಡಿದುಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಎರಡನೆಯದು ಪೆಡಿಪಾಲ್ಪ್‌ಗಳು. ಇವು ಸಹ ಆಹಾರವನ್ನು ಹಿಡಿಯಲು ಸಹಾಯ ಮಾಡುತ್ತವೆ. ಗಂಡು ಜೇಡಗಳಲ್ಲಿ ಸಂಭೋಗಾಂಗವಾಗಿ ಕೆಲಸಮಾಡುತ್ತದೆ. ಕೆಲವು ಗಣಗಳಲ್ಲಿ ಪೆಡಿಪಾಲ್ಪ್ ಮತ್ತು ಅದರ ಕೆಳಗಿರುವ ಉಪಾಂಗಗಳ ತಳಭಾಗದಲ್ಲಿ ಹಲ್ಲಿನಂತಿರುವ ಗ್ನಾತೋ ಬೇಸ್‌ಗಳಿರುತ್ತವೆ. ಇವು ಬಾಯಿಯ ಒಳಭಾಗಕ್ಕೆ ಚಾಚಿಕೊಂಡಿರುತ್ತವೆ ಮತ್ತು ಆಹಾರವನ್ನು ಹಿಡಿಯಲು ಹಾಗೂ ಚೂರು ಮಾಡಲು ಉಪಯೋಗಿಸುತ್ತವೆ. ಉಳಿದ ಮೂರು, ನಾಲ್ಕು, ಐದು, ಆರನೆಯ ಜೊತೆಗಳು ಕಾಲುಗಳು. ಇವು ಪ್ರಾಣಿ ನಡೆಯಲು ಸಹಾಯಕವಾಗಿವೆ. ಉಪಾಂಗಗಳಲ್ಲಿ ಕೀಲುಗಳಿವೆ. ಆದುದರಿಂದಲೇ ಆರ್‍ಯಾಕ್ನಿಡವನ್ನು ಸಂಧಿಪದಿಗಳ ವಂಶದಲ್ಲಿ ಸೇರಿಸಲ್ಪಟ್ಟಿದೆ. ಚೆಲಿಸಿರಾದಲ್ಲಿ ಎರಡು ಅಥವಾ ಮೂರು, ಪೆಡಿಪಾಲ್ಪ್‌ನಲ್ಲಿ ಆರು ಅಥವಾ ಏಳು ಹಾಗೂ ಕಾಲುಗಳಲ್ಲಿ ಏಳು ಕೀಲುಗಳಿವೆ. ಎಂಟು ಜೊತೆ ಕಾಲುಗಳಿರುವುದರಿಂದ ಆರ್‍ಯಾಕ್ನಿಡಗಳನ್ನು ಅಷ್ಟಪದಿಯಂತಲೂ ಕರೆಯಬಹುದು. ಉದರದಲ್ಲಿ ಸಾಮಾನ್ಯವಾಗಿ ಉಪಾಂಗಗಳಿರುವುದಿಲ್ಲ. ಗುದದ್ವಾರವು ಕೊನೆಯ ಉದರ ಖಂಡದಲ್ಲಿದೆ. ಇದರ ಹಿಂಭಾಗ ರಾಜ ಏಡಿಯಲ್ಲಿರುವಂತೆ ಒಂದು ನೀಳವಾದ ಮುಳ್ಳಿರಬಹುದು ಅಥವಾ ಚೇಳಿನಲ್ಲಿರುವಂತೆ ವಿಷದಕೊಂಡಿ ಇರಬಹುದು ಅಥವಾ ಜೇಡನಲ್ಲಿರುವಂತೆ ಏನೂ ಇಲ್ಲದೆ ಸಹ ಇರಬಹುದು. ಆರ್‍ಯಾಕ್ನಿಡಗಳು ಮಾಂಸಾಹಾರಿಗಳು. ಸಣ್ಣ ಪ್ರಾಣಿಗಳನ್ನು ಹಿಡಿದು ಗಾಯಮಾಡಿ ಅವುಗಳ ಶರೀರದಲ್ಲಿರುವ ದ್ರವವನ್ನು ಮಾತ್ರ ಹೀರಿಕೊಳ್ಳುತ್ತವೆ. ಕೆಲವು (ಮೈಟ್) ಸಸ್ಯಗಳ ಶರೀರದಿಂದ

ರಸವನ್ನು ಹೀರುತ್ತವೆ. ಆದುದರಿಂದಲೇ ಇವುಗಳ ಗಂಟಲು ಕುಹರವು ಬಲವಾಗಿದ್ದು ಅನೇಕ ಕವಲೊಡೆದ ಸ್ನಾಯುಗಳಿಂದ ಕೂಡಿದೆ. ಅನ್ನನಾಳವು ಬಾಯಿಯಿಂದ ಗುದದ್ವಾರದ ತನಕ ಉದ್ದವಾದ ನಳಿಕೆಯಂತಿದೆ. ವಿಶೇಷ ಅಂಗಗಳೇನೂ ಕಾಣುವುದಿಲ್ಲ. ಜೊಲ್ಲು ಗ್ರಂಥಿಗಳು ಮತ್ತು ಉದರದ ಗ್ರಂಥಿಗಳಿರುತ್ತವೆ. ಈ ಗ್ರಂಥಿಗಳು ಉತ್ಪತ್ತಿಮಾಡುವ ಜೀರ್ಣರಸಗಳು ಆಹಾರವನ್ನು ಜೀರ್ಣಿಸುತ್ತವೆ.



ಏಡಿ



ಲಿಮಲಸ್

ಜೇಡ

ರಕ್ತ ಬಣ್ಣರಹಿತವಾಗಿದೆ. ಆದರೆ ಲಿಮ್ಯುಲಸ್‌ನಲ್ಲಿ ನೀಲಿ (ಇಂಡಿಗೋ ಬ್ಲೂ) ಬಣ್ಣವಿದೆ. ಹೃದಯ ಉದ್ದವಾಗಿದ್ದು ಶರೀರದ ಊರ್ಧ್ವ ಭಾಗ (ಡಾರ್ಸಲ್ ಸೈಡ್)ದಲ್ಲಿದೆ. ಹೃದಯದ ಸುತ್ತ ಪೆರಿಕಾರ್ಡಿಯಂ ಇದೆ. ಹೃದಯದಲ್ಲಿ ಅನೇಕ ಕೋಣೆಗಳಿವೆ. ಜೇಡದಲ್ಲಿ–ಮೂರು ಕೋಣೆಗಳು, ಚೇಳಿನಲ್ಲಿ–ಏಳುಕೋಣೆಗಳು, ಲಿಮ್ಯುಲಸ್‌ನಲ್ಲಿ–ಎಂಟು ಕೋಣೆಗಳಿವೆ. ರಕ್ತವು ಹೆಚ್ಚಾಗಿ ಶರೀರದ ಅವಕಾಶಗಳಲ್ಲಿ ಹರಿಯುತ್ತದೆ. ಆದುದರಿಂದ ಇತರ ಸಂಧಿಪದಿಗಳಲ್ಲಿರುವಂತೆ ಶರೀರದ ಮುಖ್ಯ ಅವಕಾಶಗಳನ್ನು ಹೀಮೋಸಿಲ್ ಎಂದು ಕರೆಯಲಾಗುತ್ತದೆ. ಚೇಳು ಮತ್ತು ಲಿಮ್ಯುಲಸ್‌ಗಳಲ್ಲಿ ಮಾತ್ರ ಅಪಧಮನಿ ಮತ್ತು ಅಭಿದಮನಿಗಳಿವೆ. ಪೆರಿಕಾರ್ಡಿಯಂಗೆ ಸೇರಿದ ಹಾಗೆ ಸ್ನಾಯುಗಳಿವೆ. ಈ ಸ್ನಾಯುಗಳು ಶರೀರದ ಸ್ನಾಯುಗಳೊಂದಿಗೆ ಸೇರಿಕೊಂಡಿವೆ. ಇವುಗಳ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯಿಂದ ಹೃದಯದ ಬಡಿತವುಂಟಾಗಿ. ರಕ್ತ ಪರಿಚಲನೆ ಉಂಟಾಗುತ್ತದೆ.

ಆರ್ಯಾಕ್ನಿಡಗಳಲ್ಲಿ ಶ್ವಾಸನಾಳಗಳು (ಟ್ರಾಖಿಯ), ಪುಸ್ತಕ ಫುಪ್ಫುಸ (ಬುಕ್ ಲಂಗ್)ಗಳು ಮತ್ತು ಪುಸ್ತಕ ಕಿವಿರು (ಬುಕ್ ಗಿಲ್)ಗಳು ಉಸಿರಾಡುವ ಅಂಗಗಳು. ಜಲವಾಸಿಗಳಾದ ಲಿಮ್ಯುಲಸ್‌ನಲ್ಲಿ ಪುಸ್ತಕ ಕಿವಿರುಗಳಿವೆ. ಇವುಗಳಲ್ಲಿ ಅನೇಕ ಎಳೆಗಳು ಪುಸ್ತಕದಲ್ಲಿರುವ ಹಾಳೆಗಳಂತೆ ಜೋಡಣೆಯಾಗಿರುವುದರಿಂದ ಇವಕ್ಕೆ ಪುಸ್ತಕ ಕಿವಿರುಗಳೆಂದು ಹೆಸರು. ಈ ಎಳೆಗಳ ನಡುವೆ ನೀರು ಸುತ್ತಾಡುತ್ತಿರುತ್ತದೆ. ಎಳೆಗಳ ಒಳ ಭಾಗದಲ್ಲಿ ರಕ್ತ ಹರಿಯುತ್ತಿರುತ್ತದೆ. ರಕ್ತವು ನೀರಿನಲ್ಲಿರುವ ಆಮ್ಲಜನಕವನ್ನು ಹೀರಿಕೊಂಡು ಇಂಗಾಲಾಮ್ಲವನ್ನು ಕೊಡುತ್ತದೆ. ಇದೇ ರೀತಿಯಾಗಿ ಪುಸ್ತಕ ಫುಪ್ಫುಸಗಳ ರಚನೆಯಿರುತ್ತದೆ. ಇವು ಭೂವಾಸಿಗಳಾದ ಆರ್ಯಾಕ್ನಿಡಗಳಲ್ಲಿರುತ್ತವೆ. ಶರೀರದ ಕೆಳಭಾಗ (ವೆಂಟ್ರಲ್ ಸೈಡ್) ದಲ್ಲಿರುವ ಹಳ್ಳಗಳಲ್ಲಿ ಹುದಗಿರುತ್ತವೆ. ಈ ಹಳ್ಳಗಳು ಹೊರಭಾಗಕ್ಕೆ ಪ್ರತಿಯೊಂದು ಖಂಡದಲ್ಲಿ ಸ್ಪಿಗ್‌ಮೇಟ ಅಥವಾ ಶ್ವಾಸ ಹೊರದ್ವಾರಗಳ ಮೂಲಕ ತೆರೆಯುತ್ತವೆ. ಗಾಳಿಯು ಇದರ ಮೂಲಕ ಪ್ರವೇಶಿಸಿ ಪುಸ್ತಕ ಫುಪ್ಫುಸಗಳ ಎಳೆಗಳ ನಡುವೆ ಸುತ್ತಾಡುತ್ತದೆ. ಎಳೆಗಳ ಒಳಭಾಗದಲ್ಲಿ ಹರಿಯುತ್ತಿರುವ ರಕ್ತವು ಗಾಳಿಯಲ್ಲಿರುವ ಆಮ್ಲಜನಕವನ್ನು ಹೀರಿಕೊಂಡು ಇಂಗಾಲಾಮ್ಲವನ್ನು ಕೊಡುತ್ತದೆ. ಈ ಇಂಗಾಲಾಮ್ಲವು ಪುನಃ ಅದೇ ಶ್ವಾಸದ್ವಾರಗಳ ಮೂಲಕ ಹೊರಕ್ಕೆ ಹೋಗುತ್ತದೆ.

ಆರ್ಯಾಕ್ನಿಡಗಳಲ್ಲಿ ಮ್ಯಾಲ್ಪೀಘಿಯನ್ ನಾಳಗಳು ಮತ್ತು ಕಾಕ್ಸಲ್ ಗ್ರಂಥಿಗಳು ವಿಸರ್ಜನಾಂಗಗಳು. ಇವು ಶರೀರದಲ್ಲಿ ಉತ್ಪತ್ತಿಯಾಗುವ ಸಾರಜನಕಯುಕ್ತವಾದ (ನೈಟ್ರೋಜನ್) ಕಲ್ಮಶಗಳನ್ನು ಹೊರಕ್ಕೆ ಬಿಸಾಡುವುದರಲ್ಲಿ ಸಹಾಯಕವಾಗಿವೆ.

ಶರೀರದ ಒಳಭಾಗದಲ್ಲಿ ಎಂಡೋಸ್ಟರ್‌ನೈಟ್ ಎಂಬ ಮೃದ್ವಸ್ಥಿಯಿಂದಾದ ಒಳ ಅಸ್ಥಿ ಇದೆ. ಇದಕ್ಕೆ ಕಾಲುಗಳ ಸ್ನಾಯುಗಳು ಸೇರಿಕೊಂಡಿರುತ್ತವೆ.

ನರಮಂಡಲದಲ್ಲಿ ಒಂದು ಜೊತೆ ನರಗ್ರಂಥಿಯಿದೆ. ಇದು ಅನ್ನ ನಾಳದ ಮೇಲ್ಭಾಗದಲ್ಲಿದೆ. ಈ ಗ್ರಂಥಿಯಿಂದ ಕಣ್ಣು, ಚೆಲಿಸಿರಾ ಹಾಗೂ ಪೆಡಿಪಾಲ್ಪ್‌ಗಳಿಗೆ ನರಗಳು ಹೊಗುವುವು. ಇದಾದ ನಂತರ ನೀಳವಾದ ದ್ವಿಅಧೋಭಾಗದ ನರಹುರಿ (ಡಬಲ್ ವೆಂಟಲ್ ನರ್ವ್ ಕಾರ್ಡ್) ಇದೆ. ಈ ನರ ಹುರಿಯಲ್ಲಿ ನರಗ್ರಂಥಿಗಳಿವೆ. ಪ್ರತಿಯೊಂದು ಖಂಡದಲ್ಲೂ ನರಗ್ರಂಥಿ ಇರುವುದರಿಂದ ಇವುಗಳನ್ನು ಖಂಡ ನರಗ್ರಂಥಿಗಳೆಂದು (ಸೆಗ್‌ಮೆಂಟಲ್ ಗ್ಯಾಂಗಲಿಯ) ಹೆಸರಿಸಲಾಗಿದೆ. ಆಯಾಯ ಖಂಡಗಳಲ್ಲಿರುವ ಅಂಗಾಂಗಗಳಿಗೆ ಇವುಗಳಿಂದ ನರಸರಬರಾಜಾಗುತ್ತವೆ.

ಆರ್ಯಾಕ್ನಿಡಗಳು ಏಕಲಿಂಗ ಪ್ರಾಣಿಗಳು. ಸಾಮಾನ್ಯವಾಗಿ ಗಂಡು ಗಾತ್ರದಲ್ಲಿ ಹೆಣ್ಣಿಗಿಂತ ಚಿಕ್ಕದಾಗಿರುತ್ತದೆ. ಕೆಲವಲ್ಲಿ ಹೆಣ್ಣು, ಗಂಡುಗಳಲ್ಲಿ ಬಾಹ್ಯ ವ್ಯತ್ಯಾಸ ಕಂಡುಬರುತ್ತದೆ. ಉದಾ: ಗಂಡು ಚೇಳಿನಲ್ಲಿ ಜನನೇಂದ್ರಿಯ ಮುಚ್ಚಳವು (ಜೆನೈಟಲ್ ಒಪರ್‌ಕುಲಮ್) ಎರಡಾಗಿ ಸೀಳಿರುತ್ತದೆ, ಆದರೆ ಹೆಣ್ಣಿನಲ್ಲಿ ಸೀಳಿರುರುವುದಿಲ್ಲ. ಗಂಡು ಜೇಡನಲ್ಲಿ ಪೇಡಿಪಾಲ್ಪ್‌ಗಳು ಬದಲಾವಣೆಯಾಗಿರುತ್ತವೆ. ಪೆಲಾನ್‌ಜಿಡ್ಸ್ ಗಂಡಿನಲ್ಲಿ ಶಿಶ್ನವಿರುತ್ತದೆ. ಸಂತಾನಾಂಗಗಳು ಮತ್ತು ಅವುಗಳ ನಾಳಗಳು ಅನ್ನನಾಳವನ್ನು, ನರಮಂಡಲವನ್ನು ಸುತ್ತಿಕೊಂಡಿರುತ್ತವೆ. ಇವುಗಳು ಉಂಗುರಾಕೃತಿಯಲ್ಲಿರಬಹುದು ಅಥವಾ ಬಲೆಯಾಕಾರದಲ್ಲಿರಬಹುದು.

ಚೇಳುಗಳು, ಪೆಡಿಪಾಲ್ಪ್‌ಗಳು ಮತ್ತು ಕೆಲವು ಮೈಟ್‌ಗಳು ಮರಿ ಹಾಕುವ ಆರ್ಯಾಕ್ನಿಡಗಳು. ಮಿಕ್ಕವುಗಳು ಮೊಟ್ಟೆಯಿಡುತ್ತವೆ. ಅನಂತರ ಮೊಟ್ಟೆಯೊಡೆದು ಮರಿಗಳು ಹೊರಬರುತ್ತವೆ. ಮರಿಗಳು ರೂಪಪರಿವರ್ತನೆಯಿಲ್ಲದೆ ಬೆಳೆದು ದೊಡ್ಡದಾಗುತ್ತವೆ.

ಆರ್ಯಾಕ್ನಿಡ ವರ್ಗದಲ್ಲಿ ಸೇರಿರುವ ಮುಖ್ಯ ಪ್ರಾಣಿಗಳು: ಚೇಳು, ಜೇಡ, ಲಿಮ್ಯುಲಸ್, ಉಣ್ಣೆ, ಮೈಟ್, ಚೆಲಿಫರ್, ಥೇಲಿ ಫೋನಸ್, ಪೆಲಾನ್‌ಜಿಯಂ, ಗೆಲಿಯೊಡೆಸ್.

(ಕೆ.ಪಿ.ಆರ್.)

**ಆರ್ಲಿಕ್, ಪಾಲ್** (೧೮೫೪–೧೯೧೫): ಜೀವ ಮತ್ತು ವೈದ್ಯಕೀಯ ವಿಜ್ಞಾನಗಳಲ್ಲಿ ಮೊತ್ತಮೊದಲು ರಸಾಯನ ವಿಜ್ಞಾನವನ್ನು ಬಹಳವಾಗಿ ಬಳಸಿದ ಪ್ರಯೋಗಶೀಲ ಮೇಧಾವಿ. ಜರ್ಮನಿಯ ವೈದ್ಯಕೀಯ ಸಂಶೋಧಕ. ರೋಗಪ್ರತಿರೋಧಕತೆಯ (ಇಮ್ಯೂನಿಟಿ) ಮೇಲಿನ ಸಂಶೋಧನೆಗಾಗಿ ಇಲ್ಯಾ ಮೆಷ್ನಿಕಾವ್‌ನೊಂದಿಗೆ ನೊಬೆಲ್ ಪಾರಿತೋಷಿಕ (೧೯೦೮) ಪಡೆದವ. ಮಾರ್ಚಿ ೧೪, ೧೮೫೪ರಲ್ಲಿ ಯೆಹೂದಿಯಾಗಿ ಜನಿಸಿದ ಆರ್ಲಿಕ್‌ಗೆ ಚಿಕ್ಕಂದಿನಲ್ಲಿ ಗಣಿತ, ಲ್ಯಾಟಿನ್ನುಗಳನ್ನು ಬಿಟ್ಟರೆ, ಇನ್ನಾವುದರಲ್ಲೂ ಆಸಕ್ತಿ ಇರಲಿಲ್ಲ. ಇವನಿಗೆ ಪರೀಕ್ಷೆಗಳೇ ಹಿಡಿಸುತ್ತಿರಲಿಲ್ಲ. ಆದರೆ ವೈದ್ಯ ಪದವೀಧರನಾಗಿ (೧೮೭೮) ರಸಾಯನಶಾಸ್ತ್ರ ಅವನಿಗೆ ಬಹುವಾಗಿ ರುಚಿಸಿತು. ಸ್ವಪ್ರಯತ್ನಗಳಿಂದ ಆಳವಾದ ಅಭ್ಯಾಸಕ್ಕಿಳಿದ. ಕೆಲವು ವರ್ಷಗಳು ವೈದ್ಯ ಸಹಾಯಕನಾಗಿ ಚಿಕ್ಕ ಪ್ರಯೋಗಾಲಯವನ್ನು ತೆರೆದು, ಅಲ್ಲಿ ನಡೆಸಿದ ರಕ್ತಕಣಗಳ ಮೇಲಿನ ಶೋಧನೆಯಿಂದ ಬೇಗನೆ ಬೆಳಕಿಗೆ ಬಂದ. ಆಮೇಲೆ ರಾಬರ್ಟ್ ಕಾಕನ ಸೋಂಕು ರೋಗಗಳ ಸಂಸ್ಥೆ ಸೇರಿ, ಬರ್ಲಿನ್ನಿನ ಲಸಿಕೆ ಸಂಶೋಧನಾ ಸಂಸ್ಥೆಯ ನಿರ್ದೇಶಕನಾಗಿದ್ದು (೧೮೯೬) ಕೊನೆಗೆ ಇವನಿಗಾಗಿಯೇ ಸ್ಥಾಪಿತವಾದ ರೋಗ ಚಿಕಿತ್ಸಾ ಪ್ರಯೋಗ ಸಂಸ್ಥೆಯ ಹಿರಿಯನಾದ. ಜೊತೆಗೆ, ಇದರ ಪಕ್ಕದಲ್ಲಿದ್ದ ಜಾರ್ಜ್ ಸ್ಪೇಯರ್ ಸಂಸ್ಥೆಯಲ್ಲೂ ರಸಾಯನ ರೋಗ ಚಿಕಿತ್ಸೆಯ ನಿರ್ದೇಶಕನಾಗಿದ್ದ. ಮೊದಮೊದಲು ಅನೇಕರಿಗೆ ಇವನು ಹಿಡಿಸದಿದ್ದರೂ, ಲಂಡನ್ನಿನ ರಾಯಲ್ ಸೊಸೈಟಿಯ ಹೊರನಾಡಿನ ಸದಸ್ಯತನವೂ, ಜರ್ಮನ್ ಬಿರುದಾದ 'ಎಕ್ಸೆಲೆನ್ಸಿ'ಯೂ ದಕ್ಕಿದುವು. ಬ್ಯಾಡ್ ಹೊಂಬರ್ಗಿನಲ್ಲಿ ಆಗಸ್ಟ್ ೨೦, ೧೯೧೫ರಂದು ಆರ್ಲಿಕ್ ಮರಣ ಹೊಂದಿದ.

ಮುಖ್ಯವಾಗಿ ಒಂದಾದ ಮೇಲೆ ಒಂದರಂತೆ, ೧೦–೧೫ ವರ್ಷಗಳ ಕಾಲ, ಊತಕಶಾಸ್ತ್ರದೊಂದಿಗೆ ರಕ್ತ ಜೀವಕಣಶಾಸ್ತ್ರ, ರೋಗಪ್ರತಿರೋಧಕತೆ, ರಾಸಾಯನ ರೋಗ ಚಿಕಿತ್ಸೆಗಳಲ್ಲಿ ಆರ್ಲಿಕ್‌ನ ಸಂಶೋಧನೆಗಳು ನಡೆದುವು. ಇದರೊಂದಿಗೇ ರಾಸಾಯನಿಕ ಶೋಧನೆಗಳನ್ನೂ ನಡೆಸಿದ.ಏಕಾಣು ಜೀವಿಶಾಸ್ತ್ರ, ಔಷಧಶಾಸ್ತ್ರ, ಕ್ಯಾನ್ಸರ್ ಸಂಶೋಧನೆಗಳಲ್ಲೂ ಹೆಚ್ಚಿನ ಮುನ್ನಡೆಗಳಿಗೆ ಕಾರಣನಾದ. ಹೊಸ ತಿಳಿವೇ ಆರ್ಲಿಕ್‌ನ ಸಂಶೋಧನೆಗಳ ಮೂಲ ಗುರಿಯಾಗಿದ್ದರೂ, ಅವುಗಳಿಂದ ಬಂದ ಫಲಗಳಂತೂ ಒಂದು ನವಯುಗವನ್ನೇ ಹುಟ್ಟಿಸಿದವು. ಇವುಗಳಲ್ಲಿ ಮುಖ್ಯವಾದ ಕೆಲವನ್ನು ಸೂಚಿಸಬಹುದು. ಊತಕಗಳು ಎತ್ತಿಕೊಳ್ಳುವ ಬಣ್ಣಗಳ ಬಿಡಿಪರೀಕ್ಷೆಗಾಗಿ, ಆಗ ಜರ್ಮನಿಯ ವಿಜ್ಞಾನವೂ ರಾಸಾಯನಿಕ ಕೈಗಾರಿಕೆಗಳೂ ತಯಾರಿಸುತ್ತಿದ್ದ, ಕೃತಕ ಬಣ್ಣವಸ್ತುಗಳ ಜೈವಿಕ ಗುಣಗಳನ್ನು ಪರಿಶೀಲಿಸಿದ. ಊತಕದ ಜೀವಕೋಶಗಳು, ರಕ್ತದ ಬಿಳಿಯ ಜೀವಕೋಶಗಳಲ್ಲಿನ ಬೇರೆ ಬೇರೆ ಕೋಶಗಳು ವಿಶಿಷ್ಟ ಬಣ್ಣತಳೆಯುತ್ತವೆಂಬುದನ್ನು ತೋರಿಸಿಕೊಟ್ಟು, ಇಂದಿನ ರಕ್ತವಿಜ್ಞಾನವನ್ನು (ಹೆಮಟಾಲಜಿ) ಸ್ಥಾಪಿಸಿದ. ನರದ ತಂತುಗಳು ಮೆತಿಲೀನ್ ನೀಲಿಯಿಂದ ಬಣ್ಣವೇರುವ ಹಾಗೆ, ಯಾವ ಅಡ್ಡ ವಿಷ ಪರಿಣಾಮಗಳೂ ಆಗದೆಯೇ, ಬದುಕಿರುವ ಪ್ರಾಣಿಗಳಲ್ಲಿ ಊತಕಗಳಿಗೆ ಬಣ್ಣ ಕೊಡುವ ಜೀವಾಳದ ವರ್ಣಕಗಳನ್ನು (ವೈಟಲ್ ಸ್ಟೈನ್ಸ್) ಕಂಡುಹಿಡಿದ. ಹೊಸ ವಿಧಾನಗಳಲ್ಲಿ ಇದೊಂದು ಮಹಾ ಸಾಧನೆ. ಆಕ್ಸಿಜನ್ ಕೂಡಿಸುವ ಇಲ್ಲವೇ ಕಳೆದ ಬಣ್ಣವಸ್ತುಗಳನ್ನು ಬಳಸಿ, ಜೀವಿಗಳ ಬೇರೆ ಬೇರೆ ಊತಕಗಳಲ್ಲಿನ ಆಕ್ಸಿಜನ್ ಪೂರೈಕೆಯ ಮಟ್ಟಗಳು ಬೇರೆ ಬೇರೆ ಆಗಿರುವುವೆಂದು ತೋರಿಸಿದ. ಆಮ್ಲಕ್ಕೆ ಜಗ್ಗದ ಬಣ್ಣವೇರಿಕೆಯಿಂದ ಕಾಕ್‌ನ (ಕ್ಷಯದ) ದಂಡಾಣು ಜೀವಿಯನ್ನು ಅವನು ತೋರಿಸಿದ್ದರಿಂದ, ಕ್ಷಯರೋಗ ನಿದಾನದಲ್ಲಿ ಅಗತ್ಯವಾದ ವಿಧಾನವೊಂದು ದೊರಕಿತು.

ಆರ್ಲಿಕ್‌ನಿಂದ ಜನಿಸಿದ, ಔಷಧ ವಿಜ್ಞಾನದ ಶಾಖೆಯಾದ ರಾಸಾಯನರೋಗಚಿಕಿತ್ಸೆಯ (ಕೀಮೋತೆರಪಿ) ದೆಸೆಯಿಂದ ಈಗ ಮಹಾರಾಸಾಯನಿಕ ಕೈಗಾರಿಕೆಯೇ ನಳನಳಿಸುತ್ತಿದೆ. ರೋಗ ಕಾರಣಗಳಾದ ಪರಾವಲಂಬಿ ಜೀವಿಗಳನ್ನು ಹಾಳುಗೆಡವಿ, ಅವುಗಳ ಹುಟ್ಟಡಗಿಸುವ ಮದ್ದಿನಿಂದ, ಸೋಂಕು ಹತ್ತಿರುವ ಪ್ರಾಣಿಯ ರೋಗವನ್ನು ವಾಸಿಮಾಡಬಹುದೆಂದು ಮೊತ್ತಮೊದಲು ಗೊತ್ತಾದುದು ೧೯೦೪ರಲ್ಲಿ. ಬೈರೊಡಲಿ (ಟ್ರಿಪನೊಸೋಮ್) ರೋಗಾಣುವನ್ನು ಚುಚ್ಚಿ ರೋಗ ಹತ್ತಿಸಿದ ಚಿಟ್ಟಿಲಿಗಳಿಗೆ, ಹಾಗೆ ಮದ್ದು ಚುಚ್ಚಿರದವು ರಕ್ತದ ತುಂಬ ರೋಗಾಣುಗಳು ಹೆಚ್ಚಿಕೊಂಡು ಸಾಯುವುದಕ್ಕೆ ೨೪ ತಾಸುಗಳ ಮುಂಚೆ, ಟ್ರಿಪಾನ್ ಕೆಂಪು ಎಂಬ ರಾಸಾಯನಿಕವನ್ನು ಚರ್ಮದಡಿ ಚುಚ್ಚಿ ಚಿಕಿತ್ಸೆ ಮಾಡಿದಾಗ ಬದುಕುಳಿದುವು. ಸಹೋದ್ಯೋಗಿಗಳೊಂದಿಗೆ ಸೇರಿಕೊಂಡು ನಡೆಸಿದ ಇಂತಹ ಪ್ರಯೋಗಗಳಿಂದ ಆರ್ಲಿಕ್ ರಾಸಾಯನಿಕಗಳಿಂದ ರೋಗ ಚಿಕಿತ್ಸೆ ಮಾಡುವ ವಿಧಾನದ ಸೂತ್ರಗಳ ಮೂಲ ವಿಜ್ಞಾನಿಯಾದ. ಸಾಲ್ವರ್ಸಾನ್ ಇಲ್ಲವೇ ಅರ್ಸ್‌ಫಿಮೀನ್‌ಗಳು ಮದ್ದಾಗಿ ರಾಸಾಯನಿಕ ರೋಗಚಿಕಿತ್ಸೆಯಲ್ಲಿ ಬಳಕೆಗೆ ತಂದದ್ದು ಇವನ ಒಂದು ಮಹಾಸಾಧನೆ. ಉಪದಂಶದ (ಸಿಫಿಲಿಸ್) ರೋಗಾಣುಗಳನ್ನು ಪ್ರಯೋಗದಲ್ಲಿ ಚುಚ್ಚಿ ರೋಗ ಹತ್ತಿಸಿದ ಮೊಲಗಳು, ಕೋತಿಗಳಲ್ಲಿ ಇದು ವಾಸಿಮಾಡಿತು. ಆಮೇಲೆ ಇನ್ನೂ ಒಳ್ಳೆಯ ಮದ್ದುಗಳು ಬಂದು ಇದನ್ನು ಕೈ ಬಿಟ್ಟರೂ, ಆಗಿನ ಕಾಲದಲ್ಲಿ ಉಪದಂಶದ ಚಿಕಿತ್ಸೆಗೆ ಇದರ ಹೊರತಾಗಿ ಬೇರೆ ಯಾವ ಮದ್ದೂ ಗೊತ್ತಿರಲಿಲ್ಲವಾದ್ದರಿಂದ ಇದು ಕ್ರಾಂತಿ ಎಬ್ಬಿಸಿತು. ಈ ತೆರನ ರಾಸಾಯನ ರೋಗ ಚಿಕಿತ್ಸಕ ಮದ್ದುಗಳು ಸಾಮಾನ್ಯವಾಗಿ ರೋಗಿಯ ರೋಗ ತಡೆವ ಯಾಂತ್ರಿಕತೆಗಳೊಂದಿಗೆ ಸಹಕರಿಸುವುದರಿಂದ ಮಾತ್ರ ವಾಸಿಮಾಡುತ್ತವೆ. ಈ ಮದ್ದುಗಳಿಂದ ಚಿಕಿತ್ಸೆ ಕೈಗೂಡದಿದ್ದರೆ, ರೋಗಿಯ ಇಲ್ಲವೇ ಪರಾವಲಂಬಿ ಜೀವಿಗಳ ವಿವಿಧ ರೀತಿಯ ಜೀವಿ ವರ್ತನೆಗಳೇ ಕಾರಣ ಇರಬೇಕು.

ಪ್ರಯೋಗಗಳಲ್ಲಿ ಕಂಡುಬಂದ ಕಣ್ಣರಿಕೆಗಳನ್ನು ಬಿಡಿಸಿ ನೋಡುವುದರಿಂದ ಚಿಕಿತ್ಸಾ ಸೂತ್ರಗಳನ್ನು ರೂಪಿಸಬಹುದು ಎನ್ನುತ್ತಾನೆ ಆರ್ಲಿಕ್. ಊತಕಗಳ ಆಮ್ಲಜನಕದ ಬೇಡಿಕೆಯ ಮೇಲಿನ ಪ್ರಯೋಗಗಳಿಂದ (೧೮೮೫) ಜೀವಕೋಶಗಳಲ್ಲಿ ಬದುಕಿರುವ ಜೀವಿರಸದಲ್ಲಿ (ಪ್ರೊಟೋಪ್ಲಾಸ್ಮ್), ಅವುಗಳ ವಿಶಿಷ್ಟ ಚಟುವಟಿಕೆಗಳನ್ನು ನಿರ್ಧರಿಸುವ, ಒಂದು ವಿಶೇಷ ರಾಸಿತಂಡವೂ, ಇದಕ್ಕೆ ಅಡ್ಡ ಸರಪಣಿಗಳಾಗಿ (ಪಡೆಕಗಳು) ಪರಮಾಣು – ಸಂಮಿಶ್ರಗಳು ಇರುವುದೆಂದೂ ಊಹಿಸಿದ. ಈ ಪಡೆಕಗಳು ವಿಶಿಷ್ಟ ನಿಜಗೆಲಸಗಳಲ್ಲಿ ಅಧೀನವಾಗಿದ್ದರೂ ಒಂದೊಂದೂ ಜೀವಕೋಶದ ಇಡೀ ಬಾಳುವೆಗೆ ಬಲು ಮುಖ್ಯ. ಈ ಕಲ್ಪನೆಗೆ ಆಧಾರ ಕೊಟ್ಟು, ಜೀವವಿಷಗಳೂ ಮದ್ದುಗಳೂ ವರ್ತಿಸುವುದನ್ನು ತರ್ಕಬದ್ಧವಾಗಿ ವಿವರಿಸಲಾಯಿತು. ಅವುಗಳೊಂದಿಗೆ ಅಡ್ಡ ಸರಪಣಿಗಳು ಕೂಡಲು ಅವಕಾಶಕೊಡುವ ಜೀವಕೋಶಗಳ ಮೇಲೆ ಮಾತ್ರ ಜೀವವಿಷಗಳು ವರ್ತಿಸುತ್ತವೆ. ಬಿಡಿಯಾಗಿರುವ ಪಡೆಕಗಳಾಗಿ ರೋಧವಸ್ತುಗಳು ಮೈಯಲ್ಲಿ ಹುಟ್ಟಿಕೊಳ್ಳುವುದನ್ನೂ ಇದು ವಿವರಿಸಿತು. ಈಗಲೂ ಈ ಅಡ್ಡ ಸರಪಣಿ ಸೂತ್ರ ನಿಜವೆನಿಸಿದೆ.

ಜರ್ಮನ್, ಇಂಗ್ಲಿಷ್, ಫ್ರೆಂಚ್ ಭಾಷೆಗಳಲ್ಲಿ ಆರ್ಲಿಕ್‌ನ ಇಡೀ ಬರೆಹಗಳೂ ಲೇಖನಪಟ್ಟಿಯೂ ನಾಲ್ಕು ಸಂಪುಟಗಳಲ್ಲಿ (೧೯೫೬) ಪ್ರಕಟವಾಗಿವೆ. (ಡಿ.ಎಸ್.ಎಸ್.)

**ಆರ್ಷೇಯ ಯುಗ:** ಸು. ೬೦೦ ದಶಲಕ್ಷ ವರ್ಷಗಳಿಗಿಂತ ಹಿಂದಿನ ಯುಗ (ಆರ್ಕೀಯನ್ ಈರಾ). ಈ ಪದ ಗ್ರೀಕ್ ಭಾಷೆಯ ಆರ್ಕೀಯಸ್ (ಪುರಾತನ) ಮತ್ತು ಆರ್ಕಿ (ಆರಂಭ) ಎಂಬ ಮೂಲಶಬ್ದಗಳಿಂದಾಗಿದೆ. ಜೆ. ಡಿ. ನಾನಾ ೧೮೭೨ರಲ್ಲಿ ಉತ್ತರ ಅಮೆರಿಕದ ಸುಪೀರಿಯರ್ ಸರೋವರದ ಸುತ್ತಮುತ್ತಲ ಅಥವಾ ಕೆನೆಡಿಯನ್ ಶೀಲ್ಡ್ ಪ್ರದೇಶದ ಕೇಂಬ್ರಿಯನ್ ಶಿಲಾಸ್ತೋಮಗಳಿಗಿಂತ ಹಿಂದಿನ ಶಿಲಾಸಮೂಹಗಳನ್ನು ಗುರುತಿಸಲು ಈ ಪದವನ್ನು ಮೊತ್ತಮೊದಲು ಬಳಸಿದರು. ಈ ಸಮುದಾಯದಲ್ಲಿ ಶೀಣಿ ಕಲ್ಲುಗಳು (ಗ್ರಾನೈಟಿಕ್ ನೀಸಸ್) ಸ್ಫಟಿಕೀಕರಿಸಿದ ಪದರುಶಿಲೆಗಳು (ಕ್ರಿಸ್ಟಲೈನ್‌ಷಿಸ್ಟ್) ಮಾರ್ಪಟ್ಟ ಪ್ರಸ್ತರೀ ಶಿಲೆಗಳು (ಮೆಟ–ಸೆಡಿಮೆಂಟ್ಸ್) ರೂಪಾಂತರಗೊಳ್ಳದ ಜೀವಾವಶೇಷವಿಲ್ಲದ ಶಿಲೆಗಳು ಮತ್ತು ಭೂಗರ್ಭದಿಂದ ಹೊರಬಂದ ಕಣಶಿಲೆ (ಎರಪ್ಟಿವ್ ಗ್ರಾನೈಟ್) ಇವು ಸೇರಿದ್ದುವು.

ಕೆನೇಡಿಯನ್ ಶೀಲ್ಡಿನ ಶಿಲಾವರ್ಗಗಳನ್ನು ಹೋಲುವ ಶಿಲಾಸ್ತೋಮಗಳು ಉತ್ತರ ಅಮೆರಿಕದಲ್ಲಿ ಲ್ಯಾಬ್ರಡಾರ್ ದ್ವೀಪ, ಕೊಲರ್‍ಯಾಡೋ ನದಿಯ ತಳಭಾಗ ಮತ್ತು ಇನ್ನೂ ಕೆಲವು ಪ್ರದೇಶಗಳಲ್ಲಿ ದಕ್ಷಿಣ ಅಮೆರಿಕ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಮಧ್ಯ ಯೂರೋಪಿನ ಬಾಲ್ಟಿಕ್ ಪ್ರದೇಶ, ಭಾರತ ಮತ್ತು ಪ್ರಪಂಚದ ಇನ್ನೂ ಕೆಲವು ಭಾಗಗಳಲ್ಲಿ ಕಂಡುಬಂದಿದೆ.

ಭಾರತದಲ್ಲಿ ಆರ್ಷೇಯ ಶಿಲಾವರ್ಗಗಳು : ಕೆನೆಡಿಯನ್ ಶೀಲ್ಡಿನ ಆರ್ಷೇಯ ಶಿಲೆಗಳನ್ನು ಹೋಲುವ ಪದರುಶಿಲೆಗಳು, ಶೀಣಿಕಲ್ಲುಗಳು ಮತ್ತು ಕಣಶಿಲೆಗಳು ಭಾರತದ ವಿವಿಧ ಪ್ರದೇಶಗಳಲ್ಲಿ ಅನೇಕ ಪ್ರಮಾಣಗಳ ತುಕಡಿಗಳಾಗಿ ಹರಡಿವೆ. ಆರ್ಷೇಯ ಶಿಲಾಸ್ತೋಮಗಳು ದಕ್ಷಿಣ ಭಾರತದ ಹೆಚ್ಚು ಭಾಗ, ರಾಜಾಸ್ಥಾನ, ಮಧ್ಯಪ್ರದೇಶ, ಬಿಹಾರ, ಒರಿಸ್ಸ ಪೂರ್ವಘಟ್ಟಗಳು ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಹರಡಿವೆ. ಈ ಪ್ರದೇಶಗಳ ಆರ್ಷೇಯ ಶಿಲಾಸ್ತೋಮಗಳ ಒಟ್ಟು ವಿಸ್ತೀರ್ಣ ಸು. ೧,೮೦,೦೦೦ ಚ.ಮೈ.

ವಿಕಿರಣ ನಿರ್ದಿಷ್ಟ ಕಾಲಮಾಪಕ ಪ್ರಯೋಗಗಳಿಂದ ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿರುವ ಆರ್ಷೇಯ ಶಿಲೆಗಳು ರೂಪುಗೊಂಡ ಖಚಿತಕಾಲ, ಪ್ರಮಾಣವನ್ನು ಕಂಡುಹಿಡಿಯುವುದು ಈಗ ಸು. ೩೦–೪೦ ವರ್ಷಗಳಿಂದೀಚೆಗೆ ಆರಂಭವಾಗಿದೆ. ಪ್ರೀಕೇಂಬ್ರಿಯನ್ ಶಿಲಾವರ್ಗಗಳ ಜನನ ಕಾಲಗಳು, ಸು. ೬೦೦ ದಶಲಕ್ಷ ವರ್ಷಗಳ ಹಿಂದಿನಿಂದ ೩,೦೦೦ ದಶಲಕ್ಷ ವರ್ಷಗಳವರೆಗೂ ವ್ಯಾಪಿಸಿರುವುದಾಗಿ ತಿಳಿದು ಬರುತ್ತದೆ. ಭಾರತದ ಆರ್ಷೇಯ ಶಿಲೆಗಳ ಪೈಕಿ ಕೇವಲ ಕೆಲವು ಶಿಲೆಗಳ ಕಾಲ ಪ್ರಮಾಣಗಳನ್ನು ಮಾತ್ರ ನಿರ್ಧರಿಸಲಾಗಿದೆ. ಈ ನಿರ್ಧಾರಗಳು ನಿರ್ದಿಷ್ಟವಾಗಿ ಜನನಕಾಲ ತಿಳಿಯಲು ಸಾಕಷ್ಟು ಇಲ್ಲದಿದ್ದರೂ ಪದರು ಶಿಲಾವರ್ಗಗಳ ಪರಮಾವಧಿ ಆಯಸ್ಸು ೧,೫೦೦ ದಶಲಕ್ಷಗಳಿಂದ ೨೫,೦೦೦ ದಶಲಕ್ಷ ವರ್ಷಗಳವರೆಗೂ ವ್ಯಾಪಕವಾಗಿದೆಯೆಂದು ಕಂಡುಬಂದಿದೆ. ಮತ್ತು ಕಣಶಿಲಾವರ್ಗಗಳ ಈ ವಯಸ್ಸು ಸು. ೯೦೦ ದಶಲಕ್ಷ ವರ್ಷಗಳಿಂದ ೧,೭೫೦ ದಶಲಕ್ಷಗಳವರೆಗೂ ವಿಸ್ತಾರಗೊಂಡಿದೆಯೆಂದು ತಿಳಿದುಬಂದಿದೆ. ಈಗ ನಿರ್ಧರಿಸುವ ಆರ್ಷೇಯ ಶಿಲಾವರ್ಗಗಳ ಉತ್ಪನ್ನ ಕಾಲಾವಧಿಯನ್ನು ಅನುಸರಿಸಿ ಭಾರತದ ಆರ್ಷೇಯ ಶಿಲಾವರ್ಗಗಳ ಪರಸ್ಪರ ಸಂಬಂಧ ಮತ್ತು ಹೋಲಿಕೆಗಳನ್ನು ಮಾಡಿ, ಈ ಶಿಲಾ ವರ್ಗಗಳಲ್ಲಿ ದೊರಕಬಹುದಾದ ಪಳಿಯುಳಿಕೆಗಳ (ಫಾಸಿಲ್ಸ್) ವಯಸ್ಸು ಮತ್ತು ವಿಭಿನ್ನ ರೀತಿಯ ಜೀವಿಗಳನ್ನು ಗುರುತಿಸಬಹುದು.

ಪ್ರೀಕೇಂಬ್ರಿಯನ್ ವರ್ಗಗಳು (ನಿರ್ದಿಷ್ಟ ಕೇಂಬ್ರಿಯನ್ ಶಿಲಾವರ್ಗಕ್ಕಿಂತ ಹಿಂದಿನ ಎಲ್ಲಾ ಶಿಲಾವರ್ಗಗಳು) ಅತಿ ಪ್ರಾಚೀನವಾಗಿವೆ. ಅವುಗಳ ಕಾಲಾವಧಿ ಸು. ೫೦೦ ದಶಲಕ್ಷ ವರ್ಷಗಳ ಹಿಂದಿನಿಂದ ೩,೦೦೦ ದಶಲಕ್ಷ ವರ್ಷಗಳ ಮೇಲ್ಪಟ್ಟಿರುತ್ತದೆ. ಈ ಅದ್ಭುತ ಕಾಲಾವಧಿಯ ವಿವಿಧ ಕಾಲದ ಶಿಲಾವರ್ಗಗಳಲ್ಲಿ ಜೀವಿಸಿದ್ದ ಪ್ರಾಣಿಗಳ ಪಳೆಯುಳಿಕೆಗಳನ್ನು ಹೆಸರಿಸಿ, ಗುರುತಿಸಬಹುದು.

ವಿಕಿರಣಕಾಲಮಾಪಕ ನಿರ್ಧಾರಗಳಿಂದ ಪ್ರಾಚೀನ ಕಾಲದಲ್ಲಿ ಭೂಮಿಯ ಒತ್ತಡದ ಬದಲಾವಣೆಗಳು ಕ್ರಮವಾಗಿ ೩೫೦–೫೦೦ ದಶಲಕ್ಷ ವರ್ಷಗಳಿಗೊಮ್ಮೆ ಮಾರ್ಪಟ್ಟಿರುವುದೆಂದು, ಈ ಪ್ರತಿಯೊಂದು ಒತ್ತಡ ಬದಲಾವಣೆಗಳ ಕಾಲ ಸು. ೧೭೫ ದಶಲಕ್ಷದಿಂದ ೨೫೦ ದಶಲಕ್ಷಗಳವರೆಗೂ ಇದ್ದಿತ್ತೆಂದು ತಿಳಿದುಬಂದಿದೆ. ಈ ಆಧಾರದ ಮೇಲೆ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಕೇಂಬ್ರಿಯನ್ ಶಿಲಾವರ್ಗಕ್ಕಿಂತ ಹಿಂದಿನ

ಶಿಲಾವರ್ಗಗಳನ್ನು ಸ್ಥೂಲವಾಗಿ ಪರಸ್ಪರ ಸಂಬಂಧಗಳನ್ನು ತಿಳಿಯಲು ಪ್ರೀಕೇಂಬ್ರಿಯನ್ ಶಿಲಾವರ್ಗಗಳನ್ನು ಅವುಗಳ ನಿರ್ದಿಷ್ಟ ಕಾಲವನ್ನನುಸರಿಸಿ ೮ ತಂಡಗಳಾಗಿ ವಿಭಾಗಿಸಲಾಗಿದೆ.

| ಕಾಲಮಾನ (ದಶಲಕ್ಷ ವರ್ಷಗಳಲ್ಲಿ) | ಸೂಚಿಸಿರುವ ಹೆಸರುಗಳು |
|---|---|
| ೬೦೦–೮೦೦ | ... ಅತಿಮೇಲಿನ ಪ್ರೀಕೇಂಬ್ರಿಯನ್ |
| ೮೦೦–೧,೦೦೦ | ... ಮೇಲಿನ ಪ್ರೀಕೇಂಬ್ರಿಯನ್ |
| ೧೦೦೦–೧೨೦೦ | ... ಮಧ್ಯದ ಪ್ರೀಕೇಂಬ್ರಿಯನ್ |
| ೧೨೦೦–೧೪೦೦ | ... ತಳದ ಪ್ರೀಕೇಂಬ್ರಿಯನ್ |
| ೧೪೦೦–೧೮೦೦ | ... ಇಪಾರ್ಕಿಯನ್ |
| ೧೮೦೦–೨೪೦೦ | ... ಮೆಸಾರ್ಕಿಯನ್ |
| ೨೪೦೦–೩೪೦೦ | ... ಕ್ಯಾಟಾರ್ಕಿಯನ್ |
| >೩೪೦೦ | ... ಪ್ರೋಟೋಲಿಥಿಕ್ |

ಇದು ಕೇಂಬ್ರಿಯನ್ ವರ್ಗದ ಹಿಂದಿನ ಎಲ್ಲ ಶಿಲಾವರ್ಗಗಳನ್ನೂ ಪ್ರೀಕೇಂಬ್ರಿಯನ್ ಎಂಬ ಒಂದೇ ಹೆಸರಿನಿಂದ ಕರೆಯುವ ಅಸಮಂಜಸ ಅಗತ್ಯವನ್ನು ತಪ್ಪಿಸುತ್ತದೆ. ಇದರಿಂದ ಸುಸ್ಪಷ್ಟವಾಗಿ ವಿವಿಧ ಪ್ರಾಣಿಗಳ ವಿಸ್ತಾರ, ವ್ಯಾಪ್ತಿ, ಅವುಗಳು ಜೀವಿಸಿದ್ದ ಕಾಲಗಳನ್ನು ನಿರ್ಧರಿಸಬಹುದು. (ಬಿ.ಆರ್.ಆರ್.)

**ಆಲಿಗೊಕೀಟ:** ವಲಯವಂತಗಳ (ಅನೆಲಿಡ) ವಂಶದಲ್ಲಿ ಒಂದು ವರ್ಗ. ಈ ವರ್ಗಕ್ಕೆ ಎರೆಹುಳುವೇ ಮುಂತಾದ ಹುಳುಗಳು ಸೇರುತ್ತವೆ. ಇವುಗಳ ವಾಸ ಸಾಮಾನ್ಯವಾಗಿ ಮಣ್ಣಿನಲ್ಲಿ. ಕೆಲವು ಜಲವಾಸಿಗಳೂ ಇವೆ. ಇವುಗಳಲ್ಲಿ ಚಲನೆಗೆ ಅನುಕೂಲವಾಗುವಂತೆ ಕೈಟಿನ್ ವಸ್ತುವಿನಿಂದಾದ ಸೀಟ ಎಂಬ ಬಿರುಗೂದಲುಗಳಿವೆ. ಇವು ನೆಲದಮೇಲೆ ಒಂದೇ ಕಡೆ ಕೇಂದ್ರೀಕೃತವಾಗಿರದೆ ಎಲ್ಲ ಕಡೆಗಳಲ್ಲೂ ಹರಡಿರುತ್ತವೆ. ನೋಡಿ–ಅನೆಲಿಡಾ. (ಎಚ್.ಬಿ.ಡಿ.)

**ಆಲಿಗೊನಿಯಾಪ್ಟೆರ:** ಹೋಲೊಮೆಟಬೋಲ ಗುಂಪಿನ ಕೀಟಗಳು. ಈ ಕೀಟಗಳು ಕೋಶಾವಸ್ಥೆಯಲ್ಲಿ ಸ್ವಲ್ಪ ಕಾಲ ವಿರಮಿಸಿ, ಅನೇಕ ಆಂತರಿಕ ಪುನರ್ವ್ಯವಸ್ಥೆಗೊಳ್ಳುತ್ತವೆ. ರೆಕ್ಕೆಗಳು ಆಂತರಿಕವಾಗಿ ಕಲ್ಪನಾ ತಟ್ಟೆಗಳಂತೆ ಉತ್ಪತ್ತಿಯಾಗುವುದರಿಂದ ಇವುಗಳಿಗೆ ಎಂಡಾಪ್ಟೆರಿಗೋಟ ಕೀಟಗಳೆನ್ನುವರು. ಡಿಂಬವು ಪ್ರೌಢಾವಸ್ಥೆಯ ಕೀಟಕ್ಕಿಂತ ಭಿನ್ನವಾಗಿದೆ. ಡಿಂಬ ಮತ್ತು ಪ್ರೌಢಾವಸ್ಥೆಗಳ ನಡುವೆ ಚಲನಾಶಕ್ತಿ ಇಲ್ಲದ ಕೋಶಾವಸ್ಥೆಯೊಂದು ಇದೆ.

ರೆಕ್ಕೆಯ ಕೆನ್ನೆಲುವಿನ ಕ್ಷೇತ್ರ (ಜುಗಲ್ ಫೀಲ್ಡ್) ಬಹಳವಾಗಿ ವಿಕಸಿತಗೊಂಡಿದೆ. ರೆಕ್ಕೆಗಳ ಸಿರೀಕರಣ (ವೆನೇಷನ್) ಸರಳವಾಗಿದ್ದು, ಕವಲುಗಳಿಲ್ಲದ ಒಂದೇ ಒಂದು ಸಲೆ (ವೆನ ಆರ್ಕುಟ) ಇದೆ. ಈ ಗುಂಪಿನಲ್ಲಿ ಸಂಪೂರ್ಣ ರೂಪಾಂತರಗೊಳ್ಳುವ ಎಲ್ಲಾ ಕೀಟಗಳಿವೆ. ಮಾಲ್ಪೀಜಿಯನ್ ಕೊಳವೆಗಳು ವಿಶಿಷ್ಟವಾದ ರಚನೆಯಿಂದ ಕೂಡಿದ್ದು, 2–6 ಆಲಿಗೋ ನೆಫ್ರಿಡಿಯ ಇವೆ. ಆದರೆ, ಹೈಮಿನಾಪ್ಟರಾ ಗುಂಪಿನ ಕೀಟಗಳಲ್ಲಿ ಇವುಗಳ ಸಂಖ್ಯೆ ಹೆಚ್ಚಾಗಿದೆ.

ಹೋಲೊಮೆಟಾಬೋಲ ಅಥವಾ ಎಂಡಾಪ್ಟರಿಗೋಟ ಕೀಟಗಳನ್ನು ವಿವಿಧ ಗುಂಪುಗಳಾಗಿ ವಿಂಡಿಸಲಾಗಿದೆ.

1. ಉಚ್ಚ ಗಣ (ಸೂಪರ್ ಆರ್ಡರ್) : ಕೋಲಿಯಾಪ್ಟೆರಾಯ್ಡಿಯ
   : ಕೋಲಿಯಾಪ್ಟೆರ

2. ಉಚ್ಚ ಗಣ : ನ್ಯೂರಾಪ್ಟೆರಾಯ್ಡಿಯ
   ಗಣ : ಮೆಗಾಲೋಪ್ಟೆರಾ
   ಗಣ : ರಾಫಿಡಿಯಾಪ್ಟೆರ
   ಗಣ : ಪ್ಲಾನಿಪೆನ್ನಿಯ

3. ಉಚ್ಚ ಗಣ : ಮೆಕಾಪ್ಟೆರಾಯ್ಡಿಯ
   ಗಣ : ಮೆಕಾಪ್ಟೆರ
   ಗಣ : ಟ್ರೈಕಾಪ್ಟೆರ
   ಗಣ : ಲೆಪಿಡಾಪ್ಟೆರ
   ಗಣ : ಡಿಪ್ಟೆರ

4. ಉಚ್ಚ ಗಣ : ಸೈಫನಾಪ್ಟೆರಾಯ್ಡಿಯ
   ಗಣ : ಸೈಫನಾಪ್ಟೆರ

5. ಉಚ್ಚ ಗಣ : ಹೈಮಿನಾಪ್ಟೆರಾಯ್ಡಿಯ
   ಗಣ : ಹೈಮಿನಾಪ್ಟೆರ
   ಗಣ : ಸ್ಟ್ರೆಪ್ಸಿಪ್ಟೆರ

(ಎಸ್.ಕೆ.ಆರ್.)

**ಆಲಿಗೊಸೀನ್:** ಭೂವಿಜ್ಞಾನದಲ್ಲಿ ಟರ್ಷಿಯರಿ ಯುಗದ ಮೂರನೆಯ ಕಲ್ಪ; ೪೦ ದಶಲಕ್ಷ ವರ್ಷ ಪ್ರಾಚೀನದಿಂದ ೨೫ ದ.ಲ. ವರ್ಷ ಪ್ರಾಚೀನದವರೆಗಿನ ಅವಧಿ. ಈ ಗ್ರೀಕ್ ಪದದ ಅರ್ಥ ಅಲ್ಪ (ಆಲಿಗೊಸ್); ಈಚಿನದು (ಕೈನೊಸ್). ಕಾರಣ, ಈ ಅವಧಿಯ ಚಿಪ್ಪು ಮೀನುಗಳ ಅತ್ಯಲ್ಪ ಪಳೆಯುಳಿಕೆಗಳು ಮಾತ್ರ (ಸು. ೧೦%) ಲಭ್ಯವಾಗಿವೆ. ಉತ್ತರ ಜರ್ಮನಿಯ ಎಚ್.ಇ.ಬೆರಿಕ್ ಆಲಿಗೊಸೀನ್ ಪದವನ್ನು ಅರ್ಥಪೂರ್ಣವಾಗಿ ಮೊದಲಿಗೆ ಬಳಸಿದ (೧೮೫೪).

ಆಲಿಗೊಸೀನ್ ಸ್ತೋಮಗಳು ಎಂದರೆ ಆ ಕಲ್ಪದಲ್ಲಿ ರೂಪುಗೊಂಡ ಎಲ್ಲ ಶಿಲೆಗಳ ಸಮುದಾಯ ಎಂದು ಸಾಮಾನ್ಯ ಅರ್ಥ; ನಿರ್ದಿಷ್ಟ ಅರ್ಥ ಟರ್ಷಿಯರಿ ಯುಗದ ಆಲಿಗೊಸೀನ್ ಕಲ್ಪದಲ್ಲಿ ಉಂಟಾದ ಅವಸಾದನ ಶಿಲೆಗಳು.

ಇಯೊಸೀನ್ ಕಲ್ಪದ ಅಂತ್ಯದಲ್ಲಿ ಆಂಗ್ಲೊಫ್ರಾಂಕ್‌ಬೆಲ್ಜಿಯನ್ ನಿಕ್ಷೇಪ ಪ್ರದೇಶ ಬಹಳ ಕಿರಿದಾಗಿ ಅಲ್ಲಲ್ಲಿ ಪರಸ್ಪರ ಬೇರ್ಪಟ್ಟ ತಗ್ಗುಪ್ರದೇಶಗಳಲ್ಲಿ ಮಾತ್ರ ಉಳಿಯಿತು. ಆಲಿಗೊಸೀನ್ ಕಾಲದ ಪ್ರಾರಂಭದಲ್ಲಿ ಈ ಪ್ರದೇಶದ ಹೆಚ್ಚು ಭಾಗ ಸಮುದ್ರಾಕ್ರಮಣಕ್ಕೆ ಒಳಗಾಯಿತು; ಇದು ಜರ್ಮನಿಯ ಉತ್ತರ ಭಾಗ ಮತ್ತು ರಷ್ಯದ ಪೂರ್ವ ಭಾಗಕ್ಕೆ ವಿಸ್ತರಿಸಿತು. ಆಗ ಬಂದ ಮೃದ್ವಂಗಿಗಳು ಈ ಕಾಲದ ವಿಶಿಷ್ಟ ಜೀವಿಗಳು. ಜರ್ಮನಿಯಲ್ಲಿ ಇಯೊಸೀನ್ ನಿಕ್ಷೇಪಗಳೇ ಇಲ್ಲ. ಆದರೆ ಆಲಿಗೊಸೀನ್ ನಿಕ್ಷೇಪಗಳು ಉತ್ತಮವಾಗಿ ರೂಪುಗೊಂಡಿವೆ. ಇವುಗಳ ಆಧಾರದ ಮೇಲೆಯೇ ಬೆರಿಕ್ ಆಲಿಗೊಸೀನ್ ಸ್ತೋಮ ಎಂಬ ಹೆಸರನ್ನು ಬಳಸಿದ್ದು. ಈ ಸ್ತೋಮವನ್ನು ಮೂರು ಭಾಗಗಳನ್ನಾಗಿ ವಿಭಜಿಸಲಾಗಿದೆ. ೧. ಕೆಳಭಾಗ ಹಸಿರು ಮರಳು ಮತ್ತು ಜೇಡುಗಳಿಂದ ಕೂಡಿ ವಿಶಾಲವ್ಯಾಪ್ತಿಯನ್ನು ಹೊಂದಿದೆ ಮತ್ತು ವಿಶಿಷ್ಟ ಜೀವಾವಶೇಷಗಳಿಂದ ಕೂಡಿದೆ. ಇವುಗಳ ಮಧ್ಯೆ ಕಂದು ಬಣ್ಣದ ಕಲ್ಲಿದ್ದಲ ಪದರಗಳಿವೆ. ಅವುಗಳಲ್ಲಿ ಕೆಲವು ೩೦ ಮೀ. ದಪ್ಪ ಇವೆ. ಈ ಕಲ್ಲಿದ್ದಲು ಕೋನಿಫೆರಸ್ ಗಿಡಗಳಿಂದಾಗಿವೆ. ಅವುಗಳಿಂದ ಜಿನುಗಿದ ಗೋಂದು ಬಾಲ್ಟಿಕ್ ತೀರದ ಸುಪ್ರಸಿದ್ಧ ಆಂಬರ್ ನಿಕ್ಷೇಪವಾಗಿದೆ. ಆಲಿಗೊಸೀನ್ ಸ್ತೋಮದ ಕೆಳಭಾಗ ಲ್ಯಾಟ್‌ಫೋರ್ಡ್ ಎಂಬ ಹಳ್ಳಿಯ ಬಳಿ ಹೇರಳವಾದ ಜೀವಾವಶೇಷಗಳನ್ನು ಹೊಂದಿದೆ. ಆದ್ದರಿಂದ ಇದರ ಹೆಸರು ಲ್ಯಾಟ್‌ಫೋರ್ಡಿಯನ್ ಶ್ರೇಣಿ. ೨. ಮಧ್ಯಭಾಗ ನೀಲಿ ಜೇಡಿನಿಂದ ಕೂಡಿದೆ. ಇದರ ಹೆಸರು ಸೆಪ್ಟೇರಿಯಂಟಾನ್. ಈ ನಿಕ್ಷೇಪದ ಇನ್ನೊಂದು ಮುಖದ ಹೆಸರು ಸೆಟ್ಟಿಯನ್ ಮರಳುಗಳು. ಇದರಲ್ಲಿ ಸಾಗರವಾಸಿಗಳ ಜೀವಾವಶೇಷಗಳು ಹೇರಳವಾಗಿವೆ. ಸ್ಯಾಕ್ಸೊನಿ ಹತ್ತಿರ ಇರುವ ಈ ಶಿಲೆಗಳಲ್ಲಿ ರಂಜಕದ ಉಂಡೆಗಳಿವೆ. ಇವುಗಳ ಮಧ್ಯೆ ಮೀನಿನ ಎಲುಬು ಅಥವಾ ಪ್ರಾಣಿಗಳ ಚಿಪ್ಪು ಇರುವುದು ಸಾಮಾನ್ಯ. ೩. ಮೇಲ್ಭಾಗ ಕ್ಯಾಸೆಲ್ ಮತ್ತು ಡೊಸೆಲ್‌ಡಾರ್ಫ್ ಬಳಿ ಉತ್ಕೃಷ್ಟ ರೀತಿಯಲ್ಲಿ ಸಂಚಯನಗೊಂಡಿದೆ. ಇದು ಮುಖ್ಯವಾಗಿ ಗ್ಲಾಕೊನೈಟ್ ಮರಳಿನಿಂದ ಕೂಡಿ, ಸುಮಾರು ೨೦೦ ಪ್ರಕಾರಗಳ ಜೀವಾವಶೇಷಗಳನ್ನು ಒಳಗೊಂಡಿದೆ. ಇದೇ ಅಕ್ವಿಟೇನಿಯನ್ ಶಿಲಾಶ್ರೇಣಿ.

| ಯುಗ ಕಾಲ | ಕಲ್ಪ | ಜೀವಿಗಳ ವಿವರ (ದಶಲಕ್ಷ ವರ್ಷ ಪ್ರಾಚೀನಕ್ಕೆ) |
|---|---|---|
| ಕ್ವಾಟರ್ನರಿ (ರೀಸೆಂಟ್) | ಈಚಿನ | ಆಧುನಿಕ ಮಾನವ |
| ಪ್ಲಿಸ್ಟೊಸೀನ್ | ಪ್ರಾರಂಭದ ಮಾನವ | ... |
| **ಟರ್ಷಿಯರಿ** ಪ್ಲಿಯೊಸೀನ್ | ಮಹಾ ಮಾಂಸಾಹಾರಿಗಳು | ೧ |

| | | |
|---|---|---|
| ಮಯೋಸೀನ್ | ತಿಮಿಂಗಿಲಗಳು,<br>ಕಪಿಗಳು,<br>ಹುಲ್ಲು ಮೇಯುವವು | ೨೫ |
| ಆಲಿಗೊಸೀನ್ | ಮಹಾಸ್ತನಿಗಳು | ೪೦ |
| ಇಯೊಸೀನ್ | ಹೂ ಬಿಡುವ<br>ಗಿಡಗಳ ಉದಯ | ೬೦ |
| ಪೆಲಿಯೊಸೀನ್ | ಹೊಕ್ಕಳು ಬಳ್ಳಿಯಿರುವ<br>ಮೊದಲ ಸ್ತನಿಗಳು | ೭೫ |
| ಕ್ರಿಟೇಷಿಯಸ್ | ಡೈನೊಸಾರ್‌ಗಳ ನಾಶ | ೧೩೫ |
| ಜುರಾಸಿಕ್ | ಡೈನೊಸಾರ್‌ಗಳ ಅತ್ಯುಚ್ಛ್ರಾಯ,<br>ಮೊದಲ ಹಕ್ಕಿಗಳು,<br>ಮೊದಲ ಪುಟ್ಟ ಸ್ತನಿಗಳು | ೧೮೦ |
| ಟ್ರಯಾಸಿಕ್ | ಡೈನೊಸಾರ್‌ಗಳ ಉದಯ | ೨೨೫ |
| ಪರ್ಮಿಯನ್ | ಸರೀಸೃಪಗಳ ಬೆಳವಣಿಗೆ,<br>ಕೋನಿಫರ್‌ಗಳ ವಿಪುಲತೆ | |
| ಕಾರ್ಬೊನಿಫೆರಸ್ | ಮೇಲಿನ<br>ಮೊದಲ ಸರೀಸೃಪಗಳು,<br>ಕಲ್ಲಿದ್ದಲ ಕಾಡುಗಳು.<br>ಕೆಳಗಿನ ಷಾರ್ಕ್‌ಗಳ ವಿಪುಲತೆ | ೨೮೦<br>೩೫೦ |
| ಡಿವೋನಿಯನ್ | ದ್ವಿಚರಿಗಳ ಉದಯ, ಮೀನುಗಳ<br>ವಿಪುಲತೆ | ೪೦೦ |
| ಸೈಲೂರಿಯನ್ | ಮೊದಲ ನೆಲಸಸ್ಯಗಳು ಮತ್ತು<br>ಪ್ರಾಣಿಗಳು | ೪೪೦ |
| ಆರ್ಡೊವಿಶಿಯನ್ | ಮೊದಲ ಮೀನುಗಳು | ೫೦೦ |
| ಕೇಂಬ್ರಿಯನ್ | ನೀರಿನ ಅಕಶೇರುಕಗಳು | ೬೦೦ |

ಪ್ಯಾರಿಸ್ ಪ್ರದೇಶದಲ್ಲಿ ಇಯೊಸೀನ್ ಸ್ತೋಮ ಆಲಿಗೊಸೀನ್ ಸ್ತೋಮದೊಡನೆ ಬೆರೆಯುವುದನ್ನು ಈ ಎರಡೂ ಸ್ತೋಮಗಳನ್ನು ಕೊರೆದು ಹರಿಯುತ್ತಿರುವ ನದಿಗಳ ಕಣಿವೆಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಇಲ್ಲಿ ಆಲಿಗೊಸೀನ್ ಸ್ತೋಮವನ್ನು ಸೆನಾಯ್ಸಿಯನ್, ಸ್ಟ್ಯಾಂಪೇನಿಯನ್ ಮತ್ತು ಚಟ್ಟಿಯನ್ ಎಂಬ ಮೂರು ಭಾಗಗಳಾಗಿ ವಿಭಜಿಸಲಾಗಿದೆ. ಭೂಪ್ರದೇಶ ಸುತ್ತು ಹರಿದಿರುವ ಸಮುದ್ರದಲ್ಲಿ ಸಂಚಯನಗೊಂಡ ನೀಲಿ ಮತ್ತು ಹಸಿರು ಮಾರಲ್ ಶಿಲೆಗಳು ಕೆಳಭಾಗದಲ್ಲಿವೆ. ಇವುಗಳಲ್ಲಿ ಸಮುದ್ರವಾಸಿಗಳ ಅವಶೇಷಗಳೇ ಅಲ್ಲದೆ ಸರೀಸೃಪಗಳ (ಡೈನೊಸಾರ್‌ಗಳು) ಮತ್ತು ಸ್ತನಿಗಳ ಅವಶೇಷಗಳೂ ಇವೆ. ಮಾರ್ಬಲ್ ಶಿಲೆಗಳ ಮೇಲೆ ಸುಣ್ಣದ ನಿಕ್ಷೇಪವಿದೆ. ಇದರ ಹೆಸರು ಕ್ಯಾಲ್ಕರೆ ಡಿಬ್ರೀ. ಮಧ್ಯದಲ್ಲಿ ವಿಸ್ತಾರವಾದ ಸಾಗರ ನಿಕ್ಷೇಪಗಳಿವೆ. ಇವು ಆಸ್ಟ್ರಿಯ, ಕಾರ್ಬುಲ ಮೊದಲಾದ ಲ್ಯಾಮೆಲಿಬ್ರಾಂಕ್‌ಗಳಿಂದ ಕೂಡಿದ ಮಾರಲ್ ಶಿಲೆಗಳಿಂದ ಪ್ರಾರಂಭವಾಗುತ್ತವೆ. ಇವುಗಳ ಮೇಲೆ ಮರಳು ಪದರಗಳಿವೆ. ಇವುಗಳ ಕೆಳಭಾಗವನ್ನು ಚೌರೆ ಮರಳುಗಳೆಂದೂ ಮೇಲ್ಭಾಗವನ್ನು ಫೌಂಟನ್ ಬ್ಲೊ ಮರಳುಗಳೆಂದೂ ಕರೆಯಲಾಗಿದೆ. ಇವೆಲ್ಲವೂ ಜೀವಾವಶೇಷರಹಿತವಾದುವು. ಗಾಜು ತಯಾರಿಕೆಗೆ ಅತ್ಯುತ್ತಮ. ಮೇಲ್ಭಾಗ ಕೆಳಗಿನಿಂದ ಕ್ರಮವಾಗಿ ಸುಣ್ಣ ಶಿಲೆ, ಹಸಿರು ಮಾರಲ್, ಮರಳು ಮತ್ತು ಮರಳುಶಿಲೆಗಳಿಂದ ಕೂಡಿದೆ. ಮರಳುಗಳಲ್ಲಿ ಸ್ತನಿಗಳ ಅವಶೇಷಗಳಿವೆ. ಅವುಗಳಲ್ಲಿ ಆಂತ್ರಕೊಥೀರಿಯಂ ಮತ್ತು ಮೈಕ್ರೊಬೊನಂ ಮುಖ್ಯವಾದುವು.

ಬೆಲ್ಜಿಯಂನಲ್ಲಿ ಆಲಿಗೊಸೀನ್ ಸ್ತೋಮ ಆಂಟ್‌ವರ್ಪ್‌ನ ಸುತ್ತಮುತ್ತ ವ್ಯಾಪಿಸಿದೆ. ಇಂಗ್ಲೆಂಡಿನಲ್ಲಿ ಈ ಸ್ತೋಮ ಹ್ಯಾಂಪ್‌ಷೈರ್ ಮತ್ತು ವೈಟ್ ದ್ವೀಪಗಳಿಗೆ ಮಾತ್ರ ಸೀಮಿತ. ಈ ಎರಡು ಪ್ರದೇಶಗಳಲ್ಲಿಯೂ ಕೆಳ ಮತ್ತು ಮಧ್ಯ ಭಾಗಗಳು ಮಾತ್ರ ರೂಪುಗೊಂಡಿವೆ. ಬೆಲ್ಜಿಯಂನಲ್ಲಿನ ಭೂಕೊರೆತವನ್ನು ಪರಿಶೀಲಿಸಿದಾಗ ಅಲ್ಲಿ ಭೂಮಿಯ ಮೇಲ್ಭಾಗವಿರುವುದು ಕಂಡುಬಂದಿದೆ.

ಉತ್ತರ ಅಮೆರಿಕದಲ್ಲಿ ಆಲಿಗೊಸೀನ್ ಯುಗ ಜ್ವಾಲಾಮುಖಿಗಳ ಕಾರ್ಯಾಚರಣೆಯೊಡನೆ ಪ್ರಾರಂಭವಾಯಿತು. ಪಶ್ಚಿಮ ಪ್ರದೇಶವನ್ನು ಜ್ವಾಲಾಮುಖಿಯ ಬೂದಿ ಮುಚ್ಚಿತು. ಎಲ್ಲೋಸ್ಟೋನ್ ಪಾರ್ಕ್ ಮತ್ತು ಕೊಲರೆಡೊ ಪ್ರಾಂತ್ಯದ ಸ್ಯಾನ್ ಜುವಾನ್ ಪರ್ವತ ಪ್ರದೇಶಗಳಲ್ಲಿ ಜ್ವಾಲಾಮುಖಿಗಳ ಹಾವಳಿ ತೀವ್ರವಾಗಿತ್ತು. ಆಲಿಗೊಸೀನ್ ಕಾಲದ ಭೂನಿಕ್ಷೇಪಗಳು ದಕ್ಷಿಣ ಡಕೋಟ, ನೆಬ್ರಾಸ್ಕ, ವೋಮಿಂಗ್ ಮತ್ತು ಕೊಲರೆಡೊ ಪ್ರಾಂತ್ಯಗಳಲ್ಲಿ ಚೆನ್ನಾಗಿ ಸಂಚಯನಗೊಂಡಿವೆ. ಈ ನಿಕ್ಷೇಪಗಳೇ ವೈಟ್ ರಿವರ್ ಶಿಲಾಶ್ರೇಣಿ. ಇವು ಶಿಥಿಲೀಕರಣ ಹೊಂದಿ ಬ್ಲಾಕ್‌ಹಿಲ್‌ಗೆ ಆಗ್ನೇಯದಲ್ಲಿ ಅಪ್ರಯೋಜಕ ಬೃಹದ್ ಭೂಮಿ ಎನಿಸಿಕೊಂಡಿವೆ. ಈ ಪ್ರದೇಶ ಬೆನ್ನೆಲುಬುಳ್ಳ ಪ್ರಾಣಿಗಳ ಅವಶೇಷಗಳ ಗಣಿ.

ಭಾರತದಲ್ಲಿ ಆಲಿಗೊಸೀನ್ ಕಾಲ ಹಿಮಾಲಯ ಪರ್ವತದ ಮೇಲೊಗೆತದ ಒಂದನೆಯ ಮತ್ತು ಎರಡನೆಯ ಹಂತಗಳ ಮಧ್ಯಕಾಲ. ಇಯೊಸೀನ್ ಕಲ್ಪದ ಅಂತ್ಯದಲ್ಲಿ ಟೆತಿಸ್ ಸಾಗರದ ನಿಕ್ಷೇಪಗಳು ಮೇಲೊಗೆಯಲ್ಪಟ್ಟು ಹಿಮಾಲಯ ಪರ್ವತಗಳ ಉದಯಕ್ಕೆ ನಾಂದಿಯಾಯಿತು. ಟೆತಿಸ್ ಸಾಗರದ ನಿಕ್ಷೇಪಗಳು ದಿಂಡುದಿಂಡಾಗಿ ಮಾಡಲ್ಪಟ್ಟಿದ್ದರಿಂದ ಸಾಗರ ದಕ್ಷಿಣಕ್ಕೆ ಹಿಂಜರಿದು, ಈಗಿನ ಬಲೂಚಿಸ್ತಾನ ಮತ್ತು ಸಿಂಧ್ ಪ್ರದೇಶದಲ್ಲಿ ಮಾತ್ರ ಉಳಿಯಿತು. ಪೂರ್ವದಲ್ಲಿ ಅಸ್ಸಾಂ ಮತ್ತು ಬರ್ಮಕ್ಕೆ ಮಧ್ಯೆ ಒಂದು ದೊಡ್ಡ ದಿಂಡುಂಟಾಗಿ, ಸಾಗರ ಇಬ್ಭಾಗವಾಗಿ ಅಸ್ಸಾಂ ಮತ್ತು ಬರ್ಮಗಳಲ್ಲಿ ದಕ್ಷಿಣದ ಸ್ವಲ್ಪ ಪ್ರದೇಶಗಳಲ್ಲಿ ಮಾತ್ರ ಉಳಿಯಿತು. ಆದ್ದರಿಂದ ಅಲಿಗೊಸೀನ್ ನಿಕ್ಷೇಪಗಳು ಈ ಪ್ರದೇಶದಲ್ಲಿ ಮಾತ್ರ ಕಾಣಸಿಗುತ್ತವೆ.

ಬಲೂಚಿಸ್ತಾನದಲ್ಲಿ ಅನೇಕ ಅಡಿಗಳಷ್ಟು ಮರಳುಶಿಲೆ ಮತ್ತು ಹಸಿರು ಬಣ್ಣದ ಮರಳು ಮಿಶ್ರಿತ ಜೇಡುಶಿಲೆಗಳು ನಿಕ್ಷೇಪಗೊಂಡಿವೆ. ಸ್ವಲ್ಪ ಸುಣ್ಣಶಿಲೆಯೂ ಇದೆ. ಈ ನಿಕ್ಷೇಪಗಳು ಆಲ್ಪ್ಸ್ ಪ್ರದೇಶದ ಆಲಿಗೊಸೀನ್ ಕಾಲದ ಫ್ಲಿಸ್ಚ್ ನಿಕ್ಷೇಪವನ್ನು ಹೋಲುವುವು. ಇವುಗಳಿಗೆ ಕೊಜಕ್ ಜೇಡುಶಿಲೆಗಳು ಎಂಬ ಹೆಸರಿದೆ. ಇವುಗಳಲ್ಲಿ ಜೀವಾವಶೇಷಗಳಿರುವುದು ಅತ್ಯಲ್ಪ. ಅಪೂರ್ವವಾಗಿ ಸಿಕ್ಕುವ ಶಂಖಗಳು ಆಲಿಗೊಸೀನ್ ಕಾಲವನ್ನು ಸೂಚಿಸುತ್ತವೆ. ಬಲೂಚಿಸ್ತಾನದ ನಿಕ್ಷೇಪಗಳಿಗಿಂತ ಸಿಂಧ್‌ನಲ್ಲಿರುವ ಆಲಿಗೊಸೀನ್ ನಿಕ್ಷೇಪಗಳು ಆಸಕ್ತಿಯನ್ನು ಕೆರಳಿಸುತ್ತವೆ. ಕಿರ್ಥಾರ್ ಶಿಲಾಶ್ರೇಣಿಯ ಮೇಲೆ ಅನುರೂಪತೆಯಿಂದ ನಿಕ್ಷೇಪಗೊಂಡಿರುವ ನಾರಿಶ್ರೇಣಿಯ ಕೆಳಭಾಗ ಈ ಕಾಲದ್ದು.

ಅಸ್ಸಾಂನಲ್ಲಿ ನಿಕ್ಷೇಪಗೊಂಡಿರುವ ಆಲಿಗೊಸೀನ್ ಶಿಲೆಗಳಿಗೆ ಬರೈಲ್ ಶಿಲಾಶ್ರೇಣಿ ಎಂಬ ಹೆಸರಿದೆ. ಇವುಗಳಲ್ಲಿ ಜೀವಾವಶೇಷಗಳು ಬಲು ವಿರಳ. ಈ ಶ್ರೇಣಿಯ ಮೇಲೆ ಅನನುರೂಪತೆಯಿಂದ ನಿಕ್ಷೇಪಗೊಂಡಿರುವ ಮಯೊಸೀನ್ ಶಿಲೆಗಳ ಆಧಾರದ ಮೇಲೆ ಇದರ ಕಾಲ ನಿಶ್ಚಯಿಸಲಾಗಿದೆ. ಬರ್ಮದ ಪೆಗು ಶಿಲಾಶ್ರೇಣಿ ಈ ಕಾಲಕ್ಕೆ ಸೇರಿದೆ. ಇವುಗಳಲ್ಲಿ ಜೀವಾವಶೇಷಗಳು ಹೇರಳ; ಅಲ್ಲದೆ ಇವು ತೈಲಾಶ್ರಯಗಳ ತವರು.

ಆಲಿಗೊಸೀನ್ ಯುಗ ಪ್ರಾರಂಭವಾಗುವ ವೇಳೆಗೆ ಕ್ರಿಯೊಡಾಂಟ ಶಾಖೆಯ ಒಂದು ಜಾತಿಯನ್ನುಳಿದು ಪ್ರಾಚೀನ ಸ್ತನಿಗಳೆಲ್ಲ ಗತವಂಶಿಗಳಾಗಿದ್ದುವು. ಮಾರ್ಸೂಪಿಯ ಮತ್ತು ಕೀಟಾಹಾರಿಗಳು ಪ್ರಾಮುಖ್ಯ ಹೊಂದಿರಲಿಲ್ಲ. ಆದರೆ ಪ್ರಗತಿಪರ ಸ್ತನಿಗಳು ಪ್ರಬಲವಾಗುತ್ತಿದ್ದುವು. ಮೂರು ಬೆರಳಿನ ಮೀಸೊಹಿಪ್ಪಸ್ ಮತ್ತು ಮಯೋಹಿಪ್ಪಸ್‌ಗಳು ಅತಿ ಸಾಮಾನ್ಯ ಕುದುರೆಗಳಾಗಿದ್ದುವು. ಓಡುವ, ದ್ವಿಚರ ಮತ್ತು ನಿಜ ಎಂಬ ಮೂರು ಜಾತಿಯ ಖಡ್ಗಮೃಗಗಳು ಆಲಿಗೊಸೀನ್ ಕಾಲಕ್ಕೆ ಸೀಮಿತಗೊಂಡಿವೆ. ಆದರೆ ಮೂರು ಜಾತಿಗಳಲ್ಲೂ ದೈತ್ಯಾಕಾರಿಗಳು ಉದಯಿಸಿದುವು. ದ್ವಿಚರ ಖಡ್ಗಮೃಗಗಳ ಗಾತ್ರ ಗಣನೀಯವಾದುದು. ಬಲೂಚಿಥೀರಿಯಂ ಎಂಬ ಖಡ್ಗಮೃಗ ಆಗಿನ ಇತರ ಎಲ್ಲ ಪ್ರಾಣಿಗಳಿಗಿಂತ ದೊಡ್ಡದಾಗಿತ್ತು. ಈ ಕಾಲದ ಯಾವ ಖಡ್ಗಮೃಗಕ್ಕೂ ಕೊಂಬುಗಳಿರಲಿಲ್ಲ. ಬಲೂಚಿಥೀರಿಯಂ ಖಡ್ಗಮೃಗವನ್ನು ಬಿಟ್ಟರೆ ಟೈಟನೊಥೀರ್‌ಗಳೇ ಅತಿಗಾತ್ರದ ಪ್ರಾಣಿಗಳಾಗಿದ್ದುವು. ಈ ಪ್ರಾಣಿಗಳು ಆಲಿಗೊಸೀನ್ ಯುಗದ ಅಂತ್ಯಕ್ಕೆ ಮೊದಲೇ ಆಶ್ಚರ್ಯಕರವಾದ ರೀತಿಯಲ್ಲಿ ನಿರ್ನಾಮವಾದುವು. ಕ್ರಿಯೊಡಾಂಟಗಳ ವಿಕಾಸದ ಉನ್ನತ ಶಿಖರವನ್ನು ಮುಟ್ಟಿದುವುಗಳಲ್ಲಿ ಒಂಟೆ, ಟಪೀರ್ , ಬೀವರ್, ಅಳಿಲು, ಮೊಲ ಮತ್ತು ಇಲಿಗಳೂ ಇದ್ದುವು. ನಾಯಿ, ಕಚ್ಚುವ ಮತ್ತು ಇರಿಯುವ ಬೆಕ್ಕುಗಳು ಈ ಕಾಲದ ಮುಖ್ಯ ಮಾಂಸಾಹಾರಿಗಳು. ಆಲಿಗೊಸೀನ್ ಕಾಲದಲ್ಲಿ ಯೂರೋಪಿನ ಸಸ್ಯವರ್ಗ, ಉಷ್ಣವಲಯದ ಗಿಡಮರಗಳು ಮತ್ತು ಶೀತವಲಯದ ಸಸ್ಯಗಳ ಮಿಶ್ರಣದಿಂದ ಕೂಡಿತ್ತು. ಆದರೆ ಯೂರಲ್ ಪರ್ವತ ಪ್ರದೇಶ ಮತ್ತು ಜಪಾನ್‌ಗಳು, ಉತ್ತರ ಅಮೆರಿಕ ಮತ್ತು ಯೂರೋಪುಗಳ ಅಕ್ಷಾಂಶಗಳಲ್ಲಿಯೇ ಇದ್ದರೂ ಆ ಪ್ರದೇಶಗಳಲ್ಲಿ ಸಮಶೀತೋಷ್ಣವಲಯದ

ಸಸ್ಯವರ್ಗ ಇದ್ದುದು ವ್ಯಕ್ತವಾಗಿದೆ. ಹೀಗೆ ಉತ್ತರಾರ್ಧಗೋಳದ ಪಶ್ಚಿಮದಲ್ಲಿ ಉಷ್ಣವಲಯದ ಸಸ್ಯಪ್ರಾಂತ್ಯವೂ ಪೂರ್ವದಲ್ಲಿ ಸಮಶೀತೋಷ್ಣವಲಯದ ಸಸ್ಯಪ್ರಾಂತ್ಯವೂ ಕಂಡು ಬರುತ್ತಿದ್ದುದೆಂದು ತಿಳಿಯಬಹುದು. ಸಿಂಧ್ ಪ್ರಾಂತ್ಯದಲ್ಲಿ ಆಲಿಗೊಸೀನ್ ಶಿಲೆಗಳಲ್ಲಿ ಸಮ್ಮುಲೈಟಿಸ್, ಇಂಟರ್‌ಮೀಡಿಯಸ್ ಮತ್ತು ಲೆಪಿಡೊಸೈಕ್ಲೈನ ಡಯಲೇಟ ಎಂಬ ಫೊರಾಮಿನಿಫೆರ್‌ಗಳ ಅವಶೇಷಗಳು ಹೇರಳವಾಗಿವೆ. ಮೊದಲನೆಯದು ಆಲಿಗೊಸೀನ್ ಸ್ತೋಮದ ಕೆಳಭಾಗದ ವಿಶಿಷ್ಟ ಅವಶೇಷ. ಇವೇ ಅಲ್ಲದೆ ಮಾಂಟ್ಲವಾಲ್ಲಿಯ ಎಂಬ ಹವಳ, ಸ್ಕೇಚಾಸ್ಟರ್, ಯೂಪೆಟಗಸ್ ಮತ್ತು ಕ್ಲೈಪಿಯಾಸ್ಟರ್ ಎಂಬ ಎಕಿನಾಯಿಡ್‌ಗಳು ಹೆಚ್ಚು ಸಂಖ್ಯೆಯಲ್ಲಿವೆ. ಅಲ್ಲದೆ ಆಸ್ಟ್ರಿಯ, ಲ್ಯೂಸಿನ, ಪೆಕ್ಟೆನ್, ವೀನಸ್ ಮೊದಲಾದ ಮೃದ್ವಂಗಿಗಳೂ ಇದ್ದವು ಎಂದು ತಿಳಿದುಬಂದಿದೆ. (ಡಿ.ಆರ್.)

**ಆಲ್ಬಟ್ರಾಸ್:** ಒಂದು ದೊಡ್ಡ ಬಲಿಷ್ಠ ಕಡಲ ಕೋಳಿ. ಪೆಟ್ರಲ್‌ಗಳಿಗೆ ಸಮೀಪ ಸಂಬಂಧಿಯಾದ ಪ್ರೊಸೆಲ್ಲರಿಫಾರ್ಮಿಸ್ ಗಣದಲ್ಲಿ ಡೈಯೋಮಿಡಿಡೆ ಕುಟುಂಬದ ಪಕ್ಷಿ. ಸ್ಪ್ಯಾನಿಷ್ ಬಾಷೆಯಲ್ಲಿ ಪೆಲಿಕನ್‌ಗೆ ಇರುವ ಆಲ್‌ಕಟ್ರಝ್ ಎಂಬ ಪದದ ವಿರೂಪವೇ ಆಲ್ಬಟ್ರಾಸ್. ವಿವಿಧ ಭಾಷೆಗಳಲ್ಲಿ ದಡ್ಡಕೋಳಿ (ಮೂಲಿ ಮಕ್), ಗೂನಿ, ಬೂಬಿ ಎಂಬ ಹೆಸರುಗಳು ಇದಕ್ಕುಂಟು; ಡೈಯೋಮಿಡಿಯ ಮತ್ತು ಫೋಬಿಟ್ರಿಯ ಎಂಬ 2 ಜಾತಿಗಳ 13 ಪ್ರಭೇದಗಳು ಆಲ್ಬಟ್ರಾಸ್ ಎನಿಸಿವೆ. ಇವುಗಳಲ್ಲಿ ಒಂದು ಭೂಮಧ್ಯಭಾಗದಲ್ಲೂ 3 ದಕ್ಷಿಣ ಪೆಸಿಫಿಕ್‌ನಲ್ಲೂ 9 ದಕ್ಷಿಣ ಶೀತ ಭಾಗದಲ್ಲೂ ಕಂಡು ಬರುತ್ತವೆ. ಸುಮಾರು 3.5 ಮೀ. ಅಗಲದ 8 ಕಿಗ್ರಾಂ ತೂಗುವ ಅಲೆಮಾರಿ ಆಲ್ಬಟ್ರಾಸ್ (ಡೈಯೋಮಿಡಿಯ ಎಕ್ಸುಲನ್ಸ್) ದೈತ್ಯ ಹಾಗೂ ಪ್ರಸಿದ್ಧವಾದುದು. ನ್ಯೂಜಿಲೆಂಡ್ ಮತ್ತು ದ. ಅಮೆರಿಕ ಸಾಗರಗಳಲ್ಲಿರುವ ರಾಯಲ್ ಆಲ್ಬಟ್ರಾಸ್ (ಡೈಯೋಮಿಡಿಯ ಎಪೊಮೋಮಾರ್ಫ) ಅಷ್ಟೇ ಹೆಸರುವಾಸಿಯಾಗಿದೆ. ಇವುಗಳ ಸಂಖ್ಯೆ ಸುಮಾರು 3,00,000 ಎಂದು ಅಂದಾಜು ಮಾಡಲಾಗಿದೆ.

ತನ್ನ ವಿಶಾಲದೇಹ ಮತ್ತು ವಿಶಿಷ್ಟ ಹಾರಾಟ ಸಾಮರ್ಥ್ಯದಿಂದ ಅನೇಕರ ಗಮನ ಸೆಳೆದಿದೆ. ಬಲಿಷ್ಠ ಶರೀರದಲ್ಲಿ ತಲೆ ಮತ್ತು ಕೊಕ್ಕು ದಪ್ಪವಾಗಿವೆ. ಬಲವಾದ ಮತ್ತು ಬಾಗಿದ ಕೊಕ್ಕು ಕೊಂಬಿನ ಪದಾರ್ಥವುಳ್ಳ ತಟ್ಟೆಗಳಿಂದ ರಕ್ಷಿತವಾಗಿದೆ. ಮೇಲ್ಭಾಗದ ಕೊಕ್ಕಿನ ಎರಡೂ ಕಡೆಗಳಿಗೆ ಹಬ್ಬಿರುವ ಒಂದು ಸಣ್ಣಕೊಳವೆಯಲ್ಲಿ ಮೂಗಿನ ಹೊಳ್ಳೆಗಳು ಉಪಸ್ಥಿತವಾಗಿವೆ. ಅತಿದೊಡ್ಡ ಮತ್ತು ಮೊನಚಾಗಿರುವ ರೆಕ್ಕೆಗಳ ತೋಳಿನ ಭಾಗ ಬಲವಾಗಿದ್ದು ಹಾರಾಟದ ಪುಕ್ಕಗಳು ಉದ್ದವಾಗಿವೆ. ಜೀವಂತವಾಗಿರುವ ಇನ್ನಾವುದೇ ಹಕ್ಕಿಗಿಂತ ಅಗಲವಾದ ರೆಕ್ಕೆಗಳು (ಸು. 200 ರಿಂದ 370 ಸೆಂಮೀ) ಇದಕ್ಕಿವೆ. ದೊಡ್ಡ ರೆಕ್ಕೆಗಳಿಂದ ಹಾರಾಡುವ ಪಕ್ಷಿಗಳಲ್ಲೇ ಭಾಗ್ಯಶಾಲಿಗಳಾದ ಆಲ್ಬಟ್ರಾಸ್ ಸಮುದ್ರದ ಮೇಲೆ ಅತಿ ಎತ್ತರದಲ್ಲಿ ಹಾರಬಲ್ಲವು ಮತ್ತು ಅನೇಕ ಗಂಟೆಗಳ ಕಾಲ ರೆಕ್ಕೆಗಳ ಬಡಿತವಿಲ್ಲದೆಯೇ ಗಾಳಿಯಲ್ಲಿರಬಲ್ಲವು. ಪುಕ್ಕಗಳ ಬಣ್ಣ ಬಿಳಿಮಿಶ್ರಿತ ಕಂದು ಅಥವಾ ಕಪ್ಪು. ಕಾಲುಗಳು ತೀರಾ ಹಿಂಭಾಗಕ್ಕಿರುವುದರಿಂದ ನಡೆಯಲಾರದೆ ಕಾಲೆಳೆದುಕೊಂಡು ಸಾಗುತ್ತವೆ. ಇದರಿಂದ ಭೂಮಿಯ ಮೇಲಿರುವಾಗ ವಕ್ರವಾಗಿ ಕಾಣುತ್ತವೆ. ಅದಕ್ಕೇ ಅವುಗಳನ್ನು ಗೂನಿ ಎನ್ನುವರು. ಹೆಬ್ಬೆರಳು ಕ್ಷೀಣಿಸಿದೆ ಅಥವಾ ಸಂಪೂರ್ಣವಾಗಿ ಇಲ್ಲದೇ ಇರಬಹುದು. ಬೆರಳುಗಳ ನಡುವೆ ಜಾಲಪಾದವಿದೆ. ಹಾರಾಡುವಾಗ ಬಾಲದಿಂದಾಚೆಗೂ ಕಾಲುಗಳನ್ನು ಚಾಚಿ ಸಮತೋಲನ ನಿಯಂತ್ರಕ ಅಥವ ರಡ್ಡರ್ ಆಗಿ ಬಳಸುತ್ತವೆ.

ಅನೇಕ ಆಲ್ಬಟ್ರಾಸ್‌ಗಳು ನೀರಿನ ಮೇಲೆ ಕುಳಿತಂತೆಯೇ ವಿಶ್ರಮಿಸುತ್ತವೆ. ಸ್ಕ್ವಿಡ್‌ಗಳು ಮೂಲಾಹಾರವಾದರೂ ಮೀನು, ಏಡಿ, ಪಕ್ಷಿಗಳನ್ನು ಆಹಾರವಾಗಿ ಸೇವಿಸಿ ನೀರು ಕುಡಿಯುತ್ತವೆ. ಸ್ವಾಭಾವಿಕವಾಗಿ ಸಮುದ್ರ ಜಾಡಮಾಲಿಯಂತೆ ಹಡಗುಗಳ ಸುತ್ತ ಹಾರಾಡುತ್ತ ಮೀನುಗಳನ್ನು ಆಯ್ದುಕೊಳ್ಳುವುದು, ಅಲ್ಲದೆ ಅನೇಕ ದಿನಗಳ ಕಾಲ ನೌಕೆಗಳನ್ನು ಹಿಂಬಾಲಿಸುವುದು ಇದರ ಸ್ವಭಾವ. ಅಧಿಕ ಲವಣ ಮತ್ತು ನೀರನ್ನು ನಾಸಿಕ ಗ್ರಂಥಿಗಳಿಂದ ಮತ್ತು ಬಾಯಿಯಿಂದ ಹೊರದೂಡುತ್ತವೆ. ಮರಿಗಳಂತೂ ಆಗಾಗ್ಗೆ ಇದನ್ನು ಉಗುಳುತ್ತಲೇ ಇರುತ್ತವೆ. ಬಾಯಿ ಮೂಗುಗಳಿಂದ ಜಿನುಗುವ ಈ ದ್ರವ ಅಸಹ್ಯವಾದುದು.

ಹೆಣ್ಣಿನಲ್ಲಿರುವ ಕಪ್ಪು ಜುಟ್ಟಿರುವ ಅಲೆಮಾರಿ ಆಲ್ಬಟ್ರಾಸನ್ನು ಬಿಟ್ಟರೆ ಉಳಿದುವುಗಳಲ್ಲಿ ಬಾಹ್ಯವಾಗಿ ಲಿಂಗವ್ಯತ್ಯಾಸ ಕಾಣದು. ಮೊಟ್ಟೆ ಇಡುವಾಗ ಸಾಮೂಹಿಕವಾಗಿ ಭೂಮಿಯಲ್ಲಿ ತೋಡಿ ಗೂಡುಕಟ್ಟುತ್ತವೆ. ನಿರ್ಜನ ದ್ವೀಪಗಳಲ್ಲಿ ಸೆಪ್ಟೆಂಬರ್‌ನಿಂದ ಫೆಬ್ರವರಿವರೆಗೆ ಮೊಟ್ಟೆ ಇಡುವಾಗ ಆಕರ್ಷಕ ಚಟುವಟಿಕೆ ಕಾಣುವುದು. ನಾನಾ ರೀತಿ ಕರಕರ ಶಬ್ದ ಮಾಡಿ ಗಂಡು ಹೆಣ್ಣಿನ ಸುತ್ತ ಸುತ್ತುವುದು. ಗಂಡು ಹೆಣ್ಣಿನ ಎತ್ತಿದ ಭುಜಗಳು ತಾಗದಂತೆ ಕತ್ತುಗಳನ್ನು ಎಡಬಲಗಳಿಗೆ ಕುಣಿಸಿ, ಕೊಕ್ಕುಗಳಿಂದ ಕಚ್ಚಾಡಿ, ತಲೆಬಗ್ಗಿಸಿ ಕೊನೆಗೆ ಒಂದಕ್ಕೊಂದು ಪುಕ್ಕ ನೇವರಿಸುತ್ತಾ ತೃಪ್ತಿ ಪಡೆಯುತ್ತದೆ. ಕಪ್ಪು ಮತ್ತು ಬಿಳಿಮಚ್ಚೆಗಳುಳ್ಳ ಸುಮಾರು 6 ಕೋಳಿಮೊಟ್ಟೆ ಗಾತ್ರದ ಒಂದು ಮೊಟ್ಟೆಯನ್ನು ಹೆಣ್ಣು ಇಡುವುದು. 65 ರಿಂದ 79 ದಿನಗಳ ಕಾಲ ಗಂಡು ಹೆಣ್ಣುಗಳೆರಡೂ ಮೊಟ್ಟೆಗೆ ಕಾವು ಕೊಡುತ್ತವೆ. ಮರಿಯನ್ನು ಜೋಡಿಗಳೆರಡೂ ಸುಮಾರು ಮೂರರಿಂದ ಐದು ವಾರಗಳ ಕಾಲ ರಕ್ಷಿಸುತ್ತವೆ. ಆಹಾರವನ್ನು ಅಗಿದು ಮರಿಗೆ ಉಣಿಸುತ್ತವೆ. ತಮ್ಮ ದೀರ್ಘಕಾಲದ ಹಾರಾಟದ ನಡುವೆ ಎರಡು ವರ್ಷಕ್ಕೊಮ್ಮೆ ಮರಿ ಮಾಡುತ್ತವೆ.

ಇವುಗಳ ವಲಸೆಯ ಅಧ್ಯಯನ ಬಹಳ ಆಳವಾಗಿ ನಡೆದಿರುವುದು. ಎಲ್ಲಿಗೇ ವಲಸೆ ಹೋದರೂ ತಮ್ಮ ಸ್ವಸ್ಥಾನಕ್ಕೆ ತಪ್ಪದೇ ಹಿಂದಿರುಗುತ್ತವೆ. ಲೇಸನ್ ಆಲ್ಬಟ್ರಾಸ್ ಎಂಬುದು 2500 ರಿಂದ 6000 ಕಿ.ಮೀ. ಗಳವರೆಗೆ ಹಾರಿದ್ದ ದಾಖಲಾತಿ ಮಾಡಲಾಗಿದೆ. 1847 ರಲ್ಲೇ ಚಿಲಿ ತೀರದಿಂದ ಅಲೆಮಾರಿ ಆಲ್ಬಟ್ರಾಸ್ (ಡೈಯೋಮಿಡಿಯ ಎಕ್ಸುಲೆನ್ಸ್) ಎಂಬುದು 12 ದಿನಗಳಲ್ಲಿ 5000 ಕಿ.ಮೀ. ದೂರ ಹಾರಿದ್ದು ಕಂಡು ಬಂದಿದೆ. ಉತ್ತರ ಪೆಸಿಫಿಕ್ ಸಾಗರದ ಮಿಡ್‌ವೇ ದ್ವೀಪದಿಂದ 18 ಆಲ್ಬಟ್ರಾಸ್‌ಗಳನ್ನು ವಿಮಾನದಲ್ಲಿ ವಿವಿಧ ಪ್ರದೇಶಗಳಿಗೆ ಸಾಗಿಸಿದ್ದರೂ ಅವುಗಳಲ್ಲಿ 14, ದಿನಕ್ಕೆ 200–500 ಕಿ.ಮೀ. ವೇಗದಲ್ಲಿ ಕೆಲವು 6500 ಕಿ.ಮೀ. ಮೈಲಿಗಳಿಂದ ಹಿಂತಿರುಗಿದ್ದನ್ನೂ ಗಮನಿಸಲಾಗಿದೆ.

ಆಲ್ಬಟ್ರಾಸ್ ನಾಶಗೊಂಡರೆ ದುರಾದೃಷ್ಟವೆಂಬ ತಪ್ಪು ಕಲ್ಪನೆಯೂ ಇತ್ತು. ಆದರೂ ದೀರ್ಘ ನೌಕಾಯಾನ ಕಾಲದಲ್ಲಿ ಉದ್ದವಾದ ಕೊಕ್ಕೆಯಿಂದ ಅವಗಳನ್ನು ಬೇಟೆಯಾಡಿ ನಲಿಯುವ ಚಪಲವಿತ್ತು. ಅದರ ಚರ್ಮ, ಜಾಲಪಾದವನ್ನು ಉಂಗುರ, ತಂಬಾಕು ಚೀಲ ಮುಂತಾದವುಗಳಾಗಿ ಬಳಸುವುದುಂಟು. ಇವುಗಳ ಉದ್ದಕೊಳವೆಯಂತಹ ಮೂಳೆಗಳನ್ನು ಕೊಳವೆಗಳಾಗಿ ಉಪಯೋಗಿಸುವರು. ಪುಕ್ಕಕ್ಕಾಗಿ ಆಲ್ಬಟ್ರಾಸ್‌ಗಳು ಮರಿಮಾಡುವ ಗುಂಪಿಗೆ ಆಗ್ಗಾಗ್ಗೆ ನುಗ್ಗಿ ಅವು ತೀರಾ ವಿರಳವಾಗುಷ್ಟರ ಮಟ್ಟಿಗೆ ಬೇಟೆಯಾಡಿದ್ದಾರೆ.

(ಕೆ.ಎಸ್.ಪಿ)

**ಆಲ್ಬಟ್‌ರ್ಟ್, ಸರ್ ಥಾಮಸ್ ಕ್ಲಿಫರ್ಡ್** (೧೮೩೬–೧೯೨೫): ಇಂಗ್ಲಿಷ್ ವೈದ್ಯ. ಮಹಾಗ್ರಂಥವಾದ ವೈದ್ಯಸೂತ್ರ ವಿಧಾನಗಳನ್ನು ೮ ಸಂಪುಟಗಳಲ್ಲಿ ಸಂಪಾದಿಸಿ (೧೮೯೬–೧೮೯೯) ಕೀರ್ತಿ ಪಡೆದ. ಈ ಮಹಾಗ್ರಂಥ ಹಲವಾರು ಬಾರಿ ಮರುಮುದ್ರಣ ಕಂಡಿತು. ವೈದ್ಯಶಾಸ್ತ್ರಕ್ಕೆ ಇವನ ಹಲವಾರು ಕೊಡುಗೆಗಳಿವೆ. ಹಿಂದೆ ೬೦ ಸೆಂಮೀ ಗಳಷ್ಟು ನೀಳವಾಗಿದ್ದ



ಮೈ ಉಷ್ಣಮಾಪಕವನ್ನು ಈಗಿರುವ ಸಣ್ಣ ಆಕಾರದಲ್ಲಿ ತಂದವನೀತ (೧೮೬೬). ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ (೧೮೮೦). ಹಾಗೇ ವೈದ್ಯ ರಾಯಲ್ ಕಾಲೇಜಿನಲ್ಲೂ ಫೆಲೋಷಿಪ್ ಪಡೆದ (೧೮೮೩). ಪ್ರಪಂಚದಲ್ಲಿ ಮೊಟ್ಟಮೊದಲಾಗಿ, ಉಪದಂಶ (ಸಿಫಿಲಿಸ್) ರೋಗದಲ್ಲಿ ಮಿದುಳಿನ ಧಮನಿಗಳ ವ್ಯತ್ಯಾಸಗಳು (೧೮೬೮), ಧಮನಿಗಳ ರೋಗಗಳು–ಇವನ್ನು ಕುರಿತ ಎರಡು ಸಂಪುಟಗಳನ್ನು ಪ್ರಕಟಿಸಿದ (೧೯೧೫). ಗುಂಡಿಗೆಯಿಂದೇಳುವ ಎದೆಶೂಲೆಗೆ ಅದರ ಧಮನಿಗಳು ಅಮುಕಿ ಕುಗ್ಗುವುದೇ ಕಾರಣವೆಂದು ಮೊದಲು ಹೇಳಿದ (೧೯೧೫). ಆಳವಾದ ಅಭ್ಯಾಸ, ಅನುಭವಗಳಿಂದ, ಒಳಾಂಗಗಳ ನರಬೇನೆಗಳು (೧೮೮೪), ಸಾಮಾನ್ಯ ಮನೋರೋಗಗಳು (೧೮೯೧) ಎಂಬ ವಿಷಯಗಳ ಮೇಲೆ ಈತ ಮಾಡಿದ ಭಾಷಣಗಳು ಅಚ್ಚಾಗಿವೆ. ಕೊರಳಲ್ಲೇಳುವ ಕ್ಷಯದ ಗಡ್ಡೆಗಳನ್ನು

ಕೊಯ್ದುತೆಗೆವ ವಿಧಾನವನ್ನು ಮೊದಲು (೧೮೮೫) ವಿವರಿಸಿದ. ನರಗಳ, ಮೂತ್ರಪಿಂಡಗಳ ರೋಗಗಳಲ್ಲಿ ಕೆಟ್ಟಿರುವುದನ್ನು ಕಣ್ಣಿನಿಂದ ನೋಡುವ ಕಣ್ಣುದರ್ಶಕದ ಬಳಕೆ ಜಾರಿಗೆ ತಂದ (೧೮೭೧). ವೈದ್ಯಚರಿತ್ರೆಯನ್ನು ಆಳವಾಗಿ ಅಭ್ಯಾಸಮಾಡಿದ್ದ ಆಲ್ಬರ್ಟ್, ಸರ್ ಥಾಮಸ್ ಕ್ಲಿಫರ್ಡ್ ಅದರಲ್ಲಿ ಪರಿಣತ ಎನ್ನಿಸಿಕೊಂಡಿದ್ದ. ***

**ಆಲ್ಬ್ಯುಮೆನ್:** ಆಲ್ಬ್ಯುಮೆನ್ ಎನ್ನುವುದು ಜಿಗುಟಾದ ಹರಳೆಣ್ಣೆಯಂಥ ದ್ರವವು ಅಲ್ಲದ, ಘನವು ಅಲ್ಲದ, ಸಾಮಾನ್ಯವಾಗಿ ಕೋಳಿ ಮೊಟ್ಟೆಯಲ್ಲಿ ಕಂಡು ಬರುವ ಬಿಳಿಭಾಗ. ಪ್ರೋಟೀನುಗಳಲ್ಲಿ ಆಲ್ಬ್ಯುಮೆನ್ಸ್ ಎಂಬ ವರ್ಗಕ್ಕೆ ಇದು ಸೇರುತ್ತದೆ. ಇದರಲ್ಲಿ ನಿರ್ದಿಷ್ಟವಾದ ಪ್ರಮಾಣದಲ್ಲಿ ಇಂಗಾಲ, ಆಮ್ಲಜನಕ, ಜಲಜನಕ, ಸಾರಜನಕ ಮತ್ತು ಗಂಧಕಗಳಿರುತ್ತವೆ. ಈ ವಸ್ತುವನ್ನು ಬಿಸಿಮಾಡಿದಾಗ ಗಟ್ಟಿಯಾಗುತ್ತದೆ. ಆಲ್ಬ್ಯುಮೆನ್ ಹೆಚ್ಚಾಗಿ ಮೊಟ್ಟೆಯಲ್ಲಿರುವ ಶ್ವೇತಭಾಗದ ರೂಪದಲ್ಲಿರುತ್ತದೆ. ಇದನ್ನು ಓವಾಲ್ಬ್ಯುಮೆನ್ ಎಂದೂ ಕರೆಯುತ್ತಾರೆ. ರಕ್ತದಲ್ಲಿನ ಆಲ್ಬ್ಯುಮೆನ್‌ಗೆ ಸೀರಮ್ ಆಲ್ಬ್ಯುಮೆನ್ ಮತ್ತು ಹಾಲಿನಲ್ಲಿರುವುದಕ್ಕೆ ಲ್ಯಾಕ್ಟಾಲ್ಬ್ಯುಮೆನ್ ಎಂದೂ ಹೆಸರು. ಕೋಳಿಮೊಟ್ಟೆಯಲ್ಲಿರುವ ಆಲ್ಬ್ಯುಮೆನ್‌ನಲ್ಲಿ ಓವಾಲ್ಬುಮೆನ್, ಎನಾಲ್ಬುಮೆನ್, ಓವೋಮ್ಯೂಕಾಯ್ಡ್ ಮತ್ತು ಓವೊಮ್ಯೂಸಿನ್ ಎಂಬ ನಾಲ್ಕು ಬಗೆಯ ಪ್ರೋಟೀನುಗಳಿವೆ. ಓವಾಲ್ಬುಮೆನ್ 77%, ಎನಾಲ್ಬುಮೆನ್ 3% ಹಾಗು ಓವೊಮ್ಯುಕಾಯ್ಡ 13% ಭಾಗವೂ, ಓವೊಮ್ಯೂಸಿನ್ 7% ಭಾಗ ಹಾಗು ಓವೊಗ್ಲೊಬುಲಿನ್ ಅತ್ಯಲ್ಪ ಭಾಗವೂ ಇರುತ್ತವೆ. ಮೇಲಿನ ವಸ್ತುಗಳ ಮಿಶ್ರಣದಿಂದಾಗಿ ಮೊಟ್ಟೆಯ ಆಲ್ಬ್ಯುಮೆನ್ ಬಿಳಿ ಲೋಳೆಯಾಗಿರುತ್ತದೆ.

ಆಲ್ಬ್ಯುಮೆನ್ ಸಾಮಾನ್ಯವಾಗಿ ಪಕ್ಷಿಗಳ, ಕೆಲವು ಸರೀಸೃಪಗಳ (ಉದಾ: ಮೊಸಳೆ ಮತ್ತು ಆಮೆ) ಹಾಗು ದ್ವಿಚರಿಗಳ ಮೊಟ್ಟೆಗಳಲ್ಲಿ ಅಧಿಕ ಪ್ರಮಾಣದಲ್ಲಿರುತ್ತದೆ. ಸರೀಸೃಪಗಳಲ್ಲಿ ಮತ್ತು ಪಕ್ಷಿಗಳ ಭ್ರೂಣಕ್ಕೆ ಇದು ನೀರಿನ ಸಂಗ್ರಹಾಲಯವಾಗಿ ವರ್ತಿಸುತ್ತದೆ. ಈ ಪ್ರಾಣಿಗಳ ಸಂತಾನೋತ್ಪತ್ತಿಯಲ್ಲಿ ಇದು ಒಂದು ಗಮನಾರ್ಹವಾದ ಬದಲಾವಣೆಯಾಗಿದೆ. ಪ್ರಾಣಿಗಳು ನೀರಿನಿಂದ ಹೊರಬಂದು ನೆಲದ ಮೇಲೆ ವಾಸಿಸಲು ಪ್ರಾರಂಭವಾದ ಮೇಲೆ ಸಂತಾನಾಭಿವೃದ್ಧಿಗಾಗಿ ಮೊಟ್ಟೆಯಿಟ್ಟಾಗ, ಭ್ರೂಣಕ್ಕೆ ಬೇಕಾದ ಆಹಾರ, ನೀರು ಮುಂತಾದವುಗಳನ್ನೂ ಅವುಗಳ ಬೆಳವಣಿಗೆಗಾಗಿ ಮೊಟ್ಟೆಯೊಳಗಿಡಲು ಪ್ರಾರಂಭಿಸಿದವು. ಆದುದರಿಂದ ಈ ಪ್ರಾಣಿಗಳಲ್ಲಿ ಯಾವಾಗಲು ಅಂಡಾಣುವು ಆಲ್ಬ್ಯುಮೆನ್‌ನಿಂದ ಆವೃತವಾಗಿರುತ್ತದೆ. ಪಕ್ಷಿಗಳ ಮೊಟ್ಟೆಗಳಲ್ಲಿ ಆಲ್ಬ್ಯುಮೆನ್‌ನ ಎರಡು ಪದರಗಳಿರುತ್ತದೆ. ಒಳ ಪದರದ ಎರಡು ತುದಿಗಳು ತಿರುಚಿಕೊಂಡು ಶಿಲಾಜೆ ಎಂಬ ರಚನೆಯಾಗುತ್ತದೆ.

ಆಲ್ಬ್ಯುಮೆನ್ ಅನ್ನು ಉತ್ಪತ್ತಿ ಮಾಡಲು ಅಂಡನಾಳಗಳಲ್ಲಿ ಗ್ರಂಥಿಗಳಿರುತ್ತವೆ. ದ್ವಿಚರಿಗಳಲ್ಲಿ ಅಂಡನಾಳಗಳ ಭಿತ್ತಿಯು ಗ್ರಂಥಿರೂಪದಲ್ಲಿದ್ದು, ಅಂಡಾಣುಗಳು ಇವುಗಳ ಮೂಲಕ ಹಾದು ಹೋಗುವಾಗ ಇವು ಆಲ್ಬ್ಯುಮೆನ್ ಅನ್ನು ಸ್ರವಿಸಿ ಮೊಟ್ಟೆಗಳಿಗೆ ಲೇಪಿಸುತ್ತವೆ. ಪಕ್ಷಿಗಳಲ್ಲಿ ಎಡಭಾಗದ ಅಂಡನಾಳದ ಮೇಲ್ಭಾಗದಲ್ಲಿ ನೀಳವಾದ ನಳಿಕಾರೂಪದ ಗ್ರಂಥಿಗಳು ಆಲ್ಬ್ಯುಮೆನ್ ಅನ್ನು ಉತ್ಪತ್ತಿ ಮಾಡುತ್ತವೆ. ಓವಾಲ್ಬುಮೆನ್ ಸ್ರವಿಕೆಯು ಅಂಡಾಶಯಲ್ಲಿ ಉತ್ಪತ್ತಿಯಾಗುವ ಎಸ್ಟ್ರೋಜನ್ ಹಾರ್ಮೋನಿನ ಪ್ರಭಾವದಿಂದಾಗುತ್ತದೆ. ಸ್ತನಿಗಳಲ್ಲಿ ಪ್ರಾಚೀನ ಗುಣಲಕ್ಷಣಗಳನ್ನೊಳಗೊಂಡ ಕೆಲ ಪ್ರಾಣಿಗಳ ಮೊಟ್ಟೆಗಳು ಸ್ವಲ್ಪ ಆಲ್ಬ್ಯುಮೆನ್‌ನಿಂದ ಆವೃತವಾಗಿರುತ್ತವೆ. ಒಪೋಸಮ್ ಮತ್ತು ಮೊಲಗಳಲ್ಲಿ ಸಹ ಒಂದು ತೆಳುವಾದ ಆಲ್ಬ್ಯುಮೆನ್ ಪದರವು ಗ್ರಾಫಿಯನ್ ಫೊಲಿಕಲ್ ಮೇಲೆ ಲೇಪಿತವಾಗುತ್ತದೆ.

(ಎಂ.ವಿ.ಸಿ./ಎಲ್.ಎಸ್.ಜಿ.)

**ಆವಾಸಗಳು:** ಒಂದು ಜೀವಿಯು ವಾಸಿಸುವ ಸ್ಥಳ. ಜೀವಿಯ ಸ್ವಾಭಾವಿಕ ಮನೆ ಎನ್ನಬಹುದು. ಅಂದರೆ, ಒಂದು ಜೀವಿಯನ್ನು ನಾವು ಸಂಗ್ರಹಿಸಬೇಕಾದಲ್ಲಿ ಅಥವಾ ನೋಡಬೇಕಾದಲ್ಲಿ ಹುಡುಕ ತಕ್ಕ ಸ್ಥಳ. ಸರಳವಾಗಿ ಹೇಳುವುದಾದರೆ ಇದನ್ನು ನಾವು ಜೀವಿಯ ವಿಳಾಸವೆಂತಲೂ ಹೇಳಬಹುದು. ಈ ಪದವು ಹ್ಯಾಬಿಟರ್ ಎಂದರೆ ವಾಸಿಸಲು ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಆವಾಸದಲ್ಲಿ, ಆ ಭಾಗದಲ್ಲಿರುವ ವಾತಾವರಣದಲ್ಲಿರುವ ಎಲ್ಲ ಲಕ್ಷಣಗಳೂ ಸೇರಿರುತ್ತವೆ. ಆದರೆ ಈ ಪದವನ್ನು ಮುಖ್ಯವಾಗಿ ಭೌತಿಕ ಲಕ್ಷಣಗಳಾದ ಸ್ಥಳವರ್ಣನೆ, ನೀರಿನ ಲಭ್ಯತೆ ಮತ್ತು ಹವೆ ಮುಂತಾದವುಗಳಿಗೆ ಉಪಯೋಗಿಸಿದರೂ, ಅಲ್ಲಿರುವ ಸಸ್ಯ ಹಾಗೂ ಪ್ರಾಣಿ ಸಮುದಾಯಗಳೂ ಕೂಡಾ ಮುಖ್ಯ ಘಟಕಗಳಾಗಿವೆ. ಒಂದು ಆವಾಸವನ್ನು ಅಭ್ಯಸಿಸುವಾಗ ಅಲ್ಲಿರುವ ಜೀವಿಗಳ ಹಾಗೂ ಭೌತಿಕ ಘಟಕಗಳ ಪರಿಚಯ ನಮಗಾಗುತ್ತದೆ. ಭೂಗ್ರಹದಲ್ಲಿ ಮುಖ್ಯವಾಗಿ ಕಡಲು, ಅಳಿವೆ, ಸಿಹಿನೀರು, ಮತ್ತು ನೆಲಗಳೆಂಬ 4 ಪ್ರಧಾನ ಆವಾಸಗಳಿವೆ. ಪ್ರತೀ ಆವಾಸದಲ್ಲಿ ಭಿನ್ನ ಭಿನ್ನವಾದ ಭೌತಿಕ ಹಾಗೂ ರಾಸಾಯನಿಕ ಘಟಕಗಳಿದ್ದು ಇಲ್ಲಿ ವಾಸಿಸುವ ಜೀವಿಗಳು ಈ ಪರಿಸ್ಥಿತಿಗಳಿಗೆ ತಕ್ಕಂತೆ ಹೊಂದಿಕೊಂಡಿರಬೇಕು. ಈ ಎಲ್ಲ ಅವಾಸಗಳಲ್ಲಿ ಜಲ ಅಥವಾ ವಾಯು ಮಾಧ್ಯಮವಾಗಿರುತ್ತದೆ.

ಕಡಲು ಮತ್ತು ನೆಲಕ್ಕೆ ಹೋಲಿಸಿದಾಗ ಸಿಹಿನೀರಿನ ಆವಾಸವು ಬಹಳ ಸ್ವಲ್ಪಾಂಶ ಮಾತ್ರವಿದ್ದು ಮಾನವನಿಗೆ ಸುಲಭ ಭೇದ್ಯವಾಗಿವೆ. ಅಲ್ಲಿರುವ ಜೀವರಾಶಿಗಳ ಸಂಖ್ಯೆ ಮತ್ತು ವೈವಿಧ್ಯಗಳೂ ಕಡಿಮೆ. ಅಳಿವೆಯಲ್ಲಿ ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಭೌತಿಕ ಘಟಕಗಳಿದ್ದು ಈ ಘಟಕಗಳೂ ಇಲ್ಲಿ ವಾಸಿಸುವ ಜೀವಿಗಳನ್ನು ನಿರ್ಧರಿಸುತ್ತವೆ. ಕಡಲು ಒಂದು ವಿಸ್ತಾರವಾದ ವಾಸಸ್ಥಾನವಾಗಿದ್ದು ಭೂಗ್ರಹದ ಸಿಂಹಪಾಲನ್ನು ಆಕ್ರಮಿಸಿಕೊಂಡಿದೆ. ಮೇಲಿನ ಮೂರು ಆವಾಸ ಸ್ಥಾನಗಳಲ್ಲಿ ಜಲವು ಮಾಧ್ಯಮವಾದರೆ, ನೆಲದಲ್ಲಿ ವಾಯು ಮಾಧ್ಯಮವಾಗಿದ್ದು ಇಲ್ಲಿ ಈ ಮೊದಲು ಕಂಡ ಆವಾಸಗಳಿಗಿಂತ ಭಿನ್ನವಾದ ಭೌತಿಕ ಘಟಕಗಳಿವೆ ಹಾಗೂ ಅವುಗಳಿಗನುಗುಣವಾದ ಜೀವರಾಶಿಗಳನ್ನೂ ಇಲ್ಲಿ ಕಾಣಬಹುದು.

(ಎಂ.ಎನ್.ಎಂ.)

**ಆಸ್ಟಕಸ್:** ಜಗತ್ತಿನಾದ್ಯಂತ ಸಿಹಿನೀರಿನ ಕೊಳಗಳು, ಸರೋವರಗಳು, ಹೊಳೆ, ನದಿಗಳಲ್ಲಿ ವಾಸಿಸುವ ನಳ್ಳಿ, ಆಸ್ಟಕಸ್ ಫ್ಲೂವಿಯೇಟಲಸ್ ಎಂಬುದು ಸಾಮಾನ್ಯ ಪ್ರಭೇದ. ಡೆಕಾಪೊಡ ಗಣದ, ಮ್ಯಾಕ್ರೂರ ಉಪಗಣದ, ಬಹುಮಟ್ಟಿಗೆ ರಚನೆಯಲ್ಲಿ ಸೀಗಡಿಯನ್ನೇ ಹೋಲುವ ಕಠಿಣಚರ್ಮಿ. ಆದರೂ ಸೀಗಡಿಯಿಂದ ಕೆಲವೊಂದು ಲಕ್ಷಣಗಳಲ್ಲಿ ಸ್ಪಷ್ಟವಾಗಿ ಭಿನ್ನವಾಗಿದೆ. 5. ಸೆಂಮೀ. ಉದ್ದ ಬೆಳೆಯುತ್ತದೆ. ಉದರ ಭಾಗಕ್ಕೆ ಹೋಲಿಸಿದರೆ ಶಿರೋಕ್ಷ ಭಾಗವು ತುಂಬಾ ದೊಡ್ಡದು. ಮೂತಿಯಲ್ಲಿ ಪಕ್ಕದ ಮುಳ್ಳುಹಲ್ಲುಗಳಿಲ್ಲ. ಮೊದಲ ಮೂರು ಜೊತೆ ವಕ್ಷದ ನಡಿಗೆ ಕಾಲುಗಳಿವೆ. ಕೀಲುಗಳಿದ್ದು, ಮೊದಲ ಜೊತೆ ಪ್ರಬಲವಾಗಿದೆ. ನೀರಿನ ತಳದಲ್ಲಿ ಬಿಲ ತೋಡಿ ವಾಸಿಸುತ್ತದೆ. ಸಣ್ಣ ಪುಟ್ಟ ಮೀನುಗಳು ಮತ್ತು ಇತರ ಪ್ರಾಣಿಗಳನ್ನು ತಿಂದು ಬದುಕುತ್ತದೆ. ಕೆಲಿಪೆಡ್‌ಗಳನ್ನು ಆತ್ಮರಕ್ಷಣೆ ಮತ್ತು ಆಕ್ರಮಣಗಳಿಗಾಗಿ ಬಳಸುತ್ತದೆ. ಇದು ಭಿನ್ನಲಿಂಗಿ. ದೇಹದ ಹೊರಗೆ ನಿಷೇಚನ ನಡೆಯುತ್ತದೆ. ಮೊಟ್ಟೆಗಳನ್ನು ಹೆಣ್ಣು ಹೊತ್ತು ತಿರುಗುತ್ತದೆ. ಅವನ್ನು ಪ್ಲಿಯೊಪಾಡ್‌ಗಳ ಸುತ್ತ ಸುತ್ತಿಕೊಳ್ಳುತ್ತದೆ. ಬೆಳೆವಣಿಗೆಯಲ್ಲಿ ಲಾರ್ವ ಅವಸ್ಥೆ ಇಲ್ಲ. ನೇರವಾದ ಬೆಳೆವಣಿಗೆ ನಡೆಯುತ್ತದೆ.

(ಎಚ್.ಎಚ್.ಎಸ್.)

**ಆಸ್ಟಿಯೋಸ್ಟ್ರೇಸಿ:** ಕಾರ್ಡೇಟಾ ವಂಶಕ್ಕೆ ಸೇರಿದ ನಶಿಸಿಹೋಗಿರುವಂತಹ ದವಡೆರಹಿತ ಪ್ರಾಣಿಗಳ ಸೆಫಲಾಸ್ಪಿಡೊಮಾರ್ಫಿ ವರ್ಗದ ಒಂದು ಉಪವರ್ಗ. ಈ ವರ್ಗಕ್ಕೆ ಸೇರಿದ ಪಳೆಯುಳಿಕೆಗಳು (ಉದಾ: ಸೆಫಲ್ಯಾಸ್ಪಿಸ್) ಸೈಲೂರಿಯನ್ ಮತ್ತು ಡಿವೋನಿಯನ್ ಕಾಲದ ನದೀತೀರಗಳಲ್ಲಿ ಸಿಕ್ಕಿವೆ. ಇವು ಬಹಳ ಹಳೇಕಾಲದ ಮತ್ತು ಬಹಳ ಅಪರೂಪವಾದ ಕಶೇರುಕಗಳ ಪಳಿಯುಳಿಕೆಗಳು. ಸೈಕ್ಲೋಸ್ಟೋಮೇಟ ಎಂಬ ಜಾತಿಯ ಕಶೇರುಕಗಳಿಗೆ ಬಹಳ ಹತ್ತಿರದ ಸಂಬಂಧದ ಚಿಹ್ನೆಗಳನ್ನು ತೋರಿಸುತ್ತವೆ. ಸ್ಟೆನ್‌ಸಿಯೊ (1932) ಎಂಬ ತಜ್ಞನು ಈ ಪಳಿಯುಳಿಕೆಗಳನ್ನು ಅಭ್ಯಸಿಸಿ ಈ ಬಗ್ಗೆ ಸಾಕಷ್ಟು ವಿವರಗಳನ್ನು ನೀಡಿದ್ದಾನೆ. ಇವುಗಳ ಅಂಗಾಂಗಗಳ ಮೇಲ್ಭಾಗವು ಗುರಾಣಿಯಂಥ ಮೂಳೆಯಲ್ಲಿ ಮುಚ್ಚಲ್ಪಟ್ಟಿದ್ದು ಕೆಳಭಾಗದಲ್ಲಿ ಮಿದುಳಿನ, ರಜ್ಜಿನ ಮತ್ತು ಜಲಶ್ವಾಸಾಂಗಗಳ ಉಪಕರಣಗಳ ಅಚ್ಚುಗಳು ಬಹಳ ಸ್ಪಷ್ಟವಾಗಿ ಕಾಣಿಸಿವೆ. ನೋಡುವುದಕ್ಕೆ ಮೀನಿನಹಾಗೆ ಇದ್ದು ವಿಷಮವೃತ್ತಾಕಾರದ (ಮೇಲಕ್ಕೆ ತಿರುಗಿದ) ಬಾಲದ ಈಜುರೆಕ್ಕೆ (ಹೆಟರೋಸರ್ಕಲ್) ಇದೆ. ಮೈಮೇಲೆ ಭಾರವಾದ ಮೂಳೆಗಳ ತೊಗಲು ಉಂಟು. ಒಂದು ಜೊತೆ ತೂಗಾಡುವಂಥ ಚಪ್ಪಟೆಯಾದ ಅಂಗವು ಕಿವಿರುಗಳ ಹಿಂದೆ ಕಂಡುಬರುತ್ತದೆ. ಬಹುಶಃ ಇವುಗಳು ಎದೆಯ ಈಜುರೆಕ್ಕೆಗಳನ್ನು ನಿರೂಪಿಸುತ್ತವೆ. ಆದರೆ ಇವುಗಳಲ್ಲಿ ಕಿಬ್ಬೊಟ್ಟೆಯ ಈಜುರೆಕ್ಕೆ ಗುರುತು ಇಲ್ಲ. ಈ ಪ್ರಾಣಿಗಳ ಮಿದುಳು ಸೈಕ್ಲೋಸ್ಟೋಮ್‌ಗಳ ಮಿದುಳನ್ನು ಹೋಲುತ್ತದೆ. ನೋಡಿ–ಆಸ್ತ್ರಕೋಡರ್ಮಿ. (ಕೆ.ಆರ್.ಕೆ)

**ಆಸ್ಟೆರಾಯ್ಡಿಯ:** ಅಕಶೇರುಕಪ್ರಾಣಿಗಳ ಗುಂಪಿನ ಕಂಟಕಚರ್ಮಿ (ಎಕಿನೊಡರ್ಮ್) ವಂಶದ ಐದು ವರ್ಗಗಳಲ್ಲಿ ಒಂದು. ಆಸ್ಟೆರಾಯ್ಡಿಯ ಪ್ರಾಣಿಗಳ ಶರೀರ ನಕ್ಷತ್ರಗಳನ್ನೇ ಹೋಲುವುದರಿಂದ ಇವುಗಳಿಗೆ ನಕ್ಷತ್ರಮೀನುಗಳು (ಸ್ಟಾರ್ ಫಿಶ್), ಕಡಲು ನಕ್ಷತ್ರಗಳು ಎಂಬ ರೂಢನಾಮಗಳೂ ಇವೆ. ಚರ್ಮ ಸುಣ್ಣಮಿಶ್ರಿತ ತಟ್ಟೆಗಳಂಥ ರಚನೆಗಳಿಂದ ಆವೃತವಾಗಿ ಗಟ್ಟಿಯಾಗಿದೆ. ಆಸ್ಟೆರಿಯಾಸ್ ಎಂಬ ನಕ್ಷತ್ರಮೀನಿಗೆ ಈ ವರ್ಗದ ಮುಖ್ಯ ಲಕ್ಷಣಗಳೆಲ್ಲವೂ ಇವೆ. ಇದರ ಮಧ್ಯಭಾಗದಲ್ಲಿ ಪಂಚಭುಜಾಕೃತಿಯ ತಟ್ಟೆ ಇದೆ. ಇದಕ್ಕೆ ಹೊಂದಿಕೊಂಡು ಐದು ತೋಳುಗಳಿವೆ. ತೋಳುಗಳು ಶರೀರದ ಮಧ್ಯದ ತಟ್ಟೆಯಿಂದ ಬೆಳೆದುಬಂದಿರುವ ಗುರುತು ಸ್ಫುಟವಾಗಿ ಕಾಣುವುದಿಲ್ಲ. ಸ್ಪಷ್ಟವಾದ ಮುಖ ಮತ್ತು ವಿಮುಖ ಮೇಲ್ಮೈಯನ್ನು ಕಾಣಬಹುದು. ಮುಖಮೇಲ್ಮೈ (ಓರಲ್ ಸರ್ಫೇಸ್) ಕೆಳಕ್ಕಿದ್ದು, ಬಾಯಿಯನ್ನು ಹೊಂದಿದೆ. ಅದರ ಸುತ್ತಲೂ ಅತ್ಯಂತ ಚಿಕ್ಕ ಚಿಕ್ಕ ಮುಳ್ಳಿನೋಪಾದಿಯ ರಚನೆಗಳಿವೆ. ಜಠರ ಚೀಲದಂತೆ. ಅದು ತಟ್ಟೆಯಂತಿರುವ ಶರೀರದ ಬಹುಭಾಗವನ್ನು ಆಕ್ರಮಿಸಿದೆ. ಬಾಯಿಯಿಂದ ಪ್ರತಿತೋಳಿನ ತುದಿಯವರೆಗೂ ಒಂದು ಕಾಲುವೆಯಂಥ ರಚನೆ ಇದೆ. ಇದು ಸರಿಯಾಗಿ ಬಾಹುಗಳ ಮಧ್ಯದಲ್ಲಿ ಹರಿದುಹೋಗಿದೆ. ಇವನ್ನು ಆಂಬುಲ್ಯಾಕ್ರಲ್ ಕಾಲುವೆಗಳೆನ್ನುತ್ತಾರೆ. ಇವುಗಳ ಇಕ್ಕೆಲದಲ್ಲೂ ನಳಿಕೆಯಂಥ ಅತ್ಯಂತ

ಚಿಕ್ಕ ಚಿಕ್ಕ ಜೋಡಿ ರಚನೆಗಳಿವೆ. ಇವೇ ನಳಿಕೆಪಾದಗಳು (ಟ್ಯೂಬ್‌ಫೀಟ್). ಪ್ರತಿಯೊಂದು ನಳಿಕೆಪಾದದ ತುದಿಯಲ್ಲೂ ಒಂದೊಂದು ಅಂಟುಸಿಂಬಿಯಿದೆ. ಈ ಪ್ರಾಣಿ ತನ್ನ ಪಾದಗಳನ್ನು ಹೊರಚಾಚಬಲ್ಲುದು ಮತ್ತು ಒಳಗೆಳೆದುಕೊಳ್ಳಬಲ್ಲುದು. ನಕ್ಷತ್ರಮೀನಿನ ಚಲನೆ ನಳಿಕೆಪಾದಗಳ ಸಹಾಯದಿಂದ. ಇವುಗಳ ಈ ಕ್ರಿಯೆ ಬಲು ಸಂಕೀರ್ಣ. ಆಂಬುಲ್ಯಾಕ್ರಲ್ ಕಾಲುವೆಯಲ್ಲಿ ನೀರು ತುಂಬಿಕೊಂಡಿರುವ ನಾಳ ಪ್ರಾಣಿಯ ತಳಭಾಗದಲ್ಲಿ ಬಾಯಿಯ ಸುತ್ತಲೂ ಉಂಗುರದಂತಿರುವ ನಾಳವನ್ನು ಸೇರುತ್ತದೆ. ಉಂಗುರನಾಳಕ್ಕೆ ನೀರು ತುಂಬಿಕೊಂಡಿರುವ ಚೀಲದಂಥ ರಚನೆಗಳು ಅಂಟಿಕೊಂಡಿವೆ. ಉಂಗುರನಾಳಕ್ಕೂ ಪ್ರಾಣಿಯ ಹೊರ ಭಾಗಕ್ಕೂ ಸಂಪರ್ಕ ಕಲ್ಲುಗಾಲುವೆಯೆಂಬ ಮತ್ತೊಂದು ನಾಳದಿಂದ. ಪ್ರಾಣಿಯ ವಿಮುಖಮೇಲ್ಮೈಯಲ್ಲಿ (ಅಬೋರಲ್ ಸರ್ಫೇಸ್) ಕಲ್ಲುಗಾಲುವೆಯ ಬಾಯಿ (ಮ್ಯಾಡ್ರಿಪೊರೈಟ್) ಇದೆ. ಸಮುದ್ರದ ನೀರು ಮ್ಯಾಡ್ರಿಪೊರೈಟನ್ನು ಪ್ರವೇಶಿಸಿ ಕಲ್ಲುಗಾಲುವೆಯ ಮೂಲಕ ಉಂಗುರಗಾಲುವೆಯನ್ನು ತಲುಪುತ್ತದೆ. ಇದು ಉಂಗುರಗಾಲುವೆ ಮತ್ತು ಅದಕ್ಕಂಟಿಕೊಂಡಿರುವ ಚೀಲಗಳಿಗೆ ತುಂಬಿಕೊಂಡು ಉಂಗುರಗಾಲುವೆಯಿಂದ ಪ್ರತಿ ತೋಳಿನೊಳಗೂ ಇರುವ ಕಾಲುವೆಗಳಿಗೆ ಪ್ರವಹಿಸುವುದು. ಇಲ್ಲಿರುವ ಕಾಲುವೆಯ ಇಕ್ಕೆಲದ ನಳಿಕೆಪಾದಗಳೊಳಗೆ ನೀರು ಹರಿಯುತ್ತವೆ. ನಳಿಕೆಪಾದದ ಬುರುಡೆಯಾಕಾರದ ಆಂಪುಲ್ಲ ನೀರಿನಿಂದ ತುಂಬಿಕೊಂಡು ಸಂಕುಚಿಸುತ್ತದೆ. ಇದರಿಂದ ನೀರು ಆಂಪುಲ್ಲದ ಮುಂಭಾಗದ ನಳಿಕೆಗೆ ನುಗ್ಗಿ, ಹಿಗ್ಗಿ, ಉದ್ದವಾಗಿ ಅದು ಪ್ರಾಣಿಯ ಶರೀರದಿಂದ ಹೊರಚಾಚಿಕೊಳ್ಳುತ್ತದೆ. ನಳಿಕೆಪಾದದೊಳಗಿರುವ ನೀರು ಅಂಟುಸಿಂಬಿಯೊಳಗಿರುವ ರಂಧ್ರದ ಮೂಲಕ ಹೊರಹೋಗುತ್ತದೆ. ತೋಳಿನ ತುದಿಯಲ್ಲಿ ಒಂದು ಸಂಕುಚಿಸಲಾರದ ನಳಿಕೆಪಾದವಿದೆ. ಇದರ ಕೆಲಸ ಸ್ಪರ್ಶನಕಾರ್ಯ ನಿರ್ವಹಣೆ. ಇದರ ಮೇಲುಭಾಗದಲ್ಲಿ ಒಂದು ಕೆಂಪನೆಯ ಕಾಳಿನಂಥ ರಚನೆಯಿದೆ. ಇದನ್ನು ಕಣ್ಣಿಗೆ ಹೋಲಿಸಬಹುದು.

ನಕ್ಷತ್ರಮೀನಿನ ಮೇಲುಭಾಗದಲ್ಲಿ ಒತ್ತೊತ್ತಾಗಿ ಹೆಣೆದುಕೊಂಡಿರುವ ಚಿಕ್ಕ ಚಿಕ್ಕ ತಟ್ಟೆಗಳ ಜಾಲವೇ ಇದೆ. ತಟ್ಟೆಗಳ ಜೋಡಣೆ ಒಂದರಪಕ್ಕದಲ್ಲೊಂದರಂತೆ ನಿರ್ದಿಷ್ಟ ರೀತಿಯಲ್ಲಿದೆ. ಎರಡು ತಟ್ಟೆಗಳ ಮಧ್ಯೆ ಚರ್ಮದಿಂದ ಚಿಕ್ಕ ಚಿಕ್ಕ ಗುಳ್ಳೆಗಳಂಥ ಚೀಲಗಳು ಹೊರಬಂದಿವೆ. ಇವಕ್ಕೆ ಪಾಪುಲ್ಲೆ ಎಂದು ಹೆಸರು. ಇವು ಪ್ರಾಣಿಗಳ ಉಸಿರಾಟದಲ್ಲಿ ಸಹಕರಿಸುತ್ತವೆ. ಶರೀರದ ಮೇಲಿರುವ ತಟ್ಟೆಗಳ ಮೇಲೆ ಚೂಪಾದ ಮುಳ್ಳಿನಂಥ ರಚನೆಗಳಿವೆ. ಸೂಕ್ಷ್ಮದರ್ಶಿಯ ಸಹಾಯದಿಂದ ಇವನ್ನು ಪರೀಕ್ಷಿಸಿದರೆ ಇವುಗಳಲ್ಲಿ ಕೆಲವು ರಚನೆಗಳು ಸೂಕ್ಷ್ಮ ಚಿಮ್ಮಟಗಳಂತೆ, ಕತ್ತರಿಗಳಂತೆ ಕಾಣುವುವು. ಇವಕ್ಕೆ ಪೆಡಿಸಲೇರಿಯೆ ಎಂದು ಹೆಸರು. ಇವು ಪ್ರಾಣಿಯ ರಕ್ಷಣಾಂಗಗಳು. ಪೇಡಿಸಲೇರಿಯಾದ ಬಾಹುಗಳ ಒಳಭಾಗದಲ್ಲಿ ಚೂಪಾದ ಹಲ್ಲುಗಳಂಥ ರಚನೆಗಳಿವೆ. ಒಂದು ಸಾರಿ ಈ ಪೆಡಿಸಲೇರಿಯಾದ ಹಿಡಿತಕ್ಕೆ ಸಿಕ್ಕಿದ ಪದಾರ್ಥ ಬಿಡಿಸಿಕೊಳ್ಳುವುದು ಕಷ್ಟ. ಕೆಲವು ನಕ್ಷತ್ರಮೀನುಗಳಲ್ಲಿ ಶರೀರದ ಮೇಲುಭಾಗದಲ್ಲಿ ಮಧ್ಯಕ್ಕೆ ಸ್ವಲ್ಪ ಮಗ್ಗುಲಾಗಿ ಆಸನದ್ವಾರ ಇದೆ. ಮತ್ತೆ ಕೆಲವಕ್ಕೆ ಆಸನದ್ವಾರವಿಲ್ಲ.

ನಕ್ಷತ್ರಮೀನುಗಳಲ್ಲಿ ಲಿಂಗಭೇದ ಉಂಟು. ಹೆಣ್ಣು ಪ್ರಾಣಿಯಲ್ಲಿ ಅಂಡಾಶಯವೂ ಗಂಡಿನಲ್ಲಿ ವೃಷಣವೂ ಇದೆ. ಅಂಡಾಶಯ ಮತ್ತು ವೃಷಣಗಳಿಗೆ ಹಕ್ಕಿಯ ಪುಕ್ಕಗಳಂಥ ರಚನೆ ಇದೆ. ಇವುಗಳಲ್ಲಿ ಉತ್ಪತ್ತಿಯಾದ ಕೋಶಗಳು ಪ್ರಾಣಿಯ ಮೇಲುಭಾಗದಲ್ಲಿ ಎರಡು ಬಾಹುಗಳಿಗೂ ಮಧ್ಯೆ ಇರುವ ರಂಧ್ರಗಳ ಮೂಲಕ ಹೊರ ಹಾಕುತ್ತವೆ. ಗರ್ಭಧಾರಣೆ ಸಮುದ್ರದ ನೀರಿನಲ್ಲಿ ನಡೆಯುತ್ತದೆ. ಸಾವಿರ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳು ಬೆಳೆದು ಲಾರ್ವಗಳು ಹೊರಬರುತ್ತವೆ. ಆಸ್ಟೆರಾಯ್ಡಿಯ ವರ್ಗದ ಪ್ರಾಣಿಗಳ ಲಾರ್ವಕ್ಕೆ ಬೈಪಿನ್ನೇರಿಯಾ ಲಾರ್ವವೆಂದು ಹೆಸರು. ಲಾರ್ವಗಳು ಸ್ವತಂತ್ರವಾಗಿ ಈಸಿಕೊಂಡಿದ್ದು ಸುಮಾರು ಆರು ವಾರಗಳಲ್ಲಿ ಚಿಕ್ಕ ಚಿಕ್ಕ ನಕ್ಷತ್ರಮೀನುಗಳಾಗುತ್ತವೆ.

ನಕ್ಷತ್ರಮೀನುಗಳಲ್ಲಿ ವರ್ಣವೈವಿಧ್ಯವುಂಟು. ಕೆಲವು ಕೆಂಪು, ಕೆಲವು ಹಳದಿ; ಮತ್ತೆ ಕೆಲವು ಇತರ ವರ್ಣಗಳನ್ನು ಅಥವಾ ಅವುಗಳ ಮಿಶ್ರಣವನ್ನು ಹೊಂದಿರುವುದುಂಟು. ನಕ್ಷತ್ರಮೀನುಗಳಿಗೆ ಮೃದ್ವಂಗಿಗಳ ವಂಶದ ಪ್ರಾಣಿಗಳಾದ ಕಪ್ಪೆಚಿಪ್ಪಿನ ಪ್ರಾಣಿಗಳು ಅತ್ಯಂತ ರುಚಿಕರವಾದ ಆಹಾರ. ತನ್ನ ಪಂಚಬಾಹುಗಳನ್ನೂ ಬಗ್ಗಿಸಿ ನಳಿಕೆಪಾದಗಳ ಸಹಾಯದಿಂದ ಕಪ್ಪೆಚಿಪ್ಪನ್ನು ಅಗಲವಾಗಿ ಬಿಡಿಸಿ ಅದರೊಳಗಿರುವ ಪ್ರಾಣಿಯನ್ನು ನುಂಗುವುದೇ ನಕ್ಷತ್ರಮೀನಿಗೆ ಆನಂದ. ಆಹಾರ ಸೇವನೆಯ ಕಾಲದಲ್ಲಿ ಜಠರದ ಒಳಭಾಗ ಸಂಪೂರ್ಣವಾಗಿ ಹೊರ ಬಂದು ಆಹಾರವಾಗುವ ಪ್ರಾಣಿಯನ್ನು ಸುತ್ತಿಕೊಳ್ಳುತ್ತದೆ. ಆಹಾರ ಜೀರ್ಣವಾದಮೇಲೆ ಜಠರ ಒಳಸೇರುತ್ತದೆ. ಬೆಲೆಬಾಳುವ ಮುತ್ತುಗಳನ್ನು ಕೊಡುವ ಆಯಿಸ್ಟರ್‌ಗಳನ್ನು ನಕ್ಷತ್ರ ಮೀನು ತಿಂದು ನಾಶಪಡಿಸುತ್ತದೆ. ಬಲೆಗೆ ಬಿದ್ದಮೇಲೂ ಮೀನುಗಳನ್ನು ಇವು ತಿಂದು ನಾಶ ಮಾಡುವುದುಂಟು. ಪ್ರಪಂಚದ ಕೆಲವು ಭಾಗಗಳಲ್ಲಿ ಇವನ್ನು ಭೂತದ ಬೆರಳುಗಳು ಎಂದು ಭಾವಿಸುವರು.

ಮೇಲೆ ಹೇಳಿದ ನಕ್ಷತ್ರಮೀನುಗಳಲ್ಲದೆ ಇನ್ನೂ ವಿವಿಧ ರೀತಿಯವಿವೆ. ಆಸ್ಟರೈನಾ ಗಿಬ್ಬೋಸ ಅತ್ಯಂತ ಚಿಕ್ಕ ನಕ್ಷತ್ರಮೀನು. ಒಂದೂವರೆ ಸೆಂಮೀ ಮಾತ್ರ ಅಗಲವಿದೆ. ಪಾಲ್‌ಮಿಪೆಸ್ ಪ್ಲಾಸೆಂಟ ಪಂಚಭುಜಾಕೃತಿಯನ್ನು ಹೊಂದಿದ್ದು ಬಿಸ್ಕತ್ತಿನಂತಿದೆ. ಮಿಥ್ರೊಡಿಯಕ್ಕೆ ಅತಿ ದೊಡ್ಡ ದೊಡ್ಡ ಮುಳ್ಳುಗಳಿವೆ. ಸೋಲಾಸ್ಟರ್ ಪಾಪೊಸಸ್‌ಗೆ (ನಕ್ಷತ್ರ ಸೂರ್ಯ) ಬಹಳ ಬಾಹುಗಳಿವೆ. ಸೂರ್ಯನಂತೆ ಕಾಣುತ್ತದೆ. ಛತ್ರಿಯಾಕಾರಕ್ಕಿರುವ ಟೆರಾಸ್ಟರ್ ಎಂಬ ನಕ್ಷತ್ರಮೀನು ಸಮುದ್ರದಲ್ಲಿ ಆಳವಾದ ನೀರಿನಲ್ಲಿ ವಾಸಿಸುತ್ತದೆ. ಲೊಡಿಯ ಮತ್ತು ಲಿಂಕಿಯಾಗಳಿಗೆ ನೀಳವಾದ ತೋಳುಗಳಿವೆ. (ಎಲ್.ಎಸ್.ಜಿ.)

**ಆಸ್ಟ್ರಕೋಡರ್ಮಿ:** ಸೈಲೂರಿಯನ್ ಮತ್ತು ಡಿವೋನಿಯನ್ ಕಾಲದ ಅವಶೇಷಗಳೊಂದಿಗೆ ಕಂಡುಬಂದಿರುವ ಪ್ರಾಚೀನಕಾಲದ ಮೀನಿನಂಥ ಪ್ರಾಣಿವರ್ಗ. ನಮಗೆ ಗೊತ್ತಿರುವ ಕಶೇರುಕ ಪ್ರಾಣಿಗಳ ಪೈಕಿ ಅತಿ ಹಳೆಯ ಪಳೆಯುಳಿಕೆಗಳು ಈ ಗುಂಪಿನಿಂದಲೇ ದೊರೆತಿವೆ. ಈ ಗುಂಪಿನ ಪ್ರಾಣಿಗಳಿಗೆ ದವಡೆಗಳು ಇರಲಿಲ್ಲ. ಒಮ್ಮೊಮ್ಮೆ ಇವುಗಳಲ್ಲಿ ಜೋಡಿ ಉಪಾಂಗಗಳು (ಅಪೆಂಡೇಜ್) ಇಲ್ಲದಿರುವುದು ಕಂಡುಬಂದಿದೆ. ಈ ಮೂಲ ಗುಣಲಕ್ಷಣಗಳು ಪ್ರಾಚೀನ ಲಕ್ಷಣಗಳಾಗಿದ್ದು ಈಗ ಜೀವದಿಂದಿರುವ ದುಂಡುಬಾಯಿ ಪ್ರಾಣಿಗಳನ್ನು (ಸೈಕ್ಲೋಸ್ಟೋಮ್) ಹೋಲುತ್ತವೆ. ಈ ಪ್ರಾಣಿಗಳಿಗೆ ಎಲುಬಿನ ಹೊರಕವಚವಿತ್ತು. ಕೆಲವು ವೇಳೆ ದೇಹದ ಒಳಗೂ ಅಸ್ಥಿಭಾಗಗಳು ಕಂಡುಬರುತ್ತಿದ್ದುವು. ಇದರಲ್ಲಿ ಮೂರು ಉಪವರ್ಗಗಳು;

ಆಸ್ಪಿಯೋಸ್ಟ್ರೇಸಿ: ಹೆಮಿಸೆಫಲಾಸ್ಪಿಸ್ ಎಂಬುದು ಈ ಉಪವರ್ಗಕ್ಕೆ ಸೇರಿದ್ದು. ಇದರ ತಲೆ ಮತ್ತು ಕಿವಿರಿನ ಭಾಗಗಳು ಅರ್ಧಚಂದ್ರಾಕಾರದ ದೊಡ್ಡ ಅಸ್ಥಿ ಕವಚದಿಂದ ಮುಚ್ಚಿದ್ದುವು. ಇದಕ್ಕೆ ಸಹಜವಾದ ಎರಡು ಕಣ್ಣುಗಳ ಜೊತೆಗೆ ಮಧ್ಯದ ನೆತ್ತಿಯ ಕಣ್ಣೊಂದಿತ್ತು. ಬಾಯಿ ಬಹಳ ಸಣ್ಣದು. ಒಳಗಡೆ ಒಂದು ಕಿವಿರು ಕೋಣೆ. ತಲೆಯ ಕೆಳಭಾಗದಲ್ಲಿ ದುಂಡನೆಯ ಹತ್ತು ಜೊತೆ ಕಿವಿರಿನ ರಂಧ್ರಗಳಿದ್ದುವು. ಈ ಪ್ರಾಣಿಯಲ್ಲಿ ವಿದ್ಯುತ್ ಅಂಗಗಳೂ ಒತ್ತಡವನ್ನು ಗೊತ್ತುಮಾಡಿಕೊಳ್ಳತಕ್ಕ ಜ್ಞಾನಾಂಗವೂ ಇದ್ದುದು ಕಂಡುಬಂದಿದೆ.

ಅನಾಸ್ಪಿಡ : ಇದರಲ್ಲಿ ಚಿಕ್ಕ ಕದಿರಿನಾಕಾರದ ಮೀನಿನಂಥ ಪ್ರಾಣಿಗಳಿವೆ. ಅನಾಸ್ಪಿಸ್ ಈ ಉಪವರ್ಗಕ್ಕೆ ಸೇರಿದ ಪ್ರಾಣಿ. ಇವಕ್ಕೆ ಅಗಲವಾದ ತಲೆಯ ಕವಚವಿರಲಿಲ್ಲ. ಆದರೆ ಆ ಭಾಗದಲ್ಲಿ ಸಣ್ಣ ಸಣ್ಣ ಹುರುಪೆಗಳಿದ್ದುವು. ಇವುಗಳ ಒಳರಚನೆಯ ಬಗ್ಗೆ ಮಾಹಿತಿ ದೊರೆತಿಲ್ಲ.

ಹೆಟರೋಸ್ಟ್ರೇಸಿ : ಟೀರಾಸ್ಪಿಸ್ ಈ ಉಪವರ್ಗಕ್ಕೆ ಸೇರಿದಪ್ರಾಣಿ. ಈ ಗುಂಪಿನ ಪ್ರಾಣಿಗಳಲ್ಲೂ ಶರೀರದ ಒಳರಚನೆಯ ಬಗ್ಗೆ ಹೆಚ್ಚು ವಿಷಯಗಳು ತಿಳಿದಿಲ್ಲ. ಆದರೆ ಇದಕ್ಕೆ ಶರೀರದ ಎರಡು ಕಡೆಗಳಲ್ಲೂ ಒಂದೊಂದು ದೊಡ್ಡ ಕಿವಿರಿನ ರಂಧ್ರವಿತ್ತು. ಇದರ ಮುಂಭಾಗ ದೊಡ್ಡ ದೊಡ್ಡ ತಟ್ಟೆಯಾಕಾರದ ಹುರುಪೆಗಳಿಂದ ಆವೃತವಾಗಿತ್ತು. ಕಣ್ಣುಗಳು ಬಲು ಚಿಕ್ಕವು. ಬಾಯಿ, ಶರೀರದ ಕೆಳಭಾಗದಲ್ಲಿ ಒಂದು ಅಡ್ಡ ರಂಧ್ರದಂತಿತ್ತು. ನೋಡಿ–ಆಸ್ಪಿಯೋಸ್ಟ್ರೇಸಿ. (ಎನ್.ವಿ.ಎ.)

**ಆಸ್ಪ್ರೆ:** ಗಿಡುಗನ ಜಾತಿಗೆ ಸೇರಿದ ಮೀನು ಹಿಡಿಯುವ ಹಕ್ಕಿ. ಪಾಂಡಿಯೋನ್ ಹಾಲಿಯೇಟಸ್ ಇದರ ವೈಜ್ಞಾನಿಕ ಹೆಸರು. ಪ್ರಪಂಚದ ಬಹು ಭಾಗಗಳಲ್ಲಿ ವಾಸಿಸುತ್ತದೆ. ತನ್ನ ಜಾತಿ ಮತ್ತು ಕುಲಗಳನ್ನು ಪ್ರತಿನಿಧಿಸುತ್ತ ಉಳಿದುಕೊಂಡಿರುವ ಹಕ್ಕಿ ಇದೊಂದೇ. ಕೆನಡ, ಸಂಯುಕ್ತ ಸಂಸ್ಥಾನಗಳು ಮತ್ತು ಮೆಕ್ಸಿಕೊಗಳಲ್ಲಿ ವಿಶೇಷವಾಗಿದೆ. ದಕ್ಷಿಣ ಅಮೆರಿಕದ ದಕ್ಷಿಣದ ತುದಿಗೆ ಹೋದಂತೆಲ್ಲ ಇದರ ಸುಳಿವು ಕಾಣದಾಗುತ್ತದೆ. ಮೀಂಚುಳ್ಳಿ ಹೇಗೆ ಮೇಲಿಂದ ಧುಮುಕಿ, ಅಲೆಯೊಳಕ್ಕೆ ತೂರಿ ಮೀನುಗಳನ್ನು ಹಿಡಿಯುತ್ತದೋ ಹಾಗೆ ಈ ಹಕ್ಕಿಯೂ ವೇಗದಿಂದ ನೀರೊಳಕ್ಕೆ ಹಾರಿ ಮೀನುಗಳನ್ನು ಹಿಡಿಯುತ್ತದೆ. ಕೊಕ್ಕಿನ ಬಣ್ಣ ಕಪ್ಪು. ತಲೆ ನೀಲಿ, ಕಣ್ಣು ಹಳದಿ, ಮೇಲುಮೈ ಮತ್ತು ರೆಕ್ಕೆ ಕಪ್ಪು ಕಂದು, ಗದ್ದ ಮತ್ತು ಗಂಟಲು ಬಿಳುಪು. ಎದೆಯ ಮೇಲೆ ಒಂದು ಕಪ್ಪು ಪಟ್ಟೆ. ರೆಕ್ಕೆ ಮತ್ತು ಬಾಲದ ಕೆಳಭಾಗದಲ್ಲಿ ಕಪ್ಪು ಚುಕ್ಕಿಗಳಿವೆ. ಇದಕ್ಕೆ ಮನುಷ್ಯರನ್ನು ಕಂಡರೆ ಸ್ವಲ್ಪವೂ ಭಯವಿಲ್ಲ. ದೊಡ್ಡ ಮರಗಳ ತುದಿಯಲ್ಲಿ ಗೂಡುಗಳನ್ನು ಕಡ್ಡಿಗಳಿಂದ ಕಟ್ಟುತ್ತದೆ. ಕಟ್ಟಿದ ಗೂಡನ್ನು ವರ್ಷೇ ವರ್ಷೇ ಬಲಮಾಡುತ್ತದೆ. ಅದೇ ಗೂಡುಗಳಲ್ಲಿ ವಾಸಿಸುತ್ತದೆ. ವರ್ಷಕ್ಕೆ ಒಂದೇ ಸಾರಿ ಮೊಟ್ಟೆಯಿಡುತ್ತದೆ. ಮೊಟ್ಟೆ ಬೆಳೆಯಲು ೨೧ ದಿನ ಬೇಕು. ಮಾಸಲು ಕಂದುಬಣ್ಣದ ಮೊಟ್ಟೆಗಳು ಚೆಲುವಾಗಿ ಕಾಣುತ್ತವೆ. ಮರಿಗಳು ಚಿಕ್ಕವಾಗಿರುವಾಗ ಅವುಗಳ ತಂದೆ ತಾಯಿಗಳು ಮೀನುಗಳನ್ನು ಎಳೆ ಎಳೆಯಾಗಿ ಬಿಡಿಸಿ ಅದಕ್ಕೆ ತಿನ್ನಿಸುತ್ತವೆ. (ಎ.)

**ಆಹಾರ:** ಜೀವಿಯನ್ನು ಜೀವಂತವಾಗಿ ಉಳಿಸಿಕೊಂಡು, ದಿನದ ಚಟುವಟಿಕೆಗಳಿಗೆ ಶಕ್ತಿಯನ್ನು ಕೊಟ್ಟು, ಸವೆದ ಹಾಳಾದ ಅಂಗಭಾಗಗಳನ್ನು ಸರಿಪಡಿಸಲು ನೆರವಾಗುವ, ಮೈಗೆ ಪುಷ್ಟಿ ಕೊಡುವ ವಸ್ತುಗಳ ಸಮುದಾಯ.

ಆಹಾರ ವಸ್ತುಗಳನ್ನು ಮುಖ್ಯವಾಗಿ ೬ ಭಾಗಗಳಾಗಿ ವಿಂಗಡಿಸಬಹುದು. ೧. ಅಕ್ಕಿ, ರಾಗಿ, ಜೋಳ, ಗೋದಿ, ಮುಸುಕಿನ ಜೋಳ, ನವಣೆ, ಹಾರಕ, ಸಜ್ಜೆ, ಜವೆಗೋದಿ, ಬಾರ್ಲಿ ಮುಂತಾದ ಧಾನ್ಯಗಳು ; ಸಕ್ಕರೆ, ಬೆಲ್ಲ, ಜೇನುತುಪ್ಪ ಇತ್ಯಾದಿ. ೨. ತೊಗರಿ, ಉದ್ದು, ಕಡಲೆ, ಅವರೆ,ಹೆಸರು, ತಡಗುಣಿ ಮುಂತಾದ ಬೇಳೆಕಾಳುಗಳು ೩. ತೆಂಗಿನಕಾಯಿ, ಎಳ್ಳು, ಕುಸುಬಿ, ಕಡಲೆಕಾಯಿಬೀಜ, ಬಾದಾಮಿ, ಗೋಡಂಬಿ ಮುಂತಾದ ಎಣ್ಣೆ ಕೊಡುವ ಬೀಜಗಳು ; ಕಡಲೆಕಾಯಿ ಎಣ್ಣೆ, ಎಳ್ಳೆಣ್ಣೆ, ಸಾಸಿವೆ ಎಣ್ಣೆ, ವನಸ್ಪತಿ, ಬೆಣ್ಣೆ, ತುಪ್ಪ ಮುಂತಾದ ಜಿಡ್ಡು ವಸ್ತುಗಳು ; ಹಾಲು, ಮೊಸರು, ಮಜ್ಜಿಗೆ ೪. ಬಗೆಬಗೆಯ ಸೊಪ್ಪುಗಳು,ಹಸುರೆಲೆ ತರಕಾರಿಗಳು ; ಆಲೂಗೆಡ್ಡೆ, ಮರಗೆಣಸು, ಸಿಹಿಗೆಣಸು, ಬದನೆ, ಬೆಂಡೆ, ಹುರುಳಿ, ಗೋರೀಕಾಯಿ, ಸೌತೇಕಾಯಿ ಮುಂತಾದ ತರಕಾರಿಗಳು. ೫. ಮಾವು, ಪರಂಗಿ, ಸೀಬೆ, ಕಿತ್ತಳೆ, ನಿಂಬೆ, ದ್ರಾಕ್ಷಿ ಮುಂತಾದ ಹಸಿಯ ಹಣ್ಣುಗಳು. ೬. ಮೀನು, ಕೋಳಿ, ಕುರಿ, ಬಾತು, ಹಂದಿಗಳ ಮಾಂಸಗಳು ; ಮೊಟ್ಟೆ, ಮೀನು ಮುಂತಾದ ಪ್ರೊಟೀನ್‌ಗಳಿರುವ ವಸ್ತುಗಳು.

ಸಮತೋಲ ಆಹಾರ : ಒಬ್ಬ ಆರೋಗ್ಯವಂತ ಮನುಷ್ಯನ ಅವಶ್ಯಕತೆಗನುಗುಣವಾಗಿ, ವಿವಿಧ ಆಹಾರ ವಸ್ತುಗಳನ್ನು ಒಂದು ನಿರ್ದಿಷ್ಟ ಅನುಪಾತದಲ್ಲಿರುವಂತೆ ತಯಾರಿಸಿದ ಆಹಾರ. ಅದು ಅವರವರ ಮೈಗುಣ, ವಯಸ್ಸು, ಪರಿಸರ, ಕೆಲಸಗಳಿಗೆ ತಕ್ಕಂತೆ ಬೇರೆ ಬೇರೆಯಾಗಿರಬೇಕು. ಸಮತೋಲ ಆಹಾರದಲ್ಲಿ ಸಾಕಷ್ಟು ಜೀವಾತುಗಳು, ಕಬ್ಬಿಣ, ಸುಣ್ಣ, ರಂಜಕಗಳ ರೀತಿಯ ಲೋಹ ಪದಾರ್ಥಗಳು ಇರುತ್ತವೆ. ***

**ಆಹಾರ ಕುಹರ (ದಾನಿ):** ಪ್ರೊಟೊಜೋವ ಪ್ರಾಣಿಗಳ ದೇಹದಲ್ಲಿ ಕಂಡುಬರುವ ನೀರು, ಆಹಾರ ಮತ್ತು ಅಂತಃಸ್ರಾವಗಳಿಂದ ರೂಪುಗೊಂಡ ದಾನಿ (ಫುಡ್ ವ್ಯಾಕ್ಯುಯೋಲ್). ಸೂಕ್ಷ್ಮಜೀವಿಯಾದ ಅಮೀಬ ನೀರಿನಲ್ಲಿ ಚಲಿಸುವಾಗ ಆಹಾರವನ್ನು ಸಂಧಿಸಿದರೆ, ಅದರ ಎರಡೂ ಬದಿಗೆ ಮಿಥ್ಯಾಪಾದಗಳನ್ನು (ಸೂಡೊಪೋಡಿಯ) ಪಸರಿಸಿ, ಅದನ್ನು ನಿಧಾನವಾಗಿ ಪೂರ್ತಿ ಆವರಿಸುವುದು. ಹೀಗೆ ಆವೃತವಾದ ಆಹಾರ ಹೊರರಸವನ್ನು ಕೊರೆದು, ಒಳರಸವನ್ನು ಸೇರುವುದು. ಆ ಒಳರಸದಲ್ಲಿ ಅದು ತನ್ನೊಡನೆ ಸೇರಿದ ನೀರು ಮತ್ತು ಸ್ರಾವಗಳೊಂದಿಗೆ ಆಹಾರ ಕುಹರವಾಗಿ ರೂಪುಗೊಳ್ಳುವುದು. ಸಿಲತಾಂಗಿ (ಸಿಲಿಯೇಟ್ಸ್) ಗಳಲ್ಲಿ ರೂಪುಗೊಂಡ ಆಹಾರ ಕುಹರ ಒಂದೇ ಗಾತ್ರವಿದ್ದು, ಅಂತರ ರಸದಲ್ಲಿ ಒಂದು ನಿರ್ದಿಷ್ಟ ದಾರಿಯಲ್ಲಿ ಚಲಿಸುವುದು. ಹೀಗೆ ದೇಹದಲ್ಲಿ ಬಂಧಿತವಾದ ಆಹಾರ ಆಮ್ಲ, ಕ್ಷಾರ ಮತ್ತು ಪಚನರಸಗಳ ಪರಿಣಾಮದಿಂದ ಪಚನವಾಗಿ ದೇಹದಲ್ಲಿ ಲೀನವಾಗುವುದು. ಪಚನವಾಗದ ಆಹಾರ ಮಿಥ್ಯಾಪದಿ ಪ್ರಭೇದದಲ್ಲಿ (ಸಾರ್ಕೊಡೈನ) ದೇಹದ ಹಿಂಭಾಗಕ್ಕೆ ಸರಿಸಲ್ಪಟ್ಟು ಅಮೀಬ ಮುಂದೆ ಸಾಗಿದಂತೆ ಸುತ್ತಲಿನ ನೀರಿನಲ್ಲಿ ವಿಸರ್ಜನೆಗೊಳ್ಳುವುದು. ಸಿಲತಾಂಗಿ ಮತ್ತು ಕಶಾಂಗಿಗಳಲ್ಲಿ (ಫ್ಲಾಜಿಲೇಟ್ಸ್) ಮಾತ್ರ ನಿರ್ದಿಷ್ಟ ಸ್ಥಳದಿಂದ ಹೊರಬೀಳುವುದು. ಕೆಲವು ಸಿಲತಾಂಗಿಗಳಲ್ಲಿ ಇಂಥ ಸ್ಥಳಕ್ಕೆ ಜೋಡಿಸಿರುವ ಒಂದು ನಳಿಕೆ ಇರುವುದು. ಆಹಾರ ಕುಹರದ ಆಹಾರ ಪಚನ ಹೊಂದುವಾಗ ಆಹಾರದಲ್ಲಾಗುವ ಬದಲಾವಣೆಗಳನ್ನು ಅಭ್ಯಸಿಸಲು ಒಂದು ಉಪಾಯವನ್ನು ಕಂಡುಹಿಡಿಯಲಾಗಿದೆ. ಪ್ರಾಣಿಗಳಿಗೆ ಕೆಲವು ವರ್ಣವಸ್ತುಗಳನ್ನು ಇಲ್ಲವೆ ವರ್ಣಯುಕ್ತ ಆಹಾರವನ್ನು ಒದಗಿಸಿ, ಅವುಗಳಲ್ಲಾಗುವ ವರ್ಣ ಬದಲಾವಣೆಯಿಂದ ಆಮ್ಲಯುಕ್ತ ಇಲ್ಲವೆ ಕ್ಷಾರಯುಕ್ತ ಸ್ಥಿತಿಗಳನ್ನು ತಿಳಿಯಬಹುದು. ಬಹುತರವಾಗಿ ಪಚನಕ್ರಿಯೆ ಕ್ಷಾರಯುಕ್ತ ಸ್ಥಿತಿಯಲ್ಲೇ ನಡೆಯುವುದು. ***

**ಆಹಾರ ಜಾಲ:** ಪ್ರಕೃತಿಯಲ್ಲಿ ಒಂದು ಜೀವಿಯನ್ನು ತಿಂದು ಬದುಕುವ ಪ್ರಭೇದ ಇನ್ನೊಂದು ಪ್ರಭೇದಕ್ಕೆ ಆಧಾರವಾಗುವ ಸಂಕೀರ್ಣ ಅಂತರಕ್ರಿಯೆ. ಒಂದು ಸಸ್ಯಾಹಾರಿಯು ಒಂದೇ ಪ್ರಭೇದದ ಸಸ್ಯವನ್ನು ತಿಂದು ಜೀವಿಸುವುದು ಅಪರೂಪ. ಬದಲು, ಅನೇಕ ಪ್ರಭೇದಗಳ ಉತ್ಪಾದಕರನ್ನು ಆಹಾರಕ್ಕೆ ಬಳಸಬಹುದು. ಒಂದು ಮಾಂಸಾಹಾರಿಯು ಒಂದೇ ಪ್ರಭೇದದ ಸಸ್ಯಾಹಾರಿಗಳನ್ನು ಅವಲಂಬಿಸಿರುವುದಿಲ್ಲ. ಅನೇಕ ಸಸ್ಯಾಹಾರಿಗಳನ್ನು ತಿಂದು ಜೀವಿಸುತ್ತದೆ. ಅನೇಕ ಮಿಶ್ರಾಹಾರಿಗಳು ವಿವಿಧ ಸಸ್ಯಗಳನ್ನೂ, ಮಾಂಸಹಾರಿಗಳನ್ನೂ ತಿಂದು ತಮ್ಮ ಪೋಷಕಗಳನ್ನು ಪಡೆಯಬಹುದು. ಡೆಟ್ರೈಟಸ್ ಅಹಾರ ಸರಣಿ ಮತ್ತು ಮೇಯುವ ಆಹಾರ ಸರಣಿಗಳೊಳಗೆ ಕೊಂಡಿಗಳೇರ್ಪಟ್ಟು ವಿವಿಧ ಜೀವಿಗಳು ತಮ್ಮ ಶಕ್ತಿಯ ಪೂರೈಕೆಯನ್ನು ನೆರವೇರಿಸಿ ಕೊಳ್ಳಬಹುದು. ಒಂದು ಸಾಹಚರ್ಯದಲ್ಲಿರುವ ವಿವಿಧ ಪ್ರಭೇದಗಳ ಎಲ್ಲ ಅಹಾರ ಸರಣಿಗಳನ್ನು ಪೌಷ್ಟಿಕ ಮಟ್ಟಗಳನ್ನು ಗಣನೆಗೆ ತೆಗೆದುಕೊಂಡು ಅವುಗಳ ಸಂಬಂಧವನ್ನು ಕೂಡಿಸಿದರೆ ಒಂದು ಕ್ಲಿಷ್ಟವಾದ ಒಂದರೊಡನೊಂದು ಹಾಸು ಹೊಕ್ಕಾಗಿರುವ ಜಾಲ ರೂಪ ದೊರೆಯುವುದು. ಇದೇ ಆಹಾರಜಾಲ. ಸಾಗರ ಪರಿಸರದಲ್ಲಿ ಡಯಾಟಂ, ಕೋಪಿಪಾಡ್, ಹೆರ್ರಿಂಗ್ ಎಂದು ಆಹಾರ ಸರಣಿಯನ್ನು ತೋರಿಸಿದರೂ, ವಸ್ತುತ: ಪ್ರಕೃತಿಯಲ್ಲಿ ಇಷ್ಟು ಸರಳರೂಪದಲ್ಲಿ ಇಲ್ಲ. ಸಸ್ಯಾಹಾರಿ ಕೋಪಿಪಾಡ್ ಪ್ರಾಣಿಯು ಡಯಾಟಂ ಸಸ್ಯ ಒಂದನ್ನೆ ತಿಂದು ಬದುಕುವುದಿಲ್ಲ. ಅದು ವಿವಿಧ ಪ್ರಭೇದಗಳ ಡಯಾಟಂ ಸಸ್ಯಗಳನ್ನೂ, ಕಶಾಂಗಿಗಳನ್ನು ತಿನ್ನುತ್ತದೆ. ಅಲ್ಲದೆ ಅದು ಸೂಕ್ಷ್ಮ ಪ್ರಾಣಿ ಪ್ಲಾಕ್ಟಾನುಗಳನ್ನು ಸೇವಿಸುತ್ತದೆ. ಅದೆ ರೀತಿ ಕೆಲಾನಸ್ ಕೋಪಿಪೋಡ. ಬೆಳೆದ ಹೆರ್ರಿಂಗ್ ಮೀನಿನ ಆಹಾರದ ಶೇ. 21 ರಷ್ಟಿದ್ದರೂ ಉಳಿದ ಪ್ರಾಣಿಗಳನ್ನು ಕೂಡಾ ಕೆಲಾನಸ್ ಅನ್ನು ತಿನ್ನುತ್ತವೆ. ಅಮ್ಮೊಡೈಟಿಸ್ ಎಂಬ ಮರಳ ಈಲ್ (ಸ್ಯಾಂಡ್ ಈಲ್) ಮೀನು ತನ್ನ ಆಹಾರದ ಶೇ. 70 ರಷ್ಟು ಕೆಲಾನಸ್ ಅನ್ನು ತಿನ್ನುತ್ತದೆ. ಆದರೆ, ಈ ಮೀನು ಹೆರ್ರಿಂಗ್ ಮೀನಿನ ಆಹಾರದ ಶೇ.40 ರಷ್ಟು ಇದೆ.

ಒಂದು ಹೊಳೆಯಲ್ಲಿರುವ ಸಣ್ಣ ಪ್ರಾಣಿಗಳ ಆಹಾರ ಜಾಲವನ್ನು ಚಿತ್ರದಲ್ಲಿ ತೋರಿಸಿದೆ. ಇಲ್ಲಿ ಅನೇಕ ಆಹಾರ ಸರಣಿಗಳೊಳಗಿನ ಜಾಲ ವ್ಯವಸ್ಥೆ ಮತ್ತು 3 ಪೌಷ್ಟಿಕ ಮಟ್ಟಗಳನ್ನು ಗುರುತಿಸಬಹುದು. ಕೆಲವು ಪ್ರಾಣಿಗಳು 3 ಪ್ರಮುಖ ಪೌಷ್ಟಿಕ ಮಟ್ಟಗಳ ಮಧ್ಯದ ಸ್ಥಾನವನ್ನು ಗಳಿಸಿರುವುದು. ಹೈಡ್ರೋಸ್ವೆರೆ ಪ್ರಾಣಿಯು ಸಸ್ಯಗಳನ್ನು ಪ್ರಾಣಿಗಳನ್ನು ಸೇವಿಸುತ್ತದೆ. ಆದುದರಿಂದ ಈ ಪ್ರಾಣಿಯು ಪ್ರಥಮ ಮತ್ತು ದ್ವಿತೀಯ ಬಳಕೆದಾರರ ಮಟ್ಟಗಳ ಮಧ್ಯದಲ್ಲಿವೆ. ಕೆಲವೊಮ್ಮೆ ಜಾಡಮಾಲಿಗಳು (ಸ್ಕಾವೆಂಜರ್ಸ್), ಪರಾವಲಂಬಿಗಳು ಪ್ರತಿ ಪೌಷ್ಟಿಕ ಮಟ್ಟಗಳಲ್ಲಿ ಅಥವಾ ಆಹಾರ ಸರಣಿಗಳಲ್ಲಿ ಪ್ರವೇಶಿಸಬಹುದು. ಸಸ್ಯಾಹಾರಿ ಸರಣಿ ಮತ್ತು ಡೆಟ್ರೈಟಸ್ ಸರಣಿಗಳೊಳಗೆ ಕೊಂಡಿಗಳೇರ್ಪಟ್ಟು ಪರಸ್ಪರ ಸಂಬಂಧವುಳ್ಳವುಗಳಾಗಿ ಒಂದಕ್ಕೊಂದು ಹಾಸು ಹೊಕ್ಕಾಗಿ ವ್ಯಕ್ತವಾಗುತ್ತವೆ.



ಮಾನವನನ್ನು ಉದಾಹರಣೆಯಾಗಿಟ್ಟುಕೊಂಡರೆ, ಮೊದಲ ಮಾನವನು ಆಹಾರ ಜಾಲದಲ್ಲಿ ಅನೇಕ ಹಂತದಲ್ಲಿ ಪ್ರವೇಶಿಸಿರಬಹುದೆಂದು ಅಂದಾಜು ಮಾಡಲಾಗಿದೆ. ಶೊಶಾನಿ ಇಂಡಿಯನರು ಬೀಜ ಮತ್ತು ಗೆಡ್ಡೆಗಳನ್ನು ತಿಂದು ಜೀವಿಸುತ್ತಿದ್ದು ಪ್ರಥಮ ಬಳಕೆದಾರರಾಗಿದ್ದರು. ಎಸ್ಕಿಮೊಗಳು ಮೀನುಗಳನ್ನು ಹಿಡಿದು ತಿಂದು ಆಹಾರ ಜಾಲದಲ್ಲಿ ಮೂರನೆಯ ಅಥವಾ ನಾಲ್ಕನೆಯ ಬಳಕೆದಾರರಾಗಿ ಜೀವಿಸುತ್ತಿದ್ದರು. ಆಫ್ರಿಕದಲ್ಲಿ ಬೇಟೆಯಾಡಿ ಅನೇಕ ಪ್ರಾಣಿಗಳನ್ನೂ ತಿನ್ನುತ್ತಿದ್ದರು. ಈಗೀಗ ಮಿಶ್ರಾಹಾರದ ಸೇವನೆಯಿಂದಾಗಿ ಆಹಾರ ಜಾಲದಲ್ಲಿ ಮಾನವನು ವಿವಿಧ ಹಂತದಲ್ಲಿ ಪ್ರವೇಶಿಸಿ ವಿವಿಧ ಪೌಷ್ಟಿಕ ಮಟ್ಟದಲ್ಲಿ ನಿಂತಿದ್ದಾನೆ.

ವೈವಿಧ್ಯತೆ ದೃಢತೆ ನಿಯಮ (ಡೈವರ್‌ಸಿಟಿ ಸ್ಟೆಬಿಲಿಟಿ ರೂಲ್)ನ ಪ್ರಕಾರ ಆಹಾರ ಜಾಲವು ಕ್ಲಿಷ್ಟವಾದಷ್ಟು ಜೀವ ಸಮುದಾಯದಲ್ಲಿ ಭದ್ರತೆ ಅಧಿಕವಾಗುವುದು. ಒಂದು ಪ್ರಾಣಿಯು ತನ್ನ ಆಹಾರಕ್ಕಾಗಿ ಅನೇಕ ಕೊಂಡಿಗಳನ್ನು ಅವಲಂಬಿಸಿದ್ದರೆ ಅಥವಾ ಭಿನ್ನ ಪೌಷ್ಟಿಕ ಮಟ್ಟಗಳನ್ನು ಅವಲಂಬಿಸಿದ್ದರೆ, ಆ ಸಮುದಾಯಗಳು ಭದ್ರವಾಗಿ ನೆಲೆಸಲು ಸಾಧ್ಯ. ಅಂತಹ ಸಮುದಾಯಗಳನ್ನೊಳಗೊಂಡ ಸಾಹಚರ್ಯವೂ ಪರಿಸರ ವ್ಯೂಹವೂ (ಎಕೊಸಿಸ್ಟಮ್) ಕೂಡಾ ಭದ್ರವಾಗಿ ಮುಂದುವರಿಯುವುದು. ಒಂದು ವೇಳೆ ಆಹಾರ ಸರಪಣಿಯ ಒಂದು ಕೊಂಡಿಯ ಜೀವಿಗಳಲ್ಲಿ ಏರುಪೇರುಗಳಾದರೂ ಅದನ್ನು ಸೇವಿಸುವ ಬಳಕೆದಾರರು ಸಾಹಚರ್ಯದಲ್ಲಿರುವ ಇತರ ಆಹಾರ ವಸ್ತುಗಳನ್ನು ಉಪಯೋಗಿಸಿ ನೆಲೆಸಬಹುದು.

ಆಹಾರ ಜಾಲಗಳನ್ನು ಮತ್ತು ಆಹಾರ ಸರಪಣಿಗಳನ್ನು ಪತ್ತೆ ಹಚ್ಚುವುದು. ಆಹಾರ ಜಾಲವನ್ನು ಪತ್ತೆ ಹಚ್ಚಲು 4 ವಿಧಗಳಿವೆ: 1) ಕೆಲವೊಮ್ಮೆ ನೇರವಾಗಿ ಪ್ರಾಣಿಗಳ ಆಹಾರ ಕ್ರಮವನ್ನು ಪರಿಶೀಲಿಸಿ ಅಹಾರ ಸರಣಿಯನ್ನು ಆಹಾರ ಜಾಲವನ್ನು ಕಂಡುಹಿಡಿಯಬಹುದು. 2) ಒಂದು ಆವಾಸದಲ್ಲಿರುವ ಎಲ್ಲ ಜೀವಿಗಳ ಪ್ರತಿನಿಧಿಗಳನ್ನು ಸಂಗ್ರಹಿಸಿ ಅವುಗಳ ಕರುಳಿನಲ್ಲಿರುವ ಎಲ್ಲ ಜೀವಿಗಳ ಪ್ರತಿನಿಧಿಗಳನ್ನು ಸಂಗ್ರಹಿಸಿ ಅವುಗಳ ಕರುಳಿನಲ್ಲಿರುವ ಆಹಾರ ವಸ್ತುಗಳನ್ನು ವಿಶ್ಲೇಷಿಸುವುದು ಇನ್ನೊಂದು ಪದ್ಧತಿ. ಈ ಪದ್ಧತಿಯಲ್ಲಿ ಒಂದು ಪ್ರಭೇದದ ಸಾಕಷ್ಟು ಪ್ರತಿನಿಧಿಗಳನ್ನು ಪರಿಶೀಲಿಸಿದಲ್ಲಿ ನಮಗೆ ಬೇಕಾದ ಮಾಹಿತಿ ದೊರಕುವುದು. ಈ ಕಾರ್ಯ ಕೈಗೊಳ್ಳುವಾಗ ಆಹಾರವಸ್ತುಗಳ ಪೂರ್ತಿ ದೇಹಮಾತ್ರವಲ್ಲ, ದೇಹದ ಸ್ವಲ್ಪಾಂಶವಿದ್ದರೂ ಆ ಪ್ರಭೇದವನ್ನು ಗುರುತಿಸುವ ಸಾಮರ್ಥ್ಯವಿರಬೇಕು. ಕೆಲವೊಮ್ಮೆ ಪ್ರಾಣಿ ಮತ್ತು ಸಸ್ಯಗಳ ರಸವನ್ನು ಮಾತ್ರ ಹೀರುವಂತಹ ಪ್ರಾಣಿಗಳು ಮತ್ತು ತಿಂದ ಆಹಾರದಲ್ಲಿ ಕಠಿಣವಾದ ಅಸ್ಥಿಪಂಜರಗಳಿದ್ದಲ್ಲಿ ಆ ಪ್ರಭೇದವನ್ನು ಗುರುತಿಸುವುದು ಕಷ್ಟ. ಅಂತಹ ಸಂದರ್ಭಗಳಲ್ಲಿ ಇನ್ನೊಂದು ಮಾದರಿಯು ಸಹಾಯಕವಾಗುವುದು. 3) ಪ್ರಿಸಿಪಿಟಿನ್ ಪ್ರಯೋಗ: ಕೊಳ್ಳೆ ಪ್ರಾಣಿಗಳಾಗಿರಬಹುದಾದ ಪ್ರಾಣಿಗಳ ವಸೆಯನ್ನು (ಸೀರಂ) ಮತ್ತು ಭಕ್ಷಕ ಪ್ರಾಣಿಗಳ ಸಾರವನ್ನು ಉಪಯೋಗಿಸಿ ಪ್ರತ್ಯಾಣು ಜನಕ ಪ್ರತಿಕಾಯಗಳ ಉತ್ಪತ್ತಿಯಾಗುವುದೋ ಇಲ್ಲವೋ ಎಂದು ಪರಿಶೀಲಿಸಿ ಆಹಾರ ಸರಪಣಿ ಹಾಗೂ ಆಹಾರ ಜಾಲದ ಮಾಹಿತಿಯನ್ನು ಪಡೆಯಬಹುದು. 4) ರೇಡಿಯೋಆಕ್ಟಿವ್ ಐಸೊಟೋಪು ಪಿ$_{32}$ ಅನ್ನು ಒಂದು ಸಸ್ಯಪ್ರಭೇದ ಎಲ್ಲ ಸಸ್ಯಗಳ ಮೇಲೆ ಚಿಮುಕಿಸಿ, ಗುರುತು (ಲೇಬಲ್) ಮಾಡಿ ಸ್ವಲ್ಪ ಸಮಯದ ನಂತರ ಸುತ್ತ ಮುತ್ತಲಿರುವ ಪ್ರಾಣಿಗಳಲ್ಲಿ ಕೆಲವನ್ನು ತೆಗೆದು ಪಿ$_{32}$ ಅನ್ನು ವಿಶ್ಲೇಷಿಸಿದಾಗ ಪಿ$_{32}$ ಇದ್ದರೆ, ಆ ಪ್ರಾಣಿಯು ಗುರುತಿಸಿದ ಸಸ್ಯವನ್ನು ತಿಂದಿದೆ ಎಂದಾಯಿತು. ಪಿ$_{32}$ ಅಂಶವಿರುವ ಜೀವಿಗಳೆಲ್ಲ ಈ ಆಹಾರ ಜಾಲದಲ್ಲಿ ಪಾಲ್ಗೊಂಡಿವೆ ಎಂದು ಅರಿವಾಗುವುದು. ಮಾತ್ರವಲ್ಲ, ಆಹಾರ ಜಾಲದ ವಿವಿಧ ಆಹಾರ ಸರಣಿಗಳನ್ನು ಬೇರ್ಪಡಿಸಲು ಕೂಡ ಸಹಾಯಕ.

(ಎಂ.ಎಸ್.ಎಂ.)

**ಆಹಾರ ಸರಪಳಿ, ಆಹಾರ ಜಾಲ ಮತ್ತು ಪರಿಸರ ಪಿರಮಿಡ್‌ಗಳು:** ಪ್ರಾಣಿಗಳ ಚಟುವಟಿಕೆಗಳಿಗೆ ಶಕ್ತಿ ಅತ್ಯವಶ್ಯ. ಶರೀರದಲ್ಲಿ ಶಕ್ತಿಯ ಉತ್ಪಾದನೆಗೆ ಪ್ರಾಣಿಗಳು ಆಹಾರವನ್ನು ಸೇವಿಸುತ್ತವೆ. ಪರಿಸರದಲ್ಲಿ ಶಕ್ತಿಯು ಒಂದು ಜೀವಿಯಿಂದ ಇನ್ನೊಂದು ಜೀವಿಗೆ ವರ್ಗಾವಣೆಗೊಳ್ಳುತ್ತದೆ. ಪ್ರಕೃತಿಯಲ್ಲಿ ಸಸ್ಯಗಳು ಸೂರ್ಯಬೆಳಕಿನ ಶಕ್ತಿಯನ್ನು ದ್ಯುತಿಸಂಶ್ಲೇಷಣೆ ಕ್ರಿಯೆಯಿಂದ ರಾಸಾಯನಿಕ ಶಕ್ತಿಯನ್ನಾಗಿ ಮಾರ್ಪಾಡಿಸುತ್ತವೆ. ಸಸ್ಯಗಳಿಂದ ಈ ರಾಸಾಯನಿಕ ಶಕ್ತಿ ಪ್ರಾಣಿಗಳಿಗೆ ಆಹಾರ ರೂಪದಲ್ಲಿ ವರ್ಗಾವಣೆಯಾಗುತ್ತದೆ. ಸಸ್ಯಗಳಿಗೆ ತಮ್ಮ ಆಹಾರವನ್ನು ತಾವೇ ತಯಾರಿಸುವ ಸಾಮರ್ಥ್ಯವಿದೆ. ಅವುಗಳನ್ನು ಉತ್ಪಾದಕರು (ಪ್ರೊಡ್ಯೂಸರ್ಸ್) ಅಥವಾ ಸ್ವಯಂ ಪೋಷಕರು (ಆಟೋಟ್ರೋಫ್ಸ್) ಎಂದು ಕರೆಯಲಾಗುತ್ತದೆ. ಆದರೆ, ಪ್ರಾಣಿ ಸಂಕುಲ ಆಹಾರಕ್ಕಾಗಿ ಬೇರೆ ಮೂಲಗಳನ್ನು ಅವಲಂಬಿಸಬೇಕು. ಅವು ಬಳಕೆದಾರರು (ಕನ್ಸ್ಯೂಮರ್ಸ್) ಅಥವಾ ಅನ್ಯ ಪೋಷಕರು (ಹೆಟಿರೂ ಟ್ರೋಫ್ಸ್). ಪ್ರಥಮ ಬಳಕೆದಾರರು (ಪ್ರೈಮರಿ ಕನ್ಸ್ಯೂಮರ್ಸ್) ಆಹಾರಕ್ಕಾಗಿ ಸಸ್ಯಗಳನ್ನೆ ಅವಲಂಬಿಸಿವೆ. ಕಾರಣ, ಇವುಗಳನ್ನು ಸಸ್ಯಾಹಾರಿಗಳು (ಹರ್ಬಿವೋರಸ್) ಎನ್ನುವರು. ಪ್ರಥಮ ಬಳಕೆದಾರರನ್ನು ದ್ವಿತೀಯ ಬಳಕೆದಾರರು ಬೇಟೆಯಾಡುತ್ತವೆ. ಕಾರಣ ಇವು ಮಾಂಸಾಹಾರಿಗಳು (ಕಾರ್ನಿವೋರಸ್). ದ್ವಿತೀಯ ಬಳಕೆದಾರ ಜೀವಿಗಳ ಮಾಂಸವನ್ನು ತೃತೀಯ ಬಳಕೆದಾರ ಜೀವಿಗಳು ಆಹಾರವನ್ನಾಗಿ ಸೇವಿಸುತ್ತವೆ. ಹೀಗೆ ಶಕ್ತಿಯು ಆಹಾರ ರೂಪದಲ್ಲಿ ಉತ್ಪಾದಕ ಸಸ್ಯಗಳಿಂದ ಪ್ರಥಮ ಬಳಕೆದಾರರ ಮುಖಾಂತರ ದ್ವಿತೀಯ ಮತ್ತು ತೃತೀಯ ಬಳಕೆದಾರ ಜೀವಿಗಳಿಗೆ ಸರಪಳಿಯ ರೀತಿಯಲ್ಲಿ ವರ್ಗಾವಣೆಗೊಳ್ಳುವ ಪ್ರಕ್ರಿಯೆಗೆ ಆಹಾರ ಸರಪಳಿ (ಫುಡ್ ಚೈನ್) ಎಂದು ಹೆಸರು. ಆಹಾರ ಸರಪಳಿಯು 4–5 ಹಂತಗಳಲ್ಲಿದೆ. ಪ್ರತಿಯೊಂದು ಹಂತದ ವರ್ಗಾವಣೆಯಲ್ಲೂ ಗಣನೀಯ ಪ್ರಮಾಣದ ಪ್ರಚ್ಛನ ಶಕ್ತಿಯು (ಪೊಟೆನ್ಷಿಯಲ್ ಎನರ್ಜಿ) ಶಾಖ ರೂಪದಲ್ಲಿ ಪರಿವರ್ತನೆಗೊಂಡು ನಷ್ಟವಾಗುತ್ತದೆ. ಕಾರಣ ಆಹಾರ ಸರಪಳಿಯ ಹಂತಗಳು ಕಡಿಮೆ ಇದ್ದಷ್ಟು ಮೇಲಿನ ಹಂತದ (ಹೈಯರ್ ಟ್ರೊಫಿ ಲೆವಲ್) ಪ್ರಾಣಿಗಳಿಗೆ ಹೆಚ್ಚಿನ ಆಹಾರ ಶಕ್ತಿ ಲಭ್ಯವಾಗುತ್ತದೆ.

ಹೀಗೆ ಆಹಾರ ಸರಪಳಿಯಲ್ಲಿ ಶಕ್ತಿಯ ರೂಪಾಂತರ ಮತ್ತು ಶಕ್ತಿಯು ಶಾಖದ ರೂಪದಲ್ಲಿ ವ್ಯಯವಾಗುವುದು. ಸೂರ್ಯನ ವಿಕಿರಣ ಶಕ್ತಿಯನ್ನು (ರೇಡಿಯಂಟ್ ಎನರ್ಜಿ) ಸಸ್ಯಗಳು ರಾಸಾಯನಿಕ (ಕೆಮಿಕಲ್ಸ್) ಶಕ್ತಿಯನ್ನಾಗಿ ಪರಿವರ್ತಿಸುತ್ತವೆ. ಇಂತಹ ಸಂಗ್ರಹವಾದ ರಾಸಾಯನಿಕ ಶಕ್ತಿಯನ್ನು ಪ್ರಚ್ಛನ ಶಕ್ತಿ (ಪೊಟೆನ್ಷಿಯಲ್ ಎನರ್ಜಿ) ಎನ್ನುವರು. ಈ ಪ್ರಚ್ಛನ ಶಕ್ತಿಯನ್ನು ಉತ್ಪಾದಕ ಜೀವಿಗಳು ಹಾಗೂ ಬಳಕೆದಾರ ಜೀವಿಗಳು ಉಸಿರಾಟ, ವಂಶಾಭಿವೃದ್ಧಿ ಮತ್ತು ಚಲನೆ ಮುಂತಾದ ಉದ್ದೇಶಗಳಿಗೆ ಉಪಯೋಗಿಸುತ್ತವೆ. ಈ ಸಂದರ್ಭದಲ್ಲಿ ಶಕ್ತಿಯು ಚಾಲನಾ ಶಕ್ತಿ (ಕೈನೆಟಿಕ್ ಎನರ್ಜಿ)ಯ ರೂಪದಲ್ಲಿರುತ್ತದೆ. ಆಹಾರ ಸರಪಳಿಯ ತಳಮಟ್ಟದ ಪೋಷಣಾ (ಲೋವರ್ ಟ್ರೊಫಿಕ್ ಲೆವಲ್) ಹಂತ ಮತ್ತು ಉನ್ನತ ಪೋಷಣಾ ಹಂತಗಳಲ್ಲಿ ಜೀವಿಗಳ ಸಂಬಂಧದ ರೀತಿಗನುಗುಣವಾಗಿ, ಮೂರು ಬಗೆಯ ಆಹಾರ ಸರಪಳಿಯನ್ನು ಗುರುತಿಸಲಾಗಿದೆ.

1) ಭಕ್ಷಕ ಆಹಾರ ಸರಪಳಿ (ಗ್ರೇಜಿಂಗ್ ಫುಡ್ ಚೈನ್, ಪ್ರೇ – ಪ್ರಿಡೇಟರ್ ಫುಡ್ ಚೈನ್),

2) ವಿಘಟಕ ಆಹಾರ ಸರಪಳಿ (ಡೆಟ್ರಿಟಸ್ ಫುಡ್ ಚೈನ್),

3) ಪರಾವಲಂಬಿ (ಪರೋಪಜೀವಿ) ಆಹಾರ ಸರಪಳಿ (ಪಾರಸೈಟಿಕ್ ಫುಡ್ ಚೈನ್).

1) ಭಕ್ಷಕ ಆಹಾರ ಸರಪಳಿ: ಇದರಲ್ಲಿ ಉತ್ಪಾದಕರಿಂದ (ಉದಾ: ಸಸ್ಯಗಳಿಂದ) ಪ್ರಾರಂಭಗೊಂಡು ಮಾಂಸಾಹಾರಿಗಳಲ್ಲಿ ಅಂತ್ಯಗೊಳ್ಳುತ್ತದೆ. ಉದಾ: ಜಿಂಕೆ, ಮೊಲ, ಸಸ್ಯಾಹಾರಿಗಳು. ಇವು ಸಸ್ಯಗಳನ್ನು ಸೇವಿಸಿ ಜೀವಿಸುತ್ತವೆ. ಇವುಗಳನ್ನು ಹುಲಿ, ಸಿಂಹ, ಚಿರತೆ, ಮುಂತಾದ ಮಾಂಸಾಹಾರಿಗಳು ಆಹಾರಕ್ಕಾಗಿ ಬೇಟೆಯಾಡುತ್ತವೆ. ಸಸ್ಯಹಾರಿಗಳು ಪ್ರಥಮ ಬಳಕೆದಾರರು ಮತ್ತು ಮಾಂಸಹಾರಿಗಳು ದ್ವಿತೀಯ ಬಳಕೆದಾರರು.

2) ವಿಘಟಕ ಆಹಾರ ಸರಪಳಿ: ಇದನ್ನು ಕೊಳೆತಿನಿ (ಸಾಪ್ರೊಫೈಟಿಕ್) ಆಹಾರ ಸರಪಳಿ ಎನ್ನುವರು. ಸತ್ತ ಜೀವಿಗಳ ದೇಹ ಮತ್ತು ಇತರ ಕೊಳೆತ ವಸ್ತುಗಳನ್ನು ತಮ್ಮ ಆಹಾರಕ್ಕಾಗಿ ಬಳಸುತ್ತವೆ. ಇಂತಹ ಜೀವಿಗಳಿಗೆ ಕೊಳೆತಿನಿಗಳು ಎಂದು ಹೆಸರು. ಉದಾ: ನೀರಿನಲ್ಲಿ ಸತ್ತ ಜೀವಿಗಳ ದೇಹವು ಕೊಳೆತಾಗ ಬ್ಯಾಕ್ಟೀರಿಯಾ ಮತ್ತು ಶಿಲೀಂದ್ರ, ಅವುಗಳನ್ನು ತಮ್ಮ ಆಹಾರಕ್ಕಾಗಿ ಬಳಸಿಕೊಳ್ಳುತ್ತವೆ. ಆ ಕೊಳೆತ ವಸ್ತು ಸಣ್ಣ ಸಣ್ಣ ಕಣಗಳಾಗಿ ವಿಂಗಡವಾಗುತ್ತದೆ. ಇಂತಹ ಸಣ್ಣ ಸಣ್ಣ ಕೊಳೆತ ವಸ್ತುಗಳನ್ನು ಮೀನುಗಳು ಮತ್ತು ಇತರ ಜಲಚರಿಗಳು ಆಹಾರವಾಗಿ ಬಳಸಿಕೊಳ್ಳುತ್ತವೆ. ಇದು ವಿಘಟಕ ಆಹಾರ ಸರಪಳಿ.

3) ಪರಾವಲಂಬಿ ಆಹಾರ ಸರಪಳಿ: ಇದರಲ್ಲಿ ಸಸ್ಯಗಳು ಉತ್ಪಾದಿಸಿದ ಆಹಾರ ಶಕ್ತಿಯು ಸೂಕ್ಷ್ಮಾಣು ಜೀವಿಗಳಿಗೆ ವರ್ಗಾವಣೆಗೊಳ್ಳುತ್ತದೆ. ಉದಾ ಒಂದು ಮರದಲ್ಲಿ ಹತ್ತಾರು ಪಕ್ಷಿಗಳು ಆಹಾರಕ್ಕಾಗಿ ವಾಸಿಸುತ್ತವೆ. ಪ್ರತಿಯೊಂದು ಪಕ್ಷಿಯ ಗರಿಗಳಲ್ಲಿ ಸಾವಿರಾರು ಹೇನುಗಳು (ಲೈಸ್ ಮತ್ತು ಬಗ್ಸ್) ಆಹಾರಕ್ಕಾಗಿ ಆಶ್ರಯ ಪಡೆಯುತ್ತವೆ. ಪ್ರತಿಯೊಂದು ಹೇನಿನಲ್ಲಿ ಲಕ್ಷಾಂತರ ಬ್ಯಾಕ್ಟೀರಿಯಾ ಮತ್ತು ಶಿಲೀಂದ್ರಗಳು ಆಹಾರಕ್ಕಾಗಿ ಆಶ್ರಯಿಸುತ್ತವೆ. ಇದರಲ್ಲಿ ಸಸ್ಯಗಳು ಪ್ರಥಮ ಪೋಷಣ ಹಂತದಲ್ಲಿದ್ದು, ಹಕ್ಕಿಗಳು ದ್ವಿತೀಯ ಪೋಷಣ ಹಂತದಲ್ಲಿವೆ. ಆದರೆ, ಪರಾವಲಂಬಿಗಳಾದ ಹೇನುಗಳು ಮತ್ತು ಬ್ಯಾಕ್ಟೀರಿಯಾಗಳು ಅನುಕ್ರಮವಾಗಿ ತೃತೀಯ ಮತ್ತು ಚತುರ್ಥ ಪೋಷಣಾ ಹಂತಗಳನ್ನು ಆಕ್ರಮಿಸಿವೆ.

ಆಹಾರ ಜಾಲ (ಫುಡ್ ವೆಬ್): ಪ್ರಾಣಿಗಳು ಪ್ರಕೃತಿಯಲ್ಲಿರುವ ವಿವಿಧ ಜೀವಿಗಳನ್ನು ಆಹಾರವನ್ನಾಗಿ ಬಳಸಿಕೊಳ್ಳುತ್ತವೆ. ಸಸ್ಯಾಹಾರಿಗಳು ವಿವಿಧ ಸಸ್ಯಗಳನ್ನು ಮತ್ತು ಮಾಂಸಾಹಾರಿಗಳು ವಿವಿಧ ಜಾತಿಯ ಪ್ರಾಣಿಗಳನ್ನು ತಮ್ಮ ಆಹಾರಕ್ಕಾಗಿ ಬೇಟೆಯಾಡುತ್ತವೆ. ಕಾರಣ, ಪ್ರಕೃತಿಯಲ್ಲಿರುವ ಅನೇಕ ಆಹಾರ ಸರಪಳಿಗಳು ಒಂದಕ್ಕೊಂದು ಆಂತರಿಕ ಸಂಬಂಧವನ್ನು ಹೊಂದಿವೆ. ಇಂತಹ ಆಂತರಿಕ ಸಂಬಂಧವಿರುವ ಎಲ್ಲಾ ಆಹಾರ ಸರಪಳಿಗಳಿಗೆ ಒಟ್ಟಾರೆಯಾಗಿ ಆಹಾರ ಜಾಲ ಎಂದು ಕರೆಯಲಾಗುತ್ತದೆ.







ಚಿತ್ರ 1. ಕಾಡಿನಲ್ಲಿರುವ ಆಹಾರ ಸರಪಳಿ ಚಿತ್ರ 2. ಕಾಡಿನಲ್ಲಿರುವ ಆಹಾರ ಜಾಲ

ಚಿತ್ರ 2 ರಲ್ಲಿ ತೋರಿಸಿರುವಂತೆ 5 ಆಹಾರ ಸರಪಳಿಗಳು ಒಂದಕ್ಕೊಂದು ಆಂತರಿಕ ಸಂಬಂಧಗಳನ್ನು ಹೊಂದಿವೆ. ಒಂದನೇ ಆಹಾರ ಸರಪಳಿಯಲ್ಲಿ ದವಸ ಧಾನ್ಯಗಳನ್ನು ಇಲಿ, ಹೆಗ್ಗಣಗಳು ಆಹಾರಕ್ಕಾಗಿ ಬಳಸುತ್ತವೆ. ಇಲಿ, ಹೆಗ್ಗಣಗಳನ್ನು ಹಾವು ಬೇಟೆಯಾಡುತ್ತದೆ. ಹಾವನ್ನು ಗಿಡುಗ ಆಹಾರವನ್ನಾಗಿ ಸೇವಿಸುತ್ತದೆ. ಎರಡನೇ ಆಹಾರ ಸರಪಳಿಯಲ್ಲಿ ಸಸ್ಯಗಳನ್ನು ಮೊಲವು ಮೇಯುತ್ತದೆ. ಮೊಲವನ್ನು ಗಿಡುಗವು ಆಹಾರಕ್ಕಾಗಿ ಬೇಟೆಯಾಡುತ್ತದೆ. ಹಾವು ಗಿಡುಗಕ್ಕೆ ತುತ್ತಾಗುತ್ತದೆ. ಮೂರನೇ ಆಹಾರ ಸರಪಳಿಯಲ್ಲಿ ಕೀಟಗಳು ಗಿಡಮರಗಳಿಂದ ಮಕರಂದವನ್ನು ಹೀರುತ್ತವೆ. ಕೀಟಗಳು ಕಪ್ಪೆಗಳಿಗೆ ಆಹಾರವಾಗಿವೆ. ಕಪ್ಪೆಗಳನ್ನು ಹಾವು ಬೇಟೆಯಾಡುತ್ತದೆ. ಐದನೇ ಆಹಾರ ಸರಪಳಿಯಲ್ಲಿ ಕೀಟಗಳನ್ನು ಹಲ್ಲಿಗಳು ಆಹಾರಕ್ಕಾಗಿ ಬೇಟೆಯಾಡುತ್ತವೆ. ಹಲ್ಲಿಗಳು ಗಿಡುಗಗಳಿಗೆ ಆಹಾರವಾಗುತ್ತವೆ. ಹೀಗೆ 5 ಆಹಾರ ಸರಪಳಿಗಳು ಒಂದಕ್ಕೊಂದು ಬಲೆಯ ರೀತಿಯಲ್ಲಿ ಆಂತರಿಕ ಸಂಬಂಧ ಹೊಂದಿರುವುದರಿಂದ ಇದನ್ನು ಆಹಾರ ಜಾಲ ಎಂದು ಕರೆಯುತ್ತೇವೆ.

ಪರಿಸರ ಪಿರಮಿಡ್‌ಗಳು: ಪರಿಸರ ಪಿರಮಿಡ್‌ಗಳನ್ನು ಎಲ್ಟೋನಿಯನ್ ಪಿರಮಿಡ್‌ಗಳೆಂದು ಕರೆಯುವರು. ಆಹಾರ ಸರಪಳಿಯಲ್ಲಿರುವ ಎಲ್ಲ ಪೋಷಣಾ ಹಂತಗಳನ್ನು ಅನುಕ್ರಮವಾಗಿ ಜೋಡಿಸಿದಾಗ ತ್ರಿಭುಜಾಕೃತಿಯ ರೇಖಾಚಿತ್ರ ಲಭ್ಯವಾಗುತ್ತದೆ. ಇದರ ತಳ ಭಾಗವು ಅಗಲವಾಗಿದ್ದು, ತಳಭಾಗದಿಂದ ಮೇಲೇರಿದಂತೆ ಕಿರಿದಾಗುತ್ತದೆ. ಅಗಲವಾದ ತಳ ಮಟ್ಟದಲ್ಲಿ ಪ್ರಥಮ ಪೋಷಣಾ ಹಂತ ಮತ್ತು ಅನಂತರದ ಕಿರಿದಾದ ಉನ್ನತ ಮಟ್ಟದ ಪೋಷಣಾ ಹಂತಗಳನ್ನು ತ್ರಿಭುಜಾಕೃತಿಯ ರೇಖಾಚಿತ್ರದ ಮೂಲಕ ಜೋಡಿಸಿದಾಗ ದೊರಕುವ ಪಿರಮಿಡ್‌ನ್ನು 'ಪರಿಸರ ಪಿರಮಿಡ್' ಎಂದು ಕರೆಯುತ್ತೇವೆ. ಪಿರಮಿಡ್‌ನ ತಳಭಾಗವು ಉತ್ಪಾದಕರುಗಳನ್ನು ಪ್ರತಿನಿಧಿಸಿದರೆ, ನಂತರದ ಪೋಷಣಾ ಹಂತಗಳು ಬಳಕೆದಾರರನ್ನು ಪ್ರತಿಬಿಂಬಿಸುತ್ತವೆ. ಸಾಮಾನ್ಯವಾಗಿ ಪರಿಸರ ಪಿರಮಿಡ್‌ಗಳಲ್ಲಿ ಉತ್ಪಾದಕರಾದ ಸಸ್ಯಗಳನ್ನು ಪ್ರಥಮ ಪೋಷಣಾ ಹಂತದಲ್ಲೂ, ಪ್ರಥಮ ಬಳಕೆದಾರರಾದ ಸಸ್ಯಾಹಾರಿಗಳನ್ನು ದ್ವಿತೀಯ ಪೋಷಣಾ ಹಂತದಲ್ಲೂ ಮತ್ತು ದ್ವಿತೀಯ ಬಳಕೆದಾರರಾದ ಮಾಂಸಾಹಾರಿಗಳನ್ನು ತೃತೀಯ ಪೋಷಣಾ ಹಂತದಿಂದ ಅನುಕ್ರಮವಾಗಿ ಉನ್ನತ ಮಟ್ಟದ ದ್ವಿತೀಯ, ತೃತೀಯ ಹಾಗೂ ಚತುರ್ಥ ಪೋಷಣಾ ಹಂತಕ್ಕೇರುವಾಗ ಜೀವಿಗಳ ಸಂಖ್ಯೆಯಲ್ಲಿ, ಜೈವಿಕ ರಾಶಿಯಲ್ಲಿ ಮತ್ತು ಆಹಾರ ಶಕ್ತಿ ಒದಗುವಿಕೆಯಲ್ಲಿ ಕ್ರಮೇಣವಾಗಿ ಅಗಾಧವಾದ ಕುಸಿತ ಉಂಟಾಗುತ್ತದೆ. ಜೀವಿಗಳ ಸಂಖ್ಯೆ, ಜೀವರಾಶಿ ಮತ್ತು ಶಕ್ತಿಯ ಒದಗುವಿಕೆಯನ್ನು ಅವಲಂಬಿಸಿ ಮೂರು ವಿಧದ ಪರಿಸರ ಪಿರಮಿಡ್ಡುಗಳನ್ನು ಗುರುತಿಸಲಾಗಿದೆ. ಅವು ಯಾವುವೆಂದರೆ,

1. ಸಂಖ್ಯಾ ಪಿರಮಿಡ್ (ಪಿರಮಿಡ್ ಆಫ್ ನಂಬರ್ಸ್)
2. ಜೈವಿಕ ರಾಶಿ ಪಿರಮಿಡ್ (ಪಿರಮಿಡ್ ಆಫ್ ಬೈಯೋಮಾಸ್)
3. ಶಕ್ತಿ ಪಿರಮಿಡ್ (ಪಿರಮಿಡ್ ಆಫ್ ಎನರ್ಜಿ)

1. ಸಂಖ್ಯಾ ಪಿರಮಿಡ್: ಪ್ರತಿ ಪೋಷಣಾ ಹಂತದಲ್ಲಿರುವ ಜೀವಿಗಳ ಸಂಖ್ಯೆಯನ್ನು ಪರಿಗಣಿಸಿ ರಚಿಸಿದ ತ್ರಿಭುಜಾಕೃತಿಯ ರೇಖಾಚಿತ್ರಕ್ಕೆ 'ಸಂಖ್ಯಾ ಪಿರಮಿಡ್' ಎಂದು ಹೆಸರು. ಸಂಖ್ಯಾ ಪಿರಮಿಡ್‌ಗಳಲ್ಲಿ ಎರಡು ರೀತಿಯ ಪಿರಮಿಡ್‌ಗಳಿವೆ. 1) ನೇರ ಸಂಖ್ಯಾ ಪಿರಮಿಡ್ 2) ತಲೆಕೆಳಗಾದ ಸಂಖ್ಯಾ ಪಿರಮಿಡ್. ನೇರ ಸಂಖ್ಯಾ ಪಿರಮಿಡ್‌ಗಳು ತಳಮಟ್ಟದಲ್ಲಿ ಅಗಲವಾಗಿದ್ದು, ಶೃಂಗದಲ್ಲಿ ಕಿರಿದಾಗಿರುತ್ತವೆ. ಪ್ರಥಮ ಪೋಷಣಾ ಹಂತದಲ್ಲಿ ಜೀವಿಗಳ ಸಂಖ್ಯೆಯು ಅತೀ ಹೆಚ್ಚಾಗಿದ್ದು, ನಂತರದ ಉನ್ನತ ಪೋಷಣಾ ಹಂತಗಳಲ್ಲಿ ಕ್ರಮೇಣ ಕಡಿಮೆಯಾಗುತ್ತಾ ನಾಲ್ಕನೇ ಅಥವಾ ಐದನೇ ಪೋಷಣಾ ಹಂತಗಳಲ್ಲಿ ಜೀವಿಗಳ ಸಂಖ್ಯೆಯು ಅತೀ ಕಡಿಮೆ ಇರುತ್ತದೆ. ಉದಾ: (ಚಿತ್ರ 5) ಹುಲ್ಲು ಗಾವಲಿನ ಪ್ರಥಮ ಪೋಷಣಾ ಹಂತದಲ್ಲಿ ಸು. ಒಂದು ಕೋಟಿ ಹುಲ್ಲು ಸಸ್ಯಗಳು ಇವೆ ಅಂದುಕೊಂಡರೆ ದ್ವಿತೀಯ ಪೋಷಣಾ ಹಂತದಲ್ಲಿ ಒಂದು ನೂರು ಜಿಂಕೆಗಳಿರುತ್ತವೆ. ತೃತೀಯ ಪೋಷಣಾ ಹಂತದಲ್ಲಿ ಸು. 4 ಸಿಂಹಗಳಿರಬಹುದು. ಹೀಗೆ ಪ್ರತಿಯೊಂದು ಪೋಷಣಾ ಹಂತದಲ್ಲೂ ಜೀವಿಗಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗುತ್ತದೆ. ಎರಡನೆಯದು ತಲೆಕೆಳಗಾದ ಸಂಖ್ಯಾ ಪಿರಮಿಡ್. ಇಲ್ಲಿ ತಳಭಾಗವು ಕಿರಿದಾಗಿದ್ದು, ಶೃಂಗವು ಅಗಲವಾಗಿರುತ್ತದೆ. ಅಂದರೆ, ಉತ್ಪಾದಕರ ಸಂಖ್ಯೆ ಕಡಿಮೆ ಇದ್ದು, ಬಳಕೆದಾರರ ಸಂಖ್ಯೆಯು ಪ್ರತಿಯೊಂದು ಪೋಷಣಾ ಹಂತದಲ್ಲೂ ಹೆಚ್ಚುತ್ತಾ ಹೋಗುತ್ತದೆ. ಉದಾ: ಪರಾವಲಂಬಿ ಆಹಾರ ಸರಪಳಿಯಲ್ಲಿ ಪ್ರಥಮ ಪೋಷಣಾ ಹಂತದಲ್ಲಿರುವ ಒಂದೇ ಮರದಲ್ಲಿ ದ್ವಿತೀಯ ಪೋಷಣಾ ಹಂತದಲ್ಲಿರುವ (ಪ್ರಥಮ ಬಳಕೆದಾರ) ಹಣ್ಣು ತಿನ್ನುವ ಹತ್ತು ಪಕ್ಷಿಗಳು ವಾಸ ಮಾಡುತ್ತವೆ. ಪ್ರತಿಯೊಂದು ಪಕ್ಷಿಯಲ್ಲೂ ಸು. ಒಂದು ಲಕ್ಷಕ್ಕೂ ಮಿಗಿಲಾಗಿ ಹಕ್ಕಿ ಹೇನುಗಳು ಬಾಹ್ಯ ಪರಾವಲಂಬಿಗಳಾಗಿರುತ್ತವೆ. ಪ್ರತಿಯೊಂದು ಹಕ್ಕಿ ಹೇನಿನಲ್ಲೂ ಕೋಟಿಗಟ್ಟಲೆ ಬ್ಯಾಕ್ಟೀರಿಯಾಗಳಿರುತ್ತವೆ.







ಚಿತ್ರ
ಹುಲ್ಲುಗಾವಲಿನ ಶಕ್ತಿ ಪಿರಮಿಡ್

ಚಿತ್ರ
ಹುಲ್ಲುಗಾವಲಿನ ಜೈವಿಕ ಪಿರಮಿಡ್

2. ಜೈವಿಕ ಪಿರಮಿಡ್: ಒಣ ರೂಪದ ಸಾವಯವ ವಸ್ತುಗಳ ಒಟ್ಟು ತೂಕವೇ 'ಜೈವಿಕ ರಾಶಿ'. ಇದನ್ನು ಸಾಮಾನ್ಯವಾಗಿ ಹೆಕ್ಟೇರ್ ಪ್ರಮಾಣದಲ್ಲಿ ನಮೂದಿಸಲಾಗುವುದು. ಪ್ರಥಮ ಪೋಷಣಾ ಹಂತಕ್ಕಿಂತ, ದ್ವಿತೀಯ ಪೋಷಣಾ ಹಂತದಲ್ಲಿ ಜೈವಿಕ ರಾಶಿಯ ತೂಕದಲ್ಲಿ ಕಡಿಮೆ ಇದೆ. ತೃತೀಯ ಹಾಗೂ ನಾಲ್ಕನೇ ಪೋಷಣಾ ಹಂತಗಳಲ್ಲಿ ಜೈವಿಕ ರಾಶಿಯ ತೂಕವು ಇನ್ನೂ ಕಡಿಮೆಯಾಗುತ್ತದೆ. ಈ ಎಲ್ಲಾ ಪೋಷಣ ಹಂತಗಳನ್ನು ಜೋಡಿಸಿದಾಗ ಅಗಲವಾದ ತಳಪಾಯದ ಹಾಗೂ ಕಿರಿದಾದ ಶೃಂಗವಿರುವ ತ್ರಿಭುಜಾಕೃತಿಯ ರೇಖಾಚಿತ್ರವು ರಚನೆಯಾಗುತ್ತದೆ. ಇದೇ ಜೈವಿಕರಾಶಿ ಪಿರಮಿಡ್. ಉದಾ: ಹುಲ್ಲುಗಾವಲಿನಲ್ಲಿ ಪ್ರಥಮ ಪೋಷಣಾ ಹಂತದಲ್ಲಿ ಉತ್ಪಾದಕರಾದ ಹುಲ್ಲು ಪ್ರತಿ ಹೆ. ಸು. 5000 ಕಿಗ್ರಾಂ ಲಭಿಸಿದರೆ, ದ್ವಿತೀಯ ಪೋಷಣಾ ಹಂತದಲ್ಲಿ ಸಸ್ಯಾಹಾರಿ ಕೀಟಗಳು ಪ್ರತಿ ಹೆ ಸು. 200 ಕಿಗ್ರಾಂ ದೊರಕುತ್ತವೆ. ತೃತೀಯ ಪೋಷಣಾ ಹಂತದಲ್ಲಿ ದ್ವಿತೀಯ ಬಳಕೆದಾರರಾದ ಕಪ್ಪೆಗಳು ಪ್ರತಿ ಹೆ 50 ಕಿಗ್ರಾಂ ದೊರಕಿದರೆ, ನಾಲ್ಕನೇ ಪೋಷಣಾ ಹಂತದಲ್ಲಿ ಪಕ್ಷಿಗಳು ಸು. 5 ಕಿಗ್ರಾಂ ದೊರಕಬಹುದು. ಹೀಗೆ ಜೈವಿಕರಾಶಿ ಪಿರಮಿಡ್‌ನ ತಳಭಾಗದಿಂದ ಶೃಂಗದವರೆಗೆ ಅವಲೋಕಿಸಿದಾಗ ಪ್ರತಿಯೊಂದು ಪೋಷಣಾ ಹಂತದಲ್ಲೂ ಜೈವಿಕ ರಾಶಿಯಲ್ಲಿ ಇಳಿಮುಖವಾಗುತ್ತದೆ.

3. ಶಕ್ತಿ ಪಿರಮಿಡ್: ತಳ ಮಟ್ಟದ ಪೋಷಣಾ ಹಂತಗಳಿಂದ ಅನುಕ್ರಮವಾಗುತ್ತದೆ. ಉನ್ನತ ಪೋಷಣಾ ಹಂತಗಳಿಗೆ ಸಾಗುವ ಶಕ್ತಿಯ ಪ್ರಮಾಣವನ್ನು ಆಧರಿಸಿ ರಚಿಸುವ

ಪಿರಮಿಡ್‌ಗೆ ಶಕ್ತಿ ಪಿರಮಿಡ್ ಎಂದು ಹೆಸರು. ಪ್ರಥಮ ಪೋಷಣಾ ಹಂತವನ್ನು ಉತ್ಪಾದಕರುಗಳು, ದ್ವಿತೀಯ ಪೋಷಣಾ ಹಂತದಲ್ಲಿ ಸಸ್ಯಾಹಾರಿಗಳು, ಹಾಗೂ ತೃತೀಯ ಪೋಷಣಾ ಹಂತದಲ್ಲಿ ಮಾಂಸಾಹಾರಿಗಳನ್ನು ನಮೂದಿಸಲಾಗುತ್ತದೆ. ಹೀಗೆ ಪ್ರಥಮ ಪೋಷಣಾ ಹಂತದಿಂದ ಅನಂತರದ ಉನ್ನತ ಪೋಷಣಾ ಹಂತಕ್ಕೇರುವಾಗ ಶಕ್ತಿಯ ಒದಗುವಿಕೆಯಲ್ಲಿ ಗಣನೀಯವಾದ ಕೊರತೆ ಉಂಟಾಗುತ್ತದೆ. ಕಾರಣ, ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದ ಶಕ್ತಿಯು (ಪ್ರತಿ ಶತ. 80–90) ಪ್ರತಿ ತಾಪದ ರೂಪದಲ್ಲಿ ಪ್ರತಿಯೊಂದು ಪೋಷಣಾ ಹಂತದಲ್ಲೂ ವ್ಯಯವಾಗುತ್ತದೆ. ಉದಾ: ಹುಲ್ಲುಗಾವಲಿನಲ್ಲಿ ಪ್ರಥಮ ಪೋಷಣಾ ಹಂತದಲ್ಲಿ ಉತ್ಪಾದಕರುಗಳಾದ ಹುಲ್ಲು ಚಮೀಗೆ ಸು. 5000 ಕ್ಯಾಲೋರಿ ಶಕ್ತಿಯನ್ನು ಒದಗಿಸಬಲ್ಲವು. ದ್ವಿತೀಯ ಪೋಷಣಾ ಹಂತದಲ್ಲಿ ಬಳಕೆದಾರರು ಮತ್ತು ಸಸ್ಯಾಹಾರಿಗಳಾದ ಕೀಟಗಳು ಸು. 5000 ಕ್ಯಾಲೋರಿ ಶಕ್ತಿಯನ್ನು ಒದಗಿಸಬಲ್ಲುವು. ತೃತೀಯ ಪೋಷಣಾ ಹಂತದಲ್ಲಿ ದ್ವಿತೀಯ ಬಳಕೆದಾರರು ಹಾಗೂ ಮಾಂಸಾಹಾರಿಗಳಾದ ಕಪ್ಪೆಗಳು ಚಮಿ ಗೆ ಸು. 50 ಕ್ಯಾಲೋರಿ ಶಕ್ತಿಯನ್ನು ನೀಡಬಲ್ಲುವು. ಆದರೆ ನಾಲ್ಕನೇ ಪೋಷಣಾ ಹಂತದಲ್ಲಿ ತೃತೀಯ ಬಳಕೆದಾರರಾದ ಪಕ್ಷಿಗಳು ಚಮೀಗೆ ಕೇವಲ 5 ಕ್ಯಾಲೋರಿ ಶಕ್ತಿಯನ್ನು ಬಿಡುಗಡೆ ಮಾಡಬಲ್ಲುವು. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಪ್ರತಿಯೊಂದು ಪೋಷಣಾ ಹಂತದಲ್ಲೂ ಗಣನೀಯವಾಗಿ ಶಕ್ತಿಯ ಕೊರತೆ ಕಂಡು ಬರುತ್ತದೆ. ಇದರಿಂದ ಪ್ರತಿಯೊಂದು ಪೋಷಣಾ ಹಂತದಲ್ಲೂ ಅಗಾಧ ಪ್ರಮಾಣದ ಶಕ್ತಿಯು ಶಾಖದ ರೂಪದಲ್ಲಿ ನಷ್ಟವಾಗುತ್ತದೆ. ಇದರಿಂದಾಗಿ ತಳ ಮಟ್ಟದ ಪೋಷಣಾ ಹಂತದಲ್ಲಿ ಹೆಚ್ಚಿನ ಶಕ್ತಿ ದೊರೆತರೂ, ಅನಂತರದ ಪೋಷಣಾ ಹಂತಗಳಲ್ಲಿ ದೊರಕುವ ಶಕ್ತಿಯ ಪ್ರಮಾಣವು ಕಡಿಮೆಯಾಗುತ್ತಾ ಹೋಗುತ್ತದೆ.




ಚಿತ್ರ 5.
ನೇರ ಸಂಖ್ಯಾ ಪಿರಮಿಡ್
(ಹುಲ್ಲು ಗಾವಲು)

ಚಿತ್ರ 6.
ತಲೆಕೆಳಗಾದ ಸಂಖ್ಯಾ ಪಿರವಿಡ್
(ಬಿ.ಪಿ.)

**ಇಂಗಾಲ ಚಕ್ರ (ಪ್ರಾಣಿವಿಜ್ಞಾನದಲ್ಲಿ):** ವಾಯುಮಂಡಲದಲ್ಲಿರುವ ಇಂಗಾಲದ ಡೈಆಕ್ಸೈಡ್ ಸಸ್ಯಗಳನ್ನು ಸೇರಿ ದ್ಯುತಿಸಂಶ್ಲೇಷಣೆಯಿಂದ ಕಾರ್ಬೊಹೈಡ್ರೇಟುಗಳಾಗಿ ಪರಿವರ್ತನೆಗೊಂಡು ಮುಂದೆ ಪ್ರಾಣಿಗಳ ದೇಹಗಳನ್ನು ಪ್ರವೇಶಿಸಿ ಅಲ್ಲಿನ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ಕೊನೆಗೆ ವಾಯುಮಂಡಲವನ್ನು ಇಂಗಾಲದ ಡೈಆಕ್ಸೈಡ್ ರೂಪದಲ್ಲಿಯೇ ಸೇರುವ ಪ್ರಕ್ರಿಯೆ.

ಘನರೂಪದ ಇಂಗಾಲ ಜೀವಿಯ ದೇಹವನ್ನು ನೇರವಾಗಿ ಸೇರಲಾರದು. ಅದು ಆಮ್ಲಜನಕದೊಡನೆ ಸಂಯೋಜನೆ ಹೊಂದಿ ಇಂಗಾಲದ ಡೈಆಕ್ಸೈಡ್ ರೂಪ ತಾಳಿದರೆ ಮಾತ್ರ ಜೀವಜಗತ್ತಿನ ಒಂದು ಭಾಗವಾಗಿ ಜೀವದ್ರವ್ಯದ ನಿರ್ಮಾಣದಲ್ಲಿ ಪಾಲುಗೊಳ್ಳುವುದು ಸಾಧ್ಯ. ಜೀವಜಗತ್ತನ್ನು ಆವರಿಸಿರುವ ವಾಯುಮಂಡಲದಲ್ಲಿ ಈ ಅನಿಲದ ಉಗ್ರಾಣ ಹುದುಗಿದೆ. ವಾಯುವಿನಲ್ಲಿ ಇದರ ಅಂಶ ಸುಮಾರು 0.04%. ಇಂಗಾಲದ ಡೈಆಕ್ಸೈಡ್ ಕೇವಲ ವಾಯುವಿನಲ್ಲಿ ಸೀಮಿತವಾಗಿರದೆ, ಸ್ವಲ್ಪಭಾಗ ನೀರಿನಲ್ಲಿಯೂ ಲೀನವಾಗಿ ಕಾರ್ಬೊನಿಕ್ ಅಮ್ಲವಾಗುತ್ತದೆ. ಈ ಆಮ್ಲ ಅನತಿಕಾಲದಲ್ಲಿಯೇ ಕಾರ್ಬೊನೇಟು ($CO_3^{--}$) ಮತ್ತು ಬೈಕಾರ್ಬೊನೇಟುಗಳಾಗಿ ($HCO_3^-$) ಮಾರ್ಪಡುತ್ತದೆ.

ಜೀವಜಗತ್ತಿನಲ್ಲಿ ಹಸಿರು ಸಸ್ಯಗಳು ಮಾತ್ರ ವಾಯುಮಂಡಲದ ಇಂಗಾಲದ ಡೈಆಕ್ಸೈಡನ್ನು ಸೆರೆಹಿಡಿದು ತಮಗೆ ಬೇಕಾದ ಆಹಾರ ಸಾಮಗ್ರಿಯನ್ನು ಸಂಶ್ಲೇಷಿಸಿಕೊಳ್ಳುವ ಸಾಮರ್ಥ್ಯ ಪಡೆದಿವೆ. ಸಸ್ಯಗಳು ವಾಯುಮಂಡಲದಲ್ಲಿರುವ ಇಂಗಾಲದ ಡೈಆಕ್ಸೈಡನ್ನು ತಮ್ಮ ಪತ್ರರಂಧ್ರಗಳ ಮೂಲಕ ಹೀರಿ, ತಮ್ಮ ಬೇರುಗಳಿಂದ ನೀರನ್ನು ಶೋಷಿಸಿಕೊಂಡು ಅಸಿದ್ಧ ವಸ್ತುಗಳನ್ನು ಹಸಿರಿಗೆ ಕಾರಣವಾದ ಹರಿತ್ತುಗಳಿಗೆ ಸಾಗಿಸಿ, ಸೂರ್ಯಪ್ರಕಾಶದ ನೆರವಿನಿಂದ ಗ್ಲೂಕೋಸ್ ರೂಪದ ಸರಳ ಸಕ್ಕರೆಯಾಗಿ ಪರಿವರ್ತಿಸುತ್ತವೆ. ಇಂಥ ಸಿದ್ಧರೂಪದ ಪದಾರ್ಥದಲ್ಲಿ ಸೌರಶಕ್ತಿ ಸ್ಥಿತಿರೂಪದಲ್ಲಿ ಬಂಧನವಾಗಿರುತ್ತದೆ. ಈ ಬಗೆಯ ಆಹಾರ ನಿರ್ಮಾಣದ ಪ್ರಕ್ರಿಯೆಗೆ ದ್ಯುತಿಸಂಶ್ಲೇಷಣೆ ಎಂದು ಹೆಸರು. ಇದರ ಫಲವಾಗಿ ಸರಳರೂಪದ ಕಾರ್ಬೊಹೈಡ್ರೇಟುಗಳು (ಪಿಷ್ಟ ಪದಾರ್ಥಗಳು) ಸಂಶ್ಲೇಷಣೆಗೊಳ್ಳುವುದಲ್ಲದೆ ಆಮ್ಲಜನಕ ಉತ್ಪತ್ತಿಯಾಗಿ ಸಸ್ಯದೇಹದಿಂದ ಹೊರಬಂದು ವಾಯುಮಂಡಲವನ್ನು ಸೇರುತ್ತದೆ.

$$6CO_2 + 6H_2O \xrightarrow[\text{ಪತ್ರಹರಿತ್ತು}]{\text{ಸೌರಶಕ್ತಿ}} C_6H_{12}O_6 + 6H_2O$$

ಹೀಗೆ ಬಿಡುಗಡೆಯಾದ ಆಮ್ಲಜನಕ ಜೀವಿಗಳ ಉಸಿರಾಟಕ್ಕೂ ಮತ್ತು ಸೇಂದ್ರಿಯ ಪದಾರ್ಥಗಳ ದಹನಕ್ಕೂ ಅತ್ಯಾವಶ್ಯಕ. ಇತರ ಸಂಶ್ಲೇಷಣ ಕ್ರಿಯಾವಾಹಿನಿಯಲ್ಲಿ ಲವಣಾಂಶಗಳೂ ಕೂಡಿ ಶರ್ಕರಪದಾರ್ಥ, ಪಿಷ್ಟಪದಾರ್ಥ, ಸೆಲ್ಯುಲೋಸ್, ಎಣ್ಣೆ, ಮೇದಸ್ಸು, ಲಿಪಿಡ್, ಅಮೈನೊ ಆಮ್ಲ ಮೊದಲಾದ ಸೇಂದ್ರಿಯ ವಸ್ತುಗಳು ಸಂಶ್ಲೇಷಣೆಗೊಳ್ಳುತ್ತವೆ. ಇವೆಲ್ಲ ವಸ್ತುಗಳು ತಮಗಾಗಿ ತಯಾರಿಸಿಕೊಂಡ ಪೌಷ್ಟಿಕ ಆಹಾರವಸ್ತುಗಳು. ಇವುಗಳ ನೆರವಿನಿಂದಲೇ ಸಸ್ಯಗಳು ತಮ್ಮ ಜೀವದ್ರವ್ಯವನ್ನು ಸಂರಕ್ಷಿಸಿಕೊಳ್ಳುತ್ತವೆ.

ಹಸಿರಿಲ್ಲದ ಸಸ್ಯ, ಪರತಂತ್ರ ಸಸ್ಯ ಹಾಗೂ ಪ್ರಾಣಿಗಳಿಗೆ ಆಹಾರ ಬೇಕು. ಅವು ತಮ್ಮ ದೇಹದಲ್ಲಿ ಅಸಿದ್ಧವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ತಯಾರಿಸಿಕೊಳ್ಳಲು ಬೇಕಾದ ಸಾಮರ್ಥ್ಯ, ರಚನೆಗಳನ್ನು ಪಡೆದಿರುವುದಿಲ್ಲವಾದ್ದರಿಂದ ಹಸಿರು ಸಸ್ಯಗಳಮೇಲೆ ಪರಾವಲಂಬಿಗಳಾಗಿವೆ. ಪ್ರಾಣಿಗಳಲ್ಲಿ ಆಹಾರ ಸೇವನೆ ಹಲವು ಬಗೆ. ಹಸು, ಕುರಿ, ಮೇಕೆ, ಜಿಂಕೆಗಳು ಸಸ್ಯಾಹಾರಿಗಳು. ಮಾಂಸಾಹಾರಿ ಪ್ರಾಣಿಗಳು (ಹುಲಿ, ಚಿರತೆ, ಕಪ್ಪೆ) ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಸಸ್ಯಗಳನ್ನು ತಿನ್ನುತ್ತವೆ. ಸಸ್ಯವನ್ನು ತಿಂದು ಜೀವಿಸುವ ಜಿಂಕೆಯನ್ನು ಹುಲಿ ತಿನ್ನುತ್ತದೆ. ಈ ಪರಭಕ್ಷ ಜೀವನದ ಸಂಬಂಧದಲ್ಲಿ ಆಹಾರ ಸರಪಣಿಯನ್ನು ಗುರುತಿಸಬಹುದು. ಈ ಆಹಾರ ಸರಪಣಿಗಳು ಎಷ್ಟೇ ಹ್ರಸ್ವ ಇರಲಿ ಅಥವಾ ದೀರ್ಘ ಇರಲಿ, ಸದಾ ಆಹಾರೋತ್ಪಾದಕ ಸಸ್ಯಗಳಿಂದಲೇ ಪ್ರಾರಂಭವಾಗುತ್ತವೆ. ಸರಪಣಿಯ ಪ್ರತಿ ಹಂತದಲ್ಲೂ ಪರಭಕ್ಷಿಯ ದೇಹದಲ್ಲಿ ಆಹಾರ ರೂಪದ ಸೇಂದ್ರಿಯ ಪದಾರ್ಥಗಳು ಜೀರ್ಣವಾಗಿ ಅದರಿಂದ ಹೊಸ ಸಾವಯವ ಸಂಕೀರ್ಣ ವಸ್ತುಗಳು ಪುನರ್‌ಸಂಶ್ಲೇಷಣೆಗೊಳ್ಳುತ್ತವೆ. ಹೀಗೆ ಒಂದು ಜೀವಿಯ ದೇಹ ನಿರ್ಮಾಣದಲ್ಲಿ ಭಾಗಿಯಾಗಿದ್ದ ಇಂಗಾಲ ಆಹಾರ ಸರಪಣಿಯನ್ನನುಸರಿಸುತ್ತ ಪರಭಕ್ಷಿಯ ದೇಹನಿರ್ಮಾಣದಲ್ಲಿಯೂ ಪಾಲ್ಗೊಳ್ಳಬಹುದು.

ಪ್ರತಿಯೊಂದು ಜೀವಿಯಲ್ಲಿಯೂ ಪಚನ ಮತ್ತು ಶ್ವಸನ ಕ್ರಿಯಾಚಟುವಟಿಕೆಗಳ ನೆರವಿನಿಂದ ಸರಳರೂಪದ ಇಂಗಾಲಯುಕ್ತ ಆಹಾರ ಪದಾರ್ಥಗಳ ಉತ್ಕರ್ಷಣೆಯಾಗುತ್ತದೆ.

$$C_6H_{12}O_6 + 6O_2 \rightarrow 6CO_2 + 6H_2O + \text{ಶಕ್ತಿ}$$

ಹಂತಹಂತವಾಗಿ ಸಾಗುವ ದಹನದಲ್ಲಿ ಇಂಗಾಲದ ಡೈಆಕ್ಸೈಡ್ ಮತ್ತು ನೀರಿನ ಅಣುಗಳು ರೂಪುಗೊಂಡು ಹೊರಬರುವುವಲ್ಲದೆ ಆಹಾರ ಪದಾರ್ಥದಲ್ಲಿ ಹುದುಗಿರುವ ಸ್ಥಿತಿರೂಪದ ಸೌರಶಕ್ತಿ ಗತಿಶಕ್ತಿಯಾಗಿ ಮಾರ್ಪಟ್ಟು ದೇಹದಲ್ಲಿ ಬಿಡುಗಡೆಯಾಗುತ್ತದೆ. ಈ ಶಕ್ತಿಯ ನೆರವಿನಿಂದ ಮಾತ್ರ ಜೀವಿಯ ಎಲ್ಲ ಚಟುವಟಿಕೆಗಳು ಜರುಗುವುದು ಸಾಧ್ಯ. ಹೀಗೆ ಜೀವಿಗಳ ಶ್ವಸನ ಕ್ರಿಯೆಯಿಂದ ಇಂಗಾಲದ ಡೈಆಕ್ಸೈಡ್ ಸದಾ ವಾಯುಮಂಡಲಕ್ಕೆ ಅಥವಾ ನೀರಿಗೆ ಹಿಂತಿರುಗುತ್ತಿರುತ್ತದೆ. ಇದಲ್ಲದೆ ಪ್ರಾಣಿಗಳು ಮೂತ್ರದ ಮೂಲಕ ಯೂರಿಯ ಮತ್ತು ಯೂರಿಕ್ ಆಮ್ಲಗಳನ್ನು ವಿಸರ್ಜನೆ ಮಾಡುತ್ತಿರುತ್ತವೆ. ಈ ವಿಸರ್ಜನಾವಸ್ತುಗಳು ಇಂಗಾಲಸಂಬಂಧವಾದುದರಿಂದ ಇವು ಕೊನೆಗೆ ನಿಸರ್ಗದಲ್ಲಿ ಇಂಗಾಲದ ಡೈಆಕ್ಸೈಡ್ ಮತ್ತು ಅಮೋನಿಯ ಆಗಿ ವಿಭಜನೆ ಹೊಂದಿ ಬೇರ್ಪಡುತ್ತವೆ.

ಆದರೆ ಹಸಿರು ಸಸ್ಯಗಳು ದ್ಯುತಿಸಂಶ್ಲೇಷಣೆಯಿಂದ ಸೆರೆಹಿಡಿದ ಇಂಗಾಲದ ಡೈಆಕ್ಸೈಡ್ ಪ್ರಮಾಣ ಎಲ್ಲ ಜೀವರಾಶಿಗಳ ಪಚನ, ಶ್ವಸನ ಮತ್ತು ವಿಸರ್ಜನೆ ಚಟುವಟಿಕೆಗಳಿಂದ ವಾಯುಮಂಡಲಕ್ಕೆ ಹಿಂತಿರುಗಿದ ಇಂಗಾಲದ ಡೈಆಕ್ಸೈಡ್ ಪ್ರಮಾಣ ಸರಿದೂಗಲಾರದು. ಇಂಗಾಲದ ಬಹುಭಾಗ ಸಜೀವಿಯ ದೇಹನಿರ್ಮಾಣದಲ್ಲಿ ಭಾಗವಹಿಸುವುದರಿಂದ ಆ ಜೀವಿ ಸತ್ತುಹೋದರೆ ಇಂಗಾಲ ಬಂಧನಸ್ಥಿತಿಯಲ್ಲಿ ಉಳಿದುಬಿಡುತ್ತದೆ. ಶಾಶ್ವತವಾಗಿ ಕ್ರಿಯಾಹಂತದಲ್ಲಿ ಮುಂದುವರಿಯದೆ ಇಂಗಾಲ ಸಂಗ್ರಹವಾಗಿ ನಿಂತುಬಿಟ್ಟರೆ ಜೀವಜಗತ್ತಿಗೆ ಅಂತ್ಯ ಖಂಡಿತ. ಆದರೆ ಕೊಳೆಸುವ ಬ್ಯಾಕ್ಟೀರಿಯ ಮತ್ತು ಶಿಲೀಂಧ್ರಗಳು ಸತ್ತಜೀವಿಯ ದೇಹವನ್ನು ಕೊಳೆಯಿಸುವುದರಿಂದ ಮತ್ತು ಹುಳಿಗೊಳಿಸುವುದರಿಂದ ಸೇಂದ್ರಿಯ ಪದಾರ್ಥಗಳು ವಿಚ್ಛಿದ್ರಗೊಂಡು ಇಂಗಾಲದ ಡೈಆಕ್ಸೈಡ್ ಆಗಿ ಪರಿವರ್ತನೆ ಹೊಂದಿ ಪರಿಸರಕ್ಕೆ ಮತ್ತೆ ಹಿಂತಿರುಗುತ್ತವೆ. ತನ್ಮೂಲಕ ಇಂಗಾಲದ ಬಿಡುಗಡೆಯಾಗುತ್ತದೆ. ಇದಲ್ಲದೆ ಸೌದೆ, ಮರಮುಟ್ಟುಗಳನ್ನು ಬೆಂಕಿಯಿಂದ ದಹಿಸುವಾಗಲೂ ಮರದ ಸೆಲ್ಯುಲೋಸ್ ಮತ್ತಿತರ ಸಾವಯವ ಪದಾರ್ಥಗಳಲ್ಲಿ ಹುದುಗಿರುವ ಇಂಗಾಲ ಮುಕ್ತಿ ಹೊಂದಿ ಇಂಗಾಲದ ಡೈಆಕ್ಸೈಡ್ ರೂಪದಲ್ಲಿ ಹೊರಬೀಳುತ್ತದೆ.

ಸತ್ತ ಜೀವಿಯ ದೇಹದ ಸ್ವಲ್ಪಭಾಗ ಭೂಪದರಲ್ಲಿ ಹುದುಗಿ ಹೋದ ಪಕ್ಷದಲ್ಲಿ ಅದು ಉಷ್ಣ, ಒತ್ತಡ ಮತ್ತಿತರ ಭೌತ ಚಟುವಟಿಕೆಗಳಿಂದ ಕಲ್ಲಿದ್ದಲು, ಪೆಟ್ರೋಲಿಯಂ, ಇತ್ಯಾದಿಯಾಗಿ ಪರಿವರ್ತನೆ ಹೊಂದಬಹುದು. ಈ ಪಳೆಯುಳಿಕೆ ಸೌದೆಯನ್ನು ಮನೆಮಠಗಳಲ್ಲಿ, ಗಿರಣಿ, ಕಾರ್ಖಾನೆಗಳಲ್ಲಿ, ರೈಲು, ಮೋಟಾರು ಮತ್ತು ವಿಮಾನಗಳ ಸಂಚಾರದಲ್ಲಿ ಉರಿಸುವುದರಿಂದ ಅದರಲ್ಲಿ ಅಡಗಿರುವ ಇಂಗಾಲದ ಬಿಡುಗಡೆಯಾಗುತ್ತದೆ. ಕೊನೆಯದಾಗಿ, ಕೆಲವು ಬಗೆಯ ಜೀವಿಯ ಚಟುವಟಿಕೆಗಳಿಂದ (ಹವಳದ ಪ್ರಾಣಿಗಳು) ನಿರ್ಮಿತವಾದ ಕಾರ್ಬೊನೇಟ್ ಶಿಲೆಯ ದಿಬ್ಬಗಳು, ಅಮೃತಶಿಲೆಯ ಪದರಗಳು ಕ್ರಮವಾಗಿ ಆಮ್ಲೀಯ ಕ್ರಿಯೆಯಿಂದ ಮತ್ತು ಭೂ ಸವಕಳಿಯಿಂದ ಇಂಗಾಲದ ಡೈಆಕ್ಸೈಡನ್ನು ವಾಯುಮಂಡಲಕ್ಕೆ ಮತ್ತೆ ಕಳಿಸುತ್ತವೆ. ಹೀಗೆ ವಿವಿಧ ಮಾರ್ಗಗಳಲ್ಲಿ ಬಿಡುಗಡೆಯಾದ ಇಂಗಾಲದ ಡೈಆಕ್ಸೈಡನ್ನು ಹಸಿರು ಸಸ್ಯಗಳು ಮರಳಿ ತಮ್ಮ ಆಹಾರಕ್ಕಾಗಿ ಸೆರೆಹಿಡಿಯುತ್ತವೆ. ಇಂಗಾಲದ ಚಕ್ರ ಮುಂದುವರಿಯುತ್ತ ಹೋಗುತ್ತದೆ. ಈ ಭೂಮಿಯ ಮೇಲೆ ಜೀವಿ ಉದ್ಭವಿಸಿ ಪ್ರಾರಂಬಿಸಿದ ಈ ಚಕ್ರ ಎಡೆಬಿಡದೆ ತಿರುಗುತ್ತ ಸಾಗುತ್ತಲಿದೆ. (ಬಿ.ಎನ್.ಬಿ.)

**ಇಂಟರ್ ಫೆರಾನ್:** ಕಶೇರುಕ ಪ್ರಾಣಿಗಳಿಗೆ (ವರ್ಟಿಬ್ರೇಟ್ಸ್) ಇನ್‌ಫ್ಲುಯೆಂಜ ಅಥವಾ ಸೋಂಕು ರೋಗಗಳು ಅಂಟಿದಾಗ ರೋಗಾಣುಗಳ ನಂಜಿನ ಬೆಳೆವಣಿಗೆಯನ್ನು ತಡೆಗಟ್ಟಲು ಕೋಶಗಳಲ್ಲಿ ಉತ್ಪನ್ನವಾಗುವ ರಕ್ಷಣಾ ಪ್ರೋಟೀನ್. ಆಂಗ್ಲ ಭಾಷೆಯಲ್ಲಿ ಇಂಟರ್‌ಫಿಯರ್ ಅರ್ಥ ತಡೆಗಟ್ಟು. ಅಲಿಕ್ ಇಸಾಕ್ಸ್ ಜೀವ ರಸಾಯನ ವಿಜ್ಞಾನಿ 1957ರಲ್ಲಿ ಇದನ್ನು ಕಂಡುಹಿಡಿದ. ನಂಜು ಪ್ರಥಮಬಾರಿಗೆ ಸೋಂಕಿದ 24 ಗಂಟೆಗಳಲ್ಲಿ ದೇಹದ ಕೋಶಗಳು ಈ ವಸ್ತುವನ್ನು ಉತ್ಪಾದಿಸುತ್ತವೆ. ಎರಡನೆಯ ಬಾರಿಗೆ ರೋಗಾಣುಗಳು ಸೋಂಕಿದಾಗ ಇದರ ಉತ್ಪತ್ತಿ ಅಧಿಕವಾಗಿ ನಂಜು ಸೋಂಕಿದ 78–90 ಗಂಟೆಗಳ ನಂತರ ಉನ್ನತ ಮಟ್ಟ ತಲುಪಿ, ಅನಂತರ ತಗ್ಗುತ್ತದೆ. ಇಂಟರ್‌ಫೆರಾನ್ ಉತ್ಪತ್ತಿಗೆ ಕಾರಣವಾದ ನಂಜಾಣುಗಳ ಬೆಳೆವಣಿಗೆಯನ್ನೂ ತಡೆಗಟ್ಟುತ್ತದೆ. ಇನ್‌ಫ್ಲುಯಂಜ ನಂಜಿನ ತರಹದ ಆರ್‌ಎನ್‌ಎ (ರೈಬೊನ್ಯೂಕ್ಲಿಯಿಕ್ ಆಮ್ಲ) ಗಳನ್ನೊಳಗೊಂಡ ನಂಜಾಣುಗಳ ಮತ್ತು ಸಿಡುಬು ನಂಜಿನ ತರಹದ ಡಿಎನ್‌ಎ (ಡಿ ಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ) ಗಳನ್ನೊಳಗೊಂಡ ನಂಜಾಣುಗಳ ಬೆಳೆವಣಿಗೆಯನ್ನು ಇಂಟರ್‌ಫೆರಾನ್ ತಡೆಗಟ್ಟುತ್ತದೆ. ಕಾರಣ ಇಂಟರ್‌ಫೆರಾನ್ ಕೋಶಗಳ ಸ್ವಭಾವಜನ್ಯವಾದ ರಕ್ಷಕ.

ನಂಜಾಣುಗಳನ್ನು ಕೋಳಿಯ ಭ್ರೂಣದಲ್ಲಿ ಸೋಂಕಿಸುವುದರಿಂದ ಇಂಟರ್‌ಫೆರಾನ್ ಉತ್ಪತ್ತಿ ಮಾಡಬಹುದು. ಕರುವಿನ ಮೂತ್ರಜನಕಾಂಗ (ಕಿಡ್ನಿ) ಕೋಶಗಳಲ್ಲಿ ಮತ್ತು ಮೂಗಿಲಿಯ ಮಿದುಳಿನ ಕೋಶಗಳಲ್ಲಿ ಸೋಂಕು ತಗುಲಿದ ನಂತರ ಇಂಟರ್–ಫೆರಾನ್ ಉತ್ಪತ್ತಿಯಾಗುವುದು. ದೇಹದ ಎಲ್ಲ ಅಂಗಾಂಶಗಳಲ್ಲಿ ಈ ಪ್ರೋಟೀನನ್ನು ಉತ್ಪತ್ತಿಮಾಡಬಲ್ಲ ಸಾಮರ್ಥ್ಯ ಇದೆಯಾದರೂ ವ್ಯತ್ಯಾಸಗಳಿವೆ. ಮೂಗಿಲಿಯ ಮಿದುಳಿನ ರೋಗಗಳೇ ಅಧಿಕ ಪ್ರಮಾಣದಲ್ಲಿ ಇಂಟರ್‌ಫೆರಾನನ್ನು ಉತ್ಪತ್ತಿ ಮಾಡುತ್ತವೆ. ಇಂಟರ್–ಫೆರಾನ್ ಉತ್ಪತ್ತಿಮಾಡುವ ಒಂದು ವಿಧಾನದಲ್ಲಿ ಬದುಕಿರುವ ಮೂಗಿಲಿಯ ಮಿದುಳಿಗೆ ಓ–ವೈರಸ್‌ಗಳನ್ನು ಸೇರಿಸಿ, 3-4 ದಿವಸಗಳ ನಂತರ ಮಿದುಳನ್ನು ಬೇರ್ಪಡಿಸಿ ಹ್ಯಾಂಕ್‌ನ ಉಪ್ಪಿನ ದ್ರಾವಣದಲ್ಲಿ ಬೇರೆಸಿ, 44,000 x ಗುರುತ್ವಾಕರ್ಷಣೆಯಲ್ಲಿ (44000g) ಎರಡು ಬಾರಿ ಭ್ರಮಣಯಂತ್ರದಲ್ಲಿ (ಸೆಂಟ್ರಿಫ್ಯೂಜ್) ತಿರುಗಿಸಲಾಯಿತು. ಇದರಿಂದ ನಂಜಾಣುಗಳು ಗಾಜಿನ ಪ್ರನಾಳದ ತಳದಲ್ಲಿ ಶೇಖರಗೊಂಡು, ಇಂಟರ್‌ಫೆರಾನ್ ದ್ರವರೂಪದಲ್ಲಿ ಮೇಲೆ ಬರುತ್ತವೆ.

ಇದರ ಅಣುತೂಕ 35,000. $60^0$ ಸೆ. ಉಷ್ಣತೆಯಲ್ಲಿ 30 ನಿಮಿಷ ಕಾಯಿಸಿದರೂ ತನ್ನ ಗುಣವನ್ನು ಕಳೆದುಕೊಳ್ಳುವುದಿಲ್ಲ. ಆದರೆ 100 ಸೆ. ಉಷ್ಣತೆಯಲ್ಲಿ 5 ನಿಮಿಷ ಕಾಯಿಸಿದರೆ ಇದರ ಗುಣ ಹಾಳಾಗುತ್ತದೆ. ಪೆಪ್ಸಿನ್ ಮತ್ತು ಟ್ರೆಪ್ಸಿನ್ ಕಿಣ್ವಗಳು ಇಂಟರ್‌ಫೆರಾನಿನೊಂದಿಗೆ ವರ್ತಿಸಿದಾಗ ಅದರ ಗುಣ ಹಾಳಾಗುತ್ತದೆ. ಆದರೆ ಆರ್‌ಎನ್‌ಏಸ್ ಕಿಣ್ವ ಈ ಪ್ರೋಟೀನನ್ನು ವಿಶ್ಲೇತನಗೊಳಿಸುವುದಿಲ್ಲ.

ಕೋಶಗಳಲ್ಲಿ ಇಂಟರ್‌ಫೆರಾನಿನ ಉತ್ಪತ್ತಿಯನ್ನು ನಂಜು ಅಥವಾ ನಂಜಾಣು ಪ್ರೇರೇಪಿಸುತ್ತದೆ. ಇದಕ್ಕೆ ಕಾರಣ ಅವುಗಳಲ್ಲಿರುವ ನ್ಯೂಕ್ಲಿಯಿಕ್ ಆಮ್ಲ. ಅತಿನೇರಳೆ ಕಿರಣಗಳಿಂದ ಸಂಸ್ಕರಿಸಲ್ಪಟ್ಟ ನಂಜಾಣು ಈ ಪ್ರೋಟೀನಿನ ಉತ್ಪತ್ತಿಗೆ ಪ್ರಚೋದಿಸಲಾರದು. ಕೋಶಗಳಲ್ಲಿ ಇದರ ಉತ್ಪತ್ತಿ ಕೋಶಗಳ ಕೇಂದ್ರದಲ್ಲಿರುವ ಡಿಎನ್‌ಎ ಯ ಹತೋಟಿಯಲ್ಲಿದೆ. ಇಂಟರ್‌ಫೆರಾನಿನ ಉತ್ಪತ್ತಿಗೆ ಬೇಕಾದ ದೂತ ಆರ್‌ಎನ್‌ಎ ಸೃಷ್ಟಿಸುತ್ತದೆ. ಇವುಗಳ ಸಹಾಯದಿಂದ ಕೋಶದ ಆರ್‌ಎನ್‌ಎ ಇಂಟರ್‌ಫೆರಾನನ್ನು ಉತ್ಪತ್ತಿ ಮಾಡುತ್ತದೆ. ಡಿಎನ್‌ಎ ನಿರ್ದೇಶಿತವಾದ ಹೊಸ ಆರ್‌ಎನ್‌ಎ ಸೃಷ್ಟಿಯನ್ನು ತಡೆಗಟ್ಟಬಲ್ಲ ಯಾವುದೊಂದು ವಸ್ತುವೂ ಇಂಟರ್‌ಫೆರಾನಿನ ಉತ್ಪತ್ತಿಯನ್ನು ನಿರೋಧಿಸಬಲ್ಲದು. ಆಕ್ಟಿನೋಮೈಸಿನ್ ಡಿ ಮತ್ತು ಮೈಟೋಮೈಸಿನ್ ಎಂಬ ಜೀವನಿರೋಧಕಗಳು (ಆಂಟಿಬಯೊಟಿಕ್ಸ್) ಕೋಶಗಳಲ್ಲಿ ಈ ಪ್ರೋಟೀನಿನ ಉತ್ಪತ್ತಿಯನ್ನು ತಡೆಯುತ್ತವೆ. ಆತಿಥೇಯ ಕೋಶಗಳನ್ನು ಅತಿನೇರಳೆ ಕಿರಣಗಳಿಂದ ಸಂಸ್ಕರಿಸಿದರೂ ಈ ವಸ್ತು ಉತ್ಪತ್ತಿಯಾಗುವುದಿಲ್ಲ. ಕೋಶಗಳಲ್ಲಿ ಆರ್‌ಎನ್‌ಎ ಉತ್ಪತ್ತಿಯನ್ನು ತಡೆಗಟ್ಟುವ ಪಿಕೊರ್ನಾ ಗುಂಪಿನ ನಂಜಾಣುಗಳು ಇಂಟರ್‌ಫೆರಾನಿನ ಉತ್ಪತ್ತಿಯನ್ನು ಪ್ರೇರೇಪಿಸುವುದಿಲ್ಲ. ಈ ಜಾತಿಯ ನಂಜಾಣುಗಳು ಕ್ರಮಿಸಿದ ಅನಂತರ ಕೋಶಗಳನ್ನು ಇಂಟರ್‌ಫೆರಾನಿಂದ ಸಂಸ್ಕರಿಸಿದರೂ ನಂಜಾಣುಗಳ ಬೆಳೆವಣಿಗೆ ನಿಲ್ಲುವುದಿಲ್ಲ. ಆದರೆ, ಪೂರ್ವಭಾವಿಯಾಗಿ ಇಂಟರ್‌ಫೆರಾನಿಂದ ಸಂಸ್ಕರಿಸಲಾದ ಕೋಶಗಳಲ್ಲಿ ಈ ಜಾತಿಯ ನಂಜಾಣುಗಳು ಬೆಳೆಯುವುದಿಲ್ಲ. ಕೋಶಗಳಲ್ಲಿ ಇಂಟರ್‌ಫೆರಾನಿನ ಉತ್ಪತ್ತಿ ಕೋಶ ನಂಜಿನ ಸೋಂಕನ್ನು ತಡೆಗಟ್ಟುವ ಪ್ರಥಮ ರಕ್ಷಣಾ ಕ್ರಮವಾಗಿದೆ. ನಂಜಾಣುಗಳು ತಮ್ಮ ಪುನರುತ್ಪತ್ತಿಗೆ ಆತಿಥೇಯ ಕೋಶಗಳಲ್ಲಿ ತಮಗೇ ವಿಶಿಷ್ಟವಾದ ಪ್ರೋಟೀನ್ ಮತ್ತು ನ್ಯೂಕ್ಲಿಯಿಕ್ ಆಮ್ಲವನ್ನು ಉತ್ಪತ್ತಿ ಮಾಡಿಕೊಳ್ಳುತ್ತವೆ. ಇಂಟರ್‌ಫೆರಾನಿಂದ ಸಂಸ್ಕರಿಸಿದ ಕೋಶಗಳಲ್ಲಿ ನಂಜುಗಳಿಗೆ ವಿಶಿಷ್ಟವಾದ ಮೊದಲಿನ ಪ್ರೋಟೀನುಗಳು ಉತ್ಪತ್ತಿಯಾಗುತ್ತವೆ. ಆದರೆ ಆರ್‌ಎನ್‌ಎ ಆಗಲಿ ಸೋಂಕಿಗೆ ಕಾರಣವಾದ ಆರ್‌ಎನ್‌ಎ ಆಗಲಿ ಉತ್ಪತ್ತಿಯಾಗುವುದಿಲ್ಲ. ಈ ಪ್ರೋಟೀನು ನಂಜುಗಳ ಉತ್ಪತ್ತಿಗೆ ಕಾರಣವಾದ ಜೈವಿಕ ಕ್ರಿಯೆಗಳಲ್ಲಿ ಆರ್‌ಎನ್‌ಎಗಳ ರಚನೆಗಳ ಮಧ್ಯವರ್ತಿ ಹಂತಗಳನ್ನು ತಡೆಗಟ್ಟುತ್ತವೆ. ನಂಜುನಿಂದ ಆಕ್ರಮಿತವಾದ ಕೋಶಗಳಲ್ಲಿ ನಂಜಿಗೆ ವಿಶಿಷ್ಟವಾದ ನ್ಯೂಕ್ಲಿಯಿಕ್ ಆಮ್ಲಗಳ ರಚನೆಗೆ ಅಡ್ಡಬರುವ ಪ್ರೋಟೀನುಗಳು ಉತ್ಪತ್ತಿಯಾಗುತ್ತವೆ. ಇಂಟರ್‌ಫೆರಾನ್ ನಂಜುಗಳ ಬೆಳೆವಣಿಗೆಯನ್ನು ನೇರವಾಗಿ ತಡೆಗಟ್ಟದೆ ನೂಕ್ಲಿಯಿಕ್ ಆಮ್ಲಗಳ ರಚನೆಗೆ ಅಡ್ಡಬರುವ ಪ್ರೋಟೀನುಗಳ ಉತ್ಪತ್ತಿಗೆ ಕಾರಣವಾಗುವುದರ ಮೂಲಕ ಪರೋಕ್ಷವಾಗಿ ತಡೆ ಮಾಡಬಹುದು. ಕೋಶಗಳು ಸ್ವಭಾವಜನ್ಯವಾಗಿ ಈ ಪ್ರೋಟೀನುಗಳನ್ನು ಉತ್ಪತ್ತಿಮಾಡುವ ಸಾಮರ್ಥ್ಯಪಡೆದಿದ್ದರೂ ಸಾಧಾರಣ ಪರಿಸ್ಥಿತಿಯಲ್ಲಿ ಇವುಗಳ ಅವಶ್ಯಕತೆಯಿಲ್ಲದಿರುವುದರಿಂದ ಈ ಸಾಮರ್ಥ್ಯ ಹತೋಟಿಗೊಳಗಾಗಿರುತ್ತದೆ. ಇಂಟರ್‌ಫೆರಾನ್ ಈ ಹತೋಟಿಯನ್ನು ಹೋಗಲಾಡಿಸಿ ನಂಜಾಣುಗಳ ಬೆಳೆವಣಿಗೆಗೆ ಅಡ್ಡಬರುವ ಪ್ರೋಟೀನುಗಳ ಉತ್ಪತ್ತಿಗೆ ಅವಕಾಶಮಾಡುತ್ತದೆ. (ಎಚ್.ಎಸ್.ಎಸ್.)

**ಇಂಡಿಯನ್ ವೆಟರ್‌ನರಿ ರಿಸರ್ಚ್ ಇನ್‌ಸ್ಟಿಟ್ಯೂಟ್(ಐವಿಆರ್‌ಐ):** ಇಜಾತ್ ನಗರದಲ್ಲಿರುವ ಪಶುಸಂಗೋಪನೆ ಹಾಗೂ ವೈದ್ಯಕೀಯ ವಿಷಯಗಳಲ್ಲಿ ಸಂಶೋಧನೆ

ಹಾಗೂ ಶಿಕ್ಷಣ ನೀಡುತ್ತಿರುವ ಸಂಸ್ಥೆ. ಪುಣೆಯಲ್ಲಿ ಇಂಪೀರಿಯಲ್ ಬ್ಯಾಕ್ಟೀರಿಯಾ ಪ್ರಯೋಗಾಲಯ ಎಂಬ ಹೆಸರಿನಲ್ಲಿ 1889 ರ ಡಿಸೆಂಬರ್ 9 ರಂದು ಸ್ಥಾಪಿತವಾಯಿತು. ಮೂಲಭೂತ ಉದ್ದೇಶ ದನಕರುಗಳಿಗೆ ಬರುವ ರೋಗರುಜಿನಗಳ ಅಧ್ಯಯನ. ಅನಂತರ ಮುಕ್ತೇಶ್ವರ ಹಾಗೂ ಕುಮಾಂವ್ ಬೆಟ್ಟ ಪ್ರದೇಶಗಳಿಗೆ ವರ್ಗಾಯಿಸಲ್ಪಟ್ಟಿತು. 1913 ರಲ್ಲಿ ಮುಖ್ಯ ಕಾರ್ಯಾಲಯ ಇಜಾತ್ ನಗರದಲ್ಲಿ ಆರಂಭವಾಯಿತು. 1925 ರಲ್ಲಿ ವಿಸ್ತಾರಗೊಳಿಸಿ ಸಂಸ್ಥೆಯನ್ನು ಇಂಪೀರಿಯಲ್ ವೆಟರ್ನರಿ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂದು ಪುನರ್ ನಾಮಕರಣ ಮಾಡಲಾಯಿತು.

ಪಶು ವಿಜ್ಞಾನದ ಅಧ್ಯಯನ ಮೂಲ ಉದ್ದೇಶವಾದರೂ ಪಶು ಸಾಕಾಣಿಕೆದಾರರಿಗೆ ಶಿಕ್ಷಣ ತರಬೇತಿಗಳನ್ನು ಇದು ಆರಂಭದಿಂದಲೂ ನೀಡುತ್ತಿದೆ. 1958 ರಲ್ಲಿ ಪಶು ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ನೀಡಲು ಪ್ರಾರಂಭಿಸಲಾಯಿತು. ಸ್ವಾತಂತ್ರ್ಯಾನಂತರ ಸಂಸ್ಥೆಯ ಹೆಸರನ್ನು ಇಂಡಿಯನ್ ವೆಟರ್‌ನರಿ ರಿಸರ್ಚ್ ಇನ್‌ಸ್ಟಿಟ್ಯೂಟ್ (ಐವಿಆರ್‌ಐ) ಎಂದರೆ ಭಾರತೀಯ ಪಶು ವೈದ್ಯಕೀಯ ಸಂಶೋಧನಾ ಸಂಸ್ಥೆ ಎಂದು ಬದಲಿಸಲಾಯಿತು. 1966 ರಲ್ಲಿ ಸಂಸ್ಥೆಯ ಆಡಳಿತಾತ್ಮಕ ಅಧಿಕಾರ ಭಾರತ ಸರ್ಕಾರದಿಂದ, ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ಐಸಿಎಆರ್) ಗೆ ವರ್ಗಾಯಿಸಲಾಯಿತು. ಇದೊಂದು ಸ್ವಾಯತ್ತ ಸಂಸ್ಥೆ.

1983 ರಲ್ಲಿ ವಿಶ್ವವಿದ್ಯಾನಿಲಯದ ಸ್ಥಾನಮಾನ ಪಡೆಯಿತು. ಪಶು ವಿಜ್ಞಾನದಲ್ಲಿ ನಡೆಯುವ ಮಹತ್ತರ ಸಂಶೋಧನೆಗಳು, ಕೋಳಿ ಸಾಕಾಣಿಕೆಯಲ್ಲಿ ಹೊಸ ತಂತ್ರಜ್ಞಾನಗಳು, ಹೊಸ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವ ಹಾಗೂ ವಿವಿಧ ಸೋಂಕುಗಳಿಂದ ಸಾಕು ಪ್ರಾಣಿಗಳನ್ನು ರಕ್ಷಿಸುವ ಲಸಿಕೆಗಳ ತಯಾರಿಕೆಯಲ್ಲಿ ಸಂಸ್ಥೆ ಮಂಚೂಣಿಯಲ್ಲಿದೆ. ಪಶು ವೈದ್ಯಕೀಯ, ಪಶು ಆಹಾರ, ಪಶು ವಾತಾವರಣ, ಪಶು ತಳಿ ತಂತ್ರಜ್ಞಾನ ಮುಂತಾದ ವಿಷಯಗಳಲ್ಲಿ ಶಿಕ್ಷಣ ಹಾಗೂ ಸಂಶೋಧನೆಗಳನ್ನು ನಡೆಸುತ್ತಿದೆ. 2020ರ ಹೊತ್ತಿಗೆ ಬೆಳೆಯುತ್ತಿರುವ ಜನಸಂಖ್ಯೆಗೆ ಸರಿದೂಗುವಂತೆ ಪಶು ಸಂಪತ್ತನ್ನು ಹೆಚ್ಚಿಸುವ ಡೈರಿ ಉದ್ಯಮ, ಕೋಳಿ ಸಾಕಾಣಿಕೆ, ಆಡು, ಕುರಿ, ಮೊಲಗಳ ಸಾಕಾಣಿಕೆಗಳ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಿ ಪಶು ಸಂಗೋಪನೆಯನ್ನು ಅಭಿವೃದ್ಧಿ ಪಡಿಸುವ ಗುರಿ ಹೊಂದಿದೆ. ಜಾಗತಿಕ ಮಟ್ಟದಲ್ಲಿ ಈ ನಿಟ್ಟಿನಲ್ಲಿ ಮುಂದುವರಿಯುವುದು ಸಂಸ್ಥೆಯ ಮುಂದಿರುವ ಧ್ಯೇಯೋದ್ದೇಶಗಳಲ್ಲಿ ಒಂದು.

ಪಶು ಸಂಗೋಪನೆಯಲ್ಲಿ ಹೊಸ ತಂತ್ರಜ್ಞಾನ, ಹೊಸ ವಿಧಾನಗಳನ್ನು ಅಭಿವೃದ್ಧಿಪಡಿಸಿ, ಪಶು ಆಹಾರದಲ್ಲಿಯೂ ಯುಕ್ತವಾದ ಸಂಶೋಧನೆ ಕೈಗೊಂಡು ಅದನ್ನು ಪಶು ಸಂಗೋಪನೆ ಕೈಗೊಂಡಿರುವ ಜನರಿಗೆ ತಲುಪಿಸುವುದು ಹಾಗೂ ರಾಷ್ಟ್ರದ ಪಶು ಸಂಪತ್ತನ್ನು ಹೆಚ್ಚಿಸುವುದು ಇದರ ಮುಖ್ಯ ಕಾರ್ಯಕ್ರಮ. (ಎಸ್.ಎಂ.ಜಿ.)

**ಇಂಪಾಲ:** ಆರ್ಟಿಯೋಡ್ಯಾಕ್ಟೈಲ ವರ್ಗದ ಬೋವಿಡೆ ಕುಟುಂಬಕ್ಕೆ ಸೇರಿದ ಒಂದು ಸ್ತನಿ. ಪಾಲ ಅಥವಾ ಪಲ್ಲ ಎಂದೂ ಕರೆಯುತ್ತಾರೆ. ಈಪೈಸಿರೋಸ್ ಮೆಲಾಂಪಸ್ ವೈಜ್ಞಾನಿಕ ಹೆಸರು. ಇದೊಂದು ಅತ್ಯಾಕರ್ಷಕ ಪ್ರಾಣಿ. ಕೆಲವು ವೇಳೆ ದಟ್ಟವಾದ ಅಡವಿ ಪ್ರದೇಶಗಳಲ್ಲಿ ಕಂಡುಬಂದರೂ ಇದರ ವಾಸ ಮಾತ್ರ ಉಪವನಗಳಂತಿರುವ ಪ್ರದೇಶಗಳಲ್ಲಿ. ನೀರಿರುವ ಸ್ಥಳಗಳ ಸಮೀಪದಲ್ಲಿ, ವನ್ಯಪ್ರದೇಶಗಳ ಬಯಲುಗಳಲ್ಲಿ ಮೇಯಲು ಬರುವುದು. ಬಿಸಿಲ ಝಳ ಹೆಚ್ಚಾದಾಗ ಇದು ಮರದ ನೆರಳಿಗೆ ಬಂದು ಅಲ್ಲಿ ಮಲಗಿ ವಿಶ್ರಮಿಸಿಕೊಳ್ಳುತ್ತದೆ. ಇಂಪಾಲ ಒಳ್ಳೆ ಸಂಚಾರಿ. ಸಾಮಾನ್ಯವಾಗಿ ನದಿಗಳ ಜಾಡನ್ನೇ ಅನುಸರಿಸಿಕೊಂಡು ಅಲೆದಾಡುವ ಸ್ವಭಾವ. ಗಾಬರಿಗೊಂಡಾಗ ಈ ಪ್ರಾಣಿಗಳು ಪೊದೆಗಳು ಮತ್ತು ಬಂಡೆಗಳನ್ನು ಲೀಲಾಜಾಲವಾಗಿ ದೊಡ್ಡ ಜಿಗಿತಗಳಿಂದ ವೇಗವಾಗಿ ಕ್ರಮಿಸಿ ಯಾವ ತೊಂದರೆಯೂ ಇಲ್ಲದೆ ಕಾಡಿನ ನಿರ್ಜನ ಪ್ರದೇಶವನ್ನು ಸೇರಿಕೊಂಡು ಅಲ್ಲಿ ಸುಧಾರಿಸಿಕೊಳ್ಳುತ್ತವೆ. ಅತಿ ವೇಗವಾಗಿ ಓಡುತ್ತಿರುವಾಗ ಆಕರ್ಷಕವಾಗಿ ಓಲಾಡುತ್ತ ಗಾಳಿಯಲ್ಲಿ ತೇಲಿ ಹೋಗುತ್ತಿರುವುದೋ ಎಂದು ಭಾಸವಾಗುವಂತೆ ಜಿಗಿಯುವ ಸ್ವಭಾವ. ಆದರೆ ಇದು ಸ್ವಲ್ಪ ದೂರವನ್ನು ಮಾತ್ರ ಅತಿ ವೇಗವಾಗಿ ಓಡಬಲ್ಲುದು. ಹಾಗೆ ಮಾಡುವಾಗ ಪೊದೆ ಮತ್ತು ಬಂಡೆಗಳನ್ನು ಗಮನಿಸದೆ ಅನೇಕ ವೇಳೆ ತನ್ನ ಜೊತೆಯವುಗಳ ಮೇಲೂ ಹಾರಿ ಓಡಿಹೋಗುತ್ತದೆ. ಇದು ಒಂದು ಜಿಗಿತಕ್ಕೆ ಸುಮಾರು 10 ಮೀ ದೂರವನ್ನು ಹಾರಿದ್ದನ್ನು ನೋಡಿದವರು ಇದ್ದಾರೆ. 2.5 ಮೀ ಎತ್ತರದ ಕಂಬಿ ಬೇಲಿಯನ್ನು ಲಘುವಾಗಿ ನೆಗೆಯಬಲ್ಲುದೆಂಬುದು ತಿಳಿದಿದೆ. ಇಂಪಾಲಗಳು ಸಂಘ ಜೀವಿಗಳಾದರೂ ಸಾಮಾನ್ಯವಾಗಿ ಒಂದು ಹಿಂಡಿನಲ್ಲಿ 50 ಪ್ರಾಣಿಗಳಿಗಿಂತ ಹೆಚ್ಚಾಗಿರುವುದಿಲ್ಲ. ಚಳಿಗಾಲದಲ್ಲಿ ಗಂಡು ಹೆಣ್ಣುಗಳೆರಡೂ ಜೊತೆಯಾಗಿ ಜೀವಿಸುತ್ತವೆ. ಈ ಕಾಲದಲ್ಲಿ ಹಿಂಡಿನ ಪ್ರಮಾಣ ದೊಡ್ಡದು. ಆದರೆ ಬೇಸಿಗೆ ಕಾಲದಲ್ಲಿ ಇವು ಹುಲ್ಲುಗಾವಲುಗಳಲ್ಲಿ ಮೇಯಲು ಹೊರಟಾಗ ಹಿಂಡುಗಳು ಸಣ್ಣದಾಗಿದ್ದು ಪ್ರತಿಯೊಂದು ಹಿಂಡಿನಲ್ಲೂ ವಯಸ್ಸಿಗೆ ಬಂದ ಒಂದು ಗಂಡು ಮತ್ತು 15 ಅಥವಾ 20 ಹೆಣ್ಣುಗಳು ಇರುತ್ತವೆ. ಆಗಾಗ್ಗೆ ಪ್ರಾಯಕ್ಕೆ ಬಂದ ಗಂಡು ಇಂಪಾಲ ತನ್ನ ಹೆಣ್ಣು ಸಂಗಾತಿಗಳಿಗೋಸ್ಕರ ಹೋರಾಡಬೇಕಾಗುತ್ತದೆ. ಹರೆಯದ ಗಂಡು ವಯಸ್ಸಾದ ಇಂಪಾಲಗಳೊಡನೆ ಸೆಣಸಿ ಗೆಲ್ಲಬಲ್ಲುದು.

ಇಂಪಾಲ

ಇಂಪಾಲದ ಮೈಬಣ್ಣ ಮೇಲ್ಭಾಗದಲ್ಲಿ ಕಂದು ಮಿಶ್ರಿತ ಕೆಂಪು; ಕೆಳಭಾಗದಲ್ಲಿ ಬಿಳಿ. ವಯಸ್ಸಿಗೆ ಬಂದ ಇಂಪಾಲಗಳಿಗೆ ಮಾತ್ರ ಸುರುಳಿ ಸುತ್ತಿದ ಉಂಗುರಗಳಿಂದಾದ ಎರಡು ಕೊಂಬುಗಳಿರುತ್ತವೆ. ಕೊಂಬುಗಳ ಉದ್ದ 35–50 ಸೆಂಮೀ ಗಳು. ಇಂಪಾಲದ ಎತ್ತರ ಭುಜಮಟ್ಟಕ್ಕೆ ಸುಮಾರು 0.9 ಮೀ. ಭಾರ ಸುಮಾರು 70 ಕಿಗ್ರಾಂ. ಇವುಗಳ ಮೂಲಸ್ಥಾನಗಳಾದ ಕೀನ್ಯ ಮತ್ತು ಟ್ಯಾಂಜನೀಕ ಪ್ರದೇಶಗಳಲ್ಲಿ ಇಂದಿಗೂ ಕಂಡುಬರುತ್ತವೆ. ಇಂಪಾಲ ಜಾತಿಯ ಮತ್ತೊಂದು ಪ್ರಭೇದ (ಈಪೈಸಿರೋಸ್ ಪೆಟರ್ಸಿ) ಆಫ್ರಿಕದ ನೈರುತ್ಯ ಪ್ರದೇಶದಲ್ಲಿ ಮತ್ತು ಅಂಗೋಲದ ವನ್ಯ ಬಯಲುಗಳಲ್ಲಿ ಇವೆ. (ಎನ್.ವಿ.ಎ.)

**ಇಕೋಟೋನ್:** ಎರಡು ಅಥವಾ ಹೆಚ್ಚಿನ ಭಿನ್ನ ಪ್ರಭೇದಗಳು ಒಂದು ಗೂಡಿ ಬೆರೆಯುವ ಪರಿವರ್ತನ ಪ್ರದೇಶ. ಸಂಧಿವಲಯ ಅಥವಾ ಬಿಗಿಪಟ್ಟಿ ಪ್ರದೇಶ ಪರ್ಯಾಯ ಹೆಸರು. ಈ ವಲಯ ಪ್ರದೇಶಗಳಿಗಿಂತ ಕಿರಿದಾದ ಪಟ್ಟಿ ಪ್ರದೇಶ. ಮೂರು ರೀತಿಯಲ್ಲಿ ಇಕೋಟೋನನ್ನು ಗುರುತಿಸಬಹುದು.

ಮಣ್ಣಿನ ವಿಧ ಅಥವಾ ಮಣ್ಣಿನ ಬಸಿತಗಳಂತಹ ಆವರಣ ಸಂದರ್ಭಗಳಲ್ಲಿ ನಡೆಯುವ ಹಠಾತ್ ಪರಿವರ್ತನೆ.

ಸ್ಪರ್ಧೆ, ಅದರಲ್ಲೂ ಸಸ್ಯ ಒಂದರ ಅಂತರವರ್ತನೆಯಿಂದ ನಡೆಯುವ ಪರಿವರ್ತನೆ.

ಎರಡು ಅಥವಾ ಹೆಚ್ಚಿನ ಸೆರೆಯ ಸಸ್ಯಗಳು ಸಂಮಿಳಿತವಾಗುವಿಕೆ ಎಂಬ ಮೂರು ಬಗೆಯ ಇಕೋಟೋನ್ ಗಳನ್ನು ಗುರುತಿಸಬಹುದು.

ಕೊನೆಯ ಎರಡು ವಿಧಾನಗಳಲ್ಲಿ ನೆರೆಯ ಉಚ್ಚ ಸಸ್ಯಗಳು ತಮ್ಮನ್ನು ತಾವೇ ನಿಯಂತ್ರಿಸಿಕೊಳ್ಳುವಷ್ಟು ಅಧಿಕವಾಗಿರುತ್ತವೆ. ಇದರ ಫಲವಾಗಿ ಪ್ರಧಾನ ಪ್ರಭೇದದ ಪ್ರಬಲತೆಯಲ್ಲಿ ಬದಲಾವಣೆಯಾಗುತ್ತದೆ. ಅನೇಕ ವೇಳೆ. ನೆರೆಯ ಪ್ರದೇಶಗಳಲ್ಲಿರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಪ್ರಭೇದಗಳ ಸಂಖ್ಯೆ, ಸಾಂದ್ರತೆ ಮತ್ತು ವಿಧಗಳಿರಬಹುದು. ಇದಕ್ಕೆ ಸೀಮಾ ಪ್ರಭಾವ ಎಂದು ಹೆಸರು. ಪ್ರಾಣಿಗಳಲ್ಲೂ ಇಂಥ ಪ್ರಭಾವಗಳಿವೆ. ಉದಾ: ಉತ್ತರ ಅಮೆರಿಕಾದ ಇಲಿನಾಯಸ್‌ನ ಕಾಡಿನಲ್ಲಿ ಸಂತಾನಾಭಿವೃದ್ಧಿ ನಡೆಸುವ ಪಕ್ಷಿ ಪ್ರಭೇದಗಳಲ್ಲಿ 14 ಕಾಡಿನ ಒಳಪ್ರದೇಶದಲ್ಲಿ 22 ಕಾಡಿನ ಅಂಚಿನಲ್ಲೂ ಇವೆ.

ಎಡ್ ಬರ್ನ್ (1947) ಎಂಬಾತನ ಪ್ರಕಾರ ಪೆನ್ಸಿಲ್‌ವೇನಿಯಾದ 130 ಎಕರೆ ಪ್ರದೇಶಗಳಲ್ಲಿ ಹಣ್ಣಿನ ತೋಟ, ಪೊದೆ, ಕೋನಿಫರ್ ಹಾಗೂ ಗಟ್ಟಿ ಮರಗಳಿಂದ ಕೂಡಿದ ಕಾಡುಗಳಿದ್ದು, ಅಲ್ಲಿ ಸಂಪೂರ್ಣ ಹುಲ್ಲುಗಾವಲು ಅಥವಾ ಕೋನಿಫರ್ ಕಾಡಿನಲ್ಲಿರುವುದಕ್ಕಿಂತ ಪಕ್ಷಿಗಳ ಸಾಂದ್ರತೆ ಹೆಚ್ಚಾಗಿವೆ. ಅದೇ ಹುಲ್ಲುಗಾವಲುಗಳಲ್ಲಿ ಅಲ್ಲಿ ಧಾನ್ಯ ಬೆಳೆಗಳನ್ನು ಬೆಳೆಸಿದಾಗ ಅವುಗಳ ಸಂಖ್ಯೆ ಪ್ರತಿ ಎಕರೆಗೆ 48 ಜೊತೆಗಳಿಂದ 93 ಜೊತೆಗಳಿಗೆ ಏರಿತು.

ಕಾಡು ಮತ್ತು ಹುಲ್ಲುಗಾವಲು ನಡುವೆ ಇರುವ ಇಕೋಟೋನನ್ನು ಅಂಚು (ಎಡ್ಜ್‌ಎಫೆಕ್ಟ್) ಎನ್ನಲಾಗುತ್ತದೆ. ಸಾಮಾನ್ಯವಾಗಿ, ಮನುಷ್ಯ ವಾಸಿಸುವಲ್ಲೆಲ್ಲಾ ಕಾಡು ಕಡಿದು ಹುಲ್ಲುಗಾವಲು, ಕೃಷಿಭೂಮಿ ಮತ್ತು ಇತರ ಆಕ್ರಮಿತ ಪ್ರದೇಶಗಳನ್ನಾಗಿ ಪರಿವರ್ತಿಸುತ್ತಾನೆ. ಬಯಲಿನಲ್ಲಿ ಗಿಡಗಳನ್ನು ಬೆಳೆಸುತ್ತಾನೆ. ಇಂಥ ಕೃತಕ ಇಕೋಟೋನ್ ಗಳಲ್ಲಿ ಕಳೆಯ ಅನೇಕ ಪ್ರಭೇದಗಳು, ಹಕ್ಕಿಗಳು, ಕೀಟ ಮತ್ತು ಸ್ತನಿಗಳ ಸಂಖ್ಯೆ ಹೆಚ್ಚಿರುತ್ತದೆ. ಇಕೋಟೋನ್‌ಗಳಲ್ಲಿ ಸಾಂದ್ರತೆಯ ಹೆಚ್ಚಳವಿರಬೇಕೆಂಬ ನಿಯಮವಿಲ್ಲ. ಆದರೆ ಆರ್ಥಿಕವಾಗಿ ಅಮೂಲ್ಯವಾದ ಪ್ರಾಣಿಗಳು ಸೀಮಾ ಪ್ರಭೇದಗಳಾಗಿ ಇಕೋಟೋನಿನ ಪ್ರಯೋಜನ ಪಡೆಯಬಹುದು. (ಬಿ.ಕೆ.ಜಿ)

**ಇಕ್ತಿಯೋಪ್ಟೆರಿಜಿಯ:** ಸರೀಸೃಪ ವರ್ಗಕ್ಕೆ ಸೇರಿದ ನಶಿಸಿಹೋಗಿರುವ ಪ್ರಾಣಿಗಳ ಒಂದು ಉಪವರ್ಗ. ಈ ಪ್ರಾಣಿಗಳು ಮೀಸೊಜೋಯಿಕ್ ಯುಗದಲ್ಲಿ ನೀರಿನಲ್ಲಿ ವಾಸಮಾಡುತ್ತಿದ್ದುವು. ಮತ್ಸ್ಯದ ಆಕಾರವನ್ನು ಹೊಂದಿದ್ದುವು ಈ ಗತವಂಶೀ ಸರೀಸೃಪಗಳಲ್ಲಿ ಎರಡು ಗಣಗಳಿವೆ. ಒಂದು ಗುಂಪು ಸಿಹಿನೀರ ವಾಸಿಯಾಗಿದ್ದರೆ (ಮಿಸೊಸಾರಿಯ) ಇನ್ನೊಂದು ಗುಂಪು (ಇಕ್ತಿಯೋಸಾರಿಯ) ಉಪ್ಪುನೀರಿನಲ್ಲಿ ವಾಸಮಾಡುತ್ತಿತ್ತು. ಈ

ಪ್ರಾಣಿಗಳು ಸಂಪೂರ್ಣವಾಗಿ ನೀರಿಗೆ ಹೊಂದಿಕೊಂಡಿದ್ದರೂ ಗಾಳಿಯನ್ನು ಉಸಿರಾಡುತ್ತಿದ್ದುವು. ಇವುಗಳ ದೇಹವು 0.9 – 18 ಮೀ ಗಳವರೆಗೂ ಉದ್ದವಿತ್ತು ಹಾಗೂ ನೀರಿನಲ್ಲಿ ಸುಲಭವಾಗಿ ಈಜಲು ಸಹಾಯಮಾಡುವ ಆಕಾರೋಪಾದಿಯಲ್ಲಿತ್ತು. ಕಾಲುಗಳು ಮೀನಿನ ಈಜುರೆಕ್ಕೆಗಳ ಆಕಾರವನ್ನು ಹೊಂದಿದ್ದುವು. ಈ ಅಂಗಗಳು ಸರೀಸೃಪಗಳ ಈಜುವಿಕೆಯಲ್ಲಿ ಸಹಾಯ ಮಾಡುತ್ತಿದ್ದುವು. ಆದರೆ ಇವುಗಳ ಚಲಿಸುವಿಕೆಗೆ ಮುಖ್ಯವಾದ ಅಂಗವಾಗಿದ್ದುದು ಬಾಲ. ಈ ಬಾಲ ಕೆಲವು ಮೀನುಗಳ ಬಾಲದೋಪಾದಿಯಲ್ಲಿತ್ತು. ಈ ಬಾಲದಲ್ಲಿ ಮೇಲಿನ ಹಾಲೆ ಕೆಳಗಿನ ಹಾಲೆಗಿಂತ ಚಿಕ್ಕದಾಗಿದ್ದು ದುರ್ಬಲವಾಗಿತ್ತು ಹಾಗೂ ಬೆನ್ನಲುಬಿನ ಕೆಳಗಿನ ಹಾಲೆಯೊಳಕ್ಕೆ ಮುಂದುವರೆದಿತ್ತು. ಬೆನ್ನಿನ ಮೇಲೆ ಬರೀ ಮಾಂಸದಿಂದ ಕೂಡಿದ ಒಂದು ಈಜುರೆಕ್ಕೆಯಿತ್ತು. ಈ ಅಂಗಗಳ ಸಹಾಯದಿಂದ ಇವು ವೇಗವಾಗಿ ಈಜುತ್ತಿದ್ದುವು. ಮೊಟ್ಟೆಗಳನ್ನು ಮರಿಯಾಗುವವರೆಗೂ ಶರೀರದಲ್ಲಿ ಇಟ್ಟುಕೊಂಡಿರುತ್ತಿದ್ದುವು ಎನ್ನುವುದಕ್ಕೆ ಸಾಕಷ್ಟು ಪಳೆಯುಳಿಕೆಯ ಪುರಾವೆಗಳು ಸಿಕ್ಕಿವೆ. ಈ ಪ್ರಾಣಿಗಳ ಮೂಲ ಯಾವುದೆಂದು ತಿಳಿಯದಿದ್ದರೂ ಕಾಂಡ ಸರೀಸೃಪ (ಸ್ಟೆಮ್ ರೆಪ್ಟೈಲ್ಸ್) ಗಳಿಂದ ಜನ್ಮ ತಾಳಿರಬಹುದು ಎಂದು ಊಹಿಸಲಾಗಿದೆ. ನೀರಿನಲ್ಲಿ ಸುಮಾರು ದಶಲಕ್ಷ ವರ್ಷಗಳ ಕಾಲ ಆಳಿದ ಈ ಉಪವರ್ಗಕ್ಕೆ ಸೇರಿದ ಪ್ರಾಣಿಗಳು ಕ್ರಿಟೇಷಿಯಸ್ ಕಾಲದ ಉತ್ತರಾರ್ಧದಲ್ಲಿ ನಾಶಗೊಂಡವು. ಇಕ್ತಿಯೋಸಾರಸ್ ಈ ಉಪವರ್ಗಕ್ಕೆ ಸೇರಿದ ಒಂದು ಸರೀಸೃಪ. (ಎಚ್.ಎಸ್.ವೈ.)

**ಇಕ್ತಿಯೋಸಾರ್:** ಮೀಸೊಜೋಯಿಕ್ ಯುಗದಲ್ಲಿ (65–225 ದಶಲಕ್ಷ ವರ್ಷಗಳ ಹಿಂದಿನ ಕಾಲ) ಇದ್ದ ಇಕ್ತಿಯೋಸಾರಿಯ ವರ್ಗಕ್ಕೆ ಸೇರಿದ ಜಲವಾಸಿ ಸರೀಸೃಪ. ಇದರ ಪಳೆಯುಳಿಕೆ ಮಾತ್ರ ಲಭ್ಯವಾಗಿದೆ. ಮೀಸೊಜೋಯಿಕ್ ಯುಗಕ್ಕೆ ಸರೀಸೃಪಗಳ ಕಾಲವೆಂದೂ ಹೆಸರಿದೆ. ಅಂದು ಈ ಪ್ರಾಣಿಗಳು ನೆಲದ ಒಡೆತನವನ್ನು ಹೊಂದಿದ್ದುವು. ಅವುಗಳಿಗೆ ಸಮನಾಗಬಲ್ಲ ಬೇರೆ ಪ್ರಾಣಿಗಳೇ ಇರಲಿಲ್ಲ. ಕೆಲವು ಸರೀಸೃಪಗಳು ಜಲವಾಸಿಗಳಾದುವು. ಅಂಥವುಗಳಲ್ಲಿ ಇಕ್ತಿಯೋಸಾರ್ ಒಂದು. ಆದರೆ ಇದಕ್ಕೆ ಮತ್ಸ್ಯ ಅಥವಾ ದ್ವಿಚರ ಪ್ರಾಣಿಗಳಿಗಿರುವಂಥ ಜಲವಾಸಕ್ಕೆ ಅನುಕೂಲವಾದ ಅಂಗಗಳು ಇರಲಿಲ್ಲ. ಆದ್ದರಿಂದ ಜಲವಾಸಕ್ಕೆ ತೆರಳಿದ ಸರೀಸೃಪಗಳು ಹೊಸ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಯಿತು. ಕೆಲವು ಸರೀಸೃಪಗಳು ತಮ್ಮ ದೇಹಗಳನ್ನು ಮತ್ಸ್ಯ ರೂಪಕ್ಕೆ ಅಳವಡಿಸಿಕೊಂಡುವು. ಅವೇ ಇಕ್ತಿಯೋಸಾರ್ ಸರೀಸೃಪಗಳು.



ಇಕ್ತಿಯೋಸಾರ್

ಇಕ್ತಿಯೋಸಾರಿನ ದೇಹ ಕದಿರಿನ ಆಕಾರದಲ್ಲಿತ್ತು. ಉದ್ದ 0.6–18 ಮೀ ವರೆಗೆ. ಅದು ತಲೆಯಿಂದ ಭುಜದವರೆಗೆ ಕ್ರಮೇಣ ದಪ್ಪವಾಗುತ್ತ ಅನಂತರ ಬಾಲದ ಕಡೆಗೆ ಕ್ರಮೇಣ ತೆಳುವಾಗುತ್ತ ಬಂದಿದೆ. ಅದರ ಉದ್ದವಾದ ದವಡೆಗಳಲ್ಲಿ ಅನೇಕ ಹಲ್ಲುಗಳಿದ್ದುವು. ಹಲ್ಲಿನ ಮೇಲ್ಭಾಗ ಕ್ಲಿಷ್ಟರೀತಿಯ ಸುಕ್ಕುಗಳಿಂದ ಕೂಡಿತ್ತು. ಈ ಲಕ್ಷಣ ಕಾಟಿಲೋಸಾರ್ ಸರೀಸೃಪಗಳ ಸಂಬಂಧವನ್ನು ಸೂಚಿಸುತ್ತದೆ. ತಲೆ ಮತ್ತು ಮುಂಡಗಳ ಮಧ್ಯೆ ಸ್ಪಷ್ಟವಾಗಿ ಕುತ್ತಿಗೆಯೇನೂ ಇರಲಿಲ್ಲ. ಕಾಲುಗಳು ಹಲಗೆಯಾಕಾರದ ಈಜುರೆಕ್ಕೆಗಳಾಗಿ ಮಾರ್ಪಟ್ಟಿದ್ದುವು. ಮುಂಡದ ಮೇಲ್ಭಾಗದಲ್ಲಿ ದೊಡ್ಡ ಮಾಂಸದಿಂದ ಕೂಡಿದ ಆದರೆ ಎಲುಬುಗಳಿಲ್ಲದ ಈಜುರೆಕ್ಕೆ ಇತ್ತು. ಬಾಲದ ಈಜುರೆಕ್ಕೆ ಎರಡು ವಿಷಮಭಾಗಗಳಿಂದ ಕೂಡಿತ್ತು. ತಲೆಬುರುಡೆಯಲ್ಲಿ ಒಂದೇ ಒಂದು ಕಪೋಲರಂಧ್ರವಿತ್ತು. ಇದರ ಕೆಳಭಾಗದಲ್ಲಿ ಪೋಸ್ಟ್‌ಫ್ರಾಂಟಲ್ ಮತ್ತು ಸುಪ್ರಟೆಂಪೊರಲ್ ಎಲುಬುಗಳಿದ್ದುವು. ಬೆನ್ನೆಲುಬು ಅನೇಕ ಚಪ್ಪಟೆಯಾದ ಪರಸ್ಪರ ತಾಕು ಹಾಕಲ್ಪಟ್ಟ ಎಲುಬುಗಳಿಂದ ಕೂಡಿತ್ತು. ಈ ಎಲುಬುಗಳು ಮೇಲ್ಗಡೆ ನರಮುಳ್ಳುಗಳನ್ನು (ನ್ಯೂರಲ್ ಸ್ಪೈನ್ಸ್) ಹೊಂದಿದ್ದುವು. ಬೆನ್ನೆಲುಬು ಹಿಂಭಾಗದಲ್ಲಿ ತೀವ್ರವಾಗಿ ಬಗ್ಗಿ ಬಾಲದ ಈಜುರೆಕ್ಕೆಯೊಳಕ್ಕೆ ಮುಂದುವರಿದಿತ್ತು. ಇಕ್ತಿಯೋಸಾರಿನ ಅವಶೇಷ ಮೊದಲಬಾರಿಗೆ ಟ್ರಯಾಸಿಕ್ ಸ್ತೋಮದ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳುತ್ತದೆ (190–225 ದಶಲಕ್ಷ ವರ್ಷಗಳ ಹಿಂದಿನ ಕಾಲ). ಇದರ ದೇಹ ರಚನೆ ಕಾಟಿಲೋಸಾರ್ ಸರೀಸೃಪಗಳ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ಟ್ರಯಾಸಿಕ್ ಕಾಲದ ಇಕ್ತಿಯೋಸಾರುಗಳು ಸರಳ ಮತ್ತು ಮೂಲರೂಪ ಪ್ರಕಾರಗಳು. ಅವುಗಳ ತಲೆಬುರುಡೆ ಉದ್ದವಾಗಿರಲಿಲ್ಲ. ಹಲಗೆಯಾಕಾರದ ಈಜುರೆಕ್ಕೆಗಳು ಅಗಲವಾಗಿರಲಿಲ್ಲ ಮತ್ತು ಬಾಲದ ರೆಕ್ಕೆಯೂ ದೊಡ್ಡದಾಗಿರಲಿಲ್ಲ. ಕ್ರಿಟೇಷಿಯಸ್ ಮತ್ತು ಜುರಾಸಿಕ್ ಕಲ್ಪಗಳಲ್ಲಿ (65–190 ದಶಲಕ್ಷ ವರ್ಷಗಳ ಹಿಂದಿನ ಕಾಲ) ಇವು ಹೆಚ್ಚು ಸಂಖ್ಯೆಯಲ್ಲಿದ್ದುವು. ಇಕ್ತಿಯೋಸಾರುಗಳು ಕ್ಷಣಮಾತ್ರವೂ ಭೂಮಿಯ ಮೇಲೆ ಇರಲಾರದಷ್ಟು ಜಲವಾಸಕ್ಕೆ ಹೊಂದಿಕೊಂಡಿದ್ದುವು. ಆದ್ದರಿಂದ ಮೊಟ್ಟೆಗಳನ್ನು ಮರಿಯಾಗುವವರೆಗೆ ಶರೀರದಲ್ಲೇ ಇಟ್ಟುಕೊಳ್ಳುವ ಸಾಧನಗಳನ್ನು ಹೊಂದಿದ್ದುವು. ಅವುಗಳ ಅವಶೇಷಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸಿವೆ. ನೋಡಿ– ಇಕ್ತಿಯೋಪ್ಟೆರಿಜಿಯ. (ಡಿ.ಆರ್.)

**ಇಕ್ನೊಮಾನ್ ನೊಣ:** ಹೈಮಿನಾಪ್ಟೆರ ಗಣದ ಇಕ್ನೊಮಾನಿಡೆ ಕುಟುಂಬಕ್ಕೆ ಸೇರಿದ ಕೀಟಗಳು. ಸದಾ ಅದುರುತ್ತಿರುವ ತಂತು ರೂಪದ ಕುಡಿ ಮೀಸೆಗಳಿರುವುದು ಈ ನೊಣದ ವೈಶಿಷ್ಟ್ಯ. ಪ್ರಪಂಚದ ಎಲ್ಲೆಡೆ ಜೀವಿಸುತ್ತವೆ. ಪರತಂತ್ರ ಜೀವಿಗಳಾಗಿದ್ದು, ಲೆಪಿಡಾಪ್ಟೆರ ಗಣದ ಕೀಟಗಳ ದೇಹದೊಳಗೆ ಡಿಂಬಾವಸ್ಥೆಯನ್ನು ಕಳೆಯುತ್ತವೆ. ಡಿಂಬಗಳು ಲೆಕ್ಕವಿಲ್ಲದಷ್ಟು ಕಂಬಳಿ ಹುಳುಗಳನ್ನು ನಾಶಮಾಡಬಲ್ಲುವು. ಅಲ್ಲದೆ ಅನೇಕ ವೇಳೆ ಜೇಡಗಳನ್ನು ತಿನ್ನುತ್ತವೆ. ಮೆಗಾರಿಸ್ಸ ಮತ್ತು ರಾಲೆಸ್ಸ ಜಾತಿಯ ಹೆಣ್ಣು ಇಕ್ನೊಮಾನ್ ನೊಣಗಳಿಗೆ 8 ಅಥವಾ 9 ಸೆಂಮೀ ಉದ್ದವಾದ ಮೊಟ್ಟೆಗಳನ್ನು ಸಾಗಿಸುವ ಚೂಪು ನಾಳಾಂಗ (ಓವಿಪೊಸಿಟರ್) ಇದೆ. ಪೋಷಕ ಜೀವಿಯ ದೇಹವನ್ನು ನಾಳಾಂಗದ ಸಹಾಯದಿಂದ ಕೊರೆದು ಹೆಣ್ಣು ನೊಣ ಮೊಟ್ಟೆಗಳನ್ನಿಡುವುದು. ಬ್ರಿಟನ್ನಿನ ಪೀಜೋಮೇಕಸ್ ಎಂಬ ಇಕ್ನೊಮಾನ್ ನೊಣ ರೆಕ್ಕೆಗಳಿಲ್ಲದೆ ಇರುವೆಯಂತಿದೆ. ಅರ್ಜಿಯೊ ಟೈಪಸ್ ಆರ್ಮೇಟಸ್ ಎಂಬ ಇಕ್ನೊಮಾನ್ ನೊಣಗಳು ನೀರಿನಲ್ಲಿ ಮುಳುಗಿ ಟ್ರೈಕಾಪ್ಟೆರ ಕೀಟದ ಡಿಂಬಗಳಲ್ಲಿ ಮೊಟ್ಟೆಯಿಡುತ್ತವೆ.



***

**ಇಗ್ವಾನ:** ಸರೀಸೃಪಗಳ ವರ್ಗದ ಇಗ್ವಾನಿಡೆ ಕುಟುಂಬಕ್ಕೆ ಸೇರಿದ ದೊಡ್ಡ ಜಾತಿಯ ಹಲ್ಲಿ. ಹಲ್ಲುಗಳು ಹರಿತವಾದ ಅಲಗುಗಳಂತೆಯೂ ಮೇಲುತುದಿ ಗರಗಸದಂತೆಯೂ ಇವೆ. ದೇಹದ ಮೇಲೆ ಸಣ್ಣ ಸಣ್ಣ ಹುರುಪೆಗಳು, ತಲೆ ಮತ್ತು ಕುತ್ತಿಗೆಯ ಮಧ್ಯೆ ಒಂದು ತೊಗಲಿನ ಚೀಲ, ಬೆನ್ನಿನ ಮೇಲೆ ಏಣು, ಹ್ರಸ್ವ ನಾಲಗೆ–ಇವು ಈ ಪ್ರಾಣಿಯ ಲಕ್ಷಣಗಳು. ಈ ಹಲ್ಲಿ ಸು. 1.8 ಮೀ ಉದ್ದ ಬೆಳೆಯಬಲ್ಲುದು. ಮಧ್ಯ ಮತ್ತು ದಕ್ಷಿಣ ಅಮೆರಿಕ ವಾಸಿ. ಬಣ್ಣ ಹಸಿರು. ಮೈಮೇಲೆ ಕಂದುಬಣ್ಣದ ಅಡ್ಡಪಟ್ಟಿಗಳಿವೆ. ಮುಖ್ಯ ಆಹಾರ ಚಿಗುರೆಲೆ ಮತ್ತು ಹಣ್ಣುಹಂಪಲು. ಸಮಯ ಬಂದರೆ ಹಕ್ಕಿಗಳನ್ನೂ ಸಣ್ಣ ಸ್ತನಿಗಳನ್ನೂ



ಇಗ್ವಾನ

ಹಿಡಿದು ತಿನ್ನುವುದು. ಸಾಮಾನ್ಯವಾಗಿ ಇದು ಅಂಡಜ. ಆದರೆ ಕೆಲವು ಅಂಡಜರಾಯಿಗಳು. ಈ ಹಲ್ಲಿಗೂ ಗತಕಾಲದ ಇಗ್ವಾನೊಡಾನ್ (ನೋಡಿ) ಹಲ್ಲಿಗೂ ಬಲುಮಟ್ಟಿನ ಹೋಲಿಕೆ ಇರುವುದನ್ನು ಗುರುತಿಸಲಾಗಿದೆ. (ಎಂ.ಡಿ.ಪಿ.)

**ಇಗ್ವಾನೊಡಾನ್:** ಕ್ರಿಟೇಷಿಯಸ್ ಕಲ್ಪದಲ್ಲಿ (65-135 ದಶಲಕ್ಷ ವರ್ಷಗಳಷ್ಟು ಹಿಂದಿನ ಕಾಲ) ಬದುಕಿದ್ದ ಒಂದು ಹಲ್ಲಿ. ಇದು ಈಗ ಜೀವಿಸಿರುವ ಇಗ್ವಾನ (ನೋಡಿ) ಹಲ್ಲಿಯನ್ನು ಬಲುಮಟ್ಟಿಗೆ ಹೋಲುತ್ತಿತ್ತು. ಇಗ್ವಾನೊಡಾನ್ ಡೈನೋಸಾರುಗಳಲ್ಲಿ ಒಂದು. ಎತ್ತರ ಸುಮಾರು 4.5 ಮೀ. ಬಲಯುತವಾದ ಬಾಲವಿತ್ತು. ಹಿಂಗಾಲುಗಳನ್ನು ಹೊಂದಿದ್ದ ಈ ಪ್ರಾಣಿಯ ನಿಲುವು ಒಂದು ದೊಡ್ಡ ಕಾಂಗರೂವಿನ ಹಾಗೆ. ತನ್ನ ಮುಂಗಾಲುಗಳನ್ನು ಆಗಾಗ ಮಾತ್ರ ನೆಲಕ್ಕೆ ಮುಟ್ಟಿಸುತ್ತಿತ್ತು. ಇದು ಸ್ವಭಾವತಃ ಸಸ್ಯಾಹಾರಿ. ಮುಂಗಾಲಿನಲ್ಲಿ 5 ಬೆರಳುಗಳು. ಹೆಬ್ಬೆಟ್ಟಿನಲ್ಲಿ 30 ಸೆಂಮೀ ಉದ್ದದ ಉಗುರು. ಹಿಂಗಾಲಿನಲ್ಲಿ 3 ಬೆರಳುಗಳು. ಪ್ರಾಣಿಯ ಉದ್ದ ಸುಮಾರು 24 ಮೀ. ಇಗ್ವಾನೊಡಾನ್ ಪ್ರಾಣಿಗಳಂಥ ಡೈನೋಸಾರುಗಳಿಂದ ಮುಂದುವರಿದು ಪಕ್ಷಿಗಳ ಗುಂಪು ವಿಕಾಸ ಹೊಂದಿತು ಎನ್ನುವುದರಲ್ಲಿ



ಇಗ್ವಾನೊಡಾನಿನ ಎಲುಗಟ್ಟು

ಸಂದೇಹವಿಲ್ಲ. ಈ ಪ್ರಾಣಿಯ 29 ಪೂರ್ತ ಪಳೆಯುಳಿಕೆಗಳು ಬ್ರಸೆಲ್ಸ್‌ನ ಒಂದು ಕಲ್ಲಿದ್ದಲು ಗಣಿಯಲ್ಲಿ ಸಿಕ್ಕಿದುವು. ಪ್ರಾಯಶಃ ಗತಕಾಲದಲ್ಲಿ ಪ್ರಚಂಡ ನೀರಿನ ಸುಳಿಗೆ ಸಿಕ್ಕಿ ಸಾಮೂಹಿಕವಾಗಿ ಸತ್ತಿರಬಹುದು. ಈ ಸರೀಸೃಪಗಳು ಮೇಲಿನ ಜುರಾಸಿಕ್‌ನಲ್ಲೋ ಕೆಳಗಿನ ಕ್ರಿಟೇಷಿಯಸ್ ಕಲ್ಪದಲ್ಲೋ (ಎಂದರೆ 135 ದಶಲಕ್ಷ ವರ್ಷಗಳಷ್ಟು ಹಿಂದೆ) ಬದುಕಿದ್ದಿರಬಹುದು. (ಎಂ.ಡಿ.ಪಿ.)

**ಇಚ್ಚಿಪ್ಪು ಮೀನು:** ಮೃದ್ವಂಗಿಗಳ ವಂಶದ ಪೆಲಿಸಿಪೋಡ ವರ್ಗಕ್ಕೆ ಸೇರಿದ ಸೂಡೋಲ್ಯಾಮೆಲ್ಲಿಬ್ರಾಂಕಿಯೇಟ ಗಣದ ಪ್ರಾಣಿಗಳು. ಸ್ಕ್ಯಾಲಪ್ ಎಂದು ಪ್ರಚಲಿತ. ಪೆಕ್ಟೆನ್ ಜಾತಿಗೆ ಸೇರಿದ ಕಡಲಿನ ಮೃದ್ವಂಗಿ. ಇದರಲ್ಲಿ ಜೀವಂತವಾಗಿರುವ ಪ್ರಭೇದಗಳು ಸುಮಾರು 300. ಎಲ್ಲ ಸಾಗರಗಳಲ್ಲೂ ಇವೆ. ಇವುಗಳಲ್ಲಿ ಕೆಲವು ಮಾನವನ ಆಹಾರ. ಮಧ್ಯಯುಗದ ಯಾತ್ರಿಕರು ಇವುಗಳ ಕವಚಗಳನ್ನು ಸಂಕೇತಮುದ್ರೆಗಳಿಗಾಗಿ ಧರಿಸುತ್ತಿದ್ದರು. ಕಿವಿರುಗಳಿಗೆ ದ್ವಂದ್ವ ತಂತುಗಳಿದ್ದು ಅವುಗಳ ಮೇಲೆ ಹೊಳೆಯುವ ಪದರಗಳಿವೆ. ಕಿವಿರುಗಳು ಲೋಮನಾಳಗಳ ತಟ್ಟೆಗಳಿಂದಲೂ ಚೆನ್ನಾಗಿ ಬೆಳೆದ ನವಿರು ಪುಂಜದಿಂದಲೂ ಭದ್ರವಾಗಿ ಸೇರಿಕೊಂಡಿವೆ. ದೇಹದ ಮುಂಭಾಗ ಅಪೂರ್ಣ ಬೆಳವಣಿಗೆ ಪಡೆದಿದೆ. ಇದು ಒಂದೇ ಕಡೆ ನೆಲೆಸಿರುವ ಪ್ರಾಣಿಯಾದ್ದರಿಂದ ನವಿರು ಪುಂಜ ಸಮುದ್ರದ ತಳವನ್ನು ಬಲವಾಗಿ ಹಿಡಿದುಕೊಳ್ಳಲು ಸಹಾಯ ಮಾಡುತ್ತದೆ. ಚೆನ್ನಾಗಿ ಈಜಬಲ್ಲವು. ಚರ್ಮದ ಹೊರಮಡಿಕೆಯ ಅಂಚುಗಳಲ್ಲಿ ರೂಪಿತವಾದ ಕಣ್ಣುಗಳಿವೆ.

ಪೆಕ್ಟೆನ್ ಓಪರ್‌ಕ್ಯುಲಾರಿಸ್ ಸಾಮಾನ್ಯವಾಗಿ ಬ್ರಿಟಿಷ್ ದ್ವೀಪಗಳ ದಂಡೆಯ ತಳಭಾಗದಲ್ಲಿ, ಚಿಪ್ಪುಗಳ ರಾಶಿಯ ಮಧ್ಯೆ ಸ್ವಲ್ಪ ಮಣ್ಣಿನೊಡನೆ ಬೆರೆತುಕೊಂಡಿರುತ್ತದೆ. ಪೆಕ್ಟೆನ್ ಉಪಜಾತಿಗಳ ಪ್ರತಿನಿಧಿಗಳಾದ ಸೂಡೊಮುಸ್ಸಿಯಂ ಸಮುದ್ರದ ಬಹಳ ಆಳದಲ್ಲಿ ಕಂಡುಬರುತ್ತವೆ. ಉದಾಹರಣೆಗೆ, ಪೆಕ್ಟೆನ್ ನಿಯೊಸಿಯಾನಿಕಸ್ ಪೆಸಿಫಿಕ್ ಸಾಗರದಲ್ಲಿ ಸುಮಾರು 630 ಮೀ ಆಳದಲ್ಲಿ ವಾಸಿಸುತ್ತದೆ. (ಕೆ.ಎಂ.ವಿ.)

**ಇತ್ತಲೆಗ:** ಮೊಣಕೈಕೀಲನ್ನು ಮುಂಗೈಯಿಂದ ಬಲವಾಗಿ ಮಡಿಸಿದಾಗ ಎದ್ದು ಕಾಣುವ ರಟ್ಟೆಯ ಸ್ನಾಯುಗಳಲ್ಲಿ ಒಂದು (ಬೈಸೆಪ್ಸ್). ಇದರ ಮೂಲವಾಗಿ ಎರಡು ತಲೆಗಳಿವೆ: ಮೋಟಾಗಿರುವ ಮೋಟುದಲೆ (ಷಾರ್ಟ್‌ಹೆಡ್) ಮತ್ತು ನೀಳದಲೆ (ಲಾಂಗ್ ಹೆಡ್). ಮೊದಲಿನದು ಹೆಗಲ್ಮೂಳೆಯ (ಸ್ಕ್ಯಾಪುಲ) ಕೊರಕಾಯ್ಡೊ ಪ್ರೋಸೆಸ್‌ಗೂ ಎರಡನೆಯದು ಹೆಗಲ ಕೀಲೊಳಗಿನ ಕುಳಿಯಿಂದ ಗ್ಲೀನಾಯ್ಡ್‌ಕ್ಯಾವಿಟಿ ಅಂಚಿಗೂ ತಗುಲಿಕೊಂಡಿವೆ. ಹೆಗಲಿನ ಬುಡ ಎಲ್ಲ ದಿಕ್ಕುಗಳಲ್ಲೂ ಆಡುವಾಗ ಭದ್ರಗೊಳಿಸಲು ಈ ಸ್ನಾಯು ನೆರವಾಗುವುದು. ಒಂದುಗೂಡಿದ ನಡುವಣ ಭಾಗ (ಒಡಲು) ಕಂಡರದಲ್ಲಿ (ಟೆಂಡನ್) ಕೊನೆಗೊಳ್ಳುತ್ತದೆ. ಈ ಕಂಡರ ಕುಗ್ಗಿದಾಗ ಮುಂದೋಳು ಮೊಣಕೈಯಲ್ಲಿ ಮಡಿಸಿಕೊಂಡು ರಟ್ಟೆಯ ಮೇಲೆ ಬರುವುದು. ಅಲ್ಲದೆ ಅಂಗೈಯನ್ನು ಮಗುಚಿಹಾಕುತ್ತದೆ. ಭಾರ ಎತ್ತುವವರಲ್ಲಿ ಇದು ಬಲವಾಗಿರುತ್ತದೆ.

ತೊಡೆಯಲ್ಲೂ ಹಿಂದುಗಡೆ ಆಚೆಪಕ್ಕದಲ್ಲಿ ತೋಳಿನದರಷ್ಟು ಎದ್ದುಕಾಣದ ಒಂದು ಇತ್ತಲೆಗ ಸ್ನಾಯುವಿದೆ. ಮೂಳೆಗಂಟುವ ಇದರ ಕೆಳಗಣ ಕಂಡರ ಒಂದನ್ನು ಮಾತ್ರ ಮೇಲೆ ಗುರುತಿಸಬಹುದು. ಮೊಣಕಾಲಿನ ಹಿಂದುಗಡೆ, ಹೊರಪಕ್ಕದಲ್ಲಿ ಮುಟ್ಟಲು ಸಿಗುವ ಕಾಲಿನ ತೆಳುಮೂಳೆಯಾದ ಫಿಬುಲದ ಮೇಲ್ಕೊನೆಗೆ ಈ ಕಂಡರ ಅಂಟಿರುತ್ತದೆ. ಹಿಂತೊಡೆಯ ತುಂಬ ಈ ಸ್ನಾಯುವಿನ ಒಡಲು ಇದೆ. ಇದರ ಮೇಲ್ಕೊನೆ ಕುಳಿತುಕೊಂಡಾಗ ನೆಲಕ್ಕೆ ತಾಕುವ ಮೂಳೆಯ ಭಾಗವಾದ ಕಟ್ಯಾಸ್ಥಿಯ ಇಸ್ಕಿಯಂಗೆ ಅಂಟಿದೆ. ಈ ಸ್ನಾಯುವಿನ ಇನ್ನೊಂದು ತಲೆ ತೊಡೆಮೂಳೆಗೆ (ಫೀಮರ್) ಉದ್ದಕ್ಕೂ ಅಂಟಿದೆ. ರಟ್ಟೆಯ ಇತ್ತಲೆಗದಂತೆ ಇದು ಕೂಡ ಕಾಲನ್ನು ತೊಡೆ ಹಿಂದಕ್ಕೆ ಮೊಣಕಾಲಲ್ಲಿ ಬಲವಾಗಿ ಹಿಮ್ಮಡಿಸುವಂತೆ ಮಾಡುತ್ತದೆ. ಮೊಣಕಾಲನ್ನು ಮಡಿಸಿರುವಾಗ ಪಾದವನ್ನು ಹೊರಗೆ ಮಗುಚುವುದು. ಹಿಂತೊಡೆಯಲ್ಲಿರುವ ಸ್ನಾಯುಗಳಲ್ಲಿ ಇದು ಬಲು ಬಲವಾದುದು. ಮೊಣಕಾಲಿನ ರೋಗಗಳಲ್ಲಿ ಈ ಸ್ನಾಯುವಿನ ಎಳೆತದಿಂದ ಮೊಣಕಾಲು ಮಡಿಸಿಕೊಂಡೇ ಇದ್ದು ಬಿಡುವುದನ್ನು ತಪ್ಪಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ನೋಡಿ– ಸ್ನಾಯು; ಸ್ನಾಯುವಿನ ಮಂಡಲ. (ಡಿ.ಎಸ್.ಎಸ್.)

**ಇತ್ತಲೆಮಂಡಲ:** ಜಿಮ್ನೊಫಿಯಾನ ಅಥವಾ ಏಪೋಡ ಎಂಬ ಗಣಕ್ಕೆ ಸೇರಿದ ಒಂದು ದ್ವಿಚರಪ್ರಾಣಿ (ಇಕ್ತಿಯೋಫಿಸ್). ಕಾಲಿಲ್ಲದ ಈ ದ್ವಿಚರಿಗಳು ಉಷ್ಣವಲಯದ ಜೌಗು ಪ್ರದೇಶಗಳಲ್ಲೂ ಕೊಳೆಯುತ್ತಿರುವ ಎಲೆ, ಮರಮುಟ್ಟುಗಳಲ್ಲೂ ವಾಸಿಸಿ ಕ್ರಿಮಿಕೀಟಾದಿಗಳನ್ನು ತಿಂದು ಜೀವಿಸುತ್ತವೆ. ಚರ್ಮ ಲೋಳೆಗಟ್ಟಿರುತ್ತದಲ್ಲದೆ ಕೊಂಚ ಸುಕ್ಕಾಗಿಯೂ ಇದೆ. ಮೂಗಿನ ಹಿಂದೆ ಎರಡು ಚಿಕ್ಕದಾದ ಕರಬಳ್ಳಿ (ಟೆಂಟಕಲ್ಸ್) ಗಳಿವೆ. ಕಿವಿಗಳಿಗೆ ತಮಟೆ ಇಲ್ಲ. ಬಾಲ ಮೊಂಡು. ಸುರುಳಿ ಸುತ್ತಿಕೊಂಡು ಹೆಣ್ಣು ಪ್ರಾಣಿ ಮೊಟ್ಟೆಗಳನ್ನು ರಕ್ಷಿಸುತ್ತದೆ. ಈ ಗುಂಪಿಗೆ ಸೇರಿದ ಕೆಲವು ಪ್ರಭೇದಗಳು ಮೈಸೂರು ಮತ್ತು ರಾಜ್ಯದ ಮಲೆನಾಡು ಪ್ರದೇಶಗಳಲ್ಲಿ ಜೀವಿಸುತ್ತವೆ. ಗೆಗೆನೊಫಿಸ್, ಹೈಪೊಜಿಯೋಫಿಸ್, ಯೂರಿಯೊಟಿಪ್ಲಸ್, ಜಿಮ್ನೊಫಿಸ್, ಟಿಫ್ಲೊನಿಕ್ಟಸ್ ಈ ಪ್ರಾಣಿಗೆ ಹತ್ತಿರದ ಸಂಬಂಧಿಗಳು. (ಎಂ.ಡಿ.ಪಿ.)



1. 2.

ಇಕ್ತಿಯಾಫಿಸ್ ಗ್ಲೂಟಿನೋಸಸ್ (ಇತ್ತಲೆ ಮಂಡಲ)
1. ಡಿಂಬ 2. ವಯಸ್ಕ

**ಇನೋಸಿಟಾಲ್:** ಶರೀರದಲ್ಲಿ ಉತ್ಪತ್ತಿಯಾಗಿ, ದೇಹದ ಬೆಳವಣಿಗೆಗೆ ಅತ್ಯವಶ್ಯಕವಾಗಿರುವ, ಸಕ್ಕರೆಗಳಿಗೆ ಸಂಬಂಧಿಸಿದ ಇದು ಬಿ–ಕಾಂಪ್ಲೆಕ್ಸ್ ಗುಂಪಿಗೆ ಸೇರಿದ ಜೀವಾತು. ಇದು ಪ್ರಾಣಿಗಳಲ್ಲಿ ಕೂದಲು ಉದುರುವುದನ್ನು ತಡೆಹಿಡಿಯುವ ಮತ್ತು ಚರ್ಮರೋಗನಿವಾರಣೆ ಮಾಡುವ ಜೀವಾತು. ಹೆಕ್ಸ್‌ಹೈಡ್ರೋಸೈಕ್ಲೊಹೆಕ್ಸೇನಿನ ಒಂಬತ್ತು ಸ್ಟೀರಿಯೋ ಸಮಘಟಕಗಳಲ್ಲಿ (ಐಸೊಮರ್ಸ್) ಒಂದು ಮಾತ್ರ ಜೈವಿಕ ಪ್ರಾಮುಖ್ಯತೆ ಪಡೆದಿದೆ. ಅದೇ ಇನೋಸಿಟಾಲ್. ಶರೀರದ ಮಾಂಸಖಂಡಗಳಿಂದ ಉತ್ಪತ್ತಿಯಾಗುವ ಕೆಲವು ರಸಗಳಲ್ಲಿ ಇನೋಸಿಟಾಲ್ ಇದೆ. ಮಾನವನ ಮಿದುಳಿನ ಮಿದುಳುಬಳ್ಳಿಯಲ್ಲಿ ಇದು ಲೈಪೊಸಿಟಾಲ್ ಎಂಬ ರಂಜಕವುಳ್ಳ ಪದಾರ್ಥರೂಪದಲ್ಲಿದೆ. ಕೆಂಪುರಕ್ತಕಣಗಳುಳ್ಳ ಕೋಶಗಳು ಮತ್ತು ಕಣ್ಣುಗಳಲ್ಲಿರುವ ಕೋಶಗಳಲ್ಲಿ ಇನೋಸಿಟಾಲ್ ಅಲ್ಲದೆ ಕೆಲವು ಹಣ್ಣುಗಳಲ್ಲೂ ಕಾಯಿಪಲ್ಯಗಳಲ್ಲೂ ಮತ್ತು ಕೆಲವು ಧಾನ್ಯಗಳಲ್ಲೂ ಇನೋಸಿಟಾಲ್ ಫೈಟಿಕ್ ಆಮ್ಲದ ಹೆಕ್ಸ್‌ಫಾಸ್ಫೇರಿಕ್ ಎಸ್ಟರಾಗಿ ದೊರೆಯುತ್ತದೆ. ನಮ್ಮ ಶರೀರದಲ್ಲಿ ಗ್ಲೈಕೋಜನ್ ಶೇಖರವಾಗುವಂತೆ ಷಾರ್ಕ್ ಗುಂಪಿನ ಮೀನುಗಳ ದೇಹದಲ್ಲಿ ಇನೋಸಿಟಾಲ್ ಶೇಖರವಾಗುತ್ತದೆ.

ಇನೋಸಿಟಾಲ್ ಹರಳಾಕೃತಿಯ, ನೀರಿನಲ್ಲಿ ಕರಗುವ ಮದ್ಯಸಾರಗುಂಪಿನ ವಸ್ತು. ಇದರಲ್ಲಿ ಹೆಚ್ಚು–OH ಭಾಗಗಳಿರುವುದರಿಂದ ಸಕ್ಕರೆಯಂತೆಯೇ ಇದು ಸಿಹಿ. ಶರ್ಕರ ಪಿಷ್ಟ ಪದಾರ್ಥಗಳ ಮತ್ತು ಬೆಂಜೀನ್ ಉಂಗುರವುಳ್ಳ ವಸ್ತುಗಳ ಲಕ್ಷಣಗಳೆರಡೂ ಇವೆ.

1928ರಲ್ಲಿ ಇ.ವಿ. ಈಸ್ಟ್‌ಕಾಟ್ ಕೆಲವು ಯೀಸ್ಟುಗಳ ಬೆಳೆವಣಿಗೆಗೆ ಆವಶ್ಯಕವಾಗಿ ಇನೋಸಿಟಾಲ್ ಬೇಕಾದುದೆಂದು ಮೊದಲಬಾರಿಗೆ ತೋರಿಸಿದ. 1940ರಲ್ಲಿ ಇನೋಸಿಟಾಲ್ ಇಲಿಗಳಿಗೆ ಅತ್ಯವಶ್ಯಕವೆಂದು ವೂಲ್ಲೀ ತೋರ್ಪಡಿಸಿದ. ಆದರೂ ಇದರ ಆವಶ್ಯಕತೆ ಯಾವಾಗಲೂ ಇರಲೇಬೇಕಾದುದು ಕಂಡುಬಂದಿಲ್ಲ. ಕಾರಣ ಇಲಿಗಳ ಬೆಳೆವಣಿಗೆಗೆ ಸಂಬಂಧವಾಗಿ ಒದಗಿಸುವ ಅನೇಕ ಶುದ್ಧ ಆಹಾರ ಪದಾರ್ಥಗಳಲ್ಲಿ ಇನೋಸಿಟಾಲ್ ಸೇರಿರುವುದಿಲ್ಲ. ಸೂಕ್ಷ್ಮಜೀವಿಗಳ ಸಹಾಯವಿಧಾನದಿಂದ ಇದರ ಪ್ರಮಾಣ ನಿಗದಿ ಮಾಡಿದ್ದಾರೆ. ಕಿಣ್ವಗಳ ಸನ್ನಿವೇಶದಲ್ಲಿ ಇದರ ಪಾತ್ರವೇನೆಂಬುದು ವಸ್ತುತಃ ತಿಳಿದಿಲ್ಲ. ಶರ್ಕರ ಪಿಷ್ಟಪದಾರ್ಥವಾಗಿ ಅದು ಜೀವವಸ್ತುಕರಣಕ್ಕೆ (ಮೆಟಬಾಲಿಸಂ) ಒಳಗಾಗಬಲ್ಲುದು. ಸೂಕ್ಷ್ಮಜೀವಾಣುಗಳ ಬೆಳೆವಣಿಗೆಗೆ ಇದು ಅತ್ಯವಶ್ಯಕ ವಸ್ತುವಾಗಿರುವುದರ ಜೊತೆಗೆ ಇಲಿಗಳಿಗೆ ಕೆಲವು ಸಂದರ್ಭಗಳಲ್ಲಿ ಬೇಕೇಬೇಕಾದ ವಸ್ತುವಾಗಿದೆ. ಇನೋಸಿಟಾಲ್ ಅಭಾವದಿಂದಾಗಿ ಇಲಿಗಳಲ್ಲಿ ಕುಬ್ಜ ಬೆಳೆವಣಿಗೆ ಮತ್ತು ಕೂದಲು ಉದುರುವುದು ಗೋಚರವಾಗುತ್ತದೆ. ಕೆಲವು ಪರೀಕ್ಷಾ ಸನ್ನಿವೇಶಗಳಲ್ಲಿ ಇನೋಸಿಟಾಲ್ ಪಿತ್ತಜನಕಾಂಗದಲ್ಲಿ ಮೇದಸ್ಸು ಶೇಖರಿಸುವುದನ್ನು ನಿವಾರಿಸುವುದರಿಂದ ಅದನ್ನು ಲಿಪೊಟ್ರೋಪಿಕ್ ಏಜೆಂಟ್ ಎಂದು ಪರಿಗಣಿಸಿದ್ದಾರೆ. ಸಮಸ್ಥಾನಿ (ಐಸೋಟೋಪಿಕ್) ಗ್ಲೂಕೋಸನ್ನು ಉಪಯೋಗಿಸಿಕೊಂಡು ನಡೆಸಿದ ಪ್ರಯೋಗಗಳಲ್ಲಿ ಅದು ಇನೋಸಿಟಾಲ್ ಆಗಿ ಪ್ರಾಣಿಗಳಲ್ಲಿ ಪರಿವರ್ತನೆ ಹೊಂದಿರುವುದು ತಿಳಿದುಬಂದಿದೆ. ಕರುಳುಗಳಲ್ಲಿನ ಸೂಕ್ಷ್ಮ ಜೀವಿಗಳು ಇನೋಸಿಟಾಲನ್ನು ಸಾಕಷ್ಟು ಪ್ರಮಾಣದಲ್ಲಿ ಸಂಶ್ಲೇಷಿಸಿವೆ. ಮಾನವನ ಆಹಾರದಲ್ಲಿ ಇನೋಸಿಟಾಲ್ ಅವಶ್ಯವೆಂಬುದಕ್ಕೆ ಯಾವ ಪುರಾವೆ ಇಲ್ಲ. ಅತ್ಯಂತ ಬೇರ್ಪಡಿಸಿದ ಮಾನವ ಜೀವಕಣಕೂಟ ಅದರ ಸಂವರ್ಧಿಯಲ್ಲಿ (ಕಲ್ಚರ್) ತನ್ನ ಬೆಳೆವಣಿಗೆಗೆ ಈ ವಸ್ತುವನ್ನು ಅಪೇಕ್ಷಿಸುತ್ತದೆ ಎಂಬುದಾಗಿ 1956ರಲ್ಲಿ ಎಚ್. ಈಗಲ್ ತಿಳಿಸಿದ್ದಾನೆ. ಇನೋಸಿಟಾಲಿನ ಪೋಷಣ ಪಾತ್ರದ ಬಗ್ಗೆ ಇನ್ನೂ ಹೆಚ್ಚು ಸಂಶೋಧನಾಭ್ಯಾಸ ಮಾಡಬೇಕೆಂಬುದು ಇದರಿಂದ ವ್ಯಕ್ತವಾಗುತ್ತದೆ. (ಪಿ.ಜಿ.ಆರ್.)

**ಇನ್‌ವರ್ಟೇಸ್:** ಜೀವಿಗಳ ದೇಹದಲ್ಲಿ ಸಕ್ಕರೆಯ ಜಲವಿಚ್ಛೇದನ ಕ್ರಿಯೆಯನ್ನು (ಹೈಡ್ರಾಲಿಸಿಸ್) ವರ್ಧಿಸುವ ಕಿಣ್ವ (ಎಂಜೈಮ್). ಗ್ಲೂಕೋಸ್ ಮತ್ತು ಫ್ರಕ್ಟೋಸ್ ಸಕ್ಕರೆಗಳ ಸಂಯೋಜನೆಯಿಂದ ರಚನೆಗೊಳ್ಳುವ ದ್ವಿಶರ್ಕರವಾದ ಸಕ್ಕರೆ (ಸುಕ್ರೊಸ) ವಿಭಜನೆಹೊಂದಿ ಗ್ಲೂಕೋಸ್ ಮತ್ತು ಫ್ರಕ್ಟೋಸ್ ಸಕ್ಕರೆಯ ಅಣುಗಳನ್ನು ಬಿಡುಗಡೆ ಮಾಡುತ್ತದೆ.

$C_{12}H_{22}O_{11}+H_2O$ ಇನ್‌ವರ್ಟೇಸ್® $C_6H_{12}O_6 + C_6H_{12}O_6$

ಸಕ್ಕರೆ + ನೀರು ® ಗ್ಲೂಕೋಸ್ + ಫ್ರಕ್ಟೋಸ್

ಈ ಕಿಣ್ವ ಯೀಸ್ಟ್, ಕೀಟ, ಸಸ್ಯ ಮತ್ತು ಸ್ತನಿಗಳಲ್ಲಿ ಉತ್ಪತ್ತಿಯಾಗುತ್ತದೆ. ಮನುಷ್ಯನಲ್ಲಿ ಇದು ಚಿಕ್ಕ ಕರುಳಿನಲ್ಲಿದೆ.

ಸಕ್ಕರೆಯ ವಿಭಜನೆ ಎರಡು ಬಂಧಗಳೆಡೆಯಲ್ಲಿ ಜರುಗಬಹುದು. ಛೇದನೆ ಹೊಂದುವ ಬಂಧಗಳ ಆಧಾರದ ಮೇಲೆ ಇನ್‌ವರ್ಟೇಸ್ ಕಿಣ್ವಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದನೆಯ ಬಂಧದ ಛೇದನೆಯನ್ನು ವರ್ಧಿಸುವ ಕಿಣ್ವವನ್ನು b ಫ್ರಕ್ಟೋಫ್ಯೂರನೋ ಸೈಡೇಸ್ I ಎಂಬುದಾಗಿಯೂ ಎರಡನೆಯ ಬಂಧವನ್ನು ಛೇದಿಸುವ ಕಿಣ್ವಗಳನ್ನು ಗ್ಲೂಕೋಸಿಡೊ ಇನ್‌ವರ್ಟೇಸ್ II ಗಳೆಂದೂ ಕರೆಯಲಾಗಿದೆ. ಈ ಕಿಣ್ವಗಳು ಸಕ್ಕರೆಯನ್ನು ಛೇದಿಸುವ ಕ್ರಿಯೆಯನ್ನು ಮಾತ್ರವಲ್ಲದೆ, ಗ್ಲೂಕೋಸ್ ಅಥವಾ ಫ್ರಕ್ಟೋಸ್ ಅಂಶಗಳನ್ನು ಇತರ ಪರಿಗ್ರಾಹ (ಎಕ್ಸೆಪ್ಟರ್) ಅಣುಗಳಿಗೆ ವರ್ಗಾಯಿಸುವ ಕ್ರಿಯೆಯನ್ನು ವರ್ಧಿಸುತ್ತವೆ. ಒಂದನೆಯ ಗುಂಪಿಗೆ ಸೇರಿದ ಕಿಣ್ವಗಳು ಫ್ರಕ್ಟೋಸ್ ಅಂಶವನ್ನೂ ಎರಡನೆಯ ಗುಂಪಿನ ಕಿಣ್ವಗಳು ಗ್ಲೂಕೋಸ್ ಅಂಶವನ್ನೂ ವರ್ಗಾಯಿಸುತ್ತವೆ. ಸಕ್ಕರೆ, ಅರಾಬಿನೋಸ್ ಸಕ್ಕರೆ, ಮೀಥೈಲ್ ಆಲ್ಕೋಹಾಲ್, ಮದ್ಯಸಾರದ ಅಣುಗಳು ಪರಿಗ್ರಾಹಿಗಳಂತೆ ವರ್ತಿಸುತ್ತವೆ. ಸಕ್ಕರೆ ಪರಿಗ್ರಾಹಿಯಾದಾಗ ಫ್ರಕ್ಟೋಸ್ ಅಂಶಗಳ ವರ್ಗಾವಣೆಯಿಂದ, ಕೆಸ್ಟೋಸ್, ಐಸೊಕೆಸ್ಟೋಸ್ ಮತ್ತು ನಿಯೋ ಕೆಸ್ಟೋಸಸ್ ಎಂಬ ತ್ರಿಶರ್ಕರಗಳು ಇತರ ಬಹುಶರ್ಕರಗಳೂ ಉತ್ಪತ್ತಿಯಾಗುತ್ತವೆ.

ಇನ್‌ವರ್ಟೇಸ್ ಕಿಣ್ವದ ಚಟುವಟಿಕೆಯನ್ನು ಸಾಮಾನ್ಯವಾಗಿ ಎರಡು ವಿಧಾನಗಳಿಂದ ಅಳೆಯುತ್ತಾರೆ. ಸಕ್ಕರೆ ಅಪಕರ್ಷಕ ವಸ್ತುವಲ್ಲ. ಕಿಣ್ವದೊಂದಿಗೆ ಹುದುಗೇರಿಸಿದಾಗ ಅಪಕರ್ಷಕ ಗುಣವುಳ್ಳ ಗ್ಲೂಕೋಸ್ ಮತ್ತು ಫ್ರಕ್ಟೋಸ್ ಸಕ್ಕರೆಗಳು ಉತ್ಪತ್ತಿಯಾಗುವುದರಿಂದ ಅಪಕರ್ಷಕ ಶಕ್ತಿಯನ್ನು ಅಳೆದು ಚಟುವಟಿಕೆಯ ಮಟ್ಟವನ್ನು ಗೊತ್ತುಮಾಡಬಹುದು. ಹುದುಗೇರಿಸಿಇಟ್ಟ ಸಕ್ಕರೆಯ ದ್ರಾವಣದ ಮೂಲಕ ಧ್ರುವೀಕೃತ ಬೆಳಕಿನ ಕಿರಣವನ್ನು ಹಾಯಿಸಿ ಕಿರಣಸಮತಲದ ದಿಕ್ಕಿನಲ್ಲಿ ಉಂಟಾಗುವ ವ್ಯತ್ಯಾಸವನ್ನು ಪೋಲಾರಿಮೀಟರಿನಲ್ಲಿ ಅಳೆಯುವುದು ಇನ್ನೊಂದು ವಿಧಾನ. ಸಕ್ಕರೆ ಧ್ರುವೀಕೃತ ಕಿರಣದ ಸಮತಲವನ್ನು (ಪರೀಕ್ಷಕನ) ಬಲ ಪಾರ್ಶ್ವಕ್ಕೂ (ಧನಚಿಹ್ನೆ) ಫ್ರಕ್ಟೋಸ್ ಎಡಪಾರ್ಶ್ವಕ್ಕೂ (ಋಣಚಿಹ್ನೆ) ತಿರುಗಿಸುತ್ತದೆ. ಸಕ್ಕರೆಯ ವಿಭಜನೆಯ ಪರಿಣಾಮವಾಗಿ ಧ್ರುವೀಕೃತ ಕಿರಣ ಸಮತಲದ ದಿಕ್ಕು ಎಡಕ್ಕೆ ತಿರುಗುತ್ತದೆ. ಸಂಪ್ರದಾಯದ ಪ್ರಕಾರ ಧನಚಿಹ್ನೆ ಋಣಚಿಹ್ನೆಗೆ ಪರಿವರ್ತನೆಯಾದಾಗ ಆ ಕ್ರಿಯೆಗೆ ಪ್ರತಿಲೋಮಕ್ರಿಯೆ (ಇನ್ವರ್ಷನ್) ಎನ್ನುತ್ತಾರೆ. ಬದಲಾವಣೆಯ ಪ್ರಮಾಣವನ್ನು ಪೋಲಾರಿಮೀಟರಿನಲ್ಲಿ ಕೋನಮಾಪಕ ವಿಧಾನದಿಂದ ಅಳೆಯಬಹುದು. ದೇಹದಲ್ಲಿ ಸಕ್ಕರೆಯ ವಿಭಜನೆಗೆ ಇನ್‌ವರ್ಟೇಸ್ ನೆರವಾಗುತ್ತದೆ; ಔದ್ಯೋಗಿಕವಾಗಿ ಸಕ್ಕರೆಪಾಕ (ಸಿರಪ್) ಮತ್ತು ಕ್ಯಾಂಡಿಗಳ ತಯಾರಿಕೆಗೆ ಉಪಯೋಗವಾಗುತ್ತದೆ. (ಎಚ್.ಎಸ್.ಎಸ್.)

**ಇನ್ಸುಲಿನ್:** ರಕ್ತದಲ್ಲಿಯ ಸಕ್ಕರೆಯ (ಗ್ಲೂಕೊಸ್) ಮಟ್ಟ ಮತ್ತು ದೇಹದಲ್ಲಿ ಸಕ್ಕರೆಯ ಸಂಗ್ರಹಣೆ, ವಿತರಣೆ ಹಾಗೂ ಬಳಕೆಯನ್ನು ನಿಯಂತ್ರಿಸುವ, ಮೇದೋಜೀರಕ ಗ್ರಂಥಿಯಲ್ಲಿರುವ, ಅಂತ:ಸ್ರಾವಕ ಭಾಗವಾದ ಲೆಂಗರ ಹೆನ್ಸನ ಪುಟ್ಟ ದ್ವೀಪಗಳಲ್ಲಿರುವ ಬಿ–ಕೋಶಗಳಲ್ಲಿ ಉತ್ಪತ್ತಿಯಾಗುವ ಹಾರ್ಮೋನು. ಇದನ್ನು ಮೊಟ್ಟಮೊದಲ ಬಾರಿಗೆ 1921 ರಲ್ಲಿ ಫ್ರೆಡರಿಕ್ ಬೆಂಟಿಂಗ್ ಮತ್ತು ಚಾರ್ಲ್ಸ್ ಬೆಸ್ಟ್ ಕಂಡು ಹಿಡಿದರು. ಇವರ ಈ ವೈಜ್ಞಾನಿಕ ಅನ್ವೇಷಣೆಗೆ ಸಹಾಯ ಮಾಡಿದವರು. ಮ್ಯಾಕ್‌ಲಿಯೋಡ್. ಇವರುಗಳು ಕಂಡು ಹಿಡಿದ ಈ ಹಾರ್ಮೋನನ್ನು ಸಂಸ್ಕರಿಸಿದವರು ಕೊಲಿಪ್. ಪ್ರಾಣಿಗಳ ಮೇದೋಜೀರಕದಿಂದ ಬೇರ್ಪಡಿಸಿದ ಮತ್ತು ಸಂಸ್ಕರಿಸಲ್ಪಟ್ಟ ಮೊದಲನೆ ಹಾರ್ಮೋನು ಎಂಬ ಹೆಗ್ಗಳಿಕೆ ಇನ್ಸುಲಿನ್‌ಗೆ ಸಲ್ಲುತ್ತದೆ. ಇದಕ್ಕಾಗಿ ಬೆಂಟಿಂಗ್ ಮತ್ತು ಮ್ಯಾಕ್ ಲಿಯೋಡರವರಿಗೆ 1923 ರಲ್ಲಿ ವೈದ್ಯಕೀಯ ವಿಭಾಗದ ನೊಬೆಲ್ ಪಾರಿತೋಷಕ ಲಭಿಸಿತು. ಇದನ್ನವರು ಬೆಸ್ಟ್ ಮತ್ತು ಕೊಲಿಪ್ ರೊಂದಿಗೆ ಹಂಚಿಕೊಂಡರು.

ಇನ್ಸುಲಿನ್ ಪರ್ಯಾಯಪದ ನಡುಗಡ್ಡೆ. 1868 ರಲ್ಲಿ ಪಾಲ್ ಲ್ಯಾಂಗರ್ ಹಾನ್ಸ್ ಅನ್ನುವ ಜರ್ಮನಿಯ ವಿಜ್ಞಾನಿಯು, ಮೊಟ್ಟ ಮೊದಲ ಬಾರಿಗೆ ನಾಯಿಯ ಮೇದೋಜೀರಕ ಗ್ರಂಥಿಯಲ್ಲಿ ಕೆಲವು ನಡುಗಡ್ಡೆಯಂತಹ ಜೀವಕೋಶ ಸಮುದಾಯಗಳನ್ನು ತೊರಿಸಿದನು. ಇದನ್ನೆ ತದನಂತರ ಲೆಂಗರ್ ಹಾನ್ಸನ ನಡುಗಡ್ಡೆಗಳು (ಐಲೆಟ್ ಆಫ್ ಲೆಂಗರಹೆನ್ಸ್) ಎಂದು ಕರೆಯಲಾಗಿದೆ. ಈ ನಡುಗಡ್ಡೆಗಳು ಸಾಮಾನ್ಯವಾಗಿ ಗುಂಡುಸೂಜಿಯ ತಲೆ (ಪಿನ್ ಹೆಡ್) ಗಾತ್ರದ್ದಾಗಿದ್ದು ಮೇದೋಜೀರಕದ ಶೇಕಡಾ 2% ರಷ್ಟು ಭಾಗವನ್ನಾಕ್ರಮಿಸಿರುತ್ತದೆ. ಈ ನಡುಗಡ್ಡೆಯಂತಹ ಜೀವಕೋಶ ಸಮುದಾಯದಲ್ಲಿ ಶೇಕಡಾ 60 ಇನ್ಸುಲಿನ್ ಉತ್ಪಾದಿಸುವ ಬೀಟಾ ಜೀವಕೋಶಗಳಿರುತ್ತವೆ. ಇತರೆ ಶೇಕಡಾ 40 ಭಾಗದಲ್ಲಿ ಆಲ್ಫಾ, ಡೆಲ್ಟ ಮತ್ತು ಇತರೆ ಜೀವಕೋಶಗಳಿರುತ್ತವೆ.

ಇನ್ಸುಲಿನ್ ಕೇವಲ 51 ಅಮೈನೋ ಆಮ್ಲಗಳ ಸರಪಳಿಯಿಂದ ಮಾಡಲ್ಪಟ್ಟಿರುವ ಪ್ರೊಟೀನ್. ಈ 51 ಅಮೈನೋ ಆಮ್ಲಗಳು ಎ ಮತ್ತು ಬಿ ಎಂಬ ಎರಡು ಸರಪಳಿಗಳಲ್ಲಿರುತ್ತವೆ. ಇನ್ಸುಲಿನ್ ಮೂಲ ಸ್ವರೂಪ (ಸ್ಟ್ರಕ್ಚರ್) ವನ್ನು 1950 ರಲ್ಲಿ ಫ್ರೆಡ್ ಸೆಂಗರ್ ಕಂಡು ಹಿಡಿದನು. ಇನ್ಸುಲಿನ್ ಕಣವು ಬೀಟಾ ಜೀವಕೋಶದಲ್ಲಿ ಜಿಂಕ್ ಧಾತುವಿನೊಂದಿಗೆ ಬೆಸೆದುಕೊಂಡಿರುತ್ತದೆ. ರಕ್ತದಲ್ಲಿ ಇನ್ಸುಲಿನ್ ಅರ್ಧ ಜೀವಿತಾವಧಿ (ಹಾಫ್ ಲೈಫ್) ಕೇವಲ 6 ನಿಮಿಷಗಳು, ಅಷ್ಟರೊಳಗೆ ಇದರ ಉಪಯೋಗವಾಗ ಬೇಕಾಗುತ್ತದೆ. ಇನ್ಸುಲಿನ್ ತನ್ನ ಪರಿಣಾಮ ಬೀರಬೇಕಾದರೆ ಗುರಿ ಅಂಗಾಂಶಗಳಲ್ಲಿ ಮುಖ್ಯವಾಗಿ, ಯಕೃತ್, ಮಾಂಸಖಂಡಗಳು, ಕೊಬ್ಬು ಜೀವಕೋಶಗಳ ಹೊರಪದರದಲ್ಲಿ ಗ್ರಾಹಿಗಳು (ರಿಸೆಪ್ಟರ್ಸ್) ಇರಬೇಕಾಗುತ್ತದೆ. ಇದರೊಂದಿಗೆ ಕ್ಯಾಲ್ಷಿಯಂನ ಇರುವಿಕೆಯೂ ಪ್ರಮುಖ ಪಾತ್ರವಹಿಸುತ್ತದೆ. ಇನ್ಸುಲಿನ್ ರಕ್ತದೊಂದಿಗೆ ಬೆರೆತು ಜೀವಕೋಶಗಳನ್ನು ತಲುಪಿದಾಗ, ಕೋಶಪೊರೆಯಲ್ಲಿರುವ ಗ್ರಾಹಿಗಳು ಇನ್ಸುಲಿನ್ ಸಂಪರ್ಕದಿಂದ ಚುರುಕುಗೊಂಡು ಅನೇಕ ರಾಸಾಯನಿಕ ಕ್ರಿಯೆಗಳಾಗಿ, ಅಂತಿಮವಾಗಿ ಜೀವಕೋಶಗಳ ಪದರದ ಮೂಲಕ ರಕ್ತದಲ್ಲಿಯ ಸಕ್ಕರೆಯು ಕೋಶಗಳಿಗೆ ಸೇರಿ ಅಲ್ಲಿ ಉಪಯೋಗಿಸಲ್ಪಡುತ್ತದೆ. ಅಲ್ಲಿ ಈ ಸಕ್ಕರೆಯು ಶಕ್ತಿ ಉತ್ಪಾದನೆಗೆ (ಎಲ್ಲಾಕೋಶಗಳಲ್ಲಿ) ಇಂಧನವಾಗಿ ಅಥವಾ ಗ್ಲೈಕೋಜನ್ (ಯಕೃತ್ತಿನಲ್ಲಿ) ಆಗಿ ಶೇಖರಣೆಗೊಳ್ಳುತ್ತದೆ. ಸಕ್ಕರೆಯು ಜೀವಕೋಶದ ಪದರದ ಮೂಲಕ ಸೈಟೋಪ್ಲಾಸಂಗೆ ತಲುಪಿದ ನಂತರ ಪದರದ ಹೊರಕ್ಕೆ ಉಳಿದ ಇನ್ಸುಲಿನ್ ನಿಷ್ಕ್ರಿಯವಾಗುತ್ತದೆ. ಅದರೊಂದಿಗೆ ಇದ್ದಂತಹ ಜಿಂಕ್ ಧಾತುವು ದೇಹದಲ್ಲಿ ಪುನ: ಉಪಯೋಗಿಸಲ್ಪಡುತ್ತದೆ.

ಇನ್ಸುಲಿನ್ ಬಿಡುಗಡೆಯು ದೇಹದಲ್ಲಿನ ಸಕ್ಕರೆ ಪ್ರಮಾಣವನ್ನು ಅವಲಂಬಿಸಿರುತ್ತದೆ. ಇದಕ್ಕೆ ಸಹಾಯಕವಾಗಿ ಆಟೋನಾಮಿಕ್ ನರತಂತುಗಳು ಮೇದೋಜೀರಕದಲ್ಲಿ ಇರುತ್ತವೆ. ಈ ಹಾರ್ಮೋನ್ ಬಿಡುಗಡೆಗೆ ಆದೇಶ ಬರುವುದು ಮೆದುಳಿನಲ್ಲಿರುವ ಹೈಪೊಥೇಲಮಸ್

ನಿಂದ ಇಲ್ಲಿಯೂ ಕೂಡ ಇನ್ಸುಲಿನ್ ಮತ್ತು ಗ್ಲುಕೋಸ್ ಗ್ರಾಹಿಗಳಿರುತ್ತವೆ. ಇದಲ್ಲದೆ ರಕ್ತದ ಗ್ಲುಕೊಸ್ ಪ್ರಮಾಣ ಹೆಚ್ಚಾದಾಗ ಬೀಟಾಕೋಶಗಳು ಅದನ್ನು ಗ್ರಹಿಸಿ ಹೆಚ್ಚಿನ ಇನ್ಸುಲಿನ್ ಸ್ರವಿಸುತ್ತವೆ.

ಊಟ ಮಾಡಬೇಕು ಎನ್ನುವ ಆಸೆಯೂ ಕೂಡ ಇನ್ಸುಲಿನ್ ಬಿಡುಗಡೆಗೆ ಕಾರಣವಾಗುತ್ತದೆ ಎಂದು ಪ್ರಯೋಗಗಳಿಂದ ತಿಳಿದು ಬಂದಿದೆ. ಅದರಂತೆ ಮಾನಸಿಕ ಒತ್ತಡಗಳೂ ಇದರ ಬಿಡುಗಡೆಯನ್ನು ನಿರ್ಬಂಧಿಸಬಲ್ಲವು. ಯಾವುದೇ ಕಾರಣಕ್ಕೆ ಇನ್ಸುಲಿನ್ ಬಿಡುಗಡೆಯಲ್ಲಿನ ಏರಿಳಿತ ಅಥವಾ ಗ್ರಾಹಿಗಳಲ್ಲಿನ ತೊಂದರೆ ದೇಹದಲ್ಲಿನ ಸಕ್ಕರೆ ಅಂಶವು ಉಪಯೋಗಿಸಲ್ಪಡದೆ ಮೂತ್ರದಲ್ಲಿ ಹೊರಹಾಕಲ್ಪಡುತ್ತದೆ. ಇದನ್ನೆ ಸಕ್ಕರೆ ಖಾಯಿಲೆ (ಡಯಾಬಿಟಿಸ್) ಎನ್ನುವುದು.

ಪ್ರಾಣಿಜನ್ಯ ಇನ್ಸುಲಿನ್ ಅನ್ನು ಮೊಟ್ಟ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಮನುಷ್ಯನ ಮೇಲೆ ಪ್ರಯೋಗಿಸಿದ್ದು 1922 ರ ಜನವರಿಯಲ್ಲಿ. ಈ ಪ್ರಯೋಗಕ್ಕೆ ಒಳಪಟ್ಟ ಮೊದಲ ವ್ಯಕ್ತಿ ಸಕ್ಕರೆ ಖಾಯಿಲೆಯಿಂದ ನರಳುತ್ತಿದ್ದ ಬಾಲಕ ಲಿಯೋನಾರ್ಡ್ ಥಾಮ್ಸನ್. ಈತನ ಜೀವಿತಾವಧಿಯನ್ನು ಇನ್ಸುಲಿನಿಂದಾಗಿ 1935 ರವರೆಗೆ ವಿಸ್ತರಿಸಲಾಗಿತ್ತು.

ಇನ್ಸುಲಿನ್ ಕಂಡು ಹಿಡಿದ ಅನಂತರ ಅದನ್ನು ಪ್ರಾಣಿಗಳ ಮೇದೋಜೀರಕದಿಂದ ಬೇರ್ಪಡಿಸಿ ಸಕ್ಕರೆ ಖಾಯಿಲೆಯ ಚಿಕಿತ್ಸೆಗಾಗಿ ದೊಡ್ಡ ಪ್ರಮಾಣದಲ್ಲಿ ಮೊದಲಿಗೆ ಉತ್ಪಾದನೆ ಮಾಡಿದವರು 1982 ರಲ್ಲಿ ಇಂಡೋನೆಪೋಲಿಸ್ ನಲ್ಲಿರುವ ಎಲಿ ಲಿಲ್ಲಿ ಎಂಬ ಕಂಪನಿ ಮತ್ತು ಯುರೋಪಿನ ಡೆನ್‌ಮಾರ್ಕನಲ್ಲಿರುವ ಇಂಡಿಯಾನಾ ಮತ್ತು ನೋವಾ ಕಂಪೆನಿಗಳು. ಪ್ರಾರಂಭದಲ್ಲಿ ಪ್ರಾಣಿಜನ್ಯ ಇನ್ಸುಲಿನ್ ತಯಾರಿಸಲಾಗುತ್ತಿತ್ತು. ಪ್ರತಿ ಸ್ತನಿಯ ಇನ್ಸುಲಿನ್ ಮಾನವನ ಇನ್ಸುಲಿನ್ ಹೋಲುತ್ತಿದ್ದುದೇ ಇದಕ್ಕೆ ಕಾರಣ. ಆದರೆ ಇಂತಹ ಪ್ರಾಣಿಜನ್ಯ ಇನ್ಸುಲಿನ್ ಕೆಲವರಿಗೆ ಒಗ್ಗುತ್ತಿರಲಿಲ್ಲ. ಆದ್ದರಿಂದ 1984ರ ಅನಂತರ ಜೈವಿಕ ತಂತ್ರಜ್ಞಾನದಿಂದ ಪ್ರಯೋಗ ಶಾಲೆಗಳಲ್ಲಿ ಮಾನವ ಇನ್ಸುಲಿನ್ ಉತ್ಪಾದನೆ ಪ್ರಾರಂಭವಾಯಿತು. ಪ್ರಯೋಗ ಶಾಲೆಯಲ್ಲಿ ಉತ್ಪಾದಿಸಲ್ಪಟ್ಟ ಮೊದಲ ಹಾರ್ಮೋನ್ ಎಂಬ ಹೆಗ್ಗಳಿಕೆಯೂ ಕೂಡ ಇನ್ಸುಲಿನ್‌ಗೆ ಸಲ್ಲುತ್ತದೆ. ಅದರಂತೆ ರೂಪರೇಷೆಯನ್ನು ತಿಳಿದುಕೊಂಡಂತಹ ಮೊದಲ ಹಾರ್ಮೋನ್ ಎಂಬ ಗೌರವವೂ ಇನ್ಸುಲಿನ್‌ಗೆ ಸಲ್ಲುತ್ತದೆ. ಇನ್ಸುಲಿನ್ ಈಗ ಸು. 2–3% ರಷ್ಟು ಜನರ ಪ್ರಾಣರಕ್ಷಕವಾಗಿ ಉಪಯೋಗಿಸಲ್ಪಡುತ್ತಿದೆ.

ಇನ್ಸುಲಿನ್ ದೇಹದಲ್ಲಿನ ಸಕ್ಕರೆ ಪ್ರಮಾಣವನ್ನು ಹತೋಟಿಯಲ್ಲಿ ಇಡುವುದಲ್ಲದೆ ದೇಹದಲ್ಲಿನ ಕೊಬ್ಬಿನಂಶವು ನಿರಂತರವಾಗಿ ಸಮಪ್ರಮಾಣದಲ್ಲಿ ಇರುವಂತೆ ನೋಡಿಕೊಳ್ಳುತ್ತದೆ. ಇದಲ್ಲದೆ ಜೀವಕೋಶಗಳಲ್ಲಿ ಅಮೈನೋ ಆಮ್ಲಗಳು ಒಟ್ಟುಗೂಡಿ ಪ್ರೋಟೀನ್ ಉತ್ಪಾದನೆ ಮಾಡುವಲ್ಲಿ ಸಹಾಯಕವಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಇನ್ಸುಲಿನ್ ಅನ್ನು ಬಹುಮುಖಿ ಹಾರ್ಮೋನ್ ಎನ್ನಲಾಗಿದೆ. (ವಿ.ಸಿ.ಆರ್.)

ಬೇರೆ ಬೇರೆ ಪ್ರಾಣಿಗಳ ಇನ್ಸುಲಿನ್ ಅಣುವಿನ ರಚನೆಯಲ್ಲಿ ಎ ಭಾಗಾಂಶ ಸರಪಣಿಯಲ್ಲಿ ಮೂರು (8,9,10) ಅಮೈನೊ ಆಮ್ಲಗಳೂ ಬಿ ಭಾಗಾಂಶ ಸರಪಣಿಯಲ್ಲಿ ಕೊನೆಯ (30) ಅಮೈನೊ ಆಮ್ಲವೂ ಬೇರೆ ಬೇರೆ ಆಗಿರುವುವು.

| | ಎ8 | ಎ9 | ಎ10 | ಬಿ30 |
|---|---|---|---|---|
| ಮಾನವ | ಥ್ರಿಯೋ | ಸೆರೀ | ಐಲ್ಯೂ | ಥ್ರಿಯೊ |
| ಹಂದಿ | ಥ್ರಿಯೋ | ಸೆರೀ | ಐಲ್ಯೂ | ಅಲ |
| ದನ | ಅಲ | ಸೆರೀ | ವ್ಯಾ | ಅಲ |
| ಕುರಿ | ಅಲ | ಗ್ಲೂ | ವ್ಯಾ | ಅಲ |
| ಕುದುರೆ | ಥ್ರಿಯೋ | ಗ್ಲೈ | ಐಲ್ಯೂ | ಅಲ |
| ತಿಮಿಂಗಲ | ಥ್ರಿಯೋ | ಸೆರೀ | ಐಲ್ಯೂ | ಅಲ |
| ನಾಯಿ | ಥ್ರಿಯೋ | ಸೆರೀ | ಐಲ್ಯೂ | ಅಲ |
| ಮೊಲ | ಥ್ರಿಯೋ | ಸೆರೀ | ಐಲ್ಯೂ | ಸೆರೀ |

ಕಾಡ್ ಮೀನಿನಲ್ಲಿ ತಯಾರಾಗುವ ಇನ್ಸುಲಿನ್ನಿಗೂ ಇದೇ ಪ್ರಭಾವ ಇದ್ದರೂ ಅದರ ರಚನೆಯೇ ಬೇರೆ. ಆದ್ದರಿಂದ ಇನ್ಸುಲಿನ್ ಪ್ರಭಾವ ಪೂರ್ತಿ ಚೆನ್ನಾಗಿರಲು ಅದರ ಒಟ್ಟಾರೆ ಆಕಾರ ಮುಖ್ಯ ಎಂದಂತಾಯಿತು. ಮಾರಾಟಕ್ಕೆ ಈ ಮೊದಲು ಬರುತ್ತಿದ್ದ ಇನ್ಸುಲಿನ್ನುಗಳೆಲ್ಲ ದನ, ಹಂದಿಗಳಿಂದ ತಯಾರಾದುವು. ಯಾವ ಪ್ರಾಣಿಯಿಂದಲೆ ಬಂದಿರಲಿ ಇನ್ಸುಲಿನ್ ನಿಜ ಗೆಲಸಗಳು ಒಂದೇ ತೆರನಾಗಿವೆ. ಇನ್ಸುಲಿನ್ ಅಣುವಿನ ರೋಧಜನಕ (ಆಂಟಿಜನ್) ನಿರ್ಧಾರಕ (ಡಿಟರ್ಮಿನೆಂಟ್) ಎ ಭಾಗಾಂಶ ಸರಪಣಿಯ 8,9,10 ನೆಯ ಜಾಗಗಳ ಅಮೈನೊ ಆಮ್ಲಗಳಲ್ಲಿ ಇರುವುದೆಂಬ ಒಂದು ಸೂಚನೆ ಇದೆ. ಇದು ನಿಜವಾದರೆ ದನದ ಇನ್ಸುಲಿನ್ನಿಗಿಂತಲೂ ಹಂದಿಯಿಂದ ತಯಾರಾದ ಇನ್ಸುಲಿನ್ನೇ ಮಾನವ ರೋಗಿಗೆ ಚೆನ್ನಾಗಿ ಒಗ್ಗುವುದು ಎಂದಂತಾಯಿತು. ರೋಗಿಗಳ ಚಿಕಿತ್ಸೆಯಲ್ಲಿ ತುಸುಮಟ್ಟಿಗೆ ಈ ಕಲ್ಪನೆ ನಿಜ ಎನ್ನಿಸುತ್ತದೆ. ಹಂದಿ ಇನ್ಸುಲಿನ್ನಿಗೂ ಮಾನವನ ಇನ್ಸುಲಿನ್ನಿಗೂ ಇರುವ ವ್ಯತ್ಯಾಸ ಬಿ ಭಾಗಾಂಶದ ಸರಪಣಿಯ ಕೊನೆಯ ಅಮೈನೋ ಆಮ್ಲದಲ್ಲಿ ಮಾತ್ರ.

ಈಲಿಯಲ್ಲಿ ಇನ್ಸುಲಿನ್ ಅಣು ಸಾಗಿಹೋಗುವಾಗ ಕಣ್ವದಿಂದ ಎ.ಬಿ. ಸರಪಣಿಗಳಾಗಿ ಒಡೆವಂತೆ ತೋರುತ್ತದೆ. ವಿದ್ಯುತ್ ಕ್ಷೇತ್ರಚಲನೆಯ (ಎಲೆಕ್ಟ್ರೊಫಾರೆಸಿಸ್) ರೀತಿಯಲ್ಲಿ ಬಿ ಸರಪಣಿ ಪೆಪ್ಟೈಡು ರಕ್ತದಲ್ಲಿರುವ ಕೋಳಿಯೊಂದಿಗೆ (ಆಲ್ಬುಮಿನ್) ಸಾಗುತ್ತದೆ. ಬಿ.ಸರಪಣಿಯ ಪೆಪ್ಟೈಡಿಗೆ ಇನ್ಸುಲಿನ್ ರೋಧಕ ಪ್ರಭಾವ ಇದೆ. ಆದ್ದರಿಂದ ಸಿಹಿಮೂತ್ರದಲ್ಲಿ ಈ ಪೆಪ್ಟೈಡು ಹೆಚ್ಚಿರುವುದು ಒಂದು ಕಾರಣವೆಂಬ ಊಹೆಯೂ ಇದೆ.

(ವೈ.ಎಸ್.ಎಲ್.ಎ)

**ಇನ್ಸೆಕ್ಟಿವೋರ:** ಕಶೇರುಕ ವಂಶದ ಸ್ತನಿ ವರ್ಗದ ಯೂಥೀರಿಯ ಉಪವರ್ಗಕ್ಕೆ ಸೇರಿದ ಗಣ. ಈ ಗಣ ಸ್ತನಿಗಳಲ್ಲೇ ಆದಿಮ ಗಣ. ಮಿಕ್ಕ ಎಲ್ಲ ಗಣಗಳಿಗೂ ಕೇಂದ್ರ.

ಎಲುಬು ಮತ್ತು ಅಂಗ ರಚನೆಗಳಲ್ಲಿ ಇವು ಕೆಲವು ಆದಿಮ ಗುಣಗಳನ್ನು ಪಡೆದಿವೆ. ಈ ಗುಣಗಳಲ್ಲಿ ಕೆಲಮಟ್ಟಿಗೆ ಮೆಟಥೀರಿಯ ಉಪವರ್ಗವನ್ನು ಹೋಲುತ್ತವೆ. ಮುಖ್ಯವಾಗಿ, ಸಾಮಾನ್ಯ ದಂತ ವಿನ್ಯಾಸ, ಚಿಕ್ಕ ಸೆರೆಬ್ರಲ್ ಗೋಳಗಳು; ಇವು ಸೆರೆಬೆಲ್ಲಂ ಮತ್ತು ಕಾರ್ಪೊರ ಕ್ವಾಡ್ರಿಜಮೈನಗಳನ್ನು ಮುಚ್ಚುವಂತೆ ಬೆಳೆದಿಲ್ಲ. ಕೆಲವು ಇನ್ಸೆಕ್ಟಿವೋರಗಳಲ್ಲಿ ಕ್ಲೋಯಕ ಇದೆ. ವೃಷಣ ಚೀಲ ಇಲ್ಲ. ಟಿಂಪ್ಯಾನಿಕ್ ಅವಕಾಶ ತೆರೆದಿದೆ. ಕಣ್ಣುಗೂಡು ವಿಶಾಲವಾಗಿ ಟೆಂಪೊರಲ್ ಕುಳಿಯೊಡನೆ ಸಂಬಂಧ ಬೆಳೆಸಿದೆ.

ಮೂಗಿಲಿ, ಮೋಲ್‌ಗಳು, ಹೆಡ್ಜ್‌ಹಾಗ್ ಮುಂತಾದ ಜೀವಿಗಳು ಈ ಗಣಕ್ಕೆ ಸೇರಿವೆ. ಆಧುನಿಕ ಇನ್ಸೆಕ್ಟಿವೋರಗಳು ಅತಿ ಚಿಕ್ಕ ಪ್ರಾಣಿಗಳು. ಇವುಗಳ ಮೂತಿಯು ಚೂಪಾಗಿದ್ದು ಮೇಲ್ದವಡೆ ಕೆಳದವಡೆಗಿಂತಲೂ ಉದ್ದವಾಗಿರುತ್ತದೆ. ದೇಹದ ಆಕಾರದಲ್ಲಿ ವ್ಯತ್ಯಾಸಗಳುಂಟು. ಅನೇಕ ಮೂಗಿಲಿಗಳು ನೋಡಲು ಇಲಿಗಳಂತೆಯೇ ಇರುತ್ತವೆ; ಆದರೆ ಇಲಿಗಳಿಗಿರುವಂತಹ ಪ್ರಮುಖವಾದ ಬಾಚಿಹಲ್ಲುಗಳಿಲ್ಲ. ಇಲಿಗಳಲ್ಲಿರುವಂತೆ ಮೂಗಿಲಿಗಳಲ್ಲಿ ಡಯಾಸ್ಟೆಮ ಇರುವುದಿಲ್ಲ.

ಮೋಲ್‌ಗಳ ಕಾಲು ದಪ್ಪ ಹಾಗು ತುಂಡ. ಬಾಲ ಮತ್ತು ಕಣ್ಣುಗಳು ಬಹಳ ಚಿಕ್ಕವು ಅಥವ ಕ್ಷಯಿಸಿವೆ. ಹೆಡ್ಜ್‌ಹಾಗ್ (ಎರಿನೇಷಿಯಸ್) ಮತ್ತು ಇವನ್ನೇ ಹೋಲುವ ಟೆನ್ರೆಕ್ (ಸೆನ್‌ಲೆಟಸ್)ಗಳ ಚರ್ಮದ ಮೇಲೆ ಮುಳ್ಳುಗಳಂತಹ ರಚನೆಗಳಿವೆ.

ಅಳಿಲುಗಳಂತೆ ಜೀವಿಸುವ ಮರ ಮೂಗಿಲಿಗಳು ಮತ್ತು ನೀರಿನಲ್ಲಿ ವಾಸಿಸುವ ಮೋಲ್‌ಗಳನ್ನು ಬಿಟ್ಟು ಇನ್ನುಳಿದ ಎಲ್ಲ ಇನ್ಸೆಕ್ಟಿವೋರಗಳು ನೆಲದ ಮೇಲ್ಪದರದ ಬಿಲಗಳಲ್ಲಿ ವಾಸಿಸುತ್ತವೆ. ಇವು ಆಸ್ಟ್ರೇಲಿಯ ಮತ್ತು ದಕ್ಷಿಣ ಅಮೆರಿಕದ ಉತ್ತರ ಭಾಗಗಳನ್ನುಳಿದು ಇನ್ನೆಲ್ಲ ದೇಶಗಳಲ್ಲೂ ಇವೆ. ಅನೇಕ ಇನ್ಸೆಕ್ಟಿವೋರಗಳು ಚಳಿಗಾಲದಲ್ಲಿ ಸುಪ್ತ ನಿದ್ದೆ ಮಾಡುತ್ತವೆ. ಇದಕ್ಕಾಗಿಯೇ ಇವುಗಳಲ್ಲಿ ಮೀಸಲಾದ ವಿಶೇಷವಾದ ಕೊಬ್ಬು ಸಂಗ್ರಹವಿರುತ್ತದೆ.

ಸಾಮಾನ್ಯವಾಗಿ ಎಲ್ಲ ಇನ್ಸೆಕ್ಟಿವೋರಗಳು ಪ್ರಾಣಿಗಳನ್ನು ತಿನ್ನುತ್ತವೆ. ಮೂಗಿಲಿಗಳು ಕೀಟಾಹಾರಿಗಳು ಮತ್ತು ಸರ್ವಭಕ್ಷಕ ಪ್ರಾಣಿಗಳು. ಇವುಗಳಲ್ಲಿ ವಿವಿಧ ಮಾದರಿಗಳಿವೆ. ಕೆಲವು ನೆಲವಾಸಿಗಳು, ಇತರವು ಜಲ ವಾಸಿಗಳು. ಮೋಲ್‌ಗಳು ಬಿಲ ತೋಡುವ ಸಾಮರ್ಥ್ಯವನ್ನು ಪಡೆದಿವೆ. ಇವು ಮಣ್ಣಿನಲ್ಲಿರುವ ಅಕಶೇರುಕಗಳನ್ನು ತಿನ್ನುತ್ತವೆ. ಹೆಡ್ಜ್‌ಹಾಗ್‌ಗಳು ಮಿಶ್ರಾಹಾರಿಗಳು. ಇವು ಕೀಟಗಳು, ಬಸವನ ಹುಳುಗಳು, ಚಿಕ್ಕ ಹಕ್ಕಿಗಳು, ಹಲ್ಲಿಗಳು, ಕಪ್ಪೆಗಳು, ಇಲಿಗಳು ಮತ್ತು ಹಾವುಗಳನ್ನು ತಿನ್ನುತ್ತವೆ.

ಈ ಪರಿಚಿತ ಪ್ರಾಣಿಗಳೇ ಅಲ್ಲದೆ ಅಳಿಲನ್ನು ಹೋಲುವ ಪೂರ್ವದೇಶಗಳ ವೃಕ್ಷಮೂಗಿಲಿ (ಮ್ಯಾಕ್ರೊಸ್ಕೆಲೈಡ್ಸ್)ಗಳು, ಬಂಗಾರದ ಮೋಲ್ (ಕ್ರೈಸೋಕ್ಲೋರಿಸ್), ಪೊಟಮೊಗೆಲ (ಆಟರ್ ಮೋಲ್), ದಕ್ಷಿಣ ಯೂರೋಪಿನ ಮೈಯೊಗೇಟ್‌ಗಳು ಇನ್ಸೆಕ್ಟಿವೋರಕ್ಕೆ ಸೇರುತ್ತವೆ. ಆಫ್ರಿಕದಲ್ಲಿ ಅನೇಕ ಜಾತಿಯ ಗಜಮೂಗಿಲಿಗಳಿವೆ. ಇವುಗಳೆಲ್ಲಕ್ಕೂ ಉದ್ದವಾದ ಹಿಂಗಾಲುಗಳಿದ್ದು ನೆಗೆದು ಚಲಿಸುತ್ತವೆ. ಇವುಗಳ ಹಸ್ತ ಮತ್ತು ಪಾದಗಳಲ್ಲಿ ಐದೈದು ಬೆರಳುಗಳಿವೆ. ಮೈಯೊಗೇಲ್ ಜಲವಾಸಿ. ಇದಕ್ಕೆ ಜಾಲಪಾದಗಳಿವೆ. ಮರ ಮೂಗಿಲಿ ವೃಕ್ಷವಾಸಿ. ಬಹಳ ಇನ್ಸೆಕ್ಟಿವೋರಗಳು ನಿಶಾಚರಿಗಳು. ಬಹು ಗಜಮೂಗಿಲಿಗಳು ಮತ್ತು ಮರ ಮೂಗಿಲಿಗಳು ದಿನಚರಿಗಳು. ಮೋಲ್‌ಗಳು ನಿಶಾಚರಿ ಅಥವಾ ದಿನಚರಿಗಳಾಗಿರಬಹುದು. ಇವುಗಳ ಸರಾಸರಿ ಆಯಸ್ಸು ಅತಿ ಕಡಿಮೆ. ಮೂಗಿಲಿಗಳು ಸುಮಾರು ಆರು ವಾರ ಬದುಕುತ್ತವೆ. ಹೆಡ್ಜಹಾಗ್‌ಗಳು ಸುಮಾರು ಹತ್ತು ವರ್ಷ ಬದುಕ ಬಲ್ಲವು. (ಎಸ್.ಆರ್.ಆರ್.ಎ.)

**ಇಮ್ಯೂನೋ ಎಲೆಕ್ಟ್ರೋಫಾರಸಿಸ್:** ಕಶೇರುಕ ಜೀವಿಗಳ ದೇಹದಿಂದ ಬೇರ್ಪಡಿಸಿದ ಪ್ರೋಟೀನ್ ಶುದ್ಧವಾದದ್ದೆ ಅಥವಾ ಹಲವಾರು ಪ್ರೋಟೀನುಗಳ ಮಿಶ್ರಣವೆ ಎಂಬುದನ್ನು ಅರಿಯುವ ವಿಧಾನ (ಪ್ರತಿರಕ್ಷೆ ವಿದ್ಯುತ್ಕಣ ಸಂಚಲನ). ಈ ಜೀವಿಗಳ ದೇಹವನ್ನು, ದೇಹಕ್ಕೆ ಹೊರತಾದ (ಫಾರಿನ್ ಸಬ್‌ಸ್ಟನ್ಸ್) ಕೆಲವು ವಸ್ತುಗಳು ಪ್ರವೇಶಿಸಿದಾಗ ಅವನ್ನು ನಾಶಮಾಡಲು ಇಲ್ಲವೆ ನಿಷ್ಕ್ರಿಯಗೊಳಿಸಲು ವಿಶಿಷ್ಟವಾದ ನಿರೋಧಕ ವಸ್ತುಗಳನ್ನು (ಆಂಟಿಬಾಡೀಸ್) ದೇಹ ತಯಾರಿಸುತ್ತದೆ. ನಿರೋಧಕಗಳ ಉತ್ಪತ್ತಿಯನ್ನು ಪ್ರಚೋದಿಸುವ ವಸ್ತುಗಳನ್ನು ನಿರೋಧಜನಕಗಳೆನ್ನಲಾಗಿದೆ (ಆಂಟಿಜನ್ಸ್). ವೈರಸ್, ಪ್ರೋಟೀನುಗಳು, ಮತ್ತು ಬಹುಶರ್ಕರಗಳು ನಿರೋಧಜನಕಗುಣಗಳನ್ನು ಹೊಂದಿವೆ. ನಿರೋಧಜನಕದ ರಾಸಾಯನಿಕ ರಚನೆ ಏನೇ ಇರಲಿ, ಉತ್ಪತ್ತಿಯಾಗುವ ನಿರೋಧಕ ಪ್ರೋಟೀನೇ ಆಗಿರುತ್ತದೆ. (ನೋಡಿ–ಇಮ್ಯುನೊ ರಸಾಯನಶಾಸ್ತ್ರ). ಈ ವಸ್ತುಗಳು ಪ್ರಾಣಿಯ ರಕ್ತದಲ್ಲಿ ಕಾಣಬರುತ್ತವೆ. ನಿರೋಧಕಗಳ ರಚನೆ ನಿರೋಧಜನಕಗಳ ಪ್ರಕೃತಿಯನ್ನು ಅವಲಂಬಿಸಿದೆ. ಯಾವುದೇ ಒಂದು ನಿರೋಧಜನಕದ ಪ್ರವೇಶದಿಂದ ಉತ್ಪತ್ತಿಯಾದ ನಿರೋಧಕ ಆ ನಿರೋಧಜನಕದೊಂದಿಗೆ ಮಾತ್ರ ಕೂಡಿ ಒತ್ತರವನ್ನು ರಚಿಸುತ್ತದೆ. ಈ ನಿರ್ದಿಷ್ಟತೆಯನ್ನು ಉಪಯೋಗಿಸಿಕೊಂಡು ನಿರೋಧಜನಕದ ಶುದ್ಧತೆಯನ್ನು ಕಂಡುಹಿಡಿಯಬಹುದು. ಇದೆ ಇಮ್ಯೂನೋ ಎಲೆಕ್ಟ್ರೋಫಾರಸಿಸ್ ವಿಧಾನದ ತತ್ವ. ಈ ವಿಧಾನದಲ್ಲಿ ಬೇರ್ಪಡಿಸಿ




ಪರಿಶೀಲನೆಗೆ ಒಳಗಾಗಿರುವ ಪ್ರೋಟೀನನ್ನು ನಿರೋಧಜನಕವನ್ನಾಗಿ ಬಳಸಿ ನಿರೋಧಕಗಳನ್ನು ಮೊಲದಲ್ಲಿ ಉತ್ಪತ್ತಿಮಾಡುತ್ತಾರೆ. ಅನಂತರ ಮೊಲದ ರಕ್ತವನ್ನು ತೆಗೆದು ರಕ್ತಸಾರವನ್ನು (ವಸೆ) ಬೇರ್ಪಡಿಸಿ ಸ್ಟಾರ್ಚ್ ಜೆಲ್ಲನ್ನು ಆಧಾರ ವಸ್ತುವನ್ನಾಗಿ ಉಪಯೋಗಿಸಿ ವಸೆಯನ್ನು ವಿದ್ಯುತ್ ಪ್ರವಾಹಕ್ಕೆ ಒಳಪಡಿಸುತ್ತಾರೆ. ಕೆಲವು ಗಂಟೆಗಳಕಾಲ ಪ್ರವಾಹವನ್ನು ಹರಿಸಿದಾಗ ನಿರೋಧಕಗಳು ವಿವಿಧ ಅಂತರಗಳಿಗೆ ಚಲಿಸಿ ಬೇರ್ಪಡೆಯಾಗುತ್ತವೆ. ಅನಂತರ ಸ್ಟಾರ್ಚ್‌ಜೆಲ್ಲನ್ನು ಒಂದು ಗಾಜಿನ ಹಲಗೆಯ ಮೇಲೆ ಹರಡಿರುವ ಆಗಾರ್ ಜೆಲ್ಲಿನ ಮೇಲೆ ಇಡಲಾಗುವುದು. ಆಗಾರ್ ಜೆಲ್ಲಿನಲ್ಲಿ ಸ್ಟಾರ್ಚ್‌ಜೆಲ್ಲಿಗೆ ಅನತಿದೂರದಲ್ಲಿ ಸಮಾನಾಂತರವಾಗಿ ಅದರ ಉದ್ದದಷ್ಟು ಉತ್ತಳ (ಶ್ಯಾಲೋ) ಮತ್ತು ಕಿರಿದಾದ ಕಾಲುವೆಯನ್ನು ಎರಡೂಕಡೆ ಮಾಡಿ ಈ ಕಾಲುವೆಗಳಲ್ಲಿ ನಿರೋಧಜನಕವಸ್ತುವಿನ ದ್ರಾವಣವನ್ನು ತುಂಬುತ್ತಾರೆ. ಇಂಥ ವ್ಯವಸ್ಥೆಯನ್ನು ಕೆಲವು ಗಂಟೆಗಳ ಕಾಲ ಸ್ಥಿರವಾಗಿರಗೊಟ್ಟರೆ ನಿರೋಧಕ ಮತ್ತು ನಿರೋಧಜನಕಗಳು ಈ ಅವಧಿಯಲ್ಲಿ ಆಗಾರ್ ಜೆಲ್ಲಿನಲ್ಲಿ ಪ್ರಸರಿಸುತ್ತವೆ. ಈ ಸಂದರ್ಭದಲ್ಲಿ ಪರಸ್ಪರ ಅನುಗುಣವಾದ ನಿರೋಧ ಮತ್ತು ನಿರೋಧಜನಕಗಳು ಸಂಧಿಸಿದರೆ ಒತ್ತರ ರಚಿತವಾಗುತ್ತದೆ. ಒತ್ತರ ತಿಳಿಯಾದ ಆಗಾರ್ ಜೆಲ್ಲಿನಲ್ಲಿ ವಕ್ರಾಕೃತಿಯ ಒತ್ತರರೇಖೆಗಳಂತೆ ಕಾಣುತ್ತದೆ. ಒತ್ತರದ ರೇಖೆಯ ಸಂಖ್ಯೆ ಒಂದಕ್ಕಿಂತ ಹೆಚ್ಚಾಗಿದ್ದರೆ ನಿರೋಧಜನಕ ವಸ್ತುಗಳಷ್ಟು ಪ್ರೋಟೀನುಗಳನ್ನೊಳಗೊಂಡ ಮಿಶ್ರವಸ್ತುವೆಂದು ಗೊತ್ತಾಗುತ್ತದೆ. ಈ ವಿಧಾನ ಎಷ್ಟು ಸೂಕ್ಷ್ಮವಾಗಿದೆಯೆಂದರೆ ಪ್ರೋಟೀನಿನಲ್ಲಿ 1–2 ಮೈಗಾ. ಗಳಷ್ಟು (1 ಮೈಗಾ. = $10^{-6}$ ಗಾ; ಗಾ ನ 10ಲಕ್ಷ ಭಾಗಗಳಲ್ಲಿ ಒಂದು ಭಾಗ) ಅಶುದ್ಧತೆಯಿದ್ದರೂ ಕಂಡುಹಿಡಿಯಬಹುದು. ಆರೋಗ್ಯವಂತ ಮನುಷ್ಯನ ರಕ್ತ ಸಾರವನ್ನು ಇಮ್ಯೂನೋ ಎಲೆಕ್ಟ್ರೋಫಾರಸಿಸ್ ವಿಧಾನದಿಂದ ವಿಶ್ಲೇಷಣೆಮಾಡಿದಾಗ ಮೂಡಿಬಂದ ರೇಖೆಗಳನ್ನು ಚಿತ್ರದಲ್ಲಿ ಉಲ್ಲೇಖಿಸಿದೆ. ಪ್ರತಿ ಒಂದು ವಕ್ರರೇಖೆಯೂ ರಕ್ತಸಾರದಲ್ಲಿರುವ ಒಂದು ಪ್ರೋಟೀನನ್ನು ಪ್ರತಿನಿಧಿಸುತ್ತದೆ. ಪ್ರೋಟೀನುಗಳು ಪ್ರಸರಿಸುವಾಗ ಚಕ್ರಾಕೃತಿಯಲ್ಲಿ ಚಲಿಸುವುದರಿಂದ ಒತ್ತರ ರೇಖೆಗಳು ವಕ್ರಾಕೃತಿಯಲ್ಲಿರುತ್ತವೆ. (ಎಚ್.ಎಸ್.ಎಸ್.)

**ಇಮ್ಯೂನೋರಸಾಯನವಿಜ್ಞಾನ (ಪ್ರತಿರಕ್ಷೆ ರಸಾಯನ ವಿಜ್ಞಾನ):** ನಿರೋಧಜನಕ ಮತ್ತು ನಿರೋಧಕ (ಆಂಟಿಜೆನ್ ಅಂಡ್ ಆಂಟಿಬಾಡಿ) ಇವುಗಳ ಸಂಬಂಧ, ನಿರೋಧಕಗಳ ಉತ್ಪತ್ತಿಕ್ರಮ ಮತ್ತು ಆನುವಂಶೀಯತೆ ಇತ್ಯಾದಿ ವಿಷಯಗಳ ರಸಾಯನಶಾಸ್ತ್ರ ದೃಷ್ಟಿಯ ಅಭ್ಯಾಸ (ಇಮ್ಯುನೋಕೆಮಿಸ್ಟ್ರಿ). ದೇಹವನ್ನು ಆಕ್ರಮಿಸಿ ಆರೋಗ್ಯಕ್ಕೆ ಧಕ್ಕೆ ತರುವಂಥ ಬ್ಯಾಕ್ಟೀರಿಯ ಮತ್ತು ನಂಜುಗಳನ್ನು ಎದುರಿಸಿ ದೇಹರಕ್ಷಣೆ ಮಾಡಬಲ್ಲಂಥ ನಿರೋಧಕ ವಸ್ತುಗಳನ್ನು ತಯಾರಿಸುವ ಶಕ್ತಿ ಎಲ್ಲ ಕಶೇರುಕ ಪ್ರಾಣಿಗಳಿಗಿದೆ. ಇನ್‌ಫ್ಲೂಯೆಂಜ, ಟೈಫಾಯಿಡ್ ಮುಂತಾದ ನಂಜು ಬೇನೆಗಳಿಂದ ಒಂದು ಸಲ ನರಳಿದವರು ಪುನಃ ಅವುಗಳಿಗೆ ಥಕ್ಕನೆ ಬಲಿಯಾಗುವುದಿಲ್ಲವೆಂಬುದು ಅನುಭವ. ಅಂದರೆ ಈ ಸಹಜ ನರಳಿಕೆಯ ಪರಿಣಾಮವಾಗಿ ದೇಹದಲ್ಲಿ ತಯಾರಾದ ನಿರೋಧಕ ವಸ್ತುಗಳು ಒಂದು ವಿಧದ ರಕ್ಷಣಾಸ್ತ್ರಗಳಾಗಿ ವರ್ತಿಸುತ್ತವೆ. ಇಂಥ ತಿಳುವಳಿಕೆಯ ಆಧಾರದಮೇಲೆ ಸಿಡುಬು, ಕಾಲರ ಮುಂತಾದ ಕಾಯಿಲೆಗಳ ವಿರುದ್ಧ ರಕ್ಷಣೆ ನೀಡುವ ಚುಚ್ಚುಮದ್ದುಗಳನ್ನು ಬಳಸುವ ವಿಧಾನ ರೂಢಿಗೆ ಬಂದಿದೆ. ಇದರ ಪ್ರಕಾರ ಯಾವುದೊಂದು ಬ್ಯಾಕ್ಟೀರಿಯ ಅಥವಾ ನಂಜನ್ನು ಹಲವಾರು ಪ್ರಯೋಗಗಳ ಮೂಲಕ ಸೌಮ್ಯ ರೂಪಕ್ಕೆ ಮಾರ್ಪಡಿಸಿ (ವಿಷವಿಲ್ಲದಂತೆ ಮಾಡಿ) ದೇಹಕ್ಕೆ ಚುಚ್ಚುತ್ತಾರೆ. ಆಗ ದೇಹದಲ್ಲಿ ಉತ್ಪತ್ತಿಯಾಗುವ ನಿರೋಧಕಗಳು ಇದೇ ವ್ಯಾಧಿಯ ಬ್ಯಾಕ್ಟೀರಿಯ ಅಥವ ನಂಜುಗಳು ದೇಹವನ್ನು ಮುತ್ತಿದಾಗ ಅವನ್ನು ನಾಶಪಡಿಸುತ್ತವೆ. ಹೀಗೆ ಒಂದು ದೇಹಕ್ಕೆ ಪೂರ್ವಭಾವಿಯಾಗಿ ರಕ್ಷಣೆಯನ್ನು ಕಲ್ಪಿಸಿಕೊಡುವ ವಿಧಾನವೇ ಪ್ರತಿರಕ್ಷಣೆ (ಇಮ್ಯುನೈಸೇಷನ್). ದೇಹಕ್ಕೆ ಹೊರತಾದ (ಫಾರಿನ್) ಕೆಲವು ವಸ್ತುಗಳು, ಅವು ಜೀವಂತವಾಗಿರಲಿ ನಿರ್ಜೀವಿಗಳಾಗಲಿ, ದೇಹವನ್ನು ಪ್ರವೇಶಿಸಿದರೆ ನಿರೋಧಕಗಳು ಉತ್ಪತ್ತಿಯಾಗುತ್ತವೆ. ನಿರೋಧಕಗಳ ಉತ್ಪತ್ತಿಯನ್ನು ಪ್ರೇರಪಿಸುವ ವಸ್ತುಗಳೆ ನಿರೋಧಜನಕಗಳು (ಆಂಟಿಜನ್ಸ್). ಬ್ಯಾಕ್ಟೀರಿಯ ಮತ್ತು ನಂಜುಗಳ ದಾಳಿಗೆ ಫಲವೇ ಸೋಂಕು ರಕ್ಷಣಾಕ್ರಿಯೆ (ಇಮ್ಯುನಾಲಾಜಿಕಲ್ ಫಿನಾಮಿನನ್) ಎಂದು ಮೊದಮೊದಲು ಪರಿಗಣಿಸಲಾಗಿತ್ತು. ಆದರೆ ಈಗ ಬ್ಯಾಕ್ಟೀರಿಯದಲ್ಲಿರುವ ಅನೇಕ ವಸ್ತುಗಳು ನಿರೋಧಜನಕಗಳಂತೆ ವರ್ತಿಸುತ್ತವೆಯೆಂದು ತಿಳಿದಿದೆ. ಪ್ರತಿ ನಿರೋಧಜನಕ ತನಗೆಂದೇ ವಿಶಿಷ್ಟವಾದ ನಿರೋಧಕದ ಸೃಷ್ಟಿಯನ್ನು ಪ್ರಚೋದಿಸುತ್ತದೆ. ಪ್ರೋಟೀನುಗಳು, ಬಹು ಶರ್ಕರಗಳು (ಪಾಲಿಸಾಕ್ಕರೈಡ್ಸ್) ಸಾಮಾನ್ಯವಾಗಿ ಶ್ರೇಷ್ಠ ತರಗತಿಯ ನಿರೋಧಜನಗಕಳು. ನ್ಯೂಕ್ಲಿಯಿಕ್ ಆಮ್ಲಗಳು ಸಾಮಾನ್ಯವಾಗಿ ಜನಕಗಳಲ್ಲವಾದರೂ, ಕೆಲವು ಬ್ಯಾಕ್ಟೀರಿಯೋಫೇಜ್ ಡಿಎನ್‌ಎ ಅಣುಗಳು ನಿರೋಧಕಗಳನ್ನು ಉತ್ಪತ್ತಿ ಮಾಡುವ ಸಾಮರ್ಥ್ಯ ಪಡೆದಿವೆ. ಕೊಬ್ಬು ನಿರೋಧಜನಕವಲ್ಲ.

ಒಂದು ಜಾತಿಯ ಜೀವಿಗಳಲ್ಲಿ ನಿರೋಧಕಗಳನ್ನು ಪ್ರೇರೇಪಿಸುವ ಬ್ಯಾಕ್ಟೀರಿಯ ಮತ್ತು ನಂಜುಗಳು ಇನ್ನೊಂದು ಬಗೆಯ ಜೀವಿಗಳಲ್ಲಿ ಅವನ್ನು ಪ್ರಚೋದಿಸಲು ಅಸಮರ್ಥವಾಗಿರಬಹುದು. ಅನೇಕ ಸಂದರ್ಭಗಳಲ್ಲಿ ಒಂದೇ ಜಾತಿಗೆ ಸೇರಿದ ಎರಡು ಪ್ರಾಣಿಗಳು ಈ ಬಗೆಯ ಭಿನ್ನತೆಯನ್ನು ಪ್ರದರ್ಶಿಸಬಹುದು. ಆದ್ದರಿಂದ ನಿರೋಧಕದ ಉತ್ಪತ್ತಿ ನಿರೋಧಜನಕದ ಈ ಗುಣವನ್ನು ಮಾತ್ರವಲ್ಲದೆ ಆತಿಥೇಯ (ಹೋಸ್ಟ್) ಪ್ರಾಣಿಯ ಪ್ರತಿವರ್ತನೆಯನ್ನೂ (ರೆಸ್ಪಾನ್ಸ್) ಅವಲಂಬಿಸಿದೆ. ಜೀವಿ ಯಾವುದೊಂದು ನಿರೋಧಜನಕವನ್ನು ಕುರಿತಾದ ಪ್ರತಿವರ್ತನೆ ಗುಣವನ್ನು ಆನುವಂಶೀಯವಾಗಿ ಪಡೆಯುತ್ತದೆ. ಸೋಂಕು ರಕ್ಷಣಾಕ್ರಿಯೆ ಯಾವಾಗಲು ರಕ್ಷಣೆಯನ್ನು ಒದಗಿಸುವುದೆಂದು ಹೇಳಬರುವುದಿಲ್ಲ. ಅಲರ್ಜಿ ಮತ್ತು ತೀವ್ರ ಪ್ರತಿಕ್ರಿಯೆಗಳುಂಟಾದಾಗ ಜೀವಿಗೆ ಅಪಾಯವೇ ಉಂಟಾಗಬಹುದು. ಉದಾಹರಣೆಗೆ, ಮೊಟ್ಟೆಯಿಂದ ತೆಗೆದ ಆಲ್ಬುಮಿನ್ (ಓವಾಲ್ಬುಮಿನ್) ಮತ್ತು ಹಸುವಿನ ರಕ್ತದಿಂದ ಬೇರ್ಪಡಿಸಿದ ಆಲ್ಬುಮಿನ್ ಗಳನ್ನು (ಬೊವೈನ್ ಸೀರಂ ಆಲ್ಬುಮಿನ್–ಬಿಎಸ್‌ಎ) ಮನುಷ್ಯನ ರಕ್ತನಾಳಗಳ ಮೂಲಕ ಚುಚ್ಚಿದರೂ ಮನುಷ್ಯನಿಗೆ ಅಪಾಯವೇನೂ ಆಗುವುದಿಲ್ಲ. ಆದರೆ ಅವನ್ನೇ 2–3 ವಾರಗಳ ತರುವಾಯ ಮತ್ತೆ ಚುಚ್ಚಿದರೆ ತತ್‌ಕ್ಷಣವೇ ಪ್ರಬಲ ಪ್ರತಿಕ್ರಿಯೆ ಉಂಟಾಗಿ ಮರಣವೇ ಸಂಭವಿಸಬಹುದು. ಈ ನಿರೋಧಜನಕಗಳು ಮೊದಲನೆಯ ಬಾರಿ ಚುಚ್ಚಿದ ನಿರೋಧಜನಕಗಳಿಗೆ ವಿರುದ್ಧವಾಗಿ ಉತ್ಪತ್ತಿಯಾಗಿ ರಕ್ತದಲ್ಲಿ ಸಂಚರಿಸುವ ನಿರೋಧಕ ವಸ್ತುಗಳೊಂದಿಗೆ (ಆಂಟಿ ಬಿಎಸ್‌ಎ ಅಥವಾ ಆಂಟಿ ಓವಾಲ್ಬುಮಿನ್) ವರ್ತಿಸುವುದೇ ಕಾರಣ. ಇಂಥ ವೇಳೆಯಲ್ಲಿ ದೇಹಕ್ಕೆ ರಕ್ಷಣೆ ಒದಗುವುದೆಂಬ ಅಭಿಪ್ರಾಯ ಅಸಮಂಜಸವಾಗುವುದು.

ನಿರೋಧಜನಕದ ದ್ರಾವಣವನ್ನು ಅದರ ಆತ್ಮೀಯವಸೆಯೊಂದಿಗೆ (ಹೋಮೊಲೋಗಸ್ ಆಂಟಿಸೀರಂ) ಸೇರಿಸಿದಾಗ ಒತ್ತರ ರಚನೆಯಾಗುವುದು. (ಆತ್ಮೀಯವಸೆ ಎಂದರೆ ಒಂದು ನಿರೋಧಜನಕದ ಪ್ರಯೋಗದಿಂದ ಅದರ ವಿರುದ್ಧವಾಗಿ ಅದನ್ನೇ ಗುರಿಯಾಗಿ ಉತ್ಪತ್ತಿಯಾದ ನಿರೋಧಕವನ್ನು ಒಳಗೊಂಡ ರಕ್ತಸಾರ ಅಥವಾ ವಸೆ). ಬಿಎಸ್‌ಎ ಯನ್ನು ನಿರೋಧಜನಕವನ್ನಾಗಿ ಉಪಯೋಗಿಸಿ ಇತರ ಪ್ರಾಣಿಗಳಲ್ಲಿ (ಉದಾಹರಣೆಗೆ ಮೊಲದಲ್ಲಿ) ಪಡೆದ ನಿರೋಧಕವನ್ನು (ಆಂಟಿ ಬಿಎಸ್‌ಎ) ಉಳ್ಳ ವಸೆ ಬಿಎಸ್‌ಎ ಅನ್ನು ಆತ್ಮೀಯವಸೆಯೆಂದು ಪರಿಗಣಿಸಲಾಗಿದೆ. ನಿರೋಧಜನಕ ತನ್ನ ಆತ್ಮೀಯವಸೆಯೊಂದಿಗೆ ನಿರ್ದಿಷ್ಟ (ಸ್ಪೆಸಿಫಿಕ್) ರೀತಿಯಲ್ಲಿ ವರ್ತಿಸಿ ಒತ್ತರವನ್ನು




ಓಕ್ಟರ್ ಲೋನಿ ಪ್ರಯೋಗ X ಮತ್ತು Y ಗಳು x ಮತ್ತು y ನಿರೋಧಜನಕ ಗಳಿಗೆ ವಿರುದ್ಧವಾಗಿ ಉತ್ಪತ್ತಿಯಾದ ನಿರೋಧಕಗಳು- x', x ಬದಿಗೆ ಅಡ್ಡ ಪ್ರತಿಕ್ರಿಯೆ ತೋರುವ ನಿರೋಧಜನಕ




IgG ಇಮ್ಯೂನೋ ಗ್ಲಾಬ್ಯುಲಿನ್ ರಚನೆಯ ಒಂದು ಮಾದರಿ







ರಚಿಸುತ್ತದೆ. ಇನ್ನಾವ ವಸ್ತುವೂ ಈ ವಸೆಯೊಂದಿಗೆ ವರ್ತಿಸಿ ಒತ್ತರವನ್ನುಂಟುಮಾಡಲಾರದು. ಈ ಗುಣದ ಆಧಾರದ ಮೇಲೆ ಮಾಂಸ ಮತ್ತು ಮಾಂಸವನ್ನೊಳಗೊಂಡ ಆಹಾರ ವಸ್ತುಗಳಲ್ಲಿರುವ ಪ್ರೊಟೀನುಗಳನ್ನು ದನದ ಮಾಂಸ, ಹಂದಿ ಮಾಂಸ ಅಥವಾ ಇನ್ನಾವ ಪ್ರಾಣಿಗಳಿಂದ ಅಥವಾ ಸಸ್ಯಮೂಲಗಳಿಂದ ಪಡೆಯಲಾಗಿದೆಯೆ ಎಂಬುದನ್ನು ಪರೀಕ್ಷಿಸಬಹುದು. ನಿರೋಧಜನಕಗಳನ್ನು ಒತ್ತರಿಸುವ ನಿರೋಧಕಗಳಿಗೆ ಪ್ರಿಸಿಪಿಟಿನ್ನುಗಳೆಂದು ಹೆಸರಿಡಲಾಗಿದೆ. ಈ ಬಗೆಯ ನಿರೋಧಕಗಳಲ್ಲದೆ ಕಣರೂಪೀ ನಿರೋಧಜನಕಗಳನ್ನು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡುವ ಆಗ್ಲುಟಿನಿನ್ನುಗಳು, ರಕ್ತಕೋಶಗಳನ್ನು ಸೀಳುವ ಸೈಟೊಲೈಸಿನ್ನುಗಳು, ವಿಷಯುಕ್ತ ನಿರೋಧಜನಕಗಳನ್ನು (ಟಾಕ್ಸಿನ್) ನಿಶ್ಚೇತನಗೊಳಿಸುವ ಆಂಟಿಟಾಕ್ಸಿನ್ನುಗಳು ನಿರೋಧಕಗಳ ಗುಂಪಿಗೆ ಸೇರಿವೆ. ಮೊದಲಿಗೆ ನಿರೋಧಕಗಳನ್ನು ಈ ರೀತಿ ವರ್ಗೀಕರಣ ಮಾಡಲಾಗಿದ್ದರೂ ಈಚೆಗೆ ದೊರೆತಿರುವ ಮಾಹಿತಿಯಂತೆ ಈ ವರ್ಗೀಕರಣ ಉಚಿತವಲ್ಲವೆಂದೂ ಈ ಎಲ್ಲ ಕ್ರಿಯೆಗಳೂ ಒಂದೇ ಕ್ರಿಯೆಯ ನಾನಾ ಮುಖಗಳೆಂದೂ ಪರಿಗಣಿಸಲಾಗಿದೆ. ಉದಾಹರಣೆಗೆ, ನ್ಯೂಮೊಕಾಕ್ಕೈ ಎಂಬ ಸೂಕ್ಷ್ಮಜೀವಿಯಲ್ಲಿರುವ ಬಹುಶರ್ಕರಕ್ಕೆ ವಿರುದ್ಧವಾಗಿ ಪಡೆದ ನಿರೋಧಕವನ್ನು ಈ ಬಹುಶರ್ಕರಕ್ಕೆ ಸೇರಿಸಿದಾಗ ಪ್ರಿಸಿಪಿಟಿನ್ನಿನಂತೆಯೂ (ಒತ್ತರ ರಚಿತವಾಗುತ್ತದೆ), ನ್ಯೂಮೋಕಾಕ್ಕೈ ಕ್ರಿಮಿಯ ಕೋಶಗಳು ತೇಲುತ್ತಿರುವ ದ್ರಾವಣಕ್ಕೆ ಸೇರಿಸಿದರೆ ಆಗ್ಲುಟಿನಿನ್ನಿನಂತೆಯೂ (ಕೋಶಗಳು ಒಂದಕ್ಕೊಂದು ಅಂಟಿಕೊಳ್ಳುತ್ತವೆ) ವರ್ತಿಸುತ್ತದೆ.

ನಿರೋಧಕ: ನಿರೋಧಜನಕದೊಂದಿಗೆ ಒತ್ತರವನ್ನು ರಚಿಸಿದರೆ ವಸೆಯಲ್ಲಿ ಅದರ ಇರವನ್ನು ಸುಲಭವಾಗಿ ಗೊತ್ತುಮಾಡಬಹುದು. ಅನೇಕ ವೇಳೆ ಇವೆರಡು ವಸ್ತುಗಳ ಸಂಯೋಗವಸ್ತು ವಿಲೀನವಾಗುವುದೂ ಉಂಟು. ಈ ಸಂದರ್ಭಗಳಲ್ಲಿ ಅತಿ ಹೆಚ್ಚಿನ ವೇಗದ ಭ್ರಮಣಯಂತ್ರದಲ್ಲಿ (ಅಲ್ಟ್ರಾ ಸೆಂಟ್ರಿಫ್ಯೂಜ್) ಸಂಯೋಗವನ್ನು ತಿರುಗಿಸಿ ನಿರೋಧಕ ಮತ್ತು ನಿರೋಧಜನಕಗಳಿಗಿಂತ ಅಧಿಕ ತೂಕವುಳ್ಳ ವಸ್ತುವಿನ ಒತ್ತರವನ್ನು ಗೊತ್ತುಮಾಡಬಹುದು. ಒತ್ತರವನ್ನುಂಟುಮಾಡದ ನಿರೋಧಕಗಳ ಹೆಸರು ರಿಯಾಗಿನ್ಸ್. ರಿಯಾಗಿನ್ಸನ್ನು ಸಲ್ಫಹೈಡ್ರಿಲ್ ವಸ್ತುಗಳ ಸಾನ್ನಿಧ್ಯದಲ್ಲಿ ಪಫೈನ್ ಎಂಬ ಕಿಣ್ವದೊಂದಿಗೆ ಸಂಸ್ಕರಿಸಿದರೆ ಒತ್ತರವನ್ನುಂಟು ಮಾಡಬಲ್ಲ ನಿರೋಧಕಗಳಾಗಿ ಪರಿವರ್ತನೆ ಹೊಂದುತ್ತವೆ.

ಒತ್ತರ ರಚನೆ ಮತ್ತು ಅಂಟುವಿಕೆ ಕ್ರಿಯೆಗಳು ನಡೆಯಲು ಆ ನಿರೋಧಕ ಮತ್ತು ನಿರೋಧಜನಕಗಳು ಮಾತ್ರ ಸಾಕು. ಈ ಕ್ರಿಯೆಗಳು ದೇಹದ ಹೊರಗೂ ನಡೆಯುತ್ತವೆ (ಇನ್ವಿಟ್ರೋ). ಆದರೆ ಕೋಶಭೇದನೆಗೆ (ಸೆಲ್ ಲೈಸಿಸ್) ರಕ್ತದಲ್ಲಿರುವ ಇನ್ನೊಂದು ವಸ್ತುವಿನ ಸಹಾಯವೂ ಬೇಕು. ಈ ವಸ್ತುವಿಗೆ ಕಾಂಪ್ಲಿಮೆಂಟ್ ಎಂಬ ಹೆಸರಿದೆ. ಕಾಂಪ್ಲಿಮೆಂಟ್ ಸಾನ್ನಿಧ್ಯದಲ್ಲಿ ನಿರೋಧಜನಕ ಮತ್ತು ಆತ್ಮೀಯ ವಸೆಯನ್ನು ಮಿಶ್ರಣ ಮಾಡಿದರೆ ಕಾಂಪ್ಲಿಮೆಂಟ್ ಕಣ್ಮರೆಯಾಗುತ್ತದೆ. ಅದು ನಿರೋಧಕ ನಿರೋಧಜನಕಗಳ ಸಂಯುಕ್ತಕ್ಕೆ ಸೇರಿಹೋಗುತ್ತದೆ ಇಲ್ಲವೆ ನಶಿಸುತ್ತದೆ. ಕಾಂಪ್ಲಿಮೆಂಟಿಗೂ ಇತರ ನಿರೋಧಕಗಳಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಈ ವಸ್ತು $55^0$–$58^0$ ಸೆ ಉಷ್ಣತೆಯಲ್ಲಿ ನಾಶವಾಗುವುದು. ಇತರ ನಿರೋಧಕಗಳು ನಾಶವಾಗುವುದಿಲ್ಲ. ಕಾಂಪ್ಲಿಮೆಂಟ್ ಒಂದೇ ಬಗೆಯ ವಸ್ತುವಾಗಿರದೆ 7–10 ವಿವಿಧ ಅಂಶಗಳನ್ನೊಳಗೊಂಡ ವಸ್ತುವೆಂದು ಈಗ ಪರಿಗಣಿಸಲಾಗಿದೆ.

ನಿರೋಧಕಗಳನ್ನು ಉತ್ಪತ್ತಿ ಮಾಡುವ ವಿಧಾನಗಳು : ಇಮ್ಯೂನೋರಾಸಾಯನಿಕ ಸಂಶೋಧನೆಗಳಲ್ಲಿ ಮೊಲವನ್ನು ಬಲುಮಟ್ಟಿಗೆ ಬಳಸಲಾಗುತ್ತದೆ. ಇದಕ್ಕೆ ಕಾರಣಗಳಿವೆ. 1) ಎಲ್ಲ ಕಾಲಗಳಲ್ಲಿಯೂ, ಋತುಗಳಲ್ಲಿಯೂ ಇವು ದೊರೆಯುತ್ತವೆ. ಇವನ್ನು ಬೆಳೆಸಿ ರಕ್ಷಿಸುವುದು ಸುಲಭ. 2) ಸಾಕಷ್ಟು ನಿರೋಧಕ ವಸ್ತುವಿನ ಉತ್ಪತ್ತಿ ಆಗುತ್ತದೆ. 3) ಕಿವಿಯಲ್ಲಿರುವ ಸಣ್ಣರಕ್ತನಾಳದ ಮೂಲಕ ಹಲವು ಬಾರಿ ನಿರೋಧಜನಕವನ್ನು ಚುಚ್ಚುವ ಮತ್ತು ರಕ್ತವನ್ನು ಬಸಿಯುವ ಸಾಧ್ಯತೆ ಇದೆ. ಹೆಚ್ಚಿನ ಪ್ರಮಾಣದಲ್ಲಿ

ನಿರೋಧಕ ಬೇಕಾದಾಗ ಕುದುರೆಯನ್ನು ಉಪಯೋಗಿಸಲಾಗುತ್ತದೆ. ಡಿಫ್ತೀರಿಯ ಮತ್ತು ಕ್ಲಾಸ್ಟ್ರಿಡಿಯಂ ಟೆಟಾನಿಗಳ ವಿಷಗಳ ವಿರುದ್ಧ ನಿರೋಧಕಗಳನ್ನೊಳಗೊಂಡ ಇಮ್ಯೂನ್‌ಸೀರಾ (ಚುಚ್ಚುಮದ್ದಿನ) ಉತ್ಪಾದನೆಗೆ ಕುದುರೆಯನ್ನೇ ಉಪಯೋಗಿಸುತ್ತಾರೆ. ಈಚೆಗೆ ಕೋಳಿಮರಿಗಳನ್ನೂ ಅಧಿಕ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಗಿನಿ ಹಂದಿಗಳನ್ನು ಅರೆಪ್ರತಿಕ್ರಿಯ (ಹೈಪರ್ ಸೆನ್ಸಿಟಿವಿಟಿ) ಉಂಟುಮಾಡಬೇಕಾದ ಸಂದರ್ಭಗಳಲ್ಲಿ ಉಪಯೋಗಿಸುತ್ತಾರೆ. ನಿರೋಧಕಗಳನ್ನು ಉತ್ಪತ್ತಿ ಮಾಡುವ ಪ್ರಯೋಗಗಳಲ್ಲಿ ನಿರೋಧಜನಕಗಳನ್ನು ಚರ್ಮದ ಕೆಳಭಾಗ (ಸಬ್‌ಕುಟೇನಿಯಸ್) ಅಥವಾ ಮಾಂಸಖಂಡ ಅಥವಾ ನೇರವಾಗಿ ಮಲಿನ ರಕ್ತನಾಳಗಳ ಮೂಲಕ ದೇಹಕ್ಕೆ ಸೇರಿಸುತ್ತಾರೆ. ಆದರೆ ಬಾಯಿ ಮುಖಾಂತರ ಸೇರಿಸುವುದಿಲ್ಲ. ಏಕೆಂದರೆ ಆಹಾರನಾಳಗಳಲ್ಲಿರುವ ಕಿಣ್ವಗಳು ನಿರೋಧಜನಕಗಳನ್ನು ನಾಶ ಮಾಡುವುವು. ಚರ್ಮದ ಪರೆಗಳ ಮಧ್ಯೆ (ಇಂಟ್ರಾಡರ್ಮಲ್), ಚರ್ಮದ ಕೆಳಗೆ ಮತ್ತು ಮಾಂಸಖಂಡಕ್ಕೆ ಚುಚ್ಚಿದ ನಿರೋಧಜನಕ ಸಾವಕಾಶವಾಗಿ ದೇಹದಲ್ಲಿ ವ್ಯಾಪಿಸುತ್ತದೆ. ರಕ್ತನಾಳ ಮತ್ತು ಪೆರಿಟೋನಿಯಲ್ ಕ್ಯಾವಿಟಿ ಮೂಲಕ ಒಳಸೇರಿದ ನಿರೋಧಜನಕ ದೇಹದಲ್ಲಿ ಅತಿ ಶೀಘ್ರವಾಗಿ ವ್ಯಾಪಿಸುತ್ತದೆ. ನಿರೋಧಜನಕದ ವ್ಯಾಪನೆ, ಅದರ ಚುಚ್ಚುವಿಕೆಯ ಮಾರ್ಗವನ್ನು (ರೂಟ್ ಆಫ್ ಇಂಜೆಕ್ಷನ್) ಅವಲಂಬಿಸುತ್ತದೆ. ಕಣರೂಪದಲ್ಲಿರುವ ಹೆಚ್ಚಿನ ಅಣುತೂಕವುಳ್ಳ ನಿರೋಧಜನಕಗಳು ಪ್ರಾದೇಶಿಕ ದುಗ್ಧ ಗ್ರಂಥಿಗಳಲ್ಲಿ (ರೀಜನಲ್ ಲಿಂಫ್‌ನೋಡ್ಸ್) ಸೆರೆಹಿಡಿಯಲ್ಪಡುತ್ತವೆ. ರಕ್ತದ ಮೂಲಕ ಸೇರುವ ನಿರೋಧಜನಕ ಪ್ರಥಮತಃ ಶ್ವಾಸಕೋಶ ತಲುಪುತ್ತದೆ. ಈ ಅವಯವ ಗಣನೀಯ ಪ್ರಮಾಣದಲ್ಲಿ ನಿರೋಧಜನಕವನ್ನು ಶೇಖರಿಸುತ್ತದೆ. ಅನಂತರ ಅದು ಗುಂಡಿಗೆಯನ್ನು (ಹಾರ್ಟ್) ಸೇರಿ ಅಲ್ಲಿಂದ ಅಪಧಮನಿಗಳ ಮೂಲಕ ದೇಹದ ಎಲ್ಲೆಡೆಗೆ ತಲುಪುತ್ತದೆ. ಗುಲ್ಮ (ಸ್ಪ್ಲೀನ್) ಅಧಿಕ ಪ್ರಮಾಣದಲ್ಲಿ ನಿರೋಧಜನಕವನ್ನು ಶೇಖರಿಸುತ್ತದೆ.

ನಿರೋಧಜನಕವನ್ನು ಪ್ರಚೋದಿಸಲು ಅವಶ್ಯಕವಾದ ನಿರೋಧಜನಕದ ಪ್ರಮಾಣ, ನಿರೋಧಜನಕದ ಪ್ರಕೃತಿ ಮತ್ತು ಚುಚ್ಚುಮಾರ್ಗವನ್ನವಲಂಬಿಸಿರುತ್ತದೆ. ಕಣರೂಪೀ ನಿರೋಧಜನಕಗಳು ವಿಲೀನವಾದ ನಿರೋಧಜನಕಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನಿರೋಧಕಗಳನ್ನು ಉತ್ಪಾದಿಸುತ್ತವೆ. ಹೆಚ್ಚಿನ ಅಣುತೂಕವುಳ್ಳ ನಿರೋಧಜನಕ ಅಲ್ಪ ಅಣುತೂಕವುಳ್ಳ ನಿರೋಧಜನಕಗಳಿಗಿಂತ ಉತ್ತಮ ಪ್ರಚೋದಕ. ಉದಾಹರಣೆಗೆ, ಸಾಲ್ಮೊನೆಲ್ಲಾ ಅಡಿಲೈಡ್ ಸೂಕ್ಷ್ಮಜೀವಿಯ ಕಶಾಂಗವನ್ನು (ಫ್ಲಾಜೆಲ್ಲಾ) ಅತಿ ಅಲ್ಪ ಪ್ರಮಾಣದಲ್ಲಿ ಚುಚ್ಚಿದರೂ ನಿರೋಧಕ ಉತ್ಪತ್ತಿಯಾಗುತ್ತದೆ. ಆದರೆ ಕಶಾಂಗದಿಂದ ಹೊರತೆಗೆದ ಬಹು ಅಣು ಅಥವಾ ಏಕಾಣುಗಳನ್ನು (ಪಾಲಿಮರ್ ಅಥವಾ ಮೊನೊಮರ್) ಕ್ರಮವಾಗಿ 1,000 ಮತ್ತು 1,00,000 ದಷ್ಟು ಪ್ರಮಾಣದಲ್ಲಿ ಅಷ್ಟೇ ನಿರೋಧಕವನ್ನು ಉತ್ಪತ್ತಿ ಮಾಡಲು ಉಪಯೋಗಿಸಬೇಕಾಗುತ್ತದೆ. ನಿರೋಧಜನಕವನ್ನು ಒತ್ತರಿಸಲ್ಪಟ್ಟ ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಮತ್ತು ಪ್ರೂಂಡನ ಸಹಾಯದ್ರವ್ಯಗಳೊಂದಿಗೆ (ಅಡ್‌ಜುವಂಟ್) ಚುಚ್ಚಿ ಉತ್ತಮ ಪ್ರಮಾಣದಲ್ಲಿ ನಿರೋಧಕವನ್ನು ಪಡೆಯಬಹುದು. ಮೊಲಗಳಲ್ಲಿ ಮೊದಲನೆಯ ಸಾರಿ ನಿರೋಧಜನಕವನ್ನು ಚುಚ್ಚಿದ 5–8 ದಿನಗಳ ತರುವಾಯ ನಿರೋಧಕವನ್ನು ಪತ್ತೆಮಾಡಬಹುದು. ಕೆಲವು ದಿನಗಳ ಮೇಲೆ ನಿರೋಧಕದ ಪ್ರಮಾಣ ಅತ್ಯುನ್ನತ ಮಟವನ್ನು ತಲುಪುತ್ತದೆ. ಮಲಿನ ರಕ್ತನಾಳಕ್ಕೆ ಚುಚ್ಚಿದರೆ ಶೀಘ್ರವಾಗಿಯೂ, ಮಾಂಸಖಂಡಗಳಿಗೆ ಚುಚ್ಚಿದರೆ ಕೊಂಚ ನಿಧಾನವಾಗಿಯೂ ಉತ್ಪತ್ತಿಯಾಗುತ್ತದೆ. ನಿರೋಧಜನಕವನ್ನು ಕೆಲವು ವಾರಗಳ ಅಥವಾ ತಿಂಗಳುಗಳ ಅನಂತರ ಪುನಃ ಚುಚ್ಚಿದರೆ ಎರಡನೆ ಬಾರಿ ಪ್ರತಿಕ್ರಿಯೆಯಲ್ಲಿ ನಿರೋಧಕ ಮೊದಲನೆಯ ಪ್ರತಿಕ್ರಿಯೆ ಮಟ್ಟಕ್ಕಿಂತ ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಈ ಸ್ಥಿತಿಯನ್ನು ಅತಿಪ್ರತಿಕ್ರಿಯೆ (ಹೈಪರ್ ಸೆನ್ಸಿಟಿವಿಟಿ) ಎನ್ನಬಹುದು. ಅಧಿಕ ಪ್ರಮಾಣದಲ್ಲಿ ನಿರೋಧಕಗಳನ್ನು ಉತ್ಪತ್ತಿ ಮಾಡುವ ಸಲುವಾಗಿ ಪ್ರಾಣಿಗಳಿಗೆ 6 ಅಥವಾ ಅದಕ್ಕಿಂತ ಹೆಚ್ಚು ಸಾರಿ ನಿರೋಧಜನಕಗಳನ್ನು 2–3 ದಿನಗಳ ಅಂತರದಲ್ಲಿ ಚುಚ್ಚುವ ಪದ್ಧತಿ ಇದೆ. 5–6 ದಿನಗಳಿಗಿಂತ ಹೆಚ್ಚಿನ ಅಂತರ ಕೂಡದು. ನಿರೋಧಕಗಳ ಉತ್ಪತ್ತಿ 5–6 ದಿನಗಳ ಮೇಲೆ ಅತ್ಯುನ್ನತ ಮಟ್ಟವನ್ನು ತಲುಪುವುದರಿಂದ ಪುನಃ ಚುಚ್ಚಿದ ನಿರೋಧಜನಕ ಮತ್ತು ನಿರೋಧಕಗಳ ಒತ್ತರ ರಕ್ತನಾಳಗಳಲ್ಲಿ ಉಂಟಾಗಿ ಅಪಾಯ ಪರಿಸ್ಥಿತಿ ಒದಗಿ ಮರಣವೂ ಸಂಭವಿಸಬಹುದು.

ನಿರೋಧಜನಕಗಳ ನಿರ್ದಿಷ್ಟತೆ ಮತ್ತು ಸಾಮರ್ಥ್ಯ : 1. ಪ್ರೋಟೀನುಗಳು : ನಿರೋಧ ಪ್ರಚೋದಕ ಸಾಮರ್ಥ್ಯವಿರುವ ವಸ್ತುಗಳಿವೆ ಎಂಬುದರ ಅರಿವು ಮೊದಲ ಬಾರಿಗೆ ಪ್ರೋಟೀನುಗಳ ಮೂಲಕವಾಯಿತೆನ್ನಬಹುದು. ಒಂದು ಪ್ರಾಣಿಯ ಪ್ರೋಟೀನಿಗೆ ನಿರ್ದಿಷ್ಟವಾದ ನಿರೋಧಕ ಆ ಪ್ರೋಟೀನನ್ನು ಮಾತ್ರವಲ್ಲದೆ ಆ ಪ್ರಾಣಿಯ ವಂಶವೃಕ್ಷದಲ್ಲಿ (ಟ್ಯಾಕ್ಸಾನಾಮಿಕಲಿ), ಸಂಬಂಧಪಟ್ಟ ಪ್ರಾಣಿಯ ಪ್ರೋಟೀನನ್ನು ಸಹ ಒತ್ತರಿಸುತ್ತದೆ. ಉದಾಹರಣೆಗೆ, ಕುದುರೆಯ ವಸೆಗೆ ವಿರುದ್ಧವಾದ ನಿರೋಧಕಗಳು ಕತ್ತೆ ಮತ್ತು ಹೇಸರಕತ್ತೆಗಳ ವಸೆಯಲ್ಲಿರುವ ಪ್ರೋಟೀನುಗಳನ್ನು ಒತ್ತರಿಸಬಲ್ಲವು. ಈ ಗುಣ ಭಿನ್ನಜಾತಿಗಳಿಗೆ ಸೇರಿದ ಪ್ರಾಣಿಗಳಿಗಿರುವ ಪರಸ್ಪರ ಸಂಬಂಧವನ್ನು ಕಂಡುಹಿಡಿಯಲು ಸಾಧಕ. ಪ್ರಾಣಿಗಳ ದೇಹದ ದ್ರವಗಳಲ್ಲಿರುವ (ರಕ್ತ, ಹಾಲು, ಇತರ ದ್ರವಗಳು) ಪ್ರೋಟೀನುಗಳು ಮತ್ತು ವಿಲೀನವಾಗಬಲ್ಲ ಸಸ್ಯ ಪ್ರೋಟೀನುಗಳು ಶ್ರೇಷ್ಠ ನಿರೋಧಜನಕಗಳು. ವಿಲೀನವಾಗಲಾರದ ಕೂದಲು, ಉಗುರು ಇತ್ಯಾದಿ ಪ್ರೋಟೀನುಗಳು ನಿರೋಧಜನಕಗಳಲ್ಲ. ಅಲ್ಪ ಗಾತ್ರದ ಮತ್ತು ಅಲ್ಪ ಅಣುಭಾರವುಳ್ಳ ಇನ್ಸುಲಿನ್ ಮತ್ತು ಚೋದಕಗಳು ಅತಿ ಅಲ್ಪ ಪ್ರಮಾಣದಲ್ಲಿ ನಿರೋಧಕಗಳನ್ನು ಉತ್ಪತ್ತಿ ಮಾಡುತ್ತವೆ. ಹಂದಿಯಿಂದ ತೆಗೆಯಲ್ಪಟ್ಟ ಇನ್ಸುಲಿನ್, ಮನುಷ್ಯನ ದೇಹಕ್ಕೆ ಪ್ರವೇಶಿಸಿದರೂ ಅಪಾಯಕಾರಿಯಾಗುವುದಿಲ್ಲ. ಅಪೂರ್ವವಾಗಿ ಕೆಲವು ವ್ಯಕ್ತಿಗಳ ದೇಹದಲ್ಲಿ ಇನ್ಸುಲಿನ್ ಪ್ರಯೋಗದಿಂದ ಬಾಸುಂಡೆ, ಊತಗಳೂ ತಲೆದೋರಬಹುದು. ನಿರೋಧಜನಕ ಸಾಮರ್ಥ್ಯ ಪಡೆದಿರಲು ಪ್ರೋಟೀನುಗಳ ಅಣುಭಾರ ಕನಿಷ್ಠಪಕ್ಷ 10,000 ಇರಬೇಕು. ಉದಾಹರಣೆಗೆ 6,000 ಅಣುಭಾರವುಳ್ಳ ಇನ್ಸುಲಿನ್ನಿಗಿಂತ 14,000 ಅಣುಭಾರವುಳ್ಳ ರೈಬೋ ನ್ಯೂಕ್ಲಿಯೇಸ್ ಉತ್ತಮ ನಿರೋಧಜನಕ.

ರಾಸಾಯನಿಕವಾಗಿ ಶುದ್ಧವಾದ ಪ್ರೋಟೀನುಗಳನ್ನು ನಿರೋಧಜನಕಗಳನ್ನಾಗಿ ಬಳಸಿದರೂ ಅವಕ್ಕೆ ವಿರುದ್ಧವಾಗಿ ವಿಶಿಷ್ಟವಾದ ವಿವಿಧ ರೀತಿಯ ನಿರೋಧಕಗಳು ಉತ್ಪತ್ತಿಯಾಗುತ್ತವೆ. ಒಂದೊಂದು ನಿರೋಧಕವೂ ಪ್ರೋಟೀನ್ ಬೃಹದಣುವಿನ ಮೇಲ್ಮೈನಲ್ಲಿರುವ ಒಂದೊಂದು ಗುಂಪುಗಳಿಗೆ ವಿರುದ್ಧವಾಗಿರುತ್ತದೆ. ಈ ಗುಂಪುಗಳು ನಿರೋಧಕಗಳ ನಿರ್ದಿಷ್ಟತೆಗೆ ಕಾರಣವಾಗಿರುವುದರಿಂದ ಇವನ್ನು ನಿರ್ದಿಷ್ಟಕಗಳೆಂದು (ಡಿಟರ್ಮಿನೆಂಟ್ಸ್) ಕರೆಯಲಾಗಿದೆ. ರಾಸಾಯನಿಕ ರಚನೆ ಗೊತ್ತಾಗಿರುವ ಗುಂಪುಗಳನ್ನು ಕೃತಕವಾಗಿ ಪ್ರೋಟೀನುಗಳಿಗೆ ಜೋಡಿಸಿ ಅವುಗಳ ವಿರುದ್ಧವಾಗಿ ನಿರೋಧಕಗಳನ್ನು ಪಡೆಯುವುದರ ಮೂಲಕ ಪ್ರೋಟೀನಿನಲ್ಲಿ ನಿರ್ದಿಷ್ಟಕ ಗುಂಪುಗಳ ಅಸ್ತಿತ್ವವನ್ನು ತೋರಿಸಲಾಯಿತು. ಪ್ರಕೃತಿಯಲ್ಲಿ ದೊರಕುವ ಪ್ರೋಟೀನಿನಲ್ಲಿ ನಿರ್ದಿಷ್ಟತೆ ಬಹುಶಃ ಟೈರೋಸೀನ್, ಫೀನೈಲ್ ಆಲಾನಿನ್, ಟ್ರಿಪ್ಟೋಫೇನ್, ಗ್ಲುಟಾಮಿಕ್ ಆಮ್ಲ, ಲೈಸಿನ್ ಮತ್ತು ಸಿಸ್ಟಿನ್ ಅಮೀನೋ ಆಮ್ಲಗಳಿಂದ (ಅವುಗಳು ಪ್ರಕೃತಿಯಲ್ಲಿ ದೊರಕುವ ರಚನೆಯಲ್ಲಿ) ಉಂಟಾಗುತ್ತದೆಯೆಂದು ಊಹಿಸಲಾಗಿದೆ.

ಪ್ರೋಟೀನ್ ನಿರೋಧಜನಕಗಳ (ಪ್ರೋಟೀನ್ ಆಂಟಿಜನ್ಸ್) ನಿರ್ದಿಷ್ಟತೆ ಪ್ರೋಟೀನಿನ ಮೂರು ಆಯಾಮಗಳ ರಚನೆಯನ್ನವಲಂಬಿಸಿದೆ (ತ್ರೀ ಡೈಮೆನ್ಷನಲ್ ಕಾನ್‌ಫಿಗರೇಷನ್). ಪ್ರೋಟೀನನ್ನು ಕಾಯಿಸಿ ಅಥವಾ ಅದರಲ್ಲಿರುವ ಗಂಧಕ ಪರಮಾಣುಗಳ ನಡುವಿರುವ (–ಎಸ್–ಎಸ್–) ಬಂಧಗಳನ್ನು ಮುರಿದು ಈ ರಚನೆಯಲ್ಲಿ ವ್ಯತ್ಯಾಸವನ್ನುಂಟುಮಾಡಿದರೆ ನಿರ್ದಿಷ್ಟತೆಯಲ್ಲಿ ಬದಲಾವಣೆ ಉಂಟಾಗುತ್ತದೆ. ಆದ್ದರಿಂದ ಪ್ರೋಟೀನಿನ ನಿರ್ಧಾರಕ ಗುಂಪಿನಲ್ಲಿರುವ ಅಮೈನೋ ಆಮ್ಲಗಳು ಯಾವುದೊಂದು ವಿಶಿಷ್ಟವಾದ ಆಕಾರದಲ್ಲಿ ಜೋಡಣೆಯಾಗಿರುತ್ತವೆ. ಉಷ್ಣತೆಯಿಂದ ಅಥವಾ ರಾಸಾಯನಿಕ ಕ್ರಿಯೆಗಳಿಂದ ಪ್ರಕೃತಿಹೀನವಾದ (ಡೀನೇಚರ್ಡ್) ಅದೇ ಪ್ರೋಟೀನಿನಲ್ಲಿ ಈ ವಿಶಿಷ್ಟ ಜೋಡಣೆಯಲ್ಲಿ ವ್ಯತ್ಯಾಸ ಉಂಟಾಗುವುದರಿಂದ ಸಹಜ ಪ್ರೋಟೀನಿಗೆ (ನೇತಿವ್ ಪ್ರೋಟೀನ್) ನಿರ್ದಿಷ್ಟವಾದ ನಿರೋಧಕ ಉಂಟಾಗದೆ ವ್ಯತ್ಯ ಪರಿಸ್ಥಿತಿಗೆ ಹೊಂದಿಕೊಂಡು ಬೇರೊಂದು ನಿರೋಧಕ ಉತ್ಪತ್ತಿಯಾಗುವುದು. ಸಾಮಾನ್ಯವಾಗಿ ಸಹಜ (ನ್ಯಾಚುರಲ್) ಪ್ರೋಟೀನಿನ ವಿರುದ್ಧ ನಿರೋಧಕ, ಕೊಂಚ ಮಟ್ಟಿಗೆ ಪ್ರಕೃತಿಹೀನ ಪ್ರೋಟೀನನ್ನು ಮತ್ತು ಪ್ರಕೃತಿಹೀನ ಪ್ರೋಟೀನಿಗೆ ವಿರುದ್ಧವಾದ ನಿರೋಧಕ ಕೊಂಚ ಭಾಗ ಸಹಜ ಪ್ರೋಟೀನನ್ನು ಒತ್ತರಿಸುತ್ತವೆ. ಆದರೆ ರೈಬೋನ್ಯೂಕ್ಲಿಯೇಸ್ ಪ್ರೋಟೀನಿನ ವಿಷಯದಲ್ಲಿ ಈ ಗುಣ ಕಂಡುಬಂದಿಲ್ಲ. ನಿರೋಧಕ ಉತ್ಪತ್ತಿ ನಿರ್ದಿಷ್ಟತೆ ಪ್ರಾಣಿಗಳ ಜಾತಿಭೇದಗಳಲ್ಲಿ ಮಾತ್ರವಲ್ಲದೆ ಸ್ವಲ್ಪಮಟ್ಟಿಗೆ ಅಂಗಾಂಗಗಳ ಭೇದಗಳಲ್ಲಿಯೂ ಕಂಡುಬಂದಿದೆ.

ಪ್ರೋಟೀನುಗಳ ನಿರೋಧಜನಕ ಸಾಮರ್ಥ್ಯದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯುವುದು ಅತ್ಯಾವಶ್ಯಕ. ಏಕೆಂದರೆ, ಡಿಫ್ತೀರಿಯ, ಟೆಟಾನಸ್ ಮತ್ತು ಬಾಟುಲಿಸಂ ಉಂಟುಮಾಡುವ ಕ್ರಿಮಿಗಳ ವಿಷ ಪ್ರೋಟೀನು ರೂಪದಲ್ಲಿರುತ್ತದೆ. ಈ ಕ್ರಿಮಿಗಳು ವಿಷವನ್ನು ಅವು ಬೆಳೆಯುವ ದ್ರಾವಣದಲ್ಲಿ ಬಿಡುಗಡೆ ಮಾಡುತ್ತವೆ (ಎಕ್ಸೋಟಾಕ್ಸಿನ್ಸ್). ಅತ್ಯಂತ ತೀಕ್ಷ್ಣವಾದ ವಿಷಗಳಾದ್ದರಿಂದ ಈ ಪ್ರೋಟೀನುಗಳನ್ನು ಅವುಗಳ ಸ್ವಾಭಾವಿಕ ರೂಪದಲ್ಲಿ ಪ್ರಾಣಿಯ ದೇಹಕ್ಕೆ ಚುಚ್ಚಲು ಸಾಧ್ಯವಾಗುವುದಿಲ್ಲ. ಆದರೆ ಇವನ್ನು ಫಾರ್ಮಾಲ್ಡಿಹೈಡಿನಿಂದ ಸಂಸ್ಕರಿಸಿದರೆ ವಿಷ ಸ್ವಭಾವ ನಾಶವಾಗುತ್ತದೆ. ಸಂಸ್ಕರಿಸಲ್ಪಟ್ಟ ಪ್ರೋಟೀನನ್ನು ಚುಚ್ಚುವುದರಿಂದಲೂ ವಿಷಾಕ್ತವಾದ ಪ್ರೋಟೀನಿಗೆ ವಿರುದ್ಧ ನಿರೋಧಕಗಳನ್ನು

ಪಡೆಯಬಹುದು. ಈ ಪ್ರಯೋಗದಿಂದ ಪ್ರೋಟೀನಿನ ನಿರ್ದಿಷ್ಟಕ ಗುಂಪುಗಳು ವಿಷಾಕ್ತ ಗುಂಪುಗಳಿಂದ ಭಿನ್ನವಾದುವುಗಳೆಂದೂ ಇವೆರಡು ಗುಂಪುಗಳು ಪ್ರೋಟೀನಿನಲ್ಲಿ ಪರಸ್ಪರ ನಿಕಟವಾಗಿರುವುದರಿಂದ ನಿರ್ದಿಷ್ಟಕ ಗುಂಪುಗಳ ವಿರುದ್ಧ ಉತ್ಪತ್ತಿಯಾದ ನಿರೋಧಕಗಳು, ವಿಷಾಕ್ತ ಗುಂಪುಗಳು ತಮ್ಮ ಪ್ರಭಾವವನ್ನು ದೇಹದಲ್ಲಿ ಚಲಾಯಿಸದಂತೆ ಮಾಡುತ್ತವೆಂದೂ ಊಹಿಸಬಹುದು. ವಿಷಾಕ್ತ ಗುಂಪುಗಳ ರಾಸಾಯನಿಕ ರಚನೆಯಾಗಲೀ ವಿಷ ವರ್ತಿಸುವ ವಿಧಾನವಾಗಲೀ ಇದುವರೆಗೆ ಗೊತ್ತಿಲ್ಲ. ಬಲು ಮಟ್ಟಿಗೆ ವಿಷಾಕ್ತ ಪ್ರೋಟೀನುಗಳು ಕಿಣ್ವಗಳಂತೆ ವರ್ತಿಸುತ್ತವೆ. ಇವು ದೇಹದ ಪ್ರೋಟೀನುಗಳನ್ನು ಛೇದಿಸುವ ಮೂಲಕವಾಗಿಯೋ ಇಲ್ಲವೇ ಕೋಶಗಳನ್ನು ನಾಶಮಾಡುವ ಮೂಲಕವಾಗಿಯೋ ವರ್ತಿಸಬಹುದೆಂದು ಊಹಿಸಲಾಗಿದೆ.

ಸಂಬದ್ಧ ಪ್ರೋಟೀನುಗಳನ್ನು (ಕಾಂಜ್ಯುಗೇಟೆಡ್ ಪ್ರೋಟೀನ್ಸ್) ನಿರೋಧಜನಕಗಳಂತೆ ಬಳಸಿ ನಿರೋಧಕ ಮತ್ತು ನಿರೋಧಜನಕಗಳ ನಡುವೆ ನಡೆಯುವ ಕ್ರಿಯೆಯ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆಯಲಾಗಿದೆ. ಈ ವಿಧಾನದಲ್ಲಿ ಯಾವುದೊಂದು ಪ್ರೋಟೀನಿಗೆ ಪರಿಚಿತ ರಾಸಾಯನಿಕ ರಚನೆಯುಳ್ಳ ಅಲ್ಪ ಗಾತ್ರದ ಗುಂಪನ್ನು ನಿರ್ದಿಷ್ಟತೆಗೆ ಕಾರಣಗಳನ್ನು ಕಂಡುಹಿಡಿಯಲಾಗಿದೆ. ಈ ಬಗೆಯ ಒಂದು ವಿಧಾನದಲ್ಲಿ ಪ್ರೋಟೀನಿನಲ್ಲಿರುವ ಟೈರೋಸೀನ್ ಮತ್ತು ಹಿಸ್ಟಿಡಿನ್ ಅಮೈನೋ ಆಮ್ಲಗಳ ಅಂಶಕ್ಕೆ ಡೈಆಜೊ ಗುಂಪುಗಳನ್ನು ಕೆಳಕಂಡಂತೆ ಜೋಡಿಸಿ ಆಜೊ ಪ್ರೋಟೀನುಗಳನ್ನು ತಯಾರಿಸುತ್ತಾರೆ.

ಈ ಬಗೆಯ ಪ್ರೋಟೀನುಗಳನ್ನು ಚುಚ್ಚಿ ನಿರೋಧಕಗಳನ್ನು ಪಡೆದು ನಿರೋಧಕ ನಿರೋಧಜನಕಗಳ ಪರಸ್ಪರ ಕ್ರಿಯೆಯನ್ನು ಅಧ್ಯಯನಮಾಡಿ ಕೆಳಗಿನ ಸಂಗತಿಗಳನ್ನು ಕಂಡುಹಿಡಿದಿದ್ದಾರೆ: 1. ನಿರ್ದಿಷ್ಟತೆ, ಸಂಯೋಜಿತವಾದ ಆರೋಮ್ಯಾಟಿಕ್ ಅಸೋಫಿನೈಲ್ ಗುಂಪುಗಳನ್ನು ಅವಲಂಬಿಸಿದೆ 2. ಬೆಂಜೀನ್ ಆವರ್ತದಲ್ಲಿರುವ ಆಮ್ಲೀಯ ಗುಂಪಿನ ಜಾಗ, ನಿರೋಧಜನಕದ ನಿರ್ದಿಷ್ಟತೆಯಲ್ಲಿ ಗಮನೀಯ ಅಂಶವಾಗಿದೆ; 3 ಬೆಂಜೀನ್ ಗುಂಪಿನಲ್ಲಿ ಸೇರಿಸಲ್ಪಟ್ಟಿರುವ ಗುಂಪಿನ ಒಟ್ಟು ವಿದ್ಯುದಂಶ ರಾಸಾಯನಿಕ ನಿರ್ದಿಷ್ಟತೆಗೆ ಮುಖ್ಯವಾದ ಅಂಶ. ಇದೇ ವಿಧಾನಗಳನ್ನು ಅನುಸರಿಸಿ ಆಜೊ ಗುಂಪಿನ ಬದಲು ಧ್ರುವೀಕೃತ ಬೆಳಕಿನ ಕಿರಣಗಳನ್ನು ಬಲಕ್ಕೆ ತಿರುಗಿಸುವ ಟಾರ್ಟಾರಿಕ್ ಆಮ್ಲ ಮತ್ತು ಎಡಕ್ಕೆ ತಿರುಗಿಸುವ ಟಾರ್ಟಾರಿಕ್ ಆಮ್ಲಗಳನ್ನು ಪ್ರೋಟೀನಿಗೆ ಸೇರಿಸಿ ಸಂಬದ್ಧ ಪ್ರೋಟೀನುಗಳನ್ನು ತಯಾರಿಸಬಹುದು. ಸ್ವಾಭಾವಿಕವಾಗಿ ದೊರೆಯುವ ಸಕ್ಕರೆಯನ್ನೂ ಸೇರಿಸಬಹುದು. ಈ ಪ್ರಯೋಗಗಳಿಂದ ತಿಳಿದು ಬಂದಿರುವ ವಿಷಯಗಳು : 1 ಸಮಾನ ಘಟಕಗಳು (ಸಿಸ್ ಮತ್ತು ಟ್ರಾನ್ಸ್) ತಮಗೆ ವಿಶಿಷ್ಟವಾದ ಬೇರೆ ಬೇರೆ ನಿರೋಧಕಗಳನ್ನು ಅಂದರೆ ಸಮಾನ ಘಟಕಗಳು ತಮಗೆ ಸಂಬಂಧಿಸಿದ ನಿರೋಧಕವನ್ನು ಉತ್ಪಾದಿಸುತ್ತವೆ; 2. ರಾಸಾಯನಿಕ ನಿರ್ದಿಷ್ಟತೆ ಪ್ರೋಟೀನ್ ಅಣುವಿನ ನಿರ್ದಿಷ್ಟತೆಗಳು ಆಕಾಶದಲ್ಲಿ (ಸ್ಪೇಸ್) ಯಾವ ದಿಕ್ಕಿಗೆ ತಿರುಗಿದೆಯೆಂಬುದನ್ನು ಅವಲಂಬಿಸಿದೆ; 3. ನಿರೋಧಜನಕಗಳ ಆಕಾರ ಮತ್ತು ದೃಢತೆ (ಷೇಪ್ ಅಂಡ್ ರಿಜಿಡಿಟಿ) ಕೂಡ ನಿರ್ದಿಷ್ಟತೆಯ ಮೇಲೆ ಪರಿಣಾಮವನ್ನುಂಟುಮಾಡುತ್ತದೆ; 4. ಲಂಬ ಸರಪಳಿಯುಳ್ಳ ಆಲಿಫ್ಯಾಟಿಕ್ ಸರಣಿಗಳು ನಿರ್ದಿಷ್ಟತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ.

ಪ್ರೋಟೀನುಗಳಿಗೆ ಸೇರಿಸಲ್ಪಡುವ ಅಲ್ಪ ಅಣುತೂಕವುಳ್ಳ ಮತ್ತು ನಿರೋಧಕ ನಿರ್ದಿಷ್ಟತೆಗೆ ಕಾರಣಗಳಾದ ರಾಸಾಯನಿಕ ಗುಂಪುಗಳಿಗೆ ಹಾಪ್ಟೆನ್ ಅಥವಾ ಹಿಡಿಕೆ ಎನ್ನಲಾಗಿದೆ. ಹಿಡಿಕೆಗಳು ಸ್ವಯಂ ನಿರೋಧ ಜನಕಗಳಲ್ಲ. ಆದ್ದರಿಂದ ಇವನ್ನು ಚುಚ್ಚಿದರೆ ನಿರೋಧಕಗಳು ಉತ್ಪತ್ತಿಯಾಗುವುದಿಲ್ಲ. ನಿರೋಧಕ ಮತ್ತು ನಿರೋಧಜನಕಗಳಿಗಿರುವ ವಾತ್ಸಲ್ಯವನ್ನು ಕಂಡುಹಿಡಿಯಲು ಈ ಗುಂಪುಗಳು ಸಾಧಕಗಳಾಗಿವೆ. ಉದಾಹರಣೆಗೆ, ಆಜೊ ಪ್ರೋಟೀನುಗಳು ತಮ್ಮ ನಿರೋಧಕಗಳೊಂದಿಗೆ ಸೇರಿ ಒತ್ತರವನ್ನು ರಚಿಸುತ್ತವೆ. ಈ ಪ್ರತಿಕ್ರಿಯೆ ಆಜೊ ಪ್ರೋಟೀನಿನ ಒಂದು ನಿರ್ದಿಷ್ಟ ರಾಸಾಯನಿಕ ಗುಂಪನ್ನು ಮತ್ತು ಅದರ ಆಕಾರವನ್ನು ಅವಲಂಬಿಸುವುದರಿಂದ ಅದೇ ಗುಂಪುಗಳನ್ನೊಳಗೊಂಡ ಸಣ್ಣ ಅಣುಗಳು ನಿರೋಧಜನಕಗಳೊಂದಿಗೆ ನಿರೋಧಕಗಳನ್ನು ಕೂಡುವ ಕ್ರಿಯೆಯಲ್ಲಿ ಸ್ಪರ್ಧಿಸುತ್ತವೆಂದು ಊಹಿಸಬಹುದು. ಈ ತರದ ಪ್ರಯೋಗಗಳಿಂದ ನಿರ್ದಿಷ್ಟಕ ಗುಂಪುಗಳ ಪ್ರಕೃತಿಯನ್ನೂ ಅದರ ಗಾತ್ರವನ್ನೂ ಕಂಡುಹಿಡಿಯಬಹುದು. ಒಂದೇ ಪ್ರೋಟೀನಿನಲ್ಲಿ ಅನೇಕ ನಿರ್ದಿಷ್ಟಕ ಗುಂಪುಗಳಿದ್ದರೆ ಪ್ರತಿಯೊಂದು ಗುಂಪಿನ ವಿರುದ್ಧವಾಗಿ ಭಿನ್ನ ಪ್ರಕೃತಿಯ ನಿರೋಧಕಗಳ ಉತ್ಪತ್ತಿಯಾಗುತ್ತದೆ.

ಪ್ರೋಟೀನುಗಳ ನಿರೋಧಜನಕತೆಯ ಲಕ್ಷಣಗಳ ಸಂಶೋಧನೆಯಲ್ಲಿ ಕೃತಕವಾಗಿ ರಚಿಸಲ್ಪಟ್ಟ ಬಹುಅಮೈನೋಆಮ್ಲಗಳು (ಪಾಲಿಅಮೈನೋ ಆಸಿಡ್ಸ್) ನೆರವಾಗಿವೆ. ಕಾರ್ಬಾಮೈನೋ ಆಮ್ಲಗಳ ಅನ್‌ಹೈಡ್ರೈಡುಗಳಿಂದ ಕೃತಕ ಬಹ್ವಣುಗಳನ್ನು ರಚಿಸಬಹುದು. ಈ ಬಹ್ವಣುಗಳು ಸ್ವಯಂ ನಿರೋಧಜನಕಗಳಲ್ಲ. ಆದರೆ ಇವನ್ನು ಜಿಲಾಟಿನ್ ಪ್ರೋಟೀನಿಗೆ ಸಂಬಂಧಿಸಿದರೆ ಸಂಬದ್ಧ ಪ್ರೋಟೀನ್ ನಿರೋಧಕದಂತೆ ವರ್ತಿಸುತ್ತದೆ. ಜಿಲಾಟಿನ್ ಸ್ವಯಂ ದುರ್ಬಲ ನಿರೋಧಜನಕ. ಆದರೆ ಬಹು ಟೈರೋಸೀನ್ ಬಹು ಟ್ರಿಪ್ಟೋಫಾನ್, ಬಹುಫೀನೈಲ್‌ಅಲಾನಿನ್ನುಗಳನ್ನು ಸಂಬದ್ಧಿಸಿದಾಗ ನಿರೋಧಜನಕದಂತೆ ವರ್ತಿಸುತ್ತದೆ. ಬಹುಗ್ಲೈಸಿನ್, ಬಹು ಅಲಾನಿನ್, ಬಹುಲೈಸಿನ್ ಅಥವಾ ಬಹುಸೆರಿನ್ ಅಮೈನೋ ಆಮ್ಲಗಳನ್ನು ಸಂಬದ್ಧಿಸಿದರೂ ಜಿಲಾಟಿನ್ ನಿರೋಧಜನಕ ಗುಣವನ್ನು ಪಡೆಯುವುದಿಲ್ಲ. ಈ ಪ್ರಯೋಗಗಳಿಂದ ಪ್ರೋಟೀನಿನ ನಿರೋಧಜನಕಶೀಲತೆ ಅದರ ಮೇಲ್ಮೈನಲ್ಲಿರುವ ಆರೊಮ್ಯಾಟಿಕ್ ಅಥವಾ ಮುದ್ರಿಕೆಗಳಿರುವ ಅಮೈನೋ ಆಮ್ಲಗಳಿಂದ ಜನಿತವಾದದ್ದೆಂಬ ಅಭಿಪ್ರಾಯ ಮೂಡಿದೆ. ಈ ಗುಂಪುಗಳು ಪ್ರೋಟೀನಿನ ಒಳಗೆ ಅಡಗಿರದೆ ಮೇಲ್ಮೈನಲ್ಲಿದ್ದು ಕಿಣ್ವಗಳಿಗೆ ದೊರಕುವಂತಿರಬೇಕು. ಕೃತಕ ಬಹುಅಮೈನೋ ಆಮ್ಲಗಳು ಪ್ರೋಟೀನುಗಳಂತೆಯೇ ಹಿಡಿಕೆಗಳನ್ನು ಸೇರಿಸಿಕೊಳ್ಳಬಲ್ಲವು. ಬಹು ಟೈರೊಸೀನ್ ಸ್ವಯಂ ನಿರೋಧಜನಕವಲ್ಲದಿದ್ದರೂ ಡೈ ಆಜೊಟೈಸ್ ಮಾಡಿದ ಆರ್ಸನಿಲಿಕ್ ಆಮ್ಲದೊಂದಿಗೆ ಸಂಬದ್ಧಿಸಿದಾಗ ನಿರೋಧಜನಕವಾಗುತ್ತದೆ. ಬಹು ಲೈಸಿನ್ (ಪಾಲಿಲೈಸಿನ್) ಅಣುವಿಗೆ 2, 4, ಡೈನೈಟ್ರೋ ಫೀನೈಲ್ ಗುಂಪನ್ನು ಸೇರಿಸಿದಾಗ ಉತ್ಪತ್ತಿಯಾಗುವ ಡಿಎನ್‌ಪಿ ಬಹುಲೈಸಿನನ್ನು ನಿರೋಧಜನಕವನ್ನಾಗಿ ಮಾರ್ಪಡಿಸಬಹುದು. ನಿರೋಧಜನಕತೆ ಲೈಸಿನ್ ಸರಣಿಯ ಉದ್ದವನ್ನು ಅವಲಂಬಿಸಿದೆ. ಎರಡದಿಂದ ಆರು ಲೈಸಿನ್ ಅಣುಗಳಿರುವ ಸರಪಳಿ ನಿರೋಧಜನಕವಲ್ಲ. 7–9 ಅಣುಗಳನ್ನೊಳಗೊಂಡ ಶ್ರೇಣಿ ಗಿನಿಹಂದಿಗಳಲ್ಲಿ ಅತಿ ಪ್ರತಿಕ್ರಿಯೆಯನ್ನುಂಟು ಮಾಡುತ್ತದೆ. ಡಿಎನ್‌ಪಿ ಬಹು ಎಲ್ ಲೈಸಿನ್ ನಿರೋಧಜನಕವಾದರೂ ಡಿಎನ್‌ಪಿ ಬಹು ಡಿ ಲೈಸಿನ್ ನಿರೋಧಜನಕವಲ್ಲ. ಒಂದೇ ಜಾತಿಗೆ ಸೇರಿದ ಎರಡು ಪ್ರಾಣಿಗಳಲ್ಲಿ ಒಂದೇ ಬಗೆಯ ನಿರೋಧಜನಕಕ್ಕೆ ಭಿನ್ನವಾದ ಪ್ರತಿಕ್ರಿಯೆ ತೋರಬಹುದೆನ್ನುವುದಕ್ಕೆ ದೃಷ್ಟಾಂತವನ್ನು ಡಿಎನ್‌ಪಿ ಬಹು ಎಲ್ ಲೈಸಿನ್ ನಿರೋಧಜನಕ ಗಿನಿಹಂದಿಗಳಲ್ಲಿ ಪ್ರೇರೇಪಿಸುವ ಪ್ರತಿಕ್ರಿಯೆಯಲ್ಲಿ ಕಾಣಬಹುದಾಗಿದೆ. ಡಿಎನ್ ಪಿ ಬಹು ಎಲ್ ಲೈಸಿನ್ 13ನೆಯ ಗುಂಪಿನ ಶುದ್ಧ ಪೀಳಿಗೆಗೆ (ಪ್ಯೂರ್ ಸ್ಟ್ರೈನ್ ನಂ. 13) ಸೇರಿದ ಗಿನಿಹಂದಿಗಳಲ್ಲಿ ಅತಿ ಪ್ರತಿಕ್ರಿಯೆಯನ್ನು ಪ್ರೇರೇಪಿಸಲಾರದು. ಆದರೆ 2ನೆಯ ಗುಂಪಿನ ಶುದ್ಧ ಪೀಳಿಗೆಗೆ ಸೇರಿದ ಗಿನಿಹಂದಿಗಳಲ್ಲಿ ಪ್ರತಿಕ್ರಿಯೆಯನ್ನುಂಟುಮಾಡಿತು. 13ನೆಯ ಪೀಳಿಗೆ ಡಿಎನ್‌ಪಿ ಬಹು ಎಲ್ ಲೈಸಿನ್ನಿಗೆ ಪ್ರತಿಕ್ರಿಯೆಯನ್ನು ತೋರಿಸಲಿಲ್ಲವಾದರೂ ಯಾವುದೊಂದು ಡಿಎನ್‌ಪಿ ಪ್ರೋಟೀನಿಗೆ ವಿರುದ್ಧವಾಗಿ ನಿರೋಧಕಗಳನ್ನು ಉತ್ಪತ್ತಿಸಿತು. ನಿರೋಧಜನಕಕ್ಕೆ ಭಿನ್ನ ಪ್ರತಿಕ್ರಿಯೆ ಆನುವಂಶೀಯವಾಗಿದೆಯೆಂದು ಗೊತ್ತುಮಾಡಲಾಗಿದೆ. ಕೃತಕ ಬಹುಅಮೈನೋ ಆಮ್ಲಗಳು, ನಿರೋಧಕಗಳನ್ನು ಉತ್ಪತ್ತಿಸುವ ವಿಧಾನ ಕ್ರಮವನ್ನು ತಿಳಿಯಲು ಸಾಧಕಗಳಾಗಬಹುದೆಂಬ ನಿರೀಕ್ಷೆ ಇದೆ.

2. ಸೂಕ್ಷ್ಮಜೀವಿಗಳ (ಬ್ಯಾಕ್ಟೀರಿಯ) ಬಹುಶರ್ಕರಗಳು : ನ್ಯೂಮೋಕಾಕೈಗಳ (ನ್ಯೂಮೋನಿಯ ಉಂಟುಮಾಡುವ ಸೂಕ್ಷ್ಮಜೀವಿ) ಪೊರೆಚೀಲದಲ್ಲಿ (ಕ್ಯಾಪ್ಸೂಲ್) ಶರ್ಕರಗಳ ಅಂಶಗಳಿವೆ. ಈ ಶರ್ಕರಾಂಶಗಳು ಸ್ವಯಂ ನಿರೋಧಜನಕಗಳಲ್ಲದಿದ್ದರೂ ಇಮ್ಯೂನ್‌ವಸೆಯಿಂದ ವಿಶಿಷ್ಟ ರೀತಿಯಲ್ಲಿ ಒತ್ತರಿಸಲ್ಪಡುತ್ತವೆ. ಶರ್ಕರಾಂಶಗಳು ಪೊರೆಯಲ್ಲಿದ್ದು ನಿರೋಧಕಗಳಿಗೆ ಸುಲಭವಾಗಿ ನಿಲುಕುವುದರಿಂದ ನ್ಯೂಮೋಕಾಕೈಗಳು ತೇಲುತ್ತಿರುವ ದ್ರಾವಣಕ್ಕೆ ನಿರೋಧಕಗಳನ್ನೊಳಗೊಂಡ ಇಮ್ಯೂನ್‌ವಸೆಯನ್ನು ಸೇರಿಸಿದಾಗ ಸೂಕ್ಷ್ಮಜೀವಿಗಳು ಒಂದಕ್ಕೊಂದು ಅಂಟಿಕೊಳ್ಳುವಂತಾಗುತ್ತದೆ. ಸೂಕ್ಷ್ಮ ಜೀವಿಗಳ ವಿರುದ್ಧವಾಗಿ ಉತ್ಪತ್ತಿಯಾಗುವ ನಿರೋಧಕಗಳ ಪ್ರಕೃತಿ ಬಹುಶರ್ಕರಗಳ ರಾಸಾಯನಿಕ ಘಟನೆ ಮತ್ತು ರಚನೆಗಳನ್ನು ಅವಲಂಬಿಸಿರುವುದರಿಂದ ಇವು ಬ್ಯಾಕ್ಟೀರಿಯವನ್ನು ಹಲವಾರು ಗುಂಪುಗಳಾಗಿ ವರ್ಗೀಕರಿಸಲು ಸಾಧಕಗಳಾಗಿವೆ. ವಿವಿಧ ರಚನೆಯುಳ್ಳ ಬಹುಶರ್ಕರಗಳನ್ನು ಇಮ್ಯೂನ್ ವಸೆಯ ಪರೀಕ್ಷೆಯಿಂದ (ಸೀರಾಲಜಿ) ಮಾತ್ರವಲ್ಲದೆ ರಾಸಾಯನಿಕ ವಿಧಾನಗಳಿಂದಲೂ ವಿಂಗಡಿಸಬಹುದು. ಉದಾಹರಣೆಗೆ, ಒಂದನೆಯ ವರ್ಗಕ್ಕೆ ಸೇರಿದ ನ್ಯೂಮೋಕಾಕೈನಲ್ಲಿರುವ ನಿರೋಧಜನಕ ಬಹುಶರ್ಕರ ಗ್ಯಲಾಕ್ಟ್ಯುರೋನಿಕ್ ಆಮ್ಲ, ಗ್ಯಲಕ್ಟೋಸ್, ಫ್ರುಕ್ಟೋಸ ಮತ್ತು ಗ್ಲೂಕೋಸಮೀನ್ ಶರ್ಕರಗಳನ್ನೊಳಗೊಂಡಿದೆ. ಎರಡನೆಯ ವರ್ಗದ ಬಹುಶರ್ಕರಗಳಲ್ಲಿ ರ್‍ಹಾಮ್ನೋಸ್, ಗ್ಲೂಕೋಸ್ ಮತ್ತು ಗ್ಲೂಕ್ಯುರೋನಿಕ್ ಆಮ್ಲಗಳಿವೆ. ಮೂರನೆಯ ವರ್ಗದ ಬಹುಶರ್ಕರ, ಸೆಲ್ಲೋಬೈಯುರೋನಿಕ್ ಆಮ್ಲಗಳ ಬಹ್ವಣು. ಈ ಆಮ್ಲದಲ್ಲಿ ಗ್ಲೂಕೋಸ್ ಮತ್ತು ಗ್ಲೂಕ್ಯುರೋನಿಕ್ ಆಮ್ಲಗಳು ಒಂದಾದ ಮೇಲೊಂದು ಜೋಡಿಸಲ್ಪಟ್ಟಿರುತ್ತವೆ. ವಿವಿಧ ಮೂವತ್ತು ಬಗೆಯ ಪೊರೆ ಬಹುಶರ್ಕರಗಳನ್ನು

ಇದುವರೆಗೆ ಅಧ್ಯಯನ ಮಾಡಲಾಗಿದೆ. ಇವೆಲ್ಲವೂ ಭಿನ್ನ ಪ್ರಕೃತಿಯುಳ್ಳವು, ಮತ್ತು ಈ ಭಿನ್ನ ಪ್ರಕೃತಿ ಅವುಗಳಲ್ಲಿರುವ ಸಾರಜನಕ, ರಂಜಕ, ಆಮ್ಲಗಳ ಗುಂಪುಗಳು ಮತ್ತು ಶರ್ಕರಗಳ ಪ್ರಮಾಣ ಮತ್ತು ವೈವಿಧ್ಯಗಳನ್ನು ಅವಲಂಬಿಸಿವೆ.

ಸೂಕ್ಷ್ಮಜೀವಿಗಳ ಪೊರೆಗಳ ಬಹುಶರ್ಕರಗಳು ಆತ್ಮೀಯ ನಿರೋಧಕಗಳಿಂದ ಒತ್ತರಿಸಲ್ಪಡುತ್ತವೆ. ಈ ಬಹುಶರ್ಕರಗಳನ್ನು ಬೇರ್ಪಡಿಸಿ ಮನುಷ್ಯ ಮತ್ತು ಮೂಗಿಲಿಗಳಿಗೆ ಚುಚ್ಚಿ ಪ್ರತಿಕ್ರಿಯೆಯನ್ನು ಉಂಟುಮಾಡಬಹುದು. ಆದರೆ ಕುದುರೆ ಮತ್ತು ಮೊಲಗಳಲ್ಲಿ ಪ್ರತಿಕ್ರಿಯೆ ತೋರಿಬರುವುದಿಲ್ಲ. ವಾಹಕ ಪ್ರೋಟೀನಿನೊಂದಿಗೆ ಚುಚ್ಚಿದ್ದಾದರೆ ಪ್ರತಿಕ್ರಿಯೆ ಉಂಟಾಗುತ್ತದೆ. ಮನುಷ್ಯನಿಗೆ ಕೇವಲ 30–60 ಮೈಕ್ರೋಗ್ರಾಂ ಪ್ರಮಾಣದಲ್ಲಿ ನ್ಯೂಮೋಕಾಕೈನ ಬಹುಶರ್ಕರವನ್ನು ಚುಚ್ಚಿದರೂ ನ್ಯೂಮೋಕಾಕೈ ಸೂಕ್ಷ್ಮಜೀವಿಗಳಿಂದ ರಕ್ಷಿಸಬಹುದು.

ಕೆಲವು ಬಹುಶರ್ಕರಗಳ ರಚನೆಯನ್ನು ಕಂಡುಹಿಡಿಯಲಾಗಿದೆ. ಉದಾಹರಣೆಗೆ, ಸಿಲ್ 18ನೆಯ ವರ್ಗದ ನ್ಯೋಮೋಕಾಕೈನ ಬಹುಶರ್ಕರಗಳಲ್ಲಿ ಮುಖ್ಯವಾಗಿ (–3 ಗ್ಯಲಾಕ್ಟೋಸಿಲ್–1–>4 ಗ್ಲೂಕೋಸಿಲ್–1–>6 ಗ್ಲೂಕೋಸಿಲ್–1–>3 ರ್‍ಹಾಮ್ನೋಸೀಲ್–1–>4 ಗ್ಲೂಕೋಸಿಲ್) ಅಂಶಗಳಿವೆ. ಇವಲ್ಲದೆ ಅಸಿಟೈಲ್ ಮತ್ತು ಗ್ಲಿಸಿರೋಫಾಸ್ಫೇಟ್ ಗುಂಪುಗಳೂ ಇವೆ. ಅಂಥ್ರಾಕ್ಸ್ ಬಾಸಿಲೈನಲ್ಲಿ ಕವಲೊಡೆದ ಎನ್–ಅಸಿಟೈಲ್ ಗ್ಲೂಕೋಸಮೀನ್ ಗುಂಪುಗಳಿವೆ.

ಬ್ಯಾಕ್ಟೀರಿಯ ಪೊರೆ ಚೀಲಗಳಲ್ಲಿರುವ ನಿರೋಧಜನಕ ಬಹುಶರ್ಕರಗಳು ವಿಷಾಕ್ತವಲ್ಲ. ಆದರೆ ಗ್ರಾಂ ನೆಗೆಟಿವ್ ಬ್ಯಾಕ್ಟೀರಿಯ ಕೋಶಗಳಲ್ಲಿರುವ ವಿಷಗಳಲ್ಲಿ ಶರ್ಕರದ ಅಂಶವೂ ಸೇರಿದೆ. ಸಾಲ್ಮೊನೆಲ್ಲಾ, ಷಿಗೆಲ್ಲಾ ಮತ್ತಿತರ ರೋಗಾಣುಗಳ (ಪ್ಯಾಥೋಜೆನಿಕ್ ಬ್ಯಾಕ್ಟೀರಿಯ) ಕೋಶಗಳಲ್ಲಿ ಕ್ಲಿಷ್ಟ ರಚನೆಯುಳ್ಳ ವಿಷ ಉತತ್ತಿಯಾಗುತ್ತದೆ. ಈ ವಿಷ ಹೊರಗಡೆಗೆ ವಿಸರ್ಜನೆಯಾಗುವುದಿಲ್ಲ. ಇದರಲ್ಲಿ ಇರುವ ಅಂಶಗಳು: 1. ಫಾಸ್ಫೋಲಿಪಿಡುಗಳು (ರಂಜಕವನ್ನೊಳಗೊಂಡ ಕೊಬ್ಬುಗಳು) 2. ಶರ್ಕರಗಳು, 3. ಪ್ರೋಟೀನ್ ಅಥವಾ ಪಾಲಿಪೆಪ್ಟೈಡ್. ಕೋಶಾಂತರ್ಗತವಾದ ಈ ವಿಷ (ಎಂಡೋ ಟಾಕ್ಸಿನ್) ಜ್ವರ ಮತ್ತು ಚುಚ್ಚಿದೆಡೆ ಊತವನ್ನುಂಟುಮಾಡುತ್ತದೆ. ಈ ಗುಂಪಿಗೆ ಸೇರಿದ ರೋಗಾಣುಗಳು ಸ್ಕಾರ್ಲೆಟ್‌ಜ್ವರ, ಟೈಫಾಯಿಡ್, ಗೊನೋರಿಯ ಮತ್ತು ಇನ್ನು ಅನೇಕ ಕಾಯಿಲೆಗಳನ್ನುಂಟುಮಾಡುತ್ತವೆ. ವಿಷಕ್ಕೆ ಕಾರಣ ಕೊಬ್ಬೇ ಅಥವಾ ಶರ್ಕರಗಳೇ ಎಂಬುದು ನಿರ್ಧಾರವಾಗಿಲ್ಲ. ಈ ಎರಡು ಗುಂಪುಗಳೂ ಕಾರಣವಾಗಿರಬಹುದು.

ಸಾಲ್ಮೊನೆಲ್ಲಾ ಗುಂಪಿಗೆ ಸೇರಿದ ರೋಗಾಣುಗಳ ಕೋಶಾಂತರ್ಗತ ವಿಷಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆದಿದೆ; ಅಲ್ಲದೆ ಹೆಚ್ಚಿನ ವಿಷಯ ಸಂಗ್ರಹವಾಗಿದೆ. ಈ ರೋಗಾಣುಗಳು ಟೈಫಾಯಿಡ್ ಮತ್ತು ಪ್ಯಾರಾ ಟೈಫಾಯಿಡ್ ಮುಂತಾದ ಕಾಯಿಲೆಗಳಿಗೆ ಕಾರಣವಾದ ಸೂಕ್ಷ್ಮಜೀವಿಗಳು. ಸಾಲ್ಮೊನೆಲ್ಲಾ ರೋಗಾಣುಗಳ ಕೋಶಗಳಲ್ಲಿ 0–ನಿರೋಧಜನಕವೆಂದು ಕರೆಯಲಾಗಿರುವ ನಿರೋಧಜನಕವಿದೆ. ಇವು ವರ್ಗವಿಶಿಷ್ಟಗಳಾದ ವಸ್ತುಗಳು (ಟೈಪ್ ಸ್ಪೆಸಿಫಿಕ್). ಇವಲ್ಲದೆ ರೋಗಾಣುಗಳ ಕಶೆಗಳಲ್ಲಿ (ಫ್ಲಾಗೆಲ್ಲಾ) ಹೆಚ್–ನಿರೋಧಜನಕಗಳಿವೆ. 0–ನಿರೋಧಜನಕಗಳ ವಿಶ್ಲೇಷಣೆಯಿಂದ ಸುಮಾರು 20 ಬಗೆಯ ರೋಗಾಣುಗಳನ್ನು ವಿಂಗಡಿಸಲಾಗಿದೆ. ಈ ನಿರೋಧಜನಕಗಳು ಕೊಬ್ಬು ಮತ್ತು ಬಹುಶರ್ಕರಗಳ ಸಂಯುಕ್ತಗಳಾಗಿದ್ದು ಅಲ್ಪ ಪ್ರಮಾಣದಲ್ಲಿ ಸಹ ದೇಹದ ಉಷ್ಣತೆಯನ್ನು ಹೆಚ್ಚಿಸಬಲ್ಲವು (ಪೈರೋಜೆನಿಕ್). ಇವು ಅತ್ಯಂತ ವಿಷಕಾರಿಗಳು. ಕೊಬ್ಬು ಮತ್ತು ಬಹುಶರ್ಕರಗಳ ಪ್ರಮಾಣ ಸಾಧಾರಣವಾಗಿ ಸಮನಾಗಿರುತ್ತದೆ. ಕೊಬ್ಬಿನ ಭಾಗ ವಿಷಪ್ರಕೃತಿಗೆ ಬಲುಮಟ್ಟಿಗೆ ಕಾರಣ.

ರೋಗಾಣು ವರ್ಗೀಕರಣವನ್ನು ನಿರೋಧವಸೆಗಳ ಆಧಾರದ ಮೇಲೆ (ಸೀರಾಲಜಿ) ಮಾಡಿದೆ. ಈ ವರ್ಗೀಕರಣಕ್ಕೂ ಬಹುಶರ್ಕರಗಳಲ್ಲಿರುವ ರಾಸಾಯನಿಕ ವ್ಯತ್ಯಾಸಗಳಿಗೂ ಹೊಂದಾಣಿಕೆ ಇದೆಯೆಂದು ತೋರಿಸಲಾಗಿದೆ. ಎಲ್ಲ ಸಾಲ್ಮೊನೆಲ್ಲಾ ರೋಗಾಣುಗಳಲ್ಲೂ ಅವುಗಳ ವರ್ಗೀಕರಣ ವೈಶಿಷ್ಟ ಏನೇ ಇರಲಿ, ಬಹುಶರ್ಕರಗಳ ಪ್ರಕೃತಿ ಒಂದೇ ಆಗಿದೆ. ಈ ಶರ್ಕರಗಳಲ್ಲಿ ಹೆಪ್ಟೋಸ್‌ಫಾಸ್ಫೇಟ್ (ಏಳು ಇಂಗಾಲದ ಪರಮಾಣುಗಳುಳ್ಳ ಶರ್ಕರ) 2–ಕೀಟೋ 3–ಡೀ ಆಕ್ಸಿ–ಆಕ್ಟೋನಿಕ್ ಆಮ್ಲ ಮತ್ತು ಎನ್–ಅಸಿಟೈಲ್ ಗ್ಲೂಕೋಸಮೀನ್ ಇರುತ್ತವೆ. ಶ್ರೇಣಿಯ ಕೊನೆಯಲ್ಲಿರುವ ಕೀಟೊ ಡೀ ಆಕ್ಸಿ ಆಕ್ಟೋನೇಟ್ ಅಂಶಕ್ಕೆ ಕೊಬ್ಬಿನ ಅಂಶ ಸೇರಿದೆ. ಬಹು ಹೆಪ್ಟೋಸ್ ಫಾಸ್ಫೇಟ್ ಗುಂಪಿನ ಕವಲುಗಳಲ್ಲಿ ಗ್ಲೂಕೋಸ್ ಮತ್ತು ಗ್ಯಲಾಕ್ಟೋಸ್ ಗುಂಪುಗಳಿರುತ್ತವೆ. ಕೊಬ್ಬಿನ ಅಂಶದಲ್ಲಿ ಅಮೈನೋ ಆಮ್ಲಗಳೂ ಸೇರಿವೆಯೆಂದು ಗೊತ್ತಾಗಿದೆ. ಕೊಬ್ಬು–ಬಹುಶರ್ಕರಗಳ ಸಂಯುಕ್ತ, ಪೊರೆಯಿರುವ ರೋಗಾಣುಗಳಲ್ಲಿ (ನಯ ರೋಗಾಣು–ಸ್ಮೂತ್ ಸ್ಟ್ರೈನ್) ಇವೆ. ರೋಗಾಣುಗಳ ಬಹುಶರ್ಕರಗಳಿಗೆ ಗ್ಲೂಕೋಸನ್ನು ಮೊದಲು ಅನಂತರ ಗ್ಯಲಾಕ್ಟೋಸ್, ತದನಂತರ ಗ್ಲೂಕೋಸ್ ಮತ್ತು ಎನ್–ಅಸಿಟೈಲ್ ಗ್ಲೂಕ್ಲೋಸಮೀನ್ ಸೇರಿಸುವುದರಿಂದ ಮೂರು ಬಗೆಯ ನಿರೋಧಜನಕ ಬಹುಶರ್ಕರಗಳಾಗುತ್ತವೆ. ಇವನ್ನು ಕ್ರಮವಾಗಿ ಎಂ, ಆರ್‌ಐ ಮತ್ತು ಆರ್‌ಐಐ ನಿರೋಧಜನಕಗಳೆಂದು ಕರೆಯಲಾಗಿದೆ. ಅನೇಕ ಸಾಲ್ಮೊನೆಲ್ಲಾ ರೋಗಾಣುಗಳ ವರ್ಗವಿಶಿಷ್ಟ ಬಹುಶರ್ಕರಗಳು ಆರ್‌ಐಐ ಬಹು ಶರ್ಕರಕ್ಕೆ ಅಂತ್ಯಭಾಗದಲ್ಲಿ 3, 6 ಡೈಡೀಆಕ್ಸಿಹೆಕ್ಸೋಸ್ – ಅಂದರೆ 6 ಇಂಗಾಲ ಪರಮಾಣುಗಳುಳ್ಳ ಶರ್ಕರಗಳಲ್ಲಿ 3 ಮತ್ತು 6 ಇಂಗಾಲದ ಸ್ಥಾನಗಳಲ್ಲಿ ಆಕ್ಸಿಜನ್ ಇಲ್ಲದ – ಶರ್ಕರಗಳನ್ನು ಸೇರಿಸುವುದರಿಂದ ಉಂಟಾಗುತ್ತವೆ. ಡಿ–ಮ್ಯಾನೊಸ್, ಡಿ–ಗ್ಲೂಕೋಸ್, ಡಿ–ಗ್ಯಲಾಕ್ಟೋಸ್ ಮತ್ತು ಎಲ್–ಗ್ಯಲಾಕ್ಟೋಸುಗಳಿಂದ ಶರ್ಕರಗಳಿಗೆ ಅನುಕ್ರಮವಾಗಿ ಟೈವಿಲೋಸ್, ಪ್ಯಾರಟೋಸ್, ಅಬಿಕ್ವೋಸ್ ಮತ್ತು ಕೋಲಿಟೀಸ್ ಎಂಬ ಹೆಸರುಗಳಿವೆ. ಇವು ಬಹುಶರ್ಕರ ಶ್ರೇಣಿಯ ಕೊನೆಯಲ್ಲಿರುವುದರಿಂದ ನಿರೋಧಜನಕ ನಿರ್ದಿಷ್ಟತೆಗೆ ಕಾರಣ ವಸ್ತುಗಳಾಗಿರಬಹುದು.

3. ರಕ್ತವರ್ಗದ ವಸ್ತುಗಳು : ಅಪಘಾತಗಳ ಪರಿಣಾಮವಾಗಿಯೋ ಅಥವಾ ಕಾಯಿಲೆಯಿಂದಲೊ ರಕ್ತವನ್ನು ಕಳೆದುಕೊಂಡಿರುವ ವ್ಯಕ್ತಿಗಳಿಗೆ ಇತರರ ರಕ್ತವನ್ನು ತುಂಬುವುದು ನಮಗೆಲ್ಲ ಪರಿಚಿತವಾದ ವಿಷಯ. ಆದರೆ ತುಂಬುವ ರಕ್ತ ಪರಿಗ್ರಾಹಿಯ ರಕ್ತವನ್ನು ಹೋಲಬೇಕು. ಇಲ್ಲದಿದ್ದರೆ ರಕ್ತಕಣಗಳು ಒಂದಕ್ಕೊಂದು ಗುಂಪುಗೂಡಿ ಅಂಟಿಕೊಳ್ಳಬಹುದು; ಇಲ್ಲವೆ ರಕ್ತಕಣಗಳು ಛೇದನೆಯಾಗಬಹುದು ಮತ್ತು ರೋಗಿಯಲ್ಲಿ ತೀವ್ರ ಪ್ರತಿಕ್ರಿಯೆ ಉಂಟಾಗಿ ಮರಣವೂ ಸಂಭವಿಸಬಹುದು. ಬಹುತೇಕ ಜನರ ರಕ್ತದಲ್ಲಿ, ಎಲ್ಲರ ರಕ್ತವನ್ನಲ್ಲದಿದ್ದರೂ, ಅನೇಕ ಮಂದಿ ಇತರರ ರಕ್ತಕಣಗಳನ್ನು ಗುಂಪುಗೂಡಿಸುವ ಅಥವಾ ಛೇದಿಸುವ ವಸ್ತುಗಳಿವೆ. ರಕ್ತಕಣಗಳನ್ನು ಗುಂಪುಕೂಡಿಸುವ ಗುಣದ ಆಧಾರದ ಮೇಲೆ ಮನುಷ್ಯರ ರಕ್ತಕಣಗಳನ್ನು ಲ್ಯಾಂಡ್‌ಸ್ಟೀನರ್ ಎ, ಬಿ, ಎಬಿ ಮತ್ತು ಒ ಎಂಬ ನಾಲ್ಕು ವರ್ಗಗಳಾಗಿ ವಿಂಗಡಿಸಿದನು. ಎ ಗುಂಪಿಗೆ ಸೇರಿದ ರಕ್ತಕಣಗಳಲ್ಲಿ ಎ ಎಂಬ ವಸ್ತುವೂ ಬಿ ಗುಂಪಿಗೆ ಸೇರಿದ ಕಣಗಳಲ್ಲಿ ಬಿ ವಸ್ತುವೂ ಎಬಿ ಗುಂಪಿನ ರಕ್ತಕಣಗಳಲ್ಲಿ ಎ ಮತ್ತು ಬಿ ವಸ್ತುಗಳೆರಡೂ ಇವೆ. ಒ ವಸ್ತುವಿನಲ್ಲಿ ಎ ಮತ್ತು ಬಿ ಇಲ್ಲವಾದರೂ ಇವಕ್ಕೆ ಸಂಬಂಧಪಟ್ಟ ವಸ್ತುಗಳಿವೆ. ಎ ಮತ್ತು ಬಿ ವಸ್ತುಗಳನ್ನು ಆನುವಂಶೀಯವಾಗಿ ಮೆಂಡೆಲ್ಲನ ತತ್ವಗಳ ಪ್ರಕಾರ ಒಂದು ಪೀಳಿಗೆ ಅದರ ಪಿತೃಗಳಿಂದ ಪಡೆಯುತ್ತದೆ. ಎ ಗುಂಪಿಗೆ ಸೇರಿದ ವ್ಯಕ್ತಿಗಳ ಬಿ ಗುಂಪಿಗೆ ಸೇರಿದ ರಕ್ತಕಣಗಳನ್ನು ಪರಸ್ಪರ ಅಂಟಿಕೊಳ್ಳುವಂತೆ ಮಾಡುತ್ತದೆ. ಇದೇ ರೀತಿ ಬಿ ಗುಂಪಿಗೆ ಸೇರಿದ ವ್ಯಕ್ತಿಗಳ ವಸೆಯಲ್ಲಿರುವ ಒಂದು ಪ್ರೋಟೀನು ಎ ಗುಂಪಿನ ರಕ್ತಕಣಗಳನ್ನು ಗುಂಪುಗೂಡಿಸುತ್ತದೆ. ಎಬಿ ಗುಂಪಿನ ವ್ಯಕ್ತಿಗಳ ವಸೆ ಎ ಗುಂಪಿನ ರಕ್ತಕಣಗಳನ್ನಾಗಲಿ ಬಿ ಗುಂಪಿನ ರಕ್ತಕಣಗಳನ್ನಾಗಲೀ ಗುಂಪುಗೂಡಿಸುವುದಿಲ್ಲ. ಒ ಗುಂಪಿನ ವ್ಯಕ್ತಿಯ ವಸೆ ಎ ಮತ್ತು ಬಿ ಗುಂಪಿನ ರಕ್ತಕಣಗಳನ್ನು ಗುಂಪುಗೂಡಿಸಬಲ್ಲದು. ವಸೆಯಲ್ಲಿರುವ ಗುಂಪುಗೂಡಿಸುವ ಸಾಮರ್ಥ್ಯವಿರುವ ಪ್ರೋಟೀನುಗಳನ್ನು ಐಸೊಅಗ್ಲುಟಿನಿನ್ ಎನ್ನುತ್ತಾರೆ. ಈ ವಸ್ತುಗಳು ನಿಜವಾದ ನಿರೋಧಕಗಳೇ ಅಥವಾ ಇಮ್ಯೂನೋಗ್ಲಾಬ್ಯುಲಿನ್ನುಗಳೇ ಎಂಬುದು ನಿರ್ಧಾರವಾಗಿಲ್ಲ.

ರಕ್ತಕಣಗಳ ವರ್ಗವಿಶಿಷ್ಟತೆಗೆ ಕಾರಣಗಳಾದ ಮತ್ತು ರಕ್ತಕಣಗಳಲ್ಲಿರುವ ವಸ್ತುಗಳಿಗೆ ರಕ್ತವರ್ಗ ವಸ್ತುಗಳೆಂದು ಹೆಸರು (ಬ್ಲಡ್ ಗ್ರೂಪ್ ಸಬ್‌ಸ್ಟೇನ್ಸಸ್). ರಾಸಾಯನಿಕ ವಿಶ್ಲೇಷಣೆಯ ಫಲವಾಗಿ ಈ ವಸ್ತುಗಳಲ್ಲಿ ಶರ್ಕರ ಮತ್ತು ಕೊಬ್ಬುಗಳಿವೆಯೆಂದು ಗೊತ್ತಾಯಿತು. ಈ ವಸ್ತುಗಳಲ್ಲಿ ತೈಲಾಮ್ಲಗಳು (ಫ್ಯಾಟೀ ಆಸಿಡ್ಸ್) ಸ್ಫಿಂಗೋಸಿನ್ ಮತ್ತು ಮ್ಯೂಕೊ ಪ್ರೋಟೀನ್ ಅಥವಾ ಮ್ಯೂಕೊಪೆಪ್ಟೈಡ್‌ಗಳಿವೆ. ಮ್ಯೂಕೋ ಪ್ರೋಟೀನುಗಳನ್ನು ಛೇದನೆ ಮಾಡಿದಾಗ ಅಮೈನೋ ಆಮ್ಲಗಳು ಮತ್ತು ಶರ್ಕರಗಳು ದೊರೆಯುತ್ತವೆ. ಈ ಮ್ಯೂಕೊ ಪ್ರೋಟೀನುಗಳು ಅತ್ಯಲ್ಪ ಪ್ರವಾಣದಲ್ಲಿ ದೊರೆಯುವುದರಿಂದ ಅವುಗಳ ರಾಸಾಯನಿಕ ರಚನೆಯನ್ನು ಕಂಡು ಹಿಡಿಯುವುದು ಬಲು ಪ್ರಯಾಸದ ಕೆಲಸ. ಆದರೆ ಈ ಮ್ಯೂಕೊಪೆಪ್ಟೈಡುಗಳ ಗುಣಗಳನ್ನೇ ಬಲುಮಟ್ಟಿಗೆ ಹೋಲುವ ಮತ್ತು ವಿಶಿಷ್ಟ ರೀತಿಯಲ್ಲಿ ಆತ್ಮೀಯ ಐಸೊ ಅಗ್ಲುಟಿನಿನ್ನುಗಳಿಂದ ರಕ್ತಕಣಗಳು ಗುಂಪುಗೂಡುವ ಕ್ರಿಯೆಯಲ್ಲಿ ಸ್ಪರ್ಧಿಸುವ (ಆದ್ದರಿಂದ ರಾಸಾಯನಿಕ ರಚನೆಯಲ್ಲಿ ಮ್ಯೂಕೋ ಪೆಪ್‌ಟೈಡುಗಳನ್ನು ಬಲುಮಟ್ಟಿಗೆ ಹೋಲುವ) ಮ್ಯೂಕೊಪೆಪ್ಟೈಡುಗಳು ಜೊಲ್ಲು ಮತ್ತು ಮಾನವ ಹಾಗು ಪ್ರಾಣಿಗಳು ಸ್ರವಿಸುವ ಇತರ ದ್ರವಗಳಿಂದ ಬೇರೆ ಆಗಿವೆ. ಜಠರಕೋಶದ ಲೋಳೆಗ್ರಂಥಿಗಳಿಂದಲೂ ಅಂಡಾಶಯದ ಪೂತಿ ಕೋಶಗಳಿಂದಲೂ (ಒವೇರಿಯನ್ ಸಿಸ್ಟ್) ಈ ವಸ್ತುಗಳನ್ನು

ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು. ಶುದ್ಧ ರೂಪದಲ್ಲಿ ತಯಾರಿಸಿದ ರಕ್ತವರ್ಗ ಗುಂಪಿನ ವಸ್ತುಗಳಲ್ಲಿ ಮುಖ್ಯವಾಗಿ ಬಹುಶರ್ಕರವೂ ಸೀರೀನ್ ಥ್ರಿಯೋನಿನ್ ಮತ್ತು ಪ್ರೋಲೀನ್ ಅಮ್ಯೆನೋ ಆಮ್ಲಗಳನ್ನೊಳಗೊಂಡ ಪಾಲಿಪೆಪ್ಟೈಡ್ 25% ಪ್ರಮಾಣದಲ್ಲಿಯೂ ಇವೆ.

ಮನುಷ್ಯನ ಎ, ಬಿ ಮತ್ತು ಎಚ್ (ಒ–ಗುಂಪಿನ ರಕ್ತಕಣದಲ್ಲಿರುವ ವಸ್ತು) ವಸ್ತುಗಳಲ್ಲಿರುವ ಶರ್ಕರಾಂಶದಲ್ಲಿ ಗ್ಯಲಕ್ಟೋಸ್, ಎನ್–ಅಸಿಟೈಲ್ ಗ್ಲುಕೊಮೀನ್, ಎನ್–ಅಸಿಟೈಲ್ ಗ್ಯಲಾಕ್ಟೊಸಮೀನ್ ಮತ್ತು ಫ್ಯೂಕೋಸ್ ಸಕ್ಕರೆಗಳಿವೆ. ಜೊಲ್ಲಿನಲ್ಲಿ ರಕ್ತವರ್ಗ ವಸ್ತುಗಳಂತೆ ಚಟುವಟಿಕೆಯುಳ್ಳ ಪದಾರ್ಥಗಳನ್ನು ಸ್ರವಿಸದ ಮನುಷ್ಯರಲ್ಲಿ ಲ್ಯೂಯಿಸ್$^{ಎ}$ ಅಥವಾ ಎಲ್ಇ$^{ಎ}$ ಎಂಬ ಮೇಲೆ ಹೇಳಿದ ವಸ್ತುಗಳನ್ನು ಹೋಲುವ, ನಾಲ್ಕನೆಯ ಪದಾರ್ಥವನ್ನು ಕಂಡುಹಿಡಿಯಲಾಗಿದೆ. ಎಲ್ಇ$^{ಎ}$ ಪದಾರ್ಥ ಉತ್ಪತ್ತಿಗೆ ಕಾರಣವಾದ ಜೀನು ಎಬಿಒ ಜೀನುಗಳ ಗುಂಪಿನಲ್ಲಿರದೆ ಸ್ವತಂತ್ರವಾಗಿದೆ. ಎ, ಬಿ, ಎಚ್ ಮತ್ತು ಎಲ್ಇ$^{ಎ}$ ರಕ್ತವರ್ಗ ವಸ್ತುಗಳ ಬಹುಶರ್ಕರದ ಅಂತ್ಯಭಾಗದಲ್ಲಿ ಗ್ಯಲಕ್ಟೋಸಮೀನ್ ಇರುತ್ತದೆ. ಅವುಗಳ ರಚನೆ ಹೀಗಿದೆ : ಗ್ಯಲಾಕ್ಟೋಸ್, ಎನ್–ಅಸಿಟೈಲ್ ಗ್ಲೂಕೋಸಮೀನ್ ಮತ್ತು ಎನ್–ಅಸಿಟೈಲ್ ಗ್ಯಲಾಕ್ಟೋಸೋಮಿನ್ಯೆಲ್ 1–> 3 ಗ್ಯಲಾಕ್ಟೋಸಿಲ್ 1–> ಎ· ಎನ್–ಅಸಿಟೈಲ್ ಗ್ಲೂಕೋಸಮಿನ್ಯೆಲ್ 1 –> 3 ಗ್ಯಲಾಕ್ಟ್ರೋಸಿಲ್ (ಎ·ಕ್ಸ=3 ಅಥವಾ 4). ಬಹುತೇಕವಾಗಿ 1–> 3 ಮತ್ತು 1–> 4 ಬಂಧಗಳು ಬೀಟ ಮಾದರಿಯವು.

ಬಿ ಗುಂಪಿನ ವಸ್ತುಗಳಲ್ಲಿ ಎನ್ ಅಸಿಟೈಲ್ ಗ್ಲೂಕೋಸಮೀನ್ ಬದಲು ಒಂದು ಗ್ಯಲಕ್ಟೋಸ್ ಅಣುವಿದೆ. ಎ ಮತ್ತು ಬಿ ಗಳೆರಡರಲ್ಲೂ ಫ್ಯೂಕೋಸ್ ಸಕ್ಕರೆ ಅಣುಗಳಿವೆ. ಒಂದು ಫ್ಯೂಕೋಸ್ ಅಣು ಉಪಾಂತ್ಯ (ಪೆನಲ್ಟಿಮೇಟ್) ಗ್ಯಲಕ್ಟೋಸ್ ಅಣುವಿಗೂ ಮತ್ತೊಂದು ಪಕ್ಕದ ಎನ್–ಅಸಿಟೈಲ್ ಗ್ಲೂಕೋಸಮೀನ್ ಅಣುವಿಗೂ ಸೇರಿರುತ್ತದೆ. ಎಚ್ ಮತ್ತು ಎಲ್ಇ$^{ಎ}$ ವಸ್ತುಗಳ ಬಹುಶರ್ಕರಗಳ ರಚನೆ ಬಿ ವಸ್ತುವಿನ ಬಹುಶರ್ಕರದಂತೆಯೇ ಇದೆ. ಆದರೆ ಅಂತ್ಯದಲ್ಲಿ ಗ್ಯಲಕ್ಟೋಸ್ ಅಣು ಇದೆ. ಅಂದರೆ ಐದು ಶರ್ಕರಾಂಶಗಳ ಬದಲು ನಾಲ್ಕು ಶರ್ಕರಾಂಶಗಳು ಅಂತ್ಯ ಗುಂಪುಗಳಾಗುತ್ತವೆ. ಎಚ್ ಮತ್ತು ಎಲ್ಇ$^{ಎ}$ ವಸ್ತುಗಳಲ್ಲಿ ಫ್ಯೂಕೋಸ್ ಕೂಡ ಇರುತ್ತದೆ.

ಎ, ಬಿ, ಎಚ್, ಮತ್ತು ಎಲ್ಇ$^{ಎ}$ ವಸ್ತುಗಳರಚನೆಯನ್ನು ಪರಿಶೀಲಿಸಿದರೆ ಅವು ನಿಕಟ ಸಂಬಂಧಿಗಳೆಂದು ತಿಳಿದುಬರುತ್ತದೆ. ಈ ವಸ್ತುಗಳನ್ನು ಒಂದನ್ನೊಂದಕ್ಕೆ ಪರಿವರ್ತಿಸಲು ಸಾಧ್ಯವಾಗಿದೆ. ಬಿ ವಸ್ತುವನ್ನು ಕಾಫಿಬೀಜದಿಂದ ತೆಗೆದ ಕಿಣ್ವದಿಂದ ಸಂಸ್ಕರಿಸಿ ಎಚ್ ವಸ್ತುವನ್ನಾಗಿಸಿ ಮಾರ್ಪಡಿಸಬಹುದು. ಎಚ್ ವಸ್ತುವನ್ನು ಕಿಣ್ವ ಸಂಸ್ಕರಣದಿಂದ ಎಲ್ಇ$^{ಎ}$ ವಸ್ತುವಿಗೂ ಎಲ್ಇ$^{ಎ}$ ವಸ್ತುವನ್ನು 14ನೇಯ ಗುಂಪಿಗೆ ಸೇರಿದ ನ್ಯೂಮೊಕಾಕ್ಕೈ ಪೊರೆಚೀಲದ ಬಹುಶರ್ಕರದ ರಚನೆಯನ್ನು ಹೋಲುವ ವಸ್ತುವನ್ನಾಗಿಯೂ ಮಾರ್ಪಡಿಸಬಹುದು. ಈ ಪರಿವರ್ತನೆಗಳು ಸಾಧ್ಯವಿರುವುದರಿಂದ ಎಚ್ ವಸ್ತು ಎ ಮತ್ತು ಬಿ ವಸ್ತುಗಳ ಮೂಲವಸ್ತು (ಪ್ರೀಕರ್ಸರ್) ಇರಬಹುದು; ದೇಹದಲ್ಲಿ ಕಿಣ್ವಗಳಿಂದ ಎ ಮತ್ತು ಬಿ ವಸ್ತುಗಳಿಗೆ ಪರಿವರ್ತನೆ ಆಗದಿರಬಹುದು ಎಂಬ ಅಭಿಪ್ರಾಯ ಮೂಡಿದೆ. ಪರಿವರ್ತನೆಗೆ ಕಾರಣಗಳಾದ ಕಿಣ್ವಗಳ ಉತ್ಪತ್ತಿ ಎ ಮತ್ತು ಬಿ ಜೀನ್‌ಗಳ ಹತೋಟಿಯಲ್ಲಿದೆ. ಎ, ಬಿ, ಎಚ್ ಮತ್ತು ಎಲ್ಇಎ ವಸ್ತುಗಳ ರಚನೆಯಲ್ಲಿ ಅತ್ಯಲ್ಪ ವ್ಯತ್ಯಾಸವಿದೆ. ಈ ವ್ಯತ್ಯಾಸ ಬಹುಶರ್ಕರದ ಶ್ರೇಣಿಯ ಅಂತ್ಯದಲ್ಲಿರುವ ಏಕಶರ್ಕರದ ರಾಸಾಯನಿಕ ಪ್ರಕೃತಿಯ ವ್ಯತ್ಯಾಸದಿಂದ ಉಂಟಾಗುವುದು. ಆದ್ದರಿಂದ ವಿಶಿಷ್ಟ ನಿರ್ದಿಷ್ಟಕ ಗುಂಪಿನ ಗಾತ್ರ ಏಕಶರ್ಕರದ ಗಾತ್ರಕ್ಕಿಂತ ಹೆಚ್ಚಿರಲಾರದು. ರಕ್ತವರ್ಗ ವಸ್ತುಗಳು, ಪೆಪ್ಟೈಡ್ ಗುಂಪುಗಳಿಗೆ ಗ್ಯಲಕ್ಟೋಸ್ ಅಥವಾ ಎನ್–ಅಸಿಟೈಲ್ ಆಮ್ಲಗಳ (ಒಹೆಚ್) ಗುಂಪಿನ ನಡುವೆ ಉಂಟಾಗುವ ಬಂಧದ ಮೂಲಕ ಸೇರ್ಪಡೆಯಾಗಿರುತ್ತವೆ. ಎ, ಬಿ, ಒ ರಕ್ತವರ್ಗಗಳಲ್ಲದೆ ಇನ್ನೂ ಅನೇಕ ರಕ್ತ ವರ್ಗಗಳಿವೆ. ಕನಿಷ್ಠ ಪಕ್ಷ ಹದಿನಾಲ್ಕು ವರ್ಗಗಳನ್ನು ಪಟ್ಟಿ ಮಾಡಿದೆ. ಮನುಷ್ಯವರ್ಗದಲ್ಲಿ ಕೇವಲ 1% ರಷ್ಟು ಭಾಗ ಜನರು ಮಾತ್ರ ಎ, ಬಿ, ಎಚ್ ಮತ್ತು ಎಲ್ಇ$^{ಎ}$ ವಸ್ತುಗಳಲ್ಲಿ ಯಾವುದೊಂದನ್ನೂ ಸ್ರವಿಸುವುದಿಲ್ಲ.

ರಕ್ತವರ್ಗಕ್ಕೆ ಸೇರಿದ ಮತ್ತು ಮುಖ್ಯವಾದ ಆರ್‌ಎಚ್ ಅಂಶದ ರಚನೆಯ ವಿಷಯ ನಮಗಿನ್ನೂ ತಿಳಿದುಬಂದಿಲ್ಲ. ಆರ್‌ಎಚ್ ಅಂಶವಿಲ್ಲದ ತಾಯಿಯಲ್ಲಿ ಆರ್‌ಎಚ್ ಅಂಶವಿರುವ ಭ್ರೂಣ ನಿರೋಧಕ ವಸ್ತುಗಳ ಉತ್ಪತ್ತಿಯನ್ನು ಪ್ರೇರೇಪಿಸಬಲ್ಲುದು. ಈ ನಿರೋಧಜನಕಗಳು ಜರಾಯುವಿನ (ಪ್ಲಾಸೆಂಟಾ) ಮೂಲಕ ಭ್ರೂಣಕ್ಕೆ ಸೇರಿದರೆ ಭ್ರೂಣದ ಕೆಂಪು ರಕ್ತಕಣಗಳು ಛೇದಿಸಲ್ಪಡಬಹುದು ಮತ್ತು ತೀವ್ರ ಪ್ರತಿಕ್ರಿಯೆ ತೋರಿಬರಬಹುದು. ಆರ್‌ಎಚ್ ಅಂಶ ಮಗುವಿನ ವಂಶಾವಳಿಯನ್ನು ಗೊತ್ತುಮಾಡುವುದಕ್ಕೂ ಮಾನವಶಾಸ್ತ್ರ ಅಧ್ಯಯನಕ್ಕೂ ಸಹಾಯಕವಾಗಿದೆ. ಈ ದೃಷ್ಟಿಯಿಂದ ಎಂ, ಎನ್ ಮತ್ತು ಪಿ ಗುಂಪಿನ ರಕ್ತವರ್ಗಗಳೂ ಮುಖ್ಯವಾಗಿವೆ.

4. ಇತರ ನಿರೋಧಜನಕಗಳು:

ಅ) ನ್ಯೂಕ್ಲಿಯಿಕ್ ಆಮ್ಲಗಳು: ಸಾಮಾನ್ಯವಾಗಿ ನ್ಯೂಕ್ಲಿಯಿಕ್ ಆಮ್ಲಗಳು ನಿರೋಧಜನಕಗಳಂತೆ ವರ್ತಿಸುವುದಿಲ್ಲ. ಟಿ2, ಟಿ4 ಮತ್ತು ಟಿ6 ಬ್ಯಾಕ್ಟೀರಿಯೋಫೇಜುಗಳು ಡಿಎನ್‌ಎ ನಿರೋಧಜನಕಗಳಂತೆ ವರ್ತಿಸಿ ನಿರೋಧಕಗಳ ಉತ್ಪತ್ತಿಯನ್ನು ಪ್ರಚೋದಿಸಬಲ್ಲವು. ಈ ಬ್ಯಾಕ್ಟೀರಿಯೋಫೇಜುಗಳ ಡಿಎನ್‌ಎ ಗೂ ಪ್ರಾಣಿಗಳ ಮತ್ತು ಸಸ್ಯಗಳ ಡಿಎನ್‌ಎಗಳಿಗೂ ಒಂದು ವ್ಯತ್ಯಾಸವಿದೆ. ಬ್ಯಾಕ್ಟೀರಿಯೋಫೇಜುಗಳ ಡಿಎನ್‌ಎ ಯಲ್ಲಿ 5–ಹೈಡ್ರಾಕ್ಸಿ ಮೀಥೈಲ್ ಸೈಟೋಸಿನ್ ಅಂಶಗಳಿದ್ದು ಕೆಲವಕ್ಕೆ ಗ್ಲೂಕೋಸ್ ಅಂಶ ಸೇರಿಸಲ್ಪಟ್ಟಿರುತ್ತದೆ. ಈ ಗ್ಲೂಕೋಸ್ ಅಂಶವಿಲ್ಲದ ಡಿಎನ್‌ಎ ನಿರೋಧಕವನ್ನು ಉತ್ಪತ್ತಿ ಮಾಡುವುದಿಲ್ಲವಾದ್ದರಿಂದ ನಿರ್ದಿಷ್ಟತೆ ಗ್ಲೂಕೋಸ್ ಅಂಶಗಳಿಂದಾಗಿದೆಯೆನ್ನಬಹುದು.

ಆರ್‌ಎನ್‌ಎ ಗಳ ಅಂಶಗಳಾದ ರೈಬೋನ್ಯೂಕ್ಲಿಯೋಟೈಡುಗಳನ್ನು ಬಿಎಸ್‌ಎ ಅಥವಾ ಮತ್ತಿನ್ನಾವ ಪ್ರೊಟೀನುಗಳಿಗೆ ಸಂಬದ್ಧಿಸಿ ನಿರೋಧಜನಕಗಳನ್ನು ಪಡೆಯಬಹುದು. ಇವುಗಳಿಂದ ಉತ್ಪತ್ತಿಯಾದ ನಿರೋಧಕಗಳು ಪ್ರಕೃತಿಹೀನ ಡಿಎನ್‌ಎ ಗಳೊಂದಿಗೆ ಸೇರುತ್ತವೆಯೇ ವಿನಾ ಆರ್‌ಎನ್‌ಎ ಯೊಂದಿಗೆ ಸೇರುವುದಿಲ್ಲ. ಮೆಥಿಲೇಟೆಡ್ (ಮೀಥೈಲ್ ಗುಂಪುಗಳನ್ನು ಸೇರಿಸಿರುವ) ಬಿಎಸ್‌ಎ ಯೊಂದಿಗೆ ಬಹು ಅಡಿನೆಲಿಕ್, ಬಹುಇನೋಸಿನಿಕ್ ಮತ್ತು ಬಹಿಸೈಟಿಡಿಲಿಕ್ ಆಮ್ಲಗಳನ್ನು ಚುಚ್ಚಿ ನಿರೋಧಕಗಳನ್ನು ಪಡೆಯಬಹುದು.

ಆ) ಕೊಬ್ಬಿನ ಪದಾರ್ಥಗಳು : ತೈಲಾಮ್ಲಗಳು, ಟ್ರೈಗ್ಲಿಸರೈಡುಗಳು ಮತ್ತು ಇತರ ಶುದ್ಧ ಕೊಬ್ಬುಗಳು ನಿರೋಧಜನಕಗಳಂತೆ ವರ್ತಿಸುವುದಿಲ್ಲ. ಆದರೆ ಈ ವಸ್ತುಗಳು ಇತರ ನಿರೋಧಜನಕಗಳಿಗೆ ಸಹಾಯಕದ್ರವದಂತೆ ವರ್ತಿಸಿ ನಿರೋಧಕಗಳ ಉತ್ಪತ್ತಿಯನ್ನು ಹೆಚ್ಚಿಸುತ್ತವೆ.

ನಿರೋಧಕಗಳ ಪತ್ತೆ: ನಿರೋಧಕಗಳು ಪ್ರೊಟೀನುಗಳು. ವಸೆಯಲ್ಲಿ ಗಾಮ ಗ್ಲಾಬ್ಯುಲಿನ್ ಅಂಶದಲ್ಲಿಯೂ ದೇಹದ ಮತ್ತಿತರ ಸ್ರವಗಳಲ್ಲಿಯೂ ಇರುತ್ತವೆ. ಗಾಮ ಗ್ಲಾಬ್ಯುಲಿನ್ನುಗಳು ಮತ್ತು ನಿರೋಧಕಗಳು ರಾಸಾಯನಿಕ ರಚನೆಯಲ್ಲಿ ಮತ್ತು ಗುಣಗಳಲ್ಲಿ ಒಂದನ್ನೊಂದು ಬಲುಮಟ್ಟಿಗೆ ಹೋಲುವುದರಿಂದ ನಿರೋಧಕಗಳನ್ನು ಸಾಧಾರಣ ಗಾಮ ಗ್ಲಾಬ್ಯುಲಿನ್ನುಗಳಿಂದ ರಾಸಾಯನಿಕವಾಗಿ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ನಿರೋಧಕಗಳನ್ನು ಅವುಗಳ ಆತ್ಮೀಯ ನಿರೋಧಜನಕಗಳೊಂದಿಗೆ ಮಿಶ್ರ ಮಾಡುವುದರಿಂದ ಮಾತ್ರ ಗುರುತಿಸಬಹುದು.

ನಿರೋಧಕ ತನ್ನ ಆತ್ಮೀಯ ನಿರೋಧಜನಕದೊಂದಿಗೆ ಒತ್ತಡವನ್ನು ರಚಿಸುತ್ತದೆ. ಈ ಪರೀಕ್ಷೆ ಮಾಡುವಾಗ ನಿರೋಧಜನಕವನ್ನು ಅಧಿಕ ಪ್ರಮಾಣದಲ್ಲಿ ಮಿಶ್ರಣಕ್ಕೆ ಸೇರಿಸಬಾರದು. ಏಕೆಂದರೆ ನಿರೋಧಜನಕ–ನಿರೋಧಕಗಳ ಕೂಡುವಿಕೆಯಿಂದ ಉಂಟಾದ ಒತ್ತರ ಹೆಚ್ಚಿನ ಪ್ರಮಾಣದ ನಿರೋಧಜನಕದಲ್ಲಿ ವಿಲೀನವಾಗುವುದು. ಈ ಪರೀಕ್ಷೆ ಯಶಸ್ವಿಯಾಗಲು ಬೇಕಾದ ನಿರೋಧಜನಕ ಮತ್ತು ನಿರೋಧಕಗಳ ಪ್ರಮಾಣವನ್ನು ತಿಳಿಯುವುದು ಕಷ್ಟವಾದ ಕೆಲಸ. ಆದ್ದರಿಂದ ಇದನ್ನು ಸ್ವಲ್ಪಮಟ್ಟಿಗೆ ಬದಲಾಯಿಸಲಾಗಿದೆ. ನಿರೋಧಜನಕದ ದ್ರಾವಣವನ್ನು ಎಚ್ಚರಿಕೆಯಿಂದ ಪ್ರನಾಳಗಳ ಕೆಳಭಾಗಕ್ಕೆ ಸೇರಿಸಿದರೆ ಎರಡು ದ್ರಾವಣಗಳು ಮಿಶ್ರಿತವಾಗದೆ ಎರಡು ಪದರಗಳು ರಚಿತವಾಗುವುವು. ಇವು ಸಂಧಿಸುವ ಜಾಗದಲ್ಲಿ ನಿರೋಧಕ ಮತ್ತು ನಿರೋಧಜನಕಗಳೂ ಕೂಡಿ ಉಂಗುರದ ಆಕಾರದಲ್ಲಿ ಒತ್ತರ ರಚನೆಯಾಗುವುದು (ರಿಂಗ್ ಟೆಸ್ಟ್). ಇದೇ ಪರೀಕ್ಷೆಯನ್ನು ನಿರೋಧಕ ಮತ್ತು ನಿರೋಧಜನಕಗಳು ಆಗಾರ್‌ಜೆಲ್ಲಿನಲ್ಲಿ ಪ್ರಸರಿಸುವಂತೆ ಮಾಡುವುದರ ಮೂಲಕ ಸೂಕ್ಷ್ಮ ಪ್ರಮಾಣದಲ್ಲಿ ನಡೆಸಬಹುದು. ಈ ವಿಧಾನವನ್ನು ಓಡಿನ್ ಎಂಬಾತ ಸೂಚಿಸಿದ. ಇದರ ಪ್ರಕಾರ ನಿರೋಧಕ ವಸ್ತುವಿನ ದ್ರಾವಣವನ್ನು ಸುಮಾರು $47^0$ ಸೆ. ಕಾಯಿಸಿ ಸಮ ಪ್ರಮಾಣದಲ್ಲಿ ಅದೇ ಉಷ್ಣತೆಯಲ್ಲಿ ದ್ರವೀಕೃತ 1% ಆಗಾರ್ ಜೆಲ್ಲಿನೊಂದಿಗೆ ಬೆರೆಸಿ ಸಣ್ಣ ಪ್ರನಾಳಗಳಿಗೆ ಹೊಯ್ಯುತ್ತಾರೆ. ಅನಂತರ ಕೊಠಡಿಯ ಉಷ್ಣತೆಗೆ ಶೀತಲಿಸಿದಾಗ ಜೆಲ್ ರಚನೆಯಾಗುತ್ತದೆ. ತರುವಾಯ ನಿರೋಧಜನಕ ದ್ರಾವಣವನ್ನು ಎಚ್ಚರಿಕೆಯಿಂದ ಜೆಲ್ಲಿನ ಮೇಲೆ ಸುರಿಯುತ್ತಾರೆ. ನಿರೋಧಜನಕ ನಿಧಾನವಾಗಿ ಜೆಲ್ಲಿನಲ್ಲಿ ಪ್ರಸರಿಸಿದಾಗ ಒತ್ತರರೇಖೆ (ಪ್ರೆಸಿಪಿಟಿನ್ ಬ್ಯಾಂಡ್) ರಚನೆಯಾಗುತ್ತದೆ. ಈ ವಿಧಾನದಲ್ಲಿ ಕೆಲವು ಅನುಕೂಲತೆಗಳಿವೆ: 1)

ಒತ್ತರ ರೇಖೆ ಉಷ್ಣತೆಯಲ್ಲಿ ವ್ಯತ್ಯಾಸ ಅಥವಾ ಅಲುಗಾಡುವಿಕೆಯಿಂದ ವ್ಯತ್ಯಸ್ತಹೊಂದದೆ ಸ್ಥಿರವಾಗಿರುತ್ತದೆ; 2) ನಿರೋಧಜನಕ ಜೆಲ್ಲಿನಲ್ಲಿ ನಿಧಾನವಾಗಿ ಪ್ರಸರಿಸುವುದರಿಂದ ಅದರ ಸಾಂದ್ರತೆ ಕ್ರಮವಾಗಿ ಹೆಚ್ಚುತ್ತದೆ. ಆದ್ದರಿಂದ ಒತ್ತರದ ರಚನೆಗೆ ಅನುಕೂಲತಮವಾದ ಸಾಂದ್ರತೆ ಒದಗಿಯೇ ಒದಗುತ್ತದೆ; 3) ನಿರೋಧಜನಕ ಮತ್ತು ನಿರೋಧಕಗಳು ಎರಡು ಅಥವಾ ಹೆಚ್ಚಾದ ಸಂಖ್ಯೆಯಲ್ಲಿದ್ದರೆ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಒತ್ತರ ರೇಖೆಗಳು ರಚಿತವಾಗುತ್ತವೆ. ನಿರೋಧಕ ಮತ್ತು ನಿರೋಧಜನಕಗಳೆರಡೂ ಅಗಾರ್ ಜೆಲ್ಲಿನಲ್ಲಿ ಪ್ರಸರಿಸಿ ಒತ್ತರವನ್ನು ರಚಿಸುವಂತೆ ಮಾಡುವುದರಿಂದ ಈ ಪರೀಕ್ಷೆಯನ್ನು ಮತ್ತಷ್ಟು ಸೂಕ್ಷ್ಮ ಮಟ್ಟದಲ್ಲಿ ನಡೆಸಬಹುದು.

ಅನೇಕ ವೇಳೆ ರಚನೆಯಲ್ಲಿ ಹೋಲಿಕೆಯಿರುವ ಎರಡು ನಿರೋಧಕಗಳು ಒಂದೇ ನಿರೋಧಜನಕದೊಂದಿಗೆ ಕೂಡಿ ಒತ್ತರವನ್ನು ರಚಿಸುತ್ತವೆ. ಈ ತರಹದ ಕ್ರಿಯೆಗೆ ಕ್ರಾಸ್ ರೀಆಕ್ಷನ್ ಅಥವಾ ಅಡ್ಡ ಪ್ರತಿಕ್ರಿಯೆ ಎನ್ನುತ್ತಾರೆ. ಮೇಲೆ ವಿವರಿಸಿದ ವಿಧಾನಗಳಲ್ಲಿ ಅಡ್ಡ ಪ್ರತಿಕ್ರಿಯೆ ತೋರಿಸುವ ಎರಡು ನಿರೋಧಕಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಓಕ್ಟರ್‌ಲೋನಿ ಎಂಬಾತ ಸೂಚಿಸಿದ ವಿಧಾನದಲ್ಲಿ ಈ ಪರೀಕ್ಷೆ ಸಾಧ್ಯವಿದೆ. ಈ ವಿಧಾನದಲ್ಲಿ ಅಗಾರ್ ಜೆಲ್ಲನ್ನು ಚಪ್ಪಟೆಯ ತಳವಿರುವ ಗುಂಡಾಗಿರುವ ಗಾಜಿನ ಪಾತ್ರೆಗಳಿಗೆ ಸುರಿಯುತ್ತಾರೆ. ಅಥವಾ ಜೆಲ್ಲಿನಲ್ಲಿ ತಳವಿಲ್ಲದ ಸಣ್ಣ ಪಾತ್ರೆಗಳನ್ನಿಟ್ಟು ಅವುಗಳಿಗೆ ಸೇರಿಸುತ್ತಾರೆ. ಸಾಧಾರಣವಾಗಿ ನಿರೋಧಕಗಳಿರುವ (ನಿರೋಧಜನಕ) ಒಂದು ಮಧ್ಯದ ಗುಂಡಿ ನಿರೋಧಜನಕಗಳಿರುವ (ನಿರೋಧಕ) ನಾಲ್ಕು ಅಥವಾ ಆರು ಗುಂಡಿಗಳಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಒಂದೇ ಬಗೆಯ ನಿರೋಧಕ ಒಂದೇ ಬಗೆಯ ನಿರೋಧಜನಕದ ಕಡೆಗೆ ಪ್ರಸರಿಸಿದರೆ ಒಂದೇ ಒತ್ತರರೇಖೆ ಕಾಣಬರುತ್ತದೆ. ಎರಡು ಅಥವಾ ಹೆಚ್ಚು ಸಂಖ್ಯೆಯ ನಿರೋಧಕಗಳಿರುವ ವಸೆಯ ಕಡೆಗೆ ಪ್ರಸರಿಸಿದರೆ ಎರಡು ಅಥವಾ ಹೆಚ್ಚು ಸಂಖ್ಯೆಯ ಒತ್ತರ ರೇಖೆಗಳು ಕಾಣಬರುತ್ತವೆ. ಅಂಚಿನಲ್ಲಿರುವ ಎರಡು ಗುಂಡಿಗಳಲ್ಲಿ ಒಂದೇ ತರಹೆಯ ನಿರೋಧಜನಕವಿದ್ದರೆ ಎರಡೂ ಗುಂಡಿಗಳಿಗೆ ಸೇರಿದಂತೆ ಒಂದೇ ಒಂದು ರೇಖೆ ರಚನೆಯಾಗುತ್ತದೆ. ಅಕ್ಕಪಕ್ಕದ ಎರಡು ಗುಂಡಿಗಳಿಂದ ಎರಡು ವಿಭಿನ್ನವಾದ ನಿರೋಧಜನಕಗಳು ಮಧ್ಯದ ಗುಂಡಿಯಲ್ಲಿರುವ ಎರಡು ನಿರೋಧಕಗಳ ಕಡೆ ಪ್ರಸರಿಸಿದರೆ ಎರಡು ಒತ್ತರ ರೇಖೆಗಳು ರಚನೆಯಾಗುತ್ತವೆ ಮತ್ತು ಇವು ಒಂದನ್ನೊಂದು ಸೇರಿಕೊಳ್ಳದೆ ದಾಟುತ್ತವೆ. ಅಡ್ಡಪ್ರತಿಕ್ರಿಯೆ ತೋರುವ ನಿರೋಧಕ–ನಿರೋಧಜನಕಗಳು ಸೇರುವ ಸಂದರ್ಭದಲ್ಲಿ ಒತ್ತರದ ರೇಖೆಗಳು ಭಾಗಶಃ ಕೂಡಿಕೊಳ್ಳುವುವಲ್ಲದೆ ಕೊಂಡಿಯನ್ನೂ ರಚಿಸುವುವು. ನಿರೋಧಕ ಮತ್ತು ನಿರೋಧಜನಕಗಳೆರಡೂ ಪ್ರಸರಿಸುವ ವಿಧಾನಕ್ಕೆ ದ್ವಿಪ್ರಸರಣ ವಿಧಾನ (ಡಬಲ್ ಡಿಫ್ಯೂಶನ್ ಟೆಕ್ನೀಕ್) ಎನ್ನಬಹುದು. ವಿದ್ಯುತ್‌ಕ್ಷೇತ್ರ ಚಲನ (ಎಲೆಕ್ಟ್ರೊಫಾರಿಸಿಸ್) ಮತ್ತು ದ್ವಿಪ್ರಸರಣ ವಿಧಾನಗಳನ್ನು ಒಂದುಗೂಡಿಸಿ ವಿಭಿನ್ನ ನಿರೋಧಕಗಳ ಇರವನ್ನು ಮತ್ತಷ್ಟು ಸೂಕ್ಷ್ಮ ಮಟ್ಟದಲ್ಲಿ ಪರಿಶೀಲಿಸಬಹುದು. ಈ ವಿಧಾನದ ಹೆಸರು ಇಮ್ಯೂನೋಎಲೆಕ್ಟ್ರೊಫಾರಿಸಿಸ್ (ನೋಡಿ) ವಿಧಾನ. ಎಲೆಕ್ಟ್ರೊಫಾರಿಸಿಸ್ ವಿಧಾನಕ್ಕೆ ಅಗಾರ್ ಅಥವಾ ಸ್ಟಾರ್ಚ್ ಜೆಲ್ಲುಗಳನ್ನು ಉಪಯೋಗಿಸುತ್ತಾರೆ. ಈಚೆಗೆ ಅಕ್ರಿಲಮೈಡ್ ಜೆಲ್ಲಿನ ಉಪಯೋಗ ಉತ್ತಮವೆಂದು ತೋರಿಬಂದಿದೆ.

ಒತ್ತರದ ರಚನೆ ಸುಲಭವಾದ ಮತ್ತು ನಿರ್ದಿಷ್ಟವಾದ ಪರೀಕ್ಷೆಯಾದರೂ ಅಷ್ಟು ಸೂಕ್ಷ್ಮ ಮಟ್ಟದ್ದಲ್ಲ. ಅತ್ಯಲ್ಪ ಪ್ರಮಾಣದಲ್ಲಿರುವ ನಿರೋಧಕಗಳನ್ನು ರಕ್ತಕಣಗಳ ಗುಂಪುಗೂಡುವಿಕೆಯ ಪರೀಕ್ಷೆ (ಹೇಮಾಗ್ಲೂಟಿನೇಷನ್ ಟೆಸ್ಟ್), ರಕ್ತಕಣಭೇದನೆ ಮುಂತಾದ ವಿಧಾನಗಳಿಂದ ಕಂಡುಹಿಡಿಯಬಹುದು. ರಕ್ತಕಣಗಳು ಅಂಟುವಂತೆ ಮಾಡುವ ಪರೀಕ್ಷೆಯ ವಿಧಾನದಲ್ಲಿ ರಕ್ತಕಣಗಳಿಗೆ ಮೇಲ್ಮೈಗೆ ಪರೀಕ್ಷಿಸಬೇಕೆಂದಿರುವ ನಿರೋಧಕದ ಆತ್ಮೀಯ ನಿರೋಧಜನಕವನ್ನು ಲೇಪಿಸುತ್ತಾರೆ. ಈ ರಕ್ತಕಣಗಳಿಗೆ ನಿರೋಧಕಗಳನ್ನು ಸೇರಿಸಿದಾಗ ನಿರೋಧಜನಕದೊಂದಿಗೆ ಸೇರಿ ಅಕ್ಕಪಕ್ಕಗಳಲ್ಲಿರುವ ರಕ್ತಕಣಗಳಿಗೆ ಸೇತುವಿನಂತೆ ವರ್ತಿಸುತ್ತವೆ. ಇದರಿಂದ ಕಣ್ಣಿಗೆ ಕಾಣಿಸುವ ಗಾತ್ರದ ಗುಂಪುಗಳು ರಚಿತವಾಗುತ್ತವೆ. ಈ ವಿಧಾನದಿಂದ $9 x 10^{-3}$ ಮೈಗ್ರಾ ನಷ್ಟು ನಿರೋಧಕವನ್ನು ಪತ್ತೆ ಮಾಡಬಹುದು. ರಕ್ತಕಣಗಳು ಸ್ವಯಂ ಕ್ರಿಯೆಯಲ್ಲಿ ನೇರವಾಗಿ ಭಾಗವಹಿಸದೆ ನಿರೋಧಜನಕಕ್ಕೆ ಕೇವಲ ಆಧಾರಭೂತವಾಗಿರುವುದರಿಂದ ಇದನ್ನು ನಿಷ್ಕ್ರಿಯ ರಕ್ತಕಣಗಳ ಗುಂಪು ಕೂಡಿಕೆಯ ವಿಧಾನ (ಪ್ಯಾಸಿವ್ ಹೇಮಾಗ್ಲೂಟಿನೇಶನ್ ಟೆಕ್ನೀಕ್) ಎಂದು ಹೆಸರಿಸಲಾಗಿದೆ. ರಕ್ತಕಣಗಳು ಶೀಘ್ರವಾಗಿ ನಾಶವಾಗುವುದರಿಂದ ಅವುಗಳ ಬದಲು ಬೆಂಟೋನೈಟ್ (ಮಾಂಟ್‌ಮಾರಿಲ್ಲೋನೈಟ್) ಎಂಬ ಅಲ್ಯೂಮಿನಿಯಂ ಸಿಲಿಕೇಟನ್ನಾಗಲೀ ಪಾಲಿಸ್ಟೈರೀನ್ ಎಂಬ ಬಹ್ವಣುವನ್ನಾಗಲೀ ಉಪಯೋಗಿಸಬಹುದು.

ಪ್ಯಾಸಿವ್ ಕ್ಯುಟೇನಿಯಸ್ ಅನಾಫಿಲಾಕ್ಸಿಸ್ (ಪ್ಯಾಸಿವ್–ನಿಷ್ಕ್ರಿಯ, ಕ್ಯುಟೇನಿಯಸ್–ಚರ್ಮದ, ಅನಾಫಿಲಾಕ್ಸಿಸ್–ಅತಿಪ್ರತಿಕ್ರಿಯೆ) ಅತಿಪ್ರತಿಕ್ರಿಯೆ ವಿಧಾನದಲ್ಲಿ ಪರೀಕ್ಷೆಗೊಳಗಾಗಿರುವ ದ್ರಾವಣವನ್ನು ಗಿನಿ ಹಂದಿಯ ಚರ್ಮದ ಮಧ್ಯಭಾಗದಲ್ಲೆ ಚುಚ್ಚುತ್ತಾರೆ. ಅನಂತರ ಅದರ ಆತ್ಮೀಯ ನಿರೋಧಜನಕ ಮತ್ತು ಈವಾನ್ಸ್ ನೀಲಿ ಬಣ್ಣಗಳ ಮಿಶ್ರಣವನ್ನು ಆ ಪ್ರಾಣಿಗೆ ಚುಚ್ಚುತ್ತಾರೆ. ಹದಿನೈದು ಮಿನಿಟುಗಳೊಳಗಾಗಿ ಪರೀಕ್ಷಾ ದ್ರಾವಣವನ್ನು ಚುಚ್ಚಿದ ಪ್ರದೇಶ ಗಾಢವಾದ ನೀಲಿ ಬಣ್ಣವನ್ನು ತಳೆದರೆ ನಿರೋಧಕ–ನಿರೋಧಜನಕಗಳ ಕ್ರಿಯೆ ನಡೆದಿದೆಯೆಂದು ಗೊತ್ತಾಗುವುದು. ಈ ವಿಧಾನದಲ್ಲಿಯೂ ಗಿನಿ ಹಂದಿಯ ಚರ್ಮ ನೇರವಾಗಿ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ.

ಅಂಗಾಂಶಗಳಲ್ಲಿ ನಿರೋಧಕಗಳು ಇರುವ ಸ್ಥಳವನ್ನು ಪತ್ತೆಮಾಡಲು ಅನೇಕ ವಿಧಾನಗಳಿವೆ. ಅತಿನೇರಳೆ ಕಿರಣಗಳಿಂದ (ಅಲ್ಟ್ರಾವಯೊಲೆಟ್ ರೇಸ್) ಸ್ಫುರಣಗೊಂಡು ವಿಶಿಷ್ಟವಾದ ರೀತಿಯಲ್ಲಿ ದೃಷ್ಟಿರೋಹಿತದಲ್ಲಿ ಬೆಳಕನ್ನು ಚೆಲ್ಲುವ (ವಿಸಿಬಲ್ ಸ್ಪೆಕ್ಟ್ರಂ) ಫ್ಲೂರಿಸೀನ್ ಐಸೋಸಯನೇಟ್ ಮತ್ತು ಫ್ಲೂರಿಸೀನ್ ಐಸೋಥಯೋಸಯನೇಟ್ ವಸ್ತುಗಳನ್ನೊಳಗೊಂಡ ನಿರೋಧಗಳನ್ನು ಉಪಯೋಗಿಸುವ ವಿಧಾನ ಹೆಚ್ಚಾಗಿ ಬಳಕೆಯಲ್ಲಿದೆ. ರೇಡಿಯೋ ವಿಕಿರಣ ಹೊಂದುವ ಸಮಘಟಕಗಳನ್ನೊಳಗೊಂಡ ನಿರೋಧಜನಕಗಳನ್ನು ಬಳಸಿ, ನಿರೋಧಕ–ನಿರೋಧಜನಕಗಳ ಒತ್ತರವಿರುವ ಪ್ರದೇಶವನ್ನು ಆಟೋರೇಡಿಯೋಗ್ರಫಿ ವಿಧಾನದಿಂದ ಪತ್ತೆ ಮಾಡಬಹುದು.

ನಿರೋಧಕಗಳ ಶುದ್ಧೀಕರಣ : ನಿರೋಧಕಗಳು ವಸೆಯಲ್ಲಿ ಗಾಮಾಗ್ಲಾಬ್ಯುಲಿನ್ ಅಂಶದಲ್ಲಿರುತ್ತವೆ. ಶುದ್ಧೀಕರಣದ ಮೊದಲನೆ ಹೆಜ್ಜೆಯಲ್ಲಿ ಗಾಮಾಗ್ಲಾಬ್ಯುಲಿನ್ನುಗಳನ್ನು ಮಿಕ್ಕೆಲ್ಲ ಪ್ರೊಟೀನುಗಳಿಂದ ಅಮೋನಿಯಂ ಸಲ್ಫೇಟ್ ಅಥವಾ ಸೋಡಿಯಂ ಸಲ್ಫೇಟ್ ಲವಣಗಳನ್ನು ವಸೆಗೆ ಸೇರಿಸುವುದರ ಮೂಲಕ ಬೇರ್ಪಡಿಸುತ್ತಾರೆ. ಅಮೋನಿಯಂ ಸಲ್ಫೇಟಿನ ಸಾಂದ್ರಣ 1.34 ಎಂ ರಷ್ಟಿದ್ದಾಗ (ಎಂ=ಒಂದು ಅಣುಭಾರ, ಗ್ರಾಂಗಳಲ್ಲಿ) ಗಾಮಾಗ್ಲಾಬ್ಯುಲಿನ್ನುಗಳು ಒತ್ತರದ ರೂಪದಲ್ಲಿ ಹೊರಬೀಳುತ್ತವೆ. ಈ ಪ್ರೊಟೀನುಗಳನ್ನು $-5^0$ ಸೆ ನಲ್ಲಿ ವಸೆಗೆ ಮದ್ಯಸಾರವನ್ನು ಸೇರಿಸುವುದರ ಮೂಲಕ ಬೇರ್ಪಡಿಸಬಹುದು. ಆಲ್ಕೊಹಾಲಿನ (ಮದ್ಯಸಾರ) ಸಾಂದ್ರಣ 20% ಪ್ರಮಾಣವಿದ್ದಾಗ ಗಾಮಾಗ್ಲಾಬ್ಯುಲಿನ್ನುಗಳು ಬೇರ್ಪಡುತ್ತವೆ. ಡಿಇಎಇ–ಸೆಲ್ಯುಲೋಸ್ ರಾಳವನ್ನು (ಡಿಇಎಇ ಸೆಲ್ಯುಲೋಸ್ ಅಯಾನ್ ಎಕ್ಸ್‌ಛೇಂಜರ್) ಉಪಯೋಗಿಸಿಯೂ ಬೇರ್ಪಡಿಸಬಹುದು. ಈ ವಿಧಾನಗಳಿಂದ ನಿರೋಧಕಗಳನ್ನು ವಸೆಯ ಇತರ ಪ್ರೊಟೀನುಗಳಿಂದ ಬೇರ್ಪಡಿಸಬಹುದೇ ಹೊರತು ಇತರ ಗಾಮಾಗ್ಲಾಬ್ಯುಲಿನ್ನುಗಳಿಂದಾಗಲೀ ಅಥವಾ ಇತರ ನಿರೋಧಕಗಳಿಂದಾಗಲೀ ಬೇರ್ಪಡಿಸಲಾಗುವುದಿಲ್ಲ. ಯಾವುದೊಂದು ನಿರೋಧಕವನ್ನು ಶುದ್ಧ ರೂಪದಲ್ಲಿ ಬೇರ್ಪಡಿಸಬೇಕಾದರೆ ಅದರ ಆತ್ಮೀಯ ನಿರೋಧಜನಕವನ್ನು ಬಳಸಬೇಕಾಗುತ್ತದೆ. ಅನೇಕ ನಿರೋಧಕಗಳಿರುವ ದ್ರಾವಣಕ್ಕೆ ಆತ್ಮೀಯ ನಿರೋಧಜನಕದ ದ್ರಾವಣವನ್ನು ಸೇರಿಸಿದರೆ ನಿರೋಧಜನಕಕ್ಕೆ ಸಂಬಂಧಪಟ್ಟ ನಿರೋಧಕ ಮಾತ್ರ ಒತ್ತರಿಸುವುದು. ಒತ್ತರವನ್ನು ಬೇರ್ಪಡಿಸಿ ಅನಂತರ ನಿರೋಧಕವನ್ನು ಸಂಯುಕ್ತದಿಂದ ಬಿಡುಗಡೆ ಮಾಡಬಹುದು. ಒತ್ತರದ ಉಷ್ಣತೆಯನ್ನು ಹೆಚ್ಚಿಸುವುದರಿಂದಾಗಲೀ ಪಿಎಚ್ ನ್ನು ತಗ್ಗಿಸುವುದರಿಂದಾಗಲೀ ಆಯನನ ಸಾಂದ್ರಣವನ್ನು ಹೆಚ್ಚಿಸುವುದರಿಂದಾಗಲೀ ಸೋಡಿಯಂ ಡೋಡೆಕೈಲ್ ಸಲ್ಫೇಟ್ ಯೂರಿಯ ಮುಂತಾದ ವಸ್ತುಗಳನ್ನು ಸೇರಿಸುವುದರಿಂದಾಗಲೀ ನಿರೋಧಕವನ್ನು ನಿರೋಧಕ–ನಿರೋಧಜನಕಗಳ ಸಂಯುಕ್ತದಿಂದ ಬೇರ್ಪಡಿಸಬಹುದು. ನಿರೋಧಕವನ್ನು ವಿಶಿಷ್ಟರೀತಿಯಲ್ಲಿ ಬೇರ್ಪಡಿಸಲು ನಿರೋಧಜನಕವನ್ನು ದ್ರಾವಣದ ರೂಪದಲ್ಲಿ ಉಪಯೋಗಿಸುವ ಬದಲು ವಿಲೀನವಾಗದ ರೂಪದಲ್ಲಿ ಉಪಯೋಗಿಸಿದರೆ ನಿರೋಧಕವನ್ನು ಹೆಚ್ಚು ಪ್ರಮಾಣದಲ್ಲಿ ಪಡೆಯಬಹುದು. ಈ ವಿಧಾನದಲ್ಲಿ ಸೆಲ್ಯುಲೋಸನ್ನು (ಹತ್ತಿಯ ಅಂಶ) ಡೈ ಆಝೋಟೈಸ್ ಮಾಡಿ ಅನಂತರ ಪ್ರೊಟೀನ್ ನಿರೋಧಜನಕವನ್ನು ಅದಕ್ಕೆ ಸೇರಿಸಿ ವಿಲೀನವಾಗದ ವಸ್ತುವನ್ನು ಪಡೆಯುತ್ತಾರೆ. ನಿರೋಧಕಗಳಿರುವ ದ್ರಾವಣವನ್ನು ಈ ವಸ್ತುವಿನ ಮೂಲಕ ಹಾಯಿಸಿದರೆ ನಿರೋಧಜನಕಕ್ಕೆ ಆತ್ಮೀಯವಾದ ನಿರೋಧಕ ಮಾತ್ರ ಅಧಿಶೋಷಣೆಯಾಗುತ್ತದೆ. ವರ್ತಿಸುತ್ತದೆ. ಅಂದರೆ ವಿಲೀನವಾಗದ ನಿರೋಧಜನಕ ವಿಶಿಷ್ಟವಾದ ಅಧಿಶೋಧಕದಂತೆ ವರ್ತಿಸುತ್ತದೆ. ಅಧಿಶೋಷಕ ನಿರೋಧಕವನ್ನು 1% ಸೋಡಿಯಂ ಕ್ಲೋರೈಡ್ ದ್ರಾವಣದಿಂದ (ಅಡಿಗೆ ಉಪ್ಪು) ಪಿಹೆಚ್ 2.0 ಅಥವಾ 3.2 ರಲ್ಲಿ ಹೊರಹೊರಡಿಸಬಹುದು (ಎಲ್ಯೂಟ್).

ಅನೇಕ ಸಂದರ್ಭಗಳಲ್ಲಿ ನಿರೋಧಜನಕ–ನಿರೋಧಕಗಳ ಸಂಯುಕ್ತವನ್ನು ಒಡೆಯಲು ಕಿಣ್ವಗಳನ್ನು ಉಪಯೋಗಿಸಬಹುದು. ಇಂಥ ಕಿಣ್ವಗಳು ನಿರೋಧಜನಕವನ್ನು ಮಾತ್ರ ನಾಶಮಾಡುವಂತಿರಬೇಕು. ಈ ವಿಧಾನವನ್ನು ಔದ್ಯೋಗಿಕಮಟ್ಟದಲ್ಲಿ ನಿರೋಧಕಗಳನ್ನು ಪಡೆಯಲು ಅನುಸರಿಸುತ್ತಾರೆ. ಉದಾಹರಣೆಗೆ, ಡಿಫ್ತೀರಿಯ ರೋಗಾಣುವಿನ ಟಾಕ್ಸಿನ್ ವಿರುದ್ಧ ಪಡೆದ ನಿರೋಧಕ ಆಂಟಿಟಾಕ್ಸಿನ್ ತಯಾರಿಕೆಯಲ್ಲಿ

ಪೆಪ್ಸಿನ್ ಕಿಣ್ವವನ್ನು (ಜಠರದಲ್ಲಿರುವ ಕಿಣ್ವ) ಟಾಕ್ಸಿನ್–ಆಂಟಿಟಾಕ್ಸಿನ್ ಸಂಯುಕ್ತದಿಂದ ಆಂಟಿಟಾಕ್ಸಿನನ್ನು ಬೇರ್ಪಡಿಸಲು ಉಪಯೋಗಿಸುತ್ತಾರೆ. ಈಚೆಗೆ ಸೆಫಾಡೆಕ್ಸ್ ಎಂಬ ರಾಳದ ಮೂಲಕ ನಿರೋಧಕಗಳನ್ನು ಶೋಧಿಸುವ ವಿಧಾನ ಆಚರಣೆಗೆ ಬಂದಿದೆ. ಈ ವಿಧಾನದಲ್ಲಿ ನಿರೋಧಕಗಳು ಅವುಗಳ ಅಣುಭಾರವನ್ನನುಸರಿಸಿ ಬೇರ್ಪಡುತ್ತವೆ.

ನಿರೋಧಕಗಳ ಮೌಲ್ಯ ವಿಶ್ಲೇಷಣೆ : ವಸೆಯಲ್ಲಿರುವ ನಿರೋಧಕಗಳ ಮಟ್ಟವನ್ನು ಖಚಿತವಾಗಿ ಕಂಡುಹಿಡಿಯುವ ಪ್ರಯತ್ನ ಇದುವರೆಗೆ ಸಾರ್ಥಕವಾಗಿಲ್ಲ. ಬಳಕೆಯಲ್ಲಿರುವ ವಿಧಾನಗಳ ಪ್ರಕಾರ ವಸೆಯಿಂದ ನಿರೋಧಕವನ್ನು ಆತ್ಮೀಯ ನಿರೋಧಜನಕದ ಪ್ರಯೋಗದಿಂದ ಒತ್ತರಿಸಿ ಒತ್ತರವನ್ನು ತೊಳೆದು ನಿರೋಧಕವನ್ನು ಬಿಡುಗಡೆಮಾಡಿ ಅನಂತರ ನಿರೋಧಕದ ಪ್ರಮಾಣವನ್ನು ಕಂಡುಹಿಡಿಯುವ ಪದ್ಧತಿ ರೂಢಿಯಲ್ಲಿದೆ. ನಿರೋಧಕ ಪ್ರೋಟೀನ್ ವಸ್ತುವಾದ್ದರಿಂದ ಪ್ರೋಟೀನನ್ನು ಅಳೆಯಲು ಉಪಯೋಗಿಸುವ ವಿಧಾನವನ್ನು ಅನುಸರಿಸಬಹುಜುದು. ಈ ವಿಧಾನ ಸುಲಭವೆಂದು ತೋರಿಬಂದರೂ ಒತ್ತರದ ರಚನೆ ಅನೇಕ ಕ್ಲಿಷ್ಟ ಸಮಸ್ಯೆಗಳಿಂದ ಕೂಡಿರುವುದರಿಂದ ಇದರಲ್ಲಿ ಯಥಾರ್ಥವಾದ ಉತ್ತರ ದೊರೆಯಲಾರದು.

ನಿರೋಧಜನಕ ಬಣ್ಣವುಳ್ಳ ಪದಾರ್ಥವಾದರೆ ಒತ್ತರವನ್ನು ವಿಲೀನಗೊಳಿಸಿ ಬಣ್ಣದ ಸಾಂದ್ರಣವನ್ನು ಅಳೆದು ನಿರೋಧಜನಕದ ಪ್ರಮಾಣವನ್ನು ಕಂಡುಹಿಡಿಯಬಹುದು. ಒತ್ತರದ ತೂಕದಿಂದ ನಿರೋಧಜನಕದ ಪ್ರಮಾಣವನ್ನು ಕಳೆದು ನಿರೋಧಕ ಪ್ರಮಾಣವನ್ನು ಗೊತ್ತುಮಾಡಲಾಗುತ್ತದೆ. ವಿಕಿರಣಶೀಲ ವಸ್ತುವನ್ನೊಳಗೊಂಡ ನಿರೋಧಜನಕವನ್ನು ಉಪಯೋಗಿಸಿ ಒತ್ತರದ ವಿಕಿರಣಶೀಲತೆಯನ್ನು ಅಳೆಯುವುದರ ಮೂಲಕ ನಿರೋಧಜನಕದ ಪ್ರಮಾಣವನ್ನು ಅಳೆಯಬಹುದು. ಒತ್ತರದ ಒಟ್ಟು ತೂಕದಿಂದ ನಿರೋಧಜನಕದ ಪ್ರಮಾಣವನ್ನು ಕಳೆದು ನಿರೋಧಕದ ಪ್ರಮಾಣವನ್ನು ಕಂಡುಹಿಡಿಯಲಾಗುವುದು.

ನಿರೋಧಕಗಳ ಮತ್ತು ಇಮ್ಯೂನೋಗ್ಲಾಬ್ಯುಲಿನ್ನುಗಳ ಘಟನೆ : ನಿರೋಧಕಗಳು ಸದ್ಯಕ್ಕೆ ಇಮ್ಯೂನೋಗ್ಲಾಬ್ಯುಲಿನ್ನುಗಳೆಂದು ಕರೆಯಲಾಗುತ್ತಿರುವ ಗ್ಲಾಬ್ಯುಲಿನ್ನುಗಳ ಗುಂಪಿಗೆ ಸೇರಿದ ಪ್ರೋಟೀನುಗಳೆಂದು ಭಾವಿಸಲಾಗಿದೆ. ಇಮ್ಯೂನೋಗ್ಲಾಬ್ಯುಲಿನ್ನುಗಳ ರಾಸಾಯನಿಕ ಪ್ರಕೃತಿ ಮತ್ತು ಅವುಗಳ ಭೌತ ಮತ್ತು ರಾಸಾಯನಿಕ ವರ್ತನೆ ಬೇರ್ಪಡಿಸಿದ ನಿರೋಧಕಗಳಂತೆಯೇ ಇರುತ್ತವೆ ಎಂಬರ್ಥದಲ್ಲಿ ಈ ಬಗೆಯ ವರ್ಗೀಕರಣ ಮಾಡಲಾಗಿದೆ. ಇಮ್ಯೂನೋಗ್ಲಾಬ್ಯುಲಿನ್ನುಗಳೂ ನಿರೋಧಕಗಳೇ, ಅವುಗಳ ನಿರೋಧಜನಕಗಳ ಅರಿವು ಮಾತ್ರ ನಮಗಿಲ್ಲವೆಂಬ ಅಭಿಪ್ರಾಯವನ್ನು ಆಗಿಂದಾಗ್ಗೆ ಸೂಚಿಸಲಾಗುತ್ತಿದೆ. ಸೂಕ್ಷ್ಮಜೀವಿರಹಿತ ವಾತಾವರಣದಲ್ಲಿ (ಜರ್ಮ್ ಫ್ರೀ ಅಟ್‌ಮಾಸ್ಫಿಯರ್) ಪ್ರಾಣಿಗಳನ್ನು ಬೆಳೆಸಿದರೆ ಅವುಗಳ ರಕ್ತದಲ್ಲಿ ನಿರೋಧಕಗಳ ಮಟ್ಟ ಅತ್ಯಲ್ಪ ಪ್ರಮಾಣದಲ್ಲಿರುತ್ತದೆ. ಇದರಿಂದ ಮೇಲೆ ಹೇಳಿದ ಸೂಚನೆಗೆ ಸ್ವಲ್ಪ ಮಟ್ಟಿಗೆ ಬೆಂಬಲ ದೊರೆತಂತಾಗಿದೆ. ಇಮ್ಯೂನೋಗ್ಲಾಬ್ಯುಲಿನ್ ಗುಂಪಿನ ಪ್ರೋಟೀನುಗಳು ಒಂದೇ ತರಹೆಯ ವಸ್ತುಗಳಾಗಿರದೆ ಭಿನ್ನರೀತಿಯ ಪ್ರೋಟೀನುಗಳನ್ನು ಶುದ್ಧವಾದ ಹರಳಿನ ರೂಪದಲ್ಲಿ ಪಡೆಯಲಾಗಿದೆ ಮತ್ತು ಅವುಗಳ ರಾಸಾಯನಿಕ ರಚನೆಯನ್ನು ಕೂಡ ಗೊತ್ತುಮಾಡಲಾಗಿದೆ. ಆದರೆ ಇದುವರೆಗೆ ನಿರೋಧಕಗಳ ವಿಷಯದಲ್ಲಿ ಈ ಕಾರ್ಯ ಸಾಧ್ಯವಾಗಿಲ್ಲ. ನಿರೋಧಕಗಳ ಅಣುತೂಕದಲ್ಲಿ ವ್ಯತ್ಯಾಸಗಳಿವೆ ಮತ್ತು ಅವು ವಿವಿಧ ಜೀನ್‌ಗಳ ನೇತೃತ್ವದಲ್ಲಿ ರಚಿಸಲ್ಪಟ್ಟಿವೆ. ಒಂದೇ ನಿರೋಧಜನಕಕ್ಕೆ ವಿರುದ್ಧವಾಗಿ ಉತ್ಪತ್ತಿಯಾದ ನಿರೋಧಕಗಳು ಕೂಡ ಈ ಬಗೆಯ ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ. ಈ ವ್ಯತ್ಯಾಸಗಳ ದೆಸೆಯಿಂದ ನಿರೋಧಕಗಳ ರಾಸಾಯನಿಕ ರಚನೆಯನ್ನು ಕಂಡು ಹಿಡಿಯುವ ಕಾರ್ಯ ಸುಲಭವಾಗಿಲ್ಲ. ದೊರೆತ ಉತ್ತರಗಳೂ ಕರಾರುವಾಕ್ಕೆಂದು ಹೇಳಬರುವುದಿಲ್ಲ.

ನಿರೋಧಕಗಳ ವೈವಿಧ್ಯಕ್ಕೆ ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದಾಗಿ ನಿರೋಧಜನಕಗಳಲ್ಲಿ ಒಂದಕ್ಕಿಂತ ಹೆಚ್ಚಾಗಿ ನಿರ್ದಿಷ್ಟಕ ಗುಂಪುಗಳಿರಬಹುದು. ಪ್ರತಿಯೊಂದು ಗುಂಪಿನ ವಿರುದ್ಧವಾಗಿಯೂ ನಿರೋಧಕಗಳು ಉತ್ಪತ್ತಿಯಾಗುವುದರಿಂದ ವೈವಿಧ್ಯ ಉಂಟಾಗುತ್ತದೆ. ಎರಡನೆಯದಾಗಿ ಒಂದೇ ನಿರೋಧಜನಕದ ವಿರುದ್ಧವಾಗಿ ದೇಹದ ಅನೇಕ ಅಂಗಾಂಶಗಳು ನಿರೋಧಕಗಳನ್ನು ರಚಿಸುತ್ತದೆ. ಪ್ರತಿ ಒಂದು ಅಂಗವೂ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ನಿರೋಧಕಗಳನ್ನು ರಚಿಸುತ್ತವೆ. ಪ್ರತಿ ಒಂದು ಅಂಗವೂ ತನ್ನದೇ ಆದ ವಿಶಿಷ್ಟರೀತಿಯಲ್ಲಿ ನಿರೋಧಕಗಳನ್ನು ರಚಿಸುವುದರಿಂದಲೂ ವೈವಿಧ್ಯ ಉಂಟಾಗುತ್ತದೆ (ಹೆಟಿರೋಜೆನೈಟಿ). ಇಮ್ಯೂನ್ ವಸೆಯನ್ನು (ಪ್ರತಿರಕ್ಷಿತ ವಸೆ) ವಿದ್ಯುತ್ಕ್ಷೇತ್ರ ಚಲನ (ಎಲೆಕ್ಟ್ರೊಫಾರಿಸಿಸ್) ವಿಧಾನದಿಂದ ಮತ್ತು ಅತಿವೇಗ ಭ್ರಮಣಯಂತ್ರದಲ್ಲಿ ಪರೀಕ್ಷಿಸಿದಾಗ ಐದು ವರ್ಗದ ಇಮ್ಯೂನೋಗ್ಲಾಬ್ಯೂಲಿನ್ನುಗಳು ತೋರಿಬರುತ್ತವೆ. ಈ ಗುಂಪುಗಳನ್ನು ಸಮವರ್ಗ (ಐಸೊ ಟೈಪ್ಸ್) ಎನ್ನುವುದೂ ಉಂಟು. ಇವನ್ನು ವಿಶ್ವ ಆರೋಗ್ಯ ಸ್ದಂಸ್ಥೆ (ವರ್ಲ್ಡ್ ಹೆಲ್ತ್ ಆರ್ಗನೈಸೇಷನ್) ಮಾಡಿರುವ ಸೂಚನೆಯ ಮೇರೆಗೆ (1964) gG, gA, gM, gD ಮತ್ತು gE ಎಂದು ಕರೆಯಲಾಗಿದೆ. ಈ ಐದುವರ್ಗಗಳ ಗುಣಗಳನ್ನು ಕೋಷ್ಟಕ 1 ರಲ್ಲಿ ತೋರಿಸಿದೆ.

ನಿರೋಧಕಗಳ ಮೂಲಭೂತ ಘಟನೆ ಹೀಗಿದೆ. ನಿರೋಧಕ ಒಂದು ಅಣುವಿನಲ್ಲಿ ಎರಡು ಗುರು (ಹೆವಿ) ಪೆಪ್ಟೈಡ್ ಶ್ರೇಣಿಗಳು (ಹೆಚ್–ಚೈನ್ಸ್) ಎರಡು ಲಘು ಪೆಪ್ಟೈಡ್ ಶ್ರೇಣಿಗಳೂ (ಎಲ್–ಚೈನ್ಸ್) ಇರುತ್ತವೆ. ಮೇಲೆ ತಿಳಿಸಿದ ಐದು ವರ್ಗಗಳನ್ನು ಅವುಗಳಲ್ಲಿರುವ ಗುರುಶ್ರೇಣಿಯ ಪ್ರಕೃತಿಯನ್ನನುಸರಿಸಿ ಮರುವಿಂಗಡಿಸಲಾಗಿದೆ. ಗುರುಶ್ರೇಣಿಯನ್ನು ಗಾಮಾ (g), ಆಲ್ಫಾ (a), ಡೆಲ್ಟಾ (d) ಮತ್ತು ಮ್ಯೂ (m) ಎಂಬುದಾಗಿ ವರ್ಗೀಕರಣ ಮಾಡಿದ್ದಾರೆ. ಈ ವರ್ಗೀಕರಣವನ್ನು ಆ ಶ್ರೇಣಿಗಳ ಗಾತ್ರ ಮತ್ತು ನಿರೋಧಜನಕಶೀಲತೆಗಳ ಆಧಾರದ ಮೇಲೆ ಮಾಡಲಾಗಿದೆ. (ಗುರುಶ್ರೇಣಿಗಳನ್ನು ಲಘುಶ್ರೇಣಿಗಳಿಂದ ಪ್ರತ್ಯೇಕಿಸಬಹುದು. ಪ್ರತ್ಯೇಕಿಸಲ್ಪಟ್ಟ ಗುರುಶ್ರೇಣಿಗಳನ್ನು ಭಿನ್ನಜಾತಿಯ ಪ್ರಾಣಿಗೆ ಚುಚ್ಚಿದರೆ ಅವು ನಾಲ್ಕು ತರಹೆಯ ನಿರೋಧಕಗಳ ಉತ್ಪತ್ತಿಯನ್ನು ಪ್ರೇರೇಪಿಸುವುದರಿಂದ ಅವನ್ನು ನಾಲ್ಕು ಪಂಗಡಗಳನ್ನಾಗಿ ವಿಂಗಡಿಸಲಾಗಿದೆ). ಲಘುಶ್ರೇಣಿಗಳನ್ನು ರಚನೆ ಮತ್ತು ನಿರೋಧಜನಕಶೀಲತೆಯ ಆಧಾರದಮೇಲೆ ಕಪ್ಪಾ (k) ಮತ್ತು ಲ್ಯಾಮ್ಡಾ (l) ಎಂಬ ಎರಡು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಯಾವುದೇ ಒಂದು ಗುಂಪಿದೆ ಸೇರಿದ (ಕಪ್ಪ ಆಗಲಿ ಅಥವಾ ಲ್ಯಾಮ್ಡಾ ಆಗಲಿ) ಎರಡು ಲಘುಶ್ರೇಣಿಗಳು ಒಂದೇ ಗುಂಪಿಗೆ ಸೇರಿದ (ಮ್ಯೂ ವಿನಃ) ಎರಡು ಗುರುಶ್ರೇಣಿಗಳೊಂದಿಗೆ ಸೇರಿ ಒಂದು ನಿರೋಧಕ ಅಣುವನ್ನು ರಚಿಸುತ್ತವೆ. ಅಂದರೆ ಒಂದು ನಿರೋಧಕ ಅಣುವಿನಲ್ಲಿ ನಾಲ್ಕು ಪೆಪ್ಟೈಡ್ ಶ್ರೇಣಿಗಳಿರುತ್ತವೆ. gG ಅಣುವಿನ ಸೂತ್ರವನ್ನು ಕಪ್ಪ2ಲ್ಯಾಮ್ಡಾ2 ($k_2l_2$) ಎಂಬುದಾಗಿ ಸೂಚಿಸಬಹುದು. ಅಂತೆಯೇ ಇತರ ಇಮ್ಯುನೋಗ್ಲಾಬ್ಯುಲಿನ್ನುಇಗಳ ಸೂತ್ರವನ್ನು ಇದೇ ರೀತಿ ಸೂಚಿಸಬಹುದು. ಉದಾಹರಣೆಗೆ, $k_2a_2$ ಅಥವಾ $l_2a_2$, gM ಬೃಹದಣುವಿನಲ್ಲಿ ಐದು ಕಪ್ಪ ಅಥವಾ ಲ್ಯಾಮ್ಡಾ ಶ್ರೇಣಿಗಳೂ ಐದು ಮ್ಯೂ ಶ್ರೇಣಿಗಳೂ ಇವೆ.

gG ಅಣುವಿನ ಗುರುಶ್ರೇಣಿಯಲ್ಲಿ (g ವರ್ಗ) ನಾಲ್ಕು ಉಪವರ್ಗಗಳಿವೆ. ಇವನ್ನು $gG_1$, $gG_2$, $gG_3$, ಮತ್ತು $gG_4$ ಎಂದು ಕರೆಯಲಾಗಿದೆ. ಆಲ್ಫಾ ಶ್ರೇಣಿಯಲ್ಲಿ $gA_a$ ಮತ್ತು $gA_b$ ಎಂಬ ಎರಡು ಪಂಗಡಗಳಿವೆ.

ಒಂದೇ ಒಂದು ನಿರೋಧ ಅಣುವಿನ ಘಟನೆಯನ್ನು ಪರಿಶೀಲಿಸಿದಲ್ಲಿ ಅದರಲ್ಲಿ ಒಂದೇ ವರ್ಗದ ಎರಡು ಲಘುಶ್ರೇಣಿಗಳೂ ಒಂದೇ ವರ್ಗಕ್ಕೆ ಸೇರಿದ ಎರಡು ಗುರುಶ್ರೇಣಿಗಳೂ ಇರುತ್ತವೆ. ಆದ್ದರಿಂದ ಒಂದು ನಿರೋಧಕ ಅಣು ಸಮರೂಪತೆಯನ್ನು (ಸಿಮೆಟ್ರಿ) ಪ್ರದರ್ಶಿಸುತ್ತದೆ. ಪ್ರಕೃತಿಯಲ್ಲಿ ಇದುವರೆಗೆ ಸಂಕರವರ್ಗದ (ಹೈಬ್ರಿಡ್) ನಿರೋಧಕ ಅಣುವನ್ನು ಬೇರ್ಪಡಿಸಲಾಗಿಲ್ಲ. ನಿರೋಧಕದ ಅಣುವಿಗೆ ಚಿತ್ರದಲ್ಲಿ ಸೂಚಿಸಿರುವ ಘಟನೆ ಇರಬಹುದೆಂಬ ಅಭಿಪ್ರಾಯ ಹಲವಾರು ಪ್ರಯೋಗಗಳ ಆಧಾರದಿಂದ ಮಾಡಿದೆ. ಚಿತ್ರದಲ್ಲಿ ತೋರಿಸಿರುವಂತೆ ನಾಲ್ಕು ಪೆಪ್ಟೈಡ್ ಶ್ರೇಣಿಗಳೂ ಒಂದೇ ಸಮತಲದಲ್ಲಿಲ್ಲ. ಮೊಲದಿಂದ ಪಡೆದ ನಿರೋಧಕಗಳು ಕಡ್ಡಿಯಂತೆ ದುಂಡಗಿರುವ ಕಣಗಳೆಂದು ತೋರಿಸಲಾಗಿದೆ. ಈ ಕಣಗಳ ಉದ್ದ $200A^0$–$250A^0$ ಮತ್ತು ಅಡ್ಡಳತೆ $30A^0$–$40A^0$.

ನಿರೋಧಕ ನಿರೋಧಜನಕಗಳೊಂದಿಗೆ ವಿಶಿಷ್ಟ ರೀತಿಯಲ್ಲಿ ಸೇರುವ ಗುಣ ಅವುಗಳ ಅಮೈನೋ ಆಮ್ಲಗಳ ನಿರ್ದಿಷ್ಟ ಜೋಡಣೆಯಿಂದ ಉಂಟಾಗುತ್ತದೆ. ಅಣುವಿನಲ್ಲಿರುವ ಎಸ್–ಎಸ್ ಬಂಧಗಳನ್ನು ಅಪಕರ್ಷಿಸಿ ಛೇದಿಸಿದರೆ ಸೇರುವ ಸಾಮರ್ಥ್ಯ ನಷ್ಟವಾಗುವುದು. ಅಪಕರ್ಷಿತ ಅಣುವನ್ನು ಮತ್ತೆ ಉತ್ಕರ್ಷಿಸಿದರೆ ಈ ಗುಣ ಮತ್ತೆ ಉಂಟಾಗುವುದು. ಅಣುವಿನಲ್ಲಿ 2%–3% ಶರ್ಕರಾಂಶವಿದೆ. ಈ ಅಂಶ ಎಫ್‌ಸಿ ಭಾಗದಲ್ಲಿದೆ ಮತ್ತು ನಿರೋಧಕಗಳು ನಿರೋಧಜನಕಗಳೊಂದಿಗೆ ಸೇರ್ಪಡೆಯಾಗುವ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ.

ಲಘು ಶ್ರೇಣಿಯ ರಚನೆ: ಮಾನವನ ಮತ್ತು ಮೂಗಿಲಿಯ ಇಮ್ಯೂನೋಗ್ಲಾಬ್ಯುಲಿನ್ನುಗಳು ಬಹುಶಃ ಇತರ ವರ್ಗದ ಪ್ರಾಣಿಗಳ ಇಮ್ಯುನೋಗ್ಲಾಬ್ಯುಲಿನ್ನುಗಳ–ಲಘುಶ್ರೇಣಿಗಳು ಕಪ್ಪ ಮತ್ತು ಲ್ಯಾಮ್ಡಾ ಎಂಬ ವರ್ಗಗಳಿಗೆ ಸೇರಿವೆ ಎಂದು ಮೇಲೆ ಹೇಳಿದೆ. ಇವೆರಡು ಶ್ರೇಣಿಗಳನ್ನು ಅನೇಕ ವಿಧಾನಗಳಿಂದ ಬೇರ್ಪಡಿಸಬಹುದು. ಬೇರ್ಪಡಿಸಿ ಶುದ್ಧ ಮಾಡಲ್ಪಟ್ಟ ಲಘುಶ್ರೇಣಿಗಳನ್ನು ವಿದ್ಯುತ್‌ಕ್ಷೇತ್ರಚಲನ (ಎಲೆಕ್ಟ್ರೊಫಾರಿಸಿಸ್) ವಿಧಾನದಿಂದ ಪರೀಕ್ಷಿಸಿದರೆ ಶುದ್ಧವಾದ

ಲಘುಶ್ರೇಣಿ ಸಹ ಒಂದೇ ತರಹದ ಪೆಪ್ಟೈಡ್ ಶ್ರೇಣಿಗಳನ್ನೊಳಗೊಂಡಿರದೆ ನಾನಾ ಪೆಪ್ಟೈಡುಗಳ ಮಿಶ್ರಣವೆಂದು ತಿಳಿಯುತ್ತದೆ. ಆದರೆ ಮಾನವನ ಮಯೋಲೋಮಾ ಪ್ರೊಟೀನುಗಳು ಕೇವಲ ಒಂದು ಅಥವಾ ಎರಡು ತರಹೆಯ ಪ್ರೊಟೀನುಗಳ ಮಿಶ್ರಣ. ಮೂಗಿಲಿಯ ಮಯೋಲೋಮಾ ಪ್ರೊಟೀನುಗಳಲ್ಲಿರುವ ಲಘುಶ್ರೇಣಿಗಳು ಕಪ್ಪ ಮಾದರಿಯವು. ಸ್ಟಾರ್ಚ್ ಜೆಲ್ಲಿನಲ್ಲಿ ವಿದ್ಯುತ್‌ಕ್ಷೇತ್ರ ಒಳಪಡಿಸಿದಾಗ ಈ ಪ್ರೊಟೀನುಗಳು ಎರಡು ಅಥವಾ ಮೂರು ಪ್ರದೇಶಗಳಲ್ಲಿ ಕಾಣಬರುತ್ತವೆ. ಈ ವ್ಯತ್ಯಾಸ ಅವುಗಳಲ್ಲಿ ಇರುವ ನ್ಯೂರಮಿನಿಕ್ ಆಮ್ಲದ ಸಂಖ್ಯೆಯಲ್ಲಿರುವ ವ್ಯತ್ಯಾಸದಿಂದುಂಟಾಗಿದೆ. ನ್ಯೂರಮಿನಿಕ್ ಆಮ್ಲವನ್ನು ಪ್ರೊಟೀನುಗಳಿಂದ ತೆಗೆದರೆ ಎಲ್ಲ ಮಯೋಲೋಮಾ ಪ್ರೊಟೀನುಗಳೂ ಒಂದೇ ಪ್ರದೇಶದಲ್ಲಿ ಕಾಣಬರುತ್ತವೆ. ಮಯೋಲೋಮಾ ಪ್ರೊಟೀನುಗಳ ಲಘುಶ್ರೇಣಿಗಳು ಒಂದೇ ಮಾದರಿಯ ಪ್ರೋಟೀನುಗಳು ಎಂಬ ಶೋಧನೆಯಿಂದ ಇಮ್ಯೂನೋಗ್ಲಾಬ್ಯುಲಿನ್ನುಗಳ ಲಘುಶ್ರೇಣಿಯ ರಚನೆಯನ್ನು ಕಂಡುಹಿಡಿಯಲು ಸಾಧ್ಯವಾಯಿತು. ಮಯೋಲೋಮಾ ಎನ್ನುವುದು ಮನುಷ್ಯನ ಎಲುಬಿನ ನೆಣದ (ಬೋನ್ ಮ್ಯಾರೋ) ದುಗ್ಧಗ್ರಂಥಿಗಳಿಗೆ ಉಂಟಾಗುವ ಅರ್ಬುದರೋಗ (ಟ್ಯೂಮರ್). ಈ ಕಾಯಿಲೆಯಿಂದ ನರಳುವ ರೋಗಿಯ ಮೂತ್ರದಲ್ಲಿ ಬೆನ್ಸ್‌ಜೋನ್ಸ್ ಎಂಬ ಪ್ರೊಟೀನುಗಳು ವಿಸರ್ಜಿಸಲ್ಪಡುತ್ತವೆ. ಮೂತ್ರವನ್ನು $45^0$–$55^0$ ಸೆ ನಲ್ಲಿ ಕಾಯಿಸಿದರೆ ಇವು ಒತ್ತರಿಸುತ್ತವೆ. ಬೆನ್ಸ್–ಜೋನ್ಸ್ ಪ್ರೊಟೀನುಗಳ ಗುಣಗಳು ಮನುಷ್ಯನ ಇಮ್ಯೂನೋಗ್ಲಾಬ್ಯುಲಿನ್ನುಗಳ ಗುಣಗಳನ್ನು ಬಲುಮಟ್ಟಿಗೆ ಹೋಲುತ್ತವೆ. ಮನುಷ್ಯನ ನಿರೋಧಕದ ಫ್ಯಾಬ್ ಅಂಶಕ್ಕೆ ವಿರುದ್ಧವಾಗಿ ಉತ್ಪತ್ತಿಯಾದ ನಿರೋಧಕಗಳಿಂದ ಒತ್ತರಿಸಲ್ಪಡುತ್ತವೆ. ಬೇರೆ ಬೇರೆ ವ್ಯಕ್ತಿಗಳಿಂದ ವಿಸರ್ಜಿಸಲ್ಪಟ್ಟ ಬೆನ್ಸ್–ಜೋನ್ಸ್ ಪ್ರೊಟೀನುಗಳು ವಿದ್ಯುತ್‌ಕ್ಷೇತ್ರ ಚಲನ ವಿಧಾನದಲ್ಲಿ ಭಿನ್ನವೇಗಗಳಿಂದ ಚಲಿಸುತ್ತವೆ ಮತ್ತು ಅವುಗಳ ಅಮೈನೋ ಆಮ್ಲಗಳ ಘಟನೆಯಲ್ಲಿ ವ್ಯತ್ಯಾಸಗಳು ಕಂಡುಬಂದಿವೆ. ಪ್ರತಿಯೊಬ್ಬ ವ್ಯಕ್ತಿಯ ಬೆನ್ಸ್–ಜೋನ್ಸ್ ಪ್ರೊಟೀನುಗಳ ಶ್ರೇಣಿಯಲ್ಲಿ ಕಾರ್ಬಾಕ್ಸಿ ಅಂತ್ಯದ (ಆಮ್ಲಾಂಶ ಅಂತ್ಯ) 107 ಅಮೈನೋ ಆಮ್ಲಗಳ ರಚನಾಕ್ರಮ ಒಂದೇ ಆಗಿದ್ದು ಮನುಷ್ಯನ ಲಘುಶ್ರೇಣಿಯ ಕಪ್ಪ ಅಥವಾ ಲ್ಯಾಮ್ಡ ಶ್ರೇಣಿಗಳ ಕಾರ್ಬಾಕ್ಸಿ ಅಂತ್ಯದ 107 ಅಮೈನೋ ಆಮ್ಲಗಳ ರಚನೆಯನ್ನು ಕರಾರುವಾಕ್ಕಾಗಿ ಹೋಲುತ್ತವೆ. ಆದರೆ ಅಮೈನೋ ಅಂತ್ಯದ (ಟರ್ಮಿನಲ್) 105 ಅಮೈನೋ ಆಮ್ಲಗಳ ರಚನೆಯಲ್ಲಿ ಒಬ್ಬ ವ್ಯಕ್ತಿಯ ಪ್ರೊಟೀನ್ ಇನ್ನೊಬ್ಬ ವ್ಯಕ್ತಿಯ ಪ್ರೊಟೀನುಗಳನ್ನು ಹೋಲುವುದಿಲ್ಲ ಎಂದು ತಿಳಿದು ಬಂದಿತು. ಈ ಭಾಗಗಳಲ್ಲಿ ಸ್ಥಿರ (ಇನ್‌ವೇರಿಯಂಟ್) ಮತ್ತು ಅಸ್ಥಿರ (ವೇರಿಯಂಟ್) ಭಾಗಗಳೆಂದು ಹೆಸರಿಡಲಾಗಿದೆ. ಪ್ರತಿಯೊಬ್ಬ ರೋಗಿ ಅಮೈನೋ ಅಂತ್ಯದಲ್ಲಿ ನಿರ್ದಿಷ್ಟ ರೀತಿಯಲ್ಲಿ ಅಮೈನೋ ಆಮ್ಲಗಳ ಅನುಕ್ರಮರಚನೆಯುಳ್ಳ ಪ್ರೊಟೀನುಗಳನ್ನು ವಿಸರ್ಜಿಸುತ್ತಾನೆ. ಅಸ್ಥಿರಭಾಗದಲ್ಲಿರುವ 105 ಅಮೈನೋ ಆಮ್ಲಗಳಲ್ಲಿ ಕನಿಷ್ಠಪಕ್ಷ 30 ಆಮ್ಲಗಳಲ್ಲಿ ಅನುಕ್ರಮವಾಗಿ ಸ್ಥಳಪಲ್ಲಟಣೆ ಕಂಡುಬಂದಿದೆ. ಅಮೈನೋ ಆಮ್ಲಗಳ ಸ್ಥಾನಗಳು ಜೀನುಗಳಲ್ಲಿರುವ ಪ್ರತ್ಯಾಮ್ಲಗಳ ತ್ರಿವಳಿ ಶ್ರೇಣಿಗಳಿಂದ ನಿರ್ಧರಿಸಲ್ಪಡುತ್ತದೆ (ಬೇಸ್ ಟ್ರಿಪ್ಲೆಟ್). ಅಸ್ಥಿರ ಭಾಗದಲ್ಲಿ ಉಂಟಾಗುವ ಅನುಕ್ರಮ ವ್ಯತ್ಯಾಸಕ್ಕೆ ಸಂಕೇತ ತ್ರಿವಳಿಯಲ್ಲಿರುವ (ಕೋಡಿಂಗ್ ಟ್ರಿಪ್ಲೆಟ್) ಒಂದೇ ಒಂದು ಪ್ರತ್ಯಾಮ್ಲದಲ್ಲಿ ಉಂಟಾಗುವ ವ್ಯತ್ಯಾಸ ಬಲುಮಟ್ಟಿಗೆ ಕಾರಣ.

ಕುದುರೆ ಮತ್ತು ಮೊಲಗಳಲ್ಲಿ ಮಯೋಲೋಮಾ ಕಾಯಿಲೆ ಉಂಟಾಗುವುದಿಲ್ಲ. ಆದರೆ ಮೂಗಿಲಿಯಲ್ಲಿ (ಮೌಸ್) ಈ ಕಾಯಿಲೆಯನ್ನು ಉಂಟುಮಾಡಬಹುದು. ಒಂದು ಇಲಿಯಿಂದ ಮತ್ತೊಂದು ಇಲಿಗೆ ವರ್ಗಾಯಿಸಲೂಬಹುದು. ಮೂಗಿಲಿಗಳು ಮನುಷ್ಯರಂತೆ ಗಾಮಾಗ್ಲಾಬ್ಯುಲಿನ್ನುಗಳನ್ನು ಬೆನ್ಸ್–ಜಾನ್ಸ್ ತರಹೆಯ ಪ್ರೊಟೀನುಗಳನ್ನು ಉತ್ಪತ್ತಿಮಾಡುತ್ತವೆ. ಮೂಗಿಲಿಯ ಕಪ್ಪ ಲಘುಶ್ರೇಣಿಗಳ ಸ್ಥಿರಭಾಗದ ಅಮೈನೋ ಆಮ್ಲಗಳ ಅನುಕ್ರಮ ಮನುಷ್ಯನ ಕಪ್ಪ ಶ್ರೇಣಿಯ ಸ್ಥಿರಭಾಗದ ಅನುಕ್ರಮವನ್ನು ಬಲುಮಟ್ಟಿಗೆ ಹೋಲುತ್ತದೆ. ಎರಡರಲ್ಲೂ 107 ಅಮೈನೋ ಆಮ್ಲಗಳಿವೆ. ಅವುಗಳ ಪೈಕಿ 62 ಅಮೈನೋ ಆಮ್ಲಾಂಶಗಳು ಎರಡು ಶ್ರೇಣಿಗಳಲ್ಲಿ ತದ್ವತ್ತಾಗಿರುತ್ತವೆ (ಐಡೆಂಟಿಕಲ್). ವ್ಯತ್ಯಸ್ತವಾಗಿರುವ 45 ಅಮೈನೋ ಅಂಶಗಳ ಪೈಕಿ 31 ಅಂಶಗಳನ್ನು ತ್ರಿವಳಿಸಂಕೇತದಲ್ಲಿ ಒಂದು ಪ್ರತ್ಯಾಮ್ಲದ ವ್ಯತ್ಯಾಸದಿಂದಲೂ 14 ಅಂಶಗಳನ್ನು ಎರಡು ಪ್ರತ್ಯಾಮ್ಲಗಳ ವ್ಯತ್ಯಾಸದಿಂದಲೂ ಪರಸ್ಪರ ಬದಲಾಯಿಸಬಹುದು. ಅಂದರೆ ಇಲಿ ಮತ್ತು ಮನುಷ್ಯನಲ್ಲಿ ಸಾಮಾನ್ಯವಾದ ಭಾಗದ ಅಮೈನೋ ಆಮ್ಲಗಳಲ್ಲಿ ಉಂಟಾಗಿರುವ ಭೇದ 59 ಪ್ರತ್ಯಾಮ್ಲ ವತ್ಯಾಸಗಳಿಂದಾಗಿವೆ. ಈ ಸಂಶೋಧನೆಯಿಂದ ಎಲ್ಲ ಲಘುಶ್ರೇಣಿಗಳು (ಅಂದರೆ ಎಲ್ಲ ಪ್ರಾಣಿಗಳಲ್ಲಿ ಉತ್ಪತ್ತಿಯಾಗುವ ಎಲ್ಲ ಲಘುಶ್ರೇಣಿಗಳು) ಒಂದೇ ಪುರಾತನ ಲಘುಶ್ರೇಣಿಯಿಂದ ಉಂಟಾಗಿರುವುವು ಎಂದೂ ಕೋಟ್ಯಂತರ ವರ್ಷಗಳ ಅವಧಿಯಲ್ಲಿ ಉಂಟಾದ ವಿಕಾಸದ ಅಂಗವಾಗಿ ಆಗಾಗ್ಗೆ ಜೀನ್‌ನಲ್ಲಿ ಉಂಟಾದ ಮಾರ್ಪಾಟುಗಳಿಂದ ಅಲ್ಲಲ್ಲಿ ಅಮೈನೋ ಆಮ್ಲಗಳು ಬದಲಾವಣೆ ಹೊಂದಿದುವು, ಬದಲಾವಣೆ ಹೊಂದಿದ ಲಘುಶ್ರೇಣಿಗಳಲ್ಲಿ ಹಲವನ್ನು ಪ್ರಕೃತಿ ಬಾಳಲು ಯೋಗ್ಯವೆಂದು ಆರಿಸಿತೆಂದೂ ಊಹಿಸಲಾಗಿದೆ.

ಮನುಷ್ಯನ ಲಘುಶ್ರೇಣಿಯಲ್ಲಿ ಎರಡು ಸಿಸ್ಟೈನ್ ಅಂಶಗಳಿವೆ. ಈ ಅಂಶಗಳು ಸರಪಣಿಯಲ್ಲಿರುವ ಡೈಸಲ್ಫೈಡ್ ಬಂಧಕ್ಕೆ ಕಾರಣವಾಗಿವೆ. ಇವಲ್ಲದೆ ಒಂದು ಸಿಸ್ಟೈನ್ ಅಂಶವೂ ಇದೆ. ಈ ಅಂಶ ಆಮ್ಲಾಂತ್ಯಭಾಗದಲ್ಲಿದೆ ಮತ್ತು ಪೂರ್ಣ ಗಾಮಾಗ್ಲಾಬ್ಯುಲಿನ್ನಿನಲ್ಲಿ ಗುರುಶ್ರೇಣಿ ಮತ್ತು ಲಘುಶ್ರೇಣಿಗಳ ನಡುವೆ ಡೈಸಲ್ಫೈಡ್ ಬಂಧವನ್ನು ಏರ್ಪಡಿಸುತ್ತದೆ.

ಇತ್ತೀಚೆಗೆ ಮನುಷ್ಯನ ಮೂರು ಲ್ಯಾಮ್ಡ ಶ್ರೇಣಿಯ ಅಮೈನೋ ಆಮ್ಲಗಳ ಕ್ರಮಾನುಗತಿಯನ್ನು ಕಂಡುಹಿಡಿಯಲಾಗಿದೆ. ಈ ಮೂರು ಶ್ರೇಣಿಗಳ ಉದ್ದ ಒಂದೇ ಸಮನಾಗಿಲ್ಲ. ಅಂತ್ಯಭಾಗದ 105 ಅಮೈನೋ ಆಮ್ಲಗಳ ಕ್ರಮಾನುಗತಿ (ಸೀಕ್ವೆನ್ಸ್) ಒಂದೆ ಆಗಿದೆ. ಮನುಷ್ಯನ ಕಪ್ಪ ಲಘುಶ್ರೇಣಿಯಲ್ಲಿ ಸ್ಥಿರವಾದ ಭಾಗವನ್ನು ಲ್ಯಾಮ್ಡಾ ಲಘುಶ್ರೇಣಿಯ ಸ್ಥಿರಭಾಗಕ್ಕೆ ಹೋಲಿಸಿದಾಗ ಕಪ್ಪ ಶ್ರೇಣಿಯಲ್ಲಿ ವ್ಯತ್ಯಾಸ ಹೊಂದದ ಭಾಗಗಳು ಲ್ಯಾಮ್ಡ ಶ್ರೇಣಿಯಲ್ಲಿಯೂ ವ್ಯತ್ಯಾಸ ಹೊಂದಿರುವುದಿಲ್ಲವೆಂದೂ ಕಪ್ಪದಲ್ಲಿ ವ್ಯತ್ಯಸ್ತವಾಗುವ ಭಾಗ ಲ್ಯಾಮ್ಡ ಶ್ರೇಣಿಯಲ್ಲಿಯೂ ವ್ಯತ್ಯಾಸ ಹೊಂದುವುದೆಂದೂ ತಿಳಿದುಬಂದಿತು.

ಇಮ್ಯೂನೋಗ್ಲಾಬ್ಯುಲಿನ್ ($I_9G$) ಗುರುಶ್ರೇಣಿಯನ್ನು ಸಹ ವಿಶ್ಲೇಷಿಸಲಾಗಿದೆ. ಶ್ರೇಣಿಗಳಲ್ಲಿ 440 ಅಮೈನೋ ಆಮ್ಲಗಳಿವೆ. ವಿವಿಧ ಜಾತಿಯ ಪ್ರಾಣಿಗಳಿಂದ ದೊರೆತ ಗುರುಶ್ರೇಣಿಗಳ ರಚನೆಯನ್ನು ಹೋಲಿಸಿದಾಗ ಈ ಶ್ರೇಣಿಗಳಲ್ಲಿಯೂ ಅಮೈನೋ ಆಮ್ಲಗಳ ಅನುಕ್ರಮತೆ ಒಂದು ಭಾಗದಲ್ಲಿ ಮಾತ್ರ ವ್ಯತ್ಯಾಸವನ್ನು ತೋರುತ್ತದೆ. ಈ ಭಾಗ ಅಮೈನೋ ಅಂತ್ಯದಲ್ಲಿದ್ದು ಸುಮಾರು 115 ಅಮೈನೋ ಆಮ್ಲಗಳನ್ನೊಳಗೊಂಡಿದೆ. ಮಿಕ್ಕ ಭಾಗದ ಅಮೈನೋ ಆಮ್ಲಗಳ ಅನುಕ್ರಮತೆಯಲ್ಲಿ ವತ್ಯಾಸವಿರುವುದಿಲ್ಲ. ವ್ಯತ್ಯಾಸವಾಗದ ಭಾಗದ ಅಮೈನೋ ಆಮ್ಲಗಳ ಭಾಗಗಳನ್ನಾಗಿ ಮರುವಿಂಗಡಣೆ ಮಾಡಬಹುದೆಂದೂ ಈ ಮೂರು ಭಾಗಗಳೂ ಒಂದನ್ನೊಂದು ಹೋಲುವುದೆಂದೂ ತಿಳಿದುಬರುತ್ತದೆ. ಈ ಗುಣಕ್ಕೆ ಅಂತರಾತ್ಮೀಯತೆ (ಇಂಟರ್ನಲ್ ಹೊಮಾಲಜಿ) ಎನ್ನಬಹುದು. ಒಂದೊಂದು ಭಾಗವೂ ಲಘುಶ್ರೇಣಿಯ ವ್ಯತ್ಯಾಸ ಹೊಂದದ ಭಾಗವನ್ನು ಕರಾರುವಾಕ್ಕಾಗಿ ಹೋಲುತ್ತದೆ.

ಲಘುಶ್ರೇಣಿಯ ಸ್ಥಿರಭಾಗಗಳಿಗೂ ಗುರುಶ್ರೇಣಿಯ ಸ್ಥಿರಭಾಗಗಳಿಗೂ ಹೋಲಿಕೆಯಿರುವುದರಿಂದ ಲಘು ಮತ್ತು ಗುರುಶ್ರೇಣಿಗಳು ಪುರಾತನ ಕಾಲದಲ್ಲಿ ಒಂದೇ ಜೀನ್‌ನಿಂದ ಉಂಟಾಗಿರಬಹುದೆಂಬ ಸಲಹೆ ಬಂದಿದೆ. ಈ ಸಲಹೆಯ ಪ್ರಕಾರ ಆದಿಯಲ್ಲಿದ್ದ ಜೀನ್ (ಪ್ರೈಮಾರ್ಡಿಯಲ್ ಜೀನ್) ದ್ವಿಗುಣವಾಗಿ ಅನುರೂಪವಾದ ಎರಡು ಭಾಗವುಳ್ಳ ಜೀನ್‌ಆಗಿ ಪರಿವರ್ತಿತವಾಗಿ, ಲಘು ಮತ್ತು ಗುರುಶ್ರೇಣಿಗಳ ಉತ್ಪಾದನೆಗೆ ಕಾರಣವಾಯಿತು. ಕಾಲಕ್ರಮೇಣ ಜೀನಿನ ಒಂದು ಭಾಗದಲ್ಲಿ ಮಾತ್ರ ಪ್ರತ್ಯಾಮ್ಲಗಳ ಬದಲಾವಣೆಯಾಗಿ (ಮ್ಯುಟೇಶನ್) ಶ್ರೇಣಿಗಳ ಅಮೈನೋ ಆಮ್ಲಗಳ ಅನುಕ್ರಮವನ್ನು ವ್ಯತ್ಯಾಸಹೊಂದುವ ಭಾಗದಲ್ಲಿ ಮಾತ್ರ ಮಾರ್ಪಡಿಸಿತು.

ನಿರೋಧಕಗಳ ಅಂದರೆ ಇಮ್ಯುನೋಗ್ಲಾಬ್ಯುಲಿನ್ನುಗಳ ಮೂರು ಆಯಾಮಗಳ (ತ್ರೀ ಡೈಮೆನ್ಷನಲ್) ಆಕೃತಿಯ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲ. ನಿರೋಧಕ ಮತ್ತು ನಿರೋಧಜನಕಗಳು ಸೇರ್ಪಡೆಯಾಗುವ ಸ್ಥಳ ಮತ್ತು ಅದರ ಪ್ರಕೃತಿಯನ್ನು ಕರಾರುವಾಕ್ಕಾಗಿ ತಿಳಿಯಬೇಕಾದರೆ ನಿರೋಧಕದ ಮೂರು ಆಯಾಮಗಳ ಆಕೃತಿಯ ಬಗ್ಗೆ ಪೂರ್ಣವಾದ ಜ್ಞಾನಸಂಪಾದನೆಯಾಗಬೇಕು. ಆದರೂ ಈಗ ತಿಳಿದುಬಂದಿರುವ ವಿಷಯಗಳ ಪ್ರಕಾರ – 1. ನಿರೋಧಜನಕ ಸೇರುವ ಎರಡು ಸ್ಥಳಗಳೂ ನಿರೋಧಕಗಳ ತುದಿಯಲ್ಲಿವೆ; 2. ವಿವಿಧ ನಿರೋಧಜನಕಗಳು ಸೇರುವ ಸ್ಥಳಗಳು ನಿರೋಧಕದ ಮೂರು ಆಯಾಮಗಳ ಆಕೃತಿಯಲ್ಲಿ ಒದು ನಿರ್ದಿಷ್ಟಸ್ಥಾನಗಳಲ್ಲಿವೆ; 3. ಈ ಸ್ಥಳದ ಗಾತ್ರ ಸುಮಾರು $25A^0 \times 10A^0 \times 5A^0$.

ನಿರೋಧಕ ನಿರೋಧ ಜನಕದೊಂದಿಗೆ ಸೇರುವ ಗುಣವನ್ನು ಪಡೆಯಲು ಲಘು ಮತ್ತು ಗುರುಶ್ರೇಣಿಗಳು ಅವಶ್ಯಕ. ಬೇರ್ಪಡಿಸಲ್ಪಟ್ಟ ಲಘುಶ್ರೇಣಿಗಳು ನಿರೋಧಜನಕದೊಂದಿಗೆ ಸೇರಲಾರವು. ಗುರುಶ್ರೇಣಿಗಳನ್ನು ಎಚ್ಚರಿಕೆಯಿಂದ ಬೇರ್ಪಡಿಸಿ, ಅವುನಿರೋಧಜನಕಗಳೊಂದಿಗೆ ಸೇರುವ ಗುಣವನ್ನು ಕೊಂಚಮಟ್ಟಿಗೆ

ಉಳಿಸಿಕೊಂಡಿರುತ್ತವೆಂದು ತೋರಿಸಲಾಗಿದೆ. ಬೇರ್ಪಡಿಸಲ್ಪಟ್ಟ ಲಘು ಮತ್ತು ಗುರುಶ್ರೇಣಿಗಳನ್ನು ಮತ್ತೆ ಕೂಡಿಸಿ ನಿರೋಧಜನಕದೊಂದಿಗೆ ಸೇರಬಲ್ಲ ಇಮ್ಯೂನೊಗ್ಲಾಬ್ಯುಲಿನ್ನನ್ನು ಪಡೆಯಬಹುದು.

ನಿರೋಧಜನಕಗಳು ಮತ್ತು ನಿರೋಧಕಗಳು ವಿಶಿಷ್ಟರೀತಿಯಲ್ಲಿ ಸೇರ್ಪಡೆಯಾಗುತ್ತವೆ. ನಿರೋಧಜನಕಗಳ ಆಕಾರ ಮತ್ತು ನಿರೋಧಕಗಳ ಆಕಾರ ಅನುರೂಪವಾಗಿರುವುದರಿಂದ ಈ ವೈಶಿಷ್ಟ್ಯ ಉಂಟಾಗುತ್ತದೆ. ಸೇರ್ಪಡೆಯ ಕ್ರಿಯೆಯಲ್ಲಿ ಅನೇಕ ತರಹೆಯ ಆಕರ್ಷಣಶಕ್ತಿಗಳು ಪಾಲ್ಗೊಳ್ಳುತ್ತವೆ. ಇವುಗಳಲ್ಲಿ ಹೈಡ್ರೊಜನ್ ಬಂಧ, ಕೂಲಾಂಬ್ ಆಕರ್ಷಣ ಬಲಗಳು ಮುಖ್ಯವಾದುವುಗಳು. ಎಲ್ಲಕ್ಕಿಂತ ಹೆಚ್ಚಾಗಿ ನಿರೋಧಜನಕದ ಆಕಾರ ಅಥವಾ ಹಿಡಿಕೆಯ ಆಕಾರ ನಿರೋಧಕಗಳಲ್ಲಿರುವ ಸೇರ್ಪಡೆ ಸ್ಥಳದ ಆಕಾರಕ್ಕೆ ಅನುರೂಪವಾಗಿರಬೇಕು. ಇದರಿಂದಲೇ ವಿಶಿಷ್ಟತೆ ಉಂಟಾಗುತ್ತದೆ.

ಜೈವಿಕ ವ್ಯವಸ್ಥೆಯಲ್ಲಿ ನಿರೋಧಕಗಳ ಉತ್ಪತ್ತಿ : ನಿರೋಧಕಗಳು ಅನೇಕ ಅಂಗಾಂಶಗಳಲ್ಲಿ ಉತ್ಪತ್ತಿಯಾಗುತ್ತವೆ. ನಿರೋಧಜನಕ ದೇಹವನ್ನು ಪ್ರವೇಶಿಸುವ ಮಾರ್ಗವನ್ನವಲಂಬಿಸಿ ನಿರೋಧಕಗಳು ಯಾವುದೊಂದು ಅಂಗಾಂಶದಲ್ಲಿ ರಚಿತವಾಗುತ್ತವೆ. ನಿರೋಧಜನಕವನ್ನು ಚರ್ಮಕ್ಕೆ ಅಥವಾ ಮಾಂಸಖಂಡಕ್ಕೆ ಚುಚ್ಚಿದರೆ ನಿರೋಧಜನಕವು ಪ್ರಾದೇಶಿಕ ದುಗ್ಧಗ್ರಂಥಿಗಳಲ್ಲಿ (ರೀಜನಲ್‌ಲಿಂಫ್ ನೋಡ್ಸ್) ಶೇಖರವಾಗುವುದರಿಂದ ನಿರೋಧಕಗಳೂ ಅಲ್ಲಿಯೇ ಉತ್ಪತ್ತಿಯಾಗುತ್ತವೆ. ಅಭಿಧಮನಿಗಳ ಮೂಲಕ ಪ್ರವೇಶಿಸುವ ನಿರೋಧಜನಕಗಳು, ಗುಲ್ಮ, ಪಿತ್ತಜನಕಾಂಗ, ಮೂಳೆಯ ನೆಣ ಮತ್ತು ಶ್ವಾಸಕೋಶಗಳಲ್ಲಿ ಶೇಖರವಾಗುತ್ತವೆ. ಈ ಸಂದರ್ಭಗಳಲ್ಲಿ ನಿರೋಧಕ ಉತ್ಪತ್ತಿ ಗುಲ್ಮದಲ್ಲಿ ಮೊದಲು ಪ್ರಾರಂಭವಾಗಿ ಅನಂತರ ಇತರ ಅಂಗಾಂಶಗಳಲ್ಲಿಯೂ ಆಗುತ್ತದೆ. ರೆಟಿಕ್ಯೂಲೋ ಎಂಡೋಥಿಲಿಯಲ್ ಕೋಶಗಳನ್ನು ಮತ್ತು ದುಗ್ಧಗ್ರಂಥಿಗಳನ್ನೊಳಗೊಂಡ ಅಂಗಾಂಶಗಳಲ್ಲಿ ನಿರೋಧಕ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ದೇಹಕ್ಕೆ ಹೊರತಾದ ಸೂಕ್ಷ್ಮಜೀವಿ ಮತ್ತು ಇತರ ಕಣಗಳನ್ನು ಸೆರೆಹಿಡಿಯಬಲ್ಲ ಕೋಶಗಳಿಗೆ ಕಣಗಳನ್ನು, ಸೆರೆ ಹಿಡಿದು ಪೂರ್ಣವಾಗಿ ತಮ್ಮಲ್ಲಿ ಅಡಗಿಸಬಲ್ಲ ಶಕ್ತಿ ಇದೆ. ಕೋಶಗಳಿಂದ ಸೆರೆಹಿಡಿಯಲ್ಪಟ್ಟ ಕಣಗಳನ್ನು ಅವುಗಳಲ್ಲಿರುವ ಕಿಣ್ವಗಳು ವಿಚ್ಛೇದಿಸುತ್ತವೆ (ಡಿಗ್ರೇಡ್). ಆ ನಿರೋಧಕದ ಉತ್ಪತ್ತಿಗೆ ಕಣಗಳ ವಿಚ್ಛೇದನೆ ಅವಶ್ಯಕ. ನಿರೋಧಕದ ಉತ್ಪತ್ತಿಯಲ್ಲಿ ಎರಡು ತರಹೆಯ ಕೋಶಗಳು ಪಾಲ್ಗೊಳ್ಳುತ್ತವೆ. ಮೊದಲನೆಯ ಗುಂಪಿನ ಕೋಶಗಳು ನಿರೋಧಜನಕವನ್ನು ಆವರಿಸಿ ಕಣಗಳನ್ನು ಅರಗಿಸಿ ತುಂಡರಿಸುತ್ತವೆ. ಈ ಕೋಶಗಳನ್ನು ಮ್ಯಾಕ್ರೊಫೇಜಸ್ ಎಂದು ಕರೆಯಲಾಗಿದೆ. ಎರಡನೆಯ ವರ್ಗದ ಕೋಶಗಳು ಮ್ಯಾಕ್ರೊಫೇಜುಗಳಿಂದ ಬಿಡುಗಡೆಯಾಗುವ ನಿರೋಧಜನಕಗಳ ತುಣುಕುಗಳನ್ನೊಳಗೊಂಡ ವಸ್ತುವಿನಿಂದ ಪ್ರೇರಪಿತವಾಗಿ ನಿರೋಧಕಗಳನ್ನು ಉತ್ಪತ್ತಿಸುತ್ತವೆ. ಇವೆ ಲಿಂಫೊಸೈಟುಗಳು. ನಿರೋಧಜನಕಗಳು ದೇಹಕ್ಕೆ ಪ್ರವೇಶಿಸಿದಾಗ ಈ ಕೋಶಗಳು ಅನಂತಸಂಖ್ಯೆಯಲ್ಲಿ ರಚಿತವಾಗುತ್ತವೆ. ನಿರೋಧಕವನ್ನು ಉತ್ಪತ್ತಿ ಮಾಡುವುದಷ್ಟೇ ಅಲ್ಲದೆ ನಿರೋಧಜನಕಗಳನ್ನು ಗುರುತಿಸಬಲ್ಲ ಜ್ಞಾಪಕಶಕ್ತಿಯನ್ನೂ (ಇಮ್ಯೂನೋ ಕಾಂಪಿಟೆಂಟ್) ಪಡೆದಿರುತ್ತವೆ. ಲಿಂಫೊಸೈಟುಗಳನ್ನು ಪ್ರಚೋದಿಸಬಲ್ಲ ಮ್ಯಾಕ್ರೊಫೇಜಿನಿಂದ ಈ ವಸ್ತುಗಳು ಲಿಂಫೊಸೈಟುಗಳಿಗೆ ವರ್ಗಾವಣೆಯಾಗುವ ವಿಧಾನ ಸರಿಯಾಗಿ ಸಂಬಂಧವೇರ್ಪಡಬಹುದೆಂದು ಊಹಿಸಲಾಗಿದೆ. ಯಾವುದಾದರೂ ಒಂದು ಕೋಶ ವಿವಿಧ ವೈಶಿಷ್ಟ್ಯವಿರುವ ಅನೇಕ ನಿರೋಧಕಗಳನ್ನು ಉತ್ಪತ್ತಿಮಾಡಬಲ್ಲುದೆ ಎಂಬ ಸಮಸ್ಯೆ ಚರ್ಚಾಸ್ಪದವಾಗಿ ಉಳಿದಿದೆ. ಈಗ ಒದಗಿರುವ ಸಾಕ್ಷ್ಯಗಳ ಆಧಾರದ ಮೇಲೆ ಒಂದು ಕೋಶ ಒಂದೇ ತರಹೆಯ ಅಂದರೆ ಒಂದೇ ವೈಶಿಷ್ಟ್ಯದ ನಿರೋಧಕವನ್ನು ಮಾತ್ರ ಉತ್ಪತ್ತಿ ಮಾಡುತ್ತದೆಯೆಂದು ಹೇಳಬಹುದಾಗಿದೆ. ಒಂದೇ ತರಹದ ನಿರೋಧಕಗಳನ್ನು ಉತ್ಪತ್ತಿಮಾಡುವ ಕೋಶಗಳು ಒಂದೇ ವರ್ಗದ ಲಘುಶ್ರೇಣಿಗಳನ್ನು ಒಂದೇ ವರ್ಗದ ಗುರುಶ್ರೇಣಿಗಳನ್ನು ರಚಿಸುತ್ತವೆ.

ಮಿಕ್ಕೆಲ್ಲ ಪ್ರೊಟೀನುಗಳು ಉತ್ಪತ್ತಿಯಾಗುವ ವಿಧಾನವನ್ನನುಸರಿಸಿಯೇ ನಿರೋಧಕಗಳು ಉತ್ಪತ್ತಿಯಾಗುತ್ತವೆ. ಲಘು ಮತ್ತು ಗುರುಶ್ರೇಣಿಗಳ ರಚನೆ ಬಹುಶಃ ಒಂದೇ ಸ್ಥಳದಿಂದ ಪ್ರಾರಂಭವಾಗಬಹುದು. ಆದರೆ ಇವು ಭಿನ್ನಗಾತ್ರದ ಪಾಲಿರೈಬೋಸೋಮುಗಳ ಸಹಾಯದಿಂದ ರಚಿತವಾಗುತ್ತವೆ. ದೂತರೈಬೋನ್ಯೂಕ್ಲಿಯಿಕ್ ಆಮ್ಲಗಳು (ಮೆಸೆಂಜರ್ ಆರ್‌ಎನ್‌ಎ) ಗುರುಶ್ರೇಣಿಗಳನ್ನಾಗಲಿ, ಲಘುಶ್ರೇಣಿಗಳನ್ನಾಗಲಿ ಪೂರ್ಣವಾಗಿ ಒಮ್ಮೆಲೇ ರಚಿಸುವಷ್ಟು ಲಂಬವಾಗಿರುತ್ತವೆ. ಪಾಲಿರೈಬೋಸೋಮುಗಳು ಲಘುಶ್ರೇಣಿಗಳ ಅಥವಾ ಗುರುಶ್ರೇಣಿಗಳ ಪೂರ್ಣರಚನೆಗೆ ಬೇಕಾಗುವ ಗಾತ್ರವನ್ನು ಪಡೆದಿರುತ್ತವೆ. ಕೋಶದಲ್ಲಿ ಲಘುಶ್ರೇಣಿಗಳೂ ಗುರುಶ್ರೇಣಿಗಳೂ ಸಮಪ್ರಮಾಣದಲ್ಲಿ ತಯಾರಾಗಬಹುದು. ಲಘು ಮತ್ತು ಗುರುಶ್ರೇಣಿಗಳ ಜೋಡಣೆಯಾದ ತರುವಾಯ ಶರ್ಕರಾಂಶ ಜೋಡಿಸಲ್ಪಡುತ್ತದೆ. ಮೈಕ್ರೋಸೋಮಿನಲ್ಲಿ ತಯಾರಾಗುವ ಇಮ್ಯೂನೋಗ್ಲಾಬ್ಯುಲಿನ್ನುಗಳು ಕೋಶದ್ರವ್ಯಕ್ಕೆ ಬಿಡುಗಡೆಯಾಗಲು ಶರ್ಕರಾಂಶ ಸೇರಲೇಬೇಕು. ಪೂರ್ಣವಾಗಿ ಜೋಡಿಸಲ್ಪಟ್ಟ ಇಮ್ಯೂನೋಗ್ಲಾಬ್ಯುಲಿನ್ ಅಥವಾ ನಿರೋಧಕಗಳು ಪ್ಲಾಸ್ಮಾ ಕೋಶಗಳಲ್ಲಿ ಶೇಖರವಾಗುತ್ತವೆ. ಪ್ಲಾಸ್ಮಾಕೋಶಗಳು, ವಿಶಿಷ್ಟರೀತಿಯ ದುಗ್ಧಕೋಶಗಳು. ನಿರೋಧಜನಕಗಳು ಪ್ರವೇಶಿಸಿದಾಗ ಈ ಕೋಶಗಳು ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ.

ಇಮ್ಯೂನೋಗ್ಲಾಬ್ಯುಲಿನ್ ರಚನೆಯ ಬಗ್ಗೆ ನಮಗೆ ಈಗ ತಿಳಿದುಬಂದಿರುವ ಜ್ಞಾನದಿಂದ, ನಿರೋಧಕಗಳ ಉತ್ಪತ್ತಿ, ರಚನೆ ಮತ್ತು ಜೀನ್‌ಗಳ ಸಂಬಂಧಗಳ ಬಗ್ಗೆ ಹೊಸದೃಷ್ಟಿಕೋನವನ್ನು ತಳೆಯಲು ಅವಕಾಶವಾಗಿದೆ. ಇಮ್ಯೂನೋರಸಾಯನ ಶಾಸ್ತ್ರಜ್ಞನ ಮುಂದೆ ಹಲವಾರು ಸಮಸ್ಯೆಗಳಿವೆ. ಅವುಗಳಲ್ಲಿ ಮುಖ್ಯವಾದುವುಗಳಿವು: (1) ದೇಹ ಅನೇಕ ನಿರೋಧಜನಕಗಳಿಗೆ ಅನೇಕ ನಿರೋಧಕಗಳನ್ನು ವಿಶಿಷ್ಟ ರೀತಿಯಲ್ಲಿ ತಯಾರಿಸುತ್ತದೆ. ಒಂದು ಬಗೆಯ ಕೋಶ ಒಂದೇ ರೀತಿಯ ನಿರೋಧಕಗಳನ್ನು ಹೇಗೆ ಉತ್ಪತ್ತಿಮಾಡುತ್ತದೆ ? ಈ ಆಯ್ಕೆಗೆ ಆಧಾರವೇನು ? (2) ನಿರೋಧಜನಕ ಪ್ರಥಮಬಾರಿಗೆ ದೇಹವನ್ನು ಹೊಕ್ಕಾಗ ಅದಕ್ಕೆ ವಿರುದ್ಧವಾಗಿ ನಿರೋಧಕಗಳು ಅಲ್ಪಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ. ಕೆಲವು ದಿನಗಳು ಕಳೆದ ತರುವಾಯ ನಿರೋಧಕಗಳ ಉತ್ಪತ್ತಿ ಪ್ರಮಾಣ ತಗ್ಗುತ್ತ ಬಂದು ಕಡೆಗೆ ನಿಂತು ಹೋಗುವುದು. ಉತ್ಪತ್ತಿ ನಿಂತ ಕೆಲವು ತಿಂಗಳಾದ ಮೇಲೆ ಎರಡನೆಯ ಬಾರಿ ನಿರೋಧಜನಕ ದೇಹವನ್ನು ಹೊಕ್ಕರೆ ಅತಿಪ್ರತಿಕ್ರಿಯೆಯುಂಟಾಗಿ ದೇಹ ತಕ್ಷಣವೇ ಮೊದಲನೆಯ ಸಲಕ್ಕಿಂತ ಅತ್ಯಧಿಕ ಪ್ರಮಾಣದಲ್ಲಿ ನಿರೋಧಜನಕಗಳನ್ನು ತಯಾರಿಸುತ್ತದೆ. ಮೊದಲನೆಯ ಸಲ ರಚಿತವಾದ ನಿರೋಧಕಗಳಿಗೂ ಅತಿಪ್ರತಿಕ್ರಿಯೆಯಲ್ಲಿ ಉತ್ಪತ್ತಿಯಾದ ನಿರೋಧಕಗಳಿಗೂ ಕೆಲವು ವ್ಯತ್ಯಾಸಗಳಿವೆ. ಉದಾಹರಣೆಗೆ, ಅತಿಪ್ರತಿಕ್ರಿಯೆಯಲ್ಲಿ ಉತ್ಪತ್ತಿಯಾದ ನಿರೋಧಕಗಳಿಗೂ ಅದರ ನಿರೋಧಜನಕಗಳಿಗೂ ವಾತ್ಸಲ್ಯ ಮೊದಲಸಲಕ್ಕಿಂತ ಹೆಚ್ಚಾಗಿರುತ್ತದೆ. ದೇಹ ಎರಡನೆಯ ಸಲ ನಿರೋಧಜನಕವನ್ನು ಹೇಗೆ ಗುರುತಿಸಿತು ? ಈ ಜ್ಞಾಪಕ ಶಕ್ತಿಗೆ ಆಧಾರವೇನು ? (3) ಒಂದೇ ನಿರೋಧಜನಕದ ವಿರುದ್ಧವಾಗಿ ಉತ್ಪತ್ತಿಯಾಗುವ ನಿರೋಧಕಗಳಲ್ಲಿಯೇ ವೈವಿಧ್ಯ ಕಂಡುಬಂದಿದೆ. ಈ ವೈವಿಧ್ಯ ಲಘು ಮತ್ತು ಗುರುಶ್ರೇಣಿಗಳಲ್ಲಿ ವ್ಯತ್ಯಾಸ ಹೊಂದುವ ಭಾಗದಲ್ಲಿ ಅಮೈನೋ ಆಮ್ಲಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದ ಉಂತಾಗುತ್ತದೆ. ಅಮೈನೋ ಆಮ್ಲಗಳ ವ್ಯತ್ಯಾಸ, ಜೀನ್‌ನಲ್ಲಿ ಉಂಟಾಗುವ ಪ್ರತ್ಯಾಮ್ಲಗಳ (ಬೇಸ್) ಪರಿಣಾಮವಾದ್ದರಿಂದ, ಜೀನ್‌ಗಳಿಗೆ ಮತ್ತು ನಿರೋಧಕಗಳ ಉತ್ಪತ್ತಿಗೆ ಇರುವ ಸಂಬಂಧವೇನು? (ಎಚ್.ಎಸ್.ಎಸ್.)

**ಇಯಾಕ್ರೈನಾಯ್ಡಿಯ:** ಕಂಟಕಚರ್ಮಿ ವಂಶ, ಇಲ್ಯುತೆರೊಜೋವ ಉಪವಂಶಕ್ಕೆ ಸೇರಿದ ಒಂದು ಮುಖ್ಯ ವರ್ಗ. ಇದು ಪ್ರಮುಖವಾಗಿ ಲುಪ್ತಜೀವಿಗಳಿಂದ ಕೂಡಿದ ವಂಶ. ಈ ಗುಂಪಿನ ಪ್ರಾಣಿ ಲಕ್ಷಣಗಳು ಸಿಸ್ಟಾಯಿಡಿಯ ಮತ್ತು ಕ್ರೈನಾಯಿಡಿಯಗಳ ನಡುವಿನ ಲಕ್ಷಣಗಳನ್ನು ತೋರುತ್ತವೆ. ಇದಕ್ಕೆ ಅಧೋ–ಪಾರ್ಶ್ವ ಗುದದ್ವಾರವಿದೆ. ಥೀಕಲ್ ರಂಧ್ರಗಳಿಲ್ಲ. ಈ ಪ್ರಾಣಿಗಳ ದೇಹದ ಕೇಲಿಕ್ಸ್ ರೂಪುಗೊಳ್ಳುವ ಫಲಕ ಪ್ರರೂಪವು ತ್ರಿಆವರ್ತರೂಪದ್ದು ಮತ್ತು ಬಾಹುಗಳಲ್ಲಿ ಫಲಕಗಳು ಇಟ್ಟಾಗ ಕವಲೊಡೆಯುವಿಕೆಯನ್ನು ತೋರುತ್ತವೆ. ಕೆಲವು ತಜ್ಞರು ಈ ವರ್ಗವು ಪೆಲ್ಮೆಟೊಜೋವ ಉಪವಂಶದ ಪುರಾತನ ಜೀವಿಗಳೆಂದು ಅಭಿಪ್ರಾಯ ಪಡುತ್ತಾರೆ. ಮ್ಯಾಕ್ರೊಸಿಸ್ಟೆಲ್ಲ ಉದಾಹರಣೆ.

(ಎಚ್.ಎಚ್.ಎಸ್.)

**ಇರುವೆ:** ಸಂಧಿಪದಿ ವಂಶದ ಹೈಮೆನೋಪ್ಟೆರ ಗಣದ ಸದಸ್ಯ. ಆಂಗ್ಲಭಾಷೆಯಲ್ಲಿ ಆಂಟ್ಸ್ ಎನ್ನುವರು. ಇರುವೆಗಳು ಸಂಘಜೀವಿಗಳು. ಸೀನೋಜೋಯಿಕ್ ಯುಗದ ಆರಂಭದಲ್ಲಿ (65 ದಶಲಕ್ಷ ವರ್ಷಗಳ ಹಿಂದೆ) ವಾಸಿಸುತ್ತಿದ್ದ ಇರುವೆಗಳ ಪೂರ್ವಜರ ಪಳಿಯುಳಿಕೆಗಳು ಈಗ ಲಭ್ಯ. ಈ ವೇಳೆಗಾಗಲೇ ಇವುಗಳ ವಿಕಾಸ ಪೂರ್ಣವಾಗಿತ್ತು. 35,000,000 ವರ್ಷಗಳ ಹಿಂದೆ ಮರದ ಮೇಣ ಅಥವಾ ಅರಗಿನೊಳಗೆ ಸಿಕ್ಕಿಕೊಂಡು ಅಸುನೀಗಿರುವ ಇರುವೆಗಳ ಶರೀರಗಳು ಸ್ವಲ್ಪವೂ ಕೆಡದಂತೆ ಪಳೆಯುಳಿಕೆಗಳಾಗಿ ಉಳಿದಿವೆ. ಅವುಗಳ ದೇಹರಚನೆ ಮತ್ತು ಇಂದಿನ ಇರುವೆಗಳ ದೇಹ ರಚನೆಗಳಲ್ಲಿ ಹೆಚ್ಚಿನ ಬದಲಾವಣೆಗಳಿಲ್ಲ.

ಫಾರ್ಮಿಸಿಡೆ ಕುಟುಂಬದ ಸದಸ್ಯ. ಜಗತ್ತಿನಾದ್ಯಂತ ವಿಶಾಲವಾಗಿ ಹರಡಿಕೊಂಡಿರುವ ಬಹು ಸಂಖ್ಯೆಯ ಇರುವೆಗಳು ಸಂಘಜೀವಿಗಳು. ಸು. 8,000 (ಅಂದಾಜು ಮಾಡಿದ ಸಂಖ್ಯೆ 14,000) ಪ್ರಭೇದಗಳನ್ನು ಗುರುತಿಸಲಾಗಿದೆ. ಇವು ಗಾತ್ರದಲ್ಲಿ 0.5 ಸೆಂಮೀ ಇಂದ 24 ಸೆಂಮೀ ದೊಡ್ಡವು. ಹಳದಿ, ಕಂದು, ಕೆಂಪು ಅಥವಾ ಕಪ್ಪು, ಬಣ್ಣವನ್ನು

ಹೊಂದಿವೆ. ಇರುವೆಗಳ ಜೀವನಚರಿತ್ರೆ, ಆಹಾರ, ಗೂಡುಕಟ್ಟುವ ವಿಧಾನ, ಸ್ಥಳದ ಆಯ್ಕೆ ಹಾಗೂ ಸಂಘಜೀವನದ ರಚನೆ ವೈವಿಧ್ಯಮಯ.

ಬಾಲ್ಟಿಕ್ ಅರಗಿನಲ್ಲಿ ಸು. 25 ರಿಂದ 40 ದಶಲಕ್ಷ ವರ್ಷಗಳ ಹಿಂದಿನ ಓಲಿಗೊಸೀನ್ ಕಾಲದ ಇರುವೆಗಳ ಪಳೆಯುಳಿಕೆಗಳು ಸಾಕಷ್ಟು ದೊರೆತಿವೆ. ಇತ್ತೀಚೆಗೆ ದೊರೆತ 100 ದಶಲಕ್ಷದಷ್ಟು ಹಳೆಯದಾದ ಸ್ಥಿಕೊಮಿರ್ಮಾಫ್ರೆಯಿ ಎಂಬ ವಿನಾಶ ಹೊಂದಿದ ಪ್ರಭೇದದ ಪಳೆಯುಳಿಕೆಗಳು ಇರುವೆಗಳನ್ನು ಸಂಘ ಜೀವಿಗಳಲ್ಲದ ಟೈಫೀಡೆ ಬಳಗದ ಕಣಜದೊಡನೆ ಸಂಬಂಧಿಸುವ ಮಟ್ಟಿಗೆ ಸಹಕಾರಿಯಾಗಿವೆ. ಆದರೂ ಇರುವೆಯ ದೇಹರಚನಾ ವೈಶಿಷ್ಟ್ಯಗಳು ಮೂಲ ಇರುವೆಗಳಂತಿದ್ದ ಟೈಫೀಡೆ ಗುಂಪಿನ ಪೂರ್ವಜರಿಂದ ಉಗಮಗೊಂಡು ವಿಕಾಸ ಹೊಂದಿರುವಂತೆ ತೋರುತ್ತದೆ. ಇರುವೆಗಳನ್ನು ವರ್ಗೀಕರಣಕ್ಕನುಗುಣವಾಗಿ ಮಿರ್ಮಿಕಾಯ್ಡ ಮತ್ತು ಪೊನೆರಾಯ್ಡ ಸಂಕೀರ್ಣ (ಕಾಂಪ್ಲೇಕ್ಸ್) ಗಳನ್ನಾಗಿ ವಿಂಗಡಿಸಿ, ಒಟ್ಟು 11 ಉಪಬಳಗಗಳನ್ನಾಗಿ ಸು. 250 ಜಾತಿಗಳನ್ನಾಗಿ ವಿಭಜಿಸಲಾಗಿದೆ.

ಉಷ್ಣವಲಯ, ಸಮಶೀತೋಷ್ಣವಲಯಗಳಲ್ಲಿ ಮತ್ತು ಕೆಲವು ಪ್ರಭೇದದ ಇರುವೆಗಳು ಶೀತವಲಯದಲ್ಲೂ ವಾಸಿಸುತ್ತವೆ. ಇವುಗಳ ನಿವಾಸ ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿದೆ. ಕಾರಣ, ಸಂತಾನೋತ್ಪತ್ತಿಯ ಕ್ರಮ ಹಾಗೂ ಮರಿಗಳನ್ನು ಬೆಳೆಸುವ ವಿಧಾನದಲ್ಲಿ ವ್ಯತ್ಯಾಸವಿದೆ. ಇವು ಮರಿಗಳನ್ನು ಅಥವಾ ಲಾರ್ವಗಳನ್ನು ಹೊತ್ತುಕೊಂಡು ಆಗಾಗ್ಗೆ ಗೂಡು ಬದಲಾಯಿಸುತ್ತವೆ. ಭೂವಾಸಿ ಇರುವೆಗಳ ಗೂಡು ನೆಲದಡಿಯಲ್ಲಿರುತ್ತದೆ. ಚಿಕ್ಕ ಚಿಕ್ಕ ಬಿಲಗಳನ್ನು ಮಾಡಿಕೊಂಡು ವಾಸಿಸುತ್ತವೆ. ಆದರೆ, ಕೆಲವು ಜಾತಿಯ ಇರುವೆಗಳು ಮರದಮೇಲೆ, ಕಲ್ಲುಗಳ ಕೆಳಗೆ, ಕಸಕಡ್ಡಿ ರಾಶಿಗಳಲ್ಲಿ ಗೂಡುಮಾಡಿಕೊಂಡು ಜೀವಿಸುತ್ತವೆ.

ಒಂದು ಗೂಡಿನಲ್ಲಿ ಒಂದು ಅಥವ ಹಲವಾರು ಗಂಡು, ಒಂದು ಹೆಣ್ಣು ಮತ್ತು ಸಹಸ್ರಾರು ಕೆಲಸಗಾರ ಇರುವೆಗಳಿರುತ್ತವೆ. ಪ್ರಭೇದಗಳಿಗನುಗುಣವಾಗಿ ಕೆಲಸಗಾರ ಇರುವೆಗಳ ದೇಹರಚನೆ ವೈವಿಧ್ಯಮಯವಾಗಿದೆ. ಕೆಲವು ಪ್ರಭೇದದ ಕೆಲಸಗಾರ ಇರುವೆಗಳು ಅತಿ




ದೊಡ್ಡದಾದ ದೇಹಹೊಂದಿದ್ದರೆ, ಕೆಲವು ಮಧ್ಯಮ ಗಾತ್ರ ಮತ್ತೆ ಕೆಲವು ಅತಿಚಿಕ್ಕ ಗಾತ್ರದ ದೇಹ ಹೊಂದಿವೆ. ಇರುವೆ ಗೂಡಿನಲ್ಲಿರುವ ಸದಸ್ಯರ ದೇಹ ರಚನೆಯಲ್ಲಿ ಅತಿ ಹೆಚ್ಚಿನ ವೈವಿಧ್ಯಗಳಿವೆ. ಇವು ಒಂದೇ ಪ್ರಭೇದವೆಂದು ಗುರುತಿಸುವುದೇ ಕಷ್ಟವೆನಿಸುವಷ್ಟು ಭಿನ್ನವಾಗಿವೆ.

ಇರುವೆಯ ಶರೀರವು ತಲೆ, ಎದೆ, ಸೊಂಟ ಮತ್ತು ಉದರಗಳಿಂದಾಗಿದೆ. ತಲೆಯಲ್ಲಿ ಕಣ್ಣುಗಳು ಮತ್ತು ಒಂದು ಜೊತೆ ಕುಡಿಮೀಸೆಗಳಿವೆ. ಮೊಂಡಾದ ಕುಡಿಮೀಸೆಗಳು ಕೈಗಳಂತೆ ಕಾಣುತ್ತವೆ. ಬಾಯ ಸುತ್ತ ಸೂಕ್ಷ್ಮ ಅಂಗಗಳಿವೆ. ಎದೆಯ ತಳಭಾಗದಲ್ಲಿ ಮೂರು ಜೊತೆ ಕಾಲುಗಳಿವೆ. ಕೆಲವು ಪ್ರಭೇದದ ಇರುವೆಗಳಿಗೆ ಒಂದು ಜೊತೆ ಅಥವಾ ಎರಡು ಜೊತೆ ರೆಕ್ಕೆಗಳಿವೆ. ಸೊಂಟ ಭಾಗ ಉದರದ ಎರಡು ಖಂಡಗಳ ಮಿಲನದಿಂದಾಗಿದೆ. ಈ ಭಾಗದಲ್ಲಿ ಒಂದು ಅಥವಾ ಎರಡು ಮಣಿಯಂಥ ಗಂಟುಗಳಿವೆ. ಹೆಣ್ಣಿನ ಉದರದ ಹಿಂತುದಿಯಲ್ಲಿ ಒಂದು ಚೂಪಾದ ಮುಳ್ಳಿನಂಥ (ಓವಿಪೊಸಿಟರ್) ರಚನೆ ಇದೆ. ಇದು ಮೊಟ್ಟೆಯಿಡಲು ಸಹಾಯಕ.

ಭ್ರೂಣಾವಸ್ಥೆಯಲ್ಲಿ ಮೊಟ್ಟೆಯೊಳಗೆ ಮರಿ ಇರುವೆ ಬೆಳೆದು ಲಾರ್ವ (ಹುಳು) ವಾಗಿ ಹೊರ ಬರುತ್ತದೆ. ಇದು ಬೆಳೆದು ನಿಂಫ್ ಆಗಿ, ನಂತರ ಕೋಶಾವಸ್ಥೆ ತಲುಪುತ್ತದೆ. ಈ ಸಮಯದಲ್ಲಿ ಪ್ರಭೇದಕ್ಕನುಗುಣವಾಗಿ ಬಹುರೂಪ ಸದಸ್ಯರ ಉದಯಕ್ಕೆ (ಉದಾ: ರಾಣಿ, ರಾಜ ಅಥವಾ ಗಂಡು, ಹೆಣ್ಣು, ಕೆಲಸಗಾರ, ಸಿಪಾಯಿ ಇರುವೆಗಳ) ಬೆಳವಣಿಗೆಗನುಗುಣವಾಗಿ ನಡೆಯುತ್ತದೆ. ಕಾರಣ, ರಾಣಿ (ಹೆಣ್ಣು) ಅಥವಾ ರಾಜ (ಗಂಡು) ಅಥವಾ ಕೆಲಸಗಾರ (ವರ್ಕರ್) ಅಥವಾ ಸಿಪಾಯಿ (ಸೊಲ್ಜರ್) ಆಗಬೇಕೆನ್ನುವ ನಿರ್ಧಾರ ಮೊಟ್ಟೆ ಸ್ಥಿತಿಯಲ್ಲೇ ತೀರ್ಮಾನವಾಗಿರುತ್ತದೆ. ಆದ್ದರಿಂದ ಈ ಮೊಟ್ಟೆಗಳಲ್ಲಿ ಆ ಪ್ರಭೇದದ ವರ್ಣತಂತುಗಳ (ಕ್ರೊಮೋಸೋಮ್ಸ್) ಸಂಖ್ಯೆಯ ಅರ್ಧದಷ್ಟು ವರ್ಣತಂತುಗಳಿರುತ್ತವೆ. ಇದು ಹ್ಯಾಪ್ಲಾಯ್ಡ್ ಸ್ಥಿತಿ. ಆದರೆ ಹೆಣ್ಣುಗಳಾಗಿ ಬೆಳೆಯುವ ಮೊಟ್ಟೆಗಳು ವೀರ್ಯಾಣುಗಳ ಮಿಲನದಿಂದ ಗರ್ಭಧರಿಸುತ್ತವೆ. ಇವುಗಳಲ್ಲಿ ಆ ಪ್ರಭೇದದ ವರ್ಣತಂತುಗಳ ಸಂಖ್ಯೆ ಪೂರ್ಣವಾಗಿರುತ್ತದೆ. ಇದು ಡಿಪ್ಲಾಯ್ಡ್ ಸ್ಥಿತಿ. ಹೆಣ್ಣು ಇರುವೆಗಳ ಬೆಳವಣಿಗೆ ಎರಡು ವಿಧದಲ್ಲಾಗುತ್ತದೆ. ತಾಯಿತನದ ಗುಣ ಕೆಲವು ಹೆಣ್ಣುಗಳಿಗೆ ಮಾತ್ರ ಇರುವುದು. ಉಳಿದುವು ಬಂಜೆಯಂತೆ ಬೆಳೆಯುತ್ತವೆ. ತಾಯಿಯಾಗಬಲ್ಲ ಜೀವಿ ಪ್ರೌಢಾವಸ್ಥೆ ತಲುಪಿದಾಗ ರೆಕ್ಕೆಗಳು ಚೆನ್ನಾಗಿ ಬೆಳೆಯುತ್ತವೆ. ಇವು ರಾಣಿ ಇರುವೆಗಳು. ಬಂಜೆ ಇರುವೆಗಳಿಗೆ ರೆಕ್ಕೆ ಬೆಳೆಯುವುದಿಲ್ಲ. ಇವೇ ಕೆಲಸಗಾತಿಗಳು. ರಾಣಿಯ ಎದೆ ಮತ್ತು ಉದರ ಭಾಗಗಳು ಕೆಲಸಗಾರ ಇರುವೆಗಳಿಗಿಂತ ಭಿನ್ನ. ಆದರೆ ಕೆಲವು ಪ್ರಭೇದಗಳಲ್ಲಿ ರೆಕ್ಕೆಗಳಿಲ್ಲದ ಹೆಣ್ಣುಗಳು ಹುಟ್ಟುವುವು. ಇಂತಹ ಸಂದರ್ಭದಲ್ಲಿ ರಾಣಿಗೂ, ಕೆಲಸಗಾತಿಗಳಿಗೂ ಶರೀರದಲ್ಲಿ ವ್ಯತ್ಯಾಸವಿರುತ್ತದೆ. ರಾಣಿಯಾಗುವ ಜೀವಿಯಲ್ಲಿ ಮಾತ್ರ ಸಂಭೋಗಕ್ರಿಯೆಯ ಕಾಲದಲ್ಲಿ ಗಂಡಿನಿಂದ ಸೂಸುವ ವೀರ್ಯಾಣುವನ್ನು ಶೇಖರಿಸಿಟ್ಟುಕೊಳ್ಳಬಲ್ಲ ಚೀಲವಿರುವುದು. ಈ ಚೀಲವಿಲ್ಲದವುಗಳೇ ಕೆಲಸಗಾತಿಯರು. ಬಂಜೆಗಳಾಗಲು ಚೀಲದ ಬೆಳವಣಿಗೆ ಆಗದಿರುವುದೇ ಕಾರಣ. ಆದ್ದರಿಂದ, ಇವು ಸಂಭೋಗ ಕ್ರಿಯೆಯಲ್ಲಿ ಪಾಲುಗೊಳ್ಳುವುದಿಲ್ಲ. ಇಷ್ಟಾದರೂ ಇವು ಪೂರ್ಣ ಬಂಜೆಗಳಲ್ಲ. ಈ ಇರುವೆಗಳಿಗೆ ಮೊಟ್ಟೆಯಿಡುವ ಶಕ್ತಿ ಇದೆ. ಆದರೆ, ಮೊಟ್ಟೆಗಳು ಹ್ಯಾಪ್ಲಾಯ್ಡ್ ಸ್ಥಿತಿಯಲ್ಲಿರುತ್ತವೆ. ಇಂಥ ಮೊಟ್ಟೆಗಳು ಬೆಳೆದು ಗಂಡು ಇರುವೆಗಳಾಗುತ್ತವೆ. ಬೇಸಗೆ ಕಾಲದಲ್ಲಿ ಉಷ್ಣತೆ ಉತ್ತಮವಾಗಿದ್ದಾಗ ರಾಣಿ ಮತ್ತು ಕೆಲಸಗಾತಿಯರಿಟ್ಟ ಮೊಟ್ಟೆಗಳೊಳಗೆ ಬೆಳೆದ ಮರಿಗಳು ಮೊಟ್ಟೆಯನ್ನು ಒಡೆದುಕೊಂಡು ಹೊರ ಬರುತ್ತವೆ. ಕಂಬಳಿಹುಳುಗಳನ್ನು ಹೋಲುವ ಇವೇ ಲಾರ್ವಗಳು. ಇವು ಬೆಳೆದು ಕೋಶಾವಸ್ಥೆ ತಲುಪಿ ಮುಂದೆ ಪ್ರೌಢ ಇರುವೆಗಳಾಗುತ್ತವೆ.

ಗರ್ಭಧರಿಸಲು ರಾಣಿ ಇರುವೆಗೆ ಸಂಭೋಗಕ್ರಿಯೆ ಅಗತ್ಯ. ಈ ಕಾಲದಲ್ಲಿ ಅದು ವೀರ್ಯರಸ ಮತ್ತು ವೀರ್ಯಾಣುಗಳನ್ನು ಗಂಡಿನಿಂದ ಪಡೆಯುತ್ತದೆ. ಆದ್ದರಿಂದ ಕನ್ಯೆಯಾಗಿರುವ ರಾಣಿ ಇರುವೆ ಗರ್ಭಧಾರಣೆಗಿಂತ ಮುಂಚೆ ಗೂಡಿನಿಂದ ಹಾರಿಹೋಗುತ್ತದೆ. ರಾಣಿ ಇರುವೆ ಮತ್ತು ಗಂಡು ಇರುವೆಯೊಡನೆ ನಡೆಯುವ ರತಿಕ್ರೀಡೆಯನ್ನು ಶೋಭನ ನೃತ್ಯವೆನ್ನುತ್ತಾರೆ. ಗಂಡು ತನ್ನೆಲ್ಲ ವೀರ್ಯರಸವನ್ನು ಹೆಣ್ಣಿನ ವೀರ್ಯಾಣು ಸಂಗ್ರಹಣ ಚೀಲದೊಳಕ್ಕೆ ತುಂಬಿದಾಗ ನೃತ್ಯ ಮುಕ್ತಾಯವಾಗುವುದು. ಮುಂದೆ ಇವು ಬೇರೆಯಾಗುತ್ತವೆ. ನಂತರ ಗಂಡು ಸಾಯುವುದು. ರಾಣಿ ಗಳಿಸಿಕೊಂಡ ಈ ವೀರ್ಯರಸದ ಉಪಯೋಗ ಅದರ ಜೀವಿತಕಾಲದ ಕೊನೆಯವರೆಗೂ ಮೊಟ್ಟೆಗಳ ಗರ್ಭಧಾರಣೆಗೆ ಬಳಸುತ್ತದೆ. ರಾಣಿಯ ವೀರ್ಯಾಣು ಸಂಗ್ರಹಣ ಚೀಲದಲ್ಲಿ 15 ವರ್ಷಗಳವರೆಗೆ ವೀರ್ಯಾಣುಗಳನ್ನು ಶೇಖರಿಸಿಟ್ಟುಕೊಂಡ ವರದಿಗಳಿವೆ. ಕಾರಣ, ರಾಣಿ ತನ್ನ ಜೀವಿತಾವಧಿಯಲ್ಲಿ ಒಂದೇ ಸಲ ಗಂಡಿನೊಡನೆ ಸಂಭೋಗಿಸುತ್ತದೆ. ಸಂಭೋಗಕ್ರಿಯೆ ಮುಗಿದ ಮರುಗಳಿಗೆಯಿಂದಲೇ ರಾಣಿ ವಿಧವೆಯಾಗಿ ಮುಂದಿನ ಪೀಳಿಗೆ ಅಭಿವೃದ್ಧಿ ಕಡೆ ಗಮನ ಹರಿಸುತ್ತದೆ. ಆದ್ದರಿಂದ ಗೂಡುಬಿಟ್ಟು ಹಾರಿಬಂದು ಗರ್ಭಧರಿಸಿದ ರಾಣಿ ಹೊಸ ಗೂಡನ್ನು ಹುಡುಕುತ್ತದೆ. ಹೊಸ ಗೂಡಿನಲ್ಲಿ ತನ್ನ ಪೀಳಿಗೆಯ ಭದ್ರತೆ, ರಕ್ಷಣೆ, ಆಹಾರ ಮುಂತಾದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುತ್ತದೆ. ಆದ್ದರಿಂದ, ರಾಣಿ ಹುಡುಕುವ ಸ್ಥಳ ಆದರಿಂದ ಹುಟ್ಟುವ ಸಂತಾನಕ್ಕೆ ರಕ್ಷಣೆ ಬೇಕು. ಇಲ್ಲವಾದಲ್ಲಿ, ಇಡೀ ಪೀಳಿಗೆಯೇ ನಿರ್ನಾಮವಾಗುತ್ತದೆ.

ಶೋಭನ ನೃತ್ಯ ಮುಗಿದ ತಕ್ಷಣ ರಾಣಿ ನೆಲಕ್ಕಿಳಿದು, ರೆಕ್ಕೆಗಳನ್ನು ಕಳಚಿಕೊಳ್ಳುತ್ತದೆ. ರೆಕ್ಕೆಗಳ ಮಾಂಸಖಂಡಗಳು ಕ್ರಮೇಣ ಕರಗಿ ಲಾಲಾಗ್ರಂಥಿಗಳಾಗಿ ಪರಿವರ್ತನೆ ಹೊಂದುತ್ತವೆ. ಈ ಅವಧಿಯಲ್ಲಿ ರಾಣಿ ಅಂಡಾಶಯ ಮೊಟ್ಟೆಗಳನ್ನು ಉತ್ಪಾದಿಸಲಾರಂಭಿಸುತ್ತದೆ. ಮೊಟ್ಟೆಗಳು ಹೊರಬರುವಾಗ ಒಂದು ಮೊಟ್ಟೆಗೆ ಒಂದು ವೀರ್ಯಾಣುವಿನಂತೆ ಸಂಗ್ರಹಣ ಚೀಲದೊಳಗಿರುವ ವೀರ್ಯಾಣುಗಳನ್ನು ಹೊರಹಾಕುತ್ತದೆ. ಈ ವೀರ್ಯಾಣುಗಳಿಂದ ಗರ್ಭ ಧರಿಸಿದ ಮೊಟ್ಟೆಗಳನ್ನು ರಾಣಿ ಗೂಡಿನಲ್ಲಿಡುತ್ತದೆ. ಕೆಲವು ದಿನಗಳಾದ ಮೇಲೆ ಮೊಟ್ಟೆಗಳು ಒಡೆದು ಮರಿಗಳಾಗಿ ಹೊರಬರುತ್ತವೆ. ಮರಿಗಳಿಗೆ ಆಹಾರ ಒದಗಿಸುವ ಹೊಣೆ ರಾಣಿಗೆ ಸೇರಿದ್ದು. ಕೆಳಮಟ್ಟದ ವಿಕಸನ ಹೊಂದಿದ ಇರುವೆಗಳಲ್ಲಿ ರಾಣಿ ತನ್ನ ಮಕ್ಕಳ ಅಹಾರಕ್ಕಾಗಿ ಗೂಡಿನಿಂದ ಹೊರಬಂದು ಆಹಾರಾನ್ವೇಷಣೆ ಮಾಡಿ, ಮರಿಗಳಿಗೆ ಕೊಟ್ಟು ಪೋಷಿಸುತ್ತದೆ. ಮೇಲುದರ್ಜೆಯ ವಿಕಸನ ಹೊಂದಿದ ಇರುವೆಗಳಲ್ಲಿ ಗೂಡಿನಿಂದ ರಾಣಿ ಹೊರಬರುವುದೇ ಇಲ್ಲ. ರೆಕ್ಕೆಯ ಮಾಂಸಖಂಡಗಳು ಉತ್ಪತ್ತಿ ಮಾಡುವ ಲಾಲಾರಸವನ್ನೇ ಮರಿಗಳಿಗೆ ಉಣಿಸಿ ಪೋಷಿಸಲಾರಂಭಿಸುತ್ತದೆ. ರಾಣಿ ಇರುವೆಗಳು ಹೊಟ್ಟೆ ಹಸಿದಾಗ ತಮ್ಮ ಮೊಟ್ಟೆಗಳನ್ನೇ ತಿನ್ನುವುವು. ರಾಣಿ ತಿಂದುಳಿದ ಮೊಟ್ಟೆಗಳಿಂದ ಹುಟ್ಟಿದ ಮರಿಗಳು ಕೆಲಸಗಾತಿಗಳಾಗುತ್ತವೆ. ಇವುಗಳಿಗೆ ಮೊದಲು ಹುಟ್ಟಿದ ಇರುವೆಗಳಿಗೆ ದಾದಿಯರ (ನರ್ಸ್)

ಪೀಳಿಗೆಯೆಂದು ಹೆಸರು. ಈ ಪೀಳಿಗೆ ಹುಟ್ಟಿ ಬಂದಮೇಲೆ ರಾಣಿಯ ಕಷ್ಟಗಳೆಲ್ಲ ಪರಿಹಾರವಾದಂತೆ. ದಾದಿ ಇರುವೆಗಳು ಆಹಾರ ಸಂಗ್ರಹಿಸಿ ರಾಣಿಗೆ ಮತ್ತು ಮರಿಗಳಿಗೆ ಉಣ್ಣಿಸುತ್ತವೆ. ಹೀಗೆ ಇರುವೆಯ ಗೂಡು ಪೂರ್ಣವಾಗುತ್ತದೆ. ಆಗ ರಾಣಿಗೆ ಮೊಟ್ಟೆಯಿಡುವುದೊಂದೇ ಕೆಲಸ. ಈ ಕೆಲಸ 10–15 ವರ್ಷಗಳ ಕಾಲ ನಿರಂತರವಾಗಿ ನಡೆಯುತ್ತದೆ. ಕಾರಣ, ರಾಣಿ ಇರುವೆಯನ್ನು ಮೊಟ್ಟೆಯಿಡುವ ಯಂತ್ರ (ಎಗ್ ಲೆಯಿಂಗ್ ಮೆಶಿನ್) ಎನ್ನುವರು.

ದಾದಿ ಅಥವಾ ಕೆಲಸಗಾತಿಗಳು ಮರಿಗಳಿಗೆ ಆಹಾರ ಒದಗಿಸಲು ಕಾರಣ, ಈ ಮರಿಗಳ ಚರ್ಮದ ಮೇಲೆ ಉತ್ಪತ್ತಿಯಾಗುವ ಸಿಹಿಯಾದ ರಸ. ಕೆಲಸಗಾತಿಗಳು ಹೊರಗಿನಿಂದ ತಂದ ಆಹಾರವನ್ನು ಮರಿಗಳಿಗೆ ಉಣಿಸಿ ತಾವು ಅವುಗಳ ಮೈಮೇಲಿರುವ ಸಿಹಿರಸವನ್ನು ಹೀರುತ್ತವೆ. ಈ ವಿಧಾನವನ್ನು ಟ್ರೊಫಲ್ಯಾಕ್ಸಿಸ್ ಎನ್ನುತ್ತಾರೆ. ಇದು ಇರುವೆಗಳು ಸಂಘಜೀವಿಗಳಾಗಿ ಬದುಕಲು ಸಹಾಯಕ.

ಫಾರ್ಮಿಕ, ಬೋಥ್ರಿಯೋಮಿರ್ ಮೆಕ್ಸ್ ಇರುವೆ ಜಾತಿಗಳ ರಾಣಿ ಅತಿ ಚಿಕ್ಕದು. ಇದು ತನ್ನ ಕೆಲಸಗಾರ ಇರುವೆಗಳಿಗಿಂತ ಚಿಕ್ಕದು. ರಾಣಿಯ ರೆಕ್ಕೆಗಳ ಮಾಂಸಖಂಡಗಳಲ್ಲಿ ಉತ್ಪತ್ತಿಯಾಗುವ ಲಾಲಾರಸವು ಮರಿಗಳನ್ನು ಸಾಕಲು ಸಹಕಾರಿ. ಈ ಮೊಟ್ಟೆಗಳಿಂದ ಹೊರಬಂದ ಮರಿಗಳನ್ನು ಆಶ್ರಯದಾತ ಜೀವಿಯ ಗೂಡಿನಲ್ಲಿರುವ ಕೆಲಸಗಾರ ಇರುವೆಗಳು ಸಾಕುತ್ತವೆ. ಇದರಿಂದಾಗಿ ಕೆಲವೊಂದು ಬಾರಿ ಇರುವೆಯ ಗೂಡಿನಲ್ಲಿ ಎರಡು ವಿಭಿನ್ನ ಜಾತಿಯ ಇರುವೆಗಳು ಜೊತೆ–ಜೊತೆಯಾಗಿರುತ್ತವೆ. ಆಗಂತುಕ ರಾಣಿ ಹೊಸಪೀಳಿಗೆಯ ಸಹಾಯದಿಂದ ಅಲ್ಲಿಯ ರಾಣಿಯನ್ನು ಕೊಂದು ಆ ಗೂಡನ್ನೇ ತನ್ನದಾಗಿ ಮಾಡಿಕೊಳ್ಳಬಹುದು. ಬೋಥ್ರಿಯೋಮಿರ್ ಮೆಕ್ಸ್ ಜಾತಿಯ ರಾಣಿ ಆಶ್ರಯ ಕೊಟ್ಟ ಗೂಡಿನ ರಾಣಿಯ ಬೆನ್ನಿನ ಮೇಲೆ ಹತ್ತಿ ಅದರ ಕುತ್ತಿಗೆಯನ್ನು ತನ್ನ ದವಡೆಗಳಿಂದ ಕಡಿದುಹಾಕುತ್ತದೆ. ರಾಣಿ ಸತ್ತ ಮೇಲೆ, ಅದರಿಂದ ಹುಟ್ಟಿದ್ದ ಕೆಲಸಗಾರ ಇರುವೆಗಳು ಸತ್ತು ಹೋಗುತ್ತವೆ. ಆದರೆ ಬದುಕಿರುವವರೆಗೆ ಅವು ಆಗಂತುಕ ರಾಣಿಯ ಮಕ್ಕಳ ಪಾಲನೆ ಮಾಡುತ್ತವೆ.

ಪಾಲಿಯೆಕ್ಸೆಸ್ ಹರ್‌ಪಗೊಕ್ಸಿನಸ್, ಸ್ಟ್ರಾಂಗೈಲೊನ್ಯಾಥಸ್, ಫಾರ್ಮಿಕ ಮತ್ತು ಲೆಪ್ಟೊಥೊರ್ಯಾಕ್ಸ್ ಜಾತಿಗಳಲ್ಲಿ ರಾಣಿ ಇರುವೆಗಳು ತಮ್ಮ ಕ್ರೌರ್ಯಕ್ಕೆ ಹೆಸರಾಗಿವೆ. ಈ ಜಾತಿಯ ರಾಣಿ ಇರುವೆಗಳು ಇತರ ಇರುವೆಗಳ ಗೂಡನ್ನು ಪ್ರವೇಶಿಸಿ, ಅತಿಕ್ರಮಣ ಮಾಡುತ್ತವೆ. ಪ್ರವೇಶಕ್ಕೆ ಅಡ್ಡಿ ಬರುವ ಇರುವೆಗಳನ್ನು ಸಾಯಿಸುತ್ತವೆ. ಕಾರಣ, ಆಶ್ರಯ ನೀಡುವ ಗೂಡಿನ ಕೆಲಸಗಾರರ ಮತ್ತು ಗೂಡಿನ ರಕ್ಷಣೆಯಲ್ಲಿ ತೊಡಗುವ ಇರುವೆಗಳನ್ನು ಧ್ವಂಸಮಾಡಲು ರಾಣಿ ಇರುವೆ ಅವಕಾಶ ಮಾಡುತ್ತದೆ. ಅತಿಕ್ರಮಿಸಿದ ಗೂಡಿನಲ್ಲಿ ಬೇರೆ ರಾಣಿ ಇರುವೆಯ ಮೊಟ್ಟೆಗಳಿಂದ ಮರಿಗಳಾಗುತ್ತವೆ. ಬೆಳೆದ ಈ ಮರಿಗಳು ರಾಣಿಗೆ ಸೇವಕರಾಗುವ ಮೂಲಕ ಗುಲಾಮಗಿರಿಯ ದಾಸ್ಯಕ್ಕೆ ಈಡಾಗುತ್ತವೆ. ಹಳೆ ರಾಣಿಯ ಸಂತತಿ ಹಾಗೂ ಹೊಸ ರಾಣಿಯ ಸಂತತಿ ಎರಡು ಉದಯವಾಗಿ ದೊಡ್ಡ ಸಂಗ್ರಾಮವೇ ನಡೆಯುತ್ತದೆ. ಈ ಸಂಗ್ರಾಮದಲ್ಲಿ ಮೇಲುಗೈ ಪಡೆದ ರಾಣಿ ತನ್ನ ಮರಿಗಳೊಂದಿಗೆ ಅದೇ ಗೂಡಿನಲ್ಲಿ ಬದುಕುತ್ತದೆ. ಸೋತ ಇರುವೆಗಳು ತಮ್ಮ ಮರಿಯನ್ನೆಲ್ಲ ಒಂದುಗೂಡಿಸಿ ಆ ಗೂಡನ್ನು ಬಿಟ್ಟು ಬೇರೆ ಸ್ಥಳದಲ್ಲಿ ಸಂತಾನ ಮುಂದುವರಿಸುತ್ತವೆ.

ಇರುವೆಗಳ ಆಹಾರ ದ್ರವ ಸ್ಥಿತಿಯಲ್ಲಿರಬೇಕು. ರಸವನ್ನು ದೊಡ್ಡ ಇರುವೆಗಳು ಮರಿಗಳಿಗೆ ಉಣಿಸುವುದು ಸುಲಭ. ವಿಕಾಸದ ದೃಷ್ಟಿಯಿಂದ ದ್ರವ ಆಹಾರ ಸೇವನೆ ಮಾಡುವ ಇರುವೆಗಳು ಉತ್ತಮ ಮಟ್ಟದವೆಂದು ತಜ್ಞರ ಅಭಿಪ್ರಾಯ. ಹೂವಿನಲ್ಲಿರುವ ಮಧು, ಗಿಡದಲ್ಲಿನ ತಿಗಣೆಗಳ (ಎಫಿಡ್ಸ್) ಶರೀರದಲ್ಲಿ ಉತ್ಪತ್ತಿಯಾಗುವ ಸಿಹಿರಸ ಮತ್ತು ಹಣ್ಣುಗಳ ರಸ ಇರುವೆಗಳಿಗೆ ಬಲು ಪ್ರಿಯ. ಕೆಲಸಗಾರ ಇರುವೆಗಳು ತಾವು ಈ ರಸವನ್ನು ಕುಡಿದು ಜೀರ್ಣಾಂಗದಲ್ಲಿರುವ ಪ್ರೊವೆಂಟ್ರಿಕುಲಸ್‌ನಲ್ಲಿ ಶೇಖರಿಸುತ್ತವೆ. ಗೂಡಿಗೆ ಬಂದ ತಕ್ಷಣ ಈ ಆಹಾರವನ್ನು ಪ್ರೊವೆಂಟ್ರಿಕುಲಸ್‌ನಿಂದ ಪುನಃ ಬಾಯಿಗೆ ವಾಪಸ್ಸು ತಂದು ಮರಿಗಳಿಗೆ ಉಣ್ಣಿಸುತ್ತವೆ.

ಆಹಾರ ಶೇಖರಣೆಗಾಗಿ ಕೆಲವು ಪ್ರಭೇದದ ಇರುವೆಗಳು ದೇಹವನ್ನು ಮಾರ್ಪಾಟು ಮಾಡಿಕೊಂಡಿವೆ. ಉದಾ: ಕಾಂಪೊನೊಟಸ್ಸ್ ಮಿರ್ಮೆಕೊಸಿಟಸ್, ಲೆಪ್‌ಟೊಮಿರ್ಮೆಕ್ಸ್ ಪ್ರಭೇದದ ಇರುವೆಗಳಲ್ಲಿ ಆಹಾರ ಶೇಖರಣೆಗಾಗಿ ಉದರ ಭಾಗವನ್ನು ಸೀಸದಂತೆ ಮಾರ್ಪಾಟು ಮಾಡಿಕೊಂಡಿವೆ. ಕಾರಣ, ಇವುಗಳನ್ನು ಆಹಾರದ ಕಣಜ ಅಥವಾ ಮಧು ಸೀಸ ಎನ್ನುವರು. ಇವು ಕೆಲಸಗಾರ ಕೀಟಗಳಲ್ಲ. ಈ ಇರುವೆಗಳ ದೇಹ ಅತಿ ದೊಡ್ಡ ಚೀಲದಂತಾಗಿ ಆಹಾರವನ್ನು ಶೇಖರಿಸುತ್ತದೆ. ಬೇರೆ ಕೆಲಸಗಾರ ಇರುವೆಗಳು ತಾವು ಶೇಖರಿಸಿ ತಂದ ಆಹಾರವನ್ನೆಲ್ಲ ಇವುಗಳ ಬಾಯಿಗೆ ನೀಡುತ್ತವೆ. ಎಲ್ಲಾ ಕೆಲಸಗಾರ ಇರುವೆಗಳು ತಂದ ದ್ರವಯುಕ್ತ ಆಹಾರವನ್ನು ಈ ಇರುವೆ ಕುಡಿದು, ದೇಹದೊಳಗೆ ಶೇಖರಿಸಿಡುತ್ತದೆ. ಇದರೊಳಗೆ ಜೇನಿನಂಥ ರಸ ತುಂಬಿರುತ್ತದೆ. ಇಂಥ ಇರುವೆಗಳು ಚಲಿಸಲಾರವು. ಗೂಡಿನ ಕೆಲವು ಪ್ರತ್ಯೇಕ ಭಾಗಗಳ ಮೇಲ್ಛಾವಣಿಗೆ ಅಂಟಿಕೊಂಡಿರುತ್ತವೆ. ಗೂಡಿನ ಇತರ ಸದಸ್ಯರಿಗೆ ಆಹಾರ ಬೇಕಾದಾಗ ಈ ಇರುವೆಯಿಂದ ಪಡೆಯುತ್ತವೆ.

ಕೆಲವು ಇರುವೆಗಳು ತಮ್ಮ ಜೀವನಕ್ರಮದಲ್ಲಿ ಹಲವು ಬದಲಾವಣೆಯನ್ನು ಹೊಂದಿರುತ್ತವೆ. ಆಸ್ಟ್ರೇಲಿಯಾದ ಮಿರ್ಮಿಸಿಯಾ ಎಂಬ ಕೆಳದರ್ಜೆಯ ಇರುವೆಗಳ ರಾಣಿಯು ಗುಂಪು ಸ್ಥಾಪಿತ ಕಾಲದಲ್ಲಿ ಆಹಾರ ಶೋಧಿಸಲು ತಾನಾಗಿಯೇ ಗೂಡಿನಿಂದ ಹೊರಬಿದ್ದು, ಬೇಟೆಯಾಡಿದ ಇತರ ಕೀಟಗಳನ್ನು ತನ್ನ ಲಾರ್ವಗಳಿಗೆ ತರುವುದು. ಡೊರಿಲಿನೆ ಮತ್ತು ಲೆಪ್ಟಾನಿಲಿನೆ ಉಪಬಳಗಕ್ಕೆ ಸೇರಿದ ಉಷ್ಣವಲಯದ ದಂಡಿನ ಇರುವೆಗಳಿಗೆ ತಮ್ಮದೇ ಆದ ನಿರ್ದಿಷ್ಟ ಗೂಡಿರುವುದಿಲ್ಲ. ದಿನವಿಡೀ ಶ್ರಮದಾಯಕ ಬೇಟೆಯಾಡಿ ಹಿಂತಿರುಗಿದ ನಂತರ ಒಂದರಮೇಲೊಂದು ಮಲಗಿ ತಮ್ಮ ಉಪಾಂಗಗಳನ್ನು ತೊಡರಿಸಿಕೊಂಡು, ಇರುಳು ಕಳೆಯುವುವು. ಇಂಥ ವಿಶ್ರಾಂತಿಗಾಗಿ ಆರಿಸಿದ ಸ್ಥಳ ಪ್ರತಿದಿನ ಒಂದೇ ಆಗಿರಬಹುದು, ಅಥವ ಬದಲಿಸಿ, ವಲಸೆ ಹೋಗುವ ಅಲೆಮಾರಿಗಳಾಗಬಹುದು. ಈ ಎರಡು ಅವಸ್ಥೆಗಳು ಕಾಲಾಂತರದಲ್ಲಿ ಬದಲಾಗುವುವು. ಕೆಲಸಗಾರರ ಸಮೂಹವೊಂದು ಮೂಲ ಗುಂಪಿನಿಂದ ವಿಭಜನೆಗೊಂಡು ಫಲಭರಿತವಾಗಲಿರುವ ರಾಣಿಯೊಡನೆ ಹೊರಬರುವುದರೊಂದಿಗೆ ಹೊಸ ಗುಂಪೊಂದರ ಸ್ಥಾಪನೆಯಾಗುವುದು.

ಇರುವೆಗಳ ಆಹಾರಾಭ್ಯಾಸ ಕಂಡದ್ದನ್ನೆಲ್ಲಾ ಬೇಟೆಯಾಡುವುದರಿಂದ ಮೊದಲುಗೊಂಡು ಅತ್ಯಂತ ವಿಶಿಷ್ಟ ಪದ್ಧತಿಗಳಾದ ಇತರ ಸಂಧಿಪದಿಗಳ ಮೊಟ್ಟೆ ತಿನ್ನುವುದು, ಗಿಡದ ಹೇನಿನಿಂದೊಸರುವ ಸಿಹಿ ದ್ರವ ಹೀರುವುದು, ಕೂಡಿಟ್ಟ ಕಾಳುಗಳನ್ನು ತಿನ್ನುವುದು ಅಥವ ಇತರ ಪ್ರಭೇದದ ಇರುವೆಗಳನ್ನೇ ಸಂಹರಿಸಿ ತಿನ್ನಲು ಮೀಸಲಾಗಿರಬಹುದು. ಮಧ್ಯ ಹಾಗೂ ದಕ್ಷಿಣ ಅಮೇರಿಕದ ಅಟ್ಟಿನಿ ಗುಂಪಿನ ಅಣಬೆ ಕೃಷಿಕ ಇರುವೆಗಳು ವಿಶೇಷವಾಗಿ ಪ್ರಸ್ತಾಪಿಸಲರ್ಹವಾಗಿವೆ. ಇವುಗಳಲ್ಲಿ ಶೋಭನ ನೃತ್ಯಕ್ಕಾಗಿ ಹೊರಬೀಳುವ ಹೆಣ್ಣು, ತನ್ನ ಬಾಯಲ್ಲಿ ತಾಯಿಗೂಡಿನಲ್ಲಿರುವ ಅಗ್ಯಾರಿಕೇಸಿ ಅಣಬೆಯ ಗುಂಪಿಗೆ ಸೇರಿದ ವಿಶಿಷ್ಟ ಅಣಬೆಯ ಮುದ್ದೆಯೊಂದನ್ನು ತರುವುದಲ್ಲದೆ ಅನಂತರ ಹೊಸಗೂಡಿನಲ್ಲಿ ಅದನ್ನು ತನ್ನ ಮಲಮೂತ್ರದಿಂದ ಪೋಷಿಸಿ ಕೃಷಿಮಾಡುವುದು. ಅಣಬೆಯ ಒಂದೇ ಒಂದು ಪ್ರಭೇದ ಮಾತ್ರ ಬೆಳೆಯಲು ಅವಕಾಶಕೊಟ್ಟು ಉಳಿದ, ಆಕಸ್ಮಿಕವಾಗಿ ಬೆಳೆಯುವ ಅಣಬೆಗಳನ್ನು ನಿರ್ನಾಮ ಮಾಡುವುದು. ಮೂಲದಲ್ಲಿ ಕಾಳುಗಳನ್ನು ಸಂಗ್ರಹಿಸುವ ಇಲ್ಲವೆ ಕಟ್ಟಿಗೆಯಲ್ಲಿ ವಾಸಿಸುವ ಇರುವೆಗಳು, ಕಾಲಕ್ರಮದಲ್ಲಿ ಅಣಬೆ ತಿನ್ನುವುದನ್ನು ರೂಢಿಸಿಕೊಂಡು ಅಣಬೆ ಕೃಷಿಕಗಳಾಗುವುವು.

ಗೂಡು ನಿರ್ಮಾಣ ಸ್ಥಳದ ಆಯ್ಕೆಯಲ್ಲಿಯೂ ವೈವಿಧ್ಯತೆಯಿದೆ. ಗೂಡು ನೆಲದಾಳದಲ್ಲಿ, ಮರದ ರೆಂಬೆಗಳ ಮೇಲೆ, ಲಾರ್ವಗಳಿಂದ ಉತ್ಪಾದಿಸಲ್ಪಟ್ಟ ರೇಷ್ಮೆದಾರದಿಂದ ಹೆಣೆದ ಎಲೆಗಳ ಮಧ್ಯ ಅಥವಾ ಎಲೆಯ ಕೆಳಭಾಗದಲ್ಲಿ ಇರುತ್ತದೆ. ಉಷ್ಣವಲಯದ ಹಲವು ಬಗೆಯ ಸಸ್ಯಗಳು ಇರುವೆಗಳೊಂದಿಗೆ ವಿಶೇಷ ಸಂಬಂಧ ಹೊಂದಿವೆ. ಈ ಇರುವೆ ಸಸ್ಯಗಳು (ಮೆರ್ಮಿಕೊಫೈಟ್ಸ್) ಉಬ್ಬಿಕೊಂಡ ತಮ್ಮ ಪೊಳ್ಳಾಗಿರುವ ಕೆಲವು ಭಾಗಗಳಿಂದ ಇರುವೆಗಳಿಗೆ ಸಿದ್ಧ ವಾಸಸ್ಥಾನ ಕಲ್ಪಿಸಿ ಅವುಗಳನ್ನು ಆಕರ್ಷಿಸುತ್ತವೆ. ವಿಶೇಷಾಂಗಗಳಿಂದ ಆಹಾರ ಉತ್ಪಾದಿಸುವ ಇವುಗಳಲ್ಲಿರುವ ಸಿಡೊಮಿರ್‌ಮೆಕ್ಸ್ ಮತ್ತು ಇತರ ಇರುವೆಗಳು ಅತ್ಯಂತ ಉಗ್ರವಾಗಿರುವುದರಿಂದ ತಮಗೆ ಒದಗಿಸಲ್ಪಟ್ಟ ವಸತಿ ಹಾಗೂ ಆಹಾರಕ್ಕೆ ಪ್ರತಿಯಾಗಿ ಆಶ್ರಯ ಸಸ್ಯಗಳಿಗೆ ಇತರ ಕೀಟ ಹಾಗೂ ಪ್ರಾಣಿಗಳ ಆಕ್ರಮಣದಿಂದ ರಕ್ಷಣೆ ನೀಡುತ್ತವೆ.

ಇರುವೆಗಳು ಜಟಿಲ ಹಾಗೂ ಪರಿಷ್ಕೃತವಾದ ರಾಸಾಯನಿಕ ಸಂಪರ್ಕ ವ್ಯವಸ್ಥೆಯೊಂದನ್ನು ಫೀರಮೋನ್‌ಗಳಿಂದ ರಚಿಸಿಕೊಂಡಿವೆ. ಅಪಾಯ ಸೂಚನೆ, ಒಂದೆಡೆ ಕೂಡುವಿಕೆ ಮತ್ತು ಆಹಾರ ಶೋಧನಾಪಡೆಗೆ ಭರ್ತಿಮಾಡುವಿಕೆಗೆ ಸಂಬಂಧಿಸಿದಂತೆ ಸೂಚನೆಗಳು ಶರೀರದ ವಿಶಿಷ್ಟ ಗ್ರಂಥಿಗಳಲ್ಲಿ ಉದ್ಭವಿಸಿ ಒಸರಲ್ಪಡುವ ಅಪಾಯಸೂಚಿ (ಅಲಾರ್ಮ ಫೀರಮೋನ್) ಮಾರ್ಗದರ್ಶಿ (ಟ್ರಯಲ್ ಸಬ್‌ಸ್ಟೆನ್ಸ್) ರಾಸಾಯನಿಕ ಪದಾರ್ಥಗಳು. ಅನೇಕ ನಿರ್ದಿಷ್ಟ ಫೀರಮೊನ್‌ಗಳ ಮುಖಾಂತರ ಗೂಡಿನ ಇತರ ಸದಸ್ಯರುಗಳಿಂದ ಗ್ರಹಿಸಿ ಇಚ್ಛಿತ ಕಾರ್ಯ ನೆರವೇರುವುದು. ತಮ್ಮ ಗೂಡು ಹಾಗೂ ಸಹಚರರನ್ನು ಗುರುತಿಸುವುದು, ಸತ್ತ ಸದಸ್ಯರನ್ನು ಶೋಧಿಸಿ ಸಾಗಹಾಕುವುದು ಪೋಷಣಾ ತತ್ತಿ (ಟ್ರೊಫಿಕ್ ಎಗ್ಸ್) ಗಳನ್ನು ಆರಿಸಿ ತಿನ್ನುವುದು, ವಾಸನಾ ಮಾಧ್ಯಮದಿಂದ ನಡೆಯುವುದು. ದೃಷ್ಟಿ, ಯಾಂತ್ರಿಕ ಹಾಗೂ ಶ್ರವಣ ಸಂಪರ್ಕ ವ್ಯವಸ್ಥೆ ಕೂಡ ಇರುವೆಗಳಲ್ಲಿದೆ.

ಇರುವೆಗಳು ಸ್ನೇಹ ಜೀವನಕ್ಕೆ ಹೆಸರುವಾಸಿ. ಕೆಲವು ಜಾತಿಯ ಇರುವೆಗಳು ಮರ–ಗಿಡಗಳಲ್ಲಿರುವ ತಿಗಣೆಯನ್ನು ತಂದು ಗೂಡಿನಲ್ಲಿ ಸಾಕುತ್ತವೆ. ತಿಗಣೆಗಳಿಗೆ ಬೇಕಾದ ಎಲೆ ಮತ್ತು ಕಾಂಡವನ್ನು ಕೆಲಸಗಾರ ಇರುವೆಗಳು ಪ್ರತಿನಿತ್ಯವೂ ಕೊಡುತ್ತವೆ. ಈ ಆಹಾರವನ್ನು ಸೇವಿಸಿ ತಿಗಣೆಗಳು ಬದುಕುತ್ತವೆ. ಇರುವೆಗಳು ಆಹಾರ ಬೇಕಾದಾಗ

ಅವುಗಳು ತಿಗಣೆಯ ಬೆನ್ನನ್ನು ಮೆಲ್ಲಗೆ ತಟ್ಟುತ್ತವೆ. ಈ ಕ್ರಿಯೆಯಿಂದ ಪ್ರಚೋದಿತವಾದ ತಿಗಣೆಗಳು ಸಿಹಿರಸವನ್ನು ಬೆನ್ನಿನ ಮೇಲೆ ಸ್ರವಿಸುತ್ತವೆ. ಈ ರಸವನ್ನು ಹೀರಿ ಇರುವೆಗಳು ಹಸಿವು ನಿವಾರಿಸಿ ಕೊಳ್ಳುತ್ತವೆ. ಕಾರಣ, ಇಂತಹ ತಿಗಣೆಗಳನ್ನು ಹಾಲು ಕರೆವ ಹಸುವಿಗೆ ಹೋಲಿಸುತ್ತಾರೆ.

ಮರ್‌ಮಿಸೈನ್ ಗುಂಪಿನ ಇರುವೆಗಳು ಕೆಲವು ಜಾತಿಯ ಮರಗಳ ಸೊಪ್ಪನ್ನು ಗೂಡುಗಳಲ್ಲಿ ಶೇಖರಿಸಿಟ್ಟುಕೊಳ್ಳುತ್ತವೆ. ಸೊಪ್ಪಿನಲ್ಲಿ ಬೆಳೆಯುವ ಬೂಷ್ಟು ಇರುವೆಗಳಿಗೆ ಆಹಾರ. ಸುಗ್ಗಿ ಇರುವೆಗಳು (ಹಾರ್ವೆಸ್ಟಿಂಗ್ ಆಂಟ್ಸ್) ರಾಗಿ, ಬತ್ತ, ಜೋಳದ ಕಾಳುಗಳ ಸಿಪ್ಪೆ ತೆಗೆದು ಶೇಖರಿಸುತ್ತವೆ. ತೇವದಿಂದ ಈ ಕಾಳುಗಳು ಮೊಳೆಯಲಾಗದಂತೆ, ಕಾಳುಗಳ ಭ್ರೂಣಗಳನ್ನು ಒಡೆದು ತುಂಬಿಕೊಳ್ಳುವುವು. ಕಾಳುಗಳು ತೇವಗೊಂಡರೆ ಅವನ್ನು ಗೂಡಿನಿಂದ ಹೊರತಂದು ಬಿಸಿಲಿನಲ್ಲಿ ಒಣಗಿಸಿ ಮತ್ತೆ ಗೂಡಿನೊಳಕ್ಕೆ ಕೊಂಡೊಯ್ಯುತ್ತವೆ.

ಬ್ರೆಜಿಲ್ ದೇಶದಲ್ಲಿ ವಾಸಿಸುವ ಇರುವೆ ಪ್ರಭೇದಗಳು ಮಾಂಸಾಹಾರಿಗಳು. ಇವುಗಳನ್ನು ಸೇನಾ ಇರುವೆಗಳು (ಆರ್ಮಿ ಆಂಟ್ಸ್) ಎನ್ನುವರು. ಇವು ಆಹಾರವಾಗಬಲ್ಲ ಪ್ರಾಣಿಯನ್ನು ಹುಡುಕಿ, ಮುತ್ತಿಗೆ ಹಾಕಿ ತಿನ್ನುವುವು. ಈ ಗುಂಪಿನಲ್ಲಿ ಅಸಂಖ್ಯಾತ ಇರುವೆಗಳಿರುತ್ತವೆ. ಒಟ್ಟು ಸಮೂಹವೇ ಸಾಲಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚರಿಸುವಾಗ ಯಾವುದಾದರೂ ಪ್ರಾಣಿ ಅಡ್ಡಬಂದರೆ ಆಕ್ರಮಣ ಮಾಡಿ ಸಾಯಿಸುತ್ತವೆ. ಉದಾ: ಹಾವುಗಳಿಗೆ ಮುತ್ತಿಕೊಂಡ ಇರುವೆಗಳು ಹಾವಿನ ಮೂಳೆ ಮಾತ್ರ ಉಳಿಸುತ್ತವೆ.

ಕೆಂಜಿಗ ಇರುವೆಗಳು ತೆಂಗಿನಮರ, ಮಾವಿನಮರದಲ್ಲಿ ಗೂಡು ಕಟ್ಟಿಕೊಂಡು ವಾಸಿಸುತ್ತವೆ. ತೆಂಗಿನಮರದ ಗರಿಗಳನ್ನು ಒಟ್ಟುಗೂಡಿಸಿ, ಗೂಡು ನೇಯ್ದು, ಅದರೊಳಗೆ ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ಗೂಡುಕಟ್ಟುವಾಗ ಎಲೆಗಳ ಅಂಚನ್ನು ಕೆಲಸಗಾರ ಇರುವೆಗಳು ಸರಿಯಾಗಿ ಹಿಡಿದು ನಿಲ್ಲಿಸುತ್ತವೆ. ಈ ಎಲೆಗಳನ್ನು ಅಂಟಿಸಬಲ್ಲ ರೇಷ್ಮೆಯಂಥ ವಸ್ತುವನ್ನು ಮರಿಗಳು ಉತ್ಪಾದಿಸುತ್ತವೆ. ಕೆಲವು ಕೆಲಸಗಾರ ಇರುವೆಗಳು ಮರಿಗಳನ್ನು ಎತ್ತಿಕೊಂಡು ಆ ಎಲೆಯ ಮೇಲೆ ಹಿಂದಕ್ಕೆ ಮುಂದಕ್ಕೆ ಓಡಾಡುತ್ತವೆ. ಮರಿ ಸುರಿಸಿದ ಅಂಟಿನಿಂದ ಎಲೆ ಅಂಟಿಕೊಳ್ಳುತ್ತದೆ.

ದೈತ್ಯ ಕರಿ ಇರುವೆಗಳು ಮರದ ಮೇಲೆಯೇ ವಾಸಿಸುತ್ತವೆ. ಆದರೆ ಅವುಗಳ ಗೂಡು ಮಾತ್ರ ಮರದ ಬುಡದಲ್ಲಿರುತ್ತದೆ.

ಕರಿ ಇರುವೆ ಜಾತಿಯಲ್ಲಿ ಕಟ್ಟಿರುವೆಗಳಿವೆ. ಇವು ಕಚ್ಚಿದಾಗ ಒಂದು ರೀತಿಯ ವಿಷಪದಾರ್ಥವನ್ನು ಹೊರಬಿಡುತ್ತವೆ. ಆದ್ದರಿಂದ ಇವು ಕಚ್ಚಿದ ಜಾಗದಲ್ಲಿ ಕಡಿತ ಹಾಗೂ ಊತ ಉಂಟಾಗುತ್ತದೆ.

ಸಹಜೀವನ, ವಿವಿಧ ಗುಂಪಿನ ಇರುವೆಗಳಲ್ಲಿ ಪ್ರಕಟವಾಗುವ ಸಾಮಾನ್ಯ ಅಂಶ. ಇವುಗಳಲ್ಲಿ ಬೇರೊಂದು ಪ್ರಭೇದದ ರಾಣಿ ಹಾಗೂ ಕೆಲಸಗಾರರ ಮೇಲೆಯೇ ಜೀವನ ಪರ್ಯಂತ ಅವಲಂಬಿತ ಶಾಶ್ವತ ಪರಾವಲಂಬಿ ಇರುವೆಗಳಿಂದ ಹಿಡಿದು ಕೇವಲ ಒಂದೆಡೆ ಸಂಯುಕ್ತ ಗೂಡಿನಲ್ಲಿರುವ ಭಿನ್ನ ಪ್ರಭೇದದ ಎರಡು ಗುಂಪಿನವರೆಗೆ ಬಗೆಗಳಿವೆ. ಈ ಅತಿರೇಕಗಳ ನಡುವಿನ ಘಟ್ಟಗಳಲ್ಲಿ ತಾತ್ಪೂರ್ತಿಕ ಪರಾವಲಂಬನೆ, ಗುಲಾಮರಂತೆ ಕೆಲಸಗಾರರನ್ನಿಟ್ಟುಕೊಳ್ಳುವುದು, ಪರಪ್ರಭೇದದ ಗೂಡಿನಲ್ಲಿ ಸ್ವತಂತ್ರವಾಗಿ ಆಹಾರ ಸೇವಿಸುವುದು ಹಾಗೂ ಕೆಲಸವನ್ನು ಹಂಚಿಕೊಂಡು ದುಡಿಯುವ ಮಿಶ್ರಗುಂಪು ಮುಂತಾದ ಪ್ರಕಾರಗಳಿವೆ. ಇರುವೆಗಳು ವಿವಿಧ ಬಗೆಯ ಇತರ ಸಂಧಿಪದಿ ಕೀಟಗಳೊಡನೆ ಸಹಜೀವನ ನಡೆಸಿ ಅವುಗಳೊಂದಿಗೆ ಶಾಶ್ವತ ಅಥವ ತಾತ್ಕಾಲಿಕ ಸಂಬಂಧವೇರ್ಪಡಿಸಿಕೊಂಡಿವೆ.

(ಎಲ್.ಎಸ್.ಜಿ.;ಕೆ.ಡಿ.)

**ಇರುವೆ ಭಕ್ಷಕ:** ಸ್ತನಿಗಳ ವರ್ಗದ ಈಡೆಂಟೇಟ ಮತ್ತು ಫೋಲಿಡೋಟ ಗಣಗಳಿಗೆ ಸೇರಿದ ಪ್ರಾಣಿ (ಆ್ಯಂಟ್ ಈಟರ್). ಈಡೆಂಟೇಟ ಗಣದಲ್ಲಿ ಪಿಪೀಲಿಕ ಭಕ್ಷಕಗಳು ಇರುವೆ ಭಕ್ಷಕಗಳು. ಪಿಪೀಲಿಕ ಭಕ್ಷಕಗಳು ದುಂಡು ತಲೆ ಮತ್ತು ವಾನರಗಳಂತೆ ಉದ್ದವಾದ ಕೈಕಾಲುಗಳನ್ನು ಹೊಂದಿವೆ. ಉದ್ದವಾದ ಮತ್ತು ಕೊಳವೆಯಾಕಾರದ ಮೂತಿಯ ತುದಿಯಲ್ಲಿ ಕಿರಿದಾದ ಬಾಯಿ ಇದೆ. ಕಿವಿಗಳು ಚಿಕ್ಕವು ಮತ್ತು ವೃತ್ತಾಕಾರದವು. ಮೈಮೇಲಿನ ಕೂದಲು ಮೋಟು ಮತ್ತು ದಟ್ಟವಾಗಿಯೂ ಅಥವಾ ಉದ್ದ ಮತ್ತು ಬಳುಕದಂತೆ ಒರಟಾಗಿಯೂ ಇರುವುದು. ಬಾಲದ ಮೇಲೆ ಕೂದಲು ವಿರಳವಿರಬಹುದು ಅಥವಾ ದಟ್ಟವಾಗಿರಬಹುದು; ಬಾಲ ಗ್ರಾಹಕ ಶಕ್ತಿಯುಳ್ಳದ್ದು (ಪ್ರಿಹೆನ್‌ಸೈಲ್) ಅಥವಾ ಇಲ್ಲದಿರಬಹುದು. ಹಸ್ತ ಅಥವಾ ಮುಂಗಾಲಿನ ಪಾದದ ಎಲ್ಲಾ ಐದು ಬೆರಳುಗಳು ಉದ್ದವಾಗಿದ್ದರೂ ಎರಡು, ಮೂರು ಬೆರಳುಗಳು ಮಿಕ್ಕವುಗಳಿಗಿಂತ ಇನ್ನೂ ಉದ್ದವಾಗಿವೆ. ಎಲ್ಲಾ ಬೆರಳುಗಳು ಉದ್ದವೂ, ಚೂಪೂ ಆದ ನ್ಖ'ಲ್ಲ. ಘ್ರಾಣ ಶಕ್ತಿ ಚುರುಕಾಗಿದೆ. ಆದರೆ ಕಣ್ಣು, ಕಿವಿ ಸ್ವಲ್ಪ ಮಂದ. ಬಲಿಷ್ಠ ನಖಗಳ ಸಹಾಯದಿಂದ ಇರುವೆ ಮತ್ತು ಗೆದ್ದಲು ಗೂಡುಗಳನ್ನು ಬಗಿದು, ದಿಕ್ಕೆಟ್ಟು ಚಲಿಸುತ್ತಿರುವ ಆ ಕೀಟಗಳನ್ನು ನೀಳವಾದ, ಅಂಟುಳ್ಳ ನಾಲಿಗೆಯಿಂದ ಹಿಡಿದು ಭಕ್ಷಿಸುವುವು. ದೈತ್ಯ ಪಿಪೀಲಿಕ ಭಕ್ಷಕ ಜೀರುಂಡೆ ಮರಿಹುಳಗಳನ್ನೂ, ಸೆರೆಯಲ್ಲಿ ಅಪರೂಪವಾಗಿ ಹಣ್ಣುಗಳನ್ನೂ ತಿನ್ನುವುದು. ಕತ್ತುಪಟ್ಟಿಯುಳ್ಳ ಪಿಪೀಲಿಕ ಭಕ್ಷಕ (ಕಾಲರ್ಡ್ ಇರುವೆ ಭಕ್ಷಕ) ಜೇನುಗಳನ್ನೂ ಭಕ್ಷಿಸುವುದೆಂದು ತಿಳಿದುಬಂದಿದೆ.

ದೈತ್ಯ ಪಿಪೀಲಿಕ ಭಕ್ಷಕ ನೆಲವಾಸಿ. ಹಿಂಗಾಲಿನ ಪಾದ ಊರುವಂತೆ ಹಸ್ತವನ್ನು ಪೂರ್ತಿ ಊರದೆ ಅದರ ಗೆಣ್ಣುಗಳ ಮೇಲೆ ನಡೆಯುವುದರಿಂದ ಕಾಲೆಳೆದುಕೊಂಡು ಹೋಗುವಂಥ ನಡುಗೆಯುಳ್ಳದ್ದು. ಕತ್ತುಪಟ್ಟಿಯುಳ್ಳ ಪಿಪೀಲಿಕ ಭಕ್ಷಕ ವೃಕ್ಷವಾಸಿ. ನೆಲಕ್ಕೆ ಇಳಿಯುವಾಗ ಹಸ್ತದ ಹೊರ ಪಾರ್ಶ್ವವನ್ನು ಊರಿ ನಡೆಯುವುದು. ಕನಿಷ್ಠ ಪಿಪೀಲಿಕ ಭಕ್ಷಕ (ಲೀಸ್ಟ್ ಇರುವೆ ಭಕ್ಷಕ) ವೃಕ್ಷವಾಸಿಯಾದರೂ ಮಟ್ಟದ ಭೂಮಿಯ ಮೇಲೆ ಸರಾಗವಾಗಿ ನಡೆಯಬಲ್ಲದು. ಆದರೆ ನಖಗಳನ್ನು ಒಳಮುಖವಾಗಿ ತಿರುಗಿಸಿಕೊಂಡು ನಡೆಯುವುದು.

ಪಿಪೀಲಿಕ ಭಕ್ಷಕಗಳು ಜೋಡಿಯಾಗಿ ದೊರಕುವುವು. ಹೆಣ್ಣು ಮತ್ತು ಅದರ ಮರಿ ಒಟ್ಟಿಗಿರುವುವು. ಜನನವಾಗುವುದು ಒಂದೇ ಮರಿ. ಮರಿ ತಾಯಿಯ ಬೆನ್ನಮೇಲೆ ಸವಾರಿ ಮಾಡುವುದು ಅಥವಾ ಅದರ ಬಾಲಕ್ಕೆ ಅಂಟಿಕೊಂಡಿರುವುದು. ದೈತ್ಯ ಪಿಪೀಲಿಕ ಭಕ್ಷಕದ ಗರ್ಭಾವಧಿ 190 ದಿನ. ಈ ಜಾತಿಯ ಒಂದು ಪ್ರಾಣಿ ಪ್ರಾಣಿಸಂಗ್ರಹಾಲಯದಲ್ಲಿ 14 ವರ್ಷ ಕಾಲ ಜೀವಿಸಿದ್ದ ನಿದರ್ಶನ ಉಂಟು.

ಪಿಪೀಲಿಕ ಭಕ್ಷಕಗಳು ಮರದ ಪೊಟರೆ, ಟೊಳ್ಳಾದ ಕೊರಡು ಮತ್ತು ಬೇರೆ ಪ್ರಾಣಿಗಳು ತೋಡಿದ ಬಿಲಗಳಲ್ಲಿ ಆಶ್ರಯ ಪಡೆಯುವುವು. ದೈತ್ಯ ಪಿಪೀಲಿಕ ಭಕ್ಷಕ ಚೆನ್ನಾಗಿ ಈಜಬಲ್ಲದು. ದೇಹದ ಉದ್ದ 16–120 ಸೆಂಮೀ ಬಾಲದ ಉದ್ದ 18–90 ಸೆಂಮೀ ಮೈತೂಕ 500 ಗ್ರಾಂ – 35 ಕಿಗ್ರಾಂ.

ಮಿರ್ಮಿಕೋಫೇಜಿಡೆ ಕುಟುಂಬದ ಮೂರು ಪ್ರಭೇದಗಳಲ್ಲಿ ಇರುವೆ ಭಕ್ಷಕಗಳನ್ನು ಸೇರಿಸಲಾಗಿದೆ – ದೈತ್ಯ ಪಿಪೀಲಿಕ ಭಕ್ಷಕ (ಮಿರ್ಮಕೋಫೇಗ ಟ್ರೈಡ್ಯಾಕ್ಟೈಲ), ಕತ್ತುಪಟ್ಟಿಯುಳ್ಳ ಪಿಪೀಲಿಕ ಭಕ್ಷಕ (ಟಮಾಂಡುವ ಟೆಟ್ರಡ್ಯಾಕ್ಟೈಲ), ಕನಿಷ್ಠ ಪಿಪೀಲಿಕ ಭಕ್ಷಕ (ಸೈಕ್ಲೋಪ್ಸ್ ಡೈಡ್ಯಾಕ್ಟೈಲಸ್)

ಮೆಕ್ಸಿಕೊ ಸೇರಿ ಉತ್ತರ ಅಮೆರಿಕದ ದಕ್ಷಿಣ ಭಾಗ, ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕದ ಉತ್ತರಭಾಗಗಳಲ್ಲಿ ಇರುವೆ ಭಕ್ಷಕಗಳು ಹರಡಿಕೊಂಡಿವೆ. ಉಷ್ಣವಲಯದ ಕಾಡುಗಳಲ್ಲೂ, ಹುಲ್ಲುಗಾಡು (ಸವಾನಾಸ್) ಗಳಲ್ಲಿಯೂ ವಾಸಿಸುವುವು.

ಫೋಲಿಡೋಟ ಗಣಕ್ಕೆ ಸೇರಿದ ಪ್ಯಾಂಗೊಲಿನ್ ಅಥವಾ ಶಲ್ಕವಂತ ಪಿಪೀಲಿಕ ಭಕ್ಷಕ ಆಫ್ರಿಕಾದ ಉಷ್ಣಪ್ರಾಂತಗಳು ಮತ್ತು ಭಾರತವೂ ಸೇರಿ ಆಗ್ನೇಯ ಏಷ್ಯಾಯಾದಲ್ಲಿ ದೊರಕುವುದು. ಇದು ಅರಣ್ಯ, ನಿಬಿಡ ಪೊದೆಗಳೇ ಅಲ್ಲದೆ ಹುಲ್ಲುಗಾವಲು ಪ್ರದೇಶಗಳಲ್ಲೂ ಸಿಕ್ಕುವುದುಂಟು. ಮಲಯ ಜನರ ಭಾಷೆಯಲ್ಲಿ ಪ್ಯಾಂಗೋಲಿನ್ ಎಂದರೆ ಚೆಂಡಿನಂತೆ ಉಂಡೆಯಾಗುವುದು ಎಂದರ್ಥ.

ದೇಹ ನೀಳವಾಗಿದ್ದು ಕ್ರಮೇಣ ಸಣ್ಣದಾಗುವಂಥದ್ದು. ಮೈ ಮೇಲ್ಭಾಗದಲ್ಲಿ ಒಂದರಮೇಲೊಂದು ಕೂಡುವಂಥ ಶಲ್ಕಗಳ ಹೊದಿಕೆ ಇದೆ. ಮೂತಿ, ಕೆನ್ನೆ, ಮುಖದ ಪಕ್ಕಗಳು, ಮುಂಗೊರಳು, ಉದರ, ಕೈಕಾಲುಗಳ ಒಳಭಾಗ – ಇವೆಲ್ಲಾ ಶಲ್ಕರಹಿತ. ಶಲ್ಕಗಳ ಹಿಂದಿನ ಅಂಚು ಹರಿತ ಮತ್ತು ಇವು ಚಲಿಸಬಲ್ಲವು; ಇವು ವಿಶಾಲವಾಗಿವೆ. ತೆಳು ಹಳದಿ ಮಿಶ್ರಿತ ಕಂದುಬಣ್ಣದವು. ಕೂದಲು ಮತ್ತು ಚರ್ಮದ ಬಣ್ಣ ಕಂದು.

ಪುಟ್ಟ ಮತ್ತು ಮೊನೆಯುಳ್ಳ ತಲೆ ಮತ್ತು ದಪ್ಪರೆಪ್ಪೆಗಳುಳ್ಳ ಸಣ್ಣ ಕಣ್ಣುಗಳು ಉಂಟು. ನಾಲಿಗೆ 25 ಸೆಂಮೀ ನಷ್ಟು ಚಾಚಲ್ಪಡಬಲ್ಲದು. ಇದರ ಸರಾಸರಿ ದಪ್ಪ 5 ಮಿಮೀ ಸ್ನಾಯುವಿನ ಬೇರುಗಳುಂಟು. ಎದೆ ಮೂಲಕ ಇಳಿದು ಹೋಗಿ ವಸ್ತಿ ಕುಹರದಲ್ಲಿ ಕೊನೆಗೊಳ್ಳುವುವು. ಮುಂದಿನ ಕಾಲುಗಳಿಗಿಂತ ಹಿಂದಿನ ಕಾಲುಗಳು ಹೆಚ್ಚು ಉದ್ದ ಮತ್ತು ಬಲವಾಗಿವೆ. ನಾಲ್ಕು ಪಾದಗಳಲ್ಲೂ ನಖಗಳುಳ್ಳ ಐದು ಬೆರಳುಗಳುಂಟು. ಹೆಣ್ಣಿಗೆ ಎದೆ ಪ್ರದೇಶದಲ್ಲಿ ಎರಡು ಸ್ತನಗಳಿವೆ. ಹೆಣ್ಣಿಗಿಂತ ಗಂಡು ಗಾತ್ರದಲ್ಲಿ ದೊಡ್ಡದು. ತಲೆ ಮತ್ತು ಮೈಯ ಉದ್ದ 30 ರಿಂದ 88 ಸೆಮೀ ಬಾಲದ ಉದ್ದ 35 ರಿಂದ 88 ಸೆಂಮೀ. ಪ್ರಾಯದ ಪ್ರಾಣಿಯ ತೂಕ 4.5 ರಿಂದ 27 ಕಿಗ್ರಾಂ.

ಶಲ್ಕಚರ್ಮದ ಇರುವೆ ಭಕ್ಷಕಗಳು ಭೂವಾಸಿ ಅಥವಾ ವೃಕ್ಷವಾಸಿಗಳು. ಭಾರತೀಯ ಪ್ಯಾಂಗೋಲಿನ್ ಭೂವಾಸಿ. ಗುಹೆಯುಳ್ಳ ಸುರಂಗವನ್ನು ಸರಾಗವಾಗಿ ತೋಡಬಲ್ಲದು. ಸುಲಭವಾಗಿ ಮರಗಳನ್ನು ಏರಬಲ್ಲದು. ಇದರ ಚಟುವಟಿಕೆ ರಾತ್ರಿ ವೇಳೆಯಲ್ಲಿ. ಪ್ರೌಢಾವಸ್ಥೆಗೆ ಬಂದ ಮೇಲೆ ಒಂಟಿಯಾಗಿ ಅಥವಾ ಜೋಡಿಯಾಗಿ ಇರುವುದು.

ಇದು ಅಂಜುಬುರುಕು ಪ್ರಾಣಿ. ಬಿಲ ತಲಪುವುದಕ್ಕೆ ಮುಂಚೆ ವೈರಿ ಎರಗಿದರೆ ಚೆಂಡಿನಂತೆ ಉಂಡೆಯಾಗುವುದು ಹಾಗೂ ಚೂಪಂಚಿನ ಶಲ್ಕಗಳು ಸೆಟೆದುನಿಂತು

ಮುಳ್ಳುಕವಚದಂತಾಗುವುವು. ಇನ್ನೊಂದು ರಕ್ಷಣೋಪಾಯ, ಗುದದ್ವಾರದ ಸಮೀಪದಿಂದ ಗಬ್ಬು ನಾತದ ದ್ರವ ಹೊರಸೂಸುವುದು.

ರಾತ್ರಿ ಸಂಚಾರ ಹೊರಟು ವಾಸನಾಶಕ್ತಿಯಿಂದ ಪತ್ತೆಹಚ್ಚಿದ ಇರುವೆ, ಗೆದ್ದಲು ಹಾಗೂ ಬೇರೆ ಮೆದುದೇಹದ ಕೀಟಗಳನ್ನು ಕಬಳಿಸುವುದು. ರಾತ್ರಿ ಒಂದಕ್ಕೆ 150–200 ಗ್ರಾಂ ಗೆದ್ದಲು ಭಕ್ಷಿಸುವುದೆಂದೂ ಜಠರದಲ್ಲಿ ಎರಡು ಲೀಟರಿನಷ್ಟು ಕೀಟಮಿಶ್ರಿತ ಆಹಾರ ಇರುವುದೆಂದೂ ವರದಿಯಾಗಿದೆ.

ಪ್ಯಾಂಗೋಲಿನ್ ಒಂದು ಅಥವಾ ಎರಡು ಮರಿಗಳನ್ನು ಹಾಕುವುದು. ಮರಿಗಳು ತಾಯಿಯ ಬೆನ್ನಮೇಲೆ ಸವಾರಿ ಮಾಡುವುವು ಅಥವಾ ಬಾಲಕ್ಕೆ ಅಂಟಿಕೊಳ್ಳುವುವು.

ಮ್ಯಾನಿಡೆ ಕುಟುಂಬದ ಮ್ಯಾನಿಸ್ ಕ್ರಾಸಿಕಾಡೇಟ ಎಂದು ಕರೆಯಲ್ಪಡುವ ಭಾರತೀಯ ಪ್ಯಾಂಗೊಲಿನ್ ಭಾರತ ಮತ್ತು ಶ್ರೀಲಂಕ ನಿವಾಸಿ. ಇದೇ ವಂಶದ ವಿವಿಧ ಪ್ರಭೇದಗಳು ಮಲಯಾ, ಚೀನಾ ಹಾಗೂ ಆಫ್ರಿಕಾಗಳಲ್ಲಿ ದೊರೆಯುವುವು. (ಡಿ.ಎಸ್.)

**ಇರುವೆ ಸಿಂಹ:** ಅಕಶೇರುಕಗಳ ಸಂಧಿಪದಿಗಳ ವಂಶಕ್ಕೆ ಸೇರಿದ ಕೀಟ (ಆಂಟ್‌ಲೆಯನ್). ನೋಡಲು ಕೊಡತಿಹುಳುವನ್ನು ಹೋಲುತ್ತವೆ. ಆದರೆ ಅವುಗಳಷ್ಟು ದೂರ ಹಾರಲಾರವು. ಆದ್ದರಿಂದ ಇವನ್ನು ಪ್ರತ್ಯೇಕವಾಗಿ ನ್ಯೂರಾಪ್ಟಿರಾ ಗಣಕ್ಕೆ ಸೇರಿಸಲಾಗಿದೆ. ಉದ್ದ 4 ಸೆಂಮೀ. ಸಡಿಲವಾದ ಮರಳುದಿಣ್ಣೆ, ಬಂಡೆ ಮತ್ತು ಮರದ ಕೆಳಗಿನ ಮಣ್ಣು ಮುಂತಾದುವು ವಾಸಸ್ಥಾನ. ಹಗಲಿನಲ್ಲಿ ಮುರಿದ ಕೊಂಬೆಯ ಮೇಲೆ ಸ್ತಬ್ಧವಾಗಿ ಕುಳಿತಿರುವ ಇವುಗಳನ್ನು ಕಂಡುಹಿಡಿಯುವುದು ಕಷ್ಟ ಕಂದು ಬಣ್ಣ ಮತ್ತು ತೆಳುವಾದ ರೆಕ್ಕೆಗಳು ಮರದ ತೊಗಟೆಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. ರಾತ್ರಿಯಲ್ಲಿ ಸಂಗಾತಿಯ ಹುಡುಕಾಟದಲ್ಲಿ ಸ್ವಲ್ಪ ಮಟ್ಟಿಗೆ ಇತ್ತಿಂದಿತ್ತ ಹಾರಾಡುತ್ತವೆ. ಇವುಗಳ ಎರಡು ಜೊತೆ ರೆಕ್ಕೆಗಳು ಉದ್ದನೆಯ ಚೂಪಾದ ಮತ್ತು ಬಹಳಷ್ಟು ನಾಳಗಳಿರುವ ತೆಳು ಪರದೆಗಳಂತಿವೆ. ಆಂಟೆನಾ ದಪ್ಪಗಿರುತ್ತವೆ, ಉದ್ದನೆಯ ಹೊಟ್ಟೆ ಭಾಗ ಚೂಪಾಗಿದೆ. ನೆಲದ ಮೇಲೆ ನೇರವಾಗಿ ನಡೆದಾಡಲಾರವು. ನಡೆಯುವಾಗ ವಕ್ರ ಪಥವನ್ನು ನೆಲದಮೇಲೆ ಉಳಿಸುವುದರಿಂದ ಡೂಡ್ಲಿಬಗ್ಸ್ ಎಂಬ ಪರ್ಯಾಯ ಹೆಸರಿದೆ.

ಜೀವನ ಚಕ್ರ ಆರಂಭವಾಗುವುದು ಮೊಟ್ಟೆಯಿಂದ. ಮೊಟ್ಟೆ ಇಡುವಾಗ ಕೀಟವು ತನ್ನ ಹೊಟ್ಟೆಯ ತುದಿಯಿಂದ ಮಣ್ಣು ಅಥವಾ ಮರಳನ್ನು ಪದೆ ಪದೆ ತಟ್ಟುತ್ತದೆ. ನಂತರ ಸಡಿಲವಾದ ಮಣ್ಣಿನಲ್ಲಿ ಅಥವಾ ಮರಳಿನಲ್ಲಿ ಹೊಟ್ಟೆಯ ತುದಿಯನ್ನು ಹುದುಗಿಸಿ ಮೊಟ್ಟೆಯನ್ನಿಡುತ್ತದೆ. ಮೊಟ್ಟೆಯಿಂದ ಹೊರಬಂದ ಲಾರ್ವಾ ಅತಿಯಾಗಿ ತಿನ್ನುವ ಭಯಂಕರ ಕೀಟ. ಅಗಲದೇಹದ, ಉದ್ದ ಕುತ್ತಿಗೆ, ಮೂರು ಜೊತೆ ಕಾಲುಗಳುಳ್ಳ ಕೀಟ. ರೆಕ್ಕೆ ಇರುವುದಿಲ್ಲ. ತಲೆಯ ಭಾಗದಲ್ಲಿ ಕತ್ತಿ ಅಲಗಿನಂತಹ ಒಂದು ಜೊತೆ ದವಡೆ ಮತ್ತು ಅವುಗಳ ಅಂಚಿನಲ್ಲಿ ಟೊಳ್ಳಾದ ಚೂಪಾದ ಮೊನೆಗಳಿರುತ್ತವೆ. ಪ್ರಾಣಿಜನ್ಯ ಮತ್ತು ಸಸ್ಯಜನ್ಯ ವಸ್ತುಗಳನ್ನು ಆಹಾರವನ್ನಾಗಿ ಬಳಸುತ್ತವೆ. ಲಾರ್ವಾಗಳು ಎಲೆಮರೆಯಲ್ಲಿ ಅಥವಾ ರೆಂಬೆಕೊಂಬೆಗಳ ಕೆಳಗೆ ಅಥವಾ ಮಣ್ಣಿನಲ್ಲಿ ಹುದುಗಿ ಕುಳಿತಿರುತ್ತವೆ. ಲಾರ್ವಾ ಸಡಿಲವಾದ ಮಣ್ಣಿನಲ್ಲಿ ಸಣ್ಣನೆಯ ವರ್ತುಲಾಕಾರದ ಗುಂಡಿಗಳನ್ನು ಮಾಡುತ್ತದೆ. ಗುಂಡಿಗಳನ್ನು ಮಾಡಲು ಹಿಮ್ಮುಖವಾಗಿ ಚಲಿಸುತ್ತ ದವಡೆಯಿಂದ ಮಣ್ಣನ್ನು ಅಗೆದು ಮೇಲಕ್ಕೆ ಹಾಕುತ್ತದೆ. ಪ್ರತಿ ಸಲ ಚಲಿಸಿದಾಗಲೂ ಗುಂಡಿಯ ಗಾತ್ರ ಹೆಚ್ಚಾಗಿ ಇದು ಮಣ್ಣಿನ ಆಳಕ್ಕೆ ಹೋಗುತ್ತಿರುತ್ತದೆ. ಗುಣಿಗಳ ಆಳ ಮತ್ತು ಅಗಲ ಸು. 2–4 ಸೆಂಮೀ. ಗುಣಿಗಳಲ್ಲಿ ತಮ್ಮ ದವಡೆಗಳನ್ನು ಮಾತ್ರ ತೆರೆದಿಟ್ಟು ಸುಮ್ಮನೆ ಅಲುಗಾಡದೆ ಕುಳಿತಿರುತ್ತವೆ. ಗೂಡಿನ ಅಂಚಿನಲ್ಲಿ ಓಡಾಡುವ ಇರುವೆಗಳು ಜಾರಿ ಗುಂಡಿಯಲ್ಲಿ ಬೀಳುವುವು. ಆಗ ಈ ಲಾರ್ವಾ ತನ್ನ ದವಡೆಯಿಂದ ಇರುವೆಗಳನ್ನು/ ಕೀಟಗಳನ್ನು ಹಿಡಿದು ತನ್ನ ದವಡೆಯಲ್ಲಿರುವ ಟೊಳ್ಳಾದ ಮೊನೆಗಳಿಂದ ಅವುಗಳ ರಸವನ್ನು ಹೀರಿ ನಿರ್ಜೀವ ದೇಹವನ್ನು ಹೊರಕ್ಕೆಸೆಯುತ್ತದೆ. ಅನಂತರ ಪುನಃ ಗೂಡನ್ನು ಸುಸ್ಥಿತಿಗೆ ತಂದು ಮತ್ತೊಂದು ಕೀಟದ ನಿರೀಕ್ಷೆಯಲ್ಲಿರುತ್ತದೆ. ಲಾರ್ವಾ ಬೆಳೆದಂತೆಲ್ಲ ಗೂಡಿನ ಗಾತ್ರವನ್ನೂ ದೊಡ್ಡದು ಮಾಡಿಕೊಳ್ಳುತ್ತದೆ. ಸಂಪೂರ್ಣವಾಗಿ ಬೆಳೆದ ಲಾರ್ವಾ ರೇಷ್ಮೆ ಎಳೆ ಹಾಗೂ ಮಣ್ಣಿನ ಕಣದಿಂದ ಕೋಶ ಕಟ್ಟಲಾರಂಭಿಸುತ್ತದೆ. ಲಾರ್ವಾದ ಹಂತ ಪೂರೈಸಲು ಎರಡರಿಂದ ಮೂರು ವಾರಗಳು ಬೇಕು. ಬೆಳವಣಿಗೆಯ ಅನಂತರ ಮಣ್ಣಿನಲ್ಲಿ ಹುದುಗಿರುವ ಕೋಶಗಳಿಂದ ಪುಟ್ಟ ಕೀಟಗಳು ಮಣ್ಣಿನ ಮೇಲ್ಪದರಕ್ಕೆ ಬರುವುವು. ಅನಂತರ 20 ನಿಮಿಷಗಳಲ್ಲಿ ರೆಕ್ಕೆ ಬೆಳೆಯುತ್ತವೆ. ರೆಕ್ಕೆ ಮೂಡಿದ ಅನಂತರ ಸಂಗಾತಿಯನ್ನರಸಿ ಇತ್ತಿಂದತ್ತ ಹಾರಲು ಪ್ರಾರಂಭಿಸುತ್ತವೆ.

(ಪಿ.ಆರ್.ಎನ್.)

**ಇರ್ನೋಟ:** ಕಣ್ಣಿಗೆ ಕಾಣುವ ಒಂದೊಂದು ವಸ್ತುವೂ ಎರಡಾಗಿ ಕಾಣುವುದು (ಡಿಪ್ಲೋಪಿಯ). ಎರಡು ಕಣ್ಣುಗಳೂ ಒಂದೇ ಹೊತ್ತಿನಲ್ಲಿ ಒಂದು ವಸ್ತುವಿನ ಮೇಲೆ ಕೂಡದಿರುವುದೇ ಕಾರಣ. ಚೆನ್ನಾಗಿರುವ ಕಣ್ಣಿಗೆ ದಿಟಬಿಂಬ ಕಂಡರೆ ಕೆಟ್ಟಿರುವ ಕಣ್ಣು ಹುಸಿಬಿಂಬವನ್ನು ತೋರುತ್ತದೆ. ಕಣ್ಣುಗುಡ್ಡೆಯನ್ನು ಬೆರಳ ತುದಿಯಿಂದ ತುಸು ಒತ್ತಿ ಹಿಡಿದರೆ ಯಾರಿಗಾದರೂ ಇರ್ನೋಟ ಕಾಣುತ್ತದೆ. ಮೆಳ್ಳೆಗಣ್ಣಿನಲ್ಲಿ (ಸ್ಕ್ವಿಂಟ್) ಇದು ಬಲು ಸಾಮಾನ್ಯ ತೊಡಕು. ಇರ್ನೋಟ ಒಂಟಿ ಕಣ್ಣಿನದೋ ಇಗ್ಗಣ್ಣಿನದೋ ಆಗಿರಬಹುದು. ಒಂಟಿಕಣ್ಣಿನ ಇರ್ನೋಟದ ಕಾರಣ ಕಣ್ಣಲ್ಲಿ ಓಸರಿಸುವ ನಡುವರ್ತಿಗಳ (ರಿಫ್ರ್ಯಾಕ್ಟಿವ್ ಮೀಡಿಯಂ) ವ್ಯತ್ಯಾಸಗಳು, ಕಣ್ಣುನೋಟದ ಕುಂದುಗಳು, ಅಸಮನಿಟ್ಟು (ಅಸ್ಟಿಗ್ಮಾಟಿಸಂ), ಎಡೆಬಿಟ್ಟ ಇಲ್ಲವೇ ಕೆಳಬಿದ್ದ ಕಣ್ಣಮಸೂರ (ಲೆನ್ಸ್), ಆಗತಾನೆ ತಲೆದೋರಿರುವ ಮೋತಿ ಬಿಂದು (ಕ್ಯಾಟರಾಕ್ಟ್), ಕಣ್ಣಿನ ಕೋಡುಪೊರೆಯ (ಕಾರ್ನಿಯಲ್) ಹೂ–ಆಗಿರಬಹುದು. ಒಂಟಿಕಣ್ಣಿನ ಇರ್ನೋಟದ ಇನ್ನಷ್ಟು ಕಾರಣಗಳು: 1) ಮೆಳ್ಳೆಗಣ್ಣಿನಲ್ಲಿ ಇದ್ದಂತೆ, ಕಣ್ಣುಗುಡ್ಡೆಯನ್ನು ಆಡಿಸುವ ಕಣ್ಣು ಹೊರಗಣ ಸ್ನಾಯುಗಳಲ್ಲಿ ಒಂದೋ ಎರಡೋ ನಿರ್ಬಲವಾದರೆ, ಇಲ್ಲವೆ ಬಹಳ ಎಳೆದರೆ ಎರಡು ಕಣ್ಣುಗಳೂ ಒಂದೇ ವಸ್ತುವನ್ನು ನೋಡಿದಂತಾಗುವುದು. ಆಗ ಪಕ್ಕಕ್ಕೆಳೆವ, ಹುಸಿಬಿಂಬ ತೋರುವ ಒಂದು ಕಣ್ಣನ್ನು ಮುಚ್ಚಿದರೆ ಇರ್ನೋಟ ಕಳೆವುದು. ಉದ್ದನಾದ ಸ್ನಾಯುವನ್ನು ಶಸ್ತ್ರಕ್ರಿಯೆಯಿಂದ ಸಾಕಷ್ಟು ಮೊಟಕು ಮಾಡಿ, ಮೋಟಾದುದನ್ನು ಕಿತ್ತು ಇನ್ನೂ ಹಿಂದಕ್ಕೆ ಹೊಲಿದು ಮೆಳ್ಳೆಗಣ್ಣನ್ನು ಸರಿಪಡಿಸಬಹದು; 2) ಒಂದು ಕಣ್ಣೊಳಗಿನ ಬಿಂಬದ ಜಾಗವನ್ನು ಕನ್ನಡಕದಿಂದ ಬದಲಿಸಿದರೂ ಎರಡಾಗಿ ಕಾಣುವುದು; ಕ್ಯಾಟರಾಕ್ಟಿನ ಚಿಕಿತ್ಸೆಯಾಗಿ ಒಂಟಿ ಕಣ್ಣಿನ ಮಸೂರವನ್ನು ತೆಗೆದಾಗಲೂ ಎರಡಾಗಿ ತೋರುವುದು; 3) ಕಣ್ಗುಳಿಯಲ್ಲಿ (ಆರ್ಬಿಟ್) ಗಂತಿಯೋ, ಕುರುವೋ ಎದ್ದರೆ ಕಣ್ಗುಡ್ಡೆ ಒತ್ತಿದಂತಾಗುವುದೂ ಒಂದು ಕಾರಣ: ಘನದರ್ಶನದಲ್ಲಿ (ಸ್ಟೀರಿಯೊಸ್ಕೊಪಿ) ವಸ್ತುಗಳ ಗಾತ್ರ, ಆಕಾರಗಳು ಚೆನ್ನಾಗಿ ಕಾಣಲು ಇರ್ನೋಟವೇ ಕಾರಣ. ಎರಡೂ ಕಣ್ಣುಗಳ ನೇರ ದಿಟ್ಟಿಗಳೂ ಒಂದೆಡೆ ಸಂಗಮಿಸದಿದ್ದರೆ (ಫೋಕಸ್) ಎರಡಾಗಿ ತೋರುವುದು. ಕಣ್ಗುಡ್ಡೆಗಳ ರೋಗಗಳು, ತಲೆಯ ನರಗಳ ಅರನಾರಿಯಿಂದ (ಪೆರಾಲಿಸಿಸ್) ಸ್ನಾಯು ಆಡದಂತಾಗುವುದು. ಹಿಮ್ಮಿದುಳಿನ (ಸೆರಿಬೆಲ್ಲಂ), ಮುಖ್ಯ ಮಿದುಳಿನ (ಸೆರಿಬ್ರಂ) ಮತ್ತು ಮಿದುಳುಪೊರೆಗಳ (ಮೆನಿಂಜಿಸ್) ರೋಗಗಳಲ್ಲಿ ಇದು ಸಾಮಾನ್ಯ. ಕಾಣಿಸುವ ಎರಡು ಪ್ರತಿಬಿಂಬಗಳಲ್ಲಿ ದೂರದಲ್ಲಿರುವಂತೆ ತೋರುವುದೇ ದಿಟವಾದುದು, ಇನ್ನೊಂದು ಹುಸಿ. ವಸ್ತು ಎರಡಾಗಿ ಕಾಣುವಾಗ, ದಿಟ, ಹುಸಿ ಬಿಂಬಗಳು ಆಯಾ ಕಣ್ಣಿನ ಪಕ್ಕಗಳಲ್ಲಿದ್ದು ಅಡ್ಡಡ್ಡನಾಗಿರಬಹುದು; ಮೇಲೋ ಕೆಳಗೋ ಇದ್ದು ನೀಟಾಗಿರಬಹದು (ವರ್ಟಿಕಲ್). (ಡಿ.ಎಸ್.ಎಸ್.)

**ಇರ್ಲಿಂಗಿ:** ಹೆಣ್ಣು ಗಂಡುಗಳ ಲಿಂಗಗಳಿಗೆ ವಿಶಿಷ್ಟವಾದ ಎರಡು ತರದ ಲಕ್ಷಣಗಳನ್ನೂ ಹೊಂದಿರುವ ಜೀವಿ (ಹರ್ಮಫ್ರಾಡೈಟ್). ಯುಗ್ಮಕದ ಬೆಳವಣಿಗೆಯಲ್ಲಿ ಜನನಾಂಗದ ಲಿಂಗ ನಿರ್ಧಾರದೊಂದಿಗೇ ಇತರ ಅಂಗಾಂಗಗಳೂ ಅದೇ ಲಿಂಗದವಕ್ಕೆ ತಕ್ಕ ಹಾಗೆ ಬೆಳೆಯುತ್ತವೆ. ಹೀಗೆ ವೃಷಣ ಬೆಳೆದ ಕೂಸಿನಲ್ಲಿ ಶಿಶ್ನ, ಮುನ್ನಿಲುಗ (ಪ್ರಾಸ್ಟೇಟ್), ಇತ್ಯಾದಿಗಳೂ, ಅಂಡಾಶಯ ಬೆಳೆದ ಕೂಸಿನಲ್ಲಿ ಯೋನಿ, ಗರ್ಭಕೋಶ, ಗರ್ಭನಾಳ ಮುಂತಾದವೂ ಬೆಳೆವುವು. ಆದರೆ ಶಿಶ್ನದ ಅಂಕುರಾಂಗ ಹೆಣ್ಣಿನಲ್ಲಿ ಹೆಂಬುಲ್ಲವಾಗೂ (ಕ್ಲೈಟೊರಿಸ್) ಗರ್ಭಕೋಶದ ಅಂಕುರಾಂಗ ಗಂಡಿನಲ್ಲಿ ಗಂಡುಗರ್ಭಕೋಶವಾಗೂ (ಯುಟೆರಸ್ ಮ್ಯಾಸ್ಕುಲೈನಸ್) ಉಳಿದಿರುತ್ತವೆ. ಹರೆಯಕ್ಕೆ ಬಂದ ಜೀವಿಗಳಲ್ಲಿ ಈ ಅಂಗರಚನೆಗಳಲ್ಲಿನ ಬದಲಾವಣೆಯೊಂದಿಗೆ ಎಂದಿನಂತೆ ಅದೇ ಲಿಂಗದ ಗೊತ್ತಾದ ವರ್ತನೆಗಳೂ ಹೊರಗಾಣುತ್ತವೆ. ಅಂದರೆ ಸಾಮಾನ್ಯವಾಗಿ ಗಂಡಿನ ಒಲವು ಹೆಣ್ಣಿನ ಕಡೆಗೂ ಹೆಣ್ಣಿನ ಒಲವು ಗಂಡಿನ ಕಡೆಗೂ ವಾಲುತ್ತವೆ.

ಕೆಲವೇಳೆ ಹೀಗೆ ಸಹಜವಾಗಿ ಬೆಳೆಯುವುದಕ್ಕೆ ಅಡ್ಡಿಯಾಗಿ ಗಂಡು ಹೆಣ್ಣಿನ ಅಂಗಗಳು ಎರಡೂ ಒಂದೇ ವ್ಯಕ್ತಿಯಲ್ಲಿ ಇರಬಹುದು ; ಒಂದು ಜೀವಿಯಲ್ಲಿ ವೃಷಣ, ಅಂಡಾಶಯ ಈ ಎರಡು ಜನನಾಂಗ ಗ್ರಂಥಿಗಳೂ ಇರಬಹುದು; ಇಲ್ಲವೇ ಅಂಡಾಶಯ ವೃಷಣ (ಓವೊಟೆಸ್ಟಿಸ್) ಗ್ರಂಥಿ ಮಾತ್ರ ಇರಬಹುದು. ಈ ಜೀವಿಯಲ್ಲಿ ಇತರ ಜನನಾಂಗಗಳು ಬೇರೆಬೇರೆ ಆಗಿರಬಹುದು. ಒಳಗಿನ ಜನನಾಂಗಕ್ಕೂ ಹೊರಗಾಣುವವಕ್ಕೂ ಹೊಂದಾಣಿಕೆ ಕಾಣದಾಗುತ್ತದೆ. ಹೊರಗೆ ಶಿಶ್ನ ಇದ್ದರೂ ಒಳಗೆ ಗರ್ಭಕೋಶ ಇರಬಹುದು; ಹೊರಗಡೆ ಯೋನಿ ಕಾಣುತ್ತಿದ್ದರೂ ಒಳಗೆ ಗಂಡಿನ ಜನನಗ್ರಂಥಿ ಇರಬಹುದು. ಇವು ತೋರಿಕೆಯ ಇರ್ಲಿಂಗಿಗಳು. ಅಂದರೆ, ಇವು ಎರಡು ಲಿಂಗಗಳ ಪ್ರಭಾವಗಳನ್ನೂ ಒಮ್ಮೆಗೇ ತೋರವು. ಸಂತಾನಬಲವಿಲ್ಲದ ಇವು ನಪುಂಸಕ ಜೀವಿಗಳು. ಹೆಣ್ಣುಗಂಡಿನ ಜನನಾಂಗಗಳಲ್ಲಿ ಹಲವು ಸರಿಯಾಗಿರವು. ಹೆಣ್ಣಂತಿರುವ ಗಂಡೂ ಗಂಡಂತಿರುವ ಹೆಣ್ಣೂ ಇರಬಹುದು. ಆದರೂ ಇವು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಹರೆಯಕ್ಕೆ ಬರುವ ತನಕ ನಿಜವಾದ ಲಿಂಗದ ಲಕ್ಷಣಗಳು ಸರಿಯಾಗಿ ಹೊರದೋರವು.

ನಿಸರ್ಗದಲ್ಲಿ ಎಷ್ಟೊ ಗಿಡಗಳು, ವಿಕಾಸದಲ್ಲಿ ಕೆಳ ಮಟ್ಟದಲ್ಲಿರುವ ಕೆಲವು ಹುಳುಗಳು, ಮೃದ್ವಂಗಿಗಳು, ಕಠಿಣಚರ್ಮಿಗಳು (ಕ್ರಸ್ಟೇಷಿಯನ್ಸ್) ಇತ್ಯಾದಿ ವರ್ಗಗಳ ಪ್ರಾಣಿಗಳೂ ಇರ್ಲಿಂಗಿಗಳು. ಇರ್ಲಿಂಗಿಯಲ್ಲಿ ಅಂಡಗಳು ಅದರದೇ ವೃಷಣದ ವೀರ್ಯಾಣುಗಳೊಂದಿಗೆ ಕೂಡಲಾರವು. ಕೂಡಿದರೂ ಫಲವಿಲ್ಲ. ಸಂತಾನ ಸರಿಯಾಗಿ ಬೆಳೆಯದು. ಎರೆಹುಳು, ಬಸವನ ಹುಳುಗಳಲ್ಲಿ ಎರಡು ಲಿಂಗಗಳೂ ಬೇರೆ ಬೇರೆ ಆಗಿದ್ದರೂ ತನ್ನಲ್ಲಿ ತನ್ನಿಂದಲೇ ಫಲವಂತಿಕೆ ಆಗದೆ ಎರಡು ಪ್ರಾಣಿಗಳು ಜೋಡಿಬಿದ್ದು ವೀರ್ಯಾಣುಗಳನ್ನು ಒಂದಕ್ಕೊಂದು ಅದಲುಬದಲು ಮಾಡಿಕೊಳ್ಳುತ್ತವೆ. ಬಲುಮಟ್ಟಿಗೆ ಎಲ್ಲ ಬೆನ್ನೆಲುಬಿನ ಪ್ರಾಣಿಗಳಲ್ಲೂ ಬೆನ್ನುಲುಬಿ ಸ್ತನಿಯಾದ ಮಾನವನಲ್ಲೂ ಗಂಡು, ಹೆಣ್ಣು ಬೇರೆ ಬೇರೆ.

ಲಿಂಗ ನಿರ್ಧಾರ : ಒಂದು ಪ್ರಾಣಿಯ ಒಂದೊಂದು ಜೀವಕಣದಲ್ಲಿರುವ ವರ್ಣತಂತುಗಳು (ಕ್ರೊಮೋಸೋಮ್ಸ್) ಆ ಪ್ರಾಣಿಕುಲಕ್ಕೆ ತಕ್ಕಂತೆ ಗೊತ್ತಾದ ಸಂಖ್ಯೆಯಲ್ಲಿರುವುವು. ಇವುಗಳಲ್ಲಿ X ಕ್ರೊಮೋಸೋಮುಗಳೊಡನೆ ಸೇರುವ, ಹೆಣ್ಣಿನ ಜೀನ್‍ಗಳನ್ನು ಹೊತ್ತಿರುವ ಕ್ರೊಮೋಸೋಮು X ಕೂಡಿದಾಗಲೂ ಗಂಡಿನ ಜೀನ್‍ಗಳಿರುವ Y ಕೂಡಿದಾಗಲೂ ಲಿಂಗ ನಿರ್ಧಾರವಾಗುವುದು (ಲಿಂಗದ ಕ್ರೊಮೋಸೋಮುಗಳು). ಮಿಕ್ಕ ಕ್ರೊಮೋಸೋಮು ಜೊತೆಗಳು ಮೈಗೆ ಸಂಬಂಧಪಟ್ಟ ಅಲಿಂಗ ಕ್ರೊಮೋಸೋಮುಗಳು (ಆಟೊಸೋಮ್ಸ್). ಉದಾಹರಣೆಗಾಗಿ, ಮಾನವನಲ್ಲಿ 22 ಜೊತೆ ಅಲಿಂಗ ಕ್ರೊಮೋಸೋಮುಗಳಿವೆ. ಹೆಣ್ಣಲ್ಲಿ XX ಮತ್ತು ಗಂಡಲ್ಲಿ XY ಲಿಂಗದ ಕ್ರೊಮೋಸೋಮುಗಳಿವೆ. Y ಕ್ರೊಮೋಸೋಮು X ಗಿಂತ ಸಣ್ಣದು.

ಅಂಡಾಶಯಗಳೂ ವೃಷಣಗಳೂ ಸರಿಯಾಗಿ ಬೆಳೆದು ಹರೆಯದ ಹೊತ್ತಿಗೆ ಚೆನ್ನಾಗಿ ಕೆಲಸ ಮಾಡುವುದು ಮುಖ್ಯ. ಜನನಾಂಗ ಗ್ರಂಥಿಗಳ ರಸಗಳಿಂದ ಗಂಡಿನ, ಹೆಣ್ಣಿನ ಅಂಗಲಕ್ಷಣಗಳು (ಗಡ್ಡ, ಮೀಸೆಗಳು, ಸ್ತನಗಳು,) ಹರೆಯದಲ್ಲಿ ಕಾಣಿಸಿಕೊಂಡು ಜನನಾಂಗ ನಾಳಗಳು (ಶಿಶ್ನ, ಗರ್ಭಕೋಶ, ಇತ್ಯಾದಿ) ಸರಿಯಾಗಿ ಪೂರ್ತಿಯಾಗಿ ಬೆಳೆಯುತ್ತವೆ. ಹರೆಯಕ್ಕೆ ಬರಲು ಎಲ್ಲ ಅಂತಃಸ್ರಾವಿಕ ಗ್ರಂಥಿಗಳೂ ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡಬೇಕು.

ವ್ಯಕ್ತಿತ್ವ, ನಡೆ, ನುಡಿ, ಉಡುಪು, ತನ್ನ ರೂಪದ ವ್ಯಾಮೋಹ, ಮನಸ್ಸು, ಭಾವನೆಗಳಲ್ಲಿ ಹರೆಯದ ಹೊತ್ತಿಗೆ ಬದಲಾವಣೆಗಳಾಗುತ್ತವೆ. ಗೂಳಿಗೂ ಎತ್ತಿಗೂ ಇರುವ ವ್ಯತ್ಯಾಸವನ್ನು ಇಲ್ಲಿ ನೆನೆಯಬಹುದು. ಹೆಣ್ಣಂತಿರುವ ಗಂಡಿಗೆ ಗಂಡಿನಲ್ಲೇ ಒಲವು, ಗಂಡಂತಿರುವ ಹೆಣ್ಣಿಗೆ ಹೆಣ್ಣಿನಲ್ಲೇ ಒಲವು. ಇದೇ ಸ್ವಲಿಂಗತನ (ಹೋಮೊಸೆಕ್ಷುಯಾಲಿಟಿ).

ಲಿಂಗನಿರ್ಧಾರವಾಗಲು ಆಯಾ ಜಾತಿಯ ಜೀವಿಗೆ ತಕ್ಕಂತೆ ಜೀವಕಣಗಳಲ್ಲಿ ಕ್ರೊಮೋಸೋಮುಗಳು ಸರಿಯಾದ ಸಂಖ್ಯಾ ಪ್ರಮಾಣದಲ್ಲಿ ಇರುವುದು ಬಲು ಮುಖ್ಯ. ಅದರಲ್ಲೂ ಭ್ರೂಣದ ಬೆಳವಣಿಗೆಯ ಮೊದಲಲ್ಲಿ ಇನ್ನೂ ಮುಖ್ಯ. ಕ್ರೊಮೋಸೋಮುಗಳು ಮೈ ಅಂಗಗಳ ಬೆಳವಣಿಗೆಗೆ ದಾರಿ ತೋರುತ್ತವೆ. ಇವುಗಳ ಸಂಖ್ಯಾ ಪ್ರಮಾಣಗಳು ಸರಿಯಾಗಿಲ್ಲದಲ್ಲಿ ಭ್ರೂಣಗಳು ಸರಿಯಾಗಿ ಬೆಳೆಯದೆ ಬರಡಾಗಿ ಇಬ್ಬಂದಿ ಲಿಂಗ ಲಕ್ಷಣಗಳನ್ನು ತೋರುತ್ತವೆ. ಹೆಣ್ಣಿನ ಜೀವಕೋಶದ ಕೋಶಕೇಂದ್ರದ ಅಂಚಿನಲ್ಲಿ ಲಿಂಗದ ಕ್ರೊಮ್ಯಾಟಿನ್ ಇರುವುದೇ ವಿಶೇಷ ಲಕ್ಷಣ. ಗಿಡಗಳ ಕುಡಿಗಳಿಗೂ ಮೊಗ್ಗುಗಳಿಗೂ ಕಾಲ್ಚಿಸೀನ್ ಮದ್ದನ್ನು ತುಸು ಸವರಿದರೆ ಆಮೇಲೆ ಬೆಳೆದು ಬರುವ ಬೀಜಗಳ ಜೀವಕೋಶಗಳಲ್ಲಿ ಕ್ರೊಮೋಸೋಮುಗಳ ಸಂಖ್ಯೆ ಎರಡು–ಮೂರರಷ್ಟು ಗುಣಿತವಾಗಿ, ಕೊನೆಗೆ ಆ ಬೀಜಗಳಿಂದ ಹುಟ್ಟುವ ಗಿಡಗಳಲ್ಲಿ ಮೊಳೆವ ಬೀಜಗಳೇ ಬಿಡುವುದಿಲ್ಲ. ಪ್ರಾಣಿಗಳಲ್ಲೂ ಹೀಗೆ ಏನೋ ಕಾರಣದಿಂದ ಕ್ರೊಮೋಸೋಮುಗಳ ಸಂಖ್ಯೆಯಲ್ಲಿ ಬದಲಾವಣೆ ಆಗಿ ಇರ್ಲಿಂಗಿ ಲಕ್ಷಣಗಳಿರುವ ನಪುಂಸಕ ಪ್ರಾಣಿಗಳು ಹುಟ್ಟುತ್ತವೆ.

ಕ್ರೊಮೋಸೋಮುಗಳು ದುಪ್ಪಟ್ಟು ಮುಪ್ಪಟ್ಟಾದಾಗ ಕೆಲವೇಳೆ ಹೆಂಗಂಡುರೂಪತನ (ಗೈನ್ಯಾಂಡ್ರೊಮಾರ್ಫಿಸಂ) ಅಂದರೆ ಮೈಯ ಒಂದು ಪಕ್ಕ ಹೆಣ್ಣಾಗೂ ಇನ್ನೊಂದು ಗಂಡಾಗೂ ಇರುವ ಪ್ರಾಣಿಗಳು ಹುಟ್ಟುತ್ತವೆ. ಹುಳುಹುಪ್ಪಟೆಗಳಲ್ಲಿ ಈ ವಿಚಿತ್ರ ತೀರ ಸಾಮಾನ್ಯ. ಕೀಟಗಳಲ್ಲಿ ಕ್ರೊಮೋಸೋಮುಗಳು ಆಯಾ ಜಾತಿಗೆ ಗೊತ್ತಾದವಕ್ಕಿಂತ ಮುಪ್ಪಟ್ಟಾದರೆ ಮೇಟಿ ಹೆಣ್ಣು (ಸೂಪರ್ ಫೀಮೇಲ್), ಮೇಟಿ ಗಂಡು (ಸೂಪರ್ ಮೇಲ್) ಮತ್ತು ನಡುಲಿಂಗ (ಇಂಟರ್ ಸೆಕ್ಸ್) ಪ್ರಾಣಿಗಳಾಗುತ್ತವೆ.

ಮಾನವ ಇರ್ಲಿಂಗಿಗಳು : ಇಲ್ಲಿ ಐದು ಮಾದರಿಗಳಿವೆ: ನಿಜ ಇರ್ಲಿಂಗಿಗಳು; ಹುಸಿ ಹೆಣ್ಣುಗಳು ಇಲ್ಲವೇ ಗಂಡುಗಳು; ಗಂಡು ಇಲ್ಲವೇ ಹೆಣ್ಣು ಹುಸಿ ಇರ್ಲಿಂಗಿಗಳು; ನಿಜ ಇರ್ಲಿಂಗಿಗಳಲ್ಲಿ ಹೆಣ್ಣಿನ ಅಂಡಾಶಯವೂ ಗಂಡಿನ ವೃಷಣವೂ ಒಂದಾಗಿರುವವು; ಇಲ್ಲವೇ ಒಂದು ಪಕ್ಕದಲ್ಲಿ ಹೆಣ್ಣಿನ ಜನನಾಂಗವಾದ ಅಂಡಾಶಯ ಇದ್ದು, ಮತ್ತೊಂದೆಡೆ ಗಂಡಿನ ವೃಷಣ ಇರುವುದು; ಎರಡೂ ಒಂದಾಗಿ ಕೂಡಿ ಅಂಡಾಶಯವೃಷಣ ಆಗಿರಬಹುದು. ಇದುವರೆಗೆ ಪ್ರಪಂಚದಲ್ಲಿ ಈ ಬಗೆಯ 200 ಜನರ ವಿಷಯ ಮಾತ್ರ ತಿಳಿದಿದೆ. ನಿಜ ಇರ್ಲಿಂಗಿಗಳಲ್ಲಿ ಗಂಡಿನ ಶಿಶ್ನ, ಗರ್ಭಕೋಶ, ಯೋನಿ, ಅಂಡಾಶಯ ಎಲ್ಲ ಒಟ್ಟಿಗೇ ಇರುತ್ತವೆ. ಆದರೆ ಯಾವುದೂ ಪೂರ್ತಿ ಸರಿಯಾಗಿರದು. ಇದರಿಂದಲೇ ನಿಜವಾಗೂ ಪೂರ್ತಿ ಇರ್ಲಿಂಗಿ ಆಗಿರುವವರೇ ಇಲ್ಲವೆನ್ನಬಹುದು. ಗಡ್ಡ, ಮೀಸೆ, ಸ್ತನಗಳಿರಬಹುದು; ಇವು ಕೂಡ ಕೆಲವು ಕಾಲ ಇದ್ದು ಆಮೇಲೆ ಇಲ್ಲವಾಗಬಹುದು.

ಹುಸಿ (ಸೂಡೊ) ಗಂಡುಗಳು ಗಂಡಲ್ಲದ ಗಂಡುಗಳು. ಹೆಣ್ಣಿನ ಅಂಡಾಣುವಿನೊಂದಿಗೆ ಕೂಡದ ವೀರ್ಯಾಣುಗಳನ್ನು ವೃಷಣಗಳು ಹುಟ್ಟಿಸುವುದರಿಂದ ಬರಡಾಗಿರುವುವು. ಗಡ್ಡದಲ್ಲಿ ಕೂದಲು ವಿರಳ. ಕೆಲವೇಳೆ ಸ್ತನಗಳು ಬೆಳೆದಿರುತ್ತವೆ. ಹುಸಿ ಹೆಣ್ಣುಗಳು ಹೆಣ್ಣಲ್ಲದ ಹೆಣ್ಣುಗಳು. ಗಂಡಲ್ಲಿರುವಂತೆ ಕ್ರೊಮೋಸೋಮುಗಳಿದ್ದರೂ ಜನನಾಂಗಗಳೆಲ್ಲ ಹೆಣ್ಣಿನವೇ. ಅಂಡಾಶಯ ಇಲ್ಲವಾದರೂ ಗರ್ಭಕೋಶ, ಯೋನಿ ಇರುತ್ತವೆ. ಈ ಹೆಣ್ಣು ಕುಳ್ಳ. ಸ್ತನಗಳಿಲ್ಲ, ಮುಟ್ಟೂ ಇಲ್ಲ. ಗರ್ಭದಲ್ಲಿ ಇರುವಾಗಲೇ ಅಡ್ರಿನಲ್ ಗ್ರಂಥಿ ಬಲು ಚಟುವಟಿಕೆ ತೋರುವುದರಿಂದ ಗಂಡಿನ ಲಕ್ಷಣಗಳು ಈ ಹೆಣ್ಣಲ್ಲಿ ಕಾಣಬರುತ್ತವೆ.

ಅಂಗಾಂಗಗಳು ಅರೆಬರೆ ಬೆಳೆದಿರುವಾಗ ಕೂಸು ಗಂಡೊ ಹೆಣ್ಣೋ ಎಂದು ಅನುಮಾನ ಇರುವುದು ಹುಸಿ ಇರ್ಲಿಂಗಿತನ. ಹೊರಗಿನ ಜನನಾಂಗಗಳಲ್ಲಿ ಹೆಣ್ಣು, ಗಂಡು ಎರಡರ ಲಕ್ಷಣಗಳು ಇದ್ದರೂ ಒಳಗಡೆ ಅಂಡಾಶಯ ಇಲ್ಲವೇ ವೃಷಣ ಮಾತ್ರ ಇರಬಹುದು. ಇದಕ್ಕೆ ಮುಖ್ಯ ಕಾರಣ ಅಂತಃಸ್ರಾವಿಕ ರಸಗಳು. ಕೆಲವೇಳೆ ಕೆಲವರ ಮೈಯ ಕೆಲವು ಅಂಗಗಳೂ ಎಷ್ಟೋ ವೇಳೆ ಇಡೀ ಒಂದು ಪಕ್ಕವೂ ಗಂಡಿನವಂತಿದ್ದು ಉಳಿದ ಭಾಗಗಳು ಹೆಣ್ಣಿನವಂತಿರಬಹುದು. ಈ ತರದವರು ಹೆಂಗಂಡು ರೂಪಿಗಳು. ಹುಸಿ ಇರ್ಲಿಂಗಿ ಮಗುವನ್ನು ಗಂಡೋ ಹೆಣ್ಣೋ ಎಂದು ಜೀವಕೋಶಗಳಲ್ಲಿರುವ ಲಿಂಗಕ್ರೊಮ್ಯಾಟಿನ್‍ನಿಂದ ನಿರ್ಧರಿಸಬಹುದು. ಕೂಸಿನ ಲಿಂಗದ ನಿರ್ಧಾರಕ ವ್ಯತ್ಯಾಸಗಳು ಗರ್ಭದಲ್ಲಿ ಇದ್ದಾಗಲೇ ಕಾಣಬಹುದು. ಇಲ್ಲವೇ ಮಗು ಹುಟ್ಟಿದ ಮೇಲೆ ಬೆಳೆವಾಗ ಕಂಡುಬರಬಹುದು.

ಗಂಡು ಹುಸಿ ಇರ್ಲಿಂಗಿಗಳಲ್ಲಿ XY ಕ್ರೊಮೋಸೋಮುಗಳಿರುತ್ತವೆ. ವೃಷಣಗಳಿದ್ದರೂ ಗಡ್ಡ, ಮೀಸೆ, ಮತ್ತಿತರ ಗಂಡಿನ ಲಕ್ಷಣಗಳು ಹೊರಗಾಣವು. ಈ ಸ್ಥಿತಿಯ ತೀರ ಕೆಳಮಟ್ಟದವರಲ್ಲಿ ಹೆಣ್ಣಿನ ಅಂಡಾಶಯಗಳಿದ್ದು ಹೆಣ್ಣಂತಿರುವರು. ಮೇಲುಮಟ್ಟದವರು ಗಂಡಿನಂತೆ ಕಂಡರೂ ಶಿಶ್ನದಲ್ಲಿ ಮೂತ್ರನಾಳ ಇರದು. ಅಲ್ಲದೇ ವೃಷಣಗಳು ಬೀಜಚೀಲದಲ್ಲಿ (ಸ್ಕ್ರೊಟಂ) ಇರದೆ ಹೊಟ್ಟೆಯಲ್ಲೋ ಹೊಟ್ಟೆಗೋಡೆಯಲ್ಲೋ ಒಳಗೋ ಉಳಿದಿರಬಹುದು. ಹೆಣ್ಣು ಹುಸಿ ಇರ್ಲಿಂಗಿಗಳಲ್ಲಿ XX ಕ್ರೊಮೋಸೋಮುಗಳೂ ಹೆಣ್ಣಿನ ಅಂಡಾಶಯಗಳೂ ಇರುತ್ತವೆ. ಮೊದಲು ಹೆಣ್ಣಂತೆ ಕಂಡರೂ ಗರ್ಭದಲ್ಲೋ ಹೊರಗೋ ಕೂಸು ಬೆಳೆವಾಗ ಅಂಡಾಶಯದ ಇಲ್ಲವೇ ಅಡ್ರಿನಲ್ ಗ್ರಂಥಿಗಳ ಬಲು ಹದಗೆಟ್ಟ ಚಟುವಟಿಕೆಯಿಂದ ಗಂಡಿನ ಲಕ್ಷಣಗಳು ಕಾಣಿಸಿಕೊಳ್ಳುವುವು. ಹೆಂಬುಲ್ಲ ದೊಡ್ಡದಾಗಿ ಕಾಣುವುದರಿಂದ ಕೂಸನ್ನು ಗಂಡೆಂದು ಭಾವಿಸುವರು. ಬೆಳೆದ ಹೆಣ್ಣಿನಲ್ಲಿ ಈ ಬದಲಾವಣೆ ಆದರೆ ಗಡ್ಡ, ಮೀಸೆಗಳು ಬೆಳೆದು ಗಂಟಲು ದನಿ ಒಡೆಯುತ್ತದೆ. (ಎಂ.ಡಿ.; ಕೆ.ಕೆ.ಎಸ್.ಡಬ್ಲ್ಯು.)

**ಇಲಾಟೆರಿಡೆ:** ಸಂಧಿಪದಿಗಳ ವಂಶದ ಕೀಟಗಳ ವರ್ಗದ ಕೋಲಿಯಾಪ್ಟರ ಗಣದ ಕುಟುಂಬ. ಕ್ಲಿಕ್ ದುಂಬಿಗಳು ಎಂಬುದು ಸಾಮಾನ್ಯ ಹೆಸರು. ಪ್ರೌಢ ದುಂಬಿಯ ದೇಹ ಗಡುಸು. ಬಣ್ಣ ನಸುಗಪ್ಪು ಅಥವಾ ನಸುಕಂದು. ಬೆನ್ನಿನ ಮೇಲೆ ಮುಟ್ಟಿದರೆ ತಟಕ್ಕನೆ ಮೇಲಕ್ಕೆ ಚಿಮ್ಮಿ ಹಾರುವ ಗುಣ ಇದರ ವೈಶಿಷ್ಟ್ಯ. ಎದೆಯ ಮೊದಲನೆಯ ಖಂಡ ದೊಡ್ಡದು ಮತ್ತು ಗುರಾಣಿಯಂತಿದೆ. ಉದರ ಉದ್ದ ಮತ್ತು ಕಿರಿದಾಗಿದ್ದು ತುದಿಯಲ್ಲಿ ಸ್ವಲ್ಪ ಚೂಪಾಗಿದೆ. ಕಾಲುಗಳು ಮತ್ತು ಕುಡಿ ಮೀಸೆಗಳು ಮೊಟಕು. ಸ್ಪರ್ಶ ಕುಡಿಮೀಸೆಗಳು ಗರಗಸದ ಅಥವಾ ಬಾಚಣಿಗೆಯ ಅಂಚಿನಂತೆ. ಈ ದುಂಬಿಗಳ ಲಾರ್ವಾಗಳ ದೇಹ ತಂತಿಯಂತೆ ತೆಳು, ಚರ್ಮ ಗಡುಸು–ಆದ್ದರಿಂದ ತಂತಿ ಹುಳುಗಳು (ವಯರ್ ವರ್ಮ್ಸ್) ಎಂದು ಇವನ್ನು ಕರೆಯುವುದಿದೆ. ಭೂಮಿಯಲ್ಲಿ ನಾಟಿರುವ ಬೀಜಗಳನ್ನೂ ಸಸ್ಯಗಳ ಬೇರುಗಳನ್ನೂ ಇವು ತಿಂದು ನಾಶ ಮಾಡುತ್ತವೆ. ಇವುಗಳ ಹಾವಳಿ ಬಹಳ ಹೆಚ್ಚು ಮತ್ತು ಹತೋಟಿಗೆ ತರುವುದು ಬಹಳ ಕಷ್ಟ. ಪೈರೋಪೋರಸಿನ ಕೆಲವು ಪ್ರಭೇದಗಳು ಸ್ವಯಂಪ್ರಕಾಶಕ ರಚನೆಗಳನ್ನು ಹೊಂದಿವೆ. (ಪಿ.ಎ.ಆರ್.)

**ಇಲಿ:** ದಂಶಕವರ್ಗದ ಮಧ್ಯಮಗಾತ್ರದ ಉದ್ದಬಾಲದ ಪ್ರಾಣಿ (ರ್‍ಯಾಟ್). ಇದೇ ಹೆಸರಿನ ಪಂಗಡದ ಇನ್ನೊಂದು ಸದಸ್ಯ ಹೆಗ್ಗಣ. ಒಟ್ಟಾರೆ ಇವನ್ನು ಇಂಗ್ಲಿಷಿನಲ್ಲಿ ಲೇಮಿಂಗ್ಸ್

ಮತ್ತು ಮೋಲ್ಸ್ ಎಂದು ಕರೆದಿದೆ. ಇವುಗಳ ಮುಖ್ಯ ಲಕ್ಷಣಗಳು ಬೋಳಾದ ಹುರುಪೆಗಳು, ಉದ್ದ ಬಾಲ, ದೊಡ್ಡ ಕಣ್ಣುಗಳು ಮತ್ತು ಮೊನಚು ಮುಸುಡು. ಇವು ಬಲು ಚಟುವಟಿಕೆಯುಳ್ಳವು. ಈ ಜಾತಿಯಲ್ಲಿ ನೂರರಷ್ಟು ಪ್ರಭೇದಗಳಿವೆ. ಇವುಗಳ ವ್ಯಾಪ್ತಿ, ವಿತರಣೆ ಇಡೀ ಪ್ರಪಂಚಕ್ಕೆ ಅನ್ವಯಿಸುತ್ತದೆ. ಮೂಲತಃ ಇಲಿಯ ಉಗಮ ಮಧ್ಯ ಏಷ್ಯದಲ್ಲಿ ಆಗಿರಬಹುದು. ಕಾಲ–ಆಲಿಗೋಸೀನ್ (40 ದಶಲಕ್ಷ ವರ್ಷ ಪ್ರಾಚೀನ) ಕಲ್ಪದಿಂದ ಈಚೆಗೆ.

ಇಲಿಗಳು ನೆಲಜೀವಿಗಳು. ಇವಿರದ ಊರಿಲ್ಲ. ಸಾಮಾನ್ಯವಾಗಿ ಯಾವ ಆಹಾರವೂ ತ್ಯಾಜ್ಯವಲ್ಲವಾದರೂ ಮನುಷ್ಯ ಮೆಚ್ಚುವ ಕಾಳುಕಡ್ಡಿಗಳು, ದಿನಸುಗಳು, ಅವನು ತಯಾರಿಸುವ ತಿಂಡಿ ತಿನಿಸುಗಳು ಇಲಿಗಳಿಗೆ ಬಲು ಪ್ರಿಯ. ಹೀಗಾಗಿ ಮನುಷ್ಯನ ದೊಡ್ಡ ಪಿಡುಗುಗಳಲ್ಲಿ ಇವೂ ಒಂದು. 'ಅಲ್ಲೇನಿಲಿಗಳ ಕಾಟವೆ ಕಾಟ. ಅಲ್ಲಿಯ ಜನಗಳಿಗತಿ ಗೋಳಾಟ' ಎಂಬ ಜನಪ್ರಿಯ ಕವಿನುಡಿಯ ಹಿನ್ನೆಲೆ ಇಲ್ಲಿದೆ. ಆತ್ಮ ರಕ್ಷಣೆಗೋಸ್ಕರ ಇಲಿ ಸದಾ ಜಾಗರೂಕವಾಗಿರಬೇಕು. ಸಹಜವಾಗಿಯೇ ಅದರ ಸ್ವಭಾವ ಬಲು ಚುರುಕು; ನಿವಾಸ ಬಲು ಗುಪ್ತ. ಉಗ್ರಾಣದ ಮೂಲೆಗಳಲ್ಲಿ, ಸಾಮಾನು ಸರಂಜಾಮುಗಳ ಕೈಗೆಟುಕದ ಎಡೆಗಳಲ್ಲಿ, ಮರದ ಪೊಟರೆಗಳಲ್ಲಿ, ಕಲ್ಲ ಸೆರೆಗಳಲ್ಲಿ, ನೆಲದಡಿಯ ಬಿಲಗಳಲ್ಲಿ, ಇಲಿಗಳ ಠಾವು ಸಾಮಾನ್ಯ. ಕಚ್ಚಿ ಮೃದು ಮಾಡಿದ ಉಣ್ಣೆ, ಕಾಗದ ಬಟ್ಟೆ, ಹುಲ್ಲಿನ ತುಣುಕುಗಳು– ಇವನ್ನು ಸೇರಿಸಿ ಗೂಡು ಕಟ್ಟುತ್ತವೆ. ಸಂಚಾರ ಹೆಚ್ಚಾಗಿ ರಾತ್ರಿ ವೇಳೆ. ಆದರೆ ಜನ, ಅಥವಾ ಶತ್ರುಪ್ರಾಣಿ ಸಂಚಾರವಿಲ್ಲವೆಂದು ಖಾತ್ರಿಯಾದಾಗ ಬಲು ಧೈರ್ಯದಿಂದ ಹಗಲು ಹೊತ್ತಿನಲ್ಲೂ ಹೊರಗೆ ಬಂದು ಕಣ್ಣಿಗೆ ಬಿದ್ದ ತಿಂಡಿ ತಿನ್ನುವುದುಂಟು. ಯಾರಾದರೂ ಬಂದೊಡನೆ ಅಥವಾ ಸಂಶಯಕಾರಣವಾದ ಸದ್ದು ಉಂಟಾದೊಡನೆ ಸರಕ್ಕನೆ ಬಿಲಕ್ಕೆ ಜಿಗಿದು ಬಿಡುತ್ತವೆ. ಆಹಾರವನ್ನು ಅಳಿಲಿನಂತೆ ಮುಂಗಾಲುಗಳಲ್ಲಿ ಹಿಡಿದು ಹಿಂಗಾಲುಗಳ ಮೇಲೆ ಕುಳಿತು ತಿನ್ನುವುದು ರೂಢಿ. ಇಲಿ ಬಹಳ ಎತ್ತರ ಹಾರಲಾರದು. ಆದರೆ ಕಡಿದಾದ ಸ್ಥಳ ಏರಬಲ್ಲುದು. ವೇಗವಾಗಿ ಓಡುವಾಗ ಬೆಕ್ಕಿನಂತೆ ಹಿಂಗಾಲುಗಳಿಂದ ಕುಪ್ಪಳಿಸುತ್ತ ಮುಂಗಾಲುಗಳಿಂದ ಜಿಗಿಯುತ್ತ ಧಾವಿಸುತ್ತದೆ.

ಇಲಿಯ ಗಾತ್ರ ಪ್ರಭೇದಾನುಸಾರ ವ್ಯತ್ಯಾಸವಾಗುತ್ತದೆ. ಬಯೀಮಿಸ್ ಎಂಬವು ಉದ್ದದಲ್ಲಿ 100 ಮಿಮೀ ಗಿಂತಲೂ ಚಿಕ್ಕವು. ಮಸ್ಕ್‌ರ್ಯಾಟ್ ಎಂಬುವು 800 ಮಿಮೀ ಗಿಂತಲೂ ಹೆಚ್ಚು ಉದ್ದದವು.

ಇಲಿಯ ಕೆಲವು ಮುಖ್ಯ ಪ್ರಭೇದಗಳು ಹೀಗಿವೆ : ಕೌಚ ಇಲಿ, ಪಾಲ್ಲಿಟ್ ಇಲಿ, ರಾಜಾ ಇಲಿ, ಗದ್ದಲ ಇಲಿ, ಹಾರು ಇಲಿ, ಚಿಂಚಿಲ್ಲ ಇಲಿ, ತೈಲೆಂಡಿನ ಇಲಿ, ಸೂರಿಲಿ, ಸುಂಡಿಲಿ, ಮೂಗಿಲಿ, ಹೊಲದ ಇಲಿ, ಬಿಳಿಕಾಲಿನ ಇಲಿ, ಮರದಿಲಿ, ಹೆಗ್ಗಣ, ಕಾಡಿಲಿ. ಇವುಗಳಲ್ಲಿ ಕೆಲವು ಪ್ರಭೇದಗಳ ವಿವರಗಳನ್ನು ಮುಂದೆ ಕೊಟ್ಟಿದೆ. ಪಟ್ಟಿಯನ್ನು ಹೀಗೆಯೇ ಬೆಳೆಸಿಕೊಂಡು ಹೋಗಬಹುದು; ಎಷ್ಟು ಬೆಳೆಸಿದರೂ ಸದಸ್ಯರ ಹೆಸರು ಮುಗಿಯದು. ಒಂದೊಂದು ಪ್ರಭೇದವೂ ಬೆಳೆಯುವ ವೇಗವನ್ನು ಪರಿಶೀಲಿಸಿದರೆ ನಾವಿರುವುದು ಮನುಷ್ಯರ ಪ್ರಪಂಚದಲ್ಲಿಯೋ ಅಥವಾ ಇಲಿಗಳ ಪ್ರಪಂಚದಲ್ಲಿಯೋ ಎಂಬ ಸಂದೇಹ ಮೂಡುವಂತಿದೆ. ಒಂದು ಪ್ರಭೇದದ ಉದಾಹರಣೆ ಪರಿಶೀಲಿಸಬಹುದು. ಸುಗ್ಗಿ ಇಲಿ ಹೆಸರೇ ಸೂಚಿಸುವಂತೆ ಕೊಯ್ಲು ಸಮಯದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಸಾಮಾನ್ಯವಾಗಿ ವರ್ಷದಲ್ಲಿ ಎರಡು ಸಲ ಮರಿ ಹಾಕುತ್ತದೆ. ಏಪ್ರಿಲ್ ಮತ್ತು ಸೆಪ್ಟಂಬರ್ ತಿಂಗಳುಗಳು ಋತುಕಾಲಗಳು; ಆಗ ಗಂಡಿನ ತೀವ್ರ ಧ್ವನಿಯ ಸಿಳ್ಳಿನ ಆಕರ್ಷಣೆ ಪ್ರಾರಂಭ. ಹೆಣ್ಣಿಗೆ ಋತು ಮುಗಿದು ಸುಮಾರು ಇಪ್ಪತ್ತನಾಲ್ಕು ದಿವಸಗಳ ತರುವಾಯ ಮೂರರಿಂದ ಏಳರವರೆಗೆ ಎಳೆಯ ಮರಿಗಳು ಹುಟ್ಟುತ್ತವೆ. ಇವುಗಳ ಭಾರ 1.5 ಗ್ರಾಂಗಿಂತಲೂ ಕಡಿಮೆ; ಇವುಗಳಿಗೆ ರೋಮದ ಕವಚವಿಲ್ಲ ; ನೋಡಲು ಕಂಗಳಿಲ್ಲ. ಮುಂದಿನ ಎಂಟು ದಿವಸಗಳಲ್ಲಿ ಕಣ್ಣುಗಳು ತೆರೆಯುತ್ತವೆ; ಮೊದಲ ಹಲ್ಲುಗಳು ಮೊಳೆಯುತ್ತವೆ. ಸುಮಾರು ಎರಡು ವಾರ ಪ್ರಾಯವಾಗುವಾಗ ತಾಯಿ ಇಲಿ ಮೊಲೆಯೂಡಿಸುವುದನ್ನು ನಿಲ್ಲಿಸುತ್ತದೆ; ಮತ್ತೆ ಹತ್ತು ದಿವಸಗಳಲ್ಲಿ ಮರಿ ಇಲಿಗಳು ಸ್ವತಂತ್ರವಾಗುವುವು. ಐದು ವಾರಗಳು ಮುಗಿಯುವಾಗ ಹೊಸ ಪೀಳಿಗೆ ಪೂರ್ಣ ವಿಕಸನಗೊಂಡಿರುತ್ತದೆ. ಇಂಥ ಒಂದೊಂದು ಇಲಿಯ ಭಾರ ಸುಮಾರು 10 ಗ್ರಾಂ ಒಂದು ವರ್ಷ ಮುಗಿಯುವಾಗ ಸುಗ್ಗಿ ಇಲಿ ಮುದಿಯಾಗಿರುತ್ತದೆ. ಈ ಪ್ರಭೇದಕ್ಕಿಂತಲೂ ಅದೆಷ್ಟೋ ತೀವ್ರ ವೇಗದಿಂದ ವೃದ್ಧಿಯಾಗುವ ಇತರ ಪ್ರಭೇದಗಳು ಹಲವಾರು. ಆದರೆ ಇಲಿಗಳಿಗಿರುವ ಶತ್ರುಗಳ ಸಂಖ್ಯೆ ಏನೂ ಕಡಿಮೆಯಿಲ್ಲ. ಹಕ್ಕಿ, ಹಾವು, ಬೆಕ್ಕು, ನಾಯಿ ಮುಂತಾದುವೆಲ್ಲ ಇಲಿಯ ಸಹಜ ಶತ್ರುಗಳು. ಈ ಕಾರಣದಿಂದ ನಿಸರ್ಗದ ಸಮತೋಲ ಉಳಿದಿದೆ.

ಬಿಳಿ ಮತ್ತು ಕಂದು ಇಲಿಗಳನ್ನು ಮನೆಯಲ್ಲಿ ಸಾಕುವುದಿದೆ. ಕೋಗಿಲೆಯಂತೆ ಹಾಡುವ ಇಲಿಗಳು, ವರ್ತುಲಾಕಾರವಾಗಿ ಓಡುವ, ಕುಣಿಯುವ ಇಲಿಗಳು ರೋಗ ಗ್ರಸ್ತ ಇಲಿಗಳೇ ವಿನಾ ಬೇರೆ ಪ್ರಭೇದಗಳಲ್ಲ. ಉದ್ದ ಬಾಲದ ಕಾಡಿಲಿಗಳು ಮನೆಯ ಇಲಿಗಳಿಗಿಂತ ದೊಡ್ಡವು. ಎಲ್ಲ ಸ್ತನಿಗಳಿಗಿಂತ ಇಲಿಗಳ ಸಂಖ್ಯೆ ಹೆಚ್ಚು. (ಎಸ್.ಎನ್.ಕೆ.ಯು.)

ಇಲಿಗಳ ವಿವಿಧ ಜಾತಿಗಳು : ಕರ್ನಾಟಕ ರಾಜ್ಯದಲ್ಲೂ ಅದರ ಸುತ್ತು ಮುತ್ತಲೂ ಇರತಕ್ಕ ಕೆಲವು ಜಾತಿಯ ಇಲಿಗಳನ್ನೂ ಅವುಗಳ ಪ್ರಭೇದಗಳನ್ನೂ ಕೆಳಗೆ ಸೂಚಿಸಿದೆ.

1. ಹೆಗ್ಗಣ : ಬ್ಯಾಂಡಿಕೋಟ ಎಂಬ ಜಾತಿಗೆ ಸೇರಿದ್ದು ; ಈ ಹೆಸರು ತೆಲುಗಿನ ಪಂದಿಕೋಕು (ಹಂದಿ ಇಲಿ) ಎಂಬ ಹೆಸರಿನ ಅಪಭ್ರಂಶವಿರುವಂತೆ ತೋರುತ್ತದೆ. ಮೈಮೇಲಿನ ತುಪ್ಪಳದ ಅರ್ಧದಷ್ಟು ಭಾಗದಲ್ಲಿ ಮುಳ್ಳುಗಳಿವೆ. ಹೆಬ್ಬೆರಳನ್ನುಳಿದು ಮಿಕ್ಕ ಬೆರಳುಗಳಿಗೆ ಚೂಪಾದ ನಖಗಳುಂಟು. ಅಂಗಾಲಿನಲ್ಲಿ ಆರು ಮೆತ್ತೆಗಳಿವೆ. ಇದು ಮೂಷಕವರ್ಗದಲ್ಲೇ ದೊಡ್ಡ ಪ್ರಾಣಿ. ತಲೆಯಿಂದ ಬಾಲದ ಬುಡದವರೆಗೆ 30–35 ಸೆಂಮೀ. ಆದರೆ ಬಾಲವೇ 27–35 ಸೆಂಮೀ ಇರುತ್ತದೆ. ಬಣ್ಣ ಮೇಲ್ಭಾಗದಲ್ಲಿ ಕಪ್ಪು ಮಿಶ್ರಿತ ಕಂದು; ಪಕ್ಕಗಳಲ್ಲಿ ಬೂದು ಛಾಯೆ; ತಳಭಾಗ ಬೂದು ಮಿಶ್ರಿತ ಕಂದು. ಭಾರತ ಮತ್ತು ಸಿಂಹಳದ ಆದ್ಯಂತ ವ್ಯಾಪಿಸಿದೆ. ಆದರೆ ಪಶ್ಚಿಮ ಬಂಗಾಳ ಮತ್ತು

ಸಣ್ಣ ಹೆಗ್ಗಣ (ಬ್ಯಾಂಡಿಕೋಟ ಬೆಂಗಲೆನ್ಸಿಸ್)

ಇಂಡಿಯನ್ ಜರ್ಬಿಲ್ (ಟಟೇರ ಇಂಡಿಕ)



ನಾರ್ವೆ ಇಲಿ (ರೇಟ್ಟಸ್ ನೊರ್ವೆಜಿಕಸ್)

ಹೆಗ್ಗಣ (ಬ್ಯಾಂಡಿಕೋಟ ಇಂಡಿಕ)

ಪಂಜಾಬ್ ರಾಜ್ಯಗಳಲ್ಲಿ ವಿರಳ. ಹಗಲು ಹೊತ್ತು ಬಿಲಗಳಲ್ಲಿ ಮರೆಯಾಗಿದ್ದು ರಾತ್ರಿ ವೇಳೆ ಸಿಕ್ಕಿದೆಡೆಗಳನ್ನೆಲ್ಲ ತೋಡಿ ಮಣ್ಣು ಗುಡ್ಡೆಹಾಕುವುದು ಇದರ ಸ್ವಭಾವ. ಊರು, ಗ್ರಾಮಗಳಲ್ಲೂ ವ್ಯವಸಾಯ ಪ್ರದೇಶಗಳಲ್ಲೂ ಇದರ ಉಪಟಳ ಹೆಚ್ಚು. ಕಾಳು ಕಡ್ಡಿಗಳನ್ನೂ ದವಸಧಾನ್ಯಗಳನ್ನೂ ಹಣ್ಣುಹಂಪಲು ತರಕಾರಿಗಳನ್ನೂ ಕತ್ತರಿಸಿ ತಿಂದು ಹಾಕಿ ನಷ್ಟ ಉಂಟುಮಾಡುತ್ತದೆ. ಹಾಗಿದ್ದರೂ ಇದು ಸಾಮಾನ್ಯವಾಗಿ ಅಂಜುಬುರುಕ ಪ್ರಾಣಿ : ನಾಯಿಗಳು ಇದನ್ನು ಬೇಟೆಯಾಡಿ ತಿಂದು ಬಿಡುತ್ತವೆ. ಆದರೂ ಒಮ್ಮೊಮ್ಮೆ ಶತ್ರುಗಳನ್ನು ಎರಡು ಕಾಲುಗಳ ಮೇಲೆ ಎದ್ದುನಿಂತು ಧೈರ್ಯದಿಂದ ಎದುರಿಸುವುದುಂಟು. ಈ ಜಾತಿಯ ಬ್ಯಾಂಡಿಕೋಟ ಮಲಬಾರಿಕ ಎಂಬ ಪ್ರಭೇದ ಎಲ್ಲ ಕಡೆಯೂ ಹರಡಿದೆ. ಎದುರಾಳಿಯನ್ನು ಕಂಡರೆ ಹಂದಿಯಂತೆ ಎಗರಿನಿಂತು ಎದುರಿಸುತ್ತದೆ. ಗಾತ್ರ ಸಾಧಾರಣ. ತುಪ್ಪಳ ಒರಟು. ಸ್ತನಗಳ ಸಂಖ್ಯೆ 16-18.

2. ಮಕಮಲ್ ಹೆಗ್ಗಣ : ಇದರಲ್ಲಿ ಎರಡು ಜಾತಿಗಳಿವೆ. ಗುನೋಮಿನ್ ಮತ್ತು ರ್‍ಯಾಟಸ್. ಮೊದಲಜಾತಿಯ ಪ್ರಾಣಿಗಳಲ್ಲಿ ಸ್ತನಗಳು 10-12. ಉದರದ ಮೇಲಿನ ಕೂದಲ ಛಾಯೆ ಬಿಳಿ. ಮೇಲ್ಭಾಗದ ತಳಭಾಗದ ಬಣ್ಣಗಳು ಪಕ್ಕದಲ್ಲಿ ಬೆರೆತಿಲ್ಲ. ತಲೆ ಮೈ ಕೂಡಿ ಉದ್ದ 15–20 ಸೆಂಮೀ. ಇವೆರಡು ಜಾತಿಗಳಿಂದಲೂ ಬೆಳೆಗಳಿಗೆ ಭಾರಿ ಪ್ರಮಾಣದ ನಷ್ಟವುಂಟು. ದಕ್ಷಿಣ ಭಾರತದಲ್ಲಿ ಇವುಗಳ ಹಾವಳಿ ಬಲು ಹೆಚ್ಚು. ಭತ್ತ, ರಾಗಿ, ಮರಗೆಣಸು, ತೆಂಗಿನ ಸಸಿ, ತರಕಾರಿ, ಹಣ್ಣಿನ ಗಿಡ ಇವಕ್ಕೆಲ್ಲ ಭಾರಿ ನಷ್ಟ ಉಂಟುಮಾಡುತ್ತವೆ. ಗದ್ದೆ ಏರಿಗಳಲ್ಲಿ, ಕಾಲುವೆ ಪಕ್ಕದಲ್ಲಿ, ಚರಂಡಿ ಸಂದುಗಳಲ್ಲಿ ಇವುಗಳ ವಾಸ. ಬಿಲ 6–10 ಮೀ. ಗಳಷ್ಟು ಆಳ. ಒಂದೊಂದು ಗೂಡಿಗೂ ನಾಲ್ಕೈದು ದ್ವಾರಗಳಿರುವುದುಂಟು. ಮುಖ್ಯ ಸುರಂಗದಿಂದ ನಾಲ್ಕೈದು ಉಪ ಸುರಂಗಗಳು ಕವಲೊಡೆದಿರುತ್ತವೆ. ಒಂದೊಂದು ಬಿಲದಲ್ಲೂ ಒಂದು ಜೊತೆ ಮಾತ್ರ ವಾಸಿಸುತ್ತವೆ. ಹುಲ್ಲು, ಬಟ್ಟೆ ಚಿಂದಿ – ಇವನ್ನೆಲ್ಲ ಹಾಕಿ ಗೂಡಿನಲ್ಲಿ ಹಾಸಿಗೆ ಮಾಡಿ ಮರಿಗಳಿಗೆ ತಾಯಿ ಮೆತ್ತನೆಯ ಸ್ಥಳ ಕಲ್ಪಿಸುತ್ತದೆ. ಒಂದು ಸಲಕ್ಕೆ ಹತ್ತಕ್ಕಿಂತಲೂ ಹೆಚ್ಚು ಮರಿ ಹಾಕುತ್ತದೆ. ಭತ್ತ, ರಾಗಿ, ಹುಲ್ಲು–ಇವುಗಳ ತೆನೆಗಳನ್ನು ಸಾಗಿಸಿ ಗೂಡಿನಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತದೆ. ಮಕಮಲ್ ಹೆಗ್ಗಣಗಳು ಅತಿ ಚುರುಕು; ಅಪಾಯದ ಕುರುಹನ್ನು ಬಲುಬೇಗ ಗ್ರಹಿಸಿ ಅಪಾಯ ಒದಗಿದಾಗ ಬಲು ಜಾಣ್ಮೆಯಿಂದ ಓಡಿಹೋಗಿ ಶತ್ರುಗಳಿಂದ ತಪ್ಪಿಸಿಕೊಳ್ಳುತ್ತವೆ. ಕಳ್ಳ ಮಾರ್ಗಗಳಿಂದ ಗುಪ್ತ ಸ್ಥಳಕ್ಕೆ ಹೋಗಿ ಸೇರಿ ಬಿಡುತ್ತವೆ. ಕೆಲವೇಳೆ, ನೀರಿನಲ್ಲೂ ಅಡಗಿಕೊಳ್ಳುವುದುಂಟು. ವಿಧಿಯಿಲ್ಲದೆ ಶತ್ರುಗಳಿಗೆ ಸಿಕ್ಕಿದಾಗ ಸುಮ್ಮನೆ ಮಣಿಯುವುದಿಲ್ಲ. ಗುಟುರುಹಾಕಿ ವೀರಾವೇಶದಿಂದ ಕಾದಾಡಿ ಸಾಯುತ್ತವೆ. ಇದರ ಮರಿಗಳು ಹುಟ್ಟಿದ ಮೇಲೆ ಕೆಲವು ದಿವಸಗಳ ತನಕ ಕಣ್ಣು ಬಿಡುವುದಿಲ್ಲ; ಆ ಕಾಲದಲ್ಲಿ ತಾಯಿಹೆಗ್ಗಣ ಮರಿಗಳಿಗೆ ಮೊಲೆಯೂಡಿಸಿ ಮಮತೆಯ ರಕ್ಷಣೆ ನೀಡುತ್ತದೆ. ಆದರೂ ಕೆಲವು ಪ್ರಭೇದಗಳು ಅಪರೂಪವಾಗಿ ತಮ್ಮ ಮರಿಗಳನ್ನೇ ತಿಂದು ಬಿಡುವುವೆಂದು ವರದಿಯಾಗಿದೆ.

3. ಮನೆ ಇಲಿ : ರ್‍ಯಾಟಸ್ ರೌಟಿನಿ, ರ್‍ಯಾಟಸ್ ರೂಫಿಸೆಸ್ ಎಂಬೆರೆಡು ಪ್ರಭೇದಗಳನ್ನು ಈ ಹೆಸರಿನಿಂದ ಕರೆಯುವುದುಂಟು. ಇವಕ್ಕೆ ಕಪ್ಪಿಲಿ ಎಂಬ ಹೆಸರೂ ಉಂಟು. ರ್‍ಯಾ. ರೌಟಿನಿಗೆ ಉದರದ ಕೂದಲು ಸ್ಲೇಟಿನ ಬಣ್ಣ. ಮೇಲಿನ ಕೆಳಗಿನ ಬಣ್ಣಗಳು ಪಕ್ಕದಲ್ಲಿ ಬೆರೆತಂತಿವೆ. ಮಾನವನ ನಿವಾಸ ಇವುಗಳಿಗೆ ಬಹು ಪ್ರಿಯವೆನಿಸುವ ವಾಸಸ್ಥಳವಾದ್ದರಿಂದ ಇವಕ್ಕೆ ಈ ಹೆಸರು. ರ್‍ಯಾ. ರೂಫಿಸೆಸ್‌ಗೆ ಅಂಗಾಲಿನಲ್ಲಿ ಆರು ಅಥವಾ ಕಮ್ಮಿ ಮೆತ್ತೆಗಳು

ಮನೆ ಇಲಿ
(ರ್‍ಯಾಟ್ಟಸ್ ರ್‍ಯಾಟ್ಟಸ್)

ಇರುತ್ತವೆ. ಒಟ್ಟು ಸ್ತನಗಳ ಸಂಖ್ಯೆ 8. ಮನೆ ಇಲಿ ಚಿಕ್ಕವು. ತಲೆ ದೇಹ 12–20 ಸೆಂಮೀ ಉದ್ದ. ಇವು ಏಷ್ಯದಲ್ಲಿ ಉಗಮಿಸಿ ವಿಶ್ವದ ಇತರ ಖಂಡಗಳಿಗೆ ವಾಣಿಜ್ಯ ಸಾರಿಗೆಗಳ ಮೂಲಕ ಹರಡಿವೆ. ರ್‍ಯಾಟಸ್ ನಾರ್ವಿಜಿಕಸ್ ಎಂಬ ಪ್ರಭೇದ ಪ್ರಪಂಚದ ಅನೇಕ ಕಡೆ ಹರಡಿದೆ. ಎಲ್ಲ ಪ್ರಭೇದಗಳೂ ಮಾನವನೊಡನೆಯೂ ಅವನ ಕೃಷಿಕ್ಷೇತ್ರಗಳ್ಲೂ ವಾಸಿಸತ್ತವೆ. ರ್‍ಯಾ. ನಾರ್ವಿಜಿಕಸ್ ಪ್ರಭೇದ ತೋಟ ಹೊಲಗಳಲ್ಲೂ ಇರುವುವು. ಇನ್ನು ಕೆಲವು ಪ್ರಭೇದಗಳು ಎತ್ತರದಲ್ಲಿ ಎಂದರೆ ಸೂರು, ಹಂಚಿನ ಸಂದು, ಮೇಲ್ಛಾವಣಿ ಮರಗಳ ಪೊಟರೆ ಇತ್ಯಾದಿ ಸ್ಥಳದಲ್ಲಿ ವಾಸಿಸುತ್ತವೆ. ಮನೆ ಇಲಿ ನೋಡಲು ಸಣ್ಣ ಪ್ರಾಣಿಯಾದರೂ

ನಾರ್ವೆ ಇಲಿ (ರ್‍ಯಾಟಸ್ ನೊರ್ವಜಿಕಸ್)

ರೋಮದ ಕಾಲಿನ ಜರ್ಬಿಲ್
(ಜರ್ಬಿಲಸ್ ಗ್ಲಿಯೋಡೋನಿ)

ಅದರ ಪಿಡುಗು ವಿಪರೀತ. ಸಂಗ್ರಹಿಸಿಟ್ಟ ಕಾಳು, ಕಡ್ಡಿ, ದವಸಧಾನ್ಯಗಳನ್ನೆಲ್ಲ ಒಳಗೇ ತಿಂದುಹಾಕಿ ಸಿಪ್ಪೆಯನ್ನು ಹಾಗೇ ಉಳಿಸಿ ಹೋಗುತ್ತದೆ. ಇನ್ನು ಕೆಲವು ವೇಳೆ ತಿಂದೂ ಅದಕ್ಕೂ ಹೆಚ್ಚುಪಾಲನ್ನು ಹರಡಿ ಹೊಲಸುಮಾಡಿ ಕೆಡಿಸುತ್ತದೆ. ಜೊತೆಗೆ ಇದು ವರ್ಷಕ್ಕೆ 4-5 ಬಾರಿ, ಒಂದೊಂದು ಬಾರಿಗೂ 10-12 ಮರಿ ಹಾಕುವುದರಿಂದ ಇದರ ಸಂತಾನ ಬಹು ತೀವ್ರವೇಗದಲ್ಲಿ ಹೆಚ್ಚುತ್ತದೆ. ಇದರಿಂದಲೇ ಒಂದೊಂದು ಸ್ಥಳದಲ್ಲಿ ಇದ್ದಕ್ಕಿದ್ದ ಹಾಗೆಯೆ ಇವುಗಳ ಪಿಡುಗು ಎದ್ದು ತೋರುವುದು. ಬಿಳಿ ಹೊಟ್ಟೆಯ ರಾಟನಿ ಇಲಿ ತೆಂಗಿನ ಫಸಲಿಗೆ ಕಂಟಕ. ಮರದ ಮೇಲೆ ಪಟ್ಟೆಯಲ್ಲಿ ಗೂಡು ಮಾಡಿಕೊಂಡು ತೆಂಗಿನ ಹೂವನ್ನು ತಿನ್ನುವುದು, ಎಳೆಯ ಕಾಯಿಗಳ ನೀರು ಹೀರಿ ಒಣಗಿಸುವುದು, ಹೀಚುಕಾಯಿಗಳನ್ನು ಕಡಿದೆಸೆಯುವುದು ಇತ್ಯಾದಿ ಕಾರ್ಯಗಳಿಂದ ತೋಟಕ್ಕೆ ತೀರ ನಷ್ಟವುಂಟುಮಾಡುತ್ತದೆ. ರೂಫಿಸೆಸ್ ಇಲಿಯಿಂದ ದವಸಧಾನ್ಯಗಳಿಗೂ ವಾಣಿಜ್ಯ ಪ್ರಮುಖತೆಯ ಸಂಬಾರಾದಿ ವಸ್ತುಗಳಿಗೂ ತೀರ ಅಪಾಯ ಸಂಭವಿಸುವುದುಂಟು. ಮಾನವನ ಆಹಾರ ಸಾಮಗ್ರಿಗಳ ನಾಶದಲ್ಲಿ ಈ ಇಲಿಗಳು ಮುಖ್ಯ ಪಾತ್ರ ವಹಿಸುತ್ತವೆ.

4. ಹುಲ್ಲಿಲಿ : ಮಿಲ್ಲಾರ್ಡಿಯ ಎಂಬ ಜಾತಿಯವನ್ನೂ ಮಸ್ ಎಂಬ ಜಾತಿಯವನ್ನೂ ಒಟ್ಟಿಗೆ ಈ ಹೆಸರಿನಿಂದ ಕರೆಯುವುದುಂಟು. ಮಿಲ್ಲಾರ್ಡಿಯ ವಿಲ್ಪಾಡ ಎಂಬ ಪ್ರಭೇದವೇ ಮನೆಯ ಸುಂಡಿಲಿ. ಇದರ ಮೂತಿ ಕಿರಿದು, ಮೊನಚು. ಮಸ್ ಜಾತಿಯ ಇಲಿಗಳ ಉದರ ನೀಲಿಮಿಶ್ರಿತ ಬೂದುಬಣ್ಣವಾಗಿರುತ್ತದೆ. ಇವು ತೀರ ಸಣ್ಣ ಜಾತಿಗಳು. ತಲೆ, ಮೈ ಉದ್ದ 8 ಸೆಂಮೀ ಕೂದಲು ಬಲು ನುಣುಪು. ಖುಷ್ಕಿ ಜಮೀನಿನ ಪೊದೆಗಳಲ್ಲೊ ಅವುಗಳ ಹತ್ತಿರದ ಬಿಲಗಳಲ್ಲೊ ವಾಸಿಸುತ್ತವೆ. ಕಲ್ಲುಗುಡ್ಡೆಗಳಲ್ಲೂ ಮಣ್ಣಿನ ಬಿರುಕುಗಳಲ್ಲೂ ಇತರ ಜಾತಿ ಇಲಿಗಳ ಬಿಲದಲ್ಲೂ ವಾಸಿಸುವುದುಂಟು. ಬಿಲ ಕೊರೆಯುವ ಶಕ್ತಿ ಅಷ್ಟಾಗಿ ಇದಕ್ಕೆ ಇಲ್ಲ. ಒಂದೇ ಗೂಡಿನಲ್ಲಿ ಹಲವಾರು ಇಲಿಗಳು ವಾಸಿಸುವುದುಂಟು. ಭತ್ತ, ಹತ್ತಿ ಮುಂತಾದ ಬೆಳೆಗಳಿಗೆ ತುಂಬ ಹಾನಿಯುಂಟು ಮಾಡುವುವು. ಇವು ನೀರಿನಲ್ಲಿ ಇಳಿಯಲಾರವು. ಅನೇಕ ವೇಳೆ ಮಳೆಯ ನೀರಿನ ಪ್ರವಾಹ ಬಿಲಕ್ಕೆ ನುಗ್ಗಿ ಇವುಗಳ ಸಾವಿಗೆ ಕಾರಣವಾಗುತ್ತದೆ.

5. ಚಿಟ್ಟಿಲಿ : ಮಸ್ ಮಸ್ಕ್ಯುಲಸ್, ಮಸ್ ಡೂಬಿಯಸ್ ಮತ್ತು ಲೆಗ್ಗಡ ಜಾತಿಯ ಕೆಲವು ಪ್ರಭೇದಗಳ ಒಟ್ಟು ಹೆಸರು. ಮಸ್ ಮಸ್ಕುಲಸ್ ಪ್ರಭೇದದ ಉದರ ಹೊಸಲು ಕಂದು ಛಾಯೆಯ ಹಳದಿ. ಮಸ್ ಡೂಬಿಯಸ್ ಪ್ರಭೇದ ಕಡ ಇಲಿ ; ಇದರ ಮೂತಿ ಬಲು ಉದ್ದ. ಲೆಗ್ಗಡ ಜಾತಿಯ ಪ್ರಭೇದಗಳು ಸಣ್ಣ ಗಾತ್ರದವು. ಮೊದಲಿಗೆ ಯೂರೋಪ್. ಉತ್ತರ ಆಫ್ರಿಕಗಳ ನಿವಾಸಿಗಳಾದ ಮಸ್ ಪ್ರಭೇದಗಳು ಕಾಲಕ್ರಮದಲ್ಲಿ ಭಾರತ ಮುಂತಾದ

ದೇಶಗಳಿಗೂ ಹರಡಿದಂತೆ ತೋರುತ್ತದೆ. ಇವು ಗಾತ್ರದಲ್ಲಿ ಬಲು ಸಣ್ಣ. ತಲೆ-ಮೈ ಉದ್ದ 6–8 ಸೆಂಮೀ. ಬಾಲದ ಉದ್ದ 7–9 ಸೆಂಮೀ. ಬಾಲದಲ್ಲಿ ಕೂದಲು ಕಡಿಮೆ. ವಾಸ ಹೆಚ್ಚಾಗಿ ಮನೆಗಳಲ್ಲಿ; ವಿರಳವಾಗಿ ತೋಟ ಹೊಲಗಳಲ್ಲಿ; ತುಂಬ ಚಟುವಟಿಕೆಯಿಂದ ಕಂಬ, ಮರ, ಒರಟು ಗೋಡೆ ಇವನ್ನು ಸರಾಗವಾಗಿ ಹತ್ತುತ್ತವೆ. ದೂರಕ್ಕೆ ಚಿಮ್ಮಿ ನೆಗೆಯುವುದೂ ಉಂಟು. ದವಸ ಧಾನ್ಯಗಳನ್ನು ತಿಂದುಹಾಕಿ ಮಾನವನಿಗೆ ನಷ್ಟವುಂಟುಮಾಡುತ್ತವೆ. ಒಂದೊಂದು ಸಲಕ್ಕೂ 7-8 ಮರಿಗಳಂತೆ ವರ್ಷಕ್ಕೆ ಮೂರು ನಾಲ್ಕು ಬಾರಿ ಈಯುತ್ತವೆ.

6. ಸುಂಡಿಲಿ : ವ್ಯಾಂಡಲೂರಿಯ ಜಾತಿಯ ಪ್ರಭೇದಗಳನ್ನು ಈ ಹೆಸರಿನಿಂದ ಕರೆಯುವುದುಂಟು. ಗಾತ್ರದಲ್ಲಿ ಇವು ಚಿಕ್ಕವು. ಮುಖದ ಮೇಲೆ ಕಪ್ಪು ಗುರುತುಗಳಿಲ್ಲ. ಮೈಬಣ್ಣ ಕಂದು. ಪಾದಗಳು ಬಿಳಿ. ತಲೆ-ಮೈ ಉದ್ದ 6–7 ಸೆಂಮೀ. ಬಾಲದ ಉದ್ದವೂ ಅಷ್ಟೇ. ಹೊಲಗಳಲ್ಲಿ ಆಳವಾದ ಆದರೆ ತೀರ ಉದ್ದವಿಲ್ಲದ ಬಿಲಗಳಲ್ಲೂ ಕಲ್ಲು ರಾಶಿಗಳಲ್ಲೂ ವಾಸಿಸುತ್ತವೆ. ರಾಗಿ, ಹತ್ತಿ ಮುಂತಾದ ಬೆಳೆಗಳಿಗೆ ಸ್ವಲ್ಪ ಮಟ್ಟಿಗೆ ನಷ್ಟವುಂಟುಮಾಡುತ್ತವೆ.

7. ಮರ ಇಲಿ : ವ್ಯಾಂಡಲೂರಿಯ ಓಲಿರೋನಿಯ ಎಂಬ ಪ್ರಭೇದ ಮರಗಳಲ್ಲಿ ವಾಸಿಸುವುದು ಹೆಚ್ಚು. ಆದ್ದರಿಂದ ಈ ಹೆಸರು. ಇದರ ತುಪ್ಪಟ ಒರಟು. ತಲೆ-ಮೈ ಉದ್ದ 5–7 ಸೆಂಮೀ. ಬಾಲದ ಉದ್ದ 8–12 ಸೆಂಮೀ. ಸ್ತನ ನಸುಗೆಂಪು, ತಳದಲ್ಲಿ ಬಿಳುಪು. ಮರಗಳಲ್ಲಿ ಎಲೆ ಹುಲ್ಲುಗಳಿಂದ ಗೂಡು ಕಟ್ಟುತ್ತದೆ. ತೆಂಗಿನ ಮರಗಳಲ್ಲೂ ಬಿದಿರು ಮೆಳೆಗಳಲ್ಲೂ ಗುಡಿಸಲಿನ ಸೂರುಗಳಲ್ಲೂ ವಾಸಿಸುವುದುಂಟು.

ಮರ ಇಲಿ

8. ಪೊದೆ ಇಲಿ : ಗೋಲುಂಡ ಎಲಿಯಟಿ ಎಂಬ ಪ್ರಭೇದಕ್ಕೆ ಈ ಹೆಸರುಂಟು. ಗುಗ್ಗುಂದಿಯೆಂದೂ ಇದನ್ನು ಕರೆಯುವುದುಂಟು. ತುಪ್ಪುಳ ಒರಟು. ಮುಳ್ಳುಗಳಿಲ್ಲ. ಮೇಲಿನ ಬಣ್ಣ ಹಳದಿ ಮಿಶ್ರಿತ ಕಂದು ; ಕಪ್ಪು ನಸುಗೆಂಪು ಚುಕ್ಕೆಗಳುಂಟು; ಕೆಳಗೆ ಕಂದು ಮಿಶ್ರಿತ ಬಿಳಿ ಅಥವಾ ಬೂದು. ತಲೆ-ಮೈ ಉದ್ದ 12 ಸೆಂಮೀ ಬಾಲದ ಉದ್ದ 10 ಸೆಂಮೀ ದಟ್ಟವಾದ ಪೊದೆಗಳಲ್ಲಿ ನಾರು ಕಡ್ಡಿಗಳನ್ನು ಹೆಣೆದು ಅಗಲವಾದ ಗೂಡು ಕಟ್ಟುತ್ತದೆ. ಇತರ ಜಾತಿಯ ಇಲಿಗಳಂತೆ ಚುರುಕಾಗಿಲ್ಲ. ನೆಗೆಯುವ ಸಾಮರ್ಥ್ಯವನ್ನೂ ಹೊಂದಿಲ್ಲ. ಕಂದ ಮೂಲಿಕೆಗಳು ಇದರ ಆಹಾರ. ಒಂಟೊಂಟಿಯಾಗಿ ವಾಸಿಸುವುದುಂಟು. ಶ್ರೀಲಂಕಾದಲ್ಲಿ ಇವು ಕಾಫಿ ತೋಟದ ಬಳಿ ವಾಸಿಸುತ್ತ ಗಿಡದ ಎಲೆ, ಹೂ ಮೊಗ್ಗುಗಳನ್ನು ತಿಂದು ಹಾಕುತ್ತವೆ.

9. ಬಿಳಿ ಇಲಿ: ಟ್ಯಾಟೀರಾ ಕುವಿಯೇರಿ ಎಂಬ ಪ್ರಭೇದವನ್ನು ಬಿಳಿ ಇಲಿ ಎನ್ನುವರು. ತಲೆ-ಮೈ ಉದ್ದ 15–20 ಸೆಂಮೀ ಹಿಂದಿನ ಪಾದದ ಉದ್ದ 3 ಸೆಂಮೀ ಕಣ್ಣು, ಕಿವಿ ಕಿರಿದು. ಮೊಂಡಾದ ಮುಸುಡಿ. ಸಣ್ಣ ಬಾಲ. ದೇಹದ ಮೇಲ್ಗಡೆ ಮಾಸಲು ಕಂದು : ತಳದಲ್ಲಿ ಬೂದಿಮಿಶ್ರಿತ ಬಿಳುಪು. ಇವು ಉತ್ತ ಹೊಲಗಳ ಮಣ್ಣಿನಲ್ಲಿ ಬಿಲಮಾಡಿಕೊಂಡು ವಾಸಿಸುತ್ತವೆ. ಹೊರಗೆ ಬರಲೂ ಒಳಕ್ಕೆ ಹೋಗಲೂ ಹಲವಾರು ದ್ವಾರಗಳನ್ನು ಮಾಡಿಕೊಂಡಿರುತ್ತವೆ. ಸಂಶಯ ಹುಟ್ಟಿದೊಡನೆ ಅಪಾಯ ಕಂಡು ಬಂದ ಮಾರ್ಗವನ್ನುಳಿದು ಮಿಕ್ಕ ಯಾವುದಾದರೂ ದ್ವಾರದ ಮೂಲಕ ಜಾಣ್ಮೆಯಿಂದ ನುಸುಳಿ ತಪ್ಪಿಸಿಕೊಳ್ಳುವುವು. ಮರಿಗಳಿಗೆ ಗರಿಕೆ ಹುಲ್ಲಿನಿಂದ ಮೆತ್ತನೆಯ ಗೂಡನ್ನು ನಿರ್ಮಿಸುತ್ತವೆ.

ಬಿಳಿ ಇಲಿ ರಾಗಿ, ಜೋಳ, ನವಣೆ, ಅವರೆ, ತೊಗರಿ, ಉದ್ದು, ಹೆಸರು, ಅಲಸಂದಿ, ಹುಚ್ಚೆಳ್ಳು, ಕಡಲೆಕಾಯಿ, ಹರಳು ಮಂತಾದುವನ್ನು ತಿನ್ನುತ್ತದೆ. ಹುಲ್ಲು ಗೆಡ್ಡೆಗಳನ್ನೂ ತಿನ್ನುವುದುಂಟು. ಕೊಡತಿ ಹುಳುಗಳನ್ನು ತಿನ್ನುವುದನ್ನು ನೋಡಲಾಗಿದೆ. ವ್ಯವಸಾಯಕ್ಕೆ ತೊಂದರೆಯೊಡ್ಡುವ ಹುಲ್ಲುಗೆಡ್ಡೆಗಳನ್ನೂ ಕೊಡತಿ ಹುಳುಗಳನ್ನೂ ತಿನ್ನುವುದರಿಂದ ರೈತನಿಗೆ ಸ್ವಲ್ಪಮಟ್ಟಿಗಾದರೂ ಬಿಳಿ ಇಲಿ ಸಹಾಯಕ; ಆದರೆ ಅದು ದವಸ ಧಾನ್ಯಗಳಿಗೆ ಮಾಡುವ ನಷ್ಟದ ಪ್ರಮಾಣವನ್ನು ಪರಿಗಣಿಸಿದರೆ ಈ ಸಹಾಯ ಅಷ್ಟು ದೊಡ್ಡದೆನಿಸದು. (ಎನ್.ಎಸ್.ವಿ.)

10. ಮೂಗಿಲಿ (ಶ್ರೂ) : ಇವು ಇಲಿಗಳಂತಿರುವ ಕೀಟಭಕ್ಷಕಗಳು. ಇನ್‌ಸೆಕ್ಟಿವೋರ ಎಂಬ ವರ್ಗಕ್ಕೆ ಸೇರಿದ ಸೋರಿಕೊ ಇಡಿಯಾ ಪಂಗಡಕ್ಕೆ ಸೇರಿವೆ. ಅವುಗಳಲ್ಲಿ ಕೆಲವು ನೆಲ ಜೀವಿಗಳು. ಉಳಿದವು ಜಲವಾಸಿಗಳು. ದಕ್ಷಿಣ ಅಮೆರಿಕದ ಉಷ್ಣವಲಯ ಮತ್ತು ಆಸ್ಟ್ರೇಲಿಯಗಳಲ್ಲಿ ಹೊರತು ಪ್ರಪಂಚದ ಮಿಕ್ಕೆಲ್ಲ ಭಾಗಗಳಲ್ಲೂ ಇವು ನೆಲೆಸಿವೆ. ದಕ್ಷಿಣ ಅಮೆರಿಕದಲ್ಲಿ ಕೂಡ ಇವು ಉತ್ತರಭಾಗಗಳಲ್ಲಿ ಗೋಚರಿಸುತ್ತವೆ. ಗಾತ್ರದಲ್ಲೂ ರೂಪದಲ್ಲೂ ಮೂಗಿಲಿಗಳು ಸಣ್ಣ ಇಲಿಗಳಂತೆ. ಆದರೆ ಇವಕ್ಕೆ ಉದ್ದವಾಗಿಯೂ ಮೊನಚಾಗಿಯೂ ಇರುವ ಮೂತಿಯುಂಟು. ಕಣ್ಣು ಚಿಕ್ಕದು. ಮೈಯನ್ನು ಮುಚ್ಚಿರುವ ತುಪ್ಪಳ ಮೃದುವಾಗಿಯೂ ರೇಷ್ಮೆಯಂತೆಯೂ ಇದೆ. ಪುನುಗಿನಂಥ ವಾಸನೆಯನ್ನು ಹರಡುತ್ತವೆ. ಹುಳು, ಗೊಂಡಿಹುಳು, ಕೀಟ, ಕೀಟಗಳ ತತ್ತಿ ಮುಂತಾದವು ಇವಕ್ಕೆ ಆಹಾರ. ಮರದ ದಿಮ್ಮಿಗಳ ಕೆಳಗೊ ಮರದ ಪೊಟರೆಗಳಲ್ಲೊ ಅಥವಾ ನೆಲದಲ್ಲೊ ಇವು ಸಾಮಾನ್ಯವಾಗಿ ಗೂಡುಗಳನ್ನು ಕಟ್ಟುತ್ತವೆ. ಆಕಾರ ಬಟ್ಟಲಿನಂತೆ. ಒಣಹುಲ್ಲೇ ಕಟ್ಟುವ ಸಾಧನ. ಗೂಡಿಗೆ ಬಿಗಿಯಿಲ್ಲದ ಮುಚ್ಚಳಗಳಿರುತ್ತವೆ. ವರ್ಷಕ್ಕೆರಡು ಸಲ ಒಮ್ಮೆ 5-7 ಮರಿಗಳು ಹುಟ್ಟುತ್ತವೆ. ಸಂಪೂರ್ಣವಾಗಿ ಬೆಳೆಯುವವರೆಗೂ ಅವು ತಮ್ಮ ಹೆತ್ತವರೊಂದಿಗೆ ಗೂಡಿನಲ್ಲೇ ಇರುತ್ತವೆ. ಅವು ಬಾಳುವ ಕಾಲ ತುಂಬ ಕಿರಿದು. ಸುಮಾರು ಹದಿನೆಂಟು ತಿಂಗಳುಗಳಷ್ಟು ಮಾತ್ರ.

ಲೋಕದಲ್ಲಿ ಸಾಮಾನ್ಯವಾಗಿ ಕಂಡುಬರುವ ಮೂಗಿಲಿಗಳು ಯಾವುವೆಂದರೆ ಉತ್ತರ ಅಮೆರಿಕದ ಮೋಟುಬಾಲದ ಮೂಗಿಲಿ-ಬ್ಲಾರಿನ ಬ್ರೆವಿಕಾವುಡ, ಯೂರೋಪು, ಆಫ್ರಿಕ ಮತ್ತು ಯೂರೋಪಿನ ಎರಡು ಬಣ್ಣಗಳ ಬಿಳಿ ಹಲ್ಲಿನ ಮೂಗಿಲಿಗಳು-ಕ್ರೊಸಿಡ್ಯೂರ ಲ್ಯೂಕೋಡಾನ್, ಯೂರೋಪಿನ ನೀರು ಮೂಗಿಲಿ-ನಿಯೋಮಿಸ್ ಫೋಡಿಯನ್ಸ್ ಮತ್ತು ಯೂರೋಪ್ ಮತ್ತು ಉತ್ತರ ಅಮೆರಿಕಗಳ ಸಾಮಾನ್ಯ ಮೂಗಿಲಿ-ಸೋರೆಕ್ಸ್ ಆರಾನಿಯಸ್. ಇಂಡಿಯದ ಸಾಮಾನ್ಯ ಮೂಗಿಲಿ-ಸೆನ್‌ಕಸ್ ಕೊಇರೂಲಿಯಸ್ ಎಂಬುದು ಕೀಟಗಳನ್ನು ಹುಡುಕುತ್ತ ರಾತ್ರಿಯಲ್ಲಿ ಮನೆಯೊಳಕ್ಕೂ ಬರುತ್ತದೆ. ಅದರ ಕಂಕುಳಲ್ಲಿರುವ ಗ್ರಂಥಿಗಳಿಂದ ದ್ರವಿಸುವ ದ್ರವಕ್ಕೆ ಪುನುಗಿನ ವಾಸನೆ ಇದೆ.

ಯೂರೋಪಿನ ನೀರುಮೂಗಿಲಿಗಳಿಗೆ ಹೊಳೆಯುವ ತುಪ್ಪುಳ ಇದೆ. ಇದು ಸುಲಭವಾಗಿ ನೀರಿನಲ್ಲಿ ನೆನೆಯುವುದಿಲ್ಲ. ಈ ಪ್ರಾಣಿಗಳು ತಮ್ಮ ಕಾಲದ ಅಧಿಕ ಅಂಶವನ್ನು ನೀರಿನಲ್ಲಿ ಕಳೆಯುತ್ತವೆ. ಮುಂದಿನ ಕಾಲುಗಳನ್ನು ಚುಕ್ಕಾಣಿಯಂತೆ ಮಾತ್ರ ಉಪಯೋಗಿಸಿಕೊಳ್ಳುತ್ತ ಮೀನುಗಳಂತೆ ತಮ್ಮ ಮೈಯನ್ನು ಅಲುಗಾಡಿಸಿ ಈಜುತ್ತವೆ. ಉಸಿರಾಡುವುದಕ್ಕೆ ಪದೇ ಪದೇ ಮೇಲಕ್ಕೆ ಬರುತ್ತವೆ. ಇವು ನೀರಿನೊಳಗಿರುವ ಕಲ್ಲುಗಳನ್ನು ತಿರುವಿಹಾಕಿ ಮೀನಿನ ತತ್ತಿಗಳನ್ನು ತಿನ್ನುತ್ತವೆ. ಒಮ್ಮೊಮ್ಮೆ ಇವು ಆಹಾರವನ್ನು ಹುಡುಕುತ್ತ ನೆಲದ ಮೇಲಕ್ಕೂ ಬರುವುದುಂಟು. ಹೊಳೆಯ ದಡಗಳಲ್ಲಿ ಹುಲ್ಲು, ಬೇರು ಮತ್ತು ಎಲೆಗಳಿಂದ ಗೂಡುಗಳನ್ನು ಕಟ್ಟುತ್ತವೆ. ನೋಡಿ-ದಂಶಕಗಳು (ಪಿ.ಎಸ್.ಆರ್.)

ಹತೋಟಿ: ಕೀಟವರ್ಗದ ಅನಂತರ ಮಾನವ ವರ್ಗಕ್ಕೆ ಅತ್ಯಂತ ಹೆಚ್ಚಿನ ಅಪಾಯಕಾರಿಯೆನಿಸಿರುವ ಪ್ರಾಣಿ ಮೂಷಕವರ್ಗ. ಈ ವರ್ಗದ ಪ್ರಾಣಿಗಳು ಮನುಷ್ಯ ಬೆಳೆಸುವ ಆಹಾರದಲ್ಲಿ ಗಣನೀಯ ಪ್ರಮಾಣವನ್ನು ತಿಂದು ಹಾಕುತ್ತವೆ; ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಚೆಲ್ಲಿ ಹೊಲಸುಗೊಳಿಸಿ ಹಾಳು ಮಾಡುತ್ತವೆ; ಅವನ ಬಳಕೆಯ ಸಾಮಾನುಗಳಾದ ಮರಗಳು, ಚರ್ಮದ ಸಾಮಾನುಗಳು, ಬಟ್ಟೆಗಳು, ಸಾಬೂನುಗಳು, ನಯ ನಾಜೂಕಿನ ಸಾಮಾನುಗಳು-ಇವನ್ನೆಲ್ಲ ಕಡಿದು ಹಾಳು ಮಾಡುತ್ತವೆ. ಅಲ್ಲದೆ, ಮಾನವನ ಸಾಮೂಹಿಕ ಹನನಕ್ಕೆ ಕಾರಣವೆನಿಸುವ ಸಾಂಕ್ರಾಮಿಕ ರೋಗಗಳನ್ನೂ ಹರಡುತ್ತವೆ. ಇನ್ನು ಅವುಗಳಿಂದ ಮಾನವನಿಗಾಗುತ್ತಿರುವ ಉಪಯೋಗ ಅಷ್ಟೇನು ಹೇಳಿಕೊಳ್ಳುವಂಥದಲ್ಲ. ಆದ್ದರಿಂದ ಮಾನವನ ಹಿತದೃಷ್ಟಿಯಿಂದ ಮೂಷಕವರ್ಗದ ಹತೋಟಿ ಅನಿವಾರ್ಯವೆನಿಸುತ್ತದೆ. ತನ್ನ ಅಸ್ತಿತ್ವಕ್ಕೆ ಕಂಟಕ ಪ್ರಾಯವೆನಿಸುತ್ತಿರುವ ಇಲಿ ಹೆಗ್ಗಣಗಳನ್ನು ಪೂರ್ಣವಾಗಿ ನಾಶಮಾಡುವುದಂತೂ ಸಾಧ್ಯವೇ ಆಗದ ಕೆಲಸ. ಸಹಸ್ರಾರು ವರ್ಷಗಳಿಂದಲೂ ಮಾನವ ಅವುಗಳ ಕೋಟಲೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೂ ಅವು ಉಳಿದುಕೊಂಡೇ ಬಂದಿವೆ. ಈ ಕಾರ್ಯದಲ್ಲಿ ಸದಾ ಬೆಳೆಯುವ ಅವುಗಳ ಬಾಚಿಹಲ್ಲು, ಚಿಕ್ಕ ಮೈ, ಎಲ್ಲ ರೀತಿಯ ಆಹಾರವನ್ನೂ ತಿಂದು ಅರಗಿಸುವ ಬಲಯುತವಾದ ಜೀರ್ಣಾಂಗ ದೂರಪ್ರದೇಶಗಳಲ್ಲಿ ಹರಡಿ ಹಬ್ಬುವ ಅವುಗಳ ಸಾಹಸ ಎಂಥ ಸನ್ನಿವೇಶಗಳಿಗೂ ಹೊಂದಿಕೊಳ್ಳುವ ಅನುಸರಣಾ ಸಾಮರ್ಥ್ಯ, ಎಡರುತೊಡರುಗಳಿಂದ ಕಡೆಹಾಯುವ, ಚಾಕಚಕ್ಯತೆ, ಮೇಲಾಗಿ ತೀವ್ರಪ್ರದೇಶದಲ್ಲಿ ತಮ್ಮ ಸಂತಾನವನ್ನು ಹೆಚ್ಚಿಸಿಕೊಳ್ಳುವ ಅದ್ಭುತ ಶಕ್ತಿ-ಇವೆಲ್ಲ ಅವಕ್ಕೆ ನೇರವಾಗುತ್ತಿವೆ. ಆದರೂ ಮಾನವ ಅವುಗಳ ಹತೋಟಿಗಾದರೂ ಯತ್ನಿಸಬೇಕು. ಇದೊಂದು ಧರ್ಮಯುದ್ಧವೆಂದು ಭಾವಿಸಿ ಸಾರ್ವತ್ರಿಕವಾಗಿ ಹತೋಟಿ ಕಾರ್ಯವನ್ನು ಆರಂಭಿಸಬೇಕು. ಮಾನವನ ಭವಿಷ್ಯದ ದೃಷ್ಟಿಯಿಂದ ಇದು ತೀರ ಅಗತ್ಯ.

ಗಮನಿಸಬೇಕಾದ ಅಂಶಗಳು : ಇಲಿ, ಹೆಗ್ಗಣಗಳ ಹತೋಟಿಗೆ ಬಳಸುವ ಕಾರ್ಯವಿಧಾನ ಎಲ್ಲ ಸಂದರ್ಭಗಳಲ್ಲೂ ಒಂದೇ ಆಗಿರಬಾರದು. ಮೊದಲನೆಯದಾಗಿ ಆಯಾ ಸನ್ನಿವೇಶಕ್ಕೆ ತಕ್ಕಂತೆ ಹತೋಟಿ ಕಾರ್ಯಕ್ರಮ ಇರಬೇಕಾದುದು ಅಗತ್ಯ. ಹೊಲ, ಗದ್ದೆ, ಬಯಲು, ಕಾಡುಗಳಲ್ಲಿ ಕೈಗೊಳ್ಳುವ ಹತೋಟಿ ಕ್ರಮ ಮನೆಗಳಲ್ಲಿ ಸಾಧ್ಯವಾಗದು. ಎರಡನೆಯದಾಗಿ, ಶತ್ರುವಿನ ವಾಸದ ಸ್ಥಳ, ಅದರ ಆಹಾರವೆಂಥದು, ಈಯುವ ಕಾಲ ಯಾವುದು ಇತ್ಯಾದಿ ಅಂಶಗಳನ್ನು ಗಮನಿಸಬೇಕು. ಮೂರನೆಯದಾಗಿ, ಅನುಸರಿಸುವ ಕಾರ್ಯಕ್ರಮ ಮನುಷ್ಯನಿಗೆ ಅಥವಾ ಅವನ ಸನ್ನಿವೇಶಗಳಿಗೆ ಮಾರಕವಾಗಬಾರದು. ಎಂದರೆ ಅವನ ಮಕ್ಕಳು ಮರಿಗಳಿಗೆ ಅಪಾಯಕಾರಿಯಾಗಬಾರದು. ಪರಿಸರ ಕಲುಷಿತವಾಗಬಾರದು; ಆಹಾರ ಮತ್ತು ಬಳಸುವ ಇತರ ಪದಾರ್ಥಗಳು ಕಲುಷಿತಗೊಳ್ಳಬಾರದು; ವಾಸದ ಕಟ್ಟಡಕ್ಕೆ ಅಪಾಯವಾಗಬಾರದು. ನಾಲ್ಕನೆಯದಾಗಿ, ಅದಕ್ಕೆ ತಗಲುವ ವೆಚ್ಚ ವಹಿಸಬೇಕಾದ ಶ್ರಮ–ಇವೆಲ್ಲ ಅತಿಯಾಗಬಾರದು. ಕೊನೆಯದಾಗಿ, ಆ ಕಾರ್ಯವನ್ನು ಸಾರ್ವತ್ರಿಕವಾಗಿ ಅನುಸರಿಸುವಾಗ ಉಪಕರಣಗಳು, ವಸ್ತುಗಳು, ಜನ ಸಹಕಾರ, ಧನಸಹಾಯ, ತಾಂತ್ರಿಕ ನೆರವು ಇತ್ಯಾದಿಗಳನ್ನೆಲ್ಲ ಸಿದ್ಧಪಡಿಸಿಕೊಂಡೇ ಕಾರ್ಯ ಆರಂಭಮಾಡಬೇಕು.

ಹತೋಟಿಯ ವಿಧಾನಗಳು : ಇಲಿ ಹೆಗ್ಗಣಗಳ ಉಪಟಳ ಸಾಮಾಜಿಕ ಸಮಸ್ಯೆಯೆಂಬುದು ಸ್ಪಷ್ಟವಾಗಿದ್ದರೂ ಅವುಗಳ ನಿಯಂತ್ರಣಕ್ಕೆ ನಿರ್ದಿಷ್ಟವೂ ಸಾರ್ವತ್ರಿಕವೂ ಆದ ಯೋಜನೆಗಳು ಪ್ರತ್ಯೇಕವಾಗಿ ಏರ್ಪಟ್ಟಿಲ್ಲ. ಕಟ್ಟಡಗಳ ನಿರ್ಮಾಣ, ನಗರಗಳ ನೈರ್ಮಲ್ಯ, ಉಗ್ರಾಣಗಳ ನಿರ್ಮಾಣ ಇತ್ಯಾದಿಯಾದ ಕೆಲವು ಅನ್ಯಕಾರ್ಯ ಕ್ರಮಗಳ ಫಲವಾಗಿ ಸ್ವಲ್ಪಮಟ್ಟಿಗೆ ಅವುಗಳ ನಿಯಂತ್ರಣ ಕಾರ್ಯ ನಡೆಯುತ್ತಿದೆ. ಅವುಗಳ ಉಪಟಳವನ್ನು ತಡೆಯಲಾರದೆ ಪ್ರತಿ ಕುಟುಂಬವೂ ಅವನ್ನು ನಿಗ್ರಹಿಸಲು ಯತ್ನಿಸುತ್ತಲೇ ಇದೆ. ಆ ಕಾರ್ಯದಲ್ಲಿ ಅನುಸರಿಸುತ್ತಿರುವ ಹಲವಾರು ವಿಧಾನಗಳಲ್ಲಿ ಮುಖ್ಯವಾದ ಕೆಲವನ್ನು ಕೆಳಗೆ ಸೂಚಿಸಿದೆ.

1. ಇಲಿ ಹೆಗ್ಗಣಗಳ ಪ್ರವೇಶಕ್ಕೆ ಅವಕಾಶವೀಯದ ತಡೆಗಳು : ನಮ್ಮ ವಾಸದ ಮನೆ, ಉಗ್ರಾಣ, ಅಂಗಡಿ, ಕಾರ್ಖಾನೆ ಇತ್ಯಾದಿಗಳನ್ನು ಕಟ್ಟುವಾಗಲೆ ಕಲ್ಲು, ಸಿಮೆಂಟುಗಳ ತಳಪಾಯ ಹಾಕಿ ಕಟ್ಟುವುದರಿಂದಲೂ ಬಚ್ಚಲು, ಗವಾಕ್ಷಿಗಳಿಗೆ ಲೋಹದ ಬಲೆ ಜೋಡಿಸುವುದರಿಂದಲೂ ಅವು ಒಳಕ್ಕೆ ಪ್ರವೇಶಿಸದಂತಾಗುತ್ತದೆ. ಕಾಲಕ್ರಮದಲ್ಲಿ ಅದು ಶಿಥಿಲವಾಗಿ ಅವು ಕೊರೆದುಕೊಂಡು ಒಳನುಗ್ಗಬಹುದು. ಆದ್ದರಿಂದ ಕಟ್ಟಡ ಕಟ್ಟಿದ ಮೇಲೂ ಎಚ್ಚರಿಕೆಯಿಂದ ಅಂದಿಗಂದಿಗೆ ದುರಸ್ತಿ ಕಾರ್ಯ ಮಾಡಿಕೊಳ್ಳುತ್ತಿರಬೇಕು.

2. ಪಾಷಾಣ ಪ್ರಯೋಗ : ಇದು ಮೂಷಕನಿಗ್ರಹಕ್ಕೆ ಬಳಸುತ್ತಿರುವ ಮುಖ್ಯ ಉಪಾಯ. ರಾಸಾಯನಿಕ ಅಥವಾ ಸಸ್ಯಜನ್ಯ ಪಾಷಾಣಗಳನ್ನು ಆಹಾರದೊಡನೆ ಸೇರಿಸಿ ಇಲಿ ಹೆಗ್ಗಣಗಳು ಅದನ್ನು ತಿನ್ನುವಂತೆ ಮಾಡಿ ಅವನ್ನು ಕೊಲ್ಲುವುದೇ ಈ ಉಪಾಯದ ಮುಖ್ಯೋದ್ದೇಶ. ಆದರೆ ಮನೆಗಳಲ್ಲಿ ಈ ವಿಧಾನವನ್ನು ಅನುಸರಿಸುವಾಗ ಎಚ್ಚರಿಕೆ ಅಗತ್ಯ. ಇಲಿಗೆ ಎಂದಿಟ್ಟ ಪಾಷಾಣ ಮಿಶ್ರಿತ ಆಹಾರವನ್ನು ಅಜಾಗರೂಕತೆಯಿಂದ ಮಕ್ಕಳು ಮರಿಗಳಾಗಲಿ ಇತರ ಪಶುಪ್ರಾಣಿಗಳಾಗಲಿ ಸೇವಿಸಿದರೆ ಅಪಾಯ. ಹತೋಟಿ ಕಾರ್ಯದಲ್ಲಿ ಬಳಸುವ ಪಾಷಾಣಗಳು ಅನೇಕ. ನಂಜಿನ ಕೊರಡು ಸಸ್ಯದಿಂದ ದೊರಕುವ ಸ್ಟ್ರಿಕ್ನೀನ್ ಎಂಬ ವಿಷವಸ್ತು ತೀಕ್ಷ್ಣವಾದ ಪಾಷಾಣ. ಮೆಡಿಟರೇನಿಯನ್ ಸಮುದ್ರ ತೀರದಲ್ಲಿ ಬೆಳೆಯುವ ಬೆಳ್ಳುಳ್ಳಿಯಂಥ ರೆಡ್‌ಸ್ಕಿಲ್ ಎಂಬ ಸಸ್ಯದ ಕೆಂಪು ಗೆಡ್ಡೆಯೂ ಅಷ್ಟೇ ಶಕ್ತಿಯುತವಾದ ಪಾಷಾಣವೆಂಬುದು ವ್ಯಕ್ತಪಟ್ಟಿದೆ. ಇವು ಸಸ್ಯಜನ್ಯಪಾಷಾಣಗಳು. ಖನಿಜ ಜನ್ಯ ಪಾಷಾಣಗಳಲ್ಲಿ ಅನೇಕ ಬಗೆಯವು ಬಳಕೆಯಲ್ಲಿವೆ. ಆರ್ಸೀನಿಯಸ್ ಆಕ್ಸೈಡನ್ನು (ಗೌರಿ ಪಾಷಾಣ) 17ನೆಯ ಶತಮಾನದಿಂದಲೂ ಈ ಕಾರ್ಯಕ್ಕಾಗಿ ಬಳಸಲಾಗುತ್ತಿದೆ. 19 ನೆಯ ಶತಮಾನದಲ್ಲಿ ರಂಜಕ ಮತ್ತು ಬೇರಿಯಂ ಕಾರ್ಬೋನೇಟುಗಳು ಬಳಕೆಗೆ ಬಂದಿವೆ. ಆದರೆ ಆಧುನಿಕ ಬಾಕ್ಸೈಡ್ ಆ ಕಾರ್ಯಕ್ಕೆ ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿದ್ದು ಅಮೆರಿಕದಲ್ಲಿ ಮುಖ್ಯವಾಗಿ ಥಾಲಿಯಂ ಸಲ್ಫೇಟ್ ಎಂಬ ವಸ್ತುವನ್ನು ಬಳಸುತ್ತಿದ್ದರು. ಇಲ್ಲಿ ಫಾಸ್ಫೇಟ್ ಥಯೋಬೋರಿಯ, ಸೋಡಿಯಂ, ಫ್ಲೋರೊ ಇವು ಬಳಕೆಕಾರಿಯೆಂದೆನಿಸುವ ಇಲಿ ಪಾಷಾಣಗಳು. ಮೇಲಿನ ಪಾಷಾಣಗಳನ್ನು ಕಂಡುಹಿಡಿದಂತೆ ಸಸ್ಯಪಾಷಾಣಗಳ ಬಳಕೆ ನಿಂತು ಹೋಗುತ್ತದೆ. ಇಲಿ, ಹೆಗ್ಗಣಗಳ ಹತೋಟಿಗೆ ಪಾಷಾಣವನ್ನು ಆರಿಸಿಕೊಳ್ಳುವಾಗ ತೀಕ್ಷ್ಣತೆ, ಸರಬರಾಜು, ಬೆಲೆ– ಈ ನಾಲ್ಕು ಅಂಶಗಳ ಕಡೆಗೆ ಗಮನಕೊಡಬೇಕಾಗುತ್ತದೆ. ಅದನ್ನು ಪ್ರಯೋಗಿಸುವಾಗ ಕಾಳುಕಡ್ಡಿಗಳೊಡನೆ, ಬಿಸ್ಕತ್ತು ಅಥವಾ ರೊಟ್ಟಿ ಚೂರುಗಳಲ್ಲಿ ಸೇರಿಸಿಡಬೇಕು. ಬಳಸುವ ಯಾವುದೇ ಪಾಷಾಣವಾಗಲಿ ಅದರ ಇತರ ಅಂಗಗಳೊಡನೆ ಮಿಶ್ರವಾಗಿರಬಾರದು; ಅದರ ಮಾರಕ ಶಕ್ತಿ ಬಹುಬೇಗ ಕುಂದಿಹೋಗುವಂತಿರಬೇಕು; ಅವು ಇಲಿ ಹೆಗ್ಗಣದ ಅನ್ನದ ಮೂಲಕ ಬಳಸುವಂತಿರಬೇಕು; ಜೊತೆಗೆ ಅದರ ಮಾರಕಶಕ್ತಿ ತೀಕ್ಷ್ಣ ಸ್ವರೂಪವಾಗಿರಬೇಕು. ಪ್ರಯೋಗಿಸುವಾಗ ಅದನ್ನು ಮುಟ್ಟುವುದರಿಂದಲೋ ಆಹಾರ ನೀರುಗಳಿಗೆ ಸೋಂಕುವುದರಿಂದಲೊ ಇತರ ಬಿಸಿರಕ್ತ ಪ್ರಾಣಿಗಳಿಗೂ ಅಪಾಯ ತಟ್ಟುವುದುಂಟು. ಆದ್ದರಿಂದ ಅದನ್ನು ಪ್ರಯೋಗಿಸುವವರು ಆ ಅಂಶಗಳನ್ನೆಲ್ಲಾ ತಿಳಿದು ಎಚ್ಚರಿಕೆ ಚೀಟಿ ಅಂಟಿಸಿ ಭದ್ರವಾದ ಸ್ಥಳದಲ್ಲಿಟ್ಟು ಬೀಗಹಾಕಬೇಕು. ಆಕಸ್ಮಿಕವಾಗಿ ಇದನ್ನೇನಾದರೂ ಸೇವಿಸಿಬಿಟ್ಟರೆ ಬೆಕ್ಕು, ನಾಯಿ ಮುಂತಾದ ಸಾಕು ಪ್ರಾಣಿಗಳು ವಾಂತಿಮಾಡಲಾರವು. ಅಂಥ ಸಂಧರ್ಭಗಳಲ್ಲಿ ಬಳಸಿದ ಪಾಷಾಣದ ವಿವರವನ್ನು ವೈದ್ಯರಿಗೆ ನೀಡಿ ಚಿಕಿತ್ಸೆ ಮಾಡಿಸುವುದು ಅಗತ್ಯ.

3. ವಿಷವಾಯು ಪ್ರಯೋಗ : ಇದು ಇಲಿ ಹೆಗ್ಗಣಗಳ ಹತೋಟಿಗೆ ನಗರಗಳಲ್ಲಿ ಬಳಸುವ ಸಾಮಾನ್ಯ ವಿಧಾನ. ಇದನ್ನು ಎರಡು ರೀತಿಯಲ್ಲಿ ಬಳಸುವುದುಂಟು. ಪೀಪಾಯಿಗಳಲ್ಲಿ ಅನಿಲ ಅಥವಾ ದ್ರವರೂಪದಲ್ಲಿ ಅದುಮಿಟ್ಟಿರುವ ವಿಷವಸ್ತುವನ್ನು ಇಲಿಗಳು ವಾಸಿಸುವ ಕಟ್ಟಡ ಬಿಲ ಮುಂತಾದುವುಗಳ ಒಳಗೆ ಬಿಡುಗಡೆ ಮಾಡುವುದು ಒಂದು ವಿಧಾನ. ವಿಷವಸ್ತುವನ್ನು ಪುಡಿಯ ರೂಪದಲ್ಲಿ ಉದುರಿಸಿ ಅದರಿಂದ ಗಾಳಿಯ ಸಂಪರ್ಕದಿಂದ ಹೈಡ್ರೊಸಯನಿಕ್ ಆಮ್ಲದ ಅನಿಲವನ್ನು ಉತ್ಪತ್ತಿಯಾಗಿಸುವುದು ಇನ್ನೊಂದು ವಿಧಾನ. ಆಗ ವಿಷವಾಯು ಆವರಣವನ್ನೆಲ್ಲ ಆಕ್ರಮಿಸಿ ಕಂಟಕಪ್ರಾಯವಾಗುವುದು. ಎರಡನೆಯ ವಿಧಾನಕ್ಕೆ ಸಯನೈಡ್ ಲವಣವನ್ನು ಬಳಸುವುದರಿಂದ ಅದನ್ನು ಸಯನೈಡ್ ದೂಳು ಉದುರಿಸುವುದು (ಸಯನೈಡ್ ಡಸ್ಟಿಂಗ್) ಎನ್ನುವರು. ಈ ಲವಣಕ್ಕೆ ಸಯನೊಗ್ಯಾಸ್ ಎಂಬ ಹೆಸರೂ ಉಂಟು. ಸಯನೈಡ್ ಅನಿಲವನ್ನು ಹೊರಗಡೆಯ ಬಿಲಗಳಿಗೆ ಹೆಗ್ಗಣಗಳನ್ನು ಹತೋಟಿಗೆ ತರುವುದು ಸುಲಭ. ಮನೆಯ ಬಿಲಗಳಿಗೆ ಹಾಯಿಸುವಾಗ ಎಲ್ಲ ರೀತಿಯ ಎಚ್ಚರಿಕೆಗಳನ್ನೂ ವಹಿಸ ಬೇಕಾಗುತ್ತದೆ. ಪುಡಿಯನ್ನು ಬಳಸುವಾಗ ಬಿಲದ ಆಳದಲ್ಲಿ ಒಂದು ಚಮಚದ ಮೂಲಕ ಪುಡಿಯನ್ನು ಇರಿಸಿ ಬಿಲದ ಬಾಯಿಗೆ ಹಸಿಮಣ್ಣು ಮೆತ್ತಿ ಮುಚ್ಚಬೇಕು. ಅದರಿಂದ ಉತ್ಪತ್ತಿಯಾಗುವ ಎಚ್‌ಸಿಎನ್ ಅನಿಲ ಬಿಲದೊಳಗೆ ತುಂಬಿಕೊಂಡು ಅಲ್ಲಿರುವ ಪ್ರಾಣಿಗಳು ಸಾಯುತ್ತವೆ. ಹೀಗೆಯೇ ಅವುಗಳಿರುವ ಬಿಲಗಳಿಗೆಲ್ಲ ವಿಷ ಪ್ರಯೋಗಿಸಬೇಕು. ವಿಷವಾಯುವನ್ನು ಪ್ರಯೋಗಿಸಲು ಸಯನೊಗ್ಯಾಸ್ ಫುಟ್ ಪಂಪ್ ಎಂಬ ರೇಚಕಯಂತ್ರವೊಂದನ್ನು ಬಳಸುವುದುಂಟು. ಪಂಪಿನ ಹೊರಕೊಳವೆಯ ಹೊರತುದಿಯ ಕೆಳಗೆ ಒಂದು ಪುಡಿ ತುಂಬುವ ಪಾತ್ರೆಯಿದೆ. ಅದರ ಹೊರ ತುದಿಯಿಂದ ಹೊರಟ ರಬ್ಬರ್ ಕೊಳವೆಯನ್ನು ಬಿಲದೊಳಕ್ಕೆ ಹಾಯಿಸಿ ರೇಚಕವನ್ನು ಒತ್ತುವುದರಿಂದ ಪುಡಿ ತೆಳ್ಳನೆ ದೂಳಿನಂತೆ ಬಿಲದೊಳಕ್ಕೆ ಸಾಗುತ್ತದೆ. ಸಾಕಷ್ಟು ದೂಳು ಒಳಹೊಕ್ಕ ಅನಂತರ ರಬ್ಬರ್ ಕೊಳವೆಯನ್ನು ತೆಗೆದು ಬಿಲದ ಬಾಯನ್ನು ಮಣ್ಣಿನಿಂದ ಮುಚ್ಚಬೇಕು. ಹೀಗೆಯೇ ಇತರ ಬಿಲಗಳಿಗೂ ವಾಯುವನ್ನು ತುಂಬಿ ಮುಚ್ಚಬೇಕು. ವಿಷವಾಯು ಪ್ರಯೋಗಿಸುವವರು ಕೆಲವು ಎಚ್ಚರಿಕೆ ತೆಗೆದುಕೊಳ್ಳಬೇಕು. ಪುಡಿಯ ಮುಚ್ಚಳವನ್ನು ತೆರೆಯುವಾಗ ಮುಖ ಅದರೆಡೆಗೆ ತಿರುಗಿಸಬಾರದು; ಪುಡಿ ತೆಗೆದುಕೊಂಡೊಡನೆ ಡಬ್ಬಕ್ಕೆ ಮುಚ್ಚಳ ಹಾಕಿ ಮುಚ್ಚಬೇಕು. ಪುಡಿಯನ್ನು ಬಟ್ಟೆಯಮೇಲೆ ಚೆಲ್ಲಿಕೊಳ್ಳಬಾರದು. ಉಪಯೋಗಿಸಿದ ತರುವಾಯ ಡಬ್ಬವನ್ನು ಮುಚ್ಚಿ ತೇವವಿರದ ರಕ್ಷಿತ ಸ್ಥಳದಲ್ಲಿ ಇಟ್ಟಿರಬೇಕು ; ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.



ಇಲಿಯ ಬಿಲಗಳಿಗೆ ಧೂಪಕ ಹಾಕುತ್ತಿರುವುದು

4. ಯಂತ್ರೋಪಕರಣಗಳ ಬಳಕೆ : ಹಿಂದಿನಿಂದಲೂ ಇಲಿ ಹೆಗ್ಗಣಗಳ ಹತೋಟಿಗೆ ಕೆಲವು ಯಂತ್ರಗಳನ್ನು ಬಳಸುತ್ತಿರುವರು. ಅವುಗಳಲ್ಲಿ ಎರಡು ಮುಖ್ಯ ವಿಧಗಳುಂಟು. ಒಂದು ಪೆಟ್ಟಿಗೆಯ ಆಕಾರದಲ್ಲಿದ್ದು ಅದರ ತೆರೆದಿರುವ ಬಾಗಿಲಿಗೆ ಜೋಡಿಸಿರುವ ಸುರುಳಿಗೂ

ಆಹಾರ ನೇತುಹಾಕಿರುವ ಕೊಕ್ಕೆಗೂ ಸಂಬಂಧವಿರುತ್ತದೆ. ಇಲಿ ಆಹಾರ ತಿನ್ನಲು ಒಳಕ್ಕೆ ಬಂದು ಆಹಾರವನ್ನು ಮುಟ್ಟಿದೊಡನೆ ಬಾಗಿಲು ಮುಚ್ಚಿಕೊಳ್ಳುವುದು.



ಅದ್ಭುತ ಬೋನು

ಇನ್ನೊಂದು ಕತ್ತರಿಯ ವಿಧಾನ. ಹಲ್ಲಿನ ಅಂಚಿನ ತೆರೆದ ದವಡೆಯ ಕತ್ತರಿಯ ನಡುವೆ ಆಹಾರ ಇರುತ್ತದೆ. ಇಲಿ ಆಹಾರ ಇರುವ ಹಲಗೆಯಮೇಲೆ ಕಾಲಿಟ್ಟೊಡನೆ ಕತ್ತರಿಯ ದವಡೆಗಳು ಚಂಗನೆ ಒಟ್ಟುಗೂಡಿ ಇಲಿಯ ಬೆನ್ನುಮೂಳೆಯನ್ನು ಇರುಕಿಸಿ ಕತ್ತರಿಸುತ್ತದೆ. ಈ ವಿಧಾನಗಳಿಂದ ಇಲಿ ಹೆಗ್ಗಣಗಳ ಹತೋಟಿ ಅಷ್ಟಾಗಿ ಸಾಗಲಾರದು. ಅಲ್ಲದೆ ಆಕಸ್ಮಿಕವಾಗಿ ಒಮ್ಮೆ ಯಂತ್ರಗಳಿಂದ ತಪ್ಪಿಸಿಕೊಂಡ ಇಲಿ ಮತ್ತೆ ಅವುಗಳ ಬದಿಗೆ ಸುಳಿಯಲೊಲ್ಲದು.

5. ಮೂಷಕವರ್ಗದ ಸ್ವಾಭಾವಿಕ ವೈರಿಗಳ ಬಳಕೆ : ಹಾವುಗಳಿಗೆ ಇಲಿ ಬಹು ಮುಖ್ಯ ಆಹಾರವಾದ್ದರಿಂದ ಹಾವುಗಳು ಇಲಿಗಳ ಹತೋಟಿಗೆ ನೆರವಾಗುತ್ತವೆ. ಆದರೆ ಇಲಿಗಳ ಹಾವಳಿಗಿಂತ ಹಾವಿನ ಭೀತಿ ಮಾನವನಿಗೆ ಹೆಚ್ಚಿನ ಉಪಟಳವಾಗಬಹುದು. ಮೇಲಾಗಿ ಹಾವುಗಳನ್ನು ಮನೆಗಳಲ್ಲಿ ಅದಕ್ಕಾಗಿ ಬರಗೊಡುವುದು ಸಾಧ್ಯವಾಗದ ಕೆಲಸ. ಆದರೆ ಬೆಕ್ಕುಗಳಂಥ ಪ್ರಾಣಿಗಳನ್ನು ಮನೆಯಲ್ಲಿ ಸಾಕುವುದರಿಂದ ಅವು ಇಲಿಗಳನ್ನು ಕೊಂದು ತಿಂದು ಬಲುಮಟ್ಟಿಗೆ ಹತೋಟಿಗೆ ತರುತ್ತವೆ. ನಾಯಿಗಳೂ ಈ ಕಾರ್ಯದಲ್ಲಿ ನೆರವಾಗಬಲ್ಲುವು. ಈಚೆಗೆ ಇಲಿಗಳಿಗೆ ಮಾರಕವಾಗಿರುವ ಕೆಲವು ರೋಗ ಕ್ರಿಮಿಗಳನ್ನು ಅವುಗಳ ಮೇಲೆ ಬಳಸುವುದು ನಡೆದಿದೆ. ಆದರೆ ಅವು ಮಾನವನಿಗೂ ಹರಡುವ ಸಂಭವವಿರುವುದರಿಂದ ಅದರ ಪ್ರಚಾರ ಅಷ್ಟಾಗಿ ಆಗಿಲ್ಲ.

6. ಇತರ ವಿಧಾನಗಳು : ಇಲಿಗಳ ಬಿಲಗಳಿಗೆ ನೀರು ತುಂಬುವುದು, ಬೆಂಕಿ ಇಡುವುದು. ಕಡ್ಡಿ ಕಸ ತುರುಕುವುದು ಇತ್ಯಾದಿಯಾಗಿ ಪ್ರಯತ್ನಿಸಿ ಅವು ಹೊರಗೆ ಬರುವಂತೆ ಮಾಡಿ ಹೊಡೆದು ಹಾಕುವುದು ಸಾಮಾನ್ಯವಾಗಿ ಪ್ರಪಂಚದ ಎಲ್ಲ ಕಡೆಯೂ ದಿನ ಬೆಳಗಾದರೆ ನಡೆಯುತ್ತಲೆ ಇರುತ್ತದೆ. ಇದು ವ್ಯಾಪ್ತಿಯ ದೃಷ್ಟಿಯಿಂದ ಇಲಿ ಹೆಗ್ಗಣಗಳ ನಿಯಂತ್ರಣಕ್ಕೆ ಸತತವಾಗಿ ನೆರವಾಗುತ್ತಿದೆ. (ಎಸ್.ಎಸ್.ಪಿ.)

**ಇಲ್ಯೂತೆರೊಜೋವ:** ಕಂಟಕಚರ್ಮಿ ವಂಶಕ್ಕೆ ಸೇರಿದ ಒಂದು ಉಪವಂಶ. ಈ ಉಪವಂಶಕ್ಕೆ ಇಂದು ಬದುಕಿರುವ ನಾಲ್ಕು ಕಂಟಕಚರ್ಮಿ ವರ್ಗಗಳು ಸೇರುತ್ತವೆ (ಆಸ್ಟಿರಾಯಿಡಿಯ, ಓಫಿಯುರಾಯಿಡಿಯ, ಎಕಿನಾಯಿಡಿಯ ಮತ್ತು ಹೋಲೊಥೂರಾಯಿಡಿಯ). ಈ ಉಪವಂಶಕ್ಕೆ ಸೇರಿದ ಪ್ರಾಣಿಗಳು ಸಂಪೂರ್ಣ ಸ್ವತಂತ್ರ ಜೀವಿಗಳು. ಜೀವನ ಚರಿತ್ರೆಯ ಯಾವ ಕಾಲದಲ್ಲಿಯೂ ತೊಟ್ಟು ಇದ್ದು ಆಧಾರವಸ್ತುವಿಗೆ ಅಂಟಿಕೊಂಡಿರುವುದಿಲ್ಲ. ಮುಖಮೇಲ್ಮೈ ಮೇಲೆ ಸಾಮಾನ್ಯವಾಗಿ ಮಲಗಿರುತ್ತವೆ. ಹೋಲೊಥೂರಾಯಿಡಿಯಗಳು ಇದಕ್ಕೊಂದು ಅಪವಾದ. ಇವುಗಳಲ್ಲಿ ಗಮನಾರ್ಹವಾದ ಪಂಚಮುಖ ಸಮಮಿತಿಯುಂಟು. ಆಸ್ಟಿರಾಯಿಡಿಯ ಮತ್ತು ಓಫಿಯುರಾಯಿಡಿಯಗಳಲ್ಲಿ ಪಂಚಕಿರಣ ನಕ್ಷತ್ರ ಆಕಾರ ಇದೆ. ಆದರೆ ಎಕಿನಾಯಿಡಿಯಗಳಲ್ಲಿ ಗೋಳಾಕಾರವು ಮತ್ತು ಹೋಲೊಥೂರಾಡಿಯಗಳಲ್ಲಿ ನಳಿಕೆಯಾಕಾರವು ಉಂಟು. ಇವುಗಳಲ್ಲಿಯೂ ಆಂಬ್ಯುಲಾಕ್ರಲ್ ಮಂಡಲವು ವಂಶದ ಮಾದರಿ ರೂಪವನ್ನೇ ತೋರುತ್ತದೆ. ಒಂದು ವ್ಯತ್ಯಾಸವೆಂದರೆ ಕೊಳವೆ ಪಾದಗಳು ಫಲಕಗಳ ನಡುವೆ ಅಥವಾ ಮೂಲಕ ಹೊರಕ್ಕೆ ಚಾಚುತ್ತವೆ, ಮತ್ತು ಅವಕ್ಕೆ ಕಳಸಗಳಿರುತ್ತವೆ. ಈ ಉಪವಂಶವನ್ನು ಎರಡು ಸ್ಪಷ್ಟವಾದ ಗುಂಪುಗಳಾಗಿ ವಿಂಗಡಿಸಿದೆ. ಒಂದು ಗುಂಪಿಗೆ ಹೋಲೊಥೂರಾಯಿಡಿಯ ವರ್ಗವು ಮತ್ತೊಂದು ಗುಂಪಿಗೆ ಉಳಿದ ಮೂರು ವರ್ಗಗಳು ಸೇರುತ್ತವೆ. (ಎಚ್.ಎಚ್.ಎಸ್.)

# ಈ

**ಈಕ್ವಿಡೇ:** ಪೆರಿಸ್ಸೋಡಾಕ್ಟೈಲ ವರ್ಗದ ಒಂದು ಕುಟುಂಬ; ಪರ್ಯಾಯನಾಮ ಅಶ್ವಕುಟುಂಬ. ಗೊರಸಿರುವ ಪ್ರಾಣಿಗಳಲ್ಲಿ ಇಂದಿನ ಮತ್ತು ಪಳೆಯುಳಿಕೆಗಳಾಗಿರುವ ಹಿಂದಿನ ಕುದುರೆಗಳು, ಕತ್ತೆಗಳು, ಜೀಬ್ರಗಳು, ಆನೆಗರ್‌ಗಳು (ಕಾಡುಕತ್ತೆ ಜಾತಿಯ ಪ್ರಾಣಿಗಳು) ಅಶ್ವಕುಟುಂಬದ ಸದಸ್ಯರು. ಈ ಕುಟುಂಬದ ಪ್ರಾಣಿಶಾಸ್ತ್ರೀಯ ಅಧ್ಯಯನದಿಂದ ಕುದುರೆ ಕತ್ತೆ ಮುಂತಾದ ಸದಸ್ಯ ಪ್ರಾಣಿಗಳ ವಿಕಾಸದ ವಿವಿಧ ಸೋಪಾನಗಳನ್ನು ತಿಳಿಯಬಹುದು.

ಕುದುರೆಗಳ ಅತಿ ಸಮೀಪ ಪೂರ್ವಜರ ಹೆಸರು ಪೇಲಿಯೊಥೀರಸ್. ಇವು ಸುಮಾರು 35 ದಶಲಕ್ಷ ವರ್ಷ ಪ್ರಾಚೀನ ಕಾಲದಲ್ಲಿ ಗತವಂಶಿಗಳಾದುವು. ಟಿಟಾಸೋಥೀರಸ್ ಮತ್ತು ಚಾಲಿಕೊಥೀರಸ್ ಕುದುರೆಯ ಇನ್ನೆರಡು ಸಾರವಂಶೀ ಬಂಧುಗಳು. ಇನ್ನಾವ ಸ್ತನಿಗಳ ವಿಷಯದಲ್ಲೂ ದೊರೆತಿಲ್ಲದಷ್ಟು ಪಳೆಯುಳಿಕೆ ದಾಖಲೆಗಳು ಕುದುರೆಯನ್ನು ಕುರಿತು ಲಭಿಸಿವೆ. ಪರಿಣಾಮವಾಗಿ 50ದ.ಲ. ವರ್ಷ ಪ್ರಾಚೀನ ಕಾಲದಿಂದ ಇಂದಿನವರೆಗೆ ಕುದುರೆಯ ವಿಕಾಸರೇಖೆಯನ್ನು ಅವಿಚ್ಛಿನ್ನವಾಗಿ ಎಳೆಯಬಹುದು.

ಆಧುನಿಕ ಅಶ್ವ ಕುಟುಂಬದಲ್ಲಿ ಕನಿಷ್ಠಪಕ್ಷ ಆರು ಮುಖ್ಯ ಪ್ರಭೇದಗಳಿವೆ. ಇವುಗಳಲ್ಲಿ ಕೃತಕ ಅಂತರತಳೀಕರಣ ಸಾಧ್ಯ. ನೈಸರ್ಗಿಕವಾಗಿ ಅಸಾಧ್ಯ. ಕೃತಕ ತಳಿಸಂಕರದಿಂದ ಜನಿಸುವ ಮರಿಗಳು ಬಂಜೆಗಳಾಗುತ್ತವೆ. ಆದ್ದರಿಂದ ಒಂದೊಂದು ಪ್ರಭೇದದ ಲಕ್ಷಣವೂ ನಿರ್ದಿಷ್ಟವಾದುದು ಎಂಬುದು ಸ್ಪಷ್ಟ.

ಅಶ್ವ ವಿಕಾಸ : ವೈಜ್ಞಾನಿಕವಾಗಿ ಅಶ್ವಗಳ ವಿಕಾಸದ ಇತಿಹಾಸವನ್ನು ಸಂಪೂರ್ಣವಾಗಿ ಅರಿಯಲಾಗಿದೆ. ವಂಶವೃಕ್ಷ ಕಾಂಡೈಲಾರ್ಥ್ರ ಎಂಬ ಒಂದು ಸ್ತನಿಗಳ ಗುಂಪಿನಿಂದ ಪ್ರಾರಂಭವಾಯಿತು. ಈ ಗುಂಪು ಇಂದಿರುವ ಎಲ್ಲ ಜಾತಿಯ ಗೊರಸು ಪ್ರಾಣಿಗಳ ಆದಿಜೀವಿ. ಸೀನೊಜೋಯಿಕ್ ಯುಗದ ಆದಿಭಾಗದಲ್ಲಿ ಅಂದರೆ ಸು. 60–65 ದ.ಲ. ವರ್ಷ ಪ್ರಾಚೀನ ಕಾಲದಲ್ಲಿ ಹೈರಕೋಥಿರಿಯಂ ಎಂಬ ಪ್ರಾಣಿ ಜೀವಿಸಿತ್ತು. ಇಯೊಹಿಪಸ್ ಎಂದೂ ಇದಕ್ಕೆ ಹೆಸರಿದೆ. ಇದೇ ಆದಿಅಶ್ವ. ಇದರ ಮುಂದಿನ ಕಾಲುಗಳಲ್ಲಿ ನಾಲ್ಕು ಬೆರಳುಗಳೂ ಹಿಂದಿನ ಕಾಲುಗಳಲ್ಲಿ ಮೂರು ಬೆರಳುಗಳೂ ಇದ್ದುವು. ಆ ಕಾಲದಲ್ಲಿ ಇದರ ನಾನಾ ಪ್ರಭೇದಗಳು ಉತ್ತರ ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿದ್ದುವು. ಇದರ ಎತ್ತರ 60–70 ಸೆಂಮೀ. ಇದು ಇಂದಿನ ನಾಯಿಗಳನ್ನು ಹೋಲುತ್ತಿತ್ತು. ಮೂತಿ ಉದ್ದವಿರಲಿಲ್ಲ; ತಲೆಬುರುಡೆ ಕಾಂಡೈಲಾರ್ಥ್ರದ ತಲೆ ಬುರುಡೆಯನ್ನೇ ಹೋಲುತ್ತಿತ್ತು. ಕಣ್ಣಿನ ಗೂಡು ಸಂಪೂರ್ಣವಾಗಿ ಮೂಳೆಗಳಿಂದ ಆವೃತವಾಗಿತ್ತು. ಮುಚ್ಚಿಕೊಂಡಿರಲಿಲ್ಲ. ಕನಿಷ್ಠ ದರ್ಜೆಯ ಸ್ತನಿಗಳಲ್ಲಿರುವಂತೆ ಇದರಲ್ಲಿಯೂ 44 ಹಲ್ಲುಗಳಿದ್ದುವು (ಇಂದಿರುವ ಗಂಡು ಕುದುರೆಗಳಲ್ಲಿ 40 ಮತ್ತು ಹೆಣ್ಣುಗಳಲ್ಲಿ 36 ಹಲ್ಲುಗಳಿವೆ). ದವಡೆ ಹಲ್ಲುಗಳಲ್ಲಿದ್ದ ಶೃಂಗಗಳು ಬಹಳ ಕೆಳದರ್ಜೆಯಲ್ಲಿದ್ದುವು. ಇದರಿಂದಾಗಿ ಈ ಪ್ರಾಣಿ ಗಿಡಗಳ ಎಲೆ, ಬಳ್ಳಿ ಇತ್ಯಾದಿಗಳನ್ನು ತಿನ್ನುತ್ತಿತ್ತು. ಆಧುನಿಕ ಅಶ್ವಗಳ ಮುಖ್ಯ ಆಹಾರ ಹುಲ್ಲು. ಆದರೆ ಹೈರಕೋಥೀರಿಯಮ್ಮಿಗೆ ಹುಲ್ಲನ್ನು ಅರೆಯಲು ಯುಕ್ತವಾದ ಹಲ್ಲುಗಳು ಇರಲಿಲ್ಲ. ಇದರ ಬೆನ್ನು ಆಧುನಿಕ ಅಶ್ವಗಳ ಬೆನ್ನಿನಂತೆ ನೆಟ್ಟಗಿರದೆ ಕಮಾನಿನಂತೆ ಬಾಗಿತ್ತು. ಕಾಲುಗಳು ಉದ್ದವಾಗುವ ಚಿಹ್ನೆಗಳು ಕಾಣುತ್ತಿದ್ದುವು. ಮಿದುಳು ಚಿಕ್ಕದಾಗಿತ್ತು. ಇದೊಂದು ಕಾಡುಪ್ರಾಣಿ. ಸಾಮಾನ್ಯವಾಗಿ ಇಂದಿನ ಜಿಂಕೆಗಳಂತೆ ಕಾಡುಗಳಲ್ಲಿ ಗುಂಪು ಗುಂಪಾಗಿ ವಾಸಿಸುತ್ತಿದ್ದಿರಬೇಕು.

ಇಯೊಸೀನ್ ಕಲ್ಪದ (40–60 ದ. ಲ. ವರ್ಷ ಪ್ರಾಚೀನ) ವಿಕಾಸಕ್ಕೆ ಬೇಕಾದ ಬೆಳವಣಿಗೆಗಳು ಹೈರಕೋಥೀರಿಯಂ ಜೀವಿಗಳಿಂದ ಹುಟ್ಟಿಬಂದ ಸಂತತಿಯಲ್ಲಿ ಕಂಡು ಬರಲಾರಂಭಿಸಿದುವು. ಇದಕ್ಕೆ ಬೇಕಾದ ಮುಖ್ಯ ಅಂಶಗಳೆಂದರೆ ಹಲ್ಲುಗಳ ಬೆಳವಣಿಗೆ

ಮತ್ತು ಕಾಲುಗಳಲ್ಲಿದ್ದ ಬೆರಳುಗಳ ಕ್ಷೀಣತೆ (ನಡು ಬೆರಳನ್ನು ಬಿಟ್ಟು). ಕುದುರೆಯ ಹಲ್ಲುಗಳಲ್ಲಿ ಹುಲ್ಲನ್ನು ಅರೆಯಲು ಬೇಕಾದ ಉತ್ಕೃಷ್ಟ ಶೃಂಗಗಳಿವೆ. ಮುಂದವಡೆಯ ಹಲ್ಲುಗಳು ಹಿಂದವಡೆಯ ಹಲ್ಲುಗಳಂತೆಯೇ ಮಾರ್ಪಾಡಾಗಿವೆ. ಆದ್ದರಿಂದ ಕುದುರೆಯ ವಿಕಾಸದಲ್ಲಿ ನಡೆದ ಅತಿ ಮುಖ್ಯ ಶಾರೀರಿಕ ಬದಲಾವಣೆಗಳು ಕೆಳಕಂಡಂತಿವೆ.

ಒಂದೇ ಬೆರಳು ಉಳಿದಿದೆ : ಇದು ನಡು ಎಂದರೆ ಮೂರನೆಯ ಬೆರಳು : ಉಳಿದ ಬೆರಳುಗಳು ನಶಿಸಿಹೋಗಿವೆ; ಸ್ಪ್ಲಿಂಟ್ ಮೂಳೆಗಳೆಂದು ಹೆಸರಿರುವ ಎರಡನೆಯ ಮತ್ತು ನಾಲ್ಕನೆಯ ಬೆರಳುಗಳ ಹಸ್ತದ ಮೂಳೆಗಳು ಮಂಡಿಯ ತಳಭಾಗಕ್ಕೆ ಬಂದಿವೆ; ಇನ್ನುಳಿದ ಮಣಿಕಟ್ಟಿನ, ಹಿಮ್ಮಡಿಯ ಹಾಗೂ ಹಸ್ತದ ಮೂಳೆಗಳು ಮಂಡಿಯ ಭಾಗಕ್ಕೆ ಸೇರಿಕೊಂಡಿವೆ; ಮೂರನೆಯ ಬೆರಳಿನ ಹಸ್ತದ ಮೂಳೆ ಮಾತ್ರ ಎರಡು ಕಾಲುಗಳಲ್ಲೂ ಉದ್ದವಾಗಿ ಪ್ರಬುದ್ಧವಾಗಿ ಬೆಳೆದಿದೆ. ರೇಡಿಯಸ್ ಮತ್ತು ಅಲ್ನ ಮೂಳೆಗಳು ಒಂದರೊಡನೊಂದು ಸೇರಿಕೊಂಡುಬಿಟ್ಟಿವೆ; ಮೂರನೆಯ ಬೆರಳು ಅಗಲವಾಗಿದೆ; ಇದರ ಸುತ್ತಲೂ ಗೊರಸಿದೆ. ಈ ಬೆರಳಿನ ತುದಿ ನೆಲಕ್ಕೆ ಊರಿಕೊಳ್ಳುತ್ತದೆ; ತಲೆಯ ಬುರುಡೆಯಲ್ಲಿ ಕಣ್ಣಿನಗೂಡಿದೆ; ಕಣ್ಣಿನಗೂಡು ಮೂಳೆಗಳಿಂದ ಸುತ್ತುವರಿದಿದ್ದು ಪೂರ್ಣವಾಗಿದೆ; ಕಣ್ಣಿನ ಗೂಡಿನ ಮುಂಭಾಗ ಉದ್ದವಾಗಿ ಮೂತಿಯಾಗಿದೆ.

ಕುದುರೆಯ ಆಹಾರ ಹುಲ್ಲು. ಇದನ್ನು ಮೇಯಲು, ಅಗಿಯಲು ಮತ್ತು ಅರೆಯಲು ಅನುಕೂಲವಾಗುವಂತೆ ದವಡೆಯ ಹಲ್ಲುಗಳು ಅಗಲವಾಗಿ ಅವುಗಳ ಮೇಲೆ ಮೊನೆಯಾದ ಶೃಂಗಗಳಿವೆ. ಒಂದು ಶೃಂಗಕ್ಕೂ ಮತ್ತೊಂದು ಶೃಂಗಕ್ಕೂ ಮಧ್ಯೆ ಸಿಮೆಂಟಿನಂಥ ಗಟ್ಟಿಯಾದ ವಸ್ತುವಿದೆ. ಇದರ ಸಹಾಯದಿಂದ ಕುದುರೆ ಹುಲ್ಲನ್ನು ಚೆನ್ನಾಗಿ ಅಗಿಯಬಲ್ಲುದು. ಈ ಬದಲಾವಣೆಗಳ ನಾಂದಿ ಹೈರಕೋಥೀರಿಯಂ ಸಂತತಿಯಿಂದ ಹುಟ್ಟಿಬಂದ ಓರೊಹಿಪ್ಪಸ್ ಎಂಬ ಪ್ರಾಣಿಗಳಲ್ಲಿ ಪ್ರಾರಂಭವಾಗಿತ್ತು. ಇವು ಹೈರಕೋಥೀರಿಯಂ ಜೀವಿಯನ್ನೇ ಹೋಲುತ್ತಿದ್ದರೂ ಇವುಗಳಲ್ಲಿ ಹಲ್ಲುಗಳು ಸ್ವಲ್ಪ ಮಟ್ಟಿಗೆ ಮುಂದುವರಿದಿದ್ದುವು. ಇವುಗಳ ಗಾತ್ರ ದೊಡ್ಡದಾಗುತ್ತಿತ್ತು. ಬೆನ್ನಿನ ಬಾಗು ಕಡಿಮೆಯಾಗಿತ್ತು. ಈ ಜೀವಿಗಳಿಂದ ಬಂದ ಮುಂದಿನ ಸಂತತಿಯ ಹೆಸರು ಮೀಸೊಹಿಪ್ಪಸ್. ಇದರ ಮುಂಗಾಲಿನಲ್ಲಿ ಮೂರು ಬೆರಳುಗಳಿದ್ದುವು. ಅಂದರೆ ಒಂದು ಬೆರಳು ಸಂಪೂರ್ಣವಾಗಿ ನಶಿಸಿಹೋಗಿತ್ತು. ಇದರ ಮುಂದವಡೆಯ ಹಲ್ಲುಗಳು ದವಡೆಯ ಹಲ್ಲುಗಳಂತೆಯೇ ಆಗಿದ್ದುವು. ಬೆನ್ನು ನೆಟ್ಟಗಾಗಲಾರಂಭಿಸಿತ್ತು. ಇದರ ಪಳೆಯುಳಿಕೆಗಳು ಅಮೆರಿಕೆಯ ದಕ್ಷಿಣ ಡಕೋಟ ಪ್ರದೇಶದಲ್ಲಿ ಸಾಕಷ್ಟು ಸಿಕ್ಕಿವೆ. ಹಲ್ಲಿನ ಶೃಂಗಗಳು ಇದರಲ್ಲಿ ಚೆನ್ನಾಗಿ ಬೆಳೆಯದಿದ್ದ ಕಾರಣ ಇದು ಕೂಡ ಎಲೆ, ಬಳ್ಳಿ ಇತ್ಯಾದಿ ಸಸ್ಯಗಳನ್ನೇ ತಿಂದು ಜೀವಿಸುತ್ತಿತ್ತು. ಮೀಸೊಹಿಪ್ಪಸ್ ಆಲಿಗೊಸೀನ್ ಕಲ್ಪದ (25–40 ದ.ಲ.ವ. ಪ್ರಾಚೀನ) ಮಧ್ಯಭಾಗದಲ್ಲಿ ಜೀವಿಸಿತ್ತು.

ಅಶ್ವ ವಿಕಾಸಕ್ಕೆ ತವರುಮನೆ ಉತ್ತರ ಅಮೆರಿಕ ಖಂಡ. ಸಾಮಾನ್ಯವಾಗಿ ಅಶ್ವ ವಿಕಾಸವನ್ನು ನೇರವಿಕಾಸ (ಅರ್ಥೋಜೆನೆಸಿಸ್) ಎಂದು ಕರೆಯುತ್ತಾರೆ. ಏಕೆಂದರೆ ಹೈರಕೋಥೀರಿಯಂ ಜೀವಿಯಿಂದಲೇ ಇಂದಿನ ಅಶ್ವಗಳು ಕಾಲಾನಂತರದಲ್ಲಿ ಹಂತ ಹಂತವಾಗಿ ವಿಕಾಸ ಕ್ರಿಯೆಗೊಳಪಟ್ಟು ಹುಟ್ಟಿಬಂದಿವೆ ಎಂದು ಹೇಳುವವರಿದ್ದಾರೆ. ಆದರೆ ಇದು ನಿಜವಲ್ಲ. ಉತ್ತರ ಅಮೆರಿಕ ದೇಶದಲ್ಲೇನೋ ಅಶ್ವಗಳ ಸಂತತಿಗೆ ಸೇರಿದ ಹೈರಕೋಥೀರಿಯಂ, ಓರೊಹಿಪ್ಪಸ್, ಎಪಿಹಿಪ್ಪಸ್ ಇಯೊಹಿಪ್ಪಸ್, ಮಯೊಹಿಪ್ಪಸ್ ಜೀವಿಗಳು ಒಂದಾದ ಮೇಲೊಂದರಂತೆ ಸಿಕ್ಕಿವೆ. ಈ ಜೀವಿಗಳು 25 ದ.ಲ.ವರ್ಷಗಳ ಅಶ್ವವಿಕಾಸವನ್ನು ನೇರವಾಗಿ ಹಂತ ಹಂತವಾಗಿ ತೋರಿಸುತ್ತವೆ. ಆದರೆ ಮಯೊಹಿಪ್ಪಸ್ ಜೀವಿಯಿಂದ ಮುಂದಕ್ಕೆ ಅಶ್ವವಿಕಾಸ ಚರಿತ್ರೆ ಕ್ಲಿಷ್ಟವಾಗಲಾರಂಭಿಸುತ್ತದೆ. ಮಯೊಹಿಪ್ಪಸ್ ಜೀವಿ ಆಲಿಗೋಸೀನ್ ಕಾಲದ ಮಧ್ಯ ಮತ್ತು ಅಂತ್ಯಭಾಗದಲ್ಲಿತ್ತು. ಇದರ ಕಾಲು, ಹಲ್ಲುಗಳು, ಶರೀರದ ಗಾತ್ರ ಎಲ್ಲವೂ ಕೂಡ ಮಿಸೊಹಿಪ್ಪಸ್‌ಗಿಂತ ಉತ್ತಮ ಸ್ಥಿತಿಯಲ್ಲಿದ್ದುವು. ಮಯೊಹಿಪ್ಪಸ್ ಜೀವಿಯಾದ ಮೇಲೆ ಬರುವ ಜೀವಿಗಳನ್ನು ಎರಡು ಉಪಕುಟುಂಬಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಉಪಕುಟುಂಬವನ್ನು ಆಂಕಿಥೀರಿನೆ ಮತ್ತು ಎರಡನೆಯ ಉಪಕುಟುಂಬವನ್ನು ಈಕ್ವಿನೆ ಎಂದು ಕರೆಯಲಾಗಿದೆ. ಈಕ್ವಿನೆಯಲ್ಲಿ ನಿಜಾಶ್ವಗಳಿವೆ. ಆಂಕಿಥೀರುಗಳು ಎಲೆ ಬಳ್ಳಿಗಳನ್ನು ಮೇಯುತ್ತ ಕಾಡುಗಳಲ್ಲಿ ವಾಸಿಸುತ್ತಿದ್ದುವು; ಅವುಗಳ ಹಲ್ಲುಗಳು ಮುಂದುವರಿಯಲಿಲ್ಲ. ಕಾಲುಗಳಲ್ಲಿದ್ದ ಮೂರು ಬೆರಳುಗಳು ನಶಿಸಲಿಲ್ಲ. ಇವು ಉತ್ತರ ಅಮೆರಿಕದ ಕಾಡುಗಳಲ್ಲಿ ವ್ಯಾಪಿಸಿದ್ದುವು. ಆಮೇಲೆ ಯೂರೋಪ್ ಖಂಡಕ್ಕೆ ವಲಸೆ ಹೋದುವು. ಅಂಕಿಥೀರಿಯಂ ಹೈಪೊಹಿಪ್ಪಸ್, ಮೆಗಾಹಿಪ್ಪಸ್ ಎಂಬ ಪ್ರಾಣಿಗಳು ಈ ಕುಟುಂಬದ ಅತ್ಯುತ್ತಮ ಉದಾಹರಣೆಗಳು. ಪ್ಲಿಯೊಸೀನ್ ಕಲ್ಪದ (1–11 ದ.ಲ.ವ. ಪ್ರಾಚೀನ) ಆದಿಭಾಗದಲ್ಲಿ ಇವು ನಶಿಸಿಹೋದುವು.

ಈಕ್ವಿಡೆ ಉಪಕುಟುಂಬ ಆಂಕಿಥೀರುಗಳಿಗಿಂತ ವಿಭಿನ್ನವಾಗಿ ವಿಕಾಸ ಹೊಂದಲು ಉಪಕ್ರಮಿಸಿದುವು. ಮಯೊಸೀನ್ ಕಲ್ಪದ (11–25 ದ. ಲ. ವ. ಪ್ರಾಚೀನ) ವೇಳೆಗೆ ಪರಿಸರದಲ್ಲಾದ ಉತ್ಕಟ ಬದಲಾವಣೆಗಳಿಂದಾಗಿ ಉತ್ತರ ಅಮೆರಿಕದ ಬಹುಭಾಗ ಮೈದಾನ ಪ್ರದೇಶವಾಗಿ ಹುಲ್ಲಿನಿಂದಾವೃತವಾಯಿತು. 30 ದ.ಲ. ವರ್ಷಗಳ ಹಿಂದೆ ಪ್ರಾರಂಭವಾದ ಈ ಹುಲ್ಲುಗಾವಲುಗಳಲ್ಲಿದ್ದ ಹುಲ್ಲನ್ನೇ ತಿಂದು ಬದುಕಬೇಕಾದ ಪರಿಸ್ಥಿತಿ ಈ ಎರಡು ಉಪಕುಟುಂಬಗಳಿಗೂ ಒದಗಿತು. ಈಕ್ವಿಡೆ ಕುಟುಂಬದ ಜೀವಿಗಳಿಗೆ ಮಾತ್ರ ಇದು ಸಾಧ್ಯವಾಯಿತು. ಏಕೆಂದರೆ ಇವುಗಳ ಹಲ್ಲುಗಳಲ್ಲಿ ಉತ್ಕೃಷ್ಟ ಶೃಂಗಗಳ ಬೆಳವಣಿಗೆ ಈಗಾಗಲೇ ಪ್ರಾರಂಭವಾಗಿತ್ತು. ಎಲೆ ಮತ್ತು ಕಾಂಡಗಳಿಗಿಂತ ಹುಲ್ಲು ಅತಿ ಗಟ್ಟಿಯಾದ ವಸ್ತು. ಜೊತೆಗೆ ಭೂ ಮಟ್ಟದಲ್ಲಿರುವ ಇದರ ಎಸಳುಗಳ ಮೇಲೆ ದೂಳು ಮತ್ತು ಮರಳಿನ ಕಣಗಳು ಅಂಟಿಕೊಳ್ಳಲು ಅವಕಾಶವಿದೆ. ಇಂಥ ವಸ್ತುವನ್ನು ತಿನ್ನಬೇಕಾದರೆ ಆ ಪ್ರಾಣಿಯ ಹಲ್ಲುಗಳೂ ಜೀರ್ಣಾಂಗಗಳೂ ವಿಶಿಷ್ಟ ರೀತಿಯಲ್ಲಿ ರಚನೆಗೊಂಡಿರಬೇಕು. ಇಂಥ ಕಠಿಣವಸ್ತುವನ್ನು ಅಗಿಯುವಾಗ ಉಂಟಾಗುವ ಹಲ್ಲುಗಳ ಸವೆತವನ್ನು ತಡೆಗಟ್ಟಲು ಯೋಗ್ಯ ರಕ್ಷಣೆ ಅಗತ್ಯ. ಇದರಿಂದಾದ ಹಲ್ಲುಗಳಲ್ಲಿ ಹರಿತವಾದ ಅಲಗುಗಳು, ಶೃಂಗಗಳು, ಇವುಗಳ ಮಧ್ಯೆ ಸಿಮೆಂಟಿನಂಥ ವಸ್ತುಗಳು ಅನಿವಾರ್ಯವೆನಿಸಿದುವು. ಈ ರೀತಿಯ ಹಲ್ಲುಗಳನ್ನು ಈಕ್ವಿಡೆ ಕುಟುಂಬ ಬೆಳೆಸಿಕೊಳ್ಳಲಾರಂಭಿಸಿತು. ಮಯೊಸೀನ್ ಕಲ್ಪದಲ್ಲಿ ಬದುಕಿದ್ದ ಈಕ್ವಿಡೆ ಕುಟುಂಬದ ಕ್ಯಾರಾಹಿಪ್ಪಸ್ ಎಂಬ ಪ್ರಾಣಿಯಲ್ಲಿ ಈ ಎಲ್ಲ ಗುಣಗಳೂ ಇದ್ದುವು. ಇದರಿಂದ ಹುಟ್ಟಿಬಂದ ಸಂತತಿ ಹುಲ್ಲನ್ನೇ ತಿಂದು ಬದುಕಲಾರಂಭಿಸಿತು. ಇದೇ ಮೆರಿಚಿಪ್ಪಸ್. ಮೆರಿಚಿಪ್ಪಸ್ ಪ್ರಾಣಿಯಲ್ಲಿ ಹಲ್ಲುಗಳು ಆಧುನಿಕ ಅಶ್ವದ ಹಲ್ಲುಗಳಂತೆಯೇ ಇದ್ದುವು. ಇದರ ಮೂತಿ ಉದ್ದವಾಗಿತ್ತು. ಕಾಲುಗಳು ಉದ್ದವಾಗಿದ್ದುವು. ಆದರೂ ಇದರ ಕಾಲುಗಳಲ್ಲಿ ಮೂರು ಬೆರಳುಗಳಿದ್ದುವು. 15 ದ.ಲ. ವರ್ಷಗಳ ಹಿಂದೆ ಇದ್ದ ಈ ಪ್ರಾಣಿಗಳು ಹೆಚ್ಚು ಕಡಿಮೆ ಇಂದಿನ ಅಶ್ವಗಳನ್ನೇ ಹೋಲುತ್ತಿದ್ದುವು. ಮೆರಿಚಿಪ್ಪಸ್‌ನ ನಡುಬೆರಳು ಮಾತ್ರ ನೆಲಕ್ಕೂರುತ್ತಿತ್ತು. ಮಿಕ್ಕವು ನೆಲ ಮುಟ್ಟುವಂತಿರಲಿಲ್ಲ. ಅಲ್ನಾ ಮತ್ತು ಫಿಬುಲಾ ಮೂಳೆಗಳು ರೇಡಿಯಸ್ ಮತ್ತು ಟಿಬಿಯದೊಡನೆ ಮಿಲನಗೊಳ್ಳುತ್ತಿದ್ದುವು. ಮೆರಿಚಿಪ್ಪಸ್ ಸಂತತಿ ಆರು ಗುಂಪುಗಳಾಗಿ ವಿಭಾಗಗೊಂಡಿತ್ತು. ಈ ಗುಂಪುಗಳಲ್ಲಿ ನಾಲ್ಕು ಗುಂಪು ಕೆಲವೇ ಸಂತತಿಗಳವರೆಗೆ ಮಾತ್ರ ಪ್ರಬುದ್ಧಮಾನಕ್ಕೆ ಬಂದುವು. ಉಳಿದೆರಡು ಗುಂಪುಗಳಲ್ಲಿ ಮೊದಲನೆಯ ಗುಂಪಿನ ಅಶ್ವಗಳನ್ನು ಹಿಪ್ಪೇರಿಯಾನ್ ಎನ್ನುತ್ತೇವೆ. ಇದಕ್ಕೆ ಮೂರು ಬೆರಳುಗಳಿದ್ದುವು. ಹಲ್ಲುಗಳಲ್ಲಿ ಎತ್ತರವಾದ ಶೃಂಗಗಳಿದ್ದುವು. ಆದರೆ ಈ ಹಿಪ್ಪೇರಿಯಾನ್ ಪ್ಲಿಯೊಸೀನ್ ಕಲ್ಪದ ಅಂತ್ಯಭಾಗದಲ್ಲಿ ನಾಶವಾಯಿತು. ಹಿಪ್ಪೇರಿಯಾನ್ ಉತ್ತರ ಅಮೆರಿಕದಲ್ಲಿ ಹುಟ್ಟಿ ಏಷ್ಯಾ, ಅಲಾಸ್ಕ, ಯೂರೋಪ್ ಮತ್ತು ಆಫ್ರಿಕ ಖಂಡದವರೆಗೂ ವಲಸೆ ಹೋಯಿತು. ಮೆರಿಚಿಪ್ಪಸ್ ಸಂತತಿಯಲ್ಲಿ ಪ್ರಬುದ್ಧಮಾನಕ್ಕೆ ಬಂದ ಮತ್ತೊಂದು ಗುಂಪು, ಪ್ಲಿಯೊಹಿಪ್ಪಸ್. ಇದು 5–10 ದ.ಲ. ವರ್ಷಗಳವರೆಗೂ ಇತ್ತು. ಈ ಪ್ರಾಣಿಗಳ ಒಂದೊಂದು ಕಾಲಿನಲ್ಲೂ ಒಂದೊಂದು ಬೆರಳು ಇತ್ತು. ಪ್ಲಿಯೊಸೀನ್ ಕಲ್ಪದಲ್ಲಿ ಇವು ಉತ್ತರ ಅಮೆರಿಕ ಖಂಡದ ಬಹು ಭಾಗಗಳಲ್ಲಿದ್ದುವು. ಮಧ್ಯದ ಒಂದೇ ಬೆರಳು ಕಾಲಿನಲ್ಲಿ ಇದ್ದರೂ ಮಿಕ್ಕೆರಡು ಬೆರಳುಗಳು ಸಂಪೂರ್ಣವಾಗಿ ಮಾಯವಾಗಿರದೆ ಕಾಲಿನೊಳಕ್ಕೆ ಸೆಳೆದುಕೊಂಡಂತೆ ಮೇಲುಭಾಗದಲ್ಲಿ ಉಳಿದಿದ್ದುವು. ಈ ಜೀವಿಯಿಂದ ಆಧುನಿಕ ಅಶ್ವಕುಟುಂಬ ಹುಟ್ಟಿಬಂತು. ಪ್ಲಿಯೊಹಿಪ್ಪಸ್ ಪ್ಲಿಯೊಸೀನ್ ಕಾಲದ ಕೊನೆಯ ಭಾಗದಲ್ಲಿ, ಅಂದರೆ 1 ದ.ಲ. ವರ್ಷಗಳ ಹಿಂದೆ ನಾಶವಾಯಿತು. ಇದರಿಂದ ಹುಟ್ಟಿಬಂದ ಅಶ್ವಸಂತತಿ ಪ್ರಪಂಚದ ಎಲ್ಲ ಭಾಗಗಳಿಗೂ ವಲಸೆ ಹೋಯಿತು. ಇದರಲ್ಲಿ ಮಧ್ಯದ ಒಂದೇ ಬೆರಳು ಉಳಿದು ಮಿಕ್ಕೆರಡು ಬೆರಳುಗಳು ಪೂರ್ಣವಾಗಿ ಮಾಯವಾದುವು. ಅಶ್ವದ ವಲಸೆ ಆಸ್ಟ್ರೇಲಿಯ ಖಂಡ ಪ್ರಪಂಚದ ಯಾವ ಭೂಭಾಗಕ್ಕೂ ಸಂಪರ್ಕ ಹೊಂದಿಲ್ಲ. ಉತ್ತರ ಅಮೆರಿಕ ಖಂಡದಲ್ಲಿ ಹುಟ್ಟಿದ ಅಶ್ವಸಂತತಿ ದಕ್ಷಿಣ ಅಮೆರಿಕ ಖಂಡಕ್ಕೆ ಪನಾಮ ಬಳಿಯ ಈಸ್ತಮಸ್ ಮೂಲಕ ವಲಸೆ ಹೋಯಿತು. ದಕ್ಷಿಣ ಅಮೆರಿಕಕ್ಕೆ ಹೋದ ಅಶ್ವಗಳು ಹಿಪ್ಪೀರಿಯಾನ್ ಎಂಬ ಒಂದು ವಿಚಿತ್ರ ರೀತಿಯ ಅಶ್ವಗಳನ್ನು ಕೊಟ್ಟುವು. ಹಿಪ್ಪೀರಿಯಾನುಗಳಿಗೂ ಆಧುನಿಕ ಈಕ್ವಸುಗಳಿಗೂ ಹತ್ತಿರದ ಸಂಬಂಧವೇನೂ ಇಲ್ಲ. ಆಧುನಿಕ ಅಶ್ವಗಳ ಪ್ರಸರಣವಾದ ಮೇಲೆ ಈ ಹಿಪ್ಪೀರಿಯಾನ್ ನಾಶವಾಯಿತು. ಉತ್ತರ ಅಮೆರಿಕ ಖಂಡದಲ್ಲಿ ಅಶ್ವ ಕುಟುಂಬದ ಭವ್ಯ ಇತಿಹಾಸ 50 ದ.ಲ. ವರ್ಷಗಳಿಂದಲೂ ಇದೆ. ಆದರೆ 10,000 ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ಈ ಹೊಸ ಪ್ರಪಂಚದಲ್ಲಿ ಇವುಗಳ ಸರ್ವನಾಶಕ್ಕೆ ಕಾರಣವಾದ ಕ್ರಿಯೆ ಯಾವುದು? ಇದು ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ. ಇದುವರೆಗೂ ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳಲ್ಲಿ ಇವುಗಳ ನಾಶದ ಬಗ್ಗೆ ಕಾರಣಗಳನ್ನು ತಿಳಿಯಲಾಗಿಲ್ಲ. ಮುಂದೆ ಅಶ್ವಗಳನ್ನು ಹೊಸತಾಗಿ ಇಲ್ಲಿಗೆ ಆಮದು ಮಾಡಿಕೊಳ್ಳಲಾಯಿತು.

ಸಾಕು ಕುದುರೆ ಮತ್ತು ಅದರ ವಿವಿಧ ಬುಡಕಟ್ಟುಗಳನ್ನು ಒಂದೇ ಪ್ರಭೇದಕ್ಕೆ ಸೇರಿಸಿ ಈಕ್ವಸ್ ಕಬಾಲಸ್ ಎಂದು ಕರೆಯುತ್ತಾರೆ. ಇಂದು ಇದು ಕಾಡುಪ್ರಾಣಿಯಾಗಿ ಪ್ರಪಂಚದಲ್ಲಿ ಎಲ್ಲೂ ಇಲ್ಲ. ಹಾಗೆ ಇಂದು ಉಳಿದಿರುವ ಪ್ರಭೇದವೆಂದರೆ ಪ್ರಜೆವಾಸ್ಕಿಕ್.

ಇದು ಚಿಕ್ಕ ಕುದುರೆ. ಇದರ ಕುತ್ತಿಗೆಯ ಮೇಲೆ ಉದ್ದಕ್ಕೂ ನೆಟ್ಟಗಿರುವ ರೋಮಗಳಿವೆ. ಒಂದು ಕಾಲದಲ್ಲಿ ಈ ಕುದುರೆಗಳು ಮಧ್ಯ ಏಷ್ಯಾ ಖಂಡದಲ್ಲಿ ಕಂಡುಬರುತ್ತಿದ್ದುವು. ಇದರ ತಳಿ ಹೊರ ಪ್ರಪಂಚದಿಂದ ನಶಿಸಿಹೋಗಿ ಮೃಗಾಲಯಗಳಲ್ಲಿ ಮಾತ್ರ ಉಳಿದಿದೆ. ಮಧ್ಯ ಯೂರೋಪ್ ಖಂಡದಲ್ಲಿ ಇದ್ದ ಟಾರ್ಪಾನ್ ಎಂಬ ಕಾಡುಕುದುರೆಯೂ ಇಂದು ಕಾಣಬರುತ್ತಿಲ್ಲ. ಈ ರೀತಿಯ ಕಾಡು ಕುದುರೆಗಳ ತಳಿ ಮಿಶ್ರಣ ಕ್ರಿಯೆಯಿಂದಾಗಿ ಇಂದಿರುವ ಎಲ್ಲ ಆಧುನಿಕ ಕುದುರೆಗಳೂ ಹುಟ್ಟಿ ಬಂದಿವೆ.

ಆನೆಗರ್ : ಇದಕ್ಕೆ ಈಕ್ವಸ್ ಹೆಮಿಯೋನಸ್ ಎಂದೂ ಹೆಸರಿದೆ. ದೊಡ್ಡ ಕಿವಿಗಳುಳ್ಳ ಸುಮಾರಿಗೆ ಬೆಳೆದಿರುವ ಕತ್ತೆಯನ್ನೇ ಹೋಲುವ ಈ ಪ್ರಾಣಿಯ ಕುತ್ತಿಗೆಯ ಮೇಲೆ ನೆಟ್ಟಗೆ ನಿಂತಿರುವ ರೋಮಗಳ ಸಾಲನ್ನು ಕಾಣಬಹುದು. ಚೀನ, ಏಷ್ಯಾ, ಪ್ಯಾಲಿಸ್ಟೀನ್ ಪ್ರದೇಶಗಳ ಕಾಡುಗಳಲ್ಲಿ ಇದು ಹಿಂದೆ ಹೆಚ್ಚಾಗಿ ಕಾಣಬರುತ್ತಿತ್ತು. ಈಗ ಈ ಪ್ರಭೇದ ಅವಸಾನ ಸ್ಥಿತಿಯಲ್ಲಿದೆ.

ಕತ್ತೆ : ಆಧುನಿಕ ಕತ್ತೆಗಳ ಪೂರ್ವಜರ ಹೆಸರು ಕಾಡುಕತ್ತೆಗಳು. ಈಕ್ವಸ್ ಅಸಿನಸ್ ಎಂದು ಇದರ ವೈಜ್ಞಾನಿಕ ನಾಮ. ಚಿಕ್ಕ ಶರೀರ, ದೊಡ್ಡ ಕಿವಿಗಳು ಮತ್ತು ಕುತ್ತಿಗೆಯ ಮೇಲೆ ನೆಟ್ಟಗೆ ನಿಂತಿರುವ ರೋಮಗಳ ಸಾಲು ಇದರ ಮುಖ್ಯ ಲಕ್ಷಣಗಳು. ಒಂದು ಕಾಲದಲ್ಲಿ ಇದು ಉತ್ತರ ಆಫ್ರಿಕಖಂಡದಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು. ಈಗ ಅಲ್ಲಿ ಸಂಪೂರ್ಣವಾಗಿ ನಾಶವಾಗಿದೆ (ನೋಡಿ–ಕತ್ತೆ).

ಜೀಬ್ರಾಗಳು : ಮೇಲೆ ಹೇಳಿದವನ್ನು ಬಿಟ್ಟರೆ ಇನ್ನುಳಿದಿರುವ ಅಶ್ವಜಾತಿಯ ಪ್ರಾಣಿಗಳಲ್ಲಿ ಇಂದು ಬದುಕಿ ಉಳಿದಿರುವುವು ಜೀಬ್ರಾಗಳು ಮಾತ್ರ. ಇವುಗಳ ಶರೀರದ ಮೇಲೆ ಎದ್ದು ಕಾಣುವ ಪಟ್ಟೆಗಳಿವೆ. ಬೂದು ಬಣ್ಣದ ಒಡಲ ಮೇಲೆ ಕರಿಯ ಪಟ್ಟೆಗಳಿವೆ ಅಥವಾ ಕರಿಯೊಡಲ ಮೇಲೆ ಬಿಳಿಯ ಪಟ್ಟೆಗಳಿವೆ ; ಜೀಬ್ರಾಗಳಲ್ಲಿರುವ ಪ್ರಭೇದಗಳು ಹಲವಾರು. ಬಹುಪಾಲು ಆಫ್ರಿಕದಲ್ಲಿವೆ. ಮನುಷ್ಯನ ಹಾವಳಿಯಿಂದಾಗಿ ಇತ್ತೀಚೆಗೆ ಇವೂ ನಶಿಸಿಹೋಗುತ್ತಿವೆ. (ಎಲ್.ಎಸ್.ಜಿ.; ಎಸ್.ಎನ್.ಕೆ.ಯು.)

**ಈಗ್ರೆಟ್:** ಸಿಕೋನಿಫಾರ್ಮಿಸ್ ಗಣದ ಆರ್ಡಿಯಿಡೆ ಕುಟುಂಬಕ್ಕೆ ಸೇರಿದ ಹಕ್ಕಿ. ಹೆರಾನ್‌ಗಳ ಗುಂಪಿಗೆ ಸೇರಿದೆ. ಅಚ್ಚಬಿಳಿ ಗರಿಗಳಿಂದ ಕೂಡಿದ ದೇಹ ತೆಳುವಾಗಿದ್ದು ಉದ್ದವಾಗಿದೆ. ಕೊಕ್ಕು ಹಳದಿ. ನಡಿಗೆ, ಕುಣಿತ ನಯನ ಮನೋಹರ. ಸಂತಾನೋತ್ಪತ್ತಿಯ ಸಮಯದಲ್ಲಿ ಉದ್ದವಾದ ಅಲಂಕಾರಿಕ ಗರಿಗಳು (ಐಗ್ರೆಟ್) ಬೆಳೆಯುತ್ತವೆ.

ಕ್ಯಾಸ್ಮೆರೋಡಿಯಸ್ ಆಲ್ಬಸ್ ಗ್ರೇಟ್ ಈಗ್ರೆಟಿನ ವೈಜ್ಞಾನಿಕ ನಾಮ. ಸುಮಾರು 100 ಸೆಂಮೀ ಉದ್ದದ ಇದರ ವಾಸಪ್ರದೇಶ ಅಮೆರಿಕ ಮತ್ತು ಯುರೋಪ್. ಹಿಮದ ಈಗ್ರೆಟ್ (ಸ್ನೋಯಿ ಈಗ್ರೆಟ್)ನ ವೈಜ್ಞಾನಿಕ ಹೆಸರು ಈಗ್ರೆಟಾ ಥುಲಾ (ಲ್ಯೂಕೋಫೋಯಿಕ್ಸ್ ಥುಲಾ). ಸು. 60 ಸೆಂಮೀ ಉದ್ದವಿದೆ. ಕೆಂಪು ಈಗ್ರೆಟ್ ಈಗ್ರೆಟಾ ರುಫಿಸೆನ್ಸ್‌ನ ರೂಢನಾಮ. ಸು. 75 ಸೆಂಮೀ ಉದ್ದವಿದ್ದು ಎರಡು ವಿಧದ ಬಣ್ಣದ ಸ್ಥಿತಿಯಲ್ಲಿರುತ್ತದೆ – ಮೊದಲನೆಯದು ಅಚ್ಚ ಬಿಳಿ ದೇಹ; ಇನ್ನೊಂದು, ಕೆಂಪು ತಲೆ ಮತ್ತು ಕುತ್ತಿಗೆಯನ್ನು ಹೊಂದಿದ ಬೂದುಮಿಶ್ರಿತ ನೀಲಿ ದೇಹ. ಹಿಮದ ಈಗ್ರೆಟ್ ಮತ್ತು ಕೆಂಪು ಈಗ್ರೆಟ್‌ಗಳೆರಡೂ ದಕ್ಷಿಣ ಹಾಗೂ ಉತ್ತರ ಅಮೆರಿಕದವು. ಈ ಮೂರೂ ಅಮೆರಿಕದ ಪ್ರಭೇದಗಳ ಅವ್ಯಾಹತ ಬೇಟೆಯಿಂದಾಗಿ ಅವುಗಳ ಸಂಖ್ಯೆ ಸಾಕಷ್ಟು ಕ್ಷೀಣಿಸಿ, ವಂಶವೇ ನಾಶವಾಗುವ ಮಟ್ಟಕ್ಕೆ ಹೋಗಿತ್ತು. ಈ ಬೇಟೆಗೆ ಕಾರಣ ಅವುಗಳ ಅಲಂಕಾರಿಕ ಐಗ್ರೆಟ್. ಸರ್ಕಾರದ ಬಿಗಿ ಕಾಯಿದೆ, ಕಾನೂನುಗಳಿಂದಾಗಿ ಇವುಗಳ ಸಂಖ್ಯೆ ಮತ್ತೆ ಹೆಚ್ಚಿದೆ.



ಈಗ್ರೆಟ್

ಕ್ಯಾಟಲ್ ಈಗ್ರೆಟ್‌ನ ವೈಜ್ಞಾನಿಕ ನಾಮಧೇಯ ಬ್ಯುಬಲ್ಕಸ್ ಐಬಿಸ್. ಮುಂಚೆ ಆಫ್ರಿಕಕ್ಕೆ ಸೀಮಿತವಾಗಿದ್ದರೂ ಈಗ ಅಮೆರಿಕ ಮತ್ತು ಆಗ್ನೇಯ ಏಷ್ಯಾಕ್ಕೂ ವಿಸ್ತರಿಸಿದೆ. ಇದೊಂದು 50 ಸೆಂಮೀ ಉದ್ದದ ಸಣ್ಣ ಈಗ್ರೆಟ್. ಮೈತುಂಬಾ ಬಿಳಿಯ ಪುಕ್ಕಗಳಿದ್ದು ಸಂತಾನೋತ್ಪತ್ತಿಯ ಕಾಲದಲ್ಲಿ ತಲೆ, ಬೆನ್ನು ಮತ್ತು ಎದೆಯ ಮೇಲೆ ಮಾಸಲು ಹಳದಿ ಬಣ್ಣದ ಗರಿಗಳನ್ನು ಪಡೆಯುತ್ತದೆ. ದೊಡ್ಡ ಪ್ರಾಣಿಗಳಾದ ಹಸು, ಆನೆಗಳನ್ನು ಹಿಂಬಾಲಿಸುವುದು ಸಾಮಾನ್ಯ. ಕೀಟಗಳು, ಹಲ್ಲಿಗಳು ಇದರ ಆಹಾರ.

ಲಿಟಲ್ ಈಗ್ರೆಟ್ ಈಗ್ರೆಟಾ ಗಾರ್ಜೆಟ್ಟಾ ಪ್ರಭೇದಕ್ಕೆ ಸೇರಿದೆ. ಈಗ್ರೆಟ್‌ಗಳಲ್ಲೆಲ್ಲಾ ಸಣ್ಣ ಜಾತಿಯದ್ದು. ಸುಮಾರು 40–45 ಸೆಂಮೀ ಉದ್ದ ಬೆಳೆಯುತ್ತದೆ.

ಈಗ್ರೆಟ್‌ಗಳು ಜವಳು ಪ್ರದೇಶಗಳ ಮರಗಳಲ್ಲಿ ತಮ್ಮ ಗೂಡುಗಳನ್ನು ಸಮೂಹಗಳಲ್ಲಿ ಕಟ್ಟುತ್ತವೆ. ಚಳಿಗಾಲದಲ್ಲಿ ಶೀತವಲಯಗಳಿಂದ ಸಮಭಾಜಕವೃತ್ತದ ಕಡೆಗೆ ವಲಸೆ ಹೋಗುತ್ತವೆ. (ಎ.ಎಸ್.ಎಚ್.ಎ.)

**ಈಜುರೆಕ್ಕೆಗಳು:** ಮೀನಿನಲ್ಲಿ ಪ್ರಧಾನ ಚಲನೆಯ ಅಂಗಗಳು. ಇವುಗಳಲ್ಲಿ ಪ್ರಮುಖವಾಗಿ 2 ವಿಧ: 1) ಮಧ್ಯಸ್ಥ ಅಥವ ಜೊತೆಯಲ್ಲದ ಈಜುರೆಕ್ಕೆಗಳು ಮತ್ತು 2) ಜೊತೆಯಾದ ಈಜುರೆಕ್ಕೆಗಳು.

ಮಧ್ಯಸ್ಥ ಈಜುರೆಕ್ಕೆಗಳು ಸಾಮಾನ್ಯವಾಗಿ ಬೆನ್ನಿನ ಮಧ್ಯಭಾಗದಲ್ಲಿರುವ ಬೆನ್ನಿನ ಈಜುರೆಕ್ಕೆ, ಗುದದ್ವಾರದ ಹಿಂದಿರುವ ಗುದದ್ವಾರದ ಈಜುರೆಕ್ಕೆ. ಹಾಗೂ ಬಾಲದ ಕೊನೆಯಲ್ಲಿರುವ ಬಾಲದ ಈಜುರೆಕ್ಕೆಯನ್ನು ಒಳಗೊಂಡಿರುತ್ತವೆ. ಜೊತೆಯಾದ ಈಜುರೆಕ್ಕೆಗಳು ಎರಡು ಬಗೆಯವು. ಒಂದು ಎದೆಯ ಭಾಗದಲ್ಲಿರುವ ಎದೆಯ ಈಜುರೆಕ್ಕೆಗಳು, ಎರಡನೆಯದು ಹೊಟ್ಟೆಯ ಭಾಗದಲ್ಲಿರುವ ವಸ್ತಿಕುಹರದ ಈಜುರೆಕ್ಕೆಗಳು.

ಕೆಲವು ಮೀನುಗಳಲ್ಲಿ, ಇವುಗಳ ಜೊತೆಗೆ ಬೇರೆ ತೆರನ ಈಜುರೆಕ್ಕೆಗಳೂ ಕಂಡು ಬರುತ್ತವೆ. ಬೆನ್ನಿನ ಈಜುರೆಕ್ಕೆಯ ಹಿಂಭಾಗದಲ್ಲಿ ಮೃದುವಾದ ಎರಡನೆಯ ಬೆನ್ನಿನ ಈಜುರೆಕ್ಕೆಯೊಂದು ಇರುತ್ತದೆ. ಅಂಡಸ್ಥ ರೇಖೆಗಳ ಆಧಾರವಿಲ್ಲದ ಇದನ್ನು ಕೊಬ್ಬಿನ ಈಜುರೆಕ್ಕೆಯೆಂದು ಕರೆಯುವುದುಂಟು. ಮತ್ತೊಂದು ರೀತಿಯದೆಂದರೆ ಸಣ್ಣದಾದ ಉಪಈಜುರೆಕ್ಕೆಗಳು. ಸಾಧಾರಣವಾಗಿ ಬೆನ್ನಿನ, ಎರಡನೆಯ ಬೆನ್ನಿನ ಈಜುರೆಕ್ಕೆಯ ಹಿಂದೆ ಹಾಗೂ ಹೊಟ್ಟೆಯ ಭಾಗದಲ್ಲಿ ಗುದದ್ವಾರದ ಈಜುರೆಕ್ಕೆಯ ಹಿಂದೆ ಅನುಕ್ರಮವಾಗಿ ಬೆನ್ನಿನ ಉಪಈಜುರೆಕ್ಕೆಗಳು ಮತ್ತು ಗುದದ್ವಾರದ ಉಪಈಜುರೆಕ್ಕೆಗಳಿರುತ್ತವೆ.

ಜೀವ್ಯವಶೇಷಗಳು, ತುಲನಾತ್ಮಕ ಅಂಗರಚನಾ ಶಾಸ್ತ್ರ ಹಾಗೂ ಭ್ರೂಣ ವಿಜ್ಞಾನಗಳಿಂದ ದೊರೆತ ಪುರಾವೆಗಳಿಂದ ಈಜುರೆಕ್ಕೆಗಳು – ಮಧ್ಯಸ್ಥ ಮತ್ತು ಜೊತೆಯಾದ ಈಜುರೆಕ್ಕೆಗಳೆರಡೂ ಒಂದೇ ಈಜುರೆಕ್ಕೆಮಡಿಕೆಯ ಮೂಲದಿಂದ ಹುಟ್ಟಿದವು ಎಂಬುದಾಗಿ ತಿಳಿದು ಬಂದಿದೆ.

ಈಜುರೆಕ್ಕೆಗಳ ಆಕಾರ ಮತ್ತು ಸ್ಥಾನಗಳೆರಡೂ ಸಾಮಾನ್ಯವಾಗಿ ದೇಹದ ಆಕಾರ ಹಾಗೂ ಗುರುತ್ವಾಕರ್ಷಣ ಶಕ್ತಿಯ ಸ್ಥಾನವನ್ನು ಸಂಬಂಧಿಸಿರುತ್ತವೆ. ಇದಲ್ಲದೆ ವಾಯುಚೀಲದ ಆಕೃತಿ ಮತ್ತು ಸ್ಥಾನ, ಸ್ವಭಾವ, ಈಜುವ ಗುಣ ಹಾಗು ವೇಗಗಳೂ ಸಹ ಇವುಗಳನ್ನು ಪ್ರೇರೇಪಿಸುತ್ತವೆ. ಮಧ್ಯಸ್ಥ ಮತ್ತು ಜೊತೆಯಾದ ಈಜುರೆಕ್ಕೆಗಳು ಮೃದ್ವಸ್ಥಿ ಇಲ್ಲವೆ ಅಸ್ಥಿಯ ಅಂತಸ್ಥಭಾಗಗಳಿಂದ ಆಧಾರ ಹೊಂದಿವೆ. ಇವುಗಳೇ ರೇಡಿಯಲ್‌ಗಳು ಮತ್ತು ಡರ್ಮಲ್ ಈಜುರೆಕ್ಕೆಯ ಅಂತಸ್ಥಭಾಗಗಳು. ಟೀಲಿಯಾಸ್ಟ್ ಮೀನುಗಳಲ್ಲಿ ಈಜುರೆಕ್ಕೆಯ ಅಂತಸ್ಥಭಾಗಗಳು ಸಾಮಾನ್ಯವಾಗಿ ಕವಲೊಡೆದಿದ್ದು ಜೋಡಿಸಿದ ಮೂಳೆಯ ರಚನೆಗಳಾಗಿವೆ. ಇವುಗಳನ್ನು ಲೆಪಿಡೋಟ್ರೈಖಿಯ ಎಂದು ಕರೆಯುತ್ತಾರೆ. ಈಜುರೆಕ್ಕೆಗಳ ಅಂತಸ್ಥಭಾಗಗಳು, ಮೃದು ಹಾಗೂ ಮುಳ್ಳಿನ ಅಂತಸ್ಥಭಾಗಗಳುಳ್ಳ ಮೀನುಗಳ ವರ್ಗೀಕರಣದಲ್ಲಿ ಸಹಾಯಕವಾಗಿವೆ.

ಮಧ್ಯಸ್ಥ ಈಜುರೆಕ್ಕೆಗಳು: ಲಂಬದ ಈಜುರೆಕ್ಕೆಗಳೆಂದು ಕೂಡ ಕರೆಯಲಾಗಿದೆ. ಮಧ್ಯಸ್ಥ ಈಜುರೆಕ್ಕೆಗಳಾದ ಬೆನ್ನಿನ, ಗುದದ್ವಾರದ ಮತ್ತು ಬಾಲದ ಈಜುರೆಕ್ಕೆಗಳು ಪ್ರತಿಯೊಂದೂ ಕೆಲವು ವಿಧದ ಮೀನುಗಳಲ್ಲಿ ಇರುವುದಿಲ್ಲ.

ಅತಿ ಪ್ರಾಚೀನವಾದ ಸೈಕ್ಲೋಸ್ಟೋಮ್‌ಗಳಲ್ಲಿ ಈ ಈಜುರೆಕ್ಕೆಗಳು ದೇಹದ ಮಧ್ಯಭಾಗದ ಉದ್ದಕ್ಕೂ ಅವಿಚ್ಛಿನ್ನವಾಗಿವೆ. ಇವುಗಳು ದೇಹದೊಳಗೆ ಅಡಗಿರುವ ಕೆಳಗಿನ ಬೇಸಲ್‌ಗಳು ಮತ್ತು ಮೇಲಿನ ರೇಡಿಯಲ್‌ಗಳಿಂದ ಆಧಾರ ಹೊಂದಿವೆ. ಮೃದ್ವಸ್ಥಿ ಮೀನುಗಳಲ್ಲಿ ಬೆನ್ನಿನ ಹಾಗೂ ಗುದದ್ವಾರ ಈಜುರೆಕ್ಕೆಗಳು ನಿರ್ದಿಷ್ಟವಾದ ಮೇರೆಯನ್ನು ಪಡೆದಿವೆ. ಅನೇಕ ಕೊಂಬಿನ ಅಂತಸ್ಥಭಾಗಗಳು – ಸೆರೆಟೋಟ್ರೈಖಿಯಗಳಿಂದ ಹೆಚ್ಚಿನ ಆಧಾರ ಹೊಂದಿವೆ. ಈ ಮೀನುಗಳಲ್ಲಿ ಸೆರೆಟೋಟ್ರೈಖಿಯ ಮತ್ತು ಮೃದ್ವಸ್ಥಿಯ ರೇಡಿಯಲ್‌ಗಳು ಚರ್ಮ ಹಾಗೂ ಈಜುರೆಕ್ಕೆಯ ಮಾಂಸಖಂಡಗಳಿಂದ ಸಂಪೂರ್ಣವಾಗಿ ಆವರಿಸಲ್ಪಟ್ಟಿದ್ದು ಹೊರಕ್ಕೆ ಕಂಡುಬರುವುದಿಲ್ಲ. ಸ್ಟರ್ಜನ್‌ಗಳಲ್ಲಿ ಕಂಡು ಬಂದಂತೆ, ಬೆನ್ನಿನ ಹಾಗೂ ಗುದದ್ವಾರದ ಈಜುರೆಕ್ಕೆಗಳು ತಮ್ಮ ಬುಡದಲ್ಲಿ ಒಂದು ಮಾಂಸಲವಾದ ಹಾಲೆಯನ್ನು ಪಡೆದಿರುತ್ತವೆ. ಈ ಹಾಲೆಯು ದೇಹದೊಳಗಿರುವ ಒಂದು ಪಂಕ್ತಿಯ ಕಡ್ಡಿಯಂತಿರುವ

ಬೇಸಲ್‌ಗಳನ್ನು ಸುತ್ತುವರಿದಿರುವ ಈಜುರೆಕ್ಕೆಯ ಮಾಂಸದಿಂದಲೂ, ಮಾಂಸದ ಹಾಲೆಯಲ್ಲಿರುವ ರೇಡಿಯಲ್‌ಗಳಿಂದಲೂ ರಚಿಸಲ್ಪಟ್ಟಿವೆ. ಈಜುರೆಕ್ಕೆಯ ಹೊರಭಾಗವು ಅಸ್ಥಿ ಈಜುರೆಕ್ಕೆಯ ಅಂತಸ್ಥಭಾಗಗಳಿಂದ ಆಧಾರ ಪಡೆದಿದೆ. ಇವುಗಳು ಮಾರ್ಪಾಟುಗೊಂಡ ಶಲ್ಕಗಳೇ ಆಗಿದ್ದು ಲೆಪಿಡೋಟ್ರೈಖಿಯ ಎಂಬುದಾಗಿ ಕರೆಯಲ್ಪಡುತ್ತವೆ.

ಉಳಿದ ಎಲ್ಲ ಉನ್ನತಮಟ್ಟದ ಅಸ್ಥಿ ಮೀನುಗಳಲ್ಲಿ, ಸ್ಟರ್ಜನ್‌ಗಳಲ್ಲಿದ್ದ ಈಜು ರೆಕ್ಕೆಯ ತಳದ ಹಾಲೆಯು ಕಂಡುಬರುವುದಿಲ್ಲ. ಸಾಧಾರಣವಾಗಿ ರೇಡಿಯಲ್‌ಗಳು, ದೇಹದ ಮಾಂಸ ಖಂಡಗಳೊಳಗೆ ಅಂತರ್ಗತವಾಗಿರುವ ಕೇವಲ ಮೂಳೆಯ ಅಥವಾ ಮೃದ್ವಸ್ಥಿಯ ಸಣ್ಣ ಗಂಟುಗಳಾಗಿ ಕ್ಷೀಣಿಸಿವೆ. ಈಗ ಈಜುರೆಕ್ಕೆಯ ಹೊರಗಿನ ಒಂದೇ ಆಧಾರವಾದಂಥ ಲೆಪಿಡೋಟ್ರೈಖಿಯಗಳ ಜೊತೆಗೆ ಇನ್ನೂ ಕೀಲುಗಳಿಂದ ಕೂಡಿಸಲ್ಪಟ್ಟಿವೆ. ಬೇಸಲ್‌ಗಳು ಕಡ್ಡಿಯ ಹಾಗಿರುವ ರಚನೆಗಳಂತೆ ದೃಢವಾಗಿ ನಿಂತಿದ್ದು ಮಧ್ಯದಮುಳ್ಳಿನಂಥ ಮೂಳೆಗಳೆಂದು ಕರೆಯಲ್ಪಡುತ್ತಿದ್ದು, ಕಶೇರುಖಂಡಗಳ ನರಗಳ ಹಾಗೂ ರಕ್ತದ ಮೂಳೆಗಳ ಜೊತೆಗೆ ಪರ್ಯಾಯವಾಗಿರುತ್ತವೆ.




**ಟ್ಯೂನಿ**







**ಶಾರ್ಕ್**

ಬೆನ್ನಿನ ಹಾಗೂ ಗುದದ್ವಾರದ ಈಜುರೆಕ್ಕೆಗಳು ವಿಶೇಷಕಾರ್ಯಗಳಿಗೋಸ್ಕರ ಅನೇಕ ಮಾರ್ಪಾಡು ಹೊಂದಿವೆ. ಸಮುದ್ರ ತಳದ ಮೇಲೆ ಜೀವಿಸುವ ರೇಗಳಲ್ಲಿ (ಹೈಪೋಟ್ರೆಮೇಟ) ಬೆನ್ನಿನ ಈಜುರೆಕ್ಕೆಗಳು ಹೆಚ್ಚುಕಡಿಮೆ ಕ್ಷೀಣಿಸಿವೆ. ಈ ಕ್ಷೀಣತೆಯು ಮುಂದುವರಿದು ಡೇಸಿಯೇಟಿಡೆ ಕುಲದ ಸ್ಟಿಂಗ್‌ರೇಗಳಲ್ಲಿಯೂ, ಮೈಲಿಯೋಬೇಟಿಡೆ ಕುಲದ ಈಗಲ್‌ರೇಗಳಲ್ಲಿಯೂ ಬೆನ್ನಿನ ಈಜುರೆಕ್ಕೆಯು ಸಂಪೂರ್ಣವಾಗಿ ಅದೃಶ್ಯವಾಗಿದೆ. ಅಸ್ಥಿಮೀನುಗಳಲ್ಲಿ ಆಕೃತಿ ಹಾಗೂ ಗಾತ್ರಗಳಲ್ಲಿ ಬೆನ್ನಿನ ಈಜುರೆಕ್ಕೆಯು ವೈವಿಧ್ಯತೆಯನ್ನು ಪ್ರದರ್ಶಿಸುತ್ತದೆ. ಇದು ಇಲ್ಲದಿರುವುದು ಬಹು ಅಪರೂಪ. ಜಿಮ್ನೋಟಿಡ್‌ಕುಲದ ಎಲೆಕ್ಟ್ರಿಕ್ ಹಾವು ಮೀನು ಎಲೆಕ್ಟ್ರೋಫೋರಸ್‌ನಲ್ಲಿ ಬೆನ್ನಿನ ಈಜುರೆಕ್ಕೆಯು ಒಂದು ಮಾಂಸಲ ತಂತುವಾಗಿ ಕ್ಷೀಣಿಸಿದೆ. ಇತರೆ ಜಿಮ್ನೋಟಿಡ್ ಮೀನುಗಳಲ್ಲಿ ಇದು ಇರುವುದಿಲ್ಲ. ಓರ್‌ಮೀನು, ರಿಗಾಲಿಕಸ್‌ನಲ್ಲಿ ಬೆನ್ನಿನ ಈಜುರೆಕ್ಕೆಯು 6 ಮೀ.ಗೂ ಮೀರಿದ ದೇಹದ ಮೇಲಿನ ಭಾಗದುದ್ದಕ್ಕೂ ವಿಸ್ತರಿಸಿದೆ. ಇದರ ಮೊದಲಿನ ಕೆಲವು ಅಂತಸ್ಥ ಭಾಗಗಳು ಉದ್ದವಾದ ತಂತುಗಳಂತೆ ಲಂಬಿಸಲ್ಪಟ್ಟಿವೆ. ಇಂಥ ಪ್ರತಿಯೊಂದು ಎಳೆಯ ತುದಿಯೂ ಪೊರೆಯ ಪದರದಲ್ಲಿ ಕೊನೆಗೊಳ್ಳುತ್ತದೆ. ಮೃದು ಈಜುರೆಕ್ಕೆ ಮೀನುಗಳಾದ ಕ್ಲೂಪಿಯ ಮತ್ತು ಸೈಪ್ರಿನಸ್‌ನಲ್ಲಿ ಬೆನ್ನಿನ ಈಜುರೆಕ್ಕೆಯು ಚಿಕ್ಕದಾಗಿದ್ದು ಮುಖ್ಯವಾಗಿ ಕವಲೊಡೆದ ಅಂತಸ್ಥ ರೇಖೆಗಳಿಂದ ರಚಿಸಲ್ಪಟ್ಟಿದೆ. ನೋಟಾಪ್ಟಿರಸ್ ಹಾಗೂ ಸೈಲೂರಸ್‌ಗಳಲ್ಲಿ ಬೆನ್ನಿನ ಈಜುರೆಕ್ಕೆಯು ಬೆನ್ನಿನ ಮಧ್ಯಭಾಗದಲ್ಲಿ ಒಂದು ಚಿಕ್ಕಪತಾಕೆಯ ರೀತಿಯಲ್ಲಿ ಕಂಡುಬರುತ್ತದೆ. ಮೆಗಲಾಪ್ಸ್‌ನಲ್ಲಿ ಬೆನ್ನಿನ ಈಜುರೆಕ್ಕೆಯ ಕೊನೆಯ ಅಂತಸ್ಥಭಾಗವು ತನ್ನ ಹಿಂದಿನ ಅಂಚು ನಿಮ್ನಮಧ್ಯವಾಗಿರುವ, ಉದ್ದವಾದತಂತುವಿನಂತೆ ಎಳೆಯಲ್ಪಟ್ಟು ಒಂದು ಸೂಕ್ಷ್ಮವಾದ ಮೊನೆಯ ರೀತಿಯಲ್ಲಿ ಚೂಪಾಗಿರುತ್ತದೆ. ಮೃದು ಅಂತಸ್ಥ ಭಾಗಗಳುಳ್ಳ ಮೀನುಗಳಾದ ಕಾಡ್, ಪೊಲ್ಲಾಕ್, ವೈಟಿಂಗ್ ಮತ್ತು ಹಾಡ್ಡಾಕ್‌ಗಳಲ್ಲಿ ಮೂರು ಬೆನ್ನಿನ ಈಜುರೆಕ್ಕೆಗಳಿರುವುದು ಒಂದು ವೈಶಿಷ್ಟ್ಯ. ಮುಳ್ಳಿನ ಅಂತಸ್ಥ ಭಾಗಗಳುಳ್ಳ ಮೀನುಗಳಲ್ಲಿ ಎಪಿನೆಫೆಲಸ್ ಹಾಗೂ ಲೆಪೊಮಿಸ್‌ಗಳಲ್ಲಿದ್ದಂತೆ ಬೆನ್ನಿನ ಈಜುರೆಕ್ಕೆಯ ಮುಂದಿನ ಕೊನೆಯಲ್ಲಿರುವ ಅಂತಸ್ಥಭಾಗಗಳು ಮುಳ್ಳುಗಳಾಗಿ ಪರಿವರ್ತನೆಗೊಂಡಿವೆ. ಮ್ಯಾಕರೆಲ್ ಮತ್ತು ಅಪೋಗಾನ್‌ಗಳಲ್ಲಿ ಮುಳ್ಳುಳ್ಳ ಭಾಗವು ಒಂದು ನಿರ್ದಿಷ್ಟ ಈಜುರೆಕ್ಕೆಯಾಗಿ ಪ್ರತ್ಯೇಕವಾಗಿದೆ. ಈ ಮುಳ್ಳಿನ ಅಂತಸ್ಥಭಾಗಗಳು ಈಜುರೆಕ್ಕೆಗಳಿಗೆ ರಕ್ಷಣೆಯನ್ನೀಯುತ್ತವೆ. ಬ್ರಾಖಿಯಾಪ್ಟರಿಜಿ ಉಪವರ್ಗದ ಪಾಲಿಪ್ಟಿರಸ್‌ನಲ್ಲಿ ಬೆನ್ನಿನ ಈಜುರೆಕ್ಕೆಯ ಮುಂಭಾಗವು ಪ್ರತ್ಯೇಕವಾದ ಪತಾಕೆಯಂತಿರುವ ಉಪಈಜುರೆಕ್ಕೆಗಳಾಗಿ ರೂಪುಗೊಂಡಿವೆ. ಪ್ರತಿಯೊಂದು ಉಪಈಜುರೆಕ್ಕೆಯೂ ಹಾಯಿಯಂತಿರುವ ಪೊರೆಯ ಅಂಚಿಗೆ ಆಧಾರವನ್ನೀಯುವ ಬಲಿಷ್ಠವಾದ ಒಂದು ಮುಳ್ಳನ್ನು ಪಡೆದಿರುತ್ತದೆ. ಎಖಿನಿಡೆ ಕುಲದ ಸಕಿಂಗ್‌ಫಿಶ್ ಅಥವಾ ರೆಮೋರಗಳು ಅಂಟಿಕೊಳ್ಳುವ ಅಂಗಗಳಂತೆ ಮಾರ್ಪಾಡಾಗಿರುವ ಬೆನ್ನಿನ ಈಜುರೆಕ್ಕೆಗಳನ್ನು ಹೊಂದಿರುತ್ತವೆ. ಇವುಗಳಲ್ಲಿ ಮುಳ್ಳಿನ ಬೆನ್ನಿನ ಈಜುರೆಕ್ಕೆಯು, ತಲೆಯ ಅಗಲ ಹಾಗೂ ಚಪ್ಪಟೆಯಾದ ಮೇಲಿನ ಮೇಲ್ಮೈನಲ್ಲಿರುವ ಒಂದು ಅಂಡಾಕೃತಿಯ ಅಂಟಿಕೊಳ್ಳುವ ಬಟ್ಟಲಿನಂತಿರುವ ಅಂಗದಂತೆ ರೂಪುಗೊಂಡಿವೆ. ಅಂತಸ್ಥಭಾಗಗಳು ಏಣುಗಳುಳ್ಳ ಅಡ್ಡನಾದ ಫಲಕಗಳಾಗಿ ಪರಿವರ್ತನೆಗೊಂಡಿರುವ ಈ ಅಂಗವು ಒಂದು ಪೊರೆಯ ಅಂಚಿನಿಂದ ಸುತ್ತುವರಿಯಲ್ಪಟ್ಟಿದೆ. ಅಡ್ಡಫಲಕಗಳ ಹೀರಿಕೆಯ ಕಾರಣ ಅಂಟಿಕೊಳ್ಳುವ ಅಂಗದಿಂದ, ಇವುಗಳು ಇತರೆ ಪ್ರಾಣಿಗಳು ಹಾಗೂ ಹಡಗುಗಳಿಗೆ ಬಲವಾಗಿ ಅಂಟಿಕೊಂಡು ರಕ್ಷಣೆ ಮತ್ತು ಸಾಗಣೆಯನ್ನು ಪಡೆಯುತ್ತವೆ. ಗಾಳಮೀನು ಲೋಫಿಯಸ್‌ನಲ್ಲಿ ವಿಲಕ್ಷಣವಾಗಿ ಮಾರ್ಪಾಟುಗೊಂಡ ಮುಳ್ಳು ಬೆನ್ನಿನ ಈಜುರೆಕ್ಕೆಯ ಮೊದಲನೆಯ ಅಂತಸ್ಥಭಾಗವು ಮೂತಿಯ ಮೇಲೆ ಸ್ಥಾಪಿಸಲ್ಪಟ್ಟು ಒಂದು ಬಾಗುವ ದಾರ ಮತ್ತು ಒಂದು ಪೊರೆಯ ಪತಾಕೆಯಂತಿರುವ ಅಂಗಪುಚ್ಛದ ಎರೆಯಂತೆ ರೂಪುಗೊಂಡಿದೆ. ಸೆರಟಾಯ್ಡ್ ಕುಲದ ಗಾಳ ಮಿನುಗಳಲ್ಲಿ ಈ ಎರೆಯು ವಿವಿಧ ಗಾತ್ರದ ಸ್ವಯಂ ಪ್ರಕಾಶದ ಬುರುಡೆಯ ಆಕಾರವನ್ನು ಹೊಂದಿ, ಸತತ ಅಂಧಕಾರದಲ್ಲಿ ಬಾಳುವ ಇವುಗಳಿಗೆ ಇತರೆ ಮೀನುಗಳನ್ನು ಆಹಾರಕ್ಕಾಗಿ ಆಕರ್ಷಿಸಲು ದೀಪದ ರೀತಿಯಲ್ಲಿ ವರ್ತಿಸುತ್ತದೆ.

ದೇಹದ ತಳಭಾಗದ ಅಂಚಿನಲ್ಲಿದ್ದು, ಬಾಲ ಮತ್ತು ಗುದದ್ವಾರದ ಮಧ್ಯೆ ಇರುವ ಗುದದ್ವಾರದ ಈಜುರೆಕ್ಕೆಯಲ್ಲಿ ಸಹ ಬೆನ್ನಿನ ಈಜುರೆಕ್ಕೆಯಂತೆ ಆಕಾರ ಹಾಗೂ ಗಾತ್ರದಲ್ಲಿ ಕೆಲವು ಭಿನ್ನತೆಗಳು ಕಂಡುಬರುತ್ತವೆ. ಜಿಮ್ನೋಟಿಡ್ ಹಾವುಮೀನುಗಳಲ್ಲಿ ಗುದದ್ವಾರದ ಈಜುರೆಕ್ಕೆಯು ಅತಿ ಉದ್ದವಾಗಿದ್ದು ಚಲನೆಗೆ ಸಹಾಯಮಾಡುತ್ತದೆ. ಕೆಲವು ಮೀನುಗಳಲ್ಲಿ ಸಮತೋಲನ ಕಾಯುವ ಅಡಿಗಟ್ಟಿನಂತೆ ಕಾರ್ಯ ನಿರ್ವಹಿಸುವ ಇದು ಗಣನೀಯವಾಗಿ ಗಿಡ್ಡದ್ದಾಗಿರುತ್ತದೆ. ಆದರೆ ರಿಬ್ಬನ್ ಮೀನುಗಳು, ಟ್ರ್ಯಾಖಿಪ್ಟಿರಸ್ ಮತ್ತು ರಿಗಾಲಿಕಸ್‌ಗಳಲ್ಲಿ ಈ ಈಜುರೆಕ್ಕೆಯ ಅಸ್ತಿತ್ವವೇ ಇಲ್ಲ. ಕಾಡ್‌ಮೀನು ಗಾಡಸ್‌ನಲ್ಲಿ ಇದು 2 ಭಾಗಗಳಾಗಿ ಒಡೆದಿದ್ದು ಪ್ರತಿಯೊಂದೂ ಸಮಗ್ರವಾಗಿ ಮೃದು ಅಂತಸ್ಥಭಾಗಗಳಿಂದ ರಚಿತವಾಗಿದೆ. ಸೈಪ್ರಿನೋಡಾಂಟ್ ವರ್ಗದ ಪೀಸಿಲಿನೆ ಕುಲದ ಗಂಡು ಮೀನುಗಳಲ್ಲಿ ಗುದದ್ವಾರದ ಈಜುರೆಕ್ಕೆಯು ಮೈಥುನದಲ್ಲಿ ಉಪಯೋಗವಾಗುವಂಥ ಒಂದು ಸಂಕೀರ್ಣವಾದ ಒಳಗೆ ಸೇರಿಸುವ ಅಂಗದಂತೆ ವಿಶೇಷವಾಗಿ ಮಾರ್ಪಾಟುಗೊಂಡಿದೆ.

ಮಧ್ಯಸ್ಥ ಈಜುರೆಕ್ಕೆಗಳಲ್ಲಿ ಕೊನೆಯದಾದ ಬಾಲದ ಈಜುರೆಕ್ಕೆಯು ಸರಳ ಹಾಗೂ ಕವಲೊಡೆದ ಅಂತಸ್ಥಭಾಗಗಳೆರಡನ್ನೂ ಒಳಗೊಂಡಿದೆ. ಇವುಗಳು ಒಂದು ತೆಳುವಾದ ಪೊರೆಗೆ ಆಧಾರವನ್ನೀಯುತ್ತವೆ. ಈ ಈಜುರೆಕ್ಕೆಯಲ್ಲಿ ನೈಜಮುಳ್ಳುಗಳು ಎಂದಿಗೂ ಬೆಳೆಯುವುದಿಲ್ಲ. ಇದರಲ್ಲಿ ಆಧಾರದ ಅಸ್ಥಿಪಂಜರವು ಬೆನ್ನಿನ ಹಾಗೂ ಗುದದ್ವಾರದ ಈಜುರೆಕ್ಕೆಗಳಂತಲ್ಲದೆ ಕಶೇರುಸ್ತಂಭದ ಹಿಂದಿನ ಕೊನೆಯ ವಿಶೇಷ ಮಾರ್ಪಾಡುಗಳನ್ನು ಒಳಗೊಂಡಿದೆ.

ಪ್ರೌಢಮೀನುಗಳಲ್ಲಿ ಬಾಲದ ಈಜುರೆಕ್ಕೆಗಳನ್ನು 1) ಪ್ರೋಟೋಸರ್ಕಲ್ ಅರ್ಥಾತ್ ಮೊದಲ ಬಾಲ, 2) ಹೆಟಿರೋಸರ್ಕಲ್ – ಅಸಮಬಾಲ ಮತ್ತು 3) ಹೋಮೋಸರ್ಕಲ್ – ಸಮಬಾಲ ಎಂಬ ಮೂರು ಪ್ರಧಾನ ವಿಧಗಳಾಗಿ ವಿಂಗಡಿಸಲಾಗಿದೆ. ಪ್ರೋಟೋಸರ್ಕಲ್ ರೀತಿಯ ಬಾಲದ ಈಜುರೆಕ್ಕೆಯು ಅತ್ಯಂತ ಪ್ರಾಚೀನತೆರನಾಗಿದ್ದು, ಇದರಲ್ಲಿ ಆದ್ಯಮೃದ್ವಸ್ಥಿ ಪಟ್ಟೆ ಅಥವ ಕಶೇರು ಸ್ತಂಭದ ಕೊನೆಯು ನೇರವಾಗಿದ್ದು ಈಜುರೆಕ್ಕೆಯನ್ನು ಎರಡು ಸಮನಾದ ಹಾಲೆಗಳಾಗಿ ವಿಭಜಿಸುತ್ತದೆ. ಈಜುರೆಕ್ಕೆಯ ಪೊರೆಯನ್ನು ಆಧರಿಸಿರುವ ಅಂತಸ್ಥಭಾಗಗಳ ಒಂದು ಶ್ರೇಣಿಯು ಈ ಕೇಂದ್ರದ ಅಕ್ಷರೇಖೆಯ ಸುತ್ತಲೂ ವ್ಯವಸ್ಥೆಗೊಂಡಿದೆ. ಲ್ಯಾಟಿಮೇರಿಯ ವಿನಃ ಬದುಕಿರುವ ಮೀನುಗಳಲ್ಲಿ ಈ ಈಜುರೆಕ್ಕೆಯು ಇಲ್ಲ. ಬಹುತೇಕ ಸಿಲಾಚಿಯನ್‌ಗಳು ಹಾಗೂ ಕೆಲವು ಪ್ರಾಚೀನ ಅಸ್ಥಿಮೀನುಗಳಲ್ಲಿ ಕಂಡು ಬರುವ ಹೆಟಿರೋಸರ್ಕಲ್ ರೀತಿಯ ಬಾಲದ ಈಜುರೆಕ್ಕೆಯಲ್ಲಿ ಕಶೇರುಸ್ಥಂಭದ ಹಿಂದಿನ ಕೊನೆಯು ಮೇಲ್ಮುಖವಾಗಿ ಬಾಗಿದ್ದು ಹೆಚ್ಚು ಕಡಿಮೆ ಈಜುರೆಕ್ಕೆಯ ತುದಿಯವರೆಗೂ ಸಾಗುತ್ತದೆ. ಕಶೇರುಸ್ಥಂಭದ ತುದಿಯ ಸುತ್ತಲೂ ನಿರಂತರವಾಗಿರುವ ಈಜುರೆಕ್ಕೆಯ ಎರಡು ಹಾಲೆಗಳು, ಒಂದು ಸಣ್ಣಮೇಲಿನ ಹಾಲೆ ಮತ್ತು ಒಂದು ಅತಿದೊಡ್ಡ ಕೆಳಗಿನ ಹಾಲೆಯಾಗಿ ಭಿನ್ನವಾಗಿವೆ. ಬಾಹ್ಯ ಮತ್ತು ಆಂತರ್ಯದಲ್ಲಿ ಅಸಮರೂಪತೆಯಿರುವ ಬಾಲದ ಈಜುರೆಕ್ಕೆಯು ಡಾಗ್ ಫಿಶ್ ಮತ್ತು ಸ್ಟರ್ಜನ್‌ಗಳಲ್ಲಿ ಕಂಡುಬರುತ್ತದೆ. ಉನ್ನತ ಅಸ್ಥಿಮೀನುಗಳಲ್ಲಿ ಕಂಡುಬರುವ ಹೋಮೋಸರ್ಕಲ್ ಮಾದರಿಯ ಈಜುರೆಕ್ಕೆಯು ಬಾಹ್ಯದಲ್ಲಿ ಪರಸ್ಪರಾನುರೂಪತೆಯನ್ನು ಪ್ರದರ್ಶಿಸುತ್ತದೆ. ದೇಹದ ಅಕ್ಷದ ಒಂದು ವಿಸ್ತರಣೆಯು ಈಜುರೆಕ್ಕೆಯನ್ನು ಎರಡು ಸಮಗಾತ್ರದ ಹಾಗೂ ಅವಿಚ್ಛಿನ್ನವಾದ ಮೇಲಿನ ಮತ್ತು ಕೆಳಗಿನ ಹಾಲೆಗಳನ್ನಾಗಿ ಪ್ರತ್ಯೇಕಿಸುತ್ತದೆ. ಆದರೆ ಆಂತರಿಕ ರಚನೆಯಿಂದ ಇದು ಅತ್ಯಂತ ಸಂಕ್ಷಿಪ್ತವಾದ ಹೆಟಿರೋಸರ್ಕಲ್ ಬಾಲದ ಈಜುರೆಕ್ಕೆಯಂತೆ ಕಂಡುಬರುತ್ತದೆ. ಕಶೇರುಕ ಸ್ತಂಭದ ಹಿಂದಿನ ತುದಿಯು ಮೊದಲಿನಂತೆ ಮೇಲ್ಮುಖಕ್ಕೆ ಬಾಗಿದ್ದು, ಈಜುರೆಕ್ಕೆಯ ಅತ್ಯಂತ ಹಿಂದಿನ ತುದಿಯವರೆಗೆ ಸಾಗುವುದಿಲ್ಲ. ಮೇಲಿನ ಹಾಲೆಯು ಪ್ರಮಾಣದಲ್ಲಿ ಹೆಟಿರೋಸರ್ಕಲ್ ಬಾಲಕ್ಕಿಂತ ಸಣ್ಣದು. ಕೆಲವು ರ್‍ಯಾಟ್‌ಟೈಲ್‌ಗಳು, ಹಾವುಮೀನುಗಳು ಮತ್ತು ಬ್ಲೆನ್ನಿಗಳಲ್ಲಿ ಬಾಲದ ಈಜುರೆಕ್ಕೆಯು ತುದಿಯಲ್ಲಿ ಚೂಪಾಗಿದ್ದು ಸಮಪಾರ್ಶ್ವತೆಯನ್ನು ಪಡೆದಿದ್ದು ಐಸೋಸರ್ಕಲ್ ಅಥವ ಲೆಪ್ಟೋಸರ್ಕಲ್ ಬಾಲವೆಂಬ ವಿಶೇಷ ಹೆಸರು ಹೊಂದಿದೆ. ಇತ್ತೀಚಿನ ಶ್ವಾಸಕೋಶದ ಮೀನುಗಳ ಬಾಲದ ಈಜುರೆಕ್ಕೆಯು ಬಹುಶಃ ಬೆನ್ನಿನ ಹಾಗೂ ಗುದದ್ವಾರದ ಅಂತ್ಯಭಾಗಗಳು ಹಿಂದುಮುಂದಾಗಿ ಬೆಳೆಯುವುದರಿಂದಾದ ಒಂದು ಮಿಥ್ಯಾಬಾಲದ ಈಜುರೆಕ್ಕೆಯಾಗಿದೆ. ರೇ ಮತ್ತು ಸ್ಕೇಟ್‌ಗಳಲ್ಲಿ ಕೆಳಗಿನ ಹಾಲೆಯು ಕ್ಷೀಣಿಸಿದ್ದರೆ, ಎಕ್ಸೋಬಿಡೆ ಕುಲದ ಹಾರುವ ಮೀನುಗಳಲ್ಲಿ ಅದು ವಿಸ್ತರಿಸಲ್ಪಟ್ಟಿದೆ. ಓಫಿಸೊರಸ್, ಸ್ಫೇಗಿಬ್ರಾಂಬಸ್ ಮತ್ತು ಕಡಲು ಕುದುರೆ (ಹಿಪ್ಪೋಕ್ಯಾಂಪಸ್) ಗಳಲ್ಲಿ ಬಾಲದ ಈಜುರೆಕ್ಕೆಯೇ ಇಲ್ಲ. ಮಾರಮರಿಡ ಬೆಮ್ನಾರ್‌ಖಿಸ್‌ನಲ್ಲಿ ಬಾಲದ ಹಾಗೂ ಗುದದ್ವಾರದ ಈಜುರೆಕ್ಕೆಗಳೆರಡೂ ಇಲ್ಲ.

ಅಸ್ಥಿಮೀನುಗಳ ನಡುವೆ ಬಾಹ್ಯ ಸಮರೂಪತೆಯಿರುವ ಬಾಲದ ಈಜುರೆಕ್ಕೆಗಳು ಆಕೃತಿ ಮತ್ತು ಗಾತ್ರಗಳಲ್ಲಿ ವೈವಿಧ್ಯತೆಯನ್ನು ಪ್ರದರ್ಶಿಸುತ್ತವೆ. ಪ್ರಧಾನ ಆಕೃತಿಗಳೆಂದರೆ 1) ಅರ್ಧಚಂದ್ರಾಕೃತಿ (ಟನ್ನಿ) 2) ಕವಲುಗಳು (ಬಂಗುಡೆ) 3) ತುದಿ ಕತ್ತರಿಸಿದ್ದು (ಗೆಂಡೆ) 4) ಛಿನ್ನಾಗ್ರದ್ದು (ಫ್ಲೌಂಡರ್) 5) ದುಂಡು (ಟರ್‌ಬಾಟ್) ಹಾಗೂ 6) ಚೂಪಾದದ್ದು (ಗೋಬಿ).

ಮೀನುಗಳ ಎದೆಯ ಹಾಗೂ ವಸ್ತಿಕುಹರದ ಈಜುರೆಕ್ಕೆಗಳು ನೆಲವಾಸಿ ಕಶೇರುಕಗಳ ಕೈ ಹಾಗೂ ಕಾಲುಗಳಿಗೆ ಅನುಕ್ರಮವಾಗಿ ಅನುರೂಪತೆಯಿಂದಿವೆ. ಈ ಜೊತೆಯಾದ ಈಜುರೆಕ್ಕೆಗಳು ಲ್ಯಾಂಪ್ರೆಗಳು ಮತ್ತು ಹ್ಯಾಗ್‌ಮೀನುಗಳಲ್ಲಿ (ಸೈಕ್ಲೋಸ್ಟೋಮ್‌ಗಳು) ಇರುವುದಿಲ್ಲ. ಆದಾಗ್ಯೂ ಇನ್ನಿತರೆ ಮೀನುಗಳಲ್ಲಿ ಕೆಲವು ಅಪವಾದಗಳೊಡನೆ ಈ ಎರಡೂ ಈಜುರೆಕ್ಕೆಗಳು ಬೆಳೆದಿರುವುದು ಕಂಡುಬರುತ್ತದೆ.

ಕಿವಿರುಗಳ ರಂಧ್ರಗಳ ಹಿಂದೆ ಹಾಗೂ ದೇಹದ ಕೆಳ ಅಂಚಿನಲ್ಲಿ ನೆಲೆಸಿರುವ ಎದೆಯ ಈಜುರೆಕ್ಕೆಗಳ ಮುಖ್ಯಕಾರ್ಯವು ಚಲನವಲನಕ್ಕೆ ಸಂಬಂಧಿಸಿದ್ದು. ಶಾರ್ಕ್‌ಗಳಲ್ಲಿನ ಎದೆಯ ಈಜುರೆಕ್ಕೆಗಳು ಅಸ್ಥಿಮೀನುಗಳಿಗಿಂತ ಗಣನೀಯವಾಗಿ ದೊಡ್ಡದಾಗಿವೆ. ರೇಗಳು ಮತ್ತು ಅವುಗಳ ಸಂಬಂಧಿಗಳಲ್ಲಿ ಎದೆಯ ಈಜುರೆಕ್ಕೆಗಳು ಬಹುದೊಡ್ಡದಾಗಿಯೂ, ಚಪ್ಪಟೆಯಾಗಿಯೂ ಇದ್ದು ಹಾಲೆಯ ರೀತಿಯಲ್ಲಿವೆ. ಇವು ತಲೆ ಹಾಗೂ ದೇಹದ ಪಾರ್ಶ್ವಗಳಿಗೆ ಸೇರಿಸಲ್ಪಟ್ಟು ಚಲನೆಯ ಪ್ರಮುಖ ಅಂಗಗಳಾಗಿವೆ. ಸೆಲಾಚಿಯನ್‌ಗಳಲ್ಲಿ ಜೊತೆಯ ಈಜುರೆಕ್ಕೆಗಳು ಮಾಂಸಖಂಡಗಳು ಹಾಗೂ ಚರ್ಮದಿಂದ ಸಂಪೂರ್ಣವಾಗಿ ಆವೃತಗೊಂಡಿವೆ.

ಬಹು ಸಣ್ಣದಾಗಿರುವ ಎದೆಯ ಈಜುರೆಕ್ಕೆಗಳು ಹುಟ್ಟುಗಳಂತಿದ್ದು, ಅಂತಸ್ಥಭಾಗಗಳ ಆಧಾರದ ಭಾಗ ಮಾತ್ರ ಹೊರಕ್ಕೆ ಕಂಡು ಬರುತ್ತದೆ. ಅಂತಸ್ಥಭಾಗಗಳು ಸರಳವಾಗಿವೆ ಇಲ್ಲವೆ ಕವಲೊಡೆದಿವೆ.

ಮಧ್ಯಮ ಇಲ್ಲವೆ ನಿಧಾನ ವೇಗದ ಮೀನುಗಳಲ್ಲಿ ಸಂಚಲನೆಗೆ ಅಥವ ನೀರಿನ ಆಧಾರಕ್ಕೆ ಅಗಲವಾದ ದುಂಡಾದ ಅಥವ ಚಮಚದಂತಿರುವ ಎದೆಯ ಈಜುರೆಕ್ಕೆಗಳಿವೆ. ಸುತ್ತಿ ತಿರುಗುವಂಥ ವೇಗವುಳ್ಳ ಮೀನುಗಳಲ್ಲಿ ಈಜುರೆಕ್ಕೆಗಳು ಉದ್ದನಾಗಿದ್ದು ಕುಡುಗೋಲು ಆಕೃತಿಯುಳ್ಳವು. ಶ್ವಾಸಕೋಶಮೀನು ನಿಯೋಸೆರೆಟೋಡಸ್‌ನಲ್ಲಿ ಇವು ಎಲೆಯ ರೀತಿಯಲ್ಲಿದ್ದರೆ ಇನ್ನಿತರ ಶ್ವಾಸಕೋಶ ಮೀನುಗಳಲ್ಲಿ (ಪ್ರೊಟಾಪ್ಟಿರಸ್ ಮತ್ತು ಲೆಪಿಡೋಸೈರೆನ್‌ಗಳಲ್ಲಿ) ಉದ್ದನಾದ ಚೂಪಾದ ತಂತುಗಳಂತೆ ರೂಪುಗೊಂಡಿವೆ. ಇವುಗಳು ಬಹು ಅಪರೂಪವಾಗಿ ಕೆಲವು ಮೀನುಗಳಲ್ಲಿ (ಪೈಪ್ ಮೀನುಗಳು ಹಾಗೂ ಹಾವು ಮೀನುಗಳಲ್ಲಿ) ಗೈರು ಹಾಜರಿಯಾಗಿವೆ. ಗಂಡು ಟಾಪ್‌ಮಿನ್ನೊ (ಗಂಬೂಸಿಯ)ದಲ್ಲಿ ಎದೆಯ ಈಜುರೆಕ್ಕೆಯು ಆಲಿಂಗನಾಂಗದಂತೆ ಮಾರ್ಪಾಟುಹೊಂದಿದೆ. ಎಕ್ಸೋಟಿಡೆ ಕುಲದ ಹಾರುವ ಮೀನುಗಳಲ್ಲಿ ಎದೆಯ ಈಜುರೆಕ್ಕೆಗಳು ವಿಶೇಷವಾಗಿ ವಿಸ್ತರಿಸಿದ್ದು ಗಾಳಿಯಲ್ಲಿ ಹಾರಲು ಸಹಾಯಕವಾಗಿವೆ. ಸಮುದ್ರನೆಲಗಪ್ಪೆ (ಛಾನಾಸಿಡೆ) ಹಾಗೂ ಕಪ್ಪೆಮೀನು (ಆ್ಯಂಟೆನೀರಿಡೆ) ಗಳಲ್ಲಿ ಈ ಈಜುರೆಕ್ಕೆಗಳು ಬೆರಳುಗಳಲ್ಲಿ ಕೊನೆಗೊಳ್ಳುವ ಹಸ್ತವುಳ್ಳ ತೋಳುಗಳಂತೆ ರೂಪುಗೊಂಡಿದ್ದು, ಸಮುದ್ರ ತಳದ ಮೇಲೆ ಸಾವಕಾಶವಾಗಿ ತೆವಳಲೂ, ತಳ ಮತ್ತು ಬಂಡೆಗಳಿಂದ ತೂಗಾಡಲೂ ಸಾಧ್ಯವಾಗಿದೆ.

ಆಫ್ರಿಕದ ಮಡ್‌ಸ್ಕಿಪರ್ (ಪೆರಿಯಾಫ್ಥಾಲ್ಮಸ್)ನಲ್ಲಿ ಎದೆಯ ಈಜುರೆಕ್ಕೆಯ ಪೊರೆಯಭಾಗವು ಒಂದು ಮಾಂಸಖಂಡದ ದೇಟು ಇಲ್ಲವೆ ತೋಳಿನ ಕೊನೆಗೆ ಸಾಗಿಸಲ್ಪಟ್ಟು ಪಾರ್ಶ್ವಕ್ಕೂ, ಮುಂಭಾಗಕ್ಕೂ ಹಾಗೂ ಹಿಂಭಾಗಕ್ಕೂ ಚಲಿಸಲು ಸಾಧ್ಯವಾಗುವಂತಿದೆ. ಆಹಾರಕ್ಕಾಗಿ ಮರಳಿನ ಮೇಲೆ ಚಲಿಸಿದಾಗ ಇದರ ನಡಿಗೆಯು ಈ ರಚನೆಯಿಂದಾಗಿ ಕುಂಟನ ಊರುಗೋಲಿನ ನಡಿಗೆಯನ್ನು ಹೋಲುತ್ತದೆ. ನಾಲ್ಕರಿಂದ ಎಂಟರವರೆಗೆ ಕೆಳಗಿನ ಅಂತಸ್ಥಭಾಗಗಳು ಎದೆಯ ಈಜುರೆಕ್ಕೆಯಿಂದ ಬೇರ್ಪಟ್ಟು ಸೂಕ್ಷ್ಮವಾದ ತಂತುಗಳಂತೆ ರೂಪುಗೊಂಡು ಸ್ಪರ್ಶ ಮತ್ತು ರುಚಿಯ ಅಂಗಗಳನ್ನು ಪಡೆದಿರುವುದು ಥ್ರೆಡ್‌ಫಿನ್ (ಪಾಲಿ ಸೀಮಸ್)ನಲ್ಲಿ ಕಂಡುಬರುತ್ತದೆ.

ಗರ್‌ನಾರ್ಡ್ (ಟ್ರಿಗ್ಲ) ಹಾಗೂ ಸಿರಾಬಿನ್ (ಪ್ರಿಯೋನೋಟಸ್)ಗಳಲ್ಲಿ ಎದೆಯ ಈಜುರೆಕ್ಕೆಯ ಕೆಳಗಿನ 2 ಅಥವಾ 3 ಅಂತಸ್ಥ ಭಾಗಗಳು ಬಲವಾದ ಬೆರಳಿನಂತೆ ರೂಪುಗೊಂಡು, ಜ್ಞಾನೇಂದ್ರಿಯ ಕೋರಕಗಳಿಂದೊಡಗೂಡಿ ಮುಂದಕ್ಕೆ ಚಲಿಸಲು ಸಹಾಯಕವಾಗಿವೆ. ಹಾರುವ ಗರ್‌ನಾರ್ಡ್ (ಡ್ಯಾಕ್ಟೈಲಾಪ್ಟಿರಸ್)ನಲ್ಲಿ ಎದೆಯ ಈಜುರೆಕ್ಕೆಗಳು ಜಾರಿಹೋಗಲು ಸಾಧ್ಯವಾಗುವಂತೆ ರೆಕ್ಕೆಯಾಕಾರವನ್ನು ಪಡೆದಿವೆ.

ನೆಲವಾಸಿ ಕಶೇರುಕಗಳ ಹಿಂಗಾಲುಗಳಿಗೆ ಸಮನಾಗಿರುವ ವಸ್ತಿಕುಹರದ ಈಜುರೆಕ್ಕೆಗಳ ಸ್ಥಾನವು ಮೀನುಗಳ ವಿವಿಧ ಗುಂಪುಗಳಲ್ಲಿ ಬದಲಾಗುತ್ತದೆ. ಇವು ವರ್ಗೀಕರಣದಲ್ಲಿ ಸ್ವಲ್ಪ ಪ್ರಾಮುಖ್ಯತೆಯನ್ನು ಪಡೆದಿವೆ. ಇವು ಹೆರ್ರಿಂಗ್, ಸಾಲ್ಮನ್, ಗೆಂಡೆಗಳಲ್ಲಿ ಹೊಟ್ಟೆಯ ಕೆಳಗೆ, ಪರ್ಚ್, ಬಂಗುಡೆಗಳಲ್ಲಿ ಎದೆಯ ಕೆಳಗೆ ಹಾಗೂ ಕಾಡ್, ಬ್ಲೆನ್ನಿಗಳಲ್ಲಿ ಗಂಟಲಿನ ಪ್ರದೇಶದಲ್ಲಿಯೂ ನೆಲೆಸಿರುತ್ತವೆ.

ಹಾಯಿ ಮೀನುಗಳಲ್ಲಿ ವಸ್ತಿಕುಹರದ ಈಜುರೆಕ್ಕೆಗಳು ಕೆಲವು ಅಂತಸ್ಥಭಾಗಗಳ ಕಂತೆಯಾಗಿ ಕ್ಷೀಣಿಸಿವೆ. ಕಾಡ್‌ಗಳಲ್ಲಿ ಇವು ಕೇವಲ ತಂತುಗಳ ಹಾಗೆ ಮಾರ್ಪಾಟುಗೊಂಡಿವೆ. ಓರ್‌ಮೀನು–ರಿಗಾಲಿಕಸ್‌ನಲ್ಲಿ ಇವು ಒಂದು ಜೊತೆ ಉದ್ದನಾದ ಅಂತಸ್ಥಭಾಗಗಳ ರೀತಿಯಲ್ಲಿ ರೂಪುಗೊಂಡಿದ್ದು ಪ್ರತಿಯೊಂದು ತುದಿಯಲ್ಲಿ ಅಲುಗಿನ ರಚನೆಯಂತೆ ವಿಸ್ತರಿಸಲ್ಪಟ್ಟಿವೆ. ಸ್ಟಿಕಲ್‌ಬ್ಯಾಕ್–ಗ್ಯಾಸ್ಟಿರೋಸ್ಟಿಯಸ್‌ನಲ್ಲಿ ಪ್ರತಿ ಈಜುರೆಕ್ಕೆಯು ಒಂದು ಚೂಪಾದ ಮುಳ್ಳು ಹಾಗೂ ಒಂದು ಮೃದುವಾದ ಅಂತಸ್ಥಭಾಗವಾಗಿ ರೂಪಿಸಲ್ಪಟ್ಟಿದೆ. ಒಂದೇ ಮುಳ್ಳಾಗಿ ಕ್ಷೀಣಿಸಿರುವ ಈ ಈಜುರೆಕ್ಕೆಯು ಪೈನ್‌ಕೋನ್‌ಮೀನು – ಮಾನೋ ಸೆಂಟ್ರಸ್ ಮತ್ತು ಕೆಲವು ಟ್ರಿಗ್ಗರ್ ಮೀನುಗಳಲ್ಲಿ ಕಾಣಸಿಗುತ್ತದೆ. ಬಿಲತೋಡುವ ಮೀನುಗಳಲ್ಲಿ ವಸ್ತಿ ಕುಹರದ ಈಜುರೆಕ್ಕೆಗಳು ಗಾತ್ರದಲ್ಲಿ ಕ್ಷೀಣಿಸುತ್ತವೆ ಇಲ್ಲವೆ ಸಮಗ್ರವಾಗಿ ಇಲ್ಲದಿರಬಹುದು. ಹಲವು ಬ್ಲೆನ್ನಿಗಳು ಮತ್ತು ಕಸ್ಕ್‌ಹಾವುಮೀನುಗಳಲ್ಲಿ ಇವುಗಳು ಪ್ರಕಟಗೊಂಡಿಲ್ಲ. ಲ್ಯಾಂಪ್ರೆಗಳು, ಕೆಲವು ಹಾವುಮೀನುಗಳು, ಕೆಲವು ಕಿಲ್ಲಿಮೀನುಗಳು, ಚನ್ನ, ಪೈಪ್‌ಮೀನುಗಳು, ಬೆಮ್ಮೋಡ್‌ಗಳು, ಗೋಳ ಮೀನುಗಳು, ಮುಳ್ಳುಹಂದಿ ಮೀನುಗಳಲ್ಲಿ ವಸ್ತಿಕುಹರದ ಈಜುರೆಕ್ಕೆಗಳೇ ಇಲ್ಲ. ಗ್ಲಿಪ್ಟೋಸ್ಟರ್ನಮ್ ಹಾಗೂ ಗೋಬಿಗಳಲ್ಲಿ ಈ ಈಜುರೆಕ್ಕೆಗಳು ಹೀರುವ ದುಂಡಾದ ಬಟ್ಟಲಿನಂತೆ ರೂಪುಗೊಂಡು ಕಲ್ಲು, ಬಂಡೆ ಹಾಗೂ ಇನ್ನಿತರ ಸ್ಥಿರವಸ್ತುಗಳಿಗೆ ದೃಢವಾಗಿ ಅಂಟಿಕೊಂಡಿರಲು ಸಹಕಾರಿಯಾಗಿವೆ.

ಚಪ್ಪಟೆಮೀನುಗಳಲ್ಲಿ ಅಸಮಂಜಸತೆಯು ವಸ್ತಿ ಕುಹರದ ಈಜುರೆಕ್ಕೆಗಳಿಗೂ ವ್ಯಾಪಿಸಿದೆ. ಸ್ಕ್ಯಾಲ್ಡ್ (ಅರ್‌ನೋಗ್ಲಾಸಸ್) ಮೀನಿನಲ್ಲಿ ಎಡಗಡೆಯ ಪಕ್ಕದ ಈಜುರೆಕ್ಕೆಯು ದೊಡ್ಡದಾಗಿದ್ದು ದೇಹದ ಕೆಳಗಿನ ಅಂಚಿನಲ್ಲಿ ಮಡಿಕೆಯಂತೆ ಇರುತ್ತದೆ. ಬಲಗಡೆ ಈಜುರೆಕ್ಕೆಯು ಸಣ್ಣದಾಗಿದ್ದು

ಅಂಚಿನಿಂದ ಸ್ವಲ್ಪ ದೂರದಲ್ಲಿರುತ್ತದೆ. ಆಸ್ಟ್ರೇಲಿಯದ ಚಪ್ಪಟೆ ಮೀನು ರಾಂಬೋಸೋಲಿಯದ ಎಡಗಡೆ ಈಜುರೆಕ್ಕೆಯು ಉದ್ದವಾಗಿದ್ದು ಗುದದ್ವಾರದ ಈಜುರೆಕ್ಕೆಯೊಡನೆ ಸೇರಿಕೊಂಡಿದೆ.

ಶಾರ್ಕ್‌ಗಳು ಹಾಗೂ ರೇಗಳಲ್ಲಿ ವಸ್ತಿ ಕುಹರದ ಈಜುರೆಕ್ಕೆಗಳ ಹಿಂಭಾಗಗಳು ಗಂಡು ಮೀನುಗಳಲ್ಲಿ ಆಲಿಂಗನಾಂಗಗಳಾಗಿ ಮಾರ್ಪಾಟುಹೊಂದಿ ಗರ್ಭಾಧಾನಮಾಡಲು ಸಹಾಯಕಾರಿಯಾಗಿವೆ. ಎಥಿಯೋಸ್ಟೋಮ, ಮೈಕ್ರೊಪಕ್ಕದಲ್ಲಿ ವಸ್ತಿಕುಹರದ ಈಜುರೆಕ್ಕೆಗಳು ಗಂಡುಗಳಲ್ಲಿ ದೊಡ್ಡದಾಗಿದ್ದು, ಗೌಣ ಲೈಂಗಿಕ ಗುಣಲಕ್ಷಣವಾಗಿ ರಚಿತವಾಗಿವೆ.

ಮಧ್ಯಸ್ಥಿತ ಈಜುರೆಕ್ಕೆಗಳು, ಉರುಳಾಟದ ಹಾಗೂ ವಿಚಲನೆಯಂಥ ಉದ್ದದ ಹಾಗೂ ಲಂಬದ ಅಕ್ಷದ ಚಲನೆಗಳನ್ನು ನಿಯಂತ್ರಿಸುತ್ತವೆ. ಬೆನ್ನಿನ ಈಜುರೆಕ್ಕೆ ಹಾಗೂ ಗುದದ್ವಾರದ ಈಜುರೆಕ್ಕೆಗಳು ಚಲನೆಗೆ ಸಹಕಾರಿಯಾದರೂ ಬಾಲದ ಈಜುರೆಕ್ಕೆಯೊಂದೇ ಈಜುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸ್ಥಿರತೆ ಹಾಗೂ ನಿರ್ವಹಣೆಯ ಅಂಗಗಳಾಗಿರುವ ಮಧ್ಯಸ್ಥಿತ ಈಜುರೆಕ್ಕೆಗಳು ಹಡಗಿನ ಅಡಿಗಟ್ಟಿನಂತೆ ವರ್ತಿಸಿ ಮೀನು ನೇರವಾಗಿ ನಿಲ್ಲಲು ನೆರವಾಗುತ್ತವೆ. ಜೊತೆಯಾದ ಈಜುರೆಕ್ಕೆಗಳು ಸಹ ಸ್ಥಿರತೆ ಮತ್ತು ನಿರ್ವಹಣೆಯ ಅಂಗಗಳಾಗಿದ್ದು ಹಡಗಿನ ಅಡಿಗಟ್ಟಿನಂತೆ ವರ್ತಿಸಿ ಮೀನು ಪಕ್ಕಕ್ಕೆ ಹೊರಳುವುದನ್ನು ತಪ್ಪಿಸುತ್ತವೆ. ಎದೆಯ ಈಜುರೆಕ್ಕೆಯು ಚಲನೆಗೆ ಸಹಕಾರಿಯಾದಷ್ಟು ವಸ್ತಿಕುಹರದ ಈಜುರೆಕ್ಕೆಗಳಾಗುವುದಿಲ್ಲ. ಈ ಎರಡು ಈಜುರೆಕ್ಕೆಗಳ ಮುಖ್ಯಕಾರ್ಯವು ಹತ್ತುವುದು, ತಿರುಗುವುದು, ನೀರಿನಲ್ಲಿ ನಿಲ್ಲುವುದು, ಮುಳುಗುವುದು ಅಲ್ಲದೆ ತಪ್ಪಿಸಿಕೊಳ್ಳುವುದು ಮುಂತಾದವು. ಈ ಎಲ್ಲಾ ಕಾರ್ಯಗಳಲ್ಲಿ ಎದೆಯ ಈಜುರೆಕ್ಕೆಗಳು ಪ್ರಮುಖವಾಗಿಯೂ ವಸ್ತಿ ಕುಹರದ ಈಜುರೆಕ್ಕೆಗಳು ಸಹಾಯಕವಾಗಿಯೂ ಕಾರ್ಯನಿರ್ವಹಿಸುತ್ತವೆ.

(ಬಿ.ಎಚ್.ಎಂ.)

**ಈಡೆಂಟೇಟ:** ಸ್ತನಿಗಳ ವರ್ಗಕ್ಕೆ ಸೇರಿದ ಒಂದು ಗಣ. ದಕ್ಷಿಣ ಮತ್ತು ಮಧ್ಯ ಅಮೆರಿಕದ ಸ್ಲಾತ್‌ಗಳು, ಆರ್ಮಡಿಲ್ಲೊ ಮತ್ತು ಪಿಪೀಲಿಕಭಕ್ಷಿ ಈ ಗಣಕ್ಕೆ ಸೇರಿವೆ. ಅನೇಕ ಗುಣಗಳಲ್ಲಿ ಈಡೆಂಟೇಟಗಳು ಆದಿಮ ಯೂಥೀರಿಯಗಳನ್ನು ಹೋಲುತ್ತವೆ. ಹೇಗೆಂದರೆ, ಸ್ಲಾತ್ ಮತ್ತು ಆರ್ಮಡಿಲ್ಲೊಗಳಲ್ಲಿ ಮುಂಭಾಗದ ಬಾಚಿಹಲ್ಲು ಮತ್ತು ಕೋರೆ ಹಲ್ಲುಗಳಿಲ್ಲ. ಹಿಂದಿನ ಹಲ್ಲುಗಳು ವೈವಿಧ್ಯತೆ ಇಲ್ಲದೆ ಒಂದೇ ರೀತಿಯಲ್ಲಿ ಗೂಟಗಳಂತೆ ಸಾಲಾಗಿ ಜೋಡಣೆಗೊಂಡಿವೆ. ಅವಕ್ಕೆ ಎನಾಮಲ್ ಹೊದಿಕೆ ಇಲ್ಲ. ಪಿಪೀಲಿಕಭಕ್ಷಿಗಳಲ್ಲಿ ಹಲ್ಲುಗಳೇ ಇಲ್ಲ. ಸ್ಲಾತ್‌ಗಳನ್ನುಳಿದು ಮಿಕ್ಕ ಈಡೆಂಟೇಟಗಳ ಮೂತಿಯು ಉದ್ದವಾಗಿದ್ದು ಪೂರ್ಣ ಕಪಾಲವು ಕೊಳವೆಯಾಕಾರದಲ್ಲಿದೆ. ಮಿದುಳು ಸಣ್ಣಗಿದೆ. ಈ ಮಿದುಳಿನ ಸೆರಬ್ರಲ್ ಗೋಳಗಳು (ಸೆರಬ್ರಲ್ ಹೆಮಿಸ್ಫಿಯರ್‌ಗಳು) ಬೆಳೆದಿಲ್ಲ. ಘ್ರಾಣೇಂದ್ರಿಯ ಭಾಗ (ಆಲ್ಫಾಕ್ಟರಿ ಲೋಬ್) ದೊಡ್ಡದಾಗಿದೆ. ಲಂಬಾರ್ ಕಶೇರುಮಣಿಗಳ ನಡುಭಾಗ ಒಂದರೊಡನೊಂದು ಅಂಟಿಕೊಳ್ಳುವ ಕ್ರಮ ಎಲ್ಲ ಈಡೆಂಟೇಟಗಳಿಗೂ ಸಾಮಾನ್ಯವಾದ ಲಕ್ಷಣ. ಈ ಗುಣದಿಂದ ಈ ಗುಂಪಿಗೆ ಕ್ಸಿನಾರ್ತ್ರ ಎಂಬ ಹೆಸರು ಬಂದಿದೆ. ಕೋರಕಾಯಿಡ್ ಮೂಳೆ ಅಕ್ರೊಮಿಯಾನ್‌ನೊಡನೆ ಕೂಡಿಕೊಂಡು ಕೊರಕೊಸ್ಕಾಪುಲಾರ್ ರಂಧ್ರವನ್ನು ಅಳವಡಿಸಿಕೊಂಡಿದೆ ಮತ್ತು ಇಸ್ಕಿಯಂ ಹಾಗೂ ಬಲಭಾಗದ ಕಶೇರುಮಣಿಗಳು ಕೂಡಿಕೊಂಡಿವೆ. ಕಾಲುಗಳಲ್ಲಿ ಪ್ರಧಾನವಾದ ಕೊಂಡಿಯುಗುರುಗಳಿವೆ. ಈ ಕೊಂಡಿಯುಗುರುಗಳು ಭಿನ್ನವಾಗಿ ಉಪಯೋಗಿಸಲು ಅನುಕೂಲವಾಗಿವೆ. ಇವುಗಳನ್ನು ಈಡೆಂಟೇಟಗಳು ನೆಲತೋಡಲು, ನಡೆಯಲು, ಮರಗಳಿಂದ ಜೋತು ಬೀಳಲು ಉಪಯೋಗಿಸುತ್ತವೆ.

ಈ ಗಣದಲ್ಲಿ ಮೂರು ಕುಟುಂಬಗಳಿವೆ;

1) ಬ್ರಾಡಿಪೊಡಿಡೆ: ಇದು ಸ್ಲಾತ್‌ಗಳನ್ನೊಳಗೊಂಡಿದೆ. (ಉದಾ: ಬ್ರಾಡಿಪಸ್, ಕೋಲೋಪಸ್)

2) ಡಾಸಿಪೊಡಿಡೆ: ಇದಕ್ಕೆ ಆರ್ಮಡಿಲ್ಲೊಗಳು ಸೇರಿವೆ. (ಉದಾ: ಡಾಸಿಪಸ್, ಪ್ರಯೋಡಾನ್)

3) ಮಿರ್ಮೆಕೊಫೇಜಿಡೆ: ಪಿಪೀಲಿಕ ಭಕ್ಷಿಗಳು ಈ ಕುಟುಂಬಕ್ಕೆ ಸೇರಿವೆ. (ಉದಾ: ಟಮಂಡುವ, ಮೆರ್ಮಕೋಫೇಗ)

ಸ್ಲಾತ್‌ಗಳಿಗೆ ಮೃದು ಚರ್ಮವಿದೆ. ಇವು ಚತುಷ್ಪಾದಿಗಳು ಮತ್ತು ಪೂರ್ಣವಾಗಿ ವೃಕ್ಷ ಜೀವನಕ್ಕೆ ಹೊಂದಿಕೊಂಡಿವೆ. ಕೈಕಾಲುಗಳು ಉದ್ದವಾಗಿದ್ದು ಪ್ರಮುಖವಾದ ಕೊಂಡಿಯುಗುರುಗಳಿವೆ. ಅವುಗಳಿಂದ ಮರದ ರೆಂಬೆಗಳಿಂದ ಜೋತು ಬೀಳುತ್ತವೆ. ಕ್ಲಾವಿಕಲ್ ಮೂಳೆಯು ಕೊರಕಾಯಿಡ್ ಮೂಳೆಯೊಂದಿಗೆ ಕೀಲಿಕೊಂಡಿರುವುದು ಇತರ ಸ್ತನಿಗಳಲ್ಲಿಲ್ಲದ ಒಂದು ಅಪರೂಪದ ಗುಣ. ಸ್ಲಾತ್‌ಗಳು ಎಲೆಗಳನ್ನು ತಿಂದು ಜೀವಿಸುತ್ತವೆ.

ಆರ್ಮಡಿಲ್ಲೊಗಳು ನಿಶಾಚರಿಗಳು ಮತ್ತು ಬಿಲವಾಸಿಗಳು. ಇವುಗಳ ಚರ್ಮದ ಮೇಲೆ ದೇಹವನ್ನು ರಕ್ಷಿಸುವ ಮೂಳೆಯ ತಟ್ಟೆಗಳಿವೆ. ಈ ತಟ್ಟೆಗಳು ಸಾಮಾನ್ಯವಾಗಿ ದೇಹದ ಸುತ್ತಲೂ ಉಂಗುರಾಕಾರದಲ್ಲಿ ಜೋಡಣೆಗೊಂಡಿವೆ. ಈ ಪ್ರಾಣಿಯ ಕೆಳಭಾಗವು ರೋಮಗಳಿಂದ ಕೂಡಿ ಮೆತ್ತಗಿದೆ. ಆರ್ಮಡಿಲ್ಲೊಗಳು ಮಧ್ಯ ಹಾಗೂ ದಕ್ಷಿಣ ಅಮೆರಿಕದ ಉಷ್ಣವಲಯದ ಕೀಟಾಹಾರಿಗಳು. ಇವು ಸರ್ವಭಕ್ಷಕ ಜಾಡಮಾಲಿಗಳು.

ಪಿಪೀಲಿಕ ಭಕ್ಷಿಗಳಿಗೆ ಉದ್ದವಾದ ಹಲ್ಲಿಲ್ಲದ ಮೂತಿ ಇದೆ. ಪ್ರಸಿದ್ಧ ಪಿಪೀಲಿಕಭಕ್ಷಿ 1.8 ಮೀ. ಉದ್ದವಾದ ಪ್ರಾಣಿ. ದೇಹದ ಮೇಲೆ ಕೂದಲಿನ ಹೊದಿಕೆ ಇದೆ. ಬೊಂತೆಯಂತಹ ಬಾಲ; ಭುಜದ ಬಳಿ ಕಂದು ಅಂಚಿರುವ ಕಪ್ಪು ಪಟ್ಟೆ ಇದೆ. ಇವುಗಳಿಗೆ ಇರುವೆಗಳನ್ನು ಸಂಗ್ರಹಿಸಲು ಅನುಕೂಲವಾಗುವಂತಹ ಉದ್ದವಾಗಿರುವ ತೆಳುನಾಲಿಗೆ ಮತ್ತು ಬೃಹದಾಕಾರದ ಸಬ್‌ಮ್ಯಾಕ್ಸಿಲರಿ ಲಾಲಾರಸ ಗ್ರಂಥಿಗಳಿವೆ. ಮುಂಗಾಲಿನ ಕೊಂಡಿಯುಗುರುಗಳು ತುಂಬಾ ದೊಡ್ಡವು. ಮರವಾಸಿಗಳಾದ ಟಮಂಡುವ ಮತ್ತು ಸೈಕ್ಲಾಪ್ಸ್‌ಗಳ ಬಾಲವು ಸುತ್ತಿಕೊಳ್ಳಬಲ್ಲದು. ಸೈಕ್ಲಾಪ್ಸ್‌ನ ಹಿಂಗಾಲುಗಳು ಮರಹತ್ತುವುದಕ್ಕೆ ಹೊಂದಿಕೊಂಡಿವೆ. ನೋಡಿ: ಇರುವೆ ಭಕ್ಷಕ.

(ಎಸ್.ಆರ್.ಆರ್.)

**ಈಮ್ಯೂ ಹಕ್ಕಿ:** ಕ್ಯಾಸ್ಯುಯೆರಿಫಾರ್ಮಿಸ್ ಗಣದ ಡ್ರೊಮಿಸಿಯಿಡೆ ಕುಟುಂಬದ ಡ್ರೋಮೇಯಸ್ ಜಾತಿಯ ಸರಿಸುಮಾರಾಗಿ ಉಷ್ಟ್ರಪಕ್ಷಿಯನ್ನು ಹೋಲುವ ಆಸ್ಟ್ರೇಲಿಯಾದ ಹಾರಲಾರದ ಪಕ್ಷಿ. ಉಷ್ಟ್ರಪಕ್ಷಿಗೂ ಇದಕ್ಕೂ ಸಂಬಂಧವೇನೂ ಇಲ್ಲ. ಅಲ್ಪ ದೂರಗಳನ್ನು ಗಂಟೆಗೆ 50–56 ಕಿಮೀ ವೇಗದಲ್ಲಿ ಧಾವಿಸಬಲ್ಲದು; 1.5–1.8 ಮೀ ಎತ್ತರದ ಅಡಚಣೆಗಳನ್ನು ನೆಗೆದು ದಾಟಬಲ್ಲದು. ಈಜುವ ಸಾಮರ್ಥ್ಯವೂ ಇದೆ. ನಶಿಸಿ ಹೋದ ರೆಕ್ಕೆಗಳು, ನೀಳ ಮತ್ತು ಎರಡು ಸೀಳಾದ ಮೈಗರಿಗಳು, ಉರುಟಾದ ತಲೆ, ಉರುಟು ಕೊನೆಯ ಕಿರಿಯ ಕೊಕ್ಕು, ಒಂದೊಂದು ಕಾಲಿನಲ್ಲೂ ಉಗುರುಗಳಿಂದ ಕೂಡಿದ ಮೂರು ಬೆರಳುಗಳು, ಉದ್ದ ಮತ್ತು ಬಲಿಷ್ಠವಾದ ಕಾಲುಗಳು—ಇವು ಈಮ್ಯೂವಿನ ವೈಶಿಷ್ಟ್ಯಗಳು. ಪಕ್ಷಿಯ ಗಾತ್ರಕ್ಕೆ ಹೋಲಿಸಿದಾಗ ಅದರ ಕಾಲುಗಳು ಚಿಕ್ಕವು. ವಾಸ ಹೊರವಲಯದಲ್ಲಿ. ಆಹಾರ ಹಣ್ಣು, ಹಂಪಲು, ಚಿಗುರು, ಬೇರು, ಗೆಡ್ಡೆ ಮುಂತಾದುವು. ಸಂಚಾರ ಚಿಕ್ಕ ಚಿಕ್ಕ ಗುಂಪಿನಲ್ಲಿ. ಹೆಣ್ಣು ಹಕ್ಕಿ ನೆಲದ ತಗ್ಗು ಮತ್ತು ಗುಪ್ತ ಪ್ರದೇಶಗಳಲ್ಲಿ



ಈಮ್ಯೂ

ಮೊಟ್ಟೆಯಿಟ್ಟು ರಕ್ಷಿಸುತ್ತದೆ. ಒಂದು ಸಲಕ್ಕೆ 12ರ ವರೆಗೆ ನೀಲಿ–ಹಸುರು ಬಣ್ಣದ ಮೊಟ್ಟೆ ಇಡುವುದು. ಮೊದಲ ಹಂತದಲ್ಲಿ ಗಂಡು ಹಕ್ಕಿ ಮೊಟ್ಟೆಗಳಿಗೆ ಕಾವು ಕೊಡುವುದು. ಎರಡನೆಯ ಹಂತದಲ್ಲಿ ಹೆಣ್ಣು ಹಕ್ಕಿ ಈ ಹೊಣೆ ಹೊರುತ್ತದೆ. ಕಾವಿನ ಅವಧಿ ಎರಡು ತಿಂಗಳ ಕಾಲ. ಸಾಮಾನ್ಯವಾಗಿ ಗಂಡು ಏಕಪತ್ನೀವ್ರತಸ್ಥ. ಗರಿಗಳು ನೋಡಲು ಅಂದವಾಗಿವೆಯಾಗಿ ಅವನ್ನು ಪಾಶ್ಚಾತ್ಯರು ಅಲಂಕರಣ ಸಾಮಗ್ರಿಯಾಗಿ ಉಪಯೋಗಿಸುತ್ತಾರೆ. ಈಗಲೂ ಗರಿಗಳಿಗಾಗಿ ಹೆಚ್ಚಿನ ಬೇಡಿಕೆ ಇದೆ. ಇದರ ಮಾಂಸ ಮತ್ತು ಕೊಬ್ಬು ಆಹಾರ ಪದಾರ್ಥಗಳೂ ಹೌದು.

(ಜಿ.ಎಂ.ಬಿ.)

**ಈಯಲು:** ಗರ್ಭಕ್ಕೆ ಅವಧಿ ತುಂಬಿದೊಡನೆ, ಮರಿಯನ್ನೂ ಅದರೊಂದಿಗೆ ಇರುವ ಜರಾಯು (ಪ್ಲಸೆಂಟ) ಮತ್ತು ಭ್ರೂಣಚೀಲವನ್ನೂ (ಫೀಟಲ್ ಎನ್ವಲಪ್) ಜೀವಂತವಾಗಿ ಮತ್ತು ಕ್ರಮಾಗತವಾಗಿ ಹೊರಗೆಡಹುವ ಕ್ರಿಯೆ; ಮರಿ ಹಾಕುವುದೆಂದೂ ಹೇಳುವುದಿದೆ (ಪಾರ್ಚುರಿಷನ್). ಈಲು ಎನ್ನುವುದು ರೂಢಿಯಲ್ಲಿರುವ ಪದ. ಗರ್ಭಕ್ಕೆ

ಅವಧಿ ತುಂಬುವ ಮುನ್ನ ನಡೆವ ಸಜೀವ ಈಯುವಿಕೆಗೆ ಅವಧಿಪೂರ್ವ (ಅಕಾಲ) ಈಯಲು (ಪ್ರಿಮೆಚೂರ್ ಪಾರ್ಚುರಿಷನ್) ಹಾಗು ಅವಧಿ ಮೀರಿದ ಕ್ರಿಯೆಗೆ ಅವಧಿ ದಾಟಿದ ಈಯಲು ಎಂದು ಕರೆಯಲಾಗಿದೆ. ಅವಧಿಪೂರ್ವ ಜನನ ಪಡೆದ ದನದ ಕರುಗಳಲ್ಲಿ ಕಡಿಯುವ (ಬಾಚಿ) ಹಲ್ಲುಗಳಿರುವುದಿಲ್ಲ; ಮೈಮೇಲೆ ಕೂದಲಿರುವುದಿಲ್ಲ. ಗರ್ಭಕೋಶದ ಶಿಥಿಲತೆ ಇರುವ ಅಶಕ್ತ ಪ್ರಾಣಿ ಗರ್ಭಾವಧಿ ದಾಟಿದ ಮೇಲೆ ಮರಿಹಾಕುತ್ತದೆ.

ಸಾಮಾನ್ಯವಾಗಿ ಸ್ವಾಭಾವಿಕ ಈಯಲು ಕೆಲವು ದೈಹಿಕ ಬದಲಾವಣೆಗಳ ಸರಣಿಗಳನ್ನೊಳಗೊಂಡಿದೆ 1. ತಾಯಿಯಲ್ಲಿ ಪ್ರಸವದ್ವಾರ ವಿಕಾಸಗೊಳ್ಳುತ್ತದೆ. 2. ಗರ್ಭದಲ್ಲಿರುವ ಭ್ರೂಣ ಪ್ರಸವಕ್ಕೆ ಅನುಕೂಲಾಸನವನ್ನು ಕ್ರಮಾಗತವಾಗಿ ಧರಿಸಿ ಗರ್ಭ ದ್ವಾರವನ್ನು ಸೇರುತ್ತದೆ. ಆಗ ಗರ್ಭಕೋಶ ಭ್ರೂಣವನ್ನು ಚಲನವಿಹಿತಗೊಳಿಸಲು ಅದನ್ನು ಬಿಗಿಹಿಡಿದು ಪ್ರಸವ ಕಾಲವನ್ನು ಕಾಯುತ್ತದೆ. 3. ಈ ಕಾರ್ಯ ಸರಣಿಯ ಕೊನೆಯ ಹಂತವಾಗಿ ಜೀವಂತ ಮರಿಯು ಪ್ಲಸೆಂಟ ಮತ್ತು ಭ್ರೂಣಚೀಲಗಳೊಡನೆ ಹೊರಬರುತ್ತದೆ.

ಈಯುವುದರ ಪೂರ್ವಭಾವಿಯಾಗಿ ತಾಯಿಯ ಅಂಗಗಳಲ್ಲಿ ಹಲವು ಸೂಚನೆಗಳು ಕಂಡುಬರುತ್ತವೆ. ಗರ್ಭಧರಿಸಿರುವ ಪ್ರಾಣಿಯ ಕೆಚ್ಚಲು ತನ್ನ ಮೃದುಸ್ಥಿತಿಯನ್ನು ಕಳೆದುಕೊಂಡು ಗಟ್ಟಿಯಾಗುತ್ತ ವಿಕಾಸಗೊಳ್ಳುತ್ತ ಬರುವುದು. ಕೆಚ್ಚಲಿನ ಸ್ಪರ್ಶಜ್ಞಾನ ಅಧಿಕಗೊಳ್ಳುವುದು. ಆದರೆ ಸುತ್ತುಮುತ್ತಲಿನ ವಲಯ ಕೊನೆಯ ದಿವಸಗಳಲ್ಲಿ ಬಾತುಕೊಂಡಂತೆ ಕಾಣುವುದು. ಕೆಚ್ಚಲಿನಲ್ಲಿ ಸೊನೆ ಹಾಲು ಕೂಡುವುದು. ಯೋನಿದ್ವಾರ ಅಥವಾ ಭಗೋಷ್ಠಗಳು ಊದಿಕೊಂಡು ಮುಂದೆ ವಿಕಾಸಗೊಳ್ಳುವುವು. ಭಗೋಷ್ಠಗಳು ಕಪ್ಪು ವರ್ಣ ತಾಳುವುವು. ಯೋನಿದ್ವಾರ ಅರೆ ತೆರೆದಂತೆ ಕಾಣುತ್ತದೆ. ಕರು ಹೊತ್ತ ದನ, ಆಡು, ಕುರಿಗಳ ಯೋನಿದ್ವಾರದಿಂದ ಬಿಳಿಹಳದಿ ವರ್ಣದ ಶ್ಲೇಷ್ಮ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಹೊರಸೂಸುತ್ತದೆ. ನಾಯಿಗಳಲ್ಲಿ ಯೋನಿವಿಸರ್ಜಿತ ಶ್ಲೇಷ್ಮ ಹೆಚ್ಚಾಗಿರುವುದು. ಕುದುರೆಗಳಲ್ಲಿ ಇದು ಬಲು ಶುಷ್ಕವಾಗಿದ್ದು ಯೋನಿಯೊಳಗೇ ಇರುತ್ತದೆ. ಕರು ಹೊತ್ತ ದನಗಳಲ್ಲಿ ಬಾಲ ಯೋನಿದ್ವಾರದ ಒಂದು ಪಕ್ಕಕ್ಕಿರುತ್ತದೆ.

ಪ್ರಸವಕಾಲ ಸನ್ನಿಹಿತವಾದಂತೆ ದನಗಳ ಬಾಲಮೂಲದ ಇಕ್ಕೆಡೆಗಳಲ್ಲೂ ಕ್ರಮವಾಗಿ ಗುಳಿ ಬೀಳುತ್ತದೆ. ಪ್ರಸವಕಾಲ ಸಮೀಪಿಸಿದಂತೆ ಪ್ರಾಣಿ ಬಾಲವನ್ನು ಎತ್ತಿ ಹಿಡಿಯುವುದು. ಈ ಚಿಹ್ನೆಗಳು ದನಗಳಲ್ಲಿ ಗಮನಾರ್ಹವಾಗಿಯೂ ಕುದುರೆಗಳಲ್ಲಿ ಅಸ್ಪಷ್ಟವಾಗಿಯೂ ಕಂಡುಬರುತ್ತವೆ. ಕೊನೆಯ ಹಂತದಲ್ಲಿ ಪ್ರಾಣಿಗಳು ಮಂಕಾಗುತ್ತವೆ. ಮರಿ ಹಾಕುವಾಗ ಭಯಪೂರಿತವಾಗಿಯೂ ಇರುವುದುಂಟು. ಈ ದಿವಸಗಳಲ್ಲಿ ಪ್ರಾಣಿಗಳು ಪ್ರಶಾಂತ ಮತ್ತು ಏಕಾಂತ ಸ್ಥಳಗಳನ್ನರಸುತ್ತ ಆಗಾಗ ಸ್ಥಳ ಬದಲಾವಣೆ ಮಾಡುತ್ತಿರುತ್ತವೆ. ಪ್ರಥಮ ಪ್ರಸವದಲ್ಲಿ ಹೊಟ್ಟೆನೋವು ಹೆಚ್ಚಾಗಿರುವುದು. ಆದ್ದರಿಂದ ಉದ್ದೇಶರಹಿತವಾಗಿ ಆಗಾಗ ಮಲಗಿ ಏಳುತ್ತವೆ. ಬೆನ್ನು ಮುರಿಯುತ್ತವೆ. ಹೊಟ್ಟೆಯ ಕಡೆಗೆ ಭಯಪೂರಿತವಾಗಿ ನೋಡುತ್ತ ಬಾಲವನ್ನು ಎತ್ತಿ ಹಿಡಿದಿರುತ್ತವೆ. ಪ್ರಸವಕ್ಕೆ ಸಾಧಾರಣ 3 ಅಥವಾ 4 ಗಂಟೆಗಳ ಮುಂಚಿತವಾಗಿ ಕುದುರೆಗಳಲ್ಲಿ ಹೆಗಲ ಸುತ್ತಲೂ ಧಾರಾಳವಾಗಿ ಬೆವರು ಸುರಿಯುವುದನ್ನು ನೋಡಬಹುದು. ನಾಯಿ, ಬೆಕ್ಕು, ಹಂದಿ ಮತ್ತು ಮೊಲ ಇತ್ಯಾದಿ ಪ್ರಾಣಿಗಳಲ್ಲಿ ಮರಿಹಾಕುವ ಸಮಯಬಂದಾಗ ಏಕಾಂತ ಸ್ಥಳಗಳಲ್ಲಿ ಗೂಡುಕಟ್ಟುವ ಕಾತರ ಕಂಡುಬರುತ್ತದೆ. ಅಂದರೆ ಬೈಹುಲ್ಲು ಮತ್ತು ಇತರ ಮೃದುವಾದ ವಸ್ತುಗಳನ್ನೆಲ್ಲ ಕೂಡಿಸಿ ಗೂಡುಮಾಡುತ್ತವೆ. ತುಂಬುಗರ್ಭದ ನಾಯಿಗಳಲ್ಲೂ ಕುದುರೆಗಳಲ್ಲೂ ದೇಹದ ಉಷ್ಣತೆಯ ಇಳಿಮುಖ ($1^0$-$1½^0$ಸೆ.) ಶೀಘ್ರ ಪ್ರಸವದ ಸೂಚನೆ.

ಈಯಲನ್ನು ನೈಸರ್ಗಿಕವಾಗಿರಿಸಲು ಭ್ರೂಣ, ಪ್ರಸವಕಾಲಕ್ಕೆ ಮುಂಚಿತವಾಗಿ ಗರ್ಭವಿಸರ್ಜನೆಗೆ ಅನುಕೂಲವಾದ ಆಸನ ಪಡೆಯುತ್ತದೆ. ಈ ರೀತಿಯ ಪರಿವರ್ತನೆಗೆ ಗರ್ಭಕೋಶದ ಮತ್ತು ಭ್ರೂಣದ ಚಲನವಲನಗಳು ಸಹಾಯಕವಾಗಿದೆ. ಆದ್ದರಿಂದ ಮರಿಹೊತ್ತ ಪ್ರಾಣಿಗಳ ಅಸ್ವಾಭಾವಿಕ ಮತ್ತು ಕಟು ತೀಕ್ಷ್ಣ ಚಲನವಲನಗಳನ್ನೂ ಮಿತಿಮೀರಿದ ಆಹಾರ ಸೇವನೆಯನ್ನೂ ತಡೆಗಟ್ಟಿ ಗರ್ಭಕೋಶದಲ್ಲಿನ ಭ್ರೂಣದ ಸ್ವಾಭಾವಿಕ ಚಲನವಲನಗಳಿಗೆ ಅನುಕೂಲ ಮಾಡಿಕೊಡಬೇಕು. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಭ್ರೂಣ ಅನೈಸರ್ಗಿಕ ಆಸನವನ್ನು ಕಳೆದು ಪ್ರಸವಕ್ಕೆ ಅಡ್ಡಿಯಾಗುವುದು.

ಪ್ರಾಣಿಗಳು ಸ್ವಾಭಾವಿಕವಾಗಿ ಮರಿಹಾಕುವಾಗ ಪಡೆಯುವ ಕ್ರಿಯಾಸರಣಿಗಳು ಹೀಗಿವೆ: ಪ್ರಸವ ವೇದನೆಯ ಪ್ರಾರಂಭ. ಎಂದರೆ ಗರ್ಭಕೋಶದ ಸಂಕೋಚನ ಸರಣಿಯ ಆರಂಭ ಮತ್ತು ಗರ್ಭಕೋಶ ದ್ವಾರದ ತೆರೆಯುವಿಕೆ; ಚೆನ್ನಾಗಿ ವೃದ್ಧಿಯಾದ ಸಜೀವ ಮರಿಯ ನೈಸರ್ಗಿಕ ವಿಸರ್ಜನೆ; ಗರ್ಭಕೋಶದಲ್ಲಿರುವ ಜರಾಯು ಮತ್ತು ಕವಚಗಳ ಸಹಜ ವಿಸರ್ಜನೆ; ಪ್ರಸವಾನಂತರದ ಬಾಣಂತಿಯ ದೇಹದಲ್ಲಿನ ನೈಸರ್ಗಿಕ ದೈಹಿಕ ಪರಿವರ್ತನೆಗಳು. ಪ್ರಸವ ವೇದನೆಯೊಂದಿಗೆ ಮರಿ ತೆರೆದ ಗರ್ಭಕೋಶ ದ್ವಾರದ ಮೂಲಕ ಹೊರಗೆ ಬರುವುದು. ಇದಕ್ಕೆ ಬಲವಾದ ಗರ್ಭಕೋಶದ ಸ್ನಾಯುಗಳ ಸಂಕೋಚನ ಅಗತ್ಯ. ಆದ್ದರಿಂದ ಈ ಕಾರ್ಯಸರಣಿ ವೇದನೆಗೆ ಎಡೆಮಾಡುತ್ತದೆ. ಗರ್ಭಕೋಶದ ದ್ವಾರದಿಂದ ಮರಿ ಹೊರಬಂದ ಅನಂತರದ ಪ್ರಸವ ಸುಲಭವಾಗುತ್ತದೆ. ಅಂದರೆ ಯೋನಿ ಮುಂಚಿತವಾಗಿಯೇ ವಿಕಾಸಗೊಂಡಿರುತ್ತದೆ. ಅಲ್ಲದೆ ಗರ್ಭಕೋಶದಿಂದ ಮರಿಯ ವಿಸರ್ಜನೆಯ ಮೊದಲೇ ಭ್ರೂಣ ಕವಚದಲ್ಲಿದ್ದ ಅಮ್ನಿಯೋಟಿಕ್ ಮತ್ತು ಅಲಂಟೋಯಿಕ್ ದ್ರವಪಾತದಿಂದ ಯೋನಿದ್ವಾರ ನುಣುಪಾಗಿ ಸರಾಗವಾಗಿ ಮರಿ ಹೊರಬರಲು ನೆರವಾಗುತ್ತದೆ.

ಈಯುವಿಕೆಗೆ ಬೇಕಾದ ಕಾಲ ವಿವಿಧ ಪ್ರಾಣಿಗಳಲ್ಲಿ ವಿವಿಧ. ಕುದುರೆಗಳಲ್ಲಿ ಪ್ರಸವಕ್ಕೆ 15–20 ಮಿನಿಟುಗಳು ಬೇಕು. ದನಗಳಲ್ಲಿ ಅದರಲ್ಲೂ ಪ್ರಥಮ ಪ್ರಸವಕ್ಕೆ, ದೀರ್ಘಕಾಲ (1/2–3ಗಂಟೆ) ಹಿಡಿಯುತ್ತದೆ. ಕುರಿಗಳಲ್ಲಿ ಪ್ರಸವಕಾಲ ಸ್ವಲ್ಪ ಕಡಿಮೆ. ಮರಿಗಳು 10–15 ಮಿನಿಟುಗಳ ಅಂತರದಲ್ಲಿ ಹೊರ ಬರುತ್ತವೆ. ಹಂದಿಗಳಲ್ಲೂ, ನಾಯಿ, ಬೆಕ್ಕುಗಳಲ್ಲೂ ಪ್ರಸವಕಾಲ ಬಲು ದೀರ್ಘ (2-8 ಗಂಟೆ) ಅಲ್ಲದೆ ಒಂದು ಮರಿಯನ್ನು ಹೆತ್ತು ಸಾಧಾರಣ 10 ಮಿನಿಟಿನಿಂದ 30 ಮಿನಿಟುಗಳ ಅಂತರದಲ್ಲಿ ಇನ್ನೊಂದು ಮರಿಯನ್ನು ಹೆರುತ್ತದೆ.

ಸಣ್ಣ ಪ್ರಾಣಿಗಳು ಮಲಗಿಕೊಂಡೇ ಮರಿಯನ್ನು ಈದರೆ ದೊಡ್ಡವು ಅಂದರೆ ದನ ಮತ್ತು ಕುದುರೆಗಳು ಮಲಗಿಕೊಂಡು ಅಥವಾ ನಿಂತುಕೊಂಡು ಮರಿ ಹಾಕುತ್ತವೆ. ಕುದುರೆಗಳು ಈಯುವ ಕಾಲ ಸಾಮಾನ್ಯವಾಗಿ ರಾತ್ರಿ.

ಹೊಕ್ಕಳು ಬಳ್ಳಿ (ಅಂಬಿಲಿಕಲ್ ಕಾರ್ಡ್) : ದನದ ಕರುವಿನ ಹೊಕ್ಕಳು ಬಳ್ಳಿ ಗಿಡ್ಡವಾಗಿದ್ದು ಕರುವಿನ ವಿಸರ್ಜನೆಯೊಂದಿಗೆ ಕಡಿದು ಹೋಗುತ್ತದೆ. ಕುದುರೆಗಳಲ್ಲಿ ಇದು ಉದ್ದವಾಗಿದ್ದು ತಾನಾಗಿ ಕಡಿದು ಹೋಗುವುದಿಲ್ಲ. ಅನಂತರ ಕಡಿದುಹಾಕಬೇಕಾಗುತ್ತದೆ. ಹಂದಿ, ನಾಯಿ, ಬೆಕ್ಕುಗಳು ಪ್ರಸವಾನಂತರ ತಾವೇ ಕಡಿದುಹಾಕುತ್ತವೆ.

ಜರಾಯುವಿನ ವಿಸರ್ಜನೆಗೆ ಬೇಕಾದ ಕಾಲದ ಪ್ರಮಾಣದಲ್ಲೂ ವ್ಯತ್ಯಾಸವುಂಟು. ಕುದುರೆಗಳಲ್ಲಿ ಪ್ರಸವಾನಂತರ ಸಾಧಾರಣ ಅರ್ಧ ಗಂಟೆಯಲ್ಲಿ ಸೆತ್ತೆ (ಜರಾಯು) ನೈಸರ್ಗಿಕವಾಗಿ ಹೊರಬರುತ್ತದೆ. ದನಗಳಲ್ಲಿ ಇದರ ವಿಸರ್ಜನೆಗೆ ಸಾಕಷ್ಟು ಕಾಲ ಬೇಕು-ಇದು 2-8 ಗಂಟೆಗಳಷ್ಟು ಇರಬಹುದು. ವಿಸರ್ಜನೆಯ ಕಾಲ ಮೀರಿದಲ್ಲಿ ವೈದ್ಯಸಹಾಯ ಅಗತ್ಯ. ಒಂದೇ ಗರ್ಭದಲ್ಲಿ ಅನೇಕ ಮರಿಗಳನ್ನು ಈಯುವ ಪ್ರಾಣಿಗಳಲ್ಲಿ ಎರಡನೆಯ ಮರಿಯ ಪ್ರಸವದ ಮೊದಲು ಒಂದನೆಯ ಮರಿಯ ಜರಾಯುವಿನ ವಿಸರ್ಜನೆಯಾಗುತ್ತದೆ. ಗರ್ಭಕೋಶದಲ್ಲಿ ಜರಾಯು ಉಳಿದಲ್ಲಿ ಅದು ಕೊನೆಯ ಮರಿಗೆ ಸಂಬಂಧಪಟ್ಟದ್ದು. ಕುದುರೆ ಜಾತಿ ವಿನಾ ಎಲ್ಲ ಜಾತಿಯ ಪ್ರಾಣಿಗಳಲ್ಲೂ ಪ್ರಸವಾನಂತರ ಜರಾಯುವನ್ನು ತಿನ್ನುವ ಹಂಬಲವಿದೆ. ಅದನ್ನು ತಿಂದರೆ ಪ್ರಾಣಿಗಳಲ್ಲಿ ಅಜೀರ್ಣ ಇತ್ಯಾದಿ ತೊಡಕುಗಳು ಬಂದು ಹಾಲು ಕಡಿಮೆಯಾಗುತ್ತದೆ. ಆದ್ದರಿಂದ ಆ ಪ್ರಾಣಿಗೆ ಭೇದಿಗೋ ಜೀರ್ಣಕ್ಕೋ ಔಷಧಿಯನ್ನು ಕೊಡಬೇಕಾಗುವುದು.

ಪ್ರಸವಾನಂತರ ಸಾಧಾರಣ ಎರಡು ವಾರಗಳ ಕಾಲದಲ್ಲಿ ಗರ್ಭಕೋಶ ತನ್ನ ಮೊದಲಿನ ಗಾತ್ರಕ್ಕೆ ಮುದುಡಿಕೊಳ್ಳುವುದು. ಅಂದರೆ ಪ್ರಸವಾನಂತರ 4ನೆಯ ದಿವಸ ಮರಿ ತುಂಬಿದ ಗರ್ಭಕೋಶದ ಸಮ ಅರ್ಧಕ್ಕಿಳಿಯುವುದು. 8ನೆಯ ದಿವಸ ಅದರ 3/4 ಗಾತ್ರಕ್ಕಿಳಿಯುವುದು ಮತ್ತು 15ನೆಯ ದಿವಸ ಗರ್ಭಧಾರಣಾ ಕಾಲದ ಮೊದಲಿನ ಗಾತ್ರಕ್ಕೆ ಇಳಿಯುವುದು. ಆದ್ದರಿಂದ 4ನೆಯ ದಿವಸದವರೆಗೆ ಪ್ರಾಣಿಗಳ ಗರ್ಭಕೋಶ ಹೊರಗೆ ಜಾರಿ ಬರುವ ಸನ್ನಿವೇಶಗಳಿವೆ. ಅದಕ್ಕಾಗಿ ಪ್ರಾಣಿಗಳ ಹಿಂಭಾಗವನ್ನು ಏರಿಕೆಯಲ್ಲಿರುವಂತೆ ಮಾಡುವುದು ಉತ್ತಮ. ಸಾಧಾರಣ 3 ರಿಂದ 4 ವಾರಗಳ ಕಾಲದಲ್ಲಿ ಗರ್ಭಕೋಶ ಸಂಪೂರ್ಣವಾಗಿ ಸ್ವಾಭಾವಿಕಸ್ಥಿತಿಗೆ ಪರಿವರ್ತನೆ ಹೊಂದುವುದು. ಗರ್ಭಕೋಶದ ದ್ವಾರ ಪ್ರಸವಾನಂತರ 24 ಗಂಟೆಗಳಲ್ಲಿ ಮುಚ್ಚಿಕೊಳ್ಳುವುದು. ಆದರೆ ಗರ್ಭಕೋಶದಿಂದ ಶ್ಲೇಷ್ಮ ವಿಸರ್ಜನೆ ಇರುವಷ್ಟು ಸಮಯ ಅದರ ದ್ವಾರ ಒಂದರಿಂದ ಎರಡು ಸೆಂಮೀ.ಗಳಷ್ಟು ತೆರೆದಿರುತ್ತದೆ. ಗರ್ಭಕೋಶದಿಂದ ವಿಸರ್ಜನೆಯಾಗುವ ಶ್ಲೇಷ್ಮ ಗುಲಾಬಿ ಬಣ್ಣದ್ದು. ಆದರೆ ಅದರೊಡನೆ ಗರ್ಭಕೋಶದಲ್ಲಿ ಉಳಿದ ಸೆತ್ತೆಯ ಕಸಗಳಿರಬಹುದು. ನಾಯಿಗಳಲ್ಲಿ ಈ ಶ್ಲೇಷ್ಮ ಬಹಳ ಹೆಚ್ಚಾಗಿಯೂ ರಕ್ತಮಿಶ್ರಿತವಾಗಿಯೂ ಇದೆ. ಇದರ ವಿಸರ್ಜನೆ 15 ದಿವಸಗಳವರೆಗೂ ಇರಬಹುದು. ಆದರೆ ಪ್ರಸವಾನಂತರ ವಿಸರ್ಜನೆಯಾಗುವ ಶ್ಲೇಷ್ಮ ರಕ್ತಪೂರಿತವಾಗಿಯೂ ಕಪ್ಪಾಗಿಯೂ ಬಹಳ ದುರ್ವಾಸನೆಯಿಂದ ಕೂಡಿದ್ದಾಗಿಯೂ ಇದ್ದರೆ ಅದು ಗರ್ಭಕೋಶದ ರೋಗವನ್ನು ಸೂಚಿಸುತ್ತದೆ. ಪ್ರಸವಾನಂತರ ಬಾಣಂತಿ ಮತ್ತು ಮರಿಯ ಆರೈಕೆಯ ಕಡೆ ಎಚ್ಚರ ಅಗತ್ಯ. ಬಾಣಂತಿಯನ್ನು ಬೆಚ್ಚನೆಯ ಒಣಹುಲ್ಲು ಹರಡಿದ ಸ್ಥಳದಲ್ಲಿ ಚಳಿಗಾಳಿ ಬೀಸದಂತೆ ಅಡ್ಡಿಮಾಡಿ ಇರಿಸಬೇಕು. ಮರಿಯ ನಾಸಿಕ ದ್ವಾರದಿಂದ ಶ್ಲೇಷ್ಮಗಳನ್ನು ತೆಗೆದು ಮರಿಯ ಮೈಯನ್ನು ನೆಕ್ಕಲು ತಾಯಿಯ ಹತ್ತಿರ ಬಿಡಬೇಕು. ಹೊಕ್ಕಳುಬಳ್ಳಿಯನ್ನು ಸ್ವಚ್ಛ ಹಗ್ಗದಿಂದ ಬಿಗಿದು ಟಿಂಕ್ಚರ್ ಅಯೋಡೀನ್ ಹಚ್ಚಬೇಕು. ದನದ ಮೈಯನ್ನು ಹುಲ್ಲಿನ ಉಂಡೆಯಿಂದ ಸವರಿ ಬೆಚ್ಚಗಿರಿಸಬೇಕು. ಪುಷ್ಟಿದಾಯಕವೂ ಬಿಸಿಯಾಗಿಯೂ ವಿರೇಚನಕಾರಿಯಾಗಿಯೂ ಇರುವ ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಕೊಡಬೇಕು. ಗಂಜಿ ಅಥವಾ ಬಿಸಿಹಾಲು ಉತ್ತಮ. ಬಾಣಂತಿಯ ಯೋನಿದ್ವಾರವನ್ನು ಉಗುರು ಬೆಚ್ಚನೆಯ ಉಪ್ಪುನೀರಿನಿಂದ ತೊಳೆದು

ಶುಚಿ ಮಾಡಬೇಕು. ಅಲ್ಲಿ ಸಣ್ಣ ಗಾಯಗಳಿದ್ದರೆ ಹೊಂಗೆ ಎಣ್ಣೆ ಅಥವಾ ಕಹಿ ಬೇವಿನ ಎಣ್ಣೆ ಹಚ್ಚಿ ನೊಣಗಳ ಬಾಧೆಯಿಂದ ದೂರವಿಡಬೇಕು. ಮರಿಗೆ ಪ್ರಥಮವಾಗಿ ಮೊಲೆಯುಣಿಸಲು ಸಹಾಯ ಮಾಡಬೇಕು. (ಕೆ.ವಿ.ಎಂ.)

**ಈಲಿ:** ಬೆನ್ನೆಲುಬಿ ಪ್ರಾಣಿಗಳ ಹೊಟ್ಟೆಯಲ್ಲಿ ಮಾತ್ರ ಇರುವ ಬಲು ದೊಡ್ಡ ಗ್ರಂಥಿ (ಕಲಿಜ, ಯಕೃತ್, ಲಿವರ್). ದೇಹದ ಅಂಗಗಳಲ್ಲಿ ಇಷ್ಟು ಗಾತ್ರದ್ದು ಇನ್ನಾವುದೂ ಇಲ್ಲ. ಉಳಿದ ಅಂಗಗಳು ಇದನ್ನು ಒತ್ತುತ್ತಿರುತ್ತವೆ. ಇದರಿಂದ ಈಲಿಯಲ್ಲಿ ಆಗುವ ನೆಗ್ಗುಗಳನ್ನು ಹೆಣದಲ್ಲಿ ಮಾತ್ರ ಕಾಣಬಹುದಷ್ಟೆ. ಬದುಕಿದಾಗ ಶಸ್ತ್ರಕ್ರಿಯೆಗಾಗಿ ಈಲಿಯನ್ನು ಅದರ ಎಂದಿನ ಜಾಗದಿಂದ ಸರಿಸಿದರೆ ನೆಗ್ಗುಗಳು ತುಂಬಿಕೊಂಡು ಕಾಣದಾಗುತ್ತವೆ. ಪೆಟ್ಟು ತಾಕಿದರೆ, ಗಾಯವಾದರೆ ಸುಲಭವಾಗಿ ಬಿರಿದು ಹರಿಯುತ್ತದೆ. ಗಾಯವಾದರಂತೂ ವಿಪರೀತ ರಕ್ತ ಸುರಿದುಹೋಗುತ್ತದೆ. ಉದರದಲ್ಲಿರುವ ಇತರ ಅಂಗಗಳು ಒತ್ತುತ್ತಿರುವುದರಿಂದಲೇ ಈಲಿ ಅದರ ಜಾಗದಲ್ಲಿ ಇರಲು ಸಾಧ್ಯವಾಗುವುದು. ಇದರ ತೂಕ ಗಂಡಸರಲ್ಲಿ 1.4–1.6 ಕಿಗ್ರಾಂ ಹೆಂಗಸರಲ್ಲಿ 1.2–1.4 ಕಿಗ್ರಾಂ ಎಳೆಗೂಸುಗಳಲ್ಲಿ ಮೈತೂಕದ ಹೊಟ್ಟೆಯಲ್ಲಿ ಬಹು ಭಾಗವನ್ನು ತುಂಬಿರುವುದು ಇದರಿಂದಲೇ.

ಅಂಗರಚನೆ: ಬೇರೆ ಬೇರೆ ಕೆಲಸಗಳಿಗೆ ಒಂದೇ ಅಂಗಿಯನ್ನು ಹೇಳಿ ಮಾಡಿಸಿದಂತಿರುವ ಅಂಗವಿದು. ಇದರ ರಚನೆ ತೀರ ಸರಳವಾದರೂ 1949ರ ಮುನ್ನ ಇದರ ಸೂಕ್ಷ್ಮ ರಚನೆ ಏನೇನೂ ಗೊತ್ತಿರಲಿಲ್ಲ.

ಒಟ್ಟಿನಲ್ಲಿ ಈಲಿ ಜೀವಕಣಗಳ ದೊಡ್ಡ ರಾಶಿಯಂತೆ ಕಾಣುವುದು. ಇದರಲ್ಲಿ ಒಂದಕ್ಕೊಂದು ಸಂಬಂಧಿಸಿರುವ ತೆರಪುಗಳ ಸಿಕ್ಕು (ಮೇಜ್) ಎಲ್ಲೆಲ್ಲೂ ತೂರಿ ಜೊಳ್ಳು ಜೊಳ್ಳಾಗಿಸಿದೆ. ಈ ಜೊಳ್ಳು ತೆರಪುಗಳಲ್ಲಿ ವಿಶೇಷ ರೀತಿಯ ಲೋಮನಾಳಗಳ ಜಾಲರಚನೆಗಳು (ನೆಟ್‌ವರ್ಕ್) ತೂಗುಬಿದ್ದಿವೆ. ಈಲಿಯು ಬಿಡುತಿಗಳೆಂಬ (ಲ್ಯಾಕ್ಯುನೆ ಹೆಪ್ಯಾಟಿಸ್) ಮೂರೂ ದಿಕ್ಕುಗಳಲ್ಲೂ ಹರಡಿರುವ ತೊಳಬಳಸು (ಲ್ಯಾಬ್ರಿಂತ್) ಆಗಿದೆ. ಇವುಗಳ ನಡುವೆ ಈಲಿಯ ಜೀವಕಣಗಳಿಂದಾದ ಗೋಡೆ ಇದೆ. ಕೆಳಹಂತದಲ್ಲಿರುವ ಪ್ರಾಣಿಗಳಲ್ಲಿ ಈಲಿಯು ಪದರವೆಂಬ (ಲೆಮೈನ ಹೆಪ್ಯಾಟಿಸ್) ಈ ಗೋಡೆಯಲ್ಲಿ ಜೀವಕಣಗಳ ಎರಡು ಪದರಗಳಿರುವುವು. ಆದರೆ ಮಾನವ, ಉಲಿವಕ್ಕಿಗಳು, ಸ್ತನಿಗಳಲ್ಲಿ ಮಾತ್ರ ಒಂದೇ ಪದರವಿರುತ್ತದೆ. ಒಂದರೊಡನೊಂದು ಕ್ರಮವಾಗಿ ಜೋಡಿಸಿರುವ ಈ ಗೋಡೆಗಳ ರಚನೆಗೆ ಗೋಡೆಕಟ್ಟು (ಮ್ಯುರೇಲಿಯಂ) ಎಂದು ಹೆಸರಿದೆ. ಕೆಳ ಹಂತದ ಸ್ತನಿಗಳಲ್ಲಿರುವ ಈ ಗೋಡೆ ಜೀವಕಣಗಳ ಎರಡು ಪದರವಾಗಿದ್ದರಿಂದ ಜೋಡಿ ಗೋಡೆಕಟ್ಟು ಹೊಂದಿದೆ. ಒಂದೇ ಪದರ ಇರುವುದು ಸರಳ ಗೋಡೆ ಕಟ್ಟು. ಅಮುಕಿದರೆ ಸಿಕ್ಕಿಕೊಳ್ಳುವ ಮತ್ತು ಗುಂಡಿಗಳ ಹಾಗೆ ಅಕ್ಕಪಕ್ಕದ ಜೀವಕಣಗಳಲ್ಲಿ ಕುಳಿಗಳಿಗೆ ಸರಿಯಾಗಿ ಸಿಕ್ಕಿಸುವ ಸಣ್ಣಗೂಟಗಳು ಈಲಿಗೋಡೆಯ ಜೀವಕಣಗಳಿಗೆ ಇರುವುದನ್ನು ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಲ್ಲಿ ಕಾಣಬಹುದು.

ಈಲಿಯ ಜೀವಕಣಗಳ ನಡುವೆ ಇರುವ ಬಲು ಕಿರಿಯ ಪಿತ್ತದ ಕಿರುನಾಳಗಳು (ಕೆನಾಲಿಕುಲೈ) ಸಾಮಾನ್ಯ ಮೈಕ್ರೋಸ್ಕೋಪಿನಲ್ಲಿ ಕಾಣಿಸುವುದು ಕಷ್ಟ. ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಿಂದ ನೋಡಿದಾಗ ಜೀವರಸದ ಎಳೆಗೊಂಡೆಗಳು (ಮೈಕ್ರೋವಿಲ್ಲೈ) ಪಿತ್ತದ ಕಿರುನಾಳಗಳೊಳಕ್ಕೆ ಚಾಚಿರುವುದು ಗೊತ್ತಾಗುತ್ತದೆ. ಈಲಿಯ ಒಂದೊಂದು ಜೀವಕಣದ ಸುತ್ತಲೂ ಪಿತ್ತದ ಕಿರುನಾಳಗಳು ಹಲಪಕ್ಕಗಳ ಜಾಲದಂತೆ ಇರುವುವು.

ಒಂದೊಂದು ಈಲಿಯ ಜೀವಕಣದಲ್ಲೂ ಒಂದರಿಂದ ಮೂರರ ತನಕ ದುಂಡನೆಯ ನಡುಬೀಜಗಳೂ (ನ್ಯೂಕ್ಲಿಯೈ) ಒಂದೊಂದು ಕಿರುನಡುಬೀಜವೂ (ನ್ಯೂಕ್ಲಿಯೋಲಸ್) ಇರುತ್ತವೆ. ಆಯಾ ಜೀವಕಣದ ಗಾತ್ರಕ್ಕೆ ತಕ್ಕಂತೆ ಅದರ ನಡುಬೀಜದ ಗಾತ್ರ ಅಂಕಿ ಇರುತ್ತದೆ. ಈಲಿಯ ಜೀವಕಣದಲ್ಲಿ ಅನೇಕ ಕಣಕಡ್ಡಿಗಳೂ (ಮೈಟೊಕಾಂಡ್ರಿಯ) ಮುಖ್ಯವಾಗಿ ರೈಬೊನೂಕ್ಲೀಯಿಕ್ ಆಮ್ಲದಿಂದಾಗಿ ಜೋಡಿ ಪೊರೆಗಳ ಪೇರಿಕೆಗಳೂ ಇರುತ್ತವೆ. ತೆರಪುಗಳಿರುವ ಪಕ್ಕದಲ್ಲಿ, ಈಲಿಯ ಜೀವಕಣಗಳ ತುಂಬ ಬೆರಳ ತೆರನ, ಎಲೆ ತೆರನ ಚಾಚುಗಳಿರುವುದು ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಿಂದ ನೋಡಿದಾಗ ಮಾತ್ರ ಕಾಣುತ್ತದೆ. ಈ ಚಾಚುಗಳು ನಳಗುಳಿಗಳೆಂಬ (ಸೈನುಸಾಯ್ಡ್ಸ್) ವಿಶೇಷ ಲೋಮನಾಳಗಳ ಬಿಡುತಿಗಳಲ್ಲಿ ತೂಗು ಬಿದ್ದಿರುವುವು. ಕುಫರನ ಜೀವಕಣಗಳೆಂಬ ಚಪ್ಪಟೆಯಾಗಿ ತೆಳುವಾದ ಜೀವಕಣಗಳು ಗೋಡೆಗಳಲ್ಲಿದ್ದು ನಳಗುಳಿಗಳಾಗಿವೆ. ಕೊಳೆ, ಕಸ, ಸವೆದುಹೋದ ಕೆಂಪು ರಕ್ತಕಣಗಳು, ಏಕಾಣುಜೀವಿಗಳ ತೆರನ ವಸ್ತುಗಳನ್ನು, ಕುಫರನ ಜೀವಕಣಗಳು ಸುತ್ತುಗಟ್ಟಿ ಅರಗಿಸಿ ನುಂಗಿಹಾಕುತ್ತವೆ. ಕುಫರನ ಜೀವಕಣಗಳ ನಡುವೆ ಜಾಗಬಿಟ್ಟಿರುವುದೂ, ಕಿಂಡಿಗಳಿರುವುದೂ ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಿಂದ ಗೊತ್ತಾಗಿದೆ. ಕುಫರನ ಜೀವಕಣಗಳು ಈಲಿಯ ಜೀವಕಣಗಳ ಗಟ್ಟಿ ಭಾಗಗಳ ನಡುವೆ ಎಲ್ಲೆಲ್ಲೂ ಹರಡಿಕೊಂಡಿರುವ ಇಕ್ಕಟ್ಟಾದ ಎರಡುಕಡೆಯಲ್ಲಿನ (ಡಿಸ್ಸಿ) ಮೈಕ್ರೋಸ್ಕೋಪಿನಲ್ಲಿ ಕೋಟ್ಯಾನುಕೋಟಿ ಸಣ್ಣ ಚಾಚುಗಳನ್ನು ತಾಕುವಂತೆ ದ್ರವ ರಕ್ತದ ಹರಿವಿನಿಂದ ನೇರವಾಗಿ ಈ ಕಿಂಡಿಗಳ ಮೂಲಕ ನುಸುಳಬಹುದು.

ಈಲಿಯ ಬಹುಪಾಲು ಕೆಲಸಗಳಿಗೆ ಕುಫರನ ಜೀವಕಣಗಳೂ ಈಲಿಯ ಜೀವಕಣಗಳೂ ಕಾರಣ. ಇವುಗಳ ರಚನೆಯ ವಿಚಾರ ಬೇಕಾದಷ್ಟು ಗೊತ್ತಿದ್ದರೂ ಸೋಜಿಗವೇನಿಸುವ ಅವುಗಳ ಕೆಲಸಗಳು ಇನ್ನೂ ಏನೇನೂ ಗೊತ್ತಿಲ್ಲ ಎನ್ನುವುದು.

ಗರ್ಭಕೋಶದಲ್ಲಿ ಪಿಂಡ ಬೆಳೆಯುತ್ತ ತಾಯಿಯಿಂದ ಪೋಷಣೆ ಪಡೆಯುತ್ತದೆ. ಕೆಳಹಂತದ ಬೆನ್ನೆಲುಬಿಗಳಿಂದ ವಿಕಾಸವಾದ್ದರಿಂದ ಎಳೆಯ ಮಾನವ ಪಿಂಡದಲ್ಲಿ ಬಂಡಾರ ಚೀಲ ಇರುತ್ತದೆ. ಇದು ಬರಿದಾದರೂ ವಿಕಾಸದ ಹಂತಗಳನ್ನು ನೆನಪಿಸುವಂತೆ ಇದರ ಗೋಡೆಯಲ್ಲಿ ರಕ್ತನಾಳಗಳ ದಟ್ಟ ಜಾಲವಾಗಿ (ವೈಟೆಲ್ಲೀನ್ ವೆಸಲ್ಸ್) ಬೆಳೆಯುವವು ಆಮೇಲೆ ಗರ್ಭಕೋಶದಿಂದ ಪೋಷಣೆಯನ್ನು ತರುವ ರಕ್ತನಾಳಗಳ (ಹೊಕ್ಕಳಿನವು) ಇನ್ನೊಂದು ಮಂಡಲ ಬೆಳೆಯುತ್ತದೆ. ಜನೆಯ ಸಿರಗಳೂ ಗುಂಡಿಗೆಯ ಸದ್ಯ ಹಿಂದೆ ಒಂದುಗೂಡಿ ಒಟ್ಟಾಗಿ ಗುಂಡಿಗೆಯ ಒಳಹೋಗುತ್ತವೆ. ಇವು ಕೂಡುವ ಕವಲಿಂದ ಲೋಮನಾಳಗಳ ಜಾಲರಚನೆಯೊಂದು ಪಿಂಡದ ಕೂಡಿಸುವ ಅಂಗಾಂಶದ (ಕನೆಕ್ಟಿವ್ ಟಿಷ್ಯು) ರಾಶಿಯೊಳಕ್ಕೆ ಬೆಳೆವುದು. ಈ ಲೋಮನಾಳಗಳ ಜಾಲರಚನೆ ಗುಂಡಿಯೊಳಕ್ಕೆ ತೆರೆದುಕೊಳ್ಳುತ್ತದೆ.

ಆದಿ ಜೀರ್ಣನಾಳದ ಮುಂದುಗಡೆ ಬಂಡಾರ ಚೀಲದೊಂದಿಗೆ ಸೇರುವೆಡೆ ಒಡಲಿನ ಕಡೆಯ ಹೊರಚೀಲವಾಗಿ ಉಬ್ಬಿದೆಡೆಯಿಂದ ಅನೇಕ ಜೀವಕಣಗಳು ಬೇರೆಯಾಗುತ್ತವೆ. ಅದೇ ಹೊತ್ತಿನಲ್ಲಿ ಇನ್ನು ಕೆಲವು ಮೈ ಪೊಳ್ಳಿನ ಒಳವರಿಯಾದ ನಡುಪೊರೆಯಿಂದ (ಮೀಸೊತೀಲಿಯಂ) ಬೇರೆಯಾಗುತ್ತವೆ. ಒಳನೆನೆಚರ್ಮದ (ಎಂಡೊಡರ್ಮಲ್), ನಡುನೆನೆಚರ್ಮದ (ಮೀಸೊಡರ್ಮಲ್) ಇವೆರಡು ಗುಂಪಿನವೂ ಜನೆಯ ಅಲ್ಲದೆ ಹೊಕ್ಕುಳಿನ ಲೋಮನಾಳಗಳ ನಡುವಣ ಜಾಗವನ್ನು ಸೇರಿಕೊಂಡು ಲೋಮನಾಳಗಳನ್ನು ಸುತ್ತುಗಟ್ಟುತ್ತವೆ. ಇವೇ ಈಲಿಯ ಜೀವಕಣಗಳಾಗುವುವು. ಇವು ಕೂಡಲೇ ಹೊಕ್ಕುಳಿನ ಸಿರಗಳ ಮೂಲಕ ಗರ್ಭಕೋಶದಿಂದ ಬಂದ ಆಹಾರವನ್ನು ಕೂಡಿಟ್ಟುಕೊಳ್ಳುವ ಈಲಿಯ ಜೀವಕಣಗಳ ನಿಜಗೆಲಸಕ್ಕೆ ತೊಡಗುತ್ತವೆ. ಈಲಿಯ ಜೀವಕಣಗಳಿಂದ ಪಿತ್ತ ಸಾಗುನಾಳಗಳು ಬೆಳೆದು, ಕರುಳನ್ನು ಸೇರುವ ಸಾಮಾನ್ಯ ಪಿತ್ತ ಸಾಗುನಾಳವನ್ನು ಸೇರಿಕೊಳ್ಳುವುವು. ಕೋಳಿಮರಿಯಲ್ಲಿ ಮಾತ್ರ (ಮಾನವನಲ್ಲಲ್ಲ) ಕರುಳಿನ ಗೋಡೆಯ ಕೊಳವೆ ರೂಪದ ಚಾಚುಗಳಿಂದ ಈಲಿ ಆಗುವುದು ದೊಡ್ಡ ವಿಶೇಷ. ಪಿಂಡದಲ್ಲಿ ರಕ್ತಕಣಗಳನ್ನು ಈಲಿಯೇ ತಯಾರಿಸುತ್ತದೆ. ಬೆಳೆದವರಲ್ಲಿ ಈ ತಯಾರಿಕೆ ಮೂಳೆಗಳ ಮಜ್ಜೆಯಲ್ಲಾಗುವುದು. ಬೆನ್ನೆಲುಬಿ ಪ್ರಾಣಿಗಳಲ್ಲಿ ಈಲಿಯ ವಿಕಾಸದಲ್ಲಿ 20 ಬೇರೆ ಬೇರೆ ಬಗೆಗಳಿವೆ. ಯಾವ ರೀತಿಯಲ್ಲೇ ಬೆಳೆಯಲಿ ಕೊನೆಯ ಪರಿಣಾಮ ಒಂದೇ. (ಡಿ.ಎಸ್.ಎಸ್.)

ರಕ್ತ ಪರಿಚಲನೆ: ಕರುಳಿನ ಲೋಮನಾಳಗಳು ಒಂದೆಡೆ ಕೂಡಿ ಆದ ಕರುಳುನಡುಪೊರೆಯ (ಮೆಸೆಂಟರಿಕ್) ಸಿರಗಳೇ ಮುಖ್ಯವಾಗಿ ಈಲಿಗೆ ರಕ್ತವನ್ನು ಒದಗಿಸುತ್ತವೆ. ತೊರಳೆಯಿಂದ ಬರುವ ಒಂದು ಸಿರ, ಜಠರದಿಂದ ಬರುವ ಕೆಲವು ಸಣ್ಣ ಸಿರಗಳೊಂದಿಗೆ ಇವು ಸೇರಿ ಮೋಟಾದರೂ ದಪ್ಪನೆಯ ತೂರುಗೊಂದಿಯ ಸಿರ (ಪೋರ್ಟಲ್ ವೆಯ್ನ್) ರಕ್ತನಾಳವಾಗುತ್ತದೆ.

ತೂರು ಗೊಂದಿಯ ಸಿರ, ಈಲಿಯ ಧಮನಿ ಇವೆರಡರ ಕವಲುಗಳೂ ಕೊನೆಗೆ ನಾಳಗುಳಿಯೊಳಕ್ಕೆ ರಕ್ತ ಸುರಿಸುತ್ತವೆ. ನಾಳಗುಳಿಗಳ ಮೂಲಕ ರಕ್ತ ಈಲಿಯ ಸಿರಗಳ ಶಾಖೆಗಳಿಗೆ ಹರಿಯುತ್ತದೆ. ಅಲ್ಲಿಂದ ಒಟ್ಟುಗೂಡಿ ಕೆಳ ಸಿರಕೊಳ್ಳದೊಳಕ್ಕೆ (ಇನ್‌ಫೀರಿಯರ್ ವೀನಾಕೇವ) ಸುರಿದು ಗುಂಡಿಗೆಯ ಬಲಗುಂಡಿಗೆರೆಯನ್ನು (ಏಟ್ರಿಯಂ) ಸೇರಿಕೊಳ್ಳುತ್ತದೆ.

ತೂರುಗೊಂದಿಯ ಮತ್ತು ಧಮನಿಯ ರಕ್ತ ಒಳಹೋಗುವ ದಾರಿಯೇ ಅಲ್ಲದೆ, ಪಿತ್ತ ಹೊರಸಾಗುವ ಕಂಡಿಯೂ ಈಲಿಯ ತೂರುಗೊಂದಿಯೇ. ಬಲು ಕಿರಿದಾದ ಪಿತ್ತ ಕಿರಿಸಾಗಾಲುವೆಗಳು (ಕೆನಾಲಿಕುಲೈ) ಈಲಿಯೊಳಗೆ ಒಂದುಗೂಡಿ ಕಿರ್ನಾಳಗಳು (ಡಕ್ಟ್ಯೂಲ್ಸ್), ಸಣ್ಣ ಸಾಗುನಾಳಗಳು, ದೊಡ್ಡ ಸಾಗುನಾಳಗಳು, ಹಾಗೇ ಕೊನೆಗೆ ಬರಿಯ ಕಣ್ಣಿಗೆ ಕಾಣುವಷ್ಟು ದೊಡ್ಡವಾಗುತ್ತವೆ. ಇವೆಲ್ಲ ಸಾಗುನಾಳಗಳು ತೂರುಗೊಂದಿಯ ಸಿರಗಳ ಕವಲುಗಳೊಂದಿಗೆ ಸಾಗಿದರೂ ಅವಲ್ಲಿನ ಪಿತ್ತ ಮಾತ್ರ ರಕ್ತದ ಹರಿವಿನ ಎದುರುದಿಕ್ಕಿನಲ್ಲಿ ಹರಿಯುತ್ತದೆ. ಬರುಬರುತ್ತ ದೊಡ್ಡದಾಗುವ, ಗಾತ್ರವಿರುವ ಪಿತ್ತ ಸಾಗುನಾಳಗಳು ಕೊನೆಗೆ ಈಲಿಯ ತೂರುಗೊಂದಿಯಲ್ಲಿ ಈಲಿಯ ಸಾಗುನಾಳದಲ್ಲಿ ಕೊನೆಗೊಳ್ಳುತ್ತವೆ.

ಪಿತ್ತಕೋಶದ ಒಳಗಿನ ಅಡೆವಳಿ (ಲೈನಿಂಗ್) ಅನೇಕ ಮಡಿಕೆಗಳಲ್ಲಿರುವುದರಿಂದ ಅದರ ಮೇಲ್ಮೈ ಅಗಲವಾಗುವುದು. ಇದರ ಜೀವಕಣಗಳಿಗೆ ಮಿಣಿಎಳೆಗೊಂಡೆಗಳೆಂಬ (ಮೈಕ್ರೊವಿಲ್ಲೈ) ಪುಟಾಣಿ ಚಾಚುಗಳಿರುತ್ತವೆ. ಪಿತ್ತಕೋಶ ತುಸುಕಾಲ ಪಿತ್ತವನ್ನು ಕೂಡಿಟ್ಟುಕೊಳ್ಳುವುದು. ಅದೇ ಹೊತ್ತಿನಲ್ಲಿ ಮಿಣಿಎಳೆಗೊಂಡೆಗಳ ಮೂಲಕ ಪಿತ್ತದಲ್ಲಿನ ನೀರನ್ನು ಹೀರಿಹಾಕಿ ಪಿತ್ತವನ್ನು ಇನ್ನೂ ಗಟ್ಟಿಗೊಳಿಸುವುದು. ಹೀಗೇನಾದರೂ ನೀರು ತೆಗೆತ ಮಿತಿಗೆಟ್ಟರೆ, ಮುಖ್ಯವಾಗಿ ಕೊಲೆಸ್ಟಿರಾಲ್ ಇರುವ ಪಿತ್ತಗಲ್ಲುಗಳಾಗುತ್ತವೆ (ಗಾಲ್ ಸ್ಟೋನ್ಸ್). ಈಲಿಯ ಸಾಗುನಾಳದ ಇನ್ನೊಂದು ಕವಲು ಸಾಮಾನ್ಯ ಪಿತ್ತ ಸಾಗುನಾಳ.

ಇದು ಸಣ್ಣ ಕರುಳಿನ ಮೊದಲ ಭಾಗವಾದ ದುರಾರ್ಗರುಳನ್ನು (ಡುಯೊಡಿನಮ್) ಸೇರುವುದು. ಸಾಮಾನ್ಯ ಪಿತ್ತ ಸಾಗುನಾಳದ ಹೊರ ತುದಿಯಲ್ಲಿ ಅಡಿಯಗೆಂಡೆ (ಸ್ಫಿಂಕ್ಟರ್) ಎಂಬ ಒಂದು ಉಂಗುರ ಸ್ನಾಯು ಕಾವಲಿದೆ. ಕುದುರೆ ತೆರನ ಕೆಲವು ಪ್ರಾಣಿಗಳಲ್ಲಿ ಪಿತ್ತಕೋಶ ಇಲ್ಲದ್ದರಿಂದ ಬದುಕಿರಲು ಅದು ಇರಲೇಬೇಕಿಲ್ಲ. (ಎನ್.ಟಿ.ಎನ್.)

ನಿಜಗೆಲಸಗಳು : ಕರುಳಿನ ಗೋಡೆಯ ಮೂಲಕ ರಕ್ತ ಹರಿವಾಗ ಆಹಾರ ವಸ್ತುಗಳೂ ಆಗಾಗ್ಗೆ ವಿಷಕರ ವಸ್ತುಗಳೂ ಸೇರಿಕೊಳ್ಳುತ್ತವೆ. ಇವನ್ನೆಲ್ಲ ಹೀರಿಕೊಂಡು ಕೂಡಲೇ ಈಲಿಯ ಮೂಲಕ ರಕ್ತ ಸಾಗುತ್ತದೆ. ಕೆಡಕು ಮಾಡುವ ವಸ್ತುಗಳನ್ನು ತೆಗೆದುಹಾಕುವ ಸೋಸುಕವಾಗಿ (ಫಿಲ್ಟರ್), ರಾಸಾಯನಿಕ ವಿಧಾನಗಳಿಂದ ವಿಷಗಳನ್ನು ಕೆಡಿಸಿ, ಜಡಗೊಳಿಸಿ ಏಕಾಣುಜೀವಿಗಳನ್ನು ಈಲಿ ತೆಗೆದುಹಾಕುವುದು. ಗ್ಲೈಕುರೋನಿಕಾಮ್ಲ, ಗ್ಲೈಸೀನ್, ಅಸಿಟೈಲ್, ಸಲ್ಫೇಟು ಅಣ್ವಂಶಗಳೊಂದಿಗೆ ಒಂದುಕೂಡಿಸಿ, ಇಲ್ಲವೇ ಆಮ್ಲಜನಕಗೂಡಿಕೆ ಇಳಿಕೆಗಳಿಂದಲೋ ವಿಷಕರ ವಸ್ತುಗಳನ್ನು ನಿರಪಾಯಕರವಾಗಿ ಮಾಡುವುದು.

ರಕ್ತದಿಂದ ಪೋಷಕ ಪದಾರ್ಥಗಳನ್ನು ಎತ್ತಿಕೊಂಡು ಮುಂದಿನ ಬಳಕೆಗಾಗಿ ಕೂಡಿಟ್ಟುಕೊಳ್ಳುವ ಈಲಿ ಉಗ್ರಾಣವಾಗಿಯೂ ಇದೆ. ಪ್ರೊಟೀನು, ಕೊಬ್ಬು, ಹಿಟ್ಟು ಸಕ್ಕರೆಗಳ ಜೀವವಸ್ತುಕರಣ (ಮೆಟಬಾಲಿಸಂ) ಆಗುವ ಕೇಂದ್ರ ಅಂಗವಿದು. ಮಾಂಸಲಿಯಲ್ಲಿ (ಮೇದೋಜೀರಕಾಂಗ) ತಯಾರಾಗುವ ಇನ್ಸುಲಿನ್ ಪ್ರಭಾವದಿಂದ, ರಕ್ತದಿಂದ ಎತ್ತಿಕೊಂಡ ಸಕ್ಕರೆಯೂ ಕೂಡಿಟ್ಟ ವಸ್ತುಗಳಲ್ಲಿ ಒಂದು. ಕೂಡಿಡಬಹುದಾದ ಮಿಗದಿಟ್ಟಿನ (ಗ್ಲೈಕೊಜನ್) ರೂಪದಲ್ಲಿ ಸಕ್ಕರೆ ದಾಸ್ತಾನಾಗಿರುವುದು. ಶಕ್ತಿ ಬೇಕೆನಿಸುವ ತನಕ ಈಲಿಯ ಜೀವಕಣಗಳಲ್ಲಿ ಹಾಗೇ ಉಳಿದಿರುತ್ತದೆ. ಮಾಂಸಲಿಯಲ್ಲಿರುವ ಇನ್ನೊಂದು ಹಾರ್ಮೋನ್ ಇದನ್ನು ಮತ್ತೆ ಬದಲಿಸುವುದು.

ಈಲಿಯ ಜೀವಕಣಗಳಲ್ಲಿ ಕೊಬ್ಬುಗಳು, ಜೀವಾತುಗಳು ಮತ್ತಿತರ ಆಹಾರವಸ್ತುಗಳೂ ಇರುತ್ತವೆ. ಅದರ ಮೂಲಕ ಹರಿವ ರಕ್ತದೊಳಕ್ಕೆ ರಕ್ತರಸದ (ಪ್ಲಾಸ್ಮ) ಪ್ರೊಟೀನುಗಳಲ್ಲಿ ಮುಖ್ಯವಾದ ಕೋಳೆ (ಆಲ್ಬುಮಿನ್), ತಂತುಕಜನಕ (ಫೈಬ್ರಿನೊಜನ್), ಗ್ಲಾಬ್ಯುಲಿನ್ನುಗಳು. ಕೂಡಗರಣೆಜನಕ (ಪ್ರೋತ್ರಾಂಬಿನ್), ಹೆಪಾರಿನ್ನುಗಳನ್ನೂ ಅದು ತಯಾರಿಸಿ ಸೇರಿಸುವುದು. ಏಕಾಣುಜೀವಿಗಳು ತಯಾರಿಸಿ ಬಿಡುವ, ರೋಗ ಬರಿಸುವ ವಿಷಗಳಾದ ಜೀವಿವಿಷಗಳನ್ನು (ಟಾಕ್ಸಿನ್ಸ್) ಎದುರಿಸುವ ರೋಧವಸ್ತುಗಳನ್ನೂ ರಕ್ತದೊಳಕ್ಕೆ ಈಲಿ ಸೇರಿಸುತ್ತದೆ. ರೋಗಗಳು ಬಾರದಂತೆ ಮೈ ತಡೆವ ಏರ್ಪಾಡುಗಳಲ್ಲಿ ಇದೂ ಒಂದು.

ಕರುಳೊಳಕ್ಕೆ ಈಲಿ ಸುರಿಸುವ ಪಿತ್ತರಸ ಹಸಿರು ಬಣ್ಣದ ದ್ರವ. ಕೊಬ್ಬನ್ನು ಅರಗಿಸುವುದರಲ್ಲಿ ನೆರವಾಗುವ ಪಿತ್ತದ ಆಮ್ಲಗಳೂ, ಕೊಬ್ಬುಗಳು, ಎ,ಡಿ,ಕೆ,ಇ, ಜೀವಾತುಗಳು, ತೆರನ ಕೊಬ್ಬಿನಲ್ಲಿ ಕರಗುವ ವಸ್ತುಗಳೂ ಪಿತ್ತದಲ್ಲಿವೆ. ಮೂಳೆಯ ಮಜ್ಜೆ, ತೊರಳೆ, ಈಲಿಗಳಲ್ಲಿ ಕೆಟ್ಟಿರುವ ಅನೇಕ ಕೆಂಪು ರಕ್ತಕಣಗಳು ದಿನವೂ ಹಾಳಾಗುತ್ತಲೇ ಇರುವುವು. ಕೆಂಪು ರಕ್ತಕಣದಲ್ಲಿರುವ ರಕ್ತದ ಕೆಂಪುಬಣ್ಣಕ್ಕೆ ಕಾರಣವಾದ ರಕ್ತಬಣ್ಣಕ (ಹೀಮೊಗ್ಲಾಬಿನ್) ಹೀಗೆ ರಕ್ತದೊಳಕ್ಕೆ ಚೆಲ್ಲಿಬೀಳುತ್ತದೆ. ಈಲಿ ಇದನ್ನು ಎತ್ತಿಕೊಂಡು ಕೆಂಪಿತ್ತ (ಬಿಲಿರೂಬಿನ್), ಹಸಿರು ಪಿತ್ತಗಳನ್ನಾಗಿ (ಬಿಲಿವರ್ಡಿನ್) ಮಾರ್ಪಡಿಸಿ ಪಿತ್ತದ ಮೂಲಕ ಕರುಳಿಗೆ ಸಾಗಿಸುತ್ತದೆ. ಮಲದ ಕಂದುಬಣ್ಣಕ್ಕೆ ಇವೇ ಕಾರಣ. ಮೈಯಲ್ಲಿ ಹುಟ್ಟುವ ಕಸರೆ ವಸ್ತುಗಳಾದ ಮೂತ್ರಲವಣ (ಯೂರಿಯ), ಮೂತ್ರಾಮ್ಲಗಳನ್ನೂ (ಯೂರಿಕ್ ಆಸಿಡ್) ಪಿತ್ತದ ಮೂಲಕ ಈಲಿ ಹೊರದೂಡುತ್ತದೆ. ಪಿತ್ತದ ಮೂಲಕ ಈಲಿ ಕೊಲೆಸ್ಟಿರಾಲನ್ನು ಸಹ ಹೊರದೂಡಿದರೂ ಅದರ ಬಹು ಪಾಲನ್ನು ಕರುಳು ಮತ್ತೆ ಹೀರಿಕೊಂಡು ಬಿಡುವುದರಿಂದ ಹಾಳಾಗದು. ಮಾಂಸಾಹಾರಿಗಳಿಗೆ ಈಲಿಯಿಂದ ಮುಖ್ಯವಾಗಿ ಪ್ರೊಟೀನೂ, ಕೊಬ್ಬೂ ಎ,ಡಿ,ಇ,ಬಿ ಸರ್ಮಿಶ್ರ ಜೀವಾತುಗಳೂ ದೊರೆಯುತ್ತವೆ. ಇದರಲ್ಲಿ ಕಬ್ಬಿಣ, ತಾಮ್ರ, ಬಿ 12 ಜೀವಾತು ಇರುವುದರಿಂದ ಕೆಲವು ಬಗೆಯ ರಕ್ತಕೊರೆಯಲ್ಲಿ (ಅನೀಮಿಯ) ಈಲಿಯ ಸಾರವನ್ನು ಆಹಾರವಾಗಿ ಕೊಡಬಹುದು.

ಹುಟ್ಟು ವಿಕಾರಗಳು, ಗಂತಿಗಳ (ಟ್ಯೂಮರ್ಸ್) ಬೆಳೆತ, ಪರಾವಲಂಬಿ ಜೀವಿಗಳ ಸೋಂಕು (ಪ್ಯಾರಸೈಟ್ ಇನ್‌ಫೆಸ್ಟೇಷನ್) ಹೊರತಾಗಿ ಈಲಿಯ ಸಾಮಾನ್ಯ ರೋಗಗಳಲ್ಲಿ ಬಹು ಪಾಲು ಅದರ ರಚನೆಗೆಟ್ಟು ಕೆಟ್ಟಿರುವುದು. ಹಾಗೆ ಕೆಡುವುದರಿಂದ ಪ್ರಾಣಕ್ಕೆ ಹಾನಿಯಾಗಿ ಮಾರಕ ಆಗದಿರಲು ಎರಡು ಮುಖ್ಯ ಕಾರಣಗಳಿವೆ. ಎಂದಿನ ಮೂಲ ಬೇಡಿಕೆಗಳಿಗೆ ಯಾವಾಗಲೂ ಬೇಕಿರುವುದಕ್ಕಿಂತಲೂ ಮಿಗಿಲಾಗಿ ಈಲಿಯ ಊತಕವಿರುವುದು. ಅಂದರೆ, ಈಲಿಯಲ್ಲಿ ಬಹುಪಾಲನ್ನು ಏಡಿಗಂತಿ (ಕ್ಯಾನ್ಸರ್) ತುಂಬಿಕೊಂಡಿದ್ದರೂ ಕೆಲಕಾಲವಾದರೂ ಈಲಿಯ ನಿಜಗೆಲಸಗಳಿಗೆ ಆತಂಕವಾಗದು. ಎಷ್ಟೇ ಪೆಟ್ಟಾಗಿ ಹಾಳಾದರೂ ಮತ್ತೆ ಚೇತರಿಸಿಕೊಂಡು ಹೆಚ್ಚಾಗಿ ಬೆಳೆದು ವಾಸಿಮಾಡಿಕೊಳ್ಳುವ ಮಹಾಶಕ್ತಿ ಈಲಿಗಿದೆ. ಕೆಡದೆ ಉಳಿದಿರುವ ಜೀವಕಣಗಳು ಬಲುಬೇಗನೆ ಬೆಳೆದು ಗುಣಿತವಾಗಿ ದೊಡ್ಡ ಕಿಗ್ಗಂಟಿನ ಹೇರೂಪ (ನಾಡ್ಯುಲಾರ್ ಹೈಪರ್ ಪ್ಲೇಸಿಯ) ಆಗುವುದರೊಂದಿಗೆ ಪಿತ್ತಸಾಗುನಾಳಗಳ ಜೊತೆಯಲ್ಲಿ ಹೊಸ ಹುಟ್ಟಿನ ಜೀವಕಣಗಳು ಚೆನ್ನಾಗಿ ಹೊಂದಿಕೊಳ್ಳುವುವು.

ಈಲಿಯ ಕೆಲಸಗಳ ಪರೀಕ್ಷೆಗಳು: ಈಲಿಯ ಕೆಲಸಗಳು ಎಷ್ಟೊಂದು ಬಗೆಯವು ಇರುವುದೆಂದರೆ, ಯಾವ ಒಂದು ಪರೀಕ್ಷೆಯಿಂದಲೂ ಉಳಿದೆಲ್ಲ ಕೆಲಸಗಳು ಕೆಟ್ಟಿರುವ ವಿಚಾರ ಇನಿತೂ ಗೊತ್ತಾಗದು. ಬೇಕಿರುವುದಕ್ಕಿಂತಲೂ ಹೆಚ್ಚಾಗಿರುವ ಊತಕವೂ ವಾಸಿಪಡಿಸಿಕೊಳ್ಳುವ ಹೆಗ್ಗುಣವೂ ಈ ಪರೀಕ್ಷೆಗಳಿಗೆ ಅಡ್ಡಿಯಾಗುತ್ತವೆ. ಒಟ್ಟಿನಲ್ಲಿ ಕೂರಾದ (ಅಕ್ಯೂಟ್) ಹಾನಿ ರೋಗಗಳು ಇರುವುದನ್ನು ಈಗಿನ ಪರೀಕ್ಷೆಗಳು ಕೂಡಲೇ ತೋರುವುದಾದರೂ ವೈದ್ಯನಿಗೆ ಮುಖ್ಯವಾಗಿ ಬೇಕಿರುವ ವಿಚಾರಗಳನ್ನು ತಿಳಿಸಿಕೊಡವು. ಈಲಿ ಕೆಲಸಗೆಡುವಷ್ಟು ಹಾಳಾಗಿರುವುದೋ ಇಲ್ಲವೋ ಎಂಬುದನ್ನು ಅದರಲ್ಲೂ ಈಲಿಯ ಬೇರೂರಿದ ರೋಗಗಳಲ್ಲಿ ಅನುಮಾನವಿಲ್ಲದಂತೆ ತೋರವು. ಸಾಮಾನ್ಯವಾಗಿ, ನಿಜಗೆಲಸಗಳ ಜೀವವೈಜ್ಞಾನಿಕ ಪರೀಕ್ಷೆಗಳಿಗೂ ಜೀವುಂಡಿಗೆಯಿಂದ (ಬಯಾಪ್ಸಿ) ತೆಗೆದು ಮಾಡಿದ ಊತಕ ಪರೀಕ್ಷೆಗಳಿಗೂ ಹೊಂದಾಣಿಕೆ ಅಷ್ಟಾಗಿಲ್ಲ. ಮೈಕ್ರೋಸ್ಕೋಪಿನಡಿಯಲ್ಲಿ ಈಲಿ ವಿಪರೀತ ಕೆಟ್ಟಿರುವಂತೆ ಕಂಡುಬಂದರೂ ನಿಜಗೆಲಸ ಪರೀಕ್ಷೆಗಳಿಂದ ಯಾವ ಹಾನಿಯೂ ಕಾಣದಿರಬಹುದು. ಯಾವಾಗಲೂ ಯಾವುದೇ ಒಂದು ಜೀವರಾಸಾಯನಿಕ ಪರೀಕ್ಷೆಯನ್ನು ಮಾತ್ರ ನೆಚ್ಚಿಕೊಳ್ಳಬಾರದು. ಸಾಧ್ಯವಾದರೆ ಕೆಲ ಕಾಲ ಬಿಟ್ಟು ಬಿಟ್ಟು ಮಾಡುವ ಪರೀಕ್ಷೆಗಳ ಸರಣಿಗಳಿಂದಲೇ ಹೆಚ್ಚಿನ ವಿಚಾರಗಳು ಗೊತ್ತಾಗುವುವು.

ಕಳೆದ ಶತಮಾನದಲ್ಲಿಯೇ ಈಲಿಯ ಜೀವುಂಡಿಗೆಯನ್ನು ವಿವರಿಸಿದ್ದರಾದರೂ ಅದನ್ನು ಈಲಿ ಪರೀಕ್ಷೆಯಲ್ಲಿ ಒಂದಾಗಿ ಬಳಸುತ್ತಿರುವುದು ಈಚೆಗೆ. ತೂತಿರುವ ಸೂಜಿಯೊಂದನ್ನು ರೋಗಿಗೆ ನೋವಾಗದಂತೆ ಈಲಿಯೊಳಕ್ಕೆ ಬಲ ಪಕ್ಕದಿಂದ ಚುಚ್ಚಿ ಈಲಿಯ ಬಲು ಸಣ್ಣಚೂರನ್ನು ಹೊರತೆಗೆದು ಅದನ್ನು ಮೈಕ್ರೋಸ್ಕೋಪಿನಲ್ಲಿ ಪರೀಕ್ಷಿಸಲಾಗುತ್ತದೆ. ಆಮೇಲೆ ರೋಗಿ ದಿನವೆಲ್ಲ ಆಸ್ಪತ್ರೆಯಲ್ಲಿ ಇರಬೇಕು. ಹೀಗೆ ಮಾಡಿದಾಗ ಲಕ್ಷ ಮಂದಿಗೊಬ್ಬರು ಸತ್ತಿದ್ದಾರೆ. ಬೇರೂರಿದ ಈಲಿಯುರಿತ (ಹೆಪಟೈಟಿಸ್), ಕಾರಣ ಗೊತ್ತಿಲ್ಲದ ಈಲಿ ಹೆಬ್ಬೆಳೆತ. ಈಲಿಯ ಅರಿಶಿನಾರಿಗೆ (ಸಿರ್ರೋಸಿಸ್) ರೋಗಿಗಳಿಗೆ ಮುಂದೇನಾಗುವುದೆಂಬ ತಿಳಿವು–ಇವನ್ನೆಲ್ಲ ಗುರುತಿಸಲು ಇದರಿಂದ ನೆರವಾಗುತ್ತದೆ.

ಹಲವಾರು ಜೀವರಾಸಾಯನಿಕ ಪರೀಕ್ಷೆಗಳಲ್ಲಿ ತೀರ ಮುಖ್ಯವಾದುವು; ರಸಿಕೆಯಲ್ಲಿನ (ಸೀರಂ) ಕೋಳೆ, ಕೆಂಪಿತ್ತ, ಟ್ರಾನ್ಸಮಿನೇಸುಗಳು, ಗ್ಲಾಬ್ಯೂಲಿನುಗಳ ಅಳೆತ: ರಸಿಕೆಯ ವಿದ್ಯುಚ್ಚಲಚಿತ್ರಣ (ಎಲೆಕ್ಟ್ರೊಫೊರೆಸಿಸ್), ಕ್ಷಾರಕ ಫಾಸ್ಫೇಟು ದೊಳೆ, ತೈಮಾಲಿನ ಬಗ್ಗಡತೆ (ಟರ್ಬಿಡಿಟಿ), ಬ್ರೋಮ್ ಸಲ್ಫ್ಥಾಲಿಯೀನ್ ಪರೀಕ್ಷೆಗಳು. ಅಂತೂ ಯಾವ ಒಂದೇ ಒಂದು ಪರೀಕ್ಷೆಯೂ ನಿರ್ಧಾರಕವಲ್ಲ. ಹಲವಾರು ಪರೀಕ್ಷೆಗಳನ್ನು ಮಾಡಿದರೆ ಅನುಕೂಲ, ರೋಗಿಯ ಹೇಳಿಕೆ, ಮೈ ಪರೀಕ್ಷೆಗಳೊಂದಿಗೆ ಇವು ವೈದ್ಯನಿಗೆ, ಅದರಲ್ಲೂ ಕಾಮಾಲೆ ಬೇರೂರಿರುವಾಗ ರೋಗ ನಿದಾನಕ್ಕೆ (ಡಯಗ್ನೋಸಿಸ್) ನೆರವಾಗುತ್ತದೆ. (ಡಿ.ಎಸ್.ಎಸ್.)

**ಈಲ್ಯಾಂಡ್:** ಈಲ್ಯಾಂಡ್ ಅಥವಾ ಚಿಹರಿ ಅಥವಾ ಚಿಗರಿ ಆಂಟೆಲೋಪ್ ಗುಂಪಿನ ಸ್ತನಿ. ದಕ್ಷಿಣ ಆಫ್ರಿಕದಲ್ಲಿ ವಾಸಿಸುತ್ತದೆ. ಇದರ ವೈಜ್ಞಾನಿಕ ನಾಮ ಟಾರೊಟ್ರಾಗಸ್ ಓರಿಕ್ಸ್. ಎತ್ತಿನಂತೆ ಕಾಣುವ ಮೈಮಾಟ ಹೊಂದಿದ್ದು, ಗಾತ್ರದಲ್ಲಿ ಬಲು ದೊಡ್ಡದು. ತಲೆಯ ಮೇಲೆ ತಿರುಚಿಕೊಂಡಿರುವ ಎರಡು ಕೊಂಬುಗಳಿವೆ. ಕತ್ತಿನ ಕೆಳಭಾಗದಲ್ಲಿ ದಪ್ಪನೆಯ ಚರ್ಮ ತೂಗಾಡುತ್ತಿರುತ್ತದೆ. ಸದಾ ಓಡಾಡುವ ಈ ಪ್ರಾಣಿ, ಕಾಲಿನಲ್ಲಿ ಗೊರಸನ್ನು ಹೊಂದಿದ್ದು, ಓಡುವಾಗ ಕ್ಲಿಕ್ ಕ್ಲಿಕ್ ಎಂಬ ಶಬ್ದ ಮಾಡುತ್ತದೆ. ಇವು ಮೈದಾನ ಪ್ರದೇಶ ಮತ್ತು ಕಾಡುಪ್ರದೇಶಗಳ ನಡುವೆ ವಾಸಿಸುತ್ತವೆ. ಆಹಾರ ಸೇವನೆಗೆಂದು ಬಯಲು ಪ್ರದೇಶಗಳಿಗೆ ವಲಸೆ ಹೋಗುವುದುಂಟು.

ಗಂಡು 1.65 – 1.8ಮೀ. ಎತ್ತರವಿದ್ದು, 120 ಕಿಗ್ರಾಂ ತೂಕವಿದೆ. ಇದರ ಮೈಚರ್ಮ ನಸುಬಣ್ಣದಲ್ಲಿದ್ದು ಅಲ್ಲಲ್ಲೇ ಬಿಳಿಯ ಗೆರೆಗಳಿವೆ. ವಯಸ್ಸಾದ ಈಲ್ಯಾಂಡುಗಳು ನೀಲಿ ಅಥವಾ ಕಂದು ಬಣ್ಣದವು. ಹೆಣ್ಣಿನ ಕೊಂಬಿನ ಉದ್ದ ಗಂಡಿನ ಕೊಂಬಿಗಿಂತಲೂ ಹೆಚ್ಚು. ಸಾಮಾನ್ಯವಾಗಿ ಮಾರ್ಚಿ ತಿಂಗಳಿಂದ ಮೇ ತಿಂಗಳಲ್ಲಿ ಗಂಡುಹೆಣ್ಣುಗಳ ಮಿಳಿತದ ಕಾಲ. ಹೆಣ್ಣುಗರ್ಭಧರಿಸಿದ ನಂತರ ಸು. 256 ದಿವಸಗಳ ಬಳಿಕ ಮರಿ ಹಾಕುತ್ತದೆ. ಚಿಹರಿಯ ರುಚಿಯಾದ ಮಾಂಸ ಮತ್ತು ಗಟ್ಟಿ ಚರ್ಮಕ್ಕಾಗಿ ಮನುಷ್ಯ ಈ ಪ್ರಾಣಿಯ ಬೇಟೆಯಾಡುತ್ತಾನೆ. ಟಾರೊಟ್ರಾಗಸ್ ಡರ್ಬಿಯಾನಸ್ ಈ ಗುಂಪಿನ ಇನ್ನೊಂದು ಪ್ರಭೇದ. ***

# ಉ

**ಉಂಡೆಮೀನು:** ದೊಡ್ಡ ಮೂಳೆಮೀನು; ಕಶೇರುಕ; ಬೆಲೂನಿನಂತೆ ದೇಹವನ್ನು ಉಬ್ಬಿಸಿಕೊಳ್ಳಬಲ್ಲುದು; ಉಬ್ಬುಮೀನು ಪರ್ಯಾಯನಾಮ (ಗ್ಲೋಬ್ ಫಿಶ್; ಡಿಯೊಡಾನ್ ಹಿಸ್ಟ್ರಿಕ್ಸ್). ಉಷ್ಣ ಅಕ್ಷಾಂಶವಲಯಗಳ ಸಮುದ್ರ ನೀರುವಾಸಿ. ಉರುಳೆ ಆಕಾರದ ದೇಹ 60–70 ಸೆಂಮೀ. ಉದ್ದ. ದೇಹದಲ್ಲಿ ಉದ್ದನೆಯ ಮೊನಚು ಮುಳ್ಳುಗಳಿವೆ. ದಪ್ಪತಲೆ ಮತ್ತು ಉಬ್ಬು ಹಲ್ಲುಗಳು ಇದರ ವೈಶಿಷ್ಟ್ಯ. ಸಾಧಾರಣ ಮೀನಿನಂತೆಯೆ ಇದು ಸಹ ಜೀವಿಸುತ್ತದೆ. ಆದರೆ ಸ್ವಲ್ಪ ಕೆಣಕಿದಾಗ ಅಥವಾ ಕೆರಳಿಸಿದಾಗ ಗಾಳಿಯಿಂದ ಅಥವಾ ನೀರಿನಿಂದ ತನ್ನ ಹೊಟ್ಟೆ ಅಥವಾ ದೇಹದಲ್ಲಿ ಚೀಲದಂಥ ಒಂದು ಭಾಗವನ್ನು ಉಬ್ಬಿಸಿಕೊಂಡು ಉಂಡೆಯಾಕಾರದಲ್ಲಿ ಅಧೋಭಾಗ ಕಾಣುವಂತೆ ನೀರಿನಮೇಲೆ ತೇಲುತ್ತದೆ. ಆಗ ನೇರವಾಗಿ ಎದ್ದುನಿಲ್ಲುವ ಮುಳ್ಳುಗಳು ಇದಕ್ಕೆ ಶತ್ರುವಿನ ವಿರುದ್ಧ ರಕ್ಷಣೆ ನೀಡುತ್ತವೆ.



**ಟೆಟ್ರೋಡಾನ್ ಪಟೋಕ**

ಈ ಗುಂಪಿಗೆ ಸೇರಿದ ನಾಲ್ಕು ಹಲ್ಲುಗಳುಳ್ಳ ಟೆಟ್ರೋಡಾನ್ ಮತ್ತು ಎರಡು ಹಲ್ಲುಗಳುಳ್ಳ ಡಿಯೊಡಾನ್ ಭಾರತದ ಸುತ್ತಲ ಸಮುದ್ರಗಳಲ್ಲಿ ವಾಸಿಸುವುವು. ಉಂಡೆಮೀನುಗಳು ವಿಷಪೂರಿತವಾದ್ದರಿಂದ ಆಹಾರಯೋಗ್ಯವಲ್ಲ. (ಆರ್.ಎಲ್.)

**ಉಗುರುಗಳು ಮತ್ತು ಪಂಜಗಳು:** ಉರಗ, ಪಕ್ಷಿ ಹಾಗೂ ಸ್ತನಿವರ್ಗದ ಪ್ರಾಣಿಗಳಲ್ಲಿ ಬೆರಳುಗಳ ತುದಿಗಳಲ್ಲಿರುವ ರಚನೆಗಳು. ಹೊರಚರ್ಮದಿಂದ ಬೆಳೆದಿವೆ ಹಾಗೂ ವೈವಿಧ್ಯಮಯವಾಗಿವೆ.

ಉರಗ ವರ್ಗದ ಪ್ರಾಣಿಗಳ ಹೊರಚರ್ಮದಲ್ಲಿ ಹೊರಪಾಗಿ ಮಾರ್ಪಾಟಾಗಿವೆ. ಉರಗ ವರ್ಗದ ಪ್ರಾಣಿಗಳಲ್ಲಿರುವ ಪಂಜ, ಉಗುರುಗಳ ಮೂಲ ರಚನೆ. ಈ ಪ್ರಾಣಿಗಳಲ್ಲಿ ಪಂಜವು ಎರಡು ಕಠಿಣವಾದ ತಟ್ಟೆಗಳಿಂದ ರಚಿತವಾಗಿದೆ. ಈ ತಟ್ಟೆಗಳಲ್ಲಿ ಒಂದು ತಟ್ಟೆಯು ಬೆರಳಿನ ತುದಿಯ ಮೇಲಿನ ಚರ್ಮವನ್ನು ರಕ್ಷಿಸಿದರೆ, ಕೆಳಗಿರುವ ತಟ್ಟೆಯು ಕೆಳಗಿನ ಚರ್ಮವನ್ನು ರಕ್ಷಿಸುತ್ತದೆ. ಈ ಎರಡು ತಟ್ಟೆಗಳು ಬೆರಳಿನ ತುದಿಯಲ್ಲಿ ಒಂದುಗೂಡಿ ಬೆರಳಿನ ತುದಿಯನ್ನು ಪೂರ್ಣವಾಗಿ ಸಂರಕ್ಷಿಸುತ್ತವೆ. ಮೇಲಿನ ತಟ್ಟೆಯು ಕೆಳಗಿನ ತಟ್ಟೆಗಿಂತ ಮುಂದಿದ್ದು, ಮುಂದಕ್ಕೆ ಹಾಗೂ ಮಗ್ಗುಲಿಗೆ ಹರಡಿಕೊಂಡಿರುತ್ತವೆ. ಇದನ್ನು ಅಂಗ್ವಿಸ್ ಎನ್ನುವರು. ಈ ಮೇಲ್ತಟ್ಟೆಯ ಕೆಳಗಡೆ, ಚಿಕ್ಕದಾದ, ಚಪ್ಪಟೆಯಾದ ಮತ್ತೊಂದು ತಟ್ಟೆಯಿದೆ. ಇದನ್ನು ಉಪಅಂಗ್ವಿಸ್ ಎನ್ನುವರು. ಮೇಲಿನ ತಟ್ಟೆಯು ಕಠಿಣವಾಗಿದ್ದರೆ, ಕೆಳಗಿನ ತಟ್ಟೆಯಲ್ಲಿ ಗಡಸುತನ ಕಡಿಮೆ ಇರುತ್ತದೆ. ಈ ಎರಡು ರಚನೆಗಳು ಚರ್ಮದ ಮಾಲ್ಪಿಘಿಯ ಪೊರೆಯಿಂದ ರಚಿತವಾಗಿವೆ. ಪಕ್ಷಿಗಳಲ್ಲಿ ಪಂಜದ ರಚನೆಯು ಉರಗವರ್ಗದ ಪಂಜದಂತೆಯೇ ಇದ್ದರೂ ಸಹ, ಕೆಲವು ಪಕ್ಷಿಗಳಲ್ಲಿ ಅವುಗಳ ಜೀವನ ಕ್ರಮಕ್ಕೆ ಅನುಗುಣವಾಗಿ ಬದಲಾವಣೆಯಾಗಿವೆ.

ಸ್ತನಿಗಳಲ್ಲಿ ಪಂಜಗಳು ಬೆರಳಿನ ತುದಿಗಳನ್ನು ರಕ್ಷಿಸುತ್ತವೆ. ಸಾಮಾನ್ಯವಾಗಿ ಕೊನೆಯ ಬೆರಳು ಮೂಳೆಯನ್ನು ಮುಚ್ಚುವಷ್ಟು ದೊಡ್ಡದಿರುತ್ತವೆ. ಉರಗವರ್ಗ ಪ್ರಾಣಿಗಳಂತೆಯೇ ಅಂಗ್ವಿಸ್ ಹಾಗೂ ಉಪಅಂಗ್ವಿಸ್ ಭಾಗಗಳು ಸ್ತನಿಗಳ ಬೆರಳುಗಳಲ್ಲಿವೆ. ಆದರೆ ಕೆಲವು ಸ್ತನಿಗಳಲ್ಲಿ, ಬೆರಳುಗಳ ತುದಿಯಲ್ಲಿ ಚರ್ಮವು ಉಬ್ಬಿಕೊಂಡಿರುತ್ತದೆ. ಈ ರಚನೆಯು ಪ್ರಾಣಿಯ ಭಾರವನ್ನು ತಡೆದುಕೊಳ್ಳುತ್ತದೆ. ಇದು ಕಾರ್ನಿಯಲ್ ಪದರದ ಮಾರ್ಪಾಟಿನಿಂದ ರಚಿತವಾಗಿರುತ್ತದೆ.

ಕೆಲವು ಸ್ತನಿಗಳಲ್ಲಿ ಪಂಜವು, ಉಗುರಾಗಿ ಮಾರ್ಪಾಟಾಗಿರುತ್ತದೆ. ಈ ಪ್ರಾಣಿಗಳಲ್ಲಿ ಉಗುರು ಪಂಜದ ಅಂಗ್ವಿಸ್ ಭಾಗ ಮಾತ್ರ. ಉಪಅಂಗ್ವಿಸ್ ಭಾಗವು ಇರುವುದಿಲ್ಲ. ಮನುಷ್ಯನ ಪಂಜದ ಅಂಗ್ವಿಸ್‌ನ ಚಪ್ಪಟೆಯಾದ ಭಾಗವೇ ಬೆರಳಿನಲ್ಲಿನ ಉಗುರುಗಳು. ಉಗುರು ಲುಸಿಡಿಯಂ ಪದರದ ಜೀವಕೋಶಗಳು ಒತ್ತಾಗಿ ಚಪ್ಪಟೆಯಾಗಿರುವುದರಿಂದ ರಚಿತವಾಗಿವೆ.



**ಕಾರಕೆಲ್**




ಉಗುರುಗಳು ಮನುಷ್ಯನಲ್ಲಿ ಹಾಗೂ ಬೇರೆ ಪ್ರಾಣಿಗಳಲ್ಲಿಯು ಬೆಳೆಯುತ್ತವೆ. ಹೀಗೆ ಬೆಳೆಯುವಾಗ ಉಗುರುಗಳ ಮುಂಭಾಗವು ಯಾವಾಗಲು ಬೆರಳಿನ ತುದಿಯನ್ನು ಮುಚ್ಚುತ್ತವೆ. ಈ ಉಗುರುಗಳ ಬೆಳವಣಿಗೆಗೆ ಕಾರಣ ಜರ್ಮೈನಲ್ ಮ್ಯಾಟ್ರಿಕ್ಸ್ ಎಂಬ ಮಾಲ್ಪಿಘಿಯ ಪದರದ ಭಾಗ. ಇದು ಅವಿರತವಾಗಿ ಜೀವಕೋಶಗಳನ್ನು ವಿಭಜಿಸುತ್ತಿರುತ್ತದೆ. ಇದು ಉಗುರುಗಳು ಹುಟ್ಟುವ ಜಾಗದಲ್ಲಿರುತ್ತದೆ. ಈ ಜಾಗವು ಉಗುರಿನ ಅರ್ಧ ಚಂದ್ರಾಕಾರದ ಭಾಗವಾಗಿ ಕಾಣುತ್ತದೆ. ಇದನ್ನು ಲುನ್ಯುಲ ಎನ್ನುವರು.

ಉಗುರಿನ ನಸುಗೆಂಪು ಬಣ್ಣವು ಅದರ ಪಾರದರ್ಶಕತೆಯನ್ನು ಅವಲಂಬಿಸಿದೆ. ಉಗುರಿನ ಕೆಳಭಾಗದಲ್ಲಿರುವ ರಕ್ತವೇ ಬೆರಳುಗಳ ನಸುಗೆಂಪು ಬಣ್ಣಕ್ಕೆ ಕಾರಣ. ಮನುಷ್ಯನಲ್ಲಿ ವೈದ್ಯರು ರಕ್ತದ ಗುಣವನ್ನು ಪರೀಕ್ಷಿಸಲು ಉಗುರಿನ ಬಣ್ಣವನ್ನು ನೋಡುತ್ತಾರೆ. ಆದರೆ ಲುನ್ಯುಲ ಭಾಗದಲ್ಲಿ ಉಗುರು ಬೆಳ್ಳಗಿರುತ್ತದೆ. ಏಕೆಂದರೆ ಈ ಜಾಗದಲ್ಲಿ ಜೀವಕೋಶಗಳ ಪದರಗಳು ಹೆಚ್ಚಾಗಿದ್ದು, ಉಗುರಿನ ಪಾರದರ್ಶಕತೆಯು ಕಡಿಮೆಯಾಗಿರುತ್ತದೆ. ಕೆಲವು ಸಮಯಗಳಲ್ಲಿ, ಮನುಷ್ಯನ ಉಗುರುಗಳಲ್ಲಿ ಬೆಳ್ಳಗಿನ ಚುಕ್ಕೆಯಂತಹ ಜಾಗ ಕಂಡುಬರುತ್ತದೆ. ಇದನ್ನು ಸಾಮಾನ್ಯವಾಗಿ ಗರುಡಚುಕ್ಕೆ ಎಂದು ಕರೆಯುತ್ತಾರೆ. ಆದರೆ ಈ ಭಾಗ ಆಕಸ್ಮಿಕವಾಗಿ ಉಗುರಿನಲ್ಲಿ ಗಾಳಿ ತುಂಬಿರುವ ಜಾಗ.

ಉಗುರು ಹುಟ್ಟಿದ ಮೇಲೆ ಹೊರಕ್ಕೆ ಬರುವಾಗ ಮೇಲಿನ ಕಾರ್ನಿಯಲ್ ಪದರವನ್ನು ಭೇದಿಸಿಕೊಂಡು ಹೊರಕ್ಕೆ ಬರುತ್ತದೆ. ಈ ಭೇದಿಸಿದ ಪದರವು ಅಂಗ್ವಿಸ್ ಮತ್ತು ಲ್ಯುನುಲ ಸುತ್ತ ಹರಿದು ಹೋದ ಚರ್ಮದಂತಿರುತ್ತದೆ. ಚಾಚಿಕೊಂಡಿರುವ ಉಗುರಿನ ಮುಂತುದಿಯ ಕೆಳಭಾಗದಲ್ಲಿ ಕಾರ್ನಿಯಲ್ ಪದರವು ಪುನಃ ಭದ್ರಗೊಂಡಿರುತ್ತದೆ. ಈ ಭದ್ರಗೊಂಡಿರುವ ಕಾರ್ನಿಯಲ್ ಪದರ ಹಾಗೂ ಉಗುರಿನ ಮಧ್ಯೆ ಇರುವ ಸ್ವಲ್ಪ ಒರಟಾದ ಚರ್ಮ ಉರಗಗಳ ಉಪಅಂಗ್ವಿಸ್‌ನ ಅವಶೇಷ.



ಸ್ತನಿಗಳ ಪಂಜಗಳಲ್ಲಿ ಅಂಗ್ವಿಸ್ ಪಕ್ಕಗಳಿಂದ ಚಪ್ಪಟೆ ಹೊಂದಿ ಮುಂದಕ್ಕೆ ಬಾಗಿಕೊಂಡಿರುತ್ತದೆ. ಆದ್ದರಿಂದ ಉಪಅಂಗ್ವಿಸ್ ಭಾಗವು ಈ ಪ್ರಾಣಿಗಳಲ್ಲಿ ಕ್ಷೀಣಗೊಂಡಿರುತ್ತದೆ. ಮಾಂಸಾಹಾರಿ ಸ್ತನಿಗಳಲ್ಲಿ ಅಂಗ್ವಿಸ್ ಭಾಗವು ಉಪಅಂಗ್ವಿಸ್ ಭಾಗಕ್ಕಿಂತ ದೊಡ್ಡದಾಗಿದೆ. ಪ್ರಾಣಿಗಳಲ್ಲಿ ಉಪಅಂಗ್ವಿಸ್‌ನ ಕೆಳಭಾಗದಲ್ಲಿರುವ ಮೆತ್ತನೆಯ ಭಾಗ ವೇಗವಾಗಿ ಓಡುವುದಕ್ಕೆ ಸಹಾಯ ಮಾಡುತ್ತದೆ. ಹಾಗೂ ಈ ಪ್ರಾಣಿಗಳ ಭಾರವನ್ನು ಹೊರುತ್ತದೆ. ಬೆಕ್ಕಿನ ಜಾತಿಗೆ ಸೇರಿದ ಮಾಂಸಾಹಾರಿಗಳಲ್ಲಿ ಪಂಜಗಳನ್ನು ಚರ್ಮದ ಒಳಗೆ ಮರೆಸಿಕೊಳ್ಳುವ ಶಕ್ತಿಯಿದ್ದು, ಇದರಿಂದ ಸ್ವಲ್ಪವೂ ಶಬ್ದಮಾಡದೆ ಬೇಟೆಯಾಡಿ ಮಿಕಗಳನ್ನು ಹಿಡಿಯಲು ಸಹಾಯವಾಗುತ್ತದೆ.

ಮಂಗಗಳಲ್ಲಿ ಹಾಗೂ ಮಂಗಮಾನವನಲ್ಲಿ ಅಂಗ್ವಿಸ್ ಭಾಗವು ಉಪಅಂಗ್ವಿಸ್ ಭಾಗಕ್ಕಿಂತ ದೊಡ್ಡದಿರುತ್ತದೆ. ಈ ಭಾಗವು ಮಾಂಸಾಹಾರಿ ಪ್ರಾಣಿಗಳ ಉಪಅಂಗ್ವಿಸ್ ಭಾಗಕ್ಕಿಂತ ಕ್ಷೀಣಗೊಂಡಿರುತ್ತದೆ. ಹಾಗೂ ಈ ಪ್ರಾಣಿಗಳಲ್ಲಿ ಮರವನ್ನು ಬಲವಾಗಿ ಅವುಚಿಕೊಳ್ಳಲು ಬೆರಳುಗಳ ತುದಿಯಲ್ಲಿರುವ ಮೆತ್ತೆಗಳು ಸಹಾಯಮಾಡುತ್ತವೆ.

(ಎಚ್.ಎಸ್.ವೈ.)

**ಉಗ್ರಾಣದ ಪಿಡುಗುಗಳು:** ಸಂಗ್ರಹಿಸಿಟ್ಟ ಆಹಾರ ಧಾನ್ಯಗಳು ಹಾಗೂ ಉಪಯುಕ್ತ ವಸ್ತುಗಳನ್ನು ಆಕ್ರಮಿಸಿ ಹಾಳುಗೆಡಿಸುವ ಜೀವಿಗಳು. ಸ್ಟೋರ್ ಪೆಸ್ಟ್ ಎಂದೂ ಹೆಸರಿದೆ. ಬೆಳೆದ ಆಹಾರ ಧಾನ್ಯಗಳನ್ನು ಮುಂದಿನ ಉಪಯೋಗಕ್ಕೆ ಸಂಗ್ರಹಿಸಿಡುವ ಅವಶ್ಯಕತೆ ಇದೆ. ದ್ವಿದಳ ಧಾನ್ಯಗಳು, ಏಕದಳ ಧಾನ್ಯಗಳು, ಎಣ್ಣೆ ಬೀಜಗಳು, ಒಣ ಹಣ್ಣುಗಳು, ಹೊಗೆಸೊಪ್ಪು, ಗೇರು, ಏಲಕ್ಕಿ, ಆಲೂಗೆಡ್ಡೆ, ಶುಂಠಿ, ಅರಿಶಿನದಂತಹ ಆಹಾರ ಧಾನ್ಯಗಳನ್ನು ಕೀಟಗಳಿಂದ ರಕ್ಷಿಸಿಡುವುದು ಅವಶ್ಯಕ. ಕಾರಣ, ಈ ಧಾನ್ಯಗಳನ್ನು ಹಲವು ಕೀಟಗಳು, ಶಿಲೀಂಧ್ರ, ಬ್ಯಾಕ್ಟೀರಿಯ ಮತ್ತು ಇಲಿಗಳು ತಿಂದು ಹಾಳು ಮಾಡುತ್ತವೆ. ಆದ್ದರಿಂದ ಈ ಜೀವಜಂತುಗಳನ್ನು ಹತೋಟಿಯಲ್ಲಿಡಬೇಕು. ಆಹಾರ ಧಾನ್ಯಗಳನ್ನು ಸಂರಕ್ಷಿಸಲು ಸಣ್ಣ ಸಣ್ಣ ಧಾರಕಗಳು, ಕಣಜ, ಹಗೇವು, ಹಲವು ಬಗೆ ಕಡಿಕೆ, ಓಡೆ, ಗಳಗೆ, ಮಳಿಗೆ, ದೊಡ್ಡ ಉಗ್ರಾಣಗಳಲ್ಲಿ ರಾಶಿಯಾಗಿ ಮತ್ತು ಚೀಲಗಳಲ್ಲಿಡಲಾಗುತ್ತಿದೆ. ಈ ಎಲ್ಲಾ ಸಂರಕ್ಷಣಾ ವಸ್ತುಗಳಲ್ಲಿ ಕೀಟಗಳ ಹಾವಳಿ ಇರುತ್ತದೆ. ಉಗ್ರಾಣದ ಪಿಡುಗುಗಳಲ್ಲಿ ಮುಖ್ಯವಾದವು ಕೀಟಗಳು. ಇವು ಜೀರುಂಡೆಗಳು (ಬೀಟಲ್ಸ್) ಮತ್ತು ಪತಂಗಗಳ



ಬೀನ್ ಬ್ರುಚಿಡ್ ಕೊರೆದ ಬೀನ್

(ಮಾತ್ಸ್) ಗುಂಪಿಗೆ ಸೇರಿವೆ. ಜೀರುಂಡೆಗಳು ಪ್ರಾಯದಲ್ಲಿ ಮತ್ತು ಡಿಂಬದ ಹಂತದಲ್ಲಿ, ಪತಂಗಗಳು ಡಿಂಬದ ಹಂತದಲ್ಲಿ ಮಾತ್ರ ಧಾನ್ಯಗಳನ್ನು ತಿಂದು ನಷ್ಟಪಡಿಸುತ್ತವೆ. ಈ ಕೀಟಗಳ ಜೀವನ ಚರಿತ್ರೆ, ನಡತೆ, ಒಂದೇ ತರಹ ಇದ್ದರೂ, ಇವುಗಳ ಹತೋಟಿಗೆ ವಿಭಿನ್ನ ಕ್ರಮಗಳನ್ನು ಅನುಸರಿಸಬೇಕು.

ಕರ್ಕ್ಯೂಲಿಯೊನಿಡೆ ಕುಟುಂಬದ ಅಕ್ಕಿ ಮೂತಿಹುಳು ಸೈಟೊಫಿಲಸ್ ಒರೈಜಿ (ಕೆಲಾಂಡ್ರ ಒರೈಜಿ) ಪ್ರಪಂಚದಲ್ಲೆಲ್ಲಾ ಜೀವಿಸುತ್ತದೆ. ಉಷ್ಣದೇಶಗಳಲ್ಲಿ ಸಾಮಾನ್ಯ. ಭಾರತ ಇದರ ತೌರೂರು. ಬತ್ತ, ಗೋಧಿ, ಜೋಳದ ಧಾನ್ಯಗಳಿಗೆ ಇದರ ಪಿಡುಗು ಹೆಚ್ಚು. ಇದು ಗದ್ದೆಗಳಲ್ಲಿ ಬೆಳೆದು, ಪ್ರೌಢಾವಸ್ಥೆಗೆ ತಲುಪಿ ತೆನೆಗಳ ಮೇಲೆ ವಾಸಿಸುತ್ತದೆ. ಭಾರತದಲ್ಲಿ ಈ ಕೀಟದಿಂದ ಹತ್ತು ಕೋಟಿ ರೂಪಾಯಿ ಮೌಲ್ಯದ ಆಹಾರ ಧಾನ್ಯ ನಷ್ಟವಾಗುತ್ತದೆ.



ಕಾಫಿ ಬೆರಿ ಕೊರಕ (ಹೈಪೊಥೆನೆಮಸ್ ಹೆಂಪಿ) ಕೊರೆದ ಕಾಫಿ ಬೀಜಗಳು

ಇದರ ಗಾತ್ರ ಕಾಳಿನಷ್ಟು, ತಲೆ ಸೊಂಡಿಲಿನಂತೆ ಚಾಚಿದ್ದು ತುದಿಯಲ್ಲಿ ಒಂದು ಜೊತೆ ಗಟ್ಟಿಯಾದ ದವಡೆಗಳಿವೆ. ಬಣ್ಣ ಕಪ್ಪು, ಬೂದು, ಕೆಂಪು ಮಿಶ್ರಿತ, ಬೆನ್ನಿನ ಮೇಲೆ ತೆಳು ಹಳದಿ ಗುರುತುಗಳಿವೆ. ಗಂಡಿನ ಮೂತಿ ಹೆಣ್ಣಿನ ಮೂತಿಗಿಂತ ಚಿಕ್ಕದಾಗಿದ್ದು ಅಗಲವಾಗಿದೆ. ಹೆಣ್ಣು, ಕಾಳಿನ ಮೆದು ಭಾಗದಲ್ಲಿ ಮೂತಿಯಿಂದ ರಂಧ್ರವನ್ನು ಮಾಡಿ, ಹಿಂದಕ್ಕೆ ತಿರುಗಿ, ಒಂದು ಮೊಟ್ಟೆಯನ್ನಿಡುತ್ತದೆ. ಒಂದು ಹೆಣ್ಣು ಸು. 250–400 ಮೊಟ್ಟೆಗಳನ್ನಿಡುತ್ತದೆ.

ಮೊಟ್ಟೆ ಬಿಳುಪು ಪಾರದೀಪಕ, ಮೃದು, ಕುಳಿಯ ಆಕಾರಕ್ಕೆ ಹೊಂದಿಕೊಳ್ಳುತ್ತದೆ. ಸು. ಒಂದು ವಾರದಲ್ಲಿ ಮೊಟ್ಟೆಯಿಂದ ಮರಿಹುಳು ಹೊರ ಬರುತ್ತದೆ. ಮರಿಹುಳುವಿಗೆ ಗ್ರಬ್ ಎನ್ನುವರು. ಗ್ರಬ್ ಹಳದಿ ಬಣ್ಣದಿಂದಿದ್ದು, ಇದರ ದವಡೆಗಳು ಬೂದು ಬಣ್ಣಯುಕ್ತವಾಗಿವೆ. ಕಾಲುಗಳಿಲ್ಲ. ಕಾಳಿನೊಳಗಿನ ತಿರುಳನ್ನು ಕೊರೆದು ತಿಂದು, 19–34 ದಿನಗಳಲ್ಲಿ ಹುಳದ ಹಂತ ಮುಗಿಸಿ ಕೋಶವಾಗುತ್ತದೆ. ಕೋಶ (ಪ್ಯೂಪ) ಉದ್ದವಾಗಿದೆ. 3–6 ದಿನಗಳಲ್ಲಿ ಕೋಶಾವಸ್ಥೆ ಹಂತ ತಲುಪಿ ಪ್ರಾಯದ ಮೂತಿ ಹುಳುವಾಗುತ್ತದೆ. ಜೀವನ ಚರಿತ್ರೆಯ ಅವಧಿ ಪ್ರಭೇದಕ್ಕನುಗುಣವಾಗಿ ಮತ್ತು ಉಷ್ಣ ಮತ್ತು ತೇವಾಂಶವನ್ನನುಸರಿಸಿ ವ್ಯತ್ಯಾಸವಾಗುವುದು. ವರ್ಷದಲ್ಲಿ ಸಾಮಾನ್ಯವಾಗಿ 5 ಬಾರಿ ಸಂತಾನೋತ್ಪತ್ತಿ ಮಾಡುತ್ತವೆ. ಮೊಟ್ಟೆಯಿಂದ ಮೂತಿ ಹುಳುವಾಗುವವರೆಗೂ ಬೇಸಿಗೆಯಲ್ಲಿ ಒಂದು ತಿಂಗಳು, ಪ್ರತಿಕೂಲ ಹವಾಮಾನದಲ್ಲಿ 2–3 ತಿಂಗಳು ತೆಗೆದುಕೊಳ್ಳುತ್ತವೆ.



ಕಣಜದ ಮೂತಿ ಹುಳು, ಸೈಟೊಫಿಲಸ್ ಗ್ರೆನೇರಿಯಸ್ ಇದನ್ನು ಗ್ರೈನ್ ವೀವಿಲ್ ಅಥವ ಗ್ರಾನರಿ ವೀವಿಲ್ ಎನ್ನುತ್ತಾರೆ. ಯೂರೋಪ್, ಅಮೇರಿಕಗಳಲ್ಲಿ ಇದರ ಹಾವಳಿ ಹೆಚ್ಚು. ಆದರೆ, ಭಾರತದಲ್ಲಿ ಕಡಿಮೆ. ಇದರ ನಡತೆ, ಜೀವನ ಚರಿತ್ರೆ ಬಹುತೇಕ ಸೈ. ಓರೈಜಿಯನ್ನು ಹೋಲುತ್ತದೆ. ಆದರೆ ಇದರ ಗಾತ್ರ ದಪ್ಪ, ಮೈಬಣ್ಣ ಬೂದು, ಎದೆಯ ಕುಳಿಗಳು ಗೋಳಾಕಾರ, ಬೆನ್ನಿನ ಮೇಲೆ ಗುರುತುಗಳಿಲ್ಲ.




ಅಕ್ಕಿ ಕೊರಕ ಹುಳು

ಲೆಸ್ಸರ್ ಗ್ರೈನ್ ಬೋರರ್ (ರೈಜೋಪೆರ್ತ ಡಾಮಿನಿಕ) ಬಾಸ್ಟ್ರಿಕೈಡೆ ಕುಟುಂಬದ್ದು. ಇದನ್ನು ಆಸ್ಟ್ರೇಲಿಯದ ಗೋದಿ ಹುಳುವೆನ್ನುವರು. ಈ ಕೀಟ ಅತ್ಯಂತ ವಿನಾಶಕಾರಿ. ಶೇಖರಿಸಿದ್ದ ಕಾಳಿನ ಹಿಟ್ಟಿಗೂ ಪಿಡುಗಾಗುತ್ತದೆ. ಇದರ ತವರು ಭಾರತ. ವ್ಯಾಪಾರದ



ವೀವಿಲ್

ಮೂಲಕ ಇತರ ದೇಶಗಳಿಗೂ ಹರಡಿದೆ. ಹಿಟ್ಟು, ಧಾನ್ಯ, ಚರ್ಮ ಮತ್ತು ಮರದ ವಸ್ತುಗಳನ್ನು ತಿಂದು ಬದುಕುತ್ತದೆ. ಮರವನ್ನು ಕೊರೆಯುವ ಕುಟ್ಟೆಹುಳದ ಗುಂಪಿಗೆ ಸೇರಿದ ಈ ಕೀಟ, ಪ್ಯಾಕ್ ಮಾಡುವ ಪೆಟ್ಟಿಗೆ ಮರದಲ್ಲಿ, ಕಿರಾಣಿ ಗಂದಿಗೆ ವಸ್ತುಗಳ ಮೇಲೆ, ಬೆಂಡು, ಒಣ ಹಣ್ಣುಗಳ ಮೇಲೆ ಹಾವಳಿ ಮಾಡುತ್ತದೆ. ಧಾನ್ಯವನ್ನು ಕೊರೆದು, ಟೊಳ್ಳು ಮಾಡಿ, ಹೊರಪೊರೆಯನ್ನು ಮಾತ್ರ ಬಿಡುತ್ತದೆ. ದೊಡ್ಡ ಕಾಳಾದ ಮುಸುಕಿನ ಜೋಳದಲ್ಲಿ 4 ದುಂಬಿಗಳವರೆಗೂ ಇರುತ್ತವೆ. ಹೊಲದಲ್ಲಿ ಗೋದಿ ತೆನೆಗಳ ಮೇಲೆ ಇದು ಹಾವಳಿ ಮಾಡುತ್ತದೆ.

ಈ ಕೀಟದ ವರ್ತುಳ ಸಣ್ಣ, ಮೈಬಣ್ಣ ಕಪ್ಪು–ಬೂದು. ತಲೆ ಬಾಗಿದ್ದು, ಎದೆಯ ಕೆಳಗೆ ತ್ರಿಕೋನಾಕಾರವಾಗಿದೆ. ದವಡೆಗಳು ಗಟ್ಟಿ. ಹೆಣ್ಣು ದುಂಬಿ ಕಾಳಿನ ಮೇಲೆ ಮೊಳಕೆ ಬರುವ ಕಡೆ, ಚೀಲ, ಗೋಡೆ ಬಿರುಕುಗಳಲ್ಲಿ ಮೊಟ್ಟೆಗಳನ್ನಿಡುತ್ತದೆ. ಒಂದು ಹೆಣ್ಣು 300–500 ಮೊಟ್ಟೆಗಳವರೆಗು, ಒಂದೊಂದಾಗಿ ಅಥವ ಗುಂಪಾಗಿಡುತ್ತದೆ.

ಮೊಟ್ಟೆ ಬುಗುರಿಯಾಕಾರವಾಗಿದ್ದು, ಬಿಳುಪು ಬಣ್ಣ ಇದೆ. ಮರಿಗಳು 5–6 ದಿನಗಳಲ್ಲಿ ಮೊಟ್ಟೆಯಿಂದ ಹೊರ ಬರುತ್ತವೆ. ಅವುಗಳ ಗ್ರಬ್ಸ್ ಚಟುವಟಿಕೆಯಿಂದಿದ್ದು, ನೇರವಾಗಿ ಕಾಳನ್ನು ಕೊರೆಯುತ್ತವೆ. 4–5 ಸಲ ಚರ್ಮದ ಕವಚವನ್ನು ಕಳಚಿ ಸು. 44 ದಿನಗಳಲ್ಲಿ ಪೂರ್ತಿ ಬೆಳೆದು ಕೋಶವಾಗುತ್ತವೆ. 7–8 ದಿನಗಳ ಅನಂತರ ಕೋಶ ಪ್ರೌಢಾವಸ್ಥೆ ಸೇರಿ, ಮುಂದಿನ ಸಂತತಿ, ದುಂಬಿಯಾಗುತ್ತದೆ. ಜೀವನ ಚರಿತ್ರೆಯ ಕಾಲ ಸು. 2 ತಿಂಗಳು, ವರ್ಷದಲ್ಲಿ 5 ಸಂತತಿಗಳು.

ಖಾಪ್ರ ಟ್ರೋಗೊಡೆರ್ಮ (ಗ್ರನೇರಿಯ ಡೆರ್ಮಿಸ್ಟಿಡಿ) ವಿಶ್ವವ್ಯಾಪಿಯಾಗಿದೆ. ಬಹಳ ಕೆಟ್ಟ ಕೀಟ. ಗೋದಿ ಇದರ ಮುಖ್ಯ ಆಹಾರ. ಓಟ್ಸ್, ಅಕ್ಕಿ, ಜೋಳ, ಮುಸುಕಿನ ಜೋಳ, ಒಣತರಕಾರಿ, ಪ್ರಾಣಿ ವಸ್ತುಗಳಿಗು ಹಾವಳಿ ಮಾಡುತ್ತದೆ. ರಾಶಿಯ ಮೇಲ್ಪೊದರಗಳಲ್ಲಿರುತ್ತದೆ. ಬಹಳ ಕೆಳಕ್ಕೆ ಹೋಗಲಾರದು. ಪ್ರೌಢಾವಸ್ಥೆಯಲ್ಲಿನ ಕೀಟಗಳಿಂದ ನಷ್ಟವಿಲ್ಲ. ಆದರೆ ಗ್ರಬ್‌ಗಳು ನಷ್ಟವನ್ನುಂಟು ಮಾಡುತ್ತವೆ.

ಹೆಣ್ಣು ದುಂಬಿ, ಕಾಳಿನ ಮೇಲೆ ಮೊಟ್ಟೆಗಳನ್ನಿಡುತ್ತದೆ. ಒಂದು ಹೆಣ್ಣು 125 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆ 6–16 ದಿನಗಳಲ್ಲಿ ಒಡೆದು ಮರಿಯಾಗುತ್ತದೆ.

ಗ್ರಬ್ ಬೂದು–ಬಿಳುಪು ಬಣ್ಣದಿಂದ ಕೂಡಿದೆ. ಹಿಂಭಾಗದ ಖಂಡಗಳ ಮೇಲೆ ಒಂದು ತರಹ ಬಾಲವಿದ್ದಂತೆ, ಚಲಿಸುವ ನೇರವಾದ ಕೂದಲುಗಳ ಕಟ್ಟಿದೆ. ಸಣ್ಣ ಗ್ರಬ್, ಕಾಳನ್ನು ಕಡಿಯಲಾರದು. ಬೆಳೆದ ಗ್ರಬ್‌ಗಳು ಕಾಳನ್ನು ಕಡಿದು ಉದುರಿಸಿದ, ಕಸವನ್ನು ತಿನ್ನುತ್ತವೆ. ಹುಳುವಿನ ಬೆಳೆವಣಿಗೆಯ ಕಾಲದಲ್ಲಿ ಬಹಳ ವ್ಯತ್ಯಾಸವಿದೆ. ಉಷ್ಣ ಮತ್ತು ತೇವಾಂಶವನ್ನು ಆಧರಿಸಿ ಹುಳದ ಹಂತ ಮುಗಿಸಲು, ಅದು 200 ದಿನಗಳಿಂದ 4 ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಚಳಿಗಾಲದಲ್ಲಿ, ಬಿರುಕು, ರಂಧ್ರ, ಚೀಲಗಳ ಅಂಚು, ಹೆಣಿಗೆಗಳಲ್ಲಿರುತ್ತವೆ. ಕೋಶದ ಕಾಲ 6–17 ದಿನಗಳು. ಹುಟ್ಟಿದ ದುಂಬಿಗಳು 2–3 ದಿನಗಳಲ್ಲೇ ಮೊಟ್ಟೆಗಳನ್ನಿಡುತ್ತವೆ.

ಟ್ರೈಬೋಲಿಯಂ ಕ್ಯಾಸ್ಟೇನಿಯಂ (ಟ್ರೈ. ಫೆರುಜಿನಿಯಂ) ಟೆನೆಬ್ರಿಯೊನಿಡೆ ಕುಟುಂಬಕ್ಕೆ ಸೇರಿದೆ. ಬೇರೆ ದುಂಬಿಗಳು ಕಡಿದು ಪುಡಿಮಾಡಿದ ಕಾಳುಗಳೇ ಇದರ ಆಹಾರ. ಇದನ್ನು ರಸ್ಟ್‌ರೆಡ್‌ಫ್ಲೋರ್ ದುಂಬಿ ಎನ್ನುವರು. ಇದು ಗಾತ್ರದಲ್ಲಿ ಸಣ್ಣದಾಗಿದೆ. ಮೈಬಣ್ಣ ಕೆಂಪು – ಬೂದು. ತಲೆ, ಎದೆ, ಮತ್ತು ಹೊಟ್ಟೆ ಪ್ರತ್ಯೇಕವಾಗಿ ಗುರುತಿಸಬಹುದು. ಕುಡಿ ಮೀಸೆಗಳು ಚೆನ್ನಾಗಿವೆ. ಕೊನೆಯ ಖಂಡಗಳು ದಪ್ಪ. ಚೆನ್ನಾಗಿ ಹಾರಬಲ್ಲುದು. ಗೋದಿಹಿಟ್ಟು, ಮೈದ, ಸೋಜಿಗಳಿಗೆ ಮಿಲ್ಲುಗಳಲ್ಲಿ, ಹುರುಳಿ, ಬಟಾಣಿ, ಶುಂಠಿ, ಒಣಹಣ್ಣು, ಒಣಬೇರು, ಸಂಗ್ರಹಿಸಿದ ಕಾಯಿಗಳು, ಚಾಕೊಲೆಟ್, ಗಂದಿಗೆ ವಸ್ತುಗಳು, ನಶ್ಯ, ಬೇಕಿಂಗ್ ಪುಡಿ, ಮೆಣಸಿನಕಾಯಿ.

ಮೊಟ್ಟೆಗಳನ್ನು ಹಿಟ್ಟಿನಲ್ಲಿಡುತ್ತದೆ. ಒಂದು ಹೆಣ್ಣು, ಸರಾಸರಿ 450 ಮೊಟ್ಟೆಗಳನ್ನಿಡುತ್ತದೆ. ಸಣ್ಣ, ವರ್ತುಳ, ತುದಿಗಳೆರಡು ಗುಂಡು, ಬಿಳುಪು. 5–12 ದಿನಗಳಲ್ಲಿ ಒಡೆಯುತ್ತದೆ.

ಗ್ರಬ್ ಸಣ್ಣ, ವರ್ತುಳ, ತಂತಿಯಂತೆ ಇದೆ. ಶರೀರದ ಮೇಲೆ ಸೂಕ್ಷ್ಮ ಕೂದಲುಗಳಿವೆ. ಕೊನೆ ಸಂಧಿಯ ಮೇಲೆ ಒಂದು ಜತೆ ಮುಳ್ಳಿನಂತೆ ಅನುಬಂಧಗಳಿವೆ. ಮಾಸಲು ಹಳದಿ ಬಣ್ಣ.

ಕೋಶದ ಮೇಲೆ ಬಿಳುಪು ಹಳದಿ. ಮೇಲ್ಗಡೆ, ಗ್ರಬ್‌ನಲ್ಲಿದ್ದಂತೆ ಕೂದಲುಗಳಿವೆ. 6–9 ದಿನಗಳಲ್ಲಿ ಕೋಶ ಮಾರ್ಪಾಡುಗೊಂಡು ಪ್ರೌಢಾವಸ್ಥೆ ತಲುಪುತ್ತದೆ. ಜೀವನ ಚರಿತ್ರೆಯ ಕಾಲ 6 ವಾರಗಳು.

ಟ್ರೈ. ಕನ್‌ಫ್ಯೂಸಂ ಮತ್ತು, ಟ್ರೈ. ಕ್ಯಾಸ್ಟೇನಿಯಂ ಜೊತೆಯಲ್ಲಿರುತ್ತವೆ. ಸೂಕ್ಷ್ಮವಾಗಿ ನೋಡಿದರೆ ಇವುಗಳನ್ನು ಪ್ರತ್ಯೇಕಿಸಬಹುದು. ಇಲ್ಲವಾದಲ್ಲಿ ಎರಡು ಒಂದೇ ತರಹ ಕಾಣುತ್ತವೆ. ಕಾರಣ, ಕನ್‌ಫ್ಯೂಸಂ ಹೆಸರು ಬಂದಿದೆ. ನಡತೆ, ಜೀವನ ಚರಿತ್ರೆಯಲ್ಲಿ ಎರಡು ಒಂದೇ ತರಹ. ಆದರೆ ಇದರ ಎದೆ, ತಲೆಗಳ ಮೇಲೆ ಸೂಕ್ಷ್ಮರಂಧ್ರಗಳಿವೆ. ಕಣ್ಣುಗಳು ಹಾಲೆಯಾಗಿ ಮಡಿಸಿವೆ. ಕುಡಿಮೀಸೆಗಳು, ಬುಡದಿಂದ ತುದಿಯವರೆಗು ಸ್ವಲ್ಪ ಸ್ವಲ್ಪವಾಗಿ ದಪ್ಪವಾಗುತ್ತದೆ.

ಲ್ಯಾತೆಟಿಕಸ್ ಒರೈಜಿ (ಟೆನಿಬ್ರಿಯೊನಿಡೆ): ಇದು ಉದ್ದ ತಲೆಯ ಹಿಟ್ಟಿನ ದುಂಬಿ. ಇತರ ದುಂಬಿಗಳ ಜತೆಯಲ್ಲಿರುತ್ತದೆ. ಗೋದಿ, ರೈ, ಒಣಗಿದ ಸಸ್ಯವಸ್ತುಗಳನ್ನು ತಿನ್ನುತ್ತದೆ. ದುಂಬಿ ಸಣ್ಣದು. ಮಾಸಲು – ಹಳದಿ ಬಣ್ಣ ಇದೆ. ಕುಡಿಮೀಸೆಗಳು ಗದೆಯಾಕಾರ.

ಮೊಟ್ಟೆ ವರ್ತುಳ, ಮೃದು, ಪಾರದೀಪಕ. ಗ್ರಬ್ ಹಳದಿ–ಬಿಳುಪು. ತಲೆ, ಕಾಲುಗಳು ಕಪ್ಪು. ಬೆಳೆದ ಗ್ರಬ್ ಚಿಕ್ಕದಾಗಿದೆ. ಮೈತುಂಬ ಕೂದಲು. ಕೋಶ ಕೃಶ. ಶರೀರದ ಭಾಗಗಳು ಕಾಣುವುದಿಲ್ಲ. ಈ ಕೀಟ, ಟ್ರೈಕ್ಯಾಸ್ಟೇನಿಯಂ ಅನ್ನು ಬಹುಮಟ್ಟಿಗೆ ಹೋಲುತ್ತದೆ.

ಗರಗಸ ಹಲ್ಲಿನ ದುಂಬಿ. (ಒರೈಜಿ ಫೈಲಸ್ ಸೂರಿನಾಮೆನ್ಸಿಸ್) ಕುಕುಜಿಡೆ ಕುಟುಂಬದ್ದು. ಎದೆಯ ಪಕ್ಕಗಳಲ್ಲಿ 6 ಸಣ್ಣ ಗರಗಸದ ಹಲ್ಲಿನಂತ ಚೂಪುಗಳಿವೆ. ಆದ್ದರಿಂದ ಈ ಹೆಸರು. ಎಲ್ಲ ದೇಶಗಳಲ್ಲಿ ಮಿಲ್ಲು, ಉಗ್ರಾಣದಲ್ಲಿರುತ್ತದೆ. ಹಿಟ್ಟು, ಮೈದ, ಬಿಸ್ಕತ್, ಒಣದ್ರಾಕ್ಷಿ, ಹೊಗೆಸೊಪ್ಪು, ನಶ್ಯ, ಒಣಕೊಬ್ಬರಿ, ಸಸ್ಯ ಸಂಬಂಧದ ವಸ್ತುಗಳನ್ನು ತಿನ್ನುತ್ತದೆ.

ದುಂಬಿಗಳು ಬಹಳ ಕಾಲ ಬದುಕಿರುತ್ತವೆ. ಸಣ್ಣ, ಕೃಶ, ಚಪ್ಪಟೆ, ಬೂದು ಹಾರುವುದಿಲ್ಲ. ಹೆಣ್ಣು ತನ್ನ ಜೀವಿತ ಕಾಲದ 6–10 ತಿಂಗಳಲ್ಲಿ 45 ರಿಂದ 285 ಮೊಟ್ಟೆಗಳನ್ನಿಡುತ್ತದೆ. ಆಹಾರದ ಮಧ್ಯೆ ಒಂದೊಂದಾಗಿಡುತ್ತದೆ. ಮೊಟ್ಟೆ ಸಣ್ಣವು. ಬಿಳುಪಾಗಿವೆ. 3–5 ದಿನಗಳಲ್ಲಿ ಮರಿಯಾಗುತ್ತವೆ.

ಗ್ರಬ್ ಹರಿದಾಡುತ್ತ ತಿನ್ನುತ್ತದೆ. ಬೆಳೆದ ಅನಂತರ, ಕಾಳಿನ ಚೂರುಗಳನ್ನು ಅಂಟಿಸಿ, ಗೂಡನ್ನು ಮಾಡಿಕೊಳ್ಳುತ್ತದೆ. ಕೋಶವೂ ಅದರೊಳಗೆ ಒಂದು ವಾರದ ನಂತರ ದುಂಬಿಯಾಗುತ್ತದೆ. ಜೀವನ ಚರಿತ್ರೆಯ ಕಾಲ 27 ದಿನಗಳಿಂದ 315 ದಿನಗಳು.

ಬತ್ತದ ಹೂಜಿ (ಸೈಟೊಟ್ರೋಗ ಸೀರಿಯಲೆಲ್ಲ) ಗೆಲೆಕಿಯಾಡೆ ಕುಟುಂಬಕ್ಕೆ ಸೇರಿದೆ. 1736 ರಲ್ಲಿ ಫ್ರಾನ್ಸಿನ ಅಂಗೋವ್‌ಮಾಯ್ ಪ್ರಾಂತದಲ್ಲಿ ಉಪದ್ರವಕಾರಿಯಾಗಿ ಕಂಡಿದ್ದರಿಂದ ಇದನ್ನು ಅಂಗೋವ್‌ಮಾಯ್ ಧಾನ್ಯದ ಪತಂಗವೆನ್ನುವರು. ವಲಸೆಗಾರರು, ವ್ಯಾಪಾರಗಾರರಿಂದ ಇದು ಪ್ರಪಂಚದ ಎಲ್ಲ ದೇಶಗಳಿಗೂ ಹರಡಿತು. ಬಂಗಾಳದಲ್ಲಿ ಇದರ ಹೆಸರು ಸುರ್ವಿ. ಮಿಲ್ ಮಾಡದಿರುವ ಬತ್ತ, ಗೋದಿ, ಜೋಳ, ಮುಸುಕಿನ ಜೋಳಗಳ ಪ್ರಮುಖ ಶತ್ರು. ಈ ಧಾನ್ಯಗಳ ಕಾಳುಗಳನ್ನು ರಾಶಿ ಹಾಕಿದಾಗ, ಅಥವಾ ಕಣಜಗಳಲ್ಲಿ ಶೇಖರಿಸಿಟ್ಟಾಗ ಹೂಜಿಗಳು ತುಂಬಿರುತ್ತವೆ. ಯಾವುದೇ ಧಾರಕಗಳಲ್ಲಿ ಧಾನ್ಯಗಳನ್ನು ತುಂಬಿದ್ದಾಗ, ಹೂಜಿಗಳು, ಮೇಲ್ಪದರಗಳಲ್ಲಿ ಹೆಚ್ಚು ನಷ್ಟಪಡಿಸುತ್ತವೆ. ಕಾರಣ, ಈ ಕೀಟವನ್ನು ಆರ್ಥಿಕವಾಗಿ ಪ್ರಾಮುಖ್ಯತೆ ಪಡೆದಿರುವ ಕೀಟವೆನ್ನುವರು.

ಈ ಪಿಡುಗು, ಹೊಲಗದ್ದೆಗಳಲ್ಲೇ ಹಾಲು ತುಂಬುತ್ತಿರುವ ಕಾಳುಗಳ ಮೇಲೆ ಪ್ರಾರಂಭಿಸಿ, ಕೊಯ್ಲಾಗುವವರೆಗೂ ಹೆಚ್ಚುತ್ತಿದ್ದು, ಕಣ ಮಾಡಿ, ದಾಸ್ತಾನು ಮಾಡಿದ ಮೇಲೆ ಕಣಜ, ಉಗ್ರಾಣಗಳಿಗೆ ದಾಳಿಯಿಡುತ್ತದೆ. ಈ ಪ್ರದೇಶಗಳಲ್ಲಿ ವಂಶೋತ್ಪತ್ತಿ ಮಾಡುತ್ತದೆ. ಲಾರ್ವ ಹಂತದಲ್ಲಿ ಕಾಳನ್ನು ಕೊರೆದು, ರಂಧ್ರ ಮುಚ್ಚುವಂತೆ ರೇಷ್ಮೆ ಬಲೆಯನ್ನು ಸ್ರವಿಸಿ, ಒಳಗೇ ತಿರುಳನ್ನು ತಿಂದು ಬೆಳೆಯುತ್ತದೆ. ಕಾಳು ಟೊಳ್ಳಾಗಿ, ಹೊರ ಪೊರೆ ಮಾತ್ರ ಬಿಟ್ಟಿರುತ್ತದೆ. ಹೂಜಿಗಳು ರಂಧ್ರವನ್ನು ತಳ್ಳಿ ಹೊರಕ್ಕೆ ಬಂದು ಹೆಚ್ಚಾದಾಗಲೇ, ಈ ಹುಳದ ಹಾವಳಿ ಬಗ್ಗೆ ತಿಳಿಯುತ್ತದೆ.

ಹೂಜಿ ಸಣ್ಣದಾಗಿದ್ದು, ಹಳದಿ–ಬೂದು ಬಣ್ಣದಿಂದಿದೆ. ರೆಕ್ಕೆಗಳು ಚಿಕ್ಕವು. ಚೂಪು ಅಂಚುಗಳಲ್ಲಿ ಅಗಲವಾಗಿ ಕೂದಲು ಆವರಿಸಿದೆ. ಹೆಣ್ಣು ಕೀಟ ಕಾಳುಗಳ ಮೇಲೆ, ಧಾನ್ಯ ಬಿದ್ದಿರುವ ಕುಳಿ, ಬಿರುಕುಗಳಲ್ಲಿ 120–140 ಮೊಟ್ಟೆಗಳವರೆಗು ಇಡುತ್ತದೆ. ಮೊಟ್ಟೆಗಳು ಮೊದಲು ಬಿಳುಪಿದ್ದು, ಆಮೇಲೆ ಕೆಂಪಾಗಿ. ಗೋಳಾಕಾರವಾಗಿವೆ. ಒಂದು ವಾರದ ನಂತರ ಹುಳು ಮೊಟ್ಟೆಯಿಂದ ಹೊರ ಬಂದು ಕಾಳನ್ನು ಕೊರೆದು, ಒಳಗೇ ಬೆಳೆಯುತ್ತದೆ. ಅದು ಬಿಳುಪಾಗಿದ್ದು ತಲೆ ಹಳದಿ ಬಣ್ಣದಿಂದಿದೆ. ಮೂರು ಜೊತೆ ಕಾಲುಗಳಿವೆ ಮತ್ತು ನಾಲ್ಕು ಜತೆ ಹುಸಿ ಕಾಲು (ಸುಡೊ ಲೆಗ್ಸ್) ಗಳು. ಕಾಳಿನೊಳಗೆ ರೇಷ್ಮೆ ದಾರದಂತಹ ಎಳೆಯನ್ನು ಸುತ್ತ ಸ್ರವಿಸಿಕೊಂಡು ಕೋಶವಾಗುತ್ತದೆ. ಒಂದು ವಾರದ ನಂತರ ಹೂಜಿ ಹೊರಕ್ಕೆ ಬರುತ್ತದೆ. ಜೀವನ ಚರಿತ್ರೆಯ ಕಾಲ 5 ವಾರಗಳು. ವರ್ಷದಲ್ಲಿ 3–4 ಸಂತತಿಗಳಿವೆ.

ಅಕ್ಕಿ ಪತಂಗ, ಕಾರ್ಸೈರ ಕೆಫ಼ಲೋನಿಕ ಪೈರ್‍ಯಾಲಿಡೆ ಕುಟುಂಬಕ್ಕೆ ಸೇರಿದೆ. ಇದು ವಿಶ್ವವ್ಯಾಪಿ. ದಾಸ್ತಾನು ಮಾಡಿದ ಅಕ್ಕಿ, ಶೇಂಗ, ಒಣ ಹಣ್ಣುಗಳು, ಕೋಕೊ, ಬಿಸ್ಕತ್ತು, ಹಿಂಡಿಗಳು, ಚಾಕೊಲೆಟ್, ಸೋಜಿ, ಅಟ್ಟಗಳಿಗೆ ಇದರ ಕಾಟ ಜಾಸ್ತಿ. ತೊಗರಿ ಬೇಳೆ, ಗೋದಿ, ಎಳ್ಳು, ಉದ್ದು, ರಾಗಿ, ತವುಡು, ಕಡಲೆ, ಅಲಸಂದಿ, ಜೋಳಗಳಲ್ಲಿ ಸಹ ವಂಶೋತ್ಪತ್ತಿಮಾಡಿ ಇದು ಬೆಳೆಯುತ್ತದೆ.

ಇದು ನಿಶಾಚರ. ರಾತ್ರಿ ಇದರ ಚಟುವಟಿಕೆ ಹೆಚ್ಚು. ಹಗಲು ಗೋಡೆಗಳ ಮೇಲೆ, ಧಾನ್ಯಗಳ ಮೇಲೆ ನಿಶ್ಚಲವಾಗಿ ಪರಿಸರಕ್ಕೆ ಹೊಂದಿಕೊಂಡು ಕುಳಿತಿರುತ್ತದೆ. ಹೆಣ್ಣು, ಗಂಡಿಗಿಂತ ಉದ್ದ, ದಪ್ಪನಾಗಿದೆ. ರಾತ್ರಿ ಹೊತ್ತು ಪ್ರೌಢಾವಸ್ಥೆಯಲ್ಲಿರುವ ಹೆಣ್ಣು ಕೀಟ ಚೀಲ, ಗೋಡೆ, ಕಾಳುಗಳಲ್ಲಿ ಸರಾಸರಿ 206 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆ ಸಣ್ಣದಾಗಿದ್ದು, ಬಿಳುಪಾಗಿವೆ. ಇವು ಗೋಳಾಕಾರವಾಗಿವೆ. ಮೊಟ್ಟೆಗಳು 4–6 ದಿನಗಳ ಅನಂತರ ಲಾರ್ವವಾಗಿ ಹೊರ ಬರುತ್ತವೆ. ಲಾರ್ವದ ತಲೆ ಅಗಲ, ಹಳದಿ ಬಣ್ಣದಿಂದಿದೆ. ಇದು ಹರಿದಾಡಿ, ಕಾಳನ್ನು ತಿಂದು, ಹೊರಕ್ಕೆ ಕಾಣದಂತೆ, ರೇಷ್ಮೆಯಿಂದ ಗಟ್ಟಿಯಾದ ಪೊರೆಯನ್ನು ಹೆಣೆದುಕೊಳ್ಳುತ್ತದೆ. ನುಚ್ಚು, ಹಿಟ್ಟು, ಕಾಳುಗಳ ಮೇಲೆ ಆ ಗೂಡುಗಳು, ಮೆತ್ತೆಯಾಗಿರುತ್ತವೆ. ಕಾಳುಗಳನ್ನು ಬಿಡಿಸುವುದೇ ಕಷ್ಟ. 35–52 ದಿನಗಳಲ್ಲಿ ಪೂರ್ತಿ ಬೆಳೆದು, ಗೂಡಿನೊಳಗೆ ಕೋಶವಾಗಿ, 9–12 ದಿನಗಳ ಅನಂತರ ಪತಂಗವಾಗುತ್ತದೆ.

ಕಾಳು, ಒಣಹಣ್ಣುಗಳಿಗೆ ಎಫೆಸ್ಟಿಯ ಕಾಟೆಲ್ಲ, ಮೆಡಿಟರೇನಿಯನ್ ಹಿಟ್ಟಿನ ಪತಂಗ, ಎ.ಕ್ಯೂನಿಯೆಲ್ಲ, ಇಂಡಿಯನ್ ಮೀಲ್ ಪತಂಗ – ಪ್ಲೋಡಿಯ ಇಂಟರ್‌ಪಂಕ್ಟೆಲ್ಲ, ಹಿಟ್ಟಿನ ಮೂತಿ ಪತಂಗ – ಪೈರಾಲಿಸ್ ಫ಼ೆರೈನಾಲಿಸ್ ಪತಂಗಗಳು ಹಾವಳಿ ಮಾಡಿ ನಷ್ಟ ಉಂಟು ಮಾಡುತ್ತವೆ. ನುಶಿಗಳು ಮತ್ತು ಸೋಸಿಡ್ ಕೀಟಗಳು ಸಹ ಆಹಾರ ಧಾನ್ಯಗಳಿಗೆ ಪಿಡುಗಾಗಿವೆ.

ದಾಸ್ತಾನು ಮಾಡಿದ ದ್ವಿದಳ ಧಾನ್ಯಗಳ ಕೀಟಗಳು ಕೋಲಿಯಾಪ್ಟೆರ ವರ್ಗದ ಮೈಲಾಬ್ರಿಡೆ (ಬ್ರೂಕಿಡೆ) ಕುಟುಂಬಕ್ಕೆ ಸೇರಿವೆ. ಪ್ಯಾಚಿಮೀರಸ್ ಚೈನೆನ್ಸಿಸ್ (ಕೆಲ್ಲೋಸೊಬ್ರೂಕಸ್ ಚೈನೆನ್ಸಿಸ್) ಎಲ್ಲಾ ಭಾಗಗಳಲ್ಲಿ, ಎಲ್ಲಾ ಬಗೆಯ ದ್ವಿದಳ ಧಾನ್ಯಗಳಿಗೆ ಇದರ ಪಿಡುಗು ಇದೆ. ದುಂಬಿ ಕಾಳಿನ ಮೇಲೆ ಹಲವು ಸಣ್ಣ, ಬಿಳಿ ಚುಕ್ಕೆಗಳಂತಹ ಮೊಟ್ಟೆಗಳನ್ನಿಡುತ್ತದೆ. ಹೊಲದಲ್ಲಿ ಹಸಿರು ಕಾಯಿಗಳ ಮೇಲೆ ಮೊಟ್ಟೆಗಳಿಡುವುದು. ಮೊಟ್ಟೆಯೊಡೆಯಲು 4–5 ದಿನಗಳು ಬೇಕು. ಸಣ್ಣ ಗ್ರಬ್ ಕಾಯಿ ಅಥವ ಬೀಜಗಳನ್ನು ಕೊರೆಯುತ್ತದೆ. ಒಳಗಡೆ ತಿರುಳನ್ನು ತಿಂದು 2–3 ವಾರಗಳಲ್ಲಿ ಪೂರ್ತಿ ಬೆಳೆದು ಒಳಗೇ ಕೋಶವಾಗುತ್ತದೆ. ಕೋಶದಿಂದ ಪತಂಗವಾಗಿ, ಒಟ್ಟು 43 ದಿನಗಳಲ್ಲಿ ಒಂದು ಜೀವನ ಚಕ್ರವನ್ನು ಪೂರೈಸುತ್ತದೆ.

ಧಾನ್ಯ, ದ್ವಿದಳ ಧಾನ್ಯಗಳೇ ಅಲ್ಲದೆ, ಉಗ್ರಾಣಗಳಲ್ಲಿ ದಾಸ್ತಾನು ಮಾಡಿದ ಕಾಫ಼ಿ, ಅಡಿಕೆ, ಹೊಗೆಸೊಪ್ಪು ಮತ್ತು ಅದರ ವಸ್ತುಗಳು, ಗಂದಿಗೆ ಸಾಮಾನು, ಗೆಡ್ಡೆಗೆಣಸು, ಶೇಂಗ, ಹುಣಿಸೆಬೀಜ, ಗೇರು, ಧಾನ್ಯ, ಆಲೂಗೆಡ್ಡೆ, ಕೊಬ್ಬರಿ, ಬಟ್ಟೆ, ಚರ್ಮ, ಉಣ್ಣೆ, ಚೀಸ್ ಮುಂತಾದವುಗಳಿಗೂ ಈ ಕೀಟದ ಬಾಧೆ ಹೆಚ್ಚು.

ಉಗ್ರಾಣದಲ್ಲಿ ಇಲಿಗಳ ಹಾವಳಿ ಜಾಸ್ತಿ. ಸಂಗ್ರಹಿಸಿದ ಎಲ್ಲ ಬಗೆ ವಸ್ತುಗಳನ್ನು ತಿಂದು, ಮಲಿನ ಮಾಡಿ, ಕೆಟ್ಟ ರೋಗಗಳನ್ನು ಹರಡಲು ಕಾರಣವಾಗುತ್ತವೆ. ಇದರಿಂದ ಅಪಾರ ನಷ್ಟವಾಗುತ್ತದೆ. ಪ್ರತಿ ವರ್ಷ ಇವುಗಳಿಂದ 10 ಲಕ್ಷ ಟನ್‌ಗಳಷ್ಟು ಆಹಾರ ಮತ್ತು ಬಿತ್ತನೆ ಬೀಜಗಳು ನಷ್ಟವಾಗುತ್ತದೆ.

ಉಗ್ರಾಣದಲ್ಲಿ ಪಿಡುಗುಗಳ ಕಾಟ ಹೆಚ್ಚಾಗಲು ಹಲವು ಕಾರಣಗಳಿವೆ. ಉಷ್ಣಾಂಶ ಮತ್ತು ತೇವಾಂಶ ಸೂಕ್ತವಾಗಿದ್ದರೆ, ಕೀಟಗಳು ತೀವ್ರಗತಿಯಲ್ಲಿ ಹರಡುತ್ತವೆ. ಆಹಾರ ಮತ್ತು ತೇವಾಂಶ ಅನುಕೂಲವಾಗಿದ್ದರೆ, ಉಷ್ಣತೆ ಒಂದೇ ಅವುಗಳ ಚಟುವಟಿಕೆ, ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಶಾಖ ಅನುಕೂಲವಾಗಿದ್ದರೆ ತನುವು ಮೂತಿಹುಳುಗಳ ಆಕ್ರಮಣಕ್ಕೆ ತಡೆಯಾಗುತ್ತದೆ. ಕೀಟಗಳು ಅವಕ್ಕೆ ಬೇಕಾದ ತನುವನ್ನು ತಮ್ಮ ಆಹಾರದಿಂದ ಮತ್ತು ತಮ್ಮ ಜೀವದ್ರವ್ಯ ಪರಿಣಾಮದ ಫಲವಾಗಿ ತೇವಾಂಶನ್ನುಂಟುಮಾಡಿಕೊಳ್ಳುತ್ತವೆ. ಕೀಟಗಳಿಗೆ ಬೇಕಾದ ಉಷ್ಣದಲ್ಲಿ ಬಹಳ ವ್ಯತ್ಯಾಸವಿದೆ. ಅವು $48.8^0$ ಸೆ ಶಾಖಕ್ಕಿಂತ ಹೆಚ್ಚನ್ನು ತಡೆದು ಕೊಳ್ಳಲಾರವು. ಆದರೆ ಕೀಟಗಳು ಹೆಚ್ಚು ಶಾಖಕ್ಕಿಂತ ಕಡಿಮೆ ಶಾಖವನ್ನು ತಡೆದುಕೊಳ್ಳುತ್ತವೆ. ಕೀಟಗಳು ಉಷ್ಣವಲಯ ನಿವಾಸಿಗಳು. ಭಾರತದಲ್ಲಿ ಇವುಗಳ ಪಿಡುಗು ಸಂಗ್ರಹಿಸಿದ ಧಾನ್ಯಗಳಿಗೆ ಹೆಚ್ಚು. ಇವು ಬಿರುಕು ರಂಧ್ರಗಳಲ್ಲಿದ್ದು, ತಮ್ಮ ಜೀವನ ನಿಭಾಯಿಸುತ್ತವೆ. ತೇವಾಂಶ ಉಷ್ಣದ ಮೇಲೆ ಅವಲಂಬಿಸಿದೆ. ಧಾನ್ಯದಲ್ಲಿರುವ ತೇವಾಂಶವು ಅಪ್ರತ್ಯಕ್ಷವಾಗಿ ಪ್ರಭಾವ ಬೀರುತ್ತದೆ. ವಾತಾವರಣದಲ್ಲಿ ಬದಲಾವಣೆಗಳಾದಂತೆ, ಸಂಗ್ರಹಿಸಿದ ಧಾನ್ಯಗಳ ಉಷ್ಣಾಂಶ ಮತ್ತು ತೇವಾಂಶದಲ್ಲಿ ವ್ಯತ್ಯಾಸವಾದರೆ, ಕೀಟಗಳ ಬೆಳವಣಿಗೆಗೆ ಸಹಕರಿಸುತ್ತವೆ ಮತ್ತು ಆರ್ದ್ರತೆ ಶೇ. 75 ಕ್ಕಿಂತ ಹೆಚ್ಚಾದರೆ ಕೀಟಗಳು ಬೇಗ ಹೆಚ್ಚುತ್ತವೆ. ಧಾನ್ಯದಲ್ಲಿ ತೇವಾಂಶ ಶೇ. 10 ಕ್ಕಿಂತ ಕಡಿಮೆ ಹೆಚ್ಚಾದರೆ ಕೀಟಗಳು ಹೆಚ್ಚುತ್ತವೆ. ಶೇ. 10 ಕ್ಕಿಂತ ತೇವಾಂಶವಿದ್ದರೆ ಕೀಟಗಳಿಗೆ ಅನುಕೂಲವಾಗುವುದಿಲ್ಲ. ಅವುಗಳ ಜೀವದ್ರವ್ಯ ಪರಿಣಾಮ ಪಲ್ಲಟವಾಗುತ್ತದೆ. ಉಷ್ಣ ಹೆಚ್ಚಿದಂತೆ, ಆರ್ದ್ರತೆ ಕಡಿಮೆಯಾಗುತ್ತದೆ. ಆದ್ದರಿಂದ ಸಂಗ್ರಹಿಸಿಡಬೇಕಾದ ಧಾನ್ಯದಲ್ಲಿ ತೇವಾಂಶ ಶೇ. 8 ಕ್ಕಿಂತ ಕಡಿಮೆ ಇರಬೇಕು.

ದಾಸ್ತಾನು ಪಿಡುಗುಗಳ ಹತೋಟಿ: ಹಲವು ದಾಸ್ತಾನು ಕೀಟಗಳ ನಡತೆ, ಜೀವನ ಚರಿತ್ರೆ ಒಂದೇ ತರಹ. ಆಹಾರವಿದ್ದಲ್ಲಿ ಬೇಗ ವೃದ್ಧಿಯಾಗುತ್ತವೆ. ಒಂದೇ ಆಹಾರದಲ್ಲಿ ಎಲ್ಲ ಹಂತಗಳು ಇರುತ್ತವೆ. ಸಾಗಣಿ ಮೂಲಕ, ಎಲ್ಲ ಕಡೆಗೂ ಹರಡುತ್ತವೆ. ಹೊಲಗದ್ದೆ, ತೋಟಗಳಲ್ಲೇ ಕಾಳು ಬಲಿತು ಕೊಯ್ಲಿಗೆ ಬಂದಾಗ ಕಾಣಿಸಿಕೊಳ್ಳುತ್ತವೆ. ಅನಂತರ ಕಣ, ಸಾಗಣೆ ಜತೆಯಲ್ಲಿ, ಉಗ್ರಾಣಗಳಿಗೆ ಸೇರಿ, ದಾಸ್ತಾನು ಪೀಡೆಗಳಾಗುತ್ತವೆ. ಆದ್ದರಿಂದ ಹೊಲಗದ್ದೆಗಳಲ್ಲಿ ಅವು ಕಾಣಿಸಿಕೊಂಡ ಕೂಡಲೆ, ಅಪಾಯಕರವಲ್ಲದ ಕೀಟನಾಶಕವನ್ನು

ಬಳಸಿ, ಹತೋಟಿಗೊಳಿಸಬೇಕು. ಕೊಯ್ಲಾದ ನಂತರ ಉಗ್ರಾಣಕ್ಕೆ ಧಾನ್ಯಾದಿಗಳು ಬರುವವರೆಗೂ, ಪ್ರತಿಹಂತದಲ್ಲಿ ಶುಚಿತ್ವ ಮುಖ್ಯ.

ಸಾಮಾನ್ಯ ಶಿಫಾರಸ್ಸುಗಳು: ರಾಶಿ ಸಂಗ್ರಹಣೆಗೆ ಸಿಮೆಂಟ್ ಕಾಂಕ್ರೀಟ್ ಕಟ್ಟಡಗಳು, ಭೂಮಿಯ ಮೇಲಾಗಲಿ ಅಥವಾ ಕೆಳಗಾಗಲಿ ಅಥವಾ ಡಬ್ಬಿಗಳು ಸೂಕ್ತ. ಆಮೇಲೆ ಇಟ್ಟಿಗೆಗಳಿಂದ ಕಟ್ಟಿ ಒಳಗೋಡೆ, ನೆಲಗಳಿಗೆ, ಸಿಮೆಂಟ್ ಕಾಂಕ್ರೀಟಿನ ಗಿಲಾವು ಮಾಡಿರುವ ಕಟ್ಟಡಗಳು ಒಳ್ಳೆಯವು. ಮೂಟೆಗಳ ಸಂಗ್ರಹಣೆಗೆ, ಸಿಮೆಂಟ್–ಕಾಂಕ್ರೀಟ್ ಅಥವಾ ಇಟ್ಟಿಗೆಗಳಿಂದ ಕಟ್ಟಿ, ಧೂಪನಕ್ಕೆ ಎಲ್ಲ ಅನುಕೂಲಗಳಿರುವಂತಿರಬೇಕು.

ಧಾನ್ಯಗಳನ್ನು ಮೂಟೆಗಳಿಗಿಂತ ರಾಶಿಯಾಗಿ ದಾಸ್ತಾನು ಮಾಡುವುದೇ ಒಳ್ಳೆಯದು. ಭೂಮಿಯ ಮೇಲಾಗಲಿ, ಕೆಳಗಾಗಲಿ, ಬಿನ್–ಗಳಿಗೆ, ಕಡಿಕೆ, ಓಡೆ – ದುಂಡಾಗಿ ಅಥವಾ ಚತುರಸ್ರವಾಗಿದ್ದು ಸಿಮೆಂಟ್ – ಕಾಂಕ್ರೀಟಿನಿಂದ ಮಾಡಿರಬೇಕು. ಅದಾಗದಿದ್ದರೆ, ಕಲ್ಲುಗಳಿಂದ ಕಟ್ಟಿ, ನೆಲ, ಗೋಡೆ, ಮಾಳಿಗೆಗಳಿಗೆ ಗಿಲಾವು ಮಾಡಿ, ನೀರಿಳಿಯದ ವಸ್ತುವನ್ನು ಬಳಿದಿರಬೇಕು.

ಸ್ಥಳೀಯ ಪದ್ಧತಿಗಳಲ್ಲಿ ಧಾನ್ಯರಾಶಿ ಸಂಗ್ರಹಣೆಗೆ ಹುಲ್ಲಿನಿಂದ ಮಾಡಿದ ಧಾರಕಗಳು ಉತ್ತಮ (ಮೂಡೆ, ಇತ್ಯಾದಿ). ಧಾನ್ಯವನ್ನು ಚೀಲಗಳಲ್ಲಿಡಬೇಕಾದರೆ, ಪಕ್ಕ ಉಗ್ರಾಣಗಳು ಬೇಕು. ಅವುಗಳ ಗೋಡೆ, ನೆಲ, ಮಾಳಿಗೆಗಳಿಗೆ ಗಿಲಾವು ಮಾಡಿ ಮೃದುವಾಗಿಡಬೇಕು. ಬಾಗಿಲು, ಕಿಟಕಿ ಮತ್ತು ವಾತಾಯನಗಳು ಭದ್ರವಾಗಿದ್ದು ಹೊರಗಡೆಗೆ ತೆಗೆಯುವಂತಿರಬೇಕು. ತೇವಾಂಶ ಹೆಚ್ಚಾಗಿರುವ ಪ್ರದೇಶಗಳಲ್ಲಿ ಗೋಡೆಗಳಿಗೆ ನೀರಿಳಿಯದ ವಸ್ತುವನ್ನು ಬಳಿದಿರಬೇಕು.

ಶುಚಿತ್ವ ಮತ್ತು ಉಗ್ರಾಣಗಳ ನಿರ್ವಹಣೆ: ಧಾನ್ಯಗಳನ್ನಿಡುವ ಮೊದಲು ಉಗ್ರಾಣದ ಕಸವನ್ನು ಗುಡಿಸಿ, ಬಹಳ ಶುಚಿಯಾಗಿಟ್ಟಿರಬೇಕು. ಕಸವನ್ನು ಸುಡಬೇಕು. ಗೋಡೆ, ನೆಲ, ಮಾಳಿಗೆಗಳಲ್ಲಿ ಬಿರುಕು ರಂಧ್ರಗಳನ್ನು ಸಿಮೆಂಟಿನಿಂದ ಮುಚ್ಚಿ, ಸಮಮಾಡಿ, ಗಾರೆ ಸಡಿಲವಾಗಿದ್ದರೆ, ಕಿತ್ತು ಪುನಃ ಹೊಸದಾಗಿ ಗಾರೆ ಹಚ್ಚಬೇಕು. ಇಲಿಗಳ ಬಿಲಗಳನ್ನು ಗಾಜಿನ ಚೂರು, ಮರಳಿನಿಂದ ಸಮ ಮಾಡಬೇಕು. ಬಾಗಿಲುಗಳು ಇಲಿಗಳು ನುಸುಳದಂತಿರಬೇಕು.

ದಾಸ್ತಾನು ಮಾಡುವ ಧಾನ್ಯ ಒಣಗಿದ್ದು, ಹುಳುಗಳಿಲ್ಲದೆ ಶುಚಿಯಾಗಿರಬೇಕು. ಹುಳುಗಳಿದ್ದರೆ ಧೂಪಕ ಹಾಕಿ ಅನಂತರ ದಾಸ್ತಾನು ಮಾಡಬೇಕು. ಚೀಲಗಳು ಒದ್ದೆಯಾಗಿದ್ದರೆ, ಧಾನ್ಯವನ್ನು ಸುರಿದು, ಧಾನ್ಯ, ಚೀಲಗಳೆರಡನ್ನು ಒಣಗಿಸಿ, ಪುನಃ ತುಂಬಿಡಬೇಕು.

ಮೂಟೆಗಳನ್ನು ಮಾಳಿಗೆಯಿಂದ ಕೆಳಕ್ಕೆ ಶೇ. 20 ರಷ್ಟು ಜಾಗ ಬಿಟ್ಟು, ಗೋಡೆಗಳ ಬಳಿ ಸು. 45–60 ಸೆಂಮೀ ಅಡಿ ಜಾಗ ಬಿಟ್ಟು, ಪೇರಿಸಬೇಕು. ಸುತ್ತ ಗಾಳಿಯಾಡುವಂತಿದ್ದು, ಮನುಷ್ಯ ತಿರುಗಾಡಿ, ಪರೀಕ್ಷಿಸಲು ಸುಲಭವಾಗಿರಬೇಕು. ಮೂಟೆಗಳು ನೆಲಕ್ಕೆ ತಾಕದಂತೆ, ಅಟ್ಟಣೆಯ ಮೇಲಿರಬೇಕು.

ದಾಸ್ತಾನು ಮಾಡಿದ ಧಾನ್ಯದ ರಕ್ಷಣೆ: ಧಾನ್ಯವನ್ನು ತಿಂಗಳಿಗೊಂದು ಸಲ, ಮಳೆಗಾಲದಲ್ಲಿ 15 ದಿನಗಳಿಗೊಂದು ಸಲ ಪರೀಕ್ಷಿಸುತ್ತಿರಬೇಕು. ಅಲ್ಲಲ್ಲೆ ಪುಡಿ ಬಿದ್ದಿದ್ದರೆ, ಹುಳುಗಳು ಹೆಚ್ಚಾಗಿರುತ್ತವೆ. ಕಾವು ಬಂದು, ಚೀಲಗಳಲ್ಲಿ ಹುಳುಗಳು ಹೆಚ್ಚಾಗಿದ್ದರೆ, ಕೂಡಲೆ ಧೂಪಕ ಹಾಕಿ, ಆದಷ್ಟು ಬೇಗ, ವಿಲೇವಾರಿ ಮಾಡಬೇಕು. ರಾಶಿ ಮಾಡಿದ ಧಾನ್ಯದಲ್ಲಿ ಕಾವಿದ್ದರೆ, ಎಚ್ಚರಿಕೆ ಅವಶ್ಯಕ. ಉಷ್ಣಾಂಶ 32$^0$ಸೆ ಗಳಿಗಿಂತ ಹೆಚ್ಚಾಗಿದ್ದು, ತೇವಾಂಶ ಹೆಚ್ಚಾಗಿದ್ದರೆ, ಧಾನ್ಯದಲ್ಲಿ ಕಾವಿನ ಸೂಚನೆ.

ಉಗ್ರಾಣವನ್ನು ಪ್ರತಿದಿನ ಗುಡಿಸಿ, ಕಸ ತೆಗೆದು ಶುಚಿಯಾಗಿಡಬೇಕು. ಗಾಳಿಯಾಡುವಂತೆ ವಾತಾಯನಗಳನ್ನು ತೆಗೆದಿರಬೇಕು. ಮಳೆಗಾಲದಲ್ಲಿ ಮುಚ್ಚಿದ್ದು ಬೇರೆ ಕಾಲದಲ್ಲಿ ತೆಗೆದಿರಬೇಕು. ಚೀಲಗಳು, ಟ್ರಕ್‍ಗಳು, ರೈಲ್ವೆವ್ಯಾಗನ್‍ಗಳು, ಹಡಗಿನ ಸಾಮಾನು ಕುಳಿ, ದೋಣಿ ಮುಂತಾದ ಸಾಗಣೆ ವಾಹನಗಳು ಶುಚಿಯಾಗಿರಬೇಕು. ಅವುಗಳ ಸಂದುಗಳಲ್ಲಿ ಕೀಟಗಳು ಸೇರಿದ್ದರೆ, ಧೂಪಕ ಹಾಕಬೇಕು. ಈ ರೀತಿಯ ಹಲವು ಕ್ರಮಗಳಿಂದ ಕೀಟಗಳ ಪಿಡುಗನ್ನು ನಿವಾರಿಸಿ, ಆಹಾರ ಧಾನ್ಯಗಳು ನಾಶವಾಗದಂತೆ ತಡೆದು ಸಂರಕ್ಷಿಸಬಹುದು. (ಎಂ.ಪಿ.)

**ಉಡ:** ಹಲ್ಲಿಗಳ ಉಪಗಣಕ್ಕೆ (ಲ್ಯಾಸರ್‍ಟೇಲಿಯ) ವರಾನಸ್ ಜಾತಿಗೆ ಸೇರಿರುವ ಸರೀಸೃಪ (ಮಾನಿಟರ್). ಇವು ನೆಲ ಮತ್ತು ಮರಗಳ ಮೇಲೆ ವಾಸಿಸುತ್ತವೆ. ಉದ್ದ ಮತ್ತು ಬಾಗಬಲ್ಲ ಕತ್ತು, ಉದ್ದಚಾಚಬಲ್ಲ ಮತ್ತು ಎರಡಾಗಿ ಸೀಳಿರುವ ನಾಲಿಗೆ ಇದೆ. ಒಂದು ಬೃಹದಾಕಾರದ ಹಲ್ಲಿ. ಬಾಲ ಉದ್ದವೂ ಬಲಯುತವೂ ಆಗಿದೆ. ಮಿಕ್ಕ ಹಲ್ಲಿಗಳಿಗಿರುವಂತೆ ಬೆನ್ನಿನ ಭಾಗದ ಮೇಲೆ ಶಿಖೆ ಇಲ್ಲ. ಉಡ ಮುಖ್ಯವಾಗಿ ಮಾಂಸಾಹಾರಿ. ಇದರ ಕೆಲವು ಜಾತಿಗಳು ಹೆಣಗಳನ್ನು ತಿಂದರೆ ಇನ್ನು ಕೆಲವು ಹಣ್ಣುಗಳನ್ನು ತಿನ್ನುತ್ತವೆ. ನೈಲ್ ನದಿಯಲ್ಲಿರುವ (ವೆರಾನಸ್ ನೈಲೋಟಿಕಸ್) ಉಡಗಳು ಜಲವಾಸಿಗಳು. ಇಂಥವುಗಳ ಬಾಲ ಈಜಲು ಸಹಕಾರಿಯಾಗುವಂತೆ ಚಪ್ಪಟೆಯಾಗಿದೆ. ಇಂಡೋನೇಷ್ಯದ ಪಕ್ಕದಲ್ಲಿರುವ ಕೊಮ್ಯಾಡೊ ದ್ವೀಪಗಳಲ್ಲಿ ವಾಸಿಸುವ ಕೊಮ್ಯಾಡೊ ಅತಿ ಹೆಚ್ಚು ಗಾತ್ರ ಬೆಳೆಯುತ್ತದೆ. ಸಹರಾ ಮರುಭೂಮಿ ಮತ್ತು ಭಾರತದ ವಾಯುವ್ಯ ಭಾಗದಲ್ಲಿ ಮರುಭೂಮಿ ಜಾತಿಯ



ಉಡ

ಉಡಗಳಿವೆ (ವೆ.ಗ್ರಿಸಿಯಸ್). ಭಾರತ, ಮಲೇಶಿಯ, ಚೀನ ಮತ್ತು ಆಸ್ಟ್ರೇಲಿಯಗಳಲ್ಲಿ ಅರೆ ಜಲವಾಸಿಯಾದ ವೆ.ಸ್ಯಾಲ್ವಿರ್ ಜಾತಿ ದೊರಕುತ್ತದೆ. ಇದು ಉದ್ದವಾಗಿ ಬೆಳೆಯುತ್ತದೆ. ಉಡಗಳು ಜೋರಾಗಿ ಓಡಾಡಬಲ್ಲವು. ಕೋಪೋದ್ರಿಕ್ತವಾದಾಗ ಶತ್ರುಗಳೊಡನೆ ಕಾದಾಡುವಾಗ ಆವೇಶದಿಂದ ಬಾಲವನ್ನು ಬಡಿಯುತ್ತ, ನಾಲಿಗೆಯನ್ನು ಚಾಚಿ, ಹಾವುಗಳಂತೆ ಬುಸುಗುಟ್ಟುತ್ತವೆ. ಇವುಗಳ ಕಾಲು ಬೆರಳುಗಳಿಗೆ ಬಾಗಿದ ಬಲವಾದ ನಖಗಳಿವೆ. ಇವುಗಳ ಸಹಾಯದಿಂದ ನೆಲವನ್ನು ಬಿಗಿಯಾಗಿ ಹಿಡಿದರೆ ಬಿಡಿಸುವುದು ಕಷ್ಟ. ಈ ವಿಶೇಷ ಲಕ್ಷಣದಿಂದಾಗಿ ಹಿಂದೆ ಗೋಡೆಗಳಿಗೆ ಲಗ್ಗೆ ಹಾಕಿ ಮೇಲಕ್ಕೆ ಹತ್ತಲು ಉಡಗಳನ್ನು ಹೇರಳವಾಗಿ ಉಪಯೋಗಿಸುತ್ತಿದ್ದ ಅನೇಕ ನಿದರ್ಶನಗಳು ಭಾರತದ ಚರಿತ್ರೆಯಲ್ಲಿ ದೊರಕುತ್ತವೆ. ಇದರ ಕೊಬ್ಬಿನಿಂದ ಉಡದ ತುಪ್ಪ ಎಂಬ ಔಷಧಿಯನ್ನು ತಯಾರಿಸಿ ವಾತರೋಗಗಳಿಗೆ ಉಪಯೋಗಿಸುತ್ತಾರೆ. ಇದರ ಚರ್ಮವನ್ನು ಹದಮಾಡಿ ಮೆಟ್ಟು, ಸೊಂಟಪಟ್ಟಿ, ಬೂಟು ಮುಂತಾದವನ್ನು ತಯಾರಿಸುವರು. (ಎಚ್.ಬಿ.ಡಿ.)

**ಉಡ್ಡಯನ:** ಗಾಳಿಯಲ್ಲಿ ಹಾರುವುದು (ಫ್ಲೈಟ್). ಹಾರುವ ಪ್ರಾಣಿಗಳ ಜೀವನಕ್ರಮವನ್ನು ಗಮನಿಸಿದರೆ ಎರಡು ರೀತಿಯವನ್ನು ನೋಡಬಹುದು.

ಗಾಳಿಯಲ್ಲಿ ತೇಲಿ ಜಾರುವ ಪ್ರಾಣಿಗಳು: ಇವು ಪಕ್ಷಿಗಳಂತೆ ನಿರಂತರವಾಗಿ ಚಲಿಸಲಾರವು. ಎತ್ತರ ಪ್ರದೇಶದಿಂದ ತಗ್ಗು ಪ್ರದೇಶಕ್ಕೆ ಚಲಿಸುವಾಗ ಗಾಳಿಯಲ್ಲಿ ದುಮುಕಿ, ತೇಲಿ, ತಮ್ಮ ದೇಹದ ಮಾರ್ಪಾಡುಗಳ ಸಹಾಯದಿಂದ ಜಾರಿಕೊಂಡು, ಯಾವ ಅಪಾಯವೂ ಇಲ್ಲದೆ ಗುರಿ ತಲಪುತ್ತವೆ. ಈ ಚಲನೆ ಪ್ಯಾರಾಶೂಟ್ ಸಹಾಯದಿಂದ ದುಮುಕುವವರ ಇಳಿತದಂತಿದೆ. ಇಂಥವನ್ನು ಒಂದು ವಿಧದಲ್ಲಿ ಹಾರುವ ಪ್ರಾಣಿಗಳು ಎನ್ನಬಹುದು. ಉದಾಹರಣೆಗೆ ಹಾರುಮೀನು, ಹಾರುಕಪ್ಪೆ, ಹಾರುಹಲ್ಲಿ, ಹಾರುಬೆಕ್ಕು, ಹಾರುಅಳಿಲು, ಇತ್ಯಾದಿ. ಇವುಗಳ ದೇಹಗಳು ಹಾರುಚಲನೆಗೆ ಪೂರಕವಾಗಿ ರಚಿತವಾಗಿವೆ.

ಹಾರುಮೀನುಗಳು: ಇವು ಎಕ್ಸೋಸಿಟಿಸ್ ಕುಟುಂಬಕ್ಕೆ ಸೇರಿದವು. ಇವುಗಳಲ್ಲಿ ಭುಜದ ಈಜುರೆಕ್ಕೆಗಳು ಅಗಲವಾಗಿ ಬೆಳೆದಿವೆ; ಹರಡಿದಾಗ ಸುಮಾರು ಅಗಲವಿರುತ್ತದೆ. ನೀರಿನ ಮೇಲಂಚಿನಲ್ಲಿ ವೇಗದಿಂದ ಈಜಿಕೊಂಡು ಬಂದು ಬಾಲದ ಸಹಾಯದಿಂದ ನೀರನ್ನು ತಳ್ಳಿ ಗಾಳಿಗೆ ಜಿಗಿಯುತ್ತವೆ. ಉಯ್ಯಾಲೆ ಆಡುವವರು ಕಾಲಿನಿಂದ ನೆಲವನ್ನು ಮೀಟಿ ತೂಗಿಕೊಳ್ಳಲು ವೇಗವನ್ನು ಪಡೆಯುವಂತೆ ಇವು ಬಾಲದ ನೆರವಿನಿಂದ ಜಿಗಿಯುತ್ತವೆ. ಗಾಳಿಗೆ ಜಿಗಿದ ಅನಂತರ ತಮ್ಮ ಭುಜದ ಈಜುರೆಕ್ಕೆಗಳನ್ನು ಹರಡಿಕೊಂಡು ಗಾಳಿಯಲ್ಲಿ ಜಾರಿಕೊಂಡು ಪುನಃ ನೀರಿಗೆ ಇಳಿಯುತ್ತವೆ. ಪುನಃ ಬಾಲದ ಸಹಾಯದಿಂದ ಗಾಳಿಗೆ ಜಿಗಿಯಬಹುದು. ಹೀಗೆ ಇವು ನೂರಾರು ಮೀಟರ್ ದೂರ ಗಾಳಿಯಲ್ಲಿ ಚಲಿಸಬಲ್ಲವು.

ಹಾರುಕಪ್ಪೆ: ರ್‍ಹೋಕೋಫೋರಸ್ ರೈನ್ವಾರಿಡಿ ಹೆಸರಿನ ಮರಕಪ್ಪೆ, ಬೋರ್ನಿಯೋ ದ್ವೀಪವಾಸಿ. ಕಾಲಬೆರಳುಗಳ ನಡುವೆ ಇರುವ ಜಾಲಪಾದದ ನೆರವಿನಿಂದ ಗಾಳಿಯಲ್ಲಿ

ಜಿಗಿದು ಚಲಿಸುತ್ತದೆ. ಬೆರಳುಗಳಲ್ಲಿರುವ ಅಂಟು ಹೊಸಡುಗಳ ಸಹಾಯದಿಂದ ಮರ ಹತ್ತಬಲ್ಲದು.



ಹಾರು ಮೀನು

ಹಾರುಹಲ್ಲಿ: (ಡ್ರಾಕೋ ಲವೋಲಾನ್ಸ): ಮಲಯ ದ್ವೀಪದ ಕಾಡುಗಳಲ್ಲಿ ವಾಸ. ಚಿಟ್ಟೆಗಳಂತೆ ವರ್ಣರಂಜಿತ ದೇಹ. ಸಾಮಾನ್ಯವಾಗಿ ಇದು ಹೂಗಳ ಹತ್ತಿರದಲ್ಲಿ ನೆಲೆಸಿರುವುದರಿಂದ ಚಿಟ್ಟೆಗಳಂತೆಯೇ ಕಾಣಿಸುತ್ತದೆ. ಇದರ ಎದೆಯ ಪಕ್ಕೆಲುಬುಗಳು ನೇರವಾಗಿ ಪಕ್ಕಕ್ಕೆ ಬೆಳೆದಿವೆ. ಇವುಗಳ ನಡುವೆ ಚರ್ಮದ ಪದರ ಬೆಳೆದು ಒಂದು ರೀತಿಯ ರೆಕ್ಕೆಯಂತಿರುವ ರಚನೆ ಉಂಟಾಗಿದೆ. ಇದಕ್ಕೆ ಪೆಟೆಜಿಯಂ ಎಂದು ಹೆಸರು. ಇದನ್ನು ಹರಡಿಕೊಂಡು ಎತ್ತರದಿಂದ ತಗ್ಗಿಗೆ ಗಾಳಿಯಲ್ಲಿ ಜಾರಿ ಇಳಿಯುತ್ತದೆ. ಆಗ ರೆಕ್ಕೆ ಪ್ಯಾರಾಶೂಟಿನಂತೆ ಸಹಾಯ ಮಾಡುತ್ತದೆ. ಉಪಯೋಗವಿಲ್ಲದಾಗ ರೆಕ್ಕೆ ಮಡಿಸಿಕೊಳ್ಳುತ್ತದೆ.

ಹಾರುಬೆಕ್ಕು: (ಡರ್ಮಾಪ್ಟೆರ): ಸ್ತನಿ ವರ್ಗದ ಒಂದು ಉಪವರ್ಗ, ಮಡಗಾಸ್ಕರ್ ದ್ವೀಪವಾಸಿ. ಅಲ್ಲಿನ ಜನರ ಭಾಷೆಯಲ್ಲಿ ಇದರ ಹೆಸರು ಕೊಬೆಗಾಸ್ ಕಗುಆನ. ಗಾತ್ರ ಮನೆ ಬೆಕ್ಕಿನಷ್ಟೇ. ಸಂಚಾರ ರಾತ್ರಿ ವೇಳೆ. ಚರ್ಮದಿಂದ ರಚಿತವಾದ ಪೆಟೆಜಿಯಂ ರೆಕ್ಕೆ ಇದೆ. ಇದು ಕುತ್ತಿಗೆಗೂ ಮುಂಗಾಲುಗಳಿಗೂ ನಡುವೆ, ಮುಂಗಾಲು ಹಿಂಗಾಲುಗಳ ನಡುವೆ, ಹಿಂಗಾಲುಗಳಿಗೂ ಬಾಲಕ್ಕೂ ನಡುವೆ ಹರಡಿದೆ. ಇದರ ಸಹಾಯದಿಂದ ಹಾರುಬೆಕ್ಕು ಎತ್ತರದಿಂದ ತಗ್ಗಿಗೆ ಜಾರಬಲ್ಲುದು.

ಹಾರುಅಳಿಲು: ಸೈಯುರಾಪ್ಟೆರಸ್, ಟಿರಾಮಿಸ್, ಯುಪೆಟಾರಸ್ ಮತ್ತು ಅನೊಮಾಲುರಸ್ ಜಾತಿಗೆ ಸೇರಿದೆ; ಗ್ಲಾಯುಕೋಮಿಸ್ ಕುಟುಂಬ. ಭಾರತ, ಮಲಯ, ಆಫ್ಘಾನಿಸ್ತಾನ, ಯೂರೋಪ್, ಉತ್ತರ ಅಮೆರಿಕಗಳಲ್ಲಿ ಕಾಣಬಹುದು.

ಹಾರುಬೆಕ್ಕಿನಂತೆ ಇದರಲ್ಲಿಯೂ ಪೆಟೆಜಿಯಂ ಬೆಳೆದಿದೆ. ಆದರೆ ಅದರಷ್ಟು ರೂಪುಗೊಂಡಿಲ್ಲ. ಕಾಡಿನಲ್ಲಿ ನೆಲೆ, ರಾತ್ರಿಯಲ್ಲಿ ಸಂಚಾರ, ಹಾರುವಾಗ ರೆಕ್ಕೆಯ ಉಪಯೋಗವಿದೆ.

ನೈಜವಾಗಿ ಹಾರುವ ಪ್ರಾಣಿಗಳು: ಕೇವಲ ನಾಲ್ಕು ರೀತಿಯ ಪ್ರಾಣಿಗಳಿಗೆ ಈ ಸಾಮರ್ಥ್ಯ. ಪಕ್ಷಿಗಳು, ಬಾವಲಿಗಳು, ಕೀಟಗಳು ಮತ್ತು ಟೀರೋಡ್ಯಾಕ್ಟೈಲಗಳು (ಪಕ್ಷಾಂಗುಲಿಗಳು). ಇವುಗಳಲ್ಲಿ ಮೊದಲಿನ ಮೂರು ಇಂದಿಗೂ ಬದುಕಿವೆ; ಕೊನೆಯದು ಬದುಕಿಲ್ಲ. ಇವು ಗಾಳಿಯಲ್ಲಿ ಸ್ವಶಕ್ತಿಯಿಂದ ಚಲಿಸುತ್ತವೆ ಎಂದರೆ ಹಾರುತ್ತವೆ. ಈ ಪ್ರಾಣಿಗಳಲ್ಲಿ ಹಾರಲು ನೆರವಾಗುವಂತೆ ರೆಕ್ಕೆಗಳು ಅಥವಾ ರೆಕ್ಕೆಗಳಂತಿರುವ ರಚನೆಗಳು ಬೆಳೆದಿವೆ. ಟೀರೋಡ್ಯಾಕ್ಟೈಲದಲ್ಲಿ ನಾಲ್ಕನೆಯ ಕೈಬೆರಳು ದೊಡ್ಡದು. ಇದು ಚರ್ಮದ ರೆಕ್ಕೆಗೆ ಆಧಾರ. ಬಾವಲಿಗಳಲ್ಲಿ ಕೈಬೆರಳುಗಳ ನಡುವೆ, ಕೈಕಾಲುಗಳ ನಡುವೆ ಮತ್ತು ಬಾಲಕ್ಕೂ ಕಾಲುಗಳಿಗೂ ನಡುವೆ ಚರ್ಮದ ಪಟಲವೊಂದು ಹರಡಿ ರೆಕ್ಕೆಯ ರಚನೆ ಉಂಟಾಗಿದೆ. ಕೀಟಗಳಲ್ಲಿ ಕ್ಯೂಟಿಕಲ್ ರೆಕ್ಕೆಯಾಗಿ ರೂಪಿತವಾಗಿದೆ. ಪ್ರಾಣಿಗಳಲ್ಲಿ ಹಾರುವಿಕೆಯ ವಿಕಾಸ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಂಡಿದೆ. ಈ ಗುಣ ಕಾಣಿಸಿಕೊಳ್ಳಲು ಕಾರಣಗಳು ಬೇರೆ ಬೇರೆಯಾಗಿರಬೇಕು.

ಟೀರೋಡ್ಯಾಕ್ಟೈಲ: ಇವು ಮಿಸೋಜೋಯಿಕ್ ಯುಗದಲ್ಲಿ ಎಂದರೆ ಸರೀಸೃಪಗಳ ಸುವರ್ಣಯುಗದಲ್ಲಿ ಬಾಳಿ, ಆಳಿ, ಅಳಿದ ಪ್ರಾಣಿಗಳು. ಇಂದಿನ ಗುಬ್ಬಚ್ಚಿಗಳ ಗಾತ್ರದಷ್ಟು ಚಿಕ್ಕವೂ ಸಾಮಾನ್ಯ ವಿಮಾನಗಳಷ್ಟು ಗಾತ್ರದ ಪ್ರಾಣಿಗಳೂ ಅಂದು ಬದುಕಿದ್ದುವು. ಇವುಗಳ ಕೈಯ ನಾಲ್ಕನೆಯ ಬೆರಳು ಉದ್ದವಾಗಿ ಬೆಳೆದು ಹರಡಿದ ಚರ್ಮದ ಪಟಲಕ್ಕೆ ಆಧಾರವಾದ ರೆಕ್ಕೆಗಳು ರೂಪಿತವಾಗಿದ್ದುವು. ಇವುಗಳ ಅವಶೇಷಗಳು ಬವೇರಿಯ, ಕನ್ಸಾಸ್ ದೇಶಗಳ ಸುಣ್ಣಕಲ್ಲು ಪದರಗಳೊಂದಿಗೆ ದೊರಕಿವೆ.

ಬಾವಲಿ: ಇವುಗಳಿಗೆ ಕಣ್ಣುಕಪ್ಪಡಿ, ಕಪಟ ಮುಂತಾದ ಹೆಸರುಗಳಿವೆ. ಇವುಗಳ ಕೈಬೆರಳುಗಳು ಉದ್ದವಾಗಿ ಬೆಳೆದಿವೆ; ಈ ನಡುವೆ ಚರ್ಮದ ಪದರ ಹರಡಿದೆ. ಪದರ ಕೈಕಾಲುಗಳ ನಡುವೆ ಹಾಗೂ ಹಿಂಗಾಲುಗಳೆರಡರ ನಡುವೆಯೂ ಉಂಟು. ಇದರಲ್ಲಿ ಬಾಲ ಸೇರಿರಬಹುದು ಅಥವಾ ಸೇರದೆಯೂ ಇರಬಹುದು. ಈ ರಚನೆಯೇ ಬಾವಲಿ ರೆಕ್ಕೆ. ರೆಕ್ಕೆಗಳ ಬಡಿತದಿಂದ ಬಾವಲಿ ಗಾಳಿಯಲ್ಲಿ ಹಾರುತ್ತದೆ.



ಹಾರು ಕಪ್ಪೆ



ಹಾರು ಹಲ್ಲಿ



ಹಾರು ಅಳಿಲು

ಕೀಟಗಳು: ಇವುಗಳ ಹೊರ ಚರ್ಮವೇ ರೆಕ್ಕೆಗಳಾಗಿ ಮಾರ್ಪಾಡಾಗಿವೆ. ಕೆಲವು ಕೀಟಗಳ ಬಗೆಗಳನ್ನು ಹೊರತುಪಡಿಸಿದರೆ, ಹಾರುವ ಕೀಟಗಳಲ್ಲಿ ಎರಡು ಜೊತೆ ರೆಕ್ಕೆಗಳುಂಟು. ರೆಕ್ಕೆಗಳು, ದೇಹದ ಕವಚವಾದ ಕ್ಯೂಟಿಕಲ್‌ದಿಂದ ಉದ್ಭವಿಸಿ ದೇಹದ ಮಧ್ಯಭಾಗವಾದ ಥೊರಾಕ್ಸಿನ್ ಮೇಲ್ಭಾಗಕ್ಕೆ ಹೊಂದಿಕೊಂಡಿರುತ್ತವೆ. ಮುಂಭಾಗದ ರೆಕ್ಕೆಗಳು ಹಿಂಭಾಗದ ರೆಕ್ಕೆಗಳಿಗಿಂತ ದೊಡ್ಡವು. ಕೆಲವು ಕೀಟವರ್ಗಗಳಲ್ಲಿ ಹಿಂದಿನ ರೆಕ್ಕೆಗಳೇ ದೊಡ್ಡವು. ಕೆಲವು ಆರ್ಥ್ರೋಪ್ಟರೊಯ್ಡ ವಿಭಾಗಗಳಾದ ಬ್ಲಾಟ್ಟಿಡೇ, ಗ್ರಿಲ್ಲೋಟಾಲ್ಪಿಡೇ, ಫಾಸ್ಮಿಡಾ, ಮ್ಯಾಂಟಿಡಾ ಮತ್ತು ಡರ್ಮಾಪ್ರೆತಾ, ಐಸೊಪ್ಟೆರಾ, ಹೆಟೆರೊಪ್ಟೆರಾ ಮತ್ತು ಕೊಲಿಯೊಪ್ಟೆರಾಗಳಿಗೆ ಸೇರಿದ ಕೀಟಗಳಲ್ಲಿ ಮೊದಲನೆಯ ಜೊತೆ ರೆಕ್ಕೆ ದಪ್ಪಗೆ ಹಾಗೂ ಬಿರುಸಾಗಿದ್ದು ಹಾರಾಟಕ್ಕೆ ನೆರವಾಗುವುದಿಲ್ಲ. ಇವು ಕೀಟಗಳು ವಿರಮಿಸುವಾಗ ದೇಹದ (ಆಬ್ಡೊಮೆನ್) ಮೆತ್ತನೆಯ ಭಾಗವನ್ನು ಆವರಿಸಿ ರಕ್ಷಿಸುವವು. ಈ ಕೀಟಗಳಲ್ಲಿ ಎರಡನೆಯ ಜೊತೆ ರೆಕ್ಕೆಗಳು ತೆಳ್ಳನೆಯ ಪರೆಯಂತೆ ಅಗಲವಾಗಿ ಮತ್ತು ಉದ್ದವಾಗಿ ಚೆನ್ನಾಗಿ ಬೆಳೆದುಕೊಂಡು ಉಡ್ಡಯನಕ್ರಿಯೆಯಲ್ಲಿ ಸಹಾಯಕಾರಿಯಾಗಿರುವವು. ಆದರೆ, ಇಂಥ ಕೀಟಗಳು ಸ್ವಲ್ಪ ದೂರದವರೆಗೆ ಮಾತ್ರ ಸಾವಧಾನವಾಗಿ ಹಾರಬಲ್ಲವು. ಇದಕ್ಕೆ ಅಪವಾದವೆಂದರೆ ಮಿಡತೆಗಳು. ಮಿಡತೆಗಳು (ಲೋಕಸ್ಟ್‌ಗಳು) ಕೋಟಿಗಟ್ಟಲೆ ಸಂಖ್ಯೆಯಲ್ಲಿ ಗುಂಪುಗೂಡಿ ಸಾವಿರಾರು ಮೈಲುಗಳ ದೂರ ಹಾರಿ ಕ್ರಮಿಸುತ್ತವೆ.

ಲೆಪಿಡಾಪ್ಟೆರಾ, ಹೈಮೆನಾಪ್ಟೆರಾ, ಡಿಪ್ಟೆರಾಗೆ ಸೇರಿದ ಕೀಟಗಳು ನಿರಂತರವಾಗಿ ಅನೇಕ ಘಂಟೆಗಳವರೆಗೆ ಹಾರಬಲ್ಲವು. ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸತತವಾಗಿ ಹಾರುತ್ತಾ ವಲಸೆ ಹೋಗುವವು. ಉದಾ : ಡ್ರಾಗನ್‌ಫ್ಲೈಗಳು ಮತ್ತಿತರ ಕೀಟಗಳು. ಆರ್ಥ್ರೋಪ್ಟೆರೊಯ್ಡದ ಒಡೊನೇಟಾ ವಿಭಾಗಕ್ಕೆ ಸೇರಿದ ಡ್ರಾಗನ್‌ಫ್ಲೈಗಳು ಸಶಕ್ತ ಉಡ್ಡಯನಶಾಲಿಗಳು. ಆಸ್ಟ್ರೋಫ್ಲೆಬಿಯಾ ಎನ್ನುವ ಡ್ರಾಗನ್ ಫ್ಲೈ ಘಂಟೆಗೆ 60 ಮೈಲು ವೇಗದಲ್ಲಿ ಹಾರಬಲ್ಲವ.

ಕೆಲವು ಕೀಟಗಳ ಉಡ್ಡಯನ ಶಕ್ತಿ ಅತಿ ಅದ್ಭುತ. ಕಡುಜೀರೆಗಳು (ವ್ಯಾಸ್ಪಗಳು), ಸ್ಫಿಂಜಿಡ್ ಚಿಟ್ಟೆಗಳು, ಹಾಕ್‌ಮಾಥ್‌ಗಳು (ಗಿಡುಗ ಪತಂಗಗಳು) ಹಾಗೂ ನೊಣಗಳು ಅತಿ ವೇಗವಾಗಿ ಹಾರಬಲ್ಲವು. ಒಂದೇ ಜಾಗದಲ್ಲಿ ಹಾರಾಡುತ್ತಲೇ ನಿಲ್ಲುವ ಸಾಮರ್ಥ್ಯ ಹಾಕ್ ಪತಂಗಗಳಿಗೆ ಇದೆ. ಡ್ರಾಗನ್ ಚಿಟ್ಟೆಗಳೂ ಹೀಗೆಯೇ ನಿಂತಲ್ಲೇ ಹಾರಬಲ್ಲವು. ಡಿಪ್ಟೆರಾಗೆ ಸೇರಿದ ನೊಣ, ಸೊಳ್ಳೆಗಳಲ್ಲಿ ಹಿಂಭಾಗದ ರೆಕ್ಕೆಗಳು ಅತೀವ ಚಿಕ್ಕವಾಗಿ ಬ್ಯಾಲನ್ಸರ್ ಹಾಗೂ ಹಾಲ್ಟೀರ್‌ಗಳಾಗಿ ಮಾರ್ಪಟ್ಟಿರುವವು. ಬ್ಯಾಲನ್ಸರ್‌ಗಳು ಹಾಗೂ ಹಾಲ್ಟೀರ್‌ಗಳು ಸೊಳ್ಳೆ ಹಾಗೂ ನೊಣಗಳಿಗೆ ಹಾರುವಾಗ ಸಮತೋಲ ನೀಡಿ, ದಿಕ್ಕು ಬದಲಿಸಲು ನೆರವಾಗುವುದು.

ಎಷ್ಟೋ ಕೀಟಜಾತಿಗಳು ವಿಕಾಸದ ಹಾದಿಯಲ್ಲಿ ಪರಿಸರಕ್ಕೆ ತಕ್ಕಂತೆ ರೆಕ್ಕೆಗಳನ್ನು ಹಾಗೂ ಉಡ್ಡಯನ ಸಾಮರ್ಥ್ಯವನ್ನು ಸಂಪೂರ್ಣ ಕಳೆದುಕೊಂಡು ಇರುವುವು.

ಪಕ್ಷಿಗಳು: ಪಕ್ಷಿಗಳ ವಿಕಾಸದಲ್ಲಿ ಪ್ಟೀರೊಡ್ಯಾಕ್ಟೈಲಗಳಂತೆ ಟ್ರಿಯಾಸಿಕ್ ರೆಪ್ಟಿಲಿಯಗಳ ಆರ್ಕೊಸಾರಿಯಗಳೇ ಮೂಲ ಪ್ರಾಣಿಗಳು. ಬವೇರಿಯದ ಜುರಾಸಿಕ್ ಶಿಲೆಗಳಲ್ಲಿನ ಪಳೆಯುಳಿಕೆ (ಫಾಸ್ಸಿಲ್)ಗಳು, ಆರ್ಕೀಯೊಪ್ಟೆರಿಕ್ಸ್ ಮತ್ತು ಆರ್ಕಿಯೊರ್ನಿಸ್‌ಗಳು ಎಂಬ ಮಧ್ಯಂತರ ರೆಪ್ಟಿಲಿಯಗಳಿಂದ ಪಕ್ಷಿಗಳ ವಿಕಾಸವನ್ನು ಸೂಚಿಸುತ್ತವೆ.

ಎಲ್ಲ ಪಕ್ಷಿಗಳಿಗೂ ಉಡ್ಡಯನ ಶಕ್ತಿ ಇರುವುದಿಲ್ಲ. ಪ್ಯಾಲಿಯೊಗ್ನಾಟೀ ಎಂಬ (ಉಷ್ಟ್ರಪಕ್ಷಿ) ವರ್ಗಕ್ಕೆ ಸೇರಿದ ರಾಟೈಟಿ ಪಕ್ಷಿಗಳಾದ ಆಫ್ರಿಕಾ ಮತ್ತು ಪಶ್ಚಿಮ ಏಶಿಯಾಗಳಲ್ಲಿ ವಾಸಿಸುವ ಆಸ್ಟ್ರಿಚ್‌ಗಳು ದಕ್ಷಿಣ ಅಮೆರಿಕೆಯ ರೀಯಗಳು, ಆಸ್ಟ್ರೇಲಿಯದ ಎಮು ಮತು ಕಾಸ್ಸೊವರಿಗಳು ರೆಕ್ಕೆಗಳನ್ನು ಹೊಂದಿರುವವು. ಆದರೆ, ಭಾರವಾದ ದೇಹವಿರುವುದರಿಂದ ಇವುಗಳು ಹಾರುವುದಿಲ್ಲ. ಆದರೆ, ವೇಗವಾಗಿ ಓಡಬಲ್ಲವು.

ಎಲ್ಲ ಪಕ್ಷಿಗಳಲ್ಲೂ ಮುಂಗಾಲುಗಳು ರೆಕ್ಕೆಗಳಾಗಿ ಮಾರ್ಪಟ್ಟು ಅವುಗಳ ಬೆರಳುಗಳ ಸಂಖ್ಯೆ ಕ್ಷೀಣಿಸಿರುತ್ತವೆ. ರೆಕ್ಕೆಗಳ ಮೇಲೆ ಗರಿಗಳು ಇವೆ. ಚರ್ಮದ ಹೊರಪದರದಿಂದ ಗರಿಗಳು ಮೂಡುತ್ತವೆ. ರೆಕ್ಕೆಗಳ ಮೇಲೆ ಗರಿಗಳು ಹರಡಿವೆ. ಚರ್ಮದ ಹೊರ ಪದರದಿಂದ ಇವುಗಳ ಬೆಳೆವಣಿಗೆ. ಗರಿಗಳು ಹಗುರವಾಗಿದ್ದು ಹಕ್ಕಿಗೆ ಗಾಳಿಯಲ್ಲಿ ತೇಲಲು ಅನುಕೂಲತೆ ಒದಗಿಸುತ್ತದೆ. ಮೇಲಾಗಿ ದೇಹದ ಶಾಖವನ್ನು ಕಾಯ್ದಿಡಲು ಇವು ಸಹಕಾರಿಗಳು. ದೇಹ ದೋಣಿಯಾಕಾರದಲ್ಲಿದೆ. ಗರಿಗಳು ಹಿಂದಕ್ಕೆ ಬಾಗಿವೆ. ರೆಕ್ಕೆಗಳ ಬಡಿತಕ್ಕೆ ಸಹಕಾರಿಯಾಗಲು ಬಲಯುತವಾದ ಮಾಂಸಖಂಡಗಳು ಬೆಳೆದಿವೆ. ದೇಹದ ಮೂಳೆಗಳಲ್ಲಿ ಗಾಳಿ ತುಂಬಿಕೊಂಡು ಹಗುರವಾಗಿದೆ. ಶ್ವಾಸನಾಳಗಳು ಶ್ವಾಸಕೋಶಗಳಿಂದ ಮುಂದಕ್ಕೆ ಗಾಳಿಯ ಚೀಲಗಳಾಗಿ ಬೆಳೆದು ದೇಹದ ಅಂಗಾಂಗಗಳ ನಡುವೆ ಹರಡಿವೆ. ಉಸಿರಾಡಲು ಬಂದ ಗಾಳಿ ಇವುಗಳಲ್ಲಿ ಸದಾ ತುಂಬಿರುತ್ತದೆ. ಮುಂಗಾಲುಗಳು ರೆಕ್ಕೆಗಳಾಗಿ ಮಾರ್ಪಟ್ಟ ಕಾರಣದಿಂದ ಆಹಾರಾನ್ವೇಷಣೆಯಲ್ಲಿ ನೆರವಾಗಲು ಕೊಕ್ಕುಗಳು ಬೆಳೆದಿವೆ. ಆಹಾರದ ಗುಣವನ್ನು ಅನುಸರಿಸಿ ಕಾಳು ಬಿಡಿಸಲು, ಕಡಿಯಲು, ಮಾಂಸ ಸಿಗಿಯಲು, ಹುಳ–ಹುಪ್ಪಟ ಹಿಡಿಯಲು, ನೀರಿನಲ್ಲಿ ಮೀನು ಹಿಡಿಯಲು ಇವುಗಳ ಕೊಕ್ಕು ಮಾರ್ಪಟ್ಟಿದೆ. ಮುಂಗಾಲುಗಳು ಹಾರಲು ರೆಕ್ಕೆಗಳಾಗಿ ಪರಿವರ್ತನೆಗೊಂಡಿರುವುದರಿಂದ ಹಿಂಗಾಲುಗಳು ಉಳಿದ ಕ್ರಿಯೆಗೆ ಮರಗಿಡಗಳ ಕೊಂಬೆಗಳನ್ನು ಹತ್ತಲು, ಹಿಡಿಯಲು, ನೆಲದಮೇಲೆ ಓಡಲು, ಕುಪ್ಪಳಿಸಲು, ನೀರಿನಲ್ಲಿ ಈಜಲು ಇವುಗಳ ರಚನೆ ಇದೆ. ಹಾರಲು ಮುಖ್ಯ ಅಂಗಗಳಾದ ರೆಕ್ಕೆಗಳು ರಚನೆಯಲ್ಲಿ ನಿಜವಾದ ಎಂಜಿನಿಯರಿಂಗ್ ಕುಶಲತೆಯನ್ನು ತೋರಿಸುತ್ತವೆ. ಇವು ಮೇಲ್ಭಾಗಕ್ಕೆ ಉಬ್ಬಿಕೊಂಡಿದೆ. ರೆಕ್ಕೆಯನ್ನು ಮೇಲೆತ್ತುವಾಗ ಗಾಳಿಯ ಒತ್ತಡ ಯಾವ ಒಂದೆಡೆಯೂ ಕೇಂದ್ರೀಕೃತವಾಗದೆ ಹರಡಿ ಹಾರಿಹೋಗಲಿ ಎನ್ನುವುದೇ ಅದು ಉಬ್ಬಿಕೊಂಡಿರುವುದರ ಉದ್ದೇಶ. ಇದರ ಜೊತೆಗೆ ಪಕ್ಷಿ ರೆಕ್ಕೆಗಳನ್ನು ಮೇಲೆತ್ತುವಾಗ ಗರಿಗಳೆಲ್ಲವೂ ಸಡಿಲವಾಗಿ ಗಾಳಿ ಇವುಗಳ ಸಂದಿಯಲ್ಲಿ ಹಾದು ಹೋಗುವುದರಿಂದ ಹೆಚ್ಚು ಘರ್ಷಣೆ ಇಲ್ಲದೆ ಸುಲಭವಾಗಿ ಮೇಲೆ ಹೋಗುತ್ತದೆ. ಆದರೆ ರೆಕ್ಕೆಗಳನ್ನು ಕೆಳಕ್ಕೆ ಬಡಿಯುವಾಗ ಗರಿಗಳೆಲ್ಲವೂ ಒತ್ತಾಗಿ ಜೋಡಿಸಿಕೊಂಡು ಗಾಳಿಯನ್ನು ಹಿಂದಕ್ಕೂ ಕೆಳಕ್ಕೂ ಅದುಮುತ್ತವೆ. ಅಲ್ಲದೆ ಇವು ರೆಕ್ಕೆಗಳನ್ನು ಮೇಲೆ ಕೆಳಕ್ಕೆ ಬಡಿಯುವುದಿಲ್ಲ. ಮೇಲೆ ಮುಂಭಾಗದಿಂದ, ಕೆಳಗೆ ಹಿಂಭಾಗಕ್ಕೆ ಬಡಿಯುತ್ತವೆ. ಇದರಿಂದ ಅವು ಗಾಳಿಯಲ್ಲಿ ಮುಂದೆ ಚಲಿಸುವುದು. ಗಾಳಿಯನ್ನು ತಳ್ಳಲು ಅನುಕೂಲವಾಗುವಂತೆ ರೆಕ್ಕೆಯ ತಳಭಾಗ ಹಳ್ಳವಾಗಿದೆ. ಬಾಲದ ಮೇಲೆ ಬೀಸಣಿಗೆಯಂತೆ ಹರಡಿರುವ ಗರಿಗಳಿವೆ. ದಿಕ್ಕನ್ನು ಬದಲಿಸಲು ಮತ್ತು ವೇಗವನ್ನು ಕಡಿಮೆ ಮಾಡಲು ಇವುಗಳ ಸಹಾಯವಿದೆ. ಹಕ್ಕಿ ಇಳಿಯುವಾಗ ಬಾಲದ ಗರಿಗಳನ್ನು ಬೀಸಣಿಗೆಯಂತೆ ಹರಡಿ ಕೆಳಗಡೆಗೆ ಬಾಗಿಸುತ್ತದೆ. ಇದರ ಪರಿಣಾಮ ವೇಗವಾಗಿ ಧಾವಿಸುವ ವಾಹನಕ್ಕೆ ಬಿರಿ (ಬ್ರೇಕ್) ಹಾಕಿದಂತೆ. ಗರಿಗಳಿಗೆ ಒಂದು ಬಗೆಯ ತೈಲ ಲೇಪಿತವಾಗಿರುವುದರಿಂದ ಅವು ಮಳೆ ನೀರಿನಲ್ಲಿ ನೆನೆದು ಮುದ್ದೆಯಾಗುವುದಿಲ್ಲ. ಬಾಲದ ಕೆಳಗೆ ತೈಲ ಗ್ರಂಥಿಗಳಿವೆ. ಹಾರುವಾಗ ಆಹಾರವನ್ನು ಹುಡುಕಲು, ಶತ್ರು, ಮಿತ್ರರನ್ನು ಗುರುತಿಸಲು ಸಹಾಯಕವಾಗಿ ಬಲು ಸೂಕ್ಷ್ಮ ಕಣ್ಣುಗಳಿವೆ. ಹೊರ ಕಿವಿಗಳಿಲ್ಲದಿದ್ದರೂ ಶ್ರವಣಶಕ್ತಿ ಚುರುಕಾಗಿದೆ. ಹೀಗೆ ಹಾರುವ ಪರಿಸರವನ್ನು ಹೊಂದಿದಂತೆ ಹಕ್ಕಿಯ ದೇಹರಚನೆಯಿದೆ. (ಎಚ್.ಬಿ.ಡಿ.)

**ಉಣಿಸು ವಿಧಾನ:** ಪ್ರಾಣಿಗಳಲ್ಲಿ ಆಹಾರ ಸೇವನೆಯ ವಿಧಾನಗಳನ್ನು ಉಣಿಸು ವಿಧಾನ ಎನ್ನುವರು. ಪ್ರಾಣಿಯ ವರ್ಗ ಹಾಗೂ ಆಹಾರದ ಸ್ವರೂಪಗಳಿಗೆ ಅನುಗುಣವಾಗಿ ಉಣಿಸು ಕ್ರಿಯಾವಿನ್ಯಾಸ ರೂಪುಗೊಂಡಿರುತ್ತದೆ. ಆಹಾರದ ಪ್ರಕೃತಿಗೆ ಅನುಗುಣವಾಗಿ ಉಣಿಸು ಕ್ರಿಯಾವಿನ್ಯಾಸಗಳನ್ನು ನಾಲ್ಕು ಪ್ರಮುಖ ಬಗೆಗಳನ್ನಾಗಿ ವರ್ಗೀಕರಿಸಿದ್ದಾರೆ.

1) ಸೂಕ್ಷ್ಮಾಹಾರ ಭಕ್ಷಕಗಳು (ಮೈಕ್ರೊಫಾಗಸ್ ಫೀಡರ್)
2) ನಿಡು ಆಹಾರ ಭಕ್ಷಕಗಳು (ಮ್ಯಾಕ್ರೊಫಾಗಸ್ ಫೀಡರ್)
3) ಒಡೆಗೆಡಿಕ ಆಹಾರ ಭಕ್ಷಕಗಳು ( ಡೆಟ್ರಿಟಸ್ ಫೀಡರ್ )ಮತ್ತು
4) ದ್ರವಾಹಾರ ಭಕ್ಷಕಗಳು (ಫ್ಲುಯಿಡ್ ಫೀಡರ್)

1. ಸೂಕ್ಷ್ಮಾಹಾರ ಭಕ್ಷಕಗಳು: ಕಡಲಲೆಜೀವಿಗಳನ್ನು (ಪ್ಲಾಂಕ್ಟನ್) ತಿನ್ನುವ ಜಡಜೀವಿಗಳು ಮತ್ತು ನಿರಂತರವಾಗಿ ಆಹಾರವನ್ನು ಸೇವಿಸುವ ಜಲವಾಸಿ ಪ್ರಾಣಿಗಳು. ಆಹಾರ ಸೇವನೆಗಾಗಿ ಇವು ನೀರನ್ನು ತಮ್ಮ ಬಾಯೊಳಗೆ ಶಿಲಿಕೆಗಳ (ಸೀಲಿಯಾ) ಸಹಾಯದಿಂದ ಸೆಳೆದುಕೊಂಡು, ಆಹಾರಕಣಗಳನ್ನಷ್ಟೆ ಸಂಗ್ರಹಿಸಿ ಉಳಿದ ನೀರನ್ನು ಹೊರದೂಡುತ್ತವೆ. ಏಕಾಣು ಪ್ರಾಣಿಗಳಿಂದ ಕಶೇರುಕಗಳವರೆಗೆ (ನೆಮಟೋಡ ಮತ್ತು ಸಂಧಿಪದಿಗಳನ್ನು ಬಿಟ್ಟು) ಎಲ್ಲಾ ಪ್ರಾಣಿವರ್ಗಗಳಲ್ಲಿಯೂ ಈ ಬಗೆಯ ಆಹಾರ ಸೇವನೆ ಕಂಡು ಬರುತ್ತದೆ. ಪ್ಯಾರಾಮೀಸಿಯಂನಲ್ಲಿ ಬಾಯಿಯ ತೋಡಿನಲ್ಲಿರುವ ಶಿಲಿಕೆಗಳು ನೀರನ್ನು ಸೆಳೆದುಕೊಳ್ಳಲು ಸಹಾಯಮಾಡುತ್ತವೆ. ಮೆಟ್ರಿಡಿಯಂನಲ್ಲಿಯೂ ಶಿಲಿಕೆಗಳು ನೀರನ್ನು ಸೆಳೆಯುತ್ತವೆ ಮತ್ತು ಈ ಶಿಲಿಕೆಗಳು ವಿರುದ್ಧ ದಿಕ್ಕಿನಲ್ಲಿಯೂ ಸ್ಪಂದಿಸಿ ನಿಸ್ಸಾರವಾದ ಪದಾರ್ಥಗಳನ್ನು ಹೊರದಬ್ಬುತ್ತವೆ. ಲಾಮೆಲ್ಲಿಬ್ರಾಂಕ್‌ಗಳಲ್ಲಿ ಕಿವಿರು, ಸ್ಪರ್ಶಾಂಗ ಮತ್ತು ರಗಟೆಯ ಮೇಲಿರುವ ಶಿಲಿಕೆಗಳು ನೀರನ್ನು ಸೆಳೆಯಲು ಸಹಾಯ ಮಾಡುತ್ತವೆ. ಕಪ್ಪೆ ಮತ್ತು ನೆಲಗಪ್ಪೆಗಳ ಗೊದಮೊಟ್ಟೆಗಳು ಮತ್ತು ಅಮ್ಮಾಸೀಟ್ ಡಿಂಬಗಳೂ ಶಿಲಿಕೆಗಳ ಸಹಾಯದಿಂದ ಆಹಾರ ಸೇವಿಸುತ್ತವೆ.

ಬೇರೆ ರೀತಿಯ ಸೂಕ್ಷ್ಮಾಹಾರ ಭಕ್ಷಣೆಯೂ ಸಹ ಕೆಲವು ಪ್ರಾಣಿಗಳಲ್ಲಿ ಕಂಡುಬರುತ್ತದೆ. ಚಪ್ಪಂಗಿ (ಕ್ರಷ್ಟೆಷಿಯ) ಗಳು ಮತ್ತು ಕ್ಯೂಲೆಕ್ಸ್ ಡಿಂಬದಲ್ಲಿ ಉಪಾಂಗಗಳ ಮೇಲಿರುವ ಬಿರುಗೂದಲುಗಳು ನೀರನ್ನು ಸೆಳೆಯುತ್ತವೆ. ಮೀನು ಶಾರ್ಕು ಮತ್ತು ತಿಮಿಂಗಿಲಗಳು ನೀರಿನಲ್ಲಿ ಈಜುತ್ತಲೇ ಕಡಲ ತೇಲ್ಜೀವಿಗಳನ್ನು ತಿನ್ನುತ್ತವೆ.

ಸೂಕ್ಷ್ಮಾಹಾರ ಭಕ್ಷಕಗಳಲ್ಲಿ ಲೋಳೆಯು ಆಹಾರದ ತುಣುಕುಗಳನ್ನು ಸಾಗಿಸಲು ಸಹಕಾರಿಯಾಗುತ್ತದೆ. ಯೂರೆಕಿಸ್, ವರ್ಮೈಟಿಸ್, ನೀರಿಸ್ ಹುಳು, ಕೈರಾನಮಸ್‌ನ ಡಿಂಬಗಳು ಲೋಳೆಯ ದಾರ ಅಥವಾ ಬಲೆಗಳನ್ನು ನೀರಿನಲ್ಲಿ ತೇಲಿಬಿಟ್ಟು, ಇವಕ್ಕೆ ಅಂಟಿಕೊಂಡ ಆಹಾರ ಪದಾರ್ಥಗಳನ್ನು ಸೇವಿಸುತ್ತವೆ. ಸಿಯೋನ ಮತ್ತು ಇತರ ಕಡಲಚುರುಕಿಗಳೂ ಸಹ ಲೋಳೆಯ ಸಹಾಯದಿಂದ ನಿರಂತರವಾಗಿ ಆಹಾರ ಸಂಗ್ರಹಿಸುತ್ತವೆ. ಮೃದ್ವಂಗಿಗಳು, ಬ್ರೇಕಿಯೋಪೋಡ, ಪಾಲಿಜೋವ ಮತ್ತು ಕಡಲಚುರುಕಿಗಳ ಕರುಳಿನಲ್ಲಿರುವ ಶಿಲಿಕೆಗಳು ಆಹಾರ ಮತ್ತು ಲೋಳೆಯನ್ನು ತಿರುಗಿಸಿ ದಾರ ಅಥವಾ ಉಂಡೆಗಳನ್ನಾಗಿ ಮಾಡುತ್ತವೆ. ಸೂಕ್ಷ್ಮಾಹಾರ ಭಕ್ಷಕಗಳು ಸೇವಿಸುವ ಆಹಾರಕಣಗಳ ಗಾತ್ರ ಹಲವು ಮೈಕ್ರಾನುಗಳಷ್ಟು. ಲೋಳೆ ಸುರಿಸಿ ಆಹಾರವನ್ನು ಕಬಳಿಸುವ ಪ್ರಾಣಿಗಳು ಇನ್ನೂ ಸೂಕ್ಷ್ಮವಾದ ಆಹಾರಕಣಗಳನ್ನು ಸಂಗ್ರಹಿಸಬಲ್ಲುವು.

2. ನಿಡು ಆಹಾರ ಭಕ್ಷಕಗಳು: ಈ ಗುಂಪಿನ ಪ್ರಾಣಿಗಳು ತುಸು ದೊಡ್ಡದಾದ, ಸಾಂದ್ರತೆಯುಳ್ಳ ಆಹಾರ ರಾಶಿಗಳನ್ನು ಸೇವಿಸುತ್ತವೆ. ಸೂಕ್ಷ್ಮಾಹಾರ ಭಕ್ಷಕಗಳಂತೆ, ಈ ಬಗೆಯ ಆಹಾರ ಸೇವನೆ ಜಲವಾಸಿ ಪ್ರಾಣಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಕೆಲವು ರೈಜೋಪಾಡುಗಳು ಆಹಾರವನ್ನು ಸೇವಿಸಿ ಆಹಾರಾವಕಾಶ (ಫುಡ್ ವ್ಯಾಕ್ಯೂಲ್) ಗಳನ್ನು ಮಾಡಿಕೊಳ್ಳುತ್ತವೆ. ಇವು ಆಹಾರವನ್ನು ಸೆಳೆದುಕೊಳ್ಳಬಹುದು ಇಲ್ಲವೇ ಮಿಥ್ಯಾಪಾದಗಳಿಂದ ಆಹಾರವನ್ನು ಸುತ್ತುಗಟ್ಟಿ, ಅದನ್ನು ಒಳಗೆಳೆದುಕೊಳ್ಳಬಹುದು. ಕುಟುಕು ಕಣವಂತ ಪ್ರಾಣಿಗಳು ಆಹಾರವನ್ನು ಕಬಳಿಸಲು ಕುಟುಕುಕಣಗಳನ್ನು ಬಳಸುತ್ತವೆ. ತಮ್ಮನ್ನು ಸಮೀಪಿಸಿದ ಆಹಾರಜೀವಿಗಳನ್ನು ಕುಟುಕುಕಣವಂತಗಳ ಕರಬಳ್ಳಿಗಳು (ಟೆಂಟಕಲ್) ಬಳಸಿ ಹಿಡಿಯುತ್ತವೆ. ಕರಬಳ್ಳಿಯಲ್ಲಿರುವ ಕುಟುಕುಕಣಗಳನ್ನು ಚುಚ್ಚಿ ಆಹಾರ ಜೀವಿಯನ್ನು ಶಕ್ತಿಹೀನಗೊಳಿಸುತ್ತವೆ. ಅನಂತರ ಆಹಾರಜೀವಿಯನ್ನು ಕರಬಳ್ಳಿಗಳಿಂದ ಬಾಯಿಯೊಳಗೆ ತುರುಕುತ್ತವೆ.

ನಿಡು ಆಹಾರ ಭಕ್ಷಕಗಳು ಸದಾ ಆಹಾರವನ್ನು ಸೇವಿಸವು. ಆಹಾರ ಸೇವನೆಗೆ ಪ್ರಚೋದನೆಯು ಅವಶ್ಯಕ. ಈ ಪ್ರಚೋದನೆ ರಾಸಾಯನಿಕವಾಗಿರಬಹುದು ಇಲ್ಲವೇ ಯಾಂತ್ರಿಕವಾಗಿರಬಹುದು. ಉದಾ: ಆಕ್ಟಿನೊಫ್ರಿಸ್ ಸಾಲ್ ಹೈಡ್ರಾಗಳಲ್ಲಿ ಆಹಾರ ಜೀವಿಯಿಂದ ಬಿಡುಗಡೆಯಾಗುವ ರಾಸಾಯನಿಕಗಳು (ಉದಾ: ಗ್ಲುಟೊಥಯಾನ್) ಆಹಾರವನ್ನು ನುಂಗಲು ಪ್ರೇರೇಪಿಸುತ್ತವೆ. ಇನ್ನು ಕೆಲವು ಪ್ರಾಣಿಗಳಲ್ಲಿ ಹಸಿವು ಆಹಾರ ಸೇವನೆಯನ್ನು ಚುರುಕಾಗಿಸುತ್ತದೆ. ಸ್ತನಿಗಳಲ್ಲಿ ಆಹಾರ ಸೇವನೆಗೆ ಆಹಾರದ ಪರಿಮಳ ಮತ್ತು ಪಕ್ಷಿಗಳಲ್ಲಿ (ಬೇಟೆ) ದರ್ಶನವೇ ಪ್ರಚೋದನೆಯಾದೀತು.

ನಿಡು ಆಹಾರ ಭಕ್ಷಕ ಪ್ರಾಣಿಗಳಲ್ಲಿ ಆಹಾರವು ಬಾಯಿಸೇರುವ ಮೊದಲೇ ಸ್ವಲ್ಪ ಮಟ್ಟಿಗೆ ಜೀರ್ಣವಾಗಿರುತ್ತದೆ. ವಾಂಪಿರೆಲ್ಲ ತನ್ನ ಆಹಾರವಾದ ಪಾಚಿ (ಆಲ್ಗಿ) ಯ ಭಿತ್ತಿಯನ್ನು ಕರಗಿಸಲು ಸೆಲ್ಯುಲೇಸ್ ಕಿಣ್ವವನ್ನು ಸಂಶ್ಲೇಷಿಸುತ್ತದೆ. ಗ್ಲಾಕೋಮ ನೀರಿನಲ್ಲಿರುವ ಬೊಂಪಿಕ (ಜೆಲಾಟಿನ್) ವನ್ನು ಪ್ರೊಟೀನುದೊಳೆ (ಪ್ರೊಟೀನೇಸ್) ಬಳಸಿ ಕರಗಿಸಿ, ನೀರಾಗಿಸಿ, ಭಕ್ಷಿಸುತ್ತದೆ. ನಕ್ಷತ್ರಮೀನು ತನ್ನ ಜಠರವನ್ನೇ ಆಹಾರದ ಮೇಲೆ ಮುಚ್ಚಿ ಅದು ಬಾಯೊಳಗೆ ಪ್ರವೇಶಿಸುವ ಮೊದಲೇ ಸ್ವಲ್ಪ ಮಟ್ಟಿಗೆ ಜೀರ್ಣಿಸಿರುತ್ತದೆ. ಕೆಲವು ಪ್ರಾಣಿಗಳು ಆಹಾರ ಜೀವಿಯ ದೇಹದೊಳಗೆ ಪ್ರೊಟೀನುದೊಳೆಯನ್ನು ಚುಚ್ಚಿ ತುತ್ತು ಬಾಯನ್ನು ಪ್ರವೇಶಿಸುವ ಮೊದಲೇ ಜೀರ್ಣಮಾಡುತ್ತವೆ. ಜೀರ್ಣವಾಗದ ಭಾಗಗಳನ್ನು ಹೊರದೂಡುತ್ತವೆ. ಉದಾ: ಶಿರಪಾದಿಗಳು (ಸೆಫಲೋಪೋಡ) ಜೀರುಂಡೆಯ ಮತ್ತು ಮಿಣುಕುಹುಳುಗಳ ಡಿಂಬಗಳು, ಜೇಡ, ಹೊಲೆನೊಣ ಮುಂತಾದ ಪ್ರಾಣಿಗಳು.

ದಶಪದಿ ಚಪ್ಪಂದಿಗಳು ತಿನ್ನುವ ಮೊದಲು ಆಹಾರವನ್ನು ಕೊಂಡಿಗಳಿಂದ ತುಂಡರಿಸುತ್ತವೆ. ಕಿಸು ಜಠರದಲ್ಲಿನ ಅನ್ನಾಗಸೆಯ ಕಿರ್ಮೂಳೆಗಳು ಆಹಾರವನ್ನು ಇನ್ನಷ್ಟು ತುಂಡರಿಸಿ ಜೀರ್ಣಿಸುತ್ತವೆ. ಕೀಟಗಳ ದವಡೆ ಮತ್ತು ಕಾಕುಮೀಸೆಗಳು (ಪಾಲ್ಪಾ) ಇದೇ ಉದ್ದೇಶಕ್ಕಾಗಿ ರಚಿತವಾಗಿವೆ. ಗಡುಸಾದ ಆಹಾರವನ್ನು ತಿನ್ನುವ ಪ್ರಾಣಿಗಳಿಗೆ ಬಲವಾದ ದವಡೆಗಳಿರುತ್ತವೆ. ಮೃದ್ವಂಗಿಗಳಲ್ಲಿ ಅರದಂತಿರುವ ರಾಡುಲಾ ಎಂಬ ನಾಲಗೆಯಂತಹ ಅಂಗ ಎಲೆಗಳನ್ನು ಹೆರೆಯಲು ಸಹಾಯ ಮಾಡುತ್ತದೆ.

ನಾಯಿಮೀನು, ಕಪ್ಪೆ, ಹಾವು ಮುಂತಾದ ಕಶೇರುಕಗಳು ಆಹಾರವನ್ನು ಇಡಿಯಾಗಿ ಸೇವಿಸುತ್ತವೆ. ಮೊಟ್ಟೆಭಕ್ಷಕ ಹಾವು ಡಾಸಿಪೆಲ್ಟಿಸ್ ಸ್ಕಾಬ್ರಾದಲ್ಲಿ ಆಹಾರ ಸೇವನೆಗಾಗಿ ವಿಶೇಷ ಹೊಂದಾಣಿಕೆ ಇದೆ. ಇದರ ಕುತ್ತಿಗೆಯ ಸಂಧ್ಯಸ್ಥಿಗಳಿಂದ ರಕ್ತನಾಳಗಳು ಮುಳ್ಳುಗಳಂತೆ ಅನ್ನನಾಳಕ್ಕೆ ಚಾಚಿಕೊಂಡಿರುತ್ತವೆ. ಹಾವು ಮೊಟ್ಟೆಯನ್ನು ನುಂಗುವಾಗ ಈ ಮುಳ್ಳುಗಳಿಗೆ ಒತ್ತಿದ ಮೊಟ್ಟೆಗಳ ಚಿಪ್ಪು ಒಡೆಯುತ್ತದೆ. ಪಕ್ಷಿಗಳಲ್ಲಿ ಕಸುಜಠರವು ಮೃದುವಾಗಿದ್ದು ಹೆಚ್ಚು ಸ್ನಾಯು ಉಳ್ಳದ್ದಾಗಿರುತ್ತದೆ. ಆಹಾರದ ಜೊತೆಯಲ್ಲೇ ಪಕ್ಷಿಗಳು ಸಣ್ಣ ಕಲ್ಲಿನ ಹರಳುಗಳನ್ನು ನುಂಗುತ್ತವೆ. ಆಹಾರವನ್ನು ಜಜ್ಜುವುದಕ್ಕೆ ಈ ಕಲ್ಲಿನ ತುಂಡುಗಳು ಸಹಕಾರಿ. ಸ್ತನಿಗಳ ದಂತಗಳು ಬಾಯಲ್ಲಿ ಆಹಾರವನ್ನು ಜಗಿಯಲು ಆಹಾರಕ್ಕನುಗುಣವಾಗಿ ಮಾರ್ಪಟ್ಟಿರುತ್ತವೆ. ಉದಾ: ಮಾಂಸಾಹಾರಿಗಳಲ್ಲಿ ಕೋರೆಹಲ್ಲುಗಳು, ದಂಶಕಗಳಲ್ಲಿ ಬಾಚಿಹಲ್ಲುಗಳು ಹಾಗೂ ಮೆಲುಕು ಹಾಕುವ ಆಕಳುಗಳಲ್ಲಿ ದವಡೆಯ ಹಲ್ಲುಗಳ ರಚನೆ ವಿಶೇಷವಾಗಿರುತ್ತದೆ.

3. ಒಡೆಗೆಡಿಕ ಆಹಾರ ಭಕ್ಷಕಗಳು: ಈ ಪ್ರಾಣಿಗಳು ಮಣ್ಣು ಮತ್ತು ಕೆಸರಿನಲ್ಲಿರುವ ಇಂಗಾಲ ಅಥವಾ ಸಾವಯವ ವಸ್ತುಗಳನ್ನು ಸೇವಿಸುತ್ತವೆ. ಉದಾ: ಬಿಲವಾಸಿ ಲುಂಬ್ರಿಕಸ್, ದೊಡ್ಡ ಮೀನುಗಳು ಇತ್ಯಾದಿ. ಇವು ಮುಂಚಾಚಿಕೊಂಡಿರುವ ತಮ್ಮ ಗಂಟಲ ಕುಹರ ಅಥವಾ ಬಾಯಿಯ ಮೂಲಕ ಮಣ್ಣು ಮತ್ತು ಕೆಸರನ್ನು ಸೆಳೆದುಕೊಂಡು ಅದರಲ್ಲಿನ ಸಾರವನ್ನು ಸಂಗ್ರಹಿಸುತ್ತವೆ.

4. ದ್ರವಾಹಾರ ಭಕ್ಷಕಗಳು: ತಮ್ಮ ಬಾಯಿಯ ಅಂಗವ್ಯೂಹಗಳ ಮೂಲಕ ದ್ರವವನ್ನು ಸೇವಿಸುವ ಕೀಟಗಳು (ಲೆಪಿಡಾಪ್ಟಿರ). ಜೇನುನೊಣಗಳು, ಹೊಲೆನೊಣ ಮುಂತಾದುವುಗಳು ಈ ವರ್ಗಕ್ಕೆ ಸೇರಿದ ಪ್ರಾಣಿಗಳು. ದ್ರವಾಹಾರ ಭಕ್ಷಕಗಳಲ್ಲಿ ಮೂರು ಬಗೆಯ ಹೀರುವಿಕೆಯ ಅಂಗಗಳನ್ನು ನೋಡಬಹುದು. ತಗಣಿ, ಸ್ತನಿ–ಹೇನು, ಸೊಳ್ಳೆ, ಉಣ್ಣೆ ಮತ್ತು ಜಿಗಣೆ ಮುಂತಾದ ರಕ್ತ ಹೀರುವ ಕೀಟಗಳು ರಕ್ತದ ಹೆಪ್ಪುಗಟ್ಟುವಿಕೆಯನ್ನು ತಡೆಯಲು ಆಂಟಿಕೊಯಾಗುಲಿನ್ ಉತ್ಪತ್ತಿಮಾಡುತ್ತವೆ. ಪರೋಪಜೀವಿಗಳಾದ ಕಾರಲುಹುಳು, ಸ್ಪೋರೋಜೋವ, ಲಾಡಿಹುಳುಗಳು, ಸಾಕ್ಯುಲಿನ ಮುಂತಾದುವುಗಳು ಸಹ ಇದೇ ವಿಧಾನವನ್ನನುಸರಿಸುತ್ತವೆ.

ಪ್ರಾಣಿಗಳಲ್ಲಿ ಉಣಿಸುಕ್ರಿಯಾವಿನ್ಯಾಸಗಳ ವರ್ಗೀಕರಣ.

| ವಿಧಾನಗಳು | | ಉದಾಹರಣೆಗಳು |
|---|---|---|
| ಸೂಕ್ಷ್ಮಾಹಾರ ಭಕ್ಷಕಗಳು | | |
| ಮಿಥ್ಯಾಪಾದಗಳು | – | ರೇಡಿಯೊಲೇರಿಯ, ಫೋರಾಮಿನಿಫೆರಾ |
| ಶಿಲಿಕೆಗಳು | – | ಶೀಲಕಾಂಗಿಗಳು, ಸ್ಪಂಜುಗಳು, ಅನೇಕ ಹುಳುಗಳು, ಬ್ರೇಕಿಯೋಪೋಡ, ಬೈವಾಲ್ವ, ಅನ್ಯುರಾದ ಗೊದಮೊಟ್ಟೆಗಳು. |
| ಲೋಳೆ ವಿಶೇಷವಾಗಿ ಶೋಧಕ ಹಾಳೆಗಳ ರೂಪದಲ್ಲಿ | – | ಕೆಲವು ಉದರಪಾದಿಗಳು, ಟ್ಯೂನಿಕೇಟುಗಳು, ಆಂಫಿಯಾಕ್ಸಸ್, ಅಮ್ಮೊಸಿಟಸ್ ಮುಂತಾದುವುಗಳು. |
| ಬಿರುಗೂದಲು ಮತ್ತು ಇತರ ಶೋಧಕ ಅಂಗಗಳು | – | ಡಾಫ್ನಿಯ, ಕೋಪಿಪಾಡ್‌ಗಳು, ಮತ್ತಿತರ ಕಠಿಣಚರ್ಮಿಗಳು, ಶಾರ್ಕ್, ಕೆಲವು ಮೀನುಗಳು, ಫ್ಲೆಮಿಂಗೋ, ತಿಮಿಂಗಿಲ ಇತ್ಯಾದಿ. |
| ನಿಡುಆಹಾರ ಭಕ್ಷಕಗಳು | – | ಸುತ್ತಲಿನ ವಾಹಕವನ್ನು ನುಂಗುವುದು (ಮಣ್ಣು, ಮರಳು ಇತ್ಯಾದಿ) ಸಮುದ್ರ ಮತ್ತು ಸಿಹಿನೀರಿನ ಪದರಗಳಲ್ಲಿ ವಾಸಿಸುವ ಬಿಲವಾಸಿ ಮತ್ತು ನೆಲತೋಡುವ ಅನೇಕ ಪ್ರಾಣಿಗಳು, ಎರೆಹುಳು ಇತ್ಯಾದಿ. |
| ಆಹಾರ ಪ್ರಾಣಿಯನ್ನು ಶಕ್ತಿಹೀನಗೊಳಿಸಿ ಕಬಳಿಸುವುದು | – | ಅನೇಕ ಕುಟುಕು ಕಣವಂತಗಳು, ಪಾಲಿಕೀಟಗಳು, ಅನೇಕ ಸ್ತನಿಗಳಲ್ಲದ ಕಶೇರುಕಗಳು, ಮತ್ತು ಕೆಲವು ಸ್ತನಿಗಳು. |
| ಆಹಾರ ಪ್ರಾಣಿಯನ್ನು ಹಿಡಿದು ಜಗಿಯುವುದು ಮತ್ತು ಕಚ್ಚುವುದು ಇತ್ಯಾದಿ | – | ಅನೇಕ ಉದರಪಾದಿಗಳು, ಶಿರಪಾದಿಗಳು, ಕಠಿಣ ಚರ್ಮಿಗಳು, ಕೀಟಗಳು, ಸೈಕ್ಲೋಸ್ಟೋಮುಗಳು, ಕೆಲವು ಪಕ್ಷಿಗಳು, ಮತ್ತು ಅನೇಕ ಸ್ತನಿಗಳು. |
| ದ್ರವಾಹಾರ ಮತ್ತು ಒಡೆಗೆಡಿಕ ಆಹಾರ ಭಕ್ಷಕಗಳು ದ್ರವವನ್ನು ಹೀರುವುದು | – | ಟ್ರೆಮಟೋಡಗಳು, ನೆಮಟೊಡ್‌ಗಳು, ಜಿಗಣೆಗಳು, ಪರೋಪಜೀವಿ ಕೋಪಿಪೋಡಗಳು, ಕೆಲವು ಕೀಟವರ್ಗಗಳು, ಸ್ತನಿಗಳ ಮರಿಗಳು. |
| ಶರೀರದ ಮೂಲಕ ಕರಗಿದ ವಸ್ತುಗಳನ್ನು ಗ್ರಹಿಸುವುದು ಕರುಳಾಚೆಯ ಆಹಾರಗ್ರಹಣ | – | ಅನೇಕ ಪರೋಪಜೀವಿಗಳು, ಮತ್ತು ಜಲವಾಸಿ ಪ್ರಾಣಿಗಳು. |

(ಎಸ್.ಕೆ.)

**ಉಣ್ಣಿ:** ಸಂಧಿಪದಿ ವಂಶದ ಏಕಾರ್ಸಿಯ ಉಪವರ್ಗದ ಒಂದು ಪ್ರಾಣಿ (ಟಿಕ್), ಪರೋಪಜೀವಿ. ದನಕರುಗಳು, ಎಮ್ಮೆ, ಕುರಿ, ನಾಯಿ, ಕೋಳಿ ಮುಂತಾದ ಸಾಕುಪ್ರಾಣಿಗಳ ಹೊರಚರ್ಮವನ್ನು ಕಚ್ಚಿಕೊಂಡಿದ್ದು ಅವುಗಳ ರಕ್ತ ಹೀರಿ ಬದುಕುತ್ತದೆ. ಉಣ್ಣಿಯ ಚಟುವಟಿಕೆಯಿಂದ ರೋಗಗಳು ಹರಡುತ್ತವೆ. ಹೀಗಾಗಿ ಇದು ಮನುಷ್ಯರ ಮತ್ತು ಪ್ರಾಣಿಗಳ ವೈರಿ. ಇದರ ಚರ್ಮದ ಮೇಲೆ ರಕ್ಷಣಾಪೊರೆ (ಕ್ಯೂಟಿಕಲ್) ಇದೆ. ಈ ಪೊರೆಗೆ ಹಿಗ್ಗುವ ಮತ್ತು ಕುಗ್ಗುವ ಸಾಮರ್ಥ್ಯವಿದೆ. ಗಂಡಿಗಿಂತ ಹೆಣ್ಣಿಗೆ ಶಕ್ತಿ ಹೆಚ್ಚು. ಆಶ್ರಯದಾತ ಜೀವಿಯ ರಕ್ತಹೀರಿ ಅದನ್ನು ಶೇಖರಿಸಿಟ್ಟುಕೊಳ್ಳಲು ಹೆಣ್ಣು ಉಣ್ಣಿಯ ಜೀರ್ಣಾಂಗದಲ್ಲಿ ವಿಚಿತ್ರ ರೀತಿಯ ಚೀಲಗಳಿವೆ. ಚೆನ್ನಾಗಿ ರಕ್ತ ಕುಡಿದಾಗ ಹೆಣ್ಣು ದುಂಡಗೆ ಕಾಳಿನಂತಾಗುತ್ತದೆ.



ಉಣ್ಣಿಯ ಶರೀರದಲ್ಲಿ ಶಿರ ಮತ್ತು ಎದೆಗಳೆರಡೂ ಒಂದುಗೂಡಿದಂತಿದ್ದು ಒಂದೇ ಭಾಗದಂತಾಗಿದೆ. ಇದರ ಹೆಸರು ಶಿರೋವಕ್ಷ (ಸೆಫಾಲೊತೊರಾಕ್ಸ್). ಉಳಿದ ಭಾಗವೇ ಉದರ. ಇದು ಶಿರೋವಕ್ಷದಿಂದ ಬೇರೆ ಇದೆ. ಶಿರೋವಕ್ಷದಲ್ಲಿ ಚಲಿಸಬಲ್ಲ ಶಿರದ ಮುಂಭಾಗ ಉಂಟು. ಇಲ್ಲಿ ಹರಿತವಾದ ದವಡೆಗಳು ಇರುವ ವದನಾಂಗಗಳಿವೆ. ದವಡೆಗಳ ಪಕ್ಕದಲ್ಲಿ ಗಟ್ಟಿಯಾದ ಕಾಲಿನಂತಿರುವ ಒಂದು ಜೊತೆ ಸ್ಪರ್ಶೇಂದ್ರಿಯಗಳಿವೆ. ಇವನ್ನು ಪ್ಯಾಲ್ಪಿಗಳೆನ್ನುತ್ತಾರೆ. ಬಾಯ ಮುಂಭಾಗದಲ್ಲಿ ಚೂಪಾದ ಹೈಪೊಸ್ಟೊಮ್ ಎಂಬ ಅಂಗವಿದೆ. ಇದರಲ್ಲಿ ನಾನಾ ವೃತ್ತಗಳಲ್ಲಿ ಒಂದರ ಹಿಂದೆ ಒಂದರಂತೆ ಜೋಡಿಸಿಕೊಂಡಿರುವ ಸೂಕ್ಷ್ಮವಾದ ಮೊನೆಯಾದ ಮುಳ್ಳುಗಳಿವೆ. ಇವು ಹಿಂದಕ್ಕೆ ಬಾಗಿದಂತಿದ್ದು ಆಶ್ರಯದಾತ ಜೀವಿಯ ಮಾಂಸಖಂಡವನ್ನು ಕೊರೆಯಲು ಮತ್ತು ಅದನ್ನು ಭದ್ರವಾಗಿ ಹಿಡಿಯಲು ಅನುಕೂಲವಾಗಿವೆ. ಆದ್ದರಿಂದ ದನಕರುಗಳನ್ನು ಕಚ್ಚಿಕೊಂಡಿರುವ ಉಣ್ಣಿಯನ್ನು ಬಲವಾಗಿ ಎಳೆದರೆ ಅದರ ಹೈಪೊಸ್ಟೊಮ್ ಭಾಗ ಮಾಂಸಖಂಡವನ್ನು ತೀವ್ರವಾಗಿ ಗಾಯಗೊಳಿಸುತ್ತದೆ. ಅಲ್ಲದೆ ಇದು ಮುರಿದುಹೋಗಿ ಅಲ್ಲಿಯೇ ಉಳಿದು ಮುಂದೆ ಆ ಭಾಗದಲ್ಲಿ ದೊಡ್ಡ ವ್ರಣವಾಗುತ್ತದೆ.

ಉಣ್ಣಿಗೆ ಎಂಟು ಕಾಲುಗಳಿವೆ. ಅವೆಲ್ಲವೂ ಸಂಧಿಪಾದಗಳು. ಶಿರೋವಕ್ಷ ಮತ್ತು ಉದರದ ಸ್ವಲ್ಪಭಾಗದಲ್ಲಿ ಗಟ್ಟಿಯಾದ ಕವಚದಂತಿರುವ ಮುಚ್ಚಳ ಇದೆ. ದೇಹದ ತಳಭಾಗದಲ್ಲಿ ಜನನೇಂದ್ರಿಯ ರಂಧ್ರ ಮತ್ತು ಗುದದ್ವಾರ ಇವೆ. ರಂಧ್ರದ ಸ್ಥಾನ ಶಿರದ ಹಿಂತುದಿಯಲ್ಲಿ, ದ್ವಾರದ ಸ್ಥಾನ ಹಿಂತುದಿಯಿಂದ ಸ್ವಲ್ಪ ಮುಂದಕ್ಕೆ ಉದರ ಭಾಗದಲ್ಲಿ. ಉಸಿರಾಟಕ್ಕೆ ಬೇಕಾದ ರಂಧ್ರಗಳು ನಾಲ್ಕನೆಯ ಪಾದದ ಬುಡದ ಹತ್ತಿರದಲ್ಲಿನ ತಟ್ಟೆಗಳಂಥ ರಚನೆಗಳಲ್ಲಿವೆ. ಶಿರದ ಮೇಲುಗಡೆ ಚಿಕ್ಕ ಚಿಕ್ಕ ಗಟ್ಟಿಯಾದ ರೋಮಗಳಿರುವ ರಚನೆಯನ್ನಾಗಲೀ ತಟ್ಟೆಗಳಂಥ ಕವಚಗಳನ್ನಾಗಲೀ ಕಾಣಬಹುದು. ಪ್ರಾಣಿಯ ತಳಭಾಗದಲ್ಲಿಯೂ ಇಂಥ ತಟ್ಟೆಗಳು ಮತ್ತು ಸೂಕ್ಷ್ಮ ಕಾಲುವೆಗಳಂಥ ರಚನೆಗಳು ಕಂಡುಬರುತ್ತವೆ. ಈ ರೀತಿಯ ರಚನೆಗಳು ಉಣ್ಣಿಗಳ ವರ್ಗೀಕರಣಕ್ಕೆ ಬಲು ಸಹಾಯಕ.

ನಿವಾಸಸ್ಥಳ ಮತ್ತು ಜೀವನಚರಿತ್ರೆ: ಎಲ್ಲ ಉಣ್ಣಿಗಳೂ ತಮ್ಮ ಜೀವಮಾನದ ಕೆಲವು ಭಾಗವನ್ನು ಪರಾಶ್ರಯದಲ್ಲಿಯೇ ಕಳೆಯುತ್ತವೆ. ಸಾಮಾನ್ಯವಾಗಿ ಬಹಳ ಪ್ರಭೇದಗಳು ಸ್ತನಿಗಳಲ್ಲಿ ಪರೋಪಜೀವಿಗಳಾಗಿ ವಾಸಿಸುವುದುಂಟು. ಆದರೆ ಕೆಲವು ಪ್ರಭೇದಗಳು ಪಕ್ಷಿಗಳು, ಬಾವಲಿ, ಹಾವು, ಹಲ್ಲಿ ಮುಂತಾದ ಪ್ರಾಣಿಗಳನ್ನು ಆಶ್ರಯಿಸಿ ಜೀವನ ನಡೆಸುತ್ತವೆ. ಕೆಲವು ನಿರ್ದಿಷ್ಟವಾಗಿ ಒಂದೇ ರೀತಿಯ ಆಶ್ರಯದಾತನನ್ನು ಹೊಂದಿದ್ದರೆ ಮತ್ತೆ ಕೆಲವಕ್ಕೆ ಆ ರೀತಿಯ ಕಟ್ಟುಪಾಡುಗಳು ಕಂಡುಬರುವುದಿಲ್ಲ. ಉಣ್ಣಿಗಳಲ್ಲಿ ಎರಡು ಕುಟುಂಬಗಳಿವೆ. ಮೊದಲನೆಯದು ಇಕ್ಸೊಡಿಡೆ, ಎರಡನೆಯದು ಆರ್ಗಾಸಿಡೆ.

ಇಕ್ಸೊಡಿಡೆ ಕುಟುಂಬದ ಎಲ್ಲ ಉಣ್ಣಿಗಳ ಜೀವನಚರಿತ್ರೆಯೂ ಸಾಮಾನ್ಯವಾಗಿ ಒಂದೇ ತೆರ. ಸಂಭೋಗ ಕ್ರಿಯೆಯಾದ ಕೆಲವು ದಿವಸಗಳ ಮೇಲೆ ಹೆಣ್ಣು ಉಣ್ಣಿ ಆಶ್ರಯದಾತನ ಶರೀರದಿಂದ ಬೇಕಾದಷ್ಟು ರಕ್ತಹೀರಿ ಭೂಮಿಗೆ ಬಿದ್ದು ಮೊಟ್ಟೆಯಿಡಲು ಉಪಕ್ರಮಿಸುತ್ತದೆ. ಮೊಟ್ಟೆಗಳನ್ನು ಭೂಮಿಯ ಮೇಲಾಗಲೀ ಒಂದು ಚಿಕ್ಕಗುಂಡಿ ತೋಡಿ ಅದರೊಳಗಾಗಲೀ ಇಡುತ್ತದೆ. ಒಂದು ಸಲಕ್ಕೆ ಇಡುವ ಮೊಟ್ಟೆಗಳ ಸಂಖ್ಯೆ ೧೦೦–೧೦೦೦೦. ಸೂರ್ಯನ ಶಾಖದಿಂದ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ. ಇದಕ್ಕೆ ಬೇಕಾದ ಕಾಲಾವಕಾಶ ೨–೩ ವಾರಗಳು. ಆದರೆ ಚಳಿಗಾಲದಲ್ಲಿಟ್ಟ ಮೊಟ್ಟೆಗಳು ಬೇಸಗೆ ಕಾಲದ ವರೆಗೂ ಒಡೆಯುವುದೇ ಇಲ್ಲ. ಮೊಟ್ಟೆಯೊಡೆದು ಹುಟ್ಟಿ ಬಂದ ಎಳೆಯ ಜೀವಿಗಳ ಹೆಸರು ಲಾರ್ವಾಗಳು. ಇವನ್ನು ಸುಲಭವಾಗಿ ಗುರುತಿಸಬಹುದು. ಇವಕ್ಕೆ ಕೇವಲ ಆರು ಕಾಲುಗಳಿದ್ದರೆ ವಯಸ್ಕ ಉಣ್ಣಿಗೆ ಎಂಟು ಕಾಲುಗಳಿರುತ್ತವೆ. ಲಾರ್ವಾಗಳು ಹುಲ್ಲಿನ ಎಸಳುಗಳ ಮೇಲೆ ಕುಳಿತುಕೊಂಡು ಆಶ್ರಯದಾತ ಜೀವಿಯ ಬರುವಿಕೆಗೆ ಕಾಯುತ್ತದೆ. ಬಂದರೆ ಮುಂದಿನ ಕ್ರಿಯೆ ಆರಂಭ. ಇಲ್ಲವಾದರೆ ಸಾಯುತ್ತವೆ. ಹೀಗೆ ಕಾಯುತ್ತಿರುವಾಗ ಕುಳಿತಿರುವ ಹುಲ್ಲಿನ ಎಸಳುಗಳೇನಾದರೂ ಅಲುಗಾಡಿದರೆ ಕೂಡಲೇ ಅವು ನಿಮಿರಿ ಬೇಕಾದ ಆಶ್ರಯದಾತ ಪ್ರಾಣಿಯ ಶರೀರಕ್ಕೆ ಫಕ್ಕನೆ ಅಂಟಿಕೊಂಡುಬಿಡುತ್ತವೆ. ಅಲ್ಲಿಂದ ರಕ್ತಹೀರಿ ಆ ಮರಿಗಳು ಬೆಳೆಯುತ್ತವೆ. ಚೆನ್ನಾಗಿ ರಕ್ತ ಕುಡಿದು ಆಶ್ರಯದಾತ ಜೀವಿಯ ಶರೀರದಿಂದ ಇವು ಕೆಳಗೆ ಬಿದ್ದುಹೋಗುತ್ತವೆ. ಅಲ್ಲಿ ಯಾವುದಾದರೊಂದು ಕಲ್ಲಿನ ಅಥವಾ ಇತರ ವಸ್ತುವಿನ ಮರೆಯಲ್ಲಿ ಅಡಗಿ ಕುಳಿತುಕೊಳ್ಳುತ್ತವೆ. ಒಂದೆರಡು ವಾರ ಹೀಗೆ ಕಳೆದು ಮುಂದೆ ಪೊರೆ ಬಿಡಲಾರಂಭಿಸುತ್ತವೆ. ಆಗ ಹೊಸ ಚರ್ಮ ಬೆಳೆಯುತ್ತದೆ. ಈ ಮಧ್ಯೆ ಶರೀರದೊಳಗೆ ಅಂಗಗಳಲ್ಲಿ ಪರಿವರ್ತನೆಗಳು ನಡೆಯುತ್ತವೆ. ಕಡೆಯಲ್ಲಿ ಈ ಜೀವಿಗಳಿಗೆ ಇನ್ನೊಂದು ಜೊತೆ ಕಾಲುಗಳು ಹುಟ್ಟಿ ಬಂದು ಒಟ್ಟು ಎಂಟುಕಾಲುಗಳಾಗುತ್ತವೆ. ಆದರೂ ಜನನೇಂದ್ರಿಯಗಳು ಬೆಳೆದಿರುವುದಿಲ್ಲ. ಈ ರೀತಿಯ ಅಪ್ರಬುದ್ಧ ಜೀವಿಯ ಹೆಸರು ನಿಂಫ್. ಇವು ಮತ್ತೆ ಹುಲ್ಲು ಮತ್ತು ಗಿಡಬಳ್ಳಿಗಳನ್ನು ಹತ್ತಿ ತಮಗೆ ಆಶ್ರಯ ಕೊಡಬಲ್ಲ ಜೀವಿಗಳನ್ನು ಕಾಯುತ್ತ ಕುಳಿತುಕೊಳ್ಳುತ್ತವೆ. ಇದು ಎರಡನೆಯ ನಿರಶನವ್ರತ. ಆಶ್ರಯದಾತ ಆ ಕಡೆ ಬಂದಾಗ ಅದರ ಮೈಗೆ ಅಂಟಿಕೊಂಡು ಮತ್ತೆ ಆಹಾರಸೇವನೆ ಪ್ರಾರಂಭಿಸುತ್ತವೆ. ಚೆನ್ನಾಗಿ ರಕ್ತ ಕುಡಿದು ಕೆಲ ಕಾಲದಲ್ಲಿಯೇ ಮತ್ತೆ ನೆಲಕ್ಕೆ ಬಿದ್ದು ಹೋಗುತ್ತವೆ. ಕೆಲವು ವಾರಗಳನ್ನು ಕಳೆದು ಪೊರೆ ಬಿಡುತ್ತವೆ. ಇಷ್ಟರಲ್ಲಿ ಇವುಗಳ ಶರೀರದೊಳಗೆ ಜನನೇಂದ್ರಿಯಗಳು ಬೆಳೆದಿರುತ್ತವೆ. ಇಲ್ಲಿಗೆ ಉಣ್ಣಿ ಪ್ರಬುದ್ಧಾವಸ್ಥೆಗೆ ತಲುಪಿದ ವಯಸ್ಕ ಜೀವಿಯಾದಂತಾಯಿತು. ಇಂಥ ಉಣ್ಣಿಗಳು ಮತ್ತೆ ಆಶ್ರಯದಾತನನ್ನು ಕಾಯುತ್ತ ಕುಳಿತುಕೊಳ್ಳುತ್ತವೆ. ಈ ಗುಂಪಿನಲ್ಲಿ ಹೆಣ್ಣು ಗಂಡುಗಳೆರಡೂ ಇರುತ್ತವೆ. ಕಾಯುವ ಕಾಲದಲ್ಲಿಯೇ ಸಂಭೋಗ ಕ್ರಿಯೆಯೂ ನಡೆದುಹೋಗುತ್ತದೆ. ಹೀಗೆ ಬೆಳೆದ ಉಣ್ಣಿಗಳು ಆಶ್ರಯ ಕೊಡುವ ಜೀವಿಯ ಶರೀರವನ್ನು ತಲುಪಿ ಅದರ ಚರ್ಮಕ್ಕೆ ನೇತುಬೀಳುತ್ತದೆ. ಈಗ ರಾಕ್ಷಸಿಯಂತೆ ಹೆಣ್ಣು ರಕ್ತ ಹೀರಲಾರಂಭಿಸುತ್ತದೆ. ಚೆನ್ನಾಗಿ ಕುಡಿದ ಒಂದು ಹೆಣ್ಣು ಒಂದು ಗಜ್ಜುಗದ ಗಾತ್ರಕ್ಕಿರುವುದೂ ಉಂಟು.

ಉಣ್ಣಿಯ ಕೆಲವು ಪ್ರಭೇದಗಳಲ್ಲಿ ಗಂಡು ಪರೋಪಜೀವನ ನಡೆಸುವುದಿಲ್ಲ. ಜೊತೆಗೆ ಗಂಡಿಗೆ ಹೆಣ್ಣಿಗಿಂತ ಚಿಕ್ಕದಾದ ಮತ್ತು ವಿಭಿನ್ನ ರೀತಿಯ ವದನಾಂಗಗಳಿವೆ. ಉಣ್ಣಿಗಳ ಎಲ್ಲ ಪ್ರಭೇಧಗಳಲ್ಲೂ ಗಂಡು ಸಂಭೋಗ ಕ್ರಿಯೆಯಾದ ಸ್ವಲ್ಪಕಾಲದಲ್ಲಿಯೇ ಸತ್ತುಹೋಗುತ್ತದೆ. ಲಾರ್ವಾಗಳು ಆಹಾರವಿಲ್ಲದೆ ಆರು ತಿಂಗಳವರೆಗೂ ಬದುಕಬಲ್ಲವು. ಮುಚ್ಚಳ ಹಾಕಿದ ಸೀಸೆಯೊಳಗಿದ್ದ ವಯಸ್ಕ ಉಣ್ಣಿಗಳು ಐದು ವರ್ಷಗಳವರೆಗೆ ಆಹಾರವಿಲ್ಲದೆ ಉಳಿದಿವೆ. ಆದರೆ ಪ್ರತಿಯೊಂದು ಉಣ್ಣಿಯ ಪ್ರಭೇದದಲ್ಲೂ ಜೀವನಚರಿತ್ರೆ ಮೇಲೆ ಹೇಳಿದ ರೀತಿಯಲ್ಲಿಯೇ ನಡೆಯುವುದಿಲ್ಲ. ಕೆಲವಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದೇ ಇರುತ್ತವೆ.

ಆರ್ಗಾಸಿಡೆ ಕುಟುಂಬಕ್ಕೆ ಸೇರಿದ ಉಣ್ಣಿಗಳ ಜೀವನಚರಿತ್ರೆಯೆ ಮತ್ತೊಂದು ಬಗೆ. ಇವು ಆಶ್ರಯದಾತ ಜೀವಿಯ ಶರೀರದ ಬದಲು ಆ ಜೀವಿ ವಾಸಿಸುವ ಗೂಡುಗಳಲ್ಲಿನ ಬಿಲಗಳಲ್ಲಿ ಇರುತ್ತವೆ. ಇಲಿಯ ಬಿಲ, ಮೊಲದ ಗೂಡು, ಕೋಳಿಯ ಗೂಡುಗಳಲ್ಲಿ ಇವು ಹೆಚ್ಚು. ಆಶ್ರಯದಾತ ಗೂಡು ಸೇರಿದಾಗ ಅದರ ಮೈಗಂಟಿ ರಕ್ತಹೀರುವುದು ಇವುಗಳ ಗುಣ. ರಕ್ತಹೀರಿ ಕೇವಲ ಹತ್ತು ನಿಮಿಷಗಳಲ್ಲಿ ಕೆಳಗೆ ಬೀಳುತ್ತದೆ. ಆದರೆ ಕೆಲವು ಜೀವಿಗಳಲ್ಲಿ ಕೆಳಗೆ ಬೀಳಲು ಹಲವು ದಿವಸಗಳೇ ಬೇಕು. ಆದ್ದರಿಂದ ಇವು ಆಶ್ರಯದಾತರಿಂದ ದೂರ ಹೋಗಲು ಸಾಧ್ಯವೇ ಇಲ್ಲ. ಹೆಣ್ಣು ಆರ್ಗಾಸಿಡೆ ಸಾಮಾನ್ಯವಾಗಿ ಸಂಭೋಗಾನಂತರ ಒಂದು ವಾರದಲ್ಲಿ ಮೊಟ್ಟೆಗಳನ್ನು ಗುಂಪು ಗುಂಪಾಗಿ ಇಡಲು ತೊಡಗುವುದು. ಅವು ಐವತ್ತರಿಂದ ಕೆಲವೇ ನೂರಿರುತ್ತವೆ. ಒಂದು ಗುಂಪಿನ ಮೊಟ್ಟೆಗಳಿಗೂ ಮತ್ತೊಂದು ಗುಂಪಿನ ಮೊಟ್ಟೆಗಳಿಗೂ ಎರಡರಿಂದ ನಾಲ್ಕು ತಿಂಗಳ ಅಂತರವಿರುವುದು. ಅಥವಾ ಕೆಲವು ಪ್ರಭೇದಗಳಲ್ಲಿ ಹೆಣ್ಣು ಕೆಲವು ತಿಂಗಳು ಕಳೆದಮೇಲೆ ಮೊಟ್ಟೆಯಿಡಲು ಪ್ರಾರಂಭಿಸುತ್ತದೆ. ಮೊಟ್ಟೆಗಳು ಆಶ್ರಯದಾತನ ನಿವಾಸಸ್ಥಾನದಲ್ಲಿ ಅಥವಾ ಅದು ಓಡಾಡುವೆಡೆಗಳಲ್ಲಿ ಇರುತ್ತವೆ. ಮೊಟ್ಟೆಯೊಡೆದು ಹೊರಬಂದ ಮರಿಗಳಿಗೆ ಆಶ್ರಯ ಕೊಡುವ ಜೀವಿ ಸುಲಭವಾಗಿ ಸಿಕ್ಕುತ್ತದೆ. ಕೆಲವು ಪ್ರಭೇದಗಳ ಲಾರ್ವಾಗಳು ಪೊರೆ

ಬಿಡುವುದಕ್ಕೆ ಮುಂಚೆಯೂ, ಪೊರೆ ಬಿಟ್ಟಮೇಲೆಯೂ ಚೆನ್ನಾಗಿ ರಕ್ತ ಹೀರುತ್ತವೆ. ಮತ್ತೆ ಕೆಲವಲ್ಲಿ ಲಾರ್ವಾಗಳು ಆಹಾರ ಸೇವನೆಯಿಲ್ಲದೇ ಪೊರೆಬಿಟ್ಟು ನಿಂಫ್‌ಗಳಾಗಿ ಆಹಾರ ಸೇವಿಸಲುಪಕ್ರಮಿಸುತ್ತವೆ. ಇವು ಐದಾರು ಬಾರಿ ಪೊರೆ ಬಿಡುವುದುಂಟು. ಮರಿ ಹೊರ ಬಂದಂದಿನಿಂದ ವಯಸ್ಕ ಜೀವಿಯಾಗಲು ತಿಂಗಳುಗಳಾಗಬೇಕು. ಇಂಥವು ಆಹಾರ ತೆಗೆದುಕೊಳ್ಳದೆ ೫–೭ ವರ್ಷಗಳ ವರೆಗೆ ಬದುಕುತ್ತವೆ,

ಉಣ್ಣೆಗಳು ತರುವ ರೋಗಗಳು: ದನಕರುಗಳಲ್ಲಿ, ಸಾಕು ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ಉಣ್ಣೆಗಳು ರೋಗಗಳನ್ನು ಹರಡುತ್ತವೆ. ಮರುಕಲಿಜ್ವರ ತರುವ ಸ್ಪೈರೊಖೀಟ ಜೀವಾಣುಗಳು,. ಚುಕ್ಕೆಜ್ವರ ಮುಂತಾದ ರೋಗಗಳನ್ನು ತರುವ ರಿಕೆಟ್ಸಿಯ ಜೀವಿಗಳು ಹರಡುವುದು ಮುಖ್ಯವಾಗಿ ಉಣ್ಣೆಗಳಿಂದಲೇ. ಇದಲ್ಲದೆ ಬಾಬೆಸ್ಸಿದ ಮತ್ತು ಅನಪ್ಲಾಸ್ಮ ಮತ್ತು ಟುಲರೋಮಿಯ ಮುಂತಾದ ಕಾಯಿಲೆಗಳನ್ನು ತರುವ ಬ್ಯಾಕ್ಟೀರಿಯಗಳು ಹರಡುವುದು ಸಹ ಉಣ್ಣೆಗಳಿಂದಲೇ. ಕೆಲವು ಜೀವಾಣುಗಳೂ ಉಣ್ಣೆಗಳಿಂದಾಗಿ ಒಂದು ಪ್ರಾಣಿಯಿಂದ ಮತ್ತೊಂದಕ್ಕೆ ಹರಡುತ್ತವೆಂದು ಇತ್ತೀಚೆಗೆ ತಿಳಿದುಬಂದಿದೆ. ಕುರಿಗಳಿಗೆ ಬರುವ ಲ್ಯೂಪಿಂಗ್ ರೋಗಕ್ಕೆ ಕಾರಣವಾದ ವೈರಸ್ಸುಗಳು ಉಣ್ಣೆಗಳಿಂದಲೇ ಹರಡುತ್ತವೆ.

ಉಣ್ಣೆ ರಕ್ತ ಹೀರುವುದರಿಂದಾಗುವ ಅನಾಹುತವೇನೋ ಕಡಿಮೆಯಿಲ್ಲ. ಮಿತಿಮೀರಿದಾಗ ಆಶ್ರಯ ನೀಡಿದ ಪ್ರಾಣಿ ಬದುಕುವುದೇ ಅಸಾಧ್ಯವಾಗಬಹುದು. ಕಾರಣ ರಕ್ತಹೀನತೆ. ಜೆಲ್ಲಸನ್ಸ್ ಮತ್ತು ಖೋಸ್ (೧೯೩೮) ಹೇಳಿರುವ ಪ್ರಕಾರ ೬೦–೧೦೦ ಹೆಣ್ಣು ಉಣ್ಣೆಗಳು ಒಂದು ಮೊಲವನ್ನು ೫–೭ ದಿನಗಳ ಅವಧಿಯಲ್ಲಿ ಕೊಂದವು. ರಕ್ತಹೀರುವುದರ ಜೊತೆಗೆ ಉಣ್ಣೆ ಬಿಡುವ ವಿಷ ಪದಾರ್ಥವೂ ಇದಕ್ಕೆ ಕಾರಣ. ಶ್ಲೂಹಾರ್ಥ್ ಎಂಬ ವಿಜ್ಞಾನಿ ೧೯೫೦ರಲ್ಲಿ ತಾನು ಸಾಕಿದ್ದ ಉಣ್ಣೆಗಳ ಪಂಜರದೊಳಕ್ಕೆ ಇಲಿಗಳನ್ನು ಬಿಟ್ಟ. ಇಲಿಗಳು ಕೇವಲ ಮೂರು ಗಂಟೆಗಳಲ್ಲಿಯೇ ಸತ್ತುಬಿದ್ದವು. ಉಣ್ಣೆ ಎಲ್ಲಿಯೇ ಇದ್ದರೂ ಅದರ ಆಹಾರ ರಕ್ತ. ಹಸುವಿನ ಕೆಚ್ಚಲಿನ ಮೇಲಿದ್ದರೂ ಅದು ಹೀರುವುದು ರಕ್ತವನ್ನೇ. ಈ ಪ್ರಮೇಯವನ್ನು ಸರ್ವಜ್ಞಕವಿ ಸುಂದರವಾಗಿ ಬಳಸಿಕೊಂಡು ಉಣ್ಣೆ ಕೆಚ್ಚಲೊಳಿದ್ದು ಉಣ್ಣದದು ನೊರೆಹಾಲು ಎಂದು ಬರೆದಿದ್ದಾನೆ. (ಎಲ್.ಎಸ್.ಜಿ.)

**ಉಣ್ಣೆ:** ಸಾಮಾನ್ಯವಾಗಿ ಕುರಿಯ ಚರ್ಮದ ಮೇಲೆ ಬೆಳೆದ ತುಪ್ಪಟದಿಂದ ಕತ್ತರಿಸಿ ತೆಗೆಯುವ ನಯವಾದ ಮತ್ತು ಕೂದಲಿನಂತೆ ಇರುವ ವಸ್ತು (ವೂಲ್). ಕುರಿಯ ಹಾಗಿರುವ ಕೆಲವು ಪ್ರಾಣಿಗಳಾದ ಮೇಕೆ, ಲಾಮ ಮುಂತಾದುವುಗಳಿಂದಲೂ ಉಣ್ಣೆಯಂಥ ಕೂದಲನ್ನು ಪಡೆಯಬಹುದು. ಪುರಾಣ ಮತ್ತು ಇತಿಹಾಸಗಳಲ್ಲಿ ಕುರಿ ಉಣ್ಣೆಯನ್ನು ಕುರಿತ ಪ್ರಸ್ತಾಪಗಳಿವೆ. ಮೊದಲು ಒಂದು ಪ್ರಾಣಿಯ ಕೂದಲು ಮಾತ್ರವಾಗಿದ್ದ ಉಣ್ಣೆಯ ವಿಶಿಷ್ಟ ಗುಣ, ಉಪಯುಕ್ತತೆಗಳನ್ನು ಮನುಷ್ಯ ಅರಿತು ಅವನ್ನು ಬಳಸಿಕೊಂಡ. ಹೀಗೆ ನಾಗರಿಕತೆ ಮುಂದುವರಿದಂತೆ ಕುರಿಯ ಸಾಕಣೆ ಮತ್ತು ಉಣ್ಣೆಯ ಪೋಷಣೆಗಳ ಕಡೆಗೆ ವಿಶೇಷ ಗಮನವೀಯಲಾಯಿತು. ಇದರಿಂದ ಉಣ್ಣೆಯ ಉದ್ಯಮ ಬೆಳೆಯಿತು. ಈಗ ಪ್ರಪಂಚದಲ್ಲಿ ಸುಮಾರು ಎಪ್ಪತ್ತು ಕೋಟಿಗಿಂತಲೂ ಮಿಗಿಲಾಗಿ, ಅನೇಕ ಬಗೆಯ ಕುರಿಗಳಿವೆಯೆಂದು ಅಂದಾಜು ಮಾಡಲಾಗಿದೆ.

ಕುರಿಗಳನ್ನು ಸಾಮಾನ್ಯವಾಗಿ ಎರಡು ಬಗೆಯಾಗಿ ವಿಂಗಡಿಸಿದೆ. ಮೊದಲನೆಯದು ಮಾಂಸಕ್ಕಾಗಿಯೇ ಬೆಳೆಸಿದ ಕುರಿಗಳು, ಎರಡನೆಯದು ಉಣ್ಣೆಯ ಉತ್ಪಾದನೆಗಾಗಿ ಬೆಳೆಸಿದವು.

ಅನೇಕ ದೇಶಗಳಲ್ಲಿ ಉಣ್ಣೆಗಾಗಿ ಕುರಿಗಳನ್ನು ಬೆಳೆಸುವುದೇ ಒಂದು ಮುಖ್ಯ ಕೈಗಾರಿಕೆ. ಚೀನ, ತುರ್ಕಿ ಮತ್ತು ಸೈಬೀರಿಯ ದೇಶಗಳಿಂದ ದೊರಕುವ ಉಣ್ಣೆ ಸ್ವಲ್ಪ ದಪ್ಪವಾಗಿಯೂ ಉದ್ದವಾಗಿಯೂ ಇರುತ್ತದೆ. ಇದರಿಂದ ವಿಧ ವಿಧವಾದ ಜಮಖಾನಗಳನ್ನು ತಯಾರಿಸಬಹುದು. ಆಸ್ಟ್ರೇಲಿಯ, ಇಂಗ್ಲೆಂಡ್, ಸ್ಪೇನ್, ಅಮೆರಿಕ ಸಂಯುಕ್ತಸಂಸ್ಥಾನ, ಜರ್ಮನಿ, ಆಫ್ರಿಕ ಮತ್ತು ದಕ್ಷಿಣ ಅಮೆರಿಕ ದೇಶದವರು ಬೆಳೆಸುವ ಒಳ್ಳೆ ಜಾತಿಯ ಕುರಿಗಳಿಂದ ಮೃದುವಾದ ಮತ್ತು ನಯವಾದ ಉಣ್ಣೆ ಸಿಗುತ್ತದೆ. ಈ ತರಹ ಉತ್ತಮವಾದ ಉಣ್ಣೆಯನ್ನು ಮೆರಿನೋ ಜಾತಿಗೆ ಸೇರಿದ ಕುರಿಗಳಿಂದಲೂ ಮತ್ತು ಮೆರಿನೋ ಮಿಶ್ರ ತಳಿಗಳಿಂದಲೂ ಪಡೆಯುತ್ತಾರೆ. ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ನ್ಯೂಜಿಲೆಂಡ್ ದೇಶಗಳು ಮೆರಿನೋ ಜಾತಿಯ ಉಣ್ಣೆಗೆ ಪ್ರಸಿದ್ಧವಾಗಿವೆ. ಜರ್ಮನಿ ಸ್ಯಾಕ್ಸೊನಿ ಜಾತಿಗೂ ಬ್ರಾನ್ಸ್ ರ್‍ಯಾಮ್ ಬುಲೆಟ್ ಜಾತಿಗೂ ಇಂಗ್ಲೆಂಡ್ ಮಾಂಸ ಮತ್ತು ಉದ್ದವಾದ ಉಣ್ಣೆಯನ್ನು ಕೊಡುವ ಜಾತಿಗೂ ಹೆಸರುವಾಸಿಯಾಗಿವೆ.

ಕೈ ಕತ್ತರಿ ಅಥವಾ ಯಂತ್ರದ ಸಹಾಯದಿಂದ ವರ್ಷಕ್ಕೆ ಒಂದು ಅಥವಾ ಎರಡು ಸಲ ಕುರಿಯ ಉಣ್ಣೆಯನ್ನು ಕತ್ತರಿಸಿ ತೆಗೆಯುತ್ತಾರೆ. ಕೊಂದ ಕುರಿಯಿಂದ ತೆಗೆದ ಉಣ್ಣೆಗೆ ಕಿತ್ತ ಉಣ್ಣೆ ಎಂದು ಹೆಸರು. ಎರಡು ತಿಂಗಳ ಕುರಿಮರಿಯಿಂದ ಪಡೆದ ಉಣ್ಣೆಗೆ ಮರಿಯ ಉಣ್ಣೆಯೆಂದು ಹೆಸರು. ಹಾಗ್ ಎನ್ನುವ ಉಣ್ಣೆ ಸುಮಾರು ೧೧–೧೪ ತಿಂಗಳವರೆಗಿನ ಕುರಿಮರಿಗಳಿಂದ ದೊರಕುತ್ತದೆ.

ಉಣ್ಣೆಯ ಗುಣವನ್ನು ಮುಖ್ಯವಾಗಿ ಕುರಿಯ ಜಾತಿಯಿಂದ ನಿರ್ಧರಿಸಬಹುದು. ಕೆಲವು ವೇಳೆ, ಒಂದೇ ಜಾತಿಯ ಕುರಿಗಳಲ್ಲೂ ಉಣ್ಣೆಯ ಗುಣದಲ್ಲಿ ವ್ಯತ್ಯಾಸವಿರುತ್ತದೆ. ಮಾರುವ ಮೊದಲು ಉಣ್ಣೆಯ ವ್ಯವಹಾರದಲ್ಲಿ ನುರಿತವರು ಉಣ್ಣೆಯನ್ನು ಅದರ ಉದ್ದ, ಗಾತ್ರ ಮತ್ತು ನಯಕ್ಕನುಗುಣವಾಗಿ ವಿಂಗಡಿಸುತ್ತಾರೆ (ಗ್ರೇಡಿಂಗ್ ಅಂಡ್ ಕ್ಲಾಸಿಂಗ್).

ಉಣ್ಣೆಯ ವಿಚಿತ್ರವಾದ ಮಾಟ ದೇಹದ ಶಾಖವನ್ನು ಸದಾ ಸಾಮಾನ್ಯ ಸ್ಥಿತಿಯಲ್ಲಿಡಲು ಸಹಾಯಕವಾಗಿದೆ. ಅದು ಚಳಿಗಾಲದಲ್ಲಿ ದೇಹಶಾಖವನ್ನು ಕಾದಿಡುತ್ತದೆ ಮತ್ತು ಬಿಸಿಲು ಕಾಲದಲ್ಲಿ ಬೇಗೆಯಿಂದ ದೇಹವನ್ನು ಕಾಪಾಡುತ್ತದೆ. ಕ್ಷಾರಗಳು ಉಣ್ಣೆಯನ್ನು ದುರ್ಬಲಗೊಳಿಸುವುವು. ತಣ್ಣೀರು ಅಥವಾ ಬಿಸಿನೀರಿನಲ್ಲಿ ನೆನೆಹಾಕಿ ಉಜ್ಜಿದರೆ ಅದು ಜಡೆಕಟ್ಟಿಕೊಳ್ಳುತ್ತದೆ. ಉಣ್ಣೆ ಬಗೆಬಗೆಯ ಆಕರ್ಷಕ ಬಣ್ಣಗಳನ್ನು ಪಡೆಯಬಲ್ಲದು.

ಉಣ್ಣೆಯ ತಯಾರಿಕೆ: ಹಿಂದಿನ ಕಾಲದಲ್ಲಿ ನಾಗರಿಕತೆ ಸುಪ್ತಾವಸ್ಥೆಯಲ್ಲಿದ್ದಾಗ ನೇಯ್ದ ಉಡುಪುಗಳ ಸೃಷ್ಟಿ ಆಗಿರಲಿಲ್ಲ. ಅಂದು ಕಾಡುಜನ ತಮ್ಮ ದೇಹಗಳನ್ನು ಚಳಿ ಮತ್ತು ಗಾಳಿಯಿಂದ ಸಂರಕ್ಷಿಸಲು ಕಾಡುಕುರಿಗಳ ಮತ್ತು ಮೇಕೆಗಳ ಕೂದಲಿನ ಚರ್ಮವನ್ನು ಉಪಯೋಗಿಸುತ್ತಿದ್ದರು. ಆದರೆ ನಾಗರಿಕತೆ ಬೆಳೆದಂತೆ ಕುರಿ ಸಾಕಣೆಯ ಪ್ರಾಮುಖ್ಯ ಯೂರೋಪು ಖಂಡದಲ್ಲಿ ಅದರಲ್ಲಿಯೂ ಮುಖ್ಯವಾಗಿ ಸ್ಪೇನ್ ಮತ್ತು ಬ್ರಿಟನ್ನುಗಳಲ್ಲಿ ಉನ್ನತಮಟ್ಟಕ್ಕೇರಿತು. ಆಗ ಉಣ್ಣೆ ತಯಾರಿಕೆ ಒಂದು ಮುಖ್ಯ ಪ್ರಮುಖ ಕೈಗಾರಿಕೆಯಾಗಿ ಪರಿಣಮಿಸಿತು.

ಪ್ರಪಂಚದಲ್ಲಿ ಉಣ್ಣೆಯ ಉತ್ಪಾದನೆಯಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ದೇಶಗಳು ಆಸ್ಟ್ರೇಲಿಯ, ನ್ಯೂಜಿಲೆಂಡ್, ತಾಸ್ಮೇನಿಯ, ಬ್ರಿಟನ್, ದಕ್ಷಿಣ ಆಫ್ರಿಕ ಮತ್ತು ಅರ್ಜೆಂಟೀನ. ಇವುಗಳ ಜೊತೆಗೆ ಚೀನ, ಏಷ್ಯ ಮೈನರ್, ಭಾರತ ಮತ್ತು ದಕ್ಷಿಣ ಅಮೆರಿಕ ದೇಶಗಳು ಜಮಖಾನ ಮತ್ತು ಕಂಬಳಿಗಳನ್ನು ತಯಾರಿಸುವ ಉಣ್ಣೆಗೆ ಪ್ರಸಿದ್ಧಿಯಾಗಿವೆ.

ಕುರಿಗಳ ಜಾತಿಗೆ ತಕ್ಕಂತೆ ಶೇಖರಿಸಿದ ಉಣ್ಣೆಯನ್ನು ಅದರ ಗುಣಕ್ಕನುಗುಣವಾಗಿ ಉತ್ತಮ ತರಗತಿಯದು, ಮಧ್ಯಮ ತರಗತಿಯದು ಮತ್ತು ಇತರ ವರ್ಗಕ್ಕೆ ಸೇರಿದುದೆಂದು ಅನುಭವಿಗಳು ಬೇರ್ಪಡಿಸುತ್ತಾರೆ. ಉತ್ತಮ ವರ್ಗದ ಉಣ್ಣೆ ಉದ್ದದಲ್ಲಿ ಸ್ವಲ್ಪ ಚಿಕ್ಕದು ೪ ರಿಂದ ೧೨ ಸೆಂಮೀ. ಆದರೆ ಅದು ಬಲು ಮೃದು. ಅದರಲ್ಲಿ ಹುರುಪೆಗಳಿರುತ್ತವೆ. ಉದ್ದ ಹೆಚ್ಚಿದಂತೆಲ್ಲ ಅದರ ನಯ ಲಕ್ಷಣ ಮತ್ತು ಹುರುಪೆಗಳು ಕಡಿಮೆಯಾಗುತ್ತವೆ.

ಬೇರ್ಪಡಿಸುವುದು ಮತ್ತು ವಿಂಗಡಿಸುವುದು: ಬೇರೆ ಬೇರೆ ಜಾತಿಯ ಕುರಿಗಳಿಂದ ಶೇಖರಿಸಿದ ಉಣ್ಣೆಯನ್ನು ಬೇರ್ಪಡಿಸುವುದಷ್ಟೇ ಅಲ್ಲದೆ ಒಂದೇ ಜಾತಿಯ ಕುರಿಗಳ ಉಣ್ಣೆಯನ್ನು ಕೂಡ ಅವುಗಳ ದೇಹದ ಭಾಗಕ್ಕೆ ಅನುಗುಣವಾಗಿ ಹದಿನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಬಹಳ ಉತ್ತಮವಾದ ಉಣ್ಣೆ ಕುರಿಯ ಭುಜಗಳಿಂದ ಮತ್ತು ದೇಹದ ಬಲಭಾಗ ಮತ್ತು ಎಡಭಾಗದಿಂದ ಸಿಗುತ್ತದೆ. ಉಳಿದ ಭಾಗದಿಂದ ಕತ್ತರಿಸಿ ಪಡೆದ ಉಣ್ಣೆಯನ್ನು ಅದರ ಯೋಗ್ಯತಾನುಸಾರ ವಿಂಗಡಿಸುತ್ತಾರೆ. ಇದೇ ಉಣ್ಣೆಯ ತಯಾರಿಕೆಯ ಬಲು ಮುಖ್ಯವಾದ ಮೊದಲನೆಯ ಘಟ್ಟ.

ದೂಳು ತೆಗೆಯುವುದು ಮತ್ತು ಶುದ್ಧಿಮಾಡುವುದು: ಕತ್ತರಿಸಿದ ಉಣ್ಣೆಯಲ್ಲಿ ಅಡಗಿರುವ ಎಣ್ಣೆ, ಒಣಗಿದ ಬೆವರು, ಕೊಳೆ ಮತ್ತು ಕಸಕಡ್ಡಿಗಳು ಮುಂತಾದ ಅನೇಕ ವಿಧವಾದ ಕಲ್ಮಶಗಳನ್ನು ಮೊದಲು ತೆಗೆಯಬೇಕು. ಕೆಲವು ಸಂದರ್ಭಗಳಲ್ಲಿ ಉಣ್ಣೆಯ ತೂಕದ ೫೦% ಇವು ಇರುವುದಿದೆ. ಬಿಡಿಸುವ ಮತ್ತು ದೂಳನ್ನು ತೆಗೆಯುವ ಯಂತ್ರಕ್ಕೆ ಉಣ್ಣೆಯನ್ನು ಮೊದಲು ಹಾಕುತ್ತಾರೆ. ಅಲ್ಲಿ ಅದು ಸ್ವಚ್ಛವಾಗಿಯೂ ಬಿಡಿ ಬಿಡಿಯಾಗಿಯೂ ಹೊರಬರುತ್ತದೆ. ಆಮೇಲೆ ಅದನ್ನು ಸಾಬೂನು ಮತ್ತು ಕ್ಷಾರಗಳ ಸಹಾಯದಿಂದ ಅಥವಾ ಬೇರೆ ವಿಧಾನದಿಂದ ಶುದ್ಧಿಮಾಡುತ್ತಾರೆ. ಉಳಿದಿರುವ ಸಸ್ಯ ಸಂಬಂಧ ವಸ್ತುಗಳನ್ನು ಇನ್ನೊಂದು ವಿಧವಾದ ಯಂತ್ರದಿಂದ ಬೇರ್ಪಡಿಸಲಾಗುತ್ತದೆ.

ಕಚ್ಚಾ ಉಣ್ಣೆಗೆ ಬಣ್ಣ ಹಾಕುವುದು: ಕೆಲವು ಸಲ ಮೇಲೆ ಹೇಳಿದ ರೀತಿಯಲ್ಲಿ ಶುದ್ಧಿಯಾದ ಉಣ್ಣೆಗೆ ವಿಧ ವಿಧವಾದ ಬಣ್ಣಹಾಕಿ ಸೊಗಸಾದ ಮತ್ತು ಬಣ್ಣಬಣ್ಣದ ಉಣ್ಣೆಯ ಬಟ್ಟೆಯನ್ನು ನೇಯುತ್ತಾರೆ.

ಉಣ್ಣೆಯನ್ನು ಬೆರೆಸುವುದು: ಮುಂದೆ ನೇಯುವ ಬಟ್ಟೆಯ ಯೋಗ್ಯತೆಗೆ ಅನುಗುಣವಾಗಿ ಬೇರೆ ಬೇರೆ ವಿಧವಾದ ಉಣ್ಣೆಯನ್ನು ತಕ್ಕ ಪ್ರಮಾಣದಲ್ಲಿ ಬೆರೆಸಿ ಹದವಾದ ದಾರವನ್ನು ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಉಣ್ಣೆಯ ಜೊತೆಗೆ ಹತ್ತಿಯನ್ನೋ ಕೃತಕ ರೇಷ್ಮೆಯನ್ನೋ ಮಿಶ್ರಮಾಡಿ ಇನ್ನೂ ನಯವಾದ ಬಟ್ಟೆಗಳನ್ನು ತಯಾರಿಸುತ್ತಾರೆ. ಉಣ್ಣೆಯ ಎಳೆಗಳು ಯಂತ್ರದಲ್ಲಿ ಸುಲಭವಾಗಿ ಸಾಗಲು ಸ್ವಲ್ಪ ಪ್ರಮಾಣದಲ್ಲಿ ಉಣ್ಣೆಯನ್ನು ತುಂತುರು ಹನಿಯ ರೂಪದಲ್ಲಿ ಬೆರೆಸುತ್ತಾರೆ. ಈ ರೀತಿ ತಯಾರಾದ ಉಣ್ಣೆಯನ್ನು ಎಳೆಗೈವ

(ಕಾರ್ಡಿಂಗ್) ಯಂತ್ರಗಳಲ್ಲಿ ಎಳೆ ಎಳೆಯಾಗಿ ಬೇರ್ಪಡಿಸಿ ಕಡೆಗೆ ಮೃದುವಾದ ಹಗ್ಗದೋಪಾದಿಯಲ್ಲಿ ಹೊರತೆಗೆಯುತ್ತಾರೆ. ಇದನ್ನು ಉಣ್ಣೆದಾರ ತಯಾರುಮಾಡುವ ಮ್ಯೂಲ್ ಎಂಬ ಯಂತ್ರದಿಂದ ದಾರವಾಗಿ ಪರಿವರ್ತಿಸಲಾಗುವುದು.

ಉಣ್ಣೆಯಿಂದ ತಯಾರಾದ ದಾರವನ್ನು ಎರಡು ವಿಭಾಗವಾಗಿ ಅದರ ಗುಣಕ್ಕೆ ತಕ್ಕಂತೆ ವಿಂಗಡಿಸಬಹುದು. ಒಂದು ಸಾಧಾರಣ ಮಟ್ಟದ ಮತ್ತು ಮೇಲೆ ಹೇಳಿದ ವಿಧಾನದಲ್ಲಿ ತಯಾರಾದ ಉಣ್ಣೆಯ ದಾರ. ಇದರಿಂದ ಮಧ್ಯಮವರ್ಗದ ಬಟ್ಟೆಗಳನ್ನು ತಯಾರಿಸಬಹುದು. ಮತ್ತೊಂದು ಉತ್ತಮಮಟ್ಟದ ಒರ್ಸ್ಟೆಡ್ ದಾರ. ಇದರಿಂದ ಅತಿ ನಯವಾದ ಮತ್ತು ನಾಜೂಕಾದ ಬೆಲೆ ಬಾಳುವ ಬಟ್ಟೆಗಳನ್ನು ತಯಾರಿಸಬಹುದು. ಒರ್ಸ್ಟೆ ದಾರ ತಯಾರಿಸುವ ಮೊದಲು ಉತ್ತಮ ದರ್ಜೆಯ ಉಣ್ಣೆಯಲ್ಲಿರತಕ್ಕ ಚಿಕ್ಕ ಎಳೆಗಳನ್ನು ಬಾಚುವ ಯಂತ್ರದಿಂದ ಬೇರ್ಪಡಿಸಲಾಗುವುದು. ಉಳಿದ ಉದ್ದವಾದ ಎಳೆಗಳನ್ನು ಹೆಚ್ಚಿನ ಯಂತ್ರಗಳ ಮೂಲಕ ಎಲ್ಲ ಎಳೆಗಳು ನೇರವಾಗಿರುವಂತೆ ಮಾಡಿ ಅದರಿಂದ ಹೊಳಪಾದ ಮತ್ತು ಬಲವಾದ ಒರ್ಸ್ಟೆಡ್ ದಾರವನ್ನು ಪಡೆಯಬಹುದು.

ಬಟ್ಟೆ ತಯಾರಿಕೆ: ಸಾಮಾನ್ಯವಾಗಿ ಉಣ್ಣೆಯ ನೂಲಿನಿಂದ ತಯಾರುಮಾಡುವ ಬಟ್ಟೆಯನ್ನು ಎರಡು ರೀತಿಯಿಂದ ಪಡೆಯಬಹುದು. ೧. ದಾರಗಳನ್ನು ಹೆಣೆದು ಬಟ್ಟೆಯನ್ನು ತಯಾರಿಸುವುದು. ಇವು ಹೆಚ್ಚು ಪದರ ಪದರವಾಗುತ್ತವೆ. ೨ ಮಗ್ಗಗಳಿಗೆ ದಾರವನ್ನು ಹಾಸು ಮತ್ತು ಹೊಕ್ಕಾಗಿ ಹೊಂದಿಸಿ ವಿಧ ವಿಧವಾದ ನೇಯ್ಗೆಗಳನ್ನು ಅಳವಡಿಸಿ ಬಟ್ಟೆಗಳನ್ನು ಪಡೆಯುವುದು. ಕೆಲವು ವೇಳೆ ಎಳೆಗಳನ್ನು ತೆಗೆಯದೆಯೇ ಒತ್ತಡವನ್ನು ಪ್ರಯೋಗಿಸಿ ಫೆಲ್ಟ್ ಎಂಬ ಬಟ್ಟೆಯನ್ನು ಕೂಡ ತಯಾರಿಸಬಹುದು.

ಫ್ಲಾನೆಲ್, ಟ್ವೀಡ್, ಜೆರ್ಸಿ, ಸರ್ಜ್, ಗ್ಯಾಬರ್‌ಡೀನ್ ಇತ್ಯಾದಿಗಳು ಉಣ್ಣೆಬಟ್ಟೆಗಳ ಕೆಲವು ವಿಧಗಳು. ಸಾಮಾನ್ಯವಾಗಿ ಉಣ್ಣೆಯ ಬಟ್ಟೆಗಳು ಗಟ್ಟಿ ಮತ್ತು ಬಾಳಿಕೆಯುಳ್ಳವಾಗಿ ಇರುತ್ತವೆ. ಉಣ್ಣೆಯ ಸ್ಥಿತಿಸ್ಥಾಪಕ ಶಕ್ತಿಯ ಗುಣದಿಂದ ಅದರ ಬಟ್ಟೆಗಳು ಹೆಚ್ಚು ಮುದುಡಿಕೊಳ್ಳುವುದಿಲ್ಲ. ಉಣ್ಣೆಬಟ್ಟೆಗಳಿಂದ ಶಾಖ ಪ್ರವಹಿಸದ ಕಾರಣ ಚಳಿಗಾಲದಲ್ಲಿ ಮೈಯನ್ನು ಬೆಚ್ಚಗಿಡಲು ಅವು ಬಹಳ ಉಪಯುಕ್ತವಾಗಿವೆ. ಉಣ್ಣೆಗೆ ಕುಗ್ಗುವ ಗುಣವಿರುವುದರಿಂದ ಉಣ್ಣೆಬಟ್ಟೆಗಳನ್ನು ಒಗೆಯುವಾಗ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಸಾಮಾನ್ಯವಾಗಿ ತಣ್ಣೀರನ್ನೇ ಉಪಯೋಗಿಸಬೇಕು; ಮತ್ತು ಒದ್ದೆಯಾಗಿದ್ದಾಗಲೇ ಉಡುಪನ್ನು ಅದರ ಮೊದಲ ಬಟ್ಟೆಯ ಆಕಾರಕ್ಕೆ ತರುವುದು ಒಳ್ಳೆಯದು. ಹೆಚ್ಚು ಕಾಯ್ದ ಇಸ್ತ್ರಿಪೆಟ್ಟಿಗೆಗಳಿಂದ ಇಸ್ತ್ರಿ ಮಾಡಿದರೆ ಸತ್ತ್ವ ಕಳೆದುಹೋಗುತ್ತದೆ.

ಸ್ವರೂಪ: ಉಣ್ಣೆ ಎಳೆ ಒಂದು ಸಂಕೀರ್ಣ ಮತ್ತು ವ್ಯವಸ್ಥಿತ ರಚನೆ. ಇದರ ಮೂಲ ಚರ್ಮದ ಹೊರ ಪದರದಲ್ಲಿದೆ (ಎಪಿಡರ್ಮಿಸ್). ಬೆಳವಣಿಗೆಯನ್ನು ಪ್ರೇರಿಸುವ ಗ್ರಂಥಿಗಳು ಚರ್ಮದ ಕೆಳ ಪದರದಲ್ಲಿ (ಡರ್ಮಿಸ್) ಹುದುಗಿವೆ. ಇವು ಎರಡು: ಸಿಬಾಶಿಯಸ್ ಮತ್ತು ಸ್ಯೂಡಿಫೆರಸ್. ಮೊದಲಿನದು ಉಣ್ಣೆಕೊಬ್ಬನ್ನು (ವೂಲ್‌ಗ್ರೀಸ್) ಸ್ರವಿಸುತ್ತದೆ. ಇದನ್ನು ಶುದ್ಧೀಕರಿಸಿದಾಗ ಲ್ಯಾನೊಲಿನ್ (ನೋಡಿ) ದೊರೆಯುವುದು. ಎರಡನೆಯದು ಸ್ವೇದವನ್ನು ಸ್ರವಿಸುತ್ತದೆ. ಕಚ್ಚಾ ಉಣ್ಣೆಯಲ್ಲಿರುವ ಕೊಬ್ಬು ಮತ್ತು ಸ್ವೇದಸ್ರಾವಗಳ ಒಟ್ಟು ಹೆಸರು ಯೋಕ್. ಇದನ್ನು ಮನುಷ್ಯಚರ್ಮ ಹೀರಿಕೊಳ್ಳುವುದರಿಂದ ಅಂಗರಾಗಗಳ (ಕಾಸ್ಮೆಟಿಕ್) ತಯಾರಿಕೆಯಲ್ಲಿ ಇದರ ಉಪಯೋಗ ಹೆಚ್ಚು. ಬೆಳೆಯುವ ಉಣ್ಣೆಯ ಎಳೆಗಳಿಗೆ ಗ್ರಂಥಿ ಸ್ರಾವಗಳು ಮೃದುಚಾಲಕಗಳಾಗಿಯೂ (ಲ್ಯೂಬ್ರಿಕೆಂಟ್ಸ್) ರಕ್ಷಕಗಳಾಗಿಯೂ ವರ್ತಿಸುವುವು.

ಉಣ್ಣೆ ಮೂಲತಃ ಕೆರಾಟಿನ್ ಎಂಬ ಒಂದು ಪ್ರೋಟೀನ್. ಹ್ಯಾಲೋಜನ್ನುಗಳೊಂದಿಗೆ ರಾಸಾಯನಿಕ ವ್ಯತ್ಯಾಸ ಹೊಂದುತ್ತವೆ. ಸುಮಾರು ೪೦° ಸೆ. ಉಷ್ಣತೆಗೆ ಕಾಯಿಸಿದಾಗ ಗಡಸಾಗಿ ಸಾಮರ್ಥ್ಯವನ್ನೂ ತೇವವನ್ನು ಕಳೆದುಕೊಂಡು ತಣ್ಣಗಿಸಿದಾಗ ಮೊದಲಿನ ಗುಣಗಳನ್ನು ಪುನಃ ಪಡೆಯುತ್ತದೆ. ಅತಿ ಶೀತ ಪರಿಸ್ಥಿತಿಯಲ್ಲೂ ಗಮನಾರ್ಹ ಬದಲಾವಣೆ ಏನೂ ಕಂಡಿಲ್ಲ. ನೀರಿನಲ್ಲಿ ಕರಗದು, ಆದರೆ ಸಾಕಷ್ಟು ನೀರನ್ನು ಹೀರಿಕೊಳ್ಳಬಲ್ಲುದು.

(ಬಿ.ಬಿ.ಆರ್.)

**ಉತ್ಪಾದಕರು:** ವಾತಾವರಣದಲ್ಲಿರುವ ಕಾರ್ಬನ್ ಡೈಆಕ್ಸೈಡ್, ನೀರು ಮತ್ತು ಸರಳವಾದ ನಿರವಯವ ವಸ್ತುಗಳನ್ನು ಉಪಯೋಗಿಸಿಕೊಂಡು ಸೂರ್ಯನ ಬೆಳಕಿನ ವಿಸ್ತೃತ ಶಕ್ತಿಯನ್ನು ರಾಸಾಯನಿಕ ಶಕ್ತಿಯನ್ನಾಗಿ ಪರಿವರ್ತಿಸಿ ಕಾರ್ಬೋಹೈಡ್ರೇಟು ಮತ್ತಿತರ ಬಗೆಯ ಆಹಾರ ವಸ್ತುಗಳ ರೂಪದಲ್ಲಿ ಸಂಚಯಿಸಿಡಬಲ್ಲ ಜೀವಿಗಳು. ಇವು ಸ್ವಯಂ ಆಹಾರ ತಯಾರಿಸಿಕೊಳ್ಳಲು ಶಕ್ತವಾದುದರಿಂದ ಸ್ವಪೋಷಿತ ಜೀವಿಗಳು. ಇವುಗಳಿಗೆ ಮಾತ್ರ ಕಾರ್ಬನಿಕ ವಸ್ತುಗಳನ್ನು ಉತ್ಪಾದಿಸಬಲ್ಲ ಶಕ್ತಿಯಿರುವುದರಿಂದ ಇವುಗಳನ್ನು ಉತ್ಪಾದಕರೆಂದು ಕರೆಯುವರು. ಉಳಿದ ಎಲ್ಲಾ ಜೀವಿಗಳು ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಲು ಅಶಕ್ತರಾಗಿದ್ದು ಆಹಾರಕ್ಕಾಗಿ ಉತ್ಪಾದಕರನ್ನು ಅವಲಂಬಿಸಬೇಕಾಗಿದೆ. ಅವು ಬಳಕೆದಾರರು. ಉತ್ಪಾದಕರು ನೆಲ ಮತ್ತು ಜಲವಾತಾವರಣಗಳಲ್ಲಿ ಕಂಡು ಬರುತ್ತವೆ. ನೆಲದಲ್ಲಿ ವಿವಿಧ ಜಾತಿಯ ಗಿಡ, ಮರ, ಪೊದೆ, ಹುಲ್ಲು ಇತ್ಯಾದಿ ಹಸಿರು ಸಸ್ಯಗಳು ಉತ್ಪಾದಕರು. ಜಲವಾತಾವರಣದಲ್ಲಿ ಸಾಕಷ್ಟು ಸೂರ್ಯನ ಬಿಸಿಲು ತಲಪುವ ಆಳದವರೆಗೆ ಮಾತ್ರ ಉತ್ಪಾದಕರು ಜೀವಿಸಲು ಸಾಧ್ಯ. ಸಿಹಿನೀರಿನ ಆವಾಸಗಳಲ್ಲಿ, ಹೆಚ್ಚು ಆಳವಿಲ್ಲದ ಜಾಗಗಳಲ್ಲಿ ಬೇರಿನಿಂದ ಕೂಡಿದ ಸಸ್ಯಗಳಿದ್ದರೂ ಆಳಭಾಗದಲ್ಲಿ ಸಸ್ಯ ತೇಲುಜೀವಿಗಳು ಪ್ರಮುಖ ಉತ್ಪಾದಕರು.

ಸಾಗರದ ತೆರೆಗಳಲ್ಲಿ ಸಮುದ್ರಕಳೆಗಳು, ಸಸ್ಯದ ತೇಲುಜೀವಿಗಳು ಉತ್ಪಾದಕರಾಗಿ ಕಂಡು ಬಂದರೂ ತೀರದಿಂದ ದೂರ ಸಸ್ಯ ತೇಲುಜೀವಿಗಳು (ಸಸ್ಯ ಪ್ಲಾಂಕ್ಟಾನುಗಳು) ಮಾತ್ರ ಉತ್ಪಾದಕರು. ಇವುಗಳ ಪೈಕಿ ಮುಖ್ಯವಾಗಿ ಎರಡುಗುಂಪುಗಳಿವೆ. ಡಯಾಟಂ ಸಸ್ಯಗಳು ಮತ್ತು ಡೈನೋಫ್ಲೆಜೆಲ್ಲೇಟುಗಳು. ಮೊದಲಿನ ಗುಂಪು ಪ್ರಧಾನವಾಗಿದ್ದು ಸಾಗರದಲ್ಲಿರುವ ಉತ್ಪಾದಕರಲ್ಲಿ ಸಿಂಹಪಾಲು ಇವುಗಳದ್ದು. ಕೆಲವು ರಾಸಾಯನಿಕ ಸಂಯೋಜನಾ ಸಾಮರ್ಥ್ಯವನ್ನು ಹೊಂದಿರುವ ಬ್ಯಾಕ್ಟೀರಿಯಾ (ಕಿಮೋಸಿಂಥೆಟಿಕ್ ಬ್ಯಾಕ್ಟೀರಿಯಾ) ಗಳನ್ನು ಉತ್ಪಾದಕರ ಸಾಲಿಗೆ ಸೇರಿಸುವುದುಂಟು.

ಆಹಾರ ಸರಪಳಿಯಲ್ಲಿ (ಟ್ರೊಫಿಕ್ ಲೆವಲ್) ಉತ್ಪಾದಕರು ಮೊದಲ ಹಂತದಲ್ಲಿವೆ. ಆಹಾರ ಗೋಪುರದಲ್ಲಿ ಇವುಗಳದ್ದು ಅಡಿಪಾಯ. ಇವನ್ನು ಪ್ರಧಾನ ಉತ್ಪಾದಕರು ಅಥವಾ ಪ್ರಥಮ ಉತ್ಪಾದಕರು (ಪ್ರೈಮರಿ ಪ್ರೋಡ್ಯೂಝರ್ಸ್) ಎಂದೂ ಕರೆಯುತ್ತಾರೆ. ಪರಪೋಷಿತ ಜೀವಿಗಳಾದ ಬಳಕೆದಾರರಲ್ಲಿ ಪ್ರಧಾನ ಉತ್ಪಾದಕರನ್ನು ತಿಂದು, ಬದುಕಿ, ತಮ್ಮ ದೇಹವನ್ನು ಬೆಳೆಸಿಕೊಳ್ಳುವುದರಿಂದ ಇವುಗಳನ್ನು ಆನುಷಂಗಿಕ ಉತ್ಪಾದಕರೆಂದೂ (ಸೆಕೆಂಡರೀ ಪ್ರೋಡ್ಯೂಝರ್ಸ್) ಹೇಳಬಹುದು. (ಎಂ.ಎನ್.ಎಂ.)

**ಉದರ:** ಹೆಚ್ಚಿನ ಕಶೇರುಕ ಪ್ರಾಣಿಗಳಲ್ಲಿ ಕಂಡುಬರುವ ಜೀರ್ಣಾಂಗವ್ಯೂಹದ ಉಬ್ಬಿದ ಭಾಗವೆ ಉದರ. ಅನ್ನನಾಳವು ಈಸೋಫೆಗಸ್ ಅನಂತರ ಉದರದಲ್ಲಿ ಮುಂದುವರಿಯುತ್ತದೆ. ಸಾಮಾನ್ಯವಾಗಿ ಉದರವು ಸ್ನಾಯುಗಳಿಂದಾವೃತವಾದ ಒಳ ಮತ್ತು ಹೊರ ಪೊರೆಗಳನ್ನು ಹೊಂದಿವೆ. ಈ ರೀತಿ ಸ್ನಾಯುಗಳಿಂದ ಕೂಡಿದ ಗೋಡೆಗಳು ಆಹಾರವನ್ನು ಜಜ್ಜಿ ಚೂರುಚೂರು ಮಾಡಲು ಸಹಾಯಕವಾಗುತ್ತವೆ. ಇದಲ್ಲದೆ ಉದರದ ಗೋಡೆ ಪೆಪ್ಸಿನ್ ಮತ್ತು ಹೈಡ್ರೊಕ್ಲೋರಿಕ್ ಆಮ್ಲಗಳನ್ನು ಸ್ರವಿಸುವ ಗ್ರಂಥಿಗಳನ್ನು ಹೊಂದಿರುತ್ತವೆ. ಇದರಿಂದ ಉದರದಲ್ಲಿ ಆಹಾರ ಪದಾರ್ಥಗಳು ಭೌತಿಕ ಮತ್ತು ರಾಸಾಯನಿಕವಾದ ಬದಲಾವಣೆ ಹೊಂದುತ್ತವೆ. ಅನಂತರ ಆಹಾರವು ಸ್ವಲ್ಪ ಸ್ವಲ್ಪವಾಗಿ ಸಣ್ಣಕರುಳನ್ನು ಪ್ರವೇಶಿಸುತ್ತದೆ.

ಉದರವು ಆಹಾರಶೇಖರಣೆ ಮತ್ತು ಪಚನಕ್ರಿಯೆಯ ಒಂದು ಮುಖ್ಯ ಅಂಗ. ಇದರ ಮುಂಭಾಗವು ಕಾರ್ಡಿಯಾಕ್ ತುದಿಯನ್ನು ಹಿಂಭಾಗವು ಚೂಪಾಗಿರುವ ಪೈಲೋರಿಕ್ ತುದಿಯನ್ನು ಹೊಂದಿದೆ. ಆಹಾರ ಶೇಖರಣೆಯು ಮುಖ್ಯವಾಗಿ ಉದರದ ಕಾರ್ಡಿಯಾಕ್ ತುದಿಯ ಮೇಲು ಭಾಗವಾದ ಫಂಡಸ್ ನಲ್ಲಿ ನಡೆಯುತ್ತದೆ. ಅದೇ ಮಾಂಸಪುಷ್ಟಿಕಾರ್ಯವು ಉದರದ ಮಧ್ಯಭಾಗವಾದ ಕಾರ್ಡಿಯಾಕ್‌ನಲ್ಲಿ ಪ್ರಧಾನವಾಗಿರುತ್ತದೆ. ಕೆಳಗಡೆ ಭಾಗವಾದ ಪೈಲೋರಿಕ್ ತುದಿಯು, ಅದು ಸಣ್ಣ ಕರುಳನ್ನು ಸಂಧಿಸುವ ಸ್ಥಳದಲ್ಲಿ ಒಂದು ವೃತ್ತಾಕಾರದ ಸ್ನಾಯುವಿನಿಂದ ರಚಿತವಾದ ಪೈಲೊರಿಕ್ ಸ್ಫಿಂಕ್ಟರನ್ನು ಹೊಂದಿದೆ. ಇದು ಆಹಾರದ ಚಲನೆಯನ್ನು ನಿಯಂತ್ರಿಸುತ್ತದೆ.

ಉದರದ ಗೋಡೆಯು ಈ ಕೆಳಗಿನ ನಾಲ್ಕು ಪದರಗಳನ್ನು ಹೊಂದಿದೆ.

1) ಮ್ಯುಕೋಸ: ಅನೇಕ ಗ್ರಂಥಿಗಳನ್ನೊಳಗೊಂಡಿರುವ ಒಳಪೊರೆ,

2) ಸಬ್‌ಮ್ಯುಕೋಸ: ರಕ್ತನಾಳ, ದುಗ್ಧರಸನಾಳ ಮತ್ತು ನರಗಳನ್ನು ಒಳಗೊಂಡಿರುವ ಬಲೆಯಂತಿರುವ ಒಂದು ರೀತಿಯ ಅಂಗಾಂಶವನ್ನು ಹೊಂದಿರುತ್ತದೆ.

3) ಮಸ್ಕುಲಾರಿಸ್: ವಿವಿಧ ರೀತಿಯ ಸ್ನಾಯುಗಳಿಂದಾಗಿದ್ದು, ಆಹಾರದಲ್ಲಿ ಭೌತಿಕ ಬದಲಾವಣೆ ತರಲು ಸಹಾಯಕವಾಗಿದೆ.

4) ಸೆರೋಸ: ಕೊನೆಯ ಹೊರ ಹೊದಿಕೆ.

ಉದರದ ಗೋಡೆಯು ಸುಮಾರು 35,000,000 ಗ್ಯಾಸ್ಟ್ರಿಕ್ ಗ್ರಂಥಿಗಳನ್ನು ಒಳಗೊಂಡಿರುತ್ತದೆ. ಇವುಗಳು ಗ್ಯಾಸ್ಟ್ರಿಕ್ ರಸವನ್ನು ಸ್ರವಿಸುತ್ತವೆ. ಈ ಗ್ಯಾಸ್ಟ್ರಿಕ್ ರಸವು ಮ್ಯುಸಿನ್, ಹೈಡ್ರೊಕ್ಲೋರಿಕ್ ಆಮ್ಲ ಮತ್ತು ಕಿಣ್ವಗಳನ್ನು ಹೊಂದಿರುತ್ತದೆ. ಈ ಗ್ಯಾಸ್ಟ್ರಿಕ್ ರಸವು ಆಮ್ಲವಾಗಿದೆ. ಉದರದಲ್ಲಿ ಉತ್ಪತ್ತಿಯಾಗುವ ಮುಖ್ಯವಾದ ಕಿಣ್ವಗಳು ಪೆಪ್ಸಿನ್, ರೆನ್ನಿನ್ ಹಾಗೂ ಲೈಪೇಸ್. ಪೆಪ್ಸಿನ್ ಪ್ರೋಟೀನ್‌ಗಳನ್ನು ಪೆಪ್ಟೋನ್‌ಗಳಾಗಿ ಪರಿವರ್ತಿಸುತ್ತದೆ. ಮಕ್ಕಳ ಜಠರದಲ್ಲಿ ರೆನ್ನಿನ್ ಕಿಣ್ವವು ಹಾಲಿನಲ್ಲಿರುವ ಕೆಸಿನನ್ನು ಹೆಪ್ಪಾಗಿಸುತ್ತದೆ. ಲೈಪೇಸ್ ಕಿಣ್ವವು ಪಿಷ್ಟವನ್ನು ಪಿಷ್ಟಾಮ್ಲವನ್ನಾಗಿ ಪರಿವರ್ತಿಸಲು ಸಹಾಯಕವಾಗುತ್ತದೆ. ಸರ್ವಸಾಮಾನ್ಯವಾಗಿ ಸ್ಥೂಲವಾದ ಮನುಷ್ಯನ ಉದರವು ಒಂದು ದಿವಸಕ್ಕೆ ಸುಮಾರು

ಅಂದಾಜು 2000 ದಿಂದ 3000 ಮಿಲೀ. ಯಷ್ಟು ಗ್ಯಾಸ್ಟ್ರಿಕ್ ರಸವನ್ನು ಸ್ರವಿಸುತ್ತದೆ. ಗ್ಯಾಸ್ಟ್ರಿಕ್ ರಸದಲ್ಲಿರುವ ಹೈಡ್ರೊಕ್ಲೋರಿಕ್ ಆಮ್ಲವು ಆಹಾರದೊಂದಿಗೆ ಮಿಶ್ರವಾಗಿರುವ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದಲ್ಲದೆ, ಉದರದಲ್ಲಿ ಆಮ್ಲೀಯತೆ ಸೃಷ್ಟಿಸಿ ಪಚನ ಕ್ರಿಯೆಗೆ ಅನುಕೂಲವಾಗಿದೆ.

ಮೆಲುಕು ಹಾಕುವ ಪ್ರಾಣಿಗಳಾದ (ತಮ್ಮ ಅರ್ಧ ಪಚನವಾದ ಮೆಲುಕನ್ನು ಅಗಿಯುವ ಸ್ತನಿ ಪ್ರಾಣಿಗಳು) ಹಸು, ಕುರಿ, ಆಡು, ಎಮ್ಮೆ ಮುಂತಾದ ಸ್ತನಿ ಪ್ರಾಣಿಗಳ ಉದರವು ಅತಿದೊಡ್ಡದಾಗಿರುತ್ತದೆ. ಇವುಗಳ ಉದರವು ಈಸೋಫೇಗಸ್‌ನ ಅನಂತರ ಬರುವ ರುಮೆನ್ (ಪಾಂಚ), ರೆಟಿಕುಲಮ್ (ಜೇನುಗೂಡು), ವಮೇಸಮ್ (ಸಾಲ್ಟೀರಿಯಮ್) ಮತ್ತು ಅಬೋಸಮ್ (ರೆನ್ನೆಟ್) ಎಂದು ನಾಲ್ಕು ಕೋಣೆಗಳಾಗಿ ವಿಭಜನೆಗೊಂಡಿರುತ್ತದೆ. ರುಮೆನ್ ಎಲ್ಲಾ ಕೋಣೆಗಳಿಗಿಂತಲೂ ದೊಡ್ಡದು. ಇದರ ಒಳಗೋಡೆಯು ಅನೇಕ ಬೆರಳಿನಾಕಾರದ ಹೊರಹೊಮ್ಮಿದ ರುಗೆಗಳಾಗಿ ಮಾರ್ಪಾಟಾಗಿದೆ. ಆದರೆ ಅದೇ ರೆಟಿಕುಲಮ್ ಕೋಣೆಯ ಒಳಗೋಡೆಯ, ಪೂರ್ಣಭಾಗವು ನೋಡುವುದಕ್ಕೆ ಜೇನು ಗೂಡಿನಂತೆ ಕಾಣಿಸುವ ಒಂದು ಏಣುಗಳ ಜಾಲವನ್ನು ಪ್ರದರ್ಶಿಸುತ್ತದೆ. ವಮೇಸಮ್ ಮತ್ತ ಅಬೊಮಸಮ್ ಕೋಣೆಗಳು ಸಾಂಕೇತಿಕವಾದ ಉದ್ದನೆಯ ಆಕಾರದ ಸುರುಳಿಗಳನ್ನು ಹೊಂದಿವೆ. ಆದರೆ ಗ್ಯಾಸ್ಟ್ರಿಕ್ ಗ್ರಂಥಿಗಳು ಅಬೊಮೆಸಮ್‌ನಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ವಾಸ್ತವವಾಗಿ ಮೊದಲ ಮೂರು ಕೋಣೆಗಳು ಈಸೋಫೇಗಸ್‌ನ ಭಾಗಗಳು. ಅದೇ ನಾಲ್ಕನೇ ಕೋಣೆಯಾದ ಅಬೊಮೆಸಮ್ ನಿಜವಾದ ಉದರದ ಭಾಗ.

ಮೇಲೆ ತಿಳಿಸಿದ ರೀತಿಯ ಉದರ ಇರುವ ಪ್ರಾಣಿಗಳು ಹೆಚ್ಚಿನ ಪ್ರಮಾಣದಲ್ಲಿ ಆಹಾರವನ್ನು ತೆಗೆದುಕೊಳ್ಳುತ್ತವೆ. ಇವು ಅಲ್ಪಸ್ವಲ್ಪ ಅಗಿದ ಆಹಾರವನ್ನು ಒಂದೇ ಸಮನೆ ನುಂಗುವುದರಿಂದ ಇವುಗಳ ಆಹಾರ ಸೇವನೆಯ ವೇಳೆಯು ಬಹಳ ಕಡಿಮೆ. ಈ ರೀತಿ ನುಂಗಿದ ಆಹಾರವನ್ನು ಉದರದಲ್ಲಿ ಶೇಖರಿಸುತ್ತವೆ. ಅನಂತರ ವಿಶ್ರಾಂತಿ ವೇಳೆಯಲ್ಲಿ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಆಹಾರವು ಉದರದಿಂದ ಬಾಯಿಯ ಅಂಗಳಕ್ಕೆ ಬರುತ್ತದೆ. ಅಲ್ಲಿ ಅದು ಚೆನ್ನಾಗಿ ಅಗಿಯಲ್ಪಟ್ಟು ಜೀರ್ಣವಾಗಲು ಯೋಗ್ಯವಾಗುತ್ತದೆ.

ಮುಖ್ಯವಾಗಿ ಮೆಲುಕು ಹಾಕುವ ಪ್ರಾಣಿಗಳ ಆಹಾರವು ಸೆಲ್ಯುಲೋಸನ್ನು ಒಳಗೊಂಡಿರುತ್ತದೆ. ಇದು ಸುಲಭವಾಗಿ ಜೀರ್ಣವಾಗುವುದಿಲ್ಲ. ಆದರೆ ಈ ಪ್ರಾಣಿಗಳ ಉದರವು ಸೆಲ್ಯುಲೋಸನ್ನು ಶಿಥಿಲಗೊಳಿಸುವುದಕ್ಕೆ ಬೇಕಾದ ಮಾರ್ಪಾಡನ್ನು ಮಾಡಿಕೊಂಡಿದೆ. ಆಹಾರವು ಮೊದಲು ರುಮೆನ್ ಕೋಣೆಗೆ ಹೋಗುತ್ತದೆ. ಇಲ್ಲಿ ಬಹಳ ಪ್ರಮಾಣದಲ್ಲಿ ಮ್ಯುಕಸ್ ಆಹಾರಕ್ಕೆ ಸೇರುತ್ತದೆ ಮತ್ತು ಸ್ನಾಯುಗಳ ಸಂಕುಚಿಸುವಿಕೆಯು ಆಹಾರವನ್ನು ಮರ್ದಿಸುತ್ತದೆ. ಅದೇ ವೇಳೆಗೆ ಆಹಾರವು ಉದರಲ್ಲಿರುವ ಸಿಂಬಯಾಟಿಕ್ ಬ್ಯಾಕ್ಟೀರಿಯಾಗಳಾದ ರುಮಿನಿಕೊಕ್ಕಸ್, ಫ್ಲವೆಪೆಸಿಯನ್ಸ್, ಕ್ಲಾಸ್ಟ್ರಿಡಿಯಮ್, ಸೆಲ್ಲೊಬಯೋಪಾರಸ್, ಪ್ರೊಪಿಯೋನಿ ಬ್ಯಾಕ್ಟೀರಿಯಮ್, ಲಾಕ್ಟೋಬಸಿಲ್ಲಸ್ ಮತ್ತು ಸ್ಟ್ರೆಪ್ಟೊಕೋಕ್ಕಸ್‌ಗಳಿಂದ ಪ್ರವರ್ತನೆಗೊಳ್ಳುತ್ತದೆ. ಅನಂತರ ಈ ಬ್ಯಾಕ್ಟೀರಿಯಗಳು ಉತ್ಪಾದಿಸುವ ಕಿಣ್ವಗಳು ಸೆಲ್ಯುಲೋಸನ್ನು ಶೀಘ್ರಗತಿಯಲ್ಲಿ ರಾಸಾಯನಿಕವಾಗಿ ಶಿಥಿಲಗೊಳಿಸುತ್ತವೆ. ಇದರಿಂದ ಗಟ್ಟಿಯಾದ ಆಹಾರವು ಮೆದುವಾಗುತ್ತದೆ.

ಸ್ವಲ್ಪ ಪ್ರಮಾಣದ ಆಹಾರವು ಒಂದು ದೊಡ್ಡ ಉಂಡೆಯ ಆಕಾರ (ಬೋಲಸ್ ಅಥವ ಕಡ್)ದಲ್ಲಿ ರುಮೆನ್‌ನಲ್ಲಿರುವ ವಸ್ತುಗಳಿಂದ ಬೇರ್ಪಟ್ಟು ರೆಟಿಕುಲಮ್ ಮೂಲಕವಾಗಿ ಈಸೋಫೇಗಸ್ ಅಥವಾ ನೇರವಾಗಿ ಈಸೋಫೇಗಸ್‌ಗೆ ಹೆಚ್ಚಿನ ಪ್ರಮಾಣದ ಸ್ರಾವದ್ರವ ಅಥವಾ ಪ್ರವಾಹಿ ಪದಾರ್ಥದ ಜೊತೆ ಪ್ರವೇಶಿಸುತ್ತದೆ. ಆಹಾರದ ಉಂಡೆ (ಬೋಲಸ್) ಯ ಈ ರೀತಿಯ ಸಾಗುವಿಕೆಯು ಈಸೋಫೆಗಸ್ ಗೋಡೆಯಲ್ಲಿನ ಸ್ವಪ್ರೇರಿತ ಹಿಮ್ಮುಖ ಪೆರಿಸ್ಟಾಲಿಸಿಸ್ (ಕೊಳವೆಯಾಕಾರದ ಅವಯವದ ಮೂಲಕ ಸಾಗುವ ಸಂಕೋಚನ ಅತಿ) ನಿಂದ ನೆರವೇರುತ್ತದೆ.

ಅನಂತರ ಆಹಾರವು ಬಾಯಿಯ ಅಂಗಳಕ್ಕೆ ಪುನಃ ಪ್ರವೇಶಿಸುತ್ತದೆ. ಆಗ ಬೋಲಸ್‌ನಲ್ಲಿರುವ ಸ್ರಾವದ್ರವವು ತಕ್ಷಣ ರುಮೆನ್‌ಗೆ ಹಿಂತಿರುಗುತ್ತದೆ. ಆಗ ಗಟ್ಟಿಯಾದ ಆಹಾರವು ಚೆನ್ನಾಗಿ ಅಗಿಯಲ್ಪಟ್ಟು ಲಾಲಾರಸದ ಜೊತೆ ಸೇರುತ್ತದೆ. ಕೊನೆಗೆ ಈ ಸೋಫೆಗಸ್‌ಗೆ ಹಿಂತಿರುಗುತ್ತದೆ. ಇಲ್ಲಿಂದ ಅಂಟಾದ ಆಹಾರವು ವೆಮಸಮ್ ಕೋಣೆಗೆ ಬರುತ್ತದೆ. ಈ ಸಾರಿ ಆಹಾರವು ರುಮೆನ್‌ಗೆ ಬರುವುದಿಲ್ಲ. ಏಕೆಂದರೆ ರಂಧ್ರವು ಮುಚ್ಚಿಕೊಂಡಿರುತ್ತದೆ. ವೆಮಸಮ್ ಕೋಣೆಯಲ್ಲಿರುವ ಉದ್ದನಾಕಾರದ ಸುರುಳಿಗಳು ಆಹಾರವನ್ನು ಮತ್ತಷ್ಟು ಶಿಥಿಲಗೊಳಿಸುತ್ತವೆ. ಅದೇ ವೇಳೆಗೆ ಆಹಾರದ ದ್ರವಭಾಗವು ಅಬೊಮೆಸಮ್ ಕೋಣೆಗೆ ನೂಕಲ್ಪಡುತ್ತದೆ. ಇಲ್ಲಿ ಸಸಾರಜನಕದ ಜೀರ್ಣಕ್ರಿಯೆ ನಡೆಯುತ್ತದೆ. ಅನಂತರ ಆಹಾರವು ಪೈಲೋರಸ್ ಮೂಲಕ ಡುಯೋಡಿನಮ್ ಪ್ರವೇಶಿಸುತ್ತದೆ.

ಒಂಟೆಗಳ ಉದರದಲ್ಲಿ ಮೆಮಸಮ್ ಕೋಣೆ ಇರುವುದಿಲ್ಲ ಮತ್ತು ರುಮೆನ್‌ನಲ್ಲಿ ಬೆರಳಿನಾಕಾರದ ವಿಲ್ಲೆತಗಳೂ ಇರುವುದಿಲ್ಲ ಅದಕ್ಕೆ ಬದಲಾಗಿ ಅನೇಕ ಸಂಖ್ಯೆಯ ಕೈಚೀಲದಂತಿರುವ ಡೈವರ್ಟಿಕುಲಮ್ (ಕೊಳವೆಯಾಕಾರದ ಹೊರತಳ್ಳಿದಭಾಗ) ಗಳು ಇರುತ್ತವೆ. ಅವಕ್ಕೆ ನೀರಿನ ಚೀಲಗಳೆಂದು ಹೆಸರು. ಇವು ರುಮನ್ ಮತ್ತು ರೆಟಿಕುಲಮ್‌ನ ಗೋಡೆಗಳಿಂದ ಉದಯಿಸುತ್ತವೆ. ಸಾಮಾನ್ಯವಾಗಿ ನಾವೆಲ್ಲರೂ ನಂಬಿರುವಂತೆ ಅವು ನೀರನ್ನು ಶೇಖರಿಸುವುದಿಲ್ಲ.

ಉದರದ ರಚನೆಯಲ್ಲಿ ವಿಶೇಷ ಗುಣಗಳನ್ನು ಹೊಂದಿರುವ ಇನ್ನೊಂದು ಸ್ತನಿ ಕಾಂಗರೂ. ಇದರಲ್ಲಿ ಉದರದ ಪೈಲೋರಿಕ್ ಭಾಗವು ಅದರ ಗೋಡೆಗಳಲ್ಲಿ ಅನೇಕ ಕೋಶದಂತಿರುವ ಸುರುಳಿಗಳನ್ನು ಹೊಂದಿರುತ್ತದೆ. ರಕ್ತ ಹೀರುವ ಬಾವಲಿಗಳಲ್ಲಿ ಉದರದ ಪೈಲೋರಿಕ್ ಭಾಗವು ಒಂದು ಉದ್ದವಾದ ಕಣಜ ಅಥವಾ ದ್ರವಕೋಶವಾಗಿ ಮಾರ್ಪಾಟಾಗಿರುತ್ತದೆ. ಸಮುದ್ರ ತಿಮಿಂಗಿಲಗಳಲ್ಲಿ ಉದರವು ಅನೇಕ ವಿಭಾಗಗಳಾಗಿ ಪ್ರತ್ಯೇಕಿಸಲ್ಪಟ್ಟಿರುತ್ತದೆ. (ವಿ.ಕೆ.)

**ಉಭಯಜೀವಿಗಳು:** ಮೀನುಗಳು ಮತ್ತು ಸರೀಸೃಪಗಳ ನಡುವಿನ ಕಶೇರುಕ ಪ್ರಾಣಿಗಳ ಒಂದು ವರ್ಗ (ಆ್ಯಂಫಿಬಿಯ). ಈ ಪದವನ್ನು ಸರೀಸೃಪಗಳು, ಉಭಯಜೀವಿಗಳು ಮತ್ತು ಕೆಲವು ಮೀನುಗಳನ್ನೊಳಗೊಂಡ ಪ್ರಾಣಿಗಳ ಗುಂಪಿನ ಹೆಸರಾಗಿ ಲಿನೆಯಸನೂ ಮೀನುಗಳ ಮತ್ತು ಪಕ್ಷಿಗಳ ನಡುವಿನ ಎಲ್ಲ ಪ್ರಾಣಿಗಳ ಗುಂಪಿನ ಹೆಸರಾಗಿ ಕ್ಯೂವಿಯರನೂ ಬಳಸಿದ್ದಾರೆ. ಸರೀಸೃಪ ಮತ್ತು ಈಗಿನ ಉಭಯಜೀವಿಗಳು ಇವೆರಡೂ ಒಂದೇ ಗುಂಪಿನ ಪ್ರಾಣಿಗಳೆಂದು ನಿರ್ದೇಶಿಸಿ ಈ ಹೆಸರನ್ನು ಎಷ್ಟೋ ಪ್ರಾಣಿವಿಜ್ಞಾನಿಗಳು ಬಳಸಿದ್ದರು. ಆದರೆ ಈಗ ಸರೀಸೃಪಗಳು ಮತ್ತು ಉಭಯಜೀವಿಗಳ ವಿಶಿಷ್ಟ ಗುಣಗಳು ಸ್ಪಷ್ಟವಾಗಿ ಗೊತ್ತಾದ ಮೇಲೆ, ಈ ಎರಡು ಗುಂಪುಗಳ ಪ್ರಾಣಿಗಳನ್ನು ಕಶೇರುಕ ಪ್ರಾಣಿಗಳ ಬೇರೆ ಬೇರೆ ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

ಪ್ರಥಮ ಭೂಕಶೇರುಕಗಳು: 350 ದಶಲಕ್ಷ ವರ್ಷಗಳ ಹಿಂದೆ ಡಿವೋನಿಯನ್ ಯುಗದಲ್ಲಿ ಹೇರಳವಾಗಿದ್ದ ಪ್ರಾಣಿಗಳೆಂದರೆ ವಿಭಿನ್ನ ರೂಪದ ಮೀನುಗಳು. ಈ ಮೀನುಗಳಲ್ಲಿ ಕೆಲವು ಸಾಕಷ್ಟು ಪ್ರಾಣವಾಯುವನ್ನು ಪಡೆಯಲು ತಮ್ಮ ಗಾಳಿಚೀಲಗಳನ್ನು ಉಪಯೋಗಿಸುತ್ತಿದ್ದವು. ಭಾರವಾದ ಎಲುಬು ಈಜುರೆಕ್ಕೆಗಳುಳ್ಳ ಕೆಲವು ಮೀನುಗಳ ಈಜುರೆಕ್ಕೆಗಳಲ್ಲಿ ಭೂಕಶೇರುಕಗಳ ಪಾದಗಳ ಮೂಲ ರಚನೆಯ ಎಲುಬುಗಳು ಇದ್ದುವು. ಎಲ್ಲ ಕಶೇರುಕಗಳು ಈವರೆಗೂ ಜಲಚರಿಗಳಾಗಿದ್ದುದಲ್ಲದೆ ಪೂರ್ವಜ ಪ್ರಾಣಿಗಳು ಭೂಮಿಯ ಮೇಲೆ ಜೀವಿಸಲು ಸಮರ್ಥವಾಗಿರಲಿಲ್ಲ. ಮೀನಿನ ಹೋಲಿಕೆಯುಳ್ಳ ಇಂಥ ಪೂರ್ವಜ ಪ್ರಾಣಿಗಳಲ್ಲಿ ಭಾರವಾದ ದೇಹವುಳ್ಳ ಕೆಲವು ಪ್ರಾಣಿಗಳು ಹುಟ್ಟುಗಳಂತೆ ಇರುವ ಪಾದಗಳ ಸಹಾಯದಿಂದ ತಮ್ಮ ದೇಹವನ್ನು ತೇವಾಂಶ ಭೂಮಿಯಿಂದ ಎತ್ತರದ ಭೂಭಾಗಗಳಿಗೆ ಎಳೆದುಕೊಂಡು ಹೋಗಿರಲು ಸಾಧ್ಯವಾಗಿದ್ದಿರಬೇಕು. ಆದರೆ ಕ್ಷೀಣ ನಡಿಗೆಯಿಂದಾಗಿ ಮತ್ತು ಮೈಭಾಗ ಪೂರ್ತಿ ಒಣಗದ ಹಾಗೆ ಇರುವ ಸಲುವಾಗಿ ಅವು ನೀರಿನ ಬಳಿಯಲ್ಲಿಯೇ ಬಹಳ ಕಾಲವಿದ್ದಿರಬೇಕು. ಇವೇ ಪ್ರಥಮ ಉಭಯಜೀವಿಗಳು. ಇಂಥ ಪ್ರಾಣಿಗಳಿಂದಲೇ ಈಗಿನ ಉಭಯ ವರ್ಗದ ಪ್ರಾಣಿಗಳು ಉಗಮಿಸಿರಬೇಕು. ಇವು ಎರಡು ಬಗೆಯ ಜೀವನವನ್ನು ನಡೆಸುತ್ತವೆ. ಅಂದರೆ ಮೊದಲು ತಮ್ಮ ಜೀವನವನ್ನು ಜಲಚರಿಗಳಾಗಿ ಪ್ರಾರಂಭಿಸಿ ಅನಂತರ ತಮ್ಮ ದೇಹ ಮತ್ತು ರಚನೆಗಳಲ್ಲಿ ರೂಪಪರಿವರ್ತನೆಯನ್ನು ತೋರಿ ಭೂಜೀವಿಗಳಾಗಿ ಮಾರ್ಪಡುತ್ತವೆ. ಹೀಗೆ ಹಿಂದಿನ ಪೀಳಿಗೆಗಳಲ್ಲಿ ಆಗಿರಬಹುದಾದಂಥ ಬದಲಾವಣೆಗಳನ್ನ ಇಂದು ಬದುಕಿರುವ ಕೆಲವೇ ಆಧುನಿಕ ಪ್ರಭೇದಗಳ ಜೀವನಚರಿತ್ರೆಯಲ್ಲಿ ಸಂಕ್ಷೇಪವಾಗಿ ಕಾಣಬಹುದು. ಇಂದು ಬದುಕಿರುವ ಮೂರು ಗುಂಪುಗಳ ಪ್ರತಿನಿಧಿಗಳೆಂದರೆ, ಕಪ್ಪೆಗಳು ಮತ್ತು ನೆಲಗಪ್ಪೆಗಳು, ಸ್ಯಾಲಮ್ಯಾಂಡರುಗಳು ಮತ್ತು ಇತ್ತಲೆಮಂಡಲಗಳು. ಉಭಯಜೀವಿಗಳು ಅಸ್ತಿತ್ವಕ್ಕೆ ಬಂದಾಗ ಎಲ್ಲ ಕಶೇರುಕಗಳು ಜಲಚರಿಯಾಗಿದ್ದವು. ಮೊದಲ ಬಾರಿಗೆ ಭೂಮಿಯ ಮೇಲೆ ಸಫಲ ಬಾಳ್ವೆ ನಡೆಸಿದ ಪ್ರಾಣಿಗಳೆಂದರೆ ಉಭಯಜೀವಿಗಳು. ಆದರೆ, ಇವು ಜಲಚರ ಜೀವನಕ್ಕೆ ಇನ್ನೂ ಜೋತುಬಿದ್ದಿವೆ ಎಂಬುದನ್ನು ಇವುಗಳ ಸಂತಾನೋತ್ಪತ್ತಿಯ ರೀತಿ ಮತ್ತು ಜೀವನಚಕ್ರದ ಜಲಚರ ಮಜಲುಗಳಿಂದ ತಿಳಿಯಬಹುದು. ಉಭಯಜೀವಿಗಳು ಪೂರ್ಣವಾಗಿ ಭೂವಾಸಿಗಳಾದರೂ ಕೆಲವು ತೇವಾಂಶ ಪ್ರದೇಶಗಳಲ್ಲಿ ಮಾತ್ರ ಬದುಕುತ್ತವೆ.

ಎರಿಯಾಪ್ಸ್

ಬೇರೆ ಪ್ರಾಣಿವರ್ಗಗಳಂತೆ ವೈಶಿಷ್ಟ ಉಳ್ಳ ಪಕ್ಷಿಗಳ ರೆಕ್ಕೆಗಳಂತೆ, ಸ್ತನಿಗಳಂತೆ ಉಭಯಜೀವಿಗಳಲ್ಲಿ ಯಾವ ಅಪೂರ್ವವಾದ ವಿಶಿಷ್ಟ ಗುಣವೂ ಇಲ್ಲ. ಆದರೂ, ಉಭಯಜೀವಿಗಳನ್ನು ಮೀನುಗಳಿಂದ ಮತ್ತು ಆಮ್ನಿಯೋಟಗಳಿಂದ ಸುಲಭವಾಗಿ ಗುರುತಿಸಬಹುದು.

ಉಭಯಜೀವಿಗಳ ಮುಖ್ಯ ಲಕ್ಷಣಗಳು:

1) ಇವೆಲ್ಲವೂ ತಂಪು ರಕ್ತದ ಕಶೇರುಕಗಳು; ತೇವಪೂರಿತ ಅಥವಾ ಒಣಚರ್ಮಧಾರಿಗಳು. ಇತ್ತಲೆಮಂಡಲಗಳನ್ನು ಬಿಟ್ಟರೆ ಉಳಿದವುಗಳ ಚರ್ಮದಲ್ಲಿ ಹುರುಪೆಗಳಿಲ್ಲ.

2) ಇತ್ತಲೆಮಂಡಲಗಳನ್ನು ಬಿಟ್ಟು ಮಿಕ್ಕ ಎಲ್ಲ ಉಭಯ ಜೀವಿಗಳು ಭೂಮಿಯ ಮೇಲಿನ ಪ್ರಥಮ ಚತುಷ್ಪಾದಿಗಳು. ಈಜುರೆಕ್ಕೆಗಳಿಗಿಂತ ಬಲವಾದ ಅವಯವಗಳನ್ನು ಪಡೆದಿವೆ.

3) ಇವುಗಳ ಗೊದಮಾವಸ್ಥೆಯಲ್ಲಿ ಕರುಳಿನ ಕಮಾನುಗಳ ಮೇಲೆ ಕಿವಿರುಗಳನ್ನು ಕಾಣಬಹುದು. ಈ ಕಿವಿರುಗಳು ಕೆಲವು ಬಗೆಗಳಲ್ಲಿ ಜೀವನವಿಡೀ ಉಳಿದು ಬಿಡುವುವು. ಪ್ರೌಢಜೀವಿಗಳು ಶ್ವಾಸಕೋಶಗಳ ನೆರವಿನಿಂದ ಉಸಿರಾಡುತ್ತವೆ. ಇವುಗಳ ತೇವಪೂರಿತ ಚರ್ಮ ಆನುಷಂಗಿಕ ಶ್ವಾಸೇಂದ್ರಿಯವಾಗಿ ವರ್ತಿಸುತ್ತವೆ.

4) ಕಾಲುಗಳಿದ್ದರೆ ಅವುಗಳಲ್ಲಿ ವಿಂಗಡಗೊಂಡ ಬೆರಳುಗಳುಂಟು. ಕಿರಣಗಳಿಲ್ಲದ ಮತ್ತು ಜೊತೆಯಿಲ್ಲದ ಈಜುರೆಕ್ಕೆಗಳು ಗೊದಮೊಟ್ಟೆ ಹಾಗೂ ಕೆಲವು ಪ್ರೌಢಜೀವಿಗಳಲ್ಲಿ ಸಾಮಾನ್ಯವಾಗಿ ಇರುತ್ತವೆ.

5) ಬದುಕಿರುವ ಉಭಯಜೀವಿಗಳಲ್ಲಿ ಎಲ್ಲೋ ಅಪರೂಪಕ್ಕೆ ಹೊರಕಂಕಾಲ ಕಾಣಬರುತ್ತದೆ. ಆದರೆ, ಅಳಿದುಹೋದ ಉಭಯ ಜೀವಿಗಳಲ್ಲಿ ಮೂಳೆಯ ಫಲಕಗಳ ರಕ್ಷಣಾ ಕವಚ ಇತ್ತು. ತಲೆಬುರುಡೆಯಲ್ಲಿ ಮೊದಲ ಕಶೇರುಕ ಕೂಡುವ ಸ್ಥಳದಲ್ಲಿ ಎರಡು ಆಕ್ಸಿಪಿಟಲ್ ಕಾಂಡೈಲುಗಳಿವೆ.

6) ಹೃದಯದಲ್ಲಿ ಒಂದು ಹೃತ್ಕುಕ್ಷಿ ಮತ್ತು ಎರಡು ಹೃತ್ಕರ್ಣಗಳಿವೆ. ಅಂತೆಯೇ ಒಂದು ಕೋನಸ್ ಆರ್ಟರಿಯೋಸಸ್ ಮತ್ತು ಒಂದು ಸೈನಸ್ ವೀನೋಸಸ್ ಉಂಟು.

7) ಜೀರ್ಣಾಂಗ ವ್ಯವಸ್ಥೆ ಕ್ಲೋಯಕದ ಮೂಲಕ ಕೊನೆಗೊಳ್ಳುತ್ತದೆ. ಕ್ಲೋಯಕದ ಒಳಗೆ ಮೂತ್ರನಾಳಗಳು ಮತ್ತು ಜನನೇಂದ್ರಿಯ ನಾಳಗಳು ತೆರೆದಿವೆ. ಮುಂದುವರಿದ ಕಶೇರುಕಗಳ ಭ್ರೂಣದ ಅಲಂಟಾಯಿಸ್‌ಗೆ ಅನುರೂಪವಾದ ಇವುಗಳ ಮೂತ್ರಕೋಶ ಭ್ರೂಣದ ಕರುಳಿನ ಹಿಂಭಾಗದಿಂದ ಬೆಳೆಯುತ್ತದೆ.

8) ಭ್ರೂಣ ಭಂಡಾರ ವರ್ಣಕಗಳನ್ನು ಒಳಗೊಂಡಿದ್ದು ಅಂಡಗಳ ಒಂದು ಧ್ರುವದಲ್ಲಿರುತ್ತದೆ. ಉಭಯಜೀವಿಗಳು ತತ್ತಿಗಳನ್ನು ಸಾಮಾನ್ಯವಾಗಿ ನೀರಿನೊಳಗೆ ಇಡುತ್ತವೆ. ತತ್ತಿಯ ಮೊದಲ ಹಂತದ ಬೆಳೆವಣಿಗೆಯಲ್ಲಿ ಅಸಮರೂಪಕ ಹಾಲೋಬ್ಲಾಸ್ಟಿಕ್ ವಿಧಾನದ ಸ್ಫುಟನವನ್ನು ಕಾಣಬಹುದು. ಜೀವನ ಚಕ್ರದಲ್ಲಿ ಸಾಮಾನ್ಯವಾಗಿ ರೂಪಪರಿವರ್ತನೆ ಉಂಟು.

9) ಆಧುನಿಕ ಉಭಯಜೀವಿಗಳು ತತ್ತಿಗಳನ್ನು ನೀರಿನಲ್ಲಿ ತೇವಾಂಶ ಇರುವ ಸ್ಥಳದಲ್ಲಿ ಇಡುವುದುಂಟು; ಇಂಥವುಗಳಲ್ಲಿ ರೂಪಪರಿವರ್ತನೆ ಕಾಣಬರುವುದಿಲ್ಲ.

10) ತತ್ತಿಗಳಿಂದ ಹೊರಬರುವ ಗೊದಮೊಟ್ಟೆಗಳು ಜಲಚರಿಗಳಾಗಿದ್ದು ರೂಪ ಪರಿವರ್ತನೆಗೊಂಡು, ಭೂಮಿಯ ಮೇಲೆ ಜೀವಿಸುವ ಪ್ರೌಢಜೀವಿಗಳಾಗಿ ಬೆಳೆಯುವುವು. ಈ ರೀತಿ ಎರಡು ಬಗೆಯ ಜೀವನಚಕ್ರ ಉಭಯ ಜೀವಿಗಳ ವಿಶೇಷ ಗುಣ. ಕೆಲವು ಉಭಯಜೀವಿಗಳು ಗೊದಮಾವಸ್ಥೆಯಿಲ್ಲದೆ ಪ್ರೌಢಜೀವಿಗಳನ್ನು ಹೋಲುವ ಸಣ್ಣ ಮರಿಗಳನ್ನೇ ಜನ್ಮ ನೀಡುವುದುಂಟು.

11) ಚರ್ಮದಲ್ಲಿ ಬಹುಕೋಶ ಗ್ರಂಥಿಗಳು ಇವೆ. ಫುಪ್ಫುಸಗಳು ಸಾಮಾನ್ಯ ರಚನೆಯುಳ್ಳವು. ಹತ್ತು ಜೊತೆ ಕಪಾಲನರಗಳಿವೆ.

ಹೊರಚರ್ಮದ ಹೊರಗಿನ ಪದರ ಕುಗ್ಗಿ ಹೋಗಿ ಸ್ಟ್ರೇಟಮ್ ಕಾರ್ನಿಯಮ್ ಆಗಿರುವುದು ಮತ್ತು ಮೂಳೆಯ ಕಿರು ಕವಚ ಇಲ್ಲದಿರುವುದು ಇವೇ ಮೊದಲಾದ ಲಕ್ಷಣಗಳಿಂದ ಉಭಯಜೀವಿಗಳನ್ನು ಮೀನುಗಳಿಂದ ಪ್ರತ್ಯೇಕಿಸಬಹುದು. ಆಮ್ನಿಯಾನ್ ಇಲ್ಲದಿರುವುದು ಹಾಗೂ ಹುರುಪೆ ಮತ್ತು ನಖಗಳಿಲ್ಲದಿರುವುದು, ಈ ಲಕ್ಷಣಗಳಿಂದ ಉಭಯ ಜೀವಿಗಳನ್ನು ಸರೀಸೃಪಗಳಿಂದ ಬೇರ್ಪಡಿಸಬಹುದು. ಗ್ರೀನಲೆಂಡಿನ ಸಿಹಿನೀರಿನ ನದಿಗಳಲ್ಲಿ ಸಿಕ್ಕಿರುವ ಇಕ್ತಿಯೋಸ್ಟೀಗ ಎಂಬುದು ಉಭಯವರ್ಗದ ಅತ್ಯಂತ ಪ್ರಾಚೀನ ಪ್ರಾಣಿ.

ಇಂದು ಬದುಕಿರುವ ಉಭಯಜೀವಿಗಳ ಜಾತಿಗಳು: ಈ ವರ್ಗದಲ್ಲಿ ಹೆಚ್ಚು ಕಡಿಮೆ 5652 ಪ್ರಭೇದಗಳಿವೆ. ಎಲ್ಲ ಖಂಡಗಳಲ್ಲೂ ಇವು ಕಾಣದೊರೆಯುವುವು. 80 ಪ್ರಭೇದಗಳು ಉಷ್ಣವಲಯಗಳ ನಿವಾಸಿಗಳು. ಕಪ್ಪೆಗಳ ಪೂರ್ವಜ ಪ್ರಾಣಿಗಳು ಸುಮಾರು 200 ದಶಲಕ್ಷ ವರ್ಷಗಳ ಹಿಂದೆ ಟ್ರಿಯಾಸಿಕ್ ಕಾಲದಲ್ಲಿ ಕಾಣಿಸಿಕೊಂಡುವೆಂದು ಹೇಳಲಾಗಿದೆ. ಈಗಿನ ಕಪ್ಪೆಗಳು ಸುಮಾರು 160 ದಶಲಕ್ಷ ವರ್ಷಗಳ ಹಿಂದೆ ಜುರಾಸಿಕ್ ಕಾಲದಲ್ಲಿ ಕಾಣಿಸಿಕೊಂಡುವು. ಇಂದು ಬದುಕಿರುವ ಉಭಯಜೀವಿಗಳಲ್ಲಿ ಚೆನ್ನಾಗಿ ಪರಿಚಿತವಾಗಿರುವುವೆಂದರೆ ಕಪ್ಪೆಗಳು. ಕಪ್ಪೆಗಳು 4962 ಪ್ರಭೇದಗಳನ್ನು ಒಳಗೊಂಡಿವೆ. ಇವು ಬಾಲವಿಲ್ಲದ ಉಭಯಜೀವಿಗಳು. ಸ್ವಲ್ಪ ಮಟ್ಟಿಗೆ ಪರಿಚಿತವಾಗಿರುವ ಪ್ರಾಣಿಗಳು ಸ್ಯಾಲಮ್ಯಾಂಡರಗಳು ಮತ್ತು ನ್ಯೂಟ್‌ಗಳು. ಸುಮಾರು 521 ಪ್ರಭೇದಗಳನ್ನು ಒಳಗೊಂಡಿವೆ. ಇವು ಬಾಲವಿರುವ ಉಭಯಜೀವಿಗಳು. ಯೂರೋಪ್, ಏಷ್ಯ ಮತ್ತು ಅಮೆರಿಕಗಳಲ್ಲಿ ಕಾಣದೊರೆಯುವುವು. ಸುಮಾರು 140 ದಶಲಕ್ಷ ವರ್ಷಗಳ ಹಿಂದೆ, ಜುರಾಸಿಕ್ ಕಾಲದ ಉತ್ತರಾರ್ಧದಲ್ಲಿ ಇವು ಉಗಮಿಸಿದವೆನ್ನಲಾಗಿದೆ.

ಉಭಯಜೀವಿಗಳಲ್ಲಿ ಹೆಚ್ಚು ಪರಿಚಿತವಲ್ಲದ ಪ್ರಾಣಿಗಳೆಂದರೆ ಇತ್ತಲೆಮಂಡಲ. ಅಮೆರಿಕ, ಆಫ್ರಿಕ ಮತ್ತು ಏಷ್ಯ ಖಂಡಗಳಲ್ಲಿ ಸುಮಾರು 168 ಪ್ರಭೇದಗಳನ್ನು ಕಾಣಬಹುದು. ಇವು ಕಾಲುಗಳಿಲ್ಲದ ಉಭಯ ಜೀವಿಗಳು.

ಇವುಗಳಲ್ಲಿ ದೇಹರಚನಾ ಪರಿಮಿತಿ ಇದ್ದರೂ, ಪ್ರಪಂಚದ ಎಲ್ಲೆಡೆಗಳಲ್ಲಿಯೂ ಬದುಕಿರುವುದು ಇವುಗಳ ಗಣನೀಯ ಸಾಧನೆ. ವಿಭಿನ್ನ ವಾಯುಗುಣಕ್ಕೆ ಹೊಂದಿಕೊಳ್ಳಬಲ್ಲ ಕಪ್ಪೆಗಳು ಜೀವಂತ ಉಭಯಜೀವಿಗಳಲ್ಲೇ ಹೆಚ್ಚಿನ ಪರಿವರ್ತನಾಶೀಲತೆಯುಳ್ಳ ಪ್ರಾಣಿಗಳಾಗಿವೆ.

ಬಂಧನದಲ್ಲಿರಿಸಿದ ಉಭಯಜೀವಿಗಳ ವೀಕ್ಷಣೆಯ ಆಧಾರದಿಂದ ಇವುಗಳ ಆಯುಸ್ಸನ್ನು ತಿಳಿಯಲಾಗಿದೆ. ಉದಾಹರಣೆಗೆ, ಯೂರೋಪಿನ ನೆಲಗಪ್ಪೆ (ಬಫೊ) 36 ವರ್ಷಗಳು ಬಂಧನದಲ್ಲಿ ಬದುಕಿದ್ದಿತು. ಸೂಲಗಿತ್ತಿ ಬಾಂಬಿನ ಎಂಬುದು 29 ವರ್ಷ, ಜಪಾನಿನ ದೈತ್ಯ ಸ್ಯಾಲಮಾಂಡರ್ 60 ವರ್ಷ, ಅಮೆರಿಕದ ಚುಕ್ಕೆ ಸ್ಯಾಲಮ್ಯಾಂಡರ್ 20 ವರ್ಷ ಮತ್ತು ಯೂರೋಪಿನ ಸ್ಯಾಲಮಾಂಡರ್ 10–30 ವರ್ಷದವರೆಗೆ ಬದುಕಿರುತ್ತವೆ.

ದೇಹ ರಚನೆ: ಉಭಯಜೀವಿಗಳು ದ್ವಿಪಾರ್ಶ್ವ ಸಮಾಂಗತೆಯನ್ನು ತೋರುವ ಕಶೇರುಕಗಳು. ಸಾಮಾನ್ಯವಾಗಿ ದೇಹದ ಮುಂದಿನ ಭಾಗ ಮೊನಚಾಗಿದ್ದು ಹಿಂದಿನ ಭಾಗ ಮೊಂಡು ಅಥವಾ ಬಾಲವುಳ್ಳದ್ದಾಗಿದೆ. ದೇಹದ ಮೇಲ್ಭಾಗ ಹಲವಾರು ಬಣ್ಣಗಳಿಂದ ಕೂಡಿದೆಯಾದರೆ ತಳಭಾಗ ಮಾಸಲು ಬಿಳಿ ಬಣ್ಣದ್ದು. ರುಂಡ ಮುಂಡಗಳ ವಿಂಗಡಣೆ ಸ್ಪಷ್ಟವಾಗಿಲ್ಲ. ಕಪ್ಪೆಗಳಲ್ಲಿ ಎರಡು ಕೈಗಳು ಮತ್ತು ಎರಡು ಕಾಲುಗಳುಂಟು. ಕಾಲುಗಳು ಜಾಲಪಾದಿಗಳಾಗಿವೆ. ಸ್ಯಾಲಮ್ಯಾಂಡರುಗಳಲ್ಲಿ ನಾಲ್ಕು ಕಾಲುಗಳು ಮತ್ತು ಒಂದು ಬಾಲವುಂಟು. ಆದರೆ ಇತ್ತಲೆಮಂಡಲಗಳಲ್ಲಿ ಕೈಕಾಲುಗಳಿಲ್ಲ; ಮೋಟು ಬಾಲ ಮಾತ್ರ ಉಂಟು. ಉಭಯಜೀವಿಗಳು ಪಂಚಾಂಗುಲೀಯಗಳು.




A. ನೋಟೊಟ್ರೀಮ, B. ಅಲೈಟಿಸ್, C. ಹೈಲ

ಬಾಯಿಯಲ್ಲಿ ಮೇಲಿನ ಮತ್ತು ಕೆಳದವಡೆಗಳಿವೆ. ಮೇಲ್ದವಡೆಯ ಒಳ ಅಂಚಿನಲ್ಲಿ ಏಕರೂಪದ ಹಲ್ಲುಗಳಿವೆ. ಕೆಲವು ಪ್ರಭೇದಗಳಲ್ಲಿ ಕೆಳದವಡೆಯಲ್ಲೂ ಹಲ್ಲುಗಳಿರುವುದುಂಟು.

ಕೆಳದವಡೆಯ ಹಿಂಭಾಗದಲ್ಲಿ ಅಂಟಿನಿಂದ ಆವೃತವಾದ ನಾಲಿಗೆ ಇದೆ. ತಲೆಯ ಮುಂತುದಿಯಲ್ಲಿ ಮೇಲಕ್ಕೆ ತೆರೆದಿರುವಂತೆ ಎರಡು ಹೊರನಾಸಿಕ ರಂಧ್ರಗಳಿವೆ. ಪಕ್ಕಗಳಲ್ಲಿ ಎರಡು ಕಣ್ಣುಗಳು; ಉಬ್ಬಿಕೊಂಡಂತಿರುವ ಕಣ್ಣುಗಳಲ್ಲಿ ಸ್ವಲ್ಪಮಟ್ಟಿಗೆ ಚಲಿಸುವ ಮೇಲಿನ ಕಣ್ಣುರೆಪ್ಪೆ, ಚಲಿಸದ ಕೆಳಗಿನ ಕಣ್ಣುರೆಪ್ಪೆ ಮತ್ತು ಪಾರದರ್ಶಕವಾದ ಮೂರನೆಯ ಒಳರೆಪ್ಪೆ ಉಂಟು. ಕಣ್ಣುಗಳ ಹಿಂದೆ ಎರಡು ಕಿವಿ ತಮಟೆಗಳು ಉಂಟು. ದೇಹದ ಹಿಂಬದಿಯಲ್ಲಿ ಕ್ಲೋಯಕ ರಂಧ್ರವಿದೆ. ಪ್ರತ್ಯೇಕ ಗುದದ್ವಾರವಿಲ್ಲ.

ಚರ್ಮ ದೇಹದ ಸ್ನಾಯುಗಳಿಗೆ ಸಡಿಲವಾಗಿ ಅಂಟಿಕೊಂಡಿದೆ. ಇದು ಸಾಧಾರಣವಾಗಿ ನುಣುಪಾಗಿಯೂ ತೇವಪೂರಿತವಾಗಿಯೂ ಇದೆ. ಭೂವಾಸಿ ಉಭಯಜೀವಿಗಳಲ್ಲಿ ಚರ್ಮ ಒರಟಾಗಿ ಒಣಗಿದ್ದು ಅಲ್ಲಲ್ಲಿ ಗುಬುಟುಗಳಿಂದ ಕೂಡಿದೆ. ಚರ್ಮ ಸದಾ ತೇವಪೂರಿತವಾಗಿರುವುದಕ್ಕೆ ಶ್ಲೇಷ್ಮ ಗ್ರಂಥಿಗಳು ಸ್ರವಿಸುವ ಶ್ಲೇಷ್ಮವೇ ಕಾರಣ. ಇಂಥ ಚರ್ಮಕ್ಕೆ ಗಾಳಿಯಲ್ಲಿರುವ ಪ್ರಾಣವಾಯುವನ್ನು ಸ್ವಲ್ಪ ಮಟ್ಟಿಗೆ ಹೀರಿಕೊಳ್ಳುವ ಶಕ್ತಿಯಿರುವುದರಿಂದ ಇದು ಆನುಷಂಗಿಕ ಶ್ವಾಸೇಂದ್ರಿಯವೆನಿಸಿದೆ. ಹೊರ ಚರ್ಮದಲ್ಲಿ ವರ್ಣಕಗಳ ಕೋಶಗುಂಪುಗಳುಂಟು. ಈ ಕೋಶಗಳಿಗೆ ಮಿದುಳಿನ ನರಗಳ ನೇರ ಸಂಪರ್ಕವಿರುವುದರಿಂದ ಪರಿಸರಕ್ಕೆ ತಕ್ಕಂತೆ ಚರ್ಮದ ಬಣ್ಣವನ್ನು ಬದಲಾಯಿಸಲು ಅನುವಾಗಿದೆ. ಪರಿಸರದ ಆರ್ದ್ರತೆ ಬಣ್ಣ ಬದಲಾವಣೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಚರ್ಮದ ಅನೇಕ ಕಡೆಗಳಲ್ಲಿ ಸೂಕ್ಷ್ಮ ಮಲಿನ ರಕ್ತನಾಳಗಳೂ ಸೂಕ್ಷ್ಮ ನರಗಳೂ ಮತ್ತು ಸ್ಪರ್ಶೇಂದ್ರಿಯ ವಲಯಗಳೂ ಉಂಟು.

ಕಂಕಾಲ: ಇದು ಪ್ರಧಾನವಾಗಿ ಮೂಳೆಯಿಂದ ರಚಿತವಾಗಿದೆ. ಕೆಲವು ಮೃದ್ವಸ್ಥಿಗಳೂ ಉಂಟು. ಕಂಕಾಲದಲ್ಲಿ ಎರಡು ವಿಧ: 1. ತಲೆಬುರುಡೆ ಮತ್ತು ಬೆನ್ನುಹುರಿಗಳನ್ನು ಒಳಗೊಂಡ ಅಕ್ಷ ಕಂಕಾಲ (ಆಕ್ಸಿಯಲ್ ಸ್ಕೆಲಿಟನ್) ಮತ್ತು 2. ಅಂಗಗಳ ಮತ್ತು ಕಟಿಬಂಧಗಳ ಮೂಳೆಯ ರಚನೆಗಳನ್ನು ಒಳಗೊಂಡ ಉಪಾಂಗ ಕಂಕಾಲ (ಅಪೆಂಡಿಕ್ಯುಲಾರ್ ಸ್ಕೆಲಿಟನ್). ದೇಹದಲ್ಲಿ ಭುಜದ ಪಟ್ಟಿ ಮತ್ತು ಸೊಂಟದ ಪಟ್ಟಿ ಎಂಬ ಎರಡು ಕಟಿಬಂಧಗಳಿವೆ. ಅಕ್ಷ ಕಂಕಾಲದ ಬೆನ್ನುಹುರಿಯಲ್ಲಿ 9 ಕಶೇರುಗಳು ಮತ್ತು ಒಂದು ಯೂರೊಸ್ಟೈಲ್ ಇವೆ. ಪ್ರೊಸೀಲಸ್, ಆಂಫಿಸೀಲಸ್ ಮತ್ತು ಒಫಿಸ್ಥೋಸೀಲಸ್ ಎಂಬ ಮೂರು ಬಗೆಯ ಕಶೇರುಗಳುಂಟು. ಬೆನ್ನುಹುರಿಯ ಮುಂಭಾಗಕ್ಕೆ ತಲೆಬುರುಡೆಯೂ ಹಿಂಭಾಗಕ್ಕೆ ಸೊಂಟಪಟ್ಟಿಯೂ ಸೇರಿಕೊಂಡಿವೆ. ತಲೆಬುರುಡೆಯಲ್ಲಿ ಮಿದುಳನ್ನು ರಕ್ಷಿಸುವ ಮೂಳೆಯ ಪೆಟ್ಟಿಗೆ (ಕ್ರೇನಿಯಮ್) ಇದೆ. ತಲೆಬುರುಡೆ ಅನೇಕ ಮೂಳೆಗಳು ಮತ್ತು ಮೃದ್ವಸ್ಥಿಗಳಿಂದ ಕೂಡಿದೆ. ಇದರ ಹಿಂಭಾಗದ ಎರಡು ಆಕ್ಸಿಪಿಟಲ್ ಕಾಂಡೈಲುಗಳು ಬೆನ್ನುಹುರಿಯ ಮೊದಲನೆಯ ಕಶೇರುವಾದ ಅಟ್ಲಾಸಿನೊಂದಿಗೆ ಸೇರಿಕೊಂಡಿವೆ. ತಲೆಬುರುಡೆಯ ಮೇಲ್ಭಾಗ ಮೇಲ್ದವಡೆಯ ಮತ್ತು ಕೆಳಭಾಗ ಕೆಳದವಡೆಯ ಆಧಾರವಾಗಿವೆ. ಉಪಾಂಗಗಳ ಕಂಕಾಲದ ಭಾಗಗಳೆಂದರೆ ಕಟಿಬಂಧಗಳು ಮತ್ತು ಕೈಕಾಲುಗಳ ಮೂಳೆಗಳು. ಉಭಯಜೀವಿಗಳಲ್ಲಿರುವ ಎರಡು ವಿಧ ಕಟಿಬಂಧಗಳಲ್ಲಿ ಭುಜಪಟ್ಟಿ ಎದೆಯ ಭಾಗದಲ್ಲಿದ್ದು ಹೃದಯ ಮತ್ತು ಘುಪ್ಪುಸಗಳನ್ನು ರಕ್ಷಿಸುತ್ತದೆ. ಕೈಗಳ ಅಥವಾ ಮುಂಗಾಲುಗಳ ಮೂಳೆಗಳಿಗೆ ಭುಜದ ಕಟಿಬಂಧ ಆಧಾರವನ್ನು ಒದಗಿಸಿದೆ. ಕಟ್ಯಾಸ್ಥಿವಲಯ ನಡುವಿನ ಭಾಗದಲ್ಲಿದ್ದು ಬೆನ್ನು ಹುರಿಗೂ ಕಾಲುಗಳ ಮೂಳೆಗಳಿಗೂ ಆಧಾರವಾಗಿದೆ. ಭುಜಾಸ್ಥಿವಲಯಗಳು ಕಪ್ಪೆ ಮತ್ತು ಸ್ಯಾಲಮ್ಯಾಂಡರುಗಳಲ್ಲಿ ಭಿನ್ನವಾಗಿದ್ದರೂ ಕೂಡ ಒಂದೇ ರೀತಿಯ ಮೂಲರಚನೆಯಿಂದ ಉತ್ಪತ್ತಿಯಾಗಿವೆ.

**ಬ್ಯೂಫೊ ಮೆಲನೊಸ್ಟಿಕ್ಟಸ್**

ಸ್ನಾಯುವ್ಯವಸ್ಥೆ: ಎಲ್ಲ ರೀತಿಯ ಚಲನೆಯೂ ದೇಹದ ವಿವಿಧ ಸ್ನಾಯುಗಳಿಂದ ನಡೆಯುತ್ತದೆ. ಸ್ನಾಯುಗಳಲ್ಲಿ ಎರಡು ವಿಧ. 1. ಮಧ್ಯದರ್ಮ(ಮಿಸೊಡರ್ಮ್) ದಿಂದ ರೂಪುಗೊಂಡಿರುವ ಅರೇಖಾನ್ವಿತ ಅನೈಚ್ಛಿಕ ಸ್ನಾಯುಗಳು. ಇವನ್ನು ಜೀರ್ಣಾಂಗಗಳು, ಹೊಟ್ಟೆ ಮತ್ತು ರಕ್ತನಾಳಗಳಲ್ಲಿ ಕಾಣಬಹುದು. 2. ಮಯೋಟೋಮುಗಳಿಂದ ರೂಪುಗೊಂಡಿರುವ ರೇಖಾನ್ವಿತ ಐಚ್ಛಿಕ ಸ್ನಾಯುಗಳು. ಇವು ದೇಹಭಿತ್ತಿಯ ಮತ್ತು ಅಂಗಾಂಗಗಳ ಚಲನೆಗೆ ಸಹಕಾರಿಯಾಗುವುದಲ್ಲದೆ ಅನೇಕ ಮೂಳೆಗಳು ಒಂದಕ್ಕೊಂದು ಅಂಟಿಕೊಂಡಿರುವಂತೆ ಮಾಡುತ್ತವೆ. ದೇಹದ ಎಲ್ಲಾ ಸ್ನಾಯುಗಳು ನರಮಂಡಲದ ಕೇಂದ್ರವಾದ ಮಿದುಳಿನ ಹತೋಟಿಯಲ್ಲಿದ್ದರೂ ಹೊಟ್ಟೆ ಭಾಗದ ಸ್ನಾಯುಗಳು ಸಂಕುಚಿತವಾದಾಗ ನೇರ ಚಲನೆಯನ್ನು ತೋರಿಸುತ್ತವೆ. ಉದಾಹರಣೆಗೆ, ಕಪ್ಪೆಯ ಹೃದಯವನ್ನು ದೇಹದಿಂದ ಬೇರ್ಪಡಿಸಿದಾಗ ಬಹಳ ಹೊತ್ತು ಹೃದಯ ಬಡಿದುಕೊಳ್ಳುವುದು. ಉಭಯಜೀವಿಗಳು ತಂಪು ರಕ್ತದ ಪ್ರಾಣಿಗಳಾದ್ದರಿಂದ ಇವುಗಳ ದೇಹದ ಸ್ನಾಯುಗಳು ಕೊಬ್ಬಿ ಬೆಳೆಯುವುದಿಲ್ಲ.

ಜೀರ್ಣಾಂಗ ವ್ಯವಸ್ಥೆ: ತಲೆಯ ತುದಿಯಲ್ಲಿ ಬಾಯಿ ಉಂಟು. ಬಾಯಿ ಮೇಲು ಮತ್ತು ಕೆಳದವಡೆಗಳಿಂದ ಕೂಡಿದೆ. ನಾಲಿಗೆಗೆ ಚಲನ ಸಾಮರ್ಥ್ಯ ಇದೆಯಾಗಿ ಇದು ಆಹಾರವನ್ನು ಹಿಡಿಯುವ ಮತ್ತು ನುಂಗುವ ಕಾರ್ಯಕ್ಕೆ ಸಹಾಯಕವಾಗಿದೆ. ನಾಲಿಗೆ ಮತ್ತು ಅಂಗುಳಿನಲ್ಲಿ ರುಚಿಕುಡಿಗಳುಂಟು. ಜೀರ್ಣಾಂಗಗಳ ವ್ಯವಸ್ಥೆಯ ಒಳ ಅಂಚಿನಿಂದ ಶ್ಲೇಷ್ಮ ಸ್ರವಿಸಿ ಆಹಾರ ಸುಲಭವಾಗಿ ಮುಂದೆ ಚಲಿಸಲು ಅನುಕೂಲವಾಗಿದೆ. ಆಹಾರ ಬಾಯಿಯಿಂದ ಗಂಟಲು ಮುಖಾಂತರ ಅನ್ನನಾಳಕ್ಕೆ ಬಂದು ಜಠರವನ್ನು ಸೇರುತ್ತದೆ. ಜಠರ ದೇಹದ ಎಡಭಾಗಕ್ಕಿದ್ದು ಉಬ್ಬಿದ ಕೊಳವೆಯಂತಿದೆ. ಇದರ ಒಳಭಾಗ ಅನೇಕ ಮಡಿಕೆಗಳಿಂದ ಕೂಡಿದ್ದು ಜಠರ ಗ್ರಂಥಿಗಳನ್ನೊಳಗೊಂಡಿದೆ. ಬೇಡದ ಆಹಾರ ಪದಾರ್ಥ ಆಕಸ್ಮಿಕವಾಗಿ ಜಠರವನ್ನು ಸೇರಿದರೆ ಉಭಯಜೀವಿಗಳು ಜಠರವನ್ನು ಬಾಯಿ ತನಕ ಉಬ್ಬಿಸಿ, ಅಂಥ ಆಹಾರವನ್ನು ಹೊರಗೆ ಹಾಕುವ ವಿಚಿತ್ರ ಗುಣವನ್ನು ತೋರುವುವು. ಅನಿಯಮಿತ ಕಾಲಗಳಲ್ಲಿ ಆಹಾರ ಸಿಗುವುದರಿಂದ ಉಭಯಜೀವಿಗಳು ಜಠರವನ್ನು ಆಹಾರ ಶೇಖರಣೆಗೂ ಉಪಯೋಗಿಸುವುವು. ಇದರಿಂದಾಗಿ ಜಠರ ತನ್ನ ಶಕ್ತಿಗೂ ಮೀರಿ ಆಹಾರವನ್ನೂ ಇರಿಸಿಕೊಳ್ಳುವುದೂ ಉಂಟು. ಜಠರದಲ್ಲಿ ಅರ್ಧ ಜೀರ್ಣಗೊಂಡ ಆಹಾರ ಕರುಳಿಗೆ ಸಾಗುತ್ತದೆ. ಕರುಳು ಸುತ್ತುಗಟ್ಟಿದ ಕೊಳವೆಯಂತೆ ಉದ್ದವಾಗಿದೆ. ಕರುಳುಭಿತ್ತಿಯ ಒಳಭಾಗದಲ್ಲಿ ಸೂಕ್ಷ್ಮವಾದ ರಚನೆಗಳುಂಟು. ಮೇದೋಜೀರಕರಸ ಮತ್ತು ಪಿತ್ತರಸ ಕರುಳಿನೊಳಕ್ಕೆ ಸೇರುವುದಲ್ಲದೆ ಇವುಗಳ ಜೊತೆಗೆ ಕರುಳಿನ ರಸವೂ ಸೇರಿ ಆಹಾರವನ್ನು ಪೂರ್ತಿಯಾಗಿ ಜೀರ್ಣಿಸುತ್ತದೆ. ಜೀರ್ಣವಾದ ಆಹಾರವನ್ನು ಕರುಳಿನ ಲೋಮಗಳು ಹೀರಿಕೊಂಡು ಆಹಾರನ್ನು ರಕ್ತಗತ ಮಾಡುತ್ತವೆ. ಕರುಳಿನ ಮುಂಭಾಗಕ್ಕೆ ಡಿಯೋಡಿನಮ್ ಮತ್ತು ಹಿಂಭಾಗಕ್ಕೆ ಇಲಿಯಮ್ ಎಂದು ಹೆಸರು. ಜೀರ್ಣವಾಗದ ಆಹಾರದ ಇಲಿಯಮಿನಿಂದ ಹೊರಟು ಹಿಂದಿನ ಭಾಗವಾದ ಮಲಾಶಯಕ್ಕೆ ಬಂದು, ಅನಂತರ ಜೀರ್ಣಾಂಗ ವ್ಯವಸ್ಥೆಯ ಕೊನೆಯಲ್ಲಿರುವ ಕ್ಲೋಯಕಕ್ಕೆ ಬಂದು ಹೊರಬೀಳುತ್ತದೆ. ಇತರ ಪ್ರಾಣಿಗಳಂತೆ ಇವುಗಳಲ್ಲಿಯೂ ಆಹಾರ ಜೀರ್ಣಗ್ರಂಥಿಗಳಾದ ಮೇದೋಜ್ಜೀರಕ ಮತ್ತು ಪಿತ್ತರಸ ಗ್ರಂಥಿಗಳಿವೆ. ಪ್ರೌಢ ಉಭಯಜೀವಿಗಳು ಹುಳುಹುಪ್ಪಟೆ ಮತ್ತು ಇತರ ಕಶೇರುಕಗಳನ್ನು ತಿನ್ನುವುವು. ಉಭಯಜೀವಿಗಳು ದೀರ್ಘಕಾಲ ಉಪವಾಸವಿರಬಲ್ಲವು. ಪ್ರೋಟಿಯಸ್ ಒಂದು ವರ್ಷ ಮತ್ತು ಆಕ್ಸೊಲಾಟಲ್ ಎರಡು ವರ್ಷಗಳ ಕಾಲ ಆಹಾರ ಸೇವಿಸದೆ ಬದುಕಿದ್ದ ನಿದರ್ಶನಗಳುಂಟು. ಇದಕ್ಕೆ ಕಾರಣ ಇವುಗಳ ಕ್ಷೀಣಗತಿಯ ಚಯಾಪಚಯ ಕ್ರಿಯೆ. ಹೀಗೆ ಉಪವಾಸವಿರುವ ಕಾಲದಲ್ಲಿ ಇವು ದೇಹದ ಅಂಗಾಂಶಗಳಲ್ಲಿ ಸಂಗ್ರಹವಾಗಿರುವ ಆಹಾರವನ್ನು ಉಪಯೋಗಿಸುವುವೆಂದು ಹೇಳಲಾಗಿದೆ.



**ಇಕ್ತಿಯಾಫಿಸ್ ಗ್ಲೂಟಿನೋಸಸ್ (ಇತ್ತಲೆ ಮಂಡಲ)**

ರಕ್ತಪರಿಚಲನಾ ಕ್ರಮ: ರಕ್ತಪರಿಚಲನಾಕ್ರಮದ ಮುಖ್ಯ ಅಂಗ ಹೃದಯ. ಹೃದಯದಲ್ಲಿ ಮೂರು ಕೋಣೆಗಳಿವೆ; ಎರಡು ಹೃತ್ಕರ್ಣಗಳು ಮತ್ತು ಒಂದು ಹೃತ್ಕುಕ್ಷಿ. ಹೃದಯದ

ಸುತ್ತ ಇಪ್ಪದರದ ಪೆರಿಕಾರ್ಡಿಯಂ ಉಂಟು. ಬಲಹೃತ್ಕರ್ಣ ದೇಹದ ಮಲಿನ ರಕ್ತವನ್ನು ಪಡೆಯುತ್ತದೆ. ಎರಡೂ ಹೃತ್ಕರ್ಣಗಳಿಂದ ರಕ್ತ ಹೃತ್ಕುಕ್ಷಿಯನ್ನು ಪ್ರವೇಶಿಸುತ್ತದೆ. ದೇಹದ ಮಲಿನ ರಕ್ತ ಮೂರು ಮುಖ್ಯ ಮಲಿನ ರಕ್ತನಾಳಗಳ ಮೂಲಕ ಹೃದಯಕ್ಕೆ ಬಂದು ಸೇರುತ್ತದೆ. ತಲೆ ಮತ್ತು ದೇಹದ ಹಿಂಭಾಗದಿಂದ ಬರುವ ಒಂದು ಪೋಸ್ಟ್‌ಕೇವಲ್ ಮಲಿನ ರಕ್ತನಾಳ ಹೃದಯದ ಮೇಲ್ಭಾಗದಲ್ಲಿರುವ ಮಲಿನ ರಕ್ತಕೋಶದ ಸೈನಸ್ ವೀನೋಸಸ್ ಮೂಲಕ ಬಲ ಹೃತ್ಕರ್ಣವನ್ನು ತಲುಪುತ್ತದೆ. ಹೃದಯ ಮಲಿನ ರಕ್ತವನ್ನು ಫುಪ್ಫುಸಗಳಿಗೆ ಕಳುಹಿಸಿ, ಅಲ್ಲಿಂದ ಶುದ್ಧ ರಕ್ತವನ್ನು ಪಡೆಯುತ್ತವೆ. ಹೃತ್ಕುಕ್ಷಿಯ ಬಲಭಾಗದಲ್ಲಿ ಮಲಿನ ರಕ್ತವೂ ಎಡಭಾಗದಲ್ಲಿ ಶುದ್ಧ ರಕ್ತವೂ ಇದ್ದು ಒಂದರೊಡನೊಂದು ಸೇರಿಕೊಳ್ಳದಿರುವುದು ಉಭಯಜೀವಿಗಳ ವೈಶಿಷ್ಟ್ಯ. ಹೃದಯ ಸಂಕುಚಿತವಾದಾಗ ಹೃದಯದ ತಳಭಾಗದಲ್ಲಿರುವ ಕೋನಸ್ ಆರ್ಟೀರಿಯೋಸಸ್ ಮೂಲಕ ದೇಹದ ಎಲ್ಲ ಭಾಗಗಳಿಗೂ ರಕ್ತ ಹರಿಯುತ್ತದೆ. ಕೋನಸ್ ಆರ್ಟೀರಿಯೋಸಸ್ ಹೃದಯದಿಂದ ಹೊರಟು ಎರಡು ಕವಲುಗಳಾಗಿ ಒಡೆಯುತ್ತದೆ. ಒಂದೊಂದು ಕವಲೂ ಮತ್ತೆ ಮೂರು ಕವಲು ರಕ್ತನಾಳಗಳಾಗಿ ವಿಭಾಗವಾಗುತ್ತದೆ. ಮುಂದಿನ ಕೆರೊಟಿಡ್ ಕವಲು ತಲೆಗೂ ಮಧ್ಯದ ಸಿಸ್ಟಮಿಕ್ ಕವಲು ದೇಹದ ಇತರ ಭಾಗಗಳಿಗೂ ಮತ್ತು ಹಿಂದಿನ ಪಲ್ಮೋಕ್ಯುಟೇನಿಯಸ್ ಕವಲು ಫುಪ್ಫುಸಗಳಿಗೂ ರಕ್ತವನ್ನು ಒಯ್ಯುತ್ತವೆ. ಎರಡೂ ಕಡೆಯ ಸಿಸ್ಟಮಿಕ್ ಕವಲುಗಳು ಹೃದಯದ ಹಿಂಭಾಗದ ತಳಭಾಗದಲ್ಲಿ ಸೇರಿಕೊಂಡು ಮುಖ್ಯ ಶುದ್ಧ ರಕ್ತನಾಳಗಳಾಗಿ ದೇಹದ ಎಲ್ಲ ಅಂಗಗಳಿಗೂ ರಕ್ತವನ್ನು ಸರಬರಾಜು ಮಾಡುತ್ತವೆ. ಮಲಿನ ರಕ್ತ ಪರಿಚಲನೆಯಲ್ಲಿ ರೀನೋಪೋರ್ಟಲ್ ವ್ಯವಸ್ಥೆಯುಂಟು. ಇದರಲ್ಲಿ ಹಿಂದಿನ ಕಾಲುಗಳಿಂದ ಬರುವ ಮಲಿನ ರಕ್ತನಾಳಗಳು ತಮ್ಮ ಹೆಚ್ಚಿನ ರಕ್ತವನ್ನು ಮೂತ್ರಪಿಂಡಗಳಿಗೆ ತಂದು ಸುರಿಯುತ್ತವೆ. ರಕ್ತದಲ್ಲಿ ದ್ರವರೂಪದ ಪ್ಲಾಸ್ಮ ಜೊತೆಗೆ ಬಿಳಿರಕ್ತ ಕಣಗಳೂ ಕೆಂಪುರಕ್ತಕಣಗಳೂ ಇವೆ. ಕೆಂಪುರಕ್ತಕಣದಲ್ಲಿ ಕಬ್ಬಿಣದ ಸಂಯುಕ್ತವಾದ



**ಆಂಫಿಯೂಮ, ನೆಕ್ಟ್ಯೂರಸ್, ಪ್ರೋಟಿಯಸ್ ಮತ್ತು ಸೈರೆನ್**

ಹಿಮೋಗ್ಲೋಬಿನ್ ಇರುವುದರಿಂದ ರಕ್ತ ಕೆಂಪು ವರ್ಣದ್ದಾಗಿದೆ. ಮಲಿನ ರಕ್ತನಾಳಗಳ ಭಿತ್ತಿ ತೆಳುವಾಗಿದೆ. ಇವುಗಳಲ್ಲಿ ರಕ್ತ ನಿಧಾನವಾಗಿ ಚಲಿಸುತ್ತದೆ. ಶುದ್ಧರಕ್ತನಾಳದ ಭಿತ್ತಿ ಮಂದ. ರಕ್ತ ಇದರಲ್ಲಿ ಬಹಳ ವೇಗವಾಗಿ ಚಲಿಸುತ್ತದೆ. ಉಭಯಜೀವಿಗಳ ಶರೀರದಲ್ಲೂ ಬಣ್ಣವಿಲ್ಲದ ಹಾಲ್ರಸ (ಲಿಂಫ್) ಉಂಟು.

ಉಸಿರಾಟ: ವಿವಿಧ ಬಗೆಯ ಉಸಿರಾಟವನ್ನು ಕಾಣಬಹುದು. ಜೀವನ ಚಕ್ರದ ಮೊದಲ ಹಂತವಾದ ಲಾರ್ವ ಸ್ಥಿತಿಯಲ್ಲಿ ಕಿವಿರುಗಳು ಮತ್ತು ಚರ್ಮದ ಮುಖಾಂತರವೂ ಪ್ರೌಢ ಜೀವಿಗಳಲ್ಲಿ ಫುಪ್ಫುಸಗಳು, ಚರ್ಮ ಮತ್ತು ಬಾಯ ಒಳಭಾಗದ ಮುಖಾಂತರವು ಉಸಿರಾಟ ನಡೆಯುತ್ತದೆ. ಲಾರ್ವಾವಸ್ಥೆಯಲ್ಲಿ ಮತ್ತು ಪೂರ್ಣ ರೂಪಪರಿವರ್ತನೆ ಹೊಂದದ ಪ್ರೌಢ ಯುರೋಡಿಲಗಳಲ್ಲಿ ಕಿವಿರುಗಳು ಕಾಣಬರುವುವು. ಇವು ತಲೆಯ ಹಿಂಬದಿಯ ಉಭಯ ಪಾರ್ಶ್ವಗಳ ಗಂಟಲು ಭಾಗದಿಂದ ಹೊರಚಾಚಿಕೊಂಡು ಬೆಳೆಯುತ್ತವೆ. ಲಾರ್ವ ಮೊದಲು ಬಾಹ್ಯ ಕಿವಿರುಗಳಿಂದ ಉಸಿರಾಡಿ ಬೆಳವಣಿಗೆ ಮುಂದುವರಿದಂತೆ ಅಂತಃಕಿವಿರುಗಳಿಂದ ಉಸಿರಾಡುತ್ತವೆ. ಕೆಲವು ಪ್ರೌಢ ಯುರೊಡಿಲಗಳಲ್ಲಿ ಬಾಹ್ಯ ಕಿವಿರುಗಳು ಇಡೀ ಜೀವಮಾನದುದ್ದಕ್ಕೂ ಉಳಿದಿರುತ್ತವೆ. ರಕ್ತನಾಳಗಳು ಕಿವಿರುಗಳಿಗೆ ರಕ್ತವನ್ನು ತರುವುವು. ಕಿವಿರುಗಳ ಹೊರಮೈ ಮೇಲೆ ಸೂಕ್ಷ್ಮ ಪೊರೆಯೊಂದುಂಟು. ಇದರಿಂದ ನೀರಿನಲ್ಲಿರುವ ಪ್ರಾಣವಾಯುವನ್ನು ಹೀರಲು ರಕ್ತದಿಂದ ಇಂಗಾಲದ ಡೈ ಆಕ್ಸೈಡ್ ಅನ್ನು ಹೊರಗೆಡವಲು ಅನುಕೂಲವಾಗಿದೆ. ಪ್ರೌಢ ಉಭಯಜೀವಿಗಳಲ್ಲಿ ಚರ್ಮದ ಮುಖಾಂತರ ಉಸಿರಾಟ ನಡೆಯುವುದು ಗಮನೀಯವಾದ ಸಂಗತಿ. ಕೆಲವು ಪ್ರಭೇದಗಳ ಚರ್ಮದಲ್ಲಿ ಅನೇಕ ಮಡಿಕೆಗಳು ಸೂಕ್ಷ್ಮ ರಕ್ತನಾಳಗಳ ಮುಖಾಂತರ ಹರಡುತ್ತದೆ. ಲೋಳೆ ವಸ್ತುವನ್ನು ಸ್ರವಿಸುವ ಗ್ರಂಥಿಗಳಿರುವುದರಿಂದ ಚರ್ಮದ ಮೇಲ್ಭಾಗ ಸದಾ ತೇವದಿಂದಿರುತ್ತದೆ. ಇಂಥ ಚರ್ಮದ ಮೂಲಕ ಸೂಕ್ಷ್ಮ ರಕ್ತನಾಳಗಳು ಗಾಳಿಯಿಂದ ಪ್ರಾಣವಾಯುವನ್ನು ಹೀರಿಕೊಂಡು ಇಂಗಾಲದ ಡೈ ಆಕ್ಸೈಡನ್ನು ಹೊರಬಿಡುತ್ತವೆ. ಆಫ್ರಿಕದ ರೋಮದ ಕಪ್ಪೆಯ (ಹೇರಿ ಫ್ರಾಗ್) ಹೊರ ಚರ್ಮದ ಮೇಲೆ ಬೆಳೆದಿರುವ ಕೂದಲುಗಳು ಬಾಹ್ಯ ಕಿವಿರುಗಳಂತೆ ಉಸಿರಾಟದಲ್ಲಿ ನೆರವಾಗಿವೆ. ಹೆಚ್ಚು ಕಾಲ ಭೂಮಿಯ ಮೇಲೆಯೇ ಬದುಕುವ ಕೆಲವು ಉಭಯಜೀವಿಗಳಲ್ಲಿ ಕಿವಿರುಗಳು ಮತ್ತು ಚರ್ಮದಿಂದ ನಡೆಯುವ ಉಸಿರಾಟ ಸಾಧ್ಯವಾಗದೆ ಇತರ ಉಚ್ಚ ಕಶೇರುಕಗಳಂತೆ ಫುಪ್ಫುಸಗಳು ಉಸಿರಾಟದ ಮುಖ್ಯ ಅಂಗಗಳಾಗಿ ವಿಕಾಸಗೊಂಡಿವೆ. ಫುಪ್ಫುಸಗಳು ಅನ್ನನಾಳದ ಪಕ್ಕಗಳಿಂದ ಬೆಳೆದ ಶಂಕುವಿನಾಕಾರದ ಎರಡು ಸ್ವಚ್ಛ ಚೀಲಗಳಾಗಿವೆ. ಇವೆರಡೂ ಮುಂಭಾಗದಲ್ಲಿ ಸೇರಿಕೊಂಡು ಶ್ವಾಸನಾಳಗಳಾಗಿವೆ. ಈ ನಾಳ ಗಂಟಲಿನೊಳಕ್ಕೆ ಗ್ಲಾಟಿಸ್ ಎಂಬ ದ್ವಾರದ ಮೂಲಕ ತೆರೆದಿವೆ. ಫುಪ್ಫುಸದ ಭಿತ್ತಿಯಲ್ಲಿ ಮೃದು ಸ್ನಾಯುಗಳಿವೆ. ಇಡೀ ಕೋಶದಲ್ಲಿ ಬಲೆಯಾಕಾರದ ರಕ್ತನಾಳಗಳ ಗುಂಪು ಉಂಟು. ಈ ಬಲೆಯ ಮುಖಾಂತರ ಫುಪ್ಫುಸಗಳಲ್ಲಿ ರಕ್ತ ಪ್ರವಾಹಿಸಿ ಅಲ್ಲಿಗೆ ಬರುವ ಗಾಳಿಯಿಂದ ಪ್ರಾಣವಾಯುವನ್ನು ಹೀರಿ ಇಂಗಾಲದ ಡೈಆಕ್ಸೈಡ್ ಅನ್ನು ಹೊರದೂಡುತ್ತವೆ. ಉಭಯಜೀವಿಗಳ ಉಸಿರಾಟದಲ್ಲಿ ಉಚ್ಛ್ವಾಸ, ನಿಶ್ವಾಸ ಎಂಬ ಎರಡು ಹಂತಗಳುಂಟು. ಉಚ್ಛ್ವಾಸದಲ್ಲಿ ಮೊದಲು ಗಲ್ಲದ ಭಾಗ ಉಬ್ಬಿದಾಗ ಹೊರಗಿನ ಗಾಳಿ ಹೊರನಾಸಿಕಗಳಿಂದ ಒಳನುಗ್ಗಿ ಗಲ್ಲದ ಭಾಗಕ್ಕೆ ತಲುಪುತ್ತದೆ. ಅನಂತರ ಗಲ್ಲದ ಭಾಗ ಸಂಕುಚಿತಗೊಂಡು ಗಂಟಲಿನಲ್ಲಿರುವ ಗ್ಲಾಟಿಸ್ ದ್ವಾರದ ಮೂಲಕ ಗಾಳಿ ಶ್ವಾಸನಾಳ ಮತ್ತು ಫುಪ್ಫುಸಗಳಿಗೆ ಹೋಗುತ್ತದೆ. ಫುಪ್ಫುಸಗಳಲ್ಲಿ ಅನಿಲಗಳ ವಿನಿಮಯವಾದ ಮೇಲೆ ನಿಶ್ವಾಸ ಕ್ರಿಯೆ ಪ್ರಾರಂಭವಾಗಿ ಗಲ್ಲದ ಭಾಗ ಎರಡನೇ ಸಲ ಉಬ್ಬುತ್ತದೆ. ಆಗ ಅಲ್ಲಿ ಗಾಳಿಯ ಒತ್ತಡ ಕಡಿಮೆ ಇರುವುದರಿಂದ ಫುಪ್ಫುಸಗಳ ಗಾಳಿ ಗಲ್ಲದ ಕೋಣೆಗೆ ಒಳನುಗ್ಗಿ ಬರುವುದುಂಟು. ಪುನಃ ಗಲ್ಲದ ಭಾಗ ಸಂಕುಚಿತವಾದಾಗ ಅರ್ಧ ಗಾಳಿ ನಾಸಿಕಗಳ ಮುಖಾಂತರ ಹೊರಗೆ ಹೋಗುತ್ತದೆ. ಉಚ್ಛ್ವಾಸ ನಿಶ್ವಾಸ ಕ್ರಿಯೆಗಳು ಉಚ್ಚಕಶೇರುಕಗಳಲ್ಲಿರುವಂತೆ ಪರಿಪೂರ್ಣವಾಗಿಲ್ಲ. ಇತ್ತಲೆ ಮಂಡಲಗಳಲ್ಲಿ ಎಡ ಫುಪ್ಫುಸ ಅಂಕುರಾಂಗದ ರೀತಿಯಲ್ಲಿ ಇದೆ. ಬಲ ಫುಪ್ಫುಸ ಮಾತ್ರ ಉಸಿರಾಟಕ್ಕೆ ಉಪಯುಕ್ತವಾಗಿದೆ. ಸ್ಯಾಲಮ್ಯಾಂಡರುಗಳಲ್ಲಿ ಫುಪ್ಫುಸಗಳು ಅಂಕುರಾಂಗಗಳಾಗಿವೆ. ಅಥವಾ ಸಂಪೂರ್ಣ ಇಲ್ಲವಾಗಿವೆ. ಈ ಪ್ರಾಣಿಗಳು ಚರ್ಮ ಅಥವಾ ಕಿವಿರುಗಳ ಮೂಲಕ ಉಸಿರಾಡುವುವು.

ನರಮಂಡಲ: ಕಪ್ಪೆ ಉಭಯಜೀವಿಗಳ ಮಾದರಿ ಪ್ರಾಣಿಯಾಗಿರುವುದರಿಂದ ಕಪ್ಪೆಯ ನರಮಂಡಲವನ್ನು ಇಲ್ಲಿ ವಿವರಿಸಲಾಗಿದೆ. ನರಮಂಡಲವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

1. ಕೇಂದ್ರ ನರಮಂಡಲ: ಮಿದುಳು ಮತ್ತು ಮಿದುಳು ಬಳ್ಳಿ
2. ಹೊರಮೈ ನರಮಂಡಲ: ಕಪಾಲದ ಮತ್ತು ಮಿದುಳು ಬಳ್ಳಿಯ ನರಗಳು.
3. ಸ್ವಯಮಾಧಿಪತ್ಯದ ನರಮಂಡಲ: ರಕ್ತನಾಳಗಳ, ಹೊಟ್ಟೆಯ ಅಂಗಾಂಗಗಳ ನರಗಳು.

ಕೇಂದ್ರದ ನರಮಂಡಲ: ನರಮಂಡಲದ ಮುಖ್ಯಭಾಗ ಮಿದುಳು. ಮಿದುಳಿನಲ್ಲಿ ಮೂರು ಮುಖ್ಯ ಭಾಗಗಳಿವೆ. ಇದರ ಸುತ್ತ ಮೂರು ಪದರದ ಹೊದಿಕೆಯುಂಟು. ಮೊದಲಿನ ಪದರ ಕಪ್ಪು ಸೂಕ್ಷ್ಮ ಪದರ (ಪೈಯ ಮೇಟರ್). ಎರಡನೆಯದು ರಕ್ತನಾಳಗಳಿಂದ

ಕೂಡಿರುವ ಮಧ್ಯ ಪದರ (ಅರಾಕ್ನಾಯಿಡ್ ಮೆಂಬ್ರೇನ್). ಹೊರಗಿನದು ಸ್ವಲ್ಪ ದಪ್ಪಗಿರುವ ಹೊರ ಪದರ (ಡ್ಯೂರ ಮೇಟರ್). ಮುಂದಿನ ಮಿದುಳಿನಲ್ಲಿ (ಸೆರೆಬ್ರಮ್) ಉದ್ದವಾದ ಮಿದುಳಿನ ಗೋಳಾರ್ಧಗಳು ಮತ್ತು ಅವುಗಳ ಮುಂದೆ ಘ್ರಾಣೇಂದ್ರಿಯದ ಪಾಲಿಗಳಿವೆ (ಅಲ್ಫ್ಯಾಕ್ಟರಿ ಲೋಬ್ಸ್). ಇದರ ಹಿಂಭಾಗದಲ್ಲಿ ಪೈನಿಯಲ್ ಗ್ರಂಥಿಯಿದ್ದು ಕೆಳಗಡೆ ದೃಷ್ಟಿ ನರಗಳ ಕೈಯಾಸ್ಮಾ (ಆಪ್ಟಿಕ್ ಕೈಯಾಸ್ಮಾ) ಇದೆ. ಇದರ ಕೆಳಗೆ ಪಿಟ್ಯೂಟರಿ ಗ್ರಂಥಿ ಉಂಟು. ನಡುಮಿದುಳಿನಲ್ಲಿ ಅಂಡಾಕಾರದ ಎರಡು ದೃಷ್ಟಿಪಾಲಿಗಳುಂಟು (ಆಪ್ಟಿಕ್ ಲೋಬ್ಸ್). ಹಿಂದಿನ ಭಾಗದಲ್ಲಿ ಚಿಕ್ಕದಾದ ಅಡ್ಡಪಟ್ಟಿಯಂತಹ ಹಿಮ್ಮಿದುಳೂ (ಸೆರೆಬೆಲಂ) ಇದೆ. ಇದಕ್ಕೆ ಅಂಟಿರುವ ಮಿದುಳಿನ ಹಿಂದಿನ ಚಾಚುಭಾಗವಾದ ಮೆಡುಲಾ ಅಬ್ಲಾಂಗೇಟದಿಂದ ಹಿಂದಕ್ಕೆ ಮಿದುಳು ಬಳ್ಳಿ ಬೆಳೆದಿದೆ.

ಮಿದುಳು ಬಳ್ಳಿ ಚಪ್ಪಟೆಯಾಗಿದೆಯಲ್ಲದೆ ದೇಹದ ಹಿಂಭಾಗದವರೆಗೂ ಬೆಳೆದಿದೆ. ಮಿದುಳಿನ ಎಲ್ಲ ಭಾಗಗಳಲ್ಲಿಯೂ ಮಿದುಳು ಕುಳಿಗಳಿವೆ. ಮಿದುಳು ಬೂದು ಮತ್ತು ಬಿಳಿ ನರಕೋಶಗಳಿಂದ ಕೂಡಿದೆ. ಇವು ಒಂದಕ್ಕೊಂದು ತೆರೆದಿದ್ದು ಮಿದುಳು ಬಳ್ಳಿಯ ಕೊಳವೆಯೊಂದಿಗೆ ಸೇರುತ್ತವೆ.

ಹೊರಮೈ ನರಮಂಡಲ: ಮಿದುಳಿನಿಂದ ಎಡಕ್ಕೂ ಬಲಕ್ಕೂ ಹೊರಡುವ ಹತ್ತು ಜೊತೆ ಕಪಾಲ ನರಗಳುಂಟು. ಇವುಗಳ ಹೆಸರು ಮತ್ತು ದೇಹದ ಯಾವ ಭಾಗಕ್ಕೆ ಇವು ಹೋಗಿವೆ ಎಂಬ ವಿವರ ಹೀಗಿದೆ:– 1) ಘ್ರಾಣೇಂದ್ರಿಯ ನರಗಳು ನಾಸಿಕ ಭಾಗಕ್ಕೆ, 2) ದೃಷ್ಟಿ ನರಗಳು ಕಣ್ಣಿಗೆ, 3) ಆಕ್ಯುಲೊಮೋಟಾರ್ ನರಗಳು ಕಣ್ಣಿನ ನಾಲ್ಕು ಸ್ನಾಯುಗಳಿಗೆ, 4) ಪೆಥೆಟಿಕ್ ಕಣ್ಣಿನ ಸ್ನಾಯುಗಳಿಗೆ, 5) ಟ್ರೈಜೆಮಿನಲ್ ದವಡೆಗಳಿಗೆ, 6) ಅಬ್ಡುಸಿನ್ ಕಣ್ಣಿಗೆ, 7) ಮುಖದ ನರಗಳು (ಫೇಸಿಯಲ್) ಬಾಯ ಅಂಗುಳು ಮತ್ತು ಕೆಳದವಡೆಗೆ, 8) ಶ್ರವಣೇಂದ್ರಿಯ ನರಗಳು ಕಿವಿಗಳಿಗೆ, 9) ಗ್ಲಾಸೊಫರೆಂಜಿಯಲ್ ನಾಲಿಗೆಗೆ ಮತ್ತು 10) ವೇಗಸ್ ಫುಪ್ಫುಸ, ಹೃದಯ ಮತ್ತು ಜಠರಗಳಿಗೆ.

ಮಿದುಳು ಬಳ್ಳಿಯ ನರಗಳು ಕೂಡಾ ಹತ್ತು ಜೊತೆ ಉಂಟು. ಒಂದೊಂದೂ ಎರಡು ಬೇರುಗಳಿಂದ ಕೂಡಿದೆ. ಈ ನರಗಳ ಸಮೂಹದಲ್ಲಿ ಮೂರು ಗುಂಪುಗಳನ್ನು ಗುರುತಿಸಬಹುದು. ಒಂದು ಗುಂಪಿನ ನರಗಳು ಮೇಲ್ಭಾಗದ ಸ್ನಾಯುಗಳಿಗೂ ಚರ್ಮಕ್ಕೂ ಎರಡನೇ ಗುಂಪಿನ ನರಗಳು ದೇಹದ ಕೆಳಭಾಗಕ್ಕೂ ಮತ್ತು ಮೂರನೇ ಗುಂಪಿನ ನರಗಳು ಸ್ವಯಮಾಧಿಪತ್ಯದ ನರಮಂಡಲಕ್ಕೂ ಹೋಗಿವೆ.

ಸ್ವಯಮಾಧಿಪತ್ಯದ ಮಂಡಲ: ಇದರಲ್ಲಿ ಕೂಡ ಹತ್ತು ಜೊತೆ ನರಗಳು ಮತ್ತು ನರಮುಡಿಗಳುಂಟು. ಈ ನರಗಳು ಮಿದುಳು ಬಳ್ಳಿಯ ನರಗಳ ಕವಲುಗಳೊಂದಿಗೆ ಸೇರಿವೆ. ಮುಂಭಾಗದಲ್ಲಿ ಈ ನರಮಂಡಲ ಕಪಾಲನರಗಳ ಗ್ಯೆಸ್ಸೆರಿಯನ್ ನರಮುಡಿಗಳಿಗೆ ಅಂಟಿಕೊಂಡಿದೆ. ಮುಂಡದ ಒಳಗಿನ ಎಲ್ಲ ಅಂಗಾಂಗಗಳಿಗೂ ಈ ನರಮಂಡಲದ ನರಗಳು ಹೋಗಿವೆ. ದೇಹದ ಅನೈಚ್ಛಿಕ ಅಂಗಾಂಗಗಳಾದ ಹೃದಯ, ಜಠರ, ಘುಪ್ಫುಸಗಳು ಮತ್ತು ಇತರ ಅಂಗಗಳು ಈ ನರಮಂಡಲದ ಹತೋಟಿಯಲ್ಲಿರುತ್ತವೆ.

ಜ್ಞಾನೇಂದ್ರಿಯಗಳು: 1) ಕಣ್ಣು : ಕಣ್ಣುಗಳು ಎರಡಿವೆ. ಸಾಮಾನ್ಯವಾಗಿ ಎಲ್ಲ ಉಭಯಜೀವಿಗಳಲ್ಲಿ ದೃಷ್ಟಿ ಚುರುಕಾಗಿದೆ.

2) ಕಿವಿ: ಉಭಯಜೀವಿಗಳಿಗೆ ಹೊರ ಕಿವಿಯಿಲ್ಲ. ಕಿವಿಯ ತಮಟೆ ಹೊರ ಚರ್ಮಕ್ಕೆ ಹೊಂದಿಕೊಂಡಿದ್ದು ಹೊರಗಡೆ ಕಾಣುತ್ತದೆ. ಇದೇ ಶ್ರವಣೇಂದ್ರಿಯ. ಶಬ್ದದ ಅಲೆಗಳು ಕಿವಿ ತಮ್ಮಟೆಯ ಮೂಲಕ ಒಳ ಕಿವಿಯನ್ನು ತಲುಪಿ, ಅಲ್ಲಿನ ಶ್ರವಣೇಂದ್ರಿಯ ನರಗಳ ಮೂಲಕ ಶಬ್ದ ಜ್ಞಾನವನ್ನು ಮಿದುಳಿಗೆ ಮುಟ್ಟಿಸುವುವು.



1. 2.
ಇಕ್ತಿಯಾಫಿಸ್ ಗ್ಲೂಟಿನೋಸಸ್ (ಇತ್ತಲೆ ಮಂಡಲ)
1. ಡಿಂಬ 2. ವಯಸ್ಕ

3) ನಾಲಿಗೆ: ನಾಲಿಗೆಯ ಮೇಲೆ ರುಚಿ ಕುಡಿಗಳುಂಟು. ಇವುಗಳ ಸಹಾಯದಿಂದ ಆಹಾರದ ರುಚಿಯನ್ನು ಗ್ರಹಿಸುವುವು. ಕೆಲವು ಉಭಯ ಜೀವಿಗಳ ದೇಹದ ಪಕ್ಕಗಳಲ್ಲಿ ಪಾರ್ಶ್ವದ ಜ್ಞಾನೇಂದ್ರಿಯ ಕುಳಿಗಳಿವೆ. ಪರಿಸರದಲ್ಲಿ ಆಗುವ ಭೌತ ಮತ್ತು ರಾಸಾಯನಿಕ ಬದಲಾವಣೆಯನ್ನು ಈ ಕುಳಿಗಳ ನೆರವಿನಿಂದ ಉಭಯ ಜೀವಿಗಳು ಗ್ರಹಿಸಬಲ್ಲವು.

ಮೂತ್ರ ವಿಸರ್ಜನೆ ಮಂಡಲ: ದೇಹದ ಚಯಾಪಚಯ ಕ್ರಿಯೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ಪದಾರ್ಥಗಳು ದೇಹದಲ್ಲಿ ಸಂಗ್ರಹಗೊಳ್ಳುವುವು. ಇವುಗಳಲ್ಲಿ ಮೂತ್ರ ಮುಖ್ಯವಾದದ್ದು. ಎರಡು ಮೂತ್ರ ಪಿಂಡಗಳಿದ್ದು ಇವು ಮೂತ್ರವನ್ನು ದೇಹದಿಂದ ಬೇರ್ಪಡಿಸಿ ಹೊರಗೆ ಕಳುಹಿಸುತ್ತವೆ. ಮುಂಡದ ಹಿಂಬದಿಯ ಒಳಭಾಗದಲ್ಲಿ ಬೆನ್ನುಹುರಿಯ ಬಳಿ ಮೂತ್ರಪಿಂಡಗಳು ಸ್ಥಿತವಾಗಿವೆ. ಮೂತ್ರಪಿಂಡದಲ್ಲಿ ಅನೇಕ ಸಣ್ಣ ನಳಿಕೆಗಳುಂಟು. ಈ ನಳಿಕೆಗಳು ರಕ್ತದಲ್ಲಿರುವ ಬೇಡವಾದ ಉಪೋತ್ಪನ್ನಗಳನ್ನು ಬೇರ್ಪಡಿಸಿ ಮೂತ್ರಪಿಂಡದ ಹೊರಭಾಗದಿಂದ ಹೊರಡುವ ಮೂತ್ರ ನಾಳಕ್ಕೆ ಸಾಗಿಸುವುವು. ಎರಡು ಮೂತ್ರನಾಳಗಳಿಂದ ಬರುವ ಮೂತ್ರ ಮಲಕೂಪಕ್ಕೆ ಸೇರಿ ದೇಹದಿಂದ ಹೊರ ಬೀಳುತ್ತದೆ. ಮೂತ್ರಕೋಶ ಮಲಕೂಪದ ಒಂದು ಕಡೆಗೆ ತೆರೆದಿದೆ. ಮೂತ್ರಕೋಶದಲ್ಲಿ ಮೂತ್ರ ಬಂದು ಶೇಖರವಾಗಿ ಅಲ್ಲಿಂದ ಹೊರದೂಡಲ್ಪಡುತ್ತದೆ. ಅಯೋರ್ಟದಿಂದ ಹೊರಡುವ ಶುದ್ಧ ರಕ್ತನಾಳಗಳು ಮೂತ್ರ ಪಿಂಡಗಳಿಗೆ ರಕ್ತವನ್ನು ಸರಬರಾಜು ಮಾಡುತ್ತವೆ. ಅಶುದ್ಧ ರಕ್ತನಾಳಗಳು ಮೂತ್ರಪಿಂಡಗಳಿಂದ ರಕ್ತವನ್ನು ಶೇಖರಿಸಿ ಹಿಂದಿನ ಮಲಿನ ರಕ್ತನಾಳಕ್ಕೆ ಸುರಿಯುತ್ತವೆ. ಉಭಯಜೀವಿಗಳು ಸ್ತನಿಗಳಿಗಿಂತ ಹೆಚ್ಚು ಪಾಲು ಮೂತ್ರವನ್ನು ಹೊರಗೆ ಹಾಕುತ್ತವೆ. ದೇಹದಲ್ಲಿ ನೀರಿನ ಅಭಾವ ಉಂಟಾದರೆ ಮೂತ್ರದಿಂದ ನೀರಿನ ಭಾಗವನ್ನು ಮೂತ್ರಕೋಶದ ಸುತ್ತಲಿನ ಅಂಗಾಂಶಗಳು ಹೀರಿಕೊಳ್ಳುತ್ತವೆ.

ಪ್ರಜನನ: ಲೈಂಗಿಕ ಪ್ರಜನನವನ್ನು ತೋರುವುವು. ಇವುಗಳಲ್ಲಿ ಗಂಡು, ಹೆಣ್ಣು ಎಂಬ ಲಿಂಗಭೇದವುಂಟು.

ಗಂಡಿನ ಜನನೇಂದ್ರಿಯಗಳು: ಗಂಡಿನಲ್ಲಿ ಮೂತ್ರಪಿಂಡದ ಮುಂಭಾಗದ ಒಳ ಅಂಚಿಗೆ ಅಂಟಿಕೊಂಡಿರುವ ಎರಡು ವೃಷಣಗಳಿವೆ. ಇವುಗಳ ಆಕಾರ ಅಂಡದಂತೆ; ಬಣ್ಣ ಹಳದಿ. ಒಳಗೆ ರೇತಸ್ಸಿನ ಅನೇಕ ನಳಿಕೆಗಳುಂಟು. ಈ ನಳಿಕೆಗಳಲ್ಲಿ ವೀರ್ಯಾಣುಗಳು ಅಭಿವೃದ್ಧಿಗೊಂಡು ವೃಷಣದ ನಾಳಗಳ ಮೂಲಕ ಮೂತ್ರಪಿಂಡಗಳ ನಳಿಕೆಗಳಿಗೆ ಬಂದು, ಅಲ್ಲಿಂದ ಮೂತ್ರ ನಾಳದ ಮೂಲಕ ಮಲಕೂಪವನ್ನು ತಲುಪಿ ದೇಹದಿಂದ ಹೊರಬರುತ್ತವೆ. ವೃಷಣಗಳಿಗೆ ದೇಹದಲ್ಲಿನ ಮೇದೋಭಾಗಗಳು ಅಂಟಿಕೊಂಡಿವೆ.

ಹೆಣ್ಣಿನ ಜನನೇಂದ್ರಿಯ: ಹೆಣ್ಣಿನ ಜನನಗ್ರಂಥಿ ಅಂಡಾಶಯ. ಮೂತ್ರಪಿಂಡಗಳ ಕೆಳಭಾಗದಲ್ಲಿ ಎರಡು ಅಂಡಾಶಯಗಳು ಮತ್ತು ಎರಡು ಅಂಡಾಶಯ ನಾಳಗಳೂ ಇವೆ. ಪ್ರತಿ ಅಂಡಾಶಯ ನಾಳವೂ ಸುರುಳಿಸುತ್ತಿದ ಉದ್ದ ನಾಳವಾಗಿದ್ದು, ಒಂದು ಕಡೆಯಲ್ಲಿ ಅಂಡಾಶಯದ ನಾಳದ ಆಲಿಕೆಯಿಂದ ದೇಹದೊಳಕ್ಕೆ ತೆರೆದಿದೆ. ಅಂಡಾಶಯ ನಾಳ ಪ್ರತ್ಯೇಕವಾಗಿದ್ದು ಮತ್ತೊಂದು ಕಡೆಯಲ್ಲಿ ಮಲಕೂಪದೊಳಕ್ಕೆ ತೆರೆದಿದೆ. ಅಂಡಾಶಯದಲ್ಲಿ ರೂಪುಗೊಳ್ಳುವ ಅಂಡಾಣುಗಳು ದೇಹದೊಳಕ್ಕೆ ಬಂದು ಅಂಡಾಶಯ ನಾಳದ ಆಲಿಕೆಯ ಮೂಲಕ ಅಂಡಾಶಯ ನಾಳದಲ್ಲಿ ಹಾದು, ಕೊನೆಗೆ ಮಲಕೂಪಕ್ಕೆ ಬಂದು, ಅಲ್ಲಿಂದ ಹೊರ ಬೀಳುತ್ತವೆ. ಅಂಡಾಶಯ ನಾಳದ ಒಳಪೊರೆ ಜೆಲಿ ಪದಾರ್ಥವನ್ನು ಸ್ರವಿಸಿ ನಾಳದ ಮೂಲಕ ಹಾದುಹೋಗುವ ಅಂಡಾಣುಗಳ ಸುತ್ತ ಜೆಲಿ ಹೊದಿಕೆಯನ್ನು ಒದಗಿಸುತ್ತದೆ. ಅಂಡಾಶಯಗಳಿಗೆ ಅಂಟಿದಂತೆ ಅನೇಕ ಕೊಬ್ಬಿನ ಭಾಗಗಳುಂಟು. ಋತುಗಳಿಗನುಸಾರವಾಗಿ ಕೊಬ್ಬಿನ ಭಾಗಗಳ ಗಾತ್ರದಲ್ಲಿ ಏರಿಳಿತವಾಗುತ್ತದೆ.

ಉಭಯಜೀವಿಗಳು ಸಾಮಾನ್ಯವಾಗಿ ಮಳೆಗಾಲದಲ್ಲಿ ಮೊಟ್ಟೆಯಿಡುತ್ತವೆ. ಮೊಟ್ಟೆಯಿಡುವ ಕಾಲದಲ್ಲಿ ಗಂಡು ಹೆಣ್ಣಿನೊಡನೆ ಮೈಥುನದಲ್ಲಿ ತೊಡಗುತ್ತದೆ. ಹೆಣ್ಣು ಅಂಡಾಣುಗಳನ್ನು ಹೊರಗಿಡುತ್ತಿರುವಾಗ ಗಂಡು ವೀರ್ಯಾಣುಗಳನ್ನು ಅಂಡಾಣುಗಳ ಮೇಲೆ ಸುರಿಸುತ್ತದೆ. ನೀರಿನಲ್ಲಿ ಬಿದ್ದ ವೀರ್ಯಾಣುಗಳು ಅಂಡಾಣುಗಳನ್ನು ಸುತ್ತುವರಿಯುವುವು. ಒಂದು ಅಂಡಾಣುವಿನ ಸುತ್ತ ಅನೇಕ ವೀರ್ಯಾಣುಗಳಿದ್ದರೂ ಅವುಗಳಲ್ಲಿ ಒಂದು ಮಾತ್ರ ಅಂಡಾಣುವಿನ ಜೆಲಿ ಹೊದಿಕೆಯನ್ನು ಭೇದಿಸಿ ಅಂಡಾಣುವಿನೊಂದಿಗೆ ಸಂಯೋಗವಾಗುತ್ತದೆ. ಇದರಿಂದಾಗಿ ನಿಷೇಚನ ದೇಹದ ಹೊರಗೆ ನಡೆಯುತ್ತದೆ ಎನ್ನಬಹುದು. ನಿಷೇಚಿತ ಮೊಟ್ಟೆ ತನ್ನ ಬೆಳೆವಣಿಗೆಯನ್ನು ನೀರಿನಲ್ಲಿ ಪ್ರಾರಂಭಿಸುತ್ತದೆ. ಉಭಯಜೀವಿಗಳು ಒಮ್ಮೆಗೆ ಸಾವಿರಾರು ಮೊಟ್ಟೆಗಳನ್ನಿಡುತ್ತವೆ. ಕೆಲವು ಜಾತಿಗಳಲ್ಲಿ ಅಂಡಾಣುಗಳು ಮಲಕೂಪದಲ್ಲೇ ನಿಲ್ಲುವುದರಿಂದ, ಇಂಥವುಗಳಲ್ಲಿ ನಿಷೇಚನೆ ದೇಹದ ಒಳಗೆ ನಡೆಯುತ್ತದೆ. ಉಭಯಜೀವಿಗಳ ಆನುಷಂಗಿಕ ಲಿಂಗ ಲಕ್ಷಣಗಳು ಹೀಗಿವೆ:– ಗಂಡು ಕಪ್ಪೆಯಲ್ಲಿ ಮುಂದಿನ ಕಾಲುಗಳ ಒಳಬೆರಳಿನಲ್ಲಿ ಒಂದು ಮೆತ್ತೆ ಕಾಣಿಸಿಕೊಳ್ಳುತ್ತದೆ. ಆದರೆ ಹೆಣ್ಣು ಕಪ್ಪೆಯಲ್ಲಿ ಇದು ಇಲ್ಲ. ಗಂಡು ಕಪ್ಪೆಯ ಬಾಯಿಯ ತಳಭಾಗದಲ್ಲಿ ಒಂದು ಅಥವಾ ಎರಡು ಧ್ವನಿಚೀಲ ಉಂಟು. ಇವುಗಳ ಸಹಾಯದಿಂದ ಧ್ವನಿಗೈದು ಗಂಡುಕಪ್ಪೆಯು ಹೆಣ್ಣಿನ ಗಮನ ಸೆಳೆಯುತ್ತದೆ. ಗಾತ್ರದಲ್ಲಿ

ಹೆಣ್ಣುಕಪ್ಪೆ ಗಂಡಿಗಿಂತ ದೊಡ್ಡದು. ಕೆಲವು ಗಂಡು ನ್ಯೂಟ್‌ಗಳಲ್ಲಿ ದೇಹ ಆಕರ್ಷಕ ಬಣ್ಣಗಳಿಂದ ಕೂಡಿದೆ. ಗಂಡುಕಪ್ಪೆಯ ಕಿವಿತಮಟೆ ಹೆಣ್ಣಿನದಕ್ಕಿಂತ ಅಗಲವಾಗಿದೆ. ಗಂಡುಗಳು ತಮ್ಮ ವಿವಿಧ ಮೈ ಬಣ್ಣಗಳಿಂದ ಹೆಣ್ಣುಗಳನ್ನು ಆಕರ್ಷಿಸುವುದೂ ಉಂಟು. ಇಂಥ ಆನುಷಂಗಿಕ ಲಿಂಗ ಲಕ್ಷಣಗಳು ಪ್ರಣಯಾಚರಣೆಗೆ ಸಹಾಯಕವಾಗಿವೆ.

ಉಭಯಜೀವಿಗಳಲ್ಲಿ ಭ್ರೂಣದ ಬೆಳವಣಿಗೆ: ನಿಷೇಚಿತ ಅಂಡಾಣುವಿಗೆ ಬೆಳವಣಿಗೆಯ ಪ್ರಾರಂಭದಲ್ಲಿ ಯುಗ್ಮಜವೆಂದು ಹೆಸರು. ಬೆಳವಣಿಗೆ ಮುಂದುವರಿದಂತೆ ಇದನ್ನು ಸಾಮಾನ್ಯವಾಗಿ ತತ್ತಿ ಎಂದೂ ನಿರ್ದಿಷ್ಟವಾಗಿ ಭ್ರೂಣವೆಂದೂ ಕರೆಯಲಾಗಿದೆ. ಯುಗ್ಮಜ ತನ್ನ ಬೆಳವಣಿಗೆಗೆ ಬೇಕಾದ ಎಲ್ಲ ಪೋಷಕವಸ್ತುಗಳನ್ನೂ ಪಡೆದಿದೆ. ಮೊಟ್ಟೆಯ ಸುತ್ತ ಇರುವ ಜೆಲಿ ಹೊದಿಕೆಗಳು ಪರಿಸರದ ನೀರನ್ನು ಹೀರಿಕೊಂಡು ಊದಿಕೊಳ್ಳುತ್ತವೆ. ಇವು ವೃದ್ಧಿಯಾಗುತ್ತಿರುವ ಭ್ರೂಣವನ್ನು ರಕ್ಷಿಸುವುದಲ್ಲದೆ ಅದಕ್ಕೆ ಬೇಕಾದ ನೀರಿನ ಅವಶ್ಯಕತೆಯನ್ನೂ ಪೂರೈಸುತ್ತವೆ. ನೀರಿನ ಮೇಲೆ ತೇಲಾಡುತ್ತಿರುವ ಭ್ರೂಣ ಸೂರ್ಯ ಶಾಖದಿಂದ ತನ್ನ ಬೆಳವಣಿಗೆಯನ್ನು ಮುಂದುವರಿಸುತ್ತದೆ. ಭ್ರೂಣ ಬೆಳವಣಿಗೆಯ ಮೊದಲನೆಯ ಹಂತದಲ್ಲಿ ರೇಖಾ ಭಾಗ ವಿಂಗಡಣೆಯ (ಸೆಗ್ಮೆಂಟೇಷನ್) ಮೂಲಕ ಯುಗ್ಮಜ ಹಲವು ಬಾರಿ ವಿಭಾಗಗೊಂಡು ಚಂಡಿನಾಕೃತಿಯ ಬ್ಲಾಸ್ಟುಲ ಎಂಬ ರಚನೆಯಾಗುತ್ತದೆ. ಸಾಮಾನ್ಯವಾಗಿ ಈ ಹಂತದ ರೇಖಾಭಾಗ ವಿಂಗಡಣೆ ಪೂರ್ಣ ಮತ್ತು ಅಸಮ ರೀತಿಯದು. ಬ್ಲಾಸ್ಟುಲ ಹಂತದ ಭ್ರೂಣದಲ್ಲಿ ಸಮಸ್ಥಿತಿ ಮತ್ತು ಸಮರಚನೆಯುಳ್ಳ ಅನೇಕ ಜೀವಕೋಶಗಳುಂಟು. ಬೆಳವಣಿಗೆಯ ಗತಿ ಏರಿದಂತೆ ಬ್ಲಾಸ್ಟುಲ ತನ್ನ ರಚನೆಯಲ್ಲಿ ಅನೇಕ ಬದಲಾವಣೆಗಳನ್ನು ಹೊಂದಿ ಗ್ಯಾಸ್ಟ್ರುಲ ಹಂತವನ್ನು ತಲುಪುವುದು. ಭ್ರೂಣದ ರಚನೆಯಲ್ಲಿ ಮೂಲಭೂತವಾದ ಮೂರು ಕೋಶಪದರಗಳು ರೂಪುಗೊಳ್ಳುವುದು ಈ ಹಂತದಲ್ಲೇ. ಹೊರದರ್ಮ (ಎಕ್ಟೋಡರ್ಮ್), ಮಧ್ಯದರ್ಮ (ಮೀಸೋಡರ್ಮ್) ಮತ್ತು ಒಳದರ್ಮ (ಎಂಡೋಡರ್ಮ್) ಇವೇ ಈ ಮೂರು ಪದರಗಳು.

ಭ್ರೂಣವು ಗ್ಯಾಸ್ಟ್ರುಲ ಸ್ಥಿತಿಯನ್ನು ದಾಟಿ ನ್ಯೂರುಲ ಹಂತಕ್ಕೆ ಬರುವ ವೇಳೆಗೆ ಭ್ರೂಣದ ರಚನೆಯಲ್ಲಿ ದೇಹದ ಆಕ್ಷರೇಖೆಯಾದ (ಬಾಡಿ ಆಕ್ಸಿಸ್) ಕಾರ್ಡಾ ಮೀಸೋಡರ್ಮ್ ರೂಪುಗೊಂಡು ನರಮಂಡಲದ ಅಸ್ತಿಭಾರವನ್ನು ಹಾಕುತ್ತದೆ. ನ್ಯೂರುಲ ಸ್ಥಿತಿಯಲ್ಲಿ ಭ್ರೂಣ ತನ್ನ ಬೆಳವಣಿಗೆಯ ಒಂದು ನಿಶ್ಚಿತ ಘಟ್ಟವನ್ನು ತಲುಪಿ, ಬೆಳವಣಿಗೆ ಮುಂದುವರಿದು, ಲಾರ್ವಾವಸ್ಥೆಯನ್ನು ಮುಟ್ಟುತ್ತದೆ. ಈ ಸ್ಥಿತಿಯಲ್ಲಿ ಭ್ರೂಣದ ತಲೆ ಮತ್ತು ದೇಹದ ಅನೇಕ ಭಾಗಗಳು ಸ್ವಲ್ಪ ಮಟ್ಟಿಗೆ ರೂಪುಗೊಂಡಿರುವುವು. ಆಗ ಲಾರ್ವ ತನ್ನನ್ನು ಆವರಿಸಿರುವ ಜೆಲಿ ಹೊದಿಕೆಗಳನ್ನು ಭೇದಿಸಿ ಹೊರಬರುತ್ತದೆ. ಈ ಸ್ಥಿತಿಯಲ್ಲಿ ಭ್ರೂಣಕ್ಕೆ ಗೊದಮೊಟ್ಟೆ (ಟಾಡ್‌ಪೋಲ್) ಎಂಬ ಹೆಸರುಂಟು. ಇಲ್ಲಿಗೆ ಭ್ರೂಣ ಬೆಳವಣಿಗೆಯ ಮೊದಲನೆಯ ಹಂತ ಮುಗಿಯುತ್ತದೆ. ಗೊದಮೊಟ್ಟೆಯು ರೂಪಪರಿವರ್ತನೆಗೊಂಡು ಪ್ರೌಢಜೀವಿಯಾಗುವ ಕಾಲಾವಧಿಯೇ ಭ್ರೂಣ ಬೆಳವಣಿಗೆಯ ಎರಡನೆಯ ಹಂತ.

ರೂಪಪರಿವರ್ತನೆ: ಗೊದಮೊಟ್ಟೆ ರೂಪಪರಿವರ್ತನಾ ಕ್ರಿಯೆಯ ಮೂಲಕ ಪ್ರೌಢಜೀವಿಯಾಗುತ್ತದೆ. ತತ್ತಿಯಿಂದ ಒಡೆದು ಹೊರಬಂದ ಗೊದಮೊಟ್ಟೆಗೆ ಗುಂಡು ತಲೆಯೂ ಬಾಲವೂ ಉಂಟು. ತಲೆಯ ತಳಭಾಗದಲ್ಲಿರುವ ಅಂಟು ಬಟ್ಟಲುಗಳಿಂದ ನೀರಿನಲ್ಲಿರುವ ಸಸ್ಯಗಳಿಗೆ ಇದು ಅಂಟಿಕೊಂಡಿರುತ್ತದೆ. ತಲೆಯ ಮುಂಭಾಗದಲ್ಲಿ ಬಾಯಿ ರೂಪುಗೊಂಡು ಮರಿ ಹೊರಗಡೆಯಿಂದ ಆಹಾರವನ್ನು ಸೇವಿಸುತ್ತದೆ. ಬಾಲದ ಮೇಲೆ ಮತ್ತು ತಳಭಾಗದಲ್ಲಿ ಈಜುರೆಕ್ಕೆ ಬೆಳೆದು ಮರಿ ಈಜಲು ಪ್ರಾರಂಭಿಸುತ್ತದೆ. ಈ ಹೊತ್ತಿಗೆ ತಲೆ ದೊಡ್ಡದಾಗುತ್ತ ಬಂದು ಹೊಟ್ಟೆಯ ಭಾಗ ಬೆಳೆದು ಅದರೊಳಗೆ ಸುರುಳಿಯಂತಿರುವ ಕರುಳು ಕಾಣಿಸಿಕೊಳ್ಳುತ್ತದೆ. ತಲೆಯ ಪಕ್ಕಗಳಲ್ಲಿ ಬಾಹ್ಯ ಕಿವಿರುಗಳು ಬೆಳೆದು ಅನಂತರ ಅಂತಃಕಿವಿರುಗಳು ವೃದ್ಧಿಗೊಂಡು ಇವುಗಳ ಸಹಾಯದಿಂದ ಉಸಿರಾಟ ನಡೆಯುತ್ತದೆ. ಬೆಳವಣಿಗೆ ಮುಂದುವರಿದಂತೆ ಮರಿಯ ರೂಪದಲ್ಲಿ ತೀಕ್ಷ್ಣವಾದ ಬದಲಾವಣೆಗಳಾಗುತ್ತವೆ. ತಲೆಯಲ್ಲಿ ಬಾಯಿ, ಕಣ್ಣು ಮತ್ತು ಕಿವಿಗಳು ಚೆನ್ನಾಗಿ ರೂಪುಗೊಳ್ಳುತ್ತವೆ. ಸುರುಳಿಯಂತಹ ಕರುಳಿನಿಂದ ಪ್ರೌಢ ಜೀರ್ಣಾಂಗಗಳು ಬೆಳೆಯುತ್ತವೆ. ಗಂಟಲಿನ ಭಾಗದ ಕಿವಿರು ರಂಧ್ರಗಳು ಮುಚ್ಚಿ ಅನ್ನನಾಳದ ಪಕ್ಕಗಳಿಂದ ಫುಪ್ಫುಸಗಳು ಬೆಳೆದು ಶ್ವಾಸೋಚ್ಛ್ವಾಸಗಳನ್ನು ಆರಂಭಿಸುತ್ತವೆ. ಹೃದಯ ಪೂರ್ಣವಾಗಿ ರೂಪುಗೊಂಡು ರಕ್ತಪರಿಚಲನಾಕ್ರಮ ಸುಧಾರಿಸುತ್ತದೆ. ಬಾಲದ ಬುಡದ ಪಕ್ಕಗಳಲ್ಲಿ ಮೊದಲು ಹಿಂದಿನ ಕಾಲುಗಳು ಕಾಣಿಸಿಕೊಳ್ಳುವುವು. ಅಂತೆಯೇ ತಲೆಯ ಹಿಂಭಾಗದಲ್ಲಿ ಮುಂದಿನ ಕಾಲುಗಳು ರೂಪುಗೊಳ್ಳುವುವು. ಇದುವರೆಗೆ ಸಸ್ಯಾಹಾರಿಜೀವನ ನಡೆಸುತ್ತಿದ್ದ ಗೊದಮೊಟ್ಟೆ ಚಿಕ್ಕ ಪ್ರಾಣಿಗಳನ್ನು ಹಿಡಿದು ತಿನ್ನುವುದನ್ನು ಪ್ರಾರಂಭಿಸಿ ಮಾಂಸಾಹಾರಿಯಾಗುತ್ತದೆ. ಕಾಲುಗಳು ಚೆನ್ನಾಗಿ ಬೆಳೆದ ಮೇಲೆ ಭೂಮಿಯ ಮೇಲೆ ಮರಿ ಓಡಾಡತೊಡಗುತ್ತದೆ. ಕಾಲಕ್ರಮೇಣ ಕಪ್ಪೆಗಳಲ್ಲಿ ಬಾಲ ಮೋಟಕಾಗಿ ಮಾಯವಾಗುತ್ತದೆ. ಆದರೆ, ಬೇರೆ ಉಭಯಜೀವಿಗಳಾದ ಸ್ಯಾಲಮ್ಯಾಂಡರುಗಳಲ್ಲಿ ಪ್ರೌಢಾವಸ್ಥೆಯಲ್ಲೂ ಬಾಲ ಉಳಿದುಬಿಡುತ್ತದೆ. ಈ ಹೊತ್ತಿಗೆ ಮರಿ ಪ್ರೌಢಜೀವಿಯಾಗಿ ಮಾರ್ಪಟ್ಟಿರುತ್ತದೆ.

ಉಭಯಜೀವಿಗಳಲ್ಲಿ ಮರಿಗಳ ಪೋಷಣೆ: ಲೆಪ್ಟೊಡ್ಯಾಕ್ಟಿಲ ಮತ್ತು ರ್‍ಯಾಕೊಫೋರಸ್ ಎಂಬ ಉಭಯಜೀವಿಗಳು ಗೂಡುಗಳನ್ನು ನಿರ್ಮಿಸಿ ತಮ್ಮ ಮರಿಗಳನ್ನು ರಕ್ಷಿಸುತ್ತವೆ. ಸ್ಯಾಲಮಾಂಡ್ರಿಲ್ ಜಿಲ್ಯಾಟಿನ್ ಚೀಲವನ್ನು ರಚಿಸಿ ತತ್ತಿಗಳ ರಕ್ಷಣೆ ಮಾಡುತ್ತದೆ. ಡೆಂಡ್ರೊಬೇಟಿಸ್ ಎಂಬುದು ತನ್ನ ತತ್ತಿಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದರ ಮೂಲಕ ಅವುಗಳ ರಕ್ಷಣೆ ಮಾಡುತ್ತದೆ. ಇಕ್ತಿಯಾಫಿಸ್, ಡೆಸ್ಮೊಗ್ನಾತಸ್ ಮತ್ತು ಸೈಫೊನೋಪ್ಸ್ ತತ್ತಿಗಳನ್ನು ಸುತ್ತಿಕೊಂಡು ಇಲ್ಲವೆ ತತ್ತಿಗಳ ಮೇಲೆ ಕುಳಿತುಕೊಂಡು ಅವು ಹಾಳಾಗದಂತೆ ನೋಡಿಕೊಳ್ಳುವುವು. ಅಲೈಟಿಸ್ ಅಥವಾ ಸೂಲಗಿತ್ತಿ ಕಪ್ಪೆಯಲ್ಲಿ ಗಂಡುಕಪ್ಪೆ ತತ್ತಿಗಳ ಮಾಲೆಯನ್ನು ತನ್ನ ಹಿಂದಿನ ಕಾಲುಗಳಿಗೆ ಸುತ್ತಿಕೊಂಡು ಕಾಪಾಡುತ್ತದೆ. ಹೈಲ, ಪೈಪ ಮತ್ತು ನೋಟೋಟ್ರೀಮ ಇವುಗಳಲ್ಲಿ ಹೆಣ್ಣು ತನ್ನ ಬೆನ್ನ ಮೇಲೆ ತತ್ತಿಗಳನ್ನು ಹೊತ್ತುಕೊಂಡು ಸಾಗುತ್ತದೆ. ರ್‍ಯಾಕೊಫೋರಸ್ ತನ್ನ ಹೊಟ್ಟೆಯ ಮೇಲೂ ಮತ್ತು ಹೈಲೊಬೇಟಸ್ ತನ್ನ ಬಾಯಿಯಲ್ಲೂ ತತ್ತಿಗಳನ್ನು ಇರಿಸಿಕೊಂಡು ರಕ್ಷಿಸುತ್ತವೆ.

ವರ್ತನೆ: ಉಭಯಜೀವಿಗಳು ಪರಿಸರಕ್ಕೆ ತೋರುವ ಪ್ರತಿಕ್ರಿಯೆ ಇವುಗಳ ಜ್ಞಾನೇಂದ್ರಿಯಗಳ ಗ್ರಹಣ ಶಕ್ತಿಯನ್ನು ಅವಲಂಬಿಸಿದೆ. ಸ್ಯಾಲಮ್ಯಾಂಡರುಗಳು ಮತ್ತು ಇತ್ತಲೆಮಂಡಲಗಳಿಗಿಂತ ಕಪ್ಪೆ ಹಾಗೂ ನೆಲಗಪ್ಪೆಗಳ ದೃಷ್ಟಿ ಹೆಚ್ಚು ಚುರುಕು. ಕಪ್ಪೆಗಳಿಗೆ ಸ್ಥಳ ಜ್ಞಾನವುಂಟು. ಇವು ವಾಸಸ್ಥಳಕ್ಕೆ ಹಿಂದಿರುಗುವ ವಿಶೇಷ ಲಕ್ಷಣವನ್ನು ಪ್ರದರ್ಶಿಸುವುವು. ಅಂತೆಯೇ ತೊಡಕುಗಳಿಂದ ತಪ್ಪಿಸಿಕೊಳ್ಳುವುದನ್ನು ಕಲಿತು ಈ ಜ್ಞಾನವನ್ನು ಒಂದು ತಿಂಗಳವರೆಗೆ ಕಪ್ಪೆಗಳು ಜ್ಞಾಪಕದಲ್ಲಿರಿಸಿಕೊಳ್ಳಬಲ್ಲವು ಎಂದು ಹೇಳಲಾಗಿದೆ. ತಮ್ಮ ಇಡಿಯ ಜೀವಮಾನವೆಲ್ಲ ಕೇವಲ ಕೆಲವು ಚದರ ಗಜಗಳಲ್ಲಿ ಕಳೆಯುವ ಸ್ಯಾಲಮ್ಯಾಂಡರುಗಳಿಗಿಂತ ಕಪ್ಪೆಗಳು ವಾಸಿಸುವ ಪ್ರಾಂತ್ಯ ಹೆಚ್ಚು ವಿಶಾಲವಾದದು. ಸ್ಯಾಲಮ್ಯಾಂಡರುಗಳು ಮತ್ತು ಕಪ್ಪೆಗಳು ತಮ್ಮ ಸಂತಾನಾಭಿವೃದ್ಧಿಗಾಗಿ ವಲಸೆ ಹೋಗುವ ಪರಿಪಾಟಿಯನ್ನು ತೋರುವುವು. ಇಂಥ ಪ್ರಾಣಿಜೀವಿಗಳಲ್ಲಿ ಬಹುಮಟ್ಟಿಗೆ ಗಂಡು ಪ್ರಾಣಿಗಳು ಮುಂಚಿತವಾಗಿ ಹೊಳೆ, ಝರಿ ಮತ್ತು ಕೊಳಗಳಿಗೆ ವಲಸೆ ಹೋಗುತ್ತವೆ. ಅನೇಕ ಸ್ಯಾಲಮಾಂಡರುಗಳು ಪ್ರಣಯಾಚರಣೆಗೆ ಮುಂಚೆ ಅನೇಕ ತೆರನ ವರ್ತನೆಯನ್ನು ತೋರುತ್ತವೆ. ಒಂದು ಸೆಕೆಂಡಿಗೆ 50 ರಿಂದ 10,000 ಸ್ಪಂದನಗಳ ಧ್ವನಿಗಳನ್ನು ಕಪ್ಪೆಗಳು ಗ್ರಹಿಸಬಲ್ಲವು. ಇವು ಮುಖ್ಯವಾಗಿ ಚರ್ಮದ ಮುಖಾಂತರ ಸ್ಪರ್ಶಜ್ಞಾನವನ್ನು ಪಡೆಯುತ್ತವೆ. ಇವುಗಳ ಚರ್ಮ ರಾಸಾಯನಿಕಗಳಿಗೆ ಮಾತ್ರವಲ್ಲದೆ ಉಷ್ಣತೆ, ಆರ್ದ್ರತೆಗಳಿಗೆ ಶೀಘ್ರಗ್ರಾಹಿಯಾಗಿದೆ.

ಉಭಯ ಜೀವಿಗಳಲ್ಲಿ ಆರ್ಥಿಕ ಪ್ರಾಮುಖ್ಯತೆ: ಕೀಟಗಳನ್ನು ಭಕ್ಷಿಸುವುದರಿಂದ ನೆಲಗಪ್ಪೆಗಳು ರೈತರಿಗೆ ತುಂಬ ಉಪಯುಕ್ತವಾಗಿವೆ. ಕಪ್ಪೆಗಳನ್ನೇ ಆಹಾರವನ್ನಾಗಿ ಬಳಸುವುದೂ ಉಂಟು. ಅನೇಕ ದೇಶಗಳಲ್ಲಿ ಒಣಗಿಸಿದ ಸ್ಯಾಲಮ್ಯಾಂಡರುಗಳನ್ನು ಪ್ರಾಯೋಗಿಕ ಭ್ರೂಣ ವಿಜ್ಞಾನ, ಅಂತಃಸ್ರಾವಗ್ರಂಥಿ ವಿಜ್ಞಾನ ಮತ್ತು ಸಾಮಾನ್ಯ ದೇಹರಚನಾ ವಿಜ್ಞಾನಗಳ ಕೆಲವು ಮೂಲಭೂತ ಸಂಶೋಧನೆಗಳಲ್ಲಿ ಬಳಸಲಾಗಿದೆ. ಕಪ್ಪೆಯ ಚರ್ಮವನ್ನು ಮೋಜಿನ ವಸ್ತುಗಳ ತಯಾರಿಕೆಗೆ ಉಪಯೋಗಿಸುವುದಿದೆ.

ಉಭಯಜೀವಿಗಳಲ್ಲಿ ವರ್ಗೀಕರಣ: ಉಭಯಜೀವಿಗಳನ್ನು ಗತವಂಶಿ ಉಭಯಜೀವಿ ಮತ್ತು ಈಗ ಜೀವಿತವಾಗಿ ಇರುವ ಉಭಯಜೀವಿಗಳು ಎಂದು ವಿಂಗಡಿಸಬಹುದು. ಗತವಂಶಿ ಉಭಯಜೀವಿಗಳಲ್ಲಿ ಸ್ಟಿಗೋಸಿಫಾಲಿಯ ಮುಖ್ಯವಾದವುಗಳು.

1) ಸ್ಟೀಗೋಸಿಫಾಲಿಯ: ಇವು ಡಿವೋನಿಯನ್ ಯುಗದಿಂದ ಮೇಲಿನ ಟ್ರಯಾಸಿಕ್ ಯುಗದವರೆಗೂ ದೊರೆತಿರುವ ಗತವಂಶಿ ಉಭಯ ಜೀವಿಗಳು. ಸುಮಾರು 2.7 ಮೀ. ಉದ್ದ ಬೆಳೆಯುತ್ತಿದ್ದ ಈ ವರ್ಗದ ಪ್ರಾಣಿಗಳನ್ನು ಈಗಿನ ಮೊಸಳೆಗಳಿಗೆ ಹೋಲಿಸಬಹುದು. ತಲೆಬುರುಡೆಯ ಮೇಲ್ಭಾವಣಿ ಗಟ್ಟಿಯಾಗಿತ್ತು. ದೇಹದ ಹೊರಭಾಗ ಹುರುಪೆ ಮತ್ತು ತಟ್ಟೆಗಳಿಂದ ಕೂಡಿತ್ತು. ತಲೆಯ ಬುರುಡೆಯಲ್ಲಿ ಪೈನಿಯಲ್ ಕಂಡಿ ಇತ್ತು. ಜಡಪ್ರಾಣಿಗಳಾದ್ದರಿಂದ ಅವಯವಗಳು ದುರ್ಬಲವಾಗಿದ್ದವು. ಅಗಲವಾದ ಬಾಯಿಯಲ್ಲಿ ಹಲ್ಲುಗಳಿದ್ದವು. ಉದಾಹರಣೆಗಳು: ಎರಿಯಾಪ್ಸ್, ಆರ್ಕಿಗೋಸಾರಸ್ ಮತ್ತು ಬ್ರಾಂಕಿಯೊಸಾರಸ್.

2) ಉಭಯ ಜೀವಿ ಅಥವಾ ಆ್ಯಂಫಿಬಿಯ: ಬದುಕಿರುವ ಉಭಯಜೀವಿಗಳ ಗುಂಪು. ತಲೆ ಮತ್ತು ದೇಹದಲ್ಲಿ ತಟ್ಟೆ ಅಥವಾ ಹುರುಪೆಗಳಿಲ್ಲ. ತಲೆಬುರುಡೆಯಲ್ಲಿ ಪೈನಿಯಲ್ ಕಿಂಡಿ ಇಲ್ಲ.

ಉಪವರ್ಗ 1: ಜಿಮ್ನೋಫಿಯಾನ ಅಥವಾ ಅಪೋಡ: ಕಾಲುಗಳಿಲ್ಲದ ಉಭಯಜೀವಿಗಳಿವು. ಮಣ್ಣಿನಡಿಯಲ್ಲಿ, ಪೊಟರೆಗಳಲ್ಲಿ ಜೀವಿಸುತ್ತವೆ. ಮೊಟಕಾದ ಬಾಲ, ಚರ್ಮದಲ್ಲಿ ಅಡಗಿರುವ ಸುಣ್ಣದ ರೂಪದ ಹುರುಪೆಗಳಿವೆ. ಆದರೆ ಕಟಿಬಂಧಗಳಿಲ್ಲ. ಕೆಲವು ಜಾತಿಗಳ ಮರಿಗಳಲ್ಲಿ ಬಾಹ್ಯಕಿವಿರುಗಳಿವೆ (ಉದಾಹರಣೆ:ಹೈಪೋಜಿಯೋಫಿಸ್). ಜಲವಾಸಿ ಲಾರ್ವಾವಸ್ಥೆ ಇವುಗಳಲ್ಲಿ ಇಲ್ಲದೆ ಇರಬಹುದು. ಇವುಗಳ ವಿಚಿತ್ರ ಲಕ್ಷಣಗಳು ಹೀಗಿವೆ; ಹುದುಗಿಕೊಂಡಂತಿರುವ ನಿಷ್ಕ್ರಿಯವಾಗಿರುವ ಸಣ್ಣ ಕಣ್ಣುಗಳು ಮತ್ತು ನಾಸಿಕದ ಹಿಂದಿನ ಗುಣಿಯಲ್ಲಿರುವ ಕುಡಿಗಳಂಥ ಸ್ಪರ್ಶಾಂಗಗಳು. ಕಿವಿತಮಟೆ ಮತ್ತು ನಡುಗಿವಿಯ ಕುಳಿಗಳಿಲ್ಲ. ಎರಡೇ ಜೊತೆ ಅಯೊರ್ಟಿಕ್ ಕಮಾನುಗಳಿವೆ. ನೋಟೊಕಾರ್ಡ್ ಬಹುಮಟ್ಟಿಗೆ ಜೀವನವಿಡೀ ಉಳಿದಿರುವುದು. ಆ್ಯಂಫಿಸೀಲಸ್ ರೀತಿಯ ಕಶೇರುಗಳಿವೆ. ತತ್ತಿ ದೊಡ್ಡದಾದ ಮೀರೋಬ್ಲಾಸ್ಟಿಕ್ ರೀತಿಯದು. ಬಿಲದಲ್ಲಿ ವಾಸಿಸುವ ಪ್ರಾಚೀನವಾದ ವಿಚಿತ್ರ ಉಭಯಜೀವಿಗಳಿವು. ಉದಾ: ದಕ್ಷಿಣ ಅಮೆರಿಕದ ಸಿಸಿಲಿಯ, ಭಾರತ ಶ್ರೀಲಂಕಾ ಮತ್ತು ಮಲಯಗಳಲ್ಲಿ ವಾಸಿಸುವ ಇಕ್ತಿಯಾಫಿಸ್ (ಇತ್ತಲೆ ಮಂಡಲ), ಪೂರ್ವ ಆಫ್ರಿಕದಲ್ಲಿರುವ ಹೈಪೋಜಿಯೋಫಿಸ್. ಇತ್ತಲೆಮಂಡಲ ಭೂಮಿಯ ಮೇಲೆ ತತ್ತಿಗಳನ್ನಿಟ್ಟು ಮರಿ ಹೊರಬರುವವರೆಗೆ ತತ್ತಿಗಳನ್ನು ಸುತ್ತಿಕೊಂಡಿರುತ್ತದೆ.

ಉಪವರ್ಗ 2: ಯುರೊಡಿಲ ಅಥವಾ ಕಾಡೇಟ: ಪ್ರೌಢ ಯುರೋಡಿಲಗಳಲ್ಲಿ ಬಾಲ ಉಳಿದಿರುತ್ತದೆ. ಕೆಲವು ಬಗೆಗಳಲ್ಲಿ ಮರಿಯ ಕಿವಿರುಗಳು ಮತ್ತು ಕಿವಿರುರಂಧ್ರಗಳು ಕೂಡ ಪ್ರೌಢಾವಸ್ಥೆಯಲ್ಲಿ ಉಳಿದಿರಬಹುದು. ಎದೆಯ ಮೂಳೆ ಮತ್ತು ಕಟಿಬಂಧಗಳು ಪ್ರಾಚೀನ ರೀತಿಯವು. ಅವಯವಗಳು ಕ್ಷೀಣವಾಗಿವೆ. ಕೆಲವುಗಳಲ್ಲಿ ಹಿಂದಿನ ಕಾಲುಗಳಿಲ್ಲ. ಆ್ಯಂಫಿಸೀಲಸ್ ರೀತಿಯ ಅನೇಕ ಕಶೇರುಗಳುಂಟು. ಈ ಉಪವರ್ಗವನ್ನು ಏಳು ಕುಟುಂಬಗಳಾಗಿ ವಿಂಗಡಿಸಲಾಗಿದೆ.

ಕುಟುಂಬ (1) ಕ್ರಿಪ್ಟೋಬ್ರ್ಯಾಂಕಿಡೆ: ಬಹಳ ಹಿಂದುಳಿದ ರೀತಿಯ ಯೂರೋಡಿಲಗಳು. ಪ್ರೌಢ ಜೀವಿಗಳಲ್ಲಿ ಕಿವಿರುಗಳಿಲ್ಲ. ಆದರೆ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕಾಣಸಿಗುವ ಕ್ರಿಪ್ಟೊಬ್ರಾಂಕಸ್‌ನಲ್ಲಿ ಒಂದು ಕಿವಿರು ರಂಧ್ರ ಉಳಿದಿದೆ. ಜಪಾನ್ ಮತ್ತು ಟಿಬೆಟ್‌ನಲ್ಲಿ ಸಿಗುವ ಮೆಗಲೋಬಾಟ್ರಾಕಸ್ ಎಂಬುದು 1.5 ಮೀ. ಗಿಂತ ಹೆಚ್ಚು ಉದ್ದವಿದ್ದು ಅತ್ಯಂತ ದೊಡ್ಡ ಗಾತ್ರದ ಉಭಯಜೀವಿ ಎನಿಸಿಕೊಂಡಿದೆ.

ಕುಟುಂಬ (2) ಆಂಫ್ಥಿಯೂಮಿಡೆ: ಈ ಕುಟುಂಬದ ಪ್ರಾಣಿಗಳಲ್ಲಿ ಅಪೂರ್ಣವಾಗಿ ರೂಪುಗೊಂಡಿರುವ ಎರಡು ಜೊತೆ ಕಾಲುಗಳಿವೆ ಮತ್ತು ಪ್ರೌಢ ಜೀವನದಲ್ಲೂ ಒಂದು ಕಿವಿರುರಂಧ್ರವುಂಟು. ಉದಾ: ಉತ್ತರ ಅಮೆರಿಕದ ಆಂಫ್ಥಿಯೂಮ.

ಕುಟುಂಬ (3) ಆಂಬ್ಲಿಸ್ಟೋಮಿಡೆ: ಉದಾ: ಉತ್ತರ ಅಮೆರಿಕದ ಆಂಬ್ಲಿಸ್ಟೋಮ. ಇದು ಲಾರ್ವಾವಸ್ಥೆಯಲ್ಲಿಯೇ ಕೆಲವೊಮ್ಮೆ ಬಹಳ ಕಾಲ ಜೀವಿಸುತ್ತದೆ. ಈ ಸ್ಥಿತಿಯಲ್ಲಿ ಇದನ್ನು ಆಕ್ಸಲಾಟಲ್ ಎಂದು ಕರೆಯಲಾಗಿದೆ. ಆಕ್ಸಲಾಟಲಿಗೆ ಪ್ರಜನನ ಶಕ್ತಿಯುಂಟು. ಇದು ಕ್ರಮೇಣ ಪ್ರೌಢಜೀವಿಯಾದ ಆಂಬ್ಲಿಸ್ಟೊಮವಾಗಿ ಮಾರ್ಪಡುತ್ತದೆ. ಆಗ ಆಕ್ಸಲಾಟಲ್‌ನ ಕಿವಿರುಗಳು ಮಾಯವಾಗಿ ತಲೆಯ ಆಕೃತಿ ಬದಲಾಗುತ್ತದೆ.

ಕುಟುಂಬ (4) ಸ್ಯಾಲಮ್ಯಾಂಡ್ರಿಡೆ: ತತ್ತಿಯಿಡುವ ಅಥವಾ ಮರಿಹಾಕುವ ಉಭಯಜೀವಿಗಳು. ಇವು ಶೀತಪ್ರದೇಶದಲ್ಲಿ ಜೀವಿಸುತ್ತವೆ. ಉದಾ: ಸ್ಯಾಲಮ್ಯಾಂಡರ್ ಮತ್ತು ನ್ಯೂಟ್‌ಗಳು. ಟ್ರೈಟನ್ ಆಲ್ಪೆಸ್ಟ್ರಿಸ್ ಎಂಬ ನ್ಯೂಟ್ ಲಾರ್ವಾವಸ್ಥೆಯಲ್ಲಿಯೇ ಲೈಂಗಿಕ ಪ್ರಬುದ್ಧತೆಯನ್ನು ತೋರುತ್ತದೆ. ಈ ಗಣಕ್ಕೆ ಶೈವಜನಕಾವಸ್ಥೆ (ಪೀಡೋಜೆನೆಸಿಸ್) ಎಂದು ಹೆಸರು.

ಕುಟುಂಬ (5) ಪ್ಲಿತೋಡಾಂಟಿಡೆ: ಫುಪ್ಫುಸಗಳಿಲ್ಲದ ಜಲಚರ ಸ್ಯಾಲಮ್ಯಾಂಡರ್ ಈ ಕುಟುಂಬಕ್ಕೆ ಸೇರಿದೆ. ಇದು ತತ್ತಿಗಳನ್ನು ಹಾರದ ರೂಪದಲ್ಲಿಡುತ್ತದೆ. ತತ್ತಿಗಳ ಹಾರವನ್ನು ಹೆಣ್ಣು ತನ್ನ ದೇಹಕ್ಕೆ ಸುತ್ತಿಕೊಂಡು ಕಾಪಾಡುವುದು. ಅಮೆರಿಕದಲ್ಲಿ ಈ ಜಾತಿಯ ಉಭಯಜೀವಿಗಳು ಹೇರಳವಾಗಿವೆ. ಉದಾ: ಡೆಸ್ಮೊಗ್ನಾತಸ್.

ಕುಟುಂಬ (6) ಪ್ರೊಟೈಯಿಡೆ: ಪ್ರೌಢಜೀವಿಗಳಲ್ಲಿ ಕಿವಿರುಗಳುಂಟು. ಈ ಗುಂಪಿನ ಅನೇಕ ಪ್ರಭೇದಗಳು ಗುಹಾವಾಸಿಗಳು. ಇವಕ್ಕೆ ಎರಡು ಜೊತೆ ಕಾಲುಗಳುಂಟು. ಗುಹಾವಾಸಿಗಳಾಗಿರುವುದರಿಂದ ಇವುಗಳ ಕಣ್ಣುಗಳು ಕ್ಷೀಣವಾಗಿವೆಯಲ್ಲದೆ ಚರ್ಮ ಬಿಳಿಚಿಕೊಂಡಿದೆ. ನೆಕ್ಟೂರಸ್ ಎಂಬ ಪ್ರಭೇದ ಅಮೆರಿಕದ ನದಿ ಮತ್ತು ಸರೋವರಗಳಲ್ಲಿ ವಾಸಿಸುತ್ತದೆ. ಬಾಲ ಚಪ್ಪಟೆಯಾಗಿದೆ. ಮುಂಗಾಲುಗಳಲ್ಲಿ 3 ಮತ್ತು ಹಿಂಗಾಲುಗಳಲ್ಲಿ 2 ಬೆರಳುಗಳುಂಟು. ದೇಹದ ಉದ್ದ 20–30 ಸೆಂಮೀ. ಕಿವಿರುಗಳು 3 ಜೊತೆ.

ಕುಟುಂಬ (7) ಸೈರಿನಿಡೆ: ಈ ಕುಟುಂಬದ ಪ್ರಾಣಿಗಳಲ್ಲಿ ಪ್ರೌಢಾವಸ್ಥೆಯಲ್ಲೂ ಕಿವಿರುಗಳು ಉಳಿದಿವೆ. ಮುಂದಿನ ಕಾಲುಗಳು ಮಾತ್ರ ಉಂಟು. ಚರ್ಮದ ಹೊರದರ್ಮ (ಎಕ್ಟೊಡರ್ಮ್) ಮತ್ತು ಒಳದರ್ಮ (ಎಂಡೋಡರ್ಮ್) ಗಳಲ್ಲಿ ಪೂರ್ವಜರ ಹುರುಪೆಗಳನ್ನು ಹೋಲುವ ದಂತಿಗಳಿವೆ. ಉದಾ: ಉತ್ತರ ಅಮೆರಿಕದ ಸೈರೆನ್ ಮತ್ತು ಸ್ಯೂಡೋಬ್ರ್ಯಾಂಕಸ್.

ಉಪವರ್ಗ 3: ಅನ್ಯೂರ ಅಥವಾ ಸೇಲಿಯಂಶಿಯ: ಪ್ರೌಢಜೀವಿಗಳಲ್ಲಿ ಬಾಲ, ಕಿವಿರುಗಳು ಮತ್ತು ಕಿವಿರು ರಂಧ್ರಗಳು ಇಲ್ಲ. ಕಾಲುಗಳು 4. ಕಶೇರುಗಳ ಸಂಖ್ಯೆ ಕ್ಲುಪ್ತ (5–9). ಪಕ್ಕೆಲುಬುಗಳಿಲ್ಲ.

ಉಪಪಂಗಡ ಅ. ಫೆನೆರೊಗ್ಲಾಸ: ನಾಲಿಗೆ ಉಂಟು ಯೂಸ್ಟೇಷಿಯನ್ ನಾಳಗಳು ಒಳಗಂಟಲಿನೊಳಕ್ಕೆ ಪ್ರತ್ಯೇಕವಾಗಿ ತೆರೆದಿವೆ.

ಶ್ರೇಣಿ (1) ಆರ್ಸಿಫೆರ: ದೇಹದ ಎರಡೂ ಕಡೆಯ ಬಿಲ್ಲಿನಾಕೃತಿಯ ಎಪಿಕೋರಕಾಯಿಡುಗಳು ಒಂದರ ಮೇಲೊಂದು ಚಾಚಿದಂತಿವೆ. ಉದಾ: ಹಲ್ಲಿಲ್ಲದ ನೆಲಕಪ್ಪೆ ಬಫೊ. ಮರಗಪ್ಪೆ (ಹೈಲ) ಯ ಬೆರಳುಗಳ ತುದಿಯಲ್ಲಿ ಅಂಟಿನ ಗ್ರಂಥಿಗಳ ಬಿಲ್ಲೆಗಳಿವೆ. ಸೂಲಗಿತ್ತಿಕಪ್ಪೆ (ಬಾಂಬಿನ) ಮತ್ತು ಪೀಲೊಬೆಟಸ್ ಎಂಬ ಉಭಯಜೀವಿಗಳು ಈ ಶ್ರೇಣಿಗೆ ಸೇರಿವೆ.

ಶ್ರೇಣಿ (2) ಫರ್ಮಿಸ್ಟರ್ನಿಯ: ದೇಹದ ಎರಡೂ ಕಡೆಯ ಎಪಿಕೋರಕಾಯಿಡುಗಳ ತುದಿಗಳು ಒಂದಕ್ಕೊಂದು ಬಲವಾಗಿ ಕೂಡಿಕೊಂಡಿವೆ. ಉದಾಹರಣೆ: ಹುಲ್ಲುಕಪ್ಪೆ (ರಾನಾ ಟೆಂಪೊರೇರಿಯ), ಆಹಾರಯೋಗ್ಯವಾದ ಕಪ್ಪೆರಾನಾ ಎಸ್ಕುಲೆಂಟ, ಉತ್ತರ ಅಮೆರಿಕದ ಗೂಳಿಕಪ್ಪೆ (ರಾನ ಕ್ಯಾಂಟಿಸ್ಪಿಯಾನ).

ಉಪಪಂಗಡ ಬಿ. ಎಗ್ಲಾಸ: ಈ ಉಪ ಪಂಗಡದ ಉಭಯಜೀವಿಗಳಲ್ಲಿ ನಾಲಿಗೆ ಇಲ್ಲ. ಯೂಸ್ಟೇಷಿಯನ್ ನಾಳಗಳು ಒಂದೇ ನಡುಗುಂಡಿಯ ಮೂಲಕ ಒಳಗಂಟಲಿನೊಳಕ್ಕೆ ತೆರೆದಿವೆ. ಉದಾ: ಸೂರಿನಾಮ್ ನೆಲಗಪ್ಪೆ (ಪೈಪ ಪೈಪ) ಮತ್ತು ಇದರ ಸಂಬಂಧಿ ಆಫ್ರಿಕದ ಜಿನೋಫೆಸ್ ಕಪ್ಪೆ.

ಉಭಯಜೀವಿಗಳ ಭೌಗೋಳಿಕ ಹಂಚಿಕೆ: ಉಭಯಜೀವಿಗಳು ಎಲ್ಲ ಭಾಗಗಳಲ್ಲೂ ಕಾಣದೊರೆಯುವುವು ಎಂದು ಮೊದಲೇ ಹೇಳಿದೆ. ಯೂರೊಡಿಲಗಳು ಉತ್ತರ ಗೋಳಾರ್ಧದಲ್ಲೂ ಇತ್ತಲೆ ಮಂಡಲಗಳು ಉಷ್ಣವಲಯದಲ್ಲೂ, ಕಪ್ಪೆ ಮತ್ತು ನೆಲಗಪ್ಪೆಗಳು ಅತಿ ಉಷ್ಣ ಹಾಗೂ ಅತಿಶೀತ ಪ್ರದೇಶಗಳನ್ನು ಬಿಟ್ಟು ಪ್ರಪಂಚದ ಮಿಕ್ಕ ಎಲ್ಲ ಭಾಗಗಳಲ್ಲೂ ವಾಸವಾಗಿವೆ. ಅನೇಕ ಕುಟುಂಬಗಳ ಹಂಚಿಕೆಯಲ್ಲಿ ವಿವಿಧ ಪರಿಮಿತಿಗಳಿವೆ. ಹೀಗಾಗಿ ಕೆಲವು ಹೈನೋಬಿಡ್ ಜಾತಿಯ ಸ್ಯಾಲಮ್ಯಾಂಡರುಗಳು ಏಷ್ಯ ಸುತ್ತಮುತ್ತಲಿನ ದ್ವೀಪಗಳಲ್ಲಿ, ಆಂಬ್ಲಿಸ್ಟೋಮ, ಆಂಫಿಯೂಮ ಮತ್ತು ಸೈರೆನ್‌ಗಳು ಉತ್ತರ ಅಮೆರಿಕದಲ್ಲಿ ಮಾತ್ರ ಸಿಗುತ್ತವೆ. ಕ್ರಿಪ್ಟೊಬ್ರಾಂಕಸ್ ಎಂಬುದು ಜಪಾನ್, ಚೀನ ಮತ್ತು ಉತ್ತರ ಅಮೆರಿಕದ ವಾಯುವ್ಯ ಪ್ರಾಂತ್ಯದಲ್ಲಿ, ಪ್ರೋಟಿಯಸ್ ಎಂಬುದು ಉತ್ತರ ಯೂರೋಪ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಮಾತ್ರ ಸಿಗುತ್ತವೆ. ಪಕ್ಷಿಗಳು ಮತ್ತು ಸ್ತನಿಗಳಂತೆ ಉಭಯವಾಸಿಗಳು ಬಹಳ ದೂರದ ಪ್ರದೇಶಗಳಿಗೆ ವಲಸೆ ಹೋಗುವುದಿಲ್ಲ. ಆದರೆ ಬಹುಪಾಲು ಉಭಯಜೀವಿಗಳಲ್ಲಿ ಜೀವನಚರಿತ್ರೆ ಪೂರ್ಣವಾಗುವುದಕ್ಕೆ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ತತ್ತಿಯಿಡುವ ಕಾಲ ಸಮೀಪಿಸಿದಾಗ ನೀರನ್ನು ಹುಡುಕಿಕೊಂಡು ಈ ಪ್ರಾಣಿಗಳು ವಲಸೆ ಹೋಗುವುದುಂಟು. ಬಫೊ ಜಾತಿಯ ಕಪ್ಪೆಗಳು ಸಾಮಾನ್ಯವಾಗಿ ಎಲ್ಲ ರೀತಿಯ ವಾತಾವರಣಗಳಲ್ಲೂ ಜೀವಿಸುತ್ತವೆ. ಈ ಜಾತಿಯಲ್ಲಿ ನೆಲಗಪ್ಪೆ, ಮರಗಪ್ಪೆ ಮತ್ತು ಮರುಭೂಮಿ ಕಪ್ಪೆಗಳಿವೆ. ಕಪ್ಪೆ ಮತ್ತು ಮರಗಪ್ಪೆಗಳು ಉಷ್ಣವಲಯದಲ್ಲಿ ಹೇರಳವಾಗಿವೆ. ಪರ್ವತಪ್ರದೇಶಗಳಲ್ಲಿ ವಿವಿಧ ರೀತಿಯ ಹವಾಮಾನದ ಪ್ರದೇಶಗಳಿರುವುದರಿಂದ ಇಂಥ ಸ್ಥಳಗಳಲ್ಲಿ ಅನೇಕ ರೀತಿ ಉಭಯಜೀವಿಗಳನ್ನು ಕಾಣಬಹುದು. ಆದರೆ, ಒಂದೇ ರೀತಿಯ ಹವಾಪರಿಸ್ಥಿತಿಯಿರುವ ಬಯಲು ಪ್ರದೇಶದಲ್ಲಿ ಕಡಿಮೆ ಸಂಖ್ಯೆಯ ಜಾತಿಗಳಿವೆ. ವಿವಿಧ ಉಭಯಜೀವಿಗಳ ವಿಕಾಸಕ್ಕೆ ವಿಭಿನ್ನ ಹವಾಮಾನಗಳು ಒಂದು ಮುಖ್ಯ ಕಾರಣವಾಗಿರಬಹುದು. (ಆರ್.ಡಿ.ಕೆ.)

**ಉರಗಪಕ್ಷಿ:** ಸರೀಸೃಪ ವರ್ಗದ ಡೈಆಪ್ಸಿಡ ಉಪವರ್ಗದ ಟೀರೊಸಾರಿಯ ಗಣದ ಗತವಂಶೀ ಪ್ರಾಣಿ (ಟಿರೋಡಾಕ್ಟೈಲ್). ಹಾರುವ ಉರಗ, ಪಕ್ಷಾಂಗುಲಿ– ಪರ್ಯಾಯ ನಾಮಗಳು. ಕೆಳ ಜುರಾಸಿಕ್ ಕಲ್ಪದಲ್ಲಿ ಆರಂಭವಾದ ಈ ಪ್ರಾಣಿಗಳು ಮೀಸೋಜೋಯಿಕ್ ಯುಗದ ಕೊನೆಯವರೆಗೂ ಬಾಳಿದ್ದುದಕ್ಕೆ ಆಧಾರಗಳಿವೆ (ಸುಮಾರು 170-65 ದಶಲಕ್ಷವರ್ಷಗಳ ಪ್ರಾಚೀನಕಾಲ). ವಾಸ ಬೆಟ್ಟಗುಡ್ಡಗಳಲ್ಲಿ. ಇವನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು– ಒಂದು ಗುಂಪಿನ ಉರಗಪಕ್ಷಿಗಳಿಗೆ ಉದ್ದನಾದ ಬಾಲ ಮತ್ತು ತುದಿಯಲ್ಲಿ ಸಮಾನಾಂತರವಾದ ರೆಕ್ಕೆ ಇದೆ. ಮತ್ತೊಂದು ಗುಂಪಿನವಕ್ಕೆ ಬಾಲವೂ ಇಲ್ಲ, ರೆಕ್ಕೆಯೂ ಇಲ್ಲ.

ರ್‍ಯಾಂಫೊರಿಂಕಸ್ ಟೀರೊಸಾರಿಯ ಗಣದ ಒಂದು ಜಾತಿ. ಇದರ ಪಳೆಯುಳಿಕೆ ಇಂಗ್ಲೆಂಡಿನಲ್ಲಿ ಸಿಕ್ಕಿದೆ. ಚಿಕ್ಕದೇಹ, ದೊಡ್ಡ ಬಾಯಿ, ಅದರೊಳಗೆ ಉದ್ದ, ದಪ್ಪ ಮತ್ತು ಚೂಪು ಹಲ್ಲುಗಳು. ಕೆಳದವಡೆ ಕೂಡುವ ಸ್ಥಳದಿಂದ ಸ್ವಲ್ಪ ಮೇಲ್ಭಾಗದಲ್ಲಿ ಒಂದೊಂದು ದೊಡ್ಡ ಕಣ್ಣು ಇದೆ. ಅವುಗಳ ಸುತ್ತಲೂ ಪಕ್ಷಿಗಳಿಗಿರುವ ಹಾಗೆ ಸರದಂತೆ ಜೋಡಿಸಿದ

ಎಲುಬಿನ ತಟ್ಟೆಗಳಿವೆ. ಕಣ್ಣುಗಳಿಗೆ ಸ್ವಲ್ಪ ದೂರದಲ್ಲಿ ಎರಡು ನಾಸಿಕ ರಂಧ್ರಗಳಿವೆ. ಕತ್ತು ತಲೆಯನ್ನು ಇಕ್ಕೆಲಕ್ಕೂ ಬಾಗಿಸಲು ಅನುಕೂಲವಾಗಿತ್ತೆನ್ನಬಹುದು. ಉರಗಪಕ್ಷಿಯ ಬಾಲ



ಉರಗ ಪಕ್ಷಿ

ಮಾತ್ರ ೩೮ ಸೆಂಮೀ ಉದ್ದವಿದ್ದು ಅನೇಕ ಅಸ್ಥಿ, ಸ್ನಾಯುಗಳ ಜೋಡಣೆಯಿಂದ ಗಡುಸಾಗಿತ್ತು. ಚರ್ಮದ ಮಡಿಕೆಗಳಿಂದಾದ ಚಾಚಿದ ಪದರಗಳೇ ರೆಕ್ಕೆಗಳಾಗಿ ಮಾರ್ಪಟ್ಟಿದ್ದುವು. ಇವು ಅತಿ ಉದ್ದನಾದ ಮುಂಗಾಲುಗಳಿಗೆ ಗಟ್ಟಿಯಾಗಿ ಅಂಟಿಕೊಂಡಿವೆ. ಹರಡಿಕೊಂಡಾಗ ರೆಕ್ಕೆಗಳು ೭೫ ಸೆಂಮೀ ಗಳಷ್ಟು ಅಗಲವಾಗುತ್ತಿದ್ದುವು. ರೆಕ್ಕೆಯ ಮುಂಭಾಗದ ಅಂಚಿನಲ್ಲಿ ಒಂದು ಬೆರಳು ಇದೆ. ರೆಕ್ಕೆಯ ಪದರ ಸುಮಾರು ೫ ಸೆಂಮೀ ಅದಕ್ಕೆ ಮುಂಗಾಲಿನಿಂದ ಹಿಂಗಾಲಿನವರೆಗೂ ಶರೀರದ ಜೊತೆ ಸಂಬಂಧ ಇದೆ. ಬಾಲದ ತುದಿಯಲ್ಲಿ ಸಮಾನಾಂತರವಾದ ಒಂದು ಪದರವಿದೆ. ಮೊದಲ ಮೂರು ಕೈ ಬೆರಳುಗಳು ಬಿಡಿಬಿಡಿಯಾಗಿವೆಯಲ್ಲದೆ ಅವಕ್ಕೆ ಉದ್ದನಾದ ಉಗುರುಗಳಿವೆ. ಇವು ರೆಕ್ಕೆಯ ಮುಂಭಾಗದ ಹರಪಾರ್ಶ್ವದಲ್ಲಿದ್ದು ಆಹಾರ ಹಿಡಿಯಲು ಅಥವಾ ಹಾರಾಟದಿಂದ ಕೆಳಗೆ ಇಳಿಯಲು ಸಹಾಯಕ ಆಗಿದ್ದಿರಬೇಕು. ಮಂಡಿಯ ಚಿಪ್ಪು ದೇಹದಿಂದ ಹೊರಕ್ಕೆ ಚಾಚಿದೆ. ಉದ್ದನಾದ ಮೊಣಕಾಲಿನಲ್ಲಿ 5 ಕಾಲ್ಬೆರಳುಗಳಿವೆ. ಅವುಗಳಲ್ಲಿ ಒಂದು ಮಾತ್ರ ಯಾವಾಗಲೂ ಒಳಪಾರ್ಶ್ವಕ್ಕೂ, ಕೆಳಕ್ಕೂ ಬಾಗಿರುತ್ತದೆ. ಉಳಿದ 4 ಬೆರಳುಗಳೂ ಪದರದಿಂದ ಬಂಧಿಸಲ್ಪಟ್ಟಿವೆ. ರ್ಯಾಂಫೊರಿಂಕಸಿನ ದೇಹದ ಮೇಲೆ ಮೃದುವಾದ ಫಲಕರಹಿತ ಚರ್ಮದ ಹೊದಿಕೆ ಇದೆ. ಆದರೆ ತಲೆಯ ನೆತ್ತಿಯ ಮೇಲೆ ಗೊಂಚಲು ಕೂದಲಿನಂತಹ ಗಂಟುಗಳಿವೆ.

ಜುರಾಸಿಕ್ ಕಲ್ಪದ ಗುಬ್ಬಚ್ಚಿಗಿಂತಲೂ ದೊಡ್ಡವಲ್ಲದ ಪಕ್ಷಾಂಗುಲಿಗಳು ಬಾಲವಿಲ್ಲದ ಗುಂಪಿಗೆ ಸೇರಿವೆ. ಕ್ರಿಟೇಷಿಯಸ್ ಕಲ್ಪದಲ್ಲಿ ಬಾಲವುಳ್ಳ ಪಕ್ಷಾಂಗುಲಿ ವಂಶ ನಾಶವಾದರೂ ಅದರ ಸಂತತಿ ಮುಂದುವರಿದು ಅತ್ಯಧಿಕ ಗಾತ್ರವನ್ನು ತಾಳಿತು. ಇದೆ ಕಾನ್ಸಾಸ್‌ನಲ್ಲಿ ಸಿಕ್ಕಿದ ಟೆರಾನೊಡಾನ್ ಟೀರೋಸಾರಿನ ಒಂದು ಜಾತಿ. ಈ ಪ್ರಾಣಿಗೆ ೫.೪೫ ಮೀ ಉದ್ದದ ರೆಕ್ಕೆಯಿತ್ತು. ಅದರ ತಲೆಯ ಉದ್ದ ೧೦ ಸೆಂಮೀ ಬಹುಶಃ ಪಕ್ಷಾಂಗುಲಿಗಳ ಪೈಕಿ ಇದೇ ಅತ್ಯಂತ ದೊಡ್ಡ ಪ್ರಾಣಿಯಾಗಿದ್ದಿರಬೇಕು. ದೇಹ ದೊಡ್ಡದಿದ್ದರೂ ಶರೀರ ಮಾತ್ರ ಹಗುರವಾಗಿತ್ತು. ರೆಕ್ಕೆಯ ಎಲುಬುಗಳು ಬಲುತೆಳುವಾದ ಪದರದಿಂದ ಕೂಡಿದ್ದುವು. ಅಲ್ಲದೆ ಅವಕ್ಕೆ ೨.೫ ಸೆಂಮೀ ವ್ಯಾಸದ ಗಾಳಿ ಅವಕಾಶವೂ ಇತ್ತು. ಕಾನ್‌ಸಾಸ್‌ನಲ್ಲಿ ಸಿಕ್ಕ ಪಳೆಯುಳಿಕೆಗಳ ಆಧಾರದ ಮೇರೆಗೆ ಅವು ಭೂಮಿಯಿಂದ ಸುಮಾರು ನೂರಾರು ಮೈಲಿದೂರ ಹಾರಲು ಸಾಧ್ಯ ಎಂದು ಊಹಿಸಬಹುದು. ಈ ಪ್ರಾಣಿಯ ಮಿದುಳು ಪಕ್ಷಿಯ ಮಿದುಳಿನಷ್ಟಿತ್ತು. ಘ್ರಾಣೇಂದ್ರಿಯವಿರಲಿಲ್ಲವಾದ್ದರಿಂದ ದೃಷ್ಟಿಯ ಮೂಲಕವೇ ಅದು ಆಹಾರವನ್ನು ಗುರುತಿಸುತ್ತಿತ್ತೆನ್ನಬಹುದು. (ಕೆ.ಎಂ.ವಿ)

**ಉರುಳು ಹಕ್ಕಿ:** ಕೊರಾಸಿಯಿಫಾರ್ಮಿಸ್ ಗಣದ ಕೊರಾಸಿಯಿಡೆ ಕುಟುಂಬಕ್ಕೆ ಸೇರಿದ ಹಕ್ಕಿ. ರೋಲರ್ ಹಕ್ಕಿ ಎಂದೇ ಪ್ರಚಲಿತ. ಕೊರಾಸಿಯಾಸ್ ಮತ್ತು ಯೂರಿಯೋಸ್ಟೋಮಸ್ ಜಾತಿಗೆ ಸೇರಿದವುಗಳು ನೈಜ ಉರುಳು ಹಕ್ಕಿಗಳು. ಇತರ ಜಾತಿಗಳಿಗೆ ಸೇರಿದವುಗಳನ್ನು ನೆಲದ ಉರುಳು ಹಕ್ಕಿಗಳು (ಮಡಗಾಸ್ಕರ್‌ಗೆ ಸೀಮಿತ) ಮತ್ತು ಕೋಗಿಲೆ ಉರುಳು ಹಕ್ಕಿಗಳೆನ್ನುತ್ತಾರೆ. ಆಕಾಶದಲ್ಲಿ ಮಾಡುವ ಕಸರತ್ತುಗಳೇ ಈ ಹಕ್ಕಿಗಳಿಗೆ ಉರುಳು ಹಕ್ಕಿಗಳೆನ್ನಲು ಕಾರಣ. ಚೆನ್ನಾಗಿ ಹಾರಬಲ್ಲ ಇವು ಗಾಳಿಯಲ್ಲಿ ಉರುಳಬಲ್ಲವು ಮತ್ತು ತಲೆ ಕೆಳಗಾಗಿ ಲಾಗ ಹಾಕಬಲ್ಲವು.

ನೈಜ ಉರುಳು ಹಕ್ಕಿಗಳ ಉದ್ದ 25 ರಿಂದ 45 ಸೆಮೀ ಗರಿಗಳ ಬಣ್ಣ ನೀಲಿ, ಹಸಿರು, ನೇರಳೆ ಅಥವಾ ಕೆಂಪು ಮಿಶ್ರಿತ ಕಂದು. ಬಾಗಿದ ಕೊಕ್ಕು ಅಗಲವಾಗಿದ್ದು ತುದಿಯಲ್ಲಿ ಕೊಕ್ಕೆಯಾಕಾರದಲ್ಲಿದೆ. ಗಂಡು, ಹೆಣ್ಣುಗಳು ನೋಡಲು ಒಂದೇ ತರಹ. ಕೀಟಗಳು, ಕಾಳುಗಳು ಮತ್ತು ಹಣ್ಣುಗಳು ಇವುಗಳ ಆಹಾರ. ಕೂಗು ಕರ್ಕಶ. ಮರದ ಪೊಟರೆ ಅಥವಾ ಬಂಡೆಗಳ ಸಂದಿ ಇವುಗಳ ಗೂಡು. ಇಲ್ಲಿ 3 ರಿಂದ 6 ಮೊಟ್ಟೆಗಳನ್ನಿಡುತ್ತವೆ. ಮರಿಗಳ ದೇಹ ಪುಕ್ಕರಹಿತ. ತಂದೆ, ತಾಯಿ ಹಕ್ಕಿಗಳೇ ಇವುಗಳನ್ನು ಪೋಷಿಸುತ್ತವೆ. ಆಫ್ರಿಕ, ಯುರೇಷಿಯ, ಫಿಲಿಪ್ಪೈನ್ಸ್, ಇಂಡೋ–ಮಲೇಷಿಯನ್ ಪ್ರದೇಶ ಮತ್ತು ಆಸ್ಟ್ರೇಲಿಯಾ ಇವುಗಳ ವಾಸಸ್ಥಾನ.

ಕೊರಾಸಿಯಾಸ್ ಗಾರ್‍ರುಲಸ್ ಸಾಮಾನ್ಯ ಯುರೋಪಿನ ಉರುಳು ಹಕ್ಕಿಯ ವೈಜ್ಞಾನಿಕ ಹೆಸರು. ಮೈತುಂಬಾ ಹಸಿರು ಮತ್ತು ನೀಲಿ ಬಣ್ಣಗಳ ಮಿಶ್ರಣದ ಗರಿಗಳಿವೆ. ರೆಕ್ಕೆಗಳ ಗರಿಗಳು ಕಪ್ಪು. ಬೆನ್ನಿನ ಗರಿಗಳು ಕೆಂಪು ಮಿಶ್ರಿತ ಕಂದು. ಸು. 30 ಸೆಂಮೀ ಉದ್ದದ ದೇಹ. ಬೇಸಿಗೆಯಲ್ಲಿ ಯುರೋಪ್ ಮತ್ತು ಪಶ್ಚಿಮ ಏಷಿಯಾಗಳ ಸಮಶೀತೋಷ್ಣ ವಲಯದಲ್ಲಿ ವಾಸ. ಚಳಿಗಾಲದಲ್ಲಿ ಆಫ್ರಿಕಾಕ್ಕೆ ವಲಸೆ ಹೋಗುತ್ತವೆ.

ಭಾರತದ ಉರುಳು ಹಕ್ಕಿಯ ವೈಜ್ಞಾನಿಕ ನಾಮ ಕೊರಾಸಿಯಾಸ್ ಬೆಂಗಾಲೆನ್ಸಿಸ್. ಆಗ್ನೇಯ ಏಷಿಯಾದ ಎಲ್ಲ ಪ್ರದೇಶಗಳಲ್ಲ ಕಾಣಸಿಗುತ್ತದೆ. ದೇಹದ ಬಣ್ಣ ಕಂದು. ಆದರೆ ಟೊಪ್ಪಿ ಮತ್ತು ರೆಕ್ಕೆಗರಿಗಳು ಹಸಿರು ಮಿಶ್ರಿತ ನೀಲಿ. ಕುತ್ತಿಗೆ ನೀಲಿ ಮಿಶ್ರಿತ ಬಿಳಿ.

ಯೂರೋಸ್ಟೋಮಸ್ ಓರಿಯೆಂಟಾಲಿಸ್ ಡಾಲರ್ ಉರುಳು ಹಕ್ಕಿಯೆಂದೇ ಪ್ರಚಲಿತ. ಸೈಬೀರಿಯಾದಿಂದ ಆಸ್ಟ್ರೇಲಿಯಾದವರೆಗೆ ಹಬ್ಬಿದೆ. (ಎ.ಎಸ್.ಎಚ್.ಎ.)

**ಉಷ್ಟ್ರ ಪಕ್ಷಿ:** ಪ್ರಪಂಚದ ಅತಿ ದೊಡ್ಡ ಪಕ್ಷಿ (ಆಸ್ಟ್ರಿಚ್). ಗಂಡು ಸುಮಾರು ೨.೪ ಮೀ. ಎತ್ತರವೂ ೧೩೫ ಕಿಗ್ರಾಂ ತೂಕವೂ ಇರುತ್ತದೆ. ಹೆಣ್ಣು ಸ್ವಲ್ಪ ಕಿರಿಯದು. ಹಾರಲಾಗದ ಪಕ್ಷಿ. ಆದರೆ ಬಲು ವೇಗವಾಗಿ ಓಡಬಲ್ಲುದು. ವಾಸಸ್ಥಳ ಸಾಮಾನ್ಯವಾಗಿ ಅರೇಬಿಯ ಮತ್ತು ಆಫ್ರಿಕ ದೇಶಗಳ ಮರಳುಗಾಡುಗಳು. ನಿಯಾರ್ನಿತಿಸ್ ಉಪವರ್ಗದ ಈ ಪ್ರಾಣಿಯ ವೈಜ್ಞಾನಿಕ ನಾಮ ಸ್ಟ್ರುಥಿಯೊ ಕ್ಯಾಮೆಲಸ್. ಉಷ್ಟ್ರಪಕ್ಷಿಯ ರೆಕ್ಕೆಗಳಲ್ಲಿ ಹಲವು ಟೊಳ್ಳುಕಾಂಡದ ದಪ್ಪಗರಿಗಳಿವೆ. ತಲೆ ಸಣ್ಣದು. ಕತ್ತು ಉದ್ದ. ಎರಡರ ಮೇಲೂ ಗರಿಗಳ ಹೊದಿಕೆಯಿಲ್ಲ. ಅಗಲವಾದ ಚಪ್ಪಟೆ ಕೊಕ್ಕು. ಕಾಲುಗಳು ಉದ್ದ ಹಾಗೂ ಬಲವಾಗಿವೆ. ಇವಕ್ಕೂ ಗರಿಗಳ ಹೊದಿಕೆಯಿಲ್ಲ. ಎರಡು ಕಾಲುಬೆರಳುಗಳು ಮಾತ್ರ ಇವೆ. ಕೆಳಭಾಗದಲ್ಲಿ ಮೆತ್ತೆ ಇದೆ. ಒಂದು ಕಾಲುಬೆರಳು ಮತ್ತೊಂದಕ್ಕಿಂತ ಉದ್ದವಾಗಿದೆ. ಇವನ್ನು ಸರ್ವಭಕ್ಷಕಗಳೆಂದು ಕರೆದರೂ ತಿನ್ನುವುದು ಸಾಮಾನ್ಯವಾಗಿ ಗಿಡಗಂಟಿಗಳನ್ನೇ. ಬಹುಪತ್ನಿತ್ವ ಹೆಚ್ಚು.



ಅನೇಕ ಹೆಣ್ಣುಗಳು ಒಂದು ಗಂಡು ಇರುವ ಗುಂಪುಗಳಲ್ಲಿ ವಾಸಿಸುವುದು ಪದ್ಧತಿ. ಸಾಮಾನ್ಯವಾಗಿ ಒಂದು ಹೆಣ್ಣು ಹಕ್ಕಿ ಒಂದು ಸಲಕ್ಕೆ ಒಂದು ಮೊಟ್ಟೆ ಇಡುತ್ತದೆ. ಇದನ್ನು ಗಂಡು ಮೊದಲೇ ತೋಡಿದ ಬಿಲಗಳಲ್ಲಿ ಅಡಗಿಸುತ್ತದೆ. ಮೊಟ್ಟೆಗಳಿಗೆ ಕಾವುಕೊಟ್ಟು ಕಾಪಾಡುವ ಕೆಲಸವನ್ನು ಎರಡೂ ಹಕ್ಕಿಗಳು ನಿರ್ವಹಿಸುತ್ತವೆ. ಮರಿ ಹುಟ್ಟಿದಾಗಲೇ ಅದಕ್ಕೆ ಗರಿಗಳ ಹೊದಿಕೆ ಇರುತ್ತದೆ. ಅದು ಸ್ವತಂತ್ರವಾಗಿ ತಿರುಗಾಡಿ ತಾಯಿತಂದೆಗಳ ಸಹಾಯವಿಲ್ಲದೆ ಆಹಾರವನ್ನು ಹುಡುಕಿಕೊಳ್ಳಬಲ್ಲುದು. ಗಂಡು ಹಕ್ಕಿಗಳಿಗೆ ಮಾಂಸಯುತವಾದ ಶಿಶ್ನವಿದೆ. ಹಾಗೆ ಹೆಣ್ಣುಗಳಲ್ಲಿ ಹೆಂಬುಲ (ಕ್ಲೈಟೋರಿಸ್) ಉಂಟು. ಇವು ವಿಕಾಸದಲ್ಲಿ ಮೀಸೊಜೋಯಿಕ್ ಯುಗದ ಅಂತ್ಯದಲ್ಲಿ ಕಾಣಿಸಿಕೊಂಡವು.

ದಕ್ಷಿಣ ಆಫ್ರಿಕ ಮತ್ತು ಕ್ಯಾಲಿಫೋರ್ನಿಯಗಳಲ್ಲೂ ಉಷ್ಟ್ರಪಕ್ಷಿಗಳನ್ನು ಕಾಣಬಹುದು. (ಎಚ್.ಬಿ.ಡಿ.)

**ಉಷ್ಣನಿಯಂತ್ರಣ:** ಜೀವಿಗಳ ಶಾರೀರಿಕ ಉಷ್ಣಾಂಶವನ್ನು ವಾತಾವರಣದ ಉಷ್ಣಾಂಶವನ್ನವಲಂಬಿಸಿ ನಿಯಂತ್ರಿಸುವುದು. ಕ್ರಿಯಾಶೀಲ ಜೀವಿಗಳ ಅಸ್ತಿತ್ವ, ವಾತಾವರಣದಲ್ಲಿ ಉಷ್ಣತೆ ಅತಿ ಹೆಚ್ಚು ಎಂದರೆ $50^0$ ಸೆ. (ಥರ್ಮೋರೆಗ್ಯುಲೇಶನ್) ಮತ್ತು ಅತಿ ಕಡಿಮೆ $0^0$ಸೆ. ಸೀಮಿತವಾಗಿದೆ. ಹೆಪ್ಪುಕಟ್ಟಿದ ಮಂಜಿನ ಮೇಲೂ ಬಿಸಿನೀರಿನ ಬುಗ್ಗೆಗಳ ಮೇಲೂ ಅಪರೂಪ ಜೀವಿಗಳನ್ನು ಕಾಣಬಹುದಾದರೂ ಖಗೋಲದ ಉಷ್ಣಾಂಶಕ್ಕೆ ಹೋಲಿಸಿದರೆ ಉಷ್ಣಾಂಶದ ಈ ಮಿತಿ ಕಡಿಮೆಯೆ.

ಬೇರೆ ಬೇರೆ ಭೂಭಾಗಗಳಲ್ಲಿ ಉಷ್ಣಾಂಶದಲ್ಲಿ ಹೆಚ್ಚು ಕಡಿಮೆಯಾದರೂ ಭೂಮಿಯ ಎಲ್ಲಾ ಕಡೆಗಳಲ್ಲಿ ಈ ಮಿತಿಗಿಂತ ಹೆಚ್ಚು ಕಡಿಮೆಯಾಗುವುದಿಲ್ಲ.

ಪ್ರಾಣಿಗಳನ್ನು ಅವುಗಳ ಉಷ್ಣನಿಯಂತ್ರಣ ವಿಧವನ್ನು ಅವಲಂಬಿಸಿ, ಶೀತರಕ್ತ ಪ್ರಾಣಿಗಳು ಮತ್ತು ಬಿಸಿರಕ್ತ ಅಥವಾ ಉಷ್ಣರಕ್ತ ಪ್ರಾಣಿಗಳು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. ಪಕ್ಷಿಗಳು ಮತ್ತು ಸ್ತನಿಗಳನ್ನು ಬಿಟ್ಟರೆ ಉಳಿದೆಲ್ಲಾ ಪ್ರಾಣಿಗಳು ಶೀತರಕ್ತ ಪ್ರಾಣಿಗಳು. ವಾಸ್ತವಿಕವಾಗಿ ಶೀತರಕ್ತ ಮತ್ತು ಬಿಸಿರಕ್ತ ಎಂಬ ಈ ಎರಡು ಪದಗಳೂ ಸ್ವಲ್ಪ ಗೊಂದಲಕ್ಕೆಡೆಮಾಡುವುದರಿಂದ ಅವುಗಳನ್ನು ಸ್ವಲ್ಪ ವಿವೇಚಿಸಬೇಕಾಗುತ್ತದೆ. ಶೀತರಕ್ತಪ್ರಾಣಿಗಳು ನಿಜವಾಗಿ ತಂಪಾಗಿಯೂ, ಬಿಸಿರಕ್ತ ಪ್ರಾಣಿಗಳು ಬಿಸಿಯಾಗಿಯೂ ಇರುತ್ತವೆ. ಎಂದು ತಿಳಿದರೆ ತಪ್ಪಾಗುತ್ತದೆ. ಶೀತರಕ್ತ ಪ್ರಾಣಿಗಳ ದೇಹದ ಉಷ್ಣಾಂಶ ಸುತ್ತಮುತ್ತಲ ಉಷ್ಣಾಂಶಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಿರುತ್ತದೆ. ಬಿಸಿರಕ್ತ ಪ್ರಾಣಿಗಳ ದೇಹದ ಉಷ್ಣಾಂಶ ನಿರ್ದಿಷ್ಟವಾಗಿದ್ದು ವಾತಾವರಣದ ಉಷ್ಣಾಂಶದಲ್ಲಿನ ಬದಲಾವಣೆಯನ್ನನುಸರಿಸಿ ದೇಹದ ಉಷ್ಣಾಂಶದಲ್ಲಿ ಬದಲಾವಣೆಯಾಗುವುದಿಲ್ಲ. ಅಂತೆಯೇ ಧ್ರುವ ಪ್ರದೇಶದಲ್ಲಿ ವಾಸಿಸುವ ಬಿಸಿರಕ್ತ ಪ್ರಾಣಿ ಹಿಮಕರಡಿ, ಉಷ್ಣವಲಯದ ಕೋತಿ ಮತ್ತು ಸಮುದ್ರದಲ್ಲಿ ವಾಸಿಸುವ ತಿಮಿಂಗಿಲ ಈ ಎಲ್ಲ ಪ್ರಾಣಿಗಳ ದೇಹದ ಉಷ್ಣಾಂಶ ಸು. $38^0$ ಸೆ. ಇರುತ್ತದೆ. ಇವೆಲ್ಲ ಬಿಸಿರಕ್ತ ಪ್ರಾಣಿಗಳಾಗಿದ್ದು ಸ್ತನಿಗಳ ಗುಂಪಿಗೆ ಸೇರುತ್ತವೆ. ಹಾಗೆಯೆ ಶೀತರಕ್ತ ಪ್ರಾಣಿಗಳ ಉಷ್ಣಾಂಶ ವಾತಾವರಣದ ಉಷ್ಣಾಂಶಕ್ಕೆ ಅನುಗುಣವಾಗಿ ಬದಲಾಗುವುದರಿಂದ ಪ್ರಾಣಿಯ ಚಯಾಪಚಯ ಕ್ರಿಯೆಯ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ.

ಶಾರೀರಿಕ ಉಷ್ಣಾಂಶದಲ್ಲಿ ಗಣನೀಯ ಬದಲಾವಣೆಯಾಗದಿದ್ದರೂ ಬಿಸಿರಕ್ತ ಪ್ರಾಣಿಗಳು ವಾತಾವರಣದ ಉಷ್ಣಾಂಶದಲ್ಲಿ ಆಗುವ ಸ್ವಲ್ಪ ಮಟ್ಟಿನ ಬದಲಾವಣೆಯನ್ನು ತಡೆದುಕೊಳ್ಳುತ್ತವೆ. ಬಿಸಿರಕ್ತ ಪ್ರಾಣಿಗಳು ಶರೀರದ ನಿರ್ದಿಷ್ಟ ಉಷ್ಣಾಂಶವನ್ನು ನಿಯಂತ್ರಣಗೊಳಿಸಿ ತಂಪು ಅಥವಾ ಬಿಸಿ ವಾತಾವರಣದಲ್ಲಿ ಕೂಡಾ ಕ್ರಿಯಾಶೀಲವಾಗಿರುತ್ತವೆ. ಆಹಾರದ ಕೊರತೆ ಮತ್ತು ಚಳಿಯನ್ನು ಹತ್ತಿಕ್ಕಲು ಕೆಲವು ಸ್ತನಿಗಳು ಮತ್ತು ಪಕ್ಷಿಗಳು ಚಳಿಗಾಲದಲ್ಲಿ ಶಿಶಿರನಿದ್ರೆಯನ್ನು ಮಾಡುತ್ತವೆ.

ಶೀತರಕ್ತ ಪ್ರಾಣಿಗಳಲ್ಲಿ ದೇಹದ ಉಷ್ಣಾಂಶ ವಾತಾವರಣದ ಉಷ್ಣತೆಗೆ ತಕ್ಕಂತೆ ಬದಲಾವಣೆ ಹೊಂದುವುದಾದರೂ ಅವು ಏರುಪೇರಾಗುತ್ತಿರುವ ಉಷ್ಣತೆ ತಡೆದು ಕೊಳ್ಳಲು ಉಷ್ಣನಿಯಂತ್ರಣವನ್ನು ಮಾಡುತ್ತವೆ. ಸಾಮಾನ್ಯ ಉಷ್ಣಾಂಶಕ್ಕಿಂತ ಬಹಳಷ್ಟು ಹೆಚ್ಚು ಕಡಿಮೆಯಾದಾಗ ಮಾತ್ರ ಅವುಗಳ ಚಯಾಪಚಯ ಕ್ರಿಯೆಯಲ್ಲಿ ವ್ಯತ್ಯಾಸವುಂಟಾಗುತ್ತದೆ. ಪ್ರತಿ $10^0$ ಸೆ. ಉಷ್ಣಾಂಶ ಹೆಚ್ಚಾದಾಗ ಚಯಾಪಚಯ ಕ್ರಿಯೆಯ ವೇಗ ದ್ವಿಗುಣಗೊಳ್ಳುತ್ತದೆ. ಏಕೆಂದರೆ ಹೆಚ್ಚು ಉಷ್ಣಾಂಶದಲ್ಲಿ ಕಿಣ್ವಗಳ ಕ್ರಿಯಾಶಕ್ತಿ ಕೂಡಾ ಹೆಚ್ಚಾಗುವುದರಿಂದ ರಾಸಾಯನಿಕ ಕ್ರಿಯೆಯೂ ದ್ವಿಗುಣಗೊಳ್ಳುತ್ತದೆ.

ಉನ್ನತ ಮಾರಕ ಉಷ್ಣಾಂಶ ವಿವಿಧ ಪ್ರಾಣಿಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಉದಾಹರಣೆಗೆ ಹಲವಾರು ಸ್ತನಿಗಳು, ಪಕ್ಷಿಗಳು, ಸರೀಸೃಪಗಳು ಮತ್ತು ಕೀಟಗಳಲ್ಲಿ ಉನ್ನತ ಮಾರಕ ಉಷ್ಣಾಂಶ $45^0$ ಸೆ. ಆದರೆ ಜಲಚರ ಪ್ರಾಣಿಗಳಲ್ಲಿ ಈ ಉಷ್ಣಾಂಶ $35^0$ ಸೆ. ಕೆಲವು ಧ್ರುವ ಪ್ರದೇಶಗಳ ಪ್ರಾಣಿಗಳು ಕೇವಲ $10^0$ ಸೆ. ಉಷ್ಣಾಂಶವನ್ನೂ ತಡೆದುಕೊಳ್ಳಲಾರವು. ಉಷ್ಣಾಂಶ ಮಾರಕ ಹಂತವನ್ನು ತಲುಪುತ್ತಿದ್ದಂತೆ ಕಿಣ್ವಗಳು ವಿಕೃತಗೊಂದು ಕ್ರಿಯಾಹೀನವಾಗುತ್ತವೆ. ಕಡಿಮೆ ಉಷ್ಣಾಂಶದಲ್ಲಿ ಕಿಣ್ವಗಳು ಘನೀಭೂತವಾಗುತ್ತವೆ. ಚಯಾಪಚಯ ಕ್ರಿಯೆ ನಿಧಾನಗೊಳ್ಳುತ್ತದೆ.

ಬಿಸಿರಕ್ತ ಪ್ರಾಣಿಗಳು ಶರೀರದ ಉಷ್ಣಾಂಶವನ್ನು ನಿರ್ದಿಷ್ಟವಾಗಿ ನಿಯಂತ್ರಿಸುತ್ತವೆ. ಅವುಗಳ ಶಾರೀರಿಕ ಉಷ್ಣಾಂಶದಲ್ಲಿ ಬದಲಾವಣೆಯಾಗುವುದಿಲ್ಲ. ಉದಾಹರಣೆಗೆ ಆರೋಗ್ಯವಂತ ಮನುಷ್ಯನ ಶರೀರದ ಉಷ್ಣಾಂಶ $37^0$ ಸೆ. ಅತಿ ಹೆಚ್ಚು ಎಂದರೆ ಹಗಲು ವೇಳೆ $1^0$ ಸೆ. ಹೆಚ್ಚು ಮತ್ತು ರಾತ್ರಿ $1^0$ ಸೆ. ಕಡಿಮೆಯಾಗಬಹುದು. ಈ ಉಷ್ಣಾಂಶಕ್ಕಿಂತ ಹೆಚ್ಚುಕಡಿಮೆಯಾದರೆ ಅದು ಆತನಿಗೆ ಗಂಡಾಂತರಕಾರಿ. ಇದೇ ರೀತಿ ಇಲಿಯ ಸಾಮಾನ್ಯ ಉಷ್ಣಾಂಶ $36.5^0$ ಸೆ. ಕುದುರೆ – $37.7^0$ ಸೆ. ಆನೆ – $32^0$ ಸೆ. ಆದರೆ ಪಕ್ಷಿಗಳ ದೇಹದ ಉಷ್ಣಾಂಶ $40^0$ ಸೆ. ನಿಂದ $43^0$ ಸೆ. ವರೆಗಿರುತ್ತದೆ.

ಮನುಷ್ಯನಲ್ಲಿ ಉಷ್ಣನಿಯಂತ್ರಣ : $27^0$ ಸೆ. ನಿಂದ $31^0$ ಸೆ. ವರೆಗಿನ ಉಷ್ಣಾಂಶದಲ್ಲಿ ಆರೋಗ್ಯವಂತ, ವಿಶ್ರಾಂತಿ ಸ್ಥಿತಿಯಲ್ಲಿರುವಾಗ ಯಾವ ತೊಂದರೆಯಿಲ್ಲದೆ ಇರುತ್ತಾನೆ. ಅಲ್ಲದೆ ಆತನ ಶಾರೀರಿಕ ಉಷ್ಣಾಂಶದಲ್ಲಿ ಬದಲಾವಣೆಯಾಗುವುದಿಲ್ಲ. ಚಯಾಪಚಯ ಕ್ರಿಯೆಗಳು ಸಾಮಾನ್ಯವಾಗಿದ್ದು ಉಂಟಾಗುವ ಹೆಚ್ಚಿನ ಉಷ್ಣ ವಾತಾವರಣಕ್ಕೆ ಬಿಡುಗಡೆಯಾಗುತ್ತದೆ. $27^0$ ಸೆ. ಗಿಂತ ಕಡಿಮೆ ಉಷ್ಣಾಂಶವಿರುವ ವಾತಾವರಣದಲ್ಲಿ, ಆತನ ಶರೀರದಿಂದ ಹೆಚ್ಚು ಹೆಚ್ಚು ಉಷ್ಣ ಹೊರಹೋಗುತ್ತದೆ. ಇದರಿಂದ ಆತನ ಅಪ್ರೇರಿತ (ಇನ್‌ವಾಲೆಂಟರಿ) ಮಾಂಸಖಂಡಗಳು ಕುಗ್ಗುತ್ತವೆ. ಅದನ್ನೇ ನಾವು ನಡುಗುವಿಕೆ ಎನ್ನುತ್ತೇವೆ. ಚಳಿ ಹೆಚ್ಚಾದಷ್ಟು ಶರೀರದ ಉಷ್ಣಾಂಶವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಆತ ಹೆಚ್ಚು ಹೆಚ್ಚು ನಡುಗತೊಡಗುತ್ತಾನೆ. ಉಷ್ಣಾಂಶ $31^0$ ಸೆ. ಗಿಂತ ಹೆಚ್ಚಾಗುತ್ತ ಹೋದರೆ ವಾತಾವರಣದ ಈ ಉಷ್ಣಾಂಶ, ಶರೀರದಲ್ಲಿ ಚಯಾಪಚಯ ಕ್ರಿಯೆಯಿಂದ ಉಂಟಾಗುವ ಹೆಚ್ಚಿನ ಉಷ್ಣಾಂಶವನ್ನು ಹೊರಹಾಕಲು ಅಸಮರ್ಥವಾಗುತ್ತದೆ. ಆಗ ಶರೀರದಿಂದ ನೀರನ್ನು ಬೆವರಿನ ರೀತಿಯಲ್ಲಿ ಹೊರಹಾಕಿ ಉಷ್ಣವನ್ನು ನಿಯಂತ್ರಿಸಲಾಗುತ್ತದೆ. ಆದ್ದರಿಂದ ಮನುಷ್ಯನ ತಟಸ್ಥ ಉಷ್ಣ (ನ್ಯೂಟ್ರಲ್ ಟೆಂಪರೇಚರ್) $27^0$ ಸೆ. ನಿಂದ $31^0$ ಸೆ. ಆದರೆ ನಾವು ಬಟ್ಟೆ ಧರಿಸಿದರೆ ಅಥವಾ ದೈಹಿಕ ಕೆಲಸ ಮಾಡುತ್ತಿದ್ದರೆ ಈ ತಟಸ್ಥ ಉಷ್ಣದಲ್ಲಿ ಬದಲಾವಣೆಯಾಗುತ್ತದೆ. ಉಷ್ಣ ಕಡಿಮೆಯಾದಾಗ ಚರ್ಮಕ್ಕೆ ರಕ್ತದ ಹಂಚಿಕೆ ಕಡಿಮೆಯಾಗುತ್ತದೆ ಮತ್ತು ಜಾಸ್ತಿಯಾದಾಗ ರಕ್ತದ ಹಂಚಿಕೆ ಜಾಸ್ತಿಯಾಗುತ್ತದೆ.

ಉಳಿದ ಸ್ತನಿಗಳಲ್ಲಿ : ಶರೀರದ ಮೇಲಿನ ತುಪ್ಪುಳ ತಟಸ್ಥ ಉಷ್ಣಾಂಶವನ್ನು ಮನುಷ್ಯನ ಶರೀರದ ತಟಸ್ಥ ಉಷ್ಣಾಂಶಕ್ಕಿಂತ ಹೆಚ್ಚು ಕಡಿಮೆಯಾಗುವಂತೆ ಮಾಡುತ್ತದೆ. ಇದು ಧ್ರುವ ಪ್ರದೇಶದ ಪ್ರಾಣಿಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ. ಅಲಾಸ್ಕದ ನೆಲ ಅಳಿಲಿನ ತಟಸ್ಥ ಉಷ್ಣಾಂಶ $10^0$ ಸೆ. ಇದ್ದು ವಾತಾವರಣದಲ್ಲಿ ಉಷ್ಣಾಂಶ $10^0$ ಸೆ. ಗಿಂತ ಉಷ್ಣವನ್ನು ತಯಾರಿಸುತ್ತದೆ. ಎಸ್ಕಿಮೊಗಳು ತುಂಬ ತುಪ್ಪಳವುಳ್ಳ ನಾಯಿಯ ಚರ್ಮವನ್ನು ಬಟ್ಟೆಯಂತೆ ಉಪಯೋಗಿಸಿಕೊಂಡು $-20^0$ಸೆ. ಕೊರೆಯುವ ಚಳಿಯಲ್ಲೂ ಜೀವಿಸುತ್ತಾರೆ.

ಧ್ರುವಪ್ರದೇಶದ ಸೀಲ್‌ಗಳು $0^0$ ಸೆ. ನೀರಿನಲ್ಲಿ ವಾಸಿಸುತ್ತವೆ. ಈ ಉಷ್ಣಾಂಶದಲ್ಲಿ ಈಜಾಡುವಾಗ ಅವುಗಳ ತುಪ್ಪಳ ಸಾಕಷ್ಟು ರಕ್ಷಣೆಯನ್ನು ನೀಡುವುದಿಲ್ಲ. ಆದರೆ ಇವು ದೇಹದಲ್ಲಿ ಕೊಬ್ಬನ್ನು ಸಂಚಯಿಸಿ ಅದರಿಂದ ರಕ್ಷಣೆಯನ್ನು ಪಡೆಯುತ್ತವೆ. ಅತಿ ಕಡಿಮೆ ಉಷ್ಣಾಂಶದಲ್ಲಿ ತುಪ್ಪಳವು ಪ್ರಾಣಿಯ ಚರ್ಮವನ್ನು ಹಿಮದಿಂದ ಪ್ರತ್ಯೇಕಿಸಿ ಚರ್ಮವನ್ನು ರಕ್ಷಿಸುತ್ತದೆ. ಅದೇ ರೀತಿ ಉಷ್ಣವಲಯದ ಸಮುದ್ರಗಳಲ್ಲಿ ಕೇವಲ ಕೊಬ್ಬು ಮಾತ್ರ ಇದ್ದು ಚರ್ಮದ ಮೇಲೆ ತುಪ್ಪಳವಿರುವುದಿಲ್ಲ.

ಉಷ್ಣನಿಯಂತ್ರಣವನ್ನು ಮೆದುಳಿನ ಕೆಳಶಿರಗುಳಿ (ಹೈಪೊಥಲಮಸ್) ಮಾಡುತ್ತದೆ. ಮಾಂಸಖಂಡಗಳ ಕುಗ್ಗುವಿಕೆ, ಹಿಗ್ಗುವಿಕೆ, ನಡುಗುವಿಕೆ ಮುಂತಾದವುಗಳಿಗೆ ಈ ಕೆಳಶಿರಗುಳಿ ಸಂದೇಶ ನೀಡುತ್ತದೆ.

ನಡುಗುವಿಕೆ ಮತ್ತು ಬೆವರುವಿಕೆ ಬೇರೆ ಸ್ತನಿಗಳಲ್ಲಿಯೂ ಕಂಡುಬರುತ್ತದೆ. ಆದರೆ ನಾಯಿಯಲ್ಲಿ ಬೆವರು ಕಡಿಮೆ. ತುಂಬಾ ಸೆಖೆಯಲ್ಲಿ ಬಾಯನ್ನು ಅಗಲವಾಗಿ ತೆರೆದು ನಾಯಿ ತನ್ನ ನಾಲಿಗೆಯನ್ನು ಪೂರ್ತಿ ಹೊರಚಾಚುವುದರೊಂದಿಗೆ ಉಸಿರಾಟವು ಹತ್ತು ಪಟ್ಟು ಜಾಸ್ತಿಯಾಗುತ್ತದೆ. ಇದನ್ನು ಏದುಸಿರು ಬಿಡುವುದು (ಪ್ಯಾಂಟಿಂಗ್) ಎನ್ನುತ್ತಾರೆ. ಹೆಚ್ಚು ನೀರು ಬಾಷ್ಪದ ರೀತಿಯಲ್ಲಿ ಬಾಯಿಯ ಮೂಲಕ ಹೊರಹೋಗುತ್ತದೆ. ಜೊತೆಗೆ ಇಂಗಾಲದ ಡೈಯಾಕ್ಸೈಡು ಕೂಡಾ ಹೆಚ್ಚಿನ ಪ್ರಮಾಣದಲ್ಲಿ ಹೊರಹೋಗುತ್ತದೆ. ಹಸುಗಳು ಮತ್ತು ಕುರಿಗಳು ಏದುಸಿರು ಬಿಡುವುದರ ಜೊತೆಗೆ ಬೆವರನ್ನು ಸುರಿಸಿದರೂ ಮನುಷ್ಯನಷ್ಟು ತೀವ್ರವಾಗಿ ಇಲ್ಲ. ಕಾಂಗರೂ, ಮೊಲ ಮತ್ತು ಇಲಿಗಳು ಶರೀರವನ್ನು ನಾಲಿಗೆಯಿಂದ ನೆಕ್ಕುವುದರಿಂದ ಶರೀರದಲ್ಲಿ ತಂಪನ್ನು ಕಾಪಾಡಿಕೊಳ್ಳುತ್ತವೆ. ಕಡಿಮೆ ಗಾತ್ರದ ದಂಶಕಗಳ ಹೆಚ್ಚು ಭಾಗಗಳು ವಾತಾವರಣಕ್ಕೆ ತೆರೆದಿರುವುದರಿಂದ ಹೆಚ್ಚು ಗಾತ್ರದ ಪ್ರಾಣಿಗಳಿಗಿಂತ ಬೇಗನೆ ಶಾಖ ತೆಗೆದುಕೊಳ್ಳುತ್ತವೆ. ಅವುಗಳಲ್ಲಿ ಬೆವರು ಗ್ರಂಥಿಗಳು ಇಲ್ಲ ಹಾಗೂ ಏದುಸಿರು ಬಿಡುವುದೂ ಕಂಡುಬರುವುದಿಲ್ಲ. ಆದರೆ ಇವು ಹೆಚ್ಚು ಉಷ್ಣತೆಯಿರುವಾಗ ಬಿಲಗಳಲ್ಲಿ ಮತ್ತು ತಂಪು ಪ್ರದೇಶಗಳಲ್ಲಿ ಅಡಗಿ ರಕ್ಷಿಸಿಕೊಳ್ಳುತ್ತವೆ.

ಪಕ್ಷಿಗಳಲ್ಲಿ ಬೆವರು ಗ್ರಂಥಿಗಳಿರುವುದಿಲ್ಲ. ಆದರೆ ಅವು ಸ್ವಲ್ಪ ಮಟ್ಟಿಗೆ ಏದುಸಿರು ಬಿಡುತ್ತವೆ. ಬಹುಶಃ ಅವುಗಳ ಶ್ವಾಸಕೋಶಕ್ಕೆ ಅಂಟಿಕೊಂಡಿರುವ ಗಾಳಿ ಚೀಲಗಳು ಉಷ್ಣನಿಯಂತ್ರಣಕ್ಕೆ ಸಹಾಯಕವಾಗಿರಬಹುದು.

ಪ್ರಾಣಿಗಳಲ್ಲಿ ಸಾಮಾನ್ಯ ಉಷ್ಣತಾಮಾನವನ್ನು ತಡೆದುಕೊಳ್ಳುವ ಶಕ್ತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಎಲ್ಲಾ ಸಂದರ್ಭಗಳಲ್ಲಿ ಇದು ಹಾಗಾಗುವುದಿಲ್ಲ. ಇಂತಹ ಪ್ರಾಣಿಗಳು ಅವನತ ಮಾರಕ ಉಷ್ಣಾಂಶಕ್ಕಿಂತ ಸ್ವಲ್ಪ ಹೆಚ್ಚು ಕಡಿಮೆಯಾದರೂ ಅವು ಸಾಯುತ್ತವೆ.

ಶೀತರಕ್ತ ಪ್ರಾಣಿಗಳಾದ ಹಾವುಗಳು ಮತ್ತಿತರ ಸರೀಸೃಪಗಳು ಬೆಳಗಿನ ವೇಳೆ ಶರೀರವನ್ನು ಸೂರ್ಯನ ಬಿಸಿಲಿಗೆ ತೆರೆದು ಮಲಗಿಕೊಳ್ಳುತ್ತವೆ. ಆಗ ದೇಹದ ಉಷ್ಣಾಂಶ ಏರುತ್ತದೆ. ಅದೇ ರೀತಿ ತುಂಬಾ ಬಿಸಿಲಿನ ವೇಳೆಯಲ್ಲಿ ಬಿಲಗಳಲ್ಲಿ ಅಥವಾ ತಂಪು ಪ್ರದೇಶಗಳಲ್ಲಿ ಅಡಗಿ ಶಾಖದಿಂದ ರಕ್ಷಿಸಿಕೊಳ್ಳುತ್ತವೆ.

ಕೆಲವು ಕೀಟಗಳಲ್ಲಿ ಶಾರೀರಿಕ ಉಷ್ಣಾಂಶ ತುಂಬಾ ಕಡಿಮೆಯಿದ್ದರೆ ಅವು ಸರಿಯಾಗಿ ಹಾರಲಾರವು. ಮೊದಲು ಮಾಂಸಖಂಡಗಳ ಚಲನೆಯಿಂದ ಉಷ್ಣಾಂಶವನ್ನು ಹೆಚ್ಚಿಸಿಕೊಂಡು ಅನಂತರ ಅವು ಹಾರಲಾರಂಭಿಸುತ್ತವೆ. ಹೀಗೆ ಬೇರೆ ಬೇರೆ ಶೀತರಕ್ತ ಪ್ರಾಣಿಗಳು ಬೇರೆ ಬೇರೆ ರೀತಿಯಲ್ಲಿ ಉಷ್ಣವನ್ನು ನಿಯಂತ್ರಿಸಿಕೊಳ್ಳುತ್ತವೆ.

(ಎಚ್.ಎನ್.ಎಚ್.)

**ಉಸಿರಾಟ:** ಜೀವಿ ಪರಿಸರದೊಡನೆ ಅನಿಲಗಳನ್ನು ವಿನಿಮಯ ಮಾಡಿಕೊಂಡು ದೇಹದಲ್ಲಿ ಶಕ್ತಿಯನ್ನು ಉತ್ಪಾದಿಸುವ ಕ್ರಿಯೆ (ರೆಸ್ಪಿರೇಷನ್). ಪರ್ಯಾಯನಾಮ ಉಚ್ಛ್ವಾಸ–ನಿಶ್ವಾಸಕ್ರಿಯೆ. ಇದು ಪ್ರಾಣಿ ಹಾಗು ಸಸ್ಯ ಪ್ರಪಂಚಗಳಿಗೆ ಸಾಮಾನ್ಯವಾದ ಚಟುವಟಿಕೆಯಾಗಿದ್ದು ಜೀವಿಗಳು ಬದುಕಿರುವ ಸಂಕೇತವಾಗಿದೆ. ಇದರ ಸ್ಥೂಲ ಕ್ರಿಯಾತಂತ್ರ ಹೀಗಿದೆ– ಪರಿಸರದ ಆಮ್ಲಜನಕ ಜೀವಿಯ ದೇಹವನ್ನು ಪ್ರವೇಶಿಸಿ ಜೀವವಸ್ತುಕರಣದಲ್ಲಿ (ಮೆಟಬಾಲಿಸಂ) ಭಾಗವಹಿಸಿ ಶಕ್ತಿ ಉತ್ಪಾದನೆ ಮಾಡುತ್ತದೆ. ಈ ಕ್ರಿಯೆಯಲ್ಲಿ ಇಂಗಾಲದ ಡೈಆಕ್ಸೈಡ್ ಮುಂತಾದ ಜೀವಿಗೆ ಬೇಡವಾದ ಉಪೋತ್ಪನ್ನಗಳು ಜನಿಸುತ್ತವೆ. ಜೀವಿ ಇವನ್ನು ವಿಸರ್ಜಿಸುತ್ತದೆ. ಜೀವಿಯ ಸಕಲ ಚಟುವಟಿಕೆಗಳೂ ಉಸಿರಾಟದಿಂದ ದೊರಕಿದ ಶಕ್ತಿ ಆಧಾರವಾಗಿರುವುದರಿಂದ ಉಸಿರಾಟ ಬದುಕಿಗೆ ಅನಿವಾರ್ಯ.

ಪ್ರಾಣಿಗಳಲ್ಲಿ ಉಸಿರಾಟಕ್ಕೆ ನಾಲ್ಕು ಮುಖ್ಯ ಏರ್ಪಾಡುಗಳು ವಿಕಸಿಸಿರುವುದನ್ನು ಗುರುತಿಸಬಹುದು.

1. ಪೊರೆಗಳ ಮೂಲಕ ಅನಿಲಗಳ ವಿಸರಣ (ಡಿಫ್ಯೂಶನ್): ಏಕಕೋಶಕ ಜೀವಿಗಳಲ್ಲಿ ಉಸಿರಾಟ ನಡೆವ ವಿಧಾನವಿದು. ಸ್ಪಂಜಿನಂಥ ಪ್ರಾಣಿಗಳ ಗೂಡುಗಳಲ್ಲಿ ಸಾಗರದ ನೀರು ಹರಿದು ಈ ಉಸಿರಾಟ ಪರಿಣಾಮಕಾರಿಯಾಗುತ್ತದೆ. ಇನ್ನು ಕೆಲವು ಪ್ರಾಣಿಗಳಲ್ಲಿ ದರ್ಮವೇ ಉಸಿರಾಟದ ಸ್ವಲ್ಪ ಹೊಣೆಯನ್ನು ಕೆಲವು ವಿಶಿಷ್ಟ ಅವಯವಗಳೊಡನೆ ಹೊತ್ತಿದೆ. ಅತಿಶೀತ ಸನ್ನಿವೇಶಗಳಲ್ಲಿ ಹಲವು ಮೀನುಗಳು, ಕಪ್ಪೆಗಳು ಪೊರೆಯ ಮೂಲಕ ತಕ್ಕಷ್ಟು ಪ್ರಮಾಣದ ಆಮ್ಲಜನಕವನ್ನು ಪಡೆಯುತ್ತವೆ. ಉಷ್ಣತೆ ಏರಿದಂತೆ ಈ ಪ್ರಾಣಿಗಳು ಕಿವಿರುಗಳ ಮತ್ತು ಫುಪ್ಫುಸಗಳ ನೆರವಿನಿಂದ ಉಸಿರಾಡುತ್ತವೆ. ಮಾನವನಲ್ಲೂ ಇತರ ಸ್ತನಿಗಳಲ್ಲೂ ಚರ್ಮದ ಮೂಲಕ ನಡೆಯುವ ಉಸಿರಾಟ 1% ಮಾತ್ರವಿರಬಹುದೆಂದು ಅಂದಾಜು.

2. ಕಿವಿರುಗಳು: ಚರ್ಮಕ್ಕಿಂತ ಹೆಚ್ಚು ಪರಿಣಾಮಕಾರಿ ಅಂಗಗಳು. ಸಾಮಾನ್ಯವಾಗಿ ಇವು ದೇಹದ ಒಳಗಿರುತ್ತವೆ (ಕಪ್ಪೆಯ ಜೀವನದ ಒಂದು ಹಂತದಲ್ಲಿ ಹೊರಗಿರುತ್ತವೆ). ಇವು ಅಲುಗಬಲ್ಲವು. ಕಿವಿರುಗಳ ಮೂಲಕ ನೀರು ಹರಿಯುವಾಗ ಒಳಗಿನ ರಕ್ತನಾಳಗಳು ಅದರಿಂದ ಆಮ್ಲಜನಕವನ್ನು ತಮ್ಮ ರಕ್ತದಲ್ಲಿ ಹೀರಿಕೊಳ್ಳುತ್ತವೆ. ಇಂಥ ಉಸಿರಾಟ ಸಮರ್ಪಕವಾಗಿ ನೆರವೇರಲು ದರ್ಮ ಅಥವಾ ಕಿವಿರು ಒದ್ದೆಯಾಗಿರುವುದು ಅವಶ್ಯ.

3. ಫುಪ್ಫುಸಗಳು: ಪ್ರಾಣಿಗಳು ಕಾಲಾಂತರದಲ್ಲಿ ನೆಲದ ಮೇಲೆ ಬಾಳಲು ತೊಡಗಿದಾಗ ಪರಿಸ್ಥಿತಿ ಬದಲಾಗಿ ವಾಯುಮಂಡಲದಿಂದ ನೇರವಾಗಿ ಆಮ್ಲಜನಕವನ್ನು ಪಡೆಯಲು ಹೊಸ ಅಂಗಗಳೆ ಬೇಕಾದುವು. ಹೀಗೆ ಫುಪ್ಫುಸಗಳ ವಿಕಾಸವಾಯಿತು. ಈ ವಿಕಾಸದ ಪ್ರಥಮ ಹಂತವನ್ನು ಆಫ್ರಿಕದ ಬಸವನಹುಳುವಿನ ಫುಪ್ಫುಸದಲ್ಲಿ ನೋಡಬಹುದು. ಫುಪ್ಫುಸದ ಬಸವನಹುಳುವೆಂದೇ ಅದರ ಹೆಸರು. ಫುಪ್ಫುಸದ ಘನಗಾತ್ರ ಸುಮಾರು ಅರ್ಧಲೀಟರು. ಇದೊಂದು ವಿಸರಣಫುಪ್ಫುಸ (ಡಿಫ್ಯೂಶನ್‌ಲಂಗ್). ಮೇಲುವರ್ಗದ ಪ್ರಾಣಿಗಳಲ್ಲಿ ಶಕ್ತಿಯ ಅಗತ್ಯ ಹೆಚ್ಚು ಆದ್ದರಿಂದ ಆಮ್ಲಜನಕದ ಅವಶ್ಯಕತೆ ಹೆಚ್ಚಾಗಿದೆ. ಇದನ್ನು ಪೂರೈಸಲು ಫುಪ್ಫುಸದೊಳಗೆ ಆಲ್ವಿಯೋಲೈ ಎಂಬ ಮಡಿಕೆ ಅಥವಾ ವಿಭಾಗಗಳು ರೂಪುಗೊಂಡು ವಿಸರಣ ಪ್ರದೇಶದ ಸಲೆ ಹೆಚ್ಚುತ್ತ ಹೋಗುವುದು. ಜೊತೆಗೆ ಹೊರಗಿನ ಗಾಳಿಯನ್ನು ಒಳಗೆ ಸೆಳೆದುಕೊಳ್ಳುವದಕ್ಕೂ ಒಳಗಿನ ಗಾಳಿಯನ್ನು ಹೊರಗೆ ನೂಕುವುದಕ್ಕೂ ಸಹಾಯಮಾಡಬಲ್ಲ ಅಂಗರಚನೆಯೂ ಸಿದ್ಧಿಸಿದೆ. ಕಪ್ಪೆಯ ಫುಪ್ಫುಸದಲ್ಲಿ ಕೇವಲ ಕೆಲವೇ ವಿಭಾಗಗಳಿದ್ದರೆ ಮೇಲುವರ್ಗದ ಪ್ರಾಣಿಗಳಾದ ಸ್ತನಿಗಳಲ್ಲಿ ಅವು ಅಸಂಖ್ಯಾತವಾಗಿವೆ. ಪಕ್ಷಿಗಳ ಫುಪ್ಫುಸಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಉಸಿರಾಡಲು ತಕ್ಕ ರಚನೆ ಉಂಟು, ಫುಪ್ಫುಸಗಳಿಂದ ನೀಳ ಕೋಶಗಳು ಹೊರಟು ದೇಹದ ಭಾಗದೊಳಕ್ಕೆ ಚಾಚಿಕೊಂಡಿರುವುದರಿಂದಲೂ ಆಲ್ವಿಯೋಲೈಗಳು ನೀಳವಾಗಿ ಹರಡಿಕೊಂಡಿರುವುದರಿಂದಲೂ ಇದು ಸಾಧ್ಯವಾಗಿದೆ.

4. ಉಸಿರ್ನಾಳಗಳು: ನಾಲ್ಕನೆಯ ವಿಧದ ಉಸಿರಾಟ ವ್ಯವಸ್ಥೆ ಕೀಟಗಳಲ್ಲಿ ಕಂಡುಬರುತ್ತದೆ. ಇವುಗಳಲ್ಲಿರುವ ಬಹು ಕಿರಿದಾದ ಗಾಳಿ ತುಂಬಿದ ಹಲವಾರು ಕವಲುಗಳಿರುವ ಉಸಿರ್ನಾಳಗಳು ದೇಹವನ್ನು ವ್ಯಾಪಿಸಿ ಹೊರಭಾಗಕ್ಕೆ ತೆರೆದಿರುತ್ತವೆ. ರಕ್ತವನ್ನು ಸ್ಥಳೀಯವಾಗಿಯೇ ಶುದ್ಧೀಕರಿಸಲು ಇವು ನೆರವಾಗುವುವು.

ಉಸಿರ್ನಾಳಗಳು, ಫುಪ್ಫುಸಗಳು, ಎದೆ, ಫುಪ್ಫುಸಗಳ ಆವರಣ, ಎದೆಯನ್ನು ಹಿಗ್ಗಿಸಿ ಕುಗ್ಗಿಸುವ ಸ್ನಾಯುಗಳು, ಈ ಅಂಗಗಳಿಗೆ ಸಂಬಂಧಪಟ್ಟ ಅಂತರ್ವಾಹಿ ಮತ್ತು ಬಹಿರ್ವಾಹಿ ನರಗಳು ಇವಿಷ್ಟು ಸ್ತನಿಗಳ ಉಸಿರಾಟದ ಅಂಗಗಳು. ಮೂಗಿನ ಡೊಗರು, ಗಂಟಲ ಕುಹರ, ಧ್ವನಿ ಪೆಟ್ಟಿಗೆ, ಉಸಿರ್ನಾಳ ಅದರ ಎರಡು ಕವಲುಗಳು, ಫುಪ್ಫುಸಗಳಿಗೆ ಗಾಳಿ ಸತತವಾಗಿ ಪ್ರವೇಶಿಸಲು ಅನುಕೂಲವಾಗುವಂತೆ ರಚಿತವಾಗಿವೆ. ಮೂಗಿನ ಡೊಗರಿನ ಲೋಳೆಗೂಡಿನ ನಯಚರ್ಮದಲ್ಲಿ ಸೇದುವ ಗಾಳಿಯನ್ನು ಬೆಚ್ಚಗೆ ಮಾಡಿ ಆರ್ದ್ರತೆಯನ್ನು ಕೊಡುವುದಕ್ಕೆಂದೇ ಅದರೊಳಗೆ ಅನೇಕ ಗ್ರಂಥಿಗಳಿವೆ. ಉಸಿರ್ನಾಳಕ್ಕೂ ಅನ್ನನಾಳಕ್ಕೂ ಗಂಟಲ ಕುಹರ ಒಂದೇ ದಾರಿ. ಸ್ನಾಯು, ಮೃದ್ವಸ್ಥಿ ಮತ್ತು ಕವಾಟಕೋಶಗಳಿಂದ ಧ್ವನಿಪೆಟ್ಟಿಗೆ ರಚಿತವಾಗಿದೆ. ಉಸಿರ್ನಾಳದ ಗೋಡೆಗಳಲ್ಲಿ ಮೃದ್ವಸ್ಥಿಗಳ ಅಸಂಪೂರ್ಣವಾದ ಉಂಗುರಗಳಿದ್ದು ನಾಳ ಯಾವಾಗಲೂ ತೆರೆದೇ ಇರುವಂತೆ ಮಾಡುತ್ತವೆ. ನಾಳದಲ್ಲಿ ಲೋಳೆಯನ್ನು ಸ್ರವಿಸುವ ಅನೇಕ ಗ್ರಂಥಿಗಳಿವೆ. ಅದರ ಹೊರ ದರ್ಮವನ್ನು ಸ್ಪಂದನಲೋಮಾಂಗಗಳು ಅಂಚುಗಟ್ಟಿವೆ. ಈ ಗ್ರಂಥಿಗಳಿಂದ ಒಸರುವ ದ್ರವ ಮತ್ತು ಸ್ಪಂದನ ಲೋಮಾಂಗಗಳು ದೂಳು ಮತ್ತು ಇತರ ಪರಕೀಯ ವಸ್ತುಗಳು ಶ್ವಾಸಕೋಶಕ್ಕೆ ಪ್ರವೇಶಿಸದಂತೆ ತಡೆಯುತ್ತವೆ.

ಫುಪ್ಫುಸಗಳು ಸೂಕ್ಷ್ಮ ದರ್ಮದಿಂದಾಗಿರುವ ಸ್ಥಿತಿಸ್ಥಾಪಕ ಶಕ್ತಿಯುಳ್ಳ ಮತ್ತು ಅನೇಕ ಗೂಡುಗಳಿಂದ ಕೂಡಿದ ಚೀಲಗಳು. ಶ್ವಾಸದ್ವಾರಗಳ ಮೂಲಕ ಅವುಗಳಿಗೆ ಅಡೆತಡೆಯಿಲ್ಲದೆ ಗಾಳಿಯ ಸಂಪರ್ಕ ಏರ್ಪಟ್ಟಿದೆ. ಈ ಗೂಡುಗಳ ಗೋಡೆಗಳಲ್ಲಿ ಶ್ವಾಸಾಂಗದ ಹೊರ ಪೊರೆಯ ಒಂದೇ ಪದರವಿದೆ. ಲೋಮನಾಳಗಳ ಒಳಪೊರೆಯಲ್ಲಿನ ಈ ಜೀವಕೋಶಗಳ ಪದರದ ಮೂಲಕ ಗೂಡುಗಳಲ್ಲಿರುವ ಗಾಳಿಗೂ ಸುತ್ತಮುತ್ತಲಿನ ಲೋಮನಾಳಗಳಲ್ಲಿರುವ ರಕ್ತಕ್ಕೂ ಅನಿಲ ವಿನಿಮಯ ಜರುಗುತ್ತದೆ. ಫುಪ್ಫುಸಗಳು ತಾವು ನೆಲೆಗೊಂಡಿರುವ ಎದೆ ಭಾಗದ ಕುಹರಕ್ಕಿಂತ ಗಾತ್ರದಲ್ಲಿ ಬಲು ಚಿಕ್ಕವು. ಒಳಗಿರುವ ಗಾಳಿಯಿಂದ ಅವು ಯಾವಾಗಲೂ ಉಬ್ಬಿಕೊಂಡಿರುತ್ತವೆ.

ಉಚ್ಛ್ವಾಸವೆಂದರೆ ಎದೆಯ ಪ್ರದೇಶ ಮತ್ತು ಫುಪ್ಫುಸಗಳು ಹಿಗ್ಗಿ ಹೊರಗಿನ ಗಾಳಿ ಒಳಕ್ಕೆ ಪ್ರವೇಶಿಸುವಿಕೆ. ಗೋಳಾಕಾರವಾಗಿರುವ ವಪೆ ಸಂಕೋಚಗೊಂಡು ಕಿರಿದಾಗಿ ಎದೆ ಎಲುಬುಗಳು ಮುಂದಕ್ಕೆ ಹೊರಚಾಚಿಕೊಳ್ಳುವಂತೆ ಮಾಡುವುದರಿಂದ ಎದೆಯ ಪ್ರದೇಶ ಹಿಗ್ಗುತ್ತದೆ. ಆಗ ಒಳಗಿನ ಗಾಳಿಯ ಒತ್ತಡ ಸ್ವಲ್ಪ ಕಡಿಮೆಯಾಗುವುದರಿಂದ ಹೊರಗಿನ ಗಾಳಿ ಒಳಕ್ಕೆ ನುಗ್ಗಿ ಉಚ್ಛ್ವಾಸಕ್ರಿಯೆ ನೆರವೇರುತ್ತದೆ. ಎದೆ ಮತ್ತು ಫುಪ್ಫುಸಗಳು ಕುಗ್ಗಿ ಅಲ್ಲಿನ ಗಾಳಿ ಹೊರಕ್ಕೆ ಬಂದಾಗ ನಿಶ್ವಾಸಕ್ರಿಯೆ ಜರುಗುತ್ತದೆ. ಗಾಳಿಯನ್ನು ಒಳಕ್ಕೆ ಸೆಳದುಕೊಂಡಾಗ ಹಿಗ್ಗಿದ ಎದೆ ಮತ್ತಾವ ಪ್ರಯತ್ನವೂ ಇಲ್ಲದೆ ಉಚ್ಛ್ವಾಸದಲ್ಲಿ ನಿಯುಕ್ತವಾದ ಅಂಗಗಳ ಸ್ಥಿತಿಸ್ಥಾಪಕ ಶಕ್ತಿಯಿಂದಲೇ ತನ್ನ ಪೂರ್ವಸ್ಥಿತಿಗೆ ಮರಳಿದಾಗ ವಪೆಯ ಎದೆಯ ಪ್ರದೇಶ ಕುಗ್ಗಿ, ಶ್ವಾಸಕೋಶಗಳಲ್ಲಿಯ ಗಾಳಿ ಹೊರನುಗ್ಗುತ್ತದೆ. ವಪೆಯ ಸ್ನಾಯು ಮತ್ತು ಎದೆ ಗೂಡಿನ ಎಲುಬುಗಳ ಇತರ ಸ್ನಾಯುಗಳು, ನರಗಳು ತಮಗೆ ಕೊಡುವ ಉತ್ತೇಜನದ ಮೂಲಕ ಉಸಿರಾಟವನ್ನು ಲಯಬದ್ಧವಾಗಿ ನಡೆಯುವಂತೆ ಮಾಡುತ್ತವೆ.

ಉಚ್ಛ್ವಾಸ ನಡೆದಾಗಲೆಲ್ಲ ಹೊಟ್ಟೆ ಮುಂದಕ್ಕೆ ಉಬ್ಬಿಕೊಳ್ಳುತ್ತದೆ. ನಿಶ್ವಾಸದಲ್ಲಿ ತಟ್ಟನೆ ಹಿಂದಕ್ಕೆ ಸೆಳೆದುಕೊಳ್ಳುತ್ತದೆ. ವಪೆ ಕುಗ್ಗುವುದರಿಂದಲೂ ಹೊಟ್ಟೆಯ ಗೋಡೆಯ ಸ್ಥಿತಿಸ್ಥಾಪಕ ಶಕ್ತಿಯಿಂದಲೂ ಹೀಗೆ ಆಗುತ್ತದೆ. ಉಸಿರಾಟದಲ್ಲಿ ಪಕ್ಕೆಲುಬುಗಳು ಹೆಚ್ಚಾಗಿ ಚಲಿಸುತ್ತವೆ. ಉಸಿರಾಡುವುದು ಕಷ್ಟವಾದಾಗ ಮಾತ್ರ ಇದು ಕಂಡುಬರುತ್ತದೆ. ಉಸಿರ್ನಾಳ ಮತ್ತು ಅದರ ಬೃಹತ್ ಶಾಖೆಯ ಮೇಲುಗಡೆ ಕೇಳಿಬರುವ ಗಂಟಲುಸಿರಾಟ ಫುಪ್ಫುಸಗಿಡಿದುಕೊಂಡಾಗ ಉಂಟಾಗುತ್ತದೆ. ಉಸಿರಾಟ ಕ್ರಿಯೆಯಲ್ಲಿ ಭಾಗವಹಿಸುವ ಸಾಮಾನ್ಯ ಸ್ನಾಯುಗಳು ರಕ್ತಕ್ಕೆ ಸಾಕಾಗುವಷ್ಟು ಗಾಳಿಯನ್ನು ಒದಗಿಸಲು ಸೋತು ಸಹಾಯಕ ಸ್ನಾಯುಗಳು ನೆರವಿಗೆ ಒದಗಿಬರಬೇಕಾದ ಪ್ರಸಂಗದಲ್ಲಿ ಬಲವಂತದ ಉಸಿರಾಟ ತೋರುವುದು. ಚೈನ್‌ಸ್ಟೋಕ್ ಉಸಿರಾಟ ಎಂದರೆ ದೊಡ್ಡ ದೊಡ್ಡ ಗೊರಕೆಗಳನ್ನು ಬಿಡುವುದು ಮತ್ತು ಸ್ವಲ್ಪ ಹೊತ್ತು ಉಸಿರಾಡದಿರುವುದು. ಇಂಥ ಉಸಿರಾಟ, ಮಿದುಳು ರಕ್ತ ಪರಿಚಲನಾಂಗವ್ಯೂಹ ಅಥವ ಮೂತ್ರಜನಕಾಂಗಗಳ ವ್ಯಾಧಿಗಳಲ್ಲಿ ಸಾಮಾನ್ಯ.

ಉಸಿರಾಟ ಜರುಗುವ ವಿವಿಧ ಹಂತಗಳಲ್ಲಿ ಒಳಕ್ಕೂ ಹೊರಕ್ಕೂ ಸರಿದಾಡುವ ಗಾಳಿಯ ಪ್ರಮಾಣವನ್ನು ಅನಿಲಮಾಪಕದಿಂದ (ಗ್ಯಾಸೊಮೀಟರ್) ಅಳೆಯಬಹುದು, ಈ ಮುಂದೆ ಒಳಗೆ ತೆಗೆದುಕೊಂಡ ಗಾಳಿಯ ಪ್ರಮಾಣವನ್ನೂ ಹೊರಕ್ಕೆ ಬಿಟ್ಟ ಗಾಳಿಯ ಪ್ರಮಾಣವನ್ನೂ ತಿಳಿಸಲಾಗಿದೆ.

ಭರತದ ಗಾಳಿ: ಒಂದು ಉಸಿರಾಟ ಪ್ರಕ್ರಿಯೆಯಲ್ಲಿ ಒಳಗೆ ತೆಗೆದುಕೊಂಡ ಅಥವಾ ಹೊರಗೆಬಿಟ್ಟ ಗಾಳಿಯ ಪ್ರಮಾಣ, ಅದು ವಿವಿಧ ಪ್ರಭೇದಗಳಲ್ಲಿ ಹೀಗಿದೆ. ಮನುಷ್ಯ 500 ಮಿಲೀ, ಕುದುರೆ 6,000 ಮಿಲೀ, ಹಸು 3,800 ಮಿಲೀ, ಆಡು 310 ಮಿಲೀ, ಕುರಿ 200 ಮಿಲೀ, ನಾಯಿ 176 ಮಿಲೀ. ಕೆಲಸವಿಲ್ಲದೆ ಕುಳಿತಿರುವಾಗ ಶರೀರದ ತೂಕಕ್ಕೆ ಅನುಗುಣವಾಗಿ ಭರತದ ಗಾಳಿ ಬದಲಾಯಿಸುತ್ತದೆ. ಅದನ್ನು ಈ ಕೆಳಗಣ ಸೂತ್ರದಲ್ಲಿ ನಿರೂಪಿಸಬಹುದು.

ಭರತದ ಗಾಳಿ (ಮಿಲೀ)=0,0074 x ದೇಹ ತೂಕ (ಗ್ರಾಂ).

ಕುಂಭಕದಲ್ಲಿನ ಪೂರಕ ಶ್ವಾಸದ ಪ್ರಮಾಣ: ಒಂದು ಸಾಮಾನ್ಯವಾದ ಉಸಿರೆಳೆತದ ತರುವಾಯ ಶಕ್ತಿಯಿದ್ದಷ್ಟು ಆಳವಾಗಿ ಉಸಿರೆಳೆದುಕೊಂಡಾಗ ಒಳಕ್ಕೆ ಸೇರುವ ಗಾಳಿಯ ಪ್ರಮಾಣ. ಇದು ವಿವಿಧ ಪ್ರಭೇದಗಳಲ್ಲಿ ಹೀಗಿದೆ ಮನುಷ್ಯರಲ್ಲಿ ಸು. 2,000 ಮಿಲೀ; ಕುದುರೆ 1,200 ಮಿಲೀ; ಕುರಿ 100–260 ಮಿಲೀ; ಶಕ್ತಿಯಿದ್ದಷ್ಟು ಒಳಗೆಳೆದುಕೊಂಡು ಶಕ್ತಿಯಿದ್ದಷ್ಟು ಹೊರಹಾಕುವ ಗಾಳಿಗಳ ಪ್ರಮಾಣದ ಹೆಸರು ಫುಪ್ಫುಸದ ಪ್ರಾಣ ತ್ರಾಣ, ಇದು ಹೀಗಿದೆ: ಮನುಷ್ಯ 3,700 ಮಿಲೀ; ಕುದುರೆ 30,000 ಮಿಲೀ; ಕುರಿ 800–1,540 ಮಿಲೀ.

ಉಳಿಕೆಯ ಗಾಳಿ: ಕುಂಭಕದ ಗಾಳಿಯನ್ನು ಹೊರ ಹಾಕಿದ ಮೇಲೆ ಫುಪ್ಫುಸಗಳು ಮುದುರಿಹೋಗುವುದಿಲ್ಲ ಅವುಗಳಲ್ಲಿ ತಕ್ಕಷ್ಟು ಗಾಳಿ ಇದ್ದೇ ಇರುತ್ತದೆ. ಇದಕ್ಕೆ ಉಳಿಗಾಳಿ ಎಂದು ಹೆಸರು. ಅದು ಮನುಷ್ಯನಲ್ಲಿ ಸರಾಸರಿ 1,500 ಮಿಲೀ ಇದೆ. ಕುದುರೆಯಲ್ಲಿ ಸು. 1,200 ಮಿಲೀ. ಶ್ವಾಸನಾಳ ತೆರೆದ ಬಳಿಕ ಫುಪ್ಫುಸಗಳು ಮುದುರಿಕೊಂಡು ಅನಂತರ ಆ ಕೋಶಗಳಲ್ಲಿ ಉಳಿದುಕೊಂಡಿರುವ ಗಾಳಿಯ ಹೆಸರು ಕನಿಷ್ಠ ಮಿತಿಯ ಗಾಳಿ (ಮಿನಿಮಮ್ ಏರ್). ಈ ಗಾಳಿ ಇರುವುದರಿಂದಲೇ ಫುಪ್ಫುಸಗಳನ್ನು ನೀರಿನಲ್ಲಿ ಇರಿಸಿದಾಗ ಮುಳಗದೆ ತೇಲುತ್ತವೆ.

ಮಿನಿಟ್ ಪ್ರಮಾಣ: ಒಂದು ಮಿನಿಟಿನಲ್ಲಿ ನಡೆಯುವ ಉಸಿರಾಟದ ಸಂಖ್ಯೆಯಿಂದ ಭರತದ ಗಾಳಿಯನ್ನು ಗುಣಿಸಿದರೆ ಉಸಿರಾಟದ ಮಿನಿಟ್ ಪ್ರಮಾಣ ದೊರೆಯುತ್ತದೆ. ನಾಯಿಗಳಲ್ಲಿ ಇದರ ಸರಾಸರಿ ಸು. 4,000.

ಉಸಿರಾಟದ ಪುನರಾವರ್ತನೆ: ಒಂದು ಮಿನಿಟಿನಲ್ಲಿ ಎಷ್ಟು ಸಲ ಉಸಿರಾಡುತ್ತದೆ ಎಂಬುದರ ಲೆಕ್ಕ. ವಿಶ್ರಾಂತಿಯಲ್ಲಿರುವ ಉನ್ನತ ಸ್ತರದ ಪ್ರಾಣಿಗಳು ಹಾಗು ಮನುಷ್ಯನಲ್ಲಿ ಪುನರಾವರ್ತನ ಸಂಖ್ಯೆಗಳು ಹೀಗಿವೆ: ಕುದುರೆ 8–16; ನಾಯಿ 10–30; ಎತ್ತು 10–30; ಬೆಕ್ಕು 20–30; ಕರೆವ ಹಸು 18–28; ಕೋಳಿ 15–30; ಕುರಿ ಮತ್ತು ಆಡು 12–20; ಮನುಷ್ಯ 12–20; ಹಂದಿ 8–18. ಉಸಿರಾಟದ ಪುನರಾವರ್ತನೆ ಅನೇಕ ಬದಲಾವಣೆಗಳಿಗೆ ಒಳಪಟ್ಟಿದೆ. ಇದು ದೇಹದ ಗಾತ್ರ, ವಯಸ್ಸು, ವ್ಯಾಯಾಮ, ಭಾವೋದ್ರೇಕ, ಪರಿಸರದ ಉಷ್ಣಮಾನ, ಗರ್ಭಧಾರಣೆ, ಹೊಟ್ಟೆ ತುಂಬುವ ಜಾಗದ ಅಳತೆ, ಅದರಲ್ಲೂ ಮೆಲುಕು ಹಾಕುವ ಪ್ರಾಣಿಗಳಲ್ಲಿ ಮೊದಲ ಹೊಟ್ಟೆಯ ಪ್ರಮಾಣ ಮುಂತಾದ ಅಂಶಗಳನ್ನು ಅವಲಂಬಿಸಿದೆ.

ಮನುಷ್ಯರಲ್ಲಿ ಉಸಿರಾಟ: ಉಚ್ಛ್ವಾಸ ಗಾಳಿಯಲ್ಲಿನ ಧೂಳಿನ ದೊಡ್ಡ ಕಣಗಳನ್ನು ಮೂಗಿನ ಕೂದಲುಗಳು ಸೋಸಿ ಒಳಬಿಡುತ್ತವೆ. ಗಂಟಲು ಕುಳಿಯ (ಫ್ಯಾರಿಂಕ್ಸ್) ಮೂಲಕ ಇದು ಸಾಗುವಾಗ ಬೆಚ್ಚಗಾಗಿ ತೇವಗೂಡಿ ಉಸಿರ್ನಾಳಕ್ಕೆ ಬರುವ ಹೊತ್ತಿಗೆ ಇದರಲ್ಲಿ ನೀರಿನ ಆವಿ ತುಂಬಿರುವುದು.

ಉಸಿರ್ನಾಳ ಎಡಕ್ಕೂ ಬಲಕ್ಕೂ ಪಂಗುಸಿರ್ನಾಳ (ಬ್ರಾಂಕಸ್) ಮುಖ್ಯ ಕಾಂಡಗಳಾಗಿ ಕವಲೊಡೆದು ಮತ್ತು ಕವಲೊಡೆಯುತ್ತ ನವಿರುಸಿರ್ನಾಳಗಳಾಗಿ (ಬ್ರಾಂಕಿಯೋಲ್ಸ್) ಫುಪ್ಫುಸದ ಮೊದಲ ಕಿರಿಹಾಲೆಯಲ್ಲಿ (ಲಾಬ್ಯೂಲ್) ಕೊನೆಗೊಳ್ಳುತ್ತವೆ. ಈ ಕಿರಿಹಾಲೆಯೇ ಕೆಲಸಮಾಡುವ ಫುಪ್ಫುಸದ ಘಟಕ. ಗಾಳಿಗೂ ರಕ್ತಕ್ಕೂ ನಡುವೆ ಆಮ್ಲಜನಕ ಹಾಗು ಕಾರ್ಬನ್ ಡೈಆಕ್ಸೈಡ್, ವಿನಿಮಯವಾಗುವ ಸುಮರು 39 ಕೋಟಿ ಗಾಳಿಗೂಡುಗಳ ಒಳಗೆ ಗಾಳಿ ಹಂಚಿಕೆಯಾಗುತ್ತದೆ. ಒಂದು ಮಿಮೀ ಗಾತ್ರದಲ್ಲಿ 5–10 ಇರುವ ಗಾಳಿಗೂಡುಗಳು ಮುಖ್ಯವಾಗಿ ಗಾಳಿಯಲ್ಲಿ ತೂಗಿಬಿದ್ದಿರುವ ಲೋಮನಾಳಗಳ ಕಟ್ಟುಗಳು, ಈ ರಕ್ತನಾಳಗಳ ಒಟ್ಟು ಉದ್ದವನ್ನು 2,400 ಕಿಮೀ. ಎಂದು ಲೆಕ್ಕ ಹಾಕಿದೆ. ವಿಸರಣೆಗೊಳ್ಳುವ ಮೇಲ್ಮೈ 45 ಚದರ ಮೀಟರುಗಳಷ್ಟು ಹರಡಿದ್ದರೂ ಅದರ ದಪ್ಪ ಒಬ್ಬನಲ್ಲಿ 0.5–2.5 ಮೈಕ್ರಾನು. (ಮಿಲಿಮೀಟರಿನ ಸಾವಿರ ಅಂಶ) ಇರುವುದು. ವಿಶ್ರಮಿಸುವಾಗ ಒಂದೊಂದು ಲೋಮನಾಳದಲ್ಲಿ 0.9 ಸೆಕೆಂಡಿಗೊಂದು ಬಾರಿ ಹೊಸ ರಕ್ತ ಬರುವುದು. ದುಡಿಯುತ್ತಿರುವಾಗ ಸೆಕೆಂಡಿಗೆ 3 ಬಾರಿ ಬರುತ್ತದೆ. ವಿಶ್ರಮಿಸುವಾಗ ಫುಪ್ಫುಸಗಳ ಮೂಲಕ ರಕ್ತ ಮಿನಿಟಿಗೆ 5 ಲೀಟರ್ ಜೋರಾಗಿ ಗರಡಿ ಸಾಮು ಮಾಡುವಾಗ ಇದರ ನಾಲ್ಕೈದರಷ್ಟು ಪ್ರವೇಶಿಸುವುದು. ವಿಶ್ರಾಂತಿ ಪಡೆಯುತ್ತಿರುವಾಗ ಗಾಳಿಗೂಡುಗಳಿಗೆ ನುಗ್ಗುವ ಗಾಳಿ 4 ಮಿಲೀ ಅಂಗಸಾಧನೆಯಲ್ಲಿ ಇದು 100 ಲೀಟರುಗಳನ್ನು ಮೀರುವುದು.

ಫುಪ್ಫುಸದಲ್ಲಿ ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್ ವಿಸರಣೆ: ಗೊತ್ತಾದ ಉಷ್ಣತೆಯಲ್ಲಿ ಒಂದು ಅನಿಲದ ಸಾಂದ್ರತೆಯನ್ನು ಆಂಶಿಕ ಒತ್ತಡದಲ್ಲಿ (ಪಾರ್ಶಿಯಲ್ ಪ್ರೆಷರ್) ಪಾದರಸದ ಮಿಮೀ ಯಲ್ಲಿ ಹೇಳುವುದು ವಾಡಿಕೆ. ವಿಶ್ರಮಿಸುವಾಗ ಫುಪ್ಫುಸದ ಉಚ್ಛ್ವಾಸದ ಗಾಳಿಯಲ್ಲಿ ಆಮ್ಲಜನಕದ ಆಂಶಿಕ ಒತ್ತಡವು, ಗಾಳಿಗೂಡುಗಳ ರಕ್ತದಲ್ಲಿರುವ ಆಮ್ಲಜನಕದ ಆಂಶಿಕ ಒತ್ತಡಕ್ಕಿಂತ ಹೆಚ್ಚಾಗಿರುವುದರಿಂದ, ಫುಪ್ಫುಸದ ಗಾಳಿಯಲ್ಲಿರುವ ಆಮ್ಲಜನಕವು ವಿಸರಣ (ಡಿಫ್ಯುಷನ್) ಕ್ರಿಯೆಯಿಂದ ಗಾಳಿಗೂಡುಗಳ ರಕ್ತ ಸೇರುತ್ತದೆ. ಇದೇ ಸಮಯದಲ್ಲಿ ಗಾಳಿಗೂಡುಗಳಲ್ಲಿರುವ ಕಾರ್ಬನ್ ಡೈಆಕ್ಸೈಡ್, ಫುಪ್ಫುಸದ ಗಾಳಿಯನ್ನು ಸೇರುತ್ತದೆ ಹಾಗು ನಿಶ್ವಾಸದ ಗಾಳಿಯೊಡನೆ ದೇಹದ ಹೊರಗೆ ಬರುತ್ತದೆ.

ಮನುಷ್ಯನಲ್ಲಿ ಉಸಿರಾಟದ ಕ್ರಿಯಾತಂತ್ರ: ಎದೆಗೂಡಿನ ಪೊಳ್ಳಿನ ಘನಗಾತ್ರದ (ವಾಲ್ಯೂಂ) ವ್ಯತ್ಯಾಸಗಳಿಂದ ಫುಪ್ಫುಸದ ಒಳಕ್ಕೂ ಹೊರಕ್ಕೂ ಗಾಳಿ ಸಾಗುತ್ತದೆ. ಫುಪ್ಫುಸಗಳು ಮಾತ್ರ ತಾವಾಗಿಯೇ ಕುಗ್ಗುವುದೂ ಇಲ್ಲ. ಹಿಗ್ಗುವುದೂ ಇಲ್ಲ. ಹಾಗಯೇ ಬಿಟ್ಟರೆ ಅವು ಮುದುರುವ ಸ್ವಭಾವದವು. ಎದೆಗೂಡಿನ ಪೊಳ್ಳನ್ನು ಅನುಸರಿಸುತ್ತವೆ. ಆದ್ದರಿಂದ ಉಸಿರಾಡಲು ಶಕ್ತಿ ಇರುವುದೆಲ್ಲ ಫುಪ್ಫುಸಗಳ ಹೊರಗೆ ಎದೆಗೂಡಿನ ಪೊಳ್ಳಿನ ತಳದಲ್ಲಿರುವ ಬಲವಾದ ಸ್ನಾಯುಗಳಿಂದಾದ ವಪೆ ಹಾಗು ಇತರ ಸ್ನಾಯುಗಳಲ್ಲಿ. ಉಸಿರೆಳೆದುಕೊಳ್ಳುವಾಗ ಎರಡು ಯಾಂತ್ರಿಕ ಕೆಲಸಗಳಾಗುತ್ತವೆ. ಮೊದಲಿಗೆ ವಪೆಯ (ಫ್ರೆನಿಕ್)ನರದ ಮೂಲಕ ಇಳಿದು ಬರುವ ಆವೇಗಗಳು (ಇಂಪಲ್ಸಸ್) ವಪೆ ಕುಗ್ಗಿ ಕೆಳಸರಿಯುವಂತೆ ಮಾಡುವವು. ವಪೆಯ ಕುಗ್ಗು ಅರೆ ಅಂಗುಲ, ವಪೆಯ ಮೇಲ್ಮೈಯ ಸಲೆ 250 ಚಸೆಂಮೀ.

ಆದ್ದರಿಂದ ಸುಮಾರು 300 ಮಿಲೀ ಗಳಷ್ಟು ಗಾಳಿ ಈ ವಿಧಾನದಿಂದ ಒಳಹೋಗುವುದು. ಎರಡನೆಯದಾಗಿ ಬೆನ್ನು ಮೂಳೆ ಕಂಬಕ್ಕೆ ಅಂಟಿರುವ ಸ್ನಾಯುಗಳ ಹಲವಾರು ಜೋಡಿಗಳು ಮುಂದಕ್ಕೂ ಕೆಳಗಡೆಗು ಚಾಚಿ ಪಕ್ಕೆಲುಬುಗಳಿಗೆ ತಗುಲಿಕೊಂಡು, ಉಸಿರೆಳೆದುಕೊಳ್ಳುವಾಗ ಪಕ್ಕೆಲುಬುಗಳನ್ನು ಮೇಲೆತ್ತಿ ಎದೆಗೂಡಿನ ಒಳಗಣ ಘನಗಾತ್ರವನ್ನು ಹೆಚ್ಚಿಸುವುವು, ಈ ವಿಧಾನದಲ್ಲಿ ಸುಮಾರು 200 ಮಿಲೀ ಗಾಳಿ ಒಳ ಸೇರುತ್ತದೆ. ಪಕ್ಕೆಲುಬುಗಳು ಕಮಾನಾಗಿ ಬಾಗಿರುವಿಕೆ, ಅವುಗಳ ಒಟ್ಟು ರಚನೆ ಇತ್ಯಾದಿಗಳಿಂದಾಗಿ




**ಎದೆಗೂಡಿನ ಎಲುಬುಗಳ ಪಕ್ಕದ ನೋಟ**

ಒಳಗಿನ ಗಾತ್ರ ಆದಷ್ಟು ಹೆಚ್ಚಾಗಿರುವಂಥ ಏರ್ಪಾಡಿದೆ. ಅಲ್ಲದೆ ಪಕ್ಕೆಲುಬುಗಳನ್ನು ಮೇಲೆತ್ತಿದರೆ ಎದೆಗೂಡಿನ ಮುಂದು ಹಿಂದಣ ವ್ಯಾಸ ಹೆಚ್ಚಿ ಅದರ ಅಗಲ ಜಾಸ್ತಿಯಾಗುವುದು. ಇವೆಲ್ಲ ಏರ್ಪಾಡುಗಳು ಆದಷ್ಟು ಹೆಚ್ಚು ಪ್ರಮಾಣದ ಗಾಳಿ ಒಳಸೇರಲು ಸಹಕಾರಿಗಳಾಗಿವೆ. ಒಬ್ಬ ಆರೋಗ್ಯವಂತ ಮನುಷ್ಯನಲ್ಲಿ ಉಚ್ಛ್ವಾಸ ಮುಗಿದೊಡನೆ ಮಿದುಳಿನಲ್ಲಿರುವ ಉಸಿರಾಟ ನಿಯಂತ್ರಣ ಕೇಂದ್ರದಿಂದ ಬರುವ ಆವೇಗಗಳು ನಿಲ್ಲುತ್ತವೆ. ತತ್‌ಕ್ಷಣ ಫುಪ್ಫುಸಗಳ ಕುಗ್ಗು ಸೆಳೆತದಿಂದ ಎದೆಗೂಡು ಕುಸಿದು ನಿಶ್ವಾಸಕ್ಕೆ ಎಡೆ ಮಾಡಿಕೊಡುತ್ತದೆ.

ಫುಪ್ಫುಸದ ಘನಗಾತ್ರಗಳು: 70 ಕಿಗ್ರಾಂ ತೂಕದವನ ಫುಪ್ಫುಸದಲ್ಲಿ 5.25 ಲೀ.ಗಳಷ್ಟು ಗಾಳಿ ಹಿಡಿಯುತ್ತದೆ.ಇದು ಒಟ್ಟು ಫುಪ್ಫುಸದ ಗಾತ್ರ. ಇದನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಲಾಗಿದೆ. ಜೀವಾಳದ ಗಾತ್ರ (ವೈಟಲ್ ಕೆಪ್ಯಾಸಿಟಿ) ಮತ್ತಿತರ ಫುಪ್ಫುಸದ ಘನಗಾತ್ರಗಳ ಅಳತೆ ಫುಪ್ಫುಸದ ರೋಗಗಳಲ್ಲಿ ಮುಖ್ಯವಾದ ನಿದಾನದ ವಿಧಾನ.

ಡಾಲ್ಟನ್ನನ ಆಂಶಿಕ ಒತ್ತಡಗಳ ನಿಯಮ ಮತ್ತು ಉಸಿರಾಟಕ್ಕೆ ಅದರ ಅನ್ವಯ: ದೇಹದೊಳಗೆ ಅನಿಲವಿನಿಮಯವನ್ನು ಅರಿಯಲು ಅನಿಲಗಳ ಕೆಲವು ಭೌತ ಗುಣಗಳನ್ನು ಅರಿಯಬೇಕು. ಆಮ್ಲಜನಕ ರಕ್ತಬಣ್ಣದೊಡನೆ (ಹೀಮೋಗ್ಲೋಬಿನ್) ಕೂಡಿ ಊತಕಗಳವರೆಗೂ ಅದರ ಸಾಗಾಣಿಕೆ ಆ ಅನಿಲದ ಅಣುಸಾಂದ್ರತೆಯನ್ನು ಅವಲಂಬಿಸಿದೆ. ವಾತಾವರಣದ ಗಾಳಿಯನ್ನು ವಿಶ್ಲೇಷಿಸಲಾಗಿದೆ ಅದರಲ್ಲಿರುವ ಬೇರೆ ಬೇರೆ ಅನಿಲಗಳ ಘನಗಾತ್ರಗಳನ್ನು 100 ಘನಗಾತ್ರಗಳ ಒಣಗಾಳಿಯ ಪ್ರಮಾಣದಲ್ಲಿ ಅಳೆದಿದ್ದಾರೆ. ಈ ಪ್ರಕಾರ ಆಮ್ಲಜನಕ 20.94%. ಕಾರ್ಬನ್ ಡೈಕ್ಸೈಡ್ 0.03%, ಹಾಗು ನೈಟ್ರೋಜನ್

ಇತ್ಯಾದಿ ಅನಿಲಗಳು 79.03% ಇವೆಯೆಂದು ತಿಳಿದಿದೆ. ಈ ಶೇಕಡಾ ಸಂಖ್ಯೆಗಳು ಭೂಮಿಯ ಎಲ್ಲೆಡೆಗಳಲ್ಲಿ ಮಾತ್ರವಲ್ಲ ಸುಮಾರು 40 ಕಿಮೀ ಎತ್ತರದ ಔನ್ನತ್ಯಗಳಲ್ಲಿಯೂ ಸ್ಥಿರವಾಗಿಯೆ ಇವೆ. ಅಂದ ಮಾತ್ರಕ್ಕೆ ಒಂದು ಅನಿಲದ ಅಣುಸಾಂದ್ರತೆಯನ್ನು ಅದರ ಶೇಕಡ ಇರವು ಮಾತ್ರ ನಿರ್ಧರಿಸುವುದಿಲ್ಲ. 8 ಕಿಮೀ ಎತ್ತರ ಏರಿದವನು, ಉಸಿರಾಟಕ್ಕೆ ಚಡಪಡಿಸುವುದರ ಕಾರಣ ಆ ಎತ್ತರದಲ್ಲಿ ಆಮ್ಲಜನಕ ಅಣುಗಳ ವಿರಳತೆ. ಅನಿಲಗಳ ಈ ವರ್ತನೆಯ ಕಾರಣವನ್ನು ಡಾಲ್ಟನ್ (1788–1844) ವಿವರಿಸಿದ್ದಾನೆ.

ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡುಗಳನ್ನು ರಕ್ತ ಸಾಗಿಸುವ ವಿಧಾನ: ಆಹಾರ ಪದಾರ್ಥಗಳ ಉತ್ಕರ್ಷಣೆಯಲ್ಲಿನ ಅತಿ ಮುಖ್ಯ ಉಪೋತ್ಪನ್ನ ಕಾರ್ಬನ್ ಡೈಆಕ್ಸೈಡ್ ಹಾಗು ಆಮ್ಲಜನಕಗಳನ್ನು ರಕ್ತದಲ್ಲಿ ಒಯ್ಯುವ ಪ್ರಧಾನವಾಹನ, ಕೆಂಪುರಕ್ತಕಣದಲ್ಲಿರುವ, ವಿಶಿಷ್ಟ ರಾಸಾಯನಿಕ, ರಕ್ತಬಣ್ಣಕ (ಹಿಮೋಗ್ಲೋಬಿನ್).




ಪುಪ್ಪುಸದಲ್ಲಿ ಇಂಗಾಲ ಡೈಆಕ್ಸೈಡು ಹೊರಬಿದ್ದು ಆಮ್ಲಜನಕ ಒಳ ಹೋಗುವಾಗ ರಕ್ತದಲ್ಲಾಗುವ ಮುಖ್ಯ ಬದಲಾವಣೆಗಳು.

95% ಆಮ್ಲಜನಕವು ಹಿಮೋಗ್ಲೋಬಿನ್ ಜೊತೆ ಸೇರಿಕೊಂಡು, ಆಕ್ಸಿಹಿಮೋಗ್ಲೋಬಿನ್ ಆಗಿ ರಕ್ತಪರಿಚಲನೆಯ ಮುಖಾಂತರ ಅಂಗಾಂಶಗಳನ್ನು ಸೇರಿ, ಅಲ್ಲಿ ಆಕ್ಸಿಹಿಮೋಗ್ಲೋಬಿನ್‌ನಿಂದ ವಿಭಜನೆಗೊಂಡು ಕೋಶಗಳನ್ನು ಸೇರಿಕೊಂಡು ಕೋಶಗಳ ಉತ್ಕರ್ಷಣ ಕ್ರಿಯೆಯಲ್ಲಿ ಭಾಗವಹಿಸಿ, ಶಕ್ತಿ ಉತ್ಪಾದನೆಗೆ ನೆರವಾಗುತ್ತದೆ. ಜೀವಕೋಶಗಳಲ್ಲಿ ಉತ್ಕರ್ಷಣ ಕ್ರಿಯೆಯ, ಉಪೋತ್ಪನ್ನವಾದ, ತ್ಯಾಜ್ಯವಸ್ತುವಾದ ಕಾರ್ಬನ್ ಡೈಆಕ್ಸೈಡ್, ಕೋಶಗಳಿಂದ ರಕ್ತವನ್ನು ಸೇರಿ, ಕಾರ್ಬಾನಿಕ್ ಆಮ್ಲ, ಬೈಕಾರ್ಬೊನೇಟ್ ಹಾಗು ಕಾರ್ಬಅಮ್ಯೆನೊಹಿಮೋಗ್ಲೋಬಿನ ರೂಪದಲ್ಲಿ ರಕ್ತದಲ್ಲಿ ಸಾಗಿ, ಪುಪ್ಪುಸಗಳಲ್ಲಿ ನಿಶ್ವಾಸದ ಗಾಳಿಯನ್ನು ಸೇರಿಕೊಂಡು ದೇಹದಿಂದ ಹೊರಬರುತ್ತದೆ.



ಮಿದುಳುಕಾಂಡದಲ್ಲಿರುವ ಉಸಿರಾಟ ಕೇಂದ್ರ

ಉಸಿರಾಟಕೆಯ ಕೇಂದ್ರ ಹಾಗೂ ಉಸಿರಾಟ ನಿಯಂತ್ರಣ: ಮಿದುಳಿನ ಕೆಳಗಡೆಯ ಮಿದುಳಕಾಂಡದಲ್ಲಿ (ಮೆಡುಲ ಅಬ್ಲಾಂಗೇಟ) ಒಂದು ಗಜ್ಜುಗ ಗಾತ್ರದ ನರತಂತುಗಳ ಜಾಲದಿಂದ ರಚಿತವಾದ ಉಸಿರಾಟ ಕೇಂದ್ರವಿದೆ.

ಉಸಿರಾಟಕೆ ಕೇಂದ್ರವು ಉಸಿರಾಟವನ್ನು, ಆದ್ದರಿಂದ ಜೀವನವನ್ನೇ ನಿಯಂತ್ರಿಸುತ್ತದೆ. ಉಸಿರಾಟಕ್ಕೆ ಸಂಬಂಧಿಸಿದ ಸಕಲ ಸ್ನಾಯುಗಳ ಕ್ರಿಯೆಯನ್ನೂ ನಿಯಂತ್ರಿಸಿ ನಿರ್ವಹಿಸುವ ಕೇಂದ್ರವಿದೆ. ಕೆಲವು ನಿರ್ದಿಷ್ಟ ಭಾಗಗಳನ್ನು ತೆಗೆಯುವುದರಿಂದ ಅಥವಾ ರಾಸಾಯನಿಕ ದ್ರಾವಣಗಳನ್ನು ಚುಚ್ಚುವದರಿಂದ ಉಂಟಾಗುವ ಪ್ರಚೋದನೆಯ ಪರಿಣಾಮಗಳು ಮತ್ತು ಚುರುಕಾಗಿರುವ ಎಲ್ಲ ನರಕಣಗಳಿಂದ ಏಳುವ ವಿದ್ಯುತ್ತಿನ ಆವೇದನಗಳನ್ನು (ಇಂಪಲ್ಸಸ್) ಗುರುತಿಸುವುದರ ಮೂಲಕ ಉಸಿರಾಟ ಕೇಂದ್ರದ ಕ್ರಿಯಾವಿಧಾನಗಳನ್ನರಿಯಲಾಗಿದೆ. ಮೊದಲು ಆವೇದನಗಳು ಹುಟ್ಟಲು ಹಿಮ್ಮರಿವ ಚಟುವಟಿಕೆ (ರಿಫ್ಲೆಕ್ಸ್ ಆಕ್ಟಿವಿಟಿ) ಕಾರಣವಾಗಬಹುದು.

ಉಸಿರಾಟದ ರಾಸಾಯನಿಕ ನಿಯಂತ್ರಣ: ಉಚ್ಛ್ವಾಸದ ಪ್ರಮಾಣವನ್ನು ನಿಯಂತ್ರಿಸುವ ಒಂದು ರಾಸಾಯನಿಕ ವಿಧಾನ. ಮಿದುಳಿನಲ್ಲಿರುವ ಉಸಿರಾಟದ ಕೇಂದ್ರ ಪ್ರಚೋದನೆಯಿಂದ ಅನೈಚ್ಛಿಕವಾಗಿ (ನಮ್ಮ ಅರಿವಿಲ್ಲದಂತೆ) ಉಚ್ಛ್ವಾಸ – ನಿಶ್ವಾಸ ಕ್ರಿಯೆಗಳು ಕ್ರಮಬದ್ಧತೆ ಇಂದ ನೆರವೇರುವುವು. ಈ ಕೇಂದ್ರವು ಮಿದುಳಿನ ಕೆಳಗಡೆಯ ಮಿದುಳು ಕಾಂಡದಲ್ಲಿದೆ. ಈ ಕೇಂದ್ರದ ಕೆಳಗಡೆ ಭಾಗವು ಉಚ್ಛ್ವಾಸವನ್ನು, ಮೇಲ್ಗಡೆ ಭಾಗ ನಿಶ್ವಾಸವನ್ನು ನಿಯಂತ್ರಿಸುತ್ತವೆ. ಎದೆಯಲ್ಲಿರುವ ಪಕ್ಕೆಲುಬುಗಳ ಮಧ್ಯದಲ್ಲಿರುವ ಸ್ನಾಯುಗಳು (ಇಂಟರ್ ಕೊಸ್ಟಲ್ ಮಸಲ್ಸ್), ವಪೆ, ಹಾಗು ಫುಪ್ಪುಸಗಳಲ್ಲಿರುವ ನವಿರು ಉಸಿರ್ನಾಳಗಳು ಉಸಿರಾಟ ಕೇಂದ್ರದಿಂದ ವಿವಿಧ ನರಗಳಿಂದ ಸಂಪರ್ಕಹೊಂದಿವೆ. ಲಯಬದ್ಧವಾದ ನರಸಂವೇದನೆಗಳು (ಇಂಪಲ್ಸಸ್) ವಪೆ ಮತ್ತು ಪಕ್ಕೆಲುಬು ಮಧ್ಯ ಸ್ನಾಯುಗಳನ್ನು ಪ್ರಚೋದಿಸಿ, ಕುಗ್ಗಿಸಿದಾಗ, ಫುಪ್ಪುಸಗಳು ಹಿಗ್ಗಿ ಉಚ್ಛ್ವಾಸದ ಮೂಲಕ ಅವುಗಳಲ್ಲಿ ಗಾಳಿ ತುಂಬಿಕೊಳ್ಳುತ್ತದೆ. ಆಗ ಫುಪ್ಪುಸಗಳಲ್ಲಿರುವ ಹಿಗ್ಗುವಿಕೆ ಗ್ರಾಹಿಗಳು (ಸ್ಟ್ರೆಚ್ ರಿಸೆಪ್ಟರ್) ಪ್ರಚೋದನೆಗೊಂಡು ವೇಗಸ್ ನರದ ಮೂಲಕ ಉಸಿರಾಟ ಕೇಂದ್ರಕ್ಕೆ (ನಿಶ್ವಾಸ ಕೇಂದ್ರ) ಆವೇಗಗಳನ್ನು ಕಳುಹಿಸುತ್ತವೆ. ಆಗ ತಾತ್ಪೂರ್ತಿಕವಾಗಿ ಉಚ್ಛ್ವಾಸ ಕೇಂದ್ರದ ನಿರ್ಬಂಧನೆಯಾಗಿ, ಪಕ್ಕೆಲುಬು ಮಧ್ಯದ ಸ್ನಾಯುಗಳು ಹಿಗ್ಗಿ, ಎದೆಯ ಗೂಡು ಸಹಜ ಗಾತ್ರಕ್ಕೆ ಮರಳಿ, ಕುಗ್ಗಿದ ಎದೆಗೂಡಿನ ಗಾತ್ರದಿಂದ ಫುಪ್ಪುಸಗಳು ಕುಗ್ಗಿ, ನಿಶ್ವಾಸ ಉಂಟಾಗುತ್ತದೆ. ಈ ತೆರನಾಗಿ ಉಚ್ಛ್ವಾಸ – ನಿಶ್ವಾಸ ಕ್ರಿಯೆಗಳು ನಿರಂತರವಾಗಿ ಜೀವಿಯ ಪರಿವಿಲ್ಲದೆ ನಡೆಯುತ್ತಿರುತ್ತವೆ.

ಇದಲ್ಲದೆ ಉಸಿರಾಟ ಕ್ರಿಯೆಗೆ ರಾಸಾಯನಿಕ ನಿಯಂತ್ರಣವೂ ಇದೆ. ಸಾಮಾನ್ಯ ತಂಗೊರಳ (ಕಾಮನ್ ಕ್ಯಾರೊಟಿಡ್) ಹಾಗು ಮಹಾಧಮನಿ (ಅಯೋರ್ಟಾ) ಯ ಕಮಾನಿನಲ್ಲಿ, ರಕ್ತದಲ್ಲಿಯ ಇಂಗಾಲದ ಡೈಆಕ್ಸೈಡ್ ಪ್ರಮಾಣ ಹಾಗು ಆಮ್ಲೀಯತೆಗೆ ಸ್ಪಂದಿಸುವ ರಾಸಾಯನಿಕ ಗ್ರಾಹಿಗಳಿದ್ದು, ಅವುಗಳು ಮೆದುಳಿನ ಉಸಿರಾಟಕೇಂದ್ರದಿಂದ ನೇರಸಂಪರ್ಕ ಹೊಂದಿವೆ. ರಕ್ತದಲ್ಲಿ ಇಂಗಾಲದ ಡೈಆಕ್ಸೈಡ್ ಪ್ರಮಾಣ ಹೆಚ್ಚಾದಾಗ ರಾಸಾಯನಿಕ ಗ್ರಾಹಿಗಳು ಗ್ರಹಿಸಿ, ಉಚ್ಛ್ವಾಸವನ್ನು ಹೆಚ್ಚಿಸಲು, ಉಚ್ಛ್ವಾಸ ಕೇಂದ್ರವನ್ನು ಪ್ರಚೋದಿಸುತ್ತವೆ.

ಸಸ್ಯಗಳಲ್ಲಿ ಉಸಿರಾಟ: ಮೂಲತತ್ವದಲ್ಲಿ ಪ್ರಾಣಿಗಳಲ್ಲಿನ ಉಸಿರಾಟಕ್ಕೂ ಸಸ್ಯಗಳಲ್ಲಿನ ಉಸಿರಾಟಕ್ಕೂ ವ್ಯತ್ಯಾಸವಿಲ್ಲ. ಅಂದರೆ ಸಸ್ಯಗಳು ಗಾಳಿಯಿಂದ ಆಮ್ಲಜನಕವನ್ನು ಸ್ವೀಕರಿಸಿ ಆಂತರಿಕ ಉತ್ಕರ್ಷಣಕ್ರಿಯೆಗಳಲ್ಲಿ ಅದನ್ನು ಬಳಸಿಕೊಂಡು ಶಕ್ತಿಯನ್ನೂ ಇಂಗಾಲದ ಡೈಆಕ್ಸೈಡ್ ಮುಂತಾದ ಉಪೋತ್ಪನ್ನಗಳನ್ನು ಪಡೆದು ಇಂಗಾಲದ ಡೈಆಕ್ಸೈಡ್‌ನ್ನು ವಿಸರ್ಜಿಸುವವು. ಉಸಿರಾಟದ ವಿಧಾನ ಮಾತ್ರ ಬೇರೆ. ಫುಪ್ಪುಸಗಳು, ಕಿವಿರುಗಳು ಮುಂತಾದ ಉಸಿರಾಟಕೆಯ ವಿಶಿಷ್ಟ ಅವಯವಗಳು ಸಸ್ಯಗಳಲ್ಲಿಲ್ಲ. ಸಸ್ಯದ ಪ್ರತಿಯೊಂದು ಜೀವಕೋಶವೂ ನೇರವಾಗಿ ಉಸಿರಾಟ ಕ್ರಿಯೆಯಲ್ಲಿ ಭಾಗವಹಿಸುತ್ತದೆ. ಇಲ್ಲಿ ಉಸಿರಾಟದ ಬಹಿರಂಗ ಪ್ರಮಾಣವೆಂದರೆ ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್‌ಗಳ ವಿನಿಮಯ. ಸಾಮಾನ್ಯವಾಗಿಯೇ ಬಹುಪಾಲು ಸಸ್ಯಗಳಲ್ಲಿ ವಾಯುಶ್ವಸನ ಉಸಿರಾಟ (ಏರೊಬಿಕ್ ರೆಸ್ಪಿರೇಷನ್) ನಡೆಯುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಉಸಿರಾಟವು ದ್ಯುತಿಸಂಶ್ಲೇಷಣ ಕ್ರಿಯೆಯ ವಿರುದ್ಧವಾಗಿದೆ. ಉಸಿರಾಟ ಬಲು ಸಂಕೀರ್ಣ ಮತ್ತು ಹಲವಾರು ಬಗೆಯ ರಾಸಾಯನಿಕ ಕ್ರಿಯೆಗಳಿಂದ ಕೂಡಿದೆ, ಉತ್ಕರ್ಷಣೆಯ ಅಂಗವಾಗಿ ಹೊರಬರುವ ಶಕ್ತಿಯನ್ನು ಸಸ್ಯ ಕ್ರಮೇಣ ಹಂತಹಂತವಾಗಿ ಪಡೆದು ತನ್ನ ವಿವಿಧ ಚಟುವಟಿಕೆಗಳಿಗೋಸ್ಕರ ಸಂಗ್ರಹಿಸಿಟ್ಟು ಬೇಕಾದಾಗ ಬಳಸಿಕೊಳ್ಳುವುದು.

ಸಾಮಾನ್ಯವಾಗಿ ಉಸಿರಾಟದಲ್ಲಿ ಶರ್ಕರ ಪಿಷ್ಟಗಳು (ಕಾರ್ಬೊಹೈಡ್ರೇಟ್) ಮಾತ್ರವೇ ಭಾಗವಹಿಸುವುವಾದರೂ ಕೆಲವು ಬಾರಿ ಪ್ರೋಟೀನ್ ಮತ್ತು ಕೊಬ್ಬುಗಳು ಸೇರುವುದುಂಟು. ಸಕ್ಕರೆ ಭಾಗವಹಿಸಿದಾಗ ಬಳಕೆಯಾಗುವ ಆಮ್ಲಜನಕದ ಪ್ರಮಾಣ ವಿಸರ್ಜಿತವಾಗುವ ಇಂಗಾಲದ ಡೈಆಕ್ಸೈಡ್ ಪ್ರಮಾಣಕ್ಕೆ ಸಮನಾಗಿದೆ (ಅಂದರೆ ಈ ಪ್ರಮಾಣಗಳ ನಿಷ್ಪತ್ತಿ 1:1 ಎಂದಾಯಿತು), ಬದಲಾಗಿ ಮೇದೊ ಆಮ್ಲಗಳು (ಫ್ಯಾಟಿ ಆಸಿಡ್ಸ್) ಭಾಗವಹಿಸಿದಾಗ ನಿಷ್ಪತ್ತಿಯ ಬೆಲೆ 1ಕ್ಕಿಂತ ಹೆಚ್ಚಾಗಿರುವುದು. ಈ ನಿಷ್ಪತ್ತಿಯ ಹೆಸರು ಉಸಿರಾಟದ ಗುಣಾಂಕ. ಒಂದು ಸಸ್ಯದ ಉಸಿರಾಟದಲ್ಲಿ ಬಳಕೆಯಾಗುವ ವಸ್ತು ಯಾವುದು ಎಂಬುದನ್ನು ಈ ಗುಣಾಂಕದ ಮೂಲಕ ಕಂಡುಹಿಡಿಯಬಹುದು.

ಉಸಿರಾಟದ ದರ: ಇದು ಬೇರೆ ಬೇರೆ ಅಂಗಗಳಲ್ಲಿ ಮತ್ತು ಅಂಗಾಂಶಗಳಲ್ಲಿ ಬೇರೆ ಬೇರೆ. ಜೀವಕೋಶಗಳು ತ್ವರಿತವಾಗಿ ವಿಭಜನೆ ಹೊಂದುತ್ತಿರುವ ಸ್ಥಳಗಳಾದ ಬೇರಿನ

ತುದಿಗಳು, ಕಾಂಡದ ತುದಿಗಳು. ಮೊಳೆಯುತ್ತಿರುವ ಬೀಜಗಳು, ಇಲ್ಲೆಲ್ಲ ಸಾಮಾನ್ಯವಾಗಿ ಉಸಿರಾಟ ಏರು ದರದಲ್ಲಿರುವುದು. ಒಣಗಿದ ಬೀಜಗಳು, ಹಣ್ಣೆಲೆಗಳಲ್ಲಿ ದರ ಕಡಿಮೆ. ಉಸಿರಾಟದ ದರವನ್ನು ನಿಯಂತ್ರಿಸುವ ಪ್ರಧಾನ ಅಂಶಗಳು–ವಾತಾವರಣದಲ್ಲಿರುವ ಆಮ್ಲಜನಕ ಪ್ರಮಾಣ, ಇಂಗಾಲದ ಡೈಆಕ್ಸೈಡಿನ ಪ್ರಮಾಣ, ಉಸಿರಾಟದಲ್ಲಿ ಬಳಕೆಯಾಗುವ ಆಹಾರ ವಸ್ತುಗಳ ದೊರಕುವಿಕೆ ಮತ್ತು ಉಷ್ಣತೆ.

ವಾತಾವರಣದಲ್ಲಿ ಉಷ್ಣತೆ ಹೆಚ್ಚಿದಂತೆಲ್ಲ ಉಸಿರಾಟದ ದರವೂ ಹೆಚ್ಚುತ್ತದೆ. ಸಾಮಾನ್ಯವಾಗಿ $0^0$ಸೆ. ನಿಂದ ಮೇಲಕ್ಕೆ ಉಷ್ಣತೆ ಹೆಚ್ಚಾದಂತೆ ಉಸಿರಾಟವೂ ಹೆಚ್ಚುತ್ತ ಬಂದು $30^0$–$40^0$ ಸೆ. ಗಳೊಳಗೆ ಅದರ ಪರಮಾವಧಿ ದರ ತಲುಪಿ ಅಲ್ಲಿಂದ ಮೇಲಕ್ಕೆ ಕುಂಠಿತಗೊಳ್ಳುತ್ತ ಹೋಗಿ ಕೊನೆಗೆ ನಿಂತು ಹೋಗುತ್ತದೆ. ಹೆಚ್ಚಿನ ಉಷ್ಣತೆಯಲ್ಲಿ ಉಸಿರಾಟ ನಿಲ್ಲಲು ಉಸಿರಾಟದ ಕಿಣ್ವಗಳು ವಿರೂಪಗೊಳ್ಳುವುದೆ ಕಾರಣ. ಸಾಮಾನ್ಯವಾಗಿ $0^0$–$45^0$ಸೆ. ಉಷ್ಣತೆಯ ಶ್ರೇಣಿಯಲ್ಲಿ ಉಸಿರಾಟ ಪ್ರತಿ $10^0$ ಸೆ. ಉಷ್ಣತೆಯ ಹೆಚ್ಚಳಕ್ಕೆ ದ್ವಿಗುಣಗೊಳ್ಳುತ್ತದೆ.

ಉಸಿರಾಟಕ್ಕೆ ಅತ್ಯಗತ್ಯವಾದ ಆಮ್ಲಜನಕವನ್ನು ಸಸ್ಯಗಳು ವಾತಾವರಣದಿಂದ ಪಡೆಯುತ್ತವೆ. ಭೂಮಿಯ ಮೇಲೆ ವಾಸಿಸುವ ಸಸ್ಯಗಳು ತಮ್ಮ ಎಲೆಗಳ ಕೆಳಭಾಗದಲ್ಲಿರುವ ಅಸಂಖ್ಯಾತ ಅತಿ ಸೂಕ್ಷ್ಮವಾದ ರಂಧ್ರಗಳ (ಸ್ಟೋಮ) ಮುಖಾಂತರ ಆಮ್ಲಜನಕವನ್ನು ಹೀರಿಕೊಳ್ಳುತ್ತವೆ. ಉಸಿರಾಟದಲ್ಲಿ ಪ್ರಮುಖವಾಗಿ ವ್ಯಕ್ತವಾಗುವ ಅನಿಲಗಳ ವಿನಿಮಯ ಈ ರಂಧ್ರಗಳ ಮೂಲಕವೆ ನಡೆಯುವುದು. ಹಗಲಿನಲ್ಲಿ ಇವು ತೆರೆದುಕೊಂಡಿರುತ್ತವೆ. ರಾತ್ರಿಯಲ್ಲಿ ಸಾಮಾನ್ಯವಾಗಿ ಮುಚ್ಚಿಕೊಂಡಿರುತ್ತವೆ. ಪ್ರತಿಯೊಂದು ರಂಧ್ರವೂ ಒಂದೊಂದು ಪುಟ್ಟ ಸ್ಥಳಾವಕಾಶಕ್ಕೆ ಪ್ರವೇಶ ದ್ವಾರ. ಅಲ್ಲದೆ ಎಲೆಯ ಒಳಗಡೆಯಿರುವ ಜೀವಕೋಶಗಳ ನಡುವೆ ಸಣ್ಣ ಅವಕಾಶಗಳಿದ್ದೂ ಅವೆಲ್ಲ ಪರಸ್ಪರ ಕೂಡಿಕೊಂಡಿರುತ್ತವೆ. ಹೀಗಾಗಿ ಎಲೆಗಳೊಳಗೆ ಬೇಕಾದಷ್ಟು ಸ್ಥಳಾವಕಾಶವಿದ್ದು ಅದರಲ್ಲೆಲ್ಲ ಆಮ್ಲಜನಕ ತುಂಬಿಕೊಳ್ಳಬಹುದಾಗಿದೆ. ನೀರಿನಲ್ಲಿ ವಾಸಿಸುವ ಸಸ್ಯಗಳು ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ಉಪಯೋಗಿಸುತ್ತವೆ.

ಜೀವಕೋಶಗಳಲ್ಲಿ ಉಸಿರಾಟ (ಸೆಲುಲರ್ ರೆಸ್ಪಿರೇಶನ್): ಇದನ್ನು ನಾಲ್ಕು ಮುಖ್ಯ ಹಂತಗಳಾಗಿ ವಿಂಗಡಿಸಬಹುದು; 1 ಫಾಸ್ಫರಿಲೇಷನ್. 2, ಗ್ಲೈಕಾಲಿಸಿಸ್, 3 ಸಿಟ್ರಿಕ ಆಮ್ಲದ ಅಥವಾ ಕ್ರೆಬ್ಸ್ ಚಕ್ರ, 4 ಅಂತಿಮೋತ್ಕರ್ಷಣಗಳು(ಟರ್ಮಿನಲ್ ಆಕ್ಸಿಡೇಶನ್ಸ್). ಮೊದಲನೆಯ ಹಂತದಲ್ಲಿ ಕಾರ್ಬೋಹೈಡ್ರೇಟುಗಳು ಮುಖ್ಯವಾಗಿ ಗ್ಲೂಕೋಸ್ ಎರಡು ಫಾಸ್ಫೇಟ್ ಗುಂಪುಗಳೊಂದಿಗೆ ನಿರ್ದಿಷ್ಟ ರೀತಿಯಲ್ಲಿ ಕೂಡಿಕೊಂಡು ಫ್ರಕ್ಟೋಸ್ 1–6 ಡೈ ಫಾಸ್ಫೇಟ್ ಎಂಬ ವಸ್ತುವಾಗಿ ಮಾರ್ಪಾಟಾಗುತ್ತದೆ. ಆರಂಭದಲ್ಲಿ ಯಾವುದೇ ಕಾರ್ಬೋಹೈಡ್ರೇಟ್ ಇದ್ದರೂ ಅದು ಮೊದಲು ಗ್ಲೂಕೋಸ್ ಆಗಿ ಬದಲಾವಣೆ ಹೊಂದಿ ಆಮೇಲೆ ಫ್ರಕ್ಟೋಸ್–1–6, ಡೈ ಫಾಸ್ಫೇಟ್ ಆಗುತ್ತದೆ. ಎರಡನೆಯ ಹಂತವಾದ ಗ್ಲೈಕಾಲಿಸಿಸ್‌ನಲ್ಲಿ ಮೇಲೆ ಹೇಳಿದ ವಸ್ತು ಎರಡಾಗಿ ಒಡೆದು ಎರಡು ಪೈರುವಿಕ್ ಆಮ್ಲದ ಅಣುಗಳಾಗಿ ಬದಲಾವಣೆ ಹೊಂದುತ್ತದೆ. ಮೂರನೆಯ ಹಂತದಲ್ಲಿ ಪೈರುವಿಕ್ ಆಮ್ಲ ಉತ್ಕರ್ಷಿಸುತ್ತದೆ. ಮೊದಲನೆಯದಾಗಿ ಅದು ಜೀವಕೋಶಗಳಲ್ಲಿ ಮೊದಲೇ ಉಪಸ್ಥಿತವಿರುವ ಆಕ್ಸಾಲ್ ಅಸಿಟಿಕ್ ಆಮ್ಲ ಎಂಬ ರಾಸಾಯನಿಕದೊಂದಿಗೆ ಸಂಯೋಗಿಸಿ ಸಿಟ್ರಿಕ್ ಆಮ್ಲವಾಗಿ ಪರಿವರ್ತನೆಗೊಳ್ಳುತ್ತದೆ. ಆಮೇಲೆ ಈ ಆಮ್ಲ ಹಲವಾರು ಹಂತಗಳಲ್ಲಿ ವಿಭಿನ್ನರೀತಿಯ ಆಮ್ಲಗಳಾಗಿ ಬದಲಾವಣೆಗೊಂಡು ಕೆಲವೊಂದು ನಿರ್ದಿಷ್ಟ ಹಂತಗಳಲ್ಲಿ ಹೈಡ್ರೋಜನ್ ಕಳೆದುಕೊಂಡು ಆಕ್ಸಾಲ್ ಅಸಿಟಿಕ್ ಆಮ್ಲದ ರೂಪಕ್ಕೆ ಬರುತ್ತದೆ. ಕಾರಣ, ಈ ಹಂತವನ್ನು ಸಿಟ್ರಿಕ್ ಆಮ್ಲದ ಚಕ್ರವೆಂದು ಕರೆಯುತ್ತಾರೆ. ಪ್ರತಿಯೊಂದು ಸಾರಿ ಹೈಡ್ರೋಜನ್ ಪರಮಾಣುಗಳು ಬಿಡುಗಡೆಯಾದಾಗಲೂ ಅವು ನಿಕೊಟಿನಮೈಡ್– ಅಡನೈನ್–ಡೈನ್ಯೂಕ್ಲಿಯೋಟೈಡ್ ಮತ್ತು ನಿಕೊಟಿನಮೈಡ್–ಅಡನೈನ್–ಡೈನ್ಯೂಕ್ಲಿಯೊಟೈಡ್ ಫಾಸ್ಫೇಟ್ (ಎನ್ಎಡಿ ಮತ್ತು ಎನ್ಎಡಿಪಿ) ಎಂಬ ವಸ್ತುಗಳೊಂದಿಗೆ ಸೇರಿಕೊಂಡು ಅವುಗಳನ್ನು ಅಪಕರ್ಷಿಸುತ್ತದೆ. ಇದರ ಜೊತೆಗೆ ಶಕ್ತಿಯ ಸ್ವಲ್ಪ ಭಾಗವನ್ನೂ ಕೊಂಡೊಯ್ಯುತ್ತದೆ. ಹೀಗಾಗಿ ಮೊದಲು ಪೈರುವಿಕ್ ಆಮ್ಲದಲ್ಲಿದ್ದ ಶಕ್ತಿಯೆಲ್ಲ ಈಗ ಎನ್ಎಡಿ ಮತ್ತು ಎನ್ಎಡಿಪಿ ಗಳಲ್ಲಿ ಅಡಕಗೊಳ್ಳುತ್ತದೆ. ನಾಲ್ಕನೆಯ ಹಂತದಲ್ಲಿ ಎನ್ಎಡಿ ಮತ್ತು ಎನ್ಎಡಿಪಿ ಗಳಲ್ಲಿರುವ ಹೈಡ್ರೋಜನ್ ಹಂತ ಹಂತವಾಗಿ ಸೈಟೊಕ್ರೋಮ್ ಮತ್ತು ಫ್ಲೇವೋ ಪ್ರೋಟೀನ್‌ಗಳ ಮುಖಾಂತರ ವರ್ಗಾವಣೆ ಹೊಂದಿ ನೀರಾಗಿ ಮಾರ್ಪಾಡಾಗುತ್ತದೆ. ಹಾಗೆಯೇ ಅವುಗಳಲ್ಲಿರುವ ಶಕ್ತಿಯ ಭಾಗ ಅಡೆನೊಸಿನ್ ಟ್ರೈ ಫಾಸ್ಫೇಟುಗಳೆಂಬ (ಎಟಿಪಿ) ರಾಸಾಯನಿಕಗಳ ತಯಾರಿಕೆಯಲ್ಲಿ ಬಳಕೆಗೊಂಡು ಶಕ್ತಿಸಂಪನ್ನ ವಸ್ತುಗಳಾದ ಎಟಿಪಿಗಳು ತಯಾರಾಗುತ್ತವೆ. ಹೀಗೆ ಮೊದಲು ಗ್ಲೂಕೋಸ್ ಅಣುವಿನಲ್ಲಿದ್ದ ಶಕ್ತಿ ಗ್ಲೂಕೋಸ್ ಅಣು ಸಂಪೂರ್ಣ ಉತ್ಕರ್ಷಿಸಿದಾಗ 38 ಎಟಿಪಿ ಅಣುಗಳು ತಯಾರಾಗುತ್ತವೆ.

ಉಸಿರಾಟವನ್ನು ಮುಖ್ಯವಾಗಿ ನಾಲ್ಕು ಹಂತಗಳೆಂದು ವಿಂಗಡಿಸಲಾಗಿದ್ದರೂ ಪ್ರತಿಯೊಂದರಲ್ಲಿಯೂ ಹಲವಾರು ಸಣ್ಣ ಘಟ್ಟಗಳಿದ್ದು ಒಂದೊಂದನ್ನೂ ಒಂದೊಂದು ಬಗೆಯ ಕಿಣ್ವ ನಿಯಂತ್ರಿಸುತ್ತದೆ. (ಕೆ.ಬಿ.ಎಸ್)

**ಉಸಿರಾಟ ಮಂಡಲ:** ಉಸಿರಾಟದ ಎರಡು ಕ್ರಿಯೆಗಳಾದ ಉಚ್ಛ್ವಾಸ – ನಿಶ್ವಾಸಗಳು ನಿರಂತರವಾಗಿ ಸಾಗಲು ಅವಶ್ಯಕವಿರುವ ಅಂಗಗಳ ಸಮೂಹ. ಮೂಗು, ಗಂಟಲು, ಗಂಟಲುಕುಳಿ (ಫ್ಯಾರಿಂಕ್ಸ್), ಧ್ವನಿನಾಳ (ಲ್ಯರಿಂಕ್ಸ್), ಉಸಿರ್ನಾಳ (ಟ್ರಕಿಯಾ), ವಾಸನಾಂಗಗಳು, ಉಸಿರ್ನಾಳದ ಕವಲುಗಳು, ಗಾಳಿಯ ಗೂಡುಗಳು (ಪಲ್ಮೊನರಿ ಆಲ್ವಿಯೋಲೈ), ಫುಪ್ಫುಸಗಳು, ತಿದಿಯಂತಿರುವ ಎದೆಗೂಡು (ತೊರ್ಯಾಕ್ಸ್), ಕತ್ತು, ಎದೆ ಹೊಟ್ಟೆಗಳ ಸ್ನಾಯುಗಳು ಮತ್ತು ವಪೆ, ಸ್ನಾಯುಗಳನ್ನು ನಿಯಂತ್ರಿಸುವ ಮಿದುಳ ಕಾಂಡ (ಮೆಡ್ಯುಲ ಅಬ್ಲಾಂಗೇಟ) ಇವಿಷ್ಟರ ಸಮುದಾಯ. ವಪೆ ಸ್ನಾಯುಗಳ ಕುಗ್ಗುವಿಕೆಯಿಂದ ಎದೆ ಗೂಡು ಹಿಗ್ಗಿ ಮೂಗಿನ ಮೂಲಕ ಗಾಳಿ ನುಗ್ಗಿ ಫುಪ್ಫುಸಗಳನ್ನು ಉಬ್ಬಿಸುತ್ತವೆ. ಸ್ನಾಯುಗಳು ಸಡಿಲವಾದಾಗ ಎದೆಗೂಡು ಕುಗ್ಗಿ ಫುಪ್ಫುಸಗಳಲ್ಲಿರುವ ಗಾಳಿ ಹೊರಹೋಗುತ್ತದೆ.

ಉಸಿರಿನ ಮಾರ್ಗಗಳು: 1. ಮೂಗು (ನೇಸಲ್ ಕ್ಯಾವಿಟಿ): ಮೂಗಿನ ಒಳಭಾಗ ತಳದಲ್ಲಿ (ಬಾಯಂಗಳದ ಮೇಲೆ) 5 ಸೆಮೀ ಉದ್ದ, 5 ಸೆಮೀ ಅಗಲವಾಗಿದೆ. ಮೇಲ್ಭಾಗದ ಅಗಲ 5 ಮಿಮೀ ಇದರ ಮಧ್ಯೆ ತೆಳು ಮೂಳೆಗಳು ಮತ್ತು ಮೃದ್ವಸ್ಥಿ (ಕಾಟಿಲೇಜ್) ಇರುವ ತಡಿಕೆ (ಸೆಪ್ಟಂ) ಇದೆ. ಪಕ್ಕಗಳಲ್ಲಿ ಸ್ವಲ್ಪ ಮಡಚಿಕೊಂಡ ಸುರಳಿ ತೆಳುಮೂಳೆಗಳಿವೆ. ಮೂಗಿಗೆ ಸೇರಿದ ಮೂಳೆಗಳು ಒಟ್ಟು 11. ಇವನ್ನು ಬೆಚ್ಚಗಿರುವ ಕೆಂಪು ಲೋಳೆಪೊರೆ ಮುಚ್ಚಿದೆ. ಕೆಳಸುರುಳಿ ಮೂಳೆಗಳ ಮೇಲಿರುವ ಪೊರೆ ಹೆಚ್ಚು ರಕ್ತನಾಳಗಳಿಂದ ದಪ್ಪವಾಗಿದೆ. ಮೂಗಿನ ರಕ್ತನಾಳಗಳಲ್ಲಿ ಚಲಿಸುವ ಬಿಸಿರಕ್ತದಿಂದ ಉಚ್ಛ್ವಾಸದ ಗಾಳಿ ಬಿಸಿಯಾಗುತ್ತದೆ. ಅದಕ್ಕೆ ಹಬೆಯ ಅಂಶವೂ ಸೇರುತ್ತದೆ. ಲೋಳೆಪೊರೆಯ ಅಂಚಿನಲ್ಲಿ ಮತ್ತು ಹೊಳ್ಳೆಗಳಲ್ಲಿರುವ ಕೂದಲಲ್ಲಿ ಧೂಳು ಮತ್ತು ಕ್ರಿಮಿಗಳು ಅಂಟಿಕೊಂಡು ಗಾಳಿ ಶೋಧನೆಗೊಳ್ಳುತ್ತದೆ. ಮೂಗಿನ ಪಕ್ಕ ಮೂಳೆಗಳಲ್ಲಿ ಗಾಳಿಗೂಡುಗಳು (ಪ್ಯಾರಾನೇಸಲ್ ಏರ್ ಸೈನಸೇಸ್) ಧ್ವನಿವರ್ಧಕವಾಗಿ ಮೂಳೆಗಳನ್ನು ಹಗುರವಾಗಿಸಿ ಉಸಿರಿನ ಕಾವು ಹೆಚ್ಚಲು ಸಹಾಯಕವಾಗಿವೆ. ನೆಗಡಿಯಾದಾಗ ಈ ಗೂಡುಗಳಲ್ಲಿ ಕಫ ತುಂಬಿಕೊಂಡರೆ ಧ್ವನಿ ಕುಗ್ಗುವುದು. ಘ್ರಾಣೇಂದ್ರಿಯ ಗಾಳಿಯ ಪ್ರವಾಹದಲ್ಲಿಲ್ಲ; ಬದಲು ಮೇಲುಗಡೆ ಸುರಕ್ಷಿತವಾಗಿದೆ. ಗಾಳಿಯನ್ನು ಸ್ವಲ್ಪ ವೇಗದಿಂದ ತೆಗೆದುಕೊಂಡರೆ ವಾಸನೆ ಹೆಚ್ಚು ಚೆನ್ನಾಗಿ ತಿಳಿಯುತ್ತದೆ.

2. ಗಂಟಲು (ಫ್ಯಾರಿಂಕ್ಸ್): ಇದು ಆಹಾರ ಮತ್ತು ಗಾಳಿಗಳ ಮಾರ್ಗ. ನುಂಗುವಾಗ ಉಸಿರು ನಿಲ್ಲುತ್ತದೆ. ಉಸಿರಾಡುವಾಗ ನುಂಗಲಾಗುವುದಿಲ್ಲ. ಗಂಟಲಿನಲ್ಲಿ ಮೂಗು ಬಾಯಿ ಮತ್ತು ಧ್ವನಿನಾಳಗಳು ತೆರೆಯುತ್ತವೆ.

3. ಧ್ವನಿನಾಳ (ಲ್ಯಾರಿಂಕ್ಸ್): ಇದು ಕೂಗು ಕೊಳವೆ. ಇದರ ಭಿತ್ತಿಯಲ್ಲಿ ಮೃದ್ವಸ್ಥಿಗಳಿರುವುದರಿಂದ ಕೊಳವೆ ಚಪ್ಪಟೆಯಾಗದೆ ಗಾಳಿ ಸಲೀಸಾಗಿ ಓಡಾಡುವುದು. ಇದರೊಳಗೆ ಬಲ ಮತ್ತು ಎಡ ಧ್ವನಿ ತಂತುಗಳಿವೆ (ವೋಕಲ್ ಕಾರ್ಡ್ಸ್). ಧ್ವನಿ ಹೊರಡಬೇಕಾದಾಗ ಇವು ಒಂದುಗೂಡಿ ಒಂದು ಚಿಕ್ಕ ಕಿಂಡಿಯ (ಗ್ಲಾಟಿಸ್) ಮೂಲಕ ಗಾಳಿ ಹೊರಕ್ಕೆ ಒತ್ತಡದಿಂದ ಬರಬೇಕು. ಆಗ ಇವು ಕಂಪಿಸಿ ಧ್ವನಿ ಹುಟ್ಟುತ್ತದೆ. ಮಾತಾಡುವಾಗ ಧ್ವನಿನಾಳವನ್ನು ಮುಟ್ಟಿದರೆ ಒಳಗೆ ಅದು ಕಂಪಿಸುವದು ಗೊತ್ತಾಗುತ್ತದೆ. ಹೆಡೆಯಂತಿರುವ ಕಿರು ನಾಲಗೆ (ಎಪಿಗ್ಲಾಟಿಸ್) ಗಂಟಲಲ್ಲಿ ಗೋಮಾಳೆಯ (ಆಡಮ್ಸ್ ಆಪಲ್) ಮೇಲಿದೆ.

4. ಉಸಿರ್ನಾಳ: ಇದು ಧ್ವನಿನಾಳದಿಂದ ಕೆಳಕ್ಕೆ ಮುಂದುವರಿಯುತ್ತದೆ. ಗಂಟಲಿನ ಮಧ್ಯೆ ಕೆಳಭಾಗದಲ್ಲಿ ಎದೆಚೆಕ್ಕೆಯ ಮೇಲೆ ಮೃದ್ವಸ್ಥಿ ಉಂಗರಗಳು ಕೈಗೆ ಸಿಗುತ್ತವೆ. ಸ್ವಲ್ಪ ಅಮುಕಿದರೆ ಕೆಮ್ಮು ಹುಟ್ಟಬಹುದು. ಸುಮಾರು 14 ಮೃದ್ವಸ್ಥಿಯ ಉಂಗುರುಗಳಿರುವುದರಿಂದ ನಾಳ ಮುಚ್ಚಿ ಕೊಳ್ಳುವುದಿಲ್ಲ. ಉಸಿರ್ನಾಳ ಸಡಿಲವಾಗಿರುವುದರಿಂದ ಅಕ್ಕಪಕ್ಕಕ್ಕೆ ಆಡಬಲ್ಲುದು. ಸ್ನಾಯುಗಳಿಂದ ಉದ್ದವಾಗಿ ಸಣ್ಣದಾಗಬಲ್ಲುದು ಅಥವಾ ಕುರುಚಾಗಬಲ್ಲುದು. ಗಂಟಲಿನಲ್ಲಿ ಇದರ ಉದ್ದ 2.5 ಸೆಂಮೀ ಮತ್ತು ಎದೆಯಲ್ಲಿ 7.5 ಸೆಂಮೀ ವ್ಯಾಸ ಗಂಡಸಿನಲ್ಲಿ 2 ಸೆಂಮೀ ಹೆಂಗಸಿನಲ್ಲಿ 1.5 ಸೆಂಮೀ ಇದರ ಮೇಲೆ ಕಿವಿಯಿಟ್ಟು ಅಥವಾ ಕೊಳವೆಯ ಮೂಲಕ ಆಲಿಸಿದರೆ ಉಸಿರಾಡುವುದನ್ನು ಕೇಳಬಹುದು. ಗಾಳಿಯಲ್ಲಿ ಬತ್ತದ ಪೈರು ಆಡುವಂತೆ ಸಣ್ಣ ಕೂದಲಂತಿರುವ ಭಾಗಗಳು ಇದರ ಲೋಳೆಪೊರೆಯ ಮೇಲೆ ಕಫದೊಡನೆ ಧೂಳನ್ನು ಮೇಲಕ್ಕೆ ತಳ್ಳುತ್ತವೆ.

ಮಹಾಧಮನಿ (ಅಯೋರ್ಟ, ದೊಡ್ಡ ರಕ್ತನಾಳ) ಸಾಮಾನ್ಯವಾಗಿ ಸಿಫಿಲಿಸ್ ಎಂಬ ಮೇಹರೋಗದಿಂದ ಉಬ್ಬಿ ಗಾಳಿಕೊಳವೆಯನ್ನು ಅದುಮುವುದರಿಂದ ಉಸಿರಾಟ ಕಷ್ಟವಾಗುವುದು, ಅನ್ನನಾಳವನ್ನು ಅದುಮುವುದರಿಂದ ನುಂಗುವುದು ಕಷ್ಟವಾಗುವುದು

ಮತ್ತು ರೆಕೆರೆಂಟ್ ಲ್ಯಾರಿಂಜಿಯಲ್ ನರ್ವ್ ಎಂಬ ಧ್ವನಿನಾಳದ ನರವನ್ನು ಅದುಮುವುದರಿಂದ ಧ್ವನಿ ಸರಿಯಾಗಿ ಹುಟ್ಟದೆ ಗಂಟಲು ಕಟ್ಟಿದಂತಾಗುವುದು.

5. ಉಸಿರ್ನಾಳದ ಶಾಖೆಗಳು (ಬ್ರೋಂಖೈ) : ಎದೆಯ ಭಾಗದ ಉಸಿರ್ನಾಳ 7.5 ಸೆಂಮೀ ಇದೆ. ಇದು ಮೊದಲ ಬಲ ಮತ್ತು ಎಡಶಾಖೆಗಳಾಗಿ (ಪ್ರೈಮರಿ ಬ್ರೋಂಖೈ) ವಿಭಜಿಸುತ್ತದೆ. ಬಲ ಶಾಖೆ ಬಲಘುಪ್ಪುಸದಲ್ಲೂ ಎಡಶಾಖೆ ಎಡಘುಪ್ಪುಸದಲ್ಲೂ ಎರಡೆರಡಾಗಿ, 20–25 ಸಲ ಕವಲೊಡೆಯುತ್ತವೆ.

ಘುಪ್ಪುಸಗಳು (ಶ್ವಾಸಕೋಶಗಳು; ಲಂಗ್ಸ್) : ಬಲ ಮತ್ತು ಎಡ ಭಾಗದ ಎದೆಯ ಇಕ್ಕೆಲಗಳಲ್ಲಿವೆ. ಉಸಿರೆಳೆದಾಗ ಗಾಳಿ ತುಂಬವುದರಿಂದ ಇವು ಉಬ್ಬುತ್ತವೆ. ಉಸಿರ್ನಾಳದ ಪ್ರತಿ ಸಣ್ಣ ಕೊನೆಯ ಶಾಖೆಗೆ ಹಲವು ಸಣ್ಣ ಗಾಳಿ ಬುಡ್ಡೆಗಳು ಸೇರಿಕೊಂಡಿವೆ. ಬುಡ್ಡೆಗಳ ಮೇಲೆ ಸೂಕ್ಷ್ಮ ರಕ್ತನಾಳಗಳ ಬಲೆಯಿದೆ. ಬಲೆಯ ಕಣ್ಣುಗಳು ನಾಳಗಳಿಗಿಂತ ಚಿಕ್ಕವು. ಬಲೆಯನ್ನು ತೆಳುವಾಗಿ ಹರಡಿದ್ದೆ ಆದರೆ ಅದರ ವಿಸ್ತೀರ್ಣ ಸಾವಿರಾರು ಚದರಡಿಗಳಷ್ಟೆಂದು ಲೆಕ್ಕ ಹಾಕಲಾಗಿದೆ. ಅಂದರೆ ರಕ್ತ ಬಹಳ ತೆಳುವಾಗಿಯೂ ವಿಶಾಲವಾಗಿಯೂ ಘುಪ್ಪುಸಗಳಲ್ಲಿ ಹರಡಲ್ಪಟ್ಟು ಗಾಳಿಗೆ ಒಡ್ಡಲಾಗುತ್ತದೆ. ಗಾಳಿಗೂ ರಕ್ತಕ್ಕೂ ನಡುವೆ ಇರುವ ಪೊರೆ ಬಲು ತೆಳು. ಇದರ ಮೂಲಕ ಘುಪ್ಪುಸಕ್ಕೆ ಬರುವ ಮಲಿನ ರಕ್ತದಲ್ಲಿರುವ ಇಂಗಾಲದ ಡೈಆಕ್ಸೈಡ್ ಗಾಳಿಯನ್ನು ಸೇರಿ ಗಾಳಿಯಲ್ಲಿ ಹೆಚ್ಚಿರುವ ಆಕ್ಸಿಜನ್ (ಆಮ್ಲಜನಕ) ರಕ್ತವನ್ನು ಸೇರುತ್ತದೆ. ರಕ್ತವು ಹೃದಯದ (ಹಾರ್ಟ್) ಬಲಹೃತ್ಕುಕ್ಷಿಯಿಂದ (ರೈಟ್ ವೆಂಟ್ರಿಕಲ್) ಹೊರಟು ಘುಪ್ಪುಸಗಳಲ್ಲಿ ಆಕ್ಸಿಜನ್ನನ್ನು ಪಡೆದು ಎಡಹೃತ್ಕರ್ಣ ಮತ್ತು ಅಲ್ಲಿಂದ ಎಡಹೃತ್ಕುಕ್ಷಿ ಸೇರಿ ಮಹಾಧಮನಿಯ (ಅಯೋರ್ಟ) ಶಾಖೆಗಳಲ್ಲಿ ದೇಹದ ಎಲ್ಲ ಭಾಗಗಳಿಗೂ ಹೋಗಿ ಬಲಹೃತ್ಕರ್ಣಕ್ಕೆ ಹಿಂತಿರುಗುತ್ತದೆ.

ಬಲ ಘುಪ್ಪುಸದಲ್ಲಿ ಹತ್ತು ಮತ್ತು ಎಡ ಘುಪ್ಪುಸದಲ್ಲಿ ಒಂಬತ್ತು ಉಸಿರ್ನಾಳಗಳ ಗೊಂಚಲುಗಳಿವೆ (ಬ್ರೋಂಖೋ ಪಲ್ಮನರಿ ಸೆಗ್ಮೆಂಟ್ಸ್). ಹಲವು ವೇಳೆ ಕ್ರಿಮಿರೋಗ ಒಂದು ಗೊಂಚಲಿನಲ್ಲೇ ಇರುವುದರಿಂದ ಅಷ್ಟನ್ನು ಮಾತ್ರ ಶಸ್ತ್ರಕ್ರಿಯೆಯಿಂದ ತೆಗೆದುಹಾಕಲು ಸಾಧ್ಯ. ದೊಡ್ಡ ಗೊಂಚಲುಗಳ ಸ್ಥಾನಗಳು ಘುಪ್ಪುಸಗಳ ಮೇಲೆ ಕಾಣುವುದಿಲ್ಲ. ಆದರೆ ಅವನ್ನು ಗುರುತಿಸಬಹುದು.

ಘುಪ್ಪುಸದ ಮೇಲ್ಭಾಗ ಸಣ್ಣಗಿದೆ. ಕೆಳಭಾಗ ಅಗಲವಾಗಿದೆ. ಇದು ಉಬ್ಬಿ ಕುಗ್ಗಲು ಇದರ ಸುತ್ತಲೂ 2 ಪದರಗಳ ಅಳ್ಳೆಪೊರೆಯ ಚೀಲವಿದೆ (ಪ್ಲೂರಲ್ ಸ್ಯಾಕ್). ಹೊರಪೊರೆ ಎದೆಯ ಭಿತ್ತಿಗೆ ಮತ್ತು ಮಧ್ಯ ತಡಿಕೆಗೆ ಅಂಟಿಕೊಂಡಿದೆ. ಒಳಪೊರೆ ಘುಪ್ಪುಸಕ್ಕೆ ಅಂಟಿಕೊಂಡಿದೆ. ಪೊರೆಗಳ ನಡುವೆ ತೆಳುವಾಗಿ ಹರಡಿದ ಮೇಲೆ ನುಣ್ಣಗೆ ಉಜ್ಜಲು ಅನುಕೂಲವಾಗುತ್ತದೆ.

ಬಲಘುಪ್ಪುಸದಲ್ಲಿ ಮೂರು ಮತ್ತು ಎಡಘುಪ್ಪುಸದಲ್ಲಿ ಎರಡು ಹಾಲೆಗಳಿವೆ (ಲೋಬ್ಸ್). ಘುಪ್ಪುಸದ ಹೊರಪಕ್ಕ ಉಬ್ಬಿದೆ. ಒಳಪಕ್ಕ ಸುಮಾರಾಗಿ ಚಪ್ಪಟೆಯಾಗಿ ಹೃದಯ, ಅನ್ನನಾಳ, ಉಸಿರ್ನಾಳ ಮತ್ತು ದೊಡ್ಡ ರಕ್ತನಾಳಗಳಿರುವ ಎದೆಯ ಮಧ್ಯದ ತಡಿಕೆಯ (ಮೀಡಿಯಾಸ್ಟೈನಂ) ಮೇಲೆ ನುಣ್ಣಗೆ ಉಜ್ಜುತ್ತದೆ. ಒಳಪಕ್ಕದ ಮಧ್ಯೆಯಿರುವ ಘುಪ್ಪುಸನಾಭಿಯಲ್ಲಿ (ಹೈಲ್ ಆಫ್ ಲಂಗ್) ಉಸಿರ್ನಾಳದ ಬಲ ಅಥವಾ ಎಡಶಾಖೆ ಹಾಗು ಶುದ್ಧ ಮತ್ತು ಮಲಿನ ರಕ್ತನಾಳಗಳು ಹಾಯುತ್ತವೆ. ಘುಪ್ಪುಸದ ತಳ ವಪೆಯ ಮೇಲೆ ಆಡುತ್ತದೆ. ಘುಪ್ಪುಸಗಳಲ್ಲಿ ರೋಗವಿರುವ ಸ್ಥಳಗಳನ್ನು ಮೂರು ವಿಧಾನಗಳಿಂದ ಕಂಡುಹಿಡಿಯಬಹುದು:

(i) ಎದೆಯ ಕ್ಷಕಿರಣಚಿತ್ರಗಳನ್ನು ಪರೀಕ್ಷಿಸುವುದು. (ii) ಬ್ರಾಂಕೋ ಸ್ಕೋಪ್ ಎಂಬ ಕೊಳವೆಯಂತಿರುವ ದುರ್ಬೀನಿನ ಮೂಲಕ ಉಸಿರ್ನಾಳಗಳ ಬಾಯಿಗಳನ್ನು ನೇರವಾಗಿ ಕಣ್ಣಿನಿಂದ ನೋಡುವುದು. (iii) ಬ್ರಾಂಕೋಗ್ರಾಮ್ ಉಸಿರ್ನಾಳಗಳಲ್ಲಿ ಕ್ಷಕಿರಣಗಳು ಕೂರಲಾಗದ ವಿಶೇಷದ್ರವವನ್ನು (ಸಾಧಾರಣವಾಗಿ ಸ್ವಲ್ಪ ಅಯೋಡೀನನ್ನು ಕರಗಿಸಿದ ಗಸಗಸೆ ಎಣ್ಣೆ) ತುಂಬಿ ಎದೆಯ ಕ್ಷಕಿರಣ ಚಿತ್ರಗಳನ್ನು ತೆಗೆದು ಪರೀಕ್ಷಿಸುವುದು.

ಘುಪ್ಪುಸಗಳ ಸೂಕ್ಷ್ಮರಚನೆ : ಉಸಿರ್ನಾಳಗಳ ಕೊನೆಯ ಶಾಖೆಗಳ (ಟರ್ಮಿನಲ್ ಬ್ರೋಂಖಿಯೋಲ್ಸ್. ಸುಮಾರು 20ನೆಯ ಸಲ ಕವಲೊಡೆದವು) ವ್ಯಾಸ 0.2–0.7 ಸೆಂಮೀ ಇವುಗಳ ಲೋಳ್ಪೊರೆಯ ಮೇಲೆ ಆಡುವ ಸಣ್ಣ ಕೂದಲು ಇರುವ ಜೀವಕಣಗಳ ಪೊರೆ ಇದೆ (ಸ್ಯೂಡೋಸ್ಟ್ರಾಟಿಫೈಡ್ ಸಿಲಿಯೇಟೆಡ್ ಕಾಲಮ್ನರ್ ಎಪಿಥೀಲಿಯಂ). ಇವುಗಳ ಭಿತ್ತಿಯಲ್ಲಿ ಮೃದ್ವಸ್ಥಿಯ ತುಣುಕುಗಳಿವೆ. ರಕ್ತಕ್ಕೂ ಗಾಳಿಗೂ ನಡುವೆ ದಪ್ಪ ಪೊರೆಯಿರುವುದರಿಂದ ಇವುಗಳಲ್ಲಿ ಅನಿಲಗಳ ವಿನಿಮಯವಾಗುವುದಿಲ್ಲ. ಇವು ಸಣ್ಣಗಾಗಲು ಭಿತ್ತಿಯಲ್ಲಿ ಸ್ನಾಯುಜಾಲವಿದೆ. ಸ್ನಾಯುಗಳು ಸೆಟೆದುಕೊಂಡರೆ ಗೂರಲು ಉಂಟಾಗುತ್ತದೆ. ಇವು 3–4 ಬಾರಿ ಎರಡೆರಡಾಗಿ ಕವಲೊಡೆದ ಮೇಲೆ ಉಸಿರ್ನಾಳಗಳಾಗುತ್ತವೆ (ರೆಸ್ಪಿರೇಟರಿ ಬ್ರೋಂಖಿಯೋಲ್ಸ್). ಉಸಿರ್ನಾಳಗಳ ಭಿತ್ತಿಯಲ್ಲಿ ಮೃದ್ವಸ್ಥಿಯಿಲ್ಲ. ಇವುಗಳ ಪೊರೆ ಕೂದಲಿಲ್ಲದ ಘನಜೀವಕಣಗಳ ಪೊರೆ (ಕ್ಯೂಬಾಯಿಡಲ್ ಎಪಿಥೀಲಿಯಂ). ಪ್ರತಿ ಉಸಿರ್ನಾಳ ಕವಲೊಡೆಯುವುದರಿಂದ ಉಸಿರ್ನಾಳ ಗೊಂಚಲಾಗುತ್ತದೆ. ಪ್ರತಿ ಉಸಿರ್ನಾಳದಿಂದ 2–11 ಬುಡ್ಡೆಕೊಳವೆಗಳು (ಆಲ್ವಿಯೋಲಾರ್ ಡಕ್ಟ್ಸ್) ಹೊರಟುಕೊಳ್ಳುತ್ತವೆ. ಪ್ರತಿ ಬುಡ್ಡೆ ಕೊಳವೆಗೆ 5–6 ಬುಡ್ಡೆಚೀಲಗಳು (ಆಲ್ವಿಯೊಲಾರ್‌ಸ್ಯಾಕ್ಸ್) ಅಂಟಿಕೊಂಡಿವೆ. ಪ್ರತಿ ಬುಡ್ಡೆಚೀಲದ ಮೇಲೆ ಹಲವು ಬಹುಫಲಕ (ಪಾಲಿ ಹೆಡ್ರಲ್) ಬುಡ್ಡೆಗಳಿವೆ. ಹೀಗೆ ಒಂದು ಘುಪ್ಪುಸದಲ್ಲಿ 30–40 ಕೋಟಿ ಬುಡ್ಡೆಗಳು (ಸಣ್ಣ ಗಾಳಿಗೂಡು) ಇವೆಯೆಂದು ಲೆಕ್ಕಹಾಕಲಾಗಿದೆ. ಪ್ರತಿ ಬುಡ್ಡೆಯ ವ್ಯಾಸ 1/5–¼ ಮಿಮೀ ಇದು ಬಲು ತೆಳುವಾದ ಜೀವಕಣಗಳ ಪೊರೆಯಿಂದಾದುದು. ಇದರ ಮೇಲೆ ಸೂಕ್ಷ್ಮ ರಕ್ತನಾಳಗಳ ಒತ್ತಾದ ಬಲೆಯಿದೆ. ರಕ್ತಕ್ಕೂ ಗಾಳಿಗೂ ನಡುವೆ ಇರುವ ಪೊರೆಯ ದಪ್ಪ ಒಂದು ಮಿಲಿಮೀಟರಿನ 2500 ಭಾಗಗಳಲ್ಲಿ ಒಂದರಷ್ಟಿದೆ.

ನೂರಾರು ಉಸಿರ್ನಾಳಗಳ ಗೊಂಚಲಿನ ಗಾತ್ರ 1–2½ ಸೆಂಮೀ ಇದು ಘುಪ್ಪುಸದ ಮೇಲೆ ವಕ್ರ ಬಹುಭುಜದಂತೆ (ಇರ್ರೆಗ್ಯುಲರ್ ಪಾಲಿಗನ್) ಕಾಣುತ್ತದೆ. ಹೀಗೆ ಕೊನೆಯ ಶಾಖೆಗಳ ಗೊಂಚಲುಗಳು ಹೇರಳವಾಗಿದ್ದರೂ ಘುಪ್ಪುಸದ ಅತಿ ತೆಳುವಾದ ಚೂರು ಸೂಕ್ಷ್ಮದರ್ಶಿನಿಯಲ್ಲಿ ಗಾಳಿಗೂಡುಗಳಿಂದ ಸೂಕ್ಷ್ಮಬಲೆಯಂತೆ ಕಾಣುತ್ತದೆ. ಘುಪ್ಪುಸದ ಮೇಲೆ ಅದರ ನಾಭಿಯನ್ನು ಬಿಟ್ಟು ಮಿಕ್ಕೆಲ್ಲ ಭಾಗಗಳಲ್ಲೂ ತೆಳುವಾದ ಪಾರದರ್ಶಕ ಪೊರೆ ಇದೆ (ಪಲ್ಮನರಿ ಪ್ಲೂರ). ಇದರ ಕೆಳಗೆ ನಾರು ಮಾಂಸದ ಕವಚವಿದೆ. ನಾರು ಮಾಂಸದಲ್ಲಿ ಸ್ಥಿತಿಸ್ಥಾಪಕತೆ ಇರುವ ತಂತುಗಳೂ ಇವೆ. ಉಸಿರ್ನಾಳಗಳ ನಡುವೆಯೂ ಸ್ಥಿತಿಸ್ಥಾಪಕ ತಂತುಗಳ ನಡುವೆಯೂ ಈ ನಾರಿನ ಮಾಂಸವಿದೆ. ಸ್ಥಿತಿಸ್ಥಾಪಕ ತಂತುಗಳಿಂದ ಘುಪ್ಪುಸ ರಬ್ಬರ್ ಬಲೂನಿನಂತೆ ಯಾವಾಗಲೂ ಸಣ್ಣಗಾಗಲು ಪ್ರಯತ್ನಿಸುತ್ತಿರುತ್ತದೆ. ಘುಪ್ಪುಸದಲ್ಲಿ ಉಸಿರ್ನಾಳಗಳೊಡನೆ ರಕ್ತನಾಳಗಳೂ ಕವಲೊಡೆಯುತ್ತವೆ. ಹೃದಯದಿಂದ ಬರುವ ರಕ್ತನಾಳ ಕವಲೊಡೆದು ಗಾಳಿಯ ಗೂಡುಗಳ ಮೇಲೆ ಸೂಕ್ಷ್ಮ ರಕ್ತನಾಳಗಳ ಒತ್ತಾದ ಬಲೆಯಾಗುತ್ತದೆ. ಆಕ್ಸಿಜನ್ನನ್ನು ಪಡೆದ ರಕ್ತ ಶುದ್ಧ ರಕ್ತನಾಳಗಳ ಮೂಲಕ ಎಡಹೃತ್ಕರ್ಣವನ್ನು ಸೇರುತ್ತದೆ. ದುಗ್ಧನಾಳಗಳ ಕವಲುಗಳೂ ಒಂದುಗೂಡುತ್ತ ಗಾಳಿ ಕೊಳವೆ ಕವಲೊಡೆಯುವ ಸ್ಥಳದಲ್ಲಿರುವ ಗ್ರಂಥಿಗಳನ್ನು (ಬ್ರೋಂಖೋ ಪಲ್ಮನರಿ ಲಿಂಫ್ ನೋಡ್ಸ್) ಸೇರುತ್ತವೆ.

ಘುಪ್ಪುಸದ ಬೆಳೆವಣಿಗೆ : ಗರ್ಭಾವಸ್ಥೆಯ 25ನೆಯ ದಿನದ ಹೊತ್ತಿಗೆ ಭ್ರೂಣ ಸುಮಾರು 4 ಮಿ. ಮೀ. ಉದ್ದವಿರುವಾಗ ಅದರ ಗಂಟಲಿನ ತಳದಲ್ಲಿ ಒಂದು ಸಣ್ಣ ಕಾಲುವೆಯಾಗಿ (ಧ್ವನಿನಾಳ ಉಸಿರ್ನಾಳದ ಕಾಲುವೆ ; ಲ್ಯಾರಿಂಗೊಟ್ರೆಕಿಯಲ್ ಗ್ರೂವ್) ಒಂದೆರಡು ದಿನಗಳಲ್ಲಿ ಇದರ ಪಕ್ಕಗಳಲ್ಲಿ ಎರಡು ಉಬ್ಬುಗಳಾಗಿ ಘುಪ್ಪುಸಗಳ ಮೂಲ ರೂಪಗಳು (ಲಂಗ್‌ಬಡ್ಸ್) ಕಾಣಿಸಿಕೊಳ್ಳುತ್ತವೆ. ಇದೇ ನಿರ್ಧಾರಕಾಲ. ಒಂದು ಕಡೆ ಉಬ್ಬು ಆಗದಿದ್ದಲ್ಲಿ ಆ ಕಡೆ ಘುಪ್ಪುಸ ಬೆಳೆಯುವುದಿಲ್ಲ. ತಾಯಿ ಇಲಿಗಳಿಗೆ ಜೀವಾತು ಎ ಇಲ್ಲದಿರುವ ಆಹಾರವನ್ನು ಕೊಡುವುದರಿಂದ ಅವುಗಳ ಮರಿಗಳಲ್ಲಿ ಹೀಗಾಗುವುದನ್ನು ಪ್ರಯೋಗಶಾಲೆಗಳಲ್ಲಿ ನೋಡಬಹುದು. 31ನೆಯ ದಿವಸದ ಹೊತ್ತಿಗೆ ಬಲ ಮತ್ತು ಎಡ ಘುಪ್ಪುಸಾಂಕುರಗಳಿಂದ ಶಾಖೆಗಳು ಬೆಳೆಯುತ್ತವೆ. ಈ ಕಾಲದಲ್ಲಿ ಧ್ವನಿನಾಳ ಗಂಟಲಿನಿಂದಲೂ ಉಸಿರ್ನಾಳ ಅನ್ನನಾಳದಿಂದಲೂ ಬೇರ್ಪಡುತ್ತವೆ. ಬಲಗಡೆ 10 ಶಾಖೆಗಳು ಎಡಗಡೆ 9 ಶಾಖೆಗಳು ಎರಡೆರಡಾಗಿ ಕವಲೊಡೆಯುತ್ತ 36ನೆಯ ದಿವಸದ ಹೊತ್ತಿಗೆ ಬಲದಲ್ಲಿ 10 ದೊಡ್ಡ ಗೊಂಚಲುಗಳು ಮತ್ತು ಎಡಗಡೆ 9 ಆಗಿ ಘುಪ್ಪುಸಗಳ ಮೇಲೆ ಸಣ್ಣ ಗುಳ್ಳೆಗಳಂತೆ ಕಾಣುತ್ತವೆ. 40ನೆಯ ದಿವಸಕ್ಕೆ ಇನ್ನೂ ಹೆಚ್ಚು ಕವಲುಗಳಾಗಿ ದ್ರಾಕ್ಷಿಯ ದೊಡ್ಡ ಗೊಂಚಲುಗಳಂತಾಗುತ್ತವೆ. ನಾಲ್ಕನೆಯ ತಿಂಗಳ ಕೊನೆಯವರೆಗೂ ಶಾಖೆಗಳಾಗುವುದು ಮುಂದುವರಿಯುತ್ತದೆ. ಈ ಬೆಳೆವಣಿಗೆಯ ಹಂತ ಗ್ರಂಥಿಕಾಲ (ಗ್ಲಾಂಡ್ಯುಲರ್ ಪೀರಿಯಡ್). ಏಕೆಂದರೆ ಶಾಖೆಗಳ ಜೀವಕಣಗಳು ದೊಡ್ಡದಾಗಿ ಒಳಗೆ ಸ್ಥಳ ಕಡಿಮೆಯಿರುತ್ತದೆ. ಕವಲೊಡೆಯುವುದು ಸುಮಾರು 17 ಸಲ ನಡೆಯುತ್ತದೆ. ಕೊನೆಯ ಎಂಟು ಸಲ ಆದವುಗಳಲ್ಲಿ ಘನ(ಕ್ಯೂಬಾಯಿಡಲ್) ಜೀವಕಣಗಳ ತೆಳುವಾದ ಪೊರೆಯಿರುತ್ತದೆ. ಮೊದಲಿನವುಗಳಲ್ಲಿ ಆದ ಜೀವಕಣಗಳು ಉದ್ದವಾಗಿರುತ್ತವೆ (ಕಾಲಮ್ನರ್ ಎಪಿಥೇಲಿಯಂ). 4 ರಿಂದ 6ನೆಯ ತಿಂಗಳವರೆಗೆ ನಾಳಗಳ ಕಾಲ (ಕೆನಾಲಿಕ್ಯುಲರ್ ಪೀರಿಯಡ್). ಇದರಲ್ಲಿ ಕೊನೆಯ ಶಾಖೆಗಳಲ್ಲಿ ಸೂಕ್ಷ್ಮನಾಳಗಳು ಬೆಳೆಯುತ್ತವೆ. ಇವೇ ಜನನದ ಅನಂತರ ಗಾಳಿ ತುಂಬಿಕೊಳ್ಳುವ ಸಣ್ಣ ಬುಡ್ಡೆಗಳಾಗುವುವು. 6 ತಿಂಗಳಿಗೆ ಮಗು ಹುಟ್ಟಿದರೆ ಅದು ಉಸಿರಾಡಿ ಜೀವಿಸಲು ಈ ಸೂಕ್ಷ್ಮನಾಳಗಳಿಂದ ಸಾಧ್ಯ. 7ನೆಯ ತಿಂಗಳಿಂದ ಪ್ರಸವದವರೆಗೆ ಬುಡ್ಡೆಗಳ ಕಾಲ (ಆಲ್ವಿಯೋಲಾರ್ ಪೀರಿಯಡ್). ಇದರಲ್ಲಿ ಸೂಕ್ಷ್ಮರಕ್ತನಾಳಗಳು ಬುಡ್ಡೆಗಳ ಮೇಲೆ ಬೆಳೆಯುತ್ತವೆ. ಈ ಕಾಲದಲ್ಲಿ ಹುಟ್ಟಿದ ಮಗು ಬದುಕಬಲ್ಲುದು.

ಜನನ ಇನ್ನೊಂದು ಪರ್ವಕಾಲ. ಮೊದಲನೆಯ ಉಸಿರಿನಿಂದ ಘುಪ್ಪುಸವೆಲ್ಲ ಪೂರ್ತಿ ಅರಳುವುದಿಲ್ಲ. ಇದಕ್ಕೆ ಕೆಲವು ದಿವಸಗಳು ಅಥವಾ ವಾರಗಳು ಬೇಕಾಗುವುವು. ಕೆಲವು ವೇಳೆ ಘುಪ್ಪುಸದ ಕೆಲವು ಭಾಗಗಳು ಅರಳದೇ ವಯಸ್ಸಾದ ಮೇಲೂ ಗಾಳಿ ತುಂಬಿಕೊಳ್ಳದಿರಬಹುದು. ಪೂರ್ಣಗರ್ಭಕ್ಕೆ ಮೊದಲೇ ಹುಟ್ಟುವ ಅಥವಾ ತಾಯಿಯ ಹೊಟ್ಟೆ ಕೊಯ್ದು ತೆಗೆದ ಮಕ್ಕಳ ಗಾಳಿಬುಡ್ಡೆಗಳಲ್ಲಿ ಕೆಲವೇಳೆ ಲೋಳೆ ಪೊರೆಯಿದ್ದು ಉಸಿರಾಡುವುದು ಸಾಧ್ಯವಾಗದಿರಬಹುದು. ಹೀಗಾಗುವುದು ಮಗು ಗರ್ಭಕೋಶದ ಒಳಗಿನ ನೀರನ್ನು ಕುಡಿಯುವುದರಿಂದಲೆ ಅಥವಾ ಯಾವುದೋ ಕಾರಣದಿಂದಲೆ ಎಂಬುದು ಇನ್ನೂ ತಿಳಿದಿಲ್ಲ. ಜನನದ ಅನಂತರ ಉಸಿರ್ನಾಳಗಳು ತೆಳುವಾಗಿ ಉದ್ದವಾಗುವುದರಿಂದಲೂ ಶಾಖೆಗಳು ಹೆಚ್ಚುವುದರಿಂದಲೂ ಗಾಳಿ ಬುಡ್ಡೆಗಳು ದೊಡ್ಡವಾಗುವುದರಿಂದಲೂ ಘುಪ್ಪುಸ ಬೇಗ ಬೆಳೆಯುತ್ತದೆ. ಜನನದ ಹೊತ್ತಿಗೆ 17 ಸಲ ಕವಲೊಡೆದ ಉಸಿರ್ನಾಳಗಳು ಪ್ರಾಯದ ಹೊತ್ತಿಗೆ ಒಟ್ಟು 25 ಸಲ ಕವಲೊಡೆದಿರುತ್ತವೆ.

ಘುಪ್ಪುಸಗಳಲ್ಲಿ ಗಾಳಿಯನ್ನು ತುಂಬುವ ಉಸಿರಾಟದ ಅಂಗಗಳು. 1. ಎದೆಯ ಎಲುಬಿನ ಗೂಡು (ಥೊರಾಸಿಕ್ ಕೇಜ್) ಹಿಂದೆ 12 ಬೆನ್ನೆಲುಬುಗಳು (ಥೊರಾಸಿಕ್ ವರ್ಟಿಬ್ರೇ), ಮುಂದೆ ಎದೆಚಕ್ಕೆ (ಸ್ಟೆರ್ನಂ) ಮತ್ತು ಪಕ್ಕಗಳಲ್ಲಿ 12 ಜೊತೆ ಪಕ್ಕೆಲುಬುಗಳಿಂದ (ರಿಬ್ಸ್) ಆಗಿದೆ. ಇದರಲ್ಲಿ ಮುಖ್ಯವಾಗಿ ಘುಪ್ಪುಸಗಳು ಹೃದಯ ಮತ್ತು ದೊಡ್ಡ ರಕ್ತನಾಳಗಳು ರಕ್ಷಣೆ ಹೊಂದಿವೆ. ಪಕ್ಕೆಲುಬುಗಳ ಹಿಂದಿನ ಕೊನೆಗಳು ಮತ್ತು ಬೆನ್ನೆಲುಬುಗಳ ನಡುವೆ ಕೀಲುಗಳಿದ್ದು ಪಕ್ಕೆಲುಬುಗಳು ಹಿಂದಿನಿಂದ ಕೆಳಕ್ಕೆ ಓರೆಯಾಗಿ ಮತ್ತು ಪಕ್ಕಕ್ಕೆ ಬಾಗಿರುವುದರಿಂದ ಅವನ್ನು ಸ್ನಾಯುಗಳು ಮೇಲಕ್ಕೆತ್ತಿದಾಗ ಅವುಗಳ ಮುಂದಿನ ಕೊನೆಗಳು ಎದೆಚಕ್ಕೆಯನ್ನು ಮೇಲಕ್ಕೆ ಮತ್ತು ಮುಂದಕ್ಕೆ ಒಯ್ಯುತ್ತವೆ. ಹೀಗಾದಾಗ ಗೂಡು ಹಿಗ್ಗಿ ಹಿಂದುಮುಂದಿನ ಮತ್ತು ಅಕ್ಕಪಕ್ಕದ ವ್ಯಾಸಗಳು ಹೆಚ್ಚುತ್ತವೆ. ಆಗ ಹೊರಗಿನ ಗಾಳಿ ಎಲ್ಲ ದಿಕ್ಕುಗಳಿಂದಲೂ ಒಳಗಿನ ಶೂನ್ಯವನ್ನು ಆಕ್ರಮಿಸಲು ಯತ್ನಿಸಿ ಇರುವ ಒಂದೇ ದಾರಿಯಾದ ಮೂಗು, ಗಂಟಲು, ಗಾಳಿಕೊಳವೆಗಳ ಮಾರ್ಗವಾಗಿ ಘುಪ್ಪುಸಗಳೊಳಕ್ಕೆ ನುಗ್ಗಿ ಅವನ್ನು ಹಿಗ್ಗಿಸುತ್ತದೆ. ಹೀಗೆ ಉಸಿರಾಟದಲ್ಲಿ ಪದೇ ಪದೇ ಆಗುವುದರಿಂದ ಘುಪ್ಪುಸಗಳಲ್ಲಿರುವ ಗಾಳಿ ಒಳಕ್ಕೆ ನುಗ್ಗಿದ ಹೊರಗಾಳಿಯೊಡನೆ ಬೆರೆತು ಸ್ವಲ್ಪ ಸ್ವಲ್ಪವಾಗಿ ಆಚೆಹೋಗಿ ಇಂಗಾಲದ ಡೈ ಆಕ್ಸೈಡ್, ಆವಿ ಮತ್ತು ಉಷ್ಣತೆಗಳನ್ನು ಕಳೆದುಕೊಂಡು ಘುಪ್ಪುಸಗಳಲ್ಲಿ ಓಡುತ್ತಿರುವ ರಕ್ತ ಹೀರುತ್ತಿರುವುದರಿಂದ ಖರ್ಚಾಗುತ್ತಿರುವ ಆಕ್ಸಿಜನ್ನನ್ನು ತುಂಬಿಕೊಳ್ಳುತ್ತದೆ.

2. ವಪೆ (ಡಯಾಫ್ರಂ): ಸ್ತನಿಗಳಲ್ಲಿ ಮಾತ್ರ ಇರುವ ಸ್ನಾಯು. ಇದು ಎದೆ ಹೊಟ್ಟೆಗಳ ನಡುವೆ ಇರುವ ತಡಿಕೆ. ಘುಪ್ಪುಸಗಳು ತಮ್ಮ ಸಹಜ ಸ್ಥಿತಿಸ್ಥಾಪಕ ಶಕ್ತಿಯಿಂದ ಸಣ್ಣಗಾಗಲು ಯಾವಾಗಲೂ ಯತ್ನಿಸುತ್ತಿರುವುದರಿಂದ ಹೊರಗಾಳಿಯ ಒತ್ತಡಕ್ಕಿಂತ ಎದೆಯೊಳಗೆ ಒತ್ತಡ ಕಡಿಮೆಯಾಗಿದೆ. ಇದರಿಂದ ಹೊರಗಾಳಿ ಉದರವನ್ನು ಒತ್ತಿ ಉದರಾಂಗಗಳನ್ನು ವಪೆಯೊಡನೆ ಎದೆಯ ಗೂಡಿನೊಳಕ್ಕೆ ಸದಾ ತಳ್ಳುತ್ತಿರುತ್ತದೆ. ವಪೆಯ ಸ್ನಾಯು ಕುಗ್ಗಿದಾಗ ಉದರಾಂಗಗಳು ಕೆಳಕ್ಕೆ ತಳ್ಳಲ್ಪಟ್ಟು ಹೊಟ್ಟೆಯುಬ್ಬಿ ಎದೆಯಗೂಡಿನ ಆಳ ಹೆಚ್ಚಿ ಹೊರಗಾಳಿ ಮೂಗಿನ ಮೂಲಕ ಘುಪ್ಪುಸಗಳನ್ನು ಉಬ್ಬಿಸುತ್ತದೆ. ಉಸಿರಾಟದಲ್ಲಿ ವಪೆಯ ಪಾತ್ರವೇ ಹೆಚ್ಚು. ಇದು ಸೆಟೆದಾಗ ಎದೆಯ ಆಳವನ್ನು ಮಾತ್ರ ಹೆಚ್ಚಿಸುವುದಲ್ಲದೆ ಕೆಳಗಿನ ಪಕ್ಕೆಲುಬುಗಳ ಮುಂದಿನ ಕೊನೆಗಳನ್ನು ಮೇಲಕ್ಕೆತ್ತುವುದರಿಂದ ಎದೆಯ ವ್ಯಾಸಗಳನ್ನೂ ಹೆಚ್ಚಿಸುವುದು.

3. ಪಕ್ಕೆಲುಬುಗಳ ನಡುವೆ ಇರುವ ಸ್ನಾಯುಗಳು (ಇಂಟರ್‌ಕೋಸ್ಟಲ್ ಮಸಲ್ಸ್) ಪಕ್ಕೆಲುಬುಗಳನ್ನು ಮೇಲಕ್ಕೆತ್ತಿ ಎದೆಯ ವ್ಯಾಸಗಳನ್ನು ಹೆಚ್ಚಿಸುತ್ತವೆ.

4. ಮಿದುಳಿನ ಭಾಗವಾದ ಮೆಡುಲ ಆಬ್ಲಾಂಗೇಟದಲ್ಲಿರುವ ಉಸಿರಾಟಿಕೆಯ ಕೇಂದ್ರ ಶ್ವಾಸಸ್ನಾಯುಗಳ ಕಾರ್ಯಗಳು ವ್ಯಕ್ತಿಯ ಅರಿವಿಲ್ಲದೆ ತಾಳಹಾಕಿದಂತೆ ನಿರಂತರವಾಗಿ ಸಾಗುವಂತೆ ನಿಯಂತ್ರಿಸುತ್ತದೆ. ಅಷ್ಟೇ ಅಲ್ಲದೆ ಇದು ಉಸಿರಾಟದ ವೇಗವನ್ನೂ ಅವಶ್ಯಕವಾದಂತೆ ಹೆಚ್ಚು ಕಡಿಮೆ ಮಾಡುತ್ತದೆ. ರಕ್ತದಲ್ಲಿ ಇಂಗಾಲದ ಡೈ ಆಕ್ಸೈಡಿನ ಅಂಶ ಹೆಚ್ಚಿದರೆ (ಉದಾಹರಣೆಗೆ, ದೇಹಶ್ರಮದಲ್ಲಿ) ಇದು ಉಸಿರಾಟದ ವೇಗವನ್ನೂ ಆಳವನ್ನೂ ಹೆಚ್ಚಿಸುತ್ತದೆ. ಆಕ್ಸಿಜನ್ ಅಂಶ ಕಡಿಮೆಯಾದರೆ (ಉದಾಹರಣೆಗೆ, ನಿದ್ರೆಯಲ್ಲಿ) ವೇಗವನ್ನು ತಗ್ಗಿಸುತ್ತದೆ.

5. ವಿಶೇಷ ಉಸಿರಾಟದ ಸ್ನಾಯುಗಳು (ಮಸಲ್ಸ್ ಆಫ್ ಎಕ್ಸ್‌ಟ್ರಾ ಆರ್ಡಿನರಿ ರೆಸ್ಪಿರೇಶನ್) ಮಾತಾಡುವುದು, ಕೆಮ್ಮುವುದು, ಸೀನುವುದು, ಮುಕ್ಕುವುದು, ವಾಂತಿ ಮಾಡುವುದು ಮುಂತಾದ ಕಾರ್ಯಗಳಲ್ಲಿ ಹೊಟ್ಟೆ ಎದೆಗಳಲ್ಲಿ ಒತ್ತಡ ಹೆಚ್ಚುವಂತೆಯೂ ಬಿರುಸಿನಿಂದ ಉಸಿರನ್ನು ತೆಗೆದುಕೊಳ್ಳುವಾಗ ಎದೆಹೊಟ್ಟೆಗಳ ಒತ್ತಡ ಬಹಳ ಕಡಿಮೆಯಾಗುವಂತೆಯೂ ಮಾಡುತ್ತವೆ. ಒತ್ತಡವನ್ನು ಹೆಚ್ಚಿಸುವುದರಲ್ಲಿ ಉದರ ಸ್ನಾಯುಗಳ ಪಾತ್ರ ಹೆಚ್ಚು, ಒತ್ತಡವನ್ನು ತಗ್ಗಿಸುವುದರಲ್ಲಿ ವಪೆಯ ಪಾತ್ರ ಹೆಚ್ಚು. (ಎಂ.ಡಿ.)

**ಉಸುಬಿನ ನೊಣ:** ಕೀಟವರ್ಗಕ್ಕೆ ಸೇರಿದ ಡಿಪ್ಟಿರ ಗಣದ ಸೈಕೊಡಿಡೆ ಕುಟುಂಬದ ಸದಸ್ಯ. ಫ್ಲೆಬೊಟೊಮಸ್ ಜಾತಿಯ ಸಣ್ಣ ನೊಣಗಳು. ಉದ್ದ ಸು. 4 ಮಿಮೀ ದೇಹದ ಮೇಲೆ ಕೂದಲಿನ ಹೊದಿಕೆ ಇದೆ. ಹೆಣ್ಣು ನೊಣಗಳು ಮಾತ್ರ ಚುಚ್ಚುವ ಅಂಗಗಳನ್ನು ಹೊಂದಿವೆ. ಇವು ಪರತಂತ್ರ ಜೀವಿಗಳು ಕೆಲವು ಸರೀಸೃಪಗಳ ಮತ್ತು ಸ್ತನಿಗಳ ರಕ್ತವನ್ನಲ್ಲದೆ ಮನುಷ್ಯನ ರಕ್ತವನ್ನೂ ಹೀರುವುವು. ಕೆಲವು ಪ್ರಭೇದದ ಗಂಡುನೊಣಗಳು ರಾತ್ರಿ ಹೆಚ್ಚಾಗಿ ಗಾಳಿ ಬೀಸದಿರುವಾಗ ಚುರುಕಾಗಿರುತ್ತವೆ. ಹಗಲು ಗಿಡಮರಗಳ ಮತ್ತು ಕಟ್ಟಡಗಳ ಕತ್ತಲು ಪ್ರದೇಶಗಳಲ್ಲಿ ವಾಸಿಸುತ್ತವೆ. ಸಾಧಾರಣವಾಗಿ ಸದ್ದಿಲ್ಲದೆ ನಿಧಾನವಾಗಿ ಹಾರುತ್ತವೆ. ಕಲ್ಲುಗಳ ಕೆಳಗೆ, ಮರದ ಪೊಟರೆ, ಬಿಲ, ಇರುಕುಜಾಗ, ಲಾಯ, ಕೋಳಿಗಳ ಗೂಡಿನಂತಹ ಪ್ರದೇಶಗಳಲ್ಲಿ, ಕತ್ತಲಿರುವ ತೇವವಿರುವ ಮತ್ತು ಕೊಳೆಯುತ್ತಿರುವ ಪದಾರ್ಥಗಳಲ್ಲಿ ಮೊಟ್ಟೆಯಿಡುತ್ತವೆ. ಈ ಜಾಗಗಳಲ್ಲಿ ಲಾರ್ವ (ಡಿಂಬ) ಗಳಿಗೆ ಆಹಾರ ಹೇರಳವಾಗಿ ಸಿಗುತ್ತದೆ. 7 ರಿಂದ 10 ವಾರಗಳಲ್ಲಿ ಒಂದು ಜೀವನ ಚಕ್ರ ಪೂರ್ಣಗೊಳಿಸುತ್ತವೆ.




ಉಸುಬಿನ ನೊಣ

ಫ್ಲೆಬೊಟೊಮಸ್ ಜಾತಿಯ ನೊಣಗಳು ಜ್ವರವನ್ನುಂಟು ಮಾಡುವ ಲೀಷ್ಮಾನಿಯ ಸೂಕ್ಷ್ಮಜೀವಿಗಳನ್ನು ಹರಡಿ ಸಾಂಕ್ರಾಮಿಕ ರೋಗಕ್ಕೆ ಕಾರಣವಾಗಿವೆ. (ನೋಡಿ : ಉಸುಬಿನ ನೊಣದ ಜ್ವರ). ಕಾಲಾ ಅಜಾರ್ ಈ ನೊಣಗಳು ಹರಡುವ ರೋಗ. ಮೆಡಿಟರೇನಿಯನ್, ದಕ್ಷಿಣ ರಷ್ಯ, ಭಾರತ, ಚೀನಾ, ಮಧ್ಯ ಆಫ್ರಿಕ ಮತ್ತು ದಕ್ಷಿಣ ಅಮೆರಿಕದ ಕೆಲವು ಪ್ರದೇಶಗಳಲ್ಲಿ ಸಾಮಾನ್ಯ.

ಪೌರಸ್ತ್ಯ ಹುಣ್ಣು ಸಹ ಲೀಷ್ಮಾನಿಯ ಸೂಕ್ಷ್ಮಜೀವಿಗಳಿಂದ ಉಂಟಾಗುವುದು. ಈ ರೋಗ ಚರ್ಮಕ್ಕೆ ಸೀಮಿತವಾಗಿದೆ. ಇದಕ್ಕೆ ದೆಹಲಿ ಬೊಬ್ಬೆ ಅಥವಾ ಬಾಗ್ದಾದ್ ಬೊಬ್ಬೆ ಎನ್ನುವರು.

ಎಸ್ಪುಡಿಯ ರೋಗ ನಾಸಿಕ ಮತ್ತು ಬಾಯಿಯ ಪ್ರದೇಶಗಳಲ್ಲಿ ಲೀಷ್ಮಾನಿಯ ಸೂಕ್ಷ್ಮಜೀವಿಗಳಿಂದ ಉಂಟಾಗುವುದು. ಓರೋಯ ಜ್ವರ ಮತ್ತು ಪೆರ‍್ರುಗ ಪೆರುಯಾನ ರೋಗಗಳು ಬ್ಯಾಕ್ಟೀರಿಯದಿಂದ ಉಂಟಾಗುವುವು. ಈ ರೋಗಗಳು ದಕ್ಷಿಣ ಅಮೆರಿಕದಲ್ಲಿ ಸಾಮಾನ್ಯ. ಓರೋಯ ಜ್ವರದಿಂದ ಅನೀಮಿಯವೂ, ಪೆರ‍್ರುಗ ಪೆರುಯಾನದಿಂದ ಚರ್ಮದ ಮೇಲೆ ಗಂಟುಗಳೂ ಬರುವುವು. (ಎನ್.ವಿ.ಎ.)

**ಉಸುಬಿನ ನೊಣದ ಜ್ವರ:** ಉಸುಬಿನ ನೊಣ (ಸ್ಯಾಂಡ್ ಫ್ಲೈ) ಹರಡುವ ವೈರಸ್ ಜ್ವರ. ಫ್ಲೆಬೊಟೊಮಸ್ ಪಪ್ಪಾಟಾಸಿಯೈ ಜಾತಿಯ ನೊಣ ಸ್ಯಾಂಡ್‌ಫ್ಲೈ ಫೀವರ್ ರೋಗ ಹರಡುತ್ತದೆ. ಕೆಂಪೇರಿದ ಮುಖ, ನೀರು ತುಂಬಿದ ಕಣ್ಣುಗಳು, ಬೆನ್ನು, ಕೈಕಾಲುಗಳ ಸಂದುಗಳಲ್ಲಿ ನೋವು ಮತ್ತು ತಲೆ ನೋವು ಮಾರಕವಲ್ಲದ ಈ ರೋಗದ ಲಕ್ಷಣಗಳು. ಜ್ವರ ಒಮ್ಮೆಲೇ ಜಾಸ್ತಿಯಾಗಿ, ದೇಹದ ಉಷ್ಣತೆಯನ್ನು ೪೦.೫° ಸೆ ಗೆ ಏರಿಸುತ್ತದೆ. ಚಳಿ, ನಡುಕ ಸಾಮಾನ್ಯ. ಜ್ವರ ಇಳಿಯುವಾಗ ಮೈಯೆಲ್ಲ ವಿಪರೀತ ಬೆವರುತ್ತದೆ. ರೋಗಿ ನಿತ್ರಾಣಿಯಾಗಿ, ನಿಧಾನವಾಗಿ ಚೇತರಿಸಿಕೊಳ್ಳುವನು. ಬೆಳಕಿಗೆ ಕಣ್ಣುಬಿಡದಂತಾಗಿ ಕಣ್ಣೀರು ಸುರಿವುದು, ಮಂಕುತನ, ಹಸಿವುನಾಶ, ಓಕರಿಕೆ, ಕೆಲವೇಳೆ ವಾಂತಿ ಬರುತ್ತದೆ. ಸೊಳ್ಳೆ ನಿರೋಧಕ ಔಷಧಿಗಳ ಸಿಂಪಡಿಕೆಯಿಂದ ಇದರ ಹಾವಳಿ ಅಡಗಿದೆ. ದ್ವೀಪ ಪ್ರದೇಶಗಳು, ಕರಾವಳಿ, ಈಜಿಪ್ಟ್, ಪ್ಯಾಲಿಸ್ಟೈನ್, ಇರಾಕ್, ಸಿರಿಯ, ಭಾರತದ ಈಶಾನ್ಯ ರಾಜ್ಯಗಳು, ಮಧ್ಯ ಮತ್ತು ದಕ್ಷಿಣ ಅಮೆರಿಕಗಳಲ್ಲಿ ಈ ರೋಗ ಸ್ಥಾನಿಕ (ಎಂಡೆಮಿಕ್) ಎನಿಸಿದೆ.

ಭಾರತದಲ್ಲಿ ಮುಖ್ಯವಾಗಿ ಗಿರಿಜನರಾದ ಗೂರ್ಖ ಮತ್ತು ಡೋಗ್ರ ಜನರಲ್ಲಿ ಈ ಜ್ವರದ ಹಾವಳಿ ಹೆಚ್ಚು.

ವಸಂತ ಮತ್ತು ಶರತ್ಕಾಲಗಳಲ್ಲಿ ಈ ರೋಗ ಕಾಣಿಸಿಕೊಳ್ಳುವುದು. ಬೇಸಗೆಯಲ್ಲಿ ಸಹ ಈ ರೋಗ ಬರುತ್ತದೆ. ಸ್ಥಾನಿಕವಾಗಿ ರೋಗವಿರುವ ಊರಿಗೆ ಹೊಸದಾಗಿ ಬಂದ ಜನರಿಗೆ ಸುಲಭವಾಗಿ ಹರಡುತ್ತದೆ. ಕಾರಣ, ರೋಗಕ್ಕೆ ಆಸರೆ ಇನ್ನೊಬ್ಬ ರೋಗಿಯೇ. ರೋಗದ ಇಂಕ್ಯುಬೇಷನ್ ಪೀರಿಯಡ್ 5–7 ದಿನಗಳು. ರೋಗಾಣುಗಳು 1–2 ದಿನಗಳು ರಕ್ತದಲ್ಲಿರುತ್ತವೆ. ಈ ಸಮಯದಲ್ಲಿ ಉಸುಬಿನ ನೊಣ, ರೋಗಿಯ ರಕ್ತ ಹೀರಿದಾಗ ರಕ್ತದಲ್ಲಿರುವ ರೋಗಾಣುಗಳು ನೊಣದ ದೇಹಕ್ಕೆ ಸೇರುತ್ತವೆ. ವಾರ ಕಳೆದ ಮೇಲೆ ಬೇರೆಯವರಿಗೆ ಸೋಂಕು ಅಂಟಿಸುವ ಮೂಲಕ ರೋಗವನ್ನು ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ಈ ನೊಣಗಳು ಹೆಚ್ಚು ದೂರ ಹಾರಲಾರವು. ಸು. ೧೦೦ ಮೀ. ಗೊಳಗೆ ಪೂರ್ಣ ಜೀವಾವಧಿ ಮುಗಿಸುತ್ತವೆ. ನೆರಳು, ಕತ್ತಲು, ಬೆಚ್ಚಗೆ ಮತ್ತು ತಂಪಾಗಿರುವ ಸಂದುಗಳಲ್ಲಿ ವಾಸಿಸುವುದೆಂದರೆ ಬಲು ಇಷ್ಟ. ಹೆಣ್ಣು ನೊಣಗಳು ಮಾತ್ರ ಸೋಂಕು ಹರಡುವವು. ರೋಗ ಲಕ್ಷಣಗಳನ್ನು ಸೂಕ್ಷ್ಮವಾಗಿ ಗುರುತಿಸಿ, ಪರೀಕ್ಷಿಸಿ ಅನಂತರ ಸಾಂಕ್ರಾಮಿಕ ರೋಗಾಣುಗಳನ್ನು ಗುರುತಿಸಲಾಗುತ್ತದೆ.

ಕೀಟನಾಶಕಗಳನ್ನು ಸಿಂಪಡಿಸಿ ಉಸುಬಿನ ನೊಣಗಳನ್ನು ಸಾಯಿಸಬೇಕು. ರಾತ್ರಿ ಇವುಗಳ ಚಟುವಟಿಕೆ ಹೆಚ್ಚಾಗಿರುತ್ತದೆ. ಚರ್ಮಕ್ಕೆ ಅತಿಗಂಧದ ಸಿಟ್ರೊನೆಲ್ಲ ಎಣ್ಣೆಯಿರುವ ಮುಲಾಮನ್ನು ಹಚ್ಚಿಕೊಂಡರೆ ಈ ನೊಣಗಳು ಕಚ್ಚುವುದಿಲ್ಲ. ಪಂಕ, ಬೀಸಣಿಗೆಗಳಿಂದ ಗಾಳಿಯಾಡುತ್ತಿದ್ದರೆ ನೊಣಗಳು ಹತ್ತಿರ ಸುಳಿಯವು. ಸೊಳ್ಳೆ ಪರದೆಗಳನ್ನು ಹಾಕಿಕೊಂಡು ಮಲಗುವುದರಿಂದ ಈ ನೊಣಗಳಿಂದ ಬರುವ ರೋಗವನ್ನು ತಡೆಯಬಹುದು.

(ಎಚ್.ಎಸ್.ಎಸ್ಎಸ್. ; ಆರ್.ಎಸ್.ವಿ.)

# ಊ

**ಊರುಬಾಡು ಬೇನೆ:** ಇದು ಏಕಾಣು ಜೀವಿ. ಕ್ಲಾಸ್ಟ್ರಿಡಿಯಂ ಬಾಟ್ಯುಲಿನಂ ಉತ್ಪಾದಿಸುವ ಜೀವಿವಿಷ ಸೇವನೆಯಿಂದ ಉಂಟಾಗುವ ಬೇನೆ. ಆಹಾರ ವಿಷವಾಗಿ ಪರಿಣಮಿಸುತ್ತದೆ. ಇದಕ್ಕೆ ಬಾಟುಲಿಸಂ ಎನ್ನುವರು. ಈ ರೋಗ ಮಾರಣಾಂತಿಕ. ತುಂಬಾ ದಿನಗಳ ಕಾಲ ಡಬ್ಬಿಯಲ್ಲಿ ಶೇಖರಿಸಿಟ್ಟ ಆಹಾರ ಬಳಸದಿರುವುದು ಇದರ ನಿಯಂತ್ರಣಕ್ಕೆ ಮಾರ್ಗೋಪಾಯ. ಆಹಾರ ಸೇವಿಸಿದ ೧೨–೩೦ ಗಂಟೆಯೊಳಗೆ ವಿಷ ಲಕ್ಷಣಗಳು ಪ್ರಕಟವಾಗುತ್ತವೆ. ಬಾಟುಲಿನಂ ವಿಷಕ್ಕೆ ಒಳಗಾದವರಿಗೆ ತುರ್ತಾಗಿ ಬಾಟುಲಿನಂ ಪ್ರತಿ ವಿಷ ನೀಡಿ ಚಿಕಿತ್ಸಿಸುತ್ತಾರೆ. (ಡಿ.ಎಸ್.ಎಸ್.)

**ಊಸರವಳ್ಳಿ:** ಇದು ಉರಗವರ್ಗದ, ಸ್ಕ್ವಮಾಟ ಗಣದ, ಕೆಮಿಲಿಯಾನಿಡೆ ಕುಟುಂಬದ ಸದಸ್ಯ. ಇದರ ಸಾಮಾನ್ಯ ಹೆಸರು ಗೋಸುಂಬೆ. ವೈಜ್ಞಾನಿಕ ನಾಮ ಕೆಮಿಲಿಯಾನ್. ಹಲ್ಲಿಯಂತಿರುವ ಈ ಪ್ರಾಣಿಗಳು ವಾತಾವರಣಕ್ಕನುಗುಣವಾಗಿ ದೇಹದ ಬಣ್ಣವನ್ನು ಬದಲಾಯಿಸುತ್ತವೆ. ಇವು ಬಣ್ಣ ಬದಲಾಯಿಸುವ ಕ್ರಿಯೆ ಸುತ್ತಲಿನ ವಾತಾವರಣ ಪ್ರಭಾವದಿಂದ ಉಂಟಾಗುತ್ತದೆ. ಬೆಳಕು ಮತ್ತು ಉಷ್ಣ ಈ ವರ್ಣವ್ಯತ್ಯಾಸಕ್ಕೆ ಮುಖ್ಯಕಾರಣಗಳು. ಈ ಪ್ರಾಣಿಯ ಮೂಲವರ್ಣ ಕಂದು ಅಥವಾ ಹಸಿರುಬಣ್ಣ, ಇದರ ಮಧ್ಯೆ ಅಲ್ಲಲ್ಲಿ ಕಪ್ಪು ಚುಕ್ಕೆಗಳೂ ಅಕ್ಕಪಕ್ಕಗಳಲ್ಲಿ ನಸುಕಂದು ಬಣ್ಣದ ಮಚ್ಚೆಗಳಿವೆ. ಕತ್ತಲೆಯಲ್ಲಿ ಇದರ ಬಣ್ಣ ಬಿಳುಪು ಮತ್ತು ಹಳದಿಯ ಮಚ್ಚೆಗಳಿಂದ ಕೂಡಿದಂತೆ ಕಾಣುವುದು. ಬಿಸಿಲಿನಲ್ಲಿ ನಸು ಕಪ್ಪುಬಣ್ಣದಿಂದ ಕೂಡಿರುವಂತೆ ತೋರುವುದು. ಹೆಚ್ಚು ಉಷ್ಣತೆಯಲ್ಲಿ ಹಸಿರಾಗಿ ಕಂಡರೆ ಕಡಿಮೆ ಉಷ್ಣತೆಯಲ್ಲಿ ತೆಳು ಕಂದುಬಣ್ಣದಿಂದಲೂ ಹಳದಿ ಚುಕ್ಕೆಗಳಿಂದಲೂ ಕೂಡಿರುವುದು. ಉದ್ವೇಗಗೊಂಡಾಗ ತೆಳುವಾದ ಬಣ್ಣವಿರುವ ಭಾಗಗಳು ಕಪ್ಪುಬಣ್ಣಕ್ಕೆ ತಿರುಗುವುವು.

ಆಫ್ರಿಕ, ಮಡಗಾಸ್ಕರ್, ಅರೇಬಿಯ, ದಕ್ಷಿಣ ಭಾರತ ಮತ್ತು ಸಿಲೋನಿನಲ್ಲಿ ವಾಸಿಸುತ್ತವೆ. ಊಸರವಳ್ಳಿಯ ಕಾಲಿನ ಬೆರಳುಗಳು ಎರಡು ಗುಂಪಾಗಿದ್ದು, ಒಂದರಲ್ಲಿ ಎರಡು ಮತ್ತು ಇನ್ನೊಂದರಲ್ಲಿ ಮೂರು ಬೆರಳುಗಳು ಜೊತೆಗೂಡಿವೆ. ಕೊಂಬೆ–ರೆಂಬೆಗಳನ್ನು ಭದ್ರವಾಗಿ ಹಿಡಿದು ಜಿಗಿಯಲು ಉಪಯುಕ್ತವಾಗಿವೆ. ಊಸರವಳ್ಳಿಯ ತಲೆಯ ಮೇಲ್ಭಾಗದಲ್ಲಿ ಮುಳ್ಳಿನಂಥ ರಚನೆಗಳಿವೆ. ಇವು ಕೆಲವು ಪ್ರಭೇದದ ಪ್ರಾಣಿಗಳಲ್ಲಿ ದೊಡ್ಡದಾಗಿ ಬೆಳೆದು ಕೋಡುಗಳಂತೆ ಕಾಣಿಸಿಕೊಳ್ಳುವುವು. ಇವುಗಳ ಸಂಖ್ಯೆ ವಿವಿಧ ಜಾತಿಯಲ್ಲಿಯೂ ಬೇರೆ ಬೇರೆಯಾಗಿರುತ್ತದೆ. ಬಾಲ ಸುರುಳಿಯ ಹಾಗೆ ಸುತ್ತಿಕೊಂಡು ಬಲವಾಗಿ ಹಿಡಿದುಕೊಳ್ಳಲು ಸಹಾಯ ಮಾಡುತ್ತದೆ. ಕಣ್ಣುಗಳು ಸ್ವತಂತ್ರವಾಗಿ ೧೮೦° ರಿಂದ ೩೬೦° ಅಕ್ಷಾಂಶದಲ್ಲಿ ತಿರುಗುವ ಹಾಗೆ ಕಣ್ಣರೆಪ್ಪೆಗಳು ಒಂದು ದುಂಡಾದ ಪೊರೆಯಾಗಿ ಸೇರಿಕೊಂಡು ಒಂದು ಕಂಡಿಯನ್ನು ಬಿಟ್ಟಿವೆ. ನಾಲಗೆ ಅತಿ ಉದ್ದವಾಗಿದ್ದು, ಅಂಟುದ್ರವ ಹೊಂದಿದೆ. ಇದರಿಂದ ದೂರದಲ್ಲಿರುವ ಕೀಟಗಳನ್ನು ಬೇಟೆಯಾಡಿ ಹಿಡಿಯಬಲ್ಲುದು.

ಊಸರವಳ್ಳಿ ಮೊಟ್ಟೆಯಿಡುವ ಪ್ರಾಣಿ. ಮೊಟ್ಟೆಯೊಳಗೆ ಭ್ರೂಣದ ಬೆಳೆವಣಿಗೆ ಮುಗಿದನಂತರ, ಮೊಟ್ಟೆಗಳು ಬಿಸಿಲಿನ ತಾಪಕ್ಕೆ ಬಿರುಕುಗೊಳ್ಳುತ್ತವೆ. ಇದರಿಂದ ಮರಿಗಳು ಹೊರಗೆ ಬರುತ್ತವೆ. ದಕ್ಷಿಣ ಆಫ್ರಿಕದಲ್ಲಿ ವಾಸಿಸುವ ಊಸರವಳ್ಳಿ ಜಾತಿ ಹಲ್ಲಿಗಳು ಮೊಟ್ಟೆಗಳನ್ನು ತಮ್ಮ ಶರೀರದಲ್ಲೇ ಇಟ್ಟುಕೊಂಡು, ಮರಿಗಳಿಗೆ ಜನ್ಮ ನೀಡುತ್ತವೆ.

ಇಂತಹ ಎಳುಕಳಲನ್ನು ಡಿ ಜೀವಸತ್ವವಾದ ಕ್ಯಾಲ್ಸಿಫೆರಾಲ್ ಕೊಟ್ಟು ಉಪಚರಿಸಬೇಕು. ಇದು ಮೂಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಗರ್ಭಿಣಿ ಸ್ತ್ರೀಯರಿಗೆ ಶಿಕ್ಷಣ ಕೊಡಬೇಕು, ಸಮತೋಲನ ಆಹಾರ, ಮೀನಿನೆಣ್ಣೆ, ಹಾಲು, ತರಕಾರಿ, ಸಾಕಷ್ಟು ಉಪಯೋಗಿಸಿದರೆ ಕೊರತೆಯ ಎಳುಕಳಲು ಆಗದಂತೆ ತಡೆಗಟ್ಟಬಹುದು. ***



ಊಸರವಳ್ಳಿ (ಕೆಮಿಲಿಯಾನ್)

# ಎ

**ಎ.ಸಿ.ಟಿ.ಎಚ್:** ಎಸಿಟಿಎಚ್ – ಅಡ್ರಿನೊ ಕಾರ್ಟಿಕೊ ಟ್ರೋಫಿಕ್ ಹಾರ್ಮೋನು. ಕಶೇರುಕಗಳ ಪಿಟ್ಯುಟರಿ ಗ್ರಂಥಿಯ ಕಾರ್ಟಿಕೊಟ್ರೋಫ್ ಎಂಬ ನಿರ್ದಿಷ್ಟ ಜೀವಕೋಶಗಳಲ್ಲಿ ಉತ್ಪತ್ತಿಯಾಗುತ್ತದೆ. ಇತರ ಎಲ್ಲ ಅಗ್ರಪಾಲಿ ಹಾರ್ಮೋನುಗಳಂತೆ ಇದೂ ಕೂಡ 'ಅನುವರ್ತಕ ಹಾರ್ಮೋನು'. ಮೂತ್ರ ಪಿಂಡಗಳ ಊರ್ಧ್ವ ಭಾಗದಲ್ಲಿರುವ ಅಡ್ರಿನಲ್ ಗ್ರಂಥಿಗಳೊಳಗಿರುವ ನಿರ್ನಾಳ ಗ್ರಂಥಿಗಳ ಕಾರ್ಟೆಕ್ಸ್ ಭಾಗದ ಕ್ರಿಯೆಗಳನ್ನು ನಿಯಂತ್ರಿಸುತ್ತದೆ. ಕಾರಣ, ಈ ಹಾರ್ಮೋನಿಗೆ ಎಸಿಟಿಎಚ್ ಎಂಬ ಹೆಸರು. ಇದು ಪ್ರೋಟೀನು ಹಾರ್ಮೋನು. ಅಡ್ರಿನಲ್ ಗ್ರಂಥಿಯ ಕಾರ್ಟೆಕ್ಸ್ ಭಾಗದಲ್ಲಿ ಉತ್ಪತ್ತಿಯಾಗುವ ಸ್ಟಿರಾಯಿಡ್ ಹಾರ್ಮೋನುಗಳು ದೇಹದ ದ್ರವ ಚಯಾಪಚಯ ಕ್ರಿಯೆಯನ್ನು ನಿರ್ವಹಿಸುವುದರಿಂದ ಅವುಗಳ ಕ್ರಿಯೆಯನ್ನು ನಿರ್ವಹಿಸುವ ಈ ಹಾರ್ಮೋನು ತುಂಬ ಮುಖ್ಯ. ಅಡ್ರಿನಲ್ ಗ್ರಂಥಿಯ ಕಾರ್ಟೆಕ್ಸ್ ಭಾಗದಲ್ಲಿ ಉತ್ಪತ್ತಿಯಾಗುವ ಹಾರ್ಮೋನುಗಳು ಇದರ ಸಂಶ್ಲೇಷಣೆ ಮತ್ತು ಬಿಡುಗಡೆಯನ್ನು ನಿಯಂತ್ರಿಸುತ್ತವೆ. ಹೈಪೊಥೆಲಾಮಸ್ ಭಾಗದಲ್ಲಿ ಉತ್ಪತ್ತಿಯಾಗುವ ಬಿಡುಗಡೆಯ ಘಟಕ (ರಿಲಿಜಿಂಗ್ ಫ್ಯಾಕ್ಟರ್) ನಿಯಂತ್ರಣಕ್ಕೆ ಒಳಪಟ್ಟಿದೆ. (ಎಚ್.ಎಚ್.ಎಸ್)

**ಎಂಟಮಾಸ್ಟ್ರಾಕ:** ಸಂಧಿಪದಿಗಳ ವಂಶದ ಕಠಿಣ ಚರ್ಮಿ (ಕ್ರಸ್ಟೇಷಿಯ) ಗಳ ವರ್ಗದ ಒಂದು ಗುಂಪು. ಹಲವು ಸಿಹಿನೀರಿನಲ್ಲಿ, ಹಲವು ಸಮುದ್ರದ ನೀರಿನಲ್ಲಿ ವಾಸಿಸುತ್ತವೆ. ಇದರಲ್ಲಿ ಬ್ರಾಂಕಿಯೋಪೋಡ, ಆಸ್ಟ್ರಕೋಡ, ಕೋಪಿಪೋಡ ಮತ್ತು ಕ್ಲಾಡೋಸಿರ ಉಪವರ್ಗಗಳು ಸೇರಿವೆ. ಡಾಫ್ನಿಯ, ಸೈಕ್ಲೋಪ್ಸ್, ಅರ್ಗುಲಸ್ ಇತ್ಯಾದಿ ಜೀವಿಗಳು ಈ ಗುಂಪಿಗೆ ಸೇರಿವೆ. ಅತ್ಯಂತ ಸರಳ ರಚನೆಯ ದೇಹವನ್ನು ಹೊಂದಿವೆ. ಗಾತ್ರದಲ್ಲಿ ಸಣ್ಣವು. ದೇಹದ ಖಂಡಗಳ ಮತ್ತು ಉಪಾಂಗಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಸಿಪ್ರಸ್‌ನಲ್ಲಿ ಖಂಡಗಳ ಸಂಖ್ಯೆ ಕೇವಲ ಕೆಲವು ಮಾತ್ರ. ಏಪ್ಸ್‌ನಲ್ಲಿ 60–70 ರ ತನಕ ರೂಪುಗೊಂಡಿವೆ. ಎದೆ ಮತ್ತು ಉದರಗಳನ್ನು ಸುಲಭವಾಗಿ ನಿರ್ಧರಿಸುವ ರಚನೆಯಾದ ಕ್ಯಾರಪೇಸ್ ಕವಚ ಮತ್ತು ಜಠರ ಯಂತ್ರಗಳ ಬೆಳವಣಿಗೆ ಇರುವುದಿಲ್ಲ. ಉದರದ ಕೊನೆಯಲ್ಲಿ ಬಾಲದ ಮುಳ್ಳುಗಳಿವೆ. ಮ್ಯಾಕ್ಸಿಲರಿ ಗ್ರಂಥಿಗಳು ಶುದ್ಧೀಕರಣಾಂಗಗಳು. ಜೀವನ ಚರಿತ್ರೆಯಲ್ಲಿ ಮುಖ್ಯವಾಗಿ ನಾಪ್ಲಿಯಸ್ ಲಾರ್ವಾ ಕಂಡುಬರುವುದು.

(ಎನ್.ಎಂ.)

**ಎಂಟಮೀಬ:** ಪ್ರೊಟೋಝೋವ ವಂಶದ ರೈಝೊಪೋಡ ವರ್ಗದ ಅಮೀಬೈನ ಗಣದ ಏಕಕೋಶ ಜೀವಿ. ಕುಟುಂಬದ ಹೆಸರು ಎಂಟಮೀಬಿಡೆ. ಈ ಕುಟುಂಬಕ್ಕೆ ಸೇರಿದ ಜೀವಿಗಳೆಲ್ಲವೂ ಇತರ ಪ್ರಾಣಿಗಳ ಜೀರ್ಣಾಂಗಗಳಲ್ಲಿ ಪರತಂತ್ರ ಜೀವನವನ್ನು ನಡೆಸುತ್ತವೆ. ಕೆಲವು ಎಂಟಮೀಬಗಳು ಆಶ್ರಯದಾತ ಜೀವಿಗಳಿಗೆ ಯಾವ ತೊಂದರೆಯನ್ನೂ ಕೊಡದೆ ಅವುಗಳಿಗೆ ಒಂದು ರೀತಿಯ ಅನುಕೂಲವನ್ನೇ ಮಾಡುತ್ತವೆ. ಆದರೆ ಎಂಟಮೀಬ ಹಿಸ್ಟೊಲಿಟಿಕ ಎಂಬ ಪ್ರಭೇದ ಮಾತ್ರ ಅತ್ಯಂತ ಹಾನಿಕಾರಕ. ಈ ಜೀವಿಗಳು ಮನುಷ್ಯನ ಕರುಳಿನಲ್ಲಿ ವಾಸಿಸುತ್ತವೆ. ಇವುಗಳ ಧಾಳಿಯಿಂದ ಆಮಶಂಕೆ ಅಥವಾ ರಕ್ತಬೇದಿ ಎಂಬ ಭಯಂಕರ ರೋಗ ಬರುತ್ತದೆ. ಇವು ಕರುಳಿನ ಒಳಗೋಡೆಯನ್ನು ಘಾಸಿಗೊಳಿಸುತ್ತವೆ.




ಎಂಟಮೀಬ

1. ಕೋಶಕೇಂದ್ರ 2. ಎಕ್ಟೊಪ್ಲಾಸಂ
3. ಎಂಡೊಪ್ಲಾಸಂ 4. ಆಹಾರ ಅವಕಾಶ

ಎಂ.ಕೋಲಿ ಎಂಬುದೂ ಮನುಷ್ಯನ ಕರುಳಿನಲ್ಲಿ ವಾಸಿಸುತ್ತದೆ. ಇದರಿಂದ ಯಾವ ತೊಂದರೆಯೂ ಇಲ್ಲ. ಎಂ.ಜಿಂಜಿವ್ಯಾಲಿಸ್ ಎಂಬುದು ಮನುಷ್ಯನ ವಸಡು ಮತ್ತು ಹಲ್ಲುಗಳ ಸಂದಿನಲ್ಲಿ ವಾಸಿಸುತ್ತದೆ. ಎಂ. ಬ್ಲಾಟ ಎಂಬುದು ಜಿರಳೆಯ ಜೀರ್ಣಾಂಗಗಳಲ್ಲಿ ಇರುತ್ತದೆ. ಎಂ. ರನಾರಂ ಕಪ್ಪೆಯ ಜೀರ್ಣಾಂಗಗಳಲ್ಲಿ ಮತ್ತು. ಎಂ. ಬೋವಿಸ್ ಎಂಬುದು ದನಗಳ ಕರುಳಿನಲ್ಲಿ ಇರುತ್ತವೆ. ಎಂ. ಓವಿಸ್ ಎಂಬುದು ಕುರಿಗಳ ಜೀರ್ಣಾಂಗಗಳಲ್ಲಿ ಕಂಡು ಬರುತ್ತದೆ. ಎಂ.ಈಕ್ವಿ ಎಂಬುದು ಕುದುರೆಗಳ ಕರುಳಿನಲ್ಲಿ ವಾಸಿಸುತ್ತದೆ. ಈ ಎಲ್ಲ ಜೀವಿಗಳನ್ನು ಪರತಂತ್ರ ಅಮೀಬಗಳು ಎನ್ನಲಾಗುವುದು. ಇವು ತಮ್ಮ ರಚನೆಯಲ್ಲಿ ಸ್ವತಂತ್ರಜೀವಿಯಾದ ಅಮೀಬವನ್ನು ಹೋಲುತ್ತವೆ. ಆದರೆ ಸಂಕುಚಿತ ಸ್ಥಳಾವಕಾಶ (ಕಾಂಟ್ರಾಕ್ಟೈಲ್ ವ್ಯಾಕ್ಯುಯೋಲ್) ಮಾತ್ರ ಇವುಗಳಲ್ಲಿಲ್ಲ.

ಎಂಟಮೀಬ ಹಿಸ್ಟೊಲಿಟಿಕ: ಇದರ ವಾಸ ಮನುಷ್ಯನ ದೊಡ್ಡ ಕರುಳಿನಲ್ಲಿ. ಇದರಿಂದ ಆಮಶಂಕೆ ಬರುತ್ತದೆ. ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಇದು ಹರಡಿದೆ. ಆದರೆ ಉಷ್ಣ ಮತ್ತು ಸಮಶೀತೋಷ್ಣ ವಲಯಗಳಲ್ಲಿ ಇದರ ಪ್ರಸಾರ ಅಧಿಕ. ಇದು ಕರುಳಿನ ಒಳಗೋಡೆಯ ಲೋಳೆ ಪೊರೆಯನ್ನು ತನ್ನ ಶರೀರದಿಂದ ಉತ್ಪತ್ತಿಯಾಗುವ ಹಿಸ್ಟೋಲೈಸಿನ್ ಎಂಬ ಕಿಣ್ವದಿಂದ ಕರಗಿಸಿ, ಕರುಳಿನ ಗೋಡೆಯಲ್ಲಿರುವ ಅನುಲೇಪಕ ಅಂಗಾಂಶವನ್ನು ನಾಶಗೊಳಿಸಿ, ಗಾಯಗಳನ್ನು ಉಂಟುಮಾಡುತ್ತದಲ್ಲದೆ, ಸೋರುವ ರಕ್ತದಲ್ಲಿರುವ ಕೆಂಪು ರಕ್ತಕೋಶಗಳನ್ನು ಹಿಡಿದು ತಿನ್ನುತ್ತದೆ.

ಅಮೀಬ ಜೀವಿ ಹೇಗೋ ಹಾಗೆ ಇದಕ್ಕೂ ನಿರ್ದಿಷ್ಟಾಕಾರದ ದೇಹವಿಲ್ಲ. ಶರೀರದಿಂದ ಹೊರ ಚಾಚುತ್ತಿರುವ ಒಂದೆರಡು ಮಿಥ್ಯಾಪಾದಗಳಿವೆ. ಪ್ರಾಣಿಯ ಸುತ್ತಳತೆ 0.004 – 0.006 ಸೆಂಮೀ. ಸೂಕ್ಷ್ಮದರ್ಶಿಯಲ್ಲಿ ನೋಡಿದಾಗ ಇವು ಜೀವರಸದ ತುಣುಕುಗಳಂತೆ ಕಾಣುತ್ತವೆ. ಶರೀರದ ಮಧ್ಯದಲ್ಲಿ ದುಂಡಗಿರುವ ಕೋಶಕೇಂದ್ರವಿದೆ. ಕೋಶದ್ರವ್ಯ ತಿಳಿಯಾದ ಹೊರಭಾಗದಲ್ಲಿ ಎಕ್ಟೋಪ್ಲಾಸಂ ಎಂಬ ಭಾಗ ಮತ್ತು ಒಳಭಾಗದಲ್ಲಿ ತರಿ ತರಿಯಾದ ಎಂಡೋಪ್ಲಾಸಂ ಭಾಗಗಳಿವೆ. ಒಂದು ಬಾರಿಗೆ ಒಂದು ಅಥವಾ ಎರಡೇ ಮಿಥ್ಯಾಪಾದಗಳನ್ನು ಇದು ಹೊರಚಾಚುತ್ತದೆ. ದುಂಡಾಗಿರುವ ಕೋಶಕೇಂದ್ರದ ತೆಳುವಾದ ಪೊರೆಗೆ ಅಂಟಿದಂತೆ ಒಳಭಾಗದಲ್ಲಿ ಮಣಿಗಳ ಸಾಲಿನಂತಿರುವ ಕ್ರೊಮ್ಯಾಟಿಕ್ ವಸ್ತು ಉಂಟು. ಕೋಶಕೇಂದ್ರದ ಮಧ್ಯದಲ್ಲಿ ದುಂಡಗೆ ಕಾಳಿನಂತಿರುವ ಕ್ಯಾರಿಯೋಸೋಮ್ ಇದೆ. ಇದರ ರಚನೆ ಕ್ರೊಮ್ಯಾಟಿನ್ ಮತ್ತು ಪ್ಲಾಸ್ಟಿನ್ ಎಂಬ ವಸ್ತುಗಳಿಂದಾಗಿದೆ.

ಕೋಶ ದ್ರವ್ಯದೊಳಗೆ ಆಹಾರ ಅವಕಾಶಗಳೂ (ಫುಡ್ ವ್ಯಾಕ್ಯುಯೋಲ್) ಇವುಗಳೊಳಗೆ ಕೆಂಪು ರಕ್ತಕೋಶಗಳೂ ಇವೆ. ಎಂಟಮೀಬ ಹಿಸ್ಟೊಲಿಟಿಕದ ಆಹಾರ ಅವಕಾಶಗಳೊಳಗೆ ಕೆಂಪು ರಕ್ತಕೋಶಗಳಿರುವುದು ಒಂದು ವೈಶಿಷ್ಟ್ಯ. ಇದರಿಂದ ಇದನ್ನು ಸುಲಭವಾಗಿ ಪತ್ತೆಹಚ್ಚಬಹುದು. ಸಂಕುಚಿತ ಸ್ಥಳಾವಕಾಶ ಈ ಪ್ರಾಣಿಯಲ್ಲಿ ಇಲ್ಲವೇ ಇಲ್ಲ.

ಕೇವಲ ನಿರ್ಲಿಂಗ ರೀತಿಯ ಸಂತಾನೋತ್ಪತ್ತಿ ಮಾತ್ರ ಇವುಗಳಲ್ಲಿದೆ. ವಯಸ್ಕ ಜೀವಿಯ ಶರೀರ ಇಬ್ಭಾಗವಾಗಿ ಸೀಳಿಹೋಗಿ ಎರಡು ಸ್ವತಂತ್ರ ಜೀವಿಗಳು ಹುಟ್ಟುತ್ತವೆ. ಈ ಕ್ರಿಯೆಯ ಕಾಲದಲ್ಲಿ ಕೋಶಕೇಂದ್ರ ಕೂಡ ಎರಡು ಭಾಗಗಳಾಗಿ ಒಡೆಯುತ್ತದೆ. ಸಂತಾನೋತ್ಪತ್ತಿಯಿಂದಾಗಿ ಇವುಗಳು ಹೆಚ್ಚಿದ ಮೇಲೆ ಕರುಳಿನ ಗೋಡೆಯಿಂದ ಬೇರ್ಪಡುತ್ತವೆ. ಕರುಳಿಗೆ ತಲಪಿದ ಇವು ತಮ್ಮ ಮಿಥ್ಯಾಪಾದಗಳನ್ನು ಒಳಗೆಳೆದುಕೊಂಡು ದುಂಡಗಾಗುತ್ತವೆ. ಇವುಗಳ ಕೋಶಕೇಂದ್ರ ಅತಿ ದೊಡ್ಡದು. ಆಗ ಶರೀರದ ಸುತ್ತಲೂ ಒಂದು ರಕ್ಷಾಕವಚ ನಿರ್ಮಾಣಗೊಳ್ಳುತ್ತದೆ. ಈ ಕೋಶಜೀವಿಯ (ಸಿಸ್ಟ್) ಒಳಗೆ ಆಹಾರ ಪದಾರ್ಥಗಳು ಶೇಖರಗೊಂಡಿರುತ್ತವೆ. ಕ್ರೊಮ್ಯಾಟಿನ್ ತುಂಡು ತುಂಡಾಗಿರುವ ಕಡ್ಡಿಗಳಂತೆ ಕಂಡುಬರುತ್ತದೆ. ಈ ಕೋಶಜೀವಿಯ ಒಳಗಡೆ ಕೋಶಕೇಂದ್ರ ಎರಡು ಬಾರಿ ವಿಭಜನೆಗೊಂಡು ನಾಲ್ಕು ಕೋಶಕೇಂದ್ರಗಳು ಹುಟ್ಟುತ್ತವೆ. ಕೋಶಜೀವಿ ಕೂಡಿಟ್ಟ ಆಹಾರವನ್ನು ಉಪಯೋಗಿಸಿಕೊಂಡು ಬದುಕುತ್ತವೆ. ಇವುಗಳು ಮಲವಿಸರ್ಜನೆಯಿಂದಾಗಿ ಹೊರಬರುತ್ತವೆ.

ಈ ಪ್ರಾಣಿಗಳು ಒಬ್ಬರಿಂದೊಬ್ಬರಿಗೆ ಅಶುಚಿಯಾದ ನೀರು ಮತ್ತು ಆಹಾರ ಪದಾರ್ಥಗಳ ಸೇವನೆಯಿಂದ ಹರಡುತ್ತವೆ. ಇವುಗಳ ಪ್ರಸಾರಕ್ಕೆ ಮನೆಯ ನೊಣಗಳು ಸಹಾಯ ಮಾಡುತ್ತವೆ. ಹಸಿ ತರಕಾರಿ, ಹಲಸಿನ ತೊಳೆ, ಕೊಬ್ಬರಿ ಮಿಠಾಯಿ ಮುಂತಾದ ಆಹಾರ ಪದಾರ್ಥಗಳು ಇವುಗಳ ಪ್ರಸಾರಕ್ಕೆ ಸಹಾಯಕವಾಗುತ್ತವೆ. ಹಳ್ಳಿಗಾಡುಗಳಲ್ಲಿ ಇವುಗಳ ಪ್ರಸಾರ ತೀವ್ರಗತಿಯಲ್ಲಿ ನಡೆಯುತ್ತದೆ. ಪಟ್ಟಣಗಳಲ್ಲಿ ಸುಧಾರಿಸಿದ ಒಳಚರಂಡಿ ವ್ಯವಸ್ಥೆ ಮತ್ತು ಸುಧಾರಿಸಿದ ಕಕ್ಕಸುಗಳು ಇದ್ದರೆ ಪ್ರಸಾರ ತೀವ್ರವಾಗಿ ಆಗದು. ಗಾಳಿಯೂ ಇವುಗಳ ಪ್ರಸಾರಕ್ಕೆ ಸಹಾಯ ಮಾಡುತ್ತದೆ.

ಅಶುಚಿಯಾದ ಆಹಾರವನ್ನು ಮಾನವ ಸೇವಿಸಿದಾಗ ಆತನ ಜೀರ್ಣಾಂಗವನ್ನು ತಲಪುತ್ತವೆ. ಸಣ್ಣ ಕರುಳಿನಲ್ಲಿ ನಾಲ್ಕು ಕೋಶಕೇಂದ್ರ ಇರುವ ಈ ಕೋಶಜೀವಿಯ

ಗೋಡೆ ಕರಗಿಹೋಗುತ್ತದೆ. ಕೋಶದ್ರವ್ಯ ಕೋಶಕೇಂದ್ರದ ಸಂಖ್ಯೆಗೆ ಅನುಗುಣವಾಗಿ ನಾಲ್ಕು ಭಾಗಗಳಾಗಿ ವಿಭಾಗ ಹೊಂದುತ್ತದೆ. ಈಗ ಇವು ಸಣ್ಣಕರುಳಿನಿಂದ ದೊಡ್ಡ ಕರುಳಿಗೆ ಪ್ರವೇಶಿಸಿ ತಮ್ಮ ಸಂತಾನೋತ್ಪತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತವೆ.

ಎಂಟಮೀಬ ಹಿಸ್ಟೊಲಿಟಿಕ ಕರುಳಿನ ಒಳಗೋಡೆಯ ಅಂಗಾಂಶವನ್ನು ಕಿಣ್ವಗಳ ಸಹಾಯದಿಂದ ನಾಶಮಾಡುತ್ತದೆ. ಇದರಿಂದಾಗಿ ಕರುಳಿನ ಗೋಡೆಯಲ್ಲಿ ಗಾಯಗಳಾಗುತ್ತವೆ. ಈ ಗಾಯಗಳಿಂದ ರಕ್ತ ಮತ್ತು ಆಮು ಹರಿಯಲಾರಂಭಿಸುತ್ತವೆ. ಮಲವಿಸರ್ಜನೆಯ ಕಾಲದಲ್ಲಿ ಭಾರೀ ಪ್ರಮಾಣದಲ್ಲಿ ರಕ್ತ ಮತ್ತು ಆಮು ಹೊರಬರುತ್ತವೆ. ಕೆಲವೊಂದು ಬಾರಿ ಈ ಜೀವಿಗಳು ರಕ್ತಪರಿಚಲನೆಯ ಮೂಲಕ ಶರೀರದ ವಿವಿಧ ಭಾಗಗಳನ್ನು ತಲುಪಿ, ಆ ಭಾಗಗಳಲ್ಲಿ ಶೇಖರಣೆಗೊಂಡು, ರಕ್ತನಾಳಗಳನ್ನೊಡೆದು, ಕೀವು ತುಂಬಿದ ವ್ರಣಗಳ ಉತ್ಪತ್ತಿಗೆ ಕಾರಣವಾಗುವುವು. ಈ ರೋಗ ಸಾಂಕ್ರಾಮಿಕವಾಗಿ ಹರಡುವುದು ಕೂಡ ಉಂಟು. ರೋಗಿ ನಿಶ್ಶಕ್ತನಾಗುತ್ತಾನೆ. ಹೊಟ್ಟೆನೋವು, ತಲೆನೋವು, ಮಲಬದ್ಧತೆ, ನರಮಾಂದ್ಯ– ಇವು ರೋಗದ ಮುಖ್ಯ ಲಕ್ಷಣಗಳು. ರೋಗ ಉಲ್ಬಣಗೊಂಡಾಗ ಭೇದಿ, ರಕ್ತದ ಹೆಪ್ಪುಗಳು ಜಾಸ್ತಿ ಕಾಣಿಸಿಕೊಳ್ಳುತ್ತವೆ. ಇದರ ಜೊತೆ ಈ ಜೀವಿಗಳು ಹೊರಬರುತ್ತವೆ. ಈ ರೋಗವನ್ನು ತಡೆಯಲು ಎಮಿಟೀನ್ ಸೂಜಿಮದ್ದು, ಬಿಸ್ಮತ್ ಅಯೊಡೈಡ್ ಮುಂತಾದ ಔಷಧಿಗಳನ್ನು ಉಪಯೋಗಿಸುತ್ತಾರೆ. ತಡೆಗಟ್ಟುವಾಗ ಶುಚಿತ್ವಕ್ಕೆ ಆದ್ಯ ಗಮನ ಅಗತ್ಯ. ತರಕಾರಿಗಳನ್ನು ಬೇಯಿಸಿ ಉಪಯೋಗಿಸುವುದು, ಬಿಸಿನೀರನ್ನು ಉಪಯೋಗಿಸುವುದು ಅತಿಮುಖ್ಯ.

ಎಂಟಮೀಬ ಕೋಲಿ ದೊಡ್ಡ ಕರುಳಿನಲ್ಲಿ ಪರತಂತ್ರ ಜೀವನವನ್ನು ನಡೆಸುತ್ತದೆ. ಇದರಿಂದ ಯಾವ ತೊಂದರೆಯೂ ಇಲ್ಲ. ಕರುಳಿನಲ್ಲಿರುವ ಬ್ಯಾಕ್ಟೀರಿಯ ಜೀವಾಣುಗಳನ್ನು ತಿಂದು ಇದು ಬದುಕುತ್ತದೆ. ರಕ್ತ ಕೋಶಗಳನ್ನಾಗಲಿ ಅಂಗಾಂಶದ ಕೋಶಗಳನ್ನಾಗಲಿ ತಿನ್ನುವುದಿಲ್ಲ. ಈ ಪ್ರಾಣಿ ಎಂಟಮೀಬ ಹಿಸ್ಟೊಲಿಟಿಕಕ್ಕಿಂತ ಗಾತ್ರದಲ್ಲಿ ದೊಡ್ಡದು. ಎಕ್ಟೋಪ್ಲಾಸಂ ಮತ್ತು ಎಂಡೋಪ್ಲಾಸಂ ತಮ್ಮ ನಿರ್ದಿಷ್ಟತೆಯನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡಿವೆ. ನ್ಯೂಕ್ಲಿಯೋಲಸ್ ಕೋಶಕೇಂದ್ರದ ಮಧ್ಯಭಾಗದಲ್ಲಿರದೆ ಸ್ವಲ್ಪ ಪಕ್ಕಕ್ಕೆ ಸರಿದಿದೆ. ಈ ಜೀವಿಗಳ ಕೋಶಗಳಲ್ಲಿ (ಸಿಸ್ಟ್) ಎಂಟು ಕೋಶಕೇಂದ್ರಗಳಿರುತ್ತವೆ. ಇತ್ತೀಚಿನ ಸಂಶೋಧನೆಗಳಿಂದ ಈ ಕ್ರಿಮಿಗಳು ಜೀರ್ಣಾಂಗಗಳ ರೋಗಗಳಿಗೆ ಬಹುಮಟ್ಟಿಗೆ ಕಾರಣವಾಗಿವೆ ಎಂದು ತಿಳಿದುಬಂದಿದೆ.

ಎಂಟಮೀಬ ಜಿಂಜಿವ್ಯಾಲಿಸ್ ಮಾನವ ಜನಸಂಖ್ಯೆಯ ೭೦%ರಷ್ಟು ಜನರಲ್ಲಿವೆ. ವಸಡು ಮತ್ತು ಹಲ್ಲುಗಳ ಸಂದು ಇವುಗಳ ವಾಸಸ್ಥಾನ. ಹಲ್ಲುಗಳ ಸಂದುಗಳಲ್ಲಿ ಕೊಳೆಯುತ್ತಿರುವ ಆಹಾರ ಪದಾರ್ಥಗಳೂ ಬ್ಯಾಕ್ಟೀರಿಯಗಳೂ ಇವುಗಳ ಮುಖ್ಯ ಆಹಾರ. ಇವು ವಸಡಿಗೆ ಬರುವ ಪಯೋರಿಯ ಎಂಬ ರೋಗಕ್ಕೆ ಕಾರಣಕರ್ತೃಗಳು. ಒಬ್ಬರಿಂದೊಬ್ಬರಿಗೆ ಉಗುಳಿನ ಮೂಲಕ, ಎಂಜಲು ತಿನ್ನುವುದರ ಮೂಲಕ ಇವು ಹರಡುತ್ತವೆ. ಇವುಗಳ ಪ್ರಸಾರ ಮುತ್ತು ಕೊಡುವುದರ ಮೂಲಕ ತೀವ್ರಗತಿಯಲ್ಲಿ ನಡೆಯುತ್ತದೆ.

(ಆರ್.ವಿ.ಎಸ್.ಎಸ್.)

**ಎಂಟೊಪ್ರಾಕ್ಟ:** ಆಳವಿಲ್ಲದ ನೀರಿನಲ್ಲಿ ಒಂಟೊಂಟಿಯಾಗಿ ಅಥವಾ ಸಾಮೂಹಿಕವಾಗಿ ಸಾಗರದ ಜೊಂಡು ಮುಂತಾದ ವಸ್ತುಗಳಿಗೆ ಅಂಟಿಕೊಂಡು ಜೀವಿಸುವ ಸಣ್ಣಪ್ರಾಣಿಗಳ ಒಂದು ಕಿರಿಯ ವಂಶ. ಇವುಗಳಲ್ಲಿ ಅನೇಕ ಪ್ರಾಣಿಗಳು ಸ್ಪಾಂಜ್ ಮತ್ತು ಅಸಿಡಿಯ ಪ್ರಾಣಿದೇಹಕ್ಕೆ ಅಂಟಿಕೊಂಡು ಜೀವಿಸುತ್ತವೆ. ಚಾಟಿಯಂಥ ಟೆಂಟಕಲ್‍ಗಳಿರುವುದರಿಂದ ಇವನ್ನು ಹಿಂದೆ ಬ್ರಯೋಜೋವ ವಂಶಕ್ಕೆ ಸೇರಿಸಲಾಗಿತ್ತು. ಆದರೆ ಈ ಪ್ರಾಣಿಗಳಲ್ಲಿ ಬ್ರಯೊಜೋವಗಳಲ್ಲಿಲ್ಲದ ಕೆಲವು ವೈಶಿಷ್ಟ್ಯಗಳಿರುವುದರಿಂದ ಈಚೆಗೆ ಇವನ್ನು ಪ್ರತ್ಯೇಕ ವಂಶವೆಂದು ಪರಿಗಣಿಸಿದೆ. ಇದರಲ್ಲಿ ಪೆಡಿಸೆಲ್ಲೀನ, ಲಾಕ್ಸೊಸೋಮ, ಅರ್ನಟೆಲ್ಲ ಇತ್ಯಾದಿಯಾದ ಕೆಲವು ಜಾತಿಗಳಿವೆ. ಅರ್ನಟೆಲ್ಲ ಗ್ರಾಸಿಲ್ಲಿಸ್ (ಉತ್ತರ ಅಮೆರಿಕ), ಅರ್ನಟೆಲ್ಲ ಇಂಡಿಕ (ಭಾರತ) ಈ ಎರಡು ಪ್ರಭೇದಗಳು ಸಿಹಿನೀರಿನಲ್ಲೂ ಮಿಕ್ಕವು ಸಾಗರದಲ್ಲೂ ಜೀವಿಸುತ್ತವೆ.

ಎಂಟೊಪ್ರಾಕ್ಟ ಪ್ರಾಣಿಗಳಲ್ಲಿ ಪಾತ್ರೆಯಂಥ ದೇಹವನ್ನೂ ಹಿಡಿ ಅಥವಾ ತೊಟ್ಟನ್ನೂ ಗುರುತಿಸಬಹುದು. ದೇಹಭಾಗದಲ್ಲಿ ಉದರವಿದೆ. ತೊಟ್ಟಿನ ಮೂಲಕ ಪ್ರಾಣಿ ಪದಾರ್ಥಗಳಿಗೆ ಅಂಟಿಕೊಂಡಿರುತ್ತದೆ. ದೇಹದ ಇನ್ನೊಂದು ತುದಿಯಲ್ಲಿ ಟೆಂಟಕಲ್‍ಗಳಿವೆ. ಆ ಟೆಂಟಕಲ್‍ಗಳ ಒಳಭಾಗದಲ್ಲಿ ಕೂದಲುಗಳಿವೆ. ಎಲ್ಲ ಟೆಂಟಕಲ್‍ಗಳನ್ನೂ ತಳದಲ್ಲಿ ಒಂದು ಪೊರೆ ಒಟ್ಟುಗೂಡಿಸಿದೆ. ಟೆಂಟಕಲ್‍ಗಳಿರುವ ತುದಿ ಪ್ರಾಣಿಯ ತಳಭಾಗ; ತೊಟ್ಟಿನ ಭಾಗವೇ ಬೆನ್ನು ಅಥವಾ ಮೇಲಿನಭಾಗ. ಟೆಂಟಕಲ್‍ಗಳನ್ನು ವೆಸ್ಟಿಬ್ಯೂಲ್ ಎಂಬ ಭಾಗಕ್ಕೆ ಸೆಳೆದುಕೊಳ್ಳಬಹುದು. ಟೆಂಟಕಲ್‍ಗಳ ವೃತ್ತದ ನಡುವೆಯಿರುವ ವೆಸ್ಟಿಬ್ಯೂಲಿನಲ್ಲಿ ಬಾಯಿಯೂ, ಮಲದ್ವಾರವೂ ಇವೆ. ಟೆಂಟಕಲ್ ಮತ್ತು ವೆಸ್ಟಿಬ್ಯೂಲುಗಳನ್ನುಳಿದ ಮಿಕ್ಕ ದೇಹಭಾಗದ ಮೇಲೆಲ್ಲ ಒಂದು ಪೊರೆ ಇದೆ. ಇದಕ್ಕೂ ಒಳಗೆ ಮೇಲ್ತೊಕ್ಕೂ ಇನ್ನೂ ಒಳಗೆ ಲಂಬಸ್ನಾಯುಗಳಿಂದಾದ ಗೋಡೆಯೂ ಇದೆ. ದೇಹದೊಳಗೆ ಇರುವ ಪೊಟರೆ ಒಂದು ರೀತಿಯ ಮಿಥ್ಯದೇಹಾವಕಾಶ. ಇದರಲ್ಲಿ ಲೋಳೆಯಂಥ ದ್ರವ ತುಂಬಿದೆ.

ಈ ಜೀವಿಗಳಲ್ಲಿ ಜೀರ್ಣಾಂಗ U ಆಕಾರದಲ್ಲಿದೆ; ಬಾಯಿ, ಅನ್ನನಾಳ, ಜಠರ ಕೋಶ, ಕಿರಿದಾದ ಕರುಳು, ಗುದನಾಳ ಮತ್ತು ಗುದದ್ವಾರಗಳು ಇವುಗಳ ಇತರ ಭಾಗಗಳು. ಜಠರದ ಎರಡೂ ಕಡೆಗಳಲ್ಲೂ ಪ್ರೊಟೊನೆಫ್ರಿಡಿಯ ಎಂಬ ಶುದ್ಧೀಕರಣಾಂಗಗಳಿವೆ. ಅವೆರಡೂ ಹಿಂಭಾಗದಲ್ಲಿ ಸೇರಿ ಒಂದು ನಾಳವಾಗಿ ಹೊರಕ್ಕೆ ತೆರೆಯುತ್ತವೆ. ಜಠರದ ತಳಭಾಗದಲ್ಲಿ ಒಂದು ನರಮುಡಿಯಿದೆ. ಅದರಿಂದ ನರಗಳು ಟೆಂಟಕಲ್‍ಗಳಿಗೂ ತೊಟ್ಟು, ಜನನಾಂಗ ಮತ್ತು ದೇಹದ ಇತರ ಭಾಗಗಳಿಗೂ ಹೋಗಿರುತ್ತವೆ.

ಎಂಟೊಪ್ರಾಕ್ಟದ ಕೆಲವು ಪ್ರಾಣಿಗಳಲ್ಲಿ ಗಂಡು ಮತ್ತು ಹೆಣ್ಣು ಜನನಾಂಗಗಳೆರಡೂ ಉಂಟು; ಇಂಥ ದ್ವಿಲಿಂಗ ಪ್ರಾಣಿಗಳಲ್ಲಿ ಅಂಡಕೋಶದ ಹಿಂಭಾಗದಲ್ಲಿ ಒಂದು ಜೊತೆ ವೃಷಣಗಳು ಇರುತ್ತವೆ. ಅವೆರಡರ ನಾಳಗಳು ಎರಡು ಕಡೆಯಲ್ಲೂ ಸೇರುತ್ತವೆ; ಮತ್ತೆ ಅವೆರಡು ನಾಳಗಳೂ ಒಟ್ಟುಗೂಡಿ ಹೊರಕ್ಕೆ ತೆರೆಯುತ್ತವೆ.

ಭ್ರೂಣದ ಪ್ರಥಮಘಟ್ಟ ವೆಸ್ಟಿಬ್ಯೂಲಿನಲ್ಲೇ ಕಳೆಯುತ್ತದೆ. ಅನಂತರ ಈಜುವ ಲಾರ್ವಾ ಅದರಿಂದ ಹೊರಬಂದು ಯಾವುದಾದರೂ ವಸ್ತುವಿಗೆ ಕಚ್ಚಿಕೊಂಡು ರೂಪಪರಿವರ್ತನೆ ಹೊಂದಿ ವಯಸ್ಕಜೀವಿಯ ಅಂಗಭಾಗಗಳನ್ನು ಪಡೆದುಕೊಳ್ಳುತ್ತದೆ. ಈ ಪ್ರಾಣಿಯ ಲಾರ್ವಾ ಟ್ರೋಕೊಫೋರ್ ಲಾರ್ವಾವನ್ನು ಸ್ವಲ್ಪಮಟ್ಟಿಗೆ ಹೋಲುವುದಾದರೂ ಹಲವು ವ್ಯತ್ಯಾಸಗಳನ್ನು ವ್ಯಕ್ತಪಡಿಸುತ್ತದೆ.




ಎಂಟೊಪ್ರಾಕ್ಟ

1. ಟೆಂಟಕಲ್ 2. ಬಾಯಿ 3. ನೆಫ್ರಿಡಿಯಮ್
4. ಜನನಾಂಗ 5. ಅನ್ನನಾಳ 6. ಜಠರ 7. ಕರುಳು
8. ನರಮುಡಿ 9. ಗುದನಾಳ 10 ಗುದದ್ವಾರ
11. ವೆಸ್ಟಿಬ್ಯೂಲ್

ಎಂಟೊಪ್ರಾಕ್ಟದ ಎಲ್ಲ ಪ್ರಾಣಿಗಳಲ್ಲೂ ನಿರ್ಲಿಂಗರೀತಿಯ ವಂಶಾಭಿವೃದ್ಧಿ ನಡೆಯುತ್ತದೆ. ಲಾಕ್ಸೊಸೋಮದಲ್ಲಿ ಕೇಲಿಕ್ಸಿನ ಮೇಲ್ಭಾಗದಲ್ಲಿ ಮೊಗ್ಗುಗಳು (ಬಡ್) ಮೂಡಿ, ಒಂದೊಂದು ಪದಾರ್ಥಗಳಿಗೆ ಅಂಟಿಕೊಂಡು ಸ್ವತಂತ್ರಜೀವನವನ್ನು ಆರಂಭಿಸುತ್ತವೆ. ಸಾಮೂಹಿಕ ಜೀವಿಯಾದ ಪೆಡಿಸೆಲ್ಲೀನದಲ್ಲಿ ತೊಟ್ಟಿನ ಬಳಿ ಮೊಗ್ಗುಗಳು ಮೂಡಿ ಅಲ್ಲೇ ಇರುತ್ತವೆ. ಆ ವೇಳೆಗೆ ಒಂದು ಗೋಡೆ ಉದ್ಭವಿಸಿ ಜೊಆಯ್ಡ್‍ಗಳನ್ನು ಸ್ಟೋಲಾನ್‍ನಿಂದ ಪ್ರತ್ಯೇಕಿಸುತ್ತದೆ. ಹೀಗೆ ನೂತನ ಸಮೂಹಜೀವನ ಆರಂಭವಾಗುತ್ತದೆ.

ಎಂಟೊಪ್ರಾಕ್ಟವನ್ನು ಹಿಂದೆ ಎಕ್ಟೊಪ್ರಾಕ್ಟದೊಡನೆ ಸೇರಿಸಿದ್ದುದು ಉಚಿತವಲ್ಲವೆಂಬುದು ಈಗ ಸ್ಪಷ್ಟಪಟ್ಟಿದೆ. ಏಕೆಂದರೆ ಎಕ್ಟೊಪ್ರಾಕ್ಟದಲ್ಲಿ ನಿಜವಾದ ದೇಹಾವಕಾಶವುಂಟು. ಜೊತೆಗೆ ಅದರಲ್ಲಿ ಮಲದ್ವಾರ ಟೆಂಟಕಲ್‌ಗಳ ವೃತ್ತದಿಂದ ಹೊರಗಿದೆ. ಇವೆರಡಕ್ಕೂ ಇರುವ ಸಾಮ್ಯಗಳಲ್ಲಿ ಕೂದಲಿಂದ ಆವೃತವಾದ ಟೆಂಟಕಲ್‌ಗಳು ಮತ್ತು U ಆಕಾರದ ಜೀರ್ಣಾಂಗ. ಇವು ಕೇವಲ ಬಾಹ್ಯ ಸಾಮ್ಯಗಳು ಮಾತ್ರ. ಈಚೆಗೆ ಎಂಟೊಪ್ರಾಕ್ಟ ಹೆಚ್ಚಾಗಿ ರೋಟಿಫೆರದ ವರ್ಗಕ್ಕೆ ಸಂಬಂಧಿಸಿದೆಯೆಂದು ಹೇಳಲಾಗುತ್ತಿದೆ. (ಸಿ.ಎಂ.ಎಸ್.)

**ಎಂಡರ್ಸ್, ಜಾನ್ ಫ್ರಾಂಕ್ಲಿನ್ 1897–1985:** ಅಮೆರಿಕದ ಖ್ಯಾತ ಸೂಕ್ಷ್ಮಜೀವಿ ವಿಜ್ಞಾನಿ (ಮೈಕ್ರೊಬಯಾಲಜಿಸ್ಟ್). ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮೆಡಿಕಲ್ ಸ್ಕೂಲಿನಲ್ಲಿ ಬ್ಯಾಕ್ಟೀರಿಯಾಲಜಿ ಮತ್ತು ಸೋಂಕುರಕ್ಷಾವಿಜ್ಞಾನದ (ಇಮ್ಯುನಾಲಜಿ) ಪ್ರಾಧ್ಯಾಪಕ. ಅಂಗಾಂಶ ಸೃಷ್ಟಿಗೆ (ಟಿಶ್ಯು ಕಲ್ಚರ್) ಬಹು ಪರಿಣಾಮಕಾರಿಯಾದ ನೂತನ ವಿಧಾನಗಳನ್ನು ಕಂಡುಹಿಡಿದು ಅದರ ಸಹಾಯದಿಂದ ಪೋಲಿಯೊ ವೈರಸ್ಸಿನ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟ. ಇದು ಮುಂದೆ ಅವನ ದೇಶೀಯನಾದ ಜೋನಾಸ್ ಸಾಕ್‌ನಿಗೆ ಪೋಲಿಯೊ ನಿರೋಧಕ ಲಸಿಕೆ ತಯಾರಿಸಲು ದಾರಿ ಮಾಡಿಕೊಟ್ಟಿತು. ವೈರಸ್ ಕೃಷಿ ವಿಧಾನಗಳ ಬಗ್ಗೆ ಎಂಡರ್ಸ್ ನಡೆಸಿದ ಸಂಶೋಧನೆಗಾಗಿ ಅವನಿಗೂ ಅವನ ಪ್ರಧಾನ ಸಹಸಂಶೋಧಕರಾದ ಥಾಮಸ್ ಎಚ್. ವೆಲರ್ ಮತ್ತು ಫ್ರೆಡರಿಕ್ ಸಿ. ರಾಬಿನ್ಸ್ ಅವರಿಗೂ 1954ರಲ್ಲಿ ವೈದ್ಯ ವಿಜ್ಞಾನದ ನೊಬೆಲ್ ಬಹುಮಾನವನ್ನು ನೀಡಲಾಯಿತು.

ಎಂಡರ್ಸ್ ಹುಟ್ಟಿದ್ದು 1897ರ ಫೆಬ್ರವರಿ 10ರಂದು. ಕನೆಕ್ಟಿಕಟ್ ಪ್ರಾಂತ್ಯದ ವೆಸ್ಟ್ ಹಾರ್ಟ್‌ಫರ್ಡ್ ಎಂಬಲ್ಲಿ. ಯೇಲ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಮೊದಲ ಮಹಾಯುದ್ಧ ಪ್ರಾರಂಭವಾಯಿತು. ಹೀಗಾಗಿ ವಿದ್ಯಾಭ್ಯಾಸವನ್ನು ಅರ್ಧದಲ್ಲಿ ನಿಲ್ಲಿಸಿ ಸೈನಿಕ ಸೇವೆಗೆ ಹೊರಡಬೇಕಾಯಿತು. ಇದರಿಂದ ವಿಶ್ವವಿದ್ಯಾನಿಲಯದ ಪದವಿ ಪಡೆಯುವುದು ತಡವಾಯಿತು. ಪದವಿ ದೊರೆತ ಮೇಲೆ (1920) ವ್ಯಾಸಂಗವನ್ನು ಮುಂದುವರಿಸಿದ್ದು ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದಲ್ಲಿ ಸಂಶೋಧನ ಪದವಿಗಾಗಿ ವ್ಯಾಸಂಗ ಮಾಡುತ್ತಿದ್ದ ಎಂಡರ್ಸ್ ಕೊನೆಯ ಗಳಿಗೆಯಲ್ಲಿ ಕೆಲವು ಸ್ನೇಹಿತರಿಂದ ಪ್ರಭಾವಿತನಾಗಿ ವೈದ್ಯಕೀಯ ವ್ಯಾಸಂಗ ಕೈಗೊಂಡ. ಕೊನೆಗೆ 1930ರಲ್ಲಿ ಬ್ಯಾಕ್ಟೀರಿಯಾಲಜಿ ವಿಭಾಗದಲ್ಲಿ ಸಂಶೋಧನ ಪದವಿ ಗಳಿಸಿದ.

ಪೌಷ್ಟಿಕಾಂಶಗಳನ್ನು ಕರಗಿಸಿರುವ ದ್ರಾವಣವನ್ನು ಉಪಯೋಗಿಸಿ ಬ್ಯಾಕ್ಟೀರಿಯಗಳನ್ನು ಗಾಜಿನ ತಟ್ಟೆಗಳಲ್ಲಿ ಬೆಳೆಸಬಹುದು. ಆದರೆ ವೈರಸ್‌ಗಳನ್ನು ಹಾಗೆ ಬೆಳೆಸುವುದು ಸಾಧ್ಯವಿಲ್ಲ. ಅವು ವೃದ್ಧಿಯಾಗುವುದು ಸಜೀವಿಗಳ ದೇಹದಲ್ಲಿ ಮಾತ್ರ. ಆದರೆ ಫಲಿತವಾದ (ಫರ್ಟಿಲೈಸ್ಡ್) ಕೋಳಿ ಮೊಟ್ಟೆಯ ಚಿಪ್ಪಿನಲ್ಲಿ ಒಂದು ರಂಧ್ರ ಮಾಡಿ ಒಳಗಿರುವ ಕೋಳಿಯ ಭ್ರೂಣವನ್ನು ಉಪಯೋಗಿಸಿಕೊಂಡು ಅದರಲ್ಲಿ ವೈರಸುಗಳನ್ನು ಬೆಳೆಸಬಹುದು.

ವೈರಸುಗಳನ್ನು ಬೆಳೆಸಲು ಬೇಕಾದ ಜೀವಂತ ಜೀವಕೋಶಗಳು ಒಟ್ಟು ಜೀವಿಯ ಅಥವಾ ಭ್ರೂಣದ ಭಾಗವಾಗಿರಬೇಕಿಲ್ಲ, ಒಂದು ಪೂರ್ಣ ಅಂಗದ ಭಾಗವಾಗಿಯೂ ಇರಬೇಕಾದ್ದಿಲ್ಲವೆಂದು ಎಂಡರ್ಸ್ ಮನಗಂಡ. ಕೋಳಿಯ ಭ್ರೂಣವನ್ನು ಅರೆದು ರಕ್ತದಲ್ಲಿ ತೇಲಿಬಿಟ್ಟು ಅದರಲ್ಲಿ ಗದ್ದಬಾವು (ಮಂಪ್ಸ್) ವೈರಸನ್ನು ಬೆಳೆಸುವುದರಲ್ಲಿ ಎಂಡರ್ಸ್, ವೆಲರ್ ಮತ್ತು ರಾಬಿನ್ಸ್ ಯಶಸ್ಸು ಗಳಿಸಿದರು. ಹಿಂದೆ ಇದೇ ಪ್ರಯತ್ನ ಮಾಡಿದವರು ಯಶಸ್ವಿಯಾಗಿರಲಿಲ್ಲ. ಏಕೆಂದರೆ ಅದರಲ್ಲಿ ಬ್ಯಾಕ್ಟೀರಿಯಾಗಳೂ ಬೆಳೆದು ತೊಂದರೆ ಉಂಟುಮಾಡುತ್ತಿದ್ದುವು. ಎಂಡರ್ಸ್ ಮಾಡಿದ ಉಪಾಯವೆಂದರೆ, ಅದಕ್ಕೆ ಸ್ವಲ್ಪ ಪೆನಿಸಿಲಿನ್ ಬೆರೆಸಿದ್ದು, ಪೆನಿಸಿಲಿನ್ ಬ್ಯಾಕ್ಟೀರಿಯಗಳನ್ನು ನಾಶಮಾಡಿ ವೈರಸುಗಳ ವೃದ್ಧಿಗೆ ಅವಕಾಶ ಮಾಡಿಕೊಡುವುದೆಂದು ಎಂಡರ್ಸ್ ತೋರಿಸಿಕೊಟ್ಟ.

ತರುವಾಯ ಎಂಡರ್ಸ್ ತಂಡದವರು ಪೋಲಿಯೊಮಯೆಲಿಟಿಸ್ ವೈರಸ್ ಕಡೆ ಗಮನ ಹರಿಸಿದರು. ಪೋಲಿಯೊ ವೈರಸ್ ಜೀವಂತ ಕೋತಿ ಮತ್ತು ಮನುಷ್ಯರ ನರಗಳ ಅಂಗಾಂಶಗಳಲ್ಲಿ ಮಾತ್ರ ಬೆಳೆಯುವುದೆಂದು ತಿಳಿದಿತ್ತು. ಈ ತಂಡದವರು ಸತ್ತುಹುಟ್ಟಿದ (ಸ್ಟಿಲ್‌ಬಾರ್ನ್) ಶಿಶುವಿನ ಅಂಗಾಂಶವನ್ನು ಪಡೆದು ಅದಕ್ಕೆ ಪ್ರತಿಜೀವಕವನ್ನು (ಆಂಟಿಬಯೊಟಿಕ್) ಬೆರೆಸಿ ಅದರಲ್ಲಿ ಪೋಲಿಯೊ ವೈರಸನ್ನು ಬೆಳೆಸಿದರು (1949). ತರುವಾಯ ಇತರ ಬಗೆಯ ಅಂಗಾಂಶಗಳಲ್ಲೂ ಆ ವೈರಸನ್ನು ಬೆಳೆಸಿದರು. ಇಷ್ಟಾದ ಮೇಲೆ ಪೋಲಿಯೊ ವೈರಸನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಸಿ ಅದನ್ನು ಅಧ್ಯಯನಮಾಡಿ ಪೋಲಿಯೊ ನಿರೋಧಕ ಲಸಿಕೆ ತಯಾರಿಸುವುದು ಸಾಧ್ಯವಾಯಿತು. (ಜೆ.ಆರ್.ಎಲ್.)

**ಎಂಡೊಮಿಕ್ಸಿಸ್:** ಪ್ಯಾರಮೀಸಿಯಂನಂತಹ ಪ್ರೊಟೋಜೊವಗಳಲ್ಲಿ ಕಂಡುಬರುವ ಒಂದು ತರಹದ ಸಂತಾನ ಕ್ರಿಯೆ. ಯುಗ್ಮನ (ಕಾಂಜುಗೇಷನ್) ಇಲ್ಲದಿರುವಂತಹ ಪ್ರಭೇದಗಳಲ್ಲಿ ಮ್ಯಾಕ್ರೊನ್ಯೂಕ್ಲಿಯಸ್‌ನ ಪುನರುತ್ಪತ್ತಿಗೋಸ್ಕರ ನಿಯತಕಾಲಿಕವಾಗಿ ನಡೆಯುವ ವ್ಯವಸ್ಥೆಯಿದು. ವುಡ್‌ರಫ್ ಮತ್ತು ಎರ್ಡ್‌ಮನ್ ಎಂಬುವವರು 1914 ರಲ್ಲಿ ಪ್ಯಾರಮೀಸಿಯಂ ಆರೇಲಿಯದಲ್ಲಿ ಅನಂತರ ಪ್ಯಾರಮೀಸಿಯಂ ಕಾಡೆಟಮ್ ಪ್ರಭೇದಗಳಲ್ಲಿ ಮೊದಲು ವರದಿ ಮಾಡಿದರು.

ಈ ಪ್ರಭೇದಗಳು ಎರಡು ಮೈಕ್ರೊನ್ಯೂಕ್ಲಿಯಸ್ ಮತ್ತು ಒಂದು ಮ್ಯಾಕ್ರೊನ್ಯೂಕ್ಲಿಯಸ್ ಹೊಂದಿವೆ. ಇಲ್ಲಿ ಎಂಡೊಮಿಕ್ಸಿಸ್ ಕ್ರಿಯೆ ನಿಯತಕಾಲಿಕವಾಗಿದ್ದು, ಕೋಶಕೇಂದ್ರಗಳು ಸಂಯೋಜನೆಗೊಳ್ಳದೆ ಹೊಸ ಮ್ಯಾಕ್ರೊನ್ಯೂಕ್ಲಿಯಸ್ ಬೆಳವಣಿಗೆಯಾಗುತ್ತದೆ. ಈ ಕ್ರಿಯೆಯು ಹಲವು ಹಂತಗಳಲ್ಲಿ ನಡೆಯುತ್ತದೆ. ಮೊದಲು ಮ್ಯಾಕ್ರೊನ್ಯೂಕ್ಲಿಯಸ್ ನಶಿಸಿ ಹೋಗುತ್ತದೆ. ಮೈಕ್ರೊನ್ಯೂಕ್ಲಿಯಸ್‌ಗಳು ಎರಡು ಬಾರಿ ಭಾಗವಾಗಿ ಎಂಟು ಸಣ್ಣ ಹೊಸ ಕೋಶಕೇಂದ್ರಗಳಾಗುತ್ತವೆ. ಎರಡನ್ನು ಬಿಟ್ಟು ಇನ್ನುಳಿದ ಆರು ಸಣ್ಣ ಕೋಶ ಕೇಂದ್ರಗಳು ನಶಿಸಿ ಹೋಗುತ್ತವೆ. ಎರಡು ಮೈಕ್ರೊನ್ಯೂಕ್ಲಿಯಸ್‌ಗಳಿರುವ ಈ ಪ್ಯಾರಮೀಸಿಯಂ ಅಡ್ಡಸೀಳುವ ವಿಧಾನದಿಂದ ಎರಡು ಭಾಗಗಳಾಗಿ ಎರಡು ಜೀವಿಗಳನ್ನು ಕೊಡುತ್ತದೆ. ಒಂದೊಂದು ಹೊಸ ಜೀವಿಯೂ ಒಂದೊಂದು ಮೈಕ್ರೊನ್ಯೂಕ್ಲಿಯಸ್ ಅನ್ನು ಹೊಂದಿರುತ್ತವೆ. ಈ ಕೋಶಕೇಂದ್ರಗಳು ಎರಡು ಬಾರಿ ಭಾಗವಾಗಿ ನಾಲ್ಕಾಗುತ್ತವೆ. ಅವುಗಳಲ್ಲಿ ಎರಡು ಕೋಶಕೇಂದ್ರಗಳು ವಿಸ್ತಾರವಾಗಿ ಬೆಳೆದು ಮ್ಯಾಕ್ರೊನ್ಯೂಕ್ಲಿಯಸ್‌ಗಳಾಗುತ್ತವೆ. ಈ ಹೊಸ ಜೀವಿಯೂ ಮತ್ತು ಇದರ ಮೈಕ್ರೊನ್ಯೂಕ್ಲಿಯಸ್ ಮತ್ತೆ ಭಾಗವಾಗಿ ಎರಡು ಜೀವಿಗಳಾಗುತ್ತವೆ. ಕೊನೆಯ ಹಂತದಲ್ಲಿ ಒಂದು ಮ್ಯಾಕ್ರೊನ್ಯೂಕ್ಲಿಯಸ್ ಹಾಗೂ ಎರಡು ಮೈಕ್ರೊನ್ಯೂಕ್ಲಿಯಸ್‌ಗಳನ್ನು ಹೊಂದಿರುವ ನಾಲ್ಕು ಹೊಸ ಜೀವಿಗಳ ಉತ್ಪತ್ತಿಯಾಗುತ್ತದೆ.

ಪ್ಯಾರಮೀಸಿಯಂ ಸಂತಾನೋತ್ಪತ್ತಿಯ ಕ್ರಿಯೆಯಲ್ಲಿ ಎಂಡೋಮಿಕ್ಸಿಸ್ ವಿಧಾನವು ಕೋಶಕೇಂದ್ರದ ಸಂಯೋಜನೆ ವಿಧಾನಕ್ಕಿಂತಲೂ ಭಿನ್ನ. ಎಂಡೊಮಿಕ್ಸಿಸ್‌ನಲ್ಲಿ ಮ್ಯಾಕ್ರೊನ್ಯೂಕ್ಲಿಯಸ್ ಮತ್ತು ಮೈಕ್ರೊನ್ಯೂಕ್ಲಿಯಸ್‌ಗಳಲ್ಲಿನ ಕೋಶಕೇಂದ್ರೀಯ ವಸ್ತುಗಳ ಬದಲಾವಣೆ ಆಗುವುದರಿಂದ ಹೊಸ ಹರೆಯದ ಮತ್ತೊಂದು ಜೀವಕ್ಕೆ ಜೀವನಶಕ್ತಿ ನೀಡುವ ಪ್ಯಾರಮೀಸಿಯಂಗಳ ಬೆಳವಣಿಗೆಯಾಗುತ್ತವೆ. (ಎಚ್.ಪಿ.ಜಿ.)

**ಎಂಡೊಸ್ಲೈಕಿಕ್:** ಎಕೈನೊಡರ್ಮೇಟ ವಂಶ ಎಲ್ಯೂತೆರೋಜೋವ ಉಪವಂಶ. ಎಕಿನಾಯಿಡಿಯ ವರ್ಗದ ಉಪವರ್ಗ. ಎಕಿನಾಯಿಡಿಯ ವರ್ಗದ ಆಂಬ್ಯುಲಾಕ್ರಲ್ ಮಂಡಲ ವ್ಯವಸ್ಥೆಯನ್ನನುಸರಿಸಿ ರೆಗ್ಯುಲೇರಿಯ ಮತ್ತು ಇರ್‌ರೆಗ್ಯುಲೇರಿಯ (ಕ್ರಮವಾಗಿ ವ್ಯವಸ್ಥಿತ ಮತ್ತು ಅವ್ಯವಸ್ಥಿತ) ಎಂಬ ಎರಡು ಉಪವರ್ಗಗಳಾಗಿ ವಿಭಾಗಿಸಲಾಗಿದೆ. ರೆಗ್ಯುಲೇರಿಯಕ್ಕೆ ಎಂಡೊಸ್ಯೈಕ್ಲಿಕ ಪರ್ಯಾಯ ಹೆಸರು. ಇವುಗಳ ಚಿಪ್ಪು ಗೋಳಾಕಾರವಾಗಿದ್ದು ಪಂಚ ವಿಭಾಗೀಯವಾಗಿರುತ್ತದೆ. ಇಂದು ಬದುಕಿರುವ ಪ್ರಾಣಿಗಳಲ್ಲಿ ಎರಡು ಸಾಲು ಅಂತರ ಆಂಬ್ಯುಲಾಕ್ ಫಲಕಗಳಿವೆ. ಮುಖಧ್ರುವ ತುದಿಯ ಕೇಂದ್ರದಲ್ಲಿ ಬಾಯಿರಂಧ್ರ, ವಿಮುಖಧ್ರುವ ತುದಿಯಲ್ಲಿ ಗುದದ್ವಾರ ಇರುವುವು. ಗುದದ್ವಾರವು ಕೇಂದ್ರದಲ್ಲಿದ್ದು ಅದರ ಸುತ್ತ ಚೆನ್ನಾಗಿ ರೂಪಿತವಾದ ಶಿಖಾ ಫಲಕಗಳಿವೆ. ಈ ವರ್ಗದ ಉಳಿದ ಜೀವಿಗಳಿಗೆ ಭಿನ್ನವಾಗಿ, ಆಂಬ್ಯುಲಾಕ್ರ ಮಂಡಲವು ದಳಗಳ ಆಕಾರದಲ್ಲಿ ಇಲ್ಲ. ಚೆನ್ನಾಗಿ ರೂಪುಗೊಂಡ ಅರಿಸ್ಟಾಟಲ್‌ನ ಲಾಂದ್ರವಿದೆ. ಮ್ಯಾಡ್ರಿಪೋರೈಟ್ ತೆರವು ಆಂಬ್ಯುಲಾಕ್ರಲ್ ಮಂಡಲವು ದಳಗಳ ಆಕಾರದಲ್ಲಿ ಇಲ್ಲ. ಚೆನ್ನಾಗಿ ರೂಪುಗೊಂಡ ಅರಿಸ್ಟಾಟಲ್‌ನ ಲಾಂದ್ರವಿದೆ. ಮ್ಯಾಡ್ರಿಪೋರೈಟ್ ತೆರವು ಆಂಬ್ಯುಲಾಕ್ರಲ್ ಮಂಡಲದ ಒಳಗಿದೆ. ಲೆಪಿಡೊ ಸೆಂಟ್ರಾಯಿಡ, ಮೆಲೊನಿಕಿನಾಯ್ಡಿಯ, ಸಿಡೆರಾಯ್ಡಿಯ ಮತ್ತು ಡೈಯಡೆಮಾಯಿಡ ಅಥವಾ ಸೆಂಟ್ರೆಕಿನಾಯಿಡ ಈ ಉಪವರ್ಗದ ಗಣಗಳು. ***

**ಎಂಬಿಯಾಪ್ಟೆರಾ:** ಸಂಧಿಪದಿಗಳ ವಂಶದ ಕೀಟಗಳ ವರ್ಗದ ಒಂದು ಗಣ. ಈ ಗಣದ ಕೀಟಗಳನ್ನು ರೇಷ್ಮೆ ಸುರಂಗ ಮಾಡುವ (ವೆಬ್ ಸ್ಪಿನ್ನರ್ಸ್) ಕೀಟಗಳೆನ್ನುತ್ತಾರೆ. ಈ ಕೀಟಗಳು ಸಮಾಜ ಜೀವಿಗಳು ಮತ್ತು ರೇಷ್ಮೆ ಸುರಂಗಗಳಲ್ಲಿ ವಾಸಿಸುತ್ತವೆ. ಉದ್ದ ಸುಮಾರು ನಾಲ್ಕರಿಂದ ಏಳು ಮಿಮೀ. ದೇಹ ಸಣ್ಣದಿದ್ದು ಕಂದು ಅಥವಾ ಹಳದಿ ಬಣ್ಣದ್ದಾಗಿದೆ. ಕೂಡುಕಣ್ಣುಗಳಿವೆ. ಕುಡಿಮೀಸೆಗಳು ಉದ್ದವಾಗಿವೆ ಹಾಗೂ ನೀಳವಾಗಿವೆ. ಗಂಡುಗಳಿಗೆ ಮಾತ್ರ ರೆಕ್ಕೆಯಿದ್ದು ಹೆಣ್ಣಿಗೆ ರೆಕ್ಕೆಗಳಿಲ್ಲದಿರುವುದರಿಂದ ಹೆಚ್ಚಾಗಿ ಗಂಡು ಕೀಟಗಳು ದೀಪದ ಬೆಳಕಿಗೆ ಬರುವುದನ್ನು ಕಾಣಬಹುದು. ಗಂಡಿನ ಎರಡು ಜೊತೆ ರೆಕ್ಕೆಗಳು ತೆಳುವಾಗಿ, ಉದ್ದವಾಗಿ, ಪೊರೆಯಂತಿದ್ದು ಬಹಳ ಕಡಿಮೆ ನರಗಳನ್ನು ಹೊಂದಿರುತ್ತವೆ. ಮೊದಲನೆಯ ಜೊತೆ ಕಾಲಿನ ಹರಡಿನಲ್ಲಿ ಮೂರು ತುಂಡುಗಳಿದ್ದು ಮೊದಲನೆಯ ತುಂಡು ಗಿಡ್ಡ ಹಾಗೂ ದಪ್ಪವಾಗಿದೆ. ಈ ಕೀಟಗಳಿಂದ ದ್ರವಿಸುವ ರೇಷ್ಮೆದಾರವು ಮುಂಗಾಲಿನ ಹರಡಿನಲ್ಲಿರುವ ಗ್ರಂಥಿಗಳಿಂದ ಬರುತ್ತದೆ. ಹೊಟ್ಟೆಯ ತುದಿಯಲ್ಲಿ ಸಿರ್ಸೈಗಳಿರುತ್ತವೆ. ಆದರೆ ಈ ಸಿರ್ಸೈಗಳು ಗಂಡಿನಲ್ಲಿ ಸಮವಾಗಿರುವುದಿಲ್ಲ. ಹೆಣ್ಣು ಕೀಟ ಆಕಾರದಲ್ಲಿ ಲಾರ್ವಾದಂತಿರುತ್ತದೆ. ಈ ಕೀಟಗಳು ಸಾಮಾನ್ಯವಾಗಿ ಗುಂಪಾಗಿ ಕಲ್ಲುಗಳ ಕೆಳಗೆ, ಮರದ ತುಂಡು ಹಾಗೂ ತೊಗಟೆಯ ಕೆಳಭಾಗ ಮುಂತಾದ ಕಡೆ

ನೇಯ್ದಿರುವ ರೇಷ್ಮೆ ಸುರಂಗಗಳಲ್ಲಿ ಕಂಡುಬರುತ್ತವೆ. ತಾವು ರೇಷ್ಮೆಯಿಂದ ಮಾಡಿದ ಸುರಂಗಗಳಲ್ಲಿ ಸುಲಭವಾಗಿ ಹಿಂದೆ ಮುಂದೆ ಓಡಾಡಬಲ್ಲುವು. ಈ ರೇಷ್ಮೆ ಸುರಂಗಗಳು ಕೀಟಗಳ ವಾಸಸ್ಥಾನಗಳಾಗುವುದರ ಜೊತೆಗೆ ಇತರ ಪ್ರಾಣಿಗಳಿಂದ ರಕ್ಷಿಸುತ್ತವೆ. ಇವುಗಳು ಜಗಿದು ತಿನ್ನುವ ವದನಾಂಗಗಳನ್ನು ಹೊಂದಿವೆ. ರೂಪಾಂತರವು ಗಂಡಿನಲ್ಲಿ ಅತ್ಯಲ್ಪ ಮತ್ತು ಕ್ರಮೇಣ. ಹೆಣ್ಣಿನಲ್ಲಿ ಇಲ್ಲವೇ ಇಲ್ಲ. ಸಣ್ಣಗಿರುವ ಕೀಟಗಳು ಸಾಮಾನ್ಯವಾಗಿ ಉದ್ದ ಹಾಗೂ ಚಪ್ಪಟೆಯಾದ ಶರೀರವನ್ನು ಹೊಂದಿರುತ್ತವೆ. ಈ ಗಣಕ್ಕೆ ಸೇರಿದ ಕೀಟಗಳನ್ನು ಹೆಚ್ಚಾಗಿ ಬೇಸಗೆಯಲ್ಲಿ ಕಾಣಬಹುದು. ಇವುಗಳು ಶಿಲೀಂಧ್ರ ಹಾಗೂ ಸಸ್ಯಭಾಗಗಳನ್ನು ತಿಂದು ಜೀವಿಸುತ್ತವೆ. ಈ ಗಣಕ್ಕೆ ಸೇರಿದ ಕೆಲವು ಜಾತಿಗಳು ಅನಿಷೇಚನ ಜನನ ಶಕ್ತಿಯನ್ನು ಹೊಂದಿವೆ. ಹೆಣ್ಣುಗಳು ಬಹಳ ಕಡಿಮೆ ಮೊಟ್ಟೆಗಳನ್ನು ರೇಷ್ಮೆ ಸುರಂಗದಲ್ಲಿ ಇಡುತ್ತವೆ. ಕೆಲವು ದಿವಸಗಳಲ್ಲಿ ಈ ಮೊಟ್ಟೆಗಳು ಒಡೆದು ಹೊರಬಂದ ಅಪ್ಸರೆಗಳು ನಿಧಾನವಾಗಿ ಬೆಳೆಯುತ್ತವೆ. ವರ್ಷಕ್ಕೆ ಒಂದೇ ಒಂದು ಜೀವನ ಚಕ್ರ ಉಂಟು.

ಈ ಗಣದಲ್ಲಿ ಟೆರಟಂಬಿಯಿಡೆ, ಅನಿಸೆಂಬಿಯಿಡೆ ಮತ್ತು ಓಲಿಗೋಟೋಮಿಡೆ ಎಂಬ ಮೂರು ಕುಟುಂಬಗಳಿವೆ. ***

**ಎಂಬೋಲಿ:** ಭ್ರೂಣದ ಬೆಳವಣಿಗೆಯ ಕಾಲಕ್ಕೆ ನಡೆಯುವ ಗ್ಯಾಸ್ಟ್ರುಲೀಕರಣದ ಒಂದು ವಿಧಿ. ಗ್ಯಾಸ್ಟ್ರುಲೀಕರಣವು ಪ್ರಾಣಿಗಳ ಬೆಳವಣಿಗೆಯಲ್ಲಿ ಒಂದು ಪ್ರಮುಖವಾದ ಸುಸಂಘಟಿತ ಚಾಲಕ ಪ್ರಕ್ರಿಯೆ. ಗ್ಯಾಸ್ಟ್ರುಲೀಕರಣ ನಡೆಯುವ ಹೊತ್ತಿಗೆ ಭ್ರೂಣದ ಮುಂದಿನ ಸಂಭಾವ್ಯ ಅಂಗ ನಿರ್ಮಾಣಕ ಪ್ರದೇಶಗಳು ರೂಪುಗೊಂಡಿರುತ್ತವೆ. ಗ್ಯಾಸ್ಟ್ರುಲೀಕರಣ ಕಾಲದಲ್ಲಿ ಈ ಪ್ರದೇಶಗಳು ಭ್ರೂಣದಲ್ಲಿ ತಾವು ಆಕ್ರಮಿಸಿಕೊಳ್ಳುವ ನಿರ್ಧಾರಿತ ಸ್ಥಾನಗಳನ್ನು ತಲುಪುತ್ತವೆ. ಈ ಕಾಲದಲ್ಲಿ ಪ್ರದೇಶಗಳ ಮತ್ತು ಅಲ್ಲಿನ ಜೀವಕೋಶಗಳ ಸಂರಚನೋತ್ಪತ್ತಿಕ ಚಲನೆಗಳು ನಡೆಯುತ್ತವೆ. ಇದು ಗ್ಯಾಸ್ಟ್ರುಲೀಕರಣದ ವಿಶೇಷ ಲಕ್ಷಣ. ಈ ಚಲನೆಗಳು ಒಂದು ನಿರ್ದಿಷ್ಟ ಆಕಾರ ಅಥವಾ ರಚನೆಯನ್ನು ಸ್ಥಾಪಿಸುತ್ತವೆ. ಇದರಲ್ಲಿ ಎರಡು ರೀತಿಯ ಚಲನೆಗಳುಂಟು. ಎಪಿಬೋಲಿ ಮತ್ತು ಎಂಬೋಲಿ.

ಎಂಬೋಲಿ ಪದವು ಒಳಗೆ ತುರುಕುವುದು ಎಂಬ ಅರ್ಥದಲ್ಲಿ ಗ್ರೀಕ್ ಭಾಷೆಯಿಂದ ಬಂದಿದೆ. ಈ ಕಾಲದಲ್ಲಿ ಸಂಭಾವ್ಯ ಕಾರ್ಡ್ – ಮಧ್ಯದರ್ಮಿಯ ಮತ್ತು ಒಳದರ್ಮದ ಪ್ರದೇಶಗಳು ಭ್ರೂಣದ ಒಳಗಡೆಗೆ ಚಲಿಸಿ ನಿರ್ಮಾಣವಾಗುತ್ತಿರುವ ಭ್ರೂಣದ ಅಗ್ರ–ಪಶ್ಚ ಅಕ್ಷದ ಉದ್ದಕ್ಕೂ ವಿಸ್ತರಿಸುತ್ತದೆ. ಇದು ಒಂದು ಚಲನೆಯಲ್ಲಿ, ಅನೇಕ ರೀತಿಯ ಚಲನೆಗಳ ಸಂಘಟನೆ. ವಿವಿಧ ಜೀವಕೋಶಗಳು ಈ ಚಲನೆಯ ಕಾಲದಲ್ಲಿ ತೋರುವ ವರ್ತನೆಯನ್ನನುಸರಿಸಿ ಹಲವು ಚಲನಾ ವಿಧಾನಗಳನ್ನು ಗುರುತಿಸಬಹುದು.

1) ಅಂತರ್ಗಮನ: ಗ್ಯಾಸ್ಟ್ರುಲಾದ ಡಾರ್ಸಲ್ ತುಟಿಯ ತುದಿಯನ್ನು ತಲುಪಿದ ಜೀವಕೋಶಗಳು ಒಳ ಅಂಚನ್ನು ತಲುಪುವುದು ಅಂತರ್ಗಮನ. ಅಂದರೆ ತುಟಿಯ ಹೊರ ಅಂಚಿನಲ್ಲಿದ್ದ ಜೀವ ಕೋಶಗಳು ತುಟಿಯನ್ನು ದಾಟಿ ಒಳ ಅಂಚನ್ನು ತಲುಪುತ್ತವೆ.

2) ಅಭಿಸರಣ: ಭ್ರೂಣದ ಹೊರಮೇಲ್ಮೈನಲ್ಲಿ ಹರಡಿರುವ ವಿವಿಧ ಜೀವಕೋಶಗಳು ಬ್ಲಾಸ್ಟೋಪೋರಿನ ಕಡೆಗೆ ಚಲಿಸುವುದು.

3) ಅಂತರ್ವಲನ: ಜೀವಕೋಶಗಳ ಒಂದು ಪದರವು ಒಳಕ್ಕೆ ಮಡಿಸಿಕೊಳ್ಳುವುದು ಅಥವಾ ಕುಸಿದು ಇವುಗಳಿಂದ ಲೇಪನಗೊಂಡ ಸಂದಿಯೊಂದು ನಿರ್ಮಾಣವಾಗುತ್ತದೆ.

4) ಅಪಸ್ಮರಣ: ಹೀಗೆ ವಿವಿಧಕೋಶ ಚಲನೆಗಳ ಮೂಲಕ ಭ್ರೂಣದ ಒಳಭಾಗವನ್ನು ತಲುಪಿದ ವಿವಿಧ ಜೀವಕೋಶಗಳು ಅಪಸರಿದು ನಿರ್ಮಾಣವಾಗುತ್ತಿರುವ ಗ್ಯಾಸ್ಟ್ರುಲಾದಲ್ಲಿ ತಮ್ಮ ಭವಿಷ್ಯದ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತವೆ.

5) ಸ್ಥಿರವಿಭಕ್ತ: ಒಂದು ಗುಂಪಿನ ಜೀವಕೋಶಗಳಿಂದ ಕೆಲವು ಗುಂಪಾಗಿ ಪ್ರತ್ಯೇಕಗೊಂಡು ಹೊಸದೊಂದು ಪದರ ಅಥವಾ ಗುಂಪು ನಿರ್ಮಾಣವಾಗುವುದು–ಸ್ಥಿರ ವಿಭಕ್ತ.

ಈ ಪ್ರಮುಖ ಜೀವಕೋಶ ಚಲನೆಗಳ ಜೊತೆಗೆ ಚಲನೆಯ ಕಾಲಕ್ಕೆ ಕೋಶಗಳ ಸಂಖ್ಯಾವೃದ್ಧಿ ನಡೆಯಬಹುದು. ಬಹು ಅಂತರ್ವಲನ ನಡೆಯಬಹುದು. ಗುಂಪು ಜೀವಕೋಶಗಳು ಉಳಿದ ಜೀವಕೋಶಗಳಿಂದ ಪ್ರತ್ಯೇಕಗೊಂಡು ಭ್ರೂಣದಲ್ಲಿ ನಿರ್ಮಾಣವಾಗುವ ಹೊಸ ಸಂದುಗಳಿಗೆ ಚಲಿಸುವ ಅಂತರ್ ಪ್ರವೇಶ ನಡೆಯಬಹುದು. ಚಲಿಸಿ ತಮ್ಮ ನಿರ್ಧಾರಿತ ಸ್ಥಾನಗಳನ್ನು ತಲುಪಿದ ಜೀವಕೋಶಗಳು ನಿರ್ಧರಿತ ಅಕ್ಷಗಳಲ್ಲಿ ವಿಸ್ತರಿಸಬಹುದು. ಜೀವಕೋಶಗಳ ಈ ಚಲನೆಗಳೆಲ್ಲವೂ ವಿವಿಧ ಜೀವಕೋಶ ಗುಂಪುಗಳಲ್ಲಿ ಕಂಡುಬರುವ ಆಂತರಿಕ ಒತ್ತಡದ ಪರಿಣಾಮವಾಗಿ ಅಥವಾ ನೆರೆಯ ಜೀವಕೋಶ ಗುಂಪುಗಳ ಚಲನೆಯ ಒತ್ತಡದ ಪರಿಣಾಮವಾಗಿ ಚಲಿಸಬಹುದು. ಇಲ್ಲಿ ತತ್ತಿಯ ಗಾತ್ರ, ರಚನಾ ವಿಧಾನ, ತತ್ತಿಯಲ್ಲಿರುವ ಸಂಚಿತ ಆಹಾರದ ಪ್ರಮಾಣವನ್ನು ಅನುಸರಿಸುತ್ತದೆ. ಬಂಡಾರವಿಲ್ಲದ ಸ್ತನಿಯ ತತ್ತಿ, ಸಾಪೇಕ್ಷೀಯವಾಗಿ ಸ್ವಲ್ಪ ಬಂಡಾರವಿರುವ ಕಪ್ಪೆಯ ತತ್ತಿ ಮತ್ತು ಅತ್ಯಂತ ಹೆಚ್ಚು ಬಂಡಾರವಿರುವ ಪಕ್ಷಿಯ ತತ್ತಿಯಲ್ಲಿ ನಡೆಯುವ ಈ ಚಲನೆಗಳು ವ್ಯತ್ಯಾಸವನ್ನು ವೈವಿಧ್ಯತೆಯನ್ನು ತೋರಿದರೂ, ಅವುಗಳ ವಾಸ್ತವ ಉದ್ದೇಶ ಒಂದೇ.

(ಎಚ್.ಎಚ್.ಎಸ್.)

**ಎಕಿಡ್ನ:** ಸ್ತನಿ ವರ್ಗದಲ್ಲಿ ತೀರ ಕೆಳ ಮಟ್ಟದ ವಿಕಸನ ಹೊಂದಿರುವ ವರ್ಗ ಮಾನೊಟ್ರೆಮೇಟದ ಸದಸ್ಯ. ಮೊಟ್ಟೆ ಇಡುವುದೇ ಇವುಗಳ ವೈಶಿಷ್ಟ್ಯ. ಆಸ್ಟ್ರೇಲಿಯ, ಟಾಸ್ಮೇನಿಯ ಮತ್ತು ನ್ಯೂಗಿನಿ ದೇಶಗಳಲ್ಲಿ ಇದು ವಾಸಿಸುತ್ತದೆ. ಇವುಗಳ ದೇಹ ಬಲು ಭಾರ. ಬಾಲ ಚಿಕ್ಕದು. ಕೂಗು ನೀಳವಾಗಿ ಚುರುಕಾಗಿರುತ್ತದೆ. ಹಲ್ಲುಗಳಿಲ್ಲ. ಹುಳುಗಳೇ ಇವುಗಳ ಆಹಾರ. ನಾಲಗೆ ನೀಳವಾದ ಕೊಳವೆಯಂತಿದ್ದು, ಅಂಟಾಗಿರುವುದರಿಂದ ಹುಳುಗಳ ಬೇಟೆಗೆ ಅನುಕೂಲವಾಗಿದೆ. ಕಾಲುಗಳು ಚಿಕ್ಕವು, ದಪ್ಪ ಪಾದದ ಬೆರಳುಗಳು ಉದ್ದವಾಗಿದ್ದು ನೆಲ ಅಗೆಯಲು ಅನುಕೂಲವಾಗಿವೆ. ಮೈಮೇಲೆ ಗಟ್ಟಿಯಾದ ಸಣ್ಣ ಸಣ್ಣ ತಟ್ಟೆಗಳಂತಿರುವ ಚಿಪ್ಪುಗಳಿವೆ.

ಎಕಿಡ್ನ

ಬೆಟ್ಟಗುಡ್ಡಗಳು, ಮರಳು ಮತ್ತು ಕಲ್ಲು ನೆಲದಲ್ಲಿ ಇವುಗಳ ವಾಸ. ಭಯವಾದಾಗ ಚೆಂಡಿನಂತೆ ಸುರುಳಿಯಾಗುತ್ತದೆ ಅಥವಾ ಹುಡಿನೆಲವನ್ನು ಅಗೆದು ಒಳಸೇರುತ್ತದೆ. ಇವುಗಳ ದೃಷ್ಟಿ ಮಂದವಾದರೂ, ಕಿವಿ ಮೂಗು ಚುರುಕಾಗಿವೆ. ಇದು ನಿಶಾಚರಿ. ರಾತ್ರಿ ಬೇಟೆಯಾಡುತ್ತದೆ. ತನ್ನ ಹೊಟ್ಟೆಯ ಹೊರಭಾಗದಲ್ಲಿರುವ ಚೀಲಗಳಲ್ಲಿ ಮೊಟ್ಟೆಗಳನ್ನು ಇಟ್ಟುಕೊಂಡು ಕಾಪಾಡುತ್ತದೆ. ಮೊಲೆ ಹಾಲು ಚೀಲದಲ್ಲಿರುವ ಮರಿಗಳಿಗೆ ಹಾಲು ನೀಡಿ ಪೋಷಿಸುತ್ತದೆ.

ಉದ್ದ ಮೂತಿಯ, ಐದು ಕಾಲುಬೆರಳಿನ ಎಕಿಡ್ನ ಪೂರ್ವ ಆಸ್ಟ್ರೇಲಿಯ, ಟಾಸ್ಮೇನಿಯ, ದಕ್ಷಿಣ ನ್ಯೂಗಿನಿ ದೇಶದಲ್ಲಿ ವಾಸಿಸುತ್ತದೆ. ಡೊಂಕು ಮೂತಿಯ ಮೂರು ಕಾಲುಬೆರಳಿನ ಎಕಿಡ್ನ ನ್ಯೂಗಿನಿಯಲ್ಲಿ ವಾಸಿಸುತ್ತದೆ. ***

**ಎಕಿನಾಯ್ಡಿಯ:** ಎಕಿನೊಡರ್‌ಮೇಟ್ ವಂಶಕ್ಕೆ ಸೇರಿದ ಒಂದು ವರ್ಗ. ಈ ವರ್ಗದ ಪ್ರಾಣಿಗಳ ಶರೀರದ ಮೇಲೆ ದುಂಡಾದ, ಗಟ್ಟಿಯಾದ ಕವಚವಿದೆ. ಈ ಕವಚ ಓರಣವಾಗಿ ಜೋಡಿಸಲ್ಪಟ್ಟ ತಟ್ಟೆಗಳಿಂದಾಗಿದೆ. ತಟ್ಟೆಗಳ ಮೇಲೆ ಚಲಿಸುವ ಮುಳ್ಳುಗಳಿವೆ. ಈ ಪ್ರಾಣಿಗಳಿಗೆ ಕೈಕಾಲುಗಳಿಲ್ಲ. ಆದರೆ 5 ಜೋಡಿ ಸಾಲು ಕೊಳವೆ ಪಾದಗಳು ಶರೀರದ ಮೇಲ್ಭಾಗದಿಂದ ಕೆಳಭಾಗದವರೆಗಿವೆ. ಈ ವರ್ಗದಲ್ಲಿ ಸು. 850 ಪ್ರಭೇದಗಳಿವೆ. ಸು. 225 ಜಾತಿಗೆ ಸೇರಿದ 5,000 ಪಳಿಯುಳಿಕೆಗಳಿವೆ. ಈ ಪ್ರಾಣಿಗಳ ಶರೀರದಲ್ಲಿರುವ ಎಕಿನೊಕ್ರೋಮ್ ವರ್ಣದ್ರವ್ಯ ಇದೆ. ಅನೇಕ ಎಕಿನಾಯ್ಡಿಯ ಜೀವಿಗಳು ತಿಳಿ ಕಪ್ಪು ಬಣ್ಣದವಾಗಿದ್ದರೂ ಕೆಲವು ಉಜ್ವಲ ಛಾಯೆಯುಳ್ಳ ಕೆನ್ನೀಲಿ, ಕೆಂಪು, ಹಸಿರು ಅಥವಾ ಕಿತ್ತಳೆ ಬಣ್ಣ ಹೊಂದಿವೆ. ಕೆಲವು ಪ್ರಭೇದದ ಪ್ರಾಣಿಗಳಿಗೆ ಬಣ್ಣ–ಬಣ್ಣದ ಗೀರುಗಳುಳ್ಳ ಮುಳ್ಳುಗಳಿರುತ್ತವೆ. ಕೆಲವು ಪ್ರಾಣಿಗಳಿಗೆ ಬಿಳಿಯ ಬಣ್ಣವಿದೆ. ಇವು ಸಮುದ್ರದ ತಳದಲ್ಲಿ ವಾಸಿಸುತ್ತವೆ.

ಈ ಪ್ರಾಣಿಗಳಲ್ಲಿ ಎಂಡೊಸೈಕ್ಲಿಕ ಮತ್ತು ಎಕ್ಸೊಸೈಕ್ಲಿಕ ಎಂಬ ಎರಡು ಪಂಗಡಗಳಿವೆ. ಎಂಡೊಸೈಕ್ಲಿಕ ಪಂಗಡಕ್ಕೆ ಸೇರಿದ ಪ್ರಾಣಿಗಳಿಗೆ ಹಾರ್ಟ್ ಅರ್ಚಿನ್ (ಕಡಲು ಪೋರ) ಎನ್ನುವರು. ಎಕ್ಸೊಸೈಕ್ಲಿಕ ಪಂಗಡಕ್ಕೆ ಸೇರಿದ ಪ್ರಾಣಿಗಳಿಗೆ ಸ್ಯಾಂಡ್ ಡಾಲರ್ ಮತ್ತು ಕೇಕ್ ಅರ್ಚಿನ್ ಎನ್ನುವರು. ಸೀ ಅರ್ಚಿನ್ನಿನ ಕವಚ ದುಂಡಾಗಿದೆ.



ಎಖೈನೋಕಾರ್ಡಿಯಂ

ಎಕ್ಸೊಸೈಕ್ಲಿಕ ಕವಚ ಚಪ್ಪಟೆ ಕವಚದ ಮೇಲ್ಭಾಗದಲ್ಲಿ ಗುಂಪಾಗಿ ಜೋಡಿಸಲ್ಪಟ್ಟಿರುವ ಹತ್ತು ತಟ್ಟೆಗಳಿವೆ ಇದಕ್ಕೆ ಎಪಿಕಲ್ ಸಮೂಹ ಎಂದು ಹೆಸರು. ಇವುಗಳ ಮಧ್ಯದ ತಟ್ಟೆಗೆ ಪೆರಿಪ್ರಾಕ್ಟ ಎನ್ನುವರು. ಎಂಡೊಸೈಕ್ಲಿಕಗಳಿಗೆ ಆಸನದ್ವಾರ ಪೆರಿಪ್ರಾಕ್ಟದ ಮಧ್ಯದಲ್ಲಿರುತ್ತದೆ.



ಗಾರ್ಗೋನಿಸಿಫಾಲಸ್



ಸೀ ಆರ್ಚಿನ್

ಎಕ್ಸೊಸೈಕ್ಲಿಕಗಳಿಗೆ ಪೆರಿಪ್ರಾಕ್ಟದ ಮತ್ತು ಎಪಿಕಲ್ ಸಮೂಹದ ಹೊರಗೆ ಇರುತ್ತದೆ. ಸ್ಯಾಂಡ್ ಡಾಲರಿನ ಕವಚ ತೆಳ್ಳನೆಯ ದುಂಡಾದ ನಾಣ್ಯದಂತಿದೆ. ಹಾರ್ಟ್ ಅರ್ಚಿನ್ನಿನ ಕವಚ ಅಂಡಾಕಾರದ ದಿಂಬಿನಂತಿದೆ. ಇವುಗಳ ಬಾಯಿ ಶರೀರದ ಕೆಳಭಾಗದಲ್ಲಿದೆ. ಬಾಯಲ್ಲಿ ಅಗಿಯುವ ಅಂಗಕ್ಕೆ ಅರಿಸ್ಟಾಟಲ್ ಲಾಟೀನು ಎಂದು ಹೆಸರು. ಇದು ಅನೇಕ ತುಂಡುಗಳಿಂದಾದ ಜಟಿಲವಾದ ಅಂಗ. ಇದರಲ್ಲಿ ಐದು ಬಲವಾದ ಹಲ್ಲುಗಳಿವೆ.

ಕವಚದ ಮೇಲೆ ಚಿಕ್ಕ ಬಿಗಿಯುಳ್ಳ ಅಂಗಗಳಿವೆ. ಇವಕ್ಕೆ ಪೆಡಿಸಲ್ಲೇರಿಯ ಎನ್ನುವರು. ಇವು ಕಡ್ಡಿಯ ಮೇಲಿರುವ ಕೊಕ್ಕಿನಂತಿವೆ. ಕೊಕ್ಕಿನಲ್ಲಿ ಚಲಿಸುವ ಮೂರು ದವಡೆಗಳಿವೆ. ಕೆಲವಕ್ಕೆ ವಿಷಗ್ರಂಥಿ ಇದೆ. ತಮ್ಮ ಕವಚವನ್ನು ಮುಟ್ಟಿದ ಚಿಕ್ಕ ಪ್ರಾಣಿಗಳನ್ನಾಗಲಿ, ಪದಾರ್ಥಗಳನ್ನಾಗಲಿ ಇವು ಹಿಡಿದು ಹೊರಗೆ ಹಾಕುವುವು. ಇವು ತಮ್ಮ ಕವಚವನ್ನು ಸದಾ ಶುಭ್ರವಾಗಿಟ್ಟಿರುವುವು.




ಅರಿಸ್ಟಾಟಲ್ ಲಾಟೀನು

ಉಷ್ಣವಲಯದ ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳ ಕವಚದ ಮೇಲೆ ಟೊಳ್ಳಾದ ಮುಳ್ಳುಗಳಿವೆ. ಇವು ಬೇರೆ ಪ್ರಾಣಿಯ ಚರ್ಮವನ್ನು ಚುಚ್ಚಿದ ಮೇಲೆ ಮುರಿದು ಹೋದರೆ ವಿಷಕಾರಿ ಗಾಯಗಳನ್ನುಂಟುಮಾಡುತ್ತವೆ. ಲಿಸ್ತೆನೊಸೋಮದ ಮುಳ್ಳುಗಳು ಮನುಷ್ಯನನ್ನು ಕೊಲ್ಲಬಲ್ಲುವು. ಆದರೆ ಅನೇಕ ಎಕಿನಾಯ್ಡಿಯಗಳು ನಿರುಪದ್ರವಿಗಳು, (ಮೊಟ್ಟೆಯಿಡುವ ಕಾಲದಲ್ಲಿ ಇವು ಬಹು ರುಚಿಕರವಾಗಿರುತ್ತವೆ.) ಕಾರಣ, ಬಾರ್‌ಬಡಾಸ್ ದ್ವೀಪಗಳಲ್ಲಿ ಮೀನುಗಾರಿಕೆಯಂತೆ ಇವುಗಳನ್ನು ಹಿಡಿದು ಮಾರಾಟ ಮಾಡುತ್ತಾರೆ.

ಸೀ ಆರ್ಚಿನ್ ಸಮುದ್ರ ತೀರದ ಬಂಡೆಗಳಲ್ಲಿ ವಾಸಿಸುತ್ತದೆ. ಇದು ಬಂಡೆಯನ್ನು ಕೊರೆಯಬಲ್ಲದು. ಇದರ ಮುಖ್ಯ ಆಹಾರ ಏಕಕೋಶ ಸಸ್ಯಗಳು. ಬಂಡೆಗಳಿಗೆ ಅಂಟಿರುವ ಸಣ್ಣ ಪ್ರಾಣಿಗಳನ್ನೂ ತಿನ್ನುತ್ತದೆ. ಇದು ಒಂದು ವರ್ಷದಲ್ಲಿ ಪ್ರಾಯಕ್ಕೆ ಬಂದರೂ ಅನೇಕ ವರ್ಷ ಬೆಳೆಯುತ್ತ ಹೋಗುವುದು. ಜೀವಾವಧಿ 5-6 ವರ್ಷಗಳು. ಕೆಲವು ಉಭಯ ಲಿಂಗಿಗಳಿದ್ದರೂ ಸಾಧಾರಣವಾಗಿ ಲಿಂಗಭೇದವಿದೆ. ಇದರ ಡಿಂಬ (ಲಾರ್ವ) ಸಮುದ್ರದ ಮೇಲೆ ತೇಲುತ್ತದೆ. ಇದಕ್ಕೆ ಎಕಿನೊಪ್ಲೂಟಿಯಸ್ ಎನ್ನುವರು. ಕೆಲವು ಪ್ರಭೇದದ ಪ್ರಾಣಿಗಳು ಮುಳ್ಳುಗಳ ಬುಡದಲ್ಲಿ ಮರಿಮಾಡುವುವು. ಸೀ ಆರ್ಚಿನ್ ಮುಳ್ಳುಗಳ ಬುಡದಲ್ಲಿರುವ ಸ್ನಾಯುಗಳ ಸಹಾಯದಿಂದ ಮುಳ್ಳುಗಳನ್ನು ಊರಿಕೊಂಡು ನಿಧಾನವಾಗಿ ನಡೆಯುವುದು. ಮುರಿದುಹೋದ ಮುಳ್ಳುಗಳು ತಿರುಗಿ ಬೆಳೆಯುತ್ತವೆ. ಎಕ್ಸೊಸೈಕ್ಲಿಕ್ ಪಂಗಡದ ಪ್ರಾಣಿಗಳು ಸಮುದ್ರದ ಮರಳಿನಲ್ಲಿ ಹೂತುಕೊಂಡು ಮಣ್ಣಿನಲ್ಲಿ ಬೆರೆತಿರುವ ಪುಡಿಯಾದ ಆಹಾರವನ್ನು ತಿನ್ನುವುವು. ಕೆಲವು ಸಂಘ ಜೀವಿಗಳು. ಕೆಲವು ಬೇಟೆಯಾಡುತ್ತವೆ. ಕೆಲವು ಕೊಳೆತ ಮಾಂಸ ತಿನ್ನುತ್ತವೆ.

ಕೆಲವು ಪ್ರಾಣಿಗಳು ಸೀ ಆರ್ಚಿನ್ನಿನ ಕವಚವನ್ನು ತೂತುಮಾಡಿ ಅದರಲ್ಲಿ ಪರಾವಲಂಬಿಗಳಾಗಿ ಜೀವಿಸುತ್ತವೆ. ಏಡಿಕಾಯಿಗಳು ಗುದದ್ವಾರದಲ್ಲೋ, ಕವಚದ ಮೇಲೋ ವಾಸಿಸಿ ಅದರ ಮುಳ್ಳುಗಳನ್ನು ಕೊಳವೆಕಾಲುಗಳನ್ನು ತಿಂದುಕೊಂಡಿರುತ್ತವೆ. ಕೆಲವು ಪ್ರಾಣಿಗಳು ಮುಳ್ಳುಗಳ ಮಧ್ಯೆ ರಕ್ಷಣೆ ತೆಗೆದುಕೊಳ್ಳುತ್ತವೆ. (ಎಚ್.ಎಚ್.ಎಸ್)

**ಎಕಿನೊಡರ್ಮೇಟ:** ಅಕಶೇರುಕ ಉಪಸಾಮ್ರಾಜ್ಯದ ಒಂದು ಪ್ರಮುಖ ವಂಶ. ಕಂಟಕ ಚರ್ಮಿ ಎಂಬುದು ಪರ್ಯಾಯ ಹೆಸರು. ಹೊರಚರ್ಮದ ಮೇಲೆ ಮುಳ್ಳುಗಳಿವೆ. ಎಂಟಿರೋಸೀಲಸ್ ರೀತಿಯ ದೇಹಾಂತರವಕಾಶವುಳ್ಳ ಜೀವಿಗಳಿವು. ಡಿಂಬದ ಹಂತದಲ್ಲಿನ ಸಮಪಾರ್ಶ್ವ ಸ್ಥಿತಿ (ಬೈಲಟರಲ್ ಸಿಮಿಟ್ರಿ)ಯ ದೇಹವು ಪ್ರೌಢಾವಸ್ಥೆ ತಲುಪಿದಾಗ ಪಂಚಭುಜಾಕೃತಿ (ಪೆಂಟಮಿರಸ್) ಯಂತಾಗುತ್ತದೆ. ಇವುಗಳಿಗೆ ತಲೆ ಅಥವಾ ಮಿದುಳಿಲ್ಲ. ದೇಹವು ಸುಣ್ಣಮಿಶ್ರಿತವಾದ ಅಸ್ಥಿರಚನೆಯಿಂದಾಗಿದೆ. ಈ ರಚನೆ ಬೇರ್ಪಟ್ಟಂತಿರುವ ತಟ್ಟೆಗಳಂತಿದ್ದು, ಮುಳ್ಳುಗಳಿವೆ. ಇವುಗಳಲ್ಲಿ ಜಲಪರಿಚಲನಾಂಗ (ವಾಟರ್ ವ್ಯಾಸ್ಕುಲರ್ ಸಿಸ್ಟಮ್) ವ್ಯೂಹವಿದೆ. ಈ ಅಂಗ ದೇಹಾಂತರವಕಾಶದಿಂದ ಹುಟ್ಟುತ್ತದೆ. ಹೊರಗಿನಿಂದ ನೀರು ತೆಗೆದುಕೊಳ್ಳಲು ಇದರಲ್ಲಿ ಒಂದು ಜರಡಿಯಂಥ ರಂಧ್ರವಿದೆ. ಒಳಸೇರಿದ ನೀರು ನಳಿಕೆಪಾದಗಳ (ಟ್ಯೂಬ್ ಫೀಟ್) ಮೂಲಕ ಹೊರ ಬರುತ್ತದೆ.

ಅಕಶೇರುಕಗಳಲ್ಲಿ ವಿಶಿಷ್ಟತೆಯನ್ನೊಳಗೊಂಡ ವಂಶ ಎಕಿನೊಡರ್ಮೇಟ. ಕಂಟಕ ಚರ್ಮಿಗಳು ಸಮುದ್ರವಾಸಿಗಳು. ದೇಹ ರೇಡಿಯಲ್ ಸಿಮಿಟ್ರಿಯನ್ನು ಹೊಂದಿದೆ. ದುಂಡಾಗಿ ಅಥವಾ ನಾಳದಂತೆ ಅಥವಾ ನಕ್ಷತ್ರದಂತಿದೆ. ಸಾಮಾನ್ಯವಾಗಿ ಶರೀರದಲ್ಲಿ ಐದು ಬಾಹುಗಳಿವೆ. ಕೆಲವು ಪ್ರಭೇದಗಳಲ್ಲಿ ಬಾಹುಗಳು ತಟ್ಟೆಯಂತಿರುವ ಶರೀರದ ಅಂಚಿನಿಂದ ಹುಟ್ಟಿಕೊಂಡಿವೆ. ಈ ವಂಶಕ್ಕೆ ಸೇರಿದ ಹೋಲೋಥುರಾಯ್ಡಿಯ ವರ್ಗದ ಜೀವಿಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಜೀವಿಗಳ ಚರ್ಮದಲ್ಲಿ ಅತಿಗಟ್ಟಿಯಾದ ಮುಳ್ಳಿನಂತಿರುವ ರಚನೆಗಳು ಮತ್ತು ತಟ್ಟೆಗಳಿವೆ. ಆದರೆ, ಹಾಲೋಥೂರಿಯಾಗಳ ಚರ್ಮ ಒರಟು. ಮುಳ್ಳುಗಳಿರುವುದಿಲ್ಲ.

ಇತರೆ ಗುಂಪಿನ ಪ್ರಾಣಿಗಳಲ್ಲಿರುವಂತೆ ಮುಂತುದಿ ಹಿಂತುದಿಗಳ ಬದಲಾಗಿ ಓರಲ್ ಮತ್ತು ಅಬೋರಲ್ ತುದಿಗಳಿವೆ. ತಟ್ಟೆಯಂತಿರುವ ಶರೀರದ ಮಧ್ಯಭಾಗದಲ್ಲಿ ಬಾಯಿ ಇದೆ. ಬಾಯಿಯಿರುವ ಭಾಗವನ್ನು ಓರಲ್ ಭಾಗವೆಂದು, ಅದಕ್ಕೆ ವಿರುದ್ಧವಿರುವ ಭಾಗವನ್ನು ಅಬೋರಲ್ ಭಾಗವೆಂದೆನ್ನುವರು. ಅಬೋರಲ್ ಭಾಗದಲ್ಲಿ ಗುದದ್ವಾರ (ಅನಸ್) ಮತ್ತು ಮ್ಯಾಡ್ರಿಪೊರೈಟ್ ರಂಧ್ರಗಳಿವೆ. ಹಾಲೊಥೂರಾಯ್ಡಿಯಾಗಳಲ್ಲಿ ಶರೀರ ಸೌತೆಕಾಯಂತೆ ಇದ್ದು ಓರಲ್‌ಭಾಗ ಮುಂತುದಿಯಲ್ಲಿ ಅಬೋರಲ್‌ಭಾಗ ಹಿಂತುದಿಯಲ್ಲಿದೆ. ಎಕಿನೊಡರ್ಮೇಟ ಗುಂಪಿನಲ್ಲಿರುವ ಆಸ್ಟೆರಾಯ್ಡಿಯ ಮತ್ತು ಎಕಿನಾಯ್ಡಿಯ ವರ್ಗದ ಜೀವಿಗಳು, ಓರಲ್ ಭಾಗವನ್ನು ಭೂಮಿಗೆ ಆಸರೆಯಾಗಿಟ್ಟುಕೊಂಡು ಚಲಿಸುತ್ತವೆ. ಆದರೆ ಕ್ರೈನಾಯ್ಡಿಯ ವರ್ಗದ ಜೀವಿಗಳು ಅಬೋರಲ್ ಭಾಗವನ್ನು ಭೂಮಿಗೆ ಆಸರೆಯಾಗಿಟ್ಟುಕೊಳ್ಳುವುವು. ಇವುಗಳಲ್ಲಿ ಓರಲ್ ಭಾಗ ಮೇಲುಮುಖವಾಗಿರುತ್ತದೆ. ಎಕಿನೊಡರ್ಮ ಜೀವಿಯ ಶರೀರದ ಸಿಮಿಟ್ರಿಯಲ್ಲಿ ಜೋಡಿಸಿಕೊಂಡಿರುವಂತೆ ಐದು ಸಾಲುಗಳಿವೆ. ಇವು ತಗ್ಗಾದ ಹಳ್ಳದಂತೆ ಅಥವಾ ನೇಗಿಲಿನ ತೆರೆಯಂತೆ ಕಾಣುತ್ತವೆ. ಇವನ್ನು ಆಂಬುಲ್ಯಾಕರಲ್ ಕಾಲುವೆಗಳೆನ್ನುತ್ತಾರೆ. ಈ ಕಾಲುವೆಗಳ ಒಳಬುಡದಿಂದ ನಳಿಕೆಪಾದಗಳು ಹೊರಬರುತ್ತವೆ. ಈ ಪಾದಗಳು ಜಲಪರಿಚಲನೆಗೆ ಸೇರಿದ ಅಂಗಗಳು. ಆಂಬುಲ್ಯಾಕರಲ್‌ಗಳ ಮಧ್ಯೆಯಿರುವ ಸ್ಥಳಕ್ಕೆ ಇಂಟರ್ ಆಂಬುಲ್ಯಾಕರಲ ಅಥವಾ ಇಂಟರ್‌ರೇಡಿಯೈ ಎಂದು ಹೆಸರು.

ಎಕಿನೊಡರ್ಮ್‌ಗಳ ಶರೀರದ ಗೋಡೆಯಲ್ಲಿ ಹೊರಚರ್ಮ, ಒಳಚರ್ಮ ಮತ್ತು ಸೀಲೋಮಿನ ಎಪಿಥೀಲಿಯಂ ಪದರಗಳಿವೆ. ಒಳಚರ್ಮದಲ್ಲಿ ಸುಣ್ಣಮಿಶ್ರಿತ ಅಸ್ಥಿಯಿದೆ.

ಈ ಅಸ್ಥಿಯನ್ನು ಒಳಚರ್ಮವೇ ಉತ್ಪತ್ತಿ ಮಾಡುತ್ತದೆ. ಅದರಿಂದ ಎಕಿನೊಡರ್ಮ್‌ಗಳಲ್ಲಿರುವ ಅಸ್ಥಿಯನ್ನು ಒಳಾಸ್ಥಿಯೆನ್ನುತ್ತೇವೆ. ಈ ಅಸ್ಥಿ ಅತ್ಯಂತ ಸುವ್ಯವಸ್ಥಿತವಾಗಿ ಬೆಸುಗೆಹಾಕಿದ ತಟ್ಟೆಗಳಂತಿದೆ. ಇದರಿಂದಾಗಿ ಶರೀರ ಒಂದು ಭದ್ರವಾದ ಪೆಟ್ಟಿಗೆಯಂತೆ ಕಾಣುತ್ತದೆ. ಈ ರೀತಿಯ ಕವಚ ಪೆಟ್ಟಿಗೆಯನ್ನು ಥೀಕ ಅಥವಾ ಟೆಸ್ಟ್ ಎಂದು ಹೇಳುವರು. ಈ ಥೀಕ ಅಥವಾ ಟೆಸ್ಟ್ ಬೆಸುಗೆಯಿಲ್ಲದ ಆಸಿಕಲ್‌ಗಳೆಂಬ ರಚನೆಗಳಿಂದ ಕೂಡಿದೆ. ಹಾಲೊಥೂರಾಯ್ಡಿಯದಲ್ಲಿ ಆಸಿಕಲ್‌ಗಳು ನಶಿಸಿಹೋಗಿ ಅತಿಸೂಕ್ಷ್ಮವಾದ ಮುಳ್ಳಿನಂಥ ರಚನೆಗಳಿವೆ. ಅಸ್ಥಿತಟ್ಟೆ ಹಾಗೂ ಆಸಿಕಲ್‌ಗಳಲ್ಲದೆ ಮೊನಚಾದ ಸೂಜಿಗಳಂಥ ಮುಳ್ಳುಗಳಿವೆ. ಇವುಗಳ ಮೇಲೆ ಹೊರಚರ್ಮದ ಹೊದಿಕೆಯಿದೆ. ಒಳಚರ್ಮದ ತಳದಲ್ಲಿ ಮಾಂಸಖಂಡಗಳಿವೆ. ಹಾಲೊಥೂರಾಯ್ಡಿಯ ವರ್ಗದಲ್ಲಿ ಮಾಂಸಖಂಡಗಳು ಚೆನ್ನಾಗಿ ಬೆಳೆದಿವೆ.

ಜಲ ಪರಿಚಲನಾಂಗವ್ಯೂಹ (ವಾಟರ್ ವ್ಯಾಸ್ಕುಲರ್ ಸಿಸ್ಟಮ್): ಎಕಿನೊಡರ್ಮೇಟ ವಂಶದ ಪ್ರಾಣಿಗಳಲ್ಲಿರುವ ವಿಶಿಷ್ಟವಾದ ಅಂಗವ್ಯೂಹ. ಈ ಅಂಗ ಸುವ್ಯವಸ್ಥಿತ ರೀತಿಯ ನಾಳಗಳನ್ನು ಹೊಂದಿದೆ.



ನಕ್ಷತ್ರ ಮೀನಿನ ಜಲ ಪರಿಚಲನಾಂಗವ್ಯೂಹ

ನಾಳಗಳು ಆಂಬುಲ್ಯಾಕರಲ್ ಕಾಲುವೆಗಳ ತಳದಲ್ಲಿವೆ. ಈ ಕಾಲುವೆಗಳಲ್ಲಿ ನೀರು ದೇಹದಿಂದ ಹೊರಗೆ ಹರಿಯುತ್ತದೆ. ಜಲ ಪರಿಚಲನಾಂಗದ ಮುಖ್ಯಭಾಗಗಳೆಂದರೆ ಜಲರಂಧ್ರ (ಮೆಡ್ರಿಪೊರೈಟ್), ಕಲ್ಲುಗಾಲುವೆ (ಸ್ಟೋನ್ ಕೆನಾಲ್), (ಅಡ್‌ರೇಡಿಯಲ್ ಕೆನಾಲ್), ಉಂಗುರ ಕಾಲುವೆ (ರಿಂಗ್ ಕೆನಾಲ್) ಮತ್ತು ರೇಡಿಯಲ್ ಕಾಲುವೆಗಳು ಹಾಗೂ ನಳಿಕೆಪಾದ (ಟ್ಯೂಬ್ ಫೀಟ್)ಗಳು. ಜಲರಂಧ್ರ ಸಾಮಾನ್ಯವಾಗಿ ಪ್ರಾಣಿಯ ಅಬೋರಲ್ ಭಾಗದಲ್ಲಿರುತ್ತದೆ. ತಟ್ಟೆಯಂತಿರುವ ಶರೀರದ ಇಂಟರ್ ರೇಡಿಯಲ್ ಭಾಗದಲ್ಲಿದೆ. ಜಲರಂಧ್ರವೇನಾದರೂ ವಿಭಾಗವಾಗಿ ಜರಡಿಯಂತಾಗಿದ್ದರೆ ಅದನ್ನು ಮ್ಯಾಡ್ರಿಪೊರೈಟ್ ಎನ್ನುತ್ತೇವೆ. ಈ ರಂಧ್ರ ಕಲ್ಲುಗಾಲುವೆಗೆ ಸಂಪರ್ಕ ಕಲ್ಪಿಸುತ್ತದೆ. ಈ ನಾಳದ ಗೋಡೆಗಳು ಸುಣ್ಣದ ಲೇಪನಗಳಿಂದಾಗಿ ಗಟ್ಟಿಯಾಗಿರುವುದರಿಂದ ಇದಕ್ಕೆ ಕಲ್ಲುಗಾಲುವೆಯೆಂದು ಹೆಸರು. ಈ ಕಲ್ಲುಗಾಲುವೆ ಉಂಗುರ ಕಾಲುವೆಗೆ ಸಂಪರ್ಕ ಕಲ್ಪಿಸುತ್ತದೆ. ಉಂಗುರ ಕಾಲುವೆಯಿಂದ ರೇಡಿಯಲ್ ಕಾಲುವೆಗಳು ಹೊರಟು ಆಂಬುಲ್ಯಾಕರಲ್ ಕಾಲುವೆಗಳೊಳಕ್ಕೆ ಪ್ರವೇಶಿಸುತ್ತವೆ. ರೇಡಿಯಲ್ ಕಾಲುವೆಗಳ ಇಕ್ಕೆಲಗಳಲ್ಲಿ ಚಿಕ್ಕ ಚಿಕ್ಕ ನಾಳಗಳಂತಿರುವ ಅಡ್ಡಕಾಲುವೆಗಳಿವೆ. ಈ ಅಡ್ಡಕಾಲುವೆಗಳು ನಳಿಕೆ ಪಾದಗಳಲ್ಲಿ ಕೊನೆಗೊಳ್ಳುತ್ತವೆ. ನಳಿಕೆಪಾದದ ಬುಡದಲ್ಲಿ ಆಂಪುಲ್ಲ ಎಂಬ ಚೀಲದಂಥ ರಚನೆಯಿದೆ. ಈ ಆಂಪುಲ್ಲದಿಂದ ನಾಳದಂಥ ರಚನೆ ಹೊರಚಾಚಿದೆ. ಈ ನಾಳದ ತುದಿಯಲ್ಲಿ ಅಂಟು ಸಿಂಬಿಯಿದೆ. ಈ ಸಿಂಬಿಯ ಮಧ್ಯೆ ಸೂಕ್ಷ್ಮ ರಂಧ್ರವಿದೆ. ನಳಿಕೆಪಾದದ ಆಂಪುಲ್ಲದೊಳಗೆ ಒಂದು ಕವಾಟವಿದೆ. ಇದು ನೀರನ್ನು ಹಿಂದಕ್ಕೆ ಹೋಗದಂತೆ ತಡೆಗಟ್ಟುತ್ತದೆ. ಎರಡು ರೇಡಿಯಲ್ ಕಾಲುವೆಗಳ ಮಧ್ಯೆಯಿರುವ ಉಂಗುರಗಾಲುವೆಯ ಭಾಗದಲ್ಲಿ ಪೋಲಿಯನ್ ವೆಸಿಕಲ್ ಮತ್ತು ಟೀಡ್‌ಮನ್ ಬಾಡಿಸ್‌ಗಳೆಂಬ ರಚನೆಗಳಿವೆ. ನೀರು ಜಲರಂಧ್ರ ಅಥವಾ ಮ್ಯಾಡ್ರಿಪೊರೈಟ್ ರಂಧ್ರದ ಮೂಲಕ ಕಲ್ಲುಗಾಲುವೆಗೆ ಬರುತ್ತದೆ. ಕಲ್ಲುಗಾಲುವೆಯಿಂದ ಉಂಗುರಗಾಲುವೆಯನ್ನು ತಲುಪಿ, ಅಲ್ಲಿಂದ ರೇಡಿಯಲ್ ಕಾಲುವೆಗಳಿಗೆ ಹರಿಯುತ್ತದೆ. ಈ ಕಾಲುವೆಗಳಿಂದ ಅಡ್ಡಕಾಲುವೆಗಳ ಮೂಲಕ ನಳಿಕೆಪಾದಗಳ ಆಂಪುಲ್ಲ ಭಾಗವನ್ನು ತಲುಪುತ್ತದೆ. ಆಂಪುಲ್ಲ ತುಂಬಿದಮೇಲೆ ಸಂಕುಚಿಸುತ್ತದೆ. ಇದರಿಂದಾಗಿ ನೀರು ಆಂಪುಲ್ಲ ಮುಂದಿರುವ ನಾಳದ ಮೂಲಕ ಬಿರುಸಿನಿಂದ ಹೊರಹೊಮ್ಮುತ್ತದೆ. ಈ ಕ್ರಿಯೆಯಿಂದಾಗಿ ಜೀವಿ ಮೆಲ್ಲನೆ ಚಲಿಸಲು ಸಾಧ್ಯವಾಗುತ್ತದೆ. ಜಲಪರಿಚಲನೆಯಿಂದ ಉಸಿರಾಟಕ್ಕೂ ಅನುಕೂಲವಾಗುತ್ತದೆ. ನೀರಿನಲ್ಲಿರುವ ಆಮ್ಲಜನಕವನ್ನು ತೆಗೆದುಕೊಂಡು ಇಂಗಾಲದ ಡೈಆಕ್ಸೈಡನ್ನು ಜೀವಿ ಹೊರಹಾಕುತ್ತದೆ. ಆಹಾರ ಸಂಗ್ರಹಣೆಗೂ ಈ ನಳಿಕೆ ಪಾದಗಳು ಸಹಾಯಮಾಡುತ್ತವೆ. ಓಫಿಯುರಾಯ್ಡಿಯ, ಹಾಲೊಥುರಾಯ್ಡಿಯ ಮತ್ತು ಕ್ರೈನಾಯ್ಡಿಯಗಳಲ್ಲಿ ಮ್ಯಾಡ್ರಿಪೊರೈಟ್ ರಂಧ್ರ ಓರಲ್ ಭಾಗದಲ್ಲಿದೆ.

ಜೀರ್ಣಾಂಗಗಳು ಸರಳವಾಗಿವೆ. ಶರೀರದ ಓರಲ್ ಭಾಗದಲ್ಲಿ ಬಾಯಿ ಹಾಗೂ ಅಬೊರಲ್ ಭಾಗದಲ್ಲಿ ಗುದದ್ವಾರಗಳಿವೆ. ಕ್ರೈನಾಯಿಡಿಯದಲ್ಲಿ ಬಾಯಿ ಗುದದ್ವಾರಗಳೆರಡೂ ಓರಲ್ ಭಾಗದಲ್ಲಿಯೇ ತೆರೆದಿರುತ್ತವೆ. ಬಾಯಿಯಲ್ಲಿ ಕೆಲವು ವಿಶೇಷ ಅಂಗಗಳು ಬೆಳೆದಿರುತ್ತವೆ. ಪುಟ್ಟ ಅನ್ನನಾಳವಿದ್ದು ಅದರ ಹಿಂದೆ ವಿಶಾಲವಾದ ಸ್ನಾಯುಯುಕ್ತ ಜಠರವಿದೆ. ಆಸ್ಟಿರಾಯಿಡಿಯದಲ್ಲಿ ಜಠರ ಐದು ಬಾಹುಗಳಿಗೂ ಪಸರಿಸಿರುವುದು. ಕೆಲವು ಪ್ರಭೇದಗಳಲ್ಲಿ ಕರುಳು ಬಾಹುಗಳೆಡೆಗೆ ಹಾಯುತ್ತದೆ. ಸಾಮಾನ್ಯವಾಗಿ ಕರಳು ಚಿಕ್ಕದು. ಜಠರದ ಸುತ್ತ ಜಠರಗ್ರಂಥಿಗಳು ಸೊಂಪಾಗಿ ಬೆಳೆದಿರುತ್ತವೆ. ನರಮಂಡಲವು ಆದಿಮ ರೀತಿಯದು. ತ್ರಿಜ್ಯರೂಪದಲ್ಲಿ ಹರಡಿದ ನರಮುಡಿಗಳನ್ನೊಡಗೊಂಡ ಜಾಲದಂತೆ ಕಂಡುಬರುತ್ತದೆ. ಇದರಲ್ಲಿ ಮೂರು ವಿಧಾನಗಳನ್ನು ಕಾಣಬಹುದು. ೧) ಮುಖಭಾಗದ ಅಥವಾ ಎಕ್ಟೊನ್ಯೂರಲ್ ರೀತಿಯದು. ಇದು ಮುಖಭಾಗದ ಹೊರಚರ್ಮದ ಕೆಳಗೆ ಇದೆ. ಗಂಟಲಿನ ಸುತ್ತ ಹರಡಿದ ವರ್ತುಲಾಕಾರದ ಅಥವಾ ಪಂಚಭುಜಾಕಾರದ ಕೆಳಗೆ ಇದೆ. ಗಂಟಲಿನ ಸುತ್ತ ಹರಡಿದ ವರ್ತುಲಾಕಾರದ ಅಥವಾ ಪಂಚಭುಜಾಕಾರದ ರಚನೆಯಿದ್ದು ನರಮುಡಿಗಳಿರುವ ತ್ರಿಜ್ಯನರಗಳನ್ನು ಒಳಗೊಂಡಿದೆ. ಎಲ್ಲ ವಿಧಾನಗಳೂ ಇದೇ ಸ್ವರೂಪವನ್ನು ತೋರುತ್ತವೆ. ೨) ಹೈಪೊನ್ಯೂರಲ್ ವಿಧ. ಇದು ಕವಚ ಮತ್ತು ಒಳಚರ್ಮದ ನಡುವೆ ಇದೆ. ೩) ಎಂಟೊನ್ಯೂರಲ್ ವಿಧವು ಒಳಚರ್ಮದ ಒಳಭಾಗದಲ್ಲಿದೆ.

ಈ ವಂಶದ ಪ್ರಾಣಿಗಳಲ್ಲಿ ರಕ್ತಪರಿಚಲನಾ ಮಂಡಲ ಹೆಚ್ಚು ಬೆಳವಣಿಗೆಯಾಗಿಲ್ಲ. ಒಂದು ರೀತಿಯ ವಿಜಾತಿಯ ಸಂದುಗಳನ್ನೊಳಗೊಂಡ ಅಂಗಾಂಶದ ಎಳೆಗಳ ಮತ್ತು ಅವುಗಳಲ್ಲಿರುವ ಅನುಲೇಪಕರಹಿತ ಅಂತರ ಸಂಬಂಧಕ ಸಂದುಗಳೇ ಇವುಗಳ ಪರಿಚಲನಾ ಮಂಡಲ. ಸಂಧಿಪದಿಗಳಲ್ಲಿ ಕಂಡುಬರುವ ರುಧಿರಾಶಯ (ಹೀಮೊಸೀಲ್) ಮಂಡಲವನ್ನು ಬಹುಮಟ್ಟಿಗೆ ಹೋಲುತ್ತದೆ. ಬ್ಲಾಸ್ಟುಲಾದ ಬ್ಲಾಸ್ಟೊಸೀಲ್ ಅವಕಾಶದಿಂದ ಉದ್ಭವಿಸಿದ ಮಂಡಲ ಇದರಲ್ಲಿ ಮುಕ್ತ ಕೋಶಗಳನ್ನೊಳಗೊಂಡ ಮಾತೃಕೆಯೊಂದು ತುಂಬಿದೆ. ಇದರ ಆಕಾರ ಮತ್ತು ಕಾರ್ಯನಿರ್ವಹಣಾ ರೀತಿ ಭಿನ್ನವಾಗಿದೆ. ನರಮಂಡಲದ ಪೆರಿಹೀಮಲ್ (ಪರಿವೃಧಿಕ) ವೃತ್ತದ ಮೇಲೆ ಬಾಯಿಯ ಸುತ್ತ ಆಶ್ರಯಿತ ಅಂಗಾಂಶದ ಒಂದು ವೃತ್ತವಿದೆ. ಇದರಿಂದ ಪ್ರತಿ ತ್ರಿಜ್ಯದಲ್ಲಿಯೂ ಒಂದು ಎಳೆ ಅಥವಾ ನಾಳ ಹೊರಡುತ್ತದೆ. ಇದು ತ್ರಿಜ್ಯ ಪರಿವೃಧಿಕ ನಾಳೆಯ ಮೇಲೆ ಇರುತ್ತದೆ. ಈ ಮಂಡಲದ ಮತ್ತೊಂದು ಭಾಗವು ಅಕ್ಷಾಂಶ ಭಾಗದಲ್ಲಿದೆ. ಇದು ಮುಖವೃತ್ತವನ್ನು ವಿಮುಖವೃತ್ತವೊಂದರ ಜೊತೆಗೆ ಕೂಡಿಸುತ್ತದೆ. ಕೆಲವು ಗುಂಪುಗಳಲ್ಲಿ ಈ ಮಂಡಲವು ಸಂಕುಚಿಸುವುದು ಕಂಡುಬಂದರೂ ಈ ಮಂಡಲದ ಮೂಲಕ ಪರಿಚಲನೆ ಎಂಬುದು ನಡೆಯುತ್ತದೆಯೇ ಎಂಬುದು ಅನುಮಾನ. ದೇಹದ ವಿವಿಧ ಭಾಗಗಳ ನಡುವೆ ಪ್ರಸರಣದಿಂದ ಬಹುಶಃ ಇದು ಅಂತರ ಸಂಪರ್ಕವನ್ನು ಏರ್ಪಡಿಸಬಹುದು. ಹೃದಯ ಈ ಪ್ರಾಣಿಗಳಲ್ಲಿ ಇಲ್ಲ. ನಿರ್ದಿಷ್ಟ ಭಿತ್ತಿಯುಳ್ಳ ರಕ್ತನಾಳಗಳೂ ಇಲ್ಲ. ಅಮೀಬರೂಪಿ ರಕ್ತಕಣಗಳಿರುವ ರಕ್ತ, ಕಡಲ ನೀರಿನಂತಿರುವ ಒಂದು ದ್ರವ ಈ ಮಂಡಲದ ಮೂಲಕ ಹರಿಯುತ್ತದೆ.

ನಿರ್ದಿಷ್ಟವಾದ ಶ್ವಾಸಾಂಗಗಳು ಇಲ್ಲ. ಹೋಲೊಥುರಾಯ್ಡಿಯ ವರ್ಗದ ಪ್ರಾಣಿಗಳಲ್ಲಿ ಶ್ವಾಸವೃಕ್ಷ (ಉಸಿರಾಟದ ಮರ) ಇದೆ. ಅದು ಉಸಿರಾಟಕ್ಕೆ ಬೆಳೆದ ಅಂಗ. ಹೊಲೊಥುರಾಯ್ಡಿಯದಲ್ಲಿ ಮಾತ್ರ ಇದೆ. ಇದರಲ್ಲಿ ಕೆಲವು, ಸೀಲೋಮಿಕ್ ದ್ರವವನ್ನು ಹೊರಗಿನ ನೀರಿಗೆ ಸಂಪರ್ಕಿಸುತ್ತವೆ. ಆಸ್ಟಿರಾಯ್ಡಿಯ ಮತ್ತು ಎಕೈನಾಯ್ಡಿಯಗಳಲ್ಲಿ ಉಸಿರಾಟಕ್ಕೆ ಮೀಸಲಾದ ಪೋಡಿಯ ಮತ್ತು ಕಿವಿರುಗಳೆಂಬ ರಚನೆಗಳಿವೆ. ದೇಹದ ಒಳಗಿರುವ ಸೀಲೋಮಿಕ್ ದ್ರವಕ್ಕೆ ಗಾಳಿ ತುಂಬಿದ ಕಡಲನೀರನ್ನು ಒಯ್ದು ಮುಟ್ಟಿಸುವ ಕೆಲವು ರಚನೆಗಳು ಕೆಲವು ಗುಂಪುಗಳಲ್ಲಿ ಕಂಡುಬರುತ್ತವೆ. ಹೋಲೊಥುರಾಯ್ಡಿಯದ ಶ್ವಾಸವೃಕ್ಷ, ಅಫಿಯುರಾಯ್ಡಿಯದ ಜನನೇಂದ್ರಿಯ ಪುಟಿ (ಜನೈಟಲ್ ಬರ್ಸ) ಗಳು ಇದಕ್ಕೆ ಉದಾಹರಣೆಗಳು.

ಈ ವಂಶದಲ್ಲಿ ಮಲಿನ ವಸ್ತುಗಳ ವಿಸರ್ಜನೆ ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತದೆ ಎಂದು ಹೇಳುವುದು ಕಷ್ಟ. ಇವುಗಳಲ್ಲಿ ವಿಸರ್ಜನಾಂಗಗಳಿಲ್ಲ. ಕಿವಿರುಗಳ ಭಿತ್ತಿಯ ಮೂಲಕ ಕಲ್ಮಶಗಳನ್ನು ಹೊತ್ತು ಹೊರಕ್ಕೆ ಚಲಿಸುವ ಅಮೀಬ ರೂಪಿ ಜೀವಕೋಶಗಳು ವಿಸರ್ಜನೆಯ ಕೆಲಸವನ್ನು ನಿರ್ವಹಿಸುತ್ತವೆ. ಈ ದಿಸೆಯಲ್ಲಿ ಶ್ವಾಸಾಂಗಗಳು ಮತ್ತು ಕರುಳು ನೆರವಾಗುತ್ತವೆ.




ಈ ಪ್ರಾಣಿಗಳಲ್ಲಿ ಲಿಂಗ ರೀತಿಯ ಮತ್ತು ನಿರ್ಲಿಂಗ ರೀತಿಯ ಪ್ರಜನನಗಳೆರಡೂ ನಡೆಯುತ್ತವೆ. ಕೆಲವು ಭಿನ್ನಲಿಂಗಿಗಳು. ಉದಾ: ಹೋಲೊಥುರಾಯ್ಡಿಯ ಮತ್ತು ಅಫೆಯುರಾಯ್ಡಿಗಳ ಕೆಲವು ಜೀವಿಗಳು ಇವುಗಳಲ್ಲಿ ಸಂಭೋಗಾಂಗಗಳಾಗಲೀ, ಆನುಷಂಗಿಕ ಅಂಗಾಂಗಗಳಾಗಲೀ ಲಿಂಗಾಣುಗಳನ್ನು ಸ್ವೀಕರಿಸಲು ಮತ್ತು ಸಂಗ್ರಹಿಸಿಕೊಳ್ಳಲು ಯಾವುದೇ ಅಂಗ ಇಲ್ಲ. ಒಂದೇ ಒಂದು ಜನನೇಂದ್ರಿಯವಿದ್ದು ಅದು ಎರಡು ಬಾಹುಗಳ ಅಂತರ ತ್ರಿಜ್ಯದಲ್ಲಿ ಜನನ ರಂಧ್ರವೊಂದರ ಮೂಲಕ ಹೊರಕ್ಕೆ ತೆರೆಯುತ್ತದೆ. ಹೊರಲಕ್ಷಣದಿಂದ ಲಿಂಗಗಳನ್ನು ಪ್ರತ್ಯೇಕಿಸಿ ಗುರುತಿಸುವುದು ಸಾಧ್ಯವಿಲ್ಲ. ನಿಷೇಚನವು ದೇಹದ ಹೊರಗೆ ನಡೆಯುತ್ತದೆ. ತತ್ತಿಗಳು ಹೋಮೊಲೆಸಿತಲ್ ಮಾದರಿಯವು. ವಿದಲನ ಪೂರ್ಣವಾಗಿದ್ದು ತ್ರಿಜ್ಯಪ್ರರೂಪವನ್ನು ತೋರುತ್ತದೆ. ಬೆಳವಣಿಗೆಯಲ್ಲಿ ಮುಕ್ತ ಜೀವನ ನಡೆಸುವ ಲಾರ್ವ ಅವಸ್ಥೆ ಮತ್ತು ರೂಪಪರಿವರ್ತನೆಗಳು ಕಂಡುಬರುತ್ತವೆ. ಕೆಲವು ಪ್ರಾಣಿಗಳು ಜರಾಯುಜಗಳು. ಈ ಪ್ರಾಣಿಗಳು ಕಳೆದುಕೊಂಡ ಭಾಗಗಳನ್ನು ಪುನರುತ್ಪಾದಿಸಿಕೊಳ್ಳಬಲ್ಲುವು. ಕೆಲವೊಮ್ಮೆ ಖಂಡನ ರೀತಿಯಲ್ಲಿಯೂ ಪ್ರಜನನ ನಡೆಯಬಹುದು.

ಕಂಟಕ ಚರ್ಮಿಗಳು ನೆಲ ಅಥವಾ ಸಿಹಿನೀರಿನ ಪರಿಸರಗಳಲ್ಲಿ ಬದುಕಲಾರವು. ಭೂಮಿಯ ಎಲ್ಲಾ ಸಮುದ್ರ ಮಹಾಸಾಗರಗಳಲ್ಲಿ ಹರಡಿವೆ. ಪುರಾತನ ಕಾಲದಲ್ಲಿಯೂ ಅನೇಕ ಪ್ರಭೇದಗಳಿದ್ದು ವಿಕಾಸದ ದೃಷ್ಟಿಯಲ್ಲಿ ಮುಖ್ಯವಾಗಿವೆ. ಪುರಾತನ ಜೀವಿಗಳು ಹೊಂದಿದ್ದ ಗಟ್ಟಿಯಾದ ಅಸ್ಥಿಯುಳ್ಳ ಶರೀರದಿಂದಾಗಿ ಪಳೆಯುಳಿಕೆಗಳಾಗಿ ಇಂದಿಗೂ ಸಿಗುತ್ತವೆ. ಪಳೆಯುಳಿಕೆಗಳ ಅಭ್ಯಾಸದಿಂದ ಈ ಗುಂಪಿನ ಜೀವಿಗಳ ವಿಚಾರಗಳನ್ನು ಪೂರ್ಣವಾಗಿ ಅರಿಯಲು ಅನುಕೂಲವಾಗಿದೆ.

ವರ್ಗೀಕರಣ: ಎಕಿನೊಡರ್ಮೇಟಾ ವಂಶವನ್ನು ಎರಡು ಉಪವಂಶಗಳಾಗಿ ವರ್ಗೀಕರಿಸಲಾಗಿದೆ. 1. ಪೆಲ್‌ಮೆಟೋಜ಼ೋವ ಮತ್ತು 2. ಎಲ್ಯುಥಿರೋಜ಼ೋವ.

ಉಪವಂಶ ಪೆಲ್‌ಮೆಟೋಜ಼ೋವ: ಕೇವಲ ಒಂದು ವರ್ಗವನ್ನು ಬಿಟ್ಟರೆ, ಈ ಉಪವಂಶಕ್ಕೆ ಸೇರಿದ ಇತರ ವರ್ಗಗಳು ನಶಿಸಿ ಹೋಗಿವೆ. ಅವುಗಳ ಪಳೆಯುಳಿಕೆಗಳು ಮಾತ್ರ ಇವೆ. ಈ ಉಪವಂಶದ ಪ್ರಾಣಿಗಳು ಸಸ್ಯಗಳಂತೆ ನೆಲಕ್ಕಂಟಿಕೊಂಡು ಬೆಳೆಯುತ್ತವೆ. ನೇರವಾಗಿ ಅಬೋರಲ್ ಭಾಗವೇ ನೆಲಕ್ಕಂಟಿಕೊಂಡಿರಬಹುದು ಅಥವಾ ಈ ಭಾಗದಲ್ಲಿ ತೊಟ್ಟಿನಂಥ ರಚನೆಯಿದ್ದು ಅದರ ಸಹಾಯದಿಂದ ಇವು ನೆಲಕ್ಕಂಟಿಕೊಂಡಿರಬಹುದು. ಈ ತೊಟ್ಟಿನಂಥ ರಚನೆ ಸುಣ್ಣಮಿಶ್ರಿತ ತಟ್ಟೆಗಳನ್ನೊಳಗೊಂಡಿರುತ್ತದೆ. ಓರಲ್ ಭಾಗ ಮೇಲ್ಮುಖವಾಗಿರುತ್ತದೆ. ಶರೀರದಲ್ಲಿ ಗಟ್ಟಿಯಾದ ಪೆಟ್ಟಿಗೆಯಂಥ ಥೀಕ ಅಥವಾ ಟೆಸ್ಟ್ ಇದೆ. ಓರಲ್ ಭಾಗದಲ್ಲಿ ಬಾಯಿ ಮತ್ತು ಗುದದ್ವಾರಗಳೆರಡೂ ಇವೆ. ಆಂಬುಲ್ಯಾಕರಗಳು ಆಹಾರವನ್ನು ಸಂಗ್ರಹಿಸುವ ಕಾಲುವೆಗಳಾಗಿವೆ. ಓರಲ್ ಭಾಗದಲ್ಲಿ ಚೆನ್ನಾಗಿ ಬೆಳೆದ ಬಾಹುಗಳಿವೆ. ಆಂಬುಲ್ಯಾಕರಗಳು ಈ ಬಾಹುಗಳ ತುದಿಯವರೆಗೂ ಪಸರಿಸಿವೆ. ಈ ಕಾಲುವೆಗಳಲ್ಲಿರುವ ನಳಿಕೆ ಪಾದಗಳು ಆಹಾರವನ್ನು ಹಿಡಿಯಲು ಸಹಕರಿಸುತ್ತವೆ. ಎಂಟೊನ್ಯೂರಲ್ ನರಮಂಡಲ ಅಥವಾ ಅಬೋರಲ್ ನರಮಂಡಲ ಚೆನ್ನಾಗಿ ಬೆಳೆದಿದೆ. ಈ ಉಪವಂಶದಲ್ಲಿ ಐದು ವರ್ಗಗಳಿವೆ.

ವರ್ಗ 1. ಹೆಟಿರೋಸ್ಟೀಲಿಯ: ಈ ವರ್ಗದಲ್ಲಿರುವ ಪ್ರಾಣಿಗಳು ನಶಿಸಿ ಹೋಗಿವೆ. ಚಪ್ಪಟೆಯಾದ ಥೀಕ, ಅಡ್ಡಲಾಗಿರುವಂತೆ ಬೆಳೆದಿದ್ದ ತೊಟ್ಟು ಇದರ ಮುಖ್ಯ ಲಕ್ಷಣ. ಥೀಕದಲ್ಲಿ ರಂಧ್ರಗಳಿಲ್ಲ. ರೇಡಿಯಲ್ ಸಿಮಿಟ್ರಿಯಿಲ್ಲ. ಇವು ಕೇಂಬ್ರಿಯನ್ ಮತ್ತು ಸೈಲೂರಿಯನ್ ಕಾಲದ ಆದಿಭಾಗದಲ್ಲಿದ್ದುವು.

ವರ್ಗ 2. ಸಿಸ್ಟೀಡಿಯ: ಈ ವರ್ಗದ ಪ್ರಾಣಿಗಳು ನಶಿಸಿಹೋಗಿವೆ. ಇವುಗಳ ಆಕಾರ ಕೋಳಿಮೊಟ್ಟೆಯಂತಿತ್ತು. ನೇರವಾಗಿ ಅಥವಾ ತೊಟ್ಟಿನ ಸಹಾಯದಿಂದ ನೆಲಕ್ಕಂಟಿಕೊಳ್ಳುತ್ತಿದ್ದುವು. ತೊಟ್ಟು ನೆಲದಿಂದ ನೆಟ್ಟಗೆ ನಿಂತುಕೊಳ್ಳುತ್ತಿತ್ತು. ಥೀಕ ಗಟ್ಟಿಯಾಗಿದ್ದು ಪಂಚಭುಜಗಳುಳ್ಳ ತಟ್ಟೆಯನ್ನೊಳಗೊಂಡಿತ್ತು. ಕೆಲವು ತಟ್ಟೆಗಳಲ್ಲಿ ರಂಧ್ರಗಳಿದ್ದುವು. ಆಂಬುಲ್ಯಾಕರಗಳು ಎರಡರಿಂದ ಐದರವರೆಗಿದ್ದುವು. ಇವು ಬಾಹುಗಳವರೆಗೆ ಪಸರಿಸಿದ್ದುವು. ಆರ್ಡೊವಿಶಿಯನ್ ಮಧ್ಯಭಾಗದಿಂದ ಡಿವೊನಿಯನ್ ಕಾಲದ ಮಧ್ಯಭಾಗದವರೆಗೂ ಇವು ಪಸರಿಸಿದ್ದುವು. ಈ ವರ್ಗದಲ್ಲಿ ಎರಡು ಗಣಗಳಿವೆ: ಗಣ 1. ರಾಂಬಿಫೆರ, ಗಣ 2. ಡಿಪ್ಲೊಪೊರೀಟ.

ವರ್ಗ 3. ಬ್ಲಾಸ್ಟಾಯ್ಡಿಯ: ಈ ಪ್ರಾಣಿಗಳು ನಶಿಸಿ ಹೋಗಿವೆ. ಇವು ಮೊಗ್ಗಿನಾಕಾರವಾಗಿದ್ದು ನೆಲಕ್ಕೆ ನೇರವಾಗಿ ಅಥವಾ ಒಂದು ಚಿಕ್ಕತೊಟ್ಟಿನಿಂದ ಅಂಟಿಕೊಂಡಿರುತ್ತಿದ್ದುವು. ಥೀಕ ಪಂಚಮುಖಗಳನ್ನು ಹೊಂದಿತ್ತು. ಇದರಲ್ಲೆ ಹದಿಮೂರು ತಟ್ಟೆಗಳಿದ್ದು ಮೂರು ವೃತ್ತದಲ್ಲಿ ಜೋಡಿಸಿಕೊಂಡಿದ್ದುವು. ಐದು ಆಂಬುಲ್ಯಾಕರಗಳಿದ್ದು ಅವು ದಳಗಳಂತೆ ಜೋಡಿಸಿಕೊಂಡಿದ್ದುವು. ಆರ್ಡೊವಿಶಿಯನ್, ಪರ್‌ಮಿಯನ್ ಮತ್ತು ಮಿಸಿಸಿಪಿಯನ್ ಕಾಲದಲ್ಲಿ ಇವು ಜೀವಿಸಿದ್ದುವು.

ವರ್ಗ 4. ಕ್ರೈನಾಯ್ಡಿಯ: ಈ ವರ್ಗದಲ್ಲಿ ಕೆಲವು ಪ್ರಭೇದದ ಬದುಕಿರುವ ಹಾಗೂ ನಶಿಸಿ ಹೋಗಿರುವ ಜೀವಿಗಳಿವೆ. ಈ ಪ್ರಾಣಿಗಳು ನೆಲಕ್ಕೆ ತೊಟ್ಟಿನಿಂದ ಅಂಟಿಕೊಂಡಿರುತ್ತವೆ. ಓರಲ್ ಭಾಗ ಮೇಲ್ಮುಖವಾಗಿರುತ್ತದೆ. ಶರೀರ ಪಂಚಮುಖವನ್ನು ಹೊಂದಿದೆ. ಥೀಕ ರಂಧ್ರಗಳಿಲ್ಲದ ತಟ್ಟೆಗಳನ್ನೊಳಗೊಂಡಿದೆ. ಬದುಕಿರುವ ಪ್ರಾಣಿಗಳ ಬಾಹುಗಳು ಚಲಿಸುತ್ತವೆ. ಬಾಹುಗಳು ನಾನಾ ಭಾಗಗಳಾಗಿ ಚಿಲ್ಲೊಡೆದಿವೆ. ಇವುಗಳಲ್ಲಿ ಸಂಯುಕ್ತ ಎಲೆಯಲ್ಲಿರುವಂಥ ರಚನೆಗಳಿವೆ. ಬಾಹುಗಳ ತುದಿಯವರೆಗೂ ಆಂಬುಲ್ಯಾಕರ ಇದೆ. ಬಾಯಿ ಓರಲ್ ಭಾಗದ ಮಧ್ಯೆ ಇದೆ. ಗುದದ್ವಾರ ಮಧ್ಯಭಾಗದಿಂದ ಸ್ವಲ್ಪ ಪಕ್ಕಕ್ಕಿದೆ. ಆರ್ಡೊವಿಶಿಯನ್ ಕಾಲದಿಂದ ಇಂದಿನವರೆಗೂ ಇವು ಪಸರಿಸಿವೆ. ಈ ವರ್ಗದಲ್ಲಿ ನಾಲ್ಕು ಗಣಗಳಿವೆ. ಗಣ 1. ಇನಾಡುನೇಟ. 2. ಫ್ಲೆಕ್ಸಿಬಿಲಿಯ, 3. ಕಾಮೆರೇಟ (ಇವು ಗತವಂಶವಾಗಿವೆ.) 4 ಆರ್ಟಿಕ್ಯುಲೇಟ. ಇದು ನಾಶವಾಗಿ ಹೋಗಿರುವ ಮತ್ತು ಬದುಕಿರುವ ಪ್ರಾಣಿಗಳೆರಡನ್ನೂ ಒಳಗೊಂಡಿದೆ.

ವರ್ಗ 5. ಎಡ್ರಿಯೊ ಆಸ್ಟೆರಾಯ್ಡಿಯ: ಈ ವರ್ಗದ ಪ್ರಾಣಿಗಳು ನಶಿಸಿವೆ. ಇವಕ್ಕೆ ಬಾಹುಗಳಾಗಲಿ, ತೊಟ್ಟುಗಳಾಗಲಿ ಇಲ್ಲ. ಶರೀರ ತಟ್ಟೆಯಂತಿತ್ತು. ಇವು ಕೇಂಬ್ರಿಯನ್ ಮತ್ತು ಕಾರ್ಬೊನಿಫೆರಸ್ ಕಾಲದಲ್ಲಿದ್ದುವು.

ಉಪವಂಶ ಎಲ್ಯುಥೀರೋಜ಼ೋವ: ತೊಟ್ಟುಗಳಿಲ್ಲದ, ಚಲಿಸಬಲ್ಲ ಎಕಿನೊಡರ್ಮೇಟಗಳು ಈ ಉಪವಂಶಕ್ಕೆ ಸೇರಿವೆ. ಓರಲ್ ಭಾಗ ನೆಲದ ಕಡೆಗಿದ್ದು ಅಬೋರಲ್ ಭಾಗ ಮೇಲುಮುಖವಾಗಿರುವುದು. ಪಂಚಭುಜಾಕೃತಿಯುಳ್ಳ ಶರೀರ,

ಐದು ಆಂಬುಲ್ಯಾಕರದ ಕಾಲುವೆಗಳು ಇವುಗಳಲ್ಲಿವೆ. ನಳಿಕೆ ಪಾದಗಳು ಚಲನೆಗೆ ಸಹಾಯಮಾಡುತ್ತವೆ. ಗುದದ್ವಾರ ಅಬೋರಲ್ ಭಾಗದಲ್ಲಿದೆ. ಎಕ್ಟೊನ್ಯೂರಲ್ ಸ್ಥಿತಿಯ ನರಮಂಡಲ ಚೆನ್ನಾಗಿ ಬೆಳೆದಿದೆ. ಈ ಉಪವಂಶದಲ್ಲಿ 5 ವರ್ಗಗಳಿವೆ.




ಆಂಟೆಡಾನ್

ವರ್ಗ 1 ಹಾಲೊಥೂರಾಯ್ಡಿಯ: ಇವನ್ನು ಸಮುದ್ರ ಸೌತೆಯೆಂದು ಕರೆಯುತ್ತಾರೆ. ಶರೀರ ಸೌತೆಕಾಯಂತಿದ್ದು ಒಂದು ತುದಿಯಲ್ಲಿ ಓರಲ್ ಭಾಗವೂ ಮತ್ತೊಂದು ತುದಿಯಲ್ಲಿ ಅಬೋರಲ್ ಭಾಗವೂ ಇದೆ. ಒಂದೇ ಮುಖನಾಗಿ ನೆಲದ ಮೇಲೆ ಬಿದ್ದಿರುವುದರಿಂದ ಶರೀರದ ಒಂದು ಭಾಗ ಚಪ್ಪಟೆಯಾಗಿರುತ್ತದೆ. ರೇಡಿಯಲ್ ಸಿಮಿಟ್ರಿಯನ್ನು ಕಳೆದುಕೊಂಡು ಸಮಪಾರ್ಶ್ವಸ್ಥಿತಿಯನ್ನು ಗಳಿಸುತ್ತಿರುವುದು ಕಂಡುಬರುತ್ತದೆ. ಓರಲ್‌ಭಾಗದಲ್ಲಿ ಬಾಯಿ ಇದೆ. ಬಾಯಿ ಸುತ್ತಲೂ ಟೆಂಟಕಲ್‌ಗಳಿವೆ. ಇವು ಜಲಪರಿಚಲನಾಂಗಕ್ಕೆ ಸಂಬಂಧ ಕಲ್ಪಿಸಿಕೊಂಡಿವೆ. ಶರೀರದ ಚರ್ಮ ಒರಟಾಗಿದೆ. ಒಳ ಅಸ್ಥಿ ನಶಿಸಿಹೋಗಿ ಸೂಕ್ಷ್ಮ ಮುಳ್ಳಿನಂಥ ರಚನೆಗಳಿಂದಾಗಿದೆ. ನಳಿಕೆ ಪಾದಗಳು ಚಲನೆಗೆ ಸಹಾಯ ಮಾಡುತ್ತವೆ. ಕೆಲವು ಜೀವಿಗಳಲ್ಲಿ ಇವು ಇಲ್ಲ. ನಳಿಕೆಪಾದಗಳು ಆಂಬುಲ್ಯಾಕರಗಳಲ್ಲಿಯೇ ಇರಬಹುದು. ಇಲ್ಲದಿದ್ದಲ್ಲಿ ಶರೀರದ ಎಲ್ಲ ಭಾಗದಲ್ಲೂ ಹರಡಿಕೊಂಡಿರಬಹುದು. ಸಂತಾನಾಂಗ ಒಂದೇ ಇದೆ. ಕೆಲವು ಜಾತಿಯ ಜೀವಿಗಳಲ್ಲಿ ಎರಡಿದ್ದು ಬಹಳ ನಾಳಗಳಂಥ ರಚನೆಗಳನ್ನು ಹೊಂದಿವೆ. ಈ ವರ್ಗದಲ್ಲಿ ಐದು ಗಣಗಳಿವೆ.



ಫೈಯೊನ್ಸ್

ಗಣ 1. ಆಸ್ಪಿಡೋಕೈರೋಟ: ಬಹಳ ನಳಿಕೆಪಾದಗಳನ್ನು ಹೊಂದಿರುವ ಹಾಲೊಥೂರಾಯ್ಡಿಯಗಳಿವು. ಓರಲ್ ಟೆಂಟಕಲ್‌ಗಳು ಕುರುಚುಗೂದಲಿನಂತಿವೆ. ಉಸಿರಾಟದ ಮರ ಇದೆ. ಓರಲ್ ರಿಟ್ರಾಕ್ಟರ್‌ಗಳಿಲ್ಲ.

ಗಣ 2. ಎಲಾಸಿಪೋಡ: ಬಹಳ ನಳಿಕೆಪಾದಗಳಿರುವ ಹಾಲೊಥೂರಾಯ್ಡಿಯಗಳು. ಓರಲ್ ಟೆಂಟಕಲ್‌ಗಳು ಕುರುಚುಗೂದಲಿನಂತಿವೆ. ಓರಲ್ ರಿಟ್ರಾಕ್ಟರ್‌ಗಳಿಲ್ಲ. ಉಸಿರಾಟದ ಮರ ಇಲ್ಲ. ಸಮುದ್ರದ ತಳದಲ್ಲಿ ವಾಸಿಸುತ್ತವೆ.

ಗಣ 3. ಡೆಂಡ್ರೊಕೈರೋಟ: ಬಹಳ ಪಾದಗಳಿವೆ. ಓರಲ್ ಟೆಂಟಕಲ್‌ಗಳು ವೃಕ್ಷಾಕೃತಿಯಲ್ಲಿವೆ. ಓರಲ್ ರಿಟ್ರಾಕ್ಟರ್‌ಗಳು ಮತ್ತು ಉಸಿರಾಟ ಮರಗಳಿವೆ.

ಗಣ 4. ಮಾಲ್ಪಡೋನಿಯ: ಪಾದಗಳಿಲ್ಲದ ಹಾಲೊಥೂರಿಯಗಳಿವು. ಗುದದ್ವಾರದ ಭಾಗದಲ್ಲಿ ಪ್ಯಾಪಿಲ್ಲೆಗಳಿವೆ. ಓರಲ್ ಟೆಂಟಕಲ್‌ಗಳು ಬೆರಳಿನಂತಿವೆ. ಹಿಂತುದಿ ಸಣ್ಣಗಾಗುತ್ತ ಹೋಗುತ್ತದೆ. ಉಸಿರಾಟದ ಮರವಿದೆ.

ಗಣ 5. ಏಪೋಡ: ಪಾದಗಳಿಲ್ಲ. ದುಂಡಗೆ ಜಂತುವಿನಂತಿರುವ ಹಾಲೊಥೂರಿಯಗಳು. ಓರಲ್ ಟೆಂಟಕಲ್‌ಗಳು ಇವೆ. ಉಸಿರಾಟದ ಮರ ಇಲ್ಲ. ಜಲಪರಿಚಲನಾಂಗ ನಶಿಸಿಹೋಗಿದೆ.

ವರ್ಗ 2. ಎಕಿನಾಯ್ಡಿಯ: ಈ ಜೀವಿಗಳು ದುಂಡಗೆ ತಟ್ಟೆಯಂತೆ, ಕೋಳಿ ಮೊಟ್ಟೆಯಾಕಾರಕ್ಕೆ ಅಥವಾ ಹೃದಯದ ಆಕಾರಕ್ಕೆ ತಿರುಗಿವೆ. ಶರೀರದ ಮೇಲೆ ಚಲಿಸಬಲ್ಲ ಮುಳ್ಳುಗಳಿವೆ. ಟೆಸ್ಟ್ ಅಥವಾ ಥೀಕ ಗಟ್ಟಿಯಾದ ಪೆಟ್ಟಿಗೆಯಂತಿದೆ. ಇದರಲ್ಲಿರುವ ಅಸ್ಥಿತಟ್ಟೆಗಳು ಬಿಗಿಯಾಗಿ ಬೆಸೆದುಕೊಂಡಿರುವುದು ಇದಕ್ಕೆ ಕಾರಣ. ಶರೀರದಲ್ಲಿ ಆಂಬುಲ್ಯಾಕರಲ್ ಭಾಗ ಮತ್ತು ಇಂಟರ್ ಆಂಬುಲ್ಯಾಕರಲ್ ಭಾಗಗಳಿವೆ. ಆಂಬುಲ್ಯಾಕರಲ್ ತಟ್ಟೆಗಳಲ್ಲಿ ಪಾದಗಳು ಹೊರಬರಲು ರಂಧ್ರಗಳಿವೆ. ಪಾದಗಳು ಚಲಿಸಲು ಸಹಕರಿಸುತ್ತವೆ. ಈ ಪ್ರಾಣಿಗಳನ್ನು ಸಮುದ್ರದ ಅರ್ಚಿನ್ (ಸೀ ಅರ್ಚಿನ್) ಗಳೆನ್ನುವರು. ಆಂಬುಲ್ಯಾಕರಗಳು ಬಾಯಿಂದ ಅಬೋರಲ್ ಧ್ರುವದವರೆಗೂ ಇವೆ. ಬಾಯಿ ಓರಲ್‌ಭಾಗದ ಮಧ್ಯೆ ಇದ್ದು ಅದರ ಸುತ್ತಲೂ ಪೊರೆಯಂಥ ಪೆರಿಪ್ರಾಕ್ಟ್ ಇದೆ. ಸಂತಾನಾಂಗಗಳು ಪಂಚಮುಖವಾಗಿವೆ. ಈ ಜೀವಿಗಳು ಆರ್ಡೊವಿಶಿಯನ್ ಕಾಲದಿಂದ ಪ್ರಾರಂಭವಾಗಿ ಇಂದಿಗೂ ಇವೆ. ಈ ವರ್ಗದಲ್ಲಿ ಮೂರು ಉಪವರ್ಗಗಳಿವೆ.

ಉಪವರ್ಗ 1. ಬಾಥ್ರಿಯೊಸಿಡರಾಯ್ಡ್: ಇವು ಆರ್ಡೊವಿಶಿಯನ್ ಕಾಲದಲ್ಲಿದ್ದುವು. ದುಂಡಗಿದ್ದ ಟೆಸ್ಟ್ ಮತ್ತು ಪ್ರತಿ ಆಂಬುಲ್ಯಾಕರದಲ್ಲಿ ಎರಡು ಸಾಲು ತಟ್ಟೆಗಳ ಜೋಡಣೆ ಈ ವರ್ಗದ ಮುಖ್ಯಲಕ್ಷಣ. ಇಂಟರ್ ಆಂಬುಲ್ಯಾಕರದಲ್ಲಿ ಒಂದೇ ಸಾಲು ತಟ್ಟೆಗಳಿರುತ್ತಿದ್ದುವು. ಮ್ಯಾಡ್ರಿಪೊರೈಟ್ ರೇಡಿಯಲ್ ಸ್ಥಾನದಲ್ಲಿದೆ.

ಉಪವರ್ಗ 2. ರೆಗ್ಯುಲೇರಿಯ ಅಥವಾ ಎಂಡೊಸೈಕ್ಲಿಕ: ದುಂಡಗೆ ಕೋಳಿ ಮೊಟ್ಟೆಯಾಕಾರದ ಪಂಚಭುಜಾಕೃತಿಯುಳ್ಳ ಎಕಿನಾಯ್ಡಿಯಗಳಿವು. ಇಂಟರ್ ಆಂಬುಲ್ಯಾಕರ್ ಭಾಗದಲ್ಲಿ ಎರಡು ಸಾಲು ತಟ್ಟೆಗಳಿವೆ. ಪೆಸ್ಟೋಮ್ ಮತ್ತು ಪೆರಿಪ್ರಾಕ್ಟ್ ಓರಲ್ ಮತ್ತು ಅಬೋರಲ್ ಭಾಗದ ಮಧ್ಯೆ ಇವೆ. ಅರಿಸ್ಟಾಟಲನ ಲಾಟೀನು ಚೆನ್ನಾಗಿ ಬೆಳೆದಿದೆ. ಈ ಉಪವರ್ಗದಲ್ಲಿ ಐದು ಗಣಗಳಿವೆ.

ಗಣ 1. ಲೆಪಿಡೊಸೆಂಟ್ರಾಯ್ಡಿಯ. ಹಿಂದೆ ಇದ್ದುವು ಇಂದೂ ಬದುಕಿವೆ.

ಗಣ 2. ಮೆಲನ್‌ಎಕಿನಾಯ್ಡಿಯ. ನಶಿಸಿ ಹೋಗಿವೆ. ಥೀಕ ದುಂಡಗಿದ್ದು ಗಟ್ಟಿಯಾಗಿತ್ತು. ನಾಲ್ಕು ಅಥವಾ ಐದು ಸಾಲು ಆಂಬುಲ್ಯಾಕರಗಳ ತಟ್ಟೆಗಳಿವೆ.

ಗಣ 3. ಸಿಡರಾಯ್ಡಿಯ. ಬದುಕಿರುವ ಮತ್ತು ನಾಶವಾಗಿರುವ ಎಕಿನಾಯ್ಡಿಯಗಳಿವು. ಗಟ್ಟಿಯಾಗಿ ದುಂಡಗಿರುವ ಟೆಸ್ಟ್‌ಗಳನ್ನು ಹೊಂದಿವೆ. ಎರಡು ಸಾಲಿನಲ್ಲಿ ಉದ್ದವಾಗಿದ್ದರೂ ಗಾತ್ರದಲ್ಲಿ ಸಣ್ಣಗಿರುವ ಆಂಬುಲ್ಯಾಕರದ ತಟ್ಟೆಗಳ ಜೋಡಣೆ ಇದೆ. ಈ ತಟ್ಟೆಗಳು ಬಾಯವರೆಗೂ ಪಸರಿಸಿವೆ. ಪ್ರತಿ ಇಂಟರ್ ಆಂಬುಲ್ಯಾಕರ ತಟ್ಟೆಯೂ ಉದ್ದವಾದ ಮುಳ್ಳನ್ನೊಳಗೊಂಡಿದೆ. ಈ ಮುಳ್ಳಿನ ಬುಡದಲ್ಲಿ ಚಿಕ್ಕ ಚಿಕ್ಕ ಮುಳ್ಳಿನಂಥ ರಚನೆಗಳಿವೆ. ಅರಿಸ್ಟಾಟಲ್ ಲಾಟೀನ್ ಇದೆ. ಇವು ಮಿಸಿಸಿಪಿಯನ್ ಕಾಲದಿಂದ ಇಂದಿನವರೆಗೂ ಉಳಿದುಬಂದಿವೆ.

ಗಣ 4. ಔಲೊಂಡಾಂಟ. ಗತಿಸಿರುವ ಮತ್ತು ಇಂದು ಬದುಕಿರುವ ಎಕಿನಾಯ್ಡಿಯಗಳಿವು. ದುಂಡಗೆ ಪಂಚಮುಖವುಳ್ಳ ಟೆಸ್ಟ್ ಇದೆ. ಆಂಬುಲ್ಯಾಕರದಲ್ಲಿ ಎರಡು ಸಾಲುತಟ್ಟೆಗಳಿವೆ. ಕಿವಿರುಗಳಿವೆ. ಹಲ್ಲುಗಳಿಗೆ ಕೀಲ್ ಇಲ್ಲ.

ಗಣ 5. ಸ್ಟಿರೊಡಾಂಟ. ಗತಿಸಿಹೋಗಿರುವ ಎಕಿನಾಯ್ಡಿಯಗಳಿವು. ಹಲ್ಲುಗಳಿಗೆ ಕೀಲ್ ಇತ್ತು.

ಗಣ 6. ಕಮರೊಡಾಂಟ. ಹಲ್ಲುಗಳಿಗೆ ಕೀಲ್ ಇದೆ. ಟೆಸ್ಟ್ ಕೋಳಿ ಮೊಟ್ಟೆಯಂತಿದೆ.

ಉಪವರ್ಗ 3. ಇರ್ರೆಗ್ಯುಲೇರಿಯ ಅಥವಾ ಎಕ್ಸೊಸೈಕ್ಲಿಕ. ಗತಿಸಿಹೋಗಿರುವ ಮತ್ತು ಬದುಕಿರುವ ಎಕಿನಾಯ್ಡಿಯಗಳಿವು. ಸಾಮಾನ್ಯವಾಗಿ ಚಪ್ಪಟೆಯಾಗಿರುವ ಕೋಳಿಮೊಟ್ಟೆಯಾಕಾರದ ಅಥವಾ ದುಂಡನೆಯ ಟೆಸ್ಟ್ ಹೊಂದಿವೆ. ಈ ಉಪವರ್ಗದಲ್ಲಿ ನಾಲ್ಕು ಗಣಗಳಿವೆ.

ಗಣ 1. ಹೊಲಿಕ್ಟೊಪಾಯ್ಡ. ಗತಿಸಿಹೋಗಿರುವ ಎಕಿನಾಯ್ಡಿಯಗಳಿವು.

ಗಣ 2. ಕಾಸ್ಸಿಡುಲಾಯ್ಡ. ಗತಿಸಿಹೋಗಿವೆ.

ಗಣ 3. ಕ್ಲೈಪಿಯಾಸ್ಟ್ರಾಯ್ಡಿಯ. ಅನಿಯತ ಎಕಿನಾಯ್ಡಿಯಗಳು. ಚಪ್ಪಟೆಯಾಗಿವೆ. ಕಿವಿರುಗಳಿಲ್ಲ. ಲಾಟೀನು ಇದೆ.

ಗಣ 4. ಸ್ಪೆಟಂಗಾಯ್ಡಿಯ. ಅನಿಯತ ಎಕಿನಾಯ್ಡಿಯಗಳಿವು. ಕೋಳಿಮೊಟ್ಟೆಯಂತೆ ಅಥವಾ ಹೃದಯದಂತಿರುವ ಟೆಸ್ಟ್ ಇದೆ. ಕಿವಿರುಗಳಿಲ್ಲ.

ವರ್ಗ 3. ಆಸ್ಟೆರಾಯ್ಡಿಯ. ಚಪ್ಪಟೆಯಾಗಿರುವ ಪಂಚಮುಖ ಅಥವಾ ಬಾಹುಗಳುಳ್ಳ ಎಕಿನೊಡರ್ಮಗಳು. ನಕ್ಷತ್ರದಂಥ ಶರೀರ ಮತ್ತು ಸಾಮಾನ್ಯವಾಗಿ ಐದು ಬಾಹುಗಳಿವೆ. ಓರಲ್ ಭಾಗವು ತಳಮುಖವಾಗಿದೆ. ನಳಿಕೆಪಾದಗಳು, ಜಲಪರಿಚಲನಾಂಗಗಳು ಚೆನ್ನಾಗಿ

ಬೆಳೆದಿವೆ. ಆಂಬುಲ್ಯಾಕರಗಳು ಐದು ನಾಳದಂತೆ ಕಾಣುತ್ತವೆ. ಜೀರ್ಣಾಂಗ ಪ್ರತಿ ಬಾಹುವಿನೊಳಕ್ಕೂ ಪಸರಿಸಿವೆ. ಈ ವರ್ಗ ಐದು ಗಣಗಳನ್ನು ಹೊಂದಿದೆ.

ಗಣ 1. ಪ್ಲಾಟಿಯಾಸ್ಟಿರಾಯ್ಡಿಯ. ಇವು ಆರ್ಡೋವಿಶಿಯನ್ ಕಾಲದಲ್ಲಿದ್ದುವು.

ಗಣ 2. ಹೆಮಿಝೋನಿಡ.

ಗಣ 3. ಫೆನೆರೊಝೋನಿಯ. ಈ ಗಣದಲ್ಲಿ ಐದು ಉಪಗಣಗಳಿವೆ. ಬಾಹುಗಳ ತುದಿಯಲ್ಲಿ ಎರಡು ಸಾಲಿನಲ್ಲಿ ಜೋಡಿಸಿಕೊಂಡಿರುವ ತಟ್ಟೆಗಳ ಜೋಡಣೆ ಕಂಡುಬರುತ್ತದೆ.

ಗಣ 4. ಸ್ಟೈನುಲೋಸ. ಬಾಹುಗಳ ತುದಿಯಲ್ಲಿ ತಟ್ಟೆಗಳಿಲ್ಲ. ನಳಿಕೆ ಪಾದಗಳಲ್ಲಿ ಸಿಂಬೆಗಳಿವೆ.

ಗಣ 5. ಫಾರ್ಸಿಪುಲೇಟ. ನಾಲ್ಕು ಸಾಲು ನಳಿಕೆಪಾದಗಳು ಮತ್ತು ನಳಿಕೆ ಪಾದಗಳಲ್ಲಿ ಸಿಂಬೆಗಳು ಇರುವುದು ಈ ಗಣದ ಮುಖ್ಯ ಲಕ್ಷಣ.

ವರ್ಗ 4. ಓಫಿಯೂರಾಯ್ಡಿಯ. ಚಪ್ಪಟೆಯಾಗಿರುವ ಪಂಚಭುಜಾಕೃತಿಯುಳ್ಳ ಎಕಿನೊಡರ್ಮಗಳು. ಸಾಮಾನ್ಯವಾಗಿ ತೆಳ್ಳಗಿರುವ ಐದು ಬಾಹುಗಳು ಇವೆ. ಬಾಹುಗಳ ಚಲನೆ ಹಾವಿನ ಚಲನೆಯನ್ನು ಹೋಲುತ್ತದೆ. ಬಾಹುಗಳು ಕವಲೊಡೆದು ರೆಂಬೆಗಳನ್ನು ಹೊಂದಿವೆ. ಬಾಹುಗಳಲ್ಲಿ ಆಂಬೂಲ್ಯಾಕರ ಕಾಲುವೆಗಳು ಇರುವುದಿಲ್ಲ. ಶರೀರ ಮತ್ತು ಬಾಹುಗಳು ಚಪ್ಪಟೆಯಾದ ತಟ್ಟೆಗಳಿಂದ ಆವೃತವಾಗಿವೆ. ಜೀರ್ಣಾಂಗ ಬಾಹುಗಳಿಗೆ ಪಸರಿಸುವುದಿಲ್ಲ. ಮ್ಯಾಡ್ರಿಪೊರೈಟ್ ರಂಧ್ರ ಓರಲ್ ಭಾಗದಲ್ಲಿಯೇ ಇವೆ. ಈ ಜೀವಿಗಳು ಮಿಸಿಸಿಪಿಯನ್ ಕಾಲದಿಂದ ಪ್ರಾರಂಭವಾಗಿ ಇಂದಿನವರೆಗೂ ಇವೆ. ಈ ವರ್ಗ ಎರಡು ಗಣಗಳನ್ನು ಹೊಂದಿದೆ.

ಗಣ 1. ಓಫಿಯೂರೆ. ಸರಳವಾದ ಬಾಹುಗಳು. ಚೆನ್ನಾಗಿ ಬೆಳೆದಿರುವ ಶರೀರ ಈ ಗಣದ ಲಕ್ಷಣ.

ಗಣ 2. ಯೂರಿಯಲೆ. ಬಾಹುಗಳು ಸರಳವಾಗಿರಬಹುದು ಅಥವಾ ಕವಲೊಡೆದು ನಾನಾ ರೆಂಬೆಗಳನ್ನು ಹೊಂದಿರಬಹುದು.

ವರ್ಗ 5 ಓಫಿಯೊಸಿಸ್ಟಾಯ್ಡಿಯ. ಇವು ಪೇಲಿಯೊಝೋಯಿಕ್ ಕಾಲದಲ್ಲಿದ್ದುವು. ಬಾಹುಗಳು ಇರಲಿಲ್ಲ. ಓರಲ್‌ಭಾಗವನ್ನು ಭೂಮಿಗೆ ಅಭಿಮುಖವಾಗಿಟ್ಟುಕೊಂಡಿರುತ್ತಿದ್ದುವು. ಶರೀರ ಗಟ್ಟಿಯಾದ ತಟ್ಟೆಗಳಿಂದ ಆವರಿಸಿತ್ತು. ಓರಲ್ ಭಾಗದಲ್ಲಿ ಪ್ರತಿ ಆಂಬುಲ್ಯಾಕರಿನಲ್ಲಿಯೂ ಆರು ಜೊತೆ ದೊಡ್ಡ ಪಾದಗಳು ಇದ್ದುವು. (ಎಚ್.ಎಚ್.ಎಸ್)

**ಎಕಿಯೂರಾಯ್ಡಿಯ:** ಸಮುದ್ರದಲ್ಲಿ ವಾಸಿಸುವ ಹುಳುಗಳ ಒಂದು ವಂಶ. ಹಿಂದೆ ಇದನ್ನು ವಲಯವಂತಗಳ ವಂಶದೊಂದಿಗೆ ಸೇರಿಸಲಾಗಿತ್ತು. ಹೆಚ್ಚಿನ ಮಾಹಿತಿ ದೊರಕಿದ ಮೇಲೆ ಇದನ್ನು ಪ್ರತ್ಯೇಕ ವಂಶವಾಗಿಯೇ ಪರಿಗಣಿಸಲಾಗಿದೆ. ಪ್ರೌಢಾವಸ್ಥೆಯಲ್ಲಿ ಈ ವಂಶದ ಹುಳುಗಳ ದೇಹದ ಕೆಳಮೈಯಲ್ಲಿ ಕೆಲವು ವಲಯಗಳಲ್ಲಿ ಬಿರುಗೂದಲುಗಳಿವೆ. ಇವು ಆಕಾರದಲ್ಲಿ ಕಂಬದಂತೆ ಇವೆ. ಬಾಯಿ ದೇಹದ ಮುಂಭಾಗದಲ್ಲಿದೆ. ಬಾಯಿ ಮುಂದೆ ಉದ್ದವಾದ ಒಂದು ಸೊಂಡಲಿದೆ. ಕೆಲವು ಎಕಿಯೂರಾಯ್ಡಿಯಗಳಲ್ಲಿ ಸೊಂಡಿಲು ಚಿಕ್ಕದು. ಮಿಕ್ಕವುಗಳಲ್ಲಿ ಉದ್ದವಾಗಿದ್ದು ಸೂಕ್ಷ್ಮಗ್ರಾಹಿಯಾಗಿ, ಅಲುಗಾಡುತ್ತಿರುತ್ತದೆ. ಸೊಂಡಿಲಿನಲ್ಲಿರುವ ಅವಕಾಶ (ಸೀಲಮ್) ದೇಹಾವಕಾಶದೊಂದಿಗೆ ಸಂಪರ್ಕ ಹೊಂದಿದೆ. ರಕ್ತನಾಳಗಳು, ಮುಚ್ಚಿದ ರೀತಿಯವು. ಅನ್ನನಾಳದ ತಳಭಾಗದಲ್ಲಿ ನರರಜ್ಜು ಇದೆ. ಇದರಿಂದ ದೇಹದ ಭಾಗಗಳಿಗೆ ಜೋಡಿ ನರಗಳು ಹೊರಡುತ್ತವೆ. ದೇಹದ ಅಗ್ರಭಾಗದಲ್ಲಿ ನರಮುಡಿ ಇದ್ದು, ಇದರಿಂದ ನರಗಳು, ಸೊಂಡಿಲು ಮತ್ತು ದೇಹದ ಭಾಗಗಳಿಗೆ ಹೊರಡುತ್ತವೆ. ಗುದನಾಳಕ್ಕೆ ಹೊಂದಿರುವಂತೆ ಎರಡು ಅಂಧಾಂತಗಳಿವೆ. ಇವಕ್ಕೆ ಗುದಕೋಶಕ ಎಂದು ಹೆಸರು. ಇವು ಸಾರಜನಕದ ವಿಸರ್ಜನೆ ಮಾಡುತ್ತವೆ.

ಜೀರ್ಣಾಂಗಗಳು: ಬಾಯಿ ಹಿಂಭಾಗದಲ್ಲಿರುವ ಗಂಟಲ ಕುಹರಕ್ಕೆ ತೆರೆಯುತ್ತವೆ. ಅದು ಎರಡು ಕೊಂಡಿಗಳಾಗಿ ವಿಸ್ತರಿಸಿಕೊಂಡಿದ್ದು, ಅದರ ಹಿಂಭಾಗ ವಿಸ್ತಾರಗೊಂಡು ಅನ್ನನಾಳವಾಗುತ್ತದೆ. ಅದರ ಹಿಂದಿನ ತುದಿಯ ಭಾಗವೇ ಎದೆಯಚೀಲ. ಇವಿಷ್ಟೂ ಹೊರತೊಕ್ಕು ಒಳಚಾಚಿಕೊಂಡು ಆಗಿರುವ ಜೀರ್ಣಾಂಗದ ಭಾಗಗಳು, ಇನ್ನುಳಿದ ಜೀರ್ಣಾಂಗ 3 ಭಾಗವಾಗಿದೆ: ಮುಂದಿನ ಕರುಳು, ಮಧ್ಯದ ಕರುಳು, ಮತ್ತು ಹಿಂದಿನ ಕರುಳು. ಮಧ್ಯ ಕರುಳು ಕಿರಿದಾದ ಸಹಾಯಕನಾಳವನ್ನು ಹೊಂದಿದ್ದು ಜೀರ್ಣಕ್ರಿಯೆ ಹೆಚ್ಚಿಸಿದೆ. ಸಹಾಯಕನಾಳ ಈ ವಂಶದ ಪ್ರಾಣಿಗಳ ಒಂದು ವಿಶಿಷ್ಟ ಲಕ್ಷಣ. ಹಿಂದಿನ ಕರುಳು ಗುದನಾಳಕ್ಕೆ ತೆರೆಯುತ್ತದೆ. ಕರುಳಿನ ರಸದಲ್ಲಿ ಕ್ಷಾರವಸ್ತು, ಮೇದಸ್ಸು, ಸಾರಜನಕವನ್ನು ಜೀರ್ಣಿಸಬಲ್ಲ ಕಿಣ್ವ ಇರುತ್ತವೆ. ಪಿಷ್ಟ ಪದಾರ್ಥವನ್ನು ಜೀರ್ಣಿಸುವ ಕಿಣ್ವ ಈ ಪ್ರಾಣಿಯಲ್ಲಿ ಇರುವ ಬಗ್ಗೆ ಅನುಮಾನಗಳಿವೆ.

ದೇಹಾವಕಾಶ ದ್ರವ: ಈ ದ್ರವದಲ್ಲಿ ಆಮ್ಲಜನಕದೊಡನೆ ಸಂಯೋಗವಾಗುವ ಹಿಮೋಗ್ಲೋಬಿನ್‌ನಂಥ ವಸ್ತು ಇದೆ. ಕೆಲವು ಪ್ರಭೇದಗಳಲ್ಲಿ ಇದು ಇಲ್ಲ. ದ್ರವದಲ್ಲಿ ಜಲಕಣಗಳು ತೇಲುತ್ತಿರುತ್ತವೆ. ಉಚ್ಛ್ವಾಸ ನಿಶ್ವಾಸ, ಶುದ್ಧೀಕರಣ ಮತ್ತು ಪೋಷಕ ಕಾರ್ಯಗಳನ್ನು ಈ ದ್ರವ ನಿರ್ವಹಿಸುತ್ತದೆ. ದೇಹಭಾಗ ಸಂಕುಚನಗೊಳ್ಳುವುದರಿಂದ, ಚರ್ಮ ಆಮ್ಲಜನಕವನ್ನು ಹೀರಿಕೊಂಡು ಇಂಗಾಲದ ಡೈ ಆಕ್ಸೈಡನ್ನು ಹೊರದೂಡುತ್ತದೆ. ಈ ಪ್ರಾಣಿ ಒಂದೆಡೆ ನಿಶ್ಚೇಷ್ಟಿತವಾಗಿ ಅಡಗಿರುವಾಗ ಹಿಮೋಗ್ಲೋಬಿನ್ ಆಮ್ಲಜನಕವನ್ನು ಬಹು ನಿಧಾನವಾಗಿ ಒದಗಿಸಿ ಅಗತ್ಯಕಾಲಕ್ಕೆ ಸಂಗ್ರಹಿಸಿಟ್ಟಿರುತ್ತದೆ.

ಶುದ್ಧೀಕರಣಾಂಗಗಳು: ಗುದನಾಳಕ್ಕೆ ಒಂದು ಜೊತೆ ಒಳ ತೊಕ್ಕಿನಿಂದ ನಿರ್ಮಾಣವಾದ ಕೋಶಗಳು ತೆರೆಯುತ್ತವೆ. ಆಗತಾನೆ ರೂಪ ಪರಿವರ್ತನೆ ಹೊಂದಿದ ಡಿಂಬದಲ್ಲೆ ಈ ಕೋಶಗಳು ದೇಹಾವಕಾಶದೊಡನೆ ಸಂಪರ್ಕ ಹೊಂದಿರುತ್ತವೆ. ನೆಫ್ರೊಸ್ಟೋಮ್ ಎಂಬ ಎರಡು ನಾಳಗಳು ಅವೆರಡಕ್ಕೂ ಸಂಪರ್ಕ ಕಲ್ಪಿಸುತ್ತವೆ. ವಯಸ್ಕ ಪ್ರಾಣಿಗಳಲ್ಲಿ ಇಂಥ ನೆಫ್ರೊಸ್ಟೋಮ್ ಕೊಳವೆಗಳ ಸಂಖ್ಯೆ ಅಧಿಕವಾಗಿದೆ. ಈ ವಂಶದ ಪ್ರಾಣಿಗಳಲ್ಲಿ ಗುದಕೋಶಗಳಿರುವುದು ವಿಶಿಷ್ಟ ಲಕ್ಷಣ. ಅವು ಶುದ್ಧೀಕರಣ ಕಾರ್ಯದ ಜೊತೆಗೆ ಉಚ್ಛ್ವಾಸ ನಿಶ್ವಾಸಕ್ರಿಯೆಯನ್ನು ನಿರ್ವಹಿಸುತ್ತವೆ.

ರಕ್ತಪರಿಚಲನಾಂಗ: ದೇಹದ ತಳಭಾಗದಲ್ಲಿ ನರದ ಕೆಳಗೆ ಉದ್ದಕ್ಕೂ ತಳದಲ್ಲಿ ಒಂದು ನಾಳ ಸಾಗುತ್ತದೆ. ಮುಂಭಾಗದಲ್ಲಿ ಅದು ಕತ್ತಿನ ಬಳಿ ಒಡೆದು ಒಂದು ಉಂಗುರದ ರೂಪ ತಾಳಿ ಪ್ರೋಸ್ಟೋಮಿಯಮ್ಅನ್ನು ಸುತ್ತುವರಿದಿದೆ. ಮಧ್ಯ ಕರುಳನ್ನು ಆವರಿಸಿಕೊಂಡು ಬರುವ ಮತ್ತೊಂದು ನಾಳದಿಂದ ಹೊರಡುವ ಮೇಲಿನ ರಕ್ತನಾಳ ದೇಹದುದ್ದಕ್ಕೂ ಹಾಯುತ್ತದೆ. ಆ ನಾಳ ರಕ್ತವನ್ನು ಮುಂಭಾಗಕ್ಕೆ ತಳ್ಳುತ್ತದೆ. ಹಾಗೆ ತಳ್ಳಿದ ರಕ್ತ ತಳಭಾಗದಲ್ಲಿರುವ ದೀರ್ಘನಾಳದ ಮುಂಭಾಗವನ್ನು ಸೇರುತ್ತದೆ. ಹೀಗೆ ರಕ್ತಚಲನೆಯ ನಾಳಗಳು ಪೂರ್ಣವಾಗಿ ಆವೃತವಾದ ನಾಳವ್ಯೂಹವಿದೆ.

ನರವ್ಯೂಹ ಮತ್ತು ಜ್ಞಾನೇಂದ್ರಿಯಗಳು: ತಳಭಾಗದಲ್ಲೊಂದು ನೀಳ ನರವಿದೆ. ಇದರಲ್ಲಿ ನರಮುಡಿಗಳಿಲ್ಲ. ಮುಂಭಾಗದಲ್ಲಿ ಎರಡಾಗಿ ಕವಲೊಡೆದು ಗಂಟಲನ್ನು ಸುತ್ತಿಕೊಂಡು ಪ್ರೋಸ್ಟೋಮಿಯಮ್‌ನ ಅಂಚುಗಳಿಗೆ ನರದ ಕವಲುಗಳನ್ನು ಕಳಿಸುತ್ತದೆ. ಮಿದುಳೆನ್ನಬಹುದಾದ ಯಾವ ಕೇಂದ್ರೀಕೃತ ನರಮುಡಿಯು ಇದರಲ್ಲಿ ಇಲ್ಲ. ಭ್ರೂಣಾವಸ್ಥೆಯಲ್ಲಿ ತಳದ (ಉದರದ) ನರ ಹೊರತೊಕ್ಕಿನ ಮಂದಗೊಂಡ ಆವರಣಗಳಿಂದ ಮೂಡಿ ರೂಪಪರಿವರ್ತನೆಗೆ ಮುನ್ನ ಹಲವು ನರಮುಡಿಗಳನ್ನು ಹೊಂದಿರುತ್ತದೆ. ಎಕಿಯೂರಸ್ಸಿನಲ್ಲಿ ಅಂಥ 16 ಕ್ಷಣಿಕ ನರಮುಡಿಗಳು, ಯೂರಿಕಿಸ್‌ನಲ್ಲಿ 12 ನರಮುಡಿಗಳಿವೆ. ಮೇಲುತೊಕ್ಕಿನಲ್ಲಿ ಸ್ಪರ್ಶಶಕ್ತಿಯನ್ನು ಮತ್ತು ರಾಸಾಯನಿಕ ಸಂವೇದನ ಶಕ್ತಿಯನ್ನು ಹೊಂದಿರುವ ಕೋಶಗಳು ಪ್ರೋಸ್ಟೋಮಿಯಮ್‌ನ ಅಂಚಿನಲ್ಲಿ ಅಧಿಕಸಂಖ್ಯೆಯಲ್ಲಿವೆ. ಡಿಂಬಾವಸ್ಥೆಯಲ್ಲಿ ಬೆಳಕನ್ನು ಗುರುತಿಸಬಲ್ಲ ಕಣ್ಣಿನಂಥ ಕೇಂದ್ರಗಳು ಕಂಡುಬಂದರು, ವಯಸ್ಕ ಪ್ರಾಣಿಯಲ್ಲಿ ಇವು ನಶಿಸಿವೆ.

ಬಿರುಗೂದಲುಗಳು: ಬಾಯ ಹಿಂಭಾಗದಲ್ಲಿ ಮಣ್ಣನ್ನು ಕೊರೆಯಲು ಶಕ್ತವಾಗಿರುವ ಕೆಳಮುಖ ಮಾಡಿರುವ ಬಿರುಗೂದಲುಗಳಿವೆ. ಹಿಂಭಾಗದಲ್ಲಿ ಎರಡು ಅಪೂರ್ಣ ವೃತ್ತಗಳಲ್ಲಿರುವ ಅನೇಕ ಸಣ್ಣಸಣ್ಣ ಬಿರುಗೂದಲುಗಳಿವೆ. ಕೊರೆದ ಮಣ್ಣನ್ನು ಚೊಕ್ಕಟಮಾಡಲು ಅವು ಉಪಯೋಗಕ್ಕೆ ಬರುತ್ತವೆ. ಪ್ರತಿ ಬಿರುಗೂದಲು ಒಂದೇ ಒಂದು ಕೋಶವಾಗಿದ್ದು ವಿಸರ್ಜಿತ ವಸ್ತುವಿನಿಂದ ಮೂಡಿರುತ್ತದೆ. ಈ ಬಿರುಗೂದಲುಗಳು ಎರೆಹುಳುಗಳನ್ನು ಹೋಲುತ್ತವೆ. ಕೂದಲನ್ನು ಚಲಿಸಲು ಅಗತ್ಯವೆನಿಸುವ ಮಾಂಸಖಂಡಗಳು, ನೀರಿಸ್ ಪ್ರಾಣಿಯಲ್ಲಿರುವಂತೆ ಇವುಗಳಲ್ಲಿವೆ.

ದೇಹಾಂಗ ವಿಸರ್ಜನೆ ಮತ್ತು ವಂಶಾಭಿವೃದ್ಧಿ: ಬಾಯಿ ಹಿಂಭಾಗದಲ್ಲಿ ದೇಹದ ಗೋಡೆ ಸಂಕೋಚಗೊಂಡು ಒಂದು ಉಂಗುರದಂತಾಗಿ, ಮುಂಭಾಗದಲ್ಲಿರುವ ವೃತ್ತಸ್ನಾಯು ಹಿಂಡಿದಂತಾಗಿ ಮುಂದಿನ ಭಾಗವನ್ನು ಹೊರನೂಕುತ್ತದೆ. ಆಗ ಹೊರಬಂದ ದೇಹಾಂಗ ಪ್ರತ್ಯೇಕ ಪ್ರಾಣಿಯಾಗಿ ಆಹಾರಸೇವನೆಯನ್ನು ಆರಂಭಿಸುತ್ತದೆ. ಇದು ಈ ಪ್ರಾಣಿಯ ವಂಶಾಭಿವೃದ್ಧಿ ಕ್ರಮ.

ಹಿಂದೆ ಎಕಿಯೂರಾಯ್ಡಿಯ, ಸೈಫನ್‌ಕ್ಯುಲಿಡ ಮತ್ತು ಪ್ರಿಯಪುಲಿಡ ಗುಂಪುಗಳನ್ನೊಳಗೊಂಡ ಜಿಫ್ಯರಿಯ ಗುಂಪಿಗೆ ಸೇರಿಸಲಾಗಿತ್ತು. ಈಗ ಇವುಗಳ ಬಗ್ಗೆ ಪರಿಚಯವಾದ ಮೇಲೆ ಎಕಿಯೂರಾಯ್ಡಿಯಕ್ಕೆ ಪ್ರತ್ಯೇಕ ವಂಶದ ಸ್ಥಾನವನ್ನು ಕೊಡಲಾಗಿದೆ. ಈ ವಂಶವನ್ನು 3 ಗಣಗಳಾಗಿ ವಿಭಾಗಿಸಲಾಗಿದೆ. ಗಣ 1: ಎಕಿಯೂರಿನ, 2. ಥೆಲೆಸ್ಸೆಮಟಿಡೆ ಮತ್ತು ಗಣ 3. ಬೊನಿಲ್ಲಿಡೆ.

ಎಕಿಯೂರಿನ ಗಣಕ್ಕೆ ಸೇರಿದ ಪ್ರಾಣಿಗಳು ಸಮುದ್ರಗಳಲ್ಲಿ ಜೀವಿಸುತ್ತವೆ. ಇವುಗಳಲ್ಲಿ ಕೆಲವು ಪ್ರಾಣಿಗಳು ಶೀತವಲಯದ ಸಮುದ್ರಗಳಲ್ಲಿ ಜೀವಿಸುತ್ತವೆ. ಉದಾ: ಇರಿಯುರಿಯಸ್. ಇದಕ್ಕೆ ಸ್ಥಂಭಾಕೃತಿಯ ದೇಹ, ಈ ದೇಹಕ್ಕೆ ಹೊಂದಿಕೊಂಡಿರುವಂತೆ ಇರುವ ಒಂದು ಚಿಕ್ಕ ಸೊಂಡಿಲು ಇದೆ. ಲಿಂಗ ಭೇದವಿದ್ದರು ಬಾಹ್ಯರೂಪದಲ್ಲಿ ವ್ಯತ್ಯಾಸವಿಲ್ಲ. ದೇಹದ ಮುಂಭಾಗದಲ್ಲಿ ಒಂದು ಜೊತೆ ಬಿರುಗೂದಲು ಮತ್ತು ಗುದದ್ವಾರದ ಹತ್ತಿರ 3–4 ಸುತ್ತು ಬಿರುಗೂದಲುಗಳಿವೆ.

ಥೆಲೆಸ್ಸೆಮಿಟಿಡಿ ಗಣಕ್ಕೆ ಸೇರಿದ ಪ್ರಾಣಿಗಳು ಉಷ್ಣವಲಯದ ಮತ್ತು ಅದರ ಅಂಚಿನ ಸಮುದ್ರಗಳಲ್ಲಿ ಜೀವಿಸುತ್ತವೆ. ಉದಾ: ಥಲೆಸ್ಸೆಮ. ಇದಕ್ಕೆ ಚಿಕ್ಕ ಸೊಂಡಿಲಿರುತ್ತದೆ. ಆದರೆ ಗುದದ್ವಾರದ ಸುತ್ತಲು ಬಿರುಗೂದಲುಗಳಿಲ್ಲ. ಮೂರು ಜೊತೆ ಶುದ್ಧೀಕರಣಕಾರ್ಯಮಾಡುವ ನೆಫ್ರಿಡಿಯಾಗಳಿವೆ. ಬಾಯಿಯ ಕೆಳಭಾಗದಲ್ಲಿ ಕಿವಿರುಗಳಂತಿರುವ ಕೋಡುಗಳು ಇವೆ. ಭಾರತದ ನದಿಮುಖಜಭೂಮಿಗಳಲ್ಲಿ ಈ ವಂಶಕ್ಕೆ ಸೇರಿದ ಪ್ರಾಣಿಗಳು ವಾಸಿಸುತ್ತವೆ.

ಬೊನೆಲ್ಲಿಡೆ ಗಣಕ್ಕೆ ಸೇರಿದ ಪ್ರಾಣಿಗಳಲ್ಲಿ ಮುಖ್ಯವಾದುದು ಬೊನಿಲಿಯ. ಇದರ ಮುಖ್ಯ ಗುಣ: ಗಂಡು ಹೆಣ್ಣಿನಲ್ಲಿರುವ ರೂಪ ವೈವಿಧ್ಯತೆ. ಹೆಣ್ಣು ಬೊನಿಲಿಯ ಕಡುಹಸಿರು ಬಣ್ಣದ ಅಂಡಾಕೃತಿಯ ಪ್ರಾಣಿ. ಇದರ ಸೊಂಡಿಲು ಸು. 15 ಸೆಂಮೀ ಗಿಂತ ಉದ್ದವಾಗಿದ್ದು, ತುದಿ ಇಬ್ಭಾಗವಾಗಿದೆ. ಇದರ ದೇಹದ ಕೆಳಭಾಗದಲ್ಲಿ ಎರಡು ಅಥವಾ ಹೆಚ್ಚು ಬಿರುಗೂದಲುಗಳಿವೆ. ದೇಹದಲ್ಲಿ ಒಂದು ನೆಫ್ರಿಡಿಯ ಇದೆ. ಅದು ದೊಡ್ಡದಾಗಿ ಬೆಳೆದು ಗರ್ಭಕೋಶದ ಕಾರ್ಯವನ್ನು ಮಾಡುತ್ತದೆ. ಗುದದ್ವಾರದ ಹತ್ತಿರ ಅಂಡಾಕಾರದ ಗುದಕೋಶಗಳಿವೆ. ಇವುಗಳ ಮೇಲೆ ಕವಲೊಡೆದ ಸಣ್ಣನಾಳಗಳಿವೆ. ಇದು ಹರಿತ್ತಿನಂಥ ರಾಸಾಯನಿಕ ವಸ್ತು. ಇದಕ್ಕೆ ಬೊನೆಲೈನ್ ಎನ್ನುವರು. ಈ ಬಣ್ಣ ಎಚ್ಚರಿಕೆ ನೀಡುವ ತಂತ್ರ.



ಇರಿಯುರಿಯಸ್

ಗಂಡು ಬೊನಿಲಿಯಾ ಹೆಣ್ಣಿಗಿಂತ ಬಲು ಚಿಕ್ಕದು. ಇದು ಸೂಕ್ಷ್ಮಜೀವಿ. ಇದಕ್ಕೆ ಸೊಂಡಿಲಿಲ್ಲ. ಆದರೆ ಒಂದು ಜೊತೆ ಬಿರುಗೂದಲಿದೆ. ಗಂಡು ಹೆಣ್ಣಿನ ದೇಹವನ್ನು ಅಥವಾ ಅದರ ಸೊಂಡಿಲನ್ನೇ ಆಶ್ರಯಿಸಿದೆ. ಈ ಪರತಂತ್ರ ಜೀವನದ ಫಲವಾಗಿ ಇದಕ್ಕೆ ಬಾಯಿಯಾಗಲಿ, ಗುದದ್ವಾರವಾಗಲಿ ಇಲ್ಲ. ಇದರ ಜೀರ್ಣಾಂಗಗಳು ಕ್ಷೀಣಗೊಂಡಿವೆ. ಗಂಡು ಪ್ರೌಢಾವಸ್ಥೆಗೆ ಬಂದೊಡನೆ ಹೆಣ್ಣಿನ ಗರ್ಭಕೋಶದ ಹೊರ ಆವರಣದಲ್ಲಿ ನೆಲೆಸುತ್ತದೆ. ಭ್ರೂಣದ ಬೆಳವಣಿಗೆ ವಲಯವಂತಗಳ ಬೆಳವಣಿಗೆಯನ್ನು ಹೋಲುತ್ತದೆ. ಈ ಭ್ರೂಣ ಬೆಳೆದು ಡಿಂಬ (ಲಾರ್ವ)ವಾಗುತ್ತದೆ. ಡಿಂಬ ತಾಯಿಯ ದೇಹದಿಂದ ಹೊರಬಂದು ಸ್ವತಂತ್ರವಾಗಿ ಜೀವನ ನಡೆಸುತ್ತದೆ. ಇದು ಗಂಡು ಅಥವಾ ಹೆಣ್ಣು ಆಗುವ ಶಕ್ತಿಯನ್ನು ಪಡೆದಿರುತ್ತದೆ. ಲಾರ್ವ ಯಾವ ಹೆಣ್ಣಿನ ಸಂಪರ್ಕವನ್ನು ಪಡೆಯದೆ ಬೆಳೆದರೆ ಅದರಲ್ಲಿ ರೂಪ ಪರಿವರ್ತನೆಯಾಗಿ ಹೆಣ್ಣಾಗುತ್ತದೆ. ಬಾಯಿಯ ಮುಂಭಾಗ ಉದ್ದವಾಗಿ ಬೆಳೆದು ಸೊಂಡಿಲಾಗುತ್ತದೆ. ಈ ಹೆಣ್ಣು ಬೆಳೆದು ಪ್ರೌಢಾವಸ್ಥೆಗೆ ಬರುತ್ತಿದ್ದಂತೆಯೇ ದೇಹದ ಕೆಳಭಾಗದಲ್ಲಿ ಬಿರುಗೂದಲುಗಳು ಬೆಳೆಯುತ್ತವೆ. ಆದರೆ, ಯಾವುದಾದರು ಲಾರ್ವ ತನ್ನ ಸ್ವತಂತ್ರ ಜೀವನದ ಅನಂತರ ಹೆಣ್ಣು ಬೊನಿಲಿಯಾದ ದೇಹ ಅಥವಾ ಸೊಂಡಿಲಿನ ಸಂಪರ್ಕ ಪಡೆದರೆ ಅದು ಹೆಣ್ಣಿನ ಸೊಂಡಿಲಿಗೆ ಅಂಟಿಕೊಳ್ಳುತ್ತದೆ. ಸೊಂಡಿಲಿನಲ್ಲಿ ಉತ್ಪತ್ತಿಯಾದ ಉದ್ದೀಪಕ ವಸ್ತು ಡಿಂಬವು ಹೆಣ್ಣಾಗಿ ರೂಪ ಪರಿವರ್ತನೆಯಾಗುವುದನ್ನು ತಡೆಹಿಡಿಯುತ್ತದೆ. ಮರಿಹುಳುವಿನ ವ್ಯವಸ್ಥೆಯಲ್ಲಿಯೇ ಪುರುಷೇಂದ್ರಿಯಗಳ ಬೆಳವಣಿಗೆಗೆ ಕಾರಣವಾಗಿ ಬೊನಿಲಿಯಾ ಆಗುತ್ತದೆ. ಈ ಗಂಡು ಬೊನಿಲಿಯ ಪ್ರೌಢಾವಸ್ಥೆ ಹೊಂದಿದ ಅನಂತರ ಹೆಣ್ಣಿನ ಅನ್ನನಾಳದ ಮೂಲಕ ಗರ್ಭಕೋಶದ ಹೊರಾವರಣವನ್ನು ತಲುಪುತ್ತದೆ. ಹೀಗೆ ಬೊನಿಲಿಯಾದಲ್ಲಿ ಲಿಂಗ ನಿರ್ಧಾರವು ಪರಿಸರದ ಪ್ರಭಾವದಿಂದ ಪ್ರೇರಿತವಾಗಿದೆ.

ಎಕಿಯುರಾಯ್ಡಿಯ ವಂಶದ ಪ್ರಾಣಿಗಳು, ವಲಯವಂತಗಳ ವಂಶದೊಡನೆ ಅನೇಕ ಸಮಾನ ಗುಣಗಳನ್ನು ಹೊಂದಿವೆ. ಕೆಲವು ಗುಣಗಳಿಂದ ಇದು ಚಪ್ಪಟೆ ಹುಳುಗಳನ್ನು ಮತ್ತು ಮೃದ್ವಂಗಿಗಳನ್ನು ಹೋಲುವುದನ್ನು ಗಮನಿಸಿ, ಇದು ಇತರೆ ವಂಶಗಳಿಗಿಂತ ವಲಯವಂತಗಳಿಗೆ ಸಮೀಪವಾಗಿದೆ ಎಂದು ತಜ್ಞರ ಅಭಿಪ್ರಾಯ. (ಎಚ್.ಎಚ್.ಎಸ್.)

**ಎಕ್ಟೋಟ್ರೋಫಿ:** ಸಂದಿಪದಿ ಗುಂಪಿನ, ಕೀಟವರ್ಗದ, ಥೈಸಾನುರಾ ಗಣದ ಉಪಗಣ. ಈ ಕೀಟಗಳ ಬಾಯಿಯ ಉಪಾಂಗಗಳು ಹೊರಗಡೆಗೆ ಪ್ರಧಾನವಾಗಿ ಕಾಣುವುದರಿಂದ ಈ ಹೆಸರು ಬಂದಿದೆ. (ಎಕ್ಟೋ=ಹೊರಗಡೆ, ಟ್ರೋಫಿ=ಬಾಯಿಯ ಉಪಾಂಗಗಳು). ಈ ಗುಂಪಿನಲ್ಲಿ ಮೆಕಿಲಿಡೆ ಮತ್ತು ಲೆಪಿಸ್‌ಮಿಡೆ ಕುಟುಂಬಗಳಿವೆ.

ಈ ಕೀಟಗಳ ಶರೀರವು ಮೃದುವಾಗಿದ್ದು, ಬೆಳ್ಳಿಯಂತೆ ಮಿನುಗುವ ಸೂಕ್ಷ್ಮ ಹುರುಪೆಗಳಿವೆ. ಆದುದರಿಂದ ಇವನ್ನು ಬೆಳ್ಳಿಮೀನು ಎನ್ನುವರು. ದೇಹವು ತಲೆ, ಎದೆ ಮತ್ತು ಉದರ ಭಾಗಗಳಿಂದಾಗಿದೆ. ತಲೆಯು ಚಿಕ್ಕದಾಗಿದ್ದು, ಇದರಲ್ಲಿ ಎರಡು ಉದ್ದನೆಯ ಬಹು ಖಂಡಗಳಿಂದ ಮಾಡಲ್ಪಟ್ಟ ಮೀಸೆಗಳಿವೆ. ಇವು ಸ್ಪರ್ಶಾಂಗಗಳು. ತಲೆಯ ಇಕ್ಕೆಡೆಗಳಲ್ಲಿ ಕಪ್ಪು ಚುಕ್ಕಿಗಳಂತೆ ಕಾಣುವ ಸಂಯುಕ್ತ ಕಣ್ಣುಗಳಿವೆ. ಅಧೋಭಾಗದಲ್ಲಿ ಬಾಯಿ ಇದೆ ಮತ್ತು ಅದರ ಸುತ್ತಲು ಉಪಾಂಗಗಳಿವೆ. ಈ ಉಪಾಂಗಗಳು ಹೊರಗಡೆಗೆ ಕಾಣುತ್ತವೆ. ಎದೆಯಲ್ಲಿ ಮೂರು ಖಂಡಗಳಿದ್ದು, ಮೊದಲನೇ ಖಂಡವಾದ ಪ್ರೊಥೋರೆಕ್ಸ್ ದೊಡ್ಡದಾಗಿರುತ್ತದೆ. ಒಂದೊಂದು ಖಂಡದಲ್ಲಿಯು ಒಂದು ಜೊತೆ ಕಾಲುಗಳಿವೆ. ಪ್ರತಿಯೊಂದು ಕಾಲಿನಲ್ಲಿ ಅನೇಕ ಸಂಧಿಗಳಿವೆ. ಆದುದರಿಂದ ಇವುಗಳನ್ನು ಸಂಧಿಪದಿಗಳ ಗುಂಪಿನಲ್ಲಿ ಸೇರಿಸಲಾಗಿದೆ.

ಈ ಗುಂಪಿನ ಕೀಟಗಳಿಗೆ ರೆಕ್ಕೆಗಳಿರುವುದಿಲ್ಲ, ಆದುದರಿಂದ ಇವುಗಳನ್ನು ರೆಕ್ಕೆಗಳಿಲ್ಲದ ಕೀಟಗಳೆಂದು ಅಥವಾ ಎಟೇರಿಗೋಟ ಎನ್ನುವರು. ಉದರದಲ್ಲಿ 10 ಖಂಡಗಳಿವೆ. ಕೊನೆಯ ಖಂಡದಲ್ಲಿ ಒಂದು ಜೊತೆ ಅನೇಕ ಖಂಡಗಳುಳ್ಳ ಉದ್ದವಾಗಿರುವ ಕುಡಿಗಳಿವೆ. ಇವು ಗುದದ್ವಾರದ ಬಳಿ ಇರುವುದರಿಂದ ಇವನ್ನು ಗುದಕುಡಿಗಳೆನ್ನುವರು.

ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿ ವಾಸವಾಗಿವೆ. ಬಹಳ ಚುರುಕಾಗಿ ಓಡಾಡುವ ಕೀಟಗಳಿವು. ಲಿಂಗ ಸಂತಾನೋತ್ಪತ್ತಿ ಇದೆ. ಜೀವನ ಚರಿತ್ರೆಯಲ್ಲಿ ರೂಪಪರಿವರ್ತನೆ ಇಲ್ಲ. ಆದುದರಿಂದ ಇವನ್ನು ಎಮೆಟಬೋಲಾ ಎನ್ನುವರು. ಈ ಕೀಟಗಳು ಮಾನವನಿಗೆ ಹಾನಿಕರವಾಗಿವೆ. ಪುಸ್ತಕ, ಛಾಯಾ ಚಿತ್ರಗಳನ್ನು ತಿಂದು ಹಾಳುಮಾಡುತ್ತವೆ. (ಕೆ.ಪಿ.ಆರ್.)

**ಎಕ್ಟೋಪ್ರಾಕ್ಟ:** ತೊಟ್ಟು ಇರುವ ಸೂಕ್ಷ್ಮ ಜೀವಿಗಳ ಹಾಗೂ ಸಂಘಜೀವಿಗಳ ಒಂದು ಕಿರಿಯ ವಂಶ. ಬ್ರಯೋಜೋವ ಎಂದೂ ಕರೆಯುತ್ತಾರೆ. ಇವು ದೇಹಾವಕಾಶವನ್ನು ಹೊಂದಿವೆ. ತಾವೇ ಸ್ರವಿಸಿರುವ ಲೋಳೆಯಂತಿರುವ ವಸ್ತುವಿಗೋ ಅಥವಾ ಗಟ್ಟಿಯಾದ ಹೊರಕವಚಕ್ಕೋ ಅಂಟಿಕೊಂಡಿರುತ್ತವೆ. ಇವಕ್ಕೆ ಅರ್ಧ ಚಂದ್ರಾಕೃತಿಯ ಶಿರಾಸ್ತ್ರ (ಲೋಫೋಫೋರ್) ಇದೆ. ಜೀರ್ಣಾಂಗ ಬಾಗಿದೆ. ಬಾಯಿ ಮತ್ತು ಗುದರಂಧ್ರಗಳೆರಡೂ ಒಂದರ ಹತ್ತಿರ ಮತ್ತೊಂದಿವೆ. ಶುದ್ಧೀಕರಣಾಂಗಗಳಾಗಲಿ ರಕ್ತಪರಿಚಲನಾಂಗಗಳಾಗಲಿ ಇಲ್ಲ.

ಎಕ್ಟೋಪ್ರಾಕ್ಟಗಳಲ್ಲಿ ಹೆಚ್ಚಿನ ವೈವಿಧ್ಯ ಇದೆ. ಜಿಮ್‌ನೋಲೆಮಾಟ ಹಾಗೂ ಫೈಲಾಕ್ಟೋಲೆಮಾಟ ಎಂದು ಇವನ್ನು ಎರಡು ಗಣಗಳಾಗಿ ವಿಭಾಗಿಸಲಾಗಿದೆ. ಮೊದಲನೆ ವರ್ಗದ ಪ್ರಾಣಿಗಳೆಲ್ಲ ಸಮುದ್ರ ಜೀವಿಗಳು. ಎರಡನೆಯ ವರ್ಗಕ್ಕೆ ಸಿಹಿ ನೀರಿನಲ್ಲಿ ವಾಸಿಸುವ ಬ್ರಯೋಜೋವಗಳೆಲ್ಲ ಸೇರಿವೆ.

ಎಕ್ಟೋಪ್ರಾಕ್ಟಕ್ಕೆ ಸೇರಿದ ಪ್ರಾಣಿಗಳು ಬಹು ಪಾಲು ಸಂಘಜೀವಿಗಳು. ಈ ಸಂಘಜೀವಿಗಳ ಗುಂಪನ್ನು ಝೂಆರಿಯಂ ಎಂದು ಕರೆಯಲಾಗುತ್ತದೆ. ಝೂಆರಿಯಂ ಹಲವಾರು ರೀತಿಯ ಗಟ್ಟಿವಸ್ತುಗಳಿಗೆ ಅಂದರೆ ಕಲ್ಲು, ಮೃದ್ವಂಗಿಗಳ ಚಿಪ್ಪು, ಪಾಚಿ, ಹಡಗುಗಳ ಹೊರಮೈ, ಹಡಗು ನಿಲ್ದಾಣದ ಆಸರೆಗಳು ಮೊದಲಾದ ವಸ್ತುಗಳಿಗೆ ಅಂಟಿಕೊಂಡಿರುತ್ತದೆ. ಕೆಲವು ಪ್ರಭೇದಗಳು (ಮೆಂಬ್ರೇನಿಪೊರ) ನೀರಿನಲ್ಲಿರುವ ಪಾಚಿಗೆ ಅಂಟಿರುವುದುಂಟು. ಎಕ್ಟೋಪ್ರಾಕ್ಟ ಗುಂಪುಜೀವಿಗಳು ಉದ್ದವಾಗಿರಬಹುದು, ಹಬ್ಬಿಕೊಂಡಿರಬಹುದು, ಅಂಟಿಕೊಂಡಿರಬಹುದು ಅಥವಾ ಮೃದ್ವಂಗಿಗಳ ಮತ್ತು ಬ್ರಾಕಿಯೋಪಾಡ್‌ನ ಚಿಪ್ಪುಗಳ ಒಳಗೆ ಕೊರೆದು ಹೊಕ್ಕಿರಬಹುದು. ಅಂಟಿಕೊಂಡಿರುವುದಾದರೆ ಒಂದೇ ಪದರವಾಗಿರಬಹುದು ಅಥವಾ ಹಲವಾರು ಪದರದಿಂದ ಕೂಡಿರಬಹುದು. ಹಲವಾರು ಪದರವಿದ್ದರೆ ಸಾಕಷ್ಟು ದಪ್ಪವಾಗಿರುವುವು. ಉದ್ದವಾಗಿದ್ದರೆ ಜಡೆಯಾಕಾರದಲ್ಲಿರುವುವು. ಕವಲೊಡೆದ ಕೊಳವೆಯಂತೆಯೂ ಇರಬಹುದು. ಏಕರೀತಿಯ ಆಕಾರ ಹೊಂದಿದ್ದರೆ ಬಲೆಯಂತೆ ಇರಬಹುದು.

ಪ್ರತಿ ಸಂಘಜೀವಿಯಲ್ಲೂ ಒಂದೇ ನಮೂನೆಯ ರಚನೆ ಕಾಣುತ್ತದೆ. ಝೂಆರಿಯಂ ಹಲವಾರು ಝೂಆಯಿಡ್‌ಗಳ ಸಂಘಟನೆಯಿಂದ ಆಗಿದೆ. ಈ ಝೂಆಯಿಡ್‌ಗಳು ಸೂಕ್ಷ್ಮಜೀವಿಗಳು. ಕೇವಲ ಕೆಲವೇ ಮಿಮೀ ಉದ್ದವಾಗಿರುತ್ತವೆ. ಪ್ರತಿ ಝೂಆಯಿಡ್‌ಗೂ ಎರಡು ಪದರಗಳ ಹೊರಕವಚವಿದೆ. ಇದಕ್ಕೆ ಝೂಯೀಷಿಯಂ ಎನ್ನುತ್ತಾರೆ. ಈ ಝೂಯೀಷಿಯಂನಲ್ಲಿಯೇ ಟೆಂಟಕಲ್‌ಗಳನ್ನು ಹೊಂದಿರುವ ಲೋಫೊಫೊರ್ ಮತ್ತು ಇತರ ಅಂಗಗಳು ಇರುತ್ತವೆ. ಇದರಲ್ಲಿರುವ ಅಂಗಗಳಿಗೆಲ್ಲ ಒಟ್ಟಿಗೆ ಪಾಲಿಪೈಡ್ ಎನ್ನುತ್ತಾರೆ. ಈ ಗುಂಪು ಪ್ರಾಣಿಗಳನ್ನು ಅವುಗಳ ಝೂಯೀಷಿಯಂ ಮತ್ತು ಝೂಆಯಿಡ್‌ನಲ್ಲಿರುವ ವೈವಿಧ್ಯವನ್ನು ಅನುಸರಿಸಿ ವರ್ಗಗಳನ್ನಾಗಿ ವಿಂಗಡಿಸಿದ್ದಾರೆ. ಟೀನೊಸ್ಟೊಮಾಟ ಉಪಗಣದಲ್ಲಿ ಝೂಯೀಷಿಯಂಗೆ ತೆಳುವಾದ ಕೈಟಿನ್ನಿನ ಹೊರಕವಚವಿದೆ. ಕೈಲೊಸ್ಟೊಮ್ಯಾಟದಲ್ಲಿ

ಝೂಯೀಷಿಯಂನ ಹೊರಕವಚ ಪೆಟ್ಟಿಗೆಯಂತಿದೆ. ಇದರ ತುತ್ತತುದಿಯ ಕೆಳಗೆ ಒಂದು ಚಿಕ್ಕರಂಧ್ರವಿದೆ. ಈ ರಂಧ್ರಕ್ಕೆ ಕೀಲಿರುವ ಮುಚ್ಚಳವಿದೆ. ಈ ಮುಚ್ಚಳಕ್ಕೆ ಅಪರ್‌ಕುಲಂ ಎನ್ನುತ್ತಾರೆ. ಭ್ರೂಣಕೋಶ ಅಂಡಕೋಶದ ರೀತಿಯಲ್ಲಿದೆ.

ಝೂಆಯಿಡ್‌ನ ಜೀವಂತ ಭಾಗ ಝೂಯೀಷಿಯಂನ ಒಳಗಡೆ ಇರುತ್ತದೆ. ಇದಕ್ಕೆ ಟೆಂಟಕಲ್‌ಗಳುಳ್ಳ ಲೋಫೊಫೋರ್ ಇರುತ್ತದೆ. ಇದರ ಮುಖ್ಯ ಅಂಗಗಳ ಗುಂಪು ಝೂಯೀಷಿಯಂನ ಒಳಗಡೆ ನೇತುಹಾಕಿದಂತೆ ಇರುತ್ತದೆ. U–ಆಕಾರದ ಜೀರ್ಣಾಂಗಗಳಿವೆ. ಇದರ ಬಾಯಿ ಟೆಂಟಕಲ್‌ಗಳ ವರ್ತುಳದಲ್ಲಿದೆ. ಆದರೆ ಇದರ ಗುದರಂಧ್ರ ಟೆಂಟಕಲ್ ವರ್ತುಳದ ಹೊರವಲಯದಲ್ಲಿದೆ. ಜೀರ್ಣಾಂಗವನ್ನು ಬಾಯಿ, ಗಂಟಲು, ಅನ್ನನಾಳ, ಜಠರ–ಹೀಗೆ ವಿವಿಧ ನಿಟ್ಟುಗಳಾಗಿ ವಿಂಗಡಿಸಬಹುದು. ಕೊನೆಯಲ್ಲಿ ಗುದನಾಳವಿದೆ. ಟೆಂಟಕಲ್‌ನ ವರ್ತುಳದ ಹೊರಗಡೆ ಇರುವ ಗುದರಂಧ್ರಕ್ಕೆ ಗುದನಾಳ ಸೇರುತ್ತದೆ.

ನರಮಂಡಲದ ಮುಖ್ಯ ಮುಡಿ ಗಂಟಲಿನ ಅಥವಾ ಅನ್ನನಾಳದ ಹತ್ತಿರ ದೇಹಾವಕಾಶದಲ್ಲಿದೆ. ಇಲ್ಲಿಂದ ನರಗಳು, ಉಪನರಗಳು, ಟೆಂಟಕಲ್‌ಗಳು, ಹೊರಕವಚ, ಮಾಂಸದ ಪೊರೆ ಮತ್ತು ಜೀರ್ಣಾಂಗಗಳಿಗೆ ಹೋಗುತ್ತವೆ.

ಝೂಯೀಷಿಯಂನಲ್ಲಿರುವ ಪ್ರಾಣಿಯ ಮುಂಭಾಗವನ್ನು ಹೊರಗೆ ತಳ್ಳಲು, ಹಿಂದಕ್ಕೆ ಎಳೆದುಕೊಳ್ಳಲು ಅನುಕೂಲವಾಗುವಂತೆ ಸ್ನಾಯುಗಳಿವೆ. ಹೊರಮೈ ಕವಚದಿಂದ ಹಿಡಿದು ಮುಂಭಾಗದ ಪೊರೆಯವರೆಗೆ ಅಡ್ಡಲಾಗಿ ಹಾದುಹೋಗಿರುವ ಈ ಸ್ನಾಯುಗಳಿಗೆ ಪೆರೈಟಲ್ ಸ್ನಾಯುಗಳೆನ್ನುತ್ತಾರೆ. ಇವು ಟೆಂಟಕಲ್‌ನ ಕವಚವನ್ನು ಹೊರಕ್ಕೆ ತಳ್ಳಲು ಸಹಾಯ ಮಾಡುತ್ತವೆ. ಈ ಸ್ನಾಯುಗಳು ಒಂದೇ ಕಟ್ಟಿನವಾಗಿರಬಹುದು ಅಥವಾ ಹಲವಾರು ಕಟ್ಟುಗಳಿಂದ ಕೂಡಿರಬಹುದು. ಇವುಗಳ ಸಂಖ್ಯೆ ಬೇರೆ ಬೇರೆ ಎಕ್ಟೋಪ್ರಾಕ್ಟದಲ್ಲಿ ಬೇರೆ ಬೇರೆಯಾಗಿರುತ್ತದೆ. ಬ್ಯುಗುಲ ಪ್ರಾಣಿಯಲ್ಲಿ ಇಪ್ಪತ್ತರಿಂದ ನಲವತ್ತು ಜೋಡಿಗಳಿವೆ. ಆದರೆ ವಿಕ್ಟೋರೆಲ್ಲದಲ್ಲಿ ಕೇವಲ ಆರು ಜೋಡಿ ಮಾತ್ರವಿದೆ. ಝೂಯೀಷಿಯಂನ ಕವಾಟದ ಮುಚ್ಚಳವನ್ನು ಮುಚ್ಚಲು ಮತ್ತು ತೆರೆಯಲು ಅನುಕೂಲವಾಗುವಂತೆ ಆಕ್ಲುಸಾರ್ ಸ್ನಾಯುಗಳಿರುತ್ತವೆ. ರಿಟ್ರ್ಯಾಕ್ಟರ್ ಸ್ನಾಯು ಮತ್ತೊಂದು ಬಲಯುತವಾದ ಸ್ನಾಯು. ಇವು ಹೊರಗಿರುವ ಲೋಫೊಫೋರ್‌ಗೆ ಹೊಂದಿಕೊಂಡಿರುತ್ತವೆ. ಈ ಸ್ನಾಯುಗಳು ಸಂಕುಚಿತವಾದಾಗ ಹೊರಬಂದಿರುವ ಲೋಪೊಫೋರನ್ನು ಒಳಗೆ ಎಳೆದುಕೊಳ್ಳುತ್ತವೆ. ಈ ಸ್ನಾಯು ಸಂಕೋಚನಕ್ಕೆ ದೇಹದ ಒತ್ತಡದ ವ್ಯತ್ಯಾಸವೂ ಸಹಾಯ ಮಾಡುತ್ತದೆ.




A. ಎಕ್ಟೋಪ್ರಾಕ್ಟ ಜೀವಿಯ ದೇಹರಚನೆ: 1. ಬಾಯಿ 2. ಗ್ಯಾಂಗ್ಲಿಯಾನ್ 3. ಗುದದ್ವಾರ 4. ಕರುಳು 5. ಅಂಡಾಶಯ 6. ಜಠರ 7 ಅಂಡಾಶಯ 8. ಫ್ಯುನಿಕ್ಯುಲಸ್ 9. ವೃಷಣ 10. ಶರೀರದ ಗೋಡೆ 11. ಗಂಟಲು

B. ಬ್ಯುಗುಲದ ಆವಿಕ್ಯುಲೇರಿಯಂ: 1. ಕೊಕ್ಕು 2. ದವಡೆ 3. ಅಕ್ಲೂಸರ್ ಮಾಂಸಖಂಡ 5. ತೊಟ್ಟು 6. ಒಳಾಂಗಣ

ಎಕ್ಟೋಪ್ರಾಕ್ಟ ವಂಶದಲ್ಲಿನ ಪ್ರಬುದ್ಧವಾದ ವೈಶಿಷ್ಟ್ಯವೇನೆಂದರೆ ಅದರ ಝೂಆಯಿಡ್‌ಗಳಲ್ಲಿನ ಬಹುರೂಪತೆ. ಇದು ಹೆಚ್ಚಾಗಿ ಕಂಡುಬರುವುದು ಜಿಮ್‌ನೋಲೆಮಾಟ ಮತ್ತು ಕೈಲೊಸ್ಟೊಮ್ಯಾಟಗಳಲ್ಲಿ. ಚೆನ್ನಾಗಿ ಬೆಳೆದ, ಆಹಾರ ತಿನ್ನುವ ಎಲ್ಲ ಅಂಗಾಂಗಗಳುಳ್ಳ ಪಾಲಿಪೈಡ್ ಹೊಂದಿರುವ ಝೂಆಯಿಡ್‌ಗಳಿಗೆ ಆಟೊಝೂಆಯಿಡ್ ಎನ್ನುತ್ತಾರೆ. ಮಾರ್ಪಾಟಾಗಿರುವ ವಿವಿಧ ನಮೂನೆಯ ಇತರ ಝೂಆಯಿಡ್‌ಗಳಿಗೆ ಹೆಟರೊಝೂಆಯಿಡ್ ಎನ್ನುತ್ತಾರೆ. ಹೆಟರೊಝೂಆಯಿಡ್‌ನಲ್ಲಿ ಆಹಾರ ತೆಗೆದುಕೊಳ್ಳುವ ಪೌಷ್ಟಿಕ ಮತ್ತು ಪ್ರಜನನ ಅಂಗಗಳು ಇರುವುದಿಲ್ಲ. ಈ ಹೆಟರೊಝೂಆಯಿಡ್‌ಗಳು ನಾಲ್ಕು ರೀತಿಯವಿವೆ. ಆವಿಕ್ಯುಲೇರಿಯ, ವೈಬ್ರಾಕ್ಯುಲ, ಸೀನೋಝೂಆಯಿಡ್ ಮತ್ತು ಕುಬ್ಜಝೂಆಯಿಡ್.

ಕೈಲೊಸ್ಟೊಮ್ಯಾಟದಲ್ಲಿ ಆವಿಕ್ಯುಲೇರಿಯ ಮಾದರಿಯ ಹೆಟರೊಝೂಆಯಿಡ್‌ಗಳು ಹೆಚ್ಚಾಗಿವೆ. ಆವಿಕ್ಯುಲೇರಿಯ ಮಿಕ್ಕ ಝೂಆಯಿಡ್‌ಗಳ ಆಶ್ರಯದಲ್ಲಿ ಬೆಳೆಯುತ್ತವೆ. ಇವುಗಳು ಮಾರ್ಪಟ್ಟ ಝೂಯೀಷಿಯಂಗಳು. ಇವು ಝೂಆಯಿಡ್‌ಗಿಂತ ಚಿಕ್ಕದಾಗಿಯೋ, ಅಷ್ಟೇ ಗಾತ್ರದವಾಗಿಯೋ ಅಥವಾ ಅದಕ್ಕಿಂತ ದೊಡ್ಡದಾಗಿಯೋ ಇರುತ್ತವೆ. ಇದಕ್ಕೆ ಹೊಂದಿಕೊಂಡಂತೆ ಒಂದು ಮುಚ್ಚಳ ಇರುತ್ತದೆ. ಝೂಆಯಿಡ್‌ಗಿಂತ ಇದರ ಸ್ನಾಯುಗಳು ಸಂಕೀರ್ಣ. ಆವಿಕ್ಯುಲೇರಿಯದ ಒಳಗಡೆ ಚೆನ್ನಾಗಿ ಬೆಳೆದ ಪಾಲಿಪೈಡ್ ಇರಬಹುದು ಅಥವಾ ಇಲ್ಲದಿರಬಹುದು. ಇವು ಚಿಕ್ಕದಾಗಿ ಆಟೊಝೂಆಯಿಡ್‌ನ ಮೇಲಿದ್ದರೆ ಇದಕ್ಕೆ ಅಡ್ವೆನ್‌ಟಿಷಿಯಸ್ ಅಥವಾ ಡಿಪೆಂಡೆಂಟ್ ಆವಿಕ್ಯುಲೇರಿಯ ಎಂದು ಕರೆಯಲಾಗುತ್ತದೆ. ಬ್ಯುಗುಲ ಪ್ರಾಣಿಯಲ್ಲಿ ಈ ಆವಿಕ್ಯುಲಕ್ಕೆ ಒಂದು ತೊಟ್ಟಿದ್ದು ಅದು ಹಕ್ಕಿಯ ತಲೆಯನ್ನು ಹೋಲುತ್ತದೆ. ಇದರ ಮುಚ್ಚಳ ದೊಡ್ಡದಾಗಿದ್ದರೆ ಕೆಳದವಡೆ ಎನ್ನುತ್ತಾರೆ. ಈ ಕೆಳದವಡೆ ತಗಲುವ ಆವಿಕ್ಯುಲೇರಿಯದ ಭಾಗ ರಾಸ್ಟ್ರಂ. ಇದು ಹಕ್ಕಿಯ ಮೇಲ್ಭಾಗದ ಕೊಕ್ಕನ್ನು ಹೋಲುತ್ತದೆ. ನಕ್ಷತ್ರ ಮೀನು ಮತ್ತು ಸೀ ಅರ್ಚಿನ್‌ನಲ್ಲಿರುವ ಚಿಮಟದಂಥ ಪೆಡಿಸಿಲ್ಲೇರಿಯ ಮಾಡುವ ಕೆಲಸವನ್ನೇ ಬ್ಯುಗುಲದಲ್ಲಿ ಆವಿಕ್ಯುಲೇರಿಯ ಮಾಡುತ್ತದೆ. ಇದು ಮೈಮೇಲೆ ಓಡಾಡುವ ಸಣ್ಣ ಸಣ್ಣ ಪ್ರಾಣಿಗಳನ್ನು ಹಿಡಿದು ಹಾಕುತ್ತದೆ. ಕೊಕ್ಕಿನಂತಿರುವ ಈ ಆವಿಕ್ಯುಲೇರಿಯ ಬಗ್ಗುತ್ತ ಚಟುವಟಿಕೆಯಿಂದ ಅಲ್ಲಾಡುತ್ತಿದ್ದು ಹತ್ತಿರಕ್ಕೆ ಬಂದ ಸಣ್ಣ ಸಣ್ಣ ಪ್ರಾಣಿಗಳನ್ನು ಕತ್ತರಿಸಿ, ಝೂಯೀಷಿಯಂನ ಹೊರ ಮೈಯನ್ನು ಶುಚಿಯಾಗಿಡುತ್ತದೆ. ತಮ್ಮ ಚಲನೆಯಿಂದ ಸಣ್ಣ ಪ್ರಾಣಿಗಳನ್ನು ಹಿಡಿದುಹಾಕಿ ಝೂಆಯಿಡ್‌ಗೆ ಆಹಾರ ಸಂಗ್ರಹಣೆಗೆ ಸಹಾಯ ಮಾಡುತ್ತವೆ. ಜೊತೆಗೆ ಹೊರ ಮೈಯನ್ನು ಚೊಕ್ಕಟಮಾಡಿ ಹೆಚ್ಚು ಆಮ್ಲಜನಕ ವಿನಿಯಯ ನಡೆಯುವಂತೆಯೂ ದೇಹವರ್ಧನ ಕ್ರಿಯೆಯಿಂದ ಉಂಟಾದ ಉತ್ಪನ್ನ ವಸ್ತುಗಳು ದೇಹದಿಂದ ಹೊರಹೋಗುವಂತೆಯೂ ಮಾಡುತ್ತವೆ.

ಆವಿಕ್ಯುಲದಂತೆ ಸಹಾಯ ಮಾಡುವ ಮತ್ತೊಂದು ಹೆಟರೊಝೂಆಯಿಡ್ ಎಂದರೆ ವೈಬ್ರಾಕ್ಯುಲ. ಇದೂ ಮಾರ್ಪಾಟು ಹೊಂದಿನ ಝೂಆಯಿಡ್. ಇದರಲ್ಲಿ ಮುಚ್ಚಳ ಉದ್ದನೆಯ ಸಿಬಿರಿನಂತೆ ಮಾರ್ಪಾಟಾಗಿರುತ್ತದೆ. ಈ ಸಿಬಿರು ಚಿಕ್ಕದಾದೊಂದು ಕೋಶದಲ್ಲಿ ಅಡಕವಾಗಿದ್ದು ಎಲ್ಲ ಕಡೆಗೂ ಸ್ವತಂತ್ರವಾಗಿ ತಿರುಗುವಂತೆ ಇದೆ. ಇದು ಆವಿಕ್ಯುಲದ ಜೊತೆಯಲ್ಲಿ ನಿಯೋಜಿತ ಸ್ಥಾನದಲ್ಲಿರಬಹುದು ಅಥವಾ ಸ್ವತಂತ್ರವಾಗಿರಬಹುದು. ಆವಿಕ್ಯುಲ ಮತ್ತು ವೈಬ್ರಾಕ್ಯುಲ ಇವೆರಡರ ಚಲನೆ ಎಕ್ಟೋಪ್ರಾಕ್ಟ ಗುಂಪುಜೀವಿಯ ಮೈಮೇಲೆ ಕೊಳೆ ಸೇರದಂತೆ ನೋಡಿಕೊಳ್ಳುತ್ತವೆ. ಸೀನೊಝೂಆಯಿಡ್‌ನಲ್ಲಿ ಮಾರ್ಪಾಟುಗಳು ಕಡಿಮೆ. ಇದರ ದೇಹಾವಕಾಶ ದೊಡ್ಡದು. ಇದರಲ್ಲಿ ಎಳೆಎಳೆಯಾದ ಅಂಗಾಂಶವಿದೆ. ಇದರಂತೆಯೇ ಕೆಲವು ಕುಬ್ಜ ಝೂಆಯಿಡ್‌ಗಳೂ (ನ್ಯಾನೋಝೂಆಯಿಡ್) ಇವೆ.

ಎಕ್ಟೋಪ್ರಾಕ್ಟಗಳ ಜನನೇಂದ್ರಿಯಗಳು ಕೇವಲ ಜನನಗ್ರಂಥಿಗಳನ್ನು ಮಾತ್ರ ಹೊಂದಿರುತ್ತವೆ. ಜನನಕೋಶಗಳನ್ನು ಅವುಗಳ ಗುಂಡಾದ ಆಕಾರ ಮತ್ತು ದೊಡ್ಡದಾದ ಕೋಶಕೇಂದ್ರದಿಂದ ಗುರುತಿಸಬಹುದು. ಈ ಜನನಕೋಶಗಳು ಜೀವಿಯ ಬೆಳವಣಿಗೆಯ ಕಾಲದಲ್ಲಿಯೇ ಜೀರ್ಣಾಂಗಗಳ ಕೆಳಗೂ ಹೊರಮೈಗೂ ಮಧ್ಯೆ ಇರುವ ಅವಕಾಶದಲ್ಲಿ ಬೆಳೆಯಲು ಪ್ರಾರಂಭವಾಗುತ್ತವೆ. ಇವುಗಳಲ್ಲಿ ಹೆಚ್ಚು ಪ್ರಾಣಿಗಳು ದ್ವಿಲಿಂಗಿಗಳು. ಪ್ರತಿ ಝೂಆಯಿಡ್‌ನಲ್ಲಿ ಒಂದೆರಡು ಅಂಡಾಶಯಗಳೋ, ಒಂದೆರಡು ವೃಷಣಗಳೋ ಇರುತ್ತವೆ. ಸಾಮಾನ್ಯವಾಗಿ ವೃಷಣ ಝೂಆಯಿಡ್‌ನಲ್ಲಿರುವ ದೇಹಾವಕಾಶದ ಮುಂಭಾಗದಲ್ಲಿದ್ದರೆ ಅಂಡಾಶಯ ಅದೇ ಅವಕಾಶದ ಹಿಂಬದಿಯಲ್ಲಿರುತ್ತದೆ. ಆದರೆ ಇವು ಏಕಕಾಲದಲ್ಲಿ ಬಲಿಯದೆ ಒಂದು ಮಾತ್ರ ಬೇಗ ಬಲಿಯುತ್ತದೆ. ಇದರಿಂದ ಸ್ವಯಂನಿಷೇಚನ ಆಗುವುದು ತಪ್ಪುತ್ತದೆ. ಕೆಲವು ಎಕ್ಟೋಪ್ರಾಕ್ಟಗಳು ಏಕಲಿಂಗ ಪ್ರಾಣಿಗಳು.

ಎಕ್ಟೋಪ್ರಾಕ್ಟದಲ್ಲಿ ಸಾಮಾನ್ಯವಾಗಿ ದೇಹದ ಒಳಗಡೆಯೇ ಗರ್ಭ ಕಟ್ಟುತ್ತದೆ. ಆದರೆ ಹೆಚ್ಚು ಪ್ರಾಣಿಗಳಲ್ಲಿ ಒಂದು ಭ್ರೂಣಕೋಶವಿದ್ದು ಅದರೊಳಗೆ ಗರ್ಭ ಬೆಳೆಯುತ್ತದೆ. ಈ ಭ್ರೂಣಕೋಶ ಗಡ್ಡೆಯಾಕಾರದಲ್ಲಿ ದೇಹದ ಹೊರಗೆ ಅಥವಾ ದೇಹಾವಕಾಶದಲ್ಲಿ ಬೆಳೆಯಬಹುದು. ಕೆಲವು ಪ್ರಾಣಿಗಳಲ್ಲಿ ಹೊರ ಆವರಣದಲ್ಲಿ ಓವಿಸೆಲ್ ಅಥವಾ ಊಈಷಿಯಂ ಎಂಬ ಭ್ರೂಣಕೋಶವಿರುತ್ತದೆ. ಇದು ಶಿರಾಸ್ತ್ರದ ಆಕಾರವಾಗಿದ್ದು ಕೆಲವು ಆಟೊಝೂಆಯಿಡ್‌ನ ಮುಂಭಾಗದಲ್ಲಿ ಮೇಲುಗಡೆ ಇರುತ್ತದೆ. ಈ ಓವಿಸೆಲ್‌ನ ಬೆಳವಣಿಗೆ ಅಂಡಾಶಯ ಉತ್ಪತ್ತಿ ಮಾಡುವ ಕಿಣ್ವಗಳನ್ನು ಅನುಸರಿಸಿರುತ್ತದೆ. ಓವಿಸೆಲ್‌ನಲ್ಲಿ ಬೆಳೆದ ಭ್ರೂಣ ಮಂದೆ ಶಿಲಿಕೆಗಳಿಂದ ಕೂಡಿದ ಲಾರ್ವವಾಗಿ ಮಾರ್ಪಾಡಾಗುತ್ತದೆ. ಈ ಲಾರ್ವಾ ಬೆಳೆದಮೇಲೆ ಓವಿಸೆಲ್‌ನಿಂದ ಹೊರಗೆ ಬಂದು ನೀರು ಸೇರುತ್ತದೆ. ಮುಮ್ಮೊಲೆಯಾಕಾರದ

ಈ ಲಾರ್ವಾವನ್ನು ಸೈಫೊನಾಟಸ್ ಲಾರ್ವ ಎನ್ನುತ್ತಾರೆ. ಇದು ಸುಮಾರು ಎರಡು ತಿಂಗಳವರೆಗೆ ಈಜಾಡಿಕೊಂಡಿದ್ದು ಅನಂತರ ಅನುಕೂಲವಾದ ಜಾಗಕ್ಕೆ ಅಂಟಿಕೊಂಡು ಅದರ ಹೊರಕವಚವನ್ನು ಕಳಚಿಕೊಂಡು ರೂಪಪರಿವರ್ತನೆ ಹೊಂದುತ್ತದೆ. ಭ್ರೂಣಕೋಶದಿಂದ ಹೊರಬಂದ ಲಾರ್ವಾಗಳಲ್ಲಿ ಈ ಸ್ವಚ್ಛಂದ ಜೀವನದ ಅವಧಿ ಕೇವಲ ಕೆಲವೇ ದಿವಸಗಳು. ತಲೆಯಲ್ಲಿರುವ ಅಲುಗಾಡುವ ಗರಿಗಳಿಂದ ಜಾಗವನ್ನು ಪರೀಕ್ಷಿಸಿ ಲಾರ್ವಾಗಳು ಅಲ್ಲಿ ನೆಲಸುತ್ತವೆ. ಅದರುವ ಸ್ನಾಯು ಸಂಕೋಚದಿಂದ ಅಂಟಿನ ಕೋಶವನ್ನು ಹೊರದೂಡುತ್ತದೆ. ಗಟ್ಟಿ ಜಾಗದ ಮೇಲೆ ಅದು ಹರಡಿಕೊಂಡಾಗ ದೇಹದ ಇತರ ಭಾಗಗಳು ನಶಿಸಲು ಪ್ರಾರಂಭಿಸುತ್ತವೆ. ಅನಂತರ ಅದು ನೂತನವಾದ ಮೊದಲನೆಯ ಝೂಆಯಿಡ್ ಆಗಿ ಮಾರ್ಪಡುತ್ತದೆ. ಇದಕ್ಕೆ ಆನ್‌ಸೆಸ್ಟ್ರುಲ್ಲ ಎಂದು ಹೆಸರು. ಈ ಆನ್‌ಸೆಸ್ಟ್ರುಲ್ಲದ ಪಾರ್ಶ್ವದಿಂದ ಹೊಸ ಹೊಸ ಝೂಆಯಿಡ್‌ಗಳು ಮೊಗ್ಗು ಒಡೆದಂತೆ ಚಿಗುರುತ್ತವೆ. ಹೊಸ ಝೂಆಯಿಡ್‌ಗಳ ಬೆಳೆವಣಿಗೆ ಈ ರೀತಿ ಪ್ರತಿ ಪ್ರಭೇದದಲ್ಲೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಕಠಿಣ ವಾತಾವರಣ ಉಂಟಾದಾಗ ಈ ಸಂಘಜೀವಿಗಳು ಕಂದುಬಣ್ಣದ ಪದಾರ್ಥವಾಗಿ ನಿಶ್ಚೇತನ ಸ್ಥಿತಿಗೆ ಇಳಿಯುತ್ತವೆ. ಮತ್ತೆ ಸುಧಾರಿತ ವಾತಾವರಣ ಉಂಟಾದಾಗ ಇವು ಝೂಆಯಿಡ್‌ಗಳಾಗಿ ಪುನರ್ನಿರ್ಮಾಣವಾಗುತ್ತವೆ.




೧. ಪ್ಲೊಮಟೆಲ್ಲ ಪಂಕ್ಟೇಟ ೨. ಪೆಕ್ಟಿನಟೆಲ್ಲ ಮ್ಯಾಗ್ನಿಫಿಕ ೩. ಕ್ರಿಸ್ಟೇಟೆಲ್ಲ ಮುಸಿಡೊ

ಬುಗೆ (1952) ಮತ್ತು ಬುಸ್‌ಲರ್ (1953) ಎಂಬ ಪ್ರಾಣಿವಿಜ್ಞಾನಿಗಳು ಈ ಪ್ರಾಣಿಗಳು ಪ್ರೀ ಕೇಂಬ್ರಿಯನ್ ಕಾಲದಲ್ಲೆ ಚೆನ್ನಾಗಿ ವೃದ್ಧಿಯಾಗಿದ್ದವೆಂದು ನಿರ್ಧರಿಸಿದ್ದಾರೆ. ಆಗಲೇ ಇವು ಸಾಕಷ್ಟು ವೈವಿಧ್ಯವನ್ನು ಹೊಂದಿದ್ದು ಮೀಸೊಜೋಯಿಕ್ ಶಕದಲ್ಲಿ ಬಹಳ ಪ್ರವರ್ಧಮಾನಕ್ಕೆ ಬಂದಿದ್ದುವು. ಭ್ರೂಣ ಬೆಳೆವಣಿಗೆಯ ಕ್ರಮ, ಲಾರ್ವಾ ಲಕ್ಷಣಗಳು ಮತ್ತು ದೇಹ ರಚನೆಯ ವೈಶಿಷ್ಟ್ಯ– ಇವನ್ನು ವಿವೇಚಿಸಿದರೆ ಈ ಗುಂಪು ಫೋರೋನಿಡಕ್ಕೆ ನಿಕಟ ಸಂಬಂಧವನ್ನು ಹೊಂದಿದ್ದು ಪ್ರೋಟೊಸ್ಟೋಮಿಯ ಗುಂಪಿಗೆ ಸೇರುವುದೆಂದು ಹೈಮನ್ ನಿರ್ಧರಿಸಿದ್ದಾಳೆ. (ಸಿ.ಎಂ.ಎಸ್.)

**ಎಕ್ಡಿಸೋನ್:** ಕೀಟಗಳ ರೂಪವರ್ತನೆಯನ್ನು ನಿಯಂತ್ರಿಸುವ ಹಾರ್ಮೋನ್. ಬಹುಪಾಲು ಕೀಟಗಳು ಬೆಳೆವಣಿಗೆಯಲ್ಲಿ ರೂಪಪರಿವರ್ತನೆಯನ್ನು ಅನುಸರಿಸುತ್ತವೆ. ಈ ಕಾಲದಲ್ಲಿ ಸ್ಪಷ್ಟವಾದ ನಿರ್ದಿಷ್ಟ ಅವಸ್ಥೆಗಳ ಮೂಲಕ ಹಾದು ಬೆಳೆಯುತ್ತವೆ. ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಪರಿವರ್ತನೆಗೊಳ್ಳುವಾಗ ಹೊರಚರ್ಮ ಮತ್ತು ಕ್ಯುಟಿಕಲ್‌ನ ನಿರ್ಮೋಚನೆಯಾಗುತ್ತದೆ. ಈ ಕ್ರಿಯೆಗೆ, ಪೊರೆಬಿಡುವಿಕೆ (ನಿರ್ಮೋಚನೆ, ಎಕ್‌ಡೈಸಿಸ್) ಎಂದು ಹೆಸರು. ಪ್ರತಿಯೊಂದು ನಿರ್ಮೋಚನೆಯ ಅನಂತರ ಹೊರಬರುವ ಲಾರ್ವ ಹಿಂದಿನ ಅವಸ್ಥೆಗಿಂತ ತುಂಬಾ ಭಿನ್ನವಾಗಿರುವುದಿಲ್ಲ. ಆದಾಗ್ಯು ಕೆಲವು ನಿರ್ಮೋಚನೆಗಳು ತುಂಬಾ ಭಿನ್ನವಾದ ರೂಪಗಳನ್ನು ಉತ್ಪತ್ತಿಮಾಡುತ್ತವೆ. ಅಂತಹ ಸಂದರ್ಭಗಳಲ್ಲಿ ಡಿಂಬ (ಲಾರ್ವ)ಗಳು ಪ್ಯೂಪಗಳಾಗಿಯೂ, ಪ್ಯೂಪಗಳು ಪ್ರಬುದ್ಧ ಕೀಟಗಳಾಗಿಯೂ ಪರಿವರ್ತನೆಗೊಳ್ಳುತ್ತವೆ. ಈ ಕ್ರಿಯೆಗಳನ್ನು ಎರಡು ಹಾರ್ಮೋನುಗಳು ನಿಯಂತ್ರಿಸುತ್ತವೆ. ಎಕ್ಡಿಸೋನ್ ಹಾರ್ಮೋನ ನಿರ್ಮೋಚನೆಯನ್ನು ಆರಂಭಿಸುತ್ತದೆ. ಪ್ರೊಥೊರಾಸಿಕ್ ಗ್ರಂಥಿಗಳು ಈ ಹಾರ್ಮೋನನ್ನು ಉತ್ಪತ್ತಿಮಾಡುತ್ತವೆ. ಎಕ್ಡಿಸೋನ್ ಹಾರ್ಮೋನು ಕೇವಲ ನಿರ್ಮೋಚನೆ ನಡೆಯುವುದನ್ನು ಮಾತ್ರ ನಿರ್ಧರಿಸುತ್ತದೆಯೇ ಹೊರತು ನಿರ್ಮೋಚನೆಯ ಅನಂತರ ಹೊರ ಬರುವ ಅವಸ್ಥಾರೂಪವನ್ನು ನಿರ್ಧರಿಸುವುದಿಲ್ಲ. ಮಿದುಳಿನಲ್ಲಿರುವ ಕಾರ್ಪೋರ ಅಲ್ಲಾಟ ಎಂಬ ನರ ಅಂತಃಸ್ರಾವಕ ಕೋಶಗಳಿಂದ ಉತ್ಪತ್ತಿಯಾಗುವ ನರಸ್ರವಿಕೆ ಎಕ್ಡಿಸೋನ್ ಹಾರ್ಮೋನು ಪ್ರೊಥೊರ್‍ಯಾಸಿಕ್ ಗ್ರಂಥಿಯಿಂದ ಬಿಡುಗಡೆಯಾಗುವುದನ್ನು ನಿರ್ದೇಶಿಸುತ್ತವೆ. ಈ ಹಾರ್ಮೋನಿಗೆ ಮಿದುಳು ಹಾರ್ಮೋನು ಅಥವಾ ಎಕ್ಡಿಯೊಟ್ರೋಫಿನ್ ಎಂದು ಹೆಸರು. ಎಕ್ಡಿಸೋನ್ ಹಾರ್ಮೋನನ್ನು ಕೃತಕವಾಗಿ ಸಂಶ್ಲೇಷಿಸಿದ್ದಾರೆ. ಬ್ಯುಟೆನಾಂಟ್ ಮತ್ತು ಕಾಲಸನ್ (1954) ಈ ಹಾರ್ಮೋನಿನ ಹರಳುಗಳನ್ನು ಉತ್ಪತ್ತಿಮಾಡಿದರು. ಈಗ ಎರಡು ಎಕ್ಡಿಸೋನ್‌ಗಳಿರುವುದಾಗಿ ತಿಳಿದು ಬಂದಿದೆ. $\alpha$– ಎಕ್ಡಿಸೋನ್ ಮತ್ತು $\beta$–ಎಕ್ಡಿಸೋನ್ (ಅಥವಾ ಎಕ್ಡಿಸ್ಟಿರೋನ್). ಎರಡನೆಯ ಹಾರ್ಮೋನು ಸ್ವಲ್ಪ ಪ್ರಮಾಣಗಳಲ್ಲಿ ದೊರಕುತ್ತದೆ. 20–26 ಹೈಡ್ರಾಕ್ಸಿ ಎಕ್ಡಿಸೋನ್ ಎಂಬ ಮೂರನೆಯ ವಿಧದ ಎಕ್ಡಿಸೋನ್ ಕೂಡ ಕಂಡು ಬಂದಿದೆ.

ರಾಸಾಯನಿಕವಾಗಿ ಎಕ್ಡಿಸೋನ್‌ಗಳು ಸ್ಟೀರಾಯಿಡ್‌ಗಳು. ಕೊಲೆಸ್ಟ್ರಾಲ್ ಪೂರ್ವ ವಸ್ತುವಿನಿಂದ ಎಕ್ಡಿಸೋನ್ ಉತ್ಪತ್ತಿಯಾಗುತ್ತದೆ ಎಂದು ತಿಳಿದುಬಂದಿದೆ. ಆದರೆ ಕೀಟಗಳು ಸಸ್ಯ ಸ್ಟೀರಾಲ್‌ಗಳನ್ನು ಕೊಲೆಸ್ಟ್ರಾಲ್ ಆಗಿ ಪರಿವರ್ತಿಸಿಕೊಳ್ಳುತ್ತವೆ. ಮಾಂಸಾಹಾರಿ ಕೀಟಗಳು ತಮ್ಮ ಆಹಾರ ಜೀವಿಯಿಂದ ಕೊಲೆಸ್ಟ್ರಾಲ್ ಅನ್ನು ಪಡೆಯುತ್ತವೆ. ಎಕ್ಡಿಸೋನಿನ ರಾಸಾಯನಿಕ ಸೂತ್ರ. $C_{27}H_{44}O_6$ (2, 3, 149, 22R, 25 ಪೆಂಟಹೈಡ್ರಾಕ್ಸಿಲ್ 7–5– ಕೊಲೆಸ್ಟಿನ್ – 6–1). ಕೆಲವು ಸಸ್ಯಗಳಲ್ಲಿ ಎಕ್ಡಿಸೋನ್ ಹಾರ್ಮೋನಿನ ಪ್ರಭಾವವನ್ನು ತೋರುವ ವಸ್ತುಗಳು ಕಂಡುಬರುತ್ತವೆ. ಈ ಸಸ್ಯಗಳನ್ನು ತಿನ್ನುವ ದುರ್ದೈವಿ ಕೀಟಗಳ ಬೆಳೆವಣಿಗೆಯನ್ನು ಅಗಾಧವಾಗಿ ಬದಲಾಯಿಸಿ ಈ ವಸ್ತುಗಳು ಸಸ್ಯಗಳನ್ನು ರಕ್ಷಿಸುತ್ತವೆ ಎಂದು ಊಹಿಸಲಾಗಿದೆ. ಇವುಗಳನ್ನು ಫೈಟೊಎಕ್ಡಿಸೋನ್ ಎಂದು ಕರೆಯುತ್ತಾರೆ. ಈ ವಸ್ತುಗಳನ್ನುಳ್ಳ ಸಸ್ಯಗಳು ಕೀಟಗಳ ಆಕ್ರಮಣಕ್ಕೆ ಈಡಾಗುವುದಿಲ್ಲ. ನಿರ್ಮೋಚನೆಯನ್ನು ನಿಯಂತ್ರಿಸುತ್ತದೆ ಎಂದು ನಂಬಲಾಗಿದ್ದ ಕೌಮಾರ್ಯ ಹಾರ್ಮೋನು ಅಂಗಾಂಶಗಳ ಮೇಲೆ ನೇರವಾಗಿ ವರ್ತಿಸುವುದಿಲ್ಲ. ಆದರೆ ಪ್ರೊಥೊರ್‍ಯಾಸಿಕ ಗ್ರಂಥಿಗಳ ಮೂಲಕ ತಮ್ಮ ಪ್ರಭಾವವನ್ನು ಬೀರುತ್ತವೆ ಎನ್ನುವುದನ್ನು ವಿಲಿಯಮ್ಸ್, ಸಕ್ರೋಪಿಯ ಪತಂಗಗಳಲ್ಲಿ ತೋರಿಸಿಕೊಟ್ಟನು. ಹರಳುಗಳ ರೂಪದಲ್ಲಿ ಉತ್ಪತ್ತಿಮಾಡಿದ ಎಕ್ಡಿಸೋನ್ ಹಾರ್ಮೋನ್ ಅನೇಕ ಕೀಟಗಳ ಮೇಲೆ ಪ್ರಯೋಗಿಸಿದಾಗ ಸ್ವಾಭಾವಿಕ ಹಾರ್ಮೋನಿನ ಪ್ರಭಾವಗಳನ್ನೇ ಅನುಕರಿಸುವುದಾಗಿ ಕಂಡು ಬಂದಿತು. ಬಾಂಬಿಕ್ಸ್ ಕೀಟದ ಅಂಗಾಂಶಗಳಿಂದ ಎಕ್ಡಿಸೋನ್ ಚಟುವಟಿಕೆಯನ್ನು ತೋರುವ 5 ಪ್ರತ್ಯೇಕ ಭಿನ್ನಾಂಶಗಳನ್ನು ಗುರುತಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕೀಟಗಳ ದೇಹದಲ್ಲಿ ಬದುಕುವ ಟ್ರೈಕೊನಿಂಫ್ ಕಶಾಂಗಿಗಳಂತಹ ಸಹಜೀವಿಗಳು ಈ ಹಾರ್ಮೋನಿನ ಪ್ರಭಾವಕ್ಕೆ ಒಂದು ರೀತಿಯ ಪ್ರತಿಕ್ರಿಯೆಯನ್ನು ತೋರುತ್ತವೆ. ಇದು ಅವುಗಳ ಉಳಿವಿನ ದೃಷ್ಟಿಯಿಂದ ಪರಿಹೊಂದಾಣಿಕೆಪ್ರಕ್ರಿಯೆ ಇರಬಹುದು. ದೈತ್ಯ ಜೊಲ್ಲುಗ್ರಂಥಿ ಕ್ರೊಮೋಸೋಮುಗಳ ಮೇಲೆ ಈ ಹಾರ್ಮೋನನ್ನು ಪ್ರಯೋಗಿಸಿದಾಗ ಅದು ಪಫ್‌ಗಳನ್ನು ಉತ್ಪತ್ತಿಮಾಡುತ್ತದೆ. (ಎಚ್.ಎಚ್.ಎಸ್.)

**ಎಕ್‌ಡೈಸಿಸ್:** ಕೆಲವು ಪ್ರಾಣಿಗಳ ಬೆಳೆವಣಿಗೆಯ ವಿವಿಧ ಹಂತಗಳಲ್ಲಿ, ದೇಹದ ಗಾತ್ರ ಹೆಚ್ಚಿದಂತೆ ದೇಹದ ಹೊರಕವಚವನ್ನು ತ್ಯಜಿಸುವ (ಪೊರೆಬಿಡುವ), ಹಾರ್ಮೋನುಗಳಿಂದ ನಿಯಂತ್ರಿತವಾಗಿರುವ ಕ್ರಿಯೆ. ಎಕ್‌ಡೈಸಿಸ್ ಅಥವಾ ಪೊರೆ ಬಿಡುವಿಕೆ ಸಾಮಾನ್ಯವಾಗಿ ಸಂಧಿಪದಿ ವಂಶದ ಮತ್ತು ಸರೀಸೃಪ ವರ್ಗದ ಜೀವಿಗಳಲ್ಲಿ ಕಾಣಬಹುದು. ಸಂಧಿಪದಿಗಳಲ್ಲಿ ದೇಹದ ಖಂಡಗಳ ಹಾಗೂ ಉಪಾಂಗಗಳ ಕೀಲುಗಳ ನಡುವೆ ಇರುವ ಹೊರಫಲಕ ಮತ್ತು ಪೊರೆ ಲವಣಗಳಿಲ್ಲದೆ ತೆಳುವಾಗಿರುತ್ತದೆ. ಈ ಪೊರೆಯು ಅಡಿಯಲ್ಲಿರುವ ಹೈಪೊಡರ್‌ಮಿಸ್ ಪದರದಿಂದ ರೂಪುಗೊಂಡಿದೆ. ಇದಕ್ಕೆ ಹಿಗ್ಗುವ ಶಕ್ತಿ ಇಲ್ಲದಿರುವುದರಿಂದ ಜೀವಿಯು ಬೆಳೆದಂತೆಲ್ಲ ಆಗಾಗ್ಗೆ ದೇಹದಿಂದ ಕಳಚಿ ಹೊರಬೀಳುವುದು. ಈ ಪೊರೆಯು

ದಿನ ಕಳೆದಂತೆ ತೆಳುವಾಗುತ್ತ ಬಂದು ಅದರ ಅಡಿಯಲ್ಲಿ ಹೊಸಪೊರೆ ರೂಪುಗೊಳ್ಳುವುದು. ಪೊರೆ ಹೊರಕ್ಕೆ ಬೀಳುವ ಮುನ್ನ ಶಿರದಹಿಂಭಾಗದಲ್ಲಿ ನೀಳವಾಗಿ ಸೀಳುವುದು. ಅನಂತರ ಜೀವಿಯು ಶಿರ ಮತ್ತು ಉದರ ಭಾಗಗಳನ್ನು ಹಿಂದಕ್ಕೆ ಎಳೆದುಕೊಂಡು ದೇಹದ ಪೊರೆಯನ್ನು ಮುಂದಕ್ಕೆ ನೂಕುವುದು. ಇದಕ್ಕೆ ಪೊರೆಬಿಡುವಿಕೆ ಎಂದು ಹೆಸರು. ಪೊರೆಬಿಡುವ ಮುನ್ನ ಅಂಗಾಂಶಗಳಲ್ಲಿ ಗ್ಲೈಕೊಜನ್ ಪದಾರ್ಥವು ಹೆಚ್ಚಾಗಿ ಸಂಗ್ರಹವಾಗಿರುವುದರಿಂದ ಶೀಘ್ರ ಬೆಳವಣಿಗೆಗೆ ಮತ್ತು ಹಳೆ ಪೊರೆ ಕಳಚಿ ಬಿದ್ದು ಹೊಸ ಪೊರೆ ರೂಪುಗೊಳ್ಳಲು ಸಹಾಯಕವಾಗಿರುವುದು. ಸಂಧಿಪದಿಗಳ ವಂಶದಲ್ಲಿ, ಕಠಿಣ ಚರ್ಮಿಗಳ ವರ್ಗಕ್ಕೆ ಸೇರಿದ ಸೀಗಡಿಗಳು ಇತ್ಯಾದಿಗಳಲ್ಲಿ ಸಾಮಾನ್ಯವಾಗಿ ಈ ವಿಧಾನವು ಅತ್ಯಂತ ಆಶ್ಚರ್ಯಕರವಾಗಿ ಕಂಡುಬರುವುದು. ಈ ಜೀವಿಗಳಲ್ಲಿ ಕೇವಲ ದೇಹದ ಹೊರಪೊರೆ ಮಾತ್ರವಲ್ಲದೆ, ಕಣ್ಣಿನ ಮೇಲ್ಭಾಗದ ಪೊರೆ, ಸ್ಪರ್ಶಾಂಗಗಳಾದ ಸ್ಟಾಟೋಸಿಸ್ಟ್‌ಗಳ ಮೇಲಿನ ರೋಮಗಳು, ಜೀರ್ಣಾಂಗಗಳ ಮೇಲ್ಭಾಗದ ಪೊರೆ ಇತ್ಯಾದಿಗಳು ಸಹಬಿದ್ದು ಹೊಸಪೊರೆ ಬೆಳೆಯುವುದು. ಪೊರೆಬಿಡುವಿಕೆ ಸಾಮಾನ್ಯವಾಗಿ ಚಳಿಗಾಲದಲ್ಲಿ ಕಂಡುಬರುವುದಿಲ್ಲ. ಉಷ್ಣಾಂಶದ ಆವಶ್ಯಕತೆ ಅಗತ್ಯ. ಆಸ್ಟಕಸ್ ಎಂಬ ಕಠಿಣ ಚರ್ಮಿಯಲ್ಲಿ ಉಷ್ಣಾಂಶ ಅನುಸರಿಸಿ ಮೊದಲ ವರ್ಷದಲ್ಲಿ ಎಂಟುಸಾರಿ, 2ನೆ ವರ್ಷದಲ್ಲಿ 5 ಸಾರಿ ಮೂರನೆ ವರ್ಷದಲ್ಲಿ 3 ಸಾರಿಯೂ ಕಾಣಬರುವುದು. ಅನಂತರ ಗಂಡುಜೀವಿಗಳು ವರ್ಷಕ್ಕೆ 2 ಸಾರಿಯೂ, ಹೆಣ್ಣು ವರ್ಷಕ್ಕೆ 1 ಸಾರಿಯೂ, ಬೆಳವಣಿಗೆ ಪೂರ್ತಿಗೊಳ್ಳುವ ತನಕ ಮುಂದುವರಿಯುತ್ತದೆ. ಪೊರೆಬಿಡುವಿಕೆ ಅತ್ಯಂತ ಶ್ರಮದಾಯಕ ಹಾಗು ಸಾಕಷ್ಟು ಶಕ್ತಿಯ ಆವಶ್ಯಕತೆ ಇದೆ. ಅಲ್ಲದೆ ಎಲ್ಲ ವಿಧವಾದ ತೊಂದರೆಗಳನ್ನು ಎದುರಿಸಬೇಕಾಗಿರುತ್ತದೆ. ಸಂಧಿಪದಿಗಳಲ್ಲಿ ಅದರಲ್ಲೂ ಕೀಟಗಳಲ್ಲಿ ಮರಿಯು ಪ್ರೌಢಾವಸ್ಥೆಯನ್ನು ತಲುಪುವ ಮೊದಲ ಬೆಳವಣಿಗೆಯ ಹಂತಗಳಲ್ಲಿ, ಬೆಳವಣಿಗೆ ಸುಲಭವಾಗಿ ನೆರವೇರಲು ಗಡುಸಾದ ಹಳೇ ಚರ್ಮವನ್ನು ಹೊರಗೆಡಹುವಿಕೆ ಸಾಮಾನ್ಯವಾದ ಸಂಗತಿ. ಈ ವಿಧಾನದಲ್ಲಿ ಕೇವಲ ಹೊರಚರ್ಮ ಮಾತ್ರವೇ ಅಲ್ಲದೆ ಟ್ರೇಕಿಯಲ್ ನಾಳದ ಗ್ರಂಥಿಗಳ ಮತ್ತು ಕರುಳಿನ ಪೊರೆಯು ಕಳಚಿಬೀಳುವುದು. ಈ ಎಲ್ಲ ರಚನೆಗಳು, ದೇಹದ ರೋಮಗಳು, ಹುರುಪೆಗಳು ಇತ್ಯಾದಿ ದೇಹದ ಹೈಪೊಡರ್‌ಮಿಸ್‌ನ ಕೋಶಗಳಿಂದ ಪುನಃ ಏರ್ಪಡುತ್ತವೆ.

ಪೊರೆ ಬಿಡುವ ಸಮಯದಲ್ಲಿ ಕೀಟಗಳು ಚುರುಕಾಗಿರುವುದಿಲ್ಲ. ಆಗ ಒಳಚರ್ಮದ ಕೋಶಗಳು ಮೈಟಾಟಿಕ್ ವಿಭಜನೆಗೆ ಒಳಪಟ್ಟು ಸಂಖ್ಯೆಯಲ್ಲಿ ವೃದ್ಧಿಯಾಗುತ್ತವೆ. ಇದರಿಂದಾಗಿ ಹೊರಕವಚದಂತಿರುವ ಪೊರೆಯು ಹೈಪೊಡರ್‌ಮಿಸ್‌ನಿಂದ ಮತ್ತು ರಂಧ್ರನಾಳಗಳಲ್ಲಿನ ಕೋಶರಸ ತಂತುಗಳಿಂದ ಸುಲಭವಾಗಿ ಬೇರ್ಪಡುವುದು. ಈ ಹಳೆಪೊರೆಯ ಅಡಿಯಲ್ಲಿರುವ ಹೈಪೊಡರ್ಮ್ ಕೋಶಗಳು ಸ್ರವಿಸುವ ದ್ರವದಲ್ಲಿರುವ ಪ್ರೊಟಿನೇಸ್ ಮತ್ತು ಕೈಟಿನೇಸ್‌ಗಳು ಹಳೆ ಕವಚದ ಒಳದರ್ಮವನ್ನು ಕರಗುವಂತೆ ಮಾಡಿ, ಉಪವಸ್ತುಗಳ ಹೀರುವಿಕೆಗೆ ಸಹಾಯಕವಾಗಿವೆ. ಆಗ ಹೈಪೊಡರ್‌ಮಿಸ್ ಮತ್ತು ಸಹಾಯಕ ಕೋಶಗಳು ಹೊಸ ಕವಚದ ನಿರ್ಮಾಣ ಕಾರ್ಯದಲ್ಲಿ ತೊಡಗಿರುತ್ತವೆ. ಈ ಹೊಸರಚನೆ ಪೂರ್ಣಗೊಂಡಾಗ ದ್ರವವು ಹೊರಭಾಗದಿಂದ ಹೀರಲ್ಪಟ್ಟು ಹಳೆಪೊರೆ ಬಿರಿಯುವುದು. ಕೀಟಗಳು ಗಾಳಿಯನ್ನಾಗಲೀ ಇಲ್ಲವೇ ನೀರನ್ನಾಗಲೀ ಸೇವಿಸುವದರ ಮೂಲಕ ಒತ್ತಡವೇರ್ಪಟ್ಟು, ಸ್ನಾಯುಗಳ ಸಂಕುಚನದಿಮದ ಪೊರೆಬಿರಿಯಲು ಸಾಧ್ಯವಾಗಿದೆ.

ಹಲವು ಕೀಟಗಳಲ್ಲಿ ಹಳೆಪೊರೆ ಹೊರಬೀಳದೆ ಹಾಗೆಯೇ ಉಳಿದು ಹೊಸಪೊರೆಯನ್ನು ರಕ್ಷಿಸುವುದು. ಇದನ್ನು ಸೈಕ್ಲೋರಾಫ್ಹ ಡಿಪ್ಟಿರಾ, ಡ್ರೈಯನಿಡ್ಸ್ ಇತ್ಯಾದಿಗಳಲ್ಲಿ ಕಾಣಬಹುದು. ಇನ್ನು ಕೆಲವು ಕೀಟಗಳಲ್ಲಿ ಹೊರಗೆಡವಿದ ಪೊರೆಗಳು ದೇಹದ ಹಿಂಭಾಗದಲ್ಲಿ ನೆಲೆಸಿರುತ್ತವೆ. ಇದನ್ನು ಪರಾವಲಂಬಿ ಹೈಮಿನಾಪ್ಟಿರಾಗಳಲ್ಲಿ ನೋಡುತ್ತೇವೆ. ಪೊರೆಬಿಡುವಿಕೆಗೆ ಹಾರ್ಮೋನುಗಳು ಅತ್ಯಂತ ಉಪಕಾರಿಯಾಗಿವೆ. (ನೋಡಿ: ಎಕ್ಡೈಸೋನ). ವಿವಿಧ ಪ್ರಭೇದಕ್ಕೊಳಪಟ್ಟ ಕೀಟಗಳು ಸಾಮಾನ್ಯವಾಗಿ ಎಷ್ಟುಸಾರಿ ಪೊರೆಬಿಡುವುವು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಇವುಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಮೂಲತಃ ಇದರಿಂದ ಜೀವಿಗಳ ವಿಕಾಸವನ್ನು ಅಳೆಯಲು ಸಾಧ್ಯವಿಲ್ಲದಿದ್ದರೂ ಹಿಂದುಳಿದ ಕೀಟಗಳು ಅನೇಕ ಸಾರಿ ಪೊರೆಬಿಟ್ಟರೆ ಮುಂದುವರೆದವು, ಕೆಲವು ಸಾರಿ ಮಾತ್ರ ಪೊರೆ ಬಿಡಬಲ್ಲವು.

ರೆಕ್ಕೆಗಳಿಲ್ಲದ ಎಟೆರಿಗೋಟ ಉಪವರ್ಗಕ್ಕೆ ಸೇರಿದ ಕೀಟಗಳು ಪ್ರೌಢ ಅವಸ್ಥೆಯನ್ನು ತಲುಪುವ ವೇಳೆಗೆ ಸುಮಾರು ಹದಿನಾಲ್ಕು ಸಾರಿ ಪೊರೆ ಬಿಡುವುವಲ್ಲದೆ ಅನಂತರ ರೂಪದಲ್ಲಿ ಯಾವ ಬದಲಾವಣೆಯನ್ನು ತೋರ್ಪಡದೆ ಪೊರೆ ಬಿಡುವುದುಂಟು. ಇದೇ ವಿಧಾನವನ್ನು ಪ್ರೌಢ ಅವಸ್ಥೆಗೆ ಬಂದ ಕಾಂಪೋಡಿಯಾ ಮತ್ತು ಕೊಲೆಂಬೋಲಗಳಲ್ಲಿ ಕಾಣಬಹುದು. ಆದರೆ ರೆಕ್ಕೆಗಳುಳ್ಳ ಟೆರಿಗೋಟ ಉಪವರ್ಗದ ಕೀಟಗಳು ಪ್ರೌಢಾವಸ್ಥೆಯನ್ನು ತಲುಪಿದ ಮೇಲೆ ಪೊರೆಬಿಡುವುದಿಲ್ಲ.

ಹೆಮಿಮಿಪ್ಟಿರಾದ ಮರಿಗಳು ಪ್ರೌಢಾವಸ್ಥೆಗೆ ಮೊದಲು 20ಕ್ಕಿಂತ ಹೆಚ್ಚು ಸಾರಿ ಪೊರೆಬಿಟ್ಟರೆ ನ್ಯೂರಾಪ್ಟಿರಾದ ಅನೇಕ ಕೀಟಗಳು ಕೇವಲ 4 ಅಥವಾ 5 ಬಾರಿ ಪೊರೆಬಿಡುವುವು. ಉಳಿದ ಕೀಟಗಳೆಲ್ಲವನ್ನು ಇವುಗಳ ನಡುವೆ ಸೇರಿಸಬಹುದು. ಹಲವೆಡೆ ಪೊರೆಬಿಡುವ ಸಂಖ್ಯೆಯನ್ನು ತೆಗೆದುಕೊಂಡರೆ ನಿರ್ದಿಷ್ಟವೆನಿಸುವುದು ಉದಾ: ಹೆಟಿರಾಪ್ಟಿರಾದಲ್ಲಿ 5 ಬಾರಿ, ಸೊಕಾಪ್ಟಿರಾದಲ್ಲಿ 6 ಬಾರಿ ಇತ್ಯಾದಿ. ಅನೇಕ ಪ್ರಭೇದಗಳಲ್ಲಿ ಪೊರೆಬಿಡುವಿಕೆಯಲ್ಲಿ ಲಿಂಗ ವ್ಯತ್ಯಾಸವಿರುವುದು ಸಾಮಾನ್ಯವಾಗಿ ಗಂಡಿಗಿಂತ ಹೆಣ್ಣು ಹೆಚ್ಚಾಗಿ ಪೊರೆಬಿಡುವುದು. ಕೋಶಾವಸ್ಥೆಯನ್ನು ತಲುಪಿದ ಜೀವಿಯ ದೇಹದಿಂದ ಪೊರೆ ಹೊರಗೆಡುವಿಕೆಯನ್ನು ಡಿಪ್ಟೆರಾದಲ್ಲಿ ದೃಢೀಕರಿಸಲಾಗಿದೆ. (ಎನ್.ಎಂ.)

**ಎಕ್ಸ್‌–ಅಂಗ (ಎಕ್ಸ್ – ಆರ್ಗನ್):** ಕಠಿಣಚರ್ಮಿಗಳಲ್ಲಿರುವ ನರಸ್ರಾವಕಕೋಶಗಳು. ಕಠಿಣಚರ್ಮಿಗಳಲ್ಲಿ ಮೂರು ಪ್ರಧಾನ ನರರಸಧಾತು ಅಂಗಗಳಿವೆ (ನ್ಯೂರೊಹ್ಯುಮೊರಲ್ ಆರ್ಗನ್ಸ್). 1) ಸೈನಸ್ ಗ್ರಂಥಿ–ಕಣ್ಣಿನಲ್ಲಿ ಅಥವಾ ಕಣ್ಣಿನ ತೊಟ್ಟಿನಲ್ಲಿದೆ. 2) ಪಶ್ಚಬಂಧಿನಿ ಅಂಗ–ಟ್ರೈಟಸ್ ಸೆರೆಬ್ರಲ್ ಬಂಧಿನಿಯ ಹಿಂಭಾಗದಲ್ಲಿವೆ ಮತ್ತು ಪೆರಿಕಾರ್ಡಿಯಲ್ ಅಂಗ–ಹೃದಯದ ಸಮೀಪದಲ್ಲಿದೆ.

ಸೈನಸ್‌ಗ್ರಂಥಿ ಸಂಯೋಜಕ ಅಂಗಾಂಶ ಹೊದಿಕೆ ಪಡೆದ ರಕ್ತ ಅವಕಾಶ, ಇದಕ್ಕೆ ನರಸ್ರಾವಕ ಕೋಶಗಳು ತಮ್ಮ ಆಕ್ಸಾನುಗಳ ಮೂಲಕ ಸ್ರಾವಕಗಳನ್ನು ಸುರಿಯುತ್ತವೆ. ಈ ನರಸ್ರಾವಕ ಕೋಶಗಳ ಬಗ್ಗೆ ಸಾಕಷ್ಟು ಜಿಜ್ಞಾಸೆ ಇದೆ. ಇವುಗಳಲ್ಲಿ ಹಲವು ಕಣ್ಣಿನ ನರಮುಡಿಯಲ್ಲಿವೆ; ಇವಕ್ಕೆ ಎಕ್ಸ್‌–ಅಂಗವೆಂದು ಹೆಸರು. ಕಣ್ಣಿನ ನರಮುಡಿಯ ವಿವಿಧ ಖಂಡಗಳಲ್ಲಿ ಕನಿಷ್ಠ ನಾಲ್ಕು ಎಕ್ಸ್‌–ಅಂಗಗಳನ್ನು ಪತ್ತೆ ಹಚ್ಚಿ ವಿವರಿಸಲಾಗಿದೆ. ಇವುಗಳ ನರಸ್ರಾವಕ ಕೋಶಗಳಿಂದ ಹೊರಡುವ ಆಕ್ಸಾನುಗಳು ಆಕಾರ, ಗಾತ್ರ ಮತ್ತು ಕಣಗಳಲ್ಲಿ ಐದು ಬಗೆಯವಾಗಿದ್ದು, ಒಂದೇ ಗ್ರಂಥಿಯಲ್ಲಿ ಇವೆಲ್ಲವೂ ಇರಬಹುದು. ಹೀಗೆ ಪರಸ್ಪರ ಭಿನ್ನವಾಗಿರುವುದರಿಂದ ಅವು ಭಿನ್ನವಾದ ಪ್ರದೀಪಕಗಳನ್ನು ಸ್ರವಿಸುವ ಸಾಧ್ಯತೆ ಇದೆ. ಬ್ರಾಕಿಯೂರಗಳಲ್ಲಿ ಮೆಡುಲಾಟರ್ಮಿನಾಲಿಸ್ ಗ್ರಂಥಿಯಿಂದ ಆಕ್ಸಾನುಗಳು ರೂಪುಗೋಳ್ಳುವುದರಿಂದ ಎಕ್ಸ್‌–ಅಂಗವನ್ನು ಮೆಡಲಾಟರ್ಮಿನಾಲಿಸ್ ಎಕ್ಸ್‌–ಅಂಗವೆನ್ನುತ್ತಾರೆ. ಉಳಿದವುಗಳಲ್ಲಿ ಸಂವೇದಕ ನರಹುಲಿಯಿಂದ (ಸೆನ್ಸರಿ ಪ್ಯಾಪಿಲ್ಲ) ಆಕ್ಸಾನುಗಳು ಹುಟ್ಟಿಕೊಳ್ಳುವುದರಿಂದ ಎಕ್ಸ್‌–ಅಂಗಕ್ಕೆ ಸಂವೇದಕ ನರಹುಲಿ ಎಕ್ಸ್‌–ಅಂಗವೆನ್ನುತ್ತಾರೆ.

ಎಕ್ಸ್‌–ಅಂಗಗಳು ತಮ್ಮ ಸ್ರಾವಕವನ್ನು ಸೈನಸ್ ಗ್ರಂಥಿಗೆ ಸುರಿಯುತ್ತವೆ. ಸೈನಸ್ ಗ್ರಂಥಿ ಸೂಕ್ತ ಕಾಲದಲ್ಲಿ ಈ ಸ್ರಾವಕವನ್ನು ರಕ್ತಕ್ಕೆ ಸೇರಿಸುತ್ತದೆ. ಸಂಗ್ರಹಿಸಿಟ್ಟುಕೊಂಡಿರುವಾಗ ಸೈನಸ್‌ಗ್ರಂಥಿ ತನ್ನದೇ ಆದ ವಸ್ತುವನ್ನೇನಾದರೂ ಸ್ರಾವಕಕ್ಕೆ ಸೇರಿಸುತ್ತದೆಯೇ ಎಂಬುದು ಇಲ್ಲಿನ ಮತ್ತೊಂದು ಪ್ರಶ್ನೆ. ಎಕ್ಸ್‌–ಅಂಗವನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆಯುವುದು ಕಷ್ಟದ ಕೆಲಸ. ಇದರಲ್ಲಿ ಅನೇಕರು ಯಶಸ್ವಿಗಳಾಗಿದ್ದಾರೆ. ಪೊರೆಕಳಚುವಿಕೆಯನ್ನು (ಮೌಲ್ಟಿಂಗ್) ನಿರ್ಬಂಧಿಸುವ ನರಸ್ರಾವಕಗಳನ್ನು ಸ್ರವಿಸುತ್ತವೆ ಎಂಬುದಕ್ಕೆ ಆಧಾರವಿದೆ. ಎಕ್ಸ್‌–ಅಂಗದಿಂದ ಸ್ರವಿಸಿ, ಸೈನಸ್‌ಗ್ರಂಥಿಯಲ್ಲಿ ಸಂಗ್ರಹವಾದ ವಸ್ತುವನ್ನು ರಕ್ತ ಪರಿಚಲನೆಯೊಳಕ್ಕೆ ಸೇರಿಸಿದಾಗ ಪೊರೆ ಕಳಚುವಿಕೆಯನ್ನು ತಡೆಗಟ್ಟಬಹುದು. ಕಣ್ಣಿನ ತೊಟ್ಟನ್ನಾಗಲಿ ಅಥವಾ ಎಕ್ಸ್‌–ಅಂಗವನ್ನು ಸಂಪೂರ್ಣವಾಗಿ ತೆಗೆದುಹಾಕಿದರೆ ಪೊರೆಕಳಚುವಿಕೆ ಬೇಗನೆ ನಡೆಯುತ್ತದೆ. ಪೊರೆಕಳಚುವಿಕೆಯನ್ನು ತೀವ್ರಗೊಳಿಸುವ ಮತ್ತೊಂದು ರಸಧಾತುವನ್ನು ಎಕ್ಸ್‌–ಅಂಗ ಸ್ರವಿಸಿ ಸಂಗ್ರಹಿಸಿಟ್ಟು ಕೊಳ್ಳುತ್ತದೆ ಎಂಬುದು ಕೆಲವರ ಅಭಿಮತ.

ಕಿರಿಯ ಹೆಣ್ಣು ಕಠಿಣಚರ್ಮಿಗಳಲ್ಲಿ ಅಥವಾ ಸಂತಾನ ಋತುವಲ್ಲದ ವೇಳೆಯಲ್ಲಿ ಪ್ರಬುದ್ಧ ಹೆಣ್ಣಿನ ತೊಟ್ಟನ್ನು ತೆಗೆದು ಹಾಕಿದಾಗ ಅಂಡಾಶಯವು ವೇಗವಾಗಿ ಬೆಳೆದು ಅಂಡಗಳನ್ನು ಉತ್ಪಾದಿಸುತ್ತದೆ. ಕಣ್ಣಿನ ತೊಟ್ಟಿನ ಉದ್ಧರಣೆಯನ್ನು (ಎಕ್ಸ್‌ಟ್ರಾಕ್ಷನ್) ಕೊಟ್ಟಾಗ ಅಂಡಾಶಯವು ಪ್ರಬುದ್ಧಮಾನವಾಗಿರುವದನ್ನು ತಡೆಗಟ್ಟಬಹುದು. ಆದುದರಿಂದ ಅಂಡಾಶಯ ಬೆಳವಣಿಗೆಯನ್ನು ನಿರ್ಬಂಧಿಸುವ ಹಾರ್ಮೋನನ್ನು ಇದು ಸ್ರವಿಸುತ್ತದೆ ಎನ್ನಬಹುದು. ಕಣ್ಣಿನ ತೊಟ್ಟನ್ನು ತೆಗೆದು ಹಾಕಿದಾಗ ಈ ನಿರ್ಬಂಧವು ಇಲ್ಲವಾಗಿ ಅಂಡಾಶಯವು ಪ್ರಬುದ್ಧಮಾನವನ್ನು ತಲುಪುತ್ತದೆ. ವೃಷಣಗಳ ಬೆಳವಣಿಗೆಯನ್ನು ಇದೇ ರೀತಿ ನಿಯಂತ್ರಿಸಬಹುದು. ಒಟ್ಟಿನಲ್ಲಿ ಎಕ್ಸ್‌–ಅಂಗ ಒಂದು ಸಂಕೀರ್ಣ ಹಾರ್ಮೋನಿನ ಮೂಲ. ತಾನು ಉತ್ಪಾದಿಸುವ ಸ್ರಾವಕಗಳನ್ನು ಸೈನಸ್‌ಗ್ರಂಥಿಗೆ ಸಂಗ್ರಹಣೆಗಾಗಿ ಕಳುಹಿಸುತ್ತದೆ. ಸೈನಸ್‌ಗ್ರಂಥಿ ಸೂಕ್ತ ವೇಳೆಯಲ್ಲಿ ಅವನ್ನು ರಕ್ತಕ್ಕೆ ಬಿಡುಗಡೆ ಮಾಡಿದಾಗ ಕಾರ್ಯಾಚರಣೆ ನಡೆಯುತ್ತದೆ. (ಬಿ.ಕೆ.ಜೆ.)

**ಎಕ್ಸಪ್ಟೆರಿಗೋಟ:** ಎಕ್ಸಪ್ಟೆರಿಗೋಟ (ಹೆಮಿ ಮೆಟಬೋಲ) ಕೀಟವರ್ಗದ ಉಪವರ್ಗ. ಟೆರಿಗೋಟದ ಒಂದು ಭಾಗ. ರೂಪಾಂತರ ಸರಳ, ಕೋಶಾವಸ್ಥೆ ಅಪೂರ್ವ. ರೆಕ್ಕೆಗಳು ಹೊರ ಭಾಗದಿಂದ ಬೆಳೆಯುತ್ತವೆ. ಎಳಸು ಹಂತಗಳು, ಸಾಮಾನ್ಯವಾಗಿ ರಚನೆ ಮತ್ತು ನಡತೆಗಳಲ್ಲಿ ಪ್ರಾಯದ ಕೀಟಗಳನ್ನು ಹೋಲುತ್ತವೆ. ಈ ಉಪವರ್ಗದಲ್ಲಿ ಹಲವು ಗಣಗಳಿವೆ.

ಎಫೆಮೆರಾಪ್ಟಿರ. ಮೆ ನೊಣಗಳು ಮೃದು ಶರೀರ. ಮೋಟು. ಬಿರುಗೂದಲಿನಂತೆ ಕುಡಿಮೀಸೆ. ಬಾಯಿ ಭಾಗಗಳು ಅವಶೇಷ. ಕುಳಿತಾಗ ರೆಕ್ಕೆಗಳು ನಿಂತಿರುತ್ತವೆ. ಹಿಂಭಾಗದ ರೆಕ್ಕೆಗಳು ಕ್ಷೀಣ. ರೆಕ್ಕೆಗಳಲ್ಲಿ ಮಧ್ಯೆ ಸೇರಿದ ಹಲವು ಅಡ್ಡ ನರದಿಂಡುಗಳಿವೆ. ಹೊಟ್ಟೆ



ಮೇ ಫ್ಲೈ

ತುದಿಯಲ್ಲಿ ಉದ್ದವಾದ ಸರ್ಸಿ ಇದೆ. ಮರಿಗಳು ಜಲವಾಸಿಗಳು. ಉದ್ದ ಮತ್ತು ಚಪ್ಪಟೆಯಾಗಿವೆ. ವಿವಿಧ ಶ್ವಾಸ ಕಿವಿರುಗಳಿವೆ. ಪ್ರಾಯಕ್ಕೆ ಬರುವ ಮುನ್ನ, ರೆಕ್ಕೆಗಳುಳ್ಳ ಹಂತವಿದೆ. (ಎಫಿಮೆರಾಪ್ಟಿರ ನೋಡಿ).

ಓಡೋನೇಟ: ಕೊಡತಿ ಕೀಟಗಳು. ಪರಭಕ್ಷಕಗಳು. ಅಗಿಯುವ ಬಾಯಿ ಭಾಗಗಳಿವೆ. ಎರಡು ಜತೆ ಉದ್ದವಾದ, ಪೊರೆಯಂತೆ ರೆಕ್ಕೆಗಳಿವೆ. ಅವುಗಳ ಮೇಲೆ ಜಟಿಲವಾದ ಅಡ್ಡ ನರದಿಂಡುಗಳ ಜಾಲರಿ ಮತ್ತು ಒಂದು ಮಚ್ಚೆ, ಇವೆ. ಕೂಡುಗಣ್ಣುಗಳು ಬಹಳ ದೊಡ್ಡವು. ಕುಡಿಮೀಸೆಗಳು ಮೋಟಾಗಿದ್ದು, ತಂತು ರೂಪದವು. ಹೊಟ್ಟೆ ಉದ್ದ, ಕೃಶ, ನಿಂಫ್‌ಗಳು ಜಲಚರ, ಕೆಳತುಟಿ ಕೊಳ್ಳೆಗಳನ್ನು ಹಿಡಿಯಲು ಮಾರ್ಪಟ್ಟಿದೆ. ಬಾಲದ ಕಿವಿರುಗಳಿಂದ ಉಸಿರಾಟ.



ಡ್ರಾಗನ್ ಫ್ಲೈ



ಡ್ಯಾಮ್ಸಲ್ ಫ್ಲೈ



ಜಿರಳೆ

ಪ್ಲಿಕಾಪ್ಟಿರ: ಕಲ್ಲು ನೊಣಗಳು. ಶರೀರ ಮೃದು. ಕೆಲವು ದೊಡ್ಡವು, ಉದ್ದವಾದ, ಬಿರುಗೂದಲಿನಂತ ಕುಡಿಮೀಸೆಗಳು. ಕಚ್ಚುವ ಬಾಯಿ ಭಾಗಗಳಾದರು ದುರ್ಬಲ. ಪೊರೆಯಂತ ರೆಕ್ಕೆಗಳು, ಕುಳಿತಾಗ, ಹೊಟ್ಟೆಯ ಮೇಲೆ ಹಿಂದಕ್ಕೆ ಮಡಿಸಿವೆ. ಕಾಲುಗಳ ಹರಡಿನಲ್ಲಿ 3 ಖಂಡಗಳಿವೆ. ಹೊಟ್ಟೆಯ ತುದಿಯಲ್ಲಿ ಒಂದು ಜತೆ ಉದ್ದವಾದ, ಕೀಲುಗಳುಳ್ಳ ಸರ್ಸಿಗಳಿವೆ. ನಿಂಫ್‌ಗಳು ಜಲವಾಸಿಗಳು, ಕ್ಯಾಂಪೋಡಿ ಫಾರಂ. ಅವುಗಳಲ್ಲಿ ಉದ್ದವಾದ ಕುಡಿಮೀಸೆಗಳಿವೆ, ಸರ್ಸಿ ಮತ್ತು ವಿವಿಧ ಶ್ವಾಸ ಕಿವಿರುಗಳಿವೆ.

ಡಿಕ್ಟಿಯಾಪ್ಟಿರ: ಜಿರಲೆ, ಮ್ಯಾಂಟಿಡ್‌ಗಳು. 2 ಜೊತೆ ರೆಕ್ಕೆಗಳಿವೆ. ಮುಂದಿನ ರೆಕ್ಕೆಗಳು ಮಂದ – ಟೆಗ್‌ಮೈನ್ ಎಂಬ ಹೆಸರು. ಹಿಂಬಾಗದ ರೆಕ್ಕೆಗಳು ಬೀಸಣಿಗೆಯಂತೆ, ಉದ್ದವಾಗಿ ಮಡಿಸಿವೆ. ಹಿಂಗಾಲುಗಳು, ಮಧ್ಯದ ಕಾಲುಗಳಂತೆ ಓಡಲು ಮಾರ್ಪಟ್ಟಿವೆ. ಕಾಲಿನ ಹರಡಿನಲ್ಲಿ 5 ಖಂಡಗಳು. ಅಗಿಯುವ ಬಾಯಿ ಭಾಗಗಳಿವೆ.

ಗ್ರಿಲ್ಲೊಬ್ಲಾಟೊಡಿಯ. ಗ್ರಿಲ್ಲೊಬ್ಲಾಟಿಡ್‌ಗಳಿಗೆ ರೆಕ್ಕೆಗಳಿಲ್ಲ. ಕಣ್ಣುಗಳು ಸಣ್ಣವು. ಕೆಲವು ಪ್ರಭೇದದ ಕೀಟಗಳಿಗೆ ಕಣ್ಣುಗಳಿಲ್ಲ. ಹೆಣ್ಣಿನ ಅಂಡನಾಳ ವ್ಯಕ್ತವಾಗಿದೆ. ಕಾಲುಗಳೆಲ್ಲ ಒಂದೇ ತರಹ ಓಡಲು ಹೊಂದಿಕೊಂಡಿವೆ. ಕಾಲಿನ ಹರಡು 5 ಖಂಡಗಳು; ಅಗಿಯುವ ಬಾಯಿ ಭಾಗಗಳಿವೆ. (ನೋಡಿ ಕೀಟಗಳು)

ಫ್ಯಾಸ್ಮಿಡ: ಕಡ್ಡಿ ಎಲೆ ಕೀಟಗಳು. ಕೆಲವು ಪ್ರಭೇದಗಳಿಗೆ ರೆಕ್ಕೆಗಳಿಲ್ಲ. ಕೆಲವು ಪ್ರಭೇದಗಳಿಗೆ ಟೆಗ್‌ಮೈನ ಇದ್ದು, ಇದು ರೆಕ್ಕೆಗಳಿಗಿಂತ ಚಿಕ್ಕದು. ಕಾಲುಗಳೆಲ್ಲ ಒಂದೇ ತರಹ, ನಡೆಯಲು ಹೊಂದಿಕೊಂಡಿವೆ. ದವಡೆಗಳುಳ್ಳ ಬಾಯಿ ಭಾಗಗಳಿವೆ. ಕಿವಿಯ ಹರೆ ಇಲ್ಲ. ಹೆಣ್ಣಿನ ಅಂಡನಾಳ ಚಿಕ್ಕದು, ಆಗಾಗ ಮುಚ್ಚಿರುತ್ತದೆ.



ಗ್ರೈಲ್ಲೋಬ್ಲಾಟ

ಆರ್ಥಾಪ್ಟಿರ: ಮಿಡತೆಗಳು. 2 ಜತೆ ರೆಕ್ಕೆಗಳಿವೆ. ಮುಂದಿನ ರೆಕ್ಕೆಗಳು ಟೆಗ್‌ಮೈನ. ಹಿಂಗಾಲಿನ ತೊಡೆ ಫ್ಯೂಮರ್ ನೆಗೆಯಲು ಅಗಲವಾಗಿದೆ. ಕಾಲಿನ ಹರಡು 3 ಅಥವ 4 ಖಂಡಗಳು. ಶ್ರವಣ ಮತ್ತು ಶಬ್ದೋತ್ಪತ್ತಿ ಅಂಗಗಳಿವೆ. ಅಗಿಯುವ ಬಾಯಿ ಭಾಗಗಳಿವೆ.

ಡೆರ್ಮಾಪ್ಟಿರ: ಕರ್ಣಕೀಟಗಳು. ಕೀಟಗಳು ಉದ್ದವಾಗಿವೆ. ಅಗಿಯುವ ಬಾಯಿ ಭಾಗಗಳಿವೆ. ಮುಂದಿನ ರೆಕ್ಕೆಗಳು ಚಿಕ್ಕದಾದ ಟೆಗ್‌ಮೈನಿಂದಿವೆ. ನರದಿಂಡುಗಳಿಲ್ಲ. ಹಿಂದಿನ ರೆಕ್ಕೆಗಳು ಅರ್ಧ ವೃತ್ತಾಕಾರವಾಗಿವೆ. ನರದಿಂಡುಗಳು ಕೇಂದ್ರಾಪಸರಣ ಬೀಸಣಿಗೆಯಂತೆ ಮೊದಲು, ಆಮೇಲೆ ಅಡ್ಡವಾಗಿ ಮಡಿಸಿರುತ್ತವೆ. ಅನೇಕ ಕೀಟಗಳಿಗೆ ರೆಕ್ಕೆಗಳಿಲ್ಲ. ಸರ್ಸಿ ಬಹಳ ಗಟ್ಟಿಯಾದ ಚಿಮ್ಮುಟದಂತೆ ಮಾರ್ಪಟ್ಟಿವೆ.

ಎಂಬೈಯಾಪ್ಟಿರ: ಬಲೆ ಹೆಣೆಯುವ ಕೀಟಗಳು. ರೇಷ್ಮೆ ಪನ್ನಾಲೆಗಳಲ್ಲಿರುತ್ತವೆ. ಅಗಿಯುವ ಬಾಯಿ ಭಾಗಗಳಿವೆ. ಎರಡು ಜತೆ ರೆಕ್ಕೆಗಳಿವೆ. ಸರ್ಸಿ ಮೋಟು, 2–ಖಂಡಗಳು. ಹೆಣ್ಣಿಗೆ ಮರಿಗಳಂತೆ ರೆಕ್ಕೆಗಳಿಲ್ಲ.

ಐಸಾಪ್ಟಿರ: ಇವು ಸಂಘಜೀವಿಗಳು, ಬಹುರೂಪಿಗಳು ಸಂತಾನೋತ್ಪತ್ತಿ ಮಾಡುವುವು, ರೆಕ್ಕೆಗಳಿಲ್ಲದ ಶಿಪಾಯಿಗಳು, ಮತ್ತು ಕೆಲಸಗಾತಿಗಳು ಇವೆ. ಅಗಿಯುವ ಬಾಯಿಭಾಗಗಳು. ರೆಕ್ಕೆಗಳು ಒಂದೇ ತರಹ, ಉದ್ದ, ಪೊರೆಯಂತೆ, ಬುಡದಲ್ಲಿ ಮುರಿದು ಬಿದ್ದು ಹೋಗುತ್ತವೆ. ಮುಂಭಾಗದ ರೆಕ್ಕೆಗಳ ನರದಿಂಡುಗಳು ಗಟ್ಟಿ, ಉಳಿದ ನರದಿಂಡುಗಳು ಬಲೆಜಾಲರ. ಸರ್ಸಿ ಮೋಟು. ಸಂತಾನಾಂಗಗಳು ಅವನತಿ. (ನೋಡಿ ಐಸಾಪ್ಟಿರ).



ಎಂಬಿಡ್

ಸೋಕಾಪ್ಟಿರ: ಸೋಸಿಡ್‌ಗಳು, ಹೇನುಗಳು. ಸಣ್ಣ ಕೀಟಗಳು. ಕುಡಿಮೀಸೆಗಳು ತಂತುರೂಪದವು. ರೆಕ್ಕೆಗಳು ಸೂಕ್ಷ್ಮ ಪೊರೆಯಂತೆ ಇವೆ. ಹಲವಕ್ಕೆ ರೆಕ್ಕೆಗಳಿರುವುದಿಲ್ಲ. ತಲೆಯ ಮೇಲೆ Y– ಆಕಾರದ ಸೂಚರ್ ಇದೆ. ಬಾಯಿ ಭಾಗಗಳು ಬಹಳ ಸಣ್ಣ. ಸರ್ಸಿ ಇಲ್ಲ.

ಗೆದ್ದಲು

ಜೋರಾಪ್ಟಿರ: ಸಣ್ಣ ಕಿಟಗಳು, ರೆಕ್ಕೆಗಳು ಇವೆ. ಕೆಲವಕ್ಕೆ ಇಲ್ಲ. 2 ಖಂಡಗಳ ರುದ್ರಾಕ್ಷಿ ಸರದಂತ ಕುಡಿಮೀಸೆಗಳಿವೆ. ತಲೆಯ ಮೇಲೆ Y– ಆಕಾರದ ಗುರುತು ಇದೆ. ಕೆಳದವಡೆ, ಕೆಳತುಟಿಗಳು ಸಾಮಾನ್ಯವಾಗಿದ್ದಂತೆ. ರೆಕ್ಕೆಗಳು ಬಿದ್ದು ಹೋಗಬಹುದು. ಸರ್ಸಿ ಮೋಟು.

ಮಲ್ಲಾಫಗ: ಕಚ್ಚುವ ಹೇನು. ರೆಕ್ಕೆಗಳಿಲ್ಲ. ಪಕ್ಷಿಗಳ ಮೇಲೆ ಬಾಹ್ಯ ಪರೋಪಜೀವಿಗಳು. ಕಣ್ಣುಗಳು ಸಣ್ಣವು. ಸರಳಗಣ್ಣುಗಳಿಲ್ಲ. ಕುಡಿಮೀಸೆ 3–5 ಖಂಡಗಳಿಂದಾಗಿವೆ. ಅಗಿಯಲು ಬಾಯಿ ಭಾಗಗಳು ಮಾರ್ಪಟ್ಟಿವೆ. ಮುನ್ನೆದೆ ಪ್ರತ್ಯೇಕ, ಮಧ್ಯದ ಮತ್ತು ಹಿಂಭಾಗದ ಎದೆ ಭಾಗಗಳು ಒಟ್ಟುಗೂಡಿವೆ. ಸರ್ಸಿ ಇಲ್ಲ.



ಜೊರಾಪ್ಟೆರ



ಪಕ್ಷಿಯ ಹೇನು



ತ್ರಿಪ್



ಲೇಡಿಬರ್ಡ್ ಜೀರುಂಡೆ

ಅನೊಪ್ಲುರ ಅಥವ ಸೈಫಂಕ್ಯುಲೇಟ: ರಸ ಹೀರುವ ಹೇನು. ರೆಕ್ಕೆಗಳಿಲ್ಲ. ಸ್ತನಿಗಳ ಮೇಲೆ ಬಾಹ್ಯ ಪರೋಪಜೀವಿಗಳು. ಕಣ್ಣುಗಳು ಸಣ್ಣವು ಅಥವ ಇಲ್ಲ. ಕುಡಿ ಮೀಸೆ 3–5 ಖಂಡಗಳಿಂದಾಗಿವೆ. ಬಾಯಿ ಭಾಗಗಳು ಚುಚ್ಚಿ ರಸ ಹೀರಲು ಮಾರ್ಪಟ್ಟಿವೆ, ಉಪಯೋಗಿಸದಿದ್ದಾಗ, ತಲೆಯೊಳಕ್ಕೆಳೆದುಕೊಳ್ಳುತ್ತವೆ. ಎದೆ ಭಾಗಗಳೆಲ್ಲ ಒಟ್ಟುಗೂಡಿವೆ. ಸರ್ಸಿ ಇಲ್ಲ.

ಥೈಸನಾಪ್ಟೆರ: ಥ್ರಿಪ್ಸ್, ಸಣ್ಣ, ಕೃಶ ಶರೀರ. ಕುಡಿ ಮಿಸೆ ಮೋಟು. ಚುಚ್ಚುವ ಬಾಯಿ ಭಾಗಗಳು. ರೆಕ್ಕೆಗಳಿದ್ದಾಗ, ಬಹಳ ಕಿರಿದು. ಸರ್ಸಿ ಇಲ್ಲ. ರೂಪಾಂತರದಲ್ಲಿ ಬಾಯಿಭಾಗಗಳು. ರೆಕ್ಕೆಗಳಿದ್ದಾಗ, ಬಹಳ ಕಿರಿದು. ಸರ್ಸಿ ಇಲ್ಲ. ರೂಪಾಂತರದಲ್ಲಿ 1–2 ಕೋಶ ಹಂತಗಳಿವೆ.

ಹೊಮಾಪ್ಟೆರ: ಸಿಕಾಡ, ಮುತ್ತುವ ಹುಳು, ಬಿಳಿ ನೊಣ, ಸಸ್ಯ ಹೇನು, ಶಲ್ಕ ಕೀಟಗಳಿವೆ. ಸಸ್ಯರಸವನ್ನು ಹೀರುತ್ತವೆ. ಹೀರಲು ಬಾಯಿ ಭಾಗಗಳು ಮಾರ್ಪಟ್ಟಿವೆ. ರೆಕ್ಕೆಗಳು 2 ಜೊತೆ, ಕುಳಿತಾಗ, ಶರೀರದ ಮೇಲೆ ಮಾಳಿಗೆಯಂತೆ ನಿಂತಿರುತ್ತವೆ. ಗಂಡುಗಳಲ್ಲಿ ಒಂದೇ ಜತೆ ರೆಕ್ಕೆಗಳು. ಕೂಡುಗಣ್ಣು ಚೆನ್ನಾಗಿವೆ. ಸರಳುಗಣ್ಣು ಇವೆ ಅಥವ ಇಲ್ಲ.

ಹೆಟಿರಾಪ್ಟೆರ ಅಥವ ಹೆಮಿಪ್ಟೆರ: ತಿಗಣೆಗಳು. ಚುಚ್ಚಿ–ಹೀರುವ ಬಾಯಿ ಭಾಗಗಳು. ಮುಂದಿನ ರೆಕ್ಕೆಗಳ ಬುಡದ ಅರ್ಧ ಗಟ್ಟಿ, ತುದಿ ಪೊರೆ. ಹಿಂದಿನ ರೆಕ್ಕೆಗಳು ಪೊರೆಯಂತೆ ತೆಳುವಾಗಿವೆ. ಕುಳಿತಾಗ, ರೆಕ್ಕೆಗಳು ಹೊಟ್ಟೆಯ ಮೇಲೆ ಅಗಲವಾಗಿರುತ್ತವೆ. ಪೊರೆ ತುದಿಗಳು ಒಂದರ ಮೇಲೊಂದು ಸೇರುತ್ತವೆ. ಕೂಡುಗಣ್ಣು ಚೆನ್ನಾಗಿ ಬೆಳೆದಿವೆ. ಸರಳಗಣ್ಣುಗಳು ಇವೆ ಅಥವ ಇಲ್ಲ. (ನೋಡಿ ಕೀಟಗಳು) (ಎಂ.ಪಿ)

**ಎಡ್ರಿಯಾಸ್ಟೆರಾಯ್ಡಿಯ:** ಇದು ಕಂಟಕಚರ್ಮಿ ವಂಶಕ್ಕೆ ಸೇರಿದ ಒಂದು ವರ್ಗ. ಪೆಲ್ಮೆಟೊಜೋವ ಎಂಬ ಉಪವಂಶಕ್ಕೆ ಸೇರುತ್ತದೆ. ಇವು ಲುಪ್ತಜೀವಿಗಳು. ಇವುಗಳಿಗೆ ಫಲಕಾಕಾರದ ದೇಹವಿದ್ದು ತೊಟ್ಟು ಅಥವಾ ಬಾಹುಗಳಿರುವುದಿಲ್ಲ. ತಮ್ಮ ವಿಮುಖ ಮೇಲ್ಮೈ ಮೇಲೆ ಸ್ವತಂತ್ರವಾಗಿ ಬಿದ್ದಿದ್ದು ಆಧಾರವಸ್ತುವಿಗೆ ಅಂಟಿಕೊಂಡಿರುತ್ತಿದ್ದವು. ಇವುಗಳ ದೇಹದ ಚಿಪ್ಪು ಪೆಡುಸಾಗಿರದೆ ಅನೇಕ ಸಣ್ಣ ತಟ್ಟೆಗಳಿಂದ ರೂಪಿತವಾಗಿದ್ದು, ನೇರ ಆಂಬ್ಯುಲಾಕ್ರಗಳಿವೆ. ಈ ಜಾಡುಗಳಿಗೆ ಸಾಮಾನ್ಯವಾಗಿ ಆವರಣ ಫಲಕಗಳಿದ್ದವು. ನಳಿಕೆ ಪಾದಗಳು ಹೊರಕ್ಕೆ ಚಾಚಿಕೊಳ್ಳಲು ಈ ಜಾಡಿನಲ್ಲಿ ರಂಧ್ರಗಳಿದ್ದವು. ಈ ಪ್ರಾಣಿಗಳು ಕೇಂಬ್ರಿಯನ್ ಅವಧಿಯ ಉತ್ತರಾರ್ಧದಿಂದ ಕಾರ್ಬಾನಿಫೆರಸ್ ಅವಧಿಯವರೆಗೆ ಬದುಕಿದ್ದುವು. ಉದಾಹರಣೆ ಎಡ್ರಿಯಾಸ್ಟರ್. (ಎಚ್.ಎಚ್.ಎಸ್.)

**ಎತ್ತು:** ಆರ್ಟಿಯೊಡ್ಯಾಕ್ಟೈಲ ಗಣದ ಬೋವಿಡೆ ಕುಟುಂಬಕ್ಕೆ ಸೇರಿದ ಮೆಲುಕು ಹಾಕುವ ಸ್ತನಿ. ಆಂಗ್ಲ ಭಾಷೆಯ ನಾಮ ಆಕ್ಸ್ ಅಥವಾ ಬುಲ್. ಮೂಲ ಸ್ಯಾಕ್ಸನ್ ಭಾಷೆಯಲ್ಲಿ ಪಳಗಿಸಿದ ಗಂಡು ದನಕ್ಕೆ ಮಾತ್ರ ಈ ಹೆಸರನ್ನು ಬಳಸಲಾಗುತ್ತಿತ್ತು. ಕನ್ನಡದಲ್ಲಿ ಎತ್ತು, ಹೋರಿ ಎಂದು ಬಳಸುವುದು ವಾಡಿಕೆ.



ಹಳ್ಳೀಕಾರ್ ಎತ್ತು

ವ್ಯವಸಾಯದ ಕೆಲಸಕ್ಕೆ ಮಾನವ ಪಳಗಿಸಿಕೊಂಡ ಕಾಡುಪ್ರಾಣಿಗಳಲ್ಲಿ 'ಎತ್ತು' ಮೊದಲನೆಯದು. ಯೂರೋಪಿನ ನಿಯೋಲಿಥಿಕ್ ಯುಗದಲ್ಲಿ ಹೇರಳವಾಗಿ ದೊರೆತ ಎತ್ತುಗಳ ಪಳೆಯುಳಿಕೆಗಳು ಇದಕ್ಕೆ ಪುರಾವೆ. 3,500 ವರ್ಷಗಳ ಹಿಂದಿನಿಂದಲೂ ಈಜಿಪ್ಟ್, ಬ್ಯಾಬಿಲೋನಿಯ, ಭಾರತ ದೇಶಗಳಲ್ಲಿ ಮಾನವ ಎತ್ತನ್ನು ಪಳಗಿಸಿ ಕೆಲಸಕ್ಕೆ ಬಳಸಿಕೊಂಡಿರುವನೆಂದು ಹೇಳಲು ಸಾಕಷ್ಟು ಆಧಾರಗಳು ದೊರೆತಿವೆ. ಯೂರೋಪಿನಲ್ಲಿ ದೊರೆತಿರುವ ಪಳೆಯುಳಿಕೆಗಳನ್ನು ಆಧಾರವಾಗಿಟ್ಟುಕೊಂಡು, ಮಾನವ ಪಳಗಿಸಿದ ಅತ್ಯಂತ ಪ್ರಾಚೀನ ಕಾಲದ ಎತ್ತು, ಇಂದಿನ ಎತ್ತಿಗಿಂತ ಸಣ್ಣದು. ಈ ವ್ಯತ್ಯಾಸವನ್ನು ಆಧಾರವಾಗಿಟ್ಟುಕೊಂಡು ಮಾನವ ಪ್ರಥಮವಾಗಿ ಎತ್ತನ್ನು ಪಳಗಿಸಿದ್ದು ಯೂರೋಪಿನಲ್ಲಲ್ಲ, ಏಷ್ಯದಲ್ಲಿ ಎಂಬ ವಾದಗಳುಂಟು. ಏಷ್ಯದಲ್ಲಿ ಪಳಗಿಸಿದ್ದ ಎತ್ತನ್ನು ನಿಯೋಲಿಥಿಕ್ ಮಾನವ ಯೂರೋಪಿಗೆ ವಲಸೆ ಹೋದಾಗ ತನ್ನೊಡನೆ ಕೊಂಡೊಯ್ದಿರುವುದು ಸಾಧ್ಯ ಎಂಬ ಊಹೆ ಇದೆ.

ವ್ಯವಸಾಯವೇ ಪ್ರಧಾನವಾದ ದೇಶಗಳಲ್ಲಿ ಎತ್ತು ಬಹುಮುಖ್ಯ ಆರ್ಥಿಕ ಪ್ರಾಣಿ. ಸಾಧುವೆನಿಸಿರುವ ಎತ್ತು ಸುಲಭವಾಗಿ ಪಳಗುವುದರಿಂದ ಅದರಿಂದ ಬಗೆಬಗೆಯ ಕೆಲಸಗಳನ್ನು ಮಾಡಿಸುವುದು ಸುಲಭ. ಹೊಲದ ಉಳುಮೆ, ಸರಕು ಸಾಗಣೆ, ಗಾಡಿಗೆ ಹೂಡುವುದು, ವ್ಯವಸಾಯದ ವಿವಿಧ ಕಾರ್ಯಗಳಿಗೆ ಎತ್ತನ್ನು ಬಳಸಲಾಗುತ್ತದೆ. ಎತ್ತುಗಳ ಸಂಖ್ಯೆ ಅಧಿಕವಾಗಿದ್ದಷ್ಟೂ ವ್ಯವಸಾಯದ ವಹಿವಾಟು ಹೆಚ್ಚು. ಪ್ರತಿ 12 ಎಕರೆ ಸಾಗುವಳಿ ಭೂಮಿಗೂ ಕರ್ನಾಟಕದಲ್ಲಿ ಒಂದು ಜೊತೆ ಎತ್ತುಗಳಿರುವುದೆಂದು ದನಗಣತಿಯಿಂದ ತಿಳಿದುಬಂದಿದೆ. ಸಮರ್ಪಕವಾಗಿ ವ್ಯವಸಾಯ ಮಾಡಿ ಆಹಾರೋತ್ಪತ್ತಿಯನ್ನು ಹೆಚ್ಚಿಸಲು ಪ್ರತಿ ಎಂಟು ಎಕರೆಗೆ ಒಂದು ಜೊತೆ ಎತ್ತು ಅಗತ್ಯ. ನೋಡಿ– ಆರ್ಟಿಯೊಡ್ಯಾಕ್ಟೈಲ; ಬೋವಿಡೆ.
***

**ಎದೆಗೂಡು:** ಕುತ್ತಿಗೆ (ಕತ್ತು) ಮತ್ತು ಹೊಟ್ಟೆ ನಡುವೆ ಇರುವ ಭಾಗವೇ ಎದೆಗೂಡು. ಆಂಗ್ಲಭಾಷೆಯಲ್ಲಿ ಥೊರ್ಯಾಕ್ಸ್ ಎನ್ನುವರು. ಇದರ ಎಲುಗಟ್ಟಿನಲ್ಲಿ ೧೨ ಪಕ್ಕೆಲುಬುಗಳ ಜೋಡಿಗಳೂ, ಎದೆಚೆಕ್ಕೆಯೂ (ಸ್ಟರ್ನಂ), ೧೨ ಎದೆಗೂಡಿನ ಬೆನ್ನೆಲುಬುಗಳೂ ಇವೆ. ಎದೆಗೂಡಿನ ಎಲುಬುಗಳಿಗೆ ಹೊಂದಿಕೊಂಡ ಬಲವಾದ ಸ್ನಾಯುಗಳಿವೆ. ಈ ಸ್ನಾಯುಗಳಿಗೆ ಕವಚವಾಗಿ ಕೊಬ್ಬು ಚರ್ಮದ ಊತಕಗಳೂ ಇವೆ. ಉಸಿರಾಟ ಕ್ರಿಯೆಯಲ್ಲಿ ಎದೆಗೂಡಿನ ಗಾತ್ರ ಬದಲಾವಣೆಗಳಿಂದ ಉಸಿರಾಟ ಸಾಧ್ಯ. ಎದೆಗೂಡಲ್ಲಿರುವ ಮುಖ್ಯ ಅಂಗಗಳು: ಫುಪ್ಫುಸಗಳು, ಉಸಿರ್ನಾಳ ಮತ್ತದರ ಕವಲುಗಳು, ಹೃದಯ, ದೊಡ್ಡ ರಕ್ತನಾಳಗಳು, ಹಾಲುರಸ ಸಾಗುನಾಳಗಳು (ಲಿಂಫ್ಯಾಟಿಕ್ ಡಕ್ಟ್ಸ್) ಇವೆ. ಕೆಳಗಿನ ತೆರಪಾದ ತಳದಲ್ಲಿ, ಸ್ನಾಯುಗೂಡಿನ ವಪೆ ಎದೆಗೂಡೊಳಕ್ಕೆ ಉಬ್ಬಿಕೊಂಡಿದೆ. ಮೇಲ್ಗಡೆ ಸಣ್ಣ ತೆರಪಿನ ಕೊರಳಲ್ಲಿರುವ ಜೀವಾಳದ ರಚನೆಕಟ್ಟುಗಳು ಎದೆಗೂಡೊಳಕ್ಕೆ ತೂರಿಬರುತ್ತವೆ. ನೋಡಿ– ಕಶೇರುಕಗಳು.
***

**ಎಪಿಡಿಡೈಮಸ್:** ವೃಷಣದ ಹಿಂದಿನ ಭಾಗದಲ್ಲಿ ಅದಕ್ಕೆ ಹೊಂದಿಕೊಂಡಿರುವ, ನಾಳದಂತಹ, ವೀರ್‍ಯಾಣುಗಳು ಕಾರ್ಯ ಪಕ್ವತೆ (ಫಿಸಿಯಾಲಾಜಿಕಲ್ ಮೆಚುರೇಷನ್) ಪಡೆಯುವ, ಒಂದು ಪ್ರಮುಖ ಗಂಡು ಹೆಚ್ಚುವರಿ ಪ್ರಜನನಾಂಗ. ಪ್ರಾರಂಭದಲ್ಲಿ ಉಬ್ಬಿಕೊಂಡಿದ್ದ ಭಾಗಕ್ಕೆ ತಲೆಯೆಂದೂ (ಕ್ಯಾಪುಟ), ಕೊನೆಯಲ್ಲಿ ಸ್ವಲ್ಪ ಉಬ್ಬಿದ ಭಾಗವನ್ನು ಬಾಲವೆಂದೂ (ಕ್ವಾಡ) ಕರೆಯಲಾಗಿದೆ. ನಡುವಿನಲ್ಲಿ ತೆಳುವಾದ ನಾಳದಂತಿದ್ದ ಭಾಗವನ್ನು ಮಧ್ಯಭಾಗವೆಂದೂ (ಕಾರ್ಪಸ್) ವಿಂಗಡಿಸಲಾಗಿದೆ. ಇವುಗಳು ಸೂಕ್ಷ್ಮ ರಚನೆಯಲ್ಲಿ ಸ್ವಲ್ಪ ಭಿನ್ನವಾಗಿವೆ.

ಎಪಿಡಿಡೈಮಸ್ ಅತಿಯಾಗಿ ಸುತ್ತಿಕೊಂಡಿರುವ ನಾಳ. ಬಿಡಿಸಿದಾಗ 40 ಅಥವಾ 20 ಸೆಂಮೀ ಗಳಷ್ಟು ಉದ್ದವಾಗಿರುತ್ತದೆ. ಇದರಿಂದ ಅಧಿಕ ಪ್ರಮಾಣದಲ್ಲಿ ವೀರ್‍ಯಾಣುಗಳು ಶೇಖರವಾಗಲು ಅನುಕೂಲವಾಗುತ್ತದೆ. ಈ ನಾಳವೇ ಮುಂದೆ ವಾಸ್ ಡೆಫರೆನ್ಸ್ ಆಗಿ ಮುಂದುವರಿಯುತ್ತದೆ.

ಎಪಿಡಿಡೈಮಸ್‌ನ ತಲೆಯ ಭಾಗವು 10 ಅಥವಾ 15 ಎಫರೆಂಟ್ ನಳಿಕೆಗಳಿಂದ ವೃಷಣದ ಸಂಪರ್ಕ ಹೊಂದಿದೆ. ಎಫರೆಂಟ್ ನಳಿಕೆಗಳು ಮಿಸೋನೆಫ್ರಿಕ್ ನಾಳಗಳಿಂದ ಉಗಮವಾದರೆ ಎಪಿಡಿಡೈಮಸ್, ವೂಲ್ಫಿಯನ್ ನಾಳದಿಂದ ವಿಕಸನಹೊಂದುತ್ತದೆ.

ಎಪಿಡಿಡೈಮಸ್‌ನ ಭಿತ್ತಿಯು ಅನೇಕ ಅಂಗಾಂಶಗಳಿಂದಾಗಿದ್ದು ಪ್ರಮುಖವಾಗಿ ಸ್ರವಿಸುವ ಜೀವಕೋಶಗಳು, ಸ್ನಾಯುಗಳು ಮತ್ತು ಜೊಡಣೆ ಅಂಗಾಂಶಗಳಿರುತ್ತವೆ. ಜೀವಕೋಶ ತುದಿಯಲ್ಲಿ ಸ್ಟೀರಿಯೋ ಸೀಲಿಯಾಗಳಿರುತ್ತವೆ. ಇವುಗಳ ಹೊರಗೆ ಸ್ನಾಯುವಿನ ಪದರವೂ, ಜೊಡಣೆ ಅಂಗಾಂಶವೂ, ಲೊಮನಾಳಗಳೂ ಇರುತ್ತವೆ.

ಸರೀಸೃಪಗಳಲ್ಲಿ ಒಂದು ಸರಳವಾದ ನಾಳದ ರೂಪದಲ್ಲಿದ್ದ ಎಪಿಡಿಡೈಮಸ್, ಸ್ತನಿಗಳಲ್ಲಿ ಪೂರ್ಣಪ್ರಮಾಣದ ಬೆಳವಣಿಗೆಯನ್ನು ಹೊಂದಿ, ರಚನೆ ಮತ್ತು ಕಾರ್ಯದ ಸಂಕೀರ್ಣತೆ ಪಡೆದಿದೆ.

ಐದು ತರಹದ ಜೀವಕೋಶಗಳಿದ್ದು ಅವುಗಳನ್ನು ಪ್ರಿನ್ಸಿಪಲ್ ಕೋಶಗಳು, ಬೆಸಲ್‌ಕೋಶಗಳು, ಮೈಟೊಕಾಂಡ್ರಿಯ ಭರಿತ ಕೋಶಗಳು, ಕ್ಲಿಯರ್ ಕೋಶಗಳು ಮತ್ತು ಹಾಲೊಕೋಶಗಳೆಂದು ಗುರುತಿಸಲಾಗಿದೆ. ಹಲವಾರು ವರ್ಷಗಳ ಪ್ರಾಯೋಗಿಕ ಅಧ್ಯಯನಗಳು ಎಪಿಡಿಡೈಮಸ್‌ನ ಮೂರು ಮುಖ್ಯ ಕಾರ್ಯಗಳನ್ನು ವಿವರಿಸಿವೆ. 1. ವೀರ್‍ಯಾಣುಗಳನ್ನು ವೃಷಣದಿಂದ ಸಾಗಿಸುವುದು. 2. ವೀರ್‍ಯಾಣುಗಳಲ್ಲಿ ಕಾರ್ಯ ಪಕ್ವತೆಯನ್ನು ತರಲು ತಕ್ಕದಾದ ಆವರಣವನ್ನು ಸೃಷ್ಟಿಸಿ, ಕಾರ್ಯಪಕ್ವತೆ ತರುವುದು. 3. ವೀರ್‍ಯಾಣುಗಳ ಉಳಿವಿಯುಕೆಗೆ ಸಹಾಯಕವಾಗುವುದು.

ಎಪಿಡಿಡೈಮಸ್‌ನ ಜೀವಕೋಶಗಳು ವಿವಿಧ ಪ್ರೊಟೀನ್‌ಗಳನ್ನು (ಉದಾ: 70 ಮತ್ತು 37 ಕೆಡಿಎ) ಸ್ರವಿಸಿ ಅವುಗಳ ಪ್ರಭಾವದಿಂದ ವೀರ್‍ಯಾಣುಗಳಲ್ಲಿ ಕಾರ್ಯಪಕ್ವತೆ ಹಾಗೂ ಈಜುವ ಸಾಮರ್ಥ್ಯವನ್ನು ತರಲು ಸಹಾಯಕವಾಗಿದೆ.

ಪ್ರಜನನ ಕ್ರಿಯೆಯಲ್ಲಿ ಎಪಿಡಿಡೈಮಸ್‌ನ ಪಾತ್ರ ಬಹುಮುಖ್ಯವಾದದ್ದು. ವೃಷಣದಿಂದ ಬೇರ್ಪಡಿಸಿದ ವೀರ್‍ಯಾಣುಗಳಲ್ಲಿ ಈಜುವ ಸಾಮರ್ಥ್ಯವಿಲ್ಲದ ಕಾರಣ ಅವು ಅಂಡಾಣು ತಲುಪಿ (ಹೆಣ್ಣಿನ ಪ್ರಜನನಾಂಗದಲ್ಲಿ) ಅದನ್ನು ಫಲಿಸಲಾರವು. ವಿರ್‍ಯಾಣುಗಳು ಎಪಿಡಿಡೈಮಸ್‌ನ ಮುಖಾಂತರ ಬಂದಾಗ ಮಾತ್ರ ಅವುಗಳಿಗೆ ಈ ಸಾಮರ್ಥ್ಯಬರುತ್ತದೆ. ಏಕೆಂದರೆ, ಮೇಲೆ ತಿಳಿಸಿದಂತೆ, ವೀರ್‍ಯಾಣುಗಳು ಕಾರ್ಯಪಕ್ವತೆ ಪಡೆಯುವುದು ಎಪಿಡಿಡೈಮಸ್‌ನಲ್ಲಿ.

ಎಪಿಡಿಡೈಮಸ್‌ನ ಕಾರ್ಯಕ್ಷಮತೆಯನ್ನು ಅಡ್ಡಿಪಡಿಸಿ (ಡಿಸ್ಟರ್ಬ್)ಸಂತಾನ ನಿಯಂತ್ರಣವನ್ನು ಸಾಧಿಸಲು ಅನೇಕ ಪ್ರಯತ್ನಗಳು ನಡೆದಿವೆ. ಅಂದರೆ, ಕೆಲವು ರಾಸಾಯನಿಕಗಳನ್ನು (ಉದಾ: ಸಿಪ್ರೊಟಿರೊನ ಎಸಿಟೇಟ್) ಉಪಯೋಗಿಸಿ, ಎಪಿಡಿಡೈಮಸ್‌ನ್ನು ನಾಶಪಡಿಸದೇ ಕೇವಲ ಅದರ ಕಾರ್ಯವನ್ನು ಅಡ್ಡಿಪಡಿಸಿ, ವೀರ್‍ಯಾಣುಗಳನ್ನು ಶಕ್ತಿಗುಂದಿಸಲು ಪ್ರಯತ್ನಿಸಲಾಗಿದೆ. ಆದರೆ, ಇದುವರೆಗೆ, ಯಾವುದೇ ಮನುಷ್ಯರಲ್ಲಿ ಉಪಯೋಗಿಸಬಹುದಾದ, ರಾಸಾಯನಿಕಗಳ ಪತ್ತೆಯಾಗಿಲ್ಲವಾದರು, ಎಪಿಡಿಡೈಮಿಸ್ ಮೂಲಕ, ಗಂಡಿನಲ್ಲಿ ಸಂತಾನ ನಿಯಂತ್ರಣ ಸಾಧ್ಯವಾಗಬಹುದೆಂಬ ಆಸೆಯಿದೆ. (ಎಚ್.ಎನ್.ವೈ.)

**ಎಪಿಬೋಲಿ:** ಕಶೇರುಕ ಪ್ರಾಣಿಗಳ ಭ್ರೂಣದ ಬೆಳವಣಿಗೆಯಲ್ಲಿ ಗ್ಯಾಸ್ಟ್ರುಲೀಕರಣ ಕಾಲದಲ್ಲಿ ನಡೆಯುವ ಒಂದು ರೀತಿಯ ಜೀವಕೋಶಗಳ ಚಲನೆ. –ಇನ್ನೊಂದರ ಮೇಲೆ ವಿಸ್ತರಿಸು– ಎನ್ನುವ ಅರ್ಥದಲ್ಲಿ ಈ ಪದವನ್ನು ಗ್ರೀಕ್ ಭಾಷೆಯಿಂದ ಪಡೆದು ಬಳಸಿದೆ. ವಾಸ್ತವವಾಗಿ ಗ್ಯಾಸ್ಟ್ರುಲೀಕರಣ ಕಾಲದಲ್ಲಿ ಹೊರದರ್ಮ ಜೀವಕೋಶಗಳು ಸಂಖ್ಯೆಯಲ್ಲಿ ವೃದ್ಧಿಸಿ ಉಳಿದೆಲ್ಲವುಗಳನ್ನು ಸುತ್ತುವರಿಯುವ ಘಟನೆಗೆ ಈ ಪದವನ್ನು ಬಳಸುತ್ತಾರೆ. ಈ ಘಟನೆಯಲ್ಲಿ ಮುಖ್ಯಪಾತ್ರವಹಿಸುವವು ಸಂಭಾವ್ಯ ಎಪಿಡರ್ಮಲ್ ಮತ್ತು ನ್ಯೂರಲ್ ಪ್ರದೇಶಗಳು. ಈ ಪ್ರದೇಶಗಳ ಚಲನೆಯು ಭವಿಷ್ಯದ ಭ್ರೂಣದೇಹದ ಅಗ್ರ–ಪಶ್ಚ ಅಕ್ಷದ ದಿಸೆಯಲ್ಲಿ ನಡೆಯುತ್ತದೆ. ದುಂಡಾಗಿರುವ ಕಪ್ಪೆ ಅಂಫಿಯಾಕ್ಸಸ್‌ಗಳಂತಹ ಪ್ರಾಣಿಗಳ ಬ್ಲಾಸ್ಟುಲಾಗಳಲ್ಲಿ ಕಂಡುಬರುವ ಅಗ್ರ–ಪಶ್ಚೀಯವಾದ ವಿಸ್ತರಣಾ ಪ್ರವೃತ್ತಿಯು ಅಗ್ರ–ಪಶ್ಚ ದಿಕ್ಕಿನಲ್ಲಿ ಆವರಿಸಿಕೊಳ್ಳುವ ಚಲನೆಯನ್ನು ಉತ್ಪತ್ತಿ ಮಾಡುತ್ತದೆ. ಇದರ ಫಲವಾಗಿ ಸಂಭಾವ್ಯ ಎಪಿಡರ್ಮಲ್ ಮತ್ತು ನ್ಯೂರಲ್ ಪ್ರದೇಶಗಳು ಒಳಮುಖವಾಗಿ ಚಲಿಸುತ್ತಿರುವ ಸಂಭಾವ್ಯ ನೋಟೊಕಾರ್ಡ್, ಮಧ್ಯದರ್ಮ ಮತ್ತು ಒಳದರ್ಮೀಯ ಪ್ರದೇಶಗಳನ್ನು ವಾಸ್ತವವಾಗಿ ಸುತ್ತುಗಟ್ಟಿ ನುಂಗುತ್ತವೆ. ಆದರೆ, ಚಪ್ಪಟ್ಟೆಯಾದ ಬ್ಲಾಸ್ಟೋಡಿಸ್ಕ್‌ಗಳಲ್ಲಿ ಇದು ಕೇವಲ ಅಗ್ರ–ಪಶ್ಚ ವಿಸ್ತರಣೆಯಲ್ಲಿ ಕೊನೆಗೊಂಡು ಅಂಚಿನ ಕಡೆಗಿನ ಚಲನೆ ಮತ್ತು ಎಪಿಡರ್ಮಲ್ ಪ್ರದೇಶದ ವಿಸ್ತರಣೆಯನ್ನು ಒಳಗೊಳ್ಳುತ್ತದೆ. ಈ ಮೇಲೆ ತಿಳಿಸಿದ ಚಟುವಟಿಕೆಗಳು ಜೀವಕೋಶಗಳ ಸಂಖ್ಯಾವೃದ್ಧಿಯನ್ನು ಒಳಗೊಂಡು ಈ ಪ್ರದೇಶಗಳಿಗೆ ಸೀಮಿತವಾದಂತೆ ಸ್ಥಳ ಬದಲಾವಣೆಗಳನ್ನು ಉಂಟು ಮಾಡುತ್ತವೆ. ಗ್ಯಾಸ್ಟ್ರುಲೀಕರಣದಲ್ಲಿ ಇದು ಒಂದು ಪ್ರಮುಖ ಘಟನೆ. (ಎಚ್.ಎಚ್.ಎಸ್.)

**ಎಫಿಡ್ರ ನೊಣ:** ಸಂಧಿಪದಿ ವಂಶದ ಡಿಪ್ಟರ ಗಣದ ಎಫಿಡ್ರಿಡೆ ಕುಟುಂಬದ ಸದಸ್ಯ. ದೇಹ ರಚನೆಯಲ್ಲಿ ಈ ನೊಣ ಡ್ರೊಸಾಫಿಲಿಡೆ ಕುಟುಂಬ ಸದಸ್ಯರನ್ನು ಹೋಲುತ್ತದೆ. ದೇಹದ ಉದ್ದ ೧ ರಿಂದ ೨ ಮಿಮೀ. ಉಪ್ಪುನೀರಿನಲ್ಲಿ ಮೊಟ್ಟೆಯಿಡುತ್ತದೆ. ಮೊಟ್ಟೆಯೊಡೆದು ಲಾರ್ವ (ಡಿಂಬ) ಹೊರಬಂದು ಕೋಶಾವಸ್ಥೆ ತಲುಪುತ್ತದೆ. ಆಗ ಅಲೆಗಳ ಹೊಡೆತದಿಂದಾಗಿ ಕೋಶಾವಸ್ಥೆಯ ಹಂತದ ನೊಣ ದಡ ಮುಟ್ಟುತ್ತದೆ. ಕೋಶಾವಸ್ಥೆಯ ಹಂತ ಮುಗಿಸಿ, ಪ್ರೌಢಾವಸ್ಥೆ ತಲುಪುತ್ತದೆ. ನೊಣದ ಬಣ್ಣ ಕಪ್ಪು ಅಥವಾ ಕಂದುಗೆಂಪು. ಬಾಯಿ ಬಹಳ ಅಗಲ. ವಿಬ್ರಿಸೆ ಇಲ್ಲ. ಕೆನ್ನೆಗಳು ಉಬ್ಬಿವೆ. ತಲೆಯ ತಳಭಾಗದಲ್ಲಿ ಬಾಯ ಒಳಾಂಗಗಳು ಆವರಿಸಿವೆ. ಪ್ಸಿಲೋಪಪೆಟ್ರೋಲೈ ಎಂಬ ನೊಣದ ಲಾರ್ವಗಳು ಕಲ್ಲೆಣ್ಣೆ ಬಾವಿಗಳಲ್ಲಿ ವಾಸಿಸುತ್ತವೆ. ಇವು ಎಣ್ಣೆ ಬಾವಿಗೆ ಬೀಳುವ ಇತರ ಕೀಟಗಳನ್ನು ತಿಂದು ಬದುಕುತ್ತವೆ. ಕೆಲಿಫೋರ್ನಿಯದ ವಿವಿಧ ತೈಲಪ್ರದೇಶಗಳಲ್ಲಿ ಇವು ಹೆಚ್ಚಾಗಿವೆ. ಸಮುದ್ರದದಡದಲ್ಲಿ ದೊರೆಯುವ ಕೋಶವಸ್ಥೆಯ ನೊಣಗಳನ್ನು ಆಯ್ದು, ಒಣಗಿಸಿ, ರೆಡ್ ಇಂಡಿಯನ್ನರು ಆಹಾರವಾಗಿ ಬಳಸುತ್ತಾರೆ. ಮೆಕ್ಸಿಕೋದ ಸುತ್ತಮುತ್ತ ಈ ನೊಣ ಅಧಿಕ ಪ್ರಮಾಣದಲ್ಲಿ ವಾಸಿಸುತ್ತದೆ. (ಕೆ.ಎಂ.ವಿ.)

**ಎಫಿಮೆರಾಪ್ಟರ:** ಕೀಟವರ್ಗದ ಒಂದು ಗಣ. ಮೇ ನೊಣಗಳು ಈ ಗಣಕ್ಕೆ ಸೇರುತ್ತವೆ. ಈಗಾಗಲೇ ನಶಿಸಿ ಹೋಗಿರುವ ಪೆಲಿಯಾಡಿಕ್ಟಿಯಾಪ್ಟೆರಾ ಗಣದ ಸಂಬಂಧಿಗಳೆಂದು ತಜ್ಞರ ಅಭಿಪ್ರಾಯ. ಎಫಿಮೆರಾಪ್ಟೆರಾ ಹೆಸರು ಕ್ಷಣಿಕ ಜೀವನದ ಪ್ರತೀಕ. ಇವು ಕೊಳ, ಕೆರೆ, ಸರೋವರ ಮತ್ತು ನದಿಗಳ ದಡಗಳಲ್ಲಿ ವಾಸಿಸುತ್ತವೆ. ಮೃದುದೇಹದವುಗಳಾಗಿದ್ದು, ಅಸ್ಪಷ್ಟವಾದ ಕುಡಿಮೀಸೆಗಳಿವೆ. ಹೊಟ್ಟೆಯ ತುದಿಯಲ್ಲಿ 2–3 ಉದ್ದವಾದ ದಾರದ ರೀತಿಯ ಉಪಾಂಗಗಳಿರುತ್ತವೆ. ಎರಡು ಜೊತೆ ರೆಕ್ಕೆಗಳಿದ್ದು ಇವು ತೆಳುವಾಗಿಯೂ ತ್ರಿಕೋಣಾಕೃತಿಯಲ್ಲಿಯೂ, ಬಲೆಯಂತಹ ಸೆಲೆಗಳಿಂದ ಕೂಡಿರುತ್ತವೆ. ಹಿಂಜೊತೆ ರೆಕ್ಕೆಗಳು ಯಾವಾಗಲು ಮುಂಜೊತೆ ರೆಕ್ಕೆಗಳಿಗಿಂತ ಚಿಕ್ಕವು. ಕೆಲವು ಪ್ರಭೇದಗಳಲ್ಲಿ ಹಿಂಜೊತೆಯ ರೆಕ್ಕೆಗಳಿಲ್ಲ. ವದನಾಂಗಗಳು ಚೆನ್ನಾಗಿ ಬೆಳೆದಿಲ್ಲ.

ಆದರೆ, ಅಪ್ಸರೆ ಕೀಟ(ನಿಂಫ್) ಗಳಲ್ಲಿ ವದನಾಂಗಗಳು ಚೆನ್ನಾಗಿ ಬೆಳೆದಿವೆ. ರೂಪಾಂತರ ಕ್ರಿಯೆ (ಮೆಟಾಮಾರ್ಫಸಿಸ್) ಈ ಕೀಟಗಳಲ್ಲಿ ಅಪೂರ್ಣವಾಗಿದೆ. ಈ ಕೀಟಗಳು ಬೆಳಕಿಗೆ ಆಕರ್ಷಣೆಗೊಳ್ಳುತ್ತವೆ. ರಾತ್ರಿ ಬೀದಿ ದೀಪಗಳ ಬಳಿ ಕೀಟಗಳು ಭಾರೀ ಸಂಖ್ಯೆಯಲ್ಲಿ ಸೇರುತ್ತವೆ. ಈ ಕೀಟಗಳನ್ನು ಮೀನುಗಳ ಆಹಾರವನ್ನಾಗಿ ಮೀನುಗಾರರು ಬಳಸುವರು.



ಮೇ ಫ್ಲೈ ಅಪ್ಸರೆ

ಮೇ ಫ್ಲೈ ಕೀಟದ ಹಿಂಡು ಹಾರಾಟ (ಸ್ವಾರ್ಮಿಂಗ್) ಹಾಗೂ ನಿಷೇಕ ಹಾರಾಟ ( ಮೇಟಿಂಗ್ ಫ್ಲೈಟ್) ಗಳು ಆಕರ್ಷಕವಾಗಿವೆ. ಮುಸ್ಸಂಜೆಯಲ್ಲಿ ನಡೆಯುವ ಈ ಹಾರಾಟದಲ್ಲಿ ಅನೇಕ ಸಂಖ್ಯೆಯ ಗಂಡು ಕೀಟಗಳು ಪಾಲ್ಗೊಳ್ಳುತ್ತವೆ. ಈ ಹಿಂಡಿಗೆ ನುಸುಳಿದ ಹೆಣ್ಣು ಕೀಟಗಳನ್ನು ಗಂಡು ಕೀಟಗಳು ಆಕರ್ಷಿಸಿ ಅನಂತರ, ಜೊತೆಗೂಡಿ ಪೊದೆ ಅಥವಾ ಗಿಡಗಳ ಬಳಿ ಸೇರಿ ರತಿಕ್ರೀಡೆಯಲ್ಲಿ ತೊಡಗುತ್ತವೆ. ಸಂಭೋಗದ ಅನಂತರ ಹೆಣ್ಣು ಕೀಟವು ನೀರಿನ ಬಳಿ ಹೋಗಿ ಮೊಟ್ಟೆಗಳನ್ನಿಟ್ಟು ಅಸುನೀಗುತ್ತದೆ. ಈ ಕ್ರಿಯೆ ಪ್ರಭೇದಗಳಿಗನುಗುಣವಾಗಿ ವಿಭಿನ್ನವಾಗಿದೆ. ಕೆಲವು ಜಾತಿ ಕೀಟಗಳು ನಿಗದಿಯಾದ ಋತುವಿನಲ್ಲಿ ಮಾತ್ರ ಗುಂಪುಗೂಡಿ ಸಂತಾನ ಮಾಡುತ್ತವೆ.

ಈ ಗುಂಪಿನ ಎಲ್ಲ ಪ್ರಭೇದದ ಕೀಟಗಳು ಜಲವಾಸಕ್ಕೆ ಹೊಂದಿಕೊಂಡಿವೆ. ಇವುಗಳ ಜೀವನ ಚಕ್ರದಲ್ಲಿ ಅಪ್ಸರ ಕೀಟಗಳ ಹಂತ ಕಲ್ಮಶರಹಿತವಾದ ನೀರಿನಲ್ಲಿ ಸಾಗುತ್ತದೆ. ಅಪ್ಸರೆ ಕೀಟದ ಉದರ ಭಾಗವು 7 ಖಂಡಗಳಿಂದ ಕೂಡಿದ್ದು, ಮೊದಲನೇ ಖಂಡದ ಎರಡು ಪಕ್ಕಗಳಲ್ಲಿ ಜೋಡಿ ಶ್ವಾಸಾಂಗಗಳಿರುತ್ತವೆ. ಇವು ನೀರಿನಲ್ಲಿ ಉಸಿರಾಟಕ್ಕೆ ಅನುಕೂಲಕರವಾಗಿವೆ. ಹೊಟ್ಟೆಯ ತುದಿಯಲ್ಲಿ 2 ಅಥವಾ 3 ಉಪಾಂಗಗಳಿರುತ್ತವೆ. ಚೆನ್ನಾಗಿ ಬೆಳೆದ ವದನಾಂಗಗಳಿಂದ ನೀರಿನಲ್ಲಿರುವ ಕೊಳೆತ ಪದಾರ್ಥಗಳು ಮತ್ತು ಸಣ್ಣ ಜೀವಿಗಳನ್ನು ತಿಂದು ಜೀವಿಸುತ್ತವೆ. ಅನೇಕ ಬಾರಿ ಪೊರೆ ಕಳಚುತ್ತವೆ.

ಎಫಿಮರಾಪ್ಟರ ಗುಂಪಿನ ಕೀಟ ಪ್ರಭೇದಗಳ ಚರಿತ್ರೆಯು ವಿಭಿನ್ನವಾಗಿದೆ. ಕೆಲವು ಕೀಟಗಳಲ್ಲಿ ವರ್ಷಕ್ಕೆ 2 ಸಂತತಿಗಳಿವೆ. ಇನ್ನೂ ಕೆಲವು ಜಾತಿಗಳಲ್ಲಿ ಬೆಳವಣಿಗೆಯ ಕಾಲವು ಬಹಳ ಸುದೀರ್ಘ. ಅನೇಕ ಪ್ರಭೇದಗಳು ವರ್ಷಕ್ಕೆ ಒಂದು ಸಂತತಿಯನ್ನು ಪೂರೈಸುತ್ತೇವೆ. ಅಪ್ಸರ ಕೀಟಗಳ ರೂಪದಲ್ಲಿ ಜಡನಿದ್ರೆ (ಹೈಬರ್‌ನೇಷನ್) ಹೋಗುತ್ತವೆ. ಅಪ್ಸರ ಕೀಟಗಳು ಪೂರ್ಣವಾಗಿ ಬೆಳೆದಾಗ ನೀರಿನ ಮೇಲಕ್ಕೆ ಬಂದು ತಮ್ಮ ಪೊರೆಗಳನ್ನು ಕಳಚಿ, ರೆಕ್ಕೆ ಬೆಳೆದನಂತರ ಪ್ರೌಢ ಕೀಟಗಳು ಹೊರಬಂದು ಸಮೀಪದ ವಸ್ತುಗಳ ಮೇಲೆ ವಿರಮಿಸುತ್ತವೆ. ಇದು ಪೂರ್ಣವಾಗಿ ಬೆಳೆದ ಕೀಟವಾಗಿರದೆ ಉಪಕೀಟ (ಸಬ್‌ಇಮ್ಯಾಗೋ) ಆಗಿರುತ್ತದೆ. ಪುನ: ಪೊರೆ ಕಳಚಿ ಅನಂತರ ಪೂರ್ಣವಾಗಿ ಬೆಳೆದ ಕೀಟವು ಹೊರಬರುವುದು. ಕೀಟ ಪ್ರಪಂಚದಲ್ಲಿ ಬೆಳೆದ ಸ್ಥಿತಿಯಲ್ಲಿ ಪೊರೆ ಕಳಚುವ ಕೀಟ ಇದೊಂದೇ. ಪ್ರೌಢ ಕೀಟಗಳು ಆಹಾರ ಸೇವಿಸುವುದಿಲ್ಲ. ವದನಾಂಗಗಳು ತಮ್ಮ ಕಾರ್ಯವನ್ನು ನಿರ್ವಹಿಸಲಾರವು. ಈ ಕೀಟಗಳ ಜೀರ್ಣಾಂಗದಲ್ಲಿ ಗಾಳಿ ತುಂಬಿಕೊಂಡಿದ್ದು ಹಾರಾಟದಲ್ಲಿ ಸಮತೋಲನವನ್ನು ಕಾಪಾಡಲು ಸಹಕಾರಿಯಾಗಿದೆ. ಕೊನೆಯದಾಗಿ ಪೊರೆ ಕಳಚಿದ ಅನಂತರ ಹೆಣ್ಣು ಕೀಟದೊಡನೆ ಸಂಭೋಗಿಸುತ್ತದೆ. ಹೆಣ್ಣು ಕೀಟವು ಒಂದು ಬಾರಿಗೆ ನೂರಾರು ಮೊಟ್ಟೆಗಳಿಂದ ಸಾವಿರಾರು ಮೊಟ್ಟೆಗಳನ್ನು ಇಡುತ್ತಿದೆ.

ಅಪ್ಸರೆ ಕೀಟಗಳ (ನೆಯಿಡ್ಸ್)ನ್ನು ಅನೇಕ ಜಲಚರ ಪ್ರಾಣಿಗಳು ತಿನ್ನುತ್ತವೆ. ಪಕ್ಷಿಗಳು, ಕಪ್ಪೆಗಳು ಮತ್ತು ಕೀಟಗಳಿಂದ ಇವು ರಕ್ಷಣೆ ಪಡೆಯಬೇಕಾಗುತ್ತದೆ. ಮೊಟ್ಟೆಗಳನ್ನು ಕೆಲವು ಬಾರಿ ಮೀನುಗಳು ತಿನ್ನುತ್ತವೆ. ಅಪ್ಸರೆ ಕೀಟಗಳು ನೀರಿನಲ್ಲಿನ ಕೊಳೆತ ಪದಾರ್ಥಗಳನ್ನು ತಿನ್ನುವುದರಿಂದ ಇವುಗಳು ವಾಸಿಸುವ ನೀರು ನಿರ್ಮಲವಾಗಿರುತ್ತದೆ. ಮೀನುಗಳಿಗೆ ಇವು ಮುಖ್ಯವಾದ ಆಹಾರ ಮೂಲ. ಈ ಗಣದಲ್ಲಿ ಈಗಾಗಲೇ 1800 ಪ್ರಭೇದಗಳನ್ನು ಗುರುತಿಸಲಾಗಿದೆ. ಅಜ್ಞಾತವಾಗಿರುವ ಎಷ್ಟೋ ಪ್ರಭೇದಗಳು ಇನ್ನೂ ಇವೆ.

ಮೇ ನೊಣ (ಮೇ ಫ್ಲೈಸ್) ಗಳ ಜೀವಾವಧಿ ಕೆಲವೇ ಘಂಟೆ ಅಥವಾ ಒಂದು ದಿವಸ. ಈ ಕೀಟಗಳ ಅಪ್ಸರೆಗಳು (ನೆಯಿಡ್ಸ್) ನೀರಿನಲ್ಲಿ 1 ರಿಂದ 3 ವರ್ಷಗಳವರೆಗೂ ಬದುಕಿರುತ್ತವೆ.

ಅಪ್ಸರೆ (ನೆಯಿಡ್ಸ್) ಜಲಚರಿಗಳು ಉದ್ದವಾಗಿವೆ. ಹೊಟ್ಟೆಯ ತುದಿಯಲ್ಲಿ 2 ಅಥವಾ 3 ಕೈಶವಾದ ಬಾಲಗಳಿವೆ. ಆಗಾಗ ಪೊರೆ (ಹೊರಕವಚ) ಬಿಡುತ್ತವೆ.

ಈ ಗಣದಲ್ಲಿ ಎಫಿಮೆರಿಡೆ, ಹೆಪ್ಟಾಜೀನಿಯಿಡೆ ಮತ್ತು ಜೀಟಿಡೆ ಎಂಬ ಮೂರು ಕುಟುಂಬಗಳಿವೆ. ಮೊದಲನೆಯ ಕುಟುಂಬಕ್ಕೆ ಸೇರಿದ ಪ್ರಾಯದ ಮೇ ನೊಣದ ಹಿಂದಿನ ಕಾಲುಗಳ ಹರಡಿನಲ್ಲಿ ನಾಲ್ಕು ತುಂಡುಗಳಿರುತ್ತವೆ. ಉಳಿದ ಎರಡು ಕುಟುಂಬಕ್ಕೆ ಸೇರಿದ ಪ್ರಾಯದ ಕೀಟಗಳ ಹರಡಿನಲ್ಲಿ ಮೂರರಿಂದ ಐದು ತುಂಡುಗಳಿರುತ್ತವೆ. ಹೆಪ್ಟಾಜೀನಿಯಿಡೆ ಕೀಟಗಳ ಹಿಂದಿನ ಕಾಲುಗಳ ಹರಡಿನಲ್ಲಿ ಐದು ತುಂಡುಗಳಿರುತ್ತವೆ.

ಎಫಿಮೆರಿಡೆ ಕುಟುಂಬಕ್ಕೆ ಸೇರಿದ ಅಪ್ಸರೆಗಳಲ್ಲಿ ವದನಾಂಗಕ್ಕೆ ಸೇರಿದ ಕೆಳದವಡೆಗಳು ಮುಂದಕ್ಕೆ ಚಾಚಿವೆ. ಉಳಿದ ಎರಡು ಕುಟುಂಬಕ್ಕೆ ಸೇರಿದ ಕೀಟಗಳಲ್ಲಿ ಮ್ಯಾಂಡಿಬಲ್ ಇರುವುದಿಲ್ಲ. ಹೆಪ್ಟಾಜೀನಿಯಿಡೆ ಕುಟುಂಬದ ಅಪ್ಸರೆಗಳಲ್ಲಿ ತಲೆ ಸಣ್ಣಗಿದ್ದು, ಮೇಲ್ಭಾಗದಲ್ಲಿ ಕಣ್ಣುಗಳಿರುತ್ತವೆ. ಬಾಟಿಡೆ ಕುಟುಂಬದ ಅಪ್ಸರೆಗಳ ತಲೆಯಲ್ಲಿ ಈ ರೀತಿ ತಗ್ಗಿಲ್ಲದೆ ಕಣ್ಣುಗಳು ಪಕ್ಕದಲ್ಲಿರುತ್ತವೆ. ಈ ಕೀಟಗಳು ಉಷ್ಣವಲಯದ ದೇಶಗಳಲ್ಲಿ ಕಂಡು ಬರುತ್ತವೆ.

***

**ಎಫಿಮೆರಿಡೆ:** ಕೀಟವರ್ಗದ ಎಫಿಮೆರಾಪ್ಟೆರ ಗಣದ ಒಂದು ಕುಟುಂಬ. ಈ ಕುಟುಂಬದಲ್ಲಿ ಮೇ ನೊಣಗಳಿವೆ. ಇವು ಸೂಕ್ಷ್ಮಶರೀರವುಳ್ಳ ನಶ್ವರಕೀಟಗಳು. ಆಗಾಗ ಸರೋವರ, ನದಿಗಳ ಹತ್ತಿರವಿರುವ ಪಟ್ಟಣಗಳಲ್ಲಿ ದೀಪಗಳಿಗೆ ಆಕರ್ಷಿಸಲ್ಪಟ್ಟು ಅಸಂಖ್ಯಾತವಾಗಿ ಕಾಣಿಸಿಕೊಳ್ಳುತ್ತವೆ. ಇವುಗಳ ಜೀವನ ಚಕ್ರ ಸುದೀರ್ಘ. ಅಪ್ಸರೆಗಳ ಹಂತ ತುಂಬಾ ದೀರ್ಘವಾಗಿದೆ. ಅಪ್ಸರೆಗಳು (ನಿಂಫ್ಸ್) ಒಂದರಿಂದ ಮೂರು ವರ್ಷದತನಕ, ನೀರಿನಲ್ಲಿದ್ದರೂ, ಪ್ರಾಯದ ಕೀಟ ಕೇವಲ ಕೆಲವು ಗಂಟೆಗಳು ಬದುಕಿ, ಹೆಣ್ಣು ಗಂಡು ಸಂಪರ್ಕಹೊಂದಿ, ಮೊಟ್ಟೆ ಇಟ್ಟು ಸಾಯುತ್ತದೆ. ಈ ನಶ್ವರತೆಯೇ ಈ ಜಾತಿಯ ಹೆಸರು. ಅಪ್ಸರೆಗಳು ಮೀನಿಗೆ ಒಳ್ಳೆ ಆಹಾರ. ಪ್ರಾಯದ ಮೇ ನೊಣಗಳಿಗೆ ತ್ರಿಕೋನಾಕಾರದ ರೆಕ್ಕೆಗಳಿದ್ದು, ಕುಳಿತಾಗ ಪತಂಗದಂತೆ ನೇರವಾಗಿ ರೆಕ್ಕೆ ಮಡಿಸುತ್ತವೆ. ಕೆಳರೆಕ್ಕೆಗಳು ಬಹಳ ಸಣ್ಣವು. ಕುಡಿಮೀಸೆ ಚಿಕ್ಕದಾಗಿವೆ. ಗೂಡು ಕಣ್ಣು ಮತ್ತು ಸರಳ ಕಣ್ಣುಗಳು ಇವೆ. ಮಧ್ಯದ ಎದೆ ದೊಡ್ಡದು. ಹೊಟ್ಟೆಯ ತುದಿಯಲ್ಲಿ ಬಾಲಗಳಿವೆ. ಅಪ್ಸರೆಯ ಹೊಟ್ಟೆಯ ತುದಿಯಲ್ಲಿ ಎರಡು–ಮೂರು ಕೃಶವಾದ ಬಾಲಗಳಿವೆ. (ಜಿ.ಕೆ.ವಿ.)

**ಎಮ್ಮೆ:** ಎಮ್ಮೆ ಮೆಲುಕುಹಾಕುವ ಸ್ತನಿಗಳಲ್ಲಿ ಪ್ರಮುಖವಾದುದ್ದು. ಆರ್ಟಿಯೊಡ್ಯಾಕ್ಟೈಲ ವರ್ಗಕ್ಕೆ ಸೇರಿದೆ. ಏಷ್ಯದ ಎಮ್ಮೆಯ ವೈಜ್ಞಾನಿಕ ಹೆಸರು ಬ್ಯುಬೇಲಸ್ ಬ್ಯುಬಾಲಿಸ್. ಇದರ ವ್ಯಾಪ್ತಿ ಈಜಿಪ್ಟಿನಿಂದ ಫಿಲಿಪೀನ್ಸ್‌ವರೆಗೆ. ಎಮ್ಮೆಗಳ ಮೂಲ ವಾಸಸ್ಥಾನ ಭಾರತ ಮತ್ತು ಆಫ್ರಿಕದ ಉತ್ತರ ಭಾಗಗಳು. ಸುಮಾರು ಕ್ರಿ. ಶ. 600ರಲ್ಲಿ ಮೊಟ್ಟಮೊದಲು ಇಟಲಿ ದೇಶಕ್ಕೆ ಎಮ್ಮೆಗಳು ರವಾನೆಯಾದವು. ಈಗ ಫ್ರಾನ್ಸ್, ಹಂಗೆರಿ, ಸ್ಪೇನ್ ದೇಶಗಳಲ್ಲಿ ನೆಲಸಿವೆ. ಈಗಲೂ ಕಾಡೆಮ್ಮೆಗಳು ಭಾರತ ದೇಶದ ಪಶ್ಚಿಮ ಘಟ್ಟಗಳು, ಕೇರಳ, ಬಂಗಾಳ, ಅಸ್ಸಾಂ, ಒರಿಸ್ಸ, ಆಂಧ್ರಪ್ರದೇಶ, ನೇಪಾಳಗಳಲ್ಲಿ ಹುಲ್ಲು ಎತ್ತರವಾಗಿ ಬೆಳೆಯುವ ಕಾಡುಪ್ರದೇಶದಲ್ಲಿ ಕಂಡು ಬರುತ್ತವೆ. ಸಿಂಹಳ ದ್ವೀಪದಲ್ಲಿ ಪಳಗಿದ ಎಮ್ಮೆಗಳು ಪುನಃ ಕಾಡನ್ನು ಸೇರಿ ಕಾಡೆಮ್ಮೆಗಳಾಗಿ ಪರಿವರ್ತನೆಗೊಂಡಿವೆ. ಸಾವಿರಾರು ವರ್ಷಗಳಿಂದಲೂ ಮನುಷ್ಯನ ಜೊತೆಯಲ್ಲಿ ಎಮ್ಮೆಗಳು ಸಾಕು ಪ್ರಾಣಿಗಳಾಗಿ ಜೀವಿಸುತ್ತಿವೆ.

ಎಮ್ಮೆಯ ಶರೀರ ಸ್ಥೂಲ, ಸುಮಾರು 2.5 ರಿಂದ 3 ಮೀಟರಿನಷ್ಟು ಉದ್ದ. 1.5 ರಿಂದ 1.8 ಮೀ ಎತ್ತರ. 700 ರಿಂದ 800 ಕಿಗ್ರಾಂ ನಷ್ಟು ತೂಗುತ್ತವೆ. ಚರ್ಮ ದಪ್ಪ, ಕೂದಲು ವಿರಳ. ಮೈ ಬಣ್ಣ ಬೂದು ಅಥವಾ ಕಪ್ಪು. 0.5 ರಿಂದ 1ಮೀ ಉದ್ದವಾದ ಬಾಲದ ತುದಿಯಲ್ಲಿ ಬಿರುಸಾದ ಕೂದಲಿನ ಗೊಂಚಲು ಇದೆ. ತಲೆಯ ಮೇಲಿನ ಕೊಂಬುಗಳು ಬುಡದಲ್ಲಿ ಅಗಲವಾಗಿದ್ದು ಹಿಮ್ಮೊಗವಾಗಿ ಒಳಗಡೆ ಬಾಗಿರುತ್ತವೆ. ಅಡ್ಡ ಸೀಳಿಕೆಯಲ್ಲಿ ಇವು ತ್ರಿಕೋನಾಕಾರವಾಗಿವೆ. ಕೋಣದ ಕೊಂಬುಗಳು ಎಮ್ಮೆಯ ಕೊಂಬುಗಳಿಗಿಂತ ಭಾರಿಯಾಗಿವೆ. ಕೊಂಬುಗಳ ಮೇಲೆ ಅಡ್ಡವಾದ ಸುಕ್ಕುಗಳಿವೆ. ಕಾಲಿನ ಗೊರಸುಗಳು ಪಸರಿಸಿರುವುದರಿಂದ ಎಮ್ಮೆಗಳು ಕೆಸರಿನಲ್ಲಿ ಸರಾಗವಾಗಿ ಓಡಾಡಬಲ್ಲವು. ನೀರಿನಲ್ಲಿ ನೆನೆಯುವುದು ಮತ್ತು ಕೆಸರಿನಲ್ಲಿ ಹೊರಳಾಡುವುದೆಂದರೆ ಇವುಗಳಿಗೆ ಎಲ್ಲಿಲ್ಲದ ಆನಂದ. ಕೆಸರು ಮೈಗೆ ಅಂಟಿಕೊಳ್ಳುವುದರಿಂದ ನೊಣವೇ ಮುಂತಾದ ಕೀಟಗಳ ಬಾಧೆ ತಪ್ಪುತ್ತದೆ.

ಎಮ್ಮೆಗಳ ಮುಖ್ಯ ಆಹಾರ ಹುಲ್ಲು. ಸೊಪ್ಪು, ಎಲೆ ಮುಂತಾದವು. ಮೆಲಕು ಹಾಕಿ ಅಗಿದು ತಿನ್ನುವುದಕ್ಕೆ ಅನುಕೂಲವಾಗುವಂತೆ ಜಠರದಲ್ಲಿ ನಾಲ್ಕು ಭಾಗಗಳಿವೆ. ಸಾಮಾನ್ಯವಾಗಿ ಎಮ್ಮೆಗಳು ಆಹಾರವನ್ನು ಬೆಳಿಗ್ಗೆ, ಸಾಯಂಕಾಲ ಅಥವಾ ರಾತ್ರಿ ಮೇದು ಹಗಲಿನ ಬಹುವೇಳೆ ಮೆಲಕು ಹಾಕುತ್ತ ಅಥವಾ ನಿದ್ರಿಸುತ್ತ ಕಾಲಕಳೆಯುತ್ತವೆ.

ಋತು ಕಾಲದಲ್ಲಿ ಒಂದು ಕೋಣ ಹಲವಾರು ಎಮ್ಮೆಗಳಿಂದ ಕೂಡಿ ಒಂದು ಸಣ್ಣ ಸಂಸಾರವನ್ನು ಕಟ್ಟುತ್ತದೆ. ಸುಮಾರು ಹತ್ತು ತಿಂಗಳ ಅನಂತರ ಒಂದು ಅಥವಾ ಎರಡು ಕರುಗಳು ಹುಟ್ಟುತ್ತವೆ. ಹುಟ್ಟಿದ ಸ್ವಲ್ಪ ಸಮಯದಲ್ಲೆ ಕರು ತಾಯಿಯನ್ನು ಹಿಂಬಾಲಿಸುತ್ತದೆ. ಎಮ್ಮೆಯ ಜೀವಿತ ಕಾಲ ಸುಮಾರು ಹದಿನೆಂಟು ವರ್ಷಗಳು.

ಎಮ್ಮೆಗಳು ಭಾರವಾದ ಸಾಮಾನುಗಳನ್ನು ಹೊರುತ್ತವೆ, ನೇಗಿಲು ಎಳೆಯುತ್ತವೆ. ಈ ಶ್ರಮದ ಕೆಲಸಕ್ಕಾಗಿಯೂ ತೊಗಲು, ಹಾಲು, ಮಾಂಸಗಳಿಗಾಗಿಯೂ ಇವನ್ನು ಸಾಕುತ್ತಾರೆ. ತೊಗಲಿನಿಂದ ಚರ್ಮದ ಪದಾರ್ಥಗಳನ್ನೂ ಕೊಂಬಿನಿಂದ ಬಾಚಣಿಗೆ ಮೊದಲಾದುವನ್ನೂ ಮಾಡುತ್ತಾರೆ. ಜೌಗು ಪ್ರದೇಶದಲ್ಲಿ ಎತ್ತುಗಳು ಒಗ್ಗದ ಕಾರಣ, ಎಮ್ಮೆಗಳು ವ್ಯವಸಾಯಕ್ಕೆ ಮುಖ್ಯವಾಗಿ ಬತ್ತವನ್ನು ಬೆಳೆಯುವ ಗದ್ದೆಗಳಲ್ಲಿ ಬಳಕೆಗೆ ಬಂದಿವೆ. ಇಂಡೋನೇಷ್ಯ, ಮಲಯ, ಚೀನ ದೇಶಗಳಲ್ಲಿ ಲಕ್ಷಾಂತರ ಎಮ್ಮೆಗಳು ಗದ್ದೆ ಕೆಲಸಗಳಿಗೆ ಒದಗಿವೆ.

ಹಾಲುಕರೆಯುವ ಎಮ್ಮೆಗಳಿಗೆ ತಮ್ಮ ಕರುಗಳ ಮೇಲೆ ತುಂಬ ಮಮತೆ; ತಮ್ಮನ್ನು ಸಾಕುವ ಯಜಮಾನರನ್ನು ಚೆನ್ನಾಗಿ ನೆನೆಪಿಟ್ಟುಕೊಳ್ಳುತ್ತವೆ ; ಹಾಲುಕರೆಯುವ ಆಳು ಬದಲಾದಾಗ, ಆಹಾರದಲ್ಲಿ ಕ್ರಮರಾಹಿತ್ಯ ತಲೆದೋರಿದರೆ, ಪಕ್ಕದಲ್ಲಿ ವಾಸಿಸುವ ಜೊತೆಯ ಪ್ರಾಣಿ ಕಾಣದಾದಾಗ ಕರೆಯುವ ಎಮ್ಮೆಯ ಹಾಲು ಇದ್ದಕ್ಕಿದ್ದ ಹಾಗೆ ಕಡಿಮೆಯಾಗುವುದುಂಟು; ಅದಕ್ಕೆ ಮೈಸ್ವಸ್ಥವಿಲ್ಲದಾಗಲೂ ಈ ಪರಿಣಾಮವಾಗುವುದುಂಟು; ಈ ಎಲ್ಲ ಕಾರಣಗಳಿಂದ ಎಮ್ಮೆಯ ಸಾಕಾಣಿಕೆ ತುಂಬ ಸೂಕ್ಷ್ಮ ರೀತಿಯ ಕಸುಬೆಂದು ಹೇಳುತ್ತಾರೆ.

ಗಾತ್ರದಲ್ಲಿ ಆಫ್ರಿಕದ ಎಮ್ಮೆಗಳು ಏಷ್ಯಾದ ಎಮ್ಮೆಗಳಿಗಿಂತ ದೊಡ್ಡವು. ಹುಲ್ಲು ಮತ್ತು ಜೊಂಡು ಎತ್ತರವಾಗಿ ಬೆಳೆದು, ಅಡಗಿಕೊಳ್ಳಲು ಮರೆಯನ್ನು ಕೊಡುವಂಥ ಮತ್ತು ನೀರಿನ ವಸತಿ ದೊರಕುವಂಥ ಸಹರ ಮರುಭೂಮಿಯ ದಕ್ಷಿಣದಲ್ಲಿರುವ ಕಾಡು ಪ್ರದೇಶಗಳಲ್ಲಿ ಇವು ಹಿಂಡುಹಿಂಡಾಗಿ ಸ್ವೇಚ್ಛೆಯಾಗಿ ವಾಸಿಸುತ್ತವೆ. ಆಫ್ರಿಕದ ಎಮ್ಮೆಗಳನ್ನು ಪಳಗಿಸಲು ಸಾಧ್ಯವಾಗಿಲ್ಲ. ಒಂದು ಹಿಂಡಿನಲ್ಲಿ ಹತ್ತಿಪ್ಪತ್ತು ಪ್ರಾಣಿಗಳಿಂದ ನೂರಾರು ಪ್ರಾಣಿಗಳಿರಬಹುದು. ವಯಸ್ಸಾದ ಹೆಣ್ಣು ಎಮ್ಮೆ ಹಿಂಡಿನ ಮುಂದಾಳು. ಬೇಟೆಗೀಡಾಗಿರುವ ಅತ್ಯಂತ ಭಾರಿ

ಮತ್ತು ಭಯಂಕರ ಪ್ರಾಣಿಗಳಲ್ಲಿ ಆಫ್ರಿಕದ ಕಾಡೆಮ್ಮೆ ಪ್ರಸಿದ್ಧವಾಗಿದೆ. ಇದರ ಬೇಟೆ ಬಹಳ ಪ್ರಯಾಸಕರ ಮತ್ತು ಅಪಾಯಕಾರಿ. ಗಾಯಹೊಂದಿದ ಅಥವಾ ರೇಗಿದ ಕಾಡೆಮ್ಮೆ ಯಾವ ಸೂಚನೆಯನ್ನೂ ಕೊಡದೆ ಹೊಂಚು ಹಾಕಿ ಬೇಟೆಗಾರರ ಮೇಮೇಲೆ ರಭಸದಿಂದ



ಕೋಣ

ನುಗ್ಗಿ ಆಕ್ರಮಿಸುತ್ತದೆ. ಆಕ್ರಮಣ ಫಲಪ್ರದವಾಗದಿದ್ದಲ್ಲಿ ಬೇಟೆಗಾರನನ್ನು ಹಿಂಬಾಲಿಸಿ ವೈರ ಸಾಧಿಸಲು ಪ್ರಯತ್ನಿಸುತ್ತದೆ. ಇದು ಗಂಟೆಗೆ 57 ಕಿ. ಮೀ. ವೇಗವಾಗಿ ಓಡಬಲ್ಲದು. ಮನುಷ್ಯನನ್ನು ಬಿಟ್ಟರೆ ಸಿಂಹವೊಂದೇ ತನ್ನ ಆಹಾರಕ್ಕಾಗಿ ಇದರ ಬೇಟೆಯಾಡುತ್ತದೆ.

ಸೆಲಿಬಸ್ ದ್ವೀಪಗಳಲ್ಲಿ ಕುಳ್ಳು ಜಾತಿಯ ಎಮ್ಮೆಗಳಿವೆ. ನೀರಿನ ವಸತಿಯಿರುವ ಮತ್ತು ಬಿದಿರು ಮೆಳೆಗಳಿರುವ ಕಾಡು ಪ್ರದೇಶದಲ್ಲಿ ಇವು ವಾಸಿಸುತ್ತವೆ. ಇವುಗಳ ದೇಹ ಗುಂಡು ಗುಂಡಾಗಿದ್ದು, ಕಾಲು, ಬಾಲ ಕೊಂಬುಗಳು ಮೊಟಕಾಗಿರುತ್ತವೆ. ಚರ್ಮ, ಕೊಂಬು ಮತ್ತು ಮಾಂಸಕ್ಕಾಗಿ ಇವುಗಳ ಬೇಟೆ ಅತಿಯಾಗಿ ನಡೆಯುತ್ತಿರುವುದರಿಂದ, ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ. ನಾಗರಿಕತೆ ಮತ್ತು ಜನರ ಒತ್ತಡ ಹೆಚ್ಚುತ್ತ ಹೋದಂತೆ ಇವುಗಳ ಸಂಖ್ಯೆ ಕಡಿಮೆಯಾಗುತ್ತ ಬಂದಂತೆ ಕಾಣುತ್ತದೆ. ಉತ್ತರ ಅಮೆರಿಕದಲ್ಲಿ ಐರೋಪ್ಯರು ವಲಸೆ ಹೋದಾಗ ಸುಮಾರು 6 ಕೋಟಿ ಕಾಡೆಮ್ಮೆಗಳು ಇದ್ದುದಾಗಿಯೂ, ವಲಸೆ ಹೋದ ಐರೋಪ್ಯರು ಈ ಎಮ್ಮೆಗಳನ್ನು ನಾಶಮಾಡಿದರೆಂದೂ ಹೇಳಲಾಗಿದೆ. ಭಾರತದಲ್ಲಿ ಎಮ್ಮೆಗಳನ್ನು ಅನೇಕ ಶತಮಾನಗಳಿಂದ ಪಳಗಿಸಿ ಸಾಕುತ್ತಿದ್ದಾರೆ. ಉತ್ಪತ್ತಿಯಾಗುವ ಹಾಲಿನ ಅರ್ಧ ಭಾಗದಷ್ಟು ಎಮ್ಮೆಗಳಿಂದ ಬರುತ್ತದೆ. ಪರದೇಶದ ಎಮ್ಮೆಗಳಿಗಿಂತ ಭಾರತ ಮತ್ತು ಪಾಕಿಸ್ತಾನದ ಎಮ್ಮೆಗಳು ಉತ್ಕೃಷ್ಟವಾದವುಗಳು.

ಭಾರತದ ಎಮ್ಮೆಗಳಲ್ಲಿ ಮುಖ್ಯವಾಗಿ ಎಂಟು ಜಾತಿಗಳಿವೆ. ಈ ಎಲ್ಲ ಜಾತಿಗಳೂ ಹಾಲಿಗೆ ಹೆಸರಾಗಿವೆ. ಇವುಗಳಲ್ಲಿ ಮುರ್ರಾ ಜಾತಿ ಎಲ್ಲಕ್ಕಿಂತ ಉತ್ಕೃಷ್ಟವಾದದ್ದು.

ಮುರ್ರಾ ಜಾತಿಯ ಎಮ್ಮೆಗಳು ಪಂಜಾಬ್ ರಾಜ್ಯದ ರೋಥಕ್, ಹಿಸ್ಸಾರ್, ಗುರ್‍ಗಾಂ ಮತ್ತು ಕಾರ್ನಾಲ್ ಜಿಲ್ಲೆಗಳಲ್ಲಿ ಹೇರಳವಾಗಿವೆ. ಈ ಎಮ್ಮೆಗೆ ದಪ್ಪನೆಯ ಶರೀರ, ಸಣ್ಣತಲೆ, ಗುಂಗುರು ಸುರುಳಿಯಾಗಿರುವ ಮೋಟು ಕೋಡು, ಮೋಟಾದ ಕಾಲುಗಳು ಮತ್ತು ನೀಳವಾದ ಬಾಲ ಇವೆ. ಇವು ಒಂದು ಸೂಲಿನಲ್ಲಿ ೧೫೦೦ – ೨೫೦೦ ಲೀ ಹಾಲು ಕೊಡುತ್ತವೆ.

ನೀಲಿ ರವಿ ಜಾತಿ ಎಮ್ಮೆಗಳು ಆಕಾರದಲ್ಲಿ ಮುರ್ರಾ ಜಾತಿಯ ಹಾಗೆ ಇವೆ. ಆದರೆ ಹಣೆ, ಕಾಲು ಗೊರಸು, ಬಾಲಗಳ ಮೇಲೆ ಬಿಳಿ ಕೂದಲಿದೆ. ಕಣ್ಣುಗಳು ಬೆಕ್ಕಿನ ಕಣ್ಣಿನಂತೆ. 250 ದಿವಸದ ಒಂದು ಸೂಲಿನ ಅವಧಿಯಲ್ಲಿ ೧೫೦೦–೨೦೦೦ ಲೀ ಹಾಲು ಕೊಡುತ್ತವೆ. ಈ ಜಾತಿಯ ಎಮ್ಮೆಯ ವಾಸಸ್ಥಾನ ಪಾಕಿಸ್ತಾನದ ಮಾಂಟಿಗೋಮರಿ ಜಿಲ್ಲೆ ಮತ್ತು ಪಂಜಾಬಿನ ಫಿರೋಜ್‍ಪುರ ಜಿಲ್ಲೆ.

ಸುರ್ತಿ ಜಾತಿಯ ಎಮ್ಮೆಗಳು ಗುಜರಾತಿನ ಸಾಬರಮತಿ ನದಿಯ ದಡದಲ್ಲಿವೆ. ಕೋಡುಗಳು ಉದ್ದವಾಗಿ ಕುಡುಗೋಲಿನ ಆಕಾರದಲ್ಲಿ ಬೆನ್ನಿನಮೇಲೆ ಬಾಗಿ ನಿಂತಿರುತ್ತವೆ. ಹಣೆಯ ಮೇಲೆ ಮತ್ತು ಗಂಟಲ ಕೆಳಗೆ ಬಿಳಿ ಕೂದಲಿದೆ. ಒಂದು ಸೂಲಿಗೆ ೨೦೦೦–೨೫೦೦೦ ಲೀ ಹಾಲು ಕರೆಯುತ್ತವೆ. ಬೆಣ್ಣೆಯ ಅಂಶ 7.5%.

ಜಾಫರಬಾದಿ ಜಾತಿ ಎಮ್ಮೆಗಳು ಕಾಥೇವಾಡದ ಭಾವನಗರದಲ್ಲಿ ಹೇರಳವಾಗಿವೆ. ಹಣೆ ಮತ್ತು ಕಾಲಿನ ಮೇಲೆ ಬಿಳಿ ಮಚ್ಚೆಗಳಿವೆ. ಕೋಡು ಸುಮಾರು ಒಂದು ಮೊಳದುದ್ದವಿರುತ್ತದೆ. ದಿನವೊಂದಕ್ಕೆ ೧೫–೨೯ ಲೀ ಹಾಲು ಕರೆಯುತ್ತವೆ. ಮೆಹಸಾನ ಜಾತಿಯ ಎಮ್ಮೆಗಳ ವಾಸಸ್ಥಾನ ಹಿಂದಿನ ಬರೋಡ ಸಂಸ್ಥಾನ. ಈ ಎಮ್ಮೆಗಳಲ್ಲಿ ಮುರ್ರಾ ಮತ್ತು ಸುರ್ತಿ ಲಕ್ಷಣಗಳೆರಡೂ ಕಾಣುತ್ತವೆ. ದಿನವೊಂದಕ್ಕೆ ಸುಮಾರು ೧೨–೧೫ ಲೀ ಹಾಲು ಕೊಡುತ್ತವೆ. ನಾಗಪುರಿ ಜಾತಿಯ ಎಮ್ಮೆಗಳು ನಾಗಪುರ, ವರ್ಧ ಮತ್ತು ಬೀರಾರ್ ಜಿಲ್ಲೆಗಳಲ್ಲಿ ಇವೆ. ಈ ಜಾತಿಯ ಕೋಣಗಳು ಕೆಲಸಕ್ಕೆ ಹೆಸರುವಾಸಿಯಾಗಿವೆ. ಎಮ್ಮೆಗಳು ದಿವಸಕ್ಕೆ ಸುಮಾರು ೬–೮ ಲೀ ಹಾಲು ಕರೆಯುತ್ತವೆ. ಕೋಡು ಸುಮಾರು ಒಂದು ಗಜ ಉದ್ದವಿದ್ದು ಬೆನ್ನಿನಮೇಲೆ ಬಾಗಿದೆ. ಪರ್ಲಾಕಿಮಿಡಿ ಜಾತಿಯ ಎಮ್ಮೆಗಳೂ ಒರಿಸ್ಸ ರಾಜ್ಯದ ಪರ್ಲಾಕಿಮಿಡಿ ಪ್ರದೇಶದಲ್ಲಿವೆ. ಈ ಜಾತಿಯ ಕೋಣಗಳು ಕೆಸರುಗದ್ದೆಯ ಉಳುಮೆಗೆ ಹೆಸರುವಾಸಿಯಾಗಿವೆ. ಎಮ್ಮೆಯ ಬಣ್ಣ ಕಂದು, ಕೋಡು ನೀಳವಾಗಿದೆ. ದಿನವೊಂದಕ್ಕೆ ಸರಾಸರಿ ೫ ಲೀ. ಹಾಲು ಕೊಡುತ್ತವೆ.

ತೋಡ ಜಾತಿಯ ಎಮ್ಮೆಗಳನ್ನು ನೀಲಗಿರಿಯಲ್ಲಿ ವಾಸಿಸುವ ತೋಡರು ಸಾಕುತ್ತಾರೆ. ಎಮ್ಮೆಗಳು ಆಕಾರದಲ್ಲೂ ಸ್ವಭಾವದಲ್ಲೂ ಕಾಡೆಮ್ಮೆಗಳನ್ನು ಹೋಲುತ್ತವೆ. ಹೆಗಲ ಮೇಲೆ ದಪ್ಪವಾದ ಕೂದಲು ಬೆಳೆದಿದೆ. ಹಾಲಿಗೆ ಹೆಸರಾಗಿವೆ. ನೋಡಿ : ಆರ್ಟಿಯೊಡ್ಯಾಕ್ಟೈಲ.

***

**ಎರಿಯೋಪ್ಸ್:** ಪ್ರಾಚೀನ ಜೀವಕಲ್ಪದ ಉತ್ತರಾರ್ಧದ ಕೊನೆಯಲ್ಲಿ ಜೀವಿಸುತ್ತಿದ್ದ ಒಂದು ದ್ವಿಚರ ಪ್ರಾಣಿ. ಸ್ಟೀಗೋಕೆಫಾಲಿಯ ಗುಂಪಿನ ಸದಸ್ಯ. ಇದನ್ನು ಸ್ಟೀಗೋಕೆಫಾಲಿಯನ್ ಎಂದು ಕರೆಯುವರು. ಸ್ವಲ್ಪಮಟ್ಟಿಗೆ ಮೊಸಳೆಯನ್ನು ಹೋಲುತ್ತಿತ್ತು. ಪಳೆಯುಳಿಕೆಯ ಆಧಾರದಿಂದ ಇದರ ಉದ್ದ 2 ಮೀ ಇರಬಹುದೆಂದು ನಿರ್ಧರಿಸಲಾಗಿದೆ. ಇದು ಪ್ರಾಚೀನ ಜೀವ ಕಲ್ಪದ ಪರ್ಮಿಯನ್ ಯುಗದಲ್ಲಿ ಜೀವಿಸಿದ್ದ ಪ್ರಾಣಿಯೆಂದು ವಿಜ್ಞಾನಿಗಳ ಅಭಿಪ್ರಾಯ. ಇದರ ತಲೆಭಾಗ ಮೂಳೆಯ ತಟ್ಟೆಗಳಿಂದ ಕೂಡಿದ್ದು ಚರ್ಮದ ಕವಚದಿಂದ ರಕ್ಷಿಸಲ್ಪಟ್ಟಿತ್ತು. ದೇಹದ ಹೊರಭಾಗ ಹುರುಪೆ ಮತ್ತು ತಟ್ಟೆಗಳಿಂದ ಆವೃತವಾಗಿತ್ತು. ತಲೆಬುರುಡೆಯ ಮೇಲ್ಭಾವಣಿಯಲ್ಲಿ ಪೈನಿಯಲ್ ಕಂಡಿ ತೆರೆದಿದ್ದಿತು. ಇದರ ಅಗಲವಾದ ಬಾಯಲ್ಲಿ ಬುಗುರಿ ಆಕಾರದ ಹಲ್ಲುಗಳಿದ್ದುವು. ಅಂಗಾಂಗಗಳು ದುರ್ಬಲವಾಗಿದ್ದ ಕಾರಣ ಈ ಪ್ರಾಣಿ ಜಡಸ್ವಭಾವದ್ದಾಗಿತ್ತು.

***

**ಎರೆಹುಳು:** ಅಕಶೇರುಕ ಪ್ರಪಂಚದ ವಲಯವಂತ ವಂಶದ (ಅನೆಲಿಡ) ಆಲಿಗೋಕೀಟ ಎಂಬ ವರ್ಗಕ್ಕೆ ಸೇರಿದ ಪ್ರಾಣಿ. ಎರೆಹುಳುವಿನಲ್ಲಿ ನಾನಾ ಪ್ರಭೇದಗಳಿವೆ. ಲುಂಬ್ರಿಕಸ್ ಟೆರೆಸ್ಟ್ರಿಸ್ ಪ್ರಭೇದ ಯುರೋಪ್ ಮತ್ತು ಉತ್ತರ ಅಮೆರಿಕಗಳಲ್ಲಿದೆ. ಭಾರತದಲ್ಲಿ ಫೆರೆಟಿಮ ಪಾಸ್ತುಮ ಮತ್ತು ಮೆಗಾಸ್ಕೊಲೆಕ್ಸ್ ಎಂಬ ಎರಡು ಪ್ರಭೇದಗಳು ಸಾಮಾನ್ಯವಾಗಿ ಕಂಡುಬರುತ್ತವೆ.

ಎರೆಹುಳುವಿನ ವಾಸ ತೇವದ ನೆಲದಲ್ಲಿ. ಏರಿ, ಗದ್ದೆಬದಿ, ಕೈತೋಟ, ಅಡಿಕೆ ಮತ್ತು ಬಾಳೆತೋಟ ಹಾಗೂ ತೇವವಿರುವ ಎಲ್ಲ ಭೂಮಿಗಳಲ್ಲೂ ಚಿಕ್ಕ ಚಿಕ್ಕ ಬಿಲಗಳನ್ನು ತೋಡಿಕೊಂಡು ಅದರೊಳಗೆ ವಾಸಿಸುತ್ತದೆ. ಪಕ್ಷಿಗಳಿಗೆ ಉತ್ತಮ ಆಹಾರ. ಶತ್ರುಗಳಿಂದ ಪಾರಾಗಲು ಇದು ಹಗಲು ಬಿಲಗಳಲ್ಲಿ ಹುದುಗಿದ್ದು ರಾತ್ರಿಯಲ್ಲಿ ಮಾತ್ರ ಹೊರಬರುತ್ತದೆ. ಕೊಳೆಯುತ್ತಿರುವ ಎಲೆ, ಕಾಂಡ, ಹುಲ್ಲು ಇದರ ಪ್ರೀತಿಯ ಆಹಾರ. ಆಹಾರದೊಡನೆ ಮಣ್ಣನ್ನೂ ಸೇವಿಸುತ್ತದೆ. ಎರೆಹುಳುವನ್ನು ಪ್ರಕೃತಿಯ ನೇಗಿಲು ಅಥವಾ ರೈತನ ಗೆಳೆಯ ಎಂದು ಕರೆಯಲಾಗಿದೆ. ಕಾರಣ, ತಾನು ವಾಸಿಸುವ ಭೂಮಿಯನ್ನು ಇದು ಫಲವತ್ತಾಗಿಡುತ್ತದೆ. ಬಿಲಗಳನ್ನು ತೋಡುವುದರಿಂದ ಭೂಮಿ ಟೊಳ್ಳಾಗಿ ಗಾಳಿಯಾಡಲು ಅನುಕೂಲವಾಗುತ್ತದೆ. ವಿಸರ್ಜಿಸಿದ ಮಲ ಕಸ್ತೂರಿಮಾತ್ರೆಗಳಂತೆ ಭೂಮಿಯ ಮೇಲೆ ಕುಪ್ಪೆ ಕುಪ್ಪೆಯಾಗಿ ಬಿದ್ದಿರುತ್ತದೆ. ಇದಕ್ಕೆ ಕುಪ್ಪಲು ಮಣ್ಣು ಎಂದು ಹೆಸರು. ಇದು ಅತಿ ಫಲವತ್ತಾಗಿರುತ್ತದೆ. ಗಿಡಗಳ ಬೆಳವಣಿಗೆಗೆ ಬೇಕಾದ ಎಲ್ಲ ಲವಣಾಂಶಗಳು ಈ ಮಣ್ಣಿನಲ್ಲಿವೆ. ಡಾರ್ವಿನ್ ಒಂದು ಎಕರೆಯಲ್ಲಿ ವಾಸಿಸುವ ಎರೆಹುಳುಗಳು ಒಂದು ವರ್ಷದಲ್ಲಿ 18 ಟನ್ ಮಣ್ಣನ್ನು ತಿರುವಿಹಾಕುತ್ತವೆ ಎಂದು ಲೆಕ್ಕಾಚಾರ ಮಾಡಿದ್ದಾನೆ.

ಎರೆಹುಳುವಿನ ಬಣ್ಣ ಕಂದುಗೆಂಪು ಅಥವಾ ಮಣ್ಣಿನ ಬಣ್ಣ. 30–37.5 ಸೆಂಮೀ ಉದ್ದ ಬೆಳೆಯುತ್ತದೆ. ಗಾತ್ರ 1 ಸೆಂಮೀ ಶರೀರ ದುಂಡಗೆ ದಾರದಂತಿದೆ. ಆಸ್ಟ್ರೇಲಿಯದಲ್ಲಿ ಮೆಗಾಸ್ಕೋಲಿಸೈಡಿಸ್ ಆಸ್ಟ್ರಾಲಿಸ್ ಎಂಬ ಎರೆಹುಳು ಇದೆ. ಇದು 3.5 – 3.75 ಮೀ. ಉದ್ದವಿದ್ದು ನೂಲಿನ ಹಗ್ಗದಷ್ಟು ಗಾತ್ರವಿರುತ್ತದೆ. ಇದನ್ನು ರಾಕ್ಷಸ ಎರೆಹುಳು ಎನ್ನುತ್ತಾರೆ. ಇದು ಅಗಲವಾದ ಬಿಲಗಳನ್ನು ತೋಡಿಕೊಂಡು ವಾಸಿಸುತ್ತದೆ. ಬಿಲಗಳ ಬಾಯಿ ಅಗ್ನಿಪರ್ವತದ ಬಾಯಿಯಂತೆ ಕಾಣುತ್ತದೆ. ಈ ಹುಳುಗಳನ್ನು ತಿನ್ನುವ ಒಂದೇ ಒಂದು ಪಕ್ಷಿಯೆಂದರೆ ಅಲ್ಲಿನ ಲಾಫಿಂಗ್ ಕಿಂಗ್‍ಫಿಷರ್.

ಎರೆಹುಳುವಿನ ಮೈ ಸದಾ ತೇವವಾಗಿರುತ್ತದೆ. ಮುಂತುದಿ ಮತ್ತು ಹಿಂತುದಿಗಳು ಸ್ವಲ್ಪಮಟ್ಟಿಗೆ ಚೂಪಾಗಿರುತ್ತವೆ. ಇದರ ಶರೀರ ಬಹಳ ವಲಯಗಳನ್ನು (ಖಂಡ) ಹೊಂದಿದೆ. ಇಷ್ಟೇ ಖಂಡಗಳಿರಬೇಕೆಂಬ ನಿಯಮವೇನಿಲ್ಲ. ಸಾಮಾನ್ಯವಾಗಿ 100 ರಿಂದ 150 ಖಂಡಗಳಿರಬಹುದು. ಈ ಖಂಡಗಳು ಉಂಗುರದಂತಿದ್ದು ಒಂದರ ಹಿಂದೆ ಒಂದರಂತೆ

ಜೋಡಣೆಗೊಂಡಿವೆ. ಶರೀರದ ಮೇಲೆ ತೆಳುವಾದ ಕ್ಯುಟಿಕಲಿನಿಂದಾದ ಪೊರೆಯಿದೆ. ಮುಂದಿನ ಒಂದೆರಡು ಖಂಡಗಳನ್ನು ಬಿಟ್ಟರೆ ಮಿಕ್ಕೆಲ್ಲ ಖಂಡಗಳಲ್ಲೂ ಸೀಟೆಗಳೆಂಬ ಬಿರುಗೂದಲುಗಳಿವೆ. ಇವು ಖಂಡದ ಸುತ್ತಲೂ ಸಾಲಾಗಿ ಜೋಡಣೆಗೊಂಡಿವೆ.




1. ಲುಂಬ್ರಿಕಸ್ 2. ಮೆಗಾಸ್ಕಾಲೆಕ್ಸ್ ಮಾರಿಟೈ 3. ಫೆರೆಟಿಮ ಪಾಸ್ತುಮ

ಪ್ರತಿಯೊಂದು ಸೀಟೆಯೂ S ಆಕಾರಕ್ಕಿದ್ದು ತನ್ನದೇ ಆದ ಚೀಲದಲ್ಲಿ ಹುದುಗಿದೆ. ಸೀಟೆಯ ಬುಡದಲ್ಲಿ ಮಾಂಸಖಂಡಗಳಿವೆ. ಇವುಗಳ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯಿಂದಾಗಿ ಸೀಟೆ ಚಲಿಸುತ್ತದೆ. ಸೀಟೆಯನ್ನು ಚೀಲದೊಳಕ್ಕೆ ಎಳೆದುಕೊಳ್ಳಲು ಮತ್ತು ಹೊರನೂಕಲು ಈ ಮಾಂಸಖಂಡಗಳು ಸಹಕರಿಸುತ್ತವೆ. ಸೀಟೆಗಳು ಎರೆಹುಳುವಿನ ಚಲನಾಂಗಗಳು. ಎರೆಹುಳುವಿನ ಶರೀರವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. 1. ಕ್ಲೈಟೆಲಮ್ ಮುಂಭಾಗ. 2 ಕ್ಲೈಟೆಲಮ್ ಭಾಗ. 3. ಕ್ಲೈಟೆಲಮ್ ಹಿಂಭಾಗ. ಚೆನ್ನಾಗಿ ಬೆಳೆದ ಹುಳುವನ್ನು ನೋಡಿದೊಡನೆ ಗುರುತಿಸಲು ಕ್ಲೈಟೆಲಮ್ ಭಾಗ ಬಹಳ ಸಹಕಾರಿಯಾಗಿದೆ. ಶರೀರದ ಮಿಕ್ಕ ಭಾಗಕ್ಕಿಂತ ಈ ಭಾಗ ಉಬ್ಬಿಕೊಂಡಿರುತ್ತದೆ. ಈ ಭಾಗದ ಖಂಡಗಳು ಒಟ್ಟುಗೂಡಿಕೊಂಡಿವೆ.

ಫೆರೆಟಿಮ ಪ್ರಭೇದದಲ್ಲಿ ಕ್ಲೈಟೆಲಮ್ ಮುಂಭಾಗದಲ್ಲಿ 13 ಖಂಡಗಳಿವೆ. 14, 15 ಮತ್ತು 16 ನೇ ಖಂಡಗಳು ಒಟ್ಟು ಸೇರಿ ಕ್ಲೈಟೆಲಮ್ ಭಾಗವಾಗಿದೆ. ಮೆಗಾಸ್ಕೊಲೆಕ್ಸ್ ಪ್ರಾಣಿಯಲ್ಲಿ ಕ್ಲೈಟೆಲಮ್ ಮುಂಭಾಗದಲ್ಲಿ 14 ಖಂಡಗಳಿವೆ. 15, 16 ಮತ್ತು 17 ನೇ ಖಂಡಗಳು ಸೇರಿ ಕ್ಲೈಟೆಲಮ್ ಭಾಗವಾಗಿದೆ. ಅಮೆರಿಕದ ಲುಂಬ್ರಿಕಸ್ ಜೀವಿಯಲ್ಲಿ ಕ್ಲೈಟೆಲಮ್ ಮುಂಭಾಗದಲ್ಲಿ 30 ಖಂಡಗಳಿರುತ್ತವೆ. 31 ರಿಂದ 37ನೆಯ ಖಂಡಗಳು ಸೇರಿ ಕ್ಲೈಟೆಲಮ್ ಆಗಿದೆ. ಕ್ಲೈಟೆಲಮ್ ಶರೀರದ ಮಿಕ್ಕ ಭಾಗಕ್ಕಿಂತ ದಪ್ಪನಾಗಿರುವುದಕ್ಕೆ ಅದರಲ್ಲಿರುವ ಹೊರದರ್ಮದ ಪದರಗಳೇ ಕಾರಣ. ಈ ಪದರಗಳು ಒಂದರ ಮೇಲೊಂದರಂತೆ ಜೋಡಿಸಿಕೊಂಡಿವೆ. ಈ ಭಾಗವನ್ನು ಬಿಟ್ಟರೆ ಶರೀರದ ಮಿಕ್ಕ ಭಾಗದಲ್ಲಿ ಹೊರದರ್ಮದ ಕೋಶಗಳು ಕೇವಲ ಒಂದೇ ಪದರದಲ್ಲಿವೆ. ಕ್ಲೈಟೆಲಮ್ ಭಾಗದಲ್ಲಿ ಅನೇಕ ಗ್ರಂಥಿಗಳು ಇವೆ. ಇವು ಸ್ರವಿಸುವ ಲೋಳೆಯಂತಿರುವ ರಸದಿಂದಾಗಿ ಈ ಭಾಗ ಮಿಕ್ಕ ಭಾಗಕ್ಕಿಂತ ಹೆಚ್ಚು ತೇವವಾಗಿರುತ್ತದೆ. ಶರೀರದ ಮೊದಲ ಖಂಡದಲ್ಲಿ ಬಾಯಿ ಇದೆ. ಇದೊಂದು ದುಂಡನೆಯ ರಂಧ್ರ. ಬಾಯಿಯ ಮುಂದೆ ಮಾಂಸದ ಮುದ್ದೆಯಂಥ ಪ್ರೋಸ್ಟೋಮಿಯಮ್ ಎಂಬ ರಚನೆ ಇದೆ. ಶರೀರದ ಕೊನೆಯ ಖಂಡದಲ್ಲಿ ಗುದದ್ವಾರವಿದೆ.

ಎರೆಹುಳುವಿನ ಶರೀರದ ಮೇಲೆ ಎರಡು ಖಂಡಗಳು ಸಂಧಿಸುವ ಭಾಗದಲ್ಲಿ ಒಂದೊಂದು ರಂಧ್ರವಿದೆ. ಈ ರಂಧ್ರಗಳು ಬೆನ್ನಿನ ಮಧ್ಯರೇಖೆಯ ಮೇಲಿವೆ. ಫೆರೆಟಿಮ ಪ್ರಾಣಿಯಲ್ಲಿ ಈ ರಂಧ್ರಗಳು 12ನೆ ಖಂಡದಿಂದ ಹಿಂದಕ್ಕೆ ಪ್ರತಿ ಖಂಡದಲ್ಲೂ ಇವೆ. ಶರೀರದೊಳಗಿರುವ ಒಂದು ರೀತಿಯ ರಸ ಈ ರಂಧ್ರಗಳಿಂದ ಹೊರಬರುತ್ತದೆ. ಇದು ಈ ಪ್ರಾಣಿಯ ಶರೀರವನ್ನು ಸದಾ ತೇವವಾಗಿಟ್ಟಿರುತ್ತದೆ. ಲುಂಬ್ರಿಕಸ್ ಪ್ರಾಣಿಯಲ್ಲಿ ಈ ರಂಧ್ರಗಳು 8 ಅಥವಾ 9ನೆಯ ಖಂಡಗಳ ಮಧ್ಯಸ್ಥಳದಿಂದ ಪ್ರಾರಂಭವಾಗುತ್ತವೆ. ಈ ರಂಧ್ರಗಳನ್ನು ಬಿಟ್ಟರೆ ಎರೆಹುಳುವಿನ ಪಕ್ಕಗಳಲ್ಲಿ ಸೂಕ್ಷ್ಮವಾದ ಅನೇಕ ರಂಧ್ರಗಳು ಪ್ರತಿ ಖಂಡದಲ್ಲೂ ಇವೆ. ಇವನ್ನು ನೆಫ್ರೀಡಿಯ ರಂಧ್ರಗಳು ಎನ್ನುತ್ತಾರೆ. ಈ ರಂಧ್ರಗಳ ಮೂಲಕ ತ್ಯಾಜ್ಯವಸ್ತುಗಳು ಹೊರ ಹೋಗುತ್ತವೆ.

ಫೆರೆಟಿಮ ಪ್ರಾಣಿಯ ತಳಭಾಗದಲ್ಲಿ 5/6, 6/7, 7/8 ಮತ್ತು 8/9 ಖಂಡಗಳು ಸಂಧಿಸುವ ಸ್ಥಳಗಳಲ್ಲಿ ನಾಲ್ಕು ಜೊತೆ ಸ್ಪರ್ಮಥೀಕೆ ರಂಧ್ರಗಳಿವೆ. ಲುಂಬ್ರಿಕಸ್‌ನಲ್ಲಿ 9/10 ಮತ್ತು 10/11 ಖಂಡಗಳಲ್ಲಿ ಮಾತ್ರ ಈ ರೀತಿಯ ಎರಡು ಜೊತೆ ರಂಧ್ರಗಳಿವೆ. ಫೆರೆಟಿಮದಲ್ಲಿ 14ನೆಯ ಖಂಡದ ತಳಭಾಗದಲ್ಲಿ ಒಂದು ಜೊತೆ ಸ್ತ್ರೀಜನನೇಂದ್ರಿಯ ರಂಧ್ರವೂ 18ನೆಯ ಖಂಡದಲ್ಲಿ ಒಂದು ಜೊತೆ ಪುರುಷ ಜನನೇಂದ್ರಿಯ ರಂಧ್ರವೂ ಇವೆ. ಲುಂಬ್ರಿಕಸಿನಲ್ಲಿ 14ನೆಯ ಖಂಡದ ತಳಭಾಗದಲ್ಲಿ ಒಂದು ಜೊತೆ ಸ್ತ್ರೀಜನನೇಂದ್ರಿಯ ರಂಧ್ರವೂ 15ನೆಯ ಖಂಡದ ತಳಭಾಗದಲ್ಲಿ ಒಂದು ಜೊತೆ ಪುರುಷ ಜನನೇಂದ್ರಿಯ ರಂಧ್ರವೂ ಇವೆ.

ಎರೆಹುಳು ಮುಪ್ಪದರಜೀವಿ. ಶರೀರದ ಅಡ್ಡ ಸೀಳನ್ನು ಪರೀಶೀಲಿಸಿದರೆ ಅದರಲ್ಲಿರುವ ಮಾಂಸಖಂಡಗಳು ಮತ್ತು ಅಂಗಗಳ ಜೋಡಣೆ ತಿಳಿಯುತ್ತದೆ. ಅಡ್ಡಸೀಳು ವೃತ್ತಾಕಾರಕ್ಕಿರುತ್ತದೆ. ಶರೀರದ ಪ್ರಥಮ ಪದರ ಹೊರದರ್ಮ. ಇದು ಚಚ್ಚೌಕವಾಗಿರುವ ಕೋಶಗಳಿಂದಾಗಿದೆ. ಈ ಕೋಶಗಳು ಸಾಲಾಗಿ ಒಂದೇ ಪದರದಲ್ಲಿವೆ. ಹೊರದರ್ಮದ ಮೇಲೆ ಇವುಗಳೇ ಉತ್ಪತ್ತಿಮಾಡಿದ ತೆಳುವಾದ ಕ್ಯುಟಿಕಲ್ ಲೇಪನವಿದೆ. ಹೊರದರ್ಮದ ತಳಭಾಗದಲ್ಲಿ ಮಾಂಸಖಂಡಗಳ ಪದರಗಳಿವೆ. ಪ್ರಥಮ ಮಾಂಸಖಂಡದ ಪದರ ವೃತ್ತಾಕಾರಕ್ಕಿದೆ. ಎರಡನೆಯ ಪದರ ನೀಳವಾಗಿ ಜೋಡಿಸಿಕೊಂಡಿರುವ ಮಾಂಸಖಂಡಗಳನ್ನೊಳಗೊಂಡಿದೆ. ಹೊರದರ್ಮ ಮತ್ತು ಮಾಂಸಖಂಡಗಳು ಸೇರಿ ಶರೀರದ ಗೋಡೆಯಾಗಿದೆ. ಶರೀರದ ಗೋಡೆಯಲ್ಲಿ ಅಲ್ಲಲ್ಲಿ ಚಲನಾಂಗಗಳಾದ ಸೀಟೆಗಳು ನಾಟಿಕೊಂಡಂತಿವೆ. ಮಾಂಸಖಂಡಗಳ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯಿಂದಾಗಿ ಸೀಟೆಗಳು ಚಲಿಸುತ್ತವೆ. ಶರೀರದ ಗೋಡೆಯಿಂದ ಒಳಭಾಗದಲ್ಲಿ ದೇಹಾಂತರಾವಕಾಶವಿದೆ. ಇದರ ಸುತ್ತಲೂ ಏಕಪದರದ ಅನುಲೇಪಕ ಅಂಗಾಂಶದ ಕೋಶಗಳಿವೆ. ದೇಹಾಂತರಾವಕಾಶದೊಳಗೆ ಒಂದು ರೀತಿಯ ರಸವಿದೆ. ಈ ರಸದಲ್ಲಿ ವರ್ಣರಹಿತ ಅಮೀಬ ರೀತಿಯ ಕೋಶಗಳಿವೆ. ಶರೀರದ ಮೇಲು ರಂಧ್ರದ ಮೂಲಕ ಈ ರಸ ಕೋಶಗಳ ಸಮೇತ ಹೊರಬರುತ್ತದೆ. ಶರೀರದ ಮೇಲೆ ಕೂರುವ ಬ್ಯಾಕ್ಟೀರಿಯ ಮುಂತಾದ ಜೀವಾಣುಗಳನ್ನು ಈ ಕೋಶಗಳು ತಿಂದು ಹಾಕಿ ಶರೀರವನ್ನು ರಕ್ಷಿಸುತ್ತವೆ. ದೇಹಾಂತರಾವಕಾಶದಲ್ಲಿ ಕತ್ತರಿಜೋಡಣೆಯ ಅನ್ನನಾಳ, ಅದರ ಮೇಲುಭಾಗದಲ್ಲಿ ಹಾಗೂ ತಳಭಾಗದಲ್ಲಿ ರಕ್ತನಾಳಗಳು ಮತ್ತು ನರಹುರಿ, ಜೀರ್ಣಾಂಗದ ಇಕ್ಕೆಲದಲ್ಲಿ ಶುದ್ಧೀಕರಣಾಂಗಗಳಾದ ನೆಫ್ರೀಡಿಯ ಇವೆ.




ಎರೆಹುಳುವಿನ ಅಡ್ಡಸೀಳಿಕೆ ನೋಟ:

1. ಮೇಲುರಂಧ್ರ, 2. ಕ್ಯೂಟಿಕಲ್, 3. ಹೊರಚರ್ಮ, 4. ವೃತ್ತಾಕಾರದ ಮಾಂಸ ಖಂಡಗಳು, 5. ನೀಳಾಕಾರದ ಮಾಂಸಖಂಡಗಳು, 6. ಸಿಲಾಮಿನ ಎಪಿಥೀಲಿಯಂ, 7. ಕರುಳಿನ ಎಪಿಥೀಲಿಯಂ, 8. ದೇಹಾಂತರಾವಕಾಶ (ಸೀಲಾಂ), 9. ರಿಟ್ರ್ಯಾಕ್ಟರ್ ಮಾಂಸಖಂಡದ ಪೊರೆ, 10. ಸೀಟೆಯ ಚೀಲ, 11. ಸೀಟೆಗಳು, 12. ಖಂಡಕ್ಕೆ ಬಂದಿರುವ ನರಗಳು, 13. ನರದ ಪಕ್ಕದಲ್ಲಿರುವ ರಕ್ತನಾಳ, 14. ನರದತಳದಲ್ಲಿರುವ ರಕ್ತನಾಳ, 15. ಕರುಳಿನಿಂದ ನರಹುರಿ, 16. ನೆಫ್ರೀಡಿಯದ ಆಲಿಕೆ, 17. ನೆಫ್ರೀಡಿಯ ರಂಧ್ರ, 18. ತಳಭಾಗದ ರಕ್ತನಾಳ, 19. ನೆಫ್ರೀಡಿಯ ನಾಳಗಳು, 20. ಕರುಳು, 21. ನೆಫ್ರೀಡಿಯ ಚೀಲ, 22. ಟಿಫ್ಲೋಸೋಲ್, 23. ಮೇಲುಭಾಗದ ರಕ್ತನಾಳ, 24. ನೀಳಾಕಾರದ ಮಾಂಸಖಂಡಗಳು, 25. ಸ್ಪರ್ಶೇಂದ್ರಿಯ, 26. ಚರ್ಮಗ್ರಂಥಿ.

ಎರೆಹುಳುವಿನ ಜೀರ್ಣಾಂಗ ಅತಿಸರಳವಾಗಿ ನಾಳದಂತಿದೆ. ಜೀರ್ಣಾಂಗದ ಮುಂದಿನ ಭಾಗದಲ್ಲಿ ಆಹಾರವನ್ನು ಶೇಖರಿಸಲು ಫ್ಯಾರಿಂಕ್ಸ್ ಎಂಬ ಚೀಲದೋಪಾದಿಯ ಅಂಗ ಮತ್ತು ಆಹಾರವನ್ನು ಅರೆಯಲು ಗಟ್ಟಿಯಾದ ಸ್ನಾಯುಗಳಿಂದಾದ ಗಿಜರ್ಡ್ ಅಂಗ ಇವೆ. ಇವುಗಳು ಬರುವ ಖಂಡಗಳು ಪ್ರತಿ ಪ್ರಭೇದದಲ್ಲಿಯೂ ವಿಭಿನ್ನವಾಗಿವೆ. ಈ ಭಾಗಗಳ ಹಿಂದಿರುವುದು ಕರುಳು.

ಎರೆಹುಳುವಿನ ರಕ್ತ ಕೆಂಪಗಿದೆ. ಇದು ನಾಳಗಳಲ್ಲಿಯೇ ಹರಿಯುತ್ತದೆ. ಈ ಪ್ರಾಣಿಗೆ ಹೃದಯವಿಲ್ಲ. ರಕ್ತವನ್ನು ಶೇಖರಿಸಲು ಮತ್ತು ವಿತರಣೆ ಮಾಡಲು ಪ್ರತ್ಯೇಕ ರಕ್ತನಾಳಗಳಿವೆ.

ಎರೆಹುಳು ತನ್ನ ಚರ್ಮದಿಂದಲೇ ಉಸಿರಾಡುತ್ತದೆ. ಆದ್ದರಿಂದಲೇ ಇದರ ಚರ್ಮ ಸದಾ ತೇವವಾಗಿರುತ್ತದೆ. ರಕ್ತನಾಳಗಳ ಮೂಲಕ ರಕ್ತ ಚರ್ಮಕ್ಕೆ ಪ್ರವಹಿಸುತ್ತದೆ. ಗಾಳಿ ತೇವವಾದ ಚರ್ಮಕ್ಕೆ ಬಡಿದಾಗ ರಕ್ತನಾಳಗಳಲ್ಲಿರುವ ರಕ್ತ ಗಾಳಿಯಲ್ಲಿರುವ ಆಮ್ಲಜನಕವನ್ನು ಹೀರಿಕೊಂಡು ಇಂಗಾಲದ ಡೈಆಕ್ಸೈಡನ್ನು ಹೊರಹಾಕುತ್ತದೆ.

ಪ್ರತಿಖಂಡದಲ್ಲೂ ನಾಳದಂತಿರುವ ನೆಫ್ರೀಡಿಯಗಳೆಂಬ ಶುದ್ಧೀಕರಣಾಂಗಗಳಿವೆ. ಇವು ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಿ ನೆಫ್ರೀಡಿಯ ರಂಧ್ರಗಳ ಮೂಲಕ ಹೊರಹಾಕುತ್ತವೆ.

ಎರೆಹುಳುವಿನ ನರಮಂಡಲ ಅತಿಸರಳ. ಶರೀರದ ಮುಂತುದಿಯಲ್ಲಿ ಅನ್ನನಾಳದ ಸುತ್ತಲೂ ಉಂಗುರದೋಪಾದಿಯಲ್ಲಿರುವ ಒಂದು ನರಮುಡಿ ಇದೆ. ಈ ನರಮುಡಿಯಿಂದ ಅನ್ನನಾಳದ ತಳಭಾಗದಲ್ಲಿ ಶರೀರದುದ್ದಕ್ಕೂ ಒಂದು ನರಹುರಿ ಹುಟ್ಟಿಬಂದಿದೆ. ಈ ನರಹುರಿ ಪ್ರತಿಯೊಂದು ಖಂಡದಲ್ಲೂ ಗಂಟಿನೋಪಾದಿಯಲ್ಲಿದೆ. ಇಲ್ಲಿಂದ ನರಗಳು ಶರೀರದ ವಿವಿಧ ಭಾಗಗಳಿಗೆ ಹೊರಡುತ್ತವೆ.

ಎರೆಹುಳು ದ್ವಿಲಿಂಗ ಜೀವಿ. ಪುರುಷ ಹಾಗೂ ಸ್ತ್ರೀ ಜನನೇಂದ್ರಿಯಗಳು ಒಂದೇ ಪ್ರಾಣಿಯಲ್ಲಿವೆ. ಫೆರೆಟಿಮ ಜೀವಿಯಲ್ಲಿ ಪುರುಷ ಜನನೇಂದ್ರಿಯಗಳಾದ ವೃಷಣಗಳು ಹತ್ತು ಮತ್ತು ಹನ್ನೊಂದನೆಯ ಖಂಡದ ಮೇಲುಗೋಡೆಗೆ ಅಂಟಿಕೊಂಡಿದೆ. ಒಂದೊಂದು ಖಂಡದಲ್ಲೂ ಒಂದೊಂದು ಜೊತೆ ವೃಷಣಗಳಿದ್ದು ಅವು ವೃಷಣಚೀಲಗಳಿಂದ ರಕ್ಷಿಸಲ್ಪಟ್ಟಿವೆ. ಇವುಗಳಿಂದ ಉತ್ಪತ್ತಿಯಾಗುವ ವೀರ್ಯಾಣುಗಳು ಸೆಮೈನಲ್ ವೆಸಿಕಲ್‌ಗಳೆಂಬ ಚೀಲಗಳಲ್ಲಿ ಶೇಖರಗೊಂಡು ಬೆಳೆದು ಹೊರಬರುತ್ತವೆ. ಹೊರಬಂದ ವೀರ್ಯಾಣುಗಳನ್ನು ಒಂದು ಜೊತೆ ವೃಷಣನಾಳಗಳ ಆಲಿಕೆಗಳು ಸಂಗ್ರಹಿಸಿ ವೃಷಣನಾಳಗಳ ಮೂಲಕ 18ನೆಯ ಖಂಡದಲ್ಲಿರುವ ಪುರುಷ ಜನನೇಂದ್ರಿಯಗಳ ಮೂಲಕ ಹೊರದೂಡುತ್ತವೆ. ಪುರುಷ ಜನನೇಂದ್ರಿಯಕ್ಕೆ ಸಂಬಂಧಿಸಿದಂತೆ ಒಂದು ಜೊತೆ ಪ್ರಾಸ್ಟೇಟ್ ಗ್ರಂಥಿಯೂ ಇದೆ. ಇವು 17, 18, 19 ಖಂಡಗಳಲ್ಲಿ ಪಸರಿಸಿವೆ. ಇವು ಉತ್ಪತ್ತಿ ಮಾಡುವ ರಸವೂ ಪುರುಷ ಜನನೇಂದ್ರಿಯ ರಂಧ್ರದ ಮೂಲಕ ಹೊರಬರುತ್ತದೆ.

ಒಂದು ಜೊತೆ ಸ್ತ್ರೀ ಜನನೇಂದ್ರಿಯಗಳು (ಅಂಡಾಶಯಗಳು) 13ನೇ ಖಂಡದ ಮೇಲುಗೋಡೆಗೆ ಅಂಟಿಕೊಂಡಿವೆ. ಈ ಅಂಡಾಶಯಗಳಲ್ಲಿ ಮೊಟ್ಟೆಗಳು ಬೆಳೆದು ಹೊರಬರುತ್ತವೆ. ಇವನ್ನು ಅಂಡಾಶಯ ನಾಳದ ಆಲಿಕೆಗಳು ಸಂಗ್ರಹಿಸಿ ಅಂಡಾಶಯ ರಂಧ್ರದ ಮೂಲಕ ಹೊರ ಹಾಕುತ್ತವೆ. ಹೀಗೆ ಹೊರಬಂದ ಮೊಟ್ಟೆಗಳು ಕ್ಲೈಟೆಲಮ್ ನಾಳಕ್ಕೆ ಬೀಳುತ್ತವೆ.

ಸಂಭೋಗಕ್ರಿಯೆಯ ಕಾಲದಲ್ಲಿ ಎರಡು ಎರೆಹುಳುಗಳು ವಿರುದ್ಧ ದಿಕ್ಕಿನಲ್ಲಿ ಒಂದುಗೂಡುತ್ತವೆ. ಹೀಗೆ ಒಂದುಗೂಡಿದಾಗ ಒಂದರ ಪುರುಷ ಜನನೇಂದ್ರಿಯಗಳು ಮತ್ತೊಂದರ ಸ್ಪರ್ಮಥೀಕೆ ರಂಧ್ರಗಳಿಗೆ ಸರಿಯಾಗಿ ಜೋಡಿಸಿಕೊಂಡಿರುವಂತೆ ನೋಡಿಕೊಳ್ಳುತ್ತವೆ. ಪುರುಷ ಜನನೇಂದ್ರಿಯ ರಂಧ್ರದಿಂದ ಬರುವ ವೀರ್ಯಾಣುಗಳು ಮತ್ತೊಂದರ ಸ್ಪರ್ಮಥೀಕೆ ರಂಧ್ರವನ್ನು ಪ್ರವೇಶಿಸಿ ಸ್ಪರ್ಮಥೀಕೆ ಚೀಲದೊಳಗೆ ತುಂಬಿಕೊಳ್ಳುತ್ತವೆ. ಎರಡು ಪ್ರಾಣಿಗಳೂ ಸ್ಪರ್ಮಥೀಕೆ ಚೀಲಗಳು ವೀರ್ಯಾಣುಗಳಿಂದ ತುಂಬಿಕೊಂಡ ಮೇಲೆ ಬೇರ್ಪಡುತ್ತವೆ. ಹೀಗೆ ಬೇರ್ಪಟ್ಟ ಜೀವಿಯ ಮೊಟ್ಟೆಯನ್ನುಳ್ಳ ಕ್ಲೈಟೆಲಮ್ ಶರೀರದಿಂದ ಸಡಿಲಗೊಳ್ಳುತ್ತದೆ. ಇದು ಸಡಿಲಗೊಂಡಾಗ ಹುಳು ತನ್ನ ಶರೀರವನ್ನು ಹಿಂದಕ್ಕೆ ಎಳೆದುಕೊಳ್ಳಲಾರಂಭಿಸುತ್ತದೆ. ಇದರಿಂದಾಗಿ ಕ್ಲೈಟೆಲಮ್ ಮೊಟ್ಟೆಯ ಸಮೇತ ಜಾರಿಕೊಂಡು ಸ್ಪರ್ಮಥೀಕೆ ರಂಧ್ರದ ಬಳಿಗೆ ಬರುತ್ತದೆ. ಇದರ ಬಳಿಗೆ ಬಂದಾಗ ಸ್ಪರ್ಮಥೀಕೆ ಚೀಲಗಳು ಸಂಕುಚಿಸಿ ವೀರ್ಯಾಣುಗಳನ್ನು ಹೊರಹಾಕುತ್ತವೆ. ಹೊರಬಂದ ವೀರ್ಯಾಣುಗಳು ಕ್ಲೈಟೆಲಮ್‌ನೊಳಕ್ಕೆ ಬಿದ್ದು ಮೊಟ್ಟೆಯೊಡನೆ ಮಿಲನಗೊಳ್ಳುತ್ತವೆ. ಹೀಗೆ ಮೊಟ್ಟೆಗಳು ಕ್ಲೈಟೆಲಮ್‌ನೊಳಗಿದ್ದಾಗಲೇ ಗರ್ಭಧಾರಣೆಯಾಗುತ್ತದೆ. ಗರ್ಭಧರಿಸಿದ ಮೊಟ್ಟೆಗಳ ಸಮೇತ ಕ್ಲೈಟೆಲಮ್ ಬಿದ್ದುಹೋಗುತ್ತದೆ. ಬಿದ್ದುಹೋದ ಈ ಕ್ಲೈಟೆಲಮ್‌ಗೆ ಕಕೂನ್ ಎಂದು ಹೆಸರು. ಇದರೊಳಗಿರುವ ಮೊಟ್ಟೆಗಳು ಬೆಳೆದು ಮರಿಗಳು ಹೊರಬರುತ್ತವೆ.

(ಎಲ್.ಎಸ್.ಜಿ.)

**ಎಲು ಮುರುಟು:** ಮಕ್ಕಳ ಮೂಳೆಗಳಲ್ಲಿ ಸುಣ್ಣಾಂಶದ ಕೊರತೆಯಿಂದ, ಬೆಳೆವ ಮೂಳೆಗಳು ಸೊಟ್ಟಾಗುವ ರೋಗ ಇದಕ್ಕೆ ಮುಟ್ಟುದೋಷ, ಬಾಲಗ್ರಹವೆಂದು ಜನಸಾಮಾನ್ಯರು ಕರೆಯುತ್ತಾರೆ. ಇದು ದೋಷ ಅಥವಾ ಬಾಲಗ್ರಹ ಅಲ್ಲ. ಪೌಷ್ಟಿಕಾಂಶ ಆಹಾರದ ಕೊರತೆ ಮತ್ತು ಡಿ ಜೀವಸತ್ವದ ಕೊರತೆ ಮತ್ತು ಬಿಸಿಲಿನ ಅತಿನೇರಳೆಕಿರಣಗಳಿಂದ ವಂಚಿತರಾಗುವದರಿಂದ ಮೂಳೆಯಲ್ಲಿ ಸುಣ್ಣಾಂಶ ಕೂಡಿಕೊಳ್ಳುವಲ್ಲಿ ಕೊರತೆಕಾಣಿಸುತ್ತದೆ. ಹೀಗಾಗಿ ಬೆಳೆವ ಎಲುಬು ಮೆತ್ತಗಾಗಿ ಭಾರತಾಳದೆ ಅಂಕು ಡೊಂಕಾಗುತ್ತವೆ. ಮಗುವಿಗೆ ವರ್ಷತುಂಬುವ ಮೊದಲಿಗೆ ಇಲ್ಲವೆ ಮರು ವರ್ಷದಲ್ಲಿ ಇದು ಕಾಣಿಸಿ ಕೊಳ್ಳುವದು ಸಾಮಾನ್ಯ. ಉಷ್ಣವಲಯದಲ್ಲಿ ಬಹುಮಟ್ಟಿಗೆ ಎಲ್ಲರೂ ದೇಹವನ್ನು ಬಿಸಿಲಿಗೊಡ್ಡುವದರಿಂದಾಗಿ ಎಲುಮುರುಟು ರೋಗ ವಿರಳ. ಮೀನು ತಿನ್ನುವವರಲ್ಲೂ ಇದು ಕಡಿಮೆ.

ದೇಹದೊಳಗೆ ಕ್ಯಾಲ್ಸಿಯಂ ಉಪಯೋಗವಾಗಬೇಕಾದರೆ ಡಿ ಸತ್ವ ಬೇಕೆ ಬೇಕು. ಅತಿನೇರಳೆ ಕಿರಣಗಳ ಪ್ರಭಾವದಿಂದಾಗಿ ಚರ್ಮದಲ್ಲಿ, ಡಿ2 (ಕಾಲ್ಸಿಫೆರಾಲ್) ಮತ್ತು ಡಿ3 (ಕೊಲೆಕಾಲ್ಸಿಫೆರಾಲ್) ತಯಾರಾಗುತ್ತವೆ. ಆ ಬಳಿಕ ಯಕೃತ್ತಿನಲ್ಲಿ ಮತ್ತು ಮೂತ್ರ ಪಿಂಡದಲ್ಲಿ ಬದಲಾವಣೆ ಹೊಂದಿ ಇವೆರಡು ಕ್ರಿಯಾಶೀಲ ಡಿ ಜೀವಸತ್ವವಾಗುತ್ತವೆ. ಇದರ ಚಟುವಟಿಕೆಯನ್ನು ಬದಿಗುರಾಣಿಕ ಹಾರ್ಮೋನ್ (ಪ್ಯಾರಾತಾರ್ಮೋನ್) ಮತ್ತು ಕ್ಯಾಲ್ಸಿಟೋನಿನ ಹಾರ್ಮೋನ್‌ಗಳು ನಿಯಂತ್ರಿಸುತ್ತವೆ. ಯಾವುದೇ ಕಾರಣದಿಂದ ರಕ್ತದಲ್ಲಿ ಕ್ಯಾಲ್ಸಿಯಂ ಪ್ರಮಾಣ ಕಡೆಮೆಯಾದರೆ ಎಲುಬುಗಳೊಳಗಿನ ಕಾಲ್ಸಿಯಂ ಕರಗಿ ರಕ್ತ ಸೇರುತ್ತದೆ. ಹೀಗಾಗಿ ಎಲುಬು ಮೆತ್ತಗಾಗುತ್ತವೆ. ಆಹಾರದಲ್ಲಿಯ ಕೊರತೆ, ಕರುಳಿನ ರೋಗ, ಮೂತ್ರ ಪಿಂಡಗಳ ನ್ಯೂನತೆ, ಎಳೆ ಬಿಸಿಲಿನಿಂದ ವಂಚನೆಗಳೆಲ್ಲ 'ಡಿ' ಜೀವಸತ್ವದ ಕೊರತೆಯ ಕಾರಣಗಳು.

ಎಲುಮುರುಟು ರೋಗಕ್ಕೆ ತುತ್ತಾಗುವ ಮಗು ಮೊದಮೊದಲು ಸದಾ ಚಡಪಡಿಸುತ್ತದೆ. ಸಮಾಧಾನವೆಂಬುದು ಕಾಣುವದಿಲ್ಲ. ರಾತ್ರಿ ಹೊತ್ತು ಮಲಗಿದ ಮಗುವಿನ ತಲೆ ಬೆವರಿ ನೆನೆಯುತ್ತದೆ. ಕೈ ಕಾಲು ಹೊಟ್ಟೆಗಳಲ್ಲಿ ಬಿಗುವಿರುವದಿಲ್ಲ. ಕೂಡುವುದು, ತೆವಳಿಕೆ, ನಡಿಗೆಗಳು ನಿಧಾನ ಮತ್ತು ಕಷ್ಟ. ಹಲ್ಲು ಹುಟ್ಟುವುದೂ ತಡ. ಮೊದಲ ಕೆಲವು ತಿಂಗಳುಗಳಲ್ಲಿ ತಲೆ ಬುರುಡೆಯ ಮೂಳೆಗಳು ಮೆತ್ತಗಿರುತ್ತವೆ. ಉದ್ದನೆಯ ಎಲುಬುಗಳ ಕೊನೆಗಳು, ಮೆಲ್ಲೆಲುಬುಗಳು (ಎಪಿಫೈಸಿಯಲ್ ಕಾರ್ಟಿಲೇಜಸ್) ದಪ್ಪವಾಗಿ ಬೆಳೆದು ಅಗಲವಾಗಿ ಗೋಚರಿಸುತ್ತವೆ. ಅದೇ ರೀತಿ ಪಕ್ಕೆಲುಬು ಮೆಲ್ಲೆಲುಬಿನೊಂದಿಗೆ ಕೂಡುವೆಡೆಯಲ್ಲೂ ಮೂಳೆ ದಪ್ಪವಾಗಿರುವದು ಸಾಮಾನ್ಯ. ಮೂಳೆಗಳ ಕ್ಷ ಕಿರಣ ಪರೀಕ್ಷೆ, ರಕ್ತದಲ್ಲಿನ ಸುಣ್ಣಾಂಶ ಹಾಗೂ ರಂಜಕಗಳ ಮಟ್ಟದ ಪರೀಕ್ಷೆಯ ಫಲಿತಾಂಶಗಳಿಂದ ಎಲುಮುರುಟು ರೋಗ ಖಚಿತ ಪಡಿಸಿಕೊಳ್ಳಬಹುದು.

ಚಿಗುರಾವಸ್ಥೆಯಲ್ಲೇ ಇದನ್ನು ಗುರುತಿಸಿ ಉಪಚರಿಸದಿದ್ದರೆ ಮೈ ಮೂಳೆಗಳು ಬಗೆ ಬಗೆಯಾಗಿ ಅಂಕು ಡೊಂಕಾಗುತ್ತವೆ. ವಿಕಲತೆ ತೋಳುಗಳಿಗಿಂತ ತೊಡೆ ಕಾಲುಗಳಲ್ಲಿ ಹೆಚ್ಚಿಗೆ ಕಾಣಿಸುತ್ತದೆ. ಶರೀರದ ಭಾರವನ್ನು ಕಾಲುಗಳು ಹೊರುವುದರಿಂದ ಹೀಗಾಗುವುದು. ತಾಗು ಮಂಡಿ(ನಾಕ್‌ನೀ), ಪಂಗಡಗಾಲು (ಬೋಲೆಗ್) ವಿಕಲತೆಗಳು ಮಗು ನಡೆಯುವದಕ್ಕೆ ಮುನ್ನವೆ ಉಂಟಾಗುತ್ತವೆ. ನಡೆಯುವದನ್ನು ಪ್ರಾರಂಭಿಸಿದ ಮೇಲೆ ಇವು ಇನ್ನೂ ಹೆಚ್ಚು ವಿಕಾರಗೊಳ್ಳುತ್ತವೆ. ಹೆಣ್ಣುಗೂಸಿನಲ್ಲಿ ಕಿಳ್ಗುಳಿ (ಪೆಲ್ವಿಕ್) ಮೂಳೆ ಸೊಟ್ಟಾಗಿ ಮುಂದೆ ಹೆರಿಗೆಗೆ ತೊಂದರೆಯಾಗಬಹುದು. ಚಿಕಿತ್ಸೆ ಇಲ್ಲವಾದರೆ ರೋಗ ಕಳೆದು ಸೊಟ್ಟಗಿರುವ ಮೂಳೆಗಳು ಗಡುಸಾಗಿಬಿಡುತ್ತವೆ. ಎದೆಗೆಮ್ಮು, ಫುಪ್ಫುಸ ಉರಿತ, ವಾಂತಿ, ಸ್ನಾಯುನಿತ್ರಾಣ, ಯಕೃತ್ತಿನ ತೊಂದರೆ, ರಕ್ತ ಕೊರೆ ಮುಂತಾದವುಗಳೆಲ್ಲ ಎಲುಮುರುಟದೊಂದಿಗೆ ಸಂಭವಿಸಬಹುದಾದ ತೊಡಕುಗಳು. ರಕ್ತದಲ್ಲಿ ಸುಣ್ಣಾಂಶದ ಕೊರತೆಯಾಗಿ ಕೈ ಅಂಗಾಲುಗಳಲ್ಲಿ ಎಡೆಸೆಳವು (ಟೆಟನಿ) ಇಲ್ಲವೆ ಮೂರ್ಛೆ ಕಾಣಿಸಿಕೊಳ್ಳುತ್ತದೆ.

ಎಲುಮುರುಟು ರೋಗವನ್ನು ವಿಕಲತೆ ಮೂಡುವ ಮುನ್ನವೆ ಕಂಡು ಉಪಚರಿಸಬೇಕು. ಬರೀ ಕ್ಯಾಲ್ಸಿಯಂ ಫಾಸ್ಪರಸ್ ಕೊಟ್ಟರೆ ಸಾಲದು. ಮುಖ್ಯವಾಗಿ ಡಿ ಸತ್ವ ಕೊಡಬೇಕು. ಡಿ ಜೀವಸತ್ವ ಔಷಧ ರೂಪದಲ್ಲಿ ಲಭ್ಯವಿದೆ. ಮೀನಿನ ಎಣ್ಣೆ, ಹಾಲು, ತೊಪ್ಪಲುಪಲ್ಯಗಳನ್ನು ಮಗುವಿಗೆ ಆಹಾರ ರೂಪದಲ್ಲಿ ನೀಡಬೇಕು. ಎಲುಮುರುಟು ರೋಗದೊಂದಿಗೆ ನೀಚಗೊರೆ (ಸ್ಕರ್ವಿ), ಒಡಲಬೇನೆ (ಸೀಲಿಯಕ್ ಡಿಸೀಸ್) ಹಾಗೂ ಮೂತ್ರ ಪಿಂಡದ ಸೋಲುವೆಗಳನ್ನು ಗುರುತಿಸಿ ಉಪಚರಿಸಬೇಕು. ಕೆಲವು ಎಲುಮುರುಟು ರೋಗ ಎಂತೆಂತಹ ಉಪಚಾರ ನೀಡಿದರೂ ವಾಸಿಯಾಗಲಾರದು.

ಬಲಿತ ವಿಕಲತೆಯ ಮಗುವಿನ ಉಪಚಾರ ಸರಳಸಾಧ್ಯವಾಗಲಾರದು. ಮೊದಲಿಗೆ ವಿಕಲತೆಗಳನ್ನು ಸರಿ ಪಡಿಸಬೇಕು. ಅಲ್ಪ ಪ್ರಮಾಣದ ವಿಕಲತೆಯನ್ನು ದಬ್ಬೆ (ಸ್ಪ್ಲಿಂಟ್) ಇಲ್ಲವೆ ಪ್ಲಾಸ್ಟರ್ ಆಫ್ ಪ್ಯಾರಿಸಿನ ಅಚ್ಚು (ಪಿ.ಓ.ಪಿ. ಕಾಸ್ಟ) ಹಾಕಿ ಸರಿಪಡಿಸಬಹುದು. ವಿಕಲತೆ ಬಲಿತಿದ್ದರೆ ಶಸ್ತ್ರ ಕ್ರಿಯೆಯಿಂದ ಸರಿಪಡಿಸಬೇಕು. ಅನಂತರ ಡಿ ಜೀವಸತ್ವ, ಕ್ಯಾಲ್ಸಿಯಂ, ಫಾಸ್ಪರಸ್‌ಗಳನ್ನು ಮತ್ತು ಪೌಷ್ಟಿಕಾಂಶದ ಆಹಾರವನ್ನು ಕೊಡಬೇಕು.

**ಎಲುಗಟ್ಟು, ಅಕಶೇರುಕಗಳಲ್ಲಿ:** ದೇಹದ ಒಳಗೆ ಸ್ನಾಯುಗಳಿಗೆ ಆಸರೆಯಾಗಿ ಧೃಡವಾದ ಜೋಡಣೆಯಿಂದಾಗಿರುವ ಚೌಕಟ್ಟಿನ ಹೆಸರೇ ಎಲುಗಟ್ಟು. ಇದು ಕಶೇರುಕ ಗುಂಪಿನ ಪ್ರಾಣಿಗಳಲ್ಲಿ ಎಲುಬಿನ ಎಲುಗಟ್ಟಿದೆ. ಅಕಶೇರುಕಗಳಲ್ಲಿ ಎಲುಬಿಲ್ಲ. ಶರೀರಕ್ಕೆ ಸ್ಥಿರತೆ ನೀಡುವ ಇತರ ರಚನೆಗಳಿವೆ. ಶರೀರಕ್ಕೊಂದು ಆಕಾರ ಪಡೆಯಲು, ಸ್ನಾಯುಗಳಿಗೆ ಆಸರೆಯಾಗಿರಲು ಮತ್ತು ಅಸ್ಥಿಗೆ ಹೋಲಿಸಬಹುದಾದ ರಚನೆಗಳನ್ನು ಅಕಶೇರುಕಗಳು ಬೆಳೆಸಿ ಕೊಂಡಿರುವುದಕ್ಕೆ ಎಲುಗಟ್ಟು ಕಾರಣ. ಈ ರೀತಿಯ ಎಲುಗಟ್ಟು ಪ್ರಭೇದಗಳಿಗನುಗುಣವಾಗಿ ವಿವಿಧ ಆಕಾರ ಪಡೆದಿದೆ. ಇದು ಶರೀರದ ಆಕಾರವನ್ನು ಕಾಯ್ದಿಡಲು ಶರೀರದೊಳಗಿನ ನೀರನ್ನೇ ಆಶ್ರಯಿಸಬೇಕಾಗುತ್ತದೆ. ಜೀವಕೋಶಗಳಲ್ಲಿರುವ ನೀರು ಮತ್ತು ಇತರ ಭಾಗಗಳಲ್ಲಿರುವ ನೀರಿನ ಒತ್ತಡದಿಂದಾಗಿ ಆಕಾರ ಉಳಿದಿದೆ. ಕಂಬಳಿಹುಳು ಇದಕ್ಕೊಂದು ಉತ್ತಮ ನಿದರ್ಶನ. ಶರೀರದ್ರವಗಳ ಜೊತೆಗೆ ಮಾಂಸಖಂಡಗಳನ್ನು ಗಣನೆಗೆ ತೆಗೆದುಕೊಂಡಾಗ, ಚರ್ಮದ ತಳದಲ್ಲಿರುವ ಗಟ್ಟಿಯಾದ ಮಾಂಸಖಂಡಗಳ ಕುಗ್ಗುವಿಕೆ ಮತ್ತು ಹಿಗ್ಗುವಿಕೆಯಿಂದ ಪ್ರಾಣಿಯ ಚಲನೆ ಸಾಧ್ಯ.

ಅಕಶೇರುಕ ಪ್ರಪಂಚದಲ್ಲಿ ಅಸ್ಥಿಗೆ ಹೋಲಿಸಬಹುದಾದ ರಚನೆಗಳು ಏಕಕೋಶಪ್ರಾಣಿಗಳಲ್ಲಿವೆ. ಅಮೀಬದಲ್ಲಿ ಮಾತ್ರ ಇಂಥ ರಚನೆ ಇಲ್ಲ. ಆದರೆ ಇದೇ ಗುಂಪಿನ ಎಲ್ಫಿಡಿಯಾ ಪ್ರಾಣಿಯಲ್ಲಿ ಗಟ್ಟಿಮುಟ್ಟಾದ ಲವಣಮಿಶ್ರಿತ ಅಸ್ಥಿರಚನೆ ಇದೆ. ಕೆಲವು ಪ್ರಾಣಿಗಳಿಗೆ ಮರಳುಮಿಶ್ರಿತ ಅಸ್ಥಿರಚನೆಗಳಿವೆ. ಇಂಥ ರಚನೆಗಳು ಶರೀರವನ್ನು ರಕ್ಷಿಸುತ್ತವೆ. ಈ ಅಸ್ಥಿರಚನೆ ಪ್ರಾಣಿಯ ಶರೀರದ ಹೊರಭಾಗದಲ್ಲಿ ಅಥವಾ ಒಳಭಾಗದಲ್ಲಿ ಇರಬಹುದು.

ಸ್ಪಂಜುಪ್ರಾಣಿಗಳಲ್ಲಿ ಕೂಡ ಗಟ್ಟಿಯಾಗಿರುವ ಲವಣಮಿಶ್ರಿತ ರಚನೆಗಳಿವೆ. ಇವು ಅತಿಸೂಕ್ಷ್ಮವಾಗಿದ್ದು ಮುಳ್ಳುಗಳನ್ನು ಹೋಲುತ್ತವೆ.



**ಸ್ಪಾಂಜ್ ಪ್ರಾಣಿಗಳ ಸ್ಪೆಕ್ಯೂಲ್‌ಗಳು**

ಇವು ಉತ್ಪಾದಿಸುವ ಒಳ ಅಸ್ಥಿ ಸುಣ್ಣ ಸ್ಪಾಂಜಿನ್ ಗಾಜಿನಂಥ ವಸ್ತುಗಳಿಂದಾಗಿದೆ. ಈ ರಚನೆಗಳು ಶರೀರಕ್ಕೆ ಆಸರೆಯನ್ನೊದಗಿಸುತ್ತವೆ. ಪ್ರತ್ಯೇಕವಾಗಿರುವ ಜೀವಕೋಶಗಳಿಂದಲೇ ಅಸ್ಥಿರಚನೆ ಹುಟ್ಟಿಬರುತ್ತದೆ.

ಕುಟುಕು ಕಣವಂತಗಳಾದ ಹವಳ ಹುಳುಗಳು ತಮ್ಮ ದೇಹಗಳಲ್ಲಿರುವ ಜೀವಕೋಶಗಳಿಂದ ಗಟ್ಟಿಮುಟ್ಟಾದ ಅಸ್ಥಿಯನ್ನು ಉತ್ಪಾದಿಸುತ್ತವೆ. ಇವುಗಳ ಉತ್ಪನ್ನಗಳಿಂದ ಹವಳದ ಗುಡ್ಡಗಳು ಮತ್ತು ಹವಳ ದ್ವೀಪಗಳಾಗುತ್ತವೆ. ಆಲ್ಸಿಯೋನಿಯಂ ಪ್ರಾಣಿಯಲ್ಲಿ ಲವಣಮಿಶ್ರಿತ ದಾರಗಳು ಮತ್ತು ಮುಳ್ಳಿನಂಥ ರಚನೆಗಳನ್ನು ಒಳಗೊಂಡಿರುವ ಒಳ ಅಸ್ಥಿ ಇದೆ. ಹವಳದ ಗುಡ್ಡಗಳನ್ನು ನಿರ್ಮಿಸುವ ಪ್ರಾಣಿಗಳಲ್ಲಿ ಹೊರಚರ್ಮದ ಕೋಶಗಳಿಂದ ಅಸ್ಥಿ ಹುಟ್ಟುತ್ತದೆ. ಈ ಕೋಶಗಳಿಂದ ಉತ್ಪನ್ನವಾಗುವ ಬಟ್ಟಲಿನಂಥ ಅಸ್ಥಿರಚನೆಯೊಳಗೆ ಪ್ರಾಣಿ ಹುದುಗಿಕೊಳ್ಳುತ್ತದೆ. ಸಾವಿರಾರು ಪ್ರಾಣಿಗಳು ಒಟ್ಟುಗೂಡಿ ಸಂಘಜೀವನವನ್ನು ನಡೆಸಲು ಅನುಕೂಲವಾಗುಂತಹ ಅಸ್ಥಿರಚನೆಗಳಿಂದ ಹವಳದ ಗುಡ್ಡಗಳೇ ನಿರ್ಮಾಣವಾಗುತ್ತವೆ.

ಸಂಧಿಪದಿಗಳಲ್ಲಿ ಹೊರ ಅಸ್ಥಿರಚನೆ ಬಹಳ ಚೆನ್ನಾಗಿ ಬೆಳೆದಿದೆ. ಇವುಗಳ ಶರೀರದ ಮೇಲೆ ಗಟ್ಟಿಯಾದ ಹೊದಿಕೆ ಖೈಟಿನ್ ಎಂಬ ವಸ್ತುವಿನಿಂದಾಗಿದೆ.

ನೈಟ್ರೋಜನ್‌ಯುಕ್ತ ಶರ್ಕರ ಮತ್ತು ಪ್ರೋಟೀನುಗಳು ಸೇರಿ ಖೈಟಿನ್ ಆಗುತ್ತದೆ. ಖೈಟಿನ್‌ನಿಂದ ಕ್ಯೂಟಿಕಲ್ ಎಂಬ ಗಟ್ಟಿ ವಸ್ತು ಹುಟ್ಟುತ್ತದೆ. ದುಂಬಿ, ಮಿಡತೆಗಳಲ್ಲಿ ಈ ರೀತಿಯ ಕ್ಯೂಟಿಕಲ್ ಹೊದಿಕೆ ಇದೆ. ಸಂಧಿಪದಿಗಳ ಶರೀರದ ಖಂಡಗಳ ಮೇಲೆ ಈ




ಕ್ಯೂಟಿಕಲ್ ತಟ್ಟೆಗಳಂತೆ ಜೋಡಿಸಿಕೊಂಡಿರುತ್ತದೆ. ಖಂಡಗಳ ಮೇಲಿರುವ ಗಟ್ಟಿಯಾದ ತಟ್ಟೆಗಳು ಒಂದರೊಡನೊಂದು ತೆಳುವಾದ ಪೊರೆಯಿಂದ ಅಂಟಿ ಕೂಡಿಕೊಂಡಿವೆ.

ಸಿಗಡಿ, ಏಡಿ, ಲೋಬ್ಸ್ಟರ್ ಮುಂತಾದುವುಗಳ ಹೊರ ಅಸ್ಥಿಯಲ್ಲಿ ಕ್ಯೂಟಿಕಲಿನೊಡನೆ ಸುಣ್ಣದ ಲವಣಗಳಿವೆ. ಇದು ಅತಿ ಗಟ್ಟಿಯಾಗಿರುತ್ತದೆ. ಇವುಗಳ ವದನಾಂಗಗಳು ಅತಿಗಟ್ಟಿಯಾದ ಸ್ಕ್ಲಿರೋಟಿನ್ ಎಂಬ ವಸ್ತುವಿನಿಂದಾಗಿವೆ. ಸಂಧಿಪದಿಗಳ ಎಲುಗಟ್ಟು ಬರೀ ಶರೀರ ರಕ್ಷಣೆಯನ್ನಲ್ಲದೆ, ಶರೀರದಲ್ಲಿರುವ ನೀರು ಹೊರ ಹೋಗದಂತೆ ರಕ್ಷಿಸುತ್ತದೆ. ಆದ್ದರಿಂದ ಈ ಕ್ಯೂಟಿಕಲ್ ಕವಚದ ಮೇಲೆ ಒಂದು ರೀತಿಯ ಮೇಣದಂಥ ವಸ್ತುವನ್ನು ಇವು ಉತ್ಪಾದಿಸಿಕೊಳ್ಳುತ್ತವೆ. ಚರ್ಮದಲ್ಲಿರುವ ಗ್ರಂಥಿಗಳು ಇದನ್ನು ಉತ್ಪಾದಿಸುತ್ತವೆ.

ಮೃದ್ವಂಗಿಗಳಲ್ಲಿಯು ಅಸ್ಥಿರಚನೆಗಳಿವೆ. ಕಪ್ಪೆಚಿಪ್ಪಿನ ಹುಳು, ಶಂಖದ ಹುಳು, ಕವಡೆ ಪ್ರಾಣಿಗಳ ಶರೀರದ ಮೇಲೆ ಅತಿಗಟ್ಟಿಯಾದ ಸುಣ್ಣಮಿಶ್ರಿತ ಲವಣಗಳಿಂದಾದ ರಕ್ಷಾ ಕವಚಗಳಿವೆ.



ಈ ಕವಚ ಪ್ರಾಣಿಗಳಿಗೆ ರಕ್ಷಣೆಯನ್ನೊದಗಿಸುತ್ತದೆ. ಪ್ರಾಣಿ ಸತ್ತ ಮೇಲೆ ಈ ಕವಚಗಳು ಬಹಳ ಕಾಲ ಹಾಗೇ ಉಳಿದಿರುತ್ತವೆ. ಶಂಕು, ಶಂಕುವಿನಂತೆ ಇರುವ ಬಸವನ ಹುಳುವಿನ ಗುಳ್ಳೆಗಳು, ಕವಚಗಳನ್ನು ಮನುಷ್ಯ ವಿವಿಧ ರೀತಿಯಲ್ಲಿ ಬಳಸುತ್ತಿದ್ದಾನೆ. ಈ ಹೊರ ಅಸ್ಥಿರಚನೆಗಳು ಚರ್ಮದ ಹೊದಿಕೆಯಾದ ಮ್ಯಾಂಟಲ್ ಅಂಗದಿಂದ ಹುಟ್ಟುತ್ತವೆ. ಇಲ್ಲಿ ಉತ್ಪತ್ತಿಯಾಗುವ ಲವಣ ವಸ್ತುಗಳು ಗಟ್ಟಿಯಾಗಿ ಹೊರ ಅಸ್ಥಿ ರಚನೆಯಾಗುತ್ತವೆ. ಕೆಲವು ಮೃದ್ವಂಗಿಗಳಲ್ಲಿ ಇಂಥ ಅಸ್ಥಿರಚನೆಗಳು ಶರೀರದ ಒಳಗೆ ಇವೆ. ಕಟಲ್‌ಮೀನು, ಲಾಲಿಗೊ ಪ್ರಾಣಿಗಳಲ್ಲಿ ಅಸ್ಥಿರಚನೆಗಳು ಒಳಗಿವೆ.

ಎಕಿನೋಡರ್ಮೇಟ ಅಥವಾ ಕಂಟಕಚರ್ಮಿಗಳಲ್ಲಿ ಸಹ ಅಸ್ಥಿರಚನೆಗಳಿವೆ. ಹೊರಚರ್ಮದ ತಳದಲ್ಲಿ ತಟ್ಟೆಗಳಂಥ ರಚನೆಗಳನ್ನು ಇವು ಉತ್ಪಾದಿಸಿಕೊಳ್ಳುತ್ತವೆ. ಆದ್ದರಿಂದ ಇವುಗಳ ಚರ್ಮ ಒರಟಾಗಿ, ಗಟ್ಟಿಯಾಗಿರುತ್ತದೆ. ಕೆಲವು ಬಾರಿ ಈ ಅಸ್ಥಿರಚನೆಗಳು ಬಹಳ ಗಟ್ಟಿಯಾಗಿದ್ದು ಟೆಸ್ಟ್ ಅಥವಾ ಥೀಕಗಳೆಂಬ ಪಟ್ಟಿಗಳಂಥ ರಚನೆಗಳನ್ನು ಕೊಡುತ್ತವೆ. ಶರೀರದ ಮೇಲೆ ಮುಳ್ಳುಗಳಂಥ ಬೆಳವಣಿಗೆಗಳು ಸಹ ಇವೆ. ಅಕಶೇರುಕಗಳಲ್ಲಿರುವ ಈ

ಎಲುಗಟ್ಟನ್ನು ಕಶೇರುಕಗಳ ಎಲುಗಟ್ಟಿಗೆ ಯಾವ ವಿಧದಲ್ಲಿಯೂ ಹೋಲಿಸಲಾಗದು. ಕಶೇರುಕಗಳಲ್ಲಿ ಎಲುಗಟ್ಟು ಶರೀರಕ್ಕೆ ಆಸರೆ ಮತ್ತು ರಕ್ಷಣೆಯನ್ನೊದಗಿಸುವಂತೆಯೇ



1. ಟ್ರೈಪೊಲಿಯಟ್ 2. ಒಪಿಯೋ ಸೆಫಲಸ್ 3. ಟ್ರೈಡಕ್ಟೈಲ್ 4. ಜೆಮ್ಮಿಫಾರ್ಮ್

ಅಕಶೇರುಕಗಳಲ್ಲಿರುವ ಎಲುಗಟ್ಟು ಇವುಗಳ ಶರೀರ ರಕ್ಷಣೆಗೆ ಸಹಾಯಕವಾಗಿವೆ. ಈ ರೀತಿಯ ಎಲುಗಟ್ಟು ಒಂದೊಂದು ವಂಶದ ಅಕಶೇರುಕಗಳಲ್ಲಿ ವಿವಿಧ ರೀತಿಯಲ್ಲಿದೆ.

(ಎಲ್.ಎಸ್.ಜಿ.)

**ಎಲುಬು:** ಕಶೇರುಕಗಳಲ್ಲಿ ಮಾತ್ರ ಕಂಡುಬರುವ ಸಂಯೋಜಕ ಅಂಗಾಂಶ. ಇದರ ರಚನೆಯಲ್ಲಿ ಅಸ್ಥಿಕೋಶ (ಆಸ್ಟಿಯೊಬ್ಲಾಸ್ಟ್) ಗಳಿವೆ. ಅವು ತಮ್ಮ ಸುತ್ತ ಮಾತೃಕೆಯನ್ನು ಸ್ರವಿಸಿಕೊಂಡಿವೆ. ಈ ಮಾತೃಕೆಯು ಕ್ಯಾಲ್ಸಿಯಂ ಮತ್ತು ಫಾಸ್ಫರಸ್‌ಗಳ ಸಂಯುಕ್ತದಿಂದ ಕಲ್ಲಿನಂತೆ ಗಟ್ಟಿಯಾಗಿವೆ. ಮಾತೃಕೆಯಲ್ಲಿ ಕೊಲ್ಲಾಜೆನ್, ಆಸ್ಸಿಯೊಮ್ಯೂಕಾಯಿಡ್‌ಗಳೆಂಬ ಪ್ರೋಟೀನುಗಳಿವೆ. ಪ್ರತಿಯೊಂದು ಮೂಳೆಯು ಅದು ಕೀಲಿಕೊಂಡು ಬಾಗಿದ ವಿನಹ, ಉಳಿದೆಡೆಗಳಲ್ಲಿ ಪೆರಿಸ್ಟೋಮಿಯಂ ಎಂಬ ರಕ್ತ ತಂತು ಪ್ರತ್ಯಾಸ್ಥ ಹೊದಿಕೆಯಿಂದ ಆವರಿತವಾಗಿದೆ. ರಚನೆಯಲ್ಲಿ ಮೂಳೆಯು ಫಲಕ ರೂಪದಲ್ಲಿರುತ್ತದೆ. ಮಾತೃಕೆಯು ಒಂದು ನಿರ್ದಿಷ್ಟ ಕ್ರಮದಲ್ಲಿ ವ್ಯವಸ್ಥಿತವಾದ ಫಲಕಗಳಿಂದಾಗಿದೆ. ಈ ಫಲಕಗಳ ನಡುವೆ ಸಂಬಂಧ ಕಲ್ಪಿಸುವ ಹ್ಯಾವರ್ಸಿಯನ್ ನಾಲೆಗಳಿವೆ. ಫಲಕಗಳಲ್ಲಿ ಕಂಡುಬರುವ ಲೆಕೂನಗಳೆಂಬ ಸಂದುಗಳಲ್ಲಿ ಅಸ್ಥಿಕೋಶಗಳಿವೆ. ಮೂಳೆಗಳು ದೇಹಕ್ಕೆ ನಿರ್ದಿಷ್ಟ ಆಕಾರ ಕೊಡುವ ಆಧಾರ ಸ್ಥಂಭಗಳು. ಮಾಂಸಖಂಡಗಳು ಅಂಟಿಕೊಳ್ಳಲು ಸ್ಥಳವನ್ನು ಒದಗಿಸುತ್ತವೆ. ಮಿದುಳು, ಒಳಕಿವಿ ಮುಂತಾದ ಸಂವೇದನಾಂಗಗಳಿಗೆ ರಕ್ಷಣೆಯನ್ನು ಒದಗಿಸುತ್ತದೆ.

(ಎಚ್.ಬಿ.ಡಿ.)

**ಎಲುಬಿನ ರೋಗಗಳು:** ಎಲುಬಿನ ರೋಗಗಳು ಅನೇಕ. ರೋಗದ ಕಾರಣಗಳೂ ಅನೇಕಾನೇಕ. ಆನುವಂಶಿಕ, ಸಂಜಾತ, ಸೋಂಕು, ಅಪೌಷ್ಟಿಕತೆ, ಗಂತಿಗಳು ಎಲುಬಿನ ರೋಗದ ಕಾರಣಗಳಾಗಬಹುದು. ಕೆಲವು ರೋಗಗಳನ್ನು ತಡೆಗಟ್ಟಬಹುದು, ಕೆಲವನ್ನು ಚಿಕಿತ್ಸೆಯಿಂದ ಗುಣಪಡಿಸಬಹುದು. ಕೆಲವು ರೋಗಗಳು ಇನ್ನೂವರೆಗೆ ವಿಜ್ಞಾನಿಗಳ, ವೈದ್ಯರ ವಶಕ್ಕೆ ಬಂದಿಲ್ಲ. ಎಲುಬುಗಳು ರೋಗಕ್ಕೆ ತುತ್ತಾದಾಗ ವಿಕಲತೆ ಉಂಟಾಗುತ್ತದೆ. ವಿಕಲತೆ ಎದ್ದು ಕಾಣುವಂತಾದರೆ ಅಂತಹ ವ್ಯಕ್ತಿಗಳ ದೈಹಿಕ ಸಾಮರ್ಥ್ಯ ಕಡಿಮೆಯಾಗುತ್ತದೆ. ಇವರು ಸಹಜವಾಗಿಯೇ ಮಾನಸಿಕ ಗೊಂದಲಕ್ಕೊಳಗಾಗುತ್ತಾರೆ.

ಆನುವಂಶಿಕವಾಗಿ ಕಾಣುವ ಹಲವಾರು ರೋಗಗಳು ಎಲುಬುಗಳಲ್ಲಿ ನ್ಯೂನತೆಯುಂಟುಮಾಡಿ ವಿಕಲತೆಗೆ ಕಾರಣವಾಗುತ್ತವೆ. ಕೆಲವು ರೋಗಗಳು ಜನನದೊಂದಿಗೆ ಕಂಡರೆ ಕೆಲವು ರೋಗಗಳು ಮೂರು, ನಾಲ್ಕರ ದಶಕದಲ್ಲಿ ಹೊರಬೀಳುತ್ತವೆ. ಲಟ್ಟಪಾದ, ಚಪ್ಪೆಕೀಲತಪ್ಪಿಕೆ, ಎಲುಜನಕ ನ್ಯೂನತೆಗಳು ಮಗುವಿನ ಜನನದೊಂದಿಗೆ ಕಾಣಿಸುವಂಥವುಗಳು. ರುಮಟಾಯ್ಡ್ ಕೀಲುರಿತ, ಆಂಕಿಲೋಸಿಂಗ ಸ್ಪಾಂಡಿಲೈಟಿಸ್ ಮೂರು ಅಥವಾ ನಾಲ್ಕರ ದಶಕದಲ್ಲಿ ಕಾಣುವಂತವುಗಳು. ತಲೆತಲಾಂತರಕ್ಕೆ ಬಿಡದೆ ಕಾಣುವ ರೋಗಗಳು ಪ್ರಬಲ (ಡಾಮಿನೆಂಟ್) ವೆಂದೂ ಒಂದೊಂದು ತಲೆ ಬಿಟ್ಟು ಬಿಟ್ಟು ಕಾಣುವ ರೋಗಗಳು ಹಿಂಸರಿಕ (ರಿಸೆಸಿವ್) ಸ್ವರೂಪದ್ದೆಂದು ಗುರುತಿಸಿದ್ದಾರೆ.

ಗರ್ಭದಲ್ಲಿ ಪಿಂಡ ಬೆಳೆಯುವ ಮೊದಲ ಮೂರು ತಿಂಗಳ ಸಮಯದಲ್ಲಿ ತಾಯಿ ಕೆಲವೊಂದು ಔಷಧಗಳನ್ನು ಸೇವಿಸಿದರೆ, ಎಕ್ಸ್ ಕಿರಣ ಅಥವಾ ಇನ್ನಿತರ ವಿಕಿರಣತೆಗೆ ಒಳ ಪಟ್ಟರೆ ಹುಟ್ಟುವ ಮಗು ವಿಕಲವಾಗುವ ಸಂಭವ ಇದೆ. ವಿಕಲತೆಯ ಸ್ವರೂಪ ಬಹು ವಿಧವಾಗಿ ಕಾಣಿಸಿಕೊಳ್ಳಬಹುದು. ಅಂಗಭಾಗದ ಕೊರತೆ ಇರುವದೇ ಹೆಚ್ಚು.

ಸಂಶೋಧನೆ ಮುಂದುವರೆದಂತೆ ವಿಕಲತೆಯುಂಟುಮಾಡುವ ಕಾರಣ ಕಂಡುಕೊಳ್ಳಲು ಸಾಧ್ಯವಾಗುತ್ತಿದೆ. ವರ್ಣತಂತುಗಳ (ಕ್ರೊಮೋಸೋಮ್ಸ್)ಲ್ಲಿನ ನ್ಯೂನತೆ ಕಂಡು ಸರಿಪಡಿಸುವ ಪ್ರಯತ್ನಗಳು ನಡೆದಿವೆ. ಸಂಜಾತ ರೋಗಗಳ ಕಾರಣಗಳು ಗೊತ್ತಾಗುತ್ತಿರುವುದರಿಂದಾಗಿ ಅವುಗಳನ್ನೂ ಸಹ ತಡೆಗಟ್ಟಲು ಪ್ರಯತ್ನಗಳು ನಡೆದಿವೆ. ಕಂಡುಬಂದ ವಿಕಲತೆಗಳಲ್ಲಿ ಕೆಲವುಗಳನ್ನು ಚಿಕಿತ್ಸೆಯಿಂದ ಸರಿಪಡಿಸಬಹುದು.

ಸಣ್ಣ ಪೆಟ್ಟು ತಗುಲಿದರೆ ಸುಲಭವಾಗಿ ಸೀಳುವ, ಮುರಿಯುವ ಮೂಳೆಗಳೊಂದಿಗೆ ಮಗುವಿನ ಜನನವಾಗಬಹುದು. ಮಗು ಬೆಳೆಯುವಾಗ ಸಹ ಇದು ಕಾಣಿಸಿಕೊಳ್ಳಬಹುದು. ಇದಕ್ಕೆ ಎಲುಜನನ ನ್ಯೂನತೆ (ಆಸ್ಟಿಯೋಜನಿಸಿಸ್ ಇಂಪರ್ಫೆಕ್ಟ್) ಎನ್ನುತ್ತಾರೆ. ಕೆಲವೊಮ್ಮೆ ಎಲುಬಿನೊಳಗಣ ಮಜ್ಜೆಯ ಭಾಗವೆಲ್ಲ ಗಟ್ಟಿಗಡುಸಾಗಿ ಹಾಲುಗಲ್ಲಿನಂತಾಗಿರುತ್ತದೆ. ಇದು ಸಹ ಸ್ವಲ್ಪ ಪೆಟ್ಟಿನಿಂದಾಗಿ ಮುರಿಯುತ್ತದೆ. ಇದಕ್ಕೆ ಎಲುಕಲ್ಲು ರೋಗ (ಆಸ್ಟಿಯೋಪೆಟ್ರೋಸಿಸ್) ಅನ್ನುತ್ತಾರೆ. ಮೂಳೆಯ ಬದಲಾಗಿ ಮೆತುವಾದ ತಂತುವಿನ ಊತಕ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಫೈಬ್ರಸ್‌ಡಿಸ್‌ಪ್ಲೇಸಿಯ ಎನ್ನುತ್ತಾರೆ.

ಕೆಲವೊಮ್ಮೆ ಮೇಲೆಲುಮೊಳೆ (ಎಪಿಫೈಸಿಸ್) ಉರಿತಕ್ಕೊಳಗಾಗಿ ಅದರ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಲೆಗ್–ಪರ್ಥಿ ರೋಗದಲ್ಲಿ ತೊಡೆಲುತಲೆಯ ಮೇಲೆಲುಮೊಳೆ ಉರಿತಕ್ಕೊಳಗಾಗಿ ಚಪ್ಪೆಕೀಲನ್ನು ಹಾಳುಗೆಡುವುದುಂಟು. ಇಂತಹ ನ್ಯೂನತೆ ಇನ್ನೂ ಅನೇಕ ಬೆಳೆವ ಮೂಳೆಗಳಲ್ಲಿ ಕಂಡುಬರುತ್ತವೆ. ಒಮ್ಮೊಮ್ಮೆ ಬೆಳೆದ ಮೂಳೆ ನಿಧಾನವಾಗಿ ಕರಗುವದನ್ನೂ ಕಾಣಬಹುದು. ಇದಕ್ಕೆ ಮೂಳಲಯ (ಆಸ್ಟಿಯೋಲೈಸಿಸ್) ಎನ್ನುತ್ತಾರೆ.

ಚಪ್ಪೆಕೀಲಿನೆಲವುಗಳು ತಮ್ಮ ಸಹಜರೂಪದಿಂದ ವಂಚಿತವಾದ ಮಗುವಿನಲ್ಲಿ ಚಪ್ಪೆಕೀಲ್ತಪ್ಪಿಕೆಯುಂಟು ಮಾಡುತ್ತವೆ. ಲಟ್ಟಪಾದ, ತಾಗುಮಂಡಿ, ಪಂಗಡಕಾಲುಗಳು ಸಾಮಾನ್ಯವಾಗಿ ಕಾಣುವ ಮೂಳೆಯ ಊನಗಳು. ಅನೇಕ ಊನಗಳನ್ನು ಸಣ್ಣದರಲ್ಲೇ ಗುರುತಿಸಿ ಚಿಕಿತ್ಸೆ ನೀಡಿದರೆ ಒಳ್ಳೆಯ ಫಲ ಸಿಗುತ್ತದೆ.

ಜೀವಸ್ತುಕರಣದ ಏರುಪೇರುಗಳು: ಮೈಯಲ್ಲಿಯ ಮೂಳೆಗಳಲ್ಲಿ ಜೀವ ಇರುತ್ತದೆ. ಎಡೆಬಿಡದೆ ಒಂದೆಡೆ ಮೂಳೆ ಹಾಳಾಗುತ್ತಿದ್ದರೆ ಇನ್ನೊಂದೆಡೆ ಅದೇ ಹೊತ್ತಿನಲ್ಲಿ ಹೊಸ ಮೂಳೆ ಚುರುಕಾಗಿ ಬೆಳೆಯುತ್ತಿರುತ್ತದೆ. ಆರೋಗ್ಯವಂತರಲ್ಲಿ ಇವೆರಡು ಕೆಲಸಗಳು ಸಮಸಮವಾಗಿರುತ್ತವೆ. ಜೀವಸ್ತುಕರಣಕ್ರಿಯೆ ಕೆಡಿಸುವ ರೋಗಗಳ ಪ್ರಭಾವ ಎಲುಗಟ್ಟಿನ ಮೇಲೂ ಆಗುತ್ತದೆ. ಸಿ ಮತ್ತು ಡಿ ಜೀವಸತ್ವಗಳ ಕೊರತೆಯಲ್ಲಿ ಕ್ರಮವಾಗಿ ನೀಚಗೊರೆ (ಸ್ಕರ್ವಿ) ಮತ್ತು ಎಲು ಮುರುಟು (ರಿಕೆಟ್ಸ್) ಕಾಣಿಸಿಕೊಳ್ಳುತ್ತವೆ. ಥೈರಾಯ್ಡ್, ಪ್ಯಾರಾಥೈರಾಯ್ಡ್ ಗ್ರಂಥಿ, ಮೂತ್ರಪಿಂಡ, ಜಠರಗರುಳಿನ ನಾಳ, ಅಡ್ರಿನಲ್ ಗ್ರಂಥಿಗಳ ಕೆಲಸ ಕೆಟ್ಟರೆ ಮೂಳೆಯಲ್ಲಿ ಬದಲಾವಣೆ ಕಾಣಬಹುದು. ಇಷ್ಟೇ ಅಲ್ಲ. ಯಾವುದೇ ಕಾರಣದಿಂದಾಗಿ ವ್ಯಕ್ತಿ ಓಡಾಡದೆ ಹಾಸಿಗೆ ಹಿಡಿದರೆ ಮೂಳೆಗಳು ಮೆತ್ತಗಾಗುತ್ತವೆ.

ಮೈ ಕಟ್ಟಿನಲ್ಲಿ ಆದ ಏರುಪೇರು ಕಂಡಹಾಗೆ ಎಲುಗಟ್ಟಿನ ಸಹಜ ನಿಜಗೆಲಸ ಕೆಡುವದಿಲ್ಲ. ಮರುರಚನೆಗೂ ಹಾಳುಗೆಡುವದಕ್ಕೂ ನಡುವಣ ಪರಿಮಾಣ ಬದಲಾದ ಹಾಗೆಲ್ಲ ಕೊನೆಗೆ ಉಳಿವ ಮೂಳೆಯ ಮೊತ್ತವು ಕಡಿಮೆ ಆಗುವದನ್ನು ಬಿಟ್ಟರೆ ಮೂಳೆಗೆ ವಯಸ್ಸು ಏನೂ ತಟ್ಟದು. ಮೂಳೆಯ ರಾಸಾಯನಿಕ ಸಂಯೋಜನೆ ಒಂದೇ ಸಮನಾಗಿದ್ದರೂ ಇಡೀ ಎಲುಗಟ್ಟು ಹಗುರವೂ ಕೋಮಲವೂ ಆಗುವುದು. ಹೀಗಾಗಿ, ವಯಸ್ಸಾದವರ ಮೂಳೆ ಸುಲಭವಾಗಿ ಲೊಟಕ್ಕೆಂದು ಮುರಿಯುವುವು ಮತ್ತು ಮುರಿತವು ತನ್ನಷ್ಟಕ್ಕೆ ತಾನೇ ಸರಿಹೊಂದುತ್ತದೆ.

ಸೋಂಕು: ಎಲುಬಿನ ಸೋಂಕು ರೋಗಕ್ಕೆ ಎಲುಮಜ್ಜೆಯುರಿತ (ಆಸ್ಟಿಯೋಮೈಲೈಟಿಸ್) ಎನ್ನುತ್ತಾರೆ. ಕೀವು ಸೃಜಿಸುವ ರೋಗಾಣುಗಳಾದ ಸ್ಟ್ರೆಪ್ಟೊಕಾಕೈ, ಸ್ಟಾಫೈಲೋಕಾಕೈಗಳು ಸಾಮನ್ಯವಾಗಿ ಎಲು ಮಜ್ಜೆಯುರಿತವನ್ನುಂಟುಮಡುತ್ತವೆ. ಇದು ತೀವ್ರ ಇಲ್ಲವೆ ನಿಧಾನ ಸ್ವರೂಪದ್ದಾಗಿರಬಹುದು. ತೀವ್ರವಾಗಿದ್ದನ್ನು ಕೂಡಲೆ ಕಂಡು ಉಪಚರಿಸಿದರೆ ನಿಧಾನವಾಗುವದನ್ನು ತಡೆಗಟ್ಟಬಹುದಲ್ಲದೆ, ಮಗುವಿನ ಪ್ರಾಣಹಾನಿಯನ್ನೂ ತಡೆಗಟ್ಟಬಹುದು. ನಿಧಾನರೋಗವಾಗಿ ಮಾರ್ಪಟ್ಟಾಗ ಕೀಲಿನೆಲುಬು ಕರಗುತ್ತದೆ; ಒಂದು ಚೂರು ಅಥವಾ ದೊಡ್ಡದಾಗಿಯೇ ಎಲುಬು ಸಾಯುತ್ತದೆ. ಇದಕ್ಕೆ ಹೊರಚಿಕ (ಸಿಕ್ವೆಸ್ಟ್ರಮ್) ಎನ್ನುತ್ತಾರೆ. ರಗಟೆಲುಬಿನಲ್ಲಿ ತೂತುಗಳುಂಟಾಗಿ ಕೀವು ಸೋರುತ್ತದೆ. ಇಂದಿನ ದಿನಗಳಲ್ಲಿ ಇಂತಹದು ಕಾಣುವದು ಅಪರೂಪ. ಪೆನಿಸಿಲಿನ್ ಅಲ್ಲದೆ ಅನೇಕ ಬಲಯುತವಾದ ಜೀವನಿರೋಧಕ (ಅಂಟಿಬಯಾಟಿಕ್) ಮದ್ದು ಲಭ್ಯವಾಗಿ ಚಿಕಿತ್ಸೆ ಸರಳವಾಗಿದೆ. ಕೆಲವೊಮ್ಮೆ ಶಸ್ತ್ರಕ್ರಿಯೆ ಅನಿವಾರ್ಯ.

ಗಂತಿಗಳು: ಬೇರೆ ಬೇರೆ ಅಂಗಗಳಲ್ಲಿ ಗಂತಿಗಳು ಕಂಡುಬರುವಷ್ಟು ಮೂಳೆಗಳಲ್ಲಿ ಕಾಣಿಸುವುದು ಸಾಮಾನ್ಯವಲ್ಲ. ಮೂಳೆಯಗಂತಿಗಳಲ್ಲಿ ಹೆಚ್ಚಿನವು ಸೌಮ್ಯ (ಬಿನೈನ್) ಗಂತಿಗಳಾಗಿರುತ್ತವೆ ಮತ್ತು ಇವು ಶಸ್ತ್ರ ಕ್ರಿಯೆಗೆ ಮಣಿಯುತ್ತವೆ. ಪ್ರಾಥಮಿಕ ಗಂತಿಗಳಿಗಿಂತ ಗುಳೆಗಂತಿ (ಸೆಕೆಂಡರಿ) ಮೂಳೆಗಳಲ್ಲಿ ಸಾಮಾನ್ಯವಾಗಿ ಕಾಣಿಸುತ್ತವೆ. ಘುಪ್ಪುಸ, ಮುನ್ನಿಲುಗ (ಪ್ರಾಸ್ಟೇಟ್), ಗರ್ಭಕೋಶ, ವೃಷಣ, ಕರುಳು ಮತ್ತಿತರ ಅಂಗಗಳ ಗಂತಿಗಳು ಮೂಳೆಗಳಿಗೆ ಹರಡುತ್ತವೆ, ನೋವುಂಟು ಮಾಡುತ್ತವೆ, ಅಂಗದ ಆಕಾರ ಕೆಡಿಸುತ್ತವೆ. ಇವುಗಳ ಚಿಕಿತ್ಸೆ ಕಷ್ಟವಾದರೂ, ಇಂದು ವೈಜ್ಞಾನಿಕ ಪ್ರಗತಿಯಿಂದಾಗಿ, ವಿಕಿರಣ ಚಿಕಿತ್ಸೆ, ಕಿಮೊಥೆರಪಿ ನೀಡಿ, ರಕ್ತ ಪೂರಣೆ ಕೊಟ್ಟು ಗಂತಿಯನ್ನು, ಗಂತಿಯ ಕೆಡಕನ್ನು ನಿಯಂತ್ರಿಸಲು ಸಾಧ್ಯವಾಗುತ್ತಿದೆ.

ಮೂಳೆಗಳಲ್ಲಿ ಪ್ರಾಥಮಿಕವಾಗಿ ಏಳುವ ಗಂತಿಗಳಿಗೆ ಮಾಂಸಗಂತಿ (ಸಾರ್ಕೋಮಾ) ಗಳೆನ್ನುತ್ತಾರೆ. ಎಲುಬಿನ, ಮೆಲ್ಲೆಲುಬಿನ, ಮತ್ತು ತಂತುಗಳ ಪ್ರಬಲತೆಯಿರುವ ಮೂಳೆಯ ಗಂತಿಗಳನ್ನು ಗುರಿತಿಸಲಾಗಿದೆ. ಎಲುಜನಕ ಗಂತಿಯಲ್ಲಿ ಎಲುಬಿನ ಭಾಗವೇ ಪ್ರಮುಖವಾಗಿ ಕಾಣಿಸುತ್ತದೆ. ಇದು ಹದಿಹರೆಯದವರಲ್ಲಿ, ಸುಮಾರು ಎರಡು ದಶಕದ ವಯಸ್ಸಿನವರಲ್ಲಿ ಕಾಣಿಸುತ್ತದೆ. ಎಂತಹ ಪ್ರಬಲ ಉಪಚಾರದಿಂದಲೂ, ಅಂಗ ಕಳಕೊಂಡರೂ ಜೀವ ಬದುಕಿಸುವದು ಕಷ್ಟವಾಗುತ್ತದೆ.

ಇವಿಂಗ್ಸನ ಮಾಂಸಗಂತಿ, ಮೆಲ್ಲೆಲುಬಿನಮಾಂಸಗಂತಿ, ತಂತುಮಾಂಸಗಂತಿಗಳು ವಿನಾಶಕಾರಕಗಳು. ಎಲುಬಿನಲ್ಲಿ ಮಧ್ಯವಯಸ್ಸಿನ ಸುಮಾರಿಗೆ ಕಾಣಿಸುವ ರಾಕ್ಷಸಕಣಗಂತಿ (ಆಸ್ಟಿಯೋಕ್ಲಾಸ್ಟೋಮಾ) ಸ್ಥಳೀಯವಾಗಿ ಕೆಲವೊಮ್ಮೆ ಅಪಾಯಕಾರಿಯಾಗಿ ಕಂಡರೂ ವ್ಯಕ್ತಿಯ ಜೀವಕ್ಕೆ ಅಪಾಯವಿರುವದಿಲ್ಲ.

ನೀರಿನಲ್ಲಿ ಫ್ಲೋರಿನ್ ಪ್ರಮಾಣ ಹೆಚ್ಚಾಗಿದ್ದಾಗ ಅದರ ಪರಿಣಾಮ ತಂತುಗಟ್ಟುಗಳಲ್ಲಿ ಮತ್ತು ಮೂಳೆ ಕೀಲುಗಳಲ್ಲಿ ಕಾಣುತ್ತೇವೆ. ಮಕ್ಕಳು ಇಂತಹ ನೀರನ್ನು ಕುಡಿಯುತ್ತಿದ್ದರೆ ಅವರ ಹಲ್ಲುಗಳು ಹಳದಿಯಾಗುತ್ತವೆ. ಸರಿಯಾಗಿ ಬೆಳೆಯುವುದಿಲ್ಲ. ಕಾಲುಗಳು ಬಾಗಿ ತಾಗುಮಂಡಿ ಇಲ್ಲವೆ ಪಂಗಡಗಾಲು ವಿಕಲತೆ ಫಲಿಸುತ್ತದೆ. ದೊಡ್ಡವರಲ್ಲಿ ಸೊಂಟನೋವು, ಮೈಕೈನೋವು ಸಾಮಾನ್ಯ. ಎಕ್ಸ್–ಕಿರಣದ ಚಿತ್ರದಿಂದ ಇದನ್ನು ಗುರುತಿಸಬಹುದು. ಇದಕ್ಕೆ ತಕ್ಕ ಚಿಕಿತ್ಸೆ ಇಲ್ಲ. ಫ್ಲೋರಿನ್ ಹೊಂದಿದ ನೀರಿನ ಬಳಕೆ ಬಿಡುವದರಿಂದ ಇದು ಬರದಂತೆ ಮಾಡುವುದೇ ಉಪಾಯ.

ಮುರಿತಗಳು: ಮೈಯಲ್ಲಿ ಬಲುಗಟ್ಟಿಯಾದ ಊತಕ ಎಲುಬು. ಅದು ಮುರಿಯುವದು ಸಾಕಷ್ಟು ಬಲವಾದ ಪೆಟ್ಟಿನಿಂದ ಮಾತ್ರ. ಆದರೆ ರೋಗದಿಂದ ಮೆತ್ತಗಾದ ಮೂಳೆ, ಮುಪ್ಪಿನಿಂದ ತೆಳುವಾದ ಮೂಳೆ, ಹೆಂಗಸರಲ್ಲಿ ಮುಟ್ಟು ನಿಂತನಂತರದ ಬಲಹೀನ ಮೂಳೆಗಳು ಅಲ್ಪ ಸ್ವಲ್ಪ ಪೆಟ್ಟಿನಿಂದಾಗಿ ಮುರಿಯಬಹುದು. ಮುರಿದೆಲುಬಿನ ತುದಿ ಚರ್ಮದ ಗಾಯದಿಂದ ಗಾಳಿಗೊಡ್ಡುವಂತಾದರೆ, ಅದಕ್ಕೆ ತೆರೆದ ಮುರಿತ (ಓಪನ್) ಇಲ್ಲವೆ ಕಲೆತ ಮುರಿತ (ಕಾಂಪೌಂಡ್)ವೆನ್ನುತ್ತಾರೆ; ಇಲ್ಲವಾದರೆ ಅದು ಮುಚ್ಚಿದ ಮುರಿತ ಅಥವಾ ಸರಳ ಮುರಿತವಾಗುತ್ತದೆ. ಮೂಳೆಮುರಿತ ಕಂಡುಕೊಳ್ಳುವದು ಕಷ್ಟವಾಗುವುದಿಲ್ಲ. ಪೆಟ್ಟಿಗೊಳಗಾದ ಭಾಗದಲ್ಲಿ ನೋವಿರುತ್ತದೆ. ಆ ಭಾಗ ಮುಟ್ಟನೋಡಲು ಬಿಡುವುದಿಲ್ಲ. ಮುರಿತದ ಭಾಗ ಅಲುಗಾಡಿಸಿದರೆ ಕರ್ ಕರ್ ಶಬ್ದ ಕೇಳಿಸಬಹುದು ಇಲ್ಲವೆ ಪರೀಕ್ಷಿಸುವ ಕೈ ಅನುಭವಿಸಬಹುದು. ಮುರಿತಕ್ಕೊಳಗಾದ ಕೈ ಅಥವಾ ಕಾಲು ಡೊಂಕಾಗುತ್ತದೆ. ಎಕ್ಸ್–ಕಿರಣ ಚಿತ್ರ ಗಮನಿಸಿದರೆ ಎಲುಬು ಎಲ್ಲಿ ಮುರಿದಿದೆ, ಹೇಗೆ ಮುರಿದಿದೆ, ಯಾವ ಭಾಗಕ್ಕೆ ಮುರಿದೆಲುಬುಗಳು ಸರಿದಿವೆ ಎನ್ನುವ ವಿವರಗಳು ತಿಳಿಯುತ್ತವೆ. ಅದರಿಂದ ಮುರಿತದ ಚಿಕಿತ್ಸೆ ಸರಳವಾಗುತ್ತದೆ.

ಮುರಿದೆಲುಬು ಸರಿಕೂಡಿಸುವುದು, ಕೂಡಿಸಿದೆಲುಬುಗಳನ್ನು ಚೆನ್ನಾಗಿ ಕೂಡಿಕೊಳ್ಳುವತನಕ ಹಾಗೇ ಹಿಡಿದಿಡುವುದು ಮತ್ತು ಅದೇ ಸಮಯದಲ್ಲಿ ಹಿಡಿದಿಡದ ಕೀಲುಗಳನ್ನು ಆಡಿಸುತ್ತಿರುವುದು ಎಲುಮುರಿತದ ಚಿಕಿತ್ಸೆಯ ಪ್ರಮುಖ ಅಂಶಗಳು. ಮಕ್ಕಳಲ್ಲಿ ಮೂಳೆಗಳು ಹಸಿರು ಕಡ್ಡಿಯಂತೆ (ಗ್ರೀನ್ ಸ್ಟಿಕ್) ಮುರಿದು ಬಾಗುತ್ತವೆ. ಮಕ್ಕಳ ಮೂಳೆ ಮುರಿದರೂ ಸರಿಕೂಡಿಕೊಳ್ಳುತ್ತವೆ. ಅಲ್ಪ ಸ್ವಲ್ಪ ದೋಷವಿದ್ದರೂ ಬೆಳೆಯುವ ಮೂಳೆಗಳಾದುದರಿಂದ ತಾನಾಗಿಯೇ ಸರಿಹೊಂದುತ್ತವೆ. ದೊಡ್ಡವರಲ್ಲಿ ಮುರಿದ ಮೂಳೆಗಳನ್ನು ಅರಿವಳಿಕೆಯ ಸಹಾಯದಿಂದ ಸರಿಕೂಡಿಸಿ, ಪ್ಲಾಸ್ಟರ್ ಆಫ್ ಪ್ಯಾರಿಸ್ ಅಚ್ಚು (ಪ್ಲಾಸ್ಟರ್‌ಕಾಸ್ಟ್) ಹಾಕಿ ಕೆಲವು ವಾರಗಳವರೆಗೆ ಹಿಡಿದಿಡಬೇಕಾಗುತ್ತದೆ. ಸರಿಕೂಡಿಸಲು ಸಾಧ್ಯವಾಗದಾದಾಗ ಅಥವಾ ಸಾಧ್ಯವಿಲ್ಲವೆನ್ನುವ ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ಮಾಡಿ, ಮುರಿದ ಸರಿದೆಲುಬುಗಳನ್ನು ಸರಿಕೂಡಿಸಿ, ಕೂಡಿಸಿದ್ದನ್ನು ಒಳೆಲುಮೂಳೆ, (ಇಂಟ್ರಾಮೆಡುಲರಿನೇಲ್), ತಂತು; ತೂತುತಟ್ಟೆ (ಪ್ಲೇಟ್) ಯಿಂದ ಹಿಡಿದಿಡಬೇಕಾಗುತ್ತದೆ. ಇಂದಿನ ವೈಜ್ಞಾನಿಕ ಪ್ರಗತಿಯ ದಿನಗಳಲ್ಲಿ ಶಸ್ತ್ರಕ್ರಿಯೆ ಸರಳವಾಗಿ ನಾನಾ ತರಹದ ಶಸ್ತ್ರಕ್ರಿಯೆಗಳು ಬಳಕೆಯಲ್ಲಿ ಬಂದು, ರೋಗಿ ಹಾಸಿಗೆ ಹಿಡಿದು ಮಲಗುವುದು ತಪ್ಪಿ, ಸ್ವಲ್ಪ ಸಹಾಯದೊಂದಿಗೆ ಆದಷ್ಟು ಕೂಡಲೇ ಸ್ವತಂತ್ರವಾಗಿ ಓಡಾಡುವಂತಾಗಲು ಸಾಧ್ಯವಾಗಿದೆ.

ಶಸ್ತ್ರ ಕ್ರಿಯೆಯಿಂದಾದ ಗಾಯ ಸೋಂಕಿಗೊಳಗಾಗಿ ಕೀವುಂಟಾಗುವುದು ಅಪರೂಪವಾಗಿದೆ. ಸ್ವಚ್ಛತೆ, ಕ್ರಿಮಿರಹಿತತೆ, ಜೀವನಿರೋಧಕ ಔಷಧಗಳು, ಶಸ್ತ್ರಕ್ರಿಯಾ ಕಲೆ, ಶಸ್ತ್ರಮಂದಿರ (ಆಪರೇಶನ್ ಥಿಯೆಟರ್)ದಲ್ಲಿಯ ಅನುಪಮ ಸೌಕರ್ಯಗಳು ಮತ್ತು ನುರಿತ ದಾದಿಯರ ಸಹಕಾರ ಎಂತಹುದೇ ಗಂಭೀರವಾದ ಮೂಳೆ ಮುರಿತದ ಚಿಕಿತ್ಸೆಯನ್ನು ಸರಳಗೊಳಿಸಿವೆ. ರಷ್ಯಾದ ವೈದ್ಯ ಎಲಿಜಾರೋವ್ ಮೂಳೆಯಲ್ಲಿ ತೆಳು ತಂತಿಗಳನ್ನು ಸೇರಿಸಿ ಆ ತಂತಿಗಳನ್ನು ಅಂಗಭಾಗದ ಹೊರಗೆ ಅರ್ಧ 'ರಿಂಗ್' ಗಳ ಮೂಲಕ ಹಿಡಿದು ಉಪಚರಿಸುವ ಪದ್ಧತಿ ರೂಢಿಯಲ್ಲಿ ತಂದು ಮೂಳೆ ಚಿಕಿತ್ಸೆಯಲ್ಲಿ ಹೊಸತನ ನೀಡಿದ್ದಾರೆ.

***

**ಎಲುಬು ಮೀನುಗಳು:** ಮತ್ಸ್ಯ ವರ್ಗದ ಆಸ್ಟಿಯಿಕ್ತಿಸ್ ಉಪವರ್ಗದ ಮೀನುಗಳು. ಅನೇಕ ಜಾತಿಯ ಎಲುಬು ಮೀನುಗಳು ಕಾಸ್ಮಾಯ್ಡ್ ಅಥವಾ ಗನಾಯ್ಡ್ ಹುರುಪೆಗಳನ್ನು ಹೊಂದಿವೆ. ಬಾಲದ ರೆಕ್ಕೆ ಸಮಲಾಂಗೂಲ (ಹೊಮೊಸರ್ಕಲ್) ಅಥವಾ ದ್ವಿಪಾರ್ಶ್ವ ಸಮಲಾಂಗೂಲ (ಹೆಟಿರೊಸರ್ಕಲ್) ಬಗೆಯದು.

ಈಜು ರೆಕ್ಕೆಯ ಕಡ್ಡಿಗಳು ಮೂಳೆಯಿಂದಾಗಿವೆ. ಕಿವಿರುತಂತುಗಳನ್ನು ತೆಳುವಾದ ಪೊರೆ ಮುಚ್ಚಿರುತ್ತದೆ. ಈ ಪೊರೆಯನ್ನು ಅಪರ್ಕ್ಯುಲಂ ಅಥವಾ ಕಿವಿರು ಕವಚ ಎನ್ನುವರು. ಕೆಳದವಡೆ ಅನೇಕ ಮೂಳೆಗಳಿಂದ ಮಾಡಲ್ಪಟ್ಟಿದೆ. ಗರ್ಭಾಂಕುರತೆ ದೇಹದೊಳಗೆ ಆಗದೆ ಹೊರಾವರಣದಲ್ಲಿ ಆಗುತ್ತದೆ. ಅಂಡಾಶಯದ ಜೊತೆಗೆ ಅಂಡನಳಿಕೆಗಳು ಇವೆ.




A. ಹೆಟಿರೋಸರ್ಕಲ್

B. ಹೊಮೊಸರ್ಕಲ್

ಕೆಲವು ವರ್ಷಗಳ ಹಿಂದೆ, ಎಲುಬು ಮೀನಗಳು ಶಾರ್ಕ್ ಮಾದರಿಯ ಮೀನುಗಳಿಂದ ವಿಕಸನಗೊಂಡಿರುವ ಬಗ್ಗೆ ನಂಬಿಕೆ ಇತ್ತು. ಆದ್ದರಿಂದ, ಇವುಗಳ ಎಲುಬು ಒಂದು ಹೊಸ ಗಳಿಕೆ ಎಂದೂ ನಂಬಿದ್ದರು. ಆದರೆ, ಆ ರೀತಿಯಾಗದೆ ಈ ಮೀನುಗಳಲ್ಲಿ, ಎಲುಬು, ಆಸ್ತ್ರೋಡರ್ಮ್ ಮತ್ತು ಪ್ಲಾಕೊಡರ್ಮ್ ಮೀನುಗಳಲ್ಲಿದ್ದ ಹಾಗೆ ಪುರಾತನಕಾಲದಿಂದಲೂ ಇದ್ದು, ಉಳಿದುಕೊಂಡು ಬಂದಿರುವುದಲ್ಲದೆ ಕ್ರಮೇಣ ಅವುಗಳ ನವೀನ ಕಾರ್ಯಾಚರಣೆಗೆ ಹೊಂದಿಕೊಂಡಿವೆ ಎಂದು ಪ್ರಾಣಿವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಎಲುಬು ಮೀನುಗಳಿಗೆ ಬಹು ಪ್ರಾಚೀನವಾದ ಇತಿಹಾಸವಿದೆ. ಇವು ಡಿವೋನಿಯನ್ ಕಾಲದಲ್ಲಿ ವಾಸಿಸುತ್ತಿದ್ದುವೆಂಬುದಕ್ಕೆ ಪಳೆಯುಳಿಕೆಗಳ ಆಧಾರವಿದೆ. ಕಾರಣ, ಎಲುಬು ಮೀನುಗಳು ಶಾರ್ಕ್ ಮೀನುಗಳಿಗಿಂತಲೂ ಹಳೆಯವು. ಮಧ್ಯ ಡಿವೋನಿಯನ್ ಕಾಲಕ್ಕೇ ಎಲುಬು ಮೀನುಗಳು ಸಿಹಿ ನೀರಿನ ಪ್ರಧಾನ ಪ್ರಾಣಿಗಳಾಗಿದ್ದು, ಪೇಲಿಯೊಜೋಯಿಕ್ ಉತ್ತರಾರ್ಧದ ಅಂತ್ಯದಲ್ಲಿ ಹೆಚ್ಚಿನ ಜಾತಿಗಳು ಮತ್ತು ಪ್ರಭೇದಗಳನ್ನೊಳಗೊಂಡು ಬಹಳ ಸಂಖ್ಯೆಯಲ್ಲಿದ್ದುವು. ಮೀಸೊಜೋಯಿಕ್ ಕಾಲದಲ್ಲಿ ಅವು ಸಮುದ್ರಗಳಿಗೆಲ್ಲ ವಲಸೆ ಹೋಗಿ ನೆಲೆಸಲಾರಂಭಿಸಿದುದರಿಂದ ಸಮುದ್ರವೇ ಅವುಗಳ ಮುಖ್ಯ ವಾಸಸ್ಥಾನವಾಯಿತು.

ಶ್ವಾಸಕೋಶಗಳು ಪ್ರಾಚೀನ ಎಲುಬು ಮೀನುಗಳಲ್ಲಿದ್ದಂತೆ ತೋರುತ್ತದೆ. ಆದರೆ, ನವೀನ ಎಲುಬು ಮೀನುಗಳಲ್ಲಿ ಅಂಥ ರಚನೆಗಳು ಸಾಮಾನ್ಯವಾಗಿ ಇಲ್ಲ. ಕೆಲವು ವೇಳೆ ಅಂಥ ರಚನೆಗಳು ಇದ್ದಲ್ಲಿ ಅವು ಗಾಳಿ ಕೋಶಗಳಾಗಿ ಮಾರ್ಪಾಡು ಹೊಂದಿವೆ. ಋತುಗಳನ್ನನುಸರಿಸಿ ಸಿಹಿನೀರಿನ ಕೆರೆಕುಂಟೆಗಳು ಬತ್ತಿದಾಗ, ಶ್ವಾಸಕೋಶಗಳು ಈ ಮೀನುಗಳಿಗೆ ಉಸಿರಾಡಲು ಸಹಾಯಕವಾಗಿದ್ದು ಅವು ಜೀವಂತವಾಗಿರುವುದಕ್ಕೆ ಅನುಕೂಲ ಒದಗಿಸುತ್ತಿದ್ದುವೆಂದು ಕಾಣುತ್ತದೆ. ಪ್ರಾಚೀನ ಎಲುಬು ಮೀನುಗಳು ವಾಸವಾಗಿದ್ದ ಸಿಹಿನೀರಿನ ಕೆರೆಕುಂಟೆಗಳು ಆಗಾಗ್ಗೆ ಬತ್ತಿಹೋಗುತ್ತಿದ್ದಿರಬೇಕು. ವಾತಾವರಣ ಬದಲಾದ ನಂತರ ಕೆಲವು ಜೀವಂತವಾಗಿದ್ದ ಎಲುಬು ಮೀನುಗಳು ಸಮುದ್ರವನ್ನು ಸೇರಿದಮೇಲೆ ಶ್ವಾಸಕೋಶ ತನ್ನ ಪ್ರಾಧಾನ್ಯವನ್ನು ಕಳೆದುಕೊಂಡಿತು.

ಈ ವರ್ಗವನ್ನು ಎರಡು ಉಪವರ್ಗಗಳನ್ನಾಗಿ ವಿಂಗಡಿಸಲಾಗಿದೆ: ಉಪವರ್ಗ 1. ಕೊಯನಿಕ್ಥಿಸ್ ಮತ್ತು ಉಪವರ್ಗ 2. ಅಕ್ಟಿನೊಟೆರಿಜಿಯೈ.

ಕೊಯನಿಕ್ಥಿಸ್: ಈ ಉಪ ವರ್ಗದ ಮೀನುಗಳಿಗೆ ಮೂಗಿನ ಹೊಳ್ಳೆಗಳು ಒಳಗಿದ್ದು ಶ್ವಾಸಕೋಶಗಳಿಂದ ಉಸಿರಾಡುತ್ತವೆ. ಡಿವೋನಿಯನ್ ಕಾಲದಿಂದಲೂ ಕಂಡುಬಂದಿರುವ ಈ ಜಾತಿಯ ಮೀನುಗಳಿಗೆ ವಿಕಾಸದಲ್ಲಿ ಬಹು ಪ್ರಾಮುಖ್ಯತೆ ಇದೆ. ಅನೇಕ ಪ್ರಾಣಿಶಾಸ್ತ್ರಜ್ಞರು ಈ ವರ್ಗದಲ್ಲಿರುವ ಮೀನುಗಳಿಂದಲೇ ದ್ವಿಚರ ಪ್ರಾಣಿಗಳು ಹುಟ್ಟಿಕೊಂಡುವೆಂದು ಹೇಳುತ್ತಾರೆ.

ಕೊಯನಿಕ್ಥಸ್ ಮೀನುಗಳು ಸಂಖ್ಯೆಯಲ್ಲಿ ಸಾಕಷ್ಟಿದ್ದರೂ, ಪ್ರಭೇದಗಳು ಮಾತ್ರ ಕೆಲವು. ಈ ಉಪವರ್ಗದಲ್ಲಿ ಎರಡು ಗಣಗಳಿವೆ. ಗಣ 1. ಕ್ರಾಸೊಪ್ಟೆರಿಜಿಯೈ, ಗಣ 2. ಡಿಪ್ನಾಯ್.

ಕ್ರಾಸೊಪ್ಟೆರಿಜಿಯೈ: ಡಿವೋನಿಯನ್ ಕಾಲದಲ್ಲೆ ಈ ಜಾತಿಯ ಮೀನುಗಳ ಸಂಖ್ಯೆ ಅಧಿಕವಾಗಿತ್ತು. ದ್ವಿಚರ ಪ್ರಾಣಿಗಳಿಗೆ ಮತ್ತು ತನ್ಮೂಲಕ ಮತ್ತೆಲ್ಲ ಕಶೇರು ಮಣಿಸ್ತಂಭ ಪ್ರಾಣಿಗಳಿಗೆ ಪಿತೃಶ್ರೇಣಿಗಳಾಗಿದ್ದ ಈ ಮೀನುಗಳಿಗೆ ಪಳೆಯುಳಿಕೆಯ ಶಾಸ್ತ್ರದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಇವುಗಳ ಜೋಡು ಈಜು ರೆಕ್ಕೆಯ ಬುಡದಲ್ಲಿ ಒಂದು ಬಗೆಯ ಮಾಂಸದ ಪಟಲವಿರುತ್ತಿತ್ತು. ಈ ಪಟಲಕ್ಕೆ ಮೂಳೆಯ ಆಧಾರವಿತ್ತು. ಈ ಗುಣವನ್ನು ಪರಿಶೀಲಿಸಿದರೆ ಇತರ ಭೂಚರ ಕಶೇರುಕಗಳಿಗೆ ಇದೇ ರೀತಿಯ ಸಾಮ್ಯವಿರುವುದು ಕಂಡುಬರುತ್ತದೆ. ಬಹುಶಃ ಅಸ್ಥಿಯ ಆಧಾರವಿದ್ದ ಮಾಂಸದ ಪಟಲ ರೆಕ್ಕೆಯ ತಳಭಾಗದಲ್ಲಿದ್ದುದರಿಂದಲೇ ಈ ಮೀನುಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಲು ಸಹಾಯವಾಗುತ್ತಿತ್ತೆಂದು ಕಾಣುತ್ತದೆ. ಈ ಜಾತಿಯ ಮೀನುಗಳಿಗೆ ಪೈನಿಯಲ್ ರಂಧ್ರವು ಪರೈಟಲ್ ಮೂಳೆಗಳ ಮಧ್ಯದಲ್ಲಿರುವುದು ಕಂಡುಬಂದಿದೆ. ಹಲ್ಲುಗಳಿಗೆ ಉಂಗುರಾಕೃತಿಯ ರಚನೆ ಇದೆ. ಈ ಗಣದಲ್ಲಿ ಎರಡು ಜಾತಿಯ ಮೀನುಗಳಿವೆ. 1. ಆಸ್ಟಿಯೊಲೆಪಿಡ್ ಮತ್ತು 2. ಸಿಲಕಾಂತ್ ಜಾತಿಯ ಮೀನುಗಳು. ಆಸ್ಟಿಯೊಲೆಪಿಡ್ ಮೀನುಗಳು ಡಿವೋನಿಯನ್ ಮತ್ತು ಪರ್ಮಿಯನ್ ಕಾಲದಲ್ಲಿ ಜೀವಿಸಿದ್ದುವು. ಈ ಸಣ್ಣ ಗುಂಪಿನ ಮೀನುಗಳಿಗೆ ದ್ವಿಚರ ಪ್ರಾಣಿಗಳ ಅನೇಕ ಗುಣಗಳಿವೆ. ಅಷ್ಟೊಂದು ಸಾಮ್ಯವಿರುವುದರಿಂದಲೇ ದ್ವಿಚರ ಪ್ರಾಣಿಗಳು ಈ ಮೀನುಗಳಿಂದ ಹುಟ್ಟಿಕೊಂಡಿರಬಹುದೆಂದು ಊಹಿಸಲಾಗಿದೆ. ಆಸ್ಟಿಯೋಲೆಪಿಸ್ ಮ್ಯಾಕ್ರೊ ಲೆಪಿಡೊತಸ್ ಮೀನು ಈ ಗುಂಪಿನ ಮೊದಲನೆಯ ಪ್ರಭೇದ. ಪುರಾತನ ಆಕ್ಟಿನೊಟೆರಿಜಿಯೈ ಮೀನುಗಳೊಡನೆ ಹೋಲಿಸಿದರೆ ಈ ಗುಂಪಿನ ಮೀನುಗಳಲ್ಲಿ ಅನೇಕ ಸಾಮಾನ್ಯ ಅಂಶಗಳಲ್ಲದೆ ಕೆಲವು ಮೂಲಭೂತ ಅಂಶಗಳಾದ ಒಳಮೂಗಿನ ಹೊಳ್ಳೆ, ಕಾಸ್ಮಾಯ್ಡ್ ಹುರುಪೆಗಳ ರಚನೆ ಮತ್ತು ತಲೆಯ ಮೂಳೆಗಳಲ್ಲಿ ವ್ಯತ್ಯಾಸಗಳಿದ್ದುವು. ಇವುಗಳಲ್ಲಿ ಒಂದು ರೆಕ್ಕೆಯ ಬದಲು ಎರಡು ಮೇಲು ರೆಕ್ಕೆಗಳಿದ್ದು, ಸಣ್ಣ ಕಣ್ಣುಗಳ ರಚನೆ ಮತ್ತು ಜೋಡು ಈಜು ರೆಕ್ಕೆಗಳು ಆರ್ಕಿಟೆರಿಜಿಯಂ ರೀತಿಯವಾಗಿದ್ದು ಒಂದೇ ಒಂದು ಬುಡದ ಮೂಳೆ ಭುಜಕಟಿ ಬಂಧದೊಡನೆ ಕೀಲಿನಂತಿತ್ತು. ಹಲ್ಲುಗಳೂ ಸಾಮಾನ್ಯ ರೀತಿಯಲ್ಲಿರದೆ ತಿರುಪಿನಂತೆ ಸುತ್ತಾಗಿದ್ದುವು. ಈ ಗುಣಲಕ್ಷಣಗಳು ಈ ಗುಂಪಿನ ಕೆಲವು ಮೊದಲಿನ ಪ್ರಾಣಿಗಳಿಂದ ಚತುಷ್ಪಾದಿಗಳಿಗೆ ನಡೆದು ಬಂದಿವೆ. ಇದನ್ನು ಆದಿ ದ್ವಿಚರಿಗಳಲ್ಲಿ ಕಾಣಬಹುದು.

ಸಿಲಕಾಂತ್ ಮೀನುಗಳು : ಇವು ಕಾರ್ಬೋನಿಫೆರಸ್ ಕಾಲದಲ್ಲಿ ಅಂತ್ಯಗೊಂಡುವು ಎಂದು ವಿಜ್ಞಾನಿಗಳು ತಿಳಿದುಕೊಂಡಿದ್ದರು. ಆದರೆ ಇತ್ತೀಚೆಗೆ 1939 ರಲ್ಲಿ ಈ ಗುಂಪಿಗೆ ಸೇರಿದ ಒಂದು ಜೀವಂತವಾದ ಮೀನು ಸಿಕ್ಕಿತು. ಇದಕ್ಕೆ ಲ್ಯಾಟಿಮೀರಿಯ ಎಂದು



**ಸಿಲಕಾಂತ್ ಮೀನು**

ಹೆಸರು. 1952ರಲ್ಲಿ ಇದೇ ಗುಂಪಿನ ಇನ್ನೊಂದು ಮೀನು ಸಿಕ್ಕಿದ್ದು ಅದರ ರಚನೆಯನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಯಿತು. ಈ ಮೀನಿನಲ್ಲಿ, ಅದರ ಗತಕಾಲದ ಅನೇಕ ಗುಣಗಳು ಕಂಡುಬಂದಿರುವುದರಿಂದ ಅದಕ್ಕೆ 'ಜೀವಂತ ಪಳೆಯುಳಿಕೆ' (ಲಿವಿಂಗ್ ಫಾಸಿಲ್) ಎನ್ನುವರು. ಸಿಲಕಾಂತ್ ಮೀನುಗಳು ಮೂಲದಲ್ಲಿ ಸಿಹಿನೀರು ವಾಸಿಗಳು. ಅವುಗಳ ಒಂದು ಗುಂಪು ಸಾಗರವನ್ನು ಸೇರಿ ಅಲ್ಲಿನ ವಾಸಕ್ಕೆ ಅಭ್ಯಾಸ ಮಾಡಿಕೊಂಡುವು. ಇವುಗಳ ಪಳೆಯುಳಿಕೆಗಳು ಸಿಹಿನೀರು ಮತ್ತು ಉಪ್ಪುನೀರಿನ ನಿಕ್ಷೇಪಗಳಲ್ಲಿ ಸಿಕ್ಕಿವೆ. ಲ್ಯಾಟಿಮೀರಿಯ ಮೀನಿನ ಗುಣಲಕ್ಷಣಗಳ ಬಗ್ಗೆ ಆದಷ್ಟು ವಿಶದವಾಗಿ ತಿಳಿದಿದೆ. ಈಜು ರೆಕ್ಕೆ, ಬಾಲದರೆಕ್ಕೆ ಮತ್ತು ಈಜುಚೀಲ (ಕೋಶ)ಗಳ ರಚನೆಯಲ್ಲಿ ವಿಶೇಷ ಗುಣಲಕ್ಷಣಗಳಿವೆ. ಈಗ ಈ ಗುಂಪಿನ ಮೀನುಗಳನ್ನು ಸಿಲಕಾಂತಿಡೆ ಕುಟುಂಬದಲ್ಲಿಡಲಾಗಿದೆ.

ಡಿಪ್ನಾಯ್ : ಈ ಮೀನುಗಳನ್ನು ಶ್ವಾಸಕೋಶ (ಲಂಗ್ ಫಿಶ್) ಅಥವಾ ಫುಪ್ಫುಸ ಮೀನುಗಳೆಂದು ಕರೆಯುತ್ತಾರೆ. ಇವು ನೀರಿನಲ್ಲಲ್ಲದೆ ನೀರಿನ ಹೊರಗಡೆಯೂ ಉಸಿರಾಡಬಲ್ಲವಾದ್ದರಿಂದ ಇವುಗಳಿಗೆ ದ್ವಿಶ್ವಾಸಿಗಳು ಎನ್ನುವರು. ಇವು ಕಿವಿರುಗಳಿಂದಲೂ ಶ್ವಾಸಕೋಶಗಳಿಂದಲೂ ಸಂದರ್ಭಕ್ಕನುಸಾರವಾಗಿ ಉಸಿರಾಡುತ್ತವೆ. ಕೆರೆ ಕುಂಟೆ ಮತ್ತು ಜೌಗು ಪ್ರದೇಶಗಳಲ್ಲಿ ಜೀವಿಸುತ್ತವೆ. ಡಿವೋನಿಯನ್ ಕಾಲದಲ್ಲಿ ಹೇರಳವಾಗಿದ್ದು ವಿಶ್ವವ್ಯಾಪಿಗಳಾಗಿದ್ದುವು. ಈ ಗುಂಪಿನ ಮೀನುಗಳು ಆ ಕಾಲದಲ್ಲೇ ಕೆಲವು ವಿಶೇಷ ಗುಣಗಳನ್ನು ಹೊಂದಿದ್ದುವು. ಈಗ ಈ ಮೀನುಗಳ ಸಂಖ್ಯೆ ಮತ್ತು ವ್ಯಾಪ್ತಿ ಕಡಿಮೆಯಾಗಿದೆ. ಆಸ್ಟ್ರೇಲಿಯದ ಕ್ವೀನ್ಸ್‌ಲ್ಯಾಂಡಿನಲ್ಲಿ ನಿಯೊಸೆರಟೊಡಸ್, ಆಫ್ರಿಕದಲ್ಲಿ ಪ್ರೊಟಾಪ್ಟರಸ್ ಮತ್ತು ದಕ್ಷಿಣ ಅಮೆರಿಕದಲ್ಲಿ ಲೆಪಿಡೊಸೈರನ್ ಜಾತಿಯ ಮೀನುಗಳು ಮಾತ್ರ ಜೀವಂತವಾಗಿವೆ. ಈ ಆಧುನಿಕ ಮೀನುಗಳಲ್ಲಿ ಸೈಕ್ಲಾಯಿಡ್ ಹುರುಪೆಗಳಿವೆ. ತಲೆಬುರುಡೆಯಲ್ಲಿ ಎಲುಬಿನ ತಟ್ಟೆಗಳು ಕಡಿಮೆಯಾಗಿವೆ. ಹಲ್ಲುಗಳು ಕೂಡಿಕೊಂಡು ದೊಡ್ಡ ತಟ್ಟೆಗಳಂತಿವೆ. ಡಿಪ್ನಾಯ್ ಮೀನುಗಳಲ್ಲಿ ಕೆಲವು ವಿಶೇಷ ಗುಣಗಳಿದ್ದು ಮೂಳೆ ಮೀನುಗಳ ಕೆಲವು ಗುಣಗಳು ಮತ್ತು ದ್ವಿಚರಿ ಪ್ರಾಣಿಗಳ ಕೆಲವು ಗುಣಗಳು ಇವೆ. ಕರುಳಿನಲ್ಲಿರುವ ಸುರುಳಿಯ ಕವಾಟ, ಕ್ಲೊಯೆಕ ಮತ್ತು ಹೃದಯ ಭಾಗವಾದ ಕೊನಸ್ ಆರ್ಟೀರಿಯೊಸಸ್‌ನಲ್ಲಿನ ಕವಾಟಗಳು ಮತ್ತು ಕುಗ್ಗದಿರುವ ಆದ್ಯಮೃದ್ವಸ್ಥಿಯ ಪಟ್ಟಿ ಈ ಮೀನುಗಳ ಕೆಲವು ಮೂಲಗುಣಗಳು. ದ್ವಿಚರಿ ಪ್ರಾಣಿಗಳು ಈ ಡಿಪ್ನಾಯ್ ಮೀನುಗಳಿಂದಲೇ ವಿಕಸಿತವಾದುವು ಎಂದು ಪಳೆಯುಳಿಕೆ ಶಾಸ್ತ್ರಜ್ಞರು ತಿಳಿದಿದ್ದರು. ಆದರೆ, ಕೆಲವು ಮುಖ್ಯ ಪಳೆಯುಳಿಕೆಗಳು ಸಿಕ್ಕಿದ ಮೇಲೆ ಆ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು. ದ್ವಿಚರಿ ಪ್ರಾಣಿಗಳು ಮತ್ತು ಡಿಪ್ನಾಯ್ ಮೀನುಗಳು ಒಳಮೂಗು ಹೊಳ್ಳೆಗಳನ್ನೂ ಅಸ್ಥಿಯ ಆಧಾರವಿದ್ದ ಬುಡ ಪಟಲಗಳನ್ನೂ ಹೊಂದಿದ್ದ ಜೋಡಿ ಈಜುರೆಕ್ಕೆಯ ಪ್ರಾಚೀನ ಕಾಲದ ಆಸ್ಟಿಯೋಲೆಪಿಡ್ ಬುಡಕಟ್ಟಿನ ಮೀನುಗಳಿಂದ ವಿಕಸಿತವಾಗಿವೆ ಎಂದು ಅಭಿಪ್ರಾಯಪಡಲಾಗಿದೆ.



**ಪ್ರೊಟೊಪ್ಟರಸ್**

**ಲೆಪಿಡೋಸೈರನ್**



**ನಿಯೋಸೆರಟೊಡಸ್**

ಶ್ವಾಸಕೋಶ (ಲಂಗ್ ಫಿಶ್) ಅಥವಾ ಫುಪ್ಫುಸ ಮೀನುಗಳು

ಈಗ ಜೀವಂತವಾಗಿರುವ ಡಿಪ್ನಾಯ್ ಮೀನುಗಳ ಗುಂಪನ್ನು ಎರಡು ಉಪಗಣಗಳನ್ನಾಗಿ ವಿಂಗಡಿಸಿದೆ.

ಉಪಗಣ 1. ಮಾನೋನ್ಯೂಮೊನ : ಈ ಗುಂಪಿನ ಮೀನುಗಳಲ್ಲಿ ಒಂದು ಶ್ವಾಸಕೋಶವಿದೆ. ಈಜುರೆಕ್ಕೆಗಳು ಎಲುಬಿನ ಕಡ್ಡಿಗಳಿಂದ ಪ್ರಬಲವಾಗಿವೆ. ಉದಾ: ನಿಯೊಸೆರೊಟೊಡಸ್. ಈ ಮೀನು ಸು. 1.2–1.5 ಮೀ ಉದ್ದ ಬೆಳೆಯುತ್ತದೆ. ವಾಸ ಕೆರೆಗಳಲ್ಲಿ.

ಉಪಗಣ 2. ಡೈನ್ಯೂಮೊನ: ಈ ಗುಂಪಿನ ಮೀನುಗಳಲ್ಲಿ ಎರಡು ಶ್ವಾಸಕೋಶಗಳಿವೆ. ಈಜುರೆಕ್ಕೆಗಳ ಕಡ್ಡಿಗಳು ಕೆಲವು ಮೀನುಗಳಲ್ಲಿರುವುದಿಲ್ಲ. ಕೆಲವು ಜಾತಿಯ ಮೀನುಗಳಲ್ಲಿ ಒಂದೇ ಕಡೆ ಇರುತ್ತವೆ. ಆದ್ದರಿಂದ ಈಜುರೆಕ್ಕೆಗಳು ಅಷ್ಟು ಪ್ರಬಲವಾಗಿರುವುದಿಲ್ಲ. ಉದಾ: ಪ್ರೊಟೊಪ್ಟರಸ್. ಈ ಮೀನು ಸು. 1.8 ಮೀ ಉದ್ದ ಬೆಳೆಯುತ್ತದೆ. ಅಹಿತಕರ ವಾತಾವರಣದ ಋತುಗಳಲ್ಲಿ, ಇದು ತೇವದ ಭೂಮಿಯಲ್ಲಿ ಸು. 60 ಸೆಮೀ ಕೆಳಕ್ಕೆ ನಳಿಗೆಯಾಕಾರದ ಪ್ರದೇಶವನ್ನು ಅನುಗೊಳಿಸಿ ಈ ಕೋಣೆಗೆ ತನ್ನ ದೇಹದಿಂದ ಬರುವ ಅಂಟನ್ನು ಬಳಿದು ಅದು ಆರಿದ ಮೇಲೆ ತನ್ನ ದೇಹವನ್ನು ಸುರುಳಿಸುತ್ತಿ ಮಲಗುತ್ತದೆ. ಇದಕ್ಕೆ 'ಬೇಸಗೆಯ ನಿದ್ದೆ' ಎನ್ನುವರು. ಹೊರಗಿನ ವಾತಾವರಣ ಸರಿಯಿದ್ದಾಗ ಈ ಕೋಣೆಯಿಂದ ಹೊರಬಂದು ಯಥಾಪ್ರಕಾರ ನೀರಿನಲ್ಲಿ ಈಜುತ್ತದೆ.

ಲೆಪಿಡೊಸೈರನ್ : ಈ ಗುಂಪಿನ ಇನ್ನೊಂದು ಉದಾಹರಣೆ.

ಆಕ್ಟಿನೊಟೆರಿಜಿಯೈ: ಈ ಉಪವರ್ಗದ ಮೀನುಗಳಲ್ಲಿ ರೆಕ್ಕೆಗಳಿಗೆ ಕೆಲವು ಸಣ್ಣ ಕಡ್ಡಿಗಳು ಆಧಾರವಾಗಿರುವುದರಿಂದ, ಇವುಗಳಿಗೆ 'ಕಡ್ಡಿ ರೆಕ್ಕೆ ಮೀನು'ಗಳೆನ್ನುವರು. ಈ ಗುಂಪಿನಲ್ಲಿ ಸಮುದ್ರದಲ್ಲಿ ಸಿಗುವ ಎಲ್ಲ ಮೀನುಗಳನ್ನೂ ಮತ್ತು ಸಿಹಿ ನೀರಿನ ಅನೇಕ ಜಾತಿಯ ಮೀನುಗಳನ್ನೂ ಸೇರಿಸಲಾಗಿದೆ. ಅಲ್ಲದೆ ಈ ಗುಂಪಿನಲ್ಲಿ ವಿಚಿತ್ರವಾದ ಹಾಗೂ ಪ್ರಾಚೀನ ಕಾಲದ ಗುಣಗಳುಳ್ಳ ಕೆಲವು ಗೆನಾಯ್ಡ್ ಮೀನುಗಳಿವೆ.

ಪ್ರಥಮವಾಗಿ ಗೊತ್ತಾದ ಆಕ್ಟಿನೊಟೆರಿಜಿಯೈ ಮೀನುಗಳು ಮಧ್ಯ ಡಿವೋನಿಯನ್ ಕಾಲದಲ್ಲಿ ಸಿಹಿನೀರಿನಲ್ಲಿ ವಾಸವಾಗಿದ್ದುವು. ಡಿವೋನಿಯನ್ ಕಾಲದ ಪೂರ್ವಾರ್ಧದಲ್ಲಿ ಕೇವಲ ಕೆಲವೇ ಅಸ್ಪಷ್ಟ ಎಲುಬು ಮೀನುಗಳ ಪಳೆಯುಳಿಕೆಗಳು ಕಂಡುಬಂದರೂ, ಮಧ್ಯ ಡಿವೋನಿಯನ್ ಕಾಲದ ಹೊತ್ತಿಗೆ ಅವುಗಳ ಸಂಖ್ಯೆ ಹೆಚ್ಚಾಗಿ ವಿವಿಧ ಜಾತಿ ಮತ್ತು ಪ್ರಭೇದಗಳ ಸಂಖ್ಯೆಯೂ ಹೆಚ್ಚಾಯಿತು. ಆಗ ಸಿಹಿ ನೀರಿನಲ್ಲಿ ವಾಸಿಸುವ ಮೀನುಗಳೇ ಹೆಚ್ಚಾಗಿದ್ದುವು.

ಕ್ರಾಸೊಪ್ಟೆರಿಜಿಯೈ ಮತ್ತು ಆಕ್ಟಿನೊಟೆರಿಜಿಯೈ ಗುಂಪಿನ ಮೀನುಗಳ ಹತ್ತಿರದ ಸಂಬಂಧಿಗಳು. ಇವುಗಳಿಗೆ ಜನ್ಮವಿತ್ತ ಪೂರ್ವಿಕರು, ಸೈಲೂರಿಯನ್ ಉತ್ತರಾರ್ಧದಲ್ಲಿ ಅಥವಾ ಡಿವೋನಿಯನ್ ಪೂರ್ವಾರ್ಧದಲ್ಲಿ ಜೀವಿಸಿದ ಕೆಲವು ಮೀನುಗಳು ಈ ಎರಡು ಗುಂಪುಗಳ ಆದಿಮೀನುಗಳಾಗಿರಬೇಕು. ಮಧ್ಯ ಡಿವೋನಿಯನ್ ಕಾಲದ ಹೊತ್ತಿಗೆ ಈ ಗುಂಪಿನ ಮೀನುಗಳು ತಮ್ಮವೇ ಆದ ಗುಣಲಕ್ಷಣಗಳಿಂದ ರೂಪಗೊಂಡು ಬೇರೆ ಬೇರೆ ಗುಂಪುಗಳಾಗಿದ್ದುವು. ಕಡ್ಡಿರೆಕ್ಕೆ ಮೀನುಗಳು ಮೊದಲು ಕ್ರಾಸೊಪ್ಟೆರಿಜಿಯೈ ಮೀನುಗಳಿಗಿಂತ ಅಪೂರ್ವವಾಗಿದ್ದರೂ ಈಗ ಇವು ಅತಿ ಸಾಮಾನ್ಯವಾದ ಕಶೇರುಕಗಳಾಗಿವೆ.

ಪುರಾತನ ಕಡ್ಡಿರೆಕ್ಕೆ ಮೀನುಗಳ ದೇಹದ ಮೇಲೆ ಹುರುಪೆಗಳು ಹೇರಳವಾಗಿದ್ದುವು. ದೇಹ ನೀಳವಾಗಿರಲಿಲ್ಲ. ಚಲನೆ ನಿಧಾನವಾಗಿತ್ತು. ನವೀನ ಕಡ್ಡಿರೆಕ್ಕೆ ಮೀನುಗಳಲ್ಲಿ ಒಳಗಿನ ಮೂಗಿನ ಹೊಳ್ಳೆಗಳಿಲ್ಲ. ಜೋಡಿ ಈಜು ರೆಕ್ಕೆಗಳಿಗೆ ಮಾಂಸದ ಪಟಲಗಳಿಲ್ಲ. ಆದರೆ ಈ ಭಾಗಗಳಲ್ಲಿ ಸಣ್ಣ ಸಣ್ಣ ಅಸ್ಥಿಗಳಿಂದ ಆಧಾರ ದೊರೆತಿದೆ. ರೆಕ್ಕೆಯ ಬಲೆ ಕೊಂಬಿನ ಗುಣವುಳ್ಳ ಸಣ್ಣ ಕಡ್ಡಿಗಳಿಂದ ಆಧರಿತವಾಗಿದೆ. ಈ ಗುಂಪಿನ ಮೀನುಗಳಿಗೆ ಗನಾಯ್ಡ್ ರೀತಿಯ ಹುರುಪೆಗಳಿವೆ. ಈ ಗುಣಲಕ್ಷಣ ಈ ಗುಂಪನ್ನು ಗುರುತಿಸಲು ಆಧಾರ. ಅನೇಕ ಜಾತಿಗಳಲ್ಲಿ ಈ ಹುರುಪೆಗಳ ಕೆಲವು ಮೂಲವಸ್ತುಗಳು ನಶಿಸಿ ಮಾರ್ಪಾಟಾಗಿವೆ. ಇನ್ನು ಕೆಲವು ಜಾತಿಗಳಲ್ಲಿ ಇವು ತೆಳುವಾಗಿರಬಹುದು ಅಥವಾ ಇಲ್ಲದೆ ಇರಬಹುದು. ಬಾಲದ ರೆಕ್ಕೆ ಮೊದಲು ಭಿನ್ನ ಲಾಂಗೂಲವಾಗಿದ್ದು ಅನಂತರ ಸಮಲಾಂಗೂಲ ಸ್ಥಿತಿ ಮತ್ತು ಕೆಲವು ವೇಳೆ ದ್ವಿಪಾರ್ಶ್ವ ಸಮಲಾಂಗೂಲ ಸ್ಥಿತಿ ವಿಕಾಸಗೊಂಡಿತು. ಕಿವಿರು ತಂತುರಚನೆಯನ್ನು ಹೊಂದಿದೆ. ಹೃದಯದಲ್ಲಿ ಕೋನಸ್ ಆರ್ಟಿರಿಯೋಸಸ್‌ಗೆ ಬದಲಾಗಿ ಬಲ್ಬಸ್ ಆರ್ಟಿರಿಯೋಸಸ್ ಇದ್ದು ಕೋನಸ್ ಒಂದು ಅಥವಾ ಎರಡು ಸಾಲಿನ ಕವಾಟಗಳಾಗಿ ಮಾರ್ಪಾಟಾಗಿದೆ.

ಎಲುಬು ಮೀನುಗಳು ಬೆಳವಣಿಗೆಯಲ್ಲಿ ಬಹಳ ದೊಡ್ಡ ಪ್ರಮಾಣವನ್ನು ಮುಟ್ಟದಿದ್ದರೂ ಕಾಡೋಸ್ಟೈ ಗುಂಪಿನ ಆಸಿಪೆನ್ಸರ್ ಹೊಸೋ ಎಂಬ ಮೀನು ಸು. 7.2ಮೀ ಉದ್ದವಾಗಿದ್ದು ಒಂದು ಟನ್ ಭಾರವಿದೆ. ಕೆಲವು ಎಲುಬು ಮೀನುಗಳಂತೂ ಶಾರ್ಕ್ ಮೀನುಗಳಷ್ಟೇ ಅಪಾಯಕಾರಿಗಳು.

ಈ ಉಪವರ್ಗವನ್ನು ಮೂರು ಗಣಗಳನ್ನಾಗಿ ವಿಂಗಡಿಸಿದೆ.

ಗಣ 1. ಕಾಂಡ್ರೋಸ್ಟೈ : ಈ ಮೀನುಗಳಲ್ಲಿ ತಲೆಯ ಮೇಲೆ ತೆಳುವಾದ ಚರ್ಮದ ಫಲಕಗಳಿವೆ. ಅಸ್ಥಿಪಂಜರ ಮೃದ್ವಸ್ಥಿಯದು. ಶಾಶ್ವತವಾದ ಆದ್ಯಮೃದ್ವಸ್ಥಿಯ ಪಟ್ಟಿ ಇದೆ. ಭಿನ್ನಲಾಂಗೂಲ ರೀತಿಯ ಬಾಲದ ರೆಕ್ಕೆ ಇದೆ. ಕಿವಿರು ರಂಧ್ರಗಳು 5 ಜೊತೆ. ಗಾಳಿಯ ಕೋಶ ಹೊಟ್ಟೆಯ ಮೇಲ್ಭಾಗದಲ್ಲಿದೆ. ಕರುಳಿನಲ್ಲಿ ಸುರುಳಿಗೆ ಕವಾಟವಿದೆ. ಈ ಗುಂಪಿನ



ಅಸಿಪೆನ್ಸರ್

ಮೀನುಗಳು ಪೇಲಿಯೋಜೋಯಿಕ್ ಕಾಲದಲ್ಲಿ ಬಹಳ ಸಂಖ್ಯೆಯಲ್ಲಿ ಅನೇಕ ಜಾತಿಗಳಿದ್ದುವು. ಈ ಗುಂಪನ್ನು ಪೇಲಿಯೋನಿಸಿಡ್ ಗುಂಪು ಎನ್ನುವರು. ಇವು ಸಿಹಿನೀರಿನಲ್ಲಿ ಜೀವಿಸುವ ಸಣ್ಣ ಮೀನುಗಳು. ಬಾಲದ ರೆಕ್ಕೆ ಭಿನ್ನಲಾಂಗೂಲದ ರೀತಿಯದಾಗಿತ್ತು. ಹುರುಪೆಗಳು ಗನಾಯ್ಡ್ ರೀತಿಯವು. ಇವು ಕಾರ್ಬೊನಿಫೆರಸ್ ಕಾಲದಲ್ಲಿ ಅಭಿವೃದ್ಧಿಯ ಶಿಖರವನ್ನು ಮುಟ್ಟಿ ಟ್ರಯಾಸಿಕ್ ಕಾಲದಲ್ಲಿ ಕ್ಷೀಣಿಸಿ ಹೋಗಿ ಕೇವಲ ಕೆಲವೇ ಜಾತಿಯ ಮೀನುಗಳು ಉಳಿದಿವೆ. ಉದಾ: ಅಸಿಪೆನ್ಸರ್ (ಸ್ಟರ್ಜಿಯನ್), ಪಾಲಿಪ್ಟೆರಸ್.

ಗಣ 2. ಹೋಲೊಸ್ಟೈ : ಈ ಗುಂಪಿನ ಮೀನುಗಳ ಗುಣಲಕ್ಷಣಗಳನ್ನು ಪರಿಶೀಲಿಸಿದರೆ ಇವು ಕಾಂಡ್ರೊಸ್ಟೈ ಮೀನುಗಳಿಗಿಂತ ಹೆಚ್ಚು ವಿಕಸಿತವಾದುವು. ಮಾಕ್ಸಿಲ್ಲ ರಚನೆಯಲ್ಲಿ ಸಾಮ್ಯ ರೂಪಾಂತರ ಇದೆ. ಕಿವಿರು ಕವಚ ಮತ್ತು ಕಣ್ಣುಗೂಡಿನ ಪೂರ್ವ ಪ್ರದೇಶಗಳಲ್ಲೂ ಬದಲಾವಣೆ ಇದೆ. ಇವುಗಳ ಹುರುಪೆಗಳು ರಚನೆಯಲ್ಲಿ ಮಾರ್ಪಾಡಾಗಿ ತೆಳುವಾಗಿದೆ.

ಗಣ 3. ಟೀಲಿಯೊಸ್ಟೈ : ಆಕ್ಟಿನೊಟೆರಿಜಿಯೈ ವರ್ಗದ ಈ ಗುಂಪು ವಿಕಾಸ ದೃಷ್ಟಿಯಲ್ಲಿ ಬಹಳ ಅಭಿವೃದ್ಧಿ ಹೊಂದಿದೆ. ಇವು ವಾಣಿಜ್ಯ ದೃಷ್ಟಿಯಿಂದಲೂ ಬಹಳ ಮುಖ್ಯವಾದುವು. ಈ ಗುಂಪಿನಲ್ಲಿ 25 ಸಾವಿರಕ್ಕೂ ಹೆಚ್ಚಿನ ಪ್ರಭೇದಗಳಿವೆ. ಇವು ಎಲ್ಲ ಸಾಗರಗಳ ಆಳಗಳಲ್ಲೂ, ಶೀತವಲಯ ಸುಮುದ್ರಗಳಲ್ಲೂ, ಎಲ್ಲ ಸಿಹಿನೀರಿನ ಪ್ರದೇಶಗಳಲ್ಲೂ ವಾಸಿಸುತ್ತವೆ. ಈ ಗುಂಪಿನಲ್ಲಿ ಆಹಾರವಾಗಿ ಉಪಯೋಗಿಸುವ ಮೀನುಗಳಿವೆ. ನಿಜವಾದ ಟೀಲಿಯೊಸ್ಟೈ ಮೀನುಗಳು ಜುರಾಸಿಕ್ ಕಾಲದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡವು. ಕ್ರಿಟೇಷಿಯಸ್ ಕಾಲದ ಸಮುದ್ರದಲ್ಲಿ ಅವು ಹೇರಳವಾಗಿದ್ದುವು. ಟರ್ಷಿಯರಿ ಕಾಲದ ಆರಂಭದಲ್ಲಿ ಹೇರಳವಾಗಿದ್ದು ಪ್ರಸರಿಸಿದುವು. ಈ ಟೀಲಿಯಾಸ್ಟ್ ಮೀನುಗಳ ಗುಂಪು ಅನೇಕ ವಾತಾವರಣಗಳಿಗೆ ಹೊಂದಿಕೊಂಡು ಕೆಲವು ರಚನೆಗಳಲ್ಲಿ ಮಾರ್ಪಾಟು ಹೊಂದಿ, ಸಣ್ಣ-ಸಣ್ಣ ಗುಂಪುಗಳಾಗಿ ಕಾಣಿಸಿಕೊಂಡಿವೆ. ಈ ಮೀನುಗಳಲ್ಲಿ ಅಸ್ಥಿಪಂಜರ ಬಹಳವಾಗಿ ಅಸ್ಥಿಗತವಾಗಿದೆ. ಬಾಲದ ರೆಕ್ಕೆ ಅನೇಕ ವೇಳೆ ದ್ವಿಪಾರ್ಶ್ವಸಮಲಾಂಗೂಲ ರೀತಿಯದಾಗಿಯೂ ಕೆಲವು ವೇಳೆ ಸಮಲಾಂಗೂಲ ರೀತಿಯದಾಗಿಯೂ, ಇದೆ. ಸೈಕ್ಲಾಯ್ಡ್ ಅಥವಾ ಟಿನಾಯ್ಡ್



ಸೈಕ್ಲಾಯ್ಡ್ ಹುರುಪೆ



ಟೀನಾಯ್ಡ್ ಹುರುಪೆ

ರೀತಿಯ ಹುರುಪೆಗಳಿವೆ. ಕಿವಿರು ಕವಚ ಇದೆ. ಕಿವಿರುಗಳು ತಂತುಗಳ ರೂಪದಲ್ಲಿವೆ. ಅನೇಕ ವೇಳೆ ಗಾಳಿಯ ಕೋಶವಿರುತ್ತದೆ. ಕರುಳಿನಲ್ಲಿ ಸುರುಳಿಯ ಕವಾಟವಿಲ್ಲ. ಜನನ ಗ್ರಂಥಿಗಳು ಅವುಗಳ ನಳಿಕೆಗಳೊಂದಿಗೆ ಅವಿರತವಾಗಿವೆ. ವೃಷಣಗಳು ಮೂತ್ರಪಿಂಡಗಳಿಂದ ಬೇರೆಯಾಗಿವೆ. ಮೊಟ್ಟೆಗಳು ಗಾತ್ರದಲ್ಲಿ ಸಣ್ಣವಾಗಿದ್ದು ಅತ್ಯಧಿಕ ಸಂಖ್ಯೆಯಲ್ಲಿವೆ. ಡಿಂಬದ (ಲಾರ್ವ) ಸ್ಥಿತಿ ಇದೆ. ಈ ಮೀನುಗಳ ವರ್ಗೀಕರಣದಲ್ಲಿ ಕೆಲವು ಹೊರ ರಚನೆಯ ಗುಣಲಕ್ಷಣಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. 1. ಎರಡನೆಯ ಜೋಡಿ ಈಜುರೆಕ್ಕೆಗಳು ಇರುವ ಸ್ಥಳ. 2. ಬಾಯಿ ಅಗಲಿಸುವುದಕ್ಕೆ ಕಾರಣವಾದ ಪ್ರಿಮ್ಯಾಕ್ಸಿಲ್ಲ ಮತ್ತು ಮ್ಯಾಕ್ಸಿಲ್ಲಗಳ ಸಂಬಂಧ. 3. ಮೇಲಿನ ಗುದ ಮತ್ತು ಜೋಡು ಈಜುರೆಕ್ಕೆಗಳಲ್ಲಿನ ಮುಳ್ಳುಗಳು ಹಾಗೂ ಅವುಗಳ ರಚನೆ.

ಈ ಗುಂಪಿನ ವರ್ಗೀಕರಣದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಒಂದು ವರ್ಗೀಕರಣದ ಪ್ರಕಾರ ಇದರಲ್ಲಿ ಆರು ಗಣಗಳಿವೆ.

ಗಣ 1. ಐಸೊಸ್ಪಾಂಡೈಲಿ : ಇದರಲ್ಲಿ ಕೆಲವು ಪ್ರಾಚೀನ ಮೀನುಗಳನ್ನು ಸೇರಿಸಲಾಗಿದೆ. ಇವು ಹೊಲೊಸ್ಟೈ ಮೀನುಗಳನ್ನು ಹೋಲುತ್ತವೆ. ರೆಕ್ಕೆಗಳಲ್ಲಿ ಮುಳ್ಳುಗಳಿರುವುದಿಲ್ಲ. ಅನೇಕ ಜಾತಿಯ ಸಾರ್ಡಿನ, ಹಿಲ್ಸ, ಟ್ರೌಟ್ ಮುಖ್ಯವಾದುವು. ಇವಲ್ಲದೆ ಕೆಲವು ಸಮುದ್ರ ತಳದಲ್ಲಿ ಜೀವಿಸುವ ಮೀನುಗಳೂ ಸೇರಿವೆ.

ಗಣ 2. ಆಸ್ಟರಿಯೊಫೈಸಿ : ಸಿಹಿನೀರಿನಲ್ಲಿ ವಾಸಿಸುವ ಬಹಳ ಮುಖ್ಯವಾದ ಮೀನುಗಳನ್ನು ಈ ಗುಂಪಿನಲ್ಲಿ ಸೇರಿಸಲಾಗಿದೆ. ಇವುಗಳಲ್ಲಿ ಎರಡನೆಯ ಜೋಡಿ ಈಜುರೆಕ್ಕೆಗಳು ಹೊಟ್ಟೆಯ ತಳಭಾಗದಲ್ಲಿವೆ. ಈ ಗಣದ ಸೈಪ್ರಿನಾಯ್ಡಿಯ ಗುಂಪಿನಲ್ಲಿ ಆಹಾರ ಯೋಗ್ಯವಾದ ಗೆಂಡೆ ಮೀನುಗಳು (ಕಾರ್ಪ್) ಇವೆ. ದೊಡ್ಡದಾಗಿ ಬೆಳೆಯುವ ಕಟ್ಲ, ಲೇಬಿಯೊ (ರೋಹು), ಸಿರೈನ (ಮ್ರಿಗಾಲ್), ಗೆಂಡೆ (ಬಾರ್ಬಸ್ ಕರ್ನಾಟಿಕಸ್), ಅರ್ಜ (ಸಿರೈನ) ಜಾತಿಗಳಿವೆ. ಗೆಂಡೆ ಮೀನುಗಳಿಗೆ ಹಲ್ಲಿಲ್ಲ. ಇವು ಸಸ್ಯಾಹಾರಿಗಳು. ಭಾರತದಲ್ಲಿ ಕೆಲವು ವರ್ಷಗಳಿಂದ ಮುಖ್ಯವಾದ ಗೆಂಡೆಗಳ ಸಂವರ್ಧನೆ ವೈಜ್ಞಾನಿಕ

ರೀತಿಯಲ್ಲಿ ಅಗುತ್ತಿದೆ. ಆಸ್ಟರಿಯೊಫೈಸಿಯ ಇನ್ನೊಂದು ಗುಂಪು. ಮೀಸೆಮೀನು (ಸೈಲುರಾಯ್ಡಿಯ)ಗಳಾದ ಇವುಗಳಿಗೆ ಬಾಯಿಯ ಸುತ್ತಲೂ ಉದ್ದನೆಯ ಮೀಸೆಗಳಿವೆ. ಇವಕ್ಕೆ ಹಲ್ಲುಗಳಿವೆ. ಇವು ಮಾಂಸಾಹಾರಿಗಳು, ಹುರುಪೆಗಳು ಇಲ್ಲ. ಆಣೆಮೀನು (ಕ್ಲೇರಿಯಾಸ್), ಚೇಳುಮೀನು (ಹೆಟರೊನ್ಯೂಸ್ಟೆಸ್), ಬಾಳೆಮೀನು (ವಲ್ಲಾಗೊ) ತಿನ್ನಲು ಯೋಗ್ಯವಾದುವು.

ಗಣ 3. ಎಪೊಡಿಸ್ : ದೇಹ ನೀಳವಾಗಿ ಹಾವಿನ ರೀತಿ ಇರುವುದರಿಂದ ಇವುಗಳಿಗೆ ಹಾವುಮೀನು (ಈಲ್) ಗಳೆಂದು ಹೆಸರು. ಸಮುದ್ರವಾಸಿಗಳಾದರೂ ಕೆಲವು ತಮ್ಮ ಯೌವನಾವಸ್ಥೆಯನ್ನು ಸಿಹಿ ನೀರಿನಲ್ಲಿ ಕಳೆಯುತ್ತವೆ. ಜೋಡಿ ಈಜುರೆಕ್ಕೆಗಳಿಲ್ಲ. ಕೆಲವು ಪ್ರಭೇದಗಳಲ್ಲಿ ಹುರುಪೆಗಳಿವೆ. ಇವು ಮಾಂಸಾಹಾರಿಗಳು. ಉದಾ: ಮುರಿನ, ಆಂಗ್ವಿಲ್ಲ ಮತ್ತು ಓಫಿಕ್ಥಿಸ್.

ಗಣ 4. ಹೆಟರೋಮಿ : ಸಮುದ್ರದಾಳದಲ್ಲಿ ಜೀವಿಸುವ ಕೆಲವು ಮೀನುಗಳು ಈ ಗುಂಪಿಗೆ ಸೇರಿವೆ. ಇವುಗಳ ತಲೆ, ದೇಹ ಮತ್ತು ಬಾಲ ಉದ್ದವಾಗಿವೆ. ಉದಾ: ನೋಟೋಕ್ಯಾಂತಸ್, ಹೊಲೊಸಾರಸ್.

ಗಣ 5. ಮಿಸಿಕ್ಥಿಸ್ : ಈ ಗುಂಪಿನ ಮೀನುಗಳು ಸೊಳ್ಳೆ ಮರಿಗಳನ್ನು ತಿನ್ನುತ್ತವೆ. ಕಾರಣ, ಸಣ್ಣ ಮೀನುಗಳಾದ ಗ್ಯಾಂಬುಸಿಯ, ಹಾಪ್ಲೊ ಕೈಲಸ್ ಮುಂತಾದವನ್ನು ಕೆರೆಕುಂಟೆಗಳಲ್ಲಿ ಬಿಡುತ್ತಾರೆ. ಬಾಂಬೆಡಕ್ ಮೀನನ್ನು (ಹರ್ಪೊಡಾನ್) ತಿನ್ನಲು ಉಪಯೋಗಿಸುತ್ತಾರೆ. ಬಿಲೋನ್ ಮೀನಿನಲ್ಲಿ ಎರಡು ದವಡೆಗಳೂ ಕೊಕ್ಕಿನ ರೀತಿಯಲ್ಲಿ



ಬಾಂಬೆ ಡಕ್ (ಹಾರ್ಪಡೋನ್ ನೆಹೆರೆಸ್)

ಉದ್ದವಾಗಿವೆ. ಹೆಮಿರ್ಯಾಂಪಸ್ ಮೀನಿನಲ್ಲಿ ಕೆಳದವಡೆ ಮಾತ್ರ ಮೇಲುದವಡೆಗಿಂತ ಉದ್ದವಾಗಿದೆ. ಹಾರುವ ಮೀನುಗಳಲ್ಲಿ ಒಂದಾದ ಸಿಪ್ಸಿಲ್ಯೂರಸಿನಲ್ಲಿ ಮೊದಲ ಜೋಡಿ ಈಜುರೆಕ್ಕೆಗಳು ಮಾರ್ಪಾಡಾಗಿ ಬಹಳ ದೊಡ್ಡವಾಗಿದ್ದು ನೀರಿನ ಮೇಲೆ ಸ್ವಲ್ಪ ದೂರ ಹಾರುವುದಕ್ಕೆ ಅನುಕೂಲವಾಗಿವೆ. ಕುದುರೆಮೀನು (ಹಿಪ್ಪೊಕ್ಯಾಂಪಸ್) ಮತ್ತು ಕೊಳವೆ ಮೀನುಗಳಲ್ಲಿ (ಸಿನ್ಯಾತಸ್) ಹುರುಪೆಗಳು ಮಾರ್ಪಾಡಾಗಿ ದೇಹ ಸ್ವಲ್ಪ ಗಟ್ಟಿಯಾಗಿದೆ.

ಗಣ 6. ಅಕ್ಯಾಂತೊಟೆರಿಜಿಯೈ: ಈ ಮೀನುಗಳಲ್ಲಿ ಮುಂದಿನ ರೆಕ್ಕೆಯ ಕಡ್ಡಿಗಳು ಮುಳ್ಳುಗಳಾಗಿ ಮಾರ್ಪಾಡಾಗಿವೆ. ಎರಡನೆಯ ಜೋಡಿ ಈಜುರೆಕ್ಕೆಗಳು ಹೊಟ್ಟೆಯ ಮುಂದಿವೆ. ಈ ಗುಂಪಿನಲ್ಲಿ ಅನೇಕ ಸಮುದ್ರ ಮೀನುಗಳೂ, ಕೆಲವು ಸಿಹಿನೀರಿನ ಮೀನುಗಳೂ ಸೇರಿವೆ. ಮುಳ್ಳು ಪ್ರಬಲವಾಗಿರುವ ಪರ್ಚ್ ಮೀನುಗಳು (ಎಟ್ರೊಪ್ಲಸ್), ದೇಹ ನೀಳವಾಗಿರುವ ರಿಬ್ಬನ್ ಮೀನು (ಟ್ರೈಕಿಯೂರಸ್),



ಟ್ರೈಕಿಯೂರಸ್

ತೆಳುವಾಗಿ ಆಳವಾಗಿರುವ ದೇಹವುಳ್ಳ ಏಂಜೆಲ್ ಮೀನು (ಟಿರೊಫಿಲ್ಲಂ), ಗಟ್ಟಿ ದೇಹದ ಪೆಟ್ಟಿಗೆಮೀನು ಮತ್ತು ಹಸುಮೀನು (ಆಸ್ಟ್ರೇಸಿಯಾನ್), ಎರಡು ಕಣ್ಣಗಳನ್ನು ಒಂದೇ ಕಡೆ ಹೊಂದಿರುವ ಚಪ್ಪಟೆ ಮೀನು (ಸೋಲ್, ಪ್ಲೊರೊನೆಕ್ಟಿಸ್, ಸಿನಾಪ್ಟ), ಸಾಮಾನ್ಯವಾಗಿ ಗೂಡುಕಟ್ಟುವ ಸೂರ್ಯಮೀನು (ಆರ್ತೊಗೊರಿಸ್ಕಸ್), ಗಾಳದಂಥ ರೆಕ್ಕೆ ಕಡ್ಡಿಗಳಿರುವ ಗಾಳದ ಮೀನುಗಳು (ಆಂಟಿನೇರಿಯಸ್), ಹೀರುಬಟ್ಟಲಂತಿರುವ ಮೇಲುರೆಕ್ಕೆಗಳನ್ನುಳ್ಳ ಮೀನುಗಳು, ಹೀರುಬಟ್ಟಲು ಮೀನು (ಪಿಕಿನಸ್), ಗೂಡು ಕಟ್ಟಿ ಮೊಟ್ಟೆ ಮರಿಗಳನ್ನು ಕಾಪಾಡುವ ಗೌರಿ ಮೀನು (ಆಸ್ಫ್ರೊನೀಮಸ್ ಗೌರಾಮಿ), ಮೇಲುರೆಕ್ಕೆ ಮತ್ತು ಅದರ ಮುಳ್ಳಿನಲ್ಲಿ ವಿಷದ ಗ್ರಂಥಿಗಳನ್ನುಳ್ಳ ಚೇಳು ಮೀನುಗಳು (ಸ್ಕಾರ್ಪೀನಿಡೆ), ಗೋಲದ ಮೀನು (ಟೆಟ್ರಡಾನ್), ಮುಳ್ಳುಮೀನು (ಡಯೊಡಾನ್)ಗಳು ಈ ಗುಂಪಿಗೆ



**ಟೆಟ್ರೊಡಾನ್**

ಸೇರಿವೆ. ತಿನ್ನಲು ಯೋಗ್ಯವಾದ ಹೂಮೀನು, ಕೊರವ ಮತ್ತು ಕುಚ್ಚು ಮೀನುಗಳು (ಒಫಿಕೆಫಾಲಸ್ ಜಾತಿ) ಸಿಹಿನೀರಿನಲ್ಲಿ ವಾಸಿಸುತ್ತವೆ. ಗಾಳಿಯನ್ನು ಸೇವಿಸಲು ವಿಶೇಷ ಅಂಗಗಳಿರುವುದರಿಂದ ಇವು ನೀರಿನ ಹೊರಗಡೆ ಕೆಲವು ಕಾಲ ಜೀವಿಸಬಲ್ಲುವು. ಹೇರಳವಾಗಿ ಸಿಗುವ ಬಂಗಡೆ ಮೀನು (ರಾಸ್ಟಲಗರ್ ಕನಗೂರ್ತ) ಸಮುದ್ರವಾಸಿ. ಕರ್ನಾಟಕ ರಾಜ್ಯದ ಮೀನುಗಾರಿಕೆ ಉದ್ಯಮದಲ್ಲಿ ಅನೇಕ ಪ್ರಭೇದದ ಎಲುಬು ಮೀನುಗಳು ಉಪಯುಕ್ತವಾಗಿವೆ. ನೋಡಿ: ಮೀನುಗಳು; ಮೃದ್ವಸ್ಥಿ ಮೀನುಗಳು. (ಎನ್.ವಿ.ಎ.)

**ಎಲುಬು ವಿಜ್ಞಾನ:** ಮೂಳೆಗಳ, ಎಲುಗಟ್ಟಿನ (ಸ್ಕೆಲಿಟನ್), ಒಟ್ಟಾರೆ ಇಲ್ಲವೆ ಬಿಡಿ ಬಿಡಿಯಾಗಿ ಅತ್ಯಂತ ಸೂಕ್ಷ್ಮ ರಚನೆಯಿಂದ ಹಿಡಿದು ಕಣ್ಣಿಗೆ ಕಾಣಿಸುವ ರಚನೆಯನ್ನು ಅಭ್ಯಸಿಸುವ ಅಂಗರಚನಾ ವಿಜ್ಞಾನದ ವಿಭಾಗ. ಮೂಳೆಗಳ ರೂಪ, ಆಕಾರ, ಗಾತ್ರ, ಬೆಳವಣಿಗೆಯ ಕ್ರಮ, ಇತರ ಅಂಗಾಂಶಗಳೊಂದಿಗಿರುವ ಸಂಬಂಧ, ಕಾರ್ಯಚಟುವಟಿಕೆಗಳನ್ನು ವಿವರಿಸಲಾಗಿದೆ. ನೋಡಿ–ಎಲುಬು; ಎಲಗಟ್ಟು; ಕಶೇರುಕಗಳು;

***

**ಎಲುಚಿಕಿತ್ಸೆ:** ಎಲ್ಲ ರೋಗಗಳಿಗು ಕೀಲುಗಳಲ್ಲಿ, ಅವುಗಳ ಸುತ್ತುಮುತ್ತಲು ಏನಾದರೂ ಆಯ ತಪ್ಪಿದ್ದರೆ, ಮದ್ದುಗಳ ನೆರವಿಲ್ಲದೆ, ಕೇವಲ ಕೈಪಾಟಿಂದ (ಮೆನಿಪುಲೇಷನ್) ಸರಿಪಡಿಸುವ ಒಂದು ಬಗೆಯ ಅಮೆರಿಕದ ಚಿಕಿತ್ಸಾಪದ್ಧತಿ (ಆಸ್ಟಿಯೊಪತಿ). ಆಂಡ್ರೊಥಾಮಸ್ ಸ್ಟಿಲ್ (1874ರಲ್ಲಿ) ಈ ಚಿಕಿತ್ಸೆ ಕಂಡುಹಿಡಿದ. ಅವನ ಪ್ರಕಾರ, ಮದ್ದುಗಳು ವಿಷಕರ. ಮೂಳೆ, ಸ್ನಾಯು, ಕೀಲು, ತಂತುಗಟ್ಟು (ಲಿಗಮೆಂಟ್) ಮತ್ತಿತರ ಯಾವುದೇ ಊತಕದಲ್ಲಿ ರೋಗದ ಅಂಗಾಂಶ ಗಾಯಗೊಳ್ಳಬಹುದು (ಲೀಷನ್). ಪೆಟ್ಟು, ಗಾಯ, ಒತ್ತಡ, ಸೋಂಕುಗಳಿಂದ, ಬೇರೆ ರೋಗದ ಹಿಮ್ಮರಿಗೆ (ರಿಫ್ಲೆಕ್ಸ್‌ಲಿ)ಯಾಗಿ ಕೇವಲ ನರಬೇನೆಯ ಪರಿಣಾಮದಿಂದ ಹೀಗಾಗಬಹುದು. ಇದರಿಂದ, ಒಂದೆಡೆ ಹಿಡಿದುಕೊಂಡಂತೆ ಬಿಗುವಾಗಿ, ಆ ಭಾಗದ ಅಕ್ಕಪಕ್ಕಗಳ ಊತಕಗಳಲ್ಲಿ ರಕ್ತದ ಹರಿವು ನಿಧಾನವಾಗಿ, ರಕ್ತದಲ್ಲಿ ಆಮ್ಲದ ಪ್ರಮಾಣ ಜಾಸ್ತಿಯಾಗಿ (ಅಸಿಡೇಮಿಯ) ಹತ್ತಿರ ಇರುವ ನರಗಳನ್ನು ಕೆರಳಿಸುವುದು. ಇದರಿಂದಾಗಿ ಆ ನರಗಳು ಸೇರುವ ದೂರದ ಅಂಗಗಳಿಗೂ ರಕ್ತ ಹರಿವು ತಗ್ಗಿ ತೊಂದರೆಯಾಗುತ್ತದೆ. ಉದಾ: ಕರುಳುವಾಳುರಿತ (ಅಪೆಂಡಿಸೈಟಿಸ್). ಕೀಲುಗಳು ಆಯತಪ್ಪಿದಾಗ (ಸಬ್ಲಕ್ಸೇಷನ್) ಉಂಟಾಗುವ ಅಂಗಾಂಶ ಗಾಯಗಳಿಂದ ಸೋಂಕುಗಳನ್ನು ಎದುರಿಸಲು ದೇಹದೊಳಗೆ ಜೀವಿ ವಿಷರೋಧಕಗಳು (ಆಂಟಿಟಾಕ್ಸಿನ್ಸ್) ಮತ್ತು ರೋಧವಸ್ತುಗಳನ್ನು (ಆಂಟಿಬಾಡೀಸ್) ತಯಾರಿಸಿಕೊಳ್ಳುವುದಕ್ಕೆ ಅಡ್ಡಿಯಾಗುತ್ತದೆ. ಇವೆಲ್ಲವನ್ನೂ ಸರಿಪಡಿಸಬೇಕಾದರೆ ದೇಹವನ್ನು ಸಮಸ್ಥಿತಿಗೆ ತಂದು ಅದು ಮತ್ತೆ ತನ್ನ ಕೆಲಸಗಳನ್ನು ನಿರ್ವಹಿಸುವಂತೆ ಮಾಡಬೇಕು. ಇದು ಬರಿಯ ಕೈಗಳಿಂದ ಕೈಗೊಳ್ಳುವ ಕೈಪಾಟಿನಿಂದ ಸರಿಪಡಿಸುವ ಚಿಕಿತ್ಸೆ.

ಇತ್ತೀಚೆಗೆ ಈ ಚಿಕಿತ್ಸಾ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಎಲ್ಲ ರೋಗಗಳಿಂದ ರಕ್ಷಿಸಿಕೊಳ್ಳುವ ಸಾಮರ್ಥ್ಯ ದೇಹಕ್ಕಿದೆ. ಭೌತಿಕ, ರಾಸಾಯನಿಕ, ಪೋಷಕ

ಅಂಶಗಳು ಆರೋಗ್ಯದ ಮೇಲೆ ಪರಿಣಾಮ ಬೀರುವುವು. ಅನೇಕ ರೋಗಗಳಲ್ಲಿ ಮದ್ದು, ಶಸ್ತ್ರವೈದ್ಯ ಆಗಬೇಕೆಂದು ಈ ಪದ್ಧತಿಯವರು ಈಗ ಒಪ್ಪಿಕೊಂಡರೂ, ಅಂಗಾಂಶ ಗಾಯಗಳ ಹುಟ್ಟಿನ ಕಲ್ಪನೆ ಮಾತ್ರ ಬದಲಾಗಿಲ್ಲ. ಇದನ್ನು ಸ್ಟಿಲ್ ಮೊದಲು ಒಪ್ಪಿರಲಿಲ್ಲ. ಬೆನ್ನೆಲುಬುಗಳ ನಡುವಣ ಕೀಲುಗಳ ಅರೆಕೀಲ್ತಪ್ಪಿಕೆಗಳು ಘನದರ್ಶಕ (ಸ್ಟಿರಿಯೊಸ್ಕೋಪಿಕ್) ಎಕ್ಸ್‌ಕಿರಣ ಪರೀಕ್ಷೆಗಳಲ್ಲಿ ಕಂಡರೂ ಅವು ಶಸ್ತ್ರಕ್ರಿಯೆಗೆ ತಕ್ಕವಲ್ಲ. ಅವುಗಳಿಂದ ಯಾರೂ ಸಾಯುವುದಿಲ್ಲ. ಮುಖ್ಯವಾಗಿ ಬೆನ್ನೆಲುಬಿನ ಕೀಲುಗಳಲ್ಲೂ ಅವುಗಳ ಸುತ್ತಲೂ ಅಲ್ಲಲ್ಲಿ ನೋವು, ಕೋಮಲತೆ, ಸ್ನಾಯು ಸೆಡೆತ, ಚಲನೆ ಮಿತಿಗೊಂಡಿರಬಹುದು. ಎಷ್ಟೋ ವೇಳೆ ದೂರದ ಅಂಗಗಳಲ್ಲಿ ಏರುಪೇರು ಮಾಡುವಂತಿದ್ದರೂ ಇವು ಕೇವಲ ರೋಗ ಲಕ್ಷಣಗಳೇ ಹೊರತು ರೋಗಗಳಲ್ಲ. ಈ ತರಹದ ವ್ಯಾಧಿ ಬಹಳ ಮಂದಿಯಲ್ಲಿ ಇದ್ದು ಕೂಡಲೇ ಶಾಶ್ವತ ಅಥವಾ ತಾತ್ಕಾಲಿಕ ಶಮನಕ್ಕಾಗಿ ಬರೀ ಕೈಪಾಟನ್ನೇ ಬಳಸಬಹುದು. ಮಿತಿಮೀರಿ ಚಿಕಿತ್ಸೆ ಮಾಡುವುದು ಬೇಡವಾದರೆ, ಕೈಪಾಟು ಕೈಗೊಳ್ಳುವುದು ಸೂಕ್ತವಲ್ಲ. ದೇಹದಲ್ಲಿ ಗೊತ್ತಾದ ರೋಗವಿದ್ದು, ಈ ಲಕ್ಷಣಗಳು ಕಂಡುಬಂದರೆ, ಕೈಪಾಟು ಆಗಲೇಬೇಕೆಂದಿಲ್ಲ. ಇದನ್ನು ಮಾಡಿದಾಗಲೂ, ವೈದ್ಯಚಿಕಿತ್ಸೆಯ ವಿಧಾನಗಳ ಜೊತೆಗೆ ಕೈಪಾಟು ಚಿಕಿತ್ಸೆ ಮಾಡಬಹುದು. ಎಲ್ಲ ರೋಗಗಳೂ ಈ ಪದ್ಧತಿಯಿಂದಲೇ ಖಂಡಿತವಾಗಿ ವಾಸಿಯಾಗುವುವೆಂಬ ಸ್ಟಿಲ್‌ನ ಹಳೆಯ ಕಲ್ಪನೆ ಬದಲಾಗಿದೆ.

ಮೊಟ್ಟಮೊದಲು ಸ್ಟಿಲ್ 1874ರ ಜೂನ್ 22ರಲ್ಲಿ ತನ್ನ ಕಲ್ಪನೆಯನ್ನು ವರದಿಸಿದ. ಅನಂತರ 1892ರಲ್ಲಿ ಅಮೆರಿಕದಲ್ಲಿ ಒಂದು ಎಲುಚಿಕಿತ್ಸೆಯ ಶಾಲೆ ತೆರೆದ. 1964ರ ಹೊತ್ತಿಗೆ ಇಡೀ ಅಮೆರಿಕದ ಸಂಸ್ಥಾನಗಳಲ್ಲಿ 6 ಶಾಲೆಗಳಿದ್ದವು. ಹಿಂದಿನ ವೈದ್ಯಶಾಸ್ತ್ರ ಶಾಲೆಗಳಂತೆ ಇವೂ ಕಾರ್ಯ ನಡೆಸುತ್ತಿವೆ. ಬ್ರಿಟನಿನಲ್ಲಿ 2 ಶಿಕ್ಷಣ ಕೇಂದ್ರಗಳಿವೆ. ಲಂಡನ್ನಿನ ಎಲುಚಿಕಿತ್ಸೆಯ ಕಾಲೇಜಿನಲ್ಲಿ, ಒಂದು ವರ್ಷ ಮೂರು ತಿಂಗಳ ಶಿಕ್ಷಣಕ್ಕೆ ವೈದ್ಯ ಪದವೀಧರರು ಮಾತ್ರ ಸೇರಬಹುದಾದರೂ ಎಲುಚಿಕಿತ್ಸೆಯ ಬ್ರಿಟಿಷ್ ಶಾಲೆಯಲ್ಲಿ 4–5 ವರ್ಷಗಳ ತರಬೇತಿಗೆ ಬೇರೆಯವರೂ ಸೇರಬಹುದು. ಇವೆರಡರಲ್ಲೂ ಎಲುಚಿಕಿತ್ಸೆಯ ಬಗ್ಗೆ ಗಮನ ಕೊಡುವುದು ಹೆಚ್ಚು. ಲಂಡನ್ ಶಾಲೆ ಅಮೆರಿಕದ ಎಲುಚಿಕಿತ್ಸೆ ಸಂಘಕ್ಕೆ ಸೇರದೆಂದು ಹೇಳಿಕೊಳ್ಳುತ್ತದೆ. ಇನ್ನೊಂದು ಗ್ರೇಟ್‌ಬ್ರಿಟನ್ನಿನ ಎಲುಚಿಕಿತ್ಸಕ ಸಂಘದ ಮೇಲ್ವಿಚಾರಣೆಯಲ್ಲಿದೆ. ಎಲುಚಿಕಿತ್ಸಕರ ಒಂದು ಮಂಡಲಿ ನೊಂದಣಿ (ರಿಜಿಸ್ಟರ್) ಇದೆ. ಬಹುಪಾಲು ಲಂಡನ್ ಶಾಲೆಯಲ್ಲೇ ಕಲಿತ ಬಹಳ ಮಂದಿ ಎಲುಚಿಕಿತ್ಸಕರು ಫ್ರಾನ್ಸಿನಲ್ಲಿದ್ದಾರೆ. ಹೀಗೆ ಆಸ್ಟ್ರೇಲಿಯ, ನ್ಯೂಜಿಲೆಂಡ್, ವೆಸ್ಟ್ ಇಂಡೀಸ್, ಭಾರತ, ದಕ್ಷಿಣ ಆಫ್ರಿಕಗಳಲ್ಲೂ ಈ ಚಿಕಿತ್ಸಾ ವಿಧಾನ ಅನುಸರಣೆಯಲ್ಲಿದೆ.

***

**ಎಲುಸಿಂಗ ಮೋರೆ:** ಮುಖದ ಎಲುಬುಗಳು, ಕೆಲವುವೇಳೆ ತಲೆಯ ಎಲುಬುಗಳು ಅತಿಯಾಗಿ ಬೆಳೆದುಕೊಂಡು ಆ ಭಾಗಗಳ ಮಲೆತವಾಗಿ (ಹೈಪರ್‌ಟ್ರೊಫಿ) ವ್ಯಕ್ತಿಯ ಮೋರೆ ಸಿಂಹದ ಹಾಗೆ ಕಾಣಿಸುವ ಒಂದು ಅಸಾಧಾರಣ, ವಿಶಿಷ್ಟ ಆದರೆ ಮಾರಕ ವಲ್ಲದ ರೋಗ.

***

**ಎಲೆಕ್ಟ್ರೋಫೋರೆಸಿಸ್:** ವಿದ್ಯುದೀಕರಣಗೊಂಡ ಕಣಗಳನ್ನು ವಿದ್ಯುತ್ ಪ್ರವಾಹದಿಂದ ವಿರುದ್ಧ ವಿದ್ಯುದ್ವಾರಗಳೆಡೆ ಬೇರ್ಪಡಿಸುವ ಪ್ರಕ್ರಿಯೆ. ಈ ತಂತ್ರಜ್ಞಾನವನ್ನು ಮೊಟ್ಟ ಮೊದಲಿಗೆ ಸ್ವೀಡನ್ನಿನ ಎ.ಟಿಸೆಲಿಯಸ್ (1949) ಅಭಿವೃದ್ಧಿಪಡಿಸಿದ. ಪ್ರಪ್ರಥಮವಾಗಿ ಇದನ್ನು ಕಲಿಲಗಳ ಮೇಲೆ ಪ್ರಯೋಗಿಸಲಾಯಿತು. ಈ ತಂತ್ರದಿಂದ ಧನಾವೇಶ (ಪಾಸಿಟಿವ್ ಚಾರ್ಜ್) ಹೊಂದಿದ ಕಣಗಳು ಕ್ಯಾಥೋಡ್ ನೆಡೆಗೂ ಋಣಾವೇಶ (ನೆಗೇಟಿವ್ ಚಾರ್ಜ್) ಹೊಂದಿದ ಕಣಗಳು ಆನೋಡ್‌ನೆಡೆಗೂ ಬೇರ್ಪಡುತ್ತವೆ.

ಕಣಗಳ ಬೇರ್ಪಡುವಿಕೆಯ ಸಮಯ 'ವಿದ್ಯುತ್ ಪ್ರವಾಹ' ದ್ರಾವಕದ ವಾಹಕತೆ ಮತ್ತು ಕಣಗಳ ಆವೇಶಗಳನ್ನು ಅವಲಂಬಿಸಿರುತ್ತದೆ. ತಲಾ ಒಂದು ಸೆಂಮೀ ಗೆ ಒಂದು ವೋಲ್ಟ್ ವಿಭವ ಪ್ರವಣತೆ ಪ್ರಕಾರ ಒಂದು ಸೆಕೆಂಡಿಗೆ ಕಣಗಳು ಚಲಿಸುವ ದೂರವೆ ಎಲೆಕ್ಟ್ರೊಫೊರೆಟಿಕ್ ಚಲನಶೀಲತೆ. ಬೇರೆ ಬೇರೆ ಗಾತ್ರದ ಕಣಗಳಿಗೆ ಅವುಗಳದೇ ಆದ ಚಲನಶೀಲತೆ ಇರುವುದರಿಂದ, ಮಿಶ್ರಣದಿಂದ ಅವುಗಳನ್ನು ವಿದ್ಯುತ್ ಪ್ರವಾಹದ ಸಹಾಯದಿಂದ ಬೇರ್ಪಡಿಸಬಹುದು. ಎಲೆಕ್ಟ್ರೊಫೊರೆಟಿಕ್ ಚಾಲನೆಯನ್ನು ವ್ಯತ್ಯಸ್ಥ ಆಮ್ಲಾಂಶ ಪ್ರವಣತೆಯಲ್ಲೂ ನೋಡಬಹುದು. ಉದಾಹರಣೆಗೆ ಅಮೈನೋ ಆಮ್ಲಗಳು ತಮ್ಮ ಸಮ ವಿದ್ಯುತ್ ಬಿಂದುವಿನಲ್ಲಿ ಚಲಿಸುವುದಿಲ್ಲ. ಕಡಿಮೆ ಆಮ್ಲಾಂಶದಲ್ಲಿ ಧನಾವೇಶ (ಪಾಸಿಟಿವ್ ಚಾರ್ಜ್) ಹೊಂದಿದ್ದು ಕ್ಯಾಥೋಡ್ ಕಡೆಗೂ ಹೆಚ್ಚಿನ ಆಮ್ಲಾಂಶದಲ್ಲಿ ಆನೋಡ್ ಕಡೆಗೂ ಚಲಿಸುತ್ತದೆ. ಆಮ್ಲೀಯ ಕ್ಷಾರೀಯ ಮತ್ತು ತಟಸ್ಥ ಅಮೈನೋ ಆಮ್ಲಗಳು ವ್ಯತ್ಯಸ್ಥ ಆಮ್ಲಾಂಶದಲ್ಲಿ ಬೇರೆ ಬೇರೆ ಧ್ರುವದೆಡೆ ಸಾಗುತ್ತವೆ. ಆದರೆ ವಿದ್ಯುತ್ ಪ್ರವಾಹದ ಸಮ್ಮುಖದಲ್ಲಿ ಸ್ಥಿರವಾದ ಆಮ್ಲಾಂಶ ಕಾಯ್ದುಕೊಳ್ಳುವುದು ಕಷ್ಟದ ಕೆಲಸವಾದುದರಿಂದ ಬಫರ್ ದ್ರಾವಣವನ್ನು ಉಪಯೋಗಿಸಲಾಗುತ್ತದೆ. ಆಮ್ಲಾಂಶದಲ್ಲಾಗುವ ಏರಿಳಿತಗಳನ್ನು ಇದು ಬಗೆಹರಿಸುತ್ತದೆ.

ಮೊದಲಿಗೆ ಎಲೆಕ್ಟ್ರೋಫೋರೆಸಿಸ್ ವಿಧಾನದಲ್ಲಿ ಪ್ರೋಟೀನ್ ಗಳನ್ನು ದ್ರಾವಣದ ಮೂಲಕ ಬೇರ್ಪಡಿಸುತ್ತಿದ್ದರು. ಈ ವಿಧಾನ ನಿಖರವಾದ ಫಲಿತಾಂಶ ಕೊಡುವುದಿಲ್ಲವೆಂದು, ಹಲವಾರು ರೀತಿಯ ಆನಿಕ ಪದಾರ್ಥಗಳನ್ನು ಮಾಧ್ಯಮವಾಗಿ ಅಳವಡಿಸಲಾಯಿತು. ಸೋಸುಕಾಗದ, ಸೆಲ್ಯುಲೋಸ್ ಅಸಿಟೇಟ್, ಸ್ಟಾರ್ಚ್, ಅಗಾರ್ ಹಾಗೂ ಪಾಲಿ ಆಕ್ರಿಲಮೈಡ್ ಜೆಲ್ ಮುಖ್ಯವಾದ ಮಾಧ್ಯಮಗಳು. ಸೋಸು ಕಾಗದ ಬಳಸಿದಾಗ ಕೆಲವೊಮ್ಮೆ ವಲಯಗಳು ಬೆರೆತು ಹೋಗುವುದರ ಜೊತೆಗೆ ಕಣಗಳು ಕಾಗದಕ್ಕೆ ಅಂಟಿಕೊಳ್ಳುವ ಸಾಧ್ಯತೆಯಿದೆ.

ಎಲೆಕ್ಟ್ರೋಫೋರೆಸಿಸ್ ವಿಧಾನಕ್ಕೆ ಬಳಸುವ ಉಪಕರಣಗಳು ಎರಡು ಮಾದರಿಯಲ್ಲಿ ದೊರೆಯುತ್ತವೆ. ಮೊದಲನೆಯದು ಆನಿಕ ಮಾಧ್ಯಮವನ್ನೊಳಗೊಂಡ ಲಂಬವಾಗಿಟ್ಟ ಗಾಜಿನ ಕಡ್ಡಿ (ಗ್ಲಾಸ್ ರಾಡ್). ಎರಡನೆಯದು ಲಂಬಾಕಾರದ ಬದಲಾಗಿ ಸಮತಟ್ಟಾಗಿರಿಸಿದ ಹಲಗೆ. ಈ ಉಪಕರಣದಲ್ಲಿ ಎರಡು ವಿದ್ಯುದ್ವಾರಗಳಿದ್ದು ಆನಿಕ ಮಾಧ್ಯಮದೊಡನೆ ಜೋಡಿಸಿರುತ್ತದೆ. ಹಾಗೆ ಸಂಪರ್ಕಿಸಿದ ವಿದ್ಯುದ್ವಾರಗಳನ್ನು 2 ರಿಂದ 8 ವೋಲ್ಟಗಳುಳ್ಳ ಡಿ.ಸಿ.ವಿದ್ಯುತ್‌ಗೆ ಅಳವಡಿಸಲಾಗಿರುತ್ತದೆ. ವಿದ್ಯುದ್ವಾರಗಳನ್ನು ಬಫರ್ ದ್ರಾವಣ ತುಂಬಿದಂತಹ ಟಾಕಿಗಳಲ್ಲಿರಿಸಲಾಗಿರುತ್ತದೆ. ಹಾಗೆಯೇ ಬಫರ್ ದ್ರಾವಣವನ್ನು ಆಯ್ಕೆ ಮಾಡುವಾಗ ತುಂಬ ಎಚ್ಚರವಹಿಸಬೇಕಾಗಿರುತ್ತದೆ. ಇಲ್ಲವಾದಲ್ಲಿ ಬಫರ್ ದ್ರಾವಣದ ಕೆಲವು ಭಾಗವು ಬೇರ್ಪಡಲಿರುವ ಕಣಗಳೊಂದಿಗೆ ಬೆರೆಯುವ ಸಾಧ್ಯತೆ ಹೆಚ್ಚು. ಬಫರ್ ದ್ರಾವಣದ ಆಮ್ಲಾಂಶ ಪ್ರಮುಖವಾಗಿ ಬೇರ್ಪಡಿಸಬೇಕಾದ ಮಿಶ್ರಣದ ಮೇಲೆ ಅವಲಂಬಿತವಾಗಿರುತ್ತದೆ. ಹಾಗಾಗಿ ಸಮವಿದ್ಯುತ್ ಪಾಯಿಂಟ್ ನಲ್ಲಿ ಗರಿಷ್ಠ ಕಣಗಳನ್ನು ಬೇರ್ಪಡಿಸಬಹುದು.

ಜೆಲ್ ಅನ್ನು ಆನಿಕ ಪದಾರ್ಥವಾಗಿ ಉಪಯೋಗಿಸಿದಲ್ಲಿ ಉತ್ತಮ ಫಲಿತಾಂಶ ಪಡೆಯಬಹುದು. ಪ್ರೋಟೀನ್ ಮತ್ತು ನ್ಯೂಕ್ಲಿಯೋಟೈಡ್‌ಗಳನ್ನು ಬೇರ್ಪಡಿಸಲು ಪಾಲಿ ಆಕ್ರಿಲಮೈಡ್ ಅನ್ನೂ ನ್ಯೂಕ್ಲಿಕ್ ಆಮ್ಲಗಳನ್ನು ಬೇರ್ಪಡಿಸಲು ಅಗರೋಸನ್ನು ಉಪಯೋಗಿಸುತ್ತಾರೆ. ಚಪ್ಪಟೆಯಾಕಾರದ ಜೆಲ್ ಸ್ಥಂಭಾಕಾರದ ಜೆಲ್‌ಗಿಂತ ಹೆಚ್ಚಿನ ಸಾಮರ್ಥ್ಯ ಪಡೆದಿದೆ. ಹಾಗಾಗಿ ಸ್ಥಂಬಾಕಾರದ ಜೆಲ್‌ಗಿಂತಲೂ ಚಪ್ಪಟೆ ಜೆಲ್‌ಗಳು ಹೆಚ್ಚಾಗಿ ಬಳಕೆಯಲ್ಲಿದೆ.

ಜೆಲ್ ಎಲೆಕ್ಟ್ರೊಫೊರೆಸಿಸ್ ಹಾಗೂ ಸೀರಿಯೋಲಾಜಿಕಲ್ ಪ್ರಿಸಿಪಿಟಿನ್ ಮಿಶ್ರಣಗಳ ಪ್ರಯೋಗ ಎಲೆಕ್ಟ್ರೊಫೊರೆಸಿಸ್‌ನ ಇನ್ನೊಂದು ವಿಧಾನ. ಇದಕ್ಕೆ ಇಮ್ಯುನೋ ಎಲೆಕ್ಟ್ರೊಫೊರೆಸಿಸ್ ಎಂದು ಹೆಸರು. ಈ ಪ್ರಯೋಗದಲ್ಲಿ ಮೊದಲಿಗೆ ಎಲೆಕ್ಟ್ರೋಫೋರೆಸಿಸ್‌ನಿಂದ ಪ್ರೋಟೀನ್‌ಗಳ ಮಿಶ್ರಣವನ್ನು ಉಪವಿಭಾಗ ಪ್ರೋಟೀನ್ ಗಳಾಗಿ ಬೇರ್ಪಡಿಸಲಾಗುತ್ತದೆ. ಅನಂತರ ಬೇರ್ಪಡಿಸಲ್ಪಟ್ಟಂತಹ ಮಿಶ್ರಣಕ್ಕೆ ಪ್ರಜನಕವಾದ ಸೀರಮ್ (ಆ್ಯಂಟಿಸೀರಮ್) ನ್ನು ಜೆಲ್‌ನ ಒಂದು ಭಾಗದಲ್ಲಿ ವಿಸರಿಸಲಾಗುತ್ತದೆ. ಹಾಗೆ ವಿಸರಿತಗೊಂಡ ಆ್ಯಂಟಿಸೀರಮ್, ಸಜಾತಿ (ಹೋಮೋಲೋಗಸ್) ಪ್ರೋಟೀನಿನೊಂದಿಗೆ ಕೂಡಿ ಒಂದು ಅವಪಾತಿತ ಪಟ್ಟಿಯಾಗಿ ಮೂಡಿಬರುತ್ತದೆ. ಒಂದಕ್ಕಿಂತ ಹೆಚ್ಚಾಗಿ ಪಟ್ಟಿ ಕಂಡು ಬಂದಲ್ಲಿ ಅಂತ ಪ್ರೋಟೀನನ್ನು ಭಿನ್ನಜಾತಿ (ಹೆಟೆರೋಲೋಗಸ್) ಎಂದು ಕರೆಯಬಹುದಾಗಿದೆ.

ಈ ತಂತ್ರವನ್ನು ಉಪಯೋಗಿಸಿಕೊಂಡೇ ರಕ್ತದ ಸೀರಮ್‌ನಿಂದ 30ಕ್ಕೂ ಹೆಚ್ಚು ಪ್ರೋಟೀನ್‌ಗಳನ್ನು ಪ್ರತ್ಯೇಕಿಸಿ ಗುರುತಿಸಲಾಗಿದೆ.

ತಂತ್ರ ಕಂಡುಹಿಡಿದಾಗ, ಕೇವಲ ರಕ್ತದ ಪ್ರೋಟೀನುಗಳನ್ನು ಬೇರ್ಪಡಿಸಲು ಮಾತ್ರ ಬಳಸಿಕೊಳ್ಳಲಾಯಿತಾದರೂ ಮುಂದೆ ಈ ತಂತ್ರದಿಂದ ಅನೇಕ ಉಪಯೋಗಗಳಿವೆ ಎಂದು ಕಂಡು ಹಿಡಿಯಲಾಯಿತು. ಪ್ರೋಟೀನುಗಳ ವಿವಿಧ ಘಟಕಗಳನ್ನು ಪ್ರತ್ಯೇಕಿಸಿ ಗುರುತಿಸಲು, ಕಿಣ್ವಗಳನ್ನು ಗುರುತಿಸಲು, ಆನುವಂಶೀಯ ವಸ್ತುವಾದ ಡಿಎನ್‌ಎ ಹಾಗೂ ಆರ್‌ಎನ್‌ಎ ಗಳ ನ್ಯೂಕ್ಲಿಯೋಟೈಡು ಸರಣಿಯನ್ನು ಕಂಡು ಹಿಡಿಯಲು ಈ ತಂತ್ರವನ್ನು ಬಳಸಲಾಗುತ್ತಿದೆ. ಜೆನೆಟಿಕ್ ಎಂಜಿನಿಯರಿಂಗ್‌ನಲ್ಲಿ ಉಪ ಜೀವಿಯಿಂದ ಜೀನ್‌ನ್ನು ಪ್ರತ್ಯೇಕಿಸಿ, ಬ್ಯಾಕ್ಟೀರಿಯ ಕೋಶಗಳಲ್ಲಿ ಅಳವಡಿಸಿ ಅನಂತರ ಇನ್ನೊಂದು ಜೀವಿಗೆ ಅಳವಡಿಸಲಾಗುವುದು. ಜೀನ್‌ಗಳನ್ನು ಗುರುತಿಸಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಎಲೆಕ್ಟ್ರೋಫೋರೆಸಿಸ್ ಅಗತ್ಯ. ವ್ಯಕ್ತಿ ವ್ಯಕ್ತಿಗಳ ನಡುವಿನ ಸಾಮ್ಯತೆಯನ್ನು ಕಂಡು ಹಿಡಿಯಲು ಬಳಸುವ ಡಿಎನ್‌ಎ ಬೆರಳಚ್ಚು ತಂತ್ರದಲ್ಲಿ ಎಲೆಕ್ಟ್ರೋಫೋರೆಸಿಸ್ ಬಳಸಿಕೊಳ್ಳಲಾಗುತ್ತಿದೆ. ಹೀಗೆ ಅಣು ವಿಜ್ಞಾನದಲ್ಲಿ ಇದು ತುಂಬ ಉಪಯುಕ್ತವಾದ ಪ್ರಾಯೋಗಿಕ ತಂತ್ರ.

(ಜೆ.ಯು)

**ಎಲೆಹುಳು (ಎಲೆಕೀಟ):** ಕೀಟವರ್ಗದ ಫಿಲ್ಲಿಡಿಡೆ ಕುಟುಂಬದ ಸದಸ್ಯ. ಲೀಫ್ ಇನ್ಸೆಕ್ಟ್ ಅಥವಾ ವಾಕಿಂಗ್ ಲೀಫ್ ಇಂಗ್ಲೀಷ್ ಹೆಸರು. ನೋಡಲು ಹಸಿರು ಎಲೆಯಂತಿದೆ. ಇದು ಕಡ್ಡಿಕೀಟಗಳ ಹತ್ತಿರದ ಸಂಬಂಧಿ. ಇದರ ಬೆನ್ನನ್ನು ಮುಚ್ಚಿರುವ ಎರಡು ರೆಕ್ಕೆಗಳು ಸಂಪೂರ್ಣವಾಗಿ ಎಲೆಯನ್ನು ಹೋಲುತ್ತವೆ. ಹೆಣ್ಣು ಕೀಟದ ಹಿಂಬದಿಯ ರೆಕ್ಕೆಗಳು

ಹಾರಲು ಉಪಯುಕ್ತವಾಗಿಲ್ಲ. ಗಂಡುಕೀಟದ ರೆಕ್ಕೆಗಳು ಚಿಕ್ಕದಾಗಿದ್ದು, ಹಿಂದಿನ ರೆಕ್ಕೆಗಳು ಹಾರಲನುಕೂಲವಾಗುವಂತೆ ಚೆನ್ನಾಗಿ ಬೆಳೆದಿವೆ. ಡಿಂಬ ಕೆಂಪಗಿದ್ದು, ಎಲೆ



ಎಲೆಕೀಟ

ತಿನ್ನುತ್ತ ಬೆಳೆಯುತ್ತ, ಹಸಿರು ಬಣ್ಣಕ್ಕೆ ತಿರುಗುತ್ತದೆ. ಕೇವಲ ಹಸಿರು ಎಲೆ ತಿನ್ನುತ್ತವಾದ್ದರಿಂದ, ಹಸಿರು ಗಿಡಮರಗಳಲ್ಲೇ ವಾಸಿಸುವುದರಿಂದ ಈ ಕೀಟಗಳ ಬಣ್ಣ ಮತ್ತು ಆಕಾರ ಇವುಗಳಿಗೆ ರಕ್ಷಣೆ ಕೊಡುತ್ತವೆ. ಇವುಗಳ ತತ್ತಿಗಳು ಬೀಜಗಳಂತಿದ್ದು, ಇದು ರಕ್ಷಣೆ ಒದಗಿಸುತ್ತದೆ. ಭಾರತವು ಸೇರಿದಂತೆ ಪೂರ್ವದ ಫಿಜಿ ದ್ವೀಪಗಳವರೆಗೂ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ. ಎಲೆಕೀಟಗಳಲ್ಲಿ ಮೂರು ಜಾತಿಗಳನ್ನೂ ಇಪ್ಪತ್ತು ಪ್ರಭೇದಗಳನ್ನೂ ಗುರುತಿಸಲಾಗಿದೆ. ನೋಡಿ–ಅನುಕರಣೆ. ***

**ಎಲ್ಕ್ ಸಾರಂಗ:** ಜಿಗುರೆಗಳಲ್ಲೆಲ್ಲ ಅತಿದೊಡ್ಡ ಗಾತ್ರದ ಪ್ರಾಣಿ. ಸರ್ವಸ್ ಜಾತಿಗೆ ಸೇರಿದ ಈ ಪ್ರಾಣಿಯನ್ನು ಬೇರೆ ಬೇರೆ ಹೆಸರಿನಲ್ಲಿ ಕರೆಯಲಾಗುತ್ತಿದೆ. ಅಮೆರಿಕದಲ್ಲಿ ಮುಸು (ಮೂಸ್) ಎಂದೂ ಯೂರೋಪಿನಲ್ಲಿ ಕೆಂಪು ಜಿಗರೆ ಎಂದೂ, ಕಾಶ್ಮೀರದಲ್ಲಿ ಜಿಂಕೆಯೆಂದೂ, ಹಿಮಾಲಯದಲ್ಲಿ ಸೌ ಎಂದೂ, ಉತ್ತರ ಅಮೆರಿಕದಲ್ಲಿ ಇದನ್ನು ವಾಪಿಟಿ ಎನ್ನುವರು. ಎಲ್ಕ್ ಎನ್ನುವುದು ಯೂರೋಪಿನ ಹೆಸರು. ಮುಸುವನ್ನು ಬಿಟ್ಟರೆ ಅಮೆರಿಕದ ಎಲ್ಕ್ ಅತಿ ದೊಡ್ಡ ಪ್ರಾಣಿ.

ಭುಜದ ಮಟ್ಟದಿಂದ ಲೆಕ್ಕ ಹಾಕಿದರೆ ಚೆನ್ನಾಗಿ ಬೆಳೆದ ಎಲ್ಕ್ 160 ಸೆಂಮೀ ಎತ್ತರವಿದ್ದು 350 ಕಿಗ್ರಾಂ ಯಿಂದ 800 ಕಿಗ್ರಾಂ ತೂಕವಿರುತ್ತದೆ. ಚೆನ್ನಾಗಿ ಬೆಳೆದ ಕೊಂಬುಗಳು 150 ಸೆಂಮೀ ಪಸರಿಸಿರುತ್ತವೆ. ಇದರ ಕಾಲುಗಳು ಉದ್ದ, ಕೊರಳು (ಕುತ್ತಿಗೆ) ಮೊಟಕು. ಮೇಲೊಸಡು ಗ್ರಾಹಕಶಕ್ತಿಯುಳ್ಳದಾಗಿ ನೇತು ಬಿದ್ದಿರುತ್ತದೆ. ಕಿವಿಗಳು ಉದ್ದನಾಗಿ ಜೋತುಬಿದ್ದಿರುತ್ತವೆ. ನೋಡಲು ಪ್ರಾಣಿ ಅಷ್ಟೇನೂ ಆಕರ್ಷಕವಲ್ಲ. ಗಂಡಿನ ಕೂದಲು ಉದ್ದ, ಒರಟು, ಸ್ವಲ್ಪ ಪೆಡಸು.



**ಎಲ್ಕ್ ಸಾರಂಗ**

ಈ ಮೃಗ ಜೌಗುಪ್ರದೇಶದಲ್ಲಾಗಲಿ, ಕುರುಚಲು ಅಥವಾ ದಟ್ಟ ಕಾಡಿನಲ್ಲಾಗಲಿ ಹಾಯಾಗಿರಬಲ್ಲುದು. ಕಾಡಿನ ಮತ್ತು ಜೌಗಿನ ಯಾವ ಅಡಚಣೆಗಳೂ ಇದಕ್ಕೆ ಲೆಕ್ಕವಿಲ್ಲ. ಶೀತಕಾಲ ಮತ್ತು ಆಹಾರಾಭಾವಕ್ಕೂ ಇದು ಹೆದರದು. ಆದ್ದರಿಂದ ತನ್ನ ಮೇಲೆ ಬೀಳಲು ಬರುವ ತೋಳ, ಲಿಂಕ್ಸ್, ಕರಡಿಗಳು ಮತ್ತು ಗ್ಲಟನ್ ಮುಂತಾದ ಪ್ರಾಣಿಗಳಿಂದಲೂ ಮನುಷ್ಯನಿಂದಲೂ ಇದು ಅತಿ ಜಾಣತನದಿಂದ ತಪ್ಪಿಸಿಕೊಳ್ಳುತ್ತದೆ. ತನ್ನ ಏಕಾಂತಭಂಗವನ್ನು ಇದು ಸಹಿಸದು. ಸುತ್ತುಗಟ್ಟಿದಾಗ ದಿಗ್ಭ್ರಮೆಗೊಳ್ಳುತ್ತದೆ. ವ್ಯವಸಾಯದ ಒತ್ತುವರಿ ಆದಂತೆಲ್ಲ ಈ ಪ್ರಾಣಿ ಮಾಯವಾಗುತ್ತಿದೆ.

ಯೂರೋಪ್ ಖಂಡದಲ್ಲಿ ಇದು ಸ್ಕಾಂಡಿನೇವಿಯ, ಪೂರ್ವಪರ್ಷಿಯ ಮತ್ತು ರಷ್ಯದ ಕೆಲವು ಭಾಗಗಳಲ್ಲಿದೆ. ಅಮೆರಿಕದಲ್ಲಿ ಅಲಾಸ್ಕದ ಹತ್ತಿರ ಸಿಕ್ಕುತ್ತದೆ. ಉದ್ದನಾದ ಕಾಲು ಮತ್ತು ಚಿಕ್ಕ ಕತ್ತು ಇರುವುದರಿಂದ ನೆಲದ ಮೇಲಿನ ಹುಲ್ಲನ್ನು ಮೇಯಲಾರದು, ಕೇವಲ ಮರದ ಕೆಳಗಿನ ಎಲೆ ಕೊನೆಗಳು, ಪೊದರುಗಳ ತುದಿಗಳು ಮತ್ತು ಉದ್ದವಾಗಿ ಬೆಳೆಯುವ ಹುಲ್ಲುಗಳನ್ನು ಮಾತ್ರ ಮುಟ್ಟಬಲ್ಲುದು. ಬರ್ಚ್, ವಿಲ್ಲೊ, ಆಸ್ಪೆನ್, ಪಾಪ್ಲರ್ ಮರಗಳ ಎಲೆ, ಕುಡಿ, ಕಲ್ಲುಹೂ ಮತ್ತು ಪಾಚಿಗಳು ಈ ಪ್ರಾಣಿಯ ಮುಖ್ಯ ಆಹಾರ. ಬೇಸಿಗೆಯಲ್ಲಿ, ಮುಖ್ಯವಾಗಿ ಇರುಳಿನಲ್ಲಿ, ಇದು ಜೌಗು ಗುಂಡಿಗಳ ಕೆಸರಿನಲ್ಲಿ ಆಳಕ್ಕೆ ಮುಳುಗಿ ಅಲ್ಲಿ ಬೆಳೆದಿರುವ ಸಾರವತ್ತಾದ ನೀರಿನ ಗಿಡಗಳನ್ನು ಮೇಲೆತ್ತಿ, ಬೇರು ಸಹಿತ ಅವನ್ನು ಕೀಳಲು ನೀರಿನೊಳಕ್ಕೆ ಆಗಾಗ ತಲೆಯನ್ನು ಮುಳುಗಿಸುತ್ತ ಕಾಲ ಕಳೆಯುತ್ತದೆ.

ಎಲ್ಕ್ ಸಾರಂಗ ಎಷ್ಟು ಬಲಿಷ್ಠವೋ ಅಷ್ಟೇ ಧೈರ್ಯಶಾಲಿ. ಇದರ ಮೊನಚಾದ ಗೊರಸುಗಳು ಕೊಂಬುಗಳಿಗಿಂತ ಭಯಂಕರವಾದ ಆಯುಧ. ಎರಡನ್ನೂ ಅದು ತುಂಬ ಕೌಶಲದಿಂದ ಉಪಯೋಗಿಸಬಲ್ಲುದು.

ಗಂಡು ವಾಪಿಟಿ ತನ್ನ ಸುತ್ತ ಹೆಣ್ಣು ಜಿಂಕೆಗಳ ಒಂದು ಗುಂಪನ್ನು ಇಟ್ಟುಕೊಂಡು ಗುಂಪಿನ ಸ್ವಾಮ್ಯಕ್ಕಾಗಿ ಹೋರಾಟ ನಡೆಸುತ್ತದೆ. ಅದೇ ಮುಸು ತನ್ನ ಏಕಾಕಿ ಸಂಗಾತಿಯೊಡನೆ ಸಂಸಾರ ಮಾಡುತ್ತದೆ. ಮೇ ತಿಂಗಳಲ್ಲಿ ಒಂದು ಅಥವಾ ಎರಡು ಮರಿಗಳು ಹುಟ್ಟುತ್ತವೆ; ಈಯುವುದಕ್ಕೆ ಮೊದಲು ಹೆಣ್ಣುಗಳು ಕೆರೆಯ ಅಥವಾ ನದಿಯ ನಡುಗಡ್ಡೆ, ಜೌಗು ಮುಂತಾದ ದುರ್ಗಮ ಪ್ರದೇಶಗಳನ್ನು ಹುಡುಕಿಕೊಳ್ಳುತ್ತವೆ. ಹುಟ್ಟಿದ ಕೆಲವೇ ತಾಸುಗಳಲ್ಲಿ ಮರಿ ಸ್ವತಂತ್ರವಾಗಿ ಓಡಾಡುತ್ತ ತಾಯನ್ನು ಹಿಂಬಾಲಿಸುತ್ತದೆ. ***

**ಎಲ್ಯಾಸ್ಮೋಬ್ರಾಂಖೈ:** ಕಾಂಡ್ರಿಕ್ತಿಯಿಸ್ ವರ್ಗದ ಮೃದ್ವಸ್ಥಿಮೀನುಗಳ ಒಂದು ಉಪವರ್ಗ. ಶಾರ್ಕ್‌ಗಳನ್ನೂ ರೇಗಳನ್ನೂ ಹಾಗೂ ಸ್ಕೇಟ್‌ಗಳನ್ನೂ ಒಳಗೊಂಡಿದೆ. ಸೆಲಾಚಿ ಎಂದೂ ಕರೆಯುವುದುಂಟು. ಈ ಮೀನುಗಳು ಹೆಚ್ಚು ಕಡಿಮೆ ಯಾವಾಗಲೂ ಸಮುದ್ರವಾಸಿಗಳು. ಕೆಲವು ಚೌಳಾದ ನೀರಿನಲ್ಲಿ ನೆಲಸಿವೆ. ಕೆಲವು ಮಾತ್ರ ಸಿಹಿನೀರಿನಲ್ಲಿ ಬದುಕುತ್ತವೆ. ಈ ಉಪವರ್ಗವು ಜೀವಿಸಿರುವ ಮೀನುಗಳಲ್ಲೆದರಕ್ಕಿಂತ ದೊಡ್ಡ ಮೀನುಗಳನ್ನು ಒಳಗೊಂಡಿದೆ.

ಈ ಮೀನುಗಳಲ್ಲಿ ಕಿವಿರುಗಳು ಮತ್ತು ಕಿವಿರುರಂಧ್ರಗಳು ಐದರಿಂದ ಏಳು ಜೊತೆಗಳವರೆಗೆ ಇರುತ್ತವೆ. ಶ್ವಾಸರಂಧ್ರವಿರುವುದುಂಟು. ಪ್ಲೆಕಾಯ್ಡ್ ಹುರುಪೆಗಳಿವೆ ಅಥವ ಇರುವುದಿಲ್ಲ. ಗಂಡುಗಳು ಸಾಮಾನ್ಯವಾಗಿ ವಸ್ತಿಕುಹರದ ಆಲಿಂಗನಾಂಗ (ಕ್ಲಾಸ್ಪರ್)ಗಳನ್ನು ಪಡೆದಿವೆ. ವಾಯುಚೀಲಗಳಿಲ್ಲ. ಎಲ್ಯಾಸ್ಮೋಬ್ರಾಂಕಿಗಳ ದೇಹವು ಉದ್ದವಾಗಿದ್ದು ಸಾಮಾನ್ಯವಾಗಿ ಕದಿರಿನ ಆಕಾರದಲ್ಲಿರುತ್ತದೆ. ಎರಡು ಬೆನ್ನಿನ, ಒಂದು ಗುದದ್ವಾರದ ಹಾಗೂ ಒಂದು ಬಾಲದ ಈಜುರೆಕ್ಕೆಗಳಿವೆ. ಜೋಡಿ ಈಜುರೆಕ್ಕೆಗಳು ಚೆನ್ನಾಗಿ ಬೆಳೆದಿವೆ. ಎದೆಯ ಈಜುರೆಕ್ಕೆಗಳು ವಸ್ತಿಕುಹರದ ಈಜುರೆಕ್ಕೆಗಳಿಗಿಂತ ದೊಡ್ಡದಾಗಿವೆ. ಗಂಡುಗಳಲ್ಲಿ ಪ್ರತಿಯೊಂದು ವಸ್ತಿಕುಹರದ ಈಜುರೆಕ್ಕೆಯು ಅಂಗಾನುಬಂಧವಾದ ಆಲಿಂಗನಾಂಗವನ್ನು ಪಡೆದಿರುತ್ತದೆ. ಈ ಅಂಗವು ಬೆನ್ನಿನ ಪಾರ್ಶ್ವದಲ್ಲಿ ಒಂದು ಸಂದುಗೆರೆಯನ್ನು ಹೊಂದಿರುತ್ತದೆ. ಸಂದುಗೆರೆಯು ಅಂಗದ ತಳದಲ್ಲಿರುವ ಒಂದು ಕುಳಿಗೆ ಮಾರ್ಗದರ್ಶನ ಮಾಡುತ್ತದೆ.

ನಾಸಿಕರಂಧ್ರಗಳು ಹಾಗೂ ಬಾಯಿ ತಲೆಯ ಅಧೋಭಾಗದಲ್ಲಿವೆ. ಕೆಲವು ವೇಳೆ ನಾಸಿಕರಂಧ್ರಗಳು ಬಾಯಿಯ ಜೊತೆಯಲ್ಲಿ ಸಂಗಮವಾಗಿರುವಷ್ಟು ಬಹಳ ಹತ್ತಿರವಾಗಿವೆ. ಕ್ಲೋಯೆಕ ವಸ್ತಿಕುಹರದ ಈಜುರೆಕ್ಕೆಗಳ ಮಧ್ಯೆ ಇರುತ್ತದೆ. ಈ ಕ್ಲೋಯೆಕಕ್ಕೆ ಗುದದ್ವಾರದ, ಜನನದ ಹಾಗೂ ಮೂತ್ರನಾಳಗಳ ರಂಧ್ರಗಳು ತೆರೆಯುತ್ತವೆ. ಗುದದ್ವಾರದ ರಂಧ್ರದ ಎರಡೂ ಪಾರ್ಶ್ವಗಳಲ್ಲಿ ಒಂದೊಂದು ಉದರದ ರಂಧ್ರವಿದ್ದು ಇವು ದೇಹದ ಕುಳಿಯೊಳಕ್ಕೆ ಮಾರ್ಗದರ್ಶನ ಮಾಡುತ್ತವೆ. ಕಿವಿರುರಂಧ್ರಗಳು ದೇಹದ ಉದರದ ಮೇಲ್ಮೈ ಅಥವ ಪಾರ್ಶ್ವದಲ್ಲಿದ್ದು ಹೊರಕ್ಕೆ ನೇರವಾಗಿ ತೆರೆಯುತ್ತವೆ.

ಕಣ್ಣುಗಳು ಕಣ್ಣುರೆಪ್ಪೆಗಳನ್ನು ಪ್ರತಿನಿಧಿಸುವ ಮೇಲಿನ ಮತ್ತು ಕೆಳಗಿನ ಚರ್ಮದ ಮಡಿಕೆಗಳನ್ನು ಪಡೆದಿವೆ. ಕೆಲವು ಮೀನುಗಳಲ್ಲಿ ಕಣ್ಣಿನ ಮೇಲೆ ಎಳೆಯಲ್ಪಡುವಂಥ ಒಂದು ಮೂರನೆಯ ಒಳಕಣ್ಣು ರೆಪ್ಪೆ ಅಥವಾ ನಿಕ್ಟಿಟೇಟಿಂಗ್ ಪೊರೆಯಿರುವುದುಂಟು. ಇವುಗಳ ಚರ್ಮವು ಅಪಾರ ಸಂಖ್ಯೆಯಲ್ಲಿರುವ ಪ್ಲೆಕಾಯ್ಡ್ ಹುರುಪೆಗಳಿಂದಾಗಿ ಗಡುಸು ಹಾಗೂ ಒರಟಾಗಿದೆ. ಈ ಹುರುಪೆಗಳು ಒಂದು ಸಣ್ಣ ಮುಳ್ಳನ್ನು ಪಡೆದಿದ್ದು ದೇಹದ ಮೇಲ್ಮೈ ಮೇಲೆ ಹಿಮ್ಮುಖವಾದ ದಿಕ್ಕಿನಲ್ಲಿ ಮುಕ್ತವಾಗಿ ಹೊರಚಾಚಿವೆ.

ಎಲ್ಯಾಸ್ಮೋಬ್ರಾಂಖ್ ಅಂತಸ್ಥ ಅಸ್ಥಿಪಂಜರವು ಸಂಪೂರ್ಣವಾಗಿ ಮೃದ್ವಸ್ಥಿಯದು. ಆದರೆ ಮೃದ್ವಸ್ಥಿಯು ಪದೇ ಪದೇ ಹೆಚ್ಚು ಕಡಿಮೆ ಸುಣ್ಣೀಕರಣವಾಗಿದೆ. ಇವುಗಳಲ್ಲಿ ಸಾಮಾನ್ಯವಾಗಿ ಕಶೇರುಸ್ತಂಭವು ಆದ್ಯ ಮೃದ್ವಸ್ಥಿ ಪಟ್ಟಿಯಾಗಿರುತ್ತದೆ. ಸ್ನಾಯುವ್ಯೂಹವು

ಸಾಮಾನ್ಯವಾಗಿ ಮತ್ಸ್ಯರೀತಿಯದೇ ಆಗಿದೆ. ಮುಖ್ಯವಾದ ಪಾರ್ಶ್ವಸ್ಥ ಸ್ನಾಯುವು ಒಂದು ಬೆನ್ನಿನ ಹಾಗೂ ಉದರದ ಅರ್ಧವಾಗಿ ಭಾಗವಾಗಿದ್ದು ಇವುಗಳ ಸ್ನಾಯುಖಂಡಗಳು ವ್ಯವಸ್ಥೆಯಲ್ಲಿ ಪರ್ಯಾಯವಾಗಿವೆ. ಈ ಮೀನುಗಳಲ್ಲಿ ರೂಢಿಯಲ್ಲಿನ ಜಲಶ್ವಾಸಾಂಗದ ಹಾಗೂ ಕೆಳದವಡೆಯ ಸ್ನಾಯು ವ್ಯೂಹಗಳಿವೆ.

ಈ ಗುಂಪಿನ ಎಲ್ಲ ಮೀನುಗಳಲ್ಲಿ ಜೀರ್ಣನಾಳವು ಸಮಾನರೂಪದ್ದಾಗಿರುತ್ತದೆ. ಬಾಯಿಯು ಅಧೋಭಾಗದಲ್ಲಿದೆ. ಹಲ್ಲುಗಳು ಮಾದರಿ, ಗಾತ್ರ ಹಾಗೂ ಆಕೃತಿಗಳಲ್ಲಿ ವಿವಿಧ ರೀತಿಯವು. ಹಳೆಯ ಕಾರ್ಯನಿರತ ಹಲ್ಲುಗಳು ಸವೆದು ಹೋದಮೇಲೆ ಹೊಸ ಎಳೆಯ ಹಲ್ಲುಗಳು ಬೆಳೆಯುತ್ತವೆ. ಲಾಲಾರಸ ಗ್ರಂಥಿಗಳಿಲ್ಲ. ಹೊಟ್ಟೆಯು ಹೆಚ್ಚು ಕಡಿಮೆ 'U' ಆಕಾರದಲ್ಲಿರುತ್ತದೆ. ಕರುಳಿನಲ್ಲಿ ದೊಡ್ಡದಾದ ಒಂದು ಸುರುಳಿ ಕವಾಟವಿದೆ. ಗುದನಾಳವು ಕ್ಲೋಯೆಕಕ್ಕೆ ತೆರೆಯುತ್ತದೆ. ಇದು ಗುದನಾಳದ ರಸಗ್ರಂಥಿಯನ್ನು ಪಡೆದಿರುತ್ತದೆ. ಪಿತ್ತಜನಕಾಂಗ, ಮೇದೋಜೀರಕ ರಸಗ್ರಂಥಿ ಮತ್ತು ಗುಲ್ಮಗಳಿವೆ.




ದೇಹಾಂತರಾವಕಾಶವು ಉದರದ ರಂಧ್ರಗಳಿಂದ ಹೊರಕ್ಕೆ ತೆರೆಯಬಹುದು. ಕಿವಿರುಗಳು ಕಿವಿರುಕೋಣೆಗಳಲ್ಲಿವೆ. ಕಿವಿರು ತಂತುಗಳು ಜಲಶ್ವಾಸಾಂಗಗಳ ಮಧ್ಯದ ವಿಭಾಜಕ ಬಿತ್ತಿಗಳ ಮಡಿಕೆಗಳಂತಿರುವುದರಿಂದ ಇವುಗಳನ್ನು ಫಲಕ ಕಿವಿರುಗಳೆಂದು ಕರೆಯುತ್ತಾರೆ. ಈ ಕಾರಣದಿಂದಲೇ ಈ ಮೀನುಗಳಿಗೆ ಎಲ್ಯಾಸ್ಮೋಬ್ರಾಂಕೈಗಳೆಂದು ಹೆಸರು ಬಂದಿದೆ. ಶಾರ್ಕ್ ಹಾಗೂ ರೇಗಳಲ್ಲಿ ಒಂದು ಪ್ರಾಚೀನ ಮೊದಲನೆಯ ಜಲಶ್ವಾಸಾಂಗದ ಸೀಳಿನ ಅವಶೇಷವಾದ ಶ್ವಾಸರಂಧ್ರವಿದೆ.

ಹೃದಯವು ಏಕೈಕ ರಕ್ತಪರಿಚಲನೆಗೆ ಅನುಗುಣವಾಗಿ ರಚಿಸಲ್ಪಟ್ಟಿದೆ. ಕವಾಟಯುಕ್ತ ಸೈನಸ್ ವಿನೋಸಸ್, ಹೃತ್ಕರ್ಣ ಹಾಗೂ ಅತ್ಯಂತ ದಪ್ಪ ಭಿತ್ತಿಯ ಸ್ನಾಯುವುಳ್ಳ ಹೃತ್ಕುಕ್ಷಿಯನ್ನು ಪಡೆದಿರುತ್ತದೆ. ಇವುಗಳಲ್ಲಿ ಉದರದ ಅಯೋರ್ಟವು ಹೃತ್ಕುಕ್ಷಿಯನ್ನು ಬಿಡುವ ಸಂಧಿಯಲ್ಲಿ ಒಂದು ಸಂಕೋಚನೀಯ ಸ್ನಾಯುವುಳ್ಳ ಕವಾಟಯುಕ್ತ ಕೋನಸ್ ಆರ್ಟೀರಿಯೋಸಸ್ ಅನ್ನು ಹೊಂದಿದೆ. ಅಪಧಮನಿ ವ್ಯವಸ್ಥೆಯಲ್ಲಿನ ಅಭಿವಾಹಿ ಹಾಗೂ ಅಪವಾಹಿ ರಕ್ತನಾಳಗಳು ಇವುಗಳಲ್ಲಿನ ವಿಶೇಷ ಗುಣಲಕ್ಷಣಗಳನ್ನು ಸೂಚಿಸುತ್ತವೆ.

ಈ ಮೀನುಗಳಲ್ಲಿ ಪ್ರಧಾನ ಮಸ್ತಿಷ್ಕದ ಅರ್ಧಗೋಳಗಳು, ಉಪಮಸ್ತಿಷ್ಕ ಹಾಗೂ ಮಧ್ಯಸ್ಥ ಮೆದುಳುಗಳು ಹೆಚ್ಚು ಪ್ರಧಾನವಾಗಿವೆ. ಹತ್ತು ಜೊತೆಯ ಮೆದುಳುಕೋಶದ ನರಗಳು ಮೆದುಳಿಗೆ ಸಂಬಂಧಿಸಿವೆ. ಜೊತೆಯಾದ ಬೆನ್ನು ಮೂಳೆಯ ನರಗಳು ಬೆನ್ನುಹುರಿಯಿಂದ ಹುಟ್ಟಿ ಖಂಡಗಳ ವ್ಯವಸ್ಥೆಯಲ್ಲಿರುತ್ತವೆ. ಘ್ರಾಣೇಂದ್ರಿಯ, ಚೆನ್ನಾಗಿ ಅಭಿವೃದ್ಧಿ ಹೊಂದಿದ ಕಣ್ಣುಗಳು, ಶ್ರವಣದ ಹಾಗೂ ಸಮತೂಕದ ಅಂಗಗಳು ಮತ್ತು ಪಾರ್ಶ್ವಸ್ಥ ರೇಖಾವ್ಯೂಹವೇ ಮುಂತಾದವು ಈ ಮೀನುಗಳಲ್ಲಿರುವ ಪ್ರಮುಖ ಜ್ಞಾನೇಂದ್ರಿಯಗಳು.

ಚೆನ್ನಾಗಿ ಅಭಿವೃದ್ಧಿ ಹೊಂದಿದ ಪಿಟ್ಯುಟರಿ, ಥೈರಾಯ್ಡ್, ಥೈಮಸ್ ಮುಂತಾದ ನಿರ್ನಾಳ ರಸಗ್ರಂಥಿಗಳಿವೆ. ಜೋಡಿ ಮೂತ್ರಜನಕಾಂಗಗಳು ಉದ್ದವಾಗಿದ್ದು ಕೆಂಪು ಮಿಶ್ರಿತ ಕಂದು ಬಣ್ಣದ್ದಾಗಿರುತ್ತವೆ. ಪ್ರತಿಯೊಂದು ಮೂತ್ರಜನಕಾಂಗಕ್ಕೆ ಒಂದು ಮೂತ್ರನಾಳವಿರುತ್ತದೆ. ಎರಡೂ ಮೂತ್ರನಾಳಗಳು ಹಿಂಭಾಗದಲ್ಲಿ ಒಂದುಗೂಡಿ ಕುಹರವಾಗಿ ಮಾರ್ಪಟ್ಟು ತೆರೆಯುತ್ತವೆ.

ಪ್ರಜನನಾಂಗಗಳು ಜೋಡಿಯಾದ ಅಂಡಾಶಯ ಹಾಗೂ ವೃಷಣಗಳಾಗಿದ್ದು ದೇಹಾಂತರಾವಕಾಶದ ಬೆನ್ನಿನ ಭಿತ್ತಿಗೆ ಅನುಕ್ರಮವಾಗಿ ಮೀಸೊವೇರಿಯಮ್ ಮತ್ತು ಮೀಸಾರ್ಖಿಯಮ್ ಎಂಬ ಪೊರೆಗಳಿಂದ ತೂಗಾಡಿಸಲ್ಪಟ್ಟಿವೆ. ವಾಸ ಎಫರೆನ್ಷಿಯ, ವಿಸರ್ಜಕನಾಳ ಮತ್ತು ಸೆಮೈನಲ್ ವೆಸಿಕಲ್‌ಗಳು ಗಂಡು ಜನನಾಂಗವ್ಯೂಹದ ಇತರ ಭಾಗಗಳು. ವೀರ್ಯಾಣುಗಳು ಕ್ಲೋಯೆಕದ ಮುಖಾಂತರ ಹೊರಹಾಕಲ್ಪಡುತ್ತವೆ. ಅಂಡಗಳನ್ನು ಉತ್ಪಾದಿಸುವ ಅಂಡಾಶಯಗಳು ಉದ್ದವಾಗಿದ್ದು ಬಿಳಿಯಿಂದ ಹಸಿರು ಮೂಲಕ ಚಿನ್ನದ ಹಳದಿ ಬಣ್ಣದವರೆಗೆ ಬೆಳವಣಿಗೆಯ ಅನುಸಾರವಾಗಿ ಬದಲಾಗುತ್ತದೆ. ಹಾಗೆಯೆ ಅಂಗಾಂಶದ ರಚನೆ ಸಹ ಬದಲಾಯಿಸುತ್ತದೆ. ಅಂಡಾಶಯ ನಾಳವು ದೇಹಾಂತರಾವಕಾಶದ ಮುಂಭಾಗದಲ್ಲಿ ಒಂದು ಆಲಿಕದ್ವಾರವನ್ನು ಮುಂದಿನ ಕೊನೆಯಲ್ಲಿ ಪಡೆದಿದ್ದು, ಹಿಂಭಾಗದಲ್ಲಿ ಜನನ ರಂಧ್ರದ ಮೂಲಕ ಕ್ಲೋಯೆಕಕ್ಕೆ ತೆರೆಯುತ್ತದೆ. ಮೊಟ್ಟೆಯಿಟ್ಟು ಮರಿ ಮಾಡುವ ಶಾರ್ಕ್ ಮತ್ತು ಅವುಗಳ ಸಂಬಂಧಿಗಳಲ್ಲಿ ಅಂಡಾಶಯದ ಅಂಗಾಂಶವು ಅಂಡಾಶಯ ನಾಳದ ಮುಂಭಾಗದಲ್ಲಿ ಒಂದು ಚಿಪ್ಪು ರಸಗ್ರಂಥಿಯಾಗಿ ಮಾರ್ಪಾಟಾಗಿದೆ. ಮರಿಗಳನ್ನು ಹೆರುವ ಶಾರ್ಕ್ ಹಾಗೂ ಅವುಗಳ ಸಂಬಂಧಿಗಳಲ್ಲಿ ಅಂಡಾಶಯನಾಳವು ಹಿಂಭಾಗದಲ್ಲಿ ಮರಿಗಳನ್ನು ತಮ್ಮ ಭ್ರೂಣದ ಬೆಳವಣಿಗೆಗೋಸ್ಕರ ತಡೆದಿಡಲು ದೊಡ್ಡದಾಗಿದ್ದು ಗರ್ಭಕೋಶವಾಗಿ ರೂಪುಗೊಂಡಿದೆ. ಇವುಗಳಲ್ಲಿ ಗರ್ಭಾಂಕುರತೆಯು ಅಂತಸ್ಥವಾದುದು. ದೊಡ್ಡದಾದ ಮೊಟ್ಟೆಕೋಶಗಳು ಕಂಡುಬರುತ್ತವೆ.

ಎಲ್ಯಾಸ್ಮೋಬ್ರಾಂಕೈ ಉಪವರ್ಗವನ್ನು ಸ್ಕ್ವ್ಯಾಲಿಫಾರ್ಮಿಸ್ ಮತ್ತು ರಾಜಿಫಾರ್ಮಿಸ್ ಎಂಬ ಎರಡು ಗಣಗಳಾಗಿ ವರ್ಗೀಕರಿಸಲಾಗಿದೆ. ಸ್ಕ್ವ್ಯಾಲಿಫಾರ್ಮಿಸ್ ಗಣವು ಶಾರ್ಕ್‌ಗಳನ್ನೂ ರಾಜಿಫಾರ್ಮಿಸ್ ಗಣವು ರೇಗಳು ಹಾಗೂ ಸ್ಕೇಟ್‌ಗಳನ್ನು ಒಳಗೊಂಡಿವೆ. ***

**ಎಸಿಡಿಯೇಶಿಯ:** ಕಶೇರುಕಗಳ ವಂಶದ ಟ್ಯೂನಿಕೇಟ ಅಥವಾ ಯುರೋಕಾರ್ಡೇಟ ಉಪವಂಶದ ವರ್ಗ. ಸಮುದ್ರದ ಪಿಚಕಾರಿ ಅಥವಾ ಎಸಿಡಿಯನ್ ಎಂಬ ಪ್ರಾಣಿಗಳು ಸೇರಿವೆ. ಎಲ್ಲಾ ಸಮುದ್ರಗಳಲ್ಲೂ ಉಬ್ಬರವಿಳಿತ ವಲಯದಿಂದ ಹಿಡಿದು ಬಹಳ ಆಳದವರೆಗೆ ವಾಸಮಾಡುತ್ತವೆ. ಇವುಗಳಿಗೆ ಕಶೇರುಕಗಳ ಕೆಲವು ಲಕ್ಷಣಗಳು ಮಾತ್ರ ಉಂಟು. ತೊಂದರೆ ಉಂಟಾದಾಗ ಇವು ನೀರನ್ನು ಪಿಚಕಾರಿ ಅಥವಾ ಚುರುಕಿ ಮಾದರಿಯಲ್ಲಿ ಹೊರಸೂಸುವುದರಿಂದ ಸಮುದ್ರದ ಪಿಚಕಾರಿಗಳೆಂದು ಹೆಸರು. ಯಾವಾಗಲೂ ನಾಟಿರುವ, ಆಲೂಗೆಡ್ಡೆಯಂತಿರುವ ಮತ್ತು ಬೆಳೆಯುವ ಪ್ರಾಣಿಗಳು. ಈ ಎಸಿಡಿಯನ್‌ಗಳು ಕಲ್ಲಿನಮೇಲೂ ಸಮುದ್ರದ ಕಪ್ಪೆಚಿಪ್ಪುಗಳ ಮೇಲೂ ದೊಡ್ಡ ಏಡಿಗಳ ಬೆನ್ನಮೇಲೂ ಇರುವುದನ್ನು ಕಾಣಬಹುದು. ಕೆಲವು ಪ್ರಭೇದಗಳು ಒಂಟಿಯಾಗಿಯೂ (ಉದಾ: ಎಸಿಡಿಯೆಲ್ಲ ಎಸ್ಪರ) ಇನ್ನು ಕೆಲವು ಹಿಂಡಾಗಿಯೂ (ಉದಾ: ಡೆಂಡ್ರೋಡೊವ ಗ್ರೊಸ್ಸುಲೈನ) ಮತ್ತೆ ಕೆಲವು ಸಂಯುಕ್ತವಾಗಿಯೂ (ಉದಾ: ಚಿನ್ನದ ನಕ್ಷತ್ರ ಮೃದ್ವಂಗಿ ಬೊಟ್ರೈಲ್ಲಸ್ ಶ್ಲೋಸೆರಿ) ಜೀವಿಸುತ್ತವೆ.

ಮೈಮೇಲೆ ಟ್ಯೂನಿಕ್‌ಎಂಬ ರಕ್ಷಣಾ ಹೊದಿಕೆ ಇದೆ. ಈ ಟ್ಯೂನಿಕ್ ಟ್ಯೂನಿಸಿನ್ ಎಂಬ ಪದಾರ್ಥದಿಂದ ಮಾಡಲ್ಪಟ್ಟಿದೆ. ದೇಹದ ಮೇಲೆ ಎರಡು ರಂಧ್ರಗಳು ಉಂಟು– ಒಂದು ನೀರನ್ನು ಒಳಕ್ಕೆ ತೆಗೆದುಕೊಳ್ಳುವುದಕ್ಕೆ, ಮತ್ತೊಂದು ನೀರನ್ನು ಹೊರಕ್ಕೆ ಹಾಕುವುದಕ್ಕೆ.

ಶಾರ್ಕ್ ಮೀನು

ನೀರಿನಲ್ಲಿರುವ ಸತ್ತ ಪ್ರಾಣಿ ಮತ್ತು ಗಿಡಗಳ ಭಾಗಗಳೇ ಇವುಗಳಿಗೆ ಆಹಾರ. ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ತೆಗೆದುಕೊಳ್ಳುತ್ತವೆ. ಪ್ರತಿಯೊಂದು ಪ್ರಾಣಿಯಲ್ಲೂ ಗಂಡು ಮತ್ತು ಹೆಣ್ಣು ಸಂತಾನೋತ್ಪತ್ತಿ ಅಂಗಗಳು ಇದ್ದರೂ ಒಂದು ಪ್ರಾಣಿಯ ಮೊಟ್ಟೆಗಳು ಇನ್ನೊಂದು ಪ್ರಾಣಿಯ ವೀರ್ಯದಿಂದ ಗರ್ಭಮಾಡಿಸಲ್ಪಡುತ್ತದೆ. ಮೊಟ್ಟೆಯಿಂದ ಗೊದಮೊಟ್ಟೆಯಂತಿರುವ ಸ್ವತಂತ್ರವಾಗಿ ಈಜುವ ಮರಿಹುಳುವು ಆಚೆಬರುತ್ತದೆ. ಇದಕ್ಕೆ ತಲೆಯ ಮುಂಭಾಗದಲ್ಲಿ ಹೀರು ತಟ್ಟೆ ಇದೆ. ಈ ಮರಿಹುಳುವಿಗೆ ಕಶೇರುಕಗಳ ಲಕ್ಷಣಗಳಾದ ಬಗ್ಗಿಸಲಾಗುವ ಬೆನ್ನುಮೂಳೆ, ಬೆನ್ನಿನ ಮೇಲಿನ ಕೊಳವೆ ಆಕಾರದ ನರಹುರಿ ಮತ್ತು ಜಲ ಫುಪ್ಪುಸ (ಕಿವಿರು) ಕಂಡುಬರುತ್ತವೆ. ಈ ಮರಿಹುಳುವು ಬೆಳೆದಂತೆಲ್ಲಾ ಕಶೇರುಕಗಳ ಲಕ್ಷಣಗಳೆಲ್ಲವೂ ಮಾಯವಾಗುವುದು. ಇಂಥ ಘಟನೆಯನ್ನು ಹಿಂದಕ್ಕೆ ಚಲಿಸುವ ರೂಪ ಬದಲಾವಣೆ (ರಿಟ್ರೋಗ್ರೇಸಿವ್ ಮೆಟಮಾರ್ಫಸಿಸ್) ಎಂದು ಕರೆಯುತ್ತೇವೆ. ಅಂಕುರ (ಬಡ್)ಗಳಿಂದಲೂ ಸಂತಾನೋತ್ಪತ್ತಿ ಆಗುತ್ತದೆ. ರಕ್ತದ ವೈಶಿಷ್ಟ್ಯವೇನೆಂದರೆ ಅದರಲ್ಲಿ ಸಲ್ಫ್ಯೂರಿಕ್ ಆಮ್ಲ ಮತ್ತು ಅಪೂರ್ವವಾದ ವನೇಡಿಯಂ ಲೋಹವು ಕಂಡುಬರುತ್ತದೆ. ಬೇರೆ ಬೇರೆ ಪ್ರಭೇದಗಳಲ್ಲಿ 16ರಿಂದ 18 ಸಂಖ್ಯೆಗಳವರೆಗೆ ಕ್ರೋಮೋಸೋಮುಗಳು ಇರುತ್ತವೆ. (ಕೆ.ಆರ್.ಕೆ.)

**ಎಸ್ಟ್ರಸ್:** ಹೆಣ್ಣು ಸ್ತನಿಗಳಲ್ಲಿ ಕಾಣಬರುವ, ಪ್ರಣಯದ ಇಂಗಿತವನ್ನು ಗಂಡಿಗೆ ಲೈಂಗಿಕವರ್ತನೆಯಿಂದ ಸೂಚಿಸುವ ಹಾಗೂ ಲೈಂಗಿಕ ಕೂಡುವಿಕೆಗೆ ಗಂಡಿಗೆ ಅವಕಾಶವೀಯುವ ಎಸ್ಟ್ರಸ್ ಚಕ್ರದ ಒಂದು ಹಂತ. ವಿವಿಧ ಪ್ರಾಣಿಗಳಲ್ಲಿ, ಈ ಅವಧಿಯಲ್ಲಿ ಕಂಡುಬರುವ ಲೈಂಗಿಕ ವರ್ತನೆ ಭಿನ್ನವಾಗಿರುತ್ತದೆ. ಉದಾಹರಣೆಗೆ, ಇಲಿಗಳು ಈ ಅವಧಿಯಲ್ಲಿ ಚುರುಕಾಗಿ ಓಡಾಡುತ್ತವೆ. ಗಂಡು ಇಲಿ ಸ್ಪರ್ಶಿಸಿದಾಗ, ಹೆಣ್ಣು ಬಾಲವನ್ನು ಪಕ್ಕಕ್ಕೆ ಹೊರಳಿಸಿ, ಬೆನ್ನನ್ನು ಅರ್ಧಚಂದ್ರಾಕೃತಿಯಲ್ಲಿ ಬಾಗಿಸಿ, ಒಂದು ವಿಶಿಷ್ಟ ಭಂಗಿ (ಲೊರ್ಡೊಸಿಸ್) ಯನ್ನು ಪ್ರದರ್ಶಿಸುತ್ತದೆ. ಇದು ಲೈಂಗಿಕ ಕೂಡುವಿಕೆಗೆ ಪ್ರಶಸ್ತವಾದ ಭಂಗಿಯಾಗಿದ್ದು, ಗಂಡನ್ನು ಆಕರ್ಷಿಸುತ್ತದೆ. ಇದಲ್ಲದೆ ಕಿವಿಯನ್ನು ಅಲುಗಾಡಿಸುವುದು ಮುಂತಾದ ವರ್ತನೆಗಳನ್ನು ಪ್ರದರ್ಶಿಸುತ್ತದೆ. ಈ ಎಲ್ಲಕ್ರಿಯೆಗಳನ್ನು ಒಟ್ಟಾರೆ ಬೆದೆ ವರ್ತನೆ (ಎಸ್ಟ್ರಸ್ ಬಿಹೆವಿಯರ್) ಎಂದು ಕರೆಯಲಾಗಿದೆ. ಹಸು, ಕುದುರೆ ಮುಂತಾದ ದೊಡ್ಡಸ್ತನಿಗಳು ತಮ್ಮದೆ ವಿಶಿಷ್ಟರೀತಿಯಲ್ಲಿ ಬೆದೆಯನ್ನು ಪ್ರದರ್ಶಿಸುತ್ತವೆ. ಈ ಪ್ರಾಣಿಗಳನ್ನು ಸಾಕುವವರಿಗೆ, ಇದೊಂದು ಉಪಯುಕ್ತ ಮಾಹಿತಿ, ಏಕೆಂದರೆ, ಬೆದೆಗೆ ಬಂದ ಪ್ರಾಣಿಗಳನ್ನು ಗಂಡಿನೊಂದಿಗೆ ಸಂಧಿಸಲು ಅವಕಾಶಕೊಟ್ಟರೆ, ಅವು ಬಸಿರಾಗುತ್ತವೆ. ಬೆದೆ ವರ್ತನೆಯ ಅನಂತರ ಯೋನಿಬೆದೆ (ವಜೈನಲ್ ಎಸ್ಟ್ರಸ್), ಕಾಣಿಸಿಕೊಂಡು ಅಂಡವಿಸರ್ಜನೆಯಾಗುತ್ತದೆ. ಕಾರಣ, ವಿಸರ್ಜಿತ ಅಂಡಾಣು, ವೀರ್ಯಾಣುವಿನೊಂದಿಗೆ ಸಂಧಿಸಲು, ಅವಕಾಶವಾಗುವಂತೆ, ಇದೇ ಕಾಲದಲ್ಲಿ ಸಂಭೋಗ ನಡೆಸಲು ಪ್ರಾಣಿಗಳಿಗೆ ಸಂಕೇತಿಸುವ, ಬೆದೆ ವರ್ತನೆ ಪ್ರಾಣಿಗಳ ಪ್ರಜನನ ಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸಿ, ಅವುಗಳ ಸಂತತಿಯು ಮುಂದುವರೆಯಲು ಕಾರಣವಾಗಿದೆ. ಮನುಷ್ಯನ ವಿಕಾಸದಲ್ಲಿ ಇಂಥ ವರ್ತನೆ ಮಾಯವಾಗಿದೆ. ಬೆದೆ ವರ್ತನೆ, ಕೇಂದ್ರ ನರಮಂಡಲದಿಂದ ನಿಯಂತ್ರಿತವಾಗಿರುವ, ಲೈಂಗಿಕಹಾರ್ಮೋನುಗಳ ಪ್ರಚೋದನೆಗಳಿಗೆ ಒಳ ಪಟ್ಟಿರುವ ಕ್ರಿಯೆ. ಎಸ್ಟ್ರಸ್ ಚಕ್ರದಲ್ಲಿ ಮೊದಲ ಹಂತದಲ್ಲಿ ಸ್ರವಿಸುವ ಎಸ್ಟ್ರೋಜನ್ ಹಾರ್ಮೋನಿನ ಪ್ರಭಾವವಿರುತ್ತದೆ. ಆ ಮೇಲೆ ಪ್ರೊಜೆಸ್ಟಿರಾನ್ ಹಾರ್ಮೋನು ಹೈಪೊತೆಲಮಸ್‌ನಲ್ಲಿರುವ ಕೆಲವು ಕೋಶಗಳ ಮೇಲೆ ಪ್ರಭಾವ ಬೀರಿ ಲೈಂಗಿಕ ವರ್ತನೆಯನ್ನು ಪ್ರದರ್ಶಿಸಲು ಪ್ರಚೋದಿಸುತ್ತದೆ. (ಎಚ್.ಎನ್.ವೈ.)

**ಎಸ್ಟ್ರೋಜನ್:** ಅಂಡಾಶಯದಲ್ಲಿ ಉತ್ಪತ್ತಿಯಾಗುವ, ಹೆಣ್ಣು ಲೈಂಗಿಕ ಲಕ್ಷಣಗಳನ್ನು ನಿಯಂತ್ರಿಸುವ ಹಾಗೂ ಹೆಣ್ಣು ಪ್ರಜನನ ಕ್ರಿಯೆಯಲ್ಲಿ ಮಹತ್ವದ ಪಾತ್ರವಹಿಸುವ ಸ್ಟಿರಾಯಿಡ ಹಾರ್ಮೋನ್‌ಗಳು. ಪಕ್ವವಾದ ಅಂಡಾಶಯದ ಫಾಲಿಕಲ್‌ಗಳ ಗೋಡೆಗಳಲ್ಲಿರುವ ಥೀಕ ಇಂಟರ್ನಾ ಹಾಗೂ ಗ್ರಾನುಲೋಸ ಜೀವಕೋಶಗಳು ಈ ಹಾರ್ಮೋನ್ ಉತ್ಪಾದಿಸುತ್ತವೆ. ಇವೆಲ್ಲವೂ ಹದಿನಾರು ಕಾರ್ಬನ್ ಅಣುಗಳನ್ನು ಹೊಂದಿದ್ದು, ಒಂದು ಎರೊಮ್ಯಾಟಿಕ್ ಮತ್ತು ಫಿನಾಲಿಕ್ ಹೈಡ್ರೊಕ್ಸಿಲ್ ಗುಂಪು ಸಿ –3 ಯಲ್ಲಿದೆ. ಎಸ್ಟ್ರೋಜನ್‌ಗಳಲ್ಲಿ ಎಸ್ಟ್ರಾಡಿಯಾಲ್ –17/3, ಎಸ್ಟ್ರೋನ್ ಮತ್ತು ಎಸ್ಟ್ರಿಯೋಲ್ ಎಂಬುವು ಮುಖ್ಯವಾದವು. ಇವುಗಳಲ್ಲದೆ ಪ್ರಾಣಿಗಳ ಮೂತ್ರದಿಂದ ಇನ್ನೂ ಇದೇ ಜಾತಿಗೆ ಸೇರಿದ ಎಸ್ಟ್ರೋಜನ್‌ಗಳನ್ನು ಪ್ರತ್ಯೇಕಿಸಲಾಗಿದೆ. ಈ ಸ್ಟೀರಾಯಿಡ್‌ಗಳು ಅಂಡಾಶಯದಲ್ಲಿ ಮಾತ್ರವಲ್ಲದೆ, ವೃಷಣಗಳು, ಅಡ್ರಿನಲ್ ಗ್ರಂಥಿಗಳು ಮತ್ತು ಪ್ಲಾಸೆಂಟಗಳಲ್ಲಿಯೂ ಸ್ವಲ್ಪಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ.

ಎಸ್ಟ್ರೋಜನ್, ಗರ್ಭಾಶಯ, ಅಂಡನಾಳ ಹಾಗೂ ಯೋನಿಗಳ ಬೆಳವಣಿಗೆ ಹಾಗೂ ಕಾರ್ಯಗಳನ್ನು ನಿಯಂತ್ರಿಸುತ್ತದೆ. ಗರ್ಭಾಶಯದ ಗ್ರಂಥಿಗಳ ಬೆಳವಣಿಗೆ ಎಸ್ಟ್ರೋಜನ್‌ದಿಂದ ಪ್ರಭಾವಿತವಾಗಿದೆ. ದೇಹದಲ್ಲಿ ಎಸ್ಟ್ರೋಜನ್ ಪ್ರಮಾಣ ಕಮ್ಮಿಯಾದರೆ, ಅಥವಾ ಅಂಡಾಶಯಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದರೆ ಈ ಅಂಗಗಳು ಮುರುಟಿಹೋಗುತ್ತವೆ ಹಾಗೂ ಹೆಣ್ಣು ಲೈಂಗಿಕ ಲಕ್ಷಣಗಳು ಕಾಣದಾಗಿ, ಹೆಣ್ಣು ಲೈಂಗಿಕ ಆಸಕ್ತಿ ಕಳೆದುಕೊಳ್ಳುತ್ತದೆ. ಅಂಡಾಶಯದಲ್ಲಿ ಎಸ್ಟ್ರೋಜನ್ ಉತ್ಪಾದನೆಯು ಪಿಟ್ಯುಟರಿ ಗ್ರಂಥಿಸ್ರವಿಸುವ, ಅಂಡಾಶಯಗಳನ್ನು ಪ್ರೇರೇಪಿಸುವ ಹಾರ್ಮೋನುಗಳ (ಎಫ್‌ಎಸ್‌ಎಚ್, ಎಲ್‌ಎಚ್) ನಿಯಂತ್ರಣಕೊಳ್ಳಪಟ್ಟಿದೆ. ಈ ಹೆಣ್ಣು ಋತುಮತಿಯಾದ ಮೇಲೆ ಋತುಚಕ್ರ ನಿಲ್ಲುವವರೆಗೆ ಈ ಹಾರ್ಮೋನಿನ ಸ್ರವಿಕೆ ಇದ್ದು ಹೆಣ್ಣುತನಕ್ಕೆ ಕಾರಣವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಈ ಹಾರ್ಮೋನನ್ನು ಕೃತಕವಾಗಿ ತಯಾರಿಸಿ, ವಿವಿಧ ಚಿಕಿತ್ಸೆಗಳಿಗೆ ಉಪಯೋಗಿಸಲಾಗುತ್ತದೆ. ಉದಾಹರಣೆಗೆ ಸಂತಾನ ನಿಯಂತ್ರಣಕ್ಕಾಗಿ ಬಳಸುವ ಮಾತ್ರೆಗಳಲ್ಲಿ ಎಸ್ಟ್ರೋಜನ್ ಇರುತ್ತದೆ. ಋತುಚಕ್ರ ನಿಂತ ಮೇಲೆ ಹೆಂಗಸರಲ್ಲಾಗುವ ಬದಲಾವಣೆಗಳನ್ನು ತಡೆಯಲು ಇದನ್ನು ಬಳಸಲಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಎಸ್ಟ್ರೋಜನ್ ಗುರಿ ಕೋಶಗಳ (ಟಾರಗೆಟ್ ಸೆಲ್ಸ್) ಕ್ರಿಯೆಗಳನ್ನು ಹೇಗೆ ಪ್ರಚೋದಿಸುತ್ತದೆ ಎಂಬುದನ್ನು ಕಂಡುಹಿಡಿಯಲಾಗಿದೆ. ಎಸ್ಟ್ರೋಜನ್ ಕೋಶಪೊರೆಯನ್ನು ದಾಟಿ ಕೋಶದ ಒಳ ಆವರಣವನ್ನು, ತದನಂತರ ಕೋಶಕೇಂದ್ರದ ಆವರಣವನ್ನು ತಲುಪಿ ಅಲ್ಲಿರುವ ತನ್ನ ಗ್ರಾಹಕ (ರಿಸೆಪ್ಟರ್) ಜೊತೆ ಕೂಡಿಕೊಳ್ಳುತ್ತದೆ. ಗ್ರಾಹಕ ಹಾರ್ಮೋನ್ ಸಂಕೀರ್ಣವು, ಡಿಎನ್‌ಎ ನಲ್ಲಿ ಒಂದು ನಿರ್ದಿಷ್ಟ ಜಾಗದಲ್ಲಿ ಅಂಟಿಕೊಳ್ಳುತ್ತದೆ. ಈ ಜಾಗವು, ನ್ಯೂಕ್ಲಿಕ ಆಮ್ಲಗಳಲ್ಲಿರುವ ಸಾವಯವ ವಸ್ತುಗಳ ನಿರ್ದಿಷ್ಟ ಸರಪಣೀಯಿಂದಾಗಿದ್ದು, ಪ್ರತಿ ಸ್ಟಿರಾಯಿಡ್ ಹಾರ್ಮೋನಿಗೂ ಬೇರೆ ಬೇರೆ ನಿರ್ದಿಷ್ಟ ಜಾಗಗಳಿರುತ್ತವೆ (ಹಾರ್ಮೊನ್ ರೆಸ್ಪಾನ್ಸ್ ಎಲಿಮೆಂಟ್ಸ್). ಡಿಎನ್‌ಎ ಜೊತೆ ಸೇರಿಕೊಂಡ ಮೇಲೆ ಪ್ರೋಟೀನು ಉತ್ಪತ್ತಿಗೆ ಬೇಕಾದ ಎಮ್‌ಆರ್‌ಎನ್‌ಎ ಅಣುವಿನ ಉತ್ಪತ್ತಿಯಾಗಿ, ಅದು ಕೋಶವನ್ನು ಪ್ರವೇಶಿಸಿ, ಅಲ್ಲಿ ರೈಬೊಸೋಮ್‌ಗಳ ಸಹಯೋಗದೊಂದಿಗೆ, ಪ್ರೊಟೀನ್ ಉತ್ಪತ್ತಿ ಮಾಡುತ್ತವೆ. ಉದಾಹರಣೆಗೆ ಕೋಳಿಯಲ್ಲಿ ಒವಾಲ್ಬುಮಿನ್ ಎಂಬ ಪ್ರೊಟೀನ್ ಉತ್ಪತ್ತಿಯಾಗುತ್ತದೆ.

ಪ್ರಜನನ ಕ್ರಿಯೆಯಲ್ಲಿ ಎಸ್ಟ್ರೋಜನ್ ಪಾತ್ರ ಗಮನಾರ್ಹವಾದದ್ದು. ಇದು ಪಿಟ್ಯುಟರಿ ಗ್ರಂಥಿಯು ಸ್ರವಿಸುವ ಅಂಡಾಶಯವನ್ನು ಪ್ರಚೋದಿಸುವ ಹಾರ್ಮೋನ್ (ಎಫ್‌ಎಸ್‌ಎಚ್ ಮತ್ತು ಎಲ್‌ಎಚ್) ಗಳ ಸ್ರವಿಕೆಯನ್ನು ನಿಯಂತ್ರಿಸುತ್ತದೆ. ಋತು ಚಕ್ರದ ಮೊದಲನೇ ಮತ್ತು ಎರಡನೇ ವಾರದಲ್ಲಿ (ಮಾನವರಲ್ಲಿ) ಎಫ್‌ಎಸ್‌ಎಚ್ ಅಧಿಕ ಪ್ರಮಾಣದಲ್ಲಿದ್ದು, ಅಂಡಾಶಯದಲ್ಲಿ ಫಾಲಿಕಲ್‌ಗಳ ಬೆಳವಣಿಗೆ ಪ್ರಚೋದಿಸುತ್ತದೆ. ಇದೇ ಸಮಯದಲ್ಲಿ ಫಾಲಿಕಲ್‌ಗಳ ಬೆಳವಣಿಗೆಯಿಂದ ಎಷ್ಟ್ರೋಜನ್ ಸ್ರವಿಕೆಯು ಕೂಡ ವೃದ್ಧಿಸಿ, ಅದು ಗರಿಷ್ಟ ಮಟ್ಟ ತಲುಪಿದಾಗ, ಪಿಟ್ಯುಟರಿಯಿಂದ ಎಲ್‌ಎಚ್ ಹಾರ್ಮೋನ್ ಸ್ರವಿಕೆಗೆ ಪ್ರಚೋದಿಸುತ್ತದೆ. ಆಗ, ರಕ್ತದ ಎಲ್‌ಎಚ್ ಪ್ರಮಾಣ ಅತಿಯಾಗಿ ವೃದ್ಧಿಸಿ, ಅದು ಅಂಡಾಶಯದ ಫಾಲಿಕಲ್‌ಗಳ ಮೇಲೆ ಪ್ರಭಾವ ಬೀರಿ, ಅಂಡವಿಸರ್ಜನೆಯಾಗುತ್ತದೆ. ಋತುಮಧ್ಯ ಕಾಲದಲ್ಲಿ ಈ ಕ್ರಿಯೆ ಸಂಭವಿಸುತ್ತದೆ. ಅಂದರೇ, ಋತುಚಕ್ರದಲ್ಲಿ ಎಸ್ಟ್ರೋಜನ್ ಎಫ್‌ಎಚ್‌ಎಸ್ ಮತ್ತು ಎಲ್‌ಎಚ್ ಹಾರ್ಮೋನ್‌ಗಳ ಸ್ರವಿಕೆಯಲ್ಲಾಗುವ ವಿಪರೀತ ಬದಲಾವಣೆಗಳು, ಅಂಡಾಣುವಿನ ಬೆಳವಣಿಗೆ ಮತ್ತು ವಿಸರ್ಜನೆಗೆ ಕಾರಣವಾಗಿವೆ. ಈ ತಂತ್ರವನ್ನು ಬಳಸಿಕೊಂಡು, ಹೆಣ್ಣು ಸಂತಾನ ನಿಯಂತ್ರಣ ವಿಧಾನವನ್ನು ಬೆಳೆಸಲಾಗಿದೆ. ಸಂತಾನ ನಿಯಂತ್ರಣಕ್ಕಾಗಿ ತೆಗೆದುಕೊಳ್ಳುವ ಮಾತ್ರೆಗಳು, ಎಷ್ಟ್ರೋಜನ್ ಮತ್ತು ಪ್ರೊಜೆಸ್ಟಿರಾನ್ ಮಿಶ್ರಣಗಳಾಗಿದ್ದು, ಅವುಗಳನ್ನು ಪ್ರತಿದಿನ ಸೇವಿಸುವುದರಿಂದ ರಕ್ತದಲ್ಲಿ ಈ ಹಾರ್ಮೋನ್‌ಗಳ ಮಟ್ಟದಲ್ಲಿ ಬದಲಾವಣೆಯಾಗದೆ, ಪಿಟ್ಯುಟರಿ ಗ್ರಂಥಿಯ ಎಫ್‌ಎಸ್‌ಎಚ್ ಮತ್ತು ಎಲ್‌ಎಚ್ ಸ್ರವಿಕೆಯಲ್ಲಿಯೂ ಕೂಡ ಬದಲಾವಣೆಯಾಗದೆ, ಅಂಡವಿಸರ್ಜನೆಯಾಗುವುದಿಲ್ಲ. (ಹೆಚ್.ಎನ್.ವೈ.)

**ಎಳುಕಳಲು:** ಮಕ್ಕಳಲ್ಲಿ ಕಾಣುವ ಎಲು ಮುರುಟು ಬೆಳೆದವರಲ್ಲಿ ಕಂಡುಬಂದರೆ ಅದಕ್ಕೆ 'ಎಳುಕಳಲು' (ಆಸ್ಟಿಯೋ ಮಲೇಶಿಯಾ) ಎನ್ನುತ್ತಾರೆ. 'ಡಿ' ಜೀವಸತ್ವದ ಕೊರತೆಯಿಂದಾಗಿ ಬೆಳೆದಿರುವ ಮೂಳೆಗಳು ಬರುಬರುತ್ತ ಮೆತ್ತಗಾಗುತ್ತವೆ. ಯಾವತ್ತೂ ಬಿಸಿಲಿನಿಂದ ವಂಚನೆಗೊಂಡು ಪರದೆಯ ಹಿಂದೆ ಬದುಕುವ ಹೆಂಗಸರಲ್ಲಿ ಎಳುಕಳಲು ಹೆಚ್ಚಿಗೆ ಕಾಣಿಸುತ್ತದೆ. ಗಂಡಸರಲ್ಲಿದು ಕಡಿಮೆ. ಬಸುರಿನಲ್ಲಿ, ಮಗುವಿಗೆ ಹಾಲುಣಿಸುವಾಗ ತಾಯಿಗೆ ಸಾಕಾಗುವಷ್ಟು ಕಾಲ್ಸಿಯಂ ಸಿಗದಿದ್ದರೆ; ಸಿಕ್ಕ ಕಾಲ್ಸಿಯಂ ಪಿಂಡಗೂಸು ಹೀರಿ ಕೊಳ್ಳುವದರಿಂದಲೂ ತಾಯಿಯ ಎಲುಬುಗಳು ಮೆತ್ತಗಾಗಿ ಎಳುಕಳಲು ಅಂಕುರಿಸ ಬಹುದು. ಆಗ ಸುಣ್ಣಾಂಶ ಕಡಿಮೆ ಹೊಂದಿದ ಮೈಯ ಮೂಳೆಗಳು ಮೆತ್ತಗಾಗಿ ಸುಲಭವಾಗಿ ಮುರಿದು ಹೋಗುವುದು. ಇವರು ನೋವಿನಿಂದ ಬಳಲುವಂತಾಗುತ್ತದೆ. ಇಂತಹ ಎಳುಕಳಲನ್ನು ಡಿ ಜೀವಸತ್ವವಾದ ಕ್ಯಾಲ್ಸಿಫೆರಾಲ್ ಕೊಟ್ಟು ಉಪಚರಿಸಬೇಕು. ಇದು ಮೂಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಗರ್ಭಿಣಿ ಸ್ತ್ರೀಯರಿಗೆ ಶಿಕ್ಷಣ ಕೊಡಬೇಕು, ಸಮತೋಲನ ಆಹಾರ, ಮೀನಿನೆಣ್ಣೆ, ಹಾಲು, ತರಕಾರಿ, ಸಾಕಷ್ಟು ಉಪಯೋಗಿಸಿದರೆ ಕೊರತೆಯ ಎಳುಕಳಲು ಆಗದಂತೆ ತಡೆಗಟ್ಟಬಹುದು. ***

# ಏ

**ಏಂಜಲ್ ಮೀನು:** ಅನೇಕ ಬೇರೆ ಬೇರೆ ಮೀನು ಜಾತಿಗಳನ್ನು ಸೂಚಿಸುವ ಸಾಮಾನ್ಯ ಹೆಸರು. ಕೀಟೋಡಾಂಟಿಡೆ ಕುಟುಂಬಕ್ಕೆ ಸೇರಿದ ಅತ್ಯಂತ ರಮಣೀಯವಾದ ಈ ಮೀನುಗಳು ಉಷ್ಣವಲಯದ ಸಮುದ್ರವಾಸಿಗಳು. ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾದ ದೇಹವನ್ನುಳ್ಳ ಈ ಕುಟುಂಬದ ಮೀನುಗಳು ಸಾಧಾರಣವಾಗಿ ಉದ್ದದಲ್ಲಿ ೧೫–೨೦ ಸೆಂಮೀ ಗಿಂತ ಹೆಚ್ಚಾಗಿರುವುದಿಲ್ಲ. ಕೆಲವು ಪ್ರಭೇದಗಳು ೬೦ ಸೆಂಮೀ ನಷ್ಟು ಬೆಳೆಯಬಹುದು.

ಮತ್ಸ್ಯವಿಜ್ಞಾನಿಗಳಲ್ಲಿ ಕೆಲವರು ಕೀಟೋಡಾಂಟಿಡೆ ಕುಟುಂಬದವನ್ನು ಏಂಜಲ್ ಮೀನುಗಳೆಂದೂ ಬಟರ್ ಫ್ಲೈ (ಚಿಟ್ಟೆ) ಮೀನುಗಳೆಂದೂ ವಿಭಾಗಮಾಡುವರು. ಪೂರ್ವ ಅಪರ್‌ಕ್ಯುಲಂ ಮೂಳೆಯ ಕೆಳ ಅಂಚಿನಲ್ಲಿ ಗಟ್ಟಿಯಾದ ಮುಳ್ಳು ಇರುವುದು ಏಂಜಲ್ ಮೀನು; ಇಲ್ಲದ್ದು ಬಟರ್ ಫ್ಲೈ ಮೀನು.

ಸಿಕ್‌ಲಿಡೆ ಕುಟುಂಬಕ್ಕೆ ಸೇರಿದ್ದು ದಕ್ಷಿಣ ಅಮೆರಿಕದ ಸಿಹಿನೀರು ವಾಸಿಗಳಾದ ಮೂರು ಟೆರೋಫಿಲ್ಲಂ ಪ್ರಭೇದಗಳನ್ನು ಏಂಜಲ್ ಮೀನುಗಳೆನ್ನುತ್ತಾರೆ. ಟೆರೋಫಿಲ್ಲಂ ಈಮೆಕೈ ಒಂದು ಜನಪ್ರಿಯ ಪ್ರಭೇದ. ರಾಜಿಡೇ ಕುಟುಂಬದ ಮೃದ್ವಸ್ಥಿ ಮತ್ಸ್ಯಗಳಾದ ಸ್ಕೇಟ್ (ಸ್ಕ್ವಾಟಿನ ಸ್ಕ್ವಾಟಿನ)ಗಳನ್ನೂ ಏಂಜಲ್ ಮೀನುಗಳೆಂದು ಹೇಳುವುದಿದೆ.

ಏಂಜಲ್ ಮೀನುಗಳು ಹೆಸರೇ ಸೂಚಿಸುವಂತೆ ಅಪ್ಸರೆಯಂತೆ ಬಲು ಸುಂದರ. ವಿವಿಧ ವರ್ಣ ಮತ್ತು ಮಾಟಗಳಲ್ಲಿರುವ ಇವನ್ನು ಅನೇಕ ಮತ್ಸ್ಯಸಂಗ್ರಹಾಲಯಗಳಲ್ಲಿ ಮನೆಗಳಲ್ಲಿ, ಅಕ್ವೇರಿಯಂಗಳಲ್ಲಿ ಪ್ರೀತಿಯಿಂದ ಸಾಕುತ್ತಾರೆ. ನೋಡಿ–ಚಿಟ್ಟೆ ಮೀನುಗಳು.

***

**ಏಕತಳಿ ಸಂತಾನೋತ್ಪಾದನೆ:** ಸಾಕುಪ್ರಾಣಿಗಳ ಉತ್ಪಾದನೆಯಲ್ಲಿ, ಅಂದರೆ ಹಾಲಿನ ಉತ್ಪಾದನೆಗೆ ಬೇಕಾದ ಹಸುಗಳನ್ನು ತಯಾರು ಮಾಡುವುದರಲ್ಲಿಯೂ ಉಣ್ಣೆ ಮತ್ತು ಆಹಾರ ತಯಾರಿಕೆಗೆ ಬೇಕಾದ ಕುರಿ, ಮೇಕೆ, ಕೋಳಿ ಮತ್ತು ಹಂದಿಗಳ ಉತ್ಪಾದನೆಯಲ್ಲಿಯೂ ಬಳಕೆಯಲ್ಲಿರುವ ಮೂರು ತಳಿಯೆಬ್ಬಿಕೆ ವಿಧಾನಗಳಲ್ಲೊಂದು (ಲೈನ್ ಬ್ರೀಡಿಂಗ್). ಉಳಿದೆರಡೆಂದರೆ ಒಳತಳಿ ಸಂತಾನೋತ್ಪಾದನೆ (ಇನ್ ಬ್ರೀಡಿಂಗ್), ಅಡ್ಡತಳಿಯೆಬ್ಬಿಕೆ (ಕ್ರಾಸ್ ಬ್ರೀಡಿಂಗ್).

ತಂದೆಯನ್ನು ಮಗಳಿಗೆ ಕೂಡಿಸಿ ಬಂದ ಹೆಣ್ಣು ಸಂತತಿಯನ್ನು ಪುನಃ ಮುಂಚಿನ ಹೋರಿಗೂ (ತಂದೆಗೂ) ಅಥವಾ ತಾಯಿಯನ್ನು ಮಗನಿಗೂ ಕೂಡಿಸಿ ಅದರಲ್ಲಿ ಬಂದ ಗಂಡು ಸಂತತಿಯನ್ನು ಪುನಃ ಅದೇ ತಾಯಿಗೆ ಜೋಡಿಸಿ ತಳಿಗಳನ್ನು ಪಡೆಯುವುದೇ ಏಕತಳಿ ಸಂತಾನೋತ್ಪತ್ತಿ ವಿಧಾನ. ಗಂಡಿನಿಂದ ಬಂದ ಸಾಲನ್ನೇ ಇಟ್ಟುಕೊಂಡು ವಾಡಿಕೆಯಂತೆ ಒಂದೇ ಸಾಲಿನಲ್ಲಿ ಬಂದ ಸಂಬಂಧಿಕರೊಡನೆ ಕೂಡಿಸಿ ಸಂತತಿಯನ್ನು ವೃದ್ಧಿಪಡಿಸುವ ವ್ಯವಸ್ಥೆಯಿದು. ಇದರಲ್ಲಿ ನಮಗೆ ಬೇಕಾದ ಗುಣಗಳನ್ನು ಮುಂದಿನ ಸಂತಾನದಲ್ಲಿ ವರ್ಧಿಸಬಹುದು. ಏಕತಳಿ ಸಂತಾನೋತ್ಪತ್ತಿ ಕ್ರಮವು ಒಳತಳಿ ಸಂತಾನೋತ್ಪತ್ತಿ ಕ್ರಮವನ್ನೇ ಹೋಲುತ್ತದೆ. ಆದರೆ ಅವೆರಡಕ್ಕೂ ಮುಖ್ಯವಾದ ಒಂದು ವ್ಯತ್ಯಾಸ ಉಂಟು. ಒಳತಳಿ ಸಂತಾನೋತ್ಪತ್ತಿ ವಿಧಾನದಲ್ಲಿ ಹತ್ತಿರ ಸಂಬಂಧಿಕರೊಡನೆ ಜೋಡಿ ಮಾಡಿಸಿ ತಳಿಗಳನ್ನು ಪಡೆಯುತ್ತಾರೆ. ಉದ್ದೇಶ: ವಂಶದ ಗುಣಲಕ್ಷಣಗಳು ಮುಂದಿನ ಪೀಳಿಗೆಗೆ ಉಳಿದು ಬರಲಿ ಎಂಬುದು. ಆದರೆ ತಂದೆಯನ್ನು ಮಗಳು, ಮೊಮ್ಮಗಳಿಗೂ; ತಾಯನ್ನು ಮಗ ಮೊಮ್ಮಗನಿಗೂ; ಅಕ್ಕತಂಗಿಯರನ್ನು ಅಣ್ಣತಮ್ಮಂದಿರಿಗೂ ಜೋಡಿಮಾಡಿದಾಗ ಪೀಳಿಗೆಯ ಒಳ್ಳೆಯ ಗುಣಗಳೊಂದಿಗೆ ಬೇಡದ ಅವಗುಣಗಳ ಸಂಭವವೂ ಹೆಚ್ಚು. ಇದನ್ನು ಏಕತಳಿ ಸಂತಾನೋತ್ಪತ್ತಿ ವಿಧಾನದಲ್ಲಿ ತಡೆಗಟ್ಟಲಾಗಿದೆ. ಹೀಗೆ ಏಕತಳಿ ಸಂತಾನೋತ್ಪಾದನೆ ಒಳತಳಿ ಸಂತಾನೋತ್ಪಾದನೆಯ ಒಂದು ತರದ ವಿಶಿಷ್ಟ ವ್ಯವಸ್ಥೆ. ಈ ಕ್ರಮವನ್ನು ಯಾವಾಗಲೂ ಒಳ್ಳೆ ಜಾತಿಯ, ಶುದ್ಧವಾದ ಹಿಂಡುಗಳಲ್ಲೇ ಅನುಸರಿಸಬೇಕು. ಇಲ್ಲವಾದಲ್ಲಿ ಪೀಳಿಗೆಯ ಕೆಟ್ಟ ಗುಣಗಳು ಮುಂದಿನ ಎಲ್ಲ ತಳಿಗಳಲ್ಲೂ ಕಂಡುಬಂದು ಇಡೀ ಹಿಂಡೇ ಕೆಟ್ಟುಹೋಗಬಹುದು. ನೋಡಿ–ಅಡ್ಡತಳಿಯೆಬ್ಬಿಕೆ : ಒಳತಳಿ ಸಂತಾನೋತ್ಪಾದನೆ.

***

**ಏಕಾಣುಜೀವಿವಿಜ್ಞಾನ:** ಅತ್ಯಂತ ಕೆಳದರ್ಜೆಯ ಮತ್ತು ಒಂದೇ ಕೋಶವಿರುವ ಜೀವಿಗಳಾದ ಏಕಾಣುಜೀವಿಗಳ ಶಾಸ್ತ್ರೀಯ ಅಭ್ಯಾಸ. ಬ್ಯಾಕ್ಟೀರಿಯ, ಪ್ರೋಟೋಜೋವ, ಆಲ್ಗಿ, ಶಿಲೀಂಧ್ರಗಳೆಲ್ಲವೂ ಏಕಾಣು ಜೀವಿಗಳು. ಅವುಗಳ ಬಗ್ಗೆ ಪ್ರತ್ಯೇಕ ಲೇಖನಗಳಿವೆ. ಕೇವಲ ಬ್ಯಾಕ್ಟೀರಿಯಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದೆ. ಇದಕ್ಕೆ ಬ್ಯಾಕ್ಟೀರಿಯಾಲಜಿ ಎಂಬ ಹೆಸರಿದೆ. ಈ ವಿಜ್ಞಾನ ಶಾಖೆಗಳು ಅನೇಕ ಕ್ಷೇತ್ರಗಳಲ್ಲಿ ವ್ಯಾಪಿಸಿವೆ. ಉದಾಹರಣೆಗೆ ಕೃಷಿ ವಿಜ್ಞಾನದ ಭೂ ಏಕಾಣುಜೀವಿವಿಜ್ಞಾನ (ಸಾಯಿಲ್ ಬ್ಯಾಕ್ಟೀರಿಯಾಲಜಿ), ಕೈಗಾರಿಕಾ ಕ್ಷೇತ್ರದ ಏಕಾಣುಜೀವಿವಿಜ್ಞಾನ (ಇಂಡಸ್ಟ್ರೀಯಲ್ ಬ್ಯಾಕ್ಟೀರಿಯಾಲಜಿ), ವೈದ್ಯ ವಿಜ್ಞಾನದ ಏಕಾಣುಜೀವಿ ವಿಜ್ಞಾನ (ಮೆಡಿಕಲ್ ಬ್ಯಾಕ್ಟೀರಿಯಾಲಜಿ) ಇತ್ಯಾದಿ.

ಬ್ಯಾಕ್ಟೀರಿಯಗಳು ಒಂದೇ ಕೋಶವುಳ್ಳ ಸೂಕ್ಷ್ಮ ಜೀವಿಗಳು. ಇವು ಕಣ್ಣುಗಳಿಗೆ ಅಗೋಚರ. ಸೂಕ್ಷ್ಮದರ್ಶಕಗಳ ಮೂಲಕ ಮಾತ್ರ ಇವನ್ನು ವೀಕ್ಷಿಸಬಹುದು. ಇವುಗಳಲ್ಲಿ ಅನೇಕ ವಿಧಗಳಿವೆ. ಕೆಲವು ಮಾನವವರ್ಗಕ್ಕೆ ಉಪಕಾರಿಯಾದರೆ, ಮತ್ತೆ ಕೆಲವು ಅಪಕಾರಿಗಳು.

ಏಕಾಣುಜೀವಿಗಳು ಪ್ರಾಣಿವರ್ಗಕ್ಕೆ ಸೇರಿದವುಗಳೇ ಅಥವಾ ಸಸ್ಯವರ್ಗಕ್ಕೆ ಸೇರಿದವೆ? ಸಸ್ಯವರ್ಗಕ್ಕೆ ಸೇರಿದ ಶೈವಲ ಮತ್ತು ಶಿಲೀಂಧ್ರಗಳಿಗೂ ಪ್ರಾಣಿವರ್ಗಕ್ಕೆ ಸೇರಿದ ಪ್ರೋಟೋಜೋವಾಗಳಿಗೂ ಇವು ಮೂಲಜೀವಿಗಳೆಂದು ಪರಿಗಣಿಸಲಾಗಿದೆ. ಹೋಲಿಕೆಯಲ್ಲಿ ಶೈವಲ ಶಿಲೀಂಧ್ರಗಳಿಗೇ ಸಮೀಪ ಸಂಬಂಧ. ಆದ್ದರಿಂದ ಬ್ಯಾಕ್ಟೀರಿಯಗಳನ್ನು ಶೈಜೊಮೈಸೀಟ ಎಂಬ ದಂಡಾಣುಜೀವಿಗಳ ಗುಂಪಿನಲ್ಲಿ ಶೈವಲ ಶಿಲೀಂಧ್ರಗಳ ನಡುವೆ ತೋರಿಸಲಾಗಿದೆ.

ಪೂರ್ವೇತಿಹಾಸ : ಈ ವಿಜ್ಞಾನ ಇತ್ತೀಚಿನದೆಂದೇ ಹೇಳಬಹುದು. ಸೂಕ್ಷ್ಮದರ್ಶಕವನ್ನು ಕಂಡುಹಿಡಿದ ಅನಂತರವೇ ಬ್ಯಾಕ್ಟೀರಿಯಗಳ ಅರಿವು ನಮಗೆ ಉಂಟಾದುದು. 1592ರಲ್ಲಿ ಎಚ್. ಜಾನ್‌ಸನ್ ಸಂಯುಕ್ತ ಸೂಕ್ಷ್ಮದರ್ಶಕವನ್ನು (ಕಾಂಪೌಂಡ್ ಮೈಕ್ರೊಸ್ಕೋಪ್) ಕಂಡುಹಿಡಿದನಾದರೂ ಅದರಲ್ಲಿ ಬ್ಯಾಕ್ಟೀರಿಯಗಳಷ್ಟು ಸೂಕ್ಷ್ಮಜೀವಿಗಳನ್ನು ಕಾಣಲು ಸಾಧ್ಯವಾಗಲಿಲ್ಲ. 1659ರಲ್ಲಿ ಎ. ಕರ್ಶರ್ ಎಂಬ ವಿಜ್ಞಾನಿ ಹುಳಿಯಾದ ಹಾಲಿನಲ್ಲಿ ಹಾಗೂ ಕೊಳೆಯುತ್ತಿರುವ ಮಾಂಸದಲ್ಲಿ ಅತಿಪುಟ್ಟ ಸೂಕ್ಷ್ಮಜೀವಿಗಳನ್ನು ಕಂಡುದಾಗಿ ತಿಳಿಸಿದ. ಆದರೆ ಇವು ಏಕಾಣುಜೀವಿಗಳೆಂದು ಹೇಳಲು ಸಾಕಷ್ಟು ಆಧಾರವಿರಲಿಲ್ಲ. ಇವನ್ನು ಮೊತ್ತಮೊದಲು ನೋಡಿದವ ಪ್ರಾಯಶಃ ಎ. ಫಾನ್ ಲ್ಯುವೆನ್ ಹಾಕ್ (ಡಚ್) ಎಂದು ಊಹಿಸಬಹುದು. ಈತ ನೀರು, ಜೊಲ್ಲು ಇತ್ಯಾದಿಯಲ್ಲಿ ತಾನು ಕಂಡ ಕೆಲವು ಸಜೀವ ಸೂಕ್ಷ್ಮ ಪ್ರಾಣಿಗಳ ವರ್ಣನೆಯನ್ನು ಮಾಡಿ ಇದನ್ನು ಒಳಗೊಂಡ ಲೇಖನವನ್ನು ಲಂಡನ್ನಿನ ರಾಯಲ್ ಸೊಸೈಟಿಯ ಅವಗಾಹನೆಗೆ ಒಪ್ಪಿಸಿದ. ಏಕಾಣುಜೀವಿಗಳಲ್ಲಿ ಕೆಲವು ದೊಡ್ಡವು ಕೆಲವು ಚಿಕ್ಕವು. ಲ್ಯೂವೆನ್ ಹಾಕ್ ಕಂಡ ಜೀವಿಗಳು ದೊಡ್ಡವಿರಬೇಕು.

ಪ್ರತಿಯೊಂದು ರೋಗಕ್ಕೂ ಕಾರಣವಾದ ಒಂದು ನಿರ್ದಿಷ್ಟ ಸೂಕ್ಷ್ಮಜೀವಿ ಇದ್ದೇ ಇರುತ್ತದೆಂಬ ಸಿದ್ಧಾಂತವನ್ನು 1762ರಲ್ಲಿ ಎಂ.ಎ.ಪ್ಲೆನ್‌ಸಿಜ್ ಪ್ರತಿಪಾದಿಸಿದ. ಅಷ್ಟೆ ಅಲ್ಲದೆ ಈ ಜೀವಿಗಳು ದೇಹದಿಂದ ಹೊರಗಡೆಯೂ ಬದುಕಿ ಬೆಳೆಯಬಲ್ಲುವು ಹಾಗೂ ಇವು ಗಾಳಿಯಲ್ಲಿ ಒಂದು ಕಡೆಯಿಂದ ಮತ್ತೊಂದೆಡೆಗೆ ಹಾಯುವುವು ಎಂದೂ ಹೇಳಿದ. ಆದರೆ ಬ್ಯಾಕ್ಟೀರಿಯಗಳ ವಿಚಾರದಲ್ಲಿ ಈ ಸಮಯದಲ್ಲಿ ನಮ್ಮ ಜ್ಞಾನ ಅಷ್ಟು ಮುಂದುವರಿಯಲಿಲ್ಲ. ಆದ್ದರಿಂದ ಈ ಸಿದ್ಧಾಂತ ವಿಜ್ಞಾನಿಯ ದೂರದರ್ಶಿತ್ವವನ್ನು ಎತ್ತಿಹಿಡಿಯುತ್ತದೆಂದು ಹೇಳಬಹುದು. ಮೊತ್ತಮೊದಲು ಸಂಯುಕ್ತ ಸೂಕ್ಷ್ಮದರ್ಶಕದಲ್ಲಿ ವಸ್ತುವನ್ನು 1000 ದಷ್ಟು ದೊಡ್ಡದನ್ನಾಗಿ ಕಾಣುವಂತೆ ಅಳವಡಿಸಿದ ಖ್ಯಾತಿ ಜಿ.ಡೋಲೆಂಡ್ ಎಂಬುವನಿಗೆ ಸಲ್ಲತಕ್ಕದ್ದು (1844). ದೊಡ್ಡದೇನೋ ಆಯಿತು. ಆದರೆ ವಿವರ ಸ್ಫುಟವಾಗಲಿಲ್ಲ. 1870ರಲ್ಲಿ ಜಿ. ಎಬ್ಬೆ ಎಂಬ ವಿಜ್ಞಾನಿ ಸಂಯುಕ್ತ ಸೂಕ್ಷ್ಮದರ್ಶಕವನ್ನು ಎಲ್ಲ ವಿಧಗಳಿಂದಲೂ ಸಮರ್ಪಕವಾಗಿರುವಂತೆಯೂ ವಸ್ತುಗಳು ಸ್ಫುಟವಾಗುವಂತೆಯೂ ಅನೇಕ ಮಾರ್ಪಾಡುಗಳನ್ನು ಮಾಡಿ ಪರಿಷ್ಕರಿಸಿದ. ಈ ವೇಳೆಗೆ ತಕ್ಕ ಮಟ್ಟಿಗೆ ಬ್ಯಾಕ್ಟೀರಿಯಗಳ ಪರಿಚಯವಾಗಿತ್ತೆಂದು ಹೇಳಬಹುದು. ಜೀವರಾಶಿಯಲ್ಲಿ ಇವುಗಳ ಸ್ಥಾನ ನಿಷ್ಕರ್ಷೆಯಾಗಿತ್ತು. ಹಾಗೂ ಬ್ಯಾಕ್ಟೀರಿಯಗಳಲ್ಲೇ ವಿವಿಧ ಜಾತಿಯ ವಿಂಗಡಣೆಗೂ ಗಮನ ಕೊಡಲಾಗಿತ್ತು. ಪ್ರತಿಜಾತಿಯ ಬ್ಯಾಕ್ಟೀರಿಯಗಳಲ್ಲಿಯೂ ಆಯಾ ಜಾತಿಯ ಪೂರ್ಣಲಕ್ಷಣಗಳು ಇದ್ದುದು ವಿಂಗಡಣೆಗೆ ಸಹಾಯವಾಯಿತು. ಅವುಗಳ ಲಕ್ಷಣಗಳಲ್ಲೇ ವೈವಿಧ್ಯ ಕಂಡು ಬಂದಿದ್ದರೆ ಈ ವಿಂಗಡಣೆ ಕಷ್ಟ ಸಾಧ್ಯವಾಗುತ್ತಿತ್ತು. ಕೆಲವು ಬ್ಯಾಕ್ಟೀರಿಯಗಳ ಸಂತಾನೋತ್ಪತ್ತಿ ಬೀಜಕೋಶಗಳಿಂದ (ಸ್ಪೋರ್ ಫಾರ್ಮೆಶನ್) ಎಂಬುದನ್ನು 1857ರಲ್ಲಿ ಕಾನ್ ಕಂಡುಹಿಡಿದ. ಅದೇ ವರ್ಷದಲ್ಲಿ ಬ್ಯಾಕ್ಟೀರಿಯಗಳ ಅಧ್ಯಯನ, ಸಂಶೋಧನೆಗಳಿಗೆ ಹೆಸರಾಂತ ಲೂಯಿ

ಪಾಶ್ಚರ್ ಹಾಲು ಹುಳಿಯಾಗುವುದು, ಯೂರಿಯ ಲವಣ ಹುದುಗಿನಿಂದ ಅಮೋನಿಯ ಉತ್ಪಾದನೆಯಾಗುವುದೂ ಬ್ಯಾಕ್ಟೀರಿಯಗಳ ಚಟುವಟಿಕೆಯಿಂದ ಎಂದು ಶ್ರುತಪಡಿಸಿದ (1802). ವಸ್ತುಗಳು ಕೊಳೆತು ನಾರುವುದೂ ಇವುಗಳ ಕ್ರಿಯೆಯಿಂದಲೇ ಎಂಬುದೂ ತಿಳಿಯಿತು.

ಬ್ಯಾಕ್ಟೀರಿಯಗಳಿಗೆ ಕೆಲವು ವರ್ಣದ್ರವ್ಯಗಳೊಂದಿಗೆ ಸಂಪರ್ಕ ಕಲ್ಪಿಸಿ ಕೆಲವು ವಿಶಿಷ್ಟ ರೀತಿಯ ಕ್ರಮಗಳನ್ನನುಸರಿಸಿ ಅವು ಬಣ್ಣ ಹೀರುವಂತೆ ಮಾಡಿ ಬಣ್ಣ ಕಟ್ಟುವ ಮರ್ಮವನ್ನು ವೈಗರ್ಟ್ ಎಂಬಾತ ಕಂಡುಹಿಡಿದ. ವಿವಿಧ ವರ್ಣದ್ರವ್ಯಗಳನ್ನು ಹೀರುವ ಲಕ್ಷಣಗಳಿಂದ ಆಯಾ ಬ್ಯಾಕ್ಟೀರಿಯಗಳನ್ನು ಸುಲಭವಾಗಿ ಪತ್ತೆಹಚ್ಚುವುದಕ್ಕೆ ಸಾಧ್ಯವಾಯಿತಲ್ಲದೆ ಅವುಗಳ ವಿಂಗಡಣೆಯೂ ಸಾಧ್ಯವಾಯಿತು. ಪ್ರಖ್ಯಾತ ವಿಜ್ಞಾನಿ ರಾಬರ್ಟ್ ಕಾಕ್, ವಿವಿಧ ಬ್ಯಾಕ್ಟೀರಿಯಗಳನ್ನು ಸಂಶೋಧನಾಲಯದಲ್ಲಿ ಬೆಳೆಸಿ, ಬೇಕಾದುದನ್ನು ಪ್ರತ್ಯೇಕವಾಗಿ ವಿಂಗಡಿಸಿ ಬೆರಕೆಯಿಲ್ಲದೆ ಪಡೆಯುವ ವಿಧಾನ ಕಂಡುಹಿಡಿದ. ಅಗಾರ್ (ಸಾಗರದಲ್ಲಿ ಕಂಡುಬರುವ ಒಂದು ಬಗೆಯ ಆಲ್ಗಾ ಸಸ್ಯಗಳಿಂದ ಬೇರ್ಪಡಿಸಿದ ವಸ್ತು) ಉಪಯೋಗಿಸಿಕೊಂಡು ಅದಕ್ಕೆ ಬ್ಯಾಕ್ಟೀರಿಯ ಬೆಳೆಯಲು ಹಿತಕರವಾದ ಆಹಾರ ಸತ್ತ್ವಗಳನ್ನು ಸೇರಿಸಿ ಅವು ಬೆಳೆಯುವಂತೆ ಅಳವಡಿಸಿಕೊಂಡ.

ಇದೇ ಸಮಯದಲ್ಲಿ ಪಾಶ್ಚರ್ ತನ್ನ ಸಂಶೋಧನೆಗಳಿಂದ ಕೋಳಿಗಳ ಕಾಲರಾ ರೋಗ ಹಾಗೂ ಪ್ರಾಣಿಗಳ ಆಂಥ್ರಾಕ್ಸ್ ರೋಗಗಳಿಂದ ಪ್ರತಿಬಂಧಕ ಚುಚ್ಚುಮದ್ದುಗಳನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾದ. ರೋಗಗಳನ್ನು ಉಂಟುಮಾಡುವ ಜೀವಿಗಳನ್ನು ಸಂಶೋಧನಾಲಯದಲ್ಲಿ ಬೆಳೆಸಿ ಮೊದಲ ಪೀಳಿಗೆಯ ಜೀವಿಗಳಿಂದ ಎರಡನೆಯದು, ಎರಡನೆಯ ಪೀಳಿಗೆಯಿಂದ ಮೂರನೆಯದು ಹೀಗೆ ಕ್ರಮವಾಗಿ ಪೀಳಿಗೆಯಿಂದ ಪೀಳಿಗೆಯನ್ನು ಬೆಳೆಸುತ್ತ ಬಂದಾಗ ಕೊನೆಯ ಪೀಳಿಗೆಗಳು ಕೊನೆಕೊನೆ ಆಯಾ ಪ್ರಾಣಿಗಳ ದೇಹಕ್ಕೆ ಸೋಂಕು ಅಂಟಿಸಿದಾಗ ಅವು ರೋಗಪ್ರಚೋದಕ ಶಕ್ತಿಯನ್ನು ಕಳೆದುಕೊಂಡದ್ದು ಕಂಡುಬಂತು. ಈ ನಿಶ್ಚೇತನ ಜೀವಿಗಳನ್ನು ದೇಹಕ್ಕೆ ಅಂಟಿಸಿದ ಕೆಲವು ದಿವಸಗಳ ತರುವಾಯ ರೋಗ ಪ್ರಚೋದಕ ಬ್ಯಾಕ್ಟೀರಿಯಗಳಿಂದ ಸೋಂಕು ಅಂಟಿಸಿದಾಗ ಪ್ರಾಣಿಗಳಿಗೆ ರೋಗ ತಗುಲಲಿಲ್ಲ. ಅವು ಆಗ ರೋಗನಿರೋಧಕ ಶಕ್ತಿಯನ್ನು ಪಡೆದಿದ್ದವು. ಇದರಿಂದ ಮುಂದೆ ಮಾನವ ಕುಲವನ್ನೇ ಪೀಡಿಸುತ್ತಿದ್ದ ಅನೇಕ ಭೀಕರ ಸೋಂಕು ಜಾಡ್ಯಗಳಿಗೆ ನಿರೋಧಶಕ್ತಿಯನ್ನು ಪ್ರಚೋದಿಸುವ ನಿರೋಧಕಗಳನ್ನು ಕಂಡುಹಿಡಿಯಲು ಸಾಧ್ಯವಾಯಿತು.

ಇಲ್ಲಿಂದ ಮುಂದೆ ಬ್ಯಾಕ್ಟೀರಿಯಗಳ ಬಗ್ಗೆ ಅರಿವು ಅದ್ಭುತವಾಗಿ ಬೆಳೆಯುತ್ತ ಬಂದಿದೆ. ಮಾನವಕುಲದಲ್ಲಿ, ಪ್ರಾಣಿಗಳಲ್ಲಿ ಹಾಗೂ ಸಸ್ಯಗಳಲ್ಲಿ ಕಂಡುಬರುವ ಅನೇಕ ರೋಗಗಳಿಗೆ ವಿವಿಧ ಬ್ಯಾಕ್ಟೀರಿಯಗಳೇ ಕಾರಣವೆಂಬುದೂ ತಿಳಿಯಿತು. ಅನೇಕ ಮೂಢನಂಬಿಕೆಗಳೂ ಮಾಯವಾದವು. ಬ್ಯಾಕ್ಟೀರಿಯಗಳೆಲ್ಲ ಒಂದಲ್ಲ ಒಂದು ರೋಗಕ್ಕೆ ಕಾರಣವೆಂಬ ನಂಬಿಕೆಗೆ ಬುಡವಿಲ್ಲವೆಂದೂ ಮಾನವಕೋಟಿಗೆ ಮಹತ್ತರವಾದ ಉಪಕಾರ ಮಾಡುವ ಹಾಗೂ ಕೃಷಿ, ಕೈಗಾರಿಕೆ ಮತ್ತಿತರ ಕ್ಷೇತ್ರಗಳಲ್ಲಿಯೂ ಉಪಯೋಗಕರವಾದ ಬ್ಯಾಕ್ಟೀರಿಯ ಹೇರಳವಾಗಿವೆ ಎಂಬುದೂ ಅರಿವಾಯಿತು.

ಇಪ್ಪತ್ತನೆಯ ಶತಮಾನದಿಂದೀಚೆಗೆ ಅನೇಕ ಹೊಸ ವಿಷಯಗಳು ಸಂಶೋಧನಾಲಯಗಳಲ್ಲಿನ ಪ್ರಯೋಗಗಳಿಂದ ಹೊರಬಿದ್ದಿವೆ, ಹೊರ ಬೀಳುತ್ತಲೂ ಇವೆ. ಬ್ಯಾಕ್ಟೀರಿಯಗಳ ವಿಚಾರದಲ್ಲಿ ನಮ್ಮ ಜ್ಞಾನ ಅತ್ಯಂತ ಉನ್ನತಮಟ್ಟದಲ್ಲಿದೆ ಎಂದು ಹೇಳಬಹುದಾದರೂ ಇನ್ನೂ ಎಷ್ಟೋ ವಿಷಯಗಳು ತಿಳಿಯಬೇಕಿದೆ. ಈ ದಿಸೆಯಲ್ಲಿ ಇನ್ನೂ ಸಂಶೋಧನೆಗಳು ನಡೆಯುತ್ತಲೇ ಇವೆ. (ಬ್ಯಾಕ್ಟೀರಿಯಗಳ ರಚನೆ: ನೋಡಿ – ಬ್ಯಾಕ್ಟೀರಿಯ)

ಇತರ ಮೂಲ ಜೀವಿಗಳೊಂದಿಗೆ ಬ್ಯಾಕ್ಟೀರಿಯಗಳ ಸ್ಥಾನ: ಇವು ಮೂಲಸಸ್ಯಗಳನ್ನು ಹೋಲುತ್ತವೆ. ಉದಾಹರಣೆಗೆ, ನೀಲಪಚ್ಚೆ ಪಾಚಿ ಮತ್ತು ಶಿಲೀಂಧ್ರಗಳಿಗೂ ಇವಕ್ಕೂ ಅನೇಕ ಹೋಲಿಕೆಗಳಿವೆ. ಆದ್ದರಿಂದಲೇ ಬ್ಯಾಕ್ಟೀರಿಯಗಳನ್ನು ಸಸ್ಯವರ್ಗದಲ್ಲಿ ಸೇರಿಸಲಾಗಿದೆ. ಅಮೀಬ, ಪ್ಯಾರಾಮೀಶಿಯಂ, ಪ್ಲಾಸ್ಮೋಡಿಯಂಗಳು (ಮಲೇರಿಯಾಕಾರಕ) ಮುಂತಾದ ಏಕಕೋಶ ಜೀವಿಗಳನ್ನೂ ಇವು ಹೋಲುವುದಿಲ್ಲ.

ಬ್ಯಾಕ್ಟೀರಿಯಗಳ ವರ್ಗೀಕರಣ: ಕೆಲವು ವಿಶಿಷ್ಟ ಲಕ್ಷಣಗಳನ್ನು ಉಪಯೋಗಿಸಿಕೊಂಡು ವರ್ಗೀಕರಿಸಲಾಗಿದೆ. ಅವು ಹೀಗಿವೆ: 1 ಆಕೃತಿ ರಚನೆ (ಮಾರ್ಫಾಲಜಿ), 2 ಜೀವವಸ್ತುಕರಣ (ಮೆಟಬಾಲಿಸಂ), 3 ಹುದುಗು ಮತ್ತು ಅದರ ಅಂತಿಮ ಉತ್ಪನ್ನ, 4 ಸಸಾರಜನಕ ಪರಿವರ್ತನೆ, 5 ಸಂತಾನವೃದ್ಧಿಗೆ ಅವಶ್ಯಕವಾಗಿ ಒದಗಿಸಬೇಕಾದ ಕೃತಕ ಆಹಾರಸತ್ತ್ವಾಂಶಗಳು, 6 ಸೋಂಕು ಪ್ರಾಣಿಗಳಿಗೆ ಅಂಟಿಸಿದಲ್ಲಿ ಅವುಗಳ ಮೇಲಾಗುವ ಪರಿಣಾಮ ಮತ್ತು ನಿರೋಧಶಕ್ತಿ.

ತಮ್ಮ ನಿತ್ಯಕರ್ಮಗಳನ್ನೆಸಗಲು ಜೀವಿಗಳಿಗೆ ಶಕ್ತಿ ಅವಶ್ಯಕ. ಬ್ಯಾಕ್ಟೀರಿಯ ಅನೇಕ ವಿಧಗಳಲ್ಲಿ ಶಕ್ತಿಯನ್ನು ಒದಗಿಸಿಕೊಳ್ಳುತ್ತವೆ. ಇವುಗಳಿಗೂ ಕೆಲವು ಕಿಣ್ವಗಳಿಗೂ (ಎಂಜೈಮುಗಳು) ನಿಕಟ ಸಂಬಂಧವಿರುವುದು ತಿಳಿದಿದೆ. ಇವನ್ನು ಉಪಯೋಗಿಸಿಕೊಂಡು ಬೇಕಾದ ಸಸಾರಜನಕ, ಪಿಷ್ಟ ಮತ್ತಿತರ ಜೈವಿಕ ವಸ್ತುಗಳ (ಆರ್ಗ್ಯಾನಿಕ್ ಮ್ಯಾಟರ್) ವಿಭಜನೆಯಿಂದ ಅವುಗಳನ್ನು ಮೂಲ ಅಂಶಗಳಿಗೆ ಪರಿವರ್ತಿಸಿಕೊಂಡು ತಮ್ಮ ಶಕ್ತಿ ಸಂಪಾದನೆ ಮಾಡಿಕೊಳ್ಳುತ್ತವೆ. ಕೆಲವು ಬ್ಯಾಕ್ಟೀರಿಯಗಳಿಗೆ ಈ ರೀತಿ ಶಕ್ತಿಯನ್ನು ಪಡೆಯುವುದು ಅಸಾಧ್ಯ. ಅಂಥವು ಸರಳವಾದ ಆಹಾರವಸ್ತುಗಳು ಎಂದರೆ ಸಕ್ಕರೆ, ಜೈವಿಕಾಮ್ಲ (ಆರ್ಗ್ಯಾನಿಕ್ ಆಸಿಡ್), ಆಮೈನೋ ಆಮ್ಲ ಮತ್ತು ಮದ್ಯಸಾರ ಇತ್ಯಾದಿ ಅಂಶಗಳು ತಮ್ಮ ಕೋಶಪೊರೆಯನ್ನು ಒಳಹೊಕ್ಕು ಬಂದಾಗ ಅವನ್ನು ಪರಿವರ್ತಿಸಿಕೊಂಡು ಅವಶ್ಯಕವಾದ ಆಹಾರಾಂಶಗಳಿಂದ ಶಕ್ತಿಯನ್ನು ಪಡೆಯುತ್ತವೆ. ಮತ್ತೆ ಕೆಲವು ಕೇವಲ ಅಜೈವಿಕ (ಇನಾರ್ಗ್ಯಾನಿಕ್) ವಸ್ತುಗಳಿಂದ ಶಕ್ತಿ ಪಡೆಯುತ್ತವೆ. ಅಮೋನಿಯ, ಗಂಧಕ, ಹೈಡ್ರೊಜನ್ ಸಲ್ಫೈಡ್ ಇತ್ಯಾದಿ ಲವಣಗಳನ್ನು ಉತ್ಕರ್ಷಣ ಕ್ರಿಯೆಯಿಂದಲೂ ತಮ್ಮ ಸಂತಾನೋತ್ಪತ್ತಿಗೆ ಬೇಕಾಗುವ (ಹೊಸ ಕೋಶವನ್ನು ರೂಪಿಸಿಕೊಳ್ಳಲು) ಸಸಾರಜನಕ ಅಂಶಗಳನ್ನು ಅಮೋನಿಯ ಮತ್ತು ಇಂಗಾಲಾಮ್ಲಗಳಿಂದಲೂ ಪಡೆಯುತ್ತವೆ. ಅಂದರೆ ಕೆಲವು ಬ್ಯಾಕ್ಟೀರಿಯ ಜೈವಿಕ ವಸ್ತುಗಳ ಪರಿವರ್ತನೆಯಿಂದ ಮತ್ತೆ ಕೆಲವು ಅಜೈವಿಕ ವಸ್ತುಗಳ ಪರಿವರ್ತನೆಯಿಂದ ತಮ್ಮ ಜೀವಪೋಷಣೆಗೆ ಅತ್ಯಾವಶ್ಯಕವಾದ ಆಹಾರ ಶಕ್ತಿಯನ್ನು ಒದಗಿಸಿಕೊಳ್ಳುತ್ತವೆ. ಜೈವಿಕ ವಸ್ತುಗಳ ಉಪಯೋಗದಿಂದಲೇ ಜೀವಿಸುವ ಬ್ಯಾಕ್ಟೀರಿಯಗಳಿಗೆ ಸ್ವಪೋಷಿತಗಳೆಂದೂ (ಆಟೊಟ್ರೊಫಿಕ್) ಅಜೈವಿಕ ವಸ್ತುಗಳ ಪರಿವರ್ತನೆಯಿಂದ ಜೀವಿಸುವಂಥವುಗಳಿಗೆ ಅನ್ಯಪೋಷಿತಗಳೆಂದೂ (ಹೆಟಿರೊಟ್ರೊಫಿಕ್) ಹೆಸರು. ಆದರೆ ಈ ವಿಂಗಡಣೆ ಅಷ್ಟು ಕಟ್ಟುನಿಟ್ಟಲ್ಲ. ಸ್ವಪೋಷಿತ ಜೀವಿಗಳು ಕೆಲವು ಸಂದರ್ಭಗಳಲ್ಲಿ ಅನ್ಯಪೋಷಿತಗಳಾಗಿಯೂ ಅನ್ಯಪೋಷಿತಗಳು ಸ್ವಪೋಷಿತಗಳಾಗಿಯೂ ಮಾರ್ಪಾಡಾಗಬಹುದು.

ಕೆಲವು ಬ್ಯಾಕ್ಟೀರಿಯಗಳು ಮತ್ತೊಂದು ವಿಧದಲ್ಲೂ ಆಹಾರಾಂಶಗಳನ್ನು ಪಡೆದು ಶಕ್ತಿ ಉತ್ಪಾದನೆ ಮಾಡಿಕೊಳ್ಳುತ್ತವೆ. ಸಸ್ಯಗಳು ತಮ್ಮ ಕೋಶಗಳಲ್ಲಿರುವ ಪತ್ರಹರಿತ್ತುವಿನಿಂದ ಸೂರ್ಯರಶ್ಮಿಯನ್ನು ಉಪಯೋಗಿಸಿಕೊಂಡು ದ್ಯುತಿಸಂಶ್ಲೇಷಣ (ಫೋಟೋಸಿಂಥೆಸಿಸ್) ಕ್ರಿಯೆಯಿಂದ ಆಹಾರಾಂಶ ಪಡೆಯುವಂತೆ ಇವು ತಮ್ಮ ಕೋಶದಲ್ಲಿರುವ ಪತ್ರಹರಿತ್ತುವಿನಿಂದ ಆಹಾರ ಶಕ್ತಿ ರೂಪಿಸಿಕೊಳ್ಳುತ್ತವೆ.

ಬ್ಯಾಕ್ಟೀರಿಯಗಳ ಸಂತಾನವೃದ್ಧಿ : ವಿಭಜನೆ, ಅಂಕುರತೆ (ಬಡ್ಡಿಂಗ್) ಅಥವಾ ಬೀಜಕೋಶಗಳ ಉತ್ಪತ್ತಿಯಿಂದ (ಸ್ಪೋರ್ ಫಾರ್ಮೆಷನ್) ಕೂಡಿದ ಸಂತಾನಾಭಿವೃದ್ಧಿಯಾಗುತ್ತದೆ. ಲೈಂಗಿಕ ಪ್ರವೃತ್ತಿಯೂ ಉಂಟು.

ವಿಭಜನೆ: ತಾಯಿಕೋಶ ವಿಭಜನೆಯಾಗುವ ಮುನ್ನ, ಕೋಶದ್ರವ್ಯ ವಿಸ್ತರಿಸಿ ಗಾತ್ರ ದೊಡ್ಡದಾಗುತ್ತದೆ. ಮೊದಲಿನ ಅಗತ್ಯಕ್ಕಿಂತ ಸುಮಾರು ಎರಡರಷ್ಟಾದಾಗ ಕೋಶದ ನಡುವೆ ಸಂಕುಚಿತವಾಗಿ ಎರಡು ಭಾಗವಾಗಲು ಪ್ರಾರಂಭಿಸಿ ಬರು ಬರುತ್ತ ಮಧ್ಯೆ ಗೋಡೆ ಅಡ್ಡಲಾಗಿ ಹಾಯ್ದು ಬಂದು ಇಬ್ಭಾಗವಾಗುತ್ತದೆ. ಬೆಳವಣಿಗೆಗೆ ಅನುಕೂಲ ವಾತಾವರಣವಿದ್ದಲ್ಲಿ ಸಂತಾನವೃದ್ಧಿ ಅತ್ಯಂತ ಭರದಿಂದ ಸಾಗುತ್ತದೆ. ಒಂದು ಎರಡಾಗಲು ಕೇವಲ 20–30 ನಿಮಿಷ ಸಾಕು. ಇದು ಎಷ್ಟು ದೊಡ್ಡ ಪ್ರಮಾಣದ್ದೆಂದು ಊಹಿಸುವುದೂ ಕಷ್ಟ. ಉದಾ: ಒಂದು ಬ್ಯಾಕ್ಟೀರಿಯ 30 ನಿಮಿಷದಲ್ಲಿ ವಿಭಜನೆಯಾಗುತ್ತದೆ ಎಂದು ಭಾವಿಸಿದರೆ, ಒಂದು ಗಂಟೆಯಲ್ಲಿ 4 ಕೋಶಗಳಾಗುತ್ತವೆ. ಒಂದೂವರೆ ಗಂಟೆಯಲ್ಲಿ 8, ಎರಡು ಗಂಟೆಯಲ್ಲಿ 16, ಹೀಗೆ ಜ್ಯಾಮಿತೀಯ ವೇಗದಲ್ಲಿ ಬೆಳೆಯುತ್ತದೆ. ಹತ್ತು ಗಂಟೆಯಲ್ಲಿ ಒಂದು ಮಿಲಿಯ ಕೋಶಗಳಾಗುತ್ತವೆ. 24 ಗಂಟೆಗಳ ತರುವಾಯ $1 \times 2^{48}$ ಕೋಶಗಳಿರುವುವು. ಈ ಕೋಶ ಸಮೂಹವನ್ನು ಬರಿಗಣ್ಣಿಂದ ನೋಡಬಹುದು. ಕಣ್ಣಿಗೆ ಗೋಚರವಾಗುವಷ್ಟು ದೊಡ್ಡ ಸಮೂಹಕ್ಕೆ ಏಕಾಣುಜೀವಿಗಳ ವಸಾಹತು (ಕಾಲನಿ) ಎಂದು ಹೆಸರು. ಬೆಳೆಸಿದರೆ ಒಂದೇ ರಾತ್ರಿಯಲ್ಲಿ ಈ ಭಯಂಕರ ಉತ್ಪಾದನೆ ಕಾಣುವುದೇನೂ ಅತಿಶಯವಲ್ಲ. ಆದರೆ ಅದೃಷ್ಟವಶಾತ್ ಪ್ರಕೃತಿಯಲ್ಲಿ ಈ ರೀತಿಯ ಅನಿಯಮಿತ ಉತ್ಪತ್ತಿಗೆ ಅನೇಕ ಅಡಚಣೆಗಳುಂಟು. ಸಂಶೋಧನಾಲಯಗಳಲ್ಲಿ ಅವುಗಳ ಬೆಳವಣಿಗೆಗೆ ತಕ್ಕ ವಾತಾವರಣವನ್ನು ಕಲ್ಪಿಸಿ ಬೇಕಾದ ಆಹಾರ ಸತ್ತ್ವಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಿದರೆ ಮಾತ್ರ ಈ ರೀತಿ ಭಾರಿ ಪ್ರಮಾಣದ ಉತ್ಪಾದನೆ ಸಾಧ್ಯ. ಉತ್ಪಾದನೆಯ ಸಮಯದಲ್ಲಿ ಉದ್ಭವಿಸುವ ಅನೇಕ ಸ್ಥಿತಿಗತಿಗಳು ಮತ್ತು ಆಮ್ಲಗಳು ಉತ್ಪತ್ತಿ ನಿರೋಧಕಗಳಾಗಿ ಪರಿಣಮಿಸಿ ಜೀವಿಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ.

ಅಂಕುರತೆಯಿಂದ ಸಂತಾನೋತ್ಪತ್ತಿ (ಬಡ್ಡಿಂಗ್) : ಇದ್ದಕ್ಕಿದ್ದಂತೆ ಬ್ಯಾಕ್ಟೀರಿಯ ಒಂದು ಕಡೆಯಲ್ಲಿ ಒಂದು ಮೊಗ್ಗನ್ನು (ಅಂಕುರ) ಸೃಷ್ಟಿಸುತ್ತದೆ. ಇದರಿಂದ ಒಂದಾದ

ಮೇಲೊಂದು ಬಂದು, ಒಂದೊಂದಾಗಿ ತಾಯಿಯಿಂದ ಬೇರೆಯಾಗಿ ತಾನೇ ಸ್ವತಂತ್ರ ಜೀವಿಯಾಗುತ್ತದೆ. ಈ ಅಂಕುರಗಳಿಗೆ ಕೊನಿಡಿಯ ಎಂಬ ಹೆಸರೂ ಉಂಟು.

ಬೀಜಕೋಶ ಉತ್ಪತ್ತಿ (ಸ್ಪೋರ್ ಫಾರ್ಮೇಶನ್): ಕೆಲವು ದಂಡಾಣುಜೀವಿಗಳು (ಬ್ಯಾಸಿಲೈ) ಬೀಜಕೋಶ ಅಥವಾ ಬೀಜಕಣಗಳನ್ನು ಉತ್ಪತ್ತಿಮಾಡಿ ವೃದ್ಧಿಗೊಳ್ಳುತ್ತವೆ. ಬೀಜಕಣ ತಾಯಿಕೋಶದಲ್ಲೇ ರೂಪಗೊಳ್ಳುತ್ತದೆ. ಆದ್ದರಿಂದ ಇದನ್ನು ಅಂತರ್ಬೀಜಕಣ (ಎಂಡೊಸ್ಪೋರ್) ಎಂದು ಕರೆಯುವುದು ವಾಡಿಕೆ. ಎಂದಿನಂತೆ ವಿಭಜನೆಯಾಗಿ ವೃದ್ಧಿಹೊಂದಲು ಅಡಚಣೆಗಳಿದ್ದರೆ ಆ ಸಂದರ್ಭಗಳಲ್ಲಿ ಮಾತ್ರ ತಾಯಿ ಬ್ಯಾಕ್ಟೀರಿಯ ಬೀಜಕಣವಾಗಿ ಮಾರ್ಪಾಡಾಗಿ ಪುನಃ ಸ್ಥಿತಿಗತಿಗಳು ಉತ್ತಮಗೊಂಡಾಗ ಬೀಜಕಣ ಬ್ಯಾಕ್ಟೀರಿಯ ಆಗಿ ರೂಪಗೊಳ್ಳುತ್ತದೆ. ಅಂದರೆ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾದಾಗಲೆಲ್ಲ ಬೀಜಕಣವಾಗುತ್ತದೆ.

ಬೀಜಕಣ ರೂಪಗೊಳ್ಳುವುದನ್ನು ಸೂಕ್ಷ್ಮದರ್ಶಕದಲ್ಲಿ ಗಮನಿಸಬಹುದು. ಮೊತ್ತಮೊದಲು ಕೋಶದ್ರವ್ಯದಲ್ಲಿ ಒಂದು ಬೆಳಕಿನ ಬಿಂದು ಕಾಣಿಸಿಕೊಳ್ಳುತ್ತದೆ. ಇದು ಬರಬರುತ್ತ ದೊಡ್ಡದಾಗಿ ದುಂಡಗೆ ಅಥವಾ ಅಂಡಾಕಾರವಾಗಿ ಕಾಣಿಸಿ ದಪ್ಪ ಆವರಣವನ್ನು ಕಲ್ಪಿಸಿಕೊಳ್ಳುತ್ತದೆ. ಇದೇ ಬೀಜಕಣ. ಈ ಬದಲಾವಣೆಗೆ ಅನೇಕ ಗಂಟೆಗಳು ಹಿಡಿಯಬಹುದು. ಒಂದು ಬ್ಯಾಕ್ಟೀರಿಯದಿಂದ ಒಂದೇ ಬೀಜಕಣವಾಗಬಲ್ಲುದು. ಪುನಃ ಬೀಜಕಣ ಮೊಳಕೆಯಾದಾಗ ಅದರಿಂದ ಒಂದೇ ಬ್ಯಾಕ್ಟೀರಿಯ ಆಗಲು ಮಾತ್ರ ಸಾಧ್ಯ. ಬೀಜಕಣವಾಗಿ ಪರಿವರ್ತನೆ ಹೊಂದುವುದು ಇವುಗಳ ಸಹಜ ವರ್ತನೆಯಲ್ಲ.

ಉಷ್ಣತೆ ಅಧಿಕವಾದರೆ, ನೀರು ಇಂಗಿದರೆ, ಸೂರ್ಯನ ಬೆಳಕು ತೀವ್ರವಾದರೆ ಅಥವಾ ಸಾಧಾರಣ ಕ್ರಿಮಿನಾಶಕಗಳನ್ನು ಬಳಸಿದರೆ ಬೀಜಕಣಗಳು ನಾಶವಾಗುವುದಿಲ್ಲ. ಹದಗೆಟ್ಟ ಪರಿಸ್ಥಿತಿಗಳಲ್ಲಿ ಕೆಲವು ವೇಳೆ ಬೀಜಕಣ ಹತ್ತು ವರ್ಷಗಳವರೆಗೆ ಜೀವಂತವಾಗಿದ್ದು ಅನಂತರ ಮೊಳೆಯಬಲ್ಲುದು. ರೋಗಕಾರಕ ಬ್ಯಾಕ್ಟೀರಿಯಗಳಲ್ಲಿ ಕೆಲವೇ ಬೀಜಕಣವಾಗಬಲ್ಲುವು. ಇದು ನಮ್ಮ ಅದೃಷ್ಟ. ಏಕೆಂದರೆ ಬೀಜಕಣವಾಗಿ ಪರಿವರ್ತನೆ ಹೊಂದಬಲ್ಲ ಬ್ಯಾಕ್ಟೀರಿಯಗಳು ಕಷ್ಟಪರಿಸ್ಥಿತಿಗಳನ್ನೆದುರಿಸಿ ಅನೇಕ ಕಾಲ ಜೀವದಿಂದುಳಿದು ರೋಗ ತರಬಲ್ಲವು. ಅವನ್ನು ನಾಶಪಡಿಸುವುದೂ ಸುಲಭವಲ್ಲ. ಪರಿಸರ ಬದಲಾಗದೆ ಒಂದೇ ಸಮಸ್ಥಿತಿಯಲ್ಲಿದ್ದರೆ ಅವುಗಳ ಲಕ್ಷಣ, ರೂಪ ರಚನೆಗಳೂ ಬದಲಾಗುವುದಿಲ್ಲ. ಈ ಸ್ಥಿರತೆ ಜೀನುಗಳಲ್ಲಿದ್ದು ತಾಯಿಕೋಶದ ವಿಭಜನೆಯ ಸಮಯದಲ್ಲಿ ಎರಡಾಗಿ ಮರಿಕೋಶಗಳಲ್ಲಿ ಪುನರಾವರ್ತನೆಯಾಗುತ್ತದೆ. ಅಂದರೆ ತದ್ವತ್ ಜೀನುಗಳೇ ಪೀಳಿಗೆಯಿಂದ ಪೀಳಿಗೆಗೆ ಹಾಯುತ್ತವೆ. ಪರಿಸರ ಬದಲಾದಲ್ಲಿ ಈ ಬದಲಾದ ಪರಿಸರಕ್ಕೆ ಹೊಂದಿಕೊಳ್ಳಲು ಅವುಗಳಿಗೆ ತಮ್ಮ ರೂಪ, ರಚನೆ ಹಾಗೂ ಲಕ್ಷಣಗಳನ್ನು ಮಾರ್ಪಾಡು ಮಾಡಿಕೊಳ್ಳುವ ಸಾಮರ್ಥ್ಯವಿದೆ.

ಅಳಿವು–ಉಳಿವು : ಆಹಾರ, ಉಷ್ಣತೆ, ತೇವ, ಬೆಳಕು, ಆಮ್ಲಜನಕ, ಕ್ರಿಮಿನಾಶಕ ಮತ್ತು ನಂಜುರೋಧಕಗಳು (ಆಂಟಿಸೆಪ್ಟಿಕ್) ಬ್ಯಾಕ್ಟೀರಿಯಗಳ ಮೇಲೆ ಪ್ರಭಾವ ಬೀರುವ ಕೆಲವು ಮುಖ್ಯ ಅಂಶಗಳು.

ಆಹಾರ : ಸೂಕ್ತವಾದ ಆಹಾರ ದೊರಕದಿದ್ದಲ್ಲಿ ಯಾವ ಜೀವಿಯೂ ಬದುಕದು, ಬೆಳೆಯದು. ಹಾಲಿನಲ್ಲಿ ಇವು ಸಹ ಚೆನ್ನಾಗಿ ಬದುಕಿ ವೃದ್ಧಿಯಾಗಬಲ್ಲುವು. ಅಗತ್ಯವಾದ ಸಸಾರಜನಕ, ಸಕ್ಕರೆ, ಪಿಷ್ಟಗಳು, ಮೇದಸ್ಸು, ಜೀವಸತ್ವ, ಲವಣಗಳು ಮತ್ತು ನೀರು ಹಾಲಿನಲ್ಲಿ ಸಾಕಷ್ಟು ಇವೆ. ಬ್ಯಾಕ್ಟೀರಿಯ ಕೋಶದಲ್ಲಿ ಪತ್ರಹರಿತ್ತು ಇಲ್ಲದಿರುವುದರಿಂದ ಇವು (ಸಸ್ಯಗಳಂತೆ) ಗಾಳಿಯಲ್ಲಿರುವ ಇಂಗಾಲಾಮ್ಲ ಮತ್ತು ಸೂರ್ಯನ ಬೆಳಕನ್ನು ಉಪಯೋಗಿಸಿಕೊಂಡು ಆಹಾರವನ್ನು ತಯಾರಿಸಿಕೊಳ್ಳಲಾರವು. ಬದಲು, ಇವು ಇತರ ಮೂಲ ವಸ್ತುಗಳಿಂದ ತಮಗೆ ಬೇಕಾದ ಆಹಾರವನ್ನು ತಯಾರಿಸಿಕೊಳ್ಳುತ್ತವೆ.

ಕೆಲವು ಬ್ಯಾಕ್ಟೀರಿಯಗಳು ತಮಗೆ ಬೇಕಾದ ಆಹಾರಸತ್ತ್ವಗಳನ್ನು ತಾವೇ ಸಿದ್ಧಪಡಿಸಿಕೊಳ್ಳಬಲ್ಲುವು. ಇನ್ನು ಕೆಲವಕ್ಕೆ ಇದು ಸಾಧ್ಯವಿಲ್ಲ. ಆಹಾರ ಅತ್ಯಗತ್ಯವಾದುದರಿಂದ ಸುತ್ತಮುತ್ತಲಿರುವ ಆಹಾರಾಂಶಗಳನ್ನೇ ಅಳವಡಿಸಿಕೊಂಡು ತಮಗೆ ಸೂಕ್ತವಾದ ಆಹಾರವನ್ನು ಪಡೆಯುತ್ತವೆ. ಕೆಲವು ಸಸಾರಜನಕೋತ್ಪಾದಕ (ನೈಟ್ರಿಫೈಯಿಂಗ್) ಮತ್ತು ಗಂಧಕೋತ್ಪಾದಕ ಬ್ಯಾಕ್ಟೀರಿಯಗಳು ತಮ್ಮ ಸ್ವಂತ ಶಕ್ತಿಯಿಂದ ಉತ್ಪಾದನೆಮಾಡಿಕೊಂಡ ಅಮೋನಿಯ ಮತ್ತು ಗಂಧಕದ ಆಕ್ಸೈಡುಗಳ ಉಪಯೋಗದಿಂದ ಬೇಕಾದ ಇಂಗಾಲವನ್ನು ಇತರ ಮೂಲವಸ್ತುಗಳಿಂದ ಪಡೆಯುತ್ತವೆ.

ಅನೇಕ ಬ್ಯಾಕ್ಟೀರಿಯಗಳಿಗೆ ಜೈವಿಕ ವಸ್ತುಗಳಲ್ಲಿ ಅಡಕವಾಗಿರುವ ಸಸಾರಜನಕವೇ ಅವಶ್ಯಕ. ಹಾಲು, ದನದ ಮಾಂಸದ ಬಟ್ಟಿಗಳಲ್ಲಿ ಇದು ದೊರಕುತ್ತದೆ. ಸಂಶೋಧನಾಲಯಗಳಲ್ಲಿ ಕೃತಕವಾಗಿ ಇವನ್ನು ಬೆಳೆಸುವಾಗ ಅವುಗಳಿಗೆ ಈ ಆಹಾರಾಂಶಗಳೊಂದಿಗೆ ಸುಲಭವಾಗಿ ಉಪಯೋಗಮಾಡಲು ಸಾಧ್ಯವಾಗುವಂಥ ಇತರ ವಸ್ತುಗಳನ್ನೂ ಸತ್ತ್ವಗಳನ್ನೂ ಸೇರಿಸುತ್ತಾರೆ. ಉದಾಹರಣೆಗೆ ಪೆಪ್ಟೋನ್ ಎಂಬ ಸಸಾರಜನಕಾಂಶ ಜೀವಸತ್ವಗಳನ್ನೂ ಸೂಕ್ತಪ್ರಮಾಣಗಳಲ್ಲಿ ಲವಣ ಇತ್ಯಾದಿಗಳನ್ನೂ ಬೆರೆಸುವುದು ವಾಡಿಕೆ. ಥೈಯಮಿನ್ (ಜೀವಾತು), ರಿಬೋಫ್ಲೇವಿನ್ (ಜೀವಾತು ), ನಯಸಿನ್, ಬಯೋಟಿನ್, ಪ್ಯಾಂಟೋಥೆನಿಕ್ ಆಮ್ಲ, , ಫೋಲಿಕ್ ಆಮ್ಲ ಮುಖ್ಯವಾದ ಜೀವಸತ್ವಗಳು.

ಉಷ್ಣತೆ : ಬ್ಯಾಕ್ಟೀರಿಯಗಳ ಉಳಿವಿಗೆ ಸೂಕ್ತವಾದ ಉಷ್ಣತೆ ಸುಮಾರು $25^0$–$30^0$ ಸೆ. ಮನುಷ್ಯ ಮತ್ತು ಪ್ರಾಣಿಗಳಲ್ಲಿ ವೃದ್ಧಿಗೊಳ್ಳುವ ಬ್ಯಾಕ್ಟೀರಿಯಗಳಿಗೆ $37^0$ ಸೆ. ಉಷ್ಣತೆ ಅತ್ಯಂತ ಹಿತಕರ. ಇವು ನಾಶವಾಗದೆ ತಡೆಯಬಲ್ಲ ಅತಿ ಕಡಿಮೆ ಉಷ್ಣತೆ $5^0$ –$6^0$ ಸೆ. ಹಾಗೂ ಅತ್ಯಂತ ಅಧಿಕ ಉಷ್ಣತೆ ಸುಮಾರು $38^0$ –$48^0$ ಸೆ. ಅಧಿಕ ಉಷ್ಣತೆಗಿಂತ ಕಡಿಮೆ ಉಷ್ಣತೆಯನ್ನು ಅವು ಹೆಚ್ಚು ಕಾಲ ಎದುರಿಸಿ ಜೀವಂತವಾಗಿರಬಲ್ಲುವು.

ಜೀವಾಣುನಾಶನ (ಸ್ಟರಿಲೈಸೇಷನ್) : ಹಿಂದೆ ತಿಳಿಸಿದಂತೆ ಸಾಮಾನ್ಯವಾಗಿ ಈ ಜೀವಿಗಳು ಅಧಿಕ ಉಷ್ಣತೆಯಲ್ಲಿ ಜೀವಿಸಿರಲಾರವು. $50^0$ –$60^0$ ಸೆ. ಉಷ್ಣತೆಯ ಪ್ರಭಾವದಿಂದ ಇವನ್ನು ನಾಶಪಡಿಸಬಹುದು. ಕುದಿಯುವ ನೀರು, ಆವಿ ಅಥವಾ ಪಾಶ್ಚುರೀಕರಣಗಳ ಪ್ರಭಾವದಿಂದಲೂ ಈ ಜೀವಿಗಳು ನಿರ್ನಾಮವಾಗುತ್ತವೆ. ಆದರೆ ಬೀಜಕಣಗಳು ಈ ಮಟ್ಟದ ಉಷ್ಣತೆಯಲ್ಲಿ ಸುಲಭವಾಗಿ ನಾಶವಾಗವು; ಆಗಲೂ ಬಹಳ ಕಾಲ ಬೇಕು. $120^0$ ಸೆ. ಉಷ್ಣತೆಯ ಆವಿಯನ್ನು ಹೆಚ್ಚು ಒತ್ತಡಕ್ಕೆ ಒಳಪಡಿಸಿದಲ್ಲಿ ಬೀಜಕಣಗಳು ಅಲ್ಪಕಾಲಾವಧಿಯಲ್ಲೇ ನಾಶಗೊಳ್ಳುತ್ತವೆ. ಒಣಬೀಜಕಣಗಳನ್ನು (ಡ್ರೈಸ್ಪೋರ್ಸ್) ಇನ್ನೂ ಹೆಚ್ಚು ಒತ್ತಡ ಮತ್ತು ಅಧಿಕ ಉಷ್ಣತೆಗಳಿಂದ ನಾಶಪಡಿಸಬಹುದು. $170^0$ ಸೆ. ಉಷ್ಣತೆಯಲ್ಲಿ ಒಂದು ಗಂಟೆ ಕಾಲವಿಟ್ಟರೆ ಅವು ನಾಶವಾಗುತ್ತವೆ.

ತೇವ : ಭೂಮಿಯಲ್ಲಿ 2%–3%ರಷ್ಟಾದರೂ ತೇವವಿಲ್ಲದಿದ್ದಲ್ಲಿ ಬ್ಯಾಕ್ಟೀರಿಯ ಉತ್ಪತ್ತಿಯಾಗದು. 5%–10% ತೇವವಿದ್ದರೆ ಇವು ಚೇತನಗೊಳ್ಳುತ್ತವೆ. 25%–40%ರಷ್ಟು ತೇವವಿದ್ದಲ್ಲಿ ಇವುಗಳ ಬೆಳೆವಣಿಗೆಗೆ ಸಮರ್ಪಕವಾದ ಸ್ಥಿತಿಯಲ್ಲಿರುವುದು. ಬ್ಯಾಕ್ಟೀರಿಯಗಳಿಗೆ ಆಹಾರ ಸೇವಿಸಲು ಬಾಯಿ ಇಲ್ಲ. ಯಾವ ಆಹಾರವಾದರೂ ದ್ರವರೂಪದಲ್ಲೇ ಕೋಶಾವರಣದ ಮೂಲಕ ಸೋಸಿ ಹೋಗಬೇಕು. ಆದ್ದರಿಂದ ತೇವದ ಪ್ರಾಮುಖ್ಯ ಎಷ್ಟೆಂದು ತಿಳಿಯುತ್ತದೆ. ತೇವವಿಲ್ಲದ ಸ್ಥಿತಿಯನ್ನು ವಿರೋಧಿಸುವುದರಲ್ಲಿ ಈ ಜೀವಿಗಳಲ್ಲಿ ವೈವಿಧ್ಯವನ್ನು ಕಾಣಬಹುದು. ತೇವವಿಲ್ಲದ ಪರಿಸ್ಥಿತಿಗಳಲ್ಲಿ ಸುಲಭವಾಗಿ ನಾಶಗೊಳ್ಳುವ ಕೆಲವು ಬ್ಯಾಕ್ಟೀರಿಯಗಳಿವೆ. ಈ ಲಕ್ಷಣವನ್ನು ಆಹಾರಸಾಮಗ್ರಿಗಳ ರಕ್ಷಣೆಗೆ ಬಳಸಿಕೊಳ್ಳಲಾಗುತ್ತದೆ. ಆಹಾರಗಳಿಂದ ತೇವವನ್ನು ಸಂಪೂರ್ಣ ತೆಗೆದಲ್ಲಿ ಅವುಗಳ ಚಟುವಟಿಕೆ ಸ್ಥಗಿತಗೊಂಡು ಆಹಾರ ಬಹಳ ದಿನಗಳು ಕೆಡದೆ ಉತ್ತಮ ಸ್ಥಿತಿಯಲ್ಲಿರುತ್ತದೆ. ತೇವರಹಿತ ಸ್ಥಿತಿಯಲ್ಲಿ ಎಲ್ಲ ಬ್ಯಾಕ್ಟೀರಿಯಗಳು ಸಾಯದಿರಬಹುದು ಹಾಗು ತಕ್ಕಷ್ಟು ತೇವ ಒದಗಿದಲ್ಲಿ ಅವು ಪುನಃ ಚೇತನಗೊಂಡು ಆಹಾರವನ್ನು ಕೆಡಿಸಲೂ ಬಹುದು.

ಆಮ್ಲಜನಕ : ಬ್ಯಾಕ್ಟೀರಿಯಗಳು ಗಾಳಿಯಲ್ಲಿರುವ ಆಮ್ಲಜನಕವನ್ನು ವಿಧ ವಿಧವಾಗಿ ಬಳಸಿಕೊಳ್ಳುತ್ತವೆ. ಕೆಲವಕ್ಕೆ ಉಸಿರಾಡಲು ಆಮ್ಲಜನಕ ಅವಶ್ಯಕತೆಯಿರುವುದರಿಂದ ಅದಿಲ್ಲದಿದ್ದರೆ ಬೆಳೆಯಲಾರವು–ಇಂಥವು ವಾಯುಜೀವಿಗಳು (ಏರೋಬ್ಸ್). ಮತ್ತೆ ಕೆಲವು ಆಮ್ಲಜನಕ ಇಲ್ಲದೆಯೂ ಬೆಳೆಯುತ್ತವೆ. ಇದ್ದರೂ ಅದನ್ನವು ಉಪಯೋಗಿಸಿಕೊಳ್ಳಲಾರವು. ಇಂಥವು ಅವಾಯುಜೀವಿಗಳು (ಅನೆರೋಬ್ಸ್). ಮತ್ತೆ ಕೆಲವು ಎರಡು ಸ್ಥಿತಿಗಳಲ್ಲೂ ಊರ್ಜಿತವಾಗಬಲ್ಲುವು. ಇವನ್ನು ಐಚ್ಛಿಕ (ಫ್ಯಾಕಲ್‌ಟೆಟಿವ್) ಜೀವಿಗಳೆನ್ನಬಹುದು. ಅವಾಯುಜೀವಿಗಳನ್ನು ಕೊಳೆಯುವ ಮತ್ತು ಕೊಳೆಯುತ್ತಿರುವ ವಸ್ತುಗಳಲ್ಲಿ, ಭೂಮಿ ಹಾಗೂ ಕೊಳ, ಕೆರೆಗಳ ತಳದಲ್ಲಿರುವ ಮಣ್ಣಿನಲ್ಲಿ ಕಾಣಬಹುದು. ಅಪಕರ್ಷಣಕಾರಿಗಳು (ರೆಡ್ಯೂಸಿಂಗ್ ಏಜೆಂಟ್ಸ್) ಸಾಕಷ್ಟಿದ್ದರೆ (ಜೀವಸತ್ವ ಸಿಸ್ಟೈನ್ ಇತ್ಯಾದಿ) ಅವಾಯುಜೀವಿಗಳನ್ನು ಸಹ ಗಾಳಿಯಲ್ಲಿ ಬೆಳೆಸಬಹುದು. ಆಹಾರವಸ್ತುಗಳನ್ನು ಡಬ್ಬಗಳಲ್ಲಿ ಹಾಕಿ ರಕ್ಷಿಸುವ (ಟಿನ್ನಿಂಗ್) ಉದ್ಯಮದಲ್ಲಿ ಬೀಜಕೋಶ ಉತ್ಪತ್ತಿಯಾಗುವ ಬ್ಯಾಕ್ಟೀರಿಯಗಳನ್ನು ಹೊರಗಿಡುವುದು ಪ್ರಯಾಸವೇ ಸರಿ. ಕಾರ್ಯಗತಿಯ ಭರದಲ್ಲಿ ಸಾಕಷ್ಟು ಉಷ್ಣತೆಗೆ ಒಳಪಡಿಸಿ ಬೀಜಕೋಶಗಳನ್ನು ನಾಶಪಡಿಸದಿದ್ದಲ್ಲಿ ಅವನ್ನು ಡಬ್ಬದಲ್ಲಿಟ್ಟು ಮುಚ್ಚಿದ ಅನಂತರ ಈ ಆಮ್ಲಜನಕ ರಹಿತ ಮುಚ್ಚಿದ ಡಬ್ಬಗಳಲ್ಲಿ ಬೀಜಕೋಶಗಳು ಮೊಳಕೆಯಾಗಿ ವೃದ್ಧಿಗೊಳ್ಳುತ್ತವೆ. ಒಂದು ವೇಳೆ ಈ ಜೀವಿಗಳು ವಿಷವನ್ನು (ಟಾಕ್ಸಿನ್) ತಯಾರಿಸುವುವೂ ಆಗಿದ್ದಲ್ಲಿ (ಕ್ಲಾಸ್ಟ್ರಿಡಿಯಂ ಬಾಟ್ಯುಲೈನಂ) ಈ ವಿಷವುಳ್ಳ ಆಹಾರವನ್ನು ಸೇವಿಸಿದವರು ಕೂಡಲೆ ವಿಷದ ಪರಿಣಾಮಕ್ಕೊಳಗಾಗಿ ನರಳುವುದುಂಟು.

ಬೆಳಕು : ಕತ್ತಲಿದ್ದಲ್ಲಿ ಬ್ಯಾಕ್ಟೀರಿಯ ವೃದ್ಧಿ ಭರದಿಂದ ಆಗುತ್ತದೆ. ಬೆಳಕಿಗೆ ಬಂದರೆ ಇವುಗಳ ಚಲನವಲನ ಸ್ಥಗಿತಗೊಳ್ಳುತ್ತದೆ. ಸೂರ್ಯನ ಬೆಳಕಿನಲ್ಲಿ ಅವು ಹೆಚ್ಚೆಂದರೆ 10–15 ಮಿನಿಟುಗಳ ಕಾಲ ಉಳಿಯಬಹುದು; ಮತ್ತೆ ನಾಶವಾಗಿ ಹೋಗುತ್ತವೆ. ಆ ಬೆಳಕಿನಲ್ಲಿರುವ

ಅತಿನೇರಳೆ ಕಿರಣಗಳು ಇವುಗಳಿಗೆ ಅಪಾಯಕಾರಿ. ಬೀಜಕೋಶರಹಿತ ಬ್ಯಾಕ್ಟೀರಿಯಗಳಿಗೆ 3 ರಿಂದ 5 ಸೆಂಮೀ. ದೂರದಿಂದ ಈ ಕಿರಣಗಳನ್ನು ಹಾಯಿಸಿದಲ್ಲಿ ಅವು ಕೆಲವೇ ನಿಮಿಷಗಳಲ್ಲಿ ನಾಶಹೊಂದುತ್ತವೆ. ಪೂರ್ಣ ಉಪಯೋಗ ಪಡೆಯಲು ಈ ಕಿರಣಗಳನ್ನು ಸೂಕ್ತರೀತಿಯಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕ.

ಬೆಳೆಸಲು ಉಪಯೋಗಿಸುವ ಕೃತಕ ಮಾಧ್ಯಮ (ಮೀಡಿಯಂ) : ಮಾಧ್ಯಮದ ಆಮ್ಲತೆ ಅಥವಾ ಕ್ಷಾರಸ್ವಭಾವ ಬ್ಯಾಕ್ಟೀರಿಯಗಳ ಬೆಳವಣಿಗೆಯ ದೃಷ್ಟಿಯಿಂದ ಅತಿ ಮುಖ್ಯ. ಆಮ್ಲೀಯವೂ ಅಲ್ಲದ ಕ್ಷಾರೀಯವೂ ಅಲ್ಲದ ಮಾಧ್ಯಮ ಬಲುಮಟ್ಟಿಗೆ ಎಲ್ಲ ಏಕಾಣುಜೀವಿಗಳ ಬೆಳವಣಿಗೆಗೂ ಹಿತಕರವೆನ್ನಬಹುದು. ಆದರೆ ಸ್ವಲ್ಪ ಮಟ್ಟಿಗೆ ಆಮ್ಲೀಯತೆ ಅಥವಾ ಕ್ಷಾರೀಯತೆಯನ್ನು ಬಯಸುವ ಅನೇಕ ಬ್ಯಾಕ್ಟೀರಿಯಗಳೂ ಇವೆ.

ನಂಜುರೋಧಕ ಹಾಗೂ ಕ್ರಿಮಿನಾಶಕಗಳ ಪರಿಣಾಮ : ಇದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಕೆಲವು ನಾಶಕಗಳು ಬ್ಯಾಕ್ಟೀರಿಯಗಳನ್ನು ನಾಶಪಡಿಸುತ್ತವೆ. ಮತ್ತೆ ಕೆಲವು ಅವುಗಳ ಚಟುವಟಿಕೆಯನ್ನು ಸ್ಥಗಿತಗೊಳಿಸುತ್ತವೆ. ಅಧಿಕ ಸಾರದ ನಾಶಕಗಳನ್ನು ಉಪಯೋಗಿಸಿದಾಗ ನಾಶವಾಗುವ ಜೀವಿಗಳು ಸಾರಗುಂದಿಸಿದ ಅವೇ ನಾಶಕಗಳನ್ನು ಉಪಯೋಗಿಸಿದಾಗ ನಿಶ್ಚೇತನ ಮಾತ್ರ ಆಗುತ್ತವೆ. ಆದರೆ ಈ ನಾಶಕಗಳಿಂದ ಸಾಮಾನ್ಯವಾಗಿ ಎಲ್ಲ ಬ್ಯಾಕ್ಟೀರಿಯಗಳ ಜೀವಕ್ರಿಯೆಗಳೂ ಕುಂದುವುದೊಂದೇ ಅಲ್ಲದೆ ಸಂತಾನವೃದ್ಧಿಗೂ ಪೂರ್ಣವಿರಾಮವಾಗುತ್ತದೆ. ಕಾರ್ಬಾಲಿಕ್ ಆಮ್ಲ, ಮದ್ಯಸಾರ ಇತ್ಯಾದಿ ನಾಶಕಗಳು, ಗಂಧಕೀಯಗಳು, ಪ್ರತಿಜೀವಕಗಳು (ಆಂಟಿಬಯೋಟಿಕ್ಸ್) ಜೀವಕ್ರಿಯೆಗಳನ್ನು ಕುಂದಿಸಿ ಸಂತಾನೋತ್ಪತ್ತಿಯನ್ನು ನಿಲ್ಲಿಸುವ ಔಷಧಗಳು. ಬ್ಯಾಕ್ಟೀರಿಯಗಳ ಸೋಂಕಿನಿಂದ ಆಹಾರಗಳನ್ನು ಸುರಕ್ಷಿತವಾಗಿಡಲು ನಂಜುರೋಧಕಗಳನ್ನು ಮುಖ್ಯವಾಗಿ ಉಪಯೋಗ ಮಾಡಲಾಗುತ್ತಿದೆ. ಕ್ರಿಮಿನಾಶಕಗಳನ್ನು ಗಾಯಗಳ ಶುದ್ಧೀಕರಣ, ನೀರಿನಲ್ಲಿರುವ ರೋಗಕಾರಕ ಬ್ಯಾಕ್ಟೀರಿಯಗಳ ನಾಶ ಮುಂತಾದವುಗಳಲ್ಲಿ ಉಪಯೋಗ ಮಾಡಲಾಗುತ್ತಿದೆ. ಕ್ರಿಮಿನಾಶಕಗಳ ಶಕ್ತಿಯನ್ನು ಅನೇಕ ವಿದ್ಯಮಾನಗಳು ಕುಂದಿಸುತ್ತವೆ. ಇವುಗಳಲ್ಲಿ ಮುಖ್ಯವಾದುವು–1 ದ್ರವವೃದ್ಧಿ (ಡೈಲ್ಯೂಷನ್), 2 ಬ್ಯಾಕ್ಟೀರಿಯಗಳೊಂದಿಗೆ ಹೊಂದಿರುವ ಸಂಪರ್ಕ ಸಮಯ, 3 ಅವುಗಳ ಸಂಖ್ಯೆ ಮತ್ತು ಗುಂಪು, 4 ಉಷ್ಣತೆ, 5 ಮೇಲ್ಮೈ ಎಳೆತ (ಸರ್ಫೇಸ್ ಟೆನ್ಷನ್), 6 ಪರಿಸರದ ಸ್ಥಿತಿಗಳು.

ಬೀಜಕಣಗಳು ಪ್ರತಿಕೂಲ ಸ್ಥಿತಿಗಳನ್ನು ಬ್ಯಾಕ್ಟೀರಿಯಗಳಿಗಿಂತ ಹೆಚ್ಚು ಕಾಲ ನಿರೋಧಿಸಿ ಜೀವಂತವಾಗಿರಬಲ್ಲುವು. ಒಂದು ಕ್ರಿಮಿನಾಶದ ಪರಿಣಾಮ ಎಲ್ಲ ಬ್ಯಾಕ್ಟೀರಿಯ ಜೀವಿಗಳ ಮೇಲೂ ಒಂದೇ ರೀತಿ ಎಂದು ಹೇಳಲಾಗುವುದಿಲ್ಲ. ಕೀವಿನಲ್ಲಿರುವ ಸ್ಟೆಫೈಲೊಕಾಕೈ ಸ್ವಲ್ಪಮಟ್ಟಿಗೆ ಕ್ರಿಮಿನಾಶಕಗಳ ಪ್ರಭಾವವನ್ನೆದುರಿಸಬಲ್ಲುವು. ವಿಷಮಶೀತಜ್ವರ ತರುವ ಬ್ಯಾಕ್ಟೀರಿಯಗಳು ಸೂಕ್ಷ್ಮ ಕ್ರಿಮಿನಾಶಕಗಳಿಂದ ಸುಲಭವಾಗಿ ನಾಶಹೊಂದುತ್ತವೆ. ಕ್ರಿಮಿನಾಶಕಗಳ ಶಕ್ತಿಯನ್ನು ನಿರ್ಧರಿಸುವಾಗ ಬ್ಯಾಕ್ಟೀರಿಯಗಳನ್ನು ನಾಶಮಾಡುವ ಶಕ್ತಿಯೊಂದೇ ಮುಖ್ಯವೆಂದು ಹೇಳಲಾಗುವುದಿಲ್ಲ. ಇವು ಊತಕಗಳ ಮೇಲೆ ಇತರ ಕೆಟ್ಟ ಪರಿಣಾಮಗಳನ್ನು ಮಾಡಕೂಡದು.

ಗಾಳಿಯ ಮತ್ತು ನೀರಿನ ಬ್ಯಾಕ್ಟೀರಿಯಗಳು : ಬ್ಯಾಕ್ಟೀರಿಯಗಳಿಲ್ಲದ ಜಾಗಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ಕೆರೆ, ಕುಂಟೆ, ಚರಂಡಿ, ಗೊಬ್ಬರದ ಗುಂಡಿ, ನದಿ, ನೆಲ ಇತ್ಯಾದಿ ಎಲ್ಲ ಕಡೆಗಳಲ್ಲೂ ಇವು ಇದ್ದೇ ಇವೆ. ಇವುಗಳ ಆಹಾರ ಜೈವಿಕವಸ್ತುಗಳು. ಆದ್ದರಿಂದ ಜೈವಿಕವಸ್ತುಗಳಿರುವಲ್ಲೆಲ್ಲ ಈ ಜೀವಿಗಳು ಹೇರಳವಾಗಿರುತ್ತವೆ. ದ್ರವಗಳಲ್ಲಿ ಅಂದರೆ ಹಾಲು, ಹೆಂಡ, ರಕ್ತ, ಮೂತ್ರ ಇತ್ಯಾದಿಗಳಲ್ಲಿಯೂ ಘನಸ್ಥಿತಿಯ ಆಹಾರಗಳಲ್ಲಿ ಅಂದರೆ ತರಕಾರಿ, ಹಣ್ಣು, ಧಾನ್ಯ, ಮಾಂಸ ಇತ್ಯಾದಿ ಪದಾರ್ಥಗಳಲ್ಲಿಯೂ ಬ್ಯಾಕ್ಟೀರಿಯಗಳು ಕಂಡುಬರುತ್ತವೆ. ತೇವ, ಉಷ್ಣತೆ ಹಿತಕರವಾಗಿದ್ದಲ್ಲೆಲ್ಲ ಬೆಳೆದು ವೃದ್ಧಿಯಾಗುತ್ತವೆ. ಇಂಥ ಬೆಳವಣಿಗೆಗೆ ಮಿತಿ ಎಂಬುದೇ ಇಲ್ಲ. ಆದರೆ ಇಂಥ ವೃದ್ಧಿಯ ಜೊತೆಯಲ್ಲೇ ನಾಶವಾಗಲು ಬೇಕಾದ ಸ್ಥಿತಿಗಳೂ ಅಲ್ಲಿ ಹುಟ್ಟಿಕೊಳ್ಳುತ್ತವೆ. ತೇವವಿಲ್ಲದ ಸ್ಥಿತಿ, ಅಧಿಕ ಆಮ್ಲತೆ, ಸೂರ್ಯಕಿರಣಗಳು ಮುಂತಾದವುಗಳ ಪರಿಣಾಮದಿಂದ ಇವುಗಳ ಈ ವೃದ್ಧಿಗೆ ತಡೆಯುಂಟಾಗುವುದು.

ಕೆಮ್ಮುವಾಗ, ಸೀನುವಾಗ ಹಾಗೂ ಮಾತನಾಡುವಾಗ ಬಾಯಿ, ಗಂಟಲುಗಳಲ್ಲಿರುವ ಬ್ಯಾಕ್ಟೀರಿಯಗಳು ಹೊರಬಿದ್ದು ಗಾಳಿಯಲ್ಲಿ ಸೇರುತ್ತವೆ. ಈ ಗಾಳಿಯನ್ನು ಮತ್ತೊಬ್ಬ ಉಸಿರಾಡುವಾಗ ತೆಗೆದುಕೊಂಡಲ್ಲಿ ಅವನ ಗಂಟಲು ಶ್ವಾಸಕೋಶಗಳಿಗೆ ಹಾಯ್ದು ನೆಲೆಸಿ ವೃದ್ಧಿಯಾಗಿ ಸೋಂಕನ್ನುಂಟುಮಾಡುತ್ತವೆ. ಈ ರೀತಿ ಅನೇಕ ರೋಗಗಳ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಉದಾಹರಣೆಗೆ, ಎಲ್ಲ ಶ್ವಾಸಕೋಶದ ರೋಗಗಳು–ಕ್ಷಯ, ಇನ್‌ಫ್ಲೂಯೆಂಜ, ನ್ಯೂಮೋನಿಯಾ, ಗಂಟಲುಮಾರಿ, ನಾಯಿಕೆಮ್ಮು ಇತ್ಯಾದಿ.

ಹರಿಯುವ ನೀರಿಗೆ ಅಸಂಖ್ಯಾತ ಬ್ಯಾಕ್ಟೀರಿಯಗಳು ಬಂದು ಸೇರಿಕೊಳ್ಳುತ್ತವೆ. ಭೂಮಿಯ ಮೇಲ್ಪದರಗಳಲ್ಲಿರುವುವೂ ಇದರಲ್ಲಿ ಸೇರುತ್ತವೆ. ಈ ರೀತಿ ಸೇರಿದವು ನೀರಿನಲ್ಲಿ ಬಹಳ ಕಾಲ ಜೀವಿಸಿರಲಾರವು. ಅವು ಕ್ರಮೇಣ ನಾಶವಾಗುತ್ತವೆ. ಕೆಲವು ವೇಳೆ ನೀರು ಬಹಳ ಕಲ್ಮಷಯುಕ್ತವಾಗಿದ್ದು ಅದರಲ್ಲಿ ಜೈವಿಕ ವಸ್ತುಗಳು ಸಾಕಷ್ಟು ಇದ್ದರೆ ಬ್ಯಾಕ್ಟೀರಿಯಗಳ ವೃದ್ಧಿಗೆ ಧಾರಾಳ ಅವಕಾಶ ಒದಗುತ್ತದೆ.

ಬ್ಯಾಕ್ಟೀರಿಯಗಳೆಲ್ಲವೂ ವ್ಯಾಧಿಕಾರಕಗಳೆಂದೇನೂ ತಿಳಿಯಬೇಕಾಗಿಲ್ಲ. ಹಲವಾರು ಜೀವಿಗಳು ಮಾನವಕುಲಕ್ಕೆ ಉಪಕಾರಿಗಳು. ಹಾಲು ಮತ್ತು ಅದಕ್ಕೆ ಸಂಬಂಧಪಟ್ಟ ಪದಾರ್ಥಗಳ ತಯಾರಿಕೆಯಲ್ಲಿ ಸಹಾಯಮಾಡುವ ಮತ್ತು ಹೊಲಸು ತುಂಬಿದ ಭೂಮಿಯನ್ನು ಫಲವತ್ತಾಗಿ ಮಾಡುವ ಹಾಗೂ ಗ್ರಾಮಸಾರವನ್ನು ಸೃಷ್ಟಿಮಾಡುವ ಬ್ಯಾಕ್ಟೀರಿಯಗಳು ಇವುಗಳಲ್ಲಿ ಅತಿ ಮುಖ್ಯವಾದವು.

ಹಸುವಿನ ಕೆಚ್ಚಲಿನಿಂದ ಬರುವ ಹಾಲಲ್ಲೇ ಕೆಲವು ವಿಧದ ಬ್ಯಾಕ್ಟೀರಿಯಗಳಿರುತ್ತವೆ. ಆದರೆ ಇವು ಕೆಡುಕುಂಟುಮಾಡುವುವಲ್ಲ. ಹಾಲಿನಲ್ಲಿ ಏಕಾಣುಜೀವಿಗಳು ವೃದ್ಧಿಯಾಗಲು ಬೇಕಾದ ಸೌಲಭ್ಯಗಳೆಲ್ಲ ಇವೆ. ಇವುಗಳಲ್ಲಿ ಕೆಲವು ಮುಖ್ಯವಾಗಿ ಸಸಾರಜನಕಾಂಶವನ್ನು ಆಕ್ರಮಣಮಾಡಿ ಅದನ್ನು ಒಡೆಯುತ್ತವೆ. ಆ ಸಂದರ್ಭದಲ್ಲಿ ಹಾಲಿಗೆ ಕೆಟ್ಟ ವಾಸನೆ ಬರುತ್ತದೆ. ಮತ್ತೆ ಕೆಲವು ಹಾಲಿನಲ್ಲಿರುವ ಶರ್ಕರಪಿಷ್ಟ ಅಂಶಗಳನ್ನು ಆಕ್ರಮಿಸಿ ಹಾಲನ್ನು ಹೆಪ್ಪುಗಟ್ಟಿಸುತ್ತವೆ. ಬಿಸಿಮಾಡದ ಹಾಲಿನಲ್ಲಿ ಲ್ಯಾಕ್ಟೋಬ್ಯಾಸಿಲೈ ವೃದ್ಧಿಹೊಂದಿ ಹಾಲನ್ನು ಕೆಡಿಸದೆ ಹುಳಿ ಮಾಡುವುವು. ಇವನ್ನು ನೇರವಾಗಿ ಹಾಲಿಗೆ ಬೆರೆಸಿ ಕೃತಕವಾಗಿ ಹುಳಿ ತರಿಸಲೂಬಹುದು. ಹಾಲಿನಲ್ಲಿ ರೋಗಕಾರಕ ಬ್ಯಾಕ್ಟೀರಿಯಗಳು ಸೇರಬಹುದು. ಇವು ಮುಖ್ಯವಾಗಿ ಕಲಬೆರಕೆ ಮಾಡುವ ನೀರಿನಿಂದ, ಹಾಲು ಕರೆಯುವವನಿಂದ, ಪಾತ್ರೆಯಿಂದ ಅಥವಾ ಹಾಲನ್ನು ಉಪಯೋಗಿಸುವಾಗ ಸೇರುತ್ತವೆ. ಹಾಲಿನಲ್ಲಿ ಈ ರೋಗಕಾರಕಗಳು ಸೇರಿ ವೃದ್ಧಿಯಾಗದಂತೆ ಅದನ್ನು ಕಡಿಮೆ ಉಷ್ಣತೆಯಲ್ಲಿ ರಕ್ಷಿಸಬಹುದು. ರೋಗಕಾರಕಗಳನ್ನು ನಾಶಪಡಿಸಲು ಪಾಶ್ಚುರೀಕರಣ ಮಾಡಬಹುದು (ನೋಡಿ–ಪಾಶ್ಚುರೀಕರಣ). ಹಾಲಿನಿಂದ ಉತ್ಪಾದಿಸುವ ಬೆಣ್ಣೆ, ಗಿಣ್ಣು, ಮೊಸರು ಇತ್ಯಾದಿಗಳಲ್ಲಿ ಬ್ಯಾಕ್ಟೀರಿಯಗಳು ಬಹಳ ಪ್ರಮುಖಪಾತ್ರ ವಹಿಸುತ್ತವೆ. ಇವುಗಳಿಲ್ಲದೆ ಬೆಣ್ಣೆ, ಗಿಣ್ಣು, ಮೊಸರು ಮಾಡಲಾಗುವುದಿಲ್ಲ.

ಭೂಮಿಯ ಮೇಲ್ಪದರಗಳಲ್ಲಿ ಕೋಟ್ಯಾನುಕೋಟಿ ಬ್ಯಾಕ್ಟೀರಿಯಗಳಿವೆ. ಇವುಗಳ ಸಂಖ್ಯೆ ಭೂಸಾರ ಹಾಗೂ ಆಳಗಳನ್ನು ಅವಲಂಬಿಸಿದೆ. ಸಾಗುವಳಿ ಮಾಡದ ಭೂಮಿಯಲ್ಲಿ ಒಂದು ಗ್ರಾಂ ಮಣ್ಣಿನಲ್ಲಿ 100,000 ಬ್ಯಾಕ್ಟೀರಿಯಗಳೂ ಸಾಗುವಳಿ ಭೂಮಿಯಲ್ಲಿ 1,500,000 ಬ್ಯಾಕ್ಟೀರಿಯಗಳೂ ಇವೆ ಎಂದು ಅಂದಾಜುಮಾಡಲಾಗಿದೆ. ಇವು ಸಂಶೋಧನಾಲಯಗಳಲ್ಲಿ ಬೆಳೆಯಬಹುದಾದವು ಮಾತ್ರ. ಅವುಗಳ ಸಂಖ್ಯೆ ಭೂಮಿಯ ಮೇಲ್ಪದರದಿಂದ ಆಳ ಹೋದಷ್ಟೂ ಕಡಿಮೆಯಾಗುತ್ತದೆ. ಸುಮಾರು 12–18 ಸೆಂಮೀ. ಕೆಳಗೆ ಇವು ಬಹು ಕಡಿಮೆ; ಇಲ್ಲವೆಂದೇ ಹೇಳಬಹುದು. 30–35 ಸೆಂಮೀ. ಆಳದಲ್ಲಿ ಇವುಗಳ ಸುಳಿವೇ ಇಲ್ಲ.

ಜೀವರಾಶಿಯ ಉಳಿವಿಗೆ ಬ್ಯಾಕ್ಟೀರಿಯಗಳ ಚಟುವಟಿಕೆಯಿಂದಾಗುವ ಸಸಾರಜನಕ ಸ್ಥಿರೀಕರಣ (ನೈಟ್ರೊಜನ್ ಫಿಕ್ಸೇಶನ್) ಮೂಲಾಧಾರ. ವಾಯುಮಂಡಲದಲ್ಲಿ 80% ಸಾರಜನಕವಿದೆ. ಈ ಅಂಶ ಗಾಳಿಯಿಂದ ಇತರ ವಸ್ತುಗಳೊಡನೆ ಬೆರೆತು ಪ್ರೋಟೀನಾಗಿ ಪರಿವರ್ತನೆಗೊಂಡು, ಜೀವರಾಶಿಗೆ ಅತ್ಯಾವಶ್ಯಕ ಆಹಾರವಾಗುತ್ತದೆ. ಸಸಾರಜನಕ ಪ್ರತಿಕ್ರಿಯೆ ಇಲ್ಲದ ಒಂದು ಜಡಾನಿಲವಾದ್ದರಿಂದ ಜೀವಕೋಶಗಳಿಂದ ಈ ಪರಿವರ್ತನೆ ಸಾಧ್ಯವಾಗದು. ಇಲ್ಲಿ ಬ್ಯಾಕ್ಟೀರಿಯಗಳ ಪಾತ್ರ ಬಲು ಮಹತ್ತ್ವದ್ದು. ಈ ರೀತಿಯಲ್ಲಿ ಸಾರಜನಕ ಸ್ಥಿರೀಕರಣ ಮಾಡುವ ಬ್ಯಾಕ್ಟೀರಿಯಗಳು ರೈಜೋಬಿಯಂ, ಕ್ಲಾಸ್ಟ್ರಿಡಿಯಂ, ಅಜೋಟೊಬ್ಯಾಕ್ಟರ್ ಎಂಬ ಮೂರು ಗುಂಪಿಗೆ ಸೇರಿದವು. ಭೂಮಿಯಲ್ಲಿ ಸ್ಥಿರೀಕರಣ ಅದ್ಭುತ ಒಂದು ಕಡೆಯಾದರೆ ಮತ್ತೊಂದು ಕಡೆ ನಿರ್ಜೀವಿ ಜೈವಿಕ ವಸ್ತುಗಳು ಕೊಳೆತು ಅದರಿಂದ ಯಾವ ರೀತಿಯ ಬಾಧಕ ಇಲ್ಲದ ರಾಸಾಯನಿಕ ಲವಣಗಳ ಪರಿವರ್ತನೆ ಮತ್ತೊಂದು ಅದ್ಭುತ. ಸಸ್ಯ ಮತ್ತು ಪ್ರಾಣಿಗಳ ಸಾವಿನಿಂದ ಸಸಾರಜನಕ ಮತ್ತು ಇಂಗಾಲಾಣುಗಳು ಭೂಮಿಯನ್ನು ಸೇರುತ್ತವೆ. ಭೂಮಿಯಲ್ಲಿರುವ ಅಸಂಖ್ಯಾತ ಬ್ಯಾಕ್ಟೀರಿಯಗಳು ಈ ಅಣುಗಳನ್ನು ಕಿಣ್ವಗಳ ಪ್ರತಿಕ್ರಿಯೆಯಿಂದ ಸರಳ ವಸ್ತುಗಳಿಗೆ ವಿಭಜಿಸುತ್ತವೆ. ಸಸಾರಜನಕ ವಿಭಜನೆಯಿಂದ ಉತ್ಪತ್ತಿಯಾಗುವ ರಾಸಾಯನಿಕಗಳಲ್ಲಿ ಅಮೋನಿಯ ಒಂದು. ಇದು ಉತ್ಪತ್ತಿಯಾಗುವ ರೀತಿಗೆ ಅಮೋನಿಫಿಕೇಶನ್ ಎಂದು ಹೆಸರು. ಅಮೋನಿಯ ಸರಳ ರೀತಿಯ ರಾಸಾಯನಿಕ ಮತ್ತು ಅದು ಸುಲಭವಾಗಿ ಪರಿವರ್ತನೆ ಹೊಂದಿ ನೈಟ್ರೇಟ್ ಆಗಬಲ್ಲುದು. ಅಂದರೆ ಅಮೋನಿಯ ಆಮ್ಲಜನಕದೊಂದಿಗೆ ಸಂಯೋಜಿಸಿ ಅನಂತರ ನೈಟ್ರೇಟ್ ಲವಣವಾಗುತ್ತದೆ. ಈ ರೀತಿಯ ಪರಿವರ್ತನೆಗೆ ನೈಟ್ರಿಫಿಕೇಶನ್ ಎಂದು ಹೆಸರು. ಕೆಲವೇ ಕೆಲವು ಬ್ಯಾಕ್ಟೀರಿಯಗಳು ಈ ಕಷ್ಟಸಾಧ್ಯವಾದ ಪರಿವರ್ತನೆ ಮಾಡಬಲ್ಲವು. ನೈಟ್ರೋಸೋಕಾಕಸ್ ಅಮೋನಿಯವನ್ನು ನೈಟ್ರೇಟ್ ಆಗಿ ಪರಿವರ್ತಿಸುವುದು. ನೈಟ್ರೋಬ್ಯಾಕ್ಟರ್ ನೈಟ್ರೇಟನ್ನು ನೈಟ್ರೈಟ್ ಆಗಿ ಪರಿವರ್ತಿಸುತ್ತವೆ. ಈ ನೈಟ್ರೇಟ್ ಲವಣಗಳು ಸಸ್ಯಗಳ ಪ್ರಮುಖ ಆಹಾರ.

ಸಾರಜನಕವಿಲ್ಲದ ರಾಸಾಯನಿಕಗಳನ್ನೂ ಇದೇ ರೀತಿ ಬ್ಯಾಕ್ಟೀರಿಯಗಳು ಪರಿವರ್ತನೆ ಮಾಡಬಲ್ಲವು. ಇಂಗಾಲ, ಜಲಜನಕ, ಆಮ್ಲಜನಕಗಳನ್ನೊಳಗೊಂಡ ದೊಡ್ಡ ದೊಡ್ಡ ಅಣುಗಳನ್ನು ವಿಭಜಿಸಿ ಸರಳ ರೀತಿಯ ಸೆಲ್ಯುಲೋಸ್ ಮತ್ತು ಪಿಷ್ಟ ಪರಿವರ್ತನೆ ಮಾಡುವುವು. ಸೆಲ್ಯುಲೋಸ್, ಪಿಷ್ಟಗಳು ಸಹ ಇನ್ನೂ ಸರಳ ರೀತಿಯ ರಾಸಾಯನಿಕಗಳಾಗಿ ಪಚನ ಹೊಂದಿ ಅವಶ್ಯಕ ಶಕ್ತಿಯನ್ನು ಒದಗಿಸುತ್ತವೆ. ಗಂಧಕ, ರಂಜಕ, ಕಬ್ಬಿಣ ಮತ್ತಿತರ ಅಜೈವಿಕ ವಸ್ತುಗಳ ಪರಿವರ್ತನೆಯೂ ಹೀಗೆಯೇ ನಡೆಯುತ್ತದೆ.

ಗ್ರಾಮಸಾರದ ಶುದ್ಧೀಕರಣ : ದೊಡ್ಡ ಪಟ್ಟಣಗಳಲ್ಲಿ ಊರುಗಳಲ್ಲಿ ಗ್ರಾಮಸಾರ ಮತ್ತು ಅದನ್ನು ಕೊಂಡೊಯ್ಯುವ ನೀರಿನ ಶುದ್ಧೀಕರಣ ಮುಖ್ಯವಾಗಿ ಬ್ಯಾಕ್ಟೀರಿಯಗಳಿಂದ ಆಗುತ್ತದೆ. ಮನುಷ್ಯನ ಕರುಳಿನಿಂದ ಮಲದೊಂದಿಗೆ ಹೊರಹಾಯ್ದುವು, ಗಾಳಿಯ ಬ್ಯಾಕ್ಟೀರಿಯಗಳು, ಕೆಲವು ಭೂಮಿಯ ಬ್ಯಾಕ್ಟೀರಿಯ ಈ ನೀರಿನಲ್ಲಿರುವುವು. ಇವುಗಳಲ್ಲನೇಕವು ಜೈವಿಕ ವಸ್ತುಗಳನ್ನು ಪರಿವರ್ತಿಸಿ ಅವುಗಳಿಂದ ಯಾವ ಕೆಡಕೂ ಉಂಟಾಗದಂತೆ ಜಡಸ್ಥಿತಿಗೆ ಇಳಿಸುತ್ತವೆ. ಜೈವಿಕವಸ್ತುಗಳ ಕೊಳೆತದ ಫಲವಾಗಿ ಮೀಥೇನ್, ಇಂಗಾಲಾಮ್ಲ, ಸಾರಜನಕ ಮತ್ತು ಅಮೋನಿಯ ಉತ್ಪತ್ತಿಯಾಗುತ್ತವೆ. ಅಮೋನಿಯ ಆಮ್ಲಜನಕ ಸಂಯೋಗದಿಂದ ನೈಟ್ರೈಟ್ ಆಗಿ ಅನಂತರ ನೈಟ್ರೇಟ್ ಆಗುತ್ತದೆ. ಅಂದರೆ ಮೊದಲು ಕೊಳೆತು ನಾರುತ್ತಿದ್ದ ಮಲ ಈ ಬ್ಯಾಕ್ಟೀರಿಯಗಳ ಸತತ ಕ್ರಿಯೆಯಿಂದ ವಾಸನೆಯಿಲ್ಲದ, ಯಾರಿಗೂ ಅಪಾಯವಿಲ್ಲದ ಲವಣವಾಗಿ ಪರಿವರ್ತನೆಯಾಗುತ್ತದೆ. ಈ ಕ್ರಿಯೆಗಳು ಅತ್ಯಲ್ಪಕಾಲದಲ್ಲಿ ಹೆಚ್ಚು ಹಣ ವಿನಿಯೋಗವಾಗದಂತೆ ಕೃತಕವಾಗಿ ವ್ಯವಸ್ಥೆ ಮಾಡಲು ಅನೇಕ ಸಾಧನ ಸಲಕರಣೆಗಳನ್ನು ಅಳವಡಿಸಲಾಗಿದೆ.

ಕೈಗಾರಿಕೋದ್ಯಮಗಳಲ್ಲಿ ಬ್ಯಾಕ್ಟೀರಿಯಗಳ ಪಾತ್ರ : ಇವುಗಳಲ್ಲಿ ಮುಖ್ಯವಾಗಿ ಪರಿಶೀಲಿಸಬೇಕಾದವು 1 ನಾರಿನ ಉತ್ಪಾದನೆ; 2 ಸಕ್ಕರೆ, ಪಿಷ್ಟಗಳನ್ನು ಉಪಯೋಗಿಸಿ ಬೀರ್, ದ್ರಾಕ್ಷರಸಗಳ ತಯಾರಿಕೆ; 3 ಕಿಣ್ವಗಳ ತಯಾರಿಕೆ; 4 ಜೀವಸತ್ವಗಳ ಉತ್ಪಾದನೆ, 5 ಜೈವಿಕ ತಂತ್ರಜ್ಞಾನ ಹಾಗೂ ಆನುವಂಶೀಯ ತಂತ್ರಗಳಲ್ಲಿ.

1 ಕೆಲವು ವಿಶಿಷ್ಟ ಸಸ್ಯಗಳಿಂದ ನಾರು ತಯಾರುಮಾಡುತ್ತಾರೆ. ಅಂಥ ಸಸ್ಯದಲ್ಲಿ ಪೆಕ್ಟಿನ್ ಲವಣ ಇರುವ ಅಂಗಾಂಶವನ್ನು ಕೊಳೆಸಿ ನಾರುಮಾಡುತ್ತಾರೆ. ಈ ಅಂಗಾಂಶ ಮೆತುವಾಗುವಂತೆ ಮಾಡುವ ಕಿಣ್ವಗಳಿರುವ ಬ್ಯಾಕ್ಟೀರಿಯಗಳು ಕೆಲವು ಮಾತ್ರ. ಇವುಗಳಲ್ಲಿ ಮುಖ್ಯವಾದುವು ಕ್ಲಾಸ್ಟ್ರಡಿಯಂ ಪೆಸ್ಸಿಲಿಯಂ ಮತ್ತು ಕ್ಲಾಸ್ಟ್ರಡಿಯಂ ಬ್ಯೂಟೈರಿಕಂ. ಇವುಗಳ ಕ್ರಿಯೆಗೆ ಒಳಪಡಿಸದೆ ಕೃತಕವಾಗಿ ಪೆಕ್ಟಿನ್ ಮೆತುಮಾಡಲು ಪ್ರಯತ್ನಗಳು ನಡೆದಿವೆಯಾದರೂ ಅವು ಇದುವರೆಗೂ ಸಫಲವಾಗಿಲ್ಲ.

2 ಪ್ರಾಚೀನ ಕಾಲದಿಂದಲು ಮಾದಕಗಳು ಎಂದರೆ ಸುರೆ, ಸೋಮ, ದ್ರಾಕ್ಷಾರಸಗಳನ್ನು ಬ್ಯಾಕ್ಟೀರಿಯಗಳ ಬಳಕೆಯಿಂದ ಉತ್ಪಾದನೆ ಮಾಡಲಾಗುತ್ತಿದೆ. ಇಷ್ಟೇ ಅಲ್ಲದೆ ಎಥೆನಾಲ್ ಅಥವಾ ಈಥೈಲ್ ಆಲ್ಕೊಹಾಲ್, ಗ್ಲಿಸೆರಾಲ್, ಬ್ಯೂಟೆನಾಲ್, ಅಸಿಟೋನ್, ಅಸಿಟಿಕ್ ಆಮ್ಲ, ಸಿಟ್ರಿಕ್ ಆಮ್ಲ ಮುಂತಾದುವುಗಳ ತಯಾರಿಕೆಯೂ ವಿಧ ವಿಧವಾದ ಬ್ಯಾಕ್ಟೀರಿಯಗಳಿಂದಲೇ ನಡೆಯುತ್ತದೆ.

3 ಸಸಾರಜನಕ ಮತ್ತು ಪಿಷ್ಟಗಳನ್ನು ವಿಭಜಿಸಲು ಬೇಕಾದ ಕಿಣ್ವಗಳನ್ನು ಕೆಲವು ಶಿಲೀಂಧ್ರಗಳನ್ನು ಉಪಯೋಗಿಸಿ ಅಥವಾ ಬ್ಯಾಕ್ಟೀರಿಯಗಳ ಕ್ರಿಯೆಗಳಿಂದ ಉತ್ಪಾದನೆ ಮಾಡಲಾಗುತ್ತಿದೆ.

4 ಬ್ಯಾಕ್ಟೀರಿಯಗಳಲ್ಲಿ ಅನೇಕವು ಮನುಷ್ಯವರ್ಗಕ್ಕೂ ಪ್ರಾಣಿವರ್ಗಕ್ಕೂ ಅವಶ್ಯಕವಾದ ಬಿ ಜೀವಸತ್ವಗಳನ್ನು ತಾವೇ ತಯಾರಿಸಬಲ್ಲವು. ಇವೆ ಕೆಲವು ಜೀವಸತ್ವಗಳ ಮೂಲವೆಂದು ಹೇಳಬಹುದು. ಸ್ಟ್ರೆಪ್ಟೋಮೈಸಿನ್ ಎಂಬ ಪ್ರತಿ ಜೀವಿಯನ್ನು ತಯಾರಿಸುವಾಗ ಉಪಯೋಗಿಸುವ ಸ್ಟ್ರೆಪ್ಟೋಮೈಸಿನ್ ಗ್ರೈಸಿಯೂಸ್ ಸಾಕಷ್ಟು ಬಿ ಜೀವಸತ್ವವನ್ನು ಸಹ ಕೊಡುತ್ತದೆ. ಇವೇ ಅಲ್ಲದೇ ಇನ್ನೂ ಅನೇಕ ಬ್ಯಾಕ್ಟೀರಿಯಗಳಿಂದ ಜೀವಸತ್ವಗಳನ್ನು ತಯಾರಿಸಬಹುದು.

5 ಇತ್ತೀಚೆಗೆ ಜೈವಿಕ ತಂತ್ರಜ್ಞಾನಗಳಲ್ಲಿ ಬ್ಯಾಕ್ಟೀರಿಯಗಳನ್ನು ಬಳಸಲಾಗುತ್ತಿದೆ. ಜೀವಸತ್ವ, ಔಷದಿ ಮತ್ತು ಕಿಣ್ವಗಳನ್ನು ತಯಾರಿಸಲು ಬ್ಯಾಕ್ಟೀರಿಯಗಳನ್ನು ಉಪಯೋಗಿಸಲಾಗುತ್ತದೆ. ಆನುವಂಶೀಯ ತಂತ್ರದಲ್ಲಿ ಜೀವಿಯೊಂದರ ಜೀನನ್ನು ಹೊರತೆಗೆದು ಬ್ಯಾಕ್ಟೀರಿಯಗಳಲ್ಲಿ ಆಳವಡಿಸಲಾಗುವುದು. ಬ್ಯಾಕ್ಟೀರಿಯ ಆತಿಥೇಯ ಕೋಶವಾಗಿ, ಜೀನ್‌ನ ಸಂಗ್ರಹದಂತಾಗುತ್ತದೆ. ಜೈವಿಕ ಘಟಕಗಳನ್ನು ತಯಾರಿಸಲು, ಅಂತರ್ ಜೀನ್‌ಗಳನ್ನು ತಯಾರಿಸಲು ಬಳಕೆಯಾಗುತ್ತದೆ.

ಬ್ಯಾಕ್ಟೀರಿಯಗಳಲ್ಲಿ ಕೆಲವು ರೋಗಕಾರಕಗಳು. ಇವುಗಳಲ್ಲಿ ಮುಖ್ಯವಾದವು ಸ್ಟ್ರೆಪ್ಟೊಕಾಕಸ್, ಸ್ಟೆಫೈಲೋಕಾಕಸ್, ನ್ಯೂಮೋಕಾಕಸ್, ನೈಸೀರಿಯ, ಕೋರಿನಿ, ಬ್ಯಾಕ್ಟೀರಿಯಂ, ಸಾಲ್ಮನೆಲ್ಲ, ಶಿಗೆಲ್ಲ, ವಿಬ್ರಿಯೋ, ಪ್ಯಾಸ್ಚುರೆಲ್ಲ, ಬ್ರೂಸೆಲ್ಲ, ಮೈಕೋಬ್ಯಾಕ್ಟೀರಿಯಂ ಮತ್ತು ಸ್ಪೈರೋಕೀಟ ಇತ್ಯಾದಿ. ಇವು ಸಂಧಿವಾತ, ಹೃದಯದ ಒಳಪೊರೆಯ ಉರಿಯೂತ, ಕೀವು ಹುಣ್ಣುಗಳು, ಶ್ವಾಸಕೋಶಗಳ ಉರಿಯೂತ, ಮೇಹ, ಗಂಟಲುಮಾರಿ, ಶೀತಜ್ವರ, ಪ್ಲೇಗು, ಕಾಲರಾ ಇತ್ಯಾದಿ ರೋಗವುಂಟು ಮಾಡುತ್ತವೆ. ಮಾನವಕೋಟಿಗೇ ಇವು ಶತ್ರುಗಳು. ಭಯಂಕರ ಅಂಟುಜಾಡ್ಯಗಳನ್ನು ಸೋಂಕಿನ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ಹರಡುವುವು. ಈ ಗುಂಪುಗಳ ಬ್ಯಾಕ್ಟೀರಿಯಗಳಲ್ಲಿ ಅನೇಕವನ್ನು ನಾವು ಜಯಿಸಿದ್ದೇವೆ. ಅವುಗಳಿಂದ ಉಂಟಾಗುವ ರೋಗಗಳಿಗೆ ಪ್ರತಿಬಂಧಕಗಳನ್ನಾಗಲೀ ಅಥವಾ ಬಂದ ಅನಂತರ ಅವುಗಳನ್ನು ಹತೋಟಿಗೆ ತರಲು ದಿವ್ಯ ಔಷಧಗಳನ್ನಾಗಲೀ ಆಗಲೇ ಕಂಡುಹಿಡಿದಿದ್ದೇವೆ. ಆದರೂ ಅವುಗಳಿಂದ ಕಾಟ ತಪ್ಪಿಲ್ಲ. ಇವನ್ನು ಜಯಿಸಲು ನಿರಂತರ ಹೋರಾಟ ನಡೆದಿದೆ. ***

**ಏಕಾಣುಜೀವಿ ಸೋಂಕು ರೋಗಗಳು:** ಒಂದು ಜೀವಿಯಿಂದ ಇನ್ನೊಂದು ಜೀವಿಗೆ ಹರಡುವ ರೋಗಗಳೇ ಸೊಂಕಿನ ರೋಗಗಳು (ಇನ್‌ಫೆಕ್ಷಿಯಸ್ ಡಿಸೀಸಸ್). ಆತಿಥೇಯ ಜೀವಿಯನ್ನು (ಹೋಸ್ಟ್) ಆಕ್ರಮಿಸಿ ಅದರ ಅಂಗಾಂಶಗಳನ್ನು ಪ್ರವೇಶಿಸಿ ಅಲ್ಲಿ ವಿಪರೀತವಾಗಿ ವೃದ್ಧಿಗೊಳ್ಳುವ ಸೂಕ್ಷ್ಮಜೀವಿಗಳಿಂದ ಜನಿಸುವ ರೋಗಗಳು. ಆತಿಥೇಯ ಜೀವಿ ಮನುಷ್ಯ, ಪ್ರಾಣಿ, ಸಸ್ಯ. ಕೀಟ ಅಥವಾ ಬೇರೆ ಒಂದು ಸೂಕ್ಷ್ಮಜೀವಿಯೇ ಆಗಬಹುದು. ಉದಾಹರಣೆಗೆ ಏಕಾಣುಜೀವಿಗಳಲ್ಲೇ (ಬ್ಯಾಕ್ಟೀರಿಯಾ) ರೋಗಗಳನ್ನು ಉಂಟುಮಾಡಬಲ್ಲ ವೈರಸ್ ಸೂಕ್ಷ್ಮ ಜೀವಿಗಳಿವೆ. ಇವುಗಳ ಹೆಸರು ಏಕಾಣುಜೀವಿಹರಗಳು (ಬ್ಯಾಕೀರಿಯೋಫೇಜಸ್). ಮುಖ್ಯ ವಿಷಯವಿಷ್ಟೆ–ಸೂಕ್ಷ್ಮಜೀವಿ ಅಂಗಾಂಶದಲ್ಲಿ ನೆಲೆಸಬೇಕು, ವೃದ್ಧಿಗೊಳ್ಳಬೇಕು ಮತ್ತು ಅಂಗಾಂಶವನ್ನು ಘಾಸಿಗೊಳಿಸಬೇಕು. ಈ ಕೊನೆಯ ಅಂಶ ನೆರ್‌ವೇರದಿದ್ದರೆ ಅಂಥ ಸೂಕ್ಷ್ಮ ಜೀವಿಗಳು ರೋಗವನ್ನು ಉಂಟು ಮಾಡುವುದಿಲ್ಲ–ಅವು ಆತಿಥೇಯ ಜೀವಿಯನ್ನು ಅವಲಂಬಿಸಿರುವ ಪರಪಿಂಡಿ ಜೀವಿಗಳಷ್ಟೇ.

ಸೋಂಕು ರೋಗದ ಹುಟ್ಟು : ಜೀವವಿಕಾಸದಲ್ಲಿ ಸೋಂಕು ಹೇಗೆ ಎಲ್ಲಿ ಹುಟ್ಟಿತೆಂದು ಇನ್ನೂ ಖಚಿತವಾಗಿ ತಿಳಿದಿಲ್ಲ. ಮೊತ್ತ ಮೊದಲಲ್ಲಿ ಜೀವವಿಲ್ಲದ ವಸ್ತುಗಳನ್ನು ಆಹಾರವಾಗಿ ಬಳಸಿ ಕೊಳೆತಿನಿ (ಸ್ಯಾಪ್ರೊಫೈಟ್ಸ್) ಏಕಾಣುಜೀವಿಗಳು ವಿಕಾಸಗೊಂಡವು ಎನ್ನಬಹುದು. ಮಣ್ಣಲ್ಲೂ ಕೊಳೆಯುತ್ತಿರುವ ಸೊಪ್ಪುಸದೆಗಳಲ್ಲೂ ಬಿದ್ದಿದ್ದ ಇವುಗಳಲ್ಲಿ ಕೆಲವು ಪ್ರಾಣಿಗಳ ಗಾಯಗಳ ಮೂಲಕ ಆಗಾಗ್ಗೆ ಒಳಹೊಕ್ಕಿರಬೇಕು. ಆದರೆ ಆತಿಥೇಯದ ರಸಗಳ ಹೆಚ್ಚಿನ ಬಲದಿಂದಲೋ ಅವುಗಳಿಂದ ಸಾಕಷ್ಟು ಪೋಷಣೆ ದಕ್ಕದೆಯೋ ಇವುಗಳಲ್ಲಿ ಬಹುಪಾಲು ಸತ್ತರೂ ಕೆಲವಾದರೂ ಜಗ್ಗದೆ ನೆಲೆಯೂರಿರಬೇಕು. ಆಗಿನ ಹೊಸ ಪರಿಸರ ಸಂದರ್ಭಗಳಿಗೆ ತಕ್ಕಂತೆ ಹೊಂದಿಕೊಂಡಂಥ ಏಕಾಣುಜೀವಿಗಳು ಮಾತ್ರ ಉಳಿದಿರಬೇಕು. ಈ ಪ್ರಯತ್ನದಲ್ಲಿ ರೋಗಾಣುಗಳು ಹೊರಬಿಟ್ಟ ವಿಷ ಆತಿಥೇಯ ಜೀವಿಯುನ್ನು ಬಲಿತೆಗೆದುಕೊಂಡಿರಲೂಬಹುದು. ಇಂಥ ಪರಿಸ್ಥಿತಿಯಿಂದ ರೋಗಾಣುಗಳಿಗೂ ಕೇಡು ತಪ್ಪಿದ್ದಲ್ಲ. ಆಗ ಬೇರೊಂದು ಪ್ರಾಣಿಯಲ್ಲಿ ಅವು ಸೇರಿಕೊಂಡು ಹೊಸ ನೆಲೆಯಲ್ಲಿ ಮತ್ತೆ ಪರತಂತ್ರಜೀವಿಗಳಾಗಿ ಬಾಳಬೇಕಾಗುತ್ತದೆ. ವಿಕಾಸದಲ್ಲಿ ಇಂಥ ಸರಣಿಗಳು ಲೆಕ್ಕವಿಲ್ಲದಷ್ಟು ನಡೆದುಹೋಗಿವೆ. ಪರಿಸರಕ್ಕೆ ಹೊಂದಿಕೊಂಡ ರೋಗಾಣುಗಳು ಬದಲಾದುವು, ಉಳಿದುಕೊಂಡವು. ಹೊಂದಲಾಗದವು ನಿರ್ನಾಮವಾಗಿ ಹೋದುವು.

ಪ್ರಪಂಚದಲ್ಲಿರುವ ರೋಗಾಣುಗಳಿಗೆ ಲೆಕ್ಕವೇ ಇಲ್ಲ. ಒಂದೊಂದು ಬಗೆಯದು ಗೊತ್ತಾದ ಒಂದೊಂದು ರೋಗ ಹುಟ್ಟಿಸಬಹುದು. ಆದರೆ ರೋಗಾಣುಗಳ ದಾಳಿಯನ್ನು ಎದುರಿಸುವುದರಲ್ಲಿ ದೇಹ ಎದುರಿಸುವ ಬಗೆಗಳು ಮಾತ್ರ ಕೆಲವೇ ಆಗಿರುವುದರಿಂದ ಬಹುಪಾಲು ರೋಗಗಳನ್ನು ಖಚಿತವಾಗಿ ಗುರುತಿಸಬೇಕಾದರೆ ಪ್ರಯೋಗಾಲಯದ ಪರೀಕ್ಷೆಗಳಾಗಬೇಕು. ಇದರಿಂದಲೇ ಈಗ ಬೇರೆ ಬೇರೆ ಎಂದು ಗುರುತಿಸಿರುವ ಎಷ್ಟೊ ರೋಗಗಳು ಮೊದಲು ಹಾಗೆ ತಿಳಿದಿರಲಿಲ್ಲ. ಉರಿಶೀತ (ಇನ್‌ಫ್ಲುಯೆಂಜ) ಹಿಂದೆ ಬೇರೆ ಕಾಯಿಲೆಗಳ ಲೆಕ್ಕಕ್ಕೆ ಸೇರುತ್ತಿತ್ತು. ಕುಷ್ಠರೋಗಕ್ಕೂ ಬಿಳಿಯ ತೊನ್ನಿಗೂ ಚರ್ಮದ ಇನ್ನೂ ಹಲವಾರು ಬೇರೂರಿದ ರೋಗಗಳಿಗೂ ವ್ಯತ್ಯಾಸಗಳನ್ನೇ ಹಿಂದಿನ ಕಾಲದಲ್ಲಿ ಕಾಣದೆ ಎಲ್ಲವನ್ನೂ ಕುಷ್ಠ ಎನ್ನುತ್ತಿದ್ದರು. ಹಾಗೇ ವಿಪರೀತ ವಾಂತಿ, ಭೇದಿ ಆಯಿತೆಂದರೆ ಸಾಕು, ಕಾಲರ ಎನ್ನುವ ಕಾಲ ಈಗಲೂ ಇದೆ. ಹಿಂದೆ ಮಹಾಮಾರಿ ಎಂದು ಹೆಸರಾಗಿದ್ದ ಪ್ಲೇಗಿನಲ್ಲಿ ಇನ್ನೂ ಬೇರೆ ರೋಗಗಳೂ ಸೇರಿಕೊಳ್ಳುತ್ತಿದ್ದುವು. ಪುರಾತನ ರೋಗಗಳಾದ ಸಿಡುಬೂ ಘುಪ್ಪುಸದ್ದಲ್ಲದ ಕ್ಷಯವೂ ಈಜಿಪ್ಟಿನ ಮಮ್ಮಿಗಳಲ್ಲೂ ಇದ್ದುದರ ಗುರುತುಗಳು ಕಂಡುಬಂದಿವೆ. ಗ್ರೀಕರ, ಅದಕ್ಕೂ ಹಿಂದಿನ ನಾಗರಿಕ ಸಮಾಜಗಳಲ್ಲಿ ಗಂಟಲಮಾರಿ (ಡಿಫ್ತೀರಿಯ), ಘುಪ್ಪುಸುರಿತ (ನ್ಯುಮೋನಿಯ), ಕಾಲರ ರೋಗಗಳಿದ್ದ ಕುರುಹುಗಳು ದೊರೆತಿವೆ.

ಚರಿತ್ರೆ : ಸೋಂಕಿನ ರೋಗಗಳ ಗುಣ, ಕಾರಣಗಳ ವಿಷಯದಲ್ಲಿ ಪೂರ್ವ ಕಾಲದಿಂದಲೂ ಬಲು ವಿಚಿತ್ರ ನಂಬಿಕೆಗಳಿದ್ದುವು. ಅವು ಯಾವುದೋ ಕಾಣದ ಶಕ್ತಿಯ

ಕಾಟವೆಂದೇ ಜನ ನಂಬಿದ್ದರು. ಆಮೇಲಿನ ಶೋಧಕರಿಗೆ ನಿಜದ ಕತೆ ಕಂಡುಕೊಳ್ಳುವುದರಲ್ಲಿ ಇವು ಯಾವುವೂ ನೆರವಾಗಲೇ ಇಲ್ಲ. ಆದರೆ ಉಪದಂಶದ (ಸಿಫಿಲಿಸ್) ವಿಷಯವಾಗಿ ಫ್ರಾಕಸ್ಟೋರಿಯಸನಂಥವರು ಹೇಳಿದ್ದು ನಿಜ ವಿಚಾರಕ್ಕೆ ಹತ್ತಿರ ಬಂದಿದ್ದರೂ ಆಗ ಅದನ್ನು ಖಚಿತಪಡಿಸುವ ಪರಿಕರ, ಮುಟ್ಟುಗಳೂ ವಿಧಾನಗಳೂ ಇಲ್ಲದ್ದರಿಂದ ದೃಢಗೊಳಿಸಲಾಗಲಿಲ್ಲ. ೧೭ನೆಯ ಶತಮಾನದಲ್ಲಿ ಆಂತೊನಿವಾನ್ ಲೀವನ್ ಹಾಕ್ ಸೂಕ್ಷ್ಮದರ್ಶಕವನ್ನು ತಯಾರಿಸುವತನಕ ಒಂಟಿ ಊತಕದ ಜೀವಿಗಳನ್ನು ಯಾರಿಗೂ ನೋಡುವುದು ಸಾಧ್ಯವಾಗಿರಲಿಲ್ಲ. ಅಷ್ಟಾದರೂ ಬೇಕಾದ ಇತರ ವಿಧಾನಗಳೂ ಆಗಿನ್ನೂ ಗೊತ್ತಿರದಿದ್ದುದರಿಂದ ರೋಗಕಾರಣಗಳನ್ನು ಕಂಡು ಹಿಡಿಯುವುದರಲ್ಲಿ ಯಾವ ಮುನ್ನಡೆಯೂ ಆಗಲಿಲ್ಲ.

ಸೂಕ್ಷ್ಮಜೀವಿ ವಿಜ್ಞಾನ (ಮೈಕ್ರೊಬಯಾಲಜಿ) ನಿಜವಾಗಿ ಹುಟ್ಟಿದ್ದು ಲೂಯಿ ಪ್ಯಾಶ್ಚರ್‌ನಿಂದ (ನೋಡಿ–ಪ್ಯಾಶ್ಚರ್, ಲೂಯಿ). ಕೆಲವು ಜೈವಿಕ ಸಂಯುಕ್ತಗಳು ಒಡೆವುದಕ್ಕೂ ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣಬರುವ, ಬದುಕಿರುವ ಜೀವಾಣುಗಳು ಇರುವುದಕ್ಕೂ ನಿಕಟಸಂಬಂಧ ಇರುವುದನ್ನು ಈತ ಚುರುಕಾಗಿ ಗುರುತಿಸಿದ. ಒಂದೊಂದು ಜೀವಾಣುವಿನಿಂದಲೂ ಬೇರೆ ಬೇರೆ ತೆರನಾಗಿ ಹುದುಗೇಳುವುದನ್ನು (ಫರ್ಮೆಂಟೇಷನ್) ಕಂಡುಕೊಂಡ. ಇನ್ನೂ ಹೆಚ್ಚಿನದಾಗಿ ಜೀವಿಗಳು ಇದ್ದಕ್ಕಿದ್ದ ಹಾಗೆ ಹುಟ್ಟಿಕೊಳ್ಳುತ್ತವೆಂಬ ಅಂದಿನ ನಂಬಿಕೆಯನ್ನೂ ಎದುರಿಸಿ, ಚಾಲೂಕಿನ ಪ್ರಯೋಗ ಸಾಲುಗಳಿಂದ, ಮೊದಲೇ ಇರುವ ಜೀವಾಣುಗಳೇ ವೃದ್ಧಿಗೊಂಡು ಅದೇ ತೆರನ ಜೀವಾಣುಗಳು ಹುಟ್ಟಿಕೊಳ್ಳುತ್ತವೆಂದು ಅನುಮಾನವಿಲ್ಲದಂತೆ ತೋರಿಸಿ ಕೊಟ್ಟ. ಪರಿಸರ, ಸ್ಥಿತಿಗಳು ಅನುಕೂಲವಾಗಿದ್ದರೆ, ಜೀವಾಣುಗಳ ತಳಿ ಸಾಲುಗಳನ್ನೇ ದ್ರವಮಾಧ್ಯಮಗಳಲ್ಲಿ (ಮೀಡಿಯ) ಬೆಳೆಸಬಹುದೆಂದೂ ಅವುಗಳಲ್ಲಿರುವ ಜೀವಿಗಳನ್ನೆಲ್ಲ ಕುದಿಸಿ ಕೊಂದುಬಿಟ್ಟಮೇಲೆ ಬದುಕಿರುವ ಜೀವಿಗಳು ಒಳಹೋಗದಂತೆ ಎಚ್ಚರದಿಂದಿದ್ದರೆ ಯಾವ ಜೀವಿಯೂ ಬೆಳೆಯಲಾರದೆಂದೂ ಕೆಲವು ಹೊಸ ಜೀವಿಗಳನ್ನು ಒಳಬಿಟ್ಟರೆ ಅದರ ಗೊತ್ತಾದ ತೆರನ ಹುದುಗೇಳುವುದನ್ನೂ ಅನುಮಾನವಿಲ್ಲದಂತೆ ತೋರಿಸಿದ. ಇನ್ನಿತರ ಚಟುವಟಿಕೆಗಳಿಂದ ರೋಗಕಾರಣಗಳನ್ನು ಹುಡುಕಲು ತೊಡಗಿ ಕೊನೆಗೆ ಅನೇಕ ರೋಗಗಳಲ್ಲಿ ಅಂಗಾಂಶಗಳಲ್ಲಿ ಗೊತ್ತಾದ ಸೂಕ್ಷ್ಮಜೀವಿಗಳು ಬೆಳೆಯುತ್ತಿರುವುದನ್ನು ರುಜುವಾತುಪಡಿಸಿ ಅಂದಿನ ವೈದ್ಯಕುಲದ ಮೂಢನಂಬಿಕೆ ಎದುರು ಹೋರಾಡಿ, ರೋಗಗಳು ಹರಡುವ ಇಡೀ ಕಲ್ಪನೆಯಲ್ಲಿಯೇ ಕ್ರಾಂತಿ ಎಬ್ಬಿಸಿದ.

ಬೇರೆ ಬೇರೆ ಸೂಕ್ಷ್ಮಜೀವಾಣುಗಳ ಅಚ್ಚ ತಳಿಗಳನ್ನು ಬೆಳೆಸುವ ತಾಂತ್ರಿಕ ವಿಧಾನಗಳನ್ನು ಜರ್ಮನಿಯ ಏಕಾಣುಜೀವಿಶಾಸ್ತ್ರಜ್ಞ ರಾಬರ್ಟ್ ಕಾಕ್ (ನೋಡಿ–ಕಾಕ್, ರಾಬರ್ಟ್) ಜಾರಿಗೆ ತಂದು ಕ್ಷಯ, ಕಾಲರ ರೋಗಗಳ ಕಾರಣಗಳಾದ ಜೀವಾಣುಗಳನ್ನು ವಿವರಿಸಿ ತೋರಿಸಿದ. ಪ್ಯಾಶ್ಚರ್, ಕಾಕ್ ಇವರೊಡನೆ ಅಭ್ಯಸಿಸಿದವರೇ ರೋಗಗಳಿಗೆ ಕಾರಣಗಳಾದ ರೋಗಕಾರಕಗಳನ್ನು ಕಂಡುಹಿಡಿದರು. ಗಾಯಗಳಲ್ಲಿ ನಂಜಾಗುವುದನ್ನು ತಪ್ಪಿಸಲು, ಗ್ಲಾಸ್ಗೋದಲ್ಲಿದ್ದ ಜೋಸೆಫ್ ಲಿಸ್ಟರ್, ಪ್ಯಾಶ್ಚರನ ತತ್ತ್ವಗಳನ್ನು ಅನುಸರಿಸಿದ್ದರಿಂದ ಶಸ್ತ್ರವೈದ್ಯ ಚೆನ್ನಾಗಿ ಕೈಗೂಡಿದ್ದು ಇಡೀ ಶಸ್ತ್ರ ವೈದ್ಯದಲ್ಲೇ ಒಂದು ಹೊಸ ಯುಗ ಕಾಲಿಟ್ಟಿತು. ನೆಲ ಫಲವತ್ತಾಗಿರಬೇಕಾದರೆ, ಕೇವಲ ಸೂಕ್ಷ್ಮಜೀವಿಗಳ ಚಟುವಟಿಕೆಯಿಂದಲೇ ಎನ್ನುವುದು ಬೇಸಾಯದ ಶೋಧನೆಗಳಿಂದ ತೋರಿಬಂದಿತು. ಪ್ರಾಣಿಗಳ, ಗಿಡಮರಗಳ ಪ್ರಪಂಚಗಳಲ್ಲಿ ಸೋಂಕಿನ ರೋಗಗಳು ಗೊತ್ತಾದ ಸೂಕ್ಷ್ಮಜೀವಿಗಳಿಂದಲೇ ಏಳುವುದು ಖಚಿತವಾಯಿತು. ರೋಗನಿದಾನ (ಡಯಗ್ನೋಸಿಸ್), ಚಿಕಿತ್ಸೆಗಳ ವಿಧಾನಗಳು ಪ್ಯಾಶ್ಚರನ ಮೂಲ ಶೋಧನೆಗಳ ಪರಿಣಾಮ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಕಾರಣಗಳು : ಒಂದು ರೋಗ ಬರಿಸುವುದರಲ್ಲಿ ಒಂದು ಸೂಕ್ಷ್ಮಜೀವಿಯ ಗೊತ್ತಾದ ಪಾತ್ರವನ್ನು ಕಂಡುಕೊಳ್ಳುವುದರಲ್ಲಿ ಕಾಕ್‌ನ ಮೂರು ಮುಖ್ಯ ಮೂಲ ಸೂತ್ರಗಳು ಇಂದಿಗೂ ಹೆಸರಾಗಿವೆ–೧ ಒಂದು ರೋಗ ಅನುಭವಿಸುವ ಒಬ್ಬೊಬ್ಬರಲ್ಲೂ ರೋಗಕಾರಕ ಜೀವಾಣುಗಳು ಇದ್ದೇ ತೀರಬೇಕು. ಯಾವ ಅಂಗದಲ್ಲಿ ಯಾವ ತೆರನ ರೋಗ ಹೇಗೆ ಕಾಣಿಸಿಕೊಂಡಿದೆ ಎನ್ನುವುದಕ್ಕೆ ತಕ್ಕಂತೆ ರೋಗಾಣುಗಳನ್ನು ಅರಸಬೇಕು. ೨ ರೋಗ ಹತ್ತಿರುವ ಅಂಗಾಂಶಗಳಿಂದ ರೋಗಾಣುಗಳನ್ನು ಬೇರ್ಪಡಿಸಿ ಹಲವಾರು ತಲೆಮಾರಿನ ಅಚ್ಚ ತಳಿಗಳನ್ನು ಎಬ್ಬಿಸಿ ಬೆಳೆಸುವಂತಿರಬೇಕು. ೩ ಅಚ್ಚ ತಳಿಯ ರೋಗಾಣುಗಳನ್ನು ಆ ರೋಗಕ್ಕೀಡಾಗುವ ಪ್ರಾಣಿಗೆ ಹತ್ತಿಸಿದರೆ ಆ ರೋಗ ಅದರಲ್ಲಿ ತಲೆದೋರಬೇಕು; ಆ ರೋಗದ ಪ್ರಾಣಿಯ ಅಂಗಾಂಶಗಳಿಂದ ಅದೇ ರೋಗಾಣುಗಳನ್ನು ಹೊರತೆಗೆವಂತಿರಬೇಕು. ಬಹುಪಾಲು ಏಕಾಣುಜೀವಿಕ ರೋಗಗಳಲ್ಲಿ ಈ ಮೂಲಸೂತ್ರಗಳು ಚೆನ್ನಾಗಿ ಹೊಂದಿಕೊಳ್ಳುತ್ತವೆ. ಆದರೆ, ಕುಷ್ಠರೋಗದಲ್ಲಿ ೨, ೩ನೆಯವನ್ನು ಈಗಲೀಗ ಬಲು ಕಷ್ಟದಿಂದ ಮಾತ್ರ ತೋರಬಹುದು. ಕುಷ್ಠ ರೋಗಿಗಳೆಲ್ಲರಲ್ಲೂ ಇದರ ರೋಗಾಣುಗಳು ಇದ್ದೇ ಇರುವುದರಿಂದ, ಮೂಲಸೂತ್ರ ರೀತಿಯಲ್ಲಿ ಅನುಮಾನವೇ ಇಲ್ಲ.

ಕೆಲವೇಳೆ (ರಿಕೆಟ್ಸನ ವಿಷಕಣಗಳ ಸೋಂಕುಗಳ ತೆರನವಲ್ಲಿ ಇದ್ದಹಾಗೆ) ರೋಗಾಣುಗಳನ್ನು ಪ್ರಯೋಗಾಲಯದ ಕೃತಕ ಮಾಧ್ಯಮಗಳಲ್ಲಿ ಬೆಳೆಸುವುದು ಆಗಲಿಲ್ಲ. ಅಲ್ಲಿ ಈ ಮೂಲಸೂತ್ರಗಳೆಲ್ಲ ನಡೆಯದ್ದರಿಂದ, ೨ನೆಯ ಮೂಲಸೂತ್ರದಲ್ಲಿ ಪ್ರಾಣಿಯ ಬದಲಾಗಿ ರೋಗಾಣುಗಳನ್ನು ಬೆಳೆಸಲು ಊತಕಗಳ ತಳಿವರಸೆಯನ್ನೂ (ಕಲ್ಚರ್) ಕೋಳಿಮರಿ ಪಿಂಡವನ್ನೂ ಬಳಸಬೇಕಾಯಿತು. ಸೂಕ್ಷ್ಮ ದರ್ಶಕದಲ್ಲೂ ಕಾಣದಿದ್ದು ಜೀವವಿರದ ವಸ್ತುಗಳಿಂದ ಬೇರೆಯಾಗಿ ಗುರುತಿಸಲಾಗದ ಸಣ್ಣ ವಿಷಕಣಗಳ ವಿಚಾರದಲ್ಲಿ ಮೊದಲನೆಯ ಮೂಲಸೂತ್ರವನ್ನು ಕೂಡ ತೋರುವುದು ಬಲುಕಷ್ಟ. ಇದಕ್ಕೆ ಚೆನ್ನಾದ ಉಪಾಯಗಳಾಗಿ, ಬಗೆಬಗೆಯ ಮಟ್ಟದ ಸೋಸಿಕಗಳಿಂದಲೂ ವಿಪರೀತ ವೇಗದಿಂದ ಸುತ್ತುವ ಅಪಕೇಂದ್ರಣ ಯಂತ್ರದಿಂದ (ಸೆಂಟ್ರಿಫ್ಯೂಜ್) ವಿಷಕಣಗಳ ಗಾತ್ರವೂ ಕೊಂಚಮಟ್ಟಿಗೆ ಆಕಾರವೂ ಗೊತ್ತಾಗುತ್ತವೆ. ಅಲ್ಲದೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ನೆರವೂ ಅಪಾರ. ಕಾಕ್‌ನ ಕಾಲದಿಂದೀಚೆಗೆ ರೋಗಕಾರಣಗಳಾದ ಜೀವಾಣುಗಳನ್ನು ಖಚಿತಪಡಿಸಲು ಹೊಸ ವಿಧಾನಗಳು ಬಂದಿವೆ. ರೋಗ ಹತ್ತಿದ ಮೇಲೆ ರಕ್ತದ ಹರಿವಿನಲ್ಲಿ ಪ್ರತಿ ರಕ್ಷಣೆಕೊಡುವ (ಇಮ್ಯುನೈಸಿಂಗ್) ವಸ್ತುಗಳು ಹುಟ್ಟಿ, ಅನುಮಾನವಿರುವ ರೋಗಾಣು ಅಂಟಣಿಸುವ (ಅಗ್ಲೂಟಿನೇಟಿಂಗ್) ಇಲ್ಲವೇ ಲಯಿಸುವ ಅದರ ಸೋಂಕು ಬಲ ಇಲ್ಲವೇ ವಿಷವನ್ನು ತಟಸ್ಥಗೊಳಿಸುವ (ನ್ಯೂಟ್ರಲೈಸಿಂಗ್) ಗುಣಗಳನ್ನು ತೋರುವುದರಿಂದ ರೋಗವನ್ನು ಕಂಡುಕೊಳ್ಳಬಹುದು.

ರೋಗಕಾರಕಗಳು: ಸಾಮಾನ್ಯವಾಗಿ, ಈ ಸೂಕ್ಷ್ಮಜೀವಿಗಳಲ್ಲಿ ಹಲವಾರು ಬಗೆಗಳಿರುವುವು. ಏಕಾಣುಜೀವಿಗಳಿಂದ ಏಳುವ ರೋಗಗಳಲ್ಲಿ ಮುಖ್ಯವಾದವನ್ನು ಲೇಖನದ ಕೊನೆಯಲ್ಲಿರುವ ವಿವರಪಟ್ಟಿಯಲ್ಲಿ ಕೊಟ್ಟಿದೆ. ರೋಗಕಾರಕ ಏಕಾಣುಜೀವಿಗಳ ಸೋಂಕು ಅಂಟಿಸುವ ಮೈ. ಒಳನುಗ್ಗುವ ಬಲಗಳು ಒಂದೊಂದರದೂ ಒಂದೊಂದು ತೆರ. ಇವುಗಳಲ್ಲಿ ಬಹುಪಾಲು ಮೈಯೊಳಗೇ ವೃದ್ಧಿಗೊಂಡು ಒಳಜೀವಿವಿಷಗಳನ್ನು (ಎಂಡೊಟಾಕ್ಸಿನ್ಸ್) ಹೊರಬಿಡುವುವು. ಗಂಟಲಮಾರಿ, ಸೆಟೆಬೇನೆ ತೆರನ ಕೆಲವು ಮಾತ್ರ ಗಂಟಲಲ್ಲೋ ಗಾಯದಲ್ಲೋ ಒಂದೆಡೆಯಲ್ಲಿ ಹೊರಗೇ ಇದ್ದು ಸುರಿಸಿದ ಬಲು ಬಲವಾದ ಹೊರಜೀವಿವಿಷಗಳು (ಎಕ್ಸೊಟಾಕ್ಸಿನ್ಸ್) ರಕ್ತದ ಹರಿವಿನಲ್ಲಿ ಬೇರೆ ಭಾಗಗಳಿಗೆ ಸಾಗುತ್ತವೆ. ಊರುಬಾಡುಬೇನೆಯ ಕದಿರುಜೀವಿ (ಕ್ಲಾಸ್ಟ್ರಿಡಿಯಂ ಬಾಟುಲೈನಂ) ಪರತಂತ್ರ ಅಲ್ಲವೇ ಅಲ್ಲ. ಸರಿಯಾದ ಆವರಣದಲ್ಲಿರುವ ಆಹಾರದೊಳಗೆ ಇದು ಸೇರಿಬಿಟ್ಟರೆ ವೃದ್ಧಿಗೊಳ್ಳುತ್ತ ಹೊರಜೀವಿವಿಷವನ್ನು ಸುರಿಸುವುದರಿಂದ, ಇದರಿಂದೇಳುವ ರೋಗ ವಿಷವೇರಿಕೆಯೇ ಹೊರತು ಸೋಂಕು ಎನ್ನಿಸಿಕೊಳ್ಳದು.

ಸಾಮಾನ್ಯವಾಗಿ ಸಂದಿಪದಿಗಳ ಕರುಳುಗಳಲ್ಲಿರುವ ಪುಟ್ಟ ಜೀವಾಣುಗಳಾದ ರಿಕೆಟ್ಸನ ರೋಗಾಣುಗಳಲ್ಲಿ ಕೆಲವು ಮಾನವನಿಗೂ ಒಗ್ಗಿಕೊಂಡು, ಟೈಫಸ್ ಜ್ವರ, ರಾಕಿ ಪರ್ವತದ ಚುಕ್ಕೆ ಜ್ವರ, ಸುಟ್ಸುಗಮೂಷಿ, ಕ್ಯುಜ್ವರ, ಟ್ರೆಂಚ್ ಜ್ವರಗಳನ್ನು ಬರಿಸಬಲ್ಲವು. ಹೇನು ಕೂರೆಗಳು, ಚಿಗಟಗಳು, ಉಣ್ಣೆಗಳು, ನುಸಿಗಳಿಂದ ಮಾನವನಿಗೆ ಈ ಸೋಂಕುಗಳು ಸಾಗಿ ಬರುತ್ತವೆ.

ವೈರಸ್‌ಕಣಗಳು ರಿಕೆಟ್ಸನ ರೋಗಾಣುಗಳಿಗಿಂತಲೂ ಸಣ್ಣವು. ಸಾಧಾರಣ ಸೂಕ್ಷ್ಮದರ್ಶಕದಲ್ಲಿ ಇವು ಕಾಣಿಸವು. ಏಕಾಣುಜೀವಿಗಳ ಶೋಧಕಗಳ (ಫಿಲ್ಟರ್ಸ್) ಮೂಲಕ ತೂರುತ್ತವೆ. ಬದುಕಿರುವ ಊತಕಗಳಿಲ್ಲದಿದ್ದರೆ ಬೆಳೆಯವು. ಕೆಲವಂತೂ ಮಾನವನಲ್ಲಿ ಮಾತ್ರ ಪರಪಿಂಡಿಗಳಾಗಿ ಗೊತ್ತಾದ ರೋಗಗಳನ್ನು ಬರಿಸುತ್ತವೆ. ಇನ್ನು ಹಲವು ಪ್ರಾಣಿಗಳನ್ನು ಹತ್ತಿಕೊಂಡರೆ, ಮತ್ತೆ ಬೇರೆಯವು ಪ್ರಾಣಿ, ಮಾನವ ಇಬ್ಬರನ್ನೂ ಕಾಡುತ್ತವೆ. ಎಷ್ಟೋ ವೇಳೆ ಗಾಳಿಯ ಮೂಲಕ ತೇಲಿ ಬಂದರೂ ಕೀಟಗಳ ಕಡಿತದಿಂದಲೂ ಕೆಲವೇಳೆ ಆಹಾರ ಮಾರ್ಗವಾಗಿ ಒಳಸೇರಿ ಹಲ ಬಗೆಗಳ ರೋಗವೇಳಿಸುವುವು.

ಹುಗುಳು (ತ್ರಷ್) ರೋಗದ ಬಿಳಿಯ ಕಾಯಿಕ (ಕಾಂಡಿಡ ಆಲ್ಬಿಕಾನ್ಸ್), ಇನ್ನೂ ಹಲವಾರು ಫುಪ್ಫುಸ ರೋಗಗಳಿಗೂ ಕಾರಣವಾಗುವಂಥ ಹುದುಗು ಜೀವಿಗಳೂ (ಯೀಸ್ಟ್) ಅದೇ ತೆರನ ಅಣಬೆಗಳೂ (ಫಂಗಸ್) ಮಾನವನಿಗೆ ರೋಗಕಾರಕಗಳು. ಹಲವಾರು ಅಣಬೆಗಳಲ್ಲಿ ತೀರ ಸಾಮಾನ್ಯವಾದ ಹುಳುಕಡ್ಡಿ (ಗಜಕಡ್ಡಿ) ತೆರನ ಎಷ್ಟೋ ಅಣಬೆಗಳೂ ರೋಗಕಾರಕಗಳು.

ಒಂಟಿ ಊತಕ ಜೀವಿಗಳಾದ ಪ್ರೊಟೋಜೋವಾಗಳಿಂದ ಬರುವ ರೋಗಗಳಲ್ಲಿ ಮಲೇರಿಯ, ಬೈರೊಡಲಿಬೇನೆ (ಟ್ರಿಪನೊಸೋಮಿಯಾಸಿಸ್), ಲೀಷ್ಮನ್ ಬೇನೆ (ಲಿಷ್ಮಾನಿಯಾಸಿಸ್), ಅಮೀಬ ಆಮಶಂಕೆಗಳಿವೆ. ಆಮಶಂಕೆ ಸೋಂಕು ಬಾಯ ಮೂಲಕ ಹರಡುವುದಾದರೂ ಉಳಿದವುಗಳ ಸೋಂಕು ಮಾನವನನ್ನು ಕಡಿದು ರಕ್ತಹೀರುವ ಕೀಟಗಳಿಂದ ಆಗುತ್ತದೆ.

ಹರಡಿಕೆ : ಸಾಂಕ್ರಾಮಿಕತೆ : ಜನರಲ್ಲಿ ಒಂದು ರೋಗ ಹರಡಿರುವುದಕ್ಕೆ, ರೋಗ ಹರಡುವ ರೀತಿ, ಸೋಂಕು ಅಂಟಿಸುವ ರೋಗಾಣುವಿನ ತೀವ್ರತೆ, ಸೋಂಕಿಗೊಡ್ಡಿರುವ

ಜನರ ವಯಸ್ಸು, ಲಿಂಗ, ಕಸಬು, ಪೌಷ್ಟಿಕತೆ, ರೋಗನಿರೋಧಕ ಬಲ, ಹವಾಮಾನ ಮುಂತಾದವು ಕಾರಣವಾಗುವುವು. ಇವುಗಳಲ್ಲಿ ಒಂದೊಂದೂ ಏರುಪೇರಾಗಿರಬಹುದು. ಆದ್ದರಿಂದಲೇ, ಜನರಲ್ಲಿ ಒಂದು ಸೋಂಕು ಕಾಲಿಟ್ಟಿತೆಂದರೆ, ಇನ್ನಷ್ಟು ವಿವರಗಳು ದೊರೆಯುವತನಕ ಏನಾಗಬಹುದೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಒಟ್ಟಿನಲ್ಲಿ ಏಕಾಣುಜೀವಿಗಳು ಮೈ ಒಳಹೋಗಲು ಉಸಿರಾಟಮಂಡಲ, ಬಾಯಿ, ಮೈಮೇಲಿನ ಗಾಯಗಳು, ನೇರವಾಗಿ ಕೀಟಗಳ ಕಡಿತದ ತೆರನ ಚುಚ್ಚಿಕೆಗಳ ಮಾದರಿಯ ಹಲವಾರು ದಾರಿಗಳಿವೆ.

ಉಸಿರಾಟ ಮಂಡಲದ ಮೂಲಕ : ಮೂಗು, ಬಾಯಿ, ಗಂಟಲು ಲೋಳೆಪೊರೆಗಳ ಮೂಲಕ ಎಷ್ಟೋ ರೋಗಕಾರಕ ಏಕಾಣುಜೀವಿಗಳು ಒಳನುಗ್ಗಿ ರೋಗ ಬರಿಸುತ್ತವೆ. ಗಂಟಲಮಾರಿ ದಂಡಾಣುಜೀವಿ (ಬೆಸಿಲಸ್), ಕೆಂಜ್ವರ (ಸ್ಕಾರ್ಲೆಟ್ ಫೀವರ್), ಮೆಂಡಿಕೆಯುರಿತಗಳಿಗೆ (ಟಾನ್ಸಿಲೈಟಿಸ್) ಕಾರಣವಾದ ಸರಕಾಯ್ಜೀವಿ (ಸ್ಟ್ರೆಪ್ಟೊಕಾಕಸ್), ನಾಯಿಕೆಮ್ಮಿನ ದಂಡಾಣುಜೀವಿ ಮುಖ್ಯವಾದವು. ಉಗುಳು, ಕೆಮ್ಮು, ಸೀನುಗಳಿಂದ ರೋಗಾಣುಗಳು ಸುತ್ತಲೂ ಹರಡುತ್ತಿರುವುದರಿಂದ ಈ ಬೇನೆಗಳಿಂದ ನರಳುತ್ತಿರುವವರು ಬೇರೆಯವರಿಗೆ ಸೋಂಕು ಅಂಟಿಸುವಂತಿರುವರು. ಫುಪ್ಫುಸಗಳ ಒಳಗೂ ಸೋಂಕು ಹತ್ತಿಸುವ ಕ್ಷಯ ದಂಡಾಣುಜೀವಿ, ನ್ಯುಮೊಕಾಕೈ ಸೋಂಕುಗಳಲ್ಲು ಅಷ್ಟೆ. ಕೆಮ್ಮಿದಾಗ ಉಗುಳು, ಎಂಜಲು, ಲೋಳೆಗೂಡಿದ ಬೇರೆ ಬೇರೆ ಗಾತ್ರಗಳ ಸಣ್ಣ ತುಂತುರುಗಳ ದೂಳುಮೋಡವೇ ರಭಸದಿಂದ ಹೊರಬೀಳುವುದು. ಇದರಲ್ಲಿ ಬಲುಮಟ್ಟಿಗೆ ರೋಗಾಣುಗಳೂ ಇರುವುದರಿಂದ ಇದು ಇತರರ ಉಸಿರಲ್ಲಿ ಸೇರಿದರೆ ಸೋಂಕು ಅಂಟುತ್ತದೆ. ಕ್ಷಯರೋಗ ಹರಡುವುದರಲ್ಲಿ ಈ ವಿಧಾನದ ಪಾತ್ರವನ್ನು ಮೊದಲು ತೋರಿದವನು ಫ್ಲುಗ್ಗೆ (೧೯ನೆಯ ಶತಮಾನದ ಕೊನೆ).

ಕೆಮ್ಮು, ಉಗುಳುಗಳಲ್ಲಿನ ತುಂತುರುಗಳ ಮುಂದಿನ ಗತಿ ಏನಾಗುವುದೆಂಬುದು ಮುಖ್ಯವಾಗಿ ಅವುಗಳ ಗಾತ್ರಕ್ಕೆ ತಕ್ಕ ಹಾಗಿರುತ್ತದೆ. ಅವುಗಳ ಅಡ್ಡಗಲದ ವರ್ಗೀಕರಣಕ್ಕೆ ತಕ್ಕಂತೆ ಅವು ಕೆಳಗೆ ಬೀಳುವ ವೇಗ ಇರುವುದು. ದೊಡ್ಡ ದೊಡ್ಡ ಕಣಗಳು ತುಸು ದೂರ ಹಾರಿ ಬಿದ್ದು ಒಣಗಿ ದೂಳಾಗುತ್ತವೆ. ಮಿಲಿಮೀಟರಿಗೂ ಕಿರಿಯವು ಮಾತ್ರ ಬಲು ಬೇಗನೆ ಆರಿಹೋಗಿ ನೆಲಕ್ಕೆ ಬೀಳದೆ ಗಾಳಿಯಲ್ಲಿ ತೇಲುಕಣಗಳಾಗಿ ಬಿಡುತ್ತವೆ. ಸಾಮಾನ್ಯ ಅನಿಲಗಳಂತೆ ಇವು ವರ್ತಿಸಿ ಗಾಳಿ ಬೀಸಿದಾಗ ಬಲುದೂರ ಸಾಗಬಲ್ಲವು. ಆದ್ದರಿಂದ ತುಂತುರುಗಳಲ್ಲಿ ಸೇರಿದ ಸೋಂಕು ಹರಡುವ ಕಣಗಳ ಕೆಮ್ಮು, ಸೀನುಗಳಲ್ಲಿ ನಿಂತವನ ಸುತ್ತ ಐದಾರು ಅಡಿಗಳ ದೂರದಲ್ಲಿ ನೆಲದ ಮೇಲೆ ಬೀಳುವುದರಿಂದ, ಕೇವಲ ಅಕ್ಕಪಕ್ಕಗಳಲ್ಲಿ ಇರುವವರಿಗೆ ಮಾತ್ರ ಹರಡಿಕೊಳ್ಳುತ್ತವೆ. ಅದೂ ಅಲ್ಲದೆ, ಈ ಕಣಗಳ ತುಂಬ ಏಕಾಣುಜೀವಿಗಳೂ ತುಂಬಿದ್ದು, ಅವು ಪರಿಸರದ ಹಾನಿಗಳಿಗೆ ಸಿಕ್ಕಿಬೀಳದೆಯೇ ಇನ್ನೊಬ್ಬರಲ್ಲಿ ಬೇಗನೆ ಸೇರಿಕೊಳ್ಳಬಹುದು. ಸೋಂಕು ಹರಡಲು ದೂಳು ಬಲು ಸಹಾಯಕಾರಿ.

ಬಾಯ ಮೂಲಕ : ಬಾಯಲ್ಲಿ ಹೊಕ್ಕ ರೋಗಾಣುಗಳು ಜಠರ, ಕರುಳುಗಳಲ್ಲಿ ಏನಾದರೂ ಒಂದು ಬಗೆಯ ಉರಿತವೇಳಿಸುವುವು. ಇದರಿಂದ ಮಲ ಸಾಮಾನ್ಯವಾಗಿ ಸೋಂಕುಕಾರಕ ವಸ್ತುವಾಗುತ್ತದೆ. ಇದಕ್ಕೆ ಕೆಲವು ವಿನಾಯಿತಿಗಳಿವೆ. ಗಂಟಲಿಗೂ ಉಸಿರನಾಳಕ್ಕೂ ಸಂಬಂಧವಿರುವುದರಿಂದ ಉಸಿರಾಟ ಮಂಡಲದ ಸೋಂಕಿನಿಂದ ಬರುವ ಕೆಂಜ್ವರ, ಗಂಟಲಮಾರಿ ತೆರನ ರೋಗಗಳು ರೋಗಿಯ ಎಂಜಲು, ಉಗುಳು ತಾಕಿರುವ ಆಹಾರವನ್ನು ತಿನ್ನುವುದರಿಂದಲೂ ಈ ರೋಗಾಣುಗಳ ಸೋಂಕು ಹತ್ತಿರುವ ಕೆಚ್ಚಲು ಇರುವ ಹಸುಗಳ ಹಾಲನ್ನು ಕಾಯಿಸದೆ ಕುಡಿಸುವುದರಿಂದಲೂ ಬರಬಹುದು. ಇನ್ನೊಂದು ವಿನಾಯಿತಿ ದನದ ಕ್ಷಯ ರೋಗಾಣು. ಹಾಲಿನಲ್ಲಿ ಇದನ್ನು ಸೇವಿಸಿದರೆ, ಗಂಟಲು ಇಲ್ಲವೇ ಕರುಳಿನ ಹಾಲುರಸದ (ಲಿಂಫ್ಯಾಟಿಕ್) ಅಂಗಾಂಶದ ಮೂಲಕ ತೂರಿ ಕರುಳಿಗಿಂತಲೂ ಹೆಚ್ಚಾಗಿ, ದೂರದ ಮೂಳೆಗಳು, ಕೀಲುಗಳು, ಗ್ರಂಥಿಗಳು, ಮಿದುಳು ಪೊರೆಗಳು (ಮೆನಿಂಜೀಸ್) ಮತ್ತಿತರ ಅಂಗಗಳಲ್ಲಿ ರೋಗವಾಗಿ ಕಾಣಿಸಿಕೊಳ್ಳುತ್ತದೆ.

ಇವಿಷ್ಟು ಮತ್ತು ಬ್ರೂಸೆಲ್ಲೋಸಿಸ್ ನಂಥ ಹಾಲಿನ ಮೂಲಕ ಪಸರಿಸುವ ಕಾಯಿಲೆಗಳನ್ನು ಬಿಟ್ಟು ಮಲಜನ್ಯವಾದ ಸೋಂಕು ಬಾಯ ಮೂಲಕ ಹರಡಲು ಮುಖ್ಯ ಕಾರಣಗಳು ಮೂರು–ಆಹಾರ, ನೊಣಗಳು ಮತ್ತು ಕೊಳಕು ಬೆರಳುಗಳು. ಕರುಳಿನಲ್ಲಿ ಸೋಂಕು ಹೊತ್ತಿರುವವರೂ ರೋಗಿಗಳೂ ಕಕ್ಕಸಿಗೆ ಹೋಗಿ ಬಂದ ಮೇಲೆ ಕೂಡಲೇ ಕೈಯನ್ನು ಚೆನ್ನಾಗಿ ತೊಳೆದುಕೊಳ್ಳದಿದ್ದರೆ ಅವರ ಬೆರಳುಗಳಲ್ಲಿ, ಉಗುರು ಸಂದುಗಳಲ್ಲಿ ಸೋಂಕು ಅಂಟಿರುವುದರಿಂದ ಅವರು ಮುಟ್ಟಿದಲ್ಲೆಲ್ಲ ರೋಗದ ಸೋಂಕು ಹತ್ತಿಕೊಳ್ಳುವುದು. ಇದನ್ನು ತಾಕಿಸಿಕೊಂಡವರಿಗೂ ಅವರವರ ಬೆರಳುಗಳ ಮೂಲಕ ಬಾಯಿ, ಮೂಗುಗಳಿಗೆ ಸೇರಿ ಅಲ್ಲಿಂದ ಕರುಳಗಳನ್ನು ಹೊಗುವುದು. ಅಡುಗೆ ಮಾಡುವವರಲ್ಲೂ ಬಡಿಸುವವರಲ್ಲೂ ಸೋಂಕುಗಳು ಹೀಗೆ ಹತ್ತಿದ್ದರಂತೂ ಬಲು ಅಪಾಯಕರ. ಏಕೆಂದರೆ, ಕರುಳಲ್ಲಿ ಸೇರುವ ಏಕಾಣುಜೀವಿಗಳು ಬಹುಪಾಲು ಆಹಾರ ಪದಾರ್ಥಗಳಲ್ಲಿ ಹುಲುಸಾಗಿ ಬೆಳೆಯುತ್ತವೆ. ಆಹಾರವನ್ನು ಸರಿಯಾದ ಕಾವಿನಲ್ಲಿ ಇರಿಸಿದ್ದರೆ, ಏಕಾಣುಜೀವಿಗಳು ವಿಪುಲವಾಗಿ ಬೆಳೆಯುವುದರಿಂದ, ಅಂಥವನ್ನು ಸೇವಿಸಿದಲ್ಲಿ ರೋಗ ಹತ್ತುವುದು ಏನೂ ಹೆಚ್ಚಲ್ಲ. ಏಕಾಣುಜೀವಿಗಳು ದಂಡಿಯಾಗಿ ಬೆಳೆವ ಆಹಾರಗಳು ಹಾಲು, ಗಂಜಿ, ಸಾರು, ಮಾಂಸದ ತಿಂಡಿಗಳು ಮುಂತಾದುವು. ಬೆರಳುಗಳಿಂದಲೇ ಅಲ್ಲದೆ, ದೂಳು, ನೊಣಗಳಿಂದ ಕೂಡ ಸೋಂಕು ಅಂಟಬಹುದು. ಒಳಚರಂಡಿ ಸಾಗಣೆ ಏರ್ಪಾಡಿಲ್ಲದ ಊರುಗಳಲ್ಲಿ, ಎಲ್ಲೆಂದರಲ್ಲಿ ಮಲ ವಿಸರ್ಜಿಸುವುದರಿಂದ ನೆಲದ ಮೇಲೆ ಬಿದ್ದ ಮಲ ಒಣಗಿ ದೂಳಾಗಿ ಗಾಳಿಯಲ್ಲಿ ಸೇರುವುದರಿಂದಲೂ ನೊಣಗಳಿಂದಲೂ ಆಹಾರ ಕೊಳಕಾಗಬಹುದು. ಒಳಚರಂಡಿ ನೀರು ಬಂದು ಸೇರುವ ಖಾರಿಗಳಲ್ಲಿರುವ ಚಿಪ್ಪು ಮೀನುಗಳಲ್ಲಿ ಮಾನವನ ಕರುಳಿನಲ್ಲಿರುವ ಏಕಾಣುಜೀವಿಗಳಿರುವುದು ಕಂಡು ಬಂದಿದೆ. ಆದ್ದರಿಂದ ಈ ಚಿಪ್ಪುಮೀನುಗಳಲ್ಲಿ ವಿಷಮಜ್ವರದ (ಟೈಫಾಯ್ಡ್) ತೆರನ ರೋಗಾಣುಗಳಿದ್ದಲ್ಲಿ ತಿನ್ನುವವರಿಗೂ ಸೋಂಕು ಹತ್ತಬಹುದು.

ಗಾಯಗಳ, ಚರ್ಮ ತರಚಿಕೆಗಳ ಮೂಲಕ: ಹೊರಗಿನ ಯಾವ ರೋಗಾಣುವೂ ಮೈಯ ಒಳಹೋಗದಂತೆ ದೇಹವನ್ನು ರಕ್ಷಿಸುವ ದೊಡ್ಡ ಸಾಧನವೇ ಚರ್ಮ. ಒಡೆಯದ, ಬಿರಿಯದ ಚರ್ಮವನ್ನು ಯಾವ ರೋಗಕಾರಕ ಜೀವಾಣುಗಳೂ ತೂರಿ ಒಳಹೋಗುವಂತಿಲ್ಲ. ಆದರೆ ಕೊಂಚ ತರಚಿಕೊಂಡರೂ ಇನ್ನೂ ಹೆಚ್ಚಾಗಿ ಗಾಯವಾಗಿದ್ದರೂ ಸೋಂಕಿನ ಜೀವಾಣುಗಳು ಚರ್ಮದೊಳಗೆ ನುಗ್ಗಿ ಚರ್ಮದಡಿಯ ಅಂಗಾಂಶ, ಸ್ನಾಯುಗಳಲ್ಲಿ ನೆಲೆಸಬಹುದು; ಒಂದೆಡೆ ರೋಗವೆಬ್ಬಿಸಬಹುದು; ಹಾಲುರಸ, ರಕ್ತಗಳಲ್ಲಿ ಸಾಗಿ ದೂರದ ಅಂಗಗಳಲ್ಲಿ ವೃದ್ಧಿಗೊಳ್ಳಬಹುದು. ಚರ್ಮ ಇಲ್ಲವೇ ಲೋಳೆಪೊರೆ ಸೋಂಕು ಇರುವವರಿಗೆ ತಾಕಿದರೆ ಮೇಹರೋಗ ನೇರವಾಗಿ ಹತ್ತಿಕೊಳ್ಳಬಹುದು. ಚರ್ಮದ ಮೇಲೆ ಯಾವಾಗಲೂ ಇರುವ ಜೀವಿಗಳು ಕೆರೆದ, ಗೀಚಿದ, ತರಚಿಕೊಂಡ ಇಲ್ಲವೇ ಬಲವಾಗಿ ಒತ್ತಿದ ಕಡೆ ಒಳನುಗ್ಗಿ ಕೀವುಗೂಡಿಸಿ ಕುರುಗಳೇಳಿಸಬಹುದು.

ಕೀಟಗಳಿಂದ : ಕೆಲವು ರೋಗಗಳ ಹರಡಿಕೆಗೆ ರಕ್ತಹೀರುವ ಕೀಟಗಳು ಕಾರಣ. ಉದಾಹರಣೆಗೆ, ಮಲೇರಿಯ. ಈ ಕಾಯಿಲೆಯಲ್ಲಿ ರೋಗಿಯ ಚರ್ಮದಲ್ಲಿನ ಲೋಮನಾಳಗಳ ರಕ್ತದಲ್ಲಿನ ರೋಗಾಣುಗಳನ್ನು ಸೊಳ್ಳೆ ಕಚ್ಚಿ ಕುಡಿಯುತ್ತದೆ. ಕೀಟದಲ್ಲಿ ಇವು ವೃದ್ಧಿಗೊಂಡು ಕೆಲವು ದಿನಗಳಲ್ಲಿ ಜೊಲ್ಲು ಗ್ರಂಥಿಗಳಲ್ಲಿ ಸೇರಿಕೊಳ್ಳುತ್ತವೆ. ಸೊಳ್ಳೆ ಇನ್ನೊಬ್ಬರನ್ನು ಕಡಿದಾಗ ಮಲೇರಿಯ ರೋಗಾಣುಗಳು ಅವರಿಗೆ ಸಾಗುತ್ತವೆ. ಸೋಂಕಿನ ಜ್ವರದಲ್ಲಿ ಸೋಂಕುಸಾಗಣೆ ಕೂರೆಗಳಿಂದಾಗುವುದು. ಕೂರೆಯ ಕರುಳಿನ ಗೋಡೆಯಲ್ಲಿ ಈ ಜ್ವರದ ರೋಗಾಣುಗಳೂ ಬೆಳೆದು ಅದರ ಮಲದಲ್ಲಿ ಹೊರಬೀಳುತ್ತವೆ. ಕೂರೆ ಕಡಿದೆಡೆ ಕೆರೆದುಕೊಂಡರೆ ಚರ್ಮ ಗಾಯವಾಗಿ ಈ ಮಲದಲ್ಲಿನ ರೋಗಾಣುಗಳು ಒಳನುಗ್ಗುತ್ತವೆ. ಕೀಟಗಳು ಸಾಗಿಸುವ ಸೋಂಕು ಬಹುಮಟ್ಟಿಗೆ ಪ್ರಾಣಿಗಳಲ್ಲೇ ಹೆಚ್ಚು; ಆಗಾಗ್ಗೆ ಮಾನವನಿಗೂ ಹರಡಿಕೊಳ್ಳುವುದು. ಆದರೆ ಮಲೇರಿಯದ ತೆರನ ಕೆಲವು ರೋಗಗಳು ಮಾನವನಿಗೇ ಮೀಸಲು.

ರೋಗದ ಉಗ್ರತೆ, ಪ್ರತಿರಕ್ಷಣೆ : ಆತಿಥೇಯದ ಮೈಒಳಹೊಕ್ಕು, ಊತಕಗಳಲ್ಲಿ ವೃದ್ಧಿಗೊಂಡು ರೋಗ ಬರಿಸುವ, ಜೀವಾಣುವಿನ ಕಸುವೇ ಉಗ್ರತೆ. ಹೀಗಾಗುವುದು ಮೈಯಲ್ಲಿನ ರೋಗ ತಡೆವ ಬಲವಾದ ಪ್ರತಿರಕ್ಷಣೆಯ (ಇಮ್ಯೂನಿಟಿ) ಮಟ್ಟಕ್ಕೆ ತಕ್ಕಂತಿರುವುದು. ಪ್ರತಿರಕ್ಷಣೆ ಕಡಿಮೆ ಇದ್ದವನಿಗೆ ಒಂದು ಉಗ್ರ ರೋಗಾಣು ತಗುಲಿದರೆ ರೋಗ ಹತ್ತುತ್ತದೆ. ಪ್ರತಿರಕ್ಷಣೆ ಬಲವಾಗಿದ್ದವನಲ್ಲಿ ರೋಗಾಣುವಿನ ಆಟ ಏನೂ ನಡೆಯದಿರಬಹುದು. ರೋಗಾಣುವಿನ ಉಗ್ರತೆ, ಆತಿಥೇಯದ ಪ್ರತಿರಕ್ಷಣೆ ಎಂಬೀ ಪದಗಳು ಸಾಪೇಕ್ಷಕವೆಂದು ತಿಳಿಯಬೇಕು. ಒಂದು ಜೀವಾಣು ಏನೇನೂ ಉಗ್ರವಾಗಿಲ್ಲವೆಂದೋ ಒಬ್ಬ ಆತಿಥೇಯ ಯಾವ ರೋಗಾಣುವಿಗೂ ಜಗ್ಗುವುದಿಲ್ಲವೆಂದೋ ಹೇಳುವುದು ರೋಗಕಾರಕವಲ್ಲದ ಜೀವಾಣುಗಳಿಗೆ ಮಾತ್ರ. ಯಾವಾಗಲೂ ಜೀವಾಣುಗಳಲ್ಲಿ ಒಂದು ತಳಿಯದು ಇನ್ನೊಂದರಕ್ಕಿಂತ ಉಗ್ರವಾಗಿರಬಹುದು, ಇಲ್ಲವೇ ಒಬ್ಬ ಆತಿಥೇಯ ಇನ್ನೊಬ್ಬನಿಗಿಂತ ಚೆನ್ನಾಗಿ ರೋಗವನ್ನು ತಡೆದುಕೊಳ್ಳಬಹುದು. ಆದ್ದರಿಂದ ಆತಿಥೇಯನ ರೋಗನಿರೋಧಕ ಬಲವನ್ನು ಗಮನಿಸದೆ ಒಂದು ರೋಗಾಣು ಉಗ್ರವಾದದ್ದು ಎನ್ನುವಂತಿಲ್ಲ.

ರೋಗಾಣುಗಳ ಬೇರೆ ಬೇರೆ ಜಾತಿಗಳ ಉಗ್ರತೆಯೂ ಬೇರೆ ಬೇರೆ. ಅಲ್ಲದೇ ಒಂದೇ ಜೀವಾಣುವಿನ ಉಗ್ರತೆ ಬೇರೆ ಬೇರೆ ಕಾಲಗಳಲ್ಲಿ ಬದಲಾಯಿಸಬಹುದು. ಕಾಲು, ಬಾಯಿ ರೋಗದ ವಿಷಕಣದ ತೆರನ ಜೀವಾಣು ಮಾನವನಿಗೆ ರೋಗ ಹತ್ತಿಸುವುದೇ ಇಲ್ಲ. ಅದೇ ಮಾನವನ ಕ್ಷಯರೋಗಾಣು ಮಾನವನಿಗೆ ಸುಲಭವಾಗಿ ಅಂಟಿಕೊಳ್ಳುವುದು.

ದಡಾರದ ವಿಷಕಣ ಮಾತ್ರ, ಪ್ರತಿರಕ್ಷಣೆಯಿಲ್ಲದೆ ಯಾರಿಗೆ ತಗುಲಿದರೂ ಉಗ್ರವಾದ ರೋಗವನ್ನೇ ಎಬ್ಬಿಸುತ್ತದೆ.

ಆದ್ದರಿಂದ ಸೋಂಕು ಅಂಟಿದ್ದರ ಪರಿಣಾಮ, ರೋಗಾಣುವಿನ ಉಗ್ರತೆ, ಆತಿಥೇಯದ ಪ್ರತಿರಕ್ಷಣೆ ಸಮತೋಲನಕ್ಕೆ ತಕ್ಕ ಹಾಗಿರುವುದು. ರೋಗ ತಡೆವ ಬಲ ಜೋರಾಗಿದ್ದವ ಸೋಂಕಿಗೆ ಇನಿತೂ ಜಗ್ಗದೆ, ನೆಲೆಯೂರಿ ಹಾನಿಗೊಳಿಸುವ ಮುಂಚೆಯೇ ರೋಗಾಣುಗಳನ್ನು ಹಾಳುಗೆಡವಬಹುದು. ಅಷ್ಟೊಂದು ಪ್ರತಿರಕ್ಷಣೆ ಇಲ್ಲದವನಲ್ಲಿ ರೋಗಾಣು ಊತಕಗಳಲ್ಲಿ ನೆಲೆಯೂರಬಹುದಾದರೂ ರೋಗ ಎಬ್ಬಿಸದಂತಾಗಬಹುದು. ಇಂಥವನು ಆರೋಗ್ಯವಾಹಕ (ಹೆಲ್ತ್ ಕ್ಯಾರಿಯರ್) ಎಂದೆನ್ನಿಸುವನು. ಪ್ರತಿರಕ್ಷಣೆ ಇನ್ನಷ್ಟು ಕಡಿಮೆ ಇದ್ದು ಕೊಂಚ ಜಗ್ಗುವಂತಿರುವವರಲ್ಲಿ ರೋಗಾಣು ಮೈ ಒಳಹೊಕ್ಕು ಒಂದಿಷ್ಟು ಚಟುವಟಿಕೆ ತೋರಿ ಕೊಂಚ ರೋಗದ ಲಕ್ಷಣಗಳು ತೋರುವಂತೆ ಮಾಡಿದರೂ ಕೊನೆಗೆ ಮೈಯೇ ಗೆಲ್ಲುತ್ತದೆ. ಸಹಜವಾಗಿ ಈಡಾಗುವವರಲ್ಲಿ ಊತಕದಲ್ಲಿ ರೋಗಾಣು ನೆಲೆಸಿ ವಿಪರೀತ ವೃದ್ಧಿಗೊಂಡು ವಿಷವನ್ನು ಹೊರಬಿಡುತ್ತ ಪೂರ್ತಿ ರೋಗವನ್ನು ಬರಿಸುತ್ತದೆ. ಸಹಜವಾಗಿ ರೋಗವನ್ನು ತಡೆವ ಬಲ ಏನೇನೂ ಇಲ್ಲದೆ ರೋಗಕ್ಕೆ ಬಲು ಈಡಾಗವವರಲ್ಲಂತೂ ರೋಗಾಣುಗಳು ಬೇಗನೆ ವೃದ್ಧಿಗೊಂಡು ರೋಗ ಇದ್ದಕ್ಕಿದ್ದಂತೆ ತಲೆದೋರುವುದು. ರೋಗಾಣುವಿನ ಸೋಂಕು ಹರಡುವ ತೀವ್ರತೆ ಆತಿಥೇಯದ ಪ್ರತಿರಕ್ಷಣೆಯ ಮಟ್ಟಕ್ಕೆ ತಕ್ಕಂತೆ ರೋಗಿಗೆ ಮಾರಕವಾಗುವುದು. ಕೆಲವು ರೋಗಗಳಂತೂ ಹೆಚ್ಚು ಬಲಿ ತೆಗೆದುಕೊಳ್ಳುತ್ತವೆ.

ರೋಗಾಣುಗಳ ತೀವ್ರತೆ ಕೂಡ ಆಗಾಗ್ಗೆ ಹೆಚ್ಚು ಕಡಿಮೆ ಆದಂತೆ ತೋರುವುದು. ಒಂದು ರೋಗ ಸಾಂಕ್ರಾಮಿಕ ಆದುದಕ್ಕೆ ಅದರ ರೋಗಾಣುವಿನ ಸೋಂಕು ಅಂಟಿಸುವ ತೀವ್ರತೆ ಹೆಚ್ಚಿದ್ದೇ ಕಾರಣವೆಂದು ಹೇಳಿಬಿಡಬಹುದಾದರೂ ಎಂದಿನಂತೆ ಹೀಗಾಗುವುದನ್ನು ಅನುಮಾನ ಇಲ್ಲದಂತೆ ರುಜುವಾತಿಸುವುದು ಕಷ್ಟವೇ. ಸಾಮಾನ್ಯವಾಗಿ ಒಂದು ಸ್ಥಾನಿಕ (ಎಂಡೆಮಿಕ್) ರೋಗ ಸಾಂಕ್ರಾಮಿಕ ಆಗುವುದಕ್ಕೆ ಮುಖ್ಯ ಕಾರಣ ಜನರ ತಂಡದ ಪ್ರತಿರಕ್ಷಣೆಯ ಕುಗ್ಗೇ ಆಗಿದೆ. ಬಹುಪಾಲು ನಾಗರಿಕ ನಾಡುಗಳಲ್ಲಿ ದಡಾರ ಎಳೆಯ ಮಕ್ಕಳಿಗೇ ತಾಕುತ್ತದೆ. ಇದರ ರೋಗಾಣು ಬಲು ಉಗ್ರವಾದದ್ದರಿಂದ, ಇದಕ್ಕೊಡ್ಡಿದ ಎಲ್ಲ ಮಕ್ಕಳಿಗೂ ಅಂಟುತ್ತದೆ. ತೇರ್ಗಡೆಯಾದ ಮಕ್ಕಳು ಶಾಶ್ವತವಾಗಿ ಪ್ರತಿರಕ್ಷಣೆ ಪಡೆದಿರುವರು. ಆಗ ರೋಗ ಇಳಿದು ಹೋದರೆ, ಅದರ ರೋಗಾಣುವಿನ ಉಗ್ರತೆ ಕುಂದಿತೆಂದಲ್ಲ, ಈಡಾಗುವವರು ಇಲ್ಲದ್ದೇ ಕಾರಣ. ಮತ್ತೆ ಈ ರೋಗಕ್ಕೀಡಾಗುವವರು ವಯಸ್ಸಿಗೆ ಬರುವ ತನಕ, ಮುಂದಿನ ಸುಮಾರು ವರ್ಷವೆಲ್ಲ ರೋಗ ಅಡಗಿಯೇ ಇರುತ್ತದೆ. ಆದರೆ ಎಲ್ಲ ಸಾಂಕ್ರಾಮಿಕಗಳಿಗೂ ಇದೇ ಕಾರಣ ಹೇಳುವಂತಿಲ್ಲ. ಕೆಲವು ವರ್ಷಗಳಿಗೊಂದು ಬಾರಿ ನಾಡಿನ ಜನರಿಗೆ ಉರಿಶೀತ (ಇನ್‌ಫ್ಲೂಯೆಂಜ) ತಾಕಿ ಎಷ್ಟೋ ಮಂದಿ ಬೇನೆ ಬಿದ್ದರೂ ಸಾವು ಕಡಿಮೆ. ಆದರೆ ಆಗಾಗ್ಗೆ, ಇದ್ದಕ್ಕಿದ್ದ ಹಾಗೆ ಪಿಡುಗು ಜೋರಾಗಿ ಬಹಳ ಮಂದಿಯನ್ನು ಬಲಿತೆಗೆದುಕೊಳ್ಳವುದು. ಹೀಗೆ ಬಲು ಜೋರಾದ ಸಾಂಕ್ರಾಮಿಕ ಆಗುವುದರ ೨೦ ವರ್ಷಗಳ ಹಿಂದೂ ಮುಂದೂ ಇದ್ದುದಕ್ಕಿಂತಲೂ ಉರಿಶೀತವನ್ನು ತಡೆವ ಬಲ ಇದ್ದಕ್ಕಿದ್ದಂತೆ ೧೯೧೮–೧೯ರ ಸಾಂಕ್ರಾಮಿಕವಾದಾಗ ಇಳಿದುಹೋಗಿತ್ತೆಂದು ಊಹಿಸಲು ಕಾರಣಗಳೇ ಇಲ್ಲ. ಆದ್ದರಿಂದ ಆ ವಿಷಕಣದ ಬಲು ವಿಷಕರವಾದ ತಳಿ ಬೆಳೆದು ಹರಡಿರಬೇಕು.

ರೋಗ ತಲೆದೋರಲು ಇನ್ನಷ್ಟು ಕಾರಣಗಳು : ಜನರ ವಯಸ್ಸು, ಲಿಂಗ, ಕಸುಬುಗಳಿಗೂ ಸೋಂಕುಕಾರಕ ರೋಗಗಳಿಗೂ ಸಂಬಂಧವಿದೆ. ಎಷ್ಟೋ ರೋಗಗಳು ಚಿಕ್ಕಂದಿನಲ್ಲೆ ಅಂಟುತ್ತವೆ. ಆಮೇಲೆ ದೊಡ್ಡವರಾದಾಗ ಮತ್ತೆ ಅದೇ ರೋಗಗಳು ಅಂಟದ ಹಾಗೆ ತಡೆವಂತೆ ಪ್ರತಿರಕ್ಷಣೆ ಆಗಿರುತ್ತದೆ. ಅಂತೂ ಎಳೆತನದಲ್ಲಿ ಮಕ್ಕಳು ಬಹುಮಟ್ಟಿಗೆ ಅನೇಕ ರೋಗಗಳಿಗೆ ಈಡಾಗುವಂತಿರುವುವು. ಆದರೆ ಬೆಳೆದವರಲ್ಲೂ ವಿಷಮಜ್ವರದ ತೆರನ ಕೆಲವು ರೋಗಗಳು ಸಾಮಾನ್ಯ. ಮತ್ತೆ ಮುದಿತನದಲ್ಲಿ ಮೈಯಲ್ಲಿ ರೋಗ ತಡೆವ ಬಲ ಕುಂದಿರುವುದು. ಹರೆಯದಲ್ಲಿ ಏನೂ ಕೆಡಕುಮಾಡದ ಸಣ್ಣ ಬೇನೆಗಳೇ ಆಗ ಅವರಿಗೆ ಮಾರಕವಾಗುತ್ತವೆ.

ರೋಗಕ್ಕೆ ಈಡಾಗುವುದರಲ್ಲಿ ಹೆಣ್ಣು ಗಂಡುಗಳ ವ್ಯತ್ಯಾಸ ಅಷ್ಟಾಗಿಲ್ಲವಾದರೂ ಪುಪ್ಫುಸದ ಕ್ಷಯ ಹುಡುಗರಿಗಿಂತ ಹುಡುಗಿಯರಲ್ಲೇ ಹೆಚ್ಚು. ಕೆಲವು ರೋಗಗಳು ಆಯಾ ಕಸುಬುಗಳ ಕೆಲಸಗಾರರಿಗೆ ಅಂಟುತ್ತವೆ. ಪ್ರಾಣಿ ಚರ್ಮಗಳನ್ನು ಸಾಗಿಸುವ ಕೂಲಿಗಾರರಲ್ಲಿ ನೆರಡಿ (ಅಂತ್ರಾಕ್ಸ್) ರೋಗ ಸಾಮಾನ್ಯ. ಕೋಲಾರದ ಚಿನ್ನದ ಗಣಿಗಳ ಆಳದಲ್ಲಿ ೧೫–೨೦ ವರ್ಷಗಳಷ್ಟು ಹೆಚ್ಚು ಕಾಲ ಕೆಲಸ ಮಾಡುವವರಲ್ಲಿ ಮೊದಲು ಸಿಲಿಕಬೇನೆ (ಸಿಲಿಕೋಸಿಸ್) ತಲೆದೋರಿ ಅನಂತರ ಸುಲಭವಾಗಿ ಕ್ಷಯ ಹತ್ತುವಂತೆ ಕೆಲವೇಳೆ ಕಸಬಿನಿಂದ ರೋಗಕ್ಕೀಡಾಗುವುದು ಕಂಡುಬರುತ್ತದೆ.

ಪುಷ್ಟಿಯಾದ ಆಹಾರ ಇಲ್ಲವಾದರೆ ಸೋಂಕುಗಳಿಗೆ ಈಡಾಗುವುದು ಹೆಚ್ಚುವುದೆಂದು ಜನರಲ್ಲಿ ನಂಬಿಕೆ ಇರುವುದಾದರೂ ಕೂರಾದ (ಅಕ್ಯೂಟ್) ಸೋಂಕುಕಾರಕ ರೋಗಗಳಲ್ಲಂತೂ ಪೌಷ್ಟಿಕ ಆಹಾರ ಅಷ್ಟೇನೂ ಪರಿಣಾಮಕಾರಿಯಲ್ಲ. ಪುಷ್ಟಿಗೊಂಡ ಮಕ್ಕಳಲ್ಲೂ ಬಡಕಲ ಮಗುವಿನಲ್ಲೂ ದಡಾರ ಸೋಂಕು ಹತ್ತುವುದರಲ್ಲಿ ಏನೇನೂ ವ್ಯತ್ಯಾಸವಿಲ್ಲದ್ದು ಒಂದು ಉದಾಹರಣೆ. ಇತರ ಸೋಂಕುರೋಗಗಳಿಗೂ ಇದನ್ನೇ ಹೇಳಬಹುದು. ಆದರೆ, ಆಹಾರದಲ್ಲಿ ಜೀವಸತ್ವ ತೆರನ ಕೆಲವು ಅಂಶಗಳ ವಿಪರೀತ ಕೊರೆಗಳಿದ್ದರೆ ಮಾತ್ರ ರೋಗ ತಡೆವ ಬಲ ಇಳಿದು ಹೋಗುವುದು. ಅಲ್ಲದೆ ಯೂರೋಪಿನ ಹರೆಯದವರಲ್ಲಿ ಒಳಗೆ ಹುದುಗಿರುವ ಕ್ಷಯರೋಗ ಪುಷ್ಟಿಗೆಟ್ಟವರಲ್ಲಿ ಹೊರದೋರುವುದು. ಆದ್ದರಿಂದ ಪುಷ್ಟಿಗೊಂಡಿದ್ದವರು ಯಾವ ಸೋಂಕುರೋಗಗಳಿಗೂ ಈಡಾಗರೆನ್ನುವುದು ಸರಿಯಲ್ಲ.

ಸೋಂಕುರೋಗ ಹರಡುವುದಕ್ಕೂ ಹವಾಗುಣಕ್ಕೂ ಇರುವ ಸಂಬಂಧವನ್ನು ಬಿಡಿಯಾಗಿ ಕಾಣುವಂತಿಲ್ಲ. ಉಷ್ಣ ದೇಶಗಳಲ್ಲಿ ಉಸಿರಾಟ ಮಂಡಲದ ರೋಗಗಳೂ ಹೆಚ್ಚು ಸಾಮಾನ್ಯ. ಆದರೆ ಉಷ್ಣ ದೇಶಗಳಲ್ಲಿ ಮಲ, ಕೊಚ್ಚೆಗಳ ಸಾಗಣೆ ಸರಿಯಾಗಿರದೆ ಸೋಂಕು ಅಂಟುವ ಅವಕಾಶಗಳೂ ಆಹಾರ ತಯಾರಿಸುವವರ ಕೊಳಕುತನವೂ ಚಳಿದೇಶದಲ್ಲಿ ಬೆಚ್ಚಗೆ ಬಹಳ ಮಂದಿ ತಂಡಗಳಲ್ಲಿ ಒಂದೆಡೆ ಸೇರುವುದೂ ಉಸಿರಾಟ ಮಂಡಲದ ಸೋಂಕುರೋಗಗಳು ಸುಲಭವಾಗಿ ಹರಡುವುದೂ ಕಾರಣಗಳು ಎನ್ನಬಹುದು. ಮಳೆ ಬಿದ್ದರೆ ದೂಳು ಅಡಗುವುದರಿಂದ ದೂಳಿಂದ ಹರಡುವ ಸೋಂಕುರೋಗಗಳು ಮಳೆಗಾಲದಲ್ಲಿ ತಗ್ಗುತ್ತವೆ.

ಜನಾಂತರ ಸಾಂಕ್ರಾಮಿಕ ರೋಗಗಳು : ಎಷ್ಟೋ ಶತಮಾನಗಳಿಂದಲೂ ಒಂದು ರೋಗಾಣು ಒಂದು ನಾಡಿನಲ್ಲಿದ್ದು ನಾಗರಿಕರಿಗೆ ಎಲ್ಲೆಲ್ಲೂ ತಾಕುತ್ತಲೇ ಇದ್ದರೆ, ಕೊನೆಗೆ ಅದು ಬಹಳ ಮಂದಿಯನ್ನು ಸಾಯಿಸದೆ ಉಳಿವ ಸಮತೋಲಕ್ಕೆ ಬಂದಿರುತ್ತದೆ. ಮೊದಮೊದಲ ತಲೆಮಾರುಗಳಲ್ಲಿರುವ ಈ ರೋಗಕ್ಕೆ ಈಡಾಗುವವರೆಲ್ಲ ಇದಕ್ಕೆ ಬಲಿಯಾಗಿ ಆಮೇಲೆ ಇದಕ್ಕೆ ಜಗ್ಗದ ವಂಶದವರೇ ಉಳಿದು ರೋಗ ಜನಾಂತರವಾಗಿರುವುದು. ಇಂಗ್ಲೆಂಡಿನಲ್ಲಿ ಕ್ಷಯ, ಉಪದಂಶಗಳು (ಸಿಫಿಲಿಸ್) ಇದರ ಉದಾಹರಣೆಗಳು.

ಜನಾಂತರವಾಗಿರುವ ರೋಗವೇ ಸಾಂಕ್ರಾಮಿಕವಾಗುವ ಕಾರಣಗಳೆಲ್ಲ ಇನ್ನೂ ಚೆನ್ನಾಗಿ ತಿಳಿದಿಲ್ಲ. ಹಾಗಾಗಬೇಕಾದರೆ ಜನರಲ್ಲಿ ಈ ರೋಗಕ್ಕೆ ಈಡಾಗುವವರು ಸಾಕಷ್ಟು ಮಂದಿ ಇರಬೇಕು. ಸೋಂಕುಕಾರಕ ಜೀವಾಣು ಬಲು ಬೇಗನೆ ಎಲ್ಲರಲ್ಲೂ ಹಬ್ಬಿಕೊಳ್ಳಲು ಅನುಕೂಲವಿರಬೇಕು. ಉರಿಶೀತದ ತೆರನ ರೋಗದಲ್ಲಿ ಸಾಂಕ್ರಾಮಿಕ ಜೀವಾಣು ಬಲು ಮುಂಚೆ ಅಲ್ಲಲ್ಲಿ ಚೆಲ್ಲಿದಂತೆಲ್ಲ (ಸ್ಪೊರ್‍ಯಾಡಿಕ್) ಹೆಚ್ಚುಹೆಚ್ಚು ಮಂದಿಗಳಲ್ಲಿ ರೋಗ ತಲೆದೋರುವುದು. ಬಲು ಬೇಗನೆ ಕಾಯಿಲೆಗಳು ಕೊನೆಯ ಮಿತಿಗೇರಿ ಆಮೇಲೆ ನಿಧಾನವಾಗಿ ಮೊದಲಿನ ಇರವಿಗೆ ಇಳಿವುದು. ಈ ಏರಿಳಿತಗಳು ಒಂದೇ ವೇಗದಲ್ಲಿ ಇರುವುದರಿಂದ, ರೋಗಿಗಳ ಅಂಕಿಗಳನ್ನು ಒಂದು ಗ್ರಾಫಿನಲ್ಲಿ ಬಿಡಿಸಿದರೆ ಗಂಟೆಯ ಆಕಾರ ತೋರುವುದು. ಸೋಂಕು ಅಂಟಿರುವ ನೀರು, ಹಾಲು, ಐಸ್ ಕ್ರೀಮ್ ಆಹಾರಗಳನ್ನು ಸೇವಿಸಿ ರೋಗಕ್ಕೆ ಅವಕಾಶ ಕೊಡುವ ಒಂದು ಭಾಗದ ಜನರಲ್ಲಿ ಮಾತ್ರ ತಲೆ ಹಾಕುವ ಸಾಂಕ್ರಾಮಿಕ ಎಂದರೆ ವಿಷಮಜ್ವರ. ಹೀಗೆ ಏಳುವ ಸಾಂಕ್ರಾಮಿಕಗಳು ಸಿಡಿದೆದ್ದಂತೆ ತಲೆದೋರುತ್ತವೆ. ಗ್ರಾಫಿನಲ್ಲಿ ಇದರ ರೋಗಿಗಳ ಅಂಕಿಗಳನ್ನು ಹಾಕಿದಾಗ, ವಕ್ರರೇಖೆಯ ತುದಿ ಚೂಪಾಗಿದ್ದು, ಏರುವ ಕಾಲು ಕಡಿದಾಗೂ ಮರುಚಲದ (ಸೆಕೆಂಡರಿ) ಸೋಂಕುಗಳೇಳುವುದರಿಂದ, ಇಳಿವ ಕಾಲು ಕೊಂಚ ಚಪ್ಪಟೆಯಾಗೂ ಇರುವುವು. ಸಾಂಕ್ರಾಮಿಕಗಳಾಗುವ ಕಾರಣಗಳು ಇನ್ನುಳಿದ ಎಷ್ಟೋ ರೋಗಗಳಲ್ಲಿ ಬೇರೆ ಬೇರೆ ಆಗಿವೆ.

ಸೋಂಕುಕಾರಕ ರೋಗಗಳ ಲಕ್ಷಣಗಳು : ಸೋಂಕುಕಾರಕ ಜೀವಾಣು ಮೈ ಒಳಹೊಕ್ಕಮೇಲೆ ರೋಗದ ಲಕ್ಷಣಗಳು ಕಾಣಿಸಿಕೊಳ್ಳಲು ಹಿಡಿವ ಉದ್ಭವನ (ಇಂಕ್ಯುಬೇಷನ್) ಕಾಲ ಒಂದೊಂದರಲ್ಲಿ ಒಂದೊಂದು ಬಗೆ. ಹೆಣವನ್ನು ಕೊಯ್ದು ಪರೀಕ್ಷಿಸುವಾಗ ಗಾಯವಾದರೆ ಸರಕಾಯ್ಜೀವಿಯ ನಂಜುರಕ್ತವಾಗಿ (ಸೆಪ್ಟಿಸೀಮಿಯ) ೨೪ ತಾಸುಗಳಲ್ಲೇ ಸಾಯುವುದು ಇದ್ದಕ್ಕಿದ್ದ ಹಾಗೆ ಆಗುವುದರ ಉದಾಹರಣೆ. ಇನ್ನೊಂದು ಕೊನೆಯಲ್ಲಿರುವ ಕುಷ್ಠರೋಗದಲ್ಲಿ ಸೋಂಕು ಹತ್ತಿದ ಮೇಲೆ ರೋಗಲಕ್ಷಣಗಳು ಕಾಣಿಸಿಕೊಳ್ಳಲು ಹಲವಾರು ವರ್ಷಗಳೇ ಹಿಡಿಯಬಹುದು. ದಡಾರದ ತೆರನ ದದ್ದುಗಳೇಳುವ ಮಕ್ಕಳ ಜ್ವರಗಳ ಉದ್ಭವನ ಕಾಲ ೨–೩ ವಾರಗಳವರೆಗೇ ಇರಬಹುದು. ನಾಯಿಹುಚ್ಚು, ಬ್ರುಸೆಲ್ಲ ಬೇನೆಗಳಲ್ಲಿ ಇದು ೬ ವಾರಗಳಿಗೂ ಮೀರಿರುವುದು. ಕೆಲವೇಳೆ ಸೋಂಕು ಹತ್ತಿದಮೇಲೆ ಕ್ಷಯರೋಗ ಹೊರದೋರಲು ಒಂದೆರಡು ವರ್ಷಗಳೇ ಬೇಕು.

ದದ್ದುಗಳೇಳುವ ಜ್ವರಗಳಲ್ಲಿ, ಆತಿಥೇಯದಲ್ಲಿ ಸಾಕಷ್ಟು ಹಾನಿಗೊಳಿಸುವಂತೆ ವೃದ್ಧಿಗೊಳ್ಳುವ ರೋಗಾಣುವಿಗೆ ಹಿಡಿವ ವೇಳೆಯನ್ನು ಉದ್ಭವನ ಕಾಲ ಸೂಚಿಸಬಹುದು.

## ಏಕಾಣುಜೀವಿ ಸೋಂಕು ರೋಗಗಳು

| ಏಕಾಣುಜೀವಿ | ರೋಗ | ಮದ್ದು ಚಿಕಿತ್ಸೆ | ಷರಾ |
|---|---|---|---|
| ಉರಿಶೀತದ ರಕ್ತಾನುರಾಗಿ | ಉರಿಶೀತ, ಮಿದುಳು ಪೊರೆಯುರಿತ | ಮಿದುಳು ಪೊರೆಯುರಿತಕ್ಕೆ ರೋಧರಸಿಕೆ ಸ್ಟ್ರೆಪ್ಟೊಮೈಸಿನ್ | ಉರಿಶೀತಕ್ಕೆ ಮದ್ದಿಲ್ಲ |
| ಊರುಬಾಡುಬೇನೆ ಕದಿರುಜೀವಿ | ಊರುಬಾಡುಬೇನೆ | ಜೀವಿವಿಷರೋಧಕ | ಆಹಾರ ವಿಷವೇರಿಕೆ, ಸೋಂಕಲ್ಲ |
| ಎಸ್ಕರೀಷನ ಹೆಗ್ಗರುಳಜೀವಿ | ಎಳೆಗೂಸುಗಳ ಉಚ್ಚಾಟ | ಸಲ್ಪಡಯಜೀನ್, ಕ್ಲೋರಾಂ ಫೆನಿಕಾಲ್ | ..... |
| ಕಾಮಾಲೆ ರಕ್ತಸುರಿತದ ತೆಳುಸುರುಳಿ | ವೀಲನ ರೋಗ | ಪೆನಿಸಿಲಿನ್ | ಇಲಿಕಡಿತದ ರೋಗ |
| ಕಾಲರದ ಬಳುಕಜೀವಿ | ಕಾಲರ | ಸಲ್ಫೋನೇಮೈಡುಗಳು, | ರೋಗಲಕ್ಷಣ ಚಿಕಿತ್ಸೆ ಜೀವಿರೋಧಕಗಳು ಬೇಕು |
| ಕಿರಣಣ ವರ್ಗ | ಕಿರಣಣಬೇನೆ ಗಲ್ಲಕಟ್ಟು ಹುತ್ತಗಾಲು ಇಲಿಕಡಿತದ ಜ್ವರ | ಪೆನಿಸಿಲಿನ್, ಟೆರ್ರ್ ಮೈಸಿನ್, ಆರಿಯೊಮೈಸಿನ್ | ಉಗ್ರವಲ್ಲ ಇಲಿಯ ಮೂಗಿನ ಪರಪಿಂಡಿ |
| ಕುಷ್ಠದ ಅಣಬೆಯ ಏಕಾಣುಜೀವಿ | ಕುಷ್ಠರೋಗ | ಡ್ಯಾಪ್ಸೋನ್ | ....... |
| ಕ್ಷಯದ ಅಣಬೆಯ ಏಕಾಣುಜೀವಿಗಳು | ಕ್ಷಯ | ಸ್ಟ್ರೆಪ್ಟೊಮೈಸಿನ್, ಐಸೊನಿಯಾಜಿಡ್, ಪಾಸ್ | ....... |
| ಗಂಟಲಮಾರಿ ದಂಡಕಾಣುಜೀವಿ | ಗಂಟಲಮಾರಿ | ನಿರೋಧಕ್ಕಾಗಿ ಜೀವಿವಿಷದಿಂದ, ಜೀವಿವಿಷರೋಧಕ | ....... |
| ಘುದಾರಕ ಜಾತಿ | ಉಪದಂಶ, ಯಾಸ್ | ಸೋಮಲ, ಪೆನಿಸಿಲಿನ್ | ಮೇಹರೋಗ ಉಪದಂಶ |
| ನಾಯಿಕೆಮ್ಮು ರಕ್ತಾನುರಾಗಿ | ನಾಯಿಕೆಮ್ಮು | ನಿರೋಧಕ್ಕೆ ಲಸಿಕೆಗಳು | ....... |
| ನೆರಡಿ ದಂಡಾಣುಜೀವಿ | ವಿಷಮ ಬೊಕ್ಕೆ, ಉಣ್ಣೆಕಾರರ ರೋಗ | ಆರಿಯೊಮೈಸಿನ್, ಪೆನಿಸಿಲಿನ್, ರೋಧರಸಿಕೆ | ಪ್ರಾಣಿಗಳಲ್ಲಿ ಮಾತ್ರ ನೆರಡಿ |
| ಪರಮಾ ನೀಸರ್ ಜೀವಿ | ಪರಮಾಮೇಹರೋಗ | ಸಲ್ಫೋನೇಮೈಡುಗಳು, ಪೆನಿಸಿಲಿನ್ | ....... |
| ಪ್ಲೇಗು ದಂಡಾಣುಜೀವಿ | ಪ್ಲೇಗು | ಸಲ್ಪಡಯಜೀನ್, ಸ್ಟ್ರೆಪ್ಟೊಮೈಸಿನ್, ಕ್ಲೋರಾಂಫೆನಿಕಾಲ್ | ಚಿಗಟಗಳಿಂದ ಸೋಂಕು |
| ಬಾರ್ಟೊನೆಲ್ಲ ದಂಡಾಣುಜೀವಿ | ಒರೋಯ ಜ್ವರ | ಕ್ಲೋರಾಂಫೆನಿಕಾಲ್ | ಉಸುಬಿನ ನೊಣದ ಸೋಂಕು |
| ಬ್ರೂಸೆಲ್ಲ ಜಾತಿ | ಬ್ರೂಸೆಲ್ಲ ಬೇನೆ | ಟೆರ್ರ ಮೈಸಿನ್, ಆರಿಯಮೈಸಿನ್ | ದನಗಳಲ್ಲಿ ಕಂದುಹಾಕುವಿಕೆ |
| ಮಿದುಳು ಪೊರೆಯುರಿತದ ನೀಸರ್ ಜೀವಿ | ಮಿದುಳು ಬೆನ್ನುಹುರಿಯ ಜ್ವರ | ಪೆನಿಸಿಲಿನ್, ಸಲ್ಫೊನೇಮೈಡುಗಳು | ....... |
| ವಿಸರ್ಪಿ ರೋಗಾಣು | ವಿಸರ್ಪಿ | ರೋಧರಸಿಕೆ | ....... |
| ವೆಲ್ಷನ ಕದಿರುಜೀವಿ | ಅನಿಲಳಿಗೊಳಪು, ಕೆಲವೇಳೆ ಆಹಾರ ವಿಷವೇರಿಕೆ | ಜೀವಿವಿಷರೋಧಕ | ಗಾಯದ ಸೋಂಕು |
| ಸರಕಾಯ್ಜೀವಿಗಳು | ಕೆಂಜ್ವರ, ವಿಸರ್ಪಿ, ಮೆಂಡಿಕೆಯುರಿತ, ಬಾಣಂತಿ ಜ್ವರ, ಕೀಲುವಾತದ ಜ್ವರ, ಪುಪ್ಪುಸ ಉರಿತ | ಸಲ್ಫೋನೇಮೈಡುಗಳು, ಪೆನಿಸಿಲಿನ್ | ....... |
| ಸುರುಳಿಕ ಜೀವಿ | ಇಲಿಕಡಿತದ ಒಂದು ಜ್ವರ | ಸೋಮಲ, ಪೆನಿಸಿಲಿನ | ....... |
| ಸೆಟೆಬೇನೆ ಕದಿರುಜೀವಿ | ಸೆಟೆಬೇನೆ | ಜೀವಿವಿಷರೋಧಕ | ಗಾಯದ ಸೋಂಕು |
| ಷೀಗಜೀವಿ ವರ್ಗ | ಏಕಾಣುಜೀವಿಗಳಿಂದಾದ ಆಮಶಂಕೆ | ಸಲ್ಫೋನೇಮೈಡುಗಳು | ....... |
| ಹೊಂಬಣ್ಣ | ಕುರುಗಳು, ಗಾಯ, ಕೀವು, ಆಹಾರ | ಸಲ್ಫೋನೇಮೈಡುಗಳು | ....... |
| ಗುತ್ತಿಕಾಯ್ಜೀವಿಗಳು | ವಿಷವೇರಿಕೆ | ಪೆನಿಸಿಲಿನ್, ಟೆರ್ರಮೈಸಿನ್ ಆರಿಯೊಮೈಸಿನ್ | |

ಸೋಂಕು ಹತ್ತಿದ ಕೆಲವೇ ವಾರಗಳಲ್ಲಿ ಕ್ಷಯರೋಗ ತಲೆದೋರಬಹುದಾದರೂ ಇದರಿಂದ ಹೆಚ್ಚಿನ ಪರೀಕ್ಷೆಗಳಿಂದ ಮಾತ್ರ ಪತ್ತೆ ಮಾಡಬಹುದಾದ, ಅವಿತ ಸೋಂಕಿದ್ದು, ಒಂದಷ್ಟು ಕಾಲ ಕಳೆದಮೇಲೆ ರೋಗ ಹೊರಗಾಣಬಹುದು, ಇಲ್ಲವೇ ಬರುಬರುತ್ತ ಅಣಗಿ ವಾಸಿಯಾಗಬಹುದು. ಪರಪಿಂಡಿಗೂ ಆತಿಥೇಯಕ್ಕೂ ನಡುವೆ ನಾಜೂಕಿನ ಸಮತೋಲ ಏರ್ಪಟ್ಟು ಸಹಜವಾಗಿರುವ ಮೈಯ ರೋಗ ತಡೆವ ಬಲದಲ್ಲಿ ಕೊಂಚ ಕಾಲ ಇಳುಗಡೆಯಾದರೂ ಏರುಪೇರಾಗುತ್ತದೆ.

ಯಾವ ಕೀಟದಿಂದಲೇ ಸೋಂಕು ಹತ್ತಿದರೂ ಮೈಯಲ್ಲಿನ ಊತಕಗಳಲ್ಲಿ ಪ್ರತಿಕ್ರಿಯೆಗಳ ಸಾಲುಗಳೇ ಏಳುತ್ತವೆ. ಉರಿತ ಇಂಥ ಒಂದು ಪ್ರತಿಕ್ರಿಯೆ. ಉರಿತದಲ್ಲಿ ಸೋಂಕನ್ನು ಒಂದೆಡೆಗೆ ಮಿತಿಗೊಳಿಸಿ ಒಳನುಗ್ಗಿರುವ ರೋಗಾಣುವನ್ನು ಹಾಳುಗೆಡಿಸುವಂತೆ ರಕ್ತನಾಳಗಳ, ರಕ್ತಕಣಗಳ ಬದಲಾವಣೆಗಳಾಗುತ್ತವೆ. ಬಹುಮಟ್ಟಿಗೆ ಎಲ್ಲ ಜೀವಿಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಕಾಣಬರುವ ಸಾಮಾನ್ಯ ಪ್ರತಿಕ್ರಿಯೆ ಉರಿತ. ಜೀವಾಣುಗಳು ಒಳಹೋಗುವುದರಿಂದಲೇ ಅಲ್ಲದೆ ಊತಕಗಳೊಳಕ್ಕೆ ಹೊರಗಿಂದ ಯಾವ ಕೆರಳಿಸುವ ವಸ್ತು ಸೇರಿದರೂ ಉರಿತವಾಗುತ್ತದೆ. ಆದರೆ ಜೀವಾಣುಗಳಿಂದೇಳುವ ಪ್ರತಿಕ್ರಿಯೆಗಳು ಮಾತ್ರ ಆಯಾ ಮಾದರಿಯ ಜೀವಾಣುವಿಗೆ ವಿಶಿಷ್ಟ ಒಟ್ಟಾಗಿ ನವಿರುಜಾಲದ ಒಳಪೊರೆಯ ಮಂಡಲ (ರೆಟಿಕ್ಯುಲೋ–ಎಂಡೋತೀಲಿಯಲ್ ಸಿಸ್ಟಂ) ಎನಿಸಿಕೊಂಡ, ಮೈಯಲ್ಲಿರುವ ಕೆಲವು ಗೊತ್ತಾದ ಜೀವಕಣಗಳಲ್ಲಿ, ಸೋಂಕಿಗೆ ಕಾರಣವಾದ ಆಯಾ ಮಾದರಿಯ ರೋಗಾಣುವಿನ ಮೇಲೆ ವರ್ತಿಸುವ, ನಿರೋಧಕಗಳೆಂಬ (ಆಂಟಿಬಾಡೀಸ್) ಪ್ರತಿ ಕಾಯಗಳು ತಯಾರಾಗುತ್ತವೆ. ನಿರೋಧಕಕ್ಕೂ ಅದರ ಎದುರು ಸಮನಾಗಿ ರೋಗಾಣುವಿನಲ್ಲಿರುವ ನಿರೋಧಜನಕ (ಆಂಟಿಜನ್) ಎಂದಿರುವುದಕ್ಕೂ ಕೂಡಿಕೆ ತೀರ ವಿಶಿಷ್ಟ: ಅಂದರೆ ಇದು ಬೀಗ, ಕೀಲಿಯಂತಿರುವುದು. ರಕ್ತದಲ್ಲಿ ನಿರೋಧಕಗಳು ಸಾಕಷ್ಟಿದ್ದಲ್ಲಿ, ಹಲವಾರು ಬಗೆಗಳಲ್ಲಿ ರೋಗಾಣುಗಳ ಮೇಲೆ ವರ್ತಿಸಿ, ರಕ್ತ, ಅಂಗಾಂಶಗಳಲ್ಲಿ ಯಾವಾಗಲೂ ಇರುವ ತಿನಿಕಣಗಳಿಗೆ (ಫ್ಯಾಗೊಸೈಟ್ಸ್) ಬಲಿಯಾಗುವ ಹಾಗೆ ಅವನ್ನು ಬದಲಿಸುತ್ತವೆ. ಹೀಗೆ ಗಳಿಸಿದ ವಿಶಿಷ್ಟ ಪ್ರತಿರಕ್ಷಣೆ ಬಾಳಿನುದ್ದಕ್ಕೂ ಕೆಲವೇ ಕಾಲವೋ ಉಳಿಯಬಹುದು. ಬಾಳಿನುದ್ದಕ್ಕೂ ಇದ್ದರೆ, ಅದೇ ರೋಗ ಮತ್ತೆ ಅಂಟುವಂತಿಲ್ಲ. ಕೊಂಚ ಕಾಲವಿದ್ದರೆ ೨, ೩, ೪ ಬಾರಿಯಾದರೂ ಮೇಲಿಂದಮೇಲೆ ಸೋಂಕಿಗೆ ಈಡಾಗಬಹುದು.

ಬೇರೆ ಬೇರೆ ರೋಗಗಳಲ್ಲಿ ಗಳಿಸಿದ ಪ್ರತಿರಕ್ಷಣೆಯ ಮಟ್ಟ ಇರುವ ಕಾಲಗಳನ್ನು ನಿರ್ಧರಿಸುವ ಅಂಶಗಳ ವಿಚಾರದ ತಿಳಿವು ಏನೇನೂ ಸಾಲದು. ಸಾಮಾನ್ಯವಾಗಿ ಮೈಯೆಲ್ಲ ಹರಡಿಕೊಳ್ಳುವ ವಿಷಕಣಗಳ ಸೋಂಕಿನಿಂದ ಬಲವಾದ ಶಾಶ್ವತ ಪ್ರತಿರಕ್ಷಣೆ ಲಭಿಸುತ್ತದೆ. ಆದರೆ, ಏಕಾಣುಜೀವಿಗಳಿಂದೇಳುವ ಉಸಿರಾಟದ ಸೋಂಕಿನಿಂದ ಬಲವಿಲ್ಲದ ಪ್ರತಿರಕ್ಷಣೆ ಕೊಂಚ ಕಾಲ ಇದ್ದು ಹೋಗುವುದು.

ಹತೋಟಿ: ನಿರೋಧ : ಸೋಂಕಿನ ವಸ್ತುವಿನ ಪ್ರಮಾಣದ ಇಳುಗಡೆ, ಸೋಂಕು ಸಾಗಣೆಯ ಸಾಧನಗಳ ಹತೋಟಿ, ಆತಿಥೇಯದ ರೋಗ ತಡೆವ ಬಲದ ಹೆಚ್ಚಳಿಕೆ ಇವುಗಳಿಂದ ಸೊಂಕುಕಾರಕ ರೋಗಗಳು ಬಾರದಂತೆ ತಡೆಯಬಹುದು.

ರೋಗ ಅಂಟಿಸುವ ವಸ್ತುವಿನ ಪ್ರಮಾಣವನ್ನು ಇಳಿಸುವ ಉಪಾಯಗಳು, ಸೋಂಕಿನ ವಸ್ತುವಿನ ಗುಣ, ಮೂಲಗಳಿಗೆ ತಕ್ಕಹಾಗೆ ಹಲತೆರನಾಗಿರುವುವು. ಕೈವಸ್ತ್ರ, ಕೆಲವೆಡೆ ಇಟ್ಟಿರುವ ಉಗುಳುದಾನಿಗಳ ಹೊರತಾಗಿ ಎಲ್ಲೆಂದರಲ್ಲಿ ಉಗುಳು, ಸೀನು, ಎಂಜಲು ತೆಮಡೆಗಳನ್ನು ಎಡೆಯಲೇಬಾರದು. ಸೋಂಕುರೋಗಿಗಳನ್ನು ಬೇರೆಯಾಗಿ ಇರಿಸಬೇಕು. ವಾಹಕಿಗಳ ಕಸಬುಗಳಲ್ಲಿ ಯಾವ ಅಡ್ಡಿಯನ್ನೂ ಹಾಕಬೇಕಿಲ್ಲ. ಅವರನ್ನು ಕೆಲಸದಿಂದ ತೆಗೆದುಹಾಕಿ ಬೇರೆ ಇರಿಸಬೇಕಿಲ್ಲ. ಸಿಡುಬು ಕಾಲರ ರೋಗಿಗಳನ್ನು ಬೇರೆ ಇರಿಸಿದರೆ, ಯಾರೂ ಅಡ್ಡಿಪಡಿಸರು. ಆದರೆ ಅದೇ ಕ್ಷಯರೋಗಿಗಳನ್ನು ಬೇರೆ ಇರಿಸುವುದಿರಲಿ, ಒಂದೆಡೆ ಕೂಡಿ ಹಾಕುವುದಕ್ಕೂ, ಯಾರಾದರೂ ಸರಿಯೇ, ಒಪ್ಪುವುದು ಇನ್ನೂ ಕಷ್ಟ. ಪ್ಲೇಗು, ಕಾಲರ, ಸಿಡುಬು. ಹಳದಿಜ್ವರದ ರೋಗಿಗಳಿರುವ ಹಡಗುಗಳಿಗೆ ಬಲವಂತವಾಗಿ ಕ್ವಾರಂಟೀನ್ (ನಲವತ್ತು ದಿನಗಳ ತಡೆ) ಹಾಕಿರಿಸಬಹುದು. ಇಲ್ಲೂ ಅಷ್ಟೇ, ಸಾಮಾಜಿಕ, ಹಣಕಾಸಿನ ಕಷ್ಟಗಳಿಂದ ಒಂದು ಮಿತಿಗೊಂಡ ರೂಪದ ಹೊರತಾಗಿ, ಈ ವಿಧಾನ ಜಾರಿಗೆ ತರುವುದು ಕಷ್ಟ. ಕಟ್ಟುನಿಟ್ಟಾಗಿ ಪಾಲಿಸುವುದಂತೂ ಅಸಾಧ್ಯ. ಮುಖ್ಯರಾದ ಕೆಲವರ ತುರ್ತಿನ ಕೆಲಸಗಳಿಗಾಗಿ ಆರೋಗ್ಯಪಾಲನೆಯ ನಿಯಮಗಳನ್ನು ಸಡಿಲಿಸಬೇಕಾಗುವುದು. ಕೊಂಚವಾದರೂ ಸಡಿಲಿಸಿ, ರೋಗಲಕ್ಷಣಗಳು ಹೊರಗೆ ತೋರದವರನ್ನು ಮುಂದೆ ಸಾಗಲು ಬಿಡಬಹುದು. ಅವರು ಹೋಗುವ ಸ್ಥಳದ ಆರೋಗ್ಯಾಧಿಕಾರಿಗೆ ಸುದ್ದಿ ಕೊಟ್ಟು, ಬೇನೆ ಬಿದ್ದರೆ ಕೂಡಲೇ ವೈದ್ಯರನ್ನು ಕರೆಸಬೇಕು. ಯಾರಲ್ಲಾದರು ರೋಗ ಕಾಣಿಸಿಕೊಂಡರೆ ಕೂಡಲೇ ರೋಗವನ್ನು ಗುರುತಿಸಿ ತಕ್ಕ ನಿರೋಧ ಕ್ರಮಗಳನ್ನೂ ಕೈಗೊಳ್ಳಬಹುದು.

ಕಾವಿನಿಂದಲೊ ರಾಸಾಯನಿಕ ಸೋಂಕು ನಾಶಕಗಳಿಂದಲೊ ಸೋಂಕಿನ ಕಾರಕಗಳನ್ನು ಕೆಲವು ಸಮಯಗಳಲ್ಲಿ ಮಾತ್ರ ಹಾಳುಮಾಡಬಹುದೇ ಹೊರತು, ಎಲ್ಲೆಲ್ಲೂ ಇದನ್ನು ಪಾಲಿಸುವಂತಿಲ್ಲ. ಗಾಳಿಯಲ್ಲಿ ಸಾಗಿಬರುವ ಸೋಂಕನ್ನು ತಡೆಯಲು ಕಟ್ಟಡಗಳಲ್ಲಿ ಹವೆಯಾಡುವಿಕೆ (ವೆಂಟಿಲೇಷನ್) ಬಲು ಮುಖ್ಯ ವಿಧಾನ. ಇದರಿಂದ ಗಾಳಿಯಲ್ಲಿರುವ ರೋಗಾಣುಗಳೂ ಕಡಿಮೆಯಾಗಿ, ಒಳಗೆ ವಾಸಿಸುವವನಿಗೆ ಒಂದೇ ಬಾರಿಗೆ ಅವನ ಅಂಗಾಂಶಗಳು ತಡೆದುಕೊಳ್ಳುವಷ್ಟಕ್ಕಿಂತ ಹೆಚ್ಚಾಗಿರವು. ಚೊಕ್ಕತೆಯಿಂದ ದೂಳಿಲ್ಲದಂತೆ ನೋಡಿಕೊಂಡರೆ ಬಲು ಅನುಕೂಲ. ಏಕಾಣುಜೀವಿಗಳನ್ನು ಬಿಸಿಲು ಹಾನಿಗೊಳಿಸುವುದರಿಂದ, ಮನೆಯೊಳಕ್ಕೆ ಸಾಕಷ್ಟು ಬಿಸಿಲೂ ಬೆಳಕೂ ಬೀಳುವಂತೆ ಕಿಟಕಿ, ಬಾಗಿಲುಗಳ ಪರದೆಗಳನ್ನು ಕಳಚಿಟ್ಟು ಮಾಮೂಲಿನಂತೆ ನೀರು, ಸಾಬೂನುಗಳನ್ನು ಬಳಸಬಹುದು. ಬಿಸಿಲು ಇಲ್ಲವಾದಾಗ ಅತಿನೇರಳೆ ಬೆಳಕಿನ ವಿಕಿರಣತೆಯಿಂದಲೂ ಸೋಂಕು ಕಳೆವ ತಂಪುರಿಗಳನ್ನು (ಸ್ಪ್ರೇಸ್) ಆಗಾಗ್ಗೆ ಚಿಮುಕಿಸುವುದರಿಂದಲು ಕೋಣೆಯ ರೋಗಾಣುಗಳನ್ನು ಸಾಯಿಸಲು ಯತ್ನಿಸಬಹುದು. ಆದರೆ, ಇವು ಬಿಸಿಲು, ಹೊಸ ಗಾಳಿಗಳ ಸಮಕ್ಕೆ ಬಾರವು.

ಸೋಂಕು ಕಾರಕಗಳ ಸಾಗಣೆಯ ಸಾಧನಗಳ ಹತೋಟಿಯನ್ನು ಕರುಳಿನ ರೋಗಗಳಲ್ಲಿ ಬಲು ಚೆನ್ನಾಗಿ ಜಾರಿಗೆ ತರಬಹುದು. ಮುಂದುವರಿದ ಹಲವು ನಾಡುಗಳಲ್ಲಿ ಒಳ್ಳೆಯ ನೀರಿನ ಪೂರೈಕೆಯಿಂದ ಕಾಲರ ರೋಗದ ಹೆಸರಿಲ್ಲವಾಗಿದೆ. ವಿಷಮ ಜ್ವರದ ಹಾವಳಿಯೂ ತಗ್ಗಿದೆ. ಹಾಗೇ ಪಾಶ್ಚುರೀಕರಣದಿಂದಾಗಿ, ಹಾಲಿನಿಂದ ಸಾಗಿಬರುವ ರೋಗಗಳೂ ಇಲ್ಲವಾಗಿವೆ.

ಆಹಾರದ ಶುಚಿತ್ವವನ್ನು ಕುರಿತು ಬಲು ಎಚ್ಚರವಿರಬೇಕು. ಮಾಂಸಕ್ಕಾಗಿ ಕೊಲ್ಲುವ ಮೊದಲೇ ಕಡ್ಡಾಯವಾಗಿ ಪ್ರಾಣಿಗಳ ಪರೀಕ್ಷೆ ಆಗಬೇಕು. ಕಸಾಯಿ ಶಾಲೆಗಳಲ್ಲಿ ಚೊಕ್ಕತೆ, ಕಚರಸಾಗಣೆ ಚೆನ್ನಾಗಿರಬೇಕು. ಕೊಂದಮೇಲೆ ಮಾಂಸದ ಪರೀಕ್ಷೆ ಪರಿಣತರಿಂದ ಆಗಬೇಕು. ಊಟ ತಿಂಡಿಗಳ ಮಂದಿರಗಳು, ವಿದ್ಯಾರ್ಥಿ ನಿಲಯ, ವಸತಿಗೃಹಗಳು ಮತ್ತು ಮನೆಗಳಲ್ಲಿ ಆಹಾರವನ್ನು ಮುಟ್ಟಿ ಅಡುಗೆ ಮಾಡುವವರು, ಬಡಿಸುವವರು ಆರೋಗ್ಯನಿಯಮಗಳಂತೆ ತುಂಬ ಚೊಕ್ಕತೆ ಪಾಲಿಸಬೇಕು. ಆಹಾರದಿಂದ ರೋಗಗಳು ಬರದಿರಬೇಕಾದರೆ ಆಹಾರವನ್ನು ತಯಾರಿಸುವ, ಕೂಡಿಡುವ ಪಾತ್ರೆಪಡಿಗಗಳು ಚೊಕ್ಕವಾಗಿರಬೇಕು. ಅವು ಎಂದಿಗೂ ಇಲಿ ಹೆಗ್ಗಣಗಳಿಗಾಗಲಿ, ನೊಣ, ಕೀಟಕಗಳಿಗಾಗಲಿ ಸಿಗುವಂತಿರಬಾರದು.

ನಾಯಿಗಳಿಂದ ನಾಯಿಹುಚ್ಚು ಬರುವುದನ್ನು ಪೂರ್ತಿ ತಪ್ಪಿಸಬೇಕಾದರೆ ಬೀದಿ ನಾಯಿಗಳೇ ಇಲ್ಲದಂತೆ ನೋಡಿಕೊಂಡು, ಹೊರನಾಡುಗಳಿಂದ ಬರುವವುಗಳ ಮೇಲೆ ಉಸ್ತುವಾರಿ ಇಡಬೇಕು. ಮೊಟ್ಟೆಯಿಟ್ಟು ಮರಿ ಮಾಡುವ ಜಾಗಗಳನ್ನು ಹಾಳು ಮಾಡುವುದರಿಂದಲೂ ವೈರಿಕೀಟಗಳನ್ನು ರಾಸಾಯನಿಕಗಳಿಂದ ಸಾಯಿಸುವುದರಿಂದಲೂ ಕಚ್ಚಿ ರಕ್ತ ಹೀರುವ ಕೀಟಗಳಿಂದೇಳುವ ರೋಗಗಳು ಬಲು ಮಟ್ಟಿಗೆ ಅಣಗಿವೆ.

ಒಳ್ಳೆಯ ಆಹಾರ, ಹೊತ್ತೊತ್ತಿನ ಊಟ, ಮೈ ಚೊಕ್ಕತೆ, ಹೊಸಗಾಳಿ, ಸಾಕಷ್ಟು ಕೈಕಾಲಾಡಿಕೆ, ಬೇಕಿರುವಷ್ಟು ನಿದ್ರೆ ಇವಾವುದರಲ್ಲೂ ಮಿತಿಗೆಡದಿರುವುದೇ ಮುಂತಾದ ಎಂದಿನ ಆರೋಗ್ಯ ಸೂತ್ರಗಳನ್ನು ಪಾಲಿಸಿದರೆ ರೋಗಕ್ಕೆ ಒಡ್ಡಿರುವ ಜನರ ರೋಗ ತಡೆವ ಬಲವನ್ನು ಕೊಂಚಮಟ್ಟಿಗೆ ಹೆಚ್ಚಿಸಬಹುದು. ಆದರೆ ಇವನ್ನು ಮಾತ್ರ ಪಾಲಿಸಿಬಿಟ್ಟರೆ ಸೋಂಕಂಟಿಸುವ ರೋಗಗಳಿಂದ ತಪ್ಪಿಸಿಕೊಂಡ ಹಾಗಲ್ಲ. ಚಿಕ್ಕಂದಿನಲ್ಲಿ ಬಗೆಬಗೆಯ ಸೋಂಕುಗಳಿಗೊಡ್ಡಿ ಅವುಗಳೆದುರು ಒಂದಿಷ್ಟಾದರೂ ಪ್ರತಿರಕ್ಷಣೆ ಗಳಿಸಿಕೊಂಡಿರುವ ಪಟ್ಟಣಗಳಲ್ಲಿನ ಸಣಕಲರಿಗಿಂತಲೂ ಹಳ್ಳಿಗಾಡಿಂದ ಬಂದ, ಬಲು ಕಟ್ಟುಮಸ್ತಾಗಿ ಬೆಳೆದವರೇ ಸೋಂಕು ರೋಗಗಳಿಗೆ ಸುಲಭವಾಗಿ ಈಡಾಗುವರು.

ಸೋಂಕು ರೋಗ ಹತ್ತಿ ಒಂದಷ್ಟು ಮಂದಿ ಸತ್ತು, ಉಳಿದವರಲ್ಲಿ ರೋಗ ತಡೆವ ಬಲ ಹೆಚ್ಚುವಂತೆ ಲಸಿಕೆಗಳನ್ನು ಹಾಕುವುದರಿಂದಲೂ ರೋಗಕ್ಕೆ ಒಡ್ಡಿರುವ ಜನರ ರೋಗ ತಡೆವ ಬಲವನ್ನು ಹೆಚ್ಚಿಸಬಹುದು. ರೋಗ ಬಾರದಂತೆ ತಡೆಯಲು ಇದರಂಥ ಉಪಾಯ ತಾತ್ವಿಕವಾಗಿ ಇನ್ನಿಲ್ಲ ಎನಿಸಿದರೂ ಇದನ್ನು ಮಾಡಿ ನೋಡುವಾಗ ಹಲವಾರು ತೊಡಕುಗಳೂ ಮಿತಿಗಳೂ ಎದುರಾಗುತ್ತವೆ. ಬಹುಮಟ್ಟಿಗೆ ರೋಗಗಳು ಬಾರದಂತೆ ತಡೆವ ಲಸಿಕೆಗಳು ಎಲ್ಲೊ ಕೆಲವು ರೋಗಗಳೆದುರು ಮಾತ್ರ ಇವೆ. ಉಳಿದವಕ್ಕಿಲ್ಲ; ಇದ್ದರೂ ಸಾಕಷ್ಟು ಬಲವಾಗಿಲ್ಲ. ಅದೂ ಅಲ್ಲದೆ, ಸೋಂಕು ರೋಗಗಳೆ ಬಾರದಂತೆ ತಡೆಗಟ್ಟಬೇಕಾದರೆ ಸೋಂಕಿಗೆ ಈಡಾಗುವಂತೆ ಇರುವವರೆಲ್ಲರಿಗೂ ಒಂದೊಂದು ರೋಗದ ಎದುರೂ ಲಸಿಕೆ ಹಾಕುವುದಲ್ಲದೆ, ಮತ್ತೆ ಮತ್ತೆ ಹಾಕುತ್ತಲೂ ಇರಬೇಕಾಗುತ್ತದೆ. ಸೇನೆಯಲ್ಲಂತೂ ಇದು ಸರಾಗವಾಗಿ ಕೈಗೂಡಬಹುದು. ಜನಸಾಮಾನ್ಯರಲ್ಲಿ ಆಗದು. ನಿಜವಾದ ರೋಗದಿಂದ ಬಂದುದಕ್ಕೆ ತಕ್ಕಂತೆ ಅದರ ಲಸಿಕೆಯಿಂದೇಳುವ ಪ್ರತಿರಕ್ಷಣೆಯ ಮಟ್ಟವೂ ಇರುವುದು. ಅಂದರೆ ಬಾಳಿನುದ್ದಕ್ಕೂ ಶಾಶ್ವತ ಪ್ರತಿರಕ್ಷಣೆ ಕೊಡುವ ಮತ್ತೆ

ಮರುಕಳಿಸಿದ ರೋಗಗಳಲ್ಲಿ ಮಾತ್ರ ಲಸಿಕೆ ಹಾಕುವಿಕೆಯಿಂದ ಅನುಕೂಲವಿದೆ. ಸಿಡುಬು ಇದರ ಒಳ್ಳೆಯ ಉದಾಹರಣೆ.

ಹೊರಜೀವವಿಷವನ್ನು ಸುರಿಬಿಡುವ ಸೆಟೆಬೇನೆ, ಗಂಟಲಮಾರಿ ತೆರನ ಏಕಾಣುಜೀವಿಗಳಿಂದ ಏಳುವ ಹಲವು ರೋಗಗಳ ಎದುರೂ ಬಲವಾದ ಲಸಿಕೆಗಳಿವೆ. ಗಂಟಲ ಮಾರಿಯದಂತೂ ಚೆನ್ನಾಗಿ ಎದ್ದುಕಾಣುವಂಥದು. ಕೇವಲ ಮಗುವನ್ನು ಈ ರೋಗದಿಂದ ಕಾಪಿಡುವುದಲ್ಲದೆ, ಇಡೀ ನಾಡಿನಿಂದಲೇ ರೋಗವನ್ನು ಹೋಗಲಾಡಿಸಬಹುದು. ಈ ರೋಗಕ್ಕೀಡಾಗುವ ವಯಸ್ಸಿನವರನ್ನೂ ಸೇರಿಸಿಕೊಂಡು ಜನರಲ್ಲಿ ಸಾಕಷ್ಟು ಮಂದಿಗೆ ನಾಲ್ವರಲ್ಲಿ ಮೂವರಿಗಾದರೂ ಪ್ರತಿರಕ್ಷಣೆ ಪಡೆಯಲು ಲಸಿಕೆ ಹಾಕಬೇಕು. ಶಾಲಾ ಮಕ್ಕಳಿಗೆ ಸುಮಾರು ೫ ವರ್ಷಗಳಿಗೊಮ್ಮೆಯಾದರೂ ಹಾಕದಿದ್ದಲ್ಲಿ ರೋಗ ಹರಡುತ್ತಲೇ ಇರುವುದು. ಇತರ ಏಕಾಣುಜೀವಿಗಳಿಂದ ಬರುವ ರೋಗಗಳ ಎದುರು ಲಸಿಕೆಗಳು ಅಷ್ಟು ಪರಿಣಾಮಕಾರಿಗಳಲ್ಲ. ವಿಷಮಜ್ವರ, ನಾಯಿ ಕೆಮ್ಮು, ಸೊಕ್ಕಿನಜ್ವರ, ಪ್ಲೇಗು, ಕಾಲರಗಳೆದುರು ಲಸಿಕೆಗಳಿದ್ದರೂ ಅವುಗಳಿಂದ ಲಭಿಸುವ ಪ್ರತಿರಕ್ಷಣೆ ಎಷ್ಟೇ ಬೇಕೆನಿಸಿದರೂ ಬಲವಾದುವಲ್ಲ. ಉಸಿರಾಟ ಮಂಡಲದ ರೋಗಗಳೆದುರು ಲಸಿಕೆಗಳಿಲ್ಲ ತತ್ಕಾಲಕ್ಕೆ ರೋಗವನ್ನು ತಡೆವ ಬಲ ಕೊಡಲು ನಿರೋಧಕ‌ಲಸಿಕೆಗಳನ್ನು (ಆಂಟಿಸೀರಮ್) ಕೆಲವೇಳೆ ಕೊಡಬಹುದು. ಗಂಟಲಮಾರಿ, ಸೆಟೆಬೇನೆ, ಅನಿಲದ ಅಳಿಕೊಳಪುಗಳಲ್ಲಿ (ಗ್ಯಾಸ್ ಗ್ಯಾಂಗ್ರೀನ್) ಮಾತ್ರ ಹೀಗೆ ಮಾಡಬಹುದು. ಇನ್ನಾವ ವಿಧಾನಗಳಿಂದಲೂ ಆಗದಿದ್ದರೆ, ಕೆಲವು ವೇಳೆ ದಿನವೂ ಮದ್ದುಗಳನ್ನು ಕೊಡುವುದರಿಂದ ಸಾಧಿಸಬಹುದು. ಕಳೆದ ಮಹಾಯುದ್ಧ ಕಾಲದಲ್ಲಿ ಮೆಪಕ್ರೀನ್ (ಆಟೆಬ್ರೀನ್) ಕೊಡುತ್ತಿದ್ದುದರಿಂದ ಮಲೇರಿಯ ಬರದಂತೆ ತಡೆಯಲು ಸಾಧ್ಯವಾಯಿತು. ಹಾಗೇ ಕೆಲವೆಡೆ ಸಲ್ಫೋನೇಮೈಡುಗಳನ್ನು ಕೊಡುತ್ತಿದ್ದುದರಿಂದ ಉಸಿರಾಟ ಮಂಡಲದ ಬೇನೆಗಳನ್ನು ತಡೆವುದಾಯಿತು. ಆದರೆ, ಮುಂದೆ ಸಲ್ಫೋನೇಮೈಡುಗಳಿಗೆ ಜಗ್ಗದ ರೋಗಾಣುಗಳ ತಳಿಗಳು ಬೆಳೆಯಬಹುದಾದ್ದರಿಂದ, ಈ ಮದ್ದುಗಳನ್ನು ಸುಮ್ಮನೆ ಯಾವಾಗಲೂ ಕೊಡುವುದು ಒಳ್ಳೆಯದಲ್ಲ.

ಚಿಕಿತ್ಸೆ : ಮೈ ಒಳ ಹೊಕ್ಕಿರುವ ಏಕಾಣುಜೀವಿಗಳ ನಾಶದೊಂದಿಗೆ, ರೋಗಿಯ ರೋಗಲಕ್ಷಣಗಳ ಶಮನ ಮಾಡುವುದೇ ಸೋಂಕುಕಾರಕ ರೋಗಗಳ ಚಿಕಿತ್ಸೆ. ಕುರುವಿನಲ್ಲಿದ್ದ ಹಾಗೆ ಎಲ್ಲಾದರು ಕೀವು ಸೇರಿದ್ದರೆ ಇಲ್ಲವೇ ರೋಗ ಒಂದೆಡೆ ನೆಲೆಸಿದ್ದರೆ ಅದನ್ನು ಹೋಗಲಾಡಿಸಲು ಶಸ್ತ್ರಕ್ರಿಯೆ ಮಾಡಬೇಕಾಗುತ್ತದೆ. ಆದರೆ ರೋಗ ಮೈಯಲ್ಲೆಲ್ಲ ಹರಡಿದ್ದಲ್ಲಿ ಬೇರೆ ವಿಧಾನಗಳಾಗಬೇಕು. ಗಂಟಲಮಾರಿ, ಸೆಟೆಬೇನೆಗಳ ತೆರನ ರೋಗಗಳಲ್ಲೆ ರೋಗಾಣುಗಳು ಸುರಿಬಿಡುವ ಜೀವಿವಿಷವನ್ನು ಸಾಕಷ್ಟು ಪ್ರಮಾಣಗಳಲ್ಲಿ ಜೀವಿವಿಷರೋಧಕಗಳಿಂದ (ಆಂಟಿಟಾಕ್ಸಿನ್ಸ್) ಸಯ್ಗೊಳಿಸಬಹುದು. ಬಲವಾದ ಹೊರ ಜೀವಿವಿಷವನ್ನು ಸುರಿಬಿಡದ ಜೀವಾಣುಗಳೆಂದೇಳುವ ರೋಗಗಳ ಚಿಕಿತ್ಸೆಯಲ್ಲಿ ಲಸಿಕೆಗಳಿಂದ ಅನುಕೂಲವಿಲ್ಲ. ೧೯೩೫ರಿಂದೀಚೆಗೆ ಸಲ್ಫೋನೇಮೈಡುಗಳೂ ಜೀವಿರೋಧಕಗಳೂ (ಆಂಟಿಬಯೋಟಿಕ್ಸ್) ಜಾರಿಗೆ ಬಂದಾಗಿನಿಂದ ಸೋಂಕುಕಾರಕ ರೋಗಗಳ ಚಿಕಿತ್ಸೆಯಲ್ಲಿ ಕ್ರಾಂತಿಯೇ ಆಗಿದೆ. ಗಾಳಿಕಾಯ್ಜೀವಿಯ (ನ್ಯೂಮೊಕಾಕ್ಕೈ), ಸರಕಾಯ್ಜೀವಿಯ (ಸ್ಟ್ರೆಪ್ಟೊಕಾಕ್ಕೈ) ಮಿದುಳು ಪೊರೆಕಾಯ್ಜೀವಿಯ (ಮೆನಿಂಗೊಕಾಕ್ಕೈ), ರೇತುಕಾಯ್ಜೀವಿಯ (ಗಾನೊಕಾಕ್ಕೈ) ಸೋಂಕುಗಳ ಚಿಕಿತ್ಸೆಗೆ ಸಲ್ಫೋನೇಮೈಡುಗಳು ಪರಿಣಾಮಕಾರಿಗಳು.

ಸಲ್ಫೋನೇಮೈಡುಗಳು ಏಕಾಣುಜೀವಿಗಳ ಜೀವವಸ್ತು ಕರಣದಲ್ಲಿ ಅಡ್ಡಿಯಾಗಿ ಅವು ಬೆಳೆಯಲು ಬೇಕೇ ಬೇಕಿರುವ ಕೆಲವು ಪದಾರ್ಥಗನ್ನು ಬಳಸದಂತೆ ಮಾಡುತ್ತವೆ. ಏಕಾಣುಜೀವಿಗಳ ರೋಗಗಳ ಚಿಕಿತ್ಸೆಯಲ್ಲಿ ಬಲು ಮುಖ್ಯವಾದ ಜೀವಿರೋಧಕಗಳು ಪೆನಿಸಿಲಿನ್, ಸ್ಟ್ರೆಪ್ಟೊಮೈಸಿನ್, ಕ್ಲೋರಾಂಫೆನಿಕಾಲ್, ಕ್ಲೋರ್‌ಟೆಟ್ರಸೈಕ್ಲೀನ್ (ಆರಿಯೊಮೈಸಿನ್), ಆಕ್ಸಿಟೆಟ್ರಸೈಕ್ಲೀನ್ (ಟೆರ್‍ರಮೈಸಿನ್). ಎಲ್ಲ ಏಕಾಣುಜೀವಿಗಳೂ ಈ ಮದ್ದುಗಳಿಗೆ ಮಣಿಯವು. ಒಂದೆರಡು ದೊಡ್ಡವನ್ನು ಬಿಟ್ಟರೆ ಯಾವ ವಿಷಕಣಗಳ ಸೋಂಕಿನೆದುರೂ ಸರಿಯಾದ ಮದ್ದೇ ಇಲ್ಲ. ಹೊಸ ಹೊಸ ಮದ್ದುಗಳಂತೂ ತಯಾರಾಗುತ್ತಲೇ ಇವೆ. ಬಹಳ ದಿನಗಳೂ ತಿಂಗಳುಗಳೂ ಕೊಡುತ್ತಲೇ ಇದ್ದರೆ, ಕೆಲವು ಏಕಾಣುಜೀವಿಗಳು ಸಲ್ಫೋನೇಮೈಡುಗಳಿಗೂ ಜೀವರೋಧಕಗಳಿಗೂ ಜಗ್ಗದಂತಾಗುವುವು. ಅಷ್ಟೇ ಅಲ್ಲದೆ, ಹೀಗೆ ಜಗ್ಗದ ರೋಗಾಣುಗಳ ತಳಿಗಳೇ ಬೆಳೆದು ಎಲ್ಲೆಲ್ಲೂ ಹಬ್ಬಿಕೊಂಡು ಹೊಸ ಮದ್ದುಗಳಿಗೂ ಮಣಿಯದಂತಾಗುತ್ತವೆ.

***

**ಏಡಿ:** ಅಕಶೇರುಕ ಗುಂಪಿನ ಆರ್ಥ್ರೊಪೊಡ ವಂಶದ ಸದಸ್ಯ. ಕ್ರಸ್ಟೇಸಿಯ (ಕಠಿಣ ಚರ್ಮಿಗಳ) ವರ್ಗದಲ್ಲಿರುವ ಡೆಕೊಪೊಡ ಗಣದ ಬ್ರಾಕಿಯುರ ಉಪಗಣದಲ್ಲಿದೆ.

ಇದನ್ನು ಸ್ಥಳೀಯವಾಗಿ ನಳ್ಳಿ ಎನ್ನುವರು. ಇದರ ಆಂಗ್ಲನಾಮ ಕ್ರ್ಯಾಬ್. ಏಡಿಗಳು ಕಠಿಣ ಚರ್ಮಿಗಳು, ತುಂಡು ಬಾಲದ ಸಾಧಾರಣ ಜಲವಾಸಿಗಳು. ಹಲವು ಜಾತಿಯ ಏಡಿಗಳು ಸಮುದ್ರವಾಸಿಗಳು. ಕೆಲವು ಜಾತಿ ಏಡಿಗಳು ಉಷ್ಣ ಮತ್ತು ಸಮಶೀತೋಷ್ಣವಲಯ ಪ್ರದೇಶಗಳಲ್ಲಿನ ಹೊಳೆ, ತೊರೆ, ನಾಲೆ, ಝರಿ, ಕಾಲುವೆ ಮತ್ತು ನೀರು ತುಂಬಿದ ಗದ್ದೆಗಳಲ್ಲಿ ವಾಸಿಸುತ್ತವೆ. ಬಂಡೆಗಳಿಂದ ಕೂಡಿದ ತೀರ ಪ್ರದೇಶ ಮತ್ತು ತಳಪ್ರದೇಶಗಳಲ್ಲಿರುವ ಬಿರುಕು ಮತ್ತು ಬಿಲಗಳೇ ಇವುಗಳ ಬೀಡು. ಕಡಲತೀರದ ಜೌಗುಪ್ರದೇಶ ಮತ್ತು ತೇವಯುಕ್ತ ಗದ್ದೆಗಳಲ್ಲೂ ಬಿಲತೋಡಿ ವಾಸಿಸುತ್ತವೆ. ಇವು ಸಂಜೆ ಮತ್ತು ರಾತ್ರಿಯ ವೇಳೆ ತಮ್ಮ ಆಹಾರ ಹುಡುಕಲು ಹೊರಗೆ ಬರುತ್ತವೆ. ಭೂಮಿಯ ಬಿಲಗಳಲ್ಲಿ ವಾಸಿಸುವ ಏಡಿಗಳೆಲ್ಲವೂ ಜಲಚರ ಏಡಿಗಳಂತೆಯೇ ತಮ್ಮ ಪ್ರಾರಂಭಿಕ ಜೀವನವನ್ನು ನೀರಿನ ಆಸರೆಯಲ್ಲಿಯೇ ಕಳೆಯುತ್ತವೆ.



ಏಡಿ

ದೇಹ ಅಂಡಾಕಾರ ಅಥವಾ ಚೌಕ ಅಥವಾ ತ್ರಿಕೋನಾಕಾರವಾಗಿದೆ. ಕೆಲವು ಚಪ್ಪಟೆಯಾಗಿದ್ದು, ತಲೆ ಮತ್ತು ಎದೆಭಾಗಗಳು ಒಂದುಗೂಡಿ ಶಿರೋವಕ್ಷವಾಗಿ ಮಾರ್ಪಟ್ಟಿದೆ. ಇಡೀ ದೇಹವನ್ನು ಕ್ಯಾರಪೇಸ್ ಎಂಬ ಗಡುಸಾದ ಚಿಪ್ಪು ಆವರಿಸಿದೆ. ಎದೆಯ ಭಾಗದಲ್ಲಿ ಐದು ಜೊತೆ ಕಾಲುಗಳಿವೆ. ಅವುಗಳ ಪೈಕಿ ಮೊದಲ ಜೊತೆಕಾಲುಗಳು ದಪ್ಪವಾಗಿವೆ. ತುದಿಭಾಗಗಳು ಚಿಮ್ಮಟಿಕೆಯಂತೆ (ಪೆಡಿಪಾಲ್ಪ್) ಮಾರ್ಪಟ್ಟಿವೆ. ಇವುಗಳಿಂದ ಆಹಾರ ಅಥವಾ ಇತರ ವಸ್ತುಗಳನ್ನು ಹಿಡಿಯುವುದು ಸಾಧ್ಯ. ಆತ್ಮರಕ್ಷಣಾ ಸಾಧನಗಳಾಗಿ ಇವುಗಳ ಉಪಯೋಗವಿದೆ. ಏಡಿಗಳ ಓಟದ ದಾರಿಯನ್ನು ಅಡ್ಡಗಟ್ಟಿದರೆ ಅಥವಾ ಒಂದು ಮೂಲೆಗೆ ಅಟ್ಟಿ ನಿಲ್ಲಿಸಿದರೆ ಅವು ತಮ್ಮ ಇಕ್ಕುಳದಂಥ ಪಾದಗಳನ್ನು ಮೇಲೆತ್ತಿ ಭೀತಿಯುಂಟುಮಾಡಲು ಯತ್ನಿಸುತ್ತವೆ. ಒಂದು ವಸ್ತುವನ್ನು ಏಡಿ ಹಿಡಿದುಕೊಂಡರೆ ಅದನ್ನು ಸುಲಭವಾಗಿ ಬಿಡುವುದಿಲ್ಲ. ಉಳಿದ ನಾಲ್ಕು ಜೊತೆ ಪಾದಗಳ ರಚನೆ ಸರಳ. ಅವು ಚಲನೆಯಲ್ಲಿ ನೆರವಾಗುತ್ತವೆ. ಏಡಿಯ ನಡಿಗೆ ವಿಶಿಷ್ಟವಾಗಿದೆ.

ಇದು ಭೂಮಿಯ ಮೇಲೆ, ನೀರಿನ ತಳದಲ್ಲಿ ನಡೆಯುವಾಗ ಈ ಚಲನಪಾದಗಳ ತುದಿಯ ಮೇಲೆ ಭಾರ ಹಾಕಿ ಅಡ್ಡವಾಗಿ ನಡೆಯುತ್ತದೆ. ಕೆಲವು ಜಾತಿಯ ಸಮುದ್ರದ ಏಡಿಗಳ ಕೊನೆಯ ಜೊತೆಕಾಲುಗಳ ತುದಿಭಾಗಗಳು ಅಗಲವಾಗಿ ಮಾರ್ಪಟ್ಟು, ಈಜುವುದಕ್ಕೆ ನೆರವಾಗುತ್ತವೆ. ಶತ್ರುವಿನೊಡನೆ ಹೋರಾಡುವಾಗ ಏಡಿ, ಅದರ ಕಾಲುಗಳನ್ನು ಕಳೆದುಕೊಳ್ಳಬಹುದು. ಆದರೆ ಹೀಗೆ ನಷ್ಟವಾದ ಕಾಲು ಅಥವಾ ಅಂಗ ಪುನಃ ಬೆಳೆಯುತ್ತದೆ. ಎರಡು ಸಂಯುಕ್ತ ಕಣ್ಣುಗಳಿವೆ. ಮೇಲ್ಚಿಪ್ಪಿನ (ಕ್ಯಾರಪೇಸ್) ಮುಂಭಾಗದ ಗುಳಿಗಳಲ್ಲಿ ಒಳಕ್ಕೆ ಎಳೆದುಕೊಳ್ಳುವಂತೆ ಇವುಗಳ ರಚನೆ ಇದೆ. ಏಡಿಗೆ ಆರು ಜೊತೆ ಜಂಭಿಕಪಾದಗಳಿವೆ. ಇವೆಲ್ಲವೂ ಬಾಯಿ ಅಂಗುಳದಲ್ಲಿ ಅಳವಡಿಸಿದ್ದು ಅಗಲ ಹಾಗೂ ಚಪ್ಪಟೆಯಾದ ಮೂರನೆಯ ಜಂಭಿಕಪಾದಗಳು ಉಳಿದವೆಲ್ಲವನ್ನೂ ಮುಚ್ಚುತ್ತವೆ.

ಉದರ ಭಾಗ ಕ್ಷೀಣಗೊಂಡು ಶಿರೋವಕ್ಷಕ್ಕಿಂತಲೂ ಚಿಕ್ಕದಾಗಿರುವುದಲ್ಲದೆ ಎದೆಯ ಭಾಗದ ತಳದಲ್ಲಿ ಮಡಿಚಿಕೊಂಡಿದೆ. ಉದರ ಮತ್ತು ಕೀಲೇಟ್ ಪಾದಗಳ ಸಹಾಯದಿಂದ ಗಂಡು ಹೆಣ್ಣುಗಳನ್ನು ಸುಲಭವಾಗಿ ಗುರುತಿಸಬಹುದು. ಉದರ ಭಾಗ ಗಂಡಿನಲ್ಲಿ ಕಿರಿದು ಮತ್ತು ತ್ರಿಕೋನಾಕೃತಿಯದು. ಹೆಣ್ಣಿನಲ್ಲಿ ಅಗಲ ಮತ್ತು ದುಂಡಾಗಿದೆ. ಗಂಡಿನ ಕೀಲೇಟ್ ಪಾದಗಳು ಹೆಣ್ಣಿನದಕ್ಕಿಂತ ಹೆಚ್ಚು ದೊಡ್ಡವೂ ಮತ್ತು ಬಲವಾಗಿವೆ. ಫಿಡ್ಲರ್ ಏಡಿಗಳಲ್ಲಿ ಗಂಡಿನ ಒಂದು ಕೀಲೇಟ್ ಪಾದ ದೊಡ್ಡದು. ಹೆಣ್ಣಿನ ಪ್ಲವಪಾದಗಳು ಗಂಡಿನದಕ್ಕಿಂತ ಪುಷ್ಟವಾಗಿ ಬೆಳೆದಿರುತ್ತವೆ. ಸಂತಾನೋತ್ಪತ್ತಿಕಾಲದಲ್ಲಿ ಹೆಣ್ಣು ಏಡಿ ತಾನಿಟ್ಟ ಮೊಟ್ಟೆಗಳೆಲ್ಲವನ್ನು ಒಂದು ಮುದ್ದೆಮಾಡಿ ತನ್ನ ಉದರದ ಪ್ಲವಪಾದಗಳಿಗೆ ಅಂಟಿಸಿಕೊಳ್ಳುತ್ತದೆ. ಮೊಟ್ಟೆಯ ಗೊಂಚಲು ದಪ್ಪನಾಗಿರುವುದರಿಂದ ಅದು ದೇಹದಿಂದ ಹೊರಚಾಚಿ ಬರುತ್ತದೆ.

ಏಡಿಗಳು ಸರ್ವಭಕ್ಷಕ ಪ್ರಾಣಿಗಳು. ಮಾಂಸಾಹಾರಿ ಮತ್ತು ಸಸ್ಯಾಹಾರಿಗಳೆಂಬ ಎರಡು ಬಗೆಯ ಏಡಿಗಳಿವೆ. ಕೆಲವು ಜಾತಿಯ ಏಡಿಗಳು ತಮಗಿಂತಲೂ ಸಣ್ಣದಾದ ಏಡಿಗಳನ್ನು ಹಿಡಿದು ತಿನ್ನುತ್ತವೆ. ಅನೇಕ ಜಾತಿಯ ಏಡಿಗಳು ಕೊಳೆಯುತ್ತಿರುವ ಮಾಂಸವನ್ನು ತಿಂದು ಪರಿಸರವನ್ನು ಸ್ವಚ್ಛಗೊಳಿಸುತ್ತವೆ.

ಏಡಿ ಪರತಂತ್ರಜೀವಿಗಳಲ್ಲ. ಆದರೆ ಆತ್ಮರಕ್ಷಣೆಗಾಗಿ ಹಲವು ರೀತಿಯ ಉಪಾಯಗಳನ್ನು ಪ್ರದರ್ಶಿಸುತ್ತವೆ. ಕೆಲವು ಜಾತಿಯ ಏಡಿಗಳಿಗೆ ಪರಿಸರದಲ್ಲಿರುವ ಸಣ್ಣ–ಸಣ್ಣ ಕಲ್ಲುಗಳ

ಆಕಾರ, ಗಾತ್ರ ಮತ್ತು ವರ್ಣವಿನ್ಯಾಸಗಳಿವೆ. ಈ ಕಾರಣದಿಂದ ಅವು ಶತ್ರುವಿನ ಕಣ್ಣಿಗೆ ಸುಲಭವಾಗಿ ಬೀಳುವುದಿಲ್ಲ. ಕೆಲವು ಜಾತಿಯ ಏಡಿಗಳು ತಮ್ಮ ಪರಿಸರದಲ್ಲಿ ಬೆಳೆಯುವ ಜೊಂಡು ಮತ್ತು ಸ್ಪಂಜು ಪ್ರಾಣಿಗಳನ್ನು, ಸಮುದ್ರವಾಸಿ ಅನಿಮೋನ್ ಪ್ರಾಣಿಯನ್ನು ಮೇಲ್ಚಿಪ್ಪಿನ ಮೇಲೆ ಕೂರಿಸಿಕೊಂಡು ಸಹಜೀವನ ನಡೆಸುವುವು. ಇಂಥ ಸಹಜೀವನದಿಂದ ಏಡಿಗಳಿಗೆ ಸುಲಭವಾಗಿ ಆತ್ಮರಕ್ಷಣೆ ಸಿಗುತ್ತದೆ. ಇದರೊಂದಿಗೆ, ಚಲನಸಾಮರ್ಥ್ಯವಿಲ್ಲದ ಅನಿಮೋನಿಗೆ ಒಂದೆಡೆಯಿಂದ ಮತ್ತೊಂದೆಡೆಗೆ ಸವಾರಿ ಹೋಗುವ ಅವಕಾಶ ಸಿಗುತ್ತದೆ.

ಸಂತಾನೋತ್ಪತ್ತಿ ಬಗ್ಗೆ ಕಾರ್ಸಿನಸ್ ಜಾತಿಯ ಏಡಿಯನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳಲಾಗಿದೆ. ಮೊಟ್ಟೆಯಿಟ್ಟ ಎರಡು ವಾರಗಳಾದ ಮೇಲೆ ಮೊಟ್ಟೆಯಿಂದ ಮರಿ ಅಥವಾ ಲಾರ್ವಗಳು ಹೊರಬರುತ್ತವೆ. ಇವು ತಾಯಿ ಏಡಿಯನ್ನು ಹೋಲುವುದಿಲ್ಲ. ಬೆಳೆಯುತ್ತಾ, ಹೊರಕವಚವನ್ನು ಹಲವು ಬಾರಿ ಕಳಚಿ ಕೊನೆಗೆ ಮರಿ ಏಡಿಗಳಾಗುತ್ತವೆ. ಮರಿ ಏಡಿಗಳು ಹೆತ್ತವರ ರೂಪ ರಚನೆಯನ್ನು ಪಡೆಯುತ್ತವೆ. ಇದು ಕಾಯಪರಿವರ್ತನೆ. ಇದರಲ್ಲಿ ಎರಡು ಪ್ರಮುಖ ಲಾರ್ವಘಟ್ಟಗಳನ್ನು ಕಾಣಬಹುದು. ಮೊಟ್ಟೆಯಿಂದ ಹೊರಬರುವ ಲಾರ್ವದ ಘಟ್ಟಕ್ಕೆ ಜೊಯಿಯ ಎಂದು ಹೆಸರು. ಇದರ ದೇಹದ ಉದ್ದ



ಏಡಿಲಾರ್ವದ ಎರಡು ಘಟ್ಟಗಳು
ಎಡಗಡೆಯದು ಜೋಯೆಯ, ಬಲಗಡೆಯದು ಮೆಗಲೋಪ

ಒಂದು ಮಿಮೀ. ಇದು ಪಾರದರ್ಶಕವಿದ್ದು, ಸಾಗರದ ನೀರಿನಲ್ಲಿ ಈಜುತ್ತ ನೀರಲ್ಲಿ ವಾಸಿಸುವ ಸೂಕ್ಷ್ಮಜೀವಿಗಳಾದ ಪ್ಲಾಂಕ್ಟನ್‌ಗಳನ್ನು ತಿಂದು ಬೆಳೆಯುತ್ತವೆ. ಈ ಹಂತದಲ್ಲಿ ದೇಹ ದುಂಡನಾಗಿ ಒಂದು ಜೊತೆ ಸಂಯುಕ್ತ ಕಣ್ಣುಗಳನ್ನು, ರೋಸ್ಟ್ರಮ್ ಮತ್ತು ಕ್ಯಾರಪೇಸುಗಳನ್ನು ಹೊಂದುತ್ತವೆ.

ನಾಲ್ಕರಿಂದ ಐದು ಖಂಡಗಳಿಂದ ಕೂಡಿದ ಉದರ ಭಾಗ ಬಾಲದಂತಿದೆ. ಎದೆಯ ಭಾಗದಲ್ಲಿ ಮೊದಲ ಎರಡು ಜೊತೆಪಾದಗಳು ಮಾತ್ರ ಇವೆ. ಒಂದೆರಡು ಬಾರಿ ಕವಚ ಕಳಚಿದ ನಂತರ, ಬೆನ್ನಿನ ಮೇಲೆ ಒಂದು ನೀಳವಾದ ಮುಳ್ಳು ರೂಪುಗೊಳ್ಳುತ್ತದೆ. ಜೊಯಿಯ ಲಾರ್ವ ದೇಹಪರಿವರ್ತನೆಗೊಂಡ ಅನಂತರ, ಈಜಲು ನೆರವಾಗುವ ಉಪಾಂಗಗಳು ಬೆಳೆಯುತ್ತವೆ. ಇದು ಕೊನೆಗೆ ನೀರಿನ ತಳಭಾಗಕ್ಕಿಳಿದು ಮೈ ಕವಚವನ್ನು ಕಳಚಿ ಮರಿ ಏಡಿಯಾಗುತ್ತದೆ. ಇದರ ಗಾತ್ರ ಮೂರು ಮಿಮೀ ಬೆಳೆದಂತೆಲ್ಲ ಕಾಲಕಾಲಕ್ಕೆ ತನ್ನ ಗಡುಸಾದ ಹೊರಕವಚವನ್ನು ವಿಸರ್ಜಿಸಿ ಹೊಸದನ್ನು ಪುನಃ ರೂಪಿಸಿಕೊಂಡು ದೊಡ್ಡದಾಗುತ್ತದೆ. ಈ ಅವಧಿಯಲ್ಲಿ ಅದರ ಹೊರಕವಚ ಮೃದುವಾಗಿರುತ್ತದೆ. ಅದಕ್ಕೆ ಸ್ಥಿತಿಸ್ಥಾಪಕಶಕ್ತಿ ಇರುತ್ತದೆ. ಇದು ಕ್ರಮೇಣ ಗಟ್ಟಿ ಮತ್ತು ಗಡುಸಾಗುವುದು.

ಏಡಿಯ ಮಾಂಸ ಬಲು ರುಚಿಕರ. ಹೀಗಾಗಿ ಏಡಿಯ ಪ್ರಭೇದಗಳನ್ನು ಜನ ಆಹಾರಕ್ಕಾಗಿ ಉಪಯೋಗಿಸುತ್ತಾರೆ. ಇದರ ಮಾಂಸ ಔಷಧಿ ಗುಣಗಳನ್ನೊಳಗೊಂಡಿದೆ. ಭಾರತದ ಹಲವೆಡೆ ಏಡಿಮಾಂಸದ ಸಾಂಬಾರನ್ನು ಗೂರಲು, ಕೆಮ್ಮು ಮತ್ತು ಬಹು ಕಾಲದ ಜ್ವರಗಳಿಂದ ನರಳುವವರಿಗೆ ಉಪಶಮನ ಮಾಡಲು ಬಳಸುತ್ತಾರೆ. ಕೆಲವು ಪ್ರಭೇದದ ಏಡಿಗಳ ಮಾಂಸದ ಸಾರು ಶಕ್ತಿ ವರ್ಧಕ. ಏಡಿಯ ಮೈ ಕವಚವನ್ನು ಪುಡಿ ಮಾಡಿ ಹಂದಿ ಮತ್ತು ಕೋಳಿಗಳ ತಿನಿಸಿನಲ್ಲಿ ಬೆರಸುತ್ತಾರೆ. ಗೊಬ್ಬರಕ್ಕಾಗಿ ಉಪಯೋಗಿಸುವರು.

ಭಾರತದಲ್ಲಿ ಆಹಾರಕ್ಕಾಗಿ ಬಳಸುವ ಏಡಿಗಳು: ೧. ಷಿಲ್ಲ ಸೆರ್ರಾಟ: ಇದು ಸಮುದ್ರದ ಕೊಲ್ಲಿ, ಖಾರಿ, ನದಿ ಮುಖಜ ಜೌಗುಪ್ರದೇಶಗಳಲ್ಲಿ ವಾಸಿಸುತ್ತದೆ. ಇದರ ಕೊನೆಯ ಜೊತೆಕಾಲುಗಳ ತುದಿಭಾಗ ಅಗಲವಾಗಿ ಮಾರ್ಪಟ್ಟಿರುವುದರಿಂದ ನೀರಿನಲ್ಲಿ ಸುಲಭವಾಗಿ ಈಜಬಲ್ಲುದು. ಬಿಲಗಳಲ್ಲಿ ಇದರ ವಾಸ. ಭಾರತದಲ್ಲಿ ಕಂಡುಬರುವ ಏಡಿ ಜಾತಿಗಳಲ್ಲೆಲ್ಲ ಇದು ಬಲು ದೊಡ್ಡದು. ಚಿಕ್ಕ ಸರೋವರದಲ್ಲಿ ಬೆಳೆಯುವ ಷಿಲ್ಲ ಜಾತಿಯ ಏಡಿಗಳ ಕ್ಯಾರಪೇಸಿನ ಅಡ್ಡ ಅಳತೆ ೪೦ ಸೆಂಮೀ. ಬೇಸಗೆಯಲ್ಲಿ ಇವು ಯಥೇಚ್ಛವಾಗಿ ದೊರಕುವುದರಿಂದ, ಇವನ್ನು ಬಾರಿ ಪ್ರಮಾಣದಲ್ಲಿ ಹಿಡಿದು ಮಾರುತ್ತಾರೆ.

೨. ನೆಪ್ಚೂನಸ್ ಜಾತಿಯ ಏಡಿಗಳಲ್ಲಿ ನೆ. ಪೆಲಾಜಿಕಸ್ ಮತ್ತು ನೆ. ಸ್ಯಾಂಗ್ವಿನೋಲೆಟಿಟಸ್ ಪ್ರಮುಖವಾದವು. ಬಂಗಾಳ, ಒರಿಸ್ಸಾ, ದಕ್ಷಿಣ ಭಾರತದ ತೀರ ಪ್ರದೇಶಗಳಲ್ಲಿ ವಾಸಿಸುತ್ತವೆ. ಇವುಗಳ ಕ್ಯಾರಪೇಸ್ ಅಗಲವಾಗಿದ್ದು, ಸು. ೧೨-೧೪ ಸೆಂಮೀ ಗಾತ್ರವಿದೆ.

೩. ಚೌರಿಬ್ದಿಸ್ ಕ್ರ್ಯೂಸಿಫೆರ್ : ದಕ್ಷಿಣಭಾರತದ ತೀರಪ್ರದೇಶದಲ್ಲಿ ಇದರ ವಾಸ. ಈಜುವ ಸಾಮರ್ಥ್ಯ ಇದೆ. ಕ್ಯಾರಪೇಸಿನ ಮೇಲೆ ವರ್ಣವಿನ್ಯಾಸವಿದೆ.

೪. ವರುಣ ಲಿಟ್ಟರಾಟ : ಗಂಗಾನದಿ ಮುಖಜ ಭೂಪ್ರದೇಶಗಳಲ್ಲಿ ಅಸಂಖ್ಯಾತವಾಗಿ ದೊರೆಯುತ್ತದೆ. ಅಲ್ಲದೆ ಕೆರೆ ಕೊಳಗಳ ದಂಡೆಗಳಲ್ಲಿ ಬಿಲ ತೋಡಿ ವಾಸಿಸುತ್ತದೆ. ಕೆರೆಯ ನೀರು ಬತ್ತಿಹೋಗುವ ಸಂದರ್ಭಗಳಲ್ಲಿ ತೇವವಿರುವ ಕೆರೆಯಂಗಳದಲ್ಲಿ ಈ ಏಡಿಗಳು ಗುಂಪುಗೂಡುತ್ತವೆ. ಜನರು ಈ ಸಮಯವನ್ನೇ ಕಾದಿದ್ದು ಆಯಾಸವಿಲ್ಲದೆ ಸುಲಭವಾಗಿ ಹೆಚ್ಚಿನ ಸಂಖ್ಯೆಯ ಏಡಿಗಳನ್ನು ಹಿಡಿಯುತ್ತಾರೆ.

೫. ಪಾರಟೆಲ್ಫೂಸ ಸ್ಪೈನಿಜೆರ : ಕೆರೆ, ತೊರೆ, ಕಾಲುವೆಗಳ ದಂಡೆಗಳ ಬಿಲಗಳಲ್ಲಿ ವಾಸ. ಇದು ನೀರಿನಲ್ಲಿ ಈಜಲಾರದು. ಇದರ ಕ್ಯಾರಪೇಸಿನ ಅಡ್ಡಳತೆಯ ಗಾತ್ರ ೮ ಸೆಂಮೀ.

ಏಡಿಗಳ ಗಾತ್ರ ಸಾಮಾನ್ಯವಾಗಿ ಚಿಕ್ಕದು. ಕೆಲವು ಮಾತ್ರ ದೊಡ್ಡದಾಗಿವೆ. ಒಂದೆರಡು ಜಾತಿಯ ಏಡಿಗಳು ರಾಕ್ಷಸಾಕಾರದಷ್ಟು ಬೆಳೆದಿರುತ್ತವೆ. ಉದಾ: ಜಪಾನಿನ ರಾಕ್ಷಸ ಏಡಿಯ ಕ್ಯಾರಪೇಸು (ದೇಹ) ೩೦ ಸೆಂಮೀ ಗಿಂತ ಹೆಚ್ಚಿನ ವ್ಯಾಸವುಳ್ಳದ್ದು. ಅದರ ಕಾಲುಗಳ ಉದ್ದ ೩ ಮೀ.

ಬ್ರಾಕಿಯೂರದ ಸೋದರ ಉಪಗಣವಾದ ಅನೊಮುರದಲ್ಲಿ ಕೆಲವು ಕಠಿಣ ಚರ್ಮಿಗಳನ್ನು ಏಡಿಗಳೆಂದು ಕೆಲವು ಸನ್ನಿವೇಶಗಳಲ್ಲಿ ಕರೆಯುವುದುಂಟು. ಈ ಗುಂಪಿನ ದಶಪಾದಿಗಳಿಗೂ ಉದರ ಮೊಟಕು. ಅದು ಶಿರೋವಕ್ಷಕ್ಕಿಂತಲೂ ಚಿಕ್ಕದು. ಶಿರೋವಕ್ಷದ ತಳಭಾಗದಲ್ಲಿ ಅದು ಶಾಶ್ವತವಾಗಿ ಮಡಿಚಿಕೊಂಡಿರುತ್ತದೆ. ಈ ಗುಂಪಿನಲ್ಲಿ ಏಡಿಗಳೆಂದು ಕರೆಸಿಕೊಳ್ಳುವ ಪ್ರಾಣಿಗಳಿಗೆ ಸನ್ಯಾಸಿ ಏಡಿಗಳೆಂದು ಹೆಸರು. ಇವು ಬಸವನಹುಳು ವರ್ಗದ ಜಠರಪಾದಿಗಳ (ಗ್ಯಾಸ್ಟ್ರಪೊಡ) ಬರಿದಾದ ಶಂಖಗಳಲ್ಲಿ ವಾಸಿಸುತ್ತವೆ. ಇವುಗಳ ಉದರಭಾಗ ಮೃದುವಾಗಿರುವುದಲ್ಲದೆ ಶಂಖಗಳ ಆಕಾರದಂತೆ ಸುರುಳಿ ಸುತ್ತಿಕೊಂಡಿರುತ್ತದೆ. ಎಡಭಾಗ ಉದರದ ಉಪಾಂಗಗಳು ಕ್ಷೀಣಗೊಂಡಿವೆ ಮತ್ತು ಬಲಭಾಗ ನಶಿಸಿ ಹೋಗಿವೆ. ಶಂಖದ ಒಳತುದಿ ಭಾಗವನ್ನು ಹಿಡಿದುಕೊಳ್ಳಲು ಅನುಕೂಲವಾಗುವಂತೆ ಕೊನೆಯ ಉದರದ ಉಪಾಂಗಗಳು ಮತ್ತು ಪಶ್ಚಾಂತಪಾದಗಳು (ಯುರೊಪಾಡ್), ಕೊಕ್ಕೆಯಂತೆ ಮಾರ್ಪಾಟಾಗಿವೆ. ಆಂಟನಾ ಉದ್ದವಾಗಿವೆ. ಮೊದಲ ಕೀಲೇಟುಪಾದಗಳಲ್ಲಿ ಅಸಮವಾಗಿ ಬೆಳೆದಿರುವ ಕೀಲೇಟುಗಳಿವೆ. ಕೊನೆಯ ಎರಡು ಜೊತೆ ವಕ್ಷದ ಕಾಲುಗಳು ಕ್ಷೀಣಗೊಂಡಿವೆ. ಸನ್ಯಾಸಿ ಏಡಿಗಳು ದೊಡ್ಡವಾದಂತೆ ಹಳೆಯ ಶಂಖವನ್ನು ತ್ಯಜಿಸಿ ಹೊಸ ದೊಡ್ಡ ಶಂಖದಲ್ಲಿ ಮನೆ ಮಾಡಿಕೊಳ್ಳುತ್ತವೆ. ಇವು ಸಮುದ್ರ ತೀರದ ಖಾರಿಗಳಲ್ಲಿ ಕಂಡುಬರುತ್ತವೆ. ಈ ಗುಂಪಿನಲ್ಲಿ ಬಿರ್ಗಸ್ ಲ್ಯಾಟ್ರೊ ಎಂಬ ತೆಂಗಿನಕಾಯಿ ಏಡಿ ಅಥವಾ ದರೋಡೆಕಾರ



ಬಿರ್ಗಸ್ ಲಾಟ್ರೊ (ತೆಂಗಿನ ಕಾಯಿ ಏಡಿ)

ಏಡಿಯನ್ನು ಜನರು ಆಹಾರಕ್ಕಾಗಿ ಉಪಯೋಗಿಸುತ್ತಾರೆ. ಇದು ಸಹ ಸನ್ಯಾಸಿ ಏಡಿಯೇ. ಮೃದ್ವಂಗಿಗಳ ಕವಚ ಅಥವಾ ಶಂಖಗಳಲ್ಲಿ ಮನೆಮಾಡಿಕೊಂಡು ಜೀವಿಸುತ್ತದೆ.

ಹಿಂದೂಮಹಾಸಾಗರದ ಸೆಂಟಿನೆಲ್ ದ್ವೀಪ ಮತ್ತು ಬಂಗಾಳಕೊಲ್ಲಿಯ ನಿಕೋಬಾರ್ ದ್ವೀಪಗಳಿಗೆ ಇದು ಸೀಮಿತಗೊಂಡಿದೆ. ಇದರ ಕ್ಲೋಮಗಳು (ಬ್ರಾಂಕಿಯೇ) ಅಥವಾ ಕಿವಿರುಗಳು ಕ್ಷೀಣಗೊಂಡಿರುವುದರಿಂದ ಗಾಳಿಯನ್ನು ಉಸಿರಾಡಲು ಕಿವಿರು ಅಂಗುಳದಲ್ಲಿ ರಕ್ತನಾಳಗಳಿಂದ ತುಂಬಿದ ಗೊಂಡೆಗಳಿವೆ. ಭೂ ಪ್ರದೇಶಗಳಲ್ಲಿ ಹೆಚ್ಚು ಕಾಲ ವಾಸಿಸಲು ಇದು ಹೊಂದಿಕೊಂಡಿದ್ದರೂ ಆಗಾಗ್ಗೆ ಸಮುದ್ರಕ್ಕೆ ಭೇಟಿಕೊಟ್ಟು ತನ್ನ ಕಿವಿರುಗಳನ್ನು ಒದ್ದೆಮಾಡಿಕೊಳ್ಳುತ್ತದೆ. ಸಂತಾನೋತ್ಪತ್ತಿ ಸಮುದ್ರದಲ್ಲಿಯೇ ನಡೆಯುತ್ತದೆ. ಏಕೆಂದರೆ ಜೊಯಿಯ ಲಾರ್ವಗಳು ಸಮುದ್ರವಾಸಿಗಳು. ಅವು ಮರದಿಂದ ಬಿದ್ದ ತೆಂಗಿನಕಾಯಿಗಳ ಸಿಪ್ಪೆಯನ್ನು ಬಿಚ್ಚಿ ಅದರಲ್ಲಿರುವ ಕರಟವನ್ನು ಒಡೆದು ತಿನ್ನಬಲ್ಲವು. ಹಲವು ಸಂದರ್ಭಗಳಲ್ಲಿ ತೆಂಗಿನಗಿಡಗಳನ್ನೂ ಹತ್ತಬಲ್ಲವು. ತಮ್ಮ ರಕ್ಷಣೆಗಾಗಿ ಒಡೆದ ಕರಟಗಳಲ್ಲಿ ಮನೆಮಾಡಿಕೊಂಡಿರುವುದು ಇವುಗಳ ಹುಟ್ಟುಗುಣ. ಈ ಕಾರಣಗಳಿಂದಲೇ ಇವಕ್ಕೆ ತೆಂಗಿನ ಏಡಿ ಗಳೆನ್ನುವರು.

ಜಪಾನ್ ಮತ್ತು ಅಮೆರಿಕ ದೇಶಗಳಲ್ಲಿ ಏಡಿಯ ಮಾಂಸವನ್ನು ಹದಗೊಳಿಸಿ ಡಬ್ಬಗಳಲ್ಲಿ ತುಂಬುವ ಉದ್ಯಮಗಳಿವೆ. ಮೊದಲು ಏಡಿಗಳನ್ನು ೧೫-೨೦ ನಿಮಿಷಗಳ ಕಾಲ ಕುದಿಯುವ ನೀರಿನಲ್ಲಿ ಅದ್ದಿ ನಂತರ ಅವುಗಳ ಹೊರ ಕವಚ ಮತ್ತು ಇತರ ಮೃದುವಾದ ಪಚನಾಂಗ, ಶ್ವಾಸಾಂಗ, ಸಂತಾನೋತ್ಪತ್ತಿ ಅಂಗಗಳನ್ನು ಹೊರತೆಗೆದು ಶುದ್ಧವಾದ ನೀರಿನಿಂದ ಚೆನ್ನಾಗಿ ತೊಳೆಯುತ್ತಾರೆ. ನಂತರ ಅವನ್ನು ಶೇ. ೧ ಉಪ್ಪುನೀರಿನಲ್ಲಿ ತೊಳೆದು, ಜಜ್ಜಿ, ಶುದ್ಧಗೊಳಿಸಿ ಡಬ್ಬಗಳಲ್ಲಿ ತುಂಬಿ ರಕ್ಷಿಸುತ್ತಾರೆ. ಹೀಗೆ ಸಿದ್ಧಗೊಳಿಸಿದ ಕೈಸೊನೆಕ್ಸ್ ಫೆಲಾಂಜಿಯಂ ಎಂಬ ಏಡಿಯ ಮಾಂಸ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಸರಾಗಿದೆ.

***

**ಏಡಿಗಂತಿ:** ದೇಹದ ಯಾವುದೇ ಭಾಗದಲ್ಲಿ ಅಥವಾ ಅಂಗದಲ್ಲಿ ಸ್ವತಂತ್ರವಾಗಿ ಬೆಳೆಯುವ ಊತಕವೇ ಏಡಿಗಂತಿ. ಆಂಗ್ಲ ಭಾಷೆಯಲ್ಲಿ ಕ್ಯಾನ್ಸರ್ ಎನ್ನುವರು. ಇದರಿಂದ ದೇಹಕ್ಕೆ ಯಾವ ಉಪಯೋಗವೂ ಇಲ್ಲ. ಅಡೆತಡೆಯಿಲ್ಲದೆ ವರ್ಧಿಸಬಲ್ಲದು. ಪ್ರಾಥಮಿಕ ಬೆಳೆವಣಿಗೆಯ (ಪ್ರೈಮರಿ ಗ್ರೋತ್) ಸ್ಥಳದಿಂದ ದೂರವಾಗಿ ದೇಹದ ಬೇರೆ ಬೇರೆ ಭಾಗಗಳಲ್ಲಿ ತದ್ರೂಪದ ದ್ವಿತೀಯಕ ಬೆಳೆವಣಿಗೆಗಳನ್ನು ಉಂಟು ಮಾಡಬಲ್ಲುದು. ಗ್ರಾಮೀಣ ಭಾಗದಲ್ಲಿ ಅರ್ಬುದ ನಳ್ಳಿ ಎಂದು ಕರೆಯುವುದುಂಟು. ಏಡಿಯ ಕಾಲುಗಳಂತೆ ಈ ಊತಕ ದೇಹದಲ್ಲೆಲ್ಲಾ ಹರಡುವುದರಿಂದ ಏಡಿಗಂತಿ ಎಂಬ ಹೆಸರು ಬಂದಿದೆ. ಈ ರೋಗಕ್ಕೆ ಬಲಿಯಾದ ವ್ಯಕ್ತಿ ಅತಿ ಶೀಘ್ರವಾಗಿ ಮತ್ತು ತೀವ್ರವಾಗಿ ಕ್ಷೀಣಿಸಿ, ಕೊನೆಯಲ್ಲಿ ಸಾವಿಗೀಡಾಗುತ್ತಾನೆ. ಕಾರಣ, ಇದನ್ನು ವಿಷಮಗಂತಿ, ವಿಷಜಾಡ್ಯ ಎಂದು ಕರೆಯುವರು.

ಏಡಿಗಂತಿಯ ವಿಷಮತೆಯ ಮಟ್ಟ ವಿಭಿನ್ನವಾಗಿದೆ. ಇದು ಕೆಳಗಿನ ಅಂಶಗಳನ್ನು ಆಧರಿಸಿ ನಿರ್ಧರಿಸಲಾಗುತ್ತದೆ.

೧. ಏಡಿಯ ಮೈಯಿಂದ ಸುತ್ತಲೂ ಹರಡುವ ಕೈಕಾಲುಗಳಂತೆ ಅಕ್ಕಪಕ್ಕದ ಊತಕಗಳ ಬಹುಬಗೆಯ ಆಕ್ರಮಣ.

೨. ಏಡಿಗಂತಿಯನ್ನು ಶಸ್ತ್ರಕ್ರಿಯೆಯಿಂದ ಪೂರ್ಣವಾಗಿ ಕತ್ತರಿಸಿ ತೆಗೆದು ಹಾಕಿದರೂ ಅಲ್ಲಿ ಉಳಿದಿರಬಹುದಾದ ಕೆಲವೇ ಏಡಿಗಂತಿಕೋಶಗಳ ಪರಿಣಾಮವಾಗಿ ಅದೇ ಜಾಗದಲ್ಲಿ ವ್ಯಾಧಿ ಪುನಃ ತಲೆದೋರುತ್ತದೆ ಮತ್ತು ಈ ಕೋಶಗಳು ಯಥಾಪ್ರಕಾರ ವೃದ್ಧಿಗೊಳ್ಳುತ್ತವೆ.

೩. ದೇಹದ ಸಹಜ ಜೀವಕೋಶಗಳ ಬೆಳೆವಣಿಗೆಗಿರುವ ಯಾವ ನಿಯಮ ನಿರ್ಬಂಧಗಳಿಗೂ ಏಡಿಗಂತಿಯ ಕೋಶಗಳು ಬದ್ಧವಾಗಿಲ್ಲ. ವಿಭಜನೆಗೊಂಡು ಇವು ಸ್ವಸಾಮರ್ಥ್ಯದಿಂದ ಸ್ವೇಚ್ಛೆಯಾಗಿ ವೇಗವಾಗಿ ವೃದ್ಧಿಯಾಗಬಲ್ಲುವು.

೪. ವ್ಯಾಧಿಯ ವಿಷಮತೆ ತೀವ್ರಗೊಂಡಂತೆ, ಏಡಿಗಂತಿಯ ಕೋಶಗಳಿಗೂ ಮತ್ತು ಹುಟ್ಟಿದ ಊತಕದ ಕೋಶಗಳಿಗೂ ಇರುವ ಹೋಲಿಕೆ ಕಡಿಮೆ ಆಗುತ್ತದೆ. ಏಡಿಗಂತಿಯ ಕೋಶಗಳು ಊತಕದ ರಚನೆಯನ್ನಾಗಲೀ ಊತಕದಲ್ಲಿನ ಕೋಶದ ನಮೂನೆಯನ್ನಾಗಲೀ ಪಾಲಿಸುವುದಿಲ್ಲ. ಅವು ಗೋಜುಗೋಜಲಾಗಿ ಬೆಳೆದುಕೊಂಡು ಹೋಗುತ್ತವೆ.

೫. ಬಹುಪಾಲು ಏಡಿಗಂತಿಗಳಿಗೆ ಒಂದೇ ದೇಹದಲ್ಲಿ ಮೂಲಸ್ಥಾನದಿಂದ ಬಲು ದೂರದಲ್ಲಿ, ದ್ವಿತೀಯ ಗಂತಿಗಳನ್ನು (ಪ್ರಾಥಮಿಕ ಗಂತಿಗೂ ದ್ವಿತೀಯಕ ಬೆಳೆವಣಿಗೆಗೂ ಯಾವ ಸಂಬಂಧವೂ ಇಲ್ಲದಂತೆ) ಪ್ರಚೋದಿಸುವ ಶಕ್ತಿಯಿದೆ. ಈ ಶಕ್ತಿಯ ಹೆಸರು ಸ್ಥಾನಾಂತರಿಕೆ (ಮೆಟಾಸ್ಟ್ಯಾಸಿಸ್). ಹಾಲುರಸ ನಾಳಗಳು (ಲಿಂಫ್ಯಾಟಿಕ್ಸ್), ರಕ್ತನಾಳಗಳು ಮುಂತಾದ ದೇಹದ ಸಹಜ ಸಾಗುದಾರಿಗಳಲ್ಲೋ, ಪೊಳ್ಳುಗಳ ಮೂಲಕವೋ ಏಡಿಗಂತಿಯ ಕೋಶಗಳು ಸಾಗಿ ಹೋಗುವುದರಿಂದ ಇದು ಸಂಭವಿಸುತ್ತದೆ. ಇಂಥ ಕೋಶಗಳು ದೇಹದ ದೂರದೂರದ ಭಾಗಗಳಲ್ಲಿ ನೆಲೆಗೊಂಡು ಅಲ್ಲಿ ಏಡಿಗಂತಿಯ ತದ್ರೂಪಗಳಾಗಿ ಬೆಳೆಯುತ್ತವೆ. ಈ ಸ್ಥಾನಾಂತರಿಕೆಗಳ ವಿತರಣೆಯನ್ನು, ದ್ವಿತೀಯಕ ಬೆಳೆವಣಿಗೆಗಳು ಕಾಣಿಸಿಕೊಳ್ಳುವ ಸ್ಥಾನಗಳನ್ನು ದೇಹದಲ್ಲಿ ಪ್ರಾಥಮಿಕ ಬೆಳೆವಣಿಗೆಯ ಸ್ಥಾನ, ವ್ಯಾಧಿಗ್ರಸ್ಥ ಅಂಗ ಮತ್ತು ಅದಕ್ಕೂ ಹಾಲುರಸ ನಾಳಗಳು, ರಕ್ತ ನಾಳಗಳು, ಸಹಜ ಸಾಗುದಾರಿಗಳು ಮತ್ತು ದೇಹದ ಪೊಳ್ಳುಗಳು ಇವುಗಳಿಗಿರುವ ಸಂಬಂಧದಿಂದ ನಿರ್ಧರಿಸಬಹುದು.

ಸ್ಥಾನಾಂತರಿಕೆಗಳು ಉಂಟಾಗುವ ಕಾಲ ಸಹ ಬದಲಾಗುತ್ತದೆ. ಕೆಲವು ವಿಧದ ಏಡಿಗಂತಿಗಳಲ್ಲಿ ಪ್ರಾಥಮಿಕ ಬೆಳೆವಣಿಗೆ ಚಿಕ್ಕದು ಮತ್ತು ಗಮನಾರ್ಹವಲ್ಲದುದಾಗಿದ್ದು, ಯಾವ ಚಿಹ್ನೆಗಳನ್ನಾಗಲೀ ಲಕ್ಷಣಗಳನ್ನಾಗಲೀ ಪ್ರಕಟಪಡಿಸದಿರುವಾಗಲೂ ಸ್ಥಾನಾಂತರಿಕೆಗಳು ಉಂಟಾಗಬಹುದು. ಬೇರೆ ವಿಧದ ಏಡಿಗಂತಿಯಲ್ಲಿ, ಪ್ರಾಥಮಿಕ ಗಂತಿಯನ್ನು ಶಸ್ತ್ರಚಿಕಿತ್ಸೆಯಿಂದ ನಿರ್ಮೂಲಗೊಳಿಸಿದ ದೀರ್ಘ ಕಾಲಾನಂತರವೂ ಸ್ಥಾನಾಂತರಿಕೆಗಳು ತಲೆದೋರಬಹುದು. ಸ್ಥಾನಾಂತರಿಕೆಗಳು ಒಂದು ಸಲ ತಲೆದೋರಿದ ತರುವಾಯ ಪ್ರಾಥಮಿಕ ಗಂತಿಯನ್ನು ಶಸ್ತ್ರಕ್ರಿಯೆಯಿಂದ ನಿರ್ಮೂಲನಗೊಳಿಸಿದರೂ ಪ್ರಯೋಜನವಾಗದು. ಏಡಿಗಂತಿ ಖಾಯಿಲೆಯ ಅನಿವಾರ್ಯ ಅಂತಿಮ ಘಟ್ಟವನ್ನು ನಿರ್ಧರಿಸಲು ದ್ವಿತೀಯಕ ಬೆಳೆವಣಿಗೆಗಳು ಬಲು ಸಹಾಯಕಾರಿ ಅಂಶಗಳು.

ಎರಡು ಪ್ರಧಾನ ವಿಧದ ಏಡಿಗಂತಿಗಳಿವೆ ೧. ಕಾರ್ಸಿನೋಮ ಮತ್ತು ೨. ಸಾರ್ಕೋಮ.

೧. ಕಾರ್ಸಿನೋಮ : ಇದು ಚರ್ಮ, ಲೋಳೆಪರೆಗಳು, ನರಗಳು, ಮಿದುಳು, ಗ್ರಂಥಿಗಳ ತೆರನ ಮೇಲ್ಪರೆಯಿಂದ ಏಳುತ್ತದೆ. ಆದ್ದರಿಂದ ಚರ್ಮ, ಬಾಯಿ, ಒಸಡು, ಉಸಿರುನಾಳ, ಘುಪ್ಫುಸಗಳು, ಅನ್ನನಾಳ, ಜಠರ, ಕರುಳುಗಳು, ನಟ್ಟಗರುಳು (ರೆಕ್ಟಂ), ಅಂತಃಸ್ರಾವೀಗ್ರಂಥಿಗಳು, ಮೂತ್ರಪಿಂಡ, ಈಲಿ, ಮಾಂಸಲಿ, ಪಿತ್ತಕೋಶ, ಮೂತ್ರಕೋಶ, ಮೊಲೆ, ಜನನಾಂಗಗಳು, ಮಿದುಳು, ನರಗಳಲ್ಲಿ ಉಂಟಾಗುವ ಏಡಿಗಂತಿ ಕಾರ್ಸಿನೋಮ.

೨. ಸಾರ್ಕೋಮ : ಜೋಡಿಸುವ ಊತಕಗಳು ಅಂದರೆ, ತಂತುಕ (ಫೈಬರ್ಸ್), ಕೊಬ್ಬಿನ, ಸ್ನಾಯುವಿನ, ಮೆಲ್ಲೆಲುಬಿನ (ಕಾರ್ಟಿಲೇಜಿನಸ್), ಎಲುಬಿನ, ಹಾಲು ರಸದ, ರಕ್ತವನ್ನು ತಯಾರಿಸುವ ಊತಕಗಳಿಗೆ ಬರುವ ವ್ಯಾಧಿ. ಆದ್ದರಿಂದ ಲೋಳೆ ಪರೆಗಳ, ಚರ್ಮದ ಅಡಿಯ ಅಂಗಗಳಲ್ಲಿ ಇರುವ ತಂತುಕ ಮತ್ತು ಕೊಬ್ಬಿನ ಊತಕಗಳು, ಸ್ನಾಯುಗಳು, ಮೆಲ್ಲೆಲುಬುಗಳು, ಮೂಳೆಗಳು, ಹಾಲುರಸ ಗ್ರಂಥಿಗಳು, ತೊರಳೆ (ಸ್ಪ್ಲೀನ್), ಎಲುಬಿನ ಮಜ್ಜೆ (ಬೋನ್ ಮ್ಯಾರ್ರೋ), ರಕ್ತದಲ್ಲಿರುವ ಬಿಳಿಯ ಮತ್ತು ಕೆಂಪು ರಕ್ತಕಣಗಳಲ್ಲಿ ಸಾರ್ಕೋಮ ಏಡಿಗಂತಿ ಆಗುತ್ತದೆ.

ಏಡಿಗಂತಿ ಉಂಟಾಗುವುದಕ್ಕೆ ಲಿಂಗ, ವಯಸ್ಸುಗಳ ತಾರತಮ್ಯವಿಲ್ಲ. ಆದರೆ, ಜಠರ, ಗಂಟಲು ಮತ್ತು ಘುಪ್ಫುಸಗಳ ಏಡಿಗಂತಿ ಗಂಡಸರಲ್ಲಿ ಅಧಿಕ. ಮೊಲೆ ಮತ್ತು ಗರ್ಭಕೋಶಗಳ ಏಡಿಗಂತಿ ಹೆಂಗಸರಲ್ಲಿ ಅಧಿಕ. ಪ್ರಾಯದಲ್ಲಿ ಸಾರ್ಕೋಮ ಕಡಿಮೆ, ವಯಸ್ಸಾದಂತೆ ಹೆಚ್ಚುತ್ತದೆ.

ಕೋಶದ ಬೆಳೆವಣಿಗೆಯಲ್ಲಿ ತಲೆದೋರುವ ಅಕ್ರಮವೇ ಏಡಿಗಂತಿ. ದೇಹದಲ್ಲಿನ ಕೋಶಗಳ ಸಹಜ ಬೆಳೆವಣಿಗೆಯ ಮತ್ತು ವೃದ್ಧಿಯ ನಿಯಮಗಳಿಂದ ಏಡಿಗಂತಿ ಕೋಶಗಳು ಹೊರತಾಗಿವೆ. ಇವುಗಳ ಬೆಳೆವಣಿಗೆ ಹಾಗೂ ವೃದ್ಧಿ ಸ್ವತಂತ್ರ ಮತ್ತು ಶಾಶ್ವತ. ಇತರ ಕೋಶಗಳ ಜೀವವಸ್ತುಕರಣದ ನಿಯಮಕ್ಕಿಂತ ಇವುಗಳ ನಿಯಮ ಭಿನ್ನವಾಗಿದೆ. ಹೀಗಾಗಿ ಇವು ಅಪರಿಮಿತವಾಗಿ ವೃದ್ಧಿಸಬಲ್ಲುವು. ಏಡಿ ಗಂತಿ ಕೋಶದ ಗಾತ್ರ, ಆಕಾರ ಹಾಗೂ ಇತರ ಲಕ್ಷಣಗಳಲ್ಲಿ ಗಮನಾರ್ಹ ವ್ಯತ್ಯಾಸಗಳಿವೆ. ಅವು ಉತ್ಪನ್ನವಾಗುವ ಮೂಲ ಊತಕ ಕೋಶಗಳಿಗೂ, ಏಡಿಗಂತಿ ಕೋಶಗಳಿಗೂ ಯಾವುದೇ ವಿಧದ ಹೋಲಿಕೆ ಇಲ್ಲ. ಕೋಶಗಳಲ್ಲಿ ಏಡಿಗಂತಿಯಿಂದ ಉಂಟಾಗುವ ಈ ಮೂಲಭೂತ ವ್ಯತ್ಯಾಸದ ಕಾರಣವೇ ಅನ್ವೇಷಣೆ ಮತ್ತು ಸಂಶೋಧನೆಗಳ ವಸ್ತು. ಏಡಿಗಂತಿಗೆ ಕಾರಣಗಳು ಹಲವು. ಕೋಶದಲ್ಲಿ ನಡೆಯುವ ಜೀವಕ್ರಿಯೆಗಳಲ್ಲಿ ಒಂದು ಮೂಲಭೂತ ವ್ಯತ್ಯಾಸವನ್ನು ಯಾವುದೋ ಒಂದು ಆರಂಭಿಕ ಕಾರಕ (ಇನಿಶಿಯೇಟಿಂಗ್ ಏಜೆಂಟ್) ತೊಡಗಿಸಬಹುದು. ಮುಂದೆ ಪ್ರೇರಕಕಾರಕ (ಪ್ರಮೋಟಿಂಗ್ ಏಜೆಂಟ್) ಎಂಬ ಇನ್ನೊಂದು ಕಾರಕ ದೀರ್ಘಕಾಲ ಈ ಕೋಶದ ಮೇಲೆ ಕ್ರಿಯೆ ಎಸಗುವುದು. ಇದರ ಪರಿಣಾಮವಾಗಿ ಮೂಲಭೂತ ವ್ಯತ್ಯಾಸ ಅವಿಪರ್ಯಯವಾಗುತ್ತದೆ (ಇರ್ರಿವರ್ಸಿಬಲ್). ಇಂಥ ಅಂಶಗಳನ್ನು ಅಥವಾ ಕಾರಕಗಳನ್ನು ಏಡಿಗಂತಿಜನಕ (ಕಾರ್ಸಿನೋಜೆನ್ಸ್) ಗಳೆನ್ನುವರು. ಇವು ಭೌತ, ರಾಸಾಯನಿಕ, ಜೈವಿಕ (ವೈರಸ್ ಮಾದರಿಯ ಅತಿಸೂಕ್ಷ್ಮ) ಜೀವಿಗಳಾಗಿರಬಹುದು.

ಭೌತ ಮತ್ತು ರಾಸಾಯನಿಕ ಏಡಿಗಂತಿಜನಕಗಳು : ಕ್ರಿಯಾಶೀಲ ಬೆಳಕು (ಆಕ್ಟಿನಿಕ್ ಲೈಟ್), ಎಕ್ಸ್ ಕಿರಣಗಳು, ರೇಡಿಯಂ (ಸಂಕ್ಷೇಪವಾಗಿ, ಅಯಾನೀಕರಿಸುವ, ವಿಸರಣೆಯ ವಿವಿಧ ರೂಪಗಳು) ಭೌತ ಏಡಿಗಂತಿಜನಕಗಳು. ಮಾನವ ಪರಮಾಣುಯುಗದ ಹೊಸ್ತಿಲನ್ನು ದಾಟುತ್ತಿರುವುದರಿಂದ ಈ ಬಗೆಯ ವಿಸರಣೆಯಿಂದ ಆಗುವ ಅಪಾಯಗಳು ಹೆಚ್ಚು ಹೆಚ್ಚಾಗುತ್ತಿವೆ. (ನೋಡಿ-ಏಡಿಗಂತಿಜನಕ ರಾಸಾಯನಿಕಗಳು).

ಜೈವಿಕ ಏಡಿಗಂತಿಜನಕಗಳು : ಪ್ರಾಣಿಗಳಲ್ಲಿ, ಸಸ್ಯಗಳಲ್ಲಿ ಏಡಿಗಂತಿಯನ್ನು ಉಂಟುಮಾಡುವ ವೈರಸ್‌ಗಳ ಸಾಕಷ್ಟು ನಿದರ್ಶನಗಳಿವೆ. ಈ ಅತಿ ಸೂಕ್ಷ್ಮಜೀವಿಗಳು

ಬಲು ಸುಲಭವಾಗಿ ಕೋಶಗಳನ್ನು ಪ್ರವೇಶಿಸಿ ಅಲ್ಲಿ ಉಪಸ್ಥಿತವಾಗುವುವು. ತರುವಾಯ ಆ ಕೋಶಗಳ ಕಾರ್ಯ ಚಟುವಟಿಕೆಯಲ್ಲಿ ಭಾಗಿಯಾಗಿ, ಅವನ್ನು ಮಾರ್ಪಡಿಸಿ ವಿಷಮ ವ್ಯತ್ಯಾಸಗಳನ್ನು ಉಂಟುಮಾಡುತ್ತವೆ. ಇವೇ ಮುಂದೆ ವಿಷಮಗಂತಿಗಳಾಗಿ, ಏಡಿಗಂತಿಜನಕಗಳಾಗುತ್ತವೆ.

***

**ಏಡಿಗಂತಿಜನಕ ರಾಸಾಯನಿಕಗಳು:** ಜೀವಿಯ ದೇಹದಲ್ಲಿ ಏಡಿಗಂತಿ (ಕ್ಯಾನ್ಸರ್) ಉಂಟುಮಾಡಬಲ್ಲ ರಾಸಾಯನಿಕಗಳು. ಜೀವ ಕೋಶಗಳಲ್ಲಿ ವಿಷಮ ಬದಲಾವಣೆಗಳನ್ನು ಉಂಟುಮಾಡಬಲ್ಲವು. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಏಡಿಗಂತಿ ಮಾರ್ಪಾಡುಗಳನ್ನು ಉಂಟುಮಾಡಬಲ್ಲ ರಾಸಾಯನಿಕಗಳು. ಆಂಗ್ಲ ಭಾಷೆಯಲ್ಲಿ ಕಾರ್ಸಿನೊಜೆನಿಕ್ ಕೆಮಿಕಲ್ಸ್ ಎನ್ನುವರು. ಏಡಿಗಂತಿ ಬಹುಕೋಶ ಜೀವಿಗಳಿಗೆ (ಮಲ್ಟಿಸೆಲ್ಲುಲರ್ ಆರ್ಗ್ಯಾನಿಸಮ್ಸ್) ಬರುವ ಒಂದು ಕಾಯಿಲೆ. ಜೀವಿಯ ಸಹಜ ಕೋಶಗಳೇ ಅವಾಸ್ತವಿಕರೂಪ ತಳೆದು ಅನಿಯಂತ್ರಿತ ಸಂಖ್ಯೆಯಲ್ಲಿ ವೃದ್ಧಿಹೊಂದಿ, ಮತ್ತು ಜೀವಿಯ ದೇಹದಲ್ಲಿ ಹರಡಿ ಕಾಯಿಲೆ ಉಂಟು ಮಾಡುತ್ತವೆ. ಹಲವಾರು ಕಾರಣಗಳ (ಈಟಿಯಾಲಜಿ) ಪರಿಣಾಮವಾಗಿ ಉಂಟಾಗುವ ಕಾಯಿಲೆಗಳ ಒಂದು ಗುಂಪೇ ಈ ಏಡಿಗಂತಿ ರೋಗ. ಆದ್ದರಿಂದ, ಏಡಿಗಂತಿಯ ಬೆಳವಣಿಗೆಗೆ ಯಾವುದೇ ಒಂದು ವಿಶಿಷ್ಟ ಕಾರಣವನ್ನು ಹೇಳಲಾಗದು. ಏಡಿಗಂತಿಯ ಹಲವಾರು ನಮೂನೆಗಳಲ್ಲಿ ಬಹುಸಂಖ್ಯೆಯ ಕಾರಣಗಳು ಅಡಕವಾಗಿ ಪ್ರಧಾನಪಾತ್ರ ವಹಿಸುತ್ತವೆ. ಇಂಥವುಗಳಲ್ಲಿ ರಾಸಾಯನಿಕಗಳಿಂದ ಉತ್ಪನ್ನವಾಗುವ ಏಡಿಗಂತಿ (ಕಾರ್ಸಿನೋಜೆನಿಸಿಸ್) ಗಮನಾರ್ಹವಾದದ್ದು.

ಪರ್ಸಿವಾಲ್ ಪಾಟ್ ೧೭೭೫ರಲ್ಲಿ ರಾಸಾಯನಿಕ ಜನ್ಯ ಏಡಿಗಂತಿಯನ್ನು ಮೊದಲು ಗುರುತಿಸಿದ. ಹೊಗೆಕೊಳವೆಗಳಲ್ಲಿ ಕಟ್ಟಿಕೊಂಡಿದ್ದ ಕಿಟ್ಟ ತೆಗೆದು ಚೊಕ್ಕಪಡಿಸುತ್ತಿದ್ದ ಹುಡುಗರಲ್ಲಿ ತರಡಿನ ಏಡಿಗಂತಿ ಸಾಮಾನ್ಯವಾಗಿ ಹೊಗೆ ಕರಿಯಿಂದ ಕಾಣಿಸಿಕೊಂಡಿದೆ ಎಂದು ಪಾಟ್‌ಗುರುತಿಸಿದ. ನಂತರ ಕಾರ್ಖಾನೆಗಳ ಕೆಲಸಗಾರರಲ್ಲಿ ಕಂಡುಬರುವ ಚರ್ಮದ ಏಡಿಗಂತಿಗೆ (ಇಂಡಸ್ಟ್ರಿಯಲ್ ಸ್ಕಿನ್ ಕ್ಯಾನ್ಸರ್) ಕಾರಣ, ಚರ್ಮಕ್ಕೆ ತಾರೆಣ್ಣೆಯೊಡನೆ ಒದಗುವ ಸಂಪರ್ಕ ಎಂದು ಒಂದು ಶತಮಾನದ ತರುವಾಯ ೧೮೭೫ರಲ್ಲಿ ವಾನ್ ವಾಲ್ಕ್ ಮ್ಯಾನ್ ಸೂಚಿಸಿದ. ಶೇಲ್ ಎಣ್ಣೆಯ ಪರಿಣಾಮವಾಗಿ ಉಂಟಾಗುವ ಫ್ಯಾರಾಫಿನ್ ಏಡಿಗಂತಿಯನ್ನು ೧೮೭೬ರಲ್ಲಿ ಬೆಲ್ ಎಂಬಾತ ಶೋಧಿಸಿದ. ಕೈಗಾರಿಕೆಗಳು ಸರ್ವವ್ಯಾಪ್ತಿಯಾಗಿ ಬೆಳೆದಂತೆ ಖನಿಜದ ಎಣ್ಣೆ, ತಾರೆಣ್ಣೆ, ಹೊಗೆಕರಿ ಇವನ್ನೆಲ್ಲ ತಾಗಿಸಿಕೊಳ್ಳುವ ಕೆಲಸಗಾರರಲ್ಲಿ ಏಡಿಗಂತಿ ಉಂಟಾದುದು ಗಮನಕ್ಕೆ ಬಂತು.

ರಾಸಾಯನಿಕಗಳು ಏಡಿಗಂತಿಜನಕಗಳಾಗಬಹುದೆಂಬುದನ್ನು ಈ ಅನುಭವಗಳು ಸೂಚಿಸಿದುವು. ಆದರೆ, ಈ ಭಾವನೆ ಖಚಿತವಾದದ್ದು, ಯೋಮಗಾವ ಮತ್ತು ಇಚಿಕಾವ ವಿಜ್ಞಾನಿಗಳು ೧೯೧೫ರಲ್ಲಿ ಮಾಡಿದ ಸುಪ್ರಸಿದ್ಧ ಪರಿಶೋಧನೆಯಿಂದ ತಿಳಿಯಿತು. ಈ ವಿಜ್ಞಾನಿಗಳು ಮೊಲಗಳ ಕಿವಿಗಳಿಗೆ ತಾರೆಣ್ಣೆ ಲೇಪಿಸಿ ಅಲ್ಲಿ ವಿಷಮಗಂತಿಗಳು (ಮ್ಯಾಲಿಗ್ನಂಟ್ ಟ್ಯೂಮರ್ಸ್) ಉಂಟಾಗುವುದನ್ನು ಗಮನಿಸಿದರು. ಮುಂದೆ ೧೯೧೮ರಲ್ಲಿ ಇದೇ ತರಹದ ಪ್ರಯೋಗದಿಂದ ಇಲಿಗಳ (ಮೈಸ್) ಚರ್ಮದ ಮೇಲೆ ಗಂತಿಗಳನ್ನು ಉಂಟು ಮಾಡುವುದು ವಿಜ್ಞಾನಿ ಸುಟ್ಲೂಯಿಗೆ ಸಾಧ್ಯವಾಯಿತು. ಇಂಥ ಪ್ರಯೋಗಗಳ ಪರಿಣಾಮವಾಗಿ ತಾರೆಣ್ಣೆ, ಖನಿಜದ ಎಣ್ಣೆ ಮುಂತಾದವುಗಳಲ್ಲಿ ಇರುವ ಏಡಿಗಂತಿಜನಕ ರಾಸಾಯನಿಕಗಳನ್ನು ಬೇರ್ಪಡಿಸಿ ಅಭ್ಯಸಿಸಲು ಹೊಸ ದಾರಿ ಲಭ್ಯವಾಯಿತು.

೧೯೩೩ರಲ್ಲಿ ಕುಕ್, ಕೆನ್ನವೇ ಮತ್ತು ಹೀಜರ್ ಎಂಬುವರು ತಾರೆಣ್ಣೆಯಲ್ಲಿರುವ ಏಡಿಗಂತಿಜನಕ ಹೈಡ್ರೊಕಾರ್ಬನ್‌ಗಳನ್ನು ಪ್ರತ್ಯೇಕಿಸಿ ಅದು ೩–೪ ಬೆಂಜೊಪೈರೀನ್ ಎಂದು ತೋರಿಸಿಕೊಟ್ಟರು. ಪಾಲಿಸೈಕ್ಲಿಕ್ ಅರೋಮ್ಯಾಟಿಕ್ ಹೈಡ್ರೊಕಾರ್ಬನ್ನಗಳ ಗುಂಪಿಗೆ ಬೆಂಜೊಪೈರೀನ್ ಸೇರಿರುವುದರಿಂದ ಇಡೀ ಗುಂಪಿನ ವಿವಿಧ ಹೈಡ್ರೊಕಾರ್ಬನ್ನಗಳ ಸಂಶ್ಲೇಷಣೆ ಹಾಗೂ ಪರೀಕ್ಷೆಗಳನ್ನು ನಡೆಸಲಾಯಿತು.

ಮಾನವನ ವೃತ್ತಿಗಳಿಗನುಗುಣವಾಗಿ ಉಂಟಾಗುವ ಅಪಾಯಗಳನ್ನು ರಾಸಾಯನಿಕ ಏಡಿಗಂತಿಜನಕಗಳ ಪರಿಶೀಲನೆಯಿಂದ ಗುರುತಿಸಲು ಸಾಧ್ಯವಾಗಿದೆ. ಮಾನವನ ಪರಿಸರದಲ್ಲಿ ಏಡಿಗಂತಿಜನಕಗಳಾಗಿ ರಾಸಾಯನಿಕಗಳು ವ್ಯಾಪಿಸಿರಬಹುದಾದುದರ ಪ್ರಾಮುಖ್ಯ ಈಗ ಮನದಟ್ಟಾಗಿದೆ. ಬಾಹ್ಯ ಪರಿಸರದಲ್ಲಿ ಮಾತ್ರವಲ್ಲ, ಆಹಾರಪದಾರ್ಥಗಳಲ್ಲಿ ಮತ್ತು ಅವುಗಳೊಡನೆ ಬೆರೆಯುವ ಇತರ ಪದಾರ್ಥಗಳಲ್ಲಿ ಸಹ ಏಡಿಗಂತಿಯ ಜನಿಸುವಿಕೆಯಲ್ಲಿ ಮುಖ್ಯ ಪಾತ್ರವಹಿಸಬಹುದಾದ ತೀಕ್ಷ್ಣಸಂಯುಕ್ತಗಳು ಇರುತ್ತವೆ. ಈ ಸಂಗತಿ ಇತ್ತೀಚೆಗೆ ಖಚಿತವಾಗುತ್ತಿದೆ.

ವೃತ್ತಿಜನ್ಯ ಏಡಿಗಂತಿಯ ಅಭ್ಯಾಸದಿಂದ ಪಾಲಿಸೈಕ್ಲಿಕ್ ಹೈಡ್ರೊಕಾರ್ಬನ್ನಗಳ ಏಡಿಗಂತಿಜನಕ ಗುಣಗಳು ತಿಳಿದುವು. ಇದರ ಪ್ರಕಾರ ಆರೋಮ್ಯಾಟಿಕ್ ಆಮೈನುಗಳು, ಮೂತ್ರಕೋಶದ ಏಡಿಗಂತಿಜನಕಗಳು. ನಿಕ್ಕಲ್ ಲೋಹ ಮೂಗಿನ ಏಡಿಗಂತಿಜನಕವಾದರೆ ಲೋಹಗಳು ಸಾಮಾನ್ಯವಾಗಿ ಘುಪ್ಘುಸದ ಏಡಿಗಂತಿಜನಕಗಳು. ಟ್ಯಾನಿಕ್ ಆಮ್ಲ, ಆಲ್ಕಲಾಯ್ಡುಗಳು, ಕ್ಲೋರೋಕಾರ್ಬನುಗಳು, ಡೈ ಆಲ್ಕೈಲ್ ಅರಿಶಿನಾರಿಗೆಯನ್ನೂ (ಲಿವರ್ ಸಿರೋಸಿಸ್) ಉಂಟುಮಾಡುವುವು. ರೇಡಿಯೋ ರಾಸಾಯನಿಕಗಳು ಮೂಳೆಯ ಲ್ಯುಕೇಮಿಯಾ ಮತ್ತು ಮೂಳೆಯ ಏಡಿಗಂತಿಜನಕಗಳು.

ದೇಹದಲ್ಲಿ ಇರುವ ಸಂಯುಕ್ತಗಳ ಅಭ್ಯಾಸದ ಪರಿಣಾಮವಾಗಿ ದೇಹದ ಒಳಗೆ ಉತ್ಪನ್ನವಾಗುವ (ಅಂತರ್ಜಾತ–ಎಂಡೋಜಿನಸ್) ರಾಸಾಯನಿಕ ಏಡಿಗಂತಿಜನಕಗಳನ್ನು ಕುರಿತು ಮಾಹಿತಿ ಇದೆ. ಅಂತ:ಸ್ರವೀಗ್ರಂಥಿಗಳ (ಎಂಡೋಕ್ರೈನ್ ಗ್ಲ್ಯಾಂಡ್ಸ್) ಬೆಳವಣಿಗೆ ಹಾಗೂ ವಿಶಿಷ್ಟ ರಚನೆಯಲ್ಲಿ ಪೋಷಕವಾಗಿರುವ ಮತ್ತು ಮೊಲೆ ಹಾಗೂ ಗರ್ಭಕೋಶದ ಮೇಲೆ ಪ್ರಭಾವ ಬೀರುವ ಚೋದನಿಕಗಳು (ಹಾರ್ಮೋನ್ಸ್) ಇವುಗಳಲ್ಲಿ ಪ್ರಧಾನವಾದುವು. ದೇಹದಲ್ಲಿ ಇರುವ ಸಮಸ್ಥಿತಿಯನ್ನು (ಹೋಮಿಯೊಸ್ಟ್ಯಾಟಿಕ್ ಬ್ಯಾಲೆನ್ಸ್) ಅಧಿಕ ಚೋದನಿಕಗಳು ವ್ಯತ್ಯಾಸಗೊಳಿಸಿದರೆ ಚೋದನಿಕಗಳಿಗೆ ಪ್ರತಿಕ್ರಿಯೆ ತೋರಿಸುವ ಅಂಗಗಳಲ್ಲಿ (ರೆಸ್ಪಾನ್‌ಸಿವ್ ಆರ್ಗನ್ಸ್) ಏಡಿಗಂತಿ ಉಂಟಾಗುವುದು.

ರೋಗ ಚಿಕಿತ್ಸೆಗಾಗಿ ಬಳಸುವ ಮದ್ದುಗಳ ಪರಿಣಾಮಗಳ ಅಭ್ಯಾಸದಿಂದ, ರಾಸಾಯನಿಕಗಳ ಏಡಿಗಂತಿಜನಕ ಗುಣಗಳನ್ನು ತಿಳಿಯಲಾಗಿದೆ. ಗಾಯಗಳಿಗೆ ಲೇಪಿಸುವ ಸ್ಕಾರ್ಲೆಟ್ ರೆಡ್ ಎಂಬ ರಾಸಾಯನಿಕದ ಪರಿಣಾಮಗಳ ಪರಿಶೀಲನೆಯಿಂದ ಏಡಿಗಂತಿಜನಕ ಅಜೋಡೈ, ಆರ್ಥೋ ಅಮೈನ್, ಅಜೋ ಟಾಲೀನ್ ಇವುಗಳ ಶೋಧನೆ ಆಯಿತು. ಏಡಿಗಂತಿಗಳ ಚಿಕಿತ್ಸೆಯಿಂದ ನೈಟ್ರೋಜನ್ ಮಸ್ಟರ್ಡ್‌ಗಳ ಏಡಿಗಂತಿಜನಕ ಗುಣ ಗೊತ್ತಾಯಿತು.

ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಘುಪ್ಘುಸದ ಏಡಿಗಂತಿಯ ವ್ಯಾಪ್ತಿ ಅಧಿಕ ಎಂದು ಏಡಿಗಂತಿಯ ಸಾಂಕ್ರಾಮಿಕ ಶಾಸ್ತ್ರ (ಎಪಿಡೆಮಿಯಾಲಜಿ) ವಿಶದೀಕರಿಸಿತು. ಇದರಿಂದ ಸಿಗರೇಟ್ ಸೇವನೆಯ ಪರಿಣಾಮದ ಶೋಧನೆಗೆ ಎಡೆಮಾಡಿಕೊಟ್ಟಿತು. ಸಿಗರೇಟ್ ಹೊಗೆಯನ್ನು ವಿಶ್ಲೇಷಿಸಿ ತಂಬಾಕಿನ ಕೆಲವು ಏಡಿಗಂತಿಜನಕ ರಾಸಾಯನಿಕಗಳನ್ನು ಪ್ರತ್ಯೇಕಿಸಲಾಗಿದೆ. ರಾಸಾಯನಿಕ ಏಡಿಗಂತಿಜನಕಗಳ ಶೋಧನೆ ಹಾಗೂ ಸಮರ್ಪಕ ರಕ್ಷಣೆಯ ಏರ್ಪಾಡುಗಳ ಬಗ್ಗೆ ತಿಳಿಯುವುದು ಇದರ ಉದ್ದೇಶ.

ಕೆಲವು ಏಡಿಗಂತಿಜನಕ ವಸ್ತುಗಳು, ರಾಸಾಯನಿಕಗಳು ಮತ್ತು ಗಂತಿಯ ಬೆಳವಣಿಗೆಯ ಸ್ವರೂಪವನ್ನು ಪಟ್ಟಿಮಾಡಿದೆ.

೧. ಕಲ್ನಾರು : ಘುಪ್ಘುಸದ ಏಡಿಗಂತಿಗೆ ಸಂಬಂಧಿಸಿದೆ. ಕಲ್ನಾರಿನಲ್ಲಿರುವ ಸಿಲಿಕ ಕಾರಣವಾಗಿರಬಹುದೆಂದು ಶಂಕೆ ಇದೆ. ಇದನ್ನು ಪ್ರಾಯೋಗಿಕವಾಗಿ ಖಚಿತ ಪಡಿಸಿಲ್ಲ.

೨. ಕ್ರೋಮಿಯಂ : ಬಣ್ಣದ ವಸ್ತುಗಳ ತಯಾರಿಕೆಯಲ್ಲಿ, ಸತು ಮತ್ತು ಸೀಸದ ಕ್ರೋಮೆಟುಗಳ ತಯಾರಿಕೆಯಲ್ಲಿ ಕೆಲಸ ಮಾಡುವವರಿಗೆ ಘುಪ್ಘುಸದ ಏಡಿಗಂತಿ ಬರುತ್ತದೆ.

೩. ನಿಕ್ಕಲ್ : ಉಸಿರಾಟದ ಸಾಗುನಾಳದ ಏಡಿಗಂತಿ ತಲೆದೋರಬಹುದು.

೪. ಕಪ್ಪುರಾಳ (ಪಿಚ್), ತಾರೆಣ್ಣೆ, ಹೊಗೆಕರಿ (ಸೂಟ್) ಮತ್ತು ಖನಿಜದ ಎಣ್ಣೆ : ಇವು ಕಾರ್ಖಾನೆಗಳಲ್ಲಿ, ಕೈಗಾರಿಕೆಗಳಲ್ಲಿ ಚರ್ಮದ ಏಡಿಗಂತಿಜನಕಗಳಾಗಿವೆ. ಪಾಲಿಸೈಕ್ಲಿಕ್ ಆರೋಮ್ಯಾಟಿಕ್ ಹೈಡ್ರೊಕಾರ್ಬನ್‌ಗಳು ಕಪ್ಪುರಾಳ, ತಾರೆಣ್ಣೆ ಮತ್ತು ಹೊಗೆಕರಿಯಲ್ಲಿರುವ ಏಡಿಗಂತಿಜನಕಗಳು.

೫. ಆರೋಮ್ಯಾಟಿಕ್ ಆಮೈನುಗಳು : ಇವನ್ನು ಸಂಶ್ಲೇಷಿತ ವರ್ಣದ್ರವ್ಯಗಳ ತಯಾರಿಕೆಯಲ್ಲೂ ರಬ್ಬರ್ ಉದ್ಯಮದಲ್ಲೂ ಉಪಯೋಗಿಸುತ್ತಾರೆ. ಇವು ಮೂತ್ರಕೋಶದ ಏಡಿಗಂತಿಜನಕಗಳು (ಬೆನ್‌ಡೀನ್, ನ್ಯಾಫ್ತಿಲಮೈನ್).

೬. ತಂಬಾಕು : ತಂಬಾಕು ಸೇವನೆಯಿಂದ ಘುಪ್ಘುಸ, ಬಾಯಿ, ಧ್ವನಿನಾಳ, ಅನ್ನನಾಳ, ಮೂತ್ರಕೋಶಗಳಲ್ಲಿ ಏಡಿಗಂತಿಗಳಾಗಿವೆ. ಪಾಲಿಸೈಕ್ಲಿಕ್ ಆರೋವ್ಯಾಟಿಕ್ ಹೈಡ್ರೊಕಾರ್ಬನ್‌ಗಳು ಮತ್ತು ನ್ಯಾಫ್ತಿಲಮೈನುಗಳಂಥ ಏಡಿಗಂತಿಜನಕ ರಾಸಾಯನಿಕಗಳನ್ನು ತಂಬಾಕುವಿನಿಂದ ಪ್ರತ್ಯೇಕಿಸಲಾಗಿದೆ.

೭. ಬಹ್ವಂಗಗಳು (ಪಾಲಿಮರ್ಸ್) ಮತ್ತು ಪ್ಲಾಸ್ಟಿಕ್ಕುಗಳು : ಇಲಿಗಳಲ್ಲಿ ಬೇಕಲೈಟಿನ ಬಿಲ್ಲೆಗಳಿಂದ ತಂತು ಸ್ನಾಯುಗಂತಿಯೂ (ಫೈಬ್ರೊಸಾರ್ಕೋಮಾ) ಸೆಲ್ಲೋಫೇನಿನ ಬಿಲ್ಲೆಯಿಂದ ಮೂತ್ರಪಿಂಡದ ಸುತ್ತಲಿನ ಸ್ನಾಯುಗಂತಿ ಆಗುತ್ತವೆ. ಈ ಬೃಹದಣುಕಾರಕಗಳಿಂದ (ಮ್ಯಾಕ್ರೋಮೊಲೆಕ್ಯುಲರ್ ಏಜೆಂಟ್ಸ್) ಉಂಟಾಗುವ ಏಡಿಗಂತಿಯ ಕಾರಣವಿನ್ನೂ ತಿಳಿದಿಲ್ಲ.

೮. ಆರ್ಸೆನಿಕ್ : ಕುರಿಗುಣಿಮದ್ದು (ಷೀಪ್ ಡಿಪ್), ವರ್ಣದ್ರವ್ಯಗಳು ಇವುಗಳ ತಯಾರಿಕೆಯಲ್ಲಿ ವಿಪುಲವಾಗಿ ಬಳಸುವ ಆರ್ಸೆನಿಕ್ ಈ ಖನಿಜದ ಗಣಿ ಕೆಲಸಗಾರರಲ್ಲಿ ಘುಪ್ಘುಸದ ಏಡಿಗಂತಿಯನ್ನು ಉಂಟುಮಾಡುವುದು. ಕೀಟನಾಶಕ ಆರ್ಸೆನಿಕ್ ತಯಾರಿಕರಿಗೆ ಚರ್ಮದ ಏಡಿಗಂತಿ ಆಗುವುದು.

೯. ಬೂಷ್ಟಿನ ಜೀವವಿಷಗಳು (ಫಂಗಲ್ ಟಾಕ್ಸಿನ್ಸ್) : ಆಹಾರಧಾನ್ಯಗಳು ಮತ್ತು ಇತರ ಆಹಾರ ಪದಾರ್ಥಗಳ ಮೇಲೆ ಬೆಳೆಯುವ ಬೂಷ್ಟುಗಳು ಬಿಡುವ

ಜೀವವಿಷಪದಾರ್ಥಗಳನ್ನು ತಿನ್ನುವುದರಿಂದ ಏಡಿಗಂತಿ ಬರುವುದು. ಈ ಶೋಧನೆ ರಾಸಾಯನಿಕ ಏಡಿಗಂತಿಜನಕಗಳ ಪ್ರಪಂಚದಲ್ಲಿ ಒಂದು ಹೊಸ ವಲಯವನ್ನೇ ಅನಾವರಣ ಮಾಡಿದೆ. ಅಸ್ಪರ್ಜಿಲ್ಲಸ್ ಫ್ಲೇವಸ್ ಎಂಬ ಹೆಸರಿನ ಬೂಷ್ಟು ಬೆರೆತಿದ್ದ ಕಡಲೆಕಾಯಿ ಹಿಂಡಿ ಆಹಾರ ಸೇವಿಸಿದ ಕೋಳಿಗಳಲ್ಲಿ ಒಂದು ವಿಚಿತ್ರ ವ್ಯಾಧಿ ತಲೆದೋರಿತು. ಇದರ ಶೋಧನೆಯ ಪರಿಣಾಮವಾಗಿ ಅಫ್ಲಟಾಕ್ಸಿನ್ ಏಡಿಗಂತಿಜನಕ ರಾಸಾಯನಿಕವನ್ನು ಪ್ರತ್ಯೇಕಿಸುವುದು ಸಾಧ್ಯವಾಯಿತು. ಹಳದಿ ಬಣ್ಣಕ್ಕೆ ತಿರುಗಿದಂಥ ಅಕ್ಕಿ ಮತ್ತು ಇಂಥ ಇತರ ಆಹಾರ ಪದಾರ್ಥಗಳ ಸೇವನೆಯಿಂದ ಈಲಿಯಲ್ಲಿ ಗಂತಿಗಳು ಏಳಬಹುದು.

ರಾಸಾಯನಿಕ ಏಡಿಗಂತಿಜನಕಗಳು ಮತ್ತು ಅವುಗಳ ವರ್ತನೆಯ ವಿಧಾನ : ರಾಸಾಯನಿಕ ಏಡಿಗಂತಿಜನಕಗಳು ಏಡಿಗಂತಿಯನ್ನು ಪ್ರಚೋದಿಸುವ ಜೀವರಾಸಾಯನಿಕ ಕ್ರಿಯಾತಂತ್ರ ವಿಶಿಷ್ಟವಾಗಿದೆ. ಗಂತಿಗಳನ್ನು ಉಂಟು ಮಾಡುವ ರಾಸಾಯನಿಕ ಕಾರಕಗಳಲ್ಲಿ ಹಲವು ವಿಧ. ಈ ವೈವಿಧ್ಯದ ಪರಿಣಾಮವಾಗಿ ಎಲ್ಲ ರಾಸಾಯನಿಕಗಳಿಗೂ ಅನ್ವಯಿಸುವಂತೆ ಅವುಗಳ ಏಡಿಗಂತಿಜನಕ ಕ್ರಿಯೆಯನ್ನು ನಿಖರವಾಗಿ ಸೂಚಿಸಬಲ್ಲ ಪರಮಾಣುಸೂತ್ರಗಳನ್ನು ವ್ಯಾಖ್ಯಿಸುವುದು ಸಾಧ್ಯವಾಗುವುದಿಲ್ಲ.

ಇಂದಿನ ಆಧಾರ ಭಾವನೆಯನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು : ೧. ಕೋಶದ ಮೇಲ್ಮೈ ಮೇಲೆ ರಾಸಾಯನಿಕ ವರ್ತಿಸುತ್ತದೆ, ಮತ್ತು ೨. ವಂಶವಾಹಿಯಾಗಿ (ಜೆನೆಟಿಕಲಿ) ಬಲು ಮುಖ್ಯವಾಗಿರುವ ನ್ಯೂಕ್ಲಿಯಿಕ್ ಆಮ್ಲಗಳೊಡನೆ ಈ ರಾಸಾಯನಿಕಗಳು ನೇರವಾಗಿ ಅಂತರ ಕ್ರಿಯೆ ಎಸಗುತ್ತವೆ. ಏಡಿಗಂತಿಜನಕಗಳ ಕ್ರಿಯೆಯ ಹಿನ್ನೆಲೆಯಲ್ಲಿರುವ ನಿಖರವಾದ ರಾಸಾಯನಿಕ ಕ್ರಿಯಾತಂತ್ರ ಏನೇ ಇರಲಿ, ಅವು ವಂಶವಾಹೀ ವಸ್ತುವಿನೊಡನೆ ಅಥವಾ ಅದರ ಮುನ್ಸೂಚಕಗಳೊಡನೆ (ಪ್ರೀಕರ್ಸಸ್) ಸಂಯೋಜಿಸುವುದರ ಬಗ್ಗೆ ಸಂಶೋಧಿಸಲಾಗಿದೆ. ಈ ಸಂಯೋಜನೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಹಜ ಬೆಳವಣಿಗೆಯನ್ನು ನಿಯಂತ್ರಿಸಲು ಅತ್ಯಾವಶ್ಯಕಗಳಾದ ಕೆಲವು ಮುಖ್ಯ ಪ್ರೊಟೀನುಗಳನ್ನು ನಿರ್ಮೂಲಗೊಳಿಸಬಹುದು.

ಇಂಥ ಸಂಯೋಜನೆಯಿಂದ ಹಲವು ಮೂಲ ಸಂಶ್ಲೇಷಣ ಕ್ರಿಯೆಗಳು ನಡೆದು ತರುವಾಯ, ಈ ಕ್ರಿಯೆಗಳನ್ನು ಆಧರಿಸಿರುವ ಜೀವಕೋಶ ವಿಭಜನೆ ಯಾವ ಹತೋಟಿ ಇಲ್ಲದೆ ನಡೆಯುತ್ತದೆ.

ಸಂಶೋಧನೆಯಿಂದ ಗಂತಿಯನ್ನು ಉಂಟುಮಾಡುವ ಹಾಗೂ ಬೆಳೆಸುವ ಕ್ರಿಯೆಯ ಅಭ್ಯಾಸದಿಂದ ಏಡಿಗಂತಿಜನಕಗಳನ್ನು ಕುರಿತು ಎರಡು ಹಂತಗಳ ಕ್ರಿಯಾತಂತ್ರವನ್ನು ನಿರೂಪಿಸಬಹುದು. ಆರಂಭಿಕ, ಪ್ರೇರಕ, ಸಹಜ ಜೀವಕೋಶಗಳನ್ನು ಏಡಿಗಂತಿಕೋಶಗಳಾಗಿ ಪರಿವರ್ತಿಸುವ ಗುಣ ಕೆಲವು ರಾಸಾಯನಿಕಗಳಿಗೆ ಇದೆ. ಇವು ಆರಂಭಿಕಗಳು (ಇನಿಷಿಯೇಟರ್ಸ್). ಉದಾ: ಪಾಲಿಸೈಕ್ಲಿಕ್ ಹೈಡ್ರೊಕಾರ್ಬನ್‌ಗಳು, ಅಜೋ ಏಡಿಗಂತಿಜನಕಗಳು ಮತ್ತು ಆರೋಮ್ಯಾಟಿಕ್ ಅಮೈನುಗಳು. ಎರಡನೆಯ ಗುಂಪಿನ ರಾಸಾಯನಿಕಗಳಿಗೆ ಏಡಿಗಂತಿಯ ಬದಲಾವಣೆಯನ್ನು ಆರಂಭಿಸಲು ಆಗುವುದಿಲ್ಲ, ಬದಲಾಗಿರುವ ಜೀವಕೋಶದ ಹೆಬ್ಬೆಳೆತಕ್ಕೆ ಒತ್ತಾಸೆಯನ್ನೋ ಶಕ್ತಿಯನ್ನೋ ನೀಡಿ ಅದನ್ನು ಗಂತಿಯಾಗಿ ಮಾರ್ಪಡಿಸುತ್ತವೆ. ಇವುಗಳಿಗೆ ಪ್ರೇರಕಗಳೆಂದು (ಪ್ರಮೋಟರ್ಸ್) ಹೆಸರು. ಉದಾ: ಜಾಪಾಳದ ಎಣ್ಣೆ, ಫಿನಾಲುಗಳು, ನಾನಯಾನಿಕ್ ಶುದ್ಧಿಕಾರಕಗಳು (ನಾನಯಾನಿಕ್ ಡಿಟರ್ಜೆಂಟ್ಸ್), ಈಳೆಯ (ಸಿಟ್ರಸ್) ಎಣ್ಣೆಗಳು, ಯುಪೋಬಿಯ ಲ್ಯಾಟೀಸುಗಳು. ಆರಂಭಿಕಗಳೇ ಪ್ರೇರಕಗಳಾಗಬಹುದು. ಆದರೆ ಇದರ ವಿಲೋಮ ಅಸಾಧ್ಯ.

ಒಂದೇ ಏಡಿಗಂತಿಜನಕಕ್ಕೆ ಒಡ್ಡಿದ ಎಲ್ಲ ಜನರಲ್ಲೂ ಏಡಿಗಂತಿ ಏಕೆ ಏಳುವುದಿಲ್ಲ ಎನ್ನುವ ಸಮಸ್ಯೆಗೆ ಆರಂಭಿಕ, ಪ್ರೇರಕ ಎಂಬ ಈ ಪರಿಕಲ್ಪನೆ ಒಂದು ಪರಿಹಾರ ನೀಡಬಹುದು. ಏಡಿಗಂತಿ ಎದ್ದು ಕಾಣಿಸಿಕೊಳ್ಳುವಂತೆ ಮಾಡುವುದರಲ್ಲಿ ನಮ್ಮ ಪರಿಸರದಲ್ಲಿರುವ ಪ್ರೇರಕ ಕಾರಕಗಳು ಎಷ್ಟು ಮುಖ್ಯ ಎಂಬುದು ಇದರಿಂದ ಖಚಿತವಾಗುತ್ತದೆ. ಆದ್ದರಿಂದ ಏಡಿಗಂತಿ ಬರದಂತೆ ಕಾಪಾಡಿಕೊಳ್ಳಬೇಕಾದರೆ ರಾಸಾಯನಿಕ ಏಡಿಗಂತಿಜನಕಗಳೊಂದಿಗೆ (ಆರಂಭಿಕಗಳು) ಮಾತ್ರವಲ್ಲ ಪ್ರೇರಕಕಾರಕಗಳೊಡನೆ ಸಹ ಸಂಪರ್ಕ ಒದಗದಂತೆ ಎಚ್ಚರ ವಹಿಸಬೇಕು.

ಸಂಶೋಧನೆಯಿಂದ ಪ್ರಾಣಿಗಳಿಗೆ ಏಡಿಗಂತಿಜನಕಗಳಾದ ವಸ್ತುಗಳ ಪರಂಪರೆಯೇ ಬೆಳೆಯುತ್ತಿದೆ. ಇವು ಪ್ರಾಯಶ: ಮನುಷ್ಯನಿಗೂ ಅಪಾಯಕಾರಿ. ಇವು ಸರ್ವವ್ಯಾಪಿಯಾಗಿರುವಂತೆ ಭಾಸವಾಗುತ್ತದೆ. ನಾವು ಸೇವಿಸುವ ಗಾಳಿಯಲ್ಲಿ, ಕುಡಿಯುವ ನೀರಿನಲ್ಲಿ, ತಿನ್ನುವ ಆಹಾರದಲ್ಲಿ, ಸೇವಿಸುವ ಹಲವಾರು ಔಷಧಿಗಳಲ್ಲಿ ಅಂಗರಾಗದ್ರವ್ಯಗಳಲ್ಲಿ ಕಾರ್ಖಾನೆಗಳಲ್ಲಿ ವಿಪುಲವಾಗಿ ಬಳಸುವ ರಾಸಾಯನಿಕಗಳಲ್ಲಿ ಇವೆ.

ಏಡಿಗಂತಿ ಸಂಶೋಧನೆ: ಏಡಿಗಂತಿಗಳು ದೇಹದಲ್ಲಿ ಉಂಟಾಗುವ ಬಗ್ಗೆ ಅಂಕಿ–ಅಂಶ, ಹರಡುವ ರೀತಿ, ರೋಗಚಿಕಿತ್ಸೆಯ ವಿಧಾನ ಪ್ರಾಣಿಗಳ ಮೇಲಿನ ಪ್ರಯೋಗಗಳು ಏಡಿಗಂತಿ ಸಂಶೋಧನೆಯ ಫಲಶೃತಿಗಳು. ಪ್ರಯೋಗಾಲಯಗಳಲ್ಲಿ ಪ್ರಾಣಿಗಳ ಮೇಲೆ ಮೂಲ ಸಂಶೋಧನೆ ನಡೆಸಿ ಪರಿಶೀಲಿಸುತ್ತಾರೆ. ನಂತರ, ಏಡಿಗಂತಿ ರೋಗಿಯನ್ನು ಆಸ್ಪತ್ರೆಗಳ ಒಳ ಮತ್ತು ಹೊರ ರೋಗಿಗಳ ಚಿಕಿತ್ಸಾಲಯದಲ್ಲಿ ತಜ್ಞ ವೈದ್ಯರು ಪರೀಕ್ಷಿಸಿ ಚಿಕಿತ್ಸೆ ಕೈಗೊಳ್ಳುತ್ತಾರೆ.

ಮೂಲಗುಣ : ಏಡಿಗಂತಿಯ ಜೀವಕಣಗಳಲ್ಲಿ ಜೀವವಸ್ತುಕರಣ (ಮೆಟಬಾಲಿಸಂ) ಹೆಚ್ಚು. ಪುನರುತ್ಪತ್ತಿ (ರಿಪ್ರೊಡಕ್ಷನ್) ಹತೋಟಿಯಲ್ಲಿಡುವ ಕ್ರೊಮೋಸೋಮನಲ್ಲಿರುವ ಜೀನ್‌ಗಳ ಮತ್ತು ಕಿಣ್ವಗಳ ಬಲು ಗಹನವಾದ ನಾಜೂಕಿನ ಹೊಂದಾಣಿಕೆಯ ಹತೋಟಿ ವ್ಯವಸ್ಥೆಗೆ ಏಡಿಗಂತಿಯಿಂದ ಎಷ್ಟೊ ಬಗೆಯ ಧಕ್ಕೆ ಉಂಟಾಗುತ್ತದೆ. ಇದರಿಂದ ಜೀನ್‌ಗಳಲ್ಲಿ ಸ್ಥಿರವಾದ ಮಾರ್ಪಾಡು ವಿಕೃತಿ (ಮ್ಯುಟೇಷನ್) ಆಗಬಹುದು. ಈ ವಿಕೃತಿ ಸಾಕಷ್ಟಿದ್ದರೆ ಜೀವಕಣ ಸಾಯುತ್ತದೆ. ಜೀವಾಣು ಸ್ಥಿರವಾಗಿ, ಜೀವಾಣು ಭಾಜ್ಯತೆಯನ್ನು (ಮೈಟೋಟಿಕ್ ರೇಟ್) ವೇಗಗೊಳಿಸಿದರೆ ಏಡಿಗಂತಿ ಉಂಟಾಗುತ್ತದೆ.

ಸಹಜವಾದ ಹತೋಟಿ ವ್ಯವಸ್ಥೆಗೆ ಧಕ್ಕೆ ತರುವ ತಿಳಿವಳಿಕೆಯು, ಏಡಿಗಂತಿಜನನ (ಕಾರ್ಸಿನೋಜನಿಸಿಸ್) ಮತ್ತು ಹತೋಟಿಗಳ ಬಗ್ಗೆ ಸಂಶೋಧಿಸಲು ಮಹಾ ಅಸ್ತ್ರ. ಗಡಿಯಾರದ ವೇಗವನ್ನು ಹೆಚ್ಚು ಕಡಿಮೆ ಮಾಡುವಂತೆಯೇ ಜೀವಾಣು ಭಾಜ್ಯತೆಯ ವೇಗವನ್ನೂ ಏಡಿಗಂತಿಜನಕಗಳಿಂದ (ಕಾರ್ಸಿನೋಜನ್ಸ್) ಹೆಚ್ಚಿಸಬಹುದು ಮತ್ತು ವಿಕಿರಣತೆ (ರೇಡಿಯೇಷನ್), ಕಾಲ್ಚಿಸಿನುಗಳಿಂದ ನಿಧಾನಗೊಳಿಸಬಹುದು. ಒಂದೊಂದು ಜೀವಾಣವೂ ೧೬ ಬಾರಿ ಗುಣಿತವಾದಾಗ ೬೦,೦೦೦ ಮರಿ ಜೀವಕಣಗಳು ಹುಟ್ಟುವುದರಿಂದ, ಜೀವಾಣು ಭಾಜ್ಯತೆಯ ವೇಗದಲ್ಲಿ ವ್ಯತ್ಯಾಸಗಳಾಗಿ ಬೇಗನೆ ಏಡಿಗಂತಿ ಉಂಟಾಗುವುದು.

ಏಡಿಗಂತಿ ಹುಟ್ಟು : ಏಡಿಗಂತಿಜನಕಗಳಲ್ಲಿ ಕೆಲವು ಭೌತಿಕವಾದರೆ, ಕೆಲವು ರಾಸಾಯನಿಕವಾಗಿವೆ. ಕೆಲವು ದೇಹದೊಳಗೆ ಇಲ್ಲವೇ ಹೊರಗಿನಿಂದಾದವು. ಅಂಗಾಂಗಗಳಲ್ಲಿ ಬಗೆಬಗೆಯ ಏಡಿಗಂತಿಗಳಾಗುವುದಕ್ಕೆ ಹಲವು ವಿಧಾನಗಳಿವೆ : ೧. ಆನುವಂಶೀಯ ಘಟಕಗಳು (ಜನೆಟಿಕ್ ಫ್ಯಾಕ್ಟರ್ಸ್), ೨. ರಾಸಾಯನಿಕಕಾರಕಗಳು (ಕೆಮಿಕಲ್ಸ್ ಏಜೆಂಟ್ಸ್), ೩. ಭೌತಿಕಕಾರಕಗಳು, ೪. ವೈರಸುಗಳು, ೫. ಚೋದನಿಕಗಳು (ಹಾರ್ಮೋನ್ಸ್), ೬. ಸಂಪ್ರದಾಯ, ರೂಢಿ, ಪದ್ಧತಿಗಳು, ೭. ಭೂಗುಣ, ಹವೆಗಳು, ೮. ಉಳಿದ ಕಾರಣಗಳು.

೧. ಆನುವಂಶೀಯ ಘಟಕಗಳು : ಏಡಿಗಂತಿ ಉಂಟಾಗುವ ಬಗ್ಗೆ ಪ್ರಯೋಗ ಪ್ರಾಣಿಗಳಲ್ಲಿ ತೋರಿಸುವುದು ಸುಲಭ. ಕೆಲವು ವಂಶಗಳ ಜನರಲ್ಲಿ ಕಣ್ಣಾಲನನೆಗಂತಿ (ರೆಟೀನೊಬ್ಲಾಸ್ಟೋಮ), ಬಹುನರತಂತುಗಳ (ಮಲ್ಟಿಪಲ್ ನ್ಯೂರೋಬ್ಲಾಸ್ಟೋಸಿಸ್) ಏಡಿಗಂತಿಗಳು ನಾಲ್ಕು ತಲೆಮಾರುಗಳ ತನಕ ಮರುಕಳಿಸಿರುವುದು ರುಜುವಾತಾಗಿದೆ. ಬಿಳಿರಕ್ತಕಣದಲ್ಲಿ (ಕ್ರಾನಿಕ್ ಲುಕೇಮಿಯ) ದೊರೆತಿರುವ ಫಿಲಡೆಲ್ಫಿಯ ಕ್ರೋಮೋಸೋಮ್ ಏಡಿಗಂತಿ ಕೆಲವು ವಂಶಗಳಲ್ಲಿ ಬರುವುದನ್ನು ತೋರಿಸುತ್ತದೆ.

೨. ರಾಸಾಯನಿಕಗಳು : ನೋಡಿ_ಏಡಿಗಂತಿಜನಕ ರಾಸಾಯನಿಕಗಳು.

೩. ಭೌತಿಕ ಕಾರಕಗಳು : ವಿಕಿರಣಶಕ್ತಿ (ರೇಡಿಯೋಆಕ್ಟಿವ್) ಕೋಬಾಲ್ಟ್ ಆರ್ಸಿನೈಡ್ ಅದಿರನ್ನು ತೆಗೆಯುವ ಜರ್ಮನಿಯ ಗಣಿ ಕೆಲಸಗಾರರಲ್ಲಿ ಫುಪ್ಫುಸದ ಗಂತಿಗಳಾದುದು ೧೯೨೬ರಲ್ಲಿ ಖಚಿತವಾಯಿತು. ಅಮೆರಿಕದ ಗಡಿಯಾರ ಕಾರ್ಖಾನೆಗಳಲ್ಲಿ, ಕತ್ತಲಲ್ಲಿ ಮಿನುಗುವ ರೇಡಿಯಂ ಬಣ್ಣ ಹಚ್ಚುವ ಕುಂಚಗಳನ್ನು ಬಾಯಿಯಿಂದ ಒದ್ದೆಮಾಡುತ್ತಿದ್ದ ಹೆಣ್ಣಾಳು ಕೆಲಸಗಾರರ ರಕ್ತಜನಕ ಮೂಳೆಗಳಲ್ಲಿ ಗಂತಿ ಉಂಟಾಗಿ ಮಾರಕ ರಕ್ತ ಕೊರೆಗೆ ಈಡಾದರು. ಈ ಬಗ್ಗೆ ಮುನ್ನೆಚ್ಚರಿಕೆ ಪಡೆದ ಯೂರೋಪಿನ ಕೆಲಸಗಾರರು ಇದೇ ಕಂಟಕದಿಂದ ಪಾರಾದರು. ಮೊದಲಿಗೆ ಎಕ್ಸ್ ಕಿರಣಗಳೊಂದಿಗೆ ಕೆಲಸಮಾಡುತ್ತಿದ್ದವರಿಗೆ ಕೈಚರ್ಮದ ಗಂತಿ ಉಂಟಾಗುತ್ತಿತ್ತು. ಹಿರೋಷಿಮಾ ನಾಗಸಾಕಿಗಳಲ್ಲಿ ಪರಮಾಣು ಬಾಂಬ್ ಸಿಡಿದಮೇಲೆ ಅಳಿದುಳಿದವರಲ್ಲಿ ಬಿಳಿರಕ್ತಕಣ ರಕ್ತತೆಯೂ ವಿಕಿರಣಚೋದಿತ ಗಂತಿಗಳೂ ಸಾಮಾನ್ಯರಿಗಿಂತ ಹತ್ತರಷ್ಟು ಹೆಚ್ಚಾಗಿತ್ತು. ಬಿಸಿಲಿಗೆ ವಿಪರೀತ ಮೈಯೊಡ್ಡುವುದು ಚರ್ಮಗಂತಿಗೆ ಕಾರಣವಾಗಬಹುದು. ಕಡಿಮೆ ತರಂಗಮಾನದ ಅತಿನೇರಳೆ ಕಿರಣಗಳು ಮೀತಿಮಿರಿದರೆ ಚರ್ಮಕ್ಕೆ ಹಾನಿಕರ.

೪. ವೈರಸುಗಳು : ಎಲೆಕ್ಟ್ರಾನ್ ಸೂಕ್ಷ್ಮದರ್ಶಕಕ್ಕೆ ಮಾತ್ರ ನಿಲುಕುವ ವೈರಸುಗಳು, ಜೀವಕಣದಲ್ಲಿ ಹೆಗ್ಗುಣಿತವಾಗಿ ಮರಿ ಜೀವಕಣಗಳ ಒಳಹೊಗಬಲ್ಲುವು. ಕೋಳಿ, ಕಪ್ಪೆ, ಮೊಲ ಮುಂತಾದ ಪ್ರಯೋಗದ ಪ್ರಾಣಿಗಳಲ್ಲಿ ಇವುಗಳಿಂದ ಏಡಿಗಂತಿ ಏಳುವುದು ಖಚಿತವಾಗಿದೆ. ಮಾನವರಲ್ಲೂ ವೈರಸ್ಸುಗಳಿಂದ ನರೋಲಿ (ವಾರ್ಟ್) ಉಂಟಾಗಿ, ಏಡಿಗಂತಿಯಾಗುತ್ತದೆ.

೫. ಚೋದನಿಕಗಳು : ಲೈಂಗಿಕ ಚೋದನಿಕಗಳು ಪ್ರಾಣಿಗಳಲ್ಲಿ ಗಂತಿಯನ್ನು ಚೋದಿಸಬಲ್ಲವು. ಪಿಟುಟರಿ ಗ್ರಂಥಿಯ ಚೋದನಿಕಗಳು ಬೆಳವಣಿಗೆಯನ್ನೂ ಅಂಗ

ಕೆಲಸಗಳನ್ನೂ ನಿಯಂತ್ರಿಸುವ, ನಾಲ್ಕು ಅಂಗಗಳಾದ ಮೊಲೆ, ಗರ್ಭಕೋಶ, ಅಂಡಾಶಯ, ಪ್ರೋಸ್ಟೇಟ್‌ನಲ್ಲಿ ಒಟ್ಟು ಏಡಿಗಂತಿಗಳಲ್ಲಿ ಶೇ. ೨೫ ರಷ್ಟು ತೋರುತ್ತವೆ. ಮೊಲೆಯ, ಪ್ರೋಸ್ಟೇಟಿನ ಗಂತಿಗಳು ಅಂಡಾಶಯವನ್ನು ಅಥವಾ ವೃಷಣಗಳನ್ನು ತೆಗೆದರೆ ತಗ್ಗುತ್ತವೆ.

೬. ಸಂಪ್ರದಾಯ, ರೂಢಿ, ಪದ್ಧತಿಗಳು, ಚಟಗಳು : ವಯಸ್ಸಿನಲ್ಲಿ ಶಿಶ್ನದ ಮುಂದೊಗಲನ್ನು ಕತ್ತರಸುವ ಮುಸ್ಲಿಮರು, ಯೆಹೂದಿಯರಲ್ಲಿ ಶಿಶ್ನದ ಏಡಿಗಂತಿ ಅತಿವಿರಳ. ಹಾಗೆ ಕತ್ತರಿಸದಿರುವ ಹಿಂದೂಗಳಲ್ಲಿ ಹೆಚ್ಚು. ಇದರೊಂದಿಗೇ ಗರ್ಭಗೊರಳಿನ (ಸರ್ವಿಕ್) ಏಡಿಗಂತಿ ಯೆಹೂದಿ, ಮುಸ್ಲಿಂ ಹೆಂಗಸರಲ್ಲಿ ಅತಿ ವಿರಳ. ಹಿಂದೂ ಹೆಂಗಸರಲ್ಲಿ ಹೆಚ್ಚು. ಶಿಶ್ನದ ಮುಂದೊಗಲಡಿಯಲ್ಲಿ ಸೇರುವ ಕೊಳಕು, ಶಿಶ್ನದ ಹಾಗೂ ಗರ್ಭಕೊರಳಿನ ಏಡಿಗಂತಿಗಳಿಗೆ ಕಾರಣವೆಂಬ ಬಲವಾದ ಶಂಕೆಯಿದೆ. ಬಾಲ್ಯ ಮದುವೆಯಾಗಿ ಹೆರಿಗೆಗಳು ಹೆಚ್ಚಾದಷ್ಟೂ ಮುಂದೊಗಲಲ್ಲಿ ಕೊಳೆ ಸೇರಿದಷ್ಟೂ ಈ ರೋಗ ಆಗುವ ಸಂಭವ ಹೆಚ್ಚು.

ಕಾಶ್ಮೀರಿಗಳು ಕಲ್ಲಿದ್ದಲಿನ ಉರಿಕೆಂಡಗಳಿರುವ ಬಿಸಿಬುಟ್ಟಿಯನ್ನು (ಕಾಂಗ್ರಿ) ಹೊಟ್ಟೆ, ತೊಡೆಗಳ ಮೇಲೆ ಇಟ್ಟುಕೊಳ್ಳುವುದರಿಂದ ಚರ್ಮ ಬೆಂದು ಏಡಿಗಂತಿಯಾಗುವುದು ಸಾಮಾನ್ಯ. ಪ್ರಪಂಚದಲ್ಲಿ ಬೇರೆ ಯಾರೂ ಈ ಪದ್ಧತಿಯನ್ನೂ ಅನುಸರಿಸುವುದಿಲ್ಲ. ಆದ್ದರಿಂದ ಬೇರೆಲ್ಲೂ ಈ ಕಾಂಗ್ರಿ ಏಡಿಗಂತಿ ಉಂಟಾಗದು.

ಹೊಗೆಸೇದಿಕೆ : ಪ್ರತಿ ದಿನ ಸೇದುವ ಸಿಗರೇಟುಗಳ ಸಂಖ್ಯೆ, ಸೇದುವ ಅವಧಿಗಳಿಗೆ ತಕ್ಕಂತೆ ಫುಪ್ಪುಸ ಗಂತಿಯ ಕಂಟಕ ಹೆಚ್ಚುತ್ತದೆ. ಸೇದುವವ'ರಲ್ಲಿ ಶೇ. ೨೦–೩೦ ರಷ್ಟು ಹೆಚ್ಚು. ಇಷ್ಟಲ್ಲದೆ ಧೂಮಪಾನಿಗಳಲ್ಲಿ ಧ್ವನಿನಾಳ, ಬಾಯಿ, ಅನ್ನನಾಳ, ಮೂತ್ರಕೋಶದ ಗಂತಿಗಳಾಗುವ ಗಂಡಾಂತರ ಹೆಚ್ಚು. ದ'ಶಲಕ್ಷ ಜನರಲ್ಲಿ ಅಮೆರಿಕದ ಗಂತಿಸಂಸ್ಥೆ ನಡೆಸಿದ ಶೋಧನೆಯಿಂದ ಈ ನಿಜಾಂಶಗಳು ತಿಳಿದು ಬಂದಿವೆ. ಬೀಡಿ ಸೇದುವ, ತಂಬಾಕು ಮೆಲ್ಲುವ ಗುಜರಾತಿಗಳಲ್ಲಿ ನಾಲಗೆಬುಡ, ಮೆಂಡಿಕೆಗಳ (ಟಾನ್ಸಿಲ್) ಏಡಿಗಂತಿ ಸಾಮಾನ್ಯ.

ಉರಿವ ತುದಿಯನ್ನು ಬಾಯೊಳಗಿಟ್ಟುಕೊಂಡು ಚುಟ್ಟ ಸೇದುವ ರೂಢಿ ಆಂಧ್ರ ಪ್ರದೇಶದಲ್ಲಿದೆ. ಬಿಸಿ ಹೊಗೆ ಬಡಿಯುವ ಬಾಯಿಯ ಗಡುಸು ಅಂಗುಳದಲ್ಲಿ (ಹಾರ್ಡ್ ಪ್ಯಾಲೆಟ್) ಏಡಿಗಂತಿ ಹೆಚ್ಚು. ಒಂದೇ ಸಮನೆ ತಾಕುವ ಕಾವೂ ತಂಬಾಕಿನ ಹೊಗೆಯೂ ಈ ಏಡಿಗಂತಿಗೆ ಮುಖ್ಯ ಕಾರಣ.

ತಾಂಬೂಲ : ಭಾರತದಲ್ಲಿ ಎಲ್ಲಾ ಜನರು ತಾಂಬೂಲ ಮೆಲ್ಲುವುದು ಸಾಮಾನ್ಯ. ಅಡಕೆಯಲ್ಲಿ ಒಗರು ಕೊಡುವ ಟ್ಯಾನಿನ್ ಅಲ್ಲದೆ, ಆರು ಆಲ್ಕಲಾಯ್ಡುಗಳಿವೆ. ತಾಂಬೂಲದಲ್ಲಿ ವೀಳೆದೆಲೆ, ಅಡಕೆ, ಸುಣ್ಣ, ಶುಂಠಿ, ತಂಬಾಕು, ಮೆಣಸು ಮತ್ತಿತರ ಪದಾರ್ಥಗಳನ್ನು ಸೇರಿಸುವರು. ಮದ್ರಾಸಿನ ಒಟ್ಟು ಏಡಿಗಂತಿಗಳಲ್ಲಿ ಶೇ. ೩೪ರಷ್ಟು ಪಾಲು ಬಾಯಿಗಂತಿಗೆ. ಹೆಚ್ಚಾಗಿ ವೀಳ್ಯ, ಅಡಕೆಗಳೊಂದಿಗೆ ತಂಬಾಕು ಅಗಿಯುತ್ತ ಬಾಯಲ್ಲಿ ಒಂದೆಡೆಗೆ ಒತ್ತಲಿಸುವುದು ಕಾರಣವೆಂದು ವರದಿಗಳಿವೆ. ಖೈನಿ ಎಂಬ ತಂಬಾಕು ಸುಣ್ಣಗಳನ್ನು ತಾಂಬೂಲದಲ್ಲಿ ಗಂಟೆಗಟ್ಟಲೆ ದವಡೆಯಲ್ಲಿಟ್ಟುಕೊಂಡು ಮೆಲ್ಲುವ ಬಿಹಾರ, ಉತ್ತರ ಪ್ರದೇಶದ ಜನರಲ್ಲಿ ಬಾಯಿ, ಅನ್ನನಾಳಗಳ ಏಡಿಗಂತಿ, ತಾಂಬೂಲ ಹಾಕದವರಿಗಿಂತ ಶೇ. ೮ ರಷ್ಟು ಹೆಚ್ಚು. ಬಾಯಿಯ ದುರ್ಗಂಧ, ಹಲ್ಲುಗಳ ರೋಗ, ಅನ್ನಾಂಗಗಳ ಕೊರೆ ಸಹ ಕಾರಣಗಳಾಗುತ್ತವೆ.

ಧೋತಿ ಗಂತಿ : ಧೋತಿ ಅಥವಾ ಪಂಚೆಯನ್ನು ಸೊಂಟದ ಸುತ್ತ ಬಿಗಿಯಾಗಿ ಕಟ್ಟಿ ಇನ್ನೊಂದು ತುದಿಯನ್ನು ತೊಡೆ ಸಂದಿನಲ್ಲಿ ತೂರಿಸಿ ಸೊಂಟದ ಹಿಂಭಾಗದಲ್ಲಿ ಬಿಗಿಸುತ್ತಾರೆ. ಸೊಂಟ ಮೂಳೆ ಮೇಲೂ ತೊಡೆಸಂದುಗಳಲ್ಲೂ ಚರ್ಮದ ಒತ್ತು ಹುಣ್ಣಾಗಿ (ಪ್ರೆಷರ್ ಸೋರ್) ಏಡಿಗಂತಿಯಾಗುವುದು ಹೆಚ್ಚು. ಬಡವರಲ್ಲಿ ಇದು ಸಾಮಾನ್ಯ. ಕೊಳಕುತನವೇ ಈ ಗಂತಿಗೆ ಕಾರಣ.

೭. ಭೂಗುಣ–ಹವೆಗಳು : ಮೊಲೆಗಂತಿ ಭಾರತ ಮತ್ತು ಜಪಾನುಗಳಲ್ಲಿ ವಿರಳ; ಯೂರೋಪ್, ಉತ್ತರ ಅಮೆರಿಕಗಳಲ್ಲಿ ಹೆಚ್ಚು. ಜಪಾನಿನಲ್ಲಿ ಜಠರದ ಏಡಿಗಂತಿ ಬಹಳ ಹೆಚ್ಚು. ಉತ್ತರ ಯೂರೋಪ್, ಅಮೆರಿಕಗಳಲ್ಲಿ ಅಧಿಕ, ಭಾರತದಲ್ಲಿ ವಿರಳ. ಚೀನೀಯರಲ್ಲಿ ಮೂಗು ಗಂಟಲ್ಕುಳಿಯ (ನೇಸೊಫ್ಯಾರಿಂಕ್ಸ್) ಗಂತಿ ಬಲು ಹೆಚ್ಚು. ಉಷ್ಣವಲಯದಲ್ಲಿ ವಾಸಿಸುವ ಬಿಳಿಜನರಲ್ಲಿ ಬಿಸಿಲಿನಿಂದ ಚರ್ಮದ ಏಡಿಗಂತಿ ಆಗುವುದು. ಚರ್ಮದಲ್ಲಿ ಕರ್ವಣ್ಣ (ಮೆಲನಿನ್) ಹೆಚ್ಚಿದ್ದು ಇದನ್ನು ತಡೆಗಟ್ಟುವ ನೀಗ್ರೊಚರ್ಮಗಳಲ್ಲಿ ಏಡಿಗಂತಿ ಕಡಿಮೆ.

೮. ಇತರೆ ಕಾರಣಗಳು : ಮದ್ಯಪಾನ ಮಾಡುವವರಲ್ಲಿ ಧ್ವನಿನಾಳ, ಅನ್ನನಾಳಗಳ ಏಡಿಗಂತಿ ಹೆಚ್ಚು. ಆಫ್ರಿಕದ ಬಂಟುಜನಾಂಗಗಳಲ್ಲಿ ಆಹಾರದ ನ್ಯೂನತೆ ಅಥವಾ ಆಹಾರಾಂಶಗಳಲ್ಲಿ ವಿಷವಸ್ತು (ಉದಾ: ಅಫ್ಲೊಟಾಕ್ಸಿನ್) ಈಲಿಯ ಏಡಿಗಂತಿಗೆ ಕಾರಣ. ಏಡಿಗಂತಿ ರೋಗಿಗಳಲ್ಲಿ ಬೇರೆ ಬಗೆಯ ಗಂತಿ ಏಳುವುದೂ ೨–೬ ರಷ್ಟು ಹೆಚ್ಚು. ಮೊಲೆಗಂತಿ ಮದುವೆ ಆಗದವರಿಗಿಂತ ಆದವರಲ್ಲಿ ಕಡಿಮೆ. ಮಕ್ಕಳಿಗೆ ಎದೆಹಾಲು ಕೊಡುವ ತಾಯಂದಿರಲ್ಲಿ ಇನ್ನೂ ಕಡಿಮೆ.

ಏಡಿಗಂತಿಯ ಗುಣಗಳು : ಹತೋಟಿಗೆಟ್ಟಿರುವುದೂ, ಜೀವಕಣಗಳ ಹುಟ್ಟುಮರಳಿಕೆಯೂ (ಅನಾಪ್ಲೇಸಿಯ) ಏಡಿಗಂತಿಯ ಮುಖ್ಯ ಗುಣಗಳು. ಸುತ್ತಣ ಅಂಗಾಂಶಗಳು ಒಳನುಗ್ಗುವುದು, ಮರುಕಳಿಕೆ, ಬೇರೆ ಅಂಗಾಂಗಗಳಿಗೆ ಗುಳೆಯ (ಮೆಟಸ್ಟೇಸಿಸ್) ಹೋಗುವುದು, ಕೋಶಕೇಂದ್ರದ (ನ್ಯೂಕ್ಲಿಯಸ್) ಮಾರ್ಪಾಟುಗಳು, ಧ್ರುವೀಕರಣದ (ಪೊಲಾರಿಟಿ) ನಾಶ, ಮಾರಕ ಪರಿಣಾಮ ಈ ಮುಖ್ಯ ಗುಣಗಳಲ್ಲಿ ಬಗೆಬಗೆಯ ಏಡಿಗಂತಿಗಳೂ ತರಾವರಿಯಾಗಿರುತ್ತವೆ.

ಏಡಿಗಂತಿ ಹರಡುವ ವಿಧಾನಗಳಿವು : ಒಳಪಸರಿಕೆ (ಇನ್‌ಫಿಲ್ಟ್ರೇಷನ್) ಹಾಲು ರಸನಾಳಗಳು (ಲಿಂಫ್ಯಾಟಿಕ್ಸ್), ರಕ್ತನಾಳಗಳ ಮೂಲಕ ಅನ್ನನಾಳ, ಕರುಳು, ಮೂತ್ರನಾಳಗಳಿಂದ ಸಹಜ ಅಂಗ ಹೊರದಾರಿಗಳಿಂದ, ಗುಂಡಿಗೆ, ಫುಪ್ಪುಸ, ಪಚನಾಂಗಗಳ ಸುತ್ತಪೊರೆಗಳ ಪೊಳ್ಳುಗಳ ಮೂಲಕ ಚುಚ್ಚಿಳಿತ (ಇನಾಕ್ಯುಲೇಷನ್)ಗಳಿಂದ ಪಸರಿಸುತ್ತದೆ.

ಮುನ್ನೇಡಿಗಂತಿ (ಪ್ರಿಕ್ಯಾನ್ಸರಸ್ ಲೀಷನ್) : ಬಾಯಿಯ, ಹೆಣ್ಣಿನ ಜನನಾಂಗದ ಬಿಳಿಮಚ್ಚನೆ (ಲ್ಯೂಕೊಪ್ಲೇಕಿಯ), ಮುಪ್ಪಿನ ಕೊಂಪೊರೆತನ (ಕೆರೆಟೋಸಿಸ್) ಮತ್ತಿತರ ಬೇನೆಗಳಲ್ಲಿ ಗಂತಿಯಾಗುವ ಸಂಭವ ಹೆಚ್ಚು.

ದೇಹದಲ್ಲಿ ಉಂಟಾಗುವ ಪರಿಣಾಮಗಳು : ತೂಕ ಕಡಿಮೆಯಾಗುವುದು, ಜಡತೆ ಉಂಟಾಗುವುದು, ಹರಡಿಕೊಂಡ ಏಡಿಗಂತಿಯಲ್ಲಿ ಹೆಚ್ಚು. ಗಂತಿಯ ನಿರ್ದಿಷ್ಟ ಸ್ವಭಾವಕ್ಕಿಂತ ಹಸಿವಿಲ್ಲದಿರುವಿಕೆ, ರಕ್ತನಷ್ಟ, ಭೇದಿ, ವಾಂತಿ, ಜ್ವರ ಕಾರಣ. ಮೈಕಡಿತ, ರಕ್ತಸಕ್ಕರೆ ತಗ್ಗುವುದು, ಕ್ಯಾಲ್ಸಿಯಂ ಹೆಚ್ಚಳಗಳಂತಹ ಬದಲಾವಣೆಗಳಾಗಬಹುದು.

ಏಡಿಗಂತಿ ಸಂಶೋಧನೆಯ ಅಂತಿಮ ಗುರಿಗಳು : ೧. ಸುಧಾರಿತ ಪರೀಕ್ಷಾ ವಿಧಾನಗಳಿಂದ ಗಂತಿಯನ್ನು ಎಳೆತನದಲ್ಲೇ ಪತ್ತೆ ಹಚ್ಚಿ, ಗೊತ್ತಿರುವ ಚಿಕಿತ್ಸಾ ವಿಧಾನಗಳಿಂದ ಬೇಗ ಗುಣಮುಖರಾಗಿಸುವುದು. ೨. ಸುಧಾರಿತ ಚಿಕಿತ್ಸೆಗಳಿಂದ ವಿಳಂಬಿತ ಹಾಗೂ ದುರ್ಲಕ್ಷಿತ ರೋಗಿಗಳು ಸಫಲಗುಣ ಪಡೆಯುವುದು. ೩. ಸಫಲ ನಿರೋಧಕ ಕ್ರಮಗಳಿಂದ ರೋಗಪರೀಕ್ಷೆ ಮತ್ತು ಚಿಕಿತ್ಸೆಯನ್ನು ಅನಗತ್ಯಗೊಳಿಸುವುದು.

ಆರಂಭಿಕ ಹಂತದ ಶೋಧನೆ : ಇದನ್ನು ಸಾಧಿಸಲು ಅವಶ್ಯ ಕ್ರಮಗಳು ಪ್ರಸ್ತುತ ಪರೀಕ್ಷಾ ಸಾಧನಗಳನ್ನು ಸದುಪಯೋಗಿಸುವುದು ಹಾಗೂ ಪರಿಪೂರ್ಣಗೊಳಿಸುವುದು. ರೋಗಲಕ್ಷಣ ಚಿಹ್ನೆಗಳು ತಲೆದೋರುವ ಮುನ್ನವೇ ತಾಂತ್ರಿಕ ಸಾಧನಗಳಿಂದ ಏಡಿಗಂತಿಯನ್ನು ಪತ್ತೆಹಚ್ಚುವುದು.

ಏಡಿಗಂತಿಯ ಎಚ್ಚರಿಕೆ ಸಂಕೇತಗಳು: ವಿವಿಧ ಏಡಿಗಂತಿ ರೋಗ ಚಿಹ್ನೆ ಲಕ್ಷಣಗಳು ತರಾವರಿಯಾಗಿದ್ದರೂ, ಕೆಲವು ಸೂಚನೆಗಳನ್ನು ಜನಸಾಮಾನ್ಯರೂ ಗುರುತಿಸಬಹುದು. ಈ ಸಂಕೇತಗಳಿಂದ ಏಡಿಗಂತಿ ರುಜುವಾತಾಗುವುದಿಲ್ಲ. ಆದರೆ, ಇವು ರೋಗಿಯನ್ನು ವೈದ್ಯರ ಪರೀಕ್ಷೆ ಸಲಹೆಗಳಿಗೆ ಸ್ಪಂದಿಸುವಂತೆ ಮಾಡಬಲ್ಲವು. ಸಕಾಲದಲ್ಲಿ ಏಡಿಗಂತಿ ಗೊತ್ತಾದರೆ ತಕ್ಕ ಚಿಕಿತ್ಸೆಯಿಂದ ಪೂರ್ಣ ಗುಣಪಡಿಸಬಹುದು. ಏಡಿಗಂತಿಗಿಂತಲೂ ಅದನ್ನು ಕುರಿತ ಅಂಜಿಕೆ ಹೆಚ್ಚು ಹಾನಿಕರ. ಈ ದಿಗಿಲಿನಿಂದ ವೈದ್ಯರಿಂದ ಸಲಹೆ ಪಡೆಯುವುದು ತಡವಾಗುತ್ತದೆ. ತಡವಾದರೆ ಪೂರ್ತಿ ಗುಣ ಕೈಗೂಡದು. ಎಚ್ಚರಿಕೆಯ ಸಂಕೇತಗಳಿವು : ೧. ಗಡ್ಡೆ ಅಥವಾ ಊದು ಕಾಣಿಸಿಕೊಂಡು ಬೆಳೆಯುತ್ತಲೇ ಇರುವುದು. ೨. ದೇಹದ ಸಹಜ ಮಾರ್ಗಗಳಿಂದ ಆಮು, ಕಫ, ಮಲ, ಮೂತ್ರ ಇತ್ಯಾದಿಗಳ ಮಿತಿಗೆಟ್ಟ ವಿಸರ್ಜನೆ ಅಥವಾ ರಕ್ತಸ್ರಾವ. ೩. ಕಾರಣವಿಲ್ಲದೆ ರೋಗ ಕಾಣಿಸಿಕೊಳ್ಳುವ ಚಿಹ್ನೆ; (i) ಒಡೆದ ದನಿ, (ii) ಎಡೆಬಿಡದ ಕೆಮ್ಮು, (iii) ಕಷ್ಟನುಂಗಣೆ, (iv) ಎಡೆಬಿಡದೆ ಅಜೀರ್ಣ, (v) ಗೊತ್ತುಗೆಟ್ಟ ಭೇದಿ ಇಲ್ಲವೇ ಮಲಗಟ್ಟು, (vi) ಬಾಯಿ, ಚರ್ಮಗಳಲ್ಲಿ ವಾಸಿಯಾಗದ ಹುಣ್ಣು, (vii) ಮೊಲೆಯಲ್ಲಿ ನೋವಿಲ್ಲದ ಗಡ್ಡೆ, (viii) ಕ್ರಮ ತಪ್ಪಿ ಆಗುವ ಮುಟ್ಟು, ಅನಿರೀಕ್ಷಿತ ರಕ್ತಸ್ರಾವ.

ಎಚ್ಚರಿಕೆ ಸಂಕೇತಗಳ ನಕಾರ (ನೆಗೆಟಿವ್) : ರೋಗಲಕ್ಷಣಗಳು ಹೆಚ್ಚಿರುವುದಕ್ಕಿಂತ ಇವು ತೋರುವುದು ಹೆಚ್ಚು ಹಾನಿಕರ. ಇದು ನೋವಿನ ಬಗ್ಗೆಯಂತೂ ಅಕ್ಷರಶಃ ನಿಜ. ರೋಗಿಗೆ ಇದು ದೈವಪ್ರಸಾದ ಎನಿಸಬಹುದು. ಆದರೆ ದುರಂತ ತಪ್ಪುವುದಿಲ್ಲ. ಏಡಿಗಂತಿಯ ಪ್ರಾರಂಭಲಕ್ಷಣ ನೋವೇ ಆಗಿದ್ದರೆ, ಎಳೆಯದರಲ್ಲೇ ಅದನ್ನು ಸುಲಭವಾಗಿ ಗುರುತಿಸಿ ಅಷ್ಟೇ ಸರಾಗವಾಗಿ ಗುಣಪಡಿಸಬಹುದು.

ಜನರಲ್ಲಿ ತಿಳಿವಳಿಕೆ : ಇಂದಿನ ಪರೀಕ್ಷಾವಿಧಾನಗಳ ಸದುಪಯೋಗಕ್ಕೆ ಮೊಟ್ಟ ಮೊದಲು ಜನರಲ್ಲಿ ಏಡಿಗಂತಿ ವಿಚಾರವಾಗಿ ತಿಳಿವು ಹೆಚ್ಚಿಸಬೇಕು. ಯಾವ ಚಿಕಿತ್ಸೆಗೂ ಜಗ್ಗದ ಸ್ಥಿತಿಯಲ್ಲಿ ಕೈಮೀರಿದ ಮೇಲೆ ರೋಗಿ ವೈದ್ಯರ ಬಳಿ ಬಂದರೆ ಯಾವ ವಿಧಾನಗಳೂ ಉಪಯೋಗವಾಗವು. ೩೫ ವಯಸ್ಸು ದಾಟಿದ ಆರೋಗ್ಯವಂತರು ಒಂದೆರಡು ಬಾರಿಯಾದರೂ ಏಡಿಗಂತಿ ಶೋಧನಾ ಶಿಬಿರಗಳಿಗೆ ಬರಬೇಕು. ಈ ಕೆಲಸ ಸೇವೆಗಳು ಸಾಮಾನ್ಯ ವೈದ್ಯ ಸಂಸ್ಥೆಗಳನ್ನವಲಂಬಿಸದೆ ಶೀಘ್ರಶೋಧನೆ, ಅದರಿಂದಾಗುವ ಸಫಲ ಚಿಕಿತ್ಸೆ ನಡೆಸುವ ರಾಷ್ಟ್ರೀಯ ಏಡಿಗಂತಿ ಸ್ವಯಂಸೇವಾ ಸಂಸ್ಥೆಗಳ ಆಶ್ರಯದಲ್ಲಿ ನಡೆಯಬೇಕು.

ಸುಧಾರಿತ ಪರೀಕ್ಷಾ ವಿಧಾನಗಳು : ಏಡಿಗಂತಿ ಶೋಧನೆ ಕಷ್ಟವಾದಾಗ ಈ ವಿಧಾನಗಳು ಗುಣಕಾರಕ ವೇಗವನ್ನು ಗಣನೀಯವಾಗಿ ಹೆಚ್ಚಿಸಬಲ್ಲವು.

ಸರಳ ಪರೀಕ್ಷೆ: ಗಂತಿ ಬರಿಗಣ್ಣಿನಿಂದ ನೋಡುವಂತಿರುವಾಗ ಅಥವಾ ಮುಟ್ಟಿದರೆ ಗೋಚರವಾಗುವಾಗ ಇದನ್ನು ಮಾಡಬೇಕು. ರೋಗಿ ಹೇಳಿಕೆಯನ್ನು ಮನವರಿಕೆ ಮಾಡಿಕೊಳ್ಳಬೇಕು.

ಎಕ್ಸ್ ಕಿರಣ ಪರೀಕ್ಷೆ : ಎಕ್ಸ್ ಕಿರಣ ಪರೀಕ್ಷೆಯಿಂದ ಏಡಿಗಂತಿಗಳನ್ನು ಗುರುತಿಸಬಹುದು. ಅನೇಕ ಬಾರಿ ಗಂತಿ ಎಕ್ಸ್‌ರೆ ಕಿರಣ ಫಲಕದ ಮೇಲೆ ಎದ್ದು ತೋರಬಹುದು, ನೆರಳು ಬೀಳಿಸಬಹುದು. ಇದನ್ನು ಸರಿಯಾಗಿ ಅರ್ಥಮಾಡಿಕೊಂಡು ಪರಿಶೀಲಿಸಬೇಕು.

ವಿಕಿರಣ ಅಪಾರದರ್ಶಕ ರಾಸಾಯನಿಕಗಳು : ಇವನ್ನು ರೋಗಿಗೆ ನುಂಗಿಸಿದರೆ, ಕೆಲವು ಗಂತಿಗಳಿಗೆ ಅಂಟಿಕೊಂಡು ಎಕ್ಸ್ ಕಿರಣ ಚಿತ್ರದಲ್ಲಿ ನೆರಳಾಗಿ ತೋರಬಹುದು. ಇವನ್ನು ಅಂಟಿಸಿಕೊಳ್ಳದ ಗಂತಿಗಳು ಅಪಾರದರ್ಶಕ ಹಿನ್ನೆಲೆಯಲ್ಲಿ ಚೆನ್ನಾಗಿ ಗೋಚರಿಸಬಹುದು. ಕೆಲವು ವಿಶೇಷ ಎಂಡೊಸ್ಕೋಪುಗಳ ನೆರವಿನಿಂದ ಉಸಿರಾಟದನಾಳ, ಜಠರ, ಮೂತ್ರ ಕೋಶ, ದೊಡ್ಡಕರುಳು ಮುಂತಾದ ಒಳಾಂಗಗಳಲ್ಲಿನ ಗಂತಿಗಳನ್ನು ಬರಿಗಣ್ಣಿನಿಂದ ನೋಡಬಹುದು.

ಜೀವುಂಡಿ (ಬಯಾಪ್ಸಿ) ತೆಗೆದುಕೊಳ್ಳುವುದು: ಶಸ್ತ್ರಕ್ರಿಯೆ ನಡೆಯುತ್ತಿದ್ದಂತೆಯೇ ಅನುಮಾನಿತ ಗಡ್ಡೆಯನ್ನು ಹೊರತೆಗೆದು ಚೂರನ್ನು (ಜೀವುಂಡಿಗೆ) ಕೂಡಲೆ ನೀರ್ಗಲ್ಲಾಗಿಸಿ ಗಡಸುಗಟ್ಟಿಸಿ, ನೀರ್ಗಲ್ಲಾಗಿಸುವ ಚಿಕ್ಕ ಕತ್ತರಿಯಿಂದ ಕತ್ತರಿಸಿ, ಸೂಕ್ಷ್ಮದರ್ಶಕದಡಿಯಲ್ಲಿ ಪರೀಕ್ಷಿಸಬೇಕು. ಈ ವಿಧಾನದಿಂದ ಗಂತಿಯ ಇರುವು, ರೋಗದ ಲಕ್ಷಣಗಳ ಬಗ್ಗೆ ತಿಳಿದು ತಕ್ಕ ಚಿಕಿತ್ಸೆಯನ್ನು ಖಚಿತವಾಗಿ ನಿರ್ಧರಿಸಬಹುದು. ಇದರಿಂದ ಮತ್ತೊಂದು ಬಾರಿ ಶಸ್ತ್ರಕ್ರಿಯೆಗೊಳಗಾಗುವ ತೊಂದರೆ ತಪ್ಪುತ್ತದೆ.

ಪದರ ಜೀವಾಣುಶಾಸ್ತ್ರ (ಎಕ್ಸ್‌ಪೋಲಿಯೇಟಿವ್ ಸೈಟಾಲಜಿ): ಸಾಮಾನ್ಯವಾಗಿ ಏಡಿಗಂತಿಯ ಜೀವಕಣಗಳು ಒಂದಕ್ಕೊಂದು ಅಂಟಿಕೊಳ್ಳುವುದು ಕಡಿಮೆ. ಬೆಳೆತದ ಮೇಲ್ಪೈ ತೊಳೆತದ ದ್ರವ್ಯದಲ್ಲಿ ಅಥವಾ ಅಂಗದ ರಸದಲ್ಲಿ ಪೊರೆಪೊರೆಯಾಗಿ ಎದ್ದುಬರುವ ಗಂತಿಕಣಗಳನ್ನು ಗುರುತಿಸುವ ವಿಧಾನವೇ ಪದರ ಜೀವಾಣುಶಾಸ್ತ್ರ.

ಎಳ್ಳಷ್ಟೂ ರೋಗಲಕ್ಷಣಗಳಿರದ ಹೆಂಗಸರ ಯೋನಿಸುರಿತದಲ್ಲಿ ಕಂಡುಬರುವ ಗಂತಿಜೀವಕಣಗಳನ್ನು ಪೆಪ್ ಲೇಪ ಶೋಧನೆ (ಪೆಪ್ ಸ್ಮಿಯರ್ ಟೆಸ್ಟ್) ಎಂಬ ಜನಪ್ರಿಯ ಪೆಪನಿಕೋಲನ ವಿಧಾನದಿಂದ ಸೂಕ್ಷ್ಮದರ್ಶಕದಡಿಯಲ್ಲಿ ಪರೀಕ್ಷಿಸಿ ಆರಂಭದಲ್ಲೇ ಗೊರಳಿನ ಏಡಿಗಂತಿಯನ್ನು ಪತ್ತೆ ಮಾಡಬಹುದು. ಈ ವಿಧಾನದ ಮೂಲಕ ಶೀಘ್ರವೇ ರೋಗವನ್ನು ಪತ್ತೆ ಹಚ್ಚುವುದು.

ಗಂತಿಕಣಗಳ ಪರೀಕ್ಷೆಯಿಂದ ಅನೇಕ ಅಂಗಗಳ ಏಡಿಗಂತಿಗಳನ್ನು ಗುರುತಿಸಬಹುದು. ದನಿನಾಳ (ಕಫ), ಫುಪ್ಪುಸ (ಉಗುಳು, ಉಸಿರ್ನಾಳದ ತೊಳೆತಗಳು), ಮೂತ್ರಪಿಂಡ, ಮೂತ್ರಕೋಶ, ಜಠರ, ಕರಳು (ಉಪ್ಪುನೀರಿನ ತೊಳೆತಗಳು), ಪಿತ್ತನಾಳ (ದೊಡ್ಡ ಕರುಳಿನ ತೊಳೆಗಳು) ಮತ್ತು ಮೊಲೆಯಿಂದ ಬರುವ ಸುರಿಕೆ, ಮಿದುಳು, ಬೆನ್ನುಹುರಿಯ ದ್ರವ (ಸೆರಿಬ್ರೊಸ್ಪೈನಲ್ ಫ್ಲೂಯಿಡ್), ಸುತ್ತಂಚಿನ (ಪೆರಿಫೆರಲ್) ರಕ್ತದಲ್ಲಿನ ಪೊರೆಯ ಚೀಲ, ಪೊಳ್ಳುಗಳಲ್ಲಿನ (ಫುಪ್ಪುಸ, ಗುಂಡಿಗೆ ಪಂಚನಾಂಗಗಳ ಸುತ್ತ ಪೊರೆ, ಕೀಲುಗಳ) ಕವಚ ದ್ರವ್ಯಗಳಲ್ಲಿ ಹಲವಾರು ಸಲ ಗಂತಿಕಣಗಳನ್ನು ಗುರುತಿಸಬಹುದು. ಇದಕ್ಕೆಲ್ಲ ರೋಗಿಯನ್ನು ವಿವಿಧ ಗಂತಿಗಳಿಗೆ ಸಿದ್ಧಗೊಳಿಸುವುದು, ಗಂತಿಕಣಗಳು ಕೆಡುವ ಮುನ್ನವೇ ಪರೀಕ್ಷಕ ಪದಾರ್ಥಗಳನ್ನು ಸೇರಿಸಿ ಅಣಿಗೊಳಿಸುವುದು, ಅತಿ ಜಾಗೃತ ಕೌಶಲದಿಂದ ಅನ್ವಯಿಕ ಪರೀಕ್ಷೆ ಮಾಡಿ ಕ್ರಿಯಾವಿಧಾನವನ್ನು ಸರಳಗೊಳಿಸಬೇಕಾಗಿದೆ.

ಜೀವವಿದ್ಯುನ್ಮಾಪಕ (ಬಯೋ ಎಲೆಕ್ಟ್ರೊಮೀಟರ್) : ಏಡಿಗಂತಿ ಮತ್ತಿತರ ರೋಗಗಳನ್ನು ಗುರುತಿಸುವ ಮಾಪಕ. ಈ ಉಪಕರಣದಿಂದ ಎಡಬಲದ ವಿದ್ಯುತ್ ವಿಭವ ವ್ಯತ್ಯಾಸಗಳನ್ನು (ಪೊಟೆನ್‌ಷಿಯಲ್ ಡಿಫರೆನ್ಸ್) ಅಳೆಯಬಹುದು. ಬೆರಳಿಗೆ ತಾಕಿರುವ ವೋಲ್ಟ್ ಮಾಪಿಯು ವಿದ್ಯುನ್ಮಂಡಲಕ್ಕೆ ಹೊಂದಿಕೊಂಡಿರುತ್ತದೆ.

ಚರ್ಮದ ವಿದ್ಯುದ್ವಾಹಕತೆ (ಕಂಡಕ್ಟಿವಿಟಿ) ಮತ್ತು ಏರುಸಿರಾಟಕ್ಕೆ (ಹೈಪರ್ ವೆಂಟಿಲೇಷನ್) ಈ ಮಾಪಕದ ಅಳತೆಗಳು, ಏಡಿಗಂತಿ ಮತ್ತಿತರ ವ್ಯಾಧಿಗಳನ್ನಷ್ಟೇ ಅಲ್ಲದೆ, ಎಲ್ಲಕ್ಕಿಂತ ಹೆಚ್ಚು ರೋಗಲಕ್ಷಣಗಳ ಸುಳಿವಿಲ್ಲದಿದ್ದರೂ ಏಡಿಗಂತಿಗಾಗುವ ಸಂಭವವನ್ನು ಗೊತ್ತಾಗಿಸುತ್ತವೆ.

ಏಡಿಗಂತಿ ರೋಗಿಗಳಲ್ಲಿ ಶೇ. ೪೦ ಮಾತ್ರ ವೆಚ್ಚದ ಪೆಪ್ ಲೇಪ ಶೋಧನೆ ಅಗತ್ಯ. ಶೇ. ೬೦ ರೋಗಿಗಳಿಗೆ ಬೇಕಿಲ್ಲವೆಂದು ಈ ಮಾಪಕದಿಂದ ಮಾರ್ಟನ್ ವಿಟ್‌ಬಿ ತೋರಿಸಿದ್ದಾನೆ. ಅಂದರೆ ಇದು ಸರ್ಕಾರಕ್ಕೆ ಪ್ರತಿ ಲಕ್ಷ ಜನರ ಪರೀಕ್ಷೆಗೆ ೨೦ ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗುತ್ತದೆ.

ನಿರೋಧಕ ಕ್ರಮಗಳು : ಏಡಿಗಂತಿಯ ಭೌಗೋಳಿಕತೆ, ಹವೆ, ಅಪಾಯಕರ ಕಸುಬುಗಳ ಸ್ಥಿತಿಗತಿಗಳು, ರೂಢಿ ಸಂಪ್ರದಾಯಗಳು, ಚಟಗಳ ಅಂಕಿಅಂಶಗಳ ಶೋಧನೆ ಏಡಿಗಂತಿ ನಿವಾರಣೆಗೆ ಮಹಾಕೊಡುಗೆಗಳು. ಪರಿಸರ ಹಾಗೂ ದೇಹದಲ್ಲಿನ ಗಂತಿಕಾರಕಗಳನ್ನು ಹೆಚ್ಚುಹೆಚ್ಚಾಗಿ ಗುರುತಿಸಿ ಮುಕ್ಕಾಲು ಭಾಗದಷ್ಟು ಗಂತಿಗಳನ್ನು ತಡೆಗಟ್ಟಲು ಸಾಧ್ಯವಾಗಿದೆ.

ಕೈಗಾರಿಕೆಯಲ್ಲಿನ ವಿವಿಧ ಹಂತಗಳಲ್ಲಿ ಅನೇಕ ವಸ್ತುಗಳಿಂದ ಗಂತಿ ಉಂಟಾಗಬಹುದು. ಅದುರಿನಲ್ಲಿನ ವಿಕಿರಣಶಕ್ತಿ, ಬಣ್ಣವಸ್ತುಗಳ ತಯಾರಿಕೆಯಲ್ಲಿ, ಕ್ರೋಮಿಯಂ ತಯಾರಿಕೆಯ ಉತ್ಪನ್ನಗಳಲ್ಲಿ, ಎಕ್ಸ್ ಕಿರಣ ಕೊಳವೆಗಳಿಂದ, ಹರಿದಳ, ಕಲ್ನಾರುಗಳಲ್ಲಿ, ಅದುರಿನ ಬಳಕೆಯ ರೂಪದ ತನಕ ಸರಿಯಾದ ನಿವಾರಣೋಪಾಯಗಳು ಏಡಿಗಂತಿಯಾಗುವುದನ್ನು ತಪ್ಪಿಸುತ್ತವೆ. ಈ ಕ್ರಮಗಳಿಂದ ವಸ್ತುಗಳ ಬಣ್ಣ, ಕಾರ್ಖಾನೆಗಳಲ್ಲಿ ಮೂತ್ರಕೋಶದ ಗಂತಿ ವಿರಳವಾಗಿದೆ. ವಿಕಿರಣದ ಎದುರು ಎಲ್ಲರೂ ರಕ್ಷಿತರಾಗಬೇಕೆಂದು ಕಾನೂನುಗಳಿವೆ. ಕಾನೂನು ಸಮ್ಮತ ಗೀಗರ್ ಮುಲ್ಲರ್ ಗುಣಕ (ಕೌಂಟರ್), ಕೊಡುಗೆಮಾಪಕ (ಡೋಸಿಮೀಟರ್), ಪಟಲ ಪದಕ (ಫಿಲ್ಮ್ ಬ್ಯಾಡ್ಜ್) ವಿಕಿರಣಮಾಪಕಗಳು ಬಳಕೆಯಲ್ಲಿವೆ. ಬಾಳಿನುದ್ದಕ್ಕೂ ಮಾನಿತ ವಿಕಿರಣತೆಯ ಪ್ರಮಾಣವನ್ನು ಕಡಿಮೆಗೊಳಿಸಬಹುದು. ಸೀಸದ ಮುಂಕವಚ (ಏಪ್ರನ್), ಕೈಗೆ ಪ್ಲಾಸ್ಟಿಕ ಕವಚಗಳು ಈ ಕೆಲಸಗಾರರನ್ನು ಕಾಪಾಡುತ್ತವೆ.

ಆರಂಭಿಕದಲ್ಲಿನ ಏಡಿಗಂತಿ ಚಿಕಿತ್ಸೆ : ಏಡಿಗಂತಿ ಆರಂಭಿಕ ಹಂತದಲ್ಲಿರುವಾಗಲೇ ಚಿಕಿತ್ಸೆ ಕೈಗೊಳ್ಳುವುದು ಒಳ್ಳೆಯದು. ಚಿಕಿತ್ಸೆ ವಿಳಂಬಕ್ಕೆ ಕಾರಣಗಳು ಹಲವು. ಅಂಜಿಕೆ ಶೇ. ೭೫, ಅಜ್ಞಾನ ಶೇ. ೨೦, ಮತ್ತು ಇತರ ಕಾರಣಗಳು ಶೇ. ೫.

ಏಡಿಗಂತಿಯ ಗುಣಕಾರಕ ವೇಗಗಳು

| ಅಂಗ | ಶೀಘ್ರ ಚಿಕಿತ್ಸೆ (%) | ವಿಳಂಬಿತ ಚಿಕಿತ್ಸೆ (%) |
|---|---|---|
| ಧ್ವನಿನಾಳ | ೭೫ | ೫ |
| ತುಟಿ | ೮೫ | ೩೫ |
| ಬಾಯಿ | ೬೦ | ೫ |
| ಚರ್ಮ | ೪೦ | ೫೦ |
| ವೃಷಣ (ಬೀಜ) | ೭೫ | ೩೫ |
| ಗರ್ಭಕಂಠ | ೭೦ | ೧೦ |
| ಮೂತ್ರಕೋಶ | ೫೦ | ೩೫ |
| ಸ್ತನ | ೭೦/೭೫ | ೧೦ |

ಏಡಿಗಂತಿಯ ಚಿಕಿತ್ಸೆ : ಏಡಿಗಂತಿ ನಿರ್ಮೂಲನಕ್ಕೆ ಶಸ್ತ್ರವೈದ್ಯ ಹಾಗು ವಿಕಿರಣ ರೋಗ ಚಿಕಿತ್ಸೆ (ರೇಡಿಯೋತೆರಫಿ) ನೆರವಾಗುತ್ತವೆ. ಇವೆರಡನ್ನೂ ಒಟ್ಟಿಗೆ ಬಳಸಬಹುದು. ಗುಣವಾದ ಗಂತಿಯ ಶಮನ ಇವೆರಡರಿಂದಲೂ ರಾಸಾಯನಿಕ ರೋಗ ಚಿಕಿತ್ಸೆಯಿಂದಲೂ (ಕೀಮೋತೆರಫಿ) ಸಾಧ್ಯ.

ಶಸ್ತ್ರವೈದ್ಯ : ತಾಂತ್ರಿಕತೆಯ ಮುನ್ನಡೆ, ಏಡಿಗಂತಿ ಬಗ್ಗೆ ಹೆಚ್ಚಿನ ತಿಳಿವಳಿಕೆ, ಅರಿವಳಿಕೆ ಇವು ಶಸ್ತ್ರವೈದ್ಯದ ಉಪಯುಕ್ತತೆಯನ್ನು ದೇಹದಲ್ಲಿ ಉಂಟಾಗುವ ಎಲ್ಲಾ ತೆರನಾದ ಗಂತಿಗಳಿಗೂ ಪಸರಿಸಿವೆ. ಗಂತಿಯನ್ನು ಬುಡಮಟ್ಟ ಕೊಯ್ದೆಗೆತ, ಮೊದಲು ರೋಗಹತ್ತಿದ ನೇರಹರಡಿಕೆ ಪಾಲ್ಗೊಳ್ಳುವ ಪಕ್ಕಪಕ್ಕದ ಹಾಗೂ ಹಾಲುರಸ ಬಸಿವ ಊತಕಗಳನ್ನೆಲ್ಲಾ ಒಟ್ಟಿಗೆ ತೆಗೆಯುವುದು ಮುಂತಾದುವು ಶಸ್ತ್ರವೈದ್ಯದ ಸೂತ್ರಗಳು.

ವಿಕಿರಣ ಚಿಕಿತ್ಸೆ : ಕೆಲವು ಗಂತಿ ಚಿಕಿತ್ಸೆಗೆ ಉತ್ತಮ. ಹರಡಿರುವ ಗಂತಿಗಳ ನಿರ್ವಹಣೆಗೆ (ಉದಾ : ಮೊಲೆಯಿಂದ ಮೂಳೆಗೆ ಹರಡಿ ಹೋದ) ಫಲಕಾರಿ. ಶಸ್ತ್ರಕ್ರಿಯೆ ಆದ ಮೇಲೆ ಶಲ್ಯಕ್ಕೆ (ಸ್ಕಾಲ್ಪೆಲ್) ಸಿಗದಿರುವ ಏಡಿಗಂತಿ ಕಣಗಳ ನಾಶಕ್ಕೆ ಫಲಪ್ರದ, ವಿಕಿರಣ ಚಿಕಿತ್ಸೆಯನ್ನು ಶಸ್ತ್ರಕ್ರಿಯೆ ಅಥವಾ ರಸಾಯನ ರೋಗ ಚಿಕಿತ್ಸೆಯೊಡನೆ ಸೇರಿಸಿದರೆ ಹೆಚ್ಚು ಫಲಕಾರಿ.

ಎಕ್ಸ್‌ರೇ ಮತ್ತು ವಿಕಿರಣ ಕಿರಣಗಳು, ವಿಕಿರಣಶೀಲ ಐಸೊಟೋಪುಗಳು [ಗುರಾಣಿಕ (ಥೈರಾಯ್ಡ್) ಗ್ರಂಥಿಯ ಗಂತಿಗೆ ವಿಕಿರಣಶೀಲ ಅಯೋಡಿನ್], ಕೋಬಾಲ್ಟ್–೬೦ ಬಳಕೆಯಲ್ಲಿವೆ. ಅತ್ಯಧಿಕ ವೋಲ್ಟ್ ಹರಿವಿನ ಕಿರಣಾವಳಿಗಳಿಂದ ಆಳದಲ್ಲಿರುವ ಗಂತಿಗಳ (ಫುಪ್ಪುಸ, ಅನ್ನನಾಳ) ಚಿಕಿತ್ಸೆಗೆ ಬಳಸಿದರೆ, ರೋಗಿ ನೋವಿಲ್ಲದ ಉಪಯುಕ್ತವಾದ ಜೀವನವನ್ನು ಸಾಗಿಸಬಹುದು.

ರಸಾಯನ ರೋಗಚಿಕಿತ್ಸೆ : ಗಂತಿಕಣಗಳ ಮೇಲೆ ಫಲಕಾರಿಯಾಗುವ ಔಷಧಿಗಳನ್ನು ಕಂಡುಹಿಡಿಯುವ ಪ್ರಯತ್ನ ನಿರಂತರ. ಮುಖ್ಯವಾಗಿ ಹರಡಿದ ಗಂತಿಗಳಲ್ಲಿ ಬಿಳಿಕಣ ರಕ್ತತೆ ಹಾಗೂ ವಿಕಿರಣತೆ ಮತ್ತು ಶಸ್ತ್ರಕ್ರಿಯೆಗಳಿಗೆ ಸಹಾಯಕವಾಗಿ ರಸಾಯನ ರೋಗ ಚಿಕಿತ್ಸೆಯನ್ನು ಬಳಸುತ್ತಾರೆ.

ಏಡಿಗಂತಿ ಮೇಲೆ ಪ್ರಭಾವಿತ ಬಳಕೆಯಲ್ಲಿರುವ ಮದ್ದುಗಳು. ೧. ವಿಕಿರಣ ಅಣಕಗಳು (ರೇಡಿಯೋಮಿಮೆಟಿಕ್ಸ್), ೨. ಜೀವವಸ್ತು ರೋಧಕಗಳು (ಆಂಟಿಮೆಟಬೊಲೈಟ್ಸ್), ೩. ಜೀವಿನಿರೋಧಕಗಳು (ಆಂಟಿಬಯೋಟಿಕ್ಸ್), ೪. ಚೋದನಿಕಗಳು, ೫. ಆಲ್ಕಲಾಯಿಡ್ಸ್.

***

**ಏಡ್ಸ್:** ವೈರಾಣುವೊಂದರ ಸೋಂಕಿನಿಂದ ಮಾನವನ ದೇಹದ ರೋಗನಿರೋಧಕ ವ್ಯವಸ್ಥೆಯು (ಇಮ್ಯೂನ್ ಸಿಸ್ಟಂ) ವಿಫಲವಾದಾಗ ಕಂಡುಬರುವ ಹಲವು ರೋಗಗಳ ಕೂಟ. ಇದೊಂದು ಮಾರಕ ರೋಗ. ಏಡ್ಸ್ ಆಂಗ್ಲ ಭಾಷೆಯಲ್ಲಿರುವ ಅಕ್ವೈರ್ಡ್ ಇಮ್ಯೂನೊ ಡಿಫಿಷಿಯೆನ್ಸಿ ಸಿಂಡ್ರೋಮ್ ಎಂಬ ಹೆಸರಿನ ಸಂಕ್ಷಿಪ್ತ ರೂಪ. ಕನ್ನಡದಲ್ಲಿ ಅರ್ಜಿತ ಕೊರೆ ರೋಗನಿರೋಧಕ ಶಕ್ತಿಯ ಲಕ್ಷಣಕೂಟ ಎಂದು ಕರೆಯಬಹುದು. ಎಚ್‌ಐವಿ (ಹ್ಯೂಮನ್ ಇಮ್ಯುನೊ ಡಿಫಿಷಿಯೆನ್ಸಿ ವೈರಸ್) ವೈರಾಣುವಿನಿಂದ ಉಂಟಾಗುತ್ತದೆ. ಎಚ್‌ಐವಿ–1 ಮತ್ತು ಎಚ್‌ಐವಿ–2 ಎಂಬ ಎರಡು ವಿಧಗಳಿವೆ. ಎಚ್‌ಐವಿ ಸೋಂಕಿನ ಕೊನೆಯ ಹಂತವೇ ಏಡ್ಸ್.

ಏಡ್ಸ್ ಅನಾದಿಕಾಲದಿಂದಲೂ ಇತ್ತೆಂಬ ನಂಬಿಕೆ. ಆದರೆ ಮೊಟ್ಟಮೊದಲ ಬಾರಿಗೆ ಬೆಳಕಿಗೆ ಬಂದದ್ದು 1979 ರಲ್ಲಿ, ಅಮೆರಿಕದಲ್ಲಿ. 1981 ರಲ್ಲಿ ಸುಮಾರು 6 ಹೊಸ ಪ್ರಕರಣಗಳು ಲಾಸ್‌ಏಂಜಲಿಸ್‌ನಲ್ಲಿ ಪತ್ತೆಯಾದವು. 1989 ರ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ)ಯ ಅಂದಾಜಿನ ಪ್ರಕಾರ ಪ್ರತಿ ನಿಮಿಷಕ್ಕೊಂದು ಹೊಸ ಏಡ್ಸ್ ಪ್ರಕರಣ ಹೊರಬರುತ್ತಿದೆ. ಏಡ್ಸ್‌ನ ಉಗಮದ ಬಗ್ಗೆ ಇನ್ನೂ ಪೂರ್ಣ ಮಾಹಿತಿಯಿಲ್ಲ. ಕೆಲವು ಸಂಶೋಧಕರ ಪ್ರಕಾರ ಆಫ್ರಿಕಾದಲ್ಲಿ ವಾಸಿಸುವ ಹಸಿರು ಕೋತಿಗಳಲ್ಲಿ ಸೋಂಕಿಗೆ ಕಾರಣವಾಗಿರುವ ಒಂದು ಬಗೆಯ ವೈರಾಣುವಿನ ತಳಿಯ ಪರಿವರ್ತಿತ (ವಿಕೃತಿ) ರೂಪವೇ (ಮ್ಯುಟೆಂಟ್) ಇದಕ್ಕೆ ಕಾರಣ. ಅಮೇರಿಕದ ಡಾ. ರಾಬರ್ಟ್ ಗ್ಯಾಲೊ ಮತ್ತು ಫ್ರಾನ್ಸ್‌ನ ಲ್ಯೂಕ್ ಮಾಂಟೆನಿಯರ್ (1984) ಸ್ವತಂತ್ರವಾಗಿ ಎಚ್‌ಐವಿ ಯನ್ನು ಕಂಡುಹಿಡಿದರು. ಗ್ಯಾಲೊ ಈ ರೋಗಾಣುವನ್ನು ಎಚ್‌ಟಿಎಲ್‌ವಿ–3 (ಹ್ಯೂಮನ್ ಟಿ–ಲಿಂಪೊಸೈಟ್–3) ಎಂದೂ ಮಾಂಟೆನಿಯರ್ ಎಲ್‌ಎವಿ (ಲಿಂಫ್ ಅಡಿನೊಪಥಿ ಅಸೋಸಿಯೇಟೆಡ್ ವೈರಸ್) ಎಂದೂ ಕರೆದರು.

ಎಚ್‌ಐವಿ ರಚನೆ : ಎಚ್‌ಐವಿಯು ಒಂದು ಎಳೆಯಿರುವ ಎರಡು ಆರ್‌ಎನ್‌ಎ ಅಣುಗಳನ್ನು ಆನುವಂಶೀಯ ವಸ್ತುವಾಗಿ ಹೊಂದಿರುವ ಗೋಲಾಕೃತಿಯ ವೈರಾಣು. ಆರ್‌ಎನ್‌ಎ ವೈರಾಣುವಾಗಿರುವುದರಿಂದ ಇದೊಂದು ರಿಟ್ರೋವೈರಸ್. ಇದರಲ್ಲಿ ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್, ಇಂಟಿಗ್ರೇಸ್ ಮತ್ತು ಪ್ರೊಟಿಯೇಸ್ ಎಂಬ ಮೂರು ಕಿಣ್ವಗಳಿವೆ.

**ಎಚ್.ಐ.ವಿ**




**1. ಆರ್‌ಎನ್‌ಎ 2. ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್**
**3. ಪ್ರೋಟೀನ್ ಕವಚ 4. ಲಿಪಿಡ್ ಪದರ**

ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಆತಿಥೇಯ ಜೀವಿಯಲ್ಲಿ ಆರ್‌ಎನ್‌ಎ ಯಿಂದ ಡಿಎನ್‌ಎ ಅನ್ನು ಸಂಶ್ಲೇಷಿಸುವುದರಲ್ಲಿ ಸಹಕರಿಸುತ್ತದೆ. ಇಂಟಿಗ್ರೇಡ್ಸ್ ಈ ಡಿಎನ್‌ಎ ಅನ್ನು ಆತಿಥೇಯ ಜೀವಿಯ ಡಿಎನ್‌ಎ ಜೊತೆ ಸೇರಿಕೊಳ್ಳಲು ಸಹಾಯಮಾಡುತ್ತದೆ. ಆತಿಥೇಯ ಜೀವಿಯ ಪ್ಲಾಸ್ಮಾಪೊರೆಯಲ್ಲಿರುವ ಪ್ರೊಟೀನನ್ನು ವಿಭಜಿಸಿ ಕೋಶವನ್ನು ಪ್ರವೇಶಿಸುವುದರಲ್ಲಿ ಸಹಕರಿಸುವ ಕಿಣ್ವ ಪ್ರೊಟಿಯೇಸ್. ಆರ್‌ಎನ್‌ಎಯ ಸುತ್ತಲೂ ಪ್ರೊಟೀನ್‌ನ ಕವಚ ಪೊರೆಯಿದೆ (ಕ್ಯಾಪ್ಸಿಡ್). ಇದು ಪಿ24, ಜಿಪಿ120 ಮತ್ತು ಜಿಪಿ 140 ಎಂಬ ಮೂರು ಬಗೆಯ ಪ್ರೊಟೀನ್‌ಗಳಿಂದಾಗಿದೆ. ಈ ಕವಚ ಪೊರೆಯು ಎರಡು ಕೊಬ್ಬಿನ ಪದರಗಳಿಂದ ಆವೃತವಾಗಿದೆ. ಈ ಪದರದ ಮೇಲ್ಮೈಯಲ್ಲಿ ಒತ್ತಾದ ಗುಬುಟು ರೀತಿಯ ರಚನೆಗಳಿರುತ್ತವೆ.

ಎಚ್‌ಐವಿ ಸೋಂಕು : ಎಚ್‌ಐವಿ ಸೋಂಕುಂಟಾಗಿರುವ ವ್ಯಕ್ತಿಯನ್ನು ಎಚ್‌ಐವಿ ಧನಾತ್ಮಕ (ಎಚ್‌ಐವಿ ಪಾಸಿಟಿವ್) ವ್ಯಕ್ತಿಯೆನ್ನುವರು. ವೈರಾಣುವು ಪ್ಲಾಸ್ಮಾಪೊರೆಯ ಸಿಡಿ4 ಅಣು ಮತ್ತು ರಾಸಾಯನಿಕ ಗ್ರಾಹಿ (ಕೀಮೊರಿಸೆಪ್ಟಾರ್) ಗಳನ್ನುಪಯೋಗಿಸಿಕೊಂಡು ಸಹಾಯಕ ಟಿ ಲಿಂಫೊಸೈಟ್ (ಹೆಲ್ಪರ್ ಟಿ ಲಿಂಫೊಸೈಟ್) ಗಳ ಮೇಲೆ ದಾಳಿ ಮಾಡುತ್ತವೆ. ಇವು ಒಂದು ಬಗೆಯ ಬಿಳಿರಕ್ತಕಣಗಳು. ದೇಹದ ರಕ್ಷಣಾ ಪಡೆ. ಪ್ರತಿರಕ್ಷಣಾ ವ್ಯವಸ್ಥೆಗೆ ಕಾರಣ. ಟಿ ಲಿಂಫೊಸೈಟ್ ಮೇಲೆ ನೇರವಾಗಿ ಆಕ್ರಮಣ ಮಾಡಿ ಅವನ್ನು ನಾಶ ಮಾಡುವ ಮೂಲಕ ಪ್ರತಿರಕ್ಷಣಾ ವ್ಯವಸ್ಥೆಗೆ ಧಕ್ಕೆಯುಂಟುಮಾಡುತ್ತದೆ. ಹಾಗಾಗಿ ಬ್ಯಾಕ್ಟೀರಿಯ, ಪ್ರೊಟೋಝೊವ, ಬೂಸ್ಟ್, ಯೀಸ್ಟ್, ವೈರಾಣುಗಳು ಮತ್ತು ಇನ್ನಿತರ ಅನೇಕ ಜೀವಾಣು ವಿಷಗಳಿಂದಾಗುವ ಸೋಂಕಿಗೆ ರೋಗಿಯು ಒಳಗಾಗುತ್ತಾನೆ. ಇವನ್ನು ಸಮಯಸಾಧಕ ಸೋಂಕುಗಳು ಎನ್ನುವರು. ಅನೇಕ ಸೋಂಕುಗಳು ಮತ್ತು ಕ್ಯಾನ್ಸರ್ ಕೂಡ ಒಟ್ಟಿಗೆ ಕಾಣಿಸಿಕೊಳ್ಳುವುದರಿಂದ ಏಡ್ಸ್‌ಅನ್ನು ರೋಗವೆನ್ನುವ ಬದಲು ರೋಗಲಕ್ಷಣ ಕೂಟ ಎನ್ನುವುದು.

ಟಿ ಲಿಂಫೊಸೈಟ್ ಅನ್ನು ಪ್ರವೇಶಿಸಿದಾಕ್ಷಣ ವೈರಸ್‌ನ ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಆಕ್ರಮಣಕಾರಿ ಆರ್‌ಎನ್‌ಎ ಯಿಂದ ಡಿಎನ್‌ಎ ಅನ್ನು ಸಂಶ್ಲೇಷಿಸುತ್ತದೆ. ಆತಿಥೇಯ ಜೀವಕೋಶ ಈ ಡಿಎನ್‌ಎ ಅನ್ನು ತನ್ನದೆಂದು ತಿಳಿದು ತನ್ನ ಕ್ರೊಮೋಸೋಮಿಗೆ ಸೇರಿಸಿಕೊಳ್ಳುತ್ತದೆ. ರೋಗಲಕ್ಷಣಗಳು ಪ್ರಕಟವಾಗುವ ಮೊದಲು ಅನೇಕ ವಾರಗಳು, ತಿಂಗಳುಗಳು ಅಥವಾ ವರ್ಷಗಳವರೆಗೆ ಸುಪ್ತಾವಸ್ಥೆಯಲ್ಲಿರುತ್ತದೆ. ಚುರುಕುಗೊಂಡಾಗ ವೈರಾಣುವಿನ ಡಿಎನ್‌ಎ ಟಿ ಲಿಂಫೊಸೈಟ್‌ಗೆ ತನ್ನ ಸ್ವಪ್ರತಿಗಳನ್ನು ತಯಾರಿಸಲು ನಿರ್ದೇಶಿಸುತ್ತದೆ. ಹೊಸ ಹೊಸ ವೈರಾಣುಗಳು ಟಿ ಲಿಂಫೊಸೈಟ್‌ಗಳನ್ನು ಭೇದಿಸಿ ರಕ್ತದಲ್ಲಿ ಬಿಡುಗಡೆಯಾಗುತ್ತವೆ. ಇವು ಇತರ ಟಿ ಲಿಂಫೊಸೈಟ್‌ಗಳ ಮೇಲೆ ದಾಳಿ ಮಾಡುತ್ತವೆ. ಕ್ರಮೇಣ ಟಿಲಿಂಫೊಸೈಟ್‌ಗಳ ಸಂಖ್ಯೆ ಕಡಿಮೆಯಾಗಿ ಪ್ರತಿಕ್ಷಣ ಪ್ರತಿಕ್ರಿಯೆ (ಇಮ್ಯೂನ್ ರೆಸ್ಪಾನ್ಸ್) ಕ್ಷೀಣಿಸುತ್ತದೆ. ಇತ್ತೀಚಿನ ಸಂಶೋಧನೆಯಂತೆ ಎಚ್‌ಐವಿಗಳು ಬೃಹದ್ಭಕ್ಷಿಗಳ (ಮ್ಯಾಕ್ರೊಫೇಜ್) ಮೇಲೂ ಆಕ್ರಮಣ ನಡೆಸುತ್ತವೆಂದು ತಿಳಿದುಬಂದಿದೆ. ಆದರೆ ಅವನ್ನು ಕೊಲ್ಲುವುದಿಲ್ಲ. ಬದಲಾಗಿ ಅವುಗಳ ಪ್ರತಿರಕ್ಷಣಾ ಕಾರ್ಯಕ್ಕೆ ಅಡ್ಡಿ ಮಾಡುತ್ತವೆ. ಮೆದುಳಿನ ಜೀವಕೋಶಗಳನ್ನು ಸಾಯಿಸುವಂತಹ ವಸ್ತುಗಳನ್ನು ಸ್ರವಿಸುವಂತೆ ಮಾಡುತ್ತದೆ.

ಎಚ್‌ಐವಿಯನ್ನು ಪತ್ತೆಹಚ್ಚುವ ವಿಧಾನಗಳು : ಎಚ್‌ಐವಿಗಳ ಪ್ರವೇಶವಾದ 6 ವಾರಗಳಿಂದ 6 ತಿಂಗಳುಗಳ ಅನಂತರ ಅವುಗಳ ವಿರುದ್ಧ ಪ್ರತಿಕಾಯ (ಆಂಟಿಬಾಡಿ)ಗಳು ಉತ್ಪತ್ತಿಯಾಗುತ್ತವೆ. ಈ ಅವಧಿಯನ್ನು ವಿಂಡೊ ಅವಧಿ ಎನ್ನುವರು. ಈ ಅವಧಿಯಾದ ಮೇಲೆ ಎಲಿಸಾ ಎನ್ಜೈಮ್ ಲಿಂಕ್ಡ್ ಇಮ್ಯುನೊ ಸಾರ್ಬೆಂಟ್ ಅಸ್ಸೆ) ಪರೀಕ್ಷೆಯನ್ನು ಬೇರೆ ಬೇರೆಯಾಗಿ ಮೂರು ಬಾರಿ ಮಾಡುವುದರಿಂದ ಎಚ್‌ಐವಿಯನ್ನು ಪತ್ತೆಹಚ್ಚಬಹುದು. ಇಲ್ಲಿ ವೈರಾಣುವಿನ ಪಿ–24, ಜಿಪಿ120 ಮತ್ತು ಜಿಪಿ140 (ಪ್ರೊಟೀನ್‌ಗಳು) ಪ್ರತಿಜನಕಗಳ ವಿರುದ್ಧ ಉತ್ಪತ್ತಿಯಾಗುವ ಪ್ರತಿಕಾಯಗಳನ್ನು ಪತ್ತೆಹಚ್ಚಲಾಗುವುದು. ಇದಲ್ಲದೆ ವೆಸ್ಟರ್ನ್ ಬ್ಲಾಟ್ ಮತ್ತು ಪಿಸಿಆರ್ (ಪಾಲಿಮರೇಸ್ ಚೇಯ್ನ್ ರಿಯಾಕ್ಷನ್) ಪರೀಕ್ಷೆಗಳಿಂದಲೂ ಎಚ್‌ಐವಿ ಸೋಂಕನ್ನು ಪತ್ತೆಹಚ್ಚಬಹುದು.

ಏಡ್ಸ್‌ನ ಲಕ್ಷಣಗಳು : ಏಡ್ಸ್‌ಗೆ ತುತ್ತಾಗಿರುವ ವ್ಯಕ್ತಿಯಲ್ಲಿ ಬಿ ಮತ್ತು ಟಿಲಿಂಫೊಸೈಟ್‌ಗಳ ಸಂವೇದನಾಶೀಲತೆ ಬಹಳವಾಗಿ ಕಡಿಮೆಯಾಗಿರುತ್ತದೆ. ಹಾಗಾಗಿ ಆ ವ್ಯಕ್ತಿಯ ದೇಹವು ಅನೇಕ ರೋಗಕಾರಕಗಳಿಗೆ ಬಲಿಯಾಗುತ್ತದೆ. ಸ್ಥಳೀಯ ಅಥವಾ ಪೂರ್ಣ ದೇಹದ ಸೋಂಕುಗಳಿಂದ ನರಳಬಹುದು. ಆದರೆ ಎಲ್ಲರಲ್ಲೂ ಕಾಣಬೇಕೆಂದಿಲ್ಲ. ಕೆಲವರಲ್ಲಿ ಕೊನೆಯವರೆಗೆ ಯಾವುದೇ ರೋಗಲಕ್ಷಣಗಳು ಕಂಡುಬರುವುದಿಲ. ನಿರಂತರವಾದ ಜ್ವರ (ಪೈರಾಕ್ಸಿಯ), ದೇಹದ ತೂಕದಲ್ಲಿ ಶೇ. 10 ರಷ್ಟು ಕಡಿಮೆಯಾಗುವುದು, ಬಾಯಿ ಮತ್ತು ಗಂಟಲುಗಳಲ್ಲಿ ಬಿಳಿಯ ಗಂಡೆಗಳಾಗುವುದು (ಮೊನಿಲಿಯಾಸಿಸ್ ಸೋಂಕು–ಶಿಲೀಂಧ್ರದಿಂದಾಗುವುದು), ಸಂಧಿವಾತ, ಬಾಯಿ ಮತ್ತು ಗಂಟಲಿನಲ್ಲಿ ಹುಣ್ಣು, ದುಗ್ಧಗೆಣ್ಣುಗಳು ಊದಿಕೊಳ್ಳುವುದು, ಒಣಕೆಮ್ಮು, ದದ್ದಿನ ಹರವು (ರ್‍ಯಾಷಸ್) ಮತ್ತು ಚರ್ಮದ ತುರಿಕೆ, ರಾತ್ರಿಯಲ್ಲಿ ಬೆವರುವುದು, ಯುವಕರಲ್ಲಿ ಹಠಾತ್ ದೃಷ್ಟಿಹೀನತೆ, ಕೆಲವರಲ್ಲಿ ದುರ್ಬಲವಲ್ಲದ

ಒಂದು ಮಾನಸಿಕ ಸ್ಥಿತಿ (ಎಆರ್‌ಸಿ–ಏಡ್ಸ್ ರಿಲೇಟೆಡ್ ಕಾಂಪ್ಲೆಕ್ಸ್) ಪ್ರತಿರಕ್ಷಣ ವ್ಯವಸ್ಥೆಯ ಕುಸಿತ ಇವು ಪ್ರಾಥಮಿಕ ಲಕ್ಷಣಗಳು. ಮುಂದೆ ಕಂಡುಬರುವ ಲಕ್ಷಣಗಳನ್ನು ದ್ವಿತೀಯಕ ಲಕ್ಷಣಗಳೆನ್ನುವರು. ಅಂತಃಸ್ರಾವಿಕ ಗ್ರಂಥಿಗಳ ಸೋಂಕು ಮತ್ತು ದ್ವಿತೀಯಕ ಸೋಂಕುಗಳು ಅವುಗಳಲ್ಲಿ ಮುಖ್ಯವಾದುವು. ಮಿದುಳ್ಪೊರೆಯುರಿತ (ಮೆನಿಂಜೈಟಿಸ್), ಲಿಂಫೋಮ, ಕೋಪೊಸಿಸ್ ಸಾರ್ಕೊಮ, ಮಾನಸಿಕ ಅಸ್ವಸ್ಥತೆ (ಡೆಮೆಂಷಿಯ), ನ್ಯುಮೋನಿಯ, ಎಲುಬಿನ ಕ್ಯಾನ್ಸರ್, ಕ್ಷಯ (ಶೇ. 50 ರಷ್ಟು ಸೋಂಕಿತ ವ್ಯಕ್ತಿಗಳ ಮರಣ ಇದರಿಂದಲೇ), ರಕ್ತನಾಳಗಳ ಕ್ಯಾನ್ಸರ್, ಸರ್ಪಸುತ್ತು, ಇತ್ಯಾದಿ ಕೆಲವು ಪ್ರಮುಖ ದ್ವಿತೀಯಕ ಸೋಂಕುಗಳು ಎಚ್‌ಐವಿ 5–9 ಅಥವಾ ಹೆಚ್ಚು ವರ್ಷಗಳ ಕಾಲ ಸುಪ್ತಾವಸ್ಥೆಯಲ್ಲಿರಬಲ್ಲದಾದರೂ ಲಕ್ಷಣಗಳು ಪ್ರಾರಂಭವಾದ ಒಂದು ವರ್ಷದೊಳಗೆ ಸಾವು ಸಂಭವಿಸಬಹುದು.

ಎಚ್‌ಐವಿ ಸೋಂಕು ಹರಡುವ ವಿಧಾನ : ಎಚ್‌ಐವಿ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ರಕ್ತದ ಮೂಲಕ ಮಾತ್ರ ಹರಡಲು ಸಾಧ್ಯ. ಹೀಗೆ ರಕ್ತದ ಮೂಲಕ ಹರಡುವುದಕ್ಕೆ ಕಾರಣಗಳೆಂದರೆ;

1. ಅಸುರಕ್ಷಿತ ಲೈಂಗಿಕ ಸಂಪರ್ಕ

2. ಮಾದಕ ವಸ್ತು ಸೇವಿಸುವವರು ಒಂದೇ ಅಧಶ್ಚರ್ಮೀಯ ಸೂಜಿಯನ್ನು ಹಂಚಿಕೊಳ್ಳುವುದು.

3. ಸೋಂಕಿತ ರಕ್ತವನ್ನು ಆರೋಗ್ಯಕರ ವ್ಯಕ್ತಿಗೆ ದಾನ ಮಾಡುವುದು

4. ಕ್ರಿಮಿಶುದ್ಧೀಕರಣವಾಗಿಲ್ಲದ ಸಿರಿಂಜುಗಳನ್ನು ಉಪಯೋಗಿಸುವುದು

5. ಸೋಂಕು ತಗುಲಿದ ವ್ಯಕ್ತಿಗೆ ಉಪಯೋಗಿಸಿದ ಕ್ಷೌರದ ಪರಿಕರಗಳನ್ನು ಇತರರ ಮೇಲೂ ಪ್ರಯೋಗ ಮಾಡುವುದು.

6. ಸೋಂಕಿತ ಗರ್ಭಿಣಿ ತಾಯಿಯಿಂದ ಜರಾಯು ಮುಖಾಂತರ ಅಥವಾ ಹೆರಿಗೆಯ ನಂತರ ಮೊಲೆಹಾಲುಣಿಸುವುದರಿಂದ ಮಗುವಿಗೆ ವೈರಾಣು ವರ್ಗವಾಗುವುದು.

ಆದರೆ ಸೋಂಕು ತಗುಲಿದ ವ್ಯಕ್ತಿಯ ಕೈಕುಲುಕುವುದಾಗಲಿ ಅಪ್ಪಿಕೊಳ್ಳುವುದಾಗಲಿ ಚುಂಬಿಸುವುದಾಗಲಿ ಅವರೊಂದಿಗೆ ಬಟ್ಟೆ ಪಾತ್ರೆಗಳನ್ನು ಹಂಚಿಕೊಳ್ಳೂವುದರಿಂದಾಗಲಿ ಸಾರ್ವಜನಿಕ ಶೌಚಾಲಯ ಮತ್ತು ಈಜುಕೊಳಗಳನ್ನು ಬಳಸುವುದರಿಂದಾಗಲಿ ಏಡ್ಸ್ ರೋಗಿಗಳ ಆರೈಕೆ ಮಾಡುವುದರಿಂದಾಗಲಿ ಸೊಳ್ಳೆಗಳಿಂದಾಗಲಿ ಎಚ್‌ಐವಿ ಸೋಂಕು ಆರೋಗ್ಯವಂತರಿಗೆ ತಗಲುತ್ತದೆ ಎನ್ನುವುದು ಬರಿಯ ತಪ್ಪು ಕಲ್ಪನೆಗಳು.

ಎಚ್‌ಐವಿ ಸೋಂಕನ್ನು ತಡೆಗಟ್ಟುವ ವಿಧಾನ :ಏಡ್ಸ್ ಮಾರಕ ರೋಗವಾದ್ದರಿಂದ ಹಾಗೂ ಶಕ್ತಿಯುತವಾದ ಔಷಧಗಳಿಲ್ಲದಿರುವುದರಿಂದ ಎಚ್‌ಐವಿ ಸೋಂಕು ತಗುಲದಂತೆ ನೋಡಿಕೊಳ್ಳುವುದು ಸೂಕ್ತ. ಸೋಂಕು ತಗುಲದಂತೆ ನೋಡಿಕೊಳ್ಳಲು ಕೆಲವು ವಿಧಾನಗಳೆಂದರೆ;

1. ವಿವಾಹಕ್ಕೆ ಮುಂಚೆ ಲೈಂಗಿಕ ಸಂಪರ್ಕಗಳ ವರ್ಜನೆ

2. ವಿವಾಹಾನಂತರ ಬಹುಸಾಂಗಾತಿಗಳೊಡನೆ ಸಂಭೋಗ ಕ್ರಿಯೆಯಲ್ಲಿ ತೊಡಗದಿರುವುದು

3. ಸಂಭೋಗದ ಸಮಯದಲ್ಲಿ ಶಿಶ್ನಕವಚ (ಕಾಂಡೊಮ್) ವನ್ನು ಉಪಯೋಗಿಸುವುದು

4. ಹಚ್ಚೆ ಹಾಕುವ, ಕಿವಿ ಮತ್ತು ಮೂಗು ಚುಚ್ಚುವ, ಶಸ್ತ್ರಕ್ರಿಯೆ, ಸೂಜಿ ಚಿಕಿತ್ಸೆ (ಆಕ್ಯುಪಂಕ್ಚರ್) ಮತ್ತು ಚುಚ್ಚುಮದ್ದಿನಲ್ಲಿ ಬಳಸುವ ಸಲಕರಣೆಗಳನ್ನು ಕ್ರಿಮಿಶುದ್ಧೀಕರಿಸುವುದು

5. ಎಚ್‌ಐವಿ ಋಣಾತ್ಮಕ (ಎಚ್‌ಐವಿ. ನೆಗೆಟಿವ್) ವ್ಯಕ್ತಿಯ ರಕ್ತವನ್ನು ಮಾತ್ರ ರಕ್ತದಾನದಲ್ಲಿ ಬಳಸುವುದು

6. ಮಾದಕ ವಸ್ತುಗಳ ಚಟವನ್ನು ಅಂಟಿಸಿಕೊಳ್ಳದಿರುವುದು.

7. ಸೋಂಕಿತ ತಾಯಿಗೆ ಹೆರಿಗೆಯ ಪ್ರಾರಂಭಿಕ ಹಂತದಲ್ಲಿ ಎಆರ್‌ಟಿ (ಆಂಟಿ ರೆಟ್ರೊ ವೈರಲ್ ಥೆರಪಿ) ಔಷಧವನ್ನೂ ನವಜಾತ ಶಿಶುವಿಗೆ ನೆವಿರಪೈನ್ ಔಷಧವನ್ನೂ ಕೊಡುವುದರಿಂದ ತಾಯಿಯಿಂದ ಮಗುವಿಗೆ ಹರಡುವ ಸೋಂಕನ್ನು ಶೇ. 30–35 ರಿಂದ ಶೇ. 2 ಕ್ಕೆ ಇಳಿಸಬಹುದು.

ಚಿಕಿತ್ಸೆ: ಪರಿಣಾಮಕಾರಿಯಾದ ಔಷಧಿಯಿಲ್ಲ. ಲಸಿಕೆಯೂ ಇಲ್ಲ. ಎಚ್‌ಐವಿ ಯಲ್ಲಿ ವಿಕೃತಿಯ ದರ (ರೇಟ್ ಆಫ್ ಮ್ಯುಟೇಶನ್) ಅತಿ ಹೆಚ್ಚು. ಕೆಲವರಲ್ಲಿ ಜೀನ್‌ನ ಕ್ರಮ 20 ವರ್ಷಗಳಲ್ಲಿ ಶೇ.30 ರಷ್ಟು ಬದಲಾವಣೆಯಾಗುವುದುಂಟು. ಹಾಗಾಗಿ ಲಸಿಕೆಯನ್ನು ತಯಾರಿಸಿದರೂ ಕೂಡ ಅದು ಹೆಚ್ಚು ಕಾಲ ಪರಿಣಾಮಕಾರಿಯಾಗಿರದು. ಎನ್–ಬ್ಯೂಟೈಲ್ ಡಿಆಕ್ಸಿನೊಫೊರಿಮೈಸಿನ್ ಮತ್ತು ಅಜಿಡೊಥೈಮಿಡಿನ್ (ಎಜಡ್‌ಟಿ) ಎಂಬ ಎರಡು ಔಷಧಗಳು ಸ್ವಲ್ಪಮಟ್ಟಿಗೆ ಪರಿಣಾಮಕಾರಿಯಾಗಿವೆ. ಇವು ಎಚ್‌ಐವಿಯಲ್ಲಿ ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್‌ನ ಕ್ರಿಯಾಚಟುವಟಿಕೆಯನ್ನು ತಡೆಗಟುತ್ತವೆ. ಈ ಚಿಕಿತ್ಸೆಗೆ ಒಳಗಾದವರಲ್ಲಿ ಟಿಲಿಂಫೊಸೈಟ್‌ಗಳ ಸಂಖ್ಯೆ ವೃದ್ಧಿಯಾಗಿ ಪ್ರತಿರಕ್ಷಣ ಸಾಮರ್ಥ್ಯ ಹೆಚ್ಚಾಗಿರುವುದು, ವೈರಾಣು ಸ್ತಂಭಕ (ವೈರೊಸ್ಟ್ಯಾಟಿಕ್) ಪರಿಣಾಮ, ತೂಕ ಹೆಚ್ಚಳ ಮತ್ತು ಆರೋಗ್ಯ ಸುಧಾರಣೆ ಆಗಿರುವುದು ಕಂಡುಬಂದಿದೆ. (ಎಸ್.ಆರ್.ಎಸ್.)

**ಏಫಿಡಿಡೆ:** ಸಂಧಿಪದಿಗಳ ವಂಶದ ಕೀಟಗಳ ವರ್ಗಕ್ಕೆ ಸೇರಿದ ಒಂದು ಕುಟುಂಬ. ಹೆಮಿಪ್ಟರ ಅಥವ ರ್‍ಹಿಂಕೋಟ ಗಣದ ಉಪಗಣ ಹೋಮಾಪ್ಟರಕ್ಕೆ ಸೇರಿದೆ. ಇದರ ಕೀಟಗಳನ್ನು ಸಸ್ಯಹೇನುಗಳು, ಕರಿಜಿಗಿಗಳು, ಹಸಿರು ಕೀಟಗಳು ಮುಂತಾಗಿ ಕರೆಯುತ್ತಾರೆ. ಜೀವಮಾನವೆಲ್ಲ ಚಿಗುರು ರೆಂಬೆ, ಎಲೆಗಳ ಮೇಲೆ, ಕೆಲವು ಬಗೆಗಳು ಮಣ್ಣಿನೊಳಗೆ ಬೇರುಗಳ ಮೇಲೆ, ಕೆಲವು ದೊಡ್ಡ ಮರಗಳ ಕೊಂಬೆಗಳ ಮೇಲೆ, ಕೆಲವು ಗಂಟುಗಳನ್ನು ಮಾಡಿ ಅದರೊಳಗೆ ಕಳೆಯುತ್ತವೆ. ಚಪ್ಪಟೆಯಾಗಿರುವ ರೆಕ್ಕೆಗಳಿಲ್ಲದ ದೇಹ, ಕಾಲಿನ ಹರಡಿನಲ್ಲಿ 2–ಖಂಡಗಳು, ಜೋಡಿ ಮೊನೆಯುಗುರು, ಉದ್ದವಾದ ಮೂತಿಯಿರುವ ಹಲವು ಕೀಲುಗಳು, ಆಗಾಗ ಕಾಣುವ ಕೂಡುಗಣ್ಣುಗಳು, ಮಯಣದ ನಾಳಗಳು (ಕಾರ್ನಿಕಲ್‌ಗಳು) ಮತ್ತು ಪಕ್ಕಗಳಲ್ಲಿ 9 ಜತೆ ಶ್ವಾಸರಂಧ್ರಗಳು ಇವುಗಳ ಕೆಲವು ಲಕ್ಷಣಗಳು. ಕಾರ್ನಿಕಲ್‌ಗಳು ಅಥವ ಮಯಣದ ನಾಳಗಳು ಇವುಗಳಲ್ಲಿನ ವಿಶಿಷ್ಟ ಅಂಗಗಳು. ಕೆಲವು ಸಸ್ಯಹೇನುಗಳಲ್ಲಿ (ಎರಿಯೊಸೋಮ) ಇವು ಬಹಳ ಹ್ರಸ್ವಗೊಂಡಿವೆ. ಇವುಗಳಿಂದ ಒಂದು ಬಗೆ ಮಯಣದ ರಸ ಸೃಜಿಸಿ, ಕೀಟಗಳನ್ನು ಅವುಗಳ ಶತ್ರುಗಳಿಂದ ರಕ್ಷಿಸುತ್ತದೆ. ಕೆಲವು ಸಸ್ಯಹೇನುಗಳ ಮೈಮೇಲೆ ಬಿಳಿ ಮಯಣದ ಪುಡಿ, ಅಥವ ಕುಚ್ಚಿನಂತಿರುವ ತಂತುಗಳಿವೆ. ಇವು ಚರ್ಮಗ್ರಂಥಿಗಳು ಸೃಜಿಸಿದ ವಸ್ತು. ಜೇನಿನಂತಹ ಸಿಹಿ ಅಂಟು (ವಿಸರ್ಜನಾ ವಸ್ತು) ವಿಶೇಷವಾಗಿ ವಿಸರ್ಜಿಸಿದಾಗ ಅದು ಒಣಗಿ ಹರಳಾಗುತ್ತದೆ. ಅದನ್ನು ಜನರು ಸಂಗ್ರಹಿಸಿ ತಿನ್ನುತ್ತಾರೆ. ಗಂಡುಗಳಿಗೂ ವಲಸೆ ಹೋಗುವ ಹೆಣ್ಣುಗಳಿಗೂ 4 ರೆಕ್ಕೆಗಳಿವೆ. ತಲೆ, ಎದೆ ಹ್ರಸ್ವ, ಹೊಟ್ಟೆ ದಪ್ಪ ಮತ್ತು ಮೃದು. ಕುಡಿ ಮೀಸೆ ಉದ್ದ, ಕೃಶ. ಅವುಗಳ ಮೇಲೆ ಜ್ಞಾನವಾಹಕ ಕುಳಿಗಳಿವೆ. ಸಾಮಾನ್ಯವಾಗಿ ಹಸಿರು, ಹಲವು ಕಪ್ಪು, ಗುಲಾಬಿ ಹಳದಿ, ಅಥವ ನೀಲಿ. ಗಾತ್ರ ಸರಾಸರಿ 2.5 ಮಿಮೀ.

ಸಸ್ಯಹೇನುಗಳಲ್ಲಿ ಒಂದೇ ವಂಶದ ಬೇರೆ ಬೇರೆ ಸಂತತಿಗಳ ವಿಚಿತ್ರ ಬೆಳೆವಣಿಗೆ ಮತ್ತು ಬಹು ರೂಪ ಗಮನಾರ್ಹ. ಸಂತಾನೋತ್ಪತ್ತಿಗೆ ಸಂಬಂಧಿಸಿದ ಘಟನೆಗಳು– 1) ಅನಿಷೇಚನ ಜನನ; 2) ಅಂಡಾಯುಜ ಮತ್ತು ಜರಾಯುಜ ಜನನ; 3) ಹೆಣ್ಣು, ಗಂಡುಗಳ ಸಂಖ್ಯೆಯಲ್ಲಿ ವತ್ಯಾಸವಿರುವ–ಗಂಡುಗಳೇ ಇಲ್ಲದೆ ಅಥವ ಕಡಿಮೆ ಇರುವ ಸಂತಾನಗಳು. ರಚನಾ ಘಟನೆಗಳು–1) ಒಂದೇ ಸಂತಾನ ಅಥವಾ ಬೇರೆ ಬೇರೆ ಸಂತಾನಗಳಲ್ಲಿ ಒಂದೇ ಲಿಂಗದ, ಒಂದಕ್ಕೊಂದು ಸಂಬಂಧವಿಲ್ಲದಂತ ಬಗೆಗಳು; 2) ಬಾಯಿ ಭಾಗಗಳು ಚೆನ್ನಾಗಿ ಬೆಳೆದಿದ್ದು ಮತ್ತು ಅವನತಿ ಹೊಂದಿರುವ ಬಗೆಗಳು; 3) ಒಂದೇ ಲಿಂಗವಾಗಿದ್ದರೂ ಬೇರೆ ಬೇರೆ ಜನನ ಗ್ರಂಥಿಗಳಿರುವ ಬಗೆಗಳು. ನಡತೆಗೆ ಸಂಬಂಧಿಸಿರುವ ಸಂಗತಿಗಳೆಂದರೆ;– 1) ಸಂಬಂಧವೇ ಇಲ್ಲದಂತ ಬೇರೆ ಆಸರೆ ಸಸ್ಯಗಳಿಗೆ ವಲಸೆ (ಆಸರೆ ಬದಲಾವಣೆ); 2) ಒಂದೇ ಬಗೆ, ಒಂದೇ ಆಸರೆ ಸಸ್ಯದ ಮೇಲೆ ಬೇರೆ ಬೇರೆ ತರಹ ಜೀವನ; (3) ಒಂದೇ ಸಂತತಿಯ ಕೀಟಗಳ ವಿವಿಧ ನಡತೆಗಳು. ವಿಷಮ ಸ್ಥಿತಿಗಳಲ್ಲಿ, ಒಂದು ಕೀಟದ ಜಿವನಚರಿತ್ರೆಯಲ್ಲಿ, ಮೇಲೆ ತಿಳಿಸಿದ ಘಟನೆಗಳೆಲ್ಲ ಸಂಭವಿಸಬಹುದು.

ಸಸ್ಯಹೇನಿನ ಸಾಮಾನ್ಯ ಜೀವ ಚರಿತ್ರೆ:– ಹೆಣ್ಣು ಕೀಟ ಶರತ್ಕಾಲದಲ್ಲಿಟ್ಟ ಮೊಟ್ಟೆಗಳು ಚಳಿಗಾಲವನ್ನು ಕಳೆದು, ವಸಂತ ಮಾಸದಲ್ಲಿ ಒಡೆದು, ರೆಕ್ಕೆಗಳಿಲ್ಲದ, ನಿಷೇಚನ ಜನನದ ಜರಾಯುಜ ಹೆಣ್ಣುಗಳಾಗುತ್ತವೆ. ಇವು ವಲಸೆ ಹೋಗುತ್ತವೆ. ಸರಿಯಾದ ಆಸರೆ ಸಸ್ಯಗಳು ಸಿಕ್ಕಿದರೆ, ಅವುಗಳ ಮೇಲೆ ನೆಲೆಸಿ, ಅವುಗಳಂತ ಸಸ್ಯಹೇನುಗಳನ್ನು ಉತ್ಪತ್ತಿ ಮಾಡುತ್ತವೆ. ಬೇಸಿಗೆ ಕಳೆದು ಶರತ್ಕಾಲದಲ್ಲಿ, ಅವು ಮತ್ತು ಮೊದಲನೆ ಸಸ್ಯದ ಮೇಲೆ ಉಳಿದಿದ್ದ ರೆಕ್ಕೆಗಳಿಲ್ಲದ ಹೇನುಗಳು ಸೇರಿ ಗಂಡು, ಹೆಣ್ಣುಗಳನ್ನು ಉತ್ಪತ್ತಿ ಮಾಡುತ್ತವೆ. ಇವು ಸಂಯೋಜಿಸಿ ಹೆಣ್ಣುಗಳು ಮೊಟ್ಟೆಗಳನ್ನಿಡುತ್ತವೆ. ಚಳಿಗಾಲ ಕಳೆದ ಅನಂತರ ಈ ಜೀವನ ಚರಿತ್ರೆ ಹಂತಗಳೆಲ್ಲ ಪುನಾರಾವೃತ್ತಿಯಾಗುತ್ತವೆ.

ವಲಸೆ ಹೋಗದ ಸಸ್ಯಹೇನುಗಳು, ತಮ್ಮ ಜೀವನ ಚರಿತ್ರೆಯನ್ನೆಲ್ಲ ಒಂದೇ ಆಸರೆ ಗಿಡದ ಮೇಲೆ ಅಥವ ಆ ಜಾತಿಯ ಇತರ ಗಿಡಗಳ ಮೇಲೆ ಕಳೆಯುತ್ತವೆ. ಕೆಲವು ವಲಸೆ ಹೋದರೂ ಅವು ಅತ್ಯಲ್ಪ. ವಲಸೆ ಹೋಗುವ ಸಸ್ಯಹೇನುಗಳಲ್ಲಿ ಮೈಜಸ್ ಪರ್ಸಿಕಿ ಮೊದಲು ಪೀಚ್ ಮೇಲಿದ್ದರೂ ಹಲವು ದ್ವಿತೀಯ ಆಸರೆಗಳ ಮೇಲಿರುತ್ತವೆ. ಏಫಿಸ್ ಫೇಬಿಸ್ಪಿಂಡಲ್ ಮರದ ಮೇಲೆ ಶರತ್ಕಾಲದಲ್ಲಿ ಕಂಡು, ಮೊಟ್ಟೆಯ ಹಂತದಲ್ಲಿ ಚಳಿಗಾಲವನ್ನು ಕಳೆದು, ಮೇ–ಜೂನ್‌ಗಳಲ್ಲಿ ಹುರುಳಿ, ಸಕ್ಕರೆ, ಬೀಟ್, ಪಾಪ್ಪೀಸ್ ಮುಂತಾದ ಸಸ್ಯಗಳಿಗೆ ಹೋಗಿ, ಅಕ್ಟೋಬರ್‌ನಲ್ಲಿ ಪುನಃ ಸ್ಪಿಂಡಲ್ ಮರಕ್ಕೇ ಬರುತ್ತವೆ. ಬಹುಶಃ ಎಲ್ಲ

ಸಸ್ಯಹೇನುಗಳು ಮೊದಲು ಅನೇಕ ತರಹ ಸಸ್ಯಗಳ ರಸವನ್ನು ಹೀರುತ್ತಿದ್ದು, ಈಗಿನ ವಲಸೆ ಆ ನಡತೆಯ ಶೇಷವಿರಬಹುದು. ಇವನ್ನು ಕೆಲವರು ಮೂರು ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ. ಅ) ವಲಸೆ ಇಲ್ಲದೆ, ಹಲವು ಬಗೆ ಸಸ್ಯಗಳ ಮೇಲಿರುವವು; ಬ) ವಲಸೆ ಇರಬಹುದು; ಎರಡು ಆಸರೆ ಸಸ್ಯಗಳ ಮೇಲಿರಬಹುದು; ಅನೇಕ ಆಸರೆಗಳಿಲ್ಲ. ಒಂದೇ ಆಸರೆ ಮೇಲೆ ತನ್ನ ಜೀವನ ಚರಿತ್ರೆಯನ್ನು ಪೂರೈಸಬಹುದು; ಆದರೆ, ಇನ್ನೊಂದರ ಮೇಲೆ ಸ್ವಲ್ಪ ಬೆಳವಣಿಗೆಯನ್ನು ಹೊಂದಬಹುದು. ಕ) ವಲಸೆ ಅಗತ್ಯ; ಆಸರೆಗಳು ಅತ್ಯಲ್ಪ.

ವಲಸೆ ಹೋಗುವ ಸಸ್ಯಹೇನುಗಳ ಜೀವನ ಚರಿತ್ರೆಯಲ್ಲಿರುವ ಬಗೆಗಳು– 1) ಫಂಡೇಟ್ರಿಸಸ್:– ರೆಕ್ಕೆಗಳಿಲ್ಲ; ಜರಾಯುಜ; ನಿಷೇಚನ ಜನನ; ಚಳಿಗಾಲ ಕಳೆದ ಮೊಟ್ಟೆಗಳಿಂದ ಬಂದವು. ಇಂದ್ರಿಯಾಂಗಗಳು, ಕಾಲುಗಳು, ಕುಡಿಮಿಸೆಗಳು ಚೆನ್ನಾಗಿ ಬೆಳೆದಿರುವುದಿಲ್ಲ. ಸಂತಾನ ಶಕ್ತಿ ಹೆಚ್ಚು. ಕಣ್ಣುಗಳು ಸಣ್ಣ. ಮಯಣದ ನಾಳಗಳಲ್ಲಿ ವತ್ಯಾಸವಿದೆ. 2) ಫಂಡೇಟ್ರಿಜೆನಿಯಿ:– ರೆಕ್ಕೆಗಳಿಲ್ಲ. ನಿಷೇಚನ ಜನನ. ಜರಾಯುಜ ಹೆಣ್ಣುಗಳು. ಫಂಡೇಟ್ರಿಸಸ್ ಸಂತತಿ. ಮೊದಲನೆ ಆಸರೆ ಸಸ್ಯದ ಮೇಲಿರುತ್ತವೆ. 3) ವಲಸೆ ಹೋಗುವವು. ಫಂಡೇಟ್ರಿಜೆನಿಯಿ 2, 3, ಮತ್ತು ಆಮೇಲಿನ ಸಂತತಿಗಳಲ್ಲಿ ಉತ್ಪತ್ತಿಯಾಗುತ್ತವೆ. ರೆಕ್ಕೆಗಳಿವೆ. ನಿಷೇಚನ ಜನನ. ಜರಾಯುಜ ಹೆಣ್ಣುಗಳು. ಮೊದಲನೆ ಆಸರೆಯಿಂದ ದ್ವಿತೀಯ ಆಸರೆಗೆ ಹೋಗುತ್ತವೆ. 4) ಅಲಿನಿಕೋಲಿ:– ಅನಿಷೇಚನ ಜನನ. ಜರಾಯುಜ ಹೆಣ್ಣುಗಳು; ಬಹುಮಟ್ಟಿಗೆ ದ್ವಿತೀಯ ಆಸರೆಯ ಮೇಲೆ ಬೆಳೆಯುತ್ತವೆ; ಅನೇಕ ಸಂತತಿಗಳಿವೆ; ಕೆಲವಕ್ಕೆ ರೆಕ್ಕೆಗಳಿರುವುದಿಲ್ಲ; ಕೆಲವಕ್ಕೆ ರೆಕ್ಕೆಗಳಿರುತ್ತವೆ. ಇವಕ್ಕೂ 1ನೆ, 2ನೆ ಬಗೆಗಳಿಗೂ ವತ್ಯಾಸವಿದೆ. 5) ಸೆಕ್ಸುಪರೀ: ಅನಿಷೇಚನ ಜನನ. ಜರಾಯುಜ ಹೆಣ್ಣುಗಳು. ದ್ವಿತೀಯ ಆಸರೆಗಳ ಮೇಲಿದ್ದು ರೆಕ್ಕೆಗಳುಳ್ಳವು. ಬೇಸಿಗೆ ಕಳೆದ ಅನಂತರ ಮೊದಲನೆ ಆಸರೆಗೆ ಹೋಗುತ್ತವೆ. 6) ಸೆಕ್ಸುವೇಲಿಸ್;– ಒಂದೇ ಸಂತತಿ. ಲೈಂಗಿಕ ಸಂತಾನೋತ್ಪತ್ತಿ ಮಾಡುವ ಗಂಡು, ಹೆಣ್ಣುಗಳಿವೆ. ಹೆಣ್ಣುಗಳು ಅಂಡಾಯುಜ. ಬಹುಮಟ್ಟಿಗೆ ಹೆಣ್ಣುಗಳಿಗೆ ರೆಕ್ಕೆಗಳಿಲ್ಲ. ಗಂಡುಗಳಿಗೆ ರೆಕ್ಕೆಗಳಿವೆ ಅಥವ ಇಲ್ಲ. ಈ ಬಗೆಗಳಲ್ಲಿ ಹಲವು ರೀತಿಯ ವತ್ಯಾಸಗಳು, ವಿನಾಯಿತಿಗಳಿರುತ್ತವೆ.

ವಲಸೆ ಹೋಗದ ಸಸ್ಯಹೇನುಗಳಲ್ಲಿ ಮೈಗ್ರಂಟ್ಸ್ ಮತ್ತು ಅಲಿನಿಕೋಲಿಗಳಿಲ್ಲ. ರೆಕ್ಕೆಗಳಿರುವ ಮತ್ತು ಇಲ್ಲದ ಜರಾಯುಜ ಹೆಣ್ಣುಗಳನ್ನೇ ಫಂಡೇಟ್ರಿಜೆನಿಯಿ ಎನ್ನಬಹುದು. ಇವುಗಳಿಂದ ಸೆಕ್ಸುಪರೀಗಳಾಗಬಹುದು.

ಕೆಲವು ಸಸ್ಯಹೇನುಗಳು ಗಂಟುಗಳನ್ನು (ಗಾಲ್ಸ್) ಮಾಡುತ್ತವೆ. ಇವುಗಳಲ್ಲಿ ಮಯಣದ ನಾಳಗಳು ಅವನತಿಯಾಗಿವೆ. ಸೆಕ್ಸುವೇಲಿಸ್ ಸಣ್ಣ. ರೆಕ್ಕೆಗಳಿಲ್ಲ. ಅಲಿನಿಕೋಲಿ ಚಪ್ಪಟೆ, ಶಲ್ಕ ಕೀಟಗಳಂತೆ. ಅಲ್ಯೂರೊಡಿಡಿಯಲ್ಲಿದ್ದಂತೆ ಶರೀರದ ಅಂಚಿನ ಸುತ್ತ ಮಯಣದ ಗ್ರಂಥಿಗಳಿವೆ. ಈ ಬಗೆಗಳನ್ನೆಲ್ಲಾ ಉತ್ತರ ಭಾರತ ಮತ್ತು ಹಿಮಾಲಯದ ತಪ್ಪಲಿನಲ್ಲಿ ಕಾಣಬಹುದು. ಅಲ್ಲಿ ಲೈಂಗಿಕ ಸಂತಾನ, ಅನಿಷೇಚನ ಜನನ ಮತ್ತು ಮೊಟ್ಟೆಗಳು ಚಳಿಗಾಲವನ್ನು ಕಳೆಯುವುದೂ ತಿಳಿದುಬಂದಿದೆ. ದಕ್ಷಿಣ ಭಾರತದಲ್ಲಿ ಇವುಗಳಿಲ್ಲ.

ಸಸ್ಯಹೇನುಗಳು ಎಲ್ಲ ಬೆಳೆಗಳ, ಅರಣ್ಯ ವೃಕ್ಷಗಳ ಪೀಡೆಗಳು. ಸಮಶೀತೋಷ್ಣವಯಲದಲ್ಲಿ ವಿಶೇಷ. ಇವು ಬಹು ಸಣ್ಣ. ಎಷ್ಟೋ ಸಲ ಕಾಣುವುದೇ ಇಲ್ಲ. ಒಂದೊಂದು ವೇಳೆ ಅಸಂಖ್ಯಾತವಾಗಿ ಹೆಚ್ಚಿ, ಸಸ್ಯಗಳ ಚಿಗುರು ರೆಂಬೆ, ಎಲೆಗಳು ಮುದುಡಿ, ಬೆಳೆವಣಿಗೆ ಕುಗ್ಗಿ, ನಷ್ಟವಾಗುತ್ತದೆ. ಸಿಹಿಅಂಟನ್ನು ವಿಶೇಷವಾಗಿ ವಿಸರ್ಜಿಸಿ, ಅದು ಎಲೆಗಳ ಮೇಲೆ ಬಿದ್ದು, ಕಪ್ಪು ಬೂಷ್ಟೆ ಬೆಳೆಯುತ್ತದೆ. ಮೇಲ್ಭಾಗದಲ್ಲೇ ಅಲ್ಲದೆ, ಮಣ್ಣಿನೊಳಗೆ ಬೇರುಗಳ ಮೇಲೂ ಇರುತ್ತವೆ. ಸಂತಾನ ಶಕ್ತಿ ಹೆಚ್ಚು. ಜೀವನ ಚರಿತ್ರೆ, ಬಹುರೂಪತೆ, ಇತ್ಯಾದಿ, ಜಟಿಲ. ನಿಂಫ್‌ಗಳು (ಅಪ್ಸರೆ ಕೀಟಗಳು) 4 ಸಲ ಪೊರೆ ಬಿಟ್ಟು, ಬೆಳೆದು ಪ್ರಾಯಕ್ಕೆ ಬರುತ್ತವೆ.

ಇವು ಸಸ್ಯಗಳ ರಸವನ್ನು ಹೀರಿ ನಷ್ಟ ಪಡಿಸುವುವಲ್ಲದೆ, ಕೆಟ್ಟ ನಂಜುರೋಗಗಳನ್ನು ಹರಡುತ್ತವೆ. ಇದರಿಂದ ಇನ್ನೂ ಹೆಚ್ಚು ನಷ್ಟ. ಪೆಂಟಲೋನಿಯ ನೈಗ್ರೊನರ್ವೋಸ ಬಾಳೆಯ ಕುಚ್ಚು ಸುಳಿ (ಬಂಚಿಟಾಪ್) ಮತ್ತು ಏಲಕ್ಕಿಯ ಕಟ್ಟೆರೋಗದಂತಹ ನಂಜುರೋಗಗಳನ್ನು ಹರಡುತ್ತದೆ.

ಏಫಿಡಿಡೆ ಕುಟುಂಬದ ಕೀಟಗಳು ಜೋಳ, ಕುಸುಮೆ, ಗುಲಾಬಿ, ಗೋದಿ, ರಾಗಿ, ಹೊಗೆಸೊಪ್ಪು, ಕಬ್ಬು, ಹತ್ತಿ, ಹಲಸು, ಅವರೆ, ಸೇಬು, ಜಂಭೀರ, ಮಾವು, ಬೊಂಬು, ಎಕ್ಕೆ, ಬಾಳೆ, ನೆಲ್ಲಿ, ದ್ವಿದಳ ಧಾನ್ಯದ ಬೆಳೆಗಳು, ತರಕಾರಿ ಗಿಡಗಳು, ಇತ್ಯಾದಿ ಎಲ್ಲಾ ಬಗೆ ಸಸ್ಯಗಳಿಗೂ ಶತ್ರುಗಳು.

ಜೋಳದ ಹೇನು–ರೊಪಾಲೊಸೈಫಂ ಮೈಡಿಸ್; ಪೈರಿನ ಸುಳಿಯಲ್ಲಿ ತುಂಬಿರುತ್ತವೆ. ರಸವನ್ನು ಹೀರಿ, ಸಿಹಿ ಅಂಟನ್ನು ವಿಸರ್ಜಿಸಿ, ಹಾನಿಕರವಾದರೂ ಹತೋಟಿಯ ಅವಶ್ಯಕತೆ ಕಂಡಿಲ್ಲ. ಸ್ವಾಭಾವಿಕ ಶತ್ರುಗಳಾದ ಗುಲಂಗಜಿ ಹುಳು, ಸುಳಿದಾಡುವ ನೊಣದ ಮರಿಗಳು, ಕ್ರೈಸೋಪಿಡ್‌ಗಳು ಅವನ್ನು ಕೊಳ್ಳೆಹೊಡೆದು ಹತೋಟಿಗೊಳಿಸುತ್ತವೆ.

ರಾಗಿ ಬೇರಿನ ಹೇನು–ಟೆಟ್ರನ್ಯೂರ ಹಿರ್ಸುಟ; ಸಣ್ಣ, ಮಾಸಲು ಬಿಳುಪು ಕೀಟ. ಬೇರುಗಳ ರಸವನ್ನು ಹೀರಿ ನಷ್ಟ ಪಡಿಸುತ್ತವೆ. ಪೈರು ಬಾಡಿ ಒಣಗುತ್ತದೆ. ಬುಡದಲ್ಲಿ ಇರುವೆಗಳು ಮುತ್ತಿರುತ್ತವೆ. ಅಂಥ ಪೈರನ್ನು ಎಳೆದು ನೋಡಿದರೆ ಬೇರುಗಳ ಮೇಲೆ ಹೇನುಗಳಿರುವುದು ಕಾಣುತ್ತದೆ. ಇವು ಬತ್ತ, ಕಬ್ಬು, ಜೋಳದ ಬೇರುಗಳ ಮೇಲೂ ಇರುತ್ತವೆ.

ಅವರೆ ಹೇನು–ಏಫಿಸ್ ಕ್ರಾಕ್ಕಿಮೋರ; ಎಳೆ ಬಳ್ಳಿಗಳ ಮೇಲೆ ಮುತ್ತಿರುತ್ತವೆ. ರಸವನ್ನು ಹೀರಿ, ಸುಳಿಗಳನ್ನು ಬಾಡಿಸುತ್ತವೆ.

ನೆಲಗಡಲೆ ಹೇನು–ಏಫಿಸ್ ಲೇಬರ್ನಿ; ಕರ್ನಾಟಕದ ಉತ್ತರ ಜಿಲ್ಲೆಗಳಲ್ಲಿ ಬಹಳ ಹಾನಿಕರ. ಮಳೆ ಇಲ್ಲದೆ ಗಿಡಗಳು ಬಾಡಿದರಂತೂ ಇವುಗಳಿಂದ ಪೂರ್ತಿ ನಷ್ಟ. ಸಾವಿರಾರು ಕಪ್ಪು ಹೇನುಗಳು ರಸವನ್ನು ಹೀರಿ ಗಿಡಗಳನ್ನು ಒಣಗಿಸುತ್ತವೆ. ಸ್ವಾಭಾವಿಕ ಶತ್ರುಗಳು ಇವನ್ನು ಬಹುಮಟ್ಟಿಗೆ ಹತೋಟಿಗೊಳಿಸುತ್ತವೆ.

ಹತ್ತಿ ಹೇನು–ಏಫಿಸ್ ಗಾಸಿಪಿಯೈ; ಹತ್ತಿ ಗಿಡದ ಎಲ್ಲಾ ಹಂತಗಳಲ್ಲೂ ಈ ಕಪ್ಪು ಮಾಸಲು ಹೇನುಗಳು ಸುಳಿ, ಎಲೆಗಳ ಕೆಳಭಾಗದಲ್ಲಿ ತುಂಬಿದ್ದು, ರಸವನ್ನು ಹೀರಿ, ಸಿಹಿ ಅಂಟನ್ನು ವಿಸರ್ಜಿಸಿ, ಗಿಡಗಳನ್ನು ಕುಗ್ಗಿಸುತ್ತವೆ. ಹಲವು ಆಸರೆ ಸಸ್ಯಗಳಿವೆ.

ಹೊಗೆಸೊಪ್ಪಿನ ಹೇನು–ಮೈಜಸ್ ಪರ್ಸಿಕಿ; ಹಸಿರು ಬಣ್ಣದ ಸ್ವಲ್ಪ ದಪ್ಪ ಹೇನು. ಹೊಗೆಸೊಪ್ಪು, ಕೋಸು, ಹೂ–ಕೋಸು, ರಾಗಿ, ಜೋಳ, ಮುಂತಾದ ಬೆಳೆಗಳಿಗೆ ಹಾನಿಕರ.

ಹತೋಟಿ: ಸಸ್ಯಹೇನುಗಳು ಬಹಳ ಬೇಗ ವೃದ್ಧಿ ಹೊಂದಿ, ಪೀಡೆಗಳಾಗುತ್ತವೆ. ಸುಮಾರು 14 ದಿನಗಳಲ್ಲಿ ಪ್ರಾಯಕ್ಕೆ ಬಂದು, ವಿಶೇಷವಾಗಿ ಸಂತಾನೋತ್ಪತ್ತಿ ಮಾಡುತ್ತವೆ. ಇಷ್ಟೊಂದು ಅಸಂಖ್ಯಾತವಾದರೂ ಪ್ರಕೃತಿಯಲ್ಲಿ ಕೆಲವು ಅಂಶಗಳಿಂದ ಇವುಗಳ ಬೆಳೆವಣಿಗೆ ಮತ್ತು ಸಂತಾನ ಶಕ್ತಿಯಲ್ಲಿ ವತ್ಯಾಸವಾಗುತ್ತದೆ. ಪ್ರತಿ ಬಗೆ ಹೇನಿಗೂ ಅತ್ಯಂತ ಹಿತವಾದ ಉಷ್ಣಾಂಶ ಬೇಕು. ಅದು ಕಡಿಮೆ ಅಥವಾ ಹೆಚ್ಚಾದರೆ ಹೇನುಗಳ ಸಂತಾನಶಕ್ತಿ ಕಡಿಮೆಯಾಗಿ ಸಂಖ್ಯೆ ಕಡಿಮೆಯಾಗುತ್ತದೆ. ಜೋರಾಗಿ ಮಳೆಗೆ ಸಿಕ್ಕರೂ ಇವುಗಳ ಸಂಖ್ಯೆ ಕಡಿಮೆಯಾಗುತ್ತದೆ. ಗಾಳಿ ಕಡಿಮೆಯಾಗಿದ್ದರೆ ಹೇನುಗಳಿಗೆ ತೊಂದರೆ ಇಲ್ಲ. ಬಲವಾಗಿ ಬೀಸಿದಾಗ ಸಸ್ಯದ ಬೇರೆ ಬುಡದ ಕಡೆಗೆ ಸಾಗಿ ರಕ್ಷಿಸಿಕೊಳ್ಳುತ್ತವೆ. ಆದರೆ ಬಹಳ ಬಲವಾದ ಗಾಳಿಯಿಂದ ಕೆಲವು ಹೇನುಗಳು ಹೊಡೆದುಕೊಂಡು ಹೋಗಿ ಕಡಿಮೆಯಾಗುತ್ತವೆ. ಸಸ್ಯಹೇನುಗಳು ಶೀತರಕ್ತದ ಪ್ರಾಣಿಗಳಾದ್ದರಿಂದ ಹವಾಮಾನದ ವ್ಯತ್ಯಾಸ ಅವುಗಳ ಮೇಲೆ ಪರಿಣಾಮಕಾರಿಯಾಗುತ್ತದೆ.

ಹೇನುಗಳನ್ನು ತಿನ್ನುವ ಹಲವು ಬಗೆ ಗುಲಗಂಜಿ ಹುಳಗಳಿವೆ. ಅಲ್ಲದೆ ಹಲವು ಬಗೆ ಪರೋಪಜೀವಿಗಳಿದ್ದು ಹೇನುಗಳೊಳಗೆ ತಮ್ಮ ವಂಶಾಭಿವೃದ್ಧಿ ಮಾಡಿಕೊಂಡು, ಹೇನುಗಳು ಬೇರೆಡೆಗೆ ಹಾರಿ ಹೋಗುವುದಿರಂದಲೂ ಸಂಖ್ಯೆ ಕಡಿಮೆಯಾಗುತ್ತದೆ.

ಹೀಗೆ ಹಲವಾರು ಕಾರಣಗಳಿಂದ ಅವುಗಳ ಸಂಖ್ಯೆ ಕಡಿಮೆಯಾದರೂ ಅವು ಸಾಕಷ್ಟಿದ್ದು, ಬೆಳೆಯನ್ನು ನಷ್ಟ ಪಡಿಸುತ್ತವೆ. ಆದ್ದರಿಂದ, ಕೀಟನಾಶಕಗಳನ್ನು ಉಪಯೋಗಿಸ ಬೇಕಾಗುತ್ತದೆ. ಸಸ್ಯಾಂತರ್ಗತ ಕೀಟನಾಶಕವನ್ನೋ ಅಥವ ಸ್ಪರ್ಶ ಕೀಟನಾಶಕವನ್ನೋ ಆಗಾಗ್ಗೆ ಸಿಂಪಡಿಸಿ ಇವನ್ನು ಹತೋಟಿಗೊಳಿಸಬೇಕು. (ಎಂ.ಪಿ.)

**ಏಸಿಪೆನ್ಸರ್:** ಆಕ್ಟಿನೋಟೆರಿಜಿ ಉಪವರ್ಗದ ಏಸಿಪೆನ್ಸಿರಿಫಾರ್ಮಿಸ್ ಗಣದ ಏಸಿಪೆನ್ಸಿರಿಡೆ ಕುಲಕ್ಕೆ ಸೇರಿದ ಅಸ್ಥಿಮೀನು. ಗಾತ್ರದಲ್ಲಿ ಬಹುದೊಡ್ಡದಾಗಿ ಬೆಳೆಯುವ ಈ ಮೀನು ಸಮುದ್ರದಲ್ಲಿ ವಾಸಿಸುತ್ತದೆ. ಆದರೆ ಸಂತಾನವೃದ್ಧಿ ಮಾಡಲು ನದಿಗೆ ವಲಸೆ ಬರುತ್ತದೆ. ದೇಹವು ಐದು ಶ್ರೇಣಿಗಳ ದೊಡ್ಡದಾದ ಅಸ್ಥಿಫಲಕಗಳಿಂದ ಸಶಸ್ತ್ರವಾಗಿದೆ. ಮೂತಿ ಮತ್ತು ಬಾಲದ ವೃಂತವು ಸ್ವಲ್ಪ ಶಂಕುವಿನಾಕಾರದಲ್ಲಿವೆ. ಬಾಲವು ವಜ್ರಾಕೃತಿಯ ಶಲ್ಕಗಳಿಂದ ಆವರಿಸಲ್ಪಟ್ಟಿದೆ. ಅಡ್ಡನಾಗಿದ್ದು, ಕೆಳಮುಖನಾಗಿರುವ ಬಾಯಿಯು ಹೊರ ಚಾಚಿಕೊಂಡಿರುವಂಥಹದ್ದು. ತುಟಿಗಳು ಚಲಿಸುವಂತಿದ್ದು ನೆರಿಗೆಯಿಂದೊಡಗೂಡಿದೆ. ಹೀರುವ ಸ್ವಭಾವದ ಭಕ್ಷಣೆಯ ಈ ಮೀನು ಬಾಯಿಯ ಅಂಚಿನಲ್ಲಿ ಹೆಚ್ಚು ಕಡಿಮೆ ಚೆನ್ನಾಗಿ ಬೆಳೆದ ಎರಡು ಜೊತೆ ದಾಡಿಯ ಸ್ಪರ್ಶಾಂಗಗಳನ್ನು ಹೊಂದಿದೆ. ಪೂರ್ಣವಾಗಿ ಬೆಳೆದ ಮೀನುಗಳಲ್ಲಿ ಹಲ್ಲುಗಳು ಕಂಡು ಬರುವುದಿಲ್ಲ. ಇದಕ್ಕೆ ಒಂದು ತೆರೆದ ಶ್ವಾಸರಂಧ್ರವಿದೆ. ಮೃದ್ವಂಗಿಗಳನ್ನು, ಕಠಿಣ ಚರ್ಮಿಗಳನ್ನು, ಸಣ್ಣ ಮೀನುಗಳನ್ನೂ ತಿನ್ನುವ ಕಾರಣ ಇದರ ಹೊಟ್ಟೆಯು ಒಂದು ಬೀಸುವ ಅಂಗದಂತೆ ಮಾರ್ಪಾಟು ಹೊಂದಿದೆ. ವಾಯುಚೀಲ ದೊಡ್ಡದು. 15 ವರ್ಷ ಅಥವ ಇನ್ನೂ ಹೆಚ್ಚಾದಾಗ, 3 ಅಥವ ಹೆಚ್ಚಿನ ಅಡಿ ಬೆಳೆದಾಗ

ಈ ಮೀನು ಲೈಂಗಿಕ ಪ್ರೌಢದೆಶೆಗೆ ಬರುತ್ತದೆ. ಶೀತಲ ಸಮಶೀತೋಷ್ಣ ಹಾಗೂ ಸಮಶೀತೋಷ್ಣವಲಯಗಳಲ್ಲಿ ಈ ಮೀನು ವಾಸಿಸುತ್ತದೆ. ***

**ಏಸಿಪೆನ್ಸರಿಡೆ:** ಆಸ್ಟಿಕ್ತಿಸ್ ವರ್ಗದಲ್ಲಿನ ಆ್ಯಕ್ಟಿನೋಟೆರಿಜಿ ಉಪವರ್ಗದ ಒಂದು ಕುಟುಂಬ. ಈ ಮೀನುಗಳು ಉತ್ತರಾರ್ಧಗೋಳದ ಸಮಶೀತೋಷ್ಣವಲಯಕ್ಕೆ ಸೀಮಿತ. ಸಿಹಿನೀರಿನಲ್ಲಿ ವಾಸಿಸುತ್ತವೆ. ಇವುಗಳ ದೇಹಾಕೃತಿ ದೊಡ್ಡದು. ಮೂರು ಮೀ. ಉದ್ದವಿರುತ್ತದೆ. ಉತ್ತರಾರ್ಧಗೋಳದ ಸಿಹಿನೀರು ಮೀನುಗಳಲ್ಲೇ ಅತ್ಯಂತ ದೊಡ್ಡವು. ಸಾಮಾನ್ಯವಾಗಿ ದೇಹ ಕೊಳವೆಯಾಕಾರದಲ್ಲಿದೆ. ದೇಹಕ್ಕೆ ಐದು ಪಂಕ್ತಿಗಳ ಮೂಳೆಯ ಗುರಾಣಿಯಂಥ ಫಲಕಗಳಿವೆ. ಮುಂಚಾಚಿರುವ ಮೂತಿಯು ಸ್ವಲ್ಪ ಚಮಚದಂತೆ ಅಥವಾ ಶೃಂಗದಂತೆ ಇದೆ. ಮೂತಿಯ ಕೆಳಮೇಲ್ಮೈನಲ್ಲಿ ಚಿಕ್ಕ ಬಾಯಿಯು ಅಡ್ಡನಾಗಿರುತ್ತದೆ. ಬಾಯಿಯು ಸಹ ಮುಂಚಾಚುವಂಥದ್ದು. ಇವಕ್ಕೆ ಹಲ್ಲುಗಳಿಲ್ಲ. ಈ ಮೀನುಗಳಿಗೆ ಮೂತಿಯ ಕೆಳಭಾಗದಲ್ಲಿ ಒಂದು ಅಡ್ಡ ಪಂಕ್ತಿಯಲ್ಲಿ ನಾಲ್ಕು ದಾಡಿಗಳಂತಿರುವ ಸ್ಪರ್ಶಾಂಗಗಳಿವೆ. ಇವು ಆಹಾರವನ್ನು ಬಾಯಿಯೊಳಕ್ಕೆ ಹೀರುತ್ತವೆ. ಕಿವಿರು ಮುಚ್ಚಳದ ಚರ್ಮದ ಪದರಗಳು ಗಂಟಲಿನ ಹತ್ತಿರ ಸೇರಿದ್ದು, ಸಂದಿಯಲ್ಲಿ ಸೇರಿಕೊಂಡಿವೆ. ಬ್ರಾಂಖಿಯೋ ಸ್ಟೀಗಲ್‌ಗಳು ಇಲ್ಲ. ಬೆನ್ನಿನ ಈಜುರೆಕ್ಕೆ ಹಾಗೂ ಗುದದ್ವಾರದ ಈಜುರೆಕ್ಕೆಗಳು ಬಾಲದ ಈಜುರೆಕ್ಕೆಗೆ ಸಮೀಪವಾಗಿರುತ್ತವೆ. ನಾಲ್ಕು ಜಲಫುಪ್ಪುಸಗಳಿವೆ. ಎರಡು ಸಹಾಯಕ ಜಲಫುಪ್ಪುಸಗಳಿವೆ. ದೊಡ್ಡ, ಸರಳ ಗಾಳಿಚೀಲವು ಅನ್ನನಾಳದ ಬೆನ್ನಿನ ಭಿತ್ತಿಗೆ ಸೇರಿದೆ. ಇವುಗಳ ಮೊಟ್ಟೆಗಳು ಚಿಕ್ಕವು ಹಾಗೂ ಅಸಂಖ್ಯಾತವಾಗಿದ್ದು, ಹೆಚ್ಚಿನ ಸಂತಾನಾಭಿವೃದ್ಧಿಗೆ ಸಹಾಯಕ. ಇವುಗಳ ಅಂಡಾಶಯದ ಮೊಟ್ಟೆಗಳಿಂದ ವ್ಯಂಜನವೊಂದನ್ನು ತಯಾರಿಸಿದರೆ, ಗಾಳಿಚೀಲದ ಒಳಗಿನ ಪದರಗಳಿಂದ ಮೀನಂಟುವಜ್ರವನ್ನು ಪಡೆಯುತ್ತಾರೆ. ಈ ಮೀನುಗಳ ಮಾಂಸ ರುಚಿಕರವಾಗಿದೆ. ಈ ಕುಟುಂಬದಲ್ಲಿ ಎರಡು ಜಾತಿಯ ಪ್ರಭೇದಗಳನ್ನು ಗುರುತಿಸಲಾಗಿದೆ. ***

**ಏಸೀಲ:** ಪ್ಲಾಟಿಹೆಲ್ಮಂಥಿಸ್ ವಂಶದ ಟರ್ಬುಲೇರಿಯ ವರ್ಗಕ್ಕೆ ಸೇರಿದ ಒಂದು ಗಣ. ಈ ಗಣಕ್ಕೆ ಸೇರಿದ ಪ್ರಾಣಿಗಳು ಬಹು ಚಿಕ್ಕವು ಮತ್ತು ಸಮುದ್ರ ಜೀವಿಗಳು. ಇವುಗಳಲ್ಲಿ ಜೀರ್ಣಾಂಗ ಕೇವಲ ಬಾಯಿ ಮತ್ತು ಅನ್ನನಾಳವನ್ನು ಮಾತ್ರ ಹೊಂದಿದೆ. ಕರುಳು ಮತ್ತು ಆಸನದ್ವಾರ ಇಲ್ಲ. ವಿಸರ್ಜನಾಂಗಗಳು ಇಲ್ಲ. ಕಣ್ಣು ಸಾಧಾರಣವಾಗಿ ಇಲ್ಲ. ಸ್ಟಾಟೊಸಿಸ್ಟ್ ಇದೆ. ನಡುಪದರ ಮತ್ತು ಒಳಪದರಗಳು ನಿರ್ದಿಷ್ಟವಾಗಿರದೆ ಬೆರತಂತೆ. ಇವುಗಳಲ್ಲಿ ದೇಹಾಂತರಾವಕಾಶ ಇಲ್ಲ. ಆದ್ದರಿಂದಲೇ ಇವುಗಳನ್ನು ಏಸೀಲ (ದೇಹಾಂತರಾವಕಾಶ ರಹಿತ) ಜೀವಿಗಳೆನ್ನುವರು.

ನರವ್ಯೂಹ, ಉತ್ಪತ್ತಿ ಅಂಗಗಳು, ಜೀರ್ಣಾಂಗ, ದೇಹದಲ್ಲಿ ಇರುವ ಪ್ಯಾರಂಕೈಮದಂತಹ ಕಣಬಲೆಯಲ್ಲಿ ಕಲಸಿದಂತಾಗಿರುತ್ತವೆ. ಉತ್ಪತ್ತಿ ಅಂಗಳಿಗೆ ಸಂಬಂಧಿಸಿದ ನಾಳಗಳಿರುವುದಿಲ್ಲ. ಆದರೂ ಗಂಡಿನಲ್ಲಿ ಶಿಶ್ನವಿರುವುದು. ದೇಹದ ಮುಂಭಾಗದಲ್ಲಿನ ರಚನೆ ನಿಖರವಾಗಿದ್ದು ಇದು ಗ್ರಂಥಿಯಾಗಿ ಮತ್ತು ಸಂಯೋಗ ಕ್ರಿಯಾಂಗವಾಗಿ ಕಾರ್ಯವೆಸಗುವುದು. ಆದ್ದರಿಂದ ಇದನ್ನು ಫ್ರಾಂಟಲ್ ಆರ್ಗನ್ ಎಂದು ಕರೆಯುತ್ತಾರೆ

ಈ ಗಣದ ಚಪ್ಪಟೆಹುಳುಗಳು ಸಮುದ್ರವಾಸಿಗಳು ಮತ್ತು ಕೀಟಾಹಾರಿಗಳು. ಕೆಲವು ಜಾತಿಯವು ಪತ್ರ ಹರಿತ್ತು ಇರುವ ಸಸ್ಯಕೋಶಗಳನ್ನೇ ಹೊಂದಿರುವುವು. ಇಂತಹ ಕೋಶಗಳು ಹಸಿರು ಪಾಚಿಗಳಿರಬಹುದೆಂಬುದು ಒಂದು ವಾದ. ಈ ಬಗೆಯವು ಆಶ್ರಯ ಜೀವನವನ್ನು ಎಸಗುತ್ತವೆ.

ಈ ಗಣವನ್ನು ಪ್ರೊಪೋರಿಡೆ ಮತ್ತು ಅಫ್ಯಾನೊಸ್ಟೋಮಿಡೆ ಎಂದು ಎರಡು ಕುಟುಂಬಗಳಾಗಿ ವಿಂಗಡಿಸಿದೆ. ಮೊದಲನೆಯ ಪಂಗಡಕ್ಕೆ ಪ್ರೊಪೊರಸ್, ಮನೋಪೊರಸ್, ಮತ್ತು ಹ್ಯಾಪ್ಲೊಡಿಸ್ಕಸ್ ಸೇರಿವೆ. ಎರಡನೇ ಪಂಗಡಕ್ಕೆ ಅಫ್ಯಾನೊಸ್ಟೆಮಿಯಾ, ನಾಡಿನಾ, ಸ್ಪೆರ್ಟೋಮಾರ್ಫಾ, ಕನ್ವಲ್ಯೂಟ, ಪಾಲಿಚೋಯಿರಸ್ ಮುಂತಾದವು ಸೇರಿವೆ. (ಜಿ.ಎಂ.ಬಿ)

**ಏಸೀಲೊಮೇಟ:** ಶರೀರದಲ್ಲಿ ಸೀಲೊಮ್ ಎಂಬ ದೇಹಾವಕಾಶವನ್ನು ಪಡೆಯದ ಕೆಳದರ್ಜೆಯ ಪ್ರಾಣಿಗಳ ಗುಂಪು. ಸರಳ ಮುಪ್ಪದರ ಪ್ರಾಣಿಗಳಲ್ಲಿ ಮಧ್ಯದರ್ಮವು ಸ್ನಾಯು, ಜನನಾಂಗಗಳು ಮತ್ತು ಪ್ಯಾರೆಂಖೈಮ ಎಂಬ ವಿಚಿತ್ರ ಜೀವಕೋಶಗಳ ಗುಂಪಾಗುವುದು. ಈ ಪ್ಯಾರೆಂಖೈಮ ಎಲ್ಲ ಅಂಗಗಳ ಸುತ್ತ ದಪ್ಪನೆ ಹೊದಿಕೆ ಆಗುವುದಲ್ಲದೆ ಇದರ ಮೂಲಕ ಕವಲೊಡೆದ ಅನ್ನನಾಳದಿಂದ ಎಲ್ಲ ಭಾಗಗಳಿಗೆ ಪೋಷಕಾಂಶಗಳನ್ನು ಒದಗಿಸುವುದು. ವಿಸರ್ಜನಾಂಗಗಳಿಗೆ ಮತ್ತು ಉಸಿರಾಟದ ಅಂಗಗಳಿಗೆ ಕ್ರಮವಾಗಿ ತ್ಯಾಜ್ಯ, ಉಸಿರಾಟದ ಅಂಶಗಳು ಸಾಗಣೆಯಾಗುವುದೂ ಇದರ ಮೂಲಕವೇ. ಆದರೆ ಇಂತಹ ದೇಹಾವಕಾಶವಿಲ್ಲದ ಬಹುಪಾಲು ಸರಳ ಮುಪ್ಪದರ ಪ್ರಾಣಿಗಳ ಗುಂಪನ್ನು ಏಸೀಲೊಮೇಟ ಎನ್ನುವರು. ಚಪ್ಪಟೆಹುಳುಗಳು, ರಿಬ್ಬನ್‌ಹುಳುಗಳು ಉದಾಹರಣೆಗಳು.

ಏಸೀಲೋಮೇಟಾಗಳಲ್ಲಿ ಮೀಸೋಗ್ಲಿಯ ಬದಲು (ಸೀಲೆಂಟೆರೇಟಾಗಳಲ್ಲಿ ಹೊರ–ಒಳದರ್ಮಗಳ ನಡುವೆಯಿರುವ ಲೋಳೆಯಂತಹ ದ್ರವ) ಮಧ್ಯದರ್ಮ ಸ್ಪಂಜಿನಂಥ ಜೀವಕೋಶಗಳಿಂದ ಅಥವಾ ಕೆಲವು ಅಲೆಮಾರಿ ಜೀವಕೋಶ ದ್ರವವೊಂದರಲ್ಲಿ ತೇಲುವಂತೆ ರಚಿತವಾಗಿದೆ. ಯಾವ ಏಸೀಲೊಮೇಟದಲ್ಲೂ ನಿರ್ದಿಷ್ಟ ಅವಕಾಶ ಗೊತ್ತಾದ ಅಂಗಾಂಶ ಪರೆಯಿಂದ ಆವೃತವಾಗಿಲ್ಲ. ಆಹಾರ ಸ್ವೀಕರಿಸಲೂ ಮತ್ತು ವಿಸರ್ಜಿಸಲೂ ಬಾಯೆಂಬ ಒಂದೇ ರಂಧ್ರವಿರುವುದರಿಂದ ಆಹಾರ ಪ್ರವಾಹದಂತೆ ಮುನ್ನುಗ್ಗಲಾರದು. ಇದರಿಂದ ಒಳಗೆ ಆಹಾರ ಇರುವಂತೆಯೇ ಹೊರಗಿನಿಂದ ಆಹಾರ ಸ್ವೀಕರಿಸಲು ಅನುವಾಗುವ ಕವಲೊಡೆದ ಅನ್ನನಾಳವಿದೆ.

ಪ್ರಾಣಿ ವಿಕಾಸವೃಕ್ಷದಲ್ಲಿ ತುದಿಮೊಗ್ಗುಗಳಾಗಿವೆಯಲ್ಲದೆ ನೇರವಾಗಿ ಸೀಲೊಮೇಟಗಳ ಪೂರ್ವಜರು ಎನ್ನುವುದಕ್ಕೆ ಪುರಾವೆಗಳಿಲ್ಲ. ಏಸೀಲೊಮೇಟಗಳ ಗುಂಪಿನಲ್ಲಿ ವಿಭಿನ್ನರಚನೆಯ ವಿರುದ್ಧ ಧ್ರುವಗಳನ್ನು ಪ್ರತಿಬಿಂಬಿಸಲು ಕೇವಲ ಎರಡೇ ಎರಡು ವಂಶಗಳು ಜಯಶೀಲವಾಗಿರುವುದನ್ನು ಗಮನಿಸಬಹುದು. ಒಂದು ದಿಕ್ಕಿನಲ್ಲಿ ಸೀಲೆಂಟರೇಟಗಳಂತೆ ಕ್ಯುಟಿಕಲ್ ಇಲ್ಲದ, ಚೀಲದಂತಹ ಅನ್ನನಾಳವುಳ್ಳ (ಚಪ್ಪಟೆಹುಳುಗಳು) ವಂಶ: ಪ್ಲಾಟಿಹೆಲ್ಮಿಂತಸ್. ಲಾಡಿಹುಳು, ಕಾರಲು ಹುಳು, ಪ್ಲನೇರಿಯಗಳಂತಹ ಪ್ರಾಣಿಗಳ ಈ ವಂಶದಲ್ಲಿ ಚೀಲದೊಳಗೆ ಚೀಲವುಳ್ಳ ರಚನಾವಿನ್ಯಾಸವಿದೆ. ಕವಲೊಡೆದ ಅನ್ನನಾಳ, ಕುಡಿಕೋಶಗಳಲ್ಲಿ ವಿಸರ್ಜನಾ ಮಂಡಲ, ಜೋಡಿ ನರಮುಡಿಗಳ ನರಮಂಡಲ ಪ್ರಮುಖ ಲಕ್ಷಣಗಳು. ಮತ್ತೊಂದು ಧ್ರುವದಲ್ಲಿ ಆಳವಿಲ್ಲದ ಸಾಗರವಾಸಿಗಳಾದ ನೆಮರ್ಟಿಯ, ರಿಂಖೋಸೀಲಾಗಳ ವಂಶ. ಬೂಟ್‌ಲೇಸ್ ಹುಳುಗಳೆಂದು ಪ್ರಸಿದ್ಧವಾದ ಇವುಗಳು ಆಕರ್ಷಕ ಬಣ್ಣಗಳಿಂದ ಕೂಡಿವೆ. ಉದಾ: ಕಾರಿನೆಲ್ಲಾ, ಲೈನಿಯಸ್ (ಟಿ.ವಿ.ಎಚ್)

# ಐ

**ಐಡರ್ ಬಾತು:** ಸೊಮಟೇರಿಯ ಜಾತಿಗೆ ಸೇರಿದ ಕಡಲಬಾತು. ಇವುಗಳಲ್ಲಿ ಹಲವು ಬಗೆಯ ಪ್ರಭೇದಗಳಿದ್ದರೂ ಅಮೆರಿಕದ ಐಡರ್ (ಸೊಮಟೇರಿಯ ಡ್ರೆಸ್ಸೇರಿ) ಮತ್ತು ಯೂರೋಪಿನ ಐಡರ್ (ಸೊಮಟೇರಿಯ ಮೊಲ್ಲಿಸ್ಸಿಮ) ಪ್ರಭೇದಗಳು ಪ್ರಸಿದ್ಧವಾದುವು. ಇವು ಲ್ಯಾಬ್ರಡಾರ್, ನ್ಯೂಫೌಂಡ್‌ಲೆಂಡ್, ಗ್ರೀನ್‌ಲೆಂಡ್, ಐಸ್ಲೆಂಡ್ ಮತ್ತು ನಾರ್ವೆಗಳ ಕಡಲ ತೀರದಲ್ಲಿ ವಾಸಿಸುತ್ತವೆ. ಇವುಗಳ ತಲೆ ದಪ್ಪ; ಕೊಕ್ಕು ೮ ಸೆಂಮೀ ಉದ್ದವಿದ್ದು, ಮುಂದಲೆಯಿಂದ ಹೊರಟ ಪುಕ್ಕ ಮೂಗಿನ ಹೊಳ್ಳೆಯವರೆಗೂ ಚಾಚಿರುವುದರಿಂದ ಹಳದಿ ಬಣ್ಣದ ಕೊಕ್ಕು ಪುಕ್ಕಮಯವಾಗಿರುವಂತೆ ಕಾಣುತ್ತದೆ. ಗಂಡು ಬಾತಿನ ಮುಂದಲೆಯ ತಳಭಾಗದಲ್ಲಿ ಚಿಕ್ಕ ಕಪ್ಪು ಪುಕ್ಕಗಳಿವೆ. ತಲೆ ಮತ್ತು ಬೆನ್ನಿನ ಭಾಗವೆಲ್ಲ ಬಿಳುಪು ಪುಕ್ಕಗಳಿಂದ ಆವೃತವಾಗಿದೆ. ಹೆಣ್ಣು ರೆಕ್ಕೆಯನ್ನು ಅಗಲಿಸಿದರೆ ಕೆಂಪು ಚುಕ್ಕೆಗಳಿಂದ ಕೂಡಿದ ಎರಡು ಕಪ್ಪು ಪಟ್ಟೆಗಳನ್ನು ಕಾಣಬಹುದು. ಈ ಹಕ್ಕಿಗಳು ಏಡಿ ಮತ್ತು ಕಪ್ಪೆ ಚಿಪ್ಪು ಹುಳುಗಳನ್ನು ತಿಂದು ಜೀರ್ಣಿಸಿಕೊಳ್ಳುತ್ತವೆ. ಚೆನ್ನಾಗಿ ಈಜುತ್ತವೆ. ಒಂದು ಮೀಟರ್ ಆಳದವರೆಗೂ ನೀರಿನಲ್ಲಿ ಮುಳುಗುತ್ತವೆ. ಸಂತಾನೋತ್ಪತ್ತಿ ಕಾಲದಲ್ಲಿ ಹೆಣ್ಣು ಬಾತು ಸಮುದ್ರ ದಡದ ಮೇಲೆ ಬೆಳೆದಿರುವ ಜೊಂಡುಹುಲ್ಲನ್ನು ಬಳಸಿ ಗೂಡನ್ನು ಮಾಡುತ್ತದೆ. ತನ್ನ ಪುಕ್ಕವನ್ನು ಹಾಸಿ ಮೃದುವಾಗಿ ಮಾಡಿ ಮೊಟ್ಟೆಗಳನ್ನಿಡುತ್ತದೆ. ಒಂದೊಂದು

ಗೂಡಿನಲ್ಲಿ ಐದು ಮೊಟ್ಟೆಗಳನ್ನಿಡುತ್ತದೆ. ಗೂಡಿನಿಂದ ಹೊರಗೆ ಬರುವಾಗ ಹೆಣ್ಣು ಬಾತು ತನ್ನ ಎದೆಯಭಾಗದ ಪುಕ್ಕಗಳನ್ನು ಮೊಟ್ಟೆಗಳ ಮೇಲೆ ಉದುರಿಸಿ ಹೊದಿಕೆ ಮಾಡುತ್ತದೆ.

ಪುಕ್ಕಗಳ ಬಳಕೆ: ಹೆಣ್ಣು ಐಡರ್ ಬಾತಿನ ಪುಕ್ಕಗಳು ಗಂಡಿನದಕ್ಕಿಂತ ಮೃದು, ಹಗುರ ಮತ್ತು ಸ್ಥಿತಿಸ್ಥಾಪಕ ಶಕ್ತಿಯುಳ್ಳದ್ದು. ಹೆಚ್ಚು ಶಾಖ ಕೊಡುವ ಈ ಪುಕ್ಕಗಳಿಂದ ಬೆಲೆಬಾಳುವ ಹಾಸಿಗೆ ಮತ್ತು ಹೊದಿಕೆಗಳನ್ನು ತಯಾರಿಸುತ್ತಾರೆ. ಗಂಡಿನ ಪುಕ್ಕಗಳಿಂದ ಮಾಡಿದ ಹಾಸಿಗೆಗಳಿಗೆ ಬೆಲೆ ಕಡಿಮೆ. ಹೆಚ್ಚು ಮೊಟ್ಟೆಗಳನಿಡುತ್ತವಾದರೂ ಜನಶೋಷಣೆಯಿಂದಾಗಿ ಈ ಜಾತಿಯ ಸಂತಾನ ಕ್ರಮೇಣ ಕ್ಷೀಣಿಸುತ್ತಿದೆ. ಈಚೆಗೆ ಕಾನೂನಿನ ರಕ್ಷಣೆ ನೀಡಿ ಈ ಜಾತಿಯನ್ನು ಸಂರಕ್ಷಿಸುವತ್ತ ಗಮನ ಹರಿಸಲಾಗಿದೆ. ***

**ಐಬಿಸ್:** ಕ್ರೌಂಚ (ಹೆರಾನ್) ಮತ್ತು ಕೊಕ್ಕರೆಯ (ಸ್ಟಾರ್ಕ್) ಕುಟುಂಬಕ್ಕೆ ಸೇರಿದ ನೀರು ಹಕ್ಕಿ. ಐಬಿಸ್ ವೈಜ್ಞಾನಿಕ ನಾಮ. ವಿವಿಧ ಪ್ರಭೇದದ ಐಬಿಸ್‌ಗಳು ಪ್ರಪಂಚದ ನಾನಾ ಭಾಗಗಳಲ್ಲಿ ಹರಡಿವೆ. ಭಾರತದ ಹಲವೆಡೆಗಳಲ್ಲಿ, ಕರ್ನಾಟಕದ ಅನೇಕ ಭಾಗಗಳಲ್ಲಿ ಬಿಳಿ ಮತ್ತು ಕಪ್ಪು ಬಣ್ಣದ ಪ್ರಭೇದಗಳಿವೆ. ಐಬಿಸ್ ಹಕ್ಕಿ ಗಾತ್ರದಲ್ಲಿ ದೊಡ್ಡದು. ಕೊಕ್ಕು ಉದ್ದವಾಗಿದ್ದು, ಪಿಕಾಸಿಯ ಅಲಗಿನಂತೆ ಮುಂದಕ್ಕೆ ಬಾಗಿರುತ್ತದೆ. ಕೆಲವು ಪ್ರಭೇದದ ಹಕ್ಕಿಗಳಿಗೆ ತಲೆಯ ಮೇಲೆ ಪುಕ್ಕಗುಚ್ಛವಿದೆ. ಬಿಳಿ ಮತ್ತು ಕಪ್ಪು ಐಬಿಸ್‌ಗಳಿಗೆ ಬಣ್ಣದಲ್ಲಿ ಮಾತ್ರ ವ್ಯತ್ಯಾಸವಿದೆ. ಅಮೆರಿಕದ ಉಷ್ಣವಲಯ ಪ್ರದೇಶಗಳಲ್ಲಿ ಕೆಂಪು ಐಬಿಸ್ ಇದೆ. ಕೆಂಪು ರೆಕ್ಕೆ–ಪುಕ್ಕಗಳಿಗಾಗಿ ಈ ಹಕ್ಕಿಯನ್ನು ಬೇಟೆಯಾಡಿ ಕೊಲ್ಲಲಾಗುತ್ತಿತ್ತು. ಈ ಪ್ರಭೇದ ವಿನಾಶದ ಅಂಚಿನಲ್ಲಿದೆ. ಈಗ ಕಾನೂನಿನ ಕ್ರಮ ತೆಗೆದುಕೊಂಡು ಸಂರಕ್ಷಣೆ ಮಾಡಲಾಗುತ್ತಿದೆ.

ಕಪ್ಪುತಲೆಯ ಐಬಿಸ್

ಐಬಿಸ್ ಹಕ್ಕಿಯ ಜೀವನ ಕ್ರಮವೆಲ್ಲ ಕ್ರೌಂಚ ಮತ್ತು ಬಕಗಳಂತೆಯೆ. ಇದು ಗುಂಪಿನಲ್ಲಿ ವಾಸಿಸುತ್ತದೆ. ಕೆಲವೇಳೆ ಒಂದು ಗುಂಪಿನಲ್ಲಿ ಸಾವಿರ ಹಕ್ಕಿಗಳಿರುವುದು ಉಂಟು. ನೀರಿನಲ್ಲಿರುವ ಮೀನು, ಏಡಿ, ಕಪ್ಪೆಗಳನ್ನು ಹಿಡಿದು ತಿನ್ನುತ್ತದೆ. ದೊಡ್ಡ ಮರದ ಕೊಂಬೆಗಳಲ್ಲಿ ಕಡ್ಡಿಗಳಿಂದ ಗೂಡು ಕಟ್ಟಿಕೊಂಡು ವಾಸಿಸುತ್ತದೆ. ಒಂದು ಬಾರಿಗೆ ಎರಡರಿಂದ ನಾಲ್ಕು ಮೊಟ್ಟೆ ಇಡುತ್ತದೆ. ಮೊಟ್ಟೆಗಳು ಮರಿಯಾಗುವವರೆಗೂ ರಕ್ಷಣೆ ನೀಡಿ, ಮರಿಗಳು ಬೆಳೆದ ನಂತರ ಗೂಡಿನಿಂದ ಹೊರಗೆ ಹಾಕುತ್ತದೆ. ಮರಿ ಐಬಿಸ್‌ಗಳು ಬೆಳೆದು ತಾಯಿ ಜೊತೆ ವಾಸಿಸುತ್ತವೆ. (ಈ ಹಕ್ಕಿ ಓಸಿರಿಸ್ ದೇವತೆಯ ದೂತವಾಗಿದ್ದು, ಮಾನವರು ಮಾಡುವ ತಪ್ಪುಗಳನ್ನೆಲ್ಲ ಲೆಕ್ಕಮಾಡಿ ವರದಿ ಒಪ್ಪಿಸುತ್ತದೆಂದು ಈಜಿಪ್ಟಿನವರು ನಂಬಿದ್ದರು.)

(ಜೆ.ಎಂ.ಬಿ)

**ಐಬೆಕ್ಸ್:** ಆರ್ಟಿಯೊಡ್ಯಾಕ್ಟೈಲ ಗಣದ ಕ್ಯಾಪ್ರ ಜಾತಿಯ ಸ್ತನಿ. ದಕ್ಷಿಣ ಯೂರೋಪ್, ಮಧ್ಯ ಏಷ್ಯ ದೇಶಗಳಲ್ಲಿ ಇದರ ವಾಸ. ಸ್ಥೂಲ ಮತ್ತು ದೃಢವಾದ ಮೈಕಟ್ಟುಳ್ಳ ದೇಹದ ಕಾಡು ಮೇಕೆಯಂತಿರುವ ಪ್ರಾಣಿ. ಪರ್ವತ ಪ್ರದೇಶಗಳಲ್ಲೇ ಇದರ ವಾಸ. ಪುರಾತನ ಕಾಲದಲ್ಲಿ ಜರ್ಮನಿ ಮತ್ತು ಸ್ವಿಟ್ಜರ್‌ಲೆಂಡ್ ದೇಶಗಳ ಪರ್ವತ ಶ್ರೇಣಿಗಳಲ್ಲಿ ವಾಸಿಸುತ್ತಿದ್ದ ಬಗ್ಗೆ ಪುರಾವೆಗಳಿವೆ.

ಐಬೆಕ್ಸ್ ನೋಡುವುದಕ್ಕೆ ಸುಂದರವಾದ ಪ್ರಾಣಿ. ಇದರ ಎತ್ತರ ಒಂದು ಮೀ. ಉದ್ದ ಸು. ೧.೩ ಮೀ. ಕೊಂಬು ಬಾಗಿದ್ದು ಉದ್ದಕ್ಕೂ ಗಚ್ಚುಗಚ್ಚಾಗಿ, ಗರಗಸದಂತಿದೆ. ಹೆಣ್ಣುಗಳ ಕೊಂಬು ನೇರವಾಗಿವೆ. ಗಂಡುಗಳಿಗೆ ಗಡ್ಡವುಂಟು. ಅವುಗಳ ಮೈತುಂಬ ಒರಟಾದ ಬಿರುಸು ಕೂದಲುಗಳಿವೆ. ಬೇಸಗೆಯಲ್ಲಿ ಕೂದಲು ಸಣ್ಣಗಿದ್ದು ಬೂದುಬಣ್ಣಕ್ಕಿರುತ್ತವೆ. ಶೀತಕಾಲದಲ್ಲಿ ಉದ್ದವಾದ ಹಳದಿ–ಕೆಂಪು ಬಣ್ಣದ ಕೂದಲು ಈ ಸಣ್ಣ ತೆಳುಕೂದಲನ್ನು ಮುಚ್ಚಿಕೊಳ್ಳುತ್ತದೆ.

ಐಬೆಕ್ಸ್

ಏಷ್ಯದ ಐಬೆಕ್ಸ್‌ನ ಕೊಂಬುಗಳು ಮತ್ತು ಮೈಬಣ್ಣ ಮಿಕ್ಕ ಪ್ರದೇಶಗಳವುಕ್ಕಿಂತ ಭಿನ್ನವಾಗಿವೆ. ಬೇಸಗೆಯಲ್ಲಿ ಅವು ಝರಿಗಳ ಕಡಿದಾದ ಇಳಿಜಾರುಗಳಲ್ಲಿ ಮೊಳೆಯುವ ಹುಲ್ಲುಚಿಗುರುಗಳಿಂದ ಆಕರ್ಷಿತವಾಗಿ ಹಿಮಪಂಕ್ತಿಯಿಂದ ಕೆಳಕ್ಕೆ ಇಳಿದುಬರುತ್ತವೆ. ಗುಂಪಿನಲ್ಲಿ 12 ರಿಂದ 40 ಪ್ರಾಣಿಗಳಿರುತ್ತವೆ. ಸಾಮಾನ್ಯವಾಗಿ ಇವು ಮುಂಜಾವಿನಲ್ಲಿ, ನಂತರ ಮುಸ್ಸಂಜೆಯಲ್ಲಿ ಮೇಯುತ್ತವೆ. ಮೇವಿನ ಸ್ಥಳಗಳನ್ನು ಪದೇ ಪದೇ ಬದಲಾಯಿಸುತ್ತವೆ. ಮೇಯುವ ಸ್ಥಳಗಳ ಹಿಂದುಗಡೆಯ ಬೆಟ್ಟದ ಬೆನ್ನೇಣುಗಳೂ, ಕಮರಿಗಳೂ ಇವಕ್ಕೆ ಒಳ್ಳೆಯ ಆಶ್ರಯ ಕೊಡುತ್ತವೆ. ಈ ಉನ್ನತ ಪ್ರದೇಶಗಳಿಗೆ ವಿಶ್ರಾಂತಿಗಾಗಿ ಅಥವಾ ಭಕ್ಷಕ ಪ್ರಾಣಿಗಳ ಭಯದಿಂದ ಪಾರಾಗಲು ಹೋಗುತ್ತವೆ. ದುರ್ಗಮ ಪ್ರದೇಶಗಳಲ್ಲಿ ಈ ಪ್ರಾಣಿಗಳು ವಾಸಿಸುವುದರಿಂದ, ಇವುಗಳ ಕಣ್ಣುಗಳೂ ಚುರುಕಾದ ನೋಟ, ಶತ್ರುಗಳ ವಾಸನೆ ಕಂಡುಹಿಡಿಯುವ ಸಾಮರ್ಥ್ಯ ಮತ್ತು ಸಂದರ್ಭಕ್ಕನುಗುಣವಾಗಿ ಜಾಗರೂಕತೆಯಿಂದಿರುವ ಜಾಣ್ಮೆ ಹೊಂದಿವೆ.

ಬೇಸಗೆ ಆರಂಭದಲ್ಲಿ ವಯಸ್ಸಾದ ಗಂಡುಗಳು, ಹೆಣ್ಣುಗಳ ಮತ್ತು ಮರಿಗಳ ಹತ್ತಿರದಲ್ಲಿದ್ದು ಗುಂಪಿನ ಯೋಗಕ್ಷೇಮ ನೋಡಿಕೊಳ್ಳುತ್ತವೆ. ಅಕ್ಟೋಬರ್ ತಿಂಗಳು ಇವಕ್ಕೆ ಬೆದೆಗಾಲ. ಮೇ ಅಥವಾ ಜೂನ್ ತಿಂಗಳಿನಲ್ಲಿ ಆಹಾರ ಸಮೃದ್ಧಿಯಾಗಿರುವಾಗ ಮರಿಹಾಕುತ್ತವೆ. ಈ ಮರಿಗಳು ಇತರೆಲ್ಲ ಮೇಕೆ ಕುರಿಗಳಂತೆ ಬಲುಬೇಗ ತಮ್ಮ ತಾಯ ಜೊತೆಗೆ ಬೆಟ್ಟದ ಬಿರುಕುಗಳಲ್ಲಿ, ಬಂಡೆಗಳಲ್ಲಿ, ಓಡಾಡಲು ಪ್ರಾರಂಭಿಸುತ್ತವೆ. ಮೈಕೆಳಭಾಗದಲ್ಲಿ ದಟ್ಟವಾದ ತುಪ್ಪಟವಿರುವುದರಿಂದ ಇವಕ್ಕೆ ಚಳಿ ಸೋಕದು. ಸಮೃದ್ಧವಾಗಿಯೂ, ಮೃದುವಾಗಿಯೂ, ದಟ್ಟವಾಗಿರುವ ಈ ತುಪ್ಪುಳಕ್ಕಾಗಿ ಈ ಪ್ರಾಣಿಗಳನ್ನು ಜನ ಬೇಟೆಯಾಡುತ್ತಾರೆ. ಸೈಬೀರಿಯದ ಐಬೆಕ್ಸ್ ಉಳಿದೆಲ್ಲ ಬೆಟ್ಟದ ಆಡುಗಳಿಗಿಂತ ದೊಡ್ಡದು. ***

**ಐಲಾಂಥಸ್ ಚಿಟ್ಟೆ:** ನಾಕ್ಟೂಯಿಡೆ ಗಣದ ಎಲಿಗ್ಮಾ ನಾರ್ಸಿಸಸ್ ಎಂಬ ವೈಜ್ಞಾನಿಕ ಹೆಸರಿನ ಚಿಟ್ಟೆ. ಬಹಳ ಎತ್ತರವಾಗಿ ಬೆಳೆಯುವ ಐಲಾಂಥಸ್ ಎಕ್ಸೆಲ್ಸ ಮರದ ಎಲೆಗಳನ್ನು ತಿಂದು ಹಾಳುಮಾಡುವ ಈ ಚಿಟ್ಟೆಗಳನ್ನು ಆ ಮರದ ಹೆಸರಿಂದಲೇ ಕರೆಯಲಾಗಿದೆ. ಆಕಾರದಲ್ಲಿ ಇವು ದೊಡ್ಡವು. ಬಣ್ಣ ಹಳದಿ. ರೆಕ್ಕೆಗಳ ಮೇಲೆ ಕಂದು ಅಥವಾ ಕಪ್ಪು ಪಟ್ಟೆಗಳಿವೆ. ಡಿಂಬಗಳು ಉದ್ದವಾಗಿದ್ದು ಅವುಗಳ ಮೈಮೇಲೆ ತೆಳುವಾಗಿ ಕೂದಲು ಆವರಿಸಿರುತ್ತದೆ. ಅಲ್ಲಲ್ಲಿ ಕೆಂಪು ಮತ್ತು ಕಪ್ಪು ಪಟ್ಟೆಗಳಿವೆ. ಡಿಂಬಗಳ ತಲೆಯ ಬಣ್ಣ ಹಳದಿ. ಇವು ಮರದ ಕೊಂಬೆಗಳ ಮೇಲೆ, ಮಾಸಲು ಹಳದಿ ಬಣ್ಣದ ತೆಳುದಾರದ ಗೂಡು ಕಟ್ಟಿ ಕೋಶಾವಸ್ಥೆ ಹೊಂದುತ್ತವೆ. ಕೋಶಾವಸ್ಥೆಯಿಂದ ಪ್ರೌಢಾವಸ್ಥೆ ತಲುಪುತ್ತವೆ. ಇದು ಹಾನಿಕಾರಕ ಕೀಟ. (ಟಿ.ಎಸ್.ಟಿ.)

**ಐಸಾಪ್ಟರ:** ಕೀಟಗಳ ವರ್ಗಕ್ಕೆ ಸೇರಿದ ಗಣ. ಇವುಗಳ ರೆಕ್ಕೆಗಳು ಒಂದೇ ಗಾತ್ರದಲ್ಲಿವೆ. ಈ ಗಣದ ಕೀಟಗಳು ತಿಳಿಹಳದಿ ಮಿಶ್ರಿತ ಬಿಳಿಬಣ್ಣದ ಮೃದು ದೇಹಿ ಸಾಮಾಜಿಕ ಜೀವಿಗಳು. ಉಷ್ಣವಲಯದಲ್ಲಿ, ಸಮಶೀತೋಷ್ಣವಲಯದಲ್ಲಿ ಹೆಚ್ಚಾಗಿ ವಾಸಿಸುತ್ತವೆ.

ಮರ, ಕೊರಡು, ಮನೆಗಳಲ್ಲಿನ ತೊಲೆ, ಮಣ್ಣಿನಿಂದ ಆವೃತವಾಗಿರುವ ಮರಗಳಲ್ಲಿ ಅಸಂಖ್ಯವಾಗಿ ವಾಸಿಸುತ್ತವೆ. ನೀಳವಾದ ಕುಡಿಮೀಸೆಗಳು 10 ರಿಂದ 30 ಖಂಡಗಳಿಂದ ಕೂಡಿವೆ. ಒಂದು ಜೊತೆ ಸಂಯುಕ್ತ ಕಣ್ಣುಗಳಿವೆ. ಕೆಲವು ಜಾತಿ ಕೀಟಗಳಲ್ಲಿ ಕಣ್ಣುಗಳು




ಗೆದ್ದಲು

ಸರಿಯಾಗಿ ಬೆಳವಣಿಗೆಯಾಗಿಲ್ಲ. ಚೆನ್ನಾಗಿ ಬೆಳೆದ ವದನಾಂಗಗಳಿವೆ. ಮೂರು ಜೊತೆ ಚಿಕ್ಕ ಕಾಲುಗಳಿವೆ. ಉದರವು 11 ಖಂಡಗಳಿಂದ ಕೂಡಿದೆ. ದೇಹದ ಗಾತ್ರ ವಿಭಿನ್ನವಾಗಿದೆ. ಕೆಲವು ಜಾತಿ ಕೀಟಗಳು ಸಣ್ಣವು. ಈ ಕೀಟಗಳಲ್ಲಿ ಜಾತಿ ಪದ್ಧತಿ ಚೆನ್ನಾಗಿ ವಿಕಸನ ಗೊಂಡಿದ್ದು, ಬಹುರೂಪಿಗಳು ಅನೇಕ ಪ್ರಭೇದಗಳಲ್ಲಿವೆ. ಈ ಗುಂಪಿನ ಮುಖ್ಯವಾದ ಲಕ್ಷಣ ಸಾಮಾಜಿಕ ಜೀವನ. ಒಂದು ಜಾತಿಯ ಕುಟುಂಬದಲ್ಲಿ ಅನೇಕ ಬಗೆಯ ದೇಹರಚನೆ ಹೊಂದಿದ ಸದಸ್ಯರಿದ್ದು, ವಿವಿಧ ಕಾರ್ಯದಲ್ಲಿ ತೊಡಗುತ್ತವೆ. ಕೆಲವೇ ಸದಸ್ಯರು ವಂಶೋತ್ಪತ್ತಿಯಲ್ಲಿ ತೊಡಗುತ್ತವೆ. ಉದಾ: ಗೆದ್ದಲು ಹುಳಗಳು. ಈ ಜಾತಿ ಕೀಟಗಳಲ್ಲಿ ವಿವಿಧ ಬಗೆಯ ಸದಸ್ಯ ಕೀಟಗಳಿವೆ.

1) ರಾಜ ಹಾಗೂ ರಾಣಿ ಕೀಟಗಳು: ನಾಲ್ಕು ಉದ್ದವಾದ ರೆಕ್ಕೆಗಳಿಂದ ಕೂಡಿದ ಕಂದು ಬಣ್ಣದ ಗಂಡು ಹಾಗೂ ಹೆಣ್ಣುಗಳು.

2) ಚಿಕ್ಕ ರೆಕ್ಕೆಗಳುಳ್ಳ ಗಂಡು ಹಾಗೂ ಹೆಣ್ಣುಗಳು.

3) ರೆಕ್ಕೆಗಳಿಲ್ಲದ ಗಂಡು ಹಾಗೂ ಹೆಣ್ಣುಗಳು.

4) ರೆಕ್ಕೆಗಳಿಲ್ಲದ ಕೆಲಸಗಾರ ಕೀಟಗಳು.

5) ರೆಕ್ಕೆಗಳಿಲ್ಲದ ಸೈನಿಕರು.

(ನೋಡಿ: ಸಾಮಾಜಿಕ ಕೀಟಗಳು) (ಎಸ್.ಕೆ.ಎ.)

**ಐಸೋಜೈಮುಗಳು:** ಜೀವಿಯ ಆಂತರಿಕ ಪರಿಸರದಲ್ಲಾಗುವ ಬದಲಾವಣೆಗಳಿಗೆ ಹೊಂದಿಕೊಳ್ಳಲು ಉತ್ಪತ್ತಿಯಾಗುವ, ಒಂದೇ ಕಾರ್ಯನಿರ್ವಹಿಸುವ ಒಂದು ಕಿಣ್ವದ ಬಹುರೂಪಗಳು. ಪ್ರೋಟೀನುಗಳ ಚತುರ್ಥ ಮಟ್ಟದ ರಚನೆ ಐಸೋಜೈಮುಗಳ ರಚನೆಗೆ ಆಧಾರಭೂತವಾಗಿದೆ. ಇಂಥ ಕಿಣ್ವಗಳ ಬಗ್ಗೆ ತಿಳಿದುಬಂದಿರುವ ಜ್ಞಾನವನ್ನು ಲ್ಯಾಕ್ಟಿಕ್ ಡೀಹೈಡ್ರೋಜಿನೇಸ್ (ಎಲ್‌ಡಿಎಚ್) ಕಿಣ್ವದ ಬಗ್ಗೆ ನಡೆಸಿರುವ ಸಂಶೋಧನೆಗಳಿಂದ ಬಲುಮಟ್ಟಿಗೆ ಸಂಗ್ರಹಿಸಲಾಗಿದೆ. ಈ ಕಿಣ್ವ ಪೈರುವೇಟನ್ನು ಲ್ಯಾಕ್ಟೇಟ್ ಆಗಿ ಪರಿವರ್ತಿಸುವ ಕ್ರಿಯೆಯನ್ನು ವರ್ಧಿಸುತ್ತದೆ.

ಕೋಳಿಯಲ್ಲಿ ಈ ಕಿಣ್ವ ಮುಖ್ಯವಾಗಿ ಎರಡು ರೂಪದಲ್ಲಿ ದೊರೆಯುತ್ತದೆ. ಒಂದು ಹೃದಯದ ಮಾಂಸಖಂಡಕ್ಕೂ ಇನ್ನೊಂದು ಎದೆಯ ಮಾಂಸಖಂಡಕ್ಕೂ ವಿಶಿಷ್ಟವಾದದ್ದು. ಇವೆರಡು ಬಗೆಯ ಕಿಣ್ವಗಳಿಗೆ ಅಮೈನೋ ಆಮ್ಲಗಳ ರಚನೆಯಲ್ಲಿಯೂ ಭೌತ ಮತ್ತು ಇಮ್ಯೂನೊಲಾಜಿಕಲ್ ಗುಣದಲ್ಲಿಯೂ ವೇಗವರ್ಧಕ ಕ್ರಿಯೆಯಲ್ಲಿಯೂ ವ್ಯತ್ಯಾಸಗಳಿವೆ. ಕೋಳಿ ಮತ್ತು ಇತರ ಪ್ರಾಣಿಗಳಿಂದ ಐದು ಬಗೆಯ ಲ್ಯಾಕ್ಟಿಕ್ ಡೀ ಹೈಡ್ರೋಜಿನೇಸುಗಳನ್ನು ಬೇರ್ಪಡಿಸಲಾಗಿದೆ.

ಇವುಗಳಲ್ಲಿ ಮೂರಕ್ಕೆ, ಎದೆಯ ಮಾಂಸಖಂಡ ಕಿಣ್ವಕ್ಕೂ, ಹೃದಯ ಮಾಂಸಖಂಡ ಕಿಣ್ವಕ್ಕೂ ಮಧ್ಯಂತರ ಗುಣಗಳಿವೆ. ಉದಾಹರಣೆ ಎಲ್‌ಡಿಎಚ್ ಅನ್ನು ವಿದ್ಯುತ್‌ಕ್ಷೇತ್ರೀಯ ಚಲನೆಗೆ (ಎಲೆಕ್ಟ್ರೋಫಾರಿಸಿಸ್) ಗುರಿಪಡಿಸಿದರೆ ಸುಸ್ಪಷ್ಟವಾದ ಒಂದರಿಂದ ಇನ್ನೊಂದು ಸಮಾಂತರದಲ್ಲಿರುವ ಐದು ಪಟ್ಟಿಗಳು (ಬ್ರಾಂಡ್ಸ್) ಕಂಡುಬರುತ್ತವೆ. ಎದೆಯ ಮಾಂಸಖಂಡದ ಕಿಣ್ವ ಒಂದು ತುದಿಯಲ್ಲಿಯೂ ಹೃದಯ ಮಾಂಸಖಂಡದ ಕಿಣ್ವ ಇನ್ನೊಂದು ತುದಿಯಲ್ಲಿಯೂ ಇರುತ್ತವೆ. ಅಲ್ಲದೆ ಈ ಐದು ಐಸೋಜೈಮುಗಳ ಅಮೈನೋ ಆಮ್ಲ ಘಟನೆಯನ್ನು ಪರಿಶೀಲಿಸಿದರೆ ಹೃದಯದ ಕಿಣ್ವದಿಂದ ಹಿಡಿದು ಎದೆಯ ಕಿಣ್ವದವರೆಗೆ ಕ್ರಮಾನುಗತಿಕ ವ್ಯತ್ಯಾಸಗಳು ಕಂಡುಬರುತ್ತವೆ. ಇದೇ ತರಹೆಯ ವ್ಯತ್ಯಾಸಗಳನ್ನು ವೇಗವರ್ಧಕ ಕ್ರಿಯೆ ಮತ್ತು ಇಮ್ಯೂನೊಲಾಜಿಕಲ್ ಗುಣಗಳಲ್ಲಿಯೂ ಕಾಣಬಹುದು.

ಎಲ್‌ಡಿಎಚ್ ರಚನೆಯನ್ನು ಪರಿಶೀಲಿಸಿದಾಗ, ಇಂಥ ನಡತೆಗಿರುವ ಆಧಾರವನ್ನು ಕಂಡುಕೊಳ್ಳಬಹುದು. ಕಿಣ್ವವನ್ನು ಮರ್‌ಕ್ಯಾಪ್ಟೋ ಎಥನಾಲ್ ಸೇರಿರುವ ಗ್ವಾನಿಡಿನಿಯಂ ಕ್ಲೋರೈಡ್ ದ್ರಾವಣದಿಂದ ಸಂಸ್ಕರಿಸಿ ನಾಲ್ಕು ಉಪಾಂಗಗಳನ್ನು ಪಡೆಯಬಹುದು. ಇದು ಚತುರಂಶವುಳ್ಳ ಕಿಣ್ವವಾಗಿದ್ದರೆ (ಹೌದೆನ್ನುವುದಕ್ಕೆ ಆಧಾರಗಳಿವೆ) ಇದನ್ನು ಬೇರೆ ಎರಡು ಜೀನ್‌ಗಳಿಂದ ನಿರ್ದೇಶಿತವಾದ ಎರಡು ಬಗೆಯ ಉಪಾಂಗವುಳ್ಳ ಪ್ರೋಟೀನೆಂದು ಭಾವಿಸಿ ಮೇಲೆ ಹೇಳಿದ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬಹುದು. ಹೃದಯದ ಮಾಂಸಖಂಡದ ಕಿಣ್ವ ಎಚ್ ವರ್ಗದ ಮತ್ತು ಎದೆಯ ಮಾಂಸಖಂಡದ ಕಿಣ್ವ ಎಂ ವರ್ಗದ ಉಪಾಂಗಗಳಿಂದ ರಚಿತವಾಗಿದೆಯೆಂದು ಭಾವಿಸಿದರೆ ರಚನೆಯಲ್ಲಿ ಭಿನ್ನವಾಗಿರುವ ಐದು ಬಗೆಯ ಎಲ್‌ಎಲ್‌ಡಿಎಚ್ ಗಳನ್ನು ಎಚ್‌ಎಚ್‌ಎಚ್‌ಎಚ್, ಎಚ್‌ಎಚ್‌ಎಚ್‌ಎಂ, ಎಚ್‌ಎಚ್‌ಎಂಎಂ, ಎಚ್‌ಎಂಎಂಎಂ, ಎಂಎಂಎಂಎಂ ಪಡೆಯಬಹುದು. ಇಂಥ ಘಟನೆಗಳನ್ನು ರೂಪಿಸುವಾಗ ಚತುರಂಶಿಯ (ಟೆಟ್ರಾಮರ್) ಪ್ರತಿಯೊಂದು ಉಪಾಂಗ ಇನ್ನೊಂದಕ್ಕೆ ಎಲ್ಲ ವಿಧದಲ್ಲಿಯೂ ಸಮಾನವೆಂದು ಭಾವಿಸಲಾಗಿದೆ. ಇಲ್ಲದಿದ್ದರೆ ಎಚ್‌ಎಚ್‌ಎಚ್‌ಎಂ ರಚನೆಯುಳ್ಳ ನಾಲ್ಕು ಬಗೆಯ ಅಣುಗಳನ್ನು ಪಡೆಯಬಹುದು. ಎಡಿಎಚ್ ಎರಡು ಬಗೆಯ ಉಪಾಂಗಗಳಿಂದ ರಚಿತವಾದ ಕಿಣ್ವವೆಂದು ಭಾವಿಸಿ ಅದರ ಗುಣಗಳಲ್ಲಿ ತೋರಿಬರುವ ಕ್ರಮಾನುಗತಿಕ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬಹುದು. ಐಸೋಜೈಮುಗಳು ಬದಲಾಗುತ್ತಿರುವ ಆಂತರಿಕ ಪರಿಸರದಿಂದ ಜೈವಿಕ ಕ್ರಿಯೆಗಳು ತಡೆಯಿಲ್ಲದಂತೆ ಮುಂದುವರೆಯಲು ನೆರವಾಗುತ್ತವೆ.

***

**ಐಸೊಪೊಡ:** ಕಠಿಣ ಚರ್ಮಿಗಳ ವರ್ಗದಲ್ಲಿನ ಉಪಗಣ. ಇದು ಸಂಧಿಪದಿ ವಂಶದ ಕ್ರಸ್ಟೇಸಿಯ ವರ್ಗದ, ಮೆಲಕೊಸ್ಟ್ರಿಕ ಉಪವರ್ಗದ, ಪೆರಕ್ಯಾರಿಡ ಗಣದಲ್ಲಿದೆ. ಈ ಉಪಗಣದಲ್ಲಿರುವ ಪ್ರಾಣಿಗಳ ಮುಂಭಾಗದಲ್ಲಿ ಶಿರಸ್ತ್ರಾಣವಾಗಲಿ, ಕಣ್ಣುಗಳಿಗೆ ತೊಟ್ಟಾಗಲಿ (ಹಿಡಿ–ಸ್ಟಾಕ್) ಇಲ್ಲ. ಎದೆ ಭಾಗದ ಉಪಾಂಗಗಳಿಗೆ ಎಕ್ಸೊಪೊಡೈಟುಗಳು ಇಲ್ಲ. ಮೊದಲ ಜೊತೆ ಉಪಾಂಗಗಳು ಮ್ಯಾಕ್ಸಿಲ್ಲಿಪೀಡುಗಳಾಗಿ ಮಾರ್ಪಟ್ಟಿವೆ. ಮಿಕ್ಕೆಲ್ಲವೂ ಒಂದೇ ತೆರನಾಗಿವೆ. ಪ್ಲಿಯೊಪಾಡುಗಳು ಉಸಿರಾಟದ ಅಂಗಗಳಾಗಿ ಮಾರ್ಪಟ್ಟಿವೆ. ಯೂರೊಪಾಡುಗಳು ಬಾಲದ ಈಜು ರೆಕ್ಕೆಯೊಡನೆ ಭಾಗವಹಿಸಿಲ್ಲ. ಉದಾ: ಲಿಗಿಯ, ಆರ್ಮಡಿಲ್ಲಿಡಿಯಂ, ಎಸೆಲ್ಲಸ್ ಮತ್ತು ಐಡೊಟಿಯ ಪ್ರಾಣಿಗಳು.

ಲಿಗಿಯ ಸರ್ವಭಕ್ಷಕ ಕಡಲಜೀವಿ. ದೇಹ ಚಪ್ಪಟೆಯಾಗಿ ಅಂಡಾಕಾರವಾಗಿದೆ. ತೊಟ್ಟಿಲ್ಲದ ಎರಡು ದೊಡ್ಡ ಕಣ್ಣುಗಳಿವೆ. ಎರಡು ಜೊತೆ ಕುಡಿಮೀಸೆಗಳಲ್ಲಿ ಒಂದು ಜೊತೆ ತುಂಬ ಚಿಕ್ಕದು, ಇನ್ನೊಂದು ಜೊತೆ ಉದ್ದ. ಇವು ಭಿನ್ನ ಲಿಂಗಿಗಳು. ಬೆಳವಣಿಗೆಯಲ್ಲಿ ರೂಪಪರಿವರ್ತನೆ ಇಲ್ಲ.

ಆರ್ಮಡಿಲ್ಲಿಡಿಯಂ ನೆಲವಾಸಿ ಮರದ ಹೇನು. ಇದರ ಕುಡಿಮೀಸೆಗಳು ಚಿಕ್ಕವು. ಶತ್ರುಗಳಿಂದ ರಕ್ಷಿಸಿಕೊಳ್ಳಲು ಚಂಡಿನಂತೆ ಸುರಳಿ ಸುತ್ತಿಕೊಳ್ಳತ್ತದೆ. ಚಿಪ್ಪಿನ ಹಂದಿ (ಆರ್ಮಡಿಲ್ಲೊ)ಯಂತೆ ದೇಹ ಸುತ್ತಿ ಕೊಳ್ಳುವುದರಿಂದ ಇದಕ್ಕೆ ಈ ಅನ್ವರ್ಥನಾಮದಿಂದ ಕರೆಯುವರು.

ಈ ಉಪಗಣದಲ್ಲಿ ಪರತಂತ್ರ ಜೀವನ ನಡೆಸುವ ಹಲವು ಪ್ರಾಣಿಗಳಿವೆ. ಇವುಗಳಲ್ಲಿ ಪರತಂತ್ರ ಜೀವನದ ವಿವಿಧ ಹಂತಗಳಿವೆ. ಅಂಗಾಂಗಗಳು ಚೆನ್ನಾಗಿ ಬೆಳೆದ ತಾತ್ಕಾಲಿಕ ಪರತಂತ್ರ ಜೀವಿಗಳಿಂದ ಪ್ರೌಢಾವಸ್ಥೆಯಲ್ಲಿ ಕೇವಲ ತತ್ತಿಯ ಕೋಶ ಮಾತ್ರ ಉಳಿದಿರುವ ಪೂರ್ಣ ಪರತಂತ್ರಜೀವಿಗಳವರೆಗೂ ವಿಭಿನ್ನತೆಯಿದೆ ಉದಾ: ಮೀನಿನ ಹೇನು.

(ಎಚ್.ಬಿ.ಡಿ)

**ಐಸೊಲ್ಯೂಸಿನ್:** ಆರು ಇಂಗಾಲಗಳನ್ನುಳ್ಳ ಒಂದು ಎ–ಅಮೈನೋ ಆಮ್ಲ ಮತ್ತು ಲ್ಯೂಸಿನ್ನಿನ ಐಸೋಮರ್. ಐಸೊಲ್ಯೂಸಿನ್ನಿನ ಅಣುವಿನಲ್ಲಿ ಎರಡು ಅಸಮಾಂಗ (ಅಸಿಮೆಟ್ರಿಕ್) ಇಂಗಾಲಗಳಿರುವುದರಿಂದ ನಾಲ್ಕು ಸ್ಥಾನೀಯ (ಸ್ಪೇಶಿಯಲ್) ಐಸೊಮರುಗಳು ಸಾಧ್ಯ. ಅವುಗಳಲ್ಲಿ ಎರಡು ಡಿ–ಮತ್ತು ಎಲ್–ಐಸೊಲ್ಯೂಸಿನ್. ಉಳಿದವೆರಡು ಡಿ–ಮತ್ತು ಎಲ್–ಅಲ್ಲೊಐಸೊಲ್ಯೂಸಿನ್ ಅಣುಗಳು.

$$
\begin{array}{l}
CH_3\text{-}CH_2\text{-}CH\text{-}CH\text{-}COOH \\
\qquad\qquad\quad | \qquad\ \ | \\
\qquad\qquad\ CH_3 \quad NH_2
\end{array}
$$

1904ರಲ್ಲಿ ಏರ್‌ಲಿಕ್ ಎಂಬ ವಿಜ್ಞಾನಿ ಈ ಆಮ್ಲವನ್ನು ಮೊದಲ ಬಾರಿಗೆ ಬೇಟಿ ಕಾಕಂಬಿಯಿಂದಲೂ (ಮೊಲಾಸ್ಸಸ್) ಅನಂತರ ರಕ್ತದಲ್ಲಿನ ಪ್ರೋಟೀನಿನಿಂದಲೂ ಬೇರ್ಪಡಿಸಿದ. 1907ರಲ್ಲಿ ಅದರ ರಚನೆಯನ್ನೂ ಸಾಧಿಸಿದ. 1931ರ ವೇಳೆಗೆ ಈ ಸಂಯುಕ್ತದ ಸಂಯೋಜನೆಯೂ ನಾಲ್ಕು ಬಗೆಯ ಐಸೊಮರುಗಳ ಬೇರ್ಪಡೆಯೂ ಹಲವಾರು ವಿಜ್ಞಾನಿಗಳ ಪ್ರಯತ್ನದಿಂದ ಸಾಧ್ಯವಾಯಿತು.

ಪ್ರಕೃತಿಯಲ್ಲಿ ಲ್ಯೂಸಿನ್ ಮತ್ತು ಐಸೊಲ್ಯೂಸಿನುಗಳು ಒಟ್ಟಾಗಿ ದೊರೆಯುತ್ತವೆ. ಆದರೆ ಐಸೊಲ್ಯೂಸಿನಿನ ತಾಮ್ರಲವಣ ಲ್ಯೂಸಿನಿನ ತಾಮ್ರಲವಣಕ್ಕಿಂತ ನೀರಿನಲ್ಲಿ ಹೆಚ್ಚು ದ್ರಾವ್ಯವಾದ್ದರಿಂದ (ಸಾಲ್ಯುಬಲ್) ಅಂಶತಃ ಸ್ಫಟಿಕೀಕರಣ (ಫ್ರಾಕ್ಷನಲ್ ಕ್ರಿಸ್ಟಲೈಸೇಷನ್) ವಿಧಿಯಿಂದ ಬೇರ್ಪಡಿಸಬಹುದು. ಡಿ– ಮತ್ತು ಎಲ್– ಐಸೊಮರುಗಳ ಮಿಶ್ರಣಗಳನ್ನು ಬೇರ್ಪಡಿಸಲು ನಿರ್ದಿಷ್ಟ ಏಕಾಣುಜೀವಿಗಳನ್ನೂ (ಬ್ಯಾಕ್ಟೀರಿಯ) ನಿರ್ದಿಷ್ಟ ತಳಿಗಳ ಯೀಸ್ಟನ್ನೂ ಉಪಯೋಗಿಸಲಾಗುತ್ತದೆ.

ಎಲ್–ಐಸೊಲ್ಯೂಸಿನಿನ ಕೊರತೆಯಿಂದ ಪ್ರಾಣಿಗಳ ರಕ್ತರಸದಲ್ಲಿನ (ಪ್ಲಾಸ್ಮಾ) ಪ್ರೋಟೀನ್ ಅಂಶದಲ್ಲಿ ವೈಪರೀತ್ಯವಾಗುತ್ತದೆಂದು ತಿಳಿದುಬಂದಿದೆ. ಐಸೊಲ್ಯೂಸಿನ್ ಅಥವಾ ಅದನ್ನುಳ್ಳ ಪ್ರೋಟೀನುಗಳ ಕೊಡುಗೆಯಿಂದ ಈ ವೈಪರೀತ್ಯ ಅಥವಾ ಕೊರತೆ ತುಂಬಿ ರಕ್ತರಸದಲ್ಲಿ ಪ್ರೋಟೀನ್ ಅಂಶ ವೃದ್ಧಿಯಾಗಿ ಸಹಜಸ್ಥಿತಿಯ ಮಟ್ಟವನ್ನು ಮುಟ್ಟುತ್ತದೆ.

***

# ಒ

**ಒಂಟೆ:** ಒಂಟೆ ಪರಿಚಿತ ಸ್ತನಿಗಳಲ್ಲಿ ಪ್ರಮುಖವಾದದ್ದು ಇದು ಕಶೇರುಕ ವಂಶದ ಸ್ತನಿವರ್ಗದ ದ್ವಿಖುರಗಣದ ಕಮೆಲಿಡೆ ಕುಟುಂಬದ ಕ್ಯಾಮಲ್ಸ್ ಜಾತಿಗೆ ಸೇರಿದೆ. ಲಕ್ಷಾಂತರ ವರ್ಷಗಳ ಹಿಂದೆ ಒಂಟೆಯ ಪೂರ್ವಜರು ಉತ್ತರ ಅಮೆರಿಕ, ಯೂರೋಪ್ ಖಂಡಗಳಲ್ಲಿ ವಾಸಿಸುತ್ತಿದ್ದುವು. ಅವುಗಳ ಅವಶೇಷಗಳು ಪಳೆಯುಳಿಕೆಯ ಎಲುಬುಗಳಾಗಿ ಉಳಿದಿವೆ. ಒಂಟೆಯ ಅತ್ಯಂತ ಪೂರ್ವನಿವಾಸಿ ಗಾತ್ರದಲ್ಲಿ ಮೊಲಕ್ಕಿಂತ ದೊಡ್ಡದಾಗಿರಲಿಲ್ಲ. ಇದರಲ್ಲಿ ಎರಡು ಪ್ರಭೇದಗಳಿವೆ: ಕ್ಯಾಮಲಸ್ ಡಾವಿಡೆರಿಯಸ್ (ಅರೇಬಿಯದ ಒಂಟೆ) ಮತ್ತು ಕ್ಯಾಮಲಸ್ ಬ್ಯಾಕ್ಟ್ರಿಯೆನಸ್. ಬ್ಯಾಕ್ಟ್ರಿಯನ್ ಒಂಟೆಯ ಬೆನ್ನಿನ ಮೇಲೆ ಎರಡು ಡುಬ್ಬಗಳೂ, ಅರೇಬಿಯದ ಒಂಟೆಯ ಬೆನ್ನಿನ ಮೇಲೆ ಒಂದು ಡುಬ್ಬವೂ ಇವೆ. ಬ್ಯಾಕ್ಟ್ರಿಯನ್ ಒಂಟೆ ಅರೇಬಿಯದ ಒಂಟೆಗಿಂತ ಕುಳ್ಳು. ಪೂರ್ವ ತುರ್ಕಿಸ್ತಾನ ಮತ್ತು ಮಂಗೋಲಿಯ



ಎರಡು ಡುಬ್ಬಗಳ ಒಂಟೆಗಳ ಜನ್ಮಸ್ಥಾನಗಳು. ಅಲ್ಲಿಯ ಅಪಾರವಾದ ಚಳಿಯನ್ನು ತಡೆಯಲು ಅನುಕೂಲವಾಗುವಂತೆ ಚಳಿಗಾಲದಲ್ಲಿ ಉದ್ದವಾದ ಕೂದಲುಗಳು ಹುಟ್ಟಿ ಇವುಗಳ ಶರೀರಗಳನ್ನು ರಕ್ಷಿಸುತ್ತವೆ. ವಸಂತಋತು ಪ್ರಾರಂಭವಾದ ಮೇಲೆ ಈ ಕೇಶರಾಶಿ ಮುದ್ದೆಮುದ್ದೆಯಾಗಿ ಉದುರಿಹೋಗುತ್ತದೆ. ಆಗ ಒಂಟೆಗಳು ಗೋಬಿ ಮರಳುಗಾಡಿನತ್ತ ಹೊರಡುತ್ತವೆ. ಸುಮಾರು ೪,೦೦,೦೦,೦೦೦ ವರ್ಷಗಳ ಹಿಂದೆ ಒಂಟೆಗಳು ಉತ್ತರ ಅಮೆರಿಕದಲ್ಲಿ ಜನಿಸಿ ಸುಮಾರು ೧೦,೦೦,೦೦೦ ವರ್ಷಗಳಷ್ಟು ಹಿಂದೆ ದಕ್ಷಿಣ ಅಮೆರಿಕ ಹಾಗೂ ಏಷ್ಯಗಳಲ್ಲಿ ಹರಡಿದ್ದುವು. ಮುಂದೆ ಅವು ಅಮೆರಿಕ ಖಂಡದಲ್ಲಿ ನಿರ್ನಾಮಗೊಂಡವು. ೧೮೫೦ರಲ್ಲಿ ಅಮೆರಿಕದ ಸೈನ್ಯಬಲ ಒಂಟೆಯನ್ನು ಏಷ್ಯದಿಂದ ತಂದು ಆ ರಾಷ್ಟ್ರದಲ್ಲಿ ಉಪಯೋಗಿಸಲಾರಂಭಿಸಿತು. ಒಂಟೆ ನೋಡಲು ಕುರೂಪಿ. ಉದ್ದವಾದ ತಲೆ ಮತ್ತು ಕತ್ತು ಅದರ ವೈಶಿಷ್ಟ್ಯ. ಮರಳುಗಾಡಿನ ಜೀವನಕ್ಕೆ ಹೊಂದಿಕೊಳ್ಳುವಂತೆ ಅಂಗರಚನೆ ಮಾರ್ಪಾಡಾಗಿದೆ. ಮರಳು ದೂಳನ್ನು ಹೊರಗಿಡಲು ಮೂಗಿನ ರಂಧ್ರಗಳು ಮುಚ್ಚಿಕೊಳ್ಳಬಲ್ಲುವು. ಕಣ್ಣುರೆಪ್ಪೆಯ ಕೂದಲುಗಳು ಬಲು ನೀಳವಾಗಿದ್ದು ಬಿಸಿಲಿನ ಧಗೆಯಿಂದ ಕಣ್ಣುಗಳನ್ನು ರಕ್ಷಿಸುತ್ತವೆ. ಮೇಲ್ತುಟಿಯ ಮಧ್ಯೆ ಆಳವಾಗಿ ಬಿರುಕುಬಿಟ್ಟಿದ್ದು ಅದು ಮೂಗನ್ನೂ ಬಾಯಿಯನ್ನೂ ಒಂದುಗೂಡಿಸುತ್ತದೆ. ಮುಂಗಾಲು ಮತ್ತು ಹಿಂಗಾಲುಗಳಲ್ಲಿ ಎರಡೆರಡು (ಮೂರನೆಯ ಮತ್ತು ನಾಲ್ಕನೆಯ) ಬೆರಳುಗಳು ಮಾತ್ರ ಇವೆ; ಅವುಗಳಿಗೆ ಗೊರಸುಗಳಿವೆ. ಮಂಡಿಯ ಹೊರ ಆವರಣದಲ್ಲಿ ಚರ್ಮದ ಮೆತ್ತೆಗಳಿವೆ. ಒಂಟೆ ನಡೆಯುವಾಗ ಅದರ ಪಾದಗಳು ಅಗಲವಾಗಿ ಹಿಗ್ಗುವುದರಿಂದ ಮರಳಿನಲ್ಲಿ ಕಾಲುಗಳು ಹೂತುಕೊಳ್ಳುವುದಿಲ್ಲ.

ಮರಳುಗಾಡಿನಲ್ಲಿ ಬೆಳೆಯುವ ಮುಳ್ಳಿನ ಗಿಡಗಂಟೆಗಳೇ ಒಂಟೆಗಳ ಆಹಾರ. ತಿನ್ನಲು ಏನೂ ಸಿಕ್ಕದೆ ಇದ್ದಾಗ ಇವು ಮೀನು, ತೊಗಲು, ಹಣ್ಣು ಮತ್ತು ಬೀಜಗಳನ್ನು ಸಹ ತಿನ್ನುವುದುಂಟು. ಇವುಗಳ ದಂತಸೂತ್ರ–ಬಾಚಿಹಲ್ಲು ೧/೩, ಕೋರೆಹಲ್ಲು ೧/೧, ಮುಂದವಡ ಹಲ್ಲು ೩/೨, ಹಿಂದವಡೆ ಹಲ್ಲು ೩/೩=೩೪ ಹಲ್ಲುಗಳು. ಮೆಲುಕುಹಾಕುವ ಸ್ತನಿಯಾದ್ದರಿಂದ ಜಠರದಲ್ಲಿ ಮೂರು ಕೋಶಗಳಿವೆ. ಒಂಟೆ ನೀರನ್ನು ಜಠರದಲ್ಲಿ ಶೇಖರಿಸುತ್ತದೆ. ಜಠರದಲ್ಲಿ ಚಿಕ್ಕ ಚಿಕ್ಕ ಕುಜಾಯಿಯಂಥ ರಚನೆಗಳಿವೆ. ಇವುಗಳ ಬಾಯಿಯ ಬುಡದಲ್ಲಿ ಸಂಕುಚಿಸುವ ಮಾಂಸಖಂಡಗಳು ಸುತ್ತುವರಿದಿವೆ. ಒಂಟೆ ಕುಡಿದ ನೀರು ಜಠರದಲ್ಲಿ ತುಂಬಿಕೊಂಡೊಡನೆ ಕುಜಾಯಿ ರಚನೆಗಳ ಬಾಯಿಗಳು ತೆರೆದುಕೊಳ್ಳುತ್ತವೆ. ನೀರು ಅವುಗಳೊಳಗೆ ಶೇಖರಗೊಳ್ಳುತ್ತದೆ. ಈ ನೀರು ಅಲ್ಲೇ ಉಳಿದಿದ್ದು ಪ್ರಾಣಿಗೆ ನೀರು ಬೇಕಾದಾಗ ಅವುಗಳಿಂದ ತೊಟ್ಟಿಕ್ಕಲು ಪ್ರಾರಂಭಿಸುತ್ತದೆ. ಇವುಗಳಲ್ಲಿರುವ ನೀರು ಮುಗಿದ ಮೇಲೆ ಮತ್ತೂ ನೀರಿನ ಅವಶ್ಯಕತೆ ಇದ್ದರೆ ಆಗ ಒಂಟೆ ತನ್ನ ಡುಬ್ಬದಲ್ಲಿರುವ ಮೇದಸ್ಸಿನಿಂದ ನೀರನ್ನು ದೇಹದಲ್ಲಿಯೇ ಉತ್ಪಾದಿಸಿಕೊಳ್ಳಬಲ್ಲುದು. ಹಸಿವು ಬಾಯಾರಿಕೆಗಳಿಂದ ಪೀಡಿತವಾದ ಒಂಟೆಯ ಡುಬ್ಬ ಒಂದು ಕಡೆಗೆ ಜೋತು ಬಿದ್ದಿರುತ್ತದೆ. ಮಿಕ್ಕ ಎಲ್ಲ ಸ್ತನಿಗಳ ಕೆಂಪು ರಕ್ತಕಣಗಳು ದುಂಡಗಿದ್ದರೆ ಒಂಟೆಯವು ಅಂಡಾಕಾರವಾಗಿವೆ. ನಾಲ್ಕು ಸಹಸ್ರ ವರ್ಷಗಳಿಂದಲೂ ಒಂಟೆ ಮಾನವನ ಸೇವೆಯಲ್ಲಿದೆ. ಮರಳುಗಾಡಿನ ಜನರಿಗೆ ಇದರ ನೆರವಿಲ್ಲದೆ ಜೀವನ ಸಾಗಿಸಲು ಸಾಧ್ಯವಿಲ್ಲ. ಮರಳುಗಾಡಿನ ಏಕೈಕ ಸಂಪರ್ಕಸಾಧನ ಒಂಟೆ. ಇದರ ಕೂದಲಿನಿಂದ ಹಗ್ಗ, ಬಟ್ಟೆ, ಕಂಬಳಿಗಳನ್ನು ತಯಾರಿಸುತ್ತಾರೆ. ಈ ಪ್ರಾಣಿ ಎಷ್ಟು ಕುರೂಪಿಯೋ ಅಷ್ಟೇ ಮಂದಬುದ್ಧಿಯದೂ ಹೌದು. ಗಂಡು ಒಂಟೆ ಮದವೇರಿದಾಗ ಬಹು ಕ್ರೂರಿಯಾಗಿ ವರ್ತಿಸಬಲ್ಲುದು. ಹೆಣ್ಣು ಒಂಟೆ ೧೧ ತಿಂಗಳ ತನಕ ಗರ್ಭವನ್ನು ಧರಿಸಿ ಒಂದು ಮರಿಯನ್ನು ಈಯುತ್ತದೆ. ಒಂಟೆಯ ಆಯುಷ್ಯ ಸುಮಾರು ೫೦ ವರ್ಷಗಳು.

ಒಂಟೆ ೨೦೦–೪೦೦ ಕಿಗ್ರಾಂ ಗಳಷ್ಟು ಭಾರವನ್ನು ಹೊರಬಲ್ಲುದು. ೨೦೦–೨೫೦ ಕಿಮೀ ಗಳನ್ನು ಒಂದೇ ದಿವಸದಲ್ಲಿ ನಡೆಯಬಲ್ಲುದು. ಅರೇಬಿಯ ದೇಶದ ಹೈರೀ ಎಂಬ ತಳಿ ಟ್ಯುನಿಸಿನಿಂದ ಟ್ರಿಪೋಲಿಗೆ ಪ್ರಯಾಣ ಮಾಡಲು ಕೇವಲ ನಾಲ್ಕು ದಿವಸಗಳನ್ನು ತೆಗೆದುಕೊಂಡಿತು. ಈ ಎರಡು ಊರುಗಳಿಗೂ ಇರುವ ಅಂತರ ೯೬೦ ಕಿಮೀ ಗಳು. ಪ್ರಯಾಣ ಕಾಲದಲ್ಲಿ ಅದು ಒಬ್ಬ ಸವಾರನನ್ನೂ ೧೨೦ ಕಿಗ್ರಾಂ ಭಾರದ ಸಾಮಾನಗಳನ್ನೂ ಹೊತ್ತು ನಡೆಯಿತು. ತುರ್ಕಿಸ್ತಾನ ಮತ್ತು ಸೇನ್ ದೇಶದ ಮರಳುಗಾಡುಗಳಲ್ಲಿ ಕಾಡು ಒಂಟೆಗಳಿವೆ.

ಭಾರತದ ಒಂಟೆಗಳು : ಭಾರತದ ಒಂಟೆಗಳು ಗಟ್ಟಿಮುಟ್ಟಾಗಿವೆ. ೨–೨.೨೫ ಮೀ ಎತ್ತರದ ವರೆಗೆ ಇವು ಬೆಳೆಯುವುದುಂಟು. ಕಾಲು ಮತ್ತು ಕುತ್ತಿಗೆ ಉದ್ದವಾಗಿವೆ. ಬೆನ್ನಿನ ಮೇಲೆ ಕೇವಲ ಒಂದೇ ಒಂದು ಡುಬ್ಬವಿದೆ. ಭಾರತದಲ್ಲಿ ಇವು ಇರುವ ಸ್ಥಳಗಳು ರಾಜಾಸ್ಥಾನ, ಪಂಜಾಬ್ ಮತ್ತು ಉತ್ತರ ಪ್ರದೇಶ. ವ್ಯವಸಾಯಕ್ಕಾಗಿ ಕಾಡುಗಳನ್ನು ಕಡಿದು ಗಿಡಗಳನ್ನು ನಾಶಮಾಡುತ್ತಿರುವ ಪರಿಣಾಮವಾಗಿ ಪಂಜಾಬಿನಲ್ಲಿ ಒಂಟೆಯ ನಾನಾ ತಳಿಗಳು ವಿನಾಶದ ಅಂಚಿನಲ್ಲಿವೆ. ಇವುಗಳಲ್ಲಿ ಅತಿಮುಖ್ಯ ತಳಿಗಳು ರೋಜನ್

ಮತ್ತು ಕಲಾಚಿತ್ರ. ರಾಜಾಸ್ಥಾನದಲ್ಲಿರುವ ಮುಖ್ಯ ತಳಿ ಬಿಕನೀರ್ ಒಂಟೆ. ಇದು ಸಾಮಾನ್ಯವಾಗಿ ಭಾರತದ ಎಲ್ಲೆಡೆಗಳಲ್ಲಿಯೂ ವಾಸಿಸಬಲ್ಲುದು. ಇದು ಸವಾರಿಗೆ ಬಹು ಚೆನ್ನ. ಮರುಭೂಮಿಯ ವಾಯುಗುಣವನ್ನು ತಡೆದುಕೊಳ್ಳುವಂತೆ ಇದನ್ನು ರೂಪಿಸಲಾಗಿದೆ. ಶರೀರದ ಮೇಲೆ ಉತ್ತಮ ರೋಮಗಳಿಂದ ಕೂಡಿದ ಹೊದಿಕೆಯಿದೆ. ಮೂಗು ಮೇಲ್ಮುಖವಾಗಿದ್ದು ಮೂತಿ ಉದ್ದವಾಗಿದೆ. ಕಿವಿ ಚಿಕ್ಕವು. ಇದೇ ತಳಿಯನ್ನು ಹೋಲುವ ಮತ್ತೊಂದು ತಳಿ ಅಲ್‌ವಾರಿನಲ್ಲಿ ಕಂಡುಬರುತ್ತದೆ. ಆದರೆ ಇದರಲ್ಲಿ ಗುಡ್ಡಗಾಡಿನ ಒಂಟೆಯ ಲಕ್ಷಣಗಳೂ ಇವೆ. ಉತ್ತರ ಪ್ರದೇಶದಲ್ಲಿರುವ ತಳಿಗಳು ರೋಜನ್ ತಳಿಯನ್ನು ಹೋಲುತ್ತವೆ. ೧೯೪೫ರಲ್ಲಿ ಸುಮಾರು ೬೫,೦೦೦ ಒಂಟೆಗಳು ಭಾರತದಲ್ಲಿದ್ದುವೆಂದು ವರದಿಯಾಗಿದೆ.

ಒಂಟೆಗಳಿಗೆ ಬರುವ ರೋಗಗಳು : ಒಂಟೆಗಳಿಗೆ ಬರುವ ಕೆಲವು ವಿಶಿಷ್ಟ ರೋಗಗಳಲ್ಲಿ ಸಾಮಾನ್ಯವಾದದ್ದು ಸರ್ರಾ ರೋಗ. ಇದು ಹರಡಲು ಟ್ರಿಪನೋಸೊಮ ಇವ್ಯಾನ್ಸಿ ಎಂಬ ಏಕಕೋಶಿಕ ಜೀವಿ ಕಾರಣ. ಟಬಾನಿಡೆ ಕುಟುಂಬಕ್ಕೆ ಸೇರಿದ ರಕ್ತ ಹೀರುವ ನೊಣಗಳಲ್ಲಿ ಈ ಜೀವಿಗಳು ಇರುತ್ತವೆ. ನೊಣ ತನ್ನ ಆಹಾರಕ್ಕಾಗಿ ಒಂಟೆಯ ರಕ್ತವನ್ನು ಹೀರುವಾಗ ಅದರ ಲಾಲಾರಸದಲ್ಲಿರುವ ಟ್ರಿಪನೋಸೊಮ ಇವ್ಯಾನ್ಸಿ ಜೀವಿಗಳು ಒಂಟೆಯ ರಕ್ತವನ್ನು ತಲಪುತ್ತವೆ. ಒಂದು ಒಂಟೆಯಿಂದ ಮತ್ತೊಂದು ಒಂಟೆಗೆ ಈ ರೋಗವನ್ನು ಹರಡಲು ಈ ನೊಣಗಳು ಸಹಾಯ ಮಾಡುತ್ತವೆ. ಈ ರೋಗದ ಮುಖ್ಯ ಲಕ್ಷಣಗಳೆಂದರೆ ಬಿಟ್ಟು ಬಿಟ್ಟು ಜ್ವರ ಬರುವುದು, ಕೂದಲು ಉದುರಿಹೋಗುವುದು, ನಿಶ್ಶಕ್ತಿ ಮತ್ತು ರಕ್ತಹೀನತೆ. ಪಂಜಾಬ್ ಪ್ರಾಂತ್ಯದಲ್ಲಿನ ಸುಮಾರು ೨೫% ಒಂಟೆಗಳು ಈ ರೋಗಕ್ಕೆ ತುತ್ತಾಗುತ್ತವೆ.

ಒಂಟೆಗೆ ಬರುವ ಇತರ ರೋಗಗಳು ನ್ಯುಮೋನಿಯ, ಆರ್ಟಿಕೇರಿಯ, ಮಾನ್‌ಗೇ ಮುಂತಾದ ಚರ್ಮರೋಗಗಳು, ಕ್ಷಯ, ಫಿಲೇರಿಯಾಸಿಸ್, ಏಡಿಗಂತಿ, ಒಂಟೆಸಿಡುಬು ಇತ್ಯಾದಿ.

ಒಂಟೆಯ ಉಪಯೋಗ : ಏಷ್ಯ ಖಂಡ ಮತ್ತು ಆಫ್ರಿಕ ಖಂಡಗಳ ಮರಳುಗಾಡಿನಲ್ಲಿ ಈ ಪ್ರಾಣಿಗಳ ಬಳಕೆ ಹೆಚ್ಚು. ಒಂಟೆಯ ನಾನಾ ಜಾತಿಗಳನ್ನು ಭಾರತದಲ್ಲಿ ತಳೀಕರಿಸಿ ಸುಧಾರಿಸಿದ ತಳಿಗಳನ್ನು ಕೆಲಸಕ್ಕೆ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಒಂಟೆಗಳನ್ನು ಸಾಮಾನುಗಳ ಸಾಗಾಣಿಕೆಗೆ ಬಳಸುತ್ತಾರೆ. ವ್ಯವಸಾಯ ಮಾಡಲು ಮತ್ತು ಸವಾರಿಗಾಗಿ ಒಂಟೆಗಳನ್ನು ಉಪಯೋಗಿಸುವ ಪದ್ಧತಿಯೂ ಇದೆ.

ಒಂಟೆಗಳಿಂದ ಉತ್ಪತ್ತಿಯಾಗುವ ವಸ್ತುಗಳು: ಒಂಟೆಗಳಿಂದೊದಗುವ ಅತಿ ಮುಖ್ಯ ಉತ್ಪನ್ನಗಳೆಂದರೆ ಅದರ ರೋಮ ಮತ್ತು ಹಾಲು. ರೋಮ ಬಹಳ ಬೆಲೆ ಬಾಳುತ್ತದೆ. ಇದು ಮೃದು ಮತ್ತು ಹಗುರವಾಗಿದೆ. ಬಾಳಿಕೆ ಹೆಚ್ಚು. ದೇಹದ ಉಷ್ಣತೆಯನ್ನು ಚೆನ್ನಾಗಿ ಹಿಡಿದಿಡುತ್ತದೆ. ಭಾರತದ ಒಂಟೆಗಳ ರೋಮಗಳು ಮೇ ತಿಂಗಳಿಂದ ಜೂನ್ ತಿಂಗಳವರೆಗೆ ಉದುರುತ್ತವೆ. ಆಗ ಇವನ್ನು ಶೇಖರಿಸಲಾಗುತ್ತದೆ. ಅಲ್ಲದೆ ವರ್ಷಕ್ಕೊಮ್ಮೆ ಕತ್ತರಿಸಿಯೂ ಶೇಖರಿಸುತ್ತಾರೆ. ಬೆನ್ನು, ಕುತ್ತಿಗೆ ತೊಡೆ ಮತ್ತು ಕಾಲುಗಳಲ್ಲಿನ ರೋಮಗಳು ಉದ್ದವಾಗಿದ್ದು ಉಪಯೋಗಕ್ಕೆ ಬರುತ್ತವೆ. ಶೀತವಲಯದ ಒಂಟೆಗಳು ವರ್ಷಕ್ಕೆ ೫ ಕಿಗ್ರಾಂ ರೋಮ ಕೊಡುವುದುಂಟು. ಆದರೆ ಭಾರತದಲ್ಲಿ ಕೇವಲ ೧ ಕಿಗ್ರಾಂ ಮಾತ್ರ ರೋಮ ಸಿಕ್ಕುತ್ತದೆ. ಈ ರೋಮಗಳಿಂದ ಮೇಲುಹಾಸು, ಕಂಬಳಿ ಮತ್ತು ಕೋಟು, ಗೌನುಗಳು ಮುಂತಾದುವನ್ನು ನೇಯುತ್ತಾರೆ. ಇವು ಇತರ ಉಣ್ಣೆಯ ಪದಾರ್ಥಗಳಿಗಿಂತ ಉತ್ತಮವಾಗಿವೆ.

ಒಂಟೆಯ ಹಾಲು ಅತ್ಯುತ್ತಮ ಆಹಾರ. ಎಮ್ಮೆ ಅಥವಾ ಹಸುವಿನ ಹಾಲಿನ ಹಾಗೆ ಇದನ್ನು ಬಳಸಬಹುದು. ಆರೋಗ್ಯವಾಗಿರುವ ಒಂಟೆ ಒಂದು ದಿವಸದಲ್ಲಿ ೫ ಲೀ ಹಾಲು ಕೊಡುತ್ತದೆ. ಇದರಲ್ಲಿ ಕೊಬ್ಬು ಬಲು ಕಡಿಮೆ. ಆದರೆ ನೈಟ್ರೊಜನ್ ಅಂಶಗಳು ಬಲು ಹೆಚ್ಚು. ಹಾಲಿಗೆ ಒಂದು ವಿಶೇಷ ರೀತಿಯ ವಾಸನೆ ಇದೆ. ಇದರ ಸೇವನೆ ಕೆಲವರಲ್ಲಿ ವಿರೇಚನವನ್ನುಂಟು ಮಾಡುತ್ತದೆ. ಇದರ ಸೇವನೆಯಿಂದ ಗುಲ್ಮರೋಗಗಳ ನಿವಾರಣೆಯಾಗುತ್ತದೆಯೆಂಬ ನಂಬಿಕೆ ಇದೆ. ಒಂಟೆಯ ಹಾಲಿನ ಹಲ್ವವನ್ನು ಪರ್ಷಿಯ ದೇಶದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತದೆ. ರಾಜಾಸ್ಥಾನ, ಪಂಜಾಬು ಮುಂತಾದ ಕಡೆಗಳಲ್ಲಿ ಮಕ್ಕಳು ಒಂಟೆಹಾಲು ಕುಡಿದೇ ಬೆಳೆಯುತ್ತವೆ. ಒಂಟೆಯ ಚರ್ಮ ಹೆಚ್ಚಿನ ಉಪಯೋಗಕ್ಕೆ ಬರುವುದಿಲ್ಲ. ಚರ್ಮದ ಪೆಟ್ಟಿಗೆಗಳು, ಪಟ್ಟಿಗಳು ಮುಂತಾದುವನ್ನು ಇದರಿಂದ ತಯಾರಿಸುತ್ತಾರೆ. ಇದರ ಚರ್ಮದ ಚೀಲಗಳಲ್ಲಿ ಎಣ್ಣೆ, ತುಪ್ಪ ಮುಂತಾದವುಗಳನ್ನು ಶೇಖರಿಸುತ್ತಾರೆ. (ಎಲ್.ಎಸ್.ಜಿ.)

**ಒಂಟೆಯ ವಿಕಾಸ:** ಮರುಭೂಮಿಯ ಹಡಗೆಂದು ಪ್ರಸಿದ್ಧಿಯಾಗಿರುವ ಒಂಟೆಯು (ಸಮಸಂಖ್ಯೆಯ ಬೆರಳುಳ್ಳ ಸಸ್ತನಿಗಳು) ಆರ್ಟಿಯೊಡ್ಯಾಕ್ಟೈಲ ಎಂಬ ಗಣದ ಉಪಗಣವಾದ ಟೈಲೊಪೋಡಕ್ಕೆ ಸೇರಿದೆ. ಅಂದು ಕೂಡ ಇದೇ ಉಪಗಣದ ಪ್ರಾಣಿ. ಈ ಎರಡು ಪ್ರಾಣಿಗಳಿಗೂ ಅನೇಕ ಹೋಲಿಕೆಗಳಿದ್ದರೂ ಲಾಮದಲ್ಲಿ ಎಣ್ಣೆಯಂತಹ ಕೂದಲಿದೆ ಮತ್ತು ಒಂಟೆಯಲ್ಲಿ ಕಾಣುವ ಡುಬ್ಬ (ಹಂಪ್) ಇಲ್ಲ. ದಕ್ಷಿಣ ಅಮೆರಿಕದಲ್ಲಿ ವಾಸಿಸುವ ಈ ಪ್ರಾಣಿಯು ಒಂಟೆಯ ವಿಕಾಸದ ಚರಿತ್ರೆಯಲ್ಲಿ ನಿಕಟ ಸಂಬಂಧವನ್ನು ಪಡೆದಿರುವುದರಿಂದ ಈ ಪ್ರಾಣಿಯನ್ನು ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸುವುದು ಸಮಂಜಸ.

ಒಂಟೆಯು ಉದ್ಭವಿಸಿದ್ದೂ, ಹೆಚ್ಚು ಪರಿಣಾಮಕಾರಿ ಬದಲಾವಣೆಗಳು ಕಂಡು ಬರುವ ಹಂತಗಳನ್ನು ಮುಟ್ಟಿದ್ದು ಉತ್ತರ ಅಮೆರಿಕದಲ್ಲಾದರೂ ಅವುಗಳು ಅಲ್ಲೇ ಏಕೆ ನೆಲಸಲಿಲ್ಲ, ಬೇರೆ ಖಂಡಗಳಿಗೆ, ಏಕೆ ವಲಸೆ ಹೋಗಬೇಕಾಯಿತು ಎಂಬ ಪ್ರಶ್ನೆಗಳಿಗೆ ಸಮಂಜಸ ಉತ್ತರ ಇನ್ನೂ ದೊರೆತಿಲ್ಲ.

ಇವು ಮೆಲುಕು ಹಾಕುವ ಪ್ರಾಣಿಗಳಾದರೂ ರೂಮಿನೆಂಷಿಯಾಕ್ಕೆ ಸೇರಿಲ್ಲ. ಇದಕ್ಕೆ ಇವುಗಳ ವಂಶದ ಮೂಲವೇ ಕಾರಣ.

ಯಾವುದೇ ಪ್ರಾಣಿಯ ವಿಕಾಸವನ್ನು ತಿಳಿಯಲು ಪ್ರಯತ್ನಿಸಿದಾಗ ಮೊದಲಿಗೆ ಆ ಪ್ರಾಣಿಯ ಇಂದಿನ ರೂಪ, ಲಕ್ಷಣಗಳನ್ನು ತಿಳಿದು ನಂತರ ಈ ಲಕ್ಷಣಗಳು ಹೇಗೆ ಏತಕ್ಕಾಗಿ ವಿವಿಧ ಹಂತಗಳಲ್ಲಿ ಮೂಡಿದವು ಎಂಬುದನ್ನು ತಿಳಿಯಬೇಕು.

ಇಂದಿನ ಒಂಟೆಯ ಮುಖ್ಯ ಲಕ್ಷಣಗಳನ್ನು ಕೆಳಕಂಡಂತೆ ನಮೂದಿಸಬಹುದು.

1) ಕಾಲುಗಳು ನೀಳವಾಗಿದ್ದು ಮೂರನೆ ಮತ್ತು ನಾಲ್ಕನೆ ಬೆರಳುಗಳು ಮಾತ್ರ ಉಳಿದಿವೆ.

2) ಅಂಗೈ ಎಲುವುಗಳು (ಮೆಟಕಾರ್ಪಲ್‌ಗಳು) ಮತ್ತು ಅಂಗಾಲೆಲವುಗಳು (ಮೆಟಟಾರ್ಸಲ್‌ಗಳು) ಏಕೀಭವಿಸಿ ಕ್ಯಾನನ್ ಬೋನ್ ಆಗಿ ಬದಲಾವಣೆಯಾಗಿದೆ.

3) ಗೊರಸಿಗೆ ಬದಲು ಉಗುರುಗಳಿದ್ದು ಕಾಲ ಕೊನೆಯಲ್ಲಿ ಮೆತ್ತೆಗಳಿರುವುದರಿಂದ ಮರಳ ಮೇಲೆ ಓಡಾಡಲು ಸುಲಭ.

4) ಮರಿಯಾಗಿದ್ದಾಗ ಮೇಲು ದವಡೆಯಲ್ಲಿ ಮೂರು ಜೊತೆ ಬಾಚಿ ಹಲ್ಲುಗಳಿರುತ್ತವೆ. ಆದರೆ ಬೆಳೆದ ಒಂಟೆಯಲ್ಲಿರುವುದು ಒಂದು ಜೊತೆ ಮಾತ್ರ. ಕೆಳದವಡೆಯಲ್ಲಿ ಬಾಚಿ ಹಲ್ಲಿ ನಂತಹ ಮೂರು ಜೊತೆ ಹಲ್ಲುಗಳಿದ್ದು ಹುಲ್ಲು ಕಡಿಯಲು ಸಹಾಯಕವಾಗಿದೆ. ಕೋರೆಹಲ್ಲು ಮತ್ತು ಎರಡು ದವಡೆಗಳಲ್ಲೂ ಎರಡು ಪ್ರಿಮೋಲಾರ್‌ಗಳಿವೆ. ದವಡೆ ಹಲ್ಲು ಸೊಲೆನೊಡಾಂಟ್ ರೀತಿಯವು.

5) ಹೊಟ್ಟೆಯಲ್ಲಿ ಮೂರು ಭಾಗಗಳಿವೆ ಮತ್ತು ನೀರನ್ನು ಸಂಗ್ರಹಿಸಬಲ್ಲ ಚೀಲಗಳುಂಟು.

6) ಕ್ಯಾಮಲಸ್ ಡ್ರಾಮಿಡೇರಿಯಸ್‌ನಲ್ಲಿ ಒಂದು ಡಿಬ್ಬವೂ, ಕ್ಯಾಮೆಲಸ್ ಬ್ಯಾಕ್ಟ್ರಿಯಾನಸ್‌ನಲ್ಲಿ ಎರಡು ಡಿಬ್ಬಗಳೂ ಇವೆ.

ಒಂಟೆಯ ವಿಕಾಸದ ವೇಳೆಯಲ್ಲಾದ ಪರಿಣಾಮಕಾರಿ ವ್ಯತ್ಯಾಸಗಳನ್ನು ಈ ರೀತಿ ಪಟ್ಟಿ ಮಾಡಬಹುದು.

1) ದೇಹದ ಗಾತ್ರ ಕ್ರಮೇಣ ಹೆಚ್ಚಿತು.

2) ಪಕ್ಕದ ಬೆರಳುಗಳು ಕ್ರಮೇಣ ಚಿಕ್ಕದಾಗುತ್ತಾ ಬಂದು ಕೊನೆಗೆ ನಿಶ್ಶೇಷವಾದುವು.

3) ಕ್ಯಾನನ್ ಎಲುಬಿನ ಸ್ಥಾಪನೆಯಾಯಿತು.

4) ಗೊರಸಿನ ಮೇಲೆ ಚಲಿಸುವ (ಉಂಗೂಲಿಗ್ರೇಡ್) ವ್ಯವಸ್ಥೆಯಿಂದ ಅಂಗುಲಿಗಾಮಿ (ಡಿಜಿಟಿಗ್ರೇಡ್) ಯಾಗಿ ಪರಿವರ್ತನೆ ಮತ್ತು

5) ಹಲ್ಲುಗಳ ಸಂಖ್ಯೆ ಕಡಿಮೆಯಾಗುತ್ತ ಬಂದಿತು.

ಈಗ ವಿಕಾಸದ ವಿವಿಧ ಹಂತಗಳನ್ನು ಪರಿಶೀಲಿಸೋಣ.

ಪ್ರೋಟಿಲೋಪಸ್: ಚಿಕ್ಕ ದೇಹದ ಪುಟ್ಟ ಕೈಕಾಲುಗಳಿದ್ದ ಮೇಲಿನ ಇಯೋಸೀನ್ ಕಾಲದ ಪ್ರಾಣಿ. ಬಹುಶಃ ಈ ವಂಶಕ್ಕೆ ಆದಿ. ಈ ಪ್ರಾಣಿಗೆ ಮುಂಗಾಲಿನಲ್ಲಿ 4 ಬೆರಳುಗಳಿದ್ದುವು. ಪೂರ್ತಿ ಸಂಖ್ಯೆ ಹಲ್ಲುಗಳು ಅಂದರೆ 44 ಹಲ್ಲುಗಳಿದ್ದವು. ಮುಂಗಾಲುಗಳು ಹಿಂಗಾಲಿಗಿಂತ ಚಿಕ್ಕದಾಗಿದ್ದುವು.

ಈ ಪ್ರಾಣಿಯಾದ ಮೇಲೆ ಬಂದ ಪ್ರಾಣಿಗಳಲ್ಲಿ ಕಂಡು ಬಂದ ಶೀಘ್ರ ಬದಲಾವಣೆ ಎಂದರೆ ಚಿಕ್ಕದಾಗುತ್ತಿದ್ದ ಪಕ್ಕ ಬೆರಳುಗಳು ಪೂರ್ಣ ಅದೃಶ್ಯವಾದದ್ದು. ಹೀಗಾಗಿ ಆಲಿಗೋಸಿನ್ ಕಾಲಕ್ಕಾಗಲೆ ಎರಡೇ ಬೆರಳುಗಳುಳ್ಳ ಒಂಟೆಗಳಿದ್ದುವು. ಮುಂದಿನ ಮತ್ತೊಂದು ಮುಖ್ಯ ಬದಲಾವಣೆ ಕಂಡು ಬಂದದ್ದು ಕಾಲಿನ ರಚನೆಯಲ್ಲಿ. ಏಕೆಂದರೆ ಅಂಗೈ ಎಲುವು (ಮೆಟಾ ಕಾರ್ಪೆಲ್ಸ್) ಮತ್ತು ಅಂಗಾಲೆಲುವುಗಳು (ಮೆಟಾಟಾರ್ಸಲ್ಸ್) ಏಕೀಭವಿಸಿ ಕ್ಯಾನನ್ ಎಲುವು (ಕ್ಯಾನನ್ ಬೋನ್) ಆಯಿತು. ಕಾಲು ಈಗ ಹೆಚ್ಚು ಉದ್ದವಾದ್ದರಿಂದ ಓಡಲು ಅನುಕೂಲವಾಯಿತು. ಕತ್ತು ಕೂಡ ಹೆಚ್ಚು ಹೆಚ್ಚು ಉದ್ದವಾಗುತ್ತ ಬಂತು.

ಪೀಟ್ರೋಥೇರಿಯಂ: ಪ್ರಾಯಶ ಇನ್ನೂ ಗೊರಸನ್ನೆ ಪಡೆದಿದ್ದ ಕುರಿಯ ಉತ್ತರದ ಈ ಪ್ರಾಣಿ ಉತ್ತರ ಅಮೆರಿಕದ ಆಲಿಗೋ ಸೀನ್‌ನಲ್ಲಿ ನೋಡುತ್ತೇವೆ. ಪಕ್ಕದ ಬೆರಳುಗಳನ್ನು

ಕಳೆದುಕೊಂಡಿತ್ತಾದರೂ ಪೂರ್ಣದಂತ ಪಂಕ್ತಿಯನ್ನು ಪಡೆದಿತ್ತು. ಮೇಲಿನ ದವಡೆಹಲ್ಲುಗಳ ವಸಡಿನ ಮೇಲ್ಭಾಗ (ಗೌನ್) ಇನ್ನೂ ತಗ್ಗಿದ್ದರೂ ಕೆಳ ದವಡೆಯ ಹಲ್ಲುಗಳ ವಸಡಿನ ಮೇಲ್ಭಾಗ ಎತ್ತರಕ್ಕೆ ಬೆಳೆದಿತ್ತು.

ಪ್ರೋಟೋಮೆರಿಕ್ಸ್: ಮಯೋಸಿನ್ ಕಾಲದಲ್ಲಿ ಈ ಪ್ರಾಣಿಗೂ ಪೂರ್ಣದಂತ ವಿನ್ಯಾಸವಿತ್ತು. ಇವು ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದ ಪ್ರಾಣಿ. ಕಾಲಿನಲ್ಲಿ ಗೊರಸುಗಳಿದ್ದು ಎರಡೇ ಬೆರಳುಗಳಿದ್ದುವು.

ಪ್ರೊಕ್ಯಾಮಲಸ್ ಮೇಲಿನ ಮಯೋಸೀನ್ ಕಾಲದಲ್ಲಿತ್ತು. ಈ ಪ್ರಾಣಿ ದೊಡ್ಡದಾದ ಮೇಲೆ ಮೊದಲನೇ ಮತ್ತು ಎರಡನೇ ಬಾಚಿ ಹಲ್ಲುಗಳು ಮಾಯವಾದ್ದರಿಂದ ಹಲ್ಲುಗಳ ಸಂಖ್ಯೆ ಕಡಿಮೆಯಾಯಿತು. ಇಂದಿನ ಲಾಮಗಳಿಗಿಂತ ಹೆಚ್ಚು ದೃಢಕಾಯವಾಗಿದ್ದ ಈ ಒಂಟೆಗೆ ಕಾಲಿನಲ್ಲಿ ಮೆತ್ತೆಗಳಿದ್ದುದರಿಂದ ಮೊದಲಬಾರಿಗೆ ಮರಳು ಭೂಮಿಯ ಜೀವನಕ್ಕೆ ಹೊಂದಾಣಿಕೆ ಕಂಡು ಬಂತು. ಈ ಪ್ರಾಣಿಗೂ ಕ್ಯಾನನ್ ಎಲುಬಿತ್ತು.

ಟರ್ಷಿಯರಿ ಉತ್ತರಾರ್ಧದಲ್ಲಿ ಉತ್ತರ ಅಮೆರಿಕದಲ್ಲಿ ಒಂಟೆಗಳು ತೀರ ಹೆಚ್ಚಿನ ಸಂಖ್ಯೆಯಲ್ಲಿದ್ದದ್ದೂ ಅಲ್ಲದೆ ಈ ಗುಂಪಿನ ಕವಲುಗಳಿಗೆ ಸೇರಿದಂತೆ ಅನೇಕ ಪ್ರಾಣಿಗಳಿದ್ದುವು. ಅವುಗಳಲ್ಲಿ ಮುಖ್ಯವಾದವು ಗ್ಯಾಜೆಲ್ ಕ್ಯಾಮಲ್ಸ್ ನಂತಹ ಸ್ಟೀನೋಮೈಲಸ್ ಮತ್ತು ಜಿರಾಫೆ ಕ್ಯಾಮಲ್ಸ್ ನಂತಃ ಆಕ್ಸಿಡ್ಯಾಕ್ಟೈಲಸ್. ಜಿರಾಫೆ ಕ್ಯಾಮಲ್ಸ್ ಗಳಿಗೆ ಕತ್ತು ಮತ್ತು ಕೈಕಾಲುಗಳು ಹೆಚ್ಚು ಉದ್ದವಾಗಿದ್ದವು.

ಮಯೋಸೀನ್ ಕಾಲದಲ್ಲಿ ಆಲ್ಫಿಕ್ಯಾಮಲಸ್ ಎಂಬ ಜಿರಾಫೆ ಕ್ಯಾಮಲ್ ಇತ್ತು. ಇದಕ್ಕೆ ಚಿಕ್ಕ ತಲೆಯೂ 44 ಹಲ್ಲುಗಳೂ ಇದ್ದವು.

ಟರ್ಷಿಯರಿ ಕೊನೆಗೆ ನಿಜವಾದ ಒಂಟೆಗಳು ಪೂರ್ವಾರ್ಧ ಗೋಳವನ್ನು ತಲುಪಿ ಪ್ಲೀಸ್ಟೋಸೀನ್ ಕಾಲದಲ್ಲಿ ಎಲ್ಲೆಡೆಗೂ ಹರಡಿದುವು ಇಂದಿನ ಒಂಟೆಯು ಪ್ರೊಕ್ಯಾಮಲಸ್‌ನಲ್ಲಿದ್ದ ಪ್ರಿಮೋಲಾರ್‌ಗಳಲ್ಲಿ ಮೇಲು ದವಡೆಯಲ್ಲಿ ಒಂದನ್ನೂ ಕೆಳದವಡೆಯಲ್ಲಿ ಎರಡನ್ನೂ ಕಳೆದುಕೊಂಡಿದೆ.

ಬೇರಿಂಗ್ ಜಲಸಂಧಿಯ ಹತ್ತಿರದ ಭೂಸೇತುವೆಯ ಮೂಲಕ ಒಂಟೆಗಳು ಪೂರ್ವಾಭಿಮುಖವಾಗಿ ವಲಸೆ ಬಂದಂತೆ ಲಾಮಗಳು ಅದೇ ಕಾಲದಲ್ಲಿ ದಕ್ಷಿಣ ಅಮೆರಿಕವನ್ನು ತಲುಪಿದವು.

ಬೇರೆ ಕಡೆಯಿಂದ ತಂದ ಒಂಟೆಗಳನ್ನು ಉತ್ತರ ಅಮೆರಿಕದ ಪಶ್ಚಿಮ ಮರುಭೂಮಿ ಪ್ರದೇಶಗಳಲ್ಲಿ ಬಿಟ್ಟಾಗ ಅವು ಸುಖವಾಗಿ ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿವೆ ಮತ್ತು ಹೊಂದಾಣಿಕೆಯನ್ನೂ ತೋರಿಸಿವೆ. ಇಂತಹ ಪ್ರಾಣಿಗಳು ಯಾವ ಕಾರಣ ಆ ಪ್ರದೇಶವನ್ನು ಬಿಟ್ಟು ಬೇರೆ ಕಡೆಗೆ ವಲಸೆ ಹೋದವು ಎಂಬುದು ಇನ್ನೂ ಪ್ರಶ್ನಾರ್ಥಕವಾಗಿಯೇ ಉಳಿದಿವೆ. ***

**ಒಂಟೆಹುಳು:** ಡಿಕ್ಟಿಯಾಪ್ಟೆರ ಗಣದ ಮ್ಯಾಂಟಿಡೆ ಉಪಗಣದ ಸದಸ್ಯ. ಆಂಗ್ಲ ಭಾಷೆಯಲ್ಲಿ ಮ್ಯಾಂಟಿಸ್ ಅಥವಾ ಪ್ರೇಯಿಂಗ್ ಮ್ಯಾಂಟಿಸ್ ಎನ್ನುವರು. ಮಳ್ಳಿ ಕೀಟವೆನ್ನುವ ಒಂಟೆಹುಳು ಬೇಲಿ, ಹಸಿರು ಗಿಡಮರಗಳು, ಹುಲ್ಲು ನೆಲಗಳಲ್ಲಿ ವಾಸಿಸುತ್ತದೆ. ಇದು ಕೀಟಭಕ್ಷಕ. ಬೇರೆ ಜಾತಿಯ ಸಣ್ಣ–ಸಣ್ಣ ಕೀಟಗಳನ್ನು ತಿನ್ನುತ್ತದೆ. ಶರೀರ ನೀಳವಾಗಿದೆ. ಉದ್ದವಾದ ಮುಂಗಾಲುಗಳು ಆಹಾರಕೀಟಗಳನ್ನು ಹಿಡಿದೆಳೆದುಕೊಳ್ಳುವಂತೆ ಮಾರ್ಪಾಟಾಗಿವೆ. ಇದು ವಾಸಿಸುವ ಸ್ಥಳಕ್ಕನುಗುಣವಾಗಿ ದೇಹದ ಬಣ್ಣ ಹೊಂದಿದೆ.



ಒಂಟೆಹುಳು

ದೇಹದ ಮೇಲೆ ಹಸಿರು ಬಣ್ಣವೇ ಹೆಚ್ಚು. ಈ ಕೀಟ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿಕೊಂಡು ಅಲುಗಾಡದೆ ನಿಂತಿದ್ದು ಮುಂದೆ ಸುಳಿಯುವ ಸಣ್ಣ ಕೀಟ ಮತ್ತು ಹುಳುಗಳ ಮೇಲೆ ಫಕ್ಕನೆ ಎರಗಿ ಹಿಡಿದು ಸೇವಿಸುತ್ತದೆ. ನೊಣ, ಚಿಟ್ಟೆ, ಚಿಟ್ಟೆಯ ಮರಿಗಳು ಇದರ ಆಹಾರ. ಒಂಟೆಹುಳುವಿಗೆ ಎರಡು ಸಂಯುಕ್ತ ನೇತ್ರಗಳ ಜೊತೆಗೆ ಮೂರು ಸರಳ ನೇತ್ರಗಳಿವೆ. ಈ ಹುಳು ತನ್ನ ಮೊಟ್ಟೆಗಳನ್ನು ಸ್ಪಂಜಿನಂಥ ಚೀಲಗಳಲ್ಲಿಡುತ್ತದೆ. ಈ ಚೀಲಗಳನ್ನು ಸಣ್ಣ ಗಿಡಗಳ ರೆಂಬೆಗೆ ಅಂಟಿಸುತ್ತದೆ. ಮೊಟ್ಟೆ ಚೀಲದಿಂದ ಮರಿ ಒಂಟೆಹುಳಗಳು ಹೊರ ಬಂದು ವಿವಿಧ ಸಸ್ಯಗಳ ಮೇಲೆ ವಾಸಿಸುತ್ತವೆ. ***

**ಒಕಾಪಿ:** ಆಫ್ರಿಕದ ಉಷ್ಣವಲಯದ ಕಾಡುಗಳಲ್ಲಿ ಜೀವಿಸುವ ಜಿರಾಫೆಗಳ ಕುಲಕ್ಕೆ ಸೇರಿದ ಒಂದು ಅಪೂರ್ವವಾದ ಪ್ರಾಣಿ. ಕಾಂಗೋವಿನ ಸೆಮ್ಲಿಕಿ ಅರಣ್ಯದಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಒಕಾಪಿಯ ಜಾನ್‌ಸ್ಟೋನಿ ಎಂಬುದು ಇದರ ವೈಜ್ಞಾನಿಕ ಹೆಸರು. ಇದರ ಗಾತ್ರ ದೊಡ್ಡದು; ಮೈಮೇಲೆ ದೊಡ್ಡದಾಗಿ ಎದ್ದು ಕಾಣುವ ಗೆರೆಗಳಿವೆ. ಆದರೂ ಇಂಥ ಪ್ರಾಣಿ ಒಂದಿದೆಯೆಂಬ ತಿಳಿವಳಿಕೆ ವಿಜ್ಞಾನ ಪ್ರಪಂಚಕ್ಕೆ ೧೯೦೦ರ ವರೆಗೂ ಇರಲಿಲ್ಲ. ಇದನ್ನು ಲೋಕಕ್ಕೆ ತಿಳಿಸಿದಾತ ಹ್ಯಾರಿ ಎಚ್. ಜಾನ್‌ಸನ್. ಇಟೂರಿ ಕಾಡಿನ ಗುಜ್ಜಾರಿಗಳು ಈ ಪ್ರಾಣಿಗಳ ಜಾಡುಗಳನ್ನು ಪತ್ತೆಹಚ್ಚುವುದರಲ್ಲಿ ತುಂಬಾ ನಿಸ್ಸೀಮರು.

ಇದು ಜಿರಾಫೆಗಿಂತ ಸಣ್ಣದು. ಜಿರಾಫೆಯಂತೆ ಕೂದಲು ಮತ್ತು ಚರ್ಮ ಮುಚ್ಚಿರುವ ಕೊಂಬುಗಳಿವೆ. ಎರಡಕ್ಕೂ ಉದ್ದವೂ ಹಿಡಿತವುಳ್ಳವೂ ಆದ ನಾಲಗೆಗಳೂ ಸೀಳು ಗೊರಸುಗಳೂ ಉಂಟು. ಸದ್ದು ಮಾಡದಿರುವುದೇ ಇವಕ್ಕೆ ರೂಢಿ. ಎತ್ತರ ೧.೫–೧.೬೫ ಮೀ. ವರೆಗೆ. ತಲೆ ಜಿರಾಫೆಯಂತೆಯೇ ಇದೆ. ತೆಳುವಾದ ಚಪ್ಪಿನಂಥ ದೊಡ್ಡ ಕಿವಿಗಳಿವೆ. ಮೈಬಣ್ಣ ಕಂದು ಅಥವಾ ನೀಲಿಗೆಂಪು. ಹಿಂಭಾಗದಲ್ಲಿ ಬಿಳಿಗೀರುಗಳೂ ಮುಖ, ಕಾಲುಗಳ ಮೇಲೆ ಬಿಳಿ ಪಟ್ಟೆಗಳೂ ಇವೆ. ಹೆಣ್ಣುಗಳಿಗೆ ಕೊಂಬಿಲ್ಲ. ಆದರೆ ಗಾತ್ರ ದೊಡ್ಡದು. ಗೊರಸಿನ ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಹೀಗಿರುವುದಿಲ್ಲ.

ಮರದೆಲೆಗಳನ್ನು ಚಿವುಟಿಕೊಳ್ಳಲು ತನ್ನ ತುಂಬಾ ಉದ್ದವಾದ ತಿರುಚಿ ನಾಲಗೆಯನ್ನು ಉಪಯೋಗಿಸುತ್ತದೆ. ಹಗಲಿನಲ್ಲಿ ಕಾಡಿನ ನೀರಿರುವ ಗಹ್ವರಗಳಲ್ಲಿರುತ್ತದೆ. ಮೇಯುವಾಗ ಶತ್ರುಗಳು ಹಠಾತ್ತನೆ ಮೇಲೆರಗದಂತೆ ಸದ್ದಿನ ಸುಳಿವು ಸಿಗುವ ದೊಡ್ಡ ಒಂಟಿಮರಗಳನ್ನಿದು ಆಶ್ರಯಿಸುತ್ತದೆ. ಇದಕ್ಕೆ ಜಿರಾಫೆಯಷ್ಟು ತೀಕ್ಷ್ಣ ದೃಷ್ಟಿಯಿಲ್ಲ. ಆದರೆ ಶಬ್ದಗ್ರಹಣಶಕ್ತಿ ಚುರುಕಾಗಿದೆ. ತುತ್ತೂರಿ ಆಕಾರದ ಕಿವಿಗಳೇ ಇದನ್ನು ಸೂಚಿಸುತ್ತವೆ. ಇದರ ಆಹಾರ ಮರದ ಕೆಳಗಣ ಎಳೆಬಳ್ಳಿಗಳ ಎಲೆಗಳು. ಇದು ಹುಲ್ಲನ್ನು ಮುಟ್ಟುವುದಿಲ್ಲ.

ಒಕಾಪಿಗಳು ಒಂಟಿಯಾಗಿಯೋ ಜೋಡಿಯಾಗಿಯೋ ಇರುತ್ತವೆ. ಪುಕ್ಕಲು ಮತ್ತು ಸಾಧುಸ್ವಭಾವದ ಈ ಪ್ರಾಣಿಗಳ ಸಂಚಾರ ರಾತ್ರಿಯಲ್ಲಿ. ಇವು ಏಕಾಂತವನ್ನು ಪ್ರೀತಿಸುತ್ತವೆ. ಕಾಂಗೋ ಕಾಡಿನ ದುರ್ಗಮವೂ ದುರ್ಭೇದ್ಯವೂ ಆದ ಪ್ರದೇಶಗಳಲ್ಲಿ ಇವು ವಾಸಮಾಡುತ್ತವೆ. ಕಾಡಿನ ಅಂಚಿನಲ್ಲಿ ನೆಲೆಸಿರುವ ಗುಜ್ಜಾರಿಗಳೂ ಕೆಲವು ಬಾಂಟು ಕುಲದವರೂ ಇವುಗಳ ನೆಲೆಯನ್ನು ಪತ್ತೆಹಚ್ಚಿ, ಬೇಟೆಯಾಡಿ, ಇವುಗಳ ಮಾಂಸ ತುಂಬ ರುಚಿ ಎಂದು ಕಂಡುಕೊಂಡಿದ್ದರು. ಬಹು ಹಿಂದೆಯೇ ಬೆಲ್ಜಿಯಂ ಸರ್ಕಾರ ಈ ಅಪೂರ್ವ ಪ್ರಾಣಿ ನಾಶವಾಗದಂತೆ ಕಾಪಾಡುವುದಕ್ಕಾಗಿ ಕಾನೂನುಗಳನ್ನು ಮಾಡಿತ್ತು. ಇಟೂರಿ ಕಾಡಿನ ಮಧ್ಯದಲ್ಲಿ ಎಪುಲು ಎಂಬೆಡೆಯಲ್ಲಿರುವ ಒಕಾಪಿ ಕ್ಷೇತ್ರದಲ್ಲಿ ಬೇಟೆಯ ಇಲಾಖೆಯವರು ಇವುಗಳ ವಿಷಯದಲ್ಲಿ ವಿಸ್ತಾರವಾದ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಪ್ರಪಂಚದ ಅನೇಕ ಪ್ರಾಣಿಸಂಗ್ರಹಾಲಯಗಳಲ್ಲಿ ಇವನ್ನು ಯಶಸ್ವಿಯಾಗಿ ಸಾಕುತ್ತಿದ್ದಾರೆ. ಅಲ್ಲಿ ಇವು ಮರಿಗಳನ್ನೂ ಹಾಕುತ್ತಿವೆ. ಹೆಣ್ಣು ಒಕಾಪಿ ಪ್ರತಿ ೪೦ ದಿವಸಗಳಿಗೊಮ್ಮೆ ಬೆದೆಗೆ ಬರುತ್ತದೆ. ೪೨೫ ದಿನಗಳ ಗರ್ಭವಾಸದ ಅನಂತರ ಮರಿ ಹುಟ್ಟುತ್ತದೆ. ತಾಯಿ ಅದನ್ನು ೩–೪ ತಿಂಗಳ ತನಕ ಹಾಲುಣಿಸಿ ಸಾಕುತ್ತದೆ. ***

**ಒಚಾವಾ, ಸೆವಿರೋ (1905–1985):** ಸ್ಪ್ಯಾನಿಷ್ ಅಮೆರಿಕನ್ ಜೀವ ವಿಜ್ಞಾನಿ. ವೈದ್ಯಕೀಯ ವಿಜ್ಞಾನ ವಿಭಾಗದ ನೊಬೆಲ್ ಪ್ರಶಸ್ತಿ ವಿಜೇತ (1959).



ಸ್ಪೇನ್ ದೇಶದ ಉತ್ತರ ತೀರದ ಅಸ್ಟುರಿಯಾ ಜಿಲ್ಲೆಯ ಲಾರ್ಕಾ ಎಂಬ ಹಳ್ಳಿಯಲ್ಲಿ ಮೂರು ಜನ ಸಹೋದರರು ಮತ್ತು ಮೂರು ಜನ ಸಹೋದರಿಯರನ್ನೊಳಗೊಂಡ ಸಂಸಾರದಲ್ಲಿ ಕಡೆಯವನಾಗಿ ಹುಟ್ಟಿದ. ತಂದೆ ವಕೀಲ. ಒಚಾವಾ ಏಳು ವರ್ಷದ ಬಾಲಕನಾಗಿದ್ದಾಗಲೇ ಆತನ ತಂದೆ ತೀರಿಕೊಂಡ. ಮುಂದೆ ಈ ಕುಟುಂಬ ಸ್ಪೇನಿನ ದಕ್ಷಿಣ ತೀರದಲ್ಲಿರುವ ಮಲಾಗ ಎಂಬ ಊರಿಗೆ ಹೋಯಿತು. ಇಲ್ಲಿಯೇ ಒಚಾವಾನ ವಿದ್ಯಾಭ್ಯಾಸದ ಮೊದಲನೆಯ

ಘಟ್ಟ ಮುಗಿದದ್ದು. 1921ರಲ್ಲಿ ಈತ ಬ್ಯಾಚೆಲರ್ ಆಫ್ ಆರ್ಟ್ಸ್ ಪದವಿ ಪಡೆದು ಮರುವರ್ಷ ಮ್ಯಾಡ್ರಿಡ್ ವಿಶ್ವವಿದ್ಯಾಲಯದ ಮೆಡಿಕಲ್ ಸ್ಕೂಲನ್ನು ಸೇರಿ 1929ರಲ್ಲಿ ಡಾಕ್ಟರ್ ಆಫ್ ಮೆಡಿಸನ್ ಪದವಿ ಗಳಿಸಿದ.

ಒಚಾವಾ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಲೇ ದೇಹಶಾಸ್ತ್ರದ (ಫಿಸಿಯಾಲಜಿ) ಪ್ರಯೋಗಶಾಲೆಯಲ್ಲಿ ಬೋಧಕನಾಗಿಯೂ ನೇಮಕಗೊಂಡಿದ್ದ. 1931ರಲ್ಲಿ ವೈದ್ಯಶಾಲೆಯಲ್ಲಿ ದೇಹಶಾಸ್ತ್ರ ಮತ್ತು ಜೈವಿಕ ರಸಾಯನವಿಜ್ಞಾನದ ಅಧ್ಯಾಪಕನಾಗಿಯೂ 1935ರಲ್ಲಿ ಮ್ಯಾಡ್ರಿಡ್ ವಿಶ್ವವಿದ್ಯಾಲಯದ ನೂತನ ವೈದ್ಯಕೀಯ ಸಂಶೋಧನ ಸಂಸ್ಥೆಯ ಪ್ರಥಮ ಮುಖ್ಯಾಧಿಕಾರಿಯಾಗಿಯೂ ಆಗಿ ನೇಮಿತನಾದ. ಆದರೆ ಇದರಿಂದ ಅವನ ಜ್ಞಾನತೃಷೆ ಹಿಂಗಲಿಲ್ಲ. 1936ರಲ್ಲಿ ಒಚಾವಾ ಜರ್ಮನಿಯ ಹೀಡಲ್‍ಬರ್ಗಿನ ಕೈಸರ್ ವಿಲ್‍ಹೆಲ್ಮ್ ಸಂಸ್ಥೆಯನ್ನು ಸೇರಿದ. ಅಲ್ಲಿನ ಪ್ರಸಿದ್ಧ ವಿಜ್ಞಾನಿ ಮೇಯರ್‍ಹಾಫ್‍ನ ಹಿರಿತನದಲ್ಲಿ ಸಂಶೋಧನೆ ಕೈಗೊಂಡ. 1937ರಲ್ಲಿ ಇಂಗ್ಲೆಂಡಿಗೆ ಹೋಗಿ ಕೊಂಚ ಕಾಲ ಪ್ಲಿಮತ್‍ನಲ್ಲಿ ಇದ್ದ. ಅನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರೊ॥ ಆರ್. ಪೀಟರ್ಸ್ ಒಂದಿಗೆ ಸಹಾಯಕ ಸಂಶೋಧಕನಾಗಿ ಕೆಲಸಮಾಡಿದ (1938–41). ಈ ವೇಳೆಗೆ (1941) ಮಿಸ್ಸೂರಿಯ ಸೇಂಟ್ ಲೂಯಿಸ್‍ನಲ್ಲಿರುವ ವಾಷಿಂಗ್‍ಟನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮೆಡಿಸನ್‍ನಲ್ಲಿ ಕೋರಿ ದಂಪತಿಗಳೊಂದಿಗೆ ಕೆಲಸ ಮಾಡುವ ಅವಕಾಶ ಒಚಾವಾಗೆ ಲಭಿಸಿತು. ಅಮೆರಿಕ ದೇಶಕ್ಕೆ ವಲಸೆ ಹೋದ ಇವನಿಗೆ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮೆಡಿಸನ್ ಸಂಸ್ಥೆಯಲ್ಲಿ ಸಹ–ಸಂಶೋಧಕನ ಕೆಲಸ ದೊರೆಯಿತು (1942). ಅಲ್ಲಿಯೇ 1945ರಲ್ಲಿ ಜೈವಿಕ ರಸಾಯನವಿಜ್ಞಾನದ ಅಸಿಸ್ಟೆಂಟ್ ಪ್ರೊಫೆಸರ್ ಆಗಿಯೂ, 1946ರಲ್ಲಿ ಫಾರ್ಮಕಾಲಜಿಯ ಪ್ರೊಫೆಸರ್ ಆಗಿಯೂ ನೇಮಿತನಾದ (1946–54).

ಸಂಶೋಧನಕ್ಷೇತ್ರ ಮತ್ತು ಜೈವಿಕವಿಜ್ಞಾನದ ಬೆಳವಣಿಗೆಗೆ ಈತನ ಕೊಡುಗೆ ಅಪಾರ. ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ಜೈವಿಕ ರಸಾಯನವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ತನ್ನ ಜೀವನವನ್ನು ಮುಡುಪಾಗಿಡುವ ನಿರ್ಧಾರವನ್ನು ಈತ ಕೈಗೊಂಡ. ಎಡರುತೊಡರುಗಳನ್ನು ಲೆಕ್ಕಿಸದೆ ಗುರಿಯೆಡೆಗೆ ನಿಶ್ಚಲ ಧ್ಯೇಯದಿಂದ ಮುನ್ನಡೆದ ವಿಜ್ಞಾನಿ ಒಚಾವಾ.

ಈತ ಪ್ರಾರಂಭದಲ್ಲಿ ಆರಿಸಿಕೊಂಡ ಕ್ಷೇತ್ರ ಮಾಂಸಖಂಡಗಳ ಸಂಕೋಚನದ ಅಧ್ಯಯನ. ಮೇಯರ್‍ಹಾಫ್‍ನ ಪ್ರಯೋಗಶಾಲೆಯಲ್ಲಿ ಮಾಂಸಖಂಡಗಳ ಸಂಕುಚನ ಕ್ರಿಯೆಯ ಶಕ್ತಿಮೂಲಗಳನ್ನು ಕುರಿತು ಸಂಶೋಧನೆ ನಡೆಸಿದ. ಫಾಸ್ಫಾಜನ್ ವಸ್ತುವನ್ನು ಆಗತಾನೇ ಕಂಡುಹಿಡಿಯಲಾಗಿತ್ತು. ಇದೇ ವೇಳೆಗೆ ಲುಂಡ್ಸ್‌ಗಾರ್ಡ್ ಎಂಬಾತ ಮಾನೋಐಯೋಡೋ ಅಸಿಟಿಕ್ ಆಮ್ಲದಿಂದ ನಂಜುಗೊಳಿಸಿದ ಮಾಂಸಖಂಡಗಳು ಲ್ಯಾಕ್ಟಿಕ್ ಆಮ್ಲವನ್ನು ಉತ್ಪಾದಿಸದಂತೆಯೇ ಕೊಂಚ ಕಾಲ ಕೆಲಸ ಮಾಡಬಲ್ಲುವು ಎಂದು ತೋರಿಸಿದ್ದ. ಇನ್ಸುಲಿನ್ ಪರಿಷ್ಕೃತವಾದ ಮತ್ತು ಗ್ಲೈಕೋಜನನ್ನು ಕಳೆದುಕೊಂಡಿದ್ದ ಕಪ್ಪೆಯ ಮಾಂಸಖಂಡಗಳು ಅದುವರೆಗೆ ಪರಿಚಿತವಾಗಿದ್ದವಕ್ಕಿಂತ ಭಿನ್ನವಾದ ಮೂಲಗಳಿಂದ ಶಕ್ತಿಯನ್ನು ದೊರಕಿಸಿಕೊಳ್ಳುತ್ತವೆಂದು ಒಚಾವಾ ತೋರಿಸಿದ.

ಇಂಗ್ಲೆಂಡಿಗೆ ಬಂದ ಮೇಲೆಯೂ ಮಾಂಸಖಂಡಗಳ ಸಂಕುಚನ ಕ್ರಿಯೆಯಲ್ಲಿ ಒಚಾವಾನ ಆಸಕ್ತಿ ಉಳಿದಿತ್ತು. ಜೊತೆಗೆ ಪೀಟರ್ಸ್ ಮತ್ತು ಆತನ ಸಹೋದ್ಯೋಗಿಗಳು ಅಭ್ಯಸಿಸುತ್ತಿದ್ದ ಪೈರೂವಿಕ್ ಆಮ್ಲದ ಚಯಾಪಚಯ ವಿಧಾನ ಕ್ರಮದಲ್ಲಿಯೂ ಆಸಕ್ತಿ ತಳೆದ. ಈತನ ಸಂಶೋಧನೆಗಳ ಫಲವಾಗಿ ಮಿದುಳಿನಿಂದ ಪೈರೂವಿಕ್ ಆಮ್ಲ ಉತ್ಕರ್ಷಿತವಾಗುವ ಕ್ರಿಯಾವೇಗವನ್ನು ಸಿ4 ಡೈ ಕಾರ್ಬಾಕ್ಸಿಲಿಕ್ ಆಮ್ಲಗಳು ತ್ವರಿತಗೊಳಿಸುತ್ತವೆಯೆಂದೂ, ಈ ಕ್ರಿಯೆಯಲ್ಲಿ ವಿಟಮಿನ್ ಬಿ1 ಭಾಗವಹಿಸುತ್ತದೆಯೆಂದೂ, ಕೋಕಾರ್ಬಾಕ್ಸಿಲೇಸ್ (ಥಯಾಮಿನ್ ಪೈರೋಫಾಸ್ಫೇಟ್) ವಿಟಮಿನ್ ಬಿ1 ರ ಸಕ್ರಿಯಾರೂಪವೆಂದೂ ಗೊತ್ತಾಯಿತು. ಅಲ್ಲದೆ ಪೈರೂವಿಕ್ ಆಮ್ಲದ ಉತ್ಕರ್ಷಣ ಕ್ರಿಯೆಗೂ ಎಟಿಪಿಯ ಸಂಶ್ಲೇಷಣೆಗೂ ಇರುವ ನಿಕಟ ಸಂಬಂಧದ ಪರಿಚಯವೂ ಆಯಿತು.

1942ರಿಂದೀಚೆಗೆ ಒಚಾವಾ ನಡೆಸಿದ ಸಂಶೋಧನೆಗಳನ್ನು ಮುಖ್ಯವಾಗಿ ಮೂರು ವರ್ಗಗಳಾಗಿ ವಿಭಾಗಿಸಬಹುದು:

೧ ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಕಾರ್ಬಾಕ್ಸಿಲೇಷನ್ (ಇಂಗಾಲದ ಡೈ ಆಕ್ಸೈಡನ್ನು ಸ್ವೀಕರಿಸುವ) ಮತ್ತು ಡೀಕಾರ್ಬಾಕ್ಸಿಲೇಷನ್ (ಇಂಗಾಲದ ಡೈ ಆಕ್ಸೈಡನ್ನು ವಿಮೋಚನೆಗೊಳಿಸುವ) ಕ್ರಿಯಾವಿಧಾನಗಳ ಅಧ್ಯಯನ ಮತ್ತು ಮ್ಯಾಲಿಕ್ ಕಿಣ್ವದ ಪರಿಶೋಧನೆ.

೨. ಸಿಟ್ರಿಕ್ ಆಮ್ಲ ವರ್ತುಲಕ್ಕೆ ಸೇರಿದ ಕಿಣ್ವಗಳ ಕ್ರಿಯಾವಿಧಿಗಳ ಅಧ್ಯಯನ ಮತ್ತು ಘನಿಸುವ ಕಿಣ್ವದ ಪರಿಶೀಲನೆ.

೩. ಪಾಲಿನ್ಯೂಕ್ಲಿಯೋಟೈಡುಗಳ ಕಿಣ್ವವರ್ಧಿತ ಸಂಶ್ಲೇಷಣೆ ಮತ್ತು ಪಾಲಿನ್ಯೂಕ್ಲಿಯೋಟೈಡ್ ಫಾಸ್ಫಾರಿಲೇಸ್ ಕಿಣ್ವದ ಪರಿಶೋಧನೆ.

ಒಚಾವಾ ತನ್ನ ಸಹೋದ್ಯೋಗಿಗಳೊಂದಿಗೆ ಆನುವಂಶಿಕ ಸಂಕೇತದ ಸಮಸ್ಯೆಯನ್ನು ಬಿಡಿಸುವುದರಲ್ಲಿ ಶ್ರಮವಹಿಸಿ, ಈ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾನೆ. ಡಿಎನ್‍ಎ ಅಣುವಿನ 4 ಭಿನ್ನ ನ್ಯೂಕ್ಲಿಯೋಟೈಡುಗಳ ಅನುಕ್ರಮ ಪಾಲಿಪೆಪ್ಟೈಡಿನ (ಪ್ರೋಟೀನಿನ) 20 ಅಮೈನೋ ಆಮ್ಲಗಳ ಅನುಕ್ರಮವನ್ನು ಹೇಗೆ ನಿರ್ಧರಿಸುವುದೆಂಬುದೇ ಜೀವವಿಜ್ಞಾನಿಯ ಮುಂದಿರುವ ಸಮಸ್ಯೆ. ಡಿಎನ್‍ಎ ಯಲ್ಲಿ ಅಡಗಿರುವ ಆನುವಂಶಿಕ ಸಂದೇಶವನ್ನು ಅಮೈನೋ ಆಮ್ಲಗಳ ಭಾಷೆಗೆ ಕರಾರುವಾಕ್ಕಾಗಿ ತರ್ಜುಮೆ ಮಾಡುವ ಮತ್ತು ಸಂದೇಶದ ಪ್ರಕಾರ ಅಮೈನೋ ಆಮ್ಲಗಳನ್ನು ಜೋಡಿಸಿ ವಿಶಿಷ್ಟ ಪ್ರೋಟೀನನ್ನು ಸಿದ್ಧಗೊಳಿಸುವ ವಸ್ತುವೊಂದಿರಲೇಬೇಕು. ಆರ್‍ಎನ್‍ಎ ಸಂದೇಶವಾಹಕವಾಗಿಯೂ ಪ್ರೋಟೀನನ್ನು ಸಿದ್ಧಗೊಳಿಸುವ ಯಂತ್ರದಂತೆಯೂ ವರ್ತಿಸುತ್ತದೆಯೆಂದು ಪ್ರಯೋಗಗಳ ಮೂಲಕ ತಿಳಿದುಬಂದಿದೆ. ಜಟಿಲವಾದ ಕೋಶದಲ್ಲಿ ನಡೆಯುವ ಈ ಕ್ರಿಯೆಯನ್ನು ಪ್ರನಾಳದಲ್ಲಿ ನಡೆಸಬೇಕಾದರೆ, ನೈಸರ್ಗಿಕ ಆರ್‍ಎನ್‍ಎಯ ಕಾರ್ಯವನ್ನು ಅನುಕರಣೆ ಮಾಡಬಲ್ಲ ಕೃತಕ ಆರ್‍ಎನ್‍ಎ ಅವಶ್ಯಕವಾಗಿ ಬೇಕು. 1961ರಲ್ಲಿ ಒಚಾವಾ ತನ್ನ ಪ್ರಯೋಗಶಾಲೆಯಲ್ಲಿ ಪಾಲಿನ್ಯೂಕ್ಲಿಯೋಟೈಡ್ ಫಾಸ್ಫಾರಿಲೇಸ್ ಕಿಣ್ವದ ಸಹಾಯದಿಂದ ಎರಡು ಅಥವಾ ಹೆಚ್ಚಿನ ನ್ಯೂಕ್ಲಿಯೊಟೈಡುಗಳನ್ನೊಳಗೊಂಡ ಕೃತಕ ಕೋಪಾಲಿನ್ಯೂಕ್ಲಿಯೋಟೈಡುಗಳನ್ನು ಸಂಶ್ಲೇಷಿಸಿ, ಕೋಶರಹಿತ ವ್ಯವಸ್ಥೆಯಲ್ಲಿ ಇವನ್ನು ಸಂದೇಶ ವಾಹಕಗಳಂತೆ ಉಪಯೋಗಿಸಿ ಅಮೈನೋ ಆಮ್ಲಗಳನ್ನೊಳಗೊಂಡ ಪ್ರೋಟೀನಿನಂಥ ವಸ್ತುವನ್ನು ತಯಾರಿಸುವುದರಲ್ಲಿ ಜಯಶೀಲನಾದ.

ಸ್ಪೇನಿನಲ್ಲಿ ಜನಿಸಿ, ಜರ್ಮನಿ ಮತ್ತು ಇಂಗ್ಲೆಂಡಿನಲ್ಲಿ ತರಬೇತಿ ಹೊಂದಿ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಕೆಲಸ ಮಾಡಿದ ಈ ವಿಜ್ಞಾನಿ ವಿಜ್ಞಾನದ ಅಂತರ ರಾಷ್ಟ್ರೀಯತೆಯ ನೈಜ ಪ್ರತೀಕ. ಪ್ರಪಂಚದ ಎಲ್ಲ ದೇಶಗಳ ಶಿಷ್ಯರೂ ಇವನ ತಂಡದಲ್ಲಿ ಇದ್ದಾರೆ. ಪ್ರಪಂಚದ ನಾನಾ ವಿಶ್ವವಿದ್ಯಾನಿಲಯಗಳು ಈತನಿಗೆ ಗೌರವ ಪದವಿಗಳನ್ನು ಕೊಟ್ಟು ಪುರಸ್ಕರಿಸಿವೆ. ಒಚಾವಾ ಅನೇಕ ವೈಜ್ಞಾನಿಕ ಸಂಘಗಳ ಸದಸ್ಯನೂ ಹೌದು. 1961ರಲ್ಲಿ ಜೈವಿಕ ರಸಾಯನವಿಜ್ಞಾನದ ಅಂತರರಾಷ್ಟ್ರೀಯ ಸಂಘದ ಅಧ್ಯಕ್ಷನಾಗಿ ಈತ ಚುನಾಯಿತನಾದ. ಸಂಗೀತ, ಸಾಹಿತ್ಯ ಮತ್ತು ಕುಶಲಕಲೆಗಳಲ್ಲಿ ಈತನಿಗೆ ಅಭಿರುಚಿ. ನೋಡಿ – ಕಿಣ್ವಗಳು.

***

**ಒಣಗಣ್ಣು:** ಕಣ್ಣುಗುಡ್ಡೆ ಮುಂಭಾಗವನ್ನು ಯಾವಾಗಲೂ ತೇವದಲ್ಲಿಡುವ ತೆಳುವಾದ ಮೇಲ್ಪೊರೆ ಈ ಬೇನೆಯಲ್ಲಿ ಒಣಗಿದಂತಿರುತ್ತದೆ (ಕ್ಸಿರಾಫ್ತಾಲ್ಮಿಯ). ಎ ಜೀವಸತ್ವದ ಕೊರತೆಯಿಂದ ಕಾಣಿಸುತ್ತದೆ. ಇದರಿಂದ ಮೊಟ್ಟ ಮೊದಲಾಗಿ ಮೈಯಲ್ಲಿ ಎಲ್ಲೆಲ್ಲೂ ಮೇಲ್ಪೊರೆಗಳಲ್ಲಿ ಆಗುವಂತೆ, ಚರ್ಮದಲ್ಲೂ ಕಣ್ಣುಗುಡ್ಡೆಯಲ್ಲೂ ಬದಲಾವಣೆಗಳಾಗುವುವು. ಕಣ್ಣುಗುಡ್ಡೆ ಒಣಗುವ ಮುನ್ನ ಮಬ್ಬು, ನಸುಕಿನ ಬೆಳಕು, ಇರುಳುಗಳಲ್ಲಿ ಕಣ್ಣಿನ ನೋಟ ಮಸಕಾಗುತ್ತ, ಕೊನೆಗೆ ಇರುಳುಗುರುಡು (ನೈಟ್ ಬ್ಲೈಂಡ್‍ನೆಸ್) ಆಗುತ್ತದೆ. ಇದು ಹೆಚ್ಚಿದಂತೆಲ್ಲ, ಕಣ್ಣಿನ ಕೋಡುಪೊರೆಯೂ (ಕಂಜಂಕ್ಟಿವ) ಅದರೊಂದಿಗೆ ಕಣ್ಣುಗುಡ್ಡೆಯ ಮುಂದಿರುವ ಪಾರದರ್ಶಕ ಪಟಲ (ಕಾರ್ನಿಯ) ಕೂಡ ಹೊಳಪು ಕಳೆದುಕೊಂಡು ಒಣಗುತ್ತದೆ. ಬಹುಮಟ್ಟಿಗೆ ಕಣ್ಣೀರು ಸುರಿತ ಇಂಗುವುದರಿಂದ ಹೀಗಾಗುವುದು. ಆ ಮೇಲೆ ಬಿಳಿಯ ಕಣ್ಣುಗುಡ್ಡೆಯ ಮೇಲೆ ಪಕ್ಕಗಳಲ್ಲಿ ಸಾಬೂನು ನೊರೆ ಅಂಟಿಸಿದ ಹಾಗೆ ಹುರುಪೆ ಏಳುತ್ತದೆ. ಇದಕ್ಕೆ ಬೀಟನ ಮಟ್ಟೆಗಳು ಎಂದು ಹೆಸರಿದೆ. ಇದರೊಂದಿಗೆ ಸೋಂಕೂ ಹತ್ತಿದರೆ, ಕೋಡುಪೊರೆ ಹುಣ್ಣಾಗಿ ಮೆತ್ತಗಾಗಿ ಕೊಳೆತು ಕರಗಿ ಕಣ್ಣುಗುಡ್ಡೆಯೊಳಗಿನ ವಸ್ತುಗಳೆಲ್ಲ ಹೊರಬೀಳುತ್ತವೆ. ಹೀಗೆ ತೀರ ಹಾಳಾದ ಸ್ಥಿತಿಗೆ ಕೆರಾಟೊಮಲೇಸಿಯ ಎಂದು ಹೆಸರು. ರೋಗ ಕೈಮೀರುವ ಮುಂಚೆ ಸಾಕಷ್ಟು ಪ್ರಮಾಣಗಳಲ್ಲಿ ಎ ಜೀವಸತ್ವವನ್ನು ಕೊಡುವುದೇ ಇದರ ಪರಿಣಾಮಕರ ಚಿಕಿತ್ಸೆ.

ಸುಮಾರು ೨೫–೩೦ ವರ್ಷಗಳಷ್ಟು ಹಿಂದೆ ಹೆಚ್ಚಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಈ ಕಾಯಿಲೆ ಜನರ ಶೈಕ್ಷಣಿಕ ಮಟ್ಟದ ಸುಧಾರಣೆ ಮತ್ತು ಅದಕ್ಕಿಂತ ಮುಖ್ಯವಾಗಿ ಭಾರತ ಸರ್ಕಾರದ ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದ ಯಶಸ್ಸಿನ ದ್ಯೋತಕವಾಗಿ ಈಗ ಬಹಳ ಕಡಿಮೆಯಾಗಿದೆ ಎಂಬುದು ಸಮಾಧಾನ ತರುವ ಸಂಗತಿ.

ಇತ್ತೀಚಿನ ಆಧುನಿಕ ಕಾಲದಲ್ಲಿ ಒಣಗಿದ ಕಣ್ಣು ಇನ್ನೊಂದು ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಅದನ್ನು ನಾವು ಡ್ರೈ ಐ ಸಿಂಡ್ರೋಮ್ ಎಂದು ಹೇಳುತ್ತೇವೆ. ಕಣ್ಣು ಉರಿಯುತ್ತದೆ, ಚುಚ್ಚಿದ ಹಾಗೆ ಆಗುತ್ತದೆ ಎಂಬ ಲಕ್ಷಣಗಳೊಂದಿಗೆ ಆರಂಭವಾಗುತ್ತದೆ ಈ ಖಾಯಿಲೆ. ಕಣ್ಣಿನ ಹೊರಗಿನ ಕಪ್ಪಾಗಿ ಕಾಣುವ ಪಾರದರ್ಶಕ ಪಟಲ ಕಾರ್ನಿಯಾದಲ್ಲಿ ರಕ್ತನಾಳಗಳಿಲ್ಲ. ಹಾಗಾಗಿ ಅದರ ಆಹಾರ ಪೂರೈಕೆ–ಎಂದರೆ ಕಣ್ಣೀರಿನಿಂದ. ಈ ಕಣ್ಣೀರಿನ ಅಂಶ ವಿವಿಧ ಕಾರಣಗಳಿಂದ ಕಡಿಮೆ ಆದಾಗ ಕಣ್ಣು ಒಣಗಲಾರಂಭಿಸುತ್ತದೆ. ಆಗ ಕಾರ್ನಿಯಾಕ್ಕೆ ಆಹಾರ ಪೂರೈಕೆ ಕಡಿಮೆ ಆಗಿ ಒಣಗಿದ ಕಣ್ಣಿನ ಲಕ್ಷಣಗಳು ಅದರಲ್ಲಿ ಕಾಣಿಸಲಾರಂಭವಾಗುತ್ತದೆ. ಹತ್ತಿರ ವಸ್ತುಗಳನ್ನು ದಿಟ್ಟಿಸಿ ಕೆಲಸ ಮಾಡುವ ಅದರಲ್ಲೂ

ಕಂಪ್ಯೂಟರ್‌ನೊಂದಿಗೆ ಬಹಳ ಕಾಲ ಕೆಲಸ ಮಾಡುವವರಲ್ಲಿ ಈ ಬೇನೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

ಈ ಶುಷ್ಕ ಕಣ್ಣಿನ ಕಾರಣಗಳು ಸರಿಯಾಗಿ ಗೊತ್ತಾದಾಗ ಚಿಕಿತ್ಸೆ ಸುಲಭ, ಗೊತ್ತಾಗದಿದ್ದಾಗ ಕಣ್ಣೀರನ್ನು ಹೆಚ್ಚಿಸುವ ಔಷಧಿಗಳನ್ನು ಬಹಳ ಕಾಲದವರೆಗೆ ಕೊಡಬೇಕು. ಇದರ ಚಿಕಿತ್ಸೆ ತುಂಬಾ ತ್ರಾಸದಾಯಕವೇ ಅಲ್ಲದೆ ಪರಿಣಾಮಕಾರಿಯಲ್ಲ. ***

**ಒಪೊಸಂ:** ಗರ್ಭದಲ್ಲಿನ ಮರಿ ಪೂರ್ಣ ಬಲಿಯುವ ಮುನ್ನವೇ ಈಯುವ ಸಂಚಿ ಸ್ತನಿ. ಆಕಾರ ಹೆಗ್ಗಣದಂತೆ. ಬಲುಚುರುಕಾದ ಪ್ರಾಣಿ. ಮೆಟಾಥೀರಿಯ ಉಪವರ್ಗ, ಮಾರ್ಸುಪಿಯೇಲಿಯ ಗಣ, ಡೈಡೆಲ್ಫಿಡೆ ಕುಟುಂಬಕ್ಕೆ ಸೇರಿದೆ. ಅಮೇರಿಕದ ಒಪೊಸಮ್‌ಗಳೆಂದೇ ಪ್ರಚಲಿತ. ತಲೆಯಿಂದ ಬಾಲದವರೆಗೆ ಇದರ ಉದ್ದ ಸುಮಾರು ೩೨.೫ ಸೆಂಮೀ ಬಾಲ ಬೆಳ್ಳಗೆ ಅನಾವೃತವಾಗಿದೆ; ಉದ್ದ ೩೦ ಸೆಂಮೀ ಕೋತಿಯ ಬಾಲಕ್ಕೆ ಇರುವಂತೆ ಇದರ ಬಾಲಕ್ಕೂ ಗ್ರಾಹಕಶಕ್ತಿಯುಂಟು; ಮರವನ್ನು ಹತ್ತುವಾಗ ತುಂಬ ಉಪಯೋಗಕ್ಕೆ ಬರುತ್ತದೆ. ರೆಂಬೆಗೆ ಇದನ್ನು ಸುತ್ತು ಹಾಕಿಕೊಂಡು ಜೋತು ಬೀಳಬಹುದು. ಕಾಲುಗಳಿಗೂ ಹಿಡಿದುಕೊಳ್ಳುವ ಶಕ್ತಿಯಿದೆ. ಇವು ನೆಲವನ್ನು ತೋಡಬಲ್ಲವು; ಮರಗಳನ್ನು ಹತ್ತಲೂ ಬಲ್ಲವು.

ದಕ್ಷಿಣ ಅಮೇರಿಕ, ಮಧ್ಯ ಮತ್ತು ಉತ್ತರ ಅಮೇರಿಕಗಳಲ್ಲಿ ಅನೇಕ ತರದ ಒಪೊಸಂಗಳಿವೆ. ಅವುಗಳಲ್ಲಿ ವರ್ಜೀನಿಯ ಒಪೊಸಂ (ಡೈಡೆಲ್ಫಿಸ್ ವರ್ಜೀನಿಯಾನ), ನೀರಿನ ಒಪೊಸಂ (ಕೈರೊನೆಕ್ಟಿಸ್), ತುಪ್ಪಟವುಳ್ಳ ಒಪೊಸಂ, ಇಲಿಯಂಥ ಒಪೊಸಂ ಇತ್ಯಾದಿ ಭೇದಗಳುಂಟು. ಸಾಮಾನ್ಯ ತರದ ಒಪೊಸಂಗಳು ಅಮೇರಿಕ ದೇಶದ ಉತ್ತರ ಭಾಗದಿಂದ ಹಿಡಿದು ಅರ್ಜಂಟೈನದವರೆಗೂ ಹರಡಿವೆ. ಆದರೆ ಗಾತ್ರ, ರೂಪ ಮತ್ತು ಬಣ್ಣಗಳಲ್ಲಿ ಅವು ಬೇರೆ ಬೇರೆಯಾಗಿವೆ. ಬೆಕ್ಕಿನ ಗಾತ್ರದಿಂದ ಹಿಡಿದು ಇಲಿಯ ಗಾತ್ರದವರೆಗೂ ಇರುವುವು. ಇವು ನಿಶಾಚರಿಗಳು. ಹಗಲಲ್ಲಿ ಮರದೆಲೆಗಳ ಮರೆಯಲ್ಲಿಯೋ ಪೊಟರೆಗಳಲ್ಲೋ ಅಡಗಿಕೊಂಡು ಕಾಲ ಕಳೆಯುತ್ತವೆ. ಯಾರಾದರೂ ತಮ್ಮನ್ನು ಹಿಡಿದುಕೊಂಡಾಗ ಅಥವಾ ಶತ್ರುಗಳು ಸಮೀಪ ಬಂದಾಗ ಸತ್ತಹಾಗೆ ನಟಿಸುತ್ತವೆ. ಇದು ತಿನ್ನದ ವಸ್ತುವೇ ಇಲ್ಲ; ಹುಳು ಹುಪ್ಪಟೆಗಳನ್ನು ಹೆಚ್ಚಾಗಿ ಮೆಲ್ಲುತ್ತದೆ. ರುಚಿಯ ವಿಷಯದಲ್ಲಿ ತುಂಬಾ ಭೋಗಿಯಿದು. ಹಣ್ಣು ಅಥವಾ ಗೆಡ್ಡೆ, ಕರಟಿಕಾಯಿ, ಹಸಿರುಕಾಳು, ಮರಿಹುಳುಗಳು, ಪುಟ್ಟ ಹಕ್ಕಿಗಳ ಮೊಟ್ಟೆಗಳು–ಇವು ಇದಕ್ಕೆ ಬಹು ಹಿತಕರವಾದ ಆಹಾರ.

ಆಸ್ಟ್ರೇಲಿಯ ಖಂಡದಲ್ಲಿ ಫೆಲಾಂಜರಿಡೆ ಕುಟುಂಬಕ್ಕೆ ಸೇರಿದ ಅನೇಕ ಜಾತಿಯ ಸಂಚಿ ಪ್ರಾಣಿಗಳಿವೆ (ಮಾರ್ಸೂಪಿಯಲ್ಸ್). ಇವನ್ನು ಹಲವು ವೇಳೆ ಒಪೊಸಂಗಳೆಂದು ಕರೆಯುವುದುಂಟು. ಆದರೆ ಇವಕ್ಕೆ ಸಾಮಾನ್ಯವಾಗಿ ಫೆಲಾಂಜರ್ಸ್ ಎಂದು ಹೆಸರು. ಅಮೇರಿಕದ ಒಪೊಸಂಗಳಿಗಿಂತ ಇವು ತೀರ ಭಿನ್ನವಾಗಿವೆ. ಇವುಗಳಿಗೆ ಚಟುವಟಿಕೆ ಹೆಚ್ಚು. ಕೂದಲು ಹೇರಳವಾಗಿದೆ. ಬಾಲ ಬಲು ಉದ್ದವಾಗಿ, ಹೊರಲಾರದಷ್ಟು ಕೂದಲಿನಿಂದ ಆವೃತವಾಗಿದೆ. ಹಾರುವ ಒಪೊಸಂ (ಪೆಟೌರಸ್), ವೊಂಬಟ್ (ಫ್ಯಾಸ್ಕೊಲೊಮಿಸ್), ಕೊಅಲಾ ಕರಡಿ (ಫ್ಯಾಸ್ಕೊಲಾರ್ಕ್ಟೊಸ್) ಉದಾಹರಣೆಗಳು.

ಗರ್ಭಧಾರಣೆಯ ಅವಧಿ ಬಲು ಕಡಿಮೆ. ಗರ್ಭದಿಂದ ಹೊರ ಬರುವಾಗ ಮರಿಗಳು ಅರ್ಧಮಾತ್ರ ಬೆಳೆದಿರುತ್ತವೆ. ತಾಯಿ ಒಂದು ಸೂಲಿಗೆ ಹತ್ತರಿಂದ ಹದಿನೆಂಟರವರೆಗೆ ಮರಿ ಹಾಕುತ್ತದೆ. ಆದರೆ ಅದಕ್ಕೆ ಹದಿಮೂರೇ ಮೊಲೆತೊಟ್ಟುಗಳಿರುವುದರಿಂದ ಕೆಲವು ಮರಿಗಳನ್ನು ಅದು ಸಾಮಾನ್ಯವಾಗಿ ತ್ಯಜಿಸುತ್ತದೆ. ಬಲಿಯುವ ಮುನ್ನವೇ ಜನ್ಮತಾಳುವ ಮರಿಗಳನ್ನು ಬಹುತೇಕ ಒಪೊಸಂಗಳು ಹೊಟ್ಟೆಯ ಮೇಲಿರುವ ಸಂಚಿ ಅಥವಾ ಚೀಲಗಳಲ್ಲಿ ಇಟ್ಟುಕೊಂಡು ಬಲಿಯುವವರೆಗೂ ರಕ್ಷಿಸುತ್ತವೆ. ಹೊಟ್ಟೆಯ ಮೇಲೆ ಚೀಲ ಇಲ್ಲದಿರುವ ಜಾತಿಗಳಲ್ಲಿ ಮರಿಗಳು ತಾಯ ಮೊಲೆ ಕಚ್ಚಿಕೊಂಡೋ ಮೈಯನ್ನು ತಬ್ಬಿಕೊಂಡೋ ಆಶ್ರಯ ಪಡೆಯುತ್ತವೆ. ***

**ಒಫಿಡಿಯ:** ಸರೀಸೃಪಗಳ ವರ್ಗದ ಡೈಆಪ್ಸಿಡ ಉಪವರ್ಗಕ್ಕೆ ಸೇರಿದ ಸ್ಕ್ವಾಮಾಟ ಗಣದ ಒಂದು ಉಪಗಣ. ತೆಳುಹಾವು, ಕುರುಡುಹಾವು, ಮಂಡಲಹಾವು, ಸಮುದ್ರಹಾವು, ಕ್ರೈಟ್, ನಾಗರಹಾವು, ಹೆಬ್ಬಾವು ಮತ್ತು ಮುಂತಾದ ನಾನಾ ವಿಧವಾದ ವಿಷಪೂರಿತ ಮತ್ತು ವಿಷವಿಲ್ಲದ ಹಾವುಗಳನ್ನೊಳಗೊಂಡ ಗುಂಪು. ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಬಿಟ್ಟು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಹಾವುಗಳನ್ನು ಕಾಣಬಹುದು. ಸಾಮಾನ್ಯವಾಗಿ ಒಂಟಿಯಾಗಿ ವಾಸಮಾಡುತ್ತವೆ.

ಹಾವುಗಳಿಗೆ ಕೈಕಾಲುಗಳು, ಹೊರಗಿನ ಕಿವಿಗಳು, ಕಿವಿಯ ತಮಟೆ, ಮೂತ್ರಕೋಶಗಳು ಇಲ್ಲ. ದೇಹ ಉದ್ದವಾದ ಕೊಳವೆಯಂತಿದೆ. ನಿಶ್ಚಲವಾಗಿ ನಿಂತಿರುವಾಗ ಮತ್ತು ಮುಂದೆ ಹೋಗುವಾಗ ಶಬ್ದವು ಕೇಳಿಸುವುದಿಲ್ಲ. ಮರದ ಪೊಟರೆ, ಬಿರುಕು, ಹುತ್ತಗಳಲ್ಲಿ ಜೀವಿಸುತ್ತವೆ. ದೇಹವು ಹುರುಪೆಗಳಿಂದ ಮುಚ್ಚಲ್ಪಟ್ಟಿದೆ. ಈ ಹುರುಪೆಗಳ ಲಕ್ಷಣಗಳಿಂದ ಸರ್ಪಗಳನ್ನು ವಿಷಪೂರಿತ ಮತ್ತು ವಿಷವಲ್ಲದ್ದು ಎಂದು ವಿಂಗಡಿಸಲಾಗುತ್ತದೆ. ದೇಹ ಬೆಳೆದಂತೆಲ್ಲಾ ಈ ಹುರುಪೆಗಳ ಕವಚ ಕಳಚಿ ಬೀಳುವುದು. ಇದೇ ಪೊರೆಬಿಡುವ ಕ್ರಿಯೆ. ಹಾವುಗಳಲ್ಲಿ ನಾನಾ ರೀತಿಯ ಮಚ್ಚೆಗಳು, ಪಟ್ಟೆಗಳು, ಹೆದರಿಸುವಂಥ ಮತ್ತು ಅಣುಕಿಸುವಂಥ ಬಣ್ಣಗಳು ಇರುತ್ತವೆ. ಅವು ನುಣಚಿಕೊಂಡು ಮುಂದೆ ಮುಂದೆ ಹೋಗುತ್ತವೆ. ತಲೆ ಬುರುಡೆಯಲ್ಲಿರುವ ಮೂಳೆಗಳ ಮೂಲಕ ಶಬ್ದಗ್ರಹಿಸುವ ಶಕ್ತಿಯು ಹರಿಯುವುದು. ತಲೆ ಬುರಡೆ ಹಗುರವಾಗಿದ್ದು ಕಡಿಮೆ ಮೂಳೆಗಳಿಂದ ಕೂಡಿದ್ದಾಗಿದೆ. ವಿಷದ ಹಾವುಗಳಲ್ಲಿ ವಿಷದ ಹಲ್ಲುಗಳು ಮತ್ತು ವಿಷಗ್ರಂಥಿ (ಜೊಲ್ಲುರಸ ಗ್ರಂಥಿ ಮಾರ್ಪಾಟಾಗಿರುವುದು) ಉಂಟು. ವಿಷದಿಂದ ಉಂಟಾಗುವ ಹಾನಿ ಹಲವು ರೀತಿಯದ್ದು– ಕೆಂಪು ರಕ್ತಕಣಗಳಲ್ಲಿ ವ್ಯತ್ಯಾಸ, ರಕ್ತ ಹೆಪ್ಪುಗಟ್ಟುವಿಕೆ, ರಕ್ತನಾಳದ ಹಾನಿ, ಮೆದುಳಿನ ಮತ್ತು ಅದರ ಚಲನಾ ಕಾರ್ಯಗಳ ಹಾನಿಕರ ಮಾರ್ಪಾಟು, ಉಸಿರಾಟ ಮತ್ತು ಹೃದಯದ ಚಟುವಟಿಕೆಯಲ್ಲಿ ತೊಂದರೆ, ಇವುಗಳಲ್ಲಿ ಕೆಲವು. ಹಾವುಗಳು ನಿಶ್ಚೇಷ್ಟಸ್ಥಿತಿಯಿಂದ ಆಚೆ ಬಂದ ಮೇಲೆ ಗಂಡು ಮತ್ತು ಹೆಣ್ಣು ಜೊತೆಗೂಡುತ್ತವೆ. ಮೊಟ್ಟೆಗಳನ್ನು ಕತ್ತಲಾದ, ತಂಪಾದ, ರಕ್ಷಣೆ ಇರುವಂಥಹ ಸ್ಥಳಗಳಲ್ಲಿ ಇಡುತ್ತವೆ. ಇಲಿ, ಹೆಗ್ಗಣ, ಕಪ್ಪೆ, ಕೀಟ, ಮುಂತಾದುವುಗಳು ಹಾವುಗಳ ಆಹಾರ. ಬೇರೆ ಬೇರೆ ಪ್ರಭೇದಗಳಲ್ಲಿ 24ರಿಂದ 50 ಸಂಖ್ಯೆಗಳವರೆಗೆ ಕ್ರೊಮೋಸೋಮುಗಳು ಕಂಡು ಬರುತ್ತವೆ. (ನೋಡಿ. ಸರೀಸೃಪಗಳು; ಹಾವುಗಳು) (ಕೆ.ಆರ್.ಕೆ.)

**ಒಫಿಸ್ತೊಬ್ರ್ಯಾಂಕಿಯೇಟ:** ಮೃದ್ವಂಗಿಗಳ ವಂಶದ ಗ್ಯಾಸ್ಟ್ರೊಪೊಡ ವರ್ಗದ ಗಣ. ಇಲ್ಲಿನ ಪ್ರಭೇದಗಳೆಲ್ಲವೂ ಕಡಲ ಜೀವಿಗಳು. ತಿರುಚುಗೊಂಡ ಪ್ರೋಸೋಬ್ರ್ಯಾಂಕ್‌ಗಳಿಂದ, ಹುಟ್ಟಿಕೊಂಡರೂ ತಿರುಚು ಕಳೆದುಕೊಂಡ ಜೀವಿಗಳು. ಚಿಪ್ಪು ಸಾಮಾನ್ಯವಾಗಿ ಕ್ಷೀಣಿಸಿರುತ್ತದೆ. ಇನ್ನು ಕೆಲವು ಜೀವಿಗಳಲ್ಲಿ ಚಿಪ್ಪು ಸಂಪೂರ್ಣವಾಗಿ ಇರುವುದಿಲ್ಲ. ಬಾಹ್ಯವಾಗಿ ಗೋಚರವಾಗುವಂತಹ ಚಿಪ್ಪು ತೀರಾ ವಿರಳ. ಚಿಪ್ಪಿಗೆ ಮುಚ್ಚಳವಿರುವುದಿಲ್ಲ. ಪ್ಲೂರೊಬ್ರಾಂಕಿಡೆ, ಡೊರಿಕೊಮಾರ್ಫ, ಹೆಡಿಲಿಡೆಗಳಂತಹ ಚಿಪ್ಪುರಹಿತ ಜೀವಿಗಳಲ್ಲಿ ಸೂಚ್ಯಾಂಗಗಳು ಕೆಲವು ವೇಳೆ ಇರುತ್ತವೆ. ಚಿಪ್ಪು ಇದ್ದಲ್ಲಿ ಅದರ ಬಹು ಭಾಗವನ್ನು ಗೌಸಿನ (ಮ್ಯಾಂಟಲ್) ಮಡಿಕೆಗಳು ಆವರಿಸಿರುತ್ತವೆ. ಗೌಸು ಕೋಣೆ ಇದ್ದಲ್ಲಿ ಕ್ಷೀಣಿಸಿದ್ದು ಪಶ್ಚದ ಬಲಭಾಗಕ್ಕೆ ಸೀಮಿತವಾಗಿರುತ್ತದೆ. ಒಂಟಿ ಕಿವಿರು ಇದೆ. ಅನೇಕ ವೇಳೆ ದ್ವಿತೀಯಕ ಬ್ರಾಂಕಿಯಾಗಳು ಸಹಾಯಕ ಉಸಿರಾಟದ ಅಂಗಗಳಾಗಿ ಕಾರ್ಯ ನಿರ್ವಹಿಸುತ್ತವೆ. ಇವು ಊರ್ಧ್ವಚಾಚಿಕೆಗಳೋಪಾದಿಯಲ್ಲಿ ಒಂಟಿ ಕಿವಿರನ್ನು ಸ್ಥಳಾಂತರಿಸುವುದುಂಟು. ಹೊರಮೇಲ್ಮೈ ಕೆಲವೊಮ್ಮೆ ಉಸಿರಾಟದ ಅಂಗವಾಗಿ ಕಾರ್ಯ ನಿರ್ವಹಿಸುತ್ತದೆ. ಹೃತ್ಕುಕ್ಷಿಯ ಹಿಂದೆ ಒಂಟಿವೃಕ್ ಇದೆ. ಚಿಪ್ಪಿಗೆ ಯಾವುದೇ ರೀತಿಯ ವಿನ್ಯಾಸವಿರುವುದಿಲ್ಲ.

ಇದರಲ್ಲಿ ಎರಡು ಉಪಗಣಗಳಿವೆ;

ಉಪಗಣ 1: ಡೆಕ್ಟಿಬ್ರಾಂಕಿಯೇಟ – ಇವು ಚಿಪ್ಪಿರುವ ಒಫಿಸ್ತೊಬ್ರ್ಯಾಂಕಿಯೆಟಗಳು. ಗೌಸಿನ ಕೋಣೆ ಮತ್ತು ಕಿವಿರು ಇದೆ. ಉದಾ: ಆಕ್ವಿಯಾನ್, ಬುಲ್ಲಾ, ಅಪ್ಲೀಸಿಯಾ ಮತ್ತು ಕ್ಯಾವೊಲಿನಿಯ

ಉಪಗಣ 2: ನುಡಿಬ್ರಾಂಕಿಯೇಟ– ಬಸವನ ಹುಳುವಿನ ಸ್ವಭಾವವನ್ನು ಪಡೆದ ಒಫಿಸ್ತೊಬ್ರ್ಯಾಂಕಿಯೇಟಗಳು. ಇವಕ್ಕೆ ಚಿಪ್ಪಾಗಲಿ, ಗೌಸು ಕೋಣೆಗಳಾಗಲಿ ಅಥವಾ ಕಿವಿರಾಗಲಿ ಇರುವುದಿಲ್ಲ. ಉದಾ: ಇಯೋಲಿಸ್, ಡೋರಿಸ್ (ಬಿ.ಕೆ.ಜೆ.)

**ಒರಟುಕಾಲು ಡೇಗೆ:** ಪಕ್ಷಿವಂಶದ ಫಾಲ್ಕನಿಫಾರ್ಮಿಸ್ ಗಣದ ಆಕ್ಸಿಪಿಟ್ರಿಡೆ ಕುಟುಂಬಕ್ಕೆ ಸೇರಿದ ಬ್ಯೂಟಿಯೊ ಜಾತಿಯ ಒಂದು ಪ್ರಭೇದ. ಇದನ್ನು ಬಸರ್ಡ್‌ಹಾಕ್ ಅಥವಾ ರಫ್ ಲೆಗ್ಗೆಡ್ ಬಸರ್ಡ್ ಎಂಬ ಜನಪ್ರಿಯ ಹೆಸರಿನಿಂದ ಕರೆಯುವುದುಂಟು. ಇದರ ಶಾಸ್ತ್ರೀಯ ನಾಮ ಬ್ಯೂಟಿಯೊ ಲಗೋಪಸ್. ಈ ಪಕ್ಷಿಯ ಪಾದದ ಮೇಲಕ್ಕೆ, ಮಂಡಿಯ ಕೆಳಗೆ ಅಂದರೆ ಮೊಳಕಾಲಿನಲ್ಲಿ ಪುಕ್ಕಗಳು ಇರುವುದರಿಂದ ಇದಕ್ಕೆ ಒರಟು ಕಾಲು ಡೇಗೆ ಎಂದು ಹೆಸರು. ಇದರ ಹೊರಮೈ ಬಣ್ಣ ಗಾಢ ಕಂದು; ರೆಕ್ಕೆಗಳ ಕೆಳಗೆ ತಿಳಿಕಂದು; ಬಾಲದ ರೆಕ್ಕೆಗಳು ಬಿಳುಪು. ಋತುಮಾಸದಲ್ಲಿ ಇವು ಎತ್ತರದ ಮರಗಳ ಮೇಲೆ ಅಥವಾ ಗುಡ್ಡಗಳ ಬಂಡೆಗಲ್ಲು ತುದಿಯಲ್ಲಿ ಗೂಡುಗಳನ್ನು ಮಾಡಿ ೨–೫ ಮೊಟ್ಟೆಗಳನ್ನಿಟ್ಟು ಮರಿಮಾಡುವುವು. ಈ ಡೇಗೆ ಉತ್ತರ ಯೂರೋಪಿನಿಂದ ಬ್ರಿಟನ್ ದೇಶಕ್ಕೆ ಬಂದು ಚಳಿಗಾಲವನ್ನು ಕಳೆಯುತ್ತದೆ. ಮಿಕ್ಕ ಕಾಲಗಳಲ್ಲಿ ಸೈಬೀರಿಯ ಮತ್ತು ಉತ್ತರ ಕೆನಡ ಪ್ರದೇಶಗಳಲ್ಲಿ ವಾಸಿಸುವುದು. ಬ್ರಿಟನ್ ದೇಶದಲ್ಲಿ ಇನ್ನೊಂದು ಪ್ರಭೇದವಾದ ಬ್ಯೂಟಿಯೊ ಬ್ಯೂಟಿಯೊವನ್ನು ಸಾಮಾನ್ಯವಾಗಿ ಬಸರ್ಡ್ ಎನ್ನುವರು. ಈ ಪ್ರಭೇದವೂ ಒರಟುಕಾಲು

ಡೇಗೆಯೂ ಯೂರೋಪಿನಿಂದ ಜಪಾನಿನವರೆಗೂ ಹರಡಿವೆ. ಇವು ಸಾಧಾರಣವಾಗಿ ಸಣ್ಣ ಸ್ತನಿಗಳನ್ನೂ ಕೆಲವು ಸಾರಿ ದುಂಬಿಗಳನ್ನೂ ಪಕ್ಷಿಗಳನ್ನೂ ಬೇಟೆಯಾಡುವುವು.

(ಎನ್.ವಿ.ಎ.)

**ಒರಾಂಗೂಟಾನ್:** ಕಪಿ ಜಾತಿಗೆ ಸೇರಿದ ಒಂದು ದೊಡ್ಡ ವಾನರ. ಮಲಯ ಭಾಷೆಯಲ್ಲಿ ಕಾಡುಮನುಷ್ಯ ಎಂದರ್ಥ. ಪ್ರಾಣಿವಿಜ್ಞಾನದಲ್ಲಿ ಇದರ ಹೆಸರು ಪಾಂಗೊ ಪಿಗ್ಮೆಯಿಸ್. ಹಲವು ಸಹಸ್ರ ವರ್ಷಗಳ ಹಿಂದೆ ಆಗ್ನೇಯ ಏಷ್ಯದ ಕಾಡುಗಳಲ್ಲೆಲ್ಲ ಹರಡಿಕೊಂಡಿದ್ದರೂ ವಾತಾವರಣದಲ್ಲಾದ ಬದಲಾವಣೆಗಳಿಂದಲೋ ಮಾನವಶಕ್ತಿಗೆ

ಒರಾಂಗೂಟಾನ್

ಮಣಿದೋ ಇವುಗಳ ಸಂಖ್ಯೆ ಈಗ ಬಹುವಾಗಿ ಇಳಿದಿದೆ. ಇಂದು ಬೋರ್ನಿಯೊ ಮತ್ತು ಸುಮಾತ್ರಗಳ ಜೌಗು ಕಾಡುಗಳಲ್ಲಿ ಮಾತ್ರ ಕಾಣಬಹುದಾದ ಇವುಗಳ ಸಂಖ್ಯೆ ೫,೦೦೦ಕ್ಕಿಂತ ಕಡಿಮೆ. ವಾಸ ಮರಗಳ ಮೇಲೆ. ಸಾಮಾನ್ಯವಾಗಿ ಗಂಡು ಹೆಣ್ಣುಗಳು ಜೊತೆಜೊತೆಯಾಗಿ ಬಾಳುತ್ತವೆ; ಕೆಲವೊಮ್ಮೆ ಒಂಟಿಯಾಗಿಯೂ ಗುಂಪಿನಲ್ಲಿಯೂ ಇರಬಹುದು. ಮರಗಳ ಮೇಲೆ ರೆಂಬೆಗಳನ್ನು ಹೆಣೆದು ಗೂಡು ಕಟ್ಟಿಕೊಂಡು ಅಲ್ಲಿ ಮಲಗುತ್ತವೆ. ವಿಶ್ರಮಿಸುವಾಗ ಎಲೆಗಳಿಂದ ಮೈಯನ್ನು ಮುಚ್ಚಿಕೊಳ್ಳುವ ಅಭ್ಯಾಸ ಉಂಟು.

ಬಲಯುತವಾದ ದೇಹ, ಸಣ್ಣ ಕಿವಿಗಳು, ಗಿಡ್ಡ ಕಾಲುಗಳು, ಎದ್ದು ನಿಂತಾಗ ನೆಲ ಮುಟ್ಟುವಷ್ಟು ಉದ್ದವಾದ ಕೈಗಳು ಇದರ ವಿಶಿಷ್ಟ ಲಕ್ಷಣಗಳು. ಹೆಚ್ಚು ಕಡಿಮೆ ಗೋರಿಲ್ಲದಂತೆ ಕಾಣುತ್ತದೆ. ಇದರ ಚಿಕ್ಕ ಕಿವಿಗಳು, ಕಂದು ಚರ್ಮ, ಉದ್ದನೆಯ ವಿರಳ ಕೆಂಗೂದಲುಗಳಿಂದಾಗಿ ಇದು ಗೋರಿಲ್ಲಕ್ಕಿಂತ ಭಿನ್ನವೆನಿಸಿದೆ. ಗಂಡು ಸುಮಾರು ೧.೬೫ ಮೀ ಎತ್ತರ ಬೆಳೆಯುವುದುಂಟು; ೮೦ ಕಿಗ್ರಾಂ ತೂಗುತ್ತದೆ. ಪ್ರಾಣಿಸಂಗ್ರಹಾಲಯಗಳಲ್ಲಿ ಸಾಕಿದ ಒರಾಂಗೂಟಾನುಗಳು ವಿಪರೀತ ದಪ್ಪವಾಗಿ ಬೆಳೆದು ೧೮೦ ಕಿಗ್ರಾಂ ಗೂ ಹೆಚ್ಚು ತೂಗುವುದುಂಟು. ಪ್ರಬುದ್ಧ ಗಂಡಿನಲ್ಲಿ ಗಡ್ಡ ಬೆಳೆಯುತ್ತದೆ. ಧ್ವನಿಪೆಟ್ಟಿಗೆಯಿಂದ ಉದ್ಭವಿಸಿದ ಗಾಳಿಯ ಚೀಲವೊಂದು ಕುತ್ತಿಗೆಯ ಭಾಗದಲ್ಲಿ ನೇತುಬಿದ್ದಿದೆ. ಅಲ್ಲದೆ ಎರಡು ಕೆನ್ನೆಗಳ ಬಳಿಯೂ ಕಪಿ ಸಾಮಾನ್ಯಕ್ಕಿರುವಂತೆ ಒಂದೊಂದು ಚೀಲವಿದೆ.

ನೆಲದ ಮೇಲೆ ಇದರ ನಡಿಗೆ ನಿಧಾನ, ಅಲ್ಲದೆ ಇದು ನೆಲದ ಮೇಲೆ ನಡೆಯಲು ಇಚ್ಛಿಸುವುದೂ ಇಲ್ಲ. ಮರಗಳ ಮೇಲೆ, ರೆಂಬೆಯಿಂದ ರೆಂಬೆಗೆ ನೆಗೆದು ಸಾಗುವುದೇ ಸಾಮಾನ್ಯ. ಸರಾಗವಾಗಿ ಗಂಟೆಗೆ ೮–೧೦ ಕಿಮೀ ದೂರ ಕ್ರಮಿಸುತ್ತದೆ.

ಒರಾಂಗೂಟಾನ್ ಸ್ವಾಭಾವಿಕವಾಗಿ (ಚಿಂಪಾಂಜಿಯಷ್ಟಲ್ಲದಿದ್ದರೂ) ಬಹು ಚುರುಕಾದ ಪ್ರಾಣಿ. ಸಾಕಿ ಶಿಕ್ಷಣವಿತ್ತಾಗ ಹೆಚ್ಚಿನ ಚುರುಕುತನ ಪ್ರದರ್ಶಿಸುತ್ತದೆ. ಮನುಷ್ಯರೊಂದಿಗೆ ಇದು ಸ್ನೇಹಪರ. ತನ್ನ ಆವರಣದ ಬಗ್ಗೆ ಕುತೂಹಲವನ್ನು ಪ್ರದರ್ಶಿಸುತ್ತದೆ.

ಈ ಪ್ರಾಣಿ ಸಂಪೂರ್ಣವಾಗಿ ಸಸ್ಯಾಹಾರಿ. ಮುಖ್ಯವಾಗಿ ಹಣ್ಣುಗಳು ಇದರ ಆಹಾರ. ಕೆಲವೊಮ್ಮೆ ಎಲೆ, ದಂಟುಗಳನ್ನೂ ತಿನ್ನುತ್ತದೆ.

ಗಂಡು ೧೦ ವರ್ಷಗಳಲ್ಲಿಯೂ ಹೆಣ್ಣು ೮ ವರ್ಷಗಳಲ್ಲಿಯೂ ಪ್ರೌಢಾವಸ್ಥೆ ತಲುಪುತ್ತವೆ. ಗರ್ಭಾವಧಿ ೨೭೦ ದಿನಗಳು. ಒಮ್ಮೆಗೆ ಒಂದು ಮರಿಯನ್ನು ಮಾತ್ರ ಹೆರುತ್ತದೆ.

(ಎಚ್.ಬಿ.ಡಿ.)

**ಒಲವಿನ ಹಕ್ಕಿ:** ಗಿಳಿಯಂತೆ ತೋರುವ ಒಂದು ಬಗೆಯ ಹಕ್ಕಿ. ಸಾಧಾರಣವಾಗಿ ಆಫ್ರಿಕದ ಅಗಪೋರ್ನಿಸ್ ಜಾತಿಯವನ್ನು ಈ ಹೆಸರಿಂದ ಕರೆಯುತ್ತಾರೆ (ಲವ್ ಬರ್ಡ್). ಪ್ರಪಂಚದ ನಾನಾ ಭಾಗಗಳಲ್ಲಿ ಇವು ಹರಡಿದೆ. ಆಕಾರದಲ್ಲಿ ಗುಬ್ಬಚ್ಚಿಯಷ್ಟು ಅಥವಾ ಅದಕ್ಕಿಂತ ಸ್ವಲ್ಪ ದೊಡ್ಡದು. ಪುಕ್ಕಗಳಿಂದಾಗಿ ದೊಡ್ಡದಾಗಿ ಕಾಣುತ್ತದೆ.

ಗರಿ ಮೃದು ನೀಲಿ ಬಣ್ಣದ್ದಾಗಿದ್ದು ಮೇಲೆ ಹಸಿರು, ಕೆಂಪು ಮತ್ತು ಬಿಳಿ ಮಚ್ಚೆಗಳಿವೆ. ಗಂಡು, ಹೆಣ್ಣು ಹಕ್ಕಿಗಳು ಯವಾಗಲೂ ಜೊತೆ ಜೊತೆಯಾಗಿದ್ದು ಒಂದನ್ನೊಂದು ಹಿಂಬಾಲಿಸುತ್ತ, ಒಂದರ ಸಾಮೀಪ್ಯವನ್ನು ಮತ್ತೊಂದು ಬಯಸಿ, ಸದಾ ಸರಸ ಸಲ್ಲಾಪದಲ್ಲಿರುತ್ತವಾದ ಕಾರಣ ಇವನ್ನು ಒಲವಿನ ಹಕ್ಕಿಗಳು ಎಂದು ಕರೆದಿರಬೇಕು. ಇವನ್ನು ಹಿಡಿದು ಮಾರುವುದುಂಟು. ಕೊಂಡು ಸಾಕುವವರೂ ಇದ್ದಾರೆ.

ಫಿಶರ್‌ನ ಒಲವಿನ ಹಕ್ಕಿ ತುಂಬಾ ಲೋಕಪ್ರಿಯ. ಅದರ ವೈಜ್ಞಾನಿಕ ಹೆಸರು ಅಗಪೋರ್ನಿಸ್ ಫಿಶೇರಿ. ಹವಳದ ಕೆಂಪಿನ ಕೊಕ್ಕು, ಕೆಂಪು ಮಿಶ್ರಿತ ಕಂದು ಬಣ್ಣದ



ಒಲವಿನ ಹಕ್ಕಿ

ರೆಕ್ಕೆಗಳು, ನೀಲಿ ಮೇಲ್ಮೈಯ ಹಸಿರು ಬಾಲ, ಕಣ್ಣಿನ ಸುತ್ತ ಬಿಳಿಯ ಉಂಗುರ ಇದರ ವೈಶಿಷ್ಟ್ಯ.

(ಜಿ.ಎಂ.ಬಿ.)

**ಒಸೆಲಸ್:** ಸಂಧಿಪದಿಗಳಲ್ಲಿನ ಸರಳ ಬಗೆಯ ನೇತ್ರಾಂಗ. ಆನಿಕೊಫೋರ, ಕೀಟಗಳು, ಕಠಿಣ ಚರ್ಮಿಗಳು ಮತ್ತು ಅರ್‍ಯಾಕ್ನಿಡಾ ಗುಂಪಿನ ಜೀವಿಗಳಲ್ಲಿ ಒಸೆಲಸ್ ನೇತ್ರಗಳಿವೆ. ಸಂಧಿಪದಿ ವಂಶದಲ್ಲಿ ಮುಖ್ಯವಾಗಿ ಸರಳ ಮತ್ತು ಸಂಯುಕ್ತ ನೇತ್ರಾಂಗಗಳಿವೆ.

ಒಸೆಲಸ್ ನೇತ್ರಗಳು ಅತ್ಯಂತ ಮೂಲ ರೂಪದವು ಮತ್ತು ಸರಳವಾದವು. ಇವು ಸಂಧಿಪದಿಗಳ ಹಣೆ ಮತ್ತು ನೆತ್ತಿಯ ಭಾಗದಲ್ಲಿ, ಸಂಯುಕ್ತ ಕಣ್ಣುಗಳೆರಡರ ಮಧ್ಯೆ ಇವೆ. ಇವುಗಳ ಸಂಖ್ಯೆ ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿದೆ. ಕೆಲವು ಪ್ರಭೇದದ ಜೀವಿಗಳಲ್ಲಿ ಒಂದೇ ಇದ್ದರೆ ಇನ್ನು ಕೆಲವು ಜೀವಿಗಳಲ್ಲಿ ಹಲವಾರು ಗುಂಪುಗಳಿವೆ.




ಜೇಡದ ಒಸೆಲಸ್

ಇದು ತಲೆಯಲ್ಲಿದ್ದು ಗಡುಸು ಕವಚದಿಂದಾವರಿಸಿದೆ. ಗಡುಸು ಕವಚ ಮೃದುವಾಗಿದ್ದು, ಮಸೂರವಾಗಿ ಮಾರ್ಪಾಟಾಗಿದೆ. ಇದರಡಿ ಚರ್ಮವು ಬಟ್ಟಲಾಕಾರದಂತಿದ್ದು, ಇದರ ತಳ ಭಾಗವು ಅಕ್ಷಿಪಟವಾಗಿ, ಸುತ್ತಲಿನ ಜೀವಕೋಶಗಳು ವರ್ಣ ಖಚಿತ ಕೋಶವಾಗಿವೆ. ಈ ನೇತ್ರಗಳು ಎಷ್ಟೇ ಸರಳವಾಗಿದ್ದರೂ, ರಚನೆ ಮತ್ತು ಮಾದರಿಯಲ್ಲಿ ಮನುಷ್ಯನ ನೇತ್ರಗಳನ್ನು ಹೋಲುತ್ತವೆ. ಬೆಳಕಿನ ಕಿರಣಗಳು ಮಸೂರನ್ನು ಹಾದು, ಪಾರದರ್ಶಕ ವಸ್ತುವಾದ ವಿಟ್ರಿಯಸನ್ನು ತೂರಿ, ಅಕ್ಷಿಪಟವನ್ನು ತಲುಪಿ, ಅನಂತರ ಹೊರ ಪ್ರಪಂಚದ ಅರಿವು ಈ ಜೀವಿಗೆ ತನ್ನ ಮೆದುಳಿನ ಮೂಲಕ ಆಗುವುದು.

(ಜಿ.ಎಮ್.ಬಿ.)

**ಒಳಗಿವಿಗೂಡು:** ಕಿವಿಯ ಒಳಗಿನ ನಾಳದಲ್ಲಿರುವ, ನಾಳಕೋಶ (ವೆಸ್ಟಿಬ್ಯೂಲ್), ಅರೆಸುತ್ತಿನ ಸಾಗಾಲುವೆಗಳು (ಸೆಮಿಸರ್ಕುಲಾರ್ ಕೆನಾಲ್ಸ್), ಕಿವಿಸಂಕರದ ಸಾಗುನಾಳ (ಕಾಕ್ಲಿಯಾರ್ ಡಕ್ಟ್), ಒಳಗಿವಿಕೋಶ (ಯೂಟ್ರಿಕಲ್), ಕಿರು ಚೀಲಗಳಲ್ಲಿ (ಸ್ಯಾಕ್ಯೂಲ್) ಒಳ ಹಾಲುರಸವಿರುವ (ಎಂಡೊಲಿಂಫ್) ಮೂಳೆಯ ಭಾಗ. ನೋಡಿ–ಕಿವಿ, ಕೇಳುವಿಕೆ.

**ಒಳತಳಿಸಂತಾನೋತ್ಪಾದನೆ:** ಬಹಳ ಹತ್ತಿರದ ಬಂಧುಗಳ ನಡುವೆ ಸಂಭೋಗ ನಡೆಸಿ ಸಂತಾನೋತ್ಪಾದನೆ ಮಾಡುವ ಒಂದು ಕ್ರಮ. ಸೋದರಿಕೆಯ ಸಂಬಂಧಗಳೂ, ಅಕ್ಕನ ಮಗಳನ್ನು ವಿವಾಹವಾಗುವಿಕೆ ಮುಂತಾದವು ಈ ಗುಂಪಿಗೆ ಸೇರುತ್ತವೆ.

ಅನೇಕ ಸಸ್ಯಗಳಲ್ಲಿ ಸ್ವಕೀಯ ಪರಾಗಸ್ಪರ್ಶ ನಡೆಯುತ್ತದೆ. (ಉದಾ: ಗೋದಿ, ಬಾರ್ಲಿ, ಓಟ್ಸ್, ಜೋಳ, ಹತ್ತಿ ಮುಂತಾದುವು). ಇಂಥ ಸಸ್ಯಗಳಲ್ಲಿ ಒಳತಳಿ ಸಂತಾನೋತ್ಪಾದನೆ ಸ್ವಾಭಾವಿಕವಾಗಿಯೇ ನಡೆಯುತ್ತದೆ. ಕೆಲವು ಕೆಳವರ್ಗದ ಪ್ರಾಣಿಗಳ ಹೊರತಾಗಿ ಪ್ರಾಣಿಗಳೆಲ್ಲ ಏಕಲಿಂಗಿಗಳಾದ್ದರಿಂದ ಅವುಗಳಲ್ಲಿ ಸ್ವಕೀಯ ಗರ್ಭಾಂಕುರತೆ ಅಸಾಧ್ಯ. ಅಂತೆಯೇ ಪ್ರಾಣಿಜಗತ್ತಿನಲ್ಲಿ ಒಳತಳಿಸಂತಾನೋತ್ಪಾದನೆ ತೀರ ವಿರಳ. ಕೆಳವರ್ಗದ ಪ್ರಾಣಿಗಳಾದ ಲಾಡಿ ಹುಳುಗಳಂಥ ಕೆಲವು ಪ್ರಾಣಿಗಳಲ್ಲಿ ಸ್ವಕೀಯ ಗರ್ಭಾಂಕುರವೇ ನಿಯಮವಾಗಿರುತ್ತದೆ. ತೀರ ಹತ್ತಿರದ ಸಂಬಂಧಿಗಳ ನಡುವೆ ಅನೇಕ ಪೀಳಿಗೆಗಳವರೆಗೆ ಒಳತಳಿ ಸಂತಾನೋತ್ಪಾದನೆಯೇ ನಡೆಯುತ್ತಿದ್ದರೆ ಅದರ ಪರಿಣಾಮ ಅಪಾರ.

ಒಳತಳಿಸಂತಾನೋತ್ಪಾದನೆಯಿಂದ ಹಲವಾರು ಉಪಯೋಗಗಳುಂಟು. ಮುಖ್ಯವಾಗಿ, ಸಾಕುಪ್ರಾಣಿಗಳಲ್ಲಿ ನಮಗೆ ಬೇಕಾಗುವ ಗುಣಲಕ್ಷಣಗಳು ಸಮಜಂಪತಿ ಸ್ಥಿತಿಯಲ್ಲಿ ಉಳಿಯುವಂತಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವುದು. ಈ ಮೂಲಕ ಮಾನವ ತನಗೆ ಬೇಕಾದ ಗುಣಗಳುಳ್ಳ ಪ್ರಾಣಿಗಳನ್ನು ಪಡೆಯಬಹುದಾಗಿದೆ. ಹೊರಗಡೆಯಿಂದ ಬರಬಹುದಾದ ಬೇಡವೆನಿಸುವ ಜೀನ್‌ಗಳ ಸಂಕರವನ್ನು ತಡೆಯಬಹುದು. ಈ ರೀತಿ ಹಲವಾರು ವರ್ಷಗಳ ಒಳತಳಿಸಂತಾನೋತ್ಪಾದನೆ ಕ್ರಮದಿಂದ ಪಡೆದ ಪ್ರಾಣಿಗಳ ಉತ್ತಮ ಉದಾಹರಣೆಯೆಂದರೆ ಆಸ್ಟ್ರೇಲಿಯದ ಮೆರಿನೊ ಕುರಿ, ಪಾಶ್ಚಿಮಾತ್ಯ ದೇಶಗಳ ಹರ್‌ಫೋರ್ಡ್ ಜಾತಿಯ ದನಗಳು ಹಾಗೂ ಪಂದ್ಯದ ಕುದುರೆಗಳು.

ಒಳತಳಿಸಂತಾನೋತ್ಪಾದನೆ ಅನೇಕ ರೀತಿಗಳಲ್ಲಿ ಆನುವಂಶೀಯತೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಇದರ ಪ್ರಪ್ರಥಮ ಪರಿಣಾಮ ಆನುವಂಶೀಯ ಶುದ್ಧತೆಯ ವೃದ್ಧಿ. ಪ್ರತಿ ಒಳತಳೀಕರಣದಿಂದಲೂ ಸಮಜಂಪತಿಗಳ ಮಿಳಿತದಿಂದಾಗಿ ಒಂದೇ ತೆರನ ಗುಣಗಳಿರುವ ಹೆಚ್ಚು ಹೆಚ್ಚು ಜೀನ್ ಜೋಡಿಗಳು ಉತ್ಪತ್ತಿಯಾಗುತ್ತವೆ. ಆದರೆ ಒಂದು ವಿಷಯವನ್ನು ಮಾತ್ರ ನಾವು ಇಲ್ಲಿ ಅಲ್ಲಗಳೆಯಲಾಗುವುದಿಲ್ಲ. ಆನುವಂಶೀಯ ಶುದ್ಧತೆ ಹೆಚ್ಚಿದಂತೆಲ್ಲ ಅನೇಕ ದುರ್ಬಲ ಜೀನ್‌ಗಳು ತಮ್ಮ ಪ್ರಭಾವವನ್ನು ತೋರಿಸಲು ಪ್ರಾರಂಭಿಸುತ್ತವೆ. ಸಾಮಾನ್ಯವಾಗಿ ಇವುಗಳ ಪೈಕಿ ಅನೇಕವು ಪ್ರಬಲ ಜೀನ್‌ಗಳ ಪ್ರಭಾವಗಳಂತೆ ಜೀವಿಗೆ ಅವಶ್ಯಕವಾಗಿರುವುದಿಲ್ಲ. ಆದ್ದರಿಂದ ಒಳತಳಿಸಂತಾನೋತ್ಪಾದನೆಯಿಂದ ನಿಧಾನವಾಗಿ ಬೆಳೆಯುವ, ದುರ್ಬಲತೆಗಳುಳ್ಳ, ನಿರಾಶಾದಾಯಕ ಮತ್ತು ನ್ಯೂನ ಸಂತಾನ ವರ್ಧಿಸುವ ಸಂಭವನೀಯತೆಯೇ ಹೆಚ್ಚು. ಈ ಕಾರಣಕ್ಕಾಗಿ ಅನೇಕ ತಳಿವಿಜ್ಞಾನಿಗಳು ಈ ಕ್ರಮವನ್ನು ತಳೀಕರಣದ ಒಂದು ಅಪಾಯಕರ ಪ್ರಯೋಗವೆನ್ನುತ್ತಾರೆ. ಆದರೆ ಇವರಲ್ಲೇ ಕೆಲವರು ಅಂಥ ಪ್ರಯೋಗಗಳನ್ನು ಕೈಗೊಂಡು ತಮ್ಮವೇ ಆದ ಕೆಲವು ವಿಶಿಷ್ಟ ಗುಣಗಳಿರುವ ಪ್ರಾಣಿಗಳನ್ನು ಆಯ್ಕೆ ಮಾಡಿಕೊಂಡು ಅವನ್ನು ಪದೇ ಪದೇ ಒಳತಳಿಸಂತಾನೋತ್ಪಾದನೆಗೆ ಒಳಪಡಿಸಿ ಆ ಗುಣಗಳು ಅವಕ್ಕೇ ಮೀಸಲಾಗಿರುವಂತೆ ಮಾಡಿದ್ದಾರೆ.

ಒಳತಳಿಸಂತಾನೋತ್ಪಾದನೆಯಿಂದ ಜೀನ್‌ಗಳು ಬದಲಾವಣೆ ಹೊಂದುತ್ತವೆ ಎಂಬುದಾಗಲೀ ಅವುಗಳ ಆವರ್ತನ ವ್ಯತ್ಯಾಸವಾಗುವುದು ಎಂಬುದಾಗಲೀ ಸುಳ್ಳು. ಅಡ್ಡತಳಿಯೆಬ್ಬಿಕೆಯಲ್ಲಿ ಬರಲಾಗದ ಸಾಮೀಪ್ಯ ಅವು ಸಾಧಿಸಿ ಜೊತೆಗೂಡಲು ಇಲ್ಲಿ ಅನುಕೂಲವಿರುತ್ತದೆ ಅಷ್ಟೆ. ಆದ್ದರಿಂದಲೇ ಒಳತಳೀಕರಣ ಮುಂದುವರೆದಂತೆಲ್ಲ ಕುಟುಂಬಗಳು ಹೆಚ್ಚು ಹೆಚ್ಚು ವಿಶಿಷ್ಟಗೊಳ್ಳುತ್ತ, ಪ್ರತ್ಯೇಕಗೊಳ್ಳುತ್ತ ಹೋಗುತ್ತವೆ. ಈ ರೀತಿಯ ಸಂತಾನೋತ್ಪಾದನೆಯಿಂದ ಉದ್ಭವವಾದ ಕುಟುಂಬದ ಸಂತಾನಗಳ ಆನುವಂಶೀಯ ಮತ್ತು ಬಾಹ್ಯ ಗುಣಲಕ್ಷಣಗಳಲ್ಲಿ ಪರಸ್ಪರ ಸಾಮ್ಯ ಒಂದು ಸಾಮಾನ್ಯ ಕುಟುಂಬದ ಸಂತಾನಕ್ಕಿಂತ ಹೆಚ್ಚು.

ಒಳತಳಿಸಂತಾನೋತ್ಪಾದನೆಯಿಂದ ಇನ್ನೂ ಕೆಲವು ಉಪಯೋಗಗಳುಂಟು. ಒಂದು ಗುಂಪಿನ ಇಲ್ಲವೆ ಒಂದು ಸಂತತಿಯ ಅಪ್ರಧಾನ ನ್ಯೂನತೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳಕಿಗೆ ತರುವ ಮೂಲಕ ಇದು ಸಂತತಿಯನ್ನು ಆನುವಂಶೀಯವಾಗಿ ಶುದ್ಧಗೊಳಿಸುತ್ತದೆ. ಆನುವಂಶೀಯ ಶುದ್ಧತೆಯ ಸಾಧನೆಗೆ ಇದೊಂದೇ ಮಾರ್ಗ. ನ್ಯೂನತೆಗಳಿರುವ ಜೀನ್‌ಗಳನ್ನು ಬೇರ್ಪಡಿಸಿದರೆ ಇಡೀ ಗುಂಪೇ ಈ ಅನಾವಶ್ಯಕ ದುರ್ಬಲತೆಗಳಿಂದ ವಿಮುಕ್ತವಾಗುತ್ತದೆ. ಅಲ್ಲದೆ ಕುಟುಂಬದ ಎಲ್ಲ ಸದಸ್ಯರುಗಳೂ ಪರಸ್ಪರ ಆನುವಂಶೀಯ ಗುಣಗಳಲ್ಲಿ ಸಾಮ್ಯ ಸಾಧಿಸಿಕೊಳ್ಳಬೇಕಾದಲ್ಲಿ ಒಳತಳಿಸಂತಾನೋತ್ಪಾದನೆಯಲ್ಲದೆ ಬೇರೆ ದಾರಿ ಇಲ್ಲ. ಈ ಮಾರ್ಗದಿಂದ ಒಂದು ಕುಟುಂಬ ತನ್ನದೇ ಆದ ಕೆಲವು ವಿಶಿಷ್ಟ, ಉತ್ಕೃಷ್ಟ ಅರ್ಹತೆಗಳನ್ನು ಆನುವಂಶೀಯವಾಗಿ ಮುಂದುವರಿಸಿಕೊಂಡು ಹೋಗಬಹುದು. ಮಿಶ್ರತಳಿಯ ಮುಸುಕಿನ ಜೋಳ ಮತ್ತಿತರ ಹೆಚ್ಚು ಫಸಲು ಕೊಡುವ ತಳಿಗಳನ್ನು ಬೆಳಕಿಗೆ ತರಲು ಒಳತಳಿಸಂತಾನೋತ್ಪಾದನೆಯ ಮೂಲಕ ವಿಕಾಸಗೊಳಿಸಿದ ಶುದ್ಧ ತಳಿಗಳಿಂದ ಆಗಿರುವ ಲಾಭ ಅತ್ಯಪೂರ್ವ.

ಪ್ರಕೃತಿಯಲ್ಲೂ ಸ್ವಲ್ಪಮಟ್ಟಿಗೆ ಒಳತಳಿಸಂತಾನೋತ್ಪಾದನೆಯಾಗುವ ಅವಕಾಶಗಳಿವೆ. ಒಂದೇ ಪ್ರಭೇದದ ಅನೇಕ ವನ್ಯಜೀವಿಗಳು ಸಣ್ಣ ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. ಈ ಗುಂಪುಗಳ ನಡುವೆ ತಳೀಕರಣ ನಡೆಯುವುದು ಬಹು ಅಪೂರ್ವ. ಗುಂಪಿನೊಳಗೇ ಒಳತಳಿ ಸಂತಾನೋತ್ಪಾದನೆ ಮುಂದುವರಿದಂತೆಲ್ಲ ಗುಂಪಿನ ಎಲ್ಲ ಪ್ರಾಣಿಗಳಿಗೂ ಪರಸ್ಪರ ಸಂಬಂಧವೇರ್ಪಡುತ್ತದೆ. ಬೇರೊಂದು ಗುಂಪಿನ ಪ್ರಾಣಿಗಳು ಈ ಗುಂಪಿಗೆ ಬಂದು ಸೇರದಿದ್ದಲ್ಲಿ ಈ ಸಂಬಂಧ ನಿರಂತರವಾಗಿ ಮುಂದುವರಿಯುತ್ತಲೆ ಇರುತ್ತದೆ ಮತ್ತು ತಳಿ ಶುದ್ಧೀಕರಣ ನಡೆಯುತ್ತಿರುತ್ತದೆ. ಗುಂಪುಗಳು ಭೌಗೋಳಿಕವಾಗಿ ಬೇರ್ಪಟ್ಟಿದ್ದರಂತೂ ಒಳತಳಿ ಸಂತಾನೋತ್ಪಾದನಕ್ರಮವೇ ಇವುಗಳ ಸಂತಾನ ನಿಯಮವಾಗಿರುತ್ತದೆ. ಈ ತರಹ ಅನೇಕ ಘಟನೆಗಳು ಪ್ರಕೃತಿಯಲ್ಲಿ ನಡೆದಿವೆ; ನಡೆಯುತ್ತಿವೆ. ಆದರೆ ಅವಕ್ಕೆ ವಿಕಾಸದಲ್ಲಿ ಎಷ್ಟು ಪ್ರಾಮುಖ್ಯವಿದೆ, ಪ್ರಕೃತಿಯ ಆಯ್ಕೆಯ ಕೈವಾಡ ಈ ಗುಂಪುಗಳ ಮೇಲೆ ಯಾವ ರೀತಿಯಲ್ಲಿರುತ್ತದೆ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯಗಳು ಮೂಡಲು ಇನ್ನೂ ಸಂಶೋಧನೆಗಳು ನಡೆಯಬೇಕಾಗಿವೆ.

ಒಳತಳಿಸಂತಾನೋತ್ಪಾದನೆಯ ಬಗ್ಗೆ ವಾದಗಳು ಪ್ರತಿವಾದಗಳು ಪ್ರಾಣಿಗಳ ವಿಷಯಕ್ಕಿಂತಲೂ ಮಾನವನಲ್ಲಿ ಹೆಚ್ಚು ಪ್ರಾಮುಖ್ಯ ಪಡೆದಿವೆ. ಪುರಾತನ ಈಜಿಪ್ಟಿನ ರಾಜಕುಟುಂಬಗಳನ್ನು ಬಿಟ್ಟರೆ ಇತರ ಎಲ್ಲ ನಾಗರಿಕ ಜನಾಂಗಗಳೂ ಈ ಕ್ರಮವನ್ನು ನಿಷೇಧಿಸಿವೆ. ಸಹೋದರ ವಿವಾಹಗಳನ್ನು ಕೆಲವರು ಸಂಪೂರ್ಣವಾಗಿ ಕೈಬಿಟ್ಟಿದ್ದರೆ ಇನ್ನು ಕೆಲವು ವಿಶೇಷ ಮತವ್ಯವಸ್ಥೆಗಳು ಇವಕ್ಕೆ ವಿನಾಯಿತಿ ಕೊಟ್ಟಿವೆ. ಪೂರ್ವಜರು ಎಲ್ಲ ರೀತಿಯಲ್ಲೂ ಉತ್ಕೃಷ್ಟ ಆನುವಂಶೀಯ ಗುಣಗಳನ್ನು ಪಡೆದಿದ್ದಲ್ಲಿ ಈ ವ್ಯವಸ್ಥೆ ಜೀವವಿಜ್ಞಾನ ಪ್ರಕಾರ ಬಹು ಒಳ್ಳೆಯದು. ನೋಡಿ–ಅಡ್ಡತಳಿಯೆಬ್ಬಿಕೆ ; ಏಕತಳಿ ಸಂತಾನೋತ್ಪಾದನೆ. (ಎಸ್.ಎನ್.ಆರ್.)

**ಓಡಂಟೋರ್ನಿತಿಸ್:** ಗತಿಸಿದ ಪಕ್ಷಿಗಳ ಮಹಾಗಣ (ಸೂಪರ್ ಆರ್ಡರ್). ಓಡಂಟೊಗ್ನಾಥೆ ಎಂಬುದು ಇನ್ನೊಂದು ಹೆಸರು. ಆರ್ಕಿಯಾಪ್ಟೆರಿಕ್ಸ್, ಹೆಸ್ಪೆರಾರ್ನಿಸ್ ಮತ್ತು ಇಕ್ತಿಯಾರ್ನಿಸ್ ಎಂಬ ಮೂರು ಲುಪ್ತವಂಶಿ ಪಕ್ಷಿಗಳ ಗಣಕ್ಕೆ ಮಾರ್ಷ್ ಎಂಬುವನು 1880ರಲ್ಲಿ ಮೊದಲು ಬಳಸಿದ ಹೆಸರು. ಈತ ಕೊನೆಯ ಎರಡು ಪಕ್ಷಿಗಳ ಪಳೆಯುಳಿಕೆಗಳನ್ನು ಕಂಡುಹಿಡಿದು ಇವು ಮೂರೂ ಬೇರೆ ಬೇರೆ ಉಪಗಣಗಳಿಗೆ ಸೇರಿದವೆಂದು ಸೂಚಿಸಿದ. ಆದರೆ ಈ ವರ್ಗೀಕರಣವನ್ನು ಈಗ ಕೈಬಿಡಲಾಗಿದೆ. ಬದಲು ಜುರಾಸಿಕ್ ಯುಗದ ಆರ್ಕಿಯಾಪ್ಟೆರಿಕ್ಸ್ ಪಕ್ಷಿ ಆರ್ಕಿಯಾರ್ನಿಥಿಸ್ ಉಪವರ್ಗಕ್ಕೂ ಕ್ರಿಟೇಷಿಯಸ್ ಯುಗದ ಉಳಿದವರೆಡು ನಿಯಾರ್ನಿಥಿಸ್ ಉಪವರ್ಗಕ್ಕೂ ಸೇರಿದವೆಂದು ಭಾವಿಸಲಾಗಿದೆ. ಪಳೆಯುಳಿಕೆಗಳನ್ನು ಮಾತ್ರ ಬಿಟ್ಟಿರುವ ಈ ಮೂರು ವಿವಿಧ ಪಕ್ಷಿಗಳು ನಿಸರ್ಗದ ಒಂದು ಅಪೂರ್ವ ಕಾಣಿಕೆಯೆಂದು ಪಕ್ಷಿವಿಜ್ಞಾನಿಗಳು ತಿಳಿದಿದ್ದಾರೆ. ಇವುಗಳಿಗೆ ಕೊಕ್ಕು ಇದೆ. ಆದರೆ ಬಾಯಲ್ಲಿ ಹಲ್ಲಿರುವುದು ಒಂದು ವಿಶೇಷ. ಮುಂಗೈ ಮಾರ್ಪಾಟಾಗಿ ರೆಕ್ಕೆಯಾಗಿರುವುದಲ್ಲದೆ ರೆಕ್ಕೆಯಲ್ಲಿ ಕೈಬೆರಳುಗಳೂ ಉಗುರೂ ಇರುವುದು ಒಂದು ಕೌತುಕದ ವಿಷಯ. ಬಾಲದ ಭಾಗ ಉದ್ದವಾಗಿದ್ದು ಅದರ ಎರಡೂ ಕಡೆ ಗರಿಗಳಿವೆ. ಹಾಗಾಗಿ ಇವುಗಳಲ್ಲಿ ಸರೀಸೃಪಗಳ ಮತ್ತು ಪಕ್ಷಿಗಳ ಗುಣಲಕ್ಷಣಗಳಿವೆ. ಇದರಿಂದಾಗಿ ಯಾವುದೋ ಒಂದು ಜಾತಿಯ ಸರೀಸೃಪ ಕಾಲಕ್ರಮದಲ್ಲಿ ಪಕ್ಷಿಯಾಗಿ ವಿಕಾಸ ಹೊಂದಿತು ಎಂಬ ಸಿದ್ಧಾಂತಕ್ಕೆ ಜೀವ ವಿಕಾಸವಿಜ್ಞಾನಿಗಳು ಬಂದಿರುತ್ತಾರೆ.

ಹೆಸ್ಪರಾರ್ನಿತಿಫಾರ್ಮಿಸ್: ಹೆಸ್ಪರಾರ್ನಿಸ್ ಈ ಗಣಕ್ಕೆ ಸೇರಿದ ಮುಖ್ಯ ಪ್ರಭೇದ. ಉತ್ತರ ಅಮೆರಿಕಾದ ಕಾನ್ಸಾಸ್ ಪ್ರದೇಶದಲ್ಲಿ ಪಳೆಯುಳಿಕೆ ದೊರೆತಿದೆ. ಕ್ರಿಟೇಶಿಯಸ್‌ನ ಸುಣ್ಣಕಲ್ಲು ಪದರಗಳಲ್ಲಿ ಪಳೆಯುಳಿಕೆಗಳಾಗಿವೆ. ಒಂದು ಅಥವಾ ಒಂದೂವರೆ ಮೀಟರ್ ಉದ್ದವಿರಬಹುದು. ಬಾಯಲ್ಲಿ ಹಲ್ಲುಗಳಿದ್ದುವು. ಕಾಲ್ಬೆರಳುಗಳ ಸಂದುಗಳು ಪೊರೆಯಿಂದ ಬಂಧಿಸಿರಬಹುದು. ನೀರಿನಲ್ಲಿ ಮುಳುಗಿ ಸುಲಭವಾಗಿ ಮೀನುಗಳನ್ನು ಹಿಡಿಯುತ್ತಿದ್ದುವು.

ಇಕ್ಥಿಯಾರ್ನಿತಿಫಾರ್ಮಿಸ್: ಇಕ್ಥಿಯಾರ್ನೊಸ್ ಮತ್ತು ಅಪ್ಟೋರ್ನಿತಿಸ್ ಈ ಗಣಕ್ಕೆ ಸೇರುತ್ತವೆ. ಇವು ಇಂದಿನ ಕಡಲ ಪಕ್ಷಿಗಳ ಗಾತ್ರವಿದ್ದಿರಬಹುದು. ಬಾಯಲ್ಲಿ ಹಲ್ಲುಗಳೂ ಹಾರಲು ರೆಕ್ಕೆಗಳೂ ಇದ್ದುವು. ಮೆದುಳು ದೊಡ್ಡದಾಗಿದ್ದು ಇಂದಿನ ಪಕ್ಷಿಗಳನ್ನು ಹೋಲುತ್ತಿದ್ದುವು ಎನ್ನುವುದು ಕೆಲವರ ಅಭಿಪ್ರಾಯ. ಉತ್ತರ ಅಮೆರಿಕದ ಬಳಪದ ಕಲ್ಲುಗಳ ಪದರಗಳಲ್ಲಿ ದೊರೆತಿವೆ. (ಜಿ.ಎಂ.ಬಿ.)

# ಓ

**ಓಡೋನೇಟ:** ಕೀಟವರ್ಗದ ಒಂದು ಗಣ. ಕೊಡತಿಹುಳು ಮತ್ತು ಅಪ್ಸರೆ ನೊಣಗಳನ್ನೊಳಗೊಂಡ ಇವುಗಳನ್ನು ಕೊಡತಿ ಹುಳುಗಳು (ಡ್ರಾಗನ್ ಫ್ಲೈಸ್) ಎನ್ನುವರು. ಝರಿ ಮತ್ತು ಕೊಳಗಳ ಸುತ್ತ ಬಿರುಸಾಗಿ ಹಾರಬಲ್ಲ ಕೀಟಗಳು. ಏಕ ರೀತಿಯ ಕಿರಿದಾದ ಪಾರದರ್ಶಕ 2 ಜೊತೆ ರೆಕ್ಕೆಗಳು, ದಿಂಡುಗಳ ಜಾಲ ವಿನ್ಯಾಸವಿದೆ. ತಲೆಯಲ್ಲಿ ಎದ್ದು ಕಾಣುವ ಸಂಯುಕ್ತ ಕಣ್ಣು, ಚಿಕ್ಕ ಆಂಟೆನಾಗಳಿವೆ. ನೀಳ ಉದರ, ಎರಡು ಮತ್ತು ಮೂರನೇ ಎದೆ ಕವಚದ ಬುಡಭಾಗದಲ್ಲಿ ಸಹಾಯಕ ಗಂಡು ಪ್ರಜನನ ದ್ವಾರವಿದೆ. ಹೆಮಿಮೆಟಾಬೋಲಾ ಮಾದರಿಯ ರೂಪ ಪರಿವರ್ತನೆ ಇದೆ. ಬೆಳವಣಿಗೆಯಲ್ಲಿ ಜಲವಾಸಿ ಅಪ್ಸರಾವಸ್ಥೆ ಇದೆ. ಕೆಳದವಡೆ (ಲೇಬಿಯಂ) ಮೊಗವಾಡ ಅಥವಾ ಮುಖದ ಮುಸುಕಾಗಿ ಪರಿವರ್ತನೆಗೊಂಡಿದೆ. ಮೇಲೆ ತಿಳಿಸಿದ ಗುಣಗಳು ಓಡೋನೇಟ ಗಣದ ವಿಶೇಷಗಳು.

ಇವು ವೇಗವಾಗಿ ಹಾರಾಡುವ ಬಲಶಾಲಿ ಕೀಟಗಳು. ಚಿಕ್ಕ ಕೀಟಗಳನ್ನು ಹಿಡಿದು ಭಕ್ಷಿಸಲು ಅನುಕೂಲವಾಗುವಂತೆ ಕಾಲುಗಳು ಮುಂಭಾಗಕ್ಕೆ ತಿರುಗಿವೆ. ಬಾಲದಂತೆ ಕೃಶವಾದ ನೀಳ ಉದರ ಇದೆ. ಕಪ್ಪು ಹಿನ್ನೆಲೆಯಲ್ಲಿ ಅನೇಕ ಕೀಟಗಳು ಹೊಳೆಯುವ ಬಣ್ಣ ಪಡೆದಿವೆ. ಕೆಲವು ಪ್ರಭೇದಗಳು ಬೆಳಗಿನಿಂದ ಸಂಜೆಯವರೆಗೆ ಬಿಸಿಲಿನಲ್ಲಿ ಹಾರಾಡುತ್ತಲೇ ಇರುತ್ತವೆ. ಉಳಿದವು ಮೋಡ ಕವಿದಾಗ ಬೆಳಕಿನಲ್ಲಾಗುವ ಬದಲಾವಣೆಗಳಿಗೆ ಕೂಡಲೆ ಸಂವೇದನೆಯನ್ನು ತೋರುತ್ತವೆ. ಹಾರಾಡುವ ವೇಳೆಯಲ್ಲಿ ಮಾತ್ರ ಆಹಾರವನ್ನು ಬೇಟೆಯಾಡುತ್ತವೆ. ಇದಕ್ಕಾಗಿ ಆರು ಕಾಲುಗಳು ಬಾಯಿಯ ಕೆಳ ಭಾಗದಿಂದ ಬಹುದೂರದವರೆಗೆ ಮುಂದಕ್ಕೆ ಚಾಚಿರುತ್ತವೆ. ಎರಡು ಜೊತೆ ದವಡೆಗಳಲ್ಲಿ ಚುಚ್ಚಲು ಹಾಗು ಜಗಿಯಲು ಹಲ್ಲುಗಳಿವೆ. ವಾಸನೆಗೆ ಸಂವೇದನೆಯನ್ನು ತೀವ್ರವಾಗಿ ತೋರುವ ಆಂಟೆನಾಗಳು ಚಿಕ್ಕ ಕೂದಲಿನಂತೆ ಕ್ಷೀಣಗೊಂಡಿವೆ. ಕ್ಯಾಮರಾಗಳಂತಹ ಸಾವಿರಾರು ತುಣುಕುಗಳು ಒಂದು ಗೂಡಿದ ಸಂಯುಕ್ತ ಕಣ್ಣು ಇದೆ. ಇದು ತಲೆಯ ಮೇಲ್ಮೈನ ಸುಮಾರು ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಳ್ಳುತ್ತದೆ. ಜಾಲರೀತಿಯ ತೆಳು ರೆಕ್ಕೆಗಳ ಶೃಂಗ ಸಮೀಪದಲ್ಲಿ ರೆಕ್ಕೆ ಪಟಲದ ಕ್ಯುಟಿಕಲ್ ದಪ್ಪನಾಗಿ ಕೆಂಗಲೆ (ಸ್ಟಿಗ್ಮ)ಯಾಗಿದೆ. ಮೊದಲ ಎರಡು ನೀಳ ದಿಂಡುಗಳಿಗೆ ಬಲಕೋನದಲ್ಲಿ ಪ್ರಧಾನ ಅಡ್ಡ ದಿಂಡು ಇದೆ. ರೆಕ್ಕೆ ಬುಡದಲ್ಲಿ ದಿಂಡುಗಳ ಜಟಿಲತೆ ಇದೆ. ಈ ಗಣದಲ್ಲಿನ ಕೀಟಗಳ ಹಾರಾಡುವಿಕೆಯಲ್ಲಿ ವ್ಯತ್ಯಾಸವು ಈ ದಿಂಡುಗಳ ಹೆಣಿಗೆಯನ್ನವಲಂಬಿಸಿದೆ. ಪಳೆಯುಳಿಕೆ ಜೀವಿಗಳಲ್ಲಿ ಇದು ಕಂಡು ಬರುವುದರಿಂದ ಈ ಕೀಟಗಳ ಸ್ವಾಭಾವಿಕ ವರ್ಗೀಕರಣಕ್ಕೆ ತುಂಬಾ ಸಹಾಯಕವಾಗುತ್ತದೆ.

ಎದೆಯ ಮೊದಲ ಖಂಡವು ಕುತ್ತಿಗೆಯಂತೆ ವರ್ತಿಸುತ್ತದೆ. ಉಳಿದ ಎರಡು ಖಂಡಗಳು ಕೂಡಿಕೊಂಡು ದೇಹದ ಅತ್ಯಂತ ಬಲಯುತ ಭಾಗವಾಗಿದೆ. ಮುಂದಕ್ಕೆ ಚಾಚಿಕೊಂಡಿರುವ ಕಾಲುಗಳು ಅಧಿಕ ವಸ್ತುಗಳನ್ನು ಜೋಲು ಬೀಳಲು ಕೀಟಕ್ಕೆ ನೆರವಾಗುತ್ತದೆ. ಉದರದಲ್ಲಿ 10 ಖಂಡಗಳಿವೆ. ಕೊನೆಯ ಖಂಡದಲ್ಲಿ 3 ಅಥವಾ 4 ಆಲಿಂಗನಾಂಗಗಳಿವೆ. ಗಂಡಿನ 9ನೆಯ ಖಂಡದಲ್ಲಿ ಪ್ರಜನನ ದ್ವಾರವಿದೆ. 2 ಮತ್ತು 3 ಖಂಡಗಳಿಲ್ಲ. ಜಟಿಲ ಸಂಭೋಗ ಅಂಗವಿದೆ. ಇಲ್ಲಿ ಕಂಡು ಬರುವ ಸಂಭೋಗ ಕ್ರಿಯೆ ಬೇರಾವ ಕೀಟಗಳಲ್ಲಿಯು ಇಲ್ಲ. ಇದು ವೇಗದ ಹಾರಾಟಕ್ಕೆ ಮಾಡಿಕೊಂಡ ಹೊಂದಾಣಿಕೆ. ಹೆಣ್ಣಿನ ತಲೆ ಅಥವಾ ಎದೆ ಭಾಗವನ್ನು ಮೇಲಿನಿಂದ ಗಂಡು ತನ್ನ ಆಲಿಂಗನಾಂಗಗಳ ಸಹಾಯದಿಂದ ಹಿಡಿದುಕೊಳ್ಳುತ್ತದೆ. ಈ ರೀತಿಯ ಆಲಿಂಗನವು ಹಾರಾಡುವ ವೇಳೆಯಲ್ಲಿ ಅಥವಾ ವಿಶ್ರಾಂತಿ ವೇಳೆಯಲ್ಲಿ ನಡೆಯುತ್ತದೆ. ಆಲಿಂಗನದ ವೇಳೆಯಲ್ಲಿ ಹೆಣ್ಣು ತನ್ನ ಉದರವನ್ನು ಕೆಳಗಡೆಗೆ ಬಾಗಿಸಿ ತುದಿಯನ್ನು ಗಂಡಿನ ಸಹಾಯ ಸಂಭೋಗ ಅಂಗದ ಕಡೆಗೆ ಮುಂದೆ ಚಾಚುತ್ತದೆ. ಈ ವೇಳೆಯಲ್ಲಿ ವೀರ್ಯಾಣುಗಳು ಹೆಣ್ಣನ್ನು ಸೇರುತ್ತವೆ. ಅನಂತರ, ಹೆಣ್ಣು ಕೀಟ ಮೊಟ್ಟೆಗಳನ್ನು ಇಡುವವರೆಗೂ ಹಿಡಿದುಕೊಂಡಿರುತ್ತದೆ. ಅಂಡಗಳನ್ನು ಇಡಲು ಅಗತ್ಯವಾದ ನಳಿಕೆ ಪಡೆದ ಪ್ರಭೇದಗಳು ಅಂಡಗಳನ್ನು ಸಸ್ಯ ಅಂಗಾಂಶಗಳೊಳಕ್ಕೆ ಇಡುತ್ತವೆ. ಅದೆ ನಳಿಕೆ ರಹಿತ ಪ್ರಭೇದಗಳು ಹಾರಾಡುವ ಕಾಲದಲ್ಲಿ ನೀರಿನ ಮೇಲ್ಮೈ ಮೇಲೆ ಅಂಡಗಳನ್ನು ಎರಚುತ್ತವೆ. ಲಾರ್ವಾಗಳು (ನೈಡ್ಸ್) ಜಲಚರಜೀವಿಗಳು. ಬಹುತೇಕ ಪ್ರಭೇದಗಳು ಸಿಹಿನೀರಿನಲ್ಲಿ, ಕೆಲವು ಚೌಳು ನೀರಿನಲ್ಲಿ ಬೆಳೆಯುತ್ತವೆ. ಲಾರ್ವ ನಡೆಯಬಲ್ಲದು, ಏರಬಲ್ಲದು ಮತ್ತು ಜೆಡ್ ಮಾದರಿಯಂತೆ ಸಮರ್ಥವಾಗಿ ಈಜ ಬಲ್ಲದು. ಈಜುವಾಗ ನೀರನ್ನು ಗುದನಳಿಕೆಯೊಳಕ್ಕೆ ಎಳೆದುಕೊಂಡು ನಂತರ ಶಕ್ತಿಯುತವಾಗಿ ಹೊರಕ್ಕೆ ತಳ್ಳಿದಾಗ ದೇಹ ಮುಂದಕ್ಕೆ ಸಾಗುತ್ತದೆ. ಟ್ರೇಕಿಯಲ್ ಅಥವಾ ಗಾಳಿನಳಿಕೆ ಮಂಡಲವು ನೀರಿನಲ್ಲಿ ಸ್ಪೈರಕಲ್‌ಗಳಿಂದ ಮುಚ್ಚಿಕೊಳ್ಳುತ್ತದೆ. ಆಗ ಟ್ರೇಕಿಯಲ್ ಕಿವಿರುಗಳು ನೀರಿನಲ್ಲಿ ಉಸಿರಾಡಲು ಸಹಾಯಕವಾಗುತ್ತವೆ. ಎರಡು ರೀತಿಯ ಟ್ರೇಕಿಯೋಲ್ ನೀರಿನಲ್ಲಿ ಉಸಿರಾಡಲು ಸಹಾಯಕವಾಗುತ್ತವೆ. ಎರಡು ರೀತಿಯ ಟ್ರೇಕಿಯೋಲ್ ಕಿವಿರುಗಳಿವೆ. 1) ಜೈಗಾಪ್ಟಿರಾ ಕೀಟಗಳಲ್ಲಿ ಏನಲ್ ಸರ್ಸಿ ಮತ್ತು ಬಾಲತಂತುಗಳ ಸ್ಥಾನದಲ್ಲಿ ಬಾಹ್ಯ ಕಿವಿರುಗಳಿವೆ. 2) ಅನೈಸೊಪ್ಟಿರಾಗಳಲ್ಲಿ ಗುದನಳಿಕೆ ಭಿತ್ತಿಗಳಲ್ಲಿ ಕಿವಿರುಗಳಿವೆ. ಗುದದ್ವಾರದ ಮೂಲಕ ನೀರು ಹೋಗಿ ಬರುವಾಗ ಉಸಿರಾಟ ನಡೆಯುತ್ತದೆ.

ಮಂದಗತಿಯ ನಿಂಫ್‌ಗಳು ಕಡಲ ಕಳೆಗಳ ಮಧ್ಯೆ ಅಡಗಿ ಆಹಾರ ಪಡೆಯುತ್ತವೆ. ಪ್ರಬುದ್ಧ ಜೀವಿಯಲ್ಲಿದ್ದ ಸಾಮಾನ್ಯ ಗಾತ್ರದ ಲೇಬಿಯಂ ನಿಂಫ್‌ಗಳಲ್ಲಿ ಮುಂದಿನ ಮತ್ತು ಹಿಂದಿನ ಮೆಂಟಮ್ ಆಗಿ ನೀಳವಾಗಿರುತ್ತವೆ. ಗೊದಮೊಟ್ಟೆಯಂತಹ ಆಹಾರ ಜೀವಿಯ ಮೇಲೆ ಎರಗಲು ಲೇಬಿಯಲ್ ಕೊಂಡಿಗಳು ಶಿರಮಡಿಕೆಯಲ್ಲಿರುತ್ತವೆ. ಆಹಾರವನ್ನು ಹಿಡಿಯುವಾಗ ಲೇಬಿಯಲ್ ಕೊಂಡಿಗಳು ಹೊರಬರುತ್ತವೆ. ಬೆಳವಣಿಗೆ ಪೂರ್ತಿಯಾಗಲು 1–4 ವರ್ಷ ಬೇಕು. 10–15 ಲಾರ್ವಾ ಅವಸ್ಥೆಗಳಿವೆ. 3 ಮತ್ತು 4ನೆ ಬಾರಿ ಪೊರೆ ಕಳಚುವವರೆಗೆ ರೆಕ್ಕೆಗಳು ಬೆಳೆಯುವುದಿಲ್ಲ. ಕೊನೆಯ ಲಾರ್ವಾ ಅವಸ್ಥೆಯವರೆಗೂ ರೆಕ್ಕೆಗಳ ಬೆಳವಣಿಗೆ ನಡೆಯುತ್ತಿರುತ್ತದೆ. ಕೊನೆಯ ವಾರದಲ್ಲಿ ಲಾರ್ವ ಜಡಜೀವಿಯಾಗಿ ಆಹಾರ ಸೇವನೆಯನ್ನು ನಿಲ್ಲಿಸುತ್ತದೆ. ಲಾರ್ವದ ಆಂತರಿಕ ಅಂಗಗಳನ್ನು ಪ್ರಬುದ್ಧ ಜೀವಿಯ ಅಂಗಗಳು ಸ್ಥಳಾಂತರಿಸುತ್ತವೆ. ಕ್ಯುಟಿಕಲನ್ನು ಭೇದಿಸಿ ತೆಳುವರ್ಣದ ಕೋಮಲ ಕಾಯದ ಕೊಡತಿ ಹುಳುವು ಅರ್ಧಗಂಟೆ ಅಥವಾ ರೆಕ್ಕೆ ಮತ್ತು ಕಾಲುಗಳು ಅಂತಿಮ ಸ್ವರೂಪವನ್ನು ತಲುಪುವವರೆಗೆ ಜಡವಾಗಿಯೇ ಇರುತ್ತದೆ. ಇದೊಂದು ಸಂದಿಗ್ಧಕಾಲ. ಸ್ವಾಲೊ ಮುಂತಾದ ಪಕ್ಷಿಗಳು ತಮ್ಮ ಮರಿಗಳಿಗೆ ಇವನ್ನು ಆಹಾರವನ್ನಾಗಿ ಬಳಸಿಕೊಳ್ಳುತ್ತವೆ. ಅದಕ್ಕಾಗಿ ಅನೇಕ ಪ್ರಭೇದಗಳು ರಾತ್ರಿಯ ಕಾಲದಲ್ಲಿ ಪೊರೆ ಕಳಚಿ ಹೊರಬರುತ್ತವೆ. ಬೆಳಗಾಗುವುದರೊಳಗೆ ಇವಕ್ಕೆ ರೆಕ್ಕೆ ಮೂಡಿ ಗಾಳಿಯಲ್ಲಿ ಹಾರಬಲ್ಲ ಶಕ್ತಿ ಬಂದಿರುತ್ತದೆ.

ಸು. 4870 ಪ್ರಭೇದಗಳಿವೆ. ಇವು ಉಷ್ಣವಲಯಗಳಲ್ಲಿ ಹೆಚ್ಚಾಗಿರುತ್ತವೆ. ಭಾರತದಲ್ಲಿ 500 ಪ್ರಭೇದಗಳು, ಉತ್ತರ ಅಮೆರಿಕದಲ್ಲಿ 450 ಪ್ರಭೇದಗಳು, ಯೂರೋಪಿನಲ್ಲಿ 100 ಪ್ರಭೇದಗಳಿವೆ. ಸ್ವಾಭಾವಿಕ ಕೀಟ ನಿಯಂತ್ರಣಗಳಾಗಿ ಕೊಡತಿ ಹುಳುಗಳು ಪ್ರಮುಖ ಪಾತ್ರವಹಿಸುತ್ತವೆ. ಅವು ಸೊಳ್ಳೆ ಮತ್ತು ನೊಣಗಳನ್ನು ಹಿಡಿದು ತಿನ್ನುತ್ತವೆ. ಝರಿ, ಸರೋವರ ಮತ್ತು ಕೊಳಗಳಲ್ಲಿ ವಾಸಿಸುವ ಈ ಕೊಡತಿ ಹುಳುಗಳು ಮೀನುಗಳಿಗೆ ಆಹಾರವಾಗುತ್ತವೆ. ಅಂತೆಯೇ ಮೀನುಮರಿಗಳನ್ನು ಇವು ಭಕ್ಷಿಸುವುವು.

ಈ ಗಣದಲ್ಲಿ 2 ಉಪಗಣಗಳಿವೆ.

1) ಆನೈಸೊಪ್ಟಿರ: ಬಲಶಾಲಿಗಳಾದ ದೊಡ್ಡ ಕೊಡತಿ ಕೀಟಗಳು. ಹಿಂದಿನ ರೆಕ್ಕೆಯ ಬುಡಭಾಗ ಮುಂದಿನ ರೆಕ್ಕೆಯ ಬುಡಭಾಗಕ್ಕಿಂತ ವಿಸ್ತಾರವಾಗಿದೆ. ವಿಶ್ರಾಂತಿ ವೇಳೆಯಲ್ಲಿ ರೆಕ್ಕೆಗಳು ಪಕ್ಕಕ್ಕೆ ಚಾಚಿರುತ್ತವೆ. ಕಣ್ಣುಗಳು ಪ್ರತ್ಯೇಕಗೊಂಡಿರಬಹುದು ಅಥವಾ ಶಿರದ ಮಧ್ಯೆ ಸ್ವಲ್ಪ ಮಟ್ಟಿಗೆ ಕೂಡಿರಬಹುದು. ವೇಗವಾಗಿ ಹಾರಾಡಬಲ್ಲ ಚತುರ ಜೀವಿಗಳು. ಈ ಗಣದಲ್ಲಿ ಎಂಟು ಕುಟುಂಬಗಳಿವೆ. ಉದಾ: ಏಷ್ನಾ, ಗೊಂಫಸ್, ಕೊಡುಲೆಗ್ಯಾಸ್ಟರ್, ಲಿಂಬೆಲುಲಾ ಮತ್ತು ಸಿಂಪೆಟ್ರಾಗಳು ವ್ಯಾಪಕವಾಗಿರುವ ಜಾತಿಗಳು.

2) ಜೈಗಾಪ್ಟಿರ: ಇವು ಬಹುತೇಕ ಅಪ್ಸರೆ ಕೀಟಗಳು. ಚಿಕ್ಕವು ಹಾಗೂ ಕೋಮಲ ಶರೀರದ ಕೀಟಗಳು. ಹುಟ್ಟಿನಾಕಾರದ ರೆಕ್ಕೆಗಳಿವೆ. ನಿಧಾನವಾಗಿ ಹಾರಾಡುತ್ತವೆ. ರೆಕ್ಕೆಗಳು ಬೆನ್ನಿನ ಮೇಲೆ ಮಡಿಚಿಕೊಂಡಿರುತ್ತವೆ. ಕಣ್ಣುಗಳು ಪರಸ್ಪರ ಪ್ರತ್ಯೇಕಗೊಂಡಿವೆ. ಹತ್ತು ಅಥವಾ ಹನ್ನೊಂದು ಕುಟುಂಬಗಳಿವೆ. ಉದಾ: ಅಗ್ರಿಯೋನ್, ಎನಲ್ಲಾಗ್ಮ, ಕ್ಯಾಲೊಪ್ಟೆರಿಕ್ಸ್, ಲೆಸ್ಟ್ಸ್ ಜಾತಿಗಳು. (ಬಿ.ಕೆ.ಜಿ.)

**ಓತಿ:** ಸರೀಸೃಪ ವರ್ಗದ, ಸ್ಕ್ವಾಮೇಟ ಗಣದ ಲ್ಯಾಸರ್ಟಿಲಿಯ ಉಪಗಣದ ಸದಸ್ಯ. ಇದಕ್ಕೆ ತೋಟದ ಹಲ್ಲಿ (ಗಾರ್ಡನ್ ಲಿಸರ್ಡ್) ಎನ್ನುವರು. ಮನೆಯ ಹಿತ್ತಲು, ತೋಟ, ಗದ್ದೆಗಳ ಬೇಲಿಗಳಲ್ಲಿ, ಲಂಟಾನ ಗಿಡದಲ್ಲಿ ವಾಸಿಸುತ್ತವೆ. ಕರ್ನಾಟಕದಲ್ಲಿರುವ ಪ್ರಭೇದದ ಹೆಸರು ಕೆಲೊಟಿಸ್ ವರ್ಸಿಕಲರ್. ಇದು ಕೀಟಾಹಾರಿ. ಇದರ ದೇಹವನ್ನು

ತಲೆ, ಕತ್ತು, ಎದೆ, ಹೊಟ್ಟೆ ಮತ್ತು ಬಾಲ ಎಂದು ವಿಂಗಡಿಸಬಹುದು. ತಲೆ ಮತ್ತು ಎದೆ ನಡುವೆ ಕುತ್ತಿಗೆಯಿದೆ. ದೇಹದ ಮೇಲೆ ಹುರುಪೆಗಳ ಹೊದಿಕೆ ಇದೆ. ಹುರುಪೆಗಳ ಒಂದರ ತುದಿ ಇನ್ನೊಂದರ ಬುಡವನ್ನು ಮುಚ್ಚುವಂತೆ (ಮನೆಯ ಹಂಚುಗಳಂತೆ) ಜೋಡಿಸಲ್ಪಟ್ಟಿವೆ. ಕುತ್ತಿಗೆ ಮತ್ತು ನಡು ಬೆನ್ನಿನ ಭಾಗದಲ್ಲಿರುವ ಹುರುಪೆಗಳ ಉದ್ದವಾದ ಮುಳ್ಳು ಶಿಖೆಗಳ ಸಾಲಿನಂತೆ ಬೆಳೆದಿವೆ. ಋತುಮಾಸದಲ್ಲಿ ಕತ್ತಿನ ತಳಭಾಗ ಗಂಡು ಓತಿಗಳಲ್ಲಿ ಕೆಂಪಾಗುತ್ತದೆ. ಈ ಬಣ್ಣದಿಂದ ಅವು ರಕ್ತಪಿಪಾಸುಗಳು ಎಂಬ ತಪ್ಪು ಭಾವನೆ ಇದೆ.



ತಲೆಯ ಅಗ್ರ ಭಾಗದಲ್ಲಿ ಬಾಯಿ ಅಡ್ಡ ಸೀಳಿಕೆಯಂತಿದೆ. ಬಾಯಿ ಮೇಲ್ಗಡೆ ಒಂದು ಜೊತೆ ಹೊರನಾಸಿಕ ರಂಧ್ರಗಳೂ, ತಲೆಯ ಪಕ್ಕಗಳಲ್ಲಿ ಒಂದು ಜೊತೆ ಕಣ್ಣುಗಳೂ ಇವೆ. ಒಂದೊಂದು ಕಣ್ಣಿಗೂ ದಪ್ಪವಾದ ಮೇಲು ರೆಪ್ಪೆ, ತೆಳುವಾದ ಕೆಳರೆಪ್ಪೆ ಮತ್ತು ಪಾರದರ್ಶಕವಾದ ನಿಮೇಷಕ ಪಟಲಗಳಿವೆ. ಕಣ್ಣುಗಳ ಹಿಂಭಾಗದಲ್ಲಿ ಕಿವಿಯ ತಮಟೆ ಇದೆ. ಇದು ಕಪ್ಪೆಯಂತೆ ದೇಹದ ಸ್ವಲ್ಪ ತಗ್ಗಾದ ಕುಳಿಯಲ್ಲಿದೆ. ಈ ಕುಳಿಗೆ ಕರ್ಣರಂಧ್ರ ಎನ್ನುವರು.

ಎದೆಯ ತಳಭಾಗಕ್ಕೆ ಅಂಟಿದಂತೆ ಎರಡು ಜೊತೆ ಕಾಲುಗಳಿವೆ. ಮುಂಗಾಲುಗಳಲ್ಲಿ ತೋಳು, ಮುಂಗೈ, ಹಸ್ತ ಮತ್ತು ನಖಗಳುಳ್ಳ ಐದೈದು ಕೈಬೆರಳುಗಳಿವೆ. ಹಿಂಗಾಲುಗಳಲ್ಲಿ ತೊಡೆ, ಮುಂಗಾಲು, ಪಾದ ಮತ್ತು ಉಗುರಿರುವ ಐದು ಬೆರಳುಗಳಿವೆ. ಬುಡದ ಬಳಿ ಬಾಲ ದಪ್ಪನಾಗಿದ್ದು ಕ್ರಮೇಣ ಚೂಪಾಗುತ್ತ ಹೋಗುವುದು. ತಲೆ ಮತ್ತು ಎದೆಯ ಒಟ್ಟು ಉದ್ದದಷ್ಟೇ ಬಾಲದ ಉದ್ದವೂ ಇದೆ. ಬಾಲದ ಬುಡದ ಬಳಿ ಕ್ಲೋಯಕ ರಂಧ್ರವಿದೆ. ಇದು ಅಡ್ಡನಾಗಿ ಹರಡಿದ ಸೀಳಿಕೆಯಂತೆ ಕಾಣುತ್ತದೆ. ಇದರ ಮೂಲಕ ಮಲ ಮೂತ್ರ ಜನನೇಂದ್ರೀಯಗಳು ಹೊರಕ್ಕೆ ತೆರೆಯುತ್ತವೆ.

ಓತಿಗಳು ಭಿನ್ನಲಿಂಗಿಗಳು. ಗಂಡುಗಳಲ್ಲಿ ಕ್ಲೋಯಕದಿಂದ ಹಿಂದಕ್ಕೆ ಹರಡಿದಂತೆ, ಬಾಲದ ಅಧೋ ಭಾಗದಲ್ಲೆ, ಚರ್ಮದ ಒಳಗೆ ಒಂದು ಜೊತೆ ಆಲಿಂಗನಾಂಗಗಳಿವೆ. ಓತಿ ಅಂಡಜ ಹೆಚ್ಚು ಬಂಡಾರ (ಯೋಕ್) ಇರುವ ಬಿಳಿಯ ಸುಣ್ಣ ಚಿಪ್ಪಿನಿಂದಾವೃತವಾದ ಹತ್ತಾರು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳು ಮರಿಗಳಾಗಿ, ಪ್ರೌಢಾವಸ್ಥೆ ಸೇರಿ ಸ್ವತಂತ್ರವಾಗಿ ವಾಸಿಸುತ್ತವೆ. ***

**ಓಪಲೈನ:** ಕಪ್ಪೆ ಮತ್ತು ಗೊದಮೊಟ್ಟೆಯ ಕರುಳಿನಲ್ಲಿರುವ ಪರತಂತ್ರಜೀವಿ. ಪ್ರೋಟೋಜೋವ ವಂಶದ ಸಿಲಿಯೇಟ ವರ್ಗಕ್ಕೆ ಸೇರಿದ ಏಕಕೋಶ ಜೀವಿ. ಗಾತ್ರ 600 ರಿಂದ 700 ಮೈ.ಗಳು ಚಪ್ಪಟೆಯಾಗಿ ಎಲೆಯಂತಿದೆ. ಮುಂಭಾಗ ಚೂಪಾಗಿದ್ದರೆ ಹಿಂಭಾಗ ಗುಂಡಾಗಿದೆ. ದೇಹ ವರ್ಣರಹಿತ. ದೇಹದ ಮೇಲೆ ಸಮಾನಾಂತರವಾಗಿ ವ್ಯಾಪಿಸಿಕೊಂಡಿರುವ ದಟ್ಟವಾದ ಶಿಲಕೆಗಳ ಸಾಲುಗಳಿವೆ. ಆಂತರಿಕ ಜೀವಿಯಾದುದರಿಂದ ಇದಕ್ಕೆ ಬಾಯಿಯಿಲ್ಲ. ಸಂಕೋಚನಾವಕಾಶವೂ ಇದರಲ್ಲಿಲ್ಲ. ಜೀರ್ಣವಾದ ಆಹಾರವಿರುವ ಪರಿಸರದಲ್ಲಿರುವುದರಿಂದ ತನ್ನ ದೇಹದ ಪೊರೆಯ ಮೂಲಕ ಸಾವಯವ ವಸ್ತುಗಳನ್ನು ಹೀರಿಕೊಳ್ಳುತ್ತದೆ. ದೇಹದಲ್ಲಿ ಅನೇಕ ಕೋಶಕೇಂದ್ರಗಳು ಕೋಶದ್ರವ್ಯದಲ್ಲಿ ಹರಡಿವೆ. ನ್ಯೂಕ್ಲಿಯೋಲೈಯುಕ್ತ ಕೋಶಕೇಂದ್ರಗಳಲ್ಲದೆ ಗೊಲ್ಗಿ, ಫಲ್ಗನ್ ರಂಗು ತೆಗೆದುಕೊಳ್ಳದ ಸೂಕ್ಷ್ಮಕಣಗಳೂ ಓಪಲೈನದ ಕೋಶದ್ರವ್ಯದಲ್ಲಿವೆ.

ಸಂತಾನೋತ್ಪತ್ತಿ ದ್ವಿಖಂಡ ವಿಭಜನೆಯ ಮೂಲಕ. ಈ ವಿಭಜನೆ ಶಿಲಕೆಗಳ ಸಾಲಿಗೆ ಸಮಾನಾಂತರವಾದ ಅಕ್ಷದಲ್ಲಿ ಅಥವಾ ದೇಹಕ್ಕೆ ಓರೆಯಾಗಿರುವ ಅಕ್ಷದಲ್ಲಿ ಆಗುತ್ತದೆ. ಈ ರೀತಿಯ ವಿಭಜನೆ ವರ್ಷದಲ್ಲಿ ಎಲ್ಲಾ ಕಾಲದಲ್ಲಿ ಆಗುತ್ತದೆ. ಆದರೆ ವಸಂತ ಋತು ಪ್ರಾರಂಭವಾದಂತೆ ಬೇರೆ ರೀತಿಯಲ್ಲಿ ಸಂತಾನೋತ್ಪತ್ತಿಯಾಗುತ್ತದೆ. ವಸಂತ ಋತುವಿನಲ್ಲಿ ಓಪಲೈನ ತೀವ್ರಗತಿಯಲ್ಲಿ ವಿಭಜನೆ ಹೊಂದುತ್ತದೆ. ಇದರಿಂದಾಗಿ ಗಾತ್ರದಲ್ಲಿ ಚಿಕ್ಕದಾದ ಮತ್ತು ಕಡಿಮೆ ಕೋಶಕೇಂದ್ರಗಳನ್ನು ಹೊಂದಿದ ಚಿಕ್ಕ ಓಪಲೈನಗಳು ಉತ್ಪತ್ತಿಯಾಗುತ್ತವೆ. ಈ ಸಣ್ಣ ಓಪಲೈನಗಳು ತಮ್ಮ ಸುತ್ತಲೂ ರಕ್ಷಣೆ ಕೊಡುವ ಪೂತಕೋಶ (ಸಿಸ್ಟ್)ವನ್ನು ಹೊಂದುತ್ತವೆ. ಈ ಪೂತಕೋಶಾವೃತ ಓಪಲೈನಗಳೇ ಸೋಂಕುಕಾರಕ ಓಪಲೈನಗಳು. ಇವು ಕಪ್ಪೆಯ ದೇಹದಿಂದ ಹೊರಬಂದು ನೀರಿನಲ್ಲಿ ಬೆರೆಯುತ್ತವೆ. ಕಪ್ಪೆಯ ಗೊದಮೊಟ್ಟೆಗಳು ಇವನ್ನು ನುಂಗಿದಾಗ ಗೊದಮೊಟ್ಟೆಯ ಕರುಳಿನಲ್ಲಿ ಈ ಪೂತಕೋಶಗಳಿಂದ ಗ್ಯಾಮಿಟೋಸೈಟ್‌ಗಳು ಹೊರಬರುತ್ತವೆ. ಗ್ಯಾಮಿಟೋಸೈಟ್‌ಗಳು ವಿಭಜನೆ ಹೊಂದಿ ಎರಡು ಬೇರೆ ಬೇರೆ ಗಾತ್ರದ ಬೀಜಾಣುಗಳು ಹೊರಬರುತ್ತವೆ. ಈ ದ್ವಿಗಾತ್ರದ ಬೀಜಾಣುಗಳ ಸಂಸರ್ಗದಿಂದ ಯುಗ್ಮ ಉತ್ಪತ್ತಿಯಾಗುತ್ತದೆ. ಯುಗ್ಮಯುಕ್ತ ಪೂತಕೋಶವನ್ನು ಮತ್ತೊಂದು ಗೊದಮೊಟ್ಟೆ ನುಂಗಿದಾಗ ಅದರ ಕರುಳಿನಲ್ಲಿ ಹಲವು ಕೋಶಕೇಂದ್ರಗಳನ್ನು ಹೊಂದಿದ ಓಪಲೈನಗಳು ಪೂತಕೋಶದಿಂದ ಹೊರ ಬಂದು ತಮ್ಮ ಬೆಳವಣಿಗೆಯನ್ನು ಮುಂದುವರಿಸುತ್ತವೆ.



ಓಪಲೈನ

ಗ್ಲಾಸರ್ ಮತ್ತು ಕಾರಿಯಾರವರ ಅಭಿಪ್ರಾಯದಂತೆ ಎಲ್ಲಾ ಪೂತಕೋಶಗಳಿಂದ ಗ್ಯಾಮಿಟೋಸೈಟ್‌ಗಳು ಹೊರಬಂದರೂ ಅವುಗಳೆಲ್ಲವೂ ಬೀಜಾಣುಗಳನ್ನು ಉತ್ಪತ್ತಿ ಮಾಡುವುದಿಲ್ಲ. ಅವುಗಳಲ್ಲಿ ಕೆಲವು ನೇರವಾಗಿ ಮರಿ ಓಪಲೈನಗಳನ್ನು ಉತ್ಪತ್ತಿ ಮಾಡುತ್ತವೆ. ಈ ಮರಿ ಓಪಲೈನ ಬೆಳೆದು ಹಲವು ಕೋಶಕೇಂದ್ರಗಳನ್ನು ಹೊಂದಿದ ಓಪಲೈನಗಳಾಗುತ್ತವೆ. ಹೀಗೆ ಓಪಲೈನದಲ್ಲಿ ನಿರ್ಲಿಂಗ ಮತ್ತು ಲಿಂಗರೀತ್ಯಾ ಸಂತಾನಾಭಿವೃದ್ಧಿಯಾಗುತ್ತದೆ.

ಹಿಂದೆ ಈ ಓಪಲೈನಗಳನ್ನು ಮೂಲ ಶಿಲಕಾಂಗಿಗಳು ಅಥವಾ ಪ್ರೋಟೋಸಿಲಿಯೇಟಗಳ ಗುಂಪಿಗೆ ಸೇರಿಸಿದ್ದರು. ಇತ್ತೀಚಿನ ಸಂಶೋಧನೆ ಮತ್ತು ವಿಚಾರ ವಾದದಂತೆ ಕೆಲವು ವಿಜ್ಞಾನಿಗಳು ಇವುಗಳನ್ನು ಮಾರ್ಪಟ್ಟ ಕಶಾಂಗಿಗಳು (ಫ್ಲಾಜಲೇಟ್) ಎಂದು ಭಾವಿಸಿದ್ದಾರೆ. ಕೆಲವರು ಇವುಗಳನ್ನು ವಿಶಿಷ್ಟರೀತಿಯ ಏಕಕೋಶ ಜೀವಿಗಳೆಂದು ಭಾವಿಸಿದ್ದಾರೆ. ಇನ್ನೂ ಕೆಲವರು ಇವು ಪ್ರಾಚೀನ ಚಪ್ಪಟೆ ಹುಳುಗಳಾದ ಟರ್ಬೆಲೇರಿಯಾಗಳೊಂದಿಗೆ ಸಂಬಂಧವುಳ್ಳ ಬಹಳ ಸರಳ ರಚನೆಯನ್ನು ಹೊಂದಿರುವ ಆದಿಮ ಬಹುಕೋಶ ಜೀವಿಗಳೆಂದೂ ಭಾವಿಸಿದ್ದಾರೆ. (ಸಿ.ಎಂ.ಎಸ್.)

**ಓಪೆರಾನ್:** ಜೀನ್‌ಗಳ ನಿಯಂತ್ರಿತ ಕಾರ್ಯವನ್ನು ವಿವರಿಸುವ ಪಡಿಯಚ್ಚು. ಎಫ್. ಜೆಕಬ್ ಮತ್ತು ಜೆ. ಮೊನಡ್ 1961 ರಲ್ಲಿ ಎಶ್ಚಿರಿಷಿಯ ಕೊಲಿ ಬ್ಯಾಕ್ಟೀರಿಯಗಳು ಲ್ಯಾಕ್ಟೋಸ್ ಎಂಬ ಶರ್ಕರವನ್ನು ಪಚಿಸಿಕೊಳ್ಳುವ ವಿಧಾನವನ್ನು ಅಧ್ಯಯನ ಮಾಡುವುದರ ಮೂಲಕ ತಯಾರಿಸಿದರು. ಜೀನ್‌ಗಳು ಪ್ರೋಟೀನು ಸಂಶ್ಲೇಷಣೆಯ ಮೂಲಕ ತಮ್ಮ ಕಾರ್ಯ ನಿರ್ವಹಿಸುತ್ತವೆ. ಕೋಶವೊಂದರಲ್ಲಿ ಅನೇಕ ಜೀನ್‌ಗಳಿದ್ದರೂ ಎಲ್ಲವೂ ಎಲ್ಲ ವೇಳೆಯಲ್ಲಿ ಪ್ರೊಟೀನು ಸಂಶ್ಲೇಷಿಸುವುದಿಲ್ಲ. ಸುತ್ತಲಿನ ಪರಿಸರ, ಪರಿಸ್ಥಿತಿ, ಬೆಳವಣಿಗೆಯ ಹಂತ, ಕೋಶಗಳ ಸ್ಥಾನ ಮುಂತಾದುವುಗಳನ್ನು ಅವಲಂಬಿಸಿ ಯಾವ ಜೀನ್, ಎಲ್ಲಿ, ಯಾವಾಗ ಕ್ರಿಯಾಶೀಲವಾಗಿ ಪ್ರೊಟೀನು ಸಂಶ್ಲೇಷಣೆ ಆರಂಭಿಸಬೇಕು ಎಂಬ ನಿರ್ಧಾರವಾಗುತ್ತದೆ. ಸಂಶ್ಲೇಷಣೆ ಆರಂಭವಾಗಿ ಕೋಶಕ್ಕೆ ಅಗತ್ಯವಾದಷ್ಟು ಪ್ರೊಟೀನ್ ಸಂಗ್ರಹವಾದಾಗ ಸಂಶ್ಲೇಷಣೆ ನಿಲ್ಲುತ್ತದೆ. ಜೆಕಬ್ ಮತ್ತು ಮೊನಡ್‌ರ ಪ್ರಕಾರ ಓಪೆರಾನ್ ಜೀನ್‌ಗಳ ಒಂದು ಸಮುಚ್ಚಯ. ಕೋಶದಲ್ಲಿ ಒಂದು ಚಯಾಪಚಯ ಕ್ರಿಯೆಗೆ ಸಂಬಂಧಿಸಿದ ಪ್ರೊಟೀನುಗಳನ್ನು ಸಂಶ್ಲೇಷಿಸಲು ಅಗತ್ಯವಾದ ಆನುವಂಶೀಯ ಘಟಕಗಳನ್ನು ಒಳಗೊಂಡಿದೆ. ಕೋಶದ ಅಗತ್ಯತೆಯನ್ನು ಅವಲಂಬಿಸಿ ನಿಯಂತ್ರಕ ಭಾಗಗಳು ಪ್ರೊಟೀನು ಸಂಶ್ಲೇಷಣೆಗೆ ಪ್ರಚೋದಿಸುತ್ತವೆ ಅಥವಾ ನಿಲ್ಲಿಸುವುದಕ್ಕೆ ಆದೇಶ ನೀಡುತ್ತವೆ.

ಪ್ರತಿಯೊಂದು ಕೋಶದಲ್ಲೂ ಆನುವಂಶೀಯ ವಸ್ತುವಿನ ಪೂರ್ಣ ಪ್ರತಿಯಿರುವುದು. ಒಂದೊಂದು ಪ್ರತಿಯಲ್ಲೂ ಅನೇಕ ಜೀನ್‌ಗಳಿದ್ದು ಅವು ಅನೇಕ ಚಯಾಪಚಯ ಕ್ರಿಯೆಗಳನ್ನು ನಡೆಸುತ್ತವೆ. ಒಂದೊಂದು ಕ್ರಿಯೆಗೂ ಒಂದೊಂದು ಪ್ರತ್ಯೇಕ ಓಪೆರಾನ್ ಇದೆ. ಕೋಶವೊಂದರ ಓಪೆರಾನ್‌ಗಳನ್ನು ಎರಡು ಬಗೆಗಳಾಗಿ ವಿಂಗಡಿಸಬಹುದು.

ಮೊದಲನೆಯದು ಪ್ರೇರೇಪಕ (ಇಂಡ್ಯೂಸಿಬಲ್) ಓಪೆರಾನ್‌ಗಳು. ಇದರಲ್ಲಿ ಓಪೆರಾನನ್ನು ಕಾರ್ಯನಿರತವಾಗಿಸಲು ಒಂದು ಪ್ರೇರಕ ಕಣ (ಇಂಡ್ಯೂಸರ್) ಬೇಕಾಗುತ್ತದೆ. ಈ ಪ್ರೇರಕ ಕಣವು ಕೋಶದಲ್ಲಿದ್ದಾಗ ಓಪೆರಾನು ಚಾಲನೆಗೊಳ್ಳುತ್ತದೆ, ಪ್ರೇರಕವಿಲ್ಲದಾಗ ಕ್ರಿಯಾಹೀನವಾಗಿರುತ್ತದೆ. ಎರಡನೆಯದು ದಮನಕ (ರಿಪ್ರೆಸಿಬಲ್) ಓಪೆರಾನ್. ಇದರಲ್ಲಿ ಉತ್ತೇಜಕ ಕಣವೆಂಬುದು ಇರುವುದಿಲ್ಲ. ಬದಲಾಗಿ ಓಪೆರಾನು ಉತ್ಪಾದಿಸುವ ಪ್ರೊಟೀನ್ ಕೋಶದಲ್ಲಿ ಸಾಕಷ್ಟು ಪ್ರಮಾಣದಲ್ಲಿದ್ದರೆ, ಆ ಕಣಗಳು ಆ ಓಪೆರಾನಿನ ಕಾರ್ಯವನ್ನು ಸ್ಥಗಿತಗೊಳಿಸುತ್ತವೆ. ಅದರ ಪ್ರಮಾಣ ಕಡಿಮೆಯಾದಲ್ಲಿ, ಅದಕ್ಕನುಗುಣವಾದ ಓಪೆರಾನು ಕ್ರಿಯಾಶೀಲವಾಗುತ್ತದೆ.

ಓಪೆರಾನ್ ಪ್ರೇರಕವಾಗಿರಲಿ ಅಥವಾ ದಮನಕವಾಗಿರಲಿ, ಅವುಗಳಲ್ಲಿ ಆಕಾರಿಕ (ಸ್ಟ್ರಕ್ಚರಲ್) ಜೀನ್ ಹಾಗೂ ನಿಯಂತ್ರಕ (ರೆಗ್ಯುಲೇಟರಿ) ಜೀನ್‌ಗಳೆಂಬ ಎರಡು ಭಾಗಗಳಿವೆ.

ಆಕಾರಿಕ ಜೀನ್ : ಪ್ರೊಟೀನ್ ಸಂಶ್ಲೇಷಣೆಗೆ ಸಂಕೇತ ನೀಡುವ ನ್ಯೂಕ್ಲಿಯೊಟೈಡು ಸರಣಿಯುಳ್ಳ ಭಾಗ. ಕ್ರಿಯಾಶೀಲವಾದಾಗ ಪ್ರೊಟೀನು ಸಂಶ್ಲೇಷಣೆಗೆ ಅಗತ್ಯವಾದ ದೂತ ಆರ್‌ಎನ್ಎ (ಎಂಆರ್‌ಎನ್ಎ) ಯನ್ನು ತಯಾರಿಸುತ್ತದೆ. ಒಂದು ಓಪೆರಾನ್‌ನಲ್ಲಿ ಒಂದು ಅಥವಾ ಹಲವು ಆಕಾರಿಕ ಜೀನ್‌ಗಳಿರಬಹುದು. ಸೂಕ್ಷ್ಮಜೀವಿಗಳಲ್ಲಿ ಎಲ್ಲ ಆಕಾರಿಕ ಜೀನ್‌ಗಳು ಒಂದರ ಪಕ್ಕ ಇನ್ನೊಂದರಂತೆ ಜೋಡಿಸಿಕೊಂಡಿರುತ್ತವೆ. ಯುಕ್ಯಾರಿಯೋಟ್‌ಗಳಲ್ಲಿ ಬೇರೆಬೇರೆ ಕಡೆ ಇವೆ. ನಿಯಂತ್ರಕ ಜೀನ್‌ಗಳು ಈ ಆಕಾರಿಕ ಜೀನ್‌ಗಳ ಕಾರ್ಯವನ್ನು ನಿಯಂತ್ರಿಸುತ್ತವೆ.

ಉತ್ತೇಜಕ ಜೀನ್: ಓಪೆರಾನ್ ನಿಯಂತ್ರಕ ಜೀನ್‌ಗಳಲ್ಲೊಂದು. ಆಕಾರಿಕ ಜೀನ್‌ಗಳ ಪಕ್ಕದಲ್ಲಿರುವುದು. ಪ್ರೊಮೋಟರ್ ಜೀನ್ ಪರ್ಯಾಯ ಹೆಸರು. ಜೀನ್‌ನ ಕಾರ್ಯಾರಂಭಕ್ಕೆ ಅತ್ಯಗತ್ಯ. ಆರ್‌ಎನ್ಎ ಪಾಲಿಮರೇಸ್ ಎಂಬ ಕಿಣ್ವವು ಉತ್ತೇಜಕ ಜೀನ್‌ನೊಡನೆ ಸಂಯೋಗ ವಾದಾಗ ಪಕ್ಕದಲ್ಲಿರುವ ಆಕಾರಿಕ ಜೀನ್ ಸುರುಳಿಯನ್ನು ಬಿಚ್ಚುತ್ತದೆ. ಅನಂತರ ಪ್ರೊಟೀನು ಸಂಶ್ಲೇಷಣೆಗೆ ಅಗತ್ಯವಾದ ಸಂಕೇತಗಳನ್ನು ಹೊತ್ತ ದೂತ ಆರ್‌ಎನ್ಎಯ ಸಂಶ್ಲೇಷಣೆ ಆರಂಭವಾಗುತ್ತದೆ. ಮೊದಲ ಹತ್ತು ಹನ್ನೆರಡು ರೈಬೊನ್ಯೂಕ್ಲಿಯಿಕ್ ಆಮ್ಲಗಳ ಜೋಡಣೆಯಾಗುವಷ್ಟರಲ್ಲಿ ಆರ್‌ಎನ್ಎ ಪಾಲಿಮರೇಸ್ ಉತ್ತೇಜಕ ಜೀನ್‌ಅನ್ನು ದಾಟಿರುತ್ತದೆ. ಆದರೆ ಆರ್‌ಎನ್ಎ ಪಾಲಿಮರೇಸ್ ದೂತ ಆರ್‌ಎನ್ಎಯ ಸಂಶ್ಲೇಷಣೆಯನ್ನು ಮುಂದುವರಿಸುತ್ತದೆ.

ನಿರ್ವಾಹಕ ಜೀನ್: ಓಪೆರಾನ್‌ನ ಮತ್ತೊಂದು ನಿಯಂತ್ರಕ ಜೀನ್. ಆಪರೇಟರ್ ಪರ್ಯಾಯ ಹೆಸರು. ಈ ಜೀನ್‌ನ ಕ್ರಿಯೆಗೆ ನಿಯಂತ್ರಕ ಪ್ರೊಟೀನ್ ಬೇಕು (ರೆಗ್ಯುಲೇಟರಿ ಪ್ರೊಟೀನ್). ಓಪೆರಾನ್‌ನ ಕ್ರಿಯೆ ಅಗತ್ಯವಿಲ್ಲದಾಗ ಅಂದರೆ ಪ್ರೇರಕ ಕಣ (ಇಂಡ್ಯೂಸರ್) ಇಲ್ಲದಿದ್ದಾಗ ನಿಯಂತ್ರಕ ಪ್ರೊಟೀನು ನಿರ್ವಾಹಕ ಜೀನ್‌ನೊಂದಿಗೆ ಸಂಯೋಗವಾಗುತ್ತದೆ. ಓಪೆರಾನ್ ಕ್ರಿಯಾಹೀನವಾಗುತ್ತದೆ. ಪ್ರೇರಕ ಕಣವನ್ನು ಸೇರಿಸಿದಾಗ ಅದು ನಿಯಂತ್ರಕ ಕಣದೊಡನೆ ಬೆರೆತು ನಿರ್ವಾಹಕ ಜೀನನ್ನು ಮುಕ್ತಗೊಳಿಸುತ್ತದೆ. ಆಗ ಓಪೆರಾನ್ ಕಾರ್ಯಾರಂಭ ಮಾಡುತ್ತದೆ.

ನಿಯಂತ್ರಕ ಜೀನ್: ಓಪೆರಾನ್ ನಿಯಂತ್ರಕ ಜೀನ್‌ಗಳಲ್ಲಿ ಒಂದು. ನಿಯಂತ್ರಕ (ರೆಗ್ಯುಲೇಟರ್) ಎಂದೇ ಹೆಸರು. ಇದು ಇಡೀ ಓಪೆರಾನಿನ ಕಾರ್ಯವನ್ನು ನಿಯಂತ್ರಿಸುತ್ತದೆ. ಈ ನಿಯಂತ್ರಕ ಜೀನ್ ನಿರ್ವಾಹಕ ಜೀನ್‌ನೊಂದಿಗೆ ಕೂಡಿ ಓಪೆರಾನ್‌ನ್ನು ಕ್ರಿಯಾಹೀನಗೊಳಿಸುತ್ತದೆ. ಪ್ರೇರಕ ಕಣದ ಅಸ್ತಿತ್ವದಲ್ಲಿ ನಿಯಂತ್ರಕ ಪ್ರೊಟೀನು ಕ್ರಿಯಾಹೀನವಾಗಿ ಓಪೆರಾನ್ ಕಾರ್ಯ ನಿರ್ವಹಿಸುತ್ತದೆ. ಈ ನಿಯಂತ್ರಕ ಪ್ರೊಟೀನು ನಿರ್ವಾಹಕ ಜೀನ್‌ನೊಂದಿಗೆ ಸೇರಿದಾಗ ಆರ್‌ಎನ್ಎ ಪಾಲಿಮರೇಸ್ ಉತ್ತೇಜಕ ಜೀನ್‌ಗೆ ಬೆಸೆದುಕೊಳ್ಳಲು ಸಾಧ್ಯವಾಗುವುದಿಲ್ಲ ಮತ್ತು ಆಕಾರಿಕ ವಂಶವಾಹಿಯ ಸಂದೇಶವನ್ನು ಹೊತ್ತ ಎಂಆರ್‌ಎನ್ಎ ಕೂಡ ಉತ್ಪತ್ತಿಯಾಗುವುದಿಲ್ಲ. ಅಂತಿಮವಾಗಿ ಇಡೀ ಓಪೆರಾನಿನ ಕಾರ್ಯ ಸ್ಥಗಿತಗೊಳ್ಳುತ್ತದೆ. ಇದು ವಿದ್ಯುತ್ ಸ್ವಿಚ್ಚಿನಂತೆ ಕೆಲಸ ನಿರ್ವಹಿಸುತ್ತದೆ.

ಪ್ರೇರಕ ಕಣದ ಉಪಸ್ಥಿತಿಯಲ್ಲಿ ಅದರ ಕೆಲವು ಕಣಗಳು ನಿಯಂತ್ರಕ ಪ್ರೊಟೀನಿನೊಂದಿಗೆ ಸಂಯೋಗವಾಗುತ್ತವೆ. ಪ್ರೇರಕ–ನಿಯಂತ್ರಕ ಸಂಕೀರ್ಣ ನಿರ್ವಾಹಕ ಜೀನ್‌ಗೆ ಸೇರಲಾರದು. ಅಥವಾ ನಿಯಂತ್ರಕ ಪ್ರೊಟೀನು ನಿರ್ವಾಹಕದೊಡನೆ ಕೂಡಿದ್ದರೆ ಪ್ರೇರಕವು ನಿಯಂತ್ರಕ ಪ್ರೊಟೀನನ್ನು ನಿರ್ವಾಹಕದಿಂದ ಬೇರ್ಪಡಿಸುತ್ತದೆ. ಹೀಗೆ ಮುಕ್ತವಾದ ನಿರ್ವಾಹಕದ ಪಕ್ಕದಲ್ಲಿಯೇ ಇರುವ ಉತ್ತೇಜಕ ಜೀನ್‌ಗೆ ಆರ್‌ಎನ್ಎ ಪಾಲಿಮರೇಸ್ ಕಿಣ್ವ ಸೇರಿ ಕಾರ್ಯಾರಂಭವಾಗುತ್ತದೆ. ಈಗ ಸ್ವಿಚ್ಚನ್ನು ಅದುಮಿ ಪ್ರಾರಂಭಿಸಿದಂತೆ ಓಪೆರಾನ್ ಕಾರ್ಯ ಆರಂಭವಾಗುತ್ತದೆ. ಜೆಕಬ್ ಮತ್ತು ಮೊನಡ್ ಅಧ್ಯಯನ ನಡೆಸಿದ ಬ್ಯಾಕ್ಟೀರಿಯ ಎ. ಕೋಲಿ ಮಾನವರ ದೊಡ್ಡಕರುಳಿನಲ್ಲಿರುವ ಒಂದು ನಿರುಪದ್ರವಿ ಪರಾವಲಂಬಿ. ಜೆಕಬ್ ಮತ್ತು ಮೊನಡ್ ಅಧ್ಯಯಿಸಿದ್ದು ಈ ಬ್ಯಾಕ್ಟೀರಿಯ ಕೋಶಗಳಲ್ಲಿ ಲ್ಯಾಕ್ಟೋಸ್ ಎಂಬ ದ್ವಿಶರ್ಕರದ ಪಚನ ನಿಯಂತ್ರಿಸುವ ಓಪೆರಾನ್. ಇದೊಂದು ಪ್ರೇರೇಪಕ ಓಪೆರಾನ್, ಲ್ಯಾಕ್ಟೋಸ್ ಪ್ರೇರಕ ಕಣ. ಅದರಿಂದ ಈ ಓಪೆರಾನನ್ನು ಲ್ಯಾಕ್ಟೋಸ್ ಓಪೆರಾನ್ ಅಥವಾ ಲ್ಯಾಕ್ ಓಪೆರಾನ್ ಎಂದು ಕರೆಯಲಾಗುತ್ತದೆ.

ಎ.ಕೊಲಿ ಗ್ಲುಕೋಸ್ ಪೋಷಣಾ ಮಾಧ್ಯಮದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಗ್ಲೂಕೋಸ್ ಬದಲಿಗೆ ಲ್ಯಾಕ್ಟೋಸ್ ಮಾಧ್ಯಮದಲ್ಲಿ ಬೆಳೆದಾಗ ಪ್ರಾರಂಭಿಕ ಹಂತದಲ್ಲಿ ಅದರ ಬೆಳವಣಿಗೆ ಕುಂಠಿತವಾದರೂ, ಸ್ವಲ್ಪ ಸಮಯದ ನಂತರ ಚೇತರಿಸಿಕೊಳ್ಳುತ್ತದೆ. ಲ್ಯಾಕ್ಟೋಸ್ ಒಂದು ದ್ವಿಶರ್ಕರ. ಅದು ಪಚನವಾಗಿ ಏಕಶರ್ಕರವಾಗುವವರೆಗೆ ಈ ಹಿನ್ನಡೆ.

ಲ್ಯಾಕ್ಟೋಸ್ ಓಪೆರಾನ್ ಸಮೂಹವು ಬಿ. ಗ್ಯಾಲಿಕ್ಟೋಸಿಡೇಸ್ ಎಂಬ ಕಿಣ್ವವನ್ನು ಉತ್ಪಾದಿಸುತ್ತದೆ. ಈ ಜಲಾಪಕರ್ಷಕ ಕಿಣ್ವ ಲ್ಯಾಕ್ಟೋಸ್ ದ್ವಿಶರ್ಕರವನ್ನು ಗ್ಲುಕೋಸ್ ಹಾಗೂ ಗ್ಯಾಲಾಕ್ಟೋಸ್ ಎಂಬ ಏಕಶರ್ಕರಗಳಾಗಿ ಪರಿವರ್ತಿಸುತ್ತದೆ. ಲ್ಯಾಕ್ಟೋಸ್ ಪರ್ಮಿಯೇಸ್ ಎಂಬ ಇನ್ನೊಂದು ಕಿಣ್ವ ಲ್ಯಾಕ್ಟೋಸನ್ನು ಮಾಧ್ಯಮದಿಂದ ಕೋಶದೊಳಗೆ ತೆಗೆದುಕೊಳ್ಳುತ್ತದೆ. ಟ್ರಾನ್ಸ್ ಅಸಿಟಿಲೇಸ್ ಕಿಣ್ವ, ಗ್ಯಾಲಕ್ಟೋಸ್ ಮತ್ತು ಗ್ಲುಕೋಸ್‌ಗಳ ಬಳಕೆಗೆ ಅಗತ್ಯ. ಲ್ಯಾಕ್ಟೋಸ್ ಓಪೆರಾನ್‌ನಲ್ಲಿ ಈ ಮೂರೂ ಕಿಣ್ವಗಳ ಸಂಶ್ಲೇಷಣೆಗೆ ಅಗತ್ಯವಾದ ಸಂಕೇತಗಳು ಮೂರು ಆಕಾರಿಕ ಜೀನ್‌ಗಳಲ್ಲಿ ಅಡಗಿವೆ. ಈ ಆಕಾರಿಕ ಜೀನ್‌ಗಳ ಜೊತೆ ನಿಯಂತ್ರಕಗಳಿವೆ. ಈ ನಿಯಂತ್ರಕಗಳು ಮೇಲೆ ಹೇಳಿದ ಮಾದರಿಯಲ್ಲಿ ಮೂರೂ ಆಕಾರಿಕ ಜೀನ್‌ಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಲ್ಯಾಕ್ಟೋಸ್ ಇದ್ದಾಗ ಓಪೆರಾನ್ ಕ್ರಿಯಾಶೀಲವಾಗುತ್ತದೆ. ಗ್ಲುಕೋಸ್ ಸೇವಿಸಿದರೆ ಕ್ರಿಯೆ ನಿಲ್ಲುತ್ತದೆ. ಇಲ್ಲಿ ಗ್ಲುಕೋಸ್ ದಮನಕವಾಗಿಯೂ ವರ್ತಿಸುತ್ತದೆ. ಮೊದಲು ಲ್ಯಾಕ್ಟೋಸ್ ಓಪೆರಾನ್‌ನ್ನು ವಿವರಿಸಲಾಯಿತಾದರೂ, ಆನಂತರದ ದಿನಗಳಲ್ಲಿ ಇದೇ ಬ್ಯಾಕ್ಟೀರಿಯದಲ್ಲಿ ಅನೇಕ ಓಪೆರಾನ್‌ಗಳ ರಚನೆಯನ್ನು ವಿವರಿಸಲಾಗಿದೆ. ಬೇರೆ ಬೇರೆ ಜೀವಿಗಳಲ್ಲಿ, ಯೂಕ್ಯಾರಿಯೋಟ್‌ಗಳಲ್ಲೂ ಜೀನ್‌ಗಳ ಕಾರ್ಯನಿಯಂತ್ರಿಸುವ ಓಪೆರಾನ್ ಪ್ರತಿಕೃತಿಗಳನ್ನು ತಯಾರಿಸಲಾಗಿದೆ.




(ಪಿ.ಎಸ್.)

**ಓಫಿಡೈಯಿಡೆ:** ಓಫಿಡಿಯಾಯ್ಡಿಯ ಉಪಗಣದಲ್ಲಿರುವ ಸಮುದ್ರ ಮೀನುಗಳ ಕುಟುಂಬ. ಈ ಕುಟುಂಬದ ಮೀನುಗಳು ಮೇಲಿನ ಕ್ರಿಟೇಶಿಯಸ್ ಕಾಲದಿಂದ ಇಂದಿನವರೆಗೂ ಜೀವಂತವಾಗಿವೆ. ಕಸ್ಕ್ ಈಲ್ (ಒರ್ಬಟ್ ಮೀನನ್ನು ಹೋಲುವ ಹಾವುಮೀನು) ಗಳೆಂದು ಕರೆಯುವ ಈ ಕುಟುಂಬದಲ್ಲಿ ಸುಮಾರು ಮೂವತ್ತು ಪ್ರಭೇದಗಳಿವೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ಉಷ್ಣ ಮತ್ತು ಸಮಶೀತೋಷ್ಣ ವಲಯ ಪ್ರದೇಶಗಳಲ್ಲಿ ಇವು ಹೆಚ್ಚಾಗಿ ದೊರೆಯುವುವು.

ಓಫಿಡೈಯಿಡೆ ಕುಟುಂಬದ ಮೀನುಗಳು ಸಾಮಾನ್ಯವಾಗಿ ೩೦ ಸೆಂಮೀ ದೊಡ್ಡವು. ಕೆಲವು ಪ್ರಭೇದದ ಮೀನುಗಳು ದೊಡ್ಡ ಗಾತ್ರಕ್ಕೆ ಬೆಳೆಯುವವು. ದಕ್ಷಿಣ ಆಫ್ರಿಕದ ನೆರೆಯ ಸಮುದ್ರಗಳಲ್ಲಿನ ಕಿಂಗ್‌ಕ್ಲಿಪ್ ೧.೫ ಮೀ ಅಷ್ಟು ಉದ್ದ ಬೆಳೆಯುವುದು. ಈ ಮೀನಿನ ಮಾಂಸ ಬಹಳ ರುಚಿಕರವಾಗಿದೆ. ಈ ಕುಟುಂಬದ ಇನ್ನೆರಡು ಪ್ರಭೇದಗಳು ಪೆರು ದೇಶದ ಸಮುದ್ರ ಮೀನುಗಾರಿಕೆಯಲ್ಲಿ ಮುಖ್ಯವಾದುವು. ಇವು ೦.೭೫ ಮೀ ಉದ್ದ ಬೆಳೆಯುವುವು. ಸಾಮಾನ್ಯವಾಗಿ ಆಳವಾದ ಸಮುದ್ರದಲ್ಲಿ ಮಾತ್ರ ದೊರಕುವುವಾದರೂ ಕೆಲವೊಮ್ಮೆ ನದಿಮುಖಗಳಲ್ಲಿಯೂ ಸಮುದ್ರದ ಅಂಚಿನಲ್ಲಿಯೂ ಸಿಕ್ಕಿವೆ.

ಈ ಮೀನಿನ ದೇಹ ಚಪ್ಪಟೆಯಾಗಿ ತೆಳುವಾಗಿದೆ. ಬೆನ್ನಿನ ಮತ್ತು ಗುದದ ರೆಕ್ಕೆಗಳು (ಅಥವಾ ಈಜು ರೆಕ್ಕೆ) ತಲೆಯ ಹಿಂಭಾಗದಲ್ಲಿ ಪ್ರಾರಂಭವಾಗಿ ಬಾಲದ ಕೊನೆಯವರೆಗೆ ವ್ಯಾಪಿಸಿದ್ದು ರೆಕ್ಕೆಗಳಲ್ಲಿ ಅನೇಕ ಮುಳ್ಳಿನಂತಹ ಕಡ್ಡಿಗಳನ್ನು ಹೊಂದಿವೆ. ಈ ಕುಟುಂಬದ ಮೀನುಗಳನ್ನು ಗುರುತಿಸಲು ಪಕ್ಕೆಯ ಈಜುರೆಕ್ಕೆಗಳನ್ನು ಉಪಯೋಗಿಸುತ್ತಾರೆ. ಇವು ದೇಹದ ಮುಂಭಾಗದವರೆಗೂ (ಗಡ್ಡದಡಿಯಲ್ಲಿ) ಸಾಗಿ ಕೇವಲ ಒಂದು ಜೋಡಿ ಸೀಳಿದ ತಂತುಗಳಾಗಿ ಮಾರ್ಪಟ್ಟಿವೆ. ಅತಿಸೂಕ್ಷ್ಮವಾದ ಈ ತಂತುಗಳನ್ನು ಮೀನು ಸಮುದ್ರದ ತಳದಲ್ಲಿ ಚಲಿಸುವಾಗ ಕೆಳಭಾಗದಲ್ಲಿನ ಪರಿಸ್ಥಿತಿಯನ್ನು ಗ್ರಹಿಸಲು ಉಪಯೋಗಿಸುವುದು.

ಕ್ಯಾಲಿಫೋರ್ನಿಯದ ಸ್ಟೈನ್‌ಹಾರ್ಟ್ ಅಕ್ವೇರಿಯಂನ ಕ್ಯೂರೇಟರಾದ ಇ.ಎಸ್.ಹೆರಾಲ್ಡ್ ಈ ಕುಟುಂಬದ ಮೀನೊಂದರ ಬಗ್ಗೆ ಗಮನಾರ್ಹನಾದ ಅಂಶಗಳನ್ನು ಬೆಳಕಿಗೆ ತಂದಿದ್ದಾನೆ. ಕ್ಯಾಲಿಪೋರ್ನಿಯದ ನೆರೆಯ ಸಮುದ್ರದಲ್ಲಿ ೧೮೦ ಮೀ. ಆಳದಲ್ಲಿ ಹಿಡಿದ ಚುಕ್ಕಿ ಕಸ್ಕ್‌ಈಲ್ (ಓಟೋಫಿಡಿಯಂ ಟೈಲರಿ) ಮೀನು ಸಾಮಾನ್ಯವಾಗಿ ತನ್ನ ಬಾಲದ ಮೇಲೆ ನಿಲ್ಲುವ ಸ್ವಭಾವದ್ದೆಂದು ಇವನು ತಿಳಿಸಿರುವನು. ಅದು ಬಾಲವನ್ನೇ ಮುಂದಾಗಿ ಮಾಡಿಕೊಂಡು ಪೊಟರೆಗಳಲ್ಲಿ ನುಗ್ಗುವುದೆಂದೂ ಕೇವಲ ತಲೆಯನ್ನು ಮಾತ್ರ ಹೊರಗೆ ನೀಡುವುದೆಂದೂ ತಿಳಿದುಬಂದಿದೆ.

ಓಫಿಡೈಯಿಡೆ ಕುಟುಂಬದ ಮೀನುಗಳು ದಕ್ಷಿಣ ಆಫ್ರಿಕ, ಚಿಲಿ, ಪೆರು ಮತ್ತು ನ್ಯೂಜಿಲೆಂಡ್ ದೇಶಗಳ ಮೀನುಗಾರಿಕೆಯಲ್ಲಿ ಗಮನಾರ್ಹವಾದುವು. ***

**ಓಫಿಯೂರಾಯ್ಡಿಯ:** ಕಂಟಕಚರ್ಮಿಗಳ (ಎಕಿನೊಡರ್ಮೇಟ) ವಂಶದ ಒಂದು ವರ್ಗ. ಸಮುದ್ರಜೀವಿಗಳಾದ ಪೆಡಸುನಕ್ಷತ್ರಗಳು (ಬ್ರಿಟಲ್ ಸ್ಟಾರ್ಸ್) ಇದಕ್ಕೆ ಉದಾಹರಣೆ. ದೇಹದಲ್ಲಿ ಮಧ್ಯದ ತಟ್ಟೆಯೂ ಕಿರಣಗಳಂತೆ ಚಾಚಿರುವ ಐದು ತೋಳುಗಳೂ ಇವೆ. ತೆಳುವಾದ ದುಂಡುತೋಳುಗಳು ಮಧ್ಯತಟ್ಟೆಯಿಂದ ಸ್ಪಷ್ಟವಾಗಿ ಭಿನ್ನತೆಯನ್ನು ಪ್ರದರ್ಶಿಸುತ್ತವೆ. ಬಾಯಿವರೆಗೆ ಒಳಚಾಚಿಕೊಂಡು ಒಟ್ಟುಗೂಡಿ ಬಾಯಿಯ ಸುತ್ತಲೂ ಒಂದು ಆಧಾರ ಕಟ್ಟಿನಂತಾಗಿರುವುದು. ತೋಳುಗಳು ಬಿಡಿ. ತುದಿಯಲ್ಲಿ ಮೊನಚಾಗಿರುತ್ತವೆ. ಕೆಲವು ಪೆಡಸುನಕ್ಷತ್ರಗಳಲ್ಲಿ (ಯೂರಿಯೇಲೆ ಗಣದವು) ತೋಳುಗಳು ತುದಿಯಲ್ಲಿ ಕವಲೊಡೆದು ಸುತ್ತಲೂ ಒಂದು ರೀತಿಯ ಬಲೆಯನ್ನು ರಚಿಸಿಕೊಂಡಿವೆ.

ಬಾಯಿ ಮಧ್ಯತಟ್ಟೆಯ ಅಧೋಭಾಗದ ನಡುವೆ ಇದೆ. ಆಂಬುಲ್ಯಾಕ್ರಲ್ ಕಾಲುವೆಗಳಾಗಲಿ ಆಸನದ್ವಾರವಾಗಲಿ ಇರುವುದಿಲ್ಲ. ಮರಿಯಲ್ಲಿ ಊರ್ಧ್ವಭಾಗದಲ್ಲಿರುವ ಮ್ಯಾಡ್ರಿಪೊರೈಟ್ ತಟ್ಟೆ ಪ್ರೌಢಜೀವಿಯ ಅಧೋಭಾಗಕ್ಕೆ ಸ್ಥಳಾಂತರವಾಗುವುದು. ಮೈಮೇಲಿನ ಚರ್ಮದ ಕೆಳಗೆ ತೆಳುವಾದ ಸುಣ್ಣದ ರಚನೆಯ ಫಲಕಗಳಿವೆ. ಇವುಗಳ ಇಕ್ಕೆಡೆಗಳಲ್ಲಿ ಸಣ್ಣ ಅಥವಾ ಉದ್ದವಾದ ಮುಳ್ಳುಗಳಂಥ ರಚನೆಗಳು ಹೊರಬಾಗುತ್ತವೆ. ಕೆಲವು ಪೆಡಸುನಕ್ಷತ್ರಗಳಲ್ಲಿ ಫಲಕಗಳ (ಪ್ಲೇಟ್) ಬದಲು ಹರಳಿನಂಥ ಸುಣ್ಣದ ರಚನೆಗಳಿವೆ. ಅಧೋಭಾಗದಲ್ಲಿ ೫ ಜೊತೆ ಸಣ್ಣ ಚೀಲಗಳಿವೆ. ಇವು ಜನನಕುಹರದೊಳಕ್ಕೆ ತೆರೆಯುತ್ತವೆ. ಜನನೇಂದ್ರಿಯಗಳಲ್ಲಿ ಉತ್ಪತ್ತಿಯಾಗುವ ಪ್ರಜನನ ಜೀವಕಣಗಳೂ ಇವುಗಳಲ್ಲಿ ಬಂದು ಸೇರುವುವು. ಈ ಕುಹರಗಳು ಉಸಿರಾಡುವ ಮತ್ತು ವಿಸರ್ಜಿಸುವ ಕಾರ್ಯಗಳನ್ನೂ ನಡೆಸುತ್ತವೆ. ತೋಳುಗಳ ಚರ್ಮದ ಒಳಭಾಗದಲ್ಲಿ ಇರುವ ಆಂಬುಲ್ಯಾಕ್ರಲ್ ಫಲಕಗಳು ಅವಕ್ಕೆ ಆಧಾರವಾಗಿವೆ. ನಳಿಕೆಪಾದಗಳು ತೋಳುಗಳ ಪಕ್ಕಗಳಲ್ಲಿನ ಫಲಕಗಳ ಮಧ್ಯದಲ್ಲಿರುವ ಸಂದಿಗಳಿಂದ ಹೊರಬರುವುವು. ಒಂದೊಂದು ತೋಳಿನೊಳಗೂ ದೇಹಾಂತರಾವಕಾಶ, ನರತಂತು, ಆಂಬುಲ್ಯಾಕ್ರಲ್ ನಾಳಗಳು ಇವೆಲ್ಲವೂ ಸಾಗಿ ಬಂದಿರುತ್ತವೆ. ದೇಹಾಂತರಾವಕಾಶ ಸೀಲಮಿಕ್ ಅನುಲೇಪಕ ಪದರದಿಂದ ಆವೃತವಾಗಿದೆ. ದೇಹದ ಹೊದಿಕೆ ಹೊರ ಮತ್ತು ಒಳಪೊರೆಗಳ ಮಧ್ಯೆ ವ್ಯಾಪಿಸಿರುವುದು. ಆಂಬುಲ್ಯಾಕ್ರಲ್ ನಾಳಗಳಲ್ಲಿ ಚಲಿಸುವ ದ್ರವದಲ್ಲಿ ಹಿಮೊಗ್ಲೋಬಿನ್ ತುಂಬಿದ ಅಮೀಬಾಕಾರದ ಜೀವಕಣಗಳಿವೆ. ಆಸ್ಟೆರಾಯ್ಡಿಯ ವರ್ಗದ ಪ್ರಾಣಿಗಳಲ್ಲಿರುವ ಟೀಡ್‌ಮನ್ ಕೋಶಗಳು ಈ ಗುಂಪಿನವುಗಳಲ್ಲಿ ಇರುವುದಿಲ್ಲ.



ಪೆಡಸುನಕ್ಷತ್ರಗಳು

ಜೀರ್ಣಾಂಗಗಳಲ್ಲಿ ಬಾಯಿ, ಅನ್ನನಾಳ ಮತ್ತು ಚೀಲದಂಥ ಜಠರವೂ ಇವೆ. ಗುದದ್ವಾರವಿಲ್ಲ.

ಜಲಪರಿಚಲನಾಂಗವ್ಯೂಹ (ವಾಟರ್ ವ್ಯಾಸ್ಕುಲರ್ ಸಿಸ್ಟಮ್) : ಅಧೋ ಭಾಗದಲ್ಲಿರುವ ರಂಧ್ರಮಯವಾದ ಮ್ಯಾಡ್ರಿಪೊರೈಟ್ ತಟ್ಟೆಯಿಂದ ಮುಚ್ಚಲ್ಪಟ್ಟ ಶಿಲಾನಾಳ ಆಂಬ್ಯುಲ್ಯಾಕ್ರಲ್ ಉಂಗುರನಾಳವನ್ನು ಸೇರುವುದು. ಈ ನಾಳದಿಂದ ಹೊರಡುವ ೫ ಆಂಬ್ಯುಲ್ಯಾಕ್ರಲ್ ನಾಳಗಳು ತೋಳುಗಳೊಳಗೆ ಹಾದುಹೋಗಿರುತ್ತವೆ. ಆಂಬ್ಯುಲ್ಯಾಕ್ರಲ್ ನಾಳಗಳ ಇಕ್ಕೆಲಗಳಲ್ಲಿ ನಳಿಕೆಪಾದಗಳಿವೆ. ನಳಿಕೆಪಾದಗಳಿಗೆ ಆಂಪ್ಯುಲೆಗಳಾಗಲೀ ಹೀರುಬಟ್ಟಲುಗಳಾಗಲೀ ಇರುವುದಿಲ್ಲ. ನಳಿಕೆಪಾದಗಳು ಪ್ರಾಣಿಯ ಚಲನೆಯಲ್ಲಿ ಪಾಲುಗೊಳ್ಳುವುದಕ್ಕಿಂತ ಹೆಚ್ಚಾಗಿ ಉಸಿರಾಟಕ್ಕೂ ಪರಿಸರದ ಅರಿವು ಪಡೆಯಲೂ ಸಹಕಾರಿಯಾಗಿವೆ. ಉಂಗುರನಾಳಕ್ಕೆ ಸೇರಿಕೊಂಡಂತೆ ೪ ಪೋಲಿಯನ್ ಕೋಶಗಳಿವೆ (ವೆಸಿಕಲ್). ಜನನಕುಹರಗಳ ಒಳಮುಖ ಶಿಲಕೆಗಳುಳ್ಳ ಜೀವಕಣಗಳಿಂದ ಆವೃತವಾಗಿದೆ. ಅದರಲ್ಲಿ ಸಮುದ್ರದ ನೀರು ಯಾವಾಗಲೂ ಚಲಿಸುತ್ತಿರುತ್ತದೆ. ಆದ್ದರಿಂದ, ಅದು ಉಸಿರಾಡಲೂ ಸಹಕಾರಿಯಾಗಬಹುದು

ನರಮಂಡಲ ಮತ್ತು ಅದರಿಂದ ಹೊರಡುವ ತೋಳಿನ ನರದ ತಂತುಗಳು ಫಲಕಗಳ ತಳಭಾಗದಲ್ಲಿರುವುವು.

ಪೆಡಸುನಕ್ಷತ್ರಗಳು ಏಕಲಿಂಗಿಗಳು. ಆದರೆ ಆಂಫಿಯೂರದಲ್ಲಿ ಹೆಣ್ಣು ಮತ್ತು ಗಂಡುಜನನಾಂಗಗಳು ಒಂದೇ ಜೀವಿಯಲ್ಲಿರುತ್ತವೆ. ಒಂದೇ ವೇಳೆಯಲ್ಲಿ ತತ್ತಿಗಳೂ ವೀರ್ಯಾಣುಗಳೂ ಉತ್ಪತ್ತಿಯಾಗುತ್ತವೆ. ಉತ್ಪಾದನಾಂಗಗಳು ಜೋಡಿಜೋಡಿಯಾಗಿ ಕವಲೊಡೆದುಕೊಂಡು, ತ್ರಿಜ್ಯಾಂತರ ಸ್ಥಾನಗಳಲ್ಲಿರುವುವು. ಪೆಂಟಸಿರಸ್ ಮತ್ತು ಇನ್ನು ಕೆಲವು ಜಾತಿಗಳಲ್ಲಿ ೧೦ ಜೊತೆ ಉತ್ಪಾದನಾಂಗಗಳಿರುವುವು. ಇವು ೧೦ ಜೊತೆ ಜನನಕುಹರಗಳಿಗೆ ಅಂಟಿರುವುವು. ಜೀವನಚರಿತ್ರೆಯಲ್ಲಿ ಉಭಯಪಾರ್ಶ್ವಾಂಗ ಸೌಷ್ಠವವನ್ನು ತೋರುವ ಓಫಿಯೋಪ್ಲೂಟಿಯಸ್ ಎಂಬ ಹೆಸರಿನ ಲಾರ್ವದ ಅವಸ್ಥೆಯುಂಟು. ಇದು ರೂಪಪರಿವರ್ತನೆಯಾಗಿ ತ್ರಿಜ್ಯಸೌಷ್ಠವವುಳ್ಳ (ರೇಡಿಯಲ್ ಸಿಮೆಟ್ರಿ) ಪ್ರೌಢಜೀವಿಯಾಗುವುದು. ಲಾರ್ವದ ಅಗಾಂಗಗಳೆಲ್ಲವೂ ಪ್ರೌಢಜೀವಿಯಲ್ಲಿಯೂ ಮುಂದುವರಿಯುವುವು.

ದಕ್ಷಿಣ ಧ್ರುವ ಸಮುದ್ರದಲ್ಲಿ ಜೀವಿಸುವ ಓಫಿಯೋಫ್ಲೂಕಸ್‌ಗಳು ಮರಿಗಳನ್ನೇ ಈದು, ಅವನ್ನು ಸಾಕುತ್ತವೆ.

ಪೆಡಸುನಕ್ಷತ್ರಗಳು ಸಮುದ್ರದಲ್ಲಿ ಸರಾಗವಾಗಿ ಈಜಬಲ್ಲವು. ಕೆಲವು ವೇಳೆ ಬಹಳ ನಿಧಾನವಾಗಿ ಚಲಿಸುವುವು. ತೋಳುಗಳನ್ನು ಸುಲಭವಾಗಿ ಬಗ್ಗಿಸಬಲ್ಲವಾದುದರಿಂದ ಬಂಡೆಗಳ ಕಂಡಿಗಳನ್ನು ಹೊಕ್ಕು ಅಲ್ಲಿ ಜೀವಿಸುವುವು. ಸಾಮಾನ್ಯವಾಗಿ ಸಮುದ್ರತಳದ ಮರಳಿನಲ್ಲಿ ಹೂತಿದ್ದು ರಾತ್ರಿಯ ವೇಳೆ ಚುರುಕಾಗಿ ಓಡಾಡುವುವು.

ನೀರಿನಿಂದ ಹೊರತಂದಾಗ ಅಥವಾ ಇತರ ರೀತಿಯಲ್ಲಿ ಕಾಟ ಕೊಟ್ಟಾಗ ಪೆಡಸುನಕ್ಷತ್ರಗಳು ತಮ್ಮ ಮಧ್ಯಭಾಗವಾದ ತಟ್ಟೆಯನ್ನು ಉಳಿಸಿಕೊಂಡು ತೋಳುಗಳನ್ನು

ಸ್ವಲ್ಪಸ್ವಲ್ಪವಾಗಿ ಕಡಿದುಕೊಳ್ಳುವುವು. ಅನಂತರ ಸ್ವಲ್ಪಸ್ವಲ್ಪವಾಗಿ ಬೆಳೆದು ಮತ್ತೆ ೫ ತೋಳುಗಳುಳ್ಳ ಜೀವಿಗಳಾಗುವುವು. ತನಗೆ ತಾನೇ ತನ್ನ ತೋಳುಗಳನ್ನು ಕಡಿದುಕೊಳ್ಳುವುದು ಈ ಪ್ರಾಣಿಗೆ ಸ್ವಾಭಾವಿಕ. ಕಡಿದುಹೋದ ಒಂದು ತೋಳು ಕೆಲವು ವೇಳೆ ಪೂರ್ಣವಾದ ಜೀವಿಯಾಗುವುದುಂಟು. ಇದನ್ನು ಒಂದು ರೀತಿಯ ಪುನರುತ್ಪಾದನೆಯೆಂದು ಕರೆಯಬಹುದು.

ಓಫಿಯೂರಾಯ್ಡಿಯ ವರ್ಗದಲ್ಲಿ ೪ ಉಪವರ್ಗಗಳಿವೆ. ಲಿಸೋಫಿಯೂರೆ, ಸ್ಟ್ರೆಪ್ಟೋಫಿಯೂರೆ, ಕ್ಲಾಡೋಫಿಯೂರೆ, ಜೈಯೋಫಿಯೂರೆ– ಇವೇ ಆ ನಾಲ್ಕು ಉಪವರ್ಗಗಳು. ಲಿಸೋಫಿಯೂರೆಯ ಪ್ರಾಣಿಗಳಲ್ಲಿ ಆಂಬುಲ್ಯಾಕ್ರಲ್ ತೋಡುಗಳುಳ್ಳ ತೋಳುಗಳಿದ್ದವು. ಈ ಜೀವಿಗಳು ಸೈಲೂರಿಯನ್ ಮತ್ತು ಡಿವೋನಿಯನ್ ಯುಗದಲ್ಲಿ ಅಳಿದುಹೋದುವು. ಸ್ಟ್ರೆಪ್ಟೋಫಿಯೂರೆಯ ಪ್ರಾಣಿಗಳಲ್ಲಿ ಆಂಬುಲ್ಯಾಕ್ರಲ್ ಫಲಕಗಳು ಚಲನೆಗೆ ಎಡೆಕೊಡುವ ಕೀಲುಗಳಂತೆ ಜೋಡಣೆಯಾಗಿದ್ದವು. ಕ್ಲಾಡೋಫಿಯೂರೆಯ ಪ್ರಾಣಿಗಳಲ್ಲಿ ಆಂಬುಲ್ಯಾಕ್ರಲ್ ಫಲಕಗಳು ಕೂಡುವೆಡೆಗಳಲ್ಲಿ ಉಸುಬಿನ ಗಡಿಯಾರದಂಥ ಅಂಚುಗಳಿರುವುವು. ತೋಳುಗಳು ಕವಲೊಡೆದಿರಬಹುದು. ಜೈಗೋಫಿಯೂರೆಯ ಪ್ರಾಣಿಗಳಲ್ಲಿ ಫಲಕಗಳು ಹೆಚ್ಚಿನ ಚಲನಕ್ಕೆ ಅವಕಾಶವಿಲ್ಲದಂತೆ ಜೋಡಣೆಯಾಗಿವೆ. ಫಲಕಗಳ ಅಂಚುಗಳಲ್ಲಿ ಸಣ್ಣ ಸಣ್ಣ ದಿಬ್ಬಗಳು ಮತ್ತು ಅವುಗಳ ಅಳವಡಿಕೆಗೆ ಸೂಕ್ತವೆನಿಸುವ ಗುಳಿಗಳಲ್ಲಿ ಇರುವುವು. ಇತ್ತೀಚೆಗೆ ಓಫಿಯೂರಾಯ್ಡಿಯ ವರ್ಗವನ್ನು ಓಫಿಯೂರೆ ಮತ್ತು ಯೂರಿಯೇಲೆ ಎಂಬ ಎರಡು ಗಣಗಳಾಗಿ ವಿಂಗಡಿಸುತ್ತಾರೆ. ಮೊದಲನೆಯದರಲ್ಲಿ ೧೨ ಕುಟುಂಬಗಳೂ ಎರಡನೆಯದರಲ್ಲಿ ೪ ಕುಟುಂಬಗಳೂ ಇವೆ.

ಓಫಿಯೂರಾಯ್ಡಿಯ ವರ್ಗದಲ್ಲಿ ಸುಮಾರು 1,700 ಪ್ರಭೇದಗಳಿವೆ. ಈ ಸಂಖ್ಯೆ ಎಕಿನೊಡರ್ಮೇಟ ವಂಶದ ಇತರ ವರ್ಗಗಳ ಸಂಖ್ಯೆಗಿಂತ ಬಹಳ ಹೆಚ್ಚಿನದಾಗಿದ್ದು ಪೆಡಸುನಕ್ಷತ್ರಗಳು ಉಳಿದ ಎಕಿನೊಡರ್ಮ್ ಪ್ರಾಣಿಗಳಿಗಿಂತ ಬಹು ಯಶಸ್ವಿ ಗುಂಪೆಂದು ತೋರಿಸುತ್ತದೆ. ಬಹುಶಃ ಇದಕ್ಕೆ ಕಾರಣ ಅವುಗಳ ಪುಟ್ಟ ಗಾತ್ರ ಮತ್ತು ನಿಶಾಚರ ಸ್ವಭಾವ. ಇದರಿಂದಾಗಿ ಇವು ಬೇರೆ ಪ್ರಾಣಿಗಳ ಗಮನದಿಂದ ತಪ್ಪಿಸಿಕೊಂಡಿವೆ. ಪ್ರಪಂಚದ ಎಲ್ಲ ಸಾಗರಗಳಲ್ಲಿಯೂ ಹೇರಳವಾಗಿ ಕಾಣಬರುವ ಇವು ಬಹು ಚುರುಕಾದ ಪ್ರಾಣಿಗಳು. ಓಫಿಯೋನೇಮಿಸ್ ಮರ್ಮೋರೇಟ ಎಂಬುವು ಸಮುದ್ರದ ತಳದಲ್ಲಿ ಮರಳಿನಲ್ಲಿರುತ್ತವೆ. ಓಫಿಯಾಕ್ಟಿಸ್ ಸವಿನ್ನಿ, ಓಫಿಯೋಫ್ರಾಗ್ಮಸ್ ರೆಲಿಕ್ಟಸ್, ಓಫಿಯೋಕೋಮ ಸ್ಕೋಲೋಪೆಂಡ್ರಿನ ಮತ್ತು ಓಫಿಯೋತ್ರಿಕ್ಸ್ ಹಿರ್ಸುಟ ಇವು ಭಾರತದ ಕೃಸಾಡೈ ಮತ್ತು ಪಾಂಬನ್ ಪ್ರದೇಶದ ಸಮುದ್ರಗಳಲ್ಲಿ ಜೀವಿಸುವುವು. ಆಸ್ಟರೋನಿಕ್ಸ್, ಓಫಿಯೊಲೆಪಿಸ್, ಓಫಿಯೊಮ್ಯೂಸಿಯಮ್, ಗಾರ್ಗನೊಸಿಫ್ಯಾಲಸ್ ಮುಂತಾದುವು ಪ್ರಪಂಚದ ಬೇರೆಡೆ ದೊರಕುವ ಕೆಲವು ಮುಖ್ಯ ಜಾತಿಗಳು.

***

**ಓಮಗ್ರಂಥಿ (ತೈಮಸ್):** ಚಪ್ಪಟೆಯಾದರೂ ಅಡ್ಡಾದಿಡ್ಡಿಯಾಗಿ, ಮೆತ್ತಗಿರುವ, ಪ್ರತಿರೋಧಕ ಶಕ್ತಿಯ ಬೆಳೆವಣಿಗೆಯಲ್ಲಿ ಪಾತ್ರವಿರುವ ಗ್ರಂಥಿ. ಎದೆಚಕ್ಕೆಯ (ಸ್ಟರ್ನಂ) ಹಿಂದೆ ಹಾಗೂ ಉಸಿರ್ನಾಳ, ದೊಡ್ಡ ರಕ್ತನಾಳಗಳು, ಹೃದಯದ ಕವಚದ ಮುಂದೆ ಕಂಡುಬರುವ ಇದರಲ್ಲಿ ಅಸಮಗಾತ್ರದ ಎರಡು ಹಾಲೆಗಳಿವೆ (ಲೋಬ್ಸ್). ಮಾಂಸಾಹಾರಿಗಳಿಗೆ ರುಚಿಕರವಾದ ಮೆದುವಾದ ಮಾಂಸ ತುಂಬಿದ ಅಂಗವಿದು. ಆದ್ದರಿಂದಲೇ ಇದನ್ನೂ ಮಾಂಸಲಿ (ಸ್ವೀಟ್ ಬ್ರೆಡ್) ಎನ್ನುವುದುಂಟು. ಹೊಟ್ಟೆಯೊಳಗೂ ಒಂದು ಮಾಸಲಿ (ಪ್ಯಾಂಕ್ರಿಯಾಸ್) ಇರುವುದರಿಂದ ತೈಮಸನ್ನು ಕೊರಳಿನ ಮಾಂಸಲಿ ಎಂದಿದೆ. ವಯಸ್ಸಾದಂತೆಲ್ಲ ಈ ಗ್ರಂಥಿಯ ಗಾತ್ರದಲ್ಲಿ ಬಹಳ ಬದಲಾವಣೆ ಆಗುವುದು. ಆಗತಾನೇ ಹುಟ್ಟಿದ ಕೂಸಿನಲ್ಲಿ ಬಲು ದೊಡ್ಡದಾಗಿರುತ್ತದೆ. ಮೊದಲ ಎರಡು ವರ್ಷಗಳಲ್ಲಿ ಇದರ ಬೆಳೆವಣಿಗೆ ತೀವ್ರ. ವಯಸ್ಸಿಗೆ ಬರುವ ಹೊತ್ತಿಗೆ ಬೆಳೆವಣಿಗೆ ತುತ್ತತುದಿಗೇರುವುದು. ಆಮೇಲೆ ಬರುಬರುತ್ತ ಮುರುಟಿಕೊಳ್ಳುತ್ತ ಹೋಗಿ ಕೊನೆಗೆ ನೆಪಮಾತ್ರವಾಗಿ ಉಳಿದಿರುತ್ತದೆ. ಒಬ್ಬೊಬ್ಬರಲ್ಲೂ ಒಂದೊಂದು ಗಾತ್ರ, ತೂಕವಿರುವುದು. ಅದಕ್ಕದೇ ಹೀಗೆ ಮುರುಟಿಕೊಳ್ಳುವುದರ ಜೊತೆಗೆ, ಇದ್ದಕ್ಕಿದ್ದ ಹಾಗೆ ಸೋಂಕು, ವಿಷವೇರಿಕೆ, ಕಟ್ಟಾ ಉಪವಾಸಗಳಿಂದಲೂ ಹೀಗಾಗುವ ವರದಿಗಳಿವೆ.

ರಚನೆ: ಕೂಡಿಸುವ ಅಂಗಾಂಶ ಕವಚದಿಂದಾದ ಸೂಕ್ಷ್ಮ ವಿಭಾಗಗಳ ಒಳಗಡೆ ಸಾವಿರಾರು ಕಿರುಹಾಲೆಗಳಿರುವುವು (ಲಾಬ್ಯೂಲ್ಸ್). ಇವುಗಳ ಅಡ್ಡಳತೆ 2 ಮಿಮೀ ಮೀರಿರದು. ಕಿರುಹಾಲೆಗಳಲ್ಲಿಯ ಗ್ರಂಥಿ ಹೊರಪದರದಂತಿರುವ ರಗಟೆಯಾಗಿಯೂ (ಕಾರ್ಟೆಕ್ಸ್) ಒಳಗಣ ಕುಸುರಿಯಾಗಿಯೂ (ಮೆಡುಲ) ವಿಂಗಡವಾಗಿದೆ. ಇದರಲ್ಲಿ ನವಿರ್ಜಾಲಕಣಗಳೂ (ರೆಟಿಕ್ಯುಲೋಸೈಟ್ಸ್) ಹಾಲುರಸಕಣಗಳೂ (ಲಿಂಫೊಸೈಟ್ಸ್) ಇವೆ. ಹಿರಿಯ ನವಿರ್ಜಾಲಕಣಗಳ ಬಲೆಗಟ್ಟಿನಲ್ಲಿ ಹಾಲುರಸಕಣಗಳು ಸಿಕ್ಕುಬಿದ್ದಂತಿರುವುವು. ಕಿರುಹಾಲೆಗಳ ರಗಟೆಯಲ್ಲಿ ಹಾಲುರಸಕಣಗಳು ದಟ್ಟವಾಗಿ ಕಿಕ್ಕಿರಿದಿವೆ. ಕುಸುರಿಯಲ್ಲಿ ಹಾಲುರಸಕಣಗಳಿಗಿಂತಲೂ ನವಿರ್ಜಾಲಕಣಗಳೇ ಹೆಚ್ಚು. ಬೇರೆಡೆಯ ನವಿರ್ಜಾಲಗಳಿಗೂ ಇಲ್ಲಿನವಕ್ಕೂ ಅವುಗಳ ವಿಕಾಸದಲ್ಲಿ ವ್ಯತ್ಯಾಸಗಳಿವೆ. ಪಿಂಡಬೆಳವಣಿಗೆಯಲ್ಲಿ ಇಲ್ಲಿನವು ಮೇಲ್ಪೊರೆಯಿಂದ (ಎಪಿತೀಲಿಯಂ) ಬರುವುದೇ ಹೊರತು ಮಿಕ್ಕವಂತೆ ನಡುರಚನಾಂಶದಿಂದ (ಮೀಸೆಂಕೈಮ) ಹುಟ್ಟವು.

ಆಕಾರ, ವರ್ತನೆಗಳಲ್ಲೂ ಹಾಲುರಸಮಂಡಲದ ಹಾಲುರಸಕಣಗಳನ್ನೇ ಇವೆಲ್ಲವೂ ಹೋಲುವುವು. ಗ್ರಂಥಿಯ ನಡುಗಡ್ಡೆಯಲ್ಲಿ ಹ್ಯಾಸಲನ ಗೋಳಕಗಳಿವೆ (ಕಾರ್ಪಸೆಲ್ಸ್). ಇವುಗಳ ಕೆಲಸವೇನೆಂದು ತಿಳಿದಿಲ್ಲ. ಓಮಗ್ರಂಥಿಗೆ ರಕ್ತನಾಳ ಪೂರೈಕೆ ಅಪಾರ. ಇದು ಮುರುಟಿಕೊಂಡಾಗ ಗ್ರಂಥಿವಸ್ತುವೆಲ್ಲ ಬದಲಾಗಿ ಕೊಬ್ಬುಗೂಡಿರುವುದು. ರಗಟೆಯಲ್ಲಿ ಮೊದಲಾಗಿ ಕುಸುರಿಯಲ್ಲಿ ಕೊನೆಗೊಳ್ಳುತ್ತದೆ. ಕೊನೆಗೆ ಇಡೀ ಗ್ರಂಥಿ ಕೊಬ್ಬುಗೂಡಿ ನಟ್ಟನಡುವೆ ಉಳಿದ ಚೂರಲ್ಲಿ ಹ್ಯಾಸಲನ ಗೋಳಕಗಳಿರುತ್ತವೆ.

ಕೆಲವು ಅಸಹಜತೆಗಳು: 1. ಕೆಲವು ವೇಳೆ ಈ ಗ್ರಂಥಿಯ ಊತಕ (ಟಿಶ್ಯೂ) ಇತರ ಅಂಗಗಳಲ್ಲಿಯೂ ಕಂಡುಬರುವುದು. ಉದಾಹರಣೆಗೆ: ಗುರಾಣಿಕ ಗ್ರಂಥಿ ಮತ್ತು ಶ್ವಾಸಕೋಶಗಳಲ್ಲಿ: 2. ಗ್ರಂಥಿಯ ಒಂದು ಭಾಗ, ಕೆಲವು ವೇಳೆ ಎರಡು ಭಾಗಗಳೂ ಕಿರಿದಾಗಿರಬಹುದು; 3. ಅಪರೂಪಕ್ಕೆ ಈ ಗ್ರಂಥಿ ಕೆಲವರಲ್ಲಿ ಇಲ್ಲದೆಯೇ ಹೋಗಬಹುದು.

ಭ್ರೂಣದಲ್ಲಿ ಉಗಮ: ಓಮ ಗ್ರಂಥಿ ಮೂರನೆಯ ಬ್ರಾಂಕಿಯಲ್ ಪೌಚ್‌ನಿಂದ ಉಗಮಗೊಳ್ಳುತ್ತದೆ. ಅದರಲ್ಲಿ ಇರಡು ಎಪಿಥೀಲಿಯಲ್ ಜೀವಕೋಶಗಳಿವೆ. ಇವು ಮೊದಲಿಗೆ ಕೊಳವೆಯಾಕಾರದಲ್ಲಿ ರೂಪ ತಾಳುತ್ತವೆ. ಆನಂತರ ಘನರೂಪ ತಳೆದು ಕೆಳಮುಖವಾಗಿ ಮೀಸೆಂಕೈಮದ ಆವರಣದೊಳಗೆ ಬೆಳೆಯುತ್ತವೆ. ಮೀಸೆಂಕೈಮದ ಲಸಿಕೆಯ ಜೀವಕೋಶಗಳು ಅದರೊಳಗೆ ಪ್ರವೇಶಿಸಿ ಮೊದಲೇ ಇದ್ದ ಒತ್ತುಕಟ್ಟಾದ ಎಪಿಥೀಲಿಯಲ್ ಜೀವಕೋಶಗಳನ್ನು ಬೇರ್ಪಡಿಸುತ್ತವೆ. ಇದರಿಂದಾಗಿ ಘನರೂಪದ ಜೀವಕೋಶಗಳು ಬಲೆಯಾಕಾರವನ್ನು ತಾಳುತ್ತವೆ. ಓಮಗ್ರಂಥಿಯಲ್ಲಿ ಲಸಿಕೆಯ ಜೀವಕೋಶಗಳು ಮೊಟ್ಟಮೊದಲಿಗೆ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿ ಭ್ರೂಣಾವಸ್ಥೆಯ ಮೂರನೆಯ ತಿಂಗಳಲ್ಲಿ.

ನಿಜಗೆಲಸ: 1. ಪ್ರತಿರೋಧಕ ಕಾರ್ಯಗಳು: ಪ್ರಾಣಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ಮತ್ತು ಮನುಷ್ಯದೇಹದಲ್ಲಿ ನಡೆಸಿದ ವೀಕ್ಷಣೆಗಳಿಂದ ಓಮಗ್ರಂಥಿ ಪ್ರತಿರೋಧಕ ಶಕ್ತಿಯ ಬೆಳೆವಣಿಗೆಯಲ್ಲಿ ಪ್ರಮುಖಪಾತ್ರವನ್ನು ವಹಿಸುತ್ತದೆಂದು ತಿಳಿದುಬಂದಿದೆ. ಮಗುವಿನ ಜನನಪೂರ್ವದ ಅಥವಾ ಜನನಾನಂತರದ ಕೆಲವೇ ದಿವಸಗಳಲ್ಲಿ ಇದರ ಪ್ರಭಾವ ಶರೀರದಲ್ಲಿ ಕಂಡುಬರುತ್ತದೆ. ಈ ಪ್ರಭಾವ ಕಂಡು ಬರುವ ಕಾಲ ಬೇರೆ ಬೇರೆ ಪ್ರಾಣಿಜಾತಿಗಳಲ್ಲಿ ವ್ಯತ್ಯಾಸ ಹೊಂದುತ್ತದೆ.

ವಯಸ್ಕ ಪ್ರಾಣಿಗಳಲ್ಲಿ ಓಮಗ್ರಂಥಿಯನ್ನು ತೆಗೆದಾಗ ಯಾವ ವಿಶೇಷ ಪರಿಣಾಮ ಉಂಟಾದುದೂ ಕಂಡುಬಂದಿಲ್ಲ. ಆದರೆ ಆಗತಾನೆ ಹುಟ್ಟಿದ ಇಲಿಗಳಲ್ಲಿ ಮತ್ತು ಇತರ ದಂಶಕವರ್ಗದ ಪ್ರಾಣಿಗಳಲ್ಲಿ ಈ ಗ್ರಂಥಿಯನ್ನು ತೆಗೆದುಹಾಕಿದಾಗ ರಕ್ತದಲ್ಲಿ ಮತ್ತು ಲಸಿಕೆಯಲ್ಲಿ ಲಸಿಕೆಯ ಜೀವಕೋಶಗಳು ವಿರಳವಾದುವಲ್ಲದೆ ಊತಕಗಳು ನಿರೋಧಕಗಳನ್ನು (ಆಂಟಿಬಾಡೀಸ್) ಉತ್ಪತ್ತಿ ಮಾಡುವ ಶಕ್ತಿಯನ್ನು ಕಳೆದುಕೊಂಡುವು; ಮತ್ತು ಚರ್ಮದ ಸ್ವಜಾತಿ ಕಸಿಗೆ (ಹೋಮೋಗ್ರಾಫ್ಟ್) ಅವುಗಳಲ್ಲಿ ವಿರೋಧ ಕಂಡುಬರಲಿಲ್ಲ. ಕ್ರಮೇಣ ಆ ಪ್ರಾಣಿಗಳ ಬೆಳೆವಣಿಗೆ ಕುಗ್ಗಿ ತಿಂಗಳೊಳಗೆ ಅವು ಸತ್ತುಹೋದುವು. ಮತ್ತೆ ಅದೇ ಬಗೆಯ ಓಮಗ್ರಂಥಿಗಳನ್ನು ಅವುಗಳ ದೇಹಕ್ಕೆ ಕಸಿ ಮಾಡಿದಾಗ ಮೇಲೆ ಹೇಳಿದ ದೋಷಗಳು ಕಡಿಮೆಯಾದುವು. ಇಲ್ಲವೆ ಅದೇ ಜಾತಿಯ ಲಸಿಕೆಯ ಜೀವಕೋಶ ಅಥವಾ ರಕ್ತದ ಜೀವಕೋಶಗಳು ಉತ್ಪತ್ತಿಯಾಗುವ ಜೀವಕೋಶಗಳನ್ನು ಈ ಪ್ರಾಣಿಗಳಿಗೆ ಚುಚ್ಚಿದಾಗ ದೋಷಗಳು ಪೂರ್ಣವಾಗಿ ಮಾಯವಾದುದು ಕಂಡುಬಂದಿತು.

ಪ್ರತಿರೋಧಕಶಕ್ತಿ ಓಮಗ್ರಂಥಿಗೆ ಹೇಗೆ ಪ್ರಾಪ್ತವಾಗುತ್ತದೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ಈ ಗ್ರಂಥಿಯ ಲಸಿಕೆಯ ಜೀವಕೋಶಗಳು ಲಸಿಕೆಯ ಗ್ರಂಥಿ ಮತ್ತು ಗುಲ್ಮಗಳಿಗೆ ವಲಸೆಹೋಗುತ್ತವೆ. ದೇಹದ ಇತರ ಅಂಗಗಳಲ್ಲಿ ಉತ್ಪತ್ತಿಯಾಗುವ ಲಸಿಕೆಯ ಜೀವಕೋಶಗಳ ಮೇಲೂ ಈ ಗ್ರಂಥಿ ತನ್ನ ಪ್ರಭಾವ ಬೀರಬಹುದು. ಅಲ್ಲದೆ ಇದರಲ್ಲಿ ಒಂದು ಬಗೆಯ ವಸ್ತು (ಹ್ಯೂಮರಲ್ ಫ್ಯಾಕ್ಟರ್) ಉತ್ಪತ್ತಿಯಾಗಿ ಶಕ್ತಿಯನ್ನು ಇತರ ಲಸಿಕೆಯ ಕೇಂದ್ರಗಳಿಗೆ ಒಯ್ಯಬಹುದು.

2. ಒಳಸುರಿಕೆ ಕಾರ್ಯಗಳು: ಲಸಿಕೆಯ ಜೀವಕೋಶಗಳನ್ನು ಉತ್ಪತ್ತಿಮಾಡುವುದಲ್ಲದೇ ಗ್ರಂಥಿಯ ಬೇರೆ ಕಾರ್ಯವೇನೆಂಬುದು ಸರಿಯಾಗಿ ತಿಳಿದುಬಂದಿಲ್ಲ. ಇದು ಹಾರ್ಮೋನ್ ಉತ್ಪತ್ತಿಮಾಡುವುದೇ ಇಲ್ಲವೆ ಎಂಬ ವಿಷಯದಲ್ಲಿ ಒಮ್ಮತವಿಲ್ಲ. ಓಮಗ್ರಂಥಿಗೂ ಇತರ ಒಳಸುರಿಕ ಗ್ರಂಥಿಗಳಿಗೂ ಅನೇಕ ವಿಧವಾದ ಪರಸ್ಪರ ಸಂಬಂಧವಿರುವುದು ಕಂಡುಬಂದಿದೆ. ಜನನಪೂರ್ವದ, ಜನನಾನಂತರದ ಹಾಗೂ ವಯಸ್ಕ ಪ್ರಾಣಿಗಳಲ್ಲಿ ಆಡ್ರಿನಲ್ ಕಾರ್ಟಿಕಲ್ ಗ್ರಂಥಿಯ ಕಾರ್ಯಚಟುವಟಿಕೆಗೂ ಓಮಗ್ರಂಥಿಯ ಗಾತ್ರಕ್ಕೂ ಪ್ರತಿಲೋಮ ಸಂಬಂಧವಿರುವುದು (ಇನ್‌ವರ್ಸ್ ರಿಲೇಶನ್). ಅಡ್ರಿನಲ್ ಕಾರ್ಯಚಟುವಟಿಕೆ ಕುಗ್ಗಿದಾಗ

ಇವುಗಳ ಗಾತ್ರ ಹೆಚ್ಚಾಗುತ್ತದೆ. ನಿರ್ವೀರ್ಯಕರಣದಿಂದ (ಕ್ಯಾಸ್ಟ್ರೇಶನ್) ಅಥವಾ ಗುರಾಣಿಕ ಗ್ರಂಥಿಯನ್ನು ತೆಗೆದುಹಾಕುವುದರಿಂದ ಓಮಗ್ರಂಥಿಯ ಗಾತ್ರ ದೊಡ್ಡದಾಗುತ್ತದೆ. ಕೆಲವು ಪ್ರಾಣಿಗಳಲ್ಲಿ ಓಮಗ್ರಂಥಿಯನ್ನು ತೆಗೆದಾಗ ಜನನಾಂಗಗಳು, ಅಡ್ರಿನಲ್ ಕಾರ್ಟೆಕ್ಸ್ ಮತ್ತು ಗುರಾಣಿಕ ಗ್ರಂಥಿಗಳು ದೊಡ್ಡದಾಗುತ್ತವೆ ಮತ್ತು ದೈಹಿಕ ಬೆಳೆವಣಿಗೆ ಕುಗ್ಗುತ್ತದೆ. ಪ್ರಾಯಪೂರ್ವದಲ್ಲಿ ಈ ಗ್ರಂಥಿಯ ಬೆಳೆವಣಿಗೆ ಅತಿ ಹೆಚ್ಚಾಗಿರುವುದರಿಂದ ದೈಹಿಕ ಬೆಳೆವಣಿಗೆಯಲ್ಲಿ ಇದರ ಪಾತ್ರವಿರಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ರೋಗಗಳು: ಓಮಗ್ರಂಥಿಯಿಂದ ದೇಹದ ಆರೋಗ್ಯದಲ್ಲಾಗುವ ಏರಿಳಿತಗಳು ಅಷ್ಟೇನೂ ಗಮನಾರ್ಹವಾದುವಲ್ಲ. ವಿರಳವಾಗಿ ಗ್ರಂಥಿಯಲ್ಲಿ ಗಂಟುಗಳು (ಟ್ಯೂಮರ್ಸ್) ಮತ್ತು ಹುಣ್ಣುಗಳು ಕಾಣಿಸಿಕೊಳ್ಳುವುವು. ಮಯಸ್ತೀನಿಯ ಕಾಯಿಲೆಗೆ ಇದು ಕೆಲವು ವೇಳೆ ಕಾರಣವಾಗಬಹುದು. ಓಮಗ್ರಂಥಿ ಉಸಿರುಗಟ್ಟುವಿಕೆಯಿಂದುಂಟಾಗುವ ಸಾವಿಗೆ ಕಾರಣವೆಂದು ಹಿಂದೆ ತಿಳಿದಿದ್ದರು. ಆದರೆ ಇದನ್ನು ದೃಢಪಡಿಸುವ ಖಚಿತ ಸಾಕ್ಷಿಗಳಿಲ್ಲ.

ಪ್ರಾಣಿಗಳಲ್ಲಿ ಈ ಗ್ರಂಥಿಯ ಅಭಾವದಿಂದ ಅಸಹಜವಾದ ಪ್ರತಿನಿರೋಧಕ ಪ್ರತಿಕ್ರಿಯೆ (ಅಬ್‌ನಾರ್ಮಲ್ ಇಮ್ಯೂನ್ ರೆಸ್ಪಾನ್ಸಸ್) ಕಂಡುಬರುವುದೆಂದು ಈಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಇದರ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳು ದೈಹಿಕ ಆರೋಗ್ಯದಲ್ಲಿ ವಿವಿಧ ರೀತಿಯ ಬದಲಾವಣೆಗಳನ್ನು ತರುತ್ತವೆಯಾದರೂ ಅವುಗಳ ಕಾರ್ಯ ಕಾರಣಸಂಬಂಧ ನಿರ್ದಿಷ್ಟವಾಗಿಲ್ಲ.

ಅನಾವಶ್ಯಕ ಬೆಳೆವಣಿಗೆ ಅಥವಾ ಗಂಟುಗಳು: ಓಮಗ್ರಂಥಿಯ ಗಂಟುಗಳಿಗೆ ಥೈಮೋಮಾಸ್ ಎಂದು ಹೆಸರು. ಅವುಗಳಲ್ಲಿ ಕಂಡುಬರುವ ಪ್ರಮುಖ ಜೀವಕೋಶಗಳ ಆಧಾರದ ಮೇಲೆ ಗಂಟುಗಳನ್ನು ವಿಭಜಿಸಲಾಗುತ್ತದೆ. 20 ವರ್ಷ ವಯಸ್ಸಿಗಿಂತ ಕಡಿಮೆಯ ವ್ಯಕ್ತಿಗಳಲ್ಲಿ ಇವು ಕಾಣಿಸುವುದು ವಿರಳ. ಈ ಗಂಟುಗಳು ದೇಹದ ಇತರ ದೂರದ ಅಂಗಗಳಿಗೆ ವ್ಯಾಪಿಸುವುದು ಕಡಿಮೆ. ಆದರೆ ಅಕ್ಕಪಕ್ಕದ ಅಂಗಗಳು ಇದರ ಬಾಧೆಗೊಳಗಾಗಬಹುದು. ಈ ರೋಗದ ಚರ್ಯೆಯನ್ನು ಕೇವಲ ಅದರ ಜೀವಕೋಶಗಳ ರಚನೆಯ ಆಧಾರದಿಂದಲೇ ವಿವರಿಸಲಾಗುವುದಿಲ್ಲ. ಈ ಗಂಟುಗಳು ಕಾಣಿಸಿಕೊಂಡಾಗ ಎದೆಯ ಭಾಗದ ಅಂಗಗಳ ಮೇಲೆ ಒತ್ತಡವುಂಟಾದ ಅನುಭವವಾಗುತ್ತದೆ. ಮತ್ತೆ ಕೆಲವು ಬಾರಿ ಈ ಚಿಹ್ನೆಗಳು ಕಾಣಿಸಿಕೊಳ್ಳದೆಯೂ ಇರಬಹುದು. ಆಗ ಕ್ಷಕಿರಣ ಪರೀಕ್ಷೆಯಿಂದ ಅದನ್ನು ಪತ್ತೆಹಚ್ಚಬಹುದು. ಶಸ್ತ್ರಕ್ರಿಯೆಯಿಂದ ತೆಗೆದುಹಾಕಿದಾಗ ಅದು ಇತರ ಭಾಗಗಳಿಗೆ ವ್ಯಾಪಿಸದಿದ್ದಲ್ಲಿ ದೇಹಕ್ಕೆ ಯಾವ ಅಪಾಯವೂ ಉಂಟಾಗದು.

ದೇಹದ ಇತರ ಅನೇಕ ಕಾಯಿಲೆಗಳ ಜೊತೆಗೆ ಈ ಗಂಟುಗಳೂ ಇರಬಹುದು. ಅವುಗಳ ನಡುವಣ ಸಂಬಂಧ ಕೇವಲ ಆಕಸ್ಮಿಕವಾಗಿರಬಹುದು; ಕೆಲವು ವೇಳೆ ಆಕಸ್ಮಿಕವಲ್ಲದೆಯೂ ಇರಬಹುದು. ಕೆಲವು ಮಯಸ್ತೀನಿಯ ಗ್ರೆವಿಸಿನಿಂದ ನರಳುತ್ತಿರುವ ರೋಗಿಗಳಲ್ಲಿ ಓಮಗ್ರಂಥಿಯ ಗಂಟುಗಳು ಕಂಡುಬಂದಿವೆ. ಕೆಲವರಲ್ಲಿ ಗ್ರಂಥಿಗಳು ದೊಡ್ಡದಾಗಿರುವುದೂ ಉಂಟು. ಈ ಗಂಟುಗಳನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದಾಗ ಕಾಯಿಲೆಯಲ್ಲಿ ಗುಣ ಕಂಡುಬಂದಿತಲ್ಲದೆ ಕೆಲವರಿಗೆ ಪೂರ್ತಿ ವಾಸಿಯಾಗಿದೆ. ಈ ರೋಗದಿಂದ ಬಳಲುತ್ತಿರುವ 40 ವರ್ಷದ ಕೆಳಗಿನ ಹೆಂಗಸರಲ್ಲಿ ಓಮಗ್ರಂಥಿಯ ಗಂಟುಗಳಿಲ್ಲದಿದ್ದರೂ ಗ್ರಂಥಿಯನ್ನು ತೆಗೆದುಹಾಕಿದಾಗ ಕಾಯಿಲೆ ಗುಣವಾಗಿರುವುದು ಕಂಡುಬಂದಿದೆ. ಅಪರಿಹಾರ್ಯವಾದ ರಕ್ತಹೀನತೆಯಲ್ಲೂ ಓಮಗ್ರಂಥಿಯ ಪಾತ್ರವಿದೆಯೆಂಬುದು ಕಂಡುಬಂದಿದೆ. ಈ ಗಂಟುಗಳನ್ನು ತೆಗೆದಾಗ ಮೂರರಲ್ಲಿ ಒಂದು ಭಾಗ ರೋಗಿಗಳಲ್ಲಿ ಗುಣ ಕಂಡುಬಂದಿತು. ರಕ್ತದ ಏಡಿಗಂತಿಗೆ ಈ ಗ್ರಂಥಿ ಕೆಲವು ವೇಳೆ ಕಾರಣವಾಗಬಹುದೆಂಬುದು ಪ್ರಾಣಿಗಳಲ್ಲಿ ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದ್ದರೂ ಮನುಷ್ಯನ ವಿಷಯದಲ್ಲಿ ಅದು ಖಚಿತವಾಗಿಲ್ಲ.

ಥೈಮೊಲಿಪೊಮ: ಓಮಗ್ರಂಥಿಯಲ್ಲಿ ವಿರಳವಾಗಿ ಉಂಟಾಗುವ ಈ ಬಗೆಯ ಗಂಟು ವಿಶೇಷವಾಗಿ 10–15 ವರ್ಷದ ಮಕ್ಕಳಲ್ಲಿ ಕಂಡುಬರುತ್ತದೆ. ಇದು ಕೊಬ್ಬು ಮತ್ತು ಓಮಗ್ರಂಥಿಯ ಜಾಲಗಳಿಂದ ಕೂಡಿದೆ. ಇದಕ್ಕೆ ಹೊರಕವಚ ಇದೆ. ಕೆಮ್ಮು, ದಮ್ಮು ಮತ್ತು ನೋವುಗಳಿಗೆ ಇದು ಕಾರಣವಾಗಬಹುದು. ಎಕ್ಸ್ ಕಿರಣ ಪರೀಕ್ಷೆಯ ಮೂಲಕ ಇದನ್ನು ಪತ್ತೆಹಚ್ಚಬಹುದು. ಈ ಗಂಟು ತುಂಬ ದೊಡ್ಡದಾಗಿ ಬೆಳೆದರೂ ಅಷ್ಟೇನೂ ಅಪಾಯಕಾರಿಯಲ್ಲ.

ಉಸಿರುಕಟ್ಟುವಿಕೆ: ಓಮಗ್ರಂಥಿ ಉಸಿರುಕಟ್ಟುವಿಕೆಗೆ ಕಾರಣವಾಗುತ್ತದೆಂಬ ಭಾವನೆ ಹಿಂದೆ ಇತ್ತು. ಆದರೆ ಸಂಶೋಧನೆಗಳಿಂದ ಅದು ನಿರಾಧಾರವೆನಿಸಿದೆ. ಉಸಿರುಗಟ್ಟುವಿಕೆಯಿಂದಾಗುವ ಸಾವಿಗೆ, ಓಮಗ್ರಂಥಿ ದೊಡ್ಡದಾಗಿದ್ದರೂ, ಬೇರೆಯೇ ಕಾರಣಗಳಿದ್ದುವು. ಕೆಲವು ವೇಳೆ ಚಿಕ್ಕ ಮಕ್ಕಳಲ್ಲಿ, ಓಮಗ್ರಂಥಿ ದೊಡ್ಡದಾಗಿದ್ದು ಶ್ವಾಸನಾಳದ ಮೇಲೆ ಒತ್ತುವುದರಿಂದ ಉಸಿರಾಡಲು ತೊಂದರೆಯಾಗಬಹುದು.

ಹುಟ್ಟಿನಿಂದುಂಟಾಗುವ ಪ್ರತಿರೋಧಕ ಕಾಯಿಲೆಗಳಿಗೆ ಓಮಗ್ರಂಥಿ ಕಾರಣವಿರಬಹುದೆಂದು ಕೆಲವರ ಅಭಿಪ್ರಾಯ. ಇಂಥ ಕಾಯಿಲೆಯಲ್ಲಿ ಎರಡು ವಿಧಗಳಿವೆ; (1) ಹುಡುಗರಲ್ಲಿ ಮಾತ್ರ ಕಂಡುಬರುವುದು. (2) ಸ್ವಿಸ್ ಮಾದರಿಯ ಹುಡುಗ ಹುಡುಗಿಯರಲ್ಲಿ ಕಂಡುಬರುವಂಥದು. ಮೊದಲನೆಯದರಲ್ಲಿ ಓಮಗ್ರಂಥಿಗೆ ಸಂಬಂಧಿಸಿದಂತೆ ಯಾವ ದೋಷವೂ ಇರುವುದಿಲ್ಲ. ಆದರೆ ಎರಡನೆಯದರಲ್ಲಿ ಓಮಗ್ರಂಥಿ ಬಹಳ ಕಿರಿದಾಗಿರುತ್ತದೆ. ಜೊತೆಗೆ ಅದರಲ್ಲಿ ಲಸಿಕೆಯ ಜೀವಕೋಶಗಳೂ ತುಂಬ ಕಡಿಮೆ ಅಥವಾ ಇಲ್ಲದೆಯೇ ಇರಬಹುದು. ಈ ಕಾಯಿಲೆಯುಳ್ಳವರ ದೇಹದಲ್ಲಿ ರೋಧವಸ್ತುಗಳ ಉತ್ಪತ್ತಿಯಾಗುವುದಿಲ್ಲ ಮತ್ತು ಸ್ವಜಾತಿ ಕಸಿಯನ್ನು ವಿರೋಧಿಸುವ ಶಕ್ತಿಯೂ ಇರುವುದಿಲ್ಲ. ಇದರಿಂದ ನರಳುವವರು ಎರಡು ವರ್ಷ ಬದುಕಿದ್ದರೆ ಹೆಚ್ಚು. (ಜೆ.ಇ.ಸಿ.ಎಚ್.)

**ಓರ್ ಮೀನು:** ಎಲ್ಲ ಮಹಾಸಾಗರಗಳಲ್ಲಿಯೂ ಇರುವ ಲ್ಯಾಂಪ್ರಿಡಿಫಾರ್ಮಿಸ್ ಗಣದ ರೀಗೇಲಿಸಿಡೆ ಕುಟುಂಬದ ಮೀನು. ರಿಗೇಲಿಕಸ್ ಗ್ಲೆಸ್ನೆ ಇದರ ವೈಜ್ಞಾನಿಕ ಹೆಸರು. ದೇಹ ಪಟ್ಟಿಯಂತೆ ಬಲು ಉದ್ದವಾಗಿದೆ. ಬೆನ್ನಿನ ರೆಕ್ಕೆ ದೇಹದ ಉದ್ದಕ್ಕೂ ವಿಸ್ತರಿಸಿದ್ದು ಇದರ ಮೊದಲ ಕೆಲವು ಎಳೆಗಳು ತಲೆಯ ಮೇಲೆ ನೀಳವಾದ ಶಿಖೆಯಂತೆ ಇವೆ. ನಡುವಿನ ರೆಕ್ಕೆಗಳು ದೀರ್ಘವಾದ ಎಳೆಗಳಾಗಿ ಮಾರ್ಪಟ್ಟು ಕೊನೆಯಲ್ಲಿ ಹುಟ್ಟಿನಂತೆ (ಓರ್) ಚಪ್ಪಟೆಯಾಗಿವೆ. ಇಂಥ ರಚನೆಯಿಂದಲೇ ಇವುಗಳಿಗೆ ಓರ್ (ಹುಟ್ಟು) ಮೀನುಗಳೆಂದು ಹೆಸರು ಬಂದಿದೆ.

ಕೆಲವು ಓರ್ ಮೀನುಗಳು ೧೦–೧೫ ಮೀ ಉದ್ದ ಬೆಳೆಯುತ್ತವೆ. ಸಾಗರಗಳಲ್ಲಿ ಅಗಾಧವಾದ ಹಾವುಗಳಿರುವುವೆಂಬ ದಂತಕಥೆಗಳು ಈ ಮೀನುಗಳಿಂದ ಹುಟ್ಟಿರಬಹುದೆಂದು ಕಾಣುತ್ತದೆ.

***

**ಓಲ್ಡುವೈ:** ಮಾನವನ ಉಗಮ ಮತ್ತು ಅವನ ಇತಿಹಾಸಪೂರ್ವ ಸಂಸ್ಕೃತಿಗಳ ಸಾಕಷ್ಟು ಪುರಾವೆಗಳನ್ನು ಒದಗಿಸಿದ ಸ್ಥಳ. ಪೂರ್ವ ಆಫ್ರಿಕದ ಟಾಂಜಾನಿಯದ (ಈಗಿನ ಟಾಂಗನೀಕ) ಆಗ್ನೇಯ ಭಾಗದಲ್ಲಿನ ಸೆರೆಂಗಟಿ ಮೈದಾನದ ಒಂದು ಭಾಗ. ಪ್ಲಿಸ್ಟೊಸೀನ್ ಯುಗದ ಪ್ರಾರಂಭದಲ್ಲಿ ಉದಯಿಸಿದ ಶಿಲಾಪದರಗಳು ಇಲ್ಲಿನ ಓಲ್ಡುವೈ ನದಿಯ ಬಯಲಿನಲ್ಲಿ ಹರಡಿವೆ. ಪ್ರವಾಹದ ಕೊರೆತದಿಂದ ಇಲ್ಲಿ ಸುಮಾರು 90 ಮೀ.ಆಳವಿರುವ ಕಮರಿಯೊಂದು ಏರ್ಪಟ್ಟು ಕಮರಿಯ ಪಕ್ಕಗಳಲ್ಲಿ ವಿವಿಧ ಶಿಲಾಪದರಗಳು ಕಂಡುಬಂದಿವೆ. ಹಾಗಾಗಿ 'ಓಲ್ಡುವೈ ಗಾರ್ಜ್' ಎಂದೇ ಪ್ರಖ್ಯಾತ. ಪ್ರಖ್ಯಾತ ಪ್ರಾಗ್ಜೀವ ವಿಜ್ಞಾನಿ ಲೂಯಿಸ್ ಲೀಕೆ ಮತ್ತು ಆತನ ಪತ್ನಿ ಮೇರಿ ಲೀಕೆ ಇಲ್ಲಿ ಸಾಕಷ್ಟು ಅಧ್ಯಯನ ನಡೆಸಿದ್ದಾರೆ.

ಕಮರಿಯ ತಳದಲ್ಲಿ ಜ್ವಾಲಾಮುಖಿಯ ಸ್ಫೋಟದಿಂದ ಹುಟ್ಟಿದ ಬಸಾಲ್ಟ್ ಶಿಲೆಯ ದಪ್ಪನಾದ ಪದರಗಳಿದ್ದು ಅದರ ಮೇಲೆ ಕೆಂಪು ಶಿಲೆಯ 30 ಮೀ ದಪ್ಪದ ಪದರವೂ ಆನಂತರ ಬೂದುಬಣ್ಣದ ಪದರವೂ ಮೇಲ್ಭಾಗದಲ್ಲಿ ಈಗಿನ ನೆಲಮಟ್ಟವೂ ಇವೆ. ಈ ಪ್ಲಿಸ್ಟೊಸೀನ್ ಶಿಲಾಪದರಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ತಳಗಿನಿಂದ ಮೊದಲನೆಯ ಪದರ ಮತ್ತು ಎರಡನೆಯ ಪದರದ ಕೆಳಭಾಗವನ್ನು ಒಂದು ಗುಂಪಾಗಿಯೂ ಎರಡನೆಯ ಪದರದ ಮೇಲ್ಭಾಗ, ಮೂರನೆಯ ಮತ್ತು ನಾಲ್ಕನೆಯ ಪದರಗಳನ್ನು ಮತ್ತೊಂದು ಗುಂಪಾಗಿಯೂ ಇತ್ತೀಚಿನ ಸಂಶೋಧನೆಗಳಿಂದ ನಿರ್ದೇಶಿಸಲಾಗಿದೆ. ಭೂವಿಜ್ಞಾನ ರೀತ್ಯ ಮೊದಲ ಮತ್ತು ಎರಡನೆಯ ಪದರಗಳ ಕೆಳಭಾಗದಲ್ಲಿ ಎಲ್ಲ ಫ್ರಾಂಚಿಯನ್ ಯುಗಕ್ಕೆ ಸೇರಿದ ಪ್ರಾಣಿಗಳ ಅವಶೇಷಗಳ ಮೊದಲ ನೆಲೆಗಳಲ್ಲಿ ಸಣ್ಣ ಆಕಾರದ ಸ್ತನಿಗಳು, ಪಕ್ಷಿಗಳು ಮತ್ತು ಸರೀಸೃಪಗಳು, ಅನಂತರ ಕಾಲಕ್ಕೆ ಸೇರಿದ ವಿಶಾಲವಾದ ನೆಲೆಗಳಲ್ಲಿ ಬೃಹದಾಕಾರದ ಸ್ತನಿಗಳಾದ ಆನೆ, ಹಂದಿ, ಜಿಂಕೆ ಮತ್ತು ಮಾಂಸಭಕ್ಷಕ ಪ್ರಾಣಿಗಳ ಪಳೆಯುಳಿಕೆಗಳು, ಈ ಗುಂಪಿನ ಪದರಗಳ ಅಂತ್ಯಕಾಲದ ನೆಲೆಗಳಲ್ಲಿ ಉಷ್ಣಹವೆಯಲ್ಲಿ ವಾಸಿಸುವ ಗಜೆಲ್ (ಆಡಿನ ಜಾತಿಗೆ ಸೇರಿದ ಒಂದು ಪ್ರಾಣಿ), ಜಿಂಕೆ ಮತ್ತು ಕುದುರೆಗಳ ಪಳೆಯುಳಿಕೆಗಳೂ ಕಂಡುಬಂದಿವೆ. ಎರಡನೆಯ ಗುಂಪಿನ ಪದರಗಳಲ್ಲಿ ಬೇರೆ ರೀತಿಯ ಪ್ರಾಣಿಗಳ ಅವಶೇಷಗಳೂ ಗೋಚರವಾಗಿವೆ. ಜೌಗು ಹವೆಯಿದ್ದ ಎರಡನೆಯ ಪದರದ ಮೇಲ್ಮಟ್ಟದಲ್ಲಿ ಹಿಪೊಪೊಟಮಸ್, ಹಂದಿ, ದೈತ್ಯಾಕಾರದ ಕುರಿ, ಕುದುರೆ, ಮಾಂಸಾಹಾರಿ ಪ್ರಾಣಿಗಳು, ರೈನಾಸರಸ್ ಮತ್ತು ಕಪಿಮಾನವ ವರ್ಗದ ಸ್ತನಿಗಳ ಅವಶೇಷಗಳು ಪ್ರಧಾನವಾಗಿವೆ. 150ಕ್ಕೂ ಹೆಚ್ಚು ಪ್ರಾಣಿಗಳ ಅವಶೇಷಗಳು ಇಲ್ಲಿ ಸಿಕ್ಕಿವೆ. ಆ ಪ್ರಾಣಿಗಳಲ್ಲಿ ಬಹಳಷ್ಟು ಈಗ ನಶಿಸಿಹೋಗಿವೆ.

ಈ ವಿವಿಧ ಪದರಗಳ ಹವಾಗುಣವನ್ನು ವಿಜ್ಞಾನಿಗಳು ಈ ರೀತಿಯಾಗಿ ನಿರ್ಧರಿಸಿದ್ದಾರೆ. ಮೊದಲ ಮತ್ತು ಎರಡನೆಯ ಪದರದ ಕೆಳಭಾಗಗಳನ್ನು ಹೆಚ್ಚು ಮಳೆ ಸುರಿಯುತ್ತಿದ್ದ, ತೇವ ಹವೆಯಿದ್ದ ಆಫ್ರಿಕದ ಎರಡನೆಯ ಪ್ಲೂವಿಯಲ್ ಯುಗಕ್ಕೂ ಎರಡನೆಯ ಪದರದ ಮೇಲ್ಮಟ್ಟವನ್ನು ಒಣಹವೆಯಿದ್ದ ಎರಡನೆಯ ಪ್ಲೂವಿಯಲ್ ಯುಗದ ಅಂತ್ಯಕಾಲಕ್ಕೂ (ಈ ಕಾಲದಲ್ಲಿ ಅಲ್ಲಿದ್ದ ಸರೋವರದಲ್ಲಿ ಅಡಿಗಡಿಗೆ ಪ್ರವಾಹಗಳೇರ್ಪಡುತ್ತಿದ್ದು ಆ

ಪ್ರವಾಹಗಳಿಂದ ಉಂಟಾದ ಪದರಗಳನ್ನು ಇಲ್ಲಿ ಕಾಣಬಹುದು) ಮೂರನೆಯ ಪದರವನ್ನು ಉಷ್ಣಹವೆಯ ಎರಡನೆಯ ಅಂತರಪ್ಲೂವಿಯಲ್ ಯುಗಕ್ಕೂ ನಾಲ್ಕನೆಯ ಪದರವನ್ನು ಪುನಃ ಆ ಸರೋವರ ಪ್ರಬಲಿಸಿದ ತೇವ ಹವೆಯ ಮೂರನೆಯ ಪ್ಲೂವಿಯಲ್ ಯುಗಕ್ಕೂ ನಿರ್ದೇಶಿಸಲಾಗಿದೆ.

ಪೊಟ್ಯಾಸಿಯಂ–ಆರ್ಗಾನ್ ಕಾಲಗಣನಾಪದ್ಧತಿಯ ರೀತ್ಯ, ಮೊದಲ ಪದರ ಸುಮಾರು ಎರಡು ದಶಲಕ್ಷ ವರ್ಷಗಳಷ್ಟೂ ಎರಡನೆಯ ಪದರದ ಮೇಲ್ಭಾಗ ಸುಮಾರು 5 ಲಕ್ಷ ವರ್ಷಗಳಷ್ಟು ಪುರಾತನವೆಂದೂ ತಿಳಿದುಬಂದಿದೆ. ನಾಲ್ಕನೆಯ ಪದರದ ಮೇಲ್ಭಾಗ ಮಧ್ಯ ಪ್ಲಿಸ್ಟೊಸೀನ್ ಯುಗದ ಅಂತ್ಯ ಅಥವಾ ಅಂತ್ಯ ಪ್ಲಿಸ್ಟೊಸೀನ್ ಯುಗದ ಆರಂಭ ಕಾಲಕ್ಕೆ ಸೇರುತ್ತದೆ.

ಮಾನವ ಜಾತಿಯ ಉಗಮ: ಇಲ್ಲಿ ಆದ ಮಾನವನ ಉಗಮ ಮತ್ತು ವಿಕಾಸದ ಅಭ್ಯಾಸಕ್ಕೆ ಬಹಳ ಮುಖ್ಯವಾದ ಪುರಾವೆಗಳು ದೊರಕಿದ್ದು ಪೂರ್ವಆಫ್ರಿಕ ಮಾನವ ಜನಾಂಗದ ಉಗಮಸ್ಥಾನವೆಂದು ತೋರಿಸಿಕೊಟ್ಟಿವೆ. ಇವುಗಳಲ್ಲಿ ಬಹಳ ಮುಖ್ಯವಾದುದು ಕ್ರಿಶ 1959ರಲ್ಲಿ ಮೊದಲ ಪದರದ ಮೇಲ್ಮಟ್ಟದಲ್ಲಿ ದೊರಕಿದ ಜಿಂಜಾಂಥ್ರೋಪಸ್ ಕಪಿಮಾನವ ಅವಶೇಷಗಳು. 17,50,000 ವರ್ಷಗಳಷ್ಟು ಹಳೆಯದಾದ ಈ ಮಾನವಾವಶೇಷಗಳು ಈವರೆಗೂ ಬೆಳಕಿಗೆ ಬಂದ ಮಾನವಸಂತತಿಯಲ್ಲಿ ಮೊದಲಿನವೆಂದು ಅಭಿಪ್ರಾಯಪಡಲಾಯಿತು. ಅದೇ ಸುಮಾರಿಗೆ ಸೇರಿದ ಇನ್ನೊಂದು ಗುಂಪಿನ ಮಾನವನ ಹೋಮೋ ಹ್ಯಾಬಿಲಿಸ್ ಅವಶೇಷಗಳೊಂದಿಗೆ ಮೊತ್ತಮೊದಲಿನ ಮಾನವನಿರ್ಮಿತ ಆಯುಧೋಪಕರಣಗಳೂ ಕೆಲವು ಜಲಚರಗಳ ಅವಶೇಷಗಳೂ ಈ ನೆಲೆಯಲ್ಲಿ ಕಂಡುಬಂದುವು. ಇಲ್ಲಿ ಕಂಡುಬಂದಿರುವ ಕಲ್ಲಿನ ಅರ್ಧವರ್ತುಲದ ಅವಶೇಷಗಳು ಆ ಮಾನವರ ವಸತಿಗಳ ಅವಶೇಷಗಳಿದ್ದಿರಬಹುದೆಂದು ಅಭಿಪ್ರಾಯಪಡಲಾಗಿದೆ. ಎರಡನೆಯ ಪದರದ ಕೆಳಮಟ್ಟದಲ್ಲಿ ಹೋಮೋ ಹ್ಯಾಬಿಲಿಸ್ ಮತ್ತು ಮೇಲ್ಮಟ್ಟದಲ್ಲಿ ಹೋಮೋ ಎರೆಕ್ಟಸ್ ಮಾನವಾವಶೇಷಗಳೂ ಆಯುಧೋಪಕರಣಗಳೂ ದೊರಕಿವೆ.

ಸಾಂಸ್ಕೃತಿಕ ಅವಶೇಷಗಳು: ಇಲ್ಲಿ ಕಂಡುಬಂದಿರುವ ಮಾನವ ನಿರ್ಮಿತ ಅವಶೇಷಗಳನ್ನು ಎರಡು ಸಾಂಸ್ಕೃತಿಕ ವಿಧಾನಗಳಿಗೆ ನಿರ್ದೇಶಿಸಲಾಗಿದೆ. ಮೊದಲ ಪದರ ಮತ್ತು ಎರಡನೆಯ ಪದರದ ಕೆಳಮಟ್ಟದಲ್ಲಿ ಖಚಿತವಾಗಿ ಮಾನವ ನಿರ್ಮಿತವೆಂದು ಪರಿಗಣಿಸಲ್ಪಟ್ಟಿರುವ ಉಂಡೆಕಲ್ಲಿನಾಯುಧ, ತುಂಡು ಕೊಡಲಿಗಳು ಹೇರಳವಾಗಿದ್ದು ಅದನ್ನು ಓಲ್ಡೋವನ್ ಸಂಸ್ಕೃತಿಯೆಂದು ಕರೆಯಲಾಗಿದೆ. ಎರಡೂ ಪಾರ್ಶ್ವಗಳಿಂದ ಚಕ್ಕೆಗಳನ್ನು ತೆಗೆದುದರಿಂದ ಉಂಟಾದ ಚೂಪಾದ ಆಯುಧಗಳ ಅಂಚಿನ ಮೇಲೆ ಉಪಯೋಗದಿಂದುಂಟಾದ ಚಿಹ್ನೆಗಳು ಕಂಡುಬರುತ್ತವೆ. ಈ ಆಯುಧಗಳ ತಯಾರಿಕೆಯಲ್ಲಿ ಬಂದ ಚಕ್ಕೆ ಕಲ್ಲುಗಳನ್ನು ಕೊಯ್ಯುವ ಮತ್ತು ಒರೆಯುವ ಸಾಧನಗಳನ್ನಾಗಿ ಉಪಯೋಗಿಸಿಕೊಂಡ ಮಾಹಿತಿಗಳು ಕಂಡುಬಂದಿವೆ. ಕ್ರಮೇಣ ಈ ಉಂಡೆಕಲ್ಲಿನಾಯುಧಗಳು ರೂಪಾಂತರ ಹೊಂದಿ ಎರಡು ಪಾರ್ಶ್ವಗಳಿಂದ ಚಕ್ಕೆಗಳನ್ನು ತೆಗೆದಿರುವ, ಮೊನಚಾದ ತುದಿಯಿರುವ ಮತ್ತು ದಪ್ಪನಾದ ಕೈಪಿಡಿಯಿರುವ, ಕೈಗೊಡಲಿಯ ಪೂರ್ವರೂಪದ ಆಯುಧಗಳು ತಲೆದೋರಿವೆ. ಈ ಸಂಸ್ಕೃತಿಯನ್ನು ಕೈಕೊಡಲಿ ಸಂಸ್ಕೃತಿಯೆಂದು ಕರೆಯಲಾಗಿದೆ. ಎರಡನೆಯ ಪದರದ ಮೇಲ್ಮಟ್ಟದಲ್ಲಿ ಉಂಡೆಕಲ್ಲಿನ ತುಂಡು ಕೊಡಲಿಗಳು ಉಳಿದು ಬಂದಿದ್ದರೂ ಅಬ್ಬೆವಿಲ್ಲಿಯನ್ ಹಂತದ ಕೈಗೊಡಲಿಗಳು ಪ್ರಧಾನವಾಗಿವೆ. ಈ ಹಂತದಲ್ಲಿ ಕೆಲವು ಅಷ್ಯೂಲಿಯನ್ ಹಂತಕ್ಕೆ ಸೇರಿದ ಆಯುಧಗಳು ದೊರಕಿದ್ದರೂ ಅವು ಮೇಲಿನಿಂದ ಅಂತಸ್ಸರಿತವಾಗಿರಬಹುದೆಂದು ಅಭಿಪ್ರಾಯಪಡಲಾಗಿದೆ. ಈ ಪದರದ ಅಂತ್ಯಕಾಲದ ಅಷ್ಯೂಲಿಯನ್ ರೀತಿಯ ಆಯುಧಗಳು ಮೊದಲ ಬಾರಿಗೆ ಬಳಕೆಗೆ ಬಂದುವು. ಮೂರನೆಯ ಪದರದಲ್ಲಿ ಅಬ್ಬೆವಿಲ್ಲಿಯನ್, ಅಷ್ಯೂಲಿಯನ್ ಅಯುಧೋಪಕರಣಗಳು ದೊರಕಿದ್ದರೂ ಅಷ್ಯೂಲಿಯನ್ ಸಂಸ್ಕೃತಿ ಪ್ರಧಾನವಾಗುತ್ತದೆ. ನಾಲ್ಕನೆಯ ಪದರದಲ್ಲಿ ಅಷ್ಯೂಲಿಯನ್ ಕೈಗಾರಿಕೆಯ ಆರು ಬೇರೆ ಬೇರೆ ಹಂತಗಳಿಗೆ ನಿರ್ದೇಶಿತವಾಗುವ ಆಯುಧಗಳು ದೊರಕುತ್ತವೆ. ಕ್ಲೀವರ್ ರೀತಿಯ ಆಯುಧಗಳು ಎರಡನೆಯ ಪದರದಲ್ಲಿ ಮೊದಲ ಬಾರಿಗೆ ದೊರೆತರೂ ಈ ಕಾಲದಲ್ಲಿ ಅವನ್ನು ಹೆಚ್ಚು ಸಂಖ್ಯೆಯಲ್ಲಿ ಮತ್ತು ವಿವಿಧಾಕೃತಿಗಳಲ್ಲಿ ಮಾಡದಿರುವುದರ ಸೂಚನೆಗಳಿವೆ. ಮೊನೆಯಾದ ತುದಿಯುಳ್ಳ, ಅಂಡಾಕಾರದ ಮತ್ತು ಭಲ್ಲೆಯಾಕಾರದ ಕೈಗೊಡಲಿಗಳು ಈ ಕೈಗಾರಿಕೆಯ ವೈವಿಧ್ಯವನ್ನು ತೋರುತ್ತವೆ. ಈ ಪದರದ ಅಂತ್ಯಕಾಲದಲ್ಲಿ ಕೈಗೊಡಲಿ ಸಂಸ್ಕೃತಿ ಉಚ್ಛ್ರಾಯ ಸ್ಥಿತಿಯಲ್ಲಿದ್ದುದನ್ನು ನಯವಾಗಿ ಕಂಡರಿಸಿದ ಅನೇಕ ಉತ್ತಮ ಆಯುಧಗಳು ತೋರುತ್ತವೆ.

(ಬಿ.ಕೆ.ಜಿ.)

**ಓಸಿಲಾಟ್:** ಬೆಕ್ಕಿನ ಕುಟುಂಬಕ್ಕೆ (ಫೆಲಿಡೆ) ಸೇರಿದ ಫೆಲಿಸ್ ಪಾರ್ಡಾಲಿಸ್ ಎಂಬ ಪ್ರಾಣಿ. ದಕ್ಷಿಣ ಅಮೆರಿಕದ ಕೆಲವು ಪ್ರದೇಶಗಳಲ್ಲಿ ವಾಸಿಸುವುದು. ಮನೆಯ ಬೆಕ್ಕಿಗಿಂತೇನೂ ಅತಿ ದೊಡ್ಡದಲ್ಲ. ಎತ್ತರ ಸುಮಾರು ಅರ್ಧ ಮೀ. ಉದ್ದ ಸುಮಾರು ಒಂದು ಮೀ. ದೇಹದ ಬಣ್ಣ ಬೂದು ಅಥವಾ ಕಂದು. ಮೈಮೇಲೆ ಕಪ್ಪು ಮಚ್ಚೆಗಳಿವೆ. ಕತ್ತಿನ ಮೇಲೆ, ಕೆನ್ನೆಯ ಮೇಲೆ ಕಪ್ಪು ಪಟ್ಟೆಗಳಿವೆ. ಹೊಟ್ಟೆ ಬಿಳಿ. ಕಾಡಿನಲ್ಲಿ ವಾಸಿಸುವ ಇದನ್ನು ಕೆಲವರು ಮನೆಗಳಲ್ಲಿ ಸಾಕುವರು. ಮಾಂಸಾಹಾರಿ. ಬಹಳ ಚೆನ್ನಾಗಿ ಮರ ಹತ್ತಬಲ್ಲುದು. ತನ್ನ ಆಹಾರವನ್ನು ಬೇಟೆಯಾಡಿ ಹಿಡಿದು ತಿನ್ನುವುದು. ಹಿಡಿದ ಪ್ರಾಣಿಯ ಶರೀರವನ್ನು ಹರಿಯುವುದಕ್ಕೂ ಕತ್ತರಿಸುವುದಕ್ಕೂ ಅನುಕೂಲವಾದ ಹಲ್ಲುಗಳಿವೆ. ಮುಂದಿನ ಹಲ್ಲುಗಳು ಸಣ್ಣದಾಗಿವೆ. ಕೋರೆಹಲ್ಲುಗಳು ದೊಡ್ಡದಾಗಿ ಚೂಪಾಗಿವೆ. ದವಡೆ ಹಲ್ಲುಗಳಲ್ಲಿ ಮೊನಚಾದ ತುದಿಗಳಿರುವುದರಿಂದ ಕತ್ತರಿಯಂತೆ ಕತ್ತರಿಸುತ್ತವೆ. ತಲೆಬುರುಡೆಯ ಹಿಂಭಾಗ ಎತ್ತರವಾಗಿ ಮೊನಚಾಗಿದೆ. ಇದಕ್ಕೆ ಕತ್ತಿನ ಬಲವಾದ ಸ್ನಾಯುಗಳು ಸೇರಿಕೊಂಡಿವೆ. ಹಿಡಿದ ಬೇಟೆ ಒದ್ದಾಡಿ ತಪ್ಪಿಸಿಕೊಳ್ಳದಂತೆ ಇವು ಸಹಾಯಮಾಡುತ್ತವೆ. ಅಲ್ಲದೆ ಕೆಳದವಡೆ ಮೇಲಕ್ಕೆ, ಕೆಳಕ್ಕೆ ಮಾತ್ರ ಆಡಬಲ್ಲುದು. ಎಡಬಲಕ್ಕೆ ಆಡಲಾರದು. ಬೇಟೆ ತಪ್ಪಿಸಿಕೊಳ್ಳದಂತೆ ಇದು ಸಹ ಸಹಾಯ ಮಾಡುತ್ತದೆ. ಬೆರಳುಗಳಲ್ಲಿರುವ ಮೊನಚಾದ, ಬಾಗಿದ ನಖಗಳನ್ನು ಮೃದುವಾದ ಚೀಲಗಳೊಳಗೆ ಎಳೆದುಕೊಳ್ಳಬಲ್ಲದು. ಸಾಮಾನ್ಯವಾಗಿ ಒಂದು ಸಲಕ್ಕೆ ಎರಡು ಮರಿಗಳನ್ನು ಈಯುತ್ತದೆ.

***

# ಔ

**ಔಲುಮೀನು:** ಓಫಿಸಿಫ್ಯಾಲಿಡೆ ಕುಟುಂಬಕ್ಕೆ ಸೇರಿದ ಸಿಹಿನೀರಿನ ಎಲುಬು ಮೀನುಗಳ ಒಂದು ಪ್ರಭೇದ. ಹಾವಿನತಲೆ ಮೀನುಗಳೆಂದು ಪ್ರಸಿದ್ಧವಾಗಿವೆ. ಸಾಮಾನ್ಯವಾಗಿ ಹೂಮೀನೆಂದೂ ಇಂಗ್ಲಿಷಿನಲ್ಲಿ ಮರಲ್ ಎಂದೂ ಕರೆಯಲಾಗುವ ಇದರ ಶಾಸ್ತ್ರೀಯ ನಾಮ ಓಫಿಯೊಸಿಫ್ಯಾಲಸ್ ಮರೂಲಿಯಸ್ (ಚಾನ್ನಾ ಮರೂಲಿಯಸ್). ಇದು ಮಧ್ಯ ಆಫ್ರಿಕ, ಭಾರತ, ದಕ್ಷಿಣ ಚೀನಗಳ ಮೂಲನಿವಾಸಿ; ಮೈಸೂರು ರಾಜ್ಯದ ಎಲ್ಲ ಕೆರೆಗಳಲ್ಲೂ ಸಾಮಾನ್ಯವಾಗಿ ಸಿಕ್ಕುತ್ತದೆ. ಆಹಾರಪದಾರ್ಥವಾಗಿ ಉಪಯೋಗ ಉಂಟು.

ಬೆಳವಣಿಗೆ ನಿಧಾನ. ಸಾಮಾನ್ಯವಾಗಿ ೧೨೦ ಸೆಂಮೀ ವರೆಗೂ ಬೆಳೆಯುವುದು. ದೇಹ ಸ್ವಲ್ಪ ದುಂಡಗೆ ನೀಳವಾಗಿ ಬಾಲದ ಭಾಗದಲ್ಲಿ ಕೊಂಚ ಚಪ್ಪಟೆಯಾಗಿದೆ. ಮೈಮೇಲೆ ಸೈಕ್ಲಾಯ್ಡ್ ಅಥವಾ ಟೀನಾಯ್ಡ್ ಹುರುಪೆಗಳಿವೆ. ದೇಹದುದ್ದಕ್ಕೂ ಮೂರು ಪಂಕ್ತಿಗಳಲ್ಲಿ ಜೋಡಣೆಗೊಂಡಿರುವ ದೊಡ್ಡ ಮಚ್ಚೆಗಳಿವೆ. ಉದರಭಾಗದ ಎರಡನೆಯ ಜೊತೆ ಈಜುರೆಕ್ಕೆಗಳು ಕೊಂಚ ಮುಂದಕ್ಕಿವೆ. ಮಿಕ್ಕ ಹಾವಿನತಲೆ ಮೀನುಗಳಲ್ಲಿರುವಂತೆ ಇದರಲ್ಲಿಯೂ ಗಾಳಿಯನ್ನು ಸೇವಿಸಲು ಕಿವಿರುಕೋಣೆಯಲ್ಲಿ ಸಹಕಾರಿ ಶ್ವಾಸಾಂಗಗಳಿವೆ. ಇವು ಇರುವುದರಿಂದಲೇ ಈ ಜಾತಿಯ ಮೀನುಗಳು ನೀರಿನ ಹೊರಗೂ ಹೆಚ್ಚುಹೊತ್ತು ಬದುಕಬಲ್ಲವು. ಈ ಮೀನಿನ ಆಹಾರ ಸಾಧಾರಣವಾಗಿ ಇತರ ಸಣ್ಣ ಮೀನುಗಳು ಮತ್ತು ನೀರಿನಲ್ಲಿ ವಾಸಿಸುವ ಕೀಟಗಳು.

ಗಂಡು ಮತ್ತು ಹೆಣ್ಣುಮೀನುಗಳಿಗೆ ಬಾಹ್ಯರೂಪದಲ್ಲಿಯಾಗಲಿ ಬಣ್ಣದಲ್ಲಾಗಲಿ ವ್ಯತ್ಯಾಸವಿಲ್ಲ. ನೀರಿನಲ್ಲಿನ ಜೊಂಡಿನ ಮಧ್ಯೆ ಹೆಣ್ಣುಮೀನು ಮೊಟ್ಟೆಯಿಡುತ್ತದೆ. ಮೊಟ್ಟೆಯಿಡಲು ಹೆಣ್ಣಿಗೆ ಗಂಡುಮೀನು ಜೊಂಡಿನ ಮಧ್ಯೆ ಸ್ಥಳ ಮಾಡಿಕೊಡುವುದಲ್ಲದೆ ಮೊಟ್ಟೆಯೊಡೆದು ಮರಿಗಳು ಹೊರಬರುವ ತನಕ ಮೊಟ್ಟೆಗಳ ರಕ್ಷಣೆಯನ್ನು ವಹಿಸಿಕೊಳ್ಳುವುದೂ ಉಂಟು.

(ಎನ್.ವಿ.ಎ.)

# ಕ

**ಕಂಕೋಶ ಹುಳು:** ಒರೆತೂರಿಸಿದ (ಇನ್‌ವೆಜಿನೇಟೆಡ್) ಒಂಟಿ ಸ್ಕಾಲೆಕ್ಸ್ ಅನ್ನೂ, ಕೋಶಕವಚವನ್ನೂ (ಸಿಸ್ಟ್) ಹೊಂದಿರುವ ಲಾಡಿಹುಳುವಿನ ಅಂಡಾಕಾರದ ಲಾರ್ವ ರೂಪ (ಬ್ಲಾಡರ್ ವರ್ಮ್). ಹೋಳಂತಿರುವ ಕೋಶಕವಚ ಕಂಕೋಶವನ್ನು ಹೋಲುವುದರಿಂದ ಈ ಹೆಸರಾಗಿದೆ. ಸಿಸ್ಟಿಸರ್ಕಸ್ ಎಂದೂ ಕರೆಯುವರು. ಕಂಕೋಶಹುಳುವಾಗುವುದು ಲಾಡಿಹುಳುಗಳ ಒಂದು ವಿಶೇಷ ಲಕ್ಷಣ. ಹಂದಿಗಳ ಮತ್ತು ದನಗಳ ಮಾಂಸಗಳಲ್ಲಿ ಕಂಕೋಶಹುಳುವಿನ ಸೋಂಕಾಗುವುದು ಸಾಮಾನ್ಯ. ಹಂದಿಯಲ್ಲಿನ ಈ ಸೋಂಕು ಮಾನವನಿಗೂ ಹತ್ತಬಹುದು. ಯಾವ ಅಂಗದಲ್ಲಿ ನೆಲೆಸಿರುವುದೋ ಅದಕ್ಕೆ ತಕ್ಕ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮಿದುಳಲ್ಲಿ ನೆಲೆಸಿತೆಂದರೆ ಮೊಲ್ಲಾಗರದ ಸೆಳವುಗಳು ಕಾಣಿಸಿಕೊಳ್ಳಬಹುದು. (ನೋಡಿ: ಲಾಡಿಹುಳು)



ಕಂಕೋಶ ಹುಳು

***

**ಕಂಕೋಶ**: ಮೂತ್ರಪಿಂಡಗಳಿಂದ ಮೂತ್ರನಾಳಗಳ (ಯುರೇಟರ್ಸ್) ಮೂಲಕ ಕೆಳಗೆ ಹರಿದು ಬರುತ್ತಿರುವ ಮೂತ್ರವನ್ನು ಕೆಲಕಾಲ ಕೂಡಿಟ್ಟುಕೊಳ್ಳುವ ಸ್ನಾಯುಗಳಿಂದಾದ, ಲೋಳೆಪದರ ಒಳವರಿಯಾಗಿರುವ ಕೋಶ (ಬ್ಲಾಡರ್). ಇಲ್ಲಿಂದ ಇಷ್ಟಪಟ್ಟಾಗ ಮೂತ್ರನಾಳದ (ಯೂರಿತ್ರ) ಮೂಲಕ ಮೂತ್ರವನ್ನು ವಿಸರ್ಜಿಸಬಹುದು. ***

**ಕಂಚುಗಾರ ಹಕ್ಕಿ:** ಪಕ್ಷಿವರ್ಗದ ಸಿಕೊನಿಫಾರ್ಮಿಸ್ ಗಣದ ಸಿಕೋನಿಯೀ ಉಪಗಣದ ಸಿಕೊನೈಯಿಡೆ ಕುಟುಂಬಕ್ಕೆ ಸೇರಿದ ಪಕ್ಷಿ (ಸ್ಟಾರ್ಕ್). ನೀಳವಾದ ಕತ್ತು, ಉದ್ದನೆಯ, ದಪ್ಪನಾಗಿ, ನೇರವಾಗಿರುವ ಕೊಕ್ಕು, ಉದ್ದವಾದ ಕಾಲುಗಳಿವೆ. ಪಾದಗಳಲ್ಲಿ ಬಲೆ ಸಂಪೂರ್ಣವಾಗಿಲ್ಲ. ಉಗುರುಗಳು ಚಪ್ಪಟೆಯಾಗಿ, ಸಣ್ಣವಾಗಿವೆ. ಕಾಲನ್ನು ಒರಟಾಗಿರುವ ವಡಿವತ್ತಳೆಯ ಮೇಲೆ ಊರುವುದು. ರೆಕ್ಕೆಗಳು ಅಗಲವಾಗಿಯೂ ಉದ್ದವಾಗಿಯೂ ಇವೆ. ಬಾಲದ ರೆಕ್ಕೆಗಳು ಸಣ್ಣ. ಫರ್ಕುಲ U–ರೀತಿ ಇರುವುದು. ನಾಲಗೆ ಸಣ್ಣ.

ಇವು ಮುಕ್ಕಲು ಸ್ವಭಾವದ ಹಕ್ಕಿಗಳು. ವನ್ಯ ಅಥವಾ ಹುಲ್ಲುಗಾವಲು ಪ್ರದೇಶಗಳಲ್ಲಿ ನೀರಿರುವ ಸ್ಥಳಗಳಲ್ಲಿರುತ್ತವೆ. ಇವುಗಳ ಹಾರಾಟ ಆಕರ್ಷಕವಾಗಿರುವುದು. ಬಲವಾಗಿ, ತ್ವರಿತವಾಗಿ ಆದರೆ ಶಬ್ದ ಮಾಡದೆ ಹಾರುತ್ತವೆ. ಹಾರುವಾಗ ಕತ್ತನ್ನೂ ಕಾಲುಗಳನ್ನೂ ತಮ್ಮ ದೇಹದ ನೇರಕ್ಕೆ ಚಾಚಿ, ಸುತ್ತುಸುತ್ತಾಗಿ ಹಾರಿ, ಬಹಳ ಎತ್ತರಕ್ಕೆ ಏರುತ್ತವೆ. ನೆಲದ ಮೇಲೆ ಸುಲಭವಾಗಿ ನಡೆಯಬಲ್ಲುವು. ವಿಶ್ರಮಿಸುವಾಗ ಅಂಗಾಲನ್ನು ನೆಲದ ಮೇಲೂರುತ್ತವೆ. ಹಗಲಿನಲ್ಲಿ ಶಾಖ ಹೆಚ್ಚಿದ್ದಾಗ ನಿಶ್ಚಲವಾಗಿ ಕೂತಿರುತ್ತವೆ. ಮೀನು, ಸರೀಸೃಪಗಳು, ದ್ವಿಚರಿಗಳು, ಕಠಿಣಚರ್ಮಿಗಳು, ಮಿಡತೆಗಳು ಮತ್ತು ಜೀರುಂಡೆಗಳು ಇವುಗಳ ಆಹಾರ. ಕೆಲವು ವೇಳೆ ಚಿಕ್ಕ ಸ್ತನಿಗಳು ಅಥವಾ ಮೊಟ್ಟೆಗಳು ಮತ್ತು ಸಣ್ಣ ಹಕ್ಕಿಗಳನ್ನೂ ತಿನ್ನುತ್ತವೆ. ಇವನ್ನು ಪಳಗಿಸಿ ಸಾಕಬಹುದು.

ಎತ್ತರವಾದ ಮರಗಳಲ್ಲಿ, ಗುಡ್ಡಗಳಲ್ಲಿ, ಬಂಡೆಗಳ ಸಣ್ಣ ಗವಿಗಳಲ್ಲಿ ಅಥವಾ ಗುಡ್ಡಗಳ ಮೇಲಿನ ಚಪ್ಪಟೆ ಜಾಗಗಳಲ್ಲಿ ಗೂಡುಗಳನ್ನು ಕಟ್ಟುತ್ತವೆ. ಗೂಡನ್ನು ಸಣ್ಣ ಕಡ್ಡಿಗಳಿಂದ ಕಟ್ಟಿ ಅದರ ಮೇಲೆ ಅನೇಕ ವೇಳೆ ಒಂದು ಪದರ ಹುಲ್ಲನ್ನೊ ಎಲೆಗಳನ್ನೊ ಅಥವಾ ಪುಕ್ಕಗಳನ್ನೊ ಹರಡುತ್ತವೆ. ಕೆಲವು ಸಾರಿ ಇವನ್ನು ಹರಡದೆಯೂ ಇರಬಹುದು. ಗೂಡು ಕಟ್ಟಲು ಜೇಡಿಮಣ್ಣನ್ನು ಉಪಯೋಗಿಸುವುದೂ ಉಂಟು. ಋತುಕಾಲದಲ್ಲಿ ಅನೇಕ ಹಕ್ಕಿಗಳು ಒಂದೇ ಕಡೆ ಗುಂಪು ಸೇರುತ್ತವೆ. ಕೆಲವು ಬಗೆಗಳು ಮಾತ್ರ ದೂರದೂರವಾಗಿ ಗೂಡು ಕಟ್ಟುವುದೂ ಉಂಟು. ಒಂದು ಸಲಕ್ಕೆ ೩–೬ ಬಿಳುಪಾದ ಮೊಟ್ಟೆಗಳನ್ನಿಡುತ್ತವೆ. ಗಂಡುಹೆಣ್ಣುಗಳೆರಡೂ ಮೊಟ್ಟೆಗಳಿಗೆ ೪ ವಾರ ಕಾಲ ಕಾವನ್ನು ಕೊಡುವುವು. ತಾಯಿ ಮರಿಗಳಿಗೆ ಗುಟುಕು ಕೊಡುವಾಗ ಗಂಡು ಅವನ್ನು ಕಾಯುವುದು. ಮಿಕ್ಟೀರಿಯ ಸೆನಗಲೆನ್ಸಿಸ್ ಮತ್ತು ಮಿಕ್ಟೀರಿಯ ಇಂಡಿಕ ಪ್ರಭೇದಗಳ ಗಂಡುಪಕ್ಷಿಗಳು



ಕಂಚುಗಾರ ಹಕ್ಕಿ

ತಮ್ಮ ಸಂಗಾತಿಗಳ ಪ್ರೀತಿ ಸಂಪಾದಿಸಲು ಅವುಗಳ ಸುತ್ತ ನೃತ್ಯವನ್ನು ಮಾಡುತ್ತವೆ. ಮಿ.ಇಂಡಿಕ ಗಂಡು ತನ್ನ ರೆಕ್ಕೆಗಳನ್ನು ವಿಸ್ತರಿಸಿ ಅವುಗಳನ್ನು ಬಡಿಯುತ್ತ ತನ್ನ ಸಂಗಾತಿಯನ್ನು ಮುಟ್ಟುವುದು. ಮಿ.ಸೆನಗಲೆನ್ಸಿಸ್ ಕುಪ್ಪಳಿಸುತ್ತ ತಲೆಯನ್ನು ಬಾಗಿಸಿ ನಾಟ್ಯಮಾಡುತ್ತದೆ.

(ಎನ್.ವಿ.ಎ.)

**ಕಂಟಕಗಳು (ಸ್ಪೈನ್ಸ್):** ಕಂಟಕಚರ್ಮಿಗಳು, ಕೆಲವು ಮೀನುಗಳು ಮತ್ತು ಕೆಲವು ಸ್ತನಿಗಳ ದೇಹದ ಮೇಲಿನ ಮುಳ್ಳುಗಳು. ಮಾದರಿ ಕಂಟಕವು ನೇರವಾಗಿಯೂ, ಅಡ್ಡ ಕೊಯ್ತದಲ್ಲಿ ವೃತ್ತಾಕಾರವಾಗಿಯೂ, ಕ್ರಮೇಣ ತುದಿಯು ಚೂಪಾಗಿಯೂ ಅಥವಾ ಮೊಂಡವಾಗಿಯೂ ಇರುತ್ತದೆ. ಕಂಟಕಚರ್ಮಿಗಳ ಆಸ್ಟಿರಾಯ್ಡಿಯ ವರ್ಗದ ಪ್ರಾಣಿಗಳ ದೇಹದ ಚಾಚಿಕೆಗಳು ಒಂದೇ ತೆರನಾಗಿದ್ದು, ಮಣಿಯುವಂತಹುದಾಗಿದ್ದು (ಫ್ಲೆಕ್ಸಿಬಲ್) ದೇಹದ ಕಿರ್ಮೂಳೆಗಳ ಮೇಲೆ ಆಧಾರಿತವಾಗಿವೆ. ಅಕ್ಯಾಂಥಾಸ್ಟರ್ ಜಾತಿಯ ನಕ್ಷತ್ರ ಮೀನುಗಳಲ್ಲಿ ನಿಜವಾದ ಮುಳ್ಳುಗಳಿರುತ್ತವೆ. ಲೂಡಿ ಗುಂಪಿನ ಪ್ರಾಣಿಗಳ ಓಲಾಡುವ ಮುಳ್ಳುಗಳು ಉಸಿರಾಟಕ್ಕಾಗಿ ನೀರೋಟವನ್ನು ಸೃಷ್ಟಿಸುವುವು. ಎಕೈನಾಯ್ಡಿಯ ವರ್ಗದ ಪ್ರಾಣಿಗಳ ಕಂಟಕಗಳು ವಿಶಿಷ್ಟವಾಗಿವೆ. ಸಮುದ್ರ ಚಿಳ್ಳೆಯ (ಸೀ ಅರ್ಚಿನ್) ಬಾಯಿಯ ಹಾಗೂ ಬಾಯೆದುರಿನ ಕಂಟಕಗಳು ಉಳಿದ ಕಂಟಕಗಳಿಗಿಂತ ಚಿಕ್ಕವು. ಕೆಲವು ಡೈಯಾಡೆಮಾಟಿಡ್ ಪ್ರಾಣಿಗಳ ಕಂಟಕಗಳ ಉದ್ದ ಒಂದು ಅಡಿ. ಸ್ಪಾಟಾಂಗಾಯಿಡ್ ಗುಂಪಿನ ಪ್ರಾಣಿಗಳ ದೇಹದ ಸುತ್ತಲೂ ಕಂಟಕಗಳು ಒತ್ತೊತ್ತಾಗಿ ಇರುತ್ತವೆ. ಈ ಗುಂಪಿನ ಪ್ರಾಣಿಗಳ ಕಂಟಕಗಳು ಬಾಗಿಕೊಂಡಿದ್ದು ದೇಹಕ್ಕೆ ಸಮಾನಾಂತರವಾಗಿ ಬಾಚಣಿಗೆಯಂತಿರುತ್ತದೆ. ಇದು ನೆಲವನ್ನು ತೋಡಲು ಉಪಯುಕ್ತ. ಸ್ಪಾಟಂಗಾಯಿಡ್ ಗುಂಪಿನ ಪ್ರಾಣಿಗಳಿಗೆ ಸೀಮಿತವಾದ ಕ್ಲಾವ್ಯೂಲ್‌ಗಳೆಂಬ ಸೂಕ್ಷ್ಮವಾದ ಕಂಟಕಗಳು ಆಕಾರದಲ್ಲಿ ಟೆನಿಸ್ ರಾಕೆಟ್‌ನಂತಿದ್ದು ವಿಶಿಷ್ಟವಾಗಿವೆ. ಇವುಗಳು ಅಸಂಖ್ಯ ಬಾಸೆಗಳಿಂದ ಆವೃತ್ತವಾಗಿರುತ್ತವೆ. ನೀರೋಟವನ್ನು ಸೃಷ್ಟಿಸುವುದು ಹಾಗೂ ಚಿಪ್ಪಿನೊಳಗೆ ಸೇರಿಕೊಂಡಿರುವ ಮರಳಿನ ಕಣಗಳನ್ನು ತೆಗೆದು ಹೊರಹಾಕುವುದು ಇವುಗಳ ಕೆಲಸ.

ಕಂಟಕಚರ್ಮಿಗಳ ಕಂಟಕಗಳನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು.

1. ಪ್ರಾಥಮಿಕ ಕಂಟಕಗಳು ಉದ್ದವಾಗಿರುತ್ತವೆ.

2. ದ್ವಿತೀಯ ಕಂಟಕಗಳು ಚಿಕ್ಕದಾಗಿರುತ್ತವೆ.

3. ಟರ್ಷಿಯರಿ ಅಥವಾ ಸಾವೆತೆರ ಕಂಟಕಗಳು ಅತಿ ಚಿಕ್ಕದಾಗಿರುತ್ತವೆ.

ಕಂಟಕಗಳು ಪ್ರಾಣಿಯ ದೇಹದ ಮೇಲಿನ ಕಿಗ್ಗಂಟುಗಳ ಮೇಲೆ ಒರಳುಗುಂಡಿನ ರೀತಿಯಲ್ಲಿರುವುವು. ನಾನಾ ರೀತಿಯ ಆಕಾರಗಳಲ್ಲಿಯೂ, ಗಾತ್ರಗಳಲ್ಲಿಯೂ ಇರುತ್ತವೆ. ಎಕೈನೋತುರಾಯ್ಡಿಯ ಕುಟುಂಬದ ಪ್ರಾಣಿಗಳಲ್ಲಿ ವಿಷಪೂರಿತವಾದ ಕಂಟಕಗಳಿರುತ್ತವೆ.

ಕೆಲವು ಮೀನುಗಳಲ್ಲೂ ಮುಳ್ಳುಗಳಿರುವುವು. ಕೆಲವು ಮೀನುಗಳ ಟೀನಾಯಿಡ್ ಹುರುಪೆಗಳಿಗೆ ನೇರವಾಗಿ ಚಾಚಿದ ಮುಳ್ಳು ಮತ್ತು ಕುಸುರಿದೊಗರುಗಳಿರುತ್ತವೆ. ಉಷ್ಣವಲಯದ ಗೋಲಮೀನು ಮತ್ತು ಮುಳ್ಳು ಮೀನುಗಳಲ್ಲಿ (ಡಿಯೋಡಾನ್) ಚೂಪಾದ ಉದ್ದ ಮುಳ್ಳುಗಳಿರುತ್ತವೆ. ಉಬ್ಬು ಮೀನುಗಳಲ್ಲಿ ಮುಳ್ಳುಗಳು ರಕ್ಷಣಾ ಸಾಧನಗಳು. ಇವು ತಮ್ಮ ದೇಹವನ್ನು ಗಾಳಿಯಿಂದ ತುಂಬಿಕೊಂಡಾಗ ಮುಳ್ಳುಗಳು ಹೊರಕ್ಕೆ ಚಾಚುತ್ತವೆ. ಟೀಲಿಯಾಸ್ಟೈ ಮೀನುಗಳ ಕಿವಿರು ಕವಚಗಳು ಮತ್ತು ಬೆನ್ನಿನ ಈಜುರೆಕ್ಕೆಗಳ ಮೇಲೆ ಚೂಪಾದ ರಕ್ಷಣಾ ಮುಳ್ಳುಗಳಿರುತ್ತವೆ. ಕೆಲವೊಮ್ಮೆ ಡರ್ಮಲ್ ಗ್ರಂಥಿಗಳ ಆಧಾರದಿಂದ ಮುಳ್ಳುಗಳು ವಿಷಪೂರಿತವಾಗಿರುತ್ತವೆ. ಕೆಲವು ಮೀಸೆ ಮೀನುಗಳು. ಚೇಳು ಮೀನುಗಳು ಮತ್ತು ಟೋಡ್ ಮೀನುಗಳಲ್ಲಿಯೂ ವಿಷ ಮುಳ್ಳುಗಳಿವೆ.

ಕೆಲವು ಸ್ತನಿಗಳ ದೇಹದಲ್ಲಿ ಮುಳ್ಳುಗಳಿರುತ್ತವೆ. ಇರುವೆ ಭಕ್ಷಕಗಳ ದೇಹದ ಮೇಲ್ಭಾಗ ಒರಟಾದ ಕೂದಲುಗಳಿಂದ ಕೂಡಿದ್ದು ಇವುಗಳ ನಡುವೆ ಚೂಪಾದ ಮುಳ್ಳುಗಳಿರುತ್ತವೆ. ಮುಳ್ಳುಗಳು ಕೆಳಗಡೆ ಹಳದಿಯಾಗಿಯೂ ತುದಿಯಲ್ಲಿ ಕಪ್ಪಾಗಿಯೂ ಇರುತ್ತವೆ.

ಭಾರತದಲ್ಲಿ ಮೈದಾನ ಪ್ರದೇಶಗಳಲ್ಲಿ ವಾಸಿಸುವ ಹೆಡ್ಜ್‌ಹಾಗ್ ಪ್ಯಾರಾಎಕೈನಸ್ ಮಾಡಿವೆಂಟ್ರಿಸ್‌ನ ಹಾಗೂ ಮುಳ್ಳುಹಂದಿಯ ಬೆನ್ನಿನಲ್ಲಿ ಮುಳ್ಳುಗಳಿರುತ್ತವೆ. ಇವು ಮಾರ್ಪಟ್ಟ ಕೂದಲುಗಳು. ಪ್ರಾಣಿ ಬೆಚ್ಚಿದಾಗ ಸುರುಳಿ ಸುತ್ತಿಕೊಂಡು ಮುಳ್ಳಿನ ಚೆಂಡಿನಂತೆ ಕಾಣುತ್ತದೆ. ಹಿಸ್ಟ್ರಿಕೋಮಾರ್ಫ ಉಪಗಣ ಎಕಿಮ್ಯೆಯಿಡೆ ಕುಟುಂಬಕ್ಕೆ ಸೇರಿದ ಮೂಷಿಕಗಳ ಶರೀರದ ಮೇಲೆ ಬಿರುಗೂದಲುಗಳು, ತುಪ್ಪಟ ಹಾಗೂ ಮುಳ್ಳುಗಳಿವೆ. ಸಾಮಾನ್ಯವಾಗಿ ಕಂಟಕಗಳು ಕ್ಯಾಲ್ಸಿಯಂ ಕಾರ್ಬೊನೇಟ್‌ನಿಂದ ಕೂಡಿ ಕ್ಯಾಲ್ಸೈಟ್ ಮತ್ತು ಜೈವಿಕ ವಸ್ತುಗಳ ಮಿಶ್ರಣದಿಂದಾಗಿವೆ. ***

**ಕಂಬಳಿ ಹುಳು:** ಲೆಪಿಡಾಪ್ಟಿರ ವರ್ಗದ ಪತಂಗ, ಚಿಟ್ಟೆಗಳ ಮರಿ (ಲಾರ್ವ ಸ್ಥಿತಿ). ಕ್ಯಾಟರ್‌ಪಿಲ್ಲರ್ ಹುಳುವಿನಂತೆ ಇರುತ್ತದೆ. ರೂಪದಲ್ಲಿ ಇದಕ್ಕೂ ಚಿಟ್ಟೆಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಶರೀರದ ಮೇಲೆ, ಬಿರುಗೂದಲು ಗ್ರಂಥಿಗಳು ಮತ್ತು ಮುಳ್ಳುಗಳಂತ ಕೂದಲುಗಳು ಇರುತ್ತವೆ. ಕೆಲವಕ್ಕೆ ಮೈ ತುಂಬ ಕರಡಿಯಂತೆ ಕಪ್ಪು ಕೂದಲುಗಳಿರುವುದರಿಂದ ಕಂಬಳಿ ಹುಳುಗಳೆನ್ನುತ್ತಾರೆ. ಕೆಲವಲ್ಲಿ, ಅದರಲ್ಲೂ ಸಸ್ಯದ ಅಂಗಾಂಶವನ್ನು ಕೊರೆಯುವುವುಗಳ ಮೈ ಮೃದು.

ಮೊಟ್ಟೆಯಿಂದ ಬೆಳೆದು, ಹೊರ ಬಂದ ಕಂಬಳಿ ಹುಳು ಬಹಳ ಸಣ್ಣ;



ಬಕಾಸುರನಂತೆ ತಿಂದು ಬೇಗ ಬೆಳೆಯುತ್ತದೆ. ಪೂರ್ತಿ ಬೆಳೆಯುವ ಮುನ್ನ ಹಲವು ಸಲ ಪೊರೆ ಬಿಡುತ್ತದೆ. ಪ್ರಾಯದ ಕೀಟವಾಗುವ ಮೊದಲು ಪ್ಯೂಪ ಅವಸ್ಥೆ ತಾಳುತ್ತದೆ. ಕ್ಯಾಟರ್‌ಪಿಲ್ಲರ್ ಹಂತದಲ್ಲಿ ರೆಕ್ಕೆಗಳ ಅಂಕುರಗಳಿರುವುದಿಲ್ಲ. ಬಹುತೇಕ ಸಸ್ಯಾಹಾರಿಗಳು. ತಲೆ ಚೆನ್ನಾಗಿ ಬೆಳೆದಿರುತ್ತದೆ. ಎದೆ ಖಂಡಗಳು ಮೂರು. ಹೊಟ್ಟೆ ಖಂಡಗಳು ಹತ್ತು. 9 ಶ್ವಾಸರಂಧ್ರಗಳಿವೆ. ಒಂದು ಮುನ್ನೆದೆಯ ಪಕ್ಕದಲ್ಲಿ, ಉಳಿದ 8 ಹೊಟ್ಟೆ ಖಂಡಗಳ ಪಕ್ಕಗಳಲ್ಲಿವೆ. ಪುಟ್ಟ ಕುಡಿ ಮೀಸೆಗಳು ಕಾಣುವುದಿಲ್ಲ. ಕೂಡುಗಣ್ಣುಗಳಿಗೆ ಬದಲಾಗಿ ಆಸೆಲ್ಲೈ ಎನ್ನುವ ಸರಳಕಣ್ಣುಗಳಿವೆ. ತಲೆಯ ಮೇಲೆ ಮಧ್ಯ ತಲೆಯ ಸೇರುವೆ (ಸೂಚರ್) ಚೆನ್ನಾಗಿ ಕಾಣುತ್ತದೆ. ಮುಖದ ಭಾಗ, ಒಂದು ಕಿರಿದಾದ, ಓರೆ ಫಲಕ; ಇದನ್ನು ಅಡ್‌ಫ್ರಾಂಟಲ್ಸ್ ಎನ್ನುತ್ತಾರೆ. ಮೇಲ್ತುಟಿ ಮತ್ತು ಅದರ ಮೇಲ್ಭಾಗ ಕ್ಲೈಪಿಯಸ್ ಚೆನ್ನಾಗಿ ಕಾಣುತ್ತವೆ. ದವಡೆಗಳು (ಮಾಂಡಿಬ್‌ಲ್ಸ್)



ಲಾರ್ವ

ಅಗಿಯಲು ಗಟ್ಟಿಯಾಗಿವೆ. ಕೆಳದವಡೆಯಲ್ಲಿ (ಮಾಕ್ಸಿಲ್ಲಾ) ಕಾರ್ಡೊ ಮತ್ತು ಸ್ಟೈಪ್‌ಸ್ ಎಂಬ ಎರಡು ಭಾಗಗಳಿವೆ. ಸಾಮಾನ್ಯವಾಗಿ ಕೆಳದವಡೆಯಲ್ಲಿ ಹಾಲೆ (ಲೋಬ್) ಯೊಂದಿದೆ. ಪಾಲ್ಪೈ (ಸ್ಪರ್ಶಾಂಗ) ಯಲ್ಲಿ 2–3 ಖಂಡಗಳಿವೆ. ಕೆಳತುಟಿ ತಲೆಯ ಕೆಳಗೆ, ಕೆಳದವಡೆಗಳ ಮಧ್ಯೆ ಇದೆ. ಗಲ್ಲ (ಮೆಂಟಮ್) ದೊಡ್ಡದು. ಅದರ ಕೆಳ ಭಾಗ ಒಂದು ಜೊತೆ ಕೋನಾಕಾರದ ಪೆಡಸುಗಳಾಗಿ ವಿಭಾಗವಾಗಿದೆ. ಕೊನೆಯಲ್ಲಿ ಗಲ್ಲದ ಮುಂಭಾಗ (ಪ್ರಿಮೆಂಟಮ್) ದಲ್ಲಿ, ಮಧ್ಯೆ ತಂತುಕವಿದೆ. ಅದರಿಂದ, ಲಾಲಾಗ್ರಂಥಿಗಳಿಂದ ಅಥವಾ ರೇಷ್ಮೆ ಗ್ರಂಥಿಗಳಿಂದ ಸ್ರವಿಸಿದ ರೇಷ್ಮೆ ದಾರ ಬರುತ್ತದೆ.

ತಲೆಯ ಹಿಂಭಾಗದಲ್ಲಿ 3 ಖಂಡಗಳುಳ್ಳ ಎದೆ (ತೊರಾಕ್ಸ್) ಇದೆ. ಪ್ರತಿ ಖಂಡದಿಂದ ಒಂದು ಜೊತೆ ಕಾಲುಗಳು ಬರುತ್ತವೆ. ಪ್ರತಿ ಕಾಲು 5 – ಖಂಡಗಳಿಂದಾಗಿದೆ. ತುದಿಯಲ್ಲಿ ಒಂದು ಬಾಗಿದ ಮೊನೆಯುಗುರು. ಅನೇಕ ಕ್ಯಾಟರ್‌ಪಿಲ್ಲರ್‌ಗಳಲ್ಲಿ 5 ಹೊಟ್ಟೆ ಖಂಡಗಳಲ್ಲಿ (3 ರಿಂದ 6 ಮತ್ತು 10) ಒಂದೊಂದು ಜೊತೆ, ಮೋಟಾದ, ವರ್ತುಲಾಕಾರದ ಹುಸಿ ಕಾಲು (ಪ್ರೊಲೆಗ್ಸ್)ಗಳಿವೆ. ಅವುಗಳ ತುದಿಯಲ್ಲಿ ಸುತ್ತು ಅಥವ ಅರ್ಧ ಸುತ್ತು ಮುಳ್ಳುಗಳಂಥ ಕ್ರೋಷೆಟ್‌ಗಳಿದ್ದು, ಅವು ಕೀಟ ಹರಿದಾಡಲು ಸಹಾಯಕರ. ಕೆಲವು ಜಾತಿಯವುಗಳಲ್ಲಿ ಈ ಹುಸಿ ಕಾಲುಗಳ ಸಂಖ್ಯೆ ಕಡಿಮೆ.

ಹೈಮೆನಾಪ್ಟಿರ ಗಣದಲ್ಲಿನ ಟೆಂತ್ರೆಡಿನಿಡಿಯ ಮರಿಗಳು ಕ್ಯಾಟರ್‌ಪಿಲ್ಲರ್‌ಗಳನ್ನು ಹೋಲುತ್ತವೆ. ಇವಕ್ಕೂ ತಲೆ, ಎದೆ, ಹೊಟ್ಟೆ, ಹುಸಿಕಾಲುಗಳು ಇವೆ. ಚಟುವಟಿಕೆ, ರೂಪದಲ್ಲಿ ಚಿಟ್ಟೆಗೆ ಹೋಲಿಸಿದರೆ ವ್ಯತ್ಯಾಸವಿದೆ. ಲೆಪಿಡಾಪ್ಟಿರದ ಕ್ಯಾಟರ್‌ಪಿಲ್ಲರ್‌ಗಳಲ್ಲಿ 5 ಜೊತೆಗಳಿಗಿಂತ ಹೆಚ್ಚಾಗಿರುವುದಿಲ್ಲ. ಅಡ್‌ಫ್ರಾಂಟಲ್‌ಗಳಿಲ್ಲ. ಸರಳಕಣ್ಣುಗಳಿದ್ದರೆ ಒಂದೇ ಜೊತೆ. ಲೆಪಿಡಾಪ್ಟಿರದ ಕ್ಯಾಟರ್‌ಪಿಲ್ಲರ್‌ಗಳಲ್ಲಿ ಸರಳಗಣ್ಣುಗಳು ಒಂದು ಜೊತೆಗಿಂತ ಹೆಚ್ಚು. ಕೆಲವುಗಳಲ್ಲಿ ಇಲ್ಲ. ಟೆಂತ್ರಿಡಿನಿಡಿ ಕ್ಯಾಟರ್‌ಪಿಲ್ಲರ್‌ಗಳನ್ನು ಗರಗಸದ ಹುಳು ಎನ್ನುತ್ತಾರೆ. ಕ್ಯಾಟರ್‌ಪಿಲ್ಲರ್‌ಗಳು ಪ್ರೌಢಕೀಟ (ಚಿಟ್ಟೆ–ಪತಂಗ) ಗಳಾಗಿ ಬೆಳೆಯುವ ಪ್ರಕ್ರಿಯೆಯನ್ನು ಮೆಟಮಾರ್ಫಸಿಸ್ (ರೂಪಾಂತರ) ಎನ್ನುತ್ತಾರೆ. ***

**ಕಗ್ಗುಲ:** ಪಾರಿವಾಳ ಮತ್ತು ಕಪೋತಗಳನ್ನೊಳಗೊಂಡ ಕೊಲಂಬಿಯಿಡೆ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಹಕ್ಕಿ. ವೈಜ್ಞಾನಿಕ ನಾಮ ಟ್ರೇರಾನ್. ಹಸಿರು ಪಾರಿವಾಳವೆಂದೂ ಹೆಸರುಂಟು. ಭಾರತದಿಂದ ಹಿಡಿದು ಮಲೇಷಿಯ, ಫಿಲಿಪೈನ್ಸ್ ದ್ವೀಪಗಳವರೆಗೂ ಹರಡಿದೆ. ದೇಹರಚನೆ, ಗಾತ್ರ, ಆಕಾರ, ಪಾರಿವಾಳಗಳಂತೆಯೇ. ದೇಹದ ಮೇಲೆ ಹಳದಿಮಿಶ್ರಣವಾದ ಹಸಿರು ತುಪ್ಪುಳ ಇರುವುದು ಒಂದು ವಿಶೇಷ ಗುಣ. ಬಾಲ ಭಾಗಶಃ ದುಂಡಾಗಿರಬಹುದು, ಬೆಣೆಯ ಆಕಾರದಲ್ಲಿರಬಹುದು ಅಥವಾ ಚೂಪಾಗಿರಬಹುದು. ಟಾರ್ಸಸ್ ಎಲುಬಿರುವ ಕಾಲಿನ ಭಾಗ ಮಧ್ಯದ ಬೆರಳಿಗಿಂತ ಚಿಕ್ಕದು ಮತ್ತು ಬಲಯುತವಾದುದು. ಕೊಕ್ಕು ಚಿಕ್ಕದು ಮತ್ತು ತೆಳು. ಅದರ ಬುಡದ ಭಾಗದಲ್ಲಿ ಪಾರಿವಾಳಗಳಿಗಿರುವಂತೆ ಒಂದು ದಪ್ಪನಾದ ಮೃದು ಚರ್ಮದ ದಿಂಡಿದೆ. ಮೇತೆ(ಕ್ರಾಪ್) ದೊಡ್ಡದು. ಅದರಲ್ಲಿ ಎಳೆಯ ಮರಿಗಳಿಗೆ ಉಣಿಸಲು ಹಾಲು ಉತ್ಪತ್ತಿಯಾಗುತ್ತದೆ. ಅಂಗಾಲು ಮಾಂಸಮಯವಾಗಿಯೂ ಮೆತ್ತಗೂ ಇದ್ದು, ಬೆರಳುಗಳಿಗಿಂತ ವಿಸ್ತಾರವಾಗಿದೆ. ಹೀಗಿರುವುದು ಮರಗಳ ಮೇಲಿನ ವಾಸಕ್ಕೆ ಸೂಕ್ತವಾಗಿದೆ. ಕಗ್ಗುಲ ಮರಗಳ ಮೇಲೆ ವಾಸಿಸಿದರೂ ಕೆಲವು ವೇಳೆ ಮಣ್ಣಿನಲ್ಲಿರುವ ಉಪ್ಪನ್ನು ತಿನ್ನುವುದಕ್ಕೆ ಕೆಳಗಿಳಿಯುತ್ತದೆ. ಗುಂಪಿನಲ್ಲಿ ವಾಸಿಸುತ್ತದೆ. ಅಪರೂಪಕ್ಕೆ ಒಂಟಿಯಾಗಿರುವುದೂ ಉಂಟು. ಒಂದೊಂದು ಗುಂಪಿನಲ್ಲಿ 10 ರಿಂದ 30 ಹಕ್ಕಿಗಳಿರಬಹುದು. ಮೈಬಣ್ಣ ಗಿಡದ ಹಸಿರುಬಣ್ಣದೊಡನೆ ಐಕ್ಯವಾಗುವುದರಿಂದ ಮರದ ಮೇಲೆ ಅವನ್ನು ಗುರುತಿಸುವುದು ಕಷ್ಟ. ಅಕಸ್ಮಾತಾಗಿ ಗುಂಡಿನ ಶಬ್ದವಾದಾಗ, ಹಕ್ಕಿಗಳೆಲ್ಲ ಒಂದೇ ಗುಂಪಾಗಿ ಜೋರಾಗಿ ಹಾರಿ ಮತ್ತೆ ಅದೇ ಮರದ ಮೇಲೆ ಬಂದು ಕೂಡುತ್ತವೆ. ಇವುಗಳ ಆಹಾರ ವಿವಿಧ ಬಗೆಯ ಹಣ್ಣುಗಳು. ದಪ್ಪ ದಪ್ಪ ಹಣ್ಣುಗಳನ್ನು ಇಡಿಯಾಗಿ ನುಂಗುವುದು ವಾಡಿಕೆ. ಗಂಡುಹೆಣ್ಣುಗಳೆರಡೂ ಸೇರಿ ಮರಗಳ ತುದಿಯ ರೆಂಬೆಗಳ ಮೇಲೆ ಸಣ್ಣ ಸಣ್ಣ ಕಡ್ಡಿಗಳನ್ನು ಜೋಡಿಸಿ ಒರಟಾದ ಗೂಡುಗಳನ್ನು ಕಟ್ಟುತ್ತವೆ. ಒಂದೊಂದು

ಗೂಡಿನಲ್ಲಿ ಎರಡು ಬಿಳಿಯ ಮೊಟ್ಟೆಗಳಿರುತ್ತವೆ. ಗಂಡು, ಹೆಣ್ಣು ಎರಡೂ ಸರದಿಯ ಮೇರೆಗೆ ಕಾವು ಕೊಡುತ್ತವೆ. ಅಲ್ಲದೆ ಮರಿಗಳು ದೊಡ್ಡವಾಗುವವರೆಗೂ ಗುಟುಕು ಕೊಟ್ಟು ಸಲಹುತ್ತವೆ. ಕೆಲವು ಪ್ರಭೇದಗಳಲ್ಲಿ ಕಾವು ಕೊಡುವ ಕಾಲ 12–14 ದಿನಗಳಾದರೆ ಮತ್ತೆ ಕೆಲವಲ್ಲಿ 18–19 ದಿನಗಳು.

ಕಗ್ಗುಲಗಳಲ್ಲಿ ಹಲವು ಪ್ರಭೇದಗಳಿವೆ. ಒಂದೊಂದರಲ್ಲೂ ಒಂದಕ್ಕಿಂತಲೂ ಹೆಚ್ಚಾದ ಉಪಪ್ರಭೇದಗಳಿವೆ. ಉತ್ತರ ಭಾರತದ ಈಶಾನ್ಯ ಭಾಗದಲ್ಲಿ ಚೂಪುಬಾಲದ ಕಗ್ಗುಲ (ಟ್ರೇ. ಅಪಿಕ್ಯಾಡ), ಬೆಣೆಬಾಲದ ಕಗ್ಗುಲ (ಟ್ರೇ.ಸ್ಪೀನ್ಯೂರ), ದಪ್ಪಕೊಕ್ಕಿನ ಕಗ್ಗುಲ (ಟ್ರೇ.ಕರ್ವಿರಾಸ್ಟ್ರ), ಬೂದುತಲೆಯ ಕಗ್ಗುಲ (ಟ್ರೇ.ಪಾಂಪಡೋರ), ಹೊಂಬಣ್ಣದ ಎದೆಯ ಕಗ್ಗುಲ (ಟ್ರೇ.ಬೈಸಿಂಕ್ಟ), ತೆಂಕಣದ ಕಗ್ಗುಲ (ಟ್ರೇ.ಫೀನಿಕಾಪ್ಟೆರ) ಮೊದಲಾದುವುಗಳಿವೆ.

ಇವುಗಳ ಪೈಕಿ ದಕ್ಷಿಣ ಭಾರತದಲ್ಲಿ, ಅದರಲ್ಲೂ ಮುಖ್ಯವಾಗಿ ಪಶ್ಚಿಮಘಟ್ಟದ ಕಾಡುಗಳಲ್ಲಿ ಒಂದು ಬಗೆಯ ಬೂದುತಲೆಯ ಕಗ್ಗುಲ, ಹೊಂಬಣ್ಣದ ಎದೆಯ ಕಗ್ಗುಲ ಕಂಡುಬರುತ್ತವೆ.

***

**ಕಜ್ಜಿ ಉಣ್ಣಿ:** ಅರ್ಯಾಕ್ನಿಡ ವರ್ಗದ ಆಕರೈನ ಗಣಕ್ಕೆ ಸೇರಿದ ಸಾರ್ಕಾಪ್ಟಿಡೆ ಕುಟುಂಬದ ಸದಸ್ಯ. ಪಕ್ಷಿಗಳ ಮತ್ತು ಸ್ತನಿಗಳ ಶರೀರದ ಮೇಲೆ ಪರತಂತ್ರ ಜೀವಿಗಳು. ಸಾರ್ಕಾಪ್ಟೀಸ್ ಸ್ಕೇಬಿಯೈ ಪ್ರಭೇದದ ಉಣ್ಣಿ ಮನುಷ್ಯ, ಸಾಕು ಪ್ರಾಣಿಗಳು ಮತ್ತು ಕಾಡು ಮೃಗಗಳಲ್ಲಿ ಕಜ್ಜಿರೋಗ ಉಂಟುಮಾಡುತ್ತವೆ. ಸಾರ್ಕಾಪ್ಟೀಸ್ ಜಾತಿಯಲ್ಲಿ ಅನೇಕ ಪ್ರಭೇದದ ಉಣ್ಣಿಗಳಿವೆ. ಇವು ವಿವಿಧ ಪ್ರಾಣಿ ಪ್ರಭೇದಗಳ ಚರ್ಮದ ಹೊರಪದರದಲ್ಲಿ ಹುದುಗಿಕೊಂಡು ವಾಸಿಸುತ್ತವೆ. ಇವುಗಳ ಬಣ್ಣ ಬಿಳುಪು.




ಕಜ್ಜಿ ಉಣ್ಣಿಗಳು : ಅ. ಹೆಣ್ಣು, ಆ. ಗಂಡು (ಅಡಿಯ ನೋಟ)

ಉಣ್ಣಿಯ ದೇಹ ಆಮೆಯಾಕಾರದಲ್ಲಿದೆ. ಉದರಭಾಗ ಚಪ್ಪಟೆಯಾಗಿದ್ದು, ಬೆನ್ನು ಉಬ್ಬಿಕೊಂಡಿದೆ. ಬೆನ್ನಿನ ಮೇಲೆ ಸೂಕ್ಷ್ಮವಾದ ಸುಕ್ಕುಗಳಿವೆ. ಮೈಮೇಲೆ ಮುಳ್ಳುಗಳು ಮತ್ತು ಬಿರುಗೂದಲುಗಳಿವೆ. ಸಂಖ್ಯೆ ಮತ್ತು ದೇಹದ ಮೇಲೆ ಇವು ಹರಡಿರುವ ರೀತಿಯನ್ನನುಸರಿಸಿ, ಕಜ್ಜಿ ಉಣ್ಣಿಯನ್ನು ವಿವಿಧ ಬುಡಕಟ್ಟುಗಳಾಗಿ ವಿಂಗಡಿಸಲಾಗುತ್ತದೆ. ಉಣ್ಣಿಗೆ ಈ ಮುಳ್ಳುಗಳು ಚರ್ಮಕ್ಕೆ ಅಂಟಿಕೊಳ್ಳಲು ಸಹಾಯಕವಾಗಿವೆ. ಚಿಕ್ಕ ದೇಹ, ತುದಿಯಲ್ಲಿ ಚಿಕ್ಕ ತಲೆ ಇದೆ. ತಲೆಯ ತುದಿಯಲ್ಲಿ ಒಂದು ಜೊತೆ ಇಕ್ಕಳಕೊಂಡಿಗಳು (ಕಿಲಿಸಿರಿ), ಒಂದು ಜೊತೆ ಚಿಕ್ಕ ಸ್ಪರ್ಶಾಂಗಗಳಿವೆ. ಕಣ್ಣುಗಳಿಲ್ಲ. ದೇಹದ ಮುಂಭಾಗದಲ್ಲಿ ಎರಡು ಜೊತೆ ಮತ್ತು ಹಿಂಭಾಗದಲ್ಲಿ ಎರಡು ಜೊತೆ ಕಾಲುಗಳಿವೆ. ಹೆಣ್ಣು ಉಣ್ಣಿಯ ಹಿಂಭಾಗದ ಎರಡು ಜೊತೆಕಾಲುಗಳಲ್ಲಿ ಬಿರುಗೂದಲುಗಳಿವೆ. ಗಂಡು ಉಣ್ಣಿಯ ಹಿಂಭಾಗದ ಒಂದು ಜೊತೆ ಕಾಲುಗಳಲ್ಲಿ ಮಾತ್ರ ಬಿರುಗೂದಲುಗಳಿವೆ. ಉಳಿದೆಲ್ಲ ಕಾಲುಗಳಲ್ಲಿ ಹೀರುಬಟ್ಟಲು(ಸಕರ್ಸ್)ಗಳಿವೆ.

ಹೆಣ್ಣು ಗಂಡಿಗಿಂತ ಗಾತ್ರದಲ್ಲಿ ದೊಡ್ಡದು. ಸಂಭೋಗಕ್ರಿಯೆಯ ನಂತರ ಹೆಣ್ಣು ಮನುಷ್ಯನ ಚರ್ಮದಲ್ಲಿ ೧೦–೨೫ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳಿಂದ ೩–೪ ದಿನಗಳಲ್ಲಿ ಡಿಂಬಗಳು ಹೊರಬರುತ್ತವೆ. ಇವುಗಳಿಗೆ ಮೂರು ಜೊತೆ ಕಾಲುಗಳಿವೆ. ಮುಂದಿನ ಎರಡು ಜೊತೆ ಕಾಲುಗಳಲ್ಲಿ ಹೀರುಬಟ್ಟಲುಗಳಿವೆ. ೨–೩ ದಿನಗಳ ನಂತರ ಡಿಂಬ ಪೊರೆಬಿಟ್ಟು ಬೆಳೆದು, ಎಂಟು ಕಾಲುಗಳುಳ್ಳ ಅಪ್ಸರೆ ಕೀಟ(ನಿಂಫ್) ಆಗುತ್ತದೆ. ಅಪ್ಸರೆ ಕೀಟ ಹಂತದ ಉಣ್ಣಿ ೨–೩ ಬಾರಿ ಪೊರೆ ಕಳಚಿ ಪ್ರೌಢಾವಸ್ಥೆ ಸೇರುತ್ತದೆ. ಈ ಉಣ್ಣಿಗಳಿಂದ ಮನುಷ್ಯನಿಗೆ ಬರುವ ಕಜ್ಜಿ ಪುರಾತನ ಕಾಲದಿಂದಲೂ ಪ್ರಸಿದ್ಧಿ. ಕಜ್ಜಿಯಿಂದ ಪೀಡಿತನಾದ ರೋಗಿಯ ಸಂಪರ್ಕದಿಂದ ಅಥವಾ ಆತನ ಉಡಿಗೆಗಳನ್ನು ಮುಟ್ಟುವುದರಿಂದ ಈ ರೋಗ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ರೋಗದ ಮುಖ್ಯ ಲಕ್ಷಣ:ತುರಿಕೆ, ಕಡಿತ ಮತ್ತು ದೇಹದ ಮೇಲ್ಭಾಗದಲ್ಲಿ ತೋರುವ ಹುಣ್ಣು ಅಥವಾ ವ್ರಣ. ಅಲ್ಲದೆ ಕಜ್ಜಿಉಣ್ಣಿಗಳು ತೋಡಿದ ಗುಂಡಿಗಳಲ್ಲಿ ಸ್ಟ್ರೆಪ್ಟೊಕಾಕೈ ಬ್ಯಾಕ್ಟೀರಿಯ ಸೇರಿಕೊಂಡು ವಿವಿಧ ಬಗೆಯ ರೋಗಗಳಿಗೆ ಕಾರಣವಾಗುತ್ತವೆ. ಸ್ವಾಸ್ಥ್ಯವನ್ನು ಶುಚಿಯಾಗಿಟ್ಟುಕೊಂಡು, ಕ್ರಮವರಿತ ಔಷಧಿಗಳನ್ನು ಉಪಯೋಗಿಸುವುದರಿಂದ ಕಜ್ಜಿ ರೋಗವನ್ನು ನಿಯಂತ್ರಿಸಬಹುದು. ಗಂಧಕದ ಮುಲಾಮು, ಮಾರ್ಕ್ಯುಸ್ನೆಸ್ ಮುಲಾಮು, ಬೆಂಜೈಲ್ ಬೆಂಜೋಯೇಟ್, ಡೈಮೀಥೈಲ್–ಡೈಫೆನಿಲಿನ್ ಡೈಸಲ್ಫೈನ್ ಔಷಧಿಗಳು ರೋಗದ ಉಪಶಮನಕ್ಕೆ ಬಹು ದಿನಗಳಿಂದ ಪರಿಚಿತ. (ಜಿ.ಎಸ್.ಆರ್.)

**ಕಟ್ಟುಬಂಧ ಚಿಕಿತ್ಸೆ:** ಬೆನ್ನುಗಂಬ, ಎದೆಗೂಡು, ಹೊಟ್ಟೆಕುಳಿ ಮತ್ತಿತರ ಅಂಗಾಂಗಗಳ ತಂತುಗಟ್ಟುಗಳು (ಲಿಗಮೆಂಟ್ಸ್) ಮುದುರಿಕೊಂಡೋ ಕುಗ್ಗಿಯೋ ಬಹಳಷ್ಟು ರೋಗಗಳು ಏಳುವುವೆಂಬ ತತ್ತ್ವದ ಮೇಲೆ, ಮದ್ದುಗಳನ್ನು ಕೊಡದೆಯೇ ಚಿಕಿತ್ಸೆಗಾಗಿ ಮಾಡುವ ಕೈಸರಿಪಡಿಗೆ (ನಪ್ರಾಪತಿ). ಓಕ್ಲಿ ಸ್ಮಿತ್ (1907) ಈ ಚಿಕಿತ್ಸಾಕ್ರಮದ ಸ್ಥಾಪಕ. ಮುದುರಿ ಕುಗ್ಗಿ ಹಿಡಿದಿರುವ ಊತಕವನ್ನು ಹಿಗ್ಗಿಸಿ ಸಡಿಲಿಸುವುದರ ಮೂಲಕ ಸರಿಪಡಿಸುವುದೇ ಗುರಿ. ಮೈಯಲ್ಲಿ ಎಲ್ಲೆಲ್ಲಿ ಹೀಗೆ ಹಿಡಿದುಕೊಳ್ಳುತ್ತದೆ, ಅದನ್ನು ಹೇಗೆ ಬಿಡಿಸಬೇಕೆಂದು ತೋರುವ ಪಟಗಳು ಈ ಚಿಕಿತ್ಸೆಯಲ್ಲಿ ಮುಖ್ಯ.

***

**ಕಟ್ಟುಹಾವು:** ಭಾರತದ ವಿಷಸರ್ಪಗಳಲ್ಲಿ ಒಂದು ಜಾತಿ (ಕ್ರೇಯ್ಟ್). ಬಂಗಾರಸ್ ಎಂಬ ವೈಜ್ಞಾನಿಕ ಹೆಸರಿದೆ. ಸರೀಸೃಪ ವರ್ಗದ ಸ್ಕ್ವಾಮಾಟ ಗಣದ ಒಫಿಡಿಯ ಉಪಗಣದ ಇಲಾಪಿಡೆ ಕುಟುಂಬಕ್ಕೆ ಸೇರಿದೆ. ಈ ಜಾತಿಯಲ್ಲಿ ಸುಮಾರು 12 ಪ್ರಭೇದಗಳಿವೆ. ಬಂಗಾರಸ್ ಸಿರೂಲಿಯಸ್ ಎಂಬ ಪ್ರಭೇದ ಭಾರತದಲ್ಲಿ ಎಲ್ಲೆಡೆಗೂ ಕಂಡುಬರುತ್ತದೆ. ಮೈದಾನ ಪ್ರದೇಶಗಳಲ್ಲಿರುವುದೇ ಹೆಚ್ಚು. ಸುಮಾರು 1 ಮೀ. ಉದ್ದವಿರುವ ಇದರ ಮೇಲುಮೈ ನೀಲಮಿಶ್ರಿತ ಕಪ್ಪು. ಹೊಟ್ಟೆಯ ಭಾಗ ಬಿಳುಪು. ಮೈಮೇಲೆ ಅಡ್ಡಡ್ಡಲಾಗಿ ಬಿಳಿಯ ಪಟ್ಟೆಗಳಿವೆ. ತಲೆಗೂ ಕತ್ತಿಗೂ ಗಾತ್ರದಲ್ಲಿ ವ್ಯತ್ಯಾಸವಿಲ್ಲ. ತಲೆಯ ಮೇಲೆ ಫಲಕಗಳಿವೆ (ಶೀಲ್ಡ್). ಬೆನ್ನುಹುರಿಯುದ್ದಕ್ಕೂ ಇರುವ ಹುರುಪೆಗಳು ಉಳಿದವಕ್ಕಿಂತ ದೊಡ್ಡವು. ಬಾಲದಲ್ಲಿರುವ ಉದರಭಾಗದ ಹುರುಪೆಗಳು ಒಂದೇ ಸಾಲಿನಲ್ಲಿ ಜೋಡಣೆಗೊಂಡಿವೆ. ಇದು ನಿಶಾಚರಿ. ಗೋಡೆಗಳ ಬಿರುಕುಗಳಲ್ಲಿ, ಕಲ್ಲುಗಳ ರಾಶಿಯ ನಡುವೆ ವಾಸಿಸುತ್ತಿದ್ದು ಇಲಿ ಮತ್ತು ಇತರ ಹಾವುಗಳನ್ನು ಕಬಳಿಸುತ್ತದೆ.

ಕಟ್ಟುಹಾವು

ಕಟ್ಟುಹಾವಿನ ವಿಷ ತೀಕ್ಷ್ಣವಾದುದು. ನರಮಂಡಲವನ್ನೇ ನಿಶ್ಚೇತನಗೊಳಿಸಿ ಸಾವನ್ನು ತರುತ್ತದೆ. ಸಾವು ತರಲು ಕೇವಲ 2 ಮಿಗ್ರಾಂ ವಿಷವಿದ್ದರೂ ಸಾಕು.

ಇನ್ನೊಂದು ಬಗೆಯಾದ ಬ.ಫೇಸಿಯೇಟಸ್ ಅಸ್ಸಾಂ, ಮಧ್ಯಪ್ರದೇಶ, ಒರಿಸ್ಸ ಮತ್ತು ಉತ್ತರ ಪ್ರದೇಶದ ಕೆಲಭಾಗಗಳಲ್ಲಿ ವಾಸಿಸುತ್ತದೆ. ಇದು ಸಾಮಾನ್ಯ ಕಟ್ಟುಹಾವಿಗಿಂತ ದೊಡ್ಡದು. ಮೈಮೇಲೆ ಹಳದಿ ಮತ್ತು ಕಪ್ಪು ಬಣ್ಣದ ಅಡ್ಡಪಟ್ಟೆಗಳಿವೆ. ತಲೆ ಮತ್ತು ಕತ್ತಿನ ಮೇಲೆ ಕಪ್ಪು ಮಚ್ಚೆಗಳಿವೆ. ಬೇರೆ ಹಾವುಗಳನ್ನು ತಿಂದು ಜೀವಿಸುತ್ತದೆ. ಬಂಗಾರಸ್ ನೈಜರ್ ಎಂಬ ಮೂರನೆಯ ಬಗೆಯ ಕಟ್ಟುಹಾವು ಅಸ್ಸಾಂ ಮತ್ತು ಡಾರ್ಜಿಲಿಂಗುಗಳಲ್ಲಿ ಕಾಣಬರುತ್ತದೆ. ಇದು ಉಳಿದೆರಡಕ್ಕಿಂತ ಚಿಕ್ಕದು. ದೇಹದ ಬಣ್ಣ ಕಪ್ಪು. ಬಿಳಿ ಪಟ್ಟೆಗಳಿಲ್ಲ. ಉದರಭಾಗ ಬಿಳುಪಾಗಿದ್ದು ಅಲ್ಲಲ್ಲಿ ಕಪ್ಪು ಮಚ್ಚೆಗಳಿವೆ. ನೋಡಿ: ಹಾವುಗಳು.

***

**ಕಠಿಣ ಚರ್ಮಿಗಳು:** ಅಕಶೇರುಕಗಳ ಗುಂಪಿನ ಸಂಧಿಪದಿಗಳ ವಂಶದ ಒಂದು ವರ್ಗ (ಕ್ರಸ್ಟೇಸಿಯ). ಏಡಿ, ನಳ್ಳಿ, ಸೀಗಡಿ, ಮುಂತಾದ ಪ್ರಾಣಿಗಳು ಈ ವರ್ಗಕ್ಕೆ ಸೇರುತ್ತವೆ. ಇವು ಹೆಚ್ಚಾಗಿ ಜಲವಾಸಿಗಳು. ಇವುಗಳ ದೇಹ ಇತರ ಸಂಧಿಪದಿಗಳಂತೆ ಶಿರ, ಎದೆ ಮತ್ತು ಉದರ ಎಂದು ಮೂರು ಭಾಗಗಳಾಗಿದ್ದರೂ, ಶಿರ ಮತ್ತು ಎದೆಯ ಭಾಗಗಳು ಬೆಳವಣಿಗೆಯಲ್ಲಿ ಕೂಡಿಕೊಂಡು ಒಂದೇ ಭಾಗವಾಗಿ ಕಾಣುತ್ತದೆ. ಇದಕ್ಕೆ

ಸೆಫಲೊಥೊರ್ಯಾಕ್ಸ್ (ಶಿರೋವಕ್ಷ) ಎಂದು ಹೆಸರು. ಪ್ರತಿ ಖಂಡಕ್ಕೂ ಊರ್ಧ್ವ ಭಾಗದಲ್ಲಿ ಇರಬೇಕಾದ ಟರ್ಗ ಎಂಬ ಬಾಹ್ಯ ಅಸ್ಥಿಪಂಜರದ ಭಾಗಗಳೆಲ್ಲವೂ ಕೂಡಿಕೊಂಡು ಕ್ಯಾರಪೇಸ್ ಎಂಬ ಒಂದು ಕವಚ ನಿರ್ಮಾಣವಾಗಿದೆ. ಇದು ಸೆಫಲೊಥೊರ್ಯಾಕ್ಸ್ ಭಾಗವನ್ನು ರಕ್ಷಿಸುತ್ತದೆ. ಖಂಡಭಾಗಗಳು ಕೂಡಿಕೊಂಡಿದ್ದರೂ ಪ್ರತಿ ಖಂಡದಿಂದ ಬೆಳೆಯುವ ಜೊತೆ ಉಪಾಂಗಗಳು ಬೇರೆಯಾಗಿಯೇ ಉಳಿದಿವೆ. ಈ ವರ್ಗದ ಪ್ರಾಣಿಗಳಲ್ಲಿ ಎರಡು ಜೊತೆ ಕುಡಿಮೀಸೆಗಳಿರುವುದು ವಿಶೇಷವಾದ ಲಕ್ಷಣ.

ಶಿರ ಭಾಗದಲ್ಲಿ ಸಾಮಾನ್ಯವಾಗಿ ಚೆನ್ನಾಗಿ ರೂಪುಗೊಂಡ ಒಂದು ಜೊತೆ ಸಂಯುಕ್ತಾಕ್ಷಿಗಳಿವೆ. ಇವಕ್ಕೆ ಬೇಕಾದ ಹಾಗೆ ತಿರುಗಿಸಬಹುದಾದ ಒಂದೊಂದು ತೊಟ್ಟು ಇದೆ. ಶಿರ ಭಾಗದಲ್ಲಿ ಐದು ಖಂಡಗಳಿವೆ. ಇವನ್ನು ಪ್ರಬುದ್ಧಾವಸ್ಥೆಯಲ್ಲಿ ಪ್ರತ್ಯೇಕವಾಗಿ ಗುರುತಿಸುವುದು ಸಾಧ್ಯವಾಗದಿದ್ದರೂ ಅವುಗಳಲ್ಲಿರುವ ಐದು ಜೊತೆ ಉಪಾಂಗಗಳಿಂದ ಅವನ್ನು ಗುರುತಿಸಬಹುದು. ಎರಡು ಜೊತೆ ಕುಡಿ ಮೀಸೆಗಳು, ಒಂದು ಜೊತೆ ದವಡೆ, ಎರಡು ಜೊತೆ ದವಡೆ ಪಾದಗಳು ಇವೆ. ಇವಕ್ಕೆ ಕ್ರಮವಾಗಿ ಆಂಟೆನ್ಯೂಲ್, ಆಂಟೆನ, ಮ್ಯಾಂಡಿಬಲ್, ಮ್ಯಾಕ್ಸಿಲುಲೆ ಮತ್ತು ಮ್ಯಾಕ್ಸಿಲ ಎಂದು ಹೆಸರು. ಇವು ಮುಖ್ಯವಾಗಿ ಇಂದ್ರಿಯಾಂಗಗಳು ಮತ್ತು ಆಹಾರವನ್ನು ಅಗಿಯುವ ಅಂಗಗಳು.

ಎದೆ ಮತ್ತು ಉದರಗಳನ್ನು ನಿರ್ದಿಷ್ಟವಾಗಿ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಈ ಹೆಸರುಗಳ ಉಪಯೋಗದಲ್ಲಿ ಅಸ್ಪಷ್ಟತೆ ಇದೆ. ಕಾಲುಗಳಿರುವ ಮತ್ತು ಕಾಲುಗಳಿಲ್ಲದ ಭಾಗಗಳನ್ನು ಅಥವಾ ಜನನರಂಧ್ರದ ಮುಂಭಾಗ ಮತ್ತು ಹಿಂಭಾಗಗಳನ್ನು ಸೂಚಿಸಲು ಈ ಹೆಸರುಗಳನ್ನು ಉಪಯೋಗಿಸಲಾಗಿದೆ. ಆದರೆ ಅಭ್ಯಾಸದ ಅನುಕೂಲಕ್ಕಾಗಿ ಜನನರಂಧ್ರದ ಮುಂದಿರುವ ಭಾಗಗಳು ಎದೆಯ ಭಾಗವೆಂದೂ ಹಿಂದಿರುವುದು ಉದರಭಾಗವೆಂದೂ ಭಾವಿಸಿಕೊಳ್ಳಬಹುದು. ಅಂದರೆ ಜನನರಂಧ್ರವಿರುವ ಖಂಡವೇ ಎದೆಯ ಭಾಗದ ಕೊನೆಯ ಖಂಡ. ಪ್ರಭೇದಗಳಿಂದ ಪ್ರಭೇದಗಳಿಗೆ ಈ ಭಾಗದಲ್ಲಿನ ಖಂಡಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ.

ಸೆಫಲೊಥೊರ್ಯಾಕ್ಸಿನ ಊರ್ಧ್ವ ಭಾಗದಲ್ಲಿರುವ ಕ್ಯಾರಪೇಸ್ ಎಂಬ ದಪ್ಪ ಬಾಹ್ಯ ಅಸ್ಥಿಪಂಜರ ಈ ವರ್ಗದ ಪ್ರಾಣಿಗಳ ಪ್ರಮುಖ ಸಾಮಾನ್ಯ ಲಕ್ಷಣ. ಇದು ಊರ್ಧ್ವಭಾಗದ ಚರ್ಮದ ಮಡಿಕೆಯಿಂದ ಉದ್ಭವಿಸುತ್ತದೆ. ಮಾದರಿಯ (ಟಿಪಿಕಲ್) ಅವಸ್ಥೆಯಲ್ಲಿ ತಲೆ ಮತ್ತು ಎದೆಯ ಸ್ವಲ್ಪ ಭಾಗ ಬೆತ್ತಲೆಯಾಗಿರಬಹುದು. ಇನ್ನು ಕೆಲವದರಲ್ಲಿ ಇದು ಸಂಪೂರ್ಣ ನಶಿಸಿಹೋಗಿರುವುದೂ ಉಂಟು. ಅನೊಸ್ಟ್ರೇಕ ಮತ್ತು ಕೋಪಿಪೋಡಗಳಲ್ಲಿ ಇಲ್ಲವೇ ಇಲ್ಲ. ರಚನೆಯಲ್ಲಿ ಚಪ್ಪಟೆ ಹಾಗೂ ಅಗಲವಾದ ಗುರಾಣಿಯಂತಿರಬಹುದು ಅಥವಾ ಆಸ್ಟ್ರಕೋಡದಲ್ಲಿರುವಂತೆ ದ್ವಿಭಾಗಿಯಾಗಿ ಊರ್ಧ್ವಭಾಗದಲ್ಲಿ ಚಿಲಕವೂ (ಹಿಂಜ್) ಇರಬಹುದು; ಸಿರ್ರಿಪೀಡಿಯದಲ್ಲಿ ಇದು ಪೂರ್ಣ ಪ್ರಾಣಿಯನ್ನೇ ಆವರಿಸುವ ಚಿಪ್ಪಾಗಿದೆ. ಇದು ಆವರಿಸಿರುವ ಕೋಣೆಗೆ ಕಿವಿರುಕೋಣೆ, ಮ್ಯಾಂಟಲ್ ಕುಹರ ಮುಂತಾದ ಅನೇಕ ಹೆಸರುಗಳಿವೆ. ಈ ಭಾಗ ಬೆಳೆಯುತ್ತಿರುವ ಮರಿಗಳಿಗೆ ರಕ್ಷಣೆಯನ್ನು ಒದಗಿಸಬಹುದೆಂದು ಊಹೆ. ತಲೆಯ ಭಾಗದ ಟರ್ಗಗಳೆಲ್ಲ ಕೂಡಿ ಊರ್ಧ್ವ ಫಲಕವಾಗಿದೆ. ಊರ್ಧ್ವಫಲಕ ಮುಂಭಾಗದಲ್ಲಿ ಮೊನಚಾದ ರಾಸ್ಟ್ರಂ ಆಗಿ ಚಾಚಿಕೊಂಡಿದೆ.

ತಲೆಯ ಹಿಂದಿನ ತುದಿಯ ಊರ್ಧ್ವ ಭಾಗದಲ್ಲಿ ಊರ್ಧ್ವಾಂಗ ಎಂಬ ರಚನೆ ಇದೆ. ಇದನ್ನು ಕತ್ತಿನ ಗ್ರಂಥಿ ಎಂದೂ ಕರೆಯುತ್ತಾರೆ. ಇದನ್ನು ಕೆಲವು ಕಠಿಣಚರ್ಮಿಗಳು (ಕ್ಲ್ಯಾಡೊಸೀರ ಮತ್ತು ಕಾಂಕೋಸ್ಟ್ರೇಕ) ಆಧಾರಗಳಿಗೆ ಅಂಟಿಕೊಳ್ಳಲು ಉಪಯೋಗಿಸುತ್ತವೆ. ಮಿಕ್ಕ ಪ್ರಾಣಿಗಳಲ್ಲಿ ಇದರ ಕಾರ್ಯ ಏನು ಎಂಬುದು ಇನ್ನೂ ಸರಿಯಾಗಿ ಗೊತ್ತಿಲ್ಲ.

ಉಪಾಂಗಗಳು: ಪ್ರತಿಯೊಂದು ಖಂಡದಲ್ಲೂ ಒಂದು ಜೊತೆ ಉಪಾಂಗಗಳಿವೆ. ಇವು ತಾವಿರುವ ಖಂಡ ಭಾಗ ಮತ್ತು ನಿರ್ವಹಿಸುವ ಕಾರ್ಯಗಳನ್ನನುಸರಿಸಿ ಮಾರ್ಪಟ್ಟಿವೆ. ಮೂಲತಃ ಉಪಾಂಗಗಳಲ್ಲಿ ಎರಡು ಕವಲುಗಳಿವೆ. ಆದ್ದರಿಂದ ಇವಕ್ಕೆ ಇಕ್ಕವಲು (ಬೈರೆಮಸ್) ಉಪಾಂಗಗಳೆಂದು ಹೆಸರು. ಒಂದು ಮಾದರಿಯ ಇಕ್ಕವಲು ಉಪಾಂಗದಲ್ಲಿ ಕೆಳಕಂಡ ಭಾಗಗಳಿವೆ: ಬುಡದಲ್ಲಿ ಪ್ರೋಟೊಪೊಡೈಟ್ ಎಂಬ ತೊಟ್ಟಿನಂಥ ರಚನೆಯಿದೆ. ಇದರ ಕೆಳಗೆ ಕಾಕ್ಸ ಮತ್ತು ತುದಿಯಲ್ಲಿ ಬೇಸಿಸ್ ಎಂಬ ಎರಡು ಅಂಗಗಳಿವೆ. ಪೋಡೊಮಿಯರ್ ಎಂಬುದರ ಸಹಾಯದಿಂದ ಉಪಾಂಗ ತನ್ನ ನಿರ್ದಿಷ್ಟ ಖಂಡಕ್ಕೆ ಅಂಟಿಕೊಂಡಿದೆ. ಬೇಸಿಸ್ ತನ್ನ ಬಿಡಿಯಾದ ತುದಿಯಲ್ಲಿ ಎರಡು ಎಲೆಯಂತೆ ಅಗಲವಾದ ಕವಲುಗಳನ್ನು ಹೊಂದಿದೆ. ಈ ಕವಲುಗಳಿಗೆ ಅವು ದೇಹದ ಒಳಭಾಗದ ಕಡೆಗಿವೆಯೋ ಅಥವಾ ಹೊರಭಾಗದ ಕಡೆಗಿವೆಯೋ ಎಂಬುದನ್ನನುಸರಿಸಿ ಕ್ರಮವಾಗಿ ಎಂಡೊಪೊಡೈಟ್ ಮತ್ತು ಎಕ್ಸೊಪೊಡೈಟ್ ಎಂದು ಕರೆಯುತ್ತಾರೆ. ಈ ಉಪಾಂಗಗಳು ಎಲೆಯಂತೆ ಅಗಲವಾಗಿದ್ದರೆ ಅವನ್ನು ಫಿಲ್ಲೊಪೋಡಿಯಂ ಎಂದೂ ಉದ್ದವಾಗಿ ಕಡ್ಡಿಕಡ್ಡಿಗಳಂತೆ ಇದ್ದರೆ ಸ್ಟೆನೊಪೋಡಿಯಂ ಎಂದೂ ಕರೆಯಲಾಗುತ್ತದೆ.

ಕಠಿಣಚರ್ಮಿಗಳಲ್ಲಿ ಉಪಾಂಗಗಳ ಆಕಾರ, ರಚನೆ ಮತ್ತು ನಿರ್ವಹಿಸುವ ಕೆಲಸ ಇವುಗಳಲ್ಲಿ ಹೆಚ್ಚಿನ ವೈವಿಧ್ಯತೆ ಇದೆ. ಇದನ್ನು ಅರ್ಥಮಾಡಿಕೊಳ್ಳಲು ಸೀಗಡಿಯ ಉಪಾಂಗಗಳನ್ನು ಉದಾಹರಣೆಯಾಗಿ ಅಭ್ಯಾಸಮಾಡಿದರೆ ಸುಲಭವಾಗಬಹುದು. ಸೀಗಡಿ ಕಡಲು ಮತ್ತು ಸಿಹಿನೀರಿನ ನದಿಗಳಲ್ಲಿ ದೊರಕುತ್ತದೆ. ಇದರ ದೇಹದಲ್ಲಿ ಸೆಫಲೊ–ಥೊರ್ಯಾಕ್ಸ್ ಮತ್ತು ಉದರಭಾಗಗಳಿವೆ. ಈ ಭಾಗದ ಖಂಡವಿಂಗಡಣೆ ಸುಲಭವಾಗಿ ಕಾಣುವುದಿಲ್ಲ. ಆದರೆ ಉದರಭಾಗದಲ್ಲಿ ಆರು ಖಂಡಗಳನ್ನು ಸುಲಭವಾಗಿ ಗುರುತಿಸಬಹುದು. ಇವು ಬಿಡಿ ಬಿಡಿಯಾಗಿವೆ. ಶಿರದ ಭಾಗದಲ್ಲಿ ಐದು ಜೊತೆ, ಎದೆಯ ಭಾಗದಲ್ಲಿ ಎಂಟು ಜೊತೆ ಮತ್ತು ಉದರ ಭಾಗದಲ್ಲಿ ಆರು ಜೊತೆ, ಒಟ್ಟು ಹತ್ತೊಂಬತ್ತು ಜೊತೆ ಉಪಾಂಗಗಳಿವೆ. ಉಪಾಂಗಗಳನ್ನು ಖಂಡಗಳಿಗನುಸಾರವಾಗಿ ಕೆಳಗೆ ಕ್ರಮವಾಗಿ ವಿವರಿಸಿದೆ:

೧. ಆಂಟೆನ್ಯೂಲ್: ಇದರ ತೊಟ್ಟಿನ ಭಾಗದಲ್ಲಿ ಪ್ರೀಕಾಕ್ಸ, ಕಾಕ್ಸ ಮತ್ತು ಬೇಸಿಸ್ ಎಂದು ಮೂರು ಭಾಗಗಳಿವೆ. ಬೇಸಿಸ್ ಮುಂದಿನ ತುದಿಯಲ್ಲಿ ಬಹುಖಂಡವುಳ್ಳ ತೆಳ್ಳಗೆ ಉದ್ದವಾದ ಕುಡಿಮೀಸೆಗಳಿವೆ.

೨. ಆಂಟೆನ: ಪ್ರೋಟೊಪೊಡೈಟ್ ಭಾಗ ತುಂಬ ಚಿಕ್ಕದು. ಒಂದು ಕವಲು ಅಗಲವಾಗಿ ಕಿವಿಯ ಆಲೆಯಂತೆ ಹರಡಿದೆ. ಇನ್ನೊಂದು ತುಂಬ ಉದ್ದವಾದ ಬಹುಖಂಡವುಳ್ಳ ಕುಡಿಮೀಸೆಯಾಗಿದೆ. ಇದೂ ಕೂಡ ಸ್ಪರ್ಶಾಂಗವೇ. ಆಹಾರ ಮತ್ತು ತನ್ನ ಪರಿಸರವನ್ನು ಪರೀಕ್ಷಿಸುವ ಘ್ರಾಣೇಂದ್ರಿಯವೂ ಹೌದು.

೩. ಮ್ಯಾಂಡಿಬಲ್: ಕವಲಗಳು ಕ್ಷೀಣವಾಗಿವೆ. ಬುಡದ ಪ್ರೋಟೊಪೊಡೈಟ್ ಬಲಯುತವಾಗಿ ಗದೆಯಾಕಾರ ಮತ್ತು ಬಾಚಿಯಾಕಾರದಲ್ಲಿದೆ. ಇದರ ಮೇಲೆ ದಂತಿಗಳಿದ್ದು (ಡೆಂಟಿಕಲ್) ಅವು ಆಹಾರವನ್ನು ಅಗಿಯಲು ಸಹಕರಿಸುತ್ತವೆ. ದವಡೆಗಳು ಬಲವಾಗಿವೆ.

೪. ಮ್ಯಾಕ್ಸಿಲುಲೆ: ಇದು ಒಂದು ದವಡೆಪಾದ. ಇದರಲ್ಲಿ ಬಾಯಿಯ ಬಳಿಗೆ ನೀರು ಬರುವಂತೆ ಪ್ರವಾಹವನ್ನು ಉಂಟುಮಾಡುವ ಲೋಮಾಂಗಗಳಿವೆ. ಆದ್ದರಿಂದ ಇದು ಆಹಾರವನ್ನು ಬಾಯಿಯೆಡೆಗೆ ತರಲು ಸಹಕರಿಸುತ್ತದೆ.

೫ ಮ್ಯಾಕ್ಸಿಲ: ಇದೂ ಕೂಡ ದವಡೆಪಾದ. ಆಹಾರವನ್ನು ಬಾಯ ಬಳಿಗೆ ತರುವಲ್ಲಿ ಸಹಕರಿಸುತ್ತದೆ.

೬,೭,೮–ಮಾಕ್ಸಿಲ್ಲಿಪೀಡ್: ಇವುಗಳಲ್ಲಿ ಎಕ್ಸೊಪೊಡೈಟ್‌ಗಳು ಕ್ರಮೇಣ ಕ್ಷೀಣವಾಗಿ ಹೋಗುತ್ತವೆ. ಇವುಗಳ ಮೇಲೆ ಶ್ವಾಸಾಂಗವಾದ ಎಪಿಪೊಡೈಟುಗಳಿವೆ. ಇವು ಭ್ರಮಣೇಂದ್ರಿಯಗಳಾಗಿಯೂ ಸ್ಪರ್ಶಾಂಗಗಳಾಗಿಯೂ ಕೆಲಸ ಮಾಡುತ್ತವೆಯಲ್ಲದೆ ಆಹಾರವನ್ನು ಹಿಡಿದು ಪ್ರಾಣಿಗೆ ಒದಗಿಸುವುದರಲ್ಲಿ ಸಹಾಯ ಮಾಡುತ್ತವೆ.

೯ ರಿಂದ ೧೩ನೆಯ ಉಪಾಂಗಗಳು: ನಡಿಗೆಗೆ ಸಹಕಾರಿಯಾದ ಇವುಗಳಲ್ಲಿ ಎಕ್ಸೊಪೊಡೈಟ್ ಸಂಪೂರ್ಣವಾಗಿ ಮರೆಯಾಗಿದೆ. ಎಂಡೊಪೊಡೈಟಿನ ಖಂಡಗಳು ಉದ್ದವಾಗಿ ಬೆಳೆದು ಕಾಲುಗಳಾಗಿವೆ. ಮೊದಲನೆಯ ಎರಡು ಜೊತೆಯಲ್ಲಿ ತುದಿಯಲ್ಲಿ ಇಕ್ಕಳದ ರೀತಿಯ ರಚನೆಗಳಿವೆ. ಇವು ಆಹಾರವನ್ನು ಹಿಡಿಯಲು ಸಹಕರಿಸುತ್ತವೆ. ಒಂದೊಂದರ ಮೇಲೂ ಕಿವಿರುಗಳಿವೆ.

೧೪. ಮೊದಲನೆಯ ಈಜುಪಾದ: ಗಂಡಿನಲ್ಲಿ ಇಕ್ಕವಲು ರಚನೆ. ಆದರೆ ಎಕ್ಸೊಪೊಡೈಟ್ ಮತ್ತು ಎಂಡೊಪೊಡೈಟ್‌ಗಳು ಕೂಡಿಕೊಂಡು ಸಂಭೋಗ ಕ್ರಿಯೆಗೆ ಸಹಕಾರಿಯಾಗಿವೆ. ಆದರೆ ಹೆಣ್ಣಿನಲ್ಲಿ ಇವು ನಶಿಸಿಹೋಗಿ ಹೆಸರಿಗೆ ಮಾತ್ರ ಇವೆ.

೧೫. ಎರಡನೆಯ ಈಜುಪಾದ: ಇದೂ ಇಕ್ಕವಲು ರಚನೆ. ಗಂಡಿನಲ್ಲಿ ಸಂಭೋಗಕ್ಕೆ ಸಹಕಾರಿಯಾಗಿದೆ. ಹೆಣ್ಣಿನಲ್ಲಿ ಚಿಕ್ಕದು ಮತ್ತು ಉಪಯೋಗವಿಲ್ಲದ್ದು.

೧೬. ಮೂರನೆಯ ಈಜುಪಾದ: ಕಿವಿರು ಕೋಣೆಯಲ್ಲಿ ಸದಾ ಹೊಸ ನೀರು ಇರುವಂತೆ ಪ್ರವಾಹವನ್ನು ಉಂಟುಮಾಡುತ್ತದೆ. ಹೆಣ್ಣಿನಲ್ಲಿ ಮೊಟ್ಟೆಗಳು ಅಂಟಿಕೊಳ್ಳಲು ಸಹಕಾರಿಯಾಗಿದೆ.

೧೭–೧೮ ಈಜುಪಾದಗಳು ಮೂರನೆಯದರಂತೆಯೇ ಇವೆ.

೧೯. ಬಾಲಪಾದ: ಚಿಮ್ಮಿ ಹಿಂದಕ್ಕೆ ಈಜಲು ಸಹಕರಿಸುತ್ತದೆ.

ಪ್ರಬುದ್ಧಾವಸ್ಥೆಯಲ್ಲಿ ರಚನೆ ಮತ್ತು ಕಾರ್ಯಗಳಲ್ಲಿ ಭಿನ್ನತೆಗಳನ್ನು ಪ್ರದರ್ಶಿಸಿದರೂ ಇವು ಬೆಳೆವಣಿಗೆಯಿಂದ ಸದೃಶಾಂಗಗಳು. ಲಾಬ್‌ಸ್ಟರ್ ಮತ್ತು ಏಡಿಗಳಲ್ಲಿ ಮೊದಲನೆಯ ನಡೆಪಾದದ ತುದಿಯ ಇಕ್ಕಳಗಳು ದೊಡ್ಡವಾಗಿ ಬೆಳೆದು, ರಕ್ಷಣೆ ಮತ್ತು ಆಕ್ರಮಣದಲ್ಲಿ ಸಹಕಾರಿಯಾಗಿವೆ. ನೆಪ್ಚೂನಸ್ ಎಂಬ ಪಿಟೀಲು ಏಡಿಯಲ್ಲಿ ಈ ಕಾಲುಗಳು ಒಂದಕ್ಕೊಂದು ತಾಕಿದಾಗ ಒಂದು ರೀತಿಯ ನಾದ ಮೂಡುತ್ತದೆ. ಒಂದು ಜಾತಿಯ ಕಡಲುಏಡಿಯಲ್ಲಿ ಹೆಣ್ಣನ್ನು ಆಕರ್ಷಿಸುವ ಸಲುವಾಗಿ ಗಂಡಿನಲ್ಲಿ ಒಂದು ನಡೆಪಾದ ವಿಶೇಷವಾಗಿ ಬೆಳೆದಿದೆ. ಹೀಗೆ ಪ್ರಾಣಿಯ ಜೀವನಕ್ರಮ, ಅದು ವಾಸಿಸುವ ಸ್ಥಳ, ಆಹಾರ ಗಳಿಕೆಯ ಕ್ರಮಗಳನ್ನನುಸರಿಸಿ

ಅಂಗಗಳು ವೈವಿಧ್ಯಮಯವಾಗಿ ಮಾರ್ಪಟ್ಟಿರುವುದನ್ನು ಈ ವರ್ಗದಲ್ಲಿ ಕಾಣಬಹುದು. ಕೆಲವು ಉಪಾಂಗಗಳು ಕೆಲವು ಪ್ರಾಣಿಗಳಲ್ಲಿ ಕಳೆದುಹೋಗಬಹುದು.




ಕಠಿಣ ಚರ್ಮಿಗಳ ಉಪಾಂಗಗಳು

೧. ಆಂಟೆನ್ಯೂಲ್, ೨. ಆಂಟೆನಾ, ೩. ಮ್ಯಾಂಡಿಬಲ್, ೪. ಮತ್ತು ೫. ಮ್ಯಾಕ್ಸಿಲ, ೬. ಮ್ಯಾಕ್ಸಿಲರಿ ಗ್ರಂಥಿ ಹೊರತೆರೆಯುವ ಪಾಪಿಲ್ಲ, ೭. ಮತ್ತು ೮. ಮ್ಯಾಕ್ಸಿಲಿಪಿಡ್, ೯. ಮೊದಲನೆಯ ತೊರ್ಯಾಸಿಕ್ ಪಾದ ೧೦. ಮತ್ತು ೧೧. ಈಜುಪಾದ, ೧೨. ಬಾಲಪಾದ.

ಇವೇ ಅಲ್ಲದೆ ಕೆಲವು ಪ್ರಾಣಿಗಳಲ್ಲಿ ಆನುಷಂಗಿಕ ಉಪಾಂಗಗಳಿವೆ (ಅಕ್ಸೆಸರಿ ಅಪೆಂಡೇಜೆಸ್). ಬಾಯಿಯ ಮುಂದಿನ ಮೇಲುತುಟಿ (ಲೇಬ್ರಂ) ಮತ್ತು ಮ್ಯಾಂಡಿಬಲ್‌ಗಳ ಹಿಂದಿನ ಕೆಳತುಟಿ (ಮೆಟಸ್ಟೋಮ್) ಮುಂತಾದುವು ಆನುಷಂಗಿಕ ಉಪಾಂಗಗಳಲ್ಲಿ ಮುಖ್ಯವಾದುವು. ಆಕಸ್ಮಿಕವಾಗಿ ಕಳೆದುಹೋದ ಅಥವಾ ಊನವಾದ ಉಪಾಂಗಗಳನ್ನು ಮುಂದಿನ ಪೊರೆ ಬಿಡುವಿಕೆಯ ಕಾಲದಲ್ಲಿ ಪುನರುತ್ಪಾದಿಸಿಕೊಳ್ಳುವ ಶಕ್ತಿಯೂ ಊನವಾಗಿ ಗಾಯವಾದ ಮತ್ತು ಶತ್ರುಗಳು ಹಿಡಿದ ಉಪಾಂಗಗಳನ್ನು ಕಳಚಿಕೊಂಡು ರಕ್ಷಿಸಿಕೊಳ್ಳುವ ಕ್ರಮವೂ ಕಠಿಣಚರ್ಮಿಗಳ ವಿಶಿಷ್ಟ ಲಕ್ಷಣ.

ಒಳ ಅಸ್ಥಿಪಂಜರ : ಹೊರ ಕ್ಯುಟಿಕಲ್ ಒಳಕ್ಕೆ ಚಾಚಿಕೊಂಡು ಅಪೊಡಿಮ್‌ಗಳೆಂಬ ಒಳ ಅಸ್ಥಿಪಂಜರ ಆಗಿದೆ. ಇದು ಸ್ನಾಯುಗಳು ಅಂಟಿಕೊಳ್ಳಲು ಸಹಕಾರಿಯಾಗಿದೆ. ಇವು ಕೆಲವೊಮ್ಮೆ ಕೂಡಿಕೊಂಡು ಎಂಡೊಫ್ರಾಗ್ಮಲ್ ಅಸ್ಥಿಪಂಜರ ಮತ್ತು ಎಂಡೊಸ್ಟರ್ನೈಟ್ ಎಂಬ ಚೌಕಟ್ಟುಗಳಾಗಿ ರೂಪುಗೊಳ್ಳಬಹುದು.

ನರಮಂಡಲ: ಕಠಿಣಚರ್ಮಿಗಳ ನರಮಂಡಲ ಸಂಧಿಪದಿಗಳಲ್ಲಿನ ನರಮಂಡಲ ವಿಕಾಸದ ವಿವಿಧ ರೂಪಗಳನ್ನು ಪ್ರದರ್ಶಿಸುತ್ತದೆ. ಮಾದರಿಯ (ಆದರ್ಶ) ಸಂಧಿಪದಿ ಅವಸ್ಥೆಯಿಂದ ತೀವ್ರ ಸಂಕೀರ್ಣತೆಯ ರೂಪದವರೆಗೂ ಮಾರ್ಪಟ್ಟಿರಬಹುದು. ಬಹಳ ಪ್ರಾಚೀನವಾದ ಮತ್ತು ಹಿಂದುಳಿದ ರಚನೆಯನ್ನು ಬ್ರಾಂಕಿಯೊಪೋಡದಲ್ಲಿ ಕಾಣಬಹುದು. ಇದರಲ್ಲಿ ಬಾಯಿಯ ಹಿಂಭಾಗದಲ್ಲಿ ಕುಡಿಮೀಸೆಯ ನರಗ್ರಂಥಿಗಳು ಇವೆ. ಇದರ ಹಿಂದೆ ಪ್ರತಿ ಖಂಡಕ್ಕೂ ಒಂದೊಂದು ಜೊತೆ ನರಗ್ರಂಥಿಗಳಿವೆ. ಕೆಳ ನರಹುರಿಗಳು ಬೇರೆ ಬೇರೆಯಾಗಿದ್ದು ಅಲ್ಲಲ್ಲಿ ಅವುಗಳ ನಡುವೆ ನರಸಂಬಂಧಗಳಿರುವುದರಿಂದ ಏಣಿಯಂತೆ ಕಾಣುತ್ತದೆ. ಮ್ಯಾಲಕಾಸ್ಟ್ರೇಕ ಗಣದ ಕೆಳ ದರ್ಜೆಯ ಜೀವಿಗಳಲ್ಲಿ ಕುಡಿಮೀಸೆಯ ನರಗ್ರಂಥಿಗಳು ಮಿದುಳಿನೊಂದಿಗೆ ಸೇರಿ ಹೋಗಿವೆ ಮತ್ತು ಕೆಳ ನರಹುರಿಗಳು ಹತ್ತಿರವಾಗಿವೆ. ಇತರ ಕಠಿಣಚರ್ಮಿಗಳಲ್ಲಿ ಕೆಳ ನರಹುರಿಗಳು ತುಂಬ ಮಾರ್ಪಾಟಾಗಿವೆ. ಗಂಟಲು ಕೆಳಗಿನ ನರಗ್ರಂಥಿಗಳು ವದನಾಂಗಗಳ ಖಂಡಗಳಿಗಾಗಿ ರೂಪುಗೊಂಡು, ಏಡಿಗಳಲ್ಲಿ ಕೆಳ ನರಗ್ರಂಥಿಗಳ ಒಂದು ಗುಂಫನ ಏರ್ಪಟ್ಟಿದೆ. ರೈಜೊಸೆಫಾಲದಲ್ಲಿ ಇರುವ ಒಂದೇ ಒಂದು ನರಗ್ರಂಥಿಯಿಂದ ಎಲ್ಲೆಡೆಗೂ ನರಗಳು ಹೊರಡುತ್ತವೆ. ಮುಂದುವರಿದ ಕಠಿಣ ಚರ್ಮಿಗಳಲ್ಲಿ ಗಂಟಲಿನ ಮೇಲೆ ಮಿದುಳು, ಕೆಳಗೆ ಸಬ್‌ಇಸಾಫಿಜಿಯಲ್ ನರಗ್ರಂಥಿಗಳು ಮತ್ತು ಗಂಟಲಿನ ಸುತ್ತಲು ಇವನ್ನು ಬಂಧಿಸುವ ನರಗಳೂ ಇದ್ದು ಇದರ ಹಿಂಭಾಗದಲ್ಲಿ ಕೊನೆಯ ಖಂಡದವರೆಗೂ ಹರಡಿರುವ ಜೋಡಿ ಕೆಳ ನರಹುರಿಗಳು ಇವೆ. ಅಲ್ಲದೆ ಅನುವೇದನಾ (ಸಿಂಪತೆಟಿಕ್) ನರ ಮಂಡಲವೂ ಇದೆ.

ಜ್ಞಾನೇಂದ್ರಿಯಗಳು: ಸ್ವತಂತ್ರ ಜೀವನ ನಡೆಸುವ ಕಠಿಣಚರ್ಮಿಗಳಲ್ಲಿ ಜ್ಞಾನೇಂದ್ರಿಯಗಳು ಚೆನ್ನಾಗಿ ರೂಪುಗೊಂಡಿವೆ. ಮುಖ್ಯವಾದುವು ಎರಡು ರೀತಿಯ ಕಣ್ಣುಗಳು, ಸಂಯುಕ್ತಾಕ್ಷಿಗಳು ಮತ್ತು ಮಧ್ಯಾಕ್ಷಿಗಳು. ಕೋಪಿಪೋಡ ಮತ್ತು ಪ್ರಬುದ್ಧ ಸಿರ್ರಿಪೀಡಿಯಗಳನ್ನು ಬಿಟ್ಟರೆ ಮಿಕ್ಕೆಲ್ಲವುಗಳಲ್ಲಿಯೂ ಒಂದೊಂದು ಜೊತೆ ಸಂಯುಕ್ತಾಕ್ಷಿಗಳಿವೆ. ಈ ಕಣ್ಣುಗಳಿಗೆ ತೊಟ್ಟುಗಳಿರಬಹುದು ಅಥವಾ ಇಲ್ಲದಿರಬಹುದು. ತೊಟ್ಟುಗಳಿರುವುದರಿಂದ ಇವೂ ಕೂಡ ಮಾರ್ಪಟ್ಟ ಉಪಾಂಗಗಳು ಎಂಬ ಭಾವನೆಗೆ ಎಡೆಕೊಟ್ಟಿವೆ. ಆದರೆ ಇವಕ್ಕೆ ಅನುವಾದ ಖಂಡ ಇಲ್ಲದಿರುವುದರಿಂದಲೂ ಬೆಳವಣಿಗೆಯ ಮೊದಲ ಹಂತಗಳಲ್ಲಿ ತೊಟ್ಟುಗಳು ಇಲ್ಲದಿರುವುರಿಂದಲೂ ಈ ಭಾವನೆಗೆ ಅಂಗೀಕಾರ ದೊರಕಿಲ್ಲ. ಮಧ್ಯಾಕ್ಷಿ ಸಾಮಾನ್ಯವಾಗಿ ನಾಪ್ಲಿಯಸ್ ಡಿಂಬದಲ್ಲಿ ಮಾತ್ರ ಇದೆ. ಇದು ಬಹುಪಾಲು ಪ್ರಬುದ್ಧ ಪ್ರಾಣಿಗಳಲ್ಲಿಯೂ ಉಳಿಯಬಹುದು. ಇದರಲ್ಲಿ ವರ್ಣದ್ರವ್ಯದ ಮೂರು ಬಟ್ಟಲುಗಳಿವೆ; ಮಧ್ಯದಲ್ಲಿ ಒಂದು, ಅಕ್ಕಪಕ್ಕಗಳಲ್ಲಿ ಎರಡು. ಪ್ರತಿಯೊಂದು ಬಟ್ಟಲೂ ರೆಟಿನಲ್ (ಅಕ್ಷಿಪಟಲದ) ಜೀವಕೋಶಗಳಿಂದ ತುಂಬಿದೆ. ಈ ಜೀವಕೋಶಗಳ ಹೊರತುದಿಗಳು ನರತಂತುಗಳಾಗಿ ಮುಂದುವರಿದಿವೆ. ಆದ್ದರಿಂದ ಕಶೇರುಕಗಳಲ್ಲಿರುವಂತೆಯೇ ಇಲ್ಲಿಯೂ ಇಂದ್ರಿಯ ಜೀವಕೋಶಗಳೂ ತಲೆಕೆಳಗಾಗಿವೆ. ಕೆಲವೊಮ್ಮೆ ಒಂದೊಂದು ಬಟ್ಟಲಿಗೂ ಒಂದೊಂದು ಮಸೂರವಿರುತ್ತದೆ. ಕೆಲವು ಕೋಪಿಪೋಡಗಳಲ್ಲಿ ಪಕ್ಕದ ಬಟ್ಟಲುಗಳೆರಡೂ ನಡುವಿನದರಿಂದ ಪ್ರತ್ಯೇಕವಾಗಿ ಪಾರ್ಶ್ವದ ಅಕ್ಷಿಗಳಾಗುತ್ತವೆ. ದೇಹದ ಮೇಲೆಲ್ಲ ಹರಡಿರುವ ಮುಳ್ಳುಗಳು ಇತರ ಜ್ಞಾನಾನುಭವಗಳ ಗ್ರಹಣೆಗೆ ಸಹಕರಿಸುತ್ತವೆ. ಅವುಗಳ ಜೀವರಸದಲ್ಲಿ ನರತಂತುಗಳಿರುತ್ತವೆ. ಈ ಮುಳ್ಳುಗಳಲ್ಲಿ ಬಹುಪಾಲು ಅನೇಕ ರೀತಿಯಲ್ಲಿ ಕವಲೊಡೆದಿರುತ್ತವೆ. ಡೆಕಪೊಡ ಮತ್ತು ಸಿಂಕಾರ್ಡಿಯ ಗುಂಪಿನ ಪ್ರಾಣಿಗಳಲ್ಲಿ ಅಂಟೆನ್ಯೂಲಿನ ಬುಡದಲ್ಲಿ ಮತ್ತು ಮೈಸಿಡೆ ಗುಂಪಿನವುಗಳಲ್ಲಿ ಉದರಭಾಗದ ಆರನೆಯ ಉಪಾಂಗದ ಎಂಡೊಪೊಡೈಟ್ ಮೇಲೆ ಸ್ಟ್ಯಾಟೊಸಿಸ್ಟುಗಳೆಂಬ ಕುಳಿಗಳಿವೆ. ಈ ಕುಳಿಯ ಭಿತ್ತಿಯಲ್ಲಿ ನವುರಾದ ರೋಮಗಳೂ ಅದರ ಒಳಗೆ ಮರಳಿನ ಕಣಗಳೂ ಇವೆ. ಸ್ಟ್ಯಾಟೊಸಿಸ್ಟುಗಳು ಸಮತೋಲನದ ಜ್ಞಾನೇಂದ್ರಿಯಗಳು. ಅಂಟೆನ್ಯೂಲ್ ಮತ್ತು ಅಂಟೆನಗಳ ಮೇಲೆ ಈಸ್ಟೆಟ್ಯಾಸ್ಕ್ಸ್ ಎಂಬ ಘ್ರಾಣೇಂದ್ರಿಯ ರೋಮಗಳಿವೆ. ಅಲ್ಲದೆ ಅನೇಕ ಕಠಿಣಚರ್ಮಿಗಳ ಶಿರದ ಮುಂತುದಿಯಲ್ಲಿ ಹಣೆಯ ಅಂಗ (ಫ್ರಾಂಟಲ್ ಆರ್ಗನ್) ಎಂಬೊಂದು ರಚನೆ ಇದೆ. ಇದೂ ಕೂಡ ಜ್ಞಾನೇಂದ್ರಿಯ.

ವರ್ಣ ವಿನ್ಯಾಸ: ಕಠಿಣಚರ್ಮಿಗಳಿಗೆ ಒಂದಿಲ್ಲೊಂದು ರೀತಿಯ ಬಣ್ಣ ಉಂಟು. ಕೆಂಪು, ಕಿತ್ತಲೆ, ನೇರಳೆ, ಹಸಿರು, ನೀಲಿ, ಕಂದು, ಕಪ್ಪು ಮುಂತಾದ ಬಣ್ಣಗಳಿರುತ್ತವೆ. ಒಂದೇ ಪ್ರಭೇದದಲ್ಲಿ ಎಲ್ಲ ಬಣ್ಣಗಳೂ ಇಲ್ಲದಿರಬಹುದು. ಇವುಗಳಲ್ಲಿ ಹೆಚ್ಚು ಬಣ್ಣಗಳು ಲಿಪೊಕ್ರೋಮ್ ಎಂಬ ವಸ್ತುವಿನಿಂದಾದುವು. ಕಂದು ಮತ್ತು ಕಪ್ಪು ಬಣ್ಣಗಳು ಮೆಲಾನಿನಿಂದಾದುವು. ಇವುಗಳಲ್ಲಿ ಬಹುಪಾಲು ಕವಲೊಡೆದ ಜೀವಕೋಶಗಳಲ್ಲಿರುತ್ತವೆ (ಕ್ರೊಮ್ಯಾಟೊಫೋರ್). ಆದರೆ ನೀಲಿ ಮತ್ತು ಬಹುಶಃ ಕೆಲವು ಇತರ ಬಣ್ಣಗಳು ಅಂಗಾಂಶಗಳಲ್ಲಿ ಕರಗಿ ಹರಡಿರಬಹುದು. ಈ ಕ್ರೊಮ್ಯಾಟೊಫೋರುಗಳು ಎಪಿಡರ್ಮಲ್ ಪದರದಲ್ಲಿ, ಡರ್ಮಿಸ್‌ನಲ್ಲಿ ಅಥವಾ ಒಳಗಿನ ಅಂಗಗಳ ಸಂಯೋಜಕ ಅಂಗಾಂಶಗಳಲ್ಲಿ ಇರಬಹುದು. ಈ ಬಣ್ಣ ಕವಲುಗಳಿಗೆ ಹರಿಯುವುದರಿಂದ ಅಥವಾ ಅವುಗಳಿಂದ ವಾಪಸ್ಸು ಚಲಿಸುವುದರಿಂದ ವರ್ಣಕೋಶಗಳು ಸಂಕುಚಿಸುವ ಅಥವಾ ಹಿಗ್ಗುವ ಕ್ರಿಯೆಯನ್ನು ತೋರುತ್ತವೆ. ಈ ಕ್ರಿಯೆಗೆ ಬೆಳಕು ಮತ್ತು ಬೆಳಕಿನ ತೀವ್ರತೆ ಪ್ರಚೋದಕವಾಗಿ ವರ್ತಿಸುತ್ತವೆ. ಅಲ್ಲದೆ ಹಿನ್ನೆಲೆಯೂ ಪ್ರತಿಕ್ರಿಯೆಗೆ ಕಾರಣವಾಗಬಹುದು. ಅತಿ ತೀವ್ರವಾದ ಬೆಳಕಿನಲ್ಲಿ

ಅಥವಾ ಬೆಳಕನ್ನು ಹೀರುವ ಹಿನ್ನೆಲೆಯಲ್ಲಿ ಈ ವರ್ಣಕೋಶಗಳು ವಿಸ್ತರಿಸುತ್ತವೆ. ಕಡಿಮೆ ತೀವ್ರತೆಯ ಬೆಳಕಿನಲ್ಲಿ ಅಥವಾ ಬೆಳಕನ್ನು ಹರಡುವ ಹಿನ್ನೆಲೆಯಲ್ಲಿ ಅವು ಸಂಕುಚಿತವಾಗುತ್ತವೆ. ಆದರೆ ಈ ಪ್ರಚೋದನ ಕ್ರಮದಲ್ಲಿ ಕಣ್ಣುಗಳು ನೇರವಾಗಿ ಭಾಗವಹಿಸುವುದಿಲ್ಲ. ಬೆಳಕಿನ ಪ್ರಚೋದನೆ ಕೆಲವು ಅಂತಃಸ್ರಾವಕ ಗ್ರಂಥಿಗಳ ಮೇಲೆ ಪರಿಣಾಮ ಬೀರಿ ಅವು ಹಾರ್ಮೋನುಗಳನ್ನು ಉತ್ಪತ್ತಿ ಮಾಡುವಂತೆ ಮಾಡಿ, ಇದರಿಂದ ಮುಂದಿನ ಪ್ರತಿಕ್ರಿಯೆ ನಡೆಯುತ್ತದೆ.

ಅನ್ನನಾಳ: ಸಾಮಾನ್ಯವಾಗಿ ಇದು ನೇರವಾದ ಒಂದು ನಾಳ. ಇದರಲ್ಲಿ ಮುನ್ನಾಳ, ನಡುನಾಳ ಮತ್ತು ಹಿನ್ನಾಳಗಳೆಂಬ ಮೂರು ಭಾಗಗಳಿವೆ. ಮುನ್ನಾಳ ಮತ್ತು ಹಿನ್ನಾಳಗಳು (ಸ್ಟೊಮೇಡಿಯಂ ಮತ್ತು ಪ್ರೊಕ್ಟೋಡಿಯಂ) ಎಪಿಡರ್ಮಿಸಿನಿಂದ ಉದ್ಭವಿಸಿದ ಭಾಗಗಳು. ಇವಕ್ಕೆ ಕ್ಯುಟಿಕಲಿನ ಅನುಲೇಪನವಿದೆ. ಮುನ್ನಾಳದ ಸ್ನಾಯುಗಳು ಬಲಯುತವಾಗಿದ್ದು ಕೆಲವೊಮ್ಮೆ ಹಲ್ಲು ಅಥವಾ ಮುಳ್ಳುಗಳನ್ನು ಬೆಳೆಸಿಕೊಂಡಿವೆ. ಮ್ಯಾಲಕಾಸ್ಟ್ರೇಕ ಗುಂಪಿನ ಪ್ರಾಣಿಗಳಲ್ಲಿ ಈ ಅಂಶಗಳೂ ಸೇರಿ ಬಹಳ ಜಟಿಲವಾದ ಪ್ರೊವೆಂಟ್ರಿಕ್ಯುಲಸ್(ಜಠರ) ಆಗಿದೆ. ಇದರಲ್ಲಿ ಜಠರ ಯಂತ್ರವೂ (ಮಿಲ್) ಆಹಾರದ ರಸಗಳಿಂದ ಕಣಗಳನ್ನು ಶೋಧಿಸುವ, ಮುಳ್ಳುಗಳಿಂದಾದ ಒಂದು ಶೋಧಕಾಂಗವೂ ಇವೆ. ಈ ಯಂತ್ರ ಮತ್ತು ಶೋಧಕಾಂಗಗಳೂ ಪ್ರತ್ಯೇಕವಾದ ಕಾರ್ಡಿಯಾಕ್ ಮತ್ತು ಪೈಲಾರಿಕ್ ಕೋಣೆಗಳಲ್ಲಿವೆ. ನಡುನಾಳದ ಮುಂದಿನ ತುದಿಯಲ್ಲಿ ಒಂದು ಅಥವಾ ಹೆಚ್ಚು ಜೊತೆ ಅಪಸರಣಾಂಗಗಳು (ಹೆಪ್ಯಾಟಿಕ್ ಸೀಕೆ) ಇವೆ. ಇವು ಸ್ರಾವ ಮತ್ತು ಹೀರುವ ಕಾರ್ಯಗಳಲ್ಲಿ ಸಹಕರಿಸುತ್ತವೆ. ಕೆಲವೊಮ್ಮೆ ಇವು ಕವಲೊಡೆದು ಪಿತ್ತಜನಕಾಂಗವೂ ಆಗಬಹುದು. ಕಶೇರುಕಗಳ ಪಿತ್ತಜನಕಾಂಗಕ್ಕೆ ವ್ಯತಿರಿಕ್ತವಾಗಿ ಇದು ಜೀರ್ಣಿಸಲು ಬೇಕಾದ ಎಲ್ಲ ಕಿಣ್ವಗಳನ್ನು ಉತ್ಪತ್ತಿ ಮಾಡುತ್ತದೆಯಲ್ಲದೆ ಜೀರ್ಣವಾದ ಆಹಾರವನ್ನೂ ಹೀರಿಕೊಳ್ಳುತ್ತದೆ. ಹೆಚ್ಚಿನ ಪೋಷಕಾಂಶಗಳನ್ನು ಗ್ಲೈಕೊಜೆನ್ ಅಥವಾ ಕೊಬ್ಬಿನ ರೂಪದಲ್ಲಿ ಶೇಖರಿಸಿಡುವುದರಲ್ಲೂ ಇದು ಸಹಕಾರಿ. ಕೆಲವು ಜೀವಿಗಳಲ್ಲಿ ಹಿನ್ನಾಳ ಇಲ್ಲ. ನಡುನಾಳ ಬೇರಾವ ಸಂಬಂಧವನ್ನೂ ಕಲ್ಪಿಸದೆ ಹಠಾತ್ತನೆ ಕೊನೆಯಾಗುತ್ತದೆ. ರೈಜೊಸೆಫಾಲ ಮತ್ತು ಕೆಲವು ಕೋಪಿಪೋಡಗಳಲ್ಲಿ ಅನ್ನನಾಳ ಇಡೀ ಜೀವಿತ ಕಾಲದಲ್ಲಿ ಇರುವುದಿಲ್ಲ. ಇವು ಪರತಂತ್ರ ಜೀವನ ಕಾಲದಲ್ಲಿ, ಪೂರ್ತಿ ಜೀವಮಾನಕ್ಕೆ ಸಾಕಾಗುವಷ್ಟು ಆಹಾರವನ್ನು ಚರ್ಮದ ಮೂಲಕ ಹೀರಿಕೊಳ್ಳುತ್ತವೆ.

ವಿಸರ್ಜನೆ : ಆಂಟೆನಲ್ ಮತ್ತು ಮ್ಯಾಕ್ಸಿಲರಿ ಗ್ರಂಥಿಗಳೆಂಬ ಎರಡು ಜೊತೆ ಮುಖ್ಯ ಶುದ್ಧೀಕರಣಾಂಗಗಳಿವೆ. ಇವು ಅವುಗಳ ಹೆಸರು ಸೂಚಿಸುವಂತೆ ಆಯಾ ಉಪಾಂಗದ ಬುಡದಲ್ಲಿ ಹೊರಕ್ಕೆ ತೆರೆಯುತ್ತವೆ. ಸಾಮಾನ್ಯವಾಗಿ ಬೆಳವಣಿಗೆಯಲ್ಲಿ ಇವು ಒಂದಾದ ಮೇಲೊಂದರಂತೆ ಕಾಣಿಸಿಕೊಳ್ಳುತ್ತವೆ. ಎರಡೂ ಗ್ರಂಥಿಗಳು ಏಕಕಾಲದಲ್ಲಿಯೆ ಕಾರ್ಯನಿರ್ವಹಿಸುವುದು ಬಹಳ ಅಪೂರ್ವ. ಬ್ರಾಂಕಿಯೊಪೊಡದಲ್ಲಿ ಆಂಟೆನಲ್ ಗ್ರಂಥಿ ಡಿಂಬದ ಶುದ್ಧೀಕರಣಾಂಗ, ಮ್ಯಾಕ್ಸಿಲರಿ ಗ್ರಂಥಿ ವಯಸ್ಕ ಪ್ರಾಣಿಯ ಶುದ್ಧೀಕರಣಾಂಗ. ಆದರೆ ಡೆಕಪೊಡದಲ್ಲಿ ಆಂಟೆನಲ್ ಗ್ರಂಥಿಯೇ ವಯಸ್ಕ ಪ್ರಾಣಿಯ ಶುದ್ಧೀಕರಣಾಂಗ. ಪ್ರತಿಯೊಂದು ಗ್ರಂಥಿಯಲ್ಲಿಯೂ ಒಂದು ತುದಿಯ ಕೋಶ ಮತ್ತು ಒಂದು ನಾಳವಿದೆ. ಈ ನಾಳ ತುದಿಯ ಕೋಶದಿಂದ ಹೊರಟು ಹೊರಕ್ಕೆ ತೆರೆಯುತ್ತದೆ. ತುದಿಯ ಕೋಶ ಮತ್ತು ನಾಳಗಳು ಸಂಧಿಸುವಲ್ಲಿ ಒಂದು ವಲಯ (ಸ್ಫಿಂಕ್ಟರ್) ಸ್ನಾಯುವಿದೆ. ಡೆಕಪೊಡಗಳ ಆಂಟಿನಲ್ ಗ್ರಂಥಿಗಳು ಬಲು ಜಟಿಲವಾಗಿದೆ.

ಉಸಿರಾಟ: ಪುಟ್ಟ ದೇಹವುಳ್ಳ ಕಠಿಣಚರ್ಮಿಗಳು, ಅದರಲ್ಲಿಯೂ ಕೋಪಿಪಾಡ್‌ಗಳು ದೇಹದ ಹೊರಮೈ ಮೂಲಕ ಉಸಿರಾಡುತ್ತವೆ. ಆದರೆ ದಪ್ಪ ಅಸ್ಥಿಪಂಜರವುಳ್ಳ ಪ್ರಾಣಿಗಳಲ್ಲಿ ಉಸಿರಾಟಕ್ಕೆ ಪ್ರತ್ಯೇಕವಾದ ಅಂಗಗಳಿವೆ. ಕ್ಯಾರಪೇಸಿನ ಒಳಚರ್ಮವೇ ಉಸಿರಾಟಕ್ಕೆ ಅನುವಾಗಬಹುದು. ಕೆಲವು ಮ್ಯಾಲಕಾಸ್ಟ್ರೇಕಗಳಲ್ಲಿ ಉಪಾಂಗಗಳ ಪ್ರೋಟೊಪೊಡೈಟುಗಳ ಮೇಲೆ ಬೆಳೆಯುವ ಪ್ರವರ್ಧಗಳು ಮತ್ತು ಮಡಿಕೆ ಮಡಿಕೆಯಾಗಿರುವ ಅಥವಾ ಕವಲೊಡೆದ ಕಿವಿರುಗಳು ಇವೆ. ಅವು ಬೆಳೆಯುವ ಸ್ಥಳವನ್ನನುಸರಿಸಿ ಕಿವಿರುಗಳನ್ನು ವಿಂಗಡಿಸಿದ್ದಾರೆ: ೧ ಆರ್ತೊಬ್ರ್ಯಾಂಕ್; ಇವು ಹೊರ ಅಸ್ಥಿಪಂಜರವನ್ನು ದೇಹಕ್ಕೆ ಅಂಟಿಸುವ ಆರ್ತ್ರಾಯಿಡಲ್ ಪಟಲಕ್ಕೆ ಅಂಟಿಕೊಂಡಿವೆ. ೨ ಪೋಡೋಬ್ರ್ಯಾಂಕ್: ಇವು ಉಪಾಂಗಗಳ ಬುಡಕ್ಕೆ ಅಂಟಿಕೊಂಡಿವೆ. ೩ ಪ್ಲೂರೊಬ್ರ್ಯಾಂಕ್; ಮೇಲಿನ ಹೊರ ಅಸ್ಥಿಪಂಜರದ ಫಲಕ ಕೆಳಗಿನ ಫಲಕವನ್ನು ದಾಟಿ ಪಕ್ಕದಲ್ಲಿ ಚಾಚಿ ಪ್ಲೂರಾನ್ ಎಂಬೊಂದು ಅವಕಾಶವನ್ನು ರಚಿಸುತ್ತದೆ. ಕಿವಿರುಗಳು ಆ ಜಾಗದಲ್ಲಿ ಬೆಳಯುತ್ತವೆ. ಕಿವಿರುಗಳಿರುವ ಭಾಗಕ್ಕೆ ಸದಾ ಹೊಸನೀರಿನ ಪೂರೈಕೆ ಆಗುವಂತೆ ನೀರಿನ ಪ್ರವಾಹವನ್ನುಂಟುಮಾಡಲು ಕೆಲವು ಉಪಾಂಗಗಳೂ ಸಹಕರಿಸುತ್ತವೆ. ನೆಲದ ಮೇಲೆ ವಾಸಿಸುವ ಕಠಿಣಚರ್ಮಿಗಳಲ್ಲಿ ಗಾಳಿಯಲ್ಲಿ ಉಸಿರಾಡಲು ವಿಶೇಷ ಅಂಗಗಳಿಲ್ಲ. ಕಿವಿರುಕೋಣೆಯ ಗೋಡೆ ರಕ್ತನಾಳಗಳಿಂದ ಆವೃತವಾಗಿ ಶ್ವಾಸಕೋಶದಂಥ ರಚನೆ ರೂಪುಗೊಂಡಿದೆ.

ರಕ್ತಪರಿಚಲನೆ: ರಕ್ತಪರಿಚಲನೆಯ ಕ್ರಮದಲ್ಲೂ ಒಂದು ರೀತಿಯ ವಿಕಾಸವನ್ನು ಕಾಣಬಹುದು. ಕೆಲವು ಕಠಿಣಚರ್ಮಿಗಳಲ್ಲಿ ನಳಿಕೆಯಾಕಾರದ ಕೊಳವೆಯೊಂದು ಅನ್ನನಾಳದ ಮೇಲೆ ಹರಡಿದೆ. ಇದರ ಮುಂದಿನ ತುದಿಯಲ್ಲಿ ಒಂದು ಅಯೋರ್ಟ ಇದೆ. ಆದರೆ ಸರಿಯಾಗಿ ರೂಪುಗೊಂಡ ರಕ್ತನಾಳಗಳಿಲ್ಲ. ದೇಹದ ಅಂಗಾಶಗಳ ನಡುವೆ ಇರುವ ಬಿರುಕುಗಳಲ್ಲಿ ರಕ್ತ ಹರಿಯುತ್ತದೆ. ಈ ಬಿರುಕುಗಳನ್ನು ಹಿಮೋಸೀಲ್ ಎಂದು ಕರೆಯುತ್ತಾರೆ. ಇವುಗಳ ರಕ್ತಕ್ಕೆ ಬಣ್ಣವಿಲ್ಲ. ಬಹುತೇಕ ಪ್ರಾಣಿಗಳ ರಕ್ತದಲ್ಲಿ ಬಿಳಿಯ ರಕ್ತಕಣಗಳಿವೆ. ಮ್ಯಾಲಕಾಸ್ಟ್ರೇಕ ಗುಂಪಿನ ಪ್ರಾಣಿಗಳ ರಕ್ತದಲ್ಲಿ ಹಿಮೋಸಯಾನಿನ್ ಎಂಬ ದ್ರವ್ಯವಿದೆ. ಕೆಲವು ಪ್ರಾಣಿಗಳಲ್ಲಿ ಹಿಮೋಗ್ಲಾಬಿನ್ ಕೂಡ ಇದೆ.

ಜನನೇಂದ್ರಿಯಗಳು: ಕೆಲವು ಪ್ರಾಣಿಗಳ ವಿನಹ (ತೊಟ್ಟಿಲ್ಲದ ಸಿರ್ರಿಪೀಡಿಯ, ಕೆಲವು ಐಸೊಪಾಡ್‌ಗಳು ಇತ್ಯಾದಿ,) ಮಿಕ್ಕೆಲ್ಲವೂ ಭಿನ್ನ ಲಿಂಗಿಗಳು. ಬ್ರಾಂಕಿಯೊಪೊಡ ಮತ್ತು ಆಸ್ಟ್ರಕೋಡಗಳಲ್ಲಿ ಪಿತೃರಹಿತ ಸಂತಾನಕ್ರಿಯೆ (ಪಾರ್ಥನೊಜೆನಿಸಿಸ್) ನಡೆಯುತ್ತದೆ. ಸಾಮಾನ್ಯವಾಗಿ ಗಂಡು ಹೆಣ್ಣಿಗಿಂತ ಚಿಕ್ಕದು. ಸಂಭೋಗ ಕಾಲದಲ್ಲಿ ಹೆಣ್ಣನ್ನು ತಬ್ಬಿ ಹಿಡಿಯಲು ಮತ್ತು ರೇತ್ರಾಣುಗಳನ್ನು ವರ್ಗಾಯಿಸಲು ಮಾರ್ಪಟ್ಟ ಉಪಾಂಗಗಳಿವೆ. ಜನನೇಂದ್ರಿಯಗಳು ಸಾಮಾನ್ಯವಾಗಿ ಟೊಳ್ಳಾದ ಅಂಗಗಳು. ಇವುಗಳಿಂದ ಹೊರಟ ನಾಳಗಳು ನೇರವಾಗಿ ಹೊರಕ್ಕೆ ತೆರೆಯುತ್ತವೆ.

ಜೀವನ ಚರಿತ್ರೆ : ಜೀವನ ಚರಿತ್ರೆ ನೇರವಾದುದಲ್ಲ. ಬೆಳವಣಿಗೆಯಲ್ಲಿ ಸಾಮಾನ್ಯವಾಗಿ ಅನೇಕ ಡಿಂಬಾವಸ್ಥೆಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಮೊಟ್ಟೆಯಿಂದ ನಾಪ್ಲಿಯಸ್ ಎಂಬ ಮೊಟ್ಟೆಯಾಕಾರದ ಡಿಂಬ ಹೊರಬರುತ್ತದೆ. ಮುಂದಿನ ತುದಿ ತುಂಬ ಅಗಲ, ಖಂಡ ವಿಂಗಡಣೆ ಇಲ್ಲ. ಮೂರು ಜೊತೆ ಉಪಾಂಗಗಳಿವೆ; ಒಕ್ಕವಲಿನ ಆಂಟೆನ್ಯೂಲ್‌ಗಳು, ಇಕ್ಕವಲಿನ ಆಂಟೆನಗಳು ಹಾಗೂ ಮ್ಯಾಂಡಿಬಲ್‌ಗಳು, ಮಧ್ಯದ ಅಕ್ಷಿ ಇರುತ್ತವೆ. ಒಂದು ದೊಡ್ಡ ಲೇಬ್ರಂ ಇದೆ. ಅನ್ನನಾಳದಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು. ಆಂಟೆನಲ್ ಗ್ರಂಥಿಗಳು ಇರಬಹುದು. ಕಠಿಣಚರ್ಮಿಗಳ ಪ್ರತಿಯೊಂದು ಗುಂಪಿನಲ್ಲಿಯೂ ಈ ಡಿಂಬಾವಸ್ಥೆ ಉಂಟು. ಕೆಲವು ಪ್ರಾಣಿಗಳ ಜೀವನ ಚರಿತ್ರೆಯಲ್ಲಿ ಈ ಡಿಂಬಾವಸ್ಥೆಯೂ ಭ್ರೂಣಾವಸ್ಥೆಯಲ್ಲಿ ಕಳೆದು ಮೆಟನಾಪ್ಲಿಯಸ್ ಅಥವಾ ಜ಼ೋಯಿಯ ಅವಸ್ಥೆ ಅಥವಾ ಪ್ರಬುದ್ಧಾವಸ್ಥೆಯ ಪ್ರಾಣಿಗಳೇ ಮೊಟ್ಟೆಗಳಿಂದ ಹೊರಬರಬಹುದು. ನಾಪ್ಲಿಯಸ್ ಡಿಂಬ ಪೊರೆ ಬಿಟ್ಟು ಪ್ರೊಟೊಜ಼ೋಯಿಯ ಆಗಿ ಬೆಳೆಯುತ್ತದೆ. ಇದರಲ್ಲಿ ನಾಪ್ಲಿಯಸಿಗಿಂತಲೂ ಮೂರು ಜೊತೆ ಉಪಾಂಗಗಳು ಹೆಚ್ಚಾಗಿರುತ್ತವೆ ಮತ್ತು ಮೂರರಿಂದ ಎಂಟರವರೆಗಿನ ಖಂಡಗಳ ಅಂಕುರ ಕಾಣಿಸಿಕೊಳ್ಳುತ್ತವೆ. ಇದು ಜ಼ೋಯಿಯ ಆಗಿ ಬೆಳೆಯುತ್ತದೆ. ಈ ಡಿಂಬಾವಸ್ಥೆಯಲ್ಲಿ ಸೆಫಲೊಥೊರ್‍ಯಾಕ್ಸ್ ಮತ್ತು ಉದರಗಳು ನಿರ್ದಿಷ್ಟವಾಗಿ ರೂಪುಗೊಂಡಿರುತ್ತವೆ. ಒಂದರಿಂದ ಎಂಟು ಜೊತೆಗಳವರೆಗೆ ಉಪಾಂಗಗಳಿರುತ್ತವೆ. ಹಾಗೂ ಇನ್ನೂ ಆರು ಜೊತೆ ಬೆಳೆಯುತ್ತಿರುತ್ತವೆ. ಇದರ ಶಿರಸ್ಸಿನ ಭಾಗದಲ್ಲಿ ಮುಳ್ಳಿರುವುದು ಈ ಡಿಂಬದ ಮುಖ್ಯ ಲಕ್ಷಣ. ಜ಼ೋಯಿಯ ಡಿಂಬವು ಹೆಚ್ಚು ಕಡಿಮೆ ಪ್ರಬುದ್ಧ ಸೈಕ್ಲಾಪ್ಸುಗಳನ್ನೇ ಹೋಲುತ್ತದೆ. ಜ಼ೋಯಿಯ ಪೊರೆ ಕಳಚಿ ಪ್ರಬುದ್ಧ ಮೈಸಿಸ್ ಪ್ರಾಣಿಯನ್ನು ಹೋಲುವ ಮೈಸಿಸ್ ಅವಸ್ಥೆಯನ್ನು ತಲುಪುತ್ತದೆ. ಇದರ ಸೆಫಲೊಥೊರ್‍ಯಾಕ್ಸಿನಲ್ಲಿ ಎಂಟು ಜೊತೆ ಉಪಾಂಗಗಳಿದ್ದು ಒಂದೊಂದು ಉಪಾಂಗವೂ ತನ್ನ ನಿರ್ದಿಷ್ಟ ಕ್ರಿಯೆಯನ್ನು ನಿರ್ವಹಿಸಲು ತಕ್ಕಂತೆ ಮಾರ್ಪಟ್ಟಿರುತ್ತದೆ. ಸೀಗಡಿಗಳಲ್ಲಿ ಮೈಸಿಸ್ ಡಿಂಬ ನೇರವಾಗಿ ಪ್ರಬುದ್ಧ ಪ್ರಾಣಿಯಾಗಿ ಬೆಳೆಯುತ್ತದೆ.

ಆದ್ದರಿಂದ ಸೀಗಡಿಯು ತನ್ನ ವಿಕಾಸಕ್ಕೆ ಕಾರಣವಾದ ಪ್ರಾಣಿಗಳನ್ನು ತನ್ನ ಡಿಂಬಾವಸ್ಥೆಯ ವಿವಿಧ ಹಂತಗಳಲ್ಲಿ ನೆನೆಸಿಕೊಳ್ಳುತ್ತದೆ ಎಂದು ಪ್ರಾಣಿವಿಜ್ಞಾನಿಗಳು ಭಾವಿಸುತ್ತಾರೆ. ಲಾಬ್‌ಸ್ಟರ್ ಪ್ರಾಣಿಯ ಜೀವನಚರಿತ್ರೆಯಲ್ಲಿ ಮೈಸಿಸ್ ಅವಸ್ಥೆಯೊಂದರ ವಿನಹ ಮಿಕ್ಕ ಡಿಂಭಾವಸ್ಥೆಗಳಾವವೂ ಇಲ್ಲ. ಆದರೆ ಏಡಿಗಳ ಬೆಳವಣಿಗೆಯಲ್ಲಿ ಮೈಸಿಸ್ ಬದಲು ಮೆಗಲೋಪ ಎಂಬೊಂದು ಡಿಂಬಾವಸ್ಥೆ ಇದೆ. ಇದರಲ್ಲಿ ಸೆಫಲೊಥೊರ್‍ಯಾಕ್ಸ್ ಭಾಗ ಪೂರ್ಣವಾಗಿ ರೂಪುಗೊಂಡಿದ್ದು ಕೇವಲ ಉದರ ಭಾಗ ಮಾತ್ರ ಅಪೂರ್ಣವಾಗಿರುತ್ತದೆ.

ಕೆಲವು ಸಾರಿ ನಾನಾ ರೀತಿಯ ಜೀವನಗಳಿಗೆ ಕಠಿಣಚರ್ಮಿಗಳೂ ಹೊಂದಿಕೊಂಡು ಅವುಗಳ ದೇಹ ಮಾರ್ಪಡುವುದರಿಂದ ಪ್ರಬುದ್ಧಾವಸ್ಥೆಯಲ್ಲಿ ಅವನ್ನು ಗುರುತಿಸುವುದು ಕಷ್ಟವಾಗುತ್ತದೆ. ಉದಾಹರಣೆಗೆ, ಲಿಪಾಸ್, ಬಾರ್ನಕಲ್ ಮತ್ತು ಸ್ಯಾಕ್ಯುಲೈನಗಳು. ಲಿಪಾಸ್ ಮತ್ತು ಬಾರ್ನಕಲ್‌ಗಳಲ್ಲಿ ದೇಹ ತುಂಬ ಕ್ಷೀಣವಾಗಿ ತಮ್ಮ ರಕ್ಷಣೆಗೆ ಹೊರಚಿಪ್ಪುಗಳನ್ನು ಬೆಳೆಸಿಕೊಂಡಿವೆ. ಮೊದಲು ನೋಡುವವರಿಗೆ ತಟ್ಟನೆ ಅವು ಮೃದ್ವಂಗಿಗಳ ವಂಶಕ್ಕೆ ಸೇರಿದ ಪ್ರಾಣಿಗಳಿರಬಹುದೆಂದು ತೋರುತ್ತದೆ. ಹಾಗೆಯೇ ಸ್ಯಾಕ್ಯುಲೈನದ ಪರತಂತ್ರ ಜೀವನದಿಂದಾಗಿ, ಅದರ ಅಂಗಾಂಗಗಳೆಲ್ಲವೂ ನಶಿಸಿ ಹೋಗಿ, ಅದು ಕೇವಲ ಮೊಟ್ಟೆಗಳನ್ನು ಉತ್ಪತ್ತಿ ಮಾಡುವ ಚೀಲದಂತೆ ಕಾಣುತ್ತದೆ. ಇವುಗಳ ಜೀವನ ಚರಿತ್ರೆಯನ್ನು ಅಭ್ಯಾಸ ಮಾಡಿದಾಗ ಮಾತ್ರ ವಿಶಿಷ್ಟವಾದ ಡಿಂಬಾವಸ್ಥೆಗಳನ್ನು ಕಂಡುಹಿಡಿದು ಇವು ಕಠಿಣಚರ್ಮಿಗಳ ವರ್ಗಕ್ಕೆ ಸೇರಿದ ಪ್ರಾಣಿಗಳು ಎಂದು ಗುರುತಿಸಬಹುದು. ಆದುದರಿಂದ ಡಿಂಬಗಳು ಈ ವರ್ಗದ ಪ್ರಾಣಿಗಳ ವಿಶೇಷ ಲಕ್ಷಣ ಅಂದರೆ ಅತಿಶಯೋಕ್ತಿಯಾಗಲಾರದು.

ವರ್ಗೀಕರಣ: ಈ ವರ್ಗವನ್ನು ಅನೇಕ ಗುಣಗಳ ಆಧಾರದ ಮೇಲೆ ವರ್ಗೀಕರಿಸಿದ್ದಾರೆ. ಹಿಂದೆ ಇವನ್ನು ಮ್ಯಾಲಕಾಸ್ಟ್ರೇಕ ಮತ್ತು ಎಂಟಮಾಸ್ಟ್ರೇಕ ಎಂದು ಎರಡು ಮುಖ್ಯ ಉಪವರ್ಗಗಳಾಗಿ ವರ್ಗೀಕರಿಸುತ್ತಿದ್ದರು. ಆದರೆ ಈಗ ಇವುಗಳ ಬಗ್ಗೆ ಹೆಚ್ಚು ವಿಷಯಗಳು ತಿಳಿದುಬಂದಂತೆ ಹಿಂದೆ ಒಂದು ಗಣವೆಂದು ಗುರುತಿಸಿದ್ದ ಕೆಲವು ಗುಂಪುಗಳಿಗೆ ಉಪವರ್ಗದ ಸ್ಥಾನವನ್ನು ಕೊಟ್ಟು, ಎಂಟಮಾಸ್ಟ್ರೇಕ ಉಪವರ್ಗವನ್ನು ಕೈಬಿಟ್ಟಿದ್ದಾರೆ.

ಉಪವರ್ಗ ೧: ಬ್ರ್ಯಾಂಕಿಯೊಪೋಡ : ಸ್ವತಂತ್ರ ಜೀವಿಗಳು. ಸಂಯುಕ್ತಾಕ್ಷಿಗಳಿವೆ. ಸಾಮಾನ್ಯವಾಗಿ ಕ್ಯಾರಪೇಸ್ ಇದೆ. ಕನಿಷ್ಠ ನಾಲ್ಕು ಜೊತೆ ಮುಂಡಭಾಗದ ಪಾದಗಳಾದರೂ ಇವೆ. ಕಠಿಣಚರ್ಮಿಗಳಲ್ಲಿಯೇ ಇವು ಬಹಳ ಕೆಳಮಟ್ಟದ ಪ್ರಾಣಿಗಳು.

ಗಣ ೧: ಅನೊಸ್ಟ್ರೇಕ : ಕ್ಯಾರಪೇಸ್ ಇಲ್ಲ. ಕಣ್ಣುಗಳಿಗೆ ತೊಟ್ಟುಗಳಿವೆ. ಒಕ್ಕವಲು ಆಂಟೆನಗಳಿವೆ. ಅನೇಕ ಜೊತೆ ಒಂದೇ ರೀತಿಯ ಮುಂಡಪಾದಗಳಿವೆ. ಉದಾ: ಕೈರೊಸಿಫ್ಯಾಲಸ್, ಆರ್ಟೀಮಿಯ.

ಗಣ ೨: ಲಿಪೊಸ್ಟ್ರೇಕ : ಈ ಗುಂಪಿನ ಪ್ರಾಣಿಗಳೆಲ್ಲ ಪಳೆಯುಳಿಕೆಗಳಾಗಿವೆ. ಉದಾ: ಲೆಪಿಡೊಕ್ಯಾರಿಸ್.

ಗಣ ೩: ನೋಟೊಸ್ಟ್ರೇಕ : ಮುಂಡದ ಮೇಲೆ ಬಹಳ ಅಗಲವಾದ ಕ್ಯಾರಪೇಸ್ ಇದೆ. ತೊಟ್ಟಿಲ್ಲದ ಕಣ್ಣುಗಳು ಒಂದಕ್ಕೊಂದು ಬಹಳ ಹತ್ತಿರದಲ್ಲಿವೆ. ಅನೇಕ ಮುಂಡಪಾದಗಳಿವೆ. ಇವುಗಳಲ್ಲಿ ಮೊದಲನೆಯ ಜೊತೆ ಮಿಕ್ಕೆಲ್ಲವುಗಳಿಂದ ತುಂಬ ಭಿನ್ನ. ಉದಾ: ಏಪಸ್ ಮತ್ತು ಲೆಪಿಡ್ಯೂರಸ್.

ಗಣ ೪: ಡಿಪ್ಲೊಸ್ಟ್ರೇಕ : ಮುಂಡ ಮತ್ತು ಪಾದಗಳನ್ನು ಮುಚ್ಚುವ ಅಡಕವಾದ ಕ್ಯಾರಪೇಸ್ ಇದೆ. ತೊಟ್ಟಿಲ್ಲದ ಕಣ್ಣುಗಳೂ ದೊಡ್ಡ ಇಕ್ಕವಲಿನ ಆಂಟೆನಗಳೂ ೪ ರಿಂದ ೨೭ ಜೊತೆ ಮುಂಡಪಾದಗಳೂ ಇವೆ. ಉದಾ: ಇಸ್ಟೀರಿಯ, ಡ್ಯಾಫ್ನಿಯ.

ಉಪವರ್ಗ ೨: ಆಸ್ಟ್ರಕೋಡ : ಸ್ವತಂತ್ರ ಜೀವಿಗಳು. ಸಂಯುಕ್ತಾಕ್ಷಿಗಳು ಇರಬಹುದು ಅಥವಾ ಇಲ್ಲದಿರಬಹುದು. ದ್ವಿಭಾಗಿಯಾದ ಮತ್ತು ಅಡಕ್ಟರ್ ಸ್ನಾಯುವುಳ್ಳ ಕ್ಯಾರಪೇಸ್ ಇದೆ. ಎರಡಕ್ಕಿಂತ ಹೆಚ್ಚು ಮುಂಡಪಾದಗಳಿಲ್ಲ. ಇವುಗಳಲ್ಲಿ ಪಿತೃರಹಿತಸಂತಾನೋತ್ಪತ್ತಿ ಬಹಳ ಸಾಮಾನ್ಯ. ಕೆಲವು ಜಾತಿ ಪ್ರಾಣಿಗಳಲ್ಲಿ ಇದುವರೆಗೂ ಗಂಡುಗಳೇ ಸಿಕ್ಕಿಲ್ಲ. ಉದಾ: ಸೈಪ್ರಿಸ್ ಮತ್ತು ಸೈಪ್ರಿಡಿನ.

ಉಪವರ್ಗ ೩: ಕೋಪಿಪೋಡ : ಸ್ವತಂತ್ರಜೀವಿಗಳು ಅಥವಾ ಪರತಂತ್ರ ಜೀವಿಗಳು. ಸಂಯುಕ್ತಾಕ್ಷಿಗಳಾಗಲೀ ಕ್ಯಾರಪೇಸ್ ಆಗಲೀ ಇಲ್ಲ. ಸಾಮಾನ್ಯವಾಗಿ ಆರು ಜೊತೆ ಎದೆಯ ಉಪಾಂಗಗಳಿವೆ. ಇದರಲ್ಲಿ ಮೊದಲನೆಯದು ಒಕ್ಕವಲು. ಉದರ ಭಾಗದಲ್ಲಿ ಉಪಾಂಗಗಳಿಲ್ಲ. ದೇಹ ಬುಗುರಿಯಾಕಾರ ಅಥವಾ ಗದೆಯಾಕಾರ. ಖಂಡವಿಂಗಡಣೆಯಿಲ್ಲದಿರಬಹುದು. ಖಂಡವಿಂಗಡಣೆ ಇರುವ ಪ್ರಾಣಿಗಳಲ್ಲಿ ಇರಬೇಕಾದ ಖಂಡ ಸಂಖ್ಯೆ ನಿರ್ದಿಷ್ಟ–೧೬. ಉದಾ: ಸೈಕ್ಲಾಪ್ಸ್.

ಉಪವರ್ಗ ೪: ಬ್ರಾಂಕಿಯೂರ: ತಾತ್ಕಾಲಿಕವಾಗಿ ಮೀನುಗಳಲ್ಲಿ ಪರತಂತ್ರ ಜೀವಿಗಳಾಗಿರುತ್ತವೆ. ಸಂಯುಕ್ತಾಕ್ಷಿಗಳು, ಹೀರುಬಾಯಿ ಇವೆ. ಉದರ ಭಾಗದಲ್ಲಿ ಖಂಡ ವಿಂಗಡಣೆಯಾಗಲೀ ಪಾದಗಳಾಗಲೀ ಇಲ್ಲ. ಎದೆಯ ಭಾಗದಲ್ಲಿ ನಾಲ್ಕು ಜೊತೆ ಇಕ್ಕವಲು ಪಾದಗಳಿವೆ. ಇವುಗಳ ಎಕ್ಸೊಪೊಡೈಟ್‌ಗಳು ತುದಿಯಲ್ಲಿ ಹರಡಿವೆ. ಈ ಉಪವರ್ಗದ ಪ್ರಾಣಿಗಳು ಮೇಲೆ ನೋಡಲು ಕೋಪಿಪೋಡಗಳನ್ನೇ ಹೋಲುತ್ತವೆ. ಇವನ್ನು ಸಾಮಾನ್ಯವಾಗಿ ಕಾರ್ಪ್ ಮೀನಿನ ಹೇನು ಎಂದು ಕರೆಯುತ್ತಾರೆ. ಉದಾ: ಆರ್ಗ್ಯುಲಸ್.

ಉಪವರ್ಗ ೫: ಸಿರ್ರಿಪೀಡಿಯ : ಇವು ಒಂದು ಜಾಗಕ್ಕೆ ಅಂಟಿಕೊಂಡು ಜೀವಿಸುತ್ತವೆ. ಬಹುತೇಕ ಉಭಯಲಿಂಗಿಗಳು. ಪ್ರಬುದ್ಧ ಪ್ರಾಣಿಯಲ್ಲಿ ಸಂಯುಕ್ತಾಕ್ಷಿಗಳಿಲ್ಲ. ಕ್ಯಾರಪೇಸ್ ಚಿಪ್ಪಿನಂತೆ ಪ್ರಾಣಿಯನ್ನು ಆವರಿಸುತ್ತದೆ. ಸಾಮಾನ್ಯವಾಗಿ ಆರು ಜೊತೆ ಇಕ್ಕವಲು ಎದೆಯ ಪಾದಗಳಿವೆ. ಇವನ್ನು ಪ್ರಬುದ್ಧಾವಸ್ಥೆಯಲ್ಲಿ ಕಠಿಣಚರ್ಮಿಗಳೆಂದು ಗುರುತಿಸುವುದು ಕಷ್ಟ.

ಗಣ ೧: ಥೊರ್‍ಯಾಸಿಕ : ಅನ್ನನಾಳಗಳಿವೆ. ಆರು ಜೊತೆ ಎದೆಯ ಪಾದಗಳಿವೆ. ಉದರ ಭಾಗದಲ್ಲಿ ಖಂಡಗಳಿಲ್ಲ. ಇವು ಬಾಯಿಯ ಭಾಗದಿಂದ ಯಾವುದಾದರೂ ಆಧಾರಕ್ಕೆ ಸ್ಥಿರವಾಗಿ ಅಂಟಿಕೊಂಡಿರುತ್ತವೆ. ಉದಾ: ಲಿಪಾಸ್.

ಗಣ ೨: ಆಕ್ರೊಥೊರ್‍ಯಾಸಿಕ: ಭಿನ್ನ ಲಿಂಗಿಗಳು. ಅನ್ನನಾಳವಿದೆ. ಆರಕ್ಕಿಂತಲೂ ಕಡಿಮೆ ಜೊತೆ ಎದೆಯ ಪಾದಗಳಿವೆ. ಉದರ ಭಾಗದಲ್ಲಿ ಖಂಡಗಳಿಲ್ಲ. ಉದಾ: ಆಲ್ಸಿಪ್ಪಿ.

ಗಣ ೩: ಏಪೋಡ: ಉಭಯಲಿಂಗಿಗಳು. ಚಿಪ್ಪು, ಎದೆಯ ಪಾದ, ಗುದದ್ವಾರ, ಯಾವವೂ ಇಲ್ಲ. ಮಡಿಕೆಗಳಿಂದ ದೇಹವು ಉಂಗುರಗಳಾಗಿ ವಿಭಾಗವಾಗಿದೆ. ಉದಾ: ಪ್ರೋಟಿಯೊಲಿಪಾಸ್.

ಗಣ ೪: ರೈಝೊಸೆಫಾಲ: ಡೆಕಪಾಡ್ ಕಠಿಣಚರ್ಮಿಗಳಲ್ಲಿ ಪರತಂತ್ರ ಜೀವಿಗಳಾಗಿ ವಾಸಿಸುತ್ತವೆ. ಅನ್ನನಾಳವಿಲ್ಲ. ಪ್ರಬುದ್ಧ ಪ್ರಾಣಿಯಲ್ಲಿ ಉಪಾಂಗಗಳಿಲ್ಲ. ಎಳೆಗಳಂಥ ಹೀರು ಬೇರುಗಳನ್ನು ಬೆಳೆಸಿಕೊಂಡು ಆಶ್ರಯದಾತ ಪ್ರಾಣಿಯ ದೇಹವನ್ನು ಆವರಿಸುತ್ತವೆ. ಉದಾ: ಸ್ಯಾಕ್ಯುಲೈನ

ಗಣ ೫: ಆಸ್ಕೊಥೊರ್‍ಯಾಸಿಕ : ಪರತಂತ್ರ ಜೀವಿಗಳು. ಅನ್ನನಾಳವಿದೆ. ಆರು ಜೊತೆ ಎದೆಯ ಪಾದಗಳಿವೆ. ಉದಾ: ಲಾರಾ.

ಉಪವರ್ಗ ೬: ಮ್ಯಾಲಕಾಸ್ಟ್ರೇಕ : ಸಾಮಾನ್ಯವಾಗಿ ತೊಟ್ಟಿರುವ ಸಂಯುಕ್ತಾಕ್ಷಿಗಳಿವೆ. ಎದೆಯಲ್ಲಿ ಎಂಟು ಖಂಡಗಳಿವೆ. ಅದನ್ನು ಕ್ಯಾರಪೇಸ್ ಮುಚ್ಚಿದೆ. ಆರು ಖಂಡಗಳಿರುವ (ಅಪರೂಪವಾಗಿ ಏಳಿರುವ) ಉದರ ಭಾಗವಿದೆ. ಎಲ್ಲ ಖಂಡಗಳಿಗೂ ಉಪಾಂಗಗಳಿವೆ. ಈ ಉಪವರ್ಗದಲ್ಲಿ ವೈವಿಧ್ಯತೆಯನ್ನು ತೋರುವ ಹೇರಳ ಸಂಖ್ಯೆಯ ಪ್ರಭೇದಗಳಿವೆ.

ಗಣ ೧: ಲೆಪ್ಟೊಸ್ಟ್ರೇಕ : ಏಳು ಉದರ ಖಂಡಗಳಿವೆ. ಪಾದಗಳು ಫಿಲ್ಲೊಪೋಡಿಯಂ ಮಾದರಿಯವು. ಎದೆಯ ಯಾವ ಖಂಡಕ್ಕೂ ಕೂಡಿಕೊಳ್ಳದ ಕ್ಯಾರಪೇಸ್ ಇದೆ. ಉದಾ: ನೆಬೇಲಿಯ.

ಗಣ ೨: ಹಾಪ್ಲೊಕ್ಯಾರಿಡ : ಮೂರು ಎದೆಯ ಖಂಡಗಳೊಂದಿಗೆ ಕೂಡಿದ ಕ್ಯಾರಪೇಸ್ ಇದೆ. ಉದಾ: ಸ್ಕ್ವಿಲ್ಲ.

ಗಣ ೩: ಸಿನ್‌ಕ್ಯಾರಿಡ : ಕ್ಯಾರಪೇಸ್ ಇಲ್ಲ. ಉದಾ: ಅನಾಸ್ಪಿಡಿಸ್.

ಗಣ ೪: ಪೆರಕ್ಯಾರಿಡ : ಕ್ಯಾರಪೇಸ್ ನಾಲ್ಕಕ್ಕಿಂತ ಹೆಚ್ಚಾಗಿ ಎದೆಯ ಖಂಡಗಳೊಂದಿಗೆ ಕೂಡಿಕೊಂಡಿಲ್ಲ. ಇದರ ಭಿನ್ನತೆಯೇ ಮುಂದಿನ ವರ್ಗೀಕರಣಕ್ಕೆ ಮೂಲ.

ಉಪಗಣ ೧: ಮೈಸಿಡೇಸಿಯ : ಉದಾ : ಮೈಸಿಸ್.

ಉಪಗಣ ೨: ಕ್ಯುಮೇಸಿಯ : ಉದಾ : ಡೈಯಾಸ್ಟೈಲಿಸ್.

ಉಪಗಣ ೩: ಟ್ಯಾನಾಯ್ಡೇಸಿಯ : ಉದಾ : ಟ್ಯಾನಿಸ್

ಉಪಗಣ ೪: ಐಸೊಪೋಡ : ಕ್ಯಾರಪೇಸ್ ಇಲ್ಲ. ದೇಹ ಕೆಳಗಿನಿಂದ ಪಕ್ಕಕ್ಕೆ ಚಪ್ಪಟೆಯಾಗಿದೆ. ಉದಾ : ಲಿಗಿಯ.

ಉಪಗಣ ೫: ಆಂಫಿಪೋಡ : ಕ್ಯಾರಪೇಸ್ ಇಲ್ಲ. ಪಕ್ಕದಿಂದ ಪಕ್ಕಕ್ಕೆ ದೇಹ ಚಪ್ಪಟೆಯಾಗಿದೆ. ಉದಾ: ಕ್ಯಾಪ್ರಿಲ್ಲ.

ಗಣ ೫. ಯೂಕ್ಯಾರಿಡ : ಕ್ಯಾರಪೇಸ್ ಎದೆಯ ಎಲ್ಲ ಖಂಡಗಳೊಂದಿಗೆ ಕೂಡಿಕೊಂಡಿದೆ. ಉದಾ : ನಳ್ಳಿ, ಏಡಿ, ಶೀಗಡಿ, ಇತ್ಯಾದಿ. (ಎಚ್.ಬಿ.ಡಿ.)

**ಕಡಲ ಆನೆ**: ಸ್ತನಿಗಳ ವರ್ಗದ ಪಿನ್ನಿಪೀಡಿಯ ಗಣದ ಫೋಸಿಡೆ ಕುಟುಂಬದ ಒಂದು ಜಾತಿಯ ಸೀಲ್ ಪ್ರಾಣಿ (ಸೀ ಎಲಿಫೆಂಟ್). ವೈಜ್ಞಾನಿಕ ನಾಮ ಮಿರೂಂಗ. ಕಡಲ ಕರಡಿ, ಕಡಲ ಚಿರತೆ, ಕಡಲ ಸಿಂಹ ಮುಂತಾದುವುಗಳಿಗೆ ಹತ್ತಿರ ಸಂಬಂಧಿ. ಅವುಗಳೆಲ್ಲಕ್ಕಿಂತ ಇದು ದೊಡ್ಡದೂ ಬಲಿಷ್ಠವಾದುದೂ ಆಗಿದೆ. ಮೂತಿ ಆನೆಯ ಸೊಂಡಿಲಿನಂತೆ ಕೊಂಚ ಮುಂದಕ್ಕೆ ಚಾಚಿರುವುದರಿಂದಲೂ ದೇಹ ದಪ್ಪನಾಗಿರುವುದರಿಂದಲೂ ಇದನ್ನು ಕಡಲ ಆನೆ ಎನ್ನಲಾಗಿದೆ. ಇದರಲ್ಲಿ ಮೆಕ್ಸಿಕೊ ಬಳಿಯ ಗಾಡಲೂಪೆ ದ್ವೀಪಗಳಲ್ಲಿ ಅಲ್ಲಲ್ಲಿ ಕಾಣಬರುವ ಮಿ. ಆಂಗಸ್ಟಿರಾಸ್ಟ್ರಿಸ್ ಎಂಬ ಪ್ರಭೇದವೂ ಫಾಕ್ಲೆಂಡ್, ಕೆರ್ಗ್ಯುಯೆಲೆನ್ ಮತ್ತು ಮಕೇರಿ ದ್ವೀಪಗಳಲ್ಲಿ ಹಾಗೂ ನ್ಯೂಜಿಲೆಂಡಿಗೆ ಮುನ್ನೂರು ಮೈಲಿ ದಕ್ಷಿಣಕ್ಕಿರುವ ಕ್ಯಾಂಬೆಲ್ ದ್ವೀಪಗಳಲ್ಲಿ ವಾಸಿಸುವ ಮಿ. ಲಿಯೋನಿಯ ಎಂಬ ಪ್ರಭೇದವೂ ಇವೆ.

ಕಡಲ ಆನೆಗಳಲ್ಲಿ ಗಂಡು ಸುಮಾರು ೬ ಮೀ ಉದ್ದವಿದ್ದು ಸುಮಾರು ೨೩೦೦ ಕಿಗ್ರಾಂ ತೂಗುತ್ತದೆ. ಹೆಣ್ಣು ಸುಮಾರು ೩ ಮೀ ಉದ್ದವಿರುತ್ತದೆ. ಚರ್ಮ ಒರಟಾಗಿ ಸುಕ್ಕು ಸುಕ್ಕಾಗಿದೆ. ಮೂತಿ ೩೦ ಸೆಮೀ ಉದ್ದದ ಸೊಂಡಿಲಿನಂತೆ ಬಾಯ ಮೇಲೆ ಇಳಿಬಿದ್ದಿದೆ. ಉಸಿರೆಳೆದುಕೊಂಡಾಗ ಸೊಂಡಿಲು ಕುಣಿದೇಳುವುದೂ ದೊಡ್ಡ ಗೊರಕೆಯಂತೆ ಶಬ್ದವಾಗುವುದೂ ಕಡಲಾನೆಯ ವಿಚಿತ್ರ ಲಕ್ಷಣಗಳು. ಸ್ವಭಾವತಃ ಮಂದ. ಕಡಲ ತೀರ ಅಥವಾ ಬಂಡೆಗಳ ಮೇಲೆ ಮಲಗಿಯೇ ಇರುತ್ತದೆ. ಬೇಟೆಯಾಡಲು ಮಾತ್ರ ನೀರಿಗಿಳಿಯುತ್ತದೆ. ನೀರಿನಲ್ಲಿ ವೇಗವಾಗಿ ಮತ್ತು ಗಂಭೀರ ಗತಿಯಲ್ಲಿ ಈಜಬಲ್ಲುದು. ಮೀನುಗಳು ಮತ್ತು ಸ್ಕ್ವಿಡ್ಡುಗಳು ಇದರ ಪ್ರಧಾನ ಆಹಾರ. ಹಕ್ಕಿಗಳಂತೆ ಕಲ್ಲುಗಳನ್ನು ನುಂಗಿ ಜಠರದಲ್ಲಿ ಶೇಖರಿಸಿಕೊಳ್ಳುತ್ತದೆ. ಆಹಾರವನ್ನು ಅರೆಯಲು ಇವನ್ನು ಉಪಯೋಗಿಸಿಕೊಳ್ಳುವುದೆಂದು ತೋರುತ್ತದೆ.

ಋತುಕಾಲ ಬಂದಾಗ ಇತರ ಸೀಲ್ ಪ್ರಾಣಿಗಳಂತೆ ಸಮುದ್ರದಂಡೆಯ ಮೇಲೆ ಬೀಡು ಬಿಡುತ್ತದೆ. ಆನೆಯ ಸ್ವಭಾವದಂತೆ ಒಂದು ಗಂಡು ತನ್ನ ಹತ್ತಿರ ಹಲವು ಹೆಣ್ಣುಗಳನ್ನು ಇರಿಸಿಕೊಂಡು ಇತರ ಗಂಡುಗಳಿಂದ ರಕ್ಷಿಸಿಕೊಳ್ಳುತ್ತದೆ. ಹೆಣ್ಣುಗಳಿಗಾಗಿ ಕೆಲವೊಮ್ಮೆ ಭಯಂಕರ ಹೋರಾಟವೂ ನಡೆಯುವುದುಂಟು. ಹೆಣ್ಣು ಫೆಬ್ರುವರಿ ಮತ್ತು ಜೂನ್ ತಿಂಗಳುಗಳ ನಡುವಣ ಕಾಲದಲ್ಲಿ ಮರಿ ಹಾಕುತ್ತದೆ. ಸಾಮಾನ್ಯವಾಗಿ ಒಂದು ಸಲಕ್ಕೆ ಒಂದು ಮರಿಯನ್ನು ಈಯುತ್ತದೆ.

ಹಿಂದೆ ಕೊಬ್ಬು ಮತ್ತು ಎಣ್ಣೆಗಳಿಗಾಗಿ ಜನ ಇವನ್ನು ಬೇಟೆಯಾಡಿದರಾಗಿ ಹೇರಳವಾಗಿದ್ದ

ಕಡಲಾನೆಗಳು ಕಡಿಮೆಯಾಗುತ್ತ ಬಂದುವು. ಈಚೆಗೆ ಇವುಗಳ ಬೇಟೆಯನ್ನು ಸರ್ಕಾರಗಳು ಪ್ರತಿಬಂಧಿಸಿ ಇವುಗಳ ಪೀಳಿಗೆ ನಾಶವಾಗುವುದನ್ನು ತಪ್ಪಿಸಿವೆ. ನೋಡಿ–ಸೀಲ್.

***

**ಕಡಲ ಇಲಿ:** ವಲಯವಂತ ವಂಶದ ಪಾಲಿಕೀಟ ಗಣಕ್ಕೆ ಸೇರಿದ ಅಫ್ರೊಡೈಟ್ ಜಾತಿಯ ಕಡಲುವಾಸಿ (ಸೀಮೌಸ್). ಉತ್ತರ ಅಮೆರಿಕ, ಆಸ್ಟ್ರೇಲಿಯ ಮತ್ತು ಐರೋಪ್ಯ ರಾಷ್ಟ್ರಗಳ ಕರಾವಳಿಯ ನಯವಾದ ಮಣ್ಣಿನ ಸಮುದ್ರ ತಳದಲ್ಲಿ ವಾಸಿಸುತ್ತದೆ. ಸಮುದ್ರತಳದಲ್ಲಿ ತೆವಳುವಾಗ ಇಲಿಯನ್ನು ಹೋಲುವುದರಿಂದ ಇದಕ್ಕೆ ಈ ಹೆಸರು. ೪೦ಕ್ಕೂ ಮಿಗಿಲಾದ ಖಂಡಗಳುಳ್ಳ ಈ ಮಂದಗಾಮಿಯ ಅಂಡಾಕಾರದ ದೇಹ ೧೫–೧೮ ಸೆಮೀ ಉದ್ದ, ೭.೫–೧೦ ಸೆಮೀ ಅಗಲ. ಪ್ರತಿ ಖಂಡದ ಇಕ್ಕೆಡೆಯಲ್ಲೂ ದ್ವಿಶಾಖಾರಚನೆಯುಳ್ಳ (ಬೈರ್‍ಯಾಮಸ್) ಎರಡು ಪಾರ್ಶ್ವಪಾದ ಪ್ಯಾರಪೋಡಿಯ) ಗಳಿವೆ. ಈ ಪಾರ್ಶ್ವಪಾದಗಳ ಬೆನ್ನಿನ ಸಿರ್‍ರಸ್ಸುಗಳಿಂದಾದ ೧೫ ಜೊತೆ ಫಲಕಗಳು ಹೊರಮೈಯನ್ನು ಮುಚ್ಚಿರುತ್ತವೆ. ಆದರೆ ಅವುಗಳ ಮೇಲೆ ನಿಬಿಡವಾಗಿ ಹರಡಿರುವ ವರ್ಣರಂಜಿತ ಬಿರುಗೂದಲುಗಳ ಹೊದಿಕೆಯಿರುವುದರಿಂದ ಫಲಕಗಳು ಕಾಣುವುದಿಲ್ಲ. ಈ ರಕ್ಷಾಕವಚದ ಚಲನೆಯಿಂದ ಕಡಲ ಇಲಿಯ ಬಿಲದಲ್ಲಿ ಜಲಾಭಿಸರಣೆಯಾಗುತ್ತದೆ. ಸ್ನಾಯುಪುಷ್ಟಿತ ಸ್ಥೂಲ ಗಂಟಲಲ್ಲದೆ ೧೮ ಜೊತೆ ಕರುಳು ಚೀಲಗಳಿರುವ ಜೀರ್ಣನಾಳ ಎಲ್ಲ ಜಾತಿಯ ಕಡಲು ಇಲಿಗಳಲ್ಲೂ ಕಂಡುಬರುತ್ತವೆ. ಇದರ ಜೀರ್ಣನಾಳದ ಮುಂತುದಿಯನ್ನು ಹಿಂದಿನವರು ಆಹಾರವಾಗಿ ಉಪಯೋಗಿಸುತ್ತಿದ್ದರೆಂದು ಪ್ರತೀತಿ. ಭಾರತದ ಸಮುದ್ರ ದಡಗಳಲ್ಲಿ ಇದರ ಕೆಲವು ಪ್ರಭೇದಗಳು ಕಂಡುಬರುತ್ತವೆ. ಅವುಗಳಲ್ಲಿ ತಮಿಳುನಾಡು ಮತ್ತು ಸಾಂತಾಪಲ್ಲಿಯಲ್ಲಿ ದೊರಕುವ ಅಫ್ರೊಡೈಟ್ ಅಕ್ಯುಲಿಯೇಟ, ಲಕ್ಷದ್ವೀಪ ಮತ್ತು ಕ್ಯಾಮೊರಿನ್ ದ್ವೀಪಗಳಲ್ಲಿ ವಾಸಿಸುವ ಅ.ಆಸ್ಟ್ರಾಲಿಸ್ ಮತ್ತು ಅಂಡಮಾನ್, ಒರಿಸ್ಸ, ಕೇರಳ ಮತ್ತು ಬಂಗಾಳ ಕೊಲ್ಲಿಗಳಲ್ಲಿರುವ ಅ.ಟಾಲ್ಪಾಗಳು ಮುಖ್ಯವಾದುವು.

(ಎಸ್.ಎಚ್.ಒ.)


ಕಡಲ ಇಲಿ

**ಕಡಲ ಕರಡಿ:** ಸ್ತನಿಗಳ ವರ್ಗದ ಪಿನ್ನಿಪೀಡಿಯ ಗಣದ ಓಟರೈಯಿಡೆ ಕುಟುಂಬಕ್ಕೆ ಸೇರಿದ ಸಮುದ್ರವಾಸಿ ಸ್ತನಿ (ಸೀ ಬೇರ್). ಫರ್ ಸೀಲ್ (ತುಪ್ಪುಳ ಸೀಲ್) ಎಂದೂ ಕರೆಯುತ್ತಾರೆ. ಇದು ಕಡಲ ಸಿಂಹದ ಹತ್ತಿರದ ಸಂಬಂಧಿ. ಕ್ಯಾಲೊರೈನಸ್ ಮತ್ತು ಆರ್ಕ್ಟೊಸಿಫ್ಯಾಲಸ್ ಎಂಬ ಎರಡು ಜಾತಿಗಳು ಬಹು ಮುಖ್ಯವಾದುವು. ಮೊದಲನೆಯದು ಬೆರಿಂಗ್ ಸಮುದ್ರದ ದ್ವೀಪಗಳು, ಜಪಾನ್ ಮತ್ತು ಅಮೆರಿಕದ ಕೆಲವು ಭಾಗಗಳ ನಿವಾಸಿ. ಎರಡನೆಯದು ನ್ಯೂಜ಼ಿಲೆಂಡ್, ಆಸ್ಟ್ರೇಲಿಯ, ಟಾಸ್ಮೇನಿಯ, ಅಮೆರಿಕಗಳ ಸಮುದ್ರತೀರಗಳಲ್ಲಿ ವಾಸಿಸುತ್ತದೆ.

ಚೆನ್ನಾಗಿ ಬೆಳೆದ ಕ್ಯಾಲೊರೈನಸ್ ಜಾತಿಯ ಗಂಡು ಕಡಲ ಕರಡಿ ಸು. ೧.೮ ಮೀ ಉದ್ದವಿದ್ದು ೨೦೦–೩೦೦ ಕಿಗ್ರಾಂ ತೂಗುತ್ತದೆ. ಹೆಣ್ಣು ಗಂಡಿಗಿಂತ ಚಿಕ್ಕದು. ಇತರ ಸೀಲ್ ಪ್ರಾಣಿಗಳಲ್ಲಿರುವಂತೆಯೇ ಇದರ ದೇಹವೂ ಜಲವಾಸಕ್ಕೆ ಅನುಕೂಲವಾಗಿದೆ. ಮೈಮೇಲೆ ರೇಷ್ಮೆಯಂಥ ಮೃದುವಾದ ಹಾಗೂ ದಟ್ಟವಾದ ಕೂದಲಿವೆ. ಬಣ್ಣ ಕಪ್ಪು ಮಿಶ್ರಿತ ಬೂದು ಅಥವಾ ಕಂದು. ಸಾಮಾನ್ಯವಾಗಿ ನೀರಿನಲ್ಲಿಯೇ ತನ್ನ ಜೀವಿತವನ್ನೆಲ್ಲ ಕಳೆಯುತ್ತದೆ. ತುಂಬ ಚೆನ್ನಾಗಿ ಈಜಬಲ್ಲುದು. ನೆಲದ ಮೇಲೆ ಇತರ ಸೀಲ್ ಪ್ರಾಣಿಗಳಿಗಿಂತ ಉತ್ತಮವಾಗಿ ನಡೆಯಬಲ್ಲುದು. ಕೆಮ್ಮುವುದು, ಬೊಗಳುವುದು, ಗರ್ಜಿಸುವುದು ಇದರ ವಾಡಿಕೆ. ಮೀನು, ಸ್ಕ್ವಿಡ್ಡುಗಳು ಮತ್ತಿತರ ಸಾಗರದ ಪ್ರಾಣಿಗಳನ್ನು ಹಿಡಿದು ತಿನ್ನುತ್ತದೆ.

ಸಂತಾನೋತ್ಪತ್ತಿಯ ಕ್ರಮ, ಕಾಲ ಎಲ್ಲವೂ ಕಡಲ ಸಿಂಹಗಳಲ್ಲಿನಂತೆಯೇ. ಆದರೆ ತನ್ನ ಅಧೀನದ ಪ್ರದೇಶದ ಸ್ವಾಮ್ಯವನ್ನು ಮತ್ತು ಹೆಣ್ಣುಗಳ ಮೇಲಿನ ತನ್ನ ಅಧಿಕಾರವನ್ನು ಕಾಪಾಡಿಕೊಳ್ಳುವುದರಲ್ಲಿ ಕಡಲ ಸಿಂಹಗಳಿಗಿಂತ ಇದು ಹೆಚ್ಚಿನ ಆಸಕ್ತಿ ತೋರುವುದಲ್ಲದೆ ಹೋರಾಟವನ್ನೂ ನಡೆಸುತ್ತದೆ. ಕಡಲ ಸಿಂಹಗಳಲ್ಲಿರುವಂತೆ ಇದರಲ್ಲಿಯೂ ದಕ್ಷಿಣದ ಕಡೆಗೆ ವಲಸೆ ಹೋಗುವ ಕ್ರಮ ಇದೆ. ಹೀಗೆ ಹೋಗುವಾಗ ತಿಮಿಂಗಲಗಳಿಗೆ ತುತ್ತಾಗುವುದೂ ಉಂಟು.

ಆರ್ಕ್ಟೊಸಿಫ್ಯಾಲಸ್ ಜಾತಿಯ ಕಡಲ ಕರಡಿಗಳು ನೋಡುವುದಕ್ಕೆ ಕ್ಯಾಲೊರೈನಸ್ ಜಾತಿಯವುಗಳಂತಿದ್ದರೂ ಗಾತ್ರದಲ್ಲಿ ಚಿಕ್ಕವು. ಇವುಗಳ ಜೀವನಕ್ರಮವೂ ಅವುಗಳಂತೆಯೇ.

ಈ ಎರಡು ಜಾತಿಯ ಕಡಲ ಕರಡಿಗಳು ತಮ್ಮ ಬೆಲೆಬಾಳುವ ಚರ್ಮದಿಂದ (ಫರ್) ಬಹಳ ಹೆಸರಾಗಿವೆ. ಬಹಳ ಬೇಡಿಕೆಯಿರುವ ಈ ಚರ್ಮಕ್ಕಾಗಿ ಈ ಪ್ರಾಣಿಗಳನ್ನು ಸುಮಾರು ೩೦೦ ವರ್ಷಗಳಿಂದಲೂ ಬೇಟೆಯಾಡುತ್ತಿದ್ದಾರೆ. ಇದರಿಂದಾಗಿ ಪ್ರಪಂಚದ ಹಲವಾರು ಕಡೆಗಳಲ್ಲಿ ಇವುಗಳ ಸಂತತಿ ನಶಿಸಿಹೋಗಿದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳು, ರಷ್ಯ, ಕೆನಡ ಮತ್ತು ಜಪಾನ್ ದೇಶಗಳು ಕಡಲ ಕರಡಿಗಳ ಪ್ರಾಮುಖ್ಯವನ್ನು ಅರಿತು ಅವುಗಳ ಬೇಟೆಯನ್ನು ನಿಯಂತ್ರಿಸಲು ಒಪ್ಪಂದ ಮಾಡಿಕೊಂಡಿವೆ. ಹೀಗಾಗಿ ಅವುಗಳ ಸಂತತಿ ಕ್ರಮೇಣ ವರ್ಧಿಸುತ್ತ ಬಂದಿದೆ.

***

**ಕಡಲ ಕುದುರೆ:** ಉಷ್ಣ ಮತ್ತು ಸಮಶೀತೋಷ್ಣವಲಯಗಳ ಸಮುದ್ರದ ತೀರಪ್ರದೇಶದಲ್ಲಿ ವಾಸಿಸುವ ಅಸ್ಥಿಮೀನು. ಕೊಳವೆ ಮೀನುಗಳ (ಪೈಪ್‌ಫಿಷ್) ಸಂಬಂಧಿ. ಲೋಫೋಬ್ರಾಂಕಿಯ ಗಣದ ಸಿಂಗ್ನಾತಿಡೆ ಕುಟುಂಬಕ್ಕೆ ಸೇರಿದೆ. ವೈಜ್ಞಾನಿಕ ನಾಮ ಹಿಪ್ಪೊಕ್ಯಾಂಪಸ್. ಕುದುರೆಯ ತಲೆಯಂಥದೇ ತಲೆ ಮತ್ತು ಅದೇ ರೀತಿ ಬಾಗಿರುವ ಕುತ್ತಿಗೆಯಿರುವುದರಿಂದ ಈ ಹೆಸರು. ತೀರಪ್ರದೇಶದ ಉತ್ತಳ ನೀರಿನಲ್ಲಿ ಸಮುದ್ರಜೊಂಡಿನ ಮಧ್ಯೆ ಹೇರಳವಾಗಿ ಕಂಡುಬಂದರೂ ಕೆಲವು ಸಾರಿ ನದಿಮುಖಜ ಪ್ರದೇಶದಲ್ಲೂ ಕಾಣಬರುವುದುಂಟು.

ದೇಹ ತೆಳು, ನೀಳ ಹಾಗೂ ಸಣ್ಣದು. ಉದ್ದ ಸಾಮಾನ್ಯವಾಗಿ 7–12 ಸೆಂಮೀ. ಅಮೆರಿಕದ ಪೆಸಿಫಿಕ್ ತೀರಪ್ರದೇಶದ ಹಿಪ್ಪೊಕ್ಯಾಂಪಸ್ ಇಂಜೆನ್ಸ್ ಎಂಬ ಪ್ರಭೇದ 30 ಸೆಂಮೀ ವರೆಗೆ ಬೆಳೆದರೆ ಫ್ಲಾರಿಡದ ಬಳಿ ವಾಸಿಸುವ ಹಿ.ಜೊಸ್ಟೆರ್ನೆ ಎಂಬುದು ಕೇವಲ 5 ಸೆಂಮೀ ಉದ್ದವಿದೆ. ದೇಹದ ಮೇಲೆ ಎಲುಬಿನ ಮೈಗಾಪು ಅಥವಾ ತಟ್ಟೆಗಳು



ಕಡಲ ಕುದುರೆ: 1. ಗಂಡು, 2. ಹೆಣ್ಣು.

ದಟ್ಟವಾಗಿ ಸುವ್ಯವಸ್ಥಿತ ರೀತಿಯಲ್ಲಿ ಜೋಡಣೆಗೊಂಡಿವೆ. ತಲೆಗೂ ದೇಹಕ್ಕೂ ನಡುವಿನ ಕುತ್ತಿಗೆಯ ಭಾಗ ಸುಸ್ಪಷ್ಟ. ಕೊಳವೆಯಾಕಾರದ ಮೂತಿ ಎಲುಬುಗಳ ಕೂಡುವಿಕೆಯಿಂದಾಗಿದೆ. ಮೂತಿಯ ತುದಿಯಲ್ಲಿ ಹೀರುವಂಥ ದುಂಡಾದ ಪುಟ್ಟ ಬಾಯಿ ಇದೆ. ಕಿವಿರು ಮುಚ್ಚಳದ ಅಂಚು ದೇಹದೊಡನೆ ಅಂಟಿಕೊಂಡು ಅದರ ಬಿರುಕು ಚಿಕ್ಕ ರಂಧ್ರದಂತೆ ಮೇಲ್ಭಾಗದಲ್ಲಿದೆ. ಒಂದೊಂದು ಕಣ್ಣೂ ಗೋಸುಂಬೆಯ ಕಣ್ಣಿನಂತೆ ಪ್ರತ್ಯೇಕವಾಗಿ ಚಲಿಸಬಲ್ಲುದು. ಬಾಲ ನೀಳವಾಗಿದ್ದು ತುದಿಯವರೆಗೂ ಕ್ರಮಕ್ರಮವಾಗಿ ಚೂಪಾಗುತ್ತದೆ. ಕಡಲ ಕುದುರೆ ತನ್ನ ಬಾಲದ ತುದಿಯಿಂದ ಜೊಂಡು ಮುಂತಾದವಕ್ಕೆ ತಗುಲಿಕೊಂಡು ನೆಟ್ಟಗೆ, ವಿಚಿತ್ರ ಭಂಗಿಯಲ್ಲಿ ನಿಲ್ಲಬಲ್ಲುದು. ಬಾಲದ

ಈಜುರೆಕ್ಕೆಗಳಾಗಲಿ ಶ್ರೋಣಿಯ (ಪೆಲ್ವಿಸ್) ಈಜುರೆಕ್ಕೆಯಾಗಲಿ ಇಲ್ಲ. ಎದೆಯ ಭಾಗದಲ್ಲಿ ಒಂದು ಜೊತೆ ಬಲು ಚಿಕ್ಕವಾದ ಎದೆಯ (ಪೆಕ್ಟೊರಲ್) ಈಜುರೆಕ್ಕೆ ಮತ್ತು ಬೆನ್ನಿನ ಮೇಲೆ, ಗುದ ಇರುವ ಮಟ್ಟದಲ್ಲಿ ಒಂದು ಬೆನ್ನಿನ ಈಜುರೆಕ್ಕೆ (ಡಾರ್ಸಲ್ ಫಿನ್) ಮಾತ್ರ ಇವೆ. ಬೆನ್ನಿನ ಈಜುರೆಕ್ಕೆಯೇ ಈಜಲು ನೆರವಾಗುವ ಪ್ರಧಾನಾಂಗ. ಚಿಕ್ಕದಾಗಿರುವುದರಿಂದಲೂ ತೆಳುವಾಗಿ ಪಾರದರ್ಶಕವಾಗಿರುವುದರಿಂದಲೂ ಇದನ್ನು ಸುಲಭವಾಗಿ ನೋಡಲಾಗುವುದಿಲ್ಲ. ಮಂದಗತಿಯಲ್ಲಿ ಮುಂಚಲಿಸುವಾಗ ಬೆನ್ನಿನ ಈಜುರೆಕ್ಕೆಯ ಸುತ್ತ ನೀರಿನಲ್ಲಿ ಮೂಡುವ ತರಂಗಗಳು ತೀವ್ರಗತಿಯಲ್ಲಿರುವುದರಿಂದ ಈ ಈಜುರೆಕ್ಕೆ ಪ್ರೊಪೆಲರ್ ತರಹ ತಿರುಗುತ್ತಿರುವಂತೆ ಕಾಣುತ್ತದೆ.

ಹಿಪ್ಪೊಕ್ಯಾಂಪಸ್ ಜಾತಿಯ ಕಡಲ ಕುದುರೆಯಲ್ಲಿ ಹೆಣ್ಣುಗಂಡುಗಳ ದೇಹ ರಚನೆ ಸ್ವಲ್ಪ ಬೇರೆ ಬೇರೆ. ಗಂಡಿನಲ್ಲಿ ಉದರಭಾಗದ ತಳದಲ್ಲಿ ದೇಹಕ್ಕೆ ಅಂಟಿಕೊಂಡಂತೆ ಕಾಂಗರೂ ಪ್ರಾಣಿಗಳಿಗಿರುವಂತೆ ಒಂದು ಕಾಪುಗೂಡು ಸಂಚಿಯಿದೆ (ಬ್ರೂಡ್ ಪೌಚ್). ಈ ಸಂಚಿಯ ಮುಂಭಾಗದಲ್ಲಿ ಒಂದು ಚಿಕ್ಕ ರಂಧ್ರವಿದೆ. ಋತುಗಾಲ ಬಂದಾಗ ಹೆಣ್ಣು ಗಂಡನ್ನು ಹುಡುಕಿ ಬಂದು ಶೃಂಗಾರವಿಲಾಸವನ್ನು ಪ್ರಾರಂಭಿಸುತ್ತದೆ. ತನ್ನ ಜನನೇಂದ್ರಿಯದಿಂದ ಒಂದು ಅಂಡ ನಿಕ್ಷೇಪವನ್ನು ಬೆಳೆಸಿಕೊಂಡು ಗಂಡಿನ ಸಂಚಿಯಲ್ಲಿ ತನ್ನ ಅಂಡಾಣುಗಳನ್ನು ತುಂಬುತ್ತದೆ. ಅಂಡಾಣುಗಳು ಸಂಚಿಯನ್ನು ಸೇರುವಾಗ ಗಂಡಿನ ವೀರ್ಯಾಣುಗಳಿಂದ ನಿಷೇಚನಗೊಳ್ಳುತ್ತವೆ. ಈ ಕ್ರಿಯೆ ಆದ ಮೇಲೆ ರಂಧ್ರ ಮುಚ್ಚಿಹೋಗುತ್ತದೆ. ಸಂಚಿಯ ಒಳಗೋಡೆಯ ಪೊರೆಯಲ್ಲಿ ಉತ್ಪತ್ತಿಯಾಗುವ ಸ್ರಾವ ಬೆಳೆಯುವ ಭ್ರೂಣಗಳಿಗೆ ಪೋಷಕಾಂಶವನ್ನು ಒದಗಿಸುತ್ತದೆ. ಗಂಡು ಪ್ರಾಣಿಯೇ ಅಂಡಾಣುಗಳನ್ನು ಸಂಚಿಯಲ್ಲಿ ಧರಿಸಿ, ಪೋಷಣೆ ಕೊಟ್ಟು, ಮರಿಗಳು ಬೆಳೆವವರೆಗೂ ದಾದಿತನ ಮಾಡುತ್ತದೆ. ಸಂಚಿಯಲ್ಲಿ 40–45 ದಿನಗಳ ಕಾಲ ಬೆಳೆದ ಮೇಲೆ ಮರಿಗಳು ಒಂದೊಂದಾಗಿ ಹೊರಬರುತ್ತವೆ. ಮರಿಗಳು ಹೊರಬರುವಾಗ ಗಂಡು ತನ್ನ ಹೊಟ್ಟೆಯನ್ನು ಬಂಡೆಗೊ ಅಥವಾ ಚಿಪ್ಪಿಗೊ ಉಜ್ಜುವುದನ್ನು ನೋಡಿದರೆ ಅದು ಪ್ರಸವವೇದನೆಯನ್ನು ಅನುಭವಿಸುತ್ತಿರುವಂತೆ ಕಾಣುತ್ತದೆ.

ದಕ್ಷಿಣ ಆಸ್ಟ್ರೇಲಿಯ ತೀರಪ್ರದೇಶಕ್ಕೆ ಸೀಮಿತವಾಗಿರುವ ಫಿಲ್ಲೋಟೆರಿಕ್ಸ್ ಈಕ್ವಸ್ ಎಂಬ ಜಾತಿಯನ್ನೂ ಕಡಲ ಕುದುರೆಯೆಂದು ಕರೆಯುವುದುಂಟು. ಇದರಲ್ಲಿ ದೇಹದ ಮೇಲಿನಿಂದ ಹೊರಚಾಚಿರುವ ಉಪಾಂಗಗಳು ಜೊಂಡಿನ ಬಣ್ಣ ರಚನೆಗಳಿಂದ ಕೂಡಿರುವುದರಿಂದ ಅವನ್ನು ಅವುಗಳ ಪರಿಸರದಲ್ಲಿ ಗುರುತಿಸುವುದು ಬಹಳ ಕಷ್ಟ.

***

**ಕಡಲ ಗಿಣಿ:** ಕೆರಾಡ್ರಿಫಾರ್ಮಿಸ್ ಗಣದ ಆಲ್ಸಿಡೆ ಕುಟುಂಬಕ್ಕೆ ಸೇರಿದ ಹಕ್ಕಿ (ಪಫಿನ್). ಇದರ ಆಕಾರ ಗಿಣಿಯಂತಿದ್ದು ಕಡಲ ಸಮೀಪದಲ್ಲಿ ವಾಸಮಾಡುವುದರಿಂದ ಈ ಹೆಸರು. ಫ್ರಾಟೆರ್ಕ್ಯುಲಾ ಆರ್ಕ್ಟಿಕಾ (ಅಟ್ಲಾಂಟಿಕ್ ಪಫಿನ್) ವೈಜ್ಞಾನಿಕ ನಾಮ. ಸದಾ ನೀರಿನಲ್ಲಿ ಬೆಂಡಿನಂತೆ ತೇಲುತ್ತ–ಮುಳುಗುತ್ತ ಕಾಲ ಕಳೆಯುತ್ತದೆ. ಉತ್ತರ ಮತ್ತು ದಕ್ಷಿಣ ಅಮೆರಿಕದ ಕೆಲವು ಪ್ರದೇಶದಲ್ಲಿ ಇದು ಸಾಮಾನ್ಯ. ಆಕ್ ಹಕ್ಕಿಯ ಸಂಬಂಧಿ. ಕಾಲುಗಳು ಬಹಳ ಹಿಂದಕ್ಕಿರುವುದರಿಂದ ಭೂಮಿಯ ಮೇಲೆ ನಿಂತಾಗ ಕುಳಿತ ಮನುಷ್ಯನಂತೆ ಕಾಣುವುದು. ಹಕ್ಕಿ ದೊಡ್ಡ ಗಾತ್ರದ್ದು. ತಲೆಯೂ ಸಹ ಶರೀರಕ್ಕೆ ಹೋಲಿಸಿದರೆ ಮಿತಿಮೀರಿ ಬೆಳೆದಂತೆ ಕಾಣುತ್ತದೆ. ತಲೆಯ ಇಕ್ಕೆಡೆಗಳಲ್ಲಿ ಬಿಳಿಮಚ್ಚೆಯಿದೆ. ಕಣ್ಣಿನ ಹಿಂಭಾಗದಲ್ಲಿ ಬಂಗಾರದ ಬಣ್ಣದ ಪುಕ್ಕಗಳಿವೆ. ಕೊಕ್ಕು ತುಂಬ ದೊಡ್ಡದಾಗಿದ್ದು ಮುಖವಾಡದಂತೆ ಕಾಣುತ್ತದೆ. ಇದರಿಂದಾಗಿ ಹಕ್ಕಿ ಅಷ್ಟು ಆಕರ್ಷಕವಾಗಿಲ್ಲ. ಕೊಕ್ಕಿನ ವಿಚಿತ್ರವಾದ ರಚನೆಗೆ ಕಾರಣ ಗೊತ್ತಿಲ್ಲ. ಇದು ಸಮುದ್ರದಡದಲ್ಲಿ ಗೂಡನ್ನು ಕಟ್ಟಿ ಮೊಟ್ಟೆಯಿಡುತ್ತದೆ. ಸಮುದ್ರದಲ್ಲಿ ಸಿಗುವ ಮೀನು ಮುಂತಾದ ಪ್ರಾಣಿಗಳು ಇದರ ಆಹಾರ.

ಕಡಲ ಗಿಣಿಗಳು ಯಾವಾಗಲೂ ನೀರಲ್ಲಿ ವಾಸಮಾಡುವುದರಿಂದ ಈಜುವುದಕ್ಕೆ ಅನುಕೂಲಕರವಾದ ಅಂಗರಚನೆಗಳನ್ನು ಪಡೆದಿವೆ. ದೋಣಿಯಾಕಾರದ ದೇಹ, ಜಾಲಪಾದಗಳುಳ್ಳ ಕಾಲುಗಳು–ಇವು ಈಜಲು ಸಹಕಾರಿಯಾಗಿವೆ. ಮೈತುಂಬ ಪುಕ್ಕಗಳಿರುವುದಲ್ಲದೆ ಚರ್ಮದ ಅಡಿಯಲ್ಲಿ ಒಂದು ಪದರ ಕೊಬ್ಬು ಇರುವುದರಿಂದ ದೇಹದಲ್ಲಿ ಉಷ್ಣತೆಯನ್ನು ಕಾಪಾಡುವುದು ಸುಲಭ. ಅಲ್ಲದೆ, ಇವು ಯಾವಾಗಲೂ ಈಜುತ್ತಲೇ ಇರುವುದರಿಂದ ರೆಕ್ಕೆಗಳು ಅನುಪಯುಕ್ತವಾಗಿ ಕ್ಷೀಣಗೊಂಡಿವೆ. 60 ಮೀ. ಆಳದವರೆಗೆ ನೀರಿನಲ್ಲಿ ಮುಳುಗಬಲ್ಲುದು. ಸಂತಾನೋತ್ಪತ್ತಿ ಸಮಯದಲ್ಲಿ ಕೊಕ್ಕು ಕೆಂಪು, ಹಳದಿ ಮತ್ತು ನೀಲಿ ಬಣ್ಣಕ್ಕೆ ತಿರುಗುತ್ತದೆ. ಆಳವಾದ ಗುಂಡಿಯನ್ನು ತೋಡುತ್ತವೆ. ಹೆಣ್ಣು ಪಫಿನ್ ಒಂದು ಮೊಟ್ಟೆಯನ್ನಿಡುತ್ತದೆ. ಗಂಡು, ಹೆಣ್ಣುಗಳೆರಡೂ ಮೊಟ್ಟೆಗೆ ಕಾವು ಕೊಡುತ್ತವೆ. ಮೊಟ್ಟೆಯೊಡೆದು ಹೊರಬಂದ ಮರಿಯನ್ನು 40 ದಿನಗಳವರೆಗೆ ಪೋಷಿಸುತ್ತವೆ. (ಜಿ.ಎಂ.ಬಿ.)

**ಕಡಲ ಚಿಟ್ಟೆ:** ಗ್ಯಾಸ್ಟ್ರಪೊಡ ವರ್ಗದ, ಒಫಿಸ್ಟೊಬ್ರಾಂಕಿಯ ಗಣದಲ್ಲಿನ ಟಿರಾಪೊಡ ಉಪಗಣದ ಸದಸ್ಯ. ಸಾಗರದಲ್ಲಿ ಸ್ವೇಚ್ಛೆಯಾಗಿ ತೇಲಾಡುತ್ತಾ, ಈಜಾಡುವ ಹಲವಾರು ಜಾತಿಯ ಕಡಲ ಚಿಟ್ಟೆಗಳಿವೆ. ಇವುಗಳನ್ನು ಆಂಗ್ಲ ಭಾಷೆಯಲ್ಲಿ ಸೀ ಬಟರ್‌ಫ್ಲೈ ಎನ್ನುವರು. ಕಡಲ ಚಿಟ್ಟೆಗಳು ಮೃದ್ವಂಗಿಗಳ ಕೆಲವು ಲಕ್ಷಣಗಳನ್ನು ತೋರುತ್ತವೆ.




ಕಡಲ ಚಿಟ್ಟೆಯ ಎರಡು ಜಾತಿಗಳು: ಅ. ಕ್ಯಾವೊಲಿನಿಯ, ಆ. ಕ್ಲಿಯೋನ್

ಕಡಲ ಚಿಟ್ಟೆಗಳ ಬಾಯಿ ಮತ್ತು ಕುತ್ತಿಗೆಯ ಇಕ್ಕೆಡೆಗಳಲ್ಲಿ ಈಜುರೆಕ್ಕೆಗಳಾಗಿ ಮಾರ್ಪಾಟಾಗಿರುವ ಅಗಲವಾದ ಎರಡು ಪಾರ್ಶ್ವಪಾದ (ಪ್ಯಾರಪೋಡಿಯ) ಗಳಿವೆ. ಚಿಟ್ಟೆಯ ರೆಕ್ಕೆಯಂತಿರುವ ಇವುಗಳ ನೆರವಿನಿಂದ ಈ ಪ್ರಾಣಿಗಳು ನೀರಿನಲ್ಲಿ ಸರಾಗವಾಗಿ ಈಜುತ್ತವೆ. ಇವುಗಳ ದೇಹ ಸುಂದರವಾದ ಬಣ್ಣದಿಂದ ಕೂಡಿದೆ. ಆದ್ದರಿಂದಲೇ ಇವಕ್ಕೆ ಕಡಲ ಚಿಟ್ಟೆಗಳೆಂಬ ಹೆಸರು.

ಕಡಲ ಚಿಟ್ಟೆಗಳಿಗೆ ಸಾಗರದ ಸೂಕ್ಷ್ಮಜೀವಿಗಳೇ ಆಹಾರ. ಈಜುರೆಕ್ಕೆಗಳ ಮೇಲಿರುವ ಸೂಕ್ಷ್ಮವಾದ ಕೂದಲುಗಳ (ಸಿಲಿಯ) ಚಲನೆಯಿಂದ ಆಹಾರವನ್ನು ತಮ್ಮ ಬಳಿಗೆ ಸೆಳೆದುಕೊಳ್ಳುತ್ತವೆ. ಕೆಲವು ಪ್ರಭೇದದ ಕಡಲ ಚಿಟ್ಟೆಗಳ ದೇಹದ ಮೇಲೆ ತೆಳುವಾದ ಹಾಗೂ ಪಾರದರ್ಶಕವಾದ ಚಿಪ್ಪಿದೆ. ಈ ಆಧಾರದ ಮೇಲೆ ಟಿರಾಪೊಡ ಉಪಗಣವನ್ನು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ೧. ಟಿರಾಪೊಡ ತೀಕೊಸೊಮ್ಯಾಟ ಮತ್ತು ೨. ಟಿರಾಪೊಡ ಜಿಮ್ನೊಸೊಮ್ಯಾಟ.

ಟಿರಾಪೊಡ ತೀಕೊಸೊಮ್ಯಾಟದ ಪ್ರಾಣಿಗಳಲ್ಲಿ, ಮ್ಯಾಂಟಲ್ ಕುಹರ, ಚಿಪ್ಪು ಮತ್ತು ಒಂದು ಜೊತೆ ಕ್ಷೀಣವಾದ ಕೋಡುಬಳ್ಳಿ (ಟೆಂಟಕಲ್ಸ್) ಇವೆ. ಆದರೆ, ತಲೆ ಮತ್ತು ಕಣ್ಣುಗಳು ಸ್ಪಷ್ಟವಾಗಿಲ್ಲ. ಈಜುರೆಕ್ಕೆಗಳ ಅಂಚು ದೇಹದ ಮುಂತುದಿಯಲ್ಲಿ ಪರಸ್ಪರ ಕೂಡಿಕೊಂಡಿವೆ. ಉಸಿರಾಟದ ಅಂಗವಾಗಿ ಒಂದು ಟೆನಿಡಿಯಮ್ (ಕಿವಿರು) ಇದೆ. ಗುದದ್ವಾರ, ಮ್ಯಾಂಟಲ್ ಕುಹರದ ಬಲಭಾಗದಲ್ಲಿದೆ. ಈ ಪ್ರಾಣಿಗಳು ಸಾಗರದ ಸೂಕ್ಷ್ಮ ಜೀವಿಗಳನ್ನು ತಿನ್ನುತ್ತವೆ. ಲಿಮಾನಿಸಿಡೆ, ಕ್ಯಾವೊಲಿನಿಡೆ ಮತ್ತು ಸಿಂಬುಲಿಡೆ ಎಂಬ ಮೂರು ಕುಟುಂಬಗಳನ್ನು ಈ ವಿಭಾಗದಲ್ಲಿ ಸೇರಿಸಲಾಗಿದೆ. ಲಿಮಾನಿಸಿಡೆ ಕುಟುಂಬದ ಪ್ರಾಣಿಗಳಲ್ಲಿ ಚಿಪ್ಪು ಎಡಕ್ಕೆ ಸುರುಳಿ ಸುತ್ತಿಕೊಂಡಿದ್ದು, ಮುಚ್ಚಳವಿರುವುದು, ಮ್ಯಾಂಟಲ್ ಕುಹರ ದೇಹದ ಹಿಂಭಾಗದಲ್ಲಿರುವುದು ಮುಖ್ಯ ಲಕ್ಷಣಗಳು. ಉದಾ: ಲಿಮಾಸಿನ. ಕ್ಯಾವೊಲಿನಿಡೆ ಕುಟುಂಬದ ಪ್ರಾಣಿಗಳ ಚಿಪ್ಪು ನೀಳವಾಗಿ ಎರಡು ತಟ್ಟೆಗಳಿಂದ ಕೂಡಿದೆ. ಉದಾ: ಕ್ಯಾವೊಲಿನಿಯ. ಸಿಂಬುಲಿಡೆ ಕುಟುಂಬದಲ್ಲಿ ಪ್ರೌಢಾವಸ್ಥೆಯಲ್ಲಿ ಪ್ರಾಣಿಗೆ ಚಿಪ್ಪು ಇಲ್ಲ. ಆದರೆ ಸಂಯೋಜಿ ಅಂಗಾಂಶ (ಕನೆಕ್ಟಿವ್ ಟಿಷ್ಯು ) ಚರ್ಮದ ತಳದಲ್ಲಿ ಗಟ್ಟಿಯಾಗಿ ಮಿಥ್ಯಶಂಖವಾಗಿ ಮಾರ್ಪಟ್ಟಿದೆ. ಉದಾ: ಸಿಂಬಲಿಯ.

ಟಿರಾಪೊಡ ಜಿಮ್ನೊಸೊಮ್ಯಾಟದಲ್ಲಿ ಮ್ಯಾಂಟಲ್ ಕುಹರ ಮತ್ತು ಚಿಪ್ಪು ಇಲ್ಲ. ತಲೆ ಸುಸ್ಪಷ್ಟವಾಗಿದ್ದು, ಎರಡು ಜೊತೆ ಕೋಡುಬಳ್ಳಿಗಳಿವೆ. ಈಜುರೆಕ್ಕೆಗಳಿಗೂ ಮತ್ತು ತಲೆಗೂ ಸಂಬಂಧವಿಲ್ಲ. ಈ ಗುಂಪಿನ ಪ್ರಾಣಿಗಳು ಮಾಂಸಾಹಾರಿಗಳು. ಈ ಗುಂಪಿನಲ್ಲಿ ನಾಲ್ಕು ಕುಟುಂಬಗಳಿವೆ : ನ್ಯೂಮೋಡರ್ಮಾಟಿಡೆ, ಕ್ಲಿಯೊಸೋಪ್ಸಿಡೆ, ನೋಟೊಬ್ರಾಂಕಿಡೆ ಮತ್ತು ಕ್ಲಿಯೋನಿಡೆ. ನ್ಯೂಮೋಡರ್ಮಾಟಿಡೆಯಲ್ಲಿ ಮೂಲಕಿವಿರು ಇಲ್ಲ. ಆದರೆ ದೇಹದ

ಹಿಂಭಾಗದಲ್ಲಿ ಅನುಷಂಗಿಕ ಕಿವಿರು ಇವೆ. ಕ್ಲಿಯೋನಿಡೆ ಕುಟುಂಬದ ಪ್ರಾಣಿಗಳಲ್ಲಿ ಯಾವ ಬಗೆಯ ಕಿವಿರುಗಳಿಲ್ಲ. ಇವುಗಳ ಗಾತ್ರ ಅತಿಸೂಕ್ಷ್ಮವಾಗಿದ್ದು, ಕೆಲವು ಪ್ರಭೇದದ ಪ್ರಾಣಿಗಳನ್ನು ಬರೀಗಣ್ಣಿನಲ್ಲಿ ನೋಡಲು ಅಸಾಧ್ಯ. ಉದಾ: ನ್ಯೂಮೊಡರ್ಮ ಮತ್ತು ಕ್ಲಿಯೋನ್.

ಸಾಗರದಲ್ಲಿ ಕಡಲ ಚಿಟ್ಟೆಗಳು ಅತ್ಯಧಿಕ ಸಂಖ್ಯೆಯಲ್ಲಿವೆ. ಇವು ರಾತ್ರಿ ವೇಳೆ ಮೇಲ್ಪದರದ ನೀರಿನಲ್ಲಿದ್ದು, ಹಗಲು ನೀರಿನ ತಳಭಾಗಕ್ಕೆ ಸೇರುತ್ತವೆ. ಇವು ಹೆರ್ರಿಂಗ್ ಮೀನುಗಳಿಗೆ, ತಿಮಿಂಗಿಲಗಳಿಗೆ ಪ್ರಮುಖ ಆಹಾರ ಪ್ರಾಣಿಗಳು. ತೀಕೊಸೊಮ್ಯಾಟ ಕಡಲ ಚಿಟ್ಟೆಗಳು ಸಾವನ್ನಪ್ಪಿದ ಮೇಲೆ ಅವುಗಳ ಚಿಪ್ಪುಗಳು ಸಾಗರದ ತಳಭಾಗದಲ್ಲಿ ಸಂಗ್ರಹವಾಗಿ ಟೆರಾಪೊಡ ಊಜ಼್. ಅಥವಾ ಕಡಲ ಚಿಟ್ಟೆಯ ದಿಣ್ಣೆಗಳಾಗಿ ಪರಿವರ್ತನೆಯಾಗುತ್ತವೆ. ***

**ಕಡಲ ಚಿರತೆ:** ಸ್ತನಿ ವರ್ಗದ, ಪಿನ್ನಿಪಿಡಿಯ ಗಣದ ಫೋಸೀಡೆ ಕುಟುಂಬದ ಸದಸ್ಯ. ಹೈಡ್ರುರ್ಗ ಲೆಪ್ಟೋನಿಕ್ಸ್ ಇದರ ವೈಜ್ಞಾನಿಕ ಹೆಸರು. ಇದು ಸಮುದ್ರವಾಸಿ ಸ್ತನಿ. ಆಂಗ್ಲ ಭಾಷೆಯಲ್ಲಿ ಸೀ ಲೆಪರ್ಡ್ ಎನ್ನುವರು. ಇದರ ತೌರು ದಕ್ಷಿಣಮೇರು ಪ್ರದೇಶ. ಹಾಗಾಗಿ ಇದನ್ನು ದಕ್ಷಿಣ ಮೇರುವಿನ ಸೀಲ್ ಎನ್ನುವರು. ಮಿರಮಿರನೆ ಮಿರುಗುವ ಹಳದಿ ಬಣ್ಣದ ಕೂದಲಿರುವ ಚರ್ಮ, ಚಿರತೆಗಳಿಗಿರುವಂತೆ ಮೈಮೇಲೆ ಅಸಂಖ್ಯಾತ ಕಪ್ಪು ಮಚ್ಚೆಗಳು ಮತ್ತು ಇದರ ಕ್ರೂರ ಸ್ವಭಾವದಿಂದಾಗಿ ಇದಕ್ಕೆ ಕಡಲ ಚಿರತೆ ಎಂಬ ಹೆಸರು. ಇತರ ಸೀಲ್ ಪ್ರಾಣಿಗಳಲ್ಲಿರುವಂತೆ ಇದರ ಹಿಂಗಾಲುಗಳು ಹಿಂದಕ್ಕೆ ಬಾಗಿವೆ. ಆದ್ದರಿಂದ ಇದಕ್ಕೆ ನೆಲದ ಮೇಲೆ ನಡೆಯಲಾಗುವುದಿಲ್ಲ. ಎರಡು ಜೊತೆ ಕಾಲುಗಳಲ್ಲೂ ಜಾಲಪಾದವಿದೆ. ಮೂಗಿನ ಹೊಳ್ಳೆಗಳು ಮೂತಿಯ ತುದಿಯಲ್ಲಿರುವುದರ ಬದಲು ಮೊಸಳೆಗಳಲ್ಲಿರುವಂತೆ ಮೂತಿಯ ಮೇಲ್ಭಾಗದಲ್ಲಿವೆ. ಇದು ಈಜುತ್ತಿರುವಾಗ ಉಸಿರಾಡಲು ಸಹಾಯಕ. ಕಿವಿಗಳಿಗೆ ಆಲಿಕೆಗಳಿಲ್ಲ. ಮೀನು ಇದರ ಪ್ರಧಾನ ಆಹಾರ. ಪೆಂಗ್ವಿನ್ ಹಕ್ಕಿಗಳನ್ನೂ ಇದು ಬೇಟೆಯಾಡುವುದು. ಕಡಲ ಕರಡಿ, ಕಡಲ ಆನೆ, ಕಡಲ ಸಿಂಹ ಮುಂತಾದುವು ಇದರ ಸಂಬಂಧಿಗಳು. ನೋಡಿ: ಸೀಲ್. ***

**ಕಡಲ ತೋಳ:** ಉತ್ತರವಲಯ ಸಮುದ್ರದಲ್ಲಿ ವಾಸಿಸುವ ಬಹು ದೊಡ್ಡ ಮೀನು (ಸೀ ವುಲ್ಫ್). ವೈಜ್ಞಾನಿಕ ನಾಮ ಅನಾರಿಕಸ್. ಇದರ ದೇಹ ೧.೮ ಮೀ ಉದ್ದವಿದೆ. ಚರ್ಮ ನುಣುಪಾಗಿ, ನಯವಾಗಿದ್ದು, ಅದರ ಮೇಲೆ ಅಪೂರ್ಣ ಪೊರೆಗಳಿವೆ. ಬೆನ್ನಿನ ಈಜುರೆಕ್ಕೆ ದೇಹದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಬೆಳೆದಿದೆ. ಹೊಟ್ಟೆಯ ಮೇಲಿರುವ ಈಜುರೆಕ್ಕೆ ಬಾಲದವರೆಗೂ ವಿಸ್ತರಿಸಿದೆ. ಎದೆಯ ಮುಂಭಾಗದ ಈಜುರೆಕ್ಕೆ ದುಂಡಾಗಿದ್ದು ದೊಡ್ಡದಾಗಿದೆ. ಎದೆಯ ಹಿಂದಿರುವ ಈಜುರೆಕ್ಕೆ ಇಲ್ಲ. ಬಾಯಿಯಲ್ಲಿ ಬಲವಾಗಿರುವ ಮತ್ತು ಬಾಗಿರುವ ಹಲ್ಲುಗಳ ಎರಡು ಸಾಲುಗಳಿದ್ದು ದೊಡ್ಡ ರವೆಗಂತಿಗಳುಳ್ಳ ದವಡೆ ಹಲ್ಲುಗಳಿವೆ. ಅತ್ಯಂತ ಕ್ರೂರವಾದ ಪ್ರಾಣಿ ಎಂದೇ ಪ್ರಖ್ಯಾತವಾಗಿರುವ ಇದು ತನ್ನ ಹಲ್ಲುಗಳ ಸಹಾಯದಿಂದ ವಲ್ಕವಂತ ಪ್ರಾಣಿ ಮತ್ತು ಮೃದ್ವಂಗಿಗಳ ಗಟ್ಟಿಯಾದ ಚಿಪ್ಪುಗಳನ್ನು ಒಡೆದು ತಿಂದುಹಾಕುತ್ತದೆ. ಅಂತೆಯೇ ಇದಕ್ಕೆ ಕಡಲ ತೋಳ ಎಂದು ಹೆಸರು. ***

**ಕಡಲ ನಿಂಬೆ:** ಒಫಿಸ್ಟೊಬ್ರಾಂಕಿಯ ಗಣದ ಡೋರಿಡೆ ಕುಟುಂಬದ ಸದಸ್ಯ. ಇದೊಂದು ಜಠರಪಾದಿ ಮೃದ್ವಂಗಿ. ಆಂಗ್ಲ ಭಾಷೆಯಲ್ಲಿ ಸೀ ಲೆಮನ್ ಎನ್ನುವರು.




ಇದರ ವೈಜ್ಞಾನಿಕ ನಾಮ ಡೋರಿಸ್. ಕಡಲತೀರದ ಬಂಡೆಗಳ ಸಂದುಗಳಲ್ಲಿ ಮತ್ತು ಅವುಗಳ ಕೆಳಗೆ ವಾಸಿಸುತ್ತದೆ. ನಿಂಬೆಹಣ್ಣಿನ ಆಕಾರ ಹಾಗೂ ಮೈ ಬಣ್ಣವಿರುವುದರಿಂದ ಈ ಹೆಸರು. ಜಠರಪಾದಿಗಳ ದೇಹದ ಮೇಲಿರುವ ಚಿಪ್ಪು ಸಂಪೂರ್ಣವಾಗಿ ನಶಿಸಿಹೋಗಿದೆ. ಅಂದರೆ ಇದು ನಗ್ನದೇಹಿ. ದೇಹದ ತುದಿಯಲ್ಲಿ ಒಂದು ಜೊತೆ ಚಿಕ್ಕ ಸ್ಪರ್ಶಕಗಳಿವೆ. ತಲೆಯ ಮೇಲೆ ಒಂದು ಜೊತೆ ಎಲೆಯ ರೂಪದ ಘ್ರಾಣೇಂದ್ರಿಯ (ರೈನೋಫೋರು)ಗಳಿವೆ. ಗುದದ್ವಾರ ಬೆನ್ನಿನ ಭಾಗದಲ್ಲಿದೆ. ಇದರ ಸುತ್ತ ಎಲೆಯಾಕಾರದ ತೆಳುವಾದ ಕಿವಿರುಗಳಿವೆ. ಶ್ವಸನಕಾರ್ಯದಲ್ಲಿ ಸಹಕಾರಿಯಾಗಿರುವ ಇವನ್ನು ಗುದದ ಕಿವಿರುಗಳೆನ್ನುತ್ತಾರೆ. ಕಡಲ ನಿಂಬೆ ಮಾಂಸಾಹಾರಿ. ಕಠಿಣಚರ್ಮಿಗಳು ಇದರ ಆಹಾರ. ಹೆಣ್ಣು ಮೊಟ್ಟೆಗಳನ್ನು ಜಿಲಾಟಿನ್ನಿನಂಥ ವಸ್ತುವಿನಿಂದಾದ ಚೀಲದಲ್ಲಿ ತುಂಬಿ ಸಮುದ್ರದ ಜೊಂಡುಗಳಿಗೆ ಅಂಟಿಸುತ್ತದೆ. ಒಂದೊಂದು ಚೀಲದಲ್ಲಿ ಸು. ಆರು ಲಕ್ಷ ಮೊಟ್ಟೆಗಳಿವೆ ಎಂದು ಚಾರ್ಲ್ಸ್ ಡಾರ್ವಿನ್ ಅಂದಾಜು ಮಾಡಿದ್ದಾನೆ. ***

**ಕಡಲ ಪಶು:** ಸೈರೇನಿಯ ಗಣಕ್ಕೆ ಸೇರಿದ ಸಸ್ಯಾಹಾರಿ ಸ್ತನಿ. ಆಂಗ್ಲ ಭಾಷೆಯಲ್ಲಿ ಸೀ ಕೌ ಎನ್ನುವರು. ಡುಗಾಂಗ್ ಮತ್ತು ಮನಾಟಿ ಎಂಬ ೨ ಜಾತಿಗಳಿವೆ. ಇವುಗಳ ದೇಹ ಗಾತ್ರ ತಿಮಿಂಗಿಲದಂತಿದ್ದು ಚಪ್ಪಟೆಯಾದ ಬಾಲ ಮತ್ತು ಹುಟ್ಟಿನಂಥ ಮುಂಗಾಲು ಇವೆ. ಇವು ಸಮುದ್ರ ತೀರದಲ್ಲಿ ವಾಸಿಸುತ್ತವೆ. ಆಳ ನೀರಿಗೆ ಹೋಗುವುದೇ ಇಲ್ಲ. ಭಾರತ ಮತ್ತು ಆಸ್ಟ್ರೇಲಿಯ ಸಮುದ್ರ ತೀರದಲ್ಲಿ ಹೆಚ್ಚಾಗಿ ವಾಸಿಸುತ್ತವೆ. ಇವುಗಳಿಗೆ ಸಣ್ಣ ಕಣ್ಣು, ಚಿಕ್ಕ ಬಾಯಿ ಇವೆ. ಕಿವಿಗಳಿಗೆ ಆಲಿಕೆಗಳಿಲ್ಲ. ಸಣ್ಣ ತೂತು ಮಾತ್ರ ಇವೆ. ಸುಕ್ಕುಗಟ್ಟಿದ ಮರದ ತೊಗಟೆಯಂಥ ದಪ್ಪ ಚರ್ಮ, ಚರ್ಮದ ಕೆಳಗೆ ದಪ್ಪನಾದ ಕೊಬ್ಬಿನ ಬ್ಲಬರ್ ಇದೆ. ಕೆಲವು ವೇಳೆ ಚರ್ಮದ ಮೇಲೆ ವಿರಳವಾಗಿ, ತೆಳುವಾದ ಕೂದಲು ಇವೆ. ಇದು ಜಡಸ್ವಭಾವದ ಸಾಧುಪ್ರಾಣಿ. ಸಮುದ್ರ ಜೊಂಡಿನಂತಹ ಜಲಸಸ್ಯಗಳು ಇದರ ಆಹಾರ. ಹೆಣ್ಣು ಕಡಲ ಪಶು ಪ್ರತಿ ಬಾರಿ ಒಂದು ಮರಿ ಹಾಕುತ್ತದೆ. ಮರಿಯನ್ನು ತಾಯಿ ತುಂಬ ಅಕ್ಕರೆಯಿಂದ ಸಾಕುತ್ತದೆ. ಹಾಲು ಕುಡಿಸುವಾಗ ಮರಿಯ ತಲೆಯನ್ನು, ಎದೆಯನ್ನು ನೀರಿನಿಂದ ಮೇಲಕ್ಕೆತ್ತಿ ಮುಂಗಾಲುಗಳಿಂದ ಮನುಷ್ಯರಂತೆ ಹಿಡಿದುಕೊಳ್ಳುತ್ತದೆ. ಮನಾಟಿ ಉಷ್ಣದೇಶದ ನದಿಗಳಲ್ಲಿ ವಾಸಿಸುತ್ತದೆ. ಡುಗಾಂಗ್ ಮನಾಟಿಗಿಂತ ಚಿಕ್ಕದು. ೧.೫ – ೨.೧ ಮೀ ಉದ್ದವಿದೆ. ಅರ್ಧಚಂದ್ರಾಕೃತಿಯ ಬಾಲವಿದೆ. ಕಾಲಿನಲ್ಲಿ ಬೆರಳುಗಳಿಲ್ಲ. ಪುರಾತನ ಕಾಲದಲ್ಲಿ ನೂರಾರು ಪ್ರಾಣಿಗಳುಳ್ಳ ದೊಡ್ಡ ಗುಂಪುಗಳಾಗಿ ಸಮುದ್ರದಲ್ಲಿರುತ್ತಿದ್ದ ಇವು ಮನುಷ್ಯರನ್ನು ಕಂಡರೆ ಹೆದರುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಇವುಗಳ ಸಂಖ್ಯೆ ತುಂಬ ಕಡಿಮೆಯಾಗುತ್ತಿರುವುದು ಪರಿಸರ ಪ್ರಿಯರನ್ನು ಚಿಂತೆಗೀಡಾಗಿಸಿದೆ. ***

**ಕಡಲ ಬಾಣ:** ಲಾಲಿಗೊ ಜಾತಿಯ ಹಲವಾರು ಶಿರಪಾದಿ ಮೃದ್ವಂಗಿಗಳಿಗೆ ಕಡಲ ಬಾಣಗಳೆಂದು ಹೆಸರು. ಆಂಗ್ಲಭಾಷೆಯಲ್ಲಿ ಸೀ ಆರೊ ಎನ್ನುವರು.




ಇವುಗಳಲ್ಲಿ ಲಾಲಿಗೊ ಪೀಲಿ ಮತ್ತು ಲಾ. ಒಪಾಲೆಸೆನ್ಸ್ ಮುಖ್ಯ ಪ್ರಭೇದಗಳು. ಲಾ. ಪೀಲಿ ಮೃದ್ವಂಗಿ ಅಟ್ಲಾಂಟಿಕ್ ಸಾಗರ ತೀರಪ್ರದೇಶದ ನೋವಸ್ಕೋಷಿಯದಿಂದ

ಫ್ಲಾರಿಡದವರೆಗೆ ಹರಡಿದೆ. ದೇಹದ ಉದ್ದ ಸು. ೧.೪ ಮೀ. ವ್ಯಾಸ ಸು. ೫ ಸೆಂಮೀ. ಲಾ. ಪಾಲಡಸನ್ಸ್ ಚೀನಾದ ಸಾಗರದಲ್ಲಿ ಜೀವಿಸುತ್ತದೆ. ಇವೆರಡರಲ್ಲೂ ತಲೆಯಲ್ಲಿ ಎಂಟು ಬಾಹುಗಳೂ ಎರಡು ಪರಿಗ್ರಾಹಿ ಬಾಹುಗಳೂ ಇವೆ. ನೀರಿನಲ್ಲಿ ಈಜುವಾಗ ಬಾಹುಗಳು ಮುಂಚಾಚಿಕೊಳ್ಳುವುದರಿಂದ ಈ ಪ್ರಾಣಿ ಬಾಣವನ್ನು ಹೋಲುತ್ತದೆ. ಆದ್ದರಿಂದ ಈ ಪ್ರಾಣಿಗೆ ಈ ಹೆಸರು. ಲಾ. ಒಪಾಲೆಸೆನ್ಸ್ ಚೀನೀಯರಿಗೆ ರುಚಿಕರ ಆಹಾರವೆನಿಸಿದೆ.

***

**ಕಡಲ ಬೀಸಣಿಗೆ:** ಗಾರ್ಗೋನಿಯ (ಗಾರ್ಗೋನಿಯ ಫ್ಲಾಬೆಲಮ್) ಜಾತಿಯ ಒಂದು ಸೀಲೆಂಟರೇಟ್ ಪ್ರಾಣಿ (ಸೀ ಫ್ಯಾನ್). ಆಲ್ಸಿಯೊನೇರಿಯ ಗಣದ ಗಾರ್ಗೋನಿಡೆ ಕುಟುಂಬಕ್ಕೆ ಸೇರಿದೆ. ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಸಾಗರದ ಉತ್ತರ ಭಾಗಗಳಲ್ಲಿ ಇದರ ವಾಸ. ಶಾಖೋಪಶಾಖೆಗಳಿಂದ ಕೂಡಿ ದಿಂಡೊಂದಕ್ಕೆ ಅಂಟಿರುವ ಇದರ ದೇಹ ನೆಟ್ಟಗೆ ನಿಂತ ಮರದಂತೆ ಅಥವಾ ಬಿಚ್ಚಿದ ಬೀಸಣಿಗೆಯಂತೆ ಕಾಣುತ್ತದೆ. ದೇಹದ ಮೇಲೆ ಅಸಂಖ್ಯಾತ ಸಣ್ಣ ಸಣ್ಣ ಪಾಲಿಪ್ ಜೀವಿಗಳ ಸಮುದಾಯವಿರುತ್ತದೆ. ಈ ಕೊಂಬೆ ರೆಂಬೆಗಳು ಸಾಮಾನ್ಯವಾಗಿ ಒಂದೇ ಮಟ್ಟದಲ್ಲಿರುತ್ತವೆ.



ಕಡಲ ಬೀಸಣಿಗೆ

ಇದು ಸ್ರವಿಸುವ ಅಂತರ್‌ಕಂಕಾಲ (ಎಂಡೊಸ್ಕೆಲಿಟನ್) ಕ್ರಮೇಣ ಗಟ್ಟಿಗೊಂಡು ಕೊಂಬಿನ ರೂಪ ಪಡೆಯುತ್ತದೆ. ದೇಹ ಹಳದಿ ಅಥವಾ ಕೆಂಬಣ್ಣವಾಗಿದ್ದು 80 ಸೆಂಮೀ ಎತ್ತರ ಬೆಳೆಯಬಲ್ಲುದು. ಗಾ. ಫ್ಲಾಬೆಲಮ್‌ನಲ್ಲಿ ರೆಂಬೆಕೊಂಬೆಗಳನ್ನು ಅಸಂಖ್ಯಾತ ಅಡ್ಡರೆಂಬೆಗಳು ಬಂಧಿಸುವುದರಿಂದ ಜೀವಿ ಸಮುದಾಯ ಒಂದು ಚಪ್ಪಟೆಯಾದ ರಂಧ್ರಗಳಿಂದ ಕೂಡಿದ ಜರಡಿಯಂತೆ ಅಥವಾ ಬಲೆಯಂತೆ ಕಾಣುತ್ತದೆ. ಆದರೆ ಗಾ. ವೆರ್ರುಕೋಸದಲ್ಲಿ ನೆಟ್ಟಗೆ ಬೆಳೆಯುವ ರೆಂಬೆಗಳನ್ನು ಬಂಧಿಸುವ ಅಡ್ಡರೆಂಬೆಗಳಿರುವುದಿಲ್ಲ. ಸತ್ತ ಕಡಲ ಬೀಸಣಿಗೆಗಳ ಕಂಕಾಲಗಳನ್ನು ಜನ ಆಯ್ದು ಅಲಂಕಾರದ ವಸ್ತುಗಳಾಗಿ ಬಳಸುತ್ತಾರೆ.

***

**ಕಡಲ ಮೊಲ:** ಒಫಿಸ್ತೊಬ್ರಾಂಕಿಯ ಗಣ ಹಾಗೂ ಟೆಕ್ಟಿಬ್ರಾಂಕಿಯೇಟ ಉಪಗಣದ ಅಪ್ಲೀಸಿಡೆ ಕುಟುಂಬಕ್ಕೆ ಸೇರಿದ ಒಂದು ಜಠರಪಾದಿ (ಗ್ಯಾಸ್ಟ್ರೋಪೊಡ್) ಮೃದ್ವಂಗಿ. ಅಪ್ಲೀಸಿಯ ಇದರ ವೈಜ್ಞಾನಿಕ ನಾಮ. ಪ್ರಪಂಚದ ಎಲ್ಲ ಕಡಲುಗಳಲ್ಲೂ ಇದು ವಾಸಿಸುತ್ತದೆ. ಮುಖ್ಯವಾಗಿ ಮರಳು ಅಥವಾ ಮಣ್ಣಿನ ತೀರ ಪ್ರದೇಶ ಇದಕ್ಕೆ ಬಹು ಇಷ್ಟವಾದ ವಾಸಸ್ಥಳ. ಅಲ್ಲಿ ತನ್ನ ಆಹಾರವಸ್ತುವಾದ ಕಡಲ ಪಾಚಿಯ ಮೇಲೆ ಹರಿದಾಡುತ್ತಿರುತ್ತದೆ. ಬಸವನ ಹುಳುವನ್ನು ಹೋಲುತ್ತದೆ. ತಲೆಯ ಮೇಲೆ ಎರಡು ಜೊತೆ ಟೆಂಟಕಲ್‌ಗಳಿವೆ. ಮೊದಲ ಜೊತೆ ಅಗಲವಾಗಿದ್ದು ಮೊಲದ ಕಿವಿಗಳಂತೆ ಪ್ರಮುಖವಾಗಿ ಕಾಣುವುದರಿಂದ ಕಡಲ ಮೊಲ ಎಂದು ಹೆಸರು. ಹಿಂದಿನ ಎರಡನೆಯ ಜೊತೆ ಟೆಂಟಿಕಲ್‌ಗಳು ಮೊನಚಾಗಿದ್ದು ಘ್ರಾಣೇಂದ್ರಿಯಗಳಾಗಿ ಕೆಲಸ ಮಾಡುತ್ತವೆ. ಇವುಗಳ ಬುಡದ ಹೊರಪಾರ್ಶ್ವದಲ್ಲಿ ಒಂದು ಜೊತೆ ಕಣ್ಣುಗಳಿವೆ. ದೇಹದ ಪಶ್ಚಭಾಗದಲ್ಲಿ ಸ್ನಾಯುಮಯವಾದ ಪಾದದ ಪಕ್ಕದಿಂದ ಮೇಲ್ಮುಖನಾಗಿರುವ ಪಾರ್ಶ್ವಪಾದ (ಪ್ಯಾರಪೋಡಿಯ) ಎಂಬ ಎರಡು ಮಡಿಕೆಗಳು ಮೇಲೆ ಚಾಚಿವೆ. ಇವನ್ನು ರೆಕ್ಕೆಯಂತೆ ಬಡಿಯುವುದರ ಮೂಲಕ ನೀರಿನಲ್ಲಿ ಈಜುತ್ತದೆ. ದೇಹದ ಮೇಲಿರುವ ಮ್ಯಾಂಟಲ್ ಪದರ ಕೂಡ ದೇಹದ ಮೇಲೆ ಚಾಚಿಕೊಂಡು ಚಿಪ್ಪನ್ನು ಮುಚ್ಚಿಬಿಡುತ್ತದೆ. ಇದರ ಫಲವಾಗಿ ಚಿಪ್ಪು ಮಾರ್ಪಟ್ಟು ತೆಳುವಾಗಿ, ಪಾರದರ್ಶಕವಾಗಿರುತ್ತದೆ. ಅಲ್ಲದೆ ಉಸಿರಾಟದಲ್ಲಿ ನೆರವಾಗುವ ಒಂದು ಕಿವಿರು ಮ್ಯಾಂಟಲ್ ಕುಹರದ ಬಲಭಾಗದಲ್ಲಿ ಹಿಂದಕ್ಕೆ ಚಾಚಿರುತ್ತದೆ. ಮ್ಯಾಂಟಲ್ ಕುಹರವನ್ನು ಆವರಿಸುವ ಗೋಡೆಯಲ್ಲಿ ಕೆನ್ನೀಲಿ ಬಣ್ಣವನ್ನು ಸ್ರವಿಸುವ ಏಕಕೋಶಿಕ ಗ್ರಂಥಿಗಳಿವೆ. ಕೆಣಕಿದಾಗ ಈ ಪ್ರಾಣಿ ಆತ್ಮರಕ್ಷಣೆಗಾಗಿ ವರ್ಣಕಗಳನ್ನು ಹೊರಗೆಡವುತ್ತದೆ. ಇದು ಕಡಲ ಪಾಚಿಯನ್ನಲ್ಲದೆ ವಲಯವಂತ ಹುಳುಗಳು, ಮೃದ್ವಂಗಿ ಮತ್ತು ಕಠಿಣ ಚರ್ಮಿಗಳನ್ನು ತಿನ್ನುತ್ತದೆ. ಬಾಯ ಬಳಿ ದಪ್ಪನಾದ ಸ್ನಾಯುಮಯವಾದ ಎರಡು ತುಟಿಗಳಿವೆ. ಜಠರ ಸಂಕೀರ್ಣವಾಗಿದ್ದು ಅದಕ್ಕೆ ಮೇತೆ (ಕ್ರಾಪ್), ಸ್ನಾಯುಮಯವಾದ ಗಿಜ್ಜರ್ಡ್ ಮತ್ತು ಅನುಷಂಗಿಕ ಅನ್ನನಾಳಗಳಿವೆ. ಕಡಲ ಮೊಲ ದ್ವಿಲಿಂಗ ಪ್ರಾಣಿ. ಗರ್ಭ ಕಟ್ಟಿದ ಮೊಟ್ಟೆಗಳನ್ನು ಸರದಂತೆ ಉದ್ದುದ್ದವಾಗಿ ಇಡುತ್ತದೆ. ಪೂರ್ವ ಕಾಲದಲ್ಲಿ ಜನ ಈ ಪ್ರಾಣಿಗಳು ವಿಷಪೂರಿತವಾದುವುವೆಂದು ಬಗೆದಿದ್ದರು. ಕ್ರಿ.ಶ. ಮೊದಲ ಶತಮಾನದ ಉತ್ತರಾರ್ಧದಲ್ಲಿ ಡೊಮಿಷೆನ್ ಎಂಬ ರೋಮ್ ದೇಶದ ಚಕ್ರವರ್ತಿ ತನ್ನ ಸೋದರ ಟೈಟಸ್ ಎಂಬ ಚಕ್ರವರ್ತಿಯನ್ನು ಅಪ್ಲೀಸಿಡೆ ಕುಟುಂಬದ ಪ್ರಾಣಿಗಳಿಂದ ಪಡೆದ ವಿಷವನ್ನು ಕೊಟ್ಟು ಸಾಯಿಸಿದನೆಂದು ಒಂದು ಉಲ್ಲೇಖವಿದೆ. ನೇಪಲ್ಸ್ ಕೊಲ್ಲಿಯಲ್ಲಿ ವಾಸಿಸುವ ಅಪ್ಲೀಸಿಯ ಲೆಪೋರಿನ ಎಂಬುದು ಮನುಷ್ಯನ ಚರ್ಮಕ್ಕೆ ತಾಕಿದರೆ ನೋವು ಮತ್ತು ಕಾಯಿಲೆ ಪ್ರಾಪ್ತವಾಗುವುದೆಂದು ಅಲ್ಲಿಯ ಬೆಸ್ತರು ನಂಬುತ್ತಾರೆ. ನಿಜವಾಗಿ ಹೇಳುವುದಾದರೆ ಇವು ಅಂಥ ಕ್ರೂರ ಪ್ರಾಣಿಗಳೂ ಅಲ್ಲ, ಇವುಗಳ ದೇಹದಲ್ಲಿ ವಿಷಸಂಬಂಧವಾದ ವಸ್ತುವೂ ಇಲ್ಲ.

***

**ಕಡಲ ಸರ್ಪ:** ಇದು ಒಂದು ಸರ್ಪರೂಪಿ ಸಾಗರದ ದೈತ್ಯ. ಪೌರಾಣಿಕ ಸಂಬಂಧವಾದದ್ದು; ಕಾಲ್ಪನಿಕವಾದದ್ದು. ವಿಶಾಲವಾದ ಸಾಗರಗಳಲ್ಲಿ ಯಾನ ಮಾಡಿದ ಹಿಂದಿನ ನಾವಿಕರು ತಾವು ನೋಡಿದುದಾಗಿ ಇದನ್ನು ವರ್ಣಿಸಿದ್ದಾರೆ. ಇದರ ಬಗ್ಗೆ ಅನೇಕ ದಂತಕಥೆಗಳನ್ನು ಕಟ್ಟಿರುವುದೂ ಉಂಟು. ಆದರೆ ವೈಜ್ಞಾನಿಕವಾಗಿ ಇದುವರೆವಿಗೂ ಈ ಬಗೆಯ ಕಡಲ ಸರ್ಪಗಳನ್ನು ಸರಿಯಾಗಿ ಕಂಡವರಿಲ್ಲ. ಅಂತೂ ಕಡಲ ಸರ್ಪದ ಭ್ರಮೆ ಹುಟ್ಟಿಸುವ ಹಲವು ಸಂದರ್ಭಗಳು ಕಂಡುಬರುವುದುಂಟು. ಅವುಗಳಲ್ಲಿ ಮುಖ್ಯವಾದವು ಇವು; ಹಲವು ಕಡಲ ಹಂದಿ ಅಥವಾ ಪಾರ್ಪಾಯಿಸ್‌ಗಳು ಸಾಗರದಲ್ಲಿ ಈಜುವಾಗ ಯಾವಾಗಲೂ ಒಂದರ ಹಿಂದೆ ಮತ್ತೊಂದು ಒಂದೇ ಸಾಲಿನಲ್ಲಿ ಈಜುವುದುಂಟು. ಅವು ನೀರಿನ ಮೇಲ್ಭಾಗದಲ್ಲಿ ಈಜುವಾಗ ಗಾಳಿಸೇವನೆಗಾಗಿ ಆಗಾಗ್ಗೆ ಮೇಲೇಳುವುದೂ ಉಂಟು. ಇವುಗಳ ಬೆನ್ನಿನ ಮೇಲಿನ ಈಜುರೆಕ್ಕೆ ಅವುಗಳ ಗತಿಯನ್ನು ಕೂಡ ತೋರಿಸುತ್ತದೆ. ಈ ಕಡಲ ಹಂದಿಗಳ ಸಾಲು ನೀಳ ಹಾಗೂ ಡೊಂಕು ಡೊಂಕಾಗಿರುವುದರಿಂದ ಅದು ಕಡಲ ಸರ್ಪವಿರಬೇಕೆಂದು ದೂರದಿಂದ ನೋಡಿದವರು ಭ್ರಮಿಸಿರಲಿಕ್ಕೂ ಸಾಕು. ಸೀಟೋರೈನಸ್ ಮಾಕ್ಸಿಮಸ್ ಎಂಬ ಶಾರ್ಕ್‌ಮೀನು ಸಾಧಾರಣವಾಗಿ ಒಂದರ ಹಿಂದೆ ಒಂದು ಜೊತೆಗೂಡಿ ಈಜುವುದು ಮತ್ತೊಂದು ನಿದರ್ಶನ. ಇದರ ಉದ್ದ ಸುಮಾರು 20 ಮೀ. ಇರುತ್ತದೆ. ರಿಗ್ಯಾಲಿಕಸ್ ಗ್ಲೆಸ್ನೆ ಎಂಬ ಮೀನು ಮತ್ತೊಂದು ಉದಾಹರಣೆಯಾಗಿದೆ. ಇದರ ದೇಹ ರಿಬ್ಬನ್ನಿನ ಆಕಾರ, 6 ಮೀ. ಉದ್ದ, 13–14 ಕಿಗ್ರಾಂ ತೂಕ. ಈಜುವಾಗ ಸರ್ಪದಂತೆ ತನ್ನ ದೇಹವನ್ನು ಅಂಕುಡೊಂಕಾಗಿ ಮಾಡಿಕೊಳ್ಳುತ್ತದೆ. ಇದರ ಬೆನ್ನಿನ ಮೇಲಿನ ಈಜುರೆಕ್ಕೆ ದೇಹಾದ್ಯಂತ ಹರಡಿದೆ. ಇದರ ಮುಂದಿನ 10–15 ಈಜುರೆಕ್ಕೆಯ ದಿಂಡುಗಳು ಉದ್ದವಾಗಿದ್ದು ತಲೆಯ ಮೇಲೆ ಹರಡಿರುವುದುಂಟು. ಈ ಪ್ರಾಣಿಯನ್ನು ಕೆರಳಿಸಿದಾಗ ಈ ದಿಂಡುಗಳು ಎದ್ದು ನಿಂತು ಭಯಂಕರವಾಗಿ ಕಾಣುತ್ತವೆ. ದೇಹ ಬೆಳ್ಳಿಯಂತೆ ಬಿಳುಪು. ಈಜುರೆಕ್ಕೆ ಹವಳದಂತೆ ಕೆಂಪು. ಮೆಡಿಟರೇನಿಯನ್ ಸಮುದ್ರದಲ್ಲಿ ವಾಸಿಸುವ ನೆಮರ್ಟೀನಿಯ ಹುಳುಗಳು 10–15 ಮೀ ಉದ್ದ ಬೆಳೆಯುವುದರಿಂದ ಇವು ಕೂಡ ಕಡಲ ಸರ್ಪದ ಭ್ರಮೆ ಹುಟ್ಟಿಸಿವೆ. ಆರ್ಕಿತ್ಯೂತಿಸ್ ಜಾತಿಯ ದೈತ್ಯ ಸ್ಕ್ವಿಡ್ 15–18 ಮೀ. ಬೆಳೆಯುವುದೇ ಅಲ್ಲದೆ ಅದರ ಬಾಹು 10–12 ಮೀ. ಉದ್ದವಿದ್ದು ಹಾವಿನಂತೆ ಕಾಣಬರುತ್ತದೆ. ಪೆಸಿಫಿಕ್ ಸಾಗರದ ದೈತ್ಯಾಕಾರದ ಹಾವುಮೀನಿನಂತಿರುವ ಕ್ಲಾಮಿಡೊಸೆಲಷಿ ಜಾತಿಯ ಶಾರ್ಕ್ ಮೀನು ಕೂಡ ಕಡಲ ಸರ್ಪದ ಭ್ರಮೆ ಹುಟ್ಟಿಸಿರಬಹುದು. ಹೆಬ್ಬಾವು ರೂಪದ, ಚೂಪು ತಲೆ, ತೊಳೆಗಾಲು ರೂಪದ ಬಾಹುಗಳಿಂದ ಕೂಡಿ 20–25 ಮೀ.

ಉದ್ದ ಬೆಳೆಯುತ್ತಿದ್ದ ಗತಕಾಲದ (ಕ್ರಿಟೇಷಿಯಸ್ ಕಾಲದ) ಸರೀಸೃಪಗಳು ಸಾಗರದಲ್ಲಿ ಇಂದೂ ಬದುಕಿದ್ದು ಆಗಾಗ್ಗೆ ಕಾಣಿಸಿಕೊಳ್ಳುತ್ತವೆಂದೂ ಮತ್ತೆ ಕೆಲವರ ಭ್ರಮೆ.

***

**ಕಡಲ ಸಿಂಹ:** ಪಿನ್ನಿಪೀಡಿಯ ಗಣದ ಓಟರೈಯಿಡೆ ಕುಟುಂಬದ ಹಲವಾರು ಜಾತಿಯ ಪ್ರಾಣಿಗಳಿರುವ ಸಾಮಾನ್ಯ ಹೆಸರು (ಸೀ ಲಯನ್). ಇವೆಲ್ಲವುಗಳಲ್ಲೂ ಕಂಡುಬರುವ ನೀಳ ಹಾಗೂ ಸುಸ್ಪಷ್ಟವಾದ ಕತ್ತು, ಚಿಕ್ಕವಾದರೂ ಎದ್ದುಕಾಣುವ ಕಿವಿಗಳು, ಮೂತಿಯ ತುದಿಯಲ್ಲಿರುವ ಮೂಗಿನ ಹೊಳ್ಳೆಗಳು, ಎರಡು ಜೊತೆ ಕಾಲುಗಳಲ್ಲಿರುವ ಜಾಲಪಾದ, ಈಜುವಾಗ ಹಿಂದಕ್ಕೆ ಚಾಚುವ ಹಿಂಗಾಲುಗಳನ್ನು ನೆಲದ ಮೇಲೆ ಬಂದಾಗ ಮುಂದಕ್ಕೆ ತಿರುಗಿಸಿಕೊಳ್ಳುವ ಸಾಮರ್ಥ್ಯ ಮತ್ತು ನಶಿಸಿಹೋಗುವ ಹಂತದಲ್ಲಿರುವ ಚಿಕ್ಕ ಉಗುರುಗಳು ಮುಂತಾದುವು ಇವುಗಳ ಮುಖ್ಯ ಲಕ್ಷಣಗಳು. ಪೆಸಿಫಿಕ್ ಸಾಗರದ ಉತ್ತರ ತೀರಪ್ರದೇಶದಲ್ಲಿ ಮೊಟ್ಟಮೊದಲ ಬಾರಿ ಯೂಮೆಟೊಪಿಯಸ್ ಜುಬೇಟ ಎಂಬ ಹೆಸರಿನ ಕಡಲ ಸಿಂಹವನ್ನು ನೋಡಿದ ಜರ್ಮನ್ ವಿಜ್ಞಾನಿ ಸ್ಟೆಲ್ಲರ್ ಎಂಬಾತ ಇದರ ದಪ್ಪ ಕುತ್ತಿಗೆಯ ಮೇಲಿನ ಕೇಸರ ಅಥವಾ ಆಯಾಲು ಮತ್ತು ಸಿಂಹದ ಕಣ್ಣಿನಂಥ ಕಣ್ಣುಗಳನ್ನು ನೋಡಿ ಇದನ್ನು ಕಡಲ ಸಿಂಹವೆಂದು ಕರೆದ. ಉಳಿದ ಕಡಲ ಸಿಂಹಗಳಲ್ಲಿ ಉತ್ತರ ಅಮೆರಿಕ ಮತ್ತು ಜಪಾನ್ ಸಮುದ್ರದ ದಕ್ಷಿಣ ಭಾಗದಲ್ಲಿರುವ ಜಲೋಫಸ್ ಎಂಬ ಜಾತಿಯದೂ ಆಸ್ಟ್ರೇಲಿಯ ವಾಸಿಯಾದ ನಿಯೋಫೋಕ ಜಾತಿಯದೂ ದಕ್ಷಿಣ ಅಮೆರಿಕದ ತೀರ ಪ್ರದೇಶಗಳಲ್ಲಿ ಹೇರಳವಾಗಿ ಕಾಣಬರುವ ಓಟರಿಯ ಎಂಬುದೂ ಮುಖ್ಯವಾದುವು. ಇವೆಲ್ಲವೂ ಕಡಲ ಕರಡಿಯ (ಫರ್ ಸೀಲ್) ಹತ್ತಿರ ಸಂಬಂಧಿಗಳು.

ಕಡಲ ಸಿಂಹ

ಸಾಮಾನ್ಯವಾಗಿ 1.5–3.5 ಮೀ ಉದ್ದದ ದೇಹವುಳ್ಳ ಇವು 50 ರಿಂದ 100 ಕಿಗ್ರಾಂ ತೂಗುತ್ತವೆ. ಗಂಡು ಹೆಣ್ಣಿಗಿಂತ ಬಹಳ ದೊಡ್ಡದು. ಇವುಗಳಲ್ಲಿ ಚಿಕ್ಕದಾದರೂ ಸ್ಪಷ್ಟವಾದ ಬಾಲವಿದೆ. ಮೈಮೇಲೆ ನವುರಾದ ಕೂದಲಿನ ಹೊದಿಕೆಯಿದೆ. ಇವುಗಳ ಬಣ್ಣ ಕಂದು. ಸಾಧಾರಣವಾಗಿ ದೊಡ್ಡ ದೊಡ್ಡ ಮಂದೆಗಳಲ್ಲಿ ವಾಸಿಸುತ್ತವೆ. ಸಮುದ್ರದಲ್ಲಿ ಸುಲಭವಾಗಿ ದೊರಕುವ ಶಿರಪಾದಿಗಳು ಮತ್ತು ಕಠಿಣಚರ್ಮಿಗಳು ಇವುಗಳ ಆಹಾರ. ಕೆಲವು ಸಾರಿ ಪೆಂಗ್ವಿನ್ ಹಕ್ಕಿಗಳನ್ನು ತಿನ್ನುವುದೂ ಉಂಟು.

ಸಂತಾನೋತ್ಪತ್ತಿ ಕಾಲದಲ್ಲಿ ಇವು ನೀರಿನಿಂದ ಹೊರಬಂದು ದಡಗಳಲ್ಲಿ ಕಾಲ ಕಳೆಯತೊಡಗುತ್ತವೆ. ಮೊದಲು ದಡವನ್ನೇರುವ ಗಂಡು ಒಂದು ನಿರ್ದಿಷ್ಟ ಪ್ರದೇಶದ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿಕೊಂಡು ಹಿಂಬಾಲಿಸಿ ಬರುವ ಹಲವಾರು ಹೆಣ್ಣುಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುತ್ತದೆ. ಒಂದೊಂದು ಗಂಡಿನ ಬಳಿ 10–15 ಹೆಣ್ಣುಗಳಿರುವುದು ಸಾಮಾನ್ಯ. ಹೆಣ್ಣುಗಳು ದಡಕ್ಕೆ ಬಂದ ಸ್ವಲ್ಪ ದಿನಗಳಲ್ಲಿಯೇ ಒಂದೊಂದೇ ಮರಿಯನ್ನು ಈಯುತ್ತವೆ. ಮರಿ ಹಾಕಿದ ಕೆಲವು ಕಾಲಾನಂತರ ಗಂಡಿನೊಂದಿಗೆ ಕೂಡಿಕೊಂಡು ಮತ್ತೆ ಗರ್ಭ ಧರಿಸುವುದು ಇವುಗಳ ವೈಚಿತ್ರ್ಯ. ಮರಿಗಳ ರಕ್ಷಣೆಯನ್ನು ಸಾಮಾನ್ಯವಾಗಿ ತಾಯಿಯೇ ನೋಡಿಕೊಳ್ಳುತ್ತದೆ. ಮರಿಯ ಬಣ್ಣ ಅಚ್ಚನೀಲಿ. ನೆಲದ ಮೇಲೆ ತೆವಳಬಲ್ಲುದಾದರೂ ಈಜಲಾರದು. ಹುಟ್ಟಿದ ಎರಡು ವಾರಗಳಲ್ಲಿ ತಾಯಿಯಿಂದ ಈಜುವುದನ್ನು ಕಲಿತು ಸ್ವತಂತ್ರ ಜೀವನ ನಡೆಸಲಾರಂಭಿಸುತ್ತದೆ. ಮರಿ ದೊಡ್ಡದಾದ ಮೇಲೆ ಕಡಲ ಸಿಂಹಗಳೆಲ್ಲ ದಕ್ಷಿಣಾಭಿಮುಖವಾಗಿ ವಲಸೆ ಹೋಗುತ್ತವೆ.

ಕಡಲ ಸಿಂಹಗಳನ್ನು ಅವುಗಳ ಚರ್ಮಕ್ಕಾಗಿ ಚರ್ಮದ ತಳದಲ್ಲಿ ಸಂಗ್ರಹವಾಗಿರುವ ಬ್ಲಬರ್ ಎಂಬ ಕೊಬ್ಬಿಗಾಗಿ ಜನ ಬೇಟೆಯಾಡುತ್ತಿದ್ದರು. ಹೀಗಾಗಿ ಅವುಗಳ ವಂಶ ನಶಿಸಿಹೋಗುವ ಸಂಭವವೂ ಇತ್ತು. ಈಗೀಗ ಕಾನೂನಿನ ರಕ್ಷಣೆ ದೊರೆತು ಅದು ತಪ್ಪಿದೆ. ಕೆಲವು ಬಗೆಯ ಕಡಲ ಸಿಂಹಗಳನ್ನು ಪಳಗಿಸಿ ಪ್ರಾಣಿಸಂಗ್ರಹಾಲಯಗಳಲ್ಲಿ, ಸರ್ಕಸ್ಸುಗಳಲ್ಲಿ ಇಡುವುದುಂಟು. ತಮ್ಮ ಚುರುಕುಬುದ್ಧಿ, ಕ್ರೀಡೆಗಳಲ್ಲಿ ಅಭಿರುಚಿಯಿಂದಾಗಿ ಇವು ಬಹು ಜನಪ್ರಿಯವಾಗಿವೆ. ತುತ್ತೂರಿಗಳನ್ನು ಊದುವುದರಿಂದ ಸಂಗೀತಕ್ಕೆ ಅನುಗುಣವಾಗಿ ಕುಣಿಯುವುದೂ ಎಸೆದ ಚೆಂಡನ್ನು ಮೂಗಿನ ತುದಿಯಲ್ಲಿ ಹಿಡಿದು ನಿಲ್ಲಿಸುವುದೂ ಇವಕ್ಕೆ ಪ್ರಿಯವೆನಿಸಿರುವ ಆಟಗಳು.

***

**ಕಡಲ ಸೌತೆ:** ಕಂಟಕ ಚರ್ಮಿವಂಶದ ಹೋಲೋತುರಾಯ್ಡಿಯ ವರ್ಗದ ಪ್ರಾಣಿಗಳಿಗಿರುವ ಜನಪ್ರಿಯ ಹೆಸರು (ಸೀ ಕುಕುಂಬರ್). ಇವುಗಳ ದೇಹ ಮೃದು, ನೀಳ ಹಾಗೂ ಸ್ನಾಯುಗಳಿಂದ ಕೂಡಿದೆ. ಆಕಾರ ಸೌತೆಕಾಯಿಯಂತೆ. ಹೆಚ್ಚು ಚಟುವಟಿಕೆಗಳನ್ನು ತೋರಿಸದೆ ಸಾಗರದ ತಳದಲ್ಲಿ ಜಡವಸ್ತುವಿನಂತೆ ಇದು ಬಿದ್ದಿರುತ್ತದೆ. ಮಣ್ಣಿನಲ್ಲಿ ಬಿಲ ತೋಡಿ ಹುದುಗಿರುವುದೂ ಉಂಟು. ಬಣ್ಣ ಸಾಮಾನ್ಯವಾಗಿ ಆಕರ್ಷಕವಲ್ಲದೆ ಕಪ್ಪು, ಬೂದು, ಕಂದು. ಅಪರೂಪಕ್ಕೆ ಉಜ್ವಲ ವರ್ಣದಿಂದ ಕೂಡಿರುವುದೂ ಉಂಟು. ದೇಹದ ಒಂದು ಕೊನೆಯಲ್ಲಿ ಬಾಯಿ, ಅದಕ್ಕೆ ಅಭಿಮುಖವಾಗಿ ಮತ್ತೊಂದು ಕೊನೆಯಲ್ಲಿ ಗುದ. ಬಾಯ ಸುತ್ತ ಒಳಕ್ಕೆ ಎಳೆದುಕೊಳ್ಳಬಹುದಾದ (ಸಂಕುಚಿಸಬಲ್ಲ) ಕೋಡುಬಳ್ಳಿಗಳಿವೆ. ಈ ಬಳ್ಳಿಗಳು ಸಾಗರದ ಅಡಿಯಲ್ಲಿ ವಾಸಿಸುವ ಎಲಾಸಿಪೋಡದ ಸರಳ ನಳಿಕೆ. ಆದರೆ ಬೇರೆ ಕಡಲ ಸೌತೆಗಳಲ್ಲಿ ಅವು ಹೆಚ್ಚು ಕವಲುಗಳಿಂದ ಕೂಡಿರುತ್ತವೆ. ಕೋಡುಬಳ್ಳಿಗಳು ವಾಸ್ತವವಾಗಿ ಮಾರ್ಪಾಟಾದ ನಳಿಕೆ ಪಾದಗಳೇ. ದೇಹದ ಮೇಲೆ ಐದು ಜೊತೆ ನಳಿಕೆಪಾದಗಳು ಐದು ಸಾಲುಗಳಲ್ಲಿ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಹಬ್ಬಿರುತ್ತವೆ. ಇವುಗಳೇ ಚಲನೆಯಲ್ಲಿ ನೆರವಾಗುವ ಅಂಗಗಳು. ದೇಹದ ಗೋಡೆ ಮೃದು, ಸ್ನಾಯುಮಯ. ಸ್ನಾಯುಗಳಲ್ಲಿ ಸಣ್ಣ ಸಣ್ಣ ಸೂಕ್ಷ್ಮದರ್ಶೀಯ ಸ್ಪಿಕ್ಯೂಲುಗಳು ಹುದುಗಿರುತ್ತವೆ. ಈ ಗುಂಪಿನ ವರ್ಗೀಕರಣದಲ್ಲಿ ಸ್ಪಿಕ್ಯೂಲುಗಳು ಹೆಚ್ಚು ಸಹಾಯಕಾರಿಯಾಗಿವೆ. ಸೀಲೋಮ್ ಎಂಬ ದೇಹಾವಕಾಶ ವಿಸ್ತಾರವಾಗಿದೆ. ರೆಕ್ಟಮಿನ ಗೋಡೆಯಿಂದ ಎರಡು ದೊಡ್ಡ ಶ್ವಸನವೃಕ್ಷಗಳು ಬೆಳೆದಿರುತ್ತವೆ. ಕಡಲ ಸೌತೆಗಳು ಆಹಾರ ಸೇವಿಸುವಾಗ ಪರಿಸರದ ಮಣ್ಣನ್ನು ನುಂಗುವುದರಿಂದ ಪಚನನಾಳದಲ್ಲಿ ಮಣ್ಣು ತುಂಬಿರುತ್ತದೆ.



ಕಟಲ ಸೌತೆ

ಚೀನ, ಮಲಯ, ಫಿಲಿಪೀನ್ಸ್, ಆಸ್ಟ್ರೇಲಿಯಗಳಲ್ಲಿ ಇವುಗಳಿಂದ ಖಾದ್ಯವಸ್ತುಗಳನ್ನು, ಹೆಚ್ಚಾಗಿ ಸಾರನ್ನು ತಯಾರಿಸುತ್ತಾರೆ. ಸಾಮಾನ್ಯವಾಗಿ ಇವನ್ನು ಮೊದಲು ಹದಮಾಡಿ, ಉಪ್ಪುನೀರಿನಲ್ಲಿ ಕುದಿಸಿ, ಒಣಗಿಸಿಟ್ಟುಕೊಂಡಿದ್ದು ಊಟಕ್ಕೆ ಬಡಿಸುವ ಮುನ್ನ ಮತ್ತೆ ಬೇಯಿಸುತ್ತಾರೆ.

***

**ಕಡಲ ಹಂದಿ:** ಸಿಟೇಸಿಯ ಗಣದ ಫೋಸೀನ ಜಾತಿಯ ಜಲವಾಸಿ ಸ್ತನಿ (ಸೀ ಹಾಗ್). ಇಂಗ್ಲಿಷಿನಲ್ಲಿ ಪಾರ್ಪಾಯಿಸ್ ಎನ್ನುತ್ತಾರೆ. ತಿಮಿಂಗಿಲ ಮತ್ತು ಡಾಲ್ಫಿನ್ನುಗಳ ಹತ್ತಿರ ಸಂಬಂಧಿ. ದೇಹದ ಆಕಾರ ಡಾಲ್ಫಿನಿನಂತೆಯೇ. ಆದರೆ ಅದರಂತೆ ಮೂತಿ ಚೂಪಾಗಿಲ್ಲ. ದೇಹದ ಉದ್ದ ೧.೫–೨ ಮೀ. ಬಣ್ಣ ಸಾಮಾನ್ಯವಾಗಿ ಕಪ್ಪು. ಹೊಟ್ಟೆಯ ಭಾಗ ಬಿಳಿ. ತಲೆ ಗುಂಡಗಿದೆ. ಬಾಯಿ ಅಗಲ. ಒಂದೊಂದು ದವಡೆಯಲ್ಲಿ ೩೨–೫೭ ಹಲ್ಲುಗಳಿವೆ. ಕುತ್ತಿಗೆಯ ಕಶೇರುಕಗಳು ಒಂದರೊಡನೊಂದು ಕೂಡಿಕೊಂಡಿವೆ. ಮುಂಗಾಲುಗಳು ಜಾಲಪಾದಗಳಾಗಿ ಮಾರ್ಪಟ್ಟು ಈಜಲು ನೆರವಾಗಿವೆ. ಬೆನ್ನಿನ ಮೇಲೆ ತ್ರಿಕೋಣಾಕಾರದ ಬೆನ್ನಿನ ಈಜುರೆಕ್ಕೆಯೊಂದಿದೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ತೀರಪ್ರದೇಶದಲ್ಲಿ ಕಾಣಬರುವ ಇದು ಸಾಮಾನ್ಯವಾಗಿ ದೊಡ್ಡ ದೊಡ್ಡ ಗುಂಪುಗಳಲ್ಲಿ ವಾಸಿಸುತ್ತದೆ. ಒಂದೊಂದು ಗುಂಪಿನಲ್ಲೂ ೨೦–೧೦೦ ಪ್ರಾಣಿಗಳಿರುತ್ತವೆ. ಸಾಧಾರಣವಾಗಿ ಸಮುದ್ರದಲ್ಲೇ ವಾಸಿಸಿದರೂ ಕೆಲವೊಮ್ಮೆ ದೊಡ್ಡ ನದಿಗಳಿಗೆ ವಲಸೆ ಬರುವುದೂ ಉಂಟು. ಹೆರ್ರಿಂಗ್ ಮೀನು, ಬಂಗಡೆ, ಸ್ಕ್ವಿಡ್ ಮುಂತಾದುವು ಇದರ ಆಹಾರ. ಋತುಕಾಲ ಬೇಸಗೆ. ಹೆಣ್ಣು ಒಂದು ಸಲಕ್ಕೆ ಒಂದೇ ಮರಿಯನ್ನು ಈಯುತ್ತದೆ. ಗರ್ಭಧಾರಣೆ ಕಾಲ

ಸುಮಾರು ಒಂದು ವರ್ಷ. ತಾಯಿ ಒಂದು ಕಡೆ ವಾಲಿಕೊಂಡು ಈಜುತ್ತ ಮರಿಗೆ ಹಾಲುಣಿಸುವುದು ಇದರ ಸೋಜಿಗ. ಪ್ರಪಂಚದ ಹಲವೆಡೆ ಇದರ ಮಾಂಸವನ್ನು ತಿನ್ನುತ್ತಾರೆ. ಇಂಗ್ಲೆಂಡಿನ ರಾಜ ಎಂಟನೆಯ ಹೆನ್ರಿ ಕಾಲದಲ್ಲಿ ಇದರ ಮಾಂಸವನ್ನು ರಾಜಭೋಜನಕೂಟಗಳಲ್ಲಿ ಮಾತ್ರ ಉಪಯೋಗಿಸುತ್ತಿದ್ದರಂತೆ.

ಇದೇ ಗಣಕ್ಕೆ ಸೇರಿದ ಫೋಸಿನಾಯ್ಡಿಸ್ ಮತ್ತು ನಿಯೋಫೋಸೀನ ಎಂಬ ಜಾತಿಯ ಪ್ರಾಣಿಗಳನ್ನೂ ಕಡಲ ಹಂದಿಗಳೆಂದೇ ಕರೆಯುವುದುಂಟು. ಇವುಗಳಲ್ಲಿ ಮೊದಲನೆಯದು ಉತ್ತರ ಪೆಸಿಫಿಕ್ ಸಾಗರದ ಅಲ್ಯೂಷಿಯನ್ ದ್ವೀಪಗಳಲ್ಲಿ ವಾಸಿಸುತ್ತದೆ. ಎರಡನೆಯದು ಭಾರತ, ಬೋರ್ನಿಯೊ ಮತ್ತು ಜಪಾನಿನ ತೀರ ಪ್ರದೇಶಗಳಲ್ಲಿ ಕಾಣಬರುತ್ತದೆ. ಇದರ ಬಣ್ಣ ಕಪ್ಪು. ಬೆನ್ನಿನ ಈಜುರೆಕ್ಕೆ ಇಲ್ಲ. ಸಾಮಾನ್ಯವಾಗಿ ಸಮುದ್ರತೀರಗಳಲ್ಲಿ ವಾಸಿಸಿದರೂ ಕೆಲವೊಮ್ಮೆ ಇರವಾಡಿ ಮುಂತಾದ ಪೂರ್ವ ಏಷ್ಯದ ನದಿಗಳಲ್ಲಿ ನೂರಾರು ಮೈಲಿ ದೂರ ಒಳಕ್ಕೆ ಸಾಗಿ ಬರುವುದುಂಟು. ***

**ಕಡಲ ಹಕ್ಕಿ:** ಪೆಲಿಕನಿಫಾರ್ಮಿಸ್ ಗಣದ ಸೂಲಿಡೆ ಕುಟುಂಬಕ್ಕೆ ಸೇರಿದ ಸೂಲ ಎಂಬ ಒಂದು ಸಮುದ್ರವಾಸಿ ಪಕ್ಷಿಜಾತಿ. ರೂಢಿಯಲ್ಲಿವನ್ನು ಗಾನೆಟ್ ಎನ್ನುತ್ತಾರೆ. ಮೂರು ಪ್ರಮುಖ ಪ್ರಭೇದಗಳಿವೆ. ಇವುಗಳಲ್ಲಿ ಸೂಲ ಬಸಾನಸ್ (ಸಾಮಾನ್ಯ ಗಾನೆಟ್) ಎಂಬ ಪ್ರಭೇದ ಮುಖ್ಯವಾದುದು. ಬ್ರಿಟನ್ನಿನ ಉತ್ತರ ಭಾಗ, ಐಸ್‍ಲೆಂಡ್, ಪೆರು ಮುಂತಾದಲ್ಲಿ ಕಾಣಸಿಗುತ್ತದೆ. ಗಾತ್ರದಲ್ಲಿ ಬಹು ದೊಡ್ಡದಾದ ಹಕ್ಕಿ. ೦.೯ ಮೀ. ಉದ್ದ ಇದೆ. ಬಲಿಷ್ಠವೂ ಹೌದು. ಬಣ್ಣ ಕಣ್ಣಿಗೆ ತಿವಿಯುವಷ್ಟು ಬಿಳುಪು. ರೆಕ್ಕೆ ಅಗಲಿಸಿದಾಗ ತುದಿಯಿಂದ ತುದಿಗೆ ೧.೮ ಮೀ. ಅಗಲ. ತಲೆಯ ಮೇಲ್ಭಾಗ ಹಳದಿ. ಕಂಠಪ್ರದೇಶ ಮತ್ತು ರೆಕ್ಕೆಗಳ ತುದಿಯಲ್ಲಿ ನೀಳಾಕೃತಿಯ ಮಚ್ಚೆಗಳಿವೆ. ಕೊಕ್ಕು ಉದ್ದವಾಗಿ, ಶಕ್ತಿಯುತವಾಗಿ ಈಟಿಯ ಮೊನೆಯಂತೆ ಹರಿತವಾಗಿದೆ. ಜಾಲಪಾದವಿರುವುದರಿಂದ ಹಕ್ಕಿ ಚೆನ್ನಾಗಿ ಈಜುತ್ತದೆ. ಸೂಲ ಕೇಪೆನ್ಸಿಸ್ (ಕೇಪ್ ಗಾನೆಟ್) ಮತ್ತು ಸೂಲ ಸೆರ್ರೆಟರ್ (ಆಸ್ಟ್ರೇಲಿಯಾದ ಗಾನೆಟ್) ಉಳಿದೆರಡು ಪ್ರಭೇದಗಳು.



ಕಡಲ ಹಕ್ಕಿ

ಚಳಿಗಾಲದಲ್ಲಿ ದಕ್ಷಿಣದಿಂದ ಉತ್ತರ ಮತ್ತು ಪಶ್ಚಿಮ ಆಫ್ರಿಕಗಳ ಸಮುದ್ರ ಹಾಗೂ ಮೆಕ್ಸಿಕೊ ಕೊಲ್ಲಿಗಳತ್ತ ವಲಸೆ ಹೋಗುವುದುಂಟು. ತನ್ನ ಹಾಗೂ ಮರಿಗಳ ವಾಸಕ್ಕಾಗಿ ಕಡಲಿನ ಜೊಂಡು, ಹುಲ್ಲು ಮುಂತಾದುವುಗಳ ನೆರವಿನಿಂದ ಎತ್ತರವಾದ ಕಲ್ಲಿನ ಮೇಲೆ ಗೂಡು ಕಟ್ಟುತ್ತದೆ. ಗೂಡಿನ ನಿರ್ಮಾಣ ಕಾರ್ಯದಲ್ಲಿ ಗಂಡು ಮತ್ತು ಹೆಣ್ಣುಗಳೆರಡೂ ಭಾಗವಹಿಸುತ್ತವೆ. ಕಡಲ ಹಕ್ಕಿ ಮಾಂಸಾಹಾರಿ. ಕಡಲಿನಲ್ಲಿ ದೊರೆಯುವ ಮೀನುಗಳೇ ಇದರ ಆಹಾರ. ಇದರ ದೃಷ್ಟಿ ಅತ್ಯಂತ ತೀಕ್ಷ್ಣವಾದುದು. ತೀರ ಎತ್ತರದಲ್ಲಿ ಹಾರುತ್ತಿರುವಾಗಲೇ ನೀರಿನಲ್ಲಿ ಸಂಚರಿಸುವ ಮೀನುಗಳನ್ನು ಗುರುತಿಸುತ್ತದೆ. ನೀರಿನಿಂದ ಸುಮಾರು ನೂರು ಅಡಿಗಳ ಎತ್ತರದಿಂದ, ರೆಕ್ಕೆಗಳನ್ನು ಅರೆಮುಚ್ಚಿ, ಬಂದೂಕಿನ ಗುಂಡಿನಂತೆ ರಭಸದಿಂದ ನೇರವಾಗಿ ನುಗ್ಗಿ ಮೀನುಗಳನ್ನು ಹಿಡಿಯುವ ದೃಶ್ಯ ರಮಣೀಯ. ಈ ಕ್ರಿಯೆಯಲ್ಲಿ ಇದು ಮೀಂಚುಳ್ಳಿಯನ್ನು (ಕಿಂಗ್‍ಫಿಷರ್) ಹೋಲುತ್ತದೆ. ಆಹಾರಕ್ಕಾಗಿ ತನ್ನ ನಿವಾಸಸ್ಥಾನದಿಂದ ೧೩೦–೧೬೦ ಕಿಮೀ ಗಳಷ್ಟು ದೂರ ಸಂಚರಿಸುತ್ತದೆ. ಇದರ ಹಾರಾಟದಲ್ಲಿ ರಾಜಗಾಂಭೀರ್ಯವಿದೆ. ಇದು ಸಾಮಾನ್ಯವಾಗಿ ಅಕ್ಟೋಬರ್ ೧೧ನೆಯ ತಾರೀಖಿನ ಸುಮಾರಿಗೆ ವಲಸೆ ಹೋಗುತ್ತದೆ.

ಮೂರು ವರ್ಷ ತುಂಬಿದ ಹೆಣ್ಣುಹಕ್ಕಿ ಗರ್ಭ ಧರಿಸುತ್ತದೆ. ವಸಂತಮಾಸದ ಪ್ರಾರಂಭದಲ್ಲಿ ಒಂದು ಅಥವಾ ಎರಡು ತಿಳಿನೀಲಿ ಬಣ್ಣದ ಮೊಟ್ಟೆಗಳನ್ನಿಡುತ್ತದೆ. ಗಂಡು ಮತ್ತು ಹೆಣ್ಣು ಒಂದಾದ ಮೇಲೊಂದರಂತೆ ೪೪ ದಿನಗಳ ಕಾಲ ಮೊಟ್ಟೆಗಳಿಗೆ ಕಾವು ಕೊಡುತ್ತವೆ. ತಂದೆತಾಯಿಗಳಿಗಿಂತ ಮರಿಹಕ್ಕಿಗೆ ವಲಸೆಹೋಗುವ ಗೀಳು ಹೆಚ್ಚು.

ಕಡಲ ಹಕ್ಕಿಯ ಇನ್ನೊಂದು ಬಗೆಯಾದ ಮೋರಸ್ ಕೆಪೆನ್ಸಿಸ್ ಎಂಬುದು ದಕ್ಷಿಣ ಅಮೆರಿಕದಲ್ಲಿ ವಾಸಿಸುತ್ತದೆ. ಇವಲ್ಲದೆ ಸೂಲಿಡೆ ಕುಟುಂಬದ ಸೂಲ ಜಾತಿಯ ಪ್ರಭೇದಗಳಿಗೂ ಕಡಲ ಹಕ್ಕಿ ಎನ್ನುವ ರೂಢಿಯಿದೆ. ಬೂಬಿಗಳೆಂದೂ ಕರೆಯಲಾಗುವ ಇವುಗಳಲ್ಲಿ ಸೂಲ ನೆಬುಕ್ಸಿಯೈ (ನೀಲಿ ಪಾದದ ಬೂಬಿ), ಸೂಲ ಲ್ಯೂಕೊಗ್ಯಾಸ್ಟರ್ (ಕಂದುಬೂಬಿ), ಸೂಲ ಸೂಲ (ಕೆಂಪು ಪಾದದ ಬೂಬಿ) ಮತ್ತು ಸೂಲ ಬೋಟಿ ಎಂಬುವು ಮುಖ್ಯವಾದುವು. ಇವುಗಳಲ್ಲಿ ಕೊನೆಯದು ಮೊಟ್ಟೆಯಿಡಲು ಹಿಂದೂ ಮಹಾಸಾಗರದ ಅಸೆಂಪ್ಷನ್ ಮತ್ತು ಕ್ರಿಸ್‍ಮಸ್ ದ್ವೀಪಗಳಿಗೆ ವಲಸೆ ಹೋಗುತ್ತದೆ. (ಎನ್.ಎಂ.)

**ಕಡಲ ಹಾವುಗಳು:** ಉಷ್ಣ ಹಾಗೂ ಸಮಶೀತೋಷ್ಣವಲಯಗಳ ಸಮುದ್ರ ತೀರಪ್ರದೇಶದಲ್ಲಿ ವಾಸಿಸುವ ಅತ್ಯಂತ ವಿಷಪೂರಿತ ಬಗೆಯವು. ಇವು ನಾಗರಹಾವುಗಳ ಸಂಬಂಧಿ ಹೈಡ್ರೋಫಿಡೆ ಕುಟುಂಬಕ್ಕೆ ಸೇರಿದವು. ಏಷ್ಯ ಮತ್ತು ಆಸ್ಟ್ರೇಲಿಯಗಳ ತೀರಪ್ರದೇಶದಲ್ಲಿ ಇವುಗಳ ಸಂಖ್ಯೆ ಹೆಚ್ಚು. ಒಂದು ಜಾತಿಯ ಕಡಲ ಹಾವು ಆಫ್ರಿಕದ ಪೂರ್ವತೀರ ಪ್ರದೇಶದಲ್ಲೂ ಕಂಡುಬಂದಿದೆ. ಹಾಗೆಯೇ ಮತ್ತೊಂದು ಉತ್ತರ ಅಮೆರಿಕದ ಪಶ್ಚಿಮ ತೀರಪ್ರದೇಶದಲ್ಲಿ ಕಂಡುಬಂದಿದೆ. ಅಟ್ಲಾಂಟಿಕ್ ಸಾಗರದಲ್ಲಿ ಇವುಗಳ ಸುಳಿವಿಲ್ಲ.

ಕಡಲ ಹಾವು

ಇವು ಜಲಜೀವನಕ್ಕೆ ಅಚ್ಚುಕಟ್ಟಾಗಿ ಹೊಂದಿಕೊಂಡಿವೆ. ದೋಣಿಯ ಹುಟ್ಟಿನಂತೆ ಮಾರ್ಪಟ್ಟಿರುವ ಚಪ್ಪಟೆಯಾದ ಬಾಲ, ಕವಾಟಗಳಿಂದ ಕೂಡಿದ ಮೂಗಿನ ಹೊಳ್ಳೆಗಳು ಮತ್ತು ಮೋಟಾದ ನಾಲಗೆ – ಇವು ಜಲಜೀವನದ ಪರಿ ಹೊಂದಾಣಿಕೆಗಳು. ತಮ್ಮ ಉಪ್ಪು ನೀರಿನ ಪರಿಸರಕ್ಕೆ ಅನ್ವಯಿಸಿದಂತೆ ಇವುಗಳ ಮೂಗಿನಲ್ಲಿ ನಾಸಾ ಗ್ರಂಥಿ ಬೆಳೆದು ಹೆಚ್ಚಿನ ಉಪ್ಪನ್ನು ವಿಸರ್ಜಿಸುತ್ತವೆ. ಈಜುವುದರಲ್ಲಿ ಪ್ರಾವೀಣ್ಯ ಪಡೆದಿರುವ ಇವು ಭೂಮಿಯ ಮೇಲೆ ಹರಿದಾಡಲು ಅಸಮರ್ಥವಾಗಿವೆ. ನೀರಿನಲ್ಲಿದ್ದಾಗ ನೀರು ದೇಹವನ್ನು ಪ್ರವೇಶಿಸದಂತೆ ಮೂಗಿನ ಹೊಳ್ಳೆಗಳನ್ನು ಕವಾಟಗಳು ಮುಚ್ಚುತ್ತವೆ. ಸಾಮಾನ್ಯವಾಗಿ ತೀರಪ್ರದೇಶದಲ್ಲಿ ಹೆಚ್ಚಾಗಿ ಕಂಡುಬಂದರೂ ಇವು ದಡದಿಂದ ಬಹು ದೂರ ಈಜಿ ಹೋಗಬಲ್ಲುವು. ದಾಳಿಕಾರ ಪ್ರವೃತ್ತಿ ಇವುಗಳ ಹುಟ್ಟುಗುಣವಲ್ಲ. ಸಮುದ್ರತೀರದಲ್ಲಿ ಈಜಾಡುವವರಿಗೆ ಸಾಮಾನ್ಯವಾಗಿ ಇವು ಹಿಂಸೆ ಮಾಡುವುದಿಲ್ಲ. ಅಕಸ್ಮಾತ್ತಾಗಿ ಹಿಡಿದರೆ ಅಥವಾ ಢಿಕ್ಕಿ ಹೊಡೆದರೆ ಕಚ್ಚುವುದುಂಟು. ಇವಕ್ಕೆ ಪತಂಗಗಳಂತೆ ಬೆಳಕು ಬಲು ಇಷ್ಟ.. ರಾತ್ರಿಯ ವೇಳೆ ಕಡಲ ತೀರದಲ್ಲಿ ಲಾಂದ್ರವನ್ನಿಟ್ಟರೆ ಅದರ ಬೆಳಕಿಗೆ ಆಕರ್ಷಿತವಾಗಿ ದಡಕ್ಕೆ ಬರುತ್ತವೆ. ಇವನ್ನು ಹಿಡಿಯುವವರು ಈ ವಿಧಾನವನ್ನು ಅನುಸರಿಸುತ್ತಾರೆ. ನ್ಯೂಗಿನಿಯಲ್ಲಿ ಅಲ್ಲಿನ ಕಡಲ ಹಾವುಗಳು ದೊಡ್ಡ ದೊಡ್ಡ ನದಿಗಳನ್ನು ಪ್ರವೇಶಿಸುವುದುಂಟು. ಬೆಸ್ತರು ನದಿಗಳಲ್ಲಿ ಮೀನು ಹಿಡಿಯುವಾಗ ಅವರ ಬಲೆಗಳಿಗೆ ಇವು ಬಿದ್ದರೆ ಅವರು ಹೆದರಿಕೆಯಿಲ್ಲದೆ ಇವನ್ನು ಹಿಡಿದು ನದಿಗೆ ಎಸೆದು ಬಿಡುತ್ತಾರೆ. ಚೀನಾ ದೇಶದಲ್ಲಿ ಚೀನೀಯರು ಇವನ್ನು ತಿನ್ನುವುದುಂಟು. ಕಡಲ ಹಾವಿನ ವಿಷದ ನಂಜು ನರಗಳ ಮೇಲೆ ಪರಿಣಾಮಕಾರಿಯಾಗಿದೆ. ಬೊಂಬಾಯಿಯ ಹಾಫ್ಕಿನ್ ಇನ್ಸ್ಟಿಟ್ಯೂಟಿನಲ್ಲಿ ಇದರ ನಂಜನ್ನು ಶಮನಗೊಳಿಸುವ ಆಂಟಿವೆನಿನ್ ಅಥವಾ ಪ್ರತಿವಿಷವನ್ನು ತಯಾರಿಸುತ್ತಿದ್ದಾರೆ.

ಈ ಕಡಲ ಹಾವುಗಳ ಕುಟುಂಬದಲ್ಲಿ ಎರಡು ಉಪಕುಟುಂಬಗಳಿವೆ. 1 ಹೈಡ್ರೋಫಿನೆ, 2 ಲಾಟಿಕಾನಿನೆ. ಮೊದಲನೆಯ ಗುಂಪಿನವು ಜಲಜೀವನಕ್ಕೆ ಸಂಪೂರ್ಣವಾಗಿ

ಹೊಂದಿಕೊಂಡಿವೆ. ಅಲ್ಲದೆ ಅವು ತಮ್ಮ ಮೊಟ್ಟೆಗಳನ್ನು ಗರ್ಭಾಶಯದಲ್ಲಿಯೇ ಇಟ್ಟುಕೊಂಡು ಕಾವು ಕೊಟ್ಟು ಮರಿ ಮಾಡುತ್ತವೆ. ಆದರೆ ಎರಡನೆಯ ಗುಂಪಿನವು ಸಮುದ್ರದ ದಡಕ್ಕೆ ಬಂದು ಮೊಟ್ಟೆಗಳನ್ನಿಡುತ್ತವೆ. ಪೆಲಾಮಿಸ್ ಪ್ಲಾಟೂರಸ್ ಎಂಬ ಕಡಲ ಹಾವು ಹಿಂದೂ ಸಾಗರ ಮತ್ತು ಪೆಸಿಫಿಕ್ ಸಾಗರಗಳ ತೀರದಲ್ಲೆಲ್ಲ ಕಂಡುಬರುತ್ತದೆ. ಇದು ಸಾಮಾನ್ಯವಾಗಿ ಒಂದು ಮೀಟರು ಉದ್ದ ಬೆಳೆಯುತ್ತದೆ. ದೇಹ ಕಂದು ಅಥವಾ ಬೂದು ಬಣ್ಣವಾಗಿದ್ದು ಮೇಲೆ ಕಪ್ಪು ಪಟ್ಟಿಗಳಿರುತ್ತವೆ. ಭಾರತ ದೇಶದಲ್ಲಿ 8 ಜಾತಿ ಮತ್ತು 19 ಪ್ರಭೇದಗಳಿವೆ. ಕರಿಲಿಯ, ಲಾಟಿಕಾಡ, ಪ್ರೆಸ್ಕುಲೇಟ, ಎನ್‌ಹೈಡ್ರಿನ, ಹೈಡ್ರೋಫಿಸ್, ಲಪೆಮಿಸ್, ಮೈಕ್ರೋಸೆಫಾಲೋಫಿಸ್ ಮತ್ತು ಪೆಲಾಮಿಸ್ ಜಾತಿಯ ಕಡಲಹಾವುಗಳ ಪೈಕಿ ಕೊನೆಯ ಆರು ಜಾತಿಗಳು ಕನ್ನಡನಾಡಿನ ಕಡಲತೀರದಲ್ಲಿ ಕಾಣಬರುತ್ತವೆ. ***

**ಕಡಲ ಹೂ:** ಕುಟುಕು ಕಣವಂತ (ಸೀಲೆಂಟರೇಟ) ವಂಶಕ್ಕೆ ಸೇರಿದ ಒಂದು ಸಮುದ್ರವಾಸಿ (ಸೀ ಆನಿಮೊನಿ). ಆಂಥೊಜೋವ ವರ್ಗಕ್ಕೂ ಹೆಕ್ಸಕೊರಾಲಿಯ ಉಪವರ್ಗಕ್ಕೂ ಸೇರಿದೆ. ಮಧ್ಯೆ ಬಾಯಿಯುಳ್ಳ ಒಂದು ತಟ್ಟೆಯ ಸುತ್ತ ಹೂ ದಳಗಳಂತೆ ಜೋಡಿಸಿರುವ ಕೋಡುಬಳ್ಳಿಗಳಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಸುಮಾರು 1,000 ಪ್ರಭೇದಗಳುಳ್ಳ ಇದರ ಬಳಗ ಸಮುದ್ರ ದಂಡೆಯಿಂದ 6,600 ಮೀ ಆಳದ ವರೆಗೂ ವಿಸ್ತರಿಸಿದೆ. ವೈವಿಧ್ಯಮಯ ವರ್ಣ ವಿನ್ಯಾಸಗಳಿಂದ ಕೂಡಿದ ಈ ಸಮುದ್ರಜೀವಿಗಳು ನೋಡಲು ಬಲು ಆಕರ್ಷಕ. ಇವುಗಳಲ್ಲಿ ಏಕಾಂತ ಜೀವಿಗಳೇ ಹೇರಳವಾಗಿದ್ದರೂ ಕೂಡುಜೀವಿ, ಸಹಜೀವಿ, ಸಾಮೂಹಿಕಜೀವಿ ಮತ್ತು ಪರತಂತ್ರಜೀವಿಗಳೂ ಇಲ್ಲದೇ ಇಲ್ಲ. ಸ್ವಾಭಾವಿಕವಾಗಿ ಇವು ಸ್ಥಾವರ ಜೀವಿಗಳು. ಕಡಲ ತಳದಲ್ಲಿರುವ ಶಂಖ, ಕಪ್ಪೆಚಿಪ್ಪು, ಕಲ್ಲು ಮುಂತಾದುವುಗಳಿಗೆ ಅಂಟಿಕೊಂಡಿರುತ್ತವೆ. ಆದರೆ ಕೆಲವು ಪ್ರಾಣಿಗಳು ಮಂದಗಾಮಿಗಳಂತೆ ತೆವಳುವುದೂ ಮತ್ತೆ ಕೆಲವು ಕೋಡು ಬಳ್ಳಿಗಳ ಬಡಿತದಿಂದ ನಿಧಾನವಾಗಿ ಈಜುವುದೂ ಉಂಟು.

ಇವುಗಳ ದೇಹ ಕೊಳವೆಯಂತಿದೆ. ಆಧಾರಕ್ಕೆ ಅಂಟಿರುವ ಭಾಗವನ್ನು ಪಾದ ಅಥವಾ ಬುಡ (ಪೀಡಲ್ ಡಿಸ್ಕ್) ಎಂತಲೂ ಮೇಲ್ತುದಿಯ ಭಾಗವನ್ನು ಬಾಯ ತಟ್ಟೆ (ಓರಲ್ ಡಿಸ್ಕ್) ಎಂತಲೂ ಇವೆರಡರ ಮಧ್ಯೆ ಇರುವ ಭಾಗವನ್ನು ಕಂಬ (ಕಾಲಮ್) ಎಂತಲೂ ದೇಹವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಬಾಯ ತಟ್ಟೆಯ ಮಧ್ಯದಲ್ಲಿ ಸೀಳಿನಂಥ ಬಾಯಿಯ ಅಂಚಿನಲ್ಲಿ ಒಂದು ಅಥವಾ ಹಲವು ಸುತ್ತುಗಳಲ್ಲಿ ಜೋಡಿಸಿರುವ ಬೆರಳುಗಳಂಥ ಟೊಳ್ಳಾದ ಕೋಡುಬಳ್ಳಿಗಳೂ (ಟೆಂಟಕಲ್) ಇವೆ. ಎಲ್ಲ ಕಡಲಹೂಗಳಲ್ಲೂ ಕೋಡುಬಳ್ಳಿಗಳ ಸಂಖ್ಯೆ ಆರು ಅಥವಾ ಆರರ ಗುಣಕದಲ್ಲಿರುತ್ತದೆ. ಪ್ರತಿಯೊಂದು ಕೋಡುಬಳ್ಳಿಯಲ್ಲಿಯೂ ಅಸಂಖ್ಯಾತವಾದ ಕುಟುಕು ಕಣಗಳಿವೆ (ನಿಮ್ಯಾಟೊಸಿಸ್ಟ್ಸ್). ಬಾಯಿಯಿಂದ ಹೊರಟ ಚಿಕ್ಕ ಗಂಟಲು ನಾಳ (ಗಲೆಟ್ ಅಥವಾ ಸ್ಟೊಮೋಡಿಯಂ) ಶರೀರಸ್ತಂಭದ ಒಳಭಾಗದಲ್ಲಿ ಜೋತು ಬಿದ್ದಿದೆ. ಇದರ ಇಕ್ಕೆಡೆಗಳಲ್ಲೂ ಒಂದು ಅಥವಾ ಎರಡು ನೀರ್ನಳಿಕೆಗಳಿವೆ (ಸೈಫನೊಗ್ಲಿಫ್). ಈ ನಳಿಕೆಗಳಲ್ಲಿರುವ ಶಿಲಕೆಗಳ ಬಡಿತದಿಂದ ಆವಶ್ಯಕಾಂಶಗಳನ್ನು ಹೊತ್ತ ನೀರಿನ ಪ್ರವಾಹ ಒಂದು ನಳಿಕೆಯ (ಸಲ್ಕಸ್) ಮೂಲಕ ಒಳಹೊಕ್ಕು ಮತ್ತೊಂದರ ಮೂಲಕ (ಸಲ್ಕ್ಯುಲಸ್) ತ್ಯಾಜ್ಯ ವಸ್ತುಗಳಿಂದ ಕೂಡಿ ಹೊರಬರುತ್ತದೆ. ಈ ಜಲಾಭಿಸರಣೆಯಿಂದ ಅನಿಲಗಳ ವಿನಿಮಯಕ್ಕೂ ಸಹಾಯವಾಗುವುದು.



ವಿವಿಧ ಬಗೆಯ ಕಡಲ ಹೂಗಳು

ಕಡಲ ಹೂ ಇಪ್ಪದರ ಜೀವಿ. ಹೊರಚರ್ಮವೂ ಒಳಚರ್ಮವೂ ತನ್ಮಧ್ಯೆ ಮಂದವಾಗಿ ಬೆಳೆದಿರುವ ಮಿಸೋಗ್ಲಿಯವೂ ಶರೀರಸ್ತಂಭದ ಕೇಂದ್ರದಲ್ಲಿರುವ ಜಠರ ಸಂವಹನಿ ಡೊಗರನ್ನು (ಗಾಸ್ಟ್ರೊವ್ಯಾಸ್ಕ್ಯುಲರ್ ಕ್ಯಾವಿಟಿ) ಸುತ್ತುವರಿದಿವೆ. ಈ ಡೊಗರಿನಲ್ಲಿ ಜೋಲಾಡುತ್ತಿರುವ ಗಂಟಲ ನಾಳ 6 ಜೊತೆ ನಡುತಡಿಕೆಗಳಿಂದ ಶರೀರದ ಗೋಡೆಗೆ ಅಂಟಿರುತ್ತದೆ. ನಡುತಡಿಕೆಗಳು, ಕೋಡುಗಳಂತೆ, 6ರ ಆವರ್ತಗಳಲ್ಲಿ ಜೊತೆ ಜೊತೆಯಾಗಿ ಬೆಳೆದು ಡೊಗರನ್ನು ಅನೇಕ ಕೋಣೆಗಳಾಗಿ ವಿಭಾಗ ಮಾಡಿವೆ. ಆದರೆ ಇವುಗಳಲ್ಲಿರುವ ದ್ವಾರಗಳಿಂದ ಕೋಣೆಗಳ ಅಂತಸ್ಸಂಪರ್ಕಕ್ಕೆ ಅವಕಾಶ ಏರ್ಪಡುತ್ತದೆ. ನಡುತಡಿಕೆಗಳು ಪ್ರಥಮ, ದ್ವಿತೀಯ, ತೃತೀಯ ಮತ್ತು ಚತುರ್ಥ ತಂಡಗಳಲ್ಲಿ ಬೆಳೆಯಬಹುದು. ಆದರೆ ಪ್ರತಿ ತಂಡದಲ್ಲೂ ಕೇವಲ 6 ಜೊತೆಗಳಿದ್ದು ಅವುಗಳ ಗಾತ್ರ ಮತ್ತು ಉಗಮಕಾಲ ಒಂದೇ ಆಗಿರುತ್ತವೆ. ನೀಳ ಹಾಗೂ ವರ್ತುಳ ಸ್ನಾಯುಗಳಿಂದ ಕೂಡಿದ ನಡುತಡಿಕೆಗಳ ಗೋಡೆಗೆ ಅಂಟಿರುವ ಜನನೇಂದ್ರಿಯಗಳು ಸಂತಾನೋತ್ಪತ್ತಿಯಲ್ಲಿ ಪಾತ್ರವಹಿಸುತ್ತವೆ. ನಡುತಡಿಕೆಗಳ ಅಂಚಿನಲ್ಲಿರುವ ಅಂತ್ಯತಂತುಗಳು (ಅಕಾಂಟಿಯ) ದೇಹರಕ್ಷಣೆಯ ಕಾರ್ಯದಲ್ಲಿ ನೆರವಾಗುತ್ತವೆ. ಈ ಪ್ರಾಣಿಗಳಲ್ಲಿ ಲಿಂಗ ಮತ್ತು ನಿರ್ಲಿಂಗ ರೀತಿಯ ವಂಶಾಭಿವೃದ್ಧಿಗಳೆರಡನ್ನೂ ಕಾಣಬಹುದು. ಅಂಡಾಣುಗಳ ಸಂಯೋಗದಿಂದ ಉತ್ಪತ್ತಿಯಾಗುವ ಮರಿ ಕಡಲ ಹೂ ತಾಯಿಯ ಬಾಯ ಮೂಲಕ ಹೊರಬಂದು, ಯಾವುದಾದರೂ ಆಧಾರಕ್ಕೆ ಅಂಟಿಕೊಂಡು ಸ್ವತಂತ್ರ ಜೀವಿಯಾಗಲು ತೊಡಗುತ್ತದೆ.

ಎಲ್ಲ ಕಡಲು ಹೂಗಳೂ ಮಾಂಸಾಹಾರಿಗಳು. ಕುಟುಕು ಕಣಗಳಿಂದ ಕೂಡಿದ ಕೋಡುಬಳ್ಳಿಗಳ ನೆರವಿನಿಂದ ತಾವಿದ್ದಲ್ಲಿಗೆ ಬಂದ ಇತರ ಪ್ರಾಣಿಗಳನ್ನು ಇವು ಕೊಂದು ತಿನ್ನುತ್ತವೆ. ಕೆಲವು ಕಡಲ ಹೂಗಳಲ್ಲಿ ದೇಹದಿಂದ ಸ್ರವಿಸಲ್ಪಟ್ಟ ಅಂಟುದ್ರವಕ್ಕೆ ಮರಳು, ಕಪ್ಪೆಚಿಪ್ಪು ಮುಂತಾದ ಅನ್ಯ ವಸ್ತುಗಳು ಅಂಟಿಕೊಂಡು ಬಹಿರ್ಕವಚವೊಂದು ನಿರ್ಮಾಣವಾಗುವುದುಂಟು. (ಎಸ್.ಎಚ್.ಒ.)

**ಕಡಲಾಮೆಗಳು:** ಸರೀಸೃಪವರ್ಗದ ಕಿಲೋನಿಯ ಗಣಕ್ಕೆ (ಆಮೆಗಳ ಗುಂಪು) ಸೇರಿದ ಸಮುದ್ರವಾಸಿ ಪ್ರಾಣಿ (ಟರ್ಟಲ್). ಸಾಮಾನ್ಯವಾಗಿ ಸ್ಫಾರ್ಗಿಡೆ ಮತ್ತು ಕೀಲೊನ್ಯೆಯಿಡೆ ಕುಟುಂಬಗಳಿಗೆ ಸೇರಿದ ಪ್ರಾಣಿಗಳನ್ನು ಕಡಲಾಮೆಗಳೆನ್ನುತ್ತಾರೆ. ಇವುಗಳಲ್ಲಿ ಮೊದಲನೆಯ ಕುಟುಂಬಕ್ಕೆ ಸೇರಿದ ಡರ್ಮೋಕೆಲಿಸ್ ಕೋರಿಯೇಸಿಯ ಮತ್ತು ಎರಡನೆಯದಕ್ಕೆ ಸೇರಿದ ಕಿಲೋನ್ ಇಂಬ್ರಿಕೇಟ ಮತ್ತು ಕಿ. ಮೈಡಾಸ್ ಎಂಬುವು ಮುಖ್ಯವಾದುವು.



ಕಡಲಾಮೆ

ತೊಗಲಾಮೆ (ಲೆದರಿ ಟರ್ಟಲ್) ಎಂದೂ ಕರೆಯಲಾಗುವ ಡರ್ಮೋಕೆಲಿಸ್ ಕೋರಿಯೇಸಿಯ ಸಿಂಹಳದ ಕಡಲತೀರ ಪ್ರದೇಶಗಳಲ್ಲಿ ಹೇರಳವಾಗಿದೆ. ಗಾತ್ರದಲ್ಲಿ ಬಹುದೊಡ್ಡದು. ಸುಮಾರು ೨.೭ ಮೀ. ಉದ್ದ ಬೆಳೆಯುತ್ತದೆ. ಚೆನ್ನಾಗಿ ಬೆಳೆದ ಕಡಲಾಮೆ ೫೦೦ ಕಿಗ್ರಾಂ ತೂಗುವುದುಂಟು. ಎಲ್ಲ ಆಮೆಗಳಲ್ಲಿರುವಂತೆ ಇದರಲ್ಲೂ ದೇಹವನ್ನು ಆವರಿಸಿದ ಒಂದು ಚಿಪ್ಪಿದೆ. ಚಿಪ್ಪಿನಲ್ಲಿ ಬೆನ್ನಿನ ಕಡೆ ಉಬ್ಬಿಕೊಂಡಿರುವ ಕ್ಯಾರಪೇಸ್ ಎಂಬ ಭಾಗವೂ ಹೊಟ್ಟೆಕಡೆ ಚಪ್ಪಟೆಯಾಗಿರುವ ಪ್ಲಾಸ್ಟ್ರಾನ್ ಎಂಬ ಭಾಗವೂ ಇವೆ. ಕ್ಯಾರಪೇಸಿನ ಮೇಲೆ ಮೃದುವಾದ ಚರ್ಮದ ಹೊದಿಕೆಯಿದೆ. ಅಲ್ಲದೆ ಅದು ಚಿಕ್ಕ ಚಿಕ್ಕ ಬಹುಭುಜಾಕೃತಿಯ ಅಸ್ಥಿಫಲಕಗಳಿಂದ ಕೂಡಿದೆ. ಇಂಥ ಫಲಕಗಳು ಇತರ ಆಮೆಗಳಲ್ಲಿ ಒಳಗಿನ ಪಕ್ಕೆಲುಬುಗಳಿಗೂ ಕಶೇರುಗಳಿಗೂ ಅಂಟಿಕೊಂಡಿರುತ್ತವೆ. ಆದರೆ ತೊಗಲಾಮೆಯಲ್ಲಿ ಹಾಗಿಲ್ಲ. ಚಿಪ್ಪಿನಿಂದ ಹೊರಗೆ ಚಾಚಿಕೊಂಡಿರುವ ಎರಡು ಜೊತೆ ಕಾಲುಗಳು ದೋಣಿಯ ಹುಟ್ಟಿನಂತೆ ಮಾರ್ಪಾಟಾಗಿವೆ. ಇದರಿಂದ ಈಜಲು ಅನುಕೂಲ. ಕಾಲುಗಳ ಮೇಲೆಲ್ಲ ಹುರುಪೆಗಳ ಹೊದಿಕೆಯಿದೆ. ನಖಗಳಿಲ್ಲ. ದೇಹದ ಹಿಂತುದಿಯಲ್ಲಿ ಪುಟ್ಟ ಬಾಲವೊಂದಿದೆ. ಕಡಲಾಮೆ ಮಾಂಸಾಹಾರಿ. ಸೀಗಡಿ, ನಳ್ಳಿ, ಮೀನು ಮುಂತಾದುವು ಇದರ ಆಹಾರ. ಮೊಟ್ಟೆಯಿಡಲು ಸಮುದ್ರದಂಡೆಗೆ ಬರುತ್ತದೆ. ಮೊಟ್ಟೆಯಿಡುವ ಕಾಲ ವಸಂತಋತು. ಮರಳಿನ ತೀರಕ್ಕೆ ಬಂದು ದೊಡ್ಡ ದೊಡ್ಡ ಗುಂಡಿಗಳನ್ನು ತೋಡಿ, ಅವುಗಳಲ್ಲಿ ೬೦–೧೦೦ ಮೊಟ್ಟೆಯಿಟ್ಟು, ಗುಂಡಿಗಳನ್ನು ಮುಚ್ಚಿ ನೀರಿಗೆ ಮರಳುತ್ತದೆ. ಬಿಸಿಲಿನ ಶಾಖದಿಂದಾಗಿ ಮೊಟ್ಟೆಗಳು ಒಡೆದು ಮರಿ ಆಮೆಗಳು ಹೊರಬರುತ್ತವೆ. ಇವು ನಿಧಾನವಾಗಿ ತೆವಳಿಕೊಂಡು ಹೋಗಿ ಸಮುದ್ರವನ್ನು ಸೇರಿ ತಮ್ಮ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. ಕೀಲೊನ್ಯೆಯಿಡೆ ಕುಟುಂಬದ ಕಿಲೋನ್ ಜಾತಿಯ ಕಡಲಾಮೆಗಳು ವೆಸ್ಟ್ ಇಂಡೀಸ್, ಮಲೇಷಿಯ, ಪಶ್ಚಿಮ ಆಫ್ರಿಕ ಹಾಗೂ ಸಿಂಹಳ ದೇಶಗಳ ಸಮುದ್ರತೀರಗಳಲ್ಲಿ ಸಾಮಾನ್ಯ. ನೋಡುವುದಕ್ಕೆ

ತೊಗಲಾಮೆಯಂತೆ ಕಂಡರೂ ಕೆಲವು ಲಕ್ಷಣಗಳಲ್ಲಿ ಅದಕ್ಕಿಂತ ಭಿನ್ನವಾಗಿವೆ. ಕಾಲುಗಳಲ್ಲಿ ಒಂದು ಅಥವಾ ಎರಡು ಉಗುರುಗಳಿರುವುದೂ ಕ್ಯಾರಪೇಸಿನ ಫಲಕಗಳು ಗಡುಸಾಗಿರುವುದೂ ಇವುಗಳ ಮುಖ್ಯ ಲಕ್ಷಣಗಳು. ಉಳಿದ ಜೀವನಕ್ರಮವೆಲ್ಲ ತೊಗಲಾಮೆಯಂತೆಯೇ. ಕಿಲೋನ್ ಇಂಬ್ರಿಕೇಟ ಎನ್ನುವ ಪ್ರಭೇದವನ್ನು ಗರುಡಮೂಗಿನ ಆಮೆಯೆಂದು ಕರೆಯುತ್ತಾರೆ. ಇದು ಮಾಂಸಾಹಾರಿ. ಇದರ ಚಿಪ್ಪನ್ನು ಹಲವಾರು ಬಗೆಯ ವಸ್ತುಗಳನ್ನು ಮಾಡಲು ಉಪಯೋಗಿಸುತ್ತಾರೆ. ಕಿಲೋನ್ ಮೈಡಾಸ್ ಪ್ರಭೇದಕ್ಕೆ ಹಸಿರು ಆಮೆ ಎಂಬ ಸಾಮಾನ್ಯ ಹೆಸರಿದೆ. ೦.೯ ಮೀ. ಉದ್ದ ಬೆಳೆಯುವ ಇದು ಸಸ್ಯಾಹಾರಿ. ಇದರ ಕೊಬ್ಬು ಹಸಿರು ಬಣ್ಣಕ್ಕಿರುವುದರಿಂದ ಇದಕ್ಕೆ ಹಸಿರು ಆಮೆ ಎಂಬ ಹೆಸರು.

ಕಡಲಾಮೆಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಇವುಗಳ ಮೊಟ್ಟೆಯನ್ನೂ ತಿನ್ನುತ್ತಾರೆ. ಹಸಿರು ಆಮೆಯ ಮಾಂಸದಿಂದ ಮಾಡಲಾಗುವ ಸಾರು (ಟರ್ಟಲ್ ಸೂಪ್) ಬಹು ಪ್ರಸಿದ್ಧವಾದ ಪೇಯವಸ್ತು. ***

**ಕಡಲ ಬಯೋಟ:** ಭೂಗ್ರಹದ ಶೇಕಡಾ 70 ಕ್ಕಿಂತಲೂ ಅಧಿಕ ಭಾಗವನ್ನು ಆವರಿಸಿರುವ ಕಡಲಿನಲ್ಲಿ ವೈವಿಧ್ಯಮಯವಾದ ಸಸ್ಯಗಳು ಮತ್ತು ಪ್ರಾಣಿಗಳು ನೆಲೆಸಿವೆ. ಈ ಜೀವಿಗಳೆಲ್ಲವನ್ನು ಸೇರಿಸಿ ಕಡಲ ಬಯೋಟ ಎನ್ನಲಾಗುತ್ತದೆ. ಮೊದಲು ಜೀವಿಗಳು ಕಡಲಿನಲ್ಲಿ ಉದ್ಭವವಾದುವು ಎಂದು ಪುರಾವೆಗಳು ತಿಳಿಸಿವೆ. ಹೆಚ್ಚಿನ ಜೀವಂತ ಪ್ರಾಣಿ ವಂಶ ಪ್ರತಿನಿಧಿಗಳು ಸಾಗರವನ್ನು ತಮ್ಮ ವಾಸಸ್ಥಾನವನ್ನಾಗಿ ಆರಿಸಿಕೊಂಡಿವೆ. ಟಿನೋಫೋರ ಬ್ರೆಕಿಯೊಪೋಡ, ಕಿಟೊಗ್ನಾಥಾ, ಫೋರೊನಿಡ ಮತ್ತು ಎಕಿನೊಡರ್ಮೇಟಗಳ ಎಲ್ಲ ಪ್ರತಿನಿಧಿಗಳು ಸಮುದ್ರವಾಸಿಗಳು. ಅಕಶೇರುಕಗಳಲ್ಲಿ ಕೇವಲ 3 ವರ್ಗಗಳನ್ನುಳಿದು ಕಶೇರುಕಗಳಲ್ಲಿ ಆಂಫಿಬಿಯಾ ವರ್ಗವೊಂದನ್ನು ಬಿಟ್ಟು ಉಳಿದೆಲ್ಲ ವರ್ಗಗಳ ಪ್ರತಿನಿಧಿಗಳು ಸಮುದ್ರದಲ್ಲಿ ಕಂಡು ಬರುತ್ತವೆ. ಹೆಲೊಬೇಟಿಸ್ (ಹ್ಯಾಲೋಬೇಟ್ಸ್) ಒಂದನ್ನು ಬಿಟ್ಟರೆ ಮಿಕ್ಕ ಯಾವ ಕೀಟವೂ ಕಡಲಿನಲ್ಲಿ ಇಲ್ಲ. ಸಾಗರವು ಪ್ರಾಚೀನ ಜೀವಿಗಳನ್ನು ಸಂರಕ್ಷಿಸುವಲ್ಲಿ ಬಹಳ ಸಹಕಾರವನ್ನು ನೀಡಿದೆ ಮಾತ್ರವಲ್ಲ, ವಿಕಾಸವಾಗಿ ಮುಂದುವರಿದ ಪ್ರಾಣಿಗಳನ್ನು ಕೂಡಾ ಪುನ: ಆಶ್ರಯ ಕೊಟ್ಟು ಬರಮಾಡಿಕೊಂಡಿದೆ. ಉದಾಹರಣೆಗೆ ಬೃಹದಾಕಾರದ ಸ್ತನಿಗಳು ನೆಲದ ಮೇಲೆ ಜೀವಿಸಲು ಅಶಕ್ಯವಾದಾಗ ಸಾಗರದೆಡೆ ಸಾಗಿವೆ. ಸಸ್ಯ ಸಾಮ್ರಾಜ್ಯಕ್ಕೆ ಮಾತ್ರ ಇಲ್ಲಿ ಪ್ರಾತಿನಿಧ್ಯ ಕಡಿಮೆ. ಸ್ಪರ್ಮಟೊಫೈಟಗಳ ಪೈಕಿ ಜೊಸ್ಟೀರ ಒಂದನ್ನು ಬಿಟ್ಟರೆ ಬೇರಾವುದೂ ಇಲ್ಲಿ ಕಂಡು ಬರಲಾರದು. ಅನಂತವಾದ ಸಾಗರದಲ್ಲಿ ಅಡಗಿರುವ ಜೀವ ವೈವಿಧ್ಯತೆಯನ್ನು ಅರಿಯಲು ಸಾಗರದ ಭೌಗೋಳಿಕ ಪರಿಸ್ಥಿತಿಗನುಗುಣವಾಗಿ ಅನೇಕ ವಿಭಾಗಗಳನ್ನಾಗಿ ವಿಂಗಡಿಸಬಹುದು.

ಸಾಗರದ ಪೂರ್ತಿ ನೆಲಭಾಗವನ್ನು ಬೆಂತಿಕ್ ವಿಭಾಗವೆಂದೂ ಸಾಗರದ ಪೂರ್ತಿ ನೀರಿನ ರಾಶಿಯನ್ನು ಪೆಲೆಜಿಕ್ ವಿಭಾಗವೆಂದೂ ಹೇಳಬಹುದು. ಬೆಂತಿಕ್ ವಿಭಾಗವನ್ನು ಪುನ: ಲಿಟ್ಟೊರಲ್ ವಲಯ ಮತ್ತು ಆಳ (ಡೀಪ್) ಸಮುದ್ರ ವಲಯವೆಂದು ವಿಂಗಡಿಸಲಾಗಿದೆ. ಲಿಟ್ಟೊರಲ್ ವಲಯವನ್ನು ತೀರವಲಯ (ಯುಲಿಟ್ಟೊರಲ್) ಮತ್ತು ಉಪತೀರವಲಯ (ಸಬ್ ಲಿಟ್ಟೊರಲ್) ಎಂದು ವಿಭಜಿಸಬಹುದು.

ಕಡಲ ತೀರವನ್ನು ಅದರ ಭೌತಿಕ ರಚನೆಯನ್ನು ಹೊಂದಿಕೊಂಡು ಶಿಲಾದಡ, ಮರಳು ದಡ ಮತ್ತು ಮಣ್ಣಿನ ದಡವೆಂದು ಗುರುತಿಸಬಹುದು.

ಶಿಲಾದಡದ ಬಯೋಟ ಅಲೆಗಳ ಘರ್ಷಣೆ, ಇಳಿತದ ಸಮಯ, ಸೂರ್ಯನ ತಾಪ, ನೀರಿನ ಪಸೆಯ ಕೊರತೆ, ಭಕ್ಷಕ ಜೀವಿಗಳ ಹೆದರಿಕೆ ಮುಂತಾದ ಪ್ರತಿಕೂಲ ಪರಿಸ್ಥಿತಿಯಲ್ಲಿ ನೆಲೆಸುತ್ತವೆ. ಆದರೂ ಅಚಲವಾದ ಮತ್ತು ದೃಢವಾದ ಶಿಲಾದಡವು ಸ್ಥಿರತೆಯನ್ನೀಯುವುದರಿಂದ ವಿಶಿಷ್ಟವಾದ ಆವಾಸವಾಗಿ ವೈವಿಧ್ಯಮಯವಾದ ಜೀವರಾಶಿಗೆ ಅನುವು ಮಾಡಿಕೊಡುತ್ತದೆ. ಇಲ್ಲಿ ಹೆಚ್ಚಾಗಿ ಆಲ್ಗೆ ಜೀವಿಗಳು ಕಂಡು ಬರುತ್ತವೆ. ಮುಖ್ಯವಾಗಿ ಹಸಿರು ಆಲ್ಗೆ, ಕಂದು ಆಲ್ಗೆ ಮತ್ತು ಕೆಂಪು ಆಲ್ಗೆಗಳ ಅನೇಕ ಜಾತಿಗಳು ಇಲ್ಲಿ ನೆಲೆಸಿವೆ. ಗ್ರೆಸಿಲೇರಿಯಾ, ಸರ್ಗಾಸಂ, ಪಡಿನ, ಅಲ್ವ, ಪೋಲಿಸೈಫೋನಿಯಾ, ಡಿಕ್ಟಿಯೋಟ, ಕೀಟೊಮಾರ್ಫ, ಎಂಟರೋಮಾರ್ಫ, ಕೋಡಿಯಂ ಇತ್ಯಾದಿ ಆಲ್ಗೆಗಳು ಹೊಲ್ಡ್‌ಫಾಸ್ಟ್ ಗಳಂತಹ ಅಂಟುವ ಸಾಧನಗಳ ಮೂಲಕ ಬಂಡೆಗೆ ಅಂಟಿ ಜೀವಿಸುತ್ತವೆ. ಪ್ರಾಣಿ ಸಂಕುಲಗಳ ಪೈಕಿ ಸ್ಪಂಜುಗಳು, ಬ್ರಯೋಜೋವಗಳು, ಸಾಂಘಿಕ ಹೈಡ್ರೋಜೋವಗಳು, ಜುವಾಂತಸ್, ಜಮ್ಮೇರಿಯಾ ಇತ್ಯಾದಿ ಆಂತೊಜೋವಗಳು, ಸಮುದ್ರ ಅನಿಮಾನ್‌ಗಳು ಇಲ್ಲಿ ವಾಸಿಸುತ್ತವೆ. ಅಟ್ರೊರೈನ, ಪಟೆಲ್ಲ, ಹೆಲಿಯೋಟಿಸ್, ಫಿಸ್ಸುರೆಲ್ಲ, ಕೈಟಾನ್, ಮೈಟಿಲಸ್, ಮೊಡಿಯೊಲ್ಲಸ್ ಇತ್ಯಾದಿ ಮೃದ್ವಂಗಿಗಳು ಇಲ್ಲಿ ಸಾಮಾನ್ಯ. ಆರ್ಥ್ರೋಪೋಡಗಳ ಪೈಕಿ ಬಾರ್ನಕಲ್ ಗಳು ಇದ್ದೇ ಇವೆ. ಅನೇಕ ಏಡಿಗಳು ಕಲ್ಲಿನ ಮೇಲೆ ಮಾತ್ರ ಕೊರಕಲಿನಲ್ಲಿ ಓಡಾಡಿಕೊಂಡಿರುತ್ತವೆ. ಕೆಲವು ಸ್ಪಂಜುಗಳು, ವಲಯವಂತ ಮತ್ತು ಮೃದ್ವಂಗಿಗಳು ಕಲ್ಲಿನಲ್ಲಿ ಕೊರೆಯಲು ಶಕ್ತರಿದ್ದು ಅದರೊಳಗೆ ಜೀವಿಸುತ್ತವೆ. ಶಿಲಾದಡದಲ್ಲಿ ಜೀವಿಗಳ ಹರಡುವಿಕೆಯು ಒಂದು ನಿರ್ದಿಷ್ಟ ರೀತಿಯಲ್ಲಿ, ವಲಯ ರೂಪದಲ್ಲಿ ಹರಡಿರುತ್ತದೆ. ಪ್ರತಿ ವಲಯದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕಂಡು ಬರುವ ಜೀವಿಯ ಹೆಸರನ್ನು ಕೊಟ್ಟು ಕರೆಯುವುದು ವಾಡಿಕೆ. ಹೀಗೆ ಲಿಟ್ಟೊರೈನ ಅಧಿಕವಿರುವ ಮೇಲಿನ ವಲಯವನ್ನು ಲಿಟ್ಟೊರೈನ ವಲಯವೆಂದೂ ಬಲಾನಸ್ ಅಧಿಕವಿರುವ ಕೆಳಗಿನ ವಲಯವನ್ನು ಬಲಾನಸ್ ವಲಯ ಎಂದು ಕರೆಯಲಾಗುತ್ತದೆ.

ಕರ್ನಾಟಕದ ಕರಾವಳಿಯಲ್ಲಿ ಅಲ್ಲಲ್ಲಿ ಕಂಡು ಬರುವ ಶಿಲಾ ದಡಗಳಲ್ಲಿ ಮೇಲೆ ಹೇಳಿದ ಎಲ್ಲಾ ಬಯೋಟಗಳು ಕಂಡು ಬರುವುವು.

ಮರಳುದಡ: ಇಲ್ಲಿ ಅಸ್ಥಿರತೆ ಮತ್ತು ಇಳಿಜಾರು ಈ ಎರಡು ಘಟಕಗಳು ಮುಖ್ಯ. ಮರಳಿನ ಕಣಗಳು ಸಡಿಲವಾಗಿರುವುದರಿಂದ ಅಲೆಗಳ ರಭಸಕ್ಕೆ ಕೊರೆತ ಉಂಟಾಗುವ ಅಥವಾ ರಾಶಿ ಬೀಳುವ ಸಂಭವ ಉಂಟು. ಸಮುದ್ರ ಕಳೆಗಳು ಇಲ್ಲಿ ಕಂಡು ಬರಲಾರವು. ಇಳಿತದ ಸಮಯ ಪ್ರಾಣಿಗಳು ಮರಳಿನಲ್ಲಿ ಬಿಲಕೊರೆದು ಆಳಕ್ಕೆ ಸೇರಿ ಪ್ರಕೃತಿಯ ಭೌತಿಕ ಕಾಠಿಣ್ಯ ಗುಣಗಳಿಂದ ರಕ್ಷಣೆ ಪಡೆಯುತ್ತವೆ. ಇದಕ್ಕಾಗಿ ಇಲ್ಲಿ ಜೀವಿಸುವ ಪ್ರಾಣಿಗಳ ದೇಹರಚನೆಯಲ್ಲಿ ಅನೇಕ ವಿಧದ ಹೊಂದಾಣಿಕೆಗಳನ್ನು ಕಾಣಬಹುದು. ಅಂತಹ ಹೊಂದಾಣಿಕೆಗಳು ಕೇವಲ ಕೆಲವೇ ಪ್ರಭೇದಗಳಲ್ಲಿ ಮಾತ್ರ ಕಂಡು ಬರುವುದರಿಂದ, ಮರಳ ದಡದಲ್ಲಿ ಪ್ರಾಣಿ ಸಂಪತ್ತಿನ ವಿಧಗಳನ್ನು ನೋಡಿದರೆ ಬಹಳ ಕಡಿಮೆ. ಆದರೆ ಇರುವ ಪ್ರಾಣಿಗಳ ಸಂಖ್ಯೆಗಳು ಮಾತ್ರ ಅಧಿಕ. ಮರಳೆಡೆಗಳಲ್ಲಿ ಚಿಕ್ಕ ಸಂಖ್ಯೆಗಳು ಮಾತ್ರ ಅಧಿಕ. ಮರಳೆಡೆಗಳಲ್ಲಿ ಚಿಕ್ಕ ಪುಟ್ಟ ರೋಟಿಫೇರಗಳು, ಕೋಪಿಪಾಡ್‌ಗಳು, ಸಿಲಿಯೇಟ್‌ಗಳು ಓಸ್ಟ್ರಕಾಡ್‌ಗಳು, ಅರೆಕ್ನಿಡ ಗಳು, ಕೈನೊರಿಂಕಗಳು, ಐಸೋರಾಡ್‌ಗಳು ಮತ್ತು ನೆಮಟೋಡಗಳು ಕಂಡು ಬರುತ್ತವೆ. ಅನೇಕ ಮೃದ್ವಂಗಿಗಳು ಉತ್ತಮವಾದ ಮತ್ತು ಸ್ನಾಯುಯುತವಾದ ಪಾದದ ಸಹಾಯದಿಂದ ಮರಳಲ್ಲಿ ಹೂತು ಜೀವಿಸುತ್ತವೆ. ಕ್ರಸ್ಟೇಸಿಯಾಗಳಲ್ಲಿ ಇಮೆರಿಟ, ಎಸಿಯಾಟಿಕ, ಅಲ್ಬುನಿಯಾ, ಹರ್ಪಿನಿಯಾ, ಓಸಿಪಾಡ್ ಏಡಿಗಳೂ ಇವೆ. ಮರಳ ದಡವು ಅಸ್ಥಿರವಾದ ಕಾರಣ ಅಷ್ಟು ಜೀವಿಗಳು ಇಲ್ಲಿ ವಾಸಿಸಲು ಸಾಧ್ಯವಿಲ್ಲ.

ಮಣ್ಣಿನದಡ:– ಉಸಿರಾಟದ ಮತ್ತು ಆಹಾರ ಸಂಚಯನದ ಅಂಗಗಳು ಕೆಸರಿನ ಸೂಕ್ಷ್ಮ ಕಣಗಳಿಂದ ಮುಚ್ಚಿ ಹೋಗಬಹುದೆಂಬ ಅಥವಾ ಘಾಸಿಯಾಗಬಹುದೆಂಬ ಹೆದರಿಕೆ ಇಲ್ಲಿ ವಾಸಿಸುವ ಪ್ರಾಣಿಗಳ ಸಮಸ್ಯೆ. ಮಣ್ಣಿನ ದಡದಲ್ಲಿ ಕೆಸರು ಮಿಶ್ರಿತವಾಗಿರುವುದರಿಂದ ಚಲನೆ ಇನ್ನೊಂದು ಸಮಸ್ಯೆ. ದಡವು ಮರಳಿನಂತೆ ಅಸ್ಥಿರವಲ್ಲ. ಪ್ರಾಣಿ ಸಂಪತ್ತು ಹೆಚ್ಚಾಗಿ ಮರಳ ದಂಡೆಯಿಂದ ಅಥವಾ ಶಿಲಾ ದಂಡೆಯಿಂದ ಅಡ್ಡವಾಗಿ ಅಥವಾ ಕೆಳಭಾಗದಿಂದ ಲಂಬವಾಗಿ ವಲಸೆ ಬಂದವು. ಅರೆನಿಕೊಲ ಮರಿನ ಎಂಬ ವಲಯವಂತವು ಇಲ್ಲಿ ಕಂಡು ಬರುತ್ತದೆ. ಕಿಟೋಪ್ಟಿರಸ್, ಮಕೋಮ ಸ್ಕ್ರೊಬಿಕ್ಯುಲೆರಿಯಾ ಕಾರ್ಡಿಯಂ, ಎಡ್ಗಲ್, ಮೈಟಿಲಸ್, ಲಿಟ್ಟೊರೈನ ಇತ್ಯಾದಿ ಪ್ರಾಣಿಗಳು ಇಲ್ಲಿ ಕಂಡು ಬರುತ್ತವೆ.

ಪೆಲೆಜಿಕ್ ವಿಭಾಗ: ಕಡಲಿನಲ್ಲಿ ಬಹು ವಿಸ್ತಾರದವರೆಗೆ ಹರಡಿದ್ದು, ಇಲ್ಲಿ ಭೌತಿಕ ಘಟಕಗಳಲ್ಲಿ ಹೆಚ್ಚು ಏರುಪೇರುಗಳಿರುವುದಿಲ್ಲ. ಸೂರ್ಯನ ಬೆಳಕಿನ ಲಭ್ಯತೆಯನ್ನು ಆಧರಿಸಿ ಮೇಲಿನಿಂದ ಕೆಳಗೆ ಯುಫೋಟಿಕ್, ಡಿಸ್‌ಫೋಟಿಕ್ ಮತ್ತು ಎಫೋಟಿಕ್ ವಿಭಾಗಗಳನ್ನಾಗಿ ವಿಭಜಿಸಬಹುದು. ಇಲ್ಲಿರುವ ಜೀವಿಗಳನ್ನು ಮುಖ್ಯವಾಗಿ ತೇಲುಜೀವಿಗಳು (ಪ್ಲಾಂಕ್ಟಾನ್) ಮತ್ತು ನೆಕ್ಟಾನ್‌ಗಳೆಂದು ವಿಂಗಡಿಸಬಹುದು. ತೇಲುಜೀವಿಗಳಲ್ಲಿ ಸ್ವಪೋಷಿತವಾದ ಸಸ್ಯ ತೇಲು ಜೀವಿಗಳು (ಫೈಟೊಪ್ಲಾಂಕ್ಟಾನ್) ಮತ್ತು ಪರಪೋಷಿತನಾದ ಪ್ರಾಣಿ ತೇಲುಜೀವಿಗಳೆಂದು 2 ಗುಂಪುಗಳಿವೆ. ಸೂರ್ಯನ ಬೆಳಕು ನೀರಿನಲ್ಲಿ ತೂರಬಲ್ಲ ಆಳದವರೆಗೆ ಮಾತ್ರ ತೇಲು ಸಸ್ಯಗಳು ಜೀವಿಸಲು ಸಾಧ್ಯ. ಉತ್ಪಾದಕರ ಪೈಕಿ ಇವುಗಳು ಮಾತ್ರ ಪೆಲೆಜಿಕ್ ವಿಭಾಗದಲ್ಲಿವೆ. ಸಸ್ಯ ತೇಲುಜೀವಿಗಳ ಪೈಕಿ ಪ್ರಮುಖವಾಗಿ 2 ಗುಂಪುಗಳಿವೆ. 1) ಡಯಾಟಂ ಸಸ್ಯಗಳು ಮತ್ತು 2) ಡೈನೋಫ್ಲೇಜಲ್ಲೇಟುಗಳು. ಡಯಾಟಂ ಸಸ್ಯಗಳು ಸಮುದ್ರದಲ್ಲಿ ಕಂಡು ಬರುವ ತೇಲುಜೀವಿಗಳಲ್ಲಿ 6/10 ಅಂಶದಷ್ಟು ಪ್ರಮಾಣವನ್ನು ಹೊಂದಿದ್ದು, ಒಂದು ಬಿಂದು ನೀರಿನಲ್ಲಿ ಅತ್ಯಾಕರ್ಷಕವಾದ ವಿವಿಧಾಕೃತಿಯನ್ನು ಹೊಂದಿರುವ ಅನೇಕ ಡಯಾಟಂಗಳನ್ನು ಕಾಣಬಹುದು. ಈ ಸಸ್ಯ ತೇಲುಜೀವಿಗಳನ್ನೇ ಅವಲಂಬಿಸಿ ಪ್ರಾಣಿ ಜೀವಕೋಟಿಗಳು ನಿಂತಿವೆ. ಉದಾ: ತಿಮಿಂಗಲವು ಸಾಗರವಾಸಿ ಸ್ತನಿಯಾಗಿದ್ದು ಬೃಹದ್ ಗಾತ್ರದ ಪ್ರಾಣಿ. ಆದರೆ 1 ಟನ್ನು ಹೆರ್ರಿಂಗ್ ಮೀನು ಒಮ್ಮೆಗೆ ಹೊಟ್ಟೆ ಸೇರಿದರೆ ಮಾತ್ರ ತಕ್ಕ ಮಟ್ಟಿಗೆ ತೃಪ್ತಿಯಾದೀತು. ಆದರೆ ಪ್ರತಿ ಹೆರ್ರಿಂಗ್ ಮೀನಿಗೆ ಆರೇಳು ಸಹಸ್ರ ಚಿಕ್ಕ ಕ್ರಸ್ಟೇಸಿಯಾ ಪ್ರಾಣಿಗಳು ಬೇಕು. ಆದರೆ ಈ ಚಿಕ್ಕ ಕ್ರಸ್ಟೇಸಿಯಾ ಪ್ರಾಣಿಗಳಿಗೆ 1,30,000 ಡಯಾಟಂಗಳಷ್ಟು ಆಹಾರದ

ಸೇವನೆ ಅಗತ್ಯ. ಈ ಆಹಾರ ಸರಪಣಿಯನ್ನು ನೋಡಿದರೆ ಒಂದು ತಿಮಿಂಗಲಕ್ಕೆ ಒಮ್ಮೆಗೆ ಸುಮಾರು 400 ಸಹಸ್ರ ಮಿಲಿಯ ಡಯಾಟಂಗಳಷ್ಟು ಆಹಾರ ಬೇಕೆಂದು ತಿಳಿಯುವುದು.

ಈ ತೇಲು ಸಸ್ಯಗಳನ್ನು ಹೊಂದಿಕೊಂಡು ತೇಲುಪ್ರಾಣಿಗಳಿವೆ (ಜೂಪ್ಲಾಂಕ್ಟಾನ್). ಇವುಗಳಲ್ಲಿ ಕೆಲವು ಅಜೀವ ಪರ್ಯಂತ ತೇಲುಜೀವಿಗಳಾಗಿದ್ದರೆ (ಹೋಲೊಪ್ಲಾಂಕ್ಟಾನುಗಳು) ಉಳಿದವು ಜೀವನ ಚರಿತ್ರೆಯಲ್ಲಿ ಮಾತ್ರ ಡಿಂಬಾವಸ್ಥೆಯಲ್ಲಿ ತೇಲುಜೀವಿಗಳಾಗಿ ಕಳೆಯುತ್ತವೆ. (ಮೀರೊ ಪ್ಲಾಂಕ್ಟಾನು). ಮುಖ್ಯವಾಗಿ ಅನೇಕ ತರದ ಫೊರಾಮಿನಿಫೆರ, ರೇಡಿಯೊಲೇರಿಯಾಗಳು, ಸಾಜಿಟ್ಟ, ಸ್ಪಡಿಲ್ಲಾ ಇತ್ಯಾದಿ ಕಿಟೊಗ್ನಾಥಾಗಳು, ಕರ್ನಿನಿಯರಿಯಾ, ಪ್ಟಿರೊ, ಟ್ರೇಕಿಯಾ ಕ್ಲಯೊನ್, ಕ್ರಿಸಿಸ್ ಮುಂತಾದ ಹೆಟಿರೊಪಾಡ್ ಮತ್ತು ಟಿರೊಪಾಡ್ ಮೃದ್ವಂಗಿಗಳು ಕಾಣಬರುತ್ತವೆ. ತೇಲುವ ಪ್ರಾಣಿಗಳ ಪೈಕಿ ಕೊಪಿಪಾಡ್‌ಗಳ ಸಂಖ್ಯೆ ಎಷ್ಟರ ಮಟ್ಟಿಗೆ ಹೆಚ್ಚೆಂದರೆ, ಅವುಗಳನ್ನು ಸಮುದ್ರದ ಹುಲ್ಲುಗಾವಲುಗಳೆಂದೇ ಹೇಳುವುದು ವಾಡಿಕೆ. ಕೆಲಾನಸ್, ಸ್ಯುಡೊಕೆಲನಸ್, ಯುಕೀಟಗಳು ಸಾಮಾನ್ಯ. ಅನೇಕ ನೆಕ್ಟಾನ್ ಪ್ರಾಣಿಗಳ ಮತ್ತು ಅಂಟು ಜೀವಿಗಳ ಡಿಂಬಾವಸ್ಥೆಗಳು ತೇಲುಜೀವಿಗಳಾಗಿ ಸ್ವಲ್ಪ ಸಮಯ ಕಂಡು ಬರುತ್ತವೆ. ಪ್ಲಾನುಲ, ಇಫೈರಾ, ಸಿರಿಯಾಂತಸ್, ಬೈಪಿನ್ನೇರಿಯಾ, ಓಫಿಯೊಪ್ಲೂಟಿಯಸ್, ಎಕೈನೊಪ್ಲುಟಿಯಸ್, ಜೊಯಿಯಾ, ಮೈಸಿಸ್ ಮುಂತಾದುವು ಮುಖ್ಯ ಡಿಂಬಗಳು.

ಲೀಲಾಜಾಲವಾಗಿ ಈಜಬಲ್ಲ, ತಮ್ಮ ಚಲನೆ ಮತ್ತು ದಿಕ್ಕನ್ನು ನಿಯಂತ್ರಿಸಬಲ್ಲ ಪ್ರಾಣಿಗಳು ನೆಕ್ಟಾನುಗಳು. ಅನೇಕ ಅಕಶೇರುಕಗಳೂ ಕಶೇರುಕಗಳೂ ಈ ಗುಂಪಿನಲ್ಲಿದ್ದು ಸಾಗರದ ಮೇಲ್ಭಾಗದಿಂದ ಆಳದವರೆಗೆ ಹರಡಿವೆ ಆಕ್ಟೊಪಸ್, ಸ್ಕ್ವಿಡ್‌ಗಳಂತಹ ಮೃದ್ವಂಗಿಗಳು, ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದ ಸೀಗಡಿ ಮೀನುಗಳು, ಏಡಿಗಳು ಉದಾಹರಣೆಗಳು.

ಪೆಲೆಜಿಕ್ ವಲಯದಲ್ಲಿ ಅನೇಕ ಜಾತಿಯ ಮೀನುಗಳು ವಾಸ ಮಾಡುತ್ತವೆ. ಇವುಗಳಲ್ಲಿ ಒಂಟಿಯಾಗಿ ಮತ್ತು ತೆಪ್ಪ (ಶೋಲ್ಸ್) ವಿಧಗಳಾಗಿ ಸಂಚರಿಸುವವೆಂದು ಗುರುತಿಸಬಹುದು. ಕೆಲವು ಮೀನುಗಳಲ್ಲಿ ಸುಂದರವಾದ ಆಕರ್ಷಕ ಬಣ್ಣದ ಬಗೆ (ಜಿಬ್ರಾಮೀನು) ಗಳಿವೆ. ಸಮುದ್ರ ಮಧ್ಯಂತರದಲ್ಲಿ ವಾಸಿಸುವ ಮೀನುಗಳ ಮೇಲ್ಭಾಗ ನೀಲಿ ಬೂದು ಮಿಶ್ರಿತ ಬಣ್ಣವಾಗುವುದು. ತಳಭಾಗದಲ್ಲಿ ಭಿನ್ನ ರೀತಿಯ ಬಣ್ಣವಿರಬಹುದು. ಬಂಗುಡೆ, ಬೂತಾಯಿ, ಹೆರ್ರಿಂಗ್, ಸೋರೆಮೀನು, ಕಾಡ್ ಮೀನ್ ಇತ್ಯಾದಿ ಅನೇಕ ಮತ್ಸ್ಯಗಳು ಇಲ್ಲಿವೆ. ಸಮುದ್ರ ತಳದಲ್ಲಿ ವಾಸಿಸುವ ಮೀನುಗಳ ದೇಹ ಚಪ್ಪಟೆಯಾಗಿರುತ್ತದೆ. ಪೆಲೆಜಿಕ್ ವಿಭಾಗದಲ್ಲಿ ಲೋಗರ್ ಹೆಡ್ ಆಮೆ, ಕಿಲೋನಿಯಾ ಇಮ್‌ಬ್ರಿಕೇಟ ಮುಂತಾದ ಕಡಲಾಮೆಗಳು ಹೈಡ್ರೊಫೀಸ್ ಮತ್ತು ಪ್ಲಟಿಕಾಡಿನೆ ಕುಟುಂಬಗಳಿಗೆ ಸೇರಿದ ಸಮುದ್ರ ಹಾವುಗಳು ವಾಸಿಸುತ್ತವೆ. ಪಕ್ಷಿಗಳ ಪೈಕಿ ಕಡಲಕಾಗೆ, ಆಕ್, ಪೆಟ್ರಲ್, ಆಲ್ಬಟ್ರಾಸ್ ಮುಖ್ಯವಾದುವು. ನೀಲಿ ತಿಮಿಂಗಲ, ಫಿನ್ ತಿಮಿಂಗಲ, ಹಂಪ್ ಬೆನ್ನಿನ ತಿಮಿಂಗಲ ಮುಂತಾದ ತಿಮಿಂಗಲ ಪೂರ್ವ ಅಥವಾ ಭಾಗಶಃ ತೇಲು ಜೀವಿಗಳನ್ನು ತಿಂದು ಬದುಕುವ ಸ್ತನಿಗಳು. ಆದ್ದರಿಂದ, ಇವುಗಳ ಚಲನೆಗೂ ಸಾಂದ್ರತೆಗೂ ನಿಕಟವಾದ ಸಂಬಂಧವಿದೆ. ಸೀಲ್‌ಗಳು ಗುಂಪಾಗಿ ಚಲಿಸುತ್ತವೆ ಮತ್ತು ಮೀನುಗಳನ್ನು ಹಿಡಿದು ತಿನ್ನುತ್ತವೆ. ವಾಲ್‌ರಸ್‌ಗಳು ಸಮುದ್ರದಲ್ಲಿರುವ ಆಲ್ಗೆ ಜೀವಿಗಳನ್ನು ತಿಂದು ಜೀವಿಸುತ್ತವೆ. ಹೀಗೆ ಅನೇಕ ಸ್ತನಿಗಳು ಸಾಗರವನ್ನು ತಮ್ಮ ವಾಸಸ್ಥಾನವನ್ನಾಗಿ ಆರಿಸಿವೆ.

ಅನೇಕ ಬ್ಯಾಕ್ಟೀರಿಯಾಗಳು ಸಾಗರದ ನೀರಲ್ಲಿ ಮತ್ತು ತಳದಲ್ಲಿ ವಾಸಿಸುತ್ತವೆ. ತೀರವಲಯದಲ್ಲಿ ಅವುಗಳ ಸಂಖ್ಯೆ ಅಧಿಕ. ಕಡಲಲ್ಲಿ ಅವುಗಳ ಪಾತ್ರ ಬಲು ಹಿರಿದು. ಸಾಗರದಾಳದಲ್ಲಿಯ ಪರಿಸ್ಥಿತಿಯು ಬಹಳ ಭಿನ್ನವಾಗಿದೆ. ಇಲ್ಲಿ ಸೂರ್ಯ ರಶ್ಮಿಯ ಸೋಂಕೂ ಇಲ್ಲದೆ, ಎಲ್ಲೆಲ್ಲೂ ಗಾಡಾಂಧಕಾರವಿದ್ದು ಅಲ್ಲಲ್ಲಿ ಜೈವಿಕ ಬೆಳಕು ಹೊಂದಿರುವ ಪ್ರಾಣಿಗಳು ಇವೆ. ಉಷ್ಣತೆ, ಆಮ್ಲಜನಕ ಕಡಿಮೆಯಿದ್ದು ನೀರಿನ ಚಲನೆ ಕಡಿಮೆ. ಇಲ್ಲಿ ವಾಸಿಸುವ ಪ್ರಾಣಿಗಳು ಮಾಂಸಾಹಾರಿಗಳು ಅಥವಾ ಮೇಲಿನಿಂದ ಬೀಳುವ ಸತ್ತ ಕೊಳೆತ ವಸ್ತುಗಳನ್ನು ತಿನ್ನುವಂತವು. ಇಲ್ಲಿಯ ಭಕ್ಷಕ ಪ್ರಾಣಿಗಳ ದೇಹ ರಚನೆಯಲ್ಲಿ ಅನೇಕ ಮಾರ್ಪಾಡುಗಳಾಗಿವೆ. ಏಕಾಂತಿಫೈರ, ಆಳ ಸಮುದ್ರ ಆಕ್ಟೊಪಾಡ್, ಎಂಫಿಟ್ರಿಟಸ್, ಪೆಲಾಜಿಕಸ್, ಸ್ಯಾಕೊಫೇರಂಕ್ಸ್, ಮ್ಯಾಕ್ರೊಫೇರಂಕ್ಸ್, ಮೆಲನೋಸಿಟಸ್, ಗೊನೊಸ್ಟೋಮ ಇತ್ಯಾದಿ ಮೀನುಗಳು ಈ ವಲಯದಲ್ಲಿ ಕಾಣಬರುತ್ತವೆ. ಕೆಲವು ಪ್ರಾಣಿಗಳಲ್ಲಿ ಜೈವಿಕ ಬೆಳಕನ್ನು ನೀಡಬಲ್ಲ ಶಕ್ತಿಯಿದೆ. ಕೆಲವು ಪ್ರಾಣಿಗಳಲ್ಲಿ ಕಣ್ಣು ಉತ್ತಮ ಮಟ್ಟಕ್ಕೆ ಬೆಳೆದಿರಬಹುದಾದರೆ ಮತ್ತೆ ಕೆಲವಲ್ಲಿ ದೃಷ್ಟಿ ಕ್ಷೀಣಿಸಿರಬಹುದು.

ಆಳ ಸಮುದ್ರದ ನೆಲವನ್ನು ವಿವಿಧ ಬಗೆಯ ಮಡ್ಡಿ (ಸೆಡಿಮೆಂಟ್)ಆವರಿಸಿರುತ್ತದೆ. ಮುಖ್ಯವಾಗಿ ಪೆಲೆಜಿಕ್ ವಿಭಾಗದಲ್ಲಿರುವ ರೇಡಿಯೋಲೇರಿಯಾ, ಫೋರಾಮಿನಾಫೇರಾ, ಟೀರೊಪಾಡ್, ಡಯಟಂ ಸಸ್ಯಗಳು ಸತ್ತ ನಂತರ ಅವುಗಳ ದೇಹದ ಹೊರಾಸ್ಥಿ ಇಲ್ಲಿ ಶೇಖರವಾಗುತ್ತದೆ. ಇವು ಸುಣ್ಣ ಅಥವಾ ಸಿಲಿಕಾದಿಂದ ಕೂಡಿರಬಹುದು. ಈ ಮಡ್ಡಿಯಲ್ಲಿ ಅನೇಕ ವಿಧದ ಅಕಶೇರುಕಗಳೂ ಕೆಲವು ಅಪ್ಪು ಜೀವಿಯಾಗಿ, ಕೆಲವು ಬಿಲ ಕೊರೆದು ಮತ್ತೆ ಕೆಲವು ನೆಲದ ಮೇಲೆ ಸಂಚರಿಸುತ್ತಾ ಜೀವಿಸುತ್ತವೆ. ಕೆಲವು ವಿಧದ ಮೀನುಗಳು, ಸೆಫಲೊಪಾಡ್‌ಗಳೂ ಆಳಸಮುದ್ರದ ನೆಲದ ಮೇಲೆ ಸಂಚರಿಸುತ್ತಿದ್ದು, ಅಲ್ಲಿಯ ಅಪ್ಪುಜೀವಿಗಳನ್ನು ತಿನ್ನುತ್ತವೆ. ಹಯಲೋನೀಮ, ಯುಪ್ಲೆಕ್ಟೆಲ್ಲ ಗಾರ್‌ಗೋನಿಯ ಮ್ಯಾಡ್ರಿಪೋರೇರಿಯ ಸಮುದ್ರ ಲಿಲ್ಲಿ, ಪೆಡಸು ನಕ್ಷತ್ರಗಳೂ ಆಳ ಸಮುದ್ರದಲ್ಲಿ ಕಂಡು ಬರುತ್ತವೆ.

ಹವಳ ದಿಬ್ಬಗಳು: ಸೀಲಂಟರೇಟ ವಂಶದ ಆಂತೊಜೋವ ವರ್ಗದ ಸಮೂಹ ಜೀವಿಗಳು ರಕ್ಷಣೆಗೆಂದು ನಿರ್ಮಿಸಿಕೊಂಡ ಹೊರಕವಚಗಳಿಂದ ನಿರ್ಮಾಣವಾದ ಪ್ರದೇಶ. ಉಷ್ಣವಲಯದ ಸಮುದ್ರಗಳಲ್ಲಿ ಬಹಳ ಸಾಮಾನ್ಯವಾಗಿ ಕಂಡು ಬರುವುವು. ಹವಳಗಳಲ್ಲಿ ಎರಡು ವಿಧ. ಸಾಮುದಾಯಿಕ ಹವಳ ಮತ್ತು ಸರಳ ಹವಳ. ಸಾಮುದಾಯಿಕ ಹವಳಗಳಲ್ಲಿ ಕೋಟ್ಯಾನುಕೋಟಿ ಪ್ರಾಣಿಗಳು ಒಂದೇ ಕುಟುಂಬಕ್ಕೆ ಸೇರಿದ ಮಂದಿಗಳಂತೆ ಒಟ್ಟಿಗೆ ಜೀವಿಸುತ್ತವೆ. ಒಂದು ಕಡೆ ನೆಲೆ ನಿಂತರೆ ತಲೆ ತಲಾಂತರಗಳವರೆಗೆ ಅಲ್ಲಿಯೇ ಹವಳ ನಿರ್ಮಿಸಿ ಮಾರ್ಪಾಡುತ್ತವೆ. ಸಮುದ್ರದಲ್ಲಿ ಹೊಸ ಪರಿಸರ ನಿರ್ಮಾಣವಾಗುತ್ತದೆ. ಹವಳ ದಿಬ್ಬಗಳನ್ನು ಕಟ್ಟುವಲ್ಲಿ ಮುಖ್ಯವಾಗಿ ಪೊರಿಟಿಡೆ, ಎಕ್ರೊಪೊರಿಟಿಡೆ ಮತ್ತು ಎಸ್ಟ್ರಿಯಿಡೆ ಕುಟುಂಬಗಳು ಪ್ರಮುಖ ಪಾತ್ರವಹಿಸುತ್ತವೆ. ಹವಳಗಳ ಜೀವನಕ್ಕೆ ನಿಶ್ಚಿತವಾದ ವಾತಾವರಣ ಅಗತ್ಯ. ನೀರಿನ ಉಷ್ಣತೆ 20.5 $^0$ಸೆ., ಆಳ 90 ಮೀ ಗಿಂತ ಹೆಚ್ಚಾಗಿರಬಾರದು. ಹವಳದಿಬ್ಬಗಳಲ್ಲಿ ಕಂಡು ಬರುವ ಜೀವಿಗಳ ವೈವಿಧ್ಯತೆ ಹಾಗೂ ಸಂಖ್ಯೆಯನ್ನು ಬಣ್ಣಿಸಲು ಅಸಾಧ್ಯ. ವಿವಿಧ ಆಲ್ಗೆಗಳು, ವಿಪುಲ ಅಕಶೇರುಕಗಳೂ ಅನೇಕ ಮನಮೋಹಕ ಬಣ್ಣಗಳ ವಿವಿಧ ಮೀನುಗಳು ಹವಳದಿಬ್ಬಗಳಲ್ಲಿ ವಾಸಿಸುವುವು.

ಆಸ್ಟ್ರೇಲಿಯಾದ ಗ್ರೇಟ್‌ಬೆರಿಯರ್ ದಿಬ್ಬ ಜಗತ್ತಿನಲ್ಲೆ ಹೆಸರುವಾಸಿ. ಮನ್ನಾರ್ ಗಲ್ಫ್ ನಲ್ಲಿರುವ ಅನೇಕ ದ್ವೀಪಗಳು ಹವಳ ದ್ವೀಪಗಳು. ಕ್ರುಸಾಡಿ ದ್ವೀಪ, ಅಪ್ಪಾ ದ್ವೀಪ, ಹರೆದ್ವೀಪಗಳು ನಮ್ಮ ಸುತ್ತ ಮುತ್ತಲಿನ ಹವಳ ದ್ವೀಪಗಳು. (ಎಂ.ಎನ್.ಎಂ.)

**ಕಣಜಗಳು:** ಸಂಧಿಪದಿಗಳ ಗುಂಪಿನ ಕೀಟವರ್ಗದ, ಹೈಮೆನಾಪ್ಟಿರ ಗಣದ ಸದಸ್ಯರು. ಕಡಿಯಲು ಅಥವಾ ಹೀರಲು ಅನುವಾದ ವದನಾಂಗಗಳು, ೪ ನಯವಾದ ಪಾರದರ್ಶಕ ರೆಕ್ಕೆಗಳು, ಕಾಲು ರಹಿತ ಡಿಂಬಾವಸ್ಥೆ, ೧೨–೧೩ ಖಂಡಗಳುಳ್ಳ ಕುಡಿಮೀಸೆಗಳು, ಎದೆ ಮತ್ತು ಉದರದ ನಡುವೆ ತೊಟ್ಟಿನಂಥ ನಡು ಕಣಜಗಳ ಮುಖ್ಯ ಲಕ್ಷಣಗಳು.




೨೦,೦೦೦ಕ್ಕೂ ಹೆಚ್ಚು ಪ್ರಭೇದಗಳಿವೆ. ಕಣಜಗಳು ಸಾಮಾನ್ಯವಾಗಿ ಮಾಂಸಾಹಾರಿಗಳು. ಕೆಲವು ಬಗೆಯವು ಪರಾವಲಂಬಿಗಳು. ಕಣಜಗಳಲ್ಲಿ ಮುಖ್ಯವಾಗಿ ಎರಡು ವಿಧ. ಗುಂಪುಜೀವನ ನಡೆಸುವ ಸಾಮಾಜಿಕ ಕಣಜಗಳು. ಇವುಗಳಲ್ಲಿ ಜೇನುನೊಣಗಳಲ್ಲಿರುವಂತೆ ವ್ಯವಸ್ಥಿತ ಸಮಾಜವಿದೆ. ಅದರಲ್ಲಿ ರಾಣಿ, ಹಲವು ಗಂಡುಗಳು ಮತ್ತು ಸಹಸ್ರ ಕೆಲಸಗಾರ ಕಣಜಗಳು ಇರುತ್ತವೆ. ರಾಣಿ ಕಣಜ, ಗಂಡು ಮತ್ತು ಕೆಲಸಗಾರ ಕಣಜಗಳಿಗಿಂತ ಗಾತ್ರದಲ್ಲಿ ದೊಡ್ಡದು. ರಾಣಿ ಮತ್ತು ಕೆಲಸಗಾರ ಕಣಜಗಳ ಉದರದ ತುದಿಯಲ್ಲಿ ವಿಷ ಗ್ರಂಥಿ ಹಾಗೂ ಹಿಂದಕ್ಕೆ ಎಳೆದುಕೊಳ್ಳಬಹುದಾದ ಮೊನಚಾದ ಮುಳ್ಳು ಇರುತ್ತದೆ. ಈ ಬಗೆಯ ಕಣಜಗಳು ಕುಳಿತಾಗ ರೆಕ್ಕೆಗಳನ್ನು ದೇಹಕ್ಕೆ ಲಂಬವಾಗಿ ಮಡಿಸಿಕೊಳ್ಳುತ್ತವೆ. ಕೆಲವು ಪ್ರಭೇದದ ಕಣಜಗಳು ಒಂಟಿಜೀವನ ನಡೆಸುವ ಏಕಾಂಗಿ ಕಣಜಗಳು. ಬಹುತೇಕ

ಕಣಜಗಳು ಒಂಟಿ ಜೀವನ ನಡೆಸುತ್ತವೆ. ಕಣಜಗಳ ದೇಹಾಕಾರ, ಜೀವನ ಹಾಗೂ ಗೂಡುಕಟ್ಟುವ ರೀತಿಯ ಆಧಾರದ ಮೇಲೆ ಹಲವು ಕುಟುಂಬಗಳಾಗಿ ವಿಂಗಡಿಸಲಾಗಿದೆ. ಗುಂಪು ಜೀವನ ನಡೆಸುವ ಕಣಜಗಳು ವೆಸ್ಪಿಡೆ ಕುಟುಂಬಕ್ಕೆ ಸೇರಿವೆ. ಉಳಿದುವು ವೆಸ್ಪಿಡೆ ಕುಟುಂಬವು ಸೇರಿದಂತೆ ಪಾಂಪಿಲಿಡೆ, ಸ್ಪೆಸಿಡೆ, ಯೂಮೆನಿಡೆ, ಮ್ಯೂಟಿಲಿಡೆ, ಟೈಫೈಯಿಡೆ, ಸ್ಕೋಲೈಯಿಡೆ ಕುಟುಂಬಗಳಿಗೆ ಸೇರಿವೆ. ಕಣಜಗಳ ಜಾತಿಗಳಲ್ಲಿ ವೆಸ್ಪ, ವೆಸ್ಪುಲ, ಪಾಲಿಸ್ಟಿಸ್, ಡಾಲಿಕೋವೆಸ್ಪುಲ, ಟೈಫಿಯ, ಬ್ರ್ಯಾಕಿಗಾಸ್ಟ್ರ ಪ್ರಮುಖ ಕೀಟಗಳು. ಭಾರತದಲ್ಲಿ ವಾಸಿಸುವ ವೆಸ್ಪುಲ ಇಂಡಿಕಸ್ ತುಂಬಾ ಸಾಮಾನ್ಯ. ಸಾಮಾಜಿಕ ಜೀವನ ನಡೆಸುವ ಇದರ ದೇಹದ ಬೆನ್ನ ಮೇಲೆ ಹಳದಿ ಮತ್ತು ಕಪ್ಪು ಪಟ್ಟಿಗಳಿವೆ. ಇವು ದೊಡ್ಡ ದೊಡ್ಡ ಗೂಡುಗಳನ್ನು ಕಟ್ಟಿಕೊಂಡು ವಾಸಿಸುತ್ತವೆ. ಮರದ ತೊಗಟೆ ಅಥವಾ ಎಲೆಗಳನ್ನು ಅಗಿದು ಜೊಲ್ಲಿನೊಡನೆ ಸೇರಿಸಿ ಅದರಿಂದ ತಯಾರಾದ ಗಾರೆಯಂಥ ವಸ್ತುವನ್ನು ಗೂಡು ಕಟ್ಟಲು ಉಪಯೋಗಿಸುತ್ತವೆ. ನೆಲದಮೇಲೆ ಮರಗಳ ಪೊಟರೆ, ಎಲೆ ಮತ್ತು ಕೊಂಬೆಗಳ ತುದಿಯಲ್ಲಿ ಗೂಡು ಕಟ್ಟುತ್ತವೆ. ಗೂಡುಗಳ ಆಕಾರ ವಿಭಿನ್ನವಾಗಿದೆ. ಗೂಡು ಷಡ್ಭುಜಾಕೃತಿಯ ಸಣ್ಣ ಕೋಣೆಗಳಿಂದಾಗಿದೆ. ಹಲವು ಪದರಗಳಲ್ಲಿ ಜೋಡಿಸಿ ಈ ಕೋಣೆಗಳ ಸುತ್ತ ಕಾಗದದಂಥ ತೆಳುವಾದ ಹೊದಿಕೆ ಇದೆ. ಕೆಳಭಾಗದಲ್ಲಿ ಬಾಗಿಲಿರುತ್ತದೆ. ರಾಣಿ ಕಣಜ ಪ್ರತಿ ಕೋಣೆಗೊಂದರಂತೆ ಮೊಟ್ಟೆಯಿಡುತ್ತದೆ. ಮೊಟ್ಟೆಗಳನ್ನು ಅಂಟಿನಂಥ ದ್ರವದಿಂದ ಕೋಣೆಯ ಗೋಡೆಗೆ ಅಂಟಿಸುತ್ತದೆ. ಮೊಟ್ಟೆಗಳಿಂದ ಡಿಂಬಗಳು ಹೊರಬಂದಾಗ ಕೆಲಸಗಾರ ಕಣಜಗಳು ಅವುಗಳಿಗೆ ಆಹಾರ ನೀಡುತ್ತವೆ. ಹೂವುಗಳ ಮಕರಂದ, ಹಣ್ಣಿನ ರಸವನ್ನು ಅಗಿದು ಜೊಲ್ಲಿನೊಂದಿಗೆ ಬೆರೆಸಿ ತಿನ್ನಿಸುತ್ತವೆ. ಬ್ರ್ಯಾಕಿಗ್ಯಾಸ್ಟ್ರ ಪ್ರಭೇದದ ಕಣಜ ಹೂಗಳಿಂದ ಮಧುವನ್ನು ಶೇಖರಿಸಿ ಡಿಂಬಗಳಿಗೆ ಆಹಾರವಾಗಿ ನೀಡುತ್ತವೆ. ಗುಂಪುಜೀವನ ನಡೆಸುವ ಕಣಜಗಳು ಚಳಿಗಾಲಕ್ಕೆಂದು ಆಹಾರ ಶೇಖರಣೆ ಮಾಡುವುದಿಲ್ಲ. ಚಳಿ ತಡೆಯಲಾರದ ಗಂಡು ಹಾಗೂ ಕೆಲಸಗಾರ ಕಣಜಗಳು ಆಹಾರವಿಲ್ಲದೆ ಸತ್ತುಹೋಗುತ್ತವೆ. ಆದರೆ, ರಾಣಿ ಕಣಜ ಬೆಚ್ಚಗಿರುವ ಪೊಟರೆ ಅಥವಾ ಬಿಲಗಳಲ್ಲಿ ಚಳಿಗಾಲವನ್ನು ಕಳೆದು ಬೇಸಗೆಯಲ್ಲಿ ಪನಃ ಹೊಸದಾಗಿ ಗೂಡುಕಟ್ಟಿ ಸಂಘಜೀವನ ಆರಂಭಿಸುತ್ತದೆ. ಹಲವು ಬಗೆಯ ಗುಂಪುಜೀವನ ನಡೆಸುವ ಕಣಜಗಳು ಕೆಲವು ವೇಳೆ ಪರಾವಲಂಬಿಗಳಾಗಿ ಜೀವನ ನಡೆಸುತ್ತವೆ. ಈ ಕುಟುಂಬದಲ್ಲಿ ಕೆಲಸಗಾರ ಕಣಜಗಳಿರುವುದಿಲ್ಲ.

ಒಂಟಿಜೀವನ ನಡೆಸುವ ಕಣಜಗಳಲ್ಲಿ ಗೂಡು ಕಟ್ಟುವ ಪದ್ಧತಿ ಇದೆ. ಗೂಡು ಕಟ್ಟುವ ವಿಧಾನ ವೈವಿಧ್ಯಮಯವಾಗಿದೆ. ಜೇಡ ಕಣಜ ನೆಲದಲ್ಲಿ ಬಿಲತೋಡಿ ಗೂಡು ಮಾಡಿದರೆ, ಕೆಲವು ಕಣಜಗಳು ಮರಗಳಲ್ಲಿ, ಟೊಳ್ಳುಗಿಡಗಳ ಕಾಂಡಗಳಲ್ಲಿ, ಗಿಡ–ಮರಗಳ ರೆಂಬೆಗಳಲ್ಲಿ ಗೂಡು ಕಟ್ಟುತ್ತವೆ. ಗೂಡುಕಟ್ಟಲು ವಿವಿಧ ಬಗೆಯ ಪದಾರ್ಥಗಳನ್ನು



ಕಣಜಗಳ ಕುಡಿಕೆಯಾಕಾರದ ಗೂಡುಗಳು

ಬಳಸುತ್ತವೆ. ಗಾರೆಕಣಜಗಳು (ವಾಟರ್ ವ್ಯಾಸ್ಪ್) ಮಣ್ಣು ಮತ್ತು ಮರದ ಹೊಟ್ಟನ್ನು ತನ್ನ ಜೊಲ್ಲಿನೊಂದಿಗೆ ಬೆರೆಸಿ ಗಾರೆಯಂಥ ವಸ್ತುವನ್ನು ತಯಾರಿಸಿ, ಅದರಿಂದ ಹೂಜಿಯಾಕಾರದ ಗೂಡು ಕಟ್ಟುತ್ತವೆ. ಕೆಲವು ಕಣಜಗಳು ಮರದ ಹೊಟ್ಟನ್ನು ಜೊಲ್ಲಿನೊಂದಿಗೆ ಬೆರೆಸಿ, ತೆಳುವಾದ ಕಾಗದವನ್ನು ತಯಾರಿಸಿ ಗೂಡು ಕಟ್ಟಲು ಉಪಯೋಗಿಸುತ್ತವೆ. ಗೂಡುಗಳಲ್ಲಿ ಕೂಡಿಡುವ ಆಹಾರವಾಗಿ ಅನೇಕ ಬಗೆಯ ಕೀಟಗಳನ್ನು, ಕಂಬಳಿ ಹುಳುಗಳನ್ನು, ಜೇಡಗಳನ್ನು ಬೇಟೆಯಾಡಿ ತರುತ್ತವೆ. ಗೂಡಿನಲ್ಲಿ ಮೊಟ್ಟೆಯಿಡುವ ಮುನ್ನ ಬೇಟೆಯಾಡಿ ತಂದ ಕೀಟವನ್ನು ಅಥವಾ ಕಂಬಳಿ ಹುಳುವನ್ನು ಉದರದ ತುದಿಯಲ್ಲಿರುವ ಮುಳ್ಳಿನಿಂದ ಕುಟುಕಿ ನಿಶ್ಚೇತನಗೊಳಿಸಿ ಗೂಡಿನೊಳಗೆ ತುರುಕುತ್ತವೆ. ನಂತರ ಮೊಟ್ಟೆಯಿಡುತ್ತವೆ. ಮೊಟ್ಟೆಯಿಂದ ಹೊರಬಂದ ಡಿಂಬ ಈ ಕೀಟವನ್ನು ತಿಂದು ಬೆಳೆಯುತ್ತದೆ.

ಒಂಟಿಜೀವನ ನಡೆಸುವ ಕಣಜಗಳು ಪರತಂತ್ರ ಜೀವಿಗಳು. ಇವು ಗೂಡು ಕಟ್ಟಲಾರವು. ಇವುಗಳಲ್ಲಿ ಕೋಗಿಲೆ ಕಣಜ (ಕಕೂ ವ್ಯಾಸ್ಪ್) ಮತ್ತು ಮಕಮಲ್ಲು ಇರುವೆ (ವೆಲ್ವೆಟ್ ಆಂಟ್) ಮುಖ್ಯವಾದುವು. ಮಿರುಗುವ ಹಸಿರು ಅಥವಾ ನೀಲಿ ಬಣ್ಣದ ಕೋಗಿಲೆ ಕಣಜ ಒಂಟಿಜೇನು ಅಥವಾ ಇತರ ಕಣಜಗಳ ಗೂಡಿನಲ್ಲಿ ತನ್ನ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳಿಂದ ಹೊರ ಬರುವ ಡಿಂಬಗಳು ಜೇನಿನ ಅಥವಾ ಇತರ ಕಣಜಗಳ ಮರಿಗಳನ್ನು ತಿಂದು ಬೆಳೆಯುತ್ತವೆ. ಆತಿಥೇಯ ಪ್ರಾಣಿ ತನ್ನ ಮರಿಗಳಿಗಾಗಿ ಸಂಗ್ರಹಿಸಿಟ್ಟ ಆಹಾರವನ್ನು ತಿಂದು ಬೆಳೆಯುತ್ತದೆ. ಮಕಮಲ್ಲು ಇರುವೆಯಂತಿರುವ ಕಣಜ ದೇಹದ ಮೇಲೆ ಉದ್ದವಾದ ಮತ್ತು ದಪ್ಪನಾದ ಕಪ್ಪು ಅಥವಾ ಕೆಂಪು ಕೂದಲುಗಳಿವೆ. ಹೆಣ್ಣು ಕಣಜಗಳಿಗೆ ರೆಕ್ಕೆಗಳಿಲ್ಲ. ಗಂಡುಕಣಜಗಳಿಗೆ ಮಾತ್ರ ರೆಕ್ಕೆಯಿವೆ. ಕೆಲವು ಪ್ರಭೇದದ ಕಣಜಗಳು, ದುಂಬಿಯ ಮೇಲೂ ಮತ್ತು ಟ್ಸೆಟ್ಸೆ ನೊಣದ ಮೇಲೂ ಪರತಂತ್ರ ಜೀವಿಗಳಾಗಿವೆ. ಟೈಫೈಯಿಡೆ ಮತ್ತು ಸ್ಕೋಲೈಯಿಡೆ ಕುಟುಂಬದ ಕಣಜಗಳು ಜೀರುಂಡೆಗಳ ಮೇಲೆ ಪರಾವಲಂಬಿಯಾಗಿವೆ. ಮೊಟ್ಟೆಗಳನ್ನು ಈ ಕೀಟಗಳ ಮೇಲೆ ಇಡುತ್ತವೆ. ಡಿಂಬಗಳು ಜೀರುಂಡೆಗಳನ್ನು ಭಕ್ಷಿಸಿ ಬೆಳೆಯುತ್ತವೆ.

ಈ ರೀತಿ ಬಹಳ ಸೋಜಿಗದ ಜೀವನವನ್ನು ಸಾಗಿಸುವ ಕಣಜಗಳು ಮಾನವನಿಗೆ ಕೆಲವು ವಿಧದಲ್ಲಿ ಉಪಕಾರಿಗಳು. ಇತರ ಕೀಟಗಳನ್ನು ಕಣಜಗಳ ಡಿಂಬಗಳು ತಿನ್ನುವುದರಿಂದ ಪೀಡೆಕಾರಕ ಕೀಟಗಳನ್ನು ನಿಯಂತ್ರಿಸುತ್ತವೆ. ಅಮೆರಿಕದಲ್ಲಿ ಬೆಳೆಗಳನ್ನು ನಾಶಪಡಿಸುತ್ತಿದ್ದ ಜಪಾನೀ ಜೀರುಂಡೆಗಳನ್ನು ತಡೆಗಟ್ಟಲು ಟೈಫಿಯ ಎಂಬ ಕಣಜಗಳನ್ನು ಉಪಯೋಗಿಸುತ್ತಿದ್ದರು. ಅದೇ ರೀತಿ ಭಾರತದಲ್ಲಿ ಸಹ ವಿವಿಧ ಪ್ರಭೇದದ ಕಣಜಗಳನ್ನು ಕೃಷಿ ಬೆಳೆಗೆ ಕಾಡುವ ಪೀಡೆ ಕೀಟಗಳನ್ನು ನಿಯಂತ್ರಿಸಲು ಜೈವಿಕ ನಿಯಂತ್ರಣ ಕಾರ್ಯದಲ್ಲಿ ಬಳಸುತ್ತಾರೆ. (ಎಚ್.ಬಿ.ಡಿ.)

**ಕಣ್ಣಿನ ರೋಗಗಳು:** ದೃಷ್ಟಿಯನ್ನು ಬಾಧಿಸುವ ಕಣ್ಣಿನ ಊನಗಳು. ಕಣ್ಣಿನ ವಿವಿಧ ಭಾಗಗಳನ್ನು ಬಾಧಿಸುವ ಸೋಂಕು, ಊನ ಇತ್ಯಾದಿ. ರೆಪ್ಪೆಗಳ ರೋಗಗಳು: ಕಣ್ಣಿಗೆ ಸಣ್ಣ ಪೆಟ್ಟು, ಅಪಾಯಗಳು ತಾಕದಂತೆ ತಡೆವುದಲ್ಲದೆ ಕಣ್ಣುಗುಡ್ಡೆ ಮುಂಭಾಗ ತೇವವಿಲ್ಲದೆ ಒಣಗದಂತೆ ಇರಿಸುವವು ರೆಪ್ಪೆಗಳು. ರೆಪ್ಪೆ ಮುಚ್ಚಲು ಸುತ್ತುವರಿಕ (ಆರ್ಬಿಕ್ಯುಲಾರಿಸ್) ಸ್ನಾಯು ಕುಗ್ಗುವುದೇ ಕಾರಣ. ರೆಪ್ಪೆ ತೆರೆಯಲು ಬಾಣ ಮೊನೆಯಂಥ ಸ್ನಾಯುವಿದೆ. ಸಾಮಾನ್ಯವಾಗಿ ರೆಪ್ಪೆಗಳು ಕಣ್ಣುಗುಡ್ಡೆಗೆ ಚೆನ್ನಾಗಿ ತಾಕಿಕೊಂಡಿರುವುವು. ಇವು ನಿದ್ರೆಯಲ್ಲಿ ಮುಚ್ಚಿರುತ್ತವೆ. ರೆಪ್ಪೆ ಮುಚ್ಚಲು ಸಹಕರಿಸುವ ಆರ್ಬಿಕ್ಯುಲಾರಿಸ್ ಸ್ನಾಯು ಊದಿಕೊಂಡಾಗ ರೆಪ್ಪೆ ಅಂಚು ಒಳತಿರುಗಿರುವುದಕ್ಕೆ ಎಂಟ್ರೋಪಿಯಾನ್ ಎನ್ನುವರು. ಆಗ ರೆಪ್ಪೆಗೂದಲು ಕಣ್ಣುಗುಡ್ಡೆಯನ್ನು ಗೀಚಿದಂತಾಗಿ ಹುಣ್ಣಾಗಬಹುದು. ರೆಪ್ಪೆಗೆ ಗಾಯವೋ ಹುಣ್ಣೋ ಆಗಿ ವಾಸಿಯಾದ ಮೇಲೆ ಕಲೆಗಟ್ಟಿದಾಗ ರೆಪ್ಪೆ ಅಂಚು ಹೊರಮಡಿಸಿಕೊಳ್ಳುವುದು ಎಕ್‌ಟ್ರೋಪಿಯಾನ್. ಮುಪ್ಪಿನಲ್ಲಿ ಕೆಳರೆಪ್ಪೆಗಳಲ್ಲಿ ಬಲವಿಲ್ಲದೆ ಜೋಲು ಬೀಳಬಹುದು. ನಿತ್ರಾಣದಿಂದ ರೆಪ್ಪೆ ಜೋಲು ಬಿದ್ದಿರಬಹುದು (ಟೋಸಿಸ್). ಇದರಿಂದ ನೋಟಕ್ಕೆ ಅಡ್ಡಿಯಾದರೆ ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು.

ತಲೆಯ 7ನೆಯ ನರವಾದ ಫೇಷಿಯಲ್ ನರದ ಅಂಕೆಯಲ್ಲಿರುವ ಆರ್ಬಿಕ್ಯುಲಾರಿಸ್ ಸ್ನಾಯುವೇ ರೆಪ್ಪೆಗಳಿಂದ ಕಣ್ಣು ಮುಚ್ಚಲು ಕಾರಣವಾದ್ದರಿಂದ ಈ ನರದ ಅರನಾರಿಯಲ್ಲಿ (ಪೆರಾಲಿಸಿಸ್) ಕಣ್ಣುಮಿಟುಕಣೆ, ಮುಚ್ಚಿಗೆ ಆಗದು. ಹೀಗೆ ಬಹಳ ಹೊತ್ತು ಮುಚ್ಚದಂತಾದರೆ ಕಣ್ಣುಗುಡ್ಡೆ ಮುಂದಿರುವ ಪಾರದರ್ಶಕ ಪಟಲ (ಕಾರ್ನಿಯ) ಒಣಗಿ ಹುಣ್ಣೇಳುತ್ತದೆ. ಆಗ ನಿದ್ರೆಹೊತ್ತಿನಲ್ಲಿ ತೇವವಿರುವಂತೆ ಏನಾದರೂ ಉಪಾಯ ಮಾಡಬೇಕಾಗುವುದು.

ರೆಪ್ಪೆಗಳಲ್ಲಿನ ಗ್ರಂಥಿಗಳಿಂದ ಸುರಿವ ಮೈಜಿಡ್ಡು (ಸೀಬಂ) ರೆಪ್ಪೆ ಅಂಚುಗಳು ಒಂದಕ್ಕೊಂದು ಅಂಟದಂತೆ ಇರಿಸುವುದಲ್ಲದೆ ಎಂದಿನ ಕಣ್ಣೀರು ಹೊರಕ್ಕೆ ಹರಿದು ಹೋಗದ ಹಾಗೆ ತಡೆವುದು. ಈ ಮೈಜಿಡ್ಡು ಗ್ರಂಥಿಗಳಿಗೆ ಸೊಂಕುಹತ್ತಿ ಕೀವುಗೂಡುವುದೇ ಕಣ್ಕುಟಿಕೆ. ಇದಕ್ಕೆ ಸೋಂಕುರೋಧಕ ಮದ್ದುಗಳನ್ನು ಹಚ್ಚಿ ಕಾವು ಕೊಡುವುದರಿಂದ ಗುಣಪಡಿಸಬಹುದು. ಈ ರೆಪ್ಪೆ ಗ್ರಂಥಿಗಳಲ್ಲಿ ಅಡಚಣೆಯಾಗಿ ಒಳರೆಪ್ಪೆಯಾಳದಲ್ಲಿ ಗಟ್ಟಿ ಕುರು ಏಳುವುದೇ ಕಣ್ಣುಜಿಟ್ಟೆ (ಕೆಲೇಜಿಯಾನ್). ಕೆಲವೇಳೆ ಇದು ಸುಲಭವಾಗಿ ವಾಸಿಯಾಗದ್ದರಿಂದ ಕೊಯ್ದು ಕೀವುಗಟ್ಟಿರುವುದನ್ನು ಹೊರಡಿಸದಿದ್ದರೆ ಗಟ್ಟಿಕಾಳಿನಂತೆ ಗಂಟು ಉಳಿವುದು.

ರೆಪ್ಪೆಯ ಅಂಚುಗಳಲ್ಲಿ ಕೂದಲ ಕೋಶಿಕಗಳಲ್ಲಿ (ಫಾಲಿಕಲ್ಸ್) ಸೋಂಕು ಹತ್ತಿ ರೆಪ್ಪೆಯುರಿತವಾಗಲು (ಬ್ಲೆಫರೈಟಿಸ್) ಚರ್ಮದ ಮೇಲೆ ಯಾವಾಗಲೂ ಇರುವ ಸಾಮಾನ್ಯ ಏಕಾಣುಜೀವಿಗಳೇ ಕಾರಣ. ಆಗ ರೆಪ್ಪೆಗೂದಲುಗಳ ಬುಡದಲ್ಲಿ ಪಿಸರುಗಟ್ಟಿ ಹುರುಪೆ (ಸ್ಕೇಲ್) ಏಳುತ್ತದೆ. ಜೀವಿರೋಧಕ ಮದ್ದುಗಳಿಂದ ಇದನ್ನು ಗುಣಪಡಿಸಬಹುದು.

ಕಣ್ಣೀರಿನ ಸಾಧನದ ರೋಗಗಳು : ಸಾಧಾರಣವಾಗಿ ಕಣ್ಣೀರುಗ್ರಂಥಿಗಳು ಸ್ರವಿಸುವ ಕಣ್ಣೀರು ಹೊರಹರಿದು ಬೀಳದು. ಕಣ್ಣೀರಿನ ತೇವ ಕೂಡ ಯಾರ ಅರಿವಿಗೂ ಬರದಂತಿರುವುದು. ಕೆಲವು ಬೇನೆಗಳಲ್ಲಿ ಕಣ್ಣೀರು ಸುರಿತ ಏರುಪೇರಾಗುತ್ತದೆ. ಕಣ್ಣಿನಿಂದ ಮೂಗಿನೊಳಕ್ಕೆ ಸಾಗುವ ಕಾಲುವೆಗೆ ಅಡಚಣೆ ಆಗುವುದೇ ಕಣ್ಣೀರು ಹೆಚ್ಚಾಗಿ

ಹೊರಬೀಳುವುದರ ಕಾರಣ. ಮೂಗಿನಲ್ಲಿ ಏನಾದರೂ ಬೆಳೆದಿದ್ದರೆ ಹೀಗಾಗುತ್ತದೆ. ಹಾಗೇ ಕೆಳರೆಪ್ಪೆಯ ವಿಕಾರ, ಕಣ್ಣೀರು ಕಾಲುವೆಯಲ್ಲಿ ಒತ್ತಳ್ಳುವ ಸ್ನಾಯುವಿನ ದುರ್ಬಲತೆಗಳೂ ಕಾರಣವಾಗಬಹುದು. ಮುಪ್ಪಿನಲ್ಲಿ ಕೆಳರೆಪ್ಪೆ ಜೋಲು ಬೀಳುವುದರಿಂದ ನೀರುಗಣ್ಣು (ಎಪಿಫೋರ) ಆಗಿ ಕೊಂಚ ಕಣ್ಣೀರು ಹೊರಸುರಿವುದು. ಇವಲ್ಲಿ ಬಹುಪಾಲನ್ನು ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು. ಕಣ್ಣೀರು ಚೀಲಕ್ಕೂ ಮೂಗಿಗೂ ನಡುವಣ ಸಾಗಾಲುವೆ ಮುಚ್ಚಿಹೋಗಿದ್ದರೆ ಕಣ್ಣೀರು ಚೀಲದಲ್ಲಿ ಸೋಂಕು ಸೇರಿಕೊಳ್ಳುತ್ತದೆ. ಆಗ ಮುಚ್ಚಿಹೋದ ದಾರಿಯನ್ನು ಶಸ್ತ್ರಕ್ರಿಯೆಯಿಂದ ಬಿಡಿಸಿ ತೆರೆಯದಿದ್ದಲ್ಲಿ ಕಂಜಕ್ಟಿವಾಕ್ಕೆ ಅಪಾಯವಿದೆ.

ಕಣ್ಣೀರು ಸುರಿಕೆ ಕಡಿಮೆಯಾದಾಗ ಕಣ್ಣು ಒಣಗಿದಂತಾಗಿ ಕಣ್ಣಲ್ಲಿ ಏನೋ ಬಿದ್ದು ಕೆರೆಯುತ್ತಿರುವ ಹಾಗೆ ಆಗುವುದು. ವಯಸ್ಸಾದ ಹೆಂಗಸರಲ್ಲಿ ಅಂತಃಸ್ರಾವಕ ರೋಗವೊಂದರಲ್ಲಿ ಹೀಗಾಗುತ್ತದೆ. ಅಂತಃಸ್ರಾವಕ ಗ್ರಂಥಿ ಚಿಕಿತ್ಸೆ ನಡೆಸುವುದರೊಂದಿಗೆ ಆಗಾಗ್ಗೆ ನೀರು ತೊಟ್ಟುಗಳನ್ನು ಹಾಕಿ ಕಣ್ಣೊಳಭಾಗವನ್ನು ತೋಯಿಸುತ್ತಿರುಬಹುದು. ಕಣ್ಣೀರು ಹರಿದು ಹೋಗದಂತೆ ಸಾಗುದಾರಿಗಳನ್ನು ಶಸ್ತ್ರಕ್ರಿಯೆಯಿಂದ ಮುಚ್ಚಿಹಾಕಬಹುದು. ಇನ್ನೇನೂ ಮಾಡಲಾಗದಿದ್ದರೆ ಜೊಲ್ಲುಗ್ರಂಥಿ ನಾಳಗಳನ್ನು ಇಲ್ಲಿಗೆ ಜೋಡಿಸಿ ಹೊಲೆವುದುಂಟು.

ಕಂಜಕ್ಟಿವಾದ ರೋಗಗಳು: ಹೊರಗಾಳಿಗೆ ಒಡ್ಡಿರುವುದರಿಂದ ಸುಲಭವಾಗಿ ಸೋಂಕುಗಳು, ಒಗ್ಗದಿಕೆಗಳು, ಕೆರಳಿಕೆ ವಸ್ತುಗಳು, ರಾಸಾಯನಿಕಗಳಿಗೆ ಈಡಾಗಿ ಕಂಜಕ್ಟೈವೈಟಿಸ್ ಆಗುತ್ತದೆ. ಕಣ್ಣಲ್ಲಿ ರಕ್ತಗಟ್ಟಿ ಕೆಂಪೇರಿ, ಕಣ್ಣೀರು ಹರಿಸುತ್ತ, ರೋಸೋ ಗೀಜೋ ಕೀವೋ ಸುರಿಯಬಹುದು. ರಾತ್ರಿ ಮಲಗಿದ್ದು ಬೆಳಗ್ಗೆ ಎದ್ದಾಗ ಕಣ್ಣುರೆಪ್ಪೆಗಳು ಗೀಜುಕಟ್ಟಿ ಮೆತ್ತಿಹಾಕಿಕೊಂಡಿರುತ್ತವೆ. ಕಡಿತ, ಉರಿ ಆಗಿ ಕಣ್ಣು ಚುಚ್ಚುತ್ತಿರುವುದು. ಸಾಮಾನ್ಯವಾಗಿ ನೋವು ಅಷ್ಟಾಗಿರದು. ನೋಟಕ್ಕೂ ಅಡ್ಡಿಯಿಲ್ಲ. ಸೂರ್ಯನ ಬೆಳಕಿನ ದೀಪ, ಬೇಸಿಗೆ ದೀಪಚಾಪ, ಕಣ್ಣು ಕೋರೈಸುವ ಬಿಸಿಲುಗಳಿಂದಲೂ ಕಂಜಕ್ಟಿವೈಟಿಸ್ ಏಳಬಹುದು. ಬೆಳಕಿಗೆ ಕಣ್ಣು ಬಿಡದಂತಾಗುತ್ತದೆ.

ಕರಡಜ್ವರದೊಂದಿಗೆ (ಹೇ ಫೀವರ್) ಕೊಂಚವಾಗಿ ಒಗ್ಗದಿಕ ಕಂಜಕ್ಟೈವೈಟಿಸ್ ಕಾಣಿಸಿಕೊಳ್ಳಬಹುದು. ಊತ, ಕೆಂಪೇರಿಕೆ, ಕೆರೆತ, ದದ್ದುಗಳೂ ಏಳಬಹುದು. ಕಾರಣಕಾರಕ ಗೊತ್ತಿಲ್ಲವಾದರೂ ವಸಂತದ (ವರ್ನಲ್) ಕಂಜಕ್ಟಿವೈಟಿಸ್ ಕೂಡ ಒಗ್ಗದಿಕೆಯದೆಂಬ ಅಭಿಪ್ರಾಯವಿದೆ. ಮಕ್ಕಳಲ್ಲಿ ವಸಂತದಲ್ಲಿ ಕೆರಳುವುದು ಸಾಮಾನ್ಯ. ಕೆರೆತ ವಿಪರೀತವಾಗಿ ಕೂಡುಪೊರೆ ಮಂದವಾಗುತ್ತದೆ. ಸ್ಟಿರಾಯ್ಡ್ ಮದ್ದುಗಳಿಂದ ಕೆರೆತ ಇಳಿಯುತ್ತದೆ.

ಹೊರಗಾಳಿ, ದೂಳು, ಕಾವು, ಚಳಿಗಳಿಗೆ ತೆರೆದೊಡ್ಡಿರುವುದರಿಂದ ಕಂಜಕ್ಟಿವಾಗೆ ರೋಗಾಣುಗಳು ಸುಲಭವಾಗಿ ತಗಲುವುವು. ಆದರೆ ಸೋಂಕು ಹತ್ತಿದರೆ ಜೀವಿರೋಧಕಗಳಿಂದ ತಡೆಯಬಹುದು, ಗುಣಪಡಿಸಬಹುದು. ಬೇಸಗೆಯಲ್ಲಿ ಸಾಮಾನ್ಯವಾಗಿ ಬರುವ ಕಣ್ಣುನೋವು (ಕೆಂಗಣ್ಣು) ಇಂದಿನ ಗುಣಕಾರಿ ಮದ್ದುಗಳಿಗೆ ಮಣಿದಿದೆ. ಯಾವ ಸೋಂಕುರೋಧಕ ಮದ್ದಿಗೂ ಜಗ್ಗದ ವಿಷಕಣಗಳಿಂದಾದ (ವೈರಸ್‌ಗಳು) ಕಂಜೆಕ್ಟಿವೈಟಿಸ್ ಪ್ರಪಂಚದ ಎರಡನೆಯ ಯುದ್ಧ ಕಾಲದಲ್ಲಿ ಸಾಂಕ್ರಾಮಿಕವಾಗಿ ತಲೆದೋರಿತು. ಬಲು ಅಂಟುರೋಗವಾದ್ದರಿಂದ ಈಗಲೂ ಸಾಂಕ್ರಾಮಿಕವಾಗುವುದುಂಟು. 2–3 ತಿಂಗಳು ಕಾಡಿಸಿದರೂ ಕೊನೆಗೆ ಗುಣವಾಗುತ್ತದೆ.

ಈಜಿಪ್ಟ್, ಭಾರತದಲ್ಲಿ ಅಲ್ಲಲ್ಲಿ ಸಾಂಕ್ರಾಮಿಕದಂತೆ ಹಬ್ಬಿರುವ, ಬೇರೂರಿದ ಅಂಟುರೋಗ ರವೆಗಣ್ಣೂ (ಟ್ರಾಕೋಮ) ಒಂದು ರೀತಿಯ ಕಂಜೆಕ್ಟಿವೈಟಿಸ್. ಚಿಕಿತ್ಸೆ ಇಲ್ಲವಾದರೆ ಕಂಜಕ್ಟಿವಾದ ಮೇಲೆ ಕಲೆಗಟ್ಟಿ ಕುರುಡಾಗಬಹುದು. ವಿಶ್ವ ಆರೋಗ್ಯ ಸಂಸ್ಥೆ ಮತ್ತಿತರ ಸಂಘಗಳ ಸತತ ಯತ್ನ, ನೆರವಿನಿಂದ ಬಹಳ ಕಡೆ ಇದರ ಹಾವಳಿ ಇಳಿಯುತ್ತಿದೆ. ಈ ರೋಗಕ್ಕೆ ಕಾರಣವಾದ ವಿಷಕಣ ಕೆಲವು ಜೀವಿರೋಧಕಗಳಿಗೆ ಜಗ್ಗುತ್ತದೆ. ಗಂಡು, ಹೆಣ್ಣು ಈಜುಗಾರರ ಜನನಾಂಗಗಳಲ್ಲಿ ರೋಗ ತೋರದಿದ್ದರೂ–ಅಲ್ಲಿರುವ ಒಂದು ವಿಷಕಣವೇ ಕಣ್ಣಿಗೆ ತಾಕಿದರೆ ಈಜು ಕೊಳದ ಕಂಜೆಕ್ಟಿವೈಟಿಸ್ ಆಗುವುದರ ಕಾರಣ. ಸೋಂಕಿರುವ ಈಜುಕೊಳದಲ್ಲಿ ಇಳಿಯುವವರೆಲ್ಲರಿಗೂ ಹತ್ತುವುದು. ಎರಡು ಕಣ್ಣುಗಳಲ್ಲೂ ರೋಸು ಸುರಿಸುವ ಈ ಬೇನೆ ಸಲ್ಫೋನಮೈಡುಗಳಿಂದ ಗುಣವಾಗುತ್ತದೆ.

ಚರ್ಮ ಮತ್ತು ಲೋಳೆಪೊರೆಗಳ ಎಷ್ಟೋ ರೋಗಗಳು, ಅದರಲ್ಲೂ ಗಂಟಲಮಾರಿ (ಡಿಫ್ತೀರಿಯ), ದಡಾರ, ನಾಯಿ ಕೆಮ್ಮುಗಳಂಥ ಸೋಂಕಿನ ಜ್ವರದ ರೋಗಗಳಲ್ಲಿ ಅಷ್ಟಿಷ್ಟು ಕಂಜೆಕ್ಟಿವೈಟಿಸ್ ಕಾಣಿಸಿಕೊಳ್ಳುವುದು ಸಾಮಾನ್ಯ.

ಶುಷ್ಕ ಪ್ರದೇಶಗಳಲ್ಲಿ ಕಂಡುಬರುವ ಉರಿತವೇಳಿಸದ ಕಂಜೆಕ್ಟಿವೈಟಿಸ್ ರೋಗವನ್ನು ಮುಕ್ಕಪೊರೆ (ಟೆರಿಜಿಯಂ) ಎನ್ನುತ್ತಾರೆ. ಗಾಳಿ, ದೂಳುಗಳಿಗೊಡ್ಡಿದ ಕಂಜಕ್ಟಿವಾ ಭಾಗ ಮುದುರಿಕೊಳ್ಳುವುದಲ್ಲದೆ, ಪಾರದರ್ಶಕ ಪಟಲದ ಮೇಲೂ ತೆವಳುತ್ತದೆ. ಎಳೆಯದಾಗಿರುವಾಗ ಇದನ್ನು ನೋಡಲು ವಿಕಾರ. ಸಣ್ಣ ಶಸ್ತ್ರಕ್ರಿಯೆಯಿಂದ ಇದನ್ನು ಗುಣಪಡಿಸಿ ಮತ್ತೆ ಮರುಕಳಿಸದಂತೆ ತಡೆಗಟ್ಟಬಹುದು.

ಪಾರದರ್ಶಕ ಪಟಲದ ರೋಗಗಳು : ಪಾರದರ್ಶಕ ಪಟಲಕ್ಕೆ ಗಾಯವೋ ಹುಣ್ಣೋ ಆದಮೇಲೆ ವಾಸಿಯಾಗಿ ಕಲೆಗಟ್ಟಿದರೆ ಆ ಜಾಗಗಳೆಲ್ಲ ಅಪಾರದರ್ಶಿಯಾಗುತ್ತದೆ. ಹೀಗೆ ಕಲೆಗಟ್ಟಿದಾಗ ಬೇರೆಯವರ ಕಣ್ಣಿನಿಂದ ತೆಗೆದು ತಂದುದನ್ನು ಕೆಟ್ಟಿರುವ ಭಾಗಕ್ಕೆ ನಾಟಿ ಹಾಕುವುದಕ್ಕೆ ನೇತ್ರದಾನ ಎನ್ನುವುದುಂಟು.

ಗಾಳಿ, ದೂಳುಗಳಿಗೆ ತೆರೆದಿಟ್ಟಿರುವುದೂ ಇದರಲ್ಲಿ ರಕ್ತನಾಳಗಳೇ ಇಲ್ಲದ್ದೂ ಕೊಂಚ ಗಾಯವಾದರೂ ನೋಟಕ್ಕೆ ವಿಪರೀತ ಅಡ್ಡಿಯಾಗುವುದೂ ಪಾರದರ್ಶಕ ಪಟಲ ಕೆಡುವ ಮುಖ್ಯ ಕಾರಣಗಳು. ಪಾರದರ್ಶಕ ಪಟಲ ರೋಗಗಳಿಗೆ ಸೋಂಕು, ಚಯಾಪಚಯ ಮತ್ತು ರಕ್ತಸುತ್ತಾಟದಲ್ಲಿ ಏರುಪೇರು, ಒಗ್ಗದಿಕೆ, ಅನುವಳಿಕೆ (ಡೀಜನರೇಷನ್) ಕಾರಣಗಳಾಗಬಹುದು.

ಪಾರದರ್ಶಕ ಪಟಲದ ಹುಣ್ಣು : ಇದು ಹೊರಗಣ ಸೋಂಕು, ಗಾಯ, ಪೆಟ್ಟುಗಳಿಂದ ಆಗುವುದು. ಪಾರದರ್ಶಕ ಪಟಲದ ಗೀಚಲಿನ ಮೂಲಕ ರೋಗಾಣುಗಳು ಒಳಹೋಗುತ್ತವೆ. ಅಕ್ಕಪಕ್ಕದ ಅಂಗಾಂಶಗಳು ಹಾಳಾಗಿ ಹುಣ್ಣೇಳುತ್ತದೆ. ವಾಸಿಯಾದ ಮೇಲೆ ಹಾಳಾದ ಭಾಗದಲ್ಲಿ ಕಲೆಗಟ್ಟು (ಸ್ಕಾರ್) ಉಳಿದುಬಿಡುತ್ತದೆ. ಚಿಕಿತ್ಸೆ ಕೈಗೂಡದಲ್ಲಿ, ರೋಗಾಣು ಬಲು ಜೋರಾಗಿದ್ದರೆ, ಹಾಳಾದ ಭಾಗಗಳಿಗೆ ತಕ್ಕಂತೆ ಹುಣ್ಣು ಆಳವಾಗೂ ಪಕ್ಕಗಳಲ್ಲಿ ಹರಡಿಕೊಂಡೂ ದೊಡ್ಡದಾಗುವುದು. ಆಳವಾಗಿ ಹರಡಿದರಂತೂ ಪಾರದರ್ಶಕ ಪಟಲದಲ್ಲಿ ತೂತು ಬಿದ್ದು ನೇತ್ರದ್ರವ ಸುರಿದುಹೋಗಿ ಪಾರದರ್ಶಕ ಪಟಲಕ್ಕೆ ಪಾಪೆಪೊರೆ ತಾಕುವುದರಿಂದ ತೀರಾ ಅಪಾಯಕರ. ಕಣ್ಣುಗುಡ್ಡೆ ಗಾತ್ರ, ಆಕಾರಗಳು ಕುಸಿದುಬೀಳುತ್ತವೆ. ಇವೆರಡೂ ಅಂಟಿಕೊಂಡರೆ ಇನ್ನೂ ತೊಡಕೇ.

ಹರ್ಪಿಸ್ ಸಿಂಪ್ಲೆಕ್ಸ್ ಸೋಂಕು : ಎಷ್ಟೋ ಮಂದಿಯ ಪಾರದರ್ಶಕ ಪಟಲದ ಚೀಲಗಳಲ್ಲಿ ಈ ವಿಷಕಣಗಳಿದ್ದರೂ ಕೆಲವರಲ್ಲಿ ಮಾತ್ರ ಇವು ಒಳಹೊಕ್ಕು ಸೋಂಕೆಬ್ಬಿಸುವುದು. ಹೀಗಾದಾಗ ಮೊದಲು ಮರದ ಕೊಂಬೆಗಳ ಆಕಾರದ ಬೂದುಬಣ್ಣದ ಹುಣ್ಣಾಗಿ ಕಣ್ಣುರಿಯುತ್ತ ಕಣ್ಣೀರು ಸುರಿಯುತ್ತಿರುವುದು. ರೋಗ ತಡೆವ ಔಷಧಗಳ ಬಲ ಜೋರಾಗಿದ್ದರೆ ಕೆಲವೇ ದಿನಗಳಲ್ಲಿ ವಾಸಿಯಾಗುತ್ತದೆ. ಹಾಗಿಲ್ಲವಾದರೆ ಬಹಳ ಭಾಗ ಹಾಳಾಗುವುದು.

ಇಂಟರ್‌ಸ್ಟೀಷಿಯಲ್ ಕೆರಟೈಟಿಸ್: ಹುಟ್ಟಿನಿಂದ ಬರುವ ಸಿಫಿಲಿಸ್ ರೋಗದಲ್ಲಿ ಕೇವಲ ಮೇಲ್ಪೈಯಲ್ಲಿ ಹುಣ್ಣಾಗದೆ ಒಳಗೂ ಹಬ್ಬುವ ಪಾರದರ್ಶಕ ಪಟಲದ ಉರಿಯೂತ. ಮಗುವಿನ 5–8ನೆಯ ವಯಸ್ಸಿನಲ್ಲಿ ತಲೆದೋರುತ್ತದೆ. ಇಡೀ ಪಾರದರ್ಶಕ ಪಟಲ ಮಸುಕಾಗಿ ನೀಲಿಗೆಂಪೇರಿರುತ್ತದೆ. ಬೆಳಕಿಗೆ ಕಣ್ಣುಬಿಡಲಾಗದೆ ಕಣ್ಣೀರು ಸುರಿಯುತ್ತಿರುವುದು. ಕೆಲವು ತಿಂಗಳು ಕಾಡುವುದು. ಇನ್ನೊಂದು ಕಣ್ಣಿನಲ್ಲೂ ರೋಗ ತಲೆಹಾಕುವುದು. ಸಿಫಿಲಿಸ್ ರೋಗದ ಚಿಕಿತ್ಸೆಯಿಂದ ರೋಗ ನಿಧಾನವಾಗಿ ಅಣಗುತ್ತದೆ. ಈ ರೋಗ ಬಾರದಂತೆ ತಡೆಯಲು ರೋಗಿತಾಯಿಗೆ ಹೆರಿಗೆಗೆ ಮುಂಚೆಯೇ ಪೆನಿಸಿಲಿನ್ ಚಿಕಿತ್ಸೆ ಕೊಡುವುದೇ ಚೆನ್ನಾದ ಉಪಾಯ.

ಅನುವಳಿಕ ಬೇನೆಗಳು: ತೀರ ಸಾಮಾನ್ಯವಾದ ಈ ಬೇನೆಗಳಿಂದ ಪಾರದರ್ಶಕ ಪಟಲಕ್ಕೆ ಆಗುವ ಅನಾಹುತಗಳು ತಿಳಿದಿವೆಯೇ ಹೊರತು ಕಾರಣವಾಗಲೀ ಚಿಕಿತ್ಸೆಯಾಗಲೀ ಏನೂ ಗೊತ್ತಿಲ್ಲ. ಯಾವ ನೋವೂ ಇರಸುಮುರಸೂ ಉರಿಯೂ ಇಲ್ಲದೆಯೇ ಪಾರದರ್ಶಕ ಪಟಲ ಬರುಬರುತ್ತ ಮಸುಕಾಗಿ ನೋಟವೂ ಮಂದವಾಗುತ್ತದೆ. ಮಸುಕು ಗೊಳಿಸುವ ಚುಕ್ಕೆಗಳು, ಗಂಟುಗಳು, ಕಲೆಗಳು, ಗೆರೆಗಳಂತೆ ಬಗೆಬಗೆಯಾಗಿರಬಹುದು.

ಸ್ಕ್ಲೀರಾದ ರೋಗಗಳು: ಇವು ತುಂಬಾ ವಿರಳ. ಕೀಲುಗಳು, ಸ್ನಾಯುಗಳು, ಸ್ನಾಯುರಜ್ಜೆಗಳ ಉರಿತದೊಂದಿಗೆ ಸ್ಕ್ಲೀರೈಟಿಸ್ ತಲೆದೋರುವುದರಿಂದ ಇಡೀ ಮೈಗೆ ಹತ್ತುವ ರೋಗವಿದು. ಅಡ್ರಿನಲ್ ಗ್ರಂಥಿ ರಗಟೆಯ ಸ್ಟಿರಾಯ್ಡ್ ಮದ್ದುಗಳು ಗುಣಕಾರಿ.

ನೀಲಿ ಪೊರೆಯ ರೋಗಗಳು: ಕಣ್ಣುಗುಡ್ಡೆ ಗೋಡೆಯ 3 ಪದರಗಳಲ್ಲಿ ನಡುವಣ ಪದರವಾದ ನೀಲಿ ಪೊರೆಯಲ್ಲಿ (ಯೂವಿಯ) ಪಾಪೆಪೊರೆ, ಸಿಲಿಯರಿ ಬಾಡಿ, ಕೊರಾಯ್ಡ್ ಇವೆ. ಇವು ಮೂರು ರಚನಾಂಗಗಳಿಗೂ ಹತ್ತುವ ಉರಿತ ರೋಗಗಳ ಕಾರಣವಾದ ಜೀವಾಣುಗಳು ಸಾಮಾನ್ಯವಾಗಿ ರಕ್ತಹರಿವಿನ ಮೂಲಕ ಬರುತ್ತವೆ. ಮೈ ಬೇನೆಗಳಲ್ಲಿ ಹಲವು ಕೂರಾಗೋ (ಅಕ್ಯೂಟ್) ಬೇರೂರಿಯೋ (ಕ್ರಾನಿಕ್) ಇವಕ್ಕೂ ಹರಡಿಕೊಂಡು ಮೈಬೇನೆ ಇಳಿದುಹೋದಾಗ ಇಲ್ಲೂ ವಾಸಿಯಾಗುವುದು.

ವಿಪರೀತ ನೋವು, ಕಣ್ಣಿನ ರಕ್ತಗಟ್ಟು, ಚುಮುಗುಡಿಕೆ, ಮುಂದಣ ಗೂಡಿನಲ್ಲಿ (ಆ್ಯಂಟೀರಿಯರ್ ಚೇಂಬರ್) ರಸದ ಒಸರಿಕೆ, ಬಹುಪಾಲು ನೋಟಕ್ಕೆ ಪೂರಾ ಅಡಚಣೆ ಇವು ತೋರಿ ಇದ್ದಕ್ಕಿದ್ದ ಹಾಗೆ ಕೂರಾದ ಪಾಪೆಪೊರೆಯುರಿತವಾಗಿ (ಐರೈಟಿಸ್)

ಕಾಣಿಸಿಕೊಳ್ಳುತ್ತದೆ. ಸರಿಯಾದ ಚಿಕಿತ್ಸೆಯಿಂದ ಅಷ್ಟೇ ಬೇಗನೆ ವಾಸಿಮಾಡಬಹುದು. ಕೆಲವೇಳೆ ಕೂರಾದ ಇಲ್ಲವೇ ಬೇರೂರಿದ ಕೀಲುರಿತದೊಂದಿಗೆ ಈ ಬೇನೆ ತಲೆದೋರುವುದು.

ಬೇರೂರಿದ ನೀಲಿ ಪೊರೆಯುರಿತದಲ್ಲಿ (ಯೂವಿಯೈಟಿಸ್) ರಕ್ತಗಟ್ಟು, ಚುಮುಗುಡಿಕೆ, ನೋವೂ ಅಷ್ಟಾಗಿರವು. ಮುಂದಣ ಮತ್ತು ಕಾಚೀ (ವಿಟ್ರಿಯಸ್) ಗೂಡುಗಳೊಳಕ್ಕೆ ಒಸರಿದ ರಸದ ಪ್ರಮಾಣಕ್ಕೆ ತಕ್ಕಂತೆ ಕಣ್ಣು ನೋಟವೂ ಮಂದವಾಗುತ್ತದೆ. ಕೊರಾಯ್ಡೈಟಿಸ್ ಒಳಗಿನ ಅಕ್ಷಿಪಟಲಕ್ಕೆ ಹರಡಿ ಆ ಭಾಗದ ನೋಟದಲ್ಲಿ ಕುರುಡು ಚುಕ್ಕೆ ಎಳಿಸುತ್ತದೆ. ಮರುಕಳಿಕೆ ಜ್ವರ, ಹಂದಾಡ ಜ್ವರ (ಅಂಡ್ಯುಲೆಂಟ್ ಫೀವರ್), ಮಾಂಸಂದಬೇನೆ (ಸಾರ್ಕಾಯ್ಡೋಸಿಸ್), ಕ್ಷಯ, ಸಿಫಿಲಿಸ್ ರೋಗಗಳಲ್ಲಿ ಬೇರೂರಿದ ನೀಲಿ ಪೊರೆಯುರಿತ ಏಳುತ್ತದೆ. ಎಷ್ಟೋ ವೇಳೆ ಮೈಯಲ್ಲಿ ಬೇರಾವ ಬೇನೆಗಳೂ ಹೊರಗಾಣದಿದ್ದರೂ ಹೀಗಾಗಬಹುದು. ಮೈಬೇನೆಗೆ ಚಿಕಿತ್ಸೆಯಾದರೆ ಇದೂ ಅಣಗುತ್ತದೆ. ಸ್ಟಿರಾಯ್ಡ್ ಮದ್ದುಗಳಿಂದ ರೋಗ ತಗ್ಗಿ ಚೆನ್ನಾಗಿ ವಾಸಿಯಾಗುತ್ತದೆ.

ಅಕ್ಷಿಪಟಲದ ರೋಗಗಳು: ಅಕ್ಷಿಪಟಲದ ರೋಗಗಳಲ್ಲಿ ಮೈಗೆ ಹತ್ತುವ ಆರ್ಟೀರಿಯೊಸ್ಕ್ಲಿರೋಸಿಸ್, ರಕ್ತ ಒತ್ತಡವೇರಿಕೆ, ಗುಂಡಿಗೆ ರಕ್ತನಾಳಗಳ ಇಲ್ಲವೇ ಮೂತ್ರಪಿಂಡದ ರೋಗಗಳು, ಸಿಹಿಮೂತ್ರ, ಬಸಿರಿನ ರಕ್ತನಂಜು, ಮತ್ತಿತರ ರಕ್ತನಾಳಗಳ ಉರಿತದ ಒಗ್ಗದಿಕೆಯ ಅನುವಳಿಕ ರೋಗಗಳ ಒಂದಡೆಯ ತೋರಿಕೆಯವೇ ಹೆಚ್ಚು.

ಅಕ್ಷಿಪಟಲದ ರೋಗಗಳಲ್ಲಿ ಬಹುಪಾಲು ಅನುವಳಿಕೆಗೆ ಸಂಬಂಧಿಸಿವೆ. ಬಣ್ಣಕದ (ಪಿಗ್ಮೆಂಟರಿ) ಅನುವಳಿಕೆಯಾಗಿರುವ ರೆಟಿನೈಟಿಸ್ ಪಿಗ್ಮೆಂಟೋಸದಲ್ಲಿ ಇರುಳ್ನೋಟವೂ ಅಂಚುಗಳಲ್ಲಿನ ನೋಟವೂ ಬರುಬರುತ್ತ ಮಂದವಾಗುತ್ತವೆ. ಕೆಲವೇಳೆ ಹೀಗಾಗಲು ಎಷ್ಟೊ ವರ್ಷಗಳೇ ಹಿಡಿಯಬಹುದು. ಬಹುಮಟ್ಟಿಗೆ ಇದು ವಂಶಪರಂಪರೆಯಿಂದ ಬರುವುದು. ಈ ಬಗೆಯ ಇನ್ನೂ ಕೆಲವು ರೋಗಗಳಲ್ಲಿ ಅಕ್ಷಿಪಟಲದ ನಡುಭಾಗ ಹಾಳಾಗುವುದರಿಂದ ಆಕಾರಗಳನ್ನು ಗುರುತಿಸುವುದೂ ಓದಿ ಬರೆಯುವುದೂ ಅಸಾಧ್ಯವಾಗುತ್ತದೆ. ಈ ರೋಗಗಳಿಗೆ ಪರಿಹಾರವೇ ಇನ್ನೂ ಗೊತ್ತಿಲ್ಲ.

ಹುಟ್ಟುವ ಎಳೆಗೂಸುಗಳಲ್ಲಿ ಆಮ್ಲಜನಕವನ್ನು ಕೊಡುವುದರಿಂದ ಮಸೂರದ ಹಿಂಭಾಗ ನಾರಿನಂತೆ ಗಡುಸಾಗಿ (ರಿಟ್ರೊಲೆಂಟಲ್ ಫೈಬ್ರೊಪ್ಲೇಸಿಯ) ಕುರುಡಾಗಬಹುದು. ಆಮ್ಲಜನಕ ನೀಡುವ ಪ್ರಮಾಣವನ್ನು ಎಷ್ಟುಬೇಕೋ ಅಷ್ಟಕ್ಕೆ ಇಳಿಸುವುದರಿಂದ ಇದನ್ನು ತಪ್ಪಿಸಬಹುದು.

ಅಕ್ಷಿಪಟಲದ ಹೊರಪದರದ ಉರಿತ ಅದರ ತಳದಲ್ಲಿರುವ ಅಕ್ಷಿಪಟಲಕ್ಕೂ ಹರಡಿಳಿದು ಒಂದಿಷ್ಟು ಹಾಳಾಗಬಹುದು. ಕಲೆಗಟ್ಟದೆಯೇ ಹಾಳಾದರೆ ಅಕ್ಷಿಪಟಲದಲ್ಲಿ ತೂತಾಗಿ ಇಲ್ಲವೇ ಬೆಂದು ಇಡೀ ಅಕ್ಷಿಪಟಲವೋ ಒಂದು ಭಾಗವೋ ಕಿತ್ತು ಕಳಚಿಕೊಂಡು (ಡಿಟ್ಯಾಚ್‍ಮೆಂಟ್) ಸುಕ್ಕುಗಟ್ಟಬಹುದು. ಕಾಚದ್ರವ ಕುಗ್ಗಿ ಎಳೆದಂತಾದರೂ ಅಕ್ಷಿಪಟಲ ಕಿತ್ತು ಕಳಚಿಕೊಳ್ಳಬಹುದು. ಇವೆರಡನ್ನೂ ಈಗ ಶಸ್ತ್ರಕ್ರಿಯೆಯಿಂದಲೂ ಲೇಸರ್‌ನಿಂದಲೂ ಸರಿಪಡಿಸಬಹುದು.

ಮಸೂರದ ರೋಗಗಳು: ರೋಗ ಹತ್ತಿದರೆ ಮಸೂರ ಮಸುಕಾಗಿ ಬಿಡುತ್ತದೆ. ಮಸುಕಿನ ಕಲೆ, ಚುಕ್ಕೆಗಳು ಮಸೂರದ ಅಂಚಿನಲ್ಲಿದ್ದರೆ ನೋಟಕ್ಕೆ ಅಡ್ಡಿಬರವು. ಮಸೂರದ ನಡುವೆ ಇದ್ದರೆ ನೋಟಕ್ಕೆ ತೀರ ಅಡಚಣೆಯಾಗುತ್ತದೆ. ಮನೆಯೊಳಗಿನ ಬೆಳಕಿನಲ್ಲಿ ಅಷ್ಟಿಷ್ಟು ಚೆನ್ನಾಗಿ ಕಂಡರೂ ಹೊರಗಡೆ ಕಣ್ಣು ತೀರ ಮಂಜು ಮಂಜಾಗಬಹುದು.

ಮೋತಿಬಿಂದು (ಕ್ಯಾಟರಾಕ್ಟ್) ಮಸೂರದಲ್ಲಿ ಕಾಣಬರುವ ಕಲೆ ಇಲ್ಲವೇ ದಟ್ಟ ಚುಕ್ಕೆ. ವಯಸ್ಸಾದವರಲ್ಲಿ ಕ್ರಮೇಣ ನೋಟಕ್ಕೆ ಅಡ್ಡಿಯಾಗುವಂತೆ ಪೊರೆ ಬೆಳೆಯುವುದೂ ಹೌದು. ಹಲವು ಕಾರಣಗಳಿಂದ ಮಸೂರಕ್ಕೆ ಪುಷ್ಟಿವಸ್ತುಗಳ ಸರಬರಾಜಿನ ಕೊರೆಯಾಗಿ ಅದರಲ್ಲಿ ಅಸಹಜ ಅಂಗಾಂಶವೇಳುವುದೇ ಮೋತಿಬಿಂದು ಆಗುವ ಕಾರಣ. ಪ್ಯಾರತೈರಾಯ್ಡ್, ಮೇದೋಜೀರಕಾಂಗಗಳ (ಪ್ಯಾಂಕ್ರಿಯಾಸ್) ಬೇನೆಗಳಲ್ಲಿ ಮೋತಿಬಿಂದು ಆಗುವುದು. ಆದರೆ ಮುಪ್ಪಿನಲ್ಲಿ ಆಗುವುದೇ ಸಾಮಾನ್ಯ. ಎಳೆಮಕ್ಕಳಲ್ಲಿ ತಲೆಮಾರುಗಳಲ್ಲೂ ಮೋತಿಬಿಂದು ಆಗಬಹುದು. ಬಸುರಿನ ಮೊದಲ 3 ತಿಂಗಳಲ್ಲಿ ಸೀಮೆ ದಡಾರ (ಜರ್ಮನ್ ಮೀಸಲ್ಸ್) ಎದ್ದಿದ್ದರೂ ಹುಟ್ಟುವ ಕೂಸಿಗೆ ಹೀಗಾಗಬಹುದು.

ಕಣ್ಣಿನ ನೋಟದ ಅರಿವಿಗೆ ಮೂಲಕಾರಣವಾದ, ಕಣ್ಣುಗುಡ್ಡೆಯ ಒಳಪದರವಾಗಿರುವ ಅಕ್ಷಿಪಟಲ ಕಳಚಿಕೊಂಡರೆ (ರೆಟೀನಲ್ ಡಿಟ್ಯಾಚಿಮೆಂಟ್) ಕುರುಡಾಗುತ್ತದೆ. ಇದನ್ನು ಮತ್ತೆ ಸರಿಗೂಡಿಸಲು ಶಸ್ತ್ರಕ್ರಿಯೆಯಿಂದ ಸಾಧ್ಯ. ಇತ್ತೀಚೆಗೆ ಲೇಸರ್ ಕಿರಣಗಳಿಂದ ಸರಿಪಡಿಸುವ ಯತ್ನಗಳೂ ಕೈಗೂಡಿವೆ.

ಒಂದು ಕಣ್ಣುಗುಡ್ಡೆಯಲ್ಲಿ ಏನೋ ಕಾರಣದಿಂದ ಇದಕ್ಕಿದ್ದ ಹಾಗೆ ಒಳಗಡೆ ಒತ್ತಡ ಏರಿ ಕಣ್ಣುಕಾಣದಂತೆ ಆಗುವುದಕ್ಕೆ ಗ್ಲಾಕೋಮ ಎಂದು ಹೆಸರು. ಮದ್ದುಗಳಿಗೆ ಜಗ್ಗದಂತಾದರೆ, ಕಣ್ಣುಗುಡ್ಡೆ ಶಾಶ್ವತವಾಗಿ ಹಾಳಾಗುವುದನ್ನು ತಪ್ಪಿಸಲು ಏರಿದ ಒತ್ತಡವನ್ನು ಶಸ್ತ್ರಕ್ರಿಯೆಯಿಂದ ಇಳಿಸುವುದೊಂದೇ ದಾರಿ.

ಕುರುಡಾಗುವುದನ್ನು ತಪ್ಪಿಸಲು ಕೆಲವು ಶಸ್ತ್ರಕ್ರಿಯೆಗಳನ್ನು ಕೈಗೊಳ್ಳುವುದುಂಟು. ಪಾರದರ್ಶಕ ಪಟಲ ರೋಗಹತ್ತಿ ಹಾಳಾಗುವಂತಿದ್ದರೆ, ಕೆಲವೇಳೆ ಅದು ವಾಸಿಯಾಗುವ ತನಕ ಕಣ್ಣು ತೆರೆಯಲಾಗದಂತೆ ರೆಪ್ಪೆಗಳು ಮುಚ್ಚಿರುವಂತೆ ಹೊಲಿದಿರಬೇಕಾಗುತ್ತದೆ. ಹಾಗೇ ಕಣ್ಣುಳಿಯಲ್ಲಿ ಬೆಳೆದ ಗಂತಿಯಿಂದಲೋ ಏರಿದ ಒತ್ತಡದಿಂದಲೋ ಕಣ್ಣಿನ ಹಿಂದಿರುವ ಮುಖ್ಯ ನರವೇ ಅಪಾಯಕ್ಕೊಳಗಾದಾಗ ಕೂಡಲೇ ಶಸ್ತ್ರಕ್ರಿಯೆಯಿಂದ ಹೋಗಲಾಡಿಸಬೇಕು.

ಕಣ್ಣಿನಲ್ಲಿ ಬೆಳೆವ ಏಡಿಗಂತಿ ತೆರನ ಮಾಂಸಗಂತಿ (ಸಾರ್ಕೋಮ) ಮುಂತಾದುವು ಬೆಳೆದಾಗ ಶಸ್ತ್ರಕ್ರಿಯೆಯಿಂದ ಬುಡಮಟ್ಟ ತೆಗೆದು ಹಾಕಿ ರೋಗಿಯ ಸಾವನ್ನು ತಪ್ಪಿಸುವ ಸಂದರ್ಭಗಳೂ ಇವೆ. ಕೇವಲ ಮದ್ದುಗಳಿಂದ ಕಣ್ಣಲ್ಲಿನ ತಡೆಯಲಾಗದ ನೋವು, ಶೂಲೆಗಳನ್ನು ಕಳೆಯಲೂ ಶಸ್ತ್ರಕ್ರಿಯೆ ಆಗುವುದುಂಟು. ಕಣ್ಣೀರು ಒಂದೇ ಸಮನೆ ಸುರಿಯುತ್ತಿದ್ದಲ್ಲಿ, ಕಣ್ಣೀರು ಗ್ರಂಥಿ, ಚೀಲ, ನಾಳಗಳಲ್ಲಿನ ರೋಗದ ಪರಿಣಾಮವಾಗಿ ಅಡಚಣೆಯಾಗಿರುವುದನ್ನು ಕಳೆಯಲೂ ಸಾಮಾನ್ಯವಾಗಿ ಶಸ್ತ್ರಕ್ರಿಯೆ ಮಾಡಬೇಕಾಗುತ್ತದೆ.

ಕಣ್ಣಿನ ಅಂದ ಹೆಚ್ಚಿಸುವ ಶಸ್ತ್ರಕ್ರಿಯೆಗಳು ಕೆಲವಿವೆ. ಅಂಥವಲ್ಲಿ ಮೆಳ್ಳೆಗಣ್ಣಿನದೂ ಒಂದು. ಕಣ್ಣುಗುಡ್ಡೆ ಹೊರಮೈಮೇಲಿರುವ ಸ್ನಾಯುಗಳಲ್ಲಿ ಕೆಲವನ್ನು ಮೊಟಕುಗೊಳಿಸಿ ಇಲ್ಲವೇ ಉದ್ದ ನೀಟುವುದರಿಂದ ಇವನ್ನು ಸುಲಭವಾಗಿ ಚಿಕ್ಕಂದಿನಲ್ಲೇ ಸರಿಪಡಿಸಬಹುದು. ತೀರ ಏನೂ ಕಾಣದಂತಾಗಿ ವಿಕಾರವಾದ ಕಣ್ಣನ್ನು ಕಿತ್ತು ಹಾಕಿ ನಕಲಿ ಕಣ್ಣನ್ನು ತೋರಿಕೆಗಾಗಿ ಇಡಬಹುದು. ಕಣ್ಣು ರೆಪ್ಪೆಗಳು ಜೋಲು ಬೀಳುವುದು, ಒಳಕ್ಕೋ ಹೊರಕ್ಕೋ ಮಡಿಸಿ ಅಂಟಿರುವುದು ಮುಂತಾದುವನ್ನೂ ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು. ***

**ಕಣ್ಣು:** ಜೀವಿಗಳಲ್ಲಿ ಬೆಳಕನ್ನು ಹಾಗೂ ವಸ್ತುಗಳ ಪ್ರತಿಬಿಂಬವನ್ನು ಗ್ರಹಿಸಲು ಮಾರ್ಪಾಡಾಗಿರುವ ಅಂಗ. ಕಣ್ಣುಗಳಲ್ಲಿ ಎರಡು ವಿಧ– ಮಾರ್ಗದರ್ಶಕ ಅಥವಾ ಪ್ರತಿಬಿಂಬರಹಿತ (ಡೈರೆಕ್ಷನ್ ಅಥವಾ ನಾನ್ ಇಮೇಜ್ ಫಾರ್ಮಿಂಗ್) ಹಾಗೂ ಪ್ರತಿಬಿಂಬಯುಕ್ತ (ಇಮೇಜ್ ಫಾರ್ಮಿಂಗ್). ಸರಳ ಕಣ್ಣಿಗೆ ಅಥವಾ ಕಣ್ಣು ಚುಕ್ಕೆಗೆ (ಐ ಸ್ಪಾಟ್) ಸರಳ ನೇತ್ರ (ಆಸೆಲ್ಲಸ್) ಎಂದು ಹೇಳುತ್ತಾರೆ.

ಮಾರ್ಗದರ್ಶಕ ಕಣ್ಣುಗಳು ಹುಳುಗಳಲ್ಲಿ, ಮೃದ್ವಂಗಿಗಳಲ್ಲಿ, ಕುಟುಕು ಕಣವಂತಗಳಲ್ಲಿ, ಕಂಟಕ ಚರ್ಮಿಗಳಲ್ಲಿ ಹಾಗೂ ಕೆಲವು ಅಕಶೇರುಕಗಳಲ್ಲಿ ಕಂಡು ಬರುತ್ತವೆ. ಇಂತಹ ಕಣ್ಣುಗಳು ಕೆಲವು ಬೆಳಕಿನ ಸಂವೇದಕ ಕೋಶಗಳನ್ನೂ ವರ್ಣ ಜೀವಕೋಶಗಳನ್ನೂ ಮತ್ತು ಒಂದು ಭಾಗಮಾತ್ರವಾದ ಕವಚವನ್ನು ಹೊಂದಿರುತ್ತವೆ. ಕೆಲವು ಪ್ರಾಣಿಗಳಲ್ಲಿ ಈ ಕವಚವು ತಟ್ಟೆಯಾಕಾರದಲ್ಲಿದ್ದು ಜ್ಞಾನವಾಹಕಗಳಿಂದ ಸುತ್ತಲ್ಪಟ್ಟಿರುತ್ತದೆ. ದ್ವಿಪಾರ್ಶ್ವ ಸೌಷ್ಠವವಿರುವ ಪ್ರಾಣಿಗಳಲ್ಲಿ ಕಣ್ಣುಗಳು ಸಾಧಾರಣವಾಗಿ ಜೊತೆಯಾಗಿದ್ದು ಬೆಳಕಿನ ದಿಕ್ಕನ್ನು ನೇರವಾಗಿ ಗುರುತಿಸಲು ಸಹಾಯ ಮಾಡುತ್ತವೆ.

ಪ್ರತಿಬಿಂಬಯುಕ್ತ ಕಣ್ಣುಗಳು ಕೆಲವು ಮೃದ್ವಂಗಿಗಳಲ್ಲಿ (ಶಿರಪಾದಿಗಳಲ್ಲಿ ಮತ್ತು ಇಚ್ಚಿಪ್ಪುಗಳಲ್ಲಿ), ಬಹಳಷ್ಟು ಸಂಧಿಪದಿಗಳಲ್ಲಿ ಹಾಗೂ ಎಲ್ಲ ಕಶೇರುಕಗಳಲ್ಲಿ ಕಂಡುಬರುತ್ತವೆ. ಇದರಲ್ಲಿ ಕೂಡಾ ಎರಡು ವಿಧ–ಸರಳ ಕಣ್ಣುಗಳು ಹಾಗೂ ಸಂಯುಕ್ತಾಕ್ಷಿಗಳು. ಸರಳ ಕಣ್ಣುಗಳಲ್ಲಿ ಮಸೂರ ಮತ್ತು ಅಕ್ಷಿಪಟ ಎಂಬ ಮುಖ್ಯ ಭಾಗಗಳಿದ್ದು ಮಸೂರವು ಅದಕ್ಕೆ ಢಿಕ್ಕಿ ಹೊಡೆಯುವ ಬೆಳಕಿನ ಕಿರಣಗಳನ್ನು ಅಕ್ಷಿಪಟದ ಮೇಲೆ ಪ್ರತಿಬಿಂಬಿಸುವಂತೆ ಮಾಡುತ್ತದೆ. ಅಕ್ಷಿಪಟದಲ್ಲಿರುವ ಬೆಳಕಿನ ಸಂವೇದಕ ಕೋಶಗಳು ಬದಲಾವಣೆ ಹೊಂದುವ ಬೆಳಕಿನ ತೀವ್ರತೆಯನ್ನು ವಸ್ತುವಿನಿಂದ ಹೊರಡುವ ಬೆಳಕಿನ ತೀವ್ರತೆಗನುಸಾರವಾಗಿ ಸಂದೇಶವನ್ನು ಮಿದುಳಿಗೆ ಕಳಿಸುತ್ತವೆ. ಕೆಲವು ಪ್ರಾಣಿಗಳಲ್ಲಿ ಅಕ್ಷಿಪಟದ ಕೋಶಗಳು ಬೆಳಕಿನ ತೀವ್ರತೆಯಲ್ಲಿ ಹೆಚ್ಚು ಕಡಿಮೆಯಾದಾಗ ಮಾತ್ರ ಉದ್ರೇಕಗೊಂಡು ಕ್ರಿಯಾಶೀಲವಾಗುವಂತೆ ವ್ಯವಸ್ಥಿತವಾಗಿರುತ್ತವೆ. ಕಶೇರುಕಗಳಲ್ಲಿ ಕಂಡು ಬರುವ ಪ್ರೌಢ ಕಣ್ಣುಗಳು ಬಣ್ಣಗಳನ್ನು ಗುರುತಿಸುವ ಹಾಗೂ ವಸ್ತುಗಳು ಬೇರೆ ಬೇರೆ ದೂರದಲ್ಲಿದ್ದಾಗ ಅವುಗಳನ್ನು ಗುರುತಿಸುವ ಶಕ್ತಿಯನ್ನು ಹೊಂದಿರುತ್ತವೆ ಮತ್ತು ಬೆಳಕಿನ ಕಿರಣಗಳನ್ನು ಗುರುತಿಸುವ ಅಥವಾ ಬೆಳಕಿನ ತೀವ್ರತೆಯನ್ನು ಬದಲಾವಣೆಗೊಳಿಸುವಂತಹ ಅಕ್ಷಿಪಟವನ್ನೂ ಹೊಂದಿರುತ್ತವೆ.

ಸಂಯುಕ್ತಾಕ್ಷಿಗಳು:– ಸಂಧಿಪದಿಗಳಲ್ಲಿದ್ದು ಕೀಟಗಳಲ್ಲಿ ಮತ್ತು ಕಠಿಣ ಚರ್ಮಿಗಳಲ್ಲಿ ತೀವ್ರ ಬೆಳವಣಿಗೆ ಹೊಂದಿರುತ್ತವೆ. ಒಂದೊಂದು ಪ್ರಾಣಿಯಲ್ಲಿಯೂ ಈ ಸಂಯುಕ್ತಾಕ್ಷಿಗಳು ಜೊತೆಯಾಗಿದ್ದು ಒಂದೊಂದು ಕಣ್ಣಿನಲ್ಲೂ ಅನೇಕ ಸರಳ ನೇತ್ರಗಳಿವೆ. ಈ ಸರಳ ನೇತ್ರಗಳಿಗೆ ಅಮ್ಮಟೀಡಿಯಂ ಎಂದು ಹೆಸರು. ಕೆಲವು ಪ್ರಾಣಿಗಳಲ್ಲಿ ಕೆಲವೇ ಸಂಖ್ಯೆಯಲ್ಲಿ ಈ ಅಮಟೀಡಿಯಂಗಳಿದ್ದರೆ ಇನ್ನು ಕೆಲವು ಪ್ರಾಣಿಗಳಲ್ಲಿ 3000 ಕ್ಕೂ ಮಿಕ್ಕಿ ಇರುತ್ತವೆ. ಅಮಟೀಡಿಯಂಗಳು ಒಂದರ ಪಕ್ಕದಲ್ಲೊಂದರಂತೆ ವ್ಯವಸ್ಥಿತವಾಗಿರುತ್ತವೆ. ಎರಡು ಅಮಟೀಡಿಯಂಗಳ ಮಧ್ಯೆ ಕಪ್ಪು ವರ್ಣಕಗಳು ಇರುತ್ತವೆ. ಒಂದೊಂದು ಅಮ್ಮಟೀಡಿಯಂ

ಕೂಡಾ ಒಂದೊಂದು ಪ್ರತ್ಯೇಕ ಕಣ್ಣಿನಂತೆ ಕೆಲಸ ಮಾಡಬಲ್ಲದು. ಅಮ್ಮಟೀಡಿಯಂನ ಮೇಲ್ಭಾಗದಲ್ಲಿ (1) ಪಾರದರ್ಶಕ ಚೌಕಗಳಂತಿರುವ, ಎರಡು ಪದರಗಳುಳ್ಳ ಜೀವಕೋಶಗಳಿಂದ ಕೂಡಿರುವ ಕಾರ್ನಿಜನ್ ಪದರದಿಂದ ಉದ್ಭವಿಸುವ ಕಾರ್ನಿಯಲ್ ಮಸೂರ ಮತ್ತು (2) ವಕ್ರೀಕರಣ ಶಕ್ತಿಯುಳ್ಳ ನಾಲ್ಕು ಜೀವಕೋಶಗಳ ಗುಂಪಿನಿಂದಾದ ಹರಳು ಜೀವಕೋಶ ಅಥವಾ ವಿಟ್ರೆಲ್ಲೆ ಇರುತ್ತವೆ. ಅಮ್ಮಟೀಡಿಯಂನ ಬುಡದಲ್ಲಿ 4–8 ರೆಟಿನ್ಯುಲಾ ಎಂಬ ಉದ್ದವಾದ ಜೀವಕೋಶಗಳ ಗುಂಪಿದೆ. ಈ ಜೀವಕೋಶಗಳ ಗುಂಪು ವಿಟ್ರೆಲ್ಲೆಯೊಡನೆ ಅಂಟಿಕೊಂಡಿರುತ್ತದೆ. ರೆಟಿನ್ಯೂಲಾ ಜೀವಕೋಶಗಳ ಒಳಭಾಗವು ರ್ಯಾಬ್ಡೊಮ್ ಎಂಬ ಕೇಂದ್ರ ವಕ್ರೀಕರಣ ಸರಳನ್ನು ಸ್ರವಿಸುತ್ತದೆ. ರೆಟಿನ್ಯುಲಾ ಜೀವಕೋಶಗಳು ಕೆಳಗಡೆ ನರತಂತುಗಳಾಗಿ ಮುಂದುವರಿದು ನಯನ ನರಮುಡಿಯನ್ನು ಸೇರುತ್ತವೆ. ಅಮಟೀಡಿಯಂ ಅನ್ನು ವರ್ಣಜೀವಕೋಶಗಳು ಸಂಪೂರ್ಣವಾಗಿ ಆವರಿಸಿಕೊಂಡಿರುತ್ತವೆ. ಇದರ ಕಾರ್ನಿಯಲ್ ಮಸೂರ, ವಿಟ್ರೆಲ್ಲೆ ಮತ್ತು ಹರಳು ಶಂಕುಗಳು ಸೇರಿ ಮನುಷ್ಯನ ಕಣ್ಣಿನ ಮಸೂರ, ಕಾಚದ್ರವಗಳಿಗೆ ಅನುರೂಪವಾಗಿ ದೃಷ್ಟಿ ಸಾಧನದ ಸಲಕರಣೆಯಾಗುತ್ತದೆ. ರೆಟಿನ್ಯೂಲಾ ಭಾಗ ನಮ್ಮ ಕಣ್ಣಿನ ಅಕ್ಷಿಪಟದ ಸರಳು (ರಾಡ್) ಮತ್ತು ಶಂಕು (ಕೋನ್) ಗಳನ್ನು ಹೋಲುವಂತಿದ್ದು ಗ್ರಾಹಕ ಭಾಗವಾಗುತ್ತದೆ. ಪ್ರತಿಯೊಂದು ಅಮಟೀಡಿಯಂ ಸುತ್ತ ವರ್ಣಕಗಳು ಇರುವುದರಿಂದ ಒಂದೊಂದು ಅಮಟೀಡಿಯಂ ಕೂಡಾ ಪ್ರತ್ಯೇಕವಾಗಿ ಬೆಳಕಿನ ಕಿರಣಗಳನ್ನು ಗ್ರಹಿಸಬಲ್ಲದು. ಒಂದೊಂದು ಅಮಟೀಡಿಯಂ ವಸ್ತುವಿನ ಒಂದೊಂದು ಭಾಗವನ್ನೂ ಗ್ರಹಿಸಿ ಪ್ರತಿಬಿಂಬಿಸುತ್ತದೆ. ಎಲ್ಲ ಭಾಗಗಳನ್ನು ಸೇರಿಸಿ ಒಂದು ಸಂಪೂರ್ಣ ಚಿತ್ರವನ್ನು ಮೆದುಳು ಗ್ರಹಿಸುತ್ತದೆ. ಇದನ್ನು ಶಬಲ (ಮೊಸಾಯಿಕ್) ಚಿತ್ರವೆನ್ನುತ್ತಾರೆ. ವಿವಿಧ ಪ್ರಾಣಿಗಳಲ್ಲಿ ಹರಳು ಶಂಕುವಿನ ಆಕೃತಿ ಮತ್ತು ರೆಟಿನ್ಯುಲಾದ ಉದ್ದಗಳು ಆಯಾ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಬದಲಾವಣೆ ಹೊಂದಿರುತ್ತವೆಯೇ ಹೊರತು ಅಮಟೀಡಿಯಂನ ಭಾಗಗಳು ಬೇರೆಯಿರುವುದಿಲ್ಲ. ಕೆಲವು ಪ್ರಾಣಿಗಳಲ್ಲಿ ಒಂದು ಅಮಟೀಡಿಯಂನ ಕಾರ್ನಿಯಲ್ ಮಸೂರದಿಂದ ಹಾಯ್ದ ಬೆಳಕು ಪಕ್ಕದ ಇನ್ನೊಂದು ಅಮಟೀಡಿಯಂನ ಮೇಲೆ ಪ್ರತಿಬಿಂಬಿತವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಆ ಪ್ರಾಣಿಗಳಲ್ಲಿ ಕಣ್ಣುಗಳು ಒಂದೇ ವಸ್ತುವನ್ನು ಅನೇಕ ಸಂಖ್ಯೆಯಲ್ಲಿ ಪ್ರತಿಬಿಂಬಿಸುತ್ತವೆ. ಅಲ್ಲದೆ ಮೆದುಳಿನಲ್ಲಿ ಅವು ಸಂಕ್ಷೇಪಿಸಲ್ಪಟ್ಟು ಗುರುತಿಸಲ್ಪಡುತ್ತವೆ.

ಕಶೇರುಕಗಳ ಕಣ್ಣುಗಳು: ವಸ್ತವನ್ನು ಗುರುತಿಸುವುದಕ್ಕೆ ಮಾರ್ಪಾಟಾಗಿರುತ್ತವೆ. ಕಶೇರುಕಗಳಲ್ಲಿ ಸಾಮಾನ್ಯವಾಗಿ ನೇತ್ರದ್ವಯಗಳು ಇರುತ್ತವೆ. ಈ ನೇತ್ರಗಳ ಹೊರತಾಗಿ ಪರಿಧಿಕಣ್ಣು ಮತ್ತು ನೆತ್ತಿಕಣ್ಣುಗಳೂ ಕಶೇರುಕಗಳ ವಿಕಾಸದ ಹಾದಿಯಲ್ಲಿ ಕಂಡು ಬರುತ್ತವೆ. ಬೇರೆ ಬೇರೆ ಪ್ರಾಣಿಗಳಲ್ಲಿ ಕಣ್ಣುಗಳ ರಚನೆಯು ಒಂದೇ ಆಗಿದ್ದು ಕಣ್ಣು ರೆಪ್ಪೆ, ಗ್ರಂಥಿಗಳು ಮತ್ತು ಕಣ್ಣುಗಳ ಆವಾಸ ಸ್ಥಾನಗಳಲ್ಲಿ ಮಾತ್ರ ಬೇರೆ ಬೇರೆಯಾಗಿರಬಹುದು.

ಕಶೇರುಕಗಳ ಕಣ್ಣಿನ ವಿಕಾಸದ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆತಿಲ್ಲವಾದರೂ ನೆತ್ತಿಕಣ್ಣುಗಳು ಮತ್ತು ಪರಿಧಿ ಕಣ್ಣುಗಳು ಅಪೂರ್ಣಾವಸ್ಥೆಯಲ್ಲಿರುವ ಕಣ್ಣುಗಳು. ಕಶೇರುಕಗಳ ಕಣ್ಣುಗಳು ಒಂದರ ಪಕ್ಕದಲ್ಲೊಂದರಂತೆ ಇರುವ, ಬೆಳಕಿನ ಪ್ರವೇಶಕ್ಕೆಡೆಕೊಡುವಂತಹ ಸ್ಥಳಗಳಿಂದ ಬೆಳೆದು ಬಂದು ಮುಂದೆ ಆಯಾ ಪ್ರಾಣಿಗಳ ಪರಿಸ್ಥಿತಿಗೆ ಹೊಂದಿಕೊಂಡು ಮಾರ್ಪಾಡು ಹೊಂದಿರಬೇಕು.

ಕಣ್ಣು ಸುಮಾರಾಗಿ ಗೋಲಾಕಾರವಾಗಿದ್ದು ಹಿಂದೆ ಮತ್ತು ಪಕ್ಕದಲ್ಲಿ ಅಪಾರದರ್ಶಕವಾಗಿದ್ದು ಮುಂಭಾಗದಲ್ಲಿ ಪಾರದರ್ಶಕವಾಗಿರುತ್ತದೆ. ಈ ಪಾರದರ್ಶಕ ಭಾಗಗಳಿಂದ ಬೆಳಕಿನ ಕಿರಣಗಳು ಕಣ್ಣಿನ ಮೂಲಕ ಹಾಯ್ದು ಹೋಗುತ್ತವೆ. ಇದಲ್ಲದೆ ಕಣ್ಣಿನಲ್ಲಿರುವ ಇತರ ರಚನೆಗಳು ಇವು – (1) ಮಧ್ಯದಲ್ಲಿರುವ ರಂಧ್ರವನ್ನು ಹೊಂದಿಸಿಕೊಳ್ಳಲು ಸಾಧ್ಯವಾಗುವಂತಿರುವ ಒಂದು ಪಾಪೆಪೊರೆ (ಐರಿಸ್) – ಇದರಿಂದ ಕಣ್ಣಿನೊಳಗೆ ಹೋಗುವ ಬೆಳಕಿನ ಮೊತ್ತವನ್ನು ನಿಯಂತ್ರಿಸಬಹುದು, (2) ಬೆಳಕಿನ ಕಿರಣಗಳನ್ನು ಒಂದೆಡೆ ಕೇಂದ್ರೀಕರಿಸುವ ಶಕ್ತಿಯುಳ್ಳ ಒಂದು ಮಸೂರ, (3) ಗೋಲದ ಆಕಾರವನ್ನು ಸ್ಥಿರಪಡಿಸುವ ಮತ್ತು ಗೋಲದ ಮಧ್ಯೆ ಇರುವ ಸ್ಥಳವನ್ನು ತುಂಬಿಕೊಂಡಿರುವ ಪಾರದರ್ಶಕ ಕಾಚದ್ರವ ಮತ್ತು 4) ಬೆಳಕಿನ ಸಂವೇದಕ ಶಕ್ತಿಯಿರುವ ಅಂಗಾಂಶ, ಅಕ್ಷಿಪಟ – ಈ ಅಕ್ಷಿಪಟದ ಮೇಲೆ ಬೆಳಕಿನ ಕಿರಣಗಳು ಕೇಂದ್ರೀಕೃತಗೊಳ್ಳುತ್ತವೆ.

ಮನುಷ್ಯನ ಕಣ್ಣು ಮತ್ತು ದೃಷ್ಟಿ : ಅಗಲವಾದ ಮುಖದ ಮಧ್ಯಭಾಗಕ್ಕಿಂತ ಸ್ವಲ್ಪ ಮೇಲ್ಭಾಗದಲ್ಲಿರುವ ಜೊತೆ ಕಣ್ಣುಗಳು ಮನುಷ್ಯನ ಮುಖ್ಯ ಜ್ಞಾನಾಂಗಗಳಲ್ಲಿ (ಪಂಚೇಂದ್ರಿಯಗಳಲ್ಲಿ) ಒಂದು. ಇತರ ಪ್ರಾಣಿಗಳಂತೆ ದೃಷ್ಟಿ ಮತ್ತು ಬೆಳಕನ್ನು ಗುರುತಿಸುವುದಕ್ಕೆ ಉಪಯುಕ್ತವಾಗಿದೆ. ಕಣ್ಣುಗುಡ್ಡೆಯು ಗೋಲಾಕಾರವಾಗಿದ್ದು ಬೆಳಕಿನ ಸಂವೇದನೆಗೆ ಹಾಗೂ ದೃಷ್ಟಿಗೆ ಸಂಬಂಧಿಸಿದ ಜ್ಞಾನೇಂದ್ರಿಯ ಮತ್ತು ಅದರ ಸಹಾಯಕ ಅಂಗಗಳನ್ನು ಹೊಂದಿರುತ್ತದೆ. ಎಲ್ಲ ಕಶೇರುಕಗಳಲ್ಲಿ ಇದು ಸಾಮಾನ್ಯ ಕ್ಯಾಮರಾದಂತೆ ರಚಿಸಲ್ಪಟ್ಟಿರುತ್ತದೆ. ಅಪಾರದರ್ಶಕ ಗೋಡೆಗಳನ್ನೂ ಹಾಗೂ ಮುಂಭಾಗದ ಪಾರದರ್ಶಕ ಪಟಲ (ಕಾರ್ನಿಯ)ವನ್ನೂ ಹೊಂದಿರುತ್ತದೆ. ಕಣ್ಣಿನ ಒಳಭಾಗದಲ್ಲಿ ಒಂದು ರೀತಿಯ ಪಾರದರ್ಶಕ ವಸ್ತು ತುಂಬಿರುತ್ತದೆ. ಪಾರದರ್ಶಕ ಪಟಲದ ಹಿಂಭಾಗದಲ್ಲಿ ಒಂದು ಕೋಣೆಯಿದ್ದು, ಈ ಕೋಣೆಯ ಹಿಂಭಾಗದ ಕೋಣೆಯಿಂದ ವರ್ಣಜೀವಕೋಶಗಳ ಪೊರೆಯಿಂದಾಗಿ ಬೇರ್ಪಡಿಸಲ್ಪಟ್ಟಿದೆ. ಈ ಪೊರೆಗೆ ಕನಿನಿಕಾ ಪೊರೆ ಅಥವಾ ಪಾಪೆ ಪೊರೆ ಎಂದು ಹೆಸರು. ಈ ಕೋಣೆ ಒಂದು ರೀತಿಯ ನೀರಿನಂತಹ ಜಲರಸದಿಂದ (ನೇತ್ರದ್ರವ–ಏಕ್ವಿಯಸ್ ಹ್ಯೂಮರ್) ತುಂಬಿರುತ್ತದೆ. ಈ ಭಾಗಗಳ ಹಿಂದೆ ವಿಟ್ರಿಯಸ್ ಕೋಣೆ ಇದ್ದು ಸಾಂದ್ರವಾಗಿರುವ ಕಾಚದ್ರವ (ವಿಟ್ರಿಯಸ್ ಹ್ಯೂಮರ್) ದಿಂದ ತುಂಬಿಕೊಂಡಿರುತ್ತದೆ.

ಪಾಪೆಪೊರೆಯ ಮಧ್ಯದಲ್ಲಿ ಒಂದು ವೃತ್ತಾಕಾರದ ದ್ವಾರವಿದ್ದು ಅದನ್ನು ಕಣ್ಣುಪಾಪೆ (ಪ್ಯೂಪಿಲ್) ಅಥವಾ ಕನಿನಿಕೆ ಎನ್ನುತ್ತಾರೆ. ಈ ಕನಿನಿಕೆಯ ಹಿಂದೆ ಹರಳಿನಾಕೃತಿಯ ಪಾರದರ್ಶಕ, ಸ್ಥಿತಿಸ್ಥಾಪಕತ್ವವುಳ್ಳ ಪೀನ ಮಸೂರವಿದ್ದು ಇದು ನವುರಾದ ಮೀನಖಂಡದ ದಾರಗಳಿಂದಾದ ಆಲಂಬಕ ರಜ್ಜು (ಸಸ್ಪೆನ್ಸರಿ ಲಿಗಮೆಂಟ್) ಅಥವಾ ಜಿನ್‌ನ ಜೋನ್ಯೂಲ್ ದಿಂದ ಬಂಧಿಸಲ್ಪಟ್ಟಿದೆ. ಈ ಜಿನ್‌ನ ಜೋನ್ಯುಲಾವು ಕೊರಾಯ್ಡ್‌ನ ಸ್ಪಂದನ ಲೋಮಾಂಗ (ಸಿಲಿಯರಿ ಬಾಡಿ)ಕ್ಕೆ ಅಂಟಿಕೊಂಡಿರುತ್ತದೆ. ಈ ಸ್ಪಂದನ ಲೋಮಾಂಗವು ವಿಕಸನಗೊಂಡಾಗ ಮಸೂರವು ಚಪ್ಪಟೆಯಾಗುತ್ತದೆ. ಸ್ಪಂದನ ಲೋಮಾಂಗವು ಆಕುಂಚನಗೊಂಡಾಗ ಮಸೂರವು ಹೆಚ್ಚು ಬಾಗಿಕೊಳ್ಳುತ್ತದೆ. ಈ ರೀತಿ ಮಸೂರದ ಆಕಾರವು ಬದಲಾವಣೆ ಹೊಂದುವುದರಿಂದ ಕಣ್ಣುಗಳು ವಸ್ತುವಿನ ಪ್ರತಿಬಿಂಬವನ್ನು ಬೇರೆ ಬೇರೆ ದೂರಗಳಲ್ಲಿ ಕೇಂದ್ರೀಕೃತಗೊಳಿಸಬಹುದು.

ಮಸೂರದ ಒಳಭಾಗವು ಹೊರಮೈಗಿಂತ ಗಟ್ಟಿಯಾಗಿರುತ್ತದೆ. ಮೆದು ಹೊರಮೈಯಿರುವುದರಿಂದ ಮಸೂರದ ಆಕಾರವು ಕಡಿಮೆ ಪ್ರಮಾಣದ ಶಕ್ತಿಯಿಂದ ಬದಲಾವಣೆ ಹೊಂದಲು ಸಾಧ್ಯ. ಮಸೂರದ ಎದುರು ಭಾಗವು ಹಿಂಭಾಗಕ್ಕಿಂತ ಹೆಚ್ಚು ಬಾಗಿರುತ್ತದೆ. ಮಸೂರವು ವಯಸ್ಸಾದಂತೆಲ್ಲ ಹೆಚ್ಚು ಗಟ್ಟಿಯಾಗುವುದಲ್ಲದೆ ಅದರ ಪಾರದರ್ಶಿತ್ವವೂ ಕಡಿಮೆಯಾಗುತ್ತಾ ಹೋಗುತ್ತದೆ.

ಹೊರಗಡೆಯಿಂದ ಬರುವ ಬೆಳಕಿನ ಕಿರಣಗಳು ಮೊದಲು ಪಾರದರ್ಶಕ ಪಟಲದಲ್ಲಿ ಸಂಗ್ರಹಿಸಲ್ಪಟ್ಟು ವಕ್ರೀಕೃತಗೊಳ್ಳುತ್ತವೆ. ಅನಂತರ ಮಸೂರದ ಮೇಲೆ ಬಿದ್ದು ಇನ್ನಷ್ಟು ಬಾಗಿಸಲ್ಪಡುತ್ತವೆ. ಭೂಚರಪ್ರಾಣಿಗಳಲ್ಲಿ ಪಾರದರ್ಶಕ ಪಟಲದಲ್ಲಿ ಬೆಳಕಿನ ಕಿರಣಗಳು ಹೆಚ್ಚು ವಕ್ರೀಕೃತಗೊಂಡರೆ ಜಲಚರಗಳಲ್ಲಿ ಮಸೂರದಿಂದ ವಕ್ರೀಕೃತವಾಗುತ್ತವೆ. ಮಸೂರವು ವಕ್ರೀಕರಣಗೊಂಡ ಬೆಳಕಿನ ಕಿರಣಗಳನ್ನು ಅಕ್ಷಿಪಟದ ಮೇಲೆ ಕೇಂದ್ರೀಕೃತಗೊಳಿಸಿ ವಸ್ತುವನ್ನು ತಲೆಕೆಳಕಾಗಿ ಹಾಗೂ ಅತಿ ಚಿಕ್ಕದಾಗಿ ಪ್ರತಿಬಿಂಬಿಸುವಂತೆ ಮಾಡುತ್ತದೆ.

ಕಣ್ಣುಗುಡ್ಡೆಯ ಹೊರಕವಚವು ಮೂರು ಹೊದಿಕೆಗಳಿಂದ ಮಾಡಲ್ಪಟ್ಟಿದೆ– ತಂತುಗೌಸು, ಉವಿಯಲ್ ಗೌಸು ಹಾಗೂ ಅಕ್ಷಿಪಟ (ರೆಟಿನಾ). ಹೊರಭಾಗದ ತಂತುಗೌಸು ಗಟ್ಟಿಯಾಗಿದ್ದು ಅದರ ಹಿಂದಿನ ವಿಸ್ತಾರವಾದ ಅಪಾರದರ್ಶಕ ಭಾಗಕ್ಕೆ ಕಣ್ಣು ಗುಡ್ಡೆಯ ಬಿಳಿಪೊರೆ ಅಥವಾ ಸ್ಕ್ಲಿರಾ ಎಂದೂ ಮುಂಭಾಗದ ಹೆಚ್ಚು ಬಾಗಿರುವ ಭಾಗಕ್ಕೆ ಪಾರದರ್ಶಕ ಪಟಲ ಎಂದೂ ಹೆಸರು. ಸ್ಕ್ಲಿರಾವು ಕೊಲ್ಲಾಜಿನ್ ಎಂಬ ಪ್ರೊಟೀನಿನಿಂದ ಕೂಡಿದ್ದು ನಯನಾಂತರಿಕ ಹಾಗೂ ಬಾಹ್ಯ ಘರ್ಷಣೆಯನ್ನು ತಡೆಯಲು ಸಹಾಯಕವಾಗುತ್ತದೆ. ಕಣ್ಣುಗುಡ್ಡೆಯ ಮುಂಭಾಗದ ಕೋಣೆಯ ಹತ್ತಿರವಿರುವ ಪ್ರೊಟೀನು ಶ್ಲೀಮನ ಕಾಲುವೆ ಯನ್ನು ಸುತ್ತಿಕೊಂಡಿರುತ್ತದೆ. ಈ ಕಾಲುವೆಯ ಮೂಲಕ ನೇತ್ರರಸವು ಮುಂಭಾಗದ ಕೋಣೆಯಿಂದ ಹರಿದುಹೋಗುತ್ತದೆ. ಪಾರದರ್ಶಕ ಪಟಲ ಮತ್ತು ಸ್ಕ್ಲೀರಾದ ಮಧ್ಯೆಯಿರುವ ಅರ್ಧಪಾರದರ್ಶಕ ಭಾಗ–ಲಿಂಬಸ್ ಕಂಜಂಕ್ಟಿವ ಮತ್ತು ಕಣ್ಣು ರೆಪ್ಪೆಯ ಲೋಳೆಯಿಂದ ಕೂಡಿದ ಒಳಚರ್ಮವನ್ನೂ ಒಂದುಗೂಡಿಸಿ ಸ್ಕ್ಲೀರಾದ ಮುಂಭಾಗದಲ್ಲಿರುತ್ತದೆ. ಪಾರದರ್ಶಕ ಪಟಲವು ಐದು ಪದರಗಳಿಂದ ಕೂಡಿದ್ದು ತಿರುಳು ಅಥವಾ ಸ್ಟ್ರೋಮಾ ಪ್ರಾಪ್ರಿಯವು ಎಲ್ಲಕ್ಕಿಂತ ದಪ್ಪನಾಗಿರುತ್ತದೆ. ಸ್ಟ್ರೋಮ ಪ್ರಾಪ್ರಿಯದ ದಾರಗಳು ಸಮಾನಾಂತರದಲ್ಲಿ ಅಳವಡಿಸಲ್ಪಟ್ಟಿರುವುದರಿಂದ ಪಾರದರ್ಶಕ ಪಟಲದ ಪಾರದರ್ಶಿಕತ್ವವು ಒಂದೇ ರೀತಿಯಲ್ಲಿರುತ್ತದೆ. ತಂತುಗೌಸಿನ ಕೆಳಗಡೆಯ ಪದರವು ಉವಿಯಲ್ ಗೌಸು. ಇದರ ತೆಳುವಾದ ಮತ್ತು ದೊಡ್ಡ ಭಾಗ ಕಣ್ಣುಗುಡ್ಡೆಯ ಪೊರೆ (ಕೋರಾಯ್ಡ್). ಅಕ್ಷಿಪಟದ ಶಂಕು ಮತ್ತು ಹರಳುಗಳಿಗೆ ಪುಷ್ಟಿಕರವಾದ ರಕ್ತವನ್ನು ವಿತರಣೆ ಮಾಡಲು ಇದು ಸಹಾಯಕವಾಗುವುದಲ್ಲದೆ ಕಣ್ಣು ಗುಡ್ಡೆಯ ಒಳಭಾಗಕ್ಕೆ ಕಪ್ಪು ಹೊದಿಕೆಯನ್ನುಂಟು ಮಾಡುತ್ತದೆ. ಕಣ್ಣು ಗುಡ್ಡೆಯ ಪೊರೆಯು ಸ್ಕ್ಲೀರಾದೊಂದಿಗೆ ತುಂಬ ನವಿರಾದ ಎಳೆಗಳಿಂದ ಅಂಟಿಕೊಂಡಿರುವುದರಿಂದ ಪೊರೆಯು ಸುಲಭವಾಗಿ ಸ್ಕ್ಲೀರಾದಿಂದ ಬೇರ್ಪಡಬಹುದು. ಕಣ್ಣು ಗುಡ್ಡೆಯ ಪೊರೆಯ ಮುಂಭಾಗದಲ್ಲಿ ಸ್ಪಂದನ ಲೋಮಾಂಗವು ಸೂಕ್ಷ್ಮ

ವೃತ್ತಾಕಾರವಾಗಿ ಅಳವಡಿಸಲ್ಪಟ್ಟ ದಿಂಡುಗಳಂತೆ ಮುಂಚಾಚಿಕೊಂಡು ಮೃದು ಮಾಂಸದ ಎಳೆಗಳನ್ನು ಮತ್ತು ರಕ್ತನಾಳಗಳನ್ನೂ ಹೊಂದಿರುತ್ತದೆ. ಸ್ಪಂದನ ಲೋಮಾಂಗದ ಒಳಭಾಗದಲ್ಲಿ ಎರಡು ವರ್ಣಜೀವಕೋಶಗಳ ಪದರಗಳಿದ್ದು ಅವು ನೇತ್ರದ್ರವವನ್ನು ಸ್ರವಿಸುತ್ತವೆ. ಸ್ಪಂದನ ಲೋಮವುಳ್ಳ ಮಾಂಸಖಂಡಗಳು ಮಸೂರದ ಅತಿಜ್ಞಾನವಾಹಿ ಅಸ್ಥಿರಜ್ಜುಗಳನ್ನು ವಿಕಸಿತಗೊಳಿಸಲು ಸಹಕಾರಿಯಾಗಿವೆ. ಮಸೂರದ ವಕ್ರೀಕರಣ ಶಕ್ತಿ ಹೆಚ್ಚಾಗುವುದಲ್ಲದೆ ಶ್ಲೀಂನ ಕಾಲುವೆಯ ದ್ವಾರದ ಗಾತ್ರವನ್ನು ಹೆಚ್ಚು ಕಡಿಮೆ ಮಾಡಿ ನೇತ್ರದ್ರವವು ಮುಂಭಾಗದ ಕೋಣೆಯಿಂದ ಹೊರಹೋಗುವಂತೆ ಮಾಡುತ್ತದೆ.

ಪಾಪೆಪೊರೆಯು ಉವಿಯಲ್ ಗೌಸಿನ ಎದುರು ಭಾಗದಲ್ಲಿದ್ದು ವರ್ಣಯುಕ್ತ ಪಾಪೆಯನ್ನು ಹೊಂದಿರುತ್ತದೆ. ಈ ಪಾಪೆಯ ಕುಗ್ಗುವಿಕೆಯಿಂದ ಕಣ್ಣಿನೊಳಕ್ಕೆ ಹೋಗುವ ಬೆಳಕಿನ ಮೊತ್ತ ನಿಯಂತ್ರಿಸಲ್ಪಡುತ್ತದೆ.




ಕಣ್ಣುಗುಡ್ಡೆಯ ನೀಳ ಛೇದ ನೋಟ

ಅಕ್ಷಿಪಟವು ಕಣ್ಣುಗುಡ್ಡೆಯ ಸಂಪೂರ್ಣ ಒಳಗಡೆಯ ಪದರವಾಗಿದ್ದು ಹಿಂಭಾಗದ ಕೋಣೆ (ಕಾಚಕೋಣೆ)ಯ ಬಹುಭಾಗವನ್ನು ಆವರಿಸಿಕೊಂಡಿರುತ್ತದೆ. ಅಕ್ಷಿಪಟದ ಮುಂಭಾಗವು ಗರಗಸದಂತೆ ಹಲ್ಲುಳ್ಳದ್ದಾಗಿದೆ. ಪಾರದರ್ಶಕ ಪಟಲ, ಮಸೂರ ಹಾಗೂ ನೇತ್ರದ್ರವದಿಂದ ಸಂಕುಚಿತಗೊಂಡ ಬೆಳಕಿನ ಕಿರಣಗಳು ಅಕ್ಷಿಪಟದ ಮೇಲೆ ವಸ್ತುವಿನ ಪ್ರತಿಬಿಂಬವು ತಲೆಕೆಳಗಾಗಿ ಬೀಳುವಂತೆ ಮಾಡುತ್ತದೆ. ಜ್ಞಾನವಾಹಿ ನರಗಳಿಂದ ಇದು ನರ ಸಂದೇಶದ ರೀತಿಯಲ್ಲಿ ನಯನ ನರಮುಡಿಯನ್ನು ಸೇರುತ್ತದೆ.

ಕಣ್ಣುಗುಡ್ಡೆಯು ದೂರದೃಷ್ಟಿಯುಳ್ಳವರಲ್ಲಿದಂತೆ ಚಿಕ್ಕದಾಗಿದ್ದರೆ ಪ್ರತಿಬಿಂಬವು ಅಕ್ಷಿಪಟದ ಹಿಂದೆ ಬೀಳುತ್ತದೆ. ಇದನ್ನು ಸರಿಪಡಿಸಿ ಪ್ರತಿಬಿಂಬವು ಅಕ್ಷಿಪಟದ ಮೇಲೆ ಬೀಳುವಂತೆ ಮಾಡಲು ಪೀನ ಮಸೂರವನ್ನು ಕಣ್ಣಿನ ಮುಂದೆ ಇಡಬಹುದು. ಸಮೀಪ ದೃಷ್ಟಿಯುಳ್ಳವರಿಗೆ ಕಣ್ಣುಗುಡ್ಡೆಯು ಉದ್ದವಾಗಿದ್ದು ಪ್ರತಿಬಿಂಬವು ಅಕ್ಷಿಪಟಕ್ಕಿಂತ ಮುಂದೆ ಬೀಳುತ್ತದೆ. ಇದನ್ನು ಸರಪಡಿಸಲು ನಿಮ್ನ ಮಸೂರವನ್ನು ಉಪಯೋಗಿಸಬಹುದು.

ದೃಷ್ಟಿಯ ರಾಸಾಯನಿಕ ಕ್ರಿಯೆ:– ಶಂಕು ಮತ್ತು ಸರಳುಗಳ ಮೇಲೆ ಬೀಳುವ ಬೆಳಕು ಅವುಗಳನ್ನು ಉದ್ರೇಕಗೊಳಿಸಿ ನರ ಆವೇಗವನ್ನು ಉತ್ಪಾದಿಸುತ್ತವೆ. ಸರಳುಗಳ ಹೊರಭಾಗವು ಪೊರೆಯಿಂದಾವೃತವಾಗಿದ್ದು ರೊಡಾಪ್ಸಿನ್ ದೃಷ್ಟಿವರ್ಣವನ್ನು ಹೊಂದಿರುತ್ತದೆ. ಈ ದೃಷ್ಟಿ ವರ್ಣವು ರೆಟಿನಿನ್ ಎಂಬ ಎ ಜೀವಸತ್ವದ ಆಲ್‌ಡಿಹೈಡ್ ಅನ್ನೂ ಆಪ್ಸಿನ್ ಎಂಬ ಪ್ರೊಟೀನನ್ನೂ ಹೊಂದಿರುತ್ತದೆ. ರೆಟಿನಿನ್ ಎರಡು ಸಮಾಯವಯ ಸ್ಥಿತಿಯಲ್ಲಿದ್ದು, ಅವೆರಡೂ ಜ್ಯಾಮಿತಿಕವಾಗಿ ಬೇರೆ ಬೇರೆಯಾಗಿರುತ್ತವೆ. ಆಪ್ಸಿನ್ ಜೊತೆ ಸೇರಿದಾಗ ಇದು ಸಿಸ್ ಸ್ಥಿತಿಯಲ್ಲಿದ್ದು ಬೆಳಕಿನ ಶಕ್ತಿಯನ್ನು ಹೀರಿ ಟ್ರಾನ್ಸ್–ರೆಟಿನಿನ್ ಆಗುತ್ತದೆ. ಈ ಟ್ರಾನ್ಸ್ ಸ್ಥಿತಿಯಲ್ಲಿ ರೆಟಿನಿನ್ ಇರುವಾಗ ರೊಡಾಪ್ಸಿನ್ ದೃಷ್ಟಿ ವರ್ಣವು ಅಸ್ಥಿರವಾಗಿದ್ದು (ಟ್ರಾನ್ಸ್ ರೆಟಿನಿನ್, ಆಪ್ಸಿನ್ ನಲ್ಲಿರುವ ಸ್ಥಳಕ್ಕೆ ಹೊಂದಿಕೊಳ್ಳದೇ ಇರುವುದರಿಂದ) ಇವೆರಡೂ ಬೇರೆ ಬೇರೆಯಾಗುತ್ತವೆ. ಈ ಕ್ರಿಯೆಯು ಕೋಶಪೊರೆಯ ಮೇಲೆ ಪ್ರಭಾವ ಬೀರುವುದರಿಂದ ಸರಳುಗಳು ವಿದ್ಯುತ್ ಕ್ರಿಯಾಶೀಲವಾಗುತ್ತವೆ. ಮುಂದೆ ಟ್ರಾನ್ಸ್ ರೆಟಿನಿನ್ ಟ್ರಾನ್ಸ್ – ಎ ಜೀವಸತ್ವವಾಗಿ ಪರಿವರ್ತನೆಗೊಂಡು ಸಮಾವಯವ ಕ್ರಿಯೆಯಿಂದ ಸಿಸ್–ಎ ಜೀವಸತ್ವವಾಗುತ್ತದೆ. ಅನಂತರ ಸಿಸ್–ಎ ಜೀವಸತ್ವವು ಸಿಸ್ ರೆಟಿನಿನ್ ಆಗಿ ಪರಿವರ್ತನೆಹೊಂದುತ್ತದೆ. ಈ ಎಲ್ಲ ಹಂತಗಳಲ್ಲಿ ಜೀವಕೋಶಗಳಲ್ಲಿ ಕೇಂದ್ರೀಕೃತವಾದ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತದೆ. ಈ ಸಿಸ್ ರೆಟಿನಿನ್ ಪುನಃ ಆಪ್ಸಿನ್ ಜೊತೆ ಸೇರಿ ರೊಡಾಪ್ಸಿನ್ ದೃಷ್ಟಿ ವರ್ಣವಾಗುತ್ತದೆ. ಕಣ್ಣು ಬೆಳಕಿನಲ್ಲಿ ತೆರೆದಿರುವಾಗ ಈ ರೊಡಾಪ್ಸಿನ್ ದೃಷ್ಟಿವರ್ಣಚಕ್ರವು ಸತತವಾಗಿ ನಡೆಯುತ್ತಿರುತ್ತದೆ. ಆದರೆ ಚಕ್ರದ ವೇಗ ಬೆಳಕಿನ ಮೊತ್ತವನ್ನು ಅವಲಂಬಿಸಿರುತ್ತದೆ. ರೊಡಾಪ್ಸಿನ್ ದೃಷ್ಟಿವರ್ಣವು ಶುಭ್ರ ಬೆಳಕಿನಲ್ಲಿ ಬೇಗ ಧ್ವಂಸಗೊಂಡರೆ ಕತ್ತಲಲ್ಲಿ ಪುನಃ ಬೇಗ ಸಂಯೋಜಿತಗೊಳ್ಳುತ್ತದೆ. ಮಸುಕು ಬೆಳಕಿನಲ್ಲಿ ನೋಡಬೇಕಾದರೆ ಮೊದಲು ಕತ್ತಲಿನಲ್ಲಿ ನಿಂತು ಆ ನಂತರ ನೋಡಿದರೆ ವಸ್ತುಗಳು ಬೇಗ ಸ್ಫುಟವಾಗಿ ಗೋಚರಿಸುತ್ತವೆ. ರೋಡಾಪ್ಸಿನ್ ದೃಷ್ಟಿವರ್ಣವು ಮಸುಕಾದ ಬೆಳಕಿನಲ್ಲಿ ಬಿಳಿ ಮತ್ತು ಕಪ್ಪು ಬಣ್ಣಗಳನ್ನು ಗುರುತಿಸುತ್ತದೆ. ರೆಟಿನಿನ್‌ನ ಪೂರ್ವಗಾಮಿ ವಸ್ತುವಾದ ಎ ಜೀವಸತ್ವವು ಕಡಿಮೆಯಾದಲ್ಲಿ ಮಸುಕಾದ ಬೆಳಕಿನಲ್ಲಿ ವಸ್ತುಗಳನ್ನು ಗುರುತಿಸುವ ಶಕ್ತಿಯು ಹೊರಟು ಹೋಗುತ್ತದೆ. ಶಂಕುಗಳು ಪ್ರಖರ ಬೆಳಕಿನಲ್ಲಿ ಮಾತ್ರ ಉದ್ರೇಕಗೊಂಡು ಬಣ್ಣಗಳನ್ನು ಗುರುತಿಸಲು ಸಹಾಯಕವಾಗುತ್ತದೆ. ಶಂಕುವಿನಲ್ಲಿ ಕೆಂಪು, ಹಸಿರು ಮತ್ತು ನೀಲಿ ಎಂಬ ಮೂರು ವಿಧವಿದ್ದು ಇವುಗಳ ಪರಸ್ಪರ ಕ್ರಿಯೆಯಿಂದ ವಿವಿಧ ವರ್ಣಗಳನ್ನು ಗುರುತಿಸಬಹುದು. ವಿವಿಧ ಬಣ್ಣಗಳು ಹೇಗೆ ಗುರುತಿಸಲ್ಪಡುತ್ತವೆ ಎಂಬುದರ ಬಗ್ಗೆ ಹೆಚ್ಚು ತಿಳಿವಳಿಕೆಯಿಲ್ಲದಿದ್ದರೂ ವರ್ಣಾಂಧತ್ವದ ಅಭ್ಯಾಸದಿಂದ ಈ ಮೇಲಿನ ತಿಳುವಳಿಕೆ ಸಧ್ಯಕ್ಕೆ ನಮಗೆ ಸಿಕ್ಕಿದೆ. ಇದನ್ನು ತ್ರಿವರ್ಣ ಸಿದ್ಧಾಂತದಲ್ಲಿ ವಿವರಿಸುತ್ತಾರೆ.

ಮಸೂರದ ಹಿಂದೆ ನೇರಕ್ಕೆ ಅಕ್ಷಿಪಟದಲ್ಲಿ ಅಸಂಖ್ಯಾತ ಸರಳು ಮತ್ತು ಶಂಕು ಕೋಶಗಳಿವೆ. ಇದೇ ತೀಕ್ಷ್ಣವಾದ ಪ್ರತಿಬಿಂಬ ಮೂಡುವ ಜಾಗ. ಇದನ್ನು ಹಳದಿ ಚುಕ್ಕೆ (ಯೆಲ್ಲೊ ಸ್ಪಾಟ್) ಅಥವಾ ಫೋವಿಯಾ ಎನ್ನುತ್ತಾರೆ. ಕಣ್ಣಿನ ನರ ಕಣ್ಣುಗುಡ್ಡೆಯಿಂದ ಹೊರಹೋಗುವಲ್ಲಿ ಸರಳು ಮತ್ತು ಶಂಕು ಕೋಶಗಳಿಲ್ಲ. ಇಲ್ಲಿ ಪ್ರತಿಬಿಂಬ ಮೂಡುವುದಿಲ್ಲ. ಇದೇ ಕುರುಡು ಚುಕ್ಕೆ (ಅಂಧ್ರ ಪ್ರದೇಶ).

ಕಣ್ಣು ರೆಪ್ಪೆಗಳು: ಚರ್ಮದ ಅಂಗಾಂಶಗಳ ಚಲಿಸುವ ರಕ್ಷಾಕವಚಗಳಾಗಿದ್ದು ಕಣ್ಣು ಗುಡ್ಡೆಗಳನ್ನು ಅಗೋಚರ ಬಾಧೆಗಳಿಂದ ರಕ್ಷಿಸುತ್ತವೆ. ಕಣ್ಣುರೆಪ್ಪೆಯ ಒಳಭಾಗದಲ್ಲಿ ತೇವವಾಗಿದ್ದು ಪಾರದರ್ಶಕ ಪಟಲ ಮತ್ತು ಕಂಜಂಕ್ಟಿವಗಳು ನಿಯಮಿತವಾಗಿ ಕೆಲಸ ಮಾಡಲು ಸಹಾಯ ಮಾಡುತ್ತದೆ. ಪ್ರತಿಯೊಂದು ಕಣ್ಣುರೆಪ್ಪೆಯೂ (1) ದಾರಗಳ ಜಾಳಿಗೆಯಿಂದಾದ ಸಂಯೋಜನಾ ಫಲಕವನ್ನು, (2) ಚಾಲನೆಗೆ ಸಹಾಯಕವಾದ ಮಾಂಸಖಂಡಗಳನ್ನು ಮತ್ತು (3) ಮೃದುಚಾಲಕ ದ್ರವಗಳನ್ನು ಸ್ರವಿಸುವ ಗ್ರಂಥಿಗಳನ್ನೂ ಹೊಂದಿದ್ದು ಒಳಗಡೆಯಿಂದ ಲೋಳೆಯ ಚರ್ಮದ ಪೊರೆಯನ್ನು ಅಂಚುಗಳಲ್ಲಿ ಕೂದಲುಗಳಿಂದ ಕೂಡಿರುವ ಕಣ್ಣಿವೆಗಳನ್ನೂ ಹೊಂದಿರುತ್ತದೆ. ಮೇಲ್ರೆಪ್ಪೆಯು ವೃತ್ತಾಕಾರದ ಮಾಂಸಖಂಡಗಳಿಂದಾದ ಆರ್ಬಿಕ್ಯುಲಾರಿಸ್ ಹಾಗೂ ಬಾಣದ ತುದಿಯಾಕಾರದ ಲಿವೇಟರ್ಸ್ ಮಾಂಸಖಂಡಗಳಿಂದ ಮುಚ್ಚಿ ತೆಗೆದುಕೊಳ್ಳುತ್ತದೆ. ರೆಪ್ಪೆಗಳನ್ನು ಚಲನೆಯಲ್ಲಿರುವಂತೆ ಮಾಡಲು ಸಂಜ್ಞೆಯು ಏಳನೆಯ ಕಪಾಲನರವಾದ ಫೇಷಿಯಲ್ ನರದಿಂದ ಬರುತ್ತದೆ. ರೆಪ್ಪೆಯ ತುದಿಗಳು ರೆಪ್ಪೆ ಗ್ರಂಥಿಯಿಂದ ಬರುವ ಮೃದುಚಾಲಕ ದ್ರವದಿಂದ ಲಘುವಾಗಿ ಚಲಿಸುತ್ತದೆ. ಈ ಕೊಬ್ಬುಳ್ಳ ದ್ರವವು ಕಣ್ಣೀರಿನ ಸಮತೋಲನೆಯನ್ನು ಕಾಯ್ದುಕೊಳ್ಳುತ್ತದೆ.

ಕೆಲವು ಉಭಯಜೀವಿಗಳಲ್ಲಿ, ಹಂದಿ, ಬೆಕ್ಕು ಮುಂತಾದ ಕೆಲವು ಸ್ತನಿಗಳಲ್ಲಿ ಅನಿಮೇಷಕ ಪಟಲ (ನಿಕ್ಟಿಟೇಟಿಂಗ್ ಮೆಂಬ್ರೇನ್)ಎಂಬ ಮೂರನೆಯ ರೆಪ್ಪೆಯಿದ್ದು ಇದು ಕಣ್ಣಿನ ಮಧ್ಯದ ಕೊನೆಯಲ್ಲಿರುತ್ತದೆ. ಕಣ್ಣು ಗುಡ್ಡೆಯು ಸ್ವಲ್ಪ ಒಳಗಡೆ ಹೋದಾಗ ಪಾರದರ್ಶಕ ಪಟಲದ ಮೇಲೆ ನಿಧಾನವಾಗಿ ಚಲಿಸಿ ಕಣ್ಣನ್ನು ಚೊಕ್ಕಟಗೊಳಿಸುತ್ತದೆ. ಮನುಷ್ಯನಲ್ಲಿ ಇದು ಅವಶೇಷ ಸ್ಥಿತಿಯಲ್ಲಿದ್ದು ಅರೆಚಂದ್ರ ಮಡಿಕೆ (ಸೆಮಿಲ್ಯೂನಾರ್ ಫೋಲ್ಡ್) ಎಂದು ಇದನ್ನು ಕರೆಯುತ್ತಾರೆ.

ಕಣ್ಣು ಚುಕ್ಕೆ: ಏಕಕೋಶಜೀವಿಗಳಲ್ಲಿ ಬೆಳಕನ್ನು ಗ್ರಹಿಸುವ ಹೆಚ್ಚು ವರ್ಣಯುಕ್ತ ಭಾಗಕ್ಕೆ ಕಣ್ಣು ಚುಕ್ಕೆ ಎಂದು ಹೆಸರು. ಅಕಶೇರುಕಗಳ ಹೊರಚರ್ಮದ ಬೆಳಕಿನ ಸಂವೇದಕ ಶಕ್ತಿಯಿರುವ ಭಾಗಕ್ಕೆ ಕೂಡಾ ಕೆಲವೊಮ್ಮೆ ಕಣ್ಣುಚುಕ್ಕೆ ಎಂದೇ ಕರೆಯುತ್ತಾರೆ. ಯುಗ್ಲಿನಾದಲ್ಲಿ ಈ ಚುಕ್ಕೆಯು ನೀರು ಕಾಲುವೆಯ ಕಶಾಂಗದ ಬುಡದಲ್ಲಿರುತ್ತದೆ. ಇದು ಒಂದು ತಟ್ಟೆಯಾಕಾರದಲ್ಲಿದ್ದು ವರ್ಣಯುಕ್ತ ಸರಳುಗಳನ್ನು ಹೊಂದಿದ್ದು ಪ್ರಾಣಿಯ ಹಿಂಭಾಗದಿಂದ ಬರುವ ಬೆಳಕನ್ನು ಗ್ರಹಿಸುತ್ತದೆ. ಇದು ಕಶಾಂಗದ ಬಡಿತದ ಮೇಲೆ ಪ್ರಭಾವ ಬೀರಿ ಪ್ರಾಣಿಯ ಬೆಳಕಿನ ಕಡೆಗೆ ಚಲಿಸುವಂತೆ ಮಾಡುತ್ತದೆ.

(ಎಸ್.ಎನ್.ಎಚ್.)

**ಕತ್ತರಿಹುಳುಗಳು:** ಕೀಟವರ್ಗದ ಲೆಪಿಡಾಪ್ಟಿರ ಗಣದ ಫ್ಯಾಲಿನಿಡೆ ಮತ್ತು ನಾಕ್ಟುಯಿಡೆ ಕುಟುಂಬದ ಸದಸ್ಯರು. ಇವು ಪತಂಗಗಳ ಡಿಂಬಗಳು (ಕಟ್‌ವರ್ಮ್ಸ್). ಬೆಳೆಗಳ ಸಸಿಗಳನ್ನು ಕತ್ತರಿಸಿ ತುಂಡುಮಾಡಿ ನಾಶಪಡಿಸುವುದರಿಂದ ಇವಕ್ಕೆ ಈ ಹೆಸರು. ಉರುಳೆಯಾಕಾರದವು. ನುಣುಪಾದ ದೇಹ, ಮಣ್ಣಿನಂತಿರುವ ಬಣ್ಣ ಇದೆ. ಈ ಕೀಟಗಳಿಗೆ ೫ ಜೊತೆ ಮುಂಗಾಲುಗಳಿವೆ. ಅವುಗಳನ್ನು ಪ್ರೋ ಲೆಗ್ಸ್ ಎನ್ನುವರು.

ಹಗಲಿನಲ್ಲಿ ಹೆಂಟೆ, ಕಲ್ಲು ಮತ್ತು ಹುಡಿಮಣ್ಣಿನ ಕೆಳಗೆ ಅಡಗಿಕೊಂಡಿರುತ್ತವೆ. ರಾತ್ರಿ ವಿವಿಧ ಸಸ್ಯಗಳ ಮೇಲೆ ದಾಳಿ ಇಟ್ಟು, ಆಹಾರ ಪಡೆಯುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿದ್ದಾಗ ಗುಂಪು ಗುಂಪಾಗಿ ಹೊಲದಿಂದ ಹೊಲಕ್ಕೆ ಸಾಗಿ ಸಾಕಷ್ಟು ನಷ್ಟ ಉಂಟುಮಾಡುತ್ತವೆ. ಕೆಲವು ಹುಳುಗಳು ಗಿಡಗಳ ಎಲೆ, ಬೇರು, ಕಾಂಡವನ್ನು ಕತ್ತರಿಸಿದರೆ, ಕೆಲವು ಹಣ್ಣು ಮತ್ತು ಮರಗಳನ್ನು ಕೊರೆಯುತ್ತವೆ. ಇವು ಕೃಷಿ ಬೆಳೆಗಳಿಗೆ ತೀವ್ರ ಹಾನಿಯುಂಟುಮಾಡುವ ಪಿಡುಗುಗಳಾಗಿವೆ. ಉದಾ: ಹೊಗೆಸೊಪ್ಪಿನ ಹುಳು (ಪ್ರೋಡೀನಿಯ), ರಾಗಿಯ ಹುಳು (ಲ್ಯಾಫಿಗ್ಮ), ದಂಡುಹುಳು (ಸಿರ್‌ಫಿಸ್), ಆಲೂಗಡ್ಡೆಯ ಕತ್ತರಿಹುಳು (ಯುಕ್ಸೋವ) ಮತ್ತು ಬತ್ತ ಮುತ್ತುವ ಹುಳು (ಸ್ಪೋಡಾಪ್ಟೆರ), ಕೋಸು, ಮೆಣಸಿನಕಾಯಿ, ಈರುಳ್ಳಿ, ಬದನೆ ಮುಂತಾದ ಬೆಳೆಗಳಿಗೆ ಕತ್ತರಿಹುಳುಗಳು ನಷ್ಟ ಉಂಟುಮಾಡುತ್ತವೆ.

ಇವುಗಳನ್ನು ಆಕರ್ಷಣೆಗೊಳಪಡಿಸಿ ವಿಷ ಬೆರೆಸಿದ ಆಹಾರವನ್ನು (ಬೇಯ್ಟ್) ನೆಲದ ಮೇಲೆ ಹರಡಿ, ಅವು ಈ ಆಹಾರವನ್ನು ತಿಂದ ತಕ್ಷಣ ಸಾಯುವಂತೆ ಮಾಡುವುದೊಂದೇ ನಿವಾರಣೆಯ ಪರಿಣಾಮಕಾರಿ ಮಾರ್ಗ. ***

**ಕತ್ತಿಮೀನು:** ಕ್ಸಿಫಿಡೆ ಕುಟುಂಬದ ಸದಸ್ಯ. ಕ್ಸಿಫಿಯಾಸ್ ಗ್ಲೇಡಿಯಸ್ ಇದರ ವೈಜ್ಞಾನಿಕ ಹೆಸರು. ಇದು ಉಷ್ಣ ಮತ್ತು ಸಮಶೀತೋಷ್ಣ ಸಮುದ್ರಗಳಲ್ಲಿ ವಾಸಿಸುತ್ತದೆ. ಉದ್ದವಾದ ಕತ್ತಿಯಾಕಾರದ ಮೂತಿ ಇದೆ. ಬೆನ್ನಿನ ಮೇಲೆ ಎತ್ತರವಾದ ರೆಕ್ಕೆಗಳಿವೆ.



ಕತ್ತಿ ಮೀನು

ಬಾಯಿಯೊಳಗೆ ಹಲ್ಲುಗಳಿಲ್ಲ. ಮೈಮೇಲೆ ಹುರುಪೆ(ಸ್ಕೇಲ್ಸ್)ಗಳಿಲ್ಲ. ಇದರ ಉದ್ದ ೫.೨ ಮೀ. ತೂಕ ೪೫೦ ಕಿಗ್ರಾಂ. ವೇಗವಾಗಿ ಈಜುತ್ತದೆ. ಕತ್ತಿಮೀನು ಬೇರೆ ಪ್ರಭೇದದ ಸಣ್ಣ ಮೀನುಗಳ ಮೇಲೆ ಹಠಾತ್ತನೆ ದಾಳಿ ಮಾಡಿ, ಕತ್ತಿಯಂತಿರುವ ಮೂತಿಯಿಂದ ಅವುಗಳಿಗೆ ಊನಮಾಡಿ ಅನಂತರ ಒಂದೊಂದನ್ನಾಗಿ ನುಂಗುತ್ತದೆ. ನೀರಿನ ಮೇಲ್ಮೈಯಲ್ಲಿ ಮತ್ತು ೧೮೦ ಮೀ ಆಳದಲ್ಲೂ ಸಹ ಆಹಾರಕ್ಕಾಗಿ ಬೇಟೆಯಾಡುತ್ತ ಸರಾಗವಾಗಿ ಈಜುತ್ತಿರುತ್ತದೆ. ಕೆಲವೊಮ್ಮೆ ಸಣ್ಣ ಹಡಗುಗಳ ತಳಭಾಗವನ್ನು ಮೂತಿಯಿಂದ ಹೊಡೆದು ಕತ್ತರಿಸುವುದೆಂದು ಹೇಳಲಾಗಿದೆ.

ಕತ್ತಿಮೀನಿನ ಮಾಂಸ ಬಲು ರುಚಿ. ಅದರಲ್ಲಿ ಪ್ರೋಟೀನಿನ ಅಂಶ ಅಧಿಕವಾಗಿದೆ. ಮೀನುಗಾರರು ಹಿಡಿಯುವ ಹಲವು ಬಗೆಯ ಮೀನುಗಳಲ್ಲಿ ಇದು ವಾಣಿಜ್ಯ ದೃಷ್ಟಿಯಿಂದ ಮುಖ್ಯವಾದುದು. ***

**ಕತ್ತೆ:** ಸ್ತನಿ ಗುಂಪಿನ ಪೆರಿಸ್ಸೊಡ್ಯಾಕ್ಟೈಲಾ ಗಣಕ್ಕೆ ಮತ್ತು ಈಕ್ವಿಡೆ ಕುಟುಂಬಕ್ಕೆ ಸೇರಿದೆ. ಕುದುರೆ ಮತ್ತು ಜೀಬ್ರಗಳಂತೆಯೇ ಈಕ್ವಸ್ ಎನ್ನುವ ಜಾತಿ. ಕತ್ತೆಯಲ್ಲಿ ಮುಖ್ಯವಾದ ಎರಡು ಪ್ರಭೇದಗಳಿವೆ: ಈಕ್ವಸ್ ಅಸಿನಸ್ ಮತ್ತು ಈಕ್ವಸ್ ಹೆಮಿಯೋನಸ್. ಮೊದಲನೆಯದು ಈಶಾನ್ಯ ಆಫ್ರಿಕದಲ್ಲಿ (ಇಥಿಯೋಪಿಯ, ಸೋಮಾಲಿಯ) ಕಂಡುಬರುವ ಕಾಡುಕತ್ತೆ. ಸಾಕಿದ ಕತ್ತೆ ಈ ಕತ್ತೆಯಿಂದಲೇ ಬಂದುದೆಂದು ನಂಬಲಾಗಿದೆ. ಎರಡನೆಯ ಪ್ರಭೇದ ಏಷ್ಯದ ನಿವಾಸಿಯಾದ ಕಾಡುಕತ್ತೆ. ಇದನ್ನು ೧) ಸಿರಿಯದ ಕಾಡುಕತ್ತೆ (ಈ. ಹೆ. ಹೆಮಿಪ್ಪಸ್), ೨) ತುರ್ಕಿ ಮತ್ತು ವಾಯುವ್ಯ ಇರಾನಿನಲ್ಲಿರುವ ಆನಜರ್ ಎಂಬ ಕತ್ತೆ (ಈ.ಹೆ. ಆನಜರ್), ೩) ಭಾರತದ ಕಚ್ ಮತ್ತು ಲಡಖಿನಲ್ಲಿರುವ ಕಾಡುಕತ್ತೆ (ಈ.ಹೆ.ಖುರ್). ೪) ಟಿಬೆಟ್ಟಿನಲ್ಲಿ ೧೫,೦೦೦'ಗೂ ಎತ್ತರದ ಪ್ರದೇಶದಲ್ಲಿ ಕಾಣಬರುವ ಕಿಯಾಂಗ್ ಎಂಬ ಕತ್ತೆ (ಈ.ಹೆ.ಕಿಯಂಗ್) ಮತ್ತು ೫) ಮಧ್ಯ ಮಂಗೋಲಿಯದ ನಿವಾಸಿಯಾದ ಕುಲಾನ್ ಎನ್ನಲಾಗುವ ಕಾಡುಕತ್ತೆ (ಈ.ಹೆ.ಹೆಮಿಯೋನಸ್) ಎಂಬ ಐದು ಉಪಪ್ರಭೇದಗಳಾಗಿ ವಿಂಗಡಿಸಲಾಗಿದೆ.

ಕತ್ತೆಗಳ ದೇಹರಚನೆ ಕುದುರೆಯಂತೆಯೇ; ಆದರೆ ಗಾತ್ರ ಮತ್ತು ಎತ್ತರ ಕಡಿಮೆ, ಕಿವಿಗಳು ಉದ್ದ, ಗೊರಸು ಕುದುರೆಗಳವಕ್ಕಿಂತ ಚಿಕ್ಕವು, ಬಾಲದ ತುದಿ ಕುಚ್ಚಿನಂತಿದೆ. ಕತ್ತಿನ ಮೇಲೆ ಇಳಿಬಿದ್ದಿರುವ ಅಥವಾ ನೆಟ್ಟಗಿರುವ ಕೂದಲಿನ ಅಯಾಲಿದೆ. ಬೆನ್ನಿನ ಮಧ್ಯೆ ಬಾಲದವರೆಗೂ ಹಬ್ಬಿರುವ ಪಟ್ಟೆಯಿದೆ. ಒಂದು ಭುಜದಿಂದ ಮತ್ತೊಂದು ಭುಜಕ್ಕೆ ಅಡ್ಡವಾಗಿ ಹರಡುವ ಇನ್ನೊಂದು ಪಟ್ಟೆ ಇದೆ. ಕೆಲವೊಮ್ಮೆ ಕಾಲುಗಳ ಮೇಲೆ ಅಡ್ಡಡ್ಡನಾದ ಮಸುಕಾದ ಪಟ್ಟೆಗಳಿರುವುದೂ ಉಂಟು. ದೀರ್ಘವಾಗಿ ಉಸಿರನ್ನು ಎಳೆದುಕೊಳ್ಳುವಾಗ ಮತ್ತು ಬಿಡುವಾಗ ಉಂಟಾಗುವ ಹೀ–ಹಾ ಎಂಬ ಇದರ ಕೂಗು ಕತ್ತೆಜಾತಿಗೇ ವಿಶಿಷ್ಟವಾದುದು ಮತ್ತು ಪ್ರಾಣಿ ಪ್ರಪಂಚದಲ್ಲೇ ಅತ್ಯಂತ ವಿಚಿತ್ರವಾದುದು. ಕಾಡುಕತ್ತೆಗಳು ಒಂಟಿಯಾಗಿಯೊ ಮಂದೆಗಳಲ್ಲಿಯೋ ಇರುತ್ತವೆ. ಮರಿ ಹಾಕುವ ಕಾಲದಲ್ಲಿ ಮಾತ್ರ ಮಂದೆಯಿಂದ ಬೇರೆಯಾಗುತ್ತವೆ. ಗಂಡು ಹೆಣ್ಣುಗಳ ಕೂಡುವಿಕೆ ಸಾಮಾನ್ಯವಾಗಿ ಆಗಸ್ಟ್–ಅಕ್ಟೋಬರ್ ತಿಂಗಳುಗಳಲ್ಲಿ. ಗರ್ಭಧಾರಣೆಯ ಅವಧಿ ಸುಮಾರು ೧೧–೧೨ ತಿಂಗಳು. ಹೆಣ್ಣು ಸಾಮಾನ್ಯವಾಗಿ ಒಂದು ಸಲಕ್ಕೆ ಒಂದು ಮರಿಯನ್ನು ಈಯುತ್ತದೆ.

ಕತ್ತೆಯ ಬಗ್ಗೆ ಒಂದು ಸ್ವಾರಸ್ಯವಾದ ಕಥೆ ಇದೆ. ಒಂದು ಕಥೆಯಲ್ಲಾದರೂ ತನ್ನ ಜಾಣತನವನ್ನು ಕುರಿತು ಎರಡು ಒಳ್ಳೆಯ ಮಾತನ್ನು ಬರೆಯಬೇಕೆಂದು ಕತ್ತೆ ಈಸೋಪನನ್ನು ಕೇಳಿತಂತೆ. ಹಾಗೆ ಮಾಡಿದರೆ ಜನ ತನ್ನನ್ನೇ ಕತ್ತೆಯೆಂದು ಹೀಗಳೆಯುತ್ತಾರೆಂದು ಈಸೋಪ ಕತ್ತೆಗೆ ಹೇಳಿದನಂತೆ. ಕತ್ತೆ ಸಾಮಾನ್ಯವಾಗಿ ಎಲ್ಲರೂ ಭಾವಿಸಿರುವಷ್ಟು ಮೊಂಡು ಮತ್ತು ದಡ್ಡ ಪ್ರಾಣಿಯಲ್ಲ. ತನಗೆ ಇಷ್ಟಬಂದಾಗ ಮಾತ್ರ ಕೆಲಸ ಮಾಡುವುದರಿಂದ ಮತ್ತು ಉದ್ದೇಶ ಪೂರ್ವಕವಾಗಿಯೊ ಎಂಬಂತೆ ಮೊಂಡಾಟ ಹೂಡುವುದರಿಂದ ಕತ್ತೆಗೆ ಬುದ್ಧಿಶಕ್ತಿ ಮತ್ತು ವಿವೇಚನಾಶಕ್ತಿ ಇದೆ ಎನಿಸುತ್ತದೆ. ಜಗಳವಾಡುವಾಗ ಅಥವಾ ಆತ್ಮರಕ್ಷಣೆಯ ಅವಶ್ಯಕತೆ ಉಂಟಾದಾಗ ಕತ್ತೆ ತನ್ನ ಹಿಂಗಾಲುಗಳನ್ನು ಮೇಲಕ್ಕೆತ್ತಿ ಜಾಡಿಸಿ ಒದೆಯುತ್ತದೆ; ತನ್ನ ಬಾಚಿಹಲ್ಲುಗಳಿಂದ ಕಚ್ಚುವುದೂ ಉಂಟು. ಕತ್ತೆ ವೇಗವಾಗಿ (ಕುದುರೆಯಷ್ಟಲ್ಲದಿದ್ದರೂ) ಓಡಬಲ್ಲುದು; ಗಂಟೆಗೆ ೫೭ ಕಿಮೀ ವೇಗವಾಗಿ ಓಡಿದ ದಾಖಲೆಗಳುಂಟು.

ತೋಳ, ಕತ್ತೆಕಿರುಬಗಳು ಕತ್ತೆಯ ಸ್ವಾಭಾವಿಕ ಶತ್ರುಗಳು.

ಸುಮಾರು ೪,೦೦೦ ವರ್ಷಗಳ ಹಿಂದೆ ಈಜಿಪ್ಟಿನವರು ಕಾಡುಕತ್ತೆಗಳನ್ನು ಹಿಡಿದು ಪಳಗಿಸಿದರೆಂದು ನಂಬಲಾಗಿದೆ. ಸಾಕಿದ ಕತ್ತೆಗಳೆಂಬ ಒಂದು ನಿರ್ದಿಷ್ಟ ಬಗೆಯ ತಳಿ ಅಂದಿನಿಂದ ಅಸ್ತಿತ್ವಕ್ಕೆ ಬಂದಿದೆ. ಸಾಕಿದ ಕತ್ತೆಗಳು ಕಾಡುಕತ್ತೆಗಳಿಗಿಂತ ಗಾತ್ರದಲ್ಲಿ ಚಿಕ್ಕವು ಮತ್ತು ಸ್ವಲ್ಪ ಮಾಸಲು ಬಣ್ಣದವು. ಕತ್ತೆಗಳನ್ನು ಸಾಕುವುದು ಬಹು ಸುಲಭ: ಏಕೆಂದರೆ ಅವುಗಳ ಆಹಾರ ಬಹಳ ಸರಳ ರೀತಿಯದು: ಎಂಥ ಆಹಾರವನ್ನಾದರೂ ತಿಂದು, ಹೆಚ್ಚುಕಾಲ ನೀರು ಕುಡಿಯದೇ ಇರಬಲ್ಲವು. ಆದರೆ ದುಡಿಮೆಯಲ್ಲಿ ಮಾತ್ರ ಬೇರಾವ ಪ್ರಾಣಿಗೂ ಕಡಿಮೆಯಿಲ್ಲ. ಬಿಸಿಲಿನ ತಾಪದಲ್ಲಿ, ಬಹಳ ಕಷ್ಟಕರದ ಸ್ಥಿತಿಯಲ್ಲಿ, ಅತಿ ಕಡಿದಾದ ಪರ್ವತ ಪ್ರದೇಶದಲ್ಲಿ ಹೆಜ್ಜೆ ತಪ್ಪದೆ ಬಹಳ ಜಾಗರೂಕತೆಯಿಂದ ನಡೆಯುವ ಸಾಮರ್ಥ್ಯ ಹೊಂದಿರುವುದರಿಂದ ಇವನ್ನು ಬೆಟ್ಟಗುಡ್ಡಗಳಲ್ಲಿ ಭಾರವಾದ ಸಾಮಾನು ಸಾಗಿಸಲು ಬಳಸುತ್ತಾರೆ.

ಭಾರತದಲ್ಲಿ ಗುಜರಾತ್ ರಾಜ್ಯದ ಕಚ್ ಪ್ರದೇಶ ಮತ್ತು ಲಡಾಖಿನಲ್ಲಿರುವ ಕಾಡುಕತ್ತೆಗಳನ್ನು ಬಿಟ್ಟರೆ ಉಳಿದವೆಲ್ಲ ಸಾಕು ಕತ್ತೆಗಳೇ. ಕಾಡುಕತ್ತೆ ಇತರ ಕತ್ತೆಗಳಿಗಿಂತ ಗಾತ್ರದಲ್ಲಿ ದೊಡ್ಡದು (ಎತ್ತರ ೦.೯೩–೧.೨೧ ಮೀ.) ಹಾಗೂ ಹೆಚ್ಚು ಮಾಟವಾದುದು. ಮೈಬಣ್ಣ ಹಳದಿ ಮರಳಿನಂತೆ. ಕಿವಿಗಳೂ ಕೊಂಚ ಚಿಕ್ಕವು. ಕೂಗು ಹೆಚ್ಚು ತೀವ್ರವಾದುದು. ಕಾಡುಕತ್ತೆ ಇತರ ಕತ್ತೆಗಳೊಂದಿಗಾಗಲಿ ಬೇರಾವ ಸಾಕು ಪ್ರಾಣಿಗಳೊಂದಿಗಾಗಲಿ ಸೇರುವುದೇ ಇಲ್ಲ. ಭಾರತದ ಕತ್ತೆಗಳಲ್ಲೂ ಎರಡು ಬಗೆಗಳಿವೆ. ಒಂದು ಬಗೆಯದು ಕೊಂಚ ಕುಳ್ಳು (ಎತ್ತರ ೦.೮೧ ಮೀ.) ಮತ್ತು ಬೂದು ಬಣ್ಣದ್ದು. ಇವು ದೇಶದ ಎಲ್ಲ ಭಾಗಗಳಲ್ಲಿಯೂ ಇವೆ. ಎರಡನೆಯ ಬಗೆಯದು ಎತ್ತರ (೦.೯೩ ಮೀ.) ಮತ್ತು ಅದರ ಬಣ್ಣ ಬಿಳಿ ಅಥವಾ ತಿಳಿಬೂದಿ. ಇದು ಕಚ್ ಪ್ರದೇಶದಲ್ಲಿ ಕಾಣಬರುತ್ತದೆ.



ಕಷ್ಟಸಹಿಷ್ಣುವೂ ಹೆಚ್ಚು ಭಾರವನ್ನು ಹೊರುವ ಸಾಮರ್ಥ್ಯವುಳ್ಳದ್ದೂ ಆದ ಕತ್ತೆಯ ಉಪಯುಕ್ತತೆಯನ್ನು ಕಂಡುಕೊಂಡು, ಇನ್ನೂ ಉತ್ತಮವಾದ ತಳಿಗಳನ್ನು ಪಡೆಯಲು ಭಾರತದಲ್ಲಿ ತಳೀಕರಣ ಪ್ರಯೋಗಗಳನ್ನು ನಡೆಸಿದ್ದಾರೆ,. ಬೇರೆ ಬೇರೆ ದೇಶಗಳಿಂದ ಉತ್ತಮ ಬಗೆಯ ಗಂಡುಕತ್ತೆಗಳನ್ನು ತರಿಸಿ ಅಡ್ಡತಳಿಯೊಡ್ಡಿಕೆಯಲ್ಲಿ ಬಳಸುತ್ತಿದ್ದಾರೆ. ಅಲ್ಲದೆ ಗಂಡುಕತ್ತೆ ಮತ್ತು ಹೆಣ್ಣು ಕುದುರೆಗಳನ್ನು ಅಡ್ಡಹಾಯಿಸಿ ಪಡೆವ ಮಿಶ್ರತಳಿಯಾದ ಹೇಸರಗತ್ತೆ (ಮ್ಯೂಲ್) ಬಗ್ಗೆಯೂ ಸಾಕಷ್ಟು ಪ್ರಯೋಗಗಳು ನಡೆಯುತ್ತಿವೆ. ಹೇಸರಗತ್ತೆಗಳು ಗಾತ್ರ, ವೇಗ ಮತ್ತು ಶಕ್ತಿಸಾಮರ್ಥ್ಯಗಳಲ್ಲಿ ಕುದುರೆಯನ್ನೂ ನೋಟ, ಕಷ್ಟಸಹಿಷ್ಣುತೆ, ಸಹನೆ, ಒರಟುತನ ಮುಂತಾದವುಗಳಲ್ಲಿ ಕತ್ತೆಯನ್ನೂ ಹೋಲುತ್ತವೆ. ಹೀಗಾಗಿ ಇವನ್ನು ಹಲವಾರು ಬಗೆಯ ಕಷ್ಟತರವಾದ ಕೆಲಸಗಳಿಗೆ ಬಳಸಲಾಗುತ್ತಿದೆ. ಸೈನ್ಯದಲ್ಲೂ ಪರ್ವತ ಪ್ರದೇಶಗಳಲ್ಲೂ ಇವುಗಳ ಬಳಕೆ ಹೆಚ್ಚು. ***

**ಕತ್ತೆಕಿರುಬ:** ಮಾಂಸಾಹಾರಿ ಸ್ತನಿಗಳ ಗುಂಪಿನ (ಕಾರ್ನಿವೊರ) ಹೈಯಿನಿಡೆ ಕುಟುಂಬಕ್ಕೆ ಸೇರಿದ ಕುರೂಪಿಯಾದ ವನ್ಯಪ್ರಾಣಿ. ಇದರ ವೈಜ್ಞಾನಿಕ ನಾಮ ಹೈಯೀನ. ಇದರಲ್ಲಿ ಎರಡು ಪ್ರಭೇದಗಳಿವೆ. ಒಂದು ಹೈ.ಸ್ಟ್ರಯೇಟ (ಪಟ್ಟೆಗಳಿರುವ ಕತ್ತೆಕಿರುಬ). ಇದು ಭಾರತ, ಪರ್ಷಿಯ, ಏಷ್ಯಮೈನರ್ ಮತ್ತು ಉತ್ತರ ಹಾಗೂ ಪೂರ್ವ ಆಫ್ರಿಕದ ಕಾಡುಗಳಲ್ಲಿ ಕಂಡುಬರುತ್ತದೆ. ಇನ್ನೊಂದು ಹೈ.ಬ್ರುನಿಯ (ಕಂದು ಕತ್ತೆಕಿರುಬ). ಇದು ದಕ್ಷಿಣ ಆಫ್ರಿಕದ ನಿವಾಸಿ. ನಾಯಿಗಳಲ್ಲಿರುವಂಥ ಹೆಜ್ಜೆ ಮತ್ತು ಕಾಲುಗಳು, ಬಹಳ ಬಲಿಷ್ಠವಾದ ಮತ್ತು ಉದ್ದವಾದ ಮುಂಗಾಲುಗಳು, ಮೋಟಾದ ಮತ್ತು ಒಂದಕ್ಕೊಂದು ತಾಕುವಂತಿರುವ ಹಿಂಗಾಲುಗಳು, ಚಿಕ್ಕದಾದ ಪೊದೆಯಂತಿರುವ ಬಾಲ, ಬಹು ಬಲಿಷ್ಠವಾದ ದವಡೆಗಳು, ಹಿಂದಕ್ಕೆ ಸೆಳೆದುಕೊಳ್ಳಲಾಗದಂಥ ಉಗುರುಗಳು ಇವು ಈ ಎರಡೂ ಬಗೆಯ ಕತ್ತೆಕಿರುಬಗಳ ಮುಖ್ಯಲಕ್ಷಣಗಳು.



ಕತ್ತೆಕಿರುಬ

ಭಾರತದಲ್ಲಿ ಕಾಣುವ ಕತ್ತೆಕಿರುಬ ಸುಮಾರು ತೋಳದ ಗಾತ್ರದ್ದು. ಬೂದು ಮಿಶ್ರಿತ ಕಂದುಬಣ್ಣದ ಇದರ ದೇಹದ ಮೇಲೆ ಅಸ್ಪಷ್ಟವಾದ ಉದ್ದುದ್ದ ಪಟ್ಟೆಗಳಿವೆ. ಕುತ್ತಿಗೆ ಮತ್ತು ಬೆನ್ನಿನ ಉದ್ದಕ್ಕೂ ಕೇಸರಗಳ ಸಾಲಿವೆ. ಇದರ ಕೂಗು ಬಲು ವಿಚಿತ್ರವಾದುದು. ಅಟ್ಟಹಾಸದಿಂದ ಕೇಕೆ ಹಾಕಿ ನಗುವಂತಿರುತ್ತದೆ. ನಿಶಾಚರಿಯಾದ ಇದು ಸಾಮಾನ್ಯವಾಗಿ ಒಂಟಿಯಾಗಿಯೇ ಜೀವಿಸುತ್ತದೆ. ತನ್ನ ಆಹಾರವನ್ನು ವಾಸನೆಯಿಂದ ಪತ್ತೆಹಚ್ಚುತ್ತದೆ. ಬೇಟೆಯಾಡುವ ಪ್ರಾಣಿಯಲ್ಲದ್ದರಿಂದ ಇದರ ಆಹಾರದಲ್ಲಿ ವೈವಿಧ್ಯವಿಲ್ಲ. ಸತ್ತ ಪ್ರಾಣಿಗಳು ಇದರ ಮುಖ್ಯ ಆಹಾರ. ಹುಲಿ, ಚಿರತೆ ಮುಂತಾದ ಹಿಂಸ್ರಪ್ರಾಣಿಗಳು ತಿಂದು ಮಿಗಿಸಿದುದು ಇದರ ಪಾಲಿಗೆ. ಕೆಲವೊಮ್ಮೆ ಕುರಿ, ಆಡು, ನಾಯಿ ಮುಂತಾದ ಸಾಕುಪ್ರಾಣಿಗಳನ್ನು ಕದ್ದೊಯ್ಯುವುದೂ ಉಂಟು. ಆದರೆ ಮನುಷ್ಯನನ್ನು ಕಂಡರೆ ಭಯಪಡುವ ಈ ಪ್ರಾಣಿ. ಅವನು ವಾಸಿಸುವ ಸ್ಥಳಗಳಿಂದ ದೂರವೇ ಇರುತ್ತದೆ. ಇವುಗಳ ಸಾಂಸಾರಿಕ ಜೀವನದ ಬಗ್ಗೆ ಹೆಚ್ಚು ತಿಳಿಯದು. ಹೆಣ್ಣು ಕತ್ತೆಕಿರುಬ ಒಂದು ಬಾರಿಗೆ 2–4 ಮರಿಗಳನ್ನು ಈಯುತ್ತದೆ. ತಾಯಿಯೇ ಮರಿಗಳನ್ನು ಹಾಲೂಡಿಸಿ ಸಾಕುವುದು ಸಾಮಾನ್ಯ.

ಕತ್ತೆಕಿರುಬಗಳನ್ನು ಪಳಗಿಸುವುದೂ ಉಂಟು. ಸಾಕಿದ ಪ್ರಾಣಿಗಳು ಸಾಧುವಾಗಿಯೂ ನಂಬಿಕೆಗೆ ಅರ್ಹವಾಗಿಯೂ ಇರುತ್ತವೆ. ***

**ಕದಿರುಗಿಣಿ:** ನೆಕ್ಟರಿನೈಯಿಡೆ ಕುಟುಂಬಕ್ಕೆ ಸೇರಿದ ಹಕ್ಕಿ (ಸನ್‌ಬರ್ಡ್). ಈ ಕುಟುಂಬದಲ್ಲಿ ಸುಮಾರು 104 ಪ್ರಭೇದಗಳಿದ್ದು ಎಲ್ಲಕ್ಕೂ ಸನ್‌ಬರ್ಡ್ ಎಂಬ ಹೆಸರೇ ಅನ್ವಯಿಸುತ್ತದೆ. ಇವೆಲ್ಲ ಹೆಚ್ಚಾಗಿ ಉಷ್ಣವಲಯಗಳಲ್ಲಿ ವಾಸಿಸುತ್ತವೆ. ಆಫ್ರಿಕಾದಲ್ಲಿ ಹೆಚ್ಚು. ದಕ್ಷಿಣ ಏಷ್ಯ ಮತ್ತು ಹತ್ತಿರದ ದ್ವೀಪಗಳಲ್ಲಿಯೂ ಹಲವು ಪ್ರಭೇದಗಳು ಕಾಣಿಸಿಗುತ್ತವೆ. ಆಸ್ಟ್ರೇಲಿಯ ಖಂಡದಲ್ಲೂ ಒಂದು ಪ್ರಭೇದವಿದೆ. ಕಾಡುಗಳಲ್ಲಿ ಅಥವಾ ತೋಟಗಳಲ್ಲಿ ಆಹಾರ ಹುಡುಕುತ್ತ ಕಾಲಕಳೆಯುತ್ತವೆ. ಗಂಡುಗಳಿಗೆ ಮಿರುಗುವ ವರ್ಣರಂಜಿತ ಗರಿಗಳಿವೆ. ಹಳದಿ, ಕೆಂಪು ಹಾಗೂ ಕಪ್ಪು ಚುಕ್ಕಿಗಳಿರುವ ಹೊಳೆಯುವ ನೀಲಿ, ಕೆನ್ನೀಲಿ, ಹಸಿರು ಬಣ್ಣಗಳು ಬಹಳ ಸಾಮಾನ್ಯ. ಹೆಣ್ಣುಗಳ ಬಣ್ಣ ಮಾಸಲು. ಹೂವುಗಳ ಬಳಿ ಕುಳಿತು, ಹೂವಿನೊಳಗಿನ ಮಧುವಿಗಾಗಿ ಮತ್ತು ಅಲ್ಲಿಗೆ ಬರುವ ಚಿಕ್ಕಪುಟ್ಟ ಕೀಟಗಳಿಗಾಗಿ ಇವು ಹುಡುಕುತ್ತಿರುವುದು ಬಹಳ ಸಾಮಾನ್ಯ ದೃಶ್ಯ. ಇದಕ್ಕಾಗಿ ಇವಕ್ಕೆ ಬಾಗಿದ ಕೊಕ್ಕು, ಉದ್ದಕ್ಕೆ ಚಾಚಬಹುದಾದ, ಹೆಚ್ಚು ಕಡಿಮೆ ಕೊಳವೆಯಾಕರದ ನಾಲಗೆಯಿದೆ. ಮರದ ರೆಂಬೆಗಳಲ್ಲಿ ಅಂಡಾಕಾರದ ಹುಲ್ಲಿನ ಗೂಡುಗಳನ್ನು ಕಟ್ಟುತ್ತವೆ. ಗೂಡಿಗೆ ತುದಿಯ ಪಕ್ಕದಲ್ಲಿ ಬಾಗಿಲೊಂದಿದ್ದು ಅದರ ಮೇಲೆ ಮುಚ್ಚಳವಿರುತ್ತದೆ. ಹೆಣ್ಣು ಚುಕ್ಕಿಗಳಿರುವ ಎರಡು ಮೊಟ್ಟೆಗಳನ್ನಿಡುತ್ತದೆ. ಏತೋಪೈಗಾ ಮಿಸ್ಟಕ್ಯಾಲಿಸ್ (ಸ್ಕಾರ್ಲೆಟ್ ಸನ್‌ಬರ್ಡ್), ಅರಾಕ್ನೋಥೀರಾ ಲಾಂಗಿರಾಸ್ಟ್ರಿಸ್ (ಸಣ್ಣ ಜೇಡಬೇಟೆಗಾರ), ಚಾಲೊಮಿತ್ರ ಸೆನೆಗೆಲೆನ್ಸಿಸ್ (ಸ್ಕಾರ್ಲೆಟ್ ಎದೆಯ ಸನ್‌ಬರ್ಡ್) ಮತ್ತು ಹೆಡೈಡಿಪ್ನ ಪ್ಲಾಟ್ಯೂರ (ಪಿಗ್ಮಿ ಉದ್ದಬಾಲದ ಸನ್‌ಬರ್ಡ್) ಕೆಲವು ಪ್ರಭೇದಗಳು. ಮೈಸೂರಿನಲ್ಲಿ ಕಾಣಬರುವ ಕದಿರು ಗಿಣಿಗಳಲ್ಲಿ ಕೆನ್ನೀಲಿ ಕದಿರುಗಿಣಿ ಮತ್ತು ಕೆನ್ನೀಲಿ ಕೆದರು ಕದಿರುಗಿಣಿಗಳು ಮುಖ್ಯವಾದವು.

(ಎಚ್.ಬಿ.ಡಿ)

**ಕನ್ಯಾಕೀಟ:** ಓಡನೇಟ ಗಣದ ಜೈಗಾಪ್ಟರ ಉಪಗಣದಲ್ಲಿರುವ ಅನೇಕ ಜಾತಿಯ ಕೀಟಗಳ ಸಾಮಾನ್ಯ ಹೆಸರು. ಪ್ರಪಂಚದಲ್ಲೆಲ್ಲ ವಾಸಿಸುವ ಈ ಕೀಟಗಳು ಉಷ್ಣವಲಯದಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ. ಇವುಗಳ ದೇಹಗಾತ್ರ ಸಾಧಾರಣವಾಗಿದ್ದು, ತೆಳುವಾಗಿದೆ.

ಎರಡು ಜೊತೆ ಸಮರೂಪದ ಪೊರೆಯಂತಿರುವ ರೆಕ್ಕೆಗಳಿವೆ. ಇವುಗಳ ಹಾರಾಟ ದುರ್ಬಲವಾಗಿದೆ. ಕಾರಣ, ರೆಕ್ಕೆಗಳು ಬಲಿಷ್ಠವಾಗಿಲ್ಲ. ಪ್ರೌಢಜೀವಿಗಳ ಬಣ್ಣ ಮಬ್ಬಾಗಿದೆ. ಕೆಲವು ಪ್ರಭೇದದ ಕೀಟಗಳ ರೆಕ್ಕೆಗಳ ಮೇಲೆ ಕೆಂಪು ಅಥವಾ ಕಪ್ಪು ಬಣ್ಣದ ಪಟ್ಟಿಗಳಿವೆ. ದೇಹ ಮತ್ತು ರೆಕ್ಕೆಗಳು ಮಿರುಗುವ ಹಚ್ಚಹಸುರಿನ ಬಣ್ಣದಿಂದ ಕೂಡಿವೆ.

ಕನ್ಯಾಕೀಟಗಳ ದೇಹವು ತಲೆ, ವಕ್ಷ ಮತ್ತು ಉದರಗಳಿಂದಾಗಿದೆ. ತಲೆಯಲ್ಲಿ ದುಂಡಾಗಿರುವ, ಹೊರಚಾಚಿಕೊಂಡಂತಿರುವ ಎರಡು ಸಂಯುಕ್ತ ಕಣ್ಣುಗಳಿವೆ. ಬಲಯುತವಾದ ಎರಡು ದವಡೆಗಳಿವೆ. ವಕ್ಷ ಭಾಗದಲ್ಲಿ ಮೂರು ಖಂಡಗಳಿವೆ. ಎರಡನೆಯ ಮತ್ತು ಮೂರನೆಯ ಖಂಡಗಳು ಆಯತಾಕಾರವಾಗಿದ್ದು ಸ್ವಲ್ಪ ಹಿಂದಕ್ಕೆ ಚಾಚಿವೆ. ಸಮರೂಪದ ರೆಕ್ಕೆಗಳಿವೆ. ರೆಕ್ಕೆಗಳ ಬುಡ ಮಾತ್ರ ಸ್ವಲ್ಪ ಕಿರಿದು. ತೆಳುವಾಗಿ ಪಾರದರ್ಶಕವಾಗಿರುವ ಈ ರೆಕ್ಕೆಗಳ ಮೇಲೆ ಬಲೆಯಂಥ ನರ ವಿನ್ಯಾಸವಿದೆ. ಕನ್ಯಾಕೀಟಗಳು ನೆಲದ ಮೇಲೆ ಕುಳಿತಾಗ ರೆಕ್ಕೆಗಳು ಅಗಲವಾಗಿ ಹರಡದೆ ಮಡಿಚಿಕೊಂಡು ಎದೆಯ ಭಾಗದಿಂದ ಹಿಂಚಾಚಿಕೊಳುತ್ತವೆ. ವಕ್ಷದ ಪ್ರತಿ ಖಂಡದಲ್ಲೂ ಒಂದೊಂದು ಜೊತೆ ಸಂಧಿಪಾದಗಳಿವೆ. ಉದರ ಭಾಗ ಹತ್ತು ಖಂಡಗಳಿಂದ ಕೂಡಿದೆ. ಗಂಡಿನಲ್ಲಿ ಉದರದ ತುದಿಯಲ್ಲಿ ಆದಿಗುದದ ತಟ್ಟೆ ಇಲ್ಲ. ಗಂಡಿನ ಉದರದ ಎರಡನೆಯ ಮತ್ತು ಮೂರನೆಯ ಖಂಡಗಳ ತಳಭಾಗದಲ್ಲಿ ಒಂದು ಮೈಥುನಾಂಗ ಮತ್ತು ಅದಕ್ಕೆ ಸಂಬಂಧಿಸಿದ ಒಂದು ಚೀಲವಿದೆ. ಸಂಭೋಗಕಾಲದಲ್ಲಿ ಹೆಣ್ಣನ್ನು ಆಲಿಂಗಿಸಿ ಹಿಡಿದುಕೊಳ್ಳಲು ಸಹಾಯಕವಾಗುವ ಆಲಿಂಗಕಗಳು (ಕ್ಲಾಸ್ಪರ್) ಕೊನೆಯ ಖಂಡದಲ್ಲಿವೆ. ಹೆಣ್ಣಿನ ಉದರಭಾಗದ ಕೊನೆಯಲ್ಲಿ ಜನನೇಂದ್ರಿಯದ ದ್ವಾರದ ಬಳಿ ಚೆನ್ನಾಗಿ ರೂಪುಗೊಂಡ ಅಂಡನಿಕ್ಷೇಪವಿದೆ (ಓವಿಪಾಸಿಟರ್). ಸಂಭೋಗ ಮಾಡುವಾಗ ಗಂಡು ತನ್ನ ಜನನೇಂದ್ರಿಯ ದ್ವಾರದ ಮೂಲಕ ವೀರ್ಯಾಣುಗಳನ್ನು ಮೈಥುನಾಂಗದ ಬಳಿಯಿರುವ ಚೀಲಕ್ಕೆ ತುಂಬಿಕೊಳ್ಳುತ್ತದೆ. ನಂತರ ಅದು ತನ್ನ ಆಲಿಂಗಕಗಳ ಸಹಾಯದಿಂದ ಹೆಣ್ಣಿನ ಕುತ್ತಿಗೆಯನ್ನು ಬಿಗಿಯಾಗಿ ಹಿಡಿದು, ಹೆಣ್ಣುಕೀಟದ ದೇಹವನ್ನು ಕಮಾನಿನಂತೆ ಬಾಗಿಸಿಕೊಂಡು, ಹೆಣ್ಣಿನ ಜನನೇಂದ್ರಿಯ ದ್ವಾರವನ್ನು ಮೈಥುನಾಂಗದ ಬಳಿಗೆ ಸಾಗಿಸಿ ಅದರ ಮೂಲಕ ವೀರ್ಯಾಣುಗಳನ್ನು ಬಿಡುತ್ತದೆ. ನಂತರ ಹೆಣ್ಣು ಗಿಡದ ರೆಂಬೆಯನ್ನು ಬಲವಾಗಿ ಹಿಡಿದು ತನ್ನ ಅಂಡನಿಕ್ಷೇಪದ ಸಹಾಯದಿಂದ ಗಿಡದ ಮೃದುತೊಗಟೆಯನ್ನು ತೂತುಮಾಡಿ ತನ್ನ ಗರ್ಭಾಂಕುರಿತ ಅಂಡಾಣುಗಳನ್ನು ಇಡುತ್ತದೆ. ಹೆಣ್ಣು ಮೊಟ್ಟೆಗಳನ್ನು ಇಡುವವರೆಗೂ ಗಂಡು ತನ್ನ ಹಿಡಿತವನ್ನು ಸಾಮಾನ್ಯವಾಗಿ ಸಡಿಲಿಸುವುದಿಲ್ಲ.



ಡ್ಯಾಮ್‌ಸಲ್ ಫ್ಲೈ

ಮೊಟ್ಟೆಯಿಂದ ಹೊರಬರುವ ಡಿಂಬಗಳು ನೀರಿನಲ್ಲಿ ಜೀವಿಸುತ್ತವೆ. ಇವುಗಳಿಗೆ ನೆಯಾಡ್ಸ್‌ಗಳೆನ್ನುವರು. ಮಾಂಸಾಹಾರಿಗಳಾದ ಇವು ಸೊಳ್ಳೆಗಳ ಡಿಂಬಗಳು ಮತ್ತು ಕಠಿಣಚರ್ಮಿಗಳ ಡಿಂಬಗಳನ್ನು ತಿಂದು ಜೀವಿಸುತ್ತವೆ. ಇವುಗಳ ದೇಹವೂ ಬಹಳ ತೆಳುವಾಗಿದ್ದು ದುರ್ಬಲವಾಗಿದೆ. ನೀರಿನಲ್ಲಿ ಒಂದು ವರ್ಷ ಜೀವಿಸುತ್ತವೆ. ಈ ಸಮಯದಲ್ಲಿ ೧೦–೧೫ ಬಾರಿ ಹೊರಕವಚವನ್ನು ಕಳಚಿ ದೇಹದ ಗಾತ್ರ ಹೆಚ್ಚಿಸಿಕೊಳ್ಳುತ್ತವೆ. ರೆಕ್ಕೆಗಳಿಲ್ಲದ ಈ ಡಿಂಬಗಳ ದೇಹದ ಕೊನೆಯಲ್ಲಿ ದೋಣಿಯ ಹುಟ್ಟಿನ ಆಕಾರದ ಮೂರು ದೊಡ್ಡ ಶ್ವಸನನಾಳ ಕಿವಿರು (ಟ್ರಾಕಿಯಲ್ ಗಿಲ್ಸ್) ಗಳಿವೆ. ಇವು ನೀರ್‌ಲ್ಲಿ ಉಸಿರಾಡಲು ನೆರವಾಗುತ್ತವೆ. ಪ್ರೌಢಜೀವಿ ರೂಪುಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ಜಲವಾಸಿ ಡಿಂಬದ ದೇಹದಲ್ಲಿ ರೆಕ್ಕೆಗಳು ರೂಪುಗೊಳ್ಳುತ್ತವೆ. ಇತರ ಅಂಗಗಳ ರಚನೆಯಾದ ಮೇಲೆ ಡಿಂಬ ನೀರಿನಿಂದ ಹೊರಬಂದು ಒಂದು ಮರದ ಕೊಂಬೆಯ ಮೇಲೆ ತಂಗುತ್ತದೆ. ಅದರ ಕವಚದ ಪರೆ ಒಣಗಿದ ಮೇಲೆ, ದೇಹ ಬಿರಿದು, ಅದರೊಳಗಿನಿಂದ ಪ್ರೌಢಜೀವಿ ಹೊರಬಂದು ಹಾರಲಾರಂಭಿಸುತ್ತದೆ.



ಡಾಮ್ಸಲ್ ಫ್ಲೈ ನ ಅಪ್ಸರೆ ಕೀಟ

***

**ಕಪಾಲ:** ಕಶೇರುಕಗಳ ತಲೆಬುರುಡೆ ಭಾಗದ ಕಂಕಾಲ. ಇದು ಅಕ್ಷೀಯ ಕಂಕಾಲದ ಭಾಗ. ಮಿದುಳನ್ನು ರಕ್ಷಿಸುತ್ತದೆ. ಇದನ್ನು ಮಿದುಳು ಪೆಟ್ಟಿಗೆ ಎಂದು ಕರೆಯುತ್ತಾರೆ. ಮುಂಭಾಗ, ಮೇಲ್ಭಾಗ, ಪಕ್ಕಕ್ಕೆ, ಕೆಳಗೆ ಮತ್ತು ಹಿಂದಿನ ಭಾಗಗಳು ಮೂಳೆಗಳಿಂದಾಗಿವೆ. ಇದರೊಳಗೆ ಮಿದುಳು ಸುರಕ್ಷಿತವಾಗಿದೆ. ಹಿಂಭಾಗದಲ್ಲಿ ಫೊರಾಮೆನ್ ಮ್ಯಾಗ್ನಂ ಬೃಹತ್ ರಂಧ್ರವಿದ್ದು ಅದರ ಮೂಲಕ ಬೆನ್ನಿನ ನರಹುರಿಯು ಮಿದುಳಿನೊಂದಿಗೆ ಸಂಪರ್ಕ ಪಡೆದಿದೆ. ಈ ರಂಧ್ರದ ತಳಪಕ್ಕದಲ್ಲಿ ಅಥವಾ ಕೆಳಗೆ ಉಬ್ಬಿದ ಕಾಂಡೈಲ್‌ಗಳೆಂಬ ಗುಬುಟುಗಳಿದ್ದು ಮೊದಲ ಕಶೇರು ಮಣಿಯೊಂದಿಗೆ ಕೀಲಿಕೊಳ್ಳಲು ನೆರವಾಗುತ್ತವೆ. ಸ್ತನಿಗಳು, ಉಭಯಚರಿಗಳಲ್ಲಿ ಎರಡು ಕಾಂಡೈಲ್‌ಗಳಿದ್ದು, ಪಕ್ಷಿಗಳಲ್ಲಿ ಒಂದೇ ಒಂದು ಕಾಂಡೈಲ್ ಇದೆ. ಕಾಂಡೈಲ್ ಇರುವ ಭಾಗದಲ್ಲಿ ಆಕ್ಸಿಪಿಟಲ್ ಎಲಬುಗಳಿರುವುದರಿಂದ ಅದನ್ನು ಆಕ್ಸಿಪಿಟಲ್ ವಲಯವೆಂದು, ಅವನ್ನು ಆಕ್ಸಿಪಿಟಲ್ ಕಾಂಡೈಲ್‌ಗಳೆಂದು ಕರೆಯಲಾಗುತ್ತದೆ. ಫೊರಾಮೆನ್ ಮ್ಯಾಗ್ನಂ ರಂಧ್ರವು ಉಭಯಚರಿಗಳು, ಸರೀಸೃಪಗಳಲ್ಲಿ ಹಿಮ್ಮುಖಿನಾಗಿದ್ದು ಪಕ್ಷಿ ಮತ್ತು ಸ್ತನಿಗಳಲ್ಲಿ ತಳಮುಖವಾಗಿದೆ. ಮಾನವ ಪೂರ್ವಜರಿಂದ, ಮನುಷ್ಯನ ವಿಕಾಸವನ್ನು ಗುರುತಿಸುವಾಗ ಕಪಾಲದ ಗಾತ್ರ ಅದರ ಒಳಗಿನ ಆಯಾತವನ್ನು ಮುಖ್ಯ ಲಕ್ಷಣವಾಗಿ ಪರಿಗಣಿಸುತ್ತಾರೆ. ಆಧುನಿಕ ಮಾನವ, ಹೋಮೊ ಸೇಪಿಯನ್ಸ್‌ನಲ್ಲಿ ಅದು ಅತ್ಯಂತ ದೊಡ್ಡದು ಮತ್ತು ಅವನ ಅತ್ಯಂತ ಮುಖ್ಯ ವಿಕಾಸ ಲಕ್ಷಣ.

(ಎಚ್.ಬಿ.ಡಿ.)

**ಕಪೂಚಿನ್ ಕೋತಿ:** ಸಿಬಸ್ ಕಪೂಸಿನಸ್ ಎಂಬ ಶಾಸ್ತ್ರೀಯ ಹೆಸರಿನ ಕೋತಿ. ಪ್ರೈಮೇಟುಗಳ ಗಣದ ಪ್ಲಾಟಿರೈನಿ ಬುಡಕಟ್ಟಿನ ಸಿಬಿಡೆ ಕುಟುಂಬಕ್ಕೆ ಸೇರಿದೆ. ಅಮೆರಿಕದ ಉಷ್ಣವಲಯಗಳಲ್ಲಿ ಸಿಕ್ಕುವ ಇದು ನಿಕರಾಗುವದಿಂದ ಪರಗ್ವೆಯವರೆಗೂ ಹರಡಿದೆ. ಬಾಲ ಸುರುಳಿ ಸುತ್ತಿಕೊಳ್ಳಬಲ್ಲುದು. ಇದೇ ಕುಟುಂಬದ ಇತರ ಕೋತಿಗಳೊಂದಿಗೆ ಹೋಲಿಸಿದರೆ ಇದರ ಬಾಲ ಬಹಳ ಚಿಕ್ಕದು ಮತ್ತು ಇದರಲ್ಲಿ ಕುಂಡೆಗಳ ಮೇಲೆ ರೋಮಗಳಿವೆ. ಗಾತ್ರದಲ್ಲಿ ಇದು ಬೆಕ್ಕಿನಂತಿದೆ. ಮೈ ಮೇಲಿನ ಕೂದಲು ಉಣ್ಣೆಯಂತಿಲ್ಲ.

ಸಾಮಾನ್ಯವಾಗಿ ಇವು ಗುಂಪು ಗುಂಪಾಗಿ ಎತ್ತರವಾದ ಮರಗಳ ಮೇಲೆ ಓಡಾಡಿಕೊಂಡಿರುತ್ತವೆ. ಹಣ್ಣು, ಎಳೆಯ ಕಾಂಡ, ಮೊಗ್ಗುಗಳು, ಕೀಟಗಳು, ಮೊಟ್ಟೆ ಮತ್ತು ಮರಿಹಕ್ಕಿಗಳು ಇವುಗಳ ಪ್ರಧಾನ ಆಹಾರ. ಇವನ್ನು ಹಿಡಿದು ಸುಲಭವಾಗಿ ಪಳಗಿಸಬಹುದು. ಬಹಳ ಸಾಧು ಪ್ರಾಣಿಗಳಾದ ಇವು ಮನೆಯಲ್ಲಿ ಹಾಗೂ ಪ್ರಾಣಿ ಸಂಗ್ರಹಾಲಯಗಳಲ್ಲಿ ಸಾಕಲು ಯೋಗ್ಯವಾದುವು. (ಎಚ್.ಬಿ.ಡಿ)

**ಕಪೋತ:** ಕೊಲಂಬಿಡೆ ಕುಟುಂಬಕ್ಕೆ ಸೇರಿದ ಹಕ್ಕಿಗಳು. ಇವನ್ನು ಬೆಳವಗಳೆಂದೂ ಕರೆಯುವುದುಂಟು. ಪಾರಿವಾಳಗಳೂ ಇದೇ ಕುಟುಂಬಕ್ಕೆ ಸೇರಿವೆ. ಕಪೋತಗಳಿಗೂ ಪಾರಿವಾಳಗಳಿಗೂ ಗುಣಲಕ್ಷಣಗಳಲ್ಲಿ ಅಷ್ಟೇನೂ ಭಿನ್ನತೆ ಕಂಡುಬರುವುದಿಲ್ಲ. ಈ ಹಕ್ಕಿಗಳನ್ನು ಪಾರಿವಾಳಗಳಿಂದ ಬೇರೆ ಮಾಡಲು ತಾಂತ್ರಿಕ ಭೇದಗಳೂ ಇಲ್ಲ. ಇವು ಸಾಧಾರಣವಾಗಿ ಪಾರಿವಾಳಗಳಿಗಿಂತ ಗಾತ್ರದಲ್ಲಿ ಸಣ್ಣವು. ನಸುನೀಲಿ, ಕಂದು, ಬೂದು, ಅಥವಾ ಈ ಬಣ್ಣಗಳ ಮಿಶ್ರಣ ಇವುಗಳ ಬಣ್ಣ. ಯಾವ ಬಣ್ಣವಿದ್ದರೂ ಹೊಳಪು ಕಾಣುವುದು. ಕೊಕ್ಕು, ತಲೆ, ಕತ್ತು, ದೇಹ, ರೆಕ್ಕೆ ಕಾಲುಗಳು ಸಾಧಾರಣವಾಗಿ ಪಾರಿವಾಳದ ಹಾಗೇ ಇರುತ್ತವೆ. ಇವು ಸಣ್ಣ ದನಿಯಲ್ಲಿ ಅಥವಾ ಕೂ ಎಂಬ ಶಬ್ದದಲ್ಲಿ ಕೂಗುತ್ತವೆ. ಅನೇಕ ಪ್ರಭೇದಗಳು ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಗುಡ್ಡ ಮತ್ತು ಬಯಲು ಪ್ರದೇಶಗಳಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ಜೊತೆಯಾಗಿ ನೆಲದ ಮೇಲೆ ಅಥವಾ ಮರಗಳ ಮೇಲೆ ವಾಸಿಸುತ್ತವೆ. ಬೀಜ, ಕಾಳು, ಹಣ್ಣು, ಕೀಟ ಮತ್ತು ಹುಳುಗಳು ಇವುಗಳ ಆಹಾರ.

ಇವು ಗೂಡುಗಳನ್ನು ಸಣ್ಣ ಕಡ್ಡಿಗಳಿಂದ ಕಟ್ಟುತ್ತವೆ. ಗೂಡನ್ನು ಗುಡ್ಡ, ಮರದ ತುದಿ, ದೊಡ್ಡ ಕಟ್ಟಡಗಳು, ಮರದ ಪೊಟರೆ ಅಥವಾ ನೆಲದ ಮೇಲಿನ ಸಸ್ಯಗಳ ಮಧ್ಯೆ ನಿರ್ಮಿಸುವುದು ವಾಡಿಕೆ. ಮೊಟ್ಟೆಗಳು ಸಾಮಾನ್ಯವಾಗಿ ಬಿಳುಪು. ಕೆಲವು ಸಾರಿ ಮಾಸಲು ಬಿಳುಪಾಗಿರುತ್ತವೆ. ಪ್ರತಿಯೊಂದು ಸಾರಿಗೂ 1–3 ಮೊಟ್ಟೆಗಳನ್ನಿಡುತ್ತವೆ. ಸಾಧಾರಣವಾಗಿ ಗಂಡು ಹೆಣ್ಣುಗಳೆರಡೂ ಮೊಟ್ಟೆಗಳ ಮೇಲೆ ಕೂತು ಕಾವನ್ನು ಕೊಡುತ್ತವೆ.

ಬಹುಮಟ್ಟಿಗೆ ಬಾಳಿನ ಉದ್ದಕ್ಕೂ ಒಂದು ಗಂಡು ಒಂದೇ ಹೆಣ್ಣಿನೊಡನೆ ವಾಸಿಸುತ್ತದೆ. ಅವುಗಳಲ್ಲೊಂದು ಆಕಸ್ಮಿಕಕ್ಕೊಳಗಾದಾಗ ಇನ್ನೊಂದು ಎಷ್ಟೋ ಕಾಲ ಸುಮ್ಮನಿದ್ದು ಅನಂತರ ಇನ್ನೊಂದನ್ನು ವರಿಸುವುದು. ಕಪೋತಗಳಲ್ಲಿ ಅನೇಕ ವಿಧಗಳುಂಟು. ಬೆಟ್ಟದ ಕಪೋತದ ಬಣ್ಣ ನಸುಬೂದು. ಮರುಗುವ ಕಪೋತದ (ಮೌರ್ನಿಂಗ್ ಡವ್–ಜನೈಡೂರ ಮ್ಯಾಕ್ರೂರ) ವಿಚಾರವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಇದರ ಹೃದಯದ ಬಡಿತ ಒಂದು ಮಿನಿಟಿಗೆ 135. ರೆಕ್ಕೆ ಬಡಿತದಿಂದ ಈ ಪಕ್ಷಿಯನ್ನು ಗುರುತಿಸಬಹುದು. ಗಂಡು ಹಕ್ಕಿ ಹೆಣ್ಣು ಹಕ್ಕಿಗೆ ಗೂಡು ಕಟ್ಟುವ ಸ್ಥಳವನ್ನು ತೋರಿಸುತ್ತದೆ ಮತ್ತು ಗೂಡಿಗೆ ಬೇಕಾಗುವ ಪದಾರ್ಥಗಳನ್ನು ಒದಗಿಸುತ್ತದೆ. ಇದು ಮೊಟ್ಟೆಗಳಿಗೆ 21 ದಿನ ಕಾವು ಕೊಡುವುದು. ಋತು ಮಾಸ ಮಾರ್ಚಿಯಿಂದ ಅಕ್ಟೋಬರ್ ವರೆಗೆ ವ್ಯಾಪಿಸುತ್ತದೆ. ಚಕ್ರ ಅಥವಾ ಆಮೆ ಕಪೋತ (ರಿಂಗ್ ಡವ್ ಅಥವಾ ಟರ್ಟ್ಲ್ ಡವ್) ಬೇರೆ ಜಾತಿಯ ಕಪೋತಗಳ ಮೊಟ್ಟೆಗಳಿಗೆ ಕಾವನ್ನು ಕೊಡುವುದು. ಹಣ್ಣು ತಿನ್ನುವ ಕಪೋತ (ಫ್ರೂಟ್ ಡವ್–ಟೆಲಿನೋಪಸ್) ದಕ್ಷಿಣ ಪೆಸಿಫಿಕ್ ದ್ವೀಪಗಳಲ್ಲಿದೆ.

ಅನೇಕ ಹೆಸರಿನ ಆಮೆ ಕಪೋತಗಳು (ಟರ್ಟ್ಲ್ ಡವ್) ಮತ್ತು ಕೋಗಿಲೆ ಕಪೋತಗಳೂ (ಕಕೂ ಡವ್) ನಮ್ಮ ದೇಶದಲ್ಲಿವೆ. ಇವು ಮ್ಯಾಕ್ರೊಪೈಜಿಯ ಮತ್ತು ಸ್ಟ್ರೆಪ್ಟೋಪೇಲಿಯ ಜಾತಿಗೆ ಸೇರಿವೆ.

ಭಾರತ, ನೇಪಾಳ, ಭೂತಾನ್, ಪಾಕಿಸ್ತಾನ ದೇಶಗಳಲ್ಲಿ ಸುಮಾರು 20 ಪ್ರಭೇದಗಳಿವೆ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಎರಡು ಪ್ರಭೇದಗಳನ್ನು ವಿವರಿಸಿದ್ದಾರೆ.

ಮಾನವ ಕ್ರಿಪೂ ಮೂರು ಸಹಸ್ರ ವರ್ಷಗಳ ಹಿಂದೆಯೆ ಪಾರಿವಾಳವನ್ನು ಪಳಗಿಸಲು ಆರಂಭಿಸಿದ. ಆದಿಕಾಲದ ಆ ಕಾಡು ಪಾರಿವಾಳದ ಪೂರ್ವಜನಿಂದ ಇಂದಿಗೆ ಸುಮಾರು 200ಕ್ಕೂ ಹೆಚ್ಚು ವಿವಿಧ ರೀತಿಯ ತಳಿಗಳು ರೂಪುಗೊಂಡಿವೆ. ಈ ವಿಚಾರವಾಗಿ ಸುದೀರ್ಘವಾದ ಅಧ್ಯಯನವನ್ನು ನಡೆಸಿ ಮೊದಲು ಪರಿಚಯ ಮಾಡಿಕೊಟ್ಟ ಕೀರ್ತಿ ಚಾರ್ಲ್ಸ್ ಡಾರ್ವಿನ್ನನಿಗೆ ಸಲ್ಲುತ್ತದೆ.

ಪಾರಿವಾಳಗಳಲ್ಲಿ ಕೆಲವು ಪ್ರಭೇದಗಳಿಗೆ ವಿವಿಧ ರೀತಿಯ ತರಪೇತು ನೀಡಬಹುದು. ದೂರ ಪ್ರಯಾಣದಲ್ಲಿ ನಿರ್ದಿಷ್ಟ ಸ್ಥಳವನ್ನು ಗುರುತಿಟ್ಟುಕೊಂಡು ಹೋಗುವುದು ಮತ್ತು ಹೊರಟ ಸ್ಥಳಕ್ಕೆ ಸರಿಯಾಗಿ ಹಿಂದಿರುವುದು, ಪಂದ್ಯಾಟಗಳಿಗೆ (ರೇಸಿಂಗ್) ಪಳಗಿಸುವುದು, ಟಪಾಲು ಸಾಗಿಸುವುದು ಇತ್ಯಾದಿ ಕಾರ್ಯಗಳನ್ನು ಅವಕ್ಕೆ ಕಲಿಸುವುದು ಸಾಧ್ಯ. ಇಂದಿಗೂ ಕೆಲವು ಸಂದರ್ಭಗಳಲ್ಲಿ ಅಂಚೆಯನ್ನು ಸಾಗಿಸಲು ಪಳಗಿದ ಪಾರಿವಾಳಗಳನ್ನು ಬಳಸುವುದುಂಟು. ನೋಡಿ–ಪಾರಿವಾಳ. (ಎನ್.ವಿ.ಎ)

**ಕಪ್ಪುಕೋತಿ:** ಪ್ರೈಮೇಟುಗಳ ಗಣದ ಕ್ಯಾಟರೈನಿ ಬುಡಕಟ್ಟಿನ ಸೈನೊಪಿತೆಕಾಯಿಡೆ ಕುಟುಂಬಕ್ಕೆ ಸೇರಿದ ಸೈನೊಪಿತೆಕಸ್ ನೈಜರ್ ಎಂಬ ಶಾಸ್ತ್ರೀಯ ಹೆಸರಿನ ಕೋತಿ. ನೋಡುವುದಕ್ಕೆ ಬಬೂನ್ ಕೋತಿಯಂತೆಯೇ ಇದೆ. ದೇಹದ ಗಾತ್ರ, ನಿಲ್ಲುವ ಭಂಗಿ, ದಪ್ಪ ಮತ್ತು ಪ್ರಮುಖವಾದ ಹುಬ್ಬುಗಳು, ನಾಯಿಯಂಥ ಮೂತಿ, ತೆಳುವಾದ ಉದ್ದನೆಯ ನಾಸಿಕ ಮತ್ತು ಕಣ್ಣುಗಳ ಕೆಳಗೆ ಮೂಗಿನ ಎರಡೂ ಪಕ್ಕಗಳಲ್ಲಿ ಇರುವ ರೋಮರಹಿತ ಕಪ್ಪು ಚರ್ಮದ ಉಬ್ಬು–ಇವುಗಳಲ್ಲೆಲ್ಲ ಬಬೂನ್ ಕೋತಿಯನ್ನು ಹೋಲುತ್ತದೆ. ಮೈ ಕಾಡಿಗೆಕಪ್ಪು ಬಣ್ಣದ್ದು. ಒತ್ತಾಗಿ ಬೆಳೆದ ಕೂದಲುಗಳಿಂದ ಕೂಡಿದ ಚರ್ಮ ಮತ್ತು ತಲೆಯ ಮೇಲೆ ಉದ್ದವಾದ ಬಿರುಸಾದ ಕೂದಲುಗಳು ಇವೆ. ಬೇಕೆಂದಾಗ ಕೋತಿ ಈ ಕೂದಲುಗಳನ್ನು ನಿಮಿರಿಸಿ ಶತ್ರುಗಳನ್ನು ಹೆದರಿಸಲು ವಿಲಕ್ಷಣ ರೂಪ ತಾಳುವುದು.

ಇದು ಬಹಳ ಬುದ್ಧಿವಂತ ಪ್ರಾಣಿಯೆಂದು ಹೆಸರಾಗಿದೆ. ನಮ್ಮಲ್ಲಿರುವ ಕೋತಿ ಮೊಸಳೆಯ ಕತೆಯಷ್ಟೆ ಚತುರವಾದ ಕತೆಗಳು ಇದರ ಬಗ್ಗೆ ಇವೆ. ಸೆಲೆಬಸ್ ದ್ವೀಪವಾಸಿಗಳು ಇವನ್ನು ಬಹಳ ಪೂಜ್ಯ ಭಾವನೆಯಿಂದ ನೋಡುತ್ತಾರೆ. ಅಲ್ಲದೆ ಮಾನವರಿಗಿಂತಲೂ ಇವು ಶ್ರೇಷ್ಠವೆಂತಲೂ ತಾವು ಇವುಗಳ ವಂಶಜರೆಂದೂ ಹೇಳಿಕೊಳ್ಳುತ್ತಾರೆ. ***

ಕಪ್ಪುಕೋತಿ

**ಕಪ್ಪೆ:** ಕಶೇರುಕಗಳ ಗುಂಪಿನ ದ್ವಿಚರವರ್ಗದ (ಆಂಫಿಬಿಯ) ಅನ್ಯೂರ ಗಣಕ್ಕೆ ಸೇರಿದ ಪ್ರಾಣಿ. ಸಾಮಾನ್ಯವಾಗಿ ಬಾಲವಿಲ್ಲದ ದ್ವಿಚರಿಗಳಿಗೆಲ್ಲ ಈ ಹೆಸರು ಅನ್ವಯವಾಗುತ್ತದೆ. ಇವುಗಳ ವರ್ಗದ ಹೆಸರೇ ಸೂಚಿಸುವಂತೆ ಕಪ್ಪೆಗಳು ನೀರಿನಲ್ಲೂ ನೆಲದ ಮೇಲೂ ಜೀವಿಸಬಲ್ಲುವು. ಇಂಥ ಜೀವನಕ್ಕೆ ತಕ್ಕಂತೆ ದೇಹದ ಮಾರ್ಪಾಟುಗಳನ್ನೂ ಹೊಂದಿವೆ. ಕಪ್ಪೆಗಳಲ್ಲಿ ಹಲವಾರು ವಿಧಗಳಿವೆ. ಇವುಗಳಲ್ಲಿ ನೀರಿನಲ್ಲಿ ವಾಸಿಸುವ ಕಪ್ಪೆ (ಫ್ರಾಗ್), ನೆಲಗಪ್ಪೆ (ಟೋಡ್) ಮತ್ತು ಹಾರುಗಪ್ಪೆ (ಫ್ಲೈಯಿಂಗ್ ಫ್ರಾಗ್) ಮುಖ್ಯವಾದುವು. ಸಾಧಾರಣವಾಗಿ ನೀರಿನಲ್ಲಿ ವಾಸಿಸುವ ಕಪ್ಪೆಗಳು ತಮ್ಮ ಬದುಕನ್ನು ಸಂಪೂರ್ಣವಾಗಿ ನೀರಿನಲ್ಲೇ ಸಾಗಿಸುತ್ತವೆ. ಇವುಗಳ ಚರ್ಮ ನುಣುಪಾಗಿದ್ದು ಲೋಳೆಯಿಂದ ಆವೃತವಾಗಿರುತ್ತದೆ. ಅಲ್ಲದೆ ಇವುಗಳ ಭುಜಕಟ್ಟಿನ (ಶೋಲ್ಡರ್ ಗರ್ಡಲ್) ಎರಡು ಭಾಗಗಳು ಕೂಡಿಕೊಂಡು ಒಂದು ದೃಢವಾದ ಪಟ್ಟಿಯಾಗಿವೆ. ನೆಲಗಪ್ಪೆಗಳು ನೀರಿನಲ್ಲೇ ಜನ್ಮ ತಾಳುವುದಾದರೂ ಪ್ರೌಢಾವಸ್ಥೆಯನ್ನು ನೆಲದ ಮೇಲೆ ಕಳೆಯುತ್ತವೆ. ಮೊಟ್ಟೆಯಿಡಲು ಮಾತ್ರ ಅವು ನೀರಿಗೆ ಹೋಗುತ್ತವೆ. ಇವುಗಳ ಚರ್ಮ ಒರಟು ಹಾಗೂ ಒಣಗಿರುತ್ತದೆಯಲ್ಲದೆ ಅದರ ಮೇಲೆಲ್ಲ ಬುಗುಟುಗಳಿವೆ. ಇವುಗಳಲ್ಲಿ ಭುಜಕಟ್ಟಿನ ಎರಡು ಭಾಗಗಳು ಕೂಡಿಕೊಂಡಿರದೆ ಒಂದರ ಮೇಲೊಂದು ಚಾಚಿಕೊಂಡಿವೆ. ಹಾರುಗಪ್ಪೆ ನೀರಿನಲ್ಲಿ ವಾಸಿಸುವ ಕಪ್ಪೆಯಂತೆಯೇ ಇದೆ. ಆದರೆ ಅದಕ್ಕಿಂತ ಗಾತ್ರದಲ್ಲಿ ಚಿಕ್ಕದು. ಕೈಕಾಲುಗಳ ಬೆರಳುಗಳ ಮಧ್ಯೆ ರೆಕ್ಕೆಯಂತೆ ಹರಡಿರುವ ಜಾಲಪಾದವಿದೆ. ಮರದಿಂದ ಮರಕ್ಕೆ ಹಾರುವಾಗ ಈ ಜಾಲಪಾದವನ್ನು ಪ್ಯಾರಾಚೂಟಿನಂತೆ ಬಳಸಿಕೊಳ್ಳಬಲ್ಲುದು.

ಕಪ್ಪೆ ಸಾಮಾನ್ಯವಾಗಿ ಕೆರೆ, ಕುಂಟೆ, ಸಣ್ಣತೊರೆಗಳು ಮತ್ತಿತರ ತೇವಪೂರಿತ ಸ್ಥಳಗಳಲ್ಲಿ ವಾಸಿಸುತ್ತದೆ. ಸಣ್ಣಪುಟ್ಟ ಹುಳುಗಳು, ಬಸವನ ಹುಳುಗಳು ಮತ್ತು ಕೀಟಗಳು ಇದರ ಪ್ರಧಾನ ಆಹಾರ. ಇಂಥ ಪ್ರಾಣಿಗಳನ್ನು ತಿಂದು ನಾಶಪಡಿಸುವುದರಿಂದ ರೈತನಿಗೆ ಬಹಳ ಸಹಾಯಕವಾಗಿದೆ.

ಕಪ್ಪೆಯ ದೇಹವನ್ನು ತಲೆ, ಮುಂಡ ಮತ್ತು ಕೈಕಾಲುಗಳೆಂದು ವಿಭಾಗಿಸಬಹುದು. ತಲೆ ಚಪ್ಪಟೆಯಾಗಿಯೂ ತ್ರಿಕೋಣಾಕಾರವಾಗಿಯೂ ಇದೆ. ಮೂತಿಯ ತುದಿಯಲ್ಲಿ ಒಂದು ಅಗಲವಾದ ಬಾಯಿಯೂ ಕೊಂಚ ಮೇಲ್ಭಾಗದಲ್ಲಿ ಒಂದು ಜೊತೆ ಹೊರನಾಸಿಕ ರಂಧ್ರಗಳೂ ಇವೆ. ಸ್ವಲ್ಪ ಹಿಂದಕ್ಕೆ ಎರಡು ದೊಡ್ಡ ಉಬ್ಬಿಕೊಂಡ ಕಣ್ಣುಗಳಿವೆ. ಕಣ್ಣುಗಳಿಗೆ ಮನುಷ್ಯರಲ್ಲಿರುವಂತೆಯೇ ಎರಡು ಸಾಮಾನ್ಯ ರೆಪ್ಪೆಗಳೂ ಪಾರದರ್ಶಕವಾದ ನಿಮೇಷಕ ಪಟಲ (ನಿಕ್ಟಿಟೇಟಿಂಗ್ ಮೆಂಬ್ರೇನ್) ಎಂಬ ಮೂರನೆಯ ರೆಪ್ಪೆಯೂ ಇವೆ. ಕಣ್ಣುಗಳ ಹಿಂಬದಿಯಲ್ಲಿ ದುಂಡಾದ ಕಿವಿಯ ತಮಟೆಗಳಿವೆ. ತಲೆಗೂ ಮುಂಡಕ್ಕೂ ನಡುವೆ ಸ್ಪಷ್ಟವಾದ ಕುತ್ತಿಗೆಯಿಲ್ಲ. ಮುಂಡಭಾಗ ಹೆಚ್ಚುಕಡಿಮೆ ಕೊಳವೆಯಾಕಾರವಾಗಿದ್ದು ಎರಡು ಜೊತೆ ಕಾಲುಗಳನ್ನು ಹೊಂದಿದೆ. ಮುಂಡದ ಹಿಂತುದಿಯಲ್ಲಿ ಹಿಂಗಾಲುಗಳ ನಡುವೆ ಮಲ, ಮೂತ್ರ ಹಾಗೂ ಜನನೇಂದ್ರಿಯ ದ್ವಾರವಾದ ಕ್ಲೋಯಕ ಎಂಬ ರಂಧ್ರವಿದೆ. ಮುಂಗಾಲಿನಲ್ಲಿ ನಾಲ್ಕು ಬೆರಳುಗಳೂ ಹಿಂಗಾಲಿನಲ್ಲಿ ಐದು ಬೆರಳುಗಳೂ ಇವೆ. ಹಿಂಗಾಲುಗಳು ಮುಂಗಾಲುಗಳಿಗಿಂತ ಬಹಳ ಉದ್ದ. ಎಲ್ಲ ಬೆರಳುಗಳ ನಡುವೆ ಜಾಲಪಾದವಿದೆ. ಇದು ಈಜುವುದಕ್ಕೆ ಸಹಕಾರಿ. ಗಂಡು ಕಪ್ಪೆಯಲ್ಲಿ ದವಡೆಗಳ ಬಳಿ ಎರಡೂ ಪಕ್ಕಗಳಲ್ಲಿ ಬಾಯ ಅಂಗುಳದೊಳಕ್ಕೆ ತೆರೆಯುವಂಥ ಎರಡು ಧ್ವನಿಚೀಲಗಳಿವೆ. ಕಪ್ಪೆಯ ವಿಚಿತ್ರವಾದ ಹಾಗೂ ವಿಶಿಷ್ಟವಾದ ವಟಗುಟ್ಟುವ ಶಬ್ದವನ್ನು ವರ್ಧಿಸಲು ಇವು ಸಹಕಾರಿಯಾಗಿವೆ.

ಕಶೇರುಕಗಳ ರಚನೆಯ ಅಭ್ಯಾಸಕ್ಕೆ ಇದು ಸರಳವಾದ ಮತ್ತು ಮೂಲರಚನೆಯನ್ನು ತೋರುವ ಮಾದರಿಯಾಗಿದೆ. ಮನುಷ್ಯದೇಹದಲ್ಲಿರುವಂತೆಯೇ ಕಪ್ಪೆಯಲ್ಲಿಯೂ ಚೆನ್ನಾಗಿ ರೂಪುಗೊಂಡ ಅಸ್ಥಿಪಂಜರವಿದೆ. ಇದನ್ನು ಮುಖ್ಯವಾಗಿ ಅಕ್ಷೀಯ ಅಸ್ಥಿಪಂಜರ, ಅನುಬಂಧಿ ಅಸ್ಥಿಪಂಜರ ಮತ್ತು ಅವಯವಭಾಗ ಎಂದು ವಿಭಾಗಿಸಬಹುದು. ಅಕ್ಷೀಯ ಭಾಗದಲ್ಲಿ ಒಂಬತ್ತು ಕಶೇರುಖಂಡವನ್ನೊಳಗೊಂಡ ಬೆನ್ನುಮೂಳೆಯೂ ಭಾಗಶಃ ಮೂಳೆ ಮತ್ತು ಭಾಗಶಃ ಮೃದ್ವಸ್ಥಿಯಿಂದಾದ ತಲೆಬುರುಡೆಯೂ ಇವೆ. ಬೆನ್ನುಮೂಳೆಯ ಹಿಂತುದಿಯಲ್ಲಿ ಅದರಷ್ಟೇ ಉದ್ದವಾದ ಯೂರೋಸ್ಟೈಲ್ ಎಂಬ ಕಡ್ಡಿಯಂಥ ಭಾಗವಿದೆ. ತಲೆಬುರುಡೆಯಲ್ಲಿ ಹಲವಾರು ಎಲುಬುಗಳಿಂದಾದ ಮಿದುಳುಪೆಟ್ಟಿಗೆ, ಮೇಲಿನ ಹಾಗೂ ಕೆಳಗಿನ ದವಡೆಗಳು ಮತ್ತು ಹೈಯಾಯಿಡ್ ಉಪಕರಣವೆಂಬ ವಿಶೇಷ ರೀತಿಯ ಭಾಗವೂ ಇವೆ. ಈ ಉಪಕರಣ ಕಪ್ಪೆಮರಿಯಲ್ಲಿ ಕಿವಿರುಗಳಿಗೆ ಆಧಾರವಾಗಿರುತ್ತದೆ. ಅನುಬಂಧಿ ಅಸ್ಥಿಪಂಜರದಲ್ಲಿ ಹಲವಾರು ಎಲುಬುಗಳಿಂದಾದ ಭುಜಾಸ್ಥಿ ವಲಯವೂ V–ಆಕಾರದ ಕಟ್ಯಾಸ್ಥಿವಲಯವೂ ಇವೆ. ಭುಜಾಸ್ಥಿವಲಯಕ್ಕೆ ಮುಂಗಾಲುಗಳ ಆಧಾರಮೂಳೆಗಳೂ ಕಟ್ಯಾಸ್ಥಿವಲಯಕ್ಕೆ ಹಿಂಗಾಲುಗಳ ಮೂಳೆಗಳೂ ಕೂಡಿಕೊಂಡಿವೆ. ಕಾಲುಗಳ ಮೂಳೆಗಳು ಹೆಚ್ಚು ಕಡಿಮೆ ಮನುಷ್ಯರಲ್ಲಿರುವಂತೆಯೆ ಇವೆ.

ಕಪ್ಪೆಯ ಜೀರ್ಣಾಂಗಗಳು ಮನುಷ್ಯರಲ್ಲಿರುವಂತೆಯೆ ಇವೆ. ಬಹಳ ದೊಡ್ಡ ಬಾಯಿ, ವಿಚಿತ್ರವಾದ ನಾಲಗೆ ಮತ್ತು ದೊಡ್ಡ ದವಡೆಗಳು–ಇವು ಕಪ್ಪೆಯ ವಿಶೇಷ ಲಕ್ಷಣಗಳು. ನಾಲಗೆ ಬಾಯಂಗುಳದ ಮುಂಭಾಗದಲ್ಲಿ ಅಂಟಿಕೊಂಡು ಹಿಂದಕ್ಕೆ ಮಡಿಚಿಕೊಂಡಿದೆ. ಈ ನಾಲಗೆಯನ್ನು ಸಾಕಷ್ಟು ದೂರ ಚಾಚಿ, ಹಾರಾಡುವ ಕೀಟಗಳನ್ನು ಅರೆಕ್ಷಣದಲ್ಲಿ ಹಿಡಿದು ಬಾಯಿಗೆ ಹಾಕಿಕೊಳ್ಳಬಲ್ಲುದು. ನಾಲಗೆಯ ತುದಿ ಅಂಟಾಗಿರುವುದರಿಂದ ಕೀಟಗಳನ್ನು ಹಿಡಿಯುವುದು ಸುಲಭ. ದವಡೆಗಳಲ್ಲಿ ಹಲ್ಲುಗಳಿಲ್ಲ. ಆದ್ದರಿಂದ ತಿಂದ ಆಹಾರವನ್ನು ಅಗಿಯದೆ ಹಾಗೆಯೇ ಗಂಟಲಿನ ಮೂಲಕ ಜಠರಕ್ಕೆ ಸಾಗಿಸುತ್ತದೆ. ಅಲ್ಲಿಂದ ಆಹಾರ ಸಣ್ಣಕರುಳಿಗೂ ಅನಂತರ ದೊಡ್ಡ ಕರುಳಿಗೂ ಸಾಗುತ್ತದೆ. ಪಚನಕ್ರಿಯೆಯಲ್ಲಿ ಸಹಾಯಕವಾಗಲು ಎರಡು ಹಾಲೆಗಳಿಂದಾದ ಯಕೃತ್ತೂ ಹಲವಾರು ಹಾಲೆಗಳುಳ್ಳ ಮೇದೋಜೀರಕವೂ ಇವೆ. ಎರಡರಿಂದ ಹೊರಡುವ ನಾಳಗಳು ಕೂಡಿಕೊಂಡು ಕರುಳಿನೊಳಕ್ಕೆ ತೆರೆಯುತ್ತವೆ. ಕರುಳು ಗುದನಾಳದಲ್ಲಿ ಮುಂದುವರಿದು ಕ್ಲೋಯಕ ರಂಧ್ರದೊಡನೆ ಸಂಬಂಧ ಕಲ್ಪಿಸುತ್ತದೆ. ಪಚನಕ್ರಿಯೆ ಮನುಷ್ಯದೇಹದಲ್ಲಿ ನಡೆದಂತೆಯೇ ನಡೆಯುತ್ತದೆ.

ಕಪ್ಪೆಯಲ್ಲಿ ಉಸಿರಾಟ ಬಹುಪಾಲು ಶ್ವಾಸಕೋಶಗಳಿಂದಲೇ ನಡೆಯುತ್ತದೆ. ಶ್ವಾಸಾಂಗದಲ್ಲಿ ಬಾಯಂಗುಳದಲ್ಲಿ ತೆರೆಯುವಂಥ ಗ್ಲಾಟಿಸ್ ಭಾಗವೂ ಲ್ಯಾರಿಂಗೊ–ಟ್ರೆಕಿಯಲ್ ಅವಕಾಶವೂ ಒಂದು ಜೊತೆ ಶ್ವಾಸಕೋಶಗಳೂ ಇವೆ. ಹೊರನಾಸಿಕ ರಂಧ್ರದಿಂದ ಬಾಯ ಅಂಗುಳದೊಳಕ್ಕೆ ಗಾಳಿ ಬರುತ್ತದೆ. ಆಗ ಬಾಯಿ ಮುಚ್ಚಿಕೊಂಡು ಆ ಗಾಳಿ ಲ್ಯಾರಿಂಗೊ–ಟ್ರೇಕಿಯಲ್ ಕೊಳವೆಯ ಮೂಲಕ ಶ್ವಾಸಕೋಶದೊಳಕ್ಕೆ ಹೋಗುತ್ತದೆ. ಶ್ವಾಸಕೋಶದಲ್ಲಿ ಮನುಷ್ಯರಲ್ಲಿರುವಂತೆ ಅನೇಕ ಸೂಕ್ಷ್ಮ ಗಾಳಿಚೀಲಗಳಿದ್ದು ಇಲ್ಲಿ ರಕ್ತ ಮತ್ತು ಗಾಳಿಯ ಮಧ್ಯ ಆಮ್ಲಜನಕ ಹಾಗು ಇಂಗಾಲದ ಡೈಆಕ್ಸೈಡ್‌ಗಳ ವಿನಿಮಯವಾಗುತ್ತದೆ. ರಕ್ತನಾಳಗಳಿಂದ ಇಂಗಾಲದ ಡೈಆಕ್ಸೈಡ್ ಹೊರಬಿದ್ದು ಅಶುದ್ಧ ಗಾಳಿಯಾಗಿ, ಬಂದ ದಾರಿಯಲ್ಲೆ ಹಿಂದಕ್ಕೆ ಬರುತ್ತದೆ. ಕಪ್ಪೆಯ ಚರ್ಮಕ್ಕೂ ಉಸಿರಾಟದ ಶಕ್ತಿಯಿದೆ. ಚರ್ಮದ ಕೆಳಗೆ ಅನೇಕ ಸೂಕ್ಷ್ಮ ರಕ್ತನಾಳಗಳಿದ್ದು ಅವು ನೇರವಾಗಿ ಹೊರಗಿನ ವಾತಾವರಣದಿಂದ ಆಮ್ಲಜನಕವನ್ನು ಹೀರಿಕೊಂಡು ಇಂಗಾಲಾಮ್ಲವನ್ನು ಬಿಟ್ಟುಕೊಡಬಲ್ಲುವು. ಇದರಿಂದಾಗಿ ಕಪ್ಪೆ ನೀರಿನಲ್ಲಿ ಮುಳುಗಿದ್ದಾಗಲೂ ಚರ್ಮದ ಮೂಲಕ ಉಸಿರಾಡಬಲ್ಲುದು. ಕಪ್ಪೆಮರಿಗಳಲ್ಲಿ ಉಸಿರಾಟ ಕಿವಿರುಗಳ ಮೂಲಕ ನಡೆಯುತ್ತದೆ.

ಕಪ್ಪೆಯಲ್ಲಿ ರಕ್ತಪರಿಚಲನೆಗೆ ಸಂಬಂಧಿಸಿದಂತೆ ಹೃದಯ, ಅಪಧಮನಿ ಸಮೂಹ ಮತ್ತು ಅಭಿಧಮನಿ ಸಮೂಹ ಇದೆ. ರಕ್ತಪರಿಚಲನಾಕ್ರಮ ಮನುಷ್ಯರಲ್ಲಿರುವಂತೆ ಇದ್ದರೂ ಹಲವಾರು ಮುಖ್ಯ ವ್ಯತ್ಯಾಸಗಳನ್ನು ಇಲ್ಲಿ ಕಾಣಬಹುದು. ಕಪ್ಪೆಯ ಹೃದಯದಲ್ಲಿ ಮೇಲ್ಭಾಗದಲ್ಲಿ ಎರಡು ಕೋಣೆಗಳೂ(ಆರಿಕಲ್ಸ್) ಹಾಗು ಕೆಳಭಾಗದಲ್ಲಿ ಒಂದು ಕೋಣೆಯೂ (ವೆಂಟ್ರಿಕಲ್) ಇವೆ. ದೇಹದ ಇತರ ಭಾಗಗಳಿಂದ ಹರಿದು ಬರುವ ಅಶುದ್ಧ ರಕ್ತ ಅಭಿಧಮನಿಗಳ ಮೂಲಕ ಹೃದಯದ ಮೇಲಿನ ಬಲ ಕೋಣೆಯನ್ನು ಸೇರುತ್ತದೆ. ಮೇಲಿನ ಎಡಕೋಣೆಯಲ್ಲಿ ಶ್ವಾಸಕೋಶಗಳಿಂದ ಬರುವ ಶುದ್ಧರಕ್ತ ಸೇರುತ್ತದೆ. ಎರಡು ಬಗೆಯ ರಕ್ತಗಳೂ ಮೇಲಿನ ಎರಡು ಕೋಣೆಗಳಿಂದ ಒಂದೇ ಸಾಮಾನ್ಯದ್ವಾರದ ಮೂಲಕ ಕೆಳಕೋಣೆಯನ್ನು ಸೇರುತ್ತವೆ. ಹೀಗೆ ಈ ರಕ್ತ ಹೊರಡುತ್ತಿದ್ದಂತೆಯೇ ಎಡಕೋಣೆಯಿಂದ ಉಳಿದ ಶುದ್ಧರಕ್ತ ಮತ್ತೆ ಕೆಳಕೋಣೆಗೆ ಬರುತ್ತದೆ. ಈ ರಕ್ತ ಪುನಃ ಕೆಳಕೋಣೆಯ ಸಂಕುಚನದಿಂದ ಮಿದುಳುಭಾಗಕ್ಕೆ ಸಾಗುತ್ತದೆ. ಹೀಗೆ ಮಿದುಳುಭಾಗಕ್ಕೆ ಮಾತ್ರ ಸಂಪೂರ್ಣ ಶುದ್ಧರಕ್ತ ಪೂರೈಕೆಯಾಗುತ್ತದೆ. ಈ ರೀತಿಯ ರಕ್ತಪರಿಚಲನೆ ಕಪ್ಪೆಗೆ ವಿಶಿಷ್ಟವಾದುದು.

ಕಪ್ಪೆಯ ನರಸಮೂಹದಲ್ಲಿ, ಮಿದುಳು, ಬೆನ್ನುಹುರಿ ಮತ್ತು ಅವುಗಳಿಂದ ದೇಹದ ನಾನಾಭಾಗಗಳಿಗೆ ಹೊರಡುವ ನರವ್ಯವಸ್ಥೆಯೂ ಇದೆ. ಇದರ ಸ್ಥೂಲರಚನೆ ಮತ್ತು ಕೆಲಸದ ರೀತಿ ಸಾಮಾನ್ಯವಾಗಿ ಮನುಷ್ಯದೇಹದಲ್ಲಿರುವಂತೆಯೇ. ನರಕಣಗಳ ಸಂವೇದನಾಶಕ್ತಿ, ಸಂವೇದನೆಗಳು ಮಿದುಳನ್ನು ಸೇರುವ ಬಗೆ ಹಾಗೂ ಮಿದುಳಿನಿಂದ ಬರುವ ಪ್ರತಿಕ್ರಿಯೆ ಚಲಿಸುವ ಕ್ರಮ ಎಲ್ಲವೂ ಮನುಷ್ಯರಲ್ಲಿರುವಂತೆಯೆ ಇರುವುದರಿಂದ ಕಪ್ಪೆಯನ್ನು ನರಸಂಬಂಧದ ಪ್ರಯೋಗಗಳಲ್ಲಿ ಬಳಸುತ್ತಾರೆ.

ಕಪ್ಪೆಯ ಮೂತ್ರ ವಿಸರ್ಜನೆಯ ಪ್ರಮುಖ ಅಂಗಗಳು ಉದ್ದುದ್ದನಾದ ಚಪ್ಪಟೆಯಾದ ಒಂದು ಜೊತೆ ಮೂತ್ರಜನಕಾಂಗಗಳು. ಇವು ಬೆನ್ನುಮೂಳೆಯ ಯೂರೋಸ್ಟೈಲಿನ ಎರಡು ಪಾರ್ಶ್ವಗಳಲ್ಲಿವೆ. ಇವುಗಳಿಂದ ಒಂದೊಂದು ಮೂತ್ರನಾಳ ಹೊರಟು ಕ್ಲೋಯಕ ರಂಧ್ರವನ್ನು ಸೇರುತ್ತವೆ.

ಕಪ್ಪೆಯಲ್ಲಿ ಲಿಂಗಗಳು ಭಿನ್ನವಾಗಿವೆ. ಗಂಡಿನಲ್ಲಿ ಒಂದು ಜೊತೆ ಹಳದಿ ಬಣ್ಣದ ಅಂಡಾಕಾರದ ವೃಷಣಗಳೂ ಅವುಗಳಿಂದ ಹೊರಡುವ ಎರಡು ವೀರ್ಯನಾಳಗಳೂ ಇವೆ. ಈ ನಾಳಗಳು ಮೂತ್ರಜನಕಾಂಗದ ಮೂಲಕ ಸಾಗಿ ಮೂತ್ರನಾಳದೊಂದಿಗೆ ಸೇರುತ್ತವೆ. ಮೂತ್ರನಾಳಗಳು ಕ್ಲೋಯಕ ರಂಧ್ರದ ಮೂಲಕ ಹೊರಕ್ಕೆ ತೆರೆಯುತ್ತವೆ. ವೃಷಣಗಳಲ್ಲಿ ಉತ್ಪತ್ತಿಯಾದ ವೀರ್ಯಾಣುಗಳು ಮೂತ್ರನಾಳದ ಮೂಲಕವೇ ಹೊರಬರಬೇಕು. ಹೆಣ್ಣುಕಪ್ಪೆಯಲ್ಲಿ ಒಂದು ಜೊತೆ ಮಡಿಕೆಮಡಿಕೆಯಾದ ಅಂಡಾಶಯಗಳಿವೆ. ಅವುಗಳ ಬಳಿಯಲ್ಲಿ ಆದರೆ ಅವುಗಳೊಂದಿಗೆ ಸಂಬಂಧವಿರುವ ಎರಡು ಅಂಡನಾಳ (ಓವಿಡಕ್ಟ್)ಗಳಿವೆ. ಇವುಗಳ ಒಂದು ತುದಿ ಆಲಿಕೆಯಂತಿದ್ದು ಇನ್ನೊಂದು ತುದಿ ಕ್ಲೋಯಕ ರಂಧ್ರದೊಳಕ್ಕೆ ತೆರೆಯುತ್ತದೆ. ಅಂಡಾಶಯಗಳಲ್ಲಿ ಉತ್ಪತ್ತಿಯಾದ ಅಂಡಾಣುಗಳು ಅಂಡಾಶಯಗಳ ಸುತ್ತ ಇರುವ ದೇಹಾವಕಾಶದೊಳಕ್ಕೆ ಬರುತ್ತವೆ. ಅಲ್ಲಿಂದ ಓವಿಡಕ್ಟ್‌ಗಳ ಆಲಿಕೆಯಂಥ ತುದಿಯ ಮುಖಾಂತರ ಅವು ಕ್ಲೋಯಕ ರಂಧ್ರಕ್ಕೆ ಬಂದು ಹೊರಬೀಳುತ್ತವೆ. ಮೊಟ್ಟೆಯಿಡುವುದರಲ್ಲಿ ಕಪ್ಪೆಗಳು ಮತ್ತು ನೆಲಗಪ್ಪೆಗಳು ವೈಶಿಷ್ಟ್ಯಪೂರ್ಣವಾದ ನಡತೆಯನ್ನು ಪ್ರದರ್ಶಿಸುತ್ತವೆ. ಕಪ್ಪೆಗಳು ಆಕ್ರಮವಾದ ಕುಚ್ಚುಗಳ ರೀತಿಯಲ್ಲಿ ಮೊಟ್ಟೆಯನ್ನಿಟ್ಟರೆ ನೆಲಗಪ್ಪೆಗಳು ಮಣಿಸರದಂತೆ ಮೊಟ್ಟೆಯಿಡುತ್ತವೆ. ಎಲ್ಲ ಕಪ್ಪೆಗಳಲ್ಲೂ ನಿಷೇಚನ ದೇಹದ ಹೊರಗೆ ನಡೆಯುತ್ತದೆ. ಆ ಕಾಲದಲ್ಲಿ ಗಂಡುಕಪ್ಪೆ ಹೆಣ್ಣಿನ ಮೇಲೆ ಕೂತು ಅದನ್ನು ಬಲವಾಗಿ ಹಿಡಿದುಕೊಳ್ಳುತ್ತದೆ. ಆಗ ಹೆಣ್ಣು ಮೊಟ್ಟೆಗಳನ್ನು ತನ್ನ ವಿಶಿಷ್ಟರೀತಿಯಲ್ಲಿ ಹೊರಬಿಡುತ್ತದೆ. ಅನಂತರ ಗಂಡುಕಪ್ಪೆ ತನ್ನ ವೀರ್ಯಾಣುಗಳನ್ನು ಮೊಟ್ಟೆಗಳ ಮೇಲೆ ಸೇಚಿಸುತ್ತದೆ. ಹೀಗೆ ಗರ್ಭಾಂಕುರಗೊಂಡ ಮೊಟ್ಟೆಗಳು ನೀರಿನ ಮೇಲೆಯೇ ತೇಲುತ್ತಿದ್ದು ಅವುಗಳೊಳಗೆ ಭ್ರೂಣದ ಬೆಳವಣಿಗೆ ಸಾಗುತ್ತದೆ. ಕೆಲವು ದಿನಗಳ ಅನಂತರ ಮೊಟ್ಟೆಯಿಂದ ಪುಟ್ಟಮರಿಯೊಂದು ಹೊರಬಿದ್ದು ತನ್ನ ಉಳಿದ ಬೆಳವಣಿಗೆಯನ್ನು ಬಾಹ್ಯಪರಿಸರದಲ್ಲಿ ನಡೆಸುತ್ತದೆ. ಈ ಮರಿಯಲ್ಲಿ ದೊಡ್ಡ ತಲೆಯೂ ಕೊಳವೆಯಂಥ ಮುಂಡವೂ ಉದ್ದವಾದ ಬಾಲವೂ ಇವೆ. ಮುಂಡ ಮತ್ತು ತಲೆ ಸೇರುವಲ್ಲಿ ಎರಡು ಜೊತೆ ಕವಲೊಡೆದ ಹೊರಕಿವಿರುಗಳಿವೆ. ಈ ಮರಿಯನ್ನು ಗೊದಮೊಟ್ಟೆ ಎನ್ನಲಾಗಿದೆ. ತಲೆಯ ತುದಿಯಲ್ಲಿ ಅಗಲವಾದ ಬಾಯೊಂದು ಕಾಲಕ್ರಮೇಣ ಮೂಡುತ್ತದೆ. ಬಾಲದ ಸಹಾಯದಿಂದ ಈಜುವ ಈ ಮರಿ ಸಸ್ಯಾಹಾರಿ. ನೀರಿನಲ್ಲಿ ಬೆಳೆಯುವ ತೇಲುವ ಜೀವಿಗಳನ್ನು (ಪ್ಲಾಂಕ್ಟಾನ್) ತಿಂದು ಜೀವಿಸುತ್ತದೆ. ನಿಧಾನವಾಗಿ ಹೊರಕಿವಿರುಗಳು ಮಾಯವಾಗಿ ತಲೆಯ ಎರಡೂ ಪಕ್ಕಗಳಲ್ಲಿ ಒಳಕಿವಿರುಗಳು ಹುಟ್ಟುತ್ತವೆ. ಬೆಳವಣಿಗೆ ಮುಂದುವರಿದಂತೆಲ್ಲ ಮುಂದಿನ ಮತ್ತು ಹಿಂದಿನ ಕಾಲುಗಳು ಹುಟ್ಟಿಕೊಳ್ಳುತ್ತವೆ. ದೇಹದ ಒಳಗೂ ಹಲವಾರು ಬದಲಾವಣೆಗಳು ಕಾಣಿಸಿಕೊಂಡು ಗೊದಮೊಟ್ಟೆ ಪ್ರೌಢಜೀವಿಯಾಗುತ್ತದೆ. ಶ್ವಾಸಾಂಗಗಳ ಹುಟ್ಟು, ಕಿವಿರುಗಳು ಹಾಗು ಬಾಲ ಮಾಯವಾಗುವಿಕೆ –ಮುಂತಾದ ಬದಲಾವಣೆಗಳಿಂದ ಗೊದೆಮೊಟ್ಟೆ ರೂಪಾಂತರ (ಮೆಟಮಾರ್ಫೊಸಿಸ್) ಹೊಂದಿ ಪೂರ್ತಿ ನೀರಿನ ಜೀವನದಿಂದ ಉಭಯವಾಸಿಯಾಗಿ ಪರಿವರ್ತನೆಹೊಂದುತ್ತದೆ.

ಬಹುಪಾಲು ಕಪ್ಪೆಗಳಲ್ಲಿ ಸಂತಾನರಕ್ಷಣೆಯಿಲ್ಲವಾದರೂ ಕೆಲವು ಬಗೆಯ ಕಪ್ಪೆಗಳಲ್ಲಿ ಅದು ಉಚ್ಚಮಟ್ಟದ್ದಾಗಿದೆ. ಅಲೈಟಿಸ್ (ಸೂಲಗಿತ್ತಿ ಕಪ್ಪೆ) ಇದಕ್ಕೆ ಉತ್ತಮ ನಿದರ್ಶನ. ಇದರಲ್ಲಿ ಗಂಡುಕಪ್ಪೆ ಮೊಟ್ಟೆಗಳ ರಕ್ಷಣೆಯನ್ನು ನಿರ್ವಹಿಸುವುದು ಕಂಡುಬರುತ್ತದೆ. ವಸಂತಕಾಲದಲ್ಲಿ ಅನೇಕ ಗಂಡುಕಪ್ಪೆಗಳು ಒಂದೇ ಒಂದು ಹೆಣ್ಣು ಕಪ್ಪೆಯನ್ನು ಸುತ್ತುವರಿದು ಅದಕ್ಕಾಗಿ ಒಂದು ಸಮರವನ್ನೇ ನಡೆಸುತ್ತವೆ. ಯಶಸ್ವಿಯಾದ ಗಂಡು ಹೆಣ್ಣಿನಿಂದ ಹೊರಬಂದ ಮೊಟ್ಟೆಗಳ ಗರ್ಭಧಾರಣೆ ಮಾಡಿ, ಮೊಟ್ಟೆಗಳ ಕುಚ್ಚನ್ನು ತನ್ನ ಹಿಂಗಾಲುಗಳ ಸುತ್ತ ಸುತ್ತಿಕೊಂಡು ನೀರಿನಲ್ಲಿ ಈಜಲು ತೊಡಗುತ್ತದೆ. ಅನಂತರ ಯಾವುದಾದರೂ ಒಂದು ಬಿಲವನ್ನು ಸೇರಿ ಅಡಗಿಕೊಳ್ಳುತ್ತದೆ. ಕಾಲಕಾಲಕ್ಕೆ ಮೊಟ್ಟೆಗಳನ್ನು ಹೊರತಂದು ನೀರಿನಲ್ಲಿ ಮುಳುಗಿಸಿ ಅವು ಹಸಿಯಾಗಿರುವಂತೆ ಮಾಡುತ್ತಿರುತ್ತದೆ. ಈ ಕಾಲದಲ್ಲಿ ಮೊಟ್ಟೆಗಳಲ್ಲಿ ಭ್ರೂಣ ಬೆಳೆಯುತ್ತಿದ್ದು ಸಂಪೂರ್ಣ ಬೆಳವಣಿಗೆಯಾದ ಮೇಲೆ ಗೊದಮೊಟ್ಟೆಗಳು ಹೊರಬರುತ್ತವೆ. ಇಲ್ಲಿಗೆ ಗಂಡುಕಪ್ಪೆಯ ಕೆಲಸ ಮುಗಿಯಿತು. ಹೈಲ ಜೋಲ್ಡಿ ಎಂಬ ಮರಗಪ್ಪೆಯಲ್ಲಿಯೂ ವಿಚಿತ್ರ ರೀತಿಯ ಸಂತಾನರಕ್ಷಣೆಯ ಕ್ರಮವಿರುವುದನ್ನು ಕಾಣಬಹುದು. ಇದರಲ್ಲಿ ಹೆಣ್ಣುಕಪ್ಪೆಯ ಬೆನ್ನಿನ ಮೇಲೆ ಒಂದು ಬಗೆಯ ಚೀಲವಿದೆ. ಗರ್ಭಧರಿಸಿದ ಮೊಟ್ಟೆಗಳನ್ನು ಈ ಚೀಲದೊಳಕ್ಕೆ ತುಂಬಿಕೊಂಡು ಅವು ಮರಿಯಾಗಿ ಹೊರಬರುವವರೆಗೂ ಪಾಲಿಸುತ್ತದೆ. ಇದೇ ಬಗೆಯ ಚೀಲವನ್ನು ಅಮೆರಿಕದ ಉಷ್ಣಪ್ರದೇಶಗಳಲ್ಲಿ ಕಾಣಬರುವ ಮಾರ್ಸೂಪಿಯಲ್ ನೆಲಗಪ್ಪೆಗಳಲ್ಲಿ (ನೋಟೋಟ್ರೀಮ) ನೋಡಬಹುದು.

ಕಪ್ಪೆಗಳು ಪ್ರಪಂಚದ ಎಲ್ಲ ಪ್ರದೇಶಗಳಲ್ಲೂ ಕಾಣಬರುತ್ತವೆ. ದಕ್ಷಿಣಭಾರತದಲ್ಲಿ ಅನೇಕ ಜಾತಿಯ ಕಪ್ಪೆಗಳು ಸಿಕ್ಕುತ್ತವೆ. ಮುಖ್ಯವಾಗಿ ರಾನ ಎಂಬ ಜಾತಿಗೆ ಸೇರಿದ ಮೂರು ಪ್ರಭೇದಗಳು ಬಹು ಸಾಮಾನ್ಯ. ಇವು–1 ರಾನ ಹೆಕ್ಸಡ್ಯಾಕ್ಟೈಲ (ಹಸಿರುಕಪ್ಪೆ)– ಇದರ ಹಿಂಗಾಲುಗಳಲ್ಲಿ ಅಂಕುರಾವಸ್ಥೆಯಲ್ಲಿರುವ ಆರನೆಯ ಬೆರಳಿರುವುದು ಇದರ ವೈಶಿಷ್ಟ್ಯ, 2. ರಾನ ಟೈಗ್ರಿನ (ಗೂಳಿಗಪ್ಪೆ), 3.ರಾನ ಸೈಯಾನೋಫ್ಲಿಕ್ಟಿಸ್ (ಬಿಳಿಯ ಕಪ್ಪೆ). ಇವುಗಳಲ್ಲಿ ಮೊದಲೆರಡು ಪ್ರಭೇದಗಳು ಆರ್ಥಿಕ ದೃಷ್ಟಿಯಿಂದ ಮುಖ್ಯವಾದುವು. ಇವುಗಳ ಹಿಂಗಾಲುಗಳು ಪಾಶ್ಚಾತ್ಯ ದೇಶಗಳಲ್ಲಿ ರುಚಿಕರ ಹಾಗೂ ಪ್ರಿಯವಾದ ಭಕ್ಷ್ಯವೆನಿಸಿದೆ. ಇವುಗಳ ರಫ್ತಿನಿಂದ ಭಾರತಕ್ಕೆ ಅವಶ್ಯಕವಾದ ವಿದೇಶೀ ವಿನಿಮಯದ ಗಳಿಕೆಯಾದರೂ, ಅತಿಯಾದ ರಫ್ತಿನಿಂದ, ಪ್ರಭೇದ ನಾಶವಾಗುವ ಸಂಭವವಿರುವುದರಿಂದ, ರಫ್ತನ್ನು ರದ್ದು ಪಡಿಸಲಾಗಿದೆ. ಬಿಳಿಯ ಕಪ್ಪೆಯನ್ನು ಪ್ರಾಯೋಗಿಕ ಪ್ರಾಣಿಯಾಗಿ ವಿವಿಧ ವಿಶ್ವವಿದ್ಯಾನಿಲಯದಲ್ಲಿ ಬಳಸುತ್ತಿದ್ದಾರೆ. ರಾನ ಜಾತಿಯಲ್ಲದೆ ಬ್ಯೂಫೋ ಮೆಲನೋಸ್ಟಿಕ್ಟಸ್ ಎಂಬ ನೆಲಗಪ್ಪೆಯೂ, ಯೂಪೆರೊಡಾನ್ ಸಿಸ್ಟೊಮ ಎಂಬ ಮರಳುಗಪ್ಪೆಯೂ, ರಾಮನೆಲ್ಲ ಮೈಕ್ರೋಹೈಲ ಎಂಬ ಕಪ್ಪೆಯೂ ದಕ್ಷಿಣ ಭಾರತದಲ್ಲಿ ಹೇರಳವಾಗಿ ಕಾಣಬರುತ್ತವೆ. ಇವಲ್ಲದೆ ಯೂರೋಪಿನಲ್ಲಿ ವಾಸಿಸುವ ಅಗ್ನಿಉದರದ ನೆಲಗಪ್ಪೆ, ಗಯಾನದಲ್ಲಿರುವ ಪೈಪ ಪೈಪ ಎಂಬ ಕಪ್ಪೆ, ಬೋರ್ನಿಯೊ ಮತ್ತು ಮಲಯಗಳಲ್ಲಿ ದೊರಕುವ ರ್‍ಯಾಕೊಫೋರಸ್ ಜಾತಿಯ ಹಾರುಗಪ್ಪೆ–ಇವು ಇನ್ನಿತರ ಮುಖ್ಯ ಕಪ್ಪೆಗಳು. ***

**ಕಪ್ಪೆಚಿಪ್ಪು ಪ್ರಾಣಿಗಳು:** ಸಿಹಿ ನೀರಿನಲ್ಲಿ ವಾಸಿಸುವ ಎರಡು ಚಿಪ್ಪುಹೋಳುಗಳ ಕವಚವನ್ನುಳ್ಳ ಮೃದ್ವಂಗಿಗಳು (ಫ್ರೆಷ್ ವಾಟರ್ ಮಸಲ್). ಲ್ಯಾಮೆಲ್ಲಿಬ್ರಾಂಕಿಯ ಅಥವಾ ಪೆಲಿಸಿಪೋಡ ವರ್ಗಕ್ಕೂ ಯೂಲ್ಯಾಮೆಲ್ಲಿಬ್ರಾಂಕಿಯ ಗಣದ ಯೂನಿಯೋನಿಡೆ ಕುಟುಂಬಕ್ಕೂ ಸೇರಿವೆ. ಈ ಕುಟುಂಬದಲ್ಲಿ ೮೫ ಜಾತಿಗಳೂ ೭೫೦ ಪ್ರಭೇದಗಳೂ ಇವೆ. ಮುತ್ತಿನಂತೆ ಮಿರುಗುವ ಚಿಪ್ಪಿನ ಒಳಮೈ, ಸಮಪ್ರಮಾಣದಲ್ಲಿ ಸ್ಫುಟಗೊಂಡ ಸ್ನಾಯು ಕಲೆಗಟ್ಟುಗಳು, ಸುಸ್ಪಷ್ಟವಾದ ಒಂದು ಮ್ಯಾಂಟಲ್ ರೇಖೆ, ಪುಟ್ಟ ಜಲನಾಲೆಗಳು ಮತ್ತು ಮರಳನ್ನು ತೋಡಲು ನೆರವಾಗುವ ಪುಷ್ಟವಾಗಿ ಬೆಳೆದ ಕೈಗೊಡಲಿ ರೂಪದ ಪಾದ– ಇವು ಈ ಕುಟುಂಬದ ವಿಶೇಷ ಲಕ್ಷಣಗಳು. ಯೂನಿಯೊ, ಅನೊಡಾಂಟ, ಕ್ವಾಡ್ರುಲ, ಲಾಂಪ್ಸಿಲಿಸ್, ಲಾಮೆಲ್ಲಿಡೆನ್ಸ್ ಮೊದಲಾದ ಜಾತಿಗಳು ಮುಖ್ಯವಾದುವು. ಇವು ಸಾಧಾರಣವಾಗಿ ದೊಡ್ಡ ಕೆರೆ, ಕೊಳಗಳಲ್ಲಿ ಹಾಗೂ ಶಾಂತವಾಗಿ ನೀರು ಹರಿಯುವ ನದಿ ತೊರೆಗಳ ತಳಭಾಗದ ಮೃದುವಾದ ಮಣ್ಣಿನಲ್ಲಿ ಬಿಲ ಮಾಡಿಕೊಂಡು ವಾಸಿಸುತ್ತವೆ. ಇವುಗಳ ದೇಹದ ಸ್ವಲ್ಪ ಭಾಗ ಮಾತ್ರ ಮಣ್ಣಿನ ಮೇಲ್ಭಾಗದಲ್ಲಿರುತ್ತದೆ. ಪ್ರಾಣಿ ಸತ್ತಮೇಲೆ ಚಿಪ್ಪು ಹೋಳುಗಳ ಮಧ್ಯೆ ಇರುವ ಮೃದುದೇಹ ನಶಿಸಿಹೋದಮೇಲೆ ಚಿಪ್ಪಿನ ಹೋಳುಗಳು ಅಲೆಗಳ ಹೊಡೆತಕ್ಕೆ ಸಿಕ್ಕಿ ನದಿ ಅಥವಾ ಕೆರೆ ದಂಡೆಗಳಲ್ಲಿ ಬಂದು ಬೀಳುತ್ತವೆ. ಒಮ್ಮೊಮ್ಮೆ

ಈ ಚಿಪ್ಪುಗಳ ಮೇಲೆ ಅಥವಾ ಅವುಗಳ ಬಳಿ ಸಣ್ಣ ಸಣ್ಣ ಕಪ್ಪೆಗಳು ಕಂಡು ಬರುವುದರಿಂದ ಈ ಚಿಪ್ಪು ಪ್ರಾಣಿಗಳಿಗೆ ಕನ್ನಡದಲ್ಲಿ ಕಪ್ಪೆಚಿಪ್ಪು ಪ್ರಾಣಿಗಳು ಎಂದು ಹೆಸರು ಬಂದಿರಬೇಕು.

ಕಪ್ಪೆಚಿಪ್ಪು ಪ್ರಾಣಿಯ ದೇಹ ಮೃದುವಾಗಿದೆ. ಚಿಪ್ಪಿನ ಹೋಳುಗಳನ್ನು ಬಿಚ್ಚಿ ನೋಡಬಹುದು. ದೇಹದಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು ೧. ಒಳ ಅಂಗಗಳನ್ನೊಳಗೊಂಡ ಮುದ್ದೆ ಅಥವಾ ವಿಸರಲ್ ಮಾಸ್, ೨. ಅದರ ತಳಭಾಗದಿಂದ ಇಳಿಬಿದ್ದು ಮುಂದೆ ಚಾಚಿರುವ ಕೈಗೊಡಲಿ ರೂಪದ ಸ್ನಾಯುಮಯ ಪಾದ, ೩.ದೇಹದ ಇಕ್ಕೆಡೆಗಳಲ್ಲಿ ವಿಸರಲ್ ಮಾಸನ್ನು ಆವರಿಸಿ ಇಳಿಬಿದ್ದಿರುವ ಎರಡು ತೆಳುವಾದ ಮ್ಯಾಂಟಲ್‌ಗಳು. ಇದರಲ್ಲಿ ಇತರ ಮೃದ್ವಂಗಿಗಳಲ್ಲಿರುವಂತೆ ಸ್ಪಷ್ಟವಾದ ತಲೆ ಇಲ್ಲ. ದೇಹ ದ್ವಿಪಾರ್ಶ್ವಸೌಷ್ಟವ ಉಳ್ಳದ್ದು. ದೇಹವನ್ನು ಹಾಯ್ದುಹೋಗುವ ಎರಡು ಅಭಿವರ್ತನಿ ಸ್ನಾಯುಗಳು ಚಿಪ್ಪುಹೋಳುಗಳನ್ನು ಬಂಧಿಸುತ್ತವೆ. ಇವುಗಳಿಗೆ ಅಗ್ರ ಅಭಿವರ್ತನಿ ಸ್ನಾಯು ಮತ್ತು ಪಶ್ಚ ಅಭಿವರ್ತನಿ ಸ್ನಾಯು ಎಂದು ಹೆಸರು. ಈ ಪ್ರಾಣಿಯ ಬಾಯಿ ಅಗ್ರ ಅಭಿವರ್ತನಿ ಸ್ನಾಯುವಿನ ತಳಭಾಗದಲ್ಲಿ ಇದೆ. ಬಾಯಿಯ ಎಡಬಲದಲ್ಲಿ ಎರಡೆರಡು ತ್ರಿಕೋಣಾಕಾರದ ಜೋಲು ತುಟಿಗಳಿವೆ (ಲೇಬಿಯಲ್ ಪ್ಯಾಲ್ಪ್ಸ್). ಮ್ಯಾಂಟಲ್ ಪಾಲಿಗಳ ನಡುವಣ ಪ್ರದೇಶಕ್ಕೆ ಮ್ಯಾಂಟಲ್ ಕುಹರ (ಮ್ಯಾಂಟಲ್ ಕ್ಯಾವಿಟಿ) ಎಂದು ಹೆಸರು. ಈ ಮ್ಯಾಂಟಲ್ ಕುಹರದಲ್ಲಿ ಪಾದ, ಶ್ವಸನಾಂಗ, ವಿಸರ್ಜನಾಂಗಗಳು ಮತ್ತು ಜನನಾಂಗಗಳ ದ್ವಾರಗಳು, ಇವೆಲ್ಲ ಇವೆ. ಮ್ಯಾಂಟಲ್ ಪಾಲಿಗಳು ದೇಹದ ಪಶ್ಚಭಾಗದಲ್ಲಿ ಪರಸ್ಪರ ಕೂಡಿಕೊಂಡಿವೆ. ಆ ಭಾಗದಲ್ಲಿ ಎರಡು ದ್ವಾರಗಳಿವೆ. ಒಂದು ಬೆನ್ನುಭಾಗದ ಅಪವಾಹಿ ದ್ವಾರ (ಎಕ್ಸ್‌ಹೇಲೆಂಟ್ ಸೈಫನ್) ಮತ್ತು ಎರಡನೆಯದು ಉದರಭಾಗದ ಆವಾಹಿ ದ್ವಾರ (ಇನ್ಹೇಲೆಂಟ್ ಸೈಫನ್).

ಶ್ವಸನಾಂಗಗಳಾದ ಕಿವಿರು(ಗಿಲ್ಸ್) ಮತ್ತು ಲೇಬಿಯಲ್ ಪ್ಯಾಲ್ಪುಗಳ ಮೇಲೆ ಶಿಲಕೆಗಳಿರುತ್ತವೆ. ಇವುಗಳ ಚಲನೆಯ ಫಲವಾಗಿ ಮ್ಯಾಂಟಲಿನಲ್ಲಿರುವ ನೀರು ಪ್ರವಾಹದಂತೆ ಚಲಿಸಲಾರಂಭಿಸುತ್ತದೆ. ಕಿವಿರಿನ ಮೇಲೆಲ್ಲ ಅಸಂಖ್ಯಾತ ಸೂಕ್ಷ್ಮತಮವಾದ ರಂಧ್ರಗಳಿವೆ. ಆವಾಹಿದ್ವಾರದಿಂದ ಮ್ಯಾಂಟಲ್ ಕುಹರವನ್ನು ಪ್ರವೇಶಿಸಿದ ನೀರು ಕಿವಿರುಗಳ ರಂಧ್ರಗಳ ಮೂಲಕ ಹಾಯ್ದು, ನೀರ್ನಳಿಕೆಗಳ (ವಾಟರ್ ಟ್ಯೂಬ್) ಮೂಲಕ ಸಂಚರಿಸಿ, ಅಧಿಕ್ಲೋಮ ಗೂಡನ್ನು (ಸೂಪ್ರಬ್ರಾಂಕಿಯಲ್ ಚೇಂಬರ್) ಹೊಕ್ಕು ಅಪವಾಹಿದ್ವಾರದ ಮೂಲಕ ಹೊರಬರುತ್ತದೆ. ಈ ಪ್ರಾಣಿಯ ಕಿವಿರುಗಳು ಶ್ವಸನ ಕಾರ್ಯದಲ್ಲಿ ನೆರವಾಗುವುದಲ್ಲದೆ ಸೂಕ್ಷ್ಮ ಆಹಾರಜೀವಿಗಳನ್ನು ಒಳಗೊಂಡ ನೀರಿನ ಪ್ರವಾಹವನ್ನು ಬಾಯಿಯ ಕಡೆ ಸಾಗಿಸುವುದಕ್ಕೂ ಸಹಾಯ ಮಾಡುತ್ತವೆ ಮತ್ತು ಅವು ಕಾವಿನ ಗೂಡಾಗಿಯೂ (ಇಂಕ್ಯುಬೇಷನ್ ಚೇಂಬರ್) ವರ್ತಿಸುತ್ತವೆ. ಚಿಪ್ಪಿನ ಎರಡು ಹೋಳುಗಳು ಪೃಷ್ಠಭಾಗದಲ್ಲಿ ಒರಟು ಹಾಗೂ ಸ್ಥಿತಿಸ್ಥಾಪನಶಕ್ತಿಯುಳ್ಳ ಒಂದು ಅಸ್ಥಿರಜ್ಜುವಿನ (ಹಿಂಜ್ ಲಿಗಮೆಂಟ್) ಸಹಾಯದಿಂದ ಕೂಡಿಕೊಂಡಿರುತ್ತವೆ. ಹೀಗೆ ಕೂಡಿರುವ ಕ್ಷೇತ್ರಕ್ಕೆ ಕೀಲು ರೇಖೆ ಎಂದು ಹೆಸರು. ಈ ಅಸ್ಥಿರಜ್ಜುವಿನ ನೆರವಿನಿಂದ ಚಿಪ್ಪಿನ ಹೋಳುಗಳು ತಳಭಾಗದಲ್ಲಿ ಅಗಲಿಸಿ ಸಂದು ಬಿಟ್ಟುಕೊಳ್ಳುತ್ತವೆ. ಆದರೆ ಜೀವಂತ ಪ್ರಾಣಿಯಲ್ಲಿ ದೇಹದ ಅಗ್ರ ಮತ್ತು ಪಶ್ಚ ಅಭಿವರ್ತನಿ ಸ್ನಾಯುಗಳ ಸಂಕೋಚನದಿಂದ ಚಿಪ್ಪಿನ ಹೋಳುಗಳು ಮುಚ್ಚಿಕೊಂಡಿರುತ್ತವೆ. ಸ್ನಾಯುಗಳು ಸಡಿಲಿಸಿದಾಗ ಚಿಪ್ಪಿನ ಹೋಳುಗಳು ಬಾಯಿಬಿಟ್ಟುಕೊಳ್ಳುತ್ತವೆ. ಹೀಗೆ ಉಂಟಾದ ಸಂದುವಿನ ಮೂಲಕ ಪ್ರಾಣಿ ತನ್ನ ಪಾದವನ್ನು ಹೊರಚಾಚುತ್ತದೆ.




ಕಪ್ಪೆಚಿಪ್ಪುಹುಳುವಿನ ಸಾಮಾನ್ಯನೋಟ:

1. ಅವಾಹಿದ್ವಾರ 2. ಅಪವಾಹಿದ್ವಾರ 3. ಪಾದ

ಕೀಲುರೇಖೆಯ ಸ್ಥಳದಲ್ಲಿ, ಎರಡೂ ಹೋಳುಗಳ ಅಂಚಿನಲ್ಲಿ ಹಲ್ಲುಗಳಿದ್ದು ಒಂದು ಹೋಳಿನ ಹಲ್ಲುಗಳು ಮತ್ತೊಂದರ ಹಲ್ಲುಗಳ ನಡುವೆ ಇರುವ ತೆರವುಸ್ಥಳಗಳಲ್ಲಿ ಹೊಂದಿಕೊಳ್ಳುವಂಥ ಏರ್ಪಾಟು ಇದೆ. ಭ್ರೂಣಾವಸ್ಥೆಯಲ್ಲಿ ಚಿಪ್ಪಿನ ಕವಚ ಚಿಪ್ಪು ಗ್ರಂಥಿಯಿಂದ ಸ್ರವಿಸಲ್ಪಡುತ್ತದೆ. ಆದರೆ ದೊಡ್ಡದಾಗಿ ಬೆಳೆದಂತೆ ಮ್ಯಾಂಟಲಿನಲ್ಲಿರುವ ಗ್ರಂಥಿಗಳೂ ಕವಚದ ನಿರ್ಮಾಣಕಾರ್ಯದಲ್ಲಿ ಪಾಲುಗೊಳ್ಳುತ್ತವೆ. ಪ್ರಾಣಿ ಬೆಳೆದಂತೆಲ್ಲ ಚಿಪ್ಪಿನ ಗಾತ್ರ ದೊಡ್ಡದಾಗುತ್ತದೆ ಮತ್ತು ಅದರ ಹೋಳುಗಳ ಹೊರಮೈ ಮೇಲೆ ಬೆಳವಣಿಗೆಯ ರೇಖೆಗಳು ಹೆಚ್ಚುತ್ತ ಹೋಗುತ್ತವೆ. ಈ ರೇಖೆಗಳು ಚಿಪ್ಪಿನ ಅಂಚಿಗೆ ಸಮಾನಾಂತರವಾಗಿವೆ. ಚಿಪ್ಪಿನ ಅತ್ಯಂತ ಹಳೆಯ ಭಾಗ ದಪ್ಪನಾಗಿದೆ. ಇದಕ್ಕೆ ಅಂಬೊ ಎಂದು ಹೆಸರು. ಇದು ಕೀಲುರೇಖೆಯ ಸಮೀಪದಲ್ಲಿದೆ.

ಚಿಪ್ಪಿನಲ್ಲಿ ಮೂರು ಪದರಗಳಿವೆ. ಇವು ತಮ್ಮ ರಚನೆಯಲ್ಲಿ ವೈವಿಧ್ಯ ತೋರುವುದಲ್ಲದೆ ಬೇರೆ ಬೇರೆ ರಾಸಾಯನಿಕ ವಸ್ತುಗಳಿಂದ ರಚಿತವಾಗಿದೆ. ೧. ಪೆರಿಆಸ್ಟ್ರಕಂ ವಸ್ತುವಿನಿಂದ ಕೂಡಿರುವ ಕಪ್ಪು ಮಿಶ್ರವಾದ ಕಂದು ಬಣ್ಣದ ಹೊರಪದರ. ೨. ಮಧ್ಯದ ಪ್ರಿಸ್ಮಾಟಿಕ್ ಪದರ; ಇದರಲ್ಲಿ ಅಸಂಖ್ಯಾತ ಸುಣ್ಣದ ಹರಳುಗಳು ಕಾಂಕಿಯೋಲಿನ್ ಎಂಬ ವಸ್ತುವಿನಲ್ಲಿ ಹುದುಗಿರುತ್ತವೆ. ೩. ನೇಕ್ರಿಯಸ್ ಪದರ. ಮೊದಲ ಎರಡು ಪದರಗಳು ಮ್ಯಾಂಟಲಿನ ಅಂಚುಗಳಿಂದ ಉತ್ಪಾದನೆಯಾದವು. ಇದರ ಫಲವಾಗಿ ಬೆಳವಣಿಗೆಯ ಸಮಾನ ಕೇಂದ್ರಿಯ ಗುರುತುಗಳನ್ನು ಚಿಪ್ಪಿನ ಮೇಲೆ ಕಾಣಬಹುದು. ಮೂರನೆಯ ಪದರ ಮ್ಯಾಂಟಲಿನ ಇಡೀ ಮೇಲ್ಮೈಯಿಂದ ರಚಿತವಾದ್ದು. ಈ ಪದರಕ್ಕೂ ಮತ್ತು ಮ್ಯಾಂಟಲಿನ ಹೊರಪದರಕ್ಕೂ ನಡುವೆ ಯಾವುದಾದರೊಂದು ಪರಕೀಯ ವಸ್ತು ಅಥವಾ ಪರತಂತ್ರ ಜೀವಿ ಪ್ರವೇಶಿಸಿದರೆ ಅದರ ಸುತ್ತಲೂ ಸುಣ್ಣದ ಪದರಗಳು ಬೆಳೆದು ಅದನ್ನು ಆವರಿಸುತ್ತವೆ. ಮುತ್ತಿನ ಚಿಪ್ಪಿನ ಪ್ರಾಣಿಯಲ್ಲಿ ಮುತ್ತು ನಿರ್ಮಾಣವಾಗುವುದು ಈ ವಿಧಾನದಿಂದಲೇ.

ಕಪ್ಪೆಚಿಪ್ಪು ಹುಳುವಿನ ಬೆಳವಣಿಗೆಯ ಕ್ರಮ ಮೃದ್ವಂಗಿಗಳಲ್ಲೆಲ್ಲ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಗಂಡು ಮತ್ತು ಹೆಣ್ಣುಗಳಲ್ಲಿ ಭೇದವಿದ್ದರೂ ಈ ಭೇದಗಳನ್ನು ಹೊರನೋಟದಲ್ಲಿ ಗುರುತಿಸುವುದು ಕಷ್ಟ. ಹೆಣ್ಣಿನ ಅಂಡಾಶಯದಿಂದ ಪಕ್ವವಾದ ಅಂಡಾಣುಗಳು ಹೊರಬಂದು ಕಿವಿರುಗಳ ಜಲನಳಿಕೆಗಳಲ್ಲಿ ಬೀಳುತ್ತವೆ. ಗಂಡಿನ ವೀರ್ಯಾಣುಗಳು ಮ್ಯಾಂಟಲ್ ಕುಹರವನ್ನು ಹೊಕ್ಕು, ಕಿವಿರುಗಳ ಮೇಲಿರುವ ರಂಧ್ರಗಳ ಮೂಲಕ ಸಾಗಿ, ಕಿವಿರುಗಳ ಒಳಾಂಗಣದಲ್ಲಿರುವ ಅಂಡಾಣುಗಳನ್ನು ಗರ್ಭಾಂಕುರಗೊಳಿಸುತ್ತವೆ. ಗರ್ಭಧರಿಸಿದ ಅಂಡಾಣುಗಳು ನೀರು ನಳಿಕೆಗಳಲ್ಲಿ ಬೆಳೆಯಲಾರಂಭಿಸುತ್ತವೆ. ಕೆಲ ದಿನಗಳಲ್ಲಿಯೇ ಅಂಡಾಣು ಕವಚಗಳಿಂದ ಸಣ್ಣ ಸಣ್ಣ ಗ್ಲಾಕಿಡಿಯಂ ಲಾರ್ವಗಳು ಹೊರಬರುತ್ತವೆ. ಕೆಲಕಾಲದ ನಂತರ ಇವು ತಾಯಿ ದೇಹದ ಅಪವಾಹಿದ್ವಾರದ ಮೂಲಕ ಹೊರ ಬಂದು ಸ್ವತಂತ್ರ ಜೀವನವನ್ನು ಸಾಗಿಸುತ್ತವೆ. ಈ ಲಾರ್ವಕ್ಕೆ ಎರಡು ತ್ರಿಕೋನಾಕಾರದ ತೆಳುವಾದ ಚಿಪ್ಪಿನ ಪಾಲಿಗಳಿವೆ. ಪ್ರತಿ ಚಿಪ್ಪಿನ ಪಾಲಿಯ ಬಿಡುವಾದ ಅಂಚಿನಲ್ಲಿ ಒಳಕ್ಕೆ ಬಾಗಿದ ಮುಳ್ಳಿನಂತಿರುವ ಒಂದು ಹಲ್ಲು ಇದೆ. ಇದರ ಮ್ಯಾಂಟಲ್ ಪಾಲಿಗಳು ಬಹು ಚಿಕ್ಕವು ಮತ್ತು ಅವುಗಳ ಅಂಚಿನಲ್ಲಿ ಮೂರು ಅಥವಾ ನಾಲ್ಕು ಗ್ರಂಥೀಯ ಜೀವಕೋಶಗಳಿವೆ. ಇವುಗಳ ಸ್ರಾವದಿಂದ ಒಂದು ಉದ್ದವಾದ ತಾತ್ಕಾಲಿಕ ಬೈಸಸ್ ಎಂಬ ದಾರ ರೂಪಗೊಂಡು ಹೊರಚಾಚಿರುತ್ತದೆ. ಮ್ಯಾಂಟಲ್ ಪಾಲಿಗಳ ಒಳಮೈ ಮೇಲೆ ವಿಚಿತ್ರವಾದ ಕುಂಚದಂಥ ಜ್ಞಾನೇಂದ್ರಿಯಗಳಿವೆ. ಈ ಗ್ಲಾಕಿಡಿಯಂ ಲಾರ್ವಗಳು ನೀರಿನ ತಳಭಾಗಕ್ಕೆ ಇಳಿಯಬಹುದು ಅಥವಾ ನೀರಿನ ಪ್ರವಾಹದ ಮೂಲಕ ಬೇರೆಡೆಗೆ ವಿತರಣೆಯಾಗಬಹುದು. ಕೆಲಕಾಲ ನೀರಿನಲ್ಲಿ ಈಜುತ್ತಿದ್ದಂತೆ ತಮ್ಮ ಸುತ್ತಮುತ್ತ ಈಜುವ ಮೀನುಗಳ ಕಿವಿರುಗಳಿಗೆ ತಮ್ಮ ಕೊಕ್ಕೆ ಮತ್ತು ಬೈಸಸ್ ದಾರದ ಸಹಾಯದಿಂದ ಅಂಟಿಕೊಂಡು ತಮ್ಮ ಸುತ್ತಲೂ ಮೀನಿನ ಅಂಗದ ಆವರಣವನ್ನು ಬೆಳೆಸಿಕೊಂಡು




ಗ್ಲಾಕಿಡಿಯಂ ಡಿಂಬ: 1. ಚಿಪ್ಪು 2. ಬೈಸಸ್ ದಾರ 3. ಕೊಕ್ಕೆ

ಕಾಯ ಪರಿವರ್ತನೆಯನ್ನು ಹೊಂದುತ್ತವೆ. ಅಂದರೆ ಇವು ತಮ್ಮ ಎರಡನೆಯ ಲಾರ್ವಾವಸ್ಥೆಯನ್ನು ಪರತಂತ್ರ ಜೀವನದಲ್ಲಿ ಕಳೆಯುತ್ತವೆ. ಈ ಜೀವನದಲ್ಲಿ ತಮಗೆ

ಬೇಕಾದ ಪೌಷ್ಟಿಕಾಂಶವನ್ನು ತಮ್ಮ ಆತಿಥೇಯ ಮೀನಿನಿಂದ ಪಡೆಯುತ್ತವೆ. ಕಾಯ ಪರಿವರ್ತನೆಯ ಕಾಲದಲ್ಲಿ ಬೈಸಸ್ ದಾರ ಮತ್ತು ಜ್ಞಾನೇಂದ್ರಿಯಗಳು ನಶಿಸಿಹೋಗುತ್ತವೆ. ಬಾಯಿ, ಗುದ, ದೇಹದ ತಳಭಾಗದಲ್ಲಿ ಸ್ನಾಯುಮಯವಾದ ಪಾದ ಮತ್ತು ಕಿವಿರುಗಳು ರೂಪುಗೊಳ್ಳುತ್ತವೆ. ಅನಂತರ ಅವು ತಮ್ಮ ಪೋಷಕ ಜೀವಿಯ ದೇಹದಿಂದ ಹೊರಬಂದು ನೀರಿನಲ್ಲಿ ಇಳಿದು ತಳವನ್ನು ಸೇರಿ ಸ್ವತಂತ್ರ ಜೀವನವನ್ನು ಸಾಗಿಸುತ್ತ ಬೆಳೆಯಲಾರಂಭಿಸುತ್ತವೆ. ಯೂನಿಯೋ, ಕ್ವಾಡ್ರುಲ ಜಾತಿಯ ಕಪ್ಪೆಚಿಪ್ಪು ಹುಳುಗಳು ಬೇಸಿಗೆಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಅನೊಡೊಂಟ, ಲಾಂಪ್ಸಿಲಿಸ್ ಜಾತಿಯವು ಬೇಸಿಗೆಯ ಕೊನೆಯ ಭಾಗದಲ್ಲಿ ಸಂತಾನೋತ್ಪತ್ತಿ ಮಾಡಿ ತಮ್ಮ ಗ್ಲಾಕಿಡಿಯಂ ಲಾರ್ವಗಳನ್ನು ಮುಂಬರುವ ವಸಂತ ಋತುವಿನವರೆಗೂ ತಮ್ಮ ದೇಹದಲ್ಲಿಯೇ ಇಟ್ಟುಕೊಳ್ಳುತ್ತವೆ.

ಉತ್ತರ ಅಮೆರಿಕದ ಒಹಾಯೊ ಮತ್ತು ಆಲಬಾಮ ನದಿ ಮಂಡಲಗಳಲ್ಲೂ ಯೂರೋಪಿನ ಕೆಲದೇಶಗಳಲ್ಲೂ ಮುತ್ತಿನ ಗುಂಡಿಗಳಿಗಾಗಿ ಯೂನಿಯೊ ಜಾತಿಗೆ ಸೇರಿದ ಕಪ್ಪೆಚಿಪ್ಪು ಹುಳುಗಳನ್ನು ಬೆಳೆಸುವ ಉದ್ಯಮ ಬೆಳೆದಿತ್ತು. ಆದರೆ ಪ್ಲಾಸ್ಟಿಕ್ ಉದ್ಯಮ ಹೆಚ್ಚಾದಂತೆ ಈ ಮುತ್ತಿನ ಗುಂಡಿಗಳ ಬೇಡಿಕೆ ಕಡಿಮೆಯಾಗುತ್ತಾ ಬಂದಿದೆ. ಹಿಂದೆ ಮಾನವನಿಗೆ ಈ ಪ್ರಾಣಿಗಳು ಆಹಾರ ವಸ್ತುವಾಗಿದ್ದುವೆಂದು ತೋರುತ್ತದೆ. ಕೆಲದೇಶಗಳಲ್ಲಿ ಈ ಪ್ರಾಣಿಗಳ ಚಿಪ್ಪು ಮತ್ತು ಮೃದುದೇಹದಿಂದ ಹಂದಿ ಮತ್ತು ಕೋಳಿಗಳ ಆಹಾರವನ್ನು ತಯಾರು ಮಾಡುತ್ತಾರೆ. ***

**ಕಮೋಡೊ:** ಒಂದು ಜಾತಿಯ ಸರೀಸೃಪ. ಉಡದ ಜಾತಿಗೆ ಹತ್ತಿರದ ಸಂಬಂಧಿ. ಸ್ಕ್ವಾಮಾಟ ಗಣದ ವೆರಾನಿಡೆ ಕುಟುಂಬಕ್ಕೆ ಸೇರಿದೆ. ವೆರಾನಸ್ ಕಮೋಡೋಯೆನ್ಸಿಸ್ ಇದರ ವೈಜ್ಞಾನಿಕ ನಾಮ. ಜೀವಂತವಾಗಿರುವ ಹಲ್ಲಿಗಳಲ್ಲಿ ಅತಿ ದೊಡ್ಡದೆನಿಸಿದ ಇದು 3.6 ಮೀ. ಉದ್ದ ಬೆಳೆಯುತ್ತದೆ ಹಾಗೂ 150 ಕಿಗ್ರಾಂ ತೂಗುತ್ತದೆ. ಬಣ್ಣ ಕಪ್ಪು. ಚರ್ಮ ಮೂಳೆಯಷ್ಟು ಗಟ್ಟಿಯಾಗಿದೆ. ಹವಾಗುಣವನ್ನು ಪರೀಕ್ಷಿಸಲು ತನ್ನ ಹಳದಿ ಬಣ್ಣದ ನಾಲ್ಕು ಕವಲುಗಳಾಗಿ ಸೀಳಿದ ನಾಲಗೆಯನ್ನು ಆಗಾಗ ಹೊರಚಾಚುತ್ತದೆ. ಹೀಗೆ ನಾಲಗೆಯನ್ನು ಹೊರಕ್ಕೂ ಒಳಕ್ಕೂ ಆಡಿಸುವಾಗ ಅದು ದೀಪದ ಜ್ವಾಲೆಯ ಹಾಗೆ ಕಾಣುತ್ತದೆ. ಇದು ಮಾಂಸಾಹಾರಿ. ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದಲ್ಲದೆ ಬದುಕಿರುವ ಕೀಟಗಳನ್ನು, ಕಶೇರುಕಗಳನ್ನು ತಿನ್ನುತ್ತದೆ. ಸಾಮಾನ್ಯವಾಗಿ ನೆಲದಮೇಲೆಯೇ ವಾಸ. ಕೆಲವು ವೇಳೆ ನೀರಿನಲ್ಲಿ ಈಜುವುದುಂಟು. ರಾತ್ರಿಯನ್ನು ಬಿಲಗಳಲ್ಲಿ ಕಳೆಯುತ್ತದೆ. ಕೆಲವು ಸಾರಿ ಬಿಲದಲ್ಲೇ ಹಲವಾರು ದಿನಗಳನ್ನು ಕಳೆಯುವುದೂ ಉಂಟು. ಈ ಪ್ರಾಣಿಯ ವಿಚಾರ ಬಹಳ ದಿನಗಳವರೆಗೂ ತಿಳಿದಿರಲಿಲ್ಲ. ಕೇವಲ 50ವರ್ಷಗಳಿಂದೀಚೆಗೆ ಇದರ ಇರುವಿಕೆ ಗೊತ್ತಾಗಿದೆ. ಇದರ ಸಂತತಿ ಪ್ಲಿಸ್ಟೊಸೀನ್ ಕಾಲದ ಆದಿಯಿಂದ ಬೆಳೆದುಬಂದಿದೆ ಎಂದು ತಜ್ಞರು ಹೇಳಿದ್ದಾರೆ. ಇದು ಸೆಲೆಬಸ್ ದ್ವೀಪದ ದಕ್ಷಿಣಕ್ಕಿರುವ ಸುಂದ ದ್ವೀಪಗಳಲ್ಲಿ ಕಂಡುಬರುತ್ತದೆ. (ಎನ್.ವಿ.ಎ)

**ಕಯೋಟ್:** ಸ್ತನಿಗಳ ವರ್ಗದ ಕಾರ್ನಿವೊರ ಗಣದಲ್ಲಿನ ಕೇನಿಡೆ (ನಾಯಿಗಳ) ಕುಟುಂಬಕ್ಕೆ ಸೇರಿದ ಪ್ರಾಣಿ. ಕೇನಿಸ್ ಲೇಟ್ರನ್ಸ್ ಇದರ ವೈಜ್ಞಾನಿಕ ಹೆಸರು. ಇದನ್ನು ಹುಲ್ಲುಗಾವಲಿನ ತೋಳ (ಪ್ರೈರಿ ವುಲ್ಫ್) ಎಂದು ಕರೆಯುವುದುಂಟು. ಉತ್ತರ ಅಮೆರಿಕದಲ್ಲಿ ಅಲಾಸ್ಕದಿಂದ ಹಿಡಿದು ಮೆಕ್ಸಿಕೋ ವರೆಗಿನ ಪ್ರದೇಶಗಳಲ್ಲಿ ಹೇರಳವಾಗಿ ಕಾಣಬರುತ್ತದೆ. ಸಾಮಾನ್ಯವಾಗಿ ಬಯಲುಗಳಲ್ಲಿ ವಾಸಿಸುವುದು ಹೆಚ್ಚು. ಗಾತ್ರದಲ್ಲಿ ತೋಳಕ್ಕಿಂತ ಚಿಕ್ಕದಾಗಿದೆ. ನರಿಯನ್ನು ಹೆಚ್ಚುಕಡಿಮೆ ಹೋಲುವ ಇದು ಸು. 90 ಸೆಂಮೀ ಉದ್ದ, 30–38 ಸೆಂಮೀ ಎತ್ತರ ಇದೆ. ಇದರ ತೂಕ ಸು. 30–35 ಕಿಗ್ರಾಂ ತಳಭಾಗ ಬಿಳುಪಾಗಿದೆ; ಕಾಲುಗಳು ಕೊಂಚ ಕೆಂಪು ಬಣ್ಣದವು. ಬಾಲದ ತುದಿ ಕಪ್ಪು ಬಣ್ಣದ್ದು; ಕುಚ್ಚಿನಂತಿದೆ. ಬಾಲದ ಬುಡದಲ್ಲಿ ಕಪ್ಪು ಬಣ್ಣದ ಗ್ರಂಥಿಗಳುಳ್ಳ ಪ್ರದೇಶವಿದೆ. ಕಯೋಟ್ ಓಡುವಾಗ ಬಾಲ ಕೆಳಮುಖವಾಗಿ ಬಾಗಿರುತ್ತದೆ.

ಕಯೋಟ್ ನಿಶಾಚರಿ. ಮಾಂಸಾಹಾರಿಯಾದ ಇದರ ಆಹಾರ ಮೊಲ, ಇಲಿ, ಹೆಗ್ಗಣ, ಅಳಿಲು, ಜಿಂಕೆ, ಬಾತು ಮತ್ತು ಇತರ ಹಕ್ಕಿಗಳು. ಹೊಂಚುಹಾಕಿ ಬೇಟೆಯನ್ನು ಹಿಡಿಯುವುದೇ ಹೆಚ್ಚು. ಕೆಲವು ವೇಳೆ ಅಟ್ಟಿಸಿಕೊಂಡು ಹೋಗಿ ಬೇಟೆಯಾಡಿ ಹಿಡಿಯುವುದೂ ಉಂಟು. ಬೇಟೆಯಾಡುವಾಗ ಸುಮಾರು 65 ಕಿಮೀ ವೇಗದಲ್ಲಿ ಓಡಿದ ದಾಖಲೆಗಳುಂಟು. ಗುಂಪುಗುಂಪಾಗಿ ಕೂಡಿಕೊಂಡು ಬೇಟೆಯಾಡುತ್ತದೆ. ಸಾಕುಪ್ರಾಣಿಗಳನ್ನು ಹಿಡಿದು ತಿನ್ನುವುದೆಂದು ಹೇಳುವರಾದರೂ ಅದು ಬಹಳ ವಿರಳ. ಕೆಲವು ವೇಳೆ ಹಣ್ಣುಹಂಪಲಗಳನ್ನೂ ತಿನ್ನುವುದುಂಟು. ತಾನೇ ನೆಲದಲ್ಲಿ ಗೂಡು ಕೊರೆದುಕೊಂಡು ಅಥವಾ ಇತರ ಪ್ರಾಣಿಗಳು ಮಾಡಿರುವ ನೆಲದ ಬಿಲಗಳನ್ನು ಇನ್ನೂ ಅಗಲ ಮಾಡಿಕೊಂಡು ಹಗಲಿನಲ್ಲಿ ಅಡಗಿಕೊಂಡಿರುತ್ತದೆ. ಇಂಥ ಗೂಡುಗಳಲ್ಲಿ, ಸಾಮಾನ್ಯವಾಗಿ ವಸಂತ ಋತುವಿನಲ್ಲಿ ಮರಿ ಹಾಕುತ್ತದೆ. ಒಂದು ಸೂಲಿಗೆ 6–8 ಮರಿಗಳನ್ನು ಈಯುತ್ತದೆ. ಗಂಡು–ಹೆಣ್ಣು ಕಯೋಟುಗಳೆರಡೂ ಮರಿಗಳ ಪೋಷಣೆ ಮಾಡುತ್ತವೆ; ಆಜೀವಪರ್ಯಂತ ಗಂಡು ಹೆಣ್ಣುಗಳು ಒಟ್ಟಿಗೆ ವಾಸಿಸುತ್ತವೆ (ಇವುಗಳ ಆಯುಸ್ಸು ಸುಮಾರು 13 ವರ್ಷಗಳು). ಒಂಟಿಯಾಗಿ ಅಥವಾ ಗುಂಪುಗಳಲ್ಲಿ ಪ್ರತಿ ಸಂಜೆ ಇವು ವಿಚಿತ್ರವಾಗಿ ಕೂಗುತ್ತವೆ. ಬೊಗಳುವಿಕೆ, ಅರಚುವಿಕೆ, ಹುಯ್ಯಲಿಡುವಿಕೆ, ನರಿಗಳಂತೆ ಊಳಿಡುವಿಕೆ ಮುಂತಾಗಿ ಹಲವು ವಿಧದ ಇದರ ಕೂಗು ಮುಸ್ಸಂಜೆಯಲ್ಲಿ ಕಾಡಿನಲ್ಲಿ ಒಂಟಿಯಾಗಿ ಹೋಗುವವರಿಗೆ ಭಯ ಹುಟ್ಟಿಸುವಂಥದು. ***

**ಕರಡಿ:** ಕಾರ್ನಿವೊರ ಗಣದ ಅರ್ಸಿಡೆ ಕುಟುಂಬಕ್ಕೆ ಸೇರಿದ ಸ್ತನಿ. ಪ್ರಪಂಚದಲ್ಲಿ ಸುಮಾರು ೭ ಜಾತಿ ಹಾಗೂ ೯ ಪ್ರಭೇದಗಳಿವೆ. ಇವು ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿರುವುದೇ ಹೆಚ್ಚು. ಉತ್ತರ ಶೀತವಲಯದಲ್ಲೂ ಒಂದು ಜಾತಿಯ ಕರಡಿ ಇದೆ. ಅಫ್ರಿಕ, ಮಡಗಾಸ್ಕರ್ ದ್ವೀಪ, ಆಸ್ಟ್ರೇಲಿಯ ಹಾಗೂ ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಮಾತ್ರ ಕರಡಿ ಇಲ್ಲ. ಬಹು ಭಾರವಾದ ದೇಹ, ದೇಹದ ಗಾತ್ರಕ್ಕೆ ಹೋಲಿಸಿದರೆ ಚಿಕ್ಕವಾದ ಆದರೆ ಬಲಯುತವಾದ ಕಾಲುಗಳು, ಪುಟ್ಟಬಾಲ, ದೊಡ್ಡ ಗಾತ್ರದ ತಲೆ, ದೇಹದ ಮೇಲೆಲ್ಲ ಉದ್ದನೆಯ ಹಾಗೂ ಪೊದೆಯಂಥ ಕೂದಲುಗಳು–ಇವು ಕರಡಿಯ ಪ್ರಮುಖವಾದ ಸಾಮಾನ್ಯ ಲಕ್ಷಣಗಳು. ಸಾಮಾನ್ಯವಾಗಿ ಕರಡಿಗಳ ಕಣ್ಣು ಮತ್ತು ಕಿವಿಗಳು ಬಲು ಚಿಕ್ಕವು–ಕಿವಿಗಳು ಗುಂಡಗಿದ್ದು ನೆಟ್ಟಗೆ ನಿಂತಂತಿವೆ. ಮೂತಿ ಉದ್ದವಾಗಿದೆ. ತುಟಿಗಳು ದವಡೆಗಳಿಗೆ ಅಂಟಿಲ್ಲ. ಎರಡು ಜೊತೆ ಕಾಲುಗಳಲ್ಲೂ ಐದೈದು ಬೆರಳುಗಳಿವೆ. ಇವುಗಳಲ್ಲಿ ಚೂಪಾದ ಬಾಗಿದ ಹಾಗೂ ಗಡುಸಾದ ಉಗುರುಗಳಿವೆ (ಪಂಜ). ಇವು ಆಹಾರವನ್ನು ಸಿಗಿಯಲು ಗುಳಿ ತೋಡಲೂ, ಸಹಕಾರಿಯಾಗಿವೆ. ಕರಡಿಗಳು ಊರುಗಾಲಿಗಳು (ಪ್ಲಾಂಟಿಗ್ರೇಡ್). ನಡೆಯುವಾಗ ಅಂಗಾಲನ್ನು ಅದರಲ್ಲೂ ಹಿಮ್ಮಡಿಯನ್ನು ನೆಲಕ್ಕೆ ಊರುವುದರಿಂದ ಇವುಗಳ ನಡಿಗೆ ವಿಚಿತ್ರವಾಗಿದ್ದು ತೊನೆಯುತ್ತ ನಡೆಯುವಂತೆ ಕಾಣುತ್ತದೆ. ಸಾಮಾನ್ಯವಾಗಿ ನಾಲ್ಕು ಕಾಲುಗಳನ್ನು ಊರಿ ನಡೆಯುವುವಾದರೂ ಕೆಲವೊಮ್ಮೆ ಬರಿಯ ಹಿಂಗಾಲುಗಳ ಮೇಲೆ ನಡೆಯುವುದೂ ಉಂಟು. ನಡಿಗೆ ವಿಚಿತ್ರವಾದರೂ ಕರಡಿಗಳು ವೇಗವಾಗಿ ಹಾಗೂ ಅತ್ಯಂತ ಜಾಗರೂಕತೆಯಿಂದ ನಡೆಯಬಲ್ಲುವು. ನೆಲದ ಮೇಲೆಯೇ ಸಂಪೂರ್ಣವಾಗಿ ತಮ್ಮ ಚಟುವಟಿಕೆಗಳನ್ನು ನಿರ್ವಹಿಸುವ ಕರಡಿಗಳ ಅಂಗಾಲಿನ ಮೇಲೆ ಕೂದಲು ಇದೆ. ದೇಹದ ಗಾತ್ರದಲ್ಲೂ ತೂಕದಲ್ಲೂ ಬೇರೆ ಬೇರೆ ಬಗೆಯ ಕರಡಿಗಳಲ್ಲಿ ವೈವಿಧ್ಯವಿದೆ. ಕೆಲವು ಸುಮಾರು ೩ ಮೀ. ಉದ್ದವಿದ್ದು, ಸು. ೭೮೦ ಕಿಗ್ರಾಂ. ತೂಗಿದರೆ (ಉದಾಹರಣೆಗೆ ಅಲಾಸ್ಕದ ಕಂದು ಕರಡಿ) ಇನ್ನು ಕೆಲವು ಕೇವಲ ೧ ಮೀ. ಉದ್ದವಿದ್ದು ೨೭–೪೦ ಕಿ.ಗ್ರಾಂ ತೂಗುತ್ತವೆ (ಉದಾಹರಣೆಗೆ ಮಲಯದ ಬಿಸಿಲು ಕರಡಿ). ದೇಹದ ಬಣ್ಣದಲ್ಲೂ ವೈವಿಧ್ಯವನ್ನು ಕಾಣಬಹುದು – ಕಂದು, ಕಪ್ಪು, ನೀಲಿಮಿಶ್ರಿತ ಕಪ್ಪು, ಬೂದು, ಬಿಳಿ ಇತ್ಯಾದಿ. ಕೆಲವು ಕರಡಿಗಳಲ್ಲಿ ಎದೆಯ ಮೇಲೆ ಅರ್ಧ ಚಂದ್ರಾಕೃತಿಯ ಅಥವಾ ಚಕ್ರದಂಥ ಬಿಳಿಯ ಬಣ್ಣದ ಗುರುತುಗಳುಂಟು.

ಕರಡಿ ನಿಶಾಚರಿ. ಹಗಲೆಲ್ಲ ಗುಡ್ಡಬೆಟ್ಟಗಳಲ್ಲಿನ ಗವಿಗಳಲ್ಲೊ, ದಟ್ಟವಾದ ಪೊದೆಗಳಲ್ಲೊ, ದೊಡ್ಡ ದಿಮ್ಮಿಗಳ ಪೊಟರೆಗಳಲ್ಲೊ ಅಥವಾ ನೆಲವನ್ನು ತೋಡಿ ಮಾಡಿಕೊಂಡ ಬಿಲಗಳಲ್ಲೊ ನಿದ್ರಿಸುತ್ತ ಕಾಲ ಕಳೆಯುತ್ತಿದ್ದು, ಆಹಾರಾರ್ಜನೆಗಾಗಿ ಸಂಜೆ ಅಥವಾ ರಾತ್ರಿ ಹೊರ ಹೊರಡುತ್ತದೆ. ಶೀತವಲಯದ ಕರಡಿ ಮಾತ್ರ ಹಗಲಿನಲ್ಲೆ ತನ್ನ ಚಟುವಟಿಕೆಗಳಲ್ಲಿ ನಿರತವಾಗಿರುತ್ತದೆ. ಸಾಮಾನ್ಯವಾಗಿ ಕರಡಿಗಳೆಲ್ಲ ಆಹಾರವನ್ನು ಹುಡುಕಿಕೊಂಡು ತಾವು

ವಾಸಿಸುವ ಸ್ಥಳದಿಂದ ಬಹುದೂರ ಹೋಗುತ್ತವೆ. ಅದಕ್ಕೇ ಬಹಳ ಅಲೆಮಾರಿ ಪ್ರಾಣಿಗಳೆಂದು ಇವು ಹೆಸರಾಗಿವೆ. ಕರಡಿಗಳು ಸರ್ವಭಕ್ಷಕ ಪ್ರಾಣಿಗಳು. ಹುಲ್ಲು, ಎಲೆ, ಬೇರು, ಹಣ್ಣು, ಹಂಪಲು, ಜೇನುತುಪ್ಪ ಮುಂತಾದ ಸಸ್ಯಾಹಾರವನ್ನೂ ಕೀಟಗಳು, ಸಣ್ಣಪುಟ್ಟ ಸ್ತನಿಗಳು ಮುಂತಾದ ಮಾಂಸಾಹಾರವನ್ನೂ ತಿನ್ನುತ್ತವೆ. ಮೀನನ್ನು ಹಿಡಿದು ತಿನ್ನುವುದೂ ಉಂಟು. ಆಹಾರಪ್ರಾಣಿಗಳನ್ನು ತಮ್ಮ ಬಲವಾದ ಪಂಜಗಳಿಂದ ಹೊಡೆದು ಕೊಂದು ತಿನ್ನುವುದೇ ವಾಡಿಕೆ. ಕರಡಿಗಳಿಗೆ ದೃಷ್ಟಿ ಹಾಗೂ ಶ್ರವಣ ಶಕ್ತಿಗಳು ಕಡಿಮೆ. ಅದರೆ ಘ್ರಾಣಶಕ್ತಿ ಅತ್ಯಂತ ಚುರುಕು. ಅಹಾರ ಮತ್ತು ಶತ್ರುಗಳ ಸುಳಿವನ್ನು ವಾಸನೆಯಿಂದಲೇ ಪತ್ತೆಹಚ್ಚುತ್ತವೆ. ಇವುಗಳ ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಶಿಶಿರಸ್ವಾಪತೆ (ಹೈಬರ್ನೇಷನ್). ಬಹುಪಾಲು ಜಾತಿಯ ಕರಡಿಗಳು ಚಳಿಗಾಲದಲ್ಲಿ ತಮ್ಮ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಿ ಯಾವುದಾದರೂ ಗುಹೆಯಲ್ಲಿ ೨-೩ ತಿಂಗಳ ಕಾಲ ನಿದ್ದೆ ಹೋಗುತ್ತವೆ. ಈ ಕಾಲದಲ್ಲಿ ಉಸಿರಾಡುವುದೊಂದನ್ನು ಬಿಟ್ಟರೆ ಉಳಿದೆಲ್ಲ ದೈಹಿಕ ವ್ಯಾಪಾರಗಳೂ ನಿಂತಂತೆಯೇ ಇರುತ್ತವೆ. ಆದರೆ ಕೆಲವು ವಿಜ್ಞಾನಿಗಳ ಪ್ರಕಾರ ಈ ಬಗೆಯ ನಿದ್ದೆ ಕೀಟಗಳು ಮುಂತಾದ ಪ್ರಾಣಿಗಳಲ್ಲಿರುವಂತೆ ನಿಜವಾದ ಶಿಶಿರಸ್ವಾಪತೆಯಲ್ಲ. ಏಕೆಂದರೆ ಈ ಕಾಲದಲ್ಲಿ ಕರಡಿಗಳು ಎಚ್ಚರಗೊಳ್ಳುವುದೂ ಗುಹೆಯಿಂದ ಹೊರಬಂದು ಮತ್ತು ಬಂದಂತೆ ನಡೆದಾಡುವುದೂ ಕಂಡುಬಂದಿದೆ. ಶೀತವಲಯದ ಕರಡಿಗಳು (ಗರ್ಭಧರಿಸಿದ ಹೆಣ್ಣುಗಳನ್ನು ಬಿಟ್ಟು), ಮಲಯದ ಬಿಸಿಲು ಕರಡಿ ಮತ್ತು ಭಾರತದ ಕರಡಿ (ಸ್ಲಾತ್ ಬೇರ್)-ಇವು ಶಿಶಿರಸ್ವಾಪತೆ ಮಾಡುವುದಿಲ್ಲ ಎಂದು ಹೇಳಲಾಗಿದೆ.

ಕರಡಿಗಳು ಸ್ವಾಭಾವಿಕವಾಗಿ ಶಾಂತಸ್ವಭಾವದ ಪ್ರಾಣಿಗಳು. ತಾವಾಗಿಯೇ ಇತರ ಪ್ರಾಣಿಗಳ ಮೇಲೆ (ಆಹಾರ ಪ್ರಾಣಿಗಳನ್ನು ಬಿಟ್ಟು) ಬಿದ್ದು ಆಕ್ರಮಣ ಮಾಡುವುದಿಲ್ಲ. ಆದಷ್ಟು ಮಟ್ಟಿಗೆ ಬೇರೆ ಪ್ರಾಣಿಗಳೊಂದಿಗೆ ಹೋರಾಡುವುದನ್ನು ತಪ್ಪಿಸಲು ಪ್ರಯತ್ನಿಸುತ್ತವೆ. ಆದರೆ ಸ್ವಂತ ಹಾಗೂ ಮರಿಗಳ ರಕ್ಷಣೆಗಾಗಿ, ಆಹಾರಕ್ಕಾಗಿ, ಇಕ್ಕಟ್ಟಿಗೆ ಸಿಲುಕಿದಾಗ, ಬಹು ಕ್ರೂರವಾಗಿ, ಅಪಾಯಕರವಾಗಿ ಹೋರಾಡಬಲ್ಲವು.

ಇವು ಸಾಮಾನ್ಯವಾಗಿ ಒಂಟಿಜೀವನ ನಡೆಸುತ್ತವೆ. ಸಂತಾನಾಭಿವೃದ್ಧಿಯ ಕಾಲದಲ್ಲಿ ಮಾತ್ರ ಒಟ್ಟೊಟ್ಟಿಗೆ ಇರುತ್ತವೆ. ಪ್ರತಿವರ್ಷದ ಅಕ್ಟೋಬರ್ ಮಾರ್ಚಿ ತಿಂಗಳುಗಳ ನಡುವಣ ಕಾಲ ಕರಡಿಗಳು ಮರಿ ಹಾಕುವ ಕಾಲ. ೬-೯ ತಿಂಗಳುಗಳ ಅವಧಿಯ ಗರ್ಭಧಾರಣೆಯ ಅನಂತರ ಒಂದೊಂದು ಹೆಣ್ಣೂ ೧-೪ ಮರಿಗಳನ್ನು ಹೆರುತ್ತದೆ. ಆಗತಾನೇ ಹುಟ್ಟಿದ ಮರಿಗಳು ಬಹಳ ಚಿಕ್ಕವಾಗಿದ್ದು ಸುಮಾರು ೨೩೦-೫೬೦ ಗ್ರಾಂ ಮಾತ್ರ ತೂಗುತ್ತವೆ. ಹುಟ್ಟಿದಾಗ ಕಣ್ಣು ತೆರೆದೇ ಇರುವುದಿಲ್ಲ ಮರಿಗಳ ಪಾಲನೆಯನ್ನು ತಾಯಿ ಕರಡಿ ಮಾಡುತ್ತದೆ. ೧-೨ ವರ್ಷ ತಾಯಿಯೊಡನೆಯೇ ಇದ್ದು ಆಮೇಲೆ ಮರಿಗಳು ತಮ್ಮ ಬದುಕನ್ನು ಸ್ವತಂತ್ರವಾಗಿ ನಡೆಸಲಾರಂಭಿಸುತ್ತವೆ. ೨½-೬ ವರ್ಷಗಳಲ್ಲಿ ಪ್ರೌಢಾವಸ್ಥೆ ತಲಪುತ್ತವೆ. ಕರಡಿಗಳ ಆಯಸ್ಸು ಸುಮಾರು ೧೫-೩೦ ವರ್ಷಗಳು ಸಾಕಿದ ಕರಡಿಗಳು ಇನ್ನೂ ಹೆಚ್ಚುಕಾಲ ಬದುಕಿರುವ ದಾಖಲೆಗಳುಂಟು.

ಅಮೆರಿಕದ ಕಪ್ಪು ಕರಡಿ, ಅಲಾಸ್ಕದ ಕಂದು ಕರಡಿ, ಏಷ್ಯಾದ ಕಪ್ಪು ಕರಡಿ, ಬಿಸಿಲು ಕರಡಿ, ಭಾರತದ ಕರಡಿ, ಮಚ್ಚೆ ಕರಡಿ ಮತ್ತು ಶೀತವಲಯದ ಕರಡಿ - ಇವು ಪ್ರಪಂಚದಲ್ಲಿ ಕಾಣಬರುವ ಏಳು ಜಾತಿಯ ಕರಡಿಗಳು.

೧. ಅಮೆರಿಕದ ಕಪ್ಪು ಕರಡಿ : ಇದರ ಶಾಸ್ತ್ರೀಯ ನಾಮ ಯುಆರ್ಕ್ಟಸ್ ಅಮೆರಿಕಾನಸ್. ಉತ್ತರ ಅಮೆರಿಕದ ದಟ್ಟವಾದ ಕಾಡುಗಳಲ್ಲಿ ವಿಶೇಷವಾಗಿ ಕಾಣಬರುತ್ತದೆ. ಸುಮಾರು ೧.೫-೧.೮ ಮೀ. ಉದ್ದವಿರುವ ಇದರ ಭಾರ ಸು. ೧೫೦ ಕಿಗ್ರಾಂ. ದೇಹದ ಬಣ್ಣ ಕಪ್ಪು, ಕಂದು, ನೀಲಿಮಿಶ್ರಿತ ಕಪ್ಪು, ಬಿಳಿ ಇತ್ಯಾದಿ ವಿವಿಧ ಬಗೆಯದು. ಬಹಳ ಚೆನ್ನಾಗಿ ಮರ ಹತ್ತಬಲ್ಲುದು. ಸಹಜವಾಗಿ ಸಾಧುಪ್ರಾಣಿ. ಹಣ್ಣುಹಂಪಲು, ಮೀನು ಇತ್ಯಾದಿ ಇದರ ಆಹಾರ. ಪ್ರೌಢ ಕರಡಿಗಳನ್ನು ಪಳಗಿಸುವುದು ಕಷ್ಟವಾದರೂ ಮರಿಗಳನ್ನು ಹಿಡಿದು ಪಳಗಿಸಿ ಕೆಲವು ಮೋಜಿನ ಆಟಗಳನ್ನು ಕಲಿಸುವುದು ಸಾಧ್ಯ. ಕೆಲವು ಕಡೆ ಇದರ ಮಾಂಸವನ್ನು ತಿನ್ನುವ ರೂಢಿ ಇದೆ.

೨. ಅಲಾಸ್ಕದ ಕಂದು ಕರಡಿ : ಅರ್ಸಸ್ ಆರ್ಕ್ಟಸ್ ಎಂಬ ಶಾಸ್ತ್ರೀಯ ಹೆಸರಿನ ಈ ಕರಡಿ ಅಲಾಸ್ಕದ ಅರಣ್ಯವಾಸಿ. ಒಂದು ಕಾಲದಲ್ಲಿ ಉತ್ತರ ಅಮೆರಿಕ, ಯೂರೋಪು ಹಾಗೂ ಏಷ್ಯದ ಕಾಡುಗಳಲ್ಲಿ ಹೇರಳವಾಗಿ ಕಾಣಬರುತ್ತಿದ್ದ ಇದು ಇಂದು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಯೆಲ್ಲೊಸ್ಟೋನ್ ಮತ್ತು ಗ್ಲೇಸಿಯರ್ ರಾಷ್ಟ್ರೀಯ ಉದ್ಯಾನಗಳಲ್ಲಿ, ಅಲಾಸ್ಕ ಹಾಗೂ ಕೆನಡಗಳ ಕಾಡುಗಳಲ್ಲಿ ಮಾತ್ರ ವಾಸಿಸುತ್ತದೆ. ಜೀವಂತ ಕರಡಿಗಳಲ್ಲೆಲ್ಲ ಅತ್ಯಂತ ದೊಡ್ಡದೂ ಬಲಶಾಲಿಯೂ ಎಂದು ಹೆಸರಾಗಿದೆ. ಸುಮಾರು ೨.೮ ಮೀ ಉದ್ದವಿದ್ದು, ೭೮೦ ಕಿಗ್ರಾಂ ವರೆಗೂ ಭಾರವಿರುತ್ತದೆ. ತನ್ನ ಪಂಜದ ಪ್ರಹಾರದಿಂದ ತನಗಿಂತಲೂ ಭಾರವಾದ ಕಾಡುಕೋಣಗಳನ್ನು ಕೊಂದಿರುವ ನಿದರ್ಶನಗಳಿವೆ. ಇದು ಸರ್ವಭಕ್ಷಕ. ಇದನ್ನು ಸುಲಭವಾಗಿ ಪಳಗಿಸಬಹುದು. ತಾಳಲಯಕ್ಕನುಗುಣವಾಗಿ ಕುಣಿಯುವುದನ್ನು ಕಲಿಸಿ ಸರ್ಕಸುಗಳಲ್ಲಿ ಪ್ರದರ್ಶಿಸಲಾಗುತ್ತದೆ.

೩. ಏಷ್ಯದ ಕಪ್ಪು ಕರಡಿ : ಹಿಮಾಲಯದ ಕರಡಿಯೆಂದೂ ಕರೆಯಲಾಗುವ ಇದು ಬಲೂಚಿಸ್ತಾನ, ಹಿಮಾಲಯ, ಚೀನ, ಜಪಾನ್ ಮತ್ತು ಕೊರಿಯ ದೇಶಗಳ ಕಾಡುಗಳಲ್ಲೆಲ್ಲ ಹರಡಿದೆ. ಸೆಲೆನಾರ್ಕ್ಟಸ್ ತಿಬೆಟಾನಸ್ ಎಂಬುದು ಇದರ ವೈಜ್ಞಾನಿಕನಾಮ. ಇದು ಸುಮಾರು ೧.೬ ಮೀ. ಉದ್ದವುಳ್ಳದ್ದೂ ಸುಮಾರು ೧೨೦ ಕಿಗ್ರಾಂ ತೂಕವುಳ್ಳದ್ದೂ ಆಗಿದೆ. ಇದರ ಬಣ್ಣ ಕಪ್ಪು. ಎದೆಯ ಮೇಲೆ ಅರ್ಧ ಚಂದ್ರಾಕೃತಿಯ ಬಿಳಿಯ ಅಥವಾ ಮಾಸಲು ಹಳದಿ ಬಣ್ಣದ ಮಚ್ಚೆ ಇದೆ. ಉಳಿದ ಜಾತಿಯ ಕರಡಿಗಳಿಗಿಂತ ಹೆಚ್ಚು ಅಪಾಯಕಾರಿ ಹಾಗೂ ಆಕ್ರಮಣಕಾರಿ. ವನ್ಯ ಪ್ರಾಣಿಗಳನ್ನಲ್ಲದೆ ಕುರಿ, ಮೇಕೆ, ದನಕರು ಮುಂತಾದ ಸಾಕುಪ್ರಾಣಿಗಳನ್ನೂ ಕೊಂದು ತಿನ್ನುವುದೆಂದು ಹೇಳುತ್ತಾರೆ. ಇದರ ಮಾಂಸದಲ್ಲಿ ಔಷಧೀಯ ಗುಣಗಳಿವೆಯೆಂದು ಚೀನೀಯರು ನಂಬುತ್ತಾರೆ.

೪. ಬಿಸಿಲು ಕರಡಿ (ಸನ್ ಬೇರ್) : ಬರ್ಮ, ಮಲಯ, ಸುಮಾತ್ರ, ಬೋರ್ನಿಯೊಗಳ ಗುಡ್ಡಗಾಡುಗಳಲ್ಲಿ ಕಾಣಬರುವ ಇದರ ಶಾಸ್ತ್ರೀಯ ನಾಮ ಹೆಲಾರ್ಕ್ಟಸ್ ಮಲಯಾನಸ್. ಕರಡಿಗಳಲ್ಲೆಲ್ಲ ಅತ್ಯಂತ ಚಿಕ್ಕದು ; ೧.೧-೧.೪ ಮೀ ಉದ್ದವಿದ್ದು ಸು. ೨೭-೬೫ ಕಿಗ್ರಾಂ ಭಾರವಿದೆ. ಬಣ್ಣ ಕಪ್ಪು, ಎದೆಯಮೇಲೆ ಕಿತ್ತಳೆ ಅಥವಾ ಬಿಳಿಯ ಮಚ್ಚೆಯಿದೆ. ಮೂತಿ ಬೂದು ಬಣ್ಣದ್ದು. ತುಂಬ ಚೆನ್ನಾಗಿ ಮರ ಹತ್ತಬಲ್ಲ ಇದರ ವಾಸ ಬಹುಪಾಲು ಮರದ ಮೇಲೆಯೇ. ಬಹಳ ಬುದ್ಧಿವಂತ ಪ್ರಾಣಿಯೆಂದು ಹೆಸರಾಗಿದೆ. ಈ ಕರಡಿಯ ಮರಿಗಳನ್ನು ಮಾತ್ರ ಪಳಗಿಸಬಹುದು.

೫. ಭಾರತದ ಕರಡಿ (ಸ್ಲಾತ್ ಬೇರ್): ಭಾರತ ಮತ್ತು ಸಿಂಹಳ ದೇಶಗಳು ಇದರ ತವರು. ಇದರ ವೈಜ್ಞಾನಿಕ ನಾಮ ಮೆಲರ್ಸಸ್ ಅರ್ಸಿನಸ್. ಜೇನು ಕರಡಿ ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಗುಡ್ಡಗಾಡುಗಳಲ್ಲಿ ವಾಸಿಸುತ್ತದೆ. ಸುಮಾರು ೧.೪-೧.೮ ಮೀ ಉದ್ದ. ೫೫-೧೫೬ ಕಿಗ್ರಾಂ ಭಾರ ಇದೆ. ದೇಹದ ಬಣ್ಣ ಕಪ್ಪು. ಎದೆಯ ಮೇಲೆ V ಅಥವಾ Y ಆಕಾರದ ಬಿಳಿಯ ಮಚ್ಚೆಯಿದೆ. ಇದರ ಮೂತಿ ಬಹಳ ಉದ್ದ. ತುಟಿಗಳು ಸರಾಗವಾಗಿ ಅಡ್ಡಡ್ಡವಾಗಿ ಚಲಿಸಬಲ್ಲುವು. ಮೂಗಿನ ಹೊಳ್ಳೆಗಳನ್ನು ಬೇಕೆನಿಸಿದಾಗ ಮುಚ್ಚಿಕೊಳ್ಳಬಲ್ಲುದು. ಬಾಚಿಹಲ್ಲುಗಳಿಲ್ಲ. ಗೆದ್ದಲುಗಳನ್ನು ಹಿಡಿದು ತಿನ್ನಲು ಇವೆಲ್ಲ ಲಕ್ಷಣಗಳನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತದೆ. ಹುತ್ತವನ್ನು ಕೆದವಿ, ಮಣ್ಣನ್ನೂ ಕೊಳೆಯನ್ನೂ ಊದಿ ಹಾರಿಸಿ, ಮೂತಿಯನ್ನು ಕೊಳವೆಯಂತೆ ಮಾಡಿಕೊಂಡು ಹುಳುಗಳನ್ನು ಬಾಯೊಳಕ್ಕೆ ಎಳೆದು ಕೊಳ್ಳುತ್ತದೆ. ಜೇನು ಕಂಡರೂ ಇದಕ್ಕೆ ಬಲು ಇಷ್ಟ. ಜೇನುಗೂಡನ್ನು ಹುಡುಕಿಕೊಂಡು ಹಲವಾರು ಮೈಲಿಗಳು ಅಲೆಯುವುದುಂಟು. ಈ ಕರಡಿಯನ್ನು ಪಳಗಿಸಿ ಸಾಕಬಹುದಲ್ಲದೆ ಇದಕ್ಕೆ ಹಲವಾರು ಆಟಗಳನ್ನು ಕಲಿಸಬಹುದು.

೬. ಮಚ್ಚೆ ಕರಡಿ : ದಕ್ಷಿಣ ಅಮೆರಿಕದ ವೆನಿಜ್ವೇಲ, ಕೊಲಂಬಿಯ, ಎಕ್ವಡಾರ್, ಪೆರು, ಬೊಲೀವಿಯ ಮುಂತಾದ ಪ್ರದೇಶಗಳ ನಿವಾಸಿ. ಶಾಸ್ತ್ರೀಯವಾಗಿ ಇದನ್ನು ಟ್ರೆಮಾರ್ಕ್ಟಸ್ ಆರ್ನೇಟಸ್ ಎಂದು ಕರೆಯುತ್ತಾರೆ. ಇದರ ಉದ್ದ ಸುಮಾರು ೧.೫-೧.೮ ಮೀ; ತೂಕ ಸುಮಾರು ೭೦ ಕಿಗ್ರಾಂ ಕಣ್ಣುಗಳ ಸುತ್ತ ಕನ್ನಡಕದ ಆಕೃತಿಯ ಬಿಳಿಯ ಮಚ್ಚೆಯಿರುವುದು ಇದರ ವಿಶಿಷ್ಟ ಲಕ್ಷಣ.

೭. ಶೀತವಲಯದ ಕರಡಿ (ಪೋಲಾರ್ ಬೇರ್) : ಥಲಾಕ್ಟಸ್ ಮ್ಯಾರಿಟಿಮಸ್ ಎಂಬ ಶಾಸ್ತ್ರೀಯ ಹೆಸರಿನ ಈ ಕರಡಿ ಉತ್ತರ ಶೀತವಲಯದಲ್ಲಿ ಹೇರಳವಾಗಿದೆ. ಹಿಮಕರಡಿ ಇದರ ಪರ್ಯಾಯ ನಾಮ. ಅಚ್ಚ ಬಿಳಿಯ ಬಣ್ಣ, ನೀಳವಾದ ಕುತ್ತಿಗೆ, ದೇಹದ ಗಾತ್ರಕ್ಕೆ ಹೋಲಿಸಿದರೆ ಚಿಕ್ಕದಾಗಿರುವ ತಲೆ, ರೋಮ ಪೂರಿತ ಅಂಗಾಲು-ಇವು ಇದರ ಮುಖ್ಯ ಲಕ್ಷಣಗಳು. ಇದು ಸುಮಾರು ೨.೨-೨.೫ ಮೀ ಉದ್ದ ಹಾಗೂ ೭೨೦ ಕಿಗ್ರಾಂ ಭಾರ ಇದೆ. ಕರಡಿಗಳಲ್ಲೆಲ್ಲ ಅತ್ಯಂತ ಹೆಚ್ಚಿನ ಅಲೆಮಾರಿ ಪ್ರಾಣಿ ಇದು. ನೆಲದ ಮೇಲೆ ವೇಗವಾಗಿ ಚಲಿಸಬಲ್ಲುದಲ್ಲದೆ ನೀರಿನಲ್ಲೂ ಸರಾಗವಾಗಿ ಈಜಬಲ್ಲುದು. ಮೀನು, ಸೀಲ್‌ಪ್ರಾಣಿ, ಸಾಗರದ ವಿವಿಧ ಬಗೆಯ ಹಕ್ಕಿಗಳು, ಹಿಮಸಾರಂಗ ಮುಂತಾದುವು ಇದರ ಪ್ರಧಾನ ಆಹಾರ. ಹಣ್ಣು, ಎಲೆ ಇತ್ಯಾದಿ ತಿನ್ನುವ ರೂಢಿಯೂ ಉಂಟು. ಇದರ ಚರ್ಮಕ್ಕಾಗಿ ಮತ್ತು ರುಚಿಕರವಾದ ಮಾಂಸಕ್ಕಾಗಿ ಎಸ್ಕಿಮೋ ಜನ ಇದನ್ನು ಬೇಟೆಯಾಡುತ್ತಾರೆ. ಆದರೆ ಇದರ ಯಕೃತ್ತಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಎ ಜೀವಸತ್ವ ಇರುವುದರಿಂದ ಇದು ವಿಷ ಪೂರಿತವೆಂದು ಹೇಳುತ್ತಾರೆ. (ಎಸ್.ಎಚ್.ಓ.)

**ಕರಾಡ್ರಿಯೀಫಾರ್ಮಿಸ್:** ಪ್ಲೋವರ್, ಸ್ನೈಪ್, ಕರ್ಲ್ಯೂ, ಕೆಂಪು ಶಾಂಕ್, ವುಡ್ ಕಾಕ್, ಮರಳು ಉದಿಗ, ಆಯಿಸ್ಟರ್ ಆಕರ್ಷಕ, ಜಕಾನ, ಗಲ್, ಆವೋಸೆಟ್, ಬಾತುಕೋಳಿ ಮುಂತಾದ ಪಕ್ಷಿಗಳನ್ನೊಳಗೊಂಡ ನಿಯಾರ್ನಿತಿಸ್ ಉಪವರ್ಗದ ನಿಯೋಗ್ನಾತ ಅಧಿಗಣದ ಒಂದು ಗಣ. ಈ ಗಣಕ್ಕೆ ಸೇರಿದ ಪಕ್ಷಿಗಳು ಸಣ್ಣ ಗಾತ್ರದಿಂದ

ಹಿಡಿದು ಮಧ್ಯಮ ಗಾತ್ರದವರೆಗೆ ಇದ್ದು ನದಿ ದಂಡೆಗಳಲ್ಲಿ, ಮುಖ್ಯವಾಗಿ ಭೂಭಾಗದಲ್ಲಿ ವಾಸಿಸುವ, ಕೆಲವು ವೇಳೆ ಸ್ವಚ್ಛ ನೀರಿರುವ ಸ್ಥಳಗಳಲ್ಲಿ ನೆಲೆಸಿರುವ ಅಥವಾ ಜೌಗು ಭೂಮಿಯಲ್ಲಿ ನೆಲೆಸಿರುವ ಪಕ್ಷಿಗಳಾಗಿರುತ್ತವೆ. ಸಾಮಾನ್ಯವಾಗಿ ಉದ್ದವಾದ ಕಾಲು ಮತ್ತು ಕೊಕ್ಕುಗಳನ್ನು ಹೊಂದಿರುತ್ತವೆ.

ಕರಾಡ್ರಿಯೀಫಾರ್ಮಿಸ್ ಗಣವು ಲಿಮಿಕೋಲೆ, ಲ್ಯಾರಿಡೆ, ಸ್ಟರ್ನಿನೆ ಮತ್ತು ಅಲ್ಸಿಡೆ ಎಂಬ 4 ಕುಟುಂಬಗಳನ್ನೊಳಗೊಂಡಿದೆ. ಲಿಮಿಕೋಲೆಗೆ ಸೇರಿದವು ದಟ್ಟಡಿ ಇಡುವ, ಚೆನ್ನಾಗಿ ಹಾರಬಲ್ಲ ಪಕ್ಷಿಗಳು. ಕೊಕ್ಕು ಒಂದೊಂದು ಜೀವಿ ಪ್ರಭೇಧಗಳಲ್ಲಿ ಒಂದೊಂದು ರೀತಿಯಾಗಿರುತ್ತದೆ. ಹಿಮಟೋಪಸ್ (ಸ್ಟೈಪ್ – ಮರಗಾಲು ಪಕ್ಷಿ) ನಲ್ಲಿ ಪೂರ್ತಿಯಾಗಿ ಗಟ್ಟಿಯಾಗಿರುತ್ತದೆ. ಕರಾಡ್ರಿಯಸ್ ಮತ್ತು ಲಾಬಿವನೆಲ್ಲಸ್ ಗಳಲ್ಲಿ ತುದಿಯಲ್ಲಿ ಮಾತ್ರ ಗಟ್ಟಿಯಾಗಿದ್ದು ಬುಡದಲ್ಲಿ ಮೃದುವಾಗಿರುತ್ತದೆ. ಅನಾರಿಂಕಸ್‌ನಲ್ಲಿ ಕೊಕ್ಕು ಅಸಮ ಪ್ರಮಾಣದ್ದಾಗಿರುತ್ತದೆ ಮತ್ತು ಬಲಗಡೆಗೆ ನುಲಿದುಕೊಂಡಿರುತ್ತದೆ. ರಿಕರ್ವಿರೋಸ್ಟರಾ (ಕರ್ಲೀವ್) ನಲ್ಲಿ ಕೆಳಗಡೆಗೆ ಬಾಗಿರುತ್ತದೆ. ಯೂರಿನೋರಿಂಕಸ್‌ನಲ್ಲಿ ಕೊಕ್ಕು ಪಿಕಾಸಿ ಆಕಾರವಾಗಿರುತ್ತದೆ ಮತ್ತು ಟ್ರಂಗದಲ್ಲಿ ಚಪ್ಪಟೆಯಾಗಿರುತ್ತದೆ.

ಈ ಗುಂಪಿನಲ್ಲಿ ಅತಿ ಮನೋಹರವಾದುವು ಜಕಾನಗಳು. ಗಾತ್ರದಲ್ಲಿ ಮತ್ತು ಸ್ವಭಾವದಲ್ಲಿ ಲಂಗರು ಕೋಳಿ (ಮೂರ್ ಹೆನ್) ಯನ್ನು ಹೋಲುತ್ತವೆ. ಹಳೆ ಮತ್ತು ಹೊಸ ಪ್ರಪಂಚದ ಉಷ್ಣ ಪ್ರದೇಶದಲ್ಲಿನ ತಗ್ಗು ಪ್ರದೇಶಗಳ ಸರೋವರ ಮತ್ತು ನದಿ ದಡಗಳಲ್ಲಿ ವಿಸ್ತರಿಸಿವೆ. ಅತಿ ದೊಡ್ಡದಾದ ಕಾಲುಗಳು, ಬೆರಳುಗಳು ಮತ್ತು ಚಪ್ಪಟೆಯಾದ ನೇರವಾದ ಉಗುರುಗಳು ಈ ಹಕ್ಕಿಗಳ ಮುಖ್ಯ ಲಕ್ಷಣಗಳು. ಈ ರಚನೆಯು ಅವುಗಳು ಸರೋವರದ ಅಥವಾ ನದಿಯ ಕಳೆ ಮತ್ತು ನೀರಿನಲ್ಲಿ ಬೆಳೆಯುವ ಇನ್ನಿತರ ಸಸ್ಯಗಳ ತೇಲುವ ಎಲೆಗಳ ಮೇಲೆ ನಡೆಯಲು ಸಹಕರಿಸುತ್ತವೆ. ಕೆಲವು ಜೀವಿ ಪ್ರಭೇದಗಳು ಜೋತಾಡುವ ಉದ್ದವಾದ ಬಾಲವನ್ನು ಹೊಂದಿರುತ್ತವೆ. ಮತ್ತೆ ಕೆಲವು ಜೀವ ಪ್ರಭೇದಗಳಲ್ಲಿ ಪಕ್ಷಿಗಳ ಗರಿಗಳ ಮೇಲುಭಾಗಗಳು ಹೊಳಪುಳ್ಳವು. ಗಂಡು ಹೆಣ್ಣುಗಳು ನೋಡಲು ಒಂದೇ ರೀತಿ ಇದ್ದರೂ ಹೆಣ್ಣು ಪಕ್ಷಿಗಳು ಸಾಮಾನ್ಯವಾಗಿ ಗಂಡಿಗಿಂತ ದೊಡ್ಡದಾಗಿರುತ್ತವೆ. ಮೊಟ್ಟೆಗಳಿಗೆ ಕಾವುಕೊಡುವುದು ಮತ್ತು ಮರಿಗಳನ್ನು ನೋಡಿಕೊಳ್ಳುವುದು ಗಂಡಿನ ಕೆಲಸ. ಅಮೆರಿಕ ಜಕಾನಗಳು ಟೆಕ್ಸಾಸ್‌ನ ದಕ್ಷಿಣದ ಕಡೆಯಿಂದ ಅರ್ಜೆಂಟೈನದವರಿಗೆ ವ್ಯಾಪಿಸಿರುತ್ತವೆ. ಪ್ರಣಯಾಚರಣೆಯಲ್ಲಿ ಗರಿಗಳ ಪ್ರಕಾಶಮಾನವಾದ ಹಳದಿ ಚುಕ್ಕೆಗಳನ್ನು ತೋರಿಸಲು ರೆಕ್ಕೆಗಳನ್ನು ಪ್ರದರ್ಶಿಸುತ್ತವೆ. ಆದರೆ ಅವು ಸಾಮಾನ್ಯವಾಗಿ ಕುಂಕುಮ ಮತ್ತು ಕಪ್ಪು ಬಣ್ಣದ್ದಾಗಿರುತ್ತವೆ. ಹಿಮಾಲಯದಿಂದ ಸಿಲೋನ್ ಮತ್ತು ಪೂರ್ವದ ಕಡೆಯಿಂದ ಜಾವ, ಫಿಲಿಪ್ಪೈನ್ ವರೆಗೆ ವ್ಯಾಪಿಸಿರುವ ಒಂದು ರೀತಿಯ ಬೇಟೆ ಪಕ್ಷಿಯಾದ ಫೆಸೆಂಟ್ ಬಾಲದ ಜಕಾನವು ಅದರ ಮೊಟ್ಟೆಗಳನ್ನು ನೀರಿನಲ್ಲಿ ತೇಲುವ ಸಸ್ಯಗಳ ಎಲೆಗಳ ಮೇಲೆ ಇಡುತ್ತದೆ. ಕೆಲವು ವೇಳೆ ಅರ್ಧ ಮುಳುಗಿರುವ ಎಲೆಗಳ ಮೇಲೂ ಇಡುತ್ತದೆ. ಈ ಜೀವ ಪ್ರಭೇದದಲ್ಲಿ ಹೆಣ್ಣು ಪಕ್ಷಿಯು ಕಾವು ಕೊಡುವ ಕೆಲಸವನ್ನು ಮಾಡುತ್ತದೆ. ಉದ್ದಕಾಲಿನ ಆಫ್ರಿಕದ ಜಕಾನವು ಪರ್ವತ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತದೆ. ನೀಲಿ ಮುಂದಲೆಯಿಂದ ಕೂಡಿದ ಕಂದು ಬಣ್ಣದ ಶರೀರವನ್ನು ಹೊಂದಿರುತ್ತದೆ. ಪಾಚಿ ಮುಚ್ಚಿದ ಬಂಡೆಗಲ್ಲುಗಳು ಅಥವಾ ಕೆಸರಿನ ಮೇಲೆ ಸಾಮಾನ್ಯವಾಗಿ ನಡೆದಾಡುತ್ತದೆ. ಕಂಚಿನ ಬಣ್ಣದ ಜೀವ ಪ್ರಭೇದವಾದ ಲೋಟಸ್ ಪಕ್ಷಿ ಆಸ್ಟ್ರೇಲಿಯ ಮತ್ತು ಇಂಡೋನೇಷಿಯದಲ್ಲಿರುತ್ತದೆ.

ಲ್ಯಾರಿಡೆ ಕುಟುಂಬ ಗಲ್ (ಬೆಪ್ಪು ಪಕ್ಷಿ), ಸ್ಕುವಾಸ್ ಮತ್ತು ಸ್ಕಿಮ್ಮರ್ ಗಳನ್ನೊಳಗೊಂಡಿದೆ. ಇವೆಲ್ಲವೂ ಸಮುದ್ರ ಪಕ್ಷಿಗಳು. ಒಳ್ಳೆಯ ಈಜುಗಾರ ಮತ್ತು ಹಾರುವ ಪಕ್ಷಿಗಳು. ಹೆಬ್ಬೆರಳು ಚಿಕ್ಕದಾಗಿರುತ್ತದೆ ಅಥವಾ ಇರುವುದಿಲ್ಲ ಮತ್ತು ಮುಂಭಾಗದ ಬೆರಳುಗಳು ಜಾಲಪಾದವನ್ನು ಹೊಂದಿರುತ್ತವೆ. ಇವುಗಳ ಆಹಾರ ಮೀನುಗಳು.

ಸ್ಟರ್ನಿಡೆ ಕುಟುಂಬ ಟರ್ನ್ ಪಕ್ಷಿಗಳನ್ನೊಳಗೊಂಡಿದೆ. ಅವುಗಳು ಉದ್ದನೆ ರೆಕ್ಕೆಗಳನ್ನು ಹೊಂದಿರುತ್ತವೆ. ಹೆಚ್ಚಾಗಿ ಪ್ರಪಂಚದ ಬೆಚ್ಚಗಿರುವ ಭೂಭಾಗದ ಕರಾವಳಿ ಪ್ರದೇಶಗಳಲ್ಲಿ ವಿಸ್ತರಿಸಿವೆ. ತೆಳುವಾದ ಕೊಕ್ಕು ಮತ್ತು ಕವಲೊಡೆದ ಬಾಲವನ್ನು ಹೊಂದಿರುತ್ತವೆ. ಕಾಲುಗಳು ಚಿಕ್ಕದಾಗಿದ್ದು ಪಾದಗಳು ಸಣ್ಣದಾಗಿರುತ್ತವೆ ಮತ್ತು ಬೆರಳುಗಳು ಜಾಲದಿಂದ ಕೂಡಿದವುಗಳಾಗಿರುತ್ತವೆ. ಅನೇಕ ಪಕ್ಷಿಗಳು ಉತ್ತರದ ಸಮಶೀತೋಷ್ಣಪ್ರದೇಶಗಳಲ್ಲಿ ಮರಿ ಮಾಡುತ್ತವೆ. ನದಿ ತೀರದ ಅಥವಾ ಸಮುದ್ರ ತೀರದ ಮರಳು ದಂಡೆಯ ಮೇಲಿನ ಬದಿ ಕುಳಿಯಲ್ಲಿ ಒಂದೇ ಒಂದು ಮೊಟ್ಟೆಯನ್ನು ಇಡುತ್ತವೆ. ಚಿಕ್ಕ ಮೀನುಗಳು ಇವುಗಳ ಆಹಾರ.

ಅಲ್ಸಿಡೆ ಕುಟುಂಬ ಆಕ್, ಗಿಲ್ಲೆಮಾಟ್ ಮತ್ತು ಪಫಿನ್ ಗಳಿಂದ ಕೂಡಿದೆ. ಇವುಗಳು ಉತ್ತರ ಸಮುದ್ರದ ಚಿಕ್ಕ ರೆಕ್ಕೆಗಳ ಪಕ್ಷಿಗಳಾದ ಗ್ರೀಬ್ ಪಕ್ಷಿಗಳ ಅನೇಕ ಗುಣಗಳನ್ನು ಹೊಂದಿವೆ ಮತ್ತು ಮೇಲ್ನೋಟಕ್ಕೆ ಪೆಂಗ್ವಿನ್ ಗಳನ್ನು ಹೋಲುತ್ತವೆ (ಶರೀರದ ಹಿಂದಕ್ಕಿರುವ ಕಾಲುಗಳು, ಚಿಕ್ಕ ರೆಕ್ಕೆಗಳು, ಬೇಜವಾಬ್ದಾರಿಯುತ ಹಾರಾಟ ಮತ್ತು ಈಜುವಾಗ, ಮುಳುಗು ಹಾಕುವಾಗ ಇರುವ ಮಹತ್ತಾದ ಜಾಣತನ). ನೀರಿನಲ್ಲಿ ಈಜುವಾಗ ಮುಂದಕ್ಕೆ ಹೋಗಲು ಪಾದಗಳಿಗಿಂತ ರೆಕ್ಕೆಗಳನ್ನು ಹೆಚ್ಚಾಗಿ ಉಪಯೋಗಿಸುತ್ತವೆ. ಭೂಮಿಯ ಮೇಲೆ ನೆಟ್ಟಗೆ ನಿಂತುಕೊಳ್ಳುತ್ತವೆ ಮತ್ತು ವೇಗವಾಗಿ ನಡೆಯುತ್ತವೆ. ಪಫಿನ್ ಗಳಲ್ಲೂ ಬಿಳಿ, ಬೂದು ಬಣ್ಣಗಳ ದೇಹವಿರುತ್ತದೆ. ನಶಿಸಿ ಹೋಗಿರುವ ಹಾರಲಾಗದ ಪ್ಲಾಟೆಸ್ ಕೂಡ ಈ ಕುಟುಂಬಕ್ಕೆ ಸೇರಿದೆ. (ವಿ.ಕೆ.)

**ಕರಿಜೇಡ:** ತೆರಿಡ್ಯೆಯಿಡೆ ಕುಟುಂಬದ ಸದಸ್ಯ. ಇದರ ವೈಜ್ಞಾನಿಕ ಹೆಸರು ಲ್ಯಾಟ್ರೊಡೆಕ್ಟಸ್. ಪ್ರೌಢ ಹೆಣ್ಣು ಜೇಡ ಸು. 1.25 ಸೆಂಮೀ ಉದ್ದವಿದೆ. ಉದರ ದುಂಡಾಗಿದೆ. ದೇಹ ಮಿರುಗುವ ಕಪ್ಪು ಬಣ್ಣದಿಂದಿದೆ. ತಳಭಾಗದಲ್ಲಿ ಕಡು ಗೆಂಪು ಬಣ್ಣದ ಬುಡುಬುಡುಕೆ ಆಕಾರದ ಗುರುತಿದೆ. ಕೆಲವು ಹೆಣ್ಣು ಜೇಡಗಳ ಬೆನ್ನಿನ ಮೇಲೆ ಒಂದು ಸಾಲು ಕೆಂಪು



ಕರಿಜೇಡ

ಬಣ್ಣದ ಚುಕ್ಕೆಗಳಿವೆ. ಕೆಲವಕ್ಕೆ ಈ ತರಹ ಚುಕ್ಕೆಗಳು ಇಲ್ಲ. ಗಂಡು ಜೇಡ ಹೆಣ್ಣಿಗಿಂತ ಚಿಕ್ಕದು. ಇದರಲ್ಲೂ ಉದರದ ತಳ ಭಾಗದಲ್ಲಿ ಬುಡುಬುಡಕೆ ಆಕಾರದ ಗುರುತಿದೆ. ಬೆನ್ನಿನ ಮೇಲೆ ವಿವಿಧ ಮಾದರಿಯ ಕೆಂಪು ಚುಕ್ಕೆಗಳು, ಪಾರ್ಶ್ವದಲ್ಲಿ ಬಿಳಿಯ ಗೆರೆಗಳಿವೆ.

ಸಮಶೀತೋಷ್ಣ ವಲಯದ ಭಾಗಗಳಲ್ಲಿ ಇವುಗಳ ಮರಿಗಳು ಕೋಶಾವಸ್ಥೆ ಹಂತವನ್ನು ಚಳಿಗಾಲದಲ್ಲಿ ಕಳೆಯುತ್ತವೆ. ವಸಂತ ಕಾಲ ಮುಗಿಸಿದ ನಂತರ, ಪ್ರೌಢಾವಸ್ಥೆಯ ಜೇಡಗಳು ಏಪ್ರಿಲ್ ತಿಂಗಳಿನಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ, ಗಂಡು ಜೇಡಗಳು ಕಣ್ಣಿಗೆ ಬೀಳುವುದು ಅಪರೂಪ.

ಗಂಡುಜೇಡ ಏಕಾಂಗಿಯಾಗಿ ಬಲೆಯಲ್ಲಿದ್ದು, ವೀರ್ಯಾಣುಗಳನ್ನು ಎರಡನೆಯ ಉಪಾಂಗವಾದ ಪಾಲ್ಪ್‌ಗಳಲ್ಲಿನ ಚೀಲದಲ್ಲಿ ಶೇಖರಿಸಿ ಸಂಭೋಗ ಕಾಲದಲ್ಲಿ ಇವನ್ನು ಪಾಲ್ಪಿನ ಮೂಲಕ ಹೆಣ್ಣು ಜೇಡದ ಜನನೇಂದ್ರಿಯದ ದ್ವಾರದ ಒಳಗೆ ತಳ್ಳುತ್ತದೆ. ಸಂಭೋಗವಾದ ನಂತರ ಹೆಣ್ಣು ಜೇಡ ಗಂಡುಜೇಡವನ್ನು ತಿಂದುಬಿಡುತ್ತದೆ. ಹೆಣ್ಣು ಗರ್ಭಧರಿಸಿದ ನಂತರ 250–750 ಮೊಟ್ಟೆಗಳನ್ನು ತೆಳುವಾದ, ನಯವಾದ ದಾರದಿಂದ ಮಾಡಿದ ಮೃದು ಕೋಶದಲ್ಲಿ ಇಟ್ಟು ರಕ್ಷಿಸುತ್ತದೆ. 14–30 ದಿನಗಳ ಅನಂತರ ಕೋಶದೊಳಗಿರುವ ಮೊಟ್ಟೆಗಳಿಂದ ಮರಿಗಳು ಹೊರಬರುತ್ತವೆ. ಅವು ಬೆಳೆದು ಒಂದು ಬಾರಿ ಪೊರೆಬಿಟ್ಟು ನಂತರ ಹೊರಬರುತ್ತವೆ. ಪ್ರೌಢಾವಸ್ಥೆ ಹೊಂದಬೇಕಾದರೆ ಗಂಡು ಮರಿ 4–7 ಬಾರಿ ಮತ್ತು ಹೆಣ್ಣು ಮರಿ 2–9 ಬಾರಿ ದೇಹದ ಪೊರೆ ಕಳಚುತ್ತದೆ. ಇವು ಪ್ರೌಢಾವಸ್ಥೆಗೆ ಬಂದ ಒಂದೂವರೆ ವರ್ಷಗಳವರೆಗೆ ಜೀವಿಸುತ್ತವೆ. ಕರಿಜೇಡುಗಳು ಮರದ ತೊಗಟೆಯ ಒಳಗೆ, ಸಂದುಗಳಲ್ಲಿ ಅಥವಾ ಪೊಟರೆಗಳಲ್ಲಿ ನಯವಾದ ಸೂಕ್ಷ್ಮ ದಾರದಿಂದ ದೃಢವಾದ ಬಲೆಯನ್ನು ನೇಯುತ್ತವೆ. ಇತರ ಕೀಟಗಳು ಬಲೆಯೊಳಗೆ ಸಿಕ್ಕಿಕೊಂಡಾಗ ಅವುಗಳನ್ನು ಹಿಡಿದು ರಂಧ್ರಗಳನ್ನು ಕೊರೆದು, ಮೈ ಒಳಗಿರುವ ರಸವನ್ನು ಹೀರುತ್ತವೆ.

ಕರೀಜೇಡ ವಿಷಗ್ರಂಥಿಗಳನ್ನು ಹೊಂದಿದೆ. ಈ ಅಂಗವನ್ನು ಆತ್ಮರಕ್ಷಣೆಗೆ ಬಳಸುತ್ತದೆ. ಕರಿಜೇಡ ಕೆಲವು ಸಲ ಮನುಷ್ಯನನ್ನು ಕುಟುಕುವುದುಂಟು. ವಿಷ ದೇಹದೊಳಗಿನ ಕೋಶಗಳಿಗೆ ಸೇರಿದಾಗ ನೋವುಂಟಾಗುತ್ತದೆ. ಜೇಡದ ಕಡಿತಕ್ಕೆ ಬಲಿಯಾದ ವ್ಯಕ್ತಿ ಮೈನೋವು, ವಾಂತಿ, ವಪೆಯ ಅಸ್ವಸ್ಥತೆಯಿಂದ ಬಳಲುತ್ತಾನೆ. ಈ ನೋವು ಮೂರು ನಾಲ್ಕು ದಿನಗಳವರಗಿರುತ್ತದೆ. ಆದರೆ, ಸಾವು ಬಹಳ ಅಪರೂಪ.

ವಿಜ್ಞಾನಿ ಎಚ್. ಲೆವಿ, ಆಫ್ರಿಕದಲ್ಲಿರುವ ಲ್ಯಾಟ್ರೊಡೆಕ್ಟಸ್ ಜಾತಿಯಲ್ಲಿ ಲ್ಯಾ. ಜೊಮೆಟ್ರಿಕಸ್, ಅಮೆರಿಕದಲ್ಲಿರುವ ಲ್ಯಾ. ದಪ್ಲಿ, ಉತ್ತರ ಆಫ್ರಿಕದಲ್ಲಿರುವ ಲ್ಯಾ. ಪ್ಯಾಲಿಡಸ್ ಮತ್ತು

ಪ್ರಪಂಚದ ಇತರ ಉಷ್ಣವಲಯದಲ್ಲಿ ಜೀವಿಸುವ ಲ್ಯಾ. ಮ್ಯಾಕ್ಸನ್ಸ್ ಪ್ರಭೇದಗಳ ಬಗ್ಗೆ ವಿವರಿಸಿದ್ದಾನೆ. ***

**ಕರಿಹಾವು:** ಕೊಲ್ಯೂಬ್ರಿಡೆ ಕುಟುಂಬಕ್ಕೆ ಸೇರಿದ ಕಾಲ್ಯುಬರ್ ಕನ್‌ಸ್ಟ್ರಿಕ್ಟರ್ ಕನ್‌ಸ್ಟ್ರಿಕ್ಟರ್ ಎಂಬ ಶಾಸ್ತ್ರೀಯ ಹೆಸರಿನ ಹಾವು. ಉತ್ತರ ಅಮೆರಿಕದಲ್ಲಿ ಇದು ಸಾಮಾನ್ಯ. ವಿಷರಹಿತ. ಇದರಲ್ಲಿ ಹಲವಾರು ಉಪಪ್ರಭೇದಗಳಿವೆ. ಇವುಗಳಲ್ಲಿ ಅಮೆರಿಕದ ಸಂಯುಕ್ತಸಂಸ್ಥಾನಗಳ ಮಧ್ಯಭಾಗದಲ್ಲಿ ಕಾಣಬರುವ ಬ್ಲೂರೇಸರ್ ಹಾಗೂ ಆಗ್ನೇಯ ಭಾಗದಲ್ಲಿ ಕಾಣಬರುವ ದಕ್ಷಿಣದ ಬ್ಲ್ಯಾಕ್ ರೇಸರ್ ಮುಖ್ಯವಾದುವು. ತೆಳು ಹಾಗೂ ನೀಳದೇಹದ ಈ ಹಾವು ಸುಮಾರು 1.2–1.5 ಮೀ. ಉದ್ದ ಬೆಳೆಯುತ್ತದೆ. ದೇಹದ ಮೇಲ್ಭಾಗ ಕಪ್ಪು, ತಳಭಾಗ ನಸುಬಿಳುಪು ಅಥವಾ ಹಳದಿ. ಬಾಯಿಯ ತಳಭಾಗ ಬಿಳಿಬಣ್ಣದ್ದಾಗಿದೆ. ಇದು ಬಹಳ ವೇಗವಾಗಿ ಚಲಿಸಬಲ್ಲುದಲ್ಲದೆ ಮರ ಹತ್ತುವುದರಲ್ಲೂ ಈಜುವುದರಲ್ಲೂ ಪ್ರಾವೀಣ್ಯ ಪಡೆದಿದೆ. ಗಾಬರಿಗೊಂಡಾಗ ಬಾಲದ ತುದಿಯನ್ನು ಅಲುಗಾಡಿಸುತ್ತದೆ. ಇತರ ಸಣ್ಣ ಗಾತ್ರದ ಹಾವುಗಳು, ಚಿಕ್ಕ ಸ್ತನಿಗಳು, ಹಕ್ಕಿಗಳು ಮೊಟ್ಟೆಗಳು ಇದರ ಆಹಾರ. ಗಂಡು ಹೆಣ್ಣುಗಳು ವಸಂತ ಋತುವಿನಲ್ಲಿ ಸಂಭೋಗ ನಡೆಸುತ್ತವೆ. ಹೆಣ್ಣು 10–35 ಮೊಟ್ಟೆಗಳನ್ನಿಡುತ್ತದೆ : ಮೊಟ್ಟೆಯಿಡುವ ಕಾಲ ಮೇ–ಜುಲೈ. ಮೊಟ್ಟೆಗಳ ಮೇಲೆ ಸಣ್ಣ ಮರಳಿನಂಥ ಕಣಗಳಿಂದಾದ ಹೊದಿಕೆಯುಂಟು. 7 ರಿಂದ 9 ವಾರಗಳಲ್ಲಿ ಮೊಟ್ಟೆಗಳೊಡೆದು ಸಣ್ಣ ಸಣ್ಣ ಮರಿಗಳು ಹೊರಬರುತ್ತವೆ. ***

**ಕರಿಹುಂಜ:** ಗ್ಯಾಲಿಫಾರ್ಮಿಸ್ ಗಣದ ಟೆಟ್ರಓನಿಡೆ ಕುಟುಂಬಕ್ಕೆ ಸೇರಿದ ಲೈರೂರಸ್ ಟೆಟ್ರಿಕ್ಸ್ ಎಂಬ ಶಾಸ್ತ್ರೀಯ ಹೆಸರಿನ ಹಕ್ಕಿಯ ಗಂಡಿಗಿರುವ ಸಾಮಾನ್ಯ ಹೆಸರು. ಹೆಣ್ಣುಹಕ್ಕಿಯನ್ನು ಬೂದುಕೋಳಿ (ಗ್ರೇ ಹೆನ್) ಎಂದು ಕರೆಯುತ್ತಾರೆ. ಗಂಡು ಹೆಣ್ಣುಗಳೆರಡಕ್ಕೂ ಬ್ಲ್ಯಾಕ್ ಗ್ರೌಸ್ ಎಂಬ ಸಾಮಾನ್ಯ ಹೆಸರಿದೆ. ಈ ಜಾತಿಯ ಹಕ್ಕಿ ಯೂರೋಪು ಮತ್ತು ಏಷ್ಯದ ಉತ್ತರ ಭಾಗಗಳ ನಿವಾಸಿ. ಗಂಡುಹಕ್ಕಿ ಸುಮಾರು 0.6 ಮೀ ಉದ್ದವಿದ್ದು 10 ಕಿಗ್ರಾಂ ಗಿಂತಲೂ ಹೆಚ್ಚು ತೂಗುತ್ತದೆ. ಗಂಡು ಬಹಳ ಚೆಲುವಾದ ಹಾಗೂ ವರ್ಣರಂಜಿತ ಹಕ್ಕಿ. ಮೈ ಹೊಳೆಯುವ ನೀಲಿಮಿಶ್ರಿತ ಕಪ್ಪು ಬಣ್ಣದ್ದು. ಬಾಲದ ಕೆಳಗೂ ರೆಕ್ಕೆಗಳ ಮೇಲೂ ಬಿಳಿಯ ಪಟ್ಟೆಯಿದೆ. ಬಾಲ ಬೀಸಣಿಗೆಯಂತಿದೆ. ಹಣೆಯ ಮೇಲೆ ಕಡುಗೆಂಪು ಬಣ್ಣದ ಮಾಂಸಲ ಭಾಗವಿದೆ. ಹೆಣ್ಣು ಹಕ್ಕಿ ಗಂಡಿಗಿಂತ ಚಿಕ್ಕದು. ಇದರ ಮೈಬಣ್ಣ ಕೆಂಗಂದು. ಅಲ್ಲಲ್ಲಿ ಕಪ್ಪು ಪಟ್ಟೆಗಳಿವೆ.

ಕುರುಚಲು ಪ್ರದೇಶಗಳು, ಬಂಡೆಗಳಿಂದ ಕೂಡಿದ ಗುಡ್ಡಗಾಡುಗಳು ಮುಂತಾದೆಡೆ ಈ ಹಕ್ಕಿಗಳು ಸಾಮಾನ್ಯ. ಹಣ್ಣುಹಂಪಲು, ಕಾಳುಕಡ್ಡಿ ಇವುಗಳ ಪ್ರಧಾನ ಅಹಾರ. ಕರಿಹುಂಜ ಬಹುಪತ್ನೀಕ. ವಸಂತಋತುವಿನಲ್ಲಿ ಒಂದೊಂದು ಗಂಡೂ ಹಲವಾರು ಹೆಣ್ಣುಗಳನ್ನು ಸೇರಿಸಿಕೊಂಡು ವಿಶಿಷ್ಟ ಸ್ಥಳಗಳಲ್ಲಿ ಪ್ರಣಯಸೂಚಕ ನೃತ್ಯಮಾಡುತ್ತದೆ. ಈ ನರ್ತನ ಸ್ಥಳಗಳನ್ನು ಲೆಕ್ ಎನ್ನುತ್ತಾರೆ. ವಿವಿಧ ರೀತಿಯ ಭಾವ ಭಂಗಿಗಳಿಂದ ಕೂಡಿದ ಈ ಕುಣಿತದ ಮೂಲಕ ಗಂಡು ಹೆಣ್ಣುಗಳನ್ನು ಒಲಿಸಿಕೊಳ್ಳುತ್ತದೆ. ಈ ಕುಣಿತ ಬೆಳಗಿನ ಜಾವ ಆರಂಭವಾಗಿ ದಿನವೆಲ್ಲ ನಡೆಯುತ್ತಲೇ ಇರುತ್ತದೆ. ಕೆಲವು ಸಲ ಇತರ ಗಂಡುಗಳು ಈ ಸ್ಥಳಕ್ಕೆ ಬರುವುದುಂಟು. ಆಗ ಗಂಡುಹಕ್ಕಿಗಳಲ್ಲಿ ಹೆಣ್ಣುಗಳಿಗಾಗಿ ಕಾಳಗ ನಡೆಯುತ್ತದೆ. ತೋರಿಕೆಯ ಜಗಳವಾದರೂ ಕೆಲವೊಮ್ಮೆ ಇದು ಉಗ್ರವಾಗಿಯೇ ನಡೆದು ಕೆಲವು ಗಂಡುಗಳ ಸಾವಿನಲ್ಲಿ ಪರಿಣಮಿಸಬಹುದು.

ಹೆಣ್ಣು ಹಕ್ಕಿ ಒಂದು ಸಲಕ್ಕೆ 6–10 ಮೊಟೆಗಳನ್ನಿಡುತ್ತದೆ. ನೆಲದಲ್ಲಿ ಗುಂಡಿಮಾಡಿ, ಕಡ್ಡಿಗಳನ್ನು ಹರಡಿ ಗೂಡನ್ನು ಕಟ್ಟುತ್ತದೆ. ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುವುದೂ ಮರಿಗಳ ಪೋಷಣೆಯೂ ಹೆಣ್ಣಿಗೇ ಸೇರಿದ್ದು. (ಜಿ.ಎಂ.ಬಿ)

**ಕರುಳುಹುಳುವಿಜ್ಞಾನ:** ಸ್ತನಿ, ಮತ್ತಿತರ ಪ್ರಾಣಿಗಳ ಕರುಳುಗಳಲ್ಲಿ ಪರಾವಲಂಬಿಯಾಗಿ, ಜೀವಿಸುವ ಕರುಳು ಹುಳಗಳ ಅಧ್ಯಯನವೇ ಕರುಳುವಿಜ್ಞಾನ. ಒಳಸೇರಿರುವ ಹುಳುಗಳ ಹುಟ್ಟು, ಜೀವವಿಕಾಸ, ಜೀವನ ಕ್ರಮ, ಅವುಗಳಿಂದುಂಟಾಗುವ ರೋಗಗಳು, ರೋಗನಿವಾರಣೆ, ರೋಗಪ್ರತಿಬಂಧನೆಯನ್ನು ವಿವರಿಸುವ ವೈದ್ಯವಿಜ್ಞಾನ ಇದನ್ನು ಹೆಲ್ಮಿಂತಾಲಜಿ ಎನ್ನುವರು. ***

**ಕರ್ಕ್ಯೂಲಿಯಾನಿಡೆ:** ಕೀಟವರ್ಗದ ಕೋಲಿಯಾಪ್ಟಿರ ಗಣದಲ್ಲಿರುವ ಕುಟುಂಬ. ಗೋದಿ, ಅಕ್ಕಿ ಹಿಟ್ಟನ್ನು ತಿಂದು ಬದುಕುವ ಕುಟ್ಟೆ ಹುಳುಗಳು ಅಥವಾ ವಾಡೆ ಹುಳುಗಳು ಎಂದು ಕರೆಯುವ ಸೊಂಡಿಲು ಕೀಟಗಳ ಕುಟುಂಬ. ಜೀರುಂಡೆ (ಬೀಟಲ್ಸ್)ಗಳಿಗೆ ಹೋಲಿಕೆಯಿದ್ದರೂ ಕೆಲವು ಗುಣಲಕ್ಷಣಗಳಲ್ಲಿ ಭಿನ್ನವಾಗಿವೆ. ಕೀಟಗಳ ತಲೆಯ ಮುಂಭಾಗ ಕೊಕ್ಕು ಅಥವಾ ಸೊಂಡಿಲಿನಂತೆ ಇರುವುದರಿಂದ ಇವುಗಳನ್ನು ಸೊಂಡಿಲು ಕೀಟಗಳು ಎನ್ನುವರು. ಆಂಗ್ಲ ಭಾಷೆಯಲ್ಲಿ ವೀವಿಲ್ಸ್ ಎನ್ನುತ್ತಾರೆ. ವಿವಿಧ ಜಾತಿಯ ಕೀಟಗಳ ಸೊಂಡಿಲ ಗಾತ್ರ, ಆಕಾರ ಮತ್ತು ಉದ್ದ ವಿಭಿನ್ನವಾಗಿದೆ. ಕುಡಿಮೀಸೆ (ಆಂಟೆನ) ಸೊಂಡಿಲಿನ ಮಧ್ಯ ಇದೆ. ನಟ್ ವೀವಿಲ್ಸ್ ಕೀಟಗಳ ಸೊಂಡಿಲು ಬಹಳ ತೆಳ್ಳಗಿದ್ದು, ಕೀಟದ ಉದ್ದದಷ್ಟು ನೀಳವಾಗಿದೆ.



ವೀವಿಲ್

ಸೊಂಡಿಲು ಕೀಟಗಳು ಕಾಯಿ, ಹಣ್ಣು, ಮತ್ತು ಸಸ್ಯಕಾಂಡಗಳನ್ನು ಆಳವಾಗಿ ಕೊರೆದು ರಂಧ್ರಗಳನ್ನುಂಟುಮಾಡುತ್ತವೆ. ಈ ರಂಧ್ರಗಳಲ್ಲಿ ಹೆಣ್ಣು ಕೀಟ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳಿಂದ ಹೊರಬಂದ ಡಿಂಬಗಳು (ಲಾರ್ವ) ಮೊಗ್ಗು, ಬೀಜ, ಕಾಯಿ ಮತ್ತು ಕಾಂಡಗಳನ್ನು ತಿಂದು ಬೆಳೆಯುತ್ತವೆ. ಸೊಂಡಿಲು ಕೀಟಗಳು ಗೆಣಸು, ಹತ್ತಿ, ಪ್ಲಮ್, ಚೆರ್ರಿ, ಪೀಚ್, ಸೇಬು ಮುಂತಾದ ಹಣ್ಣುಗಳನ್ನು, ಉಗ್ರಾಣಗಳಲ್ಲಿ ಶೇಖರಣೆ ಮಾಡುವ ದವಸಧಾನ್ಯಗಳನ್ನೂ ತಿಂದು ಹಾಳುಮಾಡುತ್ತವೆ.

ತೊಂದರೆಗೊಳಗಾದಾಗ ಈ ಕೀಟಗಳು ಕುಡಿಮೀಸೆ ಮತ್ತು ಕಾಲುಗಳನ್ನು ಮುದುಡಿ, ಚಲಿಸದೆ ನೆಲದ ಮೇಲೆ ಬಿದ್ದು ಸತ್ತ ಹಾಗೆ ನಟಿಸುತ್ತವೆ. ಕೆಲವು ಬಣ್ಣದಲ್ಲಿ ಮತ್ತು ಆಕಾರದಲ್ಲಿ ಮರದ ತೊಗಟೆಯನ್ನು, ಕಸಕಡ್ಡಿಗಳನ್ನು ಅನುಕರಿಸುತ್ತವೆ. ಚಲಿಸದೆ ಬಿದ್ದಿರುವಾಗ ಇವನ್ನು ಗುರುತಿಸುವುದು ಕಷ್ಟ. ಈ ರೀತಿ ತಮ್ಮನ್ನು ರಕ್ಷಿಸಿಕೊಳ್ಳುತ್ತವೆ.

ಈ ಕುಟುಂಬದಲ್ಲಿ ೧೩ ಉಪಕುಟುಂಬಗಳಿವೆ.

೧. ಸೈಲಾಡಿನೆ: ತೆಳುವಾದ ಉದ್ದನೆಯ, ಇರುವೆಗಳಂತಿರುವ ಕುಟ್ಟೆ ಹುಳುಗಳು. ಇವುಗಳ ಡಿಂಬಗಳನ್ನು ಸಿಹಿಗೆಣಸು ರಂಧ್ರ ಹುಳು ಎನ್ನುವರು. ಇವು ಸಿಹಿಗೆಣಸನ್ನು ಕೊರೆದು, ಬೇರುಗಳನ್ನು, ಗಿಡಗಳನ್ನು ನಾಶಗೊಳಿಸುತ್ತವೆ. ಗೆಣಸಿನ ಗೆಡ್ಡೆಯಲ್ಲಿದ್ದು, ಪ್ರೌಢಾವಸ್ಥೆ ತಲುಪಿ ಹೊರಬರುತ್ತವೆ.




೨. ಬೆಲಿನೆ: ಈ ಉಪ ಕುಟುಂಬದ ಇಕ್ಥಿಸಿರಸ್ ನೊವಬೊರೇಸಿಯಸ್ಸಿಸ್ ಕೀಟ ಓಕ್, ಹಿಕರಿ ಮತ್ತು ಬೀಚ್ ಮರಗಳ ಕೊಂಬೆ ಮತ್ತು ಎಲೆಗಳಲ್ಲಿ ವಾಸಿಸುತ್ತದೆ. ಇದರ ಡಿಂಬಗಳು ಕೊಂಬೆಗಳನ್ನು ಕೊರೆಯುತ್ತವೆ. ಇದರ ಉದ್ದ ೧೨–೧೮ ಮಿಮೀ. ಬಣ್ಣ ಮಿರುಗುವ ಕಪ್ಪು.

೩. ರಿಂಖಿಟಿನೆ (ಸಿಂಬಿನೆ): ಈ ಕುಟುಂಬದ ಕೀಟಗಳ ಕೆಳದವಡೆಗಳ ಹೊರ ಮತ್ತು ಒಳ ಅಂಚಿನ ಮೇಲೆ ಹಲ್ಲುಗಳಿರುವುದರಿಂದ ಇವನ್ನು ಹಲ್ಲು ಮೂಗಿನ ಸೊಂಡಿಲು ಕೀಟ ಎನ್ನುವರು. ಇವುಗಳ ಉದ್ದ ೧.೫–೬.೫ ಮಿಮೀ. ಇವುಗಳ ವಾಸ ಸಣ್ಣ ಗಿಡಗಳ ಮೇಲೆ. ರಿಂಖೈಟಿನ್ ಬೈಕಲರ್ ಕೀಟಗಳು ಗುಲಾಬಿ ಗಿಡಗಳಲ್ಲಿರುತ್ತವೆ. ಇದರ ಮೈ ಬಣ್ಣ

ಕೆಂಪು ಮತ್ತು ಕೆಳಭಾಗ ಕಪ್ಪಾಗಿದೆ. ಕೆಲವು ಪ್ರಭೇದದ ಕೀಟಗಳು ಮೊಗ್ಗು, ಕಾಯಿ ಮತ್ತು ಹಣ್ಣುಗಳಲ್ಲಿ ಮೊಟ್ಟೆಯಿಟ್ಟು ಮರಿ ಮಾಡುತ್ತವೆ.

೪. ಅಟ್ಟೆಲಾಬಿನೆ: ಈ ಕುಟುಂಬದ ಕೀಟವನ್ನು ಎಲೆಸುರುಳಿ ಮಾಡುವ ಸೊಂಡಿಲು ಕೀಟ ಎನ್ನುತ್ತಾರೆ. ಮೊಟ್ಟೆಯನ್ನು ಎಲೆಯ ಮೇಲಿಟ್ಟು ಅದನ್ನು ಸುರುಳಿಸುತ್ತಿ ಎಲೆಯ ತೊಟ್ಟನ್ನು ಕಡಿದು ಕೆಳಗೆ ಬೀಳಿಸುತ್ತದೆ. ಮೊಟ್ಟೆಯೊಡೆದು ಹೊರಬರುವ ಡಿಂಬ ಎಲೆಯ ಒಳಭಾಗವನ್ನು ತಿಂದು ಬೆಳೆಯುತ್ತದೆ. ಕೀಟದ ಉದ್ದ ೩–೬ ಮಿಮೀ.

೫. ಆಕ್ಸಿಕೊರಿನಿನೆ (ಅಲ್ಲೊಕೊರೈನಿನೀ): ಈ ಕುಟುಂಬದ ಸದಸ್ಯ ಕುಟ್ಟೆಹುಳು. ಇದು ಆರೋರೂಟ್ ಗಿಡದಲ್ಲಿ ಜೀವಿಸುತ್ತದೆ.

೬. ಟ್ರ್ಯಾಖಿಗೋನಿನೆ: ಈ ಕುಟುಂಬದ ಕೀಟಗಳು ನೆಲಗಪ್ಪೆ ಆಕಾರವಿರುವುದರಿಂದ ಇವಕ್ಕೆ ನೆಲಗಪ್ಪೆ ಸೊಂಡಿಲು ಕೀಟಗಳೆಂದು ಹೆಸರು. ಎಲೆಯ ಕೆಳಭಾಗದಲ್ಲಿ ಚಲಿಸುವುದು ಈ ಕೀಟಗಳ ವಿಶೇಷ ಗುಣ.

೭. ಟೀರೋಕೋಲಿನೆ: ಇದಕ್ಕೆ ಸೇರಿದ ಕೀಟಗಳು ಚಿಕ್ಕ ರೆಕ್ಕೆಯುಳ್ಳವು. ಸಣ್ಣ ಓಕ್ ಮರಗಳಲ್ಲಿ ಇವುಗಳ ವಾಸ.

೮. ಎಪಿಯೋನಿನೆ: ಈ ಕುಟುಂಬದ ಕೀಟಗಳು ಬಹಳ ಸಣ್ಣ ಗಾತ್ರದವು. ಉದ್ದ ಸು. ೪.೫ ಮಿಮೀ ಅಥವಾ ಇನ್ನೂ ಕಡಿಮೆ. ಅನೇಕ ಪ್ರಭೇದಗಳು ಅವರೆ ಜಾತಿಯ ಸಸ್ಯಗಳಲ್ಲಿ ಪೀಡೆಕಾರಕಗಳಾಗಿವೆ. ಡಿಂಬಗಳು ಈ ಸಸ್ಯಗಳ ಬೀಜ, ಎಲೆ, ಕಾಂಡ ಮತ್ತು ಇತರ ಭಾಗಗಳನ್ನು ಕೊರೆದು ತಿನ್ನುತ್ತವೆ.

೯. ಕರ್‍ಕ್ಯೂಲಿಯೋನಿನೆ: ಈ ಕುಟುಂಬದ ಸೊಂಡಿಲು ಕೀಟಗಳು ಕರ್‍ಕ್ಯೂಲಿಯಾನಿಡೆ ವರ್ಗಕ್ಕೆ ಸೇರಿದ ಜೀರುಂಡೆಗಳು. ಇವು ಆರ್ಥಿಕ ಬೆಳೆಗಳ ಮತ್ತು ಹಣ್ಣಿನ ಮರಗಳ ಪಿಡುಗುಗಳಾಗಿವೆ. ಉದಾ: ಕೋನೊಟ್ರೇಚಲಸ್ ನೆಸುಫಾರ್ ಎಂಬ ಪ್ರಭೇಧ ಪ್ಲಮ್ ಹಣ್ಣಿನ ಕುಟ್ಟೆಹುಳು. ಆನ್ತ್ರೊನೊಮಸ್ ಗ್ರಾಂಡಿಸ್ ಹತ್ತಿ ಗಿಡಗಳ ಪೀಡೆಕಾರಕ. ಎಕಾರ್‍ನ್ ಮತ್ತು ಗಟ್ಟಿ ಕಾಯಿಗಳ (ನಟ್) ಕೀಟಗಳಲ್ಲಿ ನೀಳವಾದ ಸೊಂಡಿಲಿರುತ್ತದೆ.

೧೦. ಥೆಸೆಸ್ಪರ್ನಿನೆ (ಬ್ರೈಸೆಪೈನೆ): ಈ ಕುಟುಂಬದ ಕೀಟಗಳನ್ನು ಎಮ್ಮೆ ಮುಸುಡಿ ಕೀಟಗಳು ಎನ್ನುವರು. ದನಕರುಗಳ ಸೆಗಣಿಯಲ್ಲಿ ಇವುಗಳ ವಾಸ.

೧೧. ಕೊಸೊನಿನೆ: ಅಗಲವಾದ ಮೊಟು ಕೊಕ್ಕಿನ ಕೀಟಗಳು. ೧.೫–೬.೫ ಮಿಮೀ ಉದ್ದ ಇವೆ.

೧೨. ಓಟಯೊರಿಂಖಿನೆ: ಈ ಕೀಟಗಳು ಕುರುಚಲು ಗಿಡಗಳಲ್ಲಿ ಅಥವಾ ನೆಲದಲ್ಲಿರುತ್ತವೆ. ಕೆಲವು ಪ್ರಭೇದದ ಕೀಟಗಳು ಬಹಳ ಮುಖ್ಯವಾದ ಆರ್ಥಿಕ ಬೆಳೆಗಳಿಗೆ ಪಿಡುಗುಗಳು.

೧೩. ಕ್ಯಾಲೆಂಡ್ರಿನೆ (ಬೆಲ್ ಬಗ್ಸ್ ಮತ್ತು ಕಾಳಿನ ಕೀಟಗಳು): ಇವು ದುಂಡಾಗಿದ್ದು, ವಿವಿಧ ಗಾತ್ರದಲ್ಲಿವೆ. ರಿಂಕೊಫೊರಸ್ ಕೊಯನ್ವೇಟಸ್ ಹಾಗೂ ರಿ. ಫೆರುಜಿನಿಯಸ್ ಕೀಟಗಳು ೨೦–೩೦ ಮಿಮೀ ಉದ್ದ ಇವೆ. ಇವು ತೆಂಗಿನ ಮರಗಳಲ್ಲಿ ಪೀಡೆಗಳಾಗಿವೆ. ಸೈಟೊಫೈಲಸ್ ಒರೈಜೆ (ನೋಡಿ–ಅಕ್ಕಿಯ ಸೊಂಡಿಲು ಕೀಟ) ಅಕ್ಕಿ, ಗೋದಿ ಕಾಳುಗಳಲ್ಲಿ ವಾಸಿಸುತ್ತದೆ. ಇವು ೩–೪ ಮಿಮೀ ಉದ್ದ ಇವೆ. ಇವುಗಳ ಡಿಂಬಗಳು ಕಾಳುಗಳಲ್ಲಿ ಬೆಳೆಯುತ್ತವೆ. (ಎನ್.ಬಿ.ಕೆ.; ಎನ್.ವಿ.ಎ.)

**ಕರ್ಣಕೀಟಗಳು:** ಕೀಟವರ್ಗದ ಡರ್ಮಾಪ್ಟಿರ ಗಣದ ಸದಸ್ಯರು. ಇವುಗಳನ್ನು ಆಂಗ್ಲಭಾಷೆಯಲ್ಲಿ ಇಯರ್ ವಿಗ್ಸ್ ಎನ್ನುವರು. ಇವು ನಿದ್ರಿಸುವವರ ಕಿವಿಯೊಳಕ್ಕೆ ಹೋಗುವುವೆಂಬ ತಪ್ಪು ಭಾವನೆಯಿಂದ ಈ ಹೆಸರಿದೆ. ಇವುಗಳ ದೇಹದ ಹಿಂಭಾಗದ ಕೊನೆಯಲ್ಲಿ ಕೊಂಡಿಗಳಂತಿರುವ ಎರಡು ರಚನೆಗಳಿವೆ. ಆದ್ದರಿಂದ ಇವಕ್ಕೆ ಕೊಂಡಿಕೀಟ ಅಥವಾ ಕೊಂಡಿಹುಳು ಎಂಬ ಹೆಸರಿದೆ.

ಪ್ರೌಢಕೀಟಗಳಿಗೆ ಎರಡು ಜೊತೆ ರೆಕ್ಕೆಗಳಿವೆ. ಮುಂದಿನ ಜೊತೆ ರೆಕ್ಕೆಗಳು ಒರಟು ಮತ್ತು ಸಣ್ಣವು. ಹಿಂದಿನ ಜೊತೆ ರೆಕ್ಕೆಗಳು ಅಗಲವಾಗಿ, ತೆಳುವಾಗಿ ಪೊರೆಯಂತಿವೆ ಇವುಗಳ ಮೇಲೆ ನಾಳಗಳಿವೆ. ಕೀಟ ಹಾರದಿದ್ದಾಗ ಇವು ಮುಂದಿನ ರೆಕ್ಕೆಗಳ ಕೆಳಗೆ ಮಡಿಚಿಕೊಂಡಿವೆ. ವದನಾಂಗಗಳು ಆಹಾರವನ್ನು ಅಗಿಯುವುದಕ್ಕೆ ಸಹಕಾರಿ. ಶರೀರದ ಕೊನೆಯಲ್ಲಿರುವ ಕೊಂಡಿಗಳು ಈ ಕೀಟಗಳ ಪ್ರಧಾನ ಲಕ್ಷಣ. ಕೊಂಡಿಗಳ ಆಕಾರ ಮತ್ತು ಉದ್ದ ವಿವಿಧ ಪ್ರಭೇದಗಳಲ್ಲಿ ವಿಭಿನ್ನವಾಗಿವೆ. ಒಂದೇ ಪ್ರಭೇದದ ಗಂಡು ಮತ್ತು ಹೆಣ್ಣು ಕೀಟಗಳಲ್ಲಿ ಇವು ಭಿನ್ನವಾಗಿವೆ. ಇದರಿಂದ ಗಂಡು, ಹೆಣ್ಣುಗಳನ್ನು ಗುರುತಿಸುವುದು ಸುಲಭ. ಕೊಂಡಿಗಳನ್ನು ಆಹಾರ ಕೀಟಗಳನ್ನು ಹಿಡಿಯುವುದಕ್ಕೂ ಮತ್ತು ದೇಹ ರಕ್ಷಣೆಗೂ ಉಪಯೋಗಿಸುತ್ತವೆ. ಗಂಡು ಮತ್ತು ಹೆಣ್ಣುಗಳು ರಮಿಸುವಾಗಲೂ ಕೊಂಡಿ ಸಹಕಾರಿ. ಕೆಲವು ಪ್ರಭೇದಗಳು ತಮ್ಮ ರಕ್ಷಣೆಗಾಗಿ ಇನ್ನೊಂದು ಮಾರ್ಗವನ್ನವಲಂಬಿಸಿವೆ. ಇವುಗಳ ೨ ಮತ್ತು ೩ ನೆಯ ಉದರ ಖಂಡಗಳ ಮೇಲ್ಭಾಗದಲ್ಲಿ ವಾಸನೆಯ ಗ್ರಂಥಿಗಳಿವೆ. ಇವುಗಳಿಂದ ದುರ್ವಾಸನೆಯುಳ್ಳ ಕಂದುಮಿಶ್ರಿತ ಹಳದಿಬಣ್ಣದ ದ್ರವ ಉತ್ಪತ್ತಿಯಾಗುತ್ತದೆ. ಈ ದ್ರವವನ್ನು ೮–೧೦ ಸೆಂಮೀ ದೂರ ಚಿಮ್ಮಿಸಬಲ್ಲವು.


ಕರ್ಣಕೀಟ

ಕರ್ಣಕೀಟಗಳು ನಿಶಾಚರಿಗಳು. ಹಗಲಲ್ಲಿ ನೆಲದ ಸಂದುಗಳು, ಬಿರುಕುಗಳು, ಮರದ ಪೊಟರೆಗಳು ಮತ್ತು ಕಲ್ಲಿನ ಕೆಳಗೆ ಇರುತ್ತವೆ. ಇವುಗಳ ಮುಖ್ಯ ಆಹಾರ ಕೊಳೆತಿರುವ ಮಾಂಸ ಹಾಗೂ ಇತರ ಸಣ್ಣ ಪುಟ್ಟ ಪ್ರಾಣಿಗಳು. ಕೆಲವೊಮ್ಮೆ ಕೊಳೆತ ಸಸ್ಯಪದಾರ್ಥಗಳನ್ನು ತಿನ್ನುತ್ತವೆ.

ಹೆಣ್ಣು ಮೊಟ್ಟೆಗಳನ್ನು ಮತ್ತು ಮರಿಗಳನ್ನು ಜಾಗರೂಕತೆಯಿಂದ ರಕ್ಷಿಸಿ ಪಾಲನೆ ಮಾಡುತ್ತದೆ. ಮೊಟ್ಟೆಗಳನ್ನು ನೆಲದಲ್ಲಿ ಕೊರೆದ ತೂತುಗಳಲ್ಲಿಟ್ಟು ಅವು ಒಡೆದು ಮರಿಗಳಾಗಿ ಬೆಳೆದು ದೊಡ್ಡವಾಗುವವರೆಗೂ ರಕ್ಷಣೆ ನೀಡುತ್ತದೆ.

ಈ ಕೀಟಗಳು ಪ್ರಪಂಚದಾದ್ಯಂತ ಹರಡಿಕೊಂಡಿವೆ. ಇವುಗಳ ಸಂಖ್ಯೆ ಯೂರೋಪ್ ಮತ್ತು ಉಷ್ಣವಲಯದ ದೇಶಗಳಲ್ಲಿ ಹೆಚ್ಚು. ಸು. ೧,೨೦೦ ಪ್ರಭೇದಗಳಿವೆ. ಇದರಲ್ಲಿ ೧೨೦ ಪ್ರಭೇದಗಳು ಭಾರತದಲ್ಲಿವೆ. ಇವುಗಳಲ್ಲಿ ಮುಖ್ಯವಾದುವು: ೧. ಲೆಬೆಡ್ಯೂರಿಡೆ ಕುಟುಂಬಕ್ಕೆ ಸೇರಿದ ಲೆಬಿಡ್ಯೂರ ರೈಪೇರಿಯ, ೨. ಲೇಬಿಡೆ ಕುಟುಂಬದ ಲೇಬಿಯ ಮೈನರ್., ೩. ಫಾರ್ಫಿಕ್ಯುಲಿಡೆ ಕುಟುಂಬದ ಫಾರ್ಫಿಕ್ಯುಲ ಆರಿಕ್ಯುಲೇರಿಯ, ೪. ಕೆಲಿಸೋಸಿಡೆ ಕುಟುಂಬಕ್ಕೆ ಸೇರಿದ ಪ್ರೋರಿಯಸ್ ಅಬ್ಡಾಮಿನ್ಯಾಲಿಸ್. ಇದುವರೆಗೂ ೧೫ ಪ್ರಭೇದಗಳ ಕ್ರೊಮೋಸೋಮುಗಳ ಬಗ್ಗೆ ವಿವರ ಲಭ್ಯ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಣಿವಿಜ್ಞಾನ ವಿಭಾಗದಲ್ಲಿ ಕೆಲವು ಕೀಟಗಳ ಜೀವಕೋಶ ಮತ್ತು ಕ್ರೊಮೋಸೋಮುಗಳ ಬಗ್ಗೆ ಸಂಶೋಧನೆ ನಡೆಯುತ್ತಿದೆ. ***

**ಕರ್ಣಾಸ್ಥಿಗಳು:** ನಡುಕಿವಿಯಲ್ಲಿರುವ, ಟಿಂಪೆನಿಕ ಪಟಲದಿಂದುಂಟಾಗುವ ಕಂಪನಗಳನ್ನು ಒಳಕಿವಿಗೆ ಸಾಗಿಸಿ ಶ್ರವಣಕ್ಕೆ ಅನುಕೂಲವಾಗಿರುವ ಚಿಕ್ಕ ಮೂಳೆಗಳು. ಕಂಪನಗಳು ಉತ್ಪತ್ತಿಮಾಡುವ ಸಂವೇದನೆಗಳನ್ನು ಗ್ರಹಿಸುವುದೇ ಶ್ರವಣ. ಪ್ರಾಣಿ ಜಾತಿಗಳಲ್ಲಿ ಅವುಗಳ ರಚನಾ ಮಟ್ಟವನ್ನನುಸರಿಸಿ ಅಗತ್ಯಗಳಿಗೆ ಅನುಗುಣವಾಗಿ ಶ್ರವಣೇಂದ್ರಿಯಗಳು ರೂಪುಗೊಂಡಿವೆ. ಕಿವಿಗಳು ಎಂದು ಕರೆಯಬಹುದಾದ ಶ್ರವಣೇಂದ್ರಿಯಗಳು ಕಶೇರುಕಗಳಲ್ಲಿ ಉತ್ತಮ ಮಟ್ಟದ ಸಂವೇದನಾಂಗಗಳಾಗಿ ಬೆಳೆದುಬಂದಿವೆ. ಇವು ಮೊದಲಬಾರಿಗೆ, ನೀರಿನಲ್ಲಿ ಜೀವನ ನಡೆಸಿದ ಮೀನುಗಳಲ್ಲಿ ಕಾಣಿಸಿಕೊಂಡು ನೆಲದ ಮೇಲಿನ ಕಶೇರುಕಗಳಲ್ಲಿ ಅದ್ಭುತ ಅಂಗರಚನೆಗಳಾಗಿ ರೂಪುಗೊಂಡಿವೆ. ಪಾರ್ಶ್ವಪಂಕ್ತಿ ಸಂವೇದನಾಂಗ ಮಂಡಲವು (ಶಕ್ತಿಗ್ರಾಹಕ) ಮೀನುಗಳಲ್ಲಿ ಸುತ್ತಲಿನ ನೀರಿನ ಒತ್ತಡಗಳನ್ನು, ಕಂಪನಗಳನ್ನು ಗ್ರಹಿಸಿ ನಿವೇದಿಸುವ ಅಂಗಗಳು. ನೀರಿನ ನಿಶ್ಶಬ್ದ ಜಗತ್ತಿನಲ್ಲಿ ವಾಸಿಸುತ್ತಿದ್ದ ಈ ಜಲಚರಪ್ರಾಣಿಗಳಿಗೆ ಇವು ಅತಿಮುಖ್ಯ ಅಂಗಗಳಾಗಿದ್ದು ಹೊರಗಿನ ಪರಿಸರದಲ್ಲಿ ಉತ್ಪತ್ತಿಯಾಗುತ್ತಿದ್ದ ಬದಲಾವಣೆಗಳನ್ನು ತಿಳಿಸುತ್ತಿದ್ದವು. ಗಾಳಿಯಲ್ಲಿ ಹಾದುಬರುವ ಕಂಪನ ವ್ಯತ್ಯಾಸಗಳನ್ನು ಗ್ರಹಿಸಲು ಶಕ್ತವಾದ ಅತ್ಯಂತ ಸರಳವಾದ ಅಂಗಗಳನ್ನು ಉಭಯವಾಸಿಗಳಲ್ಲಿ ಕಾಣಬಹುದು. ದೇಹದಲ್ಲಿಯೇ ದೊರಕಿದ ಹೆಚ್ಚಿನ ಅಂಗವಿಶೇಷಗಳನ್ನು ರಚನೆಗಳನ್ನು ಬಳಸಿಕೊಂಡು ಶ್ರವಣೇಂದ್ರಿಯವನ್ನು ರೂಪಿಸುವುದು ವಿಕಾಸದ ಒಂದು ಪ್ರಮುಖ ಹೆಜ್ಜೆಯಾಗಿ ಶ್ರವಣೇಂದ್ರಿಯಗಳು ವಿಕಸಿಸಿದುವು. ಮನುಷ್ಯನೂ ಸೇರಿದಂತೆ ಸ್ತನಿಗಳ ಮಾದರಿ ಶ್ರವಣೇಂದ್ರಿಯ ರಚನೆಯನ್ನು ಪರಿಶೀಲಿಸಿದಾಗ ಅದರಲ್ಲಿ ಮೂರು ವಿಭಾಗಗಳಿರುವುದು ಕಂಡುಬರುತ್ತದೆ. ಹೊರಗಿನಿಂದ ಬರಬಹುದಾದ ಶಬ್ದದ ಅಲೆಗಳನ್ನು ಗ್ರಹಿಸಲು ಅನುಕೂಲವಾದ ಕಿವಿಯ ಆಲೆ ಹೊರಕಿವಿ, ಹೀಗೆ ಸಂಗ್ರಹವಾದ ಶಬ್ದದ ಅಲೆಗಳನ್ನು ಒಳಗಿನ ಸಂವೇದನಾಂಗಗಳಿಗೆ ವರ್ಗಾಯಿಸುವುದರಲ್ಲಿ ನೆರವಾಗುವ ನಡುಕಿವಿ ಮತ್ತು ಶ್ರವಣೇಂದ್ರಿಯಗಳನ್ನು ಒಳಗೊಂಡ ಒಳಕಿವಿ.

ನಡುಕಿವಿ ಸಾಕಷ್ಟು ವಿಸ್ತಾರವಾದ ಒಂದು ಅವಕಾಶ (ಟಿಂಪೆನಿಕ್ ಅವಕಾಶ). ಈ ಅವಕಾಶದಲ್ಲಿ ಮೂರು ಸಣ್ಣ ಮೂಳೆರಚನೆಗಳಿವೆ (ಕರ್ಣಾಸ್ಥಿಗಳು). ಟಿಂಪೆನಿಕ್ ಪಟಲದ ಕಂಪನವನ್ನು ಈ ಮೂರು ಕರ್ಣಾಸ್ಥಿಗಳು ಒಳಕಿವಿಗೆ ತಲುಪಿಸುತ್ತವೆ. ಈ ಕರ್ಣಾಸ್ಥಿಗಳನ್ನು ಕ್ರಮವಾಗಿ ಮ್ಯಾಲಿಯಸ್, ಇಂಕಸ್ ಮತ್ತು ಸ್ಟೇಪಿಸ್ ಎಂದು ಕರೆಯುತ್ತಾರೆ. ಟಿಂಪೆನಿಕ್

ಪಟಲದಿಂದ ಒಳಕಿವಿಯ ಕಿಂಡಿಯವರೆಗೆ ಹರಡಿರುವ ಟಿಂಪೆನಿಕ್ ಅವಕಾಶದಲ್ಲಿ ಈ ಕರ್ಣಾಸ್ಥಿಗಳು ಒಂದು ಸರಪಣಿಯಂತೆ ವ್ಯವಸ್ಥೆಗೊಂಡಿವೆ. ಮ್ಯಾಲಿಯಸ್ ಸುತ್ತಿಗೆಯಾಕಾರದಲ್ಲಿದ್ದು ಕರ್ಣಾಸ್ಥಿಗಳಲ್ಲಿಯೇ ಅತ್ಯಂತ ದೊಡ್ಡದು. ಇದರ ರಚನೆಯಲ್ಲಿ ಒಂದು ತಲೆ, ಕಂಠ ಮತ್ತು ಹಿಡಿ ಎಂದು ಗುರುತಿಸಬಹುದಾದ ಭಾಗಗಳಿವೆ. ಮ್ಯಾಲಿಯಸ್ ಕರ್ಣಾಸ್ಥಿಯ ಹಿಡಿಭಾಗವು ತನ್ನ ಪಾರ್ಶ್ವ ಅಂಚಿನಲ್ಲಿ ಟಿಂಪೆನಿಕ್ ಪಟಲಕ್ಕೆ ಅಂಟಿಕೊಂಡಿದೆ. ತಲೆಯಭಾಗವು ಒಳಭಾಗದಲ್ಲಿ ಇಂಕಸ್ ಕರ್ಣಾಸ್ಥಿಯೊಂದಿಗೆ ಕೀಲಿಕೊಂಡಿದೆ. ಇಂಕಸ್ ಕರ್ಣಾಸ್ಥಿಯು ಸ್ಥೂಲ ಆಕಾರವಾಗಿದೆ. ಪಕ್ಕಗಳಲ್ಲಿ ಸಂಪೀಡಿತವಾದ ಮತ್ತು ಅಗ್ರತುದಿಯಲ್ಲಿ ಹಲ್ಲಿಣದ ಆಕಾರದ ಕುಳಿಯಿದ್ದು ಅದು ಮ್ಯಾಲಿಯಸ್‌ನ ತಲೆಯೊಂದಿಗೆ ಕೀಲಿಸಿಕೊಳ್ಳುತ್ತದೆ. ಇಂಕಸ್‌ನ ಉದ್ದನೆಯ ಪ್ರವರ್ಧವು ಸ್ಟೇಪಿಸ್‌ನ ತಲೆಯೊಂದಿಗೆ ಕೀಲಿಸಿಕೊಳ್ಳುತ್ತದೆ. ಸ್ಟೇಪಿಸ್ ತ್ರಿಕಾವು ಆಕಾರದಲ್ಲಿದ್ದು ಇದರ ರಚನೆಯಲ್ಲಿ ಒಂದು ತಲೆ, ಒಂದು ಕಂಠ, ಎರಡು ಕಾಲುಗಳು ಮತ್ತು ಒಂದು ಬುಡ ಎಂಬ ರಚನೆಗಳಿವೆ. ಇದರ ತಲೆಯಲ್ಲಿ ಇಂಕಸ್‌ನ ಪ್ರವರ್ಧವು ಕೀಲಿಸಿಕೊಳ್ಳಲು ಅನುಕೂಲವಾಗುವಂತೆ ತಗ್ಗಿದ ಪ್ರದೇಶವಿದೆ. ಕಂಠಭಾಗವು ಸಂಪೀಡಿತವಾಗಿದ್ದು ಅದು ತಲೆಗೆ ಆಧಾರ ನೀಡುತ್ತದೆ. ವಿರುದ್ಧ ದಿಕ್ಕಿನಲ್ಲಿ ಚಾಚಿಕೊಂಡ ಕಾಲುಗಳು ಚಪ್ಪಟೆಯಾದ ಅಂಡಾಕಾರದ ಫಲಕವೊಂದಕ್ಕೆ ಅಂಟಿಕೊಂಡಿದ್ದು ಅದೇ ಬುಡವಾಗುತ್ತದೆ. ಈ ಬುಡಭಾಗವು ಫೆನೆಸ್ಟ್ರ ಓವಾಲಿಸ್ ಎಂದು ಕರೆಯುವ ಒಳಕಿವಿಯ ಕಿಂಡಿಗೆ ಅಂಟಿಕೊಂಡಿದೆ.

ಕಶೇರುಕಗಳ ಕಿವಿಯ ವಿಕಾಸದಲ್ಲಿ ಈ ಕರ್ಣಾಸ್ಥಿಗಳು ಕಾಣಿಸಿಕೊಂಡ ಬಗೆ ನಿಜವಾಗಿ ವಿಕಾಸದ ಒಂದು ಅದ್ಭುತ ಪವಾಡ. ತಲೆಬುರುಡೆಯ ಕೆಲವು ಮೂಳೆಗಳು ಈ ಕರ್ಣಾಸ್ಥಿಗಳ ಉದ್ಭವಕ್ಕೆ ಕಾರಣವಾಗಿದೆ ಎಂಬುದು ಸರ್ವಸಮ್ಮತ ಅಭಿಪ್ರಾಯವಾದರೂ ಅವು ಉದ್ಭವಿಸಿರುವ ವಿಕಾಸದ ವಿವರಣೆಯ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಇದನ್ನು ವಿವರಿಸಲು ಮೂರು ಮುಖ್ಯ ಸಿದ್ಧಾಂತಗಳಿವೆ.

1) ಕಾಲುಮೆಲ್ಲ ಸಿದ್ಧಾಂತ: ಈ ಸಿದ್ಧಾಂತದ ಪ್ರಕಾರ ಸ್ತನಿಗಳ ನಡುಕಿವಿಯ ಈ ಕರ್ಣಾಸ್ಥಿಗಳು ಸರೀಸೃಪಗಳ ಕಾಲುಮೆಲ್ಲ ಆರಿಸ್ (ಸ್ಟೇಪಿಸ್) ನಿಂದ ಉದ್ಭವಿದುವು. ಸರೀಸೃಪಗಳ ಕೆಳದವಡೆಯ ರಚನೆಯಲ್ಲಿ ಸೇರಿದ್ದ ಆರ್ಟಿಕ್ಯುಲಾರ್ ಮತ್ತು ಕ್ವಾಡ್ರೇಟ್‌ಗಳು ಸ್ತನಿಗಳ ದವಡೆಯ ವಿಕಾಸದಲ್ಲಿ ತಮ್ಮ ಕ್ರಿಯೆಯನ್ನು ಕಳೆದುಕೊಂಡು ಕ್ಷೀಣವಾಗಿ ಹೊರಹಾಕಲ್ಪಟ್ಟವು. ಇವುಗಳನ್ನು ವಿಕಾಸಶಕ್ತಿಯು ಸ್ತನಿಗಳ ನಡುಕಿವಿಯ ರಚನೆಯಲ್ಲಿ ಬಳಸಿಕೊಂಡಿತು ಎನ್ನುವುದು ಮುಖ್ಯ ಅಭಿಪ್ರಾಯ. ಈ ಅಭಿಪ್ರಾಯವನ್ನು ಒಪ್ಪಿಕೊಂಡರೂ ಇವೆಲ್ಲವೂ ಕಾಲುಮೆಲ್ಲ ಆರಿಸ್‌ನಿಂದಲೇ ಉದ್ಭವಿಸಿದುವು ಎನ್ನುವುದರ ಬಗೆಗೆ ಅನೇಕ ಆಕ್ಷೇಪಣೆಗಳಿವೆ.

2) ಹಕ್ಸ್ಲಿ ಸಿದ್ಧಾಂತ: ಇದರ ಪ್ರಕಾರ ಸ್ತನಿಗಳ ಸ್ಟೇಪಿಸ್ ಕರ್ಣಾಸ್ಥಿಯು ಸರೀಸೃಪಗಳ ಕಾಲುಮೆಲ್ಲದಿಂದಲೂ, ಇಂಕಸ್ ಹಯಾಯಿಡ್ ಸೂಪ್ರ ಸ್ಟೇಪೀಡಿಯಲ್ ಭಾಗದಿಂದಲೂ ಮತ್ತು ಮ್ಯಾಲಿಯಸ್ ಕ್ವಾಡ್ರೇಟ್‌ನಿಂದಲೂ ಉದ್ಭವಿಸಿದುವು. ಇವನ ಅಭಿಮತದಂತೆ ಸರೀಸೃಪಗಳ ಆರ್ಟಿಕ್ಯುಲಾರ್ ಮೂಳೆಯು ನಡುಕಿವಿಯ ರಚನೆಯಲ್ಲಿ ಯಾವ ಪಾತ್ರವನ್ನು ವಹಿಸದೆ ಸ್ತನಿಯ ಕೆಳದವಡೆಯಾದ ಡೆಂಟರಿಯ ಕಾಂಡೈಲ್‌ನ್ನು ಪ್ರತಿನಿಧಿಸುತ್ತದೆ. ಈ ಸಿದ್ಧಾಂತಕ್ಕೆ ಭ್ರೂಣ ವೈಜ್ಞಾನಿಕ ಆಧಾರಗಳು ಇಲ್ಲ.

3) ರಿಚರ್ಡ್ಸ್ ಸಿದ್ಧಾಂತ: ಬಹುಮತ ಸಮ್ಮತವಾದ ಮತ್ತು ಬಹುಮಂದಿ ಅಂಗರಚನಾವಿಜ್ಞಾನಿಗಳು ಒಪ್ಪಿಕೊಂಡಿರುವ ಸಿದ್ಧಾಂತ. ಇದು ಸ್ತನಿಗಳ ಸ್ಟೇಪಿಸ್ ಸರೀಸೃಪಗಳ ಕಾಲುಮೆಲ್ಲ ಆರಿಸ್‌ನಿಂದಲೂ, ಮ್ಯಾಲಿಯಸ್ ಆರ್ಟಿಕ್ಯುಲಾರ್ ನಿಂದಲೂ ಮತ್ತು ಇಂಕಸ್ ಕ್ವಾಡ್ರೇಟ್ ನಿಂದಲೂ ಉದ್ಭವಿಸಿದುವು ಎಂದು ತಿಳಿಸುತ್ತದೆ. ನೋಡಿ – ಕಿವಿ. ***

**ಕರ್ನಾಟಕದ ಪ್ರಾಣಿಸಂಪತ್ತು:** ಮಾಮೇಲಿಯ ಎಂದರೆ ಸ್ತನಿ ವರ್ಗದ ಹಲವಾರು ಗಣಗಳ ಪ್ರತಿನಿಧಿಗಳು ಕರ್ನಾಟಕದಲ್ಲಿವೆ. ಮಾನವನನ್ನೊಳಗೊಂಡ (ಹೋಮೋ ಸೇಪಿಯನ್ಸ್) ಪ್ರೈಮೇಟ್ ಗಣ ಈ ವರ್ಗಕ್ಕೆ ಸಂಬಂಧಿಸಿದ್ದೇ. ಈ ಗಣದ ಆರು ಪ್ರೈಮೇಟುಗಳು ಕರ್ನಾಟಕದಲ್ಲಿವೆ. ಎಲ್ಲರಿಗೂ ಚಿರಪರಿಚಿತವಾಗಿರುವ ಕೋತಿ ಅಥವಾ ಕಪಿ ಇವುಗಳಲ್ಲೊಂದು. ಇದಕ್ಕೆ ಇಂಗ್ಲಿಷಿನಲ್ಲಿ ಬಾನೆಟ್ ಮೆಕಾಕ್ ಎಂದು ಹೆಸರು. ಇದರ ವೈಜ್ಞಾನಿಕ ಹೆಸರು ಮೆಕಾಕ ರೇಡಿಯೇಟ. ಕುಳಿತುಕೊಂಡಾಗ ಇದರ ಎತ್ತರ ಸು. 60 ಸೆಂಮೀ. ಬಾಲದ ಉದ್ದ ತಲೆ ಮತ್ತು ದೇಹದ ಉದ್ದಕ್ಕಿಂತಲೂ ಹೆಚ್ಚು. ಗಂಡಿನ ತೂಕ ಸುಮಾರು 6 ರಿಂದ 9 ಕಿಗ್ರಾಂ. ಹೆಣ್ಣಿನ ತೂಕ 3–4 ಕಿಗ್ರಾಂ. ಇವು ಸಾಮಾನ್ಯವಾಗಿ ಮನುಷ್ಯ ವಾಸಿಸುವ ನೆಲೆಗೆ ಹತ್ತಿರವಾಗಿ ಕಂಡಬಂದರೂ ಕಾಡಿನಲ್ಲೂ ವಾಸಿಸುತ್ತವೆ. ಎರಡನೆಯದು ಸಿಂಗಲೀಕ. ಇದರ ಬಾಲ ಸಿಂಹದ ಬಾಲದಂತಿರುವುದರಿಂದ ಇದಕ್ಕೆ ಲಯನ್ ಟೈಲ್ಡ್ ಮಕಾಕ್ ಎಂದು ಹೆಸರು. ಇದರ ವೈಜ್ಞಾನಿಕ ನಾಮ ಮಕಾಕ ಸೈಲೆನಸ್. ಇದರ ತಲೆ ಮತ್ತು ದೇಹದ ಉದ್ದ ಸು. 50–60 ಬಾಲ 10–15 ಸೆಂಮೀ. ಹೆಣ್ಣು ಗಂಡಿಗಿಂತ ಚಿಕ್ಕದು. ಇದು ಪಶ್ಚಿಮಘಟ್ಟ ಮತ್ತು ಉತ್ತರ ಕನ್ನಡ ಜಿಲ್ಲೆಗಳ ದಟ್ಟ ಕಾಡಿನಲ್ಲಿ ವಾಸಿಸುತ್ತದೆ. ಗಲ್ಲ ಮತ್ತು ಕೆನ್ನೆಗಳ ಮೇಲೆ ಉದ್ದವಾದ ಕಂದುಬಣ್ಣದ ಕೂದಲುಂಟು. ಇಡೀ ದೇಹದ ಮೇಲಿನ ಕೂದಲು ಮಿರುಗುವ ಕಪ್ಪು ಬಣ್ಣದ್ದು. ನಾಚಿಕೆಪಡುವ ಈ ಜೀವಿಗಳ ವಾಸ ಗುಂಪು ಗುಂಪಾಗಿ. ಒಂದೊಂದು ಗುಂಪಿನಲ್ಲೂ ಸುಮಾರು 12 ರಿಂದ 20 ಪ್ರಾಣಿಗಳಿರುತ್ತವೆ. ಮರಗಳ ಮೇಲೆಯೇ ಇವುಗಳ ಚಲನವಲನ. ಕೆಲವು ಸಂದರ್ಭಗಳಲ್ಲಿ ಇವು ಮರಗಳಿಂದ ಇಳಿದು ಭೂಮಿಯ ಮೇಲೂ ಓಡಾಡುತ್ತವೆ. ಇವನ್ನು ಪಳಗಿಸುವುದು ಕಷ್ಟ. ಮೂಸು ಅಥವಾ ಮುಸುವ ಎಂಬ ಮತ್ತೊಂದು ಬಗೆಯ ವೃಕ್ಷವಾಸಿ ಕಾಡುಗಳಲ್ಲಿ ಹಳ್ಳಿಗಳ ಬಳಿ ಕಂಡುಬರುತ್ತದೆ. ಹನುಮಾನ್ ಕೋತಿ ಇದರ ಪರ್ಯಾಯ ನಾಮ. ಕಾಮನ್ ಲಂಗೂರ್ ಎಂಬ ಸಾಮಾನ್ಯ ಇಂಗ್ಲಿಷ್ ಹೆಸರೂ ಪ್ರೆಸ್‌ಬೈಟಿಸ್ ಎಂಟೆಲಸ್ ಎಂಬ ವೈಜ್ಞಾನಿಕ ಹೆಸರೂ ಇದಕ್ಕಿವೆ. ಇದು ನೀಳಗಾಲಿನ ನೀಳಬಾಲದ ಕಪ್ಪು ಮುಖದ ಕೋತಿ. ಇದು ಭಾರತಾದ್ಯಂತ ಹರಡಿದೆ. ಸಾಮಾನ್ಯವಾಗಿ ಕೊಳ ಮತ್ತು ದೇವಾಲಯಗಳ ಬಳಿ ಇರುವುದು ಹೆಚ್ಚು. ಕೆಲವೆಡೆ ಹಿಂದೂಗಳು ಈ ಕೋತಿಯನ್ನು ಪೂಜಿಸುವುದೂ ಉಂಟು. ಇದರ ಆಹಾರ ಹೂ, ಹಣ್ಣು, ಮೊಗ್ಗು ಇತ್ಯಾದಿ. ಪ್ರೆಸ್‌ಬೈಟಿಸ್ ಜಾನಿ (ನೀಲಗಿರಿ ಲಂಗೂರ್) ಎಂಬ ಇನ್ನೊಂದು ಬಗೆಯ ಕೋತಿ ಕೊಡಗು ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಕಾಡುಗಳಲ್ಲಿ ಇದೆ. ಇದರ ತಲೆ ಹಳದಿ ಮತ್ತು ಕಂದುಬಣ್ಣದ ಮಿಶ್ರಣ. ಮೈಮೇಲಿನ ಕೂದಲು ಕಪ್ಪು ಮಿಶ್ರಿತ ಬೂದು. ಹಚ್ಚಹಸಿರು ತುಂಬಿದ ಬೆಟ್ಟಗುಡ್ಡ ಕಾಡುಗಳೇ ಇದರ ವಾಸಸ್ಥಾನ; ಕೆಲವು ವೇಳೆ ತೋಟ ಮತ್ತು ಸಾಗುವಳಿ ಪ್ರದೇಶಗಳಿಗೆ ನುಗ್ಗಿ ಹಾವಳಿ ಮಾಡುವುದೂ ಉಂಟು. ಇದರ ಸುಂದರವಾದ ತುಪ್ಪುಳಕ್ಕಾಗಿ ಜನರು ಇದನ್ನು ನಾಯಿಗಳ ಸಹಾಯದಿಂದ ಬೇಟೆಯಾಡುವುದುಂಟು. ಲೋರಿಸ್ ಟಾರ್ಡಿಗ್ರೇಡಸ್ ಎಂಬ ಶಾಸ್ತ್ರೀಯ ಹೆಸರುಳ್ಳ ಕಾಡುಪಾಪ ಅಥವಾ ಅಡವಿ ಮನುಷ್ಯ ಕರ್ನಾಟಕದಲ್ಲೂ ಕಂಡುಬಂದಿದೆ. ಕೊಡಗುಜಿಲ್ಲೆ ಇದರ ತವರು ಪ್ರದೇಶ. ಇದೂ ಕೂಡ ವೃಕ್ಷವಾಸಿಯೇ. ಒಂದೊಂದು ಸುಮಾರು 280–340 ಗ್ರಾಂ ತೂಗುತ್ತದೆ. ಗಂಡಿಗಿಂತ ಹೆಣ್ಣು ಸ್ವಲ್ಪ ಚಿಕ್ಕದು. ಬಾಹುಗಳು ನೀಳ ಮತ್ತು ತೆಳು. ಬಾಲ ಇಲ್ಲ. ಮೂತಿ ಚೂಪು; ಕಿವಿಗಳು ದೊಡ್ಡವು. ರಾತ್ರಿಯ ವೇಳೆ ಚಟುವಟಿಕೆಯಿಂದಿದ್ದು ಹಗಲಿನಲ್ಲಿ ಎಲೆಯ ಮರೆಯಲ್ಲಿ ವಿಶ್ರಮಿಸಿಕೊಳ್ಳುತ್ತದೆ. ಹಣ್ಣು ಹಂಪಲೇ ಇದರ ಆಹಾರವಾದರೂ ಭೂಮಿಗಿಳಿದಾಗ ಕೀಟ, ಹಲ್ಲಿ, ಕಪ್ಪೆ ಮತ್ತು ಸಣ್ಣ ಸಣ್ಣ ಪಕ್ಷಿಗಳನ್ನು ತಿನ್ನುತ್ತದೆ.

ಒಂದು ಬಗೆಯ ವಿಶಿಷ್ಟ ಮಾಂಸಾಹಾರಿಗಳ ಗಣವಾದ ಕಾರ್ನಿವೊರದ ಪ್ರತಿನಿಧಿಗಳು ಕರ್ನಾಟಕದಲ್ಲಿ ಉಂಟು. ಈ ಗಣದಲ್ಲಿ ಹಲವು ಕುಟುಂಬಗಳಿವೆ. ಅವುಗಳಲ್ಲಿ ಬೆಕ್ಕು, ಹುಲಿ ಮೊದಲಾದುವನ್ನು ಒಳಗೊಂಡ ಫೆಲಿಡೆ ಕುಟುಂಬ ಒಂದು. ದುಂಡು ತಲೆ, ಒಳಕ್ಕೆ ಎಳೆದುಕೊಳ್ಳಬಹುದಾದ ಮೊನೆಯುಗುರು ಅಥವಾ ನಖಗಳು ಈ ಕುಟುಂಬದ ಪ್ರಾಣಿಗಳ ವಿಶೇಷ ಲಕ್ಷಣ. ಬಹು ಹಿಂದೆ ಸಿಂಹಗಳು ದಟ್ಟವಾದ ದಂಡಕಾರಣ್ಯದಲ್ಲಿ ವಾಸಿಸುತ್ತಿದ್ದುವೆಂದು ಹೇಳಲಾಗಿದ್ದರೂ ಈಗ ಇವು ಕನ್ನಡನಾಡಿನಲ್ಲಿ ಇಲ್ಲವೇ ಇಲ್ಲ. ಹುಲಿ (ಪ್ಯಾಂತೆರ ಟೈಗ್ರಿಸ್) ಕರ್ನಾಟಕದ ದಟ್ಟವಾದ ಕಾಡುಗಳಲ್ಲಿ ಕಂಡುಬರುತ್ತದೆ. ಇದು ವಾಸಿಸುವ ಕಾಡುಗಳಲ್ಲಿ ಸಾಕಷ್ಟು ಆಹಾರಜೀವಿಗಳು, ಮರಗಳು, ನೆರಳು, ಬಾಯಾರಿಕೆಯನ್ನು ನೀಗುವ ಜಲಾಶಯ ಅವಶ್ಯಕ. ಹುಲಿಯ ಮೈಮೇಲಿನ ರೋಮದ ಬಣ್ಣ ಮೋಹಕ ಹಾಗೂ ಉಜ್ಜ್ವಲ. ಇದೆ ಕುಟುಂಬಕ್ಕೆ ಸೇರಿದ ಚಿರತೆಗಳು (ಪ್ಯಾಂತೆರ ಪಾರ್ಡಸ್) ಗುಡ್ಡಪ್ರದೇಶಗಳಲ್ಲಿ ಹೆಚ್ಚಾಗಿ ದೊರಕುತ್ತಿದ್ದುವಂತೆ. ಇವು ಸಾಮಾನ್ಯವಾಗಿ ಮಾನವನ ನೆಲೆಯ ಸನಿಹದಲ್ಲಿಯೇ ವಾಸಿಸುತ್ತಿದ್ದು ದನ, ಕುರಿ, ಮೇಕೆ ಮೊದಲಾದ ಸಾಕುಪ್ರಾಣಿಗಳಿಗೆ ಉಪದ್ರವವನ್ನುಂಟು ಮಾಡುತ್ತಿದ್ದುವು. ಮಾನವನ ಬೇಟೆಯಿಂದ ಇವುಗಳ ಸಂಖ್ಯೆ ಸಾಕಷ್ಟು ಕ್ಷೀಣವಾಗಿ ಈಗ ಇವು ವಿರಳವಾಗಿ ಹೋಗಿವೆ. ಇವನ್ನು ಮೃಗಾಲಯಗಳಲ್ಲಿ ಮಾತ್ರ ನೋಡಬಹುದು. ಚಿರತೆ ಬೆಕ್ಕು ಅಥವಾ ಕಾಡುಬೆಕ್ಕು (ಫೆಲಿಸ್ ಬೆಂಗಾಲೆನ್ಸಿಸ್) ಕರ್ನಾಟಕದ ಕಾಡುಗಳಲ್ಲಿ ಕಂಡುಬರುತ್ತದೆ. ಇದರ ಗಾತ್ರ ಸಾಕುಬೆಕ್ಕಿನಷ್ಟು. ಆದರೆ ಕಾಲುಗಳು ಮಾತ್ರ ನೀಳ. ದೇಹದ ರಚನೆಯಂತೂ ಪುಟ್ಟ ಚಿರತೆಯಂತೆಯೇ ಇರುತ್ತದೆ. ದೇಹ ಹಳದಿಬಣ್ಣ. ಫೆಲಿಸ್ ಕೇಯಸ್ ಎಂಬ ಶಾಸ್ತ್ರೀಯ ಹೆಸರನ್ನು ಮಂಟ ಬೆಕ್ಕು ಅಥವಾ ಕಾಡುಬೆಕ್ಕಿಗೆ ಇಡಲಾಗಿದೆ. ಇದೂ ಕೂಡ ಸಾಕು ಬೆಕ್ಕಿಗಿಂತ ದೊಡ್ಡದು. ಇದರ ಬಾಲ ಮಾತ್ರ ಚಿಕ್ಕದು. ಕಾಲುಗಳು ನೀಳ, ಕಣ್ಣುಗಳು ಮಂದಹಸಿರುಬಣ್ಣ. ಕಾಡುಗಳಲ್ಲಿ ವಾಸಿಸಿದರೂ ಕಾಡುಗಳ ಸಮೀಪದಲ್ಲಿರುವ ಹಳ್ಳಿಗಳಿಗೂ ರಾತ್ರಿವೇಳೆ ಬರುವುದುಂಟು. ಬೇಟೆಯ ಚಿರತೆ (ಆಸಿನೋನಿಕ್ಸ್ ಜೂಬೇಟಸ್) ಕನ್ನಡನಾಡಿನ ಉತ್ತರದ ಬಯಲಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಒಂದು ಕಾಲಕ್ಕೆ ಇತ್ತು. ಇದರ ಕಾಲುಗಳು ತೆಳು. ಇದು ನಖಗಳನ್ನು ಸಂಪೂರ್ಣವಾಗಿ ಒಳಕ್ಕೆ ಸೆಳೆದುಕೊಳ್ಳಲಾರದು. ವೇಗವಾಗಿ ಓಡುವ ಜಿಂಕೆಗಳನ್ನು ಹಿಂಬಾಲಿಸಿ ಬೇಟೆಯಾಡುವುದು ಇದಕ್ಕೆ ಪ್ರಿಯ. ಮಾನವ ಇವುಗಳ ಉಪದ್ರವವನ್ನು

ತಾಳಲಾರದೆ ಇವನ್ನು ಬೇಟೆಯಾಡಿ ಬಯಲಿನಲ್ಲಿ ಸಿಗದಂತೆ ಮಾಡಿದ್ದಾನೆ. ಇವು ಕನ್ನಡ ನಾಡಿನ ಬಯಲಿನಲ್ಲಿ ಸ್ವೇಚ್ಛೆಯಾಗಿ ಸಿಗುತ್ತವೆಯೋ ಇಲ್ಲವೋ ತಿಳಿಯದು. ಇವನ್ನು ಮೃಗಾಲಯಗಳಲ್ಲಂತೂ ನೋಡೇ ನೋಡಬಹುದು.

ವೈವೆರಿಡೆ ಕುಟುಂಬಕ್ಕೆ ಸೇರಿದ ಪುನುಗು ಬೆಕ್ಕಿನ (ವೈವಿರಿಕ್ಯುಲ ಇಂಡಿಕ) ವಾಸ ಕಾಡು ಮತ್ತು ಗುಡ್ಡಪ್ರದೇಶಗಳಲ್ಲಿ ಆಗಿದ್ದರೂ ಇದು ಎತ್ತರವಾಗಿ ಬೆಳೆಯುವ ಹುಲ್ಲು ಮೈದಾನದಲ್ಲಿ ಹೇರಳವಾಗಿ ದೊರೆಯುತ್ತದೆ. ಉದ್ದ ಸು. 90 ಸೆಂಮೀ. ತೂಕ ಸು. 3–4 ಕಿಗ್ರಾಂ. ದೇಹ ಬೂದುಬಣ್ಣ. ಬಾಲ ಸ್ವಲ್ಪಮಟ್ಟಿಗೆ ಪಟಪಟ್ಟೆಬಣ್ಣ. ಕೆಲವು ಸಂದರ್ಭಗಳಲ್ಲಿ ಇದನ್ನು ಹಳ್ಳಿಗಳ ಮನೆಗಳಲ್ಲೂ ಚರಂಡಿಗಳಲ್ಲೂ ಕಾಣಲಾಗಿದೆ. ಇದು ಮರವನ್ನು ಹತ್ತಬಲ್ಲದು. ಇಲಿ, ಅಳಿಲು, ಸಣ್ಣಸಣ್ಣ ಪಕ್ಷಿಗಳು ಇದರ ಆಹಾರ. ವೃಷಣಕೋಶ ಪೂರ್ವಪ್ರದೇಶದಲ್ಲಿರುವ ಸುಗಂಧ ಗ್ರಂಥಿಗಳಿಂದ ಪುನುಗನ್ನು ಉತ್ಪಾದಿಸಿ ಇದು ಮರಗಳಿಗೆ ಒರಸುತ್ತದೆ. ಕೇರ ಬೆಕ್ಕು (ಪ್ಯಾರಡಾಕ್ಸ್ಯೂರಸ್ ಹರ್ಮಾಫ್ರೊಡೈಟಸ್) ಇದೇ ಕುಟುಂಬಕ್ಕೆ ಸೇರಿದ್ದು. ಇದು ಕಾಡುಗಳಲ್ಲಿ ಮರಗಳ ಮೇಲೆ ಕೆಲವು ಸಂದರ್ಭಗಳಲ್ಲಿ ಹಳ್ಳಿಗಳ ಹೊರ ವಲಯದಲ್ಲಿರುವ ಮಾವಿನಮರ ಮತ್ತು ಈಚಲು ಮರಗಳ ಮೇಲೂ ವಾಸಿಸುತ್ತದೆ. ಅಲ್ಲದೆ ಮಾನವ ವಾಸಿಸುವ ಮನೆ ಅಥವಾ ಹಳೆಮನೆ, ಪಾಳುಬಿದ್ದ ದೇವಸ್ಥಾನ ಮೋರಿ ಚರಂಡಿಗಳಲ್ಲೂ ಕಂಡುಬಂದಿದೆ.

ಎರಡು ಜಾತಿಯ ಕೀರಗಳು (ಮುಂಗುಸಿ) ಕನ್ನಡ ನಾಡಿನಲ್ಲಿ ಇವೆ. ಇವು ಹರ್ಪೆಸ್ಟಿಡೆ ಕುಟುಂಬಕ್ಕೆ ಸೇರಿದವು. ಸಾಮಾನ್ಯವಾಗಿ ತಿಳಿದಿರುವ ಕೀರ (ಹರ್ಪೆಸ್ಟಿಸ್ ಎಡ್ವರ್ಸಿ) 90 ಸೆಂಮೀ ಉದ್ದವಿದೆ. ದೇಹದಷ್ಟೇ ಉದ್ದದ ಬಾಲವೂ ಉಂಟು. ಇದರ ತೂಕ 1.4 ಕಿಗ್ರಾಂ. ಕಾಡುಗಳು ಇದರ ತವರು ಪ್ರದೇಶವಾದರೂ ಕುರುಚಲು ಕಾಡುಗಳಲ್ಲಿ ಹಾಗೂ ಸಾಗುವಳಿ ಪ್ರದೇಶಗಳಲ್ಲಿ ಇದು ಸಾಮಾನ್ಯವಾಗಿ ಕಂಡುಬರುತ್ತದೆ. ಇದು ಬೆಕ್ಕುಗಳಂತೆ ಇಲಿಗಳನ್ನು ಬೇಟೆಯಾಡಿ ತಿನ್ನುತ್ತದೆ. ಅಲ್ಲದೆ ನಾಗರಹಾವು ಮೊದಲಾದ ವಿಷದ ಹಾವುಗಳೊಡನೆ ಹೋರಾಡುವ ಪ್ರವೃತ್ತಿಯೂ ಇದಕ್ಕಿದೆ. ಮತ್ತೊಂದು ಬಗೆಯ ಕೀರ ಕೆಂಪುಕೀರ (ಹ.ವಿಟಿಕಾಲಿಸ್). ಇದರ ಕುತ್ತಿಗೆಯ ಬಳಿ ಮತ್ತು ಕುತ್ತಿಗೆಯ ಹಿಂಭಾಗದಲ್ಲಿ ನೀಳವಾದ ಬಾಲವಿದೆ; ಅದು ದೇಹದ ಉದ್ದಕ್ಕಿಂತಲೂ ಕಡಿಮೆ. ಇಲಿ, ಹಾವು, ಚೇಳು, ಕೀಟಗಳೇ ಇದರ ಆಹಾರ. ಪಶ್ಚಿಮಘಟ್ಟದ ಕಾಡು ಪ್ರದೇಶಗಳಲ್ಲಿ ಈ ಕೀರ ಕಂಡುಬರುತ್ತದೆ.

ಕತ್ತೆಕಿರುಬ ಅಥವಾ ನಾಯಿಹುಲಿ ಹೈನಿಡೆ ಕುಟುಂಬದ ಪ್ರತಿನಿಧಿಯಾಗಿ ಬೆಟ್ಟಗುಡ್ಡಗಳ ಗುಹೆಗಳಲ್ಲಿ ಮತ್ತು ಎತ್ತರವಾಗಿ ಬೆಳೆಯುವ ಬಯಲು ಪ್ರದೇಶದಲ್ಲಿ ಸಾಮಾನ್ಯವಾಗಿ ದೊರಕುತ್ತದೆ. ಕಾಡುಪ್ರದೇಶಗಳಲ್ಲಿ ವಿರಳ. ಇದು ಹಗಲಿನಲ್ಲಿ ವಿಶ್ರಾಂತಿ ಪಡೆದು ರಾತ್ರಿಯ ವೇಳೆ ಬೇಟೆಗೆ ಹೊರಡುತ್ತದೆ.

ನಾಯಿಕುಟುಂಬ ಕೇನಿಡೆಗೆ ಸೇರಿದ ಪ್ರಾಣಿಗಳು ತೋಳ (ಕೇನಿಸ್ ಲೂಪುಸ್), ನರಿ ಅಥವಾ ಕುಸ್ಸಾನರಿ (ಕೇನಿಸ್ ಆರಿಯಸ್), ಸಣ್ಣನರಿ ಅಥವಾ ಕೆಂಪುನರಿ (ವುಲ್ಪೆಸ್ ಬೆಂಗಾಲೆನ್ಸಿಸ್) ಮತ್ತು ಸೀಳುನಾಯಿ ಅಥವಾ ಕಾಡುನಾಯಿ (ಕ್ಯೂಆನ್ ಆಲ್ಪೈನಸ್). ತೋಳ ಕಾಡುಗಳಲ್ಲಿ ವಾಸಿಸಿ ಕಾಡಿನ ದನಕರು, ಜಿಂಕೆಗಳನ್ನು ತಿಂದು ಜೀವಿಸುತ್ತದೆ. ನರಿ, ಕೆಂಪುನರಿಗಳು ಮಾಂಸಹಾರಿಗಳಾಗಿರುವುದೆ ಅಲ್ಲದೆ ಕಬ್ಬು, ಕಾಫಿ ಮತ್ತು ನೆಲಗಡಲೆ ಫಸಲುಗಳಿಗೆ ಉಪದ್ರವವನ್ನುಂಟುಮಾಡುತ್ತವೆ. ಸೀಳು ನಾಯಿಗಳು ಜಿಂಕೆ, ಮೊಲ ಮೊದಲಾದುವನ್ನು ಹಿಡಿದು ತಿಂದು ಜೀವಿಸುತ್ತವೆ. ಕರ್ನಾಟಕದ ಕರಡಿಗಳು (ಮೆಲರ್ಸಸ್ ಅರ್ಸಿನಸ್) ಕೂಡ ಕಾರ್ನಿವೋರ ಗಣಕ್ಕೆ ಸೇರಿದುವು. ಇವು ಮಂಡ್ಯ, ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಬೆಟ್ಟಗುಡ್ಡಗಳ ಗುಹೆಗಳಲ್ಲಿ ವಾಸಿಸುತ್ತವೆ. ಇವು ಕೀಟಗಳನ್ನೇ ಅಲ್ಲದೆ ಹಣ್ಣು ಮತ್ತು ಜೇನುಗೂಡಿನಿಂದ ಪಡೆದ ಜೇನುತುಪ್ಪವನ್ನೂ ತಿನ್ನುತ್ತವೆ. ಇವುಗಳ ಮೈ ಮೇಲೆ ನೀಳವಾದ ಕೂದಲಿವೆ.

ಮುಸ್ಟೆಲ್ಲಿಡೆ ನೀರುನಾಯಿ (ಲುಟ್ರ ಲುಟ್ರ), ಮುರ್ರನಾಯಿ (ಮಾರ್ಟೀಸ್ ಗ್ವಾಲ್ಕಿನ್ಸಿ), ಮೆಲಿವೋರ ಕ್ಯಾಪೆನ್ಸಿಸ್ ಮೊದಲಾದುವುಗಳಿವೆ. ಇವುಗಳ ಮುಖ್ಯ ಆಹಾರ ಮೀನು. ನೀರುನಾಯಿ ಕೊಡಗು ಜಿಲ್ಲೆಯ ಎತ್ತರವಾದ ಶೀತಪ್ರದೇಶದ ನೀರಿನಲ್ಲಿ ವಾಸಿಸುತ್ತದೆ. ದೇಹ ಸ್ವಲ್ಪಮಟ್ಟಿಗೆ ಕಪ್ಪು. ಇದನ್ನು ಹಿಡಿದು ಸುಲಭವಾಗಿ ಸಾಕಬಹುದು. ಇದೇ ಜಾತಿಗೆ ಸೇರಿದ ಮತ್ತೊಂದು ಬಗೆಯ ಕೆಂಚು ನೀರುನಾಯಿ ಲುಟ್ರ ಪರ್ಸಿಸಿಲ್ಲಾಟದ ದೇಹದ ಬಣ್ಣ ಕೆಂಪಾಗಿರುತ್ತದೆ. ಇದು ಕೂಡ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ದೊರಕುತ್ತದೆ. ಮುರ್ರನಾಯಿಯ ಮುಖ ಸ್ವಲ್ಪ ಕಪ್ಪು, ಕುತ್ತಿಗೆಯ ತಳಭಾಗ ಬಿಳುಪು ಮತ್ತು ಹಳದಿ. ದೇಹದ ಹಿಂಭಾಗ ಸ್ವಲ್ಪ ಕಪ್ಪು. ಕೊಡಗಿನ ಬೆಟ್ಟಗುಡ್ಡಗಳಲ್ಲಿ ವಾಸ. ಅಲ್ಲದೆ ಇದು ಮರದಮೇಲೂ ಹತ್ತಿ ಓಡಾಡಬಲ್ಲುದು. ನಖಗಳಿಲ್ಲದ ನೀರುನಾಯಿ (ಅಯೋನಿಕ್ಸ್ ಸಿನರಿಯ) ಕೊಡಗಿನ ಬೆಟ್ಟಗಳಲ್ಲಿ ಹರಿಯುವ ಸಣ್ಣಸಣ್ಣ ನದಿಗಳಲ್ಲಿ ಕಂಡುಬರುತ್ತದೆ. ತಾರಕರಡಿ (ಮೆಲಿವೋರ ಕ್ಯಾಪೆನ್ಸಿಸ್) ಒಣಮೈದಾನ ಪ್ರದೇಶಗಳಲ್ಲಿ ದೊರಕುತ್ತದೆ. ಕರಡಿಯಂತೆ ಇದರ ಕಾಲು ಮೋಟು, ದಪ್ಪ ; ಬಾಲ ಚಿಕ್ಕದು. ಪಾದಗಳು ಅಗಲ. ಪಕ್ಷಿಗಳು, ಜೇನು, ಹಣ್ಣು, ಸರೀಸೃಪಗಳು ಇದರ ಆಹಾರ. ಇದು ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುವ ಕಾಡುಪ್ರದೇಶದಲ್ಲಿ ಕಂಡುಬರುವುದಿಲ್ಲ.

ಇನ್ಸೆಕ್ಟಿವೊರ ಗಣದ ಪ್ರತಿನಿಧಿಗಳೂ ಕರ್ನಾಟಕದಲ್ಲಿವೆ. ಇವು ಕೀಟಭಕ್ಷಿಗಳು. ಇವುಗಳಲ್ಲಿ ಮರದ ಮುಳ್ಳಿಲಿ (ಅನತಾನ ಎಲೋಟಿ), ಕಂದು ಮೂಗಿಲಿ (ಪ್ಯಾರಎಕೈನಸ್ ಮೈಕ್ರೊಪಸ್) ಮತ್ತು ಸುಂಡಿಲಿಗಳು (ಸಂಕಸ್ ಮ್ಯುರಿನಸ್) ಪ್ರಸಿದ್ಧವಾದುವು. ಮರದ ಮುಳ್ಳಿಲಿ ಒಣಪ್ರದೇಶದಲ್ಲಿ ವಾಸಿಸುತ್ತದೆ. ದೇಹ 18–20 ಸೆಂಮೀ ಉದ್ದ. ಬಾಲ 20–23 ಸೆಂಮೀ. ಕಂದು ಮೂಗಿಲಿಯ ದೇಹದ ಉದ್ದ 15–18 ಸೆಂಮೀ. ಬಾಲ 2–5 ಸೆಂಮೀ. ಗೂಟದಂಥ ಮೂಗು, ಮೋಟುಬಾಲ ಇದರ ವೈಶಿಷ್ಟ್ಯ. ಇದರ ವಾಸ ಮೈದಾನ ಪ್ರದೇಶ. ಅಪರೂಪಕ್ಕೆ ಮನೆಗಳನ್ನೂ ಪ್ರವೇಶಿಸುವುದುಂಟು. ಸುಂಡಿಲಿ ಬಯಲಿನಲ್ಲಿಯೇ ಅಲ್ಲದೆ ಮನೆಗಳಲ್ಲಿಯೂ ವಾಸಿಸುತ್ತದೆ. ದೇಹ 15 ಸೆಂಮೀ, ಬಾಲ 8 ಸೆಂಮೀ ಉದ್ದ. ಮೂತಿ ನೀಳ ಮತ್ತು ಚೂಪು. ಇದು ಕೀರಲು ಧ್ವನಿ ಮಾಡುತ್ತದೆ.

ಬಾವಲಿಗಳು ಕೈರಪ್ಟರ ಗಣಕ್ಕೆ ಸೇರಿದುವು. ಬಾವಲಿಯ ಮುಂಗಾಲಿನ ಬೆರಳುಗಳು ಲಂಬವಾಗಿ ಬೆಳೆದು ಜಾಲಪಟಲದಿಂದ ಕೂಡಿರುವುದೇ ಅಲ್ಲದೆ ಈ ಪಟಲ ವಿಶಾಲವಾಗಿದೆ. ಇದು ದೇಹದ ಪಕ್ಕ ಮತ್ತು ಹಿಂಗಾಲುಗಳನ್ನು ಬಂಧಿಸಿ ಹಾರಲು ನೆರವಾಗುವುದು ಒಂದು ವೈಶಿಷ್ಟ್ಯ. ಸಾಮಾನ್ಯವಾಗಿ ಮರಗಳ ಕೊಂಬೆ, ಕೆಲವು ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಮನೆ, ದೇವಾಲಯಗಳ ತೊಲೆಗಳು ಇಲ್ಲೆಲ್ಲ ಜೋಲಾಡುತ್ತಿರುತ್ತವೆ. ಇವು ಸಾಮಾನ್ಯವಾಗಿ ಹಗಲಿನಲ್ಲಿ ಒಂದೆಡೆಯಿದ್ದು ಸಂಜೆಯಾಗುತ್ತಲೇ ತಮ್ಮ ಬೀಡಿನಿಂದ ಹೊರಬಂದು ಚಟುವಟಿಕೆಯಿಂದ ಹಾರಿ ಆಹಾರವನ್ನು ಸಂಪಾದಿಸುತ್ತವೆ. ಇವುಗಳಿಗಿರುವ ಜ್ಞಾನೇಂದ್ರಿಯ ಸೂಕ್ಷ್ಮತಮವಾದುದ್ದು. ಕನ್ನಡ ನಾಡಿನಲ್ಲಿ ತೊಗಲ ಬಾವಲಿ (ಟಿರೋಪಸ್ ಎಡ್ವರ್ಸಿ), ಅಗಲಗಿವಿಯ ಬಾವಲಿ (ರೈನೊಲೋಫಸ್), ಹಣ್ಣು ಬಾವಲಿ ಮೊದಲಾದುವು ಇವೆ. ಇವು ಹಣ್ಣುಗಳನ್ನು ತಿನ್ನುವುದರಿಂದ ಬಾಳೆ, ಸೀಬೆ ಮೊದಲಾದ ತೋಟಗಳಿಗೆ ಇವುಗಳ ಉಪದ್ರವ ಹೆಚ್ಚು.

ಅಳಿಲುಗಳ ಗುಂಪಿನ ರೊಡೆಂಶಿಯದ ಪ್ರತಿನಿಧಿಗಳೆಲ್ಲವೂ ಮಾನವನ ದವಸ ಧಾನ್ಯ, ಹಣ್ಣು ಹಂಪಲು ಮೊದಲಾದುವನ್ನು ತಿಂದು ನಾಶಪಡಿಸತಕ್ಕವು. ಸಾಮಾನ್ಯವಾಗಿ ಕಂಡುಬರುವ ಅಳಿಲಿಗೆ ಬೆನ್ನಿನ ಮೇಲೆ ಮೂರು ನೀಳವಾದ ಬಿಳಿಯ ಪಟ್ಟೆಗಳಿವೆ. ಈ ಅಳಿಲು (ಫ್ಯುನಾಂಬ್ಯುಲಸ್ ಪಾಮೇರಮ್) ಸಾಗುವಳಿ ಪ್ರದೇಶಗಳಲ್ಲಿಯೇ ಅಲ್ಲದೆ ಇತರ ಬಯಲಿನಲ್ಲೂ ಕಾಡಿನ ಸರಹದ್ದಿನಲ್ಲೂ ಮಾನವನ ವಸತಿಯ ಸನಿಹದಲ್ಲೂ ಕಂಡುಬರುತ್ತದೆ. ಇದರ ಸೋದರ ಅಳಿಲುಗಳು ಉದಾಹರಣೆಗೆ ಪಟ್ಟೆ ಅಳಿಲು (ಫ್ಯು. ರಫ್ಥೋನಿ) ಕೊಡಗು ಜಿಲ್ಲೆ ಮತ್ತು ಹಾಸನ ಜಿಲ್ಲೆಗಳಲ್ಲಿ ಕಂಡುಬಂದರೆ ಕಾಡು ಅಳಿಲು (ಫ್ಯು. ನ್ಯೂಮೇರಿಯಸ್) ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯ ಕಾಡುಗಳಲ್ಲಿ ಉಂಟು. ಬೂದು ಅಳಿಲು (ಸೈಯೂರಸ್ ಇಂಡಿಕಸ್) ಎಂಬ ದೊಡ್ಡ ಅಳಿಲು ಪಶ್ಚಿಮ ಘಟ್ಟಗಳ ದಟ್ಟಡವಿಗಳಲ್ಲಿ ವಾಸಿಸುತ್ತದೆ. ಬಯಲಿನ ಇಲಿ ಅಥವಾ ಕೋಕ (ನಿಕೋಸಿಯ ಬೆಂಗಾಲೆನ್ಸಿಸ್) ಎಂಬ ಇಲಿ ಬಯಲಿನಲ್ಲಿ ಬಿಲ ತೋಡಿ ಅದರಲ್ಲಿ ವಾಸಿಸುತ್ತದೆ. ಸಾಗುವಳಿ ಪ್ರದೇಶದಲ್ಲಿ ಇದರ ಹಾವಳಿ ಹೆಚ್ಚು. ಹೆಗ್ಗಣ (ಸೆಸೋಸಿಯ ಬ್ಯಾಂಡಿಕೋಟ) ಬಿಲಗಳಲ್ಲಿ ವಾಸಿಸಿ ಕಣಜಗಳಿಗೆ ದಾಳಿ ಇಡುತ್ತದೆ. ಮನೆಯಿಲಿ (ಮಸ್ ಡೆಕುಮಾನಸ್), ಮನೆ ಬುರ್ಗಿಲಿ (ಮಸ್ ಮಸ್ಕುಲಸ್) ಮತ್ತು ಕರಿಯಿಲಿ (ಮಸ್ ರ್‍ಯಾಟ್ಟಸ್) ಮಾನವನ ವಸತಿಗೃಹಗಳಲ್ಲಿಯೇ ಕಂಡುಬರುತ್ತವೆ. ಧಾನ್ಯದವಸಗಳಿಗೆ ಇವುಗಳ ಹಾವಳಿ ಹೆಚ್ಚು. ಬೂದಿಬಣ್ಣದ ಕೌಲಿಲಿ (ಮಸ್ ಪ್ಲಾಟಿತ್ರಿಕ್ಸ್), ಕೆರೆಯಿಲಿ (ಮಸ್ ಮೆಟ್ಟಾಡ) ಸಹ ಉಂಟು. ಇವುಗಳಿಂದಲೂ ಸಾಗುವಳಿಗೆ ತೊಂದರೆ ಇದೆ. ಮರದ ಇಲಿಗೆ (ಮಸ್ ಓಲೆರೇಸಿಯಸ್) ಉದ್ದವಾದ ಬಾಲವಿದೆ. ಮುಳ್ಳುಹಂದಿ (ಹಿಸ್ಟ್ರಿಕ್ಸ್ ಲ್ಯೂಕೂರ) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇದೆ. ಇದು ಕಾಫಿ ಮತ್ತು ಕಬ್ಬಿನ ತೋಟಗಳಿಗೆ ನುಗ್ಗಿ ಹಾವಳಿ ಮಾಡುವುದುಂಟು. ಕರ್ನಾಟಕದ ಕಾಡುಗಳಲ್ಲಿ ಎರಡು ಬಗೆಯ ಮೊಲಗಳು ಮುಖ್ಯವಾದುವು. ಒಂದು, ಮೊಲ (ಲೀಪಸ್ ರುಫಿಕಾಡೇಟಸ್), ಇನ್ನೊಂದು ಕರಿ ಕಂಠದ ಮೊಲ (ಲೀ. ನೈಗ್ರಿಕಾಲಿಸ್).

ಕರ್ನಾಟಕದ ಪಶ್ಚಿಮಘಟ್ಟದ ಕಾಡುಗಳಲ್ಲಿ ಸ್ವೇಚ್ಛೆಯಾಗಿ ಜೀವಿಸುವ ಅತ್ಯಂತ ದೊಡ್ಡ ಪ್ರಾಣಿ ಆನೆ (ಎಲಿಫಾಸ್ ಮಾಕ್ಸಿಮಸ್). ಇದು ಅಂಗ್ಯುಲೇಟ ಗಣದಲ್ಲಿರುವ ಪ್ರೋಬಾಸಿಡೆ ಎಂಬ ಉಪಗಣಕ್ಕೆ ಸೇರಿದ್ದು. ಇದರ ಬೀಡು ಸಾಮಾನ್ಯವಾಗಿ ಶಿವಮೊಗ್ಗ ಜಿಲ್ಲೆಯಿಂದ ಹಿಡಿದು ಮೈಸೂರು ಜಿಲ್ಲೆಯವರೆಗೂ ಇದೆ.

ಮೆಲುಕುಹಾಕುವ ಎರಡು ಗೊರಸುಗಳುಳ್ಳ ಹಸು, ಕುರಿ, ಮೇಕೆ, ಜಿಂಕೆ ಮೊದಲಾದ ಪ್ರಾಣಿಗಳು ಅಂಗ್ಯುಲೇಟ ಗಣ ಆರ್ಟಿಯೊಡ್ಯಾಕ್ಟೈಲ ಉಪಗಣಕ್ಕೆ ಸೇರಿವೆ. ದನಕರುಗಳನ್ನು (ಬಾಸ್ ಇಂಡಿಕಸ್) ಪುರಾತನ ಕಾಲದಿಂದಲೂ ಪಳಗಿಸಿ ಬೇಸಾಯಕ್ಕೆ

ಉಪಯೋಗಿಸುವುದೇ ಅಲ್ಲದೆ ಹಾಲುಮೊಸರುಗಳಿಗಾಗಿಯೂ ಸಾಕುತ್ತಾರೆ. ಕುರಿ (ಓವಿಸ್) ಮತ್ತು ಆಡುಗಳನ್ನು ಮುಖ್ಯವಾಗಿ ಮಾಂಸಕ್ಕಾಗಿ ಸಾಕುತ್ತಾರೆ. ಬೈಬಾಸ್ ಗೌರುಸ್ ಎಂಬ ವೈಜ್ಞಾನಿಕ ಹೆಸರು ಇರುವ ಕಾಡೆಮ್ಮೆ ಪಶ್ಚಿಮಘಟ್ಟದ ಕಾಡುಗಳಲ್ಲಿ ಮಂದೆಗೂಡಿ ವಾಸಿಸುತ್ತವೆ. ಕಾಡಿನಲ್ಲಿ ಸ್ವೇಚ್ಛೆಯಾಗಿ ಜೀವಿಸುವ ಕಾಡೆಮ್ಮೆಗಳು ಸ್ವಭಾವತಃ ದರ್ಪ ಗಾಂಭೀರ್ಯಗಳಿಂದ ಕೂಡಿದುವು. ಸುಮಾರು 65–70 ಸೆಂಮೀ ಎತ್ತರ 78–90 ಸೆಂಮೀ ಉದ್ದ ಬೆಳೆಯುತ್ತದೆ. ಇದರೊಡನೆ ಒಳನಾಡಿನ ಸಾಕು ಎಮ್ಮೆಗಳು ಗಬ್ಬವಾಗಿರುವುದು ತಿಳಿದುಬಂದಿದೆ. ಕೊಳ್ಳೆಗಾಲದ ಕಾಡುಗಳಲ್ಲಿ ಕಾಡು ಆಡು ಅಥವಾ ಬುರ್ರೆ ಆಡುಗಳು (ಹೆಮಿತ್ರಗೇಸ್ ಹೈಲೋಕ್ರಸ್) 1,200 ಮೀ ಎತ್ತರ ಪ್ರದೇಶಗಳಲ್ಲಿ ವಾಸಿಸುತ್ತವೆ.

ಚಿಗರೆ, ಹುಲ್ಲೆಕರ, ಜಿಂಕೆ, ಸಾರಂಗ, ಮೊದಲಾದ ಪ್ರಾಣಿಗಳು ಸರ್ವಿಡೆ ಕುಟುಂಬಕ್ಕೆ ಸೇರಿದುವು. ಈ ಕುಟುಂಬದ ಜೀವಿಗಳ ಕೊಂಬು ಟೊಳ್ಳಾಗಿರದೆ ಗಟ್ಟಿಯಾಗಿರುತ್ತದೆ. ಕೊಂಡ ಕುರಿಗಳು (ಟ್ರ್ಯಾಸೆರಸ್ ಕ್ವಾರ್ಡಿಕಾರ್ನಿಸ್) ಕನ್ನಡನಾಡಿನ ದಕ್ಷಿಣ ತೀರದ ಪಶ್ಚಿಮಘಟ್ಟಗಳಲ್ಲಿ ವಾಸಿಸುತ್ತವೆ. ಹೆಣ್ಣುಜೀವಿಗಳಿಗೆ ಕೊಂಬುಗಳಿರುವುದಿಲ್ಲ. ಆದರೆ ಗಂಡುಗಳಿಗೆ ಎರಡು ಜೊತೆ ಕೊಂಬುಗಳಿವೆ. ಮುಂದಿನ ಜೊತೆಯ ಕೊಂಬುಗಳು ಹಿಂದಿನ ಜೊತೆಗಿಂತ ಚಿಕ್ಕವು. ಭಾರತದ ಚಿಗರಿಗಳು (ಗಝೆಲ್ ಬೆನೆಟಿ) ಉತ್ತರ ಕರ್ನಾಟಕದ ಬಯಲು ಸೀಮೆಯ ಒಣಪ್ರದೇಶದ ಕುರುಚಲು ಕಾಡುಗಳಲ್ಲಿ ವಾಸಿಸುತ್ತವೆ. ಇವು ಆಡುಗಾತ್ರದ ಸುಂದರ ಪ್ರಾಣಿಗಳು. ಇವುಗಳ ಕುತ್ತಿಗೆ ನೀಳ ಮತ್ತು ಸಣ್ಣ ; ಕಣ್ಣುಗಳು ದೊಡ್ಡವು ಮತ್ತು ಸುಂದರವಾದುವು ; ಮೈಗೂದಲು ನಯ ಮತ್ತು ಬಾಲ ಮೋಟು. ಹೆಣ್ಣುಗಳಿಗೆ ಸಾಮಾನ್ಯವಾಗಿ ಕೊಂಬುಗಳು ಲೋಪ. ಆದರೆ ಕೆಲವಕ್ಕೆ ನೀಳವಾದ ಅರ್ಧ ಚಂದ್ರಾಕಾರವಾಗಿ ಬೆನ್ನಿನ ಭಾಗಕ್ಕೆ ಬಾಗಿದ ಕೊಂಬುಗಳ ಮೇಲೆ ಬುಡದಿಂದ ತುದಿಯವರೆಗೂ ವೃತ್ತಾಕಾರದ ದಿಬ್ಬಗಳಿರುತ್ತವೆ. ಹುಲ್ಲೆಕರುಗಳು (ಆಂಟಿಲೋಪ್ ಸರ್ವಿಕಾಪ್ರ) ಕನ್ನಡ ನಾಡಿನ ಕಾಡಿನಲ್ಲಿ ಕಂಡು ಬರುತ್ತವೆ. ಇವಕ್ಕೆ 35 ಸೆಂಮೀ ಎತ್ತರ ಬೆಳೆಯುವ ಕೊಂಬುಗಳಿವೆ. ಹಲವಾರು ಸುತ್ತುವರಿದ ದಿಬ್ಬಗಳಿಂದ ಕೂಡಿದ ಕೊಂಬುಗಳು ನೆಟ್ಟಗಿರದೆ ಸ್ವಲ್ಪ ಸ್ವಲ್ಪ ವಂಕಿ ವಂಕಿಯಾಗಿರುತ್ತವೆ. ಕೊಂಬುಗಳು ಗಂಡು ಹೆಣ್ಣುಗಳೆರಡರಲ್ಲೂ ಕಂಡುಬರುತ್ತವೆ. ಸಾಂಬಾರ್ ಅಥವಾ ಕಡವೆಗಳು (ಸರ್ವಸ್ ಯಾನಿಕಲರ್) ಜಿಂಕೆಯ ಜಾತಿಗಳಲ್ಲೆಲ್ಲ ದೊಡ್ಡವು. ಸುಮಾರು 65–70 ಸೆಂಮೀ ಎತ್ತರ. ಮೈಗೂದಲು ಒರಟು. ಇದಕ್ಕೆ ಕುತ್ತಿಗೆಯ ಬಳಿ ನೀಳವಾದ ಕೂದಲಿದೆ. ಇವು ಕಾಡಿನ ಪ್ರಾಣಿಗಳು. ಸಾರಂಗ ಅಥವಾ ಚಿತ್ರಾಂಗ ಜಿಂಕೆಗಳು (ಆಕ್ಸಿಸ್ ಆಕ್ಸಿಸ್) ಕನ್ನಡ ನಾಡಿನ ಪಶ್ಚಿಮಘಟ್ಟದ ಕಾಡುಗಳಲ್ಲಿ ಮಂದೆಮಂದೆಯಾಗಿ ವಾಸಿಸುತ್ತದೆ. ಈ ಬಗೆಯ ಜಿಂಕೆಗಳು ಇತರ ಜಿಂಕೆಗಳಿಗಿಂತ ಚಿಕ್ಕವು. ಬೊಗಳುವ ಜಿಂಕೆಗಳೂ (ಮಂಟೈಯಕಸ್ ಮಂಟ್ಜಾಕ್) ನಮ್ಮ ನಾಡಿನ ಕಾಡುಗಳಲ್ಲಿ ದೊರಕುತ್ತವೆ. ಇವು ನಾಯಿ ಬೊಗಳಿದಂತೆಯೇ ಶಬ್ದ ಮಾಡುತ್ತವೆ. ಒಂದು ಕವಲಿಂದ ಕೂಡಿದ ಕೊಂಬು ಮೋಟು. ಬಾಲವೂ ಮೋಟು.

ಕರ್ನಾಟಕದ ಕಾಡುಹಂದಿ (ಸಸ್ ಕ್ರಿಸ್ಟೇಟಸ್) ಕಾಡುಗಳಲ್ಲಿ ಒಂಟೊಂಟಿಯಾಗಿ ಜೀವಿಸುತ್ತದೆ. ಇದರ ಮೇಲುದವಡೆಯ ಮೇಲೆ ಕೋರೆ ಹಲ್ಲುಗಳು ಕಮಾನಿನಂತೆ ಮೇಲ್ಮುಖನಾಗಿ ಬಾಗಿ ಬಾಯಿಯಿಂದ ಹೊರಚಾಚಿರುತ್ತವೆ. ಅಲ್ಲದೆ ಇವುಗಳ ಕೋರೆಹಲ್ಲುಗಳು ಚಿರಕಾಲ ಬೆಳೆಯತಕ್ಕವು. ಕೋರೆಹಲ್ಲುಗಳ ಸಹಾಯದಿಂದ ಗೆಡ್ಡೆಗೆಣಸುಗಳನ್ನು ಅಗೆದು ತಿನ್ನುತ್ತವೆ. ಇವುಗಳಿಗೆ ನಾಲ್ಕು ಬೆರಳುಗಳಿದ್ದರೂ ನಡೆಯುವಾಗ ಎರಡು ಮಾತ್ರ ಭೂಮಿಯನ್ನು ಮುಟ್ಟುತ್ತವೆ.

ಬರ್ಕ ಅಥವಾ ಕೂರಂದಿ (ಟ್ರ್ಯಾಗ್ಯುಲಸ್ ಮೆಮಿನ್ನ) ಕನ್ನಡನಾಡಿನ ಪಶ್ಚಿಮಘಟ್ಟದ ಕಾಡುಗಳಲ್ಲಿ ಇದೆ. ಇದರ ಎತ್ತರ ಸುಮಾರು 13 ಸೆಂಮೀ. ಜಿಂಕೆಯಂಥ ಈ ಪ್ರಾಣಿಗಳ ದೇಹದ ರಚನೆ ಜಿಂಕೆ ಮತ್ತು ಹಂದಿಗಳ ರಚನೆಯ ಮಧ್ಯವರ್ತಿಯಾಗಿದೆ.

ಫಾಲಿಡೋಟ ವರ್ಗದ ಪ್ರತಿನಿಧಿಯಾಗಿ ಕರ್ನಾಟಕದಲ್ಲಿ ಚಿಪ್ಪು ಹಂದಿ (ಮೇನಿಸ್ ಕ್ರಾಸಿಕಾಡೇಟ) ದೊರಕುತ್ತದೆ. ಇದಕ್ಕೆ ಮೈಮೇಲೆಲ್ಲ ಹಂಚಿನಂತೆ ಅಳವಡಿಸಿರುವ ಅಗಲವಾದ ಹುರುಪೆಗಳಿವೆ. ಕಾಲುಗಳು ಮೋಟು. ಐದು ಬೆರಳುಗಳಿವೆ. ಮೂತಿ ಉದ್ದ ಮತ್ತು ಚೂಪು. ಮುಂಗಾಲಿನ ಬೆರಳುಗಳಿಗೆ ಬಲವಾದ ನಖಗಳಿವೆ. ಹಲ್ಲು ಲೋಪ. ಇರುವೆ, ಗೆದ್ದಲು ಮೊದಲಾದ ಕೀಟಗಳೇ ಇದರ ಆಹಾರ. ನಿಶಾಚರಿಯಾದ ಈ ಪ್ರಾಣಿ ಬಿಲತೋಡಿ ಜೀವಿಸುತ್ತದೆ. ಅಪಾಯ ಸನ್ನಿಹಿತವಾದರೆ ದೇಹವನ್ನು ಚೆಂಡಿನಂತೆ ಮುದುರಿಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುತ್ತದೆ.

ಕರ್ನಾಟಕದ ಪಕ್ಷಿಗಳೆಲ್ಲವೂ ಹಾರುವ ಗುಂಪಿಗೆ ಸೇರಿದುವು. ಇಲ್ಲಿಯೇ ವಾಸಿಸುವ ಪಕ್ಷಿಗಳಿದ್ದರೂ ಇತರ ನೆರೆಹೊರೆಯ ರಾಜ್ಯಗಳಿಗೆ ವಲಸೆ ಹೋಗುವ ಪಕ್ಷಿಗಳೂ ಇವೆ. ಅಲ್ಲದೆ ಹೊರದೇಶದಿಂದ (ಆಫ್ಘಾನಿಸ್ತಾನ, ಸೈಬೀರಿಯ ಇತ್ಯಾದಿ) ಬರುವ ಪಕ್ಷಿಗಳಿವೆ. ಭಾರತದ ರಾಷ್ಟ್ರಪಕ್ಷಿಯೆಂದು ಪರಿಗಣಿಸಲಾಗಿರುವ ನವಿಲು (ಪೆವೊ ಕ್ರಿಸ್ಟೇಟಸ್) ಗಾಲಿಫೇಸ್ ಕುಟುಂಬದ ಪ್ರತಿನಿಧಿ. ಇದು ಕರ್ನಾಟಕದ ಕಾಡುಗಳಲ್ಲಿ ಸಾಮಾನ್ಯವಾಗಿ ನೀರಿರುವ ಕಡೆಗಳಲ್ಲಿ ಕಂಡುಬರುತ್ತದೆ. ಹೆಣ್ಣಿಗಿಂತಲೂ ಗಂಡು ಆಕರ್ಷಕವಾದ ಜೀವಿ. ಗಂಡು ತನ್ನ ಬಾಲದ ಮೋಹಕ ಹಾಗೂ ನೀಳವಾದ ರೆಕ್ಕೆಗಳನ್ನು ನೆಟ್ಟಗೆಮಾಡಿ ನರ್ತನ ಮಾಡುವುದು ಒಂದು ವೈಶಿಷ್ಟ್ಯ. ನವಿಲಿಗೆ ಹೆಚ್ಚು ಹಾರಲು ಆಗದಿದ್ದರೂ ಮರದಿಂದ ಮರಕ್ಕೆ ಹಾರಬಲ್ಲುದು. ಕೆಲವು ಹಳ್ಳಿಗಳಲ್ಲಿ ಇದನ್ನು ಪಳಗಿಸಿ ಸಾಕುವುದೂ ಉಂಟು.

ಸಾಕು ಕೋಳಿಗಳಿಗೆ ಪೂರ್ವಜರೆನ್ನಿಸಿಕೊಂಡಿರುವ ಭಾರತದ ಕಾಡು ಕೋಳಿ (ಗ್ಯಾಲಸ್ ಗ್ಯಾಲಸ್) ಕರ್ನಾಟಕದ ಕಾಡುಗಳಲ್ಲಿಯೂ ದೊರಕುತ್ತದೆ. ಇದರ ವಾಸ ಸಾಮಾನ್ಯವಾಗಿ ಕುರುಚಲು ಗಿಡಗಳು ಮತ್ತು ಬಿದಿರು ಮೆಳೆಗಳಲ್ಲಿ. ಇದೇ ಗುಂಪಿಗೆ ಸೇರಿದ ಕೆಂಗುಚ್ಚದ ಕೋಳಿ (ಗ್ಯಾಲೋಪೆರ್ಡಿಕ್ಸ್ ಸ್ಪೆಂಡಿಸೆನ್ಸ್) ಮತ್ತು ಕಂದು ಕಾಡುಕೋಳಿ (ಗ್ಯಾಲಸ್ ಸೊನೆರಾಟಿ) ಕಾಡುಗಳಲ್ಲಿ ಕಂಡುಬರುತ್ತದೆ. ಇದರ ವಾಸ ಸಾಮಾನ್ಯವಾಗಿ ಕಾಡಿನ ಪೊದರು. ಸಾಗುವಳಿ ಪ್ರದೇಶಕ್ಕೆ ಲಾವಕ್ಕಿಗಳು ಚಳಿಗಾಲದಲ್ಲಿ ಭೇಟಿ ಕೊಡುತ್ತವೆ. ಈ ಗುಂಪಿನಲ್ಲಿ ಹಲವು ಬಗೆಯ ಲಾವಕ್ಕಿಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಕಪ್ಪೆದೆಯ ಲಾವಕ್ಕಿ ಸಾಮಾನ್ಯವಾಗಿ ಹುಲುಸಾದ ಹುಲ್ಲುಗಾವಲುಗಳಲ್ಲಿ ಹಾಗೂ ಸಾಗುವಳಿ ಪ್ರದೇಶದ ಸನಿಹದಲ್ಲಿ ಕಂಡುಬರುತ್ತದೆ. ಪೊದರು ಲಾವಕ್ಕಿಗಳು ತೆರೆದ ಕಾಡುಪ್ರದೇಶಗಳಲ್ಲಿ ಮಂದೆಗೂಡಿ ಜೀವಿಸುತ್ತವೆ. ಬಿಳಿ ಎದೆಯ ನೀರಕ್ಕಿ (ಆಮೋರಾರ್ನಿಸ್ ಫೋನಿಕ್ಯೂರಸ್) ಕೆರೆ ಕಾಲುವೆಗಳ ದಂಡೆಗಳಲ್ಲಿ ದಟ್ಟವಾಗಿ ಬೆಳೆವ ಜೊಂಡುಗಳ ನಡುವೆ ವಾಸಿಸುತ್ತದೆ.

ಪಾರಿವಾಳ ಮತ್ತು ಕಪೋತಗಳು ತೆಳು ಹಾಗೂ ಹೆಚ್ಚು ಬಲಯುತವಲ್ಲದ ಕೊಕ್ಕುಗಳನ್ನುಳ್ಳವು. ಕಾಳುಕಡ್ಡಿ, ಹಣ್ಣುಗಳೇ ಇವುಗಳ ಆಹಾರ. ಇದು ಕೊಲಂಬಿಫಾರ್ಮಿಸ್ ಗಣಕ್ಕೆ ಸೇರಿದುವು. ಪಾರಿವಾಳ (ಕೊಲಂಬ ಲೀವಿಯ) ಸಾಮಾನ್ಯವಾಗಿ ಮನೆ, ಮಠ ಮತ್ತು ಮರಗಳ ಮೇಲೆ ವಾಸಿಸುತ್ತದೆ. ಇದನ್ನು ಕೆಲವರು ಮನೆಗಳಲ್ಲಿ ಸಾಕುವುದೂ ಉಂಟು. ದಪ್ಪಕೊಕ್ಕು, ದೊಡ್ಡ ದೇಹದ ಹಸಿರು ಪಾರಿವಾಳ (ಕ್ರೋಕೋಪಸ್ ಫೀನಿಕಾಪ್ಟರಿಕ್ಸ್) ಕಾಡುಗಳ ಮರಗಳ ಮೇಲೆಯೇ ವಾಸಿಸುತ್ತದೆ. ಇವುಗಳ ಕಾಲುಗಳು ಭೂಮಿಯ ಮೇಲೆ ಓಡಾಡಲು ಪರಿಪೂರ್ಣತೆ ಪಡೆದಿಲ್ಲ. ಬಿಳಿಯ ಚುಕ್ಕೆಗಳಿಂದ ಕೂಡಿದ ಬೂದುಬಣ್ಣದ ಕಪೋತಗಳು ಸಾಮಾನ್ಯವಾಗಿ ಬಯಲು ಪ್ರದೇಶದ ವಾಸಿಗಳು. ಇವು ಸಾಮಾನ್ಯವಾಗಿ ಸಾಗುವಳಿ ಪ್ರದೇಶಗಳಲ್ಲಿ ಆಗಾಗ್ಗೆ ಒಂಟೊಂಟಿಯಾಗಿ ಅಥವಾ ಗುಂಪು ಗುಂಪಾಗಿ ಕಂಡು ಬರುವುದೂ ಉಂಟು.

ಮುಂಜಾನೆ ಕಾಕಾ ಎಂದು ಕೂಗಿ ಬೆಳಗಾಗುವುದನ್ನು ಸೂಚಿಸುವ ಕಾಗೆಗಳು ಕರ್ನಾಟಕದಲ್ಲೂ ಇವೆ. ಊರುಕಾಗೆ (ಕಾರ್ವಸ್ ಸ್ಪೆಂಡೆನ್ಸ್) ಮತ್ತು ಕಾಡುಕಾಗೆ (ಕಾ. ಮ್ಯಾಕ್ರೊರಿಂಕಸ್) ಎಂಬ ಎರಡು ಬಗೆಗಳ ಕಾಗೆಗಳಿವೆ. ಕಾಡುಕಾಗೆಗಳು ಸಾಮಾನ್ಯವಾಗಿ ಕಾಡು ಮರಗಳ ಮೇಲೆ ಕಂಡುಬಂದರೂ ಆಗಾಗ್ಗೆ ಕಾಡುಗಳ ಸಮೀಪದಲ್ಲಿರುವ ಹಳ್ಳಿ ಊರುಗಳಲ್ಲೂ ಕಂಡುಬರುತ್ತವೆ. ಎರಡು ಬಗೆಯ ಕಾಗೆಗಳ ದೇಹಗಳೂ ಕಪ್ಪು. ಆದರೆ ಊರುಕಾಗೆಯ ಕಂಠ ಬೂದುಬಣ್ಣದ್ದಾಗಿದ್ದರೆ ಕಾಡುಕಾಗೆಗೆ ಅದು ಸಹ ಕಪ್ಪಾಗಿರುತ್ತದೆ.

ಕವಿಗಳ ಗಮನವನ್ನು ಅನಾದಿ ಕಾಲದಿಂದಲೂ ಸೆಳೆದಿರುವ ಭಾರತದ ಕೋಗಿಲೆಗಳು (ಯುಡೈನಮಿಸ್ ಸ್ಕೋಲೋಪೇಸೆಯಸ್) ಕರ್ನಾಟಕದ ಕಾಡು, ತೋಟಗಳಲ್ಲಿಯೂ ಇವೆ. ಗಂಡು ಅಚ್ಚಕಪ್ಪು, ಹೆಣ್ಣುಪಕ್ಷಿ ಸ್ವಲ್ಪಮಟ್ಟಿಗೆ ಕಂದು ಬಣ್ಣ. ರೆಕ್ಕೆ, ಎದೆ, ಹೊಟ್ಟೆಯ ಭಾಗಗಳಲ್ಲಿ ಬಿಳಿಯ ಚುಕ್ಕೆಗಳಿವೆ. ಇವು ಸಾಮಾನ್ಯವಾಗಿ ಕಾಗೆಗಳ ಗೂಡುಗಳಲ್ಲಿ ಮೊಟ್ಟೆಗಳನ್ನಿಟ್ಟು ಕಾಗೆಗಳ ಸಹಾಯದಿಂದ ತಮ್ಮ ಮೊಟ್ಟೆಗಳಿಗೆ ಕಾವು ಕೊಡಿಸುತ್ತವೆ. ಅಲ್ಲದೆ ಒಮ್ಮೊಮ್ಮೆ ಆ ಗೂಡಿನಲ್ಲಿ ಕಾಗೆಗಳ ಮೊಟ್ಟೆಗಳಿದ್ದರೆ ಅವನ್ನು ನಾಶಪಡಿಸುವುದೂ ಉಂಟು. ಸಾಕುತಾಯಿ ಕಾಗೆ ಆ ಮೊಟ್ಟೆಗಳನ್ನು ತನ್ನ ಮೊಟ್ಟೆಗಳೇ ಎಂದು ಭ್ರಮಿಸಿ ಕಾವುಕೊಟ್ಟು ಮರಿಗಳು ಮೊಟ್ಟೆಯಿಂದ ಹೊರಬಂದಮೇಲೆ ಗುಟುಕುಕೊಟ್ಟು ಸಾಕುತ್ತದೆ. ದೊಡ್ಡದಾಗಿ ಬೆಳೆದ ಮರಿಗಳು ಕೋಗಿಲೆಯ ಮರಿಗಳೆಂದು ತಿಳಿದಮೇಲೆ ಅದು ಅವನ್ನು ಓಡಿಸಿಬಿಡುತ್ತದೆ. ಈ ಕೋಗಿಲೆಗಳಿಗೆ ಸಂಬಂಧಿಸಿದಂತೆ ನಾಲ್ಕೈದು ಬಗೆಯ ಕೋಗಿಲೆ ಜೀವಪ್ರಭೇದಗಳು ಇಲ್ಲಿಯ ಕಾಡಿನಲ್ಲೂ ಇವೆ.

ಕರ್ನಾಟಕದ ಕಾಡು, ತೋಪು, ತೋಟಗಳಲ್ಲಿ ಹಲವು ಬಗೆಯ ಗಿಳಿಗಳು ಇವೆ. ಇವೆಲ್ಲ ಸಿಟ್ಟಾಸಿಫಾರ್ಮಿಸ್ ಗಣಕ್ಕೆ ಸೇರಿದುವು. ಸಾಮಾನ್ಯವಾಗಿ ಕಾಣಬರುವ ಹಸಿರು ಗಿಳಿ (ಸಿಟ್ಟಾಕುಲ ಕ್ರಾಮೇರಿ) ನಾಡಿನಾದ್ಯಂತ ಉಂಟು. ಸಿ. ಯೂಪಾತ್ರ ಜಾತಿಯ ದೊಡ್ಡ ಗಿಳಿ ಕಾಡುಗಳಿಗೆ ಸೀಮಿತವಾಗಿದೆ. ಇದು ಗೂಡು ಕಟ್ಟಲಾರದು. ಮರದ ಪೊಟರೆಗಳಲ್ಲಿ ಒಂದೆರಡು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತದೆ.

ಗೂಬೆಗಳು ನಿಶಾಚರ ಪಕ್ಷಿಗಳು. ಇವು ಸ್ಟ್ರಿಂಜೀಫಾರ್ಮಿಸ್ ಗಣಕ್ಕೆ ಸೇರಿದುವು. ರಾತ್ರಿ ವೇಳೆಯಲ್ಲಿ ಪುಟ್ಟ ಅಳಿಲು, ಇಲಿ ಮುಂತಾದುವನ್ನು ಹಿಡಿದು ಜೀವಿಸುತ್ತವೆ. ಇವುಗಳ ತಲೆ ದೊಡ್ಡದು. ಕಣ್ಣುಗಳು ಸಹ ದೊಡ್ಡವಾಗಿದ್ದು ಮುಮ್ಮುಖವಾಗಿ ಅಳವಡಿಕೆಗೊಂಡಿರುತ್ತವೆ. ಕೊಕ್ಕು ಚಿಕ್ಕದು. ಕೊಕ್ಕೆಯಂತೆ ಬಾಗಿದೆ. ಪಾಳುಮನೆ, ಸಮಾಧಿ,

ಮಂಟಪಗಳೇ ಇವುಗಳ ವಾಸ. ಮರದ ಕೊಂಬೆಗಳ ಮೇಲೆ ಕೂರುವ ಸೌಕರ್ಯವಿದೆ. ಅಥೇನಿ ಬ್ರಾಮ (ಚುಕ್ಕಿ ಗೂಬೆ) ಮತ್ತು ಸ್ಟ್ರಿಕ್ಸ್ ಆಸೆಲೇಟಂ (ಮರದ ಮಚ್ಚೆಗೂಬೆ) ಅಲ್ಲದೆ ಇತರ ಗೂಬೆಯ ಭೇದಗಳೂ ಕರ್ನಾಟಕದಲ್ಲಿವೆ.

ಮಾಂಸಭಕ್ಷಿಗಳಾದ ಗರುಡ, ಡೇಗೆ, ಗಿಡುಗ, ಹದ್ದು, ರಣಹದ್ದುಗಳು ಫಾಲ್ಕನಿಫಾರ್ಮಿಸ್ ಅಥವಾ ಅಕ್ಸಿಪಿಟ್ರೆಸ್ ಗಣಕ್ಕೆ ಸೇರಿದುವು. ಇವುಗಳ ಕೊಕ್ಕು ಚಿಕ್ಕವು, ಹರಿತವಾದುವು, ಬಲಯುತವಾದುವು. ಕಾಲುಬೆರಳುಗಳಲ್ಲಿರುವ ನಖಗಳೂ ಬಲಯುತವಾದುವು. ತಮ್ಮ ಆಹಾರ ಜೀವಿಯನ್ನು ಹಿಡಿದುಕೊಳ್ಳುವುದರಲ್ಲಿ ಮತ್ತು ಹರಿದು ಚಿಂದಿ ಮಾಡುವುದರಲ್ಲಿ ನೆರವಾಗತಕ್ಕವು. ಇವುಗಳ ಆಹಾರ ಇತರ ಸಣ್ಣಸಣ್ಣ ಪಕ್ಷಿಗಳು ಅಥವಾ ಸ್ತನಿಗಳು. ರಣಹದ್ದುಗಳ ಕುತ್ತಿಗೆ ಮತ್ತು ತಲೆ ಬೋಳಾಗಿವೆ. ಇವು ಸಾಮಾನ್ಯವಾಗಿ ಸತ್ತಪ್ರಾಣಿಗಳ ಮಾಂಸವನ್ನು ಭಕ್ಷಿಸುತ್ತವೆ. ಇವು ದೊಡ್ಡ ದೊಡ್ಡ ಮರಗಳ ಮೇಲೆ, ಬೆಟ್ಟಗಳ ಶಿಖರಗಳ ಮೇಲೆ ವಾಸಿಸುವುದು ಸಾಮಾನ್ಯ. ಗರುಡಪಕ್ಷಿ ಕನ್ನಡ ನಾಡಿನಾದ್ಯಂತ ಉಂಟು.

ಆನ್ಸೆರಿಫಾರ್ಮಿಸ್ ಗಣಕ್ಕೆ ಸೇರಿದ ಬಾತು ಕೋಳಿಗಳು ಕರ್ನಾಟಕದ ಜಲಾಶಯಗಳಲ್ಲಿ ಇವೆ. ಇವುಗಳ ಕೊಕ್ಕು ಅಗಲವಾಗಿರುವುದರಿಂದ ಇವು ಮೀನುಗಳನ್ನು ಸುಲಭವಾಗಿ ಹಿಡಿಯಬಲ್ಲುವು. ಒಂದು ಜಾತಿಯ ಬಾತುಕೋಳಿಯನ್ನು ಹಳ್ಳಿಗಳಲ್ಲಿ ಸಾಕುವುದೂ ಉಂಟು. ಇದರ ಮೊಟ್ಟೆ ಮನುಷ್ಯನ ಆಹಾರವೂ ಹೌದು. ಕೆಲವು ಬಗೆಯ ಬಾತುಕೋಳಿಗಳು ಈಜುವುದೇ ಅಲ್ಲದೆ ನೀರಿನಲ್ಲಿ ಮುಳುಗಿ ಮೀನುಗಳನ್ನು ಹಿಡಿಯಬಲ್ಲುವು ಮತ್ತು ಒಂದೆಡೆಯಿಂದ ಮತ್ತೊಂದೆಡೆಗೆ ಹಾರಲೂ ಬಲ್ಲುವು. ನಟ್ಕ ಅಥವಾ ಹೆಣಿಗೆ ಬಾತು (ಸಾರ್ಕಿಡಿಯಾರ್ನಿಸ್ ಮೆಲನೋಟಸ್) ಮಲೆನಾಡಿನ ಜಲಾಶಯಗಳಲ್ಲಿ ಸಾಮಾನ್ಯವಾಗಿ ಇರುವ ಪಕ್ಷಿ. ಥೀಲ್ ಅಥವಾ ಅರಳೆಬಾತು (ನೆಟ್ಟೋಪಸ್) ಕೂಡ ನಾಡಿನಾದ್ಯಂತ ದೊರಕುವ ಪಕ್ಷಿ. ಕೆಲವು ಜಾತಿಯ ಬಾತುಕೋಳಿಗಳು ಕನ್ನಡನಾಡಿಗೆ ಉತ್ತರದಿಂದ ಚಳಿಗಾಲದಲ್ಲಿ ವಲಸೆ ಬರುವುದು ಉಂಟು.

ಕಬ್ಬಾರೆ, ಕೊಕ್ಕರೆ, ಕ್ರೌಂಚಪಕ್ಷಿ, ನಾರಾಯಣಿಪಕ್ಷಿ ಮೊದಲಾದುವು ಜಲಾಶಯದಲ್ಲಿ ಅಥವಾ ಅದರ ಬಳಿ ವಾಸಿಸತಕ್ಕ ಪಕ್ಷಿಗಳು. ಇವು ಸಿಕೋನಿಫಾರ್ಮಿಸ್ ಗಣಕ್ಕೆ ಸೇರಿದುವು. ಇವಕ್ಕೆ ಹಾರುವ ಶಕ್ತಿ ಅಗಾಧ. ಕಾಲುಗಳು, ಕಾಲು ಬೆರಳುಗಳು, ಕೊಕ್ಕು ಮತ್ತು ಕುತ್ತಿಗೆ ಎಲ್ಲವೂ ಉದ್ದ. ಹಲವು ವಲಸೆಗಾರ ಪಕ್ಷಿಗಳು. ಆರ್ಡೇಯ ಸಿನೇರೆಯ ಎಂಬ ಜಾತಿಯ ಕ್ರೌಂಚಪಕ್ಷಿ ನಮ್ಮ ನಾಡಿನ ಹಲವಾರು ಕಡೆ ಇದೆ. ಇದರ ಮುಖ್ಯ ಆಹಾರ ಮೀನು. ಕಬ್ಬಾರೆ ಪಕ್ಷಿಗಳು ಒಂಟೊಂಟಿಯಾಗಿ ಕೊಳ, ನದಿ, ಕೆರೆಗಳ ಬಳಿ ವಾಸಿಸುತ್ತವೆ. ಒಮ್ಮೊಮ್ಮೆ ನೀರಿನಲ್ಲಿ ಅಲುಗಾಡದೆ ನಿಂತಿರುತ್ತವೆ. ಬುಬುಲ್‌ಕಸ್ ಐಬಿಸ್ ಎಂಬ ಕ್ರೌಂಚಪಕ್ಷಿ ಸಾಮಾನ್ಯವಾಗಿ ದನಗಳ ಹಿಂಡಿನ ಮಧ್ಯೆ ಇರುತ್ತದೆ. ಇದು ದನಕರುಗಳ ಮೈಮೇಲಿನ ಉಣ್ಣಿಗಳನ್ನು ಹಿಡಿದು ತಿನ್ನುವುದನ್ನು ಕಾಣಬಹುದು. ಆರ್ಡೆಯೋಲ ಗ್ರೇಯಿ ಜಾತಿಯ ಕಬ್ಬಾರೆ ಬತ್ತದ ಗದ್ದೆಗಳಲ್ಲಿ ಇರುವುವು. ಅನಸ್ಟೋಮಸ್ ಜಾತಿಯ ಕಬ್ಬಾರೆಯನ್ನು ಜೌಗುಪ್ರದೇಶಗಳಲ್ಲಿ ಅದರ ಅಗಲವಾದ ಕೊಕ್ಕಿನ ಸಹಾಯದಿಂದಲೇ ಗುರುತಿಸಬಹುದು. ಪ್ಲಾಟೆಲಿಯ ಲ್ಯೂಕೋರೋಡಿಯ ಎಂಬ ಕೊಕ್ಕರೆ ಈ ರಾಜ್ಯದಲ್ಲಿದೆ. ಕ್ಸೀನೋರಿಂಕಸ್ ಏಷಿಯಾಟಿಕಸ್ ಎಂಬ ಜಾತಿಯ ಕರಿಕುತ್ತಿಗೆಯ ಕೊಕ್ಕರೆಗಳು ಆಗಾಗ್ಗೆ ನದಿ ಕೆರೆಗಳ ಬಳಿ ಕಾಣುವುದುಂಟು. ಪೋಡಿಸಿಪಿಫಾರ್ಮೀಸ್ ಗಣದ ಪ್ರತಿನಿಧಿಗಳು ಕರ್ನಾಟಕದಲ್ಲಿವೆ. ಪೋಡಿಸಿಪೆಸ್ ರುಫಿಕಾಲಿಸ್ ಎಂಬ ಜಾತಿಯ ಜಲಚರ ಪಕ್ಷಿ ಈ ರಾಜ್ಯದಲ್ಲಿ ದೊರಕುವ ಅತ್ಯಂತ ಚಿಕ್ಕಪಕ್ಷಿ. ನೀರ್ಗಾಲಿಕ್ಕುವ ಕೆಲವು ಪಕ್ಷಿಗಳು ಕರಾಡ್ರಿಫಾರ್ಮೀಸ್ ಗಣಕ್ಕೆ ಸೇರಿದುವು. ಇವು ನೀರಿನಲ್ಲಿ ಎತ್ತುಗಾಲಿಕ್ಕಿ ನಡೆಯುವುದೇ ಅಲ್ಲದೆ ಹಾರಬಲ್ಲುವು. ಹೈಡ್ರೋಫೇಸಿಯಾನಸ್ ಚಿರುರ್ಗಸ್ ಕೊಳ, ಕೆರೆ, ಮೊದಲಾದ ಜೌಗು ಪ್ರದೇಶಗಳಲ್ಲಿ ಕಂಡುಬರುವ ಪಕ್ಷಿ. ಲೋಬೋಪ್ಲುವಿಯ ಮಲಬಾರಿಕ ಎಂಬ ಹಳದಿ ಬಣ್ಣದ ದೇವನಹಕ್ಕಿಗೆ ತೆರೆದ ಒಣಮೈದಾನ ಪ್ರದೇಶವೇ ವಾಸ. ಟ್ರಿಂಗ ಜಾತಿಯ ಪಕ್ಷಿ ಯೂರೋಪ್, ಉತ್ತರ ಏಷ್ಯಾದಲ್ಲಿ ಸಂತಾನೋತ್ಪತ್ತಿ ಮಾಡಿ ನಮ್ಮ ದೇಶಕ್ಕೂ ವಲಸೆ ಬರುವ ಪಕ್ಷಿ. ಕ್ಯಾಪೆಲ್ಲ ಜಾತಿಯ ಉಲ್ಲಂಗಿಪಕ್ಷಿ ಕಾಶ್ಮೀರದಲ್ಲಿ ತನ್ನ ಸಂತಾನವನ್ನು ಬೆಳೆಸಿ ನಮ್ಮ ನಾಡಿಗೆ ಚಳಿಗಾಲದಲ್ಲಿ ವಲಸೆ ಬರುವ ಪಕ್ಷಿ. ಇದರಲ್ಲಿ ಎರಡು ಪ್ರಭೇದಗಳು ಮುಖ್ಯವಾದುವು. ಒಂದು ಕ್ಯಾ. ಗಾಲಿನಾಗೊ ಮತ್ತು ಕ್ಯಾ. ಸ್ಟೆನೂರ. ಸ್ಕೋಲೋಪಾಕ್ಸ್ ರಸ್ಟಿಕೋಲ ಎಂಬ ಜಾತಿಯ ಕಾಡುಕೋಳಿಯೂ ಪಶ್ಚಿಮ ಘಟ್ಟಗಳಿಗೆ ವಲಸೆಬರುವ ಪಕ್ಷಿ.

ಕೋರಾಸಿಫಾರ್ಮಿಸ್ ಗಣದ ಪ್ರತಿನಿಧಿಗಳೂ ಇಲ್ಲಿವೆ. ಈ ಬಗೆಯ ಪಕ್ಷಿಗಳಿಗೆ ಮೂರು ಕಾಲುಬೆರಳುಗಳು ಸಾಮಾನ್ಯವಾಗಿ ಒಟ್ಟಿಗೆ ಕೂಡಿರುವುದು ಒಂದು ವೈಶಿಷ್ಟ್ಯ. ಉರುಳಕ್ಕಿ (ಕೋರಾಸಿಯಸ್ ಇಂಡಿಕ) ಉಜ್ಜ್ವಲ ಬಣ್ಣಗಳಿಂದ ಕೂಡಿದೆ. ಬೇಸಾಯ ಪ್ರದೇಶವೇ ಇದರ ವಾಸ. ಕೀಟ ಮೊದಲಾದುವೇ ಇದರ ಆಹಾರ. ಜೇನು ಮುಕ್ಕ (ಮೆರಾಪ್ಸ್ ಓರಿಯಂಟ್ಯಾಲಿಸ್) ಸಾಮಾನ್ಯವಾಗಿ ಮಾನವನ ವಸತಿಗಳ ಸನಿಹದಲ್ಲಿ ವಾಸಿಸುತ್ತದೆ. ಇದರ ಆಹಾರ ಜೇನುನೊಣಗಳು, ಕಣಜ ಮತ್ತು ಇತರ ಕೀಟಗಳು. ಡೈಕೋಸಿರಾಸ್ ಬೈಕಾರ್ನಿ ಜಾತಿಯ ಪಕ್ಷಿಗಳು ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕಂಡುಬರುತ್ತವೆ.

ಕರ್ನಾಟಕದ ಪಾಲಕೀ ಹಕ್ಕಿಗಳಿಗೆ (ಸ್ಯಾಂಡ್‌ಗ್ರೌಸಸ್) ಹಾರುವ ಶಕ್ತಿ ಹೆಚ್ಚಾಗಿದೆ. ಇವನ್ನು ಸಾಮಾನ್ಯವಾಗಿ ಬಯಲು ಸೀಮೆಯ ಕುರುಚಲು ಕಾಡುಗಳಲ್ಲಿ ಕಾಣಬಹುದು. ಕೆಲವು ವಲಸೆಗಾರ ಪ್ರವೃತ್ತಿಯುಳ್ಳವು. ಇವುಗಳ ಆಹಾರ ದವಸಧಾನ್ಯ. ಸಂಜೆ ಮತ್ತು ಬೆಳಗಿನ ಹೊತ್ತು ಮಂದೆಮಂದೆಯಾಗಿ ಸಾಗುವಳಿ ಪ್ರದೇಶಕ್ಕೆ ನುಗ್ಗಿ ದಾಳಿಮಾಡುವುದೂ ಉಂಟು. ಟಿರೋಕ್ಲೆಸ್ ಇಂಡಿಕಸ್ ಮತ್ತು ಟಿ.ಎಕ್ಸುಟಸ್ ಎಂಬವು ಮುಖ್ಯವಾದುವು. ಗುಬ್ಬಚ್ಚಿ (ಪ್ಯಾಸರ್ ಡೊಮೆಸ್ಟಿಕಸ್) ಫ್ರಿಂಜಿಲ್ಲಿಡೆ ಕುಟುಂಬಕ್ಕೆ ಸೇರಿದ ಪಕ್ಷಿ. ಇದರ ಕೊಕ್ಕು ದಪ್ಪ ಶಂಖಾಕೃತಿ. ಕಾಳಿನ ಸಿಪ್ಪೆ ಸುಲಭವಾಗಿ ಬಿಡಿಸಿ ತಿನ್ನುವ ವೈಶಿಷ್ಟ್ಯ ಇದರದ್ದು. ಮಾನವನ ವಸತಿಯ ಆಸುಪಾಸುಗಳಲ್ಲಿ ಇದರ ಬೀಡು. ಕಳ್ಳಿಪಿಟಕ ಅಥವಾ ದಾಸರಿ ಹಕ್ಕಿಗಳಲ್ಲಿ (ವ್ಯಾಗ್‌ಟೈಲ್) ಕೆಲವು ಪ್ರಭೇದಗಳನ್ನು ಕನ್ನಡ ನಾಡಿನಲ್ಲೂ ಕಾಣಬಹುದು. ಇವುಗಳ ಕೊಕ್ಕು ತೆಳು ಮತ್ತು ನೀಳ. ಬಾಲ ನೀಳ. ಮೋಟಸಿಲ್ಲ ಕೈನೇರಿಯ ಬಯಲು ಪ್ರದೇಶ ಮತ್ತು ವಸತಿಗೃಹಗಳ ಬಳಿ ಕಂಡು ಬರುತ್ತದೆ. ಸಾಗುವಳಿ ಬೆಳೆಗಳು, ಕಾಳುಕಡ್ಡಿಗಳೇ ಇದರ ಆಹಾರ. ಆಂತಸ್ ರುಫುಲಸ್ ಎಂಬ ದಾಸರಿಹಕ್ಕಿಯೂ ಮೊಟಸಿಲ್ಲದಂತೆಯೇ ಇರುತ್ತದೆ. ಆದರೆ ಬಾಲ ಸ್ವಲ್ಪ ಮೋಟು. ಇದರ ವೈಜ್ಞಾನಿಕ ಹೆಸರು ಗಲೇರಿಟ ಕ್ರಿಸ್ಟೇಟ. ಇದು ಮುಗಿಲಿನಲ್ಲಿ ಹಾರುವಾಗ ಸಿಳ್ಳು ಹಾಕುವುದು ಒಂದು ವೈಶಿಷ್ಟ್ಯ. ಬೂದು ಕಿರೀಟದ ಟಿಟ್ಟಿಭ ಪಕ್ಷಿಗಳು ಸಾಗುವಳಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಕದಿರುಗಿಣಿಗಳ ಕೊಕ್ಕು ನೀಳ, ಚೂಪು ಅಲ್ಲದೆ ಸ್ವಲ್ಪ ಕಮಾನಿನಂತೆ ಬಾಗಿರುತ್ತದೆ. ಇವು ಸಾಮಾನ್ಯವಾಗಿ ಒಂಟೊಂಟಿ ಅಥವಾ ಎರಡೆರಡಾಗಿರುವ ಗುಂಪಿನಲ್ಲಿ ಕಂಡುಬರುತ್ತವೆ. ಕಾಡು ತೋಪುಗಳಲ್ಲಿ ಇವು ಸಾಮಾನ್ಯ. ಇವು ಕೀಟಗಳನ್ನು ತಿನ್ನುವುದೇ ಅಲ್ಲದೆ ಹೂವಿನ ಮಕರಂದವನ್ನು ಹೀರಲು ಆಸೆಪಡುತ್ತವೆ. ಭಾರತದ ಪಿಟ್ಟ (ಪಿಟ್ಟ ಬ್ರಾಕಿಯೂರ) ಕುರುಚಲುಗಿಡಗಳ ಕಾಡಿನಲ್ಲಿ ವಾಸಿಸುತ್ತದೆ. ಕೀಟ ಮತ್ತು ಅವುಗಳ ಮೊಟ್ಟೆಗಳೇ ಇವುಗಳ ಮುಖ್ಯ ಆಹಾರ.

ಪಿಸಿಡೆ ಕುಟುಂಬಕ್ಕೆ ಸೇರಿದ ಮರಕುಟುಕ ಹಕ್ಕಿಗಳು ಕರ್ನಾಟಕದಾದ್ಯಂತ ಇವೆ. ಸಾಮಾನ್ಯವಾಗಿ ಕುರುಚಲು ಗಿಡಗಳ ಕಾಡುಗಳಿಗಿಂತ ದೊಡ್ಡ ಕಾಡುಗಳೇ ಇವಕ್ಕೆ ಪ್ರಿಯ. ಹೂಪೋ ಪಕ್ಷಿಗೆ (ಯೂಪ್ಯುಪ) ತಲೆಯ ಮೇಲೆ ಒಂದು ಶಿಖೆಯಿದೆ. ಇದು ಮರವನ್ನು ಕುಟುಕಿ ಗೂಡುಮಾಡುವುದಿಲ್ಲ ; ಬದಲು ಮೊದಲೇ ಇರುವ ಗೂಡು, ಪೊಟರೆಗಳಲ್ಲಿ ವಾಸಿಸುತ್ತದೆ. ತಲೆಯ ಮೇಲಿರುವ ಶಿಖೆ ಬೀಸಣಿಗೆಯಂತೆ ಮುಚ್ಚಿಕೊಳ್ಳುವಂತಿದೆ. ತೋಟದ ಹೊಲಗಳಲ್ಲಿ ಬೆಳೆ ತೆನೆಗಳಿಂದ ಕೂಡಿದ ಕಾಲದಲ್ಲಿ ಸಾಮಾನ್ಯವಾಗಿ ಕಂಡುಬರುವ ಹಕ್ಕಿಗಳು ಮೈನಾಗಳು (ಪ್ಯಾಸ್ಟರ್ ರೈಸಿಯಸ್). ಕಂದು ತಲೆಯ ಮೈನ (ಸ್ಟರ್ನಿಯ ಮಲಬಾರಿಕ) ತೆರೆದ ಕಾಡು ಪ್ರದೇಶಗಳಲ್ಲಿ ಇದೆ. ಆಕ್ರಿಡೋ ತೆರಿಸ್ ಟ್ರಿಸ್ಟಿಸ್ ಜಾತಿಯ ಮೈನಾ ಹಕ್ಕಿಗಳು ನಮ್ಮ ನಾಡಿನಾದ್ಯಂತ ದೊರಕುವ ಪಕ್ಷಿಗಳು. ಇವನ್ನು ಪಳಗಿಸಿ ಮಾತು ಕಲಿಸಬಹುದು. ಗೀಜಗನ ಹಕ್ಕಿಗಳು ಸಾಗುವಳಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಈ ಬಗೆಯ ಹಕ್ಕಿಗಳಲ್ಲಿ ನಾಲ್ಕೈದು ಪ್ರಭೇದಗಳನ್ನು ಗುರುತಿಸಬಹುದು. ನಮ್ಮ ನಾಡಿನ ಕುರುಚಲು ಗಿಡದ ಕಾಡುಗಳಲ್ಲಿ ಕೆಲವು ಬಾರಿ ದರ್ಜಿ ಹಕ್ಕಿಗಳ ಪರಿಚಯವಾಗುತ್ತದೆ. ಇವು ಎಲೆಗಳನ್ನು ಹೊಲೆದು ಗೂಡುಕಟ್ಟುವ ಕುಶಲತೆಯನ್ನು ಕಲಿತಿವೆ. ಕನ್ನಡನಾಡಿನ ಪಕ್ಷಿ ಸಂಪತ್ತು ಇನ್ನೂ ವಿಪುಲವಾಗಿದೆ. ಆದರೆ ಇಲ್ಲಿನ ಕೆಲವು ಪಕ್ಷಿಗಳಿಗೆ ಸಾಮಾನ್ಯ ಹೆಸರುಗಳ ಅಭಾವವಿದೆ. ಪಕ್ಷಿಗಳ ದೇಹರಚನೆ, ಜೀವನ ವಿಶೇಷತೆ, ಅವುಗಳ ವಲಸೆಗಾರಿ ಪ್ರವೃತ್ತಿ ಮೊದಲಾದವುಗಳ ಅಧ್ಯಯನಕ್ಕೆ ಇಲ್ಲಿ ಹೆಚ್ಚು ಅವಕಾಶವಿದೆ.

ಕನ್ನಡನಾಡಿನ ದೊಡ್ಡ ಸರೀಸೃಪ ಮೊಸಳೆ ಎಂದು ಹೇಳಬಹುದು (ಕ್ರಾಕೊಡೈಲಸ್ ಪಾಲುಸ್ಟ್ರಿಸ್). ಇದು ನದಿ, ಕೆರೆಗಳಲ್ಲಿ ವಾಸಿಸುತ್ತದೆ. ಇದರ ಕಾಲು ಬೆರಳುಗಳು ಜಾಲ ಪಾದಗಳಿಂದ ಕೂಡಿದೆ. ಸಮುದ್ರವನ್ನು ಸೇರುವ ನದಿ ಮುಖಜ ಪ್ರದೇಶಗಳಲ್ಲಿ ಜೀವಿಸುವ ಮೊಸಳೆ ಕ್ರಾಪೋರೋಸಸ್. ಇವೇ ಕ್ರಾಕೋಡೀಲಿಯ ಗಣದ ಪ್ರತಿನಿಧಿಗಳು. ಲಾಸೆಟೀಲಿಯ ಉಪಗಣದ ಪ್ರತಿನಿಧಿಗಳು ಸುಮಾರಾಗಿ ಕಂಡುಬರುತ್ತವೆ. ಮನೆಗಳಲ್ಲಿ ವಾಸಿಸುವ ಹಲ್ಲಿಯ (ಹೆಮಿಡ್ಯಾಕ್ಟೈಲಸ್ ಬ್ರೂಕಿ) ಕಾಲಿನ ಬೆರಳುಗಳಲ್ಲಿ ನಖಗಳಿವೆ. ಪಾದಗಳು ಗೋಡೆ ಗಾಜುಗಳ ಮೇಲೆ ಓಡಾಡಲು ಅನುಕೂಲವಾಗಿವೆ. ತೆರೆದ ಕಾಡುಗಳಲ್ಲಿ, ಬೇಲಿ, ಮೆಳೆಗಳಲ್ಲಿ ಮೈದಾನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಲಾಸೆಟೀಲಿಯ ಎಂದರೆ ಹೆಂಟೆಗೊದ್ದ (ಕ್ಯಾಲೋಟಿಸ್ ವರ್ಸಿಕಲಾರ್). ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಕಾಡುಗಳಲ್ಲಿ ಕ್ಯಾಲೋಟಿಸ್ ಎಲ್ಲಿಯೋಟಿ ಪ್ರಭೇದದ ಹೆಂಟೆಗೊದ್ದಗಳು ದೊರಕುತ್ತವೆ. ಕೊಳ್ಳೆಗಾಲ ತಾಲ್ಲೂಕಿನಲ್ಲಿ ಸಾಲಿಯ ಹಾರ್ಸಿಫೀಲ್ಡೀ ಜಾತಿಯ ಹೆಂಟೆಗೊದ್ದ ಉಂಟು. ಕರ್ನಾಟಕದ

ಬಯಲು ನಾಡಿನ ಗುಡ್ಡ ಪ್ರದೇಶಗಳಲ್ಲಿ ಪ್ಯಾಮೋಮಿಲಸ್ ಡಾರ್ಸಾಲಿಸ್ ಎಂಬ ಬಗೆಯ ದೊಡ್ಡಹಲ್ಲಿ (ಬಂಡೆಹಲ್ಲಿ) ಸಿಗುತ್ತದೆ. ಬಣ್ಣ ಬದಲಾಯಿಸಿಕೊಳ್ಳುವ ಗೋಸುಂಬೆ (ಕ್ಯಾಮೆಲಿಯಾನ್ ಜ಼ಿಲ್ಯಾನಿಕಸ್) ಕಾಡುಗಳ ಮರಗಳ ಮೇಲೆ ವಾಸಿಸುತ್ತದೆ. ಹಾವುರಾಣಿಗಳಲ್ಲಿ ನಾಲ್ಕು ಜೀವಜಾತಿಗೆ ಸೇರಿದುವು ನಮ್ಮ ನಾಡಿನಲ್ಲಿವೆ. ಮಬೂಯ–ಇದು ಬಯಲು, ಬೇಲಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಲೈಗೊಸೋಮ ಸೆಫೊಫಸ್ ಮತ್ತು ರಿಸ್ಟೆಲ್ಲ–ಇವು ಇತರ ಹಾವುರಾಣಿ ಸಂಬಂಧಿಗಳು. ಉಡ (ವೆರಾನಸ್ ಮಾನಿಟರ್) ಬಯಲು ಮೈದಾನ ಪ್ರದೇಶ ಮತ್ತು ಕಾಡುಗಳಲ್ಲಿ ವಾಸಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದ ಕಾಡುಗಳಲ್ಲಿ ಹಾರುವ ಹಲ್ಲಿ (ಡ್ರಾಕೋ ಡಸ್ಸಿಮಿಯೆರಿ) ಕಂಡು ಬಂದಿದೆ.

ಕಿಲೋನಿಯದ ಪ್ರತಿನಿಧಿಗಳೇ ಆಮೆಗಳು. ಇವು ನದಿ, ಕಾಲುವೆ, ಕೆರೆಗಳಲ್ಲಿ ವಾಸಿಸುತ್ತವೆ. ಹಾಗೂ ಕೆಲವು ಬಗೆಗಳು ಭೂಮಿಯ ಮೇಲೂ ಜೀವಿಸುತ್ತವೆ ಮತ್ತೆ ಕೆಲವಕ್ಕೆ ಸಾಗರಗಳೇ ತವರು ಪ್ರದೇಶ. ಮಲೆನಾಡಿನ ಬೆಟ್ಟಗುಡ್ಡಗಳಲ್ಲಿ ಜೀವಿಸುವ ನೆಲದ ಆಮೆ ಟೆಸ್ಟುಡೋ ಎಲೆಗಾನ್ಸ್. ನದಿ ಮತ್ತು ಜೌಗು ಪ್ರದೇಶದಲ್ಲಿ ವಾಸಿಸತಕ್ಕ ನೀರಾಮೆಗಳು ಟ್ರೈಯೋನಿಕ್ಸ್ ಲೆಯಿತಿ ಪ್ರಭೇದಕ್ಕೆ ಸೇರಿದುವು. ಇವುಗಳ ಚಿಪ್ಪನ್ನು ಮೃದು ಚರ್ಮ ಮುಚ್ಚಿರುತ್ತದೆ. ಕಾಲುಬೆರಳುಗಳು ಪ್ರತ್ಯೇಕವಾಗಿರುತ್ತವೆ. ನದಿ ಕಾಲುವೆಗಳಲ್ಲಿ ವಾಸಿಸುವ ನೀರಾಮೆಗಳು ಜಿಯೋಮೈಡ ಟ್ರೈಜುಗ ಜಾತಿಗೆ ಸೇರಿವೆ. ಇವುಗಳ ಕಾಲುಬೆರಳುಗಳ ಮಧ್ಯೆ ಜಲಪಾದಗಳಿವೆ. ಚಿಪ್ಪನ್ನು ಕೊಂಬಿನ ಫಲಕಗಳು ಮುಚ್ಚಿವೆ. ಇವು ತಮ್ಮ ತಲೆಯನ್ನು ಸಂಪೂರ್ಣವಾಗಿ ಚಿಪ್ಪಿನ ಒಳಭಾಗಕ್ಕೆ ಎಳೆದುಕೊಳ್ಳಬಲ್ಲುವು.

ಕನ್ನಡ ನಾಡಿನಲ್ಲಿ ಹಾವುಗಳಿಗೆ ಬರವಿಲ್ಲ–ವಿಷರಹಿತ ಮತ್ತು ವಿಷಪೂರಿತ ಹಾವುಗಳೆರಡೂ ಇವೆ. ವಿಷರಹಿತ ಹಾವುಗಳಲ್ಲಿ ಟಿಫ್ಲಾಪ್ಸ್ ಬ್ರಾಮಿನಸ್ ಎಂಬುದು ಅತ್ಯಂತ ಚಿಕ್ಕ ಹಾವು. ಇದು ಬೆಂಗಳೂರು ಜಿಲ್ಲೆಯಲ್ಲಿ ಕಂಡುಬರುತ್ತದೆ. 17–18 ಸೆಂಮೀ ಉದ್ದ ಬೆಳೆಯುತ್ತದೆ. ಹೆಬ್ಬಾವು ಅಥವಾ ದಾಸರಹಾವು (ಪೈಥಾನ್ ಮಾಲ್ಯುರಸ್) ಕನ್ನಡ ನಾಡಿನಲ್ಲಿ ಅತ್ಯಂತ ದೊಡ್ಡದಾಗಿ ಬೆಳೆಯುವ ಹಾವು. ತೇವಮಯವಾದ ಬಂಡೆಗಳಿಂದ ಕೂಡಿದ ಮೈದಾನ ಪ್ರದೇಶಗಳಲ್ಲಿ ಇದು ಗರಿಷ್ಠ 700 ಸೆಂಮೀ ಉದ್ದ ಬೆಳೆಯಬಹುದು. ನೇತ್ರಗೊಡ್ಡಿ ಹಾವು (ಎರಿಕ್ಸ್ ಕೋನಿಕಸ್) ಕರ್ನಾಟಕದಾದ್ಯಂತ ಕಂಡುಬರುವ ಹಾವು. ಬೂದಿಮಿಶ್ರಿತ ಪಾಟಲ ವರ್ಣದ ಮೈಮೇಲೆ ದೊಡ್ಡ ದೊಡ್ಡ ಕಂದುಬಣ್ಣದ ಮಚ್ಚೆಗಳಿಂದ ಇದನ್ನು ಗುರುತಿಸಬಹುದು. ಕಣ್ಣುಗಳು ಬಲು ಚಿಕ್ಕವು. ಸಾಮಾನ್ಯವಾಗಿ ಮರಳು ತುಂಬಿದ ಭೂಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಹುದುಗಿರುತ್ತದೆ. ಬಾಲ ಮೋಟು. ಯೂರೋಪಿಲ್ಟಿಡೆ ಕುಟುಂಬಕ್ಕೆ ಸೇರಿದ ಮೆಲನೋಫೀಡಿಯಂ ಜಾತಿಯ ಎರಡು ಪ್ರಭೇದಗಳು ಕೊಡಗು ಜಿಲ್ಲೆಯಲ್ಲಿ ಸಿಗುತ್ತವೆ. ಪ್ಲೆಕ್ಟುರಸ್ ಕನಾರಿಕಸ್, ಯೂರೋಪಿಲ್ಟಿಸ್ ಓಸೆಲ್ಲೆಟಸ್, ಯೂ. ಆರ್ಕ್ಟಿಸೆಪ್ಸ್, ಯೂ. ರೂಬ್ರೊಲೀನಿಯೇಟಸ್, ಯೂ. ಫಿಪ್ಸೋನಿ, ಯೂ. ಮೈಹೇಂದ್ರೆ, ಯೂ. ಮ್ಯಾಕುಲೇಟಸ್ ಜಾತಿಯ ಹಾವುಗಳು ನಮ್ಮ ಪಶ್ಚಿಮಘಟ್ಟದ ಕಾಡುಗಳಲ್ಲಿ ಇವೆ.

ಕೊಲಬ್ರಿಡೆ ಕುಟುಂಬದ ಕೇರೆ ಹಾವು (ಟಿಯಸ್ ಮೂಕೋಸಸ್) ಕರ್ನಾಟಕದಾದ್ಯಂತ ಉಂಟು. ಇದು ಮರವನ್ನು ಸ್ವಲ್ಪ ಹತ್ತಬಲ್ಲುದು. ಆಗಾಗ್ಯೆ ಕಪ್ಪೆ ಇಲಿಗಳನ್ನು ತಿನ್ನಲು ಕಣಜಗಳನ್ನು ಹೊಗುವುದುಂಟು. ಈ ಹಾವು ನಾಗರಹಾವಿನೊಡನೆ ಸಂಭೋಗ ಬೆಳೆಸಿ ಸಂತಾನೋತ್ಪತ್ತಿ ಮಾಡುತ್ತದೆಯೆಂಬ ನಂಬಿಕೆಗೆ ಯಾವ ಸಾಕ್ಷ್ಯಾಧಾರಗಳೂ ಇಲ್ಲ. ಪಟ್ಟೆ ಹಾವು ಓಲಿಗೊಡಾನ್ ವೆನೂಸ್ಟಸ್ ಪಶ್ಚಿಮಘಟ್ಟಗಳಲ್ಲಿಯೇ ಅಲ್ಲದೆ ಮಲೆನಾಡಿನ ಜಿಲ್ಲೆಗಳಲ್ಲಿಯೂ ಇದೆ. ಇದರ ಮೈ ಮೇಲಿನ ಪಟ್ಟೆಗಳು ಕಟ್ಟುಹಾವಿನಂತೆ ಕಂಡುಬರುತ್ತವೆ. ಇದೇ ಜಾತಿಯಲ್ಲಿನ ನಾಲ್ಕು ಪ್ರಭೇದಗಳೂ (ಟ್ರಾವಂಕೂರೆನ್ಸಿಸ್, ಅಫಿನಿಸ್, ಆರ್ನೆನ್ಸಿಸ್ ಮತ್ತು ಬ್ರೆವಿಕಾಡ) ನಮ್ಮ ನಾಡಿನಲ್ಲಿ ಇವೆ. ಪಶ್ಚಿಮತೀರಕ್ಕೆ ಹರಿಯುವ ನದಿಗಳ ಅಳಿವೆಗಳಲ್ಲಿ ನರೂಲಿ ಹಾವು (ಆಕ್ರೋಕೊರ್ಡುಸ್ ಗ್ರಾನುಲೇಟಸ್) ವಾಸಿಸುತ್ತದೆ. ಇದು ನೀರಿನಲ್ಲಿ ಚೆನ್ನಾಗಿ ಈಜಲಾರದು. ಅಲ್ಲಿನ ಬೆಸ್ತರಿಗೆ ಮೀನು ಹಿಡಿಯುವ ಬಲೆಗಳಿಗೆ ಆಗಾಗ್ಯೆ ಇದು ಸಿಕ್ಕಿಹಾಕಿಕೊಳ್ಳುತ್ತಿರುತ್ತದೆ. ಇದು ಮೊಟ್ಟೆಗಳನ್ನಿಡುವುದರ ಬದಲು ಒಮ್ಮೆಗೆ 6–8 ಮರಿಗಳನ್ನು ಈಯುತ್ತದೆ. ಕರಿಹಸುರು ಹಾವು (ಕ್ರೈಸೋಪೆಲಿಯ ಓರ್‍ನಾಟ) ಎಂಬುದು ಪಶ್ಚಿಮಘಟ್ಟದ ಕಾಡುಗಳಲ್ಲಿ ಇದೆ. ತಲೆ ಸಾಮಾನ್ಯವಾಗಿ ಕಪ್ಪು ಬಣ್ಣ. ಅದರ ಮೇಲೆ ಹಳದಿಯ ಅಥವಾ ಹಸಿರಿನ ಅಡ್ಡಾದಿಡ್ಡಿ ಮಚ್ಚೆಗೆರೆಗಳು. ಮರಗಳ ಕೊಂಬೆಗಳಿಗೆ ತನ್ನ ದೇಹದಿಂದ ಸುರುಳಿಸುತ್ತಿ ತೂಗಾಡುವುದು ಇದರ ವೈಶಿಷ್ಟ್ಯ. ಆಗಾಗ್ಯೆ ವಸತಿಗೃಹಗಳನ್ನು ಪ್ರವೇಶಿಸುವ ತೋಟದ ಹಾವಿಗೆ ಲೈಕೊಡಾನ್ ಆಲಿಕಸ್ ಎಂದು ಹೆಸರು. ಇದು ಸಾಮಾನ್ಯವಾಗಿ ನಿಶಾಚರಪ್ರಾಣಿ. ಮರಗಳನ್ನು ಸುಲಭವಾಗಿ ಹತ್ತಬಲ್ಲುದು. ಭೂಮಿಯ ಮೇಲೆ ಅದು ಚುರುಕಿನಿಂದ ಹರಿದಾಡಲಾರದು. ಚೌಕಳಿ ಹಾವು, ಒಳ್ಳೆ ಹಾವು ಅಥವಾ ನೀರು ಹಾವು (ನಾತ್ರಿಕ್ ಪಿಸ್ಕಟಾರ್) ನೀರ ವಸತಿಯ ಬಳಿ ಕಂಡು ಬರುತ್ತದೆ. ಕೆಲವು ಸಂದರ್ಭಗಳಲ್ಲಿ ಬತ್ತದ ಗದ್ದೆಗಳನ್ನು ಪ್ರವೇಶಿಸುವುದುಂಟು. ಹಸಿರು ಕಟ್ಟಿಗೆ ಹಾವು (ಮ್ಯಾಕ್ರೊಪಿಸ್ಥೊಡಾನ್ ಪ್ಲಂಬಿಕೊಲಾರ್) ಬೆಟ್ಟಗುಡ್ಡಗಳಿರುವ ಮೈದಾನ ಪ್ರದೇಶಗಳಲ್ಲಿ ಆಗಾಗ್ಗ ಕಂಡು ಬರುತ್ತದೆ. ಇದನ್ನು ಕೆಣಕಿದರೆ ನಾಗರಹಾವಿನಂತೆ ಹೆಡೆ ಎತ್ತುತ್ತದೆ. ಎರಡು ಬಗೆಯ ಚೆಂಗಿ ಹಾವುಗಳು ಕನ್ನಡ ನಾಡಿನಲ್ಲಿವೆ. ಒಂದು ಬೊಯ್ಗ ಟ್ರೈಗೊನೇಟ ಮತ್ತು ಬೊ. ಸಿಲೋನೆನ್ಸಿಸ್. ಮೊದಲನೆಯದು ನಾಡಿನಾದ್ಯಂತ ಕಂಡುಬಂದರೆ ಎರಡನೆಯದು ಪಶ್ಚಿಮಘಟ್ಟಗಳಿಗೆ ಸೀಮಿತವಾಗಿದೆ. ಹಸಿರು ಎಲೆ ಹಾವು ಅಥವಾ ಹಸಿರು ಹಾವು (ಡ್ರೈಯೋಫಿಸ್ ನಾಸೂಟಸ್) ಎಲ್ಲ ಕಡೆಯೂ ಉಂಟು. ಇದರ ವಾಸ ಸಾಮಾನ್ಯವಾಗಿ ಹಸುರು ತುಂಬಿದ ಬೇಲಿ, ಎತ್ತರವಾಗಿ ಬೆಳೆದ ಹುಲ್ಲು. ದೇಹ ಬಲು ಉದ್ದ. ಸುಮಾರು 194 ಸೆಂಮೀ. ಇವೇ ಅಲ್ಲದೆ ಇನ್ನೂ ಇತರ ವಿಷರಹಿತ ಹಾವುಗಳು (ಕೊಲುಬೆರ್, ಲಿಯೋಪೆಲ್ಟಿಸ್, ಕೋರೋನೆಲ್ಲ, ಅಹೆಟುಲ್ಲ ಇತ್ಯಾದಿ) ಈ ರಾಜ್ಯದಲ್ಲಿವೆ. ಅತ್ಯಂತ ವಿಷಪೂರಿತ ಹಾವುಗಳ ಸಂಖ್ಯೆ ಕಡಿಮೆಯಾಗಿದ್ದರೂ ಅವುಗಳ ಅಪಾಯದ ಪ್ರಭಾವ ಬಹಳ ದೊಡ್ಡದು. ನಾಡಿನ ಕಡಲ ನೀರಿನಲ್ಲಿ ವಾಸಿಸುವ ಕಡಲ ಹಾವುಗಳು ಅತ್ಯಂತ ವಿಷಪೂರಿತವಾದುವು. ಇವುಗಳ ಬಾಲ ಹುಟ್ಟಿನಂತೆ ಚಪ್ಪಟೆಯಾಗಿದ್ದು ಚಲನೆಗೆ ನೆರವಾಗುತ್ತವೆ. ಹೈಡ್ರೋಫಿಸ್ ಸಿರುಲೆಸೆನ್ಸ್ ಜಾತಿಯ ಕಡಲ ಹಾವು ಸಾಮಾನ್ಯವಾಗಿ ಬೆಸ್ತರ ಮೀನು ಬಲೆಗೆ ಬೀಳುತ್ತದೆ. ಭೂಮಿಯ ಮೇಲೆ ಇದು ನಿಸ್ಸಹಾಯಕ. ಬೆಸ್ತರು ಬಲೆಗೆ ಬಿದ್ದ ಈ ಹಾವುಗಳನ್ನು ಕೈಗಳಿಂದಲೇ ಹಿಡಿದು ನೀರಿಗೊ ದಡಕ್ಕೊ ಬಿಸಾಡುತ್ತಾರೆ. ಇದೇ ಅಲ್ಲದೆ ಲಾಟಿಕೌಡ, ಪ್ರೆಸ್ಕುಟಾಟ, ಎನ್ಹೈಡ್ರಿನ, ಹೈಡ್ರೋಫಿಸ್, ಲಾಪೆಮಿಸ್, ಮೈಕ್ರೋಸೆಫಾಲೋಫಿಸ್ ಮತ್ತು ಪೆಲಾಮಿಸ್ ಜಾತಿಯ ಕಡಲ ಹಾವುಗಳು ನಾಡಿನ ಕಡಲಿನಲ್ಲಿ ದೊರಕುತ್ತವೆ. ಕಟ್ಟುಹಾವು ಅಥವಾ ಕಡಂಬಳ (ಕ್ರೈಟ್, ಬಂಗಾರಸ್ ಸಿರೂಲಿಯಸ್) ನಾಡಿನಾದ್ಯಂತ ಕಂಡುಬರುತ್ತದೆ. ಇದರ ದೇಹದ ಬಣ್ಣ ಕಪ್ಪು ಮಿಶ್ರಿತವಾದ ನೀಲಿ. ಬಿಳಿಯ ಕಟ್ಟುಗಳು ದೇಹದಾದ್ಯಂತ ಹರಡಿವೆ. ನಾಗರಹಾವು (ನಾಜ ನಾಜ) ಹೆಡೆಯೆತ್ತಿ ಆಡುವ ವಿಷಸರ್ಪ. ಇದು ಸಾಕಷ್ಟು ಇದೆ. ಕೃಷ್ಣಸರ್ಪ ಅಥವಾ ಕಾಳಿಂಗಸರ್ಪ (ನಾಜ ಹನ್ನ) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇದೆ. ನಾಗರಹಾವಿಗೆ ಹೆಡೆಯ ಮೇಲೆ ಕನ್ನಡಕದಂಥ ಮಚ್ಚೆಯುಂಟು. ಕೃಷ್ಣ ಸರ್ಪದ ತಲೆಯ ಹಿಂದಿನ ದೇಹಭಾಗದ ಸುತ್ತು 10–15 ಬಿಳಿಯ ಪಟ್ಟೆಗಳಿವೆ. ಇದು 540 ಸೆಂಮೀ ವರೆಗೂ ಬೆಳೆಯಬಲ್ಲುದು.

ಮಂಡಲದ ಹಾವಿಗೆ (ರಸ್ಸೆಲ್ಸ್ ವೈಪರ್) ಕನ್ನಡಿ ಹಾವು, ಬಲಿವಡಕ ಹಾವು ಎಂಬ ಪರ್ಯಾಯ ಹೆಸರುಗಳೂ ಇವೆ. ಇದರ ವೈಜ್ಞಾನಿಕ ನಾಮ ವೈಪೆರ ರಸ್ಸೇಲಿ. ಇದು ನಮ್ಮ ನಾಡಿನಾದ್ಯಂತ ಸಾಮಾನ್ಯವಾಗಿ ಕಂಡುಬರುತ್ತದೆ. ಬೂದು ದೇಹದ ಮೇಲೆ ಮೂರು ಸಾಲಿನಲ್ಲಿ ದೊಡ್ಡ ದೊಡ್ಡ ಮಚ್ಚೆಗಳಿವೆ. ಬೆನ್ನಿನ ಮೇಲಿರುವ ಮಚ್ಚೆಗಳು ಪಕ್ಕದ ಮಚ್ಚೆಗಳಿಗಿಂತ ಸ್ವಲ್ಪ ದೊಡ್ಡವು. ಸಾಮಾನ್ಯವಾಗಿ ಬಂಡೆಗಳ ಹಾಗೂ ಪೊದೆಗಳ ಬಳಿಯ ಪರಿಸರದ ಬಣ್ಣದಂತೆಯೇ ಕಂಡುಬರುತ್ತದೆ. ಇದು ಮೂರು ದಿನಗಳ ಹೆರಿಗೆಯಲ್ಲಿ 97 ಮರಿಗಳನ್ನು ಹೆರಬಲ್ಲುದು. ಕಲ್ಲು ಹಾವು (ಎಕಿಸ್ ಕ್ಯಾರಿನೇಟಸ್) ಮಂಡಲದ ಹಾವಿನ ಹತ್ತಿರ ಸಂಬಂಧಿ; ನಾಡಿನಾದ್ಯಂತ ಹರಡಿದೆ. ತಲೆಯ ಮೇಲಿನ ಬಾಣದ ಗುರುತಿನಿಂದ ಸುಲಭವಾಗಿ ಇದನ್ನು ಗುರುತಿಸಬಹುದು. ದೇಹ ಬಣ್ಣ ಬೂದುಮಿಶ್ರಿತವಾಗಿದೆ, ತಳಭಾಗ ಬಿಳುಪು. ದೇಹದ ಮೇಲೆ ಅಲೆಅಲೆಗಳ ವಿನ್ಯಾಸದಂತಿರುವ ಎರಡು ರೇಖೆಗಳು ತಲೆಯಿಂದ ಕಾಲಿನವರೆಗೂ ವ್ಯಾಪಿಸಿದೆ. ಇದು ಕೂಡ ಮರಿಗಳನ್ನು ಈಯತಕ್ಕ ಹಾವು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಆಗಾಗ್ಯೆ ಪಶ್ಚಿಮ ಘಟ್ಟಗಳಲ್ಲಿ ಕಂಡುಬರುವ ಹಸುರು ಮಂಡಲದ ಹಾವು (ಟ್ರೈ ಮೆರೆಸುರಸ್ ಗ್ರಾಮಿನೆಯಸ್) ಸಾಮಾನ್ಯವಾಗಿ ಹುಲ್ಲು ಅಥವಾ ಬಿದಿರು ಮೆಳೆಗಳಲ್ಲಿ ಆಸರೆ ಪಡೆದು ಪರಿಸರದಲ್ಲಿ ಐಕ್ಯವಾಗಿರುತ್ತದೆ. ಇದೂ ಕೂಡ ಮರಿಗಳನ್ನು ಈಯುತ್ತದೆ. ಟ್ರೈಮೆರೆಸುರಸ್ ಜಾತಿಗೆ ಸಂಬಂಧಿಸಿದಂತೆ ಅದರ ಇತರ ಮೂರು (ಮ್ಯಾಕ್ರೋಲೆಪಿಸ್, ಮಲಬಾರಿಕಸ್, ಸ್ಟ್ರಿಗೇಟಸ್) ಪ್ರಭೇದಗಳು ಕಂಡುಬರುತ್ತವೆ. ಉತ್ತರ ಕರ್ನಾಟಕದ ಸರಹದ್ದಿನಲ್ಲಿರುವ ಗೂನು ಮೂಗಿನ ಮಂಡಲದ ಹಾವು (ಆನ್ಸಿಸ್ಟ್ರೊಡಾನ್ ಹಿಪ್ನಾಲೆ) ಕೂಡ ವಿಷಪೂರಿತ ಹಾವು.

ಅಂಫೀಬಿಯ ವರ್ಗದ ಪ್ರತಿನಿಧಿಯಾಗಿ ಕಪ್ಪೆ, ನೆಲಗಪ್ಪೆ, ಹಿತ್ತಲಮಂಡಲ, ರಾನ ಹೈಲ, ನನ್ನೊಬಟ್ರಾಕಸ್, ಫಿಲೋಟಸ್, ರಾಮನೆಲ್ಲ, ಮೈಕ್ರೊಹೈಲ ಮೊದಲಾದ ಜಾತಿಯ ಕಪ್ಪೆಗಳೂ ಬ್ಯೂಫೋ, ಯೂಪರೂಡಾನ್ ಮೊದಲಾದ ನೆಲಗಪ್ಪೆಯ ಜಾತಿಗಳೂ ಕಂಡುಬರುತ್ತವೆ. ಕಾಲುಗಳಿಲ್ಲದ ಭೂ ಜಲಚರಿ ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದಲ್ಲಿ ಸಿಗುವ ಇತ್ತಲೆ ಮಂಡಲ (ಇಕ್ತಿಯೋಫಿಸ್ ಗ್ಲೂಟಿನೋಸಸ್). ಇದು ಜೌಗು ಪ್ರದೇಶದಲ್ಲಿ ಬಿಲದಲ್ಲಿ ಹುದುಗಿ ಜೀವಿಸುತ್ತದೆ. ಹೆಣ್ಣು ಸಂತಾನೋತ್ಪತ್ತಿ ಕಾಲದಲ್ಲಿ ಮೊಟ್ಟೆಗಳ ಗೊಂಚಲಿನ ಸುತ್ತ ತನ್ನ ದೇಹವನ್ನು ಸುರುಳಿಯಂತೆ ಸುತ್ತಿ ಸಂತಾನ ಪಾಲನೆ ಮಾಡುತ್ತದೆ.

ಮೀನಿನ ಸಂಪತ್ತು ಕರ್ನಾಟಕದಲ್ಲಿ ಅಧಿಕ. ನಾನಾ ತೆರದ ಮೀನುಗಳು ಕಡಲು, ನದಿ, ಕೆರೆ, ಕಟ್ಟೆ ಮೊದಲಾದುವುಗಳಲ್ಲಿ ದೊರಕುತ್ತವೆ. ಸಿಹಿನೀರಿನಲ್ಲಿ ಸಾಮಾನ್ಯವಾಗಿ ಬರಿಯ ಎಲುಬು ಮೀನುಗಳು ಕಂಡು ಬಂದರೆ, ಕಡಲಿನ ಉಪ್ಪು ನೀರಿನಲ್ಲಿ ಎಲುಬು ಮತ್ತು ಮೆಲ್ಲೆಲುಬು ಮೀನುಗಳೆರಡೂ ಜೀವಿಸುತ್ತವೆ.

ಕಡಲಿನ ಮೆಲ್ಲೆಲುಬು ಮೀನುಗಳು ವಿವಿಧ ಬಗೆಯವು. ಇವುಗಳಲ್ಲಿ ನೇರವಾಗಿ ಮರಿಗಳನ್ನೇ ಹೆರುವಂಥ ಸೊರಮೀನು ಅಥವಾ ಚಾಟೇಮೀನು (ಸ್ಕೋಲಿಯೋಡಾನ್), ಕೊಡತಿಮೀನು (ಲೈಗೋನಬ್ಲಾಕಿ) ಮತ್ತು ಹುಲಿಮೀನು (ಸ್ಟೀಗೋಸ್ಟೋಮ) ಮೊದಲಾದುವೂ ಮೊಟ್ಟೆಗಳನ್ನಿಡುವಂಥ ಚಿಟ್ಟೆಮೀನು (ರೇ ಫಿಷ್), ನೀರುಹಂದಿ ಮೀನು (ಸ್ಕೇಟ್), ಗರಗಸ ಮೀನು (ಪ್ರಿಸ್ಟಿಸ್) ಮುಂತಾದುವೂ ಮುಖ್ಯವಾದುವು. ಇವುಗಳಲ್ಲಿ ಕೆಲವನ್ನು ಆಹಾರವಾಗಿ ಬಳಸುತ್ತಾರೆ. ದೊಡ್ಡ ಗಾತ್ರದವುಗಳ ಈಲಿಯಿಂದ ಎಣ್ಣೆಯನ್ನು ತೆಗೆಯುತ್ತಾರೆ. ಎಲುಬು ಮೀನುಗಳಲ್ಲಿ ಮುಖ್ಯವಾದುವು ಇವು – ಮ್ಯಾಕರಲ್, ಬೈಗೆ ಅಥವಾ ಬೂತಾಯಿ (ಸಾರ್ಡಿನ್), ಬಂಗಡ (ಸ್ಕ್ಯಾಂಬರ್ ಮೈಕ್ರೋಲೆಪಿಡೋಟಸ್), ಥೇಡೆ (ಈರಿಯಸ್ ಡಸ್ಸುಮಿಯರಿ), ದೊರಸ್ (ಕೈರೋ ಸೆಂಟ್ರಸ್ ದೊರಸ್), ಮಲೆಟ್, ಪಾಂಫ್ರೆಟ್ (ಸ್ಟ್ರನೇಟಿಯಸ್), ಒಂದು ಬಗೆಯ ಹಾವು ಮೀನು (ಓಫಿಕ್ತಿಸ್ ಬೋರೊ) ಮತ್ತು ಟ್ಯೂನ. ಇವುಗಳಲ್ಲಿ ಬಲುರುಚಿಯಾದ ಮೀನುಗಳೆಂದು ಹೆಸರಾದ ಮ್ಯಾಕರಲ್, ಬೈಗೆ, ಬಂಗಡೆ ಮುಂತಾದುವನ್ನು ಬೆಸ್ತರು ಮಾರಿಬಲೆಗಳನ್ನು ಬೀಸಿ ರಾಶಿಗಟ್ಟಲೆಯಾಗಿ ಹಿಡಿಯುತ್ತಾರೆ. ಕಡಲು ಮೀನುಗಳೆಲ್ಲ ಹೆಚ್ಚಾಗಿ ಸಮುದ್ರದ ಉಪ್ಪು ನೀರಿಗೇ ಸೀಮಿತವಾಗಿದ್ದರೂ ಕೆಲವು ಬಾರಿ ನದೀಮುಖಜ ಪ್ರದೇಶಗಳಲ್ಲೂ ಕಂಡುಬರುವುದುಂಟು.

ನದಿಗಳಲ್ಲಿ ದೊರಕುವ ಮೀನುಗಳಲ್ಲಿ ಮುಖ್ಯವಾದುವು ಇವು– ಕಾರ್ಪ್, ಕಟ್ಲ ಮೀನು (ಕಾಟ್ಲ ಕಾಟ್ಲ), ರೋಹುಮೀನು ಅಥವಾ ಮಂಡಕಾರ್ಲು (ಲೇಬಿಯೋ ರೋಹಿತ), ಕೆಮ್ಮಿನು (ಲೇಬಿಯೊ ಫಿಂಬ್ರಿಯೇಟಸ್), ಕುರಿಮೀನು (ಲೇ. ಕಾಲ್ಬಸ್), ಕಮ್ಮಚ್ಚಲು (ಲೇ. ಕಲ್ಬಾಸು), ಮಹ್ಶೀರ್ ಮೀನು (ಬಾರ್ಬಸ್), ಕನ್ನಡಿ ಮೀನು (ಮಿರರ್ ಕಾರ್ಪ್), ಗೆಂಡೆಮೀನು (ಪಂಕ್ಟಿಯಸ್ ಕರ್ನಾಟಿಕಸ್), ಕೂರಲು ಮೀನು (ಪಂ. ಡೂಬಿಯಸ್). ಬೆಟ್ಟಗುಡ್ಡಗಳ ಝರಿಗಳಲ್ಲಿ ಅರ್ಜಮೀನು (ಸಿರಿನ ರೇಬ) ಮತ್ತು ಸುರಾಯಿ ಅಥವಾ ಮೃಗಾಲಮೀನು (ಸಿ. ಮೃಗಾಲ) ಸಿಕ್ಕುತ್ತವೆ. ಮೀಸೆ ಮೀನು (ಕ್ಯಾಟ್ ಫಿಷ್), ಬಾಳೆಮೀನು (ವಲಾಗೊ ಅಟ್ಟು), ಕೆತ್ತಲು ಮೀನು (ಮಿಸ್ಟಸ್ ಜಾತಿ) ಮೊದಲಾದ ದೊಡ್ಡ ಗಾತ್ರದ ಮೀನುಗಳೂ ಚೇಳುಮೀನು (ಹೆಟರೋನ್ಯೂಸ್ಟಸ್ ಫಾಸಿಲಿಸ್), ಆಣಿ ಮೀನು (ಕ್ಲೇರಿಯಸ್ ಜಾತಿ) ಮುಂತಾದ ಸಣ್ಣಗಾತ್ರದ ಮೀನುಗಳೂ ಕೆರೆ ಕಟ್ಟೆಗಳಲ್ಲಿ ಸಾಮಾನ್ಯ. ಸಣ್ಣಗಾತ್ರದ ಮೀನುಗಳು ತಮ್ಮಲ್ಲಿನ ಅನುಷಂಗಿಕ ಶ್ವಸನಾಂಗಗಳ ಸಹಾಯದಿಂದ ಗಾಳಿಯನ್ನೇ ನೇರವಾಗಿ ಉಸಿರಾಡಬಲ್ಲುವು. ಹರಿಯುವ ನದಿ ತೊರೆಗಳಲ್ಲೂ ಕೆರೆ ಕಟ್ಟೆಗಳಲ್ಲೂ ಜೀವಿಸುವ ಮೀನುಗಳೂ ಇವೆ; ಚೌಲುಮೀನು (ಚಾನಾ ಮರೂಲಿಯಸ್), ಕೊರವಮೀನು (ಚಾ. ಸ್ಟ್ರಯೇಟಸ್), ಕುಚ್ಚುಮೀನು (ಚಾ. ಗೌಡ), ಹೂವುಮೀನು (ಚಾ. ಪಂಕ್ಟೇಟಸ್), ಹಾವು ಮೀನು (ಮಸ್ಟಸೆಂಬ್ಲಸ್ ಪಂಕಾಲಸ್), ಚಪ್ಪಲುಮೀನು (ನೋಟಾಪ್ಟಿರಸ್), ಬೆಳಚಿಮೀನು (ಚೇಲ), ಅಗಸಗಿತ್ತಿಮೀನು (ಬಾರಿಲಿಯಸ್)– ಇವು ಮುಖ್ಯವಾದುವು. ಸಿಹಿನೀರಿನ ಮೀನುಗಳಲ್ಲಿ ಬಹುಬಗೆಯುವು ತಿನ್ನಲು ಯೋಗ್ಯವಾದುವಾದರೂ ಕಾರ್ಪ್, ಮೀಸೆಮೀನು, ಬಾಳೆಮೀನು, ಗೆಂಡೆಮೀನು, ಔಲುಮೀನು, ಹಾವುಮೀನು, ಮಷಿರ್‌ಮೀನು ಬಲುರುಚಿಯಾದ ಮೀನುಗಳೆಂದು ಹೆಸರಾಗಿವೆ.

ಬೆನ್ನೆಲುಬಿಲ್ಲದ ಅಥವಾ ಅಕಶೇರುಕ ಪ್ರಾಣಿಗಳೂ ವಿಪುಲವಾಗಿವೆ. ಪ್ರೋಟೋಝೋವ ವಂಶದ ಅಮೀಬ, ಯುಗ್ಲಿನ, ಪ್ಯಾರಮೀಸಿಯಂ, ವೊರ್ಟಿಸೆಲ, ಯುಪ್ಲಾಟಿಸ್, ಸ್ಟೈಲೋನಿಕೆಯ ಮೊದಲಾದ ಹಲವು ಜೀವಜಾತಿಗಳು ಕೆರೆಕೊಳ ಮೊದಲಾದ ಜಲಾಶಯಗಳಲ್ಲಿ ಕಂಡುಬರುತ್ತವೆ. ಮಲೇರಿಯ ಕಾಯಿಲೆಗೆ ಕಾರಣವಾದ ಪ್ಲಾಸ್ಮೋಡಿಯಂ ಜಾತಿಯ ಪರತಂತ್ರ ಜೀವಿಗಳು ರಾಸಾಯನಿಕಗಳ ಪ್ರಭಾವದಿಂದ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿವೆ. ಇವೇ ಅಲ್ಲದೆ, ಇತರ ಜೀವಿಗಳ ದೇಹಗಳ ಪರತಂತ್ರ ಜೀವಿಗಳಾಗಿರುವ ಎಂಟಮೀಬ, ಓಪಲೈನ, ಬ್ಯಾಲಂಟೀಡಿಯಂ, ನಿಕ್ಟೋತೀರಸ್ ಮೊದಲಾದ ಪರತಂತ್ರ ಜೀವಿಗಳೂ ಕಂಡುಬರುತ್ತವೆ. ರೇಷ್ಮೆ ಹುಳುಗಳಿಗೆ ಉಪದ್ರವಕಾರಿಯಾದ ಕೆಲವು ಬಗೆಯ ಏಕಕೋಶಿಕ ಜೀವಿಗಳೂ ಇವೆ.

ಕೆಲವು ಬಗೆಯ ಸ್ಪಂಜು ಪ್ರಾಣಿಗಳು ಕಡಲಿನಲ್ಲಿ ದೊರೆಯುತ್ತವೆ. ಇವು ಸಣ್ಣ ಸಣ್ಣ ಗಿಡಗಳು ಬೆಳೆಯುವಂತೆ ನೀರಿನಲ್ಲಿ ಬೆಳೆಯುತ್ತವೆ. ಸೀಲೆಂಟರೇಟ ಗುಂಪಿನ ಪ್ರಾಣಿಗಳಲ್ಲಿ ಹೈಡ್ರ ಕೆರೆಕೊಳಗಳಲ್ಲಿ ಕಂಡುಬರುತ್ತದೆ. ಉಳಿದೆಲ್ಲ ಬಗೆಯ ಜೀವಿಗಳು ಕಡಲಿನಲ್ಲಿ ವಾಸಿಸುತ್ತವೆ. ಬಂಡೆಗೆ ಅಂಟಿಕೊಂಡು ನೀರಿನಲ್ಲಿ ವಾಸಿಸುವ ಕಡಲ ಹೂಗಳು (ಸೀ ಅನಿಮೋನು) ವರ್ಣರಂಜಿತವಾಗಿವೆ. ನದಿಮುಖಗಳಲ್ಲಿ, ಕಡಲ ಕೆರೆಗಳಲ್ಲಿ ಜೆಲ್ಲಿಫಿಷ್ ಅಥವಾ ಅಂಬಲಿ ಮೀನುಗಳು ತೇಲುತ್ತಿರುವುದು ಸಾಮಾನ್ಯ ದೃಶ್ಯ. ಅಲ್ಲಿಯ ಆಸುಪಾಸು ಜನರು ಇದನ್ನು ಸೂರ್ಯನ ಸಿಂಬಳ ಎಂದು ಕರೆಯುವುದುಂಟು.

ಚಪ್ಪಟೆ ದೇಹದ ಪ್ರಾಣಿಗುಂಪಿನಲ್ಲಿ ವಿವಿಧ ಜಾತಿಯ ಸ್ವತಂತ್ರ ಜೀವಿಗಳನ್ನು ಜೌಗುಪ್ರದೇಶದಲ್ಲಿ ಕಲ್ಲುಗಳ ಕೆಳಗೆ ಹರಿದಾಡುವುದನ್ನು ಕಾಣಬಹುದು. ಪರತಂತ್ರ ಜೀವಿಗಳಾದ ಲಾಡಿಹುಳುಗಳು ಪಕ್ಷಿ, ಸ್ತನಿ ಮೊದಲಾದುವುಗಳ ಕರುಳಿನಲ್ಲೂ ಜೀವಿಸುತ್ತವೆ. ಇವನ್ನು ಕೋಲಾರ, ತುಮಕೂರು, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಕಾಣಬಹುದು. ಕುರಿಗಳ ಯಕೃತ್ತಿನಲ್ಲಿ ಪರತಂತ್ರ ಜೀವಿ ವಾಸಿಸುತ್ತವೆ. ದುಂಡುಹುಳುಗಳ ವಂಶದ ಜೀವಿಗಳೆಲ್ಲವೂ ಪರತಂತ್ರ ಜೀವಿಗಳು. ಆನೆಕಾಲು ರೋಗಕ್ಕೆ ಕಾರಣವಾದ ದುಂಡುಹುಳು ಕಡಲು ತೀರಪ್ರದೇಶಗಳ ಜಿಲ್ಲೆಗಳಲ್ಲಿ ವ್ಯಾಪಕವಾಗಿದೆ. 90%–95% ಜನರ ಹೊಟ್ಟೆಯಲ್ಲಿ ಜಂತುಹುಳು, ಗುದದ ಹುಳುಗಳು ಸಾಮಾನ್ಯ. ನಾರುಹುಣ್ಣಿನ ರೋಗವನ್ನುಂಟುಮಾಡುವ ಡ್ರಾಕಂಕ್ಯುಲಸ್ ಮೆಡಿನೆನ್ಸಿಸ್ ಬಳ್ಳಾರಿ ಮತ್ತು ಚಿತ್ರದುರ್ಗಗಳಲ್ಲಿ ಹರಡಿವೆ. ಇದೇ ಅಲ್ಲದೆ ಸಸ್ಯವರ್ಗ ಮತ್ತು ಇತರ ಜೀವಿಗಳಲ್ಲಿ ಪರತಂತ್ರವಾಗಿರುವ ದುಂಡುಹುಳುಗಳು ಅನೇಕವಿವೆ.

ವಲಯವಂತವಂಶದ ಹುಳುಗಳ ಪ್ರತಿನಿಧಿಗಳು ಅನೇಕ ಜಾತಿಗಳಿಗೆ ಸಂಬಂಧಿಸಿವೆ. ಕಡಲಿನಲ್ಲಿರುವ ನೀರಿಸ್ ಮೊದಲಾದ ಸ್ವತಂತ್ರ ಜೀವಿಗಳು ಕಡಲ ತೀರದ ಬಂಡೆಗಳ ಬಿರುಕುಗಳಲ್ಲಿ ವಾಸಿಸುತ್ತವೆ. 10–15 ಬಗೆಯ ಎರೆಹುಳುಗಳಿವೆ. ಇವನ್ನು ಕೆಲವು ಕಡೆ ಭೂನಾಗವೆಂದೂ ಕರೆಯುವುದುಂಟು. ಜೌಗು ಪ್ರದೇಶದಲ್ಲಿ ಹಾಗೂ ನೀರಿನ ಆಸರೆಯಲ್ಲಿ ತಾತ್ಕಾಲಿಕ ಪರತಂತ್ರ ಜೀವಿಯಾಗಿ ಜೀವಿಸುವ ಜಿಗಣೆಗಳು ನಾಡಿನ ಹಲವೆಡೆ ದೊರೆತರೂ ಮಲೆನಾಡಿನ ಕಾಡುಗಳಲ್ಲಿ ಅವು ಅಧಿಕ. ಇವಕ್ಕೆ ಕಶೇರುಕಗಳ ರಕ್ತವೇ ಆಹಾರ. ಹಲವಾರು ಜಾತಿಯ ಬೇರೆ ಬೇರೆ ಬಗೆಯ ಜಿಗಣೆಗಳು, ಮೃದ್ವಂಗಿ ಮೊದಲಾದ ಪ್ರಾಣಿಗಳಲ್ಲಿ ಜೀವನ ಸಾಗಿಸುವುದೂ ಕಂಡುಬರುತ್ತವೆ.

ಮೃದ್ವಂಗಿಗಳ ಪ್ರತಿನಿಧಿಗಳೂ ಅಪರಿಮಿತ. ಕಪ್ಪೆಚಿಪ್ಪಿನ ಪ್ರಾಣಿಗಳು ನದಿ ಮತ್ತು ದೊಡ್ಡ ಕೆರೆಗಳಲ್ಲಿ ವಾಸಿಸುತ್ತವೆ. ಪೈಲ ಜಾತಿಯ ಹಾಗೂ ಇತರ ಬಗೆಯ ಬಸವನ ಹುಳುಗಳು ಬೆಂಗಳೂರು, ಮೈಸೂರು, ಮಂಡ್ಯ, ತುಮಕೂರು, ಹಾಸನ ಜಿಲ್ಲೆಗಳ ತೋಟಗಳಲ್ಲಿ ಕೆರೆಕಾಲುವೆಗಳಲ್ಲಿ ಸರ್ವೇಸಾಧಾರಣವಾಗಿ ಕಂಡುಬರುವ ಪ್ರಾಣಿಗಳು. ಸಮುದ್ರದ ದಂಡೆಯಲ್ಲಿ ಮೃದ್ವಂಗಿಗಳ ವಿವಿಧ ಜಾತಿಗಳು ವಿಪುಲವಾಗಿವೆ. ಕೈಟಾನ್ ಎಂಬ ಮೃದ್ವಂಗಿ ಕಡಲ ಬಂಡೆಗಳಿಗೆ ಅಂಟಿಕೊಂಡು ಜೀವಿಸುತ್ತದೆ. ವಿವಿಧ ಜಾತಿಯ ಶಂಖ ಪ್ರಾಣಿಗಳು ಕರ್ನಾಟಕದ ಕಡಲ ತೀರದಲ್ಲಿ ಬಹುವಾಗಿವೆ. ಬೆಸ್ತರ ಬಲೆಗೆ ಲಾಲಿಗೊ, ಸೆಪಿಯ ಮೊದಲಾದ ಶಿರಪಾದಿಗಳು ಬೀಳುತ್ತವೆ. ದೊಡ್ಡ ದೊಡ್ಡ ಸೆಪಿಯಗಳನ್ನು ಕಡಲ ತೀರದ ಜನರು ಆಹಾರವನ್ನಾಗಿ ಉಪಯೋಗಿಸುವುದುಂಟು. ಕಂಟಕಚರ್ಮಿಗಳು ಕಡಲತೀರಗಳಿಗೆ ಮಾತ್ರ ಸೀಮಿತ. ಮುಳ್ಳುಗೊಂಡೆ (ಸೀ ಅರ್ಚಿನ್) ಮತ್ತು ಪೆಡಸುನಕ್ಷತ್ರಗಳೇ (ಬ್ರಿಟಲ್‌ಸ್ಟಾರ್) ನಕ್ಷತ್ರಮೀನುಗಳಿಗಿಂತ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತವೆ. ಇವುಗಳ ಜಾತಿಯ ಸಂಖ್ಯೆಯೂ ಹೆಚ್ಚು. ಕಡಲ ಸೌತೆ, ಕಡಲ ಲಿಲ್ಲಿಗಳೂ ಕರ್ನಾಟಕದ ಕಡಲಿನಲ್ಲಿ ದೊರೆಯುತ್ತವೆ. ಸಂಧಿಪದಿ ವಂಶದ ಪ್ರಾಣಿಸಂಪತ್ತು ಹೇರಳವಾಗಿದೆ; ಮತ್ತು ವಿಭಿನ್ನವಾಗಿದೆ. ಬಗೆಬಗೆಯ ಸೀಗಡಿ, ಚಿಟ್ಲಿ, ಬೇಣಸ, ನಳ್ಳಿ, ಏಡಿ ಮೊದಲಾದುವು ಈ ವಂಶಕ್ಕೆ ಸೇರಿದುವು. ಇವು ಸಾಮಾನ್ಯವಾಗಿ ಮನುಷ್ಯನ ಆಹಾರ. ಕೀಟವರ್ಗದಲ್ಲಿ ಮನುಷ್ಯನ ದವಸಧಾನ್ಯಗಳಿಗೆ ಹಾಗೂ ಸಾಗುವಳಿ ಬೆಳೆಗಳಿಗೆ ಉಪದ್ರವವನ್ನುಂಟುಮಾಡುವ ಕೀಟಗಳಿವೆ. ಮಲೇರಿಯ, ಆನೆಕಾಲು ರೋಗ ಮೊದಲಾದ ಕಾಯಿಲೆಗಳನ್ನು ಹರಡುವ ಸೊಳ್ಳೆಗಳಿವೆ. ಮಿಡತೆ, ಮೊರವ, ಚಿಟ್ಟೆ ಮತ್ತು ಪತಂಗ, ಕೊಡತಿ ಹುಳು, ಜೀರುಂಡೆ ಮೊದಲಾದ ಕೀಟಗಳಲ್ಲಿ ಹಲವು ಬಗೆಯ ಜಾತಿಗಳಿವೆ. ಮಾನವನಿಗೆ ಉಪಕಾರಿಗಳಾದ ಜೇನುನೊಣ ಮತ್ತು ರೇಷ್ಮೆಹುಳು ಕೀಟವರ್ಗಕ್ಕೆ ಸೇರಿದುವು. ಮೈಸೂರು, ಕೊಳ್ಳೇಗಾಲ, ನಂಜನಗೂಡು, ಚನ್ನಪಟ್ಟಣ, ರಾಮನಗರ ಮೊದಲಾದ ಮುಖ್ಯ ಊರುಗಳ ಮತ್ತು ಅದರ ಆಸುಪಾಸು ಹಳ್ಳಿಗಳಲ್ಲಿ ರೇಷ್ಮೆ ಹುಳುಗಳನ್ನು ಜನರು ಸಾಕಿ ಲಾಭ ಪಡೆದರೆ, ಕೊಡಗು, ಶಿವಮೊಗ್ಗಗಳನ್ನೊಳಗೊಂಡ ಮಲೆನಾಡಿನಲ್ಲಿ ನಿಶಾಚಾರಿಗಳಾದ ಜರಿ ಅಥವಾ ಶತಪದಿ (ಸ್ಕೊಲೋಪೆಂಡ್ರ) ಮನೆ ಮಠಗಳಲ್ಲಿ, ಬಯಲಿನಲ್ಲಿ ಕಂಡುಬರುತ್ತದೆ. ಇದು ಸಾಮಾನ್ಯವಾಗಿ ತೇವವಾಗಿರುವ ಶೀತಪ್ರದೇಶದಲ್ಲಿ ವಾಸಿಸುತ್ತದೆ. ಸಾವಿರಕಾಲು ಅಥವಾ ಚಿಗಟೆಗಳು ಬಯಲು ಜೀವಿಗಳು; ನಿಧಾನವಾಗಿ ನಡೆಯತಕ್ಕವು; ಮತ್ತು ಮುಟ್ಟಿದರೆ ಸುರುಳಿ ಸುತ್ತಿಕೊಂಡು ಉಂಡೆಯಾಗುವ ಪ್ರವೃತ್ತಿಯುಳ್ಳವು. ಉಣ್ಣಿ ಚಿಗಟಗಳು ನಾಯಿ, ಹಸು ಮೊದಲಾದ ಸ್ತನಿಗಳ ಮೇಲೆ ಪರತಂತ್ರ ಜೀವನ ಸಾಗಿಸುವ ಜೀವಿಗಳು. ಜೇಡರಹುಳುಗಳ ಜೀವಜಾತಿಗಳಂತೂ ಅಧಿಕ ಸಂಖ್ಯೆಯಲ್ಲೇ ಕಂಡುಬರುತ್ತವೆ. ನೀಳಗಾಲಿನ ಗೋರ್ಕ ಹಾರ್ವೆಸ್ಟ್‌ಮ್ಯಾನ್ ಸಿಹಿನೀರಿನ ಮೇಲೆ ಮಂದೆಗೂಡಿ ವಾಸಿಸುತ್ತವೆ. ಇವನ್ನು ಬತ್ತ, ಕಬ್ಬು ಮೊದಲಾದ ಸಾಗುವಳಿ ಪ್ರದೇಶದಲ್ಲಿ ಕಾಣಬಹುದು. ಚೇಳುಗಳಲ್ಲಿ ಎರಡು ಮೂರು ಬಗೆಗಳಿವೆ. ಅಡಕೆ, ತೆಂಗು, ಬಾಳೆತೋಟಗಳಲ್ಲಿ ಚಿಟ್ಟಿ ಚೇಳು ಸಾಮಾನ್ಯವಾಗಿ ದೊರಕುತ್ತವೆ. ಇವು ಚೇಳಿನಂತೆಯೇ ಇರುತ್ತವೆ. ಆದರೆ ಉದರ ಚಿಕ್ಕದು. ಕೊಂಡಿಯಿರುವುದಿಲ್ಲ.

ಹೀಗೆ ಕರ್ನಾಟಕದ ಪ್ರಾಣಿಸಂಪತ್ತು ವೈವಿಧ್ಯ ಹಾಗೂ ವೈಪುಲ್ಯಭರಿತವಾಗಿದೆ.

(ಬಿ.ಎನ್.ಬಿ.)

**ಕರ್ಲಿ ಮೀನು:** ಇದು ಸಮುದ್ರವಾಸಿ. ಇದರ ವೈಜ್ಞಾನಿಕ ಹೆಸರು ಕೈರೊಸೆಂಟ್ರಸ್ ದೊರಬ್. ಆಂಗ್ಲ ಭಾಷೆಯಲ್ಲಿ ಸೇಬರ್ ಫಿಷ್ ಅಥವಾ ದೊರಬ್ ಎನ್ನುತ್ತಾರೆ. ಭಾರತದ ಸಮುದ್ರಗಳಲ್ಲಿ ಇದು ಹೆಚ್ಚಾಗಿ ಸಿಗುತ್ತದೆ. ಉದ್ದನೆಯ ಅಥವಾ ಬಲು ಸಂಕುಚಿತಗೊಂಡ ದೇಹ, ಉದರದ ಈಜುರೆಕ್ಕೆಯ ಮೇಲಿರುವ ಸಣ್ಣಕೂದಲುಗಳಂಥ ಅರಗಳು (ರೇ) ಮತ್ತು ಎದೆಯ ಭಾಗದ ಈಜುರೆಕ್ಕೆಯ ಕಕ್ಷದಲ್ಲಿ ಸ್ಕೇಲ್ ಇದೆ. ಇದು ಸಾಮಾನ್ಯವಾಗಿ ಸಾಗರದ ಇತರ ಮೀನುಗಳನ್ನು ತಿಂದು ಜೀವಿಸುತ್ತದೆ. ಆಹಾರದ ಮೀನುಗಳಲ್ಲಿ ಈ ಮೀನು ಬಹು ಮುಖ್ಯವಾದುದು. ***

**ಕಲಿಕೆ:** ಒಂದು ಜೀವಿ ಪಡೆದುಕೊಳ್ಳುವ ಎಲ್ಲ ಬಗೆಯ ತಿಳಿವು, ನೈಪುಣ್ಯ ಅಥವಾ ವರ್ತನೆ. ಜೀವಿ ಹುಟ್ಟಿದಾಗಲೇ ಜೀವಕಣಕ್ಕೆ ಅವಶ್ಯವಾದ ಎಲ್ಲ ಸಾಮರ್ಥ್ಯಗಳೂ ಸಾಮಾನ್ಯವಾಗಿ ಬೆಳೆದಿರುವುದಿಲ್ಲ. ಕಾಲಕ್ರಮೇಣ ಕೆಲವು ತಾವಾಗಿ ಪ್ರಕಾಶಕ್ಕೆ ಬರುತ್ತವೆ. ಮತ್ತೆ ಕೆಲವನ್ನು ಜೀವಿ ಸ್ವಪ್ರಯತ್ನದಿಂದಲೊ ಇತರರನ್ನು ಅನುಕರಿಸುವುದರಿಂದಲೊ ಇತರರಿಂದ ಹೇಳಿಸಿಕೊಂಡೊ ತನ್ನ ಸ್ವಂತ ಅನುಭವಗಳ ಮೂಲಕವೊ ಕಲಿತುಕೊಳ್ಳುತ್ತದೆ. ಸ್ವಪರಿವರ್ತನೆಯ ಸಾಮರ್ಥ್ಯ ಇತರ ಜೀವಿಗಳಿಗಿಂತ ಮಾನವನಿಗೆ ಹೆಚ್ಚು, ಇದಕ್ಕೆ ಅವನ ಮಿದುಳಿನ ವಿಶೇಷ ಬೆಳೆವಣಿಗೆಯೆ ಕಾರಣವೆಂಬುದು ಜೀವವಿಜ್ಞಾನಿಗಳ ಅಭಿಪ್ರಾಯ.

ಮಾನವೇತರ ಜೀವಿಗಳಿಗೆ ಕಲಿಕೆಯ ಅವಶ್ಯಕತೆ ಮಾನವನಿಗಿಂತ ಕಡಿಮೆ. ಅವು ಹುಟ್ಟುವಾಗಲೇ ತಮ್ಮ ಜೀವನಕ್ಕೆ ಅವಶ್ಯಕವಾದ ವರ್ತನವಿಧಾನಗಳನ್ನು ಪಡೆದುಕೊಂಡು ಬಂದಿರುತ್ತವೆ. ಕಲಿಯುವ ಅವಶ್ಯಕತೆ ಇಲ್ಲದೆಯೇ ಅನೇಕ ಜೀವಿಗಳಿಗೆ ಅವುಗಳ ಆಹಾರ, ಅದನ್ನು ತಿನ್ನುವ ವಿಧಾನ, ಅದು ಸಿಗುವ ಜಾಗ ಎಲ್ಲವೂ ತಿಳಿದಿರುತ್ತದೆ. ನೀರಿನಲ್ಲಿ ವಾಸಿಸುವ ಮೀನು, ಆಮೆ ಮೊದಲಾದ ಜೀವಿಗಳಿಗೆ ಈಜನ್ನು ಯಾರೂ ಕಲಿಸಬೇಕಾಗಿಲ್ಲ. ಕೆಲವು ಕೀಟಗಳು ಮತ್ತು ಪಕ್ಷಿಗಳು ತಮ್ಮ ಜಾತಿಗೆ ಅನುಗುಣವಾದ ಗೂಡುಗಳನ್ನು ಇತರರ ಸಹಾಯವಿಲ್ಲದೆಯೇ, ಇತರರು ಕಟ್ಟುವುದನ್ನು ನೋಡದೆಯೇ, ಕಟ್ಟಬಲ್ಲವು. ಇಂಥ ಪ್ರಕೃತಿಸಿದ್ಧವಾದ ಪ್ರವರ್ತನ ವಿಶೇಷಗಳು, ಸಿದ್ಧವರ್ತನೆಗಳು, ಸ್ವಾಭಾವಿಕ ವೃತ್ತಿಗಳು ಅಥವಾ ಮೂಲಪ್ರವೃತ್ತಿಗಳು (ಇನ್ಸ್ಟಿಂಕ್ಟ್ಸ್) ಎನಿಸಿಕೊಳ್ಳುತ್ತವೆ. ಇವು ಮನುಷ್ಯರಲ್ಲಿ ಕಂಡುಬಂದರೂ ಅವರ ವರ್ತನೆಯಲ್ಲಿ ಕಲಿಕೆಯ ಅಂಶವೇ ಬಹಳ ಹೆಚ್ಚು. ಜೀವವಿಕಾಸ ವೃಕ್ಷದಲ್ಲಿ ಉನ್ನತ ಮಟ್ಟವನ್ನು ಏರಿದಂತೆಲ್ಲ ಜೀವಿಗಳು ಕಲಿಯಬೇಕಾದ ಅಂಶ ಹೆಚ್ಚಾಗುತ್ತ ಹೋಗುತ್ತದೆ.

ಹುಟ್ಟಿದ ಒಡನೆಯೇ ಮಗುವಿನಲ್ಲಿ ಕಂಡುಬರುವ ಗುಣಗಳು ಮಾತ್ರವೇ ನೈಜವಾದವೆಂದೂ ಮಿಕ್ಕವೆಲ್ಲ ಕಲಿತುಕೊಂಡವೆಂದೂ ತಿಳಿಯಬಾರದು. ಅನೇಕ ಗುಣಗಳು ಕಲಿಯುವ ಅವಶ್ಯಕತೆ ಇಲ್ಲದೆಯೆ ತಾವಾಗಿಯೆ ಸಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಹುಟ್ಟಿದಾಗ ನಿಲ್ಲುವುದಕ್ಕಾಗಲಿ, ನಡೆಯುವುದಕ್ಕಾಗಲಿ ಆಗದ ಮಗು, ದೇಹದ ಮಾಂಸಖಂಡಗಳೂ ನರಗಳೂ ಮೂಳೆಗಳೂ ಬಲಿತು ಹತ್ತು ಹನ್ನೆರಡು ತಿಂಗಳಾದ ಕೂಡಲೆ ನಿಂತು ನಡೆಯಲು ಪ್ರಾರಂಭಿಸುತ್ತದೆ. ಹೀಗೆ ಬೆಳೆವಣಿಗೆಯಿಂದ ದೈಹಿಕ ಶಕ್ತಿಗಳಂತೆ ಮಾನಸಿಕ ಶಕ್ತಿಗಳೂ ಪಕ್ವತೆ ಪಡೆಯುತ್ತವೆ. ಕೆಲವು ಶಕ್ತಿಗಳು ಪಕ್ವವಾಗಲು ಬೆಳೆವಣಿಗೆ ಮಾತ್ರವೇ ಸಾಕು. ಇನ್ನು ಕೆಲವಕ್ಕೆ ಕಲಿಕೆ ಸಹಾಯ ಮಾಡುತ್ತದೆ.

ಎಲ್ಲ ಜೀವಿಗಳೂ ಕಲಿಯಬಲ್ಲುವು. ಒಂದು ಪ್ರಾಣಿ ಏನನ್ನು, ಎಷ್ಟು ವೇಗವಾಗಿ ಕಲಿಯಬಲ್ಲುದು ಎಂಬುದು ಆ ಪ್ರಾಣಿಯ ಸಾಮರ್ಥ್ಯವನ್ನಲ್ಲದೆ ಅದು ಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನೂ ಅವಲಂಬಿಸಿರುತ್ತದೆ. ಅಮೀಬದಂಥ ಸೂಕ್ಷ್ಮ ಜೀವಿಗಳು, ತಮ್ಮ ದೇಹಕ್ಕೆ ಹೊಂದಿಕೊಳ್ಳದ ಪರಿಸ್ಥಿತಿಗಳಿಂದ ಅಥವಾ ಅಪಾಯಕಾರಿ ಪದಾರ್ಥಗಳಿಂದ ತಪ್ಪಿಸಿಕೊಳ್ಳುವುದನ್ನು ಕಲಿಯುತ್ತವೆ. ಸಂಕೀರ್ಣ ಸಮಾಜದಲ್ಲಿ ಬಾಳಬೇಕಾದ ಮನುಷ್ಯ ಭಾಷೆ, ಗಣಿತ, ಒಳ್ಳೆಯ ನಡತೆ ಮೊದಲಾದವನ್ನು ಕಲಿಯುತ್ತಾನೆ.

ಕಲಿಕೆ ನಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಗಳನ್ನು ಅಭಿವೃದ್ಧಿಪಡಿಸುತ್ತದೆ. ಆದರೆ ಸರ್ವದಾ ಈ ಮಾತು ಸಮ್ಮತಾರ್ಹವಾಗಿಲ್ಲದಿರಬಹುದು. ಅರ್ಥವಿಲ್ಲದ ಹೆದರಿಕೆಗಳನ್ನು, ಕುರುಡು ನಂಬಿಕೆಗಳನ್ನು, ಅನೇಕ ದುರ್ವ್ಯಸನಗಳನ್ನು ಮಾನವರು ಕಲಿಯುತ್ತಾರೆ. ಇವುಗಳಿಂದ ಮಾನವನ ಜ್ಞಾನಪ್ರಜ್ಞೆಗಳ ಅಭಿವೃದ್ಧಿಗೆ ಬದಲು, ವ್ಯಕ್ತಿಗಳಿಗೂ ಸಮಾಜಕ್ಕೂ ಹಾನಿಯುಂಟಾಗಬಹುದು.

ಮಾನವೇತರ ಜೀವಿಗಳ ಕಲಿಕೆ: ಜೀವವಿಕಾಸವಾದವನ್ನು ಡಾರ್ವಿನ್ ಮಂಡಿಸಿದ ಅನಂತರ ವಿಜ್ಞಾನಿಗಳಿಗೆ ಮಾನವೇತರ ಜೀವಿಗಳ ವರ್ತನೆಗಳಲ್ಲಿ ಹೆಚ್ಚು ಆಸಕ್ತಿ ಮೂಡಿತೆಂದು ಹೇಳಬಹುದು. ಜಾರ್ಜ್ ರೋಮಾನೆ, ಲಾಯ್ಡ್ ಮಾರ್ಗನ್ ಮೊದಲಾದವರು ನಾಯಿ, ಇಲಿ, ಕೋತಿ ಮೊದಲಾದ ಜೀವಿಗಳ ವರ್ತನೆಗಳನ್ನು ಪರಿಶೀಲಿಸಿದರು. ಜೀವಿಗಳ ಕಲಿಕೆಯನ್ನು ಪ್ರಯೋಗಗಳ ಮೂಲಕ ಪರಿಶೋಧನೆ ಮಾಡಿದವರಲ್ಲಿ ಎಡ್ವರ್ಡ್ ಥಾರ್ನ್ ಡೈಕ್ ಮೊದಲನೆಯವ. ಆತ 1898ರಲ್ಲಿ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರಯೋಗಶಾಲೆ ಸ್ಥಾಪಿಸಿ, ಕೋಳಿ, ಬೆಕ್ಕು, ನಾಯಿ ಮತ್ತು ಕೋತಿಗಳ ಮೇಲೆ ಅನೇಕ ಪ್ರಯೋಗಗಳನ್ನು ನಡೆಸಿದ.

ಥಾರ್ನ್‌ಡೈಕ್ ಒಗಟು ಪೆಟ್ಟಿಗೆಯೊಂದರಲ್ಲಿ (ಪಜ಼ಲ್ ಬಾಕ್ಸ್) ಬೆಕ್ಕನ್ನು ಕೂಡಿಹಾಕಿದ. ಹಸಿದ ಬೆಕ್ಕು ಪೆಟ್ಟಿಗೆಯ ಬಾಗಿಲನ್ನು ತೆರೆದುಕೊಂಡು ಹೊರಗೆ ಬರಲು, ಬಾಗಿಲನ್ನು ತೆರೆಯಲು ಒಂದು ದಾರ ಎಳೆಯಲು, ಇಲ್ಲವೆ ಒಂದು ಗುಂಡಿ ಒತ್ತಲು ಕಲಿಯಬಲ್ಲದೆ? ಹೇಗೆ ಕಲಿಯಬಲ್ಲದು? ಇವೇ ಮೊದಲಾದ, ಕಲಿಕೆಗೆ ಸಂಬಂಧಿಸಿದ, ಅಂಶಗಳನ್ನು ಪರಿಶೀಲಿಸಿದ. ಬೆಕ್ಕು ಪೆಟ್ಟಿಗೆಯಿಂದ ಹೊರಗೆ ಬರಲು ಅನೇಕ ಪ್ರಯತ್ನಗಳನ್ನು ಮಾಡುತ್ತದೆ. ಕಂಬಿಗಳನ್ನು ಕಡಿಯುತ್ತದೆ. ಉಗುರುಗಳಿಂದ ಕೆರೆಯುತ್ತದೆ, ಕಂಬಿಗಳ ಮಧ್ಯದಿಂದ ತೂರಿಕೊಂಡು ಬರಲು ಪ್ರಯತ್ನ ಮಾಡುತ್ತದೆ. ಒಂದು ಪ್ರಯತ್ನ ಸಫಲವಾಗದಿದ್ದಲ್ಲಿ ಇನ್ನೊಂದು ಪ್ರಯತ್ನ ಮಾಡುತ್ತದೆ. ಈ ವಿಧವಾದ ಅಡ್ಡಾದಿಡ್ಡಿ ಪ್ರವರ್ತನೆಗೆ ತಿದ್ದಿಕೊಂಡು ಕಲಿಯುವ ಅಥವಾ ತಪ್ಪು ಸರಿ ನೋಡುವ (ಟ್ರಯಲ್ ಅಂಡ್ ಎರರ್) ಕ್ರಮ ಎನ್ನುತ್ತಾರೆ. ತಪ್ಪುಗಳನ್ನು ತಿದ್ದಿಕೊಳ್ಳುವ ಈ ಸತತ ಪ್ರಯತ್ನಗಳಲ್ಲಿ ಯಾವುದು ಸಫಲವಾಗುತ್ತದೆಂದು ತಿಳಿಯದ ಕಾರಣ ಜೀವಿ ಅದಕ್ಕೆ ಆ ನಿಮಿಷದಲ್ಲಿ ತೋಚಿದ ಪ್ರಯತ್ನ ಮಾಡುತ್ತದೆ. ಆದ್ದರಿಂದ ಇವುಗಳನ್ನು ಯಾದೃಚ್ಛಿಕ ದೋಷನಿವಾರಣಾ ಪ್ರಯತ್ನಗಳೆಂದು ಕರೆಯಬಹುದು. ಇಂಥ ಪ್ರಯತ್ನಗಳು ನಡೆಯುತ್ತಿರುವಾಗ ಅಕಸ್ಮಾತ್ತಾಗಿ ಬೆಕ್ಕು ಗುಂಡಿಯನ್ನು ಒತ್ತಿ ಬಾಗಿಲನ್ನು ತೆರೆದುಕೊಂದು ಹೊರಗೆ ಬರುತ್ತದೆ. ಈ ಪ್ರಯೋಗದಲ್ಲಿ ಬೆಕ್ಕು ಹಸಿದಿತ್ತೆಂಬುದನ್ನು ಗಮನಿಸಬೇಕು. ಹೊಟ್ಟೆ ತುಂಬ ಉಂಡ ಬೆಕ್ಕನ್ನು ಪೆಟ್ಟಿಗೆಯೊಳಗಿಟ್ಟು ಹೊರಗಡೆ ಆಹಾರ ಇಟ್ಟರೆ ಅದು ಬೆಚ್ಚಗೆ ಮುದುರಿಕೊಂಡು ನಿದ್ದೆಹೋಗುತ್ತದೆಯೆ ಹೊರತು ಕಲಿಯುವ ಪ್ರಯತ್ನ ಮಾಡುವುದಿಲ್ಲ.



**ಥೋರ್ನ್ ಡೈಕ್‌ನ ಪ್ರಯೋಗ**

ಥಾರ್ನ್‌ಡೈಕ್ ತಾನು ನಡೆಸಿದ ಪ್ರಯೋಗಗಳ ಆಧಾರದ ಮೇಲೆ ಕೈಕೊಂಡ ತೀರ್ಮಾನಗಳಿವು: 1 ಹಸಿವು, ನೀರಡಿಕೆ ಅಥವಾ ಇನ್ನಾವುದಾದರೂ ಹೇತುವಿನಿಂದ ಪ್ರಚೋದಿತವಾದ ಜೀವಿ ತನ್ನ ಅಪೇಕ್ಷೆಯನ್ನು ಈಡೇರಿಸಿಕೊಳ್ಳಲು ಅನೇಕ ಯಾದೃಚ್ಛಿಕ ಪ್ರಯತ್ನಗಳನ್ನು ಮಾಡುತ್ತದೆ. 2 ಈ ಯತ್ನಗಳಲ್ಲಿ ಆಕಸ್ಮಿಕವಾಗಿ ಯಾವುದೋ ಒಂದು ಕ್ರಿಯೆಯಿಂದ ಅದರ ಆಕಾಂಕ್ಷೆ ಈಡೇರುತ್ತದೆ. 3 ಮತ್ತೆ ಅಂಥದೇ ಪರಿಸ್ಥಿತಿಯನ್ನು ಎದುರಿಸಬೇಕಾದಾಗ ಜೀವಿ ಪುನಃ ಯಾದೃಚ್ಛಿಕವಾಗಿಯೇ ಪ್ರಯತ್ನಿಸಿದರೂ ಕ್ರಮೇಣ ವಿಫಲಕ್ರಿಯೆಗಳು ಕಡಿಮೆಯಾಗಿ ಸಫಲ (ಆಕಾಂಕ್ಷೆಗೆ ತೃಪ್ತಿಯನ್ನುಂಟುಮಾಡಿದ) ಕ್ರಿಯೆ ಸ್ಥಿರವಾಗಿ ನಿಲ್ಲುತ್ತದೆ. ಹೀಗೆ ವಿಫಲ ಕ್ರಿಯೆಗಳನ್ನು ದೂರ ಮಾಡಿ ಸಫಲಕ್ರಿಯೆಗಳನ್ನು ಬಲಪಡಿಸುವುದರಿಂದಲೇ ಕಲಿಕೆ ಸಿದ್ಧಿಸುತ್ತದೆ. 4 ಕಲಿಯಬೇಕಾದ ಕ್ರಿಯೆಗೂ ತನ್ನ ಪ್ರಯತ್ನಗಳಿಗೂ ಇರುವ ಕಾರ್ಯಕಾರಣ ಸಂಬಂಧದ ಅರಿವು ಕಲಿಕೆಗೆ ಅನಾವಶ್ಯಕವಾದ್ದರಿಂದ ಕಲಿಕೆ ಸಾಮಾನ್ಯವಾಗಿ ಯಾಂತ್ರಿಕ ವ್ಯಾಪಾರವಾಗಿರುತ್ತದೆ. ಸಫಲಕ್ರಿಯೆಗಳನ್ನು ಯಾಂತ್ರಿಕವಾಗಿ ದೃಢಪಡಿಸಿಕೊಳ್ಳುವುದೇ ಕಲಿಕೆ ಎಂದು ಥಾರ್ನ್ ಡೈಕ್ ಪ್ರತಿಪಾದಿಸಿದ.

ಕಲಿಕೆಯ ಪ್ರಯೋಗಗಳಲ್ಲಿ ಬಳಸುವ ಮತ್ತೊಂದು ಉಪಯುಕ್ತ ಪ್ರಾಣಿ ಬಿಳಿ ಇಲಿ. ಇದರ ಮೇಲೆ ಮೊಟ್ಟಮೊದಲು ಪ್ರಯೋಗಗಳನ್ನು ಕ್ಲಾರ್ಕ್ ವಿಶ್ವವಿದ್ಯಾನಿಲಯದ ವಿಲಾರ್ಡ್ ಸ್ಮಾಲ್ ನಡೆಸಿದ. ಅದಕ್ಕಾಗಿ ಆತ ಕಲಸುಮೆಲಸು (ಮೇಜ್) ಎಂಬ ಸಾಧನ ಉಪಯೋಗಿಸಿದ.

ಇದು ಒಂದು ಗೊಂದಲವಿನ್ಯಾಸ. ಇದರಲ್ಲಿ ಪ್ರವೇಶಸ್ಥಾನದಿಂದ ಆಹಾರವನ್ನು ಇಟ್ಟಿರುವ ಅಂತಿಮಸ್ಥಾನಕ್ಕೆ ಅನೇಕ ದಾರಿಗಳು ಕಾಣುತ್ತವೆ. ಇವುಗಳಲ್ಲಿ ಒಂದು ಮಾತ್ರ ಸರಿಯಾದ ಮಾರ್ಗ, ಮಿಕ್ಕವು ಸ್ವಲ್ಪ ದೂರ ಹೋದ ಮೇಲೆ ನಿಂತುಹೋಗುತ್ತವೆ. ಇಂಥವನ್ನು ಕುರುಡು (ಬ್ಲೈಂಡ್) ಎನ್ನುತ್ತಾರೆ. ಪ್ರವೇಶ ಸ್ಥಾನದಲ್ಲಿ ಬಿಟ್ಟಾಗ ಇಲಿ ತನ್ನ ಹಸಿವನ್ನು ತೀರಿಸಿಕೊಳ್ಳಲು ಅಂಧಮಾರ್ಗವನ್ನು ಬಿಟ್ಟು ಸರಿಯಾದ ಮಾರ್ಗ ಹಿಡಿದು ಅಂತಿಮ ಸ್ಥಾನ ಸೇರಿ ಅಲ್ಲಿ ಇಟ್ಟಿರುವ ಆಹಾರ ತಿನ್ನಬೇಕು. ಕಲಸುಮೆಲಸುಗಳನ್ನು ಉಪಯೋಗಿಸಿ ಬಿಳಿಯ ಇಲಿಗಳ ಮೇಲೆ ಮಾಡಿದ ಪ್ರಯೋಗಗಳು ಒಟ್ಟಿನಲ್ಲಿ ಒಗಟು ಪೆಟ್ಟಿಗೆಯಿಂದ ಥಾರ್ನ್‌ಡೈಕ್ ಕಂಡುಹಿಡಿದ ಅಂಶಗಳನ್ನೆ ಬಲಪಡಿಸಿವೆ.

ಅನುಬಂಧಿತ ಪ್ರತಿವರ್ತನೆಗಳು (ಕಂಡಿಷನ್ಡ್ ರೆಸ್ಪಾನ್ಸಸ್) : ಕಲಿಕೆಗೆ ಸಂಬಂಧಿಸಿದ ಪ್ರಯೋಗಗಳು, ಸೂತ್ರಗಳು ಮತ್ತು ವಾದಗಳು ಈಚೆಗೆ ರಷ್ಯದ ಶರೀರವಿಜ್ಞಾನಿ ಐವಾನ್ ಪಾವ್‌ಲೊವ್ 1901ನೆಯ ಇಸವಿಯಲ್ಲಿ ಕಂಡುಹಿಡಿದ ಅನುಬಂಧಿತ ಪ್ರತಿವರ್ತನೆಯ ತತ್ತ್ವಗಳಿಂದ ಬಹಳವಾಗಿ ಪ್ರಭಾವಿತವಾಗಿವೆ. ಕೆಲವರು, ಮುಖ್ಯವಾಗಿ ಅಮೆರಿಕದ ಮನೋವಿಜ್ಞಾನಿಗಳು, ಈ ಅನುಬಂಧನ ಕಾರ್ಯ ಎಲ್ಲ ಕಲಿಕೆಗೂ ಮೂಲ ಸೂತ್ರಗಳನ್ನು ತಿಳಿಸುತ್ತದೆಂದು ವಾದಿಸಿದ್ದಾರೆ.

ಐವಾನ್ ಪಾವ್‌ಲಾವ್ ನಾಯಿಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಯೋಗಗಳನ್ನು ನಡೆಸುತ್ತಿದ್ದ. ಆ ಸಮಯದಲ್ಲಿ ಆತ ಪರಿಶೀಲಿಸಿದ ನಾಯಿಯ ಮೂಲವರ್ತನೆಯನ್ನು ಆಧಾರವಾಗಿಟ್ಟುಕೊಂಡು ಅನೇಕ ಹೊಸ ಪ್ರಯೋಗಗಳನ್ನು ಮಾಡಿದ.

ಸಾಮಾನ್ಯವಾಗಿ ಒಂದು ಪ್ರಾಣಿಯ ಬಾಯಿಯಲ್ಲಿ ಆಹಾರವನ್ನು ಹಾಕಿದರೆ, ತತ್‌ಕ್ಷಣವೇ ಜೊಲ್ಲು ಸುರಿಯುತ್ತದೆ. ಜೊಲ್ಲಿನ ಉತ್ಪಾದನೆ ಬಾಯಿಯಲ್ಲಿಡಲಾದ ಆಹಾರಕ್ಕೆ ಸ್ವಾಭಾವಿಕ (ಮೂಲ) ಪ್ರತಿಕ್ರಿಯೆ. ಈ ಕ್ರಿಯೆಗೆ ಆಹಾರ ಸ್ವಾಭಾವಿಕ ಪ್ರಚೋದಕ. ಜೊಲ್ಲು ಸುರಿಸುವುದಕ್ಕೆ ಗಂಟೆಯ ಶಬ್ದ ಸ್ವಾಭಾವಿಕ ಪ್ರಚೋದಕವಲ್ಲ. ಆದ್ದರಿಂದ ಗಂಟೆ ಬಾರಿಸಿದರೆ ನಾಯಿಯು ಬಾಯಲ್ಲಿ ಜೊಲ್ಲು ಸುರಿಸದು. ಆದರೆ ಆಹಾರವನ್ನು ಬಾಯಿಯಲ್ಲಿ ಹಾಕುವುದಕ್ಕೆ ಒಂದು ಕ್ಷಣ ಮುಂಚೆ ಗಂಟೆ ಬಾರಿಸಿ ಆಮೇಲೆ ಆಹಾರ ಕೊಡುತ್ತಿದ್ದು ಕೆಲವು ಕಾಲ ಇದೇ ರೀತಿ ಪ್ರಯೋಗ ಮಾಡುತ್ತಿದ್ದರೆ, ಒಂದು ಘಟ್ಟದಲ್ಲಿ ಗಂಟೆ ಹೊಡೆದ ಕೂಡಲೆ ನಾಯಿಯ ಬಾಯಲ್ಲಿ ಜೊಲ್ಲು ಸುರಿಯುತ್ತದೆ; ಆಹಾರ ಕೊಡದೆ ಇದ್ದರೂ ಹೀಗಾಗುತ್ತದೆ.



ಪಾವ್‌ಲೋವನ ಪ್ರಯೋಗ

ಇದರಿಂದ ಗಂಟೆಯ ಶಬ್ದವೆಂಬ ಅನುಬಂಧಿತ ಪ್ರಚೋದಕಕ್ಕೂ (ಕಂಡಿಷನ್ ಸ್ಟಿಮ್ಯುಲಸ್) ಆಹಾರ ಕೊಟ್ಟಾಗ ಸ್ವಾಭಾವಿಕವಾಗಿ ಉಂಟಾಗುತ್ತಿದ್ದ ಜೊಲ್ಲು ಸುರಿಸುವ ಪ್ರತಿಕ್ರಿಯೆಗೂ ಒಂದು ಹೊಸ ಸಂಬಂಧವುಂಟಾಗುತ್ತದೆ. ಅನುಬಂಧಿತ ಪ್ರಚೋದಕಗಳಿಂದ ಉಂಟಾದ ಪ್ರತಿಕ್ರಿಯೆಯನ್ನು ಅನುಕೂಲಿತ ವರ್ತನೆ ಅಥವಾ ಅನುಬಂಧಿತ ಪ್ರತಿಕ್ರಿಯೆ ಎನ್ನುತ್ತಾರೆ. ಈ ಕ್ರಿಯೆಯನ್ನುಂಟುಮಾಡಿದ ಸ್ವಾಭಾವಿಕ ಪ್ರಚೋದಕದೊಡನೆ ಜೋಡಿಸಲಾದ ಅಸ್ವಾಭಾವಿಕ ಪ್ರಚೋದಕವನ್ನು (ಗಂಟೆಯ ಶಬ್ದ) ಅನುಬಂಧಿತ ಪ್ರಚೋದಕ ಎನ್ನುತ್ತಾರೆ. ಹೀಗೆ ಉತ್ಪಾದಿತವಾದ ಜೊಲ್ಲನ್ನು ಪಾವ್‌ಲಾವ್ ಮಾನಸಿಕ ಸ್ರವಣ (ಸೈಕಿಕ್ ಸೆಕ್ರೀಷನ್) ಎಂದು ಕರೆದಿದ್ದಾನೆ. ಇದರಲ್ಲಿ ಒಂದು ಪ್ರಚೋದಕಕ್ಕೂ ಒಂದು ಪ್ರತಿಕ್ರಿಯೆಗೂ ಹೊಸ ಸಂಬಂಧವನ್ನು ನಾಯಿ ಬೆಳೆಸಿಕೊಂಡಿರುವುದರಿಂದ ಇದು ಒಂದು ಸರಳರೀತಿಯ ಕಲಿಕೆ.

ಅನುಬಂಧಿತ ಪ್ರತಿವರ್ತನೆಗಳಿಗೆ ಸಂಬಂಧಿಸಿದ ಇನ್ನೂ ಅನೇಕ ವಿಷಯಗಳನ್ನು ಪ್ರಯೋಗಗಳಿಂದ ಪಾವಲಾನ್ ಕಂಡುಹಿಡಿದಿದ್ದಾನೆ. ಅನುಬಂಧಿತ ಪ್ರಚೋದಕ ಯಾವಾಗಲೂ ಮೊದಲು ಬಂದು ಅನಂತರ ಸ್ವಾಭಾವಿಕ ಪ್ರಚೋದಕ ಬರಬೇಕು.

ಮನೋವಿಜ್ಞಾನಿಗಳು ತಮ್ಮ ಪ್ರಯೋಗಗಳಲ್ಲಿ ಅನುಬಂಧಿತ ಪ್ರತಿವರ್ತನೆಗಳನ್ನು ಎರಡು ವಿಧವಾಗಿ ವಿಂಗಡಿಸಿದ್ದಾರೆ. ಪಾವ್‌ಲಾನ್ ಉಪಯೋಗಿಸಿದ ಪದ್ಧತಿಯನ್ನು ಅಭಿಜಾತ ಅನುಬಂಧನ ಅಥವಾ ಆದ್ಯ ಅನುಬಂಧನ (ಕ್ಲಾಸಿಕಲ್ ಕಂಡಿಷನಿಂಗ್) ಎಂದೂ ಇದಕ್ಕಿಂತ ಸ್ವಲ್ಪ ಭಿನ್ನವಾದ ಪದ್ಧತಿಯೊಂದನ್ನು ಉಪಕರಣ ಅನುಬಂಧನ (ಇನ್ಸ್ಟ್ರುಮೆಂಟಲ್ ಕಂಡಿಷನಿಂಗ್) ಎಂದೂ ಕರೆಯುತ್ತಾರೆ. ಅಭಿಜಾತ ವಿಧಾನಲ್ಲಿ ಸುಲಭತರವಾದ ಪ್ರಚೋದಕ ಪ್ರತಿಕ್ರಿಯೆಗಳ ಜೋಡಣೆ ಮಾತ್ರ ಕಾಣುತ್ತದೆ. ಅಲ್ಲದೆ ಅನುಬಂಧಿತ ಪ್ರಚೋದಕಕ್ಕೆ ಪ್ರಾಣಿ ಯಾವ ಪ್ರತಿಕ್ರಿಯೆ ತೋರಿಸಿತು ಎಂಬುದನ್ನು ಲೆಕ್ಕಿಸದೆ – ಅದು ಏನೇ ಮಾಡಲಿ – ಆ ಪ್ರಾಣಿಗೆ ಆಹಾರ ಕೊಡಲಾಯಿತು. ಉಪಕರಣ ಅನುಬಂಧನದಲ್ಲಿ ಹೀಗಾಗುವುದಿಲ್ಲ. ಅನುಬಂಧಿತ ಪ್ರಚೋದಕಕ್ಕೆ ಪ್ರಾಣಿ ಒಂದು ನಿರ್ದಿಷ್ಟವಾದ ಪ್ರತಿಕ್ರಿಯೆ ಮಾಡಿದರೆ ಮಾತ್ರ ಆಹಾರ ಕೊಡಲಾಗುವುದು. ಉದಾಹರಣೆಗೆ, ಗಂಟೆಯ ಶಬ್ದವಾದ ಕೂಡಲೆ ಆ ಪ್ರಾಣಿ ಒಂದು ಗುಂಡಿಯನ್ನು ಒತ್ತಿದರೆ ಮಾತ್ರ ಆಹಾರವನ್ನು ಕೊಡಲಾಗುವುದು. ಕೆಲವು ಅನುಭವಗಳ ಅನಂತರ ಪ್ರಾಣಿ ಗುಂಡಿಯನ್ನು ಒತ್ತಿ ಆಹಾರ ಸಂಪಾದಿಸಿಕೊಳ್ಳುತ್ತದೆ. ಈ ಪ್ರಯೋಗಗಳಲ್ಲಿ ಪ್ರಾಣಿಯ ಒಂದು ಪ್ರಚೋದಕಕ್ಕೆ ಪ್ರತಿಕ್ರಿಯೆಗಳಲ್ಲಿ ಒಂದನ್ನು, ಅಂದರೆ ಆಹಾರವನ್ನು ಅಥವಾ ಇನ್ನಾವುದಾದರೂ ಫಲವನ್ನು ಸಂಪಾದಿಸಿ ಕೊಡುವಂಥದನ್ನು ಮಾತ್ರ ಆರಿಸಿಕೊಳ್ಳಲು ಕಲಿಯಬೇಕು. ಈ ಕ್ರಿಯೆ ಆ ಫಲದ ಸಂಪಾದನೆಗೆ ಉಪಕರಣವಾಗುತ್ತದೆ. ಥಾರ್ನ್‌ಡೈಕ್ ಉಪಯೋಗಿಸಿದ ಒಗಟು ಪೆಟ್ಟಿಗೆ ಪ್ರಯೋಗಗಳಿಗೂ ಉಪಕರಣ ಅನುಬಂಧನ ಕ್ರಿಯೆಗಳ ಪ್ರಯೋಗಗಳಿಗೂ ಇರುವ ಸಾಮ್ಯವನ್ನು ಗಮನಿಸಬಹುದು.

ಯಾದೃಚ್ಛಿಕ ಪ್ರಯತ್ನಗಳಿಂದ ಯಾಂತ್ರಿಕವಾಗಿ ಕಲಿಕೆ ಸಿದ್ಧಿಸುವುದೆಂಬ ಥಾರ್ನ್‌ಡೈಕನ ವಾದವನ್ನು ಗೆಸ್ಟಾಲ್ಟ್ ಪಂಥಕ್ಕೆ ಸೇರಿದ ಜರ್ಮನ್ ಮನೋವಿಜ್ಞಾನಿಗಳು ನಿರಾಕರಿಸಿದ್ದಾರೆ. ಕಲಿಯಬೇಕಾದ ವಿದ್ಯೆ, ಕೆಲಸ ಅಥವಾ ಕ್ರಿಯೆಯ ಸ್ವಭಾವವನ್ನು ಅರಿತು ಅದರ ಅನೇಕ ಭಾಗಗಳನ್ನೂ ಅವುಗಳಿಗಿರುವ ಪರಸ್ಪರ ಸಂಬಂಧವನ್ನೂ ಅರ್ಥ ಮಾಡಿಕೊಂಡ ಹೊರತು ನಿಜವಾದ ಕಲಿಕೆ ಉಂಟಾಗುವುದಿಲ್ಲ; ಕಲಿಕೆಯಲ್ಲಿ ಇಂಥ ಒಳನೋಟ ಮುಖ್ಯವಾದ ಗುಣ; ಅದಿಲ್ಲದಿದ್ದರೆ ಕಲಿಕೆ ಸಾಧ್ಯವಿಲ್ಲ ಎಂದು ಅವರು ವಾದಿಸಿದ್ದಾರೆ. ಥಾರ್ನ್‌ಡೈಕ್ ಉಪಯೋಗಿಸಿದ ಒಗಟು ಪೆಟ್ಟಿಗೆ ಬೆಕ್ಕಿನ ಕಲಿಯುವ ಶಕ್ತಿಗೆ ಮೀರಿದ ಸಾಧನವಾದ್ದರಿಂದ, ಅದನ್ನು ಅಡ್ಡೇಟು ಗುಡ್ಡೇಟನಿಂದಲ್ಲದೆ ಇನ್ನಾವ ಮಾರ್ಗದಿಂದಲೂ ಕಲಿಯಲು ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ.

ತಮ್ಮ ವಾದವನ್ನು ಸಮರ್ಥಿಸಲು ಗೆಸ್ಟಾಲ್ಟ್ ಪಂಥದವರು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ವುಲ್ಫ್ ಹಾಂಗ್ ಕೊಯ್ಲರ್ ಚಿಂಪಾಂಜಿಗಳ ಮೇಲೆ ಮಾಡಿದ ಪ್ರಯೋಗಗಳು ಮುಖ್ಯವಾದವು.

ಒಂದು ಚಿಂಪಾಂಜಿಯನ್ನು ಬೋನಿನಲ್ಲಿಟ್ಟು ಕೂಡಿಹಾಕಿದೆ. ಅದಕ್ಕೆ ಹಸಿವಾಗಿದೆ. ಬೋನಿನ ಹೊರಗಡೆ ಸ್ವಲ್ಪ ದೂರದಲ್ಲಿ ಅದಕ್ಕೆ ಕಾಣುವಂತೆ ಒಂದು ಬಾಳೆಹಣ್ಣು ಇಟ್ಟಿದೆ; ಅದು ಚಿಂಪಾಂಜಿ ಬೋನಿನ ಕಂಬಿಗಳ ಮೂಲಕ ಕೈಚಾಚಿದರೆ ಸಿಗದಷ್ಟು ದೂರದಲ್ಲಿದೆ. ಬೋನಿನ ಒಂದು ಮೂಲೆಯಲ್ಲಿ ಒಂದು ಕೋಲು ಬಿದ್ದಿದೆ. ಚಿಂಪಾಂಜಿ ಮೊದಲು ಥಾರ್ನ್‌ಡೈಕನ ಬೆಕ್ಕಿನಂತೆ ಅನೇಕ ಅಡ್ಡೇಟುಗುಡ್ಡೇಟು (ಯಾದೃಚ್ಛಿಕ) ಪ್ರಯತ್ನಗಳನ್ನು ಮಾಡುತ್ತದೆ. ಹಾಗೆಯೇ, ಆಕಸ್ಮಿಕವಾಗಿ ಕೋಲನ್ನು ಉಪಯೋಗಿಸಿ ಹಣ್ಣನ್ನು ಬೋನಿನೊಳಕ್ಕೆ ಎಳೆದುಕೊಳ್ಳುತ್ತದೆ. ಆದರೆ ಒಂದು ಮುಖ್ಯವಾದ ವ್ಯತ್ಯಾಸವೇನೆಂದರೆ, ಒಂದು ಸಲ ಹೀಗೆ ಆಕಸ್ಮಿಕವಾಗಿ ಹಣ್ಣನ್ನು ಎಳೆದುಕೊಂಡ ಮೇಲೆ, ಯಾದೃಚ್ಛಿಕ ಪ್ರಯತ್ನಗಳೆಲ್ಲ ನಿಂತು ಹೋಗುತ್ತವೆ. ಇನ್ನೊಂದು ಸಲ ಇದೇ ಪರಿಸ್ಥಿತಿಯನ್ನು ಎದುರಿಸುವಾಗ ಚಿಂಪಾಂಜಿ ನೇರವಾಗಿ ಕೋಲನ್ನು ತೆಗೆದುಕೊಂಡು ಹಣ್ಣನ್ನು ತನ್ನೆಡೆಗೆ ಎಳೆದುಕೊಳ್ಳುತ್ತದೆ. ಇದರಿಂದ ಚಿಂಪಾಂಜಿಗೆ ಕಲಿಯಬೇಕಾದ ಕ್ರಿಯೆಯಲ್ಲಿ ಅಥವಾ ಸಮಸ್ಯೆಯಲ್ಲಿ ಅಂತರ್ದೃಷ್ಟಿ ಉಂಟಾಗಿದೆಯೆಂದು ತಿಳಿಯುತ್ತದೆ.

ಇದೇ ತರಹದ ಇನ್ನೊಂದು ಪ್ರಯೋಗದಲ್ಲಿ ಹಣ್ಣನ್ನು ಇನ್ನೂ ಸ್ವಲ್ಪ ದೂರದಲ್ಲಿಟ್ಟು (ಒಂದೇ ಕೋಲಿಗೆ ಎಟುಕದಂತೆ) ಎರಡು ಕೋಲುಗಳನ್ನು ಬೋನಿನಲ್ಲಿಡಲಾಗಿತ್ತು. ಈ ಎರಡನ್ನು ಸೇರಿಸಿ ಉದ್ದನೆಯ ಕೋಲನ್ನಾಗಿ ಮಾಡಿಕೊಂಡು ಚಿಂಪಾಂಜಿ ಹಣ್ಣನ್ನು ತನ್ನೆಡೆಗೆ ಎಳೆದುಕೊಳ್ಳಬಲ್ಲದೇ ಎನ್ನುವುದನ್ನು ಪರೀಕ್ಷೆ ಮಾಡಲಾಯಿತು. ಚಿಂಪಾಂಜಿ ತನ್ನ ಅಂತರ್ ದೃಷ್ಟಿಯನ್ನು ಉಪಯೋಗಿಸಿ ಇಂಥ ಸಮಸ್ಯೆಗಳನ್ನು ಬುದ್ಧಿವಂತಿಕೆಯಿಂದ ಕಲಿಯಬಲ್ಲದೆಂಬುದನ್ನು ಕೊಯ್ಲರನ ಪ್ರಯೋಗಗಳು ತೋರಿಸಿವೆ.

ಮಾನವರಲ್ಲಿ ಕಲಿಕೆ: ಮಾನವೇತರ ಜೀವಿಗಳ ಮೇಲೆ ನಡೆಸಿದಂತೆಯೇ ಮನೋವಿಜ್ಞಾನಿಗಳು ಮಾನವರ ಕಲಿಕೆಯನ್ನು ಪರಿಶೀಲಿಸಲು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಪರಭಾಷೆಗಳ ಶಬ್ದಗಳ ಅರ್ಥಗಳ ಕಲಿಕೆ, ಅಂಕಿಗಳ ಮತ್ತು ಪದಗಳ ಜೋಡಿಕೆ, ಬೆರಳಚ್ಚು (ಟೈಪ್ ರೈಟಿಂಗ್) ಕಲಿಕೆ, ಟೆಲಿಗ್ರಾಫ್ ಸಂಕೇತಗಳ ಕಲಿಕೆ ಮುಂತಾದುವನ್ನು ಪ್ರಾಯೋಗಿಕವಾಗಿ ಪರಿಶೀಲಿಸಲಾಗಿದೆ. ಮಾನವರಲ್ಲಿ ಅನುಬಂಧಿತ ಪ್ರತಿವರ್ತನೆಗಳು ಉಂಟಾಗುವುದನ್ನೂ ಪರಿಶೀಲಿಸಿದ್ದಾರೆ. ಕಲಿಕೆಯ ಮೇಲೆ ಪ್ರಭಾವ ಬೀರುವ ಅನೇಕ ವಿಷಯಗಳನ್ನೂ ಅವುಗಳ ಪ್ರಭಾವವೇನೆಂಬುದನ್ನೂ ಪ್ರಾಯೋಗಿಕವಾಗಿ ನಿರ್ಧರಿಸಿದ್ದಾರೆ. ಮಾನವರಿಗೂ ಇತರ ಜೀವಿಗಳಿಗೂ ಕಲಿಯುವ ಶಕ್ತಿಯಲ್ಲಿ ವ್ಯತ್ಯಾಸಗಳುಂಟು. ಆದರೆ ಕಲಿಕೆಯ ಮೂಲತತ್ತ್ವ ಎಲ್ಲರಿಗೂ ಒಂದೇ ಎಂದು ತಿಳಿದು ಬಂದಿದೆ.

ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಇವು: ಕಲಿಕೆ ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಅಭ್ಯಾಸ ಅವುಗಳಲ್ಲಿ ಒಂದು. ಕಲಿಯಬೇಕಾದ ಅನೇಕ ಕಾರ್ಯಗಳು ಮತ್ತು ವಿದ್ಯೆಗಳು ಅಭ್ಯಾಸಬಲದಿಂದ ಸಿದ್ಧಿಸುತ್ತವೆ; ಅವನ್ನು ಗ್ರಹಣಶಕ್ತಿಯಿಂದ ಮಾತ್ರವೇ (ಅಂತರ್ ದೃಷ್ಟಿ) ಕಲಿಯಲಾಗುವುದಿಲ್ಲ. ಅಭ್ಯಾಸದಿಂದ ಕಲಿಕೆಯ ಮೇಲಾಗುವ ಪರಿಣಾಮವನ್ನು ಕಲಿಕೆಯ ರೇಖೆಯ (ಲರ್ನ್ನಿಂಗ್ ಕರ್ವ್) ಮೂಲಕ ತೋರಿಸಬಹುದು. ಸಾಮಾನ್ಯವಾಗಿ ಕಲಿಯಲು ನಡೆಸಬೇಕಾಗುವ ಪ್ರಯತ್ನ, ಅದಕ್ಕೆ ಹಿಡಿಯುವ ಕಾಲ, ಕಲಿಯುವಾಗ ಉಂಟಾಗುವ ತಪ್ಪುಗಳು ಇವುಗಳಿಂದ ಕಲಿಕೆಯ ಫಲವೆಷ್ಟೆಂಬುದನ್ನು ಅರಿತುಕೊಳ್ಳಬಹುದು. ಕಲಿಕೆಗೆ ಪ್ರಮಾಣಗಳು ಅಥವಾ ಗುರುತುಗಳು ಎರಡು: ಕಲಿಯುವ ವೇಗ ಮತ್ತು ನಿಷ್ಕೃಷ್ಟತೆ. ಒಂದು ಪ್ರಯತ್ನದಿಂದ ಇನ್ನೊಂದಕ್ಕೆ ವೇಗ ಮತ್ತು ನಿಷ್ಕೃಷ್ಟತೆಗಳಲ್ಲಿ ಉಂಟಾಗುವ ಮಾರ್ಪಾಟನ್ನು ಕಲಿಕೆಯ ರೇಖೆ ತೋರಿಸುತ್ತದೆ. ಕಲಿಕೆ ಮುಂದುವರಿದಂತೆಲ್ಲ ತಪ್ಪುಗಳು ಕಡಿಮೆಯಾಗುತ್ತ, ಕಾಲವೂ ಕಡಿಮೆಯಾಗುತ್ತ, ನಿಷ್ಕೃಷ್ಟತೆ ಹೆಚ್ಚಾಗುತ್ತ ಹೋಗುವುದನ್ನು ರೇಖೆಯಲ್ಲಿ ಕಾಣಬಹುದು.

ಸಾಮಾನ್ಯವಾಗಿ ಯಾವುದಾದರೂ ಒಂದು ಕುಶಲವಿದ್ಯೆಯನ್ನು ಕುರಿತ ಕಲಿಕೆಯ ರೇಖೆಯಿಂದ ಗೊತ್ತಾಗುವ ಅಂಶವಿದು: ಆ ವಿದ್ಯೆಯಲ್ಲಿ ಕ್ರಮವಾಗಿ ಸ್ವಲ್ಪ ಸ್ವಲ್ಪವಾಗಿ ಪ್ರಗತಿಯಾಗುತ್ತದೆ. ಕಲಿಯಲು ಹಿಡಿಯುವ ಕಾಲವೂ ತಪ್ಪುಗಳೂ ಕಾಲದ ಅವಧಿಯೂ ಕ್ರಮೇಣ ಕಡಿಮೆಯಾಗುತ್ತವೆ. ಒಂದೊಂದು ಸಲ ಕಲಿಕೆಯ ರೇಖೆ ನಡುನಡುವೆ ಏರಿಳಿತಗಳಿಲ್ಲದೆ ನೇರವಾಗಿರುತ್ತದೆ. ಆ ಸಮಯದಲ್ಲಿ ಕಲಿಕೆ ವೃದ್ಧಿಯಾಗಿರಲಿಲ್ಲವೆಂಬುದನ್ನು ಅದು ಸೂಚಿಸುತ್ತದೆ. ಇಂಥ ಸ್ಥಳಗಳನ್ನು ಕಲಿಕೆಯ ಉತ್ಥಲಿ (ಲರ್ನಿಂಗ್ ಪ್ಲೇಟೊ) ಎಂದು ಕರೆಯುತ್ತಾರೆ. ಕಲಿಯುವವನು ಕಲಿಕೆಯಲ್ಲಿ ಅಶ್ರದ್ಧೆ ವಹಿಸಿದರೆ ಅಥವಾ ಆಸಕ್ತಿ ಕಳೆದುಕೊಂಡರೆ ಉತ್ಥಲಿಗಳು ಉಂಟಾಗುತ್ತವೆ. ಅಭ್ಯಾಸ ಮಾಡುವವನು ಇಂಥ ಸಮಯಗಳಲ್ಲಿ ಪ್ರಗತಿ ಇಲ್ಲದಿರುವುದನ್ನು ಕಂಡು ಹತಾಶನಾಗಿ ಕಲಿಕೆಯನ್ನು ಬಿಟ್ಟುಬಿಡುವುದುಂಟು. ನಿರಾಸಕ್ತಿಯಿಂದ ಕಲಿಕೆ ವೃದ್ಧಿಯಾಗದಿರುವುದೂ ವೃದ್ಧಿ ಕಾಣದ್ದರಿಂದ ನಿರಾಸಕ್ತಿಯೂ ಉಂಟಾಗುತ್ತವೆ. ಎರಡರಿಂದಲೂ ಉತ್ಥಲಿಗಳುಂಟಾಗುತ್ತವೆ. ಕಲಿಕೆಯ ಉತ್ಥಲಿಗಳು ಉಂಟಾದ ಮಾತ್ರಕ್ಕೆ ಪ್ರಗತಿ ನಿಂತು ಹೋಗಿದೆಯೆಂದೂ ಮುಂದೆ ಪ್ರಗತಿ ಅಸಾಧ್ಯವೆಂದೂ ತಿಳಿಯಬಾರದು. ಪ್ರಗತಿಯನ್ನು ವೇಗ ಮತ್ತು ನಿಷ್ಕೃಷ್ಟತೆಗಳಲ್ಲಿ ಮಾತ್ರವೇ ಅಲ್ಲದೆ ಕೆಲಸವನ್ನು ಮಾಡುವ ಸೌಲಭ್ಯದಲ್ಲೂ ಇತರ ಗುಣಗಳಲ್ಲೂ ಕಾಣಬಹುದು. ಉದಾಹರಣೆಗೆ ಒಂದು ಸಂಗೀತ ವಾದ್ಯವನ್ನು ಅಭ್ಯಾಸ ಮಾಡಿ ಸಾಧಿಸಿದವನ ಕಲಿಕೆಯಲ್ಲಿ ಪ್ರಗತಿಯನ್ನು ಕೀರ್ತನೆ ಅಥವಾ ಸ್ವರಾಲಾಪನೆ ಮಾಡುವ ವೇಗ ಮತ್ತು ನಿಷ್ಕೃಷ್ಟತೆಗಳಲ್ಲಿ ಮಾತ್ರವೇ ಅಲ್ಲದೆ, ಗೀತದ ಭಾವ ಪ್ರಕಟನೆಯಲ್ಲೂ ನುಡಿಸಿದ ಸ್ವರಗಳ ಗುಣದಲ್ಲೂ ವಾದ್ಯವನ್ನು ನುಡಿಸುವ ಸೌಲಭ್ಯದಲ್ಲೂ ಕಾಣಬಹುದು. ಈ ರೀತಿಯ ಪ್ರಗತಿಯನ್ನು ಕಲಿಕೆಯ ರೇಖೆಯಲ್ಲಿ ತೋರಿಸಲಾಗುವುದಿಲ್ಲ. ಕಷ್ಟತರವಾದ ವಿದ್ಯೆಯನ್ನು ಕಲಿಯುವಾಗ ಯಾರಿಗೇ ಆಗಲಿ ಉತ್ಥಲಿಗಳು ಆಗಾಗ ಉಂಟಾಗುತ್ತವೆ. ಇವುಗಳಿಂದ ಹತಾಶರಾಗದೆ ಅಭ್ಯಾಸವನ್ನು ಮುಂದುವರಿಸಿದರೆ ಆ ಘಟ್ಟ ಕಳೆದು ಪ್ರಗತಿಯುಂಟಾಗುತ್ತದೆ. ಉತ್ಥಲಿಗಳು ಕಲಿಕೆಯ ಕೊನೆಯನ್ನು ಸೂಚಿಸುವುದಿಲ್ಲ.

ಕಲಿಕೆಗೆ ಪ್ರಯತ್ನ ಮತ್ತು ಅಭ್ಯಾಸಗಳು ಮಾತ್ರವೇ ಸಾಲವು; ಕಲಿಯುವವನಿಗೆ ತಾನು ಎಷ್ಟರ ಮಟ್ಟಿಗೆ ಕಲಿಯುತ್ತಿದ್ದೇನೆ ಎಂಬ ಜ್ಞಾನ ಇರಬೇಕು. ಈ ಅಂಶವನ್ನು ಅನೇಕ ಪ್ರಯೋಗಗಳು ತೋರಿಸಿವೆ. ಒಂದು ಪ್ರಯೋಗದಲ್ಲಿ ಥಾರ್ನ್‌ಡೈಕ್ ಕೆಲವು ವಿದ್ಯಾರ್ಥಿಗಳ ಕಣ್ಣುಗಳಿಗೆ ಬಟ್ಟೆ ಕಟ್ಟಿ, ನಾಲ್ಕು ಅಂಗುಲದ ಗೆರೆಗಳನ್ನು ಎಳೆಯಲು ಅವರಿಗೆ ಹೇಳಿದ. ಪ್ರತಿಯೊಂದು ಸಲ ರೇಖೆ ಎಳೆದ ಮೇಲೂ ಅದರ ನಿಜವಾದ ಉದ್ದವನ್ನು ಅಳೆದುಕೊಂಡ. ಆದರೆ ಈ ವಿಷಯವನ್ನು ವಿದ್ಯಾರ್ಥಿಗಳಿಗೆ ತಿಳಿಸಲಿಲ್ಲ. ತಮ್ಮ ಸಾಧನೆಯ ಅರಿವೇ ಇಲ್ಲದೆ ವಿದ್ಯಾರ್ಥಿಗಳು ಸುಮಾರು ಎರಡು ಸಾವಿರ ಗೆರೆಗಳನ್ನು ಎಳೆದರೂ ಅವರ ಮೊದಲಿನ ಪ್ರಯತ್ನಗಳಿಗೂ ಕೊನೆಯ ಪ್ರಯತ್ನಗಳಿಗೂ ನಿಷ್ಕೃಷ್ಟತೆಯಲ್ಲಿ ಏನೂ ವ್ಯತ್ಯಾಸ ಕಾಣಲಿಲ್ಲ. ವಿದ್ಯಾರ್ಥಿಗಳ ಇನ್ನೊಂದು ಗುಂಪಿಗೆ, ಅವರು ರೇಖೆಗಳನ್ನು ಎಳೆದ ಕೂಡಲೇ ಅವುಗಳ ನಿಜವಾದ ಉದ್ದವನ್ನು ತಿಳಿಸಲಾಗಿತ್ತು. ಅಭ್ಯಾಸ ಹೆಚ್ಚಿದಂತೆಲ್ಲಾ ಅವರು ಆ ಕಲಿಕೆಯಲ್ಲಿ ಪ್ರಗತಿ ವ್ಯಕ್ತಪಡಿಸಿದರು.

ಕಲಿಕೆಯ ಪ್ರಯೋಗ ನಡೆಸಿದವರಿಗೆಲ್ಲ ವೇದ್ಯವಾಗಿರುವ ಒಂದು ಸಾಮಾನ್ಯ ಸಂಗತಿಯಿದು: ಯಾವ ಪ್ರಾಣಿಯೇ ಆಗಲಿ, ಕಲಿಕೆಯಿಂದ ಪ್ರಯೋಜನವಿದ್ದರೆ ಮಾತ್ರ ಕಲಿಯುವ ಪ್ರಯತ್ನ ಮಾಡುತ್ತದೆ. ಹೊಟ್ಟೆ ತುಂಬಿದ ಇಲಿಯನ್ನು ಅಥವಾ ಬೆಕ್ಕನ್ನು ಒಗಟು ಪೆಟ್ಟಿಗೆಯಲ್ಲಾಗಲಿ, ಕಲಸುಮೆಲಸಿನಲ್ಲಾಗಲಿ ಬಿಟ್ಟರೆ, ಅದು ಕಲಿಯುವ ಪ್ರಯತ್ನವನ್ನೇ ಮಾಡುವುದಿಲ್ಲ. ವಿದ್ಯಾರ್ಜನೆಯಲ್ಲಿ ಆಸಕ್ತಿಯೇ ಇಲ್ಲದ ವಿದ್ಯಾರ್ಥಿಗಳೂ ಅಷ್ಟೆ. ಪ್ರಾಣಿಗಳನ್ನು ಕಲಿಯುವಂತೆ ಮಾಡಲು, ಕಲಿಯಲು ಪ್ರಯತ್ನಿಸುವಂತೆ ಮಾಡಲು ಅಭಿಪ್ರೇರಣೆಗಳು (ಮೋಟೀವ್ಸ್) ಅವಶ್ಯಕ. ಪ್ರೇರಣೆಗಳನ್ನು ಮೂಡಿಸಲು ತೃಪ್ತಿಯನ್ನುಂಟುಮಾಡಬಲ್ಲ ಪದಾರ್ಥಗಳು ಅಥವಾ ಸ್ಥಿತಿಗಳು ಅವಶ್ಯಕ. ಅಭಿಪ್ರೇರಣೆಗಳನ್ನು ಹೊರಗೆಳೆದು ಅವಕ್ಕೆ ತೃಪ್ತಿಯನ್ನುಂಟು ಮಾಡಬಲ್ಲ ಪದಾರ್ಥ ಅಥವಾ ಸ್ಥಿತಿಗಳಿಗೆ ಉತ್ತೇಜಕಗಳೆಂದು (ಇನ್ಸೆಂಟಿವ್ಸ್) ಹೆಸರು. ಉತ್ತೇಜಕಗಳಿರದ ಅಭಿಪ್ರೇರಣೆಗಳಿಗೆ ಉಂಟಾಗುವ ತೃಪ್ತಿಯೇ ಕಲಿಕೆಯಿಂದ ಜೀವಿಗೆ ಉಂಟಾಗುವ ಪ್ರಯೋಜನ. ಮಾನವೇತರ ಪ್ರಾಣಿಗಳಲ್ಲಿರುವಂಥ ಹಸಿವು, ನೀರಡಿಕೆ ಮುಂತಾದ ಶಾರೀರಿಕ ಅವಶ್ಯಕತೆಗಳು ಮಾನವರಲ್ಲೂ ಬಲವಾಗಿದ್ದರೂ ಅವು ಯಾಂತ್ರಿಕವಾಗಿ ಈಡೇರುತ್ತಿರುವುದರಿಂದ ಮಾನವರ ಕಲಿಕೆಯಲ್ಲಿ ಅವು ಹೆಚ್ಚಿನ ಪ್ರಭಾವ ತೋರುವುದಿಲ್ಲ. ಗೌರವ, ಸ್ಥಾನ, ಬಿರುದು, ಬಹುಮಾನ, ಸ್ಪರ್ಧೆ, ಧನಾರ್ಜನೆ ಇತ್ಯಾದಿಗಳೇ ಅವರಿಗೆ ಬಹಳ ಮುಖ್ಯವಾದ ಅಭಿಪ್ರೇರಣೆ.

ಕಲಿಕೆಯ ಮೇಲೆ ಬಹುಮಾನ ಮತ್ತು ದಂಡನೆಗಳ (ರಿವಾರ್ಡ್ ಮತ್ತು ಪನಿಷ್‌ಮೆಂಟ್) ಪರಿಣಾಮವನ್ನು ತಿಳಿಯಲು ಅನೇಕ ಪ್ರಯೋಗಗಳು ನಡೆದಿವೆ. ಪ್ರಯೋಗ ಶಾಲೆಯಲ್ಲಿ ಉಪಯೋಗಿಸಿದ ದಂಡನೆಯಲ್ಲಿ ಧಿಕ್ಕಾರ (ರಿಪ್ರೂಫ್) ಮತ್ತು ಎಲೆಕ್ಟ್ರಿಕ್ ಷಾಕ್ ಮುಖ್ಯವಾದುವು; ಪ್ರಶಂಸೆ ಮತ್ತು ಹಣ – ಇವು ಮುಖ್ಯವಾದ ಬಹುಮಾನಗಳು. ಈ ಪ್ರಯೋಗಗಳಲ್ಲಿ ಜೀವಿಗಳು ತಪ್ಪು ಪ್ರತಿಕ್ರಿಯೆ ಮಾಡಿದಾಗ ಅವನ್ನು ದಂಡಿಸಿ, ಸರಿಯಾದ ಪ್ರತಿಕ್ರಿಯೆ ಮಾಡಿದಾಗ ಬಹುಮಾನ ಕೊಟ್ಟು, ಇವುಗಳ ಪ್ರಭಾವ ಮುಂದೆ ಆ ಜೀವಿಗಳು ಮಾಡುವ ಕಲಿಕೆಯ ಪ್ರಯತ್ನಗಳ ಮೇಲೆ ಹೇಗಿರುತ್ತದೆಯೆಂಬುದನ್ನು ಪರಿಶೀಲಿಸಿದ್ದಾರೆ. ಒಂದು ಪ್ರತಿಕ್ರಿಯೆಗೆ ಬಹುಮಾನ ದೊರೆತರೆ ಮುಂದೆ ಸಿಕ್ಕುವ ಅವಕಾಶಗಳಲ್ಲಿ ಆ ಪ್ರತಿಕ್ರಿಯೆಯ ಪುನರುಕ್ತಿಯಾಗುತ್ತದೆ; ಅದರಿಂದ ಅದು ದೃಢಗೊಳ್ಳುತ್ತದೆ. ಆದರೆ ಒಂದು ಪ್ರತಿಕ್ರಿಯೆಗೆ ದಂಡನೆ ಒದಗಿದರೆ ಮುಂದೆ ಮಾಡುವ ಕಲಿಕೆಯ ಪ್ರಯತ್ನಗಳಲ್ಲಿ ಉನ್ನತಿಯಾಗುತ್ತದೆಂದು ಹೇಳಲಾಗುವುದಿಲ್ಲ. ದಂಡನೆ ಮತ್ತು ಬಹುಮಾನಗಳು ಸಾಮಾನ್ಯವಾಗಿ ಪರಸ್ಪರ ವಿರುದ್ಧ ಪರಿಣಾಮಗಳನ್ನುಂಟು ಮಾಡುವುದಾದರೂ ಆ ಬಗ್ಗೆ ಪ್ರಯೋಗ ಸಿದ್ಧವಾದ ಆಧಾರ ಸಿಕ್ಕಿಲ್ಲ. ದಂಡನೆಯಿಂದ ದಶಗುಣಗಳು ಬರುವುದೆಂಬ ಜನರ ಸಾಮಾನ್ಯ ನಂಬಿಕೆ ಸರಿಯಲ್ಲ. ಇಷ್ಟೇ ಅಲ್ಲದೆ, ದಂಡನೆ ಬಹಳ ತೀವ್ರವಾಗಿ ದೈಹಿಕವಾಗಿ ನೋವನ್ನುಂಟು ಮಾಡುವುದಾಗಿದ್ದರೆ ಕಲಿಯುವವನಿಗೆ ಭೀತಿ ಹುಟ್ಟಿ ಸನ್ನಿವೇಶ ಗೊಂದಲಮಯವಾಗಿ ಕಲಿಕೆ ನಿಧಾನವಾಗುವುದಲ್ಲದೆ, ಮಾನಸಿಕ ಕ್ಷೋಭೆಯೂ ಉಂಟಾಗುತ್ತದೆ.

ಕಲಿಕೆಯ ಮೂಲತತ್ತ್ವ: ಕಲಿಕೆಯ ಮೂಲತತ್ತ್ವಗಳ ಬಗ್ಗೆ ಮತ್ತು ಅದು ಸಿದ್ಧಿಸುವ ರೀತಿಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆ ಬಗ್ಗೆ ಹೊರಬಂದಿರುವ ಸಿದ್ಧಾಂತಗಳನ್ನು ಸಾಹಚರ್ಯ ಸಿದ್ಧಾಂತಗಳು (ಅಸೋಸಿಯೇಷನ್ ಥಿಯರೀಸ್), ಗ್ರಹಣ ಸಿದ್ಧಾಂತಗಳು (ಪರ್ಸೆಪ್ಚುಯಲ್ ಥಿಯರೀಸ್) ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಥಾರ್ನ್‌ಡೈಕ್, ಕ್ಲಾರ್ಕ್ ಹಲ್ ಮೊದಲಾದವರು ಸಾಹಚರ್ಯ ಸಿದ್ಧಾಂತವಾದಿಗಳು. ಟಾಲ್ಮನ್, ಕೊಯ್ಲರ್ ಮೊದಲಾದವರು ಗ್ರಹಣ ಪಂಥಕ್ಕೆ ಸೇರಿದವರು. ಒಂದು ಹೊಸ ಪರಿಸ್ಥಿತಿಯನ್ನು ಎದುರಿಸಬೇಕಾದಾಗ ಜೀವಿಗಳು ತಮಗೆ ಪ್ರಕೃತಿದತ್ತವಾದ ಮತ್ತು ಗತ ಅನುಭವದಿಂದ ತಾವು ಸಂಪಾದಿಸಿದ ಪ್ರತಿಕ್ರಿಯೆಗಳಲ್ಲಿ ಯಾವುದಾದರೂ ಒಂದನ್ನು ತೋರ್ಪಡಿಸುತ್ತವೆಯೆಂದು ಸಾಹಚರ್ಯ ಸಿದ್ಧಾಂತ ಹೇಳುತ್ತದೆ. ಅದರಿಂದ ಫಲ ಉಂಟಾಗದಿದ್ದಲ್ಲಿ ಇನ್ನೊಂದನ್ನು ಹೊರಗೆಡಹುತ್ತವೆ. ಅದೂ ನಿಷ್ಫಲವಾದಲ್ಲಿ ಮತ್ತೊಂದನ್ನು ನಿರ್ವಹಿಸುತ್ತವೆ. ಹೀಗೆ ಸಮರ್ಪಕವಾದ ಪ್ರತಿಕ್ರಿಯೆ ಸಿಕ್ಕುವವರೆಗೆ ಸತತವಾಗಿ ಪ್ರಯತ್ನ ಮಾಡುತ್ತವೆ. ಕೊನೆಗೆ ಈ ಪ್ರತಿಕ್ರಿಯೆಗಳಲ್ಲಿ ಸಫಲವಾದವು ಸ್ಥಿರವಾಗಿ ನಿಲ್ಲುತ್ತವೆ; ವಿಫಲವಾದವು ಮರೆತು ಹೋಗುತ್ತವೆ. ಸಫಲವಾದ ಪ್ರತಿಕ್ರಿಯೆಗಳಿಗೂ ಆ ಹೊಸ ಪರಿಸ್ಥಿತಿಗೂ ಒಂದು ದೃಢವಾದ ಸಂಬಂಧ ಉಂಟಾಗುತ್ತದೆ. ಮುಂದೆ ಇದೇ ಪರಿಸ್ಥಿತಿಯುಂಟಾದಾಗ ಇದರೊಡನೆ ಬಂಧಿತವಾದ ಪ್ರತಿಕ್ರಿಯೆಗಳೇ ಹೊರಗೆ ಬರುತ್ತವೆ. ಜೀವಿಗಳು ಮಾಡುವ ಪ್ರತಿಕ್ರಿಯೆಗಳ

ಪರಿಣಾಮವೇ ಮೇಲೆ ಹೇಳಿದ ಬಂಧನ ಅಥವಾ ಸಾಹಚರ್ಯಕ್ಕೆ ಕಾರಣ. ಈ ವಾದವನ್ನು ಥಾರ್ನ್‌ಡೈಕ್ ಕಲಿಕೆಯ ಎರಡು ಸೂತ್ರಗಳಲ್ಲಿ ಸಂಗ್ರಹಿಸಿದ್ದಾನೆ. ಈ ಎರಡು ಸೂತ್ರಗಳನ್ನು ಅಭ್ಯಾಸ ಸೂತ್ರ (ಲಾ ಆಫ್ ಎಕ್ಸರ್‌ಸೈಜ್) ಮತ್ತು ಪರಿಣಾಮ ಸೂತ್ರ (ಲಾ ಆಫ್ ಎಫೆಕ್ಟ್) ಎಂದು ಕರೆದಿದ್ದಾನೆ. ಅಭ್ಯಾಸದ ಬಲದಿಂದ ಕಲಿಕೆಯಲ್ಲಿ ಪ್ರಗತಿಯುಂಟಾಗುತ್ತದೆಂದು ಅಭ್ಯಾಸ ಸೂತ್ರ ತಿಳಿಸುತ್ತದೆ. ಅಭ್ಯಾಸ ಮಾತ್ರವೇ ಕಲಿಕೆಗೆ ಸಾಲದು; ಪ್ರಯತ್ನಗಳಿಂದ ದೊರಕುವ ಪರಿಣಾಮವನ್ನೂ ಅದು ಅವಲಂಬಿಸಿದೆ – ಎಂದು ಪರಿಣಾಮ ಸೂತ್ರ ತಿಳಿಸುತ್ತದೆ. ತೃಪ್ತಿ, ಜಿಗುಪ್ಸೆಗಳು (ಸ್ಯಾಟಿಸ್‌ಫಾಕ್ಷನ್ ಅಂಡ್ ಅನಾಯೆನ್ಸ್) ಅಥವಾ ಬಹುಮಾನ ದಂಡನೆಗಳು ಸಮಾನಶಕ್ತಿಯುಳ್ಳವುಗಳೆಂದೂ ಬಹುಮಾನ ಅದರ ಹಿಂದೆ ಬಂದ ಪ್ರತಿಕ್ರಿಯೆಯನ್ನು ದೃಢಗೊಳಿಸುತ್ತದೆಂದೂ ದಂಡನೆ ಅದರ ಹಿಂದೆ ಬಂದ ಕ್ರಿಯೆಯನ್ನು ಶಿಥಿಲಗೊಳಿಸುತ್ತದೆಂದೂ ಪರಿಣಾಮ ಸೂತ್ರವನ್ನು ಮೊದಲು ರಚಿಸಿದಾಗ ಥಾರ್ನ್‌ಡೈಕ್ ನಂಬಿದ್ದ. ವಿಫಲವಾದ ಕ್ರಿಯೆಯನ್ನು ದೂರ ಮಾಡುವ ಶಕ್ತಿ ದಂಡನೆಗೆ ಇಲ್ಲವೆಂಬುದು ಅನಂತರದ ಪ್ರಯೋಗಗಳಿಂದ ತಿಳಿದುಬಂದಿದ್ದರಿಂದ, ದಂಡನೆಗೆ ಸಂಬಂಧಿಸಿದ ಭಾಗವನ್ನು ಪರಿಣಾಮ ಸೂತ್ರದಿಂದ ತೆಗೆದು ಹಾಕಿದ. ಥಾರ್ನ್‌ಡೈಕನ ವಾದವನ್ನು ಕ್ಲಾರ್ಕ್ ಹಲ್ ಪೂರ್ತಿಯಾಗಿ ಒಪ್ಪದಿದ್ದರೂ ಅವರಿಬ್ಬರ ವಾದಗಳಲ್ಲಿ ಬಹಳ ಸಾಮ್ಯವುಂಟು. ಸಾಹಚರ್ಯ ಸಿದ್ಧಾಂತದ ಮುಖ್ಯಾಂಶಗಳಿವು: 1 ಜೀವಿಗಳು ಪರಿಸ್ಥಿತಿ–ಪ್ರತಿಕ್ರಿಯೆಗಳ ಜೋಡಣೆಯನ್ನು ಕಲಿಯುತ್ತವೆ. 2 ಈ ಜೋಡಣೆ ಪರಿಣಾಮವನ್ನೇ ಅವಲಂಬಿಸಿದೆ. 3 ಇದು ಯಾಂತ್ರಿಕವಾಗಿ ನಡೆಯುತ್ತದೆ. ಗ್ರಹಣವಾದಿಗಳು ಇವನ್ನು ಒಪ್ಪುವುದಿಲ್ಲ. ಕಲಿಯಬೇಕಾದ ವಿದ್ಯೆಯಲ್ಲಿ ಅಂತರ್ದೃಷ್ಟಿ ಇಲ್ಲದೆ ಕಲಿಕೆ ಉಂಟಾಗುವುದಿಲ್ಲ. ಆ ವಿದ್ಯೆಯ ಅಥವಾ ಕೆಲಸದ ಭಾಗಗಳನ್ನೂ ಅವುಗಳ ಮಧ್ಯೆ ಇರುವ ಪರಸ್ಪರ ಸಂಬಂಧಗಳನ್ನೂ ತಿಳಿಯದೆ ಯಾವ ವಿದ್ಯೆಯನ್ನೂ ಕಲಿಯಲಾಗುವುದಿಲ್ಲ ಎಂದು ಅವರು ವಾದಿಸಿದ್ದಾರೆ. ಈ ವಾದದ ಬಲವನ್ನು ತಿಳಿಯಲು ಕೊಹ್ಲರ್ ಚಿಂಪಾಂಜಿಗಳ ಮೇಲೆ ಮಾಡಿದ ಪ್ರಯೋಗಗಳನ್ನು ಹಿಂದೆಯೆ ವಿವರಿಸಿದೆ. ಸಾಹಚರ್ಯವಾದಿಗಳು ಉಪಯೋಗಿಸಿದ ಸಮಸ್ಯೆಗಳು ಅಥವಾ ಸಾಧನಗಳು ಇಲಿ, ಬೆಕ್ಕು ಮೊದಲಾದ ಜೀವಿಗಳ ಬುದ್ಧಿಯ ಮಟ್ಟವನ್ನು ಮೀರಿದವು; ಆದಕಾರಣ ಅವು ಗ್ರಹಣಶಕ್ತಿಯನ್ನು ತೋರ್ಪಡಿಸಲಾಗಲಿಲ್ಲ; ಅವು ಗ್ರಹಣಶಕ್ತಿಯನ್ನು ತೋರ್ಪಡಿಸಲು ಅವಕಾಶವೇ ಸಿಕ್ಕಲಿಲ್ಲ – ಎಂದು ಅವರು ಟೀಕೆ ಮಾಡಿದ್ದಾರೆ. ***

**ಕಲ್ಲುಗೌಜಲು ಹಕ್ಕಿ:** ಕೊಲಂಬಿಫಾರ್ಮಿಸ್ ಉಪಗಣದ ಟೀರೊಕ್ಲಿಡೆ ಕುಟುಂಬದ ಸದಸ್ಯ. ಈ ಕುಟುಂಬದಲ್ಲಿರುವ ವಿವಿಧ ಪ್ರಭೇದಗಳ ಹಕ್ಕಿಗಳಿಗೆ ಸ್ಯಾಂಡ್ ಗ್ರೌಸ್ ಎನ್ನುವರು. ಇವು ಹೆಚ್ಚಾಗಿ ಮರುಭೂಮಿಗಳಲ್ಲಿ ವಾಸಿಸುವುದರಿಂದ ಇದಕ್ಕೆ ಈ ಹೆಸರು. ಆದರೆ ವಾಸ್ತವವಾಗಿ ಇದು ಪಾರಿವಾಳದ ಹತ್ತಿರ ಸಂಬಂಧಿ.

ಒಟ್ಟು ೧೬ ಪ್ರಭೇದದ ಗೌಜಲು ಹಕ್ಕಿಗಳಿವೆ. ಇವು ಆಫ್ರಿಕ ಹಾಗೂ ಮಡಗಾಸ್ಕರ್, ದಕ್ಷಿಣ ಯೂರೋಪ್, ದಕ್ಷಿಣ ಹಾಗೂ ಮಧ್ಯ ಏಷ್ಯದ ಮರಳುಗಾಡುಗಳಲ್ಲಿ ವಾಸಿಸುತ್ತವೆ. ಇವುಗಳಲ್ಲಿ ಮುಖ್ಯವಾದುವು ಮಧ್ಯ ಏಷ್ಯಾ ನಿವಾಸಿಯಾದ ಸಿರಾಪ್ಟಿಸ್ ಪ್ಯಾರಡಾಕ್ಸಸ್; ಸ್ಪೇನ್, ಉತ್ತರ ಆಫ್ರಿಕ ಮತ್ತು ಏಷ್ಯಾ ನಿವಾಸಿಯಾದ ಟೀರೋಕ್ಲಿಸ್ ಆಲ್ಚಾಟ; ಭಾರತದಲ್ಲಿ ಕಾಣಬರುವ ಟೀರೋಕ್ಲಿಸ್ ಎಕ್ಸಸ್ಟಸ್ ಮತ್ತು ಟೀರೋಕ್ಲಿಸ್ ಇಂಡಿಕಸ್.



ದೇಹ ಗಾತ್ರ ೨೨–೪೦ ಸೆಂಮೀ ಉದ್ದ. ದೇಹದ ಬಣ್ಣ ಬೂದು ಅಥವಾ ಕಂದು. ಅಲ್ಲಲ್ಲಿ ಕಿತ್ತಳೆ, ಕೆಂಗಂದು, ಕಪ್ಪು ಅಥವಾ ಬಿಳಿಯ ಬಣ್ಣದ ಮಚ್ಚೆಗಳಿವೆ. ಹಕ್ಕಿಯ ಮೈ ಬಣ್ಣ ವಾಸಿಸುವ ಪರಿಸರದ ಬಣ್ಣದೊಂದಿಗೆ ಮಿಳಿತವಾಗಿರುವುದರಿಂದ ಈ ಹಕ್ಕಿಯನ್ನು ಗುರುತಿಸುವುದು ಕಷ್ಟವಾಗುತ್ತದೆ. ದೇಹವು ತಲೆ, ಕತ್ತು ಮತ್ತು ಹೊಟ್ಟೆಯ ಭಾಗಗಳಿಂದಾಗಿದೆ. ಈ ಭಾಗದಲ್ಲಿ ಚಿಕ್ಕ ಕಾಲುಗಳಿವೆ. ಚಿಕ್ಕ ಮೊನಚಾದ ಕೊಕ್ಕು, ಉದ್ದನೆಯ ಹಾಗೂ ಚೂಪಾದ ರೆಕ್ಕೆ ಮತ್ತು ಬಾಲ ಇವೆ. ಈ ಹಕ್ಕಿಗಳು ಸಾಮಾನ್ಯವಾಗಿ ಗುಂಪುಗಳಲ್ಲಿ ವಾಸಿಸುತ್ತವೆ. ಇವು ಹಾರುವುದು ಕಡಿಮೆ. ನೆಲದ ಮೇಲೆ ಪುಟ್ಟ–ಪುಟ್ಟ ಹೆಜ್ಜೆ ಹಾಕುತ್ತ ಓಡಾಡುತ್ತವೆ. ಶತ್ರುಪ್ರಾಣಿಗಳ ಸುಳಿವು ತಿಳಿದೊಡನೆ ವೇಗವಾಗಿ ಹಾರಿಹೋಗುತ್ತವೆ. ಇವು ಬಹಳ ಪುಕ್ಕಲು ಸ್ವಭಾವದ, ಎಚ್ಚರಿಕೆಯ ಹಕ್ಕಿಗಳು. ಸಣ್ಣ ಕಾಯಿಗಳು, ಕಾಳುಗಳು, ಮೊಗ್ಗುಗಳು ಹಾಗೂ ಸಣ್ಣಪುಟ್ಟ ಕೀಟಗಳು ಇವುಗಳ ಆಹಾರ.

ಕಲ್ಲುಗೌಜಲು ಹಕ್ಕಿಗಳು ಸಾಮಾನ್ಯವಾಗಿ ಬಂಜರುಪ್ರದೇಶಗಳಲ್ಲಿ ವಾಸಿಸಿದರೂ, ದಿನಕ್ಕೆರಡು ಬಾರಿ ನೀರು ಕುಡಿಯಲು ಹತ್ತಿರದ ಯಾವುದಾದರೂ ಕೊಳ, ತೊರೆಗಳಿಗೆ ಭೇಟಿಕೊಡುತ್ತವೆ. ಈ ಹಕ್ಕಿಗಳು ಬಲು ಸೂಕ್ಷ್ಮಮತಿಗಳು. ನೀರಿಗೆ ಬಾಯಿಕ್ಕುವ ಮುನ್ನ ಇವು ಕೊಳದಿಂದ ನೂರಾರು ಗಜಗಳ ದೂರದಲ್ಲೇ ಇಳಿದು ೫–೧೦ ನಿಮಿಷ ಯಾರಾದರೂ ಶತ್ರುಗಳಿದ್ದಾರೋ ಎಂದು ನೋಡಿ ತಿಳಿಯುತ್ತವೆ. ಯಾವ ಶತ್ರು ಜೀವಿಗಳು ಇಲ್ಲ ಎಂದು ಮನವರಿಕೆಯಾದ ಮೇಲೆ ನೀರು ಕುಡಿಯಲು ಧಾವಿಸುತ್ತವೆ. ನೀರಿನಲ್ಲಿ ಎದೆಯಾಳದವರೆಗೂ ಇಳಿದು ನೀರನ್ನು ಹೀರಿ ಕುಡಿಯುತ್ತವೆ. ಅಲ್ಲಿಂದ ಗೂಡಿಗೆ ತಕ್ಷಣ ವಾಪಸಾದ ಮೇಲೆ, ಒದ್ದೆಯಾದ ಎದೆಯನ್ನು ಮರಿಗಳಿಗೆ ಸೀಪಲು ಕೊಟ್ಟು ಅವಕ್ಕೆ ನೀರುಣಿಸುತ್ತವೆ. ಈ ಹಕ್ಕಿಗಳು ನೆಲದ ಮೇಲೆ ಗೂಡುಕಟ್ಟಿ ೨–೪ ಮೊಟ್ಟೆಗಳನ್ನಿಡುತ್ತವೆ. ಗಂಡು ಹೆಣ್ಣುಗಳೆರಡೂ ಸರದಿಯ ಪ್ರಕಾರ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿ ಮಾಡುತ್ತವೆ. ಮರಿಗಳಿಗೆ ಆಹಾರ ಕೊಟ್ಟು ಸಲಹುತ್ತವೆ.

ಕೆಲವು ಕಲ್ಲುಗೌಜಲು ಹಕ್ಕಿಗಳು ವಲಸೆ ಹೋಗುತ್ತವೆ. ಉದಾ: ಮಧ್ಯಏಷ್ಯಾ ನಿವಾಸಿಯಾದ ಸಿರಾಪ್ಟಿಸ್ ಪ್ಯಾರಡಾಕ್ಸಸ್ ಹಕ್ಕಿ ಪಶ್ಚಿಮ ಯೂರೋಪಿಗೆ ಚಳಿಗಾಲದಲ್ಲಿ ವಲಸೆ ಹೋಗುತ್ತದೆ.

ಕಲ್ಲು ಗೌಜಲುಗಳು ಗೇಮ್ ಬರ್ಡ್ಸ್ ಎಂದು ಹೆಸರಾಗಿವೆ. ಇವುಗಳ ಮಾಂಸ ರುಚಿಯಾಗಿರುವುದರಿಂದ, ಈ ಹಕ್ಕಿಗಳನ್ನು ಬೇಟೆಯಾಡಿ ಕೊಲ್ಲಲಾಗುತ್ತಿದೆ. ಆದ್ದರಿಂದ ಈ ಹಕ್ಕಿಗಳು ವಿನಾಶದ ಭೀತಿ ಎದುರಿಸುತ್ತಿವೆ. (ಎಚ್.ಬಿ.ಡಿ.)

**ಕವಡೆಗಳು:** ಉದರಪಾದಿಗಳಲ್ಲಿ (ಗ್ಯಾಸ್ಟ್ರೋಪೋಡ) ಒಂದಾದ ಸೈಪ್ರೀಡೆ ಕುಟುಂಬಕ್ಕೆ ಸೇರಿದ ಮನೋಹರವಾದ ಮೃದ್ವಂಗಿಗಳು. ಉಷ್ಣವಲಯದ ಕಡಲವಾಸಿಗಳೆಂದು ಪ್ರಖ್ಯಾತಿಯಾಗಿದ್ದರೂ ಕೆಲವು ಅಪೂರ್ವ ಜಾತಿಯ ಕವಡೆಗಳು ಸಮಶೀತೋಷ್ಣವಲಯ ಹಾಗೂ ಶೀತವಲಯಗಳಲ್ಲೂ ಕಂಡುಬರುತ್ತವೆ. ಶಾಂತಸಾಗರ ಮತ್ತು ಹಿಂದೂ ಮಹಾಸಾಗರಗಳಲ್ಲಿರುವ ಹವಳದ ದ್ವೀಪಗಳ ಆಳವಿಲ್ಲದ ನೀರಿನಲ್ಲಿ ವಿಪುಲವಾಗಿ ದೊರೆಯುತ್ತವೆ. ಆಸ್ಟ್ರೇಲಿಯದ ಗ್ರೇಟ್ ಬ್ಯಾರಿಯರ್ ರೀಫ್ ಪ್ರದೇಶ ಕವಡೆಗಳ ಅಚ್ಚುಮೆಚ್ಚಿನ ಬೀಡು. ಸಾಮಾನ್ಯವಾಗಿ ಹವಳದ ದಿಣ್ಣೆಯಲ್ಲಿರುವ ಸ್ಥಳಗಳಲ್ಲಿ ಹೇರಳವಾಗಿಯೂ, ಕಲ್ಲುಬಂಡೆಗಳುಳ್ಳ ಸಮುದ್ರ ತಳದಲ್ಲಿ ವಿರಳವಾಗಿಯೂ ವಾಸಿಸುತ್ತವೆ.

ವೈವಿಧ್ಯಮಯ ವರ್ಣವಿನ್ಯಾಸ, ರಮಣೀಯ ಸೌಂದರ್ಯ ಮತ್ತು ಮಿರುಗುವ ನಯವಾದ ಮೈರಚನೆಗಳಿಂದ ಕವಡೆಗಳ ಚಿಪ್ಪುಗಳು ಲೋಕಪ್ರಸಿದ್ಧ. ಜೀವಂತ ಕವಡೆ ಪ್ರಾಣಿಗಳೂ ಕೂಡ ಆಕರ್ಷಣೀಯ ವರ್ಣ ವೈಖರಿ, ರೂಪುರೇಖೆಗಳು ಮತ್ತು ದಂತಪಂಕ್ತಿಗಳನ್ನು ಹೊಂದಿವೆ. ಆದ್ದರಿಂದಲೇ ಕವಡೆಗಳ ಚಿಪ್ಪುಗಳ ಶೇಖರಣೆಯ ವಿನ್ಯಾಸ ನಾಣ್ಯ ಮತ್ತು ಅಂಚೆಚೀಟಿಗಳ ಸಂಗ್ರಹಣೆಗಳಷ್ಟೇ ಆಕರ್ಷಕವಾಗಿದೆ. 18–19 ನೆಯ ಶತಮಾನಗಳಲ್ಲಿ ಈ ಶೇಖರಣ ಕಾರ್ಯ ಇಂಗ್ಲೆಂಡಿನಲ್ಲಿ ವಿಪುಲವಾಗಿತ್ತಲ್ಲದೆ ಮೋಜುಗಾರರ ಹಾಗೂ ಸಿರಿವಂತರ ಹವ್ಯಾಸಗಳಲ್ಲಿ ಅಗ್ರಸ್ಥಾನ ಪಡೆದಿತ್ತು. ಹೊಸ ಹೊಸ ದ್ವೀಪಗಳ ಅನ್ವೇಷಣೆಯಾದಂತೆಲ್ಲ ಅಪೂರ್ವ ಹಾಗೂ ಆಕರ್ಷಣೀಯ ಕವಡೆಗಳು ಬೆಳಕಿಗೆ ಬಂದುವು. ಅವುಗಳಿಗೆ ಉತ್ಕೃಷ್ಟವಾದ ಬೆಲೆಯೂ ದೊರೆಯುತ್ತಿತ್ತು. ಆದರೆ ಕಾಲ ಕ್ರಮೇಣ ಈ ಲಾಭದಾಯಕ ವೃತ್ತಿಯಲ್ಲಿ ಬಹು ಜನರು ನಿರತರಾದ್ದರಿಂದ ಕವಡೆಗಳ ಮೌಲ್ಯ ಕುಗ್ಗುತ್ತ ಬಂದು 19ನೆಯ ಶತಮಾನದ ಅಂತ್ಯದಲ್ಲಿ ಅವುಗಳ ಶೇಖರಣ ಕಾರ್ಯ ಕುಂಠಿತವಾಯಿತು. ಆದಿಯಲ್ಲಿ 30 ಪೌಂ.ಬೆಲೆ ಬಾಳುತ್ತಿದ್ದ ಆಸ್ಟ್ರೇಲಿಯದ ಅದ್ಭುತ ಕವಡೆ ( ಅಂಬಿಲಿಯಾ ಹೆಸಿಟೇಟ ) ಅತಿಯಾಗಿ ಸಿಕ್ಕುವಂತಾದ ಮೇಲೆ ಅದರ ಬೆಲೆ ಇಳಿಮುಖವಾಗುತ್ತ ಬಂದು ಈಗ ಅದಕ್ಕೆ 1 ಪೌಂಡಿಗಿಂತ ಕಡಿಮೆ ಹಣಕ್ಕೂ ಗಿರಾಕಿಗಳಿಲ್ಲದಂತಾಗಿದೆ. ಆದರೆ ಕೌಮಾರ ಕವಡೆ (ಸೈಪ್ರಿಯಾ ವ್ಯಾಲೆಂಬಿಯ) ಈಗಲೂ ವಿರಳವಾದ್ದರಿಂದ ಅದು ತನ್ನ ಜನಪ್ರಿಯತೆಯನ್ನು ಇನ್ನೂ ಕಾಪಾಡಿಕೊಂಡು ಬಂದಿದೆ.

ಸಾಮಾನ್ಯವಾಗಿ ಜೀವಂತ ಕವಡೆಗಳಲ್ಲಿ ವೈಭವದ ನೈಜಸ್ವರೂಪ ಅಷ್ಟಾಗಿ ಗೋಚರ ಆಗುವುದಿಲ್ಲ. ಇವುಗಳ ದೇಹ ರಚನೆಯೇ ಇದಕ್ಕೆ ಮುಖ್ಯ ಕಾರಣ. ಊರ್ಧ್ವಮುಖವಾಗಿ ಉಬ್ಬಿದ ಕಠಿಣ ಚಿಪ್ಪು ಕವಡೆಯ ಮೃದು ದೇಹವನ್ನು ರಕ್ಷಿಸುತ್ತದೆ. ಈ ರಕ್ಷಾಕವಚಕ್ಕೆ ಅಂಟಿದಂತಿರುವ ಒಳಭಾಗದ ಮ್ಯಾಂಟಲ್ ಪೊರೆ ನಯವಾದ ಶರೀರವನ್ನು ಆವರಿಸಿದೆ. ಈ ಪೊರೆಯ ಬಹಿರ್ಜೀವ ಕಣಗಳು ಚಿಪ್ಪನ್ನು ಉತ್ಪಾದಿಸುತ್ತವೆ. ಕವಡೆಯ ಮೂತಿಯ ಸನಿಹದಲ್ಲಿ ಎರಡು ಟೆಂಟಕಲ್, ಒಂದು ನೀರ್ನಾಳವೂ (ಸೈಫನ್)ಇವೆ. ಟೆಂಟಕಲ್‌ಗಳು ಸ್ಪರ್ಶೇಂದ್ರಿಯಗಳಂತೆ ಕಾರ್ಯ ನಿರ್ವಹಿಸಿದರೆ ನೀರ್ನಾಳ ಜಲಾಭಿಸರಣೆಯಲ್ಲಿ ಪಾತ್ರ ವಹಿಸುತ್ತದೆ. ಮ್ಯಾಂಟಲ್ ಪೊರೆಯ ಅಂಚಿನಲ್ಲಿರುವ ಉಪಾಂಗಗಳೇ ಅಲ್ಲದೆ ವಿಶಾಲವಾಗಿ ಪ್ರಸರಿಸಬಲ್ಲ ಚಪ್ಪಟೆಯಾದ ಪಾದ ಕವಡೆಗಳ ಅಂಗರಚನೆಯ ವೈಶಿಷ್ಟ್ಯ. ಇಬ್ಭಾಗವಾಗಿರುವ

ಮ್ಯಾಂಟಲ್ ಕವಡೆಯ ಚಿಪ್ಪನ್ನು ಸಂಪೂರ್ಣವಾಗಿ ಮುಚ್ಚಬಲ್ಲುದು. ಆದ್ದರಿಂದಲೇ ಜೀವಂತ ಕವಡೆಯ ನಿಜ ಸ್ವರೂಪ ಸ್ಪಷ್ಟವಾಗಿ ಕಾಣುವುದಿಲ್ಲ. ಚಿಪ್ಪಿನ ಅಧೋಭಾಗದ ನೀಳದ್ವಾರದ ಮೂಲಕ ಹೊರಚಾಚಿದ ಇಡೀ ಶರೀರವನ್ನು ಒಳಕ್ಕೆಳೆದುಕೊಳ್ಳಬಹುದು. ಮ್ಯಾಂಟಲ್‌ನ ಎರಡೂ ಪಟಲಗಳು ಚಿಪ್ಪಿನ ಮೇಲ್ಮೈಯಲ್ಲಿ ಸಂಧಿಸುವ ಸ್ಥಳದಲ್ಲಿ ಒಂದು ನೀಳವಾದ ವರ್ಣರೇಖೆ ಇದೆ. ಇದು ಕೆಲವು ಕವಡೆಗಳಲ್ಲಿ ಚಿರಕಾಲ ಉಳಿಯಬಹುದು. ಕವಡೆ ಪ್ರಾಣಿ ಅತಿ ಪುಕ್ಕಲು ಜೀವಿ. ಅಕ್ಕಪಕ್ಕದಲ್ಲಿ ಅಲ್ಪ ಬದಲಾವಣೆಯಾದರೂ ತನ್ನ ಮೃದುವಾದ ಶರೀರವನ್ನು ಕೂಡಲೇ ರಕ್ಷಾಕವಚದೊಳಕ್ಕೆ ಎಳೆದುಕೊಳ್ಳುತ್ತದೆ. ಇರುಳಲ್ಲಿ ಚುರುಕಾಗಿದ್ದು ಆಹಾರಾನ್ವೇಷಣೆಯಲ್ಲಿ ತೊಡಗುತ್ತದೆ. ಸಾಮಾನ್ಯವಾಗಿ ಹೈಡ್ರ ಮುಂತಾದ ಸಮುದ್ರವಾಸಿಗಳೇ ಕವಡೆಗಳ ಮುಖ್ಯ ಆಹಾರ.

ಈ ಪ್ರಾಣಿಗಳ ಚಿಪ್ಪಿನ ಬೆಳವಣಿಗೆ ಇಡೀ ಮೃದ್ವಂಗಿಗಳಲ್ಲೇ ವಿಶಿಷ್ಟರೀತಿಯದೆನಿಸಿದೆ. ಎಳೆಯ ಕವಡೆ ಪ್ರೌಢ ಕವಡೆಯಂತಿರುವುದಿಲ್ಲ. ಬೆಳವಣಿಗೆಯ ಅನೇಕ ಘಟ್ಟಗಳಲ್ಲಿ ವಿಶಿಷ್ಟ ಬದಲಾವಣೆಗಳು ಕಂಡುಬರುತ್ತವೆ. ಮರಿಕವಡೆಯ ರಕ್ಷಾಕವಚ ಒಂದು ನೀಳವಾದ ಅಕ್ಷದ ಸುತ್ತಲೂ ವಕ್ರವಾಗಿ ಸುರುಳಿ ಸುತ್ತಿರುತ್ತದೆ. ಚಿಪ್ಪಿನ ದ್ವಾರ ಗುಂಡಗೂ ಬಹು ಅಗಲವಾಗಿಯೂ ಇದೆ. ಕೇಂದ್ರದಲ್ಲಿನ ಅಕ್ಷವೂ ದ್ವಾರದ ಅಂಚಿನಲ್ಲಿರುವ ತುಟಿಯೂ ಸ್ಥೂಲವಾದಂತೆಲ್ಲ ಚಿಪ್ಪು ಒಳಮುಖನಾಗಿ ಬೆಳೆಯಲುಪಕ್ರಮಿಸುತ್ತದೆ. ಆದ್ದರಿಂದ ಹಳ್ಳದಿಣ್ಣೆಗಳಿಂದ ಕೂಡಿದ್ದ ಚಿಪ್ಪಿನ ಸುರುಳಿಗಳು ಮಾಯವಾಗಿ ವರ್ಣರಂಜಿತ ರೇಖೆಗಳನ್ನೂ ಚುಕ್ಕೆಗಳಿಂದ ಕೂಡಿದ ವಜ್ರಾರೆಯಂತೆ ಹೊಳೆಯುವ ಕಠಿಣ ಚಿಪ್ಪನ್ನೂ ಉಳ್ಳ ಆಕರ್ಷಣೀಯ ಪ್ರೌಢ ಕವಡೆ ಉದ್ಭವಿಸುತ್ತದೆ. ಈ ಮಧ್ಯೆ ಚಿಪ್ಪಿನ ಅಂತಃಪಟಲಗಳು ಕಣ್ಮರೆಯಾಗುತ್ತಿದ್ದಂತೆ ನೀಳದ್ವಾರದ ಇಕ್ಕೆಡೆಗಳಲ್ಲೂ ದಂತಪಂಕ್ತಿಗಳು ಗೋಚರಿಸುತ್ತವೆ.

ಕವಡೆಗಳು ತಮ್ಮ ಬೆಳವಣಿಗೆಯ ಕಾಲದಲ್ಲಿ ಸಮುದ್ರಶಿಲೆ ಮುಂತಾದ ಕಠಿಣ ಪದಾರ್ಥಗಳನ್ನು ಕರಗಿಸಿ ಅತ್ಯಲ್ಪ ಕಾಲದಲ್ಲೇ ಸೂಕ್ತ ವಸ್ತುಗಳಿಂದ ಒಪ್ಪ ಮಾಡಿಕೊಳ್ಳಬಲ್ಲವೆಂದು ಪ್ರತೀತಿ. ಇವುಗಳ ಈ ವಿಶಿಷ್ಟ ವರ್ತನೆಯಿಂದಲೇ ಪರಿಶುದ್ಧವಾದ ಅರಗು (ಷೆಲ್ಲಾಕ್) ಉತ್ಪತ್ತಿಯಾಗುತ್ತದೆಂದು ಹಲವರ ಅಭಿಮತ.

ಪದಾರ್ಥಗಳನ್ನು ಶೇಖರಿಸುವ ಹವ್ಯಾಸಗಳಲ್ಲೆಲ್ಲ ಕವಡೆಗಳ ಶೇಖರಣೆ ಅಗ್ರಸ್ಥಾನ ಪಡೆಯಲು ಕೆಳಕಂಡ ಅಂಶಗಳೇ ಕಾರಣ

1. ಖನಿಜಗಳಂತೆ ಇವು ಭಾರವಾಗಿಲ್ಲ. ಆದ್ದರಿಂದ ಇವನ್ನು ಸ್ಥಳದಿಂದ ಸ್ಥಳಕ್ಕೆ ಬಹು ಸುಲಭವಾಗಿ ಒಯ್ಯಬಹುದು.

2. ಉಗ್ರಾಣಗಳಲ್ಲಿ ಶೇಖರಿಸಲು ಅಷ್ಟಾಗಿ ಮುನ್ನೆಚ್ಚರಿಕೆ ವಹಿಸಬೇಕಾದ್ದಿಲ್ಲ.

3. ಕವಡೆಗಳು ಕ್ರಿಮಿಕೀಟಗಳಿಂದ ಒದಗಬಹುದಾದ ಬಾಧೆಗಳಿಂದ ವಿಮುಕ್ತವಾಗಿರುವುವಲ್ಲದೆ ಯಾವ ಶಿಲೀಂಧ್ರ ಸೋಂಕಿಗೂ ತುತ್ತಾಗುವುದಿಲ್ಲ.

4. ಕವಡೆಗಳ ಮೇಲೆ ಕೆತ್ತಿದ ನಕ್ಷೆ ಮುಂತಾದ ಇಚ್ಛಾಚಿತ್ರಗಳು ಪ್ರಕೃತಿಯ ಪ್ರಕೋಪಕ್ಕೆ ಮಣಿಯದೆ ಚಿರಕಾಲ ನಿಲ್ಲಬಲ್ಲುವು.

5. ವರ್ಗೀಕರಣ ಹಾಗೂ ವಿಕಾಸವಾದದ ಅಭ್ಯಾಸದಲ್ಲಿ ನಿರತರಾಗಿರುವ ಸಂಶೋಧಕರಿಗೆ ಕವಡೆಗಳ ಅಧ್ಯಯನ ಇಡೀ ಶಂಖಶಾಸ್ತ್ರದ (ಕಾಂಕಾಲಜಿ) ಯಥಾದರ್ಶನಕ್ಕೆ ನೆರವಾಗುತ್ತದೆ.

6. ಕವಡೆಗಳ ಸಂಗ್ರಹಣೆ ಅತಿ ಖರ್ಚಿಲ್ಲದ ಹವ್ಯಾಸ. ಶೇಖರಣ ಕಾರ್ಯದಲ್ಲಿ ಕೇವಲ ಬುಟ್ಟಿ, ಚೀಲ, ಸಣ್ಣ ಪೆಟ್ಟಿಗೆ, ಸುತ್ತಿಗೆ, ಉಳಿ, ಜರಡಿ ಮುಂತಾದ ಅಲ್ಪ ಬೆಲೆ ಬಾಳುವ ಉಪಕರಣಗಳನ್ನು ಉಪಯೋಗಿಸುತ್ತಾರೆ.

ಲೋಹ ನಾಣ್ಯಗಳ ಬಳಕೆಗೆ ಮುನ್ನ ಕವಡೆಗಳನ್ನೇ ನಾಣ್ಯರೂಪದಲ್ಲಿ ಬಳಸುತ್ತಿದ್ದರು. 19ನೆಯ ಶತಮಾನದ ಮಧ್ಯಭಾಗದವರೆಗೂ ಅಮೆರಿಕ, ಏಷ್ಯ ಮತ್ತು ಆಫ್ರಿಕ ಖಂಡಗಳ ಅನೇಕ ಕಡೆಗಳಲ್ಲಿ ಪದಾರ್ಥಗಳನ್ನು ಕೊಳ್ಳುವುದಕ್ಕಾಗಿ ಕವಡೆಗಳನ್ನು ಉಪಯೋಗಿಸುತ್ತಿದ್ದರು. ದೆಹಲಿ, ಕಾಶಿ ಮೊದಲಾದ ನಗರಗಳಲ್ಲೂ ಇವು ನಾಣ್ಯರೂಪದಲ್ಲಿ ಚಲಾವಣೆಯಲ್ಲಿದ್ದುವು. ವಿಶ್ವದ ನಾನಾ ಭಾಗಗಳಲ್ಲಿ ಬಿಡಿ ಬಿಡಿಯಾಗಿ ಬಳಸಿದರೂ ಆಫ್ರಿಕದ ಗುಡ್ಡಗಾಡು ಜನರು ಕವಡೆಗಳನ್ನು 5, 10, 15, 50 ಮತ್ತು 100ರ ಸರಳ ರೂಪದಲ್ಲಿ ಬಳಸುತ್ತಿದ್ದರು. ಅದರ ಮೌಲ್ಯ ದೇಶದಿಂದ ದೇಶಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ ಮತ್ತು ಜನಾಂಗದಿಂದ ಜನಾಂಗಕ್ಕೆ ಬೇರೆ ಬೇರೆಯಾಗಿತ್ತಲ್ಲದೆ ಅನೇಕ ಬಾರಿ ಅಪಮೌಲ್ಯದ ಅಪಕೀರ್ತಿಗೂ ತುತ್ತಾಗಿತ್ತು. ಉಗಾಂಡದಲ್ಲಿ ಕವಡೆ ನಾಣ್ಯರೂಪದಲ್ಲಿ ಚಲಾವಣೆಗೆ ಬಂದಾಗ ಎರಡು ಕವಡೆಗಳಿಗೆ ಒಬ್ಬ ಗುಲಾಮ ದೊರೆಯುತ್ತಿದ್ದನಂತೆ! ಆದರೆ ಒಂದು ಶತಮಾನದ ಅನಂತರ ಅವನ ಬೆಲೆ 2,000 ದಿಂದ 3,000 ಕ್ಕೂ ಎರಡು ಶತಮಾನಗಳ ಅನಂತರ 10000 ಕವಡೆಗಳಿಗೂ ಏರಿತ್ತೆಂದು ಪ್ರತೀತಿ. ಆಫ್ರಿಕದಲ್ಲಿ ಗುಲಾಮರನ್ನು ಕೊಳ್ಳಲು ಕವಡೆಗಳನ್ನು ಬಳಸುತ್ತಿದ್ದುದರಿಂದ ಕವಡೆ ವ್ಯಾಪಾರ ಬಹು ಲಾಭದಾಯಕವಾಗಿತ್ತು. ಮಾಲ್ಡೀವ್, ಮಫಿಯಾ ದ್ವೀಪಗಳು ಕವಡೆಗಳನ್ನು ಕಲೆ ಹಾಕುವ ಭಂಡಾರಗಳಾಗಿದ್ದುವು. ಅರಬ್ಬೀಯರು, ಆಂಗ್ಲೇಯರು, ಫ್ರೆಂಚರು ಮತ್ತು ಡಚ್ಚರು ವಿಶ್ವದ ಅತಿ ದೊಡ್ಡ ಕವಡೆ ವಣಿಕರಾಗಿದ್ದರು.

ಕವಡೆಗಳನ್ನು ಬಂಗಾಳೀಯರು ದೀಪಾವಳಿಯಂದು ಧನಲಕ್ಷ್ಮಿಯ ಸಂಕೇತವಾಗಿ ಈಗಲೂ ಪೂಜಿಸುತ್ತಾರೆ. ಆಂಧ್ರದ ಏರುಕಾಲ ಗುಡ್ಡಗಾಡು ಪಂಗಡದವರಲ್ಲಿ ವರನ ಮನೆಯವರು ವಧುವಿಗೆ ಕವಡೆಗಳ ರೂಪದಲ್ಲಿ ತೆರಕೊಡುವ ಸಂಪ್ರದಾಯ ಇಂದಿಗೂ ಸಾಂಕೇತಿಕವಾಗಿ ಉಳಿದುಕೊಂಡಿದೆ. ಒರಿಸ್ಸ ಮತ್ತು ಆಂಧ್ರ ಜನಾಂಗಗಳಲ್ಲಿ ಕವಡೆ ಮತ್ತು ನಿತ್ಯೋಪಯೋಗಿ ಸಾಮಾನುಗಳುಳ್ಳ ಕವಡೆ ಪೆಟ್ಟಿಗೆಯನ್ನು ವಧುವಿಗೆ ಕೊಡುವುದು ವಾಡಿಕೆ. ಬಂಗಾಳದ ಕೆಲವು ಬುಡಕಟ್ಟಿನವರು ಮಕ್ಕಳಿಗೆ ಕವಡೆ ಸಂಖ್ಯೆಯ ಹೆಸರನ್ನಿಟ್ಟರೆ ಶುಭಪ್ರದವೆಂದು ನಂಬಿ ಎಕ್ಕುಡಿ (ಒಂದು ಕವಡೆ), ದೊಕ್ಕುಡಿ (ಎರಡು ಕವಡೆ), ಪಾಂಚಕುಡಿ (ಐದು ಕವಡೆ), ಸಾತ್ಕುಡಿ (ಏಳು ಕವಡೆ) ಎಂದು ಮುಂತಾಗಿ ನಾಮಕರಣ ಮಾಡುವುದುಂಟು.

ಒರಿಸ್ಸದಲ್ಲಿ ಅರ್ಥ ಮಂತ್ರಿಯನ್ನು ಕವಡೆ ಸಚಿವರೆಂಬ ಅಡ್ಡ ಹೆಸರಿನಿಂದ ಕರೆಯುವುದು ವಾಡಿಕೆಯಲ್ಲಿತ್ತು. ಆಫ್ರಿಕದ ಆದಿ ಜನಾಂಗ ದೇಹಾಲಂಕಾರಕ್ಕಾಗಿ ಆಭರಣಗಳ ರೂಪದಲ್ಲಿ ಕವಡೆಗಳನ್ನು ಬಳಸುತ್ತಿದ್ದರು. ಲಂಬಾಣಿ ಜನರು ಈಗಲೂ ಕವಡೆಗಳನ್ನು ಆಭರಣವಾಗಿ ಧರಿಸುವುದನ್ನು ನೋಡಬಹುದು. ಬಂಗಾರ ಕವಡೆಯನ್ನು (ಸೈಪ್ರಿಯ ಆರಾನ್‌ಷಿಯ) ಕೊರಳಲ್ಲಿ ಧರಿಸಿದರೆ ಅಗ್ರನಾಯಕನ ಹೆಗ್ಗುರುತೆಂದು ಫಿಜಿ ಮತ್ತು ಟೊಂಗಾ ಬುಡಕಟ್ಟಿನವರ ಅಭಿಪ್ರಾಯ. ಮಂತ್ರಿಸಲ್ಪಟ್ಟ ಕೆಲವು ಬಗೆಯ ಕವಡೆಗಳನ್ನು ತಾಯಿತದ ರೂಪದಲ್ಲಿ ಕೊರಳಲ್ಲಾಗಲಿ ನಡುವಿನಲ್ಲಾಗಲೀ ಕಟ್ಟಿಕೊಂಡರೆ ಬಾಲಾರಿಷ್ಟ, ಬಂಜೆತನ ಮುಂತಾದ ಅನಿಷ್ಟಗಳು ಕಣ್ಮರೆಯಾಗುವುದೆಂದು ಆದಿ ಜನಾಂಗದವರ ಅಭಿಮತ. ಶಕುನಗಳ ಫಲಾಫಲಗಳನ್ನು ನಿರ್ಧರಿಸಲು ಭಾರತೀಯ ಜ್ಯೋತಿಷಿಗಳು ಬಹುವಾಗಿ ಕವಡೆ ಶಾಸ್ತ್ರಕ್ಕೆ ಮಾರು ಹೋಗುತ್ತಾರೆ.

ಸುಮಾರು 165 ಕ್ಕೂ ಮಿಗಿಲಾದ ಪ್ರಭೇದಗಳುಳ್ಳ ಕವಡೆಗಳ ಬಳಗವನ್ನು ಅವುಗಳ ಆಕೃತಿ ಮತ್ತು ವರ್ಣದೃಷ್ಟಿಯಿಂದ ವರ್ಗೀಕರಿಸುತ್ತಾರೆ. ಹಣಪ್ರಪಂಚದಲ್ಲಿ ನಾಣ್ಯ ಕವಡೆ (ಮಾನೆಟೇರಿಯ ಮೊನೇಟ), ಉಂಗುರ ಕವಡೆ (ಸೈಪ್ರಿಯ ಆನ್ಯುಲಸ್) ಮತ್ತು ಕಿತ್ತಳೆ ಕವಡೆ (ಸೈ. ಆರ್ಕ್ಯಾಷಿಯ) ಈ ಪ್ರಭೇದಗಳು ಚಲಾವಣೆಯಲ್ಲಿದ್ದುವು. ಸುಮಾರು ಒಂದಂಗುಲ ಉದ್ದದ ನಾಣ್ಯ ಕವಡೆಯನ್ನು ಪ್ರಪಂಚದ ಎಲ್ಲ ಭಾಗಗಳಲ್ಲೂ ನಾಣ್ಯರೂಪದಲ್ಲಿ ಬಳಸುತ್ತಿದ್ದರು. ಉಂಗುರ ಕವಡೆ ಗಾಜಿನಂತೆ ಹೊಳೆಯುತ್ತದೆ. ಇದು ನ್ಯೂಗಿನಿ ಮೊದಲಾದ ಕಡೆ ಹೆಚ್ಚಿಗೆ ಚಲಾವಣೆಯಲ್ಲಿತ್ತು. ಕಿತ್ತಳೆ ಕವಡೆಗಳು ಅರುಣ ವರ್ಣದಿಂದ ಕೂಡಿರುವುದರಿಂದ ಇವನ್ನು ಬಂಗಾರದ ಕವಡೆ ಎಂದೂ ಕರೆಯುತ್ತಾರೆ. ಇವನ್ನು ಆಫ್ರಿಕದ ಗುಡ್ಡಗಾಡು ಜನರು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಇಷ್ಟೇ ಅಲ್ಲದೆ ಮನರಂಜನೆಗೂ ಆಭರಣಗಳಿಗೂ ನಾನಾ ಬಗೆಯ ಕವಡೆಯನ್ನು ಉಪಯೋಗಿಸುತ್ತಿದ್ದರು. ಈ ಕ್ಷೇತ್ರಗಳಲ್ಲಿ ಬಳಕೆಯಲ್ಲಿದ್ದ ಕವಡೆಗಳಲ್ಲಿ ಕೇಸರಿ ಕವಡೆ (ಸೈ. ಟೈಗ್ರಿಸ್), ಕುಬ್ಜ ಕವಡೆ (ಸೈ. ಡೆಸಿಪಿಯನ್ಸ್), ಅದ್ಭುತ ಕವಡೆ ( ಅಂಬೀಲಿಯ ಹೆಸಿಟೇಟ), ಕೂರ್ಮ ಕವಡೆ (ಸೈ. ಟೆಸ್ಟೂಡಿನೇರಿಯ), ನಕ್ಷೆ ಕವಡೆ (ಸೈ. ಮ್ಯಾಪ್ಪಾ), ಅಕ್ಷಿ ಕವಡೆ (ಸೈ. ಆರ್ಗಸ್), ಬೂದು ಕವಡೆ (ಸೈ. ಇಸಾಬೆಲ), ವಕ್ರ ಕವಡೆ (ಸೈ. ಜಿಗ್‌ಬಾಗ್), ವಿದೂಷಕ ಕವಡೆ (ಸೈ. ಸ್ಕುದ್ರಾ) – ಇವು ಮುಖ್ಯವಾದವು. (ಎಸ್.ಎಚ್.ಒ)

**ಕವಲುತೋಕೆ ಹಕ್ಕಿ:** ಪ್ಯಾಸೆರಿಫಾರ್ಮೀಸ್ ಗಣದ ಹಿರಂಡನಿಡೆ ಕುಟುಂಬಕ್ಕೆ ಸೇರಿದ ಕೀಟಾಹಾರಿ ಹಕ್ಕಿ (ಸ್ವಾಲೋ). ಹಾಡು ಹಕ್ಕಿಗಳಲ್ಲೆಲ್ಲ ಅತ್ಯಂತ ಚೆಲುವಾದ ಹಕ್ಕಿಯೆಂದು ಹೆಸರಾಗಿದೆ. ಹಾರುವಿಕೆಯ ವೇಗಕ್ಕೂ ಸೊಬಗಿಗೂ ಇದು ಬಹಳ ಪ್ರಸಿದ್ಧವಾಗಿದೆ. ವೈಜ್ಞಾನಿಕವಾಗಿ ಹಿರಂಡೊ ಎಂಬ ಜಾತಿಗೆ ಸೇರಿದೆ. ಇದೇ ಕುಟುಂಬಕ್ಕೆ ಸೇರಿದ ಪೆಟ್ರೊಕೆಲಿಡಾನ್, ಇರಿಡೊಪ್ರಾಕ್ನಿ ಹಕ್ಕಿಗಳನ್ನು ಸಾಮಾನ್ಯವಾಗಿ ಸ್ವಾಲೊಗಳೆಂದು ಕರೆಯುವುದುಂಟು. ಧ್ರುವ ಪ್ರದೇಶಗಳು ಮತ್ತು ಕೆಲವು ದ್ವೀಪಗಳನ್ನು ಬಿಟ್ಟರೆ ಪ್ರಪಂಚದ ಉಳಿದೆಲ್ಲ ಕಡೆಗಳಲ್ಲೂ ಇವುಗಳ ವ್ಯಾಪ್ತಿಯಿದೆ.

ಆಕಾರ ಮತ್ತು ಜೀವನಕ್ರಮದಲ್ಲಿ ಅಂಬಕ್ಕಿಗಳೊಡನೆ (ಸ್ವಿಫ್ಟ್) ಹೋಲಿಕೆಯಿದ್ದರೂ ಇವು ಅಂಬಕ್ಕಿಗಳಿಗಿಂತ ಭಿನ್ನ ರೀತಿಯವು. ಕವಲುತೋಕೆ ಹಕ್ಕಿಗಳು ಸಾಧಾರಣವಾಗಿ ಗುಬ್ಬಚ್ಚಿಯಷ್ಟೇ ಗಾತ್ರದವು. ದೇಹದ ಬಣ್ಣ ಗಾಢನೀಲಿ, ಕಂದು ಮುಂತಾದ ವಿವಿಧ ರೀತಿಯದು. ಹೊಟ್ಟೆ ಬಿಳಿಯ ಬಣ್ಣದ್ದಾಗಿಯೂ ಕತ್ತು ಹಾಗೂ ತಲೆ ಕೆಂಪು ಬಣ್ಣದವಾಗಿಯೂ ಇವೆ. ಕಾಲು ಮತ್ತು ಉಗುರುಗಳು ಬಲವಾಗಿದ್ದರೂ ಬೆರಳುಗಳು ಮಾತ್ರ ದುರ್ಬಲವಾಗಿವೆ. ಬೆರಳುಗಳು ನೆಲದ ಮೇಲೆ ನಡೆದಾಡಲು ಅನುಕೂಲವಾಗಿಲ್ಲ.

ರೆಂಬೆಗಳ ಮೇಲೂ ಕಡಿದಾದ ಬಂಡೆಗಳ ಮೇಲೂ ಕುಳಿತುಕೊಳ್ಳುವುದಕ್ಕೆ ಮಾತ್ರ ಸಹಾಯಕವಾಗಿವೆ. ಗೂಡುಕಟ್ಟಲು ಬೇಕಾಗುವ ಸಾಮಗ್ರಿಯ ಸಂಗ್ರಹಣೆಗೆ ಮಾತ್ರ ಇವು ನೆಲದ ಮೇಲೆ ಓಡಾಡುತ್ತವೆ. ಹಾರುವುದರಲ್ಲಿ ನೈಪುಣ್ಯವನ್ನು ತೋರುತ್ತವೆ. ಹಾರುತ್ತಲೇ ಕೀಟಗಳನ್ನು ಕ್ಷಣಾರ್ಧದಲ್ಲಿ ಹಿಡಿದು ನುಂಗಬಲ್ಲುವು. ಹೀಗೆ ಆಹಾರವನ್ನು

ಕವಲುತೋಕೆ ಹಕ್ಕಿ

ಹಿಡಿಯಲೆಂದೇ ಕೊಕ್ಕು ಕೂಡ ಚಿಕ್ಕದೂ ಅಗಲವಾದುದೂ ಆಗಿದೆ. ಇವುಗಳ ಬಾಲ ಉದ್ದವಾಗಿದ್ದು 12 ಗರಿಗಳಿಂದ ಕೂಡಿದೆ. ಅಲ್ಲದೆ ಎರಡು ಕವಲುಗಳಾಗಿ ಭಾಗವಾಗಿದೆ. ಇದರಿಂದಲೇ ಇವಕ್ಕೆ ಕವಲುತೋಕೆ ಹಕ್ಕಿಗಳೆಂದು ಹೆಸರು. ಸಣ್ಣ ಸಣ್ಣ ಗುಂಪುಗಳಲ್ಲೊ ಜೋಡಿಯಾಗಿಯೊ ವಾಸಿಸುತ್ತವೆ. ಉಪದ್ರವಕಾರಿ ಕೀಟಗಳನ್ನು ಹಿಡಿದು ತಿನ್ನುವುದರಿಂದ ಮನುಷ್ಯನಿಗೆ ಪ್ರಿಯವೆನಿಸಿದ ಹಕ್ಕಿಗಳಿವು. ಮನುಷ್ಯನೊಡನೆ ಸ್ನೇಹಪರವಾದವೂ ಹೌದು. ಚೆನ್ನಾಗಿ ಹಾಡಲು ಬರದಿದ್ದರೂ ಇವುಗಳ ಚಿಲಿಪಿಲಿನಾದ ಇಂಪಾಗಿರುತ್ತದೆ.

ಇವುಗಳ ಸಂತಾನೋತ್ಪತ್ತಿಯ ಕಾಲ ಮಾರ್ಚ್‍ನಿಂದ ಸೆಪ್ಟೆಂಬರ್‍ವರೆಗಿನ ತಿಂಗಳುಗಳು. ಮನೆಗಳ ಮೇಲ್ಚಾವಣಿಗಳಿಗೆ ಅಥವಾ ಬೆಟ್ಟಗುಡ್ಡಗಳಲ್ಲಿ ಹೊರಚಾಚಿದಂಥ ಬಂಡೆಗಳ ತಳಭಾಗಗಳಿಗೆ ಅಂಟಿಕೊಂಡಂತೆ ತಟ್ಟೆಯಾಕಾರದ ಗೂಡುಗಳನ್ನು ಕಟ್ಟುತ್ತವೆ. ಗೂಡು ಕಟ್ಟುವುದಕ್ಕೆ ಮಣ್ಣು ಮತ್ತು ಹುಲ್ಲು ಎರಡನ್ನೂ ಉಪಯೋಗಿಸುತ್ತವೆ. ಕೆಲವು ಹಕ್ಕಿಗಳು ನೆಲದಲ್ಲಿರುವ ಅಥವಾ ಮರಗಳಲ್ಲಿರುವ ಪೊಟರೆಗಳನ್ನು ಗೂಡುಗಳಾಗಿ ಉಪಯೋಗಿಸುವುದುಂಟು. ಸಾಧಾರಣವಾಗಿ ಪ್ರತಿವರ್ಷ ಒಂದೇ ಪ್ರದೇಶದಲ್ಲಿ ಗೂಡು ಕಟ್ಟುವುದು ಈ ಹಕ್ಕಿಗಳ ವಿಶಿಷ್ಟ ಲಕ್ಷಣ. ಹೆಣ್ಣು ಒಂದು ಸಲಕ್ಕೆ 3–6 ಮೊಟ್ಟೆಗಳನ್ನಿಡುತ್ತದೆ. ವರ್ಷಕ್ಕೆ ಒಂದು ಸಲ ಮೊಟ್ಟೆಯಿಡುವುದಾದರೂ ಹಲವು ಬಾರಿ ಎರಡನೆಯ ಸಲ, ಅಪೂರ್ವವಾಗಿ ಮೂರನೆಯ ಸಲ ಮೊಟ್ಟೆಯಿಡುವುದೂ ಉಂಟು. ಹೆಣ್ಣು ಹಕ್ಕಿಯೊಂದೇ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುತ್ತದೆ. ಮರಿಗಳು 20–24 ದಿವಸಗಳಲ್ಲಿ ಬೆಳೆದು ದೊಡ್ಡವಾಗಿ ಹಾರಲು ಶಕ್ತವಾಗುತ್ತವೆ. ಕೌಟುಂಬಿಕ ನಡೆವಳಿಕೆ, ಸಂತಾನ ಪ್ರೇಮ ಇವುಗಳಲ್ಲಿ ಉನ್ನತ ಮಟ್ಟದಲ್ಲಿ ಕಂಡುಬರುತ್ತವೆ. ಮೊದಲ ಸಂತತಿಯ ಮರಿಗಳು ಗೂಡುಗಳ ಬಳಿಯೇ ಇದ್ದು ಅನಂತರದ ಸಂತತಿಯ ಮರಿಗಳ ಪಾಲನೆಯಲ್ಲಿ ಸಹಕರಿಸುತ್ತವೆ.

ಇವು ಬಹುದೂರ ವಲಸೆ ಹೋಗುವ ಹಕ್ಕಿಗಳೆಂದು ಹೆಸರಾಗಿವೆ. ಉದಾಹರಣೆಗೆ, ಯೂರೋಪು ಹಾಗೂ ಉತ್ತರ ಅಮೆರಿಕಗಳ ನಿವಾಸಿಯಾದ ಹಿರಂಡೊ ರಸ್ಟಿಕ ಎನ್ನುವ ಕವಲುತೋಕೆ ಹಕ್ಕಿ ಚಳಿಗಾಲದಲ್ಲಿ ಭಾರತಕ್ಕೂ ವಲಸೆ ಬರುತ್ತದೆ. ವಸಂತ ಋತುವಿನ ಆಗಮನದೊಂದಿಗೆ ಸ್ವಸ್ಥಳಕ್ಕೆ ಹಿಂತಿರುಗುತ್ತದೆ. ವಸಂತಕಾಲದ ಆರಂಭಕ್ಕೂ ಅದರ ಆಗಮನಕ್ಕೂ ಅತ್ಯಂತ ನಿಕಟವಾದ ಸಂಬಂಧವಿರುವುದರಿಂದ ಕವಲುತೋಕೆ ಹಕ್ಕಿಯನ್ನು ಒಳ್ಳೆಯ ಋತುವಿನ ಆಗಮನದ ಸುದ್ದಿ ತರುವ ದೂತ ಎನ್ನುವುದುಂಟು. ಇವುಗಳ ವಲಸೆಯ ಕ್ರಮ ಏನೇ ಇರಲಿ, ಕವಲುತೋಕೆಗಳು ಮಾನವನೊಂದಿಗೆ ಬಹಳ ನಿಕಟ ಸಂಬಂಧ ಕಲ್ಪಿಸಿಕೊಂಡಿವೆ. ಮಾನವನ ನೆಲೆಯ ಸಮೀಪದಲ್ಲಿಯೇ ಗೂಡು ಕಟ್ಟಿ ವಾಸಿಸುವ ಇವುಗಳ ಬಗ್ಗೆ ಗ್ರೀಕ್ ಇತಿಹಾಸದಲ್ಲೂ ಉಲ್ಲೇಖವಿದೆ. ಕೊರಿಯ ಮತ್ತು ಜಪಾನುಗಳಲ್ಲಿ ಇವು ಮನೆಗಳಲ್ಲಿ ಗೂಡುಕಟ್ಟುವುದು ಶುಭದ ಚಿಹ್ನೆಯೆಂಬ ಭಾವನೆಯಿದೆ. ಸಾಹಿತ್ಯದಲ್ಲಿ ಇವನ್ನು ಶ್ರದ್ಧೆ ಹಾಗೂ ಹಾರೈಕೆಗಳ ಸಂಕೇತವಾಗಿ ಬಳಸುವುದುಂಟು. ಕ್ರಿಶ್ಚಿಯನ್ ಧರ್ಮದಲ್ಲಿ ಕವಲುತೋಕೆಗಳು ದೇವನಲ್ಲಿ ಭಕ್ತನ ಮೊರೆಯ ಸಂಕೇತಗಳು.

ಭಾರತದಲ್ಲಿ ಕಾಣಬರುವ ಮುಖ್ಯವಾದ ಕವಲುತೋಕೆ ಹಕ್ಕಿಗಳಿವು:

1. ಹಿರಂಡೊ ರಸ್ಟಿಕ–ಯುರೋಪಿನಿಂದ ಚಳಿಗಾಲದಲ್ಲಿ ವಲಸೆ ಬರುವ ಹಕ್ಕಿ. ಏಪ್ರಿಲ್–ಮೇ ತಿಂಗಳುಗಳಲ್ಲಿ ಹಿಂತಿರುಗುತ್ತದೆ. ಕಡು ನೀಲಿ ಬಣ್ಣದ್ದು. ಹಿಮಾಲಯದಲ್ಲಿ 1200–2100 ಮೀ ಎತ್ತರ ಪ್ರದೇಶದಲ್ಲಿ ಗೂಡು ಕಟ್ಟುತ್ತದೆ.

2. ಹಿರಂಡೊ ಡೌರಿಕ (ಕೆಂಪುಪೃಷ್ಠದ ಕವಲುತೋಕೆ)–ದೇಹ ಕಡು ನೀಲಿ ಬಣ್ಣದ್ದು. ಅಲ್ಲಲ್ಲಿ ಕಗ್ಗಂದು ಬಣ್ಣದ ಪಟ್ಟೆಗಳಿವೆ. ಹಿಮಾಲಯದಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ.

3. ಹಿರಂಡೊ ಸ್ಮಿತಿಯೈ (ತಂತಿಬಾಲದ ಕವಲುತೋಕೆ)– ಉಳಿದವುಗಳಂತೆಯೆ ಕಡು ನೀಲಿ ಬಣ್ಣದ ದೇಹದ್ದು. ಆದರೆ ತಲೆ ಕೆಂಗಂದು ಬಣ್ಣದ್ದಾಗಿದೆ. ತಂತಿಯನ್ನು ಹೋಲುವ ಎರಡು ಬಾಲಗಳಿರುವುದು ಇದರ ವೈಚಿತ್ರ್ಯ. (ಎಚ್.ಬಿ.ಡಿ)

**ಕಶಾಂಗ :** ತೆಳುವಾದ ದಾರದಂತಿರುವ ಜೀವಕೋಶದ ಪ್ರವರ್ಧ. ಏಕಕೋಶಜೀವಿಗಳ ಪ್ರಮುಖ ಚಲನಾಂಗಗಳಲ್ಲಿ ಒಂದು (ಫ್ಲಾಜೆಲ್ಲಮ್). ಯೂಗ್ಲೀನಾದಂತಹ ಕಶಾಂಗಿಗಳಿಂದ ಹಿಡಿದು ಸ್ಪಂಜು ಪ್ರಾಣಿಗಳ ಕಂಠ ಕೋಶಗಳಲ್ಲೂ ಮಾನವನ ಪುರುಷಾಣುವಿನಲ್ಲೂ ಕಶಾಂಗವನ್ನು ಕಾಣಬಹುದು. ಅನೇಕ ಪಾಚಿಗಳಲ್ಲಿ, ಬ್ಯಾಕ್ಟೀರಿಯಾ, ಏಕಕೋಶ ಜೀವಿಗಳು, ಸಸ್ಯ ಮತ್ತು ಪ್ರಾಣಿಗಳ ಪ್ರಜನನ ಕಣಗಳಲ್ಲಿ ಕಶಾಂಗಗಳಿವೆ. ಮೂಲತ: ಚಲನೆಗೆ ನೆರವಾಗುವ ಈ ಕಶಾಂಗ ಆಹಾರಸೇವನೆ, ವಸ್ತುಗಳ ಸಾಗಾಣಿಕೆ ಮತ್ತು ಪ್ರಜನನ ಕ್ರಿಯೆಯಲ್ಲೂ ನೆರವಾಗುವುದು. ಇದು ಪ್ರೋಟೋಜೋವಾದ ಇತರ ಚಲನಾಂಗಗಳಿಗಿಂತ ಹಿಂದುಳಿದವೆಂದು ಪರಿಗಣಿಸಲಾಗಿದ್ದು, ಕಶಾಂಗಿಗಳು ಮೂಲಜೀವಿಗಳೆಂದೂ, ಬಹುಕೋಶಜೀವಿಗಳ ಉದಯಕ್ಕೆ ಬುನಾದಿ ಎಂದು ಪುರಾವೆಗಳಿವೆ.

ಯೂಗ್ಲೀನಾದಂತಹ ಸಸ್ಯರೀತಿ ಕಶಾಂಗಿಗಳಲ್ಲಿ ಒಂದು ಅಥವಾ ಎರಡು ಕಶಾಂಗಗಳಿದ್ದರೆ, ಟ್ರೈಕೋನಿಂಫಾದಂತಹ ಪ್ರಾಣಿರೀತಿ ಕಶಾಂಗಿಗಳಲ್ಲಿ ಒಂದರಿಂದ ಎಂಟು ಅಥವಾ ಅನೇಕ ಕಶಾಂಗಗಳಿರುತ್ತವೆ. ಸಾಮಾನ್ಯವಾಗಿ ಸ್ವತಂತ್ರ ಜೀವಿಗಳಲ್ಲಿ ಕೆಲವೇ ಕಶಾಂಗಗಳೂ ಪರತಂತ್ರ ಜೀವಿಗಳಲ್ಲಿ ಅನೇಕ ಕಶಾಂಗಗಳೂ ಕಂಡು ಬರುತ್ತವೆ. ಭ್ರೂಣ, ಡಿಂಬ, ಚರ್ಮದ ಲೋಮಾಂಗದ ರೀತಿ ಅನೇಕ ಕಶಾಂಗಗಳು ಉಂಟು. ಕಶಾಂಗಗಳು ಇತರ ಚಲನಾಂಗಗಳ ಜೊತೆ ಉದಾ: ಮ್ಯಾಸ್ಟಿಗಮೀಬಾದಲ್ಲಿ ಮಿಥ್ಯಾ ಪಾದಗಳೊಡನೆ, ಮಾನೊಮ್ಯಾಟಿಕ್ಸ್‍ನಲ್ಲಿ ಲೋಮಾಂಗದೊಡನೆ ಇರುತ್ತವೆ.

ರಚನೆ: ಒಂದು ಮಾದರಿ ಕಶಾಂಗದಲ್ಲಿ ಉದ್ದನೆಯ ಲೋಮಾಂಗದಂತಿದ್ದು ಒಳಗೆ ಆಕ್ಸೋನೀಮ್ ಎಂಬ ಅಕ್ಷ, ಮಧ್ಯೆ ಸೈಟೋಪ್ಲಾಸಂ ಮಾತೃಕೆ, ಹೊರಗೆ ಪ್ಲಾಸ್ಮಾಪಟಲದ ಕವಚವಿದೆ. ಕಶಾಂಗದ ಉದ್ದ 100 ಮಿಮೀ. ದಪ್ಪ 0.3 ಮೈಮೀ. ಇದರಿಂದ ಸಾಮಾನ್ಯ ಸೂಕ್ಷ್ಮದರ್ಶಕದಲ್ಲೂ ಸಹ ಇವು ಸುಲಭವಾಗಿ ಗೋಚರಿಸಲಾರವು. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಿಂದ ಕಂಡಂತೆ ಇದರ ಅಕ್ಷದಲ್ಲಿ 2+9, ಒಟ್ಟು 11 (ಹನ್ನೊಂದು) ಸೂಕ್ಷ್ಮತಂತುಗಳಿವೆ. ಕೇಂದ್ರದಲ್ಲಿರುವ ಎರಡು ತಂತುಗಳು ಪೊರೆಯಿಂದ ಆವೃತವಾಗಿವೆ. ಪರಿಧಿಯಲ್ಲಿರುವ ಒಂಬತ್ತು ಜೋಡಿ ತಂತುಗಳು ಎರಡು ಪಂಕ್ತಿಗಳ ಚಿಕ್ಕ ಬಾಹುಗಳನ್ನು ಪಡೆದಿವೆ. ಇವುಗಳಲ್ಲದೆ ಅನೇಕ ಅನುಷಂಗಿಕ ತಂತುಗಳು ಮಾತೃಕೆಯಲ್ಲಿರುತ್ತವೆ. ಈ ಬಾಹುಗಳಲ್ಲಿ ಎಟಿಪಿ ಅಂಶವಿದ್ದು ಚಲನೆಗೆ ಶಕ್ತಿ ನೀಡುತ್ತದೆ. ರಾಸಾಯನಿಕವಾಗಿ ಮೂಲ ಪಟಲ ವ್ಯವಸ್ಥೆ ಲೈಪೋಪ್ರೋಟಿನ್, ಕಿಣ್ವಗಳು, ಕಶಾಂಗದಲ್ಲಿರುತ್ತವೆ.

ಕಶಾಂಗದ ಹನ್ನೊಂದೂ ಅಕ್ಷ ತಂತುಗಳು ಒಟ್ಟಾಗಿ ಕೋಶದ್ರವ್ಯದಲ್ಲಿ ಬ್ಲಿಫೆರೋಪ್ಲಾಸ್ಟ್ ಅಥವಾ ಕೈನೆಟೊಪ್ಲಾಸ್ಟ್ ಎಂಬ ಬುಡಕಣವಾಗಿರುತ್ತವೆ. ಇದು ಕಶಾಂಗದ ಚಾಲನ ನಿಯಂತ್ರಕ ಅಲ್ಲದೆ ಕೋಶ ವಿಭಜನೆಗೂ ಸಹಕಾರಿ. ಬುಡಕಣ ರೈಜೊಪ್ಲಾಸ್ಟ್ ಎಂಬ ತಂತು, ಪಾರ್ಶ್ವ ಬುಡಕಣಗಳ ಮೂಲಕ ಸೆಂಟ್ರಿಯೋಲ್‍ಗೆ ಸೇರಿರುತ್ತದೆ. ಆ ಮೂಲಕ ಕೋಶಕೇಂದ್ರ ಕಶಾಂಗದ ಚಲನೆಯನ್ನೂ ವಿಭಜನೆಯನ್ನೂ ನಿಯಂತ್ರಿಸುವುದು.

ರೂಪ ರಚನೆ, ಗಾತ್ರ, ಆಕಾರಗಳಲ್ಲಿ ಕಶಾಂಗಗಳು ಭಿನ್ನವಾಗಿರುತ್ತವೆ. ಕಶಾಂಗಗಳಲ್ಲಿ ಹೊರ ಅಂಚು ಮೃದುವಾಗಿರುವ ವಿಪ್‍ಲಾಷ್ ಹಾಗೂ ಮ್ಯಾಕ್ಸೋನೀಮ್ ಎಂಬ ಸೂಕ್ಷ್ಮ ಹೊರ ರಚನೆಯುಳ್ಳ ಟಿನ್ಸಲ್ ಕಶಾಂಗಗಳೆಂಬ ಎರಡು ವಿಧಗಳಿವೆ. ಕೆಲವೊಮ್ಮೆ ಅನೇಕ ಕಶಾಂಗಗಳು ಒಟ್ಟಿಗೆ ಹೊಸೆದುಕೊಂಡು ಮುಳ್ಳು ಅಥವಾ ಹಗ್ಗದ ರೂಪವಾಗಿರಬಹುದು. ಟ್ರಿಪನೋಸೋಮದಲ್ಲಿ ಪ್ಲಾಸ್ಮಾಪಟಲ ಅಥವಾ ಪೆಲಿಕಲ್ ಕಶಾಂಗದೊಂದಿಗೆ ಎಳೆಯಲ್ಪಟ್ಟು ಅಂಡುಲೇಟಿಂಗ್ ಪಟಲವಾಗಿರುವುದು. ಇದು ಚಲನೆಗೆ ಮತ್ತು ಆಹಾರ ಸೇವನೆಗೆ ಸಹಕಾರಿ.

ಕಾರ್ಯವಿಧಾನ: ಕಶಾಂಗದ ಕಾರ್ಯ ನಿರ್ವಹಣೆಯ ಬಗ್ಗೆ ವಾದ ವಿವಾದಗಳಿವೆ. ಒಂದು ಅಭಿಪ್ರಾಯದ ಪ್ರಕಾರ ಕಶಾಂಗಿ ರೀತಿ ಚಲನೆ ಚಾವಟಿಯಂತೆ ಕಶಾಂಗದ ಹಿಮ್ಮುಖ, ಮುಮ್ಮುಖ ಸುತ್ತು ಹೊಡೆತಗಳಿಂದ ಉಂಟಾಗುವುದು. ಮೊದಲು

ಪರಿಣಾಮಕಾರಿ ಹಿಮ್ಮುಖ ಹೊಡೆತ. ಅನಂತರ ಸ್ಥಿತಿಪೂರ್ವ ಮುಮ್ಮುಖ ಹೊಡೆತದಿಂದ ಮುಮ್ಮುಖವಾಗಿ ಚಲಿಸುವುದು. ಕೆಲವು ಜೀವಕೋಶ ವಿಜ್ಞಾನಿಗಳ ಪ್ರಕಾರ ಅಲೆಯೋಪಾದಿಯ ಬಾಗು ಚಲನೆಗಳು ಕಶಾಂಗದ ತುದಿಯಿಂದ ಬುಡದ ಕಡೆಗೆ ಸಾಗುತ್ತದೆ. ಇವು ಪ್ರಾಣಿಯನ್ನು ನೀರಿನಲ್ಲಿ ಮುಂದಕ್ಕೆ ನೂಕುತ್ತವೆ. ಈ ಚಲನೆಗಳು ಬುಡದಿಂದ ತುದಿಯ ಕಡೆಗೆ ಹಬ್ಬಿದರೆ ಹಿಮ್ಮುಖ ಚಲನೆಯೂ, ಸುರುಳಿಯಂತಾದರೆ ಉರುಳು ಚಲನೆಯೂ ಉಂಟಾಗುತ್ತವೆ.

ಈ ಚಲನೆಗಳಿಗೆ ಬುಡಕಣವು ಕಾರಣ. ಪರಿಧಿ ತಂತುಗಳ ಬಾಹುಗಳು ಎಟಿಪಿ ಶಕ್ತಿಯನ್ನು ಒದಗಿಸುತ್ತವೆ. ಬುಡಕಣದ ಸಹಿತ ಯುಗ್ಲಿನ, ವೀರ್ಯಾಣು ಬಾಲ ಕಶಾಂಗಗಳನ್ನು ಬೇರ್ಪಡಿಸಿದ ನಂತರವು ಒದ್ದಾಟ ಚಲನೆ ಇರುವುದು ಕಂಡು ಬಂದಿರುವುದರಿಂದ ಬುಡಕಣ ಚಲನೆ ನಿಯಂತ್ರಿತವಾಗುವುದು ಎಂದು ಅರಿವಾಗುತ್ತದೆ.

ಅನೇಕ ಪಾಚಿ (ಆಲ್ಗೆ) ಏಕಕೋಶಿಗಳಲ್ಲಿ ಇವು ಮುಂಭಾಗದಲ್ಲಿದ್ದು ಶರೀರವನ್ನು ಎಳೆಯುತ್ತವೆ. ಶಿಲೀಂದ್ರ, ವೀರ್ಯಾಣುಗಳಲ್ಲಿ ಕಶಾಂಗ ಹಿಂಭಾಗದಲ್ಲಿದ್ದು ಶರೀರವನ್ನು ಮುನ್ನೂಕುತ್ತವೆ. ವಸ್ತುಗಳ ಸಾಗಾಣಿಕೆ ವಿಕಾಸದ ಅಧ್ಯಯನದಲ್ಲಿ ನೆರವಾಗುವ ಕಶಾಂಗ ಕೋಶ ವಿಭಜನೆಯಲ್ಲಿ ಸಮನಾಗಿ ಹಂಚಿಕೆಯಾಗುವುದು. (ಟಿ.ವಿ.ಹೆಚ್.)

**ಕಶಾಂಗಿಗಳು:** ಪ್ರೋಟೋಜ಼ೋವ ವಿಭಾಗದ ಒಂದು ಪ್ರಮುಖ ವರ್ಗ (ಫ್ಲಾಜೆಲೇಟ). ಮ್ಯಾಸ್ಟಿಗೋಫೋರ ಪರ್ಯಾಯ ನಾಮ. ಈ ವರ್ಗದ ಪ್ರಾಣಿಗಳು ಜಲವಾಸಿಗಳು; ಸಮುದ್ರ ಅಥವಾ ಸಿಹಿನೀರಿನ ಕೊಳಗಳಲ್ಲಿ ವಾಸಿಸುತ್ತವೆ. ಪರಾವಲಂಬಿಗಳೂ ಇವೆ. ಈ ವರ್ಗದ ಪ್ರಾಣಿಗಳಲ್ಲಿ ಚಾಟಿಯಂತಿರುವ ಕಶಾಂಗಗಳೇ ಚಲನಾಂಗಗಳು. ದೇಹಕ್ಕೆ ನಿರ್ದಿಷ್ಟವಾದ ಆಕಾರವಿದ್ದು, ಸ್ಪಷ್ಟವಾದ ಮುಂಭಾಗವಿದೆ. ಕೋಶ ದ್ರವ್ಯವನ್ನು ಎಕ್ಟೋಪ್ಲಾಸಂ ಮತ್ತು ಎಂಡೊಪ್ಲಾಸಂ ಎಂದು ವಿಂಗಡಿಸುವುದು ಕಷ್ಟ. ಮುಂಭಾಗದಲ್ಲಿ ಗಂಟಲು ಎನ್ನುವ ತಗ್ಗಾದ ಪ್ರದೇಶವಿದೆ. ಇದು ಆಹಾರಸೇವನೆಗಾಗಿ ಇರದೆ, ಕಶಾಂಗವನ್ನು ಹೊಂದಿರುವ ಸ್ಥಳವಾಗಿದೆ. ಹಸಿರು, ಕೆಂಪು, ಹಳದಿ ಹಾಗೂ ಕಂದು ಬಣ್ಣದ ಕ್ರೊಮೋಪ್ಲಾಸ್ಟ್‌ಗಳು ದೇಹದಲ್ಲಿ ಎದ್ದು ಕಾಣುವ ವಸ್ತುಗಳು. ಇವುಗಳ ಜೊತೆಗೆ ಬಹುತರವಾಗಿ ಪೈರನಾಯಿಡ್‌ಗಳು ಇರುವುವು. ಹಲವು ಕಶಾಂಗಿಗಳಲ್ಲಿ ಮುಂಭಾಗದಲ್ಲಿ ಪ್ರಕಾಶವನ್ನು ತಿಳಿಯಬಲ್ಲ ಕೆಂಪು ನೇತ್ರಬಿಂದು ಇದೆ. ನ್ಯೂಕ್ಲಿಯಸ್ ಒಂದೇ ಇದ್ದು, ಸಿಹಿನೀರು ವಾಸಿಗಳಲ್ಲಿ ಸಂಕೋಚನಾವಕಾಶಗಳಿವೆ. ಹರಿತ್ತನ್ನು ಹೊಂದಿರುವ ಕಶಾಂಗಿಗಳಲ್ಲಿ ಪೋಷಣೆ ಪೂತಿಸಸ್ಯ ಮಾದರಿಯದು; ಉಳಿದೆಲ್ಲವುಗಳಲ್ಲಿ ಸ್ಯಾಪ್ರೊಜ಼ೋಯಿಕ್ ಇಲ್ಲವೆ ಪೂರ್ತಿಪ್ರಾಣಿ ಮಾದರಿಯದು. ಈ ವರ್ಗವನ್ನು ಕೆಳಗೆ ಕಾಣಿಸಿದಂತೆ 9 ಗಣಗಳಾಗಿ ವಿಭಾಗಿಸಿದ್ದಾರೆ.

1 ಕ್ರೈಸೊಮಾನಡೈನ_ಉದಾ: ಕ್ರೈಸಮೀಬ
2 ಕ್ರಿಪ್ಟೊಮಾನಡೈನ_ಉದಾ: ಕ್ರಿಪ್ಟೊಮೊನಾಸ್
3 ಡೈನೊಫ್ಲಾಜೆಲೇಟ_ಉದಾ: ಸಿರೇಶಿಯಮ್, ನಾಕ್ಟಿಲ್ಯೂಕ
4 ಯೂಗ್ಲಿನಾಯ್ಡೈನ_ಉದಾ: ಯೂಗ್ಲಿನ
5 ಫೈಟೊಮಾನಡೈನ_ಉದಾ: ವಾಲ್ವಾಕ್ಸ್, ಪಾಂಡೊರೈನ
6 ಪ್ರೋಟೊಮಾನಡೈನ_ಉದಾ: ಟ್ರಿಪ್ಯಾನೊಸೋಮ, ಲೀಶ್‌ಮಾನಿಯ
7 ಪಾಲಿಮ್ಯಾಸ್ಟಿಗೈನ_ಉದಾ: ಟ್ರೈಕೊಮೊನಾಸ್, ಜಿಯಾರ್ಡಿಯ
8 ಹೈಪರ್‌ಮ್ಯಾಸ್ಟಿಗೈನ_ಉದಾ: ಲೋಫೋಮೊನಾಸ್
9 ರೈಜೊಮ್ಯಾಸ್ಟಿಗೈನ_ಉದಾ: ಮ್ಯಾಸ್ಟಿಗಮೀಬ. (ಎಸ್.ಬಿ.ಎಂ.)

**ಕಶೇರುಕ:** (ಕಾರ್ಡೇಟ): ಮೂಲ ಕಶೇರುಸ್ತಂಭ (ನೊಟೊಕಾರ್ಡ್), ಕಿವಿರು ರಂಧ್ರಗಳು ಹಾಗು ಮೇಲು ಭಾಗದ ನಳಿಕೆಯಂತಿರುವ ನರಹುರಿ ಈ ಮೂರು ಪ್ರಮುಖ ಗುಣಗಳನ್ನು ಹೊಂದಿರುವ, ಪ್ರಾಣಿಗಳ ಒಂದು ಪ್ರಮುಖ ವಂಶ.

ಕಶೇರುಕಗಳ ಇತರ ಲಕ್ಷಣಗಳು ಹೀಗಿವೆ:

೧. ಒಳ ಹಾಗೂ ಹೊರ ಅಸ್ಥಿರಚನೆ, ೨. ಮಸ್ತಕ, ೩. ಸೆಫಲೈಸೇಷನ್, ೪. ಮೇಲು ಮತ್ತು ತಳಭಾಗದ ನರಮೂಲಗಳು, ೫. ಅನುವೇದನ ನರಮಂಡಲ, ೬. ಪಿಟ್ಯೂಟರಿ ಮತ್ತು ಪೀನಿಯಲ್ ಅಂಗಗಳು, ೭. ತಳಭಾಗದ ಹೃದಯ, ೮. ಹೆಪ್ಯಾಟಿಕ್ ಪೋರ್ಟಲ್ ರಕ್ತ ಪರಿಚಲನೆ, ೯. ಕೆಂಪುರಕ್ತ ಕೋಶಗಳು, ೧೦. ಚಲನಾಂಗಗಳು, ೧೧. ಗುದದ್ವಾರದಿಂದ ಹಿಂದಿರುವ ಬಾಲ, ೧೨. ನಿರ್ನಾಳ ಗ್ರಂಥಿಗಳು.

ಅಸ್ಥಿರಚನೆ: ಅಕಶೇರುಕಗಳಲ್ಲಿ ಇಲ್ಲದಿರುವ ಒಂದು ಅತಿಮುಖ್ಯ ಗುಣ. ಇದು ಮೃದ್ವಸ್ಥಿಯಿಂದಾಗಿರಬಹುದು ಅಥವಾ ಮೂಳೆಯಿಂದಾಗಿರಬಹುದು. ಇಲ್ಲದಿದ್ದಲ್ಲಿ ಇವೆರಡೂ ಸೇರಿ ಆಗಿರಬಹುದು. ಕಶೇರುಕಗಳ ಬೆಳವಣಿಗೆಯ ಪ್ರಥಮಾವಸ್ಥೆಯಲ್ಲಿ ಕಶೇರುಸ್ತಂಭ (ನೋಟೊಕಾರ್ಡ್) ಅವಸ್ಥೆಯಿಂದಲೇ ಪ್ರಾರಂಭವಾಗಿ, ಜೀವಿ ಬೆಳೆದಂತೆ ಮೃದ್ವಸ್ಥಿಯಿಂದಾದ ಅಥವಾ ಮೂಳೆಯಿಂದಾದ ಬೆನ್ನು ಮೂಳೆಯ ಬೆಳವಣಿಗೆಯಾಗಿ, ನೋಟೊಕಾರ್ಡ್ ಕರಗಿಹೋಗುತ್ತದೆ. ಕಶೇರುಕಗಳಿಗೆ ಶರೀರದ ಮೇಲೆ ಶಲ್ಕಗಳು ಅಥವಾ ಚರ್ಮದಿಂದಲೇ



ಮೀನು

ಉದ್ಭವಗೊಂಡ ತಟ್ಟೆಗಳಂಥ ರಚನೆಗಳು ಇರುತ್ತವೆ. ಈ ರೀತಿಯ ಹೊದಿಕೆ ಆದಿಕಶೇರುಕಗಳಲ್ಲಿ ಇತ್ತೆಂಬುದನ್ನು ಆಸ್ಟ್ರಕೋಡರ್ಮಿಗಳ (ಪಳೆಯುಳಿಕೆ ಮೀನುಗಳು) ಅವಶೇಷಗಳು ಸ್ಪಷ್ಟಪಡಿಸಿವೆ. ಈ ಮೀನುಗಳ ಮೈಮೇಲೆ ಮೂಳೆಯಿಂದಾದ ತಟ್ಟೆಗಳಂಥ ಹೊದಿಕೆ ಇತ್ತು. ಇದು ಶರೀರದ ಮುಂದಿನ ಭಾಗದಲ್ಲಿ ಹೆಚ್ಚಾಗಿತ್ತು. ಅಸ್ಥಿ ತಟ್ಟೆಗಳು ಒಂದರೊಡನೊಂದು ಬೆಸೆದುಕೊಂಡಂತೆ ಜೋಡಿಸಿಕೊಂಡಿದ್ದುವು. ಹಿಂದಿದ್ದ ಕಶೇರುಕಗಳಲ್ಲಿ ಒಳ ಅಸ್ಥಿ ಹಾಗೂ ಹೊರ ಅಸ್ಥಿರಚನೆಗಳ ಬೆಳವಣಿಗೆ ಸಮನಾಗಿರುವುದು ಕಂಡುಬರುತ್ತದೆ. ಆದರೆ ಉಚ್ಚಮಟ್ಟದ ಇಂದಿನ ಕಶೇರುಕಗಳಲ್ಲಿ ಹೊರ ಅಸ್ಥಿ ಚರ್ಮದಿಂದ ಶರೀರದೊಳಕ್ಕೆ ಹೂತುಹೋಗಿ ಒಳ ಆಸ್ಥಿಯೊಡನೆ ಬೆರೆತುಹೋಯಿತೆಂದು ತಿಳಿದುಬರುತ್ತದೆ. ಇದರಿಂದಾಗಿ ಉಚ್ಚಮಟ್ಟದ ಕಶೇರುಕಗಳಲ್ಲಿ ಹೊರ ಅಸ್ಥಿರಚನೆಗಳಿಲ್ಲ.



ಆಂಫಿಯಾಮ (ದ್ವಿಚರಿ)

ಬೆನ್ನು ಮೂಳೆ: ಇದು ಅಕಶೇರುಕಗಳಲ್ಲಿ ಹಾಗೂ ಆದಿಕಶೇರುಕಗಳಲ್ಲಿ ಇರುವುದಿಲ್ಲ. ಇದಕ್ಕೆ ಬದಲಾಗಿ ಆದಿಕಶೇರುಕಗಳಲ್ಲಿ ಸೂಕ್ಷ್ಮ ಸರಳಿನಂಥ ನೋಟೊಕಾರ್ಡ್ ಇದೆ. ನಿಮ್ನವರ್ಗದ ಕಶೇರುಕಗಳಾದ ಚಕ್ರಿಯ ಮೀನು(ಸೈಕ್ಲೊ ಸ್ಟೊಮ್ಯಾಟ)ಗಳಲ್ಲಿ ಬೆನ್ನು ಮೂಳೆಯ ಜೊತೆಯಲ್ಲಿಯೇ ನಶಿಸಿಹೋಗಿರುವ ನೋಟೊಕಾರ್ಡನ್ನು ಕಾಣಬಹುದು. ಬೆನ್ನು ಮೂಳೆ ತನ್ನ ಬೆಳವಣಿಗೆಯ ಪ್ರಥಮ ಹಂತದಲ್ಲಿ ಮಣಿಗಳಂಥ ಮೃದ್ವಸ್ಥಿ ಅಥವಾ ಮೂಳೆಗಳ ರಚನೆಯಂತೆ ಕಂಡುಬರುತ್ತದೆ. ಈ ಮಣಿಗಳು ಆ ಜೀವಿಯ ಖಂಡಗಳಿಗೆ ಅನುಗುಣವಾಗಿ ಒಂದರ ಹಿಂದೆ ಒಂದರಂತೆ ಜೋಡಿಸಿಕೊಂಡಿರುತ್ತವೆ. ಇವು ನೋಟೊಕಾರ್ಡಿನ ಜೊತೆಯಲ್ಲಿಯೇ ಜೋಡಿಸಿಕೊಳ್ಳುತ್ತವೆ. ಹೀಗೆ ಬೆಳೆಯುವ ಕಶೇರುಮಣಿಗಳು ಕೊನೆಗೆ ನೋಟೊಕಾರ್ಡಿನ ಕವಚದೊಳಕ್ಕೆ ಪ್ರವೇಶಿಸಿ ಅದನ್ನು ನಾಶಪಡಿಸುತ್ತವೆ. ಹೀಗಾಗಿ ನೋಟೊಕಾರ್ಡ್ ಮಾಯವಾಗುತ್ತದೆ. ಆದರೆ

ಉಡ (ಸರೀಸೃಪ)

ಅದರ ಅಂಗಾಂಶ ಕಶೇರುಮಣಿಯ ಶರೀರದೊಳಕ್ಕೆ ಸೇರಿಹೋಗುತ್ತದೆ. ಪ್ರತಿ ಕಶೇರುಮಣಿಯಲ್ಲಿಯೂ ಮೇಲುಗಡೆ ನರಹುರಿಯನ್ನು ಸುರಕ್ಷಿತವಾಗಿಡುವ ಕಮಾನು ಮತ್ತು ಕೆಳಗಡೆ ರಕ್ತನಾಳದ ಪ್ರವಾಹಕ್ಕೆ ಬೇಕಾದ ಕಮಾನುಗಳು ಬೆಳೆಯುತ್ತವೆ. ಉನ್ನತಮಟ್ಟದ

ಕಶೇರುಕಗಳಲ್ಲಿ ಕಮಾನುಗಳು ಕಶೇರುಮಣಿಯ ಮೂಲ ಶರೀರದೊಡನೆ ಸೇರಿಹೋಗಿ ಕಶೇರುಮಣಿ ಗಟ್ಟಿಯಾದ ಘನವಸ್ತುವಿನಂತಾಗಲು ಸಹಾಯಮಾಡುತ್ತವೆ. ಕಶೇರುಮಣಿಗಳು ಒಂದರೊಡನೊಂದು ಕೀಲಿಸಿಕೊಂಡು ಬೆನ್ನುಮೂಳೆಯಾಗುತ್ತದೆ. ಕಶೇರುಮಣಿಗಳ ಕೀಲುಗಳು ಕಶೇರುವಿನ ಚಲನೆಗೆ ಅನುಕೂಲ ಮಾಡಿಕೊಟ್ಟಿವೆ. ಕಶೇರುಕಗಳ ವಿವಿಧ ವರ್ಗ ಹಾಗೂ ಗಣಗಳಲ್ಲಿ ಕಶೇರುಮಣಿಗಳ ಆಕಾರದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸಗಳಿವೆ.

ಗೂಬೆ

ಮಸ್ತಕ: ಕಶೇರುಕಗಳಲ್ಲಿರುವ ಮಸ್ತಕ ದೇಹರಚನಾವಿಜ್ಞಾನದ ದೃಷ್ಟಿಯಿಂದ ಮುಖ್ಯವಾದ ಭಾಗ. ಆದಿಕಶೇರುಕಗಳಲ್ಲಿ ಮಸ್ತಕವಿಲ್ಲ. ಬೆಳೆವಣಿಗೆಯ ಹಂತದಲ್ಲಿ ಮಸ್ತಕ ಮಿದುಳಿನ ಮೇಲುಭಾಗದಲ್ಲಿಯೂ ಅಕ್ಕಪಕ್ಕಗಳಲ್ಲಿಯೂ ಮೃದ್ವಸ್ಥಿ ತಟ್ಟೆಗಳ ಮೂಲಕ ರೂಪುಗೊಳ್ಳುತ್ತದೆ. ತಟ್ಟೆಗಳು ಬೆಳೆದು ದೊಡ್ಡವುಗಳಾಗಿ ಒಂದರೊಡನೊಂದು ಬೆಸೆದುಕೊಳ್ಳುತ್ತವೆ. ಇದರಿಂದಾಗಿ ಜೀವಿಯ ಮುಖ್ಯ ಅಂಗವಾದ ಮಿದುಳಿಗೆ ರಕ್ಷಣೆ ದೊರಕುತ್ತದೆ. ಆಸ್ಥಿರಚನೆಗಳುಳ್ಳ ಕಶೇರುಕಗಳಲ್ಲಿ ತಲೆಯ ಮೇಲಿರುವ ಅಸ್ಥಿತಟ್ಟೆಗಳು ಒಳಪ್ರವೇಶಿಸಿ ಮೃದ್ವಸ್ಥಿ ತಟ್ಟೆಗಳೊಡನೆ ಸೇರಿಹೋಗಿ ಒಂದು ರೀತಿಯ ಸಂಕೀರ್ಣವಾದ ಮಸ್ತಕದ ಉದ್ಭವಕ್ಕೆ ಕಾರಣವಾಗುತ್ತವೆ. ಉಚ್ಚಮಟ್ಟದ ಕಶೇರುಕಗಳಲ್ಲಿ ಮೃದ್ವಸ್ಥಿ ಮುಂದೆ ಬೆಳೆಯುವ ಅಸ್ಥಿರಚನೆಗಳಿಂದಾಗಿ ಮಾಯವಾಗುತ್ತದೆ. ಇಂಥ ಮಸ್ತಕದ ರಚನೆ ಈ ಉಪವಿಭಾಗವನ್ನು ಬಿಟ್ಟರೆ ಇನ್ನಿತರ ಯಾವ ವಿಭಾಗದ ಪ್ರಾಣಿಗಳಲ್ಲಿಯೂ ಕಂಡುಬರುವುದಿಲ್ಲ.

ಸೆಫಲೈಸೆಷನ್: ಎಲ್ಲ ಕಶೇರುಕಗಳಲ್ಲಿ ಉನ್ನತವಾಗಿ ಬೆಳೆದಿರುವ ಶಿರದ ಭಾಗವಿದ್ದು ಇಲ್ಲಿ ಮಿದುಳು ಹಾಗೂ ಸಂಕೀರ್ಣತರ ಜ್ಞಾನೇಂದ್ರಿಯಗಳಿವೆ. ಕೆಳದರ್ಜೆಯ ಕಶೇರುಕಗಳಲ್ಲಿ ಶಿರದ ಭಾಗ ಸರಿಯಾಗಿ ರೂಪುಗೊಂಡಿಲ್ಲ. ಆದರೆ ಮುಂದುವರಿದ ಕಶೇರುಕಗಳಲ್ಲಿ



ರ್‍ಹೀಸಸ್ ಮಕಾಕ್

ಇದು ಪೂರ್ಣವಾಗಿ ರೂಪುಗೊಂಡಿದೆ. ಸೈಕ್ಲೊಸ್ಟೊಮ್ಯಾಟ ವರ್ಗದಿಂದ ಸ್ತನಿವರ್ಗದವರೆಗೆ, ಶಿರದ ಗಾತ್ರ ಹಾಗೂ ಸಂಕೀರ್ಣತೆ ಪ್ರತಿವರ್ಗದಲ್ಲಿಯೂ ಹೆಚ್ಚುತ್ತ ಹೋಗಿದೆ. ನರಮಂಡಲಕ್ಕೆ ಸಂಬಂಧಿಸಿದಂತೆ ಈ ಸಂಕೀರ್ಣತೆ ಇನ್ನೂ ಹೆಚ್ಚಿ, ಶಿರಕ್ಕೆ ಶರೀರದ ಇತರ ಭಾಗಗಳೆಲ್ಲಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯ. ಕಶೇರುಕಗಳ ಶಿರದ ಬೆಳೆವಣಿಗೆ ಎಷ್ಟು ಖಂಡಗಳ ಮಿಲನದಿಂದಾಗುತ್ತದೆಂಬುದು ಇನ್ನೂ ಇತ್ಯರ್ಥವಾಗದ ವಿಷಯ. ಇದು ಎರಡು ಭಾಗಗಳಿಂದ ಬೆಳೆಯುತ್ತದೆ ಎಂದು ಡೆಬೀರ್ ಎಂಬ ವಿಜ್ಞಾನಿ ಅಭಿಪ್ರಾಯಪಡುತ್ತಾನೆ. ಈತನ ಪ್ರಕಾರ ಶಿರ ಎರಡು ಉಪಶಿರಗಳ ಒಟ್ಟುಗೂಡುವಿಕೆಯಿಂದಾಗಿ ಆಗಿದೆ. ಇವುಗಳಿಗೆ ನ್ಯೂರಲ್ ಶಿರ ಮತ್ತು ವಿಸರಲ್ ಶಿರಗಳೆಂದು ಹೆಸರು. ನ್ಯೂರಲ್ ಭಾಗ ಶಿರದ ಮೇಲುಭಾಗವಾಗಿಯೂ ವಿಸರಲ್ ಭಾಗ ಶಿರದ ತಳಭಾಗವಾಗಿಯೂ ಬೆಳೆಯುತ್ತವೆ. ಇವುಗಳ ವಿಕಾಸದ ಹಂತಗಳನ್ನು ಪರಿಶೀಲಿಸಿದರೆ ನ್ಯೂರಲ್ ಶಿರಭಾಗ ಹಂತ ಹಂತವಾಗಿ ದೊಡ್ಡದಾಗುತ್ತ ಹೋಗಿದೆ; ಆದರೆ ವಿಸರಲ್ ಶಿರಭಾಗ ಹಂತಹಂತವಾಗಿ ನಶಿಸುತ್ತ ಬಂದಿದೆ ಎಂದು ತಿಳಿಯುವುದು. ಉಚ್ಚಮಟ್ಟದ ಕಶೇರುಕಗಳಲ್ಲಿ ನ್ಯೂರಲ್ ಶಿರವೇ ಶಿರದ ಪ್ರಮುಖ ಭಾಗ. ಕೆಳದರ್ಜೆಯ ಕಶೇರುಕಗಳಲ್ಲಿ ಇದು ನಾಲ್ಕು ಖಂಡಗಳಿಂದಾಗಿದೆ. ಶಾರ್ಕ್ ಮೀನಿನಲ್ಲಿ ಈ ಶಿರಭಾಗ ಎಂಟು ಖಂಡಗಳಿಂದಾಗಿದೆ. ವಿಸರಲ್ ಶಿರದ ಖಂಡಗಳು ಸೈಕ್ಲೊಸ್ಟೊಮ್ಯಾಟದಲ್ಲಿ ಅತಿ ಹೆಚ್ಚಾಗಿವೆ. ಆದರೆ ಮುಂದಿನ ವರ್ಗಗಳಲ್ಲಿ ಈ ಖಂಡಗಳು ಕಡಿಮೆಯಾಗುತ್ತ ಹೋಗುತ್ತವೆ. ಭೂಚರ ಕಶೇರುಕಗಳಲ್ಲಿ ಕೊನೆಯ ಒಂದು ಖಂಡಮಾತ್ರ ಉಳಿಯುತ್ತದೆ.

ಜಿಂಕೆ

ಮೇಲು ಹಾಗೂ ತಳಭಾಗದ ನರಮೂಲಗಳು: ಅಕಶೇರುಕ ಪ್ರಾಣಿಗಳಲ್ಲಿ ಪ್ರತಿಖಂಡದಲ್ಲಿಯೂ ಒಂದೊಂದು ಜೊತೆ ನರಗಳು ಮಿದುಳು ಬಳ್ಳಿಯಿಂದ ಹೊರಬರುತ್ತವೆ. ಆದರೆ ಕಶೇರುಕಗಳಲ್ಲಿ ಪ್ರತಿಖಂಡದಲ್ಲಿಯೂ ಎರಡು ಜೊತೆ ನರಗಳು ಮಿದುಳುಬಳ್ಳಿಯಿಂದ ಹೊರಬರುತ್ತವೆ. ಈ ತಂಡಗಳು ನರ ಬಳ್ಳಿಯ ಮೇಲುಭಾಗದಿಂದ ಮತ್ತು ತಳಭಾಗದಿಂದ ಉದ್ಭವಿಸುತ್ತವೆ. ತಳಭಾಗದ ತಂಡ ಕೇವಲ ಪ್ರೇರಕ ( ಮೋಟಾರ್) ನರಗಳಾಗಿ ಕೆಲಸಮಾಡುತ್ತವೆ. ಅಂದರೆ ಇವು ಮಿದುಳಿನಿಂದ ಸಮಾಚಾರಗಳನ್ನು ಶರೀರದ ಇತರ ಭಾಗಗಳಾದ ಮಾಂಸಖಂಡಗಳು ಮತ್ತು ಗ್ರಂಥಿಗಳಿಗೆ ತಲುಪಿಸುತ್ತವೆ. ಮೇಲುಭಾಗದ ತಂಡ ಜ್ಞಾನವಾಹಿನಿ ಹಾಗೂ ಪ್ರೇರಕ ಕೆಲಸಗಳೆರಡನ್ನು ಮಾಡುತ್ತವೆ. ಆದ್ದರಿಂದ ಇವು ಮಿಶ್ರನರಗಳು. ಇವುಗಳ ಮೂಲದಲ್ಲಿ ನರಕೋಶಗಳು ಗುಂಪುಗೂಡಿದ್ದು ಗಂಟಿನಂತೆ ಕಾಣುತ್ತವೆ. ಈ ರಚನೆಗಳಿಗೆ ಗ್ಯಾಂಗ್ಲಿಯಗಳೆಂದು ಹೆಸರು. ಮೇಲುಭಾಗದ ಹಾಗೂ ತಳಭಾಗದ ಈ ನರಗಳು ಮೂಲಭಾಗದಲ್ಲಿ ಬೇರೆ ಇದ್ದರೂ ಇವುಗಳ ರೆಂಬೆಗಳು ಶರೀರದೊಳಗೆ ಒಂದರೊಡನೊಂದು ಮಿಲನಗೊಳ್ಳುವುದೂ ಉಂಟು. ಇದರಿಂದಾಗಿ

ಕೇರೆ ಹಾವು

ಇವು ಮಿಶ್ರನರಗಳಾಗುತ್ತವೆ. ಆದರೆ ಕೆಳದರ್ಜೆಯ ಕಶೇರುಕಗಳಾದ ಸೈಕ್ಲೊಸ್ಟೊಮ್ಯಾಟಗಳಲ್ಲಿ ಈ ರೀತಿಯ ನರಗಳ ಮಿಲನ ಕಂಡುಬರುವುದಿಲ್ಲ.



ಆನೆ

ಅನುವೇದನ (ಸಿಂಪತೆಟಿಕ್) ನರಮಂಡಲ: ಮಿದುಳುಬಳ್ಳಿಗೆ ಸಮಾನಾಂತರವಾಗಿ ಶರೀರದೊಳಗೆ ಎರಡು ಸಾಲು ಗ್ಯಾಂಗ್ಲಿಯಗಳು ಮತ್ತು ಅವಕ್ಕೆ ಸಂಬಂಧಿಸಿದಂತೆ ನರಗಳೂ ಇವೆ. ಇವು ಶರೀರದ ಒಳಗಿರುವ ಅಂಗಗಳ ಮೇಲೆ ಹಿಡಿತ ಇಟ್ಟುಕೊಂಡಿವೆ. ಇವಕ್ಕೆ ವಿಸರಲ್ ನರಮಂಡಲವೆಂದೂ ಹೆಸರಿದೆ. ಇದರ ಗ್ಯಾಂಗ್ಲಿಯಗಳು ಮತ್ತು ನರಗಳು ಕೇಂದ್ರನರಮಂಡಲದ ನರಗಳೊಡನೆ ಅದರಲ್ಲಿಯ ಮೆಡುಲ ಆಬ್ಲಾಂಗೇಟದೊಡನೆ ಸೇರಿಕೊಂಡು ಸಂಪರ್ಕ ಕಲ್ಪಿಸಿಕೊಂಡಿದೆ.

ಪಿಟ್ಯೂಟರಿ ಮತ್ತು ಪೀನಿಯಲ್ ಅಂಗಗಳು: ಇವು ಮಿದುಳಿನಿಂದ ಬೆಳೆದಿರುವ ಬಾಹ್ಯ ಬೆಳೆವಣಿಗೆಗಳಂತೆ ಅಥವಾ ಚಾಚುಗಳಂತಿವೆ. ಪಿಟ್ಯೂಟರಿಗ್ರಂಥಿ ಮುಂದಿನ ಮಿದುಳಿನ ತಳಭಾಗದಲ್ಲಿದೆ. ಇದು ಮಧ್ಯದರ್ಮ ಮತ್ತು ನರಮಂಡಲದ (ಹೊರದರ್ಮ) ಅಂಗಾಂಶಗಳೆರಡೂ ಸೇರಿ ಆಗಿರುವ ಒಂದು ಗ್ರಂಥಿ. ಸೈಕ್ಲೊಸ್ಟೋಮ್ ಗಳನ್ನು ಬಿಟ್ಟರೆ ಇದು ಅಂತಃಸ್ರಾವಕಗಳನ್ನು ಉತ್ಪತ್ತಿಮಾಡುವ ಒಂದು ಅತಿ ಕ್ಲಿಷ್ಟವಾದ ಗ್ರಂಥಿ ಹಾಗೂ ಇದರಿಂದ ಉತ್ಪತ್ತಿಯಾಗುವ ಹಾರ್ಮೋನುಗಳು ಶರೀರದ ವಿವಿಧ ಕ್ರಿಯೆಗಳನ್ನು ನಿಯಂತ್ರಿಸುವುವು. ಸೈಕ್ಲೊಸ್ಟೋಮ್‌ಗಳಲ್ಲಿ ಈ ಎರಡು ಭಾಗಗಳು ಬೇರೆಬೇರೆಯೇ ಇವೆ.

ನಿಮ್ನವರ್ಗದ ಕಶೇರುಕಗಳಲ್ಲಿ ಪೀನಿಯಲ್ ಅಂಗ ಮಿದುಳಿನ ಡಯನ್‌ಸೆಫೆಲಾನ್ ಭಾಗದಿಂದ ಹೊರಚಾಚಿಕೊಂಡಿದ್ದು ಆ ಪ್ರಾಣಿಗಳ ಮೂರನೆಯ ಕಣ್ಣಿನಂತೆ ಹಾಗೂ ಅಂತಃಸ್ರಾವದ ಗ್ರಂಥಿಯಾಗಿ ಕಾರ್ಯನಿರ್ವಹಿಸಿದರೇ ಮೇಲುದರ್ಜೆಯ ಕಶೇರುಕಗಳಲ್ಲಿ ಮುಖ್ಯವಾಗಿ ಅಂತಃಸ್ರಾವಕ ಗ್ರಂಥಿಯಾಗಿದೆ.

ಹೃದಯ: ಆಂಫಿಯಾಕ್ಸಸ್ ಜೀವಿಗೆ ನಿರ್ದಿಷ್ಟವಾದ ಹೃದಯವಿಲ್ಲ. ಆದರೆ ಇನ್ನುಳಿದ ಕಶೇರುಕಗಳಲ್ಲಿ ಹೃದಯ ಪೂರ್ಣವಾಗಿ ರೂಪುಗೊಂಡಿದೆ. ಕಶೇರುಕಗಳಲ್ಲಿ ಜೀರ್ಣಾಂಗಗಳ ತಳಭಾಗದಲ್ಲಿ ಹೃದಯವಿದೆ. ಆದರೆ ಅಕಶೇರುಕಗಳಲ್ಲಿ ಈ ಅಂಗದ ಸ್ಥಾನ ಜೀರ್ಣಾಂಗಗಳ ಮೇಲುಗಡೆ ಇದೆ. ಹೃದಯ ಸಹ ಕೆಳದರ್ಜೆಯ ಕಶೇರುಕಗಳಿಂದ ಮೇಲಿನ ದರ್ಜೆಯ ಕಶೇರುಕಗಳವರೆಗೆ ವಿಕಾಸಗೊಂಡಿರುವುದನ್ನು ಕಾಣಬಹುದು.



ಪಾಂಗೊಲಿನ್

ಹೆಪ್ಯಾಟಿಕ್ ಪೋರ್ಟಲ್ ರಕ್ತ ಪರಿಚಲನೆ: ಇದು ಕಶೇರುಕಗಳಲ್ಲಿ ಮಾತ್ರ ಕಂಡುಬರುವ ಒಂದು ವಿಶಿಷ್ಟ ಗುಣ. ಇಲ್ಲಿ ಅಭಿಧಮನಿಗಳು ಯಕೃತ್ತಿನೊಳಕ್ಕೆ ಬಂದು ಲೋಮನಾಳಗಳಾಗಿ ವಿಭಜಿಸಿ ಮತ್ತೆ ಇವೆಲ್ಲವೂ ಒಂದುಗೂಡಿ ರಕ್ತವನ್ನು ಹೃದಯಕ್ಕೆ ಕೊಂಡೊಯ್ಯುತ್ತವೆ. ಜೀರ್ಣಾಂಗಗಳಿಂದ ಬರುವ ಆಹಾರಮಿಶ್ರಿತ ರಕ್ತ ಪಿತ್ತಕೋಶದೊಳಕ್ಕೆ ಪ್ರವೇಶಿಸಿ ಅಲ್ಲಿ ಶೋಧನೆಗೊಂಡ ಅನಂತರ ಹೃದಯಕ್ಕೆ ಬರುತ್ತದೆ. ಇದು ಈ ಪರಿಚಲನೆಯ ಮುಖ್ಯ ಉದ್ದೇಶ. ಇಂಥ ರಕ್ತಪರಿಚಲನೆ ಅಕಶೇರುಕಗಳಲ್ಲಿಲ್ಲ.

ಕೆಂಪು ರಕ್ತಕೋಶಗಳು: ಅಕಶೇರುಕಗಳಲ್ಲಿ ಕೆಂಪುರಕ್ತಕೋಶಗಳು ಇರುವುದಿಲ್ಲ. ಆದರೆ ಆ ಜೀವಿಗಳ ರಕ್ತದಲ್ಲಿ ಹೀಮೋಗ್ಲೋಬಿನ್ ಇರುತ್ತದೆ. ಇದು ರಕ್ತದ ದ್ರವ ಭಾಗವಾದ ಪ್ಲಾಸ್ಮಾದೊಳಗೆ ಮಾತ್ರ ಕಂಡುಬರುತ್ತದೆ. ಆದರೆ ಕಶೇರುಕಗಳಲ್ಲಿ ಹೀಮೋಗ್ಲೋಬಿನ್ ಪ್ಲಾಸ್ಮ ದ್ರವದೊಳಗಿರದೆ ಪ್ರತ್ಯೇಕವಾದ ಕೋಶಗಳೊಳಗಿದ್ದು, ಈ



ತಿಮಿಂಗಲ

ಕೋಶಗಳಿಗೆ ಕೆಂಪುರಕ್ತಕೋಶಗಳೆಂದು ಹೆಸರು. ಇವು ಮೂಳೆಗಳೊಳಗೆ ಹುಟ್ಟುತ್ತವೆ. ಕೆಂಪುರಕ್ತಕೋಶಗಳು ಆಮ್ಲಜನಕವನ್ನು ತೆಗೆದುಕೊಂಡು ರಕ್ತಪರಿಚಲನೆಯ ಮೂಲಕ ಶರೀರದ ಅಂಗಾಂಶಗಳಿಗೆ ಅದನ್ನು ತಲಪಿಸುತ್ತವೆ.

ಚಲನಾಂಗಗಳು: ಇಂದು ಬದುಕಿರುವ ಯಾವ ಕಶೇರುಕಗಳಲ್ಲಿಯೂ ಎರಡು ಜೊತೆಗಿಂತ ಹೆಚ್ಚಾಗಿ ಚಲನಾಂಗಗಳಿಲ್ಲ. ಆದರೆ ಅಕಶೇರುಕಗಳಲ್ಲಿ ಶರೀರದ ಪ್ರತಿ ಖಂಡದಿಂದಲೂ ಒಂದೊಂದು ಜೊತೆ ಕಾಲುಗಳು ಹುಟ್ಟಿಕೊಳ್ಳುತ್ತವೆ. ಚಲನಾಂಗಗಳಾದ ಕಾಲುಗಳೇ ಕಶೇರುಕಗಳ ಮುಖ್ಯ ಗುಣವೆಂದಲ್ಲ. ಏಕೆಂದರೆ ಕೆಳದರ್ಜೆಯ ಕಶೇರುಕಗಳಾದ ಸೈಕ್ಲೊಸ್ಟೊಮ್ಯಾಟದಲ್ಲಿ ಚಲನಾಂಗಗಳೇ ಇಲ್ಲ.

ಬಾಲ: ಸಾಮಾನ್ಯವಾಗಿ ಕಶೇರುಕಗಳ ಶರೀರದ ಹಿಂಭಾಗದಲ್ಲಿ ಬಾಲವಿರುತ್ತದೆ. ಆದರೆ ಇದರೊಳಗೆ ದೇಹಾಂತರ ಅವಕಾಶವಿಲ್ಲ. ಅಲ್ಲದೆ ಉದರಭಾಗದೊಳಗಿರುವ ಯಾವ ಅಂಗವೂ ಬಾಲದೊಳಕ್ಕೆ ಪ್ರವೇಶಿಸುವುದಿಲ್ಲ. ಕೆಲವು ಉಭಯಚರಿಗಳಿಗೆ ಬಾಲವಿಲ್ಲ. ಆದರೆ ಡಿಂಬದ ಸ್ಥಿತಿಯಲ್ಲಿದ್ದಾಗ ಅವಕ್ಕೆ ಬಾಲವಿದ್ದೇ ಇರುತ್ತದೆ. ಕೆಳದರ್ಜೆಯ ಕಶೇರುಕಗಳಲ್ಲಿ ಬಾಲ ಚಲನಾಂಗವಾಗಿ ಕೆಲಸಮಾಡುತ್ತದೆ. ನೀರಿನಲ್ಲಿ ಚಲಿಸುವ ಪ್ರಾಣಿಗಳಿಗೆ ಬಾಲದ ಅಗತ್ಯವಿದ್ದೇ ಇದೆ. ಆದ್ದರಿಂದ ಇದು ಆದಿಕಶೇರುಕಗಳ ಉಗಮವಾದಾಗಲೇ ಹುಟ್ಟಿಕೊಂಡಿದೆ. ಮೇಲುದರ್ಜೆಯ ಕಶೇರುಕ, ಮನುಷ್ಯನಲ್ಲಿ ಬಾಹ್ಯವಾಗಿ ಬಾಲವಿಲ್ಲ. ಆದರೂ ಬಾಲವಿದ್ದ ಪ್ರಾಣಿಗಳಿಂದ ಈತ ಹುಟ್ಟಿಬಂದಿದ್ದಾನೆಂಬುದಕ್ಕೆ ಕುರುಹುಗಳು ಈತನ ಶರೀರದಲ್ಲಿವೆ.

ಅಂತಃಸ್ರಾವಕ ಗ್ರಂಥಿಗಳು: ಶರೀರದೊಳಗೆ ನಡೆಯುವ ಚಯಾಪಚಯ ಹಾಗೂ ಇತರ ಕ್ರಿಯೆಗಳ ಮೇಲೆ ಪ್ರಭಾವ ಬೀರುವ ಹಾರ್ಮೋನುಗಳನ್ನು ಉತ್ಪಾದಿಸುತ್ತವೆ. ಕಶೇರುಕಗಳಲ್ಲಿ ಮೇಲೆ ಹೇಳಿದ ಗುಣಗಳ ಜೊತೆಗೆ ಆಯಾ ವರ್ಗಕ್ಕೆ ಪ್ರತ್ಯೇಕವಾದ ಗುಣಗಳಿವೆ.

ಕಶೇರುಕಗಳನ್ನು ಆದಿಕಶೇರುಕಗಳು ಹಾಗೂ ಬೆನ್ನೆಲುಬಿರುವ ಪ್ರಾಣಿಗಳು, ಎಂದು ಎರಡು ಉಪಗುಂಪುಗಳಾಗಿ ವಿಭಜಿಸಲಾಗಿದೆ. ಬೆನ್ನುಲುಬಿರುವ ಕಶೇರುಕಗಳನ್ನು ಏಳು ವರ್ಗಗಳಾಗಿ ವಿಭಜಿಸಲಾಗಿದೆ. ಅವು, ೧ ಸೈಕ್ಲೊಸ್ಟೊಮ್ಯಾಟ, ೨ ಆಸ್ಟ್ರಕೋಡರ್ಮಿ, ೩ ಮೀನುಗಳು (ಪಿಸೀಸ್), ೪ ಉಭಯವಾಸಿಗಳು (ಆಂಫಿಬಿಯ), ೫ ಸರೀಸೃಪಗಳು, ೬ ಪಕ್ಷಿಗಳು (ಏವೀಸ್) ಮತ್ತು ೭ ಸ್ತನಿಗಳು. (ಎಲ್.ಎಸ್.ಜಿ.)

**ಕಶೇರುಕ ಭ್ರೂಣವಿಜ್ಞಾನ:** ಲಿಂಗಾಣುಗಳು ಕೂಡಿ ನಿಷೇಚನ ಹೊಂದಿದ ಮೇಲೆ ಹೆಣ್ಣಿನ ದೇಹದಲ್ಲಿ ಅಥವಾ ಮೊಟ್ಟೆಯ ಚಿಪ್ಪಿನ ಒಳಗೆ ಬೆಳೆಯುತ್ತಿರುವ ಭ್ರೂಣದ ಬೆಳವಣಿಗೆಯ ಅಧ್ಯಯನ. ಆದರೆ ಇತ್ತೀಚಿನ ವರ್ಷಗಳಲ್ಲಿ ಪ್ರಾಯೋಗಿಕ ಭ್ರೂಣವಿಜ್ಞಾನ, ರಾಸಾಯನಿಕ ಭ್ರೂಣವಿಜ್ಞಾನ ಮುಂತಾದ ಹೊಸ ವಿಧಾನಗಳಿಂದ ಸಂಗ್ರಹವಾದ ಅಂಶಗಳು ಅದನ್ನು ಕೇವಲ ಒಂದು ಜೀವಿಯ ಬೆಳವಣಿಗೆಯ ಒಂದು ಹಂತ ಎಂದು ಪರಿಗಣಿಸುವುದಕ್ಕಿಂತ ಅದನ್ನೇ ಒಂದು ಸ್ವತಂತ್ರ ವಿಜ್ಞಾನ ಎಂದು ಪರಿಗಣಿಸುವುದು ಸೂಕ್ತ ಎಂದು ಕಂಡು ಬರುವುದರಿಂದ ಪ್ರಾಣಿಗಳ ಬೆಳವಣಿಗೆಯ ಅಭ್ಯಾಸಕ್ಕೆ ಇಂದು ಬೆಳವಣಿಗೆಯ ಜೀವಶಾವಿಜ್ಞಾನ ಎಂಬ ಆಧುನಿಕ ಹೆಸರಿನಿಂದ ಕರೆಯುವುದು ರೂಢಿಗೆ ಬಂದಿದೆ.

ಭ್ರೂಣವಿಜ್ಞಾನ ಎಂಬ ಪದವು ತಪ್ಪು ಅಭಿಪ್ರಾಯಕ್ಕೆ ಆಸ್ಪದಕೊಡಬಹುದು. ಅದರ ವಾಸ್ತವ ಅರ್ಥವು ಭ್ರೂಣಗಳ ಅಭ್ಯಾಸಕ್ಕೆ ಮೀಸಲಾದ ವಿಜ್ಞಾನವಾಗಬಹುದು. ವಾಸ್ತವವಾಗಿ ಭ್ರೂಣ ಎಂಬ ಪದವು ತತ್ತಿಯ ಒಳಗೆ ಅಥವಾ ತಾಯಿಯ ದೇಹದಲ್ಲಿ ಇರುವ ಬೆಳವಣಿಗೆಯ ಹಂತವನ್ನು ಸೂಚಿಸುತ್ತದೆ. ಮೊಟ್ಟೆಯಿಂದ ಹೊರಬಂದಾದ ಮೇಲೆ ಅಥವಾ ತಾಯಿಯ ದೇಹದಿಂದ ಹೊರಬಿದ್ದ ಮೇಲೆ ಅದು ಭ್ರೂಣವಾಗಿರುವುದು ಸಾಧ್ಯವಿಲ್ಲ. ಆದುದರಿಂದ ಅದರ ಅಭ್ಯಾಸವು ಭ್ರೂಣವಿಜ್ಞಾನ ಮಿತಿಯಿಂದ ಹೊರಗುಳಿಯುತ್ತದೆ. ಹುಟ್ಟು ಅಥವಾ ಮೊಟ್ಟೆಯಿಂದ ಹೊರಬರುವ ಘಟನೆಗಳು ಪ್ರಾಣಿಯ ಜೀವನದಲ್ಲಿ ಪ್ರಮುಖ ಘಟನೆಗಳಾದರೂ ಇದಕ್ಕೆ ಮೊದಲು ಮತ್ತು ಅನಂತರ ಪ್ರಾಣಿಯ ದೇಹದಲ್ಲಿ ಸಂಭವಿಸುತ್ತಿರುವ ಪ್ರಕ್ರಿಯೆಗಳು ಕನಿಷ್ಠ ಕೆಳಮಟ್ಟದ ಪ್ರಾಣಿಗಳ ಮಟ್ಟಿಗಾದರೂ ಗಮನಾರ್ಹವಾಗಿ ಭಿನ್ನವಾಗಿರಲಾರವು. ಆದುದರಿಂದ ಎಳೆಯ ಮರಿಯ ಬೆಳವಣಿಗೆಯ ಅಭ್ಯಾಸವನ್ನು ಹುಟ್ಟುವ ಹಿಂದಿನ ಅಥವಾ ತತ್ತಿಯಿಂದ ಹೊರಬರುವ ಮುನ್ನಿನ ಕಾಲದ ಬೆಳವಣಿಗೆಗೆ ಸೀಮಿತವಾಗಿಡುವುದು ತುಂಬಾ ಕಾಲ್ಪನಿಕವಾಗಬಹುದು. ಆದುದರಿಂದ, ಒಂದು ಪ್ರಾಣಿಯ ಜೀವನ ಚರಿತ್ರೆಯನ್ನು ಒಟ್ಟಾಗಿ ಅಭ್ಯಸಿಸುವುದು ಸಂಪ್ರದಾಯವಾಗಿದೆ. ಆ ಕಾರಣ ಬೆಳವಣಿಗೆಯ ಜೀವವಿಜ್ಞಾನ ಎಂಬ ಹೊಸ ಅಭಿದಾನ ರೂಢಿಗೆ ಬಂದಿದೆ. ಇಲ್ಲಿ ಬೆಳವಣಿಗೆ ಎಂಬುದಕ್ಕೆ ನಾವು ಯಾವ ಅರ್ಥವನ್ನು ಕೊಡುತ್ತೇವೆ ಎಂಬುದನ್ನು ಸ್ಪಷ್ಟಪಡಿಸಬೇಕು. ಜೀವವಿಜ್ಞಾನದಲ್ಲಿ ಬೆಳವಣಿಗೆ ಎಂಬ ಪದವನ್ನು ಎರಡು ಭಿನ್ನ ಅರ್ಥಗಳಲ್ಲಿ ಬಳಸುತ್ತಾರೆ. ನಿಷೇಚಿತ ತತ್ತಿಯು ಪರಿವರ್ತನೆಗೊಂಡು ಪ್ರಬುದ್ಧ ಜೀವಿಯಾಗಿ ನಿರ್ಮಾಣಗೊಳ್ಳುವ ಘಟನೆಯಲ್ಲಿ ಪಾತ್ರವಹಿಸುವ ವಿವಿಧ ಪ್ರಕ್ರಿಯೆಗಳನ್ನು ಸೂಚಿಸಲೂ ಇದನ್ನು ಬಳಸುತ್ತೇವೆ. ಇದೇ ರೀತಿ ಜೀವಿಗಳ ನಿಧಾನವಾದ ಐತಿಹಾಸಿಕ ಪರಿವರ್ತನೆಗಳನ್ನು ಸೂಚಿಸಲು ಸಹ ಈ ಪದವನ್ನು ಬಳಸಬಹುದು. ಆದರೆ ನಾವು ಇಲ್ಲಿ ಬಳಸುತ್ತಿರುವ ಉದ್ದೇಶ ಜೀವಿಗಳ ಆದಿಯ ಬೆಳವಣಿಗೆಗಳನ್ನು ತಿಳಿಸುವುದಾಗಿದೆ. ಈ ಅರ್ಥದಲ್ಲಿ ಬೆಳವಣಿಗೆಯ ಜೀವವಿಜ್ಞಾನದ ವ್ಯಾಖ್ಯೆಯು ನಿಷೇಚಿತ ಅಂಡಾಣು ರೂಪುಗೊಳ್ಳುವುದರಿಂದ ಮೊದಲ್ಗೊಂಡು ಲಿಂಗ ಪ್ರೌಢ ಜೀವಿಯು ನಿರ್ಮಾಣವಾಗುವವರೆಗೆ ನಡೆಯುವ ಪರಿವರ್ತನೆಯ ಪರಂಪರೆಗಳು. ಈ ಪರಿಮಿತಿಯಲ್ಲಿ ನಿಷೇಚನೆಯಲ್ಲಿ ಪಾಲುಗೊಳ್ಳುವ ಲಿಂಗಾಣುಗಳ ನಿರ್ಮಾಣ, ಅವುಗಳು ಕೂಡಿ ನಡೆಯುವ ನಿಷೇಚನ, ನಿಷೇಚಿತ ತತ್ತಿಯು ವಿಭಜನೆಗೊಳ್ಳುವ ವಿದಲನ, ಬ್ಲಾಸ್ಟುಲೀಕರಣ, ಗ್ಯಾಸ್ಟ್ರುಲೀಕರಣ, ನ್ಯೂರುಲೀಕರಣ, ನಳಿಕಾಕರಣ, ಹಾಗು ಅಂಗೋತ್ಪತ್ತಿಗಳನ್ನು ಒಳಗೊಳ್ಳುತ್ತದೆ. ಕಶೇರುಕ ಪ್ರಾಣಿಗಳಲ್ಲಿ ಅಪರೂಪದ ಅಪವಾದಗಳ ವಿನಹ ಎಲ್ಲವೂ ಲಿಂಗ ದ್ವಿರೂಪತ್ವವನ್ನು ತೋರುತ್ತವೆ. ಅವುಗಳಲ್ಲಿನ ಪ್ರಜನನಾಂಗಗಳು ವಿಕಾಸದಲ್ಲಿನ ಅವುಗಳ ಸಾಪೇಕ್ಷಿಯ ಮಟ್ಟ, ಜೀವನಕ್ರಮ, ಅವು ವಾಸಿಸುವ ಪರಿಸರ ಮತ್ತು ಇತರ ಅನೇಕ ಪರಿಸ್ಥಿತಿಗಳನ್ನವಲಂಬಿಸಿ ಪ್ರಜನನಾಂಗಗಳು ಸರಳವಾಗಿರಬಹುದು ಅಥವಾ ಸ್ತನಿಗಳಂತೆ ಜಟಿಲವಾಗಿರಬಹುದು. ಸಂಕೀರ್ಣವಾದಂತೆ ಪ್ರಜನನಾಂಗಗಳು ಜಟಿಲವಾಗುವುದರ ಜೊತೆಗೆ ಅವುಗಳ ಕ್ರಿಯಾ ವಿಶೇಷಗಳನ್ನು ಸಂಘಟಿಸಿ ನಿಯಂತ್ರಿಸಲು ವಿಶಿಷ್ಟವಾದ ಅಂತ:ಸ್ರಾವಕ ಮಂಡಲ ರೂಪುಗೊಂಡಿದೆ.

ನಿಷೇಚನ ತಾಯಿಯ ದೇಹದ ಒಳಗಡೆ ಅಥವಾ ಹೊರಗಡೆ ಎಲ್ಲಾದರು ನಡೆಯಲಿ ಅದರ ಬೆಳವಣಿಗೆಯು ಅಂಡಜ ಅಥವಾ ಜರಾಯುಜ ರೀತಿಯದಾಗಿರಲಿ ಒಂದು ಹಂತದವರೆಗೆ ಏಕರೂಪತೆಯನ್ನು ತೋರಿಸುತ್ತದೆ. ನಿಷೇಚನೆ ನಡೆದ ಮೇಲೆ ತತ್ತಿಯು ವಿಭಜನೆಗೊಂಡು ಅನೇಕ ಸಂಖ್ಯೆಯಲ್ಲಿ ಜೀವಕೋಶಗಳನ್ನು ಉತ್ಪತ್ತಿ ಮಾಡುತ್ತದೆ. ಇದೇ ವಿದಲನ. ಈ ಜೀವಕೋಶಗಳು ಅವ್ಯವಸ್ಥಿತವಾಗಿ, ಅಕ್ರಮವಾಗಿ ಉಳಿಯದೆ ಒಂದು ಯೋಜಿತ ರೀತಿಯಲ್ಲಿ ಸುವ್ಯವಸ್ಥಿತವಾಗಿ ಕ್ರಮಬದ್ಧ ರೀತಿಯಲ್ಲಿ ವರ್ತಿಸುತ್ತವೆ. ಬೆಳವಣಿಗೆಯ ಒಂದು ಹಂತದವರೆವಿಗೆ ಏಕರೀತಿಯ ಬೆಳವಣಿಗೆಯ ಹಂತಗಳನ್ನು ಪ್ರದರ್ಶಿಸುತ್ತವೆ. ವಾಸ್ತವವಾಗಿ ಈ ಕಾರಣದಿಂದ ಕಶೇರುಕಗಳ ನಡುವಿನ ಸಂಬಂಧಗಳು ಮತ್ತು ಅವೆಲ್ಲವೂ ಒಂದೇ ಮೂಲದಿಂದ ಉದ್ಭವಿಸಿರಬಹುದು, ಎಂಬ ವಿವರಣೆಗೆ ಆಧಾರಗಳನ್ನು ಒದಗಿಸಿವೆ. ಬೆಳವಣಿಗೆಯ ಹಂತಗಳು ಒಂದೇ ಮಾರ್ಗದಲ್ಲಿ ಹೊರಟಿದ್ದರೂ ವಿವಿಧ ಜಾಡುಗಳನ್ನು ಹಿಡಿಯುತ್ತವೆ. ಇದಕ್ಕೆ ಪ್ರಾಣಿಗೂ ಅದರ ಸನ್ನಿವೇಶಕ್ಕೂ ನಡುವೆ ಇರುವ ನಿಕಟ ಸಂಬಂಧಗಳು ಮತ್ತು ಪ್ರಾಣಿಯ ಹೊಂದಾಣಿಕಾ ವಿಧಾನಗಳು ಕಾರಣವಾಗುತ್ತವೆ. ತತ್ತಿಗಳನ್ನು ರೂಪಿಸುವಾಗಲೇ ಮತ್ತು ತತ್ತಿಯ ರಚನೆಯಲ್ಲಿಯೇ ಅದು ಮುಂದೆ ಅನುಸರಿಸಬಹುದಾದ ಬೆಳವಣಿಗೆಯ ಜಾಡನ್ನು ನಿರ್ಧರಿಸಿದಂತಿರುತ್ತದೆ. ಉದಾಹರಣೆಗೆ ಕಶೇರುಕ ತತ್ತಿಗಳಲ್ಲಿ ಪ್ರಧಾನವಾಗಿ ಕಂಡುಬರುವ ಬಂಡಾರ (ಸ್ತನಿಗಳ ತತ್ತಿಗಳಲ್ಲಿ ಇದು ಇಲ್ಲ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು). ಅದರ ಮೊತ್ತ ಮತ್ತು ತತ್ತಿಯ ರಚನೆಯಲ್ಲಿ ಅದು ಹರಡಿರುವ ರೀತಿ ಬೆಳವಣಿಗೆಯ ವಿಧಾನವನ್ನು ನಿರ್ಧರಿಸುತ್ತದೆ. ಸಾಪೇಕ್ಷೀಯವಾಗಿ ಕಡಿಮೆ ಮೊತ್ತದಲ್ಲಿರುವ ಆಂಫಿಯಾಕ್ಸಿಸ್ ಮತ್ತು ಉಭಯಚರಿಗಳಂತಹ ಪ್ರಾಣಿಗಳ ತತ್ತಿಗಳಲ್ಲಿ ಪೂರ್ಣ ತತ್ತಿಯು ವಿದಲನಗೊಳ್ಳುತ್ತದೆ. ಆದರೆ ಬಂಡಾರವೇ ಪ್ರಧಾನವಾಗಿರುವ ಸರೀಸೃಪಗಳು, ಪಕ್ಷಿಗಳು ಮತ್ತು ಕೆಲವು ಮೀನುಗಳ ತತ್ತಿಗಳಲ್ಲಿ ವಿದಲನವು ತತ್ತಿಯ ಒಂದು ಭಾಗಕ್ಕೆ ಮಾತ್ರ ಮೀಸಲಾಗುತ್ತದೆ. ಬಂಡಾರವು ವಾಸ್ತವವಾಗಿ ಇಲ್ಲಿ ತತ್ತಿಯ ಪೂರ್ಣ ವಿಭಜನೆಗೆ ಅಡ್ಡಿಯಾಗುತ್ತದೆ. ಇದೇ ರೀತಿ ಬ್ಲಾಸ್ಟುಲ ನಿರ್ಮಾಣವಾಗುವುದು ಮತ್ತು ಗ್ಯಾಸ್ಟ್ರುಲೀಕರಣವು ನಡೆಯುವುದನ್ನು ಬಂಡಾರವು ನಿಯಂತ್ರಿಸುತ್ತದೆ. ಆಂಫಿಯಾಕ್ಸಿಸ್ ಮತ್ತು ಕಪ್ಪೆಗಳಲ್ಲಿ ಟೊಳ್ಳು ಬ್ಯಾಸ್ಟುಲ ರೂಪಗೊಂಡರೂ ಇವೆರಡರ ನಡುವೆಯೂ ಒಂದು ಮುಖ್ಯ ವ್ಯತ್ಯಾಸವನ್ನು ಕಾಣಬಹುದು. ಆಂಫಿಯಾಕ್ಸಿಸ್ ನಲ್ಲಿ ಬ್ಲಾಸ್ಟೊಸೀಲ್ ಅವಕಾಶವು ಬ್ಲಾಸ್ಟುಲಾದ ಕೇಂದ್ರ ಭಾಗದಲ್ಲಿದ್ದರೆ, ಕಪ್ಪೆಯಲ್ಲಿ ಅದು ಬ್ಲಾಸ್ಟುಲಾದ ಮೇಲು ತುದಿಗೆ ಸ್ಥಳಾಂತರಗೊಂಡಿದೆ. ಇದಕ್ಕೆ ಕಾರಣ ತತ್ತಿಯ ಕಾಯಕ ತುದಿಗೆ ಕೇಂದ್ರೀಕೃತವಾಗಿರುವ ಬಂಡಾರ. ಸರೀಸೃಪ ಮತ್ತು ಪಕ್ಷಿಗಳಲ್ಲಿ ಅಗಾಧ ಮೊತ್ತದ ಬಂಡಾರದಿಂದಾಗಿ ಸಂಪೂರ್ಣ ತತ್ತಿ ವಿದಲನಗೊಳ್ಳುವುದು ಅಸಾಧ್ಯವಾಗಿ ತತ್ತಿಯ ಮೇಲು ತುದಿಯಲ್ಲಿ ತಟ್ಟೆಯಾಕಾರದ ಬ್ಲಾಸ್ಟೊಡಿಸ್ಕ್ ರೂಪುಗೊಳ್ಳುತ್ತದೆ. ಸಂಪೂರ್ಣ ಬಂಡಾರ ರಹಿತವಾದ ಸ್ತನಿ ತತ್ತಿಗಳು ಆರಂಭದಲ್ಲಿ ಪೂರ್ಣವಾಗಿ ವಿದಲನಗೊಂಡರೂ ಅನಂತರದ ಹಂತಗಳಲ್ಲಿ ತಮ್ಮದೇ ಆದ ವಿಶೇಷ ಮಾರ್ಪಾಟುಗಳನ್ನು ತೋರುತ್ತವೆ. ಸ್ಥೂಲ ಪ್ರವೃತ್ತಿಗಳಲ್ಲಿ ಬ್ಲಾಸ್ಟುಲೀಕರಣ ಮತ್ತು ಗ್ಯಾಸ್ಟ್ರುಲೀಕರಣಗಳು ಎಲ್ಲ ಕಶೇರುಕಗಳಲ್ಲಿಯೂ ಒಂದೇ ಆದರೂ ಬಂಡಾರದ ಉಪಸ್ಥಿತಿ ಅಥವಾ ನಿರುಪಸ್ಥಿತಿ ಅದರ ಸಾಪೇಕ್ಷೀಯ

ಮೊತ್ತ ಮತ್ತು ತತ್ತಿಯಲ್ಲಿ ಅದರ ವಿತರಣೆ ಈ ಕ್ರಿಯಾವಿಧಾನಗಳನ್ನು ಕ್ರಮವಾದ ರೀತಿಯಲ್ಲಿ ಮಾರ್ಪಡಿಸಿ ನಿರ್ವಹಿಸುತ್ತದೆ.

ವಿದಳನ ಕಾಲದಲ್ಲಿ ತತ್ತಿ ವಿಭಾಗವಾಗುವ ಮತ್ತು ವಿಭಜನೆಯ ರೇಖೆ ಕಾಣಿಸಿಕೊಳ್ಳುವ ರೀತಿಯಲ್ಲಿ ಅನೇಕ ವ್ಯತ್ಯಾಸಗಳಿವೆ. 1 ರೇಖಾಂಶಿಕ (ಮೆರಿಡಿಯೋನಲ್) ವಿದಳನ– ಇದರಲ್ಲಿ ವಿಭಜರೇಖೆ ತತ್ತಿಯ ಎರಡೂ ಧ್ರುವ ಭಾಗಗಳನ್ನು ಸಂಧಿಸುತ್ತದೆ ಮತ್ತು ಅದರ ಕೇಂದ್ರದ ಮೂಲಕ ಅಥವಾ ಮಧ್ಯ ಅಕ್ಷದ ಮೂಲಕ ಹಾದು ಹೋಗುತ್ತದೆ. ಕಪ್ಪೆಗಳಲ್ಲಿ ನಡೆಯುವ ಮೊದಲೆರಡು ವಿದಳನಗಳು ಈ ರೀತಿಯವು. 2 ನೇರವಾದ ವಿದಳನ – ಇದು ರೇಖಾಂಶಿಕದಂತೆಯೇ ನಡೆದರೂ ವಿಭಜನ ರೇಖೆ ಪ್ರಾಣಿ ಧ್ರುವದಿಂದ ವೆಜಿಟಲ್ ಧ್ರುವದ ಕಡೆಗೆ ವಿಸ್ತರಿಸುತ್ತದೆ. ಇದು ತತ್ತಿಯ ಮಧ್ಯ ಅಕ್ಷದ ಮೂಲಕ ಹಾದು ಹೋಗದೆ ಅದರ ಪಕ್ಕದಲ್ಲಿ ಹಾದು ಹೋಗುತ್ತದೆ. ಈ ರೀತಿಯ ವಿದಳನ ಕೆಲವು ಮೂಳೆ ಮೀನುಗಳಲ್ಲಿ ನಡೆಯುತ್ತದೆ (ಏಮಿಯಾ ಮತ್ತು ಲೆಪಿಡೊಸ್ಟಿಯಸ್) 3 ಸಮಭಾಜಕ ವಿದಳನ – ಇದು ಮಧ್ಯ ಅಕ್ಷದ ಸಮಕೋನದಲ್ಲಿ ತತ್ತಿಯನ್ನು ಎರಡು ಭಾಗಗಳಾಗಿ ವಿಭಾಗಿಸುತ್ತದೆ. ಆಂಬ್ಲಿಸ್ಟೋಮ ತತ್ತಿಯಲ್ಲಿ ಐದನೆಯ ವಿದಳನ ಈ ರೀತಿಯನ್ನು ಅನುಸರಿಸುತ್ತದೆ. 4 ಅಕ್ಷಾಂಶಿಕ ವಿದಳನ – ಇದು ಸಮಭಾಜಕ ವಿದಳನದಂತೆಯೇ ಇದ್ದರೂ ಸಮಭಾಜಕಕ್ಷೇತ್ರದ ಅಕ್ಕಪಕ್ಕಗಳಲ್ಲಿ ಹಾದು ಹೋಗುತ್ತದೆ. ಕಪ್ಪೆಯ ತತ್ತಿಯ ಮೂರನೆಯ ವಿದಳನ ಈ ರೀತಿಯನ್ನು ಅನುಸರಿಸುತ್ತದೆ. ಇದರ ಫಲವಾಗಿ ಬ್ಲಾಸ್ಟೊಮಿಯರ್‌ಗಳು ಉತ್ಪತ್ತಿಯಾಗುತ್ತವೆ. ಇದರಿಂದ ಕೆಲವು ಸಣ್ಣವೂ ಮತ್ತು ಕೆಲವು ದೊಡ್ಡವಾಗಿಯೂ ಇರುತ್ತವೆ. ಇವನ್ನು ಕ್ರಮವಾಗಿ ಮೈಕ್ರೊಮಿಯರ್ ಮತ್ತು ಮ್ಯಾಕ್ರೊಮಿಯರ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಮೈಕ್ರೊಮಿಯರ್‌ಗಳು ಪ್ರಾಣಿ ಧ್ರುವದ ಕಡೆಗೂ ಮ್ಯಾಕ್ರೊಮಿಯರ್‌ಗಳು ವೆಜಿಟಲ್ ಧ್ರುವದ ಕಡೆಗೂ ಇರುತ್ತವೆ.

ಕೆಲವು ಅಂಶಗಳು ವಿದಳನದ ಮೇಲೆ ಪ್ರಭಾವವನ್ನು ಬೀರುತ್ತವೆ. ಇವು ಹೊರ ಅಂಶಗಳಾಗಿರಬಹುದು ಅಥವಾ ತತ್ತಿಯ ಒಳಗಿರುವ ಅಂಶಗಳೆ ಆಗಿರಬಹುದು.

ಸುತ್ತಲ ಪರಿಸರದ ಉಷ್ಣತೆ ತತ್ತಿಗಳ ವಿದಳನದ ವೇಗದ ಮೇಲೆ ಪ್ರಭಾವ ಬೀರುತ್ತದೆ. ಸಾಮಾನ್ಯವಾಗಿ ಕಪ್ಪೆಯ ತತ್ತಿಯಲ್ಲಿ 90 ಮಿನಿಟುಗಳ ಅಂತರದಲ್ಲಿ ವಿದಳನಗಳು ನಡೆಯುತ್ತವೆ. ಉಷ್ಣತೆಯನ್ನು ಹೆಚ್ಚಿಸಿದಾಗ ವಿದಳನ ವೇಗವಾಗಿಯೂ ಕಡಿಮೆ ಮಾಡಿದಾಗ ನಿಧಾನವಾಗಿಯೂ ನಡೆಯುತ್ತದೆ.

ವಿದಳನದ ಮೇಲೆ ಪ್ರಭಾವ ಬೀರುವ ಪ್ರಧಾನ ಆಂತರಿಕ ಅಂಶ ತತ್ತಿಯ ಒಳಗಿರುವ ಬಂಡಾರ. ಇದು ಸಜೀವ ವಸ್ತುವಲ್ಲ. ಇದು ಜಡ ಪದಾರ್ಥ. ವಿದಳನ ಕಾಲದಲ್ಲಿ ಇದು ಅಡ್ಡ ಬಂದು ಅದನ್ನು ಕುಂಠಿತಗೊಳಿಸುತ್ತದೆ. ಇದರಿಂದಾಗಿಯೆ ಕಪ್ಪೆಯ ಮ್ಯಾಕ್ರೊಮಿಯರ್ ಜೀವಕೋಶಗಳು ನಿಧಾನವಾಗಿ ವಿದಳನವಾಗುತ್ತವೆ; ಮತ್ತು ಪಕ್ಷಿಗಳ ತತ್ತಿಯಲ್ಲಿ ಬಂಡಾರವಿರುವ ಭಾಗದಲ್ಲಿ ವಿದಳನವೇ ನಡೆಯುವುದಿಲ್ಲ. ಬಂಡಾರವು ವಿದಳನವನ್ನು ಕುಂಠಿತಗೊಳಿಸುವುದೆ ಅಲ್ಲದೆ ವಿದಳನ ರೀತಿಯನ್ನು ಸಹ ಬದಲಾಯಿಸುತ್ತದೆ.

ತತ್ತಿಯ ರಚನಾ ವಿನ್ಯಾಸವೂ ಒಂದು ಆಂತರಿಕ ಅಂಶವಾಗಿ ವಿದಳನವನ್ನು ಮಾರ್ಪಡಿಸುತ್ತದೆ. ವಿದಳನ ರೀತಿ ತಾಯಿಯಿಂದ ಬಂದ ಆನುವಂಶಿಕ ಲಕ್ಷಣ. ಇದು ಅಂಡಾಣುವಿನ ಕೋಶದ್ರವ್ಯದ ಮೂಲಕ ಬರುವ ಕೊಡುಗೆ.

ವಿದಳನ ನಿಯಮಗಳು: ವಿದಳನ ರೀತಿಗಳನ್ನು ಅವುಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ವಿಭಜನೆಯ ಕಾಲದಲ್ಲಿ ಜೀವಕೋಶಗಳ ವರ್ತನೆಯ ಬಗೆಗೆ ಕೆಲವು ನಿಯಮಗಳನ್ನು ಪ್ರತಿಪಾದಿಸಿದ್ದಾರೆ. ಇದು ಕೇವಲ ಪ್ರವೃತ್ತಿಯನ್ನು ಪ್ರತಿನಿಧಿಸುವುದೇ ಹೊರತು ವಾಸ್ತವ ಅಂಶಗಳನ್ನು ಪ್ರತಿಪಾದಿಸುವುದಿಲ್ಲ.

1. ಸಾಕೆಯ ನಿಬಂಧನೆಗಳು: (ಅ) ಜೀವಕೋಶಗಳು ಸಮವಾದ ಮರಿಜೀವ ಕೋಶಗಳಾಗಿ ವಿಭಾಗವಾಗುವ ಪ್ರವೃತ್ತಿಯನ್ನು ತೋರಿಸುತ್ತವೆ. (ಆ) ಪ್ರತಿ ಹೊಸ ವಿದಳನದ ಜಾಡು ಹಿಂದಿನದನ್ನು ಸಮಕೋನದಲ್ಲಿ ಕತ್ತರಿಸುವ ಪ್ರವೃತ್ತಿಯನ್ನು ತೋರುತ್ತದೆ.

2. ಹರ್ಟ್‌ವಿಗ್‌ನ ನಿಯಮಗಳು:(ಅ) ಸಾಮಾನ್ಯವಾಗಿ ಒಂದು ನ್ಯೂಕ್ಲಿಯಸ್ ತನ್ನ ಮಾದರಿ ಸ್ಥಾನದಲ್ಲಿ ಜೀವರಸ ರಾಶಿಯ ಕೇಂದ್ರದಲ್ಲಿರುವ ಪ್ರವೃತ್ತಿಯನ್ನು ತೋರುತ್ತದೆ. (ಆ) ವಿಭಜನೆಯ ಕಾಲದಲ್ಲಿ ಕಾಣಿಸಿಕೊಳ್ಳುವ ಮೈಟೊಟಿಕ್ ಕದಿರಿನ ಲಂಬಾಕ್ಷ ಜೀವರಸರಾಶಿಯ ಲಂಬಾಕ್ಷಕ್ಕೆ ಅನುಗುಣವಾಗಿರುತ್ತದೆ. ಆದ್ದರಿಂದ ವಿಭಜನೆಯಲ್ಲಿ ಜೀವರಸರಾಶಿಯ ಲಂಬಾಕ್ಷ ಅಡ್ಡ ಸೀಳುವ ಪ್ರವೃತ್ತಿಯನ್ನು ತೋರುತ್ತದೆ.

ವಿದಳನದ ಫಲವಾಗಿ ರೂಪಗೊಳ್ಳುವ ಬ್ಲಾಸ್ಟ್ಯುಲ ವಿವಿಧ ಕಶೇರುಕಗಳಲ್ಲಿ ವಿವಿಧ ರೂಪವನ್ನು ತಾಳುತ್ತದೆ. ಕಪ್ಪೆಗಳಲ್ಲಿ ಟೊಳ್ಳಾದ ರಚನೆ ರೂಪುಗೊಳ್ಳುತ್ತದೆ. ಒಳಗಿರುವ ಅವಕಾಶ ಕೇಂದ್ರಭಾಗದಲ್ಲಿರದೆ ಸ್ವಲ್ಪ ಪ್ರಾಣಿಧ್ರುವಭಾಗದ ಕಡೆಗಿರುತ್ತದೆ. ಇದರ ಮೇಲ್ಭಾವಣಿಯಲ್ಲಿ ಮೈಕ್ರೊಮಿಯರ್‌ಗಳೂ ತಳಭಾಗದಲ್ಲಿ ಮ್ಯಾಕ್ರೊಮಿಯರ್ ಗಳೂ ಇವೆ. ಪಕ್ಷಿಗಳಲ್ಲಿ ಪೂರ್ತಿ ವಿದಳನ ಕ್ರಿಯೆಯಲ್ಲಿ ತತ್ತಿ ಭಾಗವಹಿಸುವುದಿಲ್ಲ. ಮೇಲ್ಭಾಗದಲ್ಲಿ ಸ್ವಲ್ಪ ಭಾಗ ಮಾತ್ರ ವಿದಳನದಲ್ಲಿ ಭಾಗವಹಿಸಿ ಜೀವಕೋಶಗಳ ತಟ್ಟೆಯಾಕಾರದ ರಚನೆ ರೂಪಗೊಳ್ಳುತ್ತದೆ. ಇದಕ್ಕೆ ಬ್ಲಾಸ್ಟೊಡಿಸ್ಕ್ ಎಂದು ಹೆಸರು. ಇದರಲ್ಲಿ ಬ್ಲಾಸ್ಟೊಸೀಲ್ ಅವಕಾಶ ಇರುವುದರ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಸ್ತನಿ ಪ್ರಾಣಿಗಳಲ್ಲಿ ಬ್ಲಾಸ್ಟ್ಯುಲ ಒಂದು ಸಂಚಿಯ ರೂಪದಲ್ಲಿ ಇರುವುದು. ಇದಕ್ಕೆ ಬ್ಲಾಸ್ಟೊಸಿಸ್ಟ್ ಎಂದು ಹೆಸರು. ಎಂಟು ಜೀವಕೋಶಗಳ ಅವಸ್ಥೆಯಲ್ಲಿಯೆ ನಾಲ್ಕು ಜೀವಕೋಶಗಳು ಒಂದುಗೂಡಿ ಗಂಟಿನ ರೀತಿಯ ರಚನೆ ರೂಪುಗೊಳ್ಳುತ್ತದೆ. ಇದರಿಂದ ಮುಂದೆ ಬೆಳೆಯುವ ಭ್ರೂಣದ ರಚನೆಯಾಗುತ್ತದೆ. ಉಳಿದ ನಾಲ್ಕು ಜೀವಕೋಶಗಳು ವಿಸ್ತರಿಸಿ ಮೇಲೆ ತಿಳಿಸಿದ ಜೀವ ಕೋಶಗಳಗಂಟನ್ನು ಆವರಿಸಿಕೊಂಡು ಸಂಚಿಯ ರೂಪತಾಳುತ್ತವೆ. ಇವೇ ಮುಂದೇ ಟ್ರೋಫೊಬ್ಲಾಸ್ಟ್ ಆಗಿ ಪರಿವರ್ತನೆಗೊಂಡು ಪ್ಲಸೆಂಟ ರೂಪುಗೊಳ್ಳುವುದರಲ್ಲಿ ಭಾಗವಹಿಸುತ್ತವೆ.




ಆಂಫಿಯಾಕ್ಸಸ್‌ನಲ್ಲಿ ಬೆಳೆವಣಿಗೆ

1–6. ವಿದಳನ ವಿವಿಧ ಹಂತಗಳು.
7–9. ವಿವಿಧ ಹಂತಗಳ ಬ್ಲಾಸ್ಟುಲ

ಆಂಫಿಯಾಕ್ಸಸ್ ಮತ್ತು ಕಪ್ಪೆಗಳಲ್ಲಿನ ತತ್ತಿಗಳ ಬೆಳವಣಿಗೆಯಲ್ಲಿ ಗ್ಯಾಸ್ಟ್ರುಲೀಕರಣ ಪ್ರಕ್ರಿಯೆಯ ವಿಧಾನದಲ್ಲಿ ಒಂದು ರೀತಿಯ ಏಕತೆಯನ್ನು ಕಾಣಬಹುದು. ಎಲ್ಲ ಕಶೇರುಕಗಳಲ್ಲಿಯೂ ಎಪಿಬೋಲಿ ಮತ್ತು ಎಂಬೋಲಿ ಕೋಶ ಸಂಚಲನೆಗಳು ಸಾಮಾನ್ಯವಾದರೂ ಅವು ನಡೆಯುವ ರೀತಿ ಒಂದೊಂದರಲ್ಲಿಯೂ ಭಿನ್ನವಾಗಿದೆ. ತತ್ತಿಯ ರಚನೆ, ತತ್ತಿಯಲ್ಲಿರುವ ಬಂಡಾರದ ಅಂಶ ಮತ್ತು ಅದರ ವಿತರಣೆ, ರೂಪುಗೊಳ್ಳುವ ಬ್ಲಾಸ್ಟುಲದ ಆಕಾರ ಇವೆಲ್ಲ ಸೇರಿ ಗ್ಯಾಸ್ಟ್ರುಲೀಕರಣ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ. ಆಂಫಿಯಾಕ್ಸಿಸ್‌ನಲ್ಲಿ ಬ್ಲಾಸ್ಟುಲ ಟೊಳ್ಳಾಗಿದ್ದು ಸ್ಥೂಲವಾಗಿ ಒಂದು ರೀತಿಯ ಅಂತರ್ವಲನದಿಂದ ಗ್ಯಾಸ್ಟ್ರುಲ ರೂಪುಗೊಳ್ಳುತ್ತದೆ. ಅಂದರೆ ಟೊಳ್ಳಾದ ಚೆಂಡೊಂದನ್ನು ಒಂದು ತುದಿಯಲ್ಲಿ ಇನ್ನೊಂದು ತುದಿಯ ಕಡೆಗೆ ಅದುಮುವುದರಿಂದ ಇಪ್ಪದರದ

ಬಟ್ಟಲಿನ ರಚನೆ ಉತ್ಪತ್ತಿಯಾಗುತ್ತದೆ. ಆಂಫಿಯಾಕ್ಸಸ್ ಗ್ಯಾಸ್ಟ್ರುಲೀಕರಣವನ್ನು ಹೆಚ್ಚು ಕಡಿಮೆ ಇದಕ್ಕೆ ಹೋಲಿಸಬಹುದು. ಇದರಲ್ಲಿ ಅನೇಕ ರೀತಿಯ ಜೀವಕೋಶ ಚಲನೆಗಳು, ವಲಸೆಗಳು ಒಳಗೊಂಡಿದ್ದು ಬ್ಲಾಸ್ಟೊಸೀಲ್ ಸ್ಥಳಾಂತರಗೊಂಡು ಗ್ಯಾಸ್ಟ್ರೊಸೀಲ್ ನಿರ್ಮಾಣವಾಗುತ್ತದೆ. ಇದು ಹೊರಕ್ಕೆ ತೆರೆಯುವ ದ್ವಾರವನ್ನು ಬ್ಲಾಸ್ಟೊಪೋರ್ ಎಂದು ಕರೆಯುತ್ತಾರೆ. ಈ ಬ್ಲಾಸ್ಟೊಪೋರ್ ರಂಧ್ರದಲ್ಲಿ ಮೇಲಿನ ಮತ್ತು ಕೆಳಗಿನ ಹಾಗೂ ಪಕ್ಕದ ತುಟಿಗಳನ್ನು ಗುರುತಿಸಬಹುದು. ಕಪ್ಪೆಯಲ್ಲಿ ಗ್ಯಾಸ್ಟ್ರುಲೀಕರಣವು ಸ್ವಲ್ಪ ವ್ಯತ್ಯಾಸವನ್ನು ತೋರುತ್ತದೆ. ಇದರ ಬ್ಲಾಸ್ಟುಲದಲ್ಲಿ ಎರಡು ರೀತಿಯ ಜೀವಕೋಶಗಳನ್ನು ಕಾಣಬಹುದು. ಪ್ರಾಣಿ ಧ್ರುವದ ಕಡೆಗೆ ನಿರ್ಮಾಣವಾಗಿ ವರ್ಣಕವನ್ನು ಪಡೆದಿರುವ ಕಪ್ಪುಕೋಶಗಳು ಗಾತ್ರದಲ್ಲಿ ಸಣ್ಣವು. ಆದರೆ ಕಾಯಕ ಧ್ರುವದ ಕಡೆಗೆ ಬಂಡಾರಭರಿತ ದೊಡ್ಡಗಾತ್ರದ ಕೋಶಗಳಿರುತ್ತವೆ. ಇವು ಕ್ರಮವಾಗಿ ಮೈಕ್ರೊಮಿಯರ್ ಹಾಗು ಮ್ಯಾಕ್ರೊಮಿಯರ್ ಕೋಶಗಳು. ಮೈಕ್ರೊಮಿಯರ್‌ಗಳು ಹೆಚ್ಚು ಸಂಖ್ಯೆಯಲ್ಲಿದ್ದು ಮ್ಯಾಕ್ರೊಮಿಯರ್‌ಗಳು ಕಡಿಮೆ ಸಂಖ್ಯೆಯಲ್ಲಿರುತ್ತವೆ. ಮ್ಯಾಕ್ರೊಮಿಯರ್‌ಗಳಲ್ಲಿರುವ ಬಂಡಾರವು ಕೋಶ ವಿಭಜನೆಗೆ ಅಡ್ಡಿಯಾಗುವುದರಿಂದ ಕೋಶವಿಭಜನೆಗಳು ಕುಂಠಿತಗೊಂಡು ನಡೆಯುವ ಕೋಶ ವಿಭಜನೆಗಳ ಸಂಖ್ಯೆ ಕಡಿಮೆಯಾಗಿ ದೊಡ್ಡ ಗಾತ್ರದ ಮ್ಯಾಕ್ರೊಮಿಯರ್ ಕೋಶಗಳ ನಿರ್ಮಾಣವಾಗುತ್ತದೆ. ಹೆಚ್ಚು ವೇಗದಲ್ಲಿ ನಿರ್ಮಾಣವಾಗುವ ಮೈಕ್ರೊಮಿಯರಗಳು ಕ್ರಮೇಣ ವ್ಯಾಪಿಸಿ ಮ್ಯಾಕ್ರೊಮಿಯರ್ ಕೋಶಗಳನ್ನು ಅತಿಕ್ರಮಿಸಿ ಆಕ್ರಮಿಸುವಂತೆ ಕಂಡುಬರುತ್ತದೆ. ಈ ಕಾಲದಲ್ಲಿ ಮೈಕ್ರೊಮಿಯರ್‌ಗಳು ಮ್ಯಾಕ್ರೊಮಿಯರ್‌ಗಳನ್ನು ಸಂಧಿಸುವ ಭಾಗದಲ್ಲಿ ಸೀಳಿಕೆಯೊಂದು ಕಾಣಿಸಿಕೊಂಡು ಅದರ ಮೂಲಕ ಜೀವಕೋಶಗಳ ಅಂತರ್ವಲನವು ನಡೆಯುತ್ತದೆ. ಈ ಸೀಳಿಕೆಯು ಬ್ಲಾಸ್ಟೊಪೋರಿನ ಡಾರ್ಸಲ್ ತುಟಿಯನ್ನು ಪ್ರತಿನಿಧಿಸಿರುತ್ತದೆ. ಹೀಗೆ ಒಳಹೊಕ್ಕು ಕೋಶಗಳು ಕ್ರಮೇಣ ಬ್ಲಾಸ್ಟೊಸೀಲನ್ನು ಸ್ಥಳಾಂತರಿಸಿ ಗ್ಯಾಸ್ಟ್ರೊಸೀಲ್ ನಿರ್ಮಾಣವಾಗುತ್ತದೆ. ಇದರಲ್ಲಿ ಅಭಿಮುಖ, ಅಪಮುಖ ಕೋಶ ಚಲನೆಗಳು ಒಳಗೊಂಡಿವೆ.

ಆಂಫಿಯಾಕ್ಸಸ್ ಮತ್ತು ಕಪ್ಪೆಯ ತತ್ತಿಗಳ ಗ್ಯಾಸ್ಟ್ರುಲೀಕರಣಕ್ಕೆ ಹೋಲಿಸಿದರೆ ಆಮ್ನಿಯೋಟ ಗುಂಪಿನ ತತ್ತಿಗಳ ಗ್ಯಾಸ್ಟ್ರುಲೀಕರಣವು ಸಂಪೂರ್ಣ ಭಿನ್ನವಾಗಿರುತ್ತದೆ. ಟೀಲಿಯಾಸ್ಟಿ ಮೀನುಗಳು, ಸರೀಸೃಪಗಳು ಮತ್ತು ಪಕ್ಷಿಗಳ ತತ್ತಿಗಳು ಬೃಹದ್ ಪ್ರಮಾಣದ ಬಂಡಾರವನ್ನೊಳಗೊಂಡಿರುವುದರಿಂದ ಬೆಳವಣಿಗೆಯ ಚಟುವಟಿಕೆಗಳು ತತ್ತಿಯ ಒಂದು ಸೂಕ್ಷ್ಮ ಭಾಗಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಆದುದರಿಂದಲೇ ಮೇಲಿನ ಪ್ರಾಣಿ ಧ್ರುವದಲ್ಲಿ ತಟ್ಟೆಯಾಕಾರದ ಬ್ಲಾಸ್ಟೊಡಿಸ್ಕ್ ನಿರ್ಮಾಣಗೊಳ್ಳುತ್ತದೆ. ಈ ತಟ್ಟೆಯ ರಚನೆಯಲ್ಲಿ ಆಂಫಿಯಾಕ್ಸಸ್ ಮತ್ತು ಕಪ್ಪೆಗಳಲ್ಲಿನಂತೆ ಜೀವಕೋಶಗಳ ಸಂಚಲನೆಗಳು ಸಾಧ್ಯವಾಗದಿರುವುದರಿಂದ ಇವುಗಳಲ್ಲಿ ಗ್ಯಾಸ್ಟ್ರುಲೀಕರಣವು ಭಿನ್ನ ಮಾರ್ಗವನ್ನು ಹಿಡಿಯುತ್ತದೆ. ಗ್ಯಾಸ್ಟ್ರುಲೀಕರಣ ಕಾಲಕ್ಕೆ ಲಂಬಾಕಾರದ ಮಂದತೆಯೊಂದು ಕಾಣಿಸಿಕೊಂಡು ಅದರ ಮೂಲಕ ಜೀವಕೋಶ ಸಂದಣಿಗಳ ಚಲನ ವಲನೆ, ಪುನರ್ ಸಂಘಟನೆಗಳು ನಡೆದು ಗ್ಯಾಸ್ಟ್ರುಲೀಕರಣ ಪೂರ್ಣಗೊಳ್ಳುತ್ತದೆ. ಸ್ತನಿಗಳಲ್ಲಿ ಬಂಡಾರವಿಲ್ಲದಿದ್ದರೂ ಅವುಗಳ ಬೆಳವಣಿಗೆಯಲ್ಲಿಯೂ ಸಂಚಿಯಂತಿರುವ ಬ್ಲಾಸ್ಟೊಸಿಸ್ಟ ರೂಪುಗೊಳ್ಳುತ್ತದೆ. ಇಲ್ಲಿಯೂ ಪಕ್ಷಿಗಳನ್ನು ಹೋಲುವ ಲಂಬಾಕಾರದ ಮಂದತೆಯೊಂದು ಕಾಣಿಸಿಕೊಳ್ಳುತ್ತದೆ.

ಗ್ಯಾಸ್ಟ್ರುಲೀಕರಣ: ಒಂಟಿ ಪದರದ ಬ್ಲಾಸ್ಟ್ಯುಲದಿಂದ ಬಹುಪದರದ ರಚನೆ ರೂಪುಗೊಳ್ಳುವುದಕ್ಕೆ ಗ್ಯಾಸ್ಟ್ರುಲೀಕರಣ ಎಂದು ಹೆಸರು. ಬ್ಲಾಸ್ಟ್ಯುಲಾದ ಊಹಾ ಅಂಗರಚನ ಪ್ರದೇಶಗಳ ಪುನರ್ ವ್ಯವಸ್ಥೆ ಮತ್ತು ಪುನರ್‌ರಚನಾವಿನ್ಯಾಸಗಳು ನಡೆದು ಆಯಾ ಪ್ರಭೇದದ ದೇಹಮಾದರಿಗೆ ಪರಿವರ್ತನೆಯಾಗಲು ಸಿದ್ಧಗೊಳಿಸುವುದೆ ಗ್ಯಾಸ್ಟ್ರುಲೀಕರಣದಂಥ ಚಾಲಕಕ್ರಿಯಾವಿಶೇಷದ ಕ್ರಿಯೆ ಎಂದು ಗ್ಯಾಸ್ಟ್ರುಲೀಕರಣವನ್ನು ನೆಲ್ಸನ್ (1953) ವಿವರಿಸಿದ್ದಾನೆ. ಈ ಕಾಲದಲ್ಲಿ ಮೂರು ಮೂಲಪದರಗಳು ಉತ್ಪತ್ತಿಯಾಗುತ್ತವೆ. ಹಾಗೂ ಮುಂದಿನ ಬೆಳವಣಿಗೆಯ ಅಕ್ಷರೇಖೆಯ ರೂಪರೇಖೆಗಳು ಕಾಣಿಸಿಕೊಳ್ಳುತ್ತವೆ. ವಿವಿಧ ಸ್ಥಾನಗಳಲ್ಲಿದ್ದ ಜೀವಕೋಶಗಳು ಈ ಕಾಲದಲ್ಲಿ ತಮ್ಮ ಭವಿಷ್ಯದ ಸ್ಥಾನಗಳಿಗೆ ಪಯಣಿಸಿ ಮುಂದಿನ ಕ್ರಿಯೆಯಾದ ವಿಭೇದೀಕರಣಕ್ಕೆ ಸಿದ್ಧವಾಗುತ್ತವೆ. ಹೀಗೆ ನಡೆಯುವ ಪಯಣದಲ್ಲಿ ಬ್ಲಾಸ್ಟ್ಯುಲದ ಬ್ಲಾಸ್ಟೊಸೀಲ್ ಅವಕಾಶ ಪ್ರಧಾನ ಪಾತ್ರವಹಿಸುತ್ತದೆ. ಬ್ಲಾಸ್ಟುಲವನ್ನು ಹಾರಲು ಸಿದ್ಧವಾಗಿ ನಿಂತ ವಿಮಾನಕ್ಕೆ ಹೋಲಿಸುತ್ತಾರೆ. ಅಂದರೆ ಗ್ಯಾಸ್ಟ್ರುಲೀಕರಣ ಕಾಲದಲ್ಲಿ ವಿಂಗಡಣೆ ಮತ್ತು ವಿಭೇದೀಕರಣಕ್ಕೆ ಬೇಕಾಗುವ ಜೀವಕೋಶ ಸಾಮಗ್ರಿಗಳನ್ನು ವಿದಳನದಿಂದ ಒಡೆದು ಬ್ಲಾಸ್ಟುಲ ಸಿದ್ಧವಾಗಿ ನಿಂತಿರುತ್ತದೆ.

ಗ್ಯಾಸ್ಟ್ರುಲೀಕರಣ ಕ್ರಿಯೆ ಮುಖ್ಯವಾಗಿ ಎರಡು ರೀತಿಯ ಜೀವಕೋಶ ಚಲನೆಗಳಿಂದ ನಡೆಯುತ್ತದೆ: 1) ಎಂಬೊಲಿ, 2) ಎಪಿಬೊಲಿ. ಇವೆರಡೂ ಚಲನೆಗಳು ಅನೇಕ ರೀತಿ ನಡೆಯುತ್ತವೆ. ಎಂಬೊಲಿಯಲ್ಲಿ ಕೆಲವು ರೀತಿಯ ಚಲನೆಗಳು ನಡೆಯುವುದನ್ನು ಕೆಳಗೆ ತಿಳಿಸಿದೆ.

(ಅ) ಅಂತರ್ವಲನ (ಇನ್‌ವೊಲ್ಯೂಷನ್): ಬ್ಲಾಸ್ಟೋಪೋರ್ ತುಟಿಯ ಬಳಿಗೆ ಚಲಿಸಿಬಂದ ಜೀವಕೋಶಗಳು ಹೊರ ಅಂಚಿನಿಂದ ಒಳ ಅಂಚಿಗೆ ಜಾರುವುದೆ ಅಂತರ್ವಲನ.

(ಆ) ಒಳಪುಗು ( ಇನ್‌ವ್ಯಾಜಿನೇಷನ್): ಜೀವಕೋಶಗಳ ಪದರವೊಂದು ಒಳಗೆ ಮಡಿಚಿಕೊಂಡು ಅಥವಾ ಒಳಕ್ಕೆ ಮುಳುಗಿ ಅವಕಾಶವನ್ನು ಆವರಿಸಿಕೊಂಡ ಪದರ ರಚನೆಯಾಗುತ್ತದೆ. ಆಂಫಿಯಾಕ್ಸಸ್ ನಲ್ಲಿ ಬ್ಲಾಸ್ಟುಲದ ಒಂದು ಭಾಗ ಒಳಕ್ಕೆ ಮಡಿಸಿಕೊಂಡು ಎರಡು ಭಿತ್ತಿಗಳಿರುವ ರಚನೆ ರೂಪುಗೊಳ್ಳುವುದನ್ನು ಉದಾಹರಣೆಯಾಗಿ ಹೇಳಬಹುದು.

(ಇ) ಜೀವಕೋಶಾಭಿವೃದ್ಧಿ: ಗ್ಯಾಸ್ಟ್ರುಲೀಕರಣ ಕಾಲದಲ್ಲಿ ವಿವಿಧ ಜೀವಕೋಶ ಚಲನೆಗಳ ಜೊತೆಯಲ್ಲಿ ಸಂಖ್ಯೆಯೂ ಹೆಚ್ಚುತ್ತದೆ.

(ಈ) ಪ್ರವೇಶನ (ಇನ್‌ಗ್ರೆಶನ್): ಒಂದು ಜೀವಕೋಶ ಅಥವಾ ಒಂದು ಚಿಕ್ಕ ಕೋಶದ ಗುಂಪು ಒಳಗಿನ ಅವಕಾಶದೊಳಕ್ಕೆ ಅಥವಾ ಬೆಳವಣಿಗೆಯ ಕಾಲದಲ್ಲಿ ಮೂಡುವ ಕುಹರಗಳಿಗೆ ನುಗ್ಗುವುದನ್ನು ಪ್ರವೇಶನ ಎನ್ನುತ್ತಾರೆ. ಸ್ತನಿಗಳ, ಪಕ್ಷಿಗಳ ಮತ್ತು ಸರೀಸೃಪಗಳ ಬೆಳವಣಿಗೆಯಲ್ಲಿ ರೂಪುಗೊಳ್ಳುವ ಪ್ರಾಕ್ ರೇಖೆಯಿಂದ (ಪ್ರಿಮಿಟಿವ್ ಸ್ಟ್ರೀಕ್) ಮಧ್ಯದರ್ಮದ ಜೀವಕೋಶಗಳು ಬಿಡಿಸಿಕೊಂಡು ಮೇಲು ಪದರ ಮತ್ತು ಕೆಳಗಿನ ಪದರಗಳ ನಡುವೆ ಇರುವ ಜಾಗದಲ್ಲಿ ತೂರುವುದು.

(ಉ) ಪದರ ವಿಚ್ಛೇದನ (ಡೀಲ್ಯಾಮಿನೇಷನ್): ಒಂದು ಜೀವಕೋಶ ಗುಂಪಿನಿಂದ ಇನ್ನೊಂದು ಜೀವಕೋಶ ಗುಂಪು ಪ್ರತ್ಯೇಕಗೊಳ್ಳುವುದಕ್ಕೆ ಪದರ ವಿಚ್ಛೇದನ ಎಂದು ಹೆಸರು. ಕಪ್ಪೆಯ ಬೆಳವಣಿಗೆಯಲ್ಲಿ ಆರ್ಕೆಂಟರಾನ್ ಅವಕಾಶದ ಮೇಲ್ಛಾವಣಿಯಲ್ಲಿರುವ ಜೀವಕೋಶಗಳ ಗುಂಪು ಪದರ ವಿಚ್ಛೇದನಗೊಂಡು ನೋಟೊಕಾರ್ಡ್ ಮತ್ತು ಸ್ನಾಯು ಫಲಕಗಳು ರೂಪುಗೊಳ್ಳುವುವು.

(ಊ) ಪರಿಚ್ಛಿನ್ನತೆ: ಜೀವಕೋಶಗಳು ವಿವಿಧ ಭಾಗಗಳಿಂದ ಒಂದು ಭಾಗದ ಕಡೆಗೆ ಚಲಿಸುವುದೆ ಪರಿಚ್ಛಿನ್ನತೆ. ಕಪ್ಪೆಯ ಬೆಳವಣಿಗೆಯಲ್ಲಿ ಅದರ ಮೇಲ್ಮೈಯಿಂದ ಡಾರ್ಸಲ್ ತುಟಿಯ ಕಡೆಗೆ ಜೀವಕೋಶಗಳು ಪರಿಚ್ಛಿನ್ನವಾಗುತ್ತವೆ.

(ಋ) ಅಪಸರಣ (ಡೈವರ್ಜೆನ್ಸ್): ಪರಿಚ್ಛಿನ್ನತೆಯ ಕಾಲದಲ್ಲಿ ಡಾರ್ಸಲ್ ತುಟಿಯ ಬಳಿ ಕೇಂದ್ರೀಕೃತವಾದ ಜೀವಕೋಶಗಳು ಅಂತರ್ವಲನಗೊಂಡು ಗ್ಯಾಸ್ಟ್ರುಲಾದ ಒಳಭಾಗದಲ್ಲಿ ವಿವಿಧ ದಿಕ್ಕಿನಲ್ಲಿ ಹರಡುವುದೆ ಅಪಸರಣ.

ಒಂದೊಂದು ಕಶೇರುಕದಲ್ಲಿಯೂ ಒಂದೊಂದು ರೀತಿಯ ಜೀವಕೋಶ ಚಲನೆಗಳು ನಡೆದು ಗ್ಯಾಸ್ಟ್ರುಲೀಕರಣ ಮುಗಿಯುತ್ತದೆ. ಈ ಕಾಲದಲ್ಲಿ ಪ್ರಧಾನವಾಗಿ ಕಾಣಬರುವ ಮತ್ತೊಂದು ಅಂಶವೆಂದರೆ ಸಂಘಟಕಗಳು ರೂಪುಗೊಳ್ಳುವುದು. ಈ ಸಂಘಟಕಗಳು ಬೆಳವಣಿಗೆಯ ಮುಂದಿನ ಘಟ್ಟದ ಪ್ರಮುಖ ಘಟನೆಯಾದ ವಿಭೇದೀಕರಣವನ್ನು ನಡೆಸಿಕೊಡುತ್ತವೆ. ಮೊಟ್ಟ ಮೊದಲನೆಯದಾಗಿ ವಿಭೇದೀಕರಣ ನಡೆದು ರೂಪುಗೊಳ್ಳುವ ರಚನೆ ಎಂದರೆ ನರಫಲಕ. ಇದು ಸಾಮಾನ್ಯವಾಗಿ ನೋಟೊಕಾರ್ಡಿನ ಮೇಲಿರುತ್ತದೆ. ನೋಟೊಕಾರ್ಡ್ ಸಂಘಟಕವಾಗಿ ವರ್ತಿಸಿ ನರಫಲಕ ರೂಪಗೊಳ್ಳಲು ಪ್ರಚೋದನೆಯನ್ನು ಒದಗಿಸುತ್ತದೆ. ಆ ನಂತರ ಫಲಕ ಮಡಿಸಿಕೊಂಡು ನರನಳಿಕೆಯುಂಟಾಗುತ್ತದೆ. ಇದರಿಂದ ಮಿದುಳು ಮತ್ತು ನರಮಂಡಲದ ಇತರ ಭಾಗಗಳು ರೂಪುಗೊಳ್ಳುತ್ತವೆ.

ಬೆಳವಣಿಗೆಯ ಜೀವವಿಜ್ಞಾನದಲ್ಲಿ ಇಂದು ಪ್ರಾಮುಖ್ಯತೆಗೆ ಬಂದಿರುವ ಎರಡು ಪ್ರಮುಖ ವಿಷಯಗಳೆಂದರೆ ನಿರ್ಧಾರ ಮತ್ತು ವಿಭೇದೀಕರಣ. ಎಲ್ಲ ಪ್ರಾಣಿಗಳು ನಿಷೇಚಿತ ತತ್ತಿ (ಯುಗ್ಮಕ) ಎಂಬ ಒಂದು ಒಂಟಿ ಜೀವಕೋಶದಿಂದ ತಮ್ಮ ಬೆಳವಣಿಗೆಯನ್ನು ಆರಂಭಿಸುತ್ತವೆ. ಇದು ಮೈಟೊಸಿಸ್ ರೀತಿಯಲ್ಲಿ ವಿಭಜನೆಗೊಂಡು ಮೂಲಕೋಶದ ಪ್ರತಿನಕಲುಗಳನ್ನು ಉತ್ಪತ್ತಿ ಮಾಡುತ್ತದೆ. ಅಂದರೆ ಇವೆಲ್ಲದರಲ್ಲಿಯೂ ಮೂಲಕೋಶದ ಕ್ರೊಮೋಸೋಮುಗಳ ಸಂಖ್ಯೆ ಮತ್ತು ಜೀನ್ ಉಂಬಳಿಗಳು ಇರುತ್ತವೆ. ಆದರೂ ಬೆಳವಣಿಗೆ ಮುಂದುವರೆದಂತೆ, ಕೆಲವು ಹೊರದರ್ಮಕೋಶಗಳಾಗಿ ಮತ್ತದರ ಜನ್ಯಕ ಅಂಗಾಂಶಗಳಾಗಿ ರೂಪುಗೊಳ್ಳುತ್ತವೆ. ಇದೇ ರೀತಿ ಒಳದರ್ಮ, ಮಧ್ಯದರ್ಮ ಮತ್ತು ಅವುಗಳ ಜನ್ಯಕ ರಚನೆಗಳು ನಿರ್ಮಾಣವಾಗುತ್ತವೆ. ಉದಾಹರಣೆಗೆ ಹೊರದರ್ಮದ ಮುಖ್ಯರಚನೆ ಎಂದರೆ ಚರ್ಮ. ಒಳದರ್ಮದ ಮುಖ್ಯ ರಚನೆಗಳೆಂದರೆ ಮೂಳೆಗಳು ಮತ್ತು ಮಧ್ಯದರ್ಮದ ಮುಖ್ಯ ರಚನೆ ಮಾಂಸ. ಜೀವರಾಸಾಯನಿಕವಾಗಿ ಇವುಗಳನ್ನು ಪರಿಶೀಲಿಸಿದರೆ ಒಂದೊಂದರಲ್ಲಿಯೂ ಅದಕ್ಕೆ ಮಾತ್ರ ಮೀಸಲಾದ ಮತ್ತು ಸೀಮಿತವಾದ ಪ್ರೊಟೀನುಗಳಿರುವುದು ಕಂಡು ಬರುತ್ತದೆ. ಉದಾ:ಚರ್ಮದಲ್ಲಿ ಕೈಟಿನ್, ಮೂಳೆಯಲ್ಲಿ ಕಾಂಡ್ರಿನ್ ಮತ್ತು ಮಾಂಸದಲ್ಲಿ ಮಯೊಸಿನ್. ಈ ಎಲ್ಲ ಅಂಗಾಂಶಗಳ ಜೀವಕೋಶಾಂಶಗಳು ಒಂದೇ ಮೂಲ ಜೀವಕೋಶದಿಂದ ಬಂದವಾಗಿದ್ದು ಅವೆಲ್ಲವುಗಳಲ್ಲಿಯೂ ಉಭಯ ಸಾಮಾನ್ಯ ಜೀನ್ ಉಂಬಳಿಗಳಿದ್ದರೂ, ಒಂದೊಂದು

ರೀತಿಯ ಅಂಗಾಂಶದಲ್ಲಿ ಒಂದೊಂದು ಜೀನ್ ಮಾತ್ರ ಚಟುವಟಿಕೆ ತೋರಲು, ಪ್ರಕಟನೆಗೊಳ್ಳಲು ಕಾರಣವೇನು? ಈ ಸಮಸ್ಯೆಯ ಪರಿಹಾರಕ್ಕೆ ತೊಡಗಿ ಪ್ರಾಯೋಗಿಕ ಭ್ರೂಣವಿಜ್ಞಾನ, ರಾಸಾಯನಿಕ ಭ್ರೂಣವಿಜ್ಞಾನ ಮತ್ತು ಭ್ರೂಣ ತಳಿವಿಜ್ಞಾನ ವಿಭಾಗಗಳು ರೂಪುಗೊಂಡಿವೆ. ಇಲ್ಲಿ ನಿರ್ಧಾರ ಮತ್ತು ವಿಭೇದೀಕರಣಗಳು ಈ ಸಮಸ್ಯೆಯ ಮುಖ್ಯ ತಿರುಳು. ಹ್ಯಾನ್ಸ್ ಸ್ಪಿಮನ್ ಮತ್ತು ಆತನ ಅನುಯಾಯಿಗಳ ಸಂಶೋಧನೆಯ ಫಲವಾಗಿ ಕಶೇರುಗಳ ಬೆಳವಣಿಗೆಯಲ್ಲಿ ನೆರೆಯ ಭಾಗದ ರಚನೆಗಳ ಮೇಲೆ ಪ್ರಭಾವಬೀರುವ, ಅವುಗಳ ಬೆಳವಣಿಗೆಯನ್ನು ಸಂಘಟಿಸುವ ಸಂಘಟನೆಗಳ ಪಾತ್ರ ತಿಳಿದು ಬಂದಿತು. ಈ ಶೋಧನೆಗಾಗಿ 1935 ರಲ್ಲಿ ಆತನಿಗೆ ನೋಬೆಲ್ ಪಾರಿತೋಷಿಕವನ್ನಿತ್ತು ಗೌರವಿಸಲಾಯಿತು.

ಉಭಯಚರಿ ತತ್ತಿಗಳಲ್ಲಿ ನಿಷೇಚನೆಯ ಅನಂತರ 90 ನಿಮಿಷಗಳಲ್ಲಿ ವರ್ಣೀಕೃತವಾದ ಪ್ರಾಣಿಧ್ರುವ ಭಾಗವು ವರ್ಣಕವಿಲ್ಲದ ಬಂಡಾರಭರಿತ ಕಾಯಿಕ ಭಾಗವನ್ನು ಸಂಧಿಸುವಲ್ಲಿ ಅರೆಚಂದ್ರಾಕೃತಿಯ ಕಂದುಭಾಗವೊಂದು ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಂದುಕೊರೆಚಂದ್ರ ಗ್ರೇ ಕ್ರೆಸೆಂಟ್ ಎಂದು ಹೆಸರು. ವೋಸ್ಟ್‌ನ ಅಭ್ಯಾಸಗಳ ಪ್ರಕಾರ ಈ ಭಾಗವು ಮುಂದೆ ಎಳೆಯ ಗ್ಯಾಸ್ಟ್ರುಲಾದಲ್ಲಿ ಬ್ಲಾಸ್ಟೊಪೋರಿನ ಡಾರ್ಸಲ್ ತುಟಿಯಾಗುತ್ತದೆ. ಅನಂತರ ಅಂತರ್ವಲಿಸಿ ಗ್ಯಾಸ್ಟ್ರೊಸೀಲ್ ಅವಕಾಶದ ಮೇಲ್ಛಾವಣಿಯಾಗುತ್ತದೆ. ಇದರ ಮೇಲೆ ಇದಕ್ಕೆ ತಾಗಿದಂತೆ ಭವಿಷ್ಯದ ನರಮಂಡಲವಾಗಿ ರೂಪುಗೊಳ್ಳುವ ಸಂಭಾವ್ಯ ಮೆಡುಲ್ಲರಿ ಫಲಕ ಭಾಗವಿರುತ್ತದೆ. ಗ್ಯಾಸ್ಟ್ರೊಸೀಲ್ ಅವಕಾಶದ ಮೇಲ್ಛಾವಣಿಯಾಗುವ ಕಾರ್ಡಾಮಿಸೋಡರ್ಮ್ ಅಥವಾ ಒಳಮಧ್ಯದರ್ಮದಿಂದ ಬರುವ ಯಾವುದೊ ಒಂದು ಚೋದನೆಯಿಂದ ಅದು ನರಫಲಕವಾಗಿ ಪರಿವರ್ತನೆಗೊಳ್ಳುತ್ತದೆ. ಇದನ್ನು ಭ್ರೂಣೀಯ ಚೋದಕ ಅಥವಾ ಸಂಘಟಕ ಎಂದು ಕರೆಯಲಾಗಿದೆ. ಸ್ಪಿಮನ್‌ನ ಪ್ರಾಯೋಗಿಕ ಅಭ್ಯಾಸಗಳಲ್ಲಿ ಡಾರ್ಸಲ್ ತುಟಿ ಅಥವಾ ಒಳ ಮಧ್ಯದರ್ಮ ಭಾಗಗಳನ್ನು ಅದೇ ವಯಸ್ಸಿನ ಬೇರೆ ಭ್ರೂಣಗಳಿಗೆ ಸಂಯೋಜಿಸಿದಾಗ ಅವು ಸ್ವೀಕೃತ ಭ್ರೂಣದಲ್ಲಿ, ಸ್ವೀಕೃತ ಭ್ರೂಣದ ಅಂಗಾಂಶಗಳನ್ನೇ ಬಳಸಿಕೊಂಡು ಎರಡನೆಯ ಭ್ರೂಣವನ್ನು ಸಂಘಟಿಸುವುದು ಕಂಡುಬಂದಿತು. ಇದರಿಂದಾಗಿ ಇದಕ್ಕೆ ಸಂಘಟಕ ಎಂಬ ಹೆಸರು ಬಂದಿತು. ಬೆಳವಣಿಗೆಯಲ್ಲಿ ಇದು ಮೊದಲು ಕಾಣಿಸಿಕೊಳ್ಳುವ ಸಂಘಟಕವಾದುದರಿಂದ ಇದನ್ನು ಪ್ರಾಥಮಿಕ ಸಂಘಟಕ ಎಂದೂ ಕರೆಯುತ್ತಾರೆ. ಇದಾದನಂತರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಭ್ರೂಣದ ಒಂದು ಭಾಗ ಇನ್ನೊಂದು ಭಾಗದ ವಿಭೇದೀಕರಣ ಮತ್ತು ಬೆಳವಣಿಗೆಗೆ ಅಗತ್ಯವಾಧ ಚೋದನೆಗಳನ್ನು ಒದಗಿಸುವ ಅನೇಕ ಸಂದರ್ಭಗಳು ಕಂಡುಬರುತ್ತವೆ. ಇವುಗಳನ್ನು ದ್ವಿತೀಯ ಸಂಘಟಕಗಳು ಎಂದು ಕರೆಯಲಾಗಿದೆ. ಚೋದನೆಗೆ ಒಳಪಟ್ಟು ಪ್ರತಿಕ್ರಿಯೆ ತೋರಿಸುವ ಅಂಗಾಂಶವು ಸಂಘಟಕಕ್ಕೆ ತಾಗಿದಂತೆ ಇರಬೇಕು. ಸಂಘಟಕದಿಂದ ಯಾವುದೋ ಒಂದು ವಸ್ತು ಚೋದಿತ ಅಂಗಾಂಶಕ್ಕೆ ಚಲಿಸಿ ಪ್ರತಿಕ್ರಿಯೆಗೆ ಕಾರಣವಾಗುತ್ತದೆ. ಹೀಗೆ ಚಲಿಸುವ, ಚೋದಿಸುವ ವಸ್ತುವಿಗೆ ಚೋದಕ ಎಂದು ಹೆಸರು. ಚೋದಕಕ್ಕೆ ಪ್ರತಿಕ್ರಿಯೆ ತೋರಿಸುವ ಅಂಗಾಂಶಕ್ಕೂ ಕೂಡ ಅದರದೆ ಆದ ಕೆಲವು ಲಕ್ಷಣಗಳಿವೆ. ಉದಾಹರಣೆಗೆ ಗ್ಯಾಸ್ಟ್ರುಲೀಕರಣದ ಆದಿ ಹಂತದಲ್ಲಿ ಕಾರ್ಡಾಮಿಸೋಡರ್ಮಿಗೂ ಸಂಭಾವ್ಯ ಮೆಡುಲ್ಲರಿ ಫಟಕ ಕೋಶಗಳಿಗೂ ನಡುವೆ ಇರುವ ನಿಕಟ ಸಂಪರ್ಕವನ್ನು ಏರ್ಪಡಿಸಿದರೆ ಚೋದನೆ ನಡೆಯುವುದಿಲ್ಲ. ಅಂದರೆ, ಚೋದನೆಗೆ ಒಳಪಡುವ ಮತ್ತು ಚೋದನೆಗೆ ಪ್ರತಿಕ್ರಿಯೆ ತೋರಿಸುವ ಸ್ವೀಕಾರಕ ಅಂಗಾಂಶದ ಜೀವಮಾನದಲ್ಲಿ ಸಂಘಟಕದ ಚೋದನೆಗೆ ಪ್ರತಿಕ್ರಿಯೆ ತೋರಿಸುವ ಹಂತವೊಂದಿರುತ್ತದೆ. ಇದಕ್ಕೆ ದಕ್ಷತೆ ಎಂದು ಹೆಸರು. ಚೋದನೆ ಪೂರ್ಣವಾದ ಮೇಲೆ ಚೋದನೆಗೆ ಗುರಿಯಾದ ಅಂಗಾಂಶ ತನ್ನ ಮುಂದಿನ ವಿಭೇದೀಕರಣವನ್ನು ಸ್ವತಃ ನಡೆಸಿಕೊಳ್ಳುತ್ತದೆ. ಇದಕ್ಕೆ ವೈಯಕ್ತೀಕರಣ ಎಂದು ಹೆಸರು. ಹೀಗೆ ಬೆಳವಣಿಗೆಯ ನಿರ್ಧಾರಣೆಗಳ ಮೂಲಕ ಒಂದು ಭಾಗ ಮತ್ತೊಂದು ಭಾಗದ ಮೇಲೆ ಬೀರುವ ಪ್ರಭಾವಗಳ ದೆಸೆಯಿಂದ ಮತ್ತು ವಿಭೇದೀಕರಣದಿಂದ ಭ್ರೂಣದ ಬೆಳವಣಿಗೆಯು ನಡೆಯುತ್ತದೆ. ಈಗ ವಿಭೇದೀಕರಣ ಸಮಸ್ಯೆಯನ್ನು ಪರಿಶೀಲಿಸೋಣ.

ನಿರ್ಧಾರ ನಡೆದುದಾದ ಮೇಲೆ ನಿರ್ಧಾರದ ಪ್ರಭಾವಳಿಯ ಸುಳಿಗೆ ಸಿಕ್ಕಿದ ಜೀವಕೋಶಗಳು ಬದಲಾಗುವುದು ಹೇಗೆ? ಎಂಬುದು ವಿಭೇದೀಕರಣದ ಸಮಸ್ಯೆಯ ತಿರುಳು. ಈ ಸಮಸ್ಯೆಯ ಪರಿಹಾರಕ್ಕೆ ಅನೇಕ ರೀತಿಯ ಪ್ರಯೋಗಗಳು ಮಾಹಿತಿಗಳನ್ನು ಒದಗಿಸಿವೆ. ಜೀವಕೋಶವು ಕೇವಲ ಒಂದು ಏಕಾಂಶ ರಚನೆ ಎನ್ನುವುದು ಕೆಲವು ಸಂದರ್ಭಗಳಲ್ಲಿ ತಪ್ಪಾಗಬಹುದು. ಅದು ಜೀವಿಗಳ ಅವಿಭಾಜ್ಯ ಏಕಮಾನ ಹೌದಾದರೂ ಕ್ರೊಮೋಸೋಮುಗಳನ್ನೊಳಗೊಂಡ ನ್ಯೂಕ್ಲಿಯಸ್ ಮತ್ತು ಇತರ ಚಟುವಟಿಕೆಗಳಿಗೆ ವಸ್ತು ಹಾಗು ಸ್ಥಳಾವಕಾಶಗಳನ್ನು ಒದಗಿಸುವ ಕೋಶದ್ರವ್ಯಗಳು ಇವೆರಡು ಘಟಕಗಳನ್ನೊಳಗೊಂಡ ರಚನೆ. ಜೀವಕೋಶದ ರಚನೆ, ಚಟುವಟಿಕೆ ಮತ್ತು ಅದರ ಅಂತಿಮ ಸ್ವಭಾವ. ಈ ಎರಡು ಅಂತರ್ಗತಗಳ ಸಹಕಾರ ಮತ್ತು ಅಂತರ್ ವರ್ತನೆಯ ಫಲ. ಆದುದರಿಂದ ಬೆಳವಣಿಗೆಯ ಕಾಲದಲ್ಲಿಯೂ ಒಂದೇ ಮೂಲದಿಂದ ಬಂದ ಜೀವಕೋಶಗಳು ಕ್ರಮೇಣ ಭಿನ್ನವಾಗುವುದಾದರೆ, ಅದಕ್ಕೆ ಕಾರಣಗಳನ್ನು ಈ ಎರಡು ಅಂತರ್ಗತಗಳ ನಡುವಿನ ಸಂಬಂಧದಲ್ಲಿ ಹುಡುಕಬೇಕಾಗುತ್ತದೆ. ನ್ಯೂಕ್ಲಿಯಸ್ ಎಂದು ಹೇಳುವಾಗ ಅದರಲ್ಲಿ ಒಂದು ದ್ವಿಗುಣಿತ ಸಂಖ್ಯೆಯ ಕ್ರೊಮೋಸೋಮುಗಳು ಇರುತ್ತವೆ ಎಂದು ಅರ್ಥ. ಆದುದರಿಂದ ಬೆಳವಣಿಗೆಯು ಈ ಎರಡರ ನಡುವಿನ ಸಹಕಾರದ ಫಲ ಎಂಬುದನ್ನು ಪರೀಕ್ಷಿಸಬೇಕಾದರೆ ಈ ಎರಡರ ನಡುವಿನ ಸಾಮರಸ್ಯವನ್ನು ಬದಲಾಯಿಸಿ ನೋಡಬೇಕಾಗುತ್ತದೆ. ಈ ದಿಸೆಯಲ್ಲಿ ವಿವಿಧ ರೀತಿಯ ಸಂಕರಗಳು ನೆರವಾಗಿವೆ.

ಬೆಳವಣಿಗೆಯಲ್ಲಿ ಎರಡನೆಯ ಪ್ರಮುಖ ಪ್ರಶ್ನೆ ಎಂದರೆ ವಿಭೇದೀಕರಣ. ಈ ಪ್ರಶ್ನೆಯ ಅಂತರಾಳದಲ್ಲಿರುವುದು ನಿಷೇಚಿತ ತತ್ತಿಯಂತಹ ಒಂದು ಒಂಟಿ ಜೀವಕೋಶವು ಬಹುಕೋಶ ಜೀವಿಗಳ ದೇಹದಲ್ಲಿರುವ ಅನೇಕ ವಿಭಿನ್ನ ರೀತಿಯ ಜೀವಕೋಶಗಳನ್ನು ಉತ್ಪತ್ತಿ ಮಾಡುತ್ತದೆ. ನಿಷೇಚಿತ ತತ್ತಿಯೊಂದರಿಂದ ನಡೆಯುವ ಭ್ರೂಣದ ಬೆಳವಣಿಗೆಯು ಜೀವಕೋಶ ಸಂದಣಿಗಳ ಸಂಕೀರ್ಣ ಬದಲಾವಣೆಯ ಆವರ್ತನಗಳ ಮೂಲಕ ಮುಂದುವರಿಯುತ್ತದೆ. ವೈಯಕ್ತಿಕ ಜೀವಕೋಶಗಳ ಲಕ್ಷಣಗಳು ಮತ್ತು ಅವು ಅಂಗಾಂಶಗಳಾಗಿ ಹಾಗೂ ಅಂಗಗಳಾಗಿ ಸಂಘಟಿಸುವ ಪ್ರಕ್ರಿಯೆ ಆ ಜೀವಿಯ ಬೆಳವಣಿಗೆಯ ಪ್ರತಿಹಂತದ ಗುಣಲಕ್ಷಣವನ್ನು ನಿರ್ಧರಿಸುತ್ತವೆ. ಜೀವಕೋಶವು ಬೆಳವಣಿಗೆಯ ಮೂಲಭೂತ ಏಕಾಂಶ. ಬೆಳವಣಿಗೆಯ ಕಾಲದಲ್ಲಿ ಸ್ತನಿಯಂತಹ ಒಂದು ಸಂಕೀರ್ಣ ಜೀವಿಯ ಬೆಳವಣಿಗೆಯಲ್ಲಿ ಒಂದು ಒಂಟಿ ತತ್ತಿಕೋಶದಿಂದ ಪ್ರಾಯಶಃ ಸಾವಿರಕ್ಕೂ ಮಿಗಿಲಾದ ಸ್ಪಷ್ಟ ಜೀವಕೋಶದ ಬಗೆಗಳು ಉತ್ಪತ್ತಿಯಾಗುತ್ತವೆ. ಪ್ರತಿ ಜೀವಕೋಶ ಬಗೆಗೂ ಕಾರಣವಾಗುವ ನಿರ್ಧಾರಕಗಳೂ ವಿದಲನಕಾಲದಲ್ಲಿ ವಿತರಣೆಗೊಳ್ಳುತ್ತವೆಂದು, ಇದರಿಂದ ಪ್ರತಿಕೋಶವು ತನಗೆ ವ್ಯವಸ್ಥಿತವಾದ ನಿರ್ಧಾರಕಗಳನ್ನು ಪಡೆಯುವುದೆಂದು, ಈ ರೀತಿಯಲ್ಲಿ ಕೋಶಕ್ಕೆ ಗುಣಲಕ್ಷಣಗಳು ವಿಶಿಷ್ಟ ಗೊಳ್ಳುತ್ತವೆಂದು ಮತ್ತು ಸ್ಥಿರವಾಗುತ್ತವೆಂದು ನಂಬಲಾಗಿತ್ತು. ಈ ರೀತಿಯ ವಿಧಾನವು ಅಂದಿಗೆ ದೊರೆತ ಮಾಹಿತಿಯ ಬೆಳಕಿನಲ್ಲಿ ಸಾಧುವಾಗಿ ಕಂಡಿತು ಮತ್ತು ಬೆಳವಣಿಗೆಯ ಕಾಲದಲ್ಲಿ ವಿವಿಧ ರೀತಿಯ ಜೀವಕೋಶಗಳ ಉತ್ಪತ್ತಿಯನ್ನು ಸಾಧ್ಯವಾದ ಮಟ್ಟಿಗೆ ವಿವರಿಸುವಂತಿತ್ತು. ಆದರೆ, ಈ ಊಹೆಯ ವಿಧಾನ ವಾಸ್ತವವಾಗಿ ನಡೆಯಬೇಕಾದರೆ ಕರಾರುವಕ್ಕಾದ, ಕ್ರಮಬದ್ಧವಾದ ವಿದಲನ ಪ್ರರೂಪಗಳ ಅಗತ್ಯವಿತ್ತು. ಆದಿಯ ಶಬಲ ತತ್ತಿ ಬೆಳವಣಿಗೆ ಸಿದ್ಧಾಂತ ಈ ಭಾವನೆಗೆ ಪೂರಕವೂ ಆಗಿತ್ತು. ಸೂಕ್ಷ್ಮ ಶಸ್ತ್ರ ಚಿಕಿತ್ಸೆಯಿಂದ ಪ್ರಾಯೋಗಿಕವಾಗಿ ಭ್ರೂಣವೊಂದರ ಭಾಗವನ್ನು ತೆಗೆದಾಗ ಅನಂತರದ ಬೆಳವಣಿಗೆಯಲ್ಲಿ ಅದಕ್ಕನುಗುಣವಾದ ನ್ಯೂನತೆ ಕಾರಣವಾಗುತ್ತಿದ್ದುದು ಈ ಶಬಲ ತತ್ತಿ ಭಾವನೆಗೆ ಆಧಾರವಾಯ್ತು. ಅಂದರೆ ತತ್ತಿಯೊಂದು ವಿವಿಧ ನಿರ್ಧಾರಕ ವಸ್ತುಗಳ ವಿತರಣಾ ಶಬಲ ರಚನೆಯೆಂದು, ಆಯಾ ಭಾಗಗಳಲ್ಲಿ ಆಯಾ ನಿರ್ಧಾರಕಗಳನ್ನು ಪಡೆದ ಜೀವಕೋಶಗಳು ವೈಯಕ್ತಿಕವಾಗಿ ವಿಭಿನ್ನ ನಿರ್ಧಾರಕಗಳನ್ನೊಳಗೊಂಡು ಪ್ರತಿಯೊಂದು ನೆರೆಯ ಜೀವಕೋಶದ ವರ್ತನೆಗೆ ಕೂಡದೆ ಪ್ರತ್ಯೇಕವಾಗಿ ಬೆಳೆಯುತ್ತೆಂದು ಮತ್ತು ಇವೆಲ್ಲವುಗಳನ್ನು ಕೋಶವಿಭಜನೆಯ ಸ್ಥಿರ ಕಾರ್ಯಕ್ರಮದ ಅನುಸಾರ ಕ್ರಮವಾದ ಪ್ರರೂಪದಲ್ಲಿ ವ್ಯವಸ್ಥೆಗೊಳಿಸಲಾಗುತ್ತದೆಂದು ಅರ್ಥವಾಗುತ್ತಿತ್ತು. ಆದರೆ ಅನಂತರ ನಡೆಸಿದ ಪ್ರಯೋಗಗಳಿಂದ ಈ ಪರಿಕಲ್ಪನೆಯು ಉಭಯ ಸಾಮಾನ್ಯವಲ್ಲ, ಎಲ್ಲ ಸಂದರ್ಭಗಳಿಗೂ ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿದು ಬಂದಿತು. ಏಕೆಂದರೆ ಕಡಲುಪೊರದಂತಹ ಪ್ರಾಣಿಯ ಭ್ರೂಣಗಳು ಆಕಸ್ಮಿಕವಾಗಿ ಅಥವಾ ಪ್ರಾಯೋಗಿಕವಾಗಿ ಕಳೆದುಕೊಂಡ ಭಾಗಗಳನ್ನು ಬೆಳವಣಿಗೆಯ ಕಾಲಕ್ಕೆ ಪುನರುತ್ಪಾದಿಸಿಕೊಳ್ಳುತ್ತವೆ. ಅಂದರೆ, ಭ್ರೂಣಗಳು ಸಮ ಸಾಮರ್ಥ್ಯದ ಬ್ಲಾಸ್ಟೊಮಿಯರ್‌ಗಳನ್ನೊಳಗೊಂಡಿರುತ್ತವೆ ಎಂಬುದು ವೇದನವಾಯ್ತು. ಭ್ರೂಣದ ಜೀವಕೋಶಗಳನ್ನು ಪುನರ್ ವ್ಯವಸ್ಥೆಗೊಳಿಸುವುದರ ಮೂಲಕ ಇದನ್ನು ತಿಳಿದುಕೊಳ್ಳಬಹುದು. ಪ್ರತಿಯೊಂದು ಬ್ಲಾಸ್ಟೊಮಿಯರ್ ಭ್ರೂಣದ ಒಂದು ಭಾಗವಾಗಿ ಬೆಳೆಯುವುದಾದರೂ ಅದನ್ನು ಪ್ರತ್ಯೇಕಿಸುವ ಬೆಳವಣಿಗೆಯ ಹಂತವನ್ನನುಸರಿಸಿ ಅದು ಒಂದು ಸಂಪೂರ್ಣ ಸ್ವಾಭಾವಿಕ ಲಾರ್ವ ಆಗಿ ಬೆಳೆಯುತ್ತದೆ. ವಾಸ್ತವವಾಗಿ ಅದರ ಗಾತ್ರವು ಸ್ವಭಾವಕ್ಕಿಂತ 1/2 , 1/4 ಅಥವಾ ಅದನ್ನು ಯಾವ ಅವಸ್ಥೆಯಲ್ಲಿ ಬೇರ್ಪಡಿಸಲಾಯ್ತು ಎನ್ನುವುದನ್ನವಲಂಬಿಸಿ ಚಿಕ್ಕದಾಗುತ್ತದೆ. ಉಭಯಚರಿ ಭ್ರೂಣಗಳಲ್ಲಿ ಕೋಶ ಗುಂಪುಗಳನ್ನು ಶಸ್ತ್ರ ಚಿಕಿತ್ಸಾ ರೂಪದಿಂದ ಪರಸ್ಪರ ಬದಲಾಯಿಸಿ ಹೊಸ ಅಂಗಾಂಶ ಪರಿಸರದಲ್ಲಿ ಅವುಗಳ ಬೆಳವಣಿಗೆಯನ್ನು ವೀಕ್ಷಿಸಲು ಸಾಧ್ಯವಾಯ್ತು. ಈ ರೀತಿ ಸ್ಥಳಾಂತರಿಸಿದ ಜೀವಕೋಶಗಳು ವರ್ಗಾಯಿಸಿದ ಭ್ರೂಣದ ಹೊಸ ಸ್ಥಾನಕ್ಕನುಗುಣವಾಗಿ ವಿಭೇದೀಕರಣಗೊಂಡುವು (ನೆರೆಯ ರೀತಿಯ ವಿಭೇದೀಕರಣ). ಇದೇ ರೀತಿಯ ಇನ್ನೂ ಅನೇಕ ಅಭ್ಯಾಸಗಳು ಒಂದು ಜೀವಕೋಶದ ವಿಧಿಯು

ಕೋಶವಿಭಜನೆಯ ಕಾಲಕ್ಕೆ ನಡೆಯುವ ನಿರ್ಧಾರಕಗಳ ಆಯ್ಕೆಯ ವಿತರಣೆಯಿಂದ ನಿರ್ಧಾರವಾಗುವುದಿಲ್ಲ. ಆದರೆ ವಾಸ್ತವವಾಗಿ ಅದು ತನ್ನ ಅಂಗಾಂಶ ಪರಿಸರದೊಂದಿಗಿನ ಅಂತರ ವರ್ತನೆಯ ಫಲವಾಗಿ ಹೊರಹೊಮ್ಮುವ ಬದಲಾವಣೆ. ಆದ್ದರಿಂದ ಈ ರೀತಿಯ ಪುನರುತ್ಪಾದಕ ಭ್ರೂಣಗಳಲ್ಲಿ ಪ್ರತಿಯೊಂದು ಜೀವಕೋಶವೂ ಅಪಾರ ವಿಧಾನದ ವಿಭೇದೀಕೃತ ಸ್ಥಿತಿಗಳ ಸಾಮರ್ಥ್ಯಗಳನ್ನು ಒಳಗೊಂಡಿರುವಂತೆ ಕಂಡುಬರುತ್ತದೆ. ಇದರಲ್ಲಿ ಯಾವುದಾದರೂ ಒಂದು ಸಾಮರ್ಥ್ಯ ಮಾತ್ರ ಬೆಳೆವಣಿಗೆಯ ಸ್ವಾಭಾವಿಕ ವಿಧಾನದಲ್ಲಿ ಅಭಿವ್ಯಕ್ತಿಗೆ ಅಂತಿಮವಾಗಿ ಆಯ್ಕೆಯಾಗುವುದು.

ಅಂದಮೇಲೆ ಒಂದು ಜೀವಕೋಶದ ವಿಭೇದೀಕರಣ ಸಾಮರ್ಥ್ಯವು ಬೆಳವಣಿಗೆಯಲ್ಲಿ ವಾಸ್ತವವಾಗಿ ಅಭಿವ್ಯಕ್ತಗೊಳ್ಳುವ ಸಾಮರ್ಥ್ಯಕ್ಕಿಂತ ಅನೇಕ ಪಟ್ಟು ಹೆಚ್ಚಾಗಿರುತ್ತದೆ ಎಂದು ಸ್ಪಷ್ಟವಾಗಿದೆ. ಹಾಗಾದರೆ ಇರುವ ಇಷ್ಟೊಂದು ಸಾಮರ್ಥ್ಯಗಳಲ್ಲಿ ಒಂದನ್ನು ಮಾತ್ರವೇ ಆರಿಸುವುದು ಯಾವುದು ಮತ್ತು ಈ ಆಯ್ಕೆ ಹೇಗೆ ನಡೆಯುತ್ತದೆ? ಆದುದರಿಂದ ಬೆಳವಣಿಗೆಯ ತಳಿವಿಜ್ಞಾನದ ಇಂದಿನ ಮುಖ್ಯ ಉದ್ದೇಶ ಅವುಗಳಲ್ಲಿರುವ ಅಪಾರ ಸಾಮರ್ಥ್ಯದಿಂದ ಸೀಮಿತವಾದ ಒಂದನ್ನು ಮಾತ್ರ ಆಯ್ಕೆಯಿಂದ ಅಭಿವ್ಯಕ್ತಿಗೊಳ್ಳಲು ಅನುವು ಮಾಡಿಕೊಡುವ ವಿಧಾನದ ಸ್ವಭಾವವನ್ನು ಅರಿಯುವದು. ವಿಭೇದೀಕೃತಗೊಂಡ ಜೀವಕೋಶವೊಂದರ ಗುಣವು ಅದರಲ್ಲಿರುವ ಜೀನ್‌ಗಳ ಚಟುವಟಿಕೆಯ ಅಂತಿಮ ಪ್ರತಿಫಲ ಎಂದು ಇಂದು ನಮಗೆ ತಿಳಿದಿದೆ. ಜೀವಕೋಶ ವಿಭಜನೆಯ ಕಾಲದಲ್ಲಿ ಕ್ರೋಮೋಸೋಮುಗಳ ಪ್ರಾಯಶಃ ಜೀನುಗಳ ಅನನ್ಯ ಗುಂಪುಗಳು ಮರಿಜೀವಕೋಶಗಳಿಗೆ ವಿತರಣೆಗೊಳ್ಳುತ್ತವೆ. ಆದಾಗ್ಯೂ ನಡೆಯುವ ಅನುಕ್ರಮ ಜೀವಕೋಶ ವಿಭಜನೆಗಳ ಮೂಲಕ ಜೀವಕೋಶಗಳು ಭಿನ್ನ ಲಕ್ಷಣ ಸಮಷ್ಟಿಯ, ಅಂದರೆ ಸ್ನಾಯು, ನರ, ವರ್ಣಕ ಅಥವಾ ಗ್ರಂಥಿ ಕೋಶಗಳಲ್ಲಿ ಕ್ರಮೇಣ ವಿಭೇದೀಕರಣಗೊಂಡು ಬದಲಾಗುತ್ತವೆ. ಲಕ್ಷಣ ಸಮಷ್ಟಿಯಲ್ಲಿ ಈ ಜೀವಕೋಶಗಳು ಗಮನಾರ್ಹವಾಗಿ ಭಿನ್ನವಾಗಿ ಕಂಡರೂ ಅವುಗಳಲ್ಲಿ ಏಕ ರೀತಿಯ ಜೀನು ಸಮಷ್ಟಿ ಇರಬೇಕಾದುದು ಸಂಭಾವ್ಯ. ಅಂದರೆ, ಪ್ರತಿಯೊಂದು ಜೀವಕೋಶವೂ ತನ್ನಲ್ಲಿರುವ ಹಲವಾರು ಜೀನ್‌ಗಳಲ್ಲಿ ಒಂದನ್ನು ಅಥವಾ ಕೆಲವನ್ನು ಮಾತ್ರ ಅಭಿವ್ಯಕ್ತಿಸುತ್ತದೆ. ಪುನಃ ಪುನಃ ನಡೆಯುವ ಕೋಶ ವಿಭಜನೆಗಳ ಕಾಲದಲ್ಲಿ ಒಂದು ನಿಗದಿಯಾದ ಚಟುವಟಿಕೆಯ ಜೀನು ತಂಡಗಳು (ನಿರ್ಧಾರಕಗಳು) ಅವುಗಳಿಗೆ ಹಂಚಿಹೋಗಿರುವಂತೆ ಅವು ವರ್ತಿಸುತ್ತವೆ. ಇದು ತಪ್ಪು ಎಂದು ಇತ್ತೀಚಿನ ಅಭ್ಯಾಸಗಳು ತೋರಿಸಿಕೊಟ್ಟಿವೆ. ಜೀವಕೋಶ ವಿಭಜನೆಗಳ ಕಾಲದಲ್ಲಿ ಅಸಮವಾಗಿ ವಿತರಣೆಗೊಳ್ಳುವುದು ಜೀನುಗಳಾಗಲೀ ಕ್ರೋಮೋಸೋಮುಗಳಾಗಲೀ ಅಲ್ಲ, ಆದರೆ ಅವು ಪ್ರತಿ ವರ್ತಿಸುವ ಮತ್ತು ಅಭಿವ್ಯಕ್ತಿಸುವ ಪರಿಸರದ ಬದಲಾವಣೆಗಳು. ಹೀಗೆ ನಡೆಯುವ ವಿಭೇದೀಕೃತ ಕೋಶಗಳ ನಡುವಿನ ವಿಭಿನ್ನತೆಗಳನ್ನು ಸಂಪೂರ್ಣವಾಗಿ ಅಲ್ಲದಿದ್ದರೂ ಬಹುಮಟ್ಟಿಗೆ ಅವುಗಳಲ್ಲಿರುವ ಕಿಣ್ವ ಸಂಯೋಜನೆಗಳ ಭಿನ್ನತೆಯೇ ಕಾರಣ ಎಂದು ಹೇಳಬಹುದು. ಕಿಣ್ವಗಳು ಮತ್ತು ಪ್ರೋಟೀನುಗಳ ರಚನೆಗೆ ಕಾರಣವಾಗುವ ಸುದ್ದಿಸಂಗ್ರಹವು ಜೀನುಗಳಾಗುವ ಕ್ರೋಮೋಸೋಮಿನ ಡಿಎನ್‌ಎಯ ನ್ಯೂಕ್ಲಿಯೊಟೈಡು ಅನುಕ್ರಮಣಿಯಲ್ಲಿ ಸಂಕೇತ ರೂಪದಲ್ಲಿ ಅಡಗಿದೆ ಎನ್ನುವುದು ಇಂದು ಎಲ್ಲರಿಗೂ ತಿಳಿದ ವಿಷಯ. ಆದುದರಿಂದ ಒಂದು ಜೀವಕೋಶದಲ್ಲಿ ಒಂದು ನಿರ್ದಿಷ್ಟ ಪ್ರೋಟೀನು ಕಾಣಿಸಿಕೊಳ್ಳುವುದು ಅದಕ್ಕನುಗುಣವಾದ ಜೀನಿನ ಚಟುವಟಿಕೆಯ ಸೂಚನೆ ಎಂದು ತೀರ್ಮಾನಿಸಬಹುದು. ಉದಾಹರಣೆಗೆ ಕೆಂಪು ರಕ್ತ ಕಣಗಳ ಜೀವಮಾನದ ಆದಿಭಾಗದಲ್ಲಿ ಹಿಮೋಗ್ಲೋಬಿನ್ ಸಂಶ್ಲೇಷಣೆಗೆ ಕಾರಣವಾಗುವ ಜೀನುಗಳು ವರ್ತಿಸುತ್ತವೆ. ಆದರೆ, ಇತರ ಕೋಶಗಳಲ್ಲಿ ವರ್ತಿಸುವುದಿಲ್ಲ. ಎರಡನೆಯ ಉದಾಹರಣೆ ಮೆಲನೊಬ್ಲಾಸ್ಟ್ ಜೀವಕೋಶಗಳ ವಿಭೇದೀಕರಣದ ಅನಂತರದ ಹಂತಗಳಲ್ಲಿ ಟೈರೊಸಿನೇಸ್ ಕಿಣ್ವ ಸಂಶ್ಲೇಷಣೆಗೆ ಕಾರಣವಾದ ಜೀನು ವರ್ತಿಸುತ್ತದೆ. ಆದರೆ ಉಳಿದ ಜೀವಕೋಶಗಳಲ್ಲಿ ವರ್ತಿಸುವುದಿಲ್ಲ. ಇದೇ ರೀತಿ ಇನ್ಸುಲಿನ್ ಹಾರ್ಮೋನಿನ ಸಂಶ್ಲೇಷಣೆಗೆ ಕಾರಣವಾದ ಜೀನು ಮೇದೋಜೀರಕಾಂಗದ ದ್ವೀಪಕೋಶಗಳಲ್ಲಿ ಮಾತ್ರ ವರ್ತಿಸುತ್ತದೆ. ಆದುದರಿಂದ ಪ್ರೋಟೀನುಗಳು ಕಾಣಿಸಿಕೊಳ್ಳುವುದರಲ್ಲಿ ಕಾಲ ಮತ್ತು ಕೋಶ ವಿಶೇಷತೆಗಳು ಇವೆ. ಈ ಕೋಶಗಳು ನಿರ್ದಿಷ್ಟ ಪ್ರೋಟೀನು ಸಂದಣಿಗಳನ್ನು ಪಡೆದಿರುವ ವಿಶೇಷ ಲಕ್ಷಣಗಳನ್ನು ತೋರುತ್ತವೆ. ಅಲ್ಲದೆ, ಈ ಪ್ರೋಟೀನುಗಳು ಆಯಾ ಜೀವಕೋಶಕ್ಕೆ ವಿಭೇದೀಕರಣದ ಪ್ರತಿ ಹಂತಕ್ಕು ನಿರ್ದಿಷ್ಟವಾಗಿವೆ. ಕೆಲವು ಪ್ರೋಟೀನುಗಳು ಆದಿ ಹಂತಗಳಲ್ಲಿ ಕಾಣಿಸಿಕೊಳ್ಳುತ್ತವೆ ಮತ್ತು ಅನಂತರ ಕಣ್ಮರೆಯಾಗುತ್ತವೆ. ಉದಾಹರಣೆಗೆ ಭ್ರೂಣದ ಹಿಮೋಗ್ಲೋಬಿನ್. ಇದೇ ರೀತಿ ಕೆಲವು ಪ್ರೋಟೀನುಗಳು ಕೋಶ ವಿಭೇದೀಕರಣದ ಅಂತಿಮ ಹಂತಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಟೈರೊಸಿನೇಸ್. ಆದುದರಿಂದ ಪ್ರತಿಯೊಂದು ಜೀವಕೋಶಕ್ಕೂ ಅದರ ಬೆಳೆವಣಿಗೆಯ ಪ್ರತಿಹಂತಕ್ಕು ನಿರ್ದಿಷ್ಟವಾದ ಪ್ರೋಟೀನುಗಳ ಉತ್ಪಾದನೆಯಿಂದ ಗುರುತಿಸಬಹುದಾದ ಜೀನೋಮಿನ ಒಂದು ಅಂಶ ಚಟುವಟಿಕೆ ತೋರುವುದನ್ನು ಕಾಣುತ್ತೇವೆ. ಆದುದರಿಂದ ಭಿನ್ನ ಜೀನುಕ್ರಿಯೆಗಳು ಕೋಶ ವಿಭೇದೀಕರಣದ ಆಂತರಿಕ ಮತ್ತು ಮೂಲಭೂತ ಮುಖ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅಂದರೆ ಈ ರೀತಿಯ ಭಿನ್ನ ಜೀನುಕ್ರಿಯೆಗಳನ್ನು ನಿಯಂತ್ರಿಸುವ ಘಟಕ ಅಥವಾ ಘಟಕಗಳು ಕೋಶ ವಿಭೇದೀಕರಣಕ್ಕೆ ಕಾರಣವಾಗುತ್ತದೆ.

(ಎಚ್.ಎಚ್.ಎಸ್.)

**ಕಶೇರುಕಗಳಲ್ಲಿ ವಿಸರ್ಜನೆ:** ಅಮೈನೋ ಆಮ್ಲಗಳು ಹಾಗೂ ಇತರ ಸಾರಜನಕ ಸಂಯುಕ್ತಗಳ ವಿಭಜನೆಯಿಂದ ಉಂಟಾದ ಸಾರಜನಕ ತ್ಯಾಜ್ಯಗಳನ್ನು ರಕ್ತದಿಂದ ಬೇರ್ಪಡಿಸಿ ವಿಸರ್ಜಿಸುವ ಸಂಕೀರ್ಣ ಕ್ರಿಯೆ.

ಸಾರಜನಕ ತ್ಯಾಜ್ಯಗಳು ಮತ್ತು ಜಲ ಸಂರಕ್ಷಣೆ: ಮುಖ್ಯವಾಗಿ ಅಮೈನೋ ಆಮ್ಲಗಳೇ ಜೀವಿಯೊಂದರ ಸಾರಜನಕ ತ್ಯಾಜ್ಯದ ಮೂಲ. ಪ್ರೋಟೀನ್ ಪಚನ ಕ್ರಿಯೆಯಲ್ಲಿ ಉತ್ಪತ್ತಿಯಾದ ಅಮೈನೋ ಆಮ್ಲಗಳು ನವ ಪ್ರೋಟೀನುಗಳ ರಚನೆಗೆ ಬಳಕೆಯಾಗಬಹುದು ಅಥವಾ ಡಿಅಮಿನೀಕರಣಕ್ಕೆ (ಡಿ ಅಮೈನೇಷನ್) ಒಳಗಾಗಬಹುದು ಅಥವಾ ಇತರೇ ಸಂಯುಕ್ತಗಳ ಸಂಶ್ಲೇಷಣೆಗೆ ಬಳಕೆಯಾಗಬಹುದು. ಡಿಅಮಿನೀಕರಣ ಪ್ರಕ್ರಿಯೆಯಲ್ಲಿ ಬಿಡುಗಡೆಯಾಗುವ ಹೆಚ್ಚುವರಿ ಸಾರಜನಕವು ಅಮೋನಿಯಾ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ತಕ್ಷಣವೇ ಕರಗುವ ಸಾಮರ್ಥ್ಯವುಳ್ಳ ಅಮೋನಿಯಾ ಅತ್ಯಂತ ವಿಷಕಾರಕವಾದ್ದರಿಂದ ಶಿಥಿಲೀಕರಣಗೊಂಡು ವಿಸರ್ಜನೆಗೊಳ್ಳಬೇಕು ಅಥವಾ ಹೆಚ್ಚು ನಂಜಿಲ್ಲದ ಪರಿವರ್ತನೆಯಾಗಿ ಯುರಿಯಾ ಅಥವಾ ಯುರಿಕ್ ಆಮ್ಲವಾಗಿ ವಿಸರ್ಜನೆಯಾಗಬೇಕು. ಸಾರಜನಕ ತ್ಯಾಜ್ಯವು ಯಾವ ರೂಪದಲ್ಲಿ ವಿಸರ್ಜನೆ ಆಗಬೇಕೆಂಬುದು ಅದು ಆಯಾ ಪ್ರಭೇದಕ್ಕೆ ಲಭ್ಯವಿರುವ ನೀರಿನ ಮೇಲೆ ನಿರ್ಧರಿತವಾಗುತ್ತದೆ.

ಕ್ಷಿಪ್ರವಾಗಿ ಕರಗುವ ಅಮೋನಿಯಾ ಕಾಯದ್ರವ ಮತ್ತು ಊತಕಗಳ ಮೂಲಕ ಸುಲಭವಾಗಿ ವಿಸರಣಗೊಂಡು, ಅಮೋನೊಟೆಲಿಕ್ ಪ್ರಾಣಿಗಳ ಬಾಹ್ಯ ಮೇಲ್ಮೈಯಿಂದ ಅವುಗಳು ವಾಸಿಸುತ್ತಿರುವ ನೀರಿನಲ್ಲಿ ವಿಸರ್ಜನೆ ಆಗುತ್ತದೆ. ಈ ತೆರನಾದ ವಿಸರ್ಜನೆ ಕೇವಲ ಜಲಚರ ಪ್ರಾಣಿಗಳಲ್ಲಿ ಸಾಧ್ಯವಿದೆ. ಅಂದರೆ ನೆಲದ ಮೇಲೆ ವಾಸಿಸುವ ಪ್ರಾಣಿಗಳ ಸುತ್ತ ಗಾಳಿ ಆವರಿಸಿರುವುದರಿಂದ ಈ ತೆರನಾದ ಅಮೋನಿಯಾ ವಿಸರ್ಜನೆ ಸಾಧ್ಯವಿಲ್ಲ, ಕಾರಣ ಈ ಪ್ರಾಣಿಗಳು ಅಮೋನಿಯಾವನ್ನು ಕಡಿಮೆ ವಿಷಕಾರಿಗಳಾದ ಯುರಿಯಾ ಅಥವಾ ಯುರಿಕ್ ಆಮ್ಲಗಳಾಗಿ ಪರಿವರ್ತಿಸಿ ಮೂತ್ರ ಪಿಂಡಗಳ ಮೂಲಕ ಅವನ್ನು ರಕ್ತದಿಂದ ಬೇರ್ಪಡಿಸಿ, ಮೂತ್ರದ ಮೂಲಕ ಇವುಗಳನ್ನು ವಿಸರ್ಜಿಸುತ್ತವೆ. ಉಭಯವಾಸಿಗಳು, ಸ್ತನಿಗಳು ಹಾಗು ಮೃದ್ವಸ್ಥಿ ಮೀನುಗಳು ಇವುಗಳ ಪರಿಸರದಲ್ಲಿ ಸಾಕಷ್ಟು ನೀರು ದೊರೆಯುವುದರಿಂದ ಅಮೋನಿಯಾವನ್ನು ಯುರಿಯಾಕ್ಕೆ ಪರಿವರ್ತಿಸಿ ಅದನ್ನು ನೀರಿನ ದ್ರಾವಣ ರೂಪದಲ್ಲಿ ಮೂತ್ರದ ಮೂಲಕ ವಿಸರ್ಜಿಸುತ್ತವೆ. ಹಾಗಾಗಿ ಇವುಗಳನ್ನು ಯುರಿಯೊಟೆಲಿಕ್ ಪ್ರಾಣಿಗಳೆಂದು ಕರೆಯಲಾಗಿದೆ. ಆದರೆ ಕೆಲವು ಪ್ರಾಣಿಗಳಿಗೆ ನೀರಿನ ಲಭ್ಯತೆ ಕಡಿಮೆಯಾಗಿದ್ದು ಸಿಕ್ಕಷ್ಟು ನೀರನ್ನು ದೇಹದಲ್ಲಿ ಉಳಿಸಿಕೊಳ್ಳಬೇಕಾಗುವುದರಿಂದ, ಸಾರಜನಕ ತ್ಯಾಜ್ಯವನ್ನು ದ್ರಾವಣದ ಮೂಲಕ ವಿಸರ್ಜಿಸಲು ಸಾಧ್ಯವಿಲ್ಲ. ಉದಾಹರಣೆಗೆ ಪಕ್ಷಿಗಳು, ಕೀಟಗಳು, ಮರುಭೂಮಿ ಪ್ರಾಣಿಗಳು ಮುಂತಾದುವು ಅಮೋನಿಯಾವನ್ನು ಯೂರಿಕ್ ಆಮ್ಲವಾಗಿ ಪರಿವರ್ತಿಸಿ, ಹೆಚ್ಚು ನೀರಿನ ಅವಶ್ಯಕತೆ ಇಲ್ಲದೆ, ಅದನ್ನು ಘನ ಅಥವಾ ಅರೆಘನ ರೂಪದಲ್ಲಿ ವಿಸರ್ಜಿಸುತ್ತವೆ (ಯೂರಿಕೊಟೆಲಿಕ್ ಪ್ರಾಣಿಗಳು).

ಕಶೇರುಕಗಳಲ್ಲಿ ವಿಸರ್ಜನೆ ಮತ್ತು ಪ್ರಜನನ ವ್ಯವಸ್ಥೆಗಳು ಸಾಮಾನ್ಯ ಸಂವಹನ ನಾಳಗಳನ್ನು ಹೊಂದಿವೆ. ಚಯಾಪಚಯ ತ್ಯಾಜ್ಯ ಮತ್ತು ಲಿಂಗಕೋಶಗಳು ಒಂದೇ ನಾಳದಿಂದ ಹೊರಹಾಕಲ್ಪಟ್ಟರೂ, ಈ ಎರಡೂ ವ್ಯವಸ್ಥೆಗಳ ಅಭಿವರ್ಧನಾ ಮೂಲಗಳು ಬೇರೆ ಆಗಿವೆ. ಭ್ರೂಣದ ನೆಫ್ರಿಕ್ ದಂಡವನ್ನು ಸೃಜಿಸುವ ಮಧ್ಯಚರ್ಮ ಅಥವಾ ನೆಫ್ರೋಟೋಮ್ ನಿಂದ ನಿಷ್ಪನ್ನಗೊಳ್ಳುವ ಮೂತ್ರಪಿಂಡಗಳು ವಲಯಿಗಳು. ನೆಫ್ರಿಕ್ ದಂಡಿನ ಅಡಿಯಲ್ಲಿರುವ ಪ್ರಜನನ ದಂಡಿನಿಂದ ಅಂಗಾಂಗಗಳು ಉಂಟಾಗುತ್ತವೆ ಮತ್ತು ಅವು ನಿರ್ವಲಯಿಗಳು.

ಕಾಯಭಿತ್ತಿಯ ಹಿಂಬದಿಯ ವಲಯೀ ರಚನೆಯಾದ ವಿಶೇಷ ಗ್ಲೋಮೆರುಲಾರ್ ಮೂತ್ರ ಪಿಂಡವು ರಕ್ತದ ಅತಿಸೂಕ್ಷ್ಮ ಸೋಸುವಿಕೆಯ ಮೂಲಕ ಕಾರ್ಯ ನಿರ್ವಹಿಸಿ ತ್ಯಾಜ್ಯವನ್ನು ಆರ್ಕಿನೆಫ್ರಿಕ್ ನಾಳಗಳ ಮೂಲಕ ಕ್ಲೋಯಕಕ್ಕೆ ಕೊಂಡೊಯ್ದು ವಿಸರ್ಜಿಸುತ್ತದೆ.

ಹಾಗ್ ಮೀನುಗಳನ್ನು ಹೊರತುಪಡಿಸಿದರೆ ಸಮುದ್ರ ನೀರಿಗಿಂತಲೂ ಕಾಯದ್ರವಗಳು ಹೆಚ್ಚು ಶಿಥಿಲ. ಈ ಸಂದರ್ಭದಲ್ಲಿ, ಅದರಲ್ಲೂ ಸಿಹಿನೀರ ಆವರಣದಲ್ಲಿ ಕಾಯದ್ರವ ಗಾತ್ರ ನಿಯಂತ್ರಣದಲ್ಲಿ ಮೂತ್ರಪಿಂಡವು ಪ್ರಮುಖ ಪಾತ್ರ ವಹಿಸುತ್ತದೆ. ಕಿವಿರುಗಳು

ಸಾರಜನಕ ತ್ಯಾಜ್ಯ ವಿಸರ್ಜನೆಯೊಂದಿಗೆ ಏಕವೇಲನ್ಸಿಯ ಅಯಾನುಗಳನ್ನು ನಿಯಂತ್ರಿಸುತ್ತವೆ. ಆದರೆ ದ್ವಿವೇಲನ್ಸಿಯ ಅಯಾನುಗಳನ್ನು ಮೂತ್ರಪಿಂಡವು ನಿಯಂತ್ರಿಸುತ್ತದೆ. ಮೂತ್ರ ಪಿಂಡಗಳು ಪ್ರಮುಖವಾಗಿ ಪ್ರೋಟೀನು ಅಪಚಯದಿಂದುಂಟಾಗುವ ಸಾರಜನಕ ತ್ಯಾಜ್ಯವನ್ನು ವಿಸರ್ಜಿಸಿದರೂ, ದೇಹದ ಜಲ ಲವಣಾಂಶಗಳನ್ನೂ ನಿಯಂತ್ರಿಸುತ್ತವೆ. ಅದರಲ್ಲೂ ವಿಶೇಷವಾಗಿ ಸೋಡಿಯಂ, ಕ್ಲೋರೈಡ್, ಕ್ಯಾಲ್ಸಿಯಂ, ಮೆಗ್ನೀಸಿಯಂ, ಪೊಟ್ಯಾಸಿಯಂ, ಬೈಕಾರ್ಬೊನೇಟ್ ಮತ್ತು ಫಾಸ್ಫೇಟ್‌ಗಳ ಅಂಶವನ್ನು ನಿಯಂತ್ರಿಸುತ್ತವೆ. ಚತುಷ್ಪಾದಿಗಳಲ್ಲಿ ಮೂತ್ರಪಿಂಡಗಳು ಈ ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತವೆ.

ಕಶೇರುಕಗಳಲ್ಲಿ ಮೂತ್ರ ಪಿಂಡದ ಮೂಲಪಾತ್ರ ಪ್ರಾಯಶಃ ಕ್ಯಾಲ್ಸಿಯಂ ಮತ್ತು ಫಾಸ್ಫೇಟುಗಳಂಥ ದ್ವಿವೇಲನ್ಸಿಯ ಅಯಾನುಗಳನ್ನು ನಿಯಂತ್ರಿಸುವುದಾಗಿರಬೇಕು.

ಮೀನುಗಳ ಮೂತ್ರಪಿಂಡವು ನೀಳವಾದ ವಲಯೀ ರಚನೆಯಾಗಿದ್ದು ಬೆನ್ನಿನ ಕಾಯಭಿತ್ತಿಯ ಉದ್ದಕ್ಕೂ ಹಬ್ಬಿಕೊಂಡಿದೆ. ಇದಕ್ಕೆ ಆರ್ಕಿನೆಫ್ರಿಕ್ ನಾಳ ಎಂದು ಹೆಸರು. ಪ್ರೊನೆಫ್ರಾಸ್, ಮಿಸೊನೆಫ್ರಾಸ್ ಹಾಗೂ ಮೆಟಾನೆಫ್ರಾಸ್‌ಗಳೆಂಬ ಮೂರು ಭಾಗಗಳನ್ನು ಹೊಂದಿದೆ. ಎಲ್ಲಾ ಕಶೇರುಕಗಳ ಭ್ರೂಣಗಳಲ್ಲೂ ಒಂದೇ ಸಂರಚನೆಯಿದೆ. ಹಾಗ್ ಮೀನುಗಳನ್ನು ಹೊರತುಪಡಿಸಿ ಎಲ್ಲ ಜೀವಂತ ಕಶೇರುಕಗಳ ಡಿಂಬಗಳಲ್ಲಿ ಮಾತ್ರ ಪ್ರೊನೆಫ್ರಾಸ್ ಕಾರ್ಯನಿರ್ವಹಿಸುತ್ತದೆ. ಆದಿಮ ಪ್ರೌಢ ಕಶೇರುಕ ಮೂತ್ರಪಿಂಡವು ಮಿಸೊ – ಮೆಟನೆಫ್ರಿಕ್ ಭಾಗಗಳನ್ನು ಹೊಂದಿದ್ದು ಅದನ್ನು ಓಫಿಸ್ತೋನೆಫ್ರಿಕ್ ಮೂತ್ರಪಿಂಡ ಎನ್ನುತ್ತಾರೆ. ಪ್ರೌಢ ಆಮ್ನಿಯೋಟ್‌ಗಳ ಮೂತ್ರಪಿಂಡ ಕೇವಲ ಮೆಟನೆಫ್ರಾಸ್‌ನ್ನು ಹೊಂದಿದ್ದು, ಯುರೆಟರ್ ಎಂಬ ನವನಾಳವನ್ನು ಹೊಂದಿದೆ.

ಅತಿಸೂಕ್ಷ್ಮ ಸೋಸುವಿಕೆ ವಿಧಾನದಿಂದ ಕಶೇರುಕ ಮೂತ್ರಪಿಂಡಗಳು ಕಾರ್ಯನಿರ್ವಹಿಸುತ್ತವೆ. ಮೂತ್ರಪಿಂಡೀಯ ರಕ್ತನಾಳಗಳು ರಕ್ತವನ್ನು ನೇರವಾಗಿ ಮೂತ್ರಪಿಂಡಕ್ಕೆ ತರುತ್ತವೆ ಮತ್ತು ಅಲ್ಲಿನ ಅತೀವ ರಕ್ತದೊತ್ತಡವು ನೀರು, ಅಯಾನು ಮತ್ತು ಸಣ್ಣ ಅಣುಗಳನ್ನು ಕಿರುರಕ್ತನಾಳಗಳ ರಂಧ್ರಗಳ ಮೂಲಕ ಹೊರಹಾಕುತ್ತವೆ. ಸೂಕ್ಷ್ಮದರ್ಶಕೀಯ ನೇಫ್ರಾನುಗಳು ಮೂತ್ರ ಪಿಂಡದ ಮೂಲ ಘಟಕಗಳು. ಇತರೇ ಅಸ್ಥಿಪಟ್ಟಿ ಪ್ರಾಣಿಗಳಲ್ಲಿ ಋಜು ಮೂತ್ರಪಿಂಡಗಳಿಲ್ಲ. ಆಂಫಿಯಾಕ್ಸಸ್ ನ ವಿಸರ್ಜನಾಂಗಗಳು ಊತಕೋಶಗಳು. ಈ ಜೀವಕೋಶಗಳು ಗ್ರಸನೀ (ಫ್ಯಾರಿನ್ಜಿಯಲ್) ರಕ್ತನಾಳಗಳೊಂದಿಗೆ ಸಂಯೋಜನೆಗೊಂಡಿದ್ದು ಎಲ್ಲವೂ ಒಂಟಿಯಾಗಿ ಮಿಥ್ಯಾ ದೇಹಾವಕಾಶವಾದ ಏಟ್ರಿಯಮ್ ನಲ್ಲಿ ತೆರೆದುಕೊಳ್ಳುತ್ತವೆ. ಕೊನೆಗೆ ಏಟ್ರಿಯೊ ರಂಧ್ರದ ಮೂಲಕ ತ್ಯಾಜ್ಯಗಳು ಹೊರಕ್ಕೆ ವಿಸರ್ಜಿಸಲ್ಪಡುತ್ತವೆ. ಈ ಊತಕೋಶಗಳು ಕಶೇರುಕ ಮೂತ್ರ ಪಿಂಡಗಳ ನೆಫ್ರಾನುಗಳಿಗೆ ಸದೃಶವಿರಬಹುದೆನಿಸುತ್ತದೆ.

ಭ್ರೂಣವರ್ಧನೆಯ ಮೊದಲಲ್ಲಿ ನೆಫ್ರಾನುಗಳು ವಲಯೋಪಾದಿಯಲ್ಲಿ ಜೋಡಣೆಯಾಗಿದ್ದು ಲಾಲಿಕೆಯನ್ನು ಹೋಲುವ ಬಿರುರೋಮಯುತ ವದನಗಳಿಂದ ದೇಹಾವಕಾಶದೊಳಕ್ಕೆ ತೆರೆದುಕೊಂಡು ಅಲ್ಲಿಂದ ಕಾಯದ್ರವವನ್ನು ಹೀರಿಕೊಳ್ಳುತ್ತವೆ. ಈ ದ್ರವವು ಆರ್ಕಿನೆಫ್ರಿಕ್ ನಾಳಗಳ ಮೂಲಕ ಕ್ಲೋಯಕಕ್ಕೆ ಸಾಗಣೆಗೊಂಡು ವಿಸರ್ಜಿತವಾಗುತ್ತದೆ. ಅಭಿವರ್ಧನೆ ಮುಂದುವರೆದಂತೆಲ್ಲಾ ಈ ನಾಳಗಳು ಅವಕಾಶದೊಡನೆ ಸಂಪರ್ಕ ಕಡಿದುಕೊಂಡು ತಮ್ಮ ಶೋಧಿತವನ್ನು ಲೋಮನಾಳ ವ್ಯೂಹದಿಂದ ಪಡೆದುಕೊಳ್ಳುತ್ತವೆ.

ಜೀವಿಯೊಂದು ಕಾಯದ್ರವಗಳ ಸಾರವನ್ನು ಸೀಮಿತ ಮಟ್ಟದಲ್ಲಿ ಮಾತ್ರ ಸಹಿಸಿಕೊಳ್ಳಬಲ್ಲುದು. ಆದ್ದರಿಂದ ಅಪಾಯ ಮಟ್ಟವನ್ನು ತಲುಪುವ ಮೊದಲೇ ತ್ಯಾಜ್ಯಗಳನ್ನು ಶರೀರದಿಂದ ಹೊರಹಾಕಬೇಕು. ಅದರಲ್ಲೂ ವಿಷವಸ್ತುವಾದ ಅಮೋನಿಯಾವು ತ್ವರಿತವಾಗಿ ವಿಸರ್ಜಿತವಾಗಬೇಕು. ಈ ನಿಟ್ಟಿನಲ್ಲಿ ಕಶೇರುಕಗಳು ಜಲ ಹಾಗೂ ತ್ಯಾಜ್ಯ ನಿರ್ಮೂಲನೆಗೆ ಸಮರ್ಥ ರಚನೆಗಳನ್ನು ವಿಕಸಿಸಿಕೊಂಡಿವೆ. ಹಾಗೂ ಮೂತ್ರಪಿಂಡಗಳು ಈ ಪ್ರಕ್ರಿಯೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಪ್ರೌಢಕಶೇರುಕ ಸ್ತನಿ ಮೂತ್ರಪಿಂಡವೊಂದು ಮಿಲಿಯಾಂತರ ನೆಫ್ರಾನುಗಳನ್ನು ಹೊಂದಿದ್ದು, ಪ್ರತಿಯೊಂದೂ ಮೂತ್ರ ಉತ್ಪಾದಿಸುತ್ತದೆ. ನೆಫ್ರಾನಿನ ಪ್ರಾಥಮಿಕ ಕಾರ್ಯಗಳೆಂದರೆ: ರಕ್ತದಿಂದ ಹೆಚ್ಚಿನ ಜಲಾಂಶ, ಲವಣಗಳು, ಅಪಚಯನ ತ್ಯಾಜ್ಯಗಳು ಮತ್ತು ಹೊರವಸ್ತುಗಳನ್ನು ತೆಗೆದುಹಾಕುವುದು. ಇದಕ್ಕಾಗಿ ರಕ್ತವು ಮೊದಲು ಗ್ಲೊಮೆರುಲಸ್‌ನಲ್ಲಿ ಶೋಧಿತವಾಗಬೇಕು. ಇದಕ್ಕೆಂದೇ ಗ್ಲೊಮೆರುಲಸ್ ಸಂರಚನಾ ದೃಷ್ಟಿಯಿಂದ ವಿಶೇಷವಾಗಿ ಸಜ್ಜುಗೊಂಡಿದೆ. ಆನಂತರ ಅತಿಸೂಕ್ಷ್ಮ ಶೋಧಿತದಿಂದ ಅವಶ್ಯವಿರುವ ಉಪಾಪಚಯಕಗಳು ಮರಳಿ ಹೀರಲ್ಪಟ್ಟು ಪರಿಚಲನಾವ್ಯೂಹವನ್ನು ಸೇರಬೇಕು.

(ಕೆ.ಎಸ್.)

**ಕಶೇರುಮಣಿ:** ಕಶೇರುಕಗಳಲ್ಲಿ ಕಶೇರು ಸ್ತಂಭದ (ವರ್ಟಿಬ್ರಲ್ ಕಾಲಮ್) ರಚನಾ ಘಟಕ. ಕಶೇರುಮಣಿಗಳ ಸಂಖ್ಯೆ ಹಾಗು ರಚನೆ ಕಶೇರುಕಗಳ ಒಂದು ವರ್ಗದಿಂದ ಮತ್ತೊಂದಕ್ಕೆ ಬದಲಾವಣೆಯಾಗುತ್ತಾ ಹೋದರೂ ಅವುಗಳ ರಚನಾ ಕ್ರಮದಲ್ಲಿ ಹಾಗೂ ಬೆಳವಣಿಗೆಯಲ್ಲಿ ಒಂದು ಬಗೆಯ ಸಾಮ್ಯತೆ ಇದೆ. ಕೆಲವು ಕಶೇರುಕಗಳ ಬಾಲದಲ್ಲಿರುವ ಕಶೇರುಮಣಿಯನ್ನು ಮಾದರಿಯಾಗಿಟ್ಟುಕೊಳ್ಳಬಹುದು. ಪ್ರತಿಯೊಂದು ಕಶೇರುಮಣಿಯಲ್ಲಿಯೂ ಸೆಂಟ್ರಮ್ ಮತ್ತು ನರಕಮಾನು (ನ್ಯೂರಲ್ ಆರ್ಚ್) ಎಂಬ ಎರಡು ಭಾಗಗಳಿವೆ. ನರಕಮಾನು ಎರಡು ನರತಟ್ಟೆಗಳಿಂದ (ನ್ಯೂರಪೋಫೈಸಿಸ್) ಕೂಡಿದೆ. ಈ ಎರಡು ತಟ್ಟೆಗಳು ಸೆಂಟ್ರಮ್‌ನ ಮೇಲ್ಭಾಗದ ಎರಡು ಪಕ್ಕಗಳಿಂದ ಹೊರಟು, ನರಹುರಿಯ (ಸ್ಪೈನಲ್ ಕಾರ್ಡ್) ಮೇಲ್ಭಾಗದಲ್ಲಿ ಕೂಡಿ ನರಕಂಟಕ (ನ್ಯೂರಲ್ ಸ್ಪೈನ್) ವಾಗಿ ಮುಂದುವರೆಯುತ್ತವೆ. ನರಕಮಾನಿನ ಹಾಗೆಯೇ ಪ್ರತಿಯೊಂದು ಕಶೇರುಮಣಿಯ ಕೆಳಭಾಗದಲ್ಲಿ ರಕ್ತ ಕಮಾನು (ಹೀಮಲ್ ಆರ್ಚ್) ನರಹುರಿಯ ಸುತ್ತಲೂ ಸುತ್ತುವರೆದು ನರಹುರಿಯ ಕೆಳಭಾಗದಲ್ಲಿ ಕೂಡಿ ರಕ್ತಕಂಟಕವಾಗಿ (ಹೀಮಲ್ ಸ್ಪೈನ್) ಮುಂದುವರೆಯುತ್ತದೆ. ರಕ್ತ ಕಮಾನು ಸಹ ಎರಡು ರಕ್ತತಟ್ಟೆಗಳಿಂದ (ಹೀಮಪೋಫೈಸಿಸ್) ರಚಿತವಾಗಿದೆ. ಈ ರಕ್ತಕಮಾನು ಸಾಮಾನ್ಯವಾಗಿ ಬಾಲದ ಭಾಗದಲ್ಲಿ ಮಾತ್ರ ಕಂಡುಬರುತ್ತದೆ. ಮುಂಡದ ಭಾಗದಲ್ಲಿ ಕಮ್ಮಿಯಾಗಿರುತ್ತದೆ ಅಥವಾ ನಶಿಸಿಹೋಗಿರುತ್ತದೆ. ಮೇಲ್ವರ್ಗದ ಕಶೇರುಕಗಳಲ್ಲಿ ಈ ಭಾಗಗಳ ಜೊತೆಯಲ್ಲಿ ಇನ್ನು ಕೆಲವು ಭಾಗಗಳು ಬೆಳೆದಿರುತ್ತವೆ. ಕಶೇರು ಸ್ತಂಭವು ಚಲನೆಗಾಗಿ ನೆರವಾಗಿರುವುದೇ ಇದಕ್ಕೆ ಕಾರಣ. ಇವುಗಳಲ್ಲಿ ಸಾಮಾನ್ಯವಾಗಿ ನರಕಮಾನಿನ ಅಗ್ರ ಮತ್ತು ಪಶ್ಚ ಅಂಚುಗಳಿಂದ ಒಂದೊಂದು ಜೊತೆ ಚಪ್ಪಟೆಯಾದ ಕೀಲಿಕಾರಚನೆಗಳು ಕ್ರಮವಾಗಿ ಹಿಂದಕ್ಕೂ ಮತ್ತು ಮುಂದಕ್ಕೂ ಚಾಚಿಕೊಂಡಿವೆ. ಇವಕ್ಕೆ ಕ್ರಮವಾಗಿ ಅಗ್ರ ಮತ್ತು ಪಶ್ಚ ಜೈಗಪೊಫೈಸಿಸ್‌ಗಳೆಂದು ಹೆಸರು. ಇವು ಕಶೇರುಮಣಿಗಳು ಕೀಲಿಕೊಳ್ಳುವುದರಲ್ಲಿ ಸಹಾಯ ಮಾಡುತ್ತವೆ. ಇವುಗಳಲ್ಲದೆ ನರಕಮಾನಿನ ಎರಡೂ ಪಕ್ಕಗಳಿಂದ ಒಂದು ದೊಡ್ಡದಾದ ಅಡ್ಡಕ್ಕೆ ಹರಡಿದ ಅಡ್ಡ ಪ್ರವರ್ಧಕಗಳಿವೆ (ಟ್ರಾನ್ಸ್‌ವರ್ಸ್ ಪ್ರಾಸೆಸಸ್). ಈ ಅಡ್ಡ ಪ್ರವರ್ಧಕಗಳು ಮೇಲು ವರ್ಗದ ಕಶೇರುಕಗಳಲ್ಲಿ ಒಂದೊಂದು ಪಕ್ಕೆಯಲ್ಲಿ ಎರಡಿರಬಹುದು. ಇವುಗಳಲ್ಲಿ ಒಂದು ಜೊತೆ ಅಡ್ಡ ಪ್ರವರ್ಧಕ ನರಕಮಾನಿನಿಂದಲೂ ಇನ್ನೊಂದು ಜೊತೆ ಸೆಂಟ್ರಮ್‌ನ ಮಧ್ಯಭಾಗದಿಂದಲೂ ಹೊರಡುತ್ತವೆ. ನರಕಮಾನಿನಿಂದ ಹೊರಟಿರುವ ಅಡ್ಡ ಪ್ರವರ್ಧಕಕ್ಕೆ ಡೈಅಪೋಫೈಸಿಸ್ ಎಂದೂ ಸೆಂಟ್ರಮ್‌ನಿಂದ ಹೊರಟಿರುವ ಅಡ್ಡ ಪ್ರವರ್ಧಕಕ್ಕೆ ಪ್ಯಾರಪೋಫೈಸಿಸ್ ಎಂದೂ ಕರೆಯುತ್ತಾರೆ. ಡೈಅಪೋಫೈಸಿಸ್ ಪಕ್ಕೆಲುಬಿನ ಟ್ಯೂಬರ್‌ಕ್ಯುಲಮ್ ಅನ್ನು ಹಾಗೂ ಪ್ಯಾರಪೋಫೈಸಿಸ್ ಪಕ್ಕೆಲುಬಿನ ಕ್ಯಾಪಿಟುಲಂ ಅನ್ನೂ ಕೀಲಿಸಿಕೊಳ್ಳುತ್ತವೆ. ಸೆಂಟ್ರಮ್ ಕಶೇರುಮಣಿಯ ಅತಿಮುಖ್ಯ ಭಾಗ. ಭ್ರೂಣಾವಸ್ಥೆಯ ಬೆನ್ನು ಹುರಿಯನ್ನು (ನೋಟೊಕಾರ್ಡ್) ಪ್ರಾಣಿಯು ಬೆಳೆಯುತ್ತಿರುವಾಗ ಸೆಂಟ್ರಮ್ ಪ್ರತಿಸ್ಥಾಪಿಸುತ್ತದೆ. ಈ ಸೆಂಟ್ರಮ್‌ನ ಮುಂದಿನ ಹಾಗೂ ಹಿಂದಿನ ತುದಿಯಲ್ಲಿ ಕುಳಿಗಳಿದ್ದರೆ ಆಂಫಿಸೀಲಸ್ ಎಂದೂ ಮುಂಭಾಗದಲ್ಲಿ ಕುಳಿಯಿದ್ದು ಹಿಂಭಾಗದಲ್ಲಿ ಉಬ್ಬಿದ್ದರೆ ಪ್ರೋಸೀಲಸ್ ಎಂದೂ ಪ್ರೊಸೀಲಸ್‌ಗೆ ವಿರುದ್ಧವಾಗಿದ್ದರೆ ಆಫಿಸ್ತೊಸೀಲಸ್ ಎಂದೂ ಎರಡೂ ಭಾಗಗಳು ಚಪ್ಪಟೆಯಾಗಿದ್ದರೆ ಆಂಫಿಪ್ಲಾಟಿಯಸ್ ಎಂದೂ ಎರಡೂ ಭಾಗಗಳು ಜೀನಿನ ಆಕಾರದಲ್ಲಿದ್ದರೆ ಹೆಟರೋಸೀಲಸ್ ಎಂದೂ ಕರೆಯುತ್ತಾರೆ. ಕೆಲವು ಮೀನುಗಳ ಬಾಲಗಳಲ್ಲಿ ಒಂದೊಂದು ಕಶೇರುಮಣಿಯಲ್ಲಿ ಎರಡು ಸೆಂಟ್ರಮ್‌ಗಳಿರುತ್ತವೆ. ಇಂತಹ ರಚನಾಕ್ರಮಕ್ಕೆ ಡಿಪ್ಲೊಸ್ಪಾಂಡೈಲಿ ಎಂದು ಕರೆಯುತ್ತಾರೆ.

ಕಶೇರುಮಣಿಯ ಬೆಳವಣಿಗೆ ಹಾಗೂ ವಿಕಾಸ: ಎಲ್ಲ ಕಶೇರುಕಗಳ ಭ್ರೂಣಾವಸ್ಥೆಯಲ್ಲಿ ಬೆನ್ನು ಹುರಿಯಿರುತ್ತದೆ. ಭ್ರೂಣವು ಬೆಳೆದ ಹಾಗೆ ಈ ಬೆನ್ನು ಹುರಿಯು ಕಶೇರುಸ್ತಂಭವಾಗುತ್ತದೆ. ಆದರೆ ಆದಿ ಕಾರ್ಡೇಟುಗಳಲ್ಲಿ (ಪ್ರೋಟೊಕಾರ್ಡೇಟ) ಹಾಗೂ ಏಗ್ನಾಥಗಳಲ್ಲಿ ಈ ಬೆನ್ನು ಹುರಿಯು ಜೀವಿಯ ಪ್ರೌಢಾವಸ್ಥೆಯಲ್ಲಿಯೂ ಮುಂದುವರೆಯುತ್ತದೆ. ಭ್ರೂಣದ ಬೆಳವಣಿಗೆಯಲ್ಲಿ ಬೆನ್ನು ಹುರಿಯ ಸುತ್ತಲೂ ಇರುವ ಮಧ್ಯದರ್ಮದ ತನುಕಂಪಳದ (ಮೀಸೊಡರ್ಮಲ್ ಸೋಮೈಟ್ಸ್) ಒಳಪದರಿನಿಂದ ಕೆಲವು ಜೀವಕೋಶಗಳು ಬೆಳೆಯತೊಡಗಿ ಬೆನ್ನುಹುರಿಯ ಸುತ್ತಲೂ ಆವರಿಸುತ್ತವೆ. ಈ ಪದರವನ್ನು ಸೆಲಿಟೊಜೀನಸ್ ಪದರವೆಂದೂ ಈ ಪದರದ ಜೀವಕೋಶಗಳನ್ನು ಕಾಂಡ್ರೋಬ್ಲಾಸ್ಟ್‌ಗಳೆಂದೂ ಕರೆಯುತ್ತೇವೆ. ಈ ಪದರದ ಮೇಲ್ಭಾಗದಲ್ಲಿ ನರಕಮಾನು ಹಾಗೂ ಕೆಳಭಾಗದಲ್ಲಿ ರಕ್ತಕಮಾನೂ ರಚನೆಯಾಗುತ್ತವೆ. ಒಂದೊಂದು ಸ್ನಾಯುಪಡೆಯ (ಮಯೊಟೋಮ್) ಖಂಡಕ್ಕೆ ಪ್ರತಿಯಾಗಿ ಒಂದೊಂದು ಕಾಂಡ್ರೋಬ್ಲಾಸ್ಟ್‌ಗಳ ಖಂಡಗಳು ಇರುತ್ತವೆ. ಈ ಕಾಂಡ್ರೋಬ್ಲಾಸ್ಟಿನ ಖಂಡಗಳಿಗೆ ಸ್ಕಿರೋಟೋಮ್‌ಗಳೆಂದು ಹೆಸರು. ಪ್ರತಿಯೊಂದು ಸ್ಕ್ಲೀರೋಟೊಮ್ ಖಂಡವೂ ಮಧ್ಯಭಾಗದಲ್ಲಿ ಸೀಳಿ ಎರಡು ಖಂಡವಾಗುತ್ತವೆ. ಇದರಲ್ಲಿ ಮುಂದಿನ ಖಂಡವು ಸಡಿಲವಾಗಿದ್ದರೆ ಹಿಂದಿನದು ದಟ್ಟವಾಗಿರುತ್ತದೆ. ಮುಂದಿನ ಖಂಡಕ್ಕೆ ಸ್ಕ್ಲೀರೋಟೋಮಿನ ತಲೆಯ ಭಾಗವೆಂದೂ

ಹಿಂದಿನ ಖಂಡಕ್ಕೆ ಸ್ಕ್ಲೀರೋಟೊಮಿನ ಬಾಲದ ಭಾಗವೆಂದೂ ಕರೆಯುತ್ತಾರೆ. ಒಂದು ಸ್ಕ್ಲೀರೋಟೊಮಿನ ಬಾಲದ ಭಾಗ ಅದರ ಹಿಂದಿರುವ ಸ್ಕ್ಲೀರೊಟೋಮಿನ ತಲೆಯ




ಕಪ್ಪೆಯ ಬೆನ್ನುಹುರಿ
ಅ. ಮೇಲ್ಭಾಗ, ಆ. ಅಧೋಭಾಗ

ಭಾಗದ ಜೊತೆಗೂಡಿ ಕಶೇರುಮಣಿಯ ರಚನೆಯಾಗುತ್ತದೆ. ಹೀಗೆ ಪ್ರತಿಯೊಂದು ಕಶೇರುಮಣಿಯಲ್ಲಿಯೂ ಮುಂದಿನ ಭಾಗ, ಮುಂದಿನ ಸ್ಕ್ಲೀರೋಟೊಮಿನ ಹಿಂಭಾಗವಾಗಿದ್ದರೆ ಅದರ ಹಿಂದಿನ ಭಾಗ, ಅದರ ಹಿಂದಿದ್ದ ಸ್ಕ್ಲೀರೋಟೊಮಿನ ಮುಂಭಾಗವಾಗಿರುತ್ತದೆ. ಹೀಗಾಗುವುದರಿಂದ ಪ್ರತಿಯೊಂದು ಸ್ನಾಯುಪಡೆಯೂ ಎರಡು ಕಶೇರುಮಣಿಗಳಿಗೆ ಅಂಟಿಕೊಂಡಿರುತ್ತದೆ. ಈ ರಚನೆಯು ಕಶೇರುಸ್ತಂಭದ ಚಲನೆಯಲ್ಲಿ ಸಹಾಯಮಾಡುತ್ತದೆ.

ಪ್ರತಿಯೊಂದು ಸ್ಕ್ಲೀರೋಟೊಮಿನಲ್ಲಿಯೂ ಜೋಡಿಯಾದ ಮೃದ್ವಸ್ಥಿ ರಚನೆಗಳು ರೂಪುಗೊಳ್ಳುತ್ತವೆ. ಒಂದೊಂದು ಸ್ಕ್ಲೀರೋಟೊಮಿನಲ್ಲಿ ನಾಲ್ಕು ಜೊತೆ ಮೃದ್ವಸ್ಥಿ ರಚನೆಗಳಿರುತ್ತವೆ. ಇವಕ್ಕೆ ಆಕ್ಯುಯೇಲಿಯಗಳೆಂದು ಹೆಸರು. ಇವುಗಳಲ್ಲಿ ಎರಡು ಜೊತೆ ಮೇಲ್ಭಾಗದಲ್ಲಿಯೂ ಎರಡು ಜೊತೆ ಕೆಳಭಾಗದಲ್ಲಿಯೂ ಇರುತ್ತವೆ. ಮೇಲ್ಭಾಗದ ಎರಡು ಜೋಡಿಯಲ್ಲಿ ಒಂದು ಜೋಡಿ ಸ್ಕ್ಲೀರೋಟೊಮಿನ ಮುಂಭಾಗದಲ್ಲಿಯೂ ಹಾಗೂ ಮತ್ತೊಂದು ಜೋಡಿ ಸ್ಕ್ಲೀರೋಟೊಮಿನ ಹಿಂಭಾಗದಲ್ಲಿಯೂ ಇರುತ್ತವೆ. ಮುಂಭಾಗದಲ್ಲಿರುವ ಜೋಡಿಗೆ ಇಂಟರ್‌ಡಾರ್ಸಲ್ ಎಂದೂ ಹಿಂಭಾಗದಲ್ಲಿರುವ ಜೋಡಿಗೆ ಬೇಸಿಡಾರ್ಸಲ್ ಎಂತಲೂ ಕರೆಯುತ್ತಾರೆ. ಇದೇ ರೀತಿ ಕೆಳಭಾಗದಲ್ಲಿ ಇಂಟರ್‌ವೆಂಟ್ರಲ್ ಮತ್ತು ಬೇಸಿವೆಂಟ್ರಲ್‌ಗಳು ಇರುತ್ತವೆ. ಬೇಸಿಡಾರ್ಸಲ್ ಮತ್ತು ಬೇಸಿವೆಂಟ್ರಲ್‌ಗಳು ಇಂಟರ್‌ಡಾರ್ಸಲ್ ಮತ್ತು ಇಂಟರ್‌ಮೆಂಟ್ರಲ್‌ಗಳಿಗಿಂತ ದೊಡ್ಡದಾಗಿರುತ್ತವೆ. ಬೇಸಿಡಾರ್ಸಲ್‌ಗಳು ನರಕಮಾನಿನ ರಚನೆಯಲ್ಲಿಯೂ ಬೇಸಿವೆಂಟ್ರಲ್‌ಗಳು ರಕ್ತ ಕಮಾನಿನ ರಚನೆಯಲ್ಲಿಯೂ ಪಾಲ್ಗೊಳ್ಳುತ್ತವೆ. ಈ ಎಲ್ಲ ರಚನೆಗಳಿಂದ ಜೀವಕೋಶಗಳು ಬೆನ್ನು ಹುರಿಯ ಹೊರ ಪದರದೊಳಕ್ಕೆ ನುಗ್ಗಿ ಸೆಂಟ್ರಮ್ ರಚಿತವಾಗುತ್ತದೆ.

ಸಾಮಾನ್ಯವಾಗಿ ಕೆಲವು ಕೆಳವರ್ಗದ ಕಶೇರುಕಗಳಲ್ಲಿ (ಮೀನುಗಳು) ಮತ್ತು ನಶಿಸಿ ಹೋದ ದ್ವಿಚರಿಗಳಲ್ಲಿ ಹೈಪೊಸೆಂಟ್ರಮ್ ಮತ್ತು ಪ್ಲೂರೊಸೆಂಟ್ರಮ್‌ಗಳು ಸೆಂಟ್ರಮ್‌ನ ರಚನೆಯಲ್ಲಿ ಭಾಗವಹಿಸುತ್ತವೆ. ಆದರೆ ದ್ವಿಚರಿಪ್ರಾಣಿಗಳಲ್ಲಿ ಹೈಪೊಸೆಂಟ್ರಮ್ ಮಾತ್ರ ಸೆಂಟ್ರಮ್ ರಚನೆಯಲ್ಲಿ ಪಾಲ್ಗೊಳ್ಳುತ್ತದೆ. ಪ್ಲೂರೊಸೆಂಟ್ರಮ್ ನಶಿಸಿಹೋಗುತ್ತದೆ. ಸರೀಸೃಪ, ಪಕ್ಷಿ ಹಾಗೂ ಸ್ತನಿಗಳಲ್ಲಿ ಪ್ಲೂರೊಸೆಂಟ್ರಮ್ ಮಾತ್ರ ಸೆಂಟ್ರಮ್‌ನ ರಚನೆಯಲ್ಲಿ ಭಾಗವಹಿಸುತ್ತದೆ. ಇವುಗಳಲ್ಲಿ ಹೈಪೊಸೆಂಟ್ರಮ್ ನಶಿಸಿಹೋಗುತ್ತದೆ. (ಎಚ್.ಎಸ್.ವೈ.)

**ಕಸ:** ಹೆರಿಗೆಯಲ್ಲಿ ಶಿಶು ಜನನದ ಅನಂತರ ಗರ್ಭಕೋಶದಲ್ಲಿ ಉಳಿದ ಮಾಸು (ಸತ್ತೆ), ಗರ್ಭಪೊರೆ, ಅಳಿದುಳಿದ ಗರ್ಭಜಲ ತಾನಾಗಿ ಹೊರಬೀಳುತ್ತದೆ. ಎಲ್ಲವನ್ನು ಒಟ್ಟಾಗಿ ಕಸ (ಆಫ್ಟರ್ ಬರ್ತ್) ಎಂದು ಕರೆಯುತ್ತಾರೆ. ಆದರೆ ಕಸ ಎಂದರೆ ಮಾಸು ಎನ್ನುವುದಕ್ಕೆ ಪರ್ಯಾಯವಾಗಿ ಬಳಕೆಯಲ್ಲಿದೆ.

ಮಾಸು ತಾಯಿ ಮಗುವಿನ ನಡುವಿನ ಕೊಂಡಿಯಾಗಿದ್ದು, ಪ್ರಕೃತಿ ರೂಪಿಸಿದ ವಿಶೇಷ ಅಂಗಾಂಶ. ಗರ್ಭಧರಿಸಿದ ಸುಮಾರು ಮೂರು ತಿಂಗಳಿಗೆ (೧೨ ರಿಂದ ೧೪ ವಾರ) ಸಂಪೂರ್ಣ ಕಾರ್ಯ ನಿರ್ವಹಿಸುವ ಶಕ್ತಿ ಪಡೆಯುತ್ತದೆ. ಅದರ ಕಾರ್ಯ ವೈವಿಧ್ಯ ಹಲವು. ದೊಡ್ಡವರಲ್ಲಿ ವಿವಿಧ ಅಂಗಗಳು ನಿರ್ವಹಿಸುವ ಕಾರ್ಯಗಳನ್ನು ಗರ್ಭದಲ್ಲಿರುವ ಶಿಶುವಿಗಾಗಿ ಮಾಸು ಈ ಕೆಳಗಿನಂತೆ ನಿರ್ವಹಿಸುತ್ತದೆ:

೧. ಶಿಶುವಿಗೆ ಶರ್ಕರ, ಪಿಷ್ಟ, ತೈಲಾಂಶಗಳನ್ನು ಸಂಗ್ರಹಿಸುವುದು (ಕರುಳಿನ ಕೆಲಸ)

೨. ಆಮ್ಲಜನಕ ಪೂರೈಸುವುದು, ಇಂಗಾಲದ ಡೈಯಾಕ್ಸೈಡ್ ಹೊರಕಳಿಸುವುದು (ಶ್ವಾಸಕೋಶದ ಕೆಲಸ)

೩. ಹೆಚ್ಚುವರಿ ನೀರು, ಲ್ಯಾಕ್ಟಿಕ್ ಆಮ್ಲ, ಲವಣ ಇತ್ಯಾದಿಗಳನ್ನು ತಾಯಿಯ ರಕ್ತ ಸಂಚಲನಾ ವ್ಯವಸ್ಥೆಗೆ ತಲುಪಿಸುವುದು (ಮೂತ್ರಪಿಂಡದ ಕೆಲಸ)

೪. ಮಗುವಿನ ಬೆಳೆವಣಿಗೆ ಪೂರ್ಣ ಹಂತ ತಲುಪುವಾಗ ಹಾರ್ಮೋನ್‌ಗಳನ್ನು ಉತ್ಪಾದಿಸುವುದು. (ಅಂತಃಸ್ರಾವಕ ಕೆಲಸ)

೫. ಮಗುವಿಗೆ ಅಪಾಯವಾಗಬಲ್ಲ ಸೂಕ್ಷ್ಮ ಜೀವಿಗಳನ್ನು ಹೊರಕವಚದಲ್ಲೇ ತಡೆಯುವುದು. ಆದರೆ ವೈರಾಣುಗಳನ್ನು ಸೋಸಲು ಸಾಧ್ಯವಿಲ್ಲ. (ರಕ್ಷಣಾ ಕವಚ)

೬. ತಾಯಿಯ ಶರೀರದಲ್ಲಿ ಉತ್ಪತ್ತಿಯಾಗುವ ಪ್ರತಿಕಾಯಗಳನ್ನು ಸೋಸುವುದು. (ಐಜಿಎಮ್ ಗುಂಪಿನ ಪ್ರತಿಕಾಯಗಳು ಮಾಸನ್ನು ದಾಟಲು ಅಸಮರ್ಥ )

ಮಾಸು ಸುಮಾರು ೩–೪ ಸೆಂಮೀ ದಪ್ಪವಾಗಿರುತ್ತದೆ. ೧೫–೧೮ ಸೆಂಮೀ ವ್ಯಾಸದ ವೃತ್ತಕಾರದಲ್ಲಿ ಸ್ಪಂಜಿನಂತಿರುತ್ತದೆ. ೩೦೦ ರಿಂದ ೫೫೦ ಗ್ರಾಂ ತೂಗುತ್ತದೆ. ಸಾಮಾನ್ಯವಾಗಿ ಗರ್ಭಕೋಶದ ಒಳಗೆ ಮೇಲ್ಭಾಗದಲ್ಲಿ ಅಂಟಿಕೊಂಡಿರುತ್ತದೆ. ಇದರ ಅಂಚಿನಿಂದ ಪ್ರಾರಂಭವಾದ ಗರ್ಭಚೀಲ, ಉಲ್ಬಚೀಲ (ಅಮ್ನಿನಿಯಟಿಕ್ ಮೆಮ್ ಬ್ರೇನ್) ಮಗುವನ್ನು ಸುತ್ತಲೂ ಆವರಿಸಿರುತ್ತದೆ. ಹೊಕ್ಕಳ ಬಳ್ಳಿಯೂ ಸಾಧಾರಣವಾಗಿ ಮಾಸಿನ ಮಧ್ಯದಿಂದ ಹಿಡಿದು ಮಗುವಿನ ಹೊಕ್ಕಳಲ್ಲಿ ಕೊನೆಯಾಗುತ್ತದೆ. ಅದರಲ್ಲಿ ಎರಡು ಸಿರೆಗಳೂ (ಅಪಧಮನಿ) ಒಂದು ಅಭಿಧಮನಿಯೂ ಇರುತ್ತದೆ. ಈ ಮೂರು ನಾಳಗಳು ಸುತ್ತಿಕೊಂಡು ಹೆಣೆದ ಹಗ್ಗದಂತೆ ಕಾಣುತ್ತದೆ. ಜನನದ ವೇಳೆಗೆ ೬೦೦–೭೫೦ ಮಿಲೀ ಗರ್ಭಜಲವಿರುತ್ತದೆ.

ವ್ಯತ್ಯಸ್ಥ ಸ್ಥಿತಿಗಳು: ೧. ಪ್ರಿವಿಯಾ: ಸಹಜವಾಗಿ ಗರ್ಭಕೋಶದ ಒಳಗೆ ಮೇಲುಭಾಗದಲ್ಲಿ ಮಾಸು ಅಂಟಿಕೊಂಡಿರುತ್ತದೆ. ಆದರೇ ಗರ್ಭಕೊರಳಿಗೆ, ಮಗುವಿನ ಕೆಳಗೆ ಅಂಟಿಕೊಂಡಿರುವ ಮಾಸು, ಗರ್ಭದ್ವಾರಕ್ಕೆ ಪೂರ್ಣ ಅಡ್ಡವಾಗಿ ಅಂಟಿಕೊಂಡಿದ್ದರೆ ಅದು ಅಪಾಯಕರ. ಪದೇ ಪದೇ ಆಗುವ ರಕ್ತಸ್ರಾವ ತಾಯಿಯನ್ನು, ಮಗುವನ್ನು ಅಪಾಯದ ಅಂಚಿಗೆ ದೂಡುತ್ತವೆ. ಸಹಜ ಹೆರಿಗೆ ಈ ಪರಿಸ್ಥಿತಿಯಲ್ಲಿ ಅಸಾಧ್ಯ. ಸ್ಕ್ಯಾನಿಂಗ್ ಪರೀಕ್ಷೆಯಿಂದ ಈ ಪರಿಸ್ಥಿತಿಯನ್ನು ಬಹುಬೇಗ ಗುರುತಿಸಬಹುದು (೧೪–೨೦ ವಾರ). ಗರ್ಭಿಣಿ ಸ್ತ್ರೀಯು ಪೂರ್ಣ ವಿಶ್ರಾಂತಿಯೊಡನೆ ಕೆಲವು ಔಷಧಿಗಳನ್ನು ಸೇವಿಸಬೇಕಾಗಬಹುದು. ಕೆಲವೊಮ್ಮೆ ಗರ್ಭದ್ವಾರ ಅಗಲವಾಗದೇ ಇರಲು ಹೊಲಿಗೆ ಹಾಕುವ ಅಗತ್ಯ ಇರುತ್ತದೆ. ಮಗುವಿನ ಬೆಳೆವಣಿಗೆಗೆ ೩೫–೩೬ ವಾರಗಳ ಕಾಲ ಮುಗಿದರೆ ಅನುಕೂಲ ಸ್ಥಿತಿಯಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಶಿಶುವನ್ನು ಹೊರತೆರೆಯಬೇಕು. ರಕ್ತಪೂರೈಕೆಯೂ ಅವಶ್ಯಕವಾಗುತ್ತದೆ.

೨. ಅತಿ ತೆಳುವಾಗಿರುವಿಕೆ / ಅತಿ ದಪ್ಪವಾಗಿರುವಿಕೆ : ಸಾಧಾರಣವಾಗಿ ೩–೪ ಸೆಂಮೀ ದಪ್ಪದ ಮಾಸು ಸಹಜವಾದುದ್ದು. ತಾಯಿಗೆ ಮಧುಮೇಹ ಕಾಯಿಲೆ ಇದ್ದರೆ, ತಾಯಿ– ಮಗುವಿನ ರಕ್ತವಿಲೋಮತೆ, ಆಂತರಿಕವಾಗಿ ನಂಜಾಗಿದ್ದರೆ ಮತ್ತು ಗರ್ಭಕೋಶದ ರಕ್ತಪರಿಚಲನೆಗೆ ಏನಾದರೂ ಅಡೆತಡೆ ಇದ್ದರೆ ಅಥವಾ ಮಾಸು ತೆಳುವಾಗಿ ಹರಡಿಕೊಳ್ಳಬಹುದು ಅತಿ ದಪ್ಪವಾಗಿರಬಹುದು.

೩. ಅಕ್ರೀಟಾ: ಗರ್ಭಕೋಶದ ಒಳಪದರಕ್ಕೆ ಅತಿ ಹತ್ತಿರವಾಗಿ ಅಂಟಿಕೊಂಡಿರುವ ಮಾಸು. ಈ ಪರಿಸ್ಥಿತಿಯಲ್ಲಿ ಮಾಸು ಸಹಜವಾಗಿ ಕಳಚಿ ಬರುವುದಿಲ್ಲ. ಹೆರಿಗೆಯಾದ ಮೇಲೆ ಅರ್ಧ ಗಂಟೆಯೊಳಗೆ ಬರಬೇಕಾದ ಮಾಸು ಹೊರಬರದೇ ತಾಯಿ ದೇಹದಿಂದ ಅತಿ ರಕ್ತಸ್ರಾವ ಆಗಬಹುದು. ತಕ್ಷಣವೇ ಹಿರಿಯ ತಜ್ಞರ ನೆರವಿನಿಂದ ಮಾಸನ್ನು ಬಿಡಿಸಿ ಹೊರತರಬೇಕಾಗುತ್ತದೆ. ಸಾಧ್ಯವಾಗದಿದ್ದರೆ ಗರ್ಭಕೋಶಕ್ಕೆ ರಕ್ತ ಪೂರೈಸುವ ನಾಳಗಳನ್ನು ಕಟ್ಟಿ ರಕ್ತ ಹರಿವನ್ನು ನಿಲ್ಲಿಸಬೇಕಾಗುತ್ತದೆ. ಮಾಸು ಹೊರಬಂದಿಲ್ಲ ಎಂದು ಹೊಕ್ಕಳ ಬಳ್ಳಿ ಹಿಡಿದು ಜೋರಾಗಿ ಎಳೆದರೆ ಗರ್ಭಕೋಶವೇ ಹೊರಬೀಳುವ ಪ್ರಸಂಗ ಬರಬಹುದು. ಇದೂ ಕೂಡ ತಾಯಿಯ ಜೀವಕ್ಕೆ ಅತಿ ಅಪಾಯಕಾರಿ. ತಾಯಿ ಮಗುವಿನ ನಡುವಿನ ಭದ್ರಸೇತು ಒಂದಿನಿತು ಹೆಚ್ಚು ಕಡಿಮೆಯಾದರೂ ತಾಯಿಗೆ ಮತ್ತು ಮಗುವಿಗೆ ತೊಂದರೆ ತಪ್ಪಿದ್ದಲ್ಲ.

೪. ಬಸುರಿ ನಂಜು: ಹೆಚ್ಚಿದ ರಕ್ತದೊತ್ತಡ, ಕಾಲುಬಾವು, ಅತಿಕಡಿಮೆ ಮೂತ್ರ ವಿಸರ್ಜನೆ ಕೆಲವೊಮ್ಮೆ ಅದಿರುವಾಯು ಎಲ್ಲ ಲಕ್ಷಣಗಳ ಸಮೂಹ. ಇದಕ್ಕೆ ಇದಮಿತ್ಥಂ

ಎಂಬ ಕಾರಣ ತಜ್ಞರಿಗೆ ಇನ್ನೂ ಸಿಕ್ಕಿಲ್ಲ. ಆದರೆ ಮಾಸಿನಲ್ಲಿಯ ರಕ್ತ ಪೂರಣದ ವ್ಯತ್ಯಾಸವನ್ನು ಎಲ್ಲ ಪ್ರಸಂಗಗಳಲ್ಲಿಯೂ ಗುರುತಿಸಿ ಧೃಢಪಡಿಸಲಾಗಿದೆ. ಈ ಅವ್ಯವಸ್ಥಿತ ಮಾಸು ತಾಯಿಯ ಬಸಿರು ನಂಜಿಗೆ ಕಾರಣ. ರಕ್ತಪೂರಣದಲ್ಲೇಕೆ ಏರುಪೇರಾಗುತ್ತದೆ, ಯಾರಲ್ಲಿ ಆಗುತ್ತದೆ ಎಂದು ಮೊದಲೇ ಕಂಡು ಹಿಡಿಯುವ ವಿಧಾನ ತಿಳಿದರೆ ಎಷ್ಟೋ ಹೆಣ್ಣುಮಕ್ಕಳ ಪ್ರಾಣ ಉಳಿಯುತ್ತದೆ. ಶಿಶುಗಳು ಆರೋಗ್ಯವಾಗಿರುತ್ತವೆ. ***

**ಕಸಾಯಿ ಖಾನೆ:** ಮನುಷ್ಯರಿಗೆ ಮಾಂಸಾಹಾರ ಒದಗಿಸಲು ಪ್ರಾಣಿಗಳನ್ನು ವಧೆ ಮಾಡುವ ಮನೆ (ಸ್ಲಾಟರ್ ಹೌಸ್). ಇದು ಸಾಮಾನ್ಯವಾಗಿ ಊರ ಹೊರಗೆ ಇರುತ್ತದೆ. ಇಂಥ ಮನೆಗೆ ಅಬಾತ್ರೆ ಅಥವಾ ಹೊಡೆದು ಹಾಕು ಎಂಬ ಪದದಿಂದ ಅಸ್ತಿತ್ವಕ್ಕೆ ಬಂದ ಅಬಾಟ್ಯಾರ್ ಎಂಬ ಹೆಸರು ರೂಢಿಯಲ್ಲಿದೆ. ಇಂದಿನ ಕಸಾಯಿ ಖಾನೆಯಲ್ಲಿ ಪ್ರಾಣಿಗಳ ವಧೆಗೆ ಬೇಕಾದ ಆಧುನಿಕ ಉಪಕರಣಗಳನ್ನು ಜೋಡಿಸಿರುತ್ತಾರೆ. ಮಧ್ಯದ ಹಜಾರಿನಲ್ಲಿ ಪ್ರಾಣಿಗಳ ಮುಂಡವನ್ನು ತೂಗುಹಾಕಿ ಅದರಿಂದ ಮಾಂಸವನ್ನು ಬೇರ್ಪಡಿಸುವ ಉಪಕರಣಗಳನ್ನು ಸಜ್ಜು ಮಾಡಿರುತ್ತಾರೆ. ಅದರ ಎದುರು ಭಾಗದಲ್ಲಿ ಶೀತಳ ಗೂಡುಗಳಿರುತ್ತವೆ. ಇವುಗಳಲ್ಲಿ ಮಾಂಸವನ್ನು ದಾಸ್ತಾನು ಮಾಡಿ ಹದ ಮಾಡುತ್ತಾರೆ. ಈ ಹಜಾರದಲ್ಲಿ ಒಂದು ಬಾಗಿಲು ಮಾರುಕಟ್ಟೆಯಿಂದ ತಂದ ದನಗಳ ದೊಡ್ಡಿಗೆ ಹೋಗುತ್ತದೆ. ಕಸಾಯಿ ಖಾನೆಯ ನೆಲ ಎಲ್ಲೆಡೆಯಲ್ಲೂ ನೀರು ಇಂಗದಂತೆ ಹಸನಾಗಿರಬೇಕು. ಅಚ್ಚುಕಟ್ಟಾದ ಚರಂಡಿಗಳಿದ್ದಲ್ಲಿ ನೀರು ನಿಲ್ಲದೆ ಹರಿದು ಒಟ್ಟು ವಾತಾವರಣದ ನೈರ್ಮಲ್ಯಕ್ಕೆ ಸಹಾಯಕವಾಗಿರುತ್ತದೆ. ಎಲ್ಲ ಆಧುನಿಕ ಕಸಾಯಿ ಖಾನೆಗಳಲ್ಲೂ ಒಂದು ಸಣ್ಣ ಪ್ರಯೋಗ ಶಾಲೆ ಇರುತ್ತದೆ. ಇಲ್ಲಿ ಮಾಂಸದ ರೋಗೋತ್ಪತ್ತಿ ಜೀವಾಣುಗಳ ಮತ್ತಿತರ ಗುಣಗಳ ಪರೀಕ್ಷೆ ಮಾಡುವುದು ಸಾಧ್ಯ. ತಿನ್ನುವುದಕ್ಕೆ ಯೋಗ್ಯವಲ್ಲದ ಮಾಂಸವನ್ನು ಉತ್ತಮವಾದ ಮಾಂಸದಾಸ್ತಾನು ಮಾಡಿರುವ ಹಜಾರದಿಂದ ದೂರವಾಗಿ ಬೇರೆ ಸ್ಥಳದಲ್ಲಿ ಶೇಖರಿಸಿರುತ್ತಾರೆ. ಸಾಮಾನ್ಯವಾಗಿ ಕಸಾಯಿ ಖಾನೆಗಳು ಊರಿನ ಹೊರಗೆ, ಸಾಗಾಣಿಕೆಗೆ ಅನುಕೂಲವಾಗಿ, ರೈಲ್ವೆ ನಿಲ್ದಾಣ ಮತ್ತು ಮಾಂಸದ ಮಾರುಕಟ್ಟೆಗಳಿಗೆ ಹಾಗೂ ಅಂಗಡಿಗಳಿಗೆ ಸಮೀಪವಾಗಿರುತ್ತವೆ. ಇದಲ್ಲದೆ ಪ್ರಾಣಿಗಳನ್ನು ವಧೆ ಮಾಡುವ ಮೊದಲು ಅವುಗಳಲ್ಲಿ ಮನುಷ್ಯನಿಗೆ ಹಾನಿಕರವಾದ ರೋಗಗಳಿವೆಯೇ ಎಂಬುದನ್ನು ಪರೀಕ್ಷಿಸಲು ಬೇಕಾದ ಸಲಕರಣೆಗಳು ಮತ್ತು ಸಿಬ್ಬಂದಿ ಆಧುನಿಕ ಕಸಾಯಿ ಖಾನೆಗಳಲ್ಲಿ ಅನಿವಾರ್ಯ. ನೈರ್ಮಲ್ಯದ ದೃಷ್ಟಿಯಿಂದ ಕೊಂದ ಪ್ರಾಣಿಗಳಿಂದ ಒದಗುವ ಮಾಂಸ ಹಾಗೂ ಉಪ ಉತ್ಪನ್ನಗಳಾದ ಚರ್ಮ, ಕೊಂಬು, ಗೊರಸು, ರಕ್ತ, ಗೊಬ್ಬರವಾಗಬಲ್ಲ ಮಾಂಸದ ಕಸ ಇವುಗಳ ವ್ಯವಸ್ಥೆ ಕಾರ್ಯ ಶೀಘ್ರವಾಗಿ ಮಾಡುವ ಅನುಕೂಲ ಕಸಾಯಿ ಖಾನೆಗಳಲ್ಲಿ ಅಗತ್ಯ.

ಭಾರತದಲ್ಲಿ ಕುರಿ, ಆಡು, ಜಾನುವಾರು, ಹಂದಿ ಮುಂತಾದ ಬೇರೆ ಬೇರೆ ಜಾತಿಯ ಪ್ರಾಣಿಗಳಿಗೆ ಪ್ರತ್ಯೇಕ ಕಸಾಯಿ ಖಾನೆಗಳಿರುತ್ತವೆ. ಗೋಮಾಂಸ ತಿನ್ನದ ಜನಕ್ಕೋಸ್ಕರ ಕೇವಲ ಆಡು, ಕುರಿಗಳನ್ನು ಕೊಂದು, ಅವುಗಳ ಮಾಂಸವನ್ನೊದಗಿಸಲು ಕಸಾಯಿ ಖಾನೆಗಳಿವೆ. ಹಾಗೆಯೇ ಹಂದಿ ಮಾಂಸವನ್ನು ತಿನ್ನದ ಜನಗಳ ಅನುಕೂಲಕ್ಕೋಸ್ಕರ ಪ್ರತ್ಯೇಕವಾದ ಹಂದಿಗಳ ಕಸಾಯಿ ಖಾನೆಗಳ ವ್ಯವಸ್ಥೆ ಇದೆ.

ಆಧುನಿಕ ಕಸಾಯಿ ಖಾನೆಗಳಲ್ಲಿ ಪ್ರಾಣಿಗಳ ಮುಂಡವನ್ನು ನೆತ್ತಿಯ ಮೇಲ್ಗಡೆ ಹಾಕಿದ ಕಂಬಿಗಳ ಸಹಾಯದಿಂದ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವ ಏರ್ಪಾಟಿರುತ್ತದೆ. ಹಾಗೆಯೇ, ಉಪ ಉತ್ಪನ್ನಗಳನ್ನು ತಂತಿ ಬುಟ್ಟಿಗಳು ಇಲ್ಲವೆ ಕಡಾಯಿಗಳ ಮೂಲಕ ಸಾಗಿಸುತ್ತಾರೆ. ಇವುಗಳಲ್ಲದೆ, ಬೇಸಿಗೆಯಲ್ಲಿ ಉಪಯೋಗಕ್ಕೋಸ್ಕರ ಶೀತಾಗಾರದ ವ್ಯವಸ್ಥೆ ಇರುತ್ತದೆ. ಚರ್ಮ ಸುಲಿದ ಮುಂಡಗಳನ್ನು ಒಂದು ಸ್ಥಳದಿಂದ ಇನ್ನೊಂದು ಊರಿಗೆ ಸಾಗಿಸುವುದಕ್ಕೂ ಶೀತಳ ವ್ಯವಸ್ಥೆ ಅಗತ್ಯ.

ಉಪೋತ್ಪನ್ನಗಳು: ಆಹಾರಯೋಗ್ಯ ಮಾಂಸ ಕಸಾಯಿ ಖಾನೆಯ ಪ್ರಧಾನ ಉತ್ಪನ್ನ. ಉಪೋತ್ಪನ್ನಗಳಲ್ಲಿ ಮುಖ್ಯವಾದವು ತೊಗಲು ಮತ್ತು ಕೊಬ್ಬು, ಪ್ರಾಣಿ ರಕ್ತ, ಗ್ರಂಥಿಗಳು, ಕರುಳು, ಮೂಳೆ. ಇವೆಲ್ಲವುಗಳಿಗೆ ವಿಶಿಷ್ಟವಾದ ಉಪಯೋಗಗಳಿವೆ. ***

**ಕಸಿಮಾಡುವಿಕೆ, ಅಂಗಾಂಶದ ಮತ್ತು ಅಂಗದ:** ಮೈಯಲ್ಲಿ ಎಲ್ಲಾದರೂ ಕೊರೆಯಾಗಿರುವ, ಕೆಲಸಗೆಟ್ಟಿರುವ, ಹಾಳಾಗಿರುವ ಊತಕ ಇಲ್ಲವೇ ಅಂಗದ ಬದಲಾಗಿ ಒಂದು ಜೀವಿಯ ಬೇರೆಡೆಯಿಂದಲೋ, ಅದೇ ಜಾತಿಯ ಬೇರೆ ಜೀವಿಯಿಂದಲೋ ಬೇರೆ ಜಾತಿಯ ಪ್ರಾಣಿಯಿಂದಲೋ ಊತಕ ಇಲ್ಲವೇ ಅಂಗವನ್ನು ನಾಟಿ ಹಾಕುವಿಕೆ (ಗ್ರಾಫ್ಟಿಂಗ್, ಟ್ರಾನ್ಸ್‌ಪ್ಲಾಂಟೇಷನ್). ನಾಟಿ ಕೆಲಸ ಪ್ರಪಂಚದಲ್ಲಿ ಎಲ್ಲೆಲ್ಲೂ ಎಡೆ ಬಿಡದೆ ನಡೆದೇ ಇರುತ್ತದೆ. ಹೂಗಳಲ್ಲಿ ಪರಾಗದಾನವು ಪ್ರಾಣಿಗಳಲ್ಲಿ ಅಂಡಾಣು ರೇತುಕಣಗಳು ಕೂಡಿ ಫಲವಂತವಾಗುವುದೂ ಜೀವಿರಸದ (ಪ್ರೋಟೊಪ್ಲಾಸ್ಮ್) ನಾಟಿಗೆ ಉದಾಹರಣೆಗಳು.

ಜೀವಿಯ ದೇಹದ ಒಂದು ಭಾಗವನ್ನು ತೆಗೆದು ಅದೇ ಜೀವಿಗೆ ನಾಟಿ ಹಾಕಿದಲ್ಲಿ ಅದನ್ನು ತನ್ನ ನಾಟಿ (ಆಟೋಗ್ರಾಫ್ಟ್, ಆಟೋಟ್ರಾನ್ಸ್‌ಪ್ಲಾಂಟ್) ಎನುತ್ತೇವೆ. ರಕ್ತ ಪೂರೈಕೆ, ಪುಷ್ಟಿ ಸಾಕಷ್ಟು ಸಿಗುತ್ತಿರುವ ತನಕ ಇದು ಬದುಕಿರುತ್ತದೆ. ಇಡೀ ಚರ್ಮ ಇಲ್ಲವೇ ಚರ್ಮದ ತೆಳುಪದರಗಳ ಚೂರುಗಳನ್ನು ಕೊಯ್ದು ತೆಗೆದು, ಚರ್ಮ ಕಿತ್ತು ಹೋಗಿರುವ ಕಡೆ ಎಲ್ಲಾದರೂ ಸರಿಯೆ ನಾಟಿ ಹಾಕಬಹುದು. ಬೇಗನೆ ಹೊಸ ರಕ್ತನಾಳಗಳು ಅದರಲ್ಲಿ ಹುಟ್ಟಿಕೊಳ್ಳುತ್ತವೆ. ಪೂರಾ ಚರ್ಮ, ಚರ್ಮದಡಿಯ ಊತಕಗಳನ್ನು ಮೈಯಲ್ಲಿ ಬೇರೆಡೆ ನಾಟಿ ಹಾಕಿದಾಗ, ಅಲ್ಲಿ ಹೊಸ ರಕ್ತನಾಳಗಳು ಬೆಳೆದುಕೊಳ್ಳುವ ತನಕವಾದರೂ ಮೂಲ ಜಾಗದ ರಕ್ತನಾಳಗಳ ಸಂಬಂಧ ಕಡಿಯದಂತೆ ನೋಡಿಕೊಳ್ಳಬೇಕು. ಅಂಗಗಳನ್ನು ನಾಟಿ ಹಾಕಬೇಕಾದರೂ ಅಷ್ಟೇ. ಇಲ್ಲವಾದರೆ, ಹೊಸ ಜಾಗದಲ್ಲಿನ ರಕ್ತನಾಳಗಳ ಧಮನಿ, ಸಿರಗಳನ್ನು ಅಂಗದಲ್ಲಿ ಇರುವವಕ್ಕೆ ಜೋಡಿಸಿ ಹೊಲಿಯಬೇಕಾಗುತ್ತದೆ. ಎಂದಿನಂತೆ ಕೆಲಸ ನಡೆಸುತ್ತಿರಲು ನರಗಳನ್ನೂ ಕೂಡಿಸಿರಬೇಕು.

ಬದಲಿ ಅಂಗಗಳ ನಾಟಿಯಲ್ಲಿ ಮೂತ್ರಪಿಂಡದ ಬಳಕೆಯಿಂದ ಎಷ್ಟೋ ಮಂದಿಗೆ ಪ್ರಾಣದಾನವಾಗಿದೆ. ಇತ್ತೀಚೆಗೆ, ಮುಖ್ಯವಾಗಿ ಮೈಯಲ್ಲಿ ಒಂಟಿ ಅಂಗಗಳಾಗಿರುವ ಗುಂಡಿಗೆ, ಈಲಿ, ಮಾಂಸಲಿಗಳಲ್ಲದೆ, ಸಣ್ಣ ಕರುಳುಗಳನ್ನೂ ಫುಪ್ಫುಸಗಳನ್ನೂ ನಾಟಿ ಹಾಕುವ ಯತ್ನಗಳಾಗಿವೆ. ಇವನ್ನು ನಾಟಿ ಹಾಕುವುದು ಕೈಗೂಡಿದ್ದರೂ ಹಾಕಿದವನ್ನು ಎಂದಿನಂತೆ ಉಳಿಯಬಿಡದೆ ದಾನಪಡೆದ ಮೈ ತಳ್ಳಿಹಾಕುತ್ತದೆ. ತನ್ನದಲ್ಲದ ಹೆರ ವಸ್ತುವಿಗೆ ಹೊಂದಿಕೊಳ್ಳದ ಗುಣವಾದ ಮರೆವಣಿಯೇ (ಇಮ್ಯೂನಿಟಿ) ಇದರ ಕಾರಣ. ಮರೆವಣೆಯನ್ನು ಅಣಗಿಸಿಡುವ ಇಂದಿನ ಮದ್ದುಗಳಿಂದ ಅಂಗನಾಟಿಗಳನ್ನು ಉಳಿಸಿಕೊಳ್ಳುವುದು ಸಾಧ್ಯ.

ಒಂದೇ ಜಾತಿಗೆ ಸೇರಿರುವ ಇನ್ನೊಂದು ಜೀವಿಯಿಂದ ಪಡೆದ ನಾಟಿಗೆ ಸರಿಜಾತಿ ನಾಟಿ (ಹೋಮೊಟ್ರಾನ್ಸ್‌ಪ್ಲಾಂಟ್, ಹೋಮೊಗ್ರಾಫ್ಟ್) ಎಂದು ಹೆಸರು. ದಾನವಾಗಿ ಪಡೆದ ಸರಿಜಾತಿ ನಾಟಿಗಳು, ಸಾಧಾರಣವಾಗಿ ಪಡೆದವರಲ್ಲಿ ಮರೆವಣೆಯನ್ನು ಚೋದಿಸುವುದರಿಂದ ಕೆಲವೇ ದಿನಗಳಲ್ಲೋ ವಾರಗಳಲ್ಲೋ ಸಾಯುತ್ತವೆ. ರಕ್ತ ನಾಳಗಳ ಒಳಪೊರೆ (ಎಂಡೊತೀಲಿಯಂ) ಹಾಳಾಗಿ ರಕ್ತ ಪೂರೈಕೆಗೆ ಅಡ್ಡಿಯಾಗುವುದೇ ಮುಖ್ಯ ಕಾರಣ. ಆ ದಾನಿಯಿಂದಲೇ ಪಡೆದ ಇನ್ನೊಂದು ನಾಟಿಯನ್ನು ಹಾಕಿದಾಗ ಮೊದಲಿನದಕ್ಕಿಂತ ಬೇಗನೆ ಹಾಳಾಗುವುದರಿಂದ ಇದು ಮರೆವಣೆಯ ವರ್ತನೆ ಎನ್ನುವುದು ಖಚಿತವಾಯಿತು. ಅಲ್ಲದೆ, ನಾಟಿ ಮೊದಲಿದ್ದ ಜಾಗದ ಹಾಲುರಸ (ಲಿಂಫ್) ಹರಿಯುತ್ತಿದ್ದ ಹಾಲುರಸ ಗಂಟುಗಳಿಂದ (ನೋಡ್ಸ್) ತೆಗೆದ ಜೀವಕಣಗಳನ್ನು ನಾಟಿ ಪಡೆವ ಪ್ರಾಣಿಗೆ ಹಾಕಿ, ಈ ಗುಣವನ್ನು ಇನ್ನೊಂದು ಜೀವಿಗೆ ಸಾಗಿಸಬಹುದಾದ್ದರಿಂದ ಇದಿನ್ನೂ ಖಚಿತವಾಯಿತು. ಈ ಪ್ರತಿಕ್ರಿಯೆಗೆ ಸಂಬಂಧಿಸಿದ ರೋಧಜನಕಗಳು (ಆ್ಯಂಟಿಜೆನ್ಸ್) ಜೀವಕೋಶಗಳ ಕೋಶಕೇಂದ್ರಗಳಲ್ಲಿ (ನ್ಯೂಕ್ಲಿಯೈ) ಇರುತ್ತವೆ. ಈ ರೋಧಜನಕಗಳು ಸಂಮಿಶ್ರ ಲೋಳೆ ಪಾಲಿಸ್ಯಾಕರೈಡುಗಳು. ಕೋಶಕೇಂದ್ರವಿರುವ ಎಲ್ಲ ಜೀವಕೋಶಗಳಲ್ಲೂ ಇರುವ ಇವಕ್ಕೆ ಜೀನ್‌ಗಳ ಸಂಬಂಧವಿದೆ. ನಾಟಿ ಪಡೆವ ಪ್ರಾಣಿಯ ರಸಿಕೆಯಲ್ಲಿ (ಸೀರಂ) ಕೆಲವೇಳೆ ರೋಧಜನಕಗಳಿರುತ್ತವೆ. ಆದರೆ ಸರಿಜಾತಿ ನಾಟಿಗಳನ್ನು ಹಾಳುಗೆಡಿಸುವವು ಮಾತ್ರ ಚುರುಕಾಗಿಡಾಗುವ ಹಾಲುರಸಕಣಗಳ (ಲಿಂಫೊಸೈಟ್ಸ್) ಮೂಲಕ ಸಾಗುತ್ತವೆ. ಕಾರ್ಟಿಸೋನ್ ಮದ್ದುಗಳಿಂದ ಸರಿಜಾತಿ ನಾಟಿಗಳು ಕೂಡಲೇ ಸಾಯದ ಹಾಗೆ ಇರಿಸಬಹುದು.

ಸರಿಜಾತಿನಾಟಿಗಳಿಗೆ ಯಾವ ತೊಡಕೂ ಇಲ್ಲದೆ ನಾಟಿ ಹಾಕಿದೆಡೆ ಬದುಕುಳಿವ ಸಂದರ್ಭಗಳಿವು: ಪಡೆವವನೂ ದಾನಿಯೂ ಅವಳಿ ಇಲ್ಲವೇ ಒಂದೇ ಕುಟುಂಬದ ರಕ್ತಸಂಬಂಧಿಯಾಗಿರಬೇಕು; ಕೋಡುಪೊರೆ (ಕಾರ್ನಿಯ), ಮೆಲ್ಲೆಲುಬುಗಳ ಹಾಗೆ ರಕ್ತನಾಳಗಳೇ ಇಲ್ಲದ ಊತಕಗಳಾಗಿರಬೇಕು; ಸ್ಟಿರಾಯ್ಡ್ ಮದ್ದುಗಳನ್ನು ಹೆಚ್ಚೆಚ್ಚಾಗಿ ಕೊಡುತ್ತಿರಬೇಕು; ಮುಂದೆ ನಾಟಿಯ ದಾನಿಯಾಗುವವನ ಬದುಕಿರುವ ಜೀವಕಣಗಳನ್ನು ನಾಟಿಯನ್ನು ಪಡೆವ ಪ್ರಾಣಿಗೆ ಅದು ಗರ್ಭದಲ್ಲೇ ಇರುವಾಗಲೋ ಹುಟ್ಟಿದ ಕೂಡಲೇ ಚುಚ್ಚಿದ್ದರಿಂದ ಅದರ ಊತಕಗಳಿಗೆ ಹೊಂದಿಕೊಂಡಿರಬೇಕು; ನಾಟಿಯನ್ನು ಪಡೆವ ಪ್ರಾಣಿಯ ಇಡೀ ಮೈಯನ್ನು ವಿಕಿರಣತೆಗೆ ಒಡ್ಡಿರಬೇಕು; ಬೇರೆಡೆ ಹಾಕಿರುವ ನಾಟಿಯಿಂದ ರಸಗಳೂ ಪುಷ್ಟಿ ವಸ್ತುಗಳೂ ತೂರಿಹರಿವಂತೆ ಬಿಟ್ಟು ಅದರ ಜೀವಕೋಶಗಳನ್ನು ಮಾತ್ರ ತಡೆವಂತೆ ತೂತುಪದರ ಪೊರೆ ಅಡ್ಡವಾಗಿರಬೇಕು. ಬೇರೆ ಬೇರೆ ಲಿಂಗದ ಅವಳಿಗಳಲ್ಲಿ ಒಬ್ಬನಿಂದೊಬ್ಬನಿಗೆ ತೆಗೆದು ಬದಲಿಸಿದ ನಾಟಿ ಕೆಲಕಾಲ ಮಾತ್ರ ಬದುಕಿರುತ್ತದೆ. ದನಗಳಲ್ಲೂ ಅಪೂರ್ವವಾಗಿ ಮಾನವನಲ್ಲೂ ಗರ್ಭದಲ್ಲಿದ್ದಾಗ ಬೇರೆ ಬೇರೆ ಲಿಂಗಗಳ ಅವಳಿಗಳ ರಕ್ತ ಒಂದಕ್ಕೊಂದು ಬೆರೆಯಬಹುದು. ಹಾಗಾದಾಗ ಒಂದೊಂದರಲ್ಲೂ ಎರಡೂ ವರ್ಗಗಳ ಕೆಂಪು ರಕ್ತಕಣಗಳು ಇರುವುದರಿಂದ, ಅಂಥ ಅವಳಿಗಳಲ್ಲಿ ಒಂದಕ್ಕೊಂದು ಬದಲಿ ನಾಟಿ ಹಾಕಿದರೂ ಸಾಯದೆ ಉಳಿದಿರುತ್ತವೆ.

ವಯಸ್ಕರ ರಕ್ತ ಹುಟ್ಟಿಸುವ ಮೂಳೆ ಮಜ್ಜೆಯಂಥ ಊತಕವನ್ನು ಸರಿಜಾತಿ ನಾಟಿಯಾಗಿ ಎಳೆಯ ಪ್ರಾಣಿಗೆ ಹಾಕಿದರೆ ಗುಜ್ಜಾರಿ ಆಗುತ್ತದೆ. ಬೆಳೆವಣಿಗೆ ಕುಗ್ಗಿ ಉಚ್ಚಾಟವಾಗಿ ಕೆಲವೇಳೆ ಸಾಯಬಹುದು. ವಿಕಿರಣತೆಗೀಡಾದ ಬೆಳೆದಿರುವ ಪ್ರಾಣಿಗೆ ನಾಟಿ ಹಾಕಿದರೂ ಅದೇ ತೆರನ ದ್ವಿತೀಯಕದ (ಸೆಕಂಡರಿ) ರೋಗ ತಲೆದೋರಬಹುದು. ನಾಟಿಯನ್ನು ಪಡೆವ ಪ್ರಾಣಿಯ ಎದುರಾಗಿ ನಾಟಿಹಾಕಿದ ಕೆಲವು ಜೀವಕೋಶಗಳ ಮರೆವಣೆಯ ಪರಿಣಾಮವಿದೆಂದು ತೋರುತ್ತದೆ.

ತನ್ನದಲ್ಲದ ಬೇರೆ ಜಾತಿಯಿಂದ ತಂದ ಊತಕ ಇಲ್ಲವೇ ಅಂಗಕ್ಕೆ ಹೆರಜಾತಿನಾಟಿ (ಅಲ್ಲೋಗ್ರಾಫ್ಟ್, ಹೆಟಿರೋಟ್ರಾನ್ಸ್‌ಪ್ಲಾಂಟ್) ಎಂದು ಹೆಸರಿದೆ. ಈ ನಾಟಿಯನ್ನು ಹಾಕಿದ ಮೇಲೆ ಸಾಮಾನ್ಯವಾಗಿ ಉಳಿಯದೆ ಸಾಯುವುದು. ಇದೂ ಮರೆವಣೆಯನ್ನು ಕೆರಳಿಸುತ್ತದೆ. ಜೀವಕಣಗಳಿಗೆ ಸಾಧಾರಣವಾಗಿ ವಿಷಕರವಾಗುವ ರೋಧವಸ್ತುಗಳು (ಆಂಟಿಬಾಡೀಸ್) ನಾಟಿ ಪಡೆವವನ ರಸಿಕೆಯಲ್ಲಿ ಇರುವುದನ್ನು ತೋರಿಸಬಹುದು. ಇಷ್ಟಾದರೂ ಕೆಲವು ಗೊತ್ತಾದ ಅಂಗಗಳಲ್ಲಿ ಗಂತಿಯ (ಟ್ಯೂಮರ್) ಹೆರಜಾತಿನಾಟಿಗಳು ಬದುಕಿ ಉಳಿಯಬಹುದು.

ಚರ್ಮ, ಎಲುಬು, ಮೆಲ್ಲೆಲುಬುಗಳ ಬಿಡಿ ತನ್ನನಾಟಿಗಳನ್ನು ಮುಖ್ಯವಾಗಿ ಸುರೂಪಿಕ ಶಸ್ತ್ರವೈದ್ಯ (ಪ್ಲಾಸ್ಟಿಕ್ ಸರ್ಜನ್) ಅಡ್ಡಿ ಆತಂಕಗಳಿಲ್ಲದೆ ಧಾರಾಳವಾಗಿ ಹಾಕುವುದುಂಟು. ಆಳವಾಗಿ ಸುಟ್ಟಿದ್ದರಿಂದ ಆಗುವ ಗಾಯಗಳ ಚಿಕಿತ್ಸೆಯಲ್ಲಿ ಚರ್ಮದ ನಾಟಿಗಳ ಬಳಕೆ ಹೆಚ್ಚು ಚಾಲ್ತಿಯಲ್ಲಿದೆ. ಚರ್ಮದ ಒಂದು ತೆಳುಪದರವನ್ನು ಮಾತ್ರ ಎತ್ತಿಕೊಳ್ಳುವುದರಿಂದ ದಾನಿಯ ಚರ್ಮಕ್ಕೆ ಹಾನಿ ತಟ್ಟದೆ ವಾಸಿಯಾಗುತ್ತದೆ. ಅರಿವಿನ ಇಡೀ ಸಣ್ಣ ನರಗಳ ತಿರಿಗಳನ್ನು ತೆಗೆದು ಹುರಿಗಟ್ಟಿ ಕೆಲವೇಳೆ ನಾಟಿ ಹಾಕುವುದುಂಟು. ಏಡಿಗಂತಿ ಎದ್ದಿರುವ ರೋಗಿಗಳಿಗೆ ವಿಕಿರಣರೋಗಚಿಕಿತ್ಸೆ (ರೇಡಿಯೊತೆರಪಿ) ಹಲವೇಳೆ ಮಿತಿಮೀರಿ ಕೊಡಬೇಕಾಗಿರುವ ಮುಂಚೆ, ಅವನ ಮೂಳೆಯ ಮಜ್ಜೆಯನ್ನು ತೆಗೆದು ಇರಿಸಿಕೊಂಡಿದ್ದು ಅದೇ ರೋಗಿಗೆ ಅದನ್ನು ತನ್ನನಾಟಿಯಾಗಿ ಕೊಡುವುದುಂಟು. ಏಡಿಗಂತಿ ಎದ್ದಿರುವುದಕ್ಕಾಗಿ ಕೆಟ್ಟಿರುವ ಭಾಗವನ್ನು ಕೊಯ್ದು ಹಾಕಿದಮೇಲೆ ಉಳಿದ ಜಠರ, ಕರುಳುಗಳ ತೊಟ್ಟುಗಾಲು (ಪೆಡಿಕಲ್) ಇರುವ ತನ್ನನಾಟಿಗಳನ್ನು ಜೀರ್ಣನಾಳ ಎಂದಿನಂತಾಗುವಂತೆ ಸರಿಪಡಿಸಲು ಹೊಲೆದು ಕೂಡಿಸುವುದುಂಟು. ಮೂತ್ರಮಂಡಲದಲ್ಲಿ ಕೆಲವು ಭಾಗಗಳನ್ನು ತುಂಡರಿಸಿ ತೆಗೆದುಹಾಕಿದಮೇಲೆ ಅದರ ಸಾಗುನಾಳವನ್ನು ಮತ್ತೆ ಎಂದಿನಂತೆ ರೂಪಿಸಲು ಕರುಳುಗಳ ತೊಟ್ಟುಗಾಲುಗಳಿರುವ ತನ್ನನಾಟಿಗಳನ್ನು ಸರಿಸಿ ಹೊಲಿಯುದುಂಟು.

ಕಣ್ಣುಗಳಲ್ಲಿ ಬಿಳಿಯ ಮಚ್ಚೆಗಳು, ಹೂಗಳು, ಶಂಕುವಿನಂತೆ ಚೂಪಾಗಿರುವ ಕಣ್ಗುಡ್ಡೆ ಇವುಗಳ ರೋಗಿಗಳಿಗೆ ಮತ್ತೆ ಕಣ್ಣು ಕಾಣುವಂತೆ ಮಾಡಲು (ನೇತ್ರದಾನ) ಕೊಡುಪೊರೆಯ ಸರಿಜಾತಿನಾಟಿಗಳನ್ನು ತಂದಿಟ್ಟು ಹೊಲೆದಾಗ, ಅವು ಮಂದವಾಗೇ ಇರಲಿ ತೆಳುವಾಗೇ ಇರಲ್ಲಿ ಅವುಗಳೊಳಕ್ಕೆ ರಕ್ತನಾಳಗಳು ಬೆಳೆಯದಿದ್ದಲ್ಲಿ ಮಾತ್ರ ಗಾಜಿನಂತೆ ಪಾರದರ್ಶಕವಾಗಿ (ಟ್ರಾನ್ಸ್‌ಪರೆಂಟ್) ತಿಳಿಯಾಗಿರುತ್ತದೆ. ಚರ್ಮದ ಸರಿಜಾತಿನಾಟಿಗಳು ಕೆಲವೇ ವಾರಗಳು ಬದುಕಿರುವುವಾದರೂ ಮೈಯೆಲ್ಲ ಬೆಂದುಹೋಗಿರುವ ರೋಗಿಗಳಿಗಂತೂ ಅವು ಪ್ರಾಣದಾಯಕ. ರೋಗಿ ಕೊಂಚ ಚೇತರಿಸಿಕೊಂಡಮೇಲೆ ಅವುಗಳ ಬದಲಾಗಿ ತನ್ನನಾಟಿಗಳನ್ನು ಹಾಕಬಹುದು. ಎಲುನೇರ್ಪಿಕ (ಆರ್ತೊಪಿಡಿಕ್) ಶಸ್ತ್ರವೈದ್ಯದಲ್ಲಿ ಎಲುಬಿನ ಸರಿಜಾತಿ ನಾಟಿಗಳು ಬಳಕೆಗೆ ಬರುವುವು. ಹಲವೇಳೆ ಇವುಗಳಲ್ಲಿ ಜೀವವಿರದು. ಬದುಕಿದ್ದರೂ ಹೆಚ್ಚು ಕಾಲ ಉಳಿಯವು. ಆದರೆ ನಾಟಿ ಪಡೆವವನ ಊತಕವೇ ಬೆಳೆಯಲು ಇವು ದಾರಿ ತೋರಿ ನೆರವಾಗುವ ಅಟ್ಟಣಿಗೆ ಆಗಿರುತ್ತವೆ. ಧಮನಿಗಳಂಥ ರಕ್ತನಾಳಗಳ ಸರಿಜಾತಿ ನಾಟಿಗಳನ್ನು ಹಾಕಿದಾಗ ಕೂಡ, ಒಳಗಿಂದಲೇ ಬೆಳೆದು ಬರುವ ಊತಕಕ್ಕೆ ಅಟ್ಟಣಿಗೆ ಮಾತ್ರ ಆಗಿರುವುವು. ಇತ್ತೀಚೆಗೆ ಜೀವಂತ ಧಮನಿಗಳ ಬದಲಾಗಿ ಕೃತಕ ಕೊಳವೆಗಳೇ ಚಾಲ್ತಿಗೆ ಬರುತ್ತಿವೆ. ದಾನಿ ಒಂದೇ ಲಿಂಗದ ಅವಳಿಯಾಗಿದ್ದರೆ ಮಾತ್ರ ಇಡೀ ಮೂತ್ರಪಿಂಡವನ್ನು ಸರಿಜಾತಿ ನಾಟಿಯಾಗಿ ಹಾಕಬಹುದು. ಹಾಗಿಲ್ಲವಾದರೆ, ನಾಟಿ ಹಾಕಿದ್ದು ಕೆಲವು ವಾರಗಳಿಗಿಂತ ಹೆಚ್ಚು ಕಾಲ ಬದುಕುಳಿದು ಕೆಲಸ ಮಾಡದು. ಅಷ್ಟು ದಿನಗಳು ಮಾತ್ರ ಕೃತಕ ಮೂತ್ರಪಿಂಡಯಂತ್ರವನ್ನೇ ರೋಗಿಗೆ ತಗುಲಿಸಿಡುವುದು ಇನ್ನೂ ಸರಳ; ಕಡಿಮೆ ಖರ್ಚಿನದು. ಬಿಳ್ಗಣತೆಯ (ಲ್ಯೂಕೀಮಿಯ), ಏಡಿಗಂತಿಯ ರೋಗಿಗಳಿಗೆ ವಿಕಿರಣರೋಗ ಚಿಕಿತ್ಸೆಯೊಂದಿಗೆ ರಕ್ತವಿಕಾಸಕ ಊತಕವನ್ನು (ಮೂಳೆಯ ಮಜ್ಜೆ) ಸರಿಜಾತಿ ನಾಟಿಯಾಗಿ ನೀಡುವುದು ಸಾಧ್ಯವಾಗಿದೆ.

ಜೀವ ಇರಬೇಕಿಲ್ಲದ ರಕ್ತ, ಎಲುಬು, ಕೋಡುಪೊರೆ, ರಕ್ತನಾಳಗಳ ನಾಟಿಗಳನ್ನು ದಾಸ್ತಾನಾಗಿ ಇಟ್ಟಿರಲು ನೀರ್ಗಲ್ಲಾಗಿಸಿ, ನೀರ್ಗಲ್ಲಲ್ಲಿ ಒಣಗಿಸಿ, ಇಲ್ಲವೇ ನಂಜುರೋಧಕಗಳಲ್ಲಿ (ಆಂಟಿಸೆಪ್ಟಿಕ್ಸ್) ಇರಿಸಬೇಕು. ೪° ಸೆ. ಶೈತ್ಯದಲ್ಲಿ ಚರ್ಮದ ನಾಟಿಗಳು ಕೆಲವು ವಾರಗಳೂ, ಗ್ಲಿಸರಾಲಲ್ಲಿ ಅದ್ದಿ–೭೯° ಸೆ. ಶೈತ್ಯಕ್ಕೆ ಇಳಿಸಿದರೆ ಕೆಲವು ತಿಂಗಳೂ ಉಳಿದಿರುತ್ತವೆ. ಏರಿದೊತ್ತಡದ (ಹೈಪರ್‌ಬೇರಿಕ್) ಆಮ್ಲಜನಕದಲ್ಲಿ ಇರಿಸಿದ್ದರೂ ಅನುಕೂಲಕರ. ರಕ್ತನಿಧಿ ಇರುವ ಹಾಗೇ ಪ್ರಾಣ ಉಳಿಸಲು ಬೇಕೆಂದವರಿಗೆ ನೀಡಲು ಬದುಕಿರುವ ಅಂಗನಿಧಿಯನ್ನು ಏರ್ಪಡಿಸುವ ಕಾಲವೂ ಬರಬಹುದು. ಆದರೆ ಇಡೀ ಅಂಗಗಳನ್ನು ನೀರ್ಗಲ್ಲಾಗಿಸಿಯೋ ಅವುಗಳ ಮೂಲಕ ಎಡೆಬಿಡದೆ ರಕ್ತ ಹರಿಸಿಯೋ ಬಹಳ ಕಾಲ ಕೆಡದಂತಿರಿಸುವುದು ಇನ್ನೂ ಕೈಗೂಡಿಲ್ಲ. ಅಂಗಗಳ ಬದಲಿ ನಾಟಿಯ ಮುನ್ನಡೆ ಮುಖ್ಯವಾಗಿ ಶಸ್ತ್ರಕ್ರಿಯೆಯ ತಂತ್ರದಲ್ಲಿ ಆಗುತ್ತಿದೆ. ಮರೆವಣೆಯನ್ನು ಅಣಗಿಸುವ, ಬದುಕಿರುವ ಅಂಗ ಕೆಡದಂತಿರಿಸುವ ವಿಧಾನಗಳು ಇನ್ನೂ ಚೆನ್ನಾಗಬೇಕು. ಬದಲಿ ಅಂಗ ನಾಟಿ ಹಾಕುವುದು ವಿಪರೀತ ಖರ್ಚಿನ ವಿಷಯ. ಹಾಗೆ ಮಾಡುವಾಗ ಬದುಕಿರುವುದರಿಂದ ಅಂಗವನ್ನು ಎತ್ತುಕೊಳ್ಳುವಾಗ ಮಾನವತೆ, ನೀತಿ, ಧರ್ಮಗಳೂ ಇತರ ಪ್ರಶ್ನೆಗಳೂ ಎದುರಾಗುವುವು. ಸತ್ತವರಿಂದ ಅಂಗಗಳನ್ನು ತೆಗೆದು ನಾಟಿ ಮಾಡುವ ಪ್ರಯೋಗಗಳು ಅಲ್ಲಲ್ಲಿ ನಡೆದಿವೆ. ಆದರೆ ಇವಕ್ಕೆ ಎಲ್ಲ ದೇಶಗಳಲ್ಲೂ ಮಾನ್ಯತೆ ಇಲ್ಲ. ಹೀಗಾಗಿ, ಒಬ್ಬನಿಂದ ಜೀವಾಳದ ಅಂಗವನ್ನು ಕಿತ್ತುಕೊಳ್ಳುವುದಾದರೆ, ಸಾವು ಎಂದರೇನು, ಯಾವ ಅಂಗ ಸತ್ತರೆ ಸಾವು, ಇವೆಲ್ಲ ಚರ್ಚಾಸ್ಪದ. ***

**ಕಸಿಮಾಡುವಿಕೆ (ಪ್ರಾಣಿಗಳಲ್ಲಿ):** ಅಂಗಾಂಶದ ಮತ್ತು ಅಂಗದ ಕಸಿ ಮಾಡುವಿಕೆ ಅಥವಾ ನಾಟಿ ಹಾಕುವಿಕೆಯಂತೆಯೇ (ಗ್ರಾಫ್ಟಿಂಗ್, ಟ್ರಾನ್ಸ್ ಪ್ಲಾಂಟೇಷನ್) ಕಪ್ಪೆ, ಇಲಿ ಮುಂತಾದುವುಗಳಲ್ಲೂ ಒಂದು ಪ್ರಾಣಿಯ ದೇಹದ ಒಂದು ಭಾಗದಿಂದ ಇನ್ನೊಂದಕ್ಕೆ ಅಥವಾ ಒಂದು ಪ್ರಾಣಿಯಿಂದ ಇನ್ನೊಂದು ಪ್ರಾಣಿಗೆ ಅಂಗಾಂಶಗಳನ್ನೊ (ಊತಕ), ಅಂಗಗಳನ್ನೊ ತೆಗೆದು ನಾಟಿ ಹಾಕಬಹುದು. ಈ ವಿಧಾನವನ್ನನುಸರಿಸಿ ಮತ್ತೊಂದಕ್ಕೆ ಯಶಸ್ವಿಯಾಗಿ ವಿನಿಮಯ ಮಾಡಲಾಗಿದೆ. ಪ್ರಾಣಿಗಳ ಬೆಳೆವಣಿಗೆಯಲ್ಲಿ ಕೋಶಕೇಂದ್ರ ಯಾವ ಪಾತ್ರ ವಹಿಸುವುದೆನ್ನುವುದರ ಬಗ್ಗೆ ಅರಿಯಲು ಈ ಪ್ರಯೋಗ ಸಹಕಾರಿಯಾಗಿದೆ. ಇದರಂತೆಯೇ ಇಲಿಗಳಲ್ಲಿ ಚರ್ಮದ ಕಸಿ ಮಾಡುವಿಕೆಯ ಬಗ್ಗೆ ಅನೇಕ ಪ್ರಯೋಗಗಳು ನಡೆದಿವೆ. ಕಸಿ ಮಾಡುವಿಕೆಯಲ್ಲಿ ನಾನಾಬಗೆಯ ತೊಂದರೆಗಳು ಹುಟ್ಟುತ್ತವೆ. ಈ ತೊಂದರೆಗಳಲ್ಲಿ ಮುಖ್ಯವಾದುವು ಇವು: ೧. ನಾಟಿ ಹಾಕಿದ ಭಾಗ ರಕ್ತನಾಳಗಳನ್ನು ಬೆಳೆಸಿಕೊಂಡು ತನಗೆ ಬೇಕಾದ ಪೋಷಕವಸ್ತು ಹಾಗೂ ಆಮ್ಲಜನಕವನ್ನು ಪಡೆಯಬೇಕಾಗುವುದು. ೨. ನಾಟಿ ಹಾಕಿದ ಕೆಲವು ದಿನಗಳಲ್ಲೇ ವಿರೋಧಕ್ರಿಯೆಯೊಂದು ಆರಂಭವಾಗಿ ದಾನ ಪಡೆದ ದೇಹ ಈ ಕಸಿಯನ್ನು ವಿಸರ್ಜಿಸುತ್ತದೆ. ಇದಕ್ಕೆ ಮುಖ್ಯ ಕಾರಣ ದಾನ ಪಡೆದ ಪ್ರಾಣಿಯ ರೋಗರಕ್ಷಣಾಕ್ರಮ (ಮರೆವಣಿ): ದೇಹಕ್ಕೆ ಸೇರುವ ಬ್ಯಾಕ್ಟೀರಿಯ ಮುಂತಾದುವುಗಳ ಆಕ್ರಮಣವನ್ನು ಎದುರಿಸಲು ದೇಹ ಪ್ರತಿಕಾಯಗಳನ್ನು (ಆಂಟಿಬಾಡೀಸ್) ಉತ್ಪತ್ತಿ ಮಾಡುವಂತೆಯೇ ನಾಟಿ ಹಾಕಿದ ಭಾಗದ ವಿರುದ್ಧವಾಗಿಯೂ ದಾನಪಡೆದ ಪ್ರಾಣಿಯ ದೇಹ ಪ್ರತಿಕಾಯಗಳನ್ನು ಉತ್ಪತ್ತಿ ಮಾಡುವುದು. ಈಗೀಗ ಬೆಳೆವಣಿಗೆ ಮತ್ತು ಜೀವಕೋಶ ವಿಭಜನೆಯನ್ನು ನಿರೋಧಿಸುವ ಔಷಧಿಗಳಾದ ಇಮ್ಯೂರಾನ್, ಆಕ್ಟಿನೋಮೈಸಿನ್–ಸಿ ಮತ್ತು ಸಂಯೋಜಿಸಲಾದ ಅಂಗವನ್ನು ತ್ಯಜಿಸುವ ಪ್ರತಿಕ್ರಿಯೆಯನ್ನು ನಿರೋಧಿಸುವ ವಸ್ತುವಾದ ಅಡ್ರಿನಲ್ ಗ್ರಂಥಿಯ ಕಾರ್ಟಿಕೋಸ್ಟೀರಾಯಿಡ್ ಹಾರ್ಮೋನುಗಳನ್ನೂ ಹಾಗೂ ಪ್ರತಿಕಾಯ ಉತ್ಪತ್ತಿಯಲ್ಲಿ ಮುಖ್ಯ ಪಾತ್ರ ವಹಿಸುವ ಅಂಗಗಳಾದ ಥೈಮಸ್, ಗುಲ್ಮ ಮತ್ತು ಪಕ್ಷಿಗಳಲ್ಲಿನ ಬರ್ಸ ಫ್ಯಾಬ್ರಿಸಿಯಸ್ ಮುಂತಾದುವುಗಳನ್ನು ತೆಗೆದು ಸಂಯೋಜಿಸುವುದರಿಂದ ಈ ವಿರೋಧ ಕ್ರಿಯೆಯನ್ನು ಯಶಸ್ವಿಯಾಗಿ ಎದುರಿಸಲಾಗಿದೆ. ಕಾರ್ಟಿಕೋಸ್ಟೀರಾಯ್ಡ್ ಹಾರ್ಮೋನುಗಳನ್ನು ಉಪಯೋಗಿಸುವ ವಿಧಾನವನ್ನು ಸಿ. ಝುಕೋವಸ್ಕಿ ಮತ್ತು ಸಿ.ಎಂ. ಕ್ಯಾಲೊವೆ ಅವರು ಪ್ರಾಣಿಗಳಲ್ಲಿಯೂ ಟಿ. ಸ್ಟಾರ್ಸಲ್ ಮತ್ತು ಅವರ ಸಂಗಡಿಗರು ಮನುಷ್ಯನಲ್ಲಿಯೂ ಅನುಸರಿಸಿದ್ದಾರೆ. ಅಲ್ಲದೆ ದಾನ ಪಡೆದ ಪ್ರಾಣಿಯ ದೇಹದ ಮೇಲೆ ಅಥವಾ ನಾಟಿ ಹಾಕುವ ಅಂಗಾಂಶದ ಮೇಲೆ ಮಾರಕವಲ್ಲದ ಪ್ರಮಾಣದಲ್ಲಿ ಎಕ್ಸ್–ಕಿರಣಗಳನ್ನು ಹಾಯಿಸಿ ರೋಧಜನಕ ವಸ್ತುಗಳನ್ನು (ಅಂಟಿಜೆನ್ಸ್) ನಾಶ ಮಾಡಬಹುದು. ಇದರಿಂದ ದಾನಪಡೆವ ಪ್ರಾಣಿಯಲ್ಲಿ ರೋಧಜನಕಗಳ ತಯಾರಿ ನಿಂತುಹೋಗುತ್ತದೆ. ಆದರೆ ದಾನಪಡೆದ ಪ್ರಾಣಿ ತನ್ನೆಲ್ಲ ರೋಗನಿರೋಧಕ ಶಕ್ತಿಯನ್ನು ಕಳೆದುಕೊಳ್ಳುವುದೇ ಇದರಲ್ಲಿನ ಒಂದು ದೊಡ್ಡ ನ್ಯೂನತೆ. ಸ್ಟಾರ್ಸಲ್ ಎಂಬಾತ ವಿವಿಧ ರಕ್ತಗುಂಪುಗಳ ನಡುವೆ ಪ್ರಯೋಗಗಳನ್ನು ನಡೆಸಿ O ಮತ್ತು Rh+ಗುಂಪಿನ ಮನುಷ್ಯರಿಂದ ಬೇರೆ ಯಾವ ಗುಂಪಿನ ಮನುಷ್ಯರಿಗೂ ಹಾಗೆಯೇ ಯಾರಿಂದ ಬೇಕಾದರೂ AB ಗುಂಪಿಗೂ ಕಸಿಮಾಡಬಹುದೆಂದೂ ತಿಳಿಸಿದ್ದಾನೆ. ಇದೇ ದಿಸೆಯಲ್ಲಿ ೩ ದಶಕಗಳಿಂದ ಹೆಚ್ಚಾಗಿ ಪ್ರಯೋಗಗಳನ್ನು ನಡೆಸಿದ ಬ್ರಿಟನ್ನಿನ ಜೀವಶಾಸ್ತ್ರಜ್ಞ ಪಿ.ಬಿ. ಮೆಡಾವರ್‌ಗೆ ೧೯೬೦ರಲ್ಲಿ ನೋಬೆಲ್ ಪಾರಿತೋಷಕ ಸಿಕ್ಕಿದೆ. (ಎಚ್.ಬಿ.ಡಿ.)

**ಕಸ್ತೂರಿ ಇಲಿ:** ಕ್ರಿಸೆಟಿಡೆ ಕುಟುಂಬಕ್ಕೆ ಸೇರಿದ, ಇಲಿಯಂತೆಯೇ ಕಾಣುವ ಅರೆ ಜಲಚರ ದಂಶಕ (ಮಸ್ಕ್ ರ್‍ಯಾಟ್). ಈ ಇಲಿಯ ಆಸನದ್ವಾರದ ಬಳಿಯಿರುವ ಒಂದು

ಜೊತೆ ಗ್ರಂಥಿಗಳಿಂದ ಉಂಟಾಗುವ ಸುಗಂಧಯುಕ್ತ ವಾಸನೆಯ ಸ್ರಾವದಿಂದಾಗಿ ಇದಕ್ಕೆ ಈ ಹೆಸರು. ಮೈಕ್ರೊಟಿನಿ ಇಂಥ ಇಲಿಗಳ ಉಪಕುಟುಂಬದ ಹೆಸರು. ನೀರಿಲಿಗಳು, ಹೊಲದ ಇಲಿಗಳು ಮತ್ತು ಲೆಮಿಂಗುಗಳು ಈ ಉಪ ಕುಟುಂಬಕ್ಕೆ ಸೇರುತ್ತವೆ. ಮರ ಬೆಳೆಯದ ತಂಡ್ರ ಪ್ರದೇಶಗಳನ್ನುಳಿದು ಉತ್ತರ ಅಮೆರಿಕದ ಎಲ್ಲ ಕಡೆಗಳಲ್ಲೂ ಕಸ್ತೂರಿ ಇಲಿಗಳು ಕಾಣ ಸಿಗುತ್ತವೆ. ಯೂರೋಪಿನಲ್ಲೂ ಇವು ವ್ಯಾಪಿಸಿಕೊಂಡಿವೆ. ಕಸ್ತೂರಿ ಇಲಿಯ ಉದ್ದ ಸುಮಾರು 30 ಸೆಂಮೀ ಪಾರ್ಶ್ವಗಳು ಅದುಮಿದಂತಿವೆ. ಚಕ್ಕೆ ಚಕ್ಕೆಯಾಗಿರುವ ಇದರ ಬಾಲದಲ್ಲಿ ಕೂದಲುಗಳಿಲ್ಲ. ದೇಹ ಅಡಕವೂ ತೂಕವುಳ್ಳದ್ದೂ ಆಗಿದೆ. ದೇಹಕ್ಕೆ ಹೋಲಿಸುವಾಗ ಬಾಲ ಚಿಕ್ಕದು. ಕಿವಿಗಳು ದುಂಡಗೆ ಇದ್ದು ಮೈಗೂದಲಿಂದಾಚೆಗೆ ಚಾಚಿರುತ್ತದೆ. ಹಿಂಗಾಲಿನಲ್ಲಿ ಐದು ಬೆರಳುಗಳು; ಬೆರಳುಗಳ ನಡುವೆ ಇರುವ ಅರೆಜಾಲಗಳು ಬಿರುಗೂದಲುಗಳಿಂದ ಹೆಣೆದುಕೊಂಡಿರುತ್ತವೆ.

ಇಲಿಗೆ ನೀರಿನಲ್ಲಿ ಈಜಲು ಅರೆಜಾಲಗಳು ಸಹಾಯಕಾರಿ. ಇಲಿಯ ದೇಹದ ಬಣ್ಣ ಕಪ್ಪು ಮಿಶ್ರಿತ ಕಂದು. ಕಾಲುಗಳು ಕಪ್ಪು ಬಣ್ಣದವು. ಮೈಮೇಲೆಲ್ಲಾ ದಟ್ಟವಾದ, ಹೊಳೆಯುವ, ಮೃದುವಾಗಿರುವ ಉದ್ದನೆಯ ಕೂದಲುಗಳಿವೆ. ತುಪ್ಪುಳ ಹೊದಿಕೆಯನ್ನು ಮಾಡುವ ಉದ್ಯಮದಲ್ಲಿ ಕಸ್ತೂರಿ ಇಲಿಯ ಚರ್ಮವೇ ಕಚ್ಚಾ ವಸ್ತು. ಆದ್ದರಿಂದ ಅದಕ್ಕೆ ಅಧಿಕ ಬೇಡಿಕೆ ಇದೆ. ಉತ್ತರ ಅಮೆರಿಕದಲ್ಲಿ ಉತ್ಪತ್ತಿಯಾಗುವ ಇತರ ಯಾವುದೇ ತುಪ್ಪುಳಕ್ಕಿಂತ ಕಸ್ತೂರಿ ಇಲಿಯ ತುಪ್ಪುಳ ಅಧಿಕ ವರಮಾನ ನೀಡುತ್ತಿದೆ. ಕುಂಟೆ, ಕೆರೆ, ತೊರೆ ಮುಂತಾದೆಡೆಗಳ ದಡದ ಮೇಲೆ ಬಿಲ ಮಾಡಿಕೊಂಡು ಅದರೊಳಗೆ ವಾಸಿಸುತ್ತದೆ. ಜವುಗು ಸಸ್ಯ, ಜಲಸಸ್ಯಗಳ ಬೇರುಗಳು, ಕೆಲವು ವೇಳೆ ಹಲವು ಜಾತಿಯ ಈಚ್ಚಿಪ್ಪಿನ ಪ್ರಾಣಿಗಳು, ಮುಳ್ಳುನಳ್ಳಿಗಳು, ಬೆಂಕಿ ಮೊಸಳೆಗಳು (ಸ್ಯಾಲಮ್ಯಾಂಡರ್ಸ್) ಮತ್ತು ಚಿಕ್ಕ ಚಿಕ್ಕ ಮೀನುಗಳು–ಇವೇ ಈ ಇಲಿಯ ಆಹಾರ. ಚಪ್ಪಟೆಯಾದ ಬಂಡೆಯ ಮೇಲೋ ಅಥವಾ ಕಡಿದು ಹಾಕಿರುವ ಜವುಗು ಸಸ್ಯದ ಮೇಲೋ ವರ್ಷಕ್ಕೆ ಒಂದು ಅಥವಾ ಎರಡು ಸೂಲಿನಂತೆ ಇವು ಮರಿಗಳನ್ನು ಹಾಕುತ್ತವೆ. ಮರಿಗಳ ಸಂಖ್ಯೆ ಒಂದೊಂದು ಸೂಲಿಗೂ ಒಂದರಿಂದ ಹನ್ನೊಂದು.

***

**ಕಸ್ತೂರಿ ದನ:** ದನವನ್ನು ಹೋಲುವ ಒಂದು ಅಪೂರ್ವಜಾತಿಯ ಮೆಲುಕು ಹಾಕುವ ಪ್ರಾಣಿ (ಮಸ್ಕ್ ಆಕ್ಸ್). ದನಗಳಿಗೂ ಕುರಿ ಆಡುಗಳಿಗೂ ಹತ್ತಿರದ ಸಂಬಂಧಿಯಾದ ಇದು ಆರ್ಟಿಯೊಡಾಕ್ಟೈಲ ಗಣ, ಬೋವಿಡೆ ಕುಟುಂಬ ಮತ್ತು ಕ್ಯಾಪ್ರಿನೆ ಉಪಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ನಾಮ ಓವಿಬಾಸ್ ಮಾಸ್ಕೇಟಸ್. ಇದರ ದೇಹದಿಂದ ಕಸ್ತೂರಿಯಂಥ ವಾಸನೆ ಹೊರಸೂಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ.

ಸುಮಾರು ಒಂದು ಮಿಲಿಯ ವರ್ಷಗಳ ಹಿಂದೆ ಸೈಬೀರಿಯ, ಜರ್ಮನಿ, ಫ್ರಾನ್ಸ್ ಹಾಗೂ ಇಂಗ್ಲೆಂಡುಗಳಲ್ಲಿ ಹೇರಳವಾಗಿತ್ತೆಂದು ತಿಳಿದು ಬಂದಿದೆ. ಈಗ ಕೆನಡಾದ ಟಂಡ್ರ ಪ್ರದೇಶ, ಉತ್ತರ ಶೀತವಲಯದ ಕೆಲವು ದ್ವೀಪಗಳು, ಗ್ರೀನ್‌ಲ್ಯಾಂಡಿನ ಉತ್ತರ ತೀರಪ್ರದೇಶ ಮುಂತಾದ ಸ್ಥಳಗಳಿಗೆ ಮಾತ್ರ ಸೀಮಿತಗೊಂಡಿದೆ.

ಕಸ್ತೂರಿದನ ತನ್ನ ಲಕ್ಷಣಗಳಲ್ಲಿ ದನಗಳನ್ನು ಕುರಿ ಆಡುಗಳನ್ನು ಹೋಲುತ್ತದೆ. ನೋಡಲು ಕೊಂಚಮಟ್ಟಿಗೆ ಅಮೆರಿಕದ ಕಾಡುಕೋಣದಂತಿದೆ. ಗಂಡು ಕಸ್ತೂರಿದನ ಸುಮಾರು ೧.೫ ಮೀ ಎತ್ತರವಿದ್ದು ಸು. ೨೨೫–೩೦೦ ಕಿಗ್ರಾಂ ತೂಗುತ್ತದೆ. ಹೆಣ್ಣು ಸ್ವಲ್ಪ ಚಿಕ್ಕ ಗಾತ್ರದ್ದು. ಮೈಮೇಲೆ ಬಲು ಉದ್ದವಾದ, ಒರಟೊರಟಾಗಿ ಜಡೆಗಟ್ಟಿದ ಕಂದು ಬಣ್ಣದ ಕೂದಲಿವೆ. ಇವು ಆಗಾಗ ಗಚ್ಚುಗಚ್ಚಾಗಿ ಉದುರಿ ಹೋಗುವುದುಂಟು. ಈ ಉದ್ದವಾದ ಕೂದಲುಗಳ ಹೊರಹೊದಿಕೆಯ ಒಳಗೆ ದಟ್ಟವಾದ ಉಣ್ಣೆಯಿದೆ. ಇದೂ ಕೂಡ ಪ್ರತಿ ಬೇಸಿಗೆಯಲ್ಲಿ ಉದುರಿಹೋಗುತ್ತದೆ. ಇಂಥ ಎರಡು ಪದರಗಳ ಹೊದಿಕೆಯಿಂದಾಗಿ ಈ ಪ್ರಾಣಿ ಎಂಥ ಶೀತವನ್ನಾದರೂ ತಡೆದುಕೊಳ್ಳಬಲ್ಲದು. ಕಸ್ತೂರಿದನಕ್ಕೆ ಬಲು ಚಿಕ್ಕವಾದ ಮತ್ತು ದೃಢವಾದ ಕಾಲುಗಳಿವೆ. ಕುತ್ತಿಗೆ ಬಹಳ ಚಿಕ್ಕದು. ಕಿವಿಗಳೂ ಸಣ್ಣವು. ಕೊಂಬುಗಳು ಮಾತ್ರ ಅಗಲವಾಗಿಯೂ ಮೊನಚಾಗಿಯೂ ಇವೆ. ತಲೆಯಲ್ಲಿ ಪ್ರಮುಖವಾಗಿ ಕಾಣುವ ಇವು ತಲೆಯ ಎರಡು ಪಕ್ಕಗಳಲ್ಲಿ ಕೆಳಮುಖನಾಗಿ ಬಾಗಿ ಮತ್ತೆ ತುದಿಯಲ್ಲಿ ಹಿಮ್ಮುಖನಾಗಿ ಬಾಗಿವೆ.

ಕಸ್ತೂರಿದನಗಳು ಹಿಂಡುಗಳಲ್ಲಿ ವಾಸಿಸುತ್ತವೆ. ಒಂದು ಗುಂಪಿನಲ್ಲಿ ಒಂದು ಗಂಡು, ಹಲವಾರು ಹೆಣ್ಣುದನಗಳು ಹಾಗೂ ಕರುಗಳು ಇರುತ್ತವೆ. ಕೆಲವು ಸಲ ಅನೇಕ ಗಂಡುಗಳು ತಮ್ಮ ತಮ್ಮ ಪರಿವಾರ ಸಮೇತ ಒಂದೇ ಗುಂಪಿನಲ್ಲಿರಬಹುದು. ಆಹಾರಕ್ಕಾಗಿ ಹಿಂಡುಹಿಂಡಾಗಿಯೇ ಸಂಚರಿಸುತ್ತವೆ. ಹುಲ್ಲು, ಕಲ್ಲುಹೂವು, ಪಾಚಿ, ವಿಲೋ ಮುಂತಾದ ಕುರುಚುಲು ಗಿಡಗಳು ಇವುಗಳ ಆಹಾರ.

ಕಸ್ತೂರಿದನ ಮರಿಹಾಕುವ ಕಾಲ ಮೇ ಅಥವಾ ಜೂನ್ ತಿಂಗಳು. ಹೆಣ್ಣುದನ ಸುಮಾರು ೯ ತಿಂಗಳ ಗರ್ಭಧಾರಣೆಯ ಅವಧಿಯ ಅನಂತರ ಒಂದು ಸಲಕ್ಕೆ ಒಂದು ಮರಿಯನ್ನು ಈಯುತ್ತದೆ.

ಮನುಷ್ಯ ಮತ್ತು ತೋಳಗಳು ಕಸ್ತೂರಿದನದ ಪ್ರಮುಖ ಶತ್ರುಗಳು. ಶತ್ರುವಿನಿಂದ ಆವೃತವಾದಾಗ ಮಂಡಲಾಕಾರದ ಗುಂಪುಗಳಲ್ಲಿ ನಿಂತು ಶತ್ರುಗಳನ್ನೆದುರಿಸುತ್ತವೆ. ಗುಂಪಿನ ಮಧ್ಯೆ ಕರುಗಳನ್ನು ಸೇರಿಸಿಕೊಂಡು ಸುತ್ತಲೂ ಗಂಡುಗಳು ತಮ್ಮ ಹರಿತವಾದ ಕೊಂಬುಗಳನ್ನು ತೋರಿಸುತ್ತ ಹಗೆಯೊಂದಿಗೆ ಸೆಣಸಲು ಅನುವಾಗುತ್ತವೆ. ತೋಳಗಳನ್ನು ಯಶಸ್ವಿಯಾಗಿ ಎದುರಿಸಬಲ್ಲವಾದರೂ ಶಸ್ತ್ರಸಜ್ಜಿತ ಮಾನವಶಕ್ತಿಗೆ ಸುಲಭವಾಗಿ ಮಣಿಯುತ್ತವೆ. ಹೀಗಾಗಿ ಇಂದು ಇವುಗಳ ಸಂಖ್ಯೆ ಬಹಳ ಇಳಿದು ಹೋಗಿದೆ. ರುಚಿಕರವಾದ ಮಾಂಸ ಮತ್ತು ಬೆಲೆಬಾಳುವ ಉಣ್ಣೆಗಾಗಿ ಇವುಗಳ ಬೇಟೆ ನಡೆದೇ ಇದೆ. ಇವು ಚೆನ್ನಾಗಿ ಹಾಲುಕೊಡಬಲ್ಲವಾದುದರಿಂದ ಕೆಲವೆಡೆ ಇವನ್ನು ಸಾಕುವ ಪ್ರಯತ್ನಗಳೂ ನಡೆದಿವೆ.

***

**ಕಸ್ತೂರಿ ಮೃಗ:** ಸರ್ವಿಡೆ ಕುಟುಂಬದ ಮಾಸ್ಕೈನೀ ಉಪಕುಟುಂಬಕ್ಕೆ ಸೇರಿದ ಒಂದು ಪರ್ವತವಾಸಿ ಪ್ರಾಣಿ (ಮಸ್ಕ್ ಡಿಯರ್). ಜಿಂಕೆಗಳ ಹತ್ತಿರದ ಸಂಬಂಧಿ. ಇದರ ವೈಜ್ಞಾನಿಕ ಹೆಸರು ಮಾಸ್ಕಸ್ ಮಾಸ್ಕಿಫೆರಸ್. ಇದರಿಂದ ಪಡೆಯಲಾಗುವ ಕಸ್ತೂರಿಗಾಗಿ ಪ್ರಸಿದ್ಧಿಯಾಗಿದೆ. ಮಧ್ಯ ಏಷ್ಯದ ಪರ್ವತ ಪ್ರದೇಶಗಳ ಮೂಲವಾಸಿ ಇದು. ಹಿಮಾಲಯದ ಗಿಲ್ಗಿಟ್‌ನಿಂದ ಹಿಡಿದು ಟಿಬೆಟ್, ವಾಯುವ್ಯ ಚೀನಗಳ ಮುಖಾಂತರ ಸೈಬೀರಿಯಾದ ವರೆಗೂ ಇದರ ವ್ಯಾಪ್ತಿಯಿದೆ. ಸಾಧಾರಣವಾಗಿ ಭೂರ್ಜಸಸ್ಯಗಳ ಕಾಡಿನಲ್ಲಿಯೇ ವಾಸಿಸುತ್ತದೆ. ಜಿಂಕೆಗಳಿಗೂ ಸಾರಂಗಗಳಿಗೂ ನಡುವಣ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಇದರ ಮೈಮಾಟ ಅಷ್ಟು ಚೆಲುವಾಗಿಲ್ಲ. ಸುಮಾರು ೫೦–೬೦ ಸೆಂಮೀ ಎತ್ತರ ಬೆಳೆಯುತ್ತದೆ. ತೂಕ ಸುಮಾರು ೯–೧೦ ಕಿಗ್ರಾಂ ಮೈಬಣ್ಣ ಕಂದು ಮತ್ತು ಬೂದು ಬಣ್ಣಗಳ ಮಿಶ್ರಣ. ಮೈಮೇಲೆಲ್ಲ ಬಿರುಸಾದ ಕೂದಲುಗಳಿವೆ. ಕಾಲುಗಳು ನಿಡಿದಾಗಿವೆ. ಹಿಂಗಾಲುಗಳು ಮುಂದಿನವಕ್ಕಿಂತ ಹೆಚ್ಚು ಉದ್ದ. ಕೊಂಬುಗಳಿಲ್ಲ, ಕಿವಿಗಳು ದೊಡ್ಡವು, ಬಾಲ ಬಹಳ ಮೊಟಕಾದುದು. ಗಂಡಿನಲ್ಲಿ ಮೇಲ್ದವಡೆಯ ಕೋರೆಹಲ್ಲುಗಳು ಬಾಯಿಯಿಂದ ಹೊರಚಾಚಿ ದಾಡೆಗಳಂತಿವೆ. ಮೃಗ ಇವನ್ನು ತನ್ನ ರಕ್ಷಣೆಗಾಗಿ ಬಳಸಿಕೊಳ್ಳುತ್ತದೆ.

ಕಸ್ತೂರಿ ಮೃಗ

ಕಸ್ತೂರಿಮೃಗ ಸಾಮಾನ್ಯವಾಗಿ ಒಂಟಿಯಾಗಿರುವುದೇ ಹೆಚ್ಚು. ಒಮ್ಮೊಮ್ಮೆ ಗಂಡುಹೆಣ್ಣುಗಳು ಜೋಡಿಯಾಗಿ ಓಡಾಡುತ್ತವೆ. ಪುಕ್ಕಲು ಸ್ವಭಾವದ ಪ್ರಾಣಿಯಿದು. ಹಗಲೆಲ್ಲ ದಟ್ಟಪೊದೆಗಳಲ್ಲಿ ಅಡಗಿದ್ದು ಸಂಜೆಯಾದ ಅನಂತರ ಆಹಾರಕ್ಕಾಗಿ ಹೊರಬರುತ್ತದೆ. ಹುಲ್ಲು, ಎಲೆ, ಕಲ್ಲುಹೂ ಮುಂತಾದವು ಇದರ ಆಹಾರ. ಹಿಮಾಲಯದಲ್ಲಿನ ಕಸ್ತೂರಿಮೃಗ ವಿಶ್ರಮಿಸುವುದಕ್ಕೆಂದು ಮೊಲಗಳಂತೆ ಹಕ್ಕೆಗಳನ್ನು ನಿರ್ಮಿಸಿಕೊಳ್ಳುತ್ತದೆ.

ಗಂಡುಹೆಣ್ಣುಗಳ ಸಂಭೋಗ ಕಾಲ ಜನವರಿ ತಿಂಗಳು, ಸುಮಾರು ೬ ತಿಂಗಳ ಅನಂತರ ಮರಿಗಳು ಹುಟ್ಟುತ್ತವೆ. ಒಂದು ಸೂಲಿಗೆ ಪ್ರಾಯಶಃ ಒಂದೇ ಮರಿ ಹುಟ್ಟುತ್ತದೆ.

ಗಂಡು ಕಸ್ತೂರಿಮೃಗದಲ್ಲಿ ಹೊಟ್ಟೆಯ ಭಾಗದಲ್ಲಿ ಚರ್ಮದೊಳಗೆ ಸುಮಾರು ಒಂದು ನಿಂಬೆಯ ಹಣ್ಣಿನ ಗಾತ್ರದ ಕೋಶದಂತಿರುವ ಗ್ರಂಥಿಯೊಂದುಂಟು. ಇದಕ್ಕೆ ಜನನೇಂದ್ರಿಯದ ಬಳಿ ಹೊರದೆರೆಯುವಂಥ ದ್ವಾರವಿದೆ. ಕಸ್ತೂರಿಯಿರುವುದು ಇದರಲ್ಲಿಯೇ. ಹೆಣ್ಣುಗಳನ್ನು ಆಕರ್ಷಿಸಲು ಇರುವ ಪ್ರಮುಖ ಸಾಧನ ಕಸ್ತೂರಿ. ಸಾಮಾನ್ಯವಾಗಿ ಪೂರ್ಣ ಬೆಳೆದ ಗಂಡಿನಿಂದ ಸುಮಾರು ೪೦–೫೫ ಗ್ರಾಂ ಕಸ್ತೂರಿ ದೊರೆಯುತ್ತದೆ. ಸಂತಾನವೃದ್ಧಿಯ ಕಾಲದಲ್ಲಿ ಕಸ್ತೂರಿಯ ಪ್ರಮಾಣ ಗಣನೀಯವಾಗಿರುತ್ತದೆ. ಕಸ್ತೂರಿಗಾಗಿ ಈ ಮೃಗವನ್ನು ಬಹಳ ಕಾಲದಿಂದಲೂ ಬೇಟೆಯಾಡುತ್ತ ಬಂದಿರುವುದರಿಂದ ಇವುಗಳ ಸಂಖ್ಯೆ ಕ್ಷೀಣವಾಗಿದೆ.

***

ಕಸ್ತೂರಿ: ಗಂಡು ಕಸ್ತೂರಿಮೃಗದ ಹೊಟ್ಟೆಯ ಚರ್ಮದೊಳಗಿರುವ ಗ್ರಂಥಿಯೊಂದರಿಂದ ಒಸರುವ ಸುಗಂಧ ವಸ್ತು (ಮಸ್ಕ್). ಅಂಗಡಿಯಲ್ಲಿ ಮಾರುವ ಕಸ್ತೂರಿ ಎಂಬ ವಸ್ತು ಈ ಪ್ರಾಣಿಯಿಂದಲೇ ಬಂದದ್ದು. ಆದರೆ ಇತರ ಕೆಲವು ಬಗೆಯ ಪ್ರಾಣಿಗಳೂ ಇದೇ ವಾಸನೆಯನ್ನು ಹೊರಸೂಸುತ್ತವೆ. ಉದಾಹರಣೆಗೆ ಕಸ್ತೂರಿ ದನ, ಕಸ್ತೂರಿ ಇಲಿ, ಕಸ್ತೂರಿ ಬಾತು, ಕಸ್ತೂರಿ ಮೂಗಿಲಿ ಇತ್ಯಾದಿ. ಅಲ್ಲದೆ ಕೆಲವು ಸಸ್ಯಗಳಲ್ಲೂ ಈ ಬಗೆಯ ವಾಸನೆ ಸೂಸುವ ಗ್ರಂಥಿಗಳಿವೆ. ಆ ಸಸ್ಯಗಳನ್ನು ಕಸ್ತೂರಿ ಗಿಡಗಳೆಂದು ಕರೆಯಲಾಗುತ್ತದೆ.

ಕಸ್ತೂರಿ ಮೃಗವನ್ನು ಕೊಂದು ಅದರ ಹೊಟ್ಟೆಯಲ್ಲಿನ ಕಸ್ತೂರಿ ಗ್ರಂಥಿಯನ್ನು ಹೊರತೆಗೆದು ಬಿಸಿಲಿನಲ್ಲೋ ಬಿಸಿ ಎಣ್ಣೆಯಲ್ಲಿ ಅದ್ದಿಯೊ ಒಣಗಿಸುತ್ತಾರೆ. ಕೆಲವು ಸಾರಿ ಕಸ್ತೂರಿಗ್ರಂಥಿಯಿಂದ ಕಸ್ತೂರಿಯನ್ನು ಹೊರತೆಗೆದು ಶುದ್ಧೀಕರಿಸಿ ಮಾರುವುದೂ ಉಂಟು. ಕಸ್ತೂರಿಯಲ್ಲಿ ಮೂರು ಬಗೆಗಳುಂಟು: 1 ಟಾಂಕಿಂಗ್ ಅಥವಾ ಚೀನೀ ಕಸ್ತೂರಿ, 2 ಅಸ್ಸಾಮ್ ಅಥವಾ ನೇಪಾಳದ ಕಸ್ತೂರಿ, (3) ಕಬಾರ್ಡಿನ್ ಅಥವಾ ರಷ್ಯದ ಕಸ್ತೂರಿ. ಟಾಂಕಿಂಗ್ ಕಸ್ತೂರಿಯೇ ಇವುಗಳೆಲ್ಲಲ್ಲ ಶ್ರೇಷ್ಠವಾದುದು, ಹಾಗೂ ಹೆಚ್ಚಿನ ಬೆಲೆಯದು.

ಕಸ್ತೂರಿ ಹೊಚ್ಚ ಹೊಸದಾಗಿರುವಾಗ ಮೃದುವಾಗಿಯೂ ಜಿಡ್ಡು ಜಿಡ್ಡಾಗಿಯೂ ಇರುತ್ತದೆ. ಅದರ ಬಣ್ಣ ಕೆನ್ನೀಲಿ. ವಾಸನೆ ಸಹಿಸಲಾಗದಷ್ಟು ಕಟು. ರುಚಿ ಕಹಿ. ಕುದಿಯುವ ನೀರಿನಲ್ಲಿ ಸ್ವಲ್ಪ ಕರಗುತ್ತದೆ. ಇದು ಸುಗಂಧ ದ್ರವ್ಯಗಳನ್ನು ತಯಾರಿಸಲು ಉಪಯೋಗಿಸುವ ಶ್ರೇಷ್ಠತಮ ಮೂಲದ್ರವ್ಯವೆಂದು ಹೆಸರಾಗಿದೆ. ಕಸ್ತೂರಿಗೆ ಔಷಧೀಯ ಗುಣಗಳೂ ಉಂಟು. ಇದನ್ನು ಉತ್ತೇಜಕ, ಕಾಮೋದ್ದೀಪಕ, ಕಫಹಾರಕ, ಸ್ವೇದಕಾರಿಯಾಗಿ ಉಪಯೋಗಿಸುತ್ತಾರೆ.

ಕಸ್ತೂರಿಯ ವೈಶಿಷ್ಟ್ಯಪೂರ್ಣ ಸುಗಂಧಕ್ಕೆ ಕಾರಣ ಅದರಲ್ಲಿನ ಮಸ್ಕೋನ್ $C_{15}H_{30}C = O$ ಎಂಬ ವಸ್ತು. ವಾಲ್ಬಾಮ್ ಎಂಬಾತ 1906ರಲ್ಲಿ ಮೊದಲ ಬಾರಿಗೆ ಇದನ್ನು ಕಸ್ತೂರಿಯಿಂದ ಬೇರ್ಪಡಿಸಿ ಶುದ್ಧೀಕರಿಸಿದ. ರಾಸಾಯನಿಕವಾಗಿ ಇದು 3–ಮೀಥೈಲ್–ಸೈಕ್ಲೊಪೆಂಟ ಡಿಕಾನೋನ್ ಎಂದು ತಿಳಿದುಬಂದಿದೆ.

ಸ್ವಾಭಾವಿಕ ಕಸ್ತೂರಿಯಂಥ ವಾಸನೆಯಿರುವ ಹಲವಾರು ಬಗೆಯ ಸಂಯುಕ್ತಗಳನ್ನು ಕೃತಕವಾಗಿ ಸಂಶ್ಲೇಷಿಸಬಹುದಾಗಿದೆ. ಬಾರ್ ಎಂಬಾತ (1888) ರಲ್ಲಿ ಅಲ್ಯೂಮಿನಿಯಮ್ ಕ್ಲೋರೈಡಿನೊಡನೆ ಟಾಲೀನ್ ಮತ್ತು ಐಸೊಬ್ಯೂಟೈಲ್ ಬ್ರೋಮೈಡುಗಳನ್ನು ಸಂಘನನ (ಕಂಡೆನ್ಸೇಷನ್) ಕ್ರಿಯೆಗೊಳಪಡಿಸಿ ಅದರಿಂದ ಬಂದ ವಸ್ತುವನ್ನು ನೈಟ್ರೀಕರಣ ಮಾಡಿ ಕೃತಕ ಕಸ್ತೂರಿಯನ್ನು ತಯಾರಿಸಿದ. ಇದಕ್ಕೆ ಬಾರ್‌ಮಸ್ಕ್ ಎಂದು ಹೆಸರು. ಇದಲ್ಲದೆ ಕಸ್ತೂರಿಯನ್ನು ಹೋಲುವ ಜೆಲೀನ್ ಮಸ್ಕ್, ಮಸ್ಕ್‌ಕೀಟೋನ್, ಮಾಸ್ಕೀನ್, ಫ್ಯಾಂಟೋಲಿಡ್ ಎಂಬ ಸಂಯುಕ್ತಗಳನ್ನು ಕೃತಕವಾಗಿ ತಯಾರಿಸಬಹುದಾಗಿದೆ. ಇವೆಲ್ಲವನ್ನು ಸಾಬೂನು ಇತ್ಯಾದಿ ವಸ್ತುಗಳಿಗೆ ಸುವಾಸನೆ ಕೊಡಲು ಬಳಸುತ್ತಾರೆ. ***

**ಕಳಿಂಗ ಪಕ್ಷಿ:** ಪ್ಯಾಸರಿಫಾರ್ಮಿಸ್. ಗಣದ ಲ್ಯಾನೈಯಿಡೆ ಕುಟುಂಬಕ್ಕೆ ಸೇರಿದ ಒಂದು ಮಾಂಸಾಹಾರಿ ಹಕ್ಕಿ (ಶ್ರೈಕ್). ಬುಚರ್ ಬರ್ಡ್ (ಕಟುಕ ಹಕ್ಕಿ) ಎಂದೂ ಕರೆಯುತ್ತಾರೆ. ತನ್ನ ಬೇಟೆಯನ್ನು ಮುಳ್ಳುಗಿಡಗಳ ಮುಳ್ಳಿಗೆ ಸಿಕ್ಕಿಸಿ ಕೊಂಚ ಕೊಂಚವಾಗಿ ಹರಿದು ತಿನ್ನುವುದರಿಂದ ಇದಕ್ಕೆ ಈ ಹೆಸರು. ಇದರಲ್ಲಿ ೨೯ ಪ್ರಭೇದಗಳಿದ್ದು ಎಲ್ಲವೂ ಲ್ಯಾನಿಯಸ್ ಎಂಬ ಶಾಸ್ತ್ರೀಯ ಹೆಸರುಳ್ಳ ಜಾತಿಗೆ ಸೇರಿವೆ. ಇವುಗಳಲ್ಲಿ ಮುಖ್ಯವಾದ ಪ್ರಭೇದಗಳಿವು: ಯುರೋಪು ಹಾಗೂ ಮೆಡಿಟರೇನಿಯನ್ ಪ್ರದೇಶಗಳಲ್ಲಿ ಕಾಣಬರುವ ಕೆಂಪು ಬೆನ್ನಿನ ಕಳಿಂಗ (ಲ್ಯಾನಿಯಸ್ ಕೊಲ್ಲೊರಿಯೊ), ಕೆನಡ ಹಾಗೂ ಅಲಾಸ್ಕಗಳಲ್ಲಿರುವ ಉತ್ತರದ ಕಳಿಂಗ (ಲ್ಯಾ.ಎಕ್ಸ್‌ಕ್ಯುಬಿಟರ್), ಭಾರತದಲ್ಲಿನ ಕೆಂಪು ಬೆನ್ನಿನ ಕಳಿಂಗ (ಲ್ಯಾಶಾಚ್) ಹಾಗೂ ಲೇ. ವಿಟೀಟಸ್. ಲೇ. ಎಕ್ಸ್‌ಕ್ಯುಬಿಟರ್ ಪ್ರಭೇದ ಭಾರತದಲ್ಲೂ ಇದೆ. ಸಾಮಾನ್ಯವಾಗಿ ಕುರುಚಲು ಕಾಡು, ಗೊಬ್ಬಳಿಮರಗಳ ತೋಪುಗಳಲ್ಲಿ ಇವುಗಳ ವಾಸ. ಸಣ್ಣ ಅಥವಾ ಮಧ್ಯಮ ಗಾತ್ರದ ಹಕ್ಕಿಗಳಿವು. ಬಹುಪಾಲು ಹಕ್ಕಿಗಳ ಉದ್ದ ಸು. ೧೮–೨೫ ಸೆಂಮೀ. ದೊಡ್ಡದಾದ ಮತ್ತು ಅಗಲವಾದ ತಲೆ, ತುದಿಯಲ್ಲಿ ಕಚ್ಚುಗಳಿರುವ ಹಾಗೂ ಬಾಗಿರುವ ಬಲವಾದ ಕೊಕ್ಕು, ಮೊನೆಯುಗುರುಗಳುಳ್ಳ ದೃಢವಾದ ಕಾಲುಗಳು ಮತ್ತು ಉದ್ದವಾದ ಬಾಲ–ಇವು ಈ ಹಕ್ಕಿಗಳ ಮುಖ್ಯ ಲಕ್ಷಣಗಳು. ದೇಹ ಬೂದು, ಬಿಳಿ, ಕರಿ, ಕಂದು, ಹಸಿರು ಹಾಗೂ ವಿವಿಧ ಬಣ್ಣಗಳ ರೆಕ್ಕೆ ಪುಕ್ಕಗಳಿಂದ ಕೂಡಿದೆ. ಕೆಲವು ಪ್ರಭೇದಗಳನ್ನು ಬಿಟ್ಟು ಉಳಿದವುಗಳಲ್ಲಿ ಗಂಡು ಮತ್ತು ಹೆಣ್ಣು ಹಕ್ಕಿಗಳ ಬಣ್ಣದಲ್ಲಿ ವ್ಯತ್ಯಾಸವಿಲ್ಲ. ಹಾಡುಹಕ್ಕಿಗಳ ಕುಟುಂಬಕ್ಕೆ ಸೇರಿದ್ದರೂ ಇವುಗಳ ಧ್ವನಿ ಕಿವಿಗೆ ಹಿತಕರವಲ್ಲ. ಆದರೆ ಕೆಲವು ಬಗೆಯವು ಇತರ ಹಕ್ಕಿಗಳ ಕೂಗನ್ನು ಚೆನ್ನಾಗಿ ಅನುಕರಿಸಬಲ್ಲುವು. ವಿವಿಧ ಬಗೆಯ ಕೀಟಗಳು, ಸಣ್ಣಗಾತ್ರದ ಓತಿ, ಹಲ್ಲಿ, ಇಲಿ ಮುಂತಾದ ಸ್ತನಿಗಳು ಮತ್ತು ಇತರ ಜಾತಿಯ ಹಕ್ಕಿಗಳು ಮುಂತಾದವು ಇವುಗಳ ಆಹಾರ. ಆಯಕಟ್ಟಿನ ಸ್ಥಳಗಳಲ್ಲಿ ಕೂತು ತಮ್ಮ ಬೇಟೆಗಾಗಿ ಇವು ಕಾಯುತ್ತವೆ. ಬೇಟೆ ಕಾಣಿಸಿದ ತತ್‌ಕ್ಷಣ ಹದ್ದು ಡೇಗೆಗಳಂತೆ ಅದರ ಮೇಲೆರಗಿ ತಮ್ಮ ಚೂಪಾದ ಕೊಕ್ಕಿನಿಂದ ಕೊಲ್ಲುತ್ತವೆ. ಕಾಲುಗಳು ದೊಡ್ಡ ಗಾತ್ರದ ಬೇಟೆಯನ್ನು ಹಿಡಿದುಕೊಳ್ಳಲು ಶಕ್ತವಾಗಿಲ್ಲವಾದ್ದರಿಂದ ಬೇಟೆಯನ್ನು ಯಾವುದಾದರೂ ಮರದ ಮುಳ್ಳಿಗೊ ತಂತಿಬೇಲಿಗೊ ಸಿಕ್ಕಿಸಿ, ತೂಗು ಹಾಕಿ ಅದನ್ನು ನಿಧಾನವಾಗಿ ಹರಿದು ತಿನ್ನುತ್ತವೆ. ಕಳಿಂಗ ಪಕ್ಷಿಗಳಿರುವ ಪ್ರದೇಶಗಳಲ್ಲಿ ಹೀಗೆ ತೂಗುಹಾಕಿರುವ ಕೀಟಗಳು, ಇಲಿಗಳು ಸಾಮಾನ್ಯ ದೃಶ್ಯ. ಬೇಟೆಯಾಡುವ ಇತರ ಹಕ್ಕಿಗಳಂತೆಯೇ ಇವೂ ಕೂಡ ತಾವು ತಿನ್ನಬಹುದಾದ್ದಕ್ಕಿಂತ ಹೆಚ್ಚು ಪ್ರಾಣಿಗಳನ್ನು ಕೊಲ್ಲುತ್ತವೆ. ಕೆಲವು ಬಾರಿ ಸಾಕಿದ ಹಕ್ಕಿಗಳನ್ನು ಹಿಡಿದು ತಿನ್ನುವುದುಂಟು. ಹೀಗಾಗಿ ಇವನ್ನು ಯಾರೂ ಇಷ್ಟಪಡುವುದಿಲ್ಲ. ಕಳಿಂಗಗಳು ತಮ್ಮ ಜೀವನವನ್ನು ಒಂಟಿಯಾಗಿಯೇ ಕಳೆಯುತ್ತವೆ. ಸಂತಾನೋತ್ಪತ್ತಿಯ ಕಾಲವಾದ ವಸಂತದಲ್ಲಿ ಮಾತ್ರ ಗಂಡು, ಹೆಣ್ಣು ಹಕ್ಕಿಗಳು ಜೊತೆಗೂಡುತ್ತವೆ. ಪೊದೆಗಳಲ್ಲಿ ಮತ್ತು ಮರಗಳಲ್ಲಿ ಹುಲ್ಲು ಮತ್ತು ಕಡ್ಡಿಗಳಿಂದ ಒರಟಾದ ಗೂಡು ಕಟ್ಟುತ್ತವೆ. ಹೆಣ್ಣು ಮಾಸಲು ಬಿಳಿಯ ಬಣ್ಣದ, ಮೇಲೆಲ್ಲ ಕಂದು ಅಥವಾ ಬೂದು ಬಣ್ಣದ ಚುಕ್ಕೆಗಳಿರುವ ೩–೬ ಮೊಟ್ಟೆಗಳನ್ನಿಡುತ್ತದೆ. ಹೆಣ್ಣೇ ಮೊಟ್ಟೆಗಳಿಗೆ ಕಾವುಕೊಟ್ಟು ಮರಿ ಮಾಡುತ್ತದೆ. ಕಾವು ಕೂರುವ ಕಾಲ ಸುಮಾರು ೧೪–೧೬ ದಿವಸಗಳು. ಗಂಡು ಕಾವು ಕೂತ ಹೆಣ್ಣಿಗೆ ಆಹಾರ ತಂದುಕೊಡುವುದರಲ್ಲಿ ನಿರತವಾಗಿರುತ್ತದೆ. ಮರಿಗಳು ದೊಡ್ಡವಾಗುವ ಕಾಲಕ್ಕೆ ಗಂಡು, ಹೆಣ್ಣುಗಳು ಬೇರೆಯಾಗಿ ಮತ್ತೆ ಒಂಟಿ ಜೀವನವನ್ನು ಮುಂದುವರಿಸುತ್ತವೆ.

ಕಳ್ಳಹಕ್ಕಿ

ಕಳಿಂಗ ಪಕ್ಷಿಯ ಕೆಲವು ಪ್ರಭೇದಗಳು ಚಳಿಗಾಲದಲ್ಲಿ ದಕ್ಷಿಣದ ಕಡೆಗೆ ವಲಸೆ ಹೋಗುತ್ತವೆ (ಉದಾಹರಣೆಗೆ: ಉತ್ತರದ ಕಳಿಂಗ). ಆದರೆ ಈ ವಲಸೆ ಹೋಗುವಿಕೆ ಬೇರೆ ಹಕ್ಕಿಗಳಲ್ಲಿರುವಂತೆ ಕ್ರಮಬದ್ಧವೂ ನಿಯತವೂ ಅಲ್ಲ. (ಎಚ್.ಬಿ.ಡಿ.)

**ಕಳ್ಳಹಕ್ಕಿ:** ಪ್ಯಾಸರಿಫಾರ್ಮಿಸ್ ಗಣದ ಕೋರ್ವಿಡೆ ಕುಟುಂಬಕ್ಕೆ ಸೇರಿದ ಹಕ್ಕಿ (ಟ್ರೀ ಪೈ). ಬಿಳಿ ಕೋಗಿಲೆ ಇದರ ಪರ್ಯಾಯ ನಾಮ. ಡೆಂಡ್ರೊಸಿಟ್ಟ ಎಂಬ ಶಾಸ್ತ್ರೀಯ ಹೆಸರಿನ ಜಾತಿಗೆ ಸೇರಿದೆ. ಸಾಮಾನ್ಯವಾಗಿ ಗುಡ್ಡಗಾಡುಗಳಲ್ಲಿ ವಾಸಿಸುತ್ತದೆ. ಸುಮಾರು 17–70 ಸೆಂಮೀ ವರೆಗೂ ಬೆಳೆಯುತ್ತದೆ. ಉದ್ದವಾದ ಬಾಲ ಇದೆ. ಪುಕ್ಕಗಳ ಬಣ್ಣ ಕಪ್ಪು, ಬಿಳಿ, ನೀಲಿ, ಹಸಿರು, ಕಂದು, ಕೆಂಗಂದು, ಇತ್ಯಾದಿ ಹಲವು ರೀತಿಯದು. ಕೆಲವು ಪ್ರಭೇದಗಳಲ್ಲಿ ರೆಕ್ಕೆ ಹಾಗು ಬಾಲದ ಪುಕ್ಕಗಳ ಮೇಲೆ ಪಟ್ಟಿಗಳಿವೆ. ಇದು ಸಾಧಾರಣವಾಗಿ ಗುಂಪುಗಳಲ್ಲಿ ವಾಸಿಸುತ್ತದೆ. ಹಣ್ಣು, ಕೀಟಗಳು, ಹಲ್ಲಿಗಳು, ಕಪ್ಪೆಗಳು, ಇತರ ಹಕ್ಕಿಗಳ ಮೊಟ್ಟೆ ಮತ್ತು ಸಣ್ಣ ಪುಟ್ಟ ಸ್ತನಿಗಳು ಮುಂತಾದವೆಲ್ಲ ಇವುಗಳ ಆಹಾರ. ಕೆಲವು ಪ್ರಭೇದಗಳು ಚೆನ್ನಾಗಿ ಹಾಡಬಲ್ಲವು.

ಭಾರತದಲ್ಲಿ ಈ ಜಾತಿಯ ಐದು ಪ್ರಭೇದಗಳು ಕಾಣಬರುತ್ತವೆ. 1. ಡೆಂಡ್ರೊಸಿಟ್ಟ ಹಿಮಾಲಯನ್ಸಿಸ್ (ಪೂರ್ವ ಹಿಮಾಲಯದ ಕಳ್ಳ ಹಕ್ಕಿ) – ಸಮುದ್ರ ಮಟ್ಟದಿಂದ 600–2100 ಮೀ. ಎತ್ತರದ ಪ್ರದೇಶಗಳಲ್ಲಿ ವಾಸಿಸುತ್ತವೆ. 2. ಡೆಂಡ್ರೊಸಿಟ್ಟ ಆಕ್ಸಿಡೆಂಟ್ಯಾಲಿಸ್ – ಎಲ್ಲ ಕಡೆಯೂ ಸಾಮಾನ್ಯವಾಗಿ ಕಾಣಬರುವ ಪ್ರಭೇದ ಇದು. 3 ಡೆಂಡ್ರೊಸಿಟ್ಟ ವ್ಯಾಗಬಾಂಡ (ಭಾರತದ ಕಳ್ಳಹಕ್ಕಿ), 4. ಡೆಂಡ್ರೊಸಿಟ್ಟ ಲ್ಯೂಕೊಗ್ಯಾಸ್ಟರ್ (ದಕ್ಷಿಣದ ಕಳ್ಳಹಕ್ಕಿ) – ಪಶ್ಚಿಮ ಘಟ್ಟಗಳ ನಿವಾಸಿ ಇದು. 5. ಡೆಂಡ್ರೊಸಿಟ್ಟ ಸರ್ಕಾರಿ – ಉಳಿದ ಕಳ್ಳಹಕ್ಕಿಗಳಿಗಿಂತ ಗಾತ್ರದಲ್ಲಿ ಚಿಕ್ಕದು. ಪೂರ್ವಘಟ್ಟಗಳಲ್ಲಿ ವಾಸಿಸುತ್ತವೆ. (ಎನ್.ವಿ.ಎ)

**ಕಳ್ಳಿಪೀರ:** ಸಮಶೀತೋಷ್ಣವಲಯ ಹಾಗೂ ಉಷ್ಣವಲಯಗಳಲ್ಲಿ ವಾಸಿಸುವ ಒಂದು ಜಾತಿಯ ಹಕ್ಕಿ (ಬೀ ಈಟರ್). ಬಲು ಸುಂದರವಾದ ಮತ್ತು ವರ್ಣವೈವಿಧ್ಯವುಳ್ಳ ಈ ಹಕ್ಕಿ ಮಿಂಚುಳ್ಳಿಗಳಿಗೆ (ಕಿಂಗ್ ಫಿಶರ್) ಹತ್ತಿರ ಸಂಬಂಧಿ. ಕೊರಾಸಿಯಿಫಾರ್ಮಿಸ್ ಗಣದ ಮೆರಾಪಿಡೆ ಕುಟುಂಬಕ್ಕೆ ಸೇರಿದೆ. ಈ ಕುಟುಂಬದಲ್ಲಿ ಹಲವಾರು ಜಾತಿಗಳಿದ್ದು ಇವುಗಳಲ್ಲಿ ಮೆರಾಪ್ಸ್ ಜಾತಿಯವು ಮುಖ್ಯವಾದುವು. ಪ್ರಭೇದಗಳು ೨೪. ಎಲ್ಲಕ್ಕೂ ಬೀ ಈಟರ್ ಎಂಬ ಸಾಮಾನ್ಯ ಹೆಸರೇ ಇದೆ. ಆಫ್ರಿಕ, ಆಸ್ಟ್ರೇಲಿಯ, ಮಡಗಾಸ್ಕರ್ ಮತ್ತು ಭಾರತದಲ್ಲಿ ಇವು ಸಾಮಾನ್ಯ.

ಬಗೆಬಗೆಯ ಕೀಟಗಳು ಇದರ ಆಹಾರವಾದರೂ ಜೇನುನೊಣವೆಂದರೆ ಬಲು ಇಷ್ಟ. ಆದುದರಿಂದಲೇ ಇದಕ್ಕೆ ಬೀ ಈಟರ್ ಎಂಬ ಹೆಸರು. ಭಾರತದಲ್ಲಿ ಎರಡು ಪ್ರಭೇದಗಳಿಗೆ ಸೇರಿರುವ ಹಕ್ಕಿಗಳಿವೆ – ನೀಲಿ ಬಾಲದ ಕಳ್ಳಿಪೀರ (ಮೆರಾಪ್ಸ್ ಸೂಪರ್‌ಸಿಲಿಯೋಸಸ್) ಮತ್ತು ಹಸಿರು ಬಣ್ಣದ ಕಳ್ಳಿಪೀರ (ಮೆರಾಪ್ಸ್ ಓರಿಯಂಟ್ಯಾಲಿಸ್).



ಕಳ್ಳಿಪೀರ

ಹಸಿರು ಬಣ್ಣದ ಕಳ್ಳಿಪೀರ ಸಾಧಾರಣವಾಗಿ ಗುಬ್ಬಚ್ಚಿಯಷ್ಟಿದೆ. ಭಾರತದ ಹಿಮಾಲಯ ಪರ್ವತದ ೧೫೦೦ ಮೀ ಎತ್ತರದಿಂದ ಹಿಡಿದು ಕನ್ಯಾಕುಮಾರಿಯ ತನಕ ಎಲ್ಲ ಕಡೆಗಳಲ್ಲಿಯೂ ಕಾಣಬರುವ ಹಕ್ಕಿಯಿದು. ದೇಹ ತೆಳುವಾಗಿ, ಸು. ೧೫ ಸೆಂಮೀ ಉದ್ದವಿದೆ. ಬಣ್ಣ ಕಾಂತಿಯುಕ್ತವಾದ ಹಸಿರು. ತಲೆ ಮತ್ತು ಕತ್ತಿನಲ್ಲಿ ಕೆಂಪುಮಿಶ್ರಿತ ಕಂದುಬಣ್ಣದ ಛಾಯೆಗಳಿವೆ. ಕುತ್ತಿಗೆಯ ಹತ್ತಿರ ಸ್ಪಷ್ಟವಾದ ಕಪ್ಪು ಬಣ್ಣದ ಕಂಠಾಹಾರದಂತೆ ಕಾಣುವ ಗುರುತಿದೆ. ಗಂಡು ಮತ್ತು ಹೆಣ್ಣು ಹಕ್ಕಿಗಳ ಬಾಹ್ಯ ಲಕ್ಷಣಗಳಲ್ಲಿ ಯಾವ ರೀತಿಯ ವ್ಯತ್ಯಾಸವೂ ಇಲ್ಲ. ಈ ಹಕ್ಕಿ ಜೋಡಿಜೋಡಿಯಾಗಿಯೋ ಗುಂಪಾಗಿಯೋ ದೂರವಾಣಿ ತಂತಿಗಳ ಮೇಲೆ ಕುಳಿತಿರುವುದನ್ನು ಕಾಣಬಹುದು. ಇದರ ಕೊಕ್ಕು ನೀಳವಾಗಿ, ತೆಳುವಾಗಿ ಸ್ವಲ್ಪ ಬಾಗಿದೆ. ರೆಕ್ಕೆಗಳು ಸಣ್ಣವು; ದುಂಡಾಗಿವೆ. ಬಾಲದಲ್ಲಿ ೧೨ ಗರಿಗಳಿವೆ. ಇವುಗಳಲ್ಲಿ ಮಧ್ಯದ ಗರಿಗಳು ಮೊಟಕಾದ ಸೂಜಿಗಳಂತಿವೆ. ಈ ಹಕ್ಕಿ ಬಹಳ ಚುರುಕಾಗಿ ಹಾರಾಡಬಲ್ಲುದು. ಹಾರುತ್ತಿರುವಾಗ ಇದರ ದೇಹದ ವಿವಿಧ ಬಣ್ಣಗಳು ಬಹಳ ಚೆನ್ನಾಗಿ ಕಾಣುತ್ತವೆ. ಅಲ್ಲದೆ ತನ್ನ ಕೊಕ್ಕನ್ನು ಕಟಕಟನೆ ಕಡಿಯುತ್ತಿರುತ್ತದೆ. ಒಣಗಿದ ರೆಂಬೆಗಳು, ಉದ್ದವಾದ ಕಂಬಗಳ ಮೇಲೆ ಕುಳಿತಿದ್ದು, ಅಂತರಿಕ್ಷದಲ್ಲಿ ಹಾರುತ್ತಿರುವ ಕೀಟಗಳನ್ನು ಥಕ್ಕನೆ ಹಾರಿ ಹಿಡಿದು, ತನ್ನ ರೆಕ್ಕೆಗಳನ್ನು ಚಲಿಸದಂತೆ ಹರಡಿ, ಹಾಗೆಯೇ ಹಿಂದಕ್ಕೆ ತಿರುಗಿಕೊಂಡು ತನ್ನ ಮೊದಲಿನ ಸ್ಥಾನಕ್ಕೆ ಬಂದು ಸೇರುತ್ತದೆ. ಅನಂತರ ಕೀಟವನ್ನು ಕೊಂಬೆಯ ಮೇಲಿಟ್ಟು ಕುಕ್ಕಿ ನುಂಗುತ್ತದೆ. ಈ ಶಿಕಾರಿಯ ಕ್ರಮ ನೋಡಲು ಬಹಳ ರಮ್ಯ. ದನಕರುಗಳ ಮೈಮೇಲಿನ ಕೀಟ ಮತ್ತು ಉಣ್ಣೆಗಳನ್ನು ತಿನ್ನುವುದೂ ಉಂಟು. ಮಧ್ಯಾಹ್ನದ ಹೊತ್ತಿನಲ್ಲಿ ಎಲೆಗಳ ಮರೆಯಲ್ಲಿ ವಿಶ್ರಮಿಸುತ್ತದೆ. ಕೆಲವು ಸಾರಿ ಮಣ್ಣಿನಲ್ಲಿ ಹೊರಳಾಡಿ ದೇಹವನ್ನು ಧೂಳಿನಿಂದ ತುಂಬಿಸಿಕೊಳ್ಳುತ್ತದೆ. ಮನುಷ್ಯನನ್ನು ಕಂಡರೆ ನಾಚಿಕೆಯಾಗಲಿ ಭಯವಾಗಲಿ ಇಲ್ಲ. ಸಾಧಾರಣವಾಗಿ ಸದ್ದು ಗದ್ದಲ ಮಾಡದ ಹಕ್ಕಿಯಾದರೂ ಕೆಲವೊಮ್ಮೆ ಇಂಪಾಗಿ 'ಟಿಟ್ ಟಿಟ್' ಎಂದು ಶಬ್ದ ಮಾಡುತ್ತದೆ. ರಾತ್ರಿಯನ್ನು ದೊಡ್ಡ ಮರಗಳ ರೆಂಬೆಯಲ್ಲಿ ಹುದುಗಿ ಮಲಗಿದ್ದು ಕಳೆಯುತ್ತದೆ. ಆಗಿಂದಾಗ್ಗೆ ಇಡಿ ಗುಂಪು ಗಾಬರಿಪಟ್ಟಂತೆ ಹೆಚ್ಚು ಉದ್ರೇಕಿತವಾದ 'ಟ್ರಿ ಟ್ರಿ' ಎಂಬ ಶಬ್ದವನ್ನು ಮಾಡುತ್ತ ತಾವು ವಾಸವಾಗಿರುವ ಮರಗಳನ್ನು ಸುತ್ತಿ ಸುತ್ತಿ ಬಂದು ಅನಂತರ ನಿಧಾನವಾಗಿ ಅದೇ ಮರಗಳಲ್ಲಿ ನಿಶ್ಶಬ್ದವಾಗಿ ಅಡಗಿಕೊಳ್ಳುತ್ತವೆ.

ಈ ಹಕ್ಕಿಯ ಸಂತಾನೋತ್ಪತ್ತಿಯ ಕಾಲ ಫೆಬ್ರವರಿಯಿಂದ ಮೇ ವರೆಗೆ. ಸಾಧಾರಣವಾಗಿ ಗುಂಪು ಗುಂಪಾಗಿ ಸೇರಿಕೊಂಡು ನದಿಯ ದಡಗಳಲ್ಲಿ ಗೂಡುಗಳನ್ನು ನಿರ್ಮಿಸುತ್ತವೆ. ಗೂಡು ಕಟ್ಟುವ ಕ್ರಮ ವೈಶಿಷ್ಟ್ಯಪೂರ್ಣವಾದುದು. ಮೊದಲು ತನ್ನ ಅರ್ಧ ತೆರೆದ ಕೊಕ್ಕಿನಿಂದ ಗೋಡೆಯ ಸು. ೨೫–೩೦ ಸೆಂಮೀ ದೂರದಿಂದ ಅನೇಕಬಾರಿ ಕುಕ್ಕುವುದರಿಂದ ಗೋಡೆಯಲ್ಲಿ ರಂಧ್ರವುಂಟುಮಾಡುತ್ತದೆ. ನಿಂತುಕೊಳ್ಳಲು ಸಾಧ್ಯವಾಗುವಷ್ಟು ದೊಡ್ಡದಾದ ರಂಧ್ರವಾದ ಮೇಲೆ ಕೊರೆಯುವ ಕೆಲಸ ಇನ್ನೂ ರಭಸವಾಗಿ ಸಾಗುತ್ತದೆ. ಬಿಲದ ಆಳ ಸು. ೧೦ ಸೆಂಮೀ ನಷ್ಟು ಆದಾಗ ಹಕ್ಕಿ ಬಿಲದೊಳಗಿನಿಂದ ಅಗೆಯಲು ಪ್ರಾರಂಭಿಸುತ್ತದೆ. ಅಗೆದ ಮಣ್ಣನ್ನು ತನ್ನ ಕಾಲುಗಳಿಂದ ಹೊರ ಹಾಕುತ್ತದೆ. ಈ ರೀತಿ ಸುಮಾರು ೪ ಸೆಂಮೀ ಅಗಲ ಮತ್ತು ೦.೩–೧.೮ ಮೀ ಉದ್ದವಿರುವ ಬಿಲಗಳನ್ನು ಕೊರೆದು, ಇಂಥ ಗೂಡಿನಲ್ಲಿ ಹೆಣ್ಣುಹಕ್ಕಿ ಗುಂಡಗಿರುವ ಅಚ್ಚ ಬಿಳಿಯ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಸಂಖ್ಯೆ ೪–೭. ಹೆಣ್ಣು ಮತ್ತು ಗಂಡು ಎರಡೂ ಜೊತೆಗೂಡಿ ಗೂಡನ್ನು ನಿರ್ಮಿಸುವುದಲ್ಲದೆ ಮೊಟ್ಟೆಗಳಿಗೆ ೨೨ ದಿನ ಕಾವನ್ನು ಕೊಟ್ಟು ಮರಿ ಮಾಡಿ, ಮರಿಗಳಿಗೆ ಆಹಾರವನ್ನು ಸಹ ತಂದು ಒದಗಿಸುತ್ತವೆ. ಈ ಹಕ್ಕಿಯ ಮಾಂಸ ತಿನ್ನಲು ರುಚಿಯಾಗಿರುತ್ತದೆ. ಗರಿಗಳನ್ನು ಹೆಚ್ಚಾಗಿ ಅಲಂಕಾರ ವಸ್ತುವಾಗಿ ಉಪಯೋಗಿಸುತ್ತಾರೆ.

ನೀಲಿ ಬಣ್ಣದ ಕಳ್ಳಿಪೀರ ಸುಮಾರು ೨೦ ಸೆಂಮೀ ಉದ್ದವಿದೆ. ಬಾಲ ಹಸಿರು ನೀಲಿಯ ಬಣ್ಣದ್ದು. ಕಣ್ಣುಗಳ ಬಳಿ ಕಪ್ಪು ಗೆರೆಗಳನ್ನು ಕಾಣಬಹುದು. ಕತ್ತಿನ ಬಳಿ ಹಳದಿ ಬಣ್ಣದ ಗುರುತಿದೆ. ಇದು ಭಾರತ, ಬರ್ಮ, ಸಿಂಹಳ ದ್ವೀಪಗಳ ನಿವಾಸಿ. ಈ ಹಕ್ಕಿ ಗಂಭೀರವಾಗಿ ಟುವ್ವಿ, ಟುವ್ವಿ ಎಂದು ಕೂಗುತ್ತದೆ. ಇದರ ಸಂತಾನೋತ್ಪತ್ತಿಯ ಕಾಲ ಮಾರ್ಚಿನಿಂದ ಜೂನ್ ವರೆಗೆ. ಗೂಡು ಕಟ್ಟುವ ಕ್ರಮ ಮುಂತಾದುವೆಲ್ಲ ಹಸಿರು ಬಣ್ಣದ ಕಳ್ಳಿಪೀರದಂತೆಯೇ.

ಮೆರಾಪ್ಸ್ ಏಪಿಯಾಸ್ಟರ್ (ಯುರೋಪ್‌ನ ಕಳ್ಳಿಪೀರ), ಮೆರಾಪ್ಸ್ ನುಬಿಕಲ್ (ಕಾರ್ಮೈನ್ ಕಳ್ಳಿಪೀರ) ಮತ್ತು ಮೆರಾಪ್ಸ್ ಓರ್ನಾಟಸ್ (ಕಾಮನಬಿಲ್ಲು ಕಳ್ಳಿಪೀರ) ಇತರ ಪ್ರಭೇದಗಳು. (ಕೆ.ಪಿ.ಆರ್.)

**ಕಾಂಗರೂ:** ಅರೆಬೆಳೆದ ಮರಿಗಳನ್ನು ಹೆತ್ತು ಅವನ್ನು ತಮ್ಮ ಹೊಟ್ಟೆಯಲ್ಲಿನ ಚೀಲದಲ್ಲಿ ಹೊತ್ತು ಬೆಳೆಸುವ ಅನೇಕ ಪ್ರಾಣಿಜಾತಿಗಳಲ್ಲಿ ಒಂದು. ಅನೇಕ ವಿಚಿತ್ರಪ್ರಾಣಿಗಳಿಗೆ ಹೆಸರಾದ ಆಸ್ಟ್ರೇಲಿಯ ಇದರ ತವರು. ಟಾಸ್ಮೇನಿಯ ದ್ವೀಪದಲ್ಲೂ ಕಾಂಗರೂ ಕಾಣಬರುತ್ತದೆ. ಇದು ಮಾರ್ಸ್ಯೂಪಿಯೇಲಿಯ ಗಣಕ್ಕೂ ಮ್ಯಾಕ್ರೋಪೋಡಿಡೆ ಕುಟುಂಬಕ್ಕೂ ಸೇರಿದೆ. ತುಂಬ ವಿಚಿತ್ರ ಪ್ರಾಣಿಯಿದು. ನೆಗೆಯಲು ಅನುಕೂಲವಾದ ಉದ್ದನೆಯ ಹಾಗೂ ಬಲವಾದ ಹಿಂಗಾಲುಗಳು, ಮಾಂಸಲವಾಗಿ ಬೆಳೆದ ಉದ್ದವಾದ ಬಾಲ, ಮರಿಗಳನ್ನು ಹೊತ್ತು ಸಾಗಲು ಮತ್ತು ಪೋಷಿಸಲು ಅನುಕೂಲವಾದ ಹೊಟ್ಟೆಯ ಚೀಲ ಇದರ ವೈಶಿಷ್ಟ್ಯಗಳು. ಬಾಲ ಬುಡದಲ್ಲಿ ದಪ್ಪವಾಗಿಯೂ ತುದಿಯಲ್ಲಿ ಮೊನಚಾಗಿಯೂ ಇದೆ. ಕಾಂಗರೂ ಕುಳಿತಾಗ ತನ್ನ ಹಿಂಗಾಲುಗಳನ್ನೂ ಬಾಲವನ್ನೂ ಒಂದು ಬಗೆಯ ಊರೆಯಾಗಿ ಉಪಯೋಗಿಸಿಕೊಂಡು ವಿಚಿತ್ರ ಭಂಗಿಯಲ್ಲಿ ಕುಳಿತುಕೊಳ್ಳುತ್ತದೆ. ಅಲ್ಲದೆ ಓಡುವಾಗ ನಿಂತು ತನ್ನ ಬಲವಾದ ಕಾಲುಗಳನ್ನೂರಿ ಕುಪ್ಪಳಿಸುತ್ತ ಹೋಗುತ್ತದೆ. ನೆಗೆಯುವುದರಲ್ಲಿ ಬಲು ಕುಶಲಿ. ಒಂದು ನೆಗೆತಕ್ಕೆ ಸುಮಾರು ೭.೫ ಮೀ ದೂರ ಕ್ರಮಿಸಬಲ್ಲುದು; ೨.೭ ಮೀ ಎತ್ತರ ಹಾರಬಲ್ಲ ಸಾಮರ್ಥ್ಯವೂ ಇದೆ.



ಕಾಂಗರೂ

ಪೂರ್ಣಬೆಳೆದ ಕಾಂಗರೂ ಸು. ೨.೫ ಮೀ ಉದ್ದ ಬೆಳೆದು, ಸು. ೯೦ ಕಿಗ್ರಾಂ ತೂಗುತ್ತದೆ. ಮೈಮೇಲೆಲ್ಲ ಕಂದು ಅಥವಾ ಬೂದಿಬಣ್ಣದ ಉಣ್ಣೆಯಂಥ ಕೂದಲಿದೆ. ಮೂತಿ ಹೆಚ್ಚುಕಡಿಮೆ ನಾಯಿಯಂತೆ. ಬಾಯಿ ಚಿಕ್ಕದು; ತುಟಿಗಳು ಮುಂಚಾಚಿವೆ. ಕಿವಿಗಳು ದೊಡ್ಡವು, ದುಂಡಗಿವೆ; ಹಿಂದಕ್ಕೂ ಮುಂದಕ್ಕೂ ಚಲಿಸಬಲ್ಲುವು. ಮುಂಗಾಲುಗಳು ಬಲು ಚಿಕ್ಕವು. ಎಲ್ಲ ಕಾಂಗರೂಗಳಿಗೂ ಮುಂಭಾಗದಲ್ಲಿ ತೆರೆಯುವಂಥ ಹೊಟ್ಟೆಯ ಚೀಲವಿದೆ. ಈ ಚೀಲದ ಒಳಗೆ ೪ ಮೊಲೆತೊಟ್ಟುಗಳಿವೆ.

ಕಾಂಗರೂಗಳು ಹೆಚ್ಚಾಗಿ ಬಯಲಿನಲ್ಲೆ ವಾಸಮಾಡುತ್ತವೆ. ಸಾಮಾನ್ಯವಾಗಿ ಜೊತೆಯಾಗಿಯೋ ದೊಡ್ಡ ದೊಡ್ಡ ಹಿಂಡುಗಳಲ್ಲಿ ವಾಸಿಸುತ್ತವೆ. ಒಂದೊಂದು ಹಿಂಡಿನಲ್ಲಿ ೫೦–೬೦ ಪ್ರಾಣಿಗಳಿರುವುದೂ ಉಂಟು. ಪ್ರತಿಯೊಂದು ಹಿಂಡಿಗೂ ಅದರದೇ ಆದ ತನ್ನಕ್ಷೇತ್ರವಿದೆ. ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸುವಾಗ ಮುಂದಾಳನ್ನು ಹಿಂಡಿನ ಉಳಿದ ಪ್ರಾಣಿಗಳು ಅನುಸರಿಸುತ್ತವೆ. ಕಾಂಗರೂಗಳು ಸ್ವಾಭಾವಿಕವಾಗಿ ಬಹಳ ಶಾಂತಸ್ವಭಾವದ ಪ್ರಾಣಿಗಳು. ಪುಕ್ಕಲುಸ್ವಭಾವದವೆಂದೇ ಹೇಳಬಹುದು. ಬೆದೆಗಾಲದಲ್ಲಿ ಮಾತ್ರ ಇತರ ಪ್ರಾಣಿಗಳೊಂದಿಗೆ ಕ್ರೂರವಾಗಿ ಹೋರಾಡಬಲ್ಲುವು. ಇವುಗಳ ಹಿಂಗಾಲಿನೊದೆತ ಸಾಮಾನ್ಯವಾದ ಏಟಲ್ಲ. ಹೋರಾಡುವಾಗ ಇವು ನಿಮಿರಿನಿಂತು ಬಾಲವನ್ನೂ ಒಂದು ಕಾಲನ್ನೂ ನೆಲಕ್ಕೂರಿ ಮತ್ತೊಂದು ಕಾಲಿನಿಂದ ರಪರಪನೆ ಒದೆಯುತ್ತವೆ.

ಕಾಂಗರೂಗಳು ಸಸ್ಯಾಹಾರಿಗಳು. ಹುಲ್ಲು, ಗಿಡಗಳ ಚಿಗುರು ಇವುಗಳ ಪ್ರಧಾನ ಆಹಾರ. ಗರ್ಭಧಾರಣೆಯ ಕಾಲ ಬಲುಕಿರಿಯದು. ಅದರ ಅವಧಿ ಸುಮಾರು ೩ ವಾರ ಮಾತ್ರ. ಒಂದು ಸೂಲಿಗೆ ಒಂದೇ ಮರಿ ಹುಟ್ಟುತ್ತದೆ. ಆಗತಾನೇ ಹುಟ್ಟಿದ ಮರಿ ತುಂಬ ಚಿಕ್ಕದು. ಸು. ೨.೫ ಮಿಮೀ ಉದ್ದವಿರುತ್ತದೆ. ಕಣ್ಣು ತೆರೆದೇ ಇರುವುದಿಲ್ಲ. ಮೈಮೇಲೆ ಕೂದಲಿನ ಹೊದಿಕೆಯೂ ಇರುವುದಿಲ್ಲ. ಹೀಗೆ ಅಪೂರ್ಣಾವಸ್ಥೆಯಲ್ಲಿ ಹುಟ್ಟುವ ಮರಿಯ ಉಳಿದ ಬೆಳೆವಣಿಗೆಯೆಲ್ಲ ತಾಯಿಯ ಹೊಟ್ಟೆಯ ಚೀಲದಲ್ಲಿಯೆ. ಮರಿ ಹುಟ್ಟಿದ ತತ್‌ಕ್ಷಣ ತನ್ನ ಮುಂಗಾಲುಗಳ ಸಹಾಯದಿಂದ ತಾಯಿಯ ಹೊಟ್ಟೆಚೀಲದೊಳಕ್ಕೆ ಹತ್ತಿಹೋಗುತ್ತದೆ. ಚೀಲದೊಳಕ್ಕೆ ಹೋದ ಅನಂತರ ಯಾವುದಾದರೊಂದು ಮೊಲೆತೊಟ್ಟನ್ನು ಬಾಯಿಯಿಂದ ಕಚ್ಚಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಸುಮಾರು ೩ ತಿಂಗಳು ಕಾಲ ಕಳೆದು ತನ್ನ ಬೆಳೆವಣಿಗೆಯನ್ನು ಪೂರ್ಣಗೊಳಿಸುತ್ತದೆ. ಅನಂತರ ಅದು ಚೀಲದಿಂದ ಹೊರಗೆ ಬಂದು ತನ್ನ ಸ್ವಂತ ಬದುಕನ್ನು ನಡೆಸಲು ಪ್ರಾರಂಭಿಸಬಲ್ಲುದು. ಆದರೆ ಮುಂದೆಯೂ ಹಲವಾರು ತಿಂಗಳು ಕಾಲ ತಾಯಿಯೊಡನೆಯೇ ಇದ್ದು ಆಪತ್ತೊದಗಿದಾಗ ಪುನಃ ತನ್ನ ಈ ರಕ್ಷಣಾಸ್ಥಾನಕ್ಕೆ ಮರಳಬಹುದು.

ಕಾಂಗರೂಗಳಲ್ಲಿ ಸುಮಾರು ೨೦ಕ್ಕಿಂತಲೂ ಹೆಚ್ಚು ಜಾತಿಗಳಿವೆ. ಇವುಗಳಲ್ಲಿ ಮುಖ್ಯವಾದುವು ಇವು: ೧. ಮ್ಯಾಕ್ರೋಪಸ್ ಜೈಗಾಂಟಿಯಸ್ ಎಂಬ ದೊಡ್ಡ ಗಾತ್ರದ ಕಾಂಗರೂ. ಇದರ ಬಣ್ಣ ಬೂದಿ. ಪೂರ್ವ ಹಾಗೂ ಪಶ್ಚಿಮ ಆಸ್ಟ್ರೇಲಿಯ ಮತ್ತು ಟಾಸ್ಮೇನಿಯಗಳಲ್ಲಿ ಜೀವಿಸುತ್ತದೆ. ೨. ಮ್ಯಾಕ್ರೋಪಸ್ ರೂಫಸ್ (ಕೆಂಪು ಬಣ್ಣದ ಕಾಂಗರೂ). ಆಸ್ಟ್ರೇಲಿಯದ ಒಳನಾಡಿನ ವಾಸಿ ಇದು. ಇವಲ್ಲದೆ ಮ್ಯಾಕ್ರೋಪೋಡಿಡೀ ಕುಟುಂಬಕ್ಕೆ ಸೇರಿದ ಡೆಂಡ್ರೊಲೇಗಸ್ (ಟ್ರೀ ಕಾಂಗರೂ ವಾಲಬೀಯ (ವಾಲಬೀ), ಪೆಟ್ರೋಗೇಲ್ (ರಾಕ್ ವಾಲಬೀ), ಡಾರ್ಕಾಪ್ಸಿಸ್ ಮುಂತಾದ ಜಾತಿಯ ಪ್ರಾಣಿಗಳನ್ನೂ ಸಾಮಾನ್ಯ ಭಾಷೆಯಲ್ಲಿ ಕಾಂಗರೂಗಳೆಂದೇ ಕರೆಯುತ್ತಾರೆ. ನೋಡಿ– ಮಾರ್ಸ್ಯೂಪಿಯೇಲಿಯ, ವಾಲಬೀ.

***

**ಕಾಂಗರೂ ಇಲಿ:** ಉತ್ತರ ಅಮೆರಿಕದ ಬೃಹದ್ ಮೈದಾನಗಳಲ್ಲಿ, ನೈಋತ್ಯಭಾಗದಲ್ಲಿನ ಮರುಭೂಮಿಯಲ್ಲಿ ವಾಸಿಸುವ ಒಂದು ಪುಟ್ಟ ದಂಶಕ (ರೋಡೆಂಟ್). ಡೈಪೊಡೋಮಿಸ್ ಜಾತಿಗೂ ಹೆಟರೋಮೈಯಿಡೆ ಕುಟುಂಬಕ್ಕೂ ಸೇರಿದೆ. ಮೆಕ್ಸಿಕೊ, ಕ್ಯಾಲಿಫೋರ್ನಿಯ, ಇಡಾಹೊ, ವ್ಯೋಮಿಂಗ್ ಮತ್ತು ಓಕ್ಲಹೋಮ ರಾಜ್ಯಗಳಲ್ಲಿ ಬಲು ಸಾಮಾನ್ಯ. ಈ ಜಾತಿಯಲ್ಲಿ ಸುಮಾರು ೫೦ ಪ್ರಭೇದಗಳಿವೆ. ಎಲ್ಲವೂ ಸಾಧಾರಣವಾಗಿ ೧೦–೧೬ ಸೆಂಮೀ ಉದ್ದ ಬೆಳೆಯುತ್ತವೆ. ದೇಹದ ಬಣ್ಣ ಕೆಲವದರಲ್ಲಿ ಕಂದು. ಇನ್ನು ಕೆಲವು ತಿಳಿಬೂದಿ ಬಣ್ಣದವು. ಮಧ್ಯವರ್ತಿ ಬಣ್ಣಗಳ ಇಲಿಗಳೂ ಉಂಟು. ಎಲ್ಲ ಪ್ರಭೇದಗಳಿಗೂ ಇರುವ ಸಾಮಾನ್ಯ ಲಕ್ಷಣಗಳಿವು: ದಪ್ಪತಲೆ, ದೊಡ್ಡದೊಡ್ಡ ಕಣ್ಣುಗಳು, ಬಲು ಪುಟ್ಟ ಮುಂಗಾಲುಗಳು, ಬಹಳ ಉದ್ದವಾದ ಹಿಂಗಾಲುಗಳು ಮತ್ತು ದೇಹಕ್ಕಿಂತ ಉದ್ದವಾದ ಬಾಲ. ಕೆನ್ನೆಯ ಎರಡೂ ಕಡೆ ಆಹಾರವನ್ನು ಕೂಡಿಡಲು ಸಂಚಿಗಳಿರುವುದು ಇವುಗಳ ಇನ್ನೊಂದು ವಿಶೇಷ ಲಕ್ಷಣ. ಪಾದಗಳು ಮತ್ತು ಉದರಭಾಗ ಬಿಳಿಯ ಬಣ್ಣವಾಗಿವೆ. ಪೃಷ್ಠಭಾಗ ಮತ್ತು ಬಾಲದ ಎರಡೂ ಪಕ್ಕಗಳಲ್ಲಿ ಉದ್ದನೆಯ ಬಿಳಿ ಪಟ್ಟೆಯಿದೆ. ಬಾಲದ ತುದಿ ಕುಚ್ಚಿನಂತಿದೆ.

ಮರದ ದಿಮ್ಮಿಗಳ ಕೆಳಗೆ, ದಟ್ಟವಾದ ಪೊದೆಗಳಲ್ಲಿ, ನೆಲದಲ್ಲಿ ಬಿಲಗಳನ್ನು ತೋಡಿ ಅವುಗಳಲ್ಲಿದ್ದು ವಾಸಿಸುತ್ತದೆ. ಕಾಳು, ಹುಲ್ಲು, ಮಿಡತೆ ಮುಂತಾದ ಕೀಟಗಳು ಇದರ ಪ್ರಧಾನ ಆಹಾರ. ಹೆಚ್ಚಾದ ಆಹಾರವನ್ನು ತನ್ನ ಬಿಲದಲ್ಲಿನ ಕೆಲವು ವಿಶೇಷ ಗೂಡುಗಳಲ್ಲಿ ಕೂಡಿಡುತ್ತದೆ. ಆಹಾರಕ್ಕಾಗಿ ಬಲು ಸುಟಿಯಾಗಿ ಕಾಂಗರೂಗಳಂತೆ ಹಿಂಗಾಲು ಊರಿ ಕುಪ್ಪಳಿಸುತ್ತ ಓಡಾಡುತ್ತದೆ. ಬಲುಚೆನ್ನಾಗಿ ನೆಗೆಯಲೂ ಬಲ್ಲುದು. ಒಂದು ನೆಗೆತಕ್ಕೆ ಸುಮಾರು ೧.೮–೨.೧ ಮೀ ದೂರ ಕ್ರಮಿಸಬಲ್ಲುದು. ಹೀಗೆ ಹಾರುವಾಗ ಸಮತೋಲನವನ್ನು ಕಾಯ್ದುಕೊಳ್ಳಲೂ ದಿಕ್ಕನ್ನು ಬದಲಾಯಿಸಲೂ ಚುಕ್ಕಾಣಿಯಂತೆ ತನ್ನ ಬಾಲವನ್ನು ಉಪಯೋಗಿಸುತ್ತದೆ.

ಕಾಂಗರೂ ಇಲಿ ವರ್ಷಕ್ಕೆ ಎರಡು ಮೂರು ಸಲ ಮರಿ ಹಾಕುತ್ತದೆ. ಒಂದು ಸೂಲಿಗೆ 3–5 ಮರಿಗಳನ್ನು ಹೆರುವುದು ವಾಡಿಕೆ. ಗರ್ಭಾವಧಿ ೪–೫ ವಾರಗಳು. ಹುಟ್ಟಿದಾಗಿನಿಂದ ಸುವಾರು 15 ದಿವಸಗಳವರೆಗೂ ಮರಿಗಳ ಕಣ್ಣುಗಳು ಮುಚ್ಚಿಕೊಂಡೇ ಇರುತ್ತವೆ.

***

**ಕಾಂಗರೂ ಹೆಗ್ಗಣ:** ದಕ್ಷಿಣ ಆಸ್ಟ್ರೇಲಿಯದ ಬಿಲವಾಸಿ ಸ್ತನಿ (ಮಾರ್ಸ್ಯೂಪಿಯಲ್ ಮೋಲ್). ಕಾಂಗರೂ ಮುಂತಾದುವುಗಳಲ್ಲಿರುವಂತೆ ಅಪ್ರಬುದ್ಧಾವಸ್ಥೆಯಲ್ಲಿ ಹುಟ್ಟುವ ಮರಿಗಳನ್ನು ಸಾಕಲು ಸಹಕಾರಿಯಾದ ಹೊಟ್ಟೆಚೀಲವಿರುವುದರಿಂದಲೂ ನೋಡಲು ಇದು ಮಕಮಲ್ ಹೆಗ್ಗಣ ಅಥವಾ ನೆಲಗುಮ್ಮದ (ಮೋಲ್) ಹಾಗಿರುವುದರಿಂದಲೂ ಇದಕ್ಕೆ ಕಾಂಗರೂ ಹೆಗ್ಗಣ ಎಂದು ಹೆಸರು. ಕಾಂಗರೂ, ವಾಲಬೀ ಮುಂತಾದ ಪ್ರಾಣಿಗಳನ್ನೊಳಗೊಂಡ ಮಾರ್ಸ್ಯೂಪಿಯೇಲಿಯ ಗಣಕ್ಕೂ ನೋಟೊರಿಕ್ಟಿಡೆ ಕುಟುಂಬಕ್ಕೂ ಸೇರಿದೆ. ಇದರ ಶಾಸ್ತ್ರೀಯನಾಮ ನೋಟೊರಿಕ್ಟೀಸ್ ಟಿಫ್ಲಾಪ್ಸ್.

ಸುಮಾರು ೯೦–೧೮೦ ಮಿಮೀ ಉದ್ದಕ್ಕೆ ಬೆಳೆಯುವ ಸಣ್ಣಗಾತ್ರದ ಪ್ರಾಣಿಯಿದು. ದೇಹದ ಮೇಲೆಲ್ಲ ಬಿಳಿಯ ಅಥವಾ ಹೊಂಬಣ್ಣದ ನಿಡಿದಾದ ರೇಷ್ಮೆಯಂಥ ಕೂದಲಿನ ಹೊದಿಕೆಯುಂಟು. ಬಾಲ ತುಂಬ ಚಿಕ್ಕದು; ಕೊಳವೆಯಂತಿದೆ; ಬಲು ಗಟ್ಟಿಯಾದುದೂ ಚರ್ಮಿಲವೂ ಆಗಿದೆ. ಅದರ ತುದಿಯಲ್ಲಿ ಕೊಂಬಿನಂಥ ಬುಗುಟಿದೆ. ಮೂಗಿನ ಮೇಲೂ ಕೊಂಬಿನಂಥ ಫಲಕವೊಂದಿದೆ. ಕಾಂಗರೂ ಹೆಗ್ಗಣಕ್ಕೆ ಹೊರಕಿವಿಗಳೇ ಇಲ್ಲ. ಇದರ ಬದಲು ತಲೆಯ ಮೇಲ್ಭಾಗದ ಎರಡೂ ಪಕ್ಕಗಳಲ್ಲಿ ಬರಿಯ ಎರಡು ತೂತುಗಳಿವೆ. ಅಲ್ಲದೆ ಈ ಪ್ರಾಣಿಗೆ ಬೇರೆ ಸ್ತನಿಗಳಲ್ಲಿರುವಂಥ ಕಣ್ಣುಗಳೂ ಇಲ್ಲ, ಹಿಂದೆ ಇದ್ದಿರಬಹುದಾದಂಥ ಕಣ್ಣುಗಳ ಅವಶೇಷವಾಗಿ ಎರಡು ಗುಳಿಗಳು ಮಾತ್ರ ಇವೆ. ಇವಕ್ಕೆ ಕನೀನಿಕೆಗಳು (ಪ್ಯೂಪಿಲ್ಸ್) ಇಲ್ಲ. ಮುಂಗಾಲಿನ ಪಾದಗಳಲ್ಲಿ ಎರಡೆರಡು ದೊಡ್ಡ ಪಂಜಗಳಿವೆ.

ಕಾಂಗರೂ ಹೆಗ್ಗಣ

ಇವು ಬಿಲ ತೋಡಲು ಅನುಕೂಲವಾಗಿವೆ. ಹಿಂಗಾಲಿನ ಪಾದಗಳಲ್ಲೂ ಮೂರು ಮೂರು ಪಂಜಗಳಿವೆ. ಕಾಂಗರೂ ಹೆಗ್ಗಣಗಳು ನೆಲದಲ್ಲಿ ಬಿಲ ತೋಡಿ ಅವುಗಳಲ್ಲಿ ವಾಸಿಸುತ್ತವೆ. ಇವುಗಳ ಆಹಾರ ಮುಖ್ಯವಾಗಿ ಎರೆಹುಳುಗಳು, ಕೀಟಗಳು ಇತ್ಯಾದಿ. ಆಹಾರ ತಿನ್ನುವಾಗ ಬಲು ಉದ್ರೇಕಗೊಂಡಂತೆ ಇರುತ್ತದೆ. ತಿನ್ನುತ್ತಿರುವಾಗಲೇ ಹಠಾತ್ತನೆ ನಿದ್ದೆ ಮಾಡುವುದೂ ಅಷ್ಟೇ ಚುರುಕಾಗಿ ಎಚ್ಚೆತ್ತು ಆಹಾರ ಭಕ್ಷಣೆಯನ್ನು ಮುಂದುವರಿಸುವುದೂ ಇದರ ಸೋಜಿಗಗಳು. ಬಹಳ ವಿರಳ ಪ್ರಾಣಿಗಳಾದುದರಿಂದ ಇವುಗಳ ಸಂತಾನೋತ್ಪತ್ತಿಯ ಕ್ರಮದ ಬಗ್ಗೆ ಏನೂ ಗೊತ್ತಿಲ್ಲ.

***

**ಕಾಂಡಕೊರಕ ಜೀರುಂಡೆಗಳು:** ಸಸ್ಯದ ಕಾಂಡ ಕೊರೆಯುವ ಕೀಟಗಳು. ಇವು ಕೀಟವರ್ಗದ ಕೋಲಿಯಾಪ್ಟಿರ (ಜೀರುಂಡೆ) ಗಣಕ್ಕೆ ಸೇರಿವೆ. ಆಂಗ್ಲ ಭಾಷೆಯಲ್ಲಿ ಸ್ಟೆಮ್ ಬೋರರ್ ಬೀಟಲ್ಸ್ ಎನ್ನುವರು. ಇವು ಬೃಹದಾಕಾರದ ಮರಗಳ ಕಾಂಡದೊಳಗೆ ವಾಸಿಸುತ್ತವೆ. ಬೇರು, ಕಾಂಡ, ಕುಡಿ, ಮೊಗ್ಗು, ಕಾಯಿ ಮತ್ತು ಬೀಜಗಳನ್ನೂ ಕೊರೆಯುತ್ತವೆ. ಪ್ರೌಢಕೀಟಗಳು ಕಾಂಡವನ್ನು ಕೊರೆಯುವುದಿಲ್ಲ. ಇವುಗಳ ಮರಿಗಳು (ಗ್ರಬ್) ಮಾತ್ರ ಕಾಂಡಕೊರೆಯುತ್ತವೆ. ಮರಿಗಳು ಬಿಳಿ ಅಥವಾ ನಸುಹಳದಿ ಬಣ್ಣದುವು. ಇವುಗಳ ದೇಹವು ತಲೆ, ಎದೆ ಹಾಗೂ ಉದರದಿಂದಾಗಿದೆ. ಕೆಲವು ಪ್ರಭೇದಗಳಲ್ಲಿ, ಎದೆಯ ಭಾಗದಲ್ಲಿ ೩ ಜೊತೆ ಕಾಲುಗಳಿವೆ. ಆದರೆ ಉದರಭಾಗದಲ್ಲಿ ಉಪಪಾದಗಳಿಲ್ಲ. ಇನ್ನು ಕೆಲವು ಪ್ರಭೇದಗಳಲ್ಲಿ ಸ್ಪಷ್ಟವಾದ ತಲೆ, ಕಾಲು ಮತ್ತು ಉಪಪಾದಗಳಿಲ್ಲ. ಎದೆಯ ಭಾಗದಲ್ಲಿ ಕಾಲುಗಳುಳ್ಳ ಪ್ರಭೇದಗಳನ್ನು ಬ್ಯೂಪ್ರೆಸ್ಟಿಡೆ, ಸೆರಾಂಬೈಸಿಡೆ ಮತ್ತು ಸ್ಕೊಲೈಟಿಡೆ ಎಂಬ ೩ ಕುಟುಂಬಗಳಾಗಿ ವಿಂಗಡಿಸಿದ್ದಾರೆ. ಕಾಲುಗಳಿಲ್ಲದುವನ್ನು ಕರ್ಕ್ಯೂಲಿಯಾನಿಡೆ ಕುಟುಂಬದಲ್ಲಿ ಸೇರಿಸಿದ್ದಾರೆ.

ಈ ಮರಿಗಳು ಪ್ರೌಢಾವಸ್ಥೆ ತಲುಪುವವರೆಗೂ ಕಾಂಡದೊಳಗೆ ಜೀವಿಸುತ್ತವೆ. ಕಾಂಡದಲ್ಲಿ ರಂಧ್ರಗಳನ್ನು ಕೊರೆದು ತಿರುಳು, ರಸ ತಿಂದು ಹೊರ ವಾತಾವರಣದ ಸಂಪರ್ಕವಿಲ್ಲದೆ ಬದುಕುತ್ತವೆ. ಇವುಗಳಿಂದ ಕೆಲವು ಆರ್ಥಿಕ ಮಹತ್ವವುಳ್ಳ ಮರಗಳಿಗೆ ಆಗುವ ಹಾನಿ ಅಪಾರ. ಹುಳು ಹತ್ತಿದ ಸಸ್ಯಗಳ ಬೆಳೆವಣಿಗೆ ಕುಂಠಿತಗೊಳ್ಳುವುದು. ಎಲೆ, ರೆಂಬೆಗಳು ಒಣಗಿ ಹೋಗುತ್ತವೆ. ಕಾಯಿಗಳು ಉದುರಿಹೋಗುತ್ತವೆ. ಕಾಂಡದಲ್ಲಿ ಇವುಗಳ

ಕೊರೆತದಿಂದ ರಂಧ್ರಗಳಾಗಿ, ಅದು ಟೊಳ್ಳಾಗಿ ಜೋರಾಗಿ ಬೀಸುವ ಗಾಳಿಗೆ ಮುರಿದು ಬೀಳುತ್ತದೆ.

ಕಾಂಡಕೊರಕ ಜೀರುಂಡೆಗಳಲ್ಲಿ ಹಲವು ಪ್ರಭೇದಗಳಿವೆ. ಇವುಗಳಲ್ಲಿ ಮುಖ್ಯವಾದುವು: ೧. ಸ್ಫೀನಾಪ್ಟರ ಗಾಸಿಪಿಯೈ (ಹತ್ತಿಗಿಡದ ಕಾಂಡಕೊರಕ), ೨. ಬ್ಯಾಟೋಸೀರ ರೂಫೋಮ್ಯಾಕ್ಯುಲೇಟ (ಮಾವಿನ ಕಾಂಡಕೊರಕ). ೩. ಕ್ಲೋರಿಡೋಲಮ್ ಅಲ್ಕಮೀನ್ (ಕಿತ್ತಳೆ ಗಿಡಗಳ ಕಾಂಡಕೊರಕ), ೪. ಜೈಲೋಟ್ರೇಕಸ್ ಕ್ವಾಡ್ರಿಪಸ್ (ಕಾಫಿ ಕಾಂಡಕೊರಕ). ೫. ಪ್ಲಾಕಿಡೀರಸ್ ಫೆರುಜಿನಿಯಸ್ (ಗೋಡಂಬಿಯ ಕಾಂಡಕೊರಕ). ೬. ಸೈಲಾಸ್ ಫಾರ್ಮಿಕೇರಿಯಸ್ (ಗೆಣಸು ಸಸ್ಯದ ಕಾಂಡಕೊರಕ), ೭. ರಿಂಕೋಫೀರಸ್ ಫೆರುಜಿನಿಯಸ್ (ತೆಂಗಿನ ಕಾಂಡಕೊರಕ), ೮. ಜೈಲೆಬೋರಸ್ ಮಾರ್ಸಾಟೈ (ಕಾಫಿ ಕಾಂಡಕೊರಕ). (ಡಿ.ಎಸ್.)

**ಕಾಂಡಕೊರಕ ನೊಣ:** ಕೀಟವರ್ಗದ ಡಿಪ್ಟರ ಗಣದ ಸದಸ್ಯ. ಸೆಸಿಡೋಮೈಯಿಡೆ, ಆಗ್ರೋಮೈಜ಼ಿಡೆ ಮತ್ತು ಆಂಥೊಮೈಯಿಡೆ ಕುಟುಂಬಗಳಲ್ಲಿ ಕಾಂಡಕೊರಕ ನೊಣಗಳಿವೆ. ಆಂಗ್ಲ ಭಾಷೆಯಲ್ಲಿ ಸ್ಟೆಮ್ ಬೋರರ್ ಫ್ಲೈ ಎನ್ನುವರು. ಇವುಗಳಲ್ಲಿ ಸೆಸಿಡೋಮೈಯಿಡೆ ಕುಟುಂಬದ ಪ್ಯಾಕಿಡಿಪ್ಲಾಸಿಸ್ ಒರೈಜ಼ೆ ನೊಣ ಬತ್ತದ ಕಣೆ ಅಥವಾ ಕೊಳವೆ ರೋಗಕ್ಕೆ ಕಾರಣ. ಆಗ್ರೋಮೈಜ಼ಿಡೆಗೆ ಸೇರಿದ ಆಗ್ರೋಮೈಜ಼ ಫೇಸಿಯೋಲಿ ಅಲಸಂದೆ (ತಡುಗುಣಿ) ಬೆಳೆಯ ಪೀಡೆ. ಮರಿಹುಳಗಳು ತೆಳು ಹಳದಿ ಬಣ್ಣದವು. ಇವುಗಳನ್ನು ಮ್ಯಾಗಟ್ ಎನ್ನುವರು. ಇವು ಎಳೆಗಿಡದ ಮೃದು ಕಾಂಡವನ್ನು ಕೊರೆದು ತಿನ್ನುತ್ತವೆ. ಕಾರಣ, ಗಿಡ ಬಾಡಿ ಸಾಯುತ್ತದೆ. ತಾಯಿ ನೊಣ ಮೃದುಕಾಂಡದ ಮೇಲಿರುವ ತೊಗಟೆಯೊಳಗೆ ಮೊಟ್ಟೆಗಳನ್ನು ಇಡುತ್ತದೆ. ಆಂಥೊಮೈಯಿಡೆ ಕುಟುಂಬಕ್ಕೆ ಸೇರಿದ ಅಥೆರಿಗೋನ ಇಂಡಿಕ ನೊಣ ಜೋಳದ ಎಳೆ ಸಸಿಗಳಿಗೆ ಮಾರಕ. ಇದು ಕಪ್ಪು ಬಣ್ಣದ ಸಣ್ಣ ನೊಣ.



ಕಾಂಡಕೊರಕ ನೊಣ

ಮೊಳೆಯುತ್ತಿರುವ ಸಸಿಯ ಕಾಂಡದಲ್ಲಿ ಮೊಟ್ಟೆಗಳನ್ನಿಡುತ್ತದೆ. ಮರಿಹುಳುಗಳು ಕಾಂಡವನ್ನು ಕೊರೆದು ತಿನ್ನುವುದರಿಂದ, ಸಸಿಗಳ ಸುಳಿ ಒಣಗಿ ಡೆಡ್ ಹಾರ್ಟ್ಸ್ ರೋಗಕ್ಕೆ ಕಾರಣವಾಗುತ್ತವೆ. ಭತ್ತಕ್ಕೆ ಅಥೆರಿಗೋನ ಒರೈಜ಼ೆ ಎಂಬ ನೊಣದಿಂದ ಮತ್ತು ನವಣೆಗೆ ಅ. ಡಿಸ್ಟ್ರಕ್ಟರ್ ಎಂಬ ನೊಣದಿಂದ ತೊಂದರೆಯುಂಟಾಗುತ್ತದೆ. ಕಾರಣ, ಈ ಬೆಳೆಗಳಿಂದ ಇಳುವರಿ ಕುಂಠಿತಗೊಂಡು, ರೈತರಿಗೆ ನಷ್ಟವಾಗುತ್ತದೆ. ಅದ್ದರಿಂದ, ಕಾಂಡಕೊರಕ ನೊಣಗಳು ಆರ್ಥಿಕವಾಗಿ ಪ್ರಮುಖ್ಯತೆ ಪಡೆದಿವೆ. (ಡಿ.ಎಸ್.)

**ಕಾಂಡಕೊರಕ ಹುಳುಗಳು:** ವಿವಿಧ ಸಸ್ಯಗಳ ಕಾಂಡಗಳನ್ನು ಕೊರೆದು, ರಸ ಹೀರಿ ಜೀವನ ಸಾಗಿಸುವ ಕೆಲವು ಬಗೆಯ ಮರಿಕೀಟಗಳು. ಕೀಟವರ್ಗದ ಲೆಪಿಡಾಪ್ಟರ (ಪತಂಗ), ಕೋಲಿಯಾಪ್ಟರ (ಜೀರುಂಡೆ) ಮತ್ತು ಡಿಪ್ಟರ (ನೊಣ) ಗಣಗಳಲ್ಲಿವೆ. ಈ ಮರಿಕೀಟಗಳನ್ನು ಕ್ರಮವಾಗಿ ಕ್ಯಾಟರ್‌ಪಿಲ್ಲರ್ (ಕಂಬಳಿಹುಳು), ಗ್ರಬ್ಸ್ ಮತ್ತು ಮ್ಯಾಗಟ್ಸ್ ಎಂದು ಕರೆಯುತ್ತಾರೆ. ಹೆಣ್ಣು ಕೀಟ ಸಸ್ಯದ ತೊಗಟೆ ಕೆಳಗೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಂದ ಹೊರಬರುವ ಮರಿ ಹುಳಗಳು ಸಸ್ಯಗಳ ಮೃದುವಾದ, ಭಾಗಗಳನ್ನು ಕೊರೆದು, ಅಲ್ಲಿನ ಅಂಗಾಂಶಗಳನ್ನು ತಿಂದು ಬೆಳೆಯುತ್ತವೆ. ಇವು ಕಾಂಡವನ್ನು ಕೊರೆಯುವುದಲ್ಲದೆ, ಬೇರು, ಎಳೆಚಿಗುರು, ಮೊಗ್ಗು, ಕಾಯಿಗಳನ್ನು ಕೊರೆಯುತ್ತವೆ. ಕಾರಣ, ಕಾಂಡಕೊರಕ ಹುಳುಗಳನ್ನು: 1. ದಂಟುಕೊರಕಗಳು: ಬತ್ತ, ರಾಗಿ, ಜೋಳ ಮತ್ತು ಹುಲ್ಲಿನ ಜಾತಿಯ ಸಸ್ಯಗಳ ಕಾಂಡಗಳನ್ನು ಕೊರೆಯುವ ಹುಳುಗಳಾದ ಲೆಪಿಡಾಪ್ಟರ ಗಣದ ಕೀಟಗಳು. 2. ಮೃದು ಕಾಂಡಕೊರಕಗಳು: ಏಕವಾರ್ಷಿಕ ಸಸ್ಯಗಳ ಕಾಂಡ ಕೊರೆಯುವಂಥವು. ಉದಾ: ಹೊಗೆಸೊಪ್ಪು, ಬದನೆ ಗಿಡದ ಕಾಂಡ ಕೊರೆಯುವ ಲೆಪಿಡಾಪ್ಟರ ಗಣದ ಕೀಟಗಳು. 3. ಗಟ್ಟಿಕಾಂಡಕೊರಕಗಳು: ಮರ ಮತ್ತು ಪೊದೆಸಸ್ಯಗಳ ಕಾಂಡಗಳನ್ನು ಕೊರೆಯುವ ಹುಳುಗಳಾದ ಕೋಲಿಯಾಪ್ಟರ ಗಣದ ಕೀಟಗಳು. ಕಾಫಿ, ಕಿತ್ತಳೆ, ಮಾವು, ತೆಂಗು ಮುಂತಾದ ಎಳೆಸಸಿಗಳನ್ನು ಕೊರೆಯುವ ಹುಳುಗಳು ಡಿಪ್ಟರ ಗಣದಲ್ಲಿವೆ. (ಡಿ.ಎಸ್.)



**ಕಾಂಡಾರ್ ಹಕ್ಕಿ:** ದಕ್ಷಿಣ ಅಮೆರಿಕದ ಆ್ಯಂಡಿಸ್ ಪರ್ವತ ಪ್ರದೇಶಗಳಲ್ಲಿ ಸಿಗುವ ಅಪೂರ್ವ ಜಾತಿಯ ರಣಹದ್ದು. ಫಾಲ್ಕನಿಫಾರ್ಮಿಸ್ ಗಣದ ಅಸಿಪಿಟ್ರಿಡೆ ಕುಟುಂಬಕ್ಕೆ ಸೇರಿದೆ. ಸಾಮಾನ್ಯವಾಗಿ ೩೦೦೦–೫೦೦೦ ಮೀ ಎತ್ತರದ ಪ್ರದೇಶಗಳಲ್ಲಿದರ ವಾಸ. ಶಾಸ್ತ್ರೀಯ ನಾಮ ವಲ್ಚರ್ ಗ್ರೈಫಸ್. ಇದರ ಹತ್ತಿರ ಸಂಬಂಧಿಯಾದ ಜಿಮ್ನೋಜಿಪ್ಸ್ ಕ್ಯಾಲಿಫೋರ್ನಿಯಾನಸ್ ಎಂಬ ರಣಹದ್ದನ್ನು ಸಹ ಕ್ಯಾಲಿಫೋರ್ನಿಯ ಕಾಂಡಾರ್ ಎಂದು ಕರೆಯಲಾಗುತ್ತದೆ. ಇದು ಉತ್ತರ ಅಮೆರಿಕದ ಕ್ಯಾಲಿಫೋರ್ನಿಯ ರಾಜ್ಯದ ದಕ್ಷಿಣ ಭಾಗದಲ್ಲಿ ಕಾಣಬರುತ್ತದೆ.



ಕಾಂಡಾರ್ ಹಕ್ಕಿ

ಕಾಂಡಾರ್ ಹಕ್ಕಿ ರಣಹದ್ದು, ಗಿಡುಗ, ಗರುಡ ಮುಂತಾದ ಹಕ್ಕಿಗಳನ್ನು ಹೋಲುತ್ತದೆ. ದೈತ್ಯಾಕಾರದ ಹಕ್ಕಿ. ಸಾಧಾರಣವಾಗಿ ೧.೨ ಮೀ ಉದ್ದವಿದೆ. ರೆಕ್ಕೆಯನ್ನು ಹರಡಿದಾಗ, ಒಂದು ತುದಿಯಿಂದ ಇನ್ನೊಂದು ತುದಿಗೆ ೨.೭–೩ ಮೀ ಅಗಲ. ತಲೆ ಮತ್ತು ಕತ್ತಿನ ಮೇಲೆ ಪುಕ್ಕಗಳಿಲ್ಲ. ನೆತ್ತಿ ಚಪ್ಪಟೆಯಾಗಿದೆ. ಗಂಡಿನಲ್ಲಿ ತಲೆಯ ಮೇಲೆ ಒಂದು ಶಿಖೆಯಿದೆ; ಕತ್ತು ಸುಕ್ಕುಸುಕ್ಕಾಗಿದೆ. ಕತ್ತಿನ ಬುಡದಲ್ಲಿ ಬಿಳಿಯ ಬಣ್ಣದ ಪುಕ್ಕಗಳಿವೆ. ಮೈಮೇಲಿನ ಪುಕ್ಕಗಳ ಬಣ್ಣ ಕಪ್ಪು. ರೆಕ್ಕೆಯಲ್ಲಿ ಬಿಳಿಯ ಮಚ್ಚೆಗಳಿವೆ. ನಖಗಳು ಮೊನಚಾಗಿಲ್ಲ. ಕೊಂಚ ನೆಟ್ಟಗಿವೆ. ಹೆಣ್ಣು ಹಕ್ಕಿ ಗಾತ್ರದಲ್ಲಿ ಗಂಡಿಗಿಂತ ಚಿಕ್ಕದು. ಇದರ ಹಾರಾಟ ಬಲು ಸೊಗಸು. ಕೊಂಚ ನಿರಾಯಾಸವಾಗಿ ಹಾರಾಡುತ್ತದೆ. ಸತ್ತ ಪ್ರಾಣಿಗಳ ದೇಹ ಇದರ ಮುಖ್ಯ ಆಹಾರ. ಕೆಲವೊಮ್ಮೆ ಕುರಿ, ಮೇಕೆ, ಜಿಂಕೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುವುದೂ ಉಂಟು. ಬಲು ಹೊಟ್ಟೆಬಾಕ ಹಕ್ಕಿಯೆಂದೇ ಪ್ರಸಿದ್ಧವಾಗಿದೆ.

ಕಾಂಡಾರುಗಳು ಹಗಲೆಲ್ಲ ಬಹು ಪಾಲು ನಿದ್ರೆಯಲ್ಲಿಯೇ ಕಳೆಯುತ್ತಿದ್ದು ಬೆಳಗ್ಗೆ ಮತ್ತು ಸಂಜೆ ಆಹಾರದ ಅನ್ವೇಷಣೆಯಲ್ಲಿ ತೊಡಗುತ್ತವೆ. ಹಗಲು ನಿದ್ರಿಸುವುದರಿಂದ ಇವನ್ನು ಹಿಡಿಯುವುದು ಬಲು ಸುಲಭ. ಹೊಟ್ಟೆ ತುಂಬಿದಾಗ ಬಲು ಆಲಸಿಗಳಾಗುವುದರಿಂದ ಆಗಲೂ ಇವುಗಳ ಬೇಟೆ ಬಲು ಸುಲಭ.

ಪರ್ವತದ ಅತಿ ಎತ್ತರ ಪ್ರದೇಶಗಳಲ್ಲಿ ವಾಸ ಮಾಡುವ ಈ ಹಕ್ಕಿಗಳು ಕೋಡುಗಲ್ಲುಗಳ ಪೊಟರೆಗಳಲ್ಲಿ ಒರಟು ಗೂಡುಗಳನ್ನು ಕಟ್ಟಿ ವರ್ಷಕ್ಕೊಮ್ಮೆ ಎರಡು ಮೊಟ್ಟೆಗಳನ್ನಿಡುತ್ತವೆ. ಸುಮಾರು ಏಳು ವಾರಗಳ ಕಾಲ ಕಾವು ಕೊಟ್ಟು ಮರಿ ಮಾಡುತ್ತವೆ. ಮರಿಗಳು ತಾಯಿತಂದೆಯೊಡನೆ ಒಂದು ವರ್ಷಕಾಲ ಇದ್ದು ಆಮೇಲೆ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. (ಜಿ.ಎಂ.ಬಿ.)

**ಕಾಂಡಿಲಾರ್ತ್ರ:** ಈ ಗಣಕ್ಕೆ ಸೇರಿದ ಪ್ರಾಣಿಗಳು ಪೇಲಿಯೋಸಿನ್ ಕಾಲದಲ್ಲಿ ವಾಸಮಾಡುತ್ತಿದ್ದುವು. ಕೆಲವು ಆಲಿಗೋಸೀನ್ ಕಾಲದವರೆಗೂ ಜೀವಿಸಿ, ನಂತರ ನಾಶಹೊಂದಿದುವು. ಈ ಗುಂಪು ಪ್ರೋಟಂಗುಲೇಟ ಉಚ್ಚ ಗಣಕ್ಕೆ ಸೇರಿದ್ದು, ಇನ್‌ಸೆಕ್ಟಿವೊರ ಹಾಗೂ ಮುಂದುವರಿದ ಅಂಗುಲೇಟ ಗುಂಪುಗಳು ಉದಯಕಾಲದಲ್ಲಿ ಕಂಡುಬರುತ್ತವೆ. ಹೈಯೋಪ್ಸೊಡಿಯ, ಮೈಯೋಕೀಯಸ್ ಫೆನಕೋಡಸ್ ಮುಂತಾದುವುಗಳು ಕಾಂಡಿಲಾರ್ತ್ರ ಗುಂಪಿಗೆ ಸೇರಿದ ಪ್ರಾಣಿಗಳು. ಇವುಗಳಲ್ಲಿ ಫೆನ್‌ಕೋಡಸ್ ಪ್ರಾಣಿಯ ಪಳೆಯುಳಿಕೆಗಳು

ಮಿಕ್ಕೆಲ್ಲ ಪ್ರಾಣಿಗಳ ಪಳೆಯುಳಿಕೆಗಳಿಗಿಂತ ಚಿರಪರಿಚಿತ. ಈ ಪ್ರಾಣಿಯು ಈಯೋಸಿನ್ ಕಾಲದಲ್ಲಿ ವಾಸಿಸುತ್ತಿತ್ತು. ಈ ಪ್ರಾಣಿಯ ಕಾಲುಗಳು ಗೊರಸಿನಿಂದಾವೃತವಾಗಿದ್ದುವು ಹಾಗೂ ಕಾಲಿನ ಮಧ್ಯದ ಬೆರಳು ಮಿಕ್ಕೆಲ್ಲವಕ್ಕಿಂತ ಉದ್ದವಾಗಿತ್ತು. ಈ ಪ್ರಾಣಿಗಳ ಬಾಲವೂ ಸಾಕಷ್ಟು ಉದ್ದವಾಗಿತ್ತು. ಕಾಂಡಿಲಾರ್ತ್ರ ಗುಂಪಿಗೆ ಸೇರಿದ ಮಿಕ್ಕ ಪ್ರಾಣಿಗಳು ಈಯೋಸಿನ್ ಕಾಲದಲ್ಲಿ ಅಸಾಧಾರಣ ಬದಲಾವಣೆ ಹೊಂದಿದ್ದುವು. ಇವುಗಳಲ್ಲಿ ಲೋಫೋಡಾಂಟ್ ದವಡೆಯ ಹಲ್ಲುಗಳಿದ್ದುವು, ಆದರೆ ಕಾಲಿನ ಬೆರಳುಗಳು ಇನ್ನೂ ಪಂಜವನ್ನು ಹೊಂದಿದ್ದುವು. ಈ ಪ್ರಾಣಿಗಳಲ್ಲಿ ಕೆಲವು ದಕ್ಷಿಣ ಅಮೇರಿಕೆಯ ಅಂಗಲೇಟಗಳಿಗೆ ಪಿತೃಗಳಾದುವು ಎಂದು ಭಾವಿಸಲಾಗಿದೆ. (ಹೆಚ್.ಎಸ್.ವೈ.)

**ಕಾಂಡ್ರಾಯಿಟಿನ್ ಸಲ್ಫೇಟ್:** ಕಶೇರುಕ ಪ್ರಾಣಿಗಳ ಮೃದ್ವಸ್ಥಿಯ (ಕಾರ್ಟಿಲೇಜ್) ತೆರಪಿನಲ್ಲಿರುವ ಜೆಲ್ಲಿಯಂಥ ಪದಾರ್ಥ ಕಾಂಡ್ರೊಮ್ಯೂಕಾಯಿಡ್; ಇದು ಗಂಧಕವುಳ್ಳ ಸಕ್ಕರೆಯ ಸ್ವರೂಪದ ಜಟಿಲವಸ್ತುಗಳಿಂದಾಗಿರುವುದರಿಂದ ಇದಕ್ಕೆ ಕಾಂಡ್ರಾಯಿಟಿನ್ ಸಲ್ಫೇಟ್ ಎಂಬ ಹೆಸರು ಬಂದಿದೆ. ಮೃದ್ವಸ್ಥಿ ಬಣ್ಣಗೊಳ್ಳುವುದಕ್ಕೆ (ಸ್ಟೇನ್) ಇದು ಕಾರಣವಾಗಿದೆ. (ಪಿ.ಜಿ.ಆರ್.)

**ಕಾಂಡ್ರಾಸ್ಟಿ:** ಇದೊಂದು ಆಕ್ಟಿನಾಪ್ಟಿರಿಜಿಯದ ಜೀವಂತ ಪ್ರಾಣಿ ಪ್ರತಿನಿಧಿಗಳ ಪುರಾತನ ಗುಂಪು. ಇದು ಏಸಿಪೆನ್ಸಿರಿಡೆ ಜಾತಿಯ ಸ್ಟರ್ಜನ್‍ಗಳನ್ನು ಮತ್ತು ಪಾಲಿಯಾಡಾಂಟಿಡೆ ಜಾತಿಯ ಪ್ಯಾಡಲ್‍ಮೀನುಗಳನ್ನು ಒಳಗೊಂಡಿದೆ. ಪೇಲಿಯೋಸೂಯಿಕ ಕಾಲದಲ್ಲಿ ಅಂತಸ್ಥಭಾಗದ ಈಜುರೆಕ್ಕೆಗಳುಳ್ಳ ಮೀನುಗಳು ಪೇಲಿಯೋನಿಸ್ಕಾಯಿಡಿಯಗಳೆಂಬ ವಿಪುಲ ಕಾಂಡ್ರಾಸ್ಟಿ ಜಾತಿಗಳಿಂದ ಪ್ರತಿನಿಧಿಸಲ್ಪಟ್ಟಿದ್ದುವು.

ಸಾಮಾನ್ಯವಾಗಿ ಈ ಮೀನುಗಳು ಚಿಕ್ಕ ಗಾತ್ರದುವು. ಇವಕ್ಕೆ ಮೇಲಕ್ಕೆ ಬಾಗಿದ ಶಾರ್ಕ್ ರೀತಿಯ ಬಾಲವಿದೆ. ಇವುಗಳ ಶಲ್ಕಗಳು ಗ್ಯಾನಾಯ್ನ್ ಎಂಬ ಹೊಳೆಯುವ ವಸ್ತುವಿನಿಂದ ಆವರಿಸಲ್ಪಟ್ಟಿವೆ. ಶಲ್ಕಗಳು ಭಾರವಾಗಿದ್ದು ವಜ್ರಾಕೃತಿಯನ್ನು ಪಡೆದಿವೆ. ಈ ಮೀನುಗಳಲ್ಲಿ ಶ್ವಾಸರಂಧ್ರವಿದೆ. ಮೇಲುದವಡೆ ಮೂಳೆಯು ಕೆನ್ನೆಯ ಎಲುಬಿಗೆ ಸೇರಿಕೊಂಡಿದೆ. ಇವುಗಳ ದವಡೆಗಳು ಕೆಳಗಿದ್ದು, ಉದ್ದವಾಗಿವೆ. ಎದೆಯ ಈಜುರೆಕ್ಕೆಯ ತಳಹದಿಯು ಉದರದ ಪಾರ್ಶ್ವದಲ್ಲಿದ್ದು ಅಡ್ಡನಾಗಿದೆ. ಈ ಮೀನುಗಳಲ್ಲಿ ಕರುಳಿನ ಸುರುಳಿ ಕವಾಟವಿರುವುದು ವೈಶಿಷ್ಟ್ಯವಾಗಿದೆ. ಇವುಗಳಲ್ಲೆಲ್ಲಾ ಈಜುರೆಕ್ಕೆಗಳ ಮುಂದಿರುವ ಮುಳ್ಳಿನಂತಿರುವ ಶಲ್ಕಗಳು ಚೆನ್ನಾಗಿ ಬೆಳೆದಿವೆ. ಆದರೆ ಇಂದಿನ ಪ್ರಭೇದಗಳಲ್ಲಿ ಇವು ದುರ್ಬಲವಾಗಿವೆ. ಅಂತರಿಕ ಅಸ್ಥಿಪಂಜರವು ಮುಖ್ಯವಾಗಿ ಮೃದ್ವಸ್ಥಿಯಿಂದಾದುದು. ಬಹಳ ಸ್ವಲ್ಪ ಮೂಳೆಯು ಅದರಲ್ಲಿ ಉಳಿದಿದೆ. ಈ ಮೀನುಗಳ ಆಹಾರ ತೆಗೆದುಕೊಳ್ಳುವ ಕ್ರಮವು ಅವನತಿ ಹೊಂದಿದ ರೀತಿಯದು. ಕಾರಣ ದವಡೆಗಳು ದುರ್ಬಲವಾಗಿದ್ದು, ಆಹಾರವು ಕಿವಿರುಗಳ ಮೂಲಕ ಹಾದು ಜಲಪುಪ್ಫುಸಗಳ ದ್ವಾರ ಜರಡಿಯಂತೆ ಸೋಸಲ್ಪಡುತ್ತದೆ.

ಈ ಗುಂಪಿನ ಮೀನುಗಳು ಕಾರ್ಬಾನಿಫೆರಸ್ ಹಾಗೂ ಟ್ರಯಾಸ್ಸಿಕ್‍ನಲ್ಲಿಯೂ ಸಹ ಅಧಿಕ ಸಂಖ್ಯೆಯಲ್ಲಿದ್ದವು. ನಂತರ ಕ್ಷೀಣಿಸಿ ಮಿಸೋಸೊಯಿಕನ ಕೊನೆಯ ಕಾಲಕ್ಕೆ, ಕೇವಲ ಎರಡು ಕುಲಗಳು ಬದುಕಿ ಉಳಿದು, ನಿರ್ನಾಮವಾದುವು. ಈಗ ಉಳಿದಿರುವುವೆಂದರೆ ಸ್ಟರ್ಜನ್‍ಗಳು ಹಾಗೂ ಪ್ಯಾಡಲ್‍ಮೀನುಗಳು ಮಾತ್ರ.

***

**ಕಾಕ್, ರಾಬರ್ಟ್ 1843–1910**: ಜರ್ಮನಿಯ ಏಕಾಣುಜೀವಿ ವಿಜ್ಞಾನಿ. ಕ್ಷಯಕ್ಕೆ ಕಾರಣವಾದ ದಂಡಾಣುಜೀವಿಯನ್ನು ಆವಿಷ್ಕರಿಸಿದ ಕೀರ್ತಿ ಈತನದು. ಜನನ ಹ್ಯಾನೋವರಿನ ಕ್ಲಾಸ್ತಾಲಿನಲ್ಲಿ ಡಿಸೆಂಬರ್ 11, 1843 ರಲ್ಲಿ. ಗಾಟಿಂಜನಿನಲ್ಲಿ ವೈದ್ಯಪದವೀಧರನಾದ (1866). 1870ರ ಯುದ್ಧದಲ್ಲಿ ಶಸ್ತ್ರ ವೈದ್ಯನಾಗಿದ್ದಾಗ ಬಿಡುವು ದೊರೆತಾಗಲೆಲ್ಲ ಸಂಶೋಧನೆಯಲ್ಲಿ ಕೈಯಾಡಿಸುತ್ತಿದ್ದ. ಆ ವೇಳೆ ನೆರಡಿ (ಅಂತ್ರಾಕ್ಸ್) ರೋಗ ಆಸುಪಾಸಿನ ದನಗಳಿಗೆ ಪಿಡುಗಿನ ರೂಪದಲ್ಲಿ ಹಬ್ಬಿತು. ಸಹಜವಾಗಿ ಕಾಕನ ಕುತೂಹಲ ಈ ದಿಸೆಯಲ್ಲಿ ಹರಿಯಿತು. ವ್ಯಾಧಿಗ್ರಸ್ತ ದನದ ದೊರಳೆಯಿಂದ (ಸ್ಪ್ಲೀನ್) ನೆರಡಿ ರೋಗಕಾರಕ ಏಕಾಣುಜೀವಿಗಳನ್ನು ಈತ ಬೇರ್ಪಡಿಸಿ (1876) ಅವನ್ನು ಪುಟ್ಟಿಲಿಗಳಿಗೆ (ಮೈಸ್) ಚುಚ್ಚಿದ. ಈ ಪ್ರಕಾರ ಒಂದರಿಂದ ಇನ್ನೊಂದು ಪುಟ್ಟಿಲಿಗೆ ವ್ಯಾಧಿಯನ್ನು ವರ್ಗಾಯಿಸಿ ಅದರ ದಂಡಾಣುಜೀವಿಗಳನ್ನು ಕೊನೆಯ ಹಂತದಲ್ಲಿ ಪಡೆದ. ಇದಕ್ಕಿಂತಲೂ ಹೆಚ್ಚಾಗಿ ಏಕಾಣುಜೀವಿಗಳನ್ನು ಜೀವಂತ ದೇಹದ ಹೊರಗೆ ಬೆಳೆಸುವ ವಿಧಾನವನ್ನು ಆತ ಕಲಿತು ಪರಿಷ್ಕರಿಸಿದ. ತನ್ನ ಸಂಶೋಧನೆಗಳನ್ನು ಕಾನ್ ಎಂಬಾತನ (ಬ್ರೆಸ್ಲೋ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ಪ್ರಾಧ್ಯಾಪಕ) ಮುಂದೆ ಮಾಡಿ ತೋರಿಸಿ ಅವನಿಗೆ ದಂಗುಬಡಿಸಿದ. ಹಿಂತಿರುಗಿ ಬಂದು ಎಂದಿನಂತೆ ತನ್ನ ವೈದ್ಯ ಕಸಬಿನೊಂದಿಗೆ ಏಕಾಣುಜೀವಿಗಳ ಶೋಧನೆಯನ್ನು ಮುಂದುವರಿಸಿದ. ಏಕಾಣು ಜೀವಿಗಳಿಗೆ ಬಣ್ಣಕೊಟ್ಟು ಜಾರುಗಾಜುಗಳ (ಸ್ಲೈಡ್ಸ್) ಮೇಲೆ ಅಂಟಿಸುವ ವಿಧಾನವನ್ನು ಕಂಡುಹಿಡಿದ. ಪಟ್ಟಣದ ವೈದ್ಯನಾಗಿದ್ದ ಇನ್ನೂ 37 ವರ್ಷದ ಕಾಕ್‍ನಿಗೆ ಆರೋಗ್ಯ ಕಚೇರಿಯಲ್ಲಿ ಒಳ್ಳೆಯ ಹುದ್ದೆ ದೊರೆಯಿತು (1880). ಆಗ ಈತ ಬರ್ಲಿನ್ನಿನಲ್ಲಿ ನೆಲೆಸಿದ. ಮರುವರ್ಷವೇ ಮಾಂಸದ ಸಾರದೊಂದಿಗೆ ಜಿಲಟಿನ್ ಮಿಶ್ರಣದಲ್ಲಿ ಅಚ್ಚ ತಳಿಯ ಏಕಾಣುಜೀವಿಗಳನ್ನು ಸಹ ಬೆಳೆಸುವ ಹೊಸ ವಿಧಾನ ಕಂಡುಹಿಡಿದು ಲೂಯಿ ಪಾಸ್ತರನ ಮೆಚ್ಚುಗೆ ಗಳಿಸಿದ. ಇದರೊಂದಿಗೆ ಬಣ್ಣ ಕೊಡುವ ವಿಧಾನವನ್ನೂ ಸೇರಿಸಿ. ಕ್ಷಯಕ್ಕೆ ಕಾರಣವಾದ ದಂಡಾಣುಜೀವಿಯನ್ನು (ಬ್ಯಾಸಿಲ್ಲಸ್) ಮೊಟ್ಟಮೊದಲಿಗೆ (1882) ತೋರಿಸಿಕೊಟ್ಟ. ಒಂದು ರೋಗಕ್ಕೆ ಗೊತ್ತಾದ ಒಂದು ರೋಗಾಣು ಮೂಲ ಕಾರಣವೆಂದು ತೋರಿಸಿಕೊಡಲು ಆಗ ಕಾಕ್ ನಿರೂಪಿಸಿದ ಮೂಲ ತತ್ತ್ವಗಳು ಈಗಲೂ ಚಾಲ್ತಿಯಲ್ಲಿವೆ. ಜರ್ಮನಿಯ ಕಾಲರ ಆಯೋಗದ ನಾಯಕನಾಗಿ ಈಜಿಪ್ಟ್, ಭಾರತಗಳಿಗೆ ಬಂದಾಗ ಕಾಲರ ರೋಗಕ್ಕೆ ಕಾರಣವಾದ ರೋಗಾಣುಗಳನ್ನು ಕಂಡುಹಿಡಿದು ಅದು ನೀರು, ಉಣಿಸು, ಅರಿವೆಗಳ ಮೂಲಕ ಬರುವುದನ್ನು ತೋರಿಸಿಕೊಟ್ಟ (1883). ಈಜಿಪ್ಟಿಗರ ಕಣ್ಣು ಬೇನೆಗೆ ಕಾರಣವಾದ ದಂಡಾಣುಜೀವಿಯನ್ನೂ ಆಗಲೇ ಕಂಡುಹಿಡಿದ. ಕ್ಷಯಾಣು ಸಾರವನ್ನು (ಟ್ಯುಬರ್ಕ್ಯುಲಿನ್) ಸೂಕ್ಷ್ಮವಾಗಿ ಶೋಧಿಸಿ (1890) ಅದು ಕ್ಷಯ ಚಿಕಿತ್ಸೆಗೆ ಬರುವುದೆಂದು ಊಹಿಸಿದ. ಅದೀಗ ಕ್ಷಯರೋಗದ ನಿದಾನದಲ್ಲಿ ಮಾತ್ರ ಇದೆ.

ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿಯೂ (1885) ಬರ್ಲಿನ್ನಿನ ಅಂಟುರೋಗಗಳ ಸಂಸ್ಥೆಯ ನಿರ್ದೇಶಕನಾಗಿಯೂ (1891) ಕಾಕ್ ಇದ್ದ. ಬ್ರಿಟನ್ನಿನ ಸರ್ಕಾರದ ಕೋರಿಕೆಯಂತೆ ದಕ್ಷಿಣ ಆಫ್ರಿಕಕ್ಕೆ ಹೋದ (1896). ಆತನ ಉದ್ದೇಶವಾದ ಗೋಮಾರಿ (ದನದ ಪ್ಲೇಗ್) ರೋಗದ ಕಾರಣ ಕಂಡುಹಿಡಿಯಲಾಗದಿದ್ದರೂ ಅದರ ಪ್ರತಿಯಾಗಿ ಹಾಕುವ ಲಸಿಕೆಯನ್ನು ಶೋಧಿಸಿದ. ಮತ್ತೆ ಆಫ್ರಿಕಾಕ್ಕೆ ಹೋದಾಗ (1906) ನಿದ್ದೆಯ ನರಳಿಕೆ (ಸ್ಲೀಪಿಂಗ್ ಸಿಕ್ನೆಸ್) ರೋಗಕ್ಕೆ ಮದ್ದನ್ನು ಬಳಕೆಗೆ ತಂದ. ವೈದ್ಯ ಹಾಗೂ ದೇಹಶಾಸ್ತ್ರ (ಮೆಡಿಸನ್ ಅಂಡ್ ಫಿಸಿಯಾಲಜಿ) ವಿಭಾಗದ ನೊಬೆಲ್ ಪಾರಿತೋಷಕ ಈತನಿಗೆ 1905ರಲ್ಲಿ ದೊರೆಯಿತು. ಇಡೀ ವೈದ್ಯಚರಿತ್ರೆಯಲ್ಲೇ ಉನ್ನತ ಏಕಾಣುಜೀವಿಶಾಸ್ತ್ರಜ್ಞರಲ್ಲಿ ಒಬ್ಬನಾಗಿದ್ದು ಅದರ ಹೆಚ್ಚಿನ ಮುನ್ನಡೆಗೂ ಏಕಾಣುಜೀವಿಗಳ ಅಚ್ಚತಳಿಗಳನ್ನು ಬೆಳೆಸುವ ವಿಧಾನಗಳನ್ನು ಕಂಡುಹಿಡಿಯಲೂ ಕಾರಣನಾಗಿ ಇಂದಿನ ಏಕಾಣುಜೀವಿಶಾಸ್ತ್ರದ ಜನಕನೆಂದು ಈತ ಹೆಸರಾಗಿದ್ದಾನೆ.

***

**ಕಾಕಸ್:** ಸಣ್ಣಗೆ, ದುಂಡಾಗಿರುವ ಬ್ಯಾಕ್ಟೀರಿಯ. ವಿಯೆನ್ನದ ಶಸ್ತ್ರವೈದ್ಯನಾಗಿದ್ದ ತಿಯೋಡೋರ್ ಬಿಲ್ರಾತ್ (1847) ಈ ಹೆಸರನ್ನು ಇತ್ತವನು. ರೋಗವಿಜ್ಞಾನದಲ್ಲಿ ಹಲವು ತರದ ಕಾಕಸ್‍ಗಳಿವೆ. ಮೈಕ್ರೊಕಾಕಸ್, ಸ್ಟ್ರೆಪ್ಟೊಕಾಕಸ್, ಸ್ಟೆಫೈಲೊಕಾಕಸ್, ಗೊನೊಕಾಕಸ್, ಮೆನಿಂಜೊಕಾಕಸ್, ನ್ಯೂಮೊಕಾಕಸ್ ಇತ್ಯಾದಿ. ನೋಡಿ–ಬ್ಯಾಕ್ಟೀರಿಯ.

***

**ಕಾಕ್ಸಿಡೆ:** ಹೆಮಿಪ್ಟಿರಾ ಗಣದ ಸ್ಟರ್ನೊರಿಂಖಾ ಉಪಗಣದ ಕೀಟ ಕುಟುಂಬ. ಈ ಕುಟುಂಬದ ಕೀಟಗಳು ದೇಹಾಕೃತಿಯಲ್ಲಿ ಮಾರ್ಪಾಡುಗಳನ್ನು ಹೊಂದಿವೆ. ಗಾತ್ರದಲ್ಲಿ ಬಹಳ ಸಣ್ಣದಾಗಿವೆ. ಎಲೆ, ಕಾಂಡ, ಹಣ್ಣು ಮತ್ತಿತರ ಭಾಗಗಳ ಮೇಲೆ ವಾಸಿಸುತ್ತವೆ. ಕೆಲವು ಪ್ರಭೇದಗಳು ಸಸ್ಯಗಳ ಬೇರಿನಲ್ಲೂ ಸಹ ಜೀವಿಸುತ್ತವೆ. ಬಹುತೇಕ ಪ್ರಭೇದದ ಕೀಟಗಳು ಜೀವನದ ಅಲ್ಪಭಾಗವನ್ನು ಚಲನಾ ಶಕ್ತಿ ಇಲ್ಲದೇ ಕಳೆಯುತ್ತವೆ. ಇಂತಹ ಸ್ಥಿತಿಯಲ್ಲಿ ಈ ಕೀಟಗಳನ್ನು ಬಹುದೂರ ಸಾಗಿಸಬಹುದು. ಈ ಕುಟುಂಬದಲ್ಲಿ 2000ಕ್ಕೂ ಹೆಚ್ಚು ಪ್ರಭೇದಗಳಿವೆ.

ಕೆಲವು ಜಾತಿಯ ಕೀಟಗಳ ಉತ್ಪನ್ನಗಳು ಆರ್ಥಿಕವಾಗಿ ಪ್ರಯಾಜನಕಾರಿ. ಉದಾ: ಅರಗು ಲಾಸಿಫರ್ ಲಕ್ಕಾ ಕೀಟದ ಉತ್ಪಾದನೆ. ಈ ಕೀಟವು ಭಾರತ ಮತ್ತು ನೆರೆಯ ದೇಶಗಳಲ್ಲಿ ಇದೆ. ಮಾಲ್ವೇಸೀ ಮತ್ತು ಲೆಗ್ಯುಮಿನೋಸೀ ಕುಟುಂಬದ ಸಸ್ಯಗಳನ್ನು ಈ ಕೀಟವು ತನ್ನ ಆಹಾರಕ್ಕಾಗಿ ಅವಲಂಬಿಸಿದೆ. ಚೀನಾ ಮೇಣವನ್ನು ಎರಿಸಿರಸ್ ಪಿಲ ಎಂಬ ಕೀಟವು ಉತ್ಪತ್ತಿ ಮಾಡುತ್ತದೆ. ಮೇಣದ ಬತ್ತಿಗಳ ತಯಾರಿಕೆಯಲ್ಲಿ ಇದನ್ನು

ಬಳಸಲಾಗುತ್ತದೆ. ಓಕ್ ಮರಗಳ ಮೇಲೆ ಹೆಚ್ಚಾಗಿ ಕಂಡು ಬರುವ ಕಾಕಸ್ ಕಾಕ್ಟೆ ಮತ್ತು ಕಿರ್ಮಸ್ ಇಲಿಸಿಸ್ ಕೀಟಗಳ ದೇಹದಿಂದ ತಯಾರಿಸುತ್ತಿದ್ದ ಬಣ್ಣವು ಬಹಳ ಮುಖ್ಯವಾದುದು.

ಈ ಕುಟುಂಬದ ಕೀಟಗಳಲ್ಲಿ ಗಂಡಿನ ರೂಪಾಂತರ ಕ್ರಿಯೆಯು ಸಂಪೂರ್ಣವಾಗಿದೆ. ಆದರೆ, ಹೆಣ್ಣು ಕೀಟಗಳಲ್ಲಿ ಇದು ಅಪೂರ್ಣ. ಗಂಡಿನ ಬೆಳವಣಿಗೆಯು ಹೆಣ್ಣಿನಂತೆಯೇ ನಡೆದರೂ ಸಹ, ಕೋಶಾವಸ್ಥೆ ಬೆಳವಣಿಗೆಯ ಕೊನೆಯ ಹಂತದಲ್ಲಿ ಕಂಡುಬರುತ್ತವೆ. ಈ ಕೋಶದಿಂದ ಎರಡು ರೆಕ್ಕೆಗಳುಳ್ಳ ಸಣ್ಣ ಕೀಟಗಳು ಹೊರಬರುತ್ತವೆ. ಇವುಗಳಿಗೆ ವದನಾಂಗಗಳು ಬೆಳೆದಿರುವುದಿಲ್ಲ. ಗಂಡು ಕೀಟಗಳು ತಮ್ಮ ಪ್ರೌಢಾವಸ್ಥೆಯಲ್ಲಿ ಆಹಾರವನ್ನು ಸೇವಿಸುವುದಿಲ್ಲ. ಹೆಣ್ಣು ಕೀಟಗಳು ಜೀವನ ಪರ್ಯಂತ ರೆಕ್ಕೆಗಳಿಲ್ಲದೆಯೇ ಬದುಕುತ್ತವೆ. ಹೆಚ್ಚಿನವುಗಳು ತಮ್ಮ ಚಲನಾ ಸಾಮರ್ಥ್ಯವನ್ನು ಕಳೆದುಕೊಂಡು ಮರಗಿಡಗಳ ಮೇಲೆ ಅಚಲವಾಗಿ ಕುಳಿತಿರುತ್ತವೆ. ಈ ಕುಟುಂಬದ ಎಲ್ಲಾ ಕೀಟಗಳ ಶರೀರವೂ ಸಹ ಮೇಣ ಅಥವಾ ರಾಳದಂತಹ ವಸ್ತುವಿನಿಂದ ಗಟ್ಟಿಯಾಗಿದೆ. ಹಿಟ್ಟಿನ ತಗಣಿಗಳು ಮತ್ತು ಮೃದು ಶಲ್ಕ ಕೀಟಗಳು ಸಿಹಿಯಾದ ಅಂಟುದ್ರವವನ್ನು ವಿಸರ್ಜಿಸುತ್ತವೆ.

ಕಾಕ್ಸಿಡೆ ಕೀಟಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

1. ಹಿಟ್ಟಿನ ತಗಣಿಗಳು (ಮೀಲೀ ಬಗ್ಸ್)

2. ಮೃದು ಶಲ್ಕ ಕೀಟಗಳು (ಸಾಫ್ಟ್ ಸ್ಕೇಲ್ಸ್)

3. ಕವಚವುಳ್ಳ ಶಲ್ಕ ಕೀಟಗಳು (ಆರ್‌ಮರ್ಡ್ ಸ್ಕೇಲ್ಸ್)

1. ಹಿಟ್ಟಿನ ತಗಣಿಗಳು: ಇವು ಕಾಕ್ಸಿಡೀ ಕುಟುಂಬದ ಕನಿಷ್ಠ ಅನುವಳಿಕಗಳು. ಕಾಲುಗಳು ಹಾಗೂ ಚಲನಾ ಶಕ್ತಿ ಜೀವನ ಪರ್ಯಂತ ಇರುತ್ತದೆ. ಶರೀರವು ನಿರ್ದಿಷ್ಟವಾದ ಖಂಡಗಳಿಂದಾಗಿದೆ. ಬೆಳವಣಿಗೆಯ ಸಮಯದಲ್ಲಿ ಕಣ್ಣು ಮತ್ತು ಕುಡಿಮೀಸೆಗಳಿವೆ. ಶರೀರವು ಮೇಣದಂತಹ ಪುಡಿಯಿಂದ ಆವರಿಸಲ್ಪಟ್ಟಿದೆ. ಇದು ಶರೀರದ ಪಕ್ಕಗಳಿಂದ ಮೇಲ್ಭಾಗಕ್ಕೆ ಎಳೆಗಳ ರೂಪದಲ್ಲಿ ಅಥವಾ ಫಲಕಗಳ ರೀತಿಯಲ್ಲಿ ಹರಡಿಕೊಂಡಿದೆ. ಈ ಕೀಟಗಳು ಸಸ್ಯಗಳ ಎಲೆ ಮತ್ತು ಕಾಂಡಗಳಿಂದ ಗಿಡದ ಜಿಬ್ಬನ್ನು ಹೀರುವುದರಿಂದ ಗಿಡವು ಹಾನಿಗೊಳಗಾಗುತ್ತದೆ. ಈ ಕೀಟಗಳಿಂದ ಸಿಹಿಯಾದ ಅಂಟು ಪದಾರ್ಥವು ವಿಸರ್ಜಿಸಲ್ಪಟ್ಟು ಅದರೊಳಗೆ ಬೂಷ್ಟು ಬೆಳೆದು ಗಿಡವು ಹಾನಿಗೊಳಗಾಗುತ್ತದೆ. ಇವು ಮೊಟ್ಟೆ ಇಡುತ್ತವೆ. ಕೆಲವು ಜಾತಿಯ ಕೀಟಗಳು ಮರಿಗಳಿಗೆ ಜೀವ ನೀಡುತ್ತವೆ. ಹೆಣ್ಣು ಕೀಟ ಮೊಟ್ಟೆ ಚೀಲಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ.

ಉದಾ:1. ಸಿಟ್ರಸ್ ಹಿಟ್ಟಿನ ತಗಣಿ (ಸೂಡೊಕಾಕಸ್ ಸಿಟ್ರಿ) ಸಿಟ್ರಸ್ ಗಿಡಗಳು, ಹೂ ಬಿಡುವ ಸಸ್ಯಗಳು ಮತ್ತು ಅಲಂಕಾರಿಕ ಸಸ್ಯಗಳನ್ನು ಇದು ಮುತ್ತಿ ಹಾನಿಯುಂಟು ಮಾಡುತ್ತದೆ.

2. ಉದ್ದಬಾಲದ ಹಿಟ್ಟಿನ ತಗಣಿ (ಸೂಡೊಕಾಕಸ್ ಓಡೊನಿಡಮ್) ಕೋಮಲ ಸಸ್ಯಗಳು ಮತ್ತು ಉಷ್ಣಪ್ರದೇಶಗಳಲ್ಲಿನ ಕೆಲವು ಸಸ್ಯಗಳನ್ನು ಹಾನಿಮಾಡುತ್ತದೆ.

ಈ ಕೀಟಗಳ ನಿಯಂತ್ರಣವು ಕಷ್ಟಕರ. ಹೈಮಿನಾಪ್ಟಿರ ಗುಂಪಿನ ಪರೋಪಜೀವಿಗಳು ಮತ್ತು ಲೇಡಿ ದುಂಬಿಗಳ ಸಹಾಯದಿಂದ ಜೈವಿಕ ನಿಯಂತ್ರಣ ಸಾಧ್ಯ. ಕೆಲವು ರಾಸಾಯನಿಕ ಉಪದ್ರವ ನಿವಾರಕಗಳಿಂದಲೂ ನಿವಾರಣೆ ಸಾಧ್ಯ.

2. ಮೃದು ಶಲ್ಕ ಕೀಟಗಳು: ಇವು ಗಾತ್ರದಲ್ಲಿ ದೊಡ್ಡದಾದ ಕೀಟಗಳು. ಅಪ್ಸರ ಕೀಟದ ಹಂತದಲ್ಲಿ ಶರೀರವು ಮೃದುವಾಗಿದ್ದು ಪೂರ್ಣವಾಗಿ ಬೆಳೆದ ಕೀಟಗಳಲ್ಲಿ ಹೊರ ಚಿಪ್ಪು ದಪ್ಪ ಹಾಗೂ ಗಟ್ಟಿಯಾಗಿದ್ದು ಉಬ್ಬಿ ಕೊಂಡಿದೆ. ಕುಡಿಮೀಸೆ ಇವೆ. ಕಾಲುಗಳು ತಿರುಗಾಡಲು ಶಕ್ತವಾಗಿವೆ. ಆದರೂ ಸಹ ಬೆಳೆದ ಹೆಣ್ಣು ಕೀಟಗಳು ಚಲನಾಶಕ್ತಿಯನ್ನು ಕಳೆದುಕೊಂಡಿವೆ. ಮೇಣದಂತಹ ಅಂಟುದ್ರವವು ಉತ್ಪತ್ತಿಯಾದಲ್ಲಿ ಅದು ಕೀಟದ ಹಿಂಭಾಗದಲ್ಲಿ ಮೊಟ್ಟೆಯ ಚೀಲವನ್ನು ಕಟ್ಟುವುದಕ್ಕಾಗಿ ಮಾತ್ರ ಉಪಯೋಗಿಸಲ್ಪಡುತ್ತದೆ. ಈ ಕೀಟಗಳು ಹಿಟ್ಟಿನ ತಗಣಿಗಳಂತೆ ಸಿಹಿಯಾದ ಅಂಟುದ್ರವವನ್ನು ವಿಸರ್ಜಿಸುತ್ತವೆ.

ಉದಾ: 1. ಯೂರೋಪಿನ ಹಣ್ಣಿನ ಲಕಾನಿಯಮ್ ಕಾರ್ನಿ. ದ್ರಾಕ್ಷಿ, ಪೆಕಾನ್, ಪೀಚ್, ಸೇಬು, ಜರದಾಲು ಮುಂತಾದ ಸಸ್ಯಗಳ ಮೇಲೆ ಅವಲಂಬಿತವಾಗಿದೆ.

2. ಗೋಲಾಕಾರದ ಶಲ್ಕ ಕೀಟ (ಸಾಯಿಸೆಟಿಯ ಹೆಮಿಸ್ಫಿಯರಿಕಾ) ಕೋಮಲ ಸಸ್ಯಗಳು, ಅವೊಕೇಡೋ ಹಣ್ಣು, ನಿಂಬೆ ಮುಂತಾದ ಗಿಡಗಳನ್ನು ನಾಶಮಾಡುತ್ತದೆ.

3. ಕಪ್ಪು ಶಲ್ಕಕೀಟ (ಸಾಯಿಸೆಟಿಯ ಓಲೇ) ಸಿಟ್ರಸ್ ಗಿಡಗಳು, ಸೇಬು, ದ್ರಾಕ್ಷಿ, ಪಿಯರ್ ಹಣ್ಣು, ಅಂಜೂರ, ಮತ್ತಿತರ ಕೋಮಲ ಸಸ್ಯಗಳ ವಿನಾಶಕಾರೀ ಕೀಟ.

2. ಕವಚವುಳ್ಳ ಶಲ್ಕಕೀಟಗಳು:

ಹಣ್ಣಿನ ಮರಗಳು, ಮತ್ತು ಅಲಂಕಾರಿಕ ಗಿಡಗಳನ್ನು ಅವಲಂಬಿಸಿರುವ ಉಪದ್ರವಕಾರೀ ಕೀಟಗಳು. ಇವುಗಳಲ್ಲಿ ಮುಖ್ಯವಾದವು. ಕಾಕ್ಸಿಡೆ ಕುಟುಂಬದ ಇತರೆ ಕೀಟಗಳಿಗಿಂತಲೂ ಇವುಗಳ ದೇಹವು ಬಹಳವಾಗಿ ಬದಲಾವಣೆಗೊಂಡಿದೆ. ಇವುಗಳ ಕವಚ ಚಿಕ್ಕದಾಗಿ, ವೃತ್ತಾಕಾರವಾಗಿ, ಉದ್ದವಾಗಿ ಅಥವಾ ಎಳೆಯ ರೀತಿಯಲ್ಲಿದೆ. ಹೆಣ್ಣು ಕೀಟಗಳು ಮೊಟ್ಟೆಗಳು ಒಡೆದ ನಂತರ ಚುರುಕಾಗಿರುತ್ತವೆ. ಒಮ್ಮೆ ಇವು ಗಿಡದ ಮೇಲೆ ನೆಲೆಯೂರಿದರೆ, ಅಲ್ಲಿಂದ ಕದಲುವುದಿಲ್ಲ. ಒಂದು ಬಾರಿ ಪೊರೆ ಕಳಚಿದ ನಂತರ ಕಾಲುಗಳು ಮಾಯವಾಗುತ್ತವೆ. ಕುಡಿಮೀಸೆಗಳು ಸಣ್ಣದಾಗುತ್ತವೆ.

ಇವುಗಳ ಕವಚವು ಶರೀರದಿಂದ ಬೇರೆಯಾಗಿದ್ದು ಮೇಣದಂತಹ ವಸ್ತುವಿನಿಂದ ರಚಿತವಾಗಿದೆ. ಇದರೊಳಗೆ ಕೀಟವು ಕಳಚಿದ ಪೊರೆಗಳಿರುತ್ತವೆ. ಈ ಗುಂಪಿನ ಕೀಟಗಳು ಉದರದ ಭಾಗದ ಕೊನೆಯ ನಾಲ್ಕು ಖಂಡಗಳು ಕೂಡಿಕೊಂಡು ಒಂದಾಗಿ ಪೈಜಿಡಿಯಮ್ ಎಂಬ ಭಾಗ ರಚಿತವಾಗಿದೆ. ಪೈಜಿಡಿಯಮ್ ಹೊಂದಿರುವ ಅಂಗಗಳ ಆಧಾರದ ಮೇಲೆ ಈ ಗುಂಪಿನ ಕೀಟಗಳನ್ನು ವಿಂಗಡಿಸಿದ್ದಾರೆ. ಕಾಕ್ಸಿಡೆ ಕುಟುಂಬದ ಇತರ ಕೀಟಗಳು ವಿಸರ್ಜಿಸುವ ಸಿಹಿಯಾದ ಅಂಟುದ್ರವವನ್ನು ಈ ಗುಂಪಿನ ಕೀಟಗಳು ವಿಸರ್ಜಿಸುವುದಿಲ್ಲ.

ಉದಾ:1. ಸನ್‌ಜೋಸ್ ಶಲ್ಕ ಕೀಟ (ಆಸ್ಪಿಡಿಯೋಟಸ್ ಪರ್ನಿಸಿಯೊಸಸ್)

ದ್ರಾಕ್ಷಿ, ಸೇಬು, ಪೀಚ್ ಹಣ್ಣು, ಜರದಾಲು ಮುಂತಾದ ಹಣ್ಣಿನ ಗಿಡಗಳ ಅತ್ಯಂತ ಉಪದ್ರವಕಾರಿ ಕೀಟ.




ಸನ್‌ಜೋಸ್ ಶಲ್ಕ ಕೀಟ

2. ಬಿಳಿಯ ಪೀಚ್ ಶಲ್ಕ ಕೀಟ (ಸ್ಯೂಡಾಲಾಪ್ಸಿಸ್ ಪೆಂಟಾಗೋನ್)

ದ್ರಾಕ್ಷಿ, ಚೆರ್ರಿ, ಪ್ರೈವೆಟ್ ಸಸ್ಯ ಮುಂತಾದವುಗಳ ವಿಧ್ವಂಸಕ ಕೀಟ.

3. ಮಬ್ಬಾದ ಶಲ್ಕ ಕೀಟ (ಕ್ರೈ ಸೊಂಫಾಲಸ್ ಅಬ್‌ಸ್ಕುರಸ್)

ಪೆಕಾನ್, ಹಿಕೊರಿ, ಓಕ್ ಮುಂತಾದ ಮರಗಳನ್ನು ಹಾನಿಗೊಳಿಸುತ್ತದೆ.

4. ಕ್ಯಾಲಿಫೋರ್ನಿಯಾದ ಕೆಂಪು ಶಲ್ಕ ಕೀಟ (ಲೆಪಿಡೊಸಾಫೆಸ್ ಬೆಕಿಯೈ)

ಸಿಟ್ರಸ್ ಜಾತಿಯ ಸಸ್ಯಗಳ ಅತ್ಯಂತ ಉಪದ್ರವಕಾರೀ ಕೀಟ.

5. ನೇರಳೇ ಶಲ್ಕ ಕೀಟ.

ಸಿಟ್ರಸ್ ಜಾತಿಯ ಗಿಡಗಳು, ಅವೊಕೇಡೊ, ನೀಲಗಿರಿ, ಅಂಜೂರ ಮುಂತಾದವುಗಳನ್ನು ಹಾನಿಗೊಳಿಸುತ್ತದೆ. (ಎಚ್.ಪಿ.ಜಿ./ಎಸ್.ಕೆ.ಆರ್)

**ಕಾಕ್ಸಿಡ್ಸ್:** ಕೀಟಗಳ ವರ್ಗ, ಹೆಮಿಪ್ಟರ ಗಣದ ಸ್ಟೆರ್ನೋರಿಂಕ ಉಪಗಣದ ಕಾಕ್ಸಿಡೆ ಕುಟುಂಬಕ್ಕೆ ಸೇರಿದ ಕೀಟಗಳು. ಮೃದು ಪೊರೆಗಳು, ಅಂಟು ಪೊರೆಗಳು ಮತ್ತು ಆಮೆಯ ಕವಚದ ಪೊರೆಗಳು ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಅಲಂಕಾರಿಕ ಸಸ್ಯಗಳಿಂದ ಹಿಡಿದು ಹಣ್ಣಿನ ಗಿಡಗಳಲ್ಲಿಯೂ ಸಹ ಕಾಣುತ್ತವೆ. ಜೀವನ ಶೈಲಿ, ಆಕಾರ ತುಂಬಾ ವೈವಿಧ್ಯತೆಯಿಂದ ಕೂಡಿದೆ. ರೆಕ್ಕೆಗಳಿಲ್ಲದ ಹೆಣ್ಣುಗಳ ಪೊರೆಯು ಕಂದು ಬಣ್ಣದ್ದಾಗಿದ್ದು ದೇಹ ಅಂಡಾಕಾರವಾಗಿ ಇಲ್ಲವೆ ಗುಂಡಾಗಿರುತ್ತದೆ. ಇನ್ನೂ ಪೂರ್ಣವಾಗಿ ಬೆಳೆಯದ ಪೊರೆಯ ಕೀಟಗಳು ಗಾತ್ರದಲ್ಲಿ ಸಣ್ಣದಾಗಿದ್ದರೂ ಪ್ರೌಢಕೀಟಗಳಂತೆ ಕಾಣುತ್ತವೆ. ಆದರೆ ಈ ಹುಳುಗಳು ತೆವಳುತ್ತಾ ಸಾಗುವ ಹುಳುಗಳಾಗಿದ್ದು ಮೂರು ಜೊತೆ ಕಾಲುಗಳನ್ನು

ಹೊಂದಿರುತ್ತವೆ. ಕಾಲುಗಳು ಮತ್ತು ಸ್ಪರ್ಶಾಂಗಗಳು ತುಂಬಾ ದುರ್ಬಲವಾಗಿವೆ. ಗುಲಾಬಿ ಬಣ್ಣದವುಗಳಾದ ಇವುಗಳ ಉದರದ ಕೊನೆಯಲ್ಲಿ ಅಂಡಾಕಾರದ ಮತ್ತು ಕಣ್ಣಿಗೆ ಎದ್ದು ಕಾಣುವ ಕೂದಲುಗಳಿವೆ.

ಅವುಗಳ ಸಂತಸೋತ್ಪತ್ತಿಯಲ್ಲೂ ಭಿನ್ನತೆಯಿದೆ. ಕೆಲವು ಕಾಕ್ಸಿಡ್‌ಗಳು ದ್ವಿಲಿಂಗಿಗಳಾಗಿದ್ದು ಸಂತಾನೋತ್ಪತ್ತಿ ಲೈಂಗಿಕವಾಗಿರುತ್ತದೆ. ಕೆಲವಲ್ಲಿ ಅನಿಷೇಚನ ಪ್ರಜನನವೂ ಇದೆ. ಮೊಟ್ಟೆಗಳು ಗರ್ಭಕೋಶದ ಉಣ್ಣೆಯಂತಹ ಅಂಟುದಾರಗಳಿಂದ ಆವೃತವಾಗಿವೆ. ಮೊದಲ ಹಂತದ ತೆವಳುವ ಹುಳುಗಳು ನೇರವಾಗಿ ಹೆಣ್ಣಿನ ಗರ್ಭಕೋಶದಿಂದ ಹೊರಬರುತ್ತವೆ. ಕೆಲವೇ ದಿವಸಗಳಲ್ಲಿ ಬೇರೆ ದಿಕ್ಕುಗಳಲ್ಲಿ ಸಾಗಿ, ಆಹಾರ ಸಿಗುವ ಸರಿಯಾದ ಸ್ಥಳಗಳನ್ನು ಹುಡುಕಿಕೊಳ್ಳುತ್ತವೆ. ಒಂದು ವಾರದಲ್ಲಿ ಎರಡನೇ ಹಂತಕ್ಕೆ ತಲುಪಿ ಮುಂದೆ ಎಲ್ಲಿಯೂ ಸಾಗದೆ ತಟಸ್ಥ ಹುಳುಗಳಾಗುತ್ತವೆ. ಕೆಲವು ಕಾಕ್ಸಿಡ್ಸ್‌ಗಳಲ್ಲಿ ಗಂಡುಗಳಿಗೆ ಹೋಲಿಸಿದರೆ ಹೆಣ್ಣು ಜೀವನದಲ್ಲಿ ಒಂದು ಹಂತ ಕಡಿಮೆ ಬೆಳವಣಿಗೆಯಿರುತ್ತದೆ. ನಿಯೋಟಾನಿಯೇ ಇದಕ್ಕೆ ಕಾರಣ. ಒಂದು ತಿಂಗಳ ನಂತರ ಮರಿಗಳು ರೆಕ್ಕೆಗಳುಳ್ಳ ಪ್ರೌಢ ಗಂಡು ಮತ್ತು ಹೆಣ್ಣು ಕೀಟಗಳಾಗುತ್ತವೆ. ಈ ತರಹದ ಪೀಳಿಗೆಗಳನ್ನು ಒಂದು ವರ್ಷದಲ್ಲಿ ನೋಡಬಹುದು.

ಕಾಕ್ಸಿಡ್ಸ್‌ಗಳ ಆಹಾರ ಸೇವನೆಯೂ ವೈವಿಧ್ಯವಾಗಿದೆ. ಕೆಲವು ಒಂದೇ ಸಸ್ಯದ ಮೇಲೆ ಜೀವಿಸಿ ತಿನ್ನುತ್ತಾ ಇದ್ದರೆ ಕೆಲವು ಹಲವು ವಿಧದ ಸಸ್ಯಗಳನ್ನು ತಿನ್ನುತ್ತವೆ. ಬಹು ಮುಖ್ಯವಾದ ಬೆಳೆಗಳನ್ನೂ ತಿಂದು ತಮ್ಮ ಸಂತತಿಯನ್ನು ಎಲ್ಲಾ ಪ್ರದೇಶಗಳಲ್ಲಿಯೂ ವಿಸ್ತರಿಸುತ್ತಾ ಹೋಗುತ್ತವೆ. ಇವುಗಳನ್ನು ತಡೆಗಟ್ಟುವುದೇ ತುಂಬಾ ಕಷ್ಟದ ಕಾರ್ಯ. ಗಿಡದ ಹೇನುಗಳಂತೆ ಹಲವು ಕಾಕ್ಸಿಡ್ಸ್‌ಗಳೂ ಸಹ ಸಿಹಿ ದ್ರವವನ್ನು ಸ್ರವಿಸುತ್ತವೆ. ಈ ಸಿಹಿ ದ್ರವದ ಹನಿಗಳು ಇರುವೆಗಳನ್ನು ಆಕರ್ಷಿಸುತ್ತದೆ. ಆಕರ್ಷಣೆಗೊಂಡ ಇರುವೆಗಳ ಸಂಖ್ಯೆ ಜಾಸ್ತಿಯಾಗಿ ಕಾಕ್ಸಿಡ್‌ಗಳನ್ನು ಬೇರೆ ಸ್ಥಳಕ್ಕೆ ಹೊತ್ತು ಸಾಗಿಸುತ್ತವೆ. ಈ ಕ್ರಿಯೆಯಿಂದಲೂ ಸಹ ಕಾಕ್ಸಿಡ್‌ಗಳು ದ್ವಿಗುಣಗೊಳ್ಳುತ್ತ ದೂರದ ಸ್ಥಳಗಳವರೆಗೂ ವಿಸ್ತಾರಗೊಳ್ಳುತ್ತವೆ. ಮತ್ತೊಂದು ದುರದೃಷ್ಟವೆಂದರೆ, ಈ ಕಾಕ್ಸಿಡ್ಸ್‌ಗಳು ಹಲವು ತರಕಾರಿ ಸಸ್ಯಗಳನ್ನು ತಿನ್ನುವುದರಿಂದ ಸಸ್ಯಗಳನ್ನು ಆತಂಕಕ್ಕೀಡುಮಾಡುತ್ತವೆ. ಆದ್ದರಿಂದ ಸಸ್ಯಗಳು ಒಂದು ತರಹ ಸಿಹಿ ದ್ರವವನ್ನು ಸ್ರವಿಸುತ್ತವೆ. ಅಂತಹ ದ್ರವವನ್ನು ಜೇನಿನ ಹನಿಯೆಂದು ಕರೆಯುತ್ತಾರೆ. ಈ ಹನಿಯು ಹಾನಿಗೊಂಡ ಸಸ್ಯದ ಮೇಲ್ಮೈ ಮೇಲೆ ಇದ್ದು ಬೂದಿಯಂತಹ ಶಿಲೀಂಧ್ರಗಳ ಬೆಳವಣಿಗೆಯಾಗುತ್ತದೆ. ಕ್ರಮೇಣ ಸಸ್ಯದ ಮೇಲ್ಮೈ ಕಪ್ಪು ಬಣ್ಣಕ್ಕೆ ತಿರುಗಿ ಎಲೆ ಹಾಗೂ ಹೂ ಗೊಂಚಲುಗಳನ್ನು ಕಳೆದುಕೊಳ್ಳುತ್ತವೆ. ಅನಂತರ ಬರುವ ಹೊಸ ಎಲೆ, ಹೂ ಗೊಂಚಲುಗಳು ಮತ್ತೆ ಕಾಕ್ಸಿಡ್ಸ್‌ಗಳ ಬೆಳವಣಿಗೆಗೆ ಬೇಕಾದ, ಜೀವನ ಸಾಗಿಸಲು ಯೋಗ್ಯವಾದ ಸ್ಥಳವಾಗಿರುತ್ತವೆ. (ಎಚ್.ಪಿ.ಜಿ.)

**ಕಾಕ್ಸಿನೆಲ್ಲಿಡೆ:** ಕೋಲಿಯಾಪ್ಟಿರಾ ಗಣದ ಪ್ರಮುಖ ಕುಟುಂಬ. ಗುಲಗಂಜಿ ಕೀಟ ಸಾಮಾನ್ಯ ಹೆಸರು. ಪ್ರಪಂಚದ ಎಲ್ಲಾ ಭಾಗಗಳಲ್ಲಿ ಹರಡಿವೆ. ಪ್ರಾಯದ ಕೀಟಗಳ ಗಾತ್ರದಲ್ಲಿ ವ್ಯತ್ಯಾಸವಿದ್ದು, 1.5 ಮಿಮೀ ದಿಂದ 6.0 ಮಿಮೀ ಉದ್ದವಿರುತ್ತವೆ. ದೇಹ ದುಂಡು, ಗೋಳಾಕಾರ ಮತ್ತು ಅರ್ಧಗೋಳಾಕಾರವಾಗಿದೆ. ಮೈ ಹೊಳಪಿನಿಂದಿದೆ. ಮೈ ಮೃದು, ಬಣ್ಣ ಕಪ್ಪು, ಬೂದು, ಹೊಳಪು ಇದ್ದು ಕೆಲವಕ್ಕೆ ಗುರುತುಗಳು ಮತ್ತು ಮಚ್ಚೆಗಳು ಇವೆ. ಒಂದೇ ಜಾತಿಯ ಹೆಣ್ಣು ಗಂಡುಗಳ ಮೈ ಮೇಲಿರುವ ಮಚ್ಚೆಗಳಲ್ಲಿ ವ್ಯತ್ಯಾಸವಿದೆ.

ಈ ಗುಲಗಂಜಿ ಕೀಟಗಳ ತಲೆ ಸಣ್ಣದು. ಮುನ್ನೆದೆ ಕೆಳಕ್ಕೆ ಬಾಗಿದೆ. ಕೂಡುಗಣ್ಣುಗಳು ದೊಡ್ಡದಾಗಿವೆ. ಕುಡಿ ಮೀಸೆಗಳು ಹನ್ನೊಂದು ತುಂಡುಗಳನ್ನು ಹೊಂದಿದ್ದು, ಗದೆಯಾಕಾರಕವಾಗಿವೆ. ಮೇಲ್ದವಡೆಗಳು ಸರಳವಾಗಿವೆ. ಮುನ್ನೆದೆ ಕಿರಿದಾಗಿದೆ. ಎಲ್ಲಾ ಕಾಲುಗಳು ಚಿಕ್ಕವು ಮತ್ತು ಹರಡುಗಳಲ್ಲಿ ನಾಲ್ಕು ತುಂಡುಗಳಿವೆ. ಮೊನೆಯುಗುರು ಒಂದು ಜೊತೆಯಿದ್ದು ಚೂಪಾಗಿವೆ. ಈ ನಾಲ್ಕು ತುಂಡುಗಳಲ್ಲಿ, ಮೂರನೆಯ ತುಂಡು ಇಬ್ಭಾಗವಾಗಿರುವ ಎರಡನೆಯ ತುಂಡಿನ ಕೆಳಭಾಗದಲ್ಲಿ ಅಡ್ಡಾಗಿರುತ್ತದೆ. ರೆಕ್ಕೆಗಳು ಹಾರಾಡಲು ಚೆನ್ನಾಗಿರುತ್ತವೆ. ಮೊದಲನೆಯ ಜೊತೆ ರೆಕ್ಕೆ "ಎಲಿಟ್ರಾ" ಶರೀರವನ್ನು ಮುಚ್ಚಿವೆ.

ಈ ಕುಟುಂಬದಲ್ಲಿ ಸು. 5000ಕ್ಕೂ ಹೆಚ್ಚು ಜಾತಿ ಕೀಟಗಳಿವೆ. ಗುಲಗಂಜಿ ಕೀಟಗಳ ಮರಿಗಳು ಮಾಂಸಹಾರಿಗಳಾಗಿದ್ದು, ಸಸ್ಯ ಹೇನು, ಶಲ್ಕಗಳು, ಬೂಜು ತಿಗಣೆಗಳು, ನುಸಿಗಳು, ಮತ್ತು ಕೆಲವು ಕೀಟಗಳ ಮೊಟ್ಟೆಗಳನ್ನು ತಿನ್ನುತ್ತವೆ. ಇವು ತೊಂದರೆಗಳಾದಾಗ ಹಳದಿ ಬಣ್ಣದ ಕಹಿಯಾದ ದ್ರಾವಣವನ್ನು ಮತ್ತು ಮುಂಗಾಲುಗಳ ಮಧ್ಯೆಯಿರುವ ಕೀಲುಗಳಲ್ಲಿರುವ ರಂಧ್ರಗಳಿಂದ ಹೊರಚೆಲ್ಲುತ್ತವೆ. ಗುಲಗಂಜಿ ಕೀಟಗಳು ಹಕ್ಕಿಗಳ ಹಾವಳಿಯಿಂದ ತಪ್ಪಿಸಿಕೊಳ್ಳಲು ಈ ಉಪಾಯ ಮಾಡುತ್ತವೆ. ಈ ಕೀಟಗಳ ಮೊಟ್ಟೆಗಳು ಕಿತ್ತಳೆ ಹಣ್ಣಿನ ಬಣ್ಣದಿಂದ ಕೂಡಿದ್ದು ಗುಂಪಾಗಿ ನಿಂತಿರುತ್ತವೆ. ಗುಲಗಂಜಿ ಕೀಟಗಳ ಮರಿಗಳು ಉದ್ದವಾಗಿ ಹಾಗೂ ಮೃದುವಾಗಿ ಗೆಜ್ಜರಿಯಾಕಾರವಾಗಿದ್ದು ಶರೀರವು ಸ್ವಲ್ಪ ಚಪ್ಪಟೆಯಾಗಿದೆ. ಮೈ ಮೇಲೆ ಉಬ್ಬುತಗ್ಗುಗಳಿದ್ದು ಸಣ್ಣ ಸಣ್ಣ ಮುಳ್ಳುಗಳಿರುತ್ತವೆ. ಈ ಮರಿಗಳು ಹಲವು ಬಣ್ಣಗಳನ್ನು ಹೊಂದಿದ್ದು ಹೊಳಪಾದ ಚುಕ್ಕೆ ಅಥವಾ ಮಚ್ಚೆಗಳಿವೆ. ಸಣ್ಣ ತಲೆಯಿದ್ದು, ಇಕ್ಕೆಡೆಗಳಲ್ಲಿ ಮೂರರಂತೆ ಸಾದಾ ಕಣ್ಣುಗಳಿವೆ. ದವಡೆಗಳು ಕುಡುಗೋಲಿನಾಕಾರದವು. ಎದೆಯ ಕೆಳಭಾಗದಲ್ಲಿ ನೀಳವಾದ ಆರು ಕಾಲುಗಳಿವೆ. ಉದರಭಾಗದಲ್ಲಿ ಕಾಲುಗಳಿಲ್ಲ.

ಮರಿಗಳು ಮೂರು ಸಾರಿ ಪೊರೆ ಬಿಡುತ್ತವೆ. ಮರಿಗಳು ಕೋಶಾವಸ್ಥೆಯನ್ನು ಹೊಂದುತ್ತವೆ. ಕೋಶಗಳಾಗುವುದಕ್ಕೆ ಮೊದಲು ಬೆಳೆದ ಮರಿಗಳು ಎಲೆಗಳ ಮೇಲೆ ತಮ್ಮ ಹೊಟ್ಟೆಯ ಹಿಂಭಾಗವನ್ನು ಅಂಟಿಸಿ ಪೊರೆಬಿಡುತ್ತವೆ. ಈ ಮರಿಗಳನ್ನು ಅಲುಗಾಡಿಸಿದಾಗ ಶರೀರವನ್ನು ಮೇಲೆತ್ತಿ ಬಡಿಯುತ್ತವೆ. ಕೋಶಾವಸ್ಥೆಯಿಂದ ಪ್ರೌಢಾವಸ್ಥೆ ಸೇರುತ್ತವೆ.

ಗುಲಗಂಜಿ ಹುಳುಗಳು ಹೆಚ್ಚಾಗಿ ಮಾನವನಿಗೆ ಉಪಕಾರಿ. ಈ ಉಪಕಾರಿ ಕೀಟಗಳು ಪ್ರೌಢ ಮತ್ತು ಮರಿ ಅವಸ್ಥೆಯಲ್ಲಿ ಕೃಷಿ ಬೆಳೆಗಳನ್ನು ಕಾಡುವ ಶತ್ರು ಹೇನು, ಶಲ್ಕ, ನುಸಿ, ಬೂಜುತಿಗಣೆಗಳನ್ನು ಹಿಡಿದು ತಿನ್ನುತ್ತವೆ. ಆದರೆ, ಕೆಲವು ಜಾತಿಯ ಕೀಟಗಳು ಬದನೆ, ಆಲೂಗಡ್ಡೆ ಮತ್ತು ಹಾಗಲಕಾಯಿ ಸಸ್ಯದ ಎಲೆಗಳನ್ನು ತಿನ್ನುತ್ತವೆ. ಕೆಲವು (ಉದಾ: ಸಿಲ್ಲೊಬೋರಾ, ಥಿಯಾ, ವ್ಲಿಜಿಡಿಯಾ, ಹ್ಯಾಲಜಿಯಾ) ಬೂಷ್ಟು ಅಥವಾ ಪರಾಗವನ್ನು ತಿನ್ನುತ್ತವೆ. ಕೆಲವು ಜಾತಿ ಪ್ರೌಢಾವಸ್ಥೆಯಲ್ಲಿ ಗುಂಪಾಗಿದ್ದು ಅತೀ ಶೀತದಿಂದ ಉಂಟಾಗುವ ತೊಂದರೆಯನ್ನು ತಪ್ಪಿಸಿಕೊಳ್ಳುತ್ತವೆ.

ಮಾನವನಿಗೆ ಉಪಕಾರಿಯಾಗಿರುವ ಗುಲಗಂಜಿ ಕೀಟಗಳಲ್ಲಿ ಎಪಿಲಾಕ್ನಾ ಪಂಕ್ಟೆಟಾ, ರೊಡೋಲಿಯಾ ಕಾರ್ಡಿನಾಲೀಸ, ಕ್ರಿಪ್ಟೋಲೀಮಸ್ ಮಾಂಟ್ರೋಜಿಯರಿ, ಮೀನೋಕೈಲಸ್ ಸೆಕ್ಸಮಾಕುಲೇಟಸ್, ಬ್ರೂಮಸ್ ಸುಚುರಾಲಿಸ್, ನೀಫಸ್ ಜಾತಿ, ಪುಲ್ಲಿಸ್ ಜಾತಿ, ಕೈಲೋಕೋರಸ್ ನಿಗ್ರೈಟಸ್, ಕಾಕ್ಸಿನೆಲ್ಲಾ ಜಾತಿ, ಸ್ತಿಥೊರಸ್ ಜಾತಿ, ಸ್ಕಿನ್ನುಸ್ ಜಾತಿ ಕೀಟಗಳು ಮುಖ್ಯವಾದುವು.

ರೊಡೋಲಿಯಾ ಕಾರ್ಡಿನಾಲಿಸ್: ಇದನ್ನು ವಿಡೇಲಿಯಾ ಗುಲಗಂಜಿ ಕೀಟವೆನ್ನುವರು. ಇದು ಆಸ್ಟ್ರೇಲಿಯಾ ನಿವಾಸಿ. ಇದು ಸಣ್ಣ ಕಂದು ಬಣ್ಣದ ಗುಂಡಾಗಿರುವ ಕೀಟ. ಇದರ ಮೇಲು ರೆಕ್ಕೆಯ ಮೇಲೆ ಉದ್ದಾಕಾರದ ನಾಲ್ಕು ಕಪ್ಪು ಮಚ್ಚೆಗಳಿವೆ.

ಆಸ್ಟ್ರೇಲಿಯಾದಲ್ಲಿ ನಿರಿಗೆ ಶಲ್ಕ (ಫ್ಲುಟೆಡ್ ಸ್ಕೇಲ್ಸ್) ಐಸಿರೀಯ ಪರ್ಚೇಸಿಯನ್ನು ತಿಂದು ನಾಶಪಡಿಸುತ್ತದೆ. ಹಾನಿಕಾರಕ ಕೀಟಗಳ ಹತೋಟಿಯಲ್ಲಿ ಇದು ಪ್ರಾಮುಖ್ಯವಾದ ಪಾತ್ರವಹಿಸುತ್ತದೆ. 1868ರಲ್ಲಿ ಐಸಿರಿಯಾ ಪರ್ಚೇಸಿ ಶಲ್ಕ ಕೀಟವು ಕ್ಯಾಲಿಫೋರ್ನಿಯಾದಲ್ಲಿ ಕಿತ್ತಳೆ ಬೆಳೆಯನ್ನು ಹಾಳುಮಾಡಿತ್ತು. ಅಮೇರಿಕಾದ ಕೀಟ ವಿಜ್ಞಾನಿ 1889ರಿಂದ 1890ರಲ್ಲಿ ಈ ಶಲ್ಕ ಕೀಟದ ತವರೂರಿಗೆ ಹೋಗಿ ಅದರ ಸ್ವಾಭಾವಿಕ ಶತ್ರುವಾದ ವಿಡೇಲಿಯಾ ಗುಲಗಂಜಿ ಕೀಟವನ್ನು ತಂದು ಅಭಿವೃದ್ಧಿಮಾಡಿ ಕಿತ್ತಳೆ ತೋಟದಲ್ಲಿ ಬಿಟ್ಟರು. ಈ ಕೀಟ ಶತ್ರು ಶಲ್ಕ ಕೀಟವನ್ನು ತಿಂದು ಹತೋಟಿಗೆ ತಂದಿತು. ಈ ಹತೋಟಿ ಕ್ರಮವನ್ನು ಕಂಡು ವಿಡೇಲಿಯಾ ಗುಲಗಂಜಿ ಕೀಟವನ್ನು ಬೇರೆ ದೇಶದವರು ತರಿಸಿಕೊಂಡು ಪೀಡೆಗಳನ್ನು ನಿಯಂತ್ರಿಸುವಲ್ಲಿ ಪ್ರಯೋಜನ ಪಡೆದರು. ದಕ್ಷಿಣ ಭಾರತದ ನೀಲಗಿರಿಯಲ್ಲಿ ಇದೇ ಶಲ್ಕ ಕೀಟವು 1922–1930ರಲ್ಲಿ ತೊಂದರೆ ಕೊಡುತ್ತಿರುವುದನ್ನು ಗಮನಿಸಿ, ವಿಡೇಲಿಯಾ ಗುಲಗಂಜಿ ಕೀಟವನ್ನು ಬಿಟ್ಟು ಹತೋಟಿಗೆ ತರಲಾಯಿತು. 1947ರಲ್ಲಿ ಈ ಶಲ್ಕ ಕೀಟವು ಕರ್ನಾಟಕದಲ್ಲಿ ಕಿತ್ತಳೆ, ಚಿತ್ರಮೂಲ, ಸರ್ವೆ (ಗಾಳಿ ಮರ) ಮೊದಲಾದ ಸಸ್ಯಗಳ ಮೇಲೆ ಕಂಡಾಗ ವಿಡೇಲಿಯಾ ಗುಲಗಂಜಿ ಕೀಟವನ್ನು ಬಳಸಿ ನಿಯಂತ್ರಿಸಲಾಯಿತು.

2. ಕ್ರಿಪ್ಟೋಲೀಮಸ್ ಮಾಂಟ್ರೋಜಿಯರಿ: ಇದು ಗಾತ್ರದಲ್ಲಿ ಸಣ್ಣದು ಮತ್ತು ಕಪ್ಪು ಬಣ್ಣದ್ದು. ಇದು ಬಿಳಿ ತಿಗಣೆ ಮತ್ತು ಇರಿಯೋಕಾಕಸ್ ಬಗೆಯ ಶಲ್ಕಗಳನ್ನು ತಿನ್ನುತ್ತದೆ. ಈ ಬಿಳಿ ತಿಗಣೆಗಳು ಹೆಚ್ಚಾಗಿ ಮಾವು, ಸೀಬೆ, ಕಿತ್ತಳೆ ಮುಂತಾದ ಮರಗಳ ಮೇಲೆ ಬಿದ್ದು ಹಾವಳಿ ಮಾಡಿ ಹಾನಿ ಮಾಡುತ್ತವೆ. ಕ್ರಿ. ಮಾಂಬ್ರೋಜಿಯರಿ ಕೀಟ ಅವುಗಳನ್ನು ತಿಂದು ಹತೋಟಿ ಮಾಡುತ್ತದೆ. ಇದರ ಮರಿಗಳ ಮೇಲೆ ಬಿಳಿ ಬೂಷ್ಟು ಇದ್ದು, ತಿಗಣೆಗಳನ್ನು ಹೋಲುತ್ತವೆ. ಆದರೆ, ಮೈ ಮೇಲೆ ಮತ್ತು ಪಕ್ಕಗಳಲ್ಲಿ ಬೆರಳುಗಳಂತಹ ಬಿಳಿ ಗುರುತುಗಳಿವೆ. ಕಾರಣ, ಸುಲಭವಾಗಿ ತಿಗಣೆಗಳಿಂದ ಪ್ರತ್ಯೇಕಿಸಬಹುದು. ಈ ಮರಿಗಳು ಸಹ ಬಿಳಿ ಬೂಷ್ಟು ತಿಗಣೆಗಳಿಂದ ಮತ್ತು ಅವುಗಳ ಮರಿಗಳನ್ನು ತಿಂದು ನಾಶಪಡಿಸುತ್ತವೆ. ಇದು ಆಸ್ಟ್ರೇಲಿಯಾದ ನಿವಾಸಿ. ಕ್ಯಾಲಿಫೋರ್ನಿಯಾದಲ್ಲಿ ಕಿತ್ತಳೆ ಗಿಡಗಳಿಗೆ ಬಿದ್ದು ತೊಂದರೆ ಕೊಡುತ್ತಿದ್ದ ಶಲ್ಕ ಬೂಜು ತಿಗಣೆ ಸುಡೋಕಾಕಸ್ ಸಿಟ್ರೈಯನ್ನು ಹತೋಟಿಗೆ ತಂದಿತು. ಈ ಕ್ರಿಪ್ಟೋಲೀಮಸ್ ಗುಲಗಂಜಿ ಕೀಟವನ್ನು ಕೊಯಿಬೆಲೆ ಎಂಬ ಕೀಟ ವಿಜ್ಞಾನಿಯು 1892ರಲ್ಲಿ ಶಬ್ದ ಕೀಟದ ನಿಯಂತ್ರಣಕ್ಕೆ ಬಳಸಿದನು. ಇದರಿಂದ ಬೂಜು ತಿಗಣೆಯ ಹಾವಳಿ ಕಡಿಮೆಯಾಯಿತು. ದಕ್ಷಿಣ ಭಾರತದಲ್ಲಿ ಕಾಫಿಗಿಡಕ್ಕೆ

ಬೀಳುವ ಬೂಜು ತಿಗಣೆಯ ಹತೋಟಿ ಮಾಡಲು ಈ ಕೀಟವನ್ನು ಉಪಯೊಗಿಸಲಾಯಿತು. 1952ರಲ್ಲಿ ಈ ಕೀಟವನ್ನು ಮೈಸೂರು ಮತ್ತು ಮದ್ರಾಸ ಪ್ರಾಂತ್ಯದ ಅನೇಕ ಭಾಗಗಳಲ್ಲಿ ಬಳಸಲಾಯಿತು.

3. ಕೈಲೋಮೆನಿಸ್ ಸೆಕ್ಸಮಾಕುಲೇಟಾ: ಈ ಕೀಟ ಹೊಲ ತೋಟಗಳಲ್ಲಿ ವಾಸಿಸುತ್ತದೆ. ಇದರ ಮರಿಗಳು ಸಣ್ಣವು. ಪ್ರಾಯದ ಕೀಟ ಸಣ್ಣವಾಗಿದ್ದು, ವಿವಿಧ ಬಣ್ಣಗಳಿಂದ ಕೂಡಿದೆ. ಕೆಲವು ಜಾತಿಯ ಕೀಟಗಳ ಮೇಲು ರೆಕ್ಕೆಗಳ ಮೇಲೆ ಮಚ್ಚೆಗಳಿವೆ. ಸಸ್ಯಹೇನುಗಳು ಇರುವಲ್ಲಿ ಇವು ಜೀವಿಸಿ, ಹೇನುಗಳನ್ನು ತಿಂದು ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಹತೋಟಿ ಮಾಡುತ್ತವೆ. ಇವುಗಳು ಜುಲೈ, ಆಗಸ್ಟ್ ತಿಂಗಳುಗಳಲ್ಲಿ ವಿವಿದ ಬೆಳೆಗಳಲ್ಲಿ ಕಾಣಬಹುದು.

4. ಕಾಕ್ಸಿನೆಲ್ಲಾ ಪಂಕ್ಟೆಟಾ: ಈ ಗುಲಗಂಜಿ ಹುಳದ ರೆಕ್ಕೆಯ ಮೇಲೆ ಏಳು ಕಪ್ಪು ಮಚ್ಚೆಗಳಿವೆ. ಇವು ಕುದುರೆ ಮಸಾಲೆ ಮೇಲೆ ಬೀಳುವ ಹೇನುಗಳು ಮತ್ತು ಕುಸುಬೆ ಬೆಳೆಗೆ ಪೀಡೆಯಾಗಿರುವ ಹೇನುಗಳನ್ನು ತಿಂದು ಆ ಬೆಳೆಗಳನ್ನು ರಕ್ಷಿಸುತ್ತವೆ.

ಸ್ಟಿಥೊರಸ್ ಮತ್ತು ಸ್ಕಿಮ್ನಸ್ ಗುಲಗಂಜಿ ಕೀಟಗಳು ಗಾತ್ರದಲ್ಲಿ ಅತೀ ಸಣ್ಣವು. ಇವು ನುಶಿ ಮತ್ತು ಹೇನುಗಳನ್ನು ತಿಂದು ಹತೋಟಿಯಲ್ಲಿಡುತ್ತವೆ. ಸಿನೋನಿಕಾ ಗ್ರಾಂಡಿಸ್ ಮತ್ತು ಅನ್ನಿಸೋಲೆಮ್ನಿಯಾ ಡೈಲೇಟೇಟ ಈ ಗುಲಗಂಜಿ ಕೀಟಗಳು ತುಂಬಾ ದೊಡ್ಡವು. ಇವುಗಳ ಗಾತ್ರ 11 ರಿಂದ 13.5 ಮಿಮಿ. ಇವು ಹೆಚ್ಚಾಗಿ ದಕ್ಷಿಣ ಏಶಿಯಾ ಮತ್ತು ಮಲೇಶಿಯಾ ದೇಶಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ವಲಸೆ ಹೋಗುವ ಗುಲಗಂಜಿ ಕೀಟಗಳೆನ್ನುವರು. ಹೆಚ್ಚಾಗಿ ಹಳದಿ ಬಿದುರಿನ ಮೇಲೆ ಬೀಳುವ ಹೇನು (ಒರಿಗ್ಮಾ ಬಾಂಬೂಸಿ)ಗಳನ್ನು ತಿನ್ನುತ್ತವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕಬ್ಬಿನ ಬೆಳೆಗೆ ಬೀಳುವ ಹೇನುಗಳನ್ನು ಹತೋಟಿಮಾಡಲು ಈ ಗುಲಗಂಜಿ. ಕೀಟಗಳನ್ನು ಉಪಯೋಗಿಸುತ್ತಾರೆ. ಇವುಗಳನ್ನು ಕರ್ನಾಟಕ ರಾಜ್ಯದಲ್ಲಿ ಜೈವಿಕ ನಿಯಂತ್ರಣ ಕಾರ್ಯದಲ್ಲಿ ಬಳಸುವರು.

ಈ ಕುಟುಂಬಕ್ಕೆ ಸೇರಿದ ಗುಲಗಂಜಿ ಕೀಟಗಳು ಮಾನವನಿಗೆ ಉಪಕಾರಿಯಾದ್ದರೂ, ಕೆಲವು ವೇಳೆ ಬೆಳೆಗಳನ್ನು ತಿಂದು ನಾಶಮಾಡುತ್ತವೆ. ಉದಾ: ಎಪಿಲಾಕ್ನಾ ಪಂಕ್ಟೆಟಾ. ಪ್ರೌಢ ಕೀಟದ ರೆಕ್ಕೆಯ ಮೇಲೆ ಕಪ್ಪು ಗುರುತುಗಳಿವೆ. ಹಳದಿ ಮತ್ತು ಹಸಿರು ಬಣ್ಣದ ಮರಿಗಳ ಮೈಮೇಲೆ ಮುಳ್ಳುಗಳಿರುತ್ತವೆ. ಈ ಮರಿಗಳನ್ನು ಸೀಡಿ ಅಥವಾ ಹಂದಿಹುಳು ಎನ್ನುವರು. ಎಪಿಲಾಕ್ನಾ ಜಾತಿಯ ಗುಲಗಂಜಿ ಕೀಟಗಳು ಮತ್ತು ಅವುಗಳ ಮರಿಗಳು ಬದನೆ, ಅಲೂಗಡ್ಡೆ, ಹೀರೆ, ಸೌತೆ, ಕಲ್ಲಂಗಡಿ, ಹಾಗಲ, ಮೆಣಸಿನಕಾಯಿ ಬೆಳೆಗಳ ಎಲೆ ತಿನ್ನುತ್ತವೆ, ಎಲೆಗಳ ಹಸಿರು ಭಾಗವನ್ನು ಅರ್ಧಚಂದ್ರಾಕೃತಿಯಲ್ಲಿ ಕೆರೆದು, ತಿಂದು ಹಾಳು ಮಾಡಿ ಎಲೆಗಳು ಒಣಗುವಂತೆ ಮಾಡುವುದರಿಂದ, ಇವುಗಳ ಹಾವಳಿಯನ್ನು ಸುಲಭವಾಗಿ ಕಂಡುಹಿಡಿಯಬಹುದು. ಕೆಲವು ವೇಳೆ ಇವುಗಳ ಜಾಸ್ತಿಯಾದಾಗ ಬೆಳೆಯು ಪುರ್ತಿಯಾಗಿ ಒಣಗಿ ಹಾಳಾಗಿ ರೈತನಿಗೆ ನಷ್ಟವಾಗುತ್ತದೆ. ಈ ಜಾತಿಯ ಗುಲಗಂಜಿ ಹುಳು ಹೆಚ್ಚಾಗಿ ಬದನೆ ಜಾತಿಗೆ ಮತ್ತು ಕುಂಬಳ ಜಾತಿಗೆ ಸೇರಿದ ಬೆಳೆಗಳಿಗೆ ಹೆಚ್ಚು ನಷ್ಟವನ್ನುಂಟುಮಾಡುತ್ತವೆ.

ಎಪಿಲಾಕ್ನಾ ವಿಜಿಯಂಟಿ ಬದನೆ, ಆಲೂಗಡ್ಡೆ, ಟೊಮೊಟೋ ಬೆಳೆಗಳ ಎಲೆಗಳನ್ನು ತಿಂದು ಹಾಳುಮಾಡುತ್ತದೆ. ಪ್ರಾಯದ ಕೀಟಗಳ ಜೊತೆ ಮರಿಹುಳು ಸಹಾ ಎಲೆಯ ಹಸಿರು ಭಾಗವನ್ನು ಕೆರೆದು ತಿನ್ನುತ್ತದೆ. ಬದನೆಗೆ ತುಂಬಾ ಹಾನಿಯನ್ನುಂಟು ಮಾಡುತ್ತವೆ. ಹೆಣ್ಣು ಗುಲಗಂಜಿ ಕೀಟವು ಎಲೆಯ ತಳಭಾಗದಲ್ಲಿ ಹಳದಿ ಬಣ್ಣದ ಮೊಟ್ಟೆಗಳನ್ನು ಗುಂಪಾಗಿ ನೀಳವಾಗಿ ಇಡುತ್ತದೆ. ಈ ಗುಲಗಂಜಿ ಕೀಟದ ಶರೀರವು ಅರ್ಧಗೋಳಾಕಾರವಾಗಿದ್ದು, ಮೃದುವಾಗಿ ಮತ್ತು ಕಡು ಬಣ್ಣದಿಂದ ಕೂಡಿದೆ. ಮೇಲು ರೆಕ್ಕೆಯ ಮೇಲೆ 28 ಕಪ್ಪು ಚುಕ್ಕೆಗಳಿರುತ್ತವೆ. ಒಂದು ಜೀವನ ಚಕ್ರ ಮುಗಿಸಲು 20 ರಿಂದ 30 ದಿವಸಗಳು ಬೇಕು. (ಟಿ.ಎಸ್.ಟಿ)

**ಕಾಕ್ಸೀಡಿಯ ರೋಗ:** ಏಕಕೋಶ ಜೀವಿಗಳಾದ ಕಾಕ್ಸೀಡಿಯ ವರ್ಗಕ್ಕೆ ಸೇರಿದ ಪರಾವಲಂಬಿ ಜೀವಿಗಳು ಉಂಟು ಮಾಡುವ ರೋಗ. ಮೊಲ, ಕೋಳಿ ಮುಂತಾದ ಪ್ರಾಣಿಗಳಲ್ಲಿ ಈ ಸೂಕ್ಷ್ಮಾಣು ಜೀವಿಗಳು ಉತ್ಪತ್ತಿಮಾಡುವ ರೋಗ ಕಾಕ್ಸಿಡಿಯೋಸಿಸ್ ಎಂದು ಕರೆಯಲಾಗುತ್ತದೆ. ಈ ಪರಾವಲಂಬಿಗಳು ಆಶ್ರಯದಾತ ಪ್ರಾಣಿಯ ಸಣ್ಣ ಕರುಳಿನ ಉಪಲೇಪಕ ಅಂಗಾಂಶದ (ಎಪಿತೀಲಿಯಲ್ ಟಿಶ್ಯು) ಕೋಶಗಳಲ್ಲಿ ಜೀವಿಸುತ್ತವೆ. ಬೆಳವಣಿಗೆಯ ಸ್ಥಿತಿಯಲ್ಲಿದ್ದಾಗ ಇವಕ್ಕೆ ಟ್ರೋಫೋಜೂಆಯ್ಟ್ ಎಂದು ಪುನರುತ್ಪತ್ತಿ ಸ್ಥಿತಿಯಲ್ಲಿದ್ದಾಗ ಶೈಜ಼ಾಂಟ್ ಎಂದು ಹೆಸರು. ಶೈಜ಼ಾಂಟ್ ಸ್ಥಿತಿಯಲ್ಲಿ ಕೋಶಬೀಜ ಹಲವು ಭಾಗಗಳಾಗಿ ವಿಭಜನೆ ಹೊಂದಿ ಮೀರೋಜ಼ೋಆಯ್ಟ್ ಮರಿಗಳು ಉತ್ಪತಿಯಾಗುತ್ತವೆ. ಪ್ರತಿಯೊಂದು ಮೀರೋಜ಼ೋಆಯ್ಟ್ ಪುನಃ ಟ್ರೋಫೊಜ಼ೂಆಯ್ಟ್ ಆಗಿ ಬೆಳೆಯುತ್ತದೆ. ಈ ರೀತಿಯ ನಿರ್ಲಿಂಗ ವಂಶಾಭಿವೃದ್ಧಿ ಅನೇಕ ಪೀಳಿಗೆಗಳವರೆಗೆ ನಡೆಯುತ್ತದೆ. ರೋಗ ಉಲ್ಬಣಿಸುವುದಕ್ಕೆ ಈ ಬಗೆಯ ವಂಶಾಭಿವೃದ್ಧಿ ಕಾರಣ.

ಆಶ್ರಯದಾತ ಜೀವಿಯಲ್ಲಿ ಈ ಪರಾವಲಂಬಿಗಳ ವಿರುದ್ಧ ಏರ್ಪಡುವ ರಕ್ಷಣೆಯ ಪ್ರತಿಕ್ರಿಯೆಯಿಂದಾಗಿ ಮೀರೋಜ಼ೋಯ್ಟ್‌ಗಳು, ಶೈಜ಼ಾಂಟ್‌ಗಳಾಗಿ ಬೆಳೆಯದೆ ಗಂಡು, ಹೆಣ್ಣು ಜೀವಿಗಳಾಗಿ ಪರಿಣಮಿಸುತ್ತವೆ. ಗಂಡಾಗಿ ರೂಪಗೊಂಡ ಸೂಕ್ಷ್ಮ ಪ್ರಜನನ ಜೀವಿ (ಮೈಕ್ರೊಗ್ಯಾಮಿಟೊಸೈಟ್) ಅನೇಕ ಭಾಗಗಳಾಗಿ ವಿಭಜನೆ ಹೊಂದಿ ಸೂಕ್ಷ್ಮ ಸಂಯೋಗಿ ಕಣಗಳಾಗುತ್ತವೆ (ಮೈಕ್ರೊಗ್ಯಾಮೀಟ್). ಹೆಣ್ಣಾಗಿ ರೂಪಗೊಂಡ ಸ್ಥೂಲ ಪ್ರಜನನ ಜೀವಿಯಿಂದ (ಮ್ಯಾಕ್ರೋಗ್ಯಾಮಿಟೊಸೈಟ್) ಒಂದು ಸ್ಥೂಲ ಸಂಯೋಗಿಕಣ (ಮ್ಯಾಕ್ರೋಗ್ಯಾಮಿಟೊಸೈಟ್) ಉದ್ಭವಿಸುತ್ತದೆ. ಒಂದೊಂದು ಸ್ಥೂಲ ಮತ್ತು ಸೂಕ್ಷ್ಮ ಸಂಯೋಗಿ ಕಣಗಳ ಸಂಯೋಗದಿಂದ ಒಂದು ಯುಗ್ಮಕಣ (ಜ಼ೈಗೋಟ್) ಉತ್ಪತ್ತಿಯಾಗುತ್ತದೆ. ಇದು ತನ್ನ ದೇಹದ ಸುತ್ತಲು ರಕ್ಷಣಾ ಕವಚವನ್ನು ರೂಪಿಸಿಕೊಂಡು ಊಸಿಸ್ಟ್ ಆಗುತ್ತದೆ. ಇಂಥ ಅನೇಕ ಊಸಿಸ್ಟ್‌ಗಳು ಆಶ್ರಯದಾತ ಜೀವಿಯ ಮಲದ ಮೂಲಕ ಹೊರಬಿದ್ದು, ನಂತರ ಅನೇಕ ಸ್ಪೊರೊಜ಼ೋಯ್ಟ್‌ಗಳನ್ನು ಉತ್ಪಾದಿಸಿ, ಕೆಲವು ದಿನಗಳಲ್ಲಿ ಪ್ರಬುದ್ಧ ಸ್ಥಿತಿಗೆ ಬರುತ್ತವೆ. ಇಂಥ ಊಸಿಸ್ಟ್‌ಗಳು ಆಹಾರದಲ್ಲಿ ಅಥವಾ ಕುಡಿಯುವ ನೀರಿನಲ್ಲಿ ಬೆರೆತು ಮತ್ತೊಂದು ಆಶ್ರಯದಾತ ಜೀವಿಯನ್ನು ಸೇರುತ್ತವೆ. ಕರುಳಿನಲ್ಲಿ ಊಸಿಸ್ಟ್ ಒಡೆದು, ಸ್ಪೊರೊಜ಼ೋಯ್ಟ್‌ಗಳು ಹೊರಬಂದು ಉಪಲೇಪಕ ಅಂಗಾಂಶವನ್ನು ಪ್ರವೇಶಿಸಿ ನಿರ್ಲಿಂಗ ರೀತಿ ಜೀವನ ಚರಿತ್ರೆಯನ್ನು ಪ್ರಾರಂಭಿಸುತ್ತವೆ.

ದನಗಳಲ್ಲಿ ತೀಕ್ಷ್ಣವಾದ ಕಾಕ್ಸೀಡಿಯ ರೋಗವನ್ನುಂಟುಮಾಡುವುದರಲ್ಲಿ ಐಮೀರಿಯ ಜೂರ್ನಿ ಸೂಕ್ಷ್ಮಾಣು ಮುಖ್ಯವಾದದ್ದು. ಬೇಸಗೆಯಲ್ಲಿ ಕರುಗಳು ಈ ರೋಗಕ್ಕೆ ತುತ್ತಾಗುತ್ತವೆ. ರೋಗದ ಮೊದಲ ಚಿಹ್ನೆ ಭೇದಿ, ನಂತರ ಎರಡು ಮೂರು ದಿನಗಳಲ್ಲಿ ಮಲದಲ್ಲಿ ರಕ್ತ ಕಂಡುಬರುತ್ತದೆ. ಮಲವಿಸರ್ಜನೆ ಆಗುವ ವೇಳೆಯಲ್ಲಿ ಕರುಳಿನ ಶೂಲೆಯಿಂದ ಕರುಗಳು ವಿಪರೀತ ನರಳುತ್ತವೆ. ಸಕಾಲದಲ್ಲಿ ಚಿಕಿತ್ಸೆ ಮಾಡಿದರೆ ರೋಗ ಚಿಹ್ನೆಗಳು ಕ್ರಮೇಣ ಕಡಿಮೆಯಾಗಿ ಕರುಗಳು ಚೇತರಿಸಿಕೊಳ್ಳುತ್ತವೆ. ಇಲ್ಲದಿದ್ದರೆ ಶೇ. 10ರಷ್ಟು ಮರಣ ಸಂಭವಿಸುತ್ತದೆ. ಐಮೀರಿಯ ಸ್ಟೆಯಿಡೆ ಪ್ರಭೇದ, ಮೊಲಗಳಲ್ಲಿ ಕಾಕ್ಸೀಡಿಯ ರೋಗವುಂಟು ಮಾಡುತ್ತದೆ. ಇದು ಇತರ ಕಾಕ್ಸೀಡಿಯಗಳಂತೆ ಕರುಳನ್ನು ಆಕ್ರಮಿಸದೆ, ಪಿತ್ತಜನಕಾಂಗವನ್ನು ಆಕ್ರಮಿಸುತ್ತದೆ.

ಕೋಳಿಗಳಲ್ಲಿ ಸು. 9 ಜಾತಿಯ ಕಾಕ್ಸೀಡಿಯಗಳು ರೋಗೋತ್ಪತ್ತಿ ಮಾಡುವುವೆಂದು ಕಂಡುಬಂದಿದೆ. ಇವುಗಳಲ್ಲಿ ಕರುಳಿನ ಸೀಕಂ ಎಂಬ ಭಾಗವನ್ನು ಆಕ್ರಮಿಸುವ ಐಮೀರಿಯ ಟೆನಲ ಎಂಬ ಪ್ರಭೇದ ಬಹಳ ಕ್ರೂರವಾದದ್ದು. ಈ ರೋಗ 5–8 ವಾರ ವಯಸ್ಸಿನ ಮರಿಗಳಿಗೆ ತಗಲುವುದು ಹೆಚ್ಚು. ಒಂದು ವಾರದ ಮರಿಗಳಿಗೂ, ವಯಸ್ಸಾದ ಕೋಳಿಗಳಿಗೂ ಬರುತ್ತದೆ. ರೋಗ ತಗುಲಿದ 4 ದಿನಗಳಲ್ಲಿ ಆಮಶಂಕೆ ಕಂಡುಬಂದು ಮುಂದಿನ್ನೆರಡು ದಿನಗಳಲ್ಲಿ ರೋಗಕ್ಕೆ ತುತ್ತಾದ ಪ್ರಾಣಿಗಳು ಸಾಯುತ್ತವೆ. ಕೆಲವೊಮ್ಮೆ ಸ್ವಾಭಾವಿಕವಾಗಿ ಚೇತರಿಸಿಕೊಳ್ಳುವುವು. ಸೂಕ್ತ ಚಿಕಿತ್ಸೆ ನೀಡದಿದ್ದರೆ ಶೇ 90 ರಷ್ಟು ಸಾವು ಸಂಭವಿಸುವ ಸಾಧ್ಯತೆಗಳಿವೆ.

ಇಕ್ಕಟ್ಟಾದ ಜಾಗದಲ್ಲಿ ಹೆಚ್ಚು ಕೋಳಿಗಳನ್ನು ಇಡುವುದು ಕಾಕ್ಸೀಡಿಯ ರೋಗ ಹರಡುವಿಕೆಗೆ ಅನುಕೂಲ. ತೇವವೂ ಊಸಿಸ್ಟುಗಳ ಬೆಳೆವಣಿಗೆ ಅವಶ್ಯಕ. ಇವುಗಳನ್ನು ಗಮನದಲ್ಲಿಟ್ಟು ತಕ್ಕ ನಿವಾರಣೆ ಕ್ರಮಗಳನ್ನು ಅನುಸರಿಸಬೇಕು. ಸಲ್ಫಮೆತಜೀನ್ ಔಷಧಗಳು ಕಾಕ್ಸೀಡಿಯ ರೋಗವನ್ನು ನಿಯಂತ್ರಿಸುವ ಮದ್ದುಗಳು. ರೋಗ ತಲೆದೋರಿದ ಕೂಡಲೇ ಆ ಗುಂಪಿನ ಎಲ್ಲ ಮರಿಗಳು ಕುಡಿಯುವ ನೀರಿನಲ್ಲಿ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಔಷಧಿಯನ್ನು ಬೆರೆಸಿ, ಕೋಳಿಗಳಿಗೆ ಒದಗಿಸುವುದು ರೋಗ ನಿವಾರಣೆಯ ಒಂದು ಮುಖ್ಯ ಕ್ರಮ. ***

**ಕಾಗೆ:** ಪ್ಯಾಸೆರಿಫಾರ್ಮಿಸ್ ಗಣದ ಕೋರ್ವಿಡೆ ಕುಟುಂಬಕ್ಕೆ ಸೇರಿದ ಕೋರ್ವಸ್ ಜಾತಿಯ ಹಕ್ಕಿ. ಪ್ರಪಂಚದ ಎಲ್ಲ ದೇಶಗಳಲ್ಲೂ ಉಂಟು. ಸುಮಾರು ೩೨ ಪ್ರಭೇದಗಳಿವೆ. ಭಾರತದಲ್ಲಿ ಕೋರ್ವಸ್ ಮ್ಯಾಕ್ರೊರಿಂಕೋಸ್ (ಕಾಡುಕಾಗೆ) ಮತ್ತು ಕೋರ್ವಸ್ ಸ್ಪ್ಲೆಂಡೆನ್ಸ್ (ಊರುಕಾಗೆ) ಎಂಬ ಎರಡು ಪ್ರಭೇದಗಳಿವೆ. ಯೂರೋಪಿನಲ್ಲಿ ಕೋರ್ವಸ್ ಕರೋನೆ ಮತ್ತು ಕೋ.ಕಾರ್ನಿಕ್ಸ್ ಎಂಬುವೂ ಉತ್ತರ ಅಮೆರಿಕದಲ್ಲಿ ಕೋರ್ವಸ್ ಬ್ರಾಕಿರಿಂಕೋಸ್, ಕೋ.ಕರಿನಸ್ ಎಂಬವೂ ಸಾಮಾನ್ಯವಾಗಿ ಕಾಣಬರುವ ಕಾಗೆಗಳು. ಭಾರತದಲ್ಲಿನ ಪ್ರಭೇದಗಳು ಸಿಂಹಳ ಮತ್ತು ಬರ್ಮಗಳಲ್ಲೂ ಇವೆ. ಒಂದೊಂದು ಪ್ರಭೇದದಲ್ಲೂ ಅವುಗಳ ಭೌಗೋಳಿಕ ವ್ಯಾಪ್ತಿಯ ಆಧಾರದ ಮೇಲೆ ಹಲವಾರು ಬಣಗಳನ್ನು ಗುರುತಿಸುವುದುಂಟು.

ಭಾರತದ ಊರು ಮತ್ತು ಕಾಡು ಕಾಗೆಗಳಲ್ಲಿ ಕೆಲವು ವ್ಯತ್ಯಾಸಗಳುಂಟು. ಊರುಕಾಗೆ ಬಯಲುಸೀಮೆಯ ವಾಸಿ. ಮಾನವ ವಸತಿಗಳ ಬಳಿ ಇದು ಬಲು ಸಾಮಾನ್ಯ. ಇದರ ಉದ್ದ ಸುಮಾರು ೪೫ ಸೆಂಮೀ ಸು. ೧೭ ಸೆಂಮೀ ಉದ್ದದ ಬಾಲವೂ, ೫ ಸೆಂಮೀ ಉದ್ದದ ಕೊಕ್ಕೂ ಇದಕ್ಕಿವೆ. ಕೊಕ್ಕು ದೃಢ. ತುದಿಯಲ್ಲಿ ನಸು ಬಾಗಿದಂತಿದೆ. ದೇಹವೆಲ್ಲ

ಕಪ್ಪು ಬಣ್ಣದ್ದು. ಕಂಠಪ್ರದೇಶ ಮಾತ್ರ ಬೂದಿಬಣ್ಣದ್ದಾಗಿದೆ. ಸತ್ತ ಇಲಿ, ಕೀಟಗಳು, ಕಾಯಿ, ಬೀಜ, ಇತರ ಹಕ್ಕಿಗಳ ಮೊಟ್ಟೆ ಮತ್ತು ಮರಿ ಇತ್ಯಾದಿ ಎಂಥ ಬಗೆಯ ಆಹಾರವನ್ನಾದರೂ ಕಾಗೆ ತಿನ್ನಬಲ್ಲುದು. ಇದು ಬಲು ಚುರುಕು ಹಾಗೂ ಧೈರ್ಯಶಾಲಿ. ಬಲು ಜಾಗರೂಕ ಪ್ರಾಣಿಯೂ ಹೌದು. ಸಂಜೆಯ ಹೊತ್ತು ಕಾಗೆಗಳೆಲ್ಲ ಯಾವುದಾದರೊಂದು ಮರದಲ್ಲೊ ಬಯಲಿನಲ್ಲೊ ಒಂದು ಕಡೆ ಗುಂಪುಗೂಡಿ ವಿಚಾರ ವಿನಿಮಯ ಮಾಡಿಕೊಳ್ಳುವಂತೆ ವ್ಯವಹರಿಸುತ್ತವೆ.

ಕಾಗೆ ತನ್ನ ಗೂಡನ್ನು ಮರದ ರೆಂಬೆಗಳ ಮೇಲೆ ಸಣ್ಣ ಕಡ್ಡಿಗಳಿಂದ ನಿರ್ಮಿಸುತ್ತದೆ. ಗೂಡು ಕಟ್ಟುವ ಕಾರ್ಯ ಹೆಚ್ಚಾಗಿ ಗಂಡಿನದು. ಗೂಡು ತಯಾರಾದ ಮೇಲೆ ಹೆಣ್ಣುಕಾಗೆ ೪–೫ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳ ಆಕಾರದಲ್ಲಿ, ಗಾತ್ರದಲ್ಲಿ ಮತ್ತು ಬಣ್ಣದಲ್ಲಿ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ ಮೊಟ್ಟೆಯ ಬಣ್ಣ ಹಸಿರು ಇಲ್ಲವೆ ನೀಲಿಮಿಶ್ರಿತ ಹಸಿರು; ಅಲ್ಲಲ್ಲಿ ಕಂದುಬಣ್ಣದ ಚುಕ್ಕೆಗಳಿವೆ. ಗಂಡುಹೆಣ್ಣುಗಳೆರಡೂ ಕಾವು ಕೊಡುತ್ತವೆ. ಮೊಟ್ಟೆಯಿಡುವ ಕಾಲ ದೇಶದ ವಿವಿಧ ಭಾಗಗಳಲ್ಲಿ ವಾಸಿಸುವ ಕಾಗೆಗಳಲ್ಲಿ ಬೇರೆಬೇರೆಯಾಗಿದೆ. ಪಶ್ಚಿಮದಲ್ಲಿ ವಾಸಿಸುವ ಕಾಗೆಗಳು ಏಪ್ರಿಲ್ ಮತ್ತು ಜೂನ್ ತಿಂಗಳುಗಳ ನಡುವೆ ಗೂಡನ್ನು ನಿರ್ಮಿಸಿ, ಮೊಟ್ಟೆಗಳನ್ನಿಡುತ್ತವೆ. ಬಂಗಾಳದ ಕಾಗೆಗಳು ಇದಕ್ಕಿಂತ ಸ್ವಲ್ಪ ಮೊದಲೂ ದಕ್ಷಿಣ ಭಾರತದಲ್ಲಿನ ಕಾಗೆಗಳು ಮುಂಗಾರು ಮಳೆ ಪ್ರಾರಂಭವಾಗುವ ಮುನ್ನವೂ ಮೊಟ್ಟೆಯಿಡುತ್ತವೆ. ಕಾಗೆ ತನ್ನ ಮರಿಗಳ ಪಾಲನೆಯಲ್ಲಿ ಹೆಚ್ಚಿನ ಶ್ರದ್ಧೆಯನ್ನು ವ್ಯಕ್ತಪಡಿಸುತ್ತದೆ.

ಕೋಗಿಲೆ ಸಾಮಾನ್ಯವಾಗಿ ತನ್ನ ಮೊಟ್ಟೆಗಳನ್ನು ಕಾಗೆಗಳ ಗೂಡಿನಲ್ಲಿಡುವುದುಂಟು. ಕಾಗೆ ಆ ಮೊಟ್ಟೆಗಳು ತನ್ನವೆಂದೇ ತಿಳಿದು ಅವಕ್ಕೆ ಕಾವುಕೊಟ್ಟು, ಮರಿ ಮಾಡಿ, ಗುಟುಕು ಕೊಟ್ಟು ಸಲಹುತ್ತದೆ. ಉಳಿದೆಲ್ಲ ವಿಚಾರಗಳಲ್ಲಿ ಚುರುಕಾಗಿರುವ ಕಾಗೆ ಇದೊಂದು ವಿಷಯದಲ್ಲಿ ಮಾತ್ರ ಪೆದ್ದು ಎನಿಸಿಕೊಂಡಿದೆ. ಆದರೆ ಕೋಗಿಲೆ ಮರಿಗಳು ದೊಡ್ಡವಾದಾಗ ಕಾಗೆಗೆ ಅವು ತನ್ನವಲ್ಲ ಎಂದು ಅರಿವು ಬಂದು ಅವನ್ನು ಕುಕ್ಕಿ ಓಡಿಸುತ್ತದೆ. ಕೆಲವು ವೇಳೆ ಸಾಯಿಸುವುದೂ ಉಂಟು. ಕಾಗೆಗೂ ಕೋಗಿಲೆಗೂ ಬದ್ಧ ವೈರ.

ಕಾಡುಕಾಗೆ ಬೆಟ್ಟ, ಗುಡ್ಡಗಳಲ್ಲಿನ ಕಾಡಿನಲ್ಲಿ ವಾಸಿಸುತ್ತದೆ. ಕೆಲವೊಮ್ಮೆ ಊರುಗಳ ಬಳಿ ಕಂಡುಬರುವುದೂ ಉಂಟು. ಇದು ಅತ್ಯಂತ ಧೈರ್ಯಶಾಲಿ. ನಿರ್ಭಯವಾಗಿ, ಯಾವ ವಿಧವಾದ ಆಹಾರ ದೊರೆತರೂ ಬಿಡದೆ ಅಪಹರಿಸುತ್ತದೆ. ಇದರ ಆಹಾರ ಮೊಟ್ಟೆಗಳು, ಸಣ್ಣ ಹಕ್ಕಿಗಳು, ಹಣ್ಣುಗಳು, ಹಲ್ಲಿಗಳು, ಮಿಡತೆಗಳು, ಇತ್ಯಾದಿ. ಇದು ಊರುಕಾಗೆಗಿಂತ ದೊಡ್ಡದು. ದೇಹದ ಉದ್ದ ೫೫ ಸೆಂಮೀ ಬಾಲ ೧೮–೨೦ ಸೆಂಮೀ ಉದ್ದವಿದೆ. ದೇಹದ ಬಣ್ಣ ಸಂಪೂರ್ಣ ಕಪ್ಪು. ಕಾಡುಕಾಗೆ ಊರಕಾಗೆಯಂತೆ ಸಂಜೆಯ ವೇಳೆ ಗುಂಪು ಸೇರುವುದಿಲ್ಲ. ಇದು ತನ್ನ ಗೂಡನ್ನು ದೊಡ್ಡ ದೊಡ್ಡ ಮರಗಳ ರೆಂಬೆಗಳ ಮೇಲೆ ಸಣ್ಣ ಕಡ್ಡಿ, ಪುಳ್ಳೆಗಳಿಂದ ನಿರ್ಮಿಸಿಕೊಳ್ಳುತ್ತದೆ. ಗೂಡಿನಲ್ಲಿ ೩ ಅಥವಾ ೪ ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳು ಆಕಾರದಲ್ಲಿ ಮತ್ತು ಬಣ್ಣದಲ್ಲಿ ಊರುಕಾಗೆಯ ಮೊಟ್ಟೆಗಳಂತೆಯೇ ಇವೆ. ಆದರೆ ಗಾತ್ರದಲ್ಲಿ ದೊಡ್ಡವು.

ಕಾಗೆ ಬೇರೆ ಪಕ್ಷಿಗಳ ವಲಸೆ ಹೋಗುವ ಪರಿಪಾಟಿಯನ್ನು ಹೊಂದಿದ್ದರೂ ವಲಸೆಯ ಕ್ರಮ ಅತ್ಯಂತ ತಾತ್ಕಾಲಿಕವಾದುದು. ನಸುಬೆಳಕಿನಲ್ಲೇ ತನ್ನ ಗೂಡನ್ನು ತೊರೆದು ದೂರದ ಸ್ಥಳಗಳಿಗೆ ಆಹಾರಕ್ಕಾಗಿ ವಲಸೆಹೋಗಿ ಕತ್ತಲೆಗೆ ಮೊದಲೇ ಹಿಂತಿರುಗುವುದು ಇದರ ಸ್ವಭಾವ. ದಿನಬೆಳಗಾದರೆ ಊರುಕಾಗೆಗಳು ಕೂಡ ಗುಂಪು ಗುಂಪಾಗಿ ಹೊರಪ್ರದೇಶಗಳ ಕಡೆ ಹಾರಿಹೋಗುವುದನ್ನು ಎಲ್ಲರೂ ಗಮನಿಸಿದ್ದಾರೆ.

ಕಾಗೆ ನಗರವಾಸಕ್ಕೆ ಚೆನ್ನಾಗಿ ಹೊಂದಿಕೊಂಡಿದೆ. ಎಷ್ಟೇ ಹೊಂದಿಕೊಂಡಿದ್ದರೂ ಗುಬ್ಬಚ್ಚಿಯಂತೆ ಇದು ಮಾನವನೊಂದಿಗೆ ಸಲಿಗೆಯಿಂದ ವರ್ತಿಸದು. ಉಪಾಯವಾಗಿ ತಿಂಡಿ ತಿನಿಸನ್ನು ಎಗರಿಸುವುದರಲ್ಲದು ನಿಸ್ಸೀಮ. ಎಂಜಲನ್ನವನ್ನು, ಕಸ ಮುಸುರೆಯನ್ನು ಕಂಡಾಗ ಕಾಕಾ ಎನ್ನುತ್ತ ತನ್ನ ಬಳಗದೊಂದಿಗೆ ಪ್ರತ್ಯಕ್ಷವಾಗುತ್ತದೆ. ಚಿಕ್ಕ ಪುಟ್ಟ ಪಾತ್ರೆ ಪಡಗವನ್ನು, ಚಮಚಗಳನ್ನು ಕದ್ದೊಯ್ಯುವುದೂ ಉಂಟು. ಮನುಷ್ಯನ ಚಲನವಲನಗಳನ್ನಿದು ಬೆಕ್ಕಿನಂತೆ ಚೆನ್ನಾಗಿ ತಿಳಿದಿದೆ. ಆಹಾರ ಸಿಕ್ಕಾಗ ಹೇಗೋ ಹಾಗೆ ಸತ್ತ ಅಥವಾ ಪೆಟ್ಟುಬಿದ್ದ ಕಾಗೆಯ ಸುತ್ತ ಗುಂಪುಗೂಡುವುದು, ಗದ್ದಲ ಮಾಡುವುದು ಇದರ ಸ್ವಭಾವ. ಸರ್ಪವೊಂದನ್ನು ಉಪಾಯದಿಂದ ಕೊಂದು, ಹೂಜಿಯಲ್ಲಿದ್ದ ಸ್ವಲ್ಪ ನೀರನ್ನು ಚತುರತೆಯಿಂದ ಕುಡಿದುದು ಮುಂತಾದ ಕಥೆಗಳಲ್ಲಿನ ಕಾಗೆಯ ಜಾಣತನ ಕೇವಲ ಕಾಲ್ಪನಿಕವೆನ್ನಲಾಗದು. ಕಾಗೆಗೆ ಬೇಟೆಯ ಎಲ್ಲ ವರಸೆಗಳೂ ತಿಳಿದಿದೆ. ಹಕ್ಕಿಗಳ ಮೊಟ್ಟೆಗಳನ್ನು ಕದಿವಲ್ಲಿ, ಸಣ್ಣ ಪುಟ್ಟ ಹಕ್ಕಿಗಳನ್ನೂ ಪ್ರಾಣಿಗಳನ್ನೂ ಹಿಡಿವಲ್ಲಿ ಇದು ನಿಸ್ಸೀಮ. ಬೇಟೆ ದೊರೆತಾಗಲಂತೂ ಉಗ್ರವಾಗಿ ವರ್ತಿಸುತ್ತದೆ. ಕೊಳೆ, ಕಳಪೆಗಳನ್ನು ತಿಂದು ಪರಿಸರವನ್ನು ಶುದ್ಧಮಾಡುವುದರಿಂದ ಇದು ಮನುಷ್ಯನಿಗೆ ಉಪಕಾರಿ ಎನಿಸಿದೆ.

ಪುರಾಣೇತಿಹಾಸದಲ್ಲಿ ಕಾಗೆಯ ಬಗ್ಗೆ ಅನೇಕ ಉಲ್ಲೇಖಗಳಿವೆ. ಸೀತೆಯನ್ನು ಬಾಧಿಸಿದ ಕಾಕಾಸುರನನ್ನು ರಾಮಬಾಣ ಅಟ್ಟಿಹೋದ ಪ್ರಸಂಗ ರಾಮಾಯಣದಲ್ಲಿದೆ. ಶನಿದೇವನ ರಥಕ್ಕೆ ಕಾಗೆಯನ್ನು ಹೂಡಲಾಗಿದೆಯೆಂದೂ ಕರ್ಣನ ಲಾಂಛನ ಕಾಗೆಯೆಂದೂ ಹೇಳಲಾಗಿದೆ. (ಎನ್.ಎಂ.)

**ಕಾಜಾಣ:** ಪಕ್ಷಿವರ್ಗದ ಪ್ಯಾಸೆರಿಫಾರ್ಮಿಸ್ ಗಣದ ಡೈಕ್ರೂರಿಡೆ ಕುಟುಂಬದ ಒಂದು ಜಾತಿಯ ಹಕ್ಕಿ (ಡ್ರಾಂಗೊ). ಇದಕ್ಕೆ ಡ್ರಾಂಗೊ ಶ್ರೈಕ್, ರಾಜಕಾಗೆ (ಕಿಂಗ್ ಕ್ರೋ) ಮುಂತಾದ ಹೆಸರುಗಳೂ ಇವೆ. ಈ ಜಾತಿಯ ವೈಜ್ಞಾನಿಕ ಹೆಸರು ಡೈಕ್ರೂರಸ್. ಇದರಲ್ಲಿ ಸುಮಾರು 30 ಪ್ರಭೇದಗಳಿವೆ. ಇವು ಆಗ್ನೇಯ ಏಷ್ಯ, ಇಥಿಯೋಪಿಯ, ಮಲಯ ಮತ್ತು ಆಸ್ಟ್ರೇಲಿಯಗಳ ನಿವಾಸಿಗಳು. ಭಾರತದಲ್ಲಿ ಡೈ. ಸೀರೂಲೆಸೆನ್ಸ್ (ಬಿಳಿಯ ಹೊಟ್ಟೆಯ ಕಾಜಾಣ), ಡೈ. ಪ್ಯಾರಡಿಸಿಯಸ್ (ಉದ್ದ ಬಾಲದ ಕಾಜಾಣ) ಮತ್ತು ಡೈ. ಅಡ್‌ಸಿಮಿಲಿಸ್ (ಕಪ್ಪು ಕಾಜಾಣ) ಎಂಬ ಮೂರು ಪ್ರಭೇದಗಳಿವೆ. ಡೈ. ಹಾಟೆಂಟೊಟಸ್ (ಸ್ಪ್ಯಾಂಗಲ್ಡ್ ಕಾಜಾಣ), ಡೈ. ಮ್ಯಾಕ್ರೋಸರ್ಕಸ್ (ರಾಜಕಾಗೆ) ಮತ್ತು ಡೈ. ಮಾಡಸ್ಟಸ್ (ವೆಲ್ವೆಟ್ ಮ್ಯಾಂಟಲ್ಡ್ ಕಾಜಾಣ) ಬೇರೆ ಪ್ರದೇಶಗಳ ಇತರ ಪ್ರಭೇದಗಳು.

ಕಾಜಾಣ

ಕಾಜಾಣಗಳು ತೋಟಗಳು, ಕಾಡುಗಳು ಮುಂತಾದ ವನ್ಯಪ್ರದೇಶಗಳಲ್ಲಿ ಸಾಧಾರಣವಾಗಿ ಒಂಟಿಯಾಗಿ ಇಲ್ಲವೆ ಜೋಡಿಗಳಲ್ಲಿ ವಾಸಿಸುತ್ತವೆ. ದೊಡ್ಡ ಗುಂಪುಗಳಲ್ಲಿರುವುದು ಅಪರೂಪ. ಸುಮಾರು 25–30 ಸೆಂಮೀ ಉದ್ದದ ಸಣ್ಣ ಗಾತ್ರದ ಹಕ್ಕಿ. ನೋಡುವುದಕ್ಕೆ ಬಹಳ ಚೆಲುವಾಗಿದೆ. ದೇಹದ ಬಣ್ಣ ಮಿರಮಿರನೆ ಹೊಳೆಯುವ ಅಚ್ಚಕಪ್ಪು ಅಥವಾ ನೇರಳೆ. ಕೆಲವು ಪ್ರಭೇದಗಳಲ್ಲಿ ಹೊಟ್ಟೆ ಬಿಳಿಯಾಗಿಯೂ ಪುಕ್ಕಗಳು ಬೂದಿ ಅಥವಾ ಕಂದು ಬಣ್ಣದವಾಗಿಯೂ ಇರುವುದುಂಟು. ಈ ವರ್ಣಭೇದಗಳ ಆಧಾರದ ಮೇಲೆ ಪ್ರಭೇದಗಳನ್ನು ಬೇರೆ ಬೇರೆ ಬಣಗಳಾಗಿ ವಿಂಗಡಿಸಬಹುದು. ಬಾಲ ಉದ್ದವಾಗಿದ್ದು ಕವಲೊಡೆದಿದೆ. ಉದ್ದಬಾಲದ ಕಾಜಾಣದ ಹೆಸರು ಅನ್ವರ್ಥಕ. ಬಾಲದ ಕವಲುಗಳು ತುದಿಯಲ್ಲಿ ಅಗಲವಾಗಿವೆ. ಅಲ್ಲದೆ ಇದರ ತಲೆಯ ಮೇಲೆ ಶಿಖೆಯೊಂದಿದೆ. ಕಾಜಾಣ ಬಲು ಚುರುಕಾದ ಹಕ್ಕಿ. ಹಾರಾಟದಲ್ಲೂ ಬಲು ಕುಶಲಿ. ಕೀಟಗಳನ್ನು, ಅದರಲ್ಲೂ ಹಾರಬಲ್ಲ ಕೀಟಗಳು, ಮಿಡತೆಗಳನ್ನು ಹಠಾತ್ತನೆ ಎರಗಿ, ಕ್ಷಣಾರ್ಧದಲ್ಲಿ ಹಿಡಿಯಬಲ್ಲ ಸಾಮರ್ಥ್ಯ ಇದಕ್ಕಿದೆ. ಹೂಗಳ ಮಕರಂದವನ್ನೂ ಕುಡಿಯುವುದುಂಟು. ಕಾಜಾಣ ಹಲವಾರು ಬಗೆಗಳಲ್ಲಿ ಕೂಗುತ್ತದೆ. ಬೇರೆ ಹಕ್ಕಿಗಳ ಕೂಗನ್ನೂ ಚೆನ್ನಾಗಿ ಅನುಕರಿಸಬಲ್ಲುದು.

ಗೂಡು ಕಟ್ಟುವ ಕಾಲ ಸಾಮಾನ್ಯವಾಗಿ ಮಾರ್ಚಿಯಿಂದ ಜೂನ್ ತಿಂಗಳುಗಳು. ಮರಗಳ ಕವಲುಗಳ ಮೇಲೆ ಸಣ್ಣ ಕಡ್ಡಿಗಳು, ಬೇರು, ಎಲೆ, ನಾರು, ಮುಂತಾದುವನ್ನು ಜೇಡಬಲೆಯಿಂದ ಬಂಧಿಸಿ ಗೂಡು ಕಟ್ಟುತ್ತದೆ. 3–5 ಮೊಟ್ಟೆಗಳನ್ನಿಡುತ್ತದೆ. ಗಂಡು ಹೆಣ್ಣುಗಳೆರಡೂ ಕಾವು ಕೊಡುವುದರಲ್ಲಿ, ಮರಿಗಳ ಪಾಲನೆಯಲ್ಲಿ ಪರಸ್ಪರ ಸಹಕರಿಸುತ್ತವೆ. (ಎನ್.ವಿ.ಎ.)

**ಕಾಟಿಲೊಸಾರಿಯ:** ಪರ್ಮಿಯನ್ ಪೂರ್ವಾರ್ಧದಲ್ಲಿ ಬದುಕಿರಬಹುದಾದ ಪಳೆಯುಳಿಕೆಗಳ ಗಣ. ಸರೀಸೃಪ, ಪಕ್ಷಿ, ಸ್ತನಿಗಳ ವಿಕಾಸಕ್ಕೆ ಮೂಲವಾದುದರಿಂದ ಕಾಂಡ ಸರೀಸೃಪ (ಸ್ಟೆಮ್ ರೆಪ್ಟೈಲ್ಸ್) ಎಂದೂ ಕರೆಯಲಾಗುತ್ತದೆ. ಇವುಗಳಿಗೆ ದ್ವಿಚರಿಗಳ ಅನೇಕ ಲಕ್ಷಣಗಳಿವೆ. ಬಹುಶಃ ಇವು ಕಾರ್ಬಾನಿಫೆರಸ್ ಕಾಲದಿಂದಲೇ ಇದ್ದುವು ಎಂದು ಕಾಣಿಸುತ್ತದೆ. ಸೈಮೂರಿಯ ಗಣದ ಮಾದರಿ ಪ್ರಾಣಿ. ಇದು ಪರ್ಮಿಯನ್ ಕಾಲದ ಟೆಕ್ಸಾಸ್ ಪ್ರಾಂತ್ಯದಲ್ಲಿ ದೊರೆತ ಪಳೆಯುಳಿಕೆಗಳಲ್ಲಿ ಕಂಡುಬರುತ್ತದೆ. ಈ ಕಾಂಡ ಸರೀಸೃಪಗಳು ದ್ವಿಚರಿಗಳ ಗುಣಲಕ್ಷಣಗಳನ್ನು ಬಹಳ ಹೋಲುತ್ತಿದ್ದುದರಿಂದ ಇವನ್ನು ಯಾವ ಗುಂಪಿಗೆ

ಸೇರಿಸಬೇಕೆನ್ನುವುದು ವಿವಾದಾತ್ಮಕವಾಗಿತ್ತು. ಸಾಮಾನ್ಯ ಆಕಾರ ಹೊಂದಿದ್ದ ತಲೆಬುರುಡೆ, ಚೂಪಾದ ಮೂಗು, ಮೇಲ್ಮುಖವಾದ ಮೂಗಿನ ಹೊಳ್ಳೆಗಳು, ಪಕ್ಕಕ್ಕೆ ಹೊರಳಿರುವ ಕಣ್ಣುಗಳು ಹಾಗೂ ಕತ್ತಿನ ಕಶೇರುಮಣಿಗಳ ಮಾರ್ಪಾಡಿನಿಂದ ಆಗಿದ್ದ ಆಕ್ಸಿಸ್ ಮತ್ತು ಅಟ್ಲಾಸ್ ಸರೀಸೃಪಗಳ ಲಕ್ಷಣಗಳು. ಎದೆಗಟ್ಟು, ಅಂತರ್ ಮೆಟ್ರೆಲುಬು ಮತ್ತು ಕೆಳಭಾಗದ ಕಾಕೊಕ್ಕಿಗಳನ್ನು ಒಳಗೊಂಡಿದೆ. ಕೀಲ್ಗುಳಿಯ ಕಟ್ಟು ಬೆನ್ನೆಲುಬಿಗೆ ಅಂಟಿಕೊಂಡಿದೆ. ಇಲಿಯಂ ಮೂಳೆಯು ದೊಡ್ಡದಾಗಿದ್ದು, ಮಾಂಸಖಂಡಗಳ ಜೋಡಣೆಗೆ ಅನುಕೂಲಕರವಾಗಿದೆ. ಈ ಮಾರ್ಪಾಡುಗಳಿಂದಾಗಿ ಈ ಪ್ರಾಣಿಗಳು ಭೂಮಿಯ ಮೇಲೆ ಸರಾಗವಾಗಿ ಓಡಾಡಬಲ್ಲವಾಗಿದ್ದುವು. ಹಿಂಗಾಲು ಮತ್ತು ಮುಂಗಾಲುಗಳಲ್ಲಿ ಐದು ಬೆರಳುಗಳು ಇದ್ದುವು. ಕಣಕಾಲೇಟುಕ್ಕಿ (ಟಿಬಿಯೇಲ್) ಕಾಣೆಯಾಗಿದ್ದುದರಿಂದ ಕೇವಲ ಎರಡು ಹತ್ತಿರದ ಮೂಳೆಗಳು ಮಾತ್ರ ಹಿಂಗಾಲಿನಲ್ಲಿದ್ದುವು. ಇವು ಸರೀಸೃಪಗಳ ಗುಣಲಕ್ಷಣಗಳು, ಆದರೆ ಈ ಪ್ರಾಣಿಗಳಲ್ಲಿ ದ್ವಿಚರಿಗಳ ಗುಣಲಕ್ಷಣಗಳೂ ಇದ್ದುವು. ಎಲುಬೀಕರಣ ತಲೆಬುರುಡೆಯ ಮೇಲ್ಭಾಗದಲ್ಲಿ ಹಾಗೂ ಅಂಗುಳಿ (ಪ್ಯಾಲಟ್)ನಲ್ಲಿ ಪೂರ್ಣವಾಗಿತ್ತು. ಕಪಾಳದಲ್ಲಿ ತಗ್ಗಿರಲಿಲ್ಲ, ಹುಗಿ ಕಪಾಳದ ಮೂಳೆ (ಇಂಟರ್ ಟೆಂಪೊರಲ್) ಇತ್ತು. ಕಿವಿಯ ಕಚ್ಚನ್ನು ಕಪಾಳ ಮೇಲಿನಮೂಳೆ ಮೇಲೆ ಹಾಗೂ ಹೊರಿಕೆಯು ಕೆಳಗೆ ಸುತ್ತುವರೆದಿದ್ದುವು. ಕಿವಿಯ ಕಚ್ಚಿನ ಮೇಲೆ ಕಿವಿತಮಟೆ ಬಿಗಿಯಾಗಿ ಎಳೆದಿತ್ತು. ಕತ್ತು ಬಹಳ ಚಿಕ್ಕದಾಗಿದ್ದು ತಲೆಬುರುಡೆಯ ಹತ್ತಿರವೇ ಎದೆಯಕಟ್ಟಿತ್ತು. ಕಶೇರುಮಣಿಗಳಲ್ಲಿ ವೈವಿಧ್ಯತೆ ಇರಲಿಲ್ಲ. ಕತ್ತಿನ ಕಶೇರುಮಣಿಗಳಲ್ಲಿ ಪಕ್ಕೆಲುಬುಗಳಿದ್ದುವು. ಹಲ್ಲುಗಳು ಮೈನಿಲುವಿನ ಲಕ್ಷಣಗಳನ್ನು ಹೊಂದಿದ್ದು ಜೊತೆಯಲ್ಲಿ ಹರಡಿಕೊಂಡಿದ್ದುವು. ಸಾಮಾನ್ಯವಾಗಿ ಎಲ್ಲ ಕಾಟಿಲೋಸಾರ್‌ಗಳಲ್ಲಿಯೂ ಕ್ಲೈತ್ರಂ ಮೂಳೆಯಿತ್ತು. ಈ ಗುಂಪಿಗೆ ಸೇರಿದ ಕೆಲವು ಪ್ರಾಣಿಗಳಲ್ಲಿ ಪಕ್ಕದ ಗೆರೆಯ ನಾಳೆಗಳಿದ್ದುವು. ಆದ್ದರಿಂದ ಈ ಪ್ರಾಣಿಗಳು ತಮ್ಮ ಜೀವನ ಚರಿತ್ರೆಯಲ್ಲಿ ನೀರಿನ ಮೂಲಕ ಹಾದು ಹೋಗುತ್ತಿದ್ದುವು ಎಂಬುದನ್ನು ತೋರಿಸುತ್ತದೆ. ಈ ಗುಂಪಿನಲ್ಲಿ ದ್ವಿಚರಿಗಳ ಗುಣಗಳಿದ್ದರೂ, ಇವು ಭೂಮಿಯ ಜೀವನಕ್ಕೆ ಹೊಂದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದುದು ಸ್ಪಷ್ಟ. ಈ ಕಾಟಿಲೋಸಾರಿಯ ಪ್ರಾಣಿಗಳಿಂದಲೇ ಮುಂದುವರೆದ ಸರೀಸೃಪಗಳು ಉದ್ಭವವಾಗಿ ಮಿಸೊಝೋಯಿಕ್ ಕಾಲದಲ್ಲಿ ಭೂಮಿಯನ್ನು ಆಳಿದುವು. (ಎಚ್.ಎಸ್.ವೈ.)

**ಕಾಡ್ ಮೀನು:** ಇದು ವಿಶ್ವದ ಮೀನುಗಾರಿಕೆಯಲ್ಲಿ ಅತ್ಯಂತ ಹೆಸರುವಾಸಿ. ಇದರ ವೈಜ್ಞಾನಿಕ ನಾಮ ಗೇಡಸ್. ಇದು ಹ್ಯಾಡಕ್, ಹೇಕ್ ಮತ್ತು ಪೋಲಕ್ ಮೀನುಗಳನ್ನೊಳಗೊಂಡ ಗ್ಯಾಡಿಡೆ ಕುಟುಂಬಕ್ಕೆ ಸೇರಿದೆ. ಗೇಡಸ್ ಜಾತಿಯಲ್ಲಿ ಸು. ೩೦ ಪ್ರಭೇದಗಳಿವೆ. ಇವುಗಳಲ್ಲಿ ಗೇಡಸ್ ಮಾರ್‌ಹುವ (ಅಥವಾ ಗೇಡಸ್ ಕೆಲ್ಲೇರಿಯಸ್) ಮತ್ತು ಗೇ ಮೈಕ್ರೊ ಸಿಫ್ಯಾಲಸ್ ಮುಖ್ಯವಾದುವು.

ಇದು ಆಹಾರಯೋಗ್ಯವಾದ ಮೀನು. ಇದರ ಯಕೃತ್ತಿನಿಂದ ಎಣ್ಣೆಯನ್ನು ತೆಗೆಯುತ್ತಾರೆ. ಈ ಎಣ್ಣೆಯಲ್ಲಿ ಎ ಜೀವಸತ್ವ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದೆ. ಕಾಡ್ ಮೀನುಗಳು ಸಮಶೀತೋಷ್ಣ ಮತ್ತು ಶೀತಸಮುದ್ರ ಪ್ರದೇಶಗಳಲ್ಲಿ ೨೭೦–೩೦೦ ಮೀ ಗಿಂತ ಕಡಿಮೆ ಆಳ ಇರುವ ಸ್ಥಳಗಳಲ್ಲಿ ವಾಸಿಸುತ್ತವೆ.

ಗೇಡಸ್ ಮಾರ್ಹುವ (ಅಟ್ಲಾಂಟಿಕ್ ಕಾಡ್) ಮೀನಿನ ಮೇಲೆ ಮೂರು ರೆಕ್ಕೆಗಳು ಮತ್ತು ಎರಡು ಗುದದ ರೆಕ್ಕೆಗಳಿವೆ. ಮೇಲುದವಡೆ ಕೆಳದವಡೆಗಿಂತ ಮುಂದಕ್ಕೆ ಚಾಚಿದೆ. ಬಾಯ ಕೆಳಗೆ ಮೀಸೆಯಂಥ ಎಳೆಗಳಿವೆ. ಇದರ ಬಣ್ಣ ಬೂದು ಮಿಶ್ರಿತವಾದ ಹಸಿರಿನಿಂದ ಇಟ್ಟಿಗೆ ಕೆಂಪಿನ ಬಣ್ಣದಂತೆ ಇದೆ. ಈ ಮೀನು ಉತ್ತರ ಯೂರೋಪಿನ ಸಮುದ್ರಗಳಲ್ಲಿ, ಉತ್ತರ ಅಮೆರಿಕ ಪೂರ್ವ ಕರಾವಳಿಯ ಉತ್ತರಭಾಗದಲ್ಲಿ ಹೇರಳವಾಗಿ ದೊರೆಯುತ್ತದೆ.

ಅಟ್ಲಾಂಟಿಕ್ ಕಾಡ್ ಮೀನು ನವೆಂಬರ್‌ನಿಂದ ಆಗಸ್ಟ್ ತಿಂಗಳವರೆಗೆ (ಹೆಚ್ಚಾಗಿ ಜನವರಿ ತಿಂಗಳಿನಿಂದ ಮಾರ್ಚ್ ತಿಂಗಳವರೆಗೆ) ಮೊಟ್ಟೆಯಿಡುತ್ತದೆ. ಬೇಸಗೆಯಲ್ಲೆ ಮೊಟ್ಟೆಯಿಡುವುದು ಹೆಚ್ಚು. ಸು. ಒಂದು ಮೀಟರ್ ಉದ್ದವಿರುವ ಹೆಣ್ಣು ೩೦ ಲಕ್ಷ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳು ನೀರಿನ ಉಷ್ಣಾಂಶವನ್ನು ಅವಲಂಬಿಸಿ ೧೦ ರಿಂದ ೫೦ ದಿನಗಳಲ್ಲಿ ಒಡೆದು, ಅವುಗಳಿಂದ ಮರಿಗಳು ಹೊರಬರುತ್ತವೆ. ಇವು ಬೇರೆ ಜಾತಿಯ ಮೀನಿನ ಮರಿಗಳನ್ನು ತಿನ್ನುತ್ತವೆ. ಕಾಡ್‌ಮೀನು ಬೇಸಗೆಯಲ್ಲಿ ಉತ್ತರಕ್ಕೂ, ಚಳಿಗಾಲದಲ್ಲಿ ದಕ್ಷಿಣಕ್ಕೂ ವಲಸೆ ಹೋಗುತ್ತದೆ.

ಉತ್ತರ ಯೂರೋಪ್ ಮತ್ತು ಅಮೆರಿಕದ ಎಲ್ಲ ಕಡಲಂಚಿನ ರಾಷ್ಟ್ರಗಳಲ್ಲಿ ಕಾಡ್ ಮೀನುಗಾರಿಕೆ ಮುಖ್ಯವಾದ ಉದ್ಯಮ. ಟ್ರಾಲ್ ಬಲೆ ಮತ್ತು ಗಾಳಗಳೇ ಈ ಮೀನು ಬೇಟೆಗೆ ಮುಖ್ಯ ಸಲಕರಣೆಗಳು. ಕಾಡ್ ಮೀನಿನ ಮಾಂಸ ಬಲುರುಚಿ. ಇವುಗಳನ್ನು ಒಣಗಿಸಿ, ಉಪ್ಪು ಹಾಕಿ ಹದಮಾಡಲಾಗುತ್ತದೆ. ಅಟ್ಲಾಂಟಿಕ್ ಕಾಡ್‌ಮೀನಿನ ಸರಾಸರಿ ಉತ್ಪನ್ನ ವರ್ಷಕ್ಕೆ ೨೮ ಲಕ್ಷ ಮೆಟ್ರಿಕ್ ಟನ್ನುಗಳಷ್ಟೆಂದು ಅಂದಾಜು ಮಾಡಲಾಗಿದೆ. ಬ್ರಿಟನ್, ರಷ್ಯಾ, ಕೆನಡ, ನಾರ್ವೆ, ಸ್ಪೇನ್ ಮತ್ತು ಪಶ್ಚಿಮ ಜರ್ಮನಿಗಳಲ್ಲಿ ವರ್ಷಕ್ಕೆ ೨ ಲಕ್ಷ ಟನ್‌ಗಿಂತಲೂ ಹೆಚ್ಚು ಕಾಡ್ ಮೀನನ್ನು ಹಿಡಿಯಲಾಗುತ್ತದೆ.

ಗೇಡಸ್ ಮೈಕ್ರೊಸಿಫ್ಯಾಲಸ್ (ಪೆಸಿಫಿಕ್ ಸಾಗರದ ಕಾಡ್ ಮೀನು) ಪೆಸಿಫಿಕ್ ಸಾಗರದಲ್ಲಿ ವಾಸಿಸುವ ಪ್ರಮುಖ ಮೀನು. ಕೆನಡ, ಅಮೆರಿಕದ ಸಂಯುಕ್ತ ಸಂಸ್ಥಾನ, ಜಪಾನ್, ಕೊರಿಯ ಮತ್ತು ರಷ್ಯ ದೇಶಗಳಲ್ಲಿ ಇದರ ಮೀನುಗಾರಿಕೆ ಪ್ರಮುಖವಾಗಿದೆ.

***

**ಕಾಡು ಕೋಳಿ:** ಕೆರಾಡ್ರಿಫಾರ್ಮಿಸ್ ಗಣದ ಸ್ಕೊಲೊಪೇಸಿಡೆ ಕುಟುಂಬದ ಸ್ಕೊಲೋಪಾಕ್ಸ್ ಜಾತಿಗೆ ಸೇರಿದ ಪಕ್ಷಿ (ವುಡ್ ಕಾಕ್). ಪ್ರಪಂಚದಾದ್ಯಂತ ಹರಡಿದ್ದರೂ ಉತ್ತರ ಯೂರೋಪ್, ಏಷ್ಯ, ಜಪಾನ್ ದೇಶಗಳಲ್ಲಿ ಅಧಿಕವಾಗಿವೆ. ಭಾರತದ ಹಿಮಾಲಯ ತಪ್ಪಲಿನಲ್ಲಿ ಹೆಚ್ಚುಸಂಖ್ಯೆಯಲ್ಲಿ ಕಾಡುಕೋಳಿಗಳನ್ನು ಕಾಣಬಹುದು. ಬಣ್ಣ ಮಬ್ಬು ಬಿಳಿ ಅಥವಾ ಕಪ್ಪು ಮಿಶ್ರಿತ ಬಿಳುಪು. ಗರಿಗಳು ಕಂದು. ಕೊಕ್ಕು ಮೋಟು. ತಲೆಯ ಮೇಲೆ ಬೂದು ಅಡ್ಡಪಟ್ಟಿಗಳಿವೆ. ತೂಕ ಸುಮಾರು 350 ಗ್ರಾಂ ಗಳಷ್ಟು. ಈ ಕುಟುಂಬದಲ್ಲಿ ಸುಮಾರು 77 ಪ್ರಭೇದಗಳಿವೆ. ವಾಸ ಹೆಚ್ಚಾಗಿ ನೀರಿನ ಬಳಿ ಮತ್ತು ಜೌಗು ಪ್ರದೇಶಗಳಲ್ಲಿ. ಕೀಟ ಮತ್ತು ಹುಳುಗಳು ಇವುಗಳ ಆಹಾರ. ಕಾಡುಕೋಳಿಗಳು ಹೊಟ್ಟೆಬಾಕ ಪ್ರಾಣಿಗಳು. ಸದಾ ತಿನ್ನುತ್ತಲೆ ಇರಬೇಕು. ಋತುಮಾಸದಲ್ಲಿ ವಿನಾ ಉಳಿದ ಕಾಲಗಳಲ್ಲಿ ಗುಂಪಾಗಿ ವಾಸಿಸುತ್ತವೆ. ಋತುಕಾಲದಲ್ಲಿ ಗಂಡು ಹೆಣ್ಣನ್ನು ಓಲೈಸಲು ನಾನಾ ನಾಟ್ಯಭಂಗಿಗಳನ್ನು ತಳೆಯುತ್ತದೆ. ಸುಸ್ವರಗಳನ್ನು ಹೊರಡಿಸುತ್ತದೆ. ಅನೇಕ ವೇಳೆ ಗಂಡು ಗಂಡುಗಳಲ್ಲಿ ಜಗಳವಾಗುವುದೂ ಉಂಟು. ಹೆಣ್ಣು ಒಂದು ಸಲಕ್ಕೆ 3–4 ಮೊಟ್ಟೆಗಳನ್ನು ಇಡುತ್ತದೆ. ಗೂಡು ಕಟ್ಟುವುದುಂಟು, ಖಾಲಿ ಪೊಟರೆಗಳನ್ನು ಆಶ್ರಯಿಸುವುದೂ ಉಂಟು. ತಾಯಿ ಹಕ್ಕಿ ಮರಿಗಳ ಪೋಷಣೆ ಮಾಡುತ್ತದೆ.

ಸ್ಕಾಲೋಪಾಕ್ಸ್ ರಸ್ಟಿಕೋಲ ಯುರೇಷ್ಯದ ಕಾಡುಕೋಳಿ. ಅಮೆರಿಕದ ಕಾಡುಕೋಳಿಯ ವೈಜ್ಞಾನಿಕ ನಾಮ ಫಿಲೊಹಿಲಾ ಮೈನರ್. (ಎನ್.ಬಿ.ಕೆ)

**ಕಾಡು ಗುಬ್ಬಚ್ಚಿ:** ಫ್ರಿಂಜಿಲ್ಲಿಡೆ ಕುಟುಂಬದ ಜಿಮ್ನೊರಿಸ್ ಜಾತಿಯ ಒಂದು ಪಕ್ಷಿ (ಜಿಮ್ನೋರಿಸ್ ಕ್ಸ್ಯಾಂತಸ್ ಕ್ಸ್ಯಾಂತಸ್). ಮೈದಾನ ಪ್ರದೇಶಗಳಲ್ಲಿ ವಾಸಮಾಡುತ್ತದೆ. ಸುಮಾರು ೧೩೫೦ ಮೀ ಎತ್ತರ ಇರುವ ಬೆಟ್ಟಗಳಿಗೂ ಹೋಗುವುದುಂಟು. ಗಂಡು ಗುಬ್ಬಚ್ಚಿಯ ಉದ್ದ ಸುಮಾರು ೧೩ ಸೆಂಮೀ ರೆಕ್ಕೆಯ ಅಳತೆ ೮ ಸೆಂಮೀ ಗುಬ್ಬಚ್ಚಿಯ ದೇಹದ ಮೇಲ್ಭಾಗ ಕಂದು ಬೂದುಬಣ್ಣ. ಕೊಕ್ಕು ಕಪ್ಪು. ಕಾಲುಗಳು ಮಾಸಲು ಕಂದು ಬೂದು. ಭುಜಗಳು ಮತ್ತು ತಳ ಹೊದಿಕೆಗಳು ದಟ್ಟ ಕೆಂಗಂದು. ರೆಕ್ಕೆಗಳಿಗೆ ಎರಡು ಬಿಳಿಪಟ್ಟೆಗಳಿಂದ ಕೂಡಿದ ಕಂದು ಬಣ್ಣವಿದೆ. ಗಡ್ಡ ಮತ್ತು ಪುಕ್ಕದ ತಳಭಾಗದ ಹೊದಿಕೆಯ ಬಣ್ಣ ಬಿಳುಪು. ದೇಹದ ಉಳಿದ ತಳಭಾಗದ ಗರಿಗಳು ಬೂದು ಅಥವಾ ಕಂದು ಬಿಳುಪು. ಉದರ ಭಾಗ ಹಾಗು ತೆರಪು ಭಾಗಗಳು ಬಿಳುಪು. ಒಂದು ಪ್ರಕಾಶಮಾನವಾದ ಹಳದಿ ಚುಕ್ಕೆ ಕುತ್ತಿಗೆಯ ಮಧ್ಯೆ ಇರುವುದರಿಂದ ಇದನ್ನು ಹಳದಿ ಕುತ್ತಿಗೆ ಗುಬ್ಬಚ್ಚಿ ಎಂದು ಕರೆಯುತ್ತಾರೆ. ಹೆಣ್ಣು ಎಲ್ಲ ರೀತಿಯಲ್ಲೂ ಗಂಡನ್ನು ಹೋಲುತ್ತದೆ. ಆದರೆ ಅದರ ಕುತ್ತಿಗೆಯಲ್ಲಿರುವ ಚುಕ್ಕೆ ಮತ್ತು ಭುಜ ಭಾಗಗಳಲ್ಲಿರುವ ಬಣ್ಣ ಅಷ್ಟೊಂದು ಪ್ರಕಾಶಮಾನವಾಗಿರುವುದಿಲ್ಲ.

ಕಾಡು ಗುಬ್ಬಚ್ಚಿ

ಹುಲ್ಲು ಮತ್ತು ಗರಿಗಳನ್ನು ಕೂಡಿಸಿ ಮರದ ಪೊಟರೆಯಲ್ಲಿ ಕಾಡುಗುಬ್ಬಚ್ಚಿ ತನ್ನ ಗೂಡನ್ನು ಕಟ್ಟುತ್ತದೆ. ಮರಿ ಮಾಡುವ ಕಾಲ ಏಪ್ರಿಲ್‌ನಿಂದ ಜುಲೈ ತಿಂಗಳವರೆಗೆ. ಹೆಣ್ಣು ಸುಮಾರು ೩ ರಿಂದ ೪ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಬಣ್ಣ ಕುರುವಿನಾಕಾರದ ಚುಕ್ಕೆಗಳನ್ನೊಳಗೊಂಡ ದಟ್ಟ ಕಂದು ಮಿಶ್ರಿತ ತಿಳಿನೀಲಿ ಹಸಿರು. ಮೊಟ್ಟೆ ಮಂದವಾಗಿರುವ ಕಡೆ ದಟ್ಟವಾದ ಬಣ್ಣವಿದೆ. ಕೆಲವು ಮೊಟ್ಟೆಗಳಿಗೆ ಕೆಂಪು–ಕಂದು ಕಲೆಗಳಿಂದ ಮಾಡಿದ ಕೆನೆಬಣ್ಣವಿದೆ. ಗುಬ್ಬಚ್ಚಿಯ ಮೊಟ್ಟೆಗಳು ಸರಾಸರಿ ಅಳತೆ ೧.೪–೧.೭೫ ಸೆಂಮೀ.

(ಕೆ.ಎಂ.ವಿ.)

**ಕಾಡು ಮೈನ:** ಅಕ್ರಿಡೋಥೀರಸ್ ಫಸ್ಕಸ್ ಎಂಬ ವೈಜ್ಞಾನಿಕ ಹೆಸರಿನ ಹಕ್ಕಿ. ನೋಡಲು ಮೈನ ಹಕ್ಕಿಯಂತಿರುವುದರಿಂದಲೂ ಕಾಡುಗಳಲ್ಲಿ ವಾಸಿಸುವುದರಿಂದಲೂ ಈ ಹೆಸರು. ಪ್ಯಾಸರಿಫಾರ್ಮೀಸ್ ಗಣದ ಸ್ಟರ್ನಿಡೆ ಕುಟುಂಬಕ್ಕೆ ಸೇರಿದೆ. ಭಾರತದಲ್ಲಿ ಕೇರಳ, ಪಶ್ಚಿಮ ಘಟ್ಟಗಳು, ಉತ್ತರ ಗುಜರಾತ್, ನೀಲಗಿರಿ, ಪಳನಿ ಬೆಟ್ಟಗಳು, ಅಸ್ಸಾಮ್ ಮತ್ತು ಹಿಮಾಲಯದ ೨೧೦೦ ಮೀ ಎತ್ತರದ ಪ್ರದೇಶಗಳ ಕಾಡುಗಳಲ್ಲಿ ಹೇರಳವಾಗಿ ಕಾಣಬರುತ್ತದೆ. ಗಾತ್ರದಲ್ಲೂ ದೇಹದ ಹಲವಾರು ಲಕ್ಷಣಗಳಲ್ಲೂ ಮೈನವನ್ನೇ ಹೋಲುತ್ತದೆ. ಆದರೆ ಇದರ ದೇಹದ ಬಣ್ಣ ಬೂದಿಮಿಶ್ರಿತ ಕಂದು. ಕಣ್ಣಿನ ಸುತ್ತ ಹಳದಿ ಬಣ್ಣದ ಚರ್ಮ ಇಲ್ಲ. ತಲೆಯ ಮೇಲೆ ಪೊದೆಯಂಥ ಶಿಖೆ ಇದೆ. ಈ ಕಾರಣಗಳಿಂದ ಇದು ಮೈನ ಹಕ್ಕಿಯಿಂದ ಭಿನ್ನವಾಗಿದೆ. ಜೋಡಿಗಳಲ್ಲಿಯೋ ಗುಂಪುಗಳಲ್ಲಿಯೋ ವಾಸಿಸುವ




ಇದು ಮಾನವನ ವಸತಿಗಳಿಂದ ದೂರವಾಗಿಯೇ ಇರುತ್ತದೆ. ಸರ್ವಭಕ್ಷಕ ಹಕ್ಕಿಯಿದು. ಹಲವಾರು ಬಗೆಯ ಕೀಟಗಳು, ಮಿಡತೆಗಳು, ಹಣ್ಣು, ಕಾಯಿ, ಹೂವಿನ ಮಕರಂದ ಮುಂತಾದುವು ಇದಕ್ಕೆ ಬಲು ಇಷ್ಟವಾದ ಅಹಾರ. ದನಗಳು ಹುಲ್ಲು ಮೇಯುತ್ತ ಹೋಗುವಾಗ ಮೇಲಕ್ಕೆ ಹಾರುವ ಕೀಟಗಳನ್ನು ಇವು ಹಿಡಿದು ತಿನ್ನುತ್ತವೆ. ಮೈನ ಹಕ್ಕಿಯಂತೆಯೇ ಕೂಗುವುದುಂಟು. ಫೆಬ್ರವರಿ – ಜುಲೈ ತಿಂಗಳುಗಳ ಸುಮಾರಿನಲ್ಲಿ ಗೂಡು ಕಟ್ಟುತ್ತದೆ. ಗೂಡನ್ನು ಪ್ರತ್ಯೇಕವಾಗೇನೂ ಕಟ್ಟುವುದಿಲ್ಲ. ಮರಕುಟಿಕ ಹಕ್ಕಿಯ ಗೂಡನ್ನೇ ಕಸಕಡ್ಡಿ, ಹುಲ್ಲು ಮುಂತಾದವುಗಳಿಂದ ತುಂಬಿ ಉಪಯೋಗಿಸಿಕೊಳ್ಳುವುದು ವಾಡಿಕೆ. ಸಾಮಾನ್ಯವಾಗಿ 3-4 ಮಿರುಗುವ ನೀಲಿಬಣ್ಣದ ಮೊಟ್ಟೆಗಳನ್ನಿಡುತ್ತದೆ.

(ವಿ.ಕೆ.ವಿ.)

**ಕಾಡು ಹಂದಿ:** ಆರ್ಟಿಯೋಡ್ಯಾಕ್ಟೈಲ ಗಣದ ಸೂಯಿಡೆ ಕುಟುಂಬಕ್ಕೆ ಸೇರಿದ ಸಸ್ ಸ್ಕ್ರಾಫ ಕ್ರಿಸ್ಟೇಟಸ್, ಪೊಟ್ಯಾಮೊಕೀರಸ್ ಪಾರ್ಕಸ್, ಹೈಲೋಕೀರಸ್ ಮೈನರ್ಟ್‌ಜಾಗೆನಿ ಎಂಬ ಶಾಸ್ತ್ರೀಯ ಹೆಸರುಗಳುಳ್ಳ ವನವಾಸಿ ಹಂದಿಗಳಿರುವ ಸಾಮಾನ್ಯ ಹೆಸರು (ವೈಲ್ಡ್ ಬೋರ್). ಸಾಕುಹಂದಿಗಳ ಪೂರ್ವಜರಿವು. ಉದ್ದವಾದ ಚೂಪಾದ ತಲೆ, ಮೊಟಕಾದ ಕತ್ತು, ಗುಡಾಣದಂಥ ದೇಹ, ಮೊಂಡು ತುದಿಯ ಮೂತಿ, ಮೂತಿಯ ಕೊನೆಯಲ್ಲಿರುವ ಮೂಗಿನ ಹೊಳ್ಳೆಗಳು, ಸಣ್ಣ ಕಣ್ಣುಗಳು, ಉದ್ದನೆಯ ಕಿವಿಗಳು, ಒಂದೊಂದು ಪಾದದಲ್ಲೂ ನಾಲ್ಕು ಬೆರಳುಗಳು ಮುಂತಾದ ಲಕ್ಷಣಗಳು ಎಲ್ಲ ಜಾತಿಗಳಲ್ಲೂ ಕಂಡುಬರುತ್ತವೆ. ಮೂತಿಯ ತುದಿಯಲ್ಲಿ ಮೃದ್ವಸ್ಥಿಯಿಂದ ರಚಿತವಾದ ತಟ್ಟೆಯೂ ಇದಕ್ಕೆ ಬಲ ಕೊಡುವಂತೆ ಒಂದು ಅನುನಾಸಿಕ ಮೂಳೆಯೂ ಇವೆ. ಇದರಿಂದಾಗಿ ಮೂತಿ ಬಲಯುತವಾಗಿದ್ದು ನೆಲವನ್ನು ತೋಡಲು ಅನುಕೂಲವಾಗಿದೆ. ಕಿವಿಗಳ ತುದಿಯಲ್ಲಿ ಕೂದಲಿನ ಕುಚ್ಚಿದೆ. ಪಾದದಲ್ಲಿನ ನಾಲ್ಕು ಬೆರಳುಗಳಲ್ಲಿ ಮಧ್ಯದವೆರಡು ಚಪ್ಪಟೆಯಾಗಿವೆಯಲ್ಲದೆ ಅವಕ್ಕೆ ಗೊರಸುಗಳಿವೆ. ಉಳಿದವೆರಡು ನೆಲದಿಂದ ಮೇಲಕ್ಕೇ ಇವೆ. ಎಲ್ಲ ಕಾಡುಹಂದಿಗಳ ಮರಿಗಳ ದೇಹದ ಮೇಲೂ ವಿಶೇಷವಾದ ಉದ್ದುದ್ದನೆಯ ಬಿಳಿಯ ಪಟ್ಟೆಗಳಿವೆ. ಕಾಡುಹಂದಿಗಳ ಇನ್ನೊಂದು ವಿಶೇಷ ಲಕ್ಷಣವೆಂದರೆ ಮೇಲಿನ ಮತ್ತು ಕೆಳಗಿನ ದವಡೆಯ ಕೋರೆ ಹಲ್ಲುಗಳು ಬಹಳ ಉದ್ದವಿದ್ದು ಬಾಯಿಯಿಂದ ಹೊರಚಾಚಿ ಮೇಲ್ಮುಖನಾಗಿ ಬಾಗಿರುವುದು. ಚಾಕುವಿನಷ್ಟು ಹರಿತವಾಗಿರುವ ಇವು ಹಂದಿಗಳ ಸ್ವರಕ್ಷಣೆಯ ಪ್ರಮುಖ ಸಾಧನಗಳಾಗಿವೆ. ಕೆಲವು ಪ್ರಭೇದಗಳಲ್ಲಿ ಈ ಕೋರೆ ಹಲ್ಲುಗಳು ಪ್ರಾಣಿ ಬದುಕಿರುವವರೆಗೂ ಬೆಳೆಯುತ್ತಲೇ ಇರುತ್ತವೆ.

ಕಾಡುಹಂದಿಗಳು ಸಂಘಜೀವಿಗಳು. ಹಿಂಡಿನಲ್ಲಿ 40-50 ಪ್ರಾಣಿಗಳಿರುತ್ತವೆ. ಸ್ಥೂಲಕಾಯದವಾದರೂ ಇವು ಬಹಳ ವೇಗವಾಗಿ ಓಡಬಲ್ಲುವು. ಇವಕ್ಕೆ ಚೆನ್ನಾಗಿ ಈಜುವುದಕ್ಕೂ ಬರುತ್ತದೆ. ಕೆಸರಿನಲ್ಲಿ ಬಿದ್ದು ಹೊರಳಾಡುವುದರೆಂದರೆ ಇವಕ್ಕೆ ಬಲು ಮೋಜು. ಬಹಳ ಬಲಶಾಲಿ ಪ್ರಾಣಿಗಳೆಂದು ಹೆಸರಾಗಿರುವ ಇವು ಗಾಯಗೊಂಡಾಗ ಅಥವಾ ಶತ್ರುವಿನ ಆಕ್ರಮಣಕ್ಕೊಳಗಾದಾಗ ಬಲು ಕ್ರೂರವಾಗಿ ಅಸಾಮಾನ್ಯ ಧೈರ್ಯದಿಂದ ಹೋರಾಡಬಲ್ಲುವು. ಚೂಪಾದ ಬಲವಾದ ಕೋರೆಗಳೇ ಇವುಗಳ ಆಯುಧ. ಶತ್ರುಪ್ರಾಣಿ

ನಾಡು ಹಂದಿ

ಕಾಡು ಹಂದಿ

ಯಾವುದೇ ಇರಲಿ ದಿಟ್ಟತನದಿಂದ ಎದುರಿಸಬಲ್ಲುವು. ಹುಲಿ, ಚಿರತೆ ಮುಂತಾದವನ್ನೂ ಎದುರಿಸಿ ಕೊಂದಿರುವ ನಿದರ್ಶನಗಳುಂಟು. ಸಾಧಾರಣವಾಗಿ ತಾವಾಗಿಯೇ ಆಕ್ರಮಣ ಮಾಡದಿದ್ದರೂ ಕೆಲವು ಬಗೆಯ ಕಾಡುಹಂದಿಗಳು ಯಾವ ಪ್ರಚೋದನೆಯೂ ಇಲ್ಲದೆ ಕೇವಲ ಆತ್ಮರಕ್ಷಣೆಗಾಗಿ ಮೇಲೆ ಬೀಳುತ್ತವೆ. ಕಾಡುಹಂದಿಗಳ ಚಟುವಟಿಕೆ ರಾತ್ರಿ ಕಾಲದಲ್ಲಿ ಹೆಚ್ಚು. ಸಂಜೆಯಿಂದ ಮುಂಜಾನೆಯವರೆಗೂ ಅವು ಆಹಾರಕ್ಕಾಗಿ ಅಲೆದಾಡುತ್ತವೆ. ಉಳಿದಂತೆ ಬೇರೆ ಪ್ರಾಣಿಗಳಿಂದ ದೂರವಾದ ಸ್ಥಳಗಳಲ್ಲಿ ಕೆಸರಿನಲ್ಲಿ ಹೊರಳಾಡಿಕೊಂಡೋ ಉದ್ದವಾಗಿ ಬೆಳೆದ ಹುಲ್ಲಿನ ಮರೆಯಲ್ಲೋ ಅಥವಾ ತಾವೇ ನಿರ್ಮಿಸಿಕೊಂಡ ಇಲ್ಲವೆ ಬೇರೆ ಪ್ರಾಣಿಗಳ ಬಿಲಗಳಲ್ಲೋ ಕಾಲ ಕಳೆಯುತ್ತವೆ. ಇವು ವಿವಿಧ ಬಗೆಯ ಆಹಾರವನ್ನು ತಿನ್ನುತ್ತವೆ. ಬೇರು, ಎಲೆ, ಕಂದಗೆಡ್ಡೆಗಳು, ಅಣಬೆಗಳು ಮುಂತಾದುವನ್ನೊಳಗೊಂಡ ಸಸ್ಯಾಹಾರವೇ ಪ್ರಧಾನವಾದರೂ ಕೆಲವು ಬಗೆಯವು ಎರೆಹುಳು, ಬಸವನಹುಳು, ಸಣ್ಣ ಇಲಿಗಳು, ಹಕ್ಕಿಗಳು, ಮೊಟ್ಟೆಗಳು ಮುಂತಾದುವನ್ನೂ ತಿನ್ನುತ್ತವೆ. ಮೂತಿಯಿಂದ, ಕೋರೆ ಹಲ್ಲುಗಳಿಂದ ನೆಲವನ್ನು ಅಗೆದು ಆಹಾರವನ್ನು ಹುಡುಕಿ ಹೊರತೆಗೆದು ತಿನ್ನುವುದು ಇವಕ್ಕೆ ಇಷ್ಟ.

ಕಾಡುಹಂದಿಗಳ ಸಂತಾನೋತ್ಪತ್ತಿಯ ಕಾಲ ಸಾಮಾನ್ಯವಾಗಿ ಅಕ್ಟೋಬರ್–ಡಿಸೆಂಬರ್ ತಿಂಗಳುಗಳು. ಒಂದು ಸೂಲಿಗೆ ಹುಟ್ಟುವ ಮರಿಗಳ ಸಂಖ್ಯೆ 2 ರಿಂದ 14 ರವರೆಗೆ. ವಿವಿಧ ಪ್ರಭೇದಗಳಲ್ಲಿ ವ್ಯತ್ಯಾಸವಿದೆ. ಅಂತೆಯೇ ಗರ್ಭಧಾರಣೆಯ ಅವಧಿಯೂ 112 ರಿಂದ 175 ದಿವಸಗಳವರೆಗೆ ವ್ಯತ್ಯಾಸವಾಗುತ್ತದೆ. ಮರಿಗಳ ರಕ್ಷಣೆಯ ಭಾರ ಸಂಪೂರ್ಣವಾಗಿ ಹೆಣ್ಣು ಹಂದಿಯದು. ಮರಿ ೧½ ವರ್ಷ ವಯಸ್ಸಿನವಾಗುವ ವೇಳೆಗೆ ಲೈಂಗಿಕ ಪ್ರಬುದ್ಧತೆಯನ್ನು ತಲುಪುವುದಾದರೂ ಪೂರ್ಣ ಬೆಳವಣಿಗೆಗೆ 5-6 ವರ್ಷ ಬೇಕು. ಕಾಡುಹಂದಿಗಳ ಆಯಸ್ಸು ಸುಮಾರು 20 ವರ್ಷಗಳು.

ಸಸ್ ಸ್ಕ್ರಾಫ ಎಂಬುದು ಯೂರೋಪಿನ ಕಾಡುಹಂದಿ. ಸ್ಪೇನ್, ಆಸ್ಟ್ರಿಯ, ಜರ್ಮನಿ, ಉತ್ತರ ಆಫ್ರಿಕ, ಮಧ್ಯ ಹಾಗೂ ಉತ್ತರ ಏಷ್ಯಗಳಲ್ಲಿ ಇದರ ವ್ಯಾಪ್ತಿಯಿದೆ. ಅಮೆರಿಕ ಸಂಯುಕ್ತಸಂಸ್ಥಾನಗಳ ಕೆಲವು ಪ್ರದೇಶಗಳಲ್ಲೂ (ಟೆನೆಸ್ಸಿ ರಾಜ್ಯದ ಪೂರ್ವ ಭಾಗ) ಯೂರೋಪಿನಿಂದ ಈ ಪ್ರಭೇದವನ್ನು ಕೊಂಡೊಯ್ದು ಬೆಳೆಸಲಾಗಿದೆ. ಸುಮಾರು 1 ಮೀ ಎತ್ತರ ಮತ್ತು 1.8 ಮೀ ಉದ್ದದ ಈ ಕಾಡುಹಂದಿ 75-200 ಕಿಗ್ರಾಂ ತೂಗುತ್ತದೆ.

ದೇಹದ ಬಣ್ಣ ಕಂದು ಅಥವಾ ಬೂದು ಮಿಶ್ರಿತ ಕಪ್ಪು. ಸಾಕುಹಂದಿಗಳ ಪೂರ್ವಜಪ್ರಾಣಿ ಇದು.

ಸಸ್ ಕ್ರಿಸ್ಟೇಟಸ್ ಎಂಬ ಪ್ರಭೇದ ಭಾರತದಲ್ಲಿ ಸಾಮಾನ್ಯವಾಗಿ ಕಾಣಸಿಗುವ ಕಾಡುಹಂದಿ. ಹಿಮಾಲಯದ 4500ಮೀ ಎತ್ತರದ ಪ್ರದೇಶಗಳಿಂದ ಹಿಡಿದು ಮೈದಾನ ಪ್ರದೇಶಗಳ ಕಾಡುಗಳಲ್ಲೆಲ್ಲ ಇದು ಅಮಿತ ಸಂಖ್ಯೆಯಲ್ಲಿದೆ. ಸಿಂಹಳ ಮತ್ತು ಬರ್ಮಗಳಲ್ಲೂ ಕಾಡುಹಂದಿಗಳಿರುವ ವರದಿಗಳಿವೆ. ಯೂರೋಪಿನ ಕಾಡುಹಂದಿಗಿಂತ ಭಾರತದ್ದು ಹೆಚ್ಚು ಎತ್ತರ. ಮೈಮೇಲಿನ ಕೂದಲು ಒತ್ತಾಗಿಲ್ಲ. ಕತ್ತಿನಿಂದ ಬೆನ್ನಿನವರೆಗೂ ಕರಿಯ ಬಿರುಗೂದಲು ಹಬ್ಬಿದೆ. ಚಿಕ್ಕದಿದ್ದಾಗ ಬೂದುಮಿಶ್ರಿತ ಕಂದು ಬಣ್ಣಕ್ಕಿರುವ ಹಂದಿ ವಯಸ್ಸಾದಂತೆ ಕೆಂಗಂದು ಬಣ್ಣಕ್ಕೆ ತಿರುಗುತ್ತದೆ. ಇದು ಕಾಡುಹಂದಿಗಳಲ್ಲೆಲ್ಲ ಅತ್ಯಂತ ಧೈರ್ಯಶಾಲಿಯೂ ಕ್ರೂರಿಯೂ ಆದುದೆಂದು ಹೇಳಿಕೆ. ಅಂಡಮಾನ್ ದ್ವೀಪಗಳಲ್ಲಿ ಇದನ್ನು ಹೋಲುವ ಸಸ್ ಸ್ಕ್ರಾಫ ಅಂಡಮಾನೆನ್ಸಸ್ ಒಂದು ಕುಳ್ಳು ಬಗೆಯ ಕಾಡುಹಂದಿ ಕಂಡುಬರುತ್ತದೆ. (ಸಸ್ ಸಾಲ್ವಾನಿಯಸ್) ಸುಮಾರು ೩೩ ಮಿಮೀ ಎತ್ತರ ೬೬ ಸೆಮೀ ಉದ್ದವಿರುವ ಇದು ೮ ಕಿಗ್ರಾಂ ತೂಗುತ್ತದೆ. ಇದರಲ್ಲಿ ಕತ್ತಿನ ಮೇಲಿನ ಕೇಸರ ಇಲ್ಲ; ಉಣ್ಣೆಯಂಥ ತುಪ್ಪುಳ ಕೂದಲೂ ಇಲ್ಲ. ಕಿವಿಯ ತುದಿಯಲ್ಲಿರುವ ಕೂದಲೂ ಗಿಡ್ಡ. ಹೆಣ್ಣಿನಲ್ಲಿ ಮೂರು ಜೊತೆ ಮೊಲೆಗಳು ಮಾತ್ರ ಇವೆ (ಉಳಿದ ಕಾಡು ಹಂದಿಗಳಲ್ಲಿ ಮೊಲೆಗಳ ಸಂಖ್ಯೆ ೬ ಜೊತೆ). ಉಳಿದೆಲ್ಲ ಜೀವನ ಕ್ರಮದಲ್ಲಿ ಇದು ಭಾರತದ ಕಾಡುಹಂದಿಯನ್ನು ಹೋಲುತ್ತದೆ.

ಪೊಟ್ಯಾಮೊಕೀರಸ್ ಪಾರ್ಕಸ್ ಎಂಬ ಶಾಸ್ತ್ರೀಯ ಹೆಸರಿನ ಕಾಡುಹಂದಿ ಆಫ್ರಿಕ ಖಂಡದ ಮೂಲವಾಸಿ. ಸಹಾರ ಮರುಭೂಮಿಯ ದಕ್ಷಿಣಕ್ಕಿರುವ ಪ್ರದೇಶಗಳಲ್ಲೂ ಮಡಗಾಸ್ಕರ್ ದ್ವೀಪದಲ್ಲೂ ಇದರ ವ್ಯಾಪ್ತಿಯಿದೆ. ಇದಕ್ಕೆ ಕೆಂಪು ಹೊಳೆ ಹಂದಿ (ರೆಡ್ ರಿವರ್ ಪಿಗ್) ಆಫ್ರಿಕದ ಪೊದೆ ಹಂದಿ (ಆಫ್ರಿಕನ್ ಬುಷ್ ಪಿಗ್) ಎಂಬ ಸಾಮಾನ್ಯ ಬಳಕೆಯ ಹೆಸರುಗಳಿವೆ. ಬೇರೆ ಕಾಡುಹಂದಿಗಳಿಗಿಂತ ಗಾತ್ರದಲ್ಲಿದು ಚಿಕ್ಕದ್ದು. ಇದರ ಉದ್ದ 1.3 ಮೀ ಎತ್ತರ 58-96 ಸೆಂಮೀ ತೂಕ 75-130 ಕಿಗ್ರಾಂ ದೇಹದ ಬಣ್ಣ ಕೆಂಪು ಮಿಶ್ರಿತ ಕಂದು. ಅಲ್ಲಲ್ಲಿ ಬಿಳಿಯ ಅಥವಾ ಹಳದಿ ಬಣ್ಣದ ಕೂದಲುಗಳಿವೆ. ಕಿವಿಯ ತುದಿಯ ಕೂದಲುಗಳು ಬಲು ಉದ್ದ. ಎರಡು ಕೆನ್ನೆಗಳ ಮೇಲೂ ಬಹಳ ಉದ್ದವಾದ ಕೂದಲುಗಳಿರುವುವಲ್ಲದೆ ಗಂಡು ಹಂದಿಯಲ್ಲಿ ಒಂದೊಂದು ಕಣ್ಣಿನ ಮುಂಭಾಗದಲ್ಲಿ ಮೂತಿಯ ಮೇಲೆ ಉದ್ದವಾದ ಒಂದು ಗಂಟಿದೆ.

ಮಧ್ಯ ಆಫ್ರಿಕದ ದಟ್ಟವಾದ ಕಾಡುಗಳಲ್ಲಿ ಹೈಲೋಕೀರಸ್ ಮೈನರ್ಟ್‌ಜಾಗೆನಿ ಎಂಬ ಹೆಸರಿನ ಕಾಡುಹಂದಿ ಕಾಣಸಿಗುತ್ತದೆ. ಇದರ ಉದ್ದ ಸುಮಾರು 76-86 ಸೆಂಮೀ. ಎತ್ತರ 15-19 ಸೆಂಮೀ. ದೇಹದ ಮೇಲೆಲ್ಲ ಉದ್ದವಾದ ಒರಟಾದ ಕಪ್ಪನೆಯ ಕೂದಲಿದೆ. ಚರ್ಮದ ಬಣ್ಣ ಕಪ್ಪು. ಕಣ್ಣಿನ ಸುತ್ತಣ ಪ್ರದೇಶ ರೋಮರಹಿತವಾಗಿರುವುದೂ ಕಣ್ಣಿನ ಮುಂಭಾಗದಲ್ಲಿ ಒಂದು ಗ್ರಂಥಿಯಿರುವುದೂ ಇದರ ವಿಶೇಷ ಲಕ್ಷಣಗಳು. ಸಾಮಾನ್ಯವಾಗಿ ಕೆಸರು ನೀರಿನಲ್ಲೇ ಹೆಚ್ಚು ಕಾಲ ಕಳೆಯುತ್ತದೆ. ಪೊದೆ ಸಸ್ಯಗಳ ಚಿಗುರು, ಹುಲ್ಲು ಇದರ ಪ್ರಧಾನ ಆಹಾರ.

ಎಲ್ಲ ಕಾಡುಹಂದಿಗಳೂ ಹೊಲಗದ್ದೆಗಳಿಗೆ ನುಗ್ಗಿ ಪೈರು ಹಾಳು ಮಾಡುವುದರಲ್ಲಿ ಹೆಸರಾದ ಪ್ರಾಣಿಗಳು. ಗೆಡ್ಡೆಗೆಣಸಿನ ಬೆಳೆ ಇವಕ್ಕೆ ಬಲು ಇಷ್ಟ. ಹೀಗೆ ಇವು ಅಪಾರವಾದ ನಷ್ಟವುಂಟುಮಾಡುವುದರಿಂದ ಮಾನವನ ಶತ್ರುಗಳೆನಿಸಿವೆ; ಮಾನವ ಇವನ್ನು ಬೇಟೆಯಾಡುತ್ತ ಬಂದಿದ್ದಾನೆ. ಇವುಗಳ ರುಚಿಕರವಾದ ಮಾಂಸಕ್ಕಾಗಿಯೂ ಕೇವಲ ಮೃಗಯಾ ವಿನೋದಕ್ಕಾಗಿಯೂ ಇವನ್ನು ಬೇಟೆಯಾಡುವುದಿದೆ. ಕಾಡು ಹಂದಿ ಬಲು ಕ್ರೂರಿಯೂ ಬಲಶಾಲಿಯೂ ನಿರ್ಭಯವಾಗಿ ಶತ್ರುಗಳನ್ನು ಎದುರಿಸುವ ಛಾತಿಯುಳ್ಳದ್ದೂ ಆಗಿರುವುದರಿಂದ ಇದರ ಬೇಟೆ ಅತ್ಯಂತ ರೋಮಾಂಚಕಾರಿಯೂ ಅಪಾಯಕಾರಿಯೂ ಎನಿಸಿದೆ. ಕಾಡುಹಂದಿಯ ಬೇಟೆ ಬಹಳ ಹಿಂದಿನ ಕಾಲದಿಂದ ಭಾರತ ಮತ್ತು ಯೂರೋಪುಗಳಲ್ಲಿ ರೂಢಿಯಲ್ಲಿದೆ. ಹಿಂದೆ ಕುದುರೆಗಳ ಮೇಲೇರಿ ಭರ್ಚಿ ಮುಂತಾದ ಆಯುಧಗಳಿಂದ ಸಜ್ಜಾಗಿ ಹಂದಿಗಳನ್ನು ಬೆನ್ನಟ್ಟಿ ಬೇಟೆಯಾಡುವುದಿತ್ತು. ಹಂದಿಯನ್ನು ಬೆನ್ನಟ್ಟಲು ಬೇಟೆನಾಯಿಗಳ ಅವಶ್ಯಕತೆಯೂ ಇದೆ. ಈಗ ಭರ್ಚಿಗಳ ಬದಲು ಬಂದೂಕುಗಳು ಬಂದಿವೆ. ಕಾಡುಹಂದಿಯ ಬೇಟೆ ಹಿಂದೆ ಯೂರೋಪಿನ ಹಲವಾರು ರಾಜರುಗಳ ಅಚ್ಚು ಮೆಚ್ಚಿನ ಕ್ರೀಡೆಯಾಗಿತ್ತು. ಬೇಟೆ ಮುಗಿದ ಮೇಲೆ ಹಂದಿಯನ್ನು ಇಡಿಯಾಗಿಯೊ ಅದರ ತಲೆಯನ್ನೊ ಬೇಯಿಸಿ ರಸಭಕ್ಷ್ಯವಾಗಿ ಬಡಿಸುತ್ತಿದ್ದರು.

ಕಾಡುಹಂದಿ ಇಂಗ್ಲೆಂಡಿನ ೩ನೆಯ ರಿಚರ್ಡ್ ದೊರೆಯ ಲಾಂಛನವಾಗಿತ್ತು. ವಿಜಯನಗರ ಅರಸರ ಲಾಂಛನವೂ ಇದೇ. ***

**ಕಾಡುಕೋಣ:** ಆರ್ಟಿಯೊಡ್ಯಾಕ್ಟೈಲ ಗಣದ ಬೋವಿಡೆ ಕುಟುಂಬಕ್ಕೆ ಸೇರಿದ ಸ್ಥೂಲಕಾಯದ ಪ್ರಾಣಿ (ಬೈಸನ್). ನೋಡುವುದಕ್ಕೆ ದೊಡ್ಡ ಗಾತ್ರದ ಕೋಣ ಅಥವಾ ಗೂಳಿಯಂತಿದೆ. ಇದರಲ್ಲಿ ಪ್ರಮುಖವಾಗಿ ಎರಡು ಜಾತಿಗಳಿವೆ. ಅಮೆರಿಕ ಮತ್ತು ಯೂರೋಪಿನಲ್ಲಿ ವಾಸಿಸುವ ಬೈಸನ್ ಎಂಬುದು ಮತ್ತು ಭಾರತದಲ್ಲಿ ಕಾಣ ಬರುವ ಬೈಬಾಸ್ ಗೌರಸ್ ಎಂಬುದು.



ಭಾರತದ ಕಾಡುಕೋಣಕ್ಕೆ ಗೌರ್ ಎಂಬ ಹೆಸರು ಇದೆ. ಇದು ಬರ್ಮ, ಮಲಯ ದೇಶಗಳಲ್ಲೂ ಕಾಣಬರುತ್ತದೆ. ಸುಮಾರು 750–1,800 ಮೀ ಎತ್ತರದ ಗುಡ್ಡಗಾಡು ಪ್ರದೇಶಗಳಲ್ಲಿ ಗುಡ್ಡಗಳ ಮೇಲೆ ಹುಲ್ಲುಗಾವಲುಗಳಿರುವಂಥ ಸ್ಥಳಗಳಲ್ಲಿ ಸಾಮಾನ್ಯವಾಗಿ ವಾಸಿಸುತ್ತದೆ. ಕರ್ನಾಟಕದ ಮಲೆನಾಡುಗಳಲ್ಲಿ ಹಿಂದೊಮ್ಮೆ ಹೇರಳ ಸಂಖ್ಯೆಯಲ್ಲಿದ್ದ ಇದು ಈಗ ಬಿಳಿಗಿರಿ ರಂಗನ ಬೆಟ್ಟದ ಶ್ರೇಣಿ, ಬಂಡೀಪುರ ಅಭಯಾರಣ್ಯ, ಭದ್ರಾ ವನ್ಯಜೀವಿಧಾಮ, ನಾಗರಹೊಳೆ, ದಾಂಡೇಲಿ ಮುಂತಾದ ಪ್ರದೇಶಗಳಲ್ಲಿ ಮಾತ್ರ ಇದೆ. ಕಾಡು ಕೋಣ ಬಹಳ ದೊಡ್ಡ ಗಾತ್ರದ ಪ್ರಾಣಿ. ಪೂರ್ಣ ಬೆಳೆದ ಕೋಣ ಸುಮಾರು 3 ಮೀ (ಬಾಲ ಬಿಟ್ಟು) ಉದ್ದ, ಸುಮಾರು 1.8 ಮೀ ಎತ್ತರ ಇದ್ದು ಒಂದು ಟನ್ನಿಗಿಂತಲೂ ಹೆಚ್ಚು ತೂಗುತ್ತದೆ. ದೇಹದ ಬಣ್ಣ ಕಪ್ಪುಮಿಶ್ರಿತ ಕಂದು. ಕಾಲುಗಳು ಮಾತ್ರ ಬೆಳ್ಳಗಿವೆ. ಮೈಮೇಲೆ ಮೃದುವಾದ ರೇಷ್ಮೆಯಂಥ ಕೂದಲಿದೆ. ಹೆಗಲಿನಿಂದ ಬೆನ್ನಿನ ಮಧ್ಯದವರೆಗೂ ಎತ್ತರವಾದ ಏಣು ಇದೆ. ತಲೆಯ ಮೇಲೆ ಅಗಲವಾಗಿ ಹರಡಿರುವ, ಬಲವಾದ ಚೂಪುತುದಿಯ ಸೊಗಸಾದ ಕೊಂಬುಗಳಿವೆ. ಕೊಂಬುಗಳ ನಡುವೆ ಇರುವ ನೆತ್ತಿ ಏಣಿನಂತೆ ಎದ್ದುಕೊಂಡಿದೆ. ಸಾಮಾನ್ಯವಾಗಿ 5–20 ಪ್ರಾಣಿಗಳನ್ನೊಳಗೊಂಡ ಹಿಂಡಿನಲ್ಲಿ ಸಂಚರಿಸುತ್ತದೆ. ಸಂಜೆ ಮತ್ತು ಮುಂಜಾನೆಯ ಮಬ್ಬುಗತ್ತಲಲ್ಲಿ ಹುಲ್ಲು, ಚಿಗುರು ಮುಂತಾದುವನ್ನು ತಿನ್ನುತ್ತ ತಿರುಗಾಡುತ್ತದೆ. ಹಗಲಲ್ಲಿ ದಟ್ಟವಾದ ಪೊದೆಗಳ ನೆರಳಿನಲ್ಲಿ ಬಿಸಿಲಿನ ತಾಪದಿಂದ ದೂರವಿದ್ದು ಆಹಾರವನ್ನು ಮೆಲಕು ಹಾಕುತ್ತ ವಿಶ್ರಮಿಸುತ್ತದೆ. ಇದು ನಾಚಿಕೆ ಹಾಗೂ ಸಾಧುಸ್ವಭಾವದ ಪ್ರಾಣಿ. ಆದರೆ ಗಾಯಗೊಂಡಾಗ, ಶತ್ರುಗಳು ಹಿಂಬಾಲಿಸಿದಾಗ ಕ್ರೂರವಾಗಿ ಹೋರಾಡಬಲ್ಲುದು. ಸಾಧಾರಣವಾಗಿ ಶತ್ರುವಿನ ಸುಳಿವು ಸಿಕ್ಕಾಗ ಮರಗಿಡಗಳ ಮೆಳೆಗಳ ನಡುವೆ ವೇಗವಾಗಿ ಓಡಿಹೋಗುತ್ತದೆ. ಸಾಮಾನ್ಯವಾಗಿ ಎಮ್ಮೆ ಹಸುಗಳಂತೆಯೇ ಕೂಗುವುದಾದರೂ ಅಪಾಯ ಸನ್ನಿಹಿತವೆಂದು ಕಂಡಾಗ ಸಿಳ್ಳಿಯಂಥ ಗುಟುರು ಹಾಕುತ್ತದೆ. ಇದರ ಸಂತಾನೋತ್ಪತ್ತಿಯ ಕಾಲ ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳು. ಒಂದು ಸಲಕ್ಕೆ ಒಂದೇ ಮರಿ ಹುಟ್ಟುತ್ತದೆ. ಉತ್ತರ ಅಮೆರಿಕದ ಕಾಡುಕೋಣದ ವೈಜ್ಞಾನಿಕ ಹೆಸರು ಬೈಸನ್ ಬೈಸನ್. ಇದನ್ನು ಬಫೆಲೋ ಎಂದೂ ಕರೆಯುವುದುಂಟು. ಅಮೆರಿಕಕ್ಕೆ ಯೂರೋಪಿನ ಜನ ಬರುವ ಮುಂಚೆ ಅಲ್ಲಿನ ವಿಶಾಲವಾದ ಬಯಲುಗಳಲ್ಲಿ ನಿರ್ಭಯವಾಗಿ ಸಂಚರಿಸಿ ತನ್ನದೇ ಆದ ರಾಜ್ಯವನ್ನು ಸ್ಥಾಪಿಸಿದ್ದ ಈ ಕಾಡುಕೋಣ ಇಂದು ಅಮೆರಿಕದ ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ವನಗಳಲ್ಲಿ ಮಾತ್ರವೇ ಉಳಿದಿವೆ. ಹಿಂದಿನ ಕಾಲದಲ್ಲಿ ಇವುಗಳ ಸಂಖ್ಯೆ ಸುಮಾರು 60,000,000 ಇತ್ತೆಂದು ಅಂದಾಜಿದೆ. ಮಾಂಸ, ಚರ್ಮ ಮತ್ತು ಬೇಟೆಯ ಶೋಕಿಗಾಗಿ ಇವನ್ನು ಕೊಲ್ಲುತ್ತ ಬಂದಂತೆ ಇವುಗಳ ಸಂಖ್ಯೆಯೂ ಕಡಮೆಯಾಗುತ್ತ ಬಂದು 1900ರ ಸುಮಾರಿಗೆ ಇವುಗಳ ಸಂತತಿ ನಿರ್ನಾಮವಾಗುವ ಹಂತದಲ್ಲಿತ್ತು. ಆದರೆ ಈಗ ಕಾನೂನಿನ ರಕ್ಷಣೆ ದೊರಕಿ ಇವುಗಳ ಸಂಖ್ಯೆ ಕೊಂಚ ಏರುತ್ತ ಬಂದಿದೆ.

ಅಮೆರಿಕದ ಕಾಡುಕೋಣವೂ ದೊಡ್ಡ ಗಾತ್ರದ ಪ್ರಾಣಿ. ಇದರ ಉದ್ದ 2–3.5 ಮೀ. ಎತ್ತರ 2–2.5 ಮೀ. ತೂಕ ಒಂದು ಟನ್ನಿಗಿಂತಲೂ ಹೆಚ್ಚು. ದೊಡ್ಡ ಗಾತ್ರದ ತಲೆ, ನೆತ್ತಿಯ ಮೇಲೆ ಜೋತುಬಿದ್ದಿರುವ ಕೂದಲಿನ ಗುಚ್ಛ, ಕೊರಳು ಮತ್ತು ಹೆಗಲನ್ನು ಸಂಪೂರ್ಣವಾಗಿ ಆವರಿಸಿರುವ ಜಡೆಗಟ್ಟಿದ ಉದ್ದ ಕೂದಲಿನ ಜೊತೆ, ಚಿಕ್ಕ ಕತ್ತು,

ಅಗಲವಾದ ಹಣೆ–ಇವು ಇದರ ಮುಖ್ಯ ಲಕ್ಷಣಗಳು. ದೇಹದ ಹಿಂಭಾಗ ಮುಂಭಾಗಕ್ಕಿಂತ ಕಡಿಮೆ ಎತ್ತರದ್ದು. ಕೊಂಬುಗಳು ಚಿಕ್ಕವು, ತಲೆಯ ಮುಂಭಾಗದಲ್ಲಿ ಮೇಲ್ಮುಖನಾಗಿ ಬಾಗಿವೆ. ಇದು ಸಾಮಾನ್ಯವಾಗಿ ಹಿಂಡುಗಳಲ್ಲಿ ಸಂಚರಿಸುತ್ತದೆ. ಹಿಂಡಿಗೆ ಎಮ್ಮೆಯೆ ಮುಂದಾಳು. ಹುಲ್ಲು ಇದರ ಪ್ರಧಾನ ಆಹಾರ. ಬೆಳಗಿನ ಹೊತ್ತು ಮತ್ತು ಸಂಜೆ ಆಹಾರಕ್ಕಾಗಿ ಅಲೆದಾಡುತ್ತದೆ. ಹಗಲೆಲ್ಲ ವಿಶ್ರಮಿಸುತ್ತ ಕಾಲ ಕಳೆಯುತ್ತದೆ. ಜುಲೈ–ಸೆಪ್ಟೆಂಬರ್ ತಿಂಗಳುಗಳ ನಡುವಣ ಕಾಲದಲ್ಲಿ ಗಂಡು ಹೆಣ್ಣುಗಳು ಕೂಡುತ್ತವೆ. ಹೆಣ್ಣು ಸುಮಾರು 9 ತಿಂಗಳು ಗರ್ಭಧಾರಣೆಯ ಅವಧಿಯ ಅನಂತರ ಒಂದೇ ಒಂದು ಮರಿಯನ್ನು ಈಯುತ್ತದೆ. ಮರಿಯ ಪಾಲನೆಯನ್ನು ಗಂಡು, ಹೆಣ್ಣು, ಕೆಲವೊಮ್ಮೆ ಹಿಂಡಿನ ಇತರ ಕೋಣಗಳೂ ನೋಡಿಕೊಳ್ಳುತ್ತವೆ. ಸುಮಾರು ಒಂದು ವರ್ಷ ಕಾಲ ಮರಿ ಹಾಲು ಕುಡಿದೇ ಜೀವಿಸುತ್ತದೆ. 3 ವರ್ಷಗಳಾದ ಅನಂತರ ಸ್ವತಂತ್ರ ಜೀವನ ನಡೆಸಲು ಪ್ರಾರಂಭಿಸುತ್ತದೆ. ಯೂರೋಪಿನ ಕಾಡುಕೋಣ (ಬೈಸನ್ ಬೊನಾಸಸ್) ಹೆಚ್ಚು ಕಡಿಮೆ ಅಮೆರಿಕದ ಪ್ರಾಣಿಯಂತೆಯೇ ಇದೆ. ಆದರೆ ಅದಕ್ಕಿಂತ ದೊಡ್ಡ ಗಾತ್ರದ್ದು. ಇದಕ್ಕೆ ವೈಸೆಂಟ್ ಎಂಬ ಹೆಸರೂ ಇದೆ. ಪುರಾತನ ಕಾಲದಲ್ಲಿ ಯೂರೋಪ್ ಮತ್ತು ಏಷ್ಯದ ಕಾಡುಗಳಲ್ಲಿ ಹೇರಳವಾಗಿತ್ತೆಂದು ಹೇಳಿಕೆ. ಈಗ ಪೋಲೆಂಡ್ ಮತ್ತು ಲಿಥುವೇನಿಯಗಳ ವನ್ಯಪ್ರದೇಶಗಳಲ್ಲಿ ಮಾತ್ರ ಇದೆ. ಜೀವನಕ್ರಮದಲ್ಲಿ ಅಮೆರಿಕದ ಕಾಡುಕೋಣವನ್ನು ಹೋಲುತ್ತದೆ. ***

**ಕಾಡುಪಾಪ:** ಪ್ರೈಮೇಟ್ ಗಣದ ಲೋರಿಸಿಡೆ ಕುಟುಂಬದ ಲೋರಿಸ್ ಜಾತಿಯ ಮತ್ತು ಲೆಮರಿಡೆ ಕುಟುಂಬದ ಲೆಮರ್ ಜಾತಿಯ ಕೋತಿಗಳಿಗೆ ಇರುವ ಸಾಮಾನ್ಯ ಹೆಸರು. ಇವುಗಳಲ್ಲಿ ಲೋರಿಸ್ ಜಾತಿಯ ಕಾಡುಪಾಪ ಭಾರತ, ಸಿಂಹಳಗಳಲ್ಲಿ ವಾಸಿಸುತ್ತದೆ. ಲೆಮರ್ ಜಾತಿಯವು ಮಡಗಾಸ್ಕರ್ ದ್ವೀಪದ ನಿವಾಸಿಗಳು.

ಲೆಮರ್ ಕಾಡುಪಾಪ ವೃಕ್ಷವಾಸಿ. ಪ್ರೈಮೇಟ್ ಗಣದ ಬಹಳ ಪ್ರಾಚೀನ ಲಕ್ಷಣಗಳನ್ನು ತೋರಿಸುತ್ತದೆ. ನೋಡುವುದಕ್ಕೆ ಅಳಿಲಿನಂತೆಯೇ ಕಾಣುತ್ತದೆ. 120-440 ಮಿಮೀ ಉದ್ದದ ಪೊದೆಪೊದೆಯಾದ ಬಾಲ, ದೊಡ್ಡ ಕಿವಿಗಳು, ತಲೆಯ ಮುಂಭಾಗದಲ್ಲಿರುವ ಪ್ರಧಾನವಾಗಿ ಕಾಣುವ ದೊಡ್ಡ ಕಣ್ಣುಗಳು–ಇದರ ಪ್ರಧಾನ ಲಕ್ಷಣಗಳು. ದೇಹದ ಮೇಲೆಲ್ಲ ಉಣ್ಣೆಯಂಥ ಕೂದಲಿವೆ. ಹಿಂಗಾಲುಗಳು ಮುಂಗಾಲು (ಕೈ)ಗಳಿಗಿಂತ ಚಿಕ್ಕವು. ಕೈಕಾಲುಗಳೆರಡರಲ್ಲೂ ರೆಂಬೆಗಳನ್ನು ಹಿಡಿಯಲು ಅನುಕೂಲವಾಗುವಂಥ, ಉಳಿದ ನಾಲ್ಕು ಬೆರಳುಗಳಿಗೆ ಎದುರಾಗಿರುವ ಹೆಬ್ಬೆರಳಿದೆ. ಕಾಲಿನ ಎರಡನೆಯ ಬೆರಳಿನಲ್ಲಿ ಪಂಜವಿದೆ. ಉಳಿದ ಬೆರಳುಗಳಲ್ಲಿ ಉಗುರುಗಳಿವೆ. ಸಾಮಾನ್ಯವಾಗಿ ಇವು 10-20 ಪ್ರಾಣಿಗಳನ್ನೊಳಗೊಂಡ ಗುಂಪುಗಳಲ್ಲಿ ವಾಸಿಸುತ್ತವೆ. ರೆಂಬೆಯಿಂದ ರೆಂಬೆಗೆ ಹಾರಿ ಚಲಿಸುತ್ತವಾದರೂ ನೆಲದ ಮೇಲೆ ಓಡುವುದು ನೆಗೆಯುವುದು ಉಂಟು. ಇವು ನಿಶಾಚರಿಗಳು. ಹಗಲನ್ನು ಯಾವುದಾದರೂ ಮರದಲ್ಲಿ ನಿದ್ರಿಸುತ್ತ ಕಾಲ ಕಳೆಯುತ್ತವೆ. ನಿದ್ರಿಸುವಾಗ ಅಥವಾ ವಿಶ್ರಮಿಸುವಾಗ ಬಾಲವನ್ನು ಯಾವುದಾದರೂ ರೆಂಬೆಗೆ ಸುತ್ತುತ್ತವೆ. ಇವುಗಳ ಆಹಾರ ಕೀಟಗಳು, ಹಣ್ಣು, ಎಲೆ ಇತ್ಯಾದಿ. ಇವು ಪ್ರೈಮೇಟ್ ಗಣಕ್ಕೆ ಸೇರಿದ್ದರೂ ಸಂತಾನೋತ್ಪತ್ತಿ ಕ್ರಮದಲ್ಲಿ ಪ್ರಾಚೀನವಾದ ಈಸ್ಟ್ರಸ್ ಆವೃತ್ತಗಳನ್ನೇ ತೋರಿಸುತ್ತವೆ. ಒಂದು ವರ್ಷದಲ್ಲಿ ಹಲವಾರು ಈಸ್ಟ್ರಸ್ ಆವೃತ್ತಗಳಿರುತ್ತವೆ. ಗರ್ಭಕೋಶದಲ್ಲಿ ಎರಡು ಕವಲುಗಳಿವೆ. ಗರ್ಭವೇಷ್ಟಿಯೂ ತುಂಬ ಹಿಂದುಳಿದ ಲಕ್ಷಣವನ್ನು ತೋರುತ್ತವೆ. ಹುಟ್ಟಿದಾಗ ಮರಿಗಳಿಗೆ ತುಂಬ ದೊಡ್ಡ ತಲೆಯೂ, ರೋಮರಹಿತ ಬಾಲವೂ ಇರುವುವು. ತಂದೆತಾಯಿಗಳೆರಡೂ ಮರಿಗಳ ಪಾಲನೆ ಮಾಡುತ್ತವೆ.

ಮಡಗಾಸ್ಕರಿನಲ್ಲೇ ಕಾಣಬರುವ ಇಂಡ್ರಿಸ್ ಮತ್ತು ಅಯ್ ಅಯ್ ಎಂಬ ಎರಡು ಪ್ರಾಣಿಗಳೂ ಲೆಮರಿಡೆ ಕುಟುಂಬಕ್ಕೆ ಸೇರಿದ್ದು ಕಾಡುಪಾಪವನ್ನೆ ಹೋಲುತ್ತವೆ. ಇಂಡ್ರಿಸ್ ಪ್ರಾಣಿಗೆ ಇಂಡ್ರಿ ಇಂಡ್ರಿ ಎಂಬ ಶಾಸ್ತ್ರೀಯ ಹೆಸರಿದೆ. ಬೆಕ್ಕಿನ ಅಥವಾ ಅಳಿಲಿನ ಪ್ರಮಾಣದ ಶರೀರ, ದೊಡ್ಡ ಕಣ್ಣು, ನರಿಯಂಥ ಮುಖ, ನಾಯಿಯ ಮೂಗು ಇದರ ಲಕ್ಷಣಗಳು. ಇದು ಸಂಕೋಚ ಸ್ವಭಾವದ್ದು. ನಿಶಾಚರಿ. ಇದರ ಇತರ ಲಕ್ಷಣಗಳೆಲ್ಲ ಲೆಮರಿನಂತೆಯೆ.

ಅಯ್ ಅಯ್ ಎಂಬುದಕ್ಕೆ ಮ್ಯಾಲಗ್ಸೆ ಕಾಡುಪಾಪ ಎಂಬ ಇನ್ನೊಂದು ಹೆಸರಿದೆ. ಇದರ ವೈಜ್ಞಾನಿಕ ನಾಮ ಡಾಬೆಂಟೋನಿಯ ಮಡಗಾಸ್ಕರಿಯೆನ್ಸಿಸ್. ಇದೂ ನಿಶಾಚರಿಯೇ. ಬಿದಿರು ಮೆಳೆಗಳಲ್ಲಿ ವಾಸಿಸುತ್ತದೆ. ಕೀಟಗಳು, ಕಂಬಳಿ ಹುಳುಗಳು, ಹಕ್ಕಿಗಳ ಮೊಟ್ಟೆ, ಬಿದಿರಿನ ಎಳೆಯಕಾಂಡ ಮುಂತಾದವನ್ನು ತಿಂದು ಜೀವಿಸುತ್ತದೆ.

ಭಾರತದಲ್ಲಿ ಸಿಕ್ಕುವ ಕಾಡುಪಾಪಗಳು ಲೋರಿಸ್ ಟಾರ್ಡಿಗ್ರೇಡಸ್ ಎಂಬ ಪ್ರಭೇದಕ್ಕೆ ಸೇರಿವೆ. ದಕ್ಷಿಣ ಭಾರತ ಮತ್ತು ಸಿಂಹಳಗಳ ಕಾಡುಗಳಲ್ಲಿ ಸಾಮಾನ್ಯ. ಕರ್ಣಾಟಕದಲ್ಲಿ ಮಲೆನಾಡ ಕಾಡುಗಳಲ್ಲಿ ಹೇರಳವಾಗಿ ಕಾಣಬರುತ್ತವೆ. ಇವಕ್ಕೆ ಅಡವಿ ಮನುಷ್ಯ, ಬಿದಿರ ಮೇಗಣ ಚದುರೆ ಎಂಬ ಹೆಸರುಗಳೂ ಇವೆ. ಬಲು ಸಂಕೋಚದ ಸ್ವಭಾವದಿಂದಾಗಿ ಇವಕ್ಕೆ ಈ ಹೆಸರು ಬಂದಿರಬೇಕು. ಇವು ಕೂಡ ವೃಕ್ಷವಾಸಿಗಳು. ದೇಹದ ಉದ್ದ 175-275 ಮಿಮೀ ಮೇಲೆಲ್ಲ ಹಳದಿ ಮಿಶ್ರಿತ ಬೂದು ಅಥವಾ ಕಂದು ಬಣ್ಣದ ಉಣ್ಣೆಯಂಥ

ಕಾಡುಪಾಪ

ಮೃದುವಾದ ಕೂದಲಿದೆ. ಬಾಲ ಇಲ್ಲ. ಹೆಬ್ಬೆರಳು ಮನುಷ್ಯರಲ್ಲಿರುವಂತಿದೆ. ಇದರಿಂದ ರೆಂಬೆಗಳನ್ನು ಹಿಡಿಯಲು ಅನುಕೂಲ. ಕಣ್ಣು ಬಲು ದೊಡ್ಡವು; ಗುಂಡಗಿವೆ. ತಲೆಯ ಮೇಲೆ ಎರಡು ಪ್ರಧಾನವಾಗಿ ಕಾಣುವ ಕಿವಿಗಳಿವೆ.

ಇವೂ ನಿಶಾಚರಿಗಳೇ. ಹಗಲೆಲ್ಲ ಯಾವುದಾದರೊಂದು ಮರದ ಮೇಲೆ ನಿದ್ರಿಸುತ್ತ ಕಾಲ ಕಳೆಯುತ್ತವೆ. ನಿದ್ರಿಸುವಾಗ ತಲೆಯನ್ನು ಕಾಲುಗಳ ಮಧ್ಯೆ ತೂರಿಸಿ ಉಂಡೆಯಂತೆ ಮಲಗಿಬಿಡುತ್ತವೆ. ಇವುಗಳ ಓಡಾಟ ಬಲು ನಿಧಾನ. ಕೀಟಗಳು, ಹಲ್ಲಿಗಳು, ಮರಗಪ್ಪೆಗಳು, ಹಕ್ಕಿಗಳು ಇವುಗಳ ಆಹಾರ. ಸಾಕಿದ ಕಾಡುಪಾಪಗಳು ಹಾಲು, ಹಣ್ಣು ಸೇವಿಸುವುದೂ ಉಂಟು. ಹೊಸ ಆವರಣಗಳಲ್ಲಿ, ಪ್ರಖರವಾದ ಬಿಸಿಲಿನಲ್ಲಿ ಇವು ಬಹಳ ಎಚ್ಚರಿಕೆಯಿಂದ ನಿಧಾನವಾಗಿ ಓಡಾಡುತ್ತವಲ್ಲದೆ ತುಂಬ ಮುಕ್ಕಲು ಸ್ವಭಾವದ ಪ್ರಾಣಿಗಳಂತೆ ವರ್ತಿಸುತ್ತವೆ. ಆದರೆ ಮಸಕು ಬೆಳಕಿನಲ್ಲಿ ಮತ್ತು ತನ್ನ ಸ್ವಕ್ಷೇತ್ರದಲ್ಲಿ ಬಲು ಚುರುಕಾಗಿ ಓಡಾಡುವುದಂಟು. ಅಲ್ಲದೆ ಸಿಡುಕಿನ ಸ್ವಭಾವದವೆಂದೂ ಹೇಳುವುದಿದೆ.

ವರ್ಷಕ್ಕೆ ಒಂದು ಸೂಲು, ಸಾಮಾನ್ಯವಾಗಿ ಒಂದು ಅಪರೂಪಕ್ಕೆ ಎರಡು ಮರಿಗಳನ್ನು ಹೆರುತ್ತವೆ. ಮರಿ ಒಂದು ವರ್ಷ ವಯಸ್ಸಿನದಾಗುವವರೆಗೂ ತಾಯಿಯ ಪಾಲನೆಯಲ್ಲೇ ಬೆಳೆಯುತ್ತದೆ.

ಕಾಡುಪಾಪವನ್ನು ಹಾವಾಡಿಗರು ಸಾಕಿ ಮಾರುವುದೂ ಉಂಟು. ಇದರ ಕಣ್ಣುಗಳನ್ನು ನೇತ್ರ ಸಂಬಂಧವಾದ ರೋಗಗಳಿಗೆ ಔಷಧಿಯಾಗಿ ಬಳಸುವ ರೂಢಿ ಭಾರತದ ಕೆಲವು ಪ್ರದೇಶಗಳಲ್ಲಿದೆ. (ಎಚ್.ಬಿ.ಡಿ.)

**ಕಾಡುಬೆಕ್ಕು:** ಸ್ತನಿ ಗುಂಪಿನ ಕಾರ್ನಿವೋರದ ಫೆಲೀಡೆ ಕುಟುಂಬಕ್ಕೆ ಸೇರಿದ ಪ್ರಾಣಿ. ಇದರ ಕೋರೆಹಲ್ಲುಗಳು ಉದ್ದ ಮತ್ತು ಚೂಪಾಗಿವೆ. ಇವು ಕತ್ತರಿಯ ಹಾಗೆ ಕೆಲಸ ಮಾಡಿ ಮಾಂಸವನ್ನು ಕತ್ತರಿಸಲು ಸಹಾಯ ಮಾಡುತ್ತವೆ. ಅತಿ ಚೂಪಾದ ನಖಗಳಿವೆ. ಇವನ್ನು ಉಪಯೋಗಿಸದೇ ಇದ್ದಾಗ ಪಾದದೊಳಕ್ಕೆ ಮಡಚಿಕೊಂಡು ಮರೆಯಾಗಿಡುವ ಶಕ್ತಿ ಈ ಪ್ರಾಣಿಗೆ ಉಂಟು. ಕಾಡುಬೆಕ್ಕಿನ ಮೂಗು ಸದಾ ಒದ್ದೆಯಾಗಿರುತ್ತದೆ. ವಾಸನೆಯಿಂದಲೇ ಆಹಾರವನ್ನು ಗುರುತಿಸಲು ಈ ತೇವವಾಗಿರುವ ಮೂಗು ಸಹಾಯ ಮಾಡುತ್ತದೆ. ಕಿವಿಯಲ್ಲಿ ಬಹಳ ಕೂದಲುಗಳಿವೆ. ಈ ಕೂದಲುಗಳ ಗ್ರಹಣ ಶಕ್ತಿ ಉತ್ತಮ ಮಟ್ಟವಾಗಿದ್ದು, ಕಣ್ಣಿಗೆ ಕಾಣದಿರುವಂಥ ವಸ್ತುಗಳ ಚಲನವಲನಗಳನ್ನು ಗುರುತಿಸಲು ಸಹಾಯಕವಾಗಿವೆ. ಕಾಡುಬೆಕ್ಕು ಬೇಟೆಯಾಡುವುದು ಸಾಮಾನ್ಯವಾಗಿ ರಾತ್ರಿಯಲ್ಲಿ. ಕತ್ತಲಿನಲ್ಲಿ

ಇದರ ಕಣ್ಣುಗಳು ಹೊಳೆಯುತ್ತಿರುತ್ತವೆ. ಗ್ವಾನಿನ್ ಎಂಬ ರಾಸಾಯನಿಕ ವಸ್ತು ಕಣ್ಣುಗಳಲ್ಲಿರುವುದರಿಂದ ಅದರ ಮೇಲೆ ಬಿದ್ದ ಬೆಳಕು ಪ್ರತಿಫಲಿತವಾಗುತ್ತದೆ. ಕತ್ತಲಲ್ಲಿ ತನ್ನ ಆಹಾರವನ್ನು ಹುಡುಕಲು ಬೆಕ್ಕುಗಳಿಗೆ ಈ ಎಲ್ಲ ಗುಣಗಳೂ ಹೊಂದಾಣಿಕೆಯನ್ನು ಒದಗಿಸಿಕೊಟ್ಟಿವೆ.



ಕಾಡು ಬೆಕ್ಕು

ಫೆಲಿಸ್ ಸಿಲ್ವೆಸ್ಟ್ರಿಸ್ ಯೂರೋಪಿನಲ್ಲಿರುವ ಕಾಡು ಬೆಕ್ಕು. ಇವು ಅತಿ ದಟ್ಟವಾದ ಕಾಡು ಅಥವಾ ಬಂಡೆಗಳಿರುವ ಸ್ಥಳಗಳಲ್ಲಿ ವಾಸಿಸುತ್ತವೆ. ರಾತ್ರಿಯಲ್ಲಿ ನದಿಗಳ ದಂಡೆ ಮತ್ತು ಕೊಳಗಳಿಗೆ ನುಗ್ಗಿ ಅಲ್ಲಿರುವ ಮೊಲ, ಸಣ್ಣ ಪಕ್ಷಿಗಳನ್ನು ಕೆಲವು ವೇಳೆ ಮೀನುಗಳನ್ನು ಬೇಟೆಯಾಡುತ್ತವೆ. ಬೇರೆ ಕಾಡುಬೆಕ್ಕುಗಳನ್ನು ಸಾಮಾನ್ಯವಾಗಿ ಸಾಕು ಪ್ರಾಣಿಗಳನ್ನಾಗಿ ಮಾಡಿಕೊಳ್ಳಬಹುದು. ಆದರೆ ಫೆಲಿಸ್ ಸಿಲ್ವೆಸ್ಟ್ರಿಸ್ ಹೀಗೆ ಪಳಗದು.

ಫೆಲಿಸ್ ಚೌಸ್ ಆಫ್ರಿಕ, ಉತ್ತರ ಅಮೆರಿಕ ಮತ್ತು ಭಾರತ ದೇಶಗಳಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಇದನ್ನು ಆಫ್ರಿಕದ ಕಾಡುಬೆಕ್ಕು ಎನ್ನುತ್ತಾರೆ. ಇದರ ಬಣ್ಣ ಬೂದು. ದೇಹದ ಹಿಂಭಾಗದಲ್ಲಿ ದಟ್ಟ ಮತ್ತು ಉದ್ದ ಕೂದಲಿದೆ. ವೇಗವಾಗಿ ಚಲಿಸಲು ಕೂದಲಿನಿಂದ ಸಹಾಯ ಉಂಟು. ಈ ಬೆಕ್ಕಿನ ಮುಖ್ಯ ಆಹಾರ ಸಣ್ಣ ಸ್ತನಿಗಳು ಮತ್ತು ಪಕ್ಷಿಗಳು.

ಫೆಲಿಸ್ ಲೈಬಿಕಾ ಆಫ್ರಿಕಕ್ಕೆ ಮೀಸಲಾಗಿರುವ ಕಾಡುಬೆಕ್ಕು. ಇದನ್ನು ಕಫಿರ ಬೆಕ್ಕು ಎಂದೂ ಕರೆಯುತ್ತಾರೆ. ಕಫಿರ ಬೆಕ್ಕುಗಳು ಪೊದೆಗಳ ಕೆಳಗೆ, ದಟ್ಟವಾಗಿ ಬೆಳೆದಿರುವ ಹುಲ್ಲಿನ ಮಧ್ಯೆ ವಾಸಿಸುತ್ತದೆ. ಇವು ಬಹಳ ಶಕ್ತಿಯುತವಾಗಿವೆ. ಕಾಡು ನಾಯಿಗಳಿಂದ ಸ್ವರಕ್ಷಣೆ ಮಾಡುಕೊಳ್ಳಬಲ್ಲುವು.

ಫೆಲಿಸ್ ನೈಗ್ರಿಪೆಸ್ ಕಾಡುಬೆಕ್ಕುಗಳಲ್ಲೆಲ್ಲ ಅತಿ ಚಿಕ್ಕದು. ಇದನ್ನು ಸೆಬಾಲಾ ಬೆಕ್ಕು ಅಥವಾ ಕಪ್ಪುಪಾದದ ಬೆಕ್ಕು ಎಂದೂ ಕರೆಯುತ್ತಾರೆ. ದಕ್ಷಿಣ ಆಫ್ರಿಕದ ಕಲಹರಿ ಮರಳುಗಾಡಿನಲ್ಲಿ ಇದು ವಾಸಿಸುತ್ತದೆ. ಇದರ ಉದ್ದ ಕೇವಲ ೫೦ ಸೆಂಮೀ ಹಗಲನ್ನು ಯಾವುದಾದರೊಂದು ಬಿಲದಲ್ಲಿ ಮಲಗಿ ಕಳೆಯುತ್ತದೆ. ಈ ಬೆಕ್ಕು ಸಾಕುಬೆಕ್ಕಿನ ಜೊತೆ ಸೇರಿ ಸಂತಾನೋತ್ಪತ್ತಿ ಮಾಡಬಲ್ಲದು. ಎಲ್ಲ ಬೆಕ್ಕುಗಳಂತೆಯೇ ಇದು ಕೂಡ ಒಂದು ಸಾರಿಗೆ ಎರಡು ಅಥವಾ ಮೂರು ಮರಿಗಳನ್ನು ಈಯುತ್ತದೆ.

ಕೆನಡದ ಕಾಡುಬೆಕ್ಕಾದ ಫೆಲಿಸ್ ಕೆನೆಡೆನ್ಸಿಸ್ ನಿತ್ಯಹರಿದ್ವರ್ಣದ ಕಾಡುಗಳಲ್ಲಿ ವಾಸಿಸುತ್ತದೆ. ಇದರ ಕಿವಿಗಳಲ್ಲಿ ಒತ್ತಾಗಿ ಬೆಳೆದಿರುವ ಕೂದಲುಗಳಿವೆ. ಕಿವಿಯ ಅಂಚು ಕಪ್ಪು. ಬಾಲ ಅತಿ ಚಿಕ್ಕದು. ಹಿಂದಿನ ಕಾಲುಗಳು ಅತಿ ಉದ್ದ. ಕೆನಡದ ಈ ಬೆಕ್ಕು ಕೊಲರೊಡೊ ಹಾಗು ನ್ಯೂಯಾರ್ಕುಗಳಲ್ಲಿಯೂ ವಾಸಿಸುತ್ತದೆ. ಇದರ ಉಣ್ಣೆಗೆ ಬಹಳ ಬೆಲೆ. ಆದ್ದರಿಂದ ಇದನ್ನು ಬಹಳವಾಗಿ ಬೇಟೆಯಾಡುತ್ತಾರೆ. ಇದರ ದೃಷ್ಟಿ ಅತಿ ತೀಕ್ಷ್ಣ. ರಾತ್ರಿಯಲ್ಲಿ ಇದು ಬಿಳಿಯ ಮೊಲಗಳನ್ನು ಬೇಟೆಯಾಡುತ್ತದೆ. ಬಿಳಿಯ ಮೊಲಗಳು ಸಿಗದಿದ್ದರೆ ಇದು ಹಸಿವಿನಿಂದ ಸಾಯುತ್ತದೆ. ಸಾಮಾನ್ಯವಾಗಿ ಬೆಕ್ಕುಗಳು ನೀರಿನಿಂದ ದೂರವಿರುತ್ತವೆ. ಆದರೆ ಈ ಕೆನಡದ ಬೆಕ್ಕು ನಾಯಿಗಳಂತೆ ಈಜಬಲ್ಲುದು. ಇವು ಸಂಭೋಗಕ್ರಿಯೆಯಾದ ಎರಡು ತಿಂಗಳಿಗೆ ಮೂರು ಅಥವಾ ನಾಲ್ಕು ಮರಿಗಳಿಗೆ ಜನ್ಮ ಕೊಡುತ್ತವೆ. ಈ ಮರಿಗಳು ಹುಟ್ಟುವಾಗ ಕುರುಡಾಗಿದ್ದು, ಹತ್ತು ದಿನಗಳ ಅನಂತರ ಕಣ್ಣನ್ನು ತೆರೆಯುತ್ತವೆ. ತಾಯಿ ಎರಡು ತಿಂಗಳವರೆಗೆ ಮರಿಗಳಿಗೆ ಹಾಲುಣಿಸುತ್ತದೆ. ಅನಂತರ ಮರಿಗಳನ್ನು ತನ್ನ ಸಂಗಡ ಬೇಟೆಯಾಡಲು ಕರೆದೊಯ್ಯುತ್ತದೆ. ಮುಂದಿನ ಬೆದೆಯ ಕಾಲ ಬರುವವರೆಗೂ ಮರಿಗಳನ್ನು ಒಟ್ಟಿಗೆ ಇಟ್ಟುಕೊಂಡಿದ್ದು ಅನಂತರ ಅವನ್ನು ಓಡಿಸುತ್ತದೆ.

(ಎಚ್.ಎ.ಆರ್)

**ಕಾಮಳ್ಳಿ:** ಪಕ್ಷಿವರ್ಗದ ಪ್ಯಾಸರಿಫಾರ್ಮಿಸ್ ಗಣದ ಸ್ಟರ್ನಿಡೆ ಕುಟುಂಬಕ್ಕೆ ಸೇರಿದ ಸುಂದರವಾದ ಹಕ್ಕಿ. ಇದರ ವೈಜ್ಞಾನಿಕ ನಾಮ ಗ್ರಾಕ್ಯುಲ ರಿಲಿಜಿಯೋಸ (ಗ್ರಾಕಲ್ ಅಥವಾ ಹಿಲ್ ಮೈನ). ದೇಹದ ಬಣ್ಣ ಮಿರುಗುವ ಅಚ್ಚಕಪ್ಪು. ರೆಕ್ಕೆಗಳ ಮೇಲೆ ಎದ್ದುಕಾಣುವ ಬಿಳಿಯ ಮಚ್ಚೆಗಳಿವೆ. ಕೊಕ್ಕು ಮತ್ತು ಕಾಲುಗಳು ಹಳದಿ ಬಣ್ಣದುವು. ತಲೆಯ ಮೇಲೆ ಕಿತ್ತಳೆ–ಹಳದಿ ಬಣ್ಣದ ಬೆತ್ತಲೆಯಾದ ಮಾಂಸಲ ಭಾಗವಿದೆ (ವ್ಯಾಟಲ್). ಗಂಡು, ಹೆಣ್ಣು ಹಕ್ಕಿಗಳೆರಡೂ ಒಂದೇ ರೀತಿ ಇವೆ. ಸಾಮಾನ್ಯವಾಗಿ ನಿತ್ಯ ಹರಿದ್ವರ್ಣ ಕಾಡುಗಳು ಮತ್ತು ಬೆಟ್ಟಗಳಲ್ಲಿ ವಾಸಿಸುತ್ತವೆ. 300–1200 ಮೀ ಎತ್ತರದ ಗುಡ್ಡಗಾಡುಗಳಲ್ಲಿ ಇವುಗಳ ವ್ಯಾಪ್ತಿ ಹೆಚ್ಚು.

ಕಾಮಳ್ಳಿಗಳು ವೃಕ್ಷವಾಸಿಗಳು. ಗಂಡು, ಹೆಣ್ಣು ಹಕ್ಕಿಗಳು ಜೊತೆಯಾಗಿಯೊ ಇಲ್ಲವೆ ಸಣ್ಣಸಣ್ಣ ಗುಂಪುಗಳಲ್ಲಿಯೊ ಇರುತ್ತವೆ. ಇವುಗಳ ಅಹಾರ ಅತ್ತಿ, ಅಂಜೂರ ಮುಂತಾದ ಹಣ್ಣುಗಳು ಮತ್ತು ಹೂವಿನ ಮಕರಂದ. ಬಲು ಗಲಾಟೆ ಸ್ವಭಾವದವಾದ ಇವು ಕೀರಲು ಧ್ವನಿಯಿಂದ ಯಾವಾಗಲೂ ಕೂಗುತ್ತಿರುತ್ತವೆ. ಬಹಳ ಚೆನ್ನಾಗಿ ಇತರ ಹಕ್ಕಿಗಳ ಕೂಗನ್ನಿವು ಅನುಕರಿಸಬಲ್ಲುವು. ಅಲ್ಲದೆ ಇವಕ್ಕೆ ಗಿಳಿಗಳಂತೆ ಮಾತನಾಡುವುದನ್ನೂ ಕಲಿಸಬಹುದು. ಇದರಿಂದ ಪಂಜರದ ಹಕ್ಕಿಗಳಾಗಿ ಸಾಕುವುದೂ ಉಂಟು.

ಕಾಮಳ್ಳಿ

ಮಾರ್ಚ್–ಅಕ್ಟೋಬರ್ ತಿಂಗಳುಗಳ ಅವಧಿಯಲ್ಲಿ ಇವು ಗೂಡು ಕಟ್ಟುತ್ತವೆ. ಎತ್ತರವಾದ ಮರಗಳ ಪೊಟರೆಗಳಲ್ಲಿ ಹುಲ್ಲು, ಎಲೆ, ಗರಿಗಳನ್ನು ಜೋಡಿಸಿ ಗೂಡು ಕಟ್ಟುವುದು ವಾಡಿಕೆ. ಮೊಟ್ಟೆಗಳ ಸಂಖ್ಯೆ 2–3; ಬಣ್ಣ ಗಾಢನೀಲಿ. ಅಲ್ಲಲ್ಲಿ ಕೆಂಪು ಮಿಶ್ರಿತ ಕಂದು ಬಣ್ಣದ, ಚಾಕೊಲೇಟ್ ಬಣ್ಣದ ಮಚ್ಚೆಗಳಿವೆ. ಹೆಣ್ಣು ಮಾತ್ರ ಮೊಟ್ಟೆಗಳಿಗೆ ಕಾವು ಕೊಡುತ್ತದೆ. ಮರಿಗಳಿಗೆ ಆಹಾರವನ್ನೊದಗಿಸುವ ಕೆಲಸ ಗಂಡು, ಹೆಣ್ಣುಗಳೆರಡದ್ದೂ ಆಗಿದೆ.

ಕಾಮಳ್ಳಿಗಳಲ್ಲಿ ಸುಮಾರು 5 ಬಣಗಳಿವೆ: ಹಿಮಾಲಯದ ಬುಡದ ಬೆಟ್ಟಗಳ ಶ್ರೇಣಿಯಲ್ಲಿ ಆಲ್ಮೋರದಿಂದ ಅಸ್ಸಾಮಿನವರೆಗೆ ಒಂದು ಬಣ ವ್ಯಾಪಿಸಿದೆ. ಇನ್ನೊಂದು ಒರಿಸ್ಸ, ಮಧ್ಯಪ್ರದೇಶದ ಆಗ್ನೇಯ ಭಾಗದಲ್ಲಿ ಕಾಣಬರುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಮತ್ತೊಂದು ಬಣ ಕಾಣಸಿಗುತ್ತದೆ. ಅಂಡಮಾನ್ ದ್ವೀಪಗಳು, ಸಿಂಹಳ ಮತ್ತು ದಕ್ಷಿಣ ಬರ್ಮಗಳಲ್ಲಿ ಒಂದು ಬಗೆಯ ಕಾಮಳ್ಳಿ ವಾಸಿಸುತ್ತದೆ. (ವಿ.ಕೆ.ವಿ)

**ಕಾಮಾಲೆ:** ರಕ್ತದಲ್ಲಿ ಮಿತಿಮೀರಿದ ಬಿಲಿರುಬಿನ್ ಇದ್ದಾಗ ಉಂಟಾಗುವ ಒಂದು ರೋಗ ಲಕ್ಷಣ (ಜಾಂಡೀಸ್). ಕಣ್ಣು ಮತ್ತು ಚರ್ಮ ಹಳದಿ ಬಣ್ಣತಳೆಯುವುದರಿಂದ ಇದು ಸ್ಪಷ್ಟವಾಗಿ ಪ್ರಕಟವಾಗುವುದು. ಅನೇಕ ವೇಳೆ ರೋಗಿಗಿಂತ ಮೊದಲು ಆತನನ್ನು ನೋಡಿದ ಇತರರು ಈ ರೋಗವನ್ನು ಗುರುತಿಸುವುದುಂಟು. ಕೆಂಪು ರಕ್ತ ಕಣಗಳಲ್ಲಿನ ಹೀಮೋಗ್ಲೋಬಿನ್ ಲಯನದಿಂದ ಉಂಟಾಗುವ ಹಳದಿಯ ವರ್ಣದ್ರವ್ಯವಾದ ಬಿಲಿರುಬಿನ್ ಪಿತ್ತಜನಕಾಂಗದಿಂದ ಒಂದು ನಾಳದ ಮೂಲಕ ಹೊರಕ್ಕೆ ವಿಸರ್ಜಿತವಾಗುವುದು. ಮುಂದೆ ಹೇಳಿರುವ ಮೂರು ಕಾರಣಗಳಿಗೆ ಅನುಗುಣವಾಗಿ ಈ ರೋಗವನ್ನು ವರ್ಗೀಕರಿಸಿದೆ: 1 ಹೀಮೋಗ್ಲೋಬಿನ್ನಿನ ಅತೀವ ಆರೋಗ್ಯಹೀನತೆಯಿಂದ ಬರುವ ಹೀಮೋಲಿಟಿಕ್ ಕಾಮಾಲೆ, 2 ಪಿತ್ತಜನಕಾಂಗಗಳಿಗೆ ಅಡಚಣೆಯುಂಟಾದಾಗ ಬರುವುದು. ಹೆಪೆಟಿಕ್ ಕಾಮಾಲೆ, 3 ಪಿತ್ತರಸನಾಳಕ್ಕೆ ತಡೆಯುಂಟಾಗಿ, ಹಿಂದಿನಿಂದ ಒತ್ತಡವಾಗಿ ರಕ್ತದಲ್ಲಿ ಹೆಚ್ಚು ಹೆಚ್ಚಾಗಿ ಬಿಲಿರುಬಿನ್ನಿನ ಸಂಗ್ರಹಣೆ ಆದಾಗ ಬರುವುದು ತಡೆ (ಅಬ್‌ಸ್ಟ್ರಕ್ಟಿವ್) ಕಾಮಾಲೆ.

ಮೊದಲನೆಯ ಬಗೆಯಲ್ಲಿ ರೋಗಿಯ ರಕ್ತದಲ್ಲಿ ಬಿಲಿರುಬಿನ್ ಪ್ರಮಾಣ ಅಧಿಕವಾಗುವುದು. ಎರಡನೆಯ ಬಗೆಯದಾದ ಹೆಪೆಟಿಕ್ ಕಾಮಾಲೆ ಸರ್ವೇ ಸಾಮಾನ್ಯ.

ಇದು ಸೋಂಕು ರೋಗ. ಒಂದು ಬಗೆಯ ಸೂಕ್ಷ್ಮ ವಿಷಕೀಟಾಣುಗಳಿಂದ ಇದು ಹರಡುತ್ತದೆ. ತಡೆ ಕಾಮಾಲೆಯಲ್ಲಿ ಹೆಸರೇ ಸೂಚಿಸುವಂತೆ ಪಿತ್ತರಸದ ವಿಸರ್ಜನೆಗೆ ತಡೆಯುಂಟಾಗುವುದು. ಆದ್ದರಿಂದ ಪಿತ್ತರಸವೂ ಅದರೊಡನೆ ಸೇರಿರುವ ಮತ್ತಿತರ ಪಿತ್ತಜನಕಾಂಗದ ರಸಗಳೂ ರಕ್ತದಲ್ಲಿಯೇ ಉಳಿಯುತ್ತವೆ.

ರೋಗದ ಚಿಹ್ನೆಗಳು ಮತ್ತು ವೇದನೆಗಳು : ರೋಗಿಯ ಚರ್ಮ, ಕಣ್ಣಿನ ಆರ್ದ್ರಚರ್ಮ, ಬೆವರು ಮತ್ತು ಮೂತ್ರ ಹಳದಿ ಬಣ್ಣಕ್ಕೆ ತಿರುಗುತ್ತವೆ. ಪಿತ್ತರಸದ ಲವಣಗಳು ಸಹ ರಕ್ತದಲ್ಲಿ ಸಂಗ್ರಹಿತವಾಗುತ್ತ ಹೋದಲ್ಲಿ ರೋಗಿಗೆ ಮೈ ಇಡೀ ತುರಿಕೆಯ ಅನುಭವವಾಗುವುದು. ರೋಗ ಲಕ್ಷಣ ಪಿತ್ತಜನಕಾಂಗಕ್ಕೆ ಸಂಬಂಧಪಟ್ಟಲ್ಲಿ ಕೆ ಜೀವಾತುವಿನ ಅಭಾವದಿಂದ, ಮೂಗು ಮತ್ತು ವಸಡುಗಳಿಂದ ರಕ್ತಸ್ರಾವವಾಗುವುದು. (ಕೆ.ಎಸ್.ಎಸ್.ಎಚ್.)

**ಕಾಮಾಲೆ ಹಕ್ಕಿ:** ಪಕ್ಷಿವರ್ಗದ ಪ್ಯಾಸೆರಿಫಾರ್ಮಿಸ್ ಗಣದ ಓರಿಯೋಲಿಡೆ ಕುಟುಂಬಕ್ಕೆ ಸೇರಿದ ಚೆಲುವಾದ ಹಕ್ಕಿ (ಗೋಲ್ಡನ್ ಓರಿಯೋಲ್). ಶಾಸ್ತ್ರೀಯ ನಾಮ ಓರಿಯೋಲಸ್. ಹೊಳೆಯುವ ಹೊನ್ನಿನ ಮೈಬಣ್ಣ, ಕಪ್ಪನೆಯ ಬಾಲ ಹಾಗೂ ರೆಕ್ಕೆಗಳು ಮತ್ತು ಕಣ್ಣಿನ ಆಚೀಚೆ ಇರುವ ಕಪ್ಪುಬಣ್ಣದ ಪಟ್ಟಿ–ಇವುಗಳಿಂದಾಗಿ ಕಾಮಾಲೆ ಹಕ್ಕಿ ಬಲು ಸುಂದರವಾಗಿ ಕಾಣುತ್ತದೆ. ಹೆಣ್ಣು ಹಕ್ಕಿಯ ಬಣ್ಣ ಹಸಿರುಮಿಶ್ರಿತ; ನೋಡಲು ಗಂಡಿನಷ್ಟು ಚೆಲುವಾಗಿಲ್ಲ. ಕಾಮಾಲೆ ಹಕ್ಕಿಯ ವಾಸ ತೋಟಗಳಲ್ಲಿ ಮತ್ತು ಕಾಡುಗಳಲ್ಲಿ. ಇದರ ಆಹಾರ ಮುಖ್ಯವಾಗಿ ಕೀಟಗಳು ಮತ್ತು ವಿವಿಧ ಬಗೆಯ ಹಣ್ಣುಗಳು. ಹೂವಿನ ಮಕರಂದವನ್ನೂ ಕುಡಿಯುತ್ತದೆ. ಸಾಮಾನ್ಯವಾಗಿ ಒಂಟಿಯಾಗಿಯೋ ಜೋಡಿಯಾಗಿಯೋ ಇರುವುದಾದರೂ ಆಸ್ಟ್ರೇಲಿಯದಲ್ಲಿನ ಕೆಲವು ಬಗೆಯವು ದೊಡ್ಡ ಗುಂಪುಗಳಲ್ಲಿರುವುದುಂಟು. ಪುಕ್ಕಲು ಸ್ವಭಾವದ್ದಾದರೂ ಸದಾ ಚಟುವಟಿಕೆಯಿಂದಿರುವ ಹಕ್ಕಿಯಿದು. ಕಾಮಾಲೆ ಹಕ್ಕಿಗೆ ಮಧುರವಾದ ಕೊಳಲುಲಿಯಂಥ ಸ್ವರ ಇದೆ. ಬೆಳಗ್ಗೆ ಮತ್ತು ಸಂಜೆ ಹಾಡುತ್ತ ಕಾಲಕಳೆಯುತ್ತದೆ.

ಏಪ್ರಿಲ್–ಮೇ ತಿಂಗಳ ಅವಧಿಯಲ್ಲಿ ಇವು ಗೂಡುಕಟ್ಟುತ್ತವೆ. ಹುಲ್ಲು, ನಾರು ಮತ್ತು ಜೇಡನ ಬಲೆಯ ಎಳೆಗಳನ್ನುಪಯೋಗಿಸಿ ಬಟ್ಟಲಿನಾಕಾರದ ಗೂಡುಗಳನ್ನು ಕಟ್ಟಿ ಮರದ ಕೊಂಬೆಗಳಿಗೆ ಜೋಲಿಯಂತೆ ತೂಗು ಹಾಕುವುದು ಈ ಹಕ್ಕಿಯ ಸೋಜಿಗದ ಕ್ರಮ. ಮೊಟ್ಟೆಗಳ ಸಂಖ್ಯೆ 2-3. ಗಂಡುಹೆಣ್ಣುಗಳೆರಡೂ ಕಾವುಕೊಟ್ಟು ಮರಿಮಾಡುತ್ತವಲ್ಲದೆ, ಮರಿಗಳ ಪಾಲನೆಯನ್ನೂ ಮಾಡುತ್ತವೆ.



ಕಾಮಾಲೆ ಹಕ್ಕಿ

ಕಾಮಾಲೆ ಹಕ್ಕಿ ಭಾರತದ ಮೈದಾನ ಪ್ರದೇಶಗಳ ಕಾಡುಗಳು, ಹಿಮಾಲಯದ ೧೫೦೦ ಮೀ ಎತ್ತರದ ಪ್ರದೇಶಗಳು, ಸಿಂಹಳ, ಏಷ್ಯಾದ ಮಧ್ಯಭಾಗ, ಫಿಲಿಪೈನ್ಸ್, ಇಂಡೋನೇಷಿಯ, ಯೂರೋಪುಗಳಲ್ಲೆಲ್ಲ ವ್ಯಾಪಿಸಿದೆ. ವಲಸೆಗಾರ ಹಕ್ಕಿಯಾದ ಇದು ಬೇಸಿಗೆಯಲ್ಲಿ ರಷ್ಯದ ಇರ್ಕುತ್ಸ್ಕವರೆಗೂ ಚಳಿಗಾಲದಲ್ಲಿ ದಕ್ಷಿಣ ಆಫ್ರಿಕದವರೆಗೂ ವಲಸೆ ಹೋಗುತ್ತದೆ. ಭಾರತದಲ್ಲಿ ಓರಿಯೋಲಸ್ ಓರಿಯೋಲಸ್ ಕುಂದು ಎಂಬ ಒಂದು ಬಗೆಯಿದೆ. ಇದು ಬೇಸಿಗೆಯಲ್ಲಿ ಕಾಶ್ಮೀರದವರೆಗೂ ಪ್ರಯಾಣಮಾಡುತ್ತದೆ. (ವಿ.ಕೆ.ವಿ)

**ಕಾಯಕಪುನರ್‌ಸಂಯೋಜನೆ:** ಮೈಟಾಟಿಕ್ ಕೋಶ ವಿಭಜನೆಯ ಸಂದರ್ಭದಲ್ಲಿ ವರ್ಣತಂತುಗಳ ಅಡ್ಡಹಾಯಿಕೆಗೆ ಇನ್ನೊಂದು ಹೆಸರು(ಸೊಮಾಟಿಕ್ ರಿ ಕಾಂಬಿನೇಶನ್). ಕುರ್ಟ್ ಸ್ಟರ್ನ್ ಎಂಬಾತ 1936 ರಲ್ಲಿ ಈ ಕ್ರಿಯೆಯನ್ನು ಮೊದಲ ಬಾರಿಗೆ ಡ್ರೊಸೋಫಿಲಾ ನೊಣಗಳಲ್ಲಿ ದರ್ಶಿಸಿದ. ಮೈಟಾಟಿಕ್ ಅಡ್ಡಹಾಯಿಕೆ ಎಂದೂ ಹೆಸರಿದೆ. ಮೈಟಾಟಿಕ್ ಅಡ್ಡಹಾಯಿಕೆಯು ಮಿಯಾಟಿಕ್ ಅಡ್ಡಹಾಯಿಕೆಗಿಂತ ಸಾವಿರದಲ್ಲಿ ಒಂದು ಪಾಲು ಅಪರೂಪ. ಅಕಸ್ಮಾತ್ ಅಡ್ಡಹಾಯಿಕೆಯಾದರೂ, ಇದು ಇಡೀ ವರ್ಣತಂತುವಿನಲ್ಲಿ ಎರಡು ಅಡ್ಡಹಾಯಿಕೆಗಿಂತ ಹೆಚ್ಚಾಗಿರುವುದಿಲ್ಲ. ಈ ಅಡ್ಡಹಾಯಿಕೆಗಳು ವರ್ಣತಂತುಗಳು ನಾಲ್ಕು ತಂತುಗಳ ಹಂತದಲ್ಲಿದ್ದಾಗ ಆಗುತ್ತವೆ. ಈ ಕ್ರಿಯೆಯನ್ನು ಕ್ಷ‍ಕಿರಣಗಳು, ಡಿಎನ್‌ಎ ಸಂಶ್ಲೇಷಣೆಯನ್ನು ತಡೆಯುವ ಹಾಗೂ ವಿಕೃತಿಕಾರಕ ರಾಸಾಯನಿಕಗಳ ಸಹಾಯದಿಂದ ಹೆಚ್ಚಿಸಬಹುದು. (ಎನ್.ಬಿ.ಕೆ)

**ಕಾರರ್, ಪಾಲ್ (1889–1971):** ರಷ್ಯದಲ್ಲಿ ಜನಿಸಿದ (ಏಪ್ರಿಲ್ 21, 1889) ಸ್ವಿಸ್ ಜೀವರಸಾಯನ ವಿಜ್ಞಾನಿ. ನೊಬೆಲ್ ಪ್ರಶಸ್ತಿ ವಿಜೇತ (1937). ಪ್ರಖ್ಯಾತ ರಸಾಯನ ವಿಜ್ಞಾನಿ ಆಲ್ಫ್ರೆಡ್ ವೆರ್ನರನ ಶಿಷ್ಯವಾಗಿ ಜ್ಯೂರಿಚ್ ವಿಶ್ವವಿದ್ಯಾಲಯದಲ್ಲಿ ಡಾಕ್ಟೊರೇಟ್ ಪದವಿಯನ್ನು ಪಡೆದ (1911). ಮುಂದೆ ಪಾಲ್ ಎರ್ಲಿಕ್ (ನೋಡಿ) ಜೊತೆ ಕೆಲಸ ಮಾಡಿ 1919ರಲ್ಲಿ ಜ್ಯೂರಿಚಿಗೆ ಮರಳಿದ. ಅಲ್ಲಿ ವೆರ್ನರನ ಮರಣದಿಂದ ತೆರವಾಗಿದ್ದ ಸ್ಥಾನದಲ್ಲಿ ನೇಮಕಗೊಂಡ.

ಈತನ ಪ್ರಧಾನ ಸಂಶೋಧನ ಕಾರ್ಯ ಸಸ್ಯಗಳಲ್ಲಿನ ವರ್ಣದ್ರವ್ಯಗಳನ್ನು ಕುರಿತದ್ದು. ಅದರಲ್ಲಿಯೂ ಹಳದಿವರ್ಣದ ಕ್ಯಾರೋಟಿನಾಯ್ಡುಗಳನ್ನು ಕುರಿತದ್ದು. ಇವು ಕೆಂಪು ಕ್ಯಾರೆಟ್ ಗೆಡ್ಡೆಗಳಲ್ಲಿನ ವರ್ಣದ್ರವ್ಯಗಳಿಗೆ ಸಂಬಂಧಪಟ್ಟಿವೆ. ಈ ವರ್ಣದ್ರವ್ಯಗಳ ರಚನೆಯ ರಾಸಾಯನಿಕ ಸೂತ್ರಗಳನ್ನು ಕಾರರ್ ವಿಶದಪಡಿಸಿದುದಲ್ಲದೆ ಇವುಗಳಲ್ಲಿ ಕೆಲವು ವರ್ಣದ್ರವ್ಯಗಳು ಪ್ರಾಣಿಗಳ ಅಂಗಗಳಲ್ಲಿ ಎ–ಜೀವಸತ್ತ್ವವಾಗಿ ಮಾರ್ಪಾಡು ಹೊಂದುತ್ತವೆ ಎಂದು ಸಹ ತೋರಿಸಿಕೊಟ್ಟ. ಈ ಸಂಶೋಧನೆಯಿಂದಾಗಿ ಎ–ಜೀವಸತ್ತ್ವದ ಉಪಗಾಮಿಯಾದ ಬೀಟ ಕ್ಯಾರೋಟಿನ್ ಎಂಬ ರಾಸಾಯನಿಕ ವಸ್ತುವಿನ ರಾಸಾಯನಿಕ ಸೂತ್ರ ಸ್ಥಿರಪಟ್ಟಿತು. ಹೀಗೆ ಮೊಟ್ಟಮೊದಲಿಗೆ ಒಂದು ಜೀವಸತ್ತ್ವದ ಸೂತ್ರವನ್ನು ಆವಿಷ್ಕರಿಸಿದ ಕೀರ್ತಿ ಕಾರರನದು.

ಮುಂದೆ ಈತ ಸಂಶೋಧನೆಯನ್ನು ಜೀವಸತ್ತ್ವ ಬಿ$_2$, ಈ, ಕೆ, ಸಿ ಕ್ಷೇತ್ರಗಳಿಗೆ ವಿಸ್ತರಿಸಿ ಅವುಗಳ ರಾಸಾಯನಿಕ ಸೂತ್ರಗಳನ್ನು ಸಹ ಕಂಡುಹಿಡಿದ. ಮೇಲ್ಕಂಡ ವಿಷಯಗಳ ಬಗ್ಗೆ ಸಾವಿರಕ್ಕೂ ಮಿಗಿಲಾಗಿ ಸಂಶೋಧನ ಪತ್ರಗಳನ್ನು ಕಾರರ್ ಪ್ರಕಟಿಸಿದ್ದಾನೆ. ಈತನ ಪ್ರಖ್ಯಾತ ಗ್ರಂಥವಾದ ಲೆಹರ್ ಬುಕ್ ಡೆರ್ ಆರ್ಗಾನಿಷೆ ಕೆಮಿಷೆನ್ (1930) ಎಂಬುದು ವಿಶ್ವದ ಪ್ರಮುಖ ಭಾಷೆಗಳಿಗೆ ತುರ್ಜುಮೆಗೊಂಡಿದೆ. ಜೂನ್ 18, 1971ರಂದು ನಿಧನ ಹೊಂದಿದ. (ಸಿ.ಎ.ಎಂ)

**ಕಾರಲು ರೋಗ:** ಪ್ಲಾಟಿಹೆಲ್ಮಿಂತಿಸ್ (ಚಪ್ಪಟೆಹುಳುಗಳು) ವಂಶದ ಟ್ರೆಮಟೋಡ ವರ್ಗಕ್ಕೆ ಸೇರಿದ ಫ್ಯಾಸಿಯೋಲ ಹೆಪ್ಯಾಟಿಕ ಮತ್ತು ಫ್ಯಾಸಿಯೋಲ ಜೈಗಾಂಟಿಕ ಎಂಬ ಎರಡು ಪರಾವಲಂಬಿ ಜೀವಿಗಳಿಂದ ಕುರಿ, ದನ ಮುಂತಾದ ಸಾಕುಪ್ರಾಣಿಗಳಲ್ಲಿ ಉಂಟಾಗುವ ರೋಗ (ಲಿವರ್ ರಾಟ್). ಮೊಲ, ಹಂದಿ, ಕುದುರೆ, ಜಿಂಕೆ ಮುಂತಾದ ಪ್ರಾಣಿಗಳಿಗೂ ಈ ರೋಗ ಬರುವುದಲ್ಲದೆ ರೋಗಪೀಡಿತ ದನದ ಮತ್ತು ಕುರಿಯ ಮಾಂಸ ತಿಂದ ಮನುಷ್ಯರಲ್ಲೂ ಇದು ಕಾಣಿಸುವುದುಂಟು.

ಇದರಲ್ಲಿ ಎರಡು ವಿಧಗಳುಂಟು – ಪಿತ್ತಜನಕಾಂಗವನ್ನೆಲ್ಲ ಗುಂಪುಗುಂಪಾಗಿ ಅಧಿಕ ಸಂಖ್ಯೆಗಳಲ್ಲಿ ಆಕ್ರಮಿಸುವ ಎಳೆಯ ಹುಳುಗಳಿಂದ ಉಂಟಾಗುವ ತೀವ್ರ ಸ್ವರೂಪದ ಕಾಯಿಲೆ (ನಿಜವಾದ ಯಕೃತ್ ಕೊಳೆ) ಮತ್ತು ಪಿತ್ತನಾಳಗಳಲ್ಲಿ (ಬೈಲ್ ಡಕ್ಟ್ಸ್) ದೀರ್ಘಕಾಲ ವಾಸಮಾಡಿಕೊಂಡಿರುವ ದೊಡ್ಡ ಹುಳುಗಳಿಂದ ಉತ್ಪತ್ತಿಯಾಗುವ ಚಿರಸ್ವರೂಪದ (ಕ್ರಾನಿಕ್ ಫಾರಮ್) ಕಾಯಿಲೆ. ಮಧ್ಯವರ್ತಿಯಾಗಿ ಆಸರೆಯಾಗಿರುವ ಕೆಲವು ಬಗೆಯ ಶಂಖು ಹುಳು ಅಥವಾ ಬಸವನ ಹುಳುಗಳು (ಲಿಮ್ನೆಯ, ಪ್ಲೆನಾರ್ಬಿಸ್, ಮೆಲೇನಿಯ ಮತ್ತು ವಿವಿಪೇರ ಜಾತಿಯ ಬಸವನ ಹುಳು) ವಾಸವಾಗಿರುವ ಜೌಗು ಪ್ರದೇಶಗಳಲ್ಲಿ ಮೇಯುವ ದನ ಕುರಿಗಳಲ್ಲಿ ಈ ಕಾಯಿಲೆ ಕಂಡುಬರುತ್ತದೆ.

ಜೀವನಚರಿತ್ರೆಯಲ್ಲಿನ ಮುಖ್ಯ ವಿವರಗಳು: ಕಾರಲುರೋಗವನ್ನುಂಟುಮಾಡುವ ಹುಳು ತನ್ನ ವಿಚಿತ್ರ ಬಗೆಯ ಜೀವನ ಚಕ್ರದ ಮೊದಲನೆಯ ಘಟ್ಟವನ್ನು ಮುಖ್ಯ ಆಶ್ರಯದಾತ ಪ್ರಾಣಿಯಾದ ಕುರಿಯ ಪಿತ್ತಜನಕಾಂಗದಲ್ಲೂ ಎರಡನೆಯ ಘಟ್ಟವನ್ನು ಮಧ್ಯವರ್ತಿ ಆಶ್ರಯದಾತ ಪ್ರಾಣಿಯಾದ ಬಸವನ ಹುಳುವಿನ ದೇಹದಲ್ಲೂ ಸಾಗಿಸುತ್ತದೆ. ಜಾಡ್ಯ ತಗುಲಿದ ಪ್ರಾಣಿಯ ಶರೀರದಿಂದ ಮಲದೊಂದಿಗೆ ಹೊರಬಂದ ಕಾರಲು ಹುಳುವಿನ ಮೊಟ್ಟೆಗಳು ಸುಮಾರು 9 ದಿವಸಗಳಲ್ಲಿ ಮಿರಸಿಡಿಯಂ ಎಂಬ ಲಾರ್ವಗಳಾಗುತ್ತವೆ. ಸನ್ನಿವೇಶಗಳು ಅನುಕೂಲವಾಗಿಲ್ಲದ ಸಂದರ್ಭಗಳಲ್ಲಿ ಮೊಟ್ಟೆಗಳು 5-6 ತಿಂಗಳಿಗೂ ಮಿಗಿಲಾಗಿ ಜೀವಂತವಾಗಿದ್ದು ಸುಸಮಯ ದೊರಕಿದ ಅನಂತರ ಮರಿಗಳನ್ನು ಉತ್ಪತ್ತಿ ಮಾಡಬಹುದು. ಮಿರಸಿಡಿಯಂ ಲಾರ್ವಗಳು ಮಧ್ಯವರ್ತಿ ಆಸರೆಯಾದ

ಬಸವನ ಹುಳುವಿನ ದೇಹವನ್ನು ಹೊಕ್ಕು 6-7ವಾರಗಳ ಅನಂತರ ಸರ್ಕೇರಿಯ ಎಂಬ ದ್ವಿತೀಯಾವಸ್ಥೆಯ ಲಾರ್ವಗಳಾಗಿ ರೂಪಾಂತರಗೊಂಡು, ಬಸವನ ಹುಳುವಿನ ದೇಹದಿಂದ ಹೊರಬಂದು, ಸಸ್ಯಗಳ ಮೇಲೆ ನೆಲೆಗೊಂಡು ಕೋಶಾವಸ್ಥೆಯನ್ನು ತಲಪುತ್ತವೆ. ಇಂಥ ಸ್ಥಳಗಳಲ್ಲಿ ಮುಖ್ಯ ಆಶ್ರಯದಾತ ಪ್ರಾಣಿಗಳಾದ ಕುರಿ, ದನ ಮುಂತಾದುವು ಹುಲ್ಲು ಮೇಯುವಾಗ ಅವುಗಳ ದೇಹವನ್ನು ಪ್ರವೇಶಿಸಿ ತಮ್ಮ ಪರಾವಲಂಬನ ಜೀವನವನ್ನು ಪ್ರಾರಂಭಿಸುತ್ತವೆ. ಕೋಶಾವಸ್ಥೆಯಲ್ಲಿ ಒಂದು ವರ್ಷವಾದರೂ ಇರಬಲ್ಲುವು. ಮುಖ್ಯ ಆಸರೆಯಾದ ಪ್ರಾಣಿಯ ಸಣ್ಣ ಕರುಳನ್ನು ತಲಪಿದ ಎಳೆಯ ಕಾರಲು ಹುಳುಗಳು ಕರುಳಿನ ಗೋಡೆಯನ್ನು ಭೇದಿಸಿ, ಹೊಟ್ಟೆಯಲ್ಲಿ ಕೆಲವು ದಿವಸಗಳನ್ನು ಕಳೆದು, ಅನಂತರ ಪಿತ್ತಜನಕಾಂಗವನ್ನು ಆಕ್ರಮಿಸುತ್ತವೆ. ಅಲ್ಲಿ 5-6 ವಾರಗಳ ಬೆಳವಣಿಗೆಯನ್ನು ಸಾಗಿಸಿ 3-4 ಮಿಮೀ ಗಳಷ್ಟು ಉದ್ದವಾದ ನಂತರ ಪಿತ್ತನಾಳವನ್ನು ಸೇರಿ ಅಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ. ಪ್ರೌಢಾವಸ್ಥೆಗೆ ಬಂದ ಕೆಲವು ದಿವಸಗಳಲ್ಲೇ ಮೊಟ್ಟೆಯಿಡಲು ಆರಂಭಿಸುತ್ತವೆ. ಜಾಡ್ಯ ಸೋಕಿದ ಕಾಲದಿಂದ 11ರಿಂದ 13 ವಾರಗಳಲ್ಲಿ ರೋಗಪೀಡಿತ ಪ್ರಾಣಿಯ ಮಲದಲ್ಲಿ ಕಾರಲು ಹುಳುವಿನ ಮೊಟ್ಟೆಗಳು ಕಾಣಬರುತ್ತವೆ.

ರೋಗಲಕ್ಷಣಗಳು : 1. ತೀವ್ರ ಸ್ವರೂಪದ ರೋಗ: ಕುರಿಗಳಲ್ಲಿ ಈ ಕಾಯಿಲೆ ದಷ್ಟಪುಷ್ಟವಾಗಿರುವ ಪ್ರಾಣಿಗಳಲ್ಲಿ ಕಾಣಿಸಿಕೊಂಡು ಕೇವಲ ಕೆಲವೇ ದಿವಸಗಳ ರೋಗದಿಂದಲೇ ಮರಣ ಸಂಭವಿಸಬಹುದು. ಜಾಡ್ಯ ತಗುಲಿದ ಪ್ರಾಣಿಗಳು ಮಂದೆಯನ್ನು ಬಿಟ್ಟು ಬೇರೆ ನಿಂತು, ಚಲಿಸಲು ಇಷ್ಟಪಡದೇ ಇರುತ್ತವೆ. ಹೊಟ್ಟೆ ಉಬ್ಬರಿಸಿಕೊಂಡು, ಮುಟ್ಟಿದರೆ ನೋವುಂಟಾಗುತ್ತದೆ. ದನಗಳಲ್ಲಿ ಈ ಕಾಯಿಲೆ ಎಳೆಯ ಕರುಗಳಿಗೂ ಅಂಟುತ್ತದೆ. ಹಸಿವಿಲ್ಲದಿರುವಿಕೆ, ಮಂಕಾಗಿರುವಿಕೆ, ಗಂಟಲು ಊತ, ಹೊಟ್ಟೆಯುಬ್ಬರ ಮತ್ತು ನೋವು–ಇವು ಕಾಯಿಲೆಯ ಲಕ್ಷಣಗಳು. ಕೆಲವೇ ದಿವಸಗಳಲ್ಲಿ ಕರುಗಳು ಸತ್ತು ಹೋಗುತ್ತವೆ.

2. ಚಿರಸ್ವರೂಪದ ರೋಗ: ಕುರಿಗಳಲ್ಲಿ ಈ ರೀತಿಯ ಜಾಡ್ಯದ ಮೊದಲ ಚಿಹ್ನೆಯೆಂದರೆ ಮಂದೆಯನ್ನು ಮುಂದೋಡಿಸಿದಾಗ ಕೆಲವು ಕುರಿಗಳು ಹಿಂದೆ ಉಳಿಯುವುದು. ಇವನ್ನು ಹಿಡಿದು ಪರೀಕ್ಷಿಸಿದಲ್ಲಿ ರಕ್ತಹೀನತೆಯ ಲಕ್ಷಣಗಳು ಎದ್ದು ಕಾಣುತ್ತವೆ. ಕಾಯಿಲೆ ಮುಂದುವರಿದಂತೆ ಪ್ರಾಣಿಯ ದೇಹ ಒಣಗುತ್ತ ಬರುವುದು ಚೆನ್ನಾಗಿ ಕಾಣುತ್ತದೆ. ಗಂಟಲ ಮತ್ತು ಹೊಟ್ಟೆಯ ಕೆಳಭಾಗಗಳಲ್ಲಿ ನೀರು ತುಂಬಿಕೊಂಡು ಊದಿಕೊಳ್ಳಬಹುದು. ದನಗಳಲ್ಲಿ ರಕ್ತಹೀನತೆ, ಭೇದಿ ಮತ್ತು ಕೃಶವಾಗಿ ಕಾಣುವ ದೇಹ ಇವು ಮುಖ್ಯವಾಗಿ ಗೋಚರವಾಗುವ ಸಾಮಾನ್ಯ ಲಕ್ಷಣಗಳು. ಗಂಟಲಿನ ಊತವೂ ಉಂಟಾಗಬಹುದು. ಇಂಥ ರೋಗವುಳ್ಳ ಕುರಿ ಮತ್ತು ದನಗಳ ಮಲವನ್ನು ಪರೀಕ್ಷಿಸಿದಾಗ ಕಾರಲು ಹುಳುವಿನ ಮೊಟ್ಟೆಗಳನ್ನು ಕಾಣಬಹುದು.

ಚಿರಸ್ವರೂಪದ ಕಾಯಿಲೆಯಲ್ಲಿ ಗಂಟಲು ಮತ್ತು ಹೊಟ್ಟೆಯಲ್ಲಿ ನೀರು ತುಂಬಿಕೊಂಡಿರುತ್ತದೆ. ಪಿತ್ತಜನಕಾಂಗ ಕ್ಷೀಣಗೊಂಡಿರುವುದಲ್ಲದೆ ಕೊಳೆತಿರುತ್ತದೆ. ಪಿತ್ತನಾಳಗಳು ವಿಶೇಷವಾಗಿ ದೊಡ್ಡದಾಗಿ ಅವುಗಳ ಗೋಡೆಗಳು ದಪ್ಪವಾಗಿರುತ್ತವೆ. ಅನೇಕ ವೇಳೆ ಪಿತ್ತನಾಳ ಮತ್ತು ಪಿತ್ತಕೋಶಗಳಲ್ಲಿ ದೊಡ್ಡ ಕಾರಲು ಹುಳುಗಳನ್ನು ಕಾಣಬಹುದು.

ಮರಣಾನಂತರ ಪರೀಕ್ಷೆ : ತೀವ್ರ ಸ್ವರೂಪದ ಕಾಯಿಲೆಯಿಂದ ಸತ್ತ ಪ್ರಾಣಿಯ ಹೊಟ್ಟೆಯಲ್ಲಿ ರಕ್ತವರ್ಣದ ದ್ರವ ಇದ್ದು ಪಿತ್ತಜನಕಾಂಗ ಬಾತುಕೊಂಡು ರಕ್ತಸ್ರಾವವಾಗಿರುವುದನ್ನು ತೋರಿಸುತ್ತದೆ. ಈ ಪಿತ್ತಜನಕಾಂಗವನ್ನು ಕತ್ತರಿಸಿ, ಹಿಂಡಿ, ನೀರಿನಿಂದ ತೊಳೆಯಬೇಕು. ಇದರಿಂದ ಪಿತ್ತಜನಕಾಂಗದ ರಸದೊಂದಿಗೆ ಎಳೆಯ ಕಾರಲು ಹುಳುಗಳು ಹೊರಬರುತ್ತವೆ. ಅನಂತರ ರಸವನ್ನು ತಂಗುವುದಕ್ಕೆ ಬಿಟ್ಟರೆ ಹುಳುಗಳು ನಿಧಾನವಾಗಿ ರಸದಿಂದ ಬೇರ್ಪಡುತ್ತವೆ.

ಚಿಕಿತ್ಸಾಕ್ರಮ: ಕುರಿಗಳಿಗೆ ಕಾರ್ಬನ್ ಟೆಟ್ರಾಕ್ಲೋರೈಡನ್ನು ಜಿಲಾಟಿನ್ ಕೋಶದಲ್ಲಿ ತುಂಬಿಕೊಡುವುದು ಅತ್ಯುತ್ತಮವಾದ ಚಿಕಿತ್ಸಾ ಕ್ರಮ. ಕಾರಲು ಹುಳುವಿನ ಜಾಡ್ಯ ಒಂದು ಮಂದೆಯಲ್ಲಿನ ಕೆಲವು ಕುರಿಗಳಲ್ಲಿ ಇರುವ ಲಕ್ಷಣಗಳು ಕಂಡರೆ ಉಳಿದ ಕುರಿಗಳಲ್ಲೂ ಇದು ಗುಪ್ತವಾಗಿರುವ ಸೂಚಕವಾದುದರಿಂದ ಎಲ್ಲ ಕುರಿಗಳಿಗೂ ಚಿಕಿತ್ಸೆಯನ್ನು ಕೈಗೊಳ್ಳುವುದು ಸೂಕ್ತವಾದ ಕ್ರಮ. ಕೇವಲ ಪ್ರೌಢಾವಸ್ಥೆಯ ಕಾರಲು ಹುಳುಗಳು ಮಾತ್ರವೇ ಈ ಔಷಧಪ್ರಯೋಗದಿಂದ ನಾಶಗೊಳ್ಳುವುದರಿಂದ ಚಿಕಿತ್ಸೆಯನ್ನು ಒಂದು ತಿಂಗಳ ಅನಂತರ ಮತ್ತೊಮ್ಮೆ ಮಾಡಬೇಕು.

ದನಗಳಿಗೆ ಕಾರ್ಬನ್ ಟೆಟ್ರಾಕ್ಲೋರೈಡ್ ಪ್ರಯೋಗ ಸುರಕ್ಷಿತವಲ್ಲ. ಹೆಕ್ಸಕ್ಲೋರೆಥೇನ್ ಎಂಬ ಮದ್ದನ್ನು ದೇಹದ ತೂಕದ ೫೦ ಕಿಗ್ರಾಂ ಗೆ ೧೦ ಗ್ರಾಂ ನಂತೆ ಒಟ್ಟು ಪ್ರಮಾಣ ೬೦ ಗ್ರಾಂ ಗೆ ಮೀರದಂತೆ ನೀರಿನೊಂದಿಗೆ ಬೆರೆಸಿ ಒಮ್ಮೆ ಕುಡಿಸುವುದು ಸಾಧಾರಣವಾದ ಕ್ರಮ. ಒಟ್ಟು ಮಂದೆಯನ್ನೆಲ್ಲ ಚಿಕಿತ್ಸೆಗೆ ಒಳಪಡಿಸುವ ಮುನ್ನ ೨–೩ ದನಗಳ ಮೇಲೆ (ಮುಖ್ಯವಾಗಿ ಔಷಧಿಯನ್ನು ತಡೆದುಕೊಳ್ಳುವ ಶಕ್ತಿ ಅತ್ಯಂತ ಕಡಿಮೆಯಾಗುಳ್ಳ ದನಗಳ ಮೇಲೆ) ಪ್ರಯೋಗ ನಡೆಸುವುದು ಒಳ್ಳೆಯದು.

ಹತೋಟಿ ಕ್ರಮ : ಕುರಿ, ಕರುಗಳು ಮತ್ತು ಒಂದು ವರ್ಷ ಪ್ರಾಯದ ದನಗಳನ್ನು ನೀರಿನ ಅಂಚುಗಳಲ್ಲಿ ಅಥವಾ ಯಾವಾಗಲೂ ಜೌಗಾಗಿರುವ ಹುಲ್ಲುಗಾವಲುಗಳಲ್ಲಿ ಮೇಯಲು ಬಿಡಬಾರದು. ನಿಂತಿರುವ ನೀರನ್ನು ಹರಿದು ಹೋಗುವಂತೆ ಮಾಡುವುದು, ನೀರಿನ ಹಳ್ಳ, ಹೊಂಡಗಳನ್ನು ಶುದ್ಧೀಕರಣ ಮಾಡುವುದು ಮತ್ತು ಕಾಲುವೆಗಳಿಗೆ ಮೈಲುತುತ್ತನ್ನು ಉಪಯೋಗಿಸುವುದು ಮುಂತಾದ ಕ್ರಮಗಳ ಮೂಲಕ ಬಸವನ ಹುಳುಗಳನ್ನು ನಿರ್ಮೂಲ ಮಾಡಲು ಯತ್ನಿಸಬೇಕು. ಎಕರೆಯೊಂದಕ್ಕೆ ೧೩ ಕಿಗ್ರಾಂ ಗಳಂತೆ ಒಂದು ಭಾಗ ಮೈಲುತುತ್ತನ್ನು 4 ಭಾಗ ಮರಳಿನೊಂದಿಗೆ ಬೆರೆಸಿದ ಮಿಶ್ರಣವನ್ನು ಕೈಯಿಂದ ಎರಚುವುದು ಬಸವನ ಹುಳುವಿನ ನಿವಾರಣೆಗೆ ಉತ್ತಮ ಮಾರ್ಗ. ***

**ಕಾರ್ಡಮೀಸೋಡರ್ಮ್:** ಕಶೇರುಕಗಳ ಬೆಳವಣಿಗೆಯ ಒಂದು ಹಂತವಾದ ಗ್ಯಾಸ್ಟ್ರುಲಾದಲ್ಲಿರುವ ಅವಕಾಶಕ್ಕೆ (ಆರ್ಕೆಂಟರಾನ್) ಛಾವಣಿಯಾಗಿರುವ ಜೀವಕೋಶಗಳ ಪಟ್ಟಿ. ಅವಕಾಶದ ಉಳಿದ ಭಾಗಗಳನ್ನು ಎಂಡೋಡರ್ಮಿನ ಜೀವಕೋಶಗಳು ಆವರಿಸಿವೆ. ಕಾರ್ಡಮೀಸೋಡರ್ಮಿನ ಉದ್ದಕ್ಕೂ, ನಡುಭಾಗದಲ್ಲಿರುವ ಜೀವಕೋಶಗಳು ಮೇಲಕ್ಕೆ ಬಾಗಿ ನೋಟೊಕಾರ್ಡ್ ರೂಪುಗೊಳ್ಳುತ್ತದೆ. ಇಕ್ಕಡೆಗಳಲ್ಲಿರುವ ಮೀಸೊಡರ್ಮ್ ಜೀವಕೋಶಗಳ ಭಾಗ ಮಡಚಿಕೊಂಡು ಒಂದು ಜೊತೆ ಸಂಚಿಗಳಾಗುತ್ತವೆ. ಸಂಚಿಗಳು ಹೊಂದಿರುವ ಅವಕಾಶ ಸೀಲೋಮ್. ಒಳಪದರದ ಉಳಿದ ಭಾಗಗಳು ಕೂಡಿಕೊಂಡು ಅನ್ನನಾಳದ ಭಿತ್ತಿ ಪೂರ್ಣವಾಗುತ್ತದೆ. ಕಾರ್ಡಮೀಸೋಡರ್ಮ್ ಈ ರೀತಿಯಲ್ಲಿ ಒಳಪದರದಿಂದ ಉದ್ಭವಿಸುವುದರಿಂದ, ಇದಕ್ಕೆ ಎಂಟೊಮೀಸೋಡರ್ಮ್ ಎಂದೂ ಕರೆಯುವರು.

ದ್ವಿಚರಿಗಳ ಗ್ಯಾಸ್ಟ್ರುಲೇಶನ್‌ನಲ್ಲಿ ವಿವಿಧ ಜೀವಕೋಶಗಳ ಚಲನೆಯನ್ನು ಮತ್ತು ನರನಳಿಕೆಯಂತಹ ಮೂಲ ಅಂಗಗಳ ಉತ್ಪತ್ತಿಯನ್ನು ಕಾರ್ಡಮೀಸೋಡರ್ಮ್ ಸಂಘಟಿಸುತ್ತದೆ. ಆದ್ದರಿಂದ ಸ್ಪಿಮನ್ನ ಇದನ್ನು ಪ್ರಾಥಮಿಕ ಸಂಘಟಕ ಎಂದು ಕರೆದನು. ಗ್ಯಾಸ್ಟ್ರುಲದಲ್ಲಿ ಕಾರ್ಡಮೀಸೋಡರ್ಮಿನ ಉದ್ದಕ್ಕೂ ಹೊರಪದರದಲ್ಲಿರುವ ನರಜೀವಕೋಶಗಳು ನರಪಟ್ಟಿಯಾಗಿ, ನರನಳಿಕೆಯಾಗಲು ಕಾರಣ ಕಾರ್ಡಮೀಸೋಡರ್ಮಿನಲ್ಲಿ ಉದ್ಭವಿಸುವ ಸಂಘಟಕ ಅಥವಾ ಪ್ರಚೋದಕ ವಸ್ತು (ಎವೊಕೇಟರ್ ಅಥವಾ ಇಂಡಕ್ಟರ್) ಆದರೆ ಕಾರ್ಡಮೀಸೋಡರ್ಮನ್ನು ಕತ್ತರಿಸಿ, ಎಳೆಯ ಅಥವಾ ಬಲಿತ ಭ್ರೂಣಕ್ಕೆ (ಗ್ಯಾಸ್ಟ್ರುಲಕ್ಕೆ) ವರ್ಗಾಯಿಸಿದಾಗ ನರಜೀವ ಕೋಶಗಳು ಪ್ರತಿಕ್ರಿಯೆ ತೋರಿಸುವುದಿಲ್ಲ. ನರಜೀವಕೋಶಗಳು ಒಂದು ನಿರ್ದಿಷ್ಟ ಕಾಲದಲ್ಲಿ ಮಾತ್ರ ಪ್ರಚೋದನೆಗೆ ಅರ್ಹವಾಗಿವೆ (ಕಾಂಪಿಟೆಂಟ್) ಎಂದು ಈ ಪ್ರಯೋಗದಿಂದ ಸ್ಪಷ್ಟವಾಗುತ್ತದೆ.

ನರನಳಿಕೆಯಿಂದ ಮಿದುಳು ರೂಪುಗೊಳ್ಳಲು ಕಾರಣವಾದ ಕಾರ್ಡಮೀಸೋಡರ್ಮಿನ ಮುಂಭಾಗಕ್ಕೆ ತಲೆಯ ಸಂಘಟಕವೆಂದೂ (ಆರ್ಕೆನ್‌ಸಿಫಾಲಿಕ) ಮಿದುಳು ಬಳ್ಳಿ ಮತ್ತು ಬಾಲದ ಭಾಗಗಳು ರೂಪುಗೊಳ್ಳಲು ಕಾರಣವಾದ ಹಿಂಭಾಗಕ್ಕೆ ಸೊಂಟ ಹಾಗೂ ಬಾಲದ ಸಂಘಟಕವೆಂದು (ಡ್ಯುಟರೆನ್ ಸೆಫಾಲಿಕ್) ಕರೆಯಲಾಗಿದೆ. (ಎಂ.ಎಸ್.)

**ಕಾರ್ಡೇಟ:** ಪ್ರಾಣಿರಾಜ್ಯದ ಒಂದು ಬಹುಪ್ರಮುಖವಾದ ವಂಶ. ಆದಿ ಕಾರ್ಡೇಟುಗಳು, ಸೈಕ್ಲೊಸ್ಟೊಮೇಟುಗಳು (ಚಕ್ರಾಸ್ಯಗಳು), ಮೀನುಗಳು, ದ್ವಿಚರಿಗಳು, ಸರೀಸೃಪಗಳು, ಪಕ್ಷಿ ಮತ್ತು ಸ್ತನಿಗಳ ವರ್ಗಗಳು ಇದರಲ್ಲಿ ಸೇರಿವೆ. ಊರ್ಧ್ವಭಾಗದ ನಳಿಕೆಯಂತಿರುವ ನರಹುರಿ, ನೋಟೋಕಾರ್ಡ್ ಮತ್ತು ಗಂಟಲಿನ ಭಾಗದಲ್ಲಿರುವ ಕಿವಿರು ರಂಧ್ರಗಳು ಈ ಸಮುದಾಯಕ್ಕೆ ಸೇರಿದ ಪ್ರಾಣಿಗಳ ಅತಿ ವಿಶಿಷ್ಟ ಲಕ್ಷಣಗಳು, ಇವಲ್ಲದೆ ಉಭಯಪಾರ್ಶ್ವ ಸಮಾಂಗತೆ, ೩ ಜನನ ಪದರಗಳು (ಜರ್ಮ್ ಲೇಯರ್ಸ್), ಖಂಡಸ್ಥ ದೇಹ, ಸಂಪೂರ್ಣವಾಗಿ ರೂಪುಗೊಂಡ ಪಚನ ಮಂಡಲ, ಚೆನ್ನಾಗಿ ರೂಪಿತವಾದ ಸೀಲೋಮ್ ಇತರ ಮುಖ್ಯ ಲಕ್ಷಣಗಳು.

ನರಹುರಿ ನಳಿಕೆಯಂತೆ ಟೊಳ್ಳಾಗಿದೆ. ಇದರ ಮುಂಭಾಗ ಕೆಲವು ನಿಮ್ನವರ್ಗದ ಕಾರ್ಡೇಟುಗಳಲ್ಲಿ ಸರಳವಾದ ಮಿದುಳು ಕೋಶದಂತೆಯೂ ಉಳಿದೆಲ್ಲ ಕಾರ್ಡೇಟುಗಳಲ್ಲಿ ಮಿದುಳಾಗಿಯೂ ಮಾರ್ಪಾಡಾಗಿದೆ. ಮಿದುಳಿನ ಹಿಂಭಾಗವೇ ಮಿದುಳುಬಳ್ಳಿ. ಹೆಮಿಕಾರ್ಡೇಟ ಉಪಭಾಗದ ಪ್ರಾಣಿಗಳಲ್ಲಿ ನರ ಅಂಗಾಂಶ ಹರಡಿಕೊಂಡಿದೆ. ಟ್ಯೂನಿಕೇಟ ಗುಂಪಿನವುಗಳಲ್ಲಿ ರೂಪಾಂತರತೆಯ ಹಂತದಲ್ಲಿ ಹುರಿಯೂ ಮಿದುಳುಕೋಶವೂ ಗ್ಯಾಂಗ್ಲಿಯ ಆಗಿ ಪರಿವರ್ತಿತವಾಗುತ್ತವೆ. ಉನ್ನತ ವರ್ಗದ ಕಾರ್ಡೇಟಗಳಲ್ಲಿ ಕಶೇರುಸ್ತಂಭದಿಂದ ಕಮಾನುಗಳು ಹುಟ್ಟಿಕೊಂಡು ನರಹುರಿಯನ್ನು ಸುತ್ತುವರಿದು ಅದಕ್ಕೆ ರಕ್ಷಣೆ ಇಯುತ್ತವೆ. ಮಿದುಳು ಮಸ್ತಕದಿಂದ ಆವೃತವಾಗಿದೆ.

ನರಹುರಿಯ ಕೆಳಬದಿಯಲ್ಲಿ ದೇಹಕ್ಕೆ ಆಧಾರವಾಗಿರುವ ನೋಟೋಕಾರ್ಡ್ ಇದೆ. ಸರಳಿನಂತಿರುವ ಇದು ಆದಿಕಾರ್ಡೇಟುಗಳಲ್ಲಿ ಜೀವಾವಧಿ ಉಳಿಯುತ್ತದೆ. ಉಳಿದೆಲ್ಲ ಕಾರ್ಡೇಟುಗಳಲ್ಲಿ ಭ್ರೂಣಾವಸ್ಥೆಯಲ್ಲಿ ಮಾತ್ರ ಇದ್ದು ಪ್ರಬುದ್ಧಾವಸ್ಥೆಯಲ್ಲಿ ಕ್ಷೀಣಗೊಂಡು ಕಶೇರುಸ್ತಂಭದಿಂದ ಆವೃತಗೊಳ್ಳುತ್ತದೆ ಇಲ್ಲವೆ ಸ್ಥಾನಪಲ್ಲಟಗೊಳ್ಳುತ್ತವೆ. ಹೆಮಿಕಾರ್ಡೇಟ್ ಪ್ರಾಣಿಗಳಲ್ಲಿ ಇದು ಚಿಕ್ಕದು ಮತ್ತು ದೇಹದ ಮುಂಭಾಗದಲ್ಲಿದೆ. ಟ್ಯೂನಿಕೇಟ ಪ್ರಾಣಿಗಳಲ್ಲಿ ಡಿಂಬಾವಸ್ಥೆಯಲ್ಲಿ ಬಾಲದ ಭಾಗದಲ್ಲಿ ಮಾತ್ರ ಇದೆ. ಸಿಫ್ಯಾಲೋಕಾರ್ಡೇಟ ಮತ್ತು ಉಳಿದ ಉಚ್ಚ ವರ್ಗದ ಪ್ರಾಣಿಗಳಲ್ಲಿ ದೇಹದುದ್ದಕ್ಕೂ ಚಾಚಿದೆ. ನೋಟೋಕಾರ್ಡಿನ ಕಾರ್ಯ ದೇಹಕ್ಕೆ ಕೇವಲ ಆಧಾರದಂತಿರುವುದು ಎಂದು ಕೆಲವರ ಅಭಿಪ್ರಾಯ. ಶರೀರದ ಸ್ನಾಯುಗಳ ಚಲನವಲನಕ್ಕೆ ಸಹಾಯಕವಾಗಿದೆ ಎಂದು ಇನ್ನು ಕೆಲವರು ಅಭಿಪ್ರಾಯಪಡುತ್ತಾರೆ. ಕಾರ್ಯ ಏನೆ ಇರಲಿ ಇದರ ಉತ್ಪತ್ತಿ ಕಾರ್ಡೇಟುಗಳ ವಿಕಾಸದಲ್ಲಿನ ಒಂದು ಮಹತ್ತ್ವಪೂರ್ಣ ಘಟನೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಕಾರ್ಡೇಟುಗಳ ಇನ್ನೊಂದು ವಿಶಿಷ್ಟ ಲಕ್ಷಣವಾದ ಕಿವಿರು ರಂಧ್ರಗಳು ಅನ್ನನಾಳ ಅಗ್ರಭಾಗವಾದ ಗಂಟಲಿನ (ಫ್ಯಾರಿಂಕ್ಸ್) ಅಕ್ಕಪಕ್ಕಗಳಲ್ಲಿವೆ. ಎಲ್ಲ ಕಾರ್ಡೇಟುಗಳ ಭ್ರೂಣಾವಸ್ಥೆಯಲ್ಲಿ ಕಾಣಿಸಿಕೊಳ್ಳುವ ಇವು ಹೆಮಿಕಾರ್ಡೇಟ, ಟ್ಯೂನಿಕೇಟ, ಸಿಫ್ಯಾಲೋಕಾರ್ಡೇಟ, ಮತ್ತು ಮೀನುಗಳಲ್ಲೆಲ್ಲ ಪ್ರಬುದ್ಧಾವಸ್ಥೆಯಲ್ಲೂ ಇವೆ. ಜಲಶ್ವಸನ ಕ್ರಿಯೆಗೆ ಇವು ಅತ್ಯಗತ್ಯ. ದ್ವಿಚರಿಗಳಲ್ಲಿ ಡಿಂಬಾವಸ್ಥೆಯಲ್ಲಿ ಮಾತ್ರ ಇದ್ದು ಪ್ರೌಢಾವಸ್ಥೆಯಲ್ಲಿ ಶ್ವಾಸಕೋಶಗಳಿಂದ ಸ್ಥಾನಪಲ್ಲಟಗೊಳ್ಳುತ್ತವೆ. ಉಳಿದೆಲ್ಲ ಕಾರ್ಡೇಟುಗಳಲ್ಲಿ ಭ್ರೂಣಾವಸ್ಥೆಯ ಪ್ರಥಮ ಹಂತಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ, ಆಗಲೂ ಇವು ಅನುಪಯುಕ್ತವಾಗಿದೆ.

ಕಾರ್ಡೇಟುಗಳ ಉಗಮ ಹೇಗಾಯಿತೆಂಬ ಪ್ರಶ್ನೆ ಕ್ಲಿಷ್ಟ. ಇದು ಅನೇಕ ವಿಕಾಸ ತಜ್ಞರ ಗಮನ ಸೆಳೆದಿದೆ. ಇವು ಒಂದಿಲ್ಲೊಂದು ಅಕಶೇರುಕ ಗುಂಪಿನಿಂದ ಹುಟ್ಟಿರಬಹುದೆಂದು ವಾದಿಸಬಹುದಾದರೂ ಈ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ಈವರೆಗೂ ದೊರೆತಿಲ್ಲ. ಅನೆಲಿಡ, ನೆಮೆರ್ಟಿನಿಯ, ಆರ್ತ್ರೊಪೋಡ ಮತ್ತು ಎಕಿನೋಡರ್ಮೇಟ ಹೀಗೆ ಈ ನಾಲ್ಕು ಗುಂಪಿನ ಪ್ರಾಣಿಗಳಿಂದ ಬೇರೆಬೇರೆಯಾಗಿ ಕಾರ್ಡೇಟುಗಳು ವಿಕಾಸವಾಗಿವೆಯೆಂದು ನಾಲ್ಕು ವಾದಗಳಿವೆ. ಇಂಥ ವಾದಗಳಲ್ಲಿ ಎರಡು ಮಾತ್ರ ಬಹುಪಾಲು ತಜ್ಞರಿಂದ ಮಾನ್ಯವಾಗಿರುವುದರಿಂದ ಗಮನಾರ್ಹವಾಗಿವೆ. ೧. ವಿಲ್ಲೀ ಎಂಬುವನ ಶಾಸ್ತ್ರೀಯವಾದ (೧೮೯೧): ಇವನ ವಾದದ ಪ್ರಕಾರ ಮೂಲ ಕಾರ್ಡೇಟುಗಳು ಈಗಿನ ಅಸಿಡಿಯನ್ ಡಿಂಬಗಳಂಥ ಪ್ರಾಣಿಗಳಿಂದಾಗಿರದೆ ಈಗಿನ ಪ್ರೌಢಾವಸ್ಥೆಯ ಅಸಿಡಿಯನುಗಳನ್ನು ಹೋಲುತ್ತಿದ್ದ ಪ್ರಾಚೀನ ಪ್ರಾಣಿಗಳಿಂದ ಉದ್ಭವಿಸಿದುವು. ೨. ಗಾರ್ಸ್ಟಾಂಗನ ಡಿಂಬವಿಕಾಸವಾದ (೧೯೨೮): ಕಾರ್ಡೇಟುಗಳ ಉಗಮ ಈಗಿನ ಅಸಿಡಿಯನ್ ಡಿಂಬಗಳಂಥ ಪ್ರಾಣಿಗಳಿಂದಾಗಿರದೆ ಈಗಿನ ಪ್ರೌಢಾವಸ್ಥೆಯ ಅಸಿಡಿಯನುಗಳನ್ನು ಹೋಲುತ್ತಿದ್ದ ಡಿಂಬಗಳನ್ನುಳ್ಳ ಅಚಲ ಪ್ರಾಣಿಗಳಿಂದ ಆಗಿದೆಯೆಂದು ಇವನ ವಾದ. ಈ ಡಿಂಬ ಈಗಿನ ಎಕಿನೋಡರ್ಮ್‌ಗಳ ಡೈಪ್ಲೂರುಲ ಡಿಂಬದಂತೆ ಇದ್ದಿತೆಂದೂ ಅದರ ವಿವಿಧ ಭಾಗಗಳಿಂದ ನರಹುರಿ, ನೋಟೋಕಾರ್ಡ್ ಮತ್ತು ಕಿವಿರು ರಂಧ್ರಗಳು ಉದ್ಭವವಾದುವೆಂದು ಈ ವಾದದ ಮೂಲನಂಬಿಕೆ. ಬೆರಿಲ್ ಎಂಬಾತ ಈ ವಾದವನ್ನು ಭಾಗಶಃ ಅನುಮೋದಿಸುತ್ತ ಡೈಪ್ಲೂರುಲ ಡಿಂಬವೇ ನೇರವಾಗಿ ಕಾರ್ಡೇಟುಗಳ ಉತ್ಪತ್ತಿಗೆ ಕಾರಣವಾಗಲಿಲ್ಲವೆಂದೂ ಕೆಲವು ವಿಶಿಷ್ಟ ಕಾರಣಗಳ ಪರಿಣಾಮವಾಗಿ ಇಂಥ ಡಿಂಬ ಅಸಿಡಿಯನ್‌ಗಳಲ್ಲಿ ಉದ್ಭವವಾಗಿ ಅಲ್ಲಿಂದ ಉಳಿದ ಕಾರ್ಡೇಟುಗಳು ಜನಿಸಿದುವೆಂದೂ ವಿವರಣೆಯಿತ್ತಿದ್ದಾನೆ.

ಕಾರ್ಡೇಟ ವಿಭಾಗದಲ್ಲಿ ನಾಲ್ಕು ಪ್ರಮುಖ ಉಪವಿಭಾಗಗಳಿವೆ:

೧ ಹೆಮಿಕಾರ್ಡೇಟ–ಟಂಗ್‌ವರ್ಮ್ಸ್ ಮತ್ತು ಅಕಾರ್ನ್ ವರ್ಮ್ಸ್

೨ ಯೂರೊಕಾರ್ಡೇಟ ಅಥವಾ ಟ್ಯೂನಿಕೇಟ–ಟ್ಯೂನಿಕೇಟ್ಸ್ ಮತ್ತು ಅಸಿಡಿಯನ್ಸ್.

೩ ಸಿಫ್ಯಾಲೊಕಾರ್ಡೇಟ–ಆಂಫಿಯಾಕ್ಸಸ್,

೪ ವರ್ಟಿಬ್ರೇಟ ಅಥವಾ ಕ್ರೇನಿಯೇಟ–ಸೈಕ್ಲೋಸ್ಟೊಮೇಟುಗಳು, ಮೀನುಗಳು, ದ್ವಿಚರಿಗಳು, ಸರೀಸೃಪಗಳು, ಪಕ್ಷಿಗಳು ಮತ್ತು ಸ್ತನಿಗಳು. ***

**ಕಾರ್ಡೋಗಲು:** ಆಹಾರದಲ್ಲಿ ಬಿ ಜೀವಸತ್ವದ ಅಂಶವಾದ ನಿಕೋಟಿನಿಕ್ ಆಮ್ಲದ ಕೊರತೆಯಿಂದ ತೋರಿಬರುವ ಒಂದು ಬಗೆಯ ಚರ್ಮವ್ಯಾಧಿ (ಪೆಲ್ಲಗ್ರ). ಈ ಕಾಯಿಲೆಯಲ್ಲಿ ಚರ್ಮ ಮತ್ತು ಲೋಳೆಪೊರೆಯ ಉರಿ, ಭೇದಿ ಮತ್ತು ಮಾನಸಿಕ ಬದಲಾವಣೆಗಳು ತೋರಿಬರುವುವಲ್ಲದೆ ಚರ್ಮ ದಪ್ಪನಾಗಿ ಒಣಗಿ ಒರಟಾಗುತ್ತದೆ. ಅಂತೆಯೆ ಈ ವ್ಯಾಧಿಗೆ ಕಾರ್ಡೋಗಲು ಎಂಬ ಹೆಸರು. ಈ ರೋಗದ ವಿವರಣೆಯನ್ನು ಸ್ಪೇನಿನ ವೈದ್ಯ ಕಾಸಲ್ ನೀಡಿದ (೧೬೩೦), ಮುಂದೆ ಇಟಲಿಯ ವೈದ್ಯ ಫ್ರಪೋಲಿ ಇದಕ್ಕೆ ಪೆಲ್ಲಗ್ರ ಎಂಬ ಹೆಸರನ್ನಿತ್ತ (೧೭೭೧). ಈ ರೋಗ ಜಗತ್ತಿನ ವಿವಿಧ ಭಾಗಗಳಲ್ಲಿ ಪ್ರಚಲಿತವಿದೆ. ಸಾಧಾರಣವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚು. ಬಡತನದಲ್ಲಿ ಜೀವನ ನಡೆಸುತ್ತ ನ್ಯೂನ ಆಹಾರ ಸೇವನೆ ಮಾಡುವ ರೈತಾಪಿ ಜನಗಳಲ್ಲಿ ಈ ರೋಗ ಸಾಮಾನ್ಯ. ಮುಸುಕಿನ ಜೋಳ ಇಲ್ಲವೆ ಬಿಳಿ ಜೋಳ ಪ್ರಮುಖ ಆಹಾರವಾಗಿರುವವರಲ್ಲಿ ಇದು ಸಾಮಾನ್ಯ. ಈ ಧಾನ್ಯಗಳಲ್ಲಿ ಸಸಾರಜನಕ ವಸ್ತುಗಳ ಕೊರತೆ ಇದೆ. ಮುಸುಕಿನ ಜೋಳದಲ್ಲಿ ನಿಕೋಟಿನಿಕ್ ಆಮ್ಲದ ಪ್ರಮಾಣ ಹೆಚ್ಚಿದ್ದರೂ ಅದು ದೇಹದ ಉಪಯೋಗಕ್ಕೆ ಬಾರದ ರೀತಿಯಲ್ಲಿದೆ. ಬಿಳಿ ಜೋಳದಲ್ಲಿ ಅಮೈನೋ ಆಮ್ಲ (ಲೂಸಿನ್) ಹೆಚ್ಚು ಪ್ರಮಾಣದಲ್ಲಿದ್ದು ಅದು ಟ್ರಿಪ್ಟೋಫೇನ್, ನಿಕೋಟಿನಿಕ್ ಆಮ್ಲದ ತಯಾರಿಕೆಗೆ ಅಡ್ಡಿಯನ್ನುಂಟುಮಾಡಿ ಕಾರ್ಡೋಗಲಿನ ಗುಣಲಕ್ಷಣಗಳ ಬೆಳೆವಣಿಗೆಗೆ ಅನುವು ಮಾಡಿಕೊಡುತ್ತದೆ. ನಿಕೋಟಿನಿಕ್ ಆಮ್ಲ ಮತ್ತು ಸಾರಜನಕ ವಸ್ತುಗಳ ಸೇವನೆ ಈ ರೋಗವನ್ನು ತಡೆಗಟ್ಟುವಲ್ಲಿ ಸಹಾಯಕಾರಿ. ಈ ರೋಗ ದೀರ್ಘಾವಧಿ ಕಾಲ ಇರಬಲ್ಲುದು. ಬುದ್ಧಿಮಾಂದ್ಯ, ಭೇದಿ, ಕೆಂಪಡರಿದ ಚರ್ಮ ತೋರಿಬರುತ್ತವೆ. ಪ್ರಾರಂಭದ ದಿಶೆಯಲ್ಲಿ ಚರ್ಮ ಕೆಂಪಡರಿ ಉರಿಯನ್ನುಂಟುಮಾಡುವುದು. ದಿನಗಳೆದಂತೆ ಚರ್ಮ ಒರಟಾಗುತ್ತದೆ. ಈ ಬದಲಾವಣೆಗಳು ಸೂರ್ಯಪ್ರಕಾಶಕ್ಕೆ ಈಡಾಗುವ ಚರ್ಮದ ಪ್ರದೇಶಗಳಾದ ಕೈ ಮತ್ತು ಪಾದದ ಮೇಲ್ಭಾಗ, ಮುಂಗೈ, ಮುಂಗಾಲು, ಕಣ್ಣಿನ ಕೆಳಗಿನ ಮುಖದ ಪಾತರಗಿತ್ತಿಯ ಪ್ರದೇಶ ಮತ್ತು ಕುತ್ತಿಗೆಯ ಚರ್ಮ ಇಲ್ಲಿ ಹೆಚ್ಚು. ಅಲ್ಲಿ ಚರ್ಮ ಕೆಂಪಡರಿ ಉಬ್ಬಿ ತುರಿಕೆಯನ್ನುಂಟುಮಾಡುತ್ತದೆ. ದಿನಕಳೆದಂತೆ ಚರ್ಮ ಒಣಗಿ ಒರಟಾಗಿ ಒಡೆದು ಕಂದು ಇಲ್ಲವೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಇವುಗಳಲ್ಲದೆ ಬಾಯಲ್ಲಿ ಮುಗುಳು, ಹುಣ್ಣು ತೋರಿಬಂದು ಕಾರ ತಿನ್ನಲು ಆಗುವುದಿಲ್ಲ. ನಾಲಗೆ ಹಸಿ ಮಾಂಸದಂತೆ ಕೆಂಪಾಗುತ್ತದೆ. ರೋಗಿ ಶೀಘ್ರಕೋಪಿಯಾಗಬಹುದು, ಚಿತ್ತಸ್ಥೈರ್ಯ ಕಳೆದುಕೊಂಡು ಹುಚ್ಚುಹುಚ್ಚಾಗಿ ಮಾತಾಡಬಹುದು.

ನಿಕೊಟಿನಮೈಡನ್ನು ೧೦೦ ಮಿಲಿಗ್ರಾಂನಂತೆ ದಿನದಲ್ಲಿ ನಾಲ್ಕು ಬಾರಿ ಸೇವಿಸುವುದರಿಂದ ರೋಗ ಗುಣಮುಖವಾಗುವುದು. ಈ ಔಷಧಿ ಜಠರದಿಂದ ಬೇಗ ಹೀರಲ್ಪಡುವುದು. ಇದರೊಂದಿಗೆ ಆಹಾರದಲ್ಲಿ ಸಸಾರಜನಕ ಪದಾರ್ಥಗಳ (ಪ್ರೋಟೀನುಗಳು) ಸೇವನೆಯೂ ಅಗತ್ಯ. ಇದರಿಂದಾಗಿ ಚರ್ಮದ ಉರಿ, ಭೇದಿ ಮೊದಲಾದವುಗಳು ವಾಸಿಯಾಗುವುವು. ಮಾನಸಿಕ ಪರಿಸ್ಥಿತಿ ನಿಧಾನಗತಿಯಲ್ಲಿ ಉತ್ತಮಗೊಳ್ಳುವುದು. ***

**ಕಾರ್ನಿವೋರ:** ಮಾಂಸಾಹಾರಿ ಸ್ತನಿಗಳ ಗಣ. ಕೆಲವು ಸರ್ವಭಕ್ಷಿಗಳೂ (ಆಮ್ನಿವೋರ) ಹೌದು. ಸಸ್ಯಾಹಾರಿಗಳೂ ಸೇರಿವೆ. ಕಾರ್ನಿವೋರಗಳು ಚುರುಕುಬುದ್ಧಿಯ ಧೈರ್ಯಶಾಲಿ ಪ್ರಾಣಿಗಳು. ಇವುಗಳಲ್ಲಿ ಕೌಟುಂಬಿಕ ಅಥವ ಸಂಘ ಜೀವನ ಸಾಮಾನ್ಯ. ತಮ್ಮ ಗುಂಪಿನ ಸದಸ್ಯರನ್ನು ಗುದದ್ವಾರ ಗ್ರಂಥಿಗಳು ಉತ್ಪಾದಿಸುವ ವಿಶೇಷ ವಾಸನೆಯಿಂದ ಗುರುತಿಸುತ್ತವೆ. ಉದ್ದ ಕಿವಿ, ಉದ್ದ ಮೀಸೆ ಮತ್ತು ಅನೇಕ ಟರ್ಬೈನಲ್ ಮೂಳೆಗಳಿಂದ ಕೂಡಿದ ತಲೆಬುರುಡೆ ಇದೆ. ಮೂಗಿಗಾಗಿ ಮೂತಿ ಚೆನ್ನಾಗಿ ಬೆಳೆದಿದೆ. ಆದರೆ ಮೋಟು ಮುಖ. ಮಿದುಳು ದೊಡ್ಡದು. ಸೆರೆಬ್ರಲ್ ಗೋಳಗಳು ಸೆರೆಬೆಲ್ಲದ ಮೇಲೆ ಹರಡಿವೆ. ಘ್ರಾಣೇಂದ್ರಿಯ ಕೇಂದ್ರಗಳು ದೊಡ್ಡವು. ಆಹಾರಕ್ಕಾಗಿ ಗಂಟೆಗಟ್ಟಲೆ ಕಾದು ಕೂರಲು ಮತ್ತು ಕಂಡಾಗ ಚಟುವಟಿಕೆಯಿಂದ ವರ್ತಿಸಲು ಅಗತ್ಯವಾದ ತಾಳ್ಮೆ ಮತ್ತು ಪ್ರೇರಣಾಶಕ್ತಿ, ಸಮತೋಲನಗಳಿವಕ್ಕಿವೆ. ಆಹಾರ ಸೇವನೆ ಮತ್ತು ವರ್ತನೆಯಲ್ಲಿ ತೀವ್ರ ವೈವಿಧ್ಯತೆ ಕಂಡು ಬರುತ್ತದೆ. ಆಸ್ಟ್ರೇಲಿಯ ಪ್ರದೇಶವನ್ನುಳಿದು ಜಗತ್ತಿನಾದ್ಯಂತ ಕಾರ್ನಿವೋರಗಳು ವಿಸ್ತರಿಸಿವೆ. ಆಸ್ಟ್ರೇಲಿಯಾದಲ್ಲಿ ಡಿಂಗೊ ಎಂಬ ನಾಯಿ ಮಾತ್ರ ಕಂಡು ಬರುತ್ತದೆ. ಧ್ರುವ ಕರಡಿ ಮತ್ತು ಧ್ರುವ ತೋಳಗಳು ಉಳಿದೆಲ್ಲ ನೆಲ ಸ್ತನಿಗಳಿಗಿಂತ ಹೆಚ್ಚು ಉತ್ತರದಲ್ಲಿವೆ. ಕಡಲಸಿಂಹಗಳು ಉತ್ತರ ಮತ್ತು ದಕ್ಷಿಣದ ನೀರಿನ ವಲಯಗಳಲ್ಲಿವೆ. ಈ ಗಣದ ಅನೇಕವು ಕೆಲವೇ ಪ್ರದೇಶಗಳಿಗೆ ಸೀಮಿತವಾಗಿವೆ.

ಅಸ್ಥಿಪಂಜರ: ಬೆರಳುಗಳು: ಪ್ರಾಯಶಃ ಆದಿಮ ಮಾಂಸಾಹಾರಿಗಳಲ್ಲಿ ಐದು ಬೆರಳುಗಳಿದ್ದಿರಬಹುದು. ಕರಡಿಗಳು ಪ್ಲಾಂಟಿಗ್ರೇಡ್ (ಪೂರ್ಣ ಪಾದಿಗಳು) ಮತ್ತು ಉಳಿದುವು ಡಿಜಿಟಿಗ್ರೇಡ್ (ಬೆರಳುಪಾದಿ) ಅಥವಾ ಅರೆ ಡಿಜಿಟಿಗ್ರೇಡ್ ಆಗಿರುತ್ತವೆ. ಒಟ್ಟಿನಲ್ಲಿ ಪ್ರತಿ ಕಾಲಿನಲ್ಲಿ ನಾಲ್ಕಕ್ಕಿಂತ ಹೆಚ್ಚು ಬೆರಳುಗಳಿರುವುವು. ಮೊದಲ ಬೆರಳು ಉಳಿದವನ್ನು ಎಂದೂ ವಿರೋಧಿಸುವುದಿಲ್ಲ. ಅಡಕವಾದ ನಖಗಳಿವೆ; ಅವನ್ನು ಸ್ಥಿತಿಸ್ಥಾಪಕ ರಜ್ಜುಗಳು ಹಿಂದಕ್ಕೆಳೆದು ಇಡುತ್ತವೆ. ತುದಿಯ ಬೆರಳೆಲುಬಿಗೆ ಕೊಂಡಿಯುಗುರುಗಳು ಸೇರಿವೆ. ಅದರಲ್ಲಿರುವ ಡಿಜಿಟೋರಂ ಪ್ರೊಫಂಡಸ್ ಸ್ನಾಯುಗಳು ಅಗತ್ಯವೆನಿಸಿದಾಗ ಕೊಂಡಿಯುಗುರುಗಳನ್ನು ಚಾಚಲು ಸಹಾಯಕವಾಗಿವೆ. ಎರಡನೆಯ ಬೆರಳೆಲುಬು ಮತ್ತು ಮೆಟಟಾರ್ಸಲ್ ತುದಿಗಳ ಮೇಲಿರುವ ಮೆತ್ತೆಗಳ ಮೇಲೆ ದೇಹದ ಭಾರ ಬೀಳುತ್ತದೆ. ಕಾರ್ಪಸ್‌ನ ಸ್ಕ್ಯಾಫಾಯ್ಡ್ ಮತ್ತು ಲೂನಾರ್ ಮೂಳೆಗಳು ಕೂಡಿಕೊಂಡಿರುವುದು ಎಲ್ಲ

ಆಧುನಿಕ ಕಾರ್ನಿವೋರಗಳ ವಿಶೇಷ ಲಕ್ಷಣ. ಮರವಾಸಿಗಳಲ್ಲಿ ಒರಟಾದ ನೆಲದ ಮೇಲೆ ನಡೆಯಲು, ಮೆಲಕ್ಕೆ ಮತ್ತು ಕೆಳಕ್ಕೆ ಏರಿಳಿಯಲು ಕಾಲು ಮತ್ತು ಬೆನ್ನು ಮೂಳೆಯ



ಸಿಂಹ

ರಚನೆಯಲ್ಲಿ ಸಾಕಷ್ಟು ಮಾರ್ಪಾಡಾಗಿವೆ. ನೀಳದೇಹದ ಹೆಚ್ಚು ಭಾರವನ್ನು ಮುಂಗಾಲುಗಳು ಹೊರುವುದಕ್ಕಾಗಿ ಹೊರಭಾಗದ ನ್ಯೂರಲ್ ಮುಳ್ಳುಗಳು ಎತ್ತರದಲ್ಲಿವೆ. ನೆಗೆಯುವಾಗ ಶಕ್ತಿಯುತ ಸ್ಯಾಕ್ರೊ ಸ್ಪೈನಾಲಿಸ್ ಮಾಂಸಗಳ ಒತ್ತಡವನ್ನು ಕಶೇರುಕ ಸ್ಥಂಬ ತಡೆದುಕೊಳ್ಳುತ್ತದೆ. ಲಂಬಾರ್‌ನಲ್ಲಿ ಪಾರ್ಶ್ವಪ್ರವರ್ಧಗಳು ಅಗಲವಾಗಿವೆ. ಮುಂಗಾಲುಗಳ ಅಲ್ನ ಮತ್ತು ಫಿಬುಲಾಗಳು ಸ್ಪಷ್ಟವಾಗಿವೆ. ಹಿಂಗಾಲುಗಳ ಫೀಮರ್‌ನಲ್ಲಿ ಮೂರನೆಯ ಟ್ರೋಕ್ಯಾಂಟರ್ ಇಲ್ಲ. ಕ್ಲ್ಯಾವಿಕಲ್‌ಗಳು ಇಲ್ಲ ಅಥವಾ ಕ್ಷೀಣಿಸಿವೆ. ವನ್ಯಜೀವಿಗಳಲ್ಲಿ ದೇಹದ ಸಮತೋಲನಕ್ಕಾಗಿ ಚೆನ್ನಾಗಿ ಬೆಳೆದ ಬಾಲವಿದೆ. ಬಾಲದಲ್ಲಿ ಮೂರು ಕಶೇರುಕಮಣಿಗಳಿರುವ ಮ್ಯಾಂಕ್ಸ್ ಮಾದರಿಯ ವೈಪರೀತ್ಯವನ್ನು ಕಾಣುತ್ತೇವೆ.



ಕ್ಲೌಡೆಡ್ ಚಿರತೆ

ದಂತಸಮೂಹ: ಮೂಲತ: ದಂತರಚನೆ ಒಂದೇ ಆಗಿದ್ದರೂ ಆಹಾರ ಸೇವನೆಗನುಗುಣವಾಗಿ ಸ್ವಲ್ಪ ವೈವಿಧ್ಯತೆಯನ್ನು ತೋರುತ್ತವೆ. ಕ್ಷೀರದಂತ ಮತ್ತು ಶಾಶ್ವತ ಹಲ್ಲುಗಳಿರುತ್ತವೆ. ಪ್ರತಿ ದವಡೆಯ ಪ್ರತಿ ಪಕ್ಕದಲ್ಲಿ ಮೂರು ಬಾಚಿ ಹಲ್ಲುಗಳಿರುತ್ತವೆ. ಅವುಗಳಲ್ಲಿ ಮಧ್ಯದ ಹಲ್ಲು ಚಿಕ್ಕದು. ಬಾಚಿ ಹಲ್ಲುಗಳು ಇರಿಯಲು ಸಹಾಯಕವಾಗಿವೆ. ಕೋರೆಹಲ್ಲುಗಳು ಮೊನಚಾಗಿದ್ದು ಎಲ್ಲ ಹಲ್ಲುಗಳನ್ನು ಮೀರಿ ಚಾಚಿರುತ್ತವೆ. ಪ್ರತಿ ಪಕ್ಕದಲ್ಲಿ ಒಂದೊಂದರಂತೆ ಇರುವ ಈ ಕೋರೆಹಲ್ಲುಗಳು ಚುಚ್ಚಲು ಅಥವಾ ತಿವಿಯಲು ಸಹಾಯಕವಾಗಿವೆ. ಮುಂದವಡೆ ಮತ್ತು ದವಡೆ ಹಲ್ಲುಗಳ ಸಂಖ್ಯೆ ವೈವಿಧ್ಯವಾಗಿದೆ. ಮೇಲ್ದವಡೆಯಲ್ಲಿ ಇವುಗಳ ಗಾತ್ರ ಮತ್ತು ಸಂಕೀರ್ಣತೆ ಮೊದಲದರಿಂದ ನಾಲ್ಕನೆಯದರವರೆಗೆ ಹೆಚ್ಚುತ್ತಾ ಹೋಗಿ ನಂತರ ಕೊನೆಯ ದವಡೆ ಹಲ್ಲಿನವರೆಗೆ ಕ್ಷೀಣಿಸುತ್ತಾ ಹೋಗುತ್ತದೆ. ಅದೇ ಕೆಳದವಡೆಯಲ್ಲಿ ಮೊದಲ ಮುಂದವಡೆ ಹಲ್ಲಿನಿಂದ ಕೇವಲ ದವಡೆ ಹಲ್ಲಿನವರೆಗೆ ಗಾತ್ರ ಮತ್ತು ಸಂಕೀರ್ಣತೆ ಹೆಚ್ಚುತ್ತದೆ.

ಮೇಲ್ದವಡೆಯ ಕೊನೆಯ (ನಾಲ್ಕನೆಯದು)ಮುಂದವಡೆ ಹಲ್ಲು ಮತ್ತು ಕೆಳದವಡೆಯ ಮೊದಲ ದವಡೆ ಹಲ್ಲು ವಿಶೇಷ ಮಾರ್ಪಾಡನ್ನು ತೋರುತ್ತವೆ. ಆಹಾರವನ್ನು ಜಗಿಯುವಾಗ ಇವು ಕತ್ತರಿಯ ಅಲಗುಗಳಂತೆ ಪರಸ್ಪರ ವಿರುದ್ಧವಾಗಿ ಚಲಿಸುತ್ತವೆ. ಮೇಲಿನದಕ್ಕೆ ಹೊರ ಏಣಿದ್ದು ಪ್ಯಾರಾಕೋನ್ ಮತ್ತು ಮೆಟಾಕೋನ್‌ಗಳಿಲ್ಲದ ಒಂದೇ ಕತ್ತರಿಸುವ ಅಲಗಿನಂತಿವೆ. ಪ್ರೋಟೋಕೋನ್ ಹಲ್ಲಿನ ಮುಂಭಾಗದಲ್ಲಿ ಒಳಬಾಗಿದ ಏಣಿನ ಮತ್ತೊಂದು ಅಲಗಾಗಿದೆ. ಕೆಳಗಿನದರಲ್ಲಿ ಪ್ಯಾರಾಕೋನ್ ಮತ್ತು ಪ್ರೋಟೋಕೋನ್‌ಗಳು ಅಲಗಿನಂತಿವೆ. ಮೇಲಿನ ಹಲ್ಲಿಗೆ ಮೂರು ಏಣಿನ ಶಿಖರ ಮತ್ತು ಮೂರು ಬೇರುಗಳಿವೆ. ಕೆಳ ಹಲ್ಲಿನಲ್ಲಿ ಎರಡು ಬೇರುಗಳು, ಬಾಹ್ಯ ಅಲಗು ಮತ್ತು ಎರಡು ಶೃಂಗಗಳಿವೆ. ಈ ಶೃಂಗಗಳಲ್ಲಿ ಪಶ್ಚದ್ದು ದೊಡ್ಡದು. ಜೊತೆಗೆ ಒಂದು ಏಣು ಮತ್ತು ಒಂದು ಟ್ಯಾಲನ್ ಇದೆ. ಈ ರೀತಿಯ ಹರಿತವಾದ ಹಲ್ಲುಗಳನ್ನು ಕಾರ್ನೇಸಿಯಲ್ ಹಲ್ಲುಗಳು ಅಥವಾ ಸಕ್ಟೋರಿಯಲ್ (ಸಿಗಿಯುವ) ಹಲ್ಲುಗಳು ಎನ್ನುತ್ತಾರೆ. ಕಾರ್ನೇಸಿಯಲ್ ಹಲ್ಲಿನ ಹಿಂಭಾಗದವು ವಿಸ್ತಾರ ಶಿಖರಗಳನ್ನು ಪಡೆದಿವೆ ಮತ್ತು ಮೂರು ಏಣುಗಳಿವೆ. ಅದೇ ಸರ್ವಭಕ್ಷಕಗಳಲ್ಲಿ ನಾಲ್ಕು ಅಥವಾ ಬಹು ಏಣುಗಳಿರಬಹುದು. ಮಾಂಸಸೇವನೆಯು ಹೆಚ್ಚಿದಂತೆಲ್ಲಾ ಈ ಹಲ್ಲುಗಳು ದುರ್ಬಲವಾಗುತ್ತವೆ ಮತ್ತು ಕಡಿಮೆಯಾಗುತ್ತವೆ. ಫೆಲಿಡೆಯಲ್ಲಿ (ಹುಲಿ) ಮೇಲಿನ ದವಡೆಯಲ್ಲಿ ಒಂದು ಜೊತೆ ಮಾತ್ರವಿದ್ದು ಕೆಳದವಡೆಯಲ್ಲಿ ಒಂದೂ ಇರುವುದಿಲ್ಲ. ಸಂಪೂರ್ಣ ಮಾಂಸಾಹಾರಿಗಳಲ್ಲಿ ದವಡೆ ಹಲ್ಲುಗಳಲ್ಲಿ ಹರಿತವಾದ ಕಂದಕಗಳು ತಿನ್ನುವ ಆಹಾರ ಜೀವಿಯ ಮೂಳೆಯ ಮಾಂಸವನ್ನು ಕತ್ತರಿಸಿ ತೆಗೆಯಲು ಹೊಂದಿಕೊಂಡಿವೆ. ಅದೇ ಆಮ್ನಿವೋರ ಮತ್ತು ಸಸ್ಯಾಹಾರಿಗಳಲ್ಲಿ ಪಶ್ಚದವಡೆ ಹಲ್ಲು ವಿಸ್ತಾರ ಏಣಿನಿಂದ ಕೂಡಿದ ಜಗಿಯುವ ಶೃಂಗಗಳನ್ನು ಪಡೆದಿವೆ.

ಎರಡು ದವಡೆಗಳು ಬಲಯುತವಾಗಿದ್ದು ಅಡ್ಡ ಹರಡಿದ ಚಿಲಕದಂತೆ ಬಿಗಿಯಾಗಿ ಕೀಲಿಕೊಂಡಿವೆ. ಇದರಿಂದಾಗಿ ಇತರ ಸ್ತನಿಗಳಲ್ಲಿ ಕಾಣಬರುವ ಸುತ್ತು ಚಲನೆ ಇಲ್ಲ. ಹಲ್ಲಿನ ಮತ್ತು ಕುತ್ತಿಗೆಯ ಮಾಂಸಗಳು ಚೆನ್ನಾಗಿ ಬೆಳೆದಿವೆ. ದವಡೆ ಮಾಂಸಗಳಲ್ಲಿ ಟೆಂಪೊರಲ್‌ಗಳು ಶಕ್ತಿಯುತವಾಗಿವೆ. ಅವುಗಳ ಬಂಧನಕ್ಕಾಗಿ ದವಡೆಯಲ್ಲಿ ಬೃಹತ್ ಕೋರಕಾಯಿಡ್ ಪ್ರವರ್ಧವಿದೆ ಮತ್ತು ಕೆಲವು ವೇಳೆ ತಲೆ ಬುರುಡೆಯ ಮೇಲೆ ಉದ್ದುದ್ದ ಹರಡಿದ ಶಿಖೆಗಳಿವೆ. ಗ್ಲಿನಾಯಿಡ್ ಕುಳಿಗಳು ಆಳವಾಗಿದ್ದು ಎದ್ದು ಕಾಣುವ ಪಶ್ಚಗ್ಲಿನಾಯಿಡ್ ರಚನೆಗಳನ್ನು ಪಡೆದಿವೆ. ಜೊತೆಗೆ ಅಡ್ಡಡ್ಡಲಾದ ನೀಳ ಆರ್ಟಿಕ್ಯುಲಾರ್ ರಚನೆಗಳಿವೆ. ಇದರಿಂದಾಗಿ ಆಹಾರ ಜೀವಿಯನ್ನು ಹಿಡಿದಾಗ ಕೆಳದವಡೆಯನ್ನು ಮೇಲಕ್ಕೆ ಮತ್ತು ಕೆಳಕ್ಕೆ ಚಲಿಸಬಹುದು. ಆದರೆ ಸುತ್ತು ಚಲನೆ ಇಲ್ಲದಿರುವುದರಿಂದ ಟೆರಿಗಾಯಿಡ್ ಮಾಂಸಗಳು ಮತ್ತು ಅವುಗಳ ಕುಳಿಗಳು ಕ್ಷೀಣಿಸಿವೆ.

ತಲೆಬುರುಡೆ: ನಾಸಿಕ ಕೋಣೆಗಳ ಕೋಮಲ ಸುರಳಿ ಮೂಳೆಗಳಲ್ಲಿ ಮ್ಯಾಕ್ಸಿಲ್ಲಾದ ಒಳಮೇಲ್ಮೈ ಪಕ್ಕಗಳಿಂದ ಹುಟ್ಟಿಕೊಂಡ ಅಗ್ರ ಮ್ಯಾಕ್ಸಿಲ್ಲೋಟರ್ಬೈನಲ್‌ಗಳು ಮತ್ತು ಪಶ್ಚ ಎತ್ಮೊಟರ್ಬೈನಲ್‌ಗಳಿವೆ. ಬಾಯಿಯ ಮೇಲ್ಛಾವಣಿಯಲ್ಲಿ ಒಂದು ಜೊತೆ ತೆರಪು ರಂಧ್ರಗಳಿವೆ. ಇವು ಮ್ಯಾಕ್ಸಿಲ್ಲೊಪ್ಯಾಲಟೈನ್‌ಗಳ ಸೇರಿಕೆಯಲ್ಲಿ ಅಥವಾ ಅದಕ್ಕಿಂತ ಸ್ವಲ್ಪ ಮುಂಚೆ ಇರಬಹುದು.

ಹುಲಿಯ ತಲೆಬುರುಡೆ ಮತ್ತು ಕೋರೆ ಹಲ್ಲುಗಳು

ಕಿವಿಯ ಕೋಶವನ್ನು ಒಳಗೊಂಡಿರುವ ಮೂಳೆಯನ್ನು ಆಡಿಟರಿ ಬುಲ್ಲಾ ಸುತ್ತುವರೆದಿದೆ. ಇದು ಸಂಪೂರ್ಣ ಅಥವಾ ಭಾಗಶ:ವಾಗಿ ಟಿಂಪ್ಯಾನಿಕ್ ಮೂಳೆಯಿಂದಾಗಿದೆ. ಪಶ್ಚದಲ್ಲಿ ಅಪರೂಪವಾಗಿ ಮೃದ್ವಸ್ಥಿ ಇರಬಹುದು. ಆಡಿಟರಿ ಬುಲ್ಲಾದ ಒಳಕೋಣೆಯನ್ನು ಎರಡು ಮೂಳೆಗಳು ಸೇರುವ ರೇಖೆಯಿಂದ ಹೊರಡುವ ಒಂದು ಪಟ್ಟಿ ವಿಭಾಗಿಸುತ್ತದೆ. ಕರ್ಣಬುಲ್ಲಾಗಳು ದೊಡ್ಡವು ಮತ್ತು ಗೋಳಾಕಾರದಲ್ಲಿವೆ. ಹಿಂಭಾಗದ ಆಕ್ಸಿಪಿಟಲ್ ಮೂಳೆ ವಿಸ್ತಾರವಾಗಿ ಪ್ಯಾರಾ ಆಕ್ಸಿಪಟಲ್ ರಚನೆಗಳಾಗಿವೆ. ಆಡಿಟರಿ ತೆರೆಪಿನ ಹಿಂಭಾಗದಲ್ಲಿ ಮ್ಯಾಸ್ಟಾಯಿಡ್ ಎಂಬ ಮತ್ತೊಂದು ರಚನೆ ಇದೆ. ಟೆಂಪೊರಲ್ ಕುಳಿ ವಿಶಾಲವಾಗಿದ್ದು ಕಣ್ಣು ಗೂಡಿನಿಂದ ಬೇರ್ಪಟ್ಟಿಲ್ಲ. ಈ ಕುಳಿಗಳ ಒಳಭಿತ್ತಿಯ ಕೆಳಗೆ ಆಲಿಸ್ಫಿನಾಯಿಡ್ ನಾಲೆ ಎಂಬ ಮೂಳೆಯ ಹಳ್ಳವೊಂದು ಆಗಾಗ ಕಂಡು ಬರುತ್ತದೆ. ಕ್ಯಾರೋಟಿಡ್ ಆರ್ಟರಿಯ ಶಾಖೆಯೊಂದು ಇದರ ಮೂಲಕ ಸಾಗುತ್ತದೆ. ಆರ್ಬಿಟ್ ಹಿಂಭಾಗದಲ್ಲಿ ಮುಚ್ಚಿರುವುದಿಲ್ಲ. ಆದರೆ ಫ್ರಾಂಟಲ್ ಮತ್ತು ಪಶ್ಚ ಆರ್ಬೈಟಲ್ ರಚನೆಗಳಿವೆ. ಜ್ಯೂಗಲ್ ಶಕ್ತಿಯುತವಾಗಿದೆ.

ಮೃದು ಅಂಗಗಳು: ಪ್ರತಿ ಕಪೋಲ ಪಕ್ಕದಲ್ಲೂ ಆರು ಅಥವಾ ಹೆಚ್ಚು ಸಾಲುಗಳ ಮೇಲ್ತುಟಿಯ ಗೊಂಚಲುಮೀಸೆ ಇದೆ. ಕಪೋಲದಲ್ಲಿ ಬಿಡಿಯಾದ ಕೆಲವು ಮೀಸೆಗಳು ಮತ್ತು ಗಂಟಲಿನ ಮೇಲೆ ಮಧ್ಯವರ್ತಿ ಮೀಸೆಗೊಂಚಲೂ ಇರುತ್ತವೆ. ನಾಸಿಕರಂಧ್ರಗಳು ಬೆತ್ತಲೆಯಾದ ಗ್ರಂಥಿಯುತ ಚರ್ಮ (ರೈನೇರಿಯಂ) ದಿಂದ ಸುತ್ತುವರೆದಿದೆ. ಮುಂಭಾಗದಲ್ಲಿ ಮೇಲ್ತುಟಿಯ ಅಂಚಿನವರೆಗೆ ಹಳ್ಳವಿರುವ ಚರ್ಮ ಪಟ್ಟಿಯಂತೆ ಫಿಟ್ರಮ್ ಆಗಿ ಮುಂದುವರೆದಿದೆ. ಕಿವಿಯಲ್ಲಿ ಚೆನ್ನಾಗಿ ರೂಪುಗೊಂಡ ಬಾಹ್ಯ ಕಿವಿ ವಿಸ್ತಾರವಾದ ಟೊಳ್ಳಾದ ಬುಡಕ್ಕೆ ಅಂಟಿಕೊಂಡಿದೆ. ಹೊರಕಿವಿಯ ಭಿತ್ತಿಗಳನ್ನು ಮೃದ್ವಸ್ಥಿ ಏರುಗಳು ಆಧರಿಸುತ್ತವೆ. ಇದರಲ್ಲಿ ಒಂದಾದ ಸೂಪ್ರಾ ಟ್ರೈಗ್ರೆಸ್ ಕೆಲವು ವೇಳೆ ಕವಾಟ ಕಿವಿಯ ತೆರಪನ್ನು ಮುಚ್ಚಲು ಸಹಾಯಕವಾಗಿದೆ. ಕಿವಿಯ ಪಶ್ಚ ಅಂಚಿನ ಕೆಳಭಾಗದ ಮೇಲೆ ಉಪ ಕವಾಟದಿಂದ ಕೂಡಿದ ಜೇಬಿನಂತಿರುವ ಬರ್ಸಾವು ಮತ್ತೊಂದು ಉಪಯುಕ್ತ ವಿಶೇಷ ಲಕ್ಷಣ.

ಅನ್ನನಾಳ ಮೊಟಕಾಗಿದೆ. ಜಠರ ಸರಳವಾಗಿದೆ. ಸೀಕಂ ಚಿಕ್ಕದು. ಆದರೆ, ಆರ್ಸಿಡೆಯಲ್ಲಿ ಸೀಕಂ ಇಲ್ಲ. ರೆಕ್ಟಂ ಮಾದರಿಯವಾಗಿ ಒಂದು ಜೊತೆ ಗ್ರಂಥಿಗಳಿಂದ ತೆರೆಯುತ್ತದೆ. ಇವು ಗುದದ್ವಾರದ ಪರಿಮಿತಿಯಲ್ಲಿಯೇ ತೆರೆಯುತ್ತವೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಇವುಗಳ ಸ್ರಾವಕವು ಒಂದು ಮೃದು ಚಾಲಕ ಅಥವಾ ಸೋಂಕು ನಿವಾರಕವಾಗಿ ವರ್ತಿಸುತ್ತದೆ. ಆದರೆ ಕೆಲವು ಜಾತಿಗಳಲ್ಲಿ, ಅದರಲ್ಲೂ ಸ್ಕಂಕ್‌ಗಳಂತಹ ಮಸ್ಟಿಲಿಡೆಗಳಲ್ಲಿ ವಿಶೇಷವಾಗಿ ಸ್ರಾವಕವು ಅತಿಯಾಗಿದ್ದು ವಾಕರಿಕೆ ಬರಿಸುತ್ತದೆ. ಇದು ರಕ್ಷಣೆಯ ಮುಖ್ಯ ಸಾಧನವೂ ಹೌದು. ಕರಡಿಗಳಲ್ಲಿ ಈ ಗ್ರಂಥಿಗಳು ಗಮನಾರ್ಹವಾಗಿಲ್ಲ ಮತ್ತು ಸೀಲ್‌ಗಳಲ್ಲಿ ಇಲ್ಲವೇ ಇಲ್ಲ.

ವೃಷಣಗಳು ಸ್ಕ್ರಾಟಂಗೆ ಇಳಿದಿವೆ. ಸಾಮಾನ್ಯವಾಗಿ ಆಸ್ ಶಿಶ್ನವಿದೆ. ಗ್ಲ್ಯಾನ್ಸ್ ಶಿಶ್ನವು ಪುನ: ಬಾಗಿದ ಕೊಂಡಿಗಳಿಂದ ಪದೇ ಪದೇ ಸುತ್ತುವರೆದಿದೆ. ಕೆಲವಲ್ಲಿ ಇದು ಊದಿಕೊಂಡು ಸಂಭೋಗ ಕಾಲದಲ್ಲಿ ಯೋನಿಯಿಂದ ಹೊರಬರುವುದಿಲ್ಲ. ಆದಿಮ ಸ್ತನಿಗಳಲ್ಲಿ ಇಬ್ಭಾಗವಾದ ಗರ್ಭಕೋಶವಿದೆ. ಕೋರಿಯೊವೈಟಲ್ಲೈನ್ ಜರಾಯು (ಪ್ಲಾಸೆಂಟ)ವಿದೆ. ಕೋರಿಯೋ ಅಲಂಟಾಯಿಕ್ ಜರಾಯು ವ್ಯಾಸೊ ಕೋರಿಯಲ್ ಮಾದರಿಯದು. ಕೋರೊಯಾನಿನ ವಿಲ್ಲೈ ಭಾಗಗಳು ಪಟ್ಟಿ ರೀತಿಯಲ್ಲಿ ಉಳಿದಿರುವುದರಿಂದ ವಲಯ ಜರಾಯು ಉಳಿದಿದೆ.

ಅನೇಕ ಕಾರ್ನಿವೋರಗಳು ಸಾಕು ಪ್ರಾಣಿಗಳಿಗೆ ಮತ್ತು ಮನುಷ್ಯ ಜೀವನಕ್ಕೆ ಹಾನಿಕಾರಕಗಳಾದರೂ ಆಟ್ಟೆರಾ, ಮಾರ್ಟೆನ್, ಮಿಂಕ್ ನರಿ ಮತ್ತು ತುಪ್ಪುಳ ಸೀಲ್‌ಗಳಂತಹವು ಅಮೂಲ್ಯ ತುಪ್ಪುಳಧಾರಿಗಳು. ಜೊತೆಗೆ ಕೃಷಿಗೆ ತೀವ್ರ ಹಾನಿಕಾರಕ ದಂಶಕಗಳಂತಹ ಅನೇಕ ಸಂತಾನಗಳನ್ನು ನಿಯಂತ್ರಿಸುತ್ತವೆ. ಬೆಕ್ಕುನಾಯಿ, ಫೆರ್ರೆಟ್, ಮುಂಗುಸಿ ಮತ್ತು ಬೇಟೆ ಚಿರತೆ ಅಥವಾ ಲಿಯೊಪಾಂಕ್ ಗಳು ಸಾಕು ಪ್ರಾಣಿಗಳೂ ಹೌದು.

ವರ್ಗೀಕರಣ: ಕಾರ್ನಿವೊರಾ ಗಣದಲ್ಲಿ ಮೂರು ಉಪಗಣಗಳಿವೆ– 1) ಕ್ರಿಯಡಾಂಟ, 2) ಫಿಸ್ಸಿಪೀಡಿಯ ಮತ್ತು 3) ಪಿನ್ನಿಪೀಡಿಯ

1) ಉಪಗಣ: ಕ್ರಿಯಡಾಂಟ – ಕ್ರಿಯಡಾಂಟ ಎಂದರೆ ಮಾಂಸ–ದಂತ ಎಂದರ್ಥ. ಇವು ಅವನತಿಗೊಂಡಿರುವ ಡಿಜಿಟಿಗ್ರೇಡ್ ಅಥವಾ ಅರೆ ಪ್ಲಾಂಟಿಗ್ರೇಡ್ ಮಾಂಸಾಹಾರಿಗಳು. 5 ಅಥವಾ 4 ಬೆರಳುಳ್ಳ ನಖಗಳಿಂದ ಕೂಡಿದ ಪಾದಗಳಿವೆ. ಸಂಪೂರ್ಣ ದಂತ ರಚನೆ ಇದೆ. ವಿಸ್ತಾರವಾದ ಕೋರೆ ಹಲ್ಲುಗಳಿವೆ. ಮಿದುಳು ಚಿಕ್ಕದು ಮತ್ತು ದುರ್ಬಲವಾಗಿ ಕುಳಿಗೊಂಡಿದ್ದಿರಬಹುದು. ಯೂಥೀರಿಯನ್ ಸ್ತನಿಗಳ ಮೂಲ ಮಾದರಿಗಳಾದ ಸಮಕಾಲೀನ ಕೀಟಾಹಾರಿಗಳನ್ನೇ ಹೋಲುತ್ತಿದ್ದವು. ಚಿಕ್ಕ ತಲೆ ಬರುಡೆ, ಟೆಂಪೊರಾಲಿಸ್ ಮಾಂಸಗಳಿಗಾಗಿ ಉದ್ದ ಶಿಖೆಗಳು, ಪೂರ್ಣ ಸಂಖ್ಯೆಯ ದಂತ ಸಮೂಹ, ಟ್ರೈಟುಬರ್‌ಕ್ಯುಲಾರ್ ಮಾದರಿಯಲ್ಲಿ ಜೋಡಿಸಿದ ಚೂಪು ಏಣುಗಳು ಮತ್ತು ಕಾರ್ನೇಸಿಯಲ್‌ಗಳಿಲ್ಲದಿರುವಿಕೆ ಮುಖ್ಯ ಲಕ್ಷಣಗಳು. ಅಂಗುಲೇಟಗಳಂತಹ ಕಾರ್ನಿವೋರಾಗಳಲ್ಲದವಕ್ಕೆ ಇವು ಆಧಾರವಾಗಿದ್ದಿರಬಹುದು. ಆಧುನಿಕ ಕಾರ್ನಿವೋರಾಗಳಿಗೂ ಮತ್ತು ಇವಕ್ಕೂ ಇದ್ದ ಇತರೆ ವ್ಯತ್ಯಾಸವೆಂದರೆ ಸ್ಕಾಫಾಯಿಡ್ ಮತ್ತು ಲ್ಯೂನೇಟ್‌ಗಳ ಪ್ರತ್ಯೇಕತೆ ಮತ್ತು ಸ್ಫಲಿತವಾಗದ ಕರ್ಣಬುಲ್ಲ.

ಬಹುಕಾಲದವರೆಗೆ ಇವನ್ನು ಇನ್ಸೆಕ್ಟಿವೋರದಲ್ಲಿ ಸೇರಿಸಲಾಗಿತ್ತು. ಆದರೆ ಇವುಗಳ ಸಂತತಿಯಲ್ಲಿ ಅನೇಕ ವಿಶೇಷತೆಗಳಿದ್ದುವು. ಆರ್ಕ್ಟೊಸಯನಿಡೆ, ಮಿಸೊನಿಕಾಯ್ಡಿಯ, ಆಕ್ಸಿನಾಯ್ಡಿಯ ಮತ್ತು ಮಯಕಾಯ್ಡಿಯ ಎಂಬ ನಾಲ್ಕು ಕುಟುಂಬಗಳಿದ್ದುವು. ಆರ್ಕ್ಟೊಸಯನಿಡೆ ಬಹುಶ: ಫೆರಂಗುಲೇಟ ಸಂದಣಿಯ ಮೂಲ ಪ್ರಾಣಿಗಳಿಗೆ ಹತ್ತಿರದ್ದಾಗಿರಬಹುದು. ಪೆಲಿಯೋಸೀನ್ ಮೇಲು ಪದರದ ಬಹುದೊಡ್ಡ ಪ್ರಾಣಿಯಾದ ಇದು ಸರ್ವಭಕ್ಷಿಯಾಗಿದ್ದಿರಬಹುದು. ಸರಳ ದಂತರಚನೆಯನ್ನು ಪಡೆದಿದ್ದುವು. ಇತರೆ ಮೂರು ಕುಟುಂಬಗಳು ಮಾರ್ಪಟ್ಟಿವೆ. ಕಾರ್ನೇಸಿಯಲ್ ಬೆಳೆಸಿಕೊಂಡಿವೆ. ಆರಂಭದ ಕೆಲವಲ್ಲಿ ಮೇಲಿನ ಮೊದಲನೆಯದು ಮತ್ತು ಕೆಳಗಿನ ಎರಡನೆಯದು ಅಥವಾ ಮೂರನೆಯ ಹಲ್ಲು ಕಾರ್ನೇಸಿಯಲ್‌ಗಳಾದುವು. ಇವನ್ನು ಮಿಥ್ಯ ಕಾರ್ನೇಸಿಯಲ್ ಎನ್ನಲಾಗಿದೆ. ಮಯಕಾಯ್ಡಿಯದಲ್ಲಿ ಆಧುನಿಕ ಕಾರ್ನೇಸಿಯಲ್‌ಗಳಿದ್ದುವು. ನಾಯಿಗಳನ್ನು ಹೋಲುವ ಡ್ರೋಮೊ ಸಯಾನ್, ನೀರು ನಾಯಿಯನ್ನು ಹೋಲುವ ಆಕ್ಸಿನ್, ಬೆಕ್ಕನ್ನು ಹೋಲುವ ಡಿಸ್ಸಾಕಸ್, ವೀಸಲ್‌ಗಳನ್ನು ಹೋಲುವ ಸೈನೊಪೆ, ಅಸಂಖ್ಯಾತ ಕತ್ತೆ ಕಿರುಬಗಳನ್ನು ಹೋಲುವ ವಿವಿಧ ಗಾತ್ರಗಳ ಹೈನೊಡಾನ್ ಮತ್ತು ಅಪಟೆಲೂರಸ್ ಕೊಂಕು ಕೋರೆಗಳಾಗಿ ಇಯೊಸೀನ್‌ನಲ್ಲಿದ್ದುವು. ಅನಂತರದ ಕಾರ್ನಿವೋರಗಳಿಗೆ ಇವು ತೋರುವ ಹೋಲಿಕೆಯಿಂದ ಈ ಆದಿ ಕಾರ್ನಿವೋರಗಳು ಪರಿಚ್ಛಿನ್ನ ವಿಕಾಸಕ್ಕೆ ಗಮನಾರ್ಹ ಉದಾಹರಣೆಗಳಾಗಿವೆ. ಇಯೋಸೀನ್ ನಂತರ ಅವುಗಳ ಸಂಖ್ಯೆ ಕಡಿಮೆಯಾಯಿತು. ಕೆಲವು ಪ್ಲಿಯೊಸೀನ್‌ನವರೆಗೆ ಉಳಿದಿದ್ದುವು. ಆದಿಯ ತೊಡಕಿನ ಸಸ್ಯಾಹಾರಿಗಳನ್ನು ಹಿಡಿಯಲು ಇವು ಸಮರ್ಥವಾಗಿದ್ದರೂ ಅನಂತರದ ವೇಗವಾಗಿ ಚಲಿಸುವ ಅಂಗುಲೇಟಗಳನ್ನು ಹಿಡಿದು ತಿನ್ನಲು ಅಸಮರ್ಥವಾದುವು.

2. ಉಪಗಣ: ಫಿಸ್ಸಿಪೀಡಿಯ: ಇಯೋಸೀನಿನ ಅಂತ್ಯದ ವೇಳೆಗೆ ಕಾಣಿಸಿಕೊಂಡವು. ಇವುಗಳ ಅತಿ ಹಿಂದಿನ ಮಿಯಾಸಿಡೆ ಗುಂಪು ಕೆಲವೊಮ್ಮೆ ಕ್ರಿಯಾಡಾಂಟಗಳೊಡನೆ ಸೇರಿಸಿ ವರ್ಗೀಕರಿಸುವಷ್ಟು ಹೋಲಿಕೆ ತೋರುತ್ತಿದ್ದುವು. ಮಿಯಾಸಿಡೆ ತೀರಾ ಪುಟ್ಟ ಪ್ರಾಣಿಗಳು; ಪ್ರಾಯಶ: ಶಾಖಾಹಾರಿಗಳು; ಆರ್ಕ್ಟೊಸಯನಿಡೆಗಳಿಗೆ ತೀರಾ ಹತ್ತಿರವಾಗಿದ್ದವು. ಆದರೆ, ನಾಲ್ಕನೆಯ ಮೇಲಿನ ಮುಂದವಡೆ ಹಲ್ಲು ಮತ್ತು ಕೆಳಗಿನ ಮೊದಲ ದವಡೆಹಲ್ಲು ಕಾರ್ನೇಸಿಯಲ್ ಹಲ್ಲುಗಳಾಗುವ ಸುಳಿವನ್ನು ತೋರಿದ್ದುವು. ಇಯೋಸೀನಿನ ಕಡೆಯಲ್ಲಿ ಮತ್ತು ಆಲಿಗೊಸೀನಿನ ಮೊದಲಲ್ಲಿ ಅನೇಕ ಫಿಸ್ಸಿಪೀಡಿಯ ಕುಟುಂಬಗಳು ಕಾಣಿಸಿಕೊಂಡವು. ಇವು ಮಿಯಾಸಿಡೆಗಳಿಂದ ಉದ್ಭವಿಸಿರಬಹುದು. ಇಲ್ಲಿ ಎರಡು ಅಭಿಕುಟುಂಬಗಳಿವೆ: ಅ) ಕ್ಯಾನಾಯ್ಡಿಯ ಮತ್ತು (ಬ) ಅಲ್ಯುರಾಯ್ಡಿಯ

ಅ) ಅಭಿಕುಟುಂಬ ಕ್ಯಾನಾಯ್ಡಿಯ:–

ಕರ್ಣಬುಲ್ಲ ಹಿಗ್ಗಿದೆ ಅಥವಾ ಕುಗ್ಗಿದೆ. ಅದರ ಕೋಣೆ ಪಟ್ಟಿಯಿಂದ ಅಪೂರ್ಣವಾಗಿ ವಿಭಾಗಗೊಂಡಿದೆ. ಪ್ಯಾರಾಆಕ್ಸಿಪಿಟಲ್ ರಚನೆಗಳು ಚಿಕ್ಕವು ಅಥವಾ ಇಲ್ಲ. ದಂತ ಸಮೂಹ 3142/3143. ಇದರಲ್ಲಿ ಕ್ಯಾನಿಡೆ; ಉರ್ಸಿಡೆ, ಐಲುರೊಪಾಯ್ಡಿಯ, ಐಲುರಿಡೆ, ಮಸ್ಟರಿಡೆ ಮತ್ತು ಪ್ರೊಸೈಯಾನ್ ಎಂಬ ಆರು ಕುಟುಂಬಗಳಿವೆ.

ಕ್ಯಾನಿಡೆ ಪ್ರಾಣಿಗಳಲ್ಲಿ ಪ್ಯಾರಾಆಕ್ಸಿಪೀಟಲ್ ರಚನೆಗಳು ಉದ್ದನಾಗಿದ್ದು ಬುಲ್ಲಾಗಳೊಂದಿಗೆ ಸಂಪರ್ಕ ಪಡೆದಿವೆ. ನೀಳ ಪಾದಗಳಿವೆ. ಮುಂಗಾಲಿನಲ್ಲಿ 4 ಅಥವಾ 5 ಬೆರಳುಗಳು ಮತ್ತು ಹಿಂಗಾಲಿನಲ್ಲಿ 4 ಬೆರಳುಗಳಿವೆ. ಮೆತ್ತೆಗಳಿಲ್ಲ. ನಖಗಳನ್ನು ಹಿಂದಕ್ಕೆಳೆದುಕೊಳ್ಳಲು ಆಗುವುದಿಲ್ಲ. ಸೀಕಂ ಚಿಕ್ಕದು. ತೋಳ, ನಾಯಿ, ಗುಳ್ಳೆನರಿ ಈ ಗುಂಪಿನವು. ಉರ್ಸಿಡೇ (ಕರಡಿಗಳು) ನಾಯಿಗಳ ಮೂಲ ಕವಲಿನ ಮಯೋಸೀನ್ ಅಡ್ಡ ಕವಲು. ಕಾರ್ನೇಸಿಯಲ್‌ಗಳಿಲ್ಲ. ಆಹಾರ ಜಗಿಯಲು ಸಹಾಯಕವಾಗುವ ಹಲ್ಲುಗಳಿವೆ. ಊರುಗಾಲಿನ ನಡಿಗೆ, 5 ಬೆರಳುಗಳು, ಚಿಕ್ಕಬಾಲ; ಸೀಕಂಇಲ್ಲ; ಸರ್ವಭಕ್ಷಿಗಳು; ಒಂದೇ ಮೂಳೆಯಿಂದಾದ ಟಿಂಪ್ಯಾನಿಕ್ ಇದೆ. ಕಣ್ಣಿನ ಬುಲ್ಲಾ ಕುಗ್ಗಿದೆ. ಪ್ಯಾರಾಆಕ್ಸಿಪಿಟಲ್ ರಚನೆಗಳು ಬುಲ್ಲಾಗಳಿಂದ ಪ್ರತ್ಯೇಕಗೊಂಡಿಲ್ಲ. ಕರಡಿಗಳು ಈ ಗುಂಪಿನ ಪ್ರಾಣಿಗಳು. ಐಲುರೊಪಾಯ್ಡಿಯದ ಪ್ರಾಣಿಗಳ ಪಾದಗಳಲ್ಲಿ ಕೂದಲುಗಳಿವೆ. ಬಿದಿರು ಕಡ್ಡಿಗಳನ್ನು ಹಿಡಿಯಲು ಅನುವಾಗಲು ಹೆಬ್ಬೆರಳಿನ ಪಕ್ಕದಲ್ಲಿ ವಿಶೇಷ ಮೂಳೆಯೊಂದಿದೆ. ಚೀನಾದಲ್ಲಿವೆ. ದೈತ್ಯ ಪಾಂಡ (ಐಲುರೊಪೋಡ) ಈ ಗುಂಪಿಗೆ ಸೇರಿದೆ. ಐಲುರಿಡೆ ಕುಟುಂಬದ ಪ್ರಾಣಿಗಳಲ್ಲಿ ಸೀಕಂ ಚಿಕ್ಕದು. ಪಾದಗಳಲ್ಲಿ ಕೂದಲಿವೆ. ನೇಪಾಳದಲ್ಲಿ ಕಂಡುಬರುತ್ತವೆ. ಬೆಕ್ಕಿನ ಪಾಂಡ ಉದಾಹರಣೆಗಳು. ಮಸ್ಟಲಿಡೆ ಕುಟುಂಬದವುಗಳಲ್ಲಿ ನೀಳ ಕುತ್ತಿಗೆ, ಬಾಗಿ ಬಳಕುವ ದೇಹ ಮತ್ತು ಚಿಕ್ಕ ಪಾದಗಳಿವೆ. ಮುಂಗುಲಿ (ಮಸ್ಟೆಲೆ), ಫೆರೆಟ್, ಸ್ಟೋಟ್, ಬ್ಯಾಡ್ಜರ್ ಕರಡಿ, ಧ್ರುವ ಬೆಕ್ಕು, ಮೆಫಿಟಿಸ್ ಸ್ಕಂಕ್, ಮಾರ್ಟಿಸ್, ಲಟ್ರ (ನೀರುನಾಯಿ) ಮತ್ತು ವೀಸಲ್ ಈ ಗುಂಪಿಗೆ ಸೇರಿವೆ. ಪ್ರೊಸೈಯಾನ್ ಕುಟುಂಬದವು ಸರ್ವಭಕ್ಷಿಗಳು. ಸರ್ವಭಕ್ಷಣೆಗೆ ಅನುವಾದ ದಂತ ಪಂಕ್ತಿ ಇದೆ. ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕದ ರಾಕೂನ್ ಈ ಗುಂಪಿಗೆ ಉದಾಹರಣೆ.

(ಬ) ಅಭಿಕುಟುಂಬ: ಅಲ್ಯುರಾಯ್ಡಿಯ: ಕರ್ಣಬುಲ್ಲದಲ್ಲಿ ಟಿಂಪ್ಯಾನಿಕ್ ಮತ್ತು ಎಂಟೊಟಿಂಪ್ಯಾನಿಕ್ ಎಂಬ ಎರಡು ಮೂಳೆಗಳಿವೆ. ಅದರಲ್ಲಿ ಪಟ್ಟಿಯಿಂದಾದ ಎರಡು ಕೋಣೆಗಳಿವೆ. ಪ್ಯಾರಾಆಕ್ಸಿಪಿಟಲ್ ರಚನೆಗಳು ಬುಲ್ಲಾಗಳಿಗೆ ನಿಕಟವಾಗಿ ಅಂಟಿಕೊಂಡಿವೆ. ಡಿಜಿಟಿಗ್ರೇಡ್ ಪಾದ ಮತ್ತು ಚಿಕ್ಕ ಸೀಕಂ ಇವೆ. ದಂತ ಸಮೂಹ 3131/3121.

ಇದರಲ್ಲಿ ನಾಲ್ಕು ಕುಟುಂಬಗಳು – ಫೆಲಿಡೆ, ವೈವರಿಡೆ, ಹರ್ಪೆಸ್ಟಿಡೆ, ಹಯನಿಡೆ. ಫೆಲಿಡೆಗೆ ಸೇರಿರುವ ಪ್ರಾಣಿಗಳಲ್ಲಿ ಮುಂದವಡೆ ಮತ್ತು ದವಡೆಗಳು ಕ್ಷೀಣಿಸಿವೆ. ಕಾರ್ನೆಸಿಯಲ್‌ಗಳು ಚೆನ್ನಾಗಿ ಬೆಳೆದಿವೆ. ಹಿಂದಕ್ಕೆಳೆದುಕೊಳ್ಳಬಹುದಾದ ನಖಗಳಿರುವ 5 ಬೆರಳುಗಳಿವೆ. ನೀಳ ಬಾಲವಿದೆ. ಜೈಗೊಮ್ಯಾಟಿಕ್ ಆರ್ಚ್ ಬಲಿಷ್ಠವಾಗಿದೆ. ಅಲಿಸ್ಫಿನಾಯಿಡ್ ನಾಲೆ ಇಲ್ಲ. ಚಿಕ್ಕ ಆಸ್ ಶಿಶ್ನವಿದೆ. ಬೆಕ್ಕುಗಳು, ಪ್ಯೂಮ, ಓಸಿಲಾಟ್, ಚಿರತೆ, ಸಿಂಹ, ಹುಲಿ, ಜಾಗುವಾರು ಇತ್ಯಾದಿ ಉದಾಹರಣೆಗಳು. ವೈವರಿಡೆ ಕುಟುಂಬದ ಪ್ರಾಣಿಗಳು ಫೆಲಿಡೆಗಿಂತ ಗಾತ್ರದಲ್ಲಿ ಚಿಕ್ಕವು. ಹೆಚ್ಚು ನೆಲವಾಸಿಗಳು. ದೊಡ್ಡ ಕಿವಿ, ಪ್ಲಾಂಟಿಗ್ರೇಡ್ ಅಥವಾ ಡಿಜಿಟಿಗ್ರೇಡ್ ಪಾದಗಳಿವೆ. ಮೆತ್ತೆಗಳಿವೆ ಪುನುಗು ಬೆಕ್ಕುಗಳು ಈ ಗುಂಪಿನವು. ಹರ್ಪೆಸ್ಟಿಡೆ ಗುಂಪಿನವುಗಳಿಗೆ ವೃತ್ತಾಕಾರದ ಚಿಕ್ಕ ಕಿವಿ, ಮಣ್ಣಿನಲ್ಲಿ ಅಡಗಿರುವಾಗ ಕಿವಿಯ ರಂಧ್ರಗಳನ್ನು ಮುಚ್ಚಲು ಅನುವಾದ ಮಡಿಕೆಗಳು ಇವೆ. ತೀವ್ರ ಹಿಂಸ್ರಜೀವಿ. ಫಾಸ್ಸೋರಿಯಲ್ ನಖಗಳಿವೆ. ಮುಂಗುಸಿಗಳು ಈ ಗುಂಪಿಗೆ ಸೇರಿವೆ. ಹಯನಿಡೆ ಗುಂಪಿನ ಕಾರ್ನಿವೋರಾಗಳಲ್ಲಿ ನಾಲ್ಕು ಬೆರಳುಗಳಿವೆ. ಚಿಕ್ಕದಾದ ಮೊಂಡು ನಖಗಳಿವೆ. ಅದನ್ನು ಹಿಂದಕ್ಕೆಳೆದುಕೊಳ್ಳಲಾಗುವುದಿಲ್ಲ. ಕಾಲು ಬೆರಳಿನಲ್ಲಿ ಮೆತ್ತೆಗಳಿವೆ. ದವಡೆ ಮತ್ತು ಕುತ್ತಿಗೆ ಗಾತ್ರದಲ್ಲಿ ದಪ್ಪವಾಗಿವೆ. ಅಗಲ ಕಿವಿಗಳಿವೆ. ಕತ್ತೆ ಕಿರುಬಗಳು ಈ ಗುಂಪಿಗೆ ಉದಾಹರಣೆಗಳು

2 ಉಪಗಣ: ಪಿನ್ನಿಪೀಡಿಯ: ಮಯೋಸೀನ್‌ನಿಂದಲೂ ಉಳಿದು ಬಂದಿರುವ ಕಡಲ ಕಾರ್ನಿವೊರಗಳು. ಇವುಗಳ ವಾಸ್ತವಿಕ ಸಂಬಂಧ ಸಂದೇಹಾಸ್ಪದವಾಗಿದೆ. ಒಂದೇ ಆದಿಮ ವಿಕಾಸದಿಂದಾಗಿ ಆದರೆ ಪ್ರತ್ಯುದ್ಭತೆಯಿಂದಾಗಿ ಪ್ರಾಯಶ: ಇವು ನೀರುನಾಯಿಗಳನ್ನು ಹೋಲುತ್ತವೆ. ಕರಡಿಗಳನ್ನೂ ದೂರದಲ್ಲಿ ಹೋಲುತ್ತವೆ. ದ್ವಿತೀಯಕವಾಗಿ ಪರಿಹೊಂದಾಣಿಕೆ ಪಡೆದ ದಂತರಚನೆ, ಜಲಜೀವನ ಮತ್ತು ಪಾದರಚನೆಗಳಲ್ಲಿ ಇವು ಇತರೆ ಕಾರ್ನಿವೋರಗಳಿಂದ ಭಿನ್ನವಾಗಿವೆ. ಐದು ಬೆರಳುಗಳುಳ್ಳ ಮೋಟುಪಾದವಿದೆ. ಪಾದದ ಬುಡಭಾಗ ದೇಹದ ಸಾಮಾನ್ಯ ಚರ್ಮದಲ್ಲಿ ಬಹುವಾಗಿ ಸೇರಿಹೋಗಿದೆ. ಎಲ್ಲ ಬೆರಳುಗಳನ್ನು ಒಂದು ಜಾಲ ಸೇರಿಸುತ್ತದೆ. ಅಪರೂಪವಾಗಿ ಕಂಡುಬರುವ ಚಿಕ್ಕ ನಖಗಳು ಅದೃಶ್ಯವಾಗುವ ಪ್ರವೃತ್ತಿಯನ್ನು ತೋರುತ್ತವೆ. ಸಾಮಾನ್ಯವಾಗಿ ಕೂದಲುಗಳಿರುತ್ತವೆ. ಇನ್ನು ಕೆಲವಲ್ಲಿ ತುಪ್ಪುಳವಿದೆ. ಫೋಸಿಡೆಯಲ್ಲಿ ದಪ್ಪನಾದ ಬ್ಲಬರ್ ಪದರವಿದೆ. ಬಾಚಿಹಲ್ಲುಗಳ 3/3 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿದ್ದು ಕೋನಾಕಾರದಲ್ಲಿವೆ. ಕೋರೆಹಲ್ಲುಗಳು ಕಾರ್ನಿವೋರಗಳಂತೆ ಚಾಚಿರುವುದಿಲ್ಲ. ದವಡೆ ಹಲ್ಲುಗಳು ಏಕರೀತಿಯಲ್ಲಿದ್ದು ಐದು ಅಥವಾ ಆರು ಇರಬಹುದು. ಕ್ಷೀರ ದಂತಗಳು ತಾಯಿಯ ಗರ್ಭದಲ್ಲಿರುವಾಗಲೆ ಅಥವಾ ಹುಟ್ಟಿದ ಕೂಡಲೆ ಬಿದ್ದು ಹೋಗುತ್ತವೆ. ಕ್ರೇನಿಯಂ ಗೋಳಾಕಾರದಲ್ಲಿದೆ. ಆರ್ಬಿಟ್ ಹಿಂದಕ್ಕೆ ತೆರೆದಿದೆ. ಬೃಹತ್ ಕರ್ಣ ಬುಲ್ಲಾವಿದೆ. ಅಸ್ಪಷ್ಟವಾದ ಪ್ಯಾರಾಆಕ್ಸಿಪಿಟಲ್ ಮತ್ತು ಮ್ಯಾಸ್ಟಾಯಿಡ್ ರಚನೆಗಳಿವೆ. ಮ್ಯಾಂಡಿಬಲ್‌ನಲ್ಲಿ ಕೊರೆನಾಯಿಡ್ ರಚನೆ ಇದೆ. ಚಿಕ್ಕ ಬಾಲವಿದೆ. ಕ್ಲಾವಿಕಲ್ ಇಲ್ಲ. ಸ್ಕ್ಯಾಫಾಯಿಡ್ ಮತ್ತು ಲ್ಯೂನಾರ್‌ಗಳು ಕೂಡಿವೆ. ಆಸ್ ಶಿಶ್ನವಿದೆ. ಮೋಟು ಸೀಕಂ ಇದೆ. ಕೌಪರ್ಸ್ ಗ್ರಂಥಿಗಳಿಲ್ಲ. 2 ಅಥವಾ 4 ಮೊಲೆಗಳಿವೆ. ಸ್ಕ್ರೋಟಂ ಇಲ್ಲ ಅಥವಾ ಬರಬಹುದು. ಕೆಲವು ಪ್ರಭೇದಗಳು ಕಡಲನ್ನು ಬಿಟ್ಟು ನದಿ, ಸರೋವರ ಹಾಗೂ ಒಳಭೂಕಡಲಿಗೆ ವಲಸೆ ಬರಬಹುದು.

ಓಟರಿಡೆ, ಫೋಸಿಡೆ ಮತ್ತು ಒಡೊಬಿನಿಡೆ ಎಂಬ ಮೂರು ಕುಟುಂಬಗಳಿವೆ. ಒಟರಿಡೇಗೆ ಸೇರಿದ ಕರ್ಣಸೀಲ್‌ಗಳಲ್ಲಿ ಚಿಕ್ಕ ಹೊರಕಿವಿ ಇದೆ. ನೆಲದ ಮೇಲೆ ನಡೆದಾಡಲು ಹಿಂಗಾಲುಗಳನ್ನು ಮುಂದಕ್ಕೆ ತಿರುಗಿಸಬಹುದು ಮತ್ತು ದೇಹಕ್ಕೆ ಅವು ಆಧಾರವನ್ನು ನೀಡುತ್ತವೆ. ನೀಳ ಕುತ್ತಿಗೆ ಇದೆ. ನಾಸಿಕ ದ್ವಾರಗಳು ಮೂತಿಯ ಕೊನೆಯಲ್ಲಿವೆ. ಮಯೋಸಿನ್‌ನಿಂದಲೂ ಬಂದಿವೆ. ಕಡಲ ಸಿಂಹಗಳು ಈ ಗುಂಪಿನವು.

ವಾಲ್ರಸ್‌ಗಳು ಓಡೊಬೆನಿಡೆ ಗುಂಪಿಗೆ ಸೇರುತ್ತವೆ. ಗಾತ್ರದಲ್ಲಿ ದೊಡ್ಡವು (3 – 3.5 ಮೀ ಉದ್ದವಿದೆ). ಬಾಹ್ಯ ಕಿವಿ ಇಲ್ಲ. ಹಿಂಗಾಲುಗಳು ಕಡಲ ಸಿಂಹಗಳನ್ನು ಹೋಲುತ್ತವೆ. ಮುದಿವಯಸ್ಸಿನಲ್ಲಿ ಕೂದಲುಗಳು ಬಿದ್ದು ಹೋಗುತ್ತವೆ. ಬಾಲ ಕ್ಷೀಣಿಸಿದೆ. ಹಿಂಗಾಲಿನಲ್ಲಿ ಒರಟು ಮೆತ್ತೆಗಳಿವೆ. ಕಡಲ ತಳದಲ್ಲಿರುವ ಮೃದ್ವಂಗಿಗಳನ್ನು ತೋಡಿ ತೆಗೆಯಲು ಮೇಲಿನ ಕೋರೆಹಲ್ಲುಗಳು ಸಹಾಯಕವಾಗಿವೆ. ಚರ್ಮ, ಎಣ್ಣೆ ಮತ್ತು ದಂತಕ್ಕಾಗಿ ಬೇಟೆಯಾಡುತ್ತಾರೆ. ಧ್ರುವಗಳ ಸುತ್ತಲೂ ಹರಡಿವೆ.

ಫೊಸಿಡೆ ಕುಟುಂಬದ ಪ್ರಾಣಿಗಳಲ್ಲಿ ಜಲಜೀವನಕ್ಕೆ ಹೆಚ್ಚಿನ ಪರಿಹೊಂದಾಣಿಕೆ ಇದೆ. ಹೊರಕಿವಿ ಇಲ್ಲ. ಹಿಂಗಾಲುಗಳು ಬಾಲದ ಅಕ್ಕಪಕ್ಕಕ್ಕೆ ಬಾಗಿ ಅದರೊಂದಿಗೆ ಸೇರಿಹೋಗಿವೆ. ಹಸ್ತ ಮತ್ತು ಪಾದಗಳಲ್ಲಿ ಕೂದಲಿವೆ. ಬಾಲ ಕ್ಷೀಣಿಸಿದೆ. ಬಾಗಬಲ್ಲ ಕಶೇರುಕಸ್ತಂಭದಲ್ಲಿ ದೊಡ್ಡ ಕಶೇರುಕಮಣಿಗಳಿವೆ. ಇವು ನೀರಿನಲ್ಲಿ ತಕ್ಷಣ ತಿರುಗುವುದಕ್ಕೆ ಮತ್ತು ಸಮತೋಲನಕ್ಕೆ ಹಾಗೂ ಚಾಕಚಕ್ಯತೆಗೂ ಅನುವಾಗಿವೆ. ಹಲ್ಲುಗಳ ಸಂಖ್ಯೆ ಕ್ಷೀಣಿಸಿದ್ದು ಸರೀಸೃಪ ಅವಸ್ಥೆಗೆ ಹಿಂದಿರುಗುವ ಪ್ರವೃತ್ತಿ ಕಂಡು ಬರುತ್ತದೆ. ಹೆಚ್ಚು ಆಳದಲ್ಲಿ ಬಹುಕಾಲ ನೀರಿನಲ್ಲಿರಬಹುದು. ಸಂಭೋಗ ನೀರಿನಲ್ಲಿ ನಡೆಯುತ್ತದೆ. ಗರ್ಭಕೋಶದ ಎರಡು ಕವಲುಗಳಲ್ಲಿ ಪರ್ಯಾಯವಾಗಿ ಗರ್ಭದಾರಣೆ ನಡೆಯುತ್ತದೆ. ವಲಯಪೂರಿತ ಜರಾಯುವಿದೆ. ನಿಶ್ಚಿತ ಸಂತಾನೋತ್ಪತ್ತಿ ತಾಣಗಳಿಗೆ ವಲಸೆ ಹೋಗುತ್ತವೆ. ಕಡಲ ನಾಯಿಗಳು ಈ ಕುಟುಂಬದ ಪ್ರಾಣಿಗಳು. (ಬಿ.ಕೆ.ಜೆ)

**ಕಾರ್ನ್‌ಬರ್ಗ್, ಆರ್ಥರ್ (1918– ):** ಅಮೆರಿಕನ್ ಜೀವ ರಸಾಯನ ವಿಜ್ಞಾನಿ. ಜೀವಿಗಳ ಆನುವಂಶಿಕ ಗುಣಲಕ್ಷಣಗಳ ಆವಾಸಸ್ಥಾನವಾಗಿರುವ ಮತ್ತು ಪ್ರತಿಯೊಂದು ಜೀವಕೋಶದ ನ್ಯೂಕ್ಲಿಯಸ್ಸಿನಲ್ಲೂ ಇರುವ ಡಿ ಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ (ಡಿಎನ್‌ಎ) ಜೀವಕೋಶದ ವಿದಳನ ಕಾಲದಲ್ಲಿ ದ್ವಿಗುಣಿತವಾಗಲು ನೆರವು ನೀಡುವ ಡಿಎನ್‌ಎ ಪಾಲಿಮೆರೇಸ್ ಎಂಬ ಕಿಣ್ವವನ್ನು ಕಂಡುಹಿಡಿದಿದ್ದಕ್ಕಾಗಿ (1956) ಸೆವಿರೊ ಒಚಾವಾ (ನೋಡಿ–ಒಚಾವಾ, ಸೆವಿರೊ) ಎಂಬಾತನೊಂದಿಗೆ ಶರೀರವಿಜ್ಞಾನ ಮತ್ತು ವೈದ್ಯವಿಜ್ಞಾನದ ನೊಬೆಲ್ ಬಹುಮಾನವನ್ನು ಪಡೆದ (1959). ಅದೇ ಕಿಣ್ವವನ್ನು ಬಳಸಿ ಜೀವಕೋಶದ ಹೊರಗೆ ನೈಸರ್ಗಿಕ ಡಿಎನ್‌ಎ ಒಂದನ್ನು ಅಚ್ಚಾಗಿ ಉಪಯೋಗಿಸಿಕೊಂಡು ಕೃತಕ ಡಿಎನ್‌ಎ ತಯಾರಿಸಿ, ಹಾಗೆ ತಯಾರಿಸಿದ ಡಿಎನ್‌ಎ ಎಲ್ಲ ರೀತಿಯಲ್ಲಿಯೂ ನೈಸರ್ಗಿಕ ಡಿಎನ್‌ಎಯಂತೆಯೇ ವರ್ತಿಸುವುದನ್ನು ತೋರಿಸಿ (1968) ಇತಿಹಾಸ ಪ್ರಸಿದ್ಧನಾದ.

ಕಾರ್ನ್‌ಬರ್ಗ್

ಕಾರ್ನ್‌ಬರ್ಗ್ 1918ರ ಮಾರ್ಚಿ 3ರಂದು ಅಮೆರಿಕೆಯ ಬ್ರೂಕ್‌ಲಿನ್ನಿನಲ್ಲಿ ಜನಿಸಿದ. ಈತ ಸ್ನಾತಕ ಶಿಕ್ಷಣವನ್ನು ಪಡೆದದ್ದು ನ್ಯೂಯಾರ್ಕ್ ನಗರದ ಸಿಟಿ ಕಾಲೇಜಿನಲ್ಲಿ. ಪ್ರಧಾನ ಐಚ್ಛಿಕ ವಿಷಯಗಳು ಜೀವವಿಜ್ಞಾನ ಮತ್ತು ರಸಾಯನ ವಿಜ್ಞಾನಗಳು. 1937ರಲ್ಲಿ ಎಂಡಿ ಡಿಗ್ರಿ ಪಡೆದ ತರುವಾಯ ರಾಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ವೈದ್ಯವಿಜ್ಞಾನವನ್ನು ಅಭ್ಯಸಿಸಿ ಮತ್ತೆ 1941ರಲ್ಲಿ ಎಂಡಿ ಡಿಗ್ರಿಯನ್ನು ಪಡೆದ. ಅದೇ ವಿಶ್ವವಿದ್ಯಾಲಯಕ್ಕೆ ಸೇರಿದ ಸ್ಟ್ರಾಂಗ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ವೃತ್ತಿ ತರಬೇತಿಯನ್ನು ಮುಗಿಸಿ ಕೆಲಕಾಲ ಅಮೆರಿಕ ಸಂಯುಕ್ತಸಂಸ್ಥಾನದ ಕರಾವಳಿ ಬೇಹುಗಾರ ಪಡೆಯಲ್ಲಿ ಲೆಫ್ಟಿನೆಂಟ್ ಆಗಿ ಕೆಲಸ ಮಾಡಿದ. 1942 ರಿಂದ 1953ರ ವರೆಗೆ ಸಾರ್ವಜನಿಕ ಆರೋಗ್ಯ ಇಲಾಖೆಯ ಸೇವೆಯಲ್ಲಿದ್ದಾಗ ಕೊನೆಯ ಆರುವರ್ಷಕಾಲ ಬೆತೆಸ್ಡದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಥ್ರೈಟಿಸ್ ಅಂಡ್ ಮೆಟಬಾಲಿಕ್ ಡಿಸೀಸಸ್ ಸಂಸ್ಥೆಯಲ್ಲಿ ಕಿಣ್ವ ವಿಭಾಗದ ಮುಖ್ಯಸ್ಥನಾಗಿದ್ದ. 1953ರಿಂದ 1959ರವರೆಗೆ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಯಲ್ಲಿ ಸೂಕ್ಷ್ಮ ಜೀವವಿಜ್ಞಾನದ ಪ್ರಾಧ್ಯಾಪಕನೂ ಆ ವಿಭಾಗದ ಮುಖ್ಯಸ್ಥನೂ ಆಗಿ ಸೇವೆ ಸಲ್ಲಿಸಿದ. ಅಲ್ಲಿಂದ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಯಲ್ಲಿ ಜೀವರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥನಾಗಿ ಕೆಲಸಮಾಡಿದ.

ಒಂದು ಬಗೆಯ ಬ್ಯಾಕ್ಟೀರಿಯದ ಡಿಎನ್‌ಎಯನ್ನು ಇನ್ನೊಂದು ಬಗೆಯ ಬ್ಯಾಕ್ಟೀರಿಯಕ್ಕೆ ವರ್ಗಾಯಿಸಿದಾಗ ಮೊದಲನೆಯದರ ಆನುವಂಶಿಕ ಗುಣಲಕ್ಷಣಗಳು ಎರಡನೆಯದರ ಆನುವಂಶಿಕ ಗುಣಲಕ್ಷಣಗಳೊಂದಿಗೆ ಸೇರಿಕೊಂಡು ಬಿಡುವುವೆಂದು ಓ. ಟಿ. ಅವೆರಿ ಮತ್ತು ಸಹಸಂಶೋಧಕರು ತೋರಿಸಿಕೊಟ್ಟಾಗ (1944) ಡಿಎನ್‌ಎಯೇ ಆನುವಂಶಿಕ ಗುಣಲಕ್ಷಣಗಳ ಆವಾಸಸ್ಥಾನವೆಂಬುದು ರುಜುವಾತಾಯಿತು. ಈ ಅಭಿಪ್ರಾಯ ಸ್ಥಿರಪಡಲು ಮುಖ್ಯ ಕಾರಣರಾದವರು ಎ. ಡಿ. ಹರ್ಷಿ ಮತ್ತು ಎಚ್. ಬಿ. ಚೇಸ್‌ರವರು. ಬ್ಯಾಕ್ಟೀರಿಯಗಳ ಮೇಲೆ ದಾಳಿ ಮಾಡುವ ವೈರಸ್‌ಗಳು ತಮ್ಮ ಪ್ರೋಟೀನ್ ಹೊದಿಕೆಯನ್ನು ಕಳಚಿ ಹಾಕಿ ನ್ಯೂಕ್ಲಿಯಿಕ್ ಆಮ್ಲವನ್ನು ಬ್ಯಾಕ್ಟೀರಿಯದ ಕೋಶದೊಳಕ್ಕೆ ಸೇರಿಸುವುವೆಂದೂ ಸ್ವಲ್ಪಕಾಲದ ಮೇಲೆ ಪ್ರೋಟೀನ್ ಹೊದಿಕೆಯನ್ನೂ ನಿರ್ಮಿಸಿಕೊಂಡಿರುವ ಹೊಸ ವೈರಸ್ ಕಣಗಳು ಹೆಚ್ಚು ಸಂಖ್ಯೆಯಲ್ಲಿ ಕೋಶವನ್ನು ಭೇದಿಸಿಕೊಂಡು ಹೊರಬರುವುವೆಂದೂ ಅವರು ತೋರಿಸಿದರು (1953). ಸರಿ ಸುಮಾರು ಅದೇ ಕಾಲಕ್ಕೆ ವಾಟ್ಸನ್ ಮತ್ತು ಕ್ರಿಕ್‌ರವರು ಡಿಎನ್‌ಎಯ ಜೋಡಿ ಎಳೆ ರಚನೆಯನ್ನು ಪ್ರತಿಪಾದಿಸಿ, ಅದರ ಎರಡು ಎಳೆಗಳು ಪರಸ್ಪರ ಪೂರಕವಾದುವೆಂದೂ ಎಳೆಗಳ ಉದ್ದಕ್ಕೂ ಪುನರಾವರ್ತಿಸುವ ನಾಲ್ಕು ಬೇರೆ ಬೇರೆ ನ್ಯೂಕ್ಲಿಯೊಟೈಡುಗಳ ಅನುಕ್ರಮವೇ ನಿರ್ದಿಷ್ಟ ಜೀನಿನ ವೈಶಿಷ್ಟ್ಯ ಎಂದೂ, ಕೋಶ

ವಿದಳನವಾಗುವಾಗ ಎರಡು ಎಳೆಗಳು ಬೇರೆ ಬೇರೆಯಾಗಿ, ಒಂದೊಂದು ಎಳೆಯೂ ತನಗೆ ಪೂರಕವಾದ ಇನ್ನೊಂದು ಎಳೆಯನ್ನು ತಯಾರಿಸಿಕೊಳ್ಳುವುದರಿಂದ ಎರಡು ಡಿಎನ್‌ಎ ಅಣುಗಳು ಉದ್ಭವಿಸುವುವೆಂದೂ ಪ್ರತಿಪಾದಿಸಿದರು. ಡಿಎನ್‌ಎ ಹೀಗೆ ಸಂಶ್ಲೇಷಿತವಾಗುವ ಬಗೆಯನ್ನು ವಿಶದೀಕರಿಸುವ ಪ್ರಯತ್ನಕ್ಕೆ ಕಾರ್ನ್‌ಬರ್ಗ್ ಕೈಹಾಕಿದ.

ಕಾರ್ನ್‌ಬರ್ಗ್ ಬೆತೆಸ್ಡದಲ್ಲಿದ್ದಾಗ ಡೈಫಾಸ್ಫೊಪಿರಿಡಿನ್ ನ್ಯೂಕ್ಲಿಯೊಟೈಡ್ (ಡಿಪಿಎನ್) ಮತ್ತು ಫ್ಲಾವಿನ್ ಅಡೆನೀನ್ ಡೈನ್ಯೂಕ್ಲಿಯೊಟೈಡ್ (ಎಫ್‌ಎಡಿ) ಎಂಬ ಎರಡು ಕೊ ಎಂಜೈಮುಗಳ (ಸಹಕಿಣ್ವಗಳು) ಜೈವಿಕ ಸಂಶ್ಲೇಷಣೆಯ ಕ್ರಿಯಾವಿನ್ಯಾಸವನ್ನು ವಿಶದೀಕರಿಸಿದ. ಈ ಸಂಶ್ಲೇಷಣೆಯಲ್ಲಿ ಮೂರು ಫಾಸ್ಫಾರಿಕಾಮ್ಲ ಶೇಷಗಳಿರುವ ನ್ಯೂಕ್ಲಿಯೊಸೈಡ್ ಟ್ರೈಫಾಸ್ಫೇಟುಗಳು ಪಾಲ್ಗೊಳ್ಳುವುವೆಂದು ತಿಳಿದು ಬಂದದ್ದರಿಂದ ಆತ ಡಿಎನ್‌ಎ ಸಂಶ್ಲೇಷಣೆಗೆ ಅಗತ್ಯವಾದ ಪೂರ್ವಗಾಮಿ ನ್ಯೂಕ್ಲಿಯೊಟೈಡುಗಳನ್ನು ಟ್ರೈಫಾಸ್ಫೇಟ್ ರೂಪದಲ್ಲಿ ತೆಗೆದುಕೊಂಡು ಜೊತೆಗೆ ಶಕ್ತಿ ಪೂರೈಕೆಗಾಗಿ ಎಟಿಪಿಯನ್ನು ಸೇರಿಸಿ ಎಶ್ಚಿರಿಶಿಯ ಕೋಲೈ ಬ್ಯಾಕ್ಟೀರಿಯದ ಸಾರದೊಂದಿಗೆ ಬೆರೆಸಿ ಸೂಕ್ತ ಉಷ್ಣತೆಯಲ್ಲಿ ಸಾಕಷ್ಟು ಕಾಲ ಬಿಟ್ಟ. ಎಶ್ಚಿರಿಶಿಯ ಕೋಲೈ ಸಾರದಲ್ಲಿ ಡಿಎನ್‌ಎ ಸಂಶ್ಲೇಷಣೆಗೆ ನೆರವಾಗುವ ಕಿಣ್ವ ಇರುವುದಾದರೆ ಅದರ ಸಹಾಯದಿಂದ ನ್ಯೂಕ್ಲಿಯೊಸೈಡ್ ಟ್ರೈಫಾಸ್ಫೇಟ್ ಅಣುಗಳು ಸೇರಿಕೊಂಡು ಡಿಎನ್‌ಎ ಸಂಶ್ಲೇಷಣೆ ನಡೆಯುವುದೆಂದು ಅವನು ನಿರೀಕ್ಷಿಸಿದ. ಈ ನಿರೀಕ್ಷೆ ಫಲಿಸಿದೆಯೇ ಎಂದು ನೋಡುವುದಕ್ಕಾಗಿ ನ್ಯೂಕ್ಲಿಯೊಸೈಡ್ ಟ್ರೈಫಾಸ್ಫೇಟ್ ಅಣುಗಳಲ್ಲಿ ವಿಕಿರಣಶೀಲ ಪರಮಾಣುಗಳನ್ನು ಸೇರಿಸಿದ್ದ. ಅನಂತರ ಪರೀಕ್ಷಿಸಲಾಗಿ ಡಿಎನ್‌ಎಯಲ್ಲಿ ವಿಕಿರಣಶೀಲ ಪರಮಾಣುಗಳು ಅತ್ಯಲ್ಪ ಪ್ರಮಾಣದಲ್ಲಿ ಸೇರಿಕೊಂಡಿದ್ದುದು ಕಂಡು ಬಂದಿತು. ಎಶ್ಚೆರಿಶಿಯ ಕೋಲೈ ಸಾರದಲ್ಲಿ ಡಿಎನ್‌ಎ ಸಂಶ್ಲೇಷಣೆಯ ಎಂಜೈಮು ಇತರ ಸಹಸ್ರಾರು ಕಿಣ್ವಗಳೊಡನೆ ಬೆರೆತುಕೊಂಡು ಅಲ್ಪ ಪ್ರಮಾಣದಲ್ಲಿರುವುದೇ ಇದಕ್ಕೆ ಕಾರಣವಿರಬೇಕೆಂದು ಯೋಚಿಸಿ ಆ ಕಿಣ್ವದ ಶುದ್ಧೀಕರಣವನ್ನು ಕೈಗೊಂಡು 1956ರ ಹೊತ್ತಿಗೆ ಅರ್ಧ ಗ್ರಾಮಿನಷ್ಟು ಶುದ್ಧ ಎಂಜೈಮನ್ನು ಪಡೆದ. ಅದಕ್ಕೆ ಡಿಎನ್‌ಎ ಪಾಲಿಮರೇಸ್ ಎಂದು ನಾಮಕರಣಮಾಡಿ, ಅದರಿಂದ ಡಿಎನ್‌ಎ ಸಂಶ್ಲೇಷಿತವಾಗುವುದೆಂಬುದನ್ನೂ ಖಚಿತಪಡಿಸಿದ. ಅಲ್ಲಿಂದೀಚೆಗೆ ಡಿಎನ್‌ಎ ಪಾಲಿಮರೇಸನ್ನು ಇತರ ಆಕರಗಳಲ್ಲಿಯೂ ಗುರುತಿಸಲಾಗಿದೆ.

ಆ ಕಿಣ್ವದ ಸಹಾಯದಿಂದ ಕೃತಕವಾಗಿ ತಯಾರಿಸಿದ ಡಿಎನ್‌ಎ ಎಲ್ಲ ರೀತಿಯಲ್ಲಿಯೂ ಅಚ್ಚಾಗಿ ಬಳಸಿದ ಡಿಎನ್‌ಎ ಯಂತೆಯೇ ಇರುವುದೇ ಎಂದು ಪರೀಕ್ಷಿಸಲು ತನ್ನದೇ ಆದ ವಿಧಾನಗಳನ್ನು ಆತ ನಿರ್ಮಿಸಿಕೊಂಡು ಪರೀಕ್ಷಿಸಿದ. ಆದರೆ ಅಂತಿಮವಾಗಿ ಅದರ ಅನನ್ಯತೆಯನ್ನು ಸ್ಥಿರಪಡಿಸಲು ಅದರ ಜೈವಿಕ ಕಾರ್ಯಚಟುವಟಿಕೆಯನ್ನೇ ಪರಿಶೀಲಿಸಬೇಕಷ್ಟೆ? ಅದಕ್ಕಾಗಿ ಬಹು ಸರಳವಾದ ಒಂದು ಡಿಎನ್‌ಎಯನ್ನು ಆರಿಸಬೇಕಾಯಿತು. ϕ X 174 ಎಂಬ ಒಂದು ಬಗೆಯ ವೈರಸಿನಲ್ಲಿರುವ ಡಿಎನ್‌ಎ ಯನ್ನು ಇದಕ್ಕಾಗಿ ಆರಿಸಿಕೊಂಡ. ಅದನ್ನು ಅಚ್ಚಾಗಿ ಬಳಸಿಕೊಂಡು ಡಿಎನ್‌ಎ ಪಾಲಿಮೆರೇಸ್ ನೆರವಿನಿಂದ ಅದರ ನಿಷ್ಕೃಷ್ಟ ಪ್ರತಿಯನ್ನು ಕೃತಕವಾಗಿ ಸಂಶ್ಲೇಷಿಸಿ (1968), ಜೈವಿಕ ಕಾರ್ಯಚಟುವಟಿಕೆಯಲ್ಲಿ ಅದಕ್ಕೂ, ನೈಸರ್ಗಿಕ ಡಿಎನ್‌ಎಗೂ ಯಾವ ಭೇದವೂ ಇಲ್ಲವೆಂದು ತೋರಿಸಿಕೊಟ್ಟಿದ್ದಾನೆ. ಜೀವದ ಪ್ರಧಾನ ಕುರುಹು ಎನ್ನಬಹುದಾದ ಡಿಎನ್‌ಎಯನ್ನು ಜೀವಿಯ ಶರೀರದ ಹೊರಗಡೆ ನಿರ್ಜೀವ ವಾತಾವರಣದಲ್ಲಿ ಕೃತಕವಾಗಿ ನಿರ್ಮಿಸಿದ ಕೀರ್ತಿ ಕಾರ್ನ್‌ಬರ್ಗ್‌ನಿಗೆ ಸಲ್ಲುವುದು. (ಜೆ.ಆರ್.ಎಲ್)

**ಕಾರ್ಪ್:** ಸಿಪ್ರೆನಿಡೆ ಕುಟುಂಬಕ್ಕೆ ಸೇರಿದ ಸಿಹಿನೀರಿನ ಅಸ್ಥಿಮೀನು. ಸಿಪ್ರಿನಸ್ ಕಾರ್ಪಿಯೊ ವೈಜ್ಞಾನಿಕ ಹೆಸರು. ಮೂಲತಃ ಜಪಾನ್, ಚೀನ ಮತ್ತು ಮಧ್ಯ ಏಷ್ಯ ವಾಸಿಯಾದರೂ ಯೂರೋಪ್, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟಿಷ್ ಐಲ್‌ಗಳಲ್ಲೂ ಹರಡಿದೆ. ಬೆನ್ನಿನ ಭಾಗ ಆಲಿವ್ ಅಥವಾ ಹಳದಿ ಮಿಶ್ರಿತ ಹಸಿರು ಬಣ್ಣದ್ದು. ಪಕ್ಕಗಳು ಹಸಿರು ಮಿಶ್ರಿತ ಹಳದಿ ಅಥವಾ ಕಂದು ಮಿಶ್ರಿತ ಹಳದಿ. ಉದರ ಹಳದಿ ಬಣ್ಣದ್ದು. ಈಜು ರೆಕ್ಕೆಗಳ ಬಣ್ಣ ಊದಾ ಮಿಶ್ರಿತ ಹಸಿರು ಅಥವಾ ಕಂದು. ಕೆಂಪಾಗಿಯೂ ಇರುವುದುಂಟು. ಹುರುಪೆಗಳು ದೊಡ್ಡವಾಗಿವೆ. ಮೇಲ್ದವಡೆಯ ಎರಡೂ ಪಕ್ಕಗಳಲ್ಲಿ ಎರಡೆರಡು ಮೀಸೆಗಳುಂಟು (ಬಾರ್ಬಲ್ಸ್). ಬೆನ್ನಿನ ಈಜು ರೆಕ್ಕೆ (ಡಾರ್ಸಲ್ ಫಿನ್) ತುಂಬಾ ಉದ್ದವಾಗಿದ್ದು 17–20 ಕವಲೊಡೆದ ಕಿರಣಗಳನ್ನು (ರೇ) ಹೊಂದಿದೆ. ಹಲ್ಲುಗಳಿಲ್ಲ.

ಕಾರ್ಪ್ ಒಂಟಿಯಾಗಿಯೊ ಅಥವಾ ಸಣ್ಣ ಗುಂಪುಗಳಲ್ಲಿಯೊ ನದಿ ಅಥವಾ ಕೊಳಗಳ ತಳದಲ್ಲಿ ವಾಸಿಸುತ್ತದೆ. ಕೀಟಗಳ ಲಾರ್ವಗಳು, ಕಠಿಣಚರ್ಮಿಗಳು, ಹುಳುಗಳು, ಬಸವನ ಹುಳುಗಳು ಮತ್ತು ಕೆಲವು ಸಸ್ಯಗಳು ಇದರ ಆಹಾರ. ಚಳಿಗಾಲದಲ್ಲಿ ಆಹಾರ ಸೇವನೆಯನ್ನು ಸಂಪೂರ್ಣವಾಗಿ ನಿಲ್ಲಿಸುತ್ತದೆ. ಸಂತಾನೋತ್ಪತ್ತಿ ಶಿಶಿರ ಕಾಲದಲ್ಲಿ ನಡೆಯುತ್ತದೆ. ಆಳವಿಲ್ಲದ ಜಾಗದಲ್ಲಿ ಸಸ್ಯಗಳ ಮೇಲಾಗಲಿ ಕೊಳೆಗಳ ಮೇಲಾಗಲಿ ಹೆಣ್ಣು ನೂರಾರು ಮೊಟ್ಟೆಗಳನ್ನಿಡುತ್ತದೆ. 48 ದಿನಗಳಲ್ಲಿ ಮೊಟ್ಟೆಗಳೊಡೆದು ಮರಿಗಳು ಹೊರಬರುತ್ತವೆ. ಶೀಘ್ರವಾಗಿ ಬೆಳೆದು ಮೂರು ವರ್ಷಗಳಲ್ಲಿ ಲೈಂಗಿಕ ಪ್ರೌಢತೆಯನ್ನು ಗಳಿಸುತ್ತವೆ. ಸೆರೆಯಲ್ಲಿ (ಸಾಕಿದಾಗ) 40 ವರ್ಷಗಳವರೆಗೂ ಜೀವಿಸಿದ ನಿದರ್ಶನವುಂಟು. ಆದರೆ ನೈಸರ್ಗಿಕ ವಾತಾವರಣದಲ್ಲಿ 15 ವರ್ಷಗಳ ಕಾಲ ಬದುಕಿರುತ್ತವೆ. ಸಾಮಾನ್ಯವಾಗಿ 35 ಸೆಂಮೀ ಉದ್ದ ಬೆಳೆಯುವ ಇವುಗಳ ತೂಕ 22 ಕಿಗ್ರಾಂ.

ಕಾರ್ಪ್ ಮೀನುಗಳನ್ನು ಆಹಾರವಾಗಿ ಬಳಸುತ್ತಾರೆ. ಕಡಿಮೆ ಜಾಗದಲ್ಲಿ ಅತಿ ಹೆಚ್ಚು ಮೀನುಗಳನ್ನು ಕೃಷಿ ಮಾಡಬಹುದಾದ್ದರಿಂದ ಇವುಗಳನ್ನು ಮತ್ಸ್ಯ ಕೃಷಿಯಲ್ಲಿ ಪ್ರಮುಖ ಮೀನಾಗಿ ಸಾಕಲಾಗುತ್ತದೆ. (ಎಸ್.ಕೆ.ಎಚ್.)

**ಕಾರ್ಪಸ್ ಅಲ್ಲಾಟಂ:** (ಬಹುವಚನ: ಕಾರ್ಪೋರ ಅಲ್ಲಾಟ) ಇದೊಂದು ನಿರ್ನಾಳ ಗ್ರಂಥಿ, ಇದಕ್ಕೂ ಕಾರ್ಪಸ್ ಕಾರ್ಡಿಯೇಕಂಗೂ, ನಿಕಟ ಸಂಬಂಧವಿದೆ. ಇವು ಟೆರಿಗೋಟ ಗಣದ ಕೀಟಗಳಲ್ಲಿವೆ. ಇವು ದುಂಡನೆಯ, ಗೋಳಾಕಾರದ ಗ್ರಂಥಿಗಳು ನಿಯೋಟಿನಿನ್ ಚೋದಕವನ್ನು ಕಾರ್ಪಸ್ ಅಲ್ಲಾಟಂ ಉತ್ಪತ್ತಿ ಮಾಡುತ್ತಿದೆ. ಸಂಕ್ಷಿಪ್ತವಾಗಿ ಈ ಚೋದಕವನ್ನು ಜೆಹೆಚ್ (ಜುವೆನೈಲ ಹಾರ್ಮೋನ್) ಎನ್ನುವರು. ಇದರ ರಾಸಾಯನಿಕ ಸೂತ್ರ ಸಿ$_{18}$ ಎಚ್$_{36}$ ಒ$_{3}$. ರೊಲ್ಲೆರ್ (1967) ಈ ಚೋದಕದ ರಾಸಾಯನಿಕ ರಚನೆಯನ್ನು ಗುರುತಿಸಿದ. ಇದರ ರಸಾಯನ ಶಾಸ್ತ್ರ ನಾಮ ಮಿಥೈಲ್ 10, 11–ಎಪಾಕ್ಸಿ –7 ಈಥೈಲ್–3, 11 ಡೈಮಿಥೈಲ್–2, 6 ಟ್ರೈಡೆಕ್‌ಡಿಯೋನೇಟ್. ಹೆಮಿಪ್ಟಿರ ಮತ್ತು ಡೆರ್ಮಾಪ್ಟಿರ ಗಣದ ಕೀಟಗಳಲ್ಲಿ ಮಹಾ ಅಪಧಮನಿಯ (ಅಯೋರ್ಟಾ) ಕೆಳಗೆ ಮಧ್ಯಸ್ಥವಾಗಿದೆ. ಇದು ಬಹಳ ಕೀಟಗಳಲ್ಲಿ, ಹೊರಚರ್ಮದಿಂದ (ಎಕ್ಟೊಡರ್ಮ) ಉದ್ಭವವಾದರೂ ಬೇರೆ ಜೀವಾಂಕುರ ಪದರಗಳಿಂದಲೂ ಇದರ ಉತ್ಪತ್ತಿ ವರದಿಯಾಗಿದೆ. ಮೂಲ ಮಿದುಳಿನಿಂದ (ಪ್ರೊಟೊಸೆರೆಬ್ರಮ್) ಹೊರಟ ನರತಂತುಗಳು, ಮೊದಲು ಕಾರ್ಪೋರ ಕಾರ್ಡಿಯೇಕಗಳನ್ನು ಹಾದು ಇದಕ್ಕೆ ನರಶಕ್ತಿಯನ್ನು ಒದಗಿಸುತ್ತವೆ. ಇದು ಮರಿಗಳ ಬೆಳವಣಿಗೆಯ ವೇಳೆ ದಪ್ಪವಾಗಿ, ಪ್ರಾಯದ ಕೀಟಗಳಲ್ಲಿ ಕ್ಷೀಣಿಸುತ್ತದೆ. ರಚನೆಯಲ್ಲಿ ಎರಡು ಬಗೆಗಳಿವೆ. ಒಂದು ಸಣ್ಣ ಗುಳ್ಳೆಗಳಂತಹ (ವೆಸಿಕ್ಯುಲಾರ) ಕೋಶಗಳುಳ್ಳದ್ದು. ಇದರಲ್ಲಿ ಒಂದು ಲಾಲಾ ಚರ್ಮದ ಹೊರ ಪೊರೆ (ಎಪಿಥಿಲಿಯಲ್ ವಾಲ್), ಒಳಗಿನ ಗುಳ್ಳೆ ಭಾಗವನ್ನು ಆವರಿಸಿದೆ; ಗುಳ್ಳೆ ಭಾಗದಲ್ಲಿ ಜೀವಕೋಶಗಳಿವೆ. ಇನ್ನೊಂದು ಜೀವಕೋಶಗಳ ಗಟ್ಟಿ ವಸ್ತು; ಇದನ್ನು ಹೊರಮೈ (ಕಾರ್ಟೆಕ್ಸ) ಮತ್ತು ಮಧ್ಯಭಾಗ (ಮೆಡ್ಯುಲ್ಲ) ಗಳೆಂದು ವಿಂಗಡಿಸಲಾಗಿದೆ. ಕೋಶಗಳಲ್ಲಿ ಸ್ರಾವಕ ಚಟುವಟಿಕೆಯ ಅಂಗಾಂಶ ಚಿನ್ಹೆಗಳು ಕಾಣುತ್ತವೆ; ಉದಾ: ಪೈರಿಸ್ ಚಿಟ್ಟೆ ಮರಿಯ ಕೊನೆ ಹಂತದ ಪ್ರಾರಂಭದಲ್ಲಿ ಚುರುಕಾಗಿದ್ದು, ಆಮೇಲೆ ಸುಪ್ತವಾಗುತ್ತವೆ; ಪುನ: ಕೋಶಾವಸ್ಥೆಯಲ್ಲಿ (ಪ್ಯುಪಲ್) ಅತ್ಯಂತ ಚುರುಕಾಗುತ್ತವೆ. ಈ ಗ್ರಂಥಿಗಳು, ಬಾಲ್ಯ ಚೋದಕವನ್ನು (ಜುವೆನೈಲ ಹಾರ್ಮೋನ್) ಸ್ರವಿಸಿ ಕೀಟದ ಬೆಳವಣಿಗೆಯಲ್ಲಿ ಪ್ರಾಯದ ಚಿನ್ಹೆಗಳುಂಟಾಗುವುದನ್ನು ತಡೆಗಟ್ಟುತ್ತದೆ; ಮುನ್ನಡೆ ಗ್ರಂಥಿಯ (ಪ್ರೊಥೊರಾಸಿಕ ಗ್ಲಾಂಡ್) ಪೊರೆಯುರ್ಚು ಚೋದಕ (ಮೋಲ್ಟಿಂಗ್ ಹಾರ್ಮೋನ್) ಕ್ರಿಯೆಯನ್ನು ವಿರೋಧಿಸುತ್ತದೆ. ಇದರಿಂದ, ಮರಿಗಳ ಸಾಮಾನ್ಯ ಕ್ರಮಾನುಗತಿ (ಸಿಕ್ವೆನ್ಸ) ಉಂಟಾಗುತ್ತದೆ. ಮರಿಗಳ ಕಡೆ ಹಂತದಲ್ಲಿ ಕಾರ್ಪೋರ ಅಲ್ಲಾಟ ಸುಪ್ತವಾಗಿ, ರೂಪಾಂತರ (ಮೆಟೊಮೊರ್ಫೋಸಿಸ್) ಪ್ರೇರಣೆಯಾಗುತ್ತದೆ. ಇದನ್ನು ಲೆಪಿಡಾಪ್ಟೀರ ಮತ್ತು ಕೋಲಿಯಾಪ್ಟೀರ ಕೀಟಗಳಲ್ಲಿ ತೋರಿಸಿದ್ದಾರೆ. ಇದು ಕೀಟಗಳಲ್ಲಿ ಸಾಮಾನ್ಯ. ಕೆಲವು ಪ್ರಾಯದ ಕೀಟಗಳಲ್ಲಿ, ಕಾರ್ಪೋರ ಅಲ್ಲಾಟಗಳ ಚೋದಕ, ಮೊಟ್ಟೆಗಳ ಬಲಿಯುವಿಕೆಗೆ ಅವಶ್ಯಕ; ಆದರೆ ಕೆರೌಸಿಯಸ್ ಕೀಟದಲ್ಲಿ ಈ ಗ್ರಂಥಿಯನ್ನು ನಾಶ ಮಾಡಿದರೂ, ಮೊಟ್ಟೆಗಳು ಬಲಿಯುತ್ತವೆ. ಕಾರ್ಪೋರ ಅಲ್ಲಾಟ, ಪ್ರಾಯ ಕೀಟದ ಚಯಾಪಚಯದ ಮೇಲೆ ಪ್ರಭಾವ ಬೀರುತ್ತದೆ. ಮೇದಸ್ಸಿನಲ್ಲಾಗುವ ವ್ಯತ್ಯಾಸದಿಂದ ಇದು ತಿಳಿದು ಬರುತ್ತದೆ. ಕ್ಯಾಲಿಫೋರದಲ್ಲಿ, ಹೆಣ್ಣು ಗಂಡಿನ ಸಹಾಯಕ ಜನನ ಗ್ರಂಥಿಗಳ (ಎಕ್ಸೆಸರಿ ರಿಪ್ರೊಡಕ್ಟಿವ್ ಗ್ಲ್ಯಾಂಡ್ಸ್) ಬೆಳವಣಿಗೆ ಅವಶ್ಯಕ.

ಅಕಶೇರುಕಗಳಲ್ಲಿ, ರಾಸಾಯನಿಕ ಚೋದಕಗಳು ನರಕೋಶಗಳಲ್ಲಿ ಉತ್ಪತಿಯಾಗಿ, ಏಕ್ಸಾನ ಮೂಲಕ ಕಾರ್ಯಸ್ಥಾನ ತಲುಪಿ ಅಲ್ಲಿ ಬಿಡುಗಡೆಯಾಗುತ್ತವೆ. ಉದಾ: ವಲ್ಕವಂತಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ, ಶರೀರ ಹೊಳೆಯುವುದನ್ನು ಅಥವ ಮಬ್ಬಾಗುವುದನ್ನು ಇವು ಹತೋಟಿಗೊಳಿಸುತ್ತವೆ. ಕಾರ್ಪೋರ ಅಲ್ಲಾಟ (ರೆಕ್ಕೆಗಳಾಕಾರದ ಗ್ರಂಥಿಗಳು) ಮತ್ತು ಕಾರ್ಪೋರ ಕಾರ್ಡಿಯೆಕ (ಹೃದಯಾಕಾರದ ಗ್ರಂಥಿ) ಇವು ಮಿದುಳಿನ ಬಳಿ ಇವೆ. ಮಿದುಳಿನ ನರಕೋಶಗಳು ಆಸ್ಫಟಿಕ ಲೋಳೆಯಂತಹ ಹರಳುಗಳನ್ನು ಸ್ರವಿಸುತ್ತವೆ; ಅವು ಆಕ್ಸಾನ್ ಮೂಲಕ ಕಾರ್ಪೋರ ಕಾರ್ಡಿಯಾಕ ಗ್ರಂಥಿಗಳನ್ನು ಹೊಕ್ಕ ಕಾರ್ಪೋರ ಅಲ್ಲಾಟಗಳಿಗೆ ಸೇರುತ್ತವೆ. ಈ ಲೋಳೆ ವಸ್ತುಗಳು, ನೇರವಾಗಿ ರಕ್ತ ರಸಕ್ಕೆ (ಹಿಮೊಲಿಂಫ್) ಸೇರುತ್ತವೆ.

ಕೀಟಗಳಲ್ಲಿ ಅಂತಃಸ್ರಾವಕಗಳ ಪರಿಣಾಮಗಳು: ಮೈ ಚರ್ಮ ಕಳಚುವಿಕೆ ಮತ್ತು ರೂಪಾಂತರಗಳೆರಡೂ ಚೋದಕಗಳ ಹತೋಟಿಯಲ್ಲಿವೆ. ಮಿದುಳಿನ ನರಸ್ರಾವಕ ಕೋಶಗಳು ಸ್ರವಿಸುವ ಚೋದಕದ ಪ್ರಭಾವದಿಂದ ಮುನ್ನಡೆಯಲ್ಲಿನ ಅಂತಃಸ್ರಾವಕ ಗ್ರಂಥಿಯು (ಪ್ರೊಥೊರೆಸಿಕ್ ಗ್ಲ್ಯಾಂಡ್) ಮೇಲೆ ಪೊರೆಯುರ್ಚು ಚೋದಕ ಸ್ರವಿಸುತ್ತದೆ. ಚರ್ಮದ ಮೇಲೆ ಈ ಚೊದಕದ ಕ್ರಿಯೆಯಿಂದ ಬೆಳವಣಿಗೆ ಮತ್ತು ಹೊರಚರ್ಮದ (ಕ್ಯುಟಿಕಲ್) ರಚನೆಗೆ ಪ್ರೇರಣೆಯಾಗಿ ರೂಪಾಂತರವಾಗುತ್ತದೆ. ಇದೊಂದು ಸ್ಟಿರಾಯ್ಡ ಚೋದಕವಾಗಿದ್ದು ಎಕ್ಡೈಸೊನ್ ಎಂದು ಕರೆಯಲಾಗಿದೆ. ಮರಿಗಳ ಬೆಳವಣಿಗೆಯಲ್ಲಿ, ಮಿದುಳಿನ ಹಿಂಭಾಗದಲ್ಲಿರುವ ಕಾರ್ಪಸ್ ಅಲ್ಲಾಟಂ ಬಾಲ್ಯ (ಜುವೆನೈಲ್) ಚೋದಕ, ನಿಯೋಟೆನಿನ್ ಸ್ರವಿಸುತ್ತದೆ. ಈ ಚೋದಕ ರಕ್ತದಲ್ಲಿ ಸೇರಿರುವವರೆಗೂ, ಪೊರೆಯುರ್ಚಿನ ಹೊರ ಚರ್ಮದ ಜೀವಕೋಶಗಳು ಮರಿಗಳ ಚರ್ಮವನ್ನು ಸೃಜಿಸುತ್ತವೆ. ಮರಿಯ ಕಡೆ ಹಂತದಲ್ಲಿ ಬಾಲ್ಯ ಚೋದಕದ ಪ್ರಮಾಣ ಕಡಿಮೆಯಾಗಿ ರೂಪಾಂತರವಾಗಿ ಕೀಟ ಪ್ರೌಢ ಅವಸ್ಥೆಗೆ ತಲುಪುತ್ತದೆ.

ಮರಿಗಳ ಹಂತದಲ್ಲೂ ಬೆಳವಣಿಗೆ ಕುಂಠಿತವಾದರೆ, ಕೋಶಗಳಲ್ಲಿ ಸುಪ್ತತೆ (ಡಯಪಾಸ್) ಸಾಮಾನ್ಯ. ಸಮಶೀತೋಷ್ಣವಲಯಗಳಲ್ಲಿ ಕೀಟಗಳು, ಕೋಶಾವಸ್ಥೆಯಲ್ಲಿ (ಉದಾ: ಕಕೂನ್ ಗಳು) ಚಳಿಗಾಲದ ಸುಪ್ತತೆಯನ್ನು ಹೊಂದುತ್ತವೆ. ಸುಪ್ತತೆಗೆ ಕಾರಣ, ಹಗಲು, ಕ್ಷೀಣಿಸಿ, ಬೆಳವಣಿಗೆ ಮತ್ತು ಪೊರೆಯುರ್ಚು ಚೋದಕಗಳ ಸ್ರವಣ ನಿಲ್ಲುವುದು.

ಬೆಳವಣಿಗೆಯಲ್ಲಾಗುವ ಆಕಾರದ ವ್ಯತ್ಯಾಸಗಳ ಜೊತೆಗೆ ಹಲವು ಪ್ರಭೇದದ ಪ್ರೌಢ ಕೀಟಗಳಲ್ಲಿ ಬಹುರೂಪತೆ ಇದೆ. ಉದಾ: ಇರುವೆ, ಮತ್ತು ಜೇನುಹುಳುಗಳಲ್ಲಿ ಕೆಲಸಗಾರ ಮತ್ತು ಸಂತಾನದಲ್ಲಿ ತೊಡಗುವ ಕೀಟಗಳು. ಗೆದ್ದಲುಗಳಲ್ಲಿ ಸಿಪಾಯಿ ಕೀಟಗಳಿವೆ. ಪ್ರಾಯದ ಸಸ್ಯ ಹೇನುಗಳಲ್ಲಿ ರೆಕ್ಕೆಗಳು ಇರಬಹುದು, ಅಥವ ಇಲ್ಲ, ಕೆಲವು ಚಿಟ್ಟೆಗಳಲ್ಲಿ ಕಾಲಕಾಲದ ದ್ವಿರೂಪಿಗಳಿರುತ್ತವೆ. ಇದಕ್ಕೆ ಜೀನ್‌ಗಳೆ ಕಾರಣ. ಜೀನ್‌ಗಳಿಗೆ ಆಕಾರಗಳ ಬೆಳವಣಿಗೆ ಶಕ್ತಿ ಇದ್ದರೂ, ನಿರ್ದಿಷ್ಟ ರೀತಿ ಬೆಳವಣಿಗೆ, ಸನ್ನಿವೇಶದ ಪ್ರಚೋದನೆಗಳಿಂದ ಸಾಧ್ಯ. ಇಂಥ ವ್ಯತ್ಯಾಸಗಳ ಹತೋಟಿಗೆ ಬಾಲ್ಯ ಚೋದಕವೂ ಸೇರಿದೆ.

ಕೀಟ ರೂಪಾಂತರ ನಿರ್ವಹಣೆ (ಮೆಟಮಾರ್ಫೊಸಿಸ್ ರೆಗ್ಯೂಲೇಷನ್): ನರಸ್ರಾವಕ ಕೋಶಗಳು ವಲ್ಕವಂತ ಮತ್ತು ಇತರೆ ಸಂದಿಪದಿಗಳಲ್ಲಿ ಪರಮೋನ್ನತಿಯನ್ನು ಪಡೆದಿವೆ. ಕೀಟಗಳಲ್ಲಿ ಈ ವ್ಯವಸ್ಥೆಗೆ ಮಿದುಳಿನ ಆದಿ ಮಸ್ತಿಷ್ಕದಲ್ಲಿನ ನರಸ್ರಾವಕ ಕೋಶಗಳು ಸೇರಿವೆ. ನರಸ್ರಾವಕ ವಸ್ತುಗಳು ಈ ಕೋಶಗಳ ಆಕ್ಸಾನ್‌ಗಳ ಮೂಲಕ ಮಿದುಳಿನ ಹಿಂಭಾಗದಲ್ಲಿರುವ ಕಾರ್ಪೋರ ಕಾರ್ಡಿಯಾಕ ಗ್ರಂಥಿಯನ್ನು ಸೇರಿ ರಕ್ತನಾಳಗಳಿಗೆ ಸೇರುತ್ತವೆ. ಈ ಕೋಶಗಳೇ ಮಿದುಳಿನ ಇನ್ನೊಂದು ಚೋದಕ ಎಕ್ಡೈಸೊಟ್ರೋಪಿನ್ ಅಥವಾ ಮಿದುಳು ಚೋದಕವನ್ನು ಸ್ರವಿಸುತ್ತವೆ. ಮಿದುಳಿಗೆ ಸೇರುವ ಜ್ಞಾನವಾಹಕ ನರಪ್ರೇರಣೆಗಳು (ನರ್ವ ಇಂಪಲ್ಸಸ್) ನರ ತುದಿಗಳಿಂದ ಬಿಡುಗಡೆ ಹೊಂದಿದ ಚೋದಕ ಕಾರ್ಪೋರ ಕಾರ್ಡಿಯೇಕಗಳಲ್ಲಿ ರಕ್ತಕ್ಕೆ ಸೇರುವುದನ್ನು ನಿಯಂತ್ರಿಸುತ್ತದೆ. ಈ ಚೋದಕ ಎಕ್‌ಡಿಸಿಯಲ್ ನಿರ್ನಾಳ ಗ್ರಂಥಿಯನ್ನು ಪ್ರಚೋದಿಸುತ್ತದೆ. ಎಕ್‌ಡೈಸೋನ್ ಚೋದಕ ಬಿಡುಗಡೆಯಾಗುತ್ತದೆ. ಈ ಚೋದಕ ಮರಿಗಳ (ಡಿಂಬ) ಬೆಳವಣಿಗೆ ಮತ್ತು ಪ್ರೌಢ ಕೀಟದ ಅಂಗಾಂಶಗಳ ವ್ಯತ್ಯಾಸಗಳನ್ನು ಪ್ರಚೋದಿಸುತ್ತದೆ. ಕಾರ್ಪೋರ ಅಲ್ಲಾಟ ಸ್ರವಿಸುವ ಯೌವನ ಚೋದಕ (ಜುವೆನೈಲ್ ಹಾರ್ಮೋನ್) ಅಂಗಾಂಶಗಳು ಮರಿಗಳಲ್ಲಿದ್ದಂತೆಯೇ ಇರಿಸುತ್ತದೆ. ಆದ್ದರಿಂದ ಕೀಟಗಳ ಬೆಳವಣಿಗೆ ಹಂತಗಳನ್ನು ಎಕ್‌ಡೈಸೋನ ಮತ್ತು ಬಾಲ್ಯ ಚೋದಕಗಳ ಮಟ್ಟಗಳು ನಿರ್ಧರಿಸುತ್ತವೆ.

ಪಿಟ್ಯುಟರಿ ಗ್ರಂಥಿಗೆ ಹೋಲುವ ಕಾರ್ಪಸ್ ಅಲ್ಲಾಟಂನಿಂದ ಪ್ರೇರಣೆ ಹೊಂದಿ, ಕೀಟಗಳ ಮೈಮೇಲೆ, ದ್ರಾವಕ ವಸ್ತುಗಳ ಸ್ರವಣವಾಗುತ್ತದೆ. ಇವುಗಳನ್ನು ವಾಸನೆ ಅಥವ ರುಚಿಯ ಮೂಲಕ ಗ್ರಾಹಕ ಕೀಟಗಳು ಗ್ರಹಿಸುತ್ತವೆ. ಈ ವಸ್ತುಗಳೇ ಫೆರಮೋನ್‌ಗಳು. ಇದೇ ಕೀಟಗಳಲ್ಲಿ ಸಂತಾನ ಮತ್ತು ಇತರ ನಡತೆಗಳ ನಿರ್ವಹಣೆ ಮತ್ತು ಸಂಬಂಧ ವ್ಯೂಹಕ್ಕೆ ದಾರಿ ಮಾಡುತ್ತದೆ.

ಕೀಟಗಳಲ್ಲಿ ಸಂತಾನಾಭಿವೃದ್ಧಿ, ಅಂಡಾಣುಗಳ ಬೆಳವಣಿಗೆ, ಅಂಡಾಣುಗಳ ಸಂಖ್ಯೆ ಮತ್ತು ಗುಣಮಟ್ಟ, ಪ್ರೌಢಾವಸ್ಥೆ ತಲುಪಲು ಬೇಕಾಗುವ ಚೋದಕಗಳ ಸ್ರವಿಸುವಿಕೆಯ ಕಾರ್ಪಸ್ ಅಲ್ಲಾಟಂ ಉತ್ಪತ್ತಿಯ ಮೇಲೆ ಅವಲಂಬಿತವಾಗಿದೆ. ಕಾರಣ, ಕಾರ್ಪಸ್ ಅಲ್ಲಾಟಂ ಚೋದಕದ ಪಾತ್ರ ಕೀಟಗಳ ಜೀವನದಲ್ಲಿ ಅಮೋಘವಾಗಿದೆ. (ಎಂಪಿ.)

**ಕಾರ್ಪಸ್ ಕಾರ್ಡಿಯಕಂ:** ಎಲ್ಲಾ ಟೆರಿಗೋಟ, ತೈಸನ್ಯೂರ ಮತ್ತು ಜಪೈಗಿಡೆ ಕೀಟಗಳಲ್ಲಿ ಮಿದುಳಿನ ಹಿಂದೆ, ಮಹಾ ಅಪಧಮನಿಯ ಎರಡು ಪಕ್ಕಗಳಲ್ಲಿ ಇರುವ ಒಂದು ಜತೆ ಸಣ್ಣ ಒಳಸ್ರವಿಕೆ ಗ್ರಂಥಿಗಳು (ಕಾರ್ಪೋರ ಕಾರ್ಡಿಯೇಕ ಬಹುವಚನ). ಇವುಗಳನ್ನು ಕಾರ್ಪೋರ ಕಾರ್ಡಿಯೇಕ (ಕಾರ್ಪೋರ ಪ್ಯಾರಕಾರ್ಡಿಯೇಕ) ಎನ್ನುವರು. ಇವು ಎರಡು ನರಗಳಿಂದ ಆದಿ ಮಸ್ತಿಷ್ಕಕ್ಕೂ (ಪ್ರೋಟೊಸೆರಬ್ರಮ್) ಮತ್ತು ಒಂದೇ ನರದಿಂದ, ಸ್ಟೊಮೇಟೊಗಾಸ್ಟ್ರಿಕ್ ವ್ಯೂಹದ ಹೈಪೊಸೆರೆಬ್ರಲ್ ಗ್ಯಾಂಗ್ಲಿಯಗೆ ಸಂಬಂಧಿಸಿವೆ. ಆಗಾಗ ಈ ಎರಡು ಗ್ರಂಥಿಗಳು ಸಂಯೋಜಿಸಿರುತ್ತವೆ. ಕಾರ್ಪೋರ ಕಾರ್ಡಿಯೇಕಗಳಲ್ಲಿರುವ




ನರಗಳು ಮತ್ತು ಕ್ರೋಮಾಫ್ಫಿಲ್ ಕೋಶಗಳು ಸ್ವಭಾವತಹ, ನರಸ್ರಾವಕ. ಇವುಗಳನ್ನು ನಿರ್ಮೂಲ ಮಾಡಿದಾಗ, ಓಡೋನೇಟ (ಉದಾ: ಕೊಡತಿಹುಳು) ಗಳಲ್ಲಿ ಕಾರ್ಪೋರ ಕಾರ್ಡಿಯೇಕಗಳು ಮುನ್ನೆದೆ ಗ್ರಂಥಿಯ ಸ್ರವಣ ಕ್ರಿಯೆಯನ್ನು ಹತೋಟಿಗೊಳಿಸುತ್ತವೆ. ಮಿದುಳು ಮತ್ತು ನರಗಳು ಉತ್ಪತ್ತಿಮಾಡುವ ಚೋದಕ, ಕಾರ್ಪೋರಕಾರ್ಡಿಯೇಕಗಳಲ್ಲಿ ಸಂಗ್ರಹಿಸುತ್ತದೆ. ಇದೇ ತೊರಾಕೊಟ್ರೋಪಿಕ್ ಚೋದಕ. ಇದು ರಕ್ತದ ಮೂಲಕ ಕೆಲವು ಎದೆ ಗ್ರಂಥಿಗಳಿಗೆ ಸೇರುತ್ತದೆ. ಆ ಗ್ರಂಥಿಗಳು ಪ್ರೇರಣೆ ಹೊಂದಿ, ಇನ್ನೊಂದು ಚೋದಕ ಎಕ್‌ಡೈಸೋನ್ ಉತ್ಪತ್ತಿ ಮಾಡುತ್ತವೆ. ಎಕ್‌ಡೈಸೋನ್ ಪೊರೆಯುರ್ಚು ಚೋದಕ (ಮೌಲ್ಟಿಂಗ್ ಹಾರ್ಮೋನ್) ಕ್ಯಾಲಿಫೋರ ಹೆಣ್ಣು ಕೀಟಗಳಲ್ಲಿ ಮಿದುಳಿನಿಂದ ಪ್ರೇರಣೆ ಹೊಂದಿ, ಕಾರ್ಪೋರಕಾರ್ಡಿಯೇಕ, ಮೊಟ್ಟೆ ಬೆಳವಣಿಗೆಯ ಚೋದಕವನ್ನು ಸ್ರವಿಸುತ್ತವೆ. ಈ ಗ್ರಂಥಿಗಳ ಸಾರ. ಕೀಟಗಳ ಹೃದಯ ಮತ್ತು ಜೀರ್ಣಾಂಗದ ಸ್ನಾಯುಗಳ ಸಂಕೋಚನದ ವೇಗವನ್ನು ಹೆಚ್ಚಿಸುತ್ತದೆ. ಮತ್ತು ವಲ್ಕವಂತಗಳ ವರ್ಣಕೋಶಗಳ ಸಂಕೋಚನವನ್ನುಂಟು ಮಾಡುತ್ತದೆ.

ಪ್ರಾಣಿ ಅಂಗಾಂಶಗಳ ಹೋಲಿಕೆ: ಕಾರ್ಪಸ್ ಅಲ್ಲಾಟಂ ರಾಸಾಯನಿಕ ಚೋದಕಗಳು, ನರಕೋಶಗಳಿಂದ ಸ್ರವಿಸಲ್ಪಟ್ಟು, ಕಾರ್ಯಸ್ಥಾನಕ್ಕೆ ಸೇರುತ್ತವೆ. ಇವುಗಳ ಕ್ರಿಯೆ ಕೀಟಗಳಲ್ಲಿ ಚೆನ್ನಾಗಿದೆ. ಈ ಸಂಬಂಧದ ಗ್ರಂಥಿಗಳೇ ಕಾರ್ಪೋರ ಕಾರ್ಡಿಯೇಕ ಮತ್ತು ಕಾರ್ಪೋರ ಅಲ್ಲಾಟ. ಇವು ಮಿದುಳಿನ ಬಳಿ ಇವೆ. ಮಿದುಳಿನ ನರಕೋಶಗಳಿಂದ ಸ್ರವಿಸಲ್ಪಟ್ಟ ಲೋಳೆ ಹರಳುಗಳು ಕಾರ್ಪೋರ ಕಾರ್ಡಿಯೇಕಗಳನ್ನು ಹೊಕ್ಕು ಆಮೇಲೆ ಕಾರ್ಪೋರ ಅಲ್ಲಾಟಗಳಿಗೆ ಸೇರುತ್ತವೆ.

ನರ ನಿರ್ನಾಳ ಪರಸ್ಪರ ಕ್ರಿಯೆ (ನ್ಯುರೊಎಂಡೋಕ್ರೈನ್ ಇಂಟರ್‌ಅಕ್ಷನ್ಸ್): ಕೀಟಗಳ ಕಾರ್ಪಸ್ ಕಾರ್ಡಿಯೇಕಂ ಮತ್ತು ಸ್ತನಿಗಳ ಪಿಟ್ಯುಟರಿ ಗ್ರಂಥಿಯ ಹಿಂಭಾಗದ ಹಾಲೆ, ಭಾಗಶಃ ಒಂದೇ ರೀತಿಯ ಕಾರ್ಯ ಮಾಡುತ್ತವೆ. ಸೂಕ್ತ ಪ್ರೇರಣೆಯಾದಾಗ, ನರಸ್ರಾವಕ ಕೋಶಗಳು ಅವುಗಳ ಸ್ರವಣ ವಸ್ತುಗಳನ್ನು ರಕ್ತವ್ಯೂಹಕ್ಕೆ ಬಿಡುತ್ತವೆ. ಆ ನರ ಚೋದಕಗಳು ರಕ್ತದ ಮೂಲಕ ಸಾಗಿ ದೂರದ ನಿರ್ನಾಳ ಗ್ರಂಥಿಗಳು ಮತ್ತು ಇತರ ಅಂಗಾಂಶಗಳ ಮೇಲೆ ಪ್ರಭಾವ ಬೀರುತ್ತವೆ.

ನರಸ್ರಾವಕ ವ್ಯೂಹದ ಪರಸ್ಪರ ಸಂಬಂಧ (ನ್ಯೂರೊಸೆಕ್ರಿಟರಿ ಸಿಸ್ಟಮ್ ಇಂಟರ್ ರಿಲೆಶನ್‌ಸಿಪ್): ಕೀಟಗಳ ಮಿದುಳಿನಲ್ಲಿ ನರಸ್ರಾವಕ ಜೀವಕೋಶಗಳ ಗುಂಪುಗಳಿವೆ. ಒಂದೊಂದು ಗುಂಪನ್ನು ಪಾಸ ಇಂಟರ್ ಸೆರೆಬ್ರಾಲಿಸ್ ಎನ್ನುತ್ತಾರೆ. ಇವು ಸ್ರವಣವನ್ನು ಹೊತ್ತ ಆಕ್ಸಾನ್‌ಗಳನ್ನು ಎರಡು ಪಕ್ಕಗಳಲ್ಲಿರುವ ಕಾರ್ಪೋರ ಕಾರ್ಡಿಯೇಕಂ ಮತ್ತು ಕಾರ್ಪಸ್ ಅಲ್ಲಾಟಂಗಳಿಗೆ ಸೇರಿಸುತ್ತವೆ. ಮಿದುಳಿಗೂ, ಕಾರ್ಪೋರಗಳಿಗೆ ನರಗಳ

ಸಂಬಂಧವಿದೆ. ಕಾರ್ಪೋರ್ರ ಕಾರ್ಡಿಯೇಕಗಳು ಕೀಟಗಳ ಕ್ರಿಯೆಗಳಿಗೆ ಬೇಕಾದ ನರಸ್ರಾವಕ ಅಂಶಗಳನ್ನು ಬಿಡುತ್ತವೆ. ಇವುಗಳಲ್ಲೊಂದು ಚೋದಕ – ಪ್ರೊತೊರಾಕೊಟ್ರೋಪಿಕ್ ಅಥವಾ ಎಕ್‌ಡಿಸಿಯೊಟ್ರೋಪಿಕ್ ಗ್ರಂಥಿಯನ್ನು ಪ್ರಚೋದಿಸಿ, ಅದು ಎಕ್ಡೈಸೋನ್ ಅಥವಾ ಪೊರೆಯುರ್ಚು ಚೋದಕವನ್ನು ಸ್ರವಿಸುವಂತೆ ಮಾಡುತ್ತದೆ. ಮುನ್ನೆದೆ ಗ್ರಂಥಿ ಪ್ರಾಯದ ಕೀಟಗಳಲ್ಲಿ ನಶಿಸುತ್ತದೆ.

ಕೀಟಗಳಲ್ಲಿ ತೊರಾಕೊಟ್ರೋಪಿಕ್ ಚೋದಕ (ಥೋರ್‌ಕೊಟ್ರೊಫಿಕ್ ಹಾರ್ಮೋನ್ – ನ್ಯೂರೊ ಹಾರ್ಮೋನ್‌ಗಳು): ಮಿದುಳಿನ ಚೋದಕಗಳಲ್ಲೊಂದು ತೊರಾಕೊಟ್ರೋಪಿಕ್ ಚೋದಕ. ಇದು ನರಚೋದಕಾಂಗ – ಕಾರ್ಪಸ್ ಕಾರ್ಡಿಯೇಕಂನಲ್ಲಿರುವ ನರತುದಿಗಳಿಂದ ಬಿಡುಗಡೆಯಾಗುತ್ತದೆ. ಕಾರ್ಪಸ್ ಕಾರ್ಡಿಯೇಕಂ ಮತ್ತು ಮಿದುಳಿನ ಸಂಬಂಧ, ಕಶೇರುಕಗಳ ಪಿಟ್ಯುಟರಿ ಗ್ರಂಥಿಯ ನರಹಾಲೆ (ನ್ಯೂರಲ್ ಲೋಬ್) ಮತ್ತು ಮಿದುಳಿನ ಹೈಪೊತೆಲಾಮಿಕ್ ಭಾಗದ ಸಂಬಂಧಿಯಂತಿದೆ. ತೊರಾಕೊಟ್ರೋಪಿಕ್ ಚೋದಕ ರಕ್ತದ ಮೂಲಕ ಎದೆಯಲ್ಲಿರುವ ಎದೆ ಗ್ರಂಥಿಗಳಿಗೆ ಸೇರುತ್ತದೆ. ಅದು ಅಲ್ಲಿನ ವಸ್ತುಗಳನ್ನು ಪ್ರೇರೇಪಿಸಿ, ಆ ಗ್ರಂಥಿ ಎಕ್‌ಡೈಸೋನ್ ಬಿಡುಗಡೆಯಾಗುವಂತೆ ಮಾಡುತ್ತದೆ. ಇದು ಕೀಟಗಳಲ್ಲಿ ಮತ್ತು ಇತರ ಸಂಧಿಪದಿಗಳಲ್ಲಿ ಮಾದರಿಯಾಗಿದೆ. ತೊರಾಕೊಟ್ರೋಪಿಕ್ ಚೋದಕ ಬಹುಶಃ ಒಂದು ಪಾಲಿಪೆಪ್ಟೈಡ್ ಹಾರ್ಮೋನ್. ಕಾರ್ಪೋರ ಕಾರ್ಡಿಯೇಕಗಳಲ್ಲಿ, ಮಿದುಳಿನ ನರಸ್ರವಣದ ಹತೋಟಿಯಲ್ಲಿ ಇನ್ನೊಂದು ಹೆಚ್ಚು ಚುರುಕಾದ ಹೈಪರ್ ಗ್ಲಿಸಿಮಿಕ್ ಚೋದಕ ಉತ್ಪತ್ತಿಯಾಗುತ್ತದೆ. (ಎಂ.ಪಿ.)

**ಕಾರ್ಪಸ್ ಲ್ಯೂಟಿಯಮ್:** ಅಂಡಾಶಯದ ಫಾಲಿಕಲ್ಲಿನಲ್ಲಿ ಇರುವ, ಅಂಡಾಣು ಪೂರ್ತಿ ಬೆಳೆದು, ಅದರ ವಿಸರ್ಜನೆಯಾದ ಮೇಲೆ, ಫಾಲಿಕಲಗೋಡೆಯಲ್ಲಿರುವ ಕೋಶಗಳು ಮಾರ್ಪಾಡು ಹೊಂದಿ ಉಂಟಾಗುವ, ಕೆಲ ಸಮಯ ಕ್ರಿಯಾಶೀಲವಾಗಿರುವ (ಪ್ರಭೇದಗಳಿಗೆ ಅನುಗುಣವಾಗಿ) ಅಂತಃಸ್ರಾವಕ ಕೋಶಗಳ ಸಮೂಹ. ಸ್ತನಿಗಳ ಅಂಡಾಶಯದಲ್ಲಿ ಅಂಡಾಣುವು ಬೆಳೆದು, ಅಂಡವಿಸರ್ಜನೆಯಾದ ಮೇಲೆ, ಅದರ ಜಾಗದಲ್ಲಿ ಹೊಸದೊಂದು ನಿರ್ನಾಳ ಗ್ರಂಥಿಯು ರೂಪುಗೊಳ್ಳುತ್ತದೆ. ಇದು ನಿರ್ಮಾಣವಾದ ಹೊಸದರಲ್ಲಿ ಹಳದಿ ಬಣ್ಣವಾಗಿರುವುದರಿಂದ ಇದಕ್ಕೆ ಕಾರ್ಪಸ್ ಲ್ಯೂಟಿಯಮ್ ಎಂಬ ಹೆಸರು ಬಂದಿದೆ. ಅಂಡಾಣು ಬೆಳೆಯುತ್ತಿರುವಾಗ ಅದರ ಸುತ್ತ ಹಲವಾರು ಕೋಶಗಳ ಪದರಗಳು ಇದ್ದು ಅಂಡಕೋಶ (ಫಾಲಿಕಲ್) ರೂಪು ಗೊಂಡಿರುತ್ತದೆ. ಬೆಳೆಯುತ್ತಿರುವ ಅಂಡಾಣುವಿಗೆ ಅಗತ್ಯವಾದ ರಕ್ಷಣೆಯನ್ನು ಒದಗಿಸಿ, ಅದಕ್ಕೆ ಬೇಕಾದ ಪೋಷಕಾಂಶಗಳನ್ನು ಪೂರೈಸಿ, ಪ್ರಜನನ ಕ್ರಿಯೆಯ ಮುಂದಿನ ಅಧ್ಯಾಯಕ್ಕೆ ಗರ್ಭಕೋಶಗಳಂತಹ ಅನುಷಂಗಿಕ ಜನನೇಂದ್ರಿಯಗಳನ್ನು ಸಿದ್ಧಗೊಳಿಸಲು ಪ್ರಧಾನವಾಗಿ ಇಸ್ಟ್ರೋಜೆನ್ ಎಂಬ ಹಾರ್ಮೋನನ್ನು ಸ್ರವಿಸುತ್ತವೆ. ಅಂಡಾಣುವು ಹೊರಬಿದ್ದ (ವಿಸರ್ಜನೆ) ಮೇಲೆ ಅಂಡಕೋಶದ ಜೀವಕೋಶಗಳು ಪಿಟುಯಿಟರಿಯ ಎಲ್‌ಎಚ್ ಹಾರ್ಮೋನ್‌ನ ಪ್ರಭಾವದಿಂದ ಕಾರ್ಪಸ್ ಲ್ಯೂಟಿಯಮ್ ಆಗಿ ಪರಿವರ್ತನೆಗೊಳ್ಳುತ್ತವೆ. ಹೀಗಾಗಲು ಅಂಡಕೋಶದಲ್ಲಿದ್ದ ಗ್ರೆನುಲೊಸ ಜೀವಕೋಶಗಳಲ್ಲಿ ಹಲವಾರು ರಚನಾತ್ಮಕ ಹಾಗೂ ಕಾರ್ಯಚಟುವಟಿಕೆಗಳಲ್ಲಿ ಬದಲಾವಣೆಯಾಗುತ್ತವೆ. ಈ ಕಾರ್ಯಕ್ಕೆ ಲ್ಯುಟಿನೈಸೇಷನ್ ಎಂದು ಹೆಸರು. ಕಾರ್ಪಸ್ ಲ್ಯೂಟಿಯಮ್ ಪ್ರೊಜೆಸ್ಟಿರೊನ್ ಎಂಬ ಹಾರ್ಮೋನನ್ನು ಸ್ರವಿಸಿ ಅನುಷಂಗಿಕ ಅಂಗಗಳನ್ನು ಅನುವುಗೊಳಿಸಲು ನೆರವಾಗುತ್ತದೆ. ಗರ್ಭಾವಸ್ಥೆಯ ಆದಿ ಹಂತಗಳಲ್ಲಿ ಗರ್ಭ ರಕ್ಷಣೆಗೆ ಪ್ರೊಜೆಸ್ಟಿರೋನ್ ಹಾರ್ಮೋನು ಅಗತ್ಯ. ಆದ್ದರಿಂದ ಕಾರ್ಪಸ್ ಲೂಟಿಯಮ್‌ನ ನಿರ್ಮಾಣ ಹಾಗೂ ಅದರ ಚಟುವಟಿಕೆಗಳು ಗರ್ಭ ನಿಲ್ಲಲು ಅತ್ಯವಶ್ಯಕ. ನಿಷೇಚನ ನಡೆಯದೆ ಗರ್ಭಕಟ್ಟದಿದ್ದರೇ ಅದು ಸ್ವಲ್ಪದಿನಗಳಲ್ಲಿ ಬಾಡಿ ಹೋಗುತ್ತದೆ. ವಿವಿಧ ಪ್ರಭೇದಗಳಲ್ಲಿ ಕಾರ್ಪಸ್ ಲ್ಯೂಟಿಯಂನ ಜೀವಿತ ಅವಧಿ ಬೇರೆ ಬೇರೆ ಆಗಿದ್ದು, ಅದು ಆ ಪ್ರಭೇದದ ಋತುಚಕ್ರದ ಅವಧಿಯ ಮೇಲೆ ನಿರ್ಧಾರಿತವಾಗಿರುತ್ತದೆ. ಉದಾಹರಣೆಗೆ ಮನುಷ್ಯರಲ್ಲಿ ಅದರ ಜೀವಿತ ಅವಧಿ 14 ದಿನಗಳು. ಅಂದರೆ, ಪ್ರತಿ ಋತುಚಕ್ರದಲ್ಲೂ, ಕಾರ್ಪಸಲ್ಯೂಟಿಯಮ್‌ನ ನಿರ್ಮಾಣವಾಗಿ, ಕಾರ್ಯನಿರ್ವಹಿಸಿ, ಅಳಿದುಹೋಗುತ್ತದೆ. ಅಂಡಕೋಶವು ಕಾರ್ಪಸ್ ಲ್ಯೂಟಿಯಂ ಆಗಿ ಪರಿವರ್ತನೆಗೊಳ್ಳಲು ಎಲ್‌ಎಚ್ ಕಾರಣವಾದರೆ ಅದು ಚಟುವಟಿಕೆಯಿಂದ ಮುಂದುವರಿಯಲು ಪ್ರೊಲ್ಯಾಕ್ಟಿನ್ ಕಾರಣ. ಗರ್ಭಕಟ್ಟದಿರುವಾಗ ಅದು ಬಾಡಿ ನಶಿಸಿಹೋಗಲು ಗರ್ಭಕೋಶವು ಉತ್ಪತ್ತಿಮಾಡುವ ಲ್ಯುಟಿಯೋ ಲೈಟಿಕ ವಸ್ತು ಕಾರಣವೆಂದು ತಿಳಿದು ಬಂದಿದೆ. ಕಾರ್ಪಸ್‌ಲ್ಯೂಟಿಯಂ ನಿರ್ಮಾಣವಾದ ಮೇಲೆ ಶಸ್ತ್ರ ಚಿಕಿತ್ಸೆಯಿಂದ ಗರ್ಭಾಶಯವನ್ನು ತೆಗೆದು ಹಾಕಿದರೆ ಇನ್ನಷ್ಟು ದೀರ್ಘಕಾಲ ಅದು ಚಟುವಟಿಕೆಯಿಂದ ಇರುತ್ತದೆ. ಇದೇ ಕಾರಣದಿಂದ ಗರ್ಭಕೋಶದಲ್ಲಿ ಭ್ರೂಣವಿರುವವರೆಗೆ ಅಥವಾ ಗರ್ಭಕೋಶವು ಬ್ಯಾಕ್ಟೀರಿಯಾ ಸೋಂಕಿಗೆ ಗುರಿಯಾಗಿರುವಾಗಲೂ ಅವು ದೀರ್ಘಕಾಲ ಚಟುವಟಿಕೆಯಾಗಿರಬಲ್ಲುವು. ಕಾರ್ಪಸ್ ಲ್ಯೂಟಿಯಮ್‌ನಂತಹ ರಚನೆಗಳು ಇತರ ಕಶೇರುಕಗಳಲ್ಲಿ ಕಂಡು ಬರುತ್ತವೆ. ಅಂಡಜರಾಯುಜ ಮೀನುಗಳು, ಹಲ್ಲಿಗಳು ಮತ್ತು ಹಾವುಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾದ ಕಾರ್ಪಸ್ ಲ್ಯೂಟಿಯಮ್ ನಿರ್ಮಾಣವಾಗುತ್ತದೆ ಮತ್ತು ಅಂಡವಾಹಿನಿಯಲ್ಲಿ ತತ್ತಿಗಳು ಉಳಿದು ಬೆಳೆಯುತ್ತಿರುವವರೆಗೆ ಚಟುವಟಿಕೆ ತೋರಿಸಿ ಅನಂತರ ಬಾಡಿ ನಶಿಸಿಹೋಗುತ್ತವೆ. ರಚನೆಯಲ್ಲಿ ಮತ್ತು ಕಿಣ್ವ ಚಟುವಟಿಕೆಗಳಲ್ಲಿ ಹಾವುರಾಣಿಯ ಕಾರ್ಪಸ್ ಲ್ಯೂಟಿಯಮ್ ಸ್ತನಿಗಳದನ್ನು ಹೋಲುವಂತೆ ಕಂಡು ಬರುತ್ತದೆ. ಹಕ್ಕಿಗಳಲ್ಲಿ ಕಾರ್ಪಸ್ ಲ್ಯೂಟಿಯಮ್ ಹೋಲುವ ರಚನೆಯನ್ನು ವರದಿ ಮಾಡಿದ್ದಾರೆ. ಸ್ತನಿಗಳಲ್ಲದ ಕಶೇರುಕಗಳಲ್ಲಿ ಕಂಡುಬರುವ ಕಾರ್ಪಸ್ ಲ್ಯೂಟಿಯಮ್‌ಗಳಿಗೂ ಜರಾಯುಜತ್ವಕ್ಕೂ ಯಾವ ಸಂಬಂಧವೂ ಇದ್ದಂತೆ ಕಂಡುಬರುವುದಿಲ್ಲ. ಏಕೆಂದರೆ ಅಂಡಜಗಳಲ್ಲಿಯೂ ಅವು ನಿರ್ಮಾಣವಾಗುತ್ತವೆ. ಆದ್ದರಿಂದ ಸ್ತನಿಗಳಲ್ಲಿ ಪ್ಲಾಸೆಂಟ ಕಾಣಿಸಿಕೊಳ್ಳುವ ಮುನ್ನವೇ ವಿಕಾಸದಲ್ಲಿ ಕಾರ್ಪಸ್ ಲ್ಯೂಟಿಯಮ್‌ಗಳು ಕಾಣಿಸಿಕೊಂಡಿವೆ. ಜರಾಯುತ್ವದಲ್ಲಿ ಅವುಗಳ ಪಾತ್ರ ಅನಂತರ ಗಳಿಸಿ ಕೊಂಡ ಕ್ರಿಯಾ ವಿಶೇಷತೆ. ಅಂಡಜರಾಯುಜ ಹಲ್ಲಿಗಳು ಮತ್ತು ಹಾವುಗಳಲ್ಲಿ ನಿರ್ಮಾಣವಾಗುವ ಕಾರ್ಪಸ್ ಲ್ಯೂಟಿಯಮ್‌ಗಳಿಗೆ ರಕ್ತಸರಬರಾಜು ಚೆನ್ನಾಗಿ ನಡೆದು ಅವು ತತ್ತಿಗಳು ಹೆಣ್ಣು ಪ್ರಾಣಿಯ ದೇಹದಲ್ಲಿ ಉಳಿದಿರುವವರೆಗೂ ಹಾಗೇ ಇದ್ದು ತತ್ತಿ ಹೊರಗೆ ಇಟ್ಟ ಮೇಲೆ ನಶಿಸಿಹೋಗುತ್ತವೆ. ಇದೇ ರೀತಿ ಪ್ರೊಟೊಥೀರಿಯಗಳಲ್ಲಿಯೂ ಅವು ತತ್ತಿಗಳು ಗರ್ಭಕೋಶದಲ್ಲಿ ಉಳಿದಿರುವವರೆಗೂ ಪೂರ್ಣಚಟುವಟಿಕೆಯಲ್ಲಿದ್ದು ಅನಂತರ ಬಾಡುತ್ತವೆ. ಮೆಟಥೀರಿಯದಲ್ಲಿ ಕಾರ್ಪಸ್ ಲ್ಯೂಟಿಯಮ್ ಮರಿ ಜನಿಸಿಯಾದ ಮೇಲೂ ನಾಲ್ಕನೆ ತಿಂಗಳವರೆಗೆ ಚಟುವಟಿಕೆಯಾಗಿರುತ್ತವೆ. ಇಲ್ಲಿ ಅದು ತೋರುವ ಚಟುವಟಿಕೆಗೂ, ಮರಿಗೆ ಹಾಲುಣಿಸುವುದಕ್ಕೂ ಸಂಬಂಧವಿಲ್ಲ.

ತಿಮಿಂಗಿಲಗಳಲ್ಲಿ ಅತ್ಯಂತ ದೊಡ್ಡ ಕಾರ್ಪಸ್ ಲ್ಯೂಟಿಯಮ್‌ಗಳು ನಿರ್ಮಾಣವಾಗುತ್ತವೆ. ಅವು 10 ಸೆಂಮೀ ವ್ಯಾಸ ಇರುತ್ತವೆ ಮತ್ತು ಅನೇಕ ವರ್ಷಗಳವರೆಗೆ, ಪ್ರಾಯಶಃ ಅವುಗಳ ಜೀವಮಾನ ಪೂರ್ತಿ ನಶಿಸದೆ ಉಳಿದಿರುತ್ತವೆ. ಒಂದು ಅಂಡಾಶಯದಲ್ಲಿ 1 ರಿಂದ 50 ರ ವರೆಗೆ ಕಾರ್ಪಸ್ ಲ್ಯೂಟಿಯಮ್‌ಗಳಿರುವ ವರದಿಗಳಿವೆ. ಇಲ್ಲಿ ಇನ್ನೊಂದು ವಿಶೇಷ ಲಕ್ಷಣವೆಂದರೆ ಬಹು ಕೋಶಕೇಂದ್ರಗಳಿರುವ ದೈತ್ಯ ಕೋಶಗಳಿರುವುದು. ಅವು 45 ಮೈಮೀ ವ್ಯಾಸವಿದ್ದು ಆರರವರೆಗೆ ಕೋಶಕೇಂದ್ರಗಳನ್ನೊಳಗೊಂಡಿರುತ್ತವೆ.

ಹಸುಗಳಲ್ಲಿ ದ್ರವ ತುಂಬಿದ ಸಂದುಗಳಂತೆ ಕಂಡುಬರುತ್ತವೆ. ಆದರೆ ಕುರಿ, ಆಡು ಮತ್ತು ಹಂದಿಗಳಲ್ಲಿ ಗಟ್ಟಿಯಾಗಿದ್ದು ಅಂಡಾಶಯದಿಂದ ಹೊರಕ್ಕೆ ಚಾಚಿಕೊಂಡಿರುತ್ತವೆ. ಅತ್ಯಲ್ಪ ಕಾಲ ಬದುಕಿರುವುದೆಂದರೆ ಕುದುರೆಗಳಲ್ಲಿ ಮತ್ತು ಇಲ್ಲಿ ಅನೇಕ ಆನುಷಂಗಿಕ ಕಾರ್ಪಸ್ ಲ್ಯೂಟಿಯಮ್‌ಗಳು ಕಂಡುಬರುತ್ತವೆ.

ಮನುಷ್ಯನು ಸೇರುವ ಪ್ರೈಮೇಟ ಗಣದ ಪ್ರಾಣಿಗಳಲ್ಲಿ ಗರ್ಭಕಟ್ಟದಿದ್ದರೆ 14ನೆಯ ದಿನ ಬಾಡುತ್ತವೆ. ಗರ್ಭಕಟ್ಟಿದರೆ 146 ದಿನಗಳವರೆಗೆ ಪಟುವಾಗಿರುತ್ತವೆ. ಮಾನವರಲ್ಲಿ ನಿರ್ಮಾಣವಾಗುವ ಕಾರ್ಪಸ್ ಲ್ಯೂಟಿಯಮ್‌ಗಳಲ್ಲಿ ನಾಲ್ಕು ಅವಸ್ಥೆಗಳನ್ನು ಕಾಣಬಹುದು: 1) ವೃದ್ಧಿ, 2) ರಕ್ತಸರಬರಾಜು 3) ಪರಿಪಕ್ವತೆ ಹಾಗೂ 4) ಬಾಡುವಿಕೆ. ಗರ್ಭಿಣಿ ಸ್ತ್ರೀಯರಲ್ಲಿ ಗರ್ಭಾವಸ್ಥೆಯ 50 ದಿನಗಳವರೆಗೆ ಗಾತ್ರದಲ್ಲಿ ಹೆಚ್ಚುತ್ತದೆ ಮತ್ತು 60 ದಿನಗಳವರೆಗೆ ತೀವ್ರವಾಗಿ ವೃದ್ಧಿಯಾಗುತ್ತದೆ. ಅನಂತರ ಕುಗ್ಗಿ, ಇಂಗಿ ಹೋಗುತ್ತದೆ. (ಎಚ್.ಬಿ.ಡಿ.)

**ಕಾಲರ:** ಇದ್ದಕ್ಕಿದ್ದಂತೆ ತಲೆದೋರುವ ತಡೆರಹಿತ ಅತಿರೇಕದ ಬೇದಿ, ವಾಂತಿ; ಮತ್ತು ಇದರ ಪರಿಣಾಮವಾಗಿ, ದೇಹದ ದ್ರವಾಂಶ ನಾಶವಾಗುವುದು, ಮಾಂಸಖಂಡಗಳ ಸೆಳೆತ, ಮೂತ್ರವಾಗದಿರುವುದು, ಕಣ್ಣುಗುಡ್ಡೆ ಒಳಹೋಗುವುದು, ನಾಲಿಗೆ ಬಾಯಿ ಒಣಗುವುದು ಮುಂತಾದ ಲಕ್ಷಣಗಳುಳ್ಳ ಕಾಯಿಲೆಯನ್ನು ಕಾಲರ ಎನ್ನುತ್ತಾರೆ. ಸೂಕ್ತ ಚಿಕಿತ್ಸೆ ದೊರೆಯದಿದ್ದರೆ ಕಾಯಿಲೆ ಮರಣಾಂತಿಕವಾಗುತ್ತದೆ. ಅಕ್ಕಿಯ ಗಂಜಿಯಂತಹ ಭೇದಿ ಕಾಲರದ ವಿಶಿಷ್ಟತೆ.

ವಿಬ್ರಿಯೋ ಕಾಲರೆ (ಕ್ಲಾಸಿಕಲ್ ಎಲ್ಟಾರ್ ಪ್ರಭೇಧ) ಎಂಬ ರೋಗಾಣುಗಳು ಕಾಲರಕ್ಕೆ ಕಾರಣ, ನೀರು ಮತ್ತು ಆಹಾರದ ಮೂಲಕ ರೋಗಾಣುಗಳು ದೇಹ ಸೇರಿ ಕರುಳಿನಲ್ಲಿ ನೆಲೆಸಿ ಕಾಯಿಲೆಯನ್ನುಂಟು ಮಾಡುತ್ತವೆ. ರೋಗಾಣುಗಳ ಪ್ರಸರಣದಲ್ಲಿ ನೊಣಗಳು ಅತಿ ಮುಖ್ಯ ಪಾತ್ರ ವಹಿಸುತ್ತದೆ.

ಕಾಲರ ರೋಗಕ್ಕೆ ವಿಬ್ರಿಯೋ ಕಾಲರೆ ಎಂಬ ರೋಗಾಣುಗಳೇ ಕಾರಣ ಎಂದು ದೃಢಪಡಿಸಿದ್ದು ರಾಬರ್ಟಕಾಕ್ ಎಂಬ ವಿಜ್ಞಾನಿ. ಕಾಲರಾ ವರ್ಷದುದ್ದಕ್ಕೂ ಸ್ಥಳೀಯವಾಗಿ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಪಿಡುಗಾಗಿ ವ್ಯಾಪಿಸುತ್ತದೆ. ಖಂಡಾಂತರವಾಗಿಯೂ ಹರಡುತ್ತದೆ. ಸ್ಥಳೀಯ ಸೋಂಕು, ಜಲ ಭೂ ಮಾರ್ಗದ ಮುಖೇನ ಪ್ರಪಂಚದಾದ್ಯಂತ

ವ್ಯಾಪಿಸಬಲ್ಲದು. 1817 ರಿಂದ 1923 ರ ವರೆಗೆ ಒಟ್ಟು ಆರು ಬಾರಿ ಕಾಲರ ಪ್ರಪಂಚದಾದ್ಯಂತ ಹರಡಿದೆ. ಪಶ್ಚಿಮ ಬಂಗಾಲ ಮತ್ತು ಪಶ್ಚಿಮ ಪಾಕಿಸ್ತಾನದಿಂದ ಈ ಆರೂ ಪಿಡುಗುಗಳು ಉಗಮವಾಗಿದೆ.

ಇತ್ತೀಚೆಗೆ ಎಲ್.ಟಾರ್ ಎಂಬ ರೋಗಾಣುಗಳಿಂದ ಕಾಲರ ಉಂಟಾಗುತ್ತಿದೆ. ಈಗ ಕಾಯಿಲೆ ಮೊದಲಿನ ಕಾಲರಾದಷ್ಟು ಮರಣಾಂತಿಕವಾಗಿಲ್ಲ. ರೋಗದ ಲಕ್ಷಣಗಳು ಸೌಮ್ಯವಾಗಿರುತ್ತದೆ. ಆರಂಭದ ಹಂತದಿಂದಲೇ ಕಾಯಿಲೆಯನ್ನು ಕೇವಲ ನೀರು, ಉಪ್ಪು, ಸಕ್ಕರೆ, ನಿಂಬೆ ರಸಗಳ ಮಿಶ್ರಣದ ಸೇವನೆಯಿಂದ ಹತೋಟಿಯಲ್ಲಿಡಬಹುದು. ಕಾಲರ ಚಿಕಿತ್ಸೆಗೆ ಉತ್ತಮ ಔಷಧಿಗಳಿವೆ. ಪ್ರತಿಬಂಧಕ ಲಸಿಕೆಯೂ ಇದೆ.

ಆಹಾರ, ನೀರು ಹಾಗೂ ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡುವುದರಿಂದ ಹಾಗೂ ನೊಣಗಳ ನಿಯಂತ್ರಣದಿಂದ ಕಾಲರವನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು. ಬಹುತೇಕ ಪ್ರಸಂಗಗಳಲ್ಲಿ ಜಾತ್ರೆಗಳಲ್ಲಿಯೇ ಕಾಲರ ಸೋಂಕು ಹರಡುತ್ತದೆ. ಹೀಗಾಗಿ ಜಾತ್ರೆಯಲ್ಲಿ ಪರಿಸರ, ನೀರು, ಆಹಾರ ಸ್ವಚ್ಛತೆಗೆ ಅತೀವ ಗಮನ ನೀಡಬೇಕಾಗುವುದು ಅತಿ ಮುಖ್ಯ.

***

**ಕಾಲ್ಮೆಟ್, ಲಿಯಾನ್ ಚಾರಲ್ಸ್ ಆಲ್ಬರ್ಟ್ (1833–1933):** ಫ್ರಾನ್ಸಿನ ಏಕಾಣುಜೀವಿ ವಿಜ್ಞಾನಿ. ಕ್ಷಯ ಹತ್ತದಿರುವಂತೆ ಮಕ್ಕಳಿಗೆ ಹಾಕುವ ಬಿಸಿಜಿ ಲಸಿಕೆಯನ್ನು ತಯಾರಿಸಲು ಕಾರಣರಾದ ಇಬ್ಬರಲ್ಲಿ ಒಬ್ಬ. ಪ್ಯಾರಿಸ್ಸಿನಲ್ಲಿ ವೈದ್ಯಪದವೀಧರನಾದ (1886). ಹಾವು ಕಚ್ಚಿದವರ ಚಿಕಿತ್ಸೆಗಾಗಿ ಚುಚ್ಚುವ ಲಸಿಕೆಯನ್ನು ಈತ ತಯಾರಿಸಿದ್ದು 1897ರಲ್ಲಿ. ಈಗಲೂ ಅದು ಭಾರತದಲ್ಲಿ ಬಳಕೆಯಲ್ಲಿದೆ. ಕ್ಷಯಾಣುಸಾರದ (ಟ್ಯುಬರ್ಕ್ಯುಲಿನ್) ಪ್ರತಿಕ್ರಿಯೆಯನ್ನು ಹೇಗೆ ಗುರುತಿಸಬೇಕೆಂದು ವಿವರಿಸಿದ (1907). ಪ್ರಪಂಚದಲ್ಲಿ ಎಲ್ಲೆಲ್ಲೂ, ಅದರಲ್ಲೂ ಮುಂದುವರಿಯುತ್ತಿರುವ ನಾಡುಗಳಲ್ಲಿ, ಕ್ಷಯರೋಗವನ್ನು ತಡೆಗಟ್ಟಲು ಹಾಕುವ ಬಿಸಿಜಿ ಲಸಿಕೆಯನ್ನು ಕೆಮಿಲ್ಲೆ ಗ್ವೆರಿನ್ನನೊಂದಿಗೆ ಸೇರಿ ಕಂಡುಹಿಡಿದ (1906). ಪ್ರಚಂಡ ವಿಷಕರ, ದನದ ಕ್ಷಯ ದಂಡಾಣುಜೀವಿಗಳನ್ನು (ಬೆಸಿಲ್ಲೈ) ಪಿತ್ತರಸ, ಆಲೂಗೆಡ್ಡೆ, ಗ್ಲಿಸರೀನಿನಲ್ಲಿ ಹಾಕಿ ತಳಿಯೆಬ್ಬಿಸಿದರೆ ವಿಷ ಕಳೆದು ಹಾನಿಮಾಡದಂತಾಗುತ್ತವೆಂದು ಕಂಡುಕೊಂಡ. ಇಷ್ಟಾದರೂ ಹೀಗೆ ವಿಷ ಕಳೆದುಕೊಂಡು ಸಾಧುವಾದ ರೋಗಾಣುಗಳಿಗೂ ಜನರ ಅಲ್ಲದೆ ದನಗಳ ಕ್ಷಯದ ಸೋಂಕು ಅಂಟುವುದನ್ನು ತಡೆಯುವ ಬಲ ಉಳಿದಿರುವುದನ್ನೂ ಗುರುತಿಸಿದ. ಈ ತಳಿಯ ಕ್ಷಯ ರೋಗಾಣುವಿಗೆ ಬೆಸಿಲಸ್ ಕಾಲ್ಮೆಟ್–ಗ್ವೆರಿನ್ (ಕಾಲ್ಮೆಟ್–ಗ್ವೆರಿನ್‌ರ ದಂಡಾಣುಜೀವಿ) ಎಂದು ಹೆಸರಾಯಿತು. ಇದೇ ಮೊಟಕಾಗಿ ಈಗ ಬಿಸಿಜಿ ಆಗಿದೆ. ಹೀಗೆ ಜೀವವಿರುವ ಈ ಲಸಿಕೆ ಮೊತ್ತಮೊದಲು 1922ರಲ್ಲಿ ಮಕ್ಕಳ ಮೇಲೆ ಪ್ರಯೋಗವಾಯಿತು. ಈಗಿದು ಪ್ರಪಂಚದಲ್ಲಿ ಎಲ್ಲೆಲ್ಲೂ ಬಳಕೆಗೆ ಬಂದು ಎಲ್ಲ ತೆರನ ಕ್ಷಯರೋಗಗಳನ್ನು ಅಡಗಿಸುವುದರಲ್ಲಿ ಉತ್ತಮವಾದುದೆಂದು ಹೆಸರಾಗಿದೆ. ಚರ್ಮಕ್ಕೆ ಚುಚ್ಚುವ ಈ ಲಸಿಕೆಯನ್ನು ಹಾಕಿದ 4–6 ವಾರಗಳಲ್ಲಿ ವ್ಯಕ್ತಿಗೆ ಕ್ಷಯರೋಗ ತಡೆವ ಬಲ ಬರುವುದು. ಪ್ಯಾರಿಸ್ಸಿನ ಪ್ಯಾಶ್ಚರ್ ಸಂಸ್ಥೆಯ ನಿರ್ದೇಶಕನಾಗಿ ತಾನು ಕಂಡುಹಿಡಿದ ಈ ಮಹತ್ತರ ಶೋಧನೆಯನ್ನು ಕಾಲ್ಮೆಟ್ ದೃಢೀಕರಿಸಲು ಹಲವಾರು ಪ್ರಕಟನೆ, ಪ್ರಬಂಧಗಳನ್ನು ಹೊರತಂದರೂ ಈ ಲಸಿಕೆಯ ಗುಣವನ್ನು ಪ್ರಪಂಚ ನಿಜವಾಗಿ ಪುರಸ್ಕರಿಸಿದ್ದು ಕಾಲ್ಮೆಟ್ ಸತ್ತಮೇಲೆ.

***

**ಕಾವೇರಿಗೆಂಡೆ:** ಕಾವೇರಿ ನದಿ ನೀರಿನಲ್ಲಿ ವಾಸಿಸುವ ಮಧ್ಯಮಗಾತ್ರದ ಗೆಂಡೆ ಜಾತಿಯ ಮೀನು. ಆಂಗ್ಲ ಭಾಷೆಯಲ್ಲಿ ಕಾರ್ಪ್ ಎನ್ನುವರು. ವೈಜ್ಞಾನಿಕ ನಾಮ ಬಾರ್ಬಸ್ ಡೂಬಿಯಸ್. ಮಂಡ್ಯ ಜಿಲ್ಲೆ ಕೃಷ್ಣರಾಜ ಸಾಗರದಲ್ಲಿ ಈ ಮೀನಿನ ಸಾಕಣೆ ಕೈಗೊಳ್ಳಲಾಗಿದೆ. ಇದು ಕರ್ನಾಟಕ ರಾಜ್ಯದ ಬೇರಾವ ನದಿಗಳಲ್ಲಿ ಇಲ್ಲ. ತಲೆ ಮೊನಚಾಗಿದ್ದು ಸಣ್ಣ ಗಾತ್ರದ ದವಡೆಗಳನ್ನು ಹೊಂದಿದೆ. ಬೆನ್ನಿನ ಈಜುರೆಕ್ಕೆಯಲ್ಲಿ ಅತಿದಪ್ಪನಾದ ಮುಳ್ಳು (ರೇ) ಇದೆ. ದೇಹದ ಬಣ್ಣ ಬೇರೆ ಜಾತಿಯ ಮೀನುಗಳಿಗಿಂತ ವಿಭಿನ್ನವಾಗಿದೆ. ಪೂರ್ಣ ಬೆಳೆದ ಮೀನಿನ ಉದ್ದ ೬೦ ಸೆಂಮೀ ತೂಕ ೪–೫ ಕಿಗ್ರಾಂ.

ಇದು ಹಿಂಗಾರು ಮಳೆ ಬೀಳುವ ಋತುವಿನಲ್ಲಿ ವಂಶಾಭಿವೃದ್ಧಿ ಮಾಡುತ್ತದೆ. ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಇದರ ಮರಿಗಳು ಕಾವೇರಿ ನದಿ ನೀರಿಲ್ಲಿ ಸಿಗುತ್ತವೆ. ಚಿಕ್ಕ ಮರಿಗಳು ಅತಿ ಸೂಕ್ಷ್ಮಪ್ರಾಣಿಗಳು ಮತ್ತು ನೀರಿನಲ್ಲಿರುವ ಚಿಗಟಗಳನ್ನು ತಿನ್ನುತ್ತವೆ. ಮರಿಗಳು ಬೆರಳು ಗಾತ್ರದಷ್ಟು ದಪ್ಪವಾದಾಗ ನೊಣದ ಡಿಂಬ, ನಾರುವಸ್ತು ಮತ್ತು ಮಣ್ಣನ್ನು ತಿನ್ನುತ್ತವೆ. ಪ್ರೌಢವಸ್ಥೆಯಲ್ಲಿ ನೀರಿನಲ್ಲಿರುವ ಪಾಚಿಯೇ ಇವುಗಳ ಆಹಾರ. ಮರಿಗಳನ್ನು ಕೆರೆಗಳಲ್ಲಿ ಬೆಳೆಸಬಹುದು. ಕಾವೇರಿಗೆಂಡೆ ಉತ್ತಮವಾದ ಆಹಾರ ಮೀನೆಂದು ಹೆಸರಾಗಿದೆ.

***

**ಕಾಸಲ್, ಆಲ್ಬ್ರೆಕ್ಟ್ ೧೮೫೩–೧೯೨೭:** ಜರ್ಮನಿಯ ಜೀವರಸಾಯನ ವಿಜ್ಞಾನಿ. ನೊಬೆಲ್ ಪಾರಿತೋಷಕ ವಿಜೇತ (೧೯೧೦). ಸ್ವಿಟ್ಜರ್ಲೆಂಡಿನ ರಾಸ್ಟಾಕ್‌ನಲ್ಲಿ ಜನಿಸಿದ. ತೌರೂರಿನ ಜಿಮ್ನಾಷಿಯಂನಲ್ಲಿ ಶಿಕ್ಷಣ ಪಡೆದ. ಸ್ಟ್ರಾಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆಯುತ್ತಿದ್ದಾಗ ಆಧುನಿಕ ಜೀವರಸಾಯನ ವಿಜ್ಞಾನಿಗಳಲ್ಲೊಬ್ಬನಾದ ಫೆಲಿಕ್ಸ್ ಹಾಪ್–ಸೀಲರ್ ಎಂಬಾತ ಈತನಿಗೆ ಗುರು. ಡಾಕ್ಟರ್ ಆಫ್ ಮೆಡಿಸನ್ ಪದವಿಯನ್ನು ಪಡೆದ ಮೇಲೆ (೧೮೭೮) ಹಾಪ್–ಸೀಲರ್ ಮತ್ತು ಬರ್ಲಿನಿನ ಶರೀರ ವಿಜ್ಞಾನ ಸಂಸ್ಥೆಯ ಇ.ಡ್ಯು. ಬಾಯ್ಸ್ ರೇಮಂಡರ ನೇತೃತ್ವದಲ್ಲಿ ಕೆಲಸ ಮಾಡಿದ. ಅನಂತರ ಸಂಸ್ಥೆಯ ರಸಾಯನಶಾಸ್ತ್ರ ವಿಭಾಗದ ನಿರ್ದೇಶಕನಾಗಿ ನೇಮಕಗೊಂಡ (೧೮೯೫). ೧೯೦೧ರ ವರೆಗೂ ಇದೇ ಹುದ್ದೆಯಲ್ಲಿ ಮುಂದುವರಿದ. ಇದೇ ಸಂದರ್ಭದಲ್ಲಿ ಹೈಡಲ್‌ಬರ್ಗ್‌ನಲ್ಲಿ ಇಂಥದ್ದೇ ಹುದ್ದೆಗೆ ಬಂದ ಆಮಂತ್ರಣವನ್ನು ಅಂಗೀಕರಿಸಿ ತನ್ನ ಕೊನೆಯ ಕಾಲದ ವರೆಗೆ ಅದೇ ಹುದ್ದೆಯಲ್ಲಿ ಇದ್ದ. ಮರಣಕ್ಕೆ ಮೊದಲು ಈತನಿಗೆ ಹೈಡಲ್‌ಬರ್ಗ್‌ನ ಎಮೆರಿಟಸ್ ಪ್ರಾಧ್ಯಾಪಕನ ಗೌರವವೂ (೧೯೦೧–೨೩) ಹೈಡಲ್‌ಬರ್ಗ್‌ನ ಸಂಸ್ಥೆಯ ನಿರ್ದೇಶಕನ ಸ್ಥಾನ ಗೌರವವೂ ದೊರಕಿದುವು. ಶರೀರವಿಜ್ಞಾನ ಸಂಬಂಧವಾದ ಪತ್ರಿಕೆಯೊಂದಕ್ಕೆ ೩೦ ವರ್ಷಗಳಿಗಿಂತಲೂ ಹೆಚ್ಚು ಕಾಲ ಸಂಪಾದಕನಾಗಿದ್ದ. ಈತನ ಅನೇಕ ಸಂಶೋಧನ ಪ್ರಬಂಧಗಳು ಈ ಪತ್ರಿಕೆಯಲ್ಲಿ ಪ್ರಕಟವಾದುವು. ಜೀವಂತಕೋಶಗಳ ರಸಾಯನವಿಜ್ಞಾನದ ಬಗೆಗಿನ ಸಮಸ್ಯೆಗಳ ಸ್ಪಷ್ಟನೆಯಲ್ಲಿ ಸಾವಯುವ ರಸಾಯನವಿಜ್ಞಾನದ ವಿಧಾನಗಳನ್ನು ಅನ್ವಯ ಮಾಡಿದವರಲ್ಲಿ ಈತ ಮೊದಲಿಗ. ಈತನ ಸಂಶೋಧನೆಗಳು ಮುಖ್ಯವಾಗಿ ನ್ಯೂಕ್ಲಿಯಿಕ್ ಆಮ್ಲಗಳ ಮೇಲೆ ನಡೆದುವು. ನ್ಯೂಕ್ಲಿಯಿಕ್ ವಸ್ತುಗಳನ್ನೊಳಗೊಂಡಂತೆ ಪ್ರೋಟೀನುಗಳ ಮೇಲೆ ಸಂಶೋಧನೆ ನಡೆಸಿ ಅದರಿಂದ ಕೋಶ ರಸಾಯನಶಾಸ್ತ್ರದ ಮೇಲೆ ಬೆಳಕು ಚೆಲ್ಲಿದ ಕಾರಣದಿಂದಾಗಿ ಈತನಿಗೆ ನೊಬೆಲ್ ಪಾರಿತೋಷಕ ದೊರಕಿತು. ಅಡೆನಿನ್ ಮತ್ತು ಥಯಮಿನ್‌ಗಳನ್ನು ಕಂಡುಹಿಡಿದ ಖ್ಯಾತಿ ಈತನದು. ಈತ ಹೈಡಲ್‌ಬರ್ಗ್‌ನಲ್ಲೇ ಕಾಲವಾದ.

***

**ಕಾಳಗಮೀನು:** ಆಗ್ನೇಯ ಏಷ್ಯದ ದೇಶಗಳ ಸಿಹಿನೀರಿನ ಕೊಳಗಳಲ್ಲಿ ವಾಸಿಸುವ ಮೀನು. ಆಂಗ್ಲ ಭಾಷೆಯಲ್ಲಿ ಫೈಟಿಂಗ್ ಫಿಶ್ ಎನ್ನುವರು. ಭಯಂಕರವಾಗಿ ಹೋರಾಡುವ ಗಂಡುಮೀನಿನ ಅಸಾಮಾನ್ಯ ಗುಣವೇ ಈ ಹೆಸರಿಗೆ ಕಾರಣ. ಇದರ ವೈಜ್ಞಾನಿಕ ನಾಮ ಬೆಟ ಸ್ಪ್ಲೆಂಡೆನ್ಸ್. ಪೂರ್ಣ ಬೆಳೆದ ಗಂಡು ಮೀನಿನ ಉದ್ದ ೬–೮ ಸೆಂಮೀ ಉದ್ದನೆಯ, ಅಗಲವಾದ, ಹೊಳೆಯುವ ಕೆಂಪು, ನೀಲಿ, ಹಸಿರು ಬಣ್ಣಗಳಿಂದ ವರ್ಣರಂಜಿತವಾಗಿರುವ ಈಜು ರೆಕ್ಕೆಗಳಿರುವುದರಿಂದ ಇದು ಸುಂದರವಾಗಿದೆ. ಹೆಣ್ಣು ಗಂಡಿನಷ್ಟು ಆಕರ್ಷಕವಾಗಿಲ್ಲ. ಕೀಟಗಳ ಡಿಂಬಗಳೇ ಇವುಗಳ ಆಹಾರ.

ಈ ಮೀನಿನ ಗೂಡು ಕಟ್ಟುವ ವಿಧಾನ ಮತ್ತು ಮರಿಗಳ ಪಾಲನೆಯ ಕ್ರಮ ವಿಶಿಷ್ಟವಾಗಿದೆ. ಗೂಡನ್ನು ಗಂಡು ಮೀನು ಕಟ್ಟುತ್ತದೆ. ಗಂಡು ಮೀನು ನೀರಿನ ಮೇಲ್ಮಟ್ಟಕ್ಕೆ ಬಂದು ಗಾಳಿಯನ್ನು ಹೀರಿಕೊಂಡು ಸಣ್ಣ ಸಣ್ಣ ಗುಳ್ಳೆಗಳಾಗಿ ಹೊರಬಿಡುತ್ತದೆ. ಪ್ರತಿಗುಳ್ಳೆಯೂ ಒಂದು ವಿಶೇಷ ಬಗೆಯ ಗಟ್ಟಿ ಲೋಳೆಯಿಂದ ಆವೃತವಾಗಿರುವುದರಿಂದ ಗುಳ್ಳೆಗಳು ಒಡೆಯದೆ ಒಂದಕ್ಕೊಂದು ಅಂಟಿಕೊಳ್ಳುತ್ತವೆ. ಹೀಗೆ ಅಂಟಿಕೊಂಡ ಗುಳ್ಳೆಗಳು ನೀರಿನ ಮಟ್ಟಕ್ಕೆ ಬಂದು ಒಟ್ಟಾಗಿ ಗೂಡಿನಂತೆ ತೇಲತೊಡಗುತ್ತವೆ. ನಂತರ ಗಂಡು ಮೀನು, ಪ್ರೌಢ ವಯಸ್ಸಿನ ಹೆಣ್ಣು ಮೀನನ್ನು ಬೆನ್ನಟ್ಟಿ ಬಲವಾಗಿ ಅಪ್ಪಿಕೊಳ್ಳುವುದರ ಮೂಲಕ ಹೆಣ್ಣು ಮೊಟ್ಟೆಯಿಡುವಂತೆ ಬಲಾತ್ಕರಿಸುತ್ತದೆ. ಮೊಟ್ಟೆಗಳು ಹೊರ ಬರುತ್ತಿದ್ದಂತೆಯೇ ನಿಧಾನವಾಗಿ ನೀರಿನ ತಳಕ್ಕಿಳಿಯುತ್ತವೆ. ತಕ್ಷಣ ಗಂಡು ಮೀನು ನೀರಿನ ತಳಕ್ಕಿಳಿಯುವ ಮೊಟ್ಟೆಗಳನ್ನು ಬಾಯಲ್ಲಿ ಹಿಡಿದು ಮೇಲಕ್ಕೆ ಬಂದು ಗೂಡಿನೊಳಕ್ಕೆ ಸೇರಿಸುತ್ತದೆ. ಈ ರೀತಿ ಎಲ್ಲಾ ಮೊಟ್ಟೆಗಳನ್ನು ಗೂಡಿಗೆ ಸಾಗಿಸಿ ಅದರ ಬಳಿ ಕಾವಲು ನಿಲ್ಲುತ್ತದೆ. ಗೂಡಿನ ಗುಳ್ಳೆಗಳು ಅಕಸ್ಮಾತ್ತಾಗಿ ಒಡೆದರೆ ಬೇರೆ ಗುಳ್ಳೆಗಳನ್ನು ಸೇರಿಸುವುದು, ಮೊಟ್ಟೆಗಳು ಕೆಳಗೆ ಬೀಳುವಂತಾದರೆ ಅವನ್ನು ಮತ್ತೆ ಗೂಡಿನೊಳಗೆ ಸೇರಿಸುವುದು, ಬೇರೆ ಶತ್ರು ಮೀನುಗಳು ಬಂದರೆ, ಅವುಗಳನ್ನು ಓಡಿಸಿ ಮೊಟ್ಟೆಗಳನ್ನು ರಕ್ಷಿಸುತ್ತದೆ. ಮೊಟ್ಟೆಗಳೊಡೆದು ಮರಿಗಳಾಗುವವರೆಗೂ ಅವನ್ನು ಕಾಪಾಡುತ್ತದೆ. ಕೆಲವು ಸಲ ಹೆಣ್ಣು ಮೀನು ಸಹ ಈ ಕಾವಲು ಕೆಲಸ ನಿರ್ವಹಿಸುತ್ತದೆ.

ಗಂಡು ಕಾಳಗ ಮೀನುಗಳು ಜಗಳಗಂಟಿಗಳು. ಗಂಡುಗಳು ಪರಸ್ಪರ ಸಮೀಪಿಸಿದಾಗ ಬಹಳ ಉದ್ರೇಕಗೊಂಡು ಕ್ರೂರವಾಗಿ ಹೋರಾಡ ತೊಡಗುತ್ತವೆ. ತಮ್ಮ ಚೂಪಾದ ಹಲ್ಲುಗಳಿಂದ ಒಂದನ್ನೊಂದು ಕಚ್ಚಿ ಈಜುರೆಕ್ಕೆಗಳನ್ನು ಕಿತ್ತು, ಗಾಯಗೊಳಿಸುತ್ತವೆ. ಹುಂಜದ ಕಾಳಗದಂತೆ ಜೂಜುಕಟ್ಟಿ ಮೀನಿನ ಸ್ಪರ್ಧೆ ನಡೆಸುವುದು ಥೈಲೆಂಡ್‌ನಲ್ಲಿ ಸಾಮಾನ್ಯವಾಗಿದೆ.

***

**ಕಾಳಮಾರಿ:** ಪ್ರೋಟೋಜೋವ ವಂಶಕ್ಕೆ ಸೇರಿದ ಲೀಷ್ಮಾನಿಯಾ ಡೊನವಾನಿ ಎಂಬ ಪರತಂತ್ರ ಜೀವಿಯಿಂದ ಪರಿಣಮಿಸುವ ಸಾಂಕ್ರಾಮಿಕ ವ್ಯಾಧಿ. ಬಹಳಕಾಲ ಅಕ್ರಮವಾಗಿ ಜ್ವರ ಬರುವುದು, ತುಂಬಕಾಲ ಎಳೆದಾಡುವುದು, ಗುಲ್ಮದ ಮತ್ತು ಪಿತ್ತಕೋಶದ

ಊತ, ದೇಹ ಸೊರಗುವುದು, ರಕ್ತಹೀನತೆ ಮೊದಲಾದುವು ಇದರ ಲಕ್ಷಣಗಳು. ಈ ರೋಗಚಿಹ್ನೆಗಳು ಅಕಸ್ಮಾತ್ ಅಥವಾ ಕ್ರಮವಾಗಿ ಕಾಣಿಸಿಕೊಳ್ಳಬಹುದು. ಕೆಲವು ಸಂದರ್ಭಗಳಲ್ಲಿ ರೋಗ ಬಹಳ ಚುರುಕಾಗಿ ಬಂದು ಚಳಿ, ತುಂಬ ಜ್ವರ ಮತ್ತು ವಾಂತಿ ಮುಂತಾದ ಲಕ್ಷಣಗಳುಂಟಾಗಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ವಿಷಮಶೀತಜ್ವರದ (ಟೈಫಾಯಿಡ್) ಲಕ್ಷಣ ತೋರಬಹುದು. ಒಂದು ವಾರದಲ್ಲಿ $103^0$ – $104^0$ ಫ್ಯಾ. ವರೆಗೂ ಜ್ವರ ಏರಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ಹೆಚ್ಚು ಜ್ವರ ಕಾಣಿಸಿಕೊಳ್ಳದೆ ಅಗೋಚರವಾಗಿ, ನಿಧಾನವಾಗಿ ರೋಗ ಉಂಟಾಗಬಹುದು. ಚುರುಕಿನಿಂದ ರೋಗ ಉಂಟಾದಾಗ ದಿವಸಕ್ಕೆ ಎರಡು ಸಲ ಬಿಟ್ಟು ಬಿಟ್ಟು ಚಳಿ–ಜ್ವರ ಬರುತ್ತದೆ. ಜ್ವರ ನಿಂತಾಗ ಬೆವರುತ್ತದೆ. ಮಧ್ಯಾಹ್ನ ಬಹಳ ಮುಂಚೆಯೇ ಜ್ವರ ಬಂದು, ಸಾಯಂಕಾಲ ಇಳಿದು, ಪುನಃ ಅರ್ಧ ರಾತ್ರಿಗೆ ಸ್ವಲ್ಪ ಮುಂಚೆಯೇ ಜ್ವರ ಪ್ರಾರಂಭವಾಗುತ್ತದೆ. ಪ್ರಾರಂಭದಲ್ಲಿ 2 ರಿಂದ 6 ವಾರಗಳು ಈ ರೀತಿ ಆಗಬಹುದು. ರೋಗ ಇನ್ನೂ ಎಳೆದಾಡುವುದಾದರೆ ಪುನಃ ಮೇಲ್ಕಂಡಂತೆ ಜ್ವರ ಉಂಟಾಗಬಹುದು. ಈ ರೋಗದ ವ್ಯಾಪ್ತಿ ಭಾರತದ ಅಸ್ಸಾಂ, ಬಂಗಾಳ, ಬಿಹಾರ್, ತಮಿಳುನಾಡು, ಸಿಕ್ಕಿಂ ಪ್ರಾಂತ್ಯಗಳು, ಚೀನ, ರಷ್ಯ ದೇಶದ ದಕ್ಷಿಣಭಾಗ, ಮೆಡಿಟರೇನಿಯನ್ ಪ್ರದೇಶಗಳು, ಆಫ್ರಿಕ, ಪರಗ್ವೆ, ಅರ್ಜೆಂಟೀನ ಮತ್ತು ಬ್ರೆಜಿಲ್‌ಗಳಿಗೆ ಸೀಮಿತವಾಗಿದೆ.

ಈ ರೋಗದ ಹರಡುವಿಕೆಗೆ ಮೂರು ಮುಖ್ಯಾಂಶಗಳಿರಬೇಕು. ರೋಗದ ಕ್ರಿಮಿಗಳ ಆಸರೆಯಾದ ಒಬ್ಬ ರೋಗಿ, ಕ್ರಿಮಿಗಳನ್ನು ಒಬ್ಬರಿಂದೊಬ್ಬರಿಗೆ ಹರಡಲು ಸ್ಯಾಂಡ್ ಫ್ಲೈ ಎಂಬ ನೊಣ, ರೋಗಕ್ಕೆ ಸುಲಭವಾಗಿ ತುತ್ತಾಗತಕ್ಕ ಪ್ರಜಾಸಂಖ್ಯೆ. ರೋಗ ನಿವಾರಣೋಪಾಯಗಳು ಮುಖ್ಯವಾಗಿ ರೋಗಗ್ರಸ್ತರನ್ನು ಬೇರ್ಪಡಿಸುವುದು, ರೋಗಪೀಡಿತ ಪ್ರದೇಶಗಳನ್ನು ಸ್ವಲ್ಪ ಕಾಲ ತೊರೆಯುವುದು, ಸ್ಯಾಂಡ್ ಫ್ಲೈ ನೊಣಗಳ ನಾಶ, ಇತ್ಯಾದಿ. ಅಂಟಿಮೊನಿ ಲೋಹದಿಂದ ತಯಾರಿಸಿದ ಔಷಧೋಪಚಾರಗಳಿಂದ ರೋಗಿ ಗುಣಗೊಳ್ಳುವುದೇ ಅಲ್ಲದೆ ರೋಗ ಇತರರಿಗೆ ಹರಡುವುದೂ ನಿಲ್ಲುತ್ತದೆಂದು ಗೊತ್ತಾಗಿದೆ.

***

**ಕಾಳು ಕೊರೆಯುವ ಕೀಟ:** ಕೋಲಿಯಾಪ್ಟರ ಗಣದ ಬ್ರಾಸ್ಟೈಕಿಡೆ ಕುಟುಂಬದ ಸದಸ್ಯ. ಇದರ ವೈಜ್ಞಾನಿಕ ಹೆಸರು ರೈಜ಼ೋಪರ್ತ ಡಾಮಿನಿಕ. ಪಿಪಾಯಿ ಆಕಾರದ ದೇಹ, ಮಾಸಲು ಕಪ್ಪುಬಣ್ಣ. ಕೆಳಕ್ಕೆ ಬಗ್ಗಿರುವ ತಲೆ, ತಲೆಯ ಮುಂದಕ್ಕೆ ಚಾಚಿರುವ ಎದೆಯ ಮೊದಲ ಖಂಡ, ತುದಿಯಲ್ಲಿ ಉಬ್ಬಿರುವ ಕುಡಿ ಮೀಸೆಗಳು ಇದರ ಮುಖ್ಯಲಕ್ಷಣಗಳು. ಇದು ದ್ವಿದಳ ಧಾನ್ಯಗಳಲ್ಲಿ ಉಂಡೆ ಕಾಳುಗಳಿಗೆ ಮಾತ್ರ ಕಂಟಕಕಾರಿ. ಸಾಮಾನ್ಯವಾಗಿ ಅಕ್ಕಿಸೊಂಡಿಲು ಕೀಟದೊಂದಿಗೆ ಇರುತ್ತದೆ. ಹೆಣ್ಣು ೫೦೦ ಮೊಟ್ಟೆಗಳನ್ನಿಡುತ್ತದೆ. ಹುಳುಗಳು ಪ್ರಾರಂಭದಲ್ಲಿ ಕಾಳಿನ ಹೊರ ಭಾಗವನ್ನು ತಿಂದು, ಅನಂತರ ಕಾಳನ್ನು ಕೊರೆದು ಒಳಗೆ ಪ್ರವೇಶಿಸುತ್ತವೆ. ಕಾಳಿನ ಮೇಲೆ ಕಾಣಿಸುವ ರಂಧ್ರಗಳು ಪ್ರೌಢಕೀಟ



ಹೊರಗೆ ಬಂದ ತೂತುಗಳೇ ವಿನಃ ಮರಿ ಒಳಗೆ ಹೋಗಲು ಮಾಡಿದವಲ್ಲ. ಕೀಟಗಳು ಸು. ೪ ವಾರ ಬದುಕಿರುತ್ತವೆ. (ಡಿ.ಎಸ್.)

**ಕಿಂಕಜೂ:** ಕಾರ್ನಿವೊರ ಗಣದ ರಕೂನ್ (ಪ್ರೊಸಿಯಾನಿಡೆ) ಕುಟುಂಬದ ಪೋಟಾಸ್ ಜಾತಿಗೆ ಸೇರಿದೆ. ಪೋಟಾಸ್ ಫ್ಲಾಅಸ್ ಎಂಬದು ಇದರ ವೈಜ್ಞಾನಿಕ ಹೆಸರು. ಇದು ದಕ್ಷಿಣ ಮತ್ತು ಮಧ್ಯ ಅಮೆರಿಕದ ಉಷ್ಣಪ್ರದೇಶಗಳ ಕಾಡುಗಳಲ್ಲಿ ವಾಸಿಸುತ್ತದೆ. ಇದನ್ನು ಕಪಿಸಿಂಹ, ಜೇನುಕರಡಿ ಎಂದೂ ಕರೆಯುವುದುಂಟು. ಇದರ ಗಾತ್ರ ಬೆಕ್ಕಿನಷ್ಟು. ಮೈಮೇಲೆ ದಟ್ಟವಾಗಿ ಬೆಳೆದಿರುವ ತೆಳುಹಳದಿ ಬಣ್ಣದ ಬಹು ನಯವಾದ ಕೂದಲುಗಳಿವೆ. ತಲೆ ಗುಂಡು, ಮೂತಿ ಮೊನಚು, ಮುಖದ ಆಚೆ ಈಚೆ ಅಗಲವಾದ ಪಳಪಳನೆ ಹೊಳೆಯುವ ಕಣ್ಣುಗಳಿವೆ. ತಲೆಯ ಮೇಲ್ಭಾಗದಲ್ಲಿ ಇಕ್ಕಡೆಯಲ್ಲೂ ಗುಂಡಾದ ಸಣ್ಣ ಕಿವಿಗಳಿವೆ. ನಾಲಗೆ ಬಲು ಉದ್ದ, ಕಾಲುಗಳು ಗಿಡ್ಡ; ಬಾಲ ದಪ್ಪ, ಉದ್ದ 50–55 ಸೆಂಮೀ ಬಾಲವನ್ನು ಕೊಂಬೆಗೆ ಸುತ್ತಿ ಜೋತುಬೀಳುತ್ತದೆ.

ಕಿಂಕಜೂ ನಿಶಾಚರ ಪ್ರಾಣಿ. ಹಗಲು ವೇಳೆ ಮರದ ಪೊಟರೆಯಲ್ಲೊ ಎಲೆಗಳ ನಡುವೆಯೊ ಮೈಯನ್ನು ಉಂಡೆಮಾಡಿಕೊಂಡು ಬಾಲದಿಂದ ಸುತ್ತಿಕೊಂಡು ಅಡಗಿರುತ್ತದೆ. ರಾತ್ರಿ ಆಹಾರಕ್ಕಾಗಿ ಸಂಚರಿಸುತ್ತದೆ. ಇದು ಬಹುಮಟ್ಟಿಗೆ ವೃಕ್ಷಜೀವಿ; ನೆಲದ ಮೇಲೆ ನಡೆಯುವುದೇ ಕಡಿಮೆ, ಕೊಂಬೆಯಿಂದ ಕೊಂಬೆಗೆ, ಮರದಿಂದ ಮರಕ್ಕೆ ಹಾರುತ್ತ ಆಹಾರ ಹುಡುಕಿಕೊಂಡು ಹೋಗುತ್ತದೆ. ಕಾಡು ಅಂಜೂರ, ಜೇನು ಇದರ ಮುಖ್ಯ ಆಹಾರವಾದರೂ ಸಣ್ಣಪುಟ್ಟ ಹಕ್ಕಿಗಳನ್ನೂ ಮೊಟ್ಟೆಗಳನ್ನೂ ತಿನ್ನುತ್ತದೆ. ಹಿಂಗಾಲು ಮುಂಗಾಲುಗಳ ಸಹಾಯದಿಂದ ಕೋತಿಯಂತೆ ಹಣ್ಣನ್ನು ಹಿಡಿದುಕೊಂಡು ತನ್ನ ಉದ್ದವಾದ ನಾಲಗೆಯಿಂದ ಒಳಗಿನ ತಿರುಳುಗಳನ್ನು ತೆಗೆದು ತಿನ್ನುತ್ತವೆ.



ಅನೇಕ ವೇಳೆ ಗಂಡುಹೆಣ್ಣುಗಳು ಒಟ್ಟಾಗಿ ವಾಸಿಸುತ್ತವೆ. ಹೆಣ್ಣು ಒಂದು ಸೂಲಿನಲ್ಲಿ ಎರಡರಿಂದ ನಾಲ್ಕು ಮರಿಗಳನ್ನು ಈಯುತ್ತದೆ. ಅವು ಹುಟ್ಟಿದ 10ದಿನಗಳ ಅನಂತರ ಕಣ್ಣು ತೆರೆಯುತ್ತವೆ. ಒಂದು ತಿಂಗಳ ವೇಳೆಗೆ ಅವುಗಳ ಬಾಲಕ್ಕೆ ಹಿಡಿದು ಕೊಳ್ಳುವ ಶಕ್ತಿ ಬರುತ್ತದೆ. ಎರಡು ತಿಂಗಳ ವೇಳೆಗೆ ಅವು ಮರದ ಕೊಂಬೆಗೆ ನೇತುಹಾಕಿಕೊಂಡು ಜೋತು ಬೀಳಬಲ್ಲುವು. ಕಿಂಕಜೂನ ಆಯಸ್ಸು ಸುಮಾರು 20 ವರ್ಷ.

ರಕೂನ್ ಕುಟುಂಬಕ್ಕೆ ಸೇರಿದ ಮತ್ತೊಂದು ಪ್ರಾಣಿಯಾದ ಒಲಿಂಗೊ ಕಿಂಕಜೂಗಳ ಸಮೂಹದಲ್ಲಿ ವಾಸಿಸುತ್ತಿರುತ್ತದೆ. ಎಕ್ವಡಾರ್‌ನಿಂದ ನಿಕರಾಗುವದ ವರೆಗೆ ಇದು ಕಂಡು ಬರುವುದು ಹೆಚ್ಚು. ಇವೆರಡು ಪ್ರಾಣಿಗಳ ತುಪ್ಪುಳವೂ ತೆಳುಹಳದಿ ಬಣ್ಣವಾಗಿದ್ದರೂ ಒಲಿಂಗೋವಿನ ಬಾಲಕ್ಕೆ ಹಿಡಿದುಕೊಳ್ಳುವ ಶಕ್ತಿಯಿಲ್ಲ. ಅಲ್ಲದೆ ಒಲಿಂಗೋವಿನ ತುಪ್ಪುಳ ಹೆಚ್ಚು ಉದ್ದ.

ಕಿಂಕಜೂವನ್ನು ಅಮೆರಿಕದ ಕೆಲವು ಭಾಗದಲ್ಲಿ ಪಳಗಿಸಿ ಸಾಕುತ್ತಾರೆ. ***

**ಕಿಣ್ವಗಳು:** ಆಹಾರ ಪದಾರ್ಥಗಳ ಚಯಾಪಚಯ ಕ್ರಿಯೆಗಳಿಗೆ ಹಾಗೂ ದೇಹದ ವಿವಿಧ ಕಾರ್ಯಗಳಿಗೆ ಸಂಬಂಧಪಟ್ಟ ರಾಸಾಯನಿಕ ಕ್ರಿಯೆಗಳು ದೇಹದೊಳಗೆ ನಡೆಯುವಾಗ ಅವುಗಳಿಗೆ ವೇಗವರ್ಧಕಗಳಂತೆ ವರ್ತಿಸುವ ವಸ್ತುಗಳೇ ಕಿಣ್ವ (ಎನ್‌ಜ಼ೈಮ್ಸ್)ಗಳು. ಇವು ಪ್ರೋಟೀನುಗಳು. ಕಾರಣ, ಇವು ಪ್ರೋಟೀನುಗಳಿಗೆ ಸಹಜವಾದ ಎಲ್ಲ ಗುಣಗಳನ್ನು ಪ್ರದರ್ಶಿಸುತ್ತವೆ. ಇವು ವಿಶಿಷ್ಟವಾದ ಕೆಲವು ಗುಣಗಳನ್ನು ಪಡೆದಿವೆ: 1. ಯಾವುದೇ ಒಂದು ಕಿಣ್ವ ವಿಶಿಷ್ಟವಾದ ಕ್ರಿಯಾಧಾರದ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ವಿಶಿಷ್ಟತೆ (ಸ್ಪೆಸಿಫಿಸಿಟಿ) ಎರಡು ಬಗೆಯದು. ಕೆಲವು ಕಿಣ್ವಗಳು ನಿರ್ದಿಷ್ಟತೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತವೆ. ಕ್ರಿಯಾಧಾರ ಸಂಯುಕ್ತದಲ್ಲಿರುವ ಬಂಧದ ಪ್ರಕೃತಿ ಸರಿಯಾಗಿರಬೇಕಲ್ಲದೆ ಬಂಧನದಲ್ಲಿ ಪಾಲ್ಗೊಳ್ಳುವ ಪುಂಜಗಳು ಮತ್ತು ಬಂಧದ ಮೂರು ಆಯಾಮಗಳ ವಿನ್ಯಾಸ ಕಿಣ್ವದ ವಿಶಿಷ್ಟತೆಯನ್ನು ತೃಪ್ತಿಪಟ್ಟು ಇಕ್ಕೆಲದ ಅಣು ಅಥವಾ ಪರಮಾಣುಗಳ ಪ್ರಕೃತಿ ಮತ್ತು ಬಂಧದ ಮೂರು ಆಯಾಮಗಳ ವಿನ್ಯಾಸಗಳ ಬಗ್ಗೆ ಅಷ್ಟಾಗಿ ಗಮನವಿಯುವುದಿಲ್ಲ. 2. ಪ್ರತಿಯೊಂದು ಕಿಣ್ವಕ್ಕೂ ಒಂದು ಅನುಕೂಲವಾದ ಉಷ್ಣತೆಯಿದೆ. ಇದರಲ್ಲಿ ಕಿಣ್ವದ ದಕ್ಷತೆ ಹೆಚ್ಚು. ಸಾಧಾರಣವಾಗಿ ರಾಸಾಯನಿಕ ಕ್ರಿಯೆಗಳು ಹೆಚ್ಚಿನ ಉಷ್ಣತೆಯಲ್ಲಿ ಅಧಿಕ ವೇಗದಿಂದ ನಡೆಯುತ್ತವೆ. ಕಿಣ್ವವರ್ಧಿತ ಕ್ರಿಯೆಗಳೂ ಈ ತತ್ತ್ವಕ್ಕೆ ಹೊರತಾದುವುಗಳಲ್ಲ. ಆದರೆ ಹೆಚ್ಚಿನ ಉಷ್ಣತೆಯಲ್ಲಿ ಕಿಣ್ವ ಬಹುಬೇಗ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುವುದರಿಂದ ಕಿಣ್ವವರ್ಧಿತ ಕ್ರಿಯೆಗಳನ್ನು ಅವಶ್ಯಕ ಉಷ್ಣತೆಯಲ್ಲಿ ನಡೆಸಬೇಕು. ಕಿಣ್ವಗಳು ಸಾಮಾನ್ಯವಾಗಿ $38^0$ ಸೆ.ನಲ್ಲಿ ದಕ್ಷತೆಯಿಂದ ಕೆಲಸಮಾಡುತ್ತವೆ. 3. ಕಿಣ್ವಗಳು ಅಮೈನೋ ಆಮ್ಲಗಳಿಂದ ರಚಿತವಾಗಿರುವುದರಿಂದ ಋಣ ಮತ್ತು ಧನ ವಿದ್ಯುತ್ತುಗಳೆರಡನ್ನೂ ಹೊಂದಿಸಲು ಸಾಧ್ಯ. ಆದ್ದರಿಂದ ಕಿಣ್ವ ವಿಲೀನವಾಗಿರುವ ದ್ರಾವಣದ ಆಮ್ಲತೆ ಅಥವಾ ಪ್ರತ್ಯಾಮ್ಲತೆ ಕಿಣ್ವದ ವಿದ್ಯುಚ್ಛಕ್ತಿಯ ಪ್ರಕೃತಿಯನ್ನು ನಿರ್ಧರಿಸುತ್ತದೆ. ಕಿಣ್ವ ದಕ್ಷತೆಯಿಂದ ಕೆಲಸಮಾಡಲು ಅದರಲ್ಲಿರುವ ಕೆಲವು ಅಮೈನೋ ಆಮ್ಲಗಳು ಅಯಾನೀಕರಣವಾಗಬೇಕಾದ್ದರಿಂದ ಕಿಣ್ವದ ಸಾಮರ್ಥ್ಯ ದ್ರಾವಣದ ಆಮ್ಲತೆಯನ್ನು ಅವಲಂಬಿಸುತ್ತದೆ. ಪ್ರತಿಯೊಂದು ಕಿಣ್ವಕ್ಕೂ ಅನುಕೂಲವಾದ ಆಮ್ಲೀಯತೆ ಇದೆ. ಅಂದರೆ ಪ್ರತಿಯೊಂದು ಕಿಣ್ವಕ್ಕೂ ಅನುಕೂಲಕರ ರಸಸಾರದ (pH) ಅಂಕವಿದೆ. ಕೆಲವು ಕಿಣ್ವಗಳು

ರಸಸಾರ (pH) ಕ್ಕಿಂತ ಸ್ವಲ್ಪಮಟ್ಟಿಗೆ ವ್ಯತ್ಯಾಸವಾಗಿರುವ ಪರಿಸರದಲ್ಲೂ ಕೆಲಸಮಾಡುತ್ತವೆ. ಇನ್ನು ಕೆಲವು ಕಿಣ್ವಗಳ ಚಟುವಟಿಕೆ ಕುಂಠಿತವಾಗುತ್ತದೆ. 4. ಕಿಣ್ವದ ಕ್ರಿಯೆಯನ್ನು ಪುರೋಗಾಮಿ ಮತ್ತು ಪ್ರತೀಪಗಾಮಿ ದಿಶೆಗಳಲ್ಲಿ ವರ್ಧಿಸಬಲ್ಲುದು. ಜೈವಿಕ ವ್ಯವಸ್ಥೆಯಲ್ಲಿ ಕ್ರಿಯೆ ನಡೆಯುವ ದಿಕ್ಕು, ಕ್ರಿಯಾಧಾರ ಮತ್ತು ಫಲಿತಗಳ ಸಾಂದ್ರಣ, ಕೋಶಕ್ಕೆ ಫಲಿತದ ಆವಶ್ಯಕತೆ, ಕ್ರಿಯೆಗೆ ಬೇಕಾದ ಶಕ್ತಿ ಮುಂತಾದ ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ.

ಕಿಣ್ವಗಳು ಜೀವಿಗಳ ಕೋಶಗಳಲ್ಲಿರುತ್ತವೆ. ಜೀವಿಗಳ ಅಂಗಾಂಶಗಳನ್ನು ಮೂಲಗಳನ್ನಾಗಿ ಬಳಸಿ ಕಿಣ್ವಗಳನ್ನು ಪಡೆಯಬಹುದು. ಪ್ರಾರಂಭದಲ್ಲಿ ಅಂಗಾಂಶಗಳನ್ನು ನೀರಿನಲ್ಲಿ ಅಥವಾ ಸಾರರಿಕ್ತ ಬಫರ್ ದ್ರಾವಣದಲ್ಲಿ ಅರೆದು ಕಿಣ್ವಗಳನ್ನು ವಿಲೀನ ಸ್ಥಿತಿಗೆ ತರಲಾಗುವುದು. ಕೆಲವು ಕೋಶಗಳ ಪೊರೆ ಸುಲಭವಾಗಿ ಒಡೆಯುವುದರಿಂದ ಗ್ರೈಂಡರುಗಳಲ್ಲಿ ಅರೆಯುವ ಕಾರ್ಯವನ್ನು ನಡೆಸಲಾಗುತ್ತದೆ. ಪೊರೆ ಸುಲಭವಾಗಿ ಒಡೆಯದಿದ್ದರೆ ಗಾಜಿನಪುಡಿ, ಮರಳು ಅಥವಾ ಕಾರ್ಬೊರಂಡಂ ಅನ್ನು ಉಪಯೋಗಿಸಿ ಅರೆಯಬೇಕು. ನೀರು ಅಥವಾ ಬಫರಿನಲ್ಲಿ ವಿಲೀನವಾದ ಕಿಣ್ವವನ್ನು ವಿಲೀನವಾಗದ ಇತರ ವಸ್ತುಗಳಿಂದ ಭ್ರಮಣಯಂತ್ರಗಳಲ್ಲಿ ಬೇರ್ಪಡಿಸಲಾಗುತ್ತದೆ. ಪ್ರೋಟೀನುಗಳ ಬೇರ್ಪಡೆಗೆ ಅನುಸರಿಸುವ ವಿಧಾನಗಳನ್ನು ಬಳಸಿ ಕಿಣ್ವಗಳನ್ನು ಬೇರ್ಪಡಿಸಲಾಗುವುದು.

ಕಿಣ್ವವನ್ನು ಬೇರ್ಪಡಿಸುವ ವಿಧಾನ: ಕೋಶದಲ್ಲಿರುವ ಕಿಣ್ವದಲ್ಲಿ ಇತರ ಪ್ರೋಟೀನುಗಳು ಮಿಶ್ರಣವಾಗಿರುವುದರಿಂದ ಅಮೋನಿಯಂ ಸಲ್ಫೇಟ್ ಅಥವಾ ಸೋಡಿಯಂ ಸಲ್ಫೇಟನ್ನು ಹಂತಹಂತವಾಗಿ ಮಿಶ್ರದ್ರಾವಣಕ್ಕೆ ಸೇರಿಸಲಾಗುವುದು. ಎಲ್ಲ ಪ್ರೋಟೀನುಗಳನ್ನು ಅಮೋನಿಯಂ ಸಲ್ಫೇಟ್ ದ್ರಾವಣದ ಒಂದೇ ಸಾರದಲ್ಲಿ ಒತ್ತರಿಸುವುದಿಲ್ಲ. ಸಾರದ ವಿವಿಧ ಮಟ್ಟಗಳಲ್ಲಿ ಪ್ರೋಟೀನುಗಳು ಒತ್ತರಿಸುತ್ತವೆ. ಬೇಕಾದ ಕಿಣ್ವ ಯಾವ ಸಾರದಲ್ಲಿ ಒತ್ತರಿಸುತ್ತದೆ ಎಂಬುದನ್ನು ಪೂರ್ವಭಾವಿ ಪ್ರಯೋಗಗಳಿಂದ ಕಂಡುಹಿಡಿದು, ಅಪೇಕ್ಷಿತ ಸಾರವನ್ನು ಹಂತ ಹಂತವಾಗಿ ಮುಟ್ಟಿಸಬೇಕು. ಕಿಣ್ವ ಒತ್ತರಿಸುವ ಮುನ್ನ ದ್ರಾವಣದಿಂದ ಹೊರಬರುವ ಪ್ರೋಟೀನುಗಳನ್ನು ಭ್ರಮಣಯಂತ್ರದ ಸಹಾಯದಿಂದ ಪ್ರತ್ಯೇಕಿಸಲಾಗುತ್ತದೆ. ಅಪೇಕ್ಷಿತ ಕಿಣ್ವದ ಒತ್ತರವನ್ನು ನಂತರ ಬೇರ್ಪಡಿಸಿ, ನೀರಿನಲ್ಲಿ ಅಥವಾ ಬಫರಿನಲ್ಲಿ ವಿಲೀನಮಾಡಿ, ಡಯಾಲಿಸಿಸ್ ವಿಧಾನದಿಂದ ಅಮೋನಿಯಂ ಮತ್ತು ಇತರ ಲವಣಗಳಿಂದ ಬೇರ್ಪಡಿಸಲಾಗುವುದು. ಇತ್ತೀಚೆಗೆ ಸೆಫಾಡೆಕ್ಸ್–ಜಿ–25 ಎಂಬ ಕೃತಕ ರಾಳವನ್ನು ಈ ಕಾರ್ಯಕ್ಕೆ ಬಳಸಲಾಗುತ್ತಿದೆ. ಈ ಹಂತದಲ್ಲಿ ಕಿಣ್ವ ಇತರ ಪ್ರೋಟೀನುಗಳನ್ನು ಒಳಗೊಂಡಿರುತ್ತದೆ. ಮುಂದಿನ ಶುದ್ಧೀಕರಣ ವಿಧಾನಗಳು ಕಿಣ್ವದ ಪ್ರಕೃತಿಯನ್ನು ಅವಲಂಬಿಸಿರುತ್ತವೆ. ಅಸಿಟೋನ್ ಅಥವಾ ಮದ್ಯಸಾರವನ್ನು ಸೂಕ್ತ ಪ್ರಮಾಣದಲ್ಲಿ ಕಿಣ್ವದ ದ್ರಾವಣಕ್ಕೆ ಸೇರಿಸಿ ಕಿಣ್ವವನ್ನು ಮಾತ್ರ ಒತ್ತರಿಸಬಹುದು. ಟ್ರೈಕ್ಯಾಲ್ಸಿಯಂ ಫಾಸ್ಫೇಟ್ ಮತ್ತು ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಜಲ್‌ಗಳಿಂದ ಆಯ್ದ ರೀತಿಯಲ್ಲಿ ಕಿಣ್ವವನ್ನು ಅಧಿಶೋಷಿಸಿ ನಂತರ ಸೂಕ್ತವಾದ ಬಫರ್ ದ್ರಾವಣಗಳಿಂದ ಜೆಲ್ಲನ್ನು ಸ್ಥಪಿಸಿ (ಎಲ್ಯೂಟ್) ಕಿಣ್ವವನ್ನು ಶುದ್ಧ ರೂಪದಲ್ಲಿ ಪಡೆಯಬಹುದು. ಈಚೆಗೆ ಕಾರ್ಬಾಕ್ಸಿಮೀಥೈಲ್ ಸೆಲ್ಯುಲೋಸ್ ಮತ್ತು ಡೈಈಥೈಲ್ ಅಮೈನೋ ಈಥೈಲ್ ಸೆಲ್ಯುಲೋಸ್, ಸೆಫಾಡಿಕ್ಸ್–ಜಿ–200 ನಂತಹ ಕೃತಕರಾಳಗಳ ಬಳಕೆ ಹೆಚ್ಚಿದೆ. ಶುದ್ಧೀಕರಣದ ಪ್ರಗತಿಯನ್ನು, ಕಿಣ್ವದ ಪ್ರಕೃತಿಯನ್ನು, ಕಿಣ್ವದ ಸಾರಜನಕಾಂಶ ಮತ್ತು ಚಟುವಟಿಕೆಗಳ ಪ್ರಮಾಣಗಳನ್ನು, ಹಂತ ಹಂತಗಳಲ್ಲಿ ಹೋಲಿಸುವುದರ ಮೂಲಕ ಕಂಡುಕೊಳ್ಳಬಹುದು. ಸಾಮಾನ್ಯವಾಗಿ ಕಿಣ್ವಗಳನ್ನು ಹರಳಿನ ರೂಪದಲ್ಲಿ ಪಡೆಯುವುದು ಶುದ್ಧೀಕರಣದ ಪ್ರಮುಖ ಅಂಶ. ಆದರೆ, ಎಲ್ಲ ಕಿಣ್ವಗಳನ್ನು ಹರಳಿನ ರೂಪದಲ್ಲಿ ಪಡೆಯುವುದು ಸಾಧ್ಯವಿಲ್ಲ. ಕಿಣ್ವಗಳು ಪ್ರಯೋಗ ಶಾಲೆಯ ಉಷ್ಣತೆಯಲ್ಲಿ ತಮ್ಮ ಕ್ರಿಯಾಸಾಮರ್ಥ್ಯವನ್ನು ಕಳೆದುಕೊಳ್ಳುವುದರಿಂದ ಬೇರ್ಪಡೆ ಮತ್ತು ಶುದ್ಧೀಕರಣಗಳನ್ನು $0^0$ ಸೆ. – $4^0$ ಸೆ. ಶೀತಲತೆಯಲ್ಲಿ ನಡೆಸಬೇಕು. ಆಮ್ಲೀಯತೆ ಅನುಕೂಲವಾಗಿರುವಂತೆ ಎಚ್ಚರಿಕೆ ವಹಿಸಬೇಕು.

ಕಿಣ್ವಗಳ ವರ್ಗೀಕರಣ: ಕಿಣ್ವವರ್ಧಿತ ಕ್ರಿಯಾ ಪ್ರಕೃತಿಗಳ ಆಧಾರದ ಮೇಲೆ ಕಿಣ್ವಗಳನ್ನು ಆರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

1. ಆಕ್ಸಿಡೋ–ರಿಡಕ್ಟೇಸುಗಳು (ಉತ್ಕರ್ಷಣ–ಅಪಕರ್ಷಣಕ್ರಿಯೆಗಳ ವರ್ಧಕಗಳು): ಈ ಗುಂಪಿಗೆ ಸೇರಿದ ಕಿಣ್ವಗಳು ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳನ್ನು ವರ್ಧಿಸುತ್ತವೆ. ಉತ್ಕರ್ಷಣ ಕ್ರಿಯೆ ನಡೆದಾಗ ಶಕ್ತಿ ಬಿಡುಗಡೆಯಾಗುತ್ತದೆ. ದೇಹದಲ್ಲಿ ಉತ್ಕರ್ಷಣ ಹೊಂದುವ ವಸ್ತು ತನ್ನಲ್ಲಿರುವ ಜಲಜನಕದ ಪರಮಾಣುಗಳನ್ನು ಅಥವಾ ಋಣ ವಿದ್ಯುತ್ಕಣಗಳನ್ನು (ಎಲೆಕ್ಟ್ರಾನುಗಳನ್ನು) ಕಳೆದುಕೊಳ್ಳುತ್ತದೆ. ಅಂತಿಮವಾಗಿ ಜಲಜನಕ ಆಕ್ಸಿಜನ್ನಿಗೆ ವರ್ಗಾಯಿಸಲ್ಪಟ್ಟು ಅದರೊಂದಿಗೆ ಸಂಯೋಜನೆಯಾಗಿ ನೀರಿನ ಅಣುವನ್ನು ಉತ್ಪತ್ತಿ ಮಾಡುತ್ತದೆ. ವಸ್ತುವಿನ ಚಯಾಪಚಯ ಕ್ರಿಯೆಯಲ್ಲಿ ಬಿಡುಗಡೆಯಾಗಬಹುದಾದ ಜಲಜನಕವನ್ನು ಆಮ್ಲಜನಕಕ್ಕೆ ವರ್ಗಾಯಿಸುವ ಕ್ರಿಯೆಯನ್ನು ಈ ಗುಂಪಿನ ಕಿಣ್ವಗಳು ವರ್ಧಿಸುತ್ತವೆ. ವಿಟಮಿನ್ ಬಿ ಗುಂಪಿಗೆ ಸೇರಿದ ನಿಕೋಟಿನಿಕ್ ಆಮ್ಲ, ರೈಬೋಫ್ಲೇವಿನ್ ಸಂಯುಕ್ತಗಳು ಫಾರ್‌ಫ್ರೈರಿನ್ ಆವರ್ತ ವ್ಯವಸ್ಥೆ ಮತ್ತು ಕಬ್ಬಿಣದ ಪರಮಾಣುಗಳು ಈ ಕಿಣ್ವಗಳ ಸಹವರ್ತಿಗಳು. ಕೋಶದಲ್ಲಿ ಮೈಟೊಕಾಂಡ್ರಿಯ ಕಣ ಉಸಿರಾಟದಲ್ಲಿ ಪ್ರಮುಖ ಪಾತ್ರವನ್ನುವಹಿಸುತ್ತದೆ. ಈ ಗುಂಪಿನ ಕಿಣ್ವಗಳಲ್ಲಿ ಕೆಲವು ಇದರ ಅಂಶಗಳು ಆಕ್ಸಿಜನ್ನಿನ ಸಹಾಯದಿಂದ ಕೋಶಗಳಲ್ಲಿ ವಸ್ತುಗಳ ಉತ್ಕರ್ಷಣೆಗೆ ಸಹಕಾರಿಯಾದ ಈ ಕಿಣ್ವಗಳನ್ನು ಉಚ್ಛ್ವಾಸ–ನಿಶ್ವಾಸ ಶ್ರೇಣಿಗಳೆಂದು ಕರೆಯಲಾಗಿದೆ. ವಸ್ತುವಿನಿಂದ ಬಿಡುಗಡೆಯಾದ ಜಲಜನಕ ಒಮ್ಮೆಲೆ ಆಕ್ಸಿಜನ್ನಿಗೆ ರವಾನೆಯಾಗದೆ ಹಂತ ಹಂತದಲ್ಲಿ ಕಿಣ್ವ ಶ್ರೇಣಿಗಳ ಮೂಲಕ ಸಾಗುವುದು. ಇದರಿಂದ ಶಕ್ತಿ ಒಮ್ಮೆಗೇ ಉತ್ಪತ್ತಿಯಾಗದೆ ಹಂತ ಹಂತಗಳಲ್ಲಿ ಉತ್ಪತ್ತಿಯಾಗಿ ಶೇಖರವಾಗುವುದು. ಮೇಲೆ ತಿಳಿಸಿದ ಶ್ರೇಣಿಯಲ್ಲಿ ಪ್ರತಿಯೊಂದು ಕಿಣ್ವಕ್ಕೂ ತನ್ನದೇ ಆದ ಸ್ಥಾನವಿದೆ. ಶ್ರೇಣಿಯ ಕಿಣ್ವಗಳು ಈ ಕ್ರಮದಲ್ಲಿವೆ: (i) ನಿಕೋಟಿನ್ ಅಮೈಡ್ ಅಡಿನೈನ್ ಡೈನ್ಯೂಕ್ಲಿಯೋಟೈಡ್ಗಳನ್ನು ಸಹವರ್ತಿಗಳನ್ನಾಗಿ ಹೊಂದಿದ ಡೀಹೈಡ್ರೋಜಿನೇಸ್ಗಳು. (ii) ಫ್ಲೇವೋ ಪ್ರೋಟೀನುಗಳು. (iii) ಕೋಎನ್‌ಜೈಮ್ ಮತ್ತು ಸೈಟೋಕ್ರೋಮ್ ಬಿ, ಸಿ ಮತ್ತು ಎ ಗಳು. ಜಲಜನಕ ಪ್ರಥಮತಃ ಪಿರಿಡಿನ್ ನ್ಯೂಕ್ಲಿಯೋಟೈಡ್ ಕಿಣ್ವಗಳಿಗೆ ವರ್ಗಾವಾಗಿ ನಂತರ ಫ್ಲೇವೋಪ್ರೋಟೀನಿಗೂ, ತದನಂತರ ಕೋಏನ್‌ಜೈಮ್ ಮಾರ್ಗವಾಗಿ ಸೈಟೊಕ್ರೋಮ್ ಬಿ, ಸಿ, ಎ. ಮೂಲಕ ಆಕ್ಸಿಜನ್ನಿಗೆ ವರ್ಗಾವಾಗುತ್ತದೆ. ಉದಾ: ಕೋಶದಲ್ಲಿ ಈಥೈಲ್ ಆಲ್ಕೊಹಾಲ್ (ಮಧ್ಯಸಾರ) ಉತ್ಕರ್ಷಣೆ ಹೊಂದಿ ಅಸಿಟಾಲ್ಡೀಹೈಡಾಗಿ ಪರಿವರ್ತನೆಯಾಗುತ್ತದೆ. ಮದ್ಯಸಾರದಿಂದ ಬಿಡುಗಡೆಯಾಗುವ ಜಲಜನಕದ ಪರಮಾಣುಗಳನ್ನು ಆಕ್ಸಿಜನ್ನಿಗೆ ವರ್ಗಾಯಿಸುವ ಕ್ರಿಯೆಯಲ್ಲಿ ಈ ಗುಂಪಿನ ಕಿಣ್ವಗಳು ಮಧ್ಯವರ್ತಿಗಳಾಗಿವೆ.

ವಿಟಮಿನ್ ಸಿ. ಅಥವಾ ಅಸ್ಕಾರ್ಬಿಕ್ ಆಮ್ಲವನ್ನು ಉತ್ಕರ್ಷಿಸಿಸುವ ಮತ್ತು ಅಪಕರ್ಷಿಸಿಸುವ ಅಸ್ಕಾರ್ಬಕ್ ಆಮ್ಲ ಆಕ್ಸಿಡೇಸ್ ಕಿಣ್ವ, ಹೈಡ್ರೋಜನ್ ಪರಾಕ್ಸೈಡನ್ನು ವಿಭಜಿಸುವ ಕ್ಯಾಟಲೇಸ್ ಮತ್ತು ಪೆರಾಕ್ಸಿಡೇಸ್ ಕಿಣ್ವಗಳು ಈ ಗುಂಪಿಗೆ ಸೇರಿವೆ.

2. ಟ್ರಾನ್ಸಫರೇಸುಗಳು (ವರ್ಗಾವಣೆ ಕಿಣ್ವಗಳು): ಕೆಲವು ಜೈವಿಕ ಕ್ರಿಯೆಗಳಲ್ಲಿ ಒಂದು ವಸ್ತುವಿನಿಂದ ಪರಮಾಣುಗಳ ವಿಶಿಷ್ಟ ಗುಂಪನ್ನು ಇನ್ನೊಂದು ವಸ್ತುವಿಗೆ ವರ್ಗಾಯಿಸುವ ಕ್ರಿಯೆಯನ್ನು ವರ್ಧಿಸುವ ಕಿಣ್ವಗಳು. ಮೀಥೈಲ್ ಪುಂಜವನ್ನು ವರ್ಗಾಯಿಸುವ ಟ್ರಾನ್ಸ್‌ಮೆಥಿಲೇಸ್, ಕೀಟೋಗುಂಪನ್ನು ವರ್ಗಾಯಿಸುವ ಟ್ರಾನ್ಸ್‌ಕೀಟೋಲೇಸುಗಳು ಅಮೈನೋಗುಂಪುಗಳನ್ನು ವರ್ಗಾಯಿಸುವ ಅಮೈನೋ ಟ್ರಾನ್ಸ್‌ಫರೇಸುಗಳು ಇತ್ಯಾದಿ ಈ ಗುಂಪಿಗೆ ಸೇರಿವೆ. ಟ್ರಾನ್ಸ್‌ಕೀಟೋಲೇಸ್ ಕಿಣ್ವಗಳಿಗೆ ಅನ್ಯುರಿನ್ ಅಥವಾ ಥಯಾಮೀನ್ ಎಂಬ ವಿಟಮಿನ್ನಿನಿಂದ ಸಂಜಾತವಾದ ಥಯಾಮೀನ್ ಪೈರೋಫಾಸ್ಫೇಟ್ ಎಂಬ ಸಹವರ್ತಿಯು ಅಮೈನೋ ಟ್ರಾನ್ಸ್‌ಫರೇಸ್‌ಗಳಿಗೆ ಪಿರಿಡಾಕ್ಸಿನ್ ಎಂಬ ಕಿಣ್ವದಿಂದ ಸಂಜಾತವಾದ ಪಿರಿಡಾಕ್ಸಾಲ್ ಫಾಸ್ಫೇಟ್ ಎಂಬ ಸಹವರ್ತಿ ನೆರವನ್ನು ನೀಡುತ್ತವೆ. ಅಮೈನೋ ಟ್ರಾನ್ಸ್‌ಫರೇಸ್ ಕಿಣ್ವ ವರ್ಧಿಸುವ ಕ್ರಿಯೆಯಲ್ಲಿ ಒಂದು ಅಮೈನೋ ಆಮ್ಲ ಅಮೈನೋಗುಂಪಿನ ದಾತೃವಿನಂತೆಯೂ ಕೀಟೋಆಮ್ಲವೊಂದು ಪರಿಗ್ರಾಹಿಯಂತೆಯೂ ವರ್ತಿಸುತ್ತವೆ. ಜೈವಿಕ ವ್ಯವಸ್ಥೆಯಲ್ಲಿ ಸಕ್ಕರೆ(ಶರ್ಕರ)ಯ ಜೀರ್ಣಕ್ರಿಯೆಯಲ್ಲಿ ಕೆಲವು ಕೀಟೋ ಆಮ್ಲಗಳು ಉತ್ಪತ್ತಿಯಾಗುತ್ತವೆ. ಪ್ರೋಟೀನಿನ ಜೀರ್ಣಕ್ರಿಯೆಯಲ್ಲಿ ಹಲವು ಅಮೈನೋ ಆಮ್ಲಗಳು ಉತ್ಪತ್ತಿಯಾಗುತ್ತವೆ. ಆದ್ದರಿಂದ ಈ ಕ್ರಿಯೆ ಸಕ್ಕರೆ(ಶರ್ಕರ)ಗಳ ಚಯಾಪಚಯ ಕ್ರಿಯೆಗೂ ಅಮೈನೋ ಆಮ್ಲಗಳ ಚಯಾಪಚಯ ಕ್ರಿಯೆಗಳಿಗೂ ಸಂಬಂಧವನ್ನು ಕಲ್ಪಿಸುತ್ತದೆ.

3. ಹೈಡ್ರೋಲೇಸಸ್: ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಬಹುಮಟ್ಟಿನ ಕ್ರಿಯೆಗಳು ರಾಸಾಯನಿಕ ಬಂಧದ ಎರಡೂ ಕಡೆಗೆ ನೀರಿನ ಅಂಶಗಳಾದ $H^+$ ಮತ್ತು $(CH)^-$ ಆಯಾನುಗಳನ್ನು ಸೇರಿಸುವುದರ ಮೂಲಕ ಬಂಧವನ್ನು ಛೇದಿಸುವ ಕ್ರಿಯೆಗಳು. ಆದ್ದರಿಂದ ಈ ಕ್ರಿಯೆಗಳನ್ನು ವರ್ಧಿಸುವ ಕಿಣ್ವಗಳ ಸಂಖ್ಯೆಯೂ ಅಧಿಕ. ಸಸ್ಯಗಳಿಂದ ತಯಾರಿಸಲ್ಪಟ್ಟು ಪ್ರಾಣಿಗಳ ಅಹಾರವಸ್ತುಗಳಾಗಿರುವ ಸ್ಟಾರ್ಚ್, ಪ್ರೋಟೀನ್ ಮತ್ತು ತೈಲಗಳಲ್ಲಿ ಜಲವಿಚ್ಛೇದನ ಹೊಂದುವ ಬಂಧನಗಳಿವೆ. ಕ್ರಿಯೆಗಳಿಗೆ ಒಳಗಾಗುವ ಕ್ರಿಯಾಧರದ ಪ್ರಕೃತಿಯನ್ನು ಅನುಸರಿಸಿ ಈ ಗುಂಪಿನ ಕಿಣ್ವಗಳನ್ನು ಕೆಳಗೆ ಕಂಡಂತೆ ಪುನಃ ವಿಂಗಡಿಸಲಾಗಿದೆ. (i) ಪೆಪ್ಟಿಡೇಸುಗಳು: ಪ್ರೋಟೀನುಗಳಲ್ಲಿ ಅಮೈನೋ ಆಮ್ಲಗಳ ನಡುವೆ ಏರ್ಪಟ್ಟಿರುವ ಪೆಪ್ಟೈಡು ಬಂಧಗಳನ್ನು ಮುರಿಯುವ ಕಿಣ್ವಗಳು. ಜಠರರಸದಲ್ಲಿರುವ ಪೆಪ್ಸಿನ್ ಈ ಗುಂಪಿಗೆ ಸೇರಿದ ಒಂದು ಕಿಣ್ವ. (ii) ಗ್ಲೈಕೋಸಿಡೇಸುಗಳು: ಬಹುಶರ್ಕರಗಳಲ್ಲಿ ಶರ್ಕರ ಮಾನಗಳ ನಡುವೆ ಏರ್ಪಡುವ ಗ್ಲೈಕೋಸಿಡಿಕ್ ಬಂಧಗಳನ್ನು ಜಲವಿಚ್ಛೇದನೆಗೆ ಒಳಪಡಿಸುವ ಕಿಣ್ವಗಳು. ಸ್ಟಾರ್ಚ್ ಬೃಹದಣುವನ್ನು ಮಾಲ್ಟೋಸ್ ಆಗಿ ಪರಿವರ್ತಿಸುವ ಅಮೈಲೇಸ್

ಕಿಣ್ವ ಈ ಗುಂಪಿಗೆ ಸೇರಿದೆ. ಇದು ಬಾಯಿಯ ಜೊಲ್ಲಿನಲ್ಲಿರುತ್ತದೆ. (iii) ಲೈಪೇಸ್: ತೈಲಾಮ್ಲಗಳಲ್ಲಿ ಮತ್ತು ಕೊಬ್ಬುಗಳಲ್ಲಿ ಸಾಮಾನ್ಯವಾಗಿ ಗ್ಲಿಸರಾಲ್ ಮತ್ತು ತೈಲಾಮ್ಲಗಳ ನಡುವೆ ಬಂಧವೇರ್ಪಟ್ಟಿರುತ್ತದೆ. ಈ ಬಂಧವನ್ನು ಜಲವಿಚ್ಛೇದನೆಗೊಳಿಸುವ ಕಿಣ್ವ ಸಮುದಾಯಕ್ಕೆ ಲೈಪೇಸುಗಳು ಎಂದು ನಾಮಕರಣ ಮಾಡಲಾಗಿದೆ. ಹರಳಿನ ಬೀಜ ಲೈಪೇಸ್ ಕಿಣ್ವದ ಉತ್ತಮ ಮೂಲ. (iv) ನ್ಯೂಕ್ಲಿಯೇಸುಗಳು: ಇವು ಡೀ ಆಕ್ಸಿರೈಬೋನ್ಯೂಕ್ಲಿಯಕ್ ಆಮ್ಲ (ಡಿಎನ್ಎ) ಮತ್ತು ರೈಬೋನ್ಯೂಕ್ಲಿಯಕ್ ಆಮ್ಲಗಳನ್ನು (ಆರ್ಎನ್ಎ) ಜೀರ್ಣಗೊಳಿಸುವ ಕಿಣ್ವಗಳು. ಹಾವಿನ ವಿಷದಲ್ಲಿ ಈ ಬಗೆಯ ಕಿಣ್ವಗಳಿವೆ. (v) ಫಾಸ್ಫಟೇಸುಗಳು: ಇವು ಪಾಸ್ಫೇಟ್ ಪುಂಜಗಳನ್ನೊಳಗೊಂಡ ಅನೇಕ ವಸ್ತುವಿನ ಮೇಲೆ ವರ್ತಿಸಿ ಪಾಸ್ಫೇಟ್ ಪುಂಜವನ್ನು ಬಿಡುಗಡೆ ಮಾಡುವ ಕಿಣ್ವಗಳು. ರಕ್ತದಲ್ಲಿ ಎರಡು ಬಗೆಯ ಫಾಸ್ಫಟೇಸುಗಳಿವೆ.

4. ಲಯೇಸುಗಳು: ಈ ಗುಂಪಿನ ಕಿಣ್ವಗಳು ಯುಗ್ಮ ಬಂಧವಿರುವ (ಡಬಲ್ ಬಾಂಡ್) ವಸ್ತುವಿಗೆ ಪರಮಾಣುಗಳ ಗುಂಪನ್ನು ಅಥವಾ ಅಣುವಿನ ಅಂಶಗಳನ್ನು ವರ್ಗಾಯಿಸುತ್ತವೆ. ಈ ಸಂಯುಕ್ತಗಳಲ್ಲಿ ಇಂಗಾಲ ಮತ್ತು ಇಂಗಾಲ ಪರಮಾಣುಗಳಿಗಿರುವ ಬಂಧವನ್ನು ಮುರಿಯುತ್ತವೆ. ಪೈರೂವಿಕ್ ಆಮ್ಲದಿಂದ ಇಂಗಾಲದ ಡೈಆಕ್ಸೈಡನ್ನು ಹೊರ ಹಾಕುವ ಕಿಣ್ವ ಈ ಗುಂಪಿಗೆ ಸೇರಿದೆ.

5. ಐಸೋಮರೇಸುಗಳು: ಅಣುವಿನ ರಾಸಾಯನಿಕ ಘಟನೆಯಲ್ಲಿ ಬದಲಾವಣೆಯಿಲ್ಲದೆ ಆದರ ಒಳರಚನೆಯಲ್ಲಿ ವ್ಯತ್ಯಾಸಗಳನ್ನು ಉಂಟುಮಾಡಿ ಸಮಘಟಕಗಳನ್ನು ಉತ್ಪತ್ತಿಮಾಡುವ ಕಿಣ್ವಗಳು ಈ ಗುಂಪಿಗೆ ಸೇರಿವೆ. ಗ್ಲೂಕೋಸನ್ನು ಫ್ರಕ್ಟೋಸಿಗೆ ಪರಿವರ್ತಿಸುವ ಕಿಣ್ವ ಗ್ಲೂಕೋಸಿನ ಚಯಾಪಚಯ ಕ್ರಿಯೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.

6 ಲಿಗೇಸುಗಳು: ಈ ಗುಂಪಿನ ಕಿಣ್ವಗಳು ಎರಡು ಅಣುಗಳ ನಡುವೆ ರಾಸಾಯನಿಕ ಬಂಧವನ್ನು ಏರ್ಪಡಿಸುತ್ತವೆ. ಆದರೆ, ಈ ಬಂಧರಚನೆಗೆ ಶಕ್ತಿ ಅವಶ್ಯಕವಾದದ್ದರಿಂದ ಕ್ರಿಯೆಗೆ ಎಟಿಪಿ ಅಣುವಿನ ನೆರವು ಅಗತ್ಯ. ಕ್ರಿಯೆ ನಡೆಯುವ ವೇಳೆಯಲ್ಲಿ ಎಟಿಪಿ ಜಲವಿಚ್ಛೇದನ ಹೊಂದಿ ಎಎಂಪಿ ಮತ್ತು ಪೈರೋಫಾಸ್ಫೇಟ್ ಅಣುಗಳು ಬಿಡುಗಡೆಯಾಗಿ ಶಕ್ತಿ ಹೊರಬರುತ್ತದೆ. ಶಕ್ತಿಯನ್ನು ಬಳಸಿ ಬಂಧದ ರಚನೆಯಾಗುತ್ತದೆ. ಇವೆರಡು ಕ್ರಿಯೆಗಳೂ ಏಕಕಾಲದಲ್ಲಿ ಕ್ರಿಯೆಯ ಅಂಗವಾಗಿ ನಡೆಯುತ್ತದೆ. ಅಸಿಟಿಕ್ ಆಮ್ಲ, ಅಸಿಟೈಲ್ ಕೊಎನ್‌ಜೈಮ್–ಎ ಆಗಿ ಪರಿವರ್ತನೆಯಾಗುವ ಕ್ರಿಯೆಯನ್ನು ವರ್ಧಿಸುವ ಕಿಣ್ವ ಈ ಗಂಪಿನದು.

ಅನೇಕ ರಾಸಾಯನಿಕ ಕ್ರಿಯೆಗಳು ಸ್ವತಂತ್ರವಾಗಿ ನಡೆಯುವಾಗ ಕ್ರಿಯಾವೇಗ ಮಂದವಾಗಿದ್ದು, ಕಿಣ್ವಗಳನ್ನು ಸೇರಿಸಿದಾಗ ಶೀಘ್ರಗತಿಯಿಂದ ನಡೆಯುತ್ತವೆ. ಕಿಣ್ವ ಕ್ರಿಯಾವೇಗವನ್ನು ವರ್ಧಿಸುವ ಕ್ರಮವನ್ನು ಅರಿಯುವುದು ಮುಖ್ಯ. ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಕಿಣ್ವವರ್ಧಿತ ಕ್ರಿಯೆಗಳಿಗೂ ಇನಾರ್ಗ್ಯಾನಿಕ್ ವೇಗವರ್ಧಕಗಳಿಂದ ಪ್ರಚೋದಿತವಾದ ಕ್ರಿಯೆಗಳಿಗೂ ಕೆಲವು ವಿಷಯಗಳಲ್ಲಿ ಹೋಲಿಕೆ ಇದ್ದರೂ ಅನೇಕ ವ್ಯತ್ಯಾಸಗಳಿವೆ. ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಕ್ರಿಯೆಗಳು ಅಭಿಕರ್ಮಕ (ರೀಏಜೆಂಟ್) ಮತ್ತು ಫಲಿತಗಳ ಸಾಂದ್ರಣವನ್ನು ಮಾತ್ರವಲ್ಲದೆ ಕಿಣ್ವದ ಸಾಂದ್ರಣವನ್ನೂ ಅವಲಂಬಿಸುತ್ತವೆ. ಕಿಣ್ವದ ಮಟ್ಟ ಸಾಕಷ್ಟಿರುವಾಗ ಕ್ರಿಯೆ ನಡೆಯುವ ದಿಕ್ಕು ಅಭಿಕರ್ಮಕ ಮತ್ತು ಫಲಿತಗಳ ಸಾಂದ್ರಣವನ್ನು ಅವಲಂಬಿಸುತ್ತದೆ. ಜೈವಿಕ ವ್ಯವಸ್ಥೆಯಲ್ಲಿ ಕಿಣ್ವ ನಾನಾ ತರದ ಹತೋಟಿಗಳಿಗೆ ಒಳಪಟ್ಟಿರುವುದರಿಂದ ಇನ್ನಷ್ಟು ಕ್ಲಿಷ್ಟವಾಗುತ್ತದೆ. ಆದರೂ, ಕಿಣ್ವವನ್ನು ಬೇರ್ಪಡಿಸಿ ಕೋಶದ ಹೊರಗೆ ಅದರ ಬಗ್ಗೆ ನಡೆಸಿರುವ ಅಧ್ಯಯನಗಳಿಂದ ಕ್ರಿಯಾಗತಿ ಕ್ರಿಯಾವಿಧಿಗಳಿಗೂ, ಕಿಣ್ವದ ರಚನೆಗೂ ಇರುವ ಸಮಸ್ಯೆಗಳ ಮೇಲೆ ಅಭ್ಯಾಸ ಮಾಡಲು ಸಾಧ್ಯವಾಗಿದೆ.,

ಮೈಕೇಲಿಸ್ ಮತ್ತು ಮೆಂಟನ್‌ರು ಕಿಣ್ವವರ್ಧಿತ ಕ್ರಿಯಾಗತಿ ವಿಶ್ಲೇಷಣೆಗೆ ಗಣಿತಶಾಸ್ತ್ರದ ಆಧಾರವನ್ನು ಮೊಟ್ಟಮೊದಲು ತೋರಿಸಿಕೊಟ್ಟರು. ಈ ಆಧಾರವನ್ನು ಕಲ್ಪಿಸಲು ಅವರು ಕೆಲವು ಪ್ರಮೇಯಗಳನ್ನು ಪೂರ್ವಭಾವಿಯಾಗಿ ಅಂಗೀಕರಿಸಿದರು. ಇವುಗಳಲ್ಲಿ ಮುಖ್ಯವಾದುವು: (i) ಕ್ರಿಯೆಯ ಪ್ರಥಮ ಹೆಜ್ಜೆಯಲ್ಲಿ ಕ್ರಿಯಾಧರ ಮತ್ತು ಕಿಣ್ವಗಳಿಗೆ ಕ್ಷಣಿಕವಾದ ಸಂಬಂಧವೇರ್ಪಟ್ಟು ಸಂಕೀರ್ಣವೊಂದು ಉತ್ಪತ್ತಿಯಾಗುತ್ತದೆ. (ii) ಉತ್ಪತ್ತಿಯಾದ ಸಂಕೀರ್ಣ ಎರಡು ವಿಧವಾಗಿ ನಶಿಸಬಹುದು. 1. ಸಂಕೀರ್ಣ ಒಡೆದು ಕಿಣ್ವ ಮತ್ತು ಕ್ರಿಯಾಧರಗಳು ಬಿಡುಗಡೆಯಾಗಬಹುದು. ಈ ಮಾರ್ಗದಲ್ಲಿ ಫಲಿತ ಉತ್ಪತ್ತಿಯಾಗುವುದಿಲ್ಲ. 2. ಸಂಕೀರ್ಣದ ಫಲವಾಗಿ ಕ್ರಿಯಾಧರ ಉತ್ತೇಜಿತಗೊಂಡು ರಾಸಾಯನಿಕ ಕ್ರಿಯೆ ನಡೆದು ಫಲಿತ ಉತ್ಪತ್ತಿಯಾಗಬಹುದು. ಆಗ ಕಿಣ್ವ ಬಿಡುಗಡೆಯಾಗಿ ಮತ್ತೊಂದು ಕ್ರಿಯಾಧರ ಅಣುವಿನೊಂದಿಗೆ ಸೇರಲು ಅವಕಾಶವಾಗುತ್ತದೆ. ಈ ರೀತಿ ಕಿಣ್ವದ ಅಣುಗಳು ಅಧಿಕ ಸಂಖ್ಯೆಯಲ್ಲಿ ಅಲ್ಲದಿದ್ದರೂ ಕ್ರಿಯಾಧರದ ಅಣುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪರಿವರ್ತಿಸಬಲ್ಲುವು.

ಇತ್ತೀಚೆಗೆ, ಕಿಣ್ವ ಕ್ರಿಯಾಧರದೊಂದಿಗೆ ಸಂಕರ್ಷಣವನ್ನು ರಚನೆಮಾಡುತ್ತದೆ ಎಂಬ ಪ್ರಮೇಯಕ್ಕೆ ಸಾಕಷ್ಟು ಆಧಾರಗಳು ದೊರೆತಿವೆ. ಮೈಕೇಲಿಸ್ ಮೆಂಟನ್ ಪ್ರಯೋಗದ ಮೂಲ ದೊರೆತ ಫಲಿತಾಂಶಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಮೈಕೇಲಿಸ್ ಮತ್ತು ಮೆಂಟನ್ನ್‌ರವರ ಸಮೀಕರಣ ಈ ರೀತಿ ಇದೆ.

$$E + S \underset{K_2}{\overset{K_1}{\longrightarrow}} ES \overset{K_3}{\longrightarrow} P + E \quad ......\ (1)$$

$K_1$ $K_2$ ಮತ್ತು $K_3$ ಕ್ರಿಯಾವೇಗವನ್ನು ನಿರ್ಧರಿಸುವ ಅಚಲಾಂಕಗಳು. ES ಸಂಕರ್ಷಣ ಉತ್ಪತ್ತಿಯಾಗುವ ವೇಗವನ್ನು ಈ ರೀತಿ ತಿಳಿಸಬಹುದು.

$$\frac{d[ES]}{dt} = K[[E] - [ES][S]] \ ..............................(2)$$

[[E] [ES]] = ಸಂಕರ್ಷಣ ರೂಪದಲ್ಲಿರುವ ಬಿಡು ಕಿಣ್ವ

[ES] ಸಂಕರ್ಷದ ಉತ್ಪತ್ತಿಯ ವೇಗ ಬಿಡುಕಿಣ್ವ ಮತ್ತು ಕ್ರಿಯಾಧರದ ಸಾಂದ್ರಣವನ್ನು ಅವಲಂಬಿಸಿದೆ. [ES] ಸಂಕರ್ಷಣ ನಶಿಸುವ ವೇಗ ಮೇಲೆ ಹೇಳಿದ ಎರಡು ಮಾರ್ಗಗಳನ್ನು ಅವಲಂಬಿಸಿದೆ. ಆದ್ದರಿಂದ,

$$\frac{d[ES]}{dt} = K_3\ [[ES] - K_2\ [ES]] \ ......................... (3)$$

ಸಮತೋಲನ ಸ್ಥಿತಿಯಲ್ಲಿ ಸಂಕರ್ಷಣದ ಉತ್ಪತ್ತಿ ನಾಶವಾಗುವುದಕ್ಕೆ ಸಮವಾಗಿರುವುದು.

$$K1\ [E] - [ES]\ ]\ [S] = K3\ [ES] + K_2\ [ES] \ ........(4)$$

ಮರುಜೋಡಣೆ ಆದ ನಂತರ

$$\frac{[S]\ [E] = [ES]]}{[ES]} \quad \frac{K_2 + K_3}{K_1} = K_2 \ ...................(5)$$

ಮೂರು ಅಂಕಗಳ ಲಬ್ಧವನ್ನು $K_m$ ಎಂದು ಕರೆಯಲಾಗಿದೆ. ಇದನ್ನು ಮೈಕೇಲಿಸ್ ಅಚಲಾಂಕವೆಂದೂ ಕರೆಯುತ್ತಾರೆ. ಸಮತೋಲನ ಸ್ಥಿತಿಯಲ್ಲಿ [ES]ನ ಸಾಂದ್ರಣ

$$ES = \frac{[ES]\ [S]}{K_m + S} \ ............. (6)$$

ಪ್ರಾಯೋಗಿಕವಾಗಿ [ES]ನ ಸಾಂದ್ರತೆಯನ್ನು ಅಳತೆಮಾಡುವುದು ಕಷ್ಟವಾದದ್ದರಿಂದ ಕ್ರಿಯೆಯ ಪ್ರಾರಂಭವೇಗಕ್ಕೂ *ES* ಸಂಕರ್ಷಣಕ್ಕೂ ಸಂಬಂಧ ಕಲ್ಪಿಸುವ ಸಮೀಕರಣವನ್ನು ಉಪಯೋಗಿಸಿ $K_m$ ನ ಮೌಲ್ಯವನ್ನು ಕಂಡುಹಿಡಿಯಬಹುದು.

ಪ್ರಾರಂಭ ವೇಗ

$$V = K_3\ [ES] \qquad .............................(7)$$

S ನ ಸಾಂದ್ರಣ ಕಿಣ್ವದ [E] ಸಾಂದ್ರಣಕ್ಕಿಂತ ಅತ್ಯಧಿಕವಾಗಿದ್ದಾಗ ಕಿಣ್ವದ ಎಲ್ಲ ಅಣುಗಳು ಸಂಕರ್ಷಣ ರೂಪದಲ್ಲಿರುತ್ತವೆ.

ಆದ್ದರಿಂದ, $E = [ES]$ ..............................(8)

ವೇಗವೂ ಗರಿಷ್ಠ ವೇಗಕ್ಕೆ (v) ಸಮವಾಗಿರುತ್ತದೆ.

$$\mathrm{V} = K3\ [E] \qquad ...............................(9)$$

ಈಗ (7) ನೆಯ ಸಮೀಕರಣದಲ್ಲಿ [ES] ಗೆ (6)ನೆಯ ಸಮೀಕರಣದಲ್ಲಿನ ಬೆಲೆಯನ್ನು ಕೊಟ್ಟು (9)ನೆಯ ಸಮೀಕರಣದಿಂದ ಭಾಗಿಸಿದರೆ.

$$\mathrm{V} = \frac{VX\ [S]}{K_m + S} \ ...........................(10)$$

$$K_m = [S]\ (\frac{V}{\mathrm{V}} - 1)$$

ಇದೇ ಮೈಕೇಲಿಸ್ – ಮೆಂಟನ್ನಿನ ಸಮೀಕರಣ.

ಪ್ರಾರಂಭ ವೇಗ vಯು Vಯ ಅರ್ಧದಷ್ಟಿದ್ದಾಗ $K_m$=[S] ಎಂದಾಗುತ್ತದೆ. ಅಂದರೆ $K_m$ ಮೌಲ್ಯ ಕ್ರಿಯಾಧಾರದ ಮೌಲ್ಯಕ್ಕೆ ಸಂಖ್ಯಾತ್ಮಕವಾಗಿ ಸಮವಾಗಿರುವುದು.

ಈ ಸಮೀಕರಣದಿಂದ ಮೈಕೆಲಿಸ್ ಅಚಲಾಂಕವೆಂದರೆ ಕಿಣ್ವ ಪ್ರಚೋದಿತ ಕ್ರಿಯೆಯ ಪ್ರಾರಂಭ ವೇಗ ಗರಿಷ್ಠ ವೇಗದ ಅರ್ಧದಷ್ಟು ವೇಗವನ್ನು ಮುಟ್ಟಲು ಬೇಕಾಗುವ ಕ್ರಿಯಾಧಾರದ ಸಾಂದ್ರಣದ (ಲೀಟರಿಗೆ ಇಂತಿಷ್ಟು ಗ್ರಾಮ್ ಅಣುತೂಕವೆಂಬಂತೆ ಅಳೆದಾಗ) ಸಂಖ್ಯಾಮೌಲ್ಯಕ್ಕೆ ಸಮವಾಗಿರುವುದು ಎಂದು ವಿವರಿಸುವರು. ಈ ಅಂಕವನ್ನು ಕಿಣ್ವ-ಕ್ರಿಯಾಧಾರಗಳಿಗಿರುವ ವಾತ್ಸಲ್ಯ ಸೂಚಿ ಎಂದು ಭಾವಿಸಬಹುದು. $K_m$ ನ ಮೌಲ್ಯ ಅಧಿಕವಾದರೆ (ಅಂದರೆ ಕ್ರಿಯೆಯ ವೇಗವನ್ನು ಹೆಚ್ಚಿಸಬೇಕಾದರೆ ಹೆಚ್ಚು ಕ್ರಿಯಾಧಾರಬೇಕು) ಕಿಣ್ವಕ್ಕೂ ಕ್ರಿಯಾಧಾರಕ್ಕೂ ಇರುವ ವಾತ್ಸಲ್ಯ ಅಧಿಕ. $K_m$ ನ ಮೌಲ್ಯ ಕಡಿಮೆಯಾದರೆ $E_s$ ಸಂಕರ್ಷಣ ಶೀಘ್ರವಾಗಿ ವಿಭಜನೆಯಾಗುತ್ತದೆ. ಆದ್ದರಿಂದ ಕಿಣ್ವಕ್ಕೂ ಕ್ರಿಯಾಧಾರಕ್ಕೂ ಇರುವ ವಾತ್ಸಲ್ಯ ಅಲ್ಪಪ್ರಮಾಣದಲ್ಲಿರುತ್ತದೆಂದು ತಿಳಿದುಬರುತ್ತದೆ.

ಕ್ರಿಯಾಧಾರವನ್ನು ಕಿಣ್ವದೊಂದಿಗೆ ಅನುಕೂಲತೆಯ ಉಷ್ಣತೆ ಮತ್ತು ಆಮ್ಲೀಯತೆಯಲ್ಲಿ ಅಥವಾ ರಸಸಾರದಲ್ಲಿ (pH) ಹುದುಗಿಟ್ಟರೆ ಫಲಿತ ಉತ್ಪತ್ತಿಯಾಗುತ್ತದೆ. ಕ್ರಿಯಾಮಿಶ್ರಣದಲ್ಲಿ ಫಲಿತ ಕಾಣಿಸಿಕೊಳ್ಳುವ ವೇಗವನ್ನು ನಾನಾ ವಿಧಾನಗಳಿಂದ ಅಳೆಯಬಹುದು. ಎಲ್ಲ ವಿಧಾನಗಳು ಕ್ರಿಯೆ ಪ್ರಾರಂಭವಾದ ಕ್ಷಣದಿಂದ ಹಿಡಿದು ಗೊತ್ತಾದ ಅವಧಿಗಳಲ್ಲಿ ಹುದುಗಿದ ಮಿಶ್ರಣದಲ್ಲಿ ಫಲಿತ ಪ್ರಮಾಣವನ್ನು ಕಂಡುಹಿಡಿಯುವ ಮಾರ್ಗವನ್ನೇ ಅವಲಂಬಿಸಿವೆ. ರಾಸಾಯನಿಕ ವಿಧಾನಗಳ ಮೂಲಕ, ಭೌತ ಮಾಪನೆಗಳ ಮೂಲಕ, ಫಲಿತವನ್ನು ಆಗಾಗ್ಗೆ ಅಳೆದು ಕ್ರಿಯೆಯ ಮುನ್ನಡೆಯನ್ನು ನಿಷ್ಕರ್ಷಿಸಬಹುದು. ಕ್ರಿಯೆ ನಡೆದು ಕಾಲದ ವಿರುದ್ಧವಾಗಿ ಫಲಿತ ಪ್ರಮಾಣವನ್ನು ನಕ್ಷೆಯಲ್ಲಿ ಗುರುತಿಸಿದರೆ ವಕ್ರರೇಖೆ ದೊರೆಯುತ್ತದೆ. ಈ ರೇಖೆಯ ರೂಪ ಕಿಣ್ವವರ್ಧಿತ ಎಲ್ಲ ಕ್ರಿಯೆಗಳಿಗೂ ಅನ್ವಯಿಸುತ್ತದೆ.

ಕಿಣ್ವಗಳ ಕ್ರಿಯಾವರ್ಧಕ ಸಾಮರ್ಥ್ಯ ಅನೇಕ ವೇಳೆ ಪ್ರೊಟೀನುಗಳಲ್ಲದ ಮತ್ತು ಅಲ್ಪಾಣುತೂಕದ ವಸ್ತುಗಳನ್ನು ಅವಲಂಬಿಸಿದೆ. ಇಂಥ ವಸ್ತುಗಳಿಗೆ ಸಹವರ್ತಿಗಳು ಎಂದು ಹೆಸರು. ಖನಿಜವಸ್ತುಗಳಾದ ಮಗ್ನೀಸಿಯಂ, ಮ್ಯಾಂಗನೀಸ್, ಸತು, ತಾಮ್ರ, ಕಬ್ಬಿಣ ಮತ್ತು ಕ್ಯಾಲ್ಸಿಯಂ ಲೋಹಗಳ ಅಯಾನುಗಳು ವಿಟವಿನ್ ಬಿ ಸಮುಚ್ಚಯಕ್ಕೆ ಸೇರಿದ ಥಯಾಮೀನ್, ರೈಬೋಫ್ಲೇವಿನ್, ನಿಕೋಟಿನಿಕ್ ಆಮ್ಲ, ಲಿಪೋಯಿಕ್ ಆಮ್ಲ, ಬಯಾಟಿನ್, ಪಿರಿಡಾಕ್ಸಾಲ್ ಫಾಸ್ಫೇಟ್, ಫೋಲಿಕ್ ಆಮ್ಲಗಳು ಮತ್ತು ವಿಟಮಿನ್ ಬಿ$_{12}$ ಜೀವಸತ್ತ್ವಗಳಿಂದ ಉತ್ಪನ್ನವಾಗುವ ವಸ್ತುಗಳು ಈ ಗುಂಪಿಗೆ ಸೇರಿವೆ. ಸಹವರ್ತಿಗಳು ಕಿಣ್ವಗಳೊಂದಿಗೆ ರಾಸಾಯನಿಕ ಬಂಧಗಳ ಮೂಲಕ ಅಥವಾ ಭೌತ ಸಂಪರ್ಕದ ಮೂಲಕ ಸೇರಿರುತ್ತವೆ. ಕಿಣ್ವಗಳು ವರ್ಧಿಸುವ ಕ್ರಿಯೆಯಲ್ಲಿ ಸಹವರ್ತಿಗಳು ನೇರವಾಗಿ ಕ್ರಿಯಾಧಾರದೊಂದಿಗೆ ಸಂಕರ್ಷಣವನ್ನು ರೂಪಿಸುತ್ತವೆ. ಕಿಣ್ವದ ಪ್ರೊಟೀನ್ ಭಾಗ ಕ್ರಿಯೆ ನಡೆಯಲು ಅಗತ್ಯವಾದ ಚೌಕಟ್ಟನ್ನು ಒದಗಿಸುತ್ತದೆ.

ಜೈವಿಕ ವ್ಯವಸ್ಥೆಯಲ್ಲಿ ಕಿಣ್ವಗಳ ಚಟುವಟಿಕೆ ನಾನಾ ತರದ ಹತೋಟಿಗೆ ಒಳಪಟ್ಟಿರುತ್ತದೆ. ಅನೇಕ ಸಂದರ್ಭಗಳಲ್ಲಿ ಕ್ರಿಯೆಯ ಅಂತ್ಯಫಲಿತವೇ ಕಿಣ್ವದ ಚಟುವಟಿಕೆಯನ್ನು ತಗ್ಗಿಸುತ್ತದೆ. ಕೋಶದಲ್ಲಿ ನಾನಾ ಚಟುವಟಿಕೆಯ ಕ್ರಿಯೆಯಲ್ಲಿ ಒಟ್ಟಿಗೆ ನಡೆಯುತ್ತವೆ. ಒಂದು ಕ್ರಿಯೆಯ ಫಲಿತ, ಇನ್ನೊಂದು ಕ್ರಿಯೆಯಲ್ಲಿ ಆರಂಭ ವಸ್ತುವಾಗಬಹುದಾದ್ದರಿಂದ ಯಾವ ಒಂದು ವಸ್ತುವೂ ಶೇಖರವಾಗಿ ಕೋಶಕ್ಕೆ ಅಗತ್ಯವಿಲ್ಲದಿದ್ದಾಗ ಒಂದು ವಸ್ತು ಉತ್ಪತ್ತಿಯಾಗುತ್ತಲೇ ಇದ್ದರೆ ಹಿತ ಪ್ರಮಾಣಕ್ಕಿಂತ ಅಧಿಕ ಮಟ್ಟದಲ್ಲಿ ಶೇಖರವಾಗಿ ಕೋಶಕ್ಕೆ ಅಪಾಯಕಾರಿಯಾಗಿ ಪರಿಣವಿಸಬಹುದು. ಅಥವಾ, ಬೇರೊಂದು ಕಿಣ್ವಕ್ಕೆ ಪ್ರತಿಬಂಧಕದಂತೆ ವರ್ತಿಸಿ ನಡೆಯುತ್ತಿರುವ, ನಡೆಯಲೇಬೇಕಾದ ಕ್ರಿಯೆಗೆ ತಡೆಯನ್ನು ಉಂಟುಮಾಡಬಹುದು. ಈ ಅನಾಹುತವನ್ನು ತಪ್ಪಿಸುವುದಕ್ಕಾಗಿಯೇ ಅನಾವಶ್ಯಕವಾದ ಪ್ರಮಾಣದಲ್ಲಿ ಫಲಿತ ಉತ್ಪತ್ತಿಯಾಗುವ ಸಂದರ್ಭದಲ್ಲಿ ಆ ಕ್ರಿಯೆಗೆ ಸಂಬಂಧಪಟ್ಟ ಕಿಣ್ವದ ಚಟುವಟಿಕೆ ಫಲಿತದಿಂದ ಕಡಿಮೆಯಾಗುವುದು. ನಾನಾ ಕಿಣ್ವಗಳ ಸಹಾಕಾರದಿಂದ ಅಂತಿಮ ಫಲಿತ ಉತ್ಪತ್ತಿಯಾಗುವ ಸಂದರ್ಭದಲ್ಲಿ ಅಂತ್ಯಫಲಿತ ಪ್ರಥಮ ಹಂತದ ಕಿಣ್ವದ ಚಟುವಟಿಕೆಯನ್ನು ತಗ್ಗಿಸುವುದು. ಕೋಶಕ್ಕೆ ಫಲಿತದ ಅಗತ್ಯ ಬಿದ್ದಾಗ ಕಿಣ್ವ ಎಂದಿನ ಚಟುವಟಿಕೆಯ ಮಟ್ಟವನ್ನು ತಲುಪುವುದು.

ಕಿಣ್ವದ ಚಟುವಟಿಕೆಯನ್ನು ಭಾಗಶಃ ಅಥವಾ ಪೂರ್ಣವಾಗಿ ತಡೆಗಟ್ಟಬಲ್ಲ ರಾಸಾಯನಿಕ ವಸ್ತುಗಳಿಗೆ ಪ್ರತಿಬಂಧಕಗಳು (ಇನ್ಹಿಬಿಟರ್ಸ್) ಎಂದು ಹೆಸರು. ಅನೇಕ ಕೃತಕ ಪ್ರತಿಬಂಧಕಗಳನ್ನು ಈಗಾಗಲೇ ತಯಾರಿಸಲಾಗಿದೆ. ಇವುಗಳ ನೆರವಿನಿಂದ ಕಿಣ್ವದ ಚಟುವಟಿಕೆಯ ಪ್ರಗತಿಯನ್ನು ಪ್ರಯೋಗಶಾಲೆಯಲ್ಲಿ ಅರಿಯಲು ಸಾಧ್ಯ. ಪ್ರತಿಬಂಧಕಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಸ್ಪರ್ಧಿ ಪ್ರತಿಬಂಧಕಗಳು: ಈ ವರ್ಗಕ್ಕೆ ಸೇರಿದ ಪ್ರತಿಬಂಧಕಗಳು ಕ್ರಿಯಾಧರ ಕಿಣ್ವದೊಂದಿಗೆ ಸೇರುವಂತೆಯೇ ಕಿಣ್ವದೊಂದಿಗೆ ಸೇರಿ ಸಂಕರ್ಷಣವನ್ನು ರಚಿಸುತ್ತವೆ. ಅಂದರೆ, ಕ್ರಿಯಾಧರಕ್ಕೂ, ಪ್ರತಿಬಂಧಕಕ್ಕೂ ಕಿಣ್ವದೊಂದಿಗೆ ಸೇರುವ ಸಲುವಾಗಿ ಸ್ಪರ್ಧೆ ಏರ್ಪಡುವುದು. ಇದರ ಫಲವಾಗಿ ಕ್ರಿಯಾವೇಗ ಕುಗ್ಗುವುದು. ಸ್ಪರ್ಧಿ ಪ್ರತಿಬಂಧಕಗಳು ಸಾಮಾನ್ಯವಾಗಿ ಕ್ರಿಯಾಧಾರದ ಆಕಾರವನ್ನು ಹೋಲುತ್ತವೆ. ಪ್ರತಿಯೊಂದು ಕಿಣ್ವಕ್ಕೂ ಚಟುವಟಿಕೆಯ ಕೇಂದ್ರಗಳಿದ್ದು ಕ್ರಿಯಾಧಾರ ಈ ಕೇಂದ್ರದೊಂದಿಗೆ ರಾಸಾಯನಿಕ ಅಥವಾ ಭೌತ ಬಂಧಗಳಿಂದ ಸೇರುವುದು. ಪ್ರತಿಬಂಧಕ, ಈ ಕೇಂದ್ರವನ್ನು ಆಕ್ರಮಿಸಿ ಕ್ರಿಯಾಧರ ಕಿಣ್ವದೊಂದಿಗೆ ಸೇರುವುದನ್ನು ತಪ್ಪಿಸುತ್ತದೆ. ಸೂಕ್ಷ್ಮಜೀವಿಗಳಿಗೆ ಮಾರಕವಾಗಿ ಉಪಯೋಗವಾಗುವ ಸಲ್ಫಾನಿಲ್ ಎಮೈಡ್ ಔಷಧ ಈ ಪ್ರತಿಬಂಧಕಕ್ಕೆ ಉದಾಹರಣೆ. ಈ ತರದ ಪ್ರತಿಬಂಧಕವನ್ನು ಕ್ರಿಯಾಧಾರದ ಸಾಂದ್ರಣವನ್ನು ಸಾಕಷ್ಟು ಹೆಚ್ಚಿಸುವುದರಿಂದ ನಿವಾರಿಸಬಹುದು. (ii) ಅಸ್ಪರ್ಧಿ ಪ್ರತಿಬಂಧಕ: ಈ ಬಗೆಯ ಪ್ರತಿಬಂಧಕಗಳು ಕಿಣ್ವದ ಚಟುವಟಿಕೆಯನ್ನು ಕೇಂದ್ರದೊಂದಿಗೆ ಭೇದಿಸಲು ಅಸಾಧ್ಯವಾದ ಬಂಧಗಳಿಂದ ಸೇರಿ ಚಟುವಟಿಕೆಯನ್ನು ಕುಂಠಿತಗೊಳಿಸುತ್ತವೆ. ಉಸಿರಾಟದಲ್ಲಿ ನಿರತವಾದ ಸೈಟೋಕ್ರೋಮ್ ಕಿಣ್ವಗಳು ಸಯನೈಡಿನಿಂದ ಪ್ರತಿಬಂಧಿಸುವ ರೀತಿ ಈ ತರದ ಪ್ರತಿಬಂಧನಕ್ಕೆ ಉದಾಹರಣೆ.

ಕಿಣ್ವ ಬೃಹದಣು: ಗಾತ್ರ ಸಾಧಾರಣವಾಗಿ ಕ್ರಿಯಾಧಾರದ ಗಾತ್ರಕ್ಕಿಂತ ಅನೇಕ ಪಟ್ಟು ಹೆಚ್ಚಾಗಿರುತ್ತದೆ. ಇದರಿಂದಾಗಿ ಕಿಣ್ವ ಮತ್ತು ಕ್ರಿಯಾಧಾರಗಳ ಸಂಕರ್ಷಣದಲ್ಲಿ ಕಿಣ್ವದ ಪ್ರತಿಯೊಂದು ಅಮೈನೋ ಆಮ್ಲವೂ ಕ್ರಿಯಾಧಾರದೊಂದಿಗೆ ನೇರವಾಗಿ ಸಂಪರ್ಕಹೊಂದಿರುವುದು ಅಸಾಧ್ಯ. ಆದ್ದರಿಂದ ಕಿಣ್ವದ ಎಲ್ಲ ಭಾಗಗಳು ಕ್ರಿಯೆಗೆ ಅವಶ್ಯಕವಿಲ್ಲವೆಂದು, ಕಿಣ್ವದ ಚಟುವಟಿಕೆ, ಕೆಲವು ಅಮೈನೋ ಆಮ್ಲಗಳ ಗುಂಪಿನಲ್ಲಿ ಕೇಂದ್ರೀಕೃತವಾಗಿರುವುದೆಂದು, ತಿಳಿದುಬರುತ್ತದೆ. ಈ ಗುಂಪಿಗೆ ಕಿಣ್ವದ ಚಟುವಟಿಕೆಯ ಕೇಂದ್ರವೆಂಬ ಹೆಸರನ್ನಿಡಲಾಗಿದೆ. ಚಟುವಟಿಕೆಯ ವ್ಯಾಪ್ತಿಯಲ್ಲಿ ಕ್ರಿಯಾಧಾರದೊಂದಿಗೆ ನೇರವಾದ ಅಥವಾ ನಿಕಟಸಂಪರ್ಕವುಳ್ಳ ಅಮೈನೋ ಆಮ್ಲಗಳು ಸೇರುತ್ತವೆ. ಈ ಕೇಂದ್ರದ ಪಕ್ಕದಲ್ಲಿ ಜೋಡಿಸಲ್ಪಟ್ಟ ಕೆಲವು ಅಮೈನೋ ಆಮ್ಲಗಳ ಗುಂಪೆಂದು ಭಾವಿಸಬಾರದು. ಕಿಣ್ವದ ಅಮೈನೋ ಆಮ್ಲಗಳ ಸರಪಳಿ ಲಂಬವಾಗಿರದೆ ಮಡಿಸಿಕೊಂಡಿರುತ್ತದೆ. ಈ ಮಡಿಕೆಯ ಫಲವಾಗಿ ಸರಪಳಿಯಲ್ಲಿ ದೂರವಾಗಿರುವ ಎರಡು ಅಮೈನೋ ಆಮ್ಲಗಳು ಮೂರು ಆಯಾಮಗಳಲ್ಲಿ ನಿಕಟವಾದ ಸ್ಥಾನಗಳಲ್ಲಿರುತ್ತವೆ.

ಕಿಣ್ವದ ಚಟುವಟಿಕೆಯ ಕೇಂದ್ರದಲ್ಲಿರುವ ಅಮೈನೋ ಆಮ್ಲಗಳನ್ನು ಗುರುತಿಸಲು ನೇರವಾದ ಮತ್ತು ಪರೋಕ್ಷವಾದ ವಿಧಾನಗಳನ್ನು ಬಳಸಲಾಗಿದೆ. ನೇರವಾದ ಒಂದು ವಿಧಾನದಲ್ಲಿ, ಕೇಂದ್ರದಲ್ಲಿಯ ಯಾವುದೊಂದು ಅಮೈನೋ ಆಮ್ಲಕ್ಕೆ ಗೊತ್ತಾದ ವಸ್ತುವೊಂದನ್ನು ಕೋವೆಲಂಟ್ ಬಂಧದ ಮೂಲಕ ಸೇರಿಸಿ ಅಂಕಿತ ಗೊಳಿಸಲಾಗುವುದು. ನಂತರ ಕಿಣ್ವವನ್ನು ಜೀರ್ಣಗೊಳಿಸಿ ಅಂಕಿತಗೊಂಡಿರುವ ಅಮೈನೋ ಆಮ್ಲ ಪ್ರಕೃತಿಯನ್ನು ತಿಳಿಯಬಹುದು. ಅಂಕಿತ ಕಿಣ್ವದ ಕ್ರಿಯಾಧರವನ್ನು ಬಹುಮಟ್ಟಿಗೆ ಹೋಲುವುದಾದರೆ, ಕೃತಕ ಕ್ರಿಯಾಧರ (ಅಂಕಿತ) ಮತ್ತು ಕಿಣ್ವಗಳ ಸಂಕರ್ಷಣವನ್ನು ಬೇರ್ಪಡಿಸಿ ಪರೀಕ್ಷಿಸಬಹುದು. ಈ ವಿಧಾನವನ್ನು ಅನುಸರಿಸಿ ಟ್ರಿಪ್ಸಿನ್ ಮತ್ತು ಕೈಮೋಟ್ರಿಪ್ಸಿನ್ (ಪ್ರೊಟೀನುಗಳನ್ನು ವಿಭಜಿಸುವ ಕಿಣ್ವಗಳು) ಗ್ಲಿಸರಾಲ್ಡಿಹೈಡನ್ನು ಉತ್ಕರ್ಷಿಸುವ ಟ್ರಯೋಸ್ ಫಾಸ್ಫೇಟ್ ಡೀಹೈಡ್ರೋಜಿನೇಸ್ ಮತ್ತು ಇನ್ನೂ ಇತರ ಕಿಣ್ವಗಳ ಮತ್ತು ಅವುಗಳ ಕ್ರಿಯಾಧಾರಗಳ ಸುಸ್ಥಿರ ಸಂಕರ್ಷಣವನ್ನು ಬೇರ್ಪಡಿಸಲಾಗಿದೆ. ಫಾಸ್ಫೇಟ್ ಪುಂಜವನ್ನು ಅಂಕಿತದಂತೆ ಉಪಯೋಗಿಸಿ ಹೈಡ್ರೋಲೇಸುಗಳಲ್ಲಿ ಸೀರಿನ್ ಅಮೈನೋ ಆಮ್ಲ ಕೇಂದ್ರದಲ್ಲಿರುವ ಒಂದು ಅಮೈನೋ ಆಮ್ಲವೆಂದು ಗೊತ್ತು ಮಾಡಲಾಗಿದೆ. ಹಿಸ್ಟಿಡಿನ್ ಕೇಂದ್ರಕ್ಕೆ ಸೇರಿದ ಇನ್ನೊಂದು ಅಮೈನೋ ಆಮ್ಲ.

ಅನೇಕ ಕಿಣ್ವಗಳು ಕ್ರಿಯಾಧಾರದೊಂದಿಗೆ ಕೇವಲ ಕ್ಷಣಿಕವಾದ ಮಧ್ಯವರ್ತಿಯನ್ನು ರಚಿಸುವುದರಿಂದ ಚಟುವಟಿಕೆಯ ಕೇಂದ್ರದ ಅನ್ವೇಷಣೆ ಅಷ್ಟು ಸುಲಭವಲ್ಲ. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಎರಡು ವಿಧಾನಗಳನ್ನು ಅನುಸರಿಸಲಾಗುವುದು. (i) ಉತ್ಪತ್ತಿಯಾಗುವ ಮಧ್ಯವರ್ತಿಯನ್ನು ರಾಸಾಯನಿಕ ಕ್ರಿಯೆಗಳ ಮೂಲಕ ಸ್ಥಿರೀಕರಿಸಿ ನಂತರ ಸಂಕರ್ಷಣವನ್ನು ಬೇರ್ಪಡಿಸಬಹುದು. (ii) ಕ್ರಿಯಾಧಾರದ ಬದಲು ಅದನ್ನು ಬಹುಮಟ್ಟಿಗೆ ಹೋಲುವ ಆದರೆ, ಸ್ಥಿರವಾದ ಮಧ್ಯವರ್ತಿಯನ್ನು ಕೊಡಲು ಅರೆಕ್ರಿಯಾಧಾರವನ್ನು ಉಪಯೋಗಿಸಿ ಮಧ್ಯವರ್ತಿಯನ್ನು ಬೇರ್ಪಡಿಸಬಹುದು. ಆದರೆ ಅರೆಕ್ರಿಯಾಧಾರ ಚಟುವಟಿಕೆಯ ಕೇಂದ್ರವನ್ನು ಮಾತ್ರ ಸೇರುವುದೆಂದು ನಿಖರವಾಗಿ ಹೇಳುವಂತಿಲ್ಲ. ಉದಾಹರಣೆಗೆ ಅನೇಕ ಕಿಣ್ವಗಳು ಪ್ಯಾರಾಕ್ಲೋರೋ ಮರ್‌ಕ್ಯುರಿ ಬೆಂಜೀನ್ ಸಲ್ಫೋನೇಟ್ ಅಥವಾ ಪ್ಯಾರಾಹೈಡ್ರಾಕ್ಸಿ ಮರ್‌ಕ್ಯುರಿ ಬೆಂಜೋಯೇಟ್‌ಗಳೊಂದಿಗೆ ಬಿಡು ಥಯಾಲ್ ಅಥವಾ ಸಲ್ಫ್‌ಹೈಡ್ರಿಲ್ ಪುಂಜಗಳ ಮೂಲಕ ಸೇರಿ ಪಟುತ್ವಗೊಳ್ಳದ ಫಲಿತವನ್ನು ರಚಿಸುತ್ತವೆ. ಈ ಕಿಣ್ವಗಳ ಚಟುವಟಿಕೆಗೆ ಬಿಡುವಾಗಿರುವ SH ಪುಂಜಗಳು ಅಗತ್ಯ. ಆದರೆ ಕಿಣ್ವದ ಪಟುತ್ವವಿಹೀನತೆ ಕೇಂದ್ರದ SH ಪುಂಜಗಳಿಗಾದ ಅಡಚಣೆಯಿಂದಲೇ ಅಥವಾ ಕಿಣ್ವದ ಬೆನ್ನುಮೂಳೆಯಂತಿರುವ ಇತರ ಭಾಗಗಳ-SH ಪುಂಜಗಳು ಮೇಲೆ ಹೇಳಿದ ವಸ್ತುಗಳೊಂದಿಗೆ ಸೇರಿದಾಗ ಆಗಬಹುದಾದ ಘಟನಾತ್ಮಕ ಅವ್ಯವಸ್ಥೆಯಿಂದಲೇ ಎಂದು ಹೇಳಲು ಕಷ್ಟ.

ಕಿಣ್ವದ ಚಟುವಟಿಕೆ ಕೇಂದ್ರಗಳಲ್ಲಿರುವ ಅಮೈನೋ ಆಮ್ಲಗಳನ್ನು ಪರೋಕ್ಷ ವಿಧಾನಗಳಿಂದಲು ಗುರುತಿಸಬಹುದು. ಕಿಣ್ವಗಳ ಚಟುವಟಿಕೆ ಅವುಗಳಿಗೆ ಅನುಕೂಲವಾದ ಆಮ್ಲೀಯತೆಯಲ್ಲಿ ಗರಿಷ್ಠ ಮಿತಿಯನ್ನು ಮುಟ್ಟುವುದು. ಆಂದರೆ ಕ್ರಿಯಾವೇಗ ಅತ್ಯುನ್ನತ ಮಟ್ಟದಲ್ಲಿ ನಡೆಯುವುದು. ಹೀಗೆ ಚಟುವಟಿಕೆ ಹೆಚ್ಚಲು ಚಟುವಟಿಕೆ ಕೇಂದ್ರದಲ್ಲಿರುವ ಅಮೈನೋ ಆಮ್ಲಗಳು ಅಯಾನೀಕರಣವಾಗುವುದೇ ಕಾರಣವೆಂದು ಭಾವಿಸಲಾಗಿದೆ. ಆದ್ದರಿಂದ ವಿವಿಧ ಆಮ್ಲೀಯತೆಯ ಪರಿಸರದಲ್ಲಿ ಕಿಣ್ವದ ಪಟುತ್ವದ ಪ್ರಮಾಣವನ್ನು ಅಳೆದು ಅನುಕೂಲ ಆಮ್ಲೀಯತೆಯನ್ನು ಗೊತ್ತು ಮಾಡಿ ಆ ಆಮ್ಲೀಯತೆಯಲ್ಲಿ ಹೆಚ್ಚಿಗೆ ಅಯಾನೀಕರಣವಾಗುವ ಅಮೈನೋ ಆಮ್ಲಗಳು ಕೇಂದ್ರದಲ್ಲಿ ಇರಬಹುದೆಂದು ಭಾವಿಸುವರು. ಇನ್ನೊಂದು ಪರೋಕ್ಷ ವಿಧಾನದ ರೀತ್ಯಾ ಕಿಣ್ವವನ್ನು ಫಾರ್ಮಾಲ್‌ಡೀಹೈಡ್ ಅಥವಾ ನೈಟ್ರಸ್ ಆಮ್ಲಗಳ ಪ್ರಭಾವಕ್ಕೆ ಸಿಕ್ಕಿಸಿ ನಂತರ ಅದರ ಚಟುವಟಿಕೆಯಲ್ಲಾಗುವ ವ್ಯತ್ಯಾಸವನ್ನು ಪರೀಕ್ಷಿಸುವುದು. ಫಾರ್ಮಾಲ್‌ಡೀಹೈಡು ಬಿಡು ಅಮೈನೋ ಗುಂಪುಗಳನ್ನು ಬಂಧಿಸುತ್ತದೆ ಮತ್ತು ನೈಟ್ರಸ್ ಆಮ್ಲ ಈ ಗುಂಪನ್ನು ನಾಶಮಾಡುತ್ತವೆ. ಈ ಎರಡು ವಸ್ತುಗಳ ಪ್ರಭಾವದಿಂದ ಕಿಣ್ವದ ಪಟುತ್ವ ನಷ್ಟವಾದರೆ ಚಟುವಟಿಕೆ ಕೇಂದ್ರದಲ್ಲಿ ಬಿಡು ಅಮೈನೋ ಪುಂಜಗಳು ಇವೆಯೆಂದು ಭಾವಿಸಬಹುದು. ಪರೋಕ್ಷ ವಿಧಾನಗಳೆಲ್ಲವು ಕೇಂದ್ರದಲ್ಲಿರುವ ಅಮೈನೋ ಆಮ್ಲಗಳ ಪ್ರಕೃತಿಯ ಬಗ್ಗೆ ನಿಶ್ಚಿತವಾದ ಉತ್ತರ ಕೊಡಲಾರವು. ಇತ್ತೀಚೆಗೆ ಲೈಸೋಸೈಮ್ ಕಿಣ್ವದ ಚಟುವಟಿಕೆ ಕೇಂದ್ರವನ್ನು ಎಕ್ಸ್ ಕಿರಣಗಳ ಸಹಾಯದಿಂದ ಗೊತ್ತು ಹಚ್ಚಿ ಅದರಲ್ಲಿರುವ ಅಮೈನೋ ಆಮ್ಲಗಳ ಪ್ರಕೃತಿಯನ್ನು ನಿರ್ಧರಿಸಲಾಗಿದೆ.

ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ರಾಸಾಯನಿಕ ಕ್ರಿಯೆ ಅತ್ಯಂತ ಜಟಿಲವಾದದ್ದು. ಕ್ರಿಯೆ ನಡೆಯುವಾಗ ಭೇದಿಸಲ್ಪಡುವ ಅಥವಾ ರಚಿತವಾಗುವ ಬಂಧಗಳ ಸ್ವರೂಪ, ಮಧ್ಯವರ್ತಿಗಳ ಪ್ರಕೃತಿ ಮತ್ತು ಕ್ರಿಯಾಮಾರ್ಗ ಇವೆಲ್ಲವನ್ನು ತಿಳಿಯಬೇಕಾದರೆ ಕೆಲವು ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕು. ಈ ಬಗೆಯ ವಿಶ್ಲೇಷಣಗಳು ಅಣುವಿನ ಮಟ್ಟದಲ್ಲಿ ನಡೆಯಬೇಕಾದ್ದರಿಂದ ಕ್ರಿಯಾಧಾರದ ಮೂರು ಆಯಾಮಗಳ ಆಕೃತಿ ಕಿಣ್ವದ ಆಕೃತಿಯೊಂದಿಗೆ ಹೊಂದಿಕೊಂಡು ಸಂಕರ್ಷಣವಾಗುವ ಬಗೆ, ಸಂಕರ್ಷಣದ ಫಲವಾಗಿ ಕ್ರಿಯಾಧಾರದ ಘಟನೆಯಲ್ಲಿ ಉಂಟಾಗುವ ಬದಲಾವಣೆ ಮತ್ತು ಫಲಿತದ ಉತ್ಪತ್ತಿ ಇವೆಲ್ಲದರ ಅರಿವು ನಮಗಾಗಬೇಕು. ಕ್ರಿಯೆ ಅತ್ಯಂತ ವೇಗದಲ್ಲಿ ನಡೆಯುವುದರಿಂದ ಕ್ರಿಯಾಧಾರ–ಕಿಣ್ವದ ಸಂಕರ್ಷಣಗಳು ಅತ್ಯಂತ ಅಲ್ಪಾಯುಷಿಗಳಾದ್ದರಿಂದಲು ಈ ಪ್ರಶ್ನೆಗಳಿಗೆ ಉತ್ತರ ದೊರಕಿಸುವುದು ಸುಲಭವಲ್ಲ. ಆದರೂ ಕ್ರಿಯೆಯ ಪ್ರಾರಂಭವೇಗ ಮತ್ತು ಸ್ಥಿರಸ್ಥಿತಿ ಸಮತೋಲನದ ಮೇಲೆ ಪ್ರತಿಬಂಧಕಗಳಿಂದಾಗುವ ಪರಿಣಾಮದ ಅಧ್ಯಯನದಿಂದಲೂ, ಸಮಸ್ಥಾನಿಗಳ ಉಪಯೋಗದಿಂದ, ಕೆಲವು ಕಿಣ್ವಗಳ ಕ್ರಿಯಾವಿಧಿಯ ಬಗ್ಗೆ ಅಧ್ಯಯನಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಕಿಣ್ವಗಳು ಪ್ರೋಟೀನುಗಳಾದ್ದರಿಂದ ಕೋಶದಲ್ಲಿ ಪ್ರೋಟೀನುಗಳು ಸಂಶ್ಲೇಷಣೆಯಾಗುವ ರೀತಿಯಲ್ಲಿ ಉತ್ಪತ್ತಿಯಾಗುತ್ತವೆ. ಕೋಶದ ಡಿಎನ್‌ಎ ಕಿಣ್ವದ ಸಂಶ್ಲೇಷಣೆಗೆ ಬೇಕಾದ ಸುದ್ದಿಯನ್ನು ಒದಗಿಸುತ್ತದೆ. ಅಮೈನೋ ಆಮ್ಲಗಳನ್ನು ಹೊತ್ತ ಆರ್‌ಎನ್‌ಎಗಳು ಡಿಎನ್‌ಎ–ನಿರ್ದೇಶಿತ ದೂತ–ಆರ್‌ಎನ್‌ಎ ನೇತೃತ್ವದಲ್ಲಿ ರೈಬೋಸೋಮುಗಳಿಗೆ ಅಮೈನೋ ಆಮ್ಲವನ್ನು ಕೊಂಡೊಯ್ಯುತ್ತವೆ. ರೈಬೋಸೋಮಿನ ಮೇಲೆ ಅಮೈನೊ ಆಮ್ಲಗಳು ಅನುಕ್ರಮವಾಗಿ ಬದ್ಧವಾಗಿ ಕಿಣ್ವವನ್ನು ಉತ್ಪತ್ತಿಮಾಡುತ್ತವೆ. ಸಿದ್ಧವಾದ ಕಿಣ್ವ ಸರಿಯಾದ ರೀತಿಯಲ್ಲಿ ಮಡಚಿಕೊಂಡು ಪಟುತ್ವವುಳ್ಳ ಕಿಣ್ವವಾಗುತ್ತದೆ. ಕಿಣ್ವವನ್ನು ಸಂಶ್ಲೇಷಿಸಲು ಬೇಕಾದ ಪರಿಜ್ಞಾನ ಆನುವಂಶೀಯವಾಗಿ ದೊರೆಯುತ್ತದೆ. ಎಶ್ಚಿರಿಶಿಯಾ ಕೋಲಿ (ಈ. ಕೊಲಿ) ಸೂಕ್ಷ್ಮ ಜೀವಿಗಳಲ್ಲಿ ಅವು ಬೆಳೆಯುವ ಮಾಧ್ಯಮದ ಘಟಕಗಳನ್ನು ಮಾರ್ಪಡಿಸಿ ಪ್ರೇರೇಪಿಸಬಹುದು. ಗ್ಲೂಕೋಸನ್ನು ಒಳಗೊಂಡ ಮಾಧ್ಯಮದಿಂದ ಎಶ್ಚರಿಶಿಯಾ ಕೋಲಿಯನ್ನು ಲ್ಯಾಕ್ಟೋಸ್ ಒಳಗೊಂಡ ಮಾಧ್ಯಮಕ್ಕೆ ಬದಲಾಯಿಸಿದರೆ, ಅದು ತನ್ನಲ್ಲಿ ಸಾಧಾರಣವಾಗಿ ಉತ್ಪತ್ತಿಯಾಗದ ಬೀಟಗ್ಯಲಾಕ್ಟೋಸೈಡೇಸ್ ಎಂಬ ಕಿಣ್ವವನ್ನು ಉತ್ಪಾದಿಸಲು ಪ್ರಾರಂಭಿಸುತ್ತದೆ. ಪುನಃ ಗ್ಲೂಕೋಸ್ ಮಾಧ್ಯಮಕ್ಕೆ ಬದಲಾಯಿಸಿದಾಗ ಕಿಣ್ವದ ಉತ್ಪತ್ತಿ ನಿಂತುಹೋಗುತ್ತದೆ.

ಇತ್ತೀಚಿನ ಸಂಶೋಧನೆಗಳು ಆನುವಂಶೀಯ ಗುಣಗಳಿಗೂ, ಕಿಣ್ವಗಳಿಗೂ ಇರುವ ಸಂಬಂಧವನ್ನು ತೋರಿಸಿಕೊಟ್ಟಿವೆ. ಪೀಳಿಗೆ ತನ್ನ ಪಿತೃಗಳಿಂದ ಅನೇಕ ವಿಶಿಷ್ಟ ಗುಣಗಳನ್ನು ಆನುವಂಶಿಕವಾಗಿ ಪಡೆಯುತ್ತದೆ. ಹೂವಿನ ಬಣ್ಣ, ಪರಿಮಳ, ಹಣ್ಣುಗಳ ರುಚಿ, ಮಾನವನಲ್ಲಿರುವ ಕೂದಲಿನ ಬಣ್ಣ, ಮೈ ಬಣ್ಣ, ಮುಖದ ರೂಪರೇಖೆಗಳು, ನಡೆಯುವ ರೀತಿ, ಮಾತಿನ ಧ್ವನಿ ಇತ್ಯಾದಿಗಳಲ್ಲಿ ಅನುರೂಪತೆಯನ್ನು ಕಾಣುತ್ತದೆ. ಹೊರನೋಟಕ್ಕೆ ಕಾಣುವ ಈ ಭೌತಗುಣಗಳು ರಾಸಾಯನಿಕ ಕ್ರಿಯೆಗಳ ಅಂತ್ಯ ಫಲಿತಾಂಶಗಳು. ಈ ರಾಸಾಯನಿಕ ವಸ್ತುಗಳನ್ನು ತಯಾರಿಸಲು ಕೋಶ ಕಿಣ್ವದ ಸಹಾಯವನ್ನು ಪಡೆಯುತ್ತದೆ. ಕಿಣ್ವದಲ್ಲಿ ಇರಬಹುದಾದ ವ್ಯತ್ಯಾಸಗಳಿಂದ ಬಣ್ಣ, ಪರಿಮಳ, ರುಚಿ ವೈವಿಧ್ಯಗಳೇರ್ಪಡುತ್ತವೆ.

ಆನುವಂಶೀಯತೆ ಮತ್ತು ಕಿಣ್ವಗಳಿಗೆ ಇರುವ ನಿಕಟಸಂಬಂಧವನ್ನು ಬೀಡ್ಲ್ ಮತ್ತು ಟೇಟಮ್ ಎಂಬ ವಿಜ್ಞಾನಿಗಳು ನ್ಯೂರೋಸ್ಪಾರಾ ಕ್ರಾಸಾ ಎಂಬ ಬೂಷ್ಟಿನಲ್ಲಿ ನಡೆಸಿದ ಸಂಶೋಧನೆಗಳಿಂದ ಸ್ಪಷ್ಟಪಡಿಸಿದರು. ಸಹಜವಾಗಿ ಬೂಷ್ಟಿನ ಬೆಳವಣಿಗೆಗೆ ಆರ್ಜಿನಿನ್ ಎಂಬ ಅಮೈನೋ ಆಮ್ಲ ಬೇಕು. ಬೂಷ್ಟು ಈ ಆಮ್ಲವನ್ನು ಗ್ಲುಟಾಮಿಕ್ ಆಮ್ಲದಿಂದ ತಯಾರಿಸಿಕೊಳ್ಳಬಲ್ಲುದು. ಒಂದು ತರಹೆಯ ವ್ಯತ್ಯಯ (ಮ್ಯುಟೇಷನ್) ಉಂಟಾದಾಗ ಈ ಸಾಮರ್ಥ್ಯಕ್ಕೆ ಕುಂದು ಬರುವುದು. ಈ ಬೂಷ್ಟಿನ ಬೆಳವಣಿಗೆಗೆ ಆರ್ಜಿನಿನ್ ಆಮ್ಲವನ್ನೇ ಒದಗಿಸಬೇಕು. ಈ ವ್ಯತ್ಯಯವನ್ನು Z ಎಂದು ಭಾವಿಸುವುದಾದರೆ ಸಿಟ್ರುಲಿನ್ ಅಥವಾ ಆರ್ಜಿನಿನ್ ಒದಗಿಸಿದರೂ ಬೆಳೆಯುವ ಸಾಮರ್ಥ್ಯವನ್ನು ಪಡೆದಿರುವ ವ್ಯತ್ಯಯ Y ಎಂದು ಭಾವಿಸಬಹುದು. X ವ್ಯತ್ಯಯ ಹೊಂದಿದ ಬೂಷ್ಟು ಆರ್ನಿಥಿನ್ ಅಥವಾ ಸಿಟ್ರುಲಿನ್ ಅಥವಾ ಆರ್ಜಿನಿನ್ ಒದಗಿಸಿದರೂ ಬೆಳೆಯುತ್ತದೆ. ಆಂದರೆ, ಬೂಷ್ಟು ಗ್ಲುಟಾಮಿಕ್ ಆಮ್ಲವನ್ನು ಆರ್ಜಿನಿನ್‌ಗೆ ಕೆಳಕಂಡ ಹಂತಗಳಲ್ಲಿ ಮಾರ್ಪಡಿಸುತ್ತದೆಂದು ಭಾವಿಸಬಹುದು.

X Y Z
ಕಿಣ್ವ 1 ಕಿಣ್ವ 2 ಕಿಣ್ವ 3
ಗ್ಲುಟಾಮಿಕ್ $\rightarrow$ ಆರ್ನಿಥಿನ್ $\rightarrow$ ಸಿಟ್ರುಲಿನ್ ಆರ್ಜಿನಿನ್

ಪ್ರತಿಯೊಂದು ಹಂತದಲ್ಲಿಯೂ ವಿಶಿಷ್ಟ ಕಿಣ್ವ ಭಾಗವಹಿಸುತ್ತದೆ. Z ವ್ಯತ್ಯಯ ಹೊಂದಿದ ಜೀವಿಗಳಲ್ಲಿ 3ನೆಯ ಕಿಣ್ವ ಉತ್ಪತ್ತಿಯಾಗುವುದಿಲ್ಲ ಅಥವಾ ಉತ್ಪತ್ತಿಯಾದರೂ ಅದರ ಸಾಮರ್ಥ್ಯ ಬಹುಮಟ್ಟಿಗೆ ನಷ್ಟವಾಗಿರುತ್ತದೆ. ಹಾಗೆಯೇ Y ವ್ಯತ್ಯಯ ಹೊಂದಿದ ಜೀವಿಗಳಲ್ಲಿ 2ನೆಯ ಕಿಣ್ವ ಉತ್ಪತ್ತಿಯಾಗುವುದಿಲ್ಲ ಮತ್ತು X ವ್ಯತ್ಯಯ ಹೊಂದಿದ ಬೂಷ್ಟಿನಲ್ಲಿ 1ನೆಯ ಕಿಣ್ವ ಸಂಶ್ಲೇಷಣೆಯಾಗುವುದಿಲ್ಲ. X, Y ಮತ್ತು Z ರೀತಿಯ ವ್ಯತ್ಯಯವನ್ನು ಹೊಂದಿದ ನ್ಯೂರೋಸ್ಪಾರಾ ಜೀವಿಗಳ ಕೋಶವನ್ನು ಪರೀಕ್ಷಿಸಿದಾಗ ಈ ಜೀವಿಗಳಲ್ಲಿ ಸಂಬಂಧಪಟ್ಟ ಕಿಣ್ವಗಳು (i) ಅತ್ಯಲ್ಪ ಪ್ರಮಾಣದಲ್ಲಿ ಸಂಶ್ಲೇಷಣೆಯಾಗುತ್ತವೆ. (ii) ತಯಾರಿಸಲ್ಪಟ್ಟರೂ ಭಾಗಶಃ ಇಲ್ಲವೆ ಸಂಪೂರ್ಣವಾಗಿ ವೇಗವರ್ಧಕ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತವೆ. ಅಥವಾ (iii) ಕಿಣ್ವಗಳನ್ನು ರಚನೆ ಮತ್ತು ಇತರ ಗುಣಗಳಲ್ಲಿ ಹೋಲುವ ಆದರೆ, ಕ್ರಿಯಾವರ್ಧಕ ಶಕ್ತಿಯಿಲ್ಲದ ವೈಪರೀತ್ಯ ಪ್ರೋಟೀನಿನ ಉತ್ಪತ್ತಿ ಆಗುವುದೆಂದು ತಿಳಿದು ಬಂದಿತು. Z ವ್ಯತ್ಯಯವನ್ನು ಹೊಂದಿದ ಜೀವಿಯ ಕೋಶವನ್ನು ನೇರವಾಗಿ ಅಥವಾ ಗ್ಲುಟಾಮಿಕ್ ಆಮ್ಲವನ್ನು ಒದಗಿಸಿದ ನಂತರ ಪರೀಕ್ಷಿಸಿದರೆ, ಸಿಟ್ರುಲಿನ್, ಆರ್ನಿಥಿನ್ ಮತ್ತು ಗ್ಲುಟಾಮಿಕ್ ಆಮ್ಲಗಳು ಅನುಕ್ರಮವಾದ ಪ್ರಮಾಣದಲ್ಲಿ ಶೇಖರವಾಗುತ್ತವೆಂದು ತೋರಿಸಬಹುದು. ಆರ್ಜಿನಿನ್ ಆಮ್ಲವನ್ನು ತನ್ನ ಕೋಶಗಳಲ್ಲಿ ಸಂಘಟಿಸಲಾರದ ಜೀವಿಯ ಕೋಶಗಳಲ್ಲಿ 1ನೆಯ ಮತ್ತು 2ನೆಯ ಕಿಣ್ವ ತಯಾರಾಗುತ್ತದೆಯಾದರೂ, 3ನೆಯ ಕಿಣ್ವ ತಯಾರಾಗುವುದಿಲ್ಲ. ಆಂದರೆ ಗ್ಲುಟಾಮಿಕ್ ಆಮ್ಲ ಆರ್ನಿಥಿನ್‌ಗೂ, ಆರ್ನಿಥಿನ್ ಸಿಟ್ರುಲಿನ್ನಿಗೂ ಪರಿವರ್ತನೆಯಾಗುತ್ತದೆ. ಆದರೆ 3ನೆಯ ಕಿಣ್ವದ ಅಭಾವವಿರುವುದರಿಂದ ಸಿಟ್ರುಲಿನ್ ಆರ್ಜಿನಿನ್ನಿಗೆ ಪರಿವರ್ತನೆಯಾಗುವುದಿಲ್ಲ.

ಆನುವಂಶೀಯತೆಗೆ ಜೀವಿಗಳ ಕೋಶಗಳಲ್ಲಿರುವ ವರ್ಣತಂತುಗಳೇ ಕಾರಣವೆಂದು ಅನೇಕ ವರ್ಷಗಳಿಂದ ತಿಳಿದುಬಂದಿದೆ. ವ್ಯತ್ಯಯ ಹೊಂದಿದ ಜೀವಿಗಳಲ್ಲಿನ ವರ್ಣತಂತುವಿನ ನಕ್ಷೆಗೂ (ಜೆನೆಟಿಕ್ ಮ್ಯಾಪ್) ಸಹಜ ಜೀವಿಗಳಲ್ಲಿನ ವರ್ಣತುಂತುವಿನ ನಕ್ಷೆಗೂ ವ್ಯತ್ಯಾಸವಿದೆ. ವರ್ಣತಂತುವಿನಲ್ಲಿ ಅನೇಕಾನೇಕ ಜೀನ್‌ಗಳಿವೆ. ಕಿಣ್ವಗಳ ಉತ್ಪತ್ತಿಯನ್ನು ಈ ಜೀನ್‌ಗಳು ನಿರ್ದೇಶಿಸುತ್ತವೆ. ಇದರಿಂದ ಒಂದು ಜೀನ್ ಒಂದು ಪ್ರೋಟೀನ್ ಎಂಬ ತತ್ತ್ವ ಪ್ರತಿಪಾದಿಸಲ್ಪಟ್ಟು ಬಹುಮಟ್ಟಿಗೆ ಪ್ರಾಯೋಗಿಕ ಆಧಾರವನ್ನು ಪಡೆಯಿತು. ಇತ್ತೀಚಿನವರೆಗೆ ಜೀನ್, ವರ್ಣತಂತುವಿನ ಪೃಥಕ್ಕಾದ (ಡಿಸ್‌ಕ್ರೀಟ್) ಒಂದು ಅಂಶವೆಂದೂ, ಆನುವಂಶಿಕ ವ್ಯತ್ಯಯಕ್ಕೆ ಒಳಗಾದ ಜೀವಿಗಳಲ್ಲಿ ಈ ವ್ಯತ್ಯಯ ಜೀನಿನ ಮಟ್ಟದಲ್ಲಿ ಉಂಟಾಗಿ ಕಿಣ್ವದ ಅಭಾವ ಅಥವಾ ಕುಂಠಿತ ಪಟುತ್ವ ಇತ್ಯಾದಿ ಗುಣಗಳಲ್ಲಿ ಪ್ರತಿಬಿಂಬಿತವಾಗುವುದೆಂದು ನಂಬಲಾಗಿತ್ತು. ಬ್ಯಾಕ್ಟಿರಿಯೋಫೇಜ್ ಎಂಬ ಅತಿಸೂಕ್ಷ್ಮಜೀವಿಗಳಲ್ಲಿ ನಡೆದ ಸಂಶೋಧನೆಗಳಿಂದ ವ್ಯತ್ಯಯಕ್ಕೆ ಒಳಗಾದ ಜೀವಿಗಳಲ್ಲಿ ಜೀನಿನ ಒಳಭಾಗದಲ್ಲಿ ಯಾವುದೊಂದು ಸ್ಥಳದಲ್ಲಿ ಮಾತ್ರ ವ್ಯತ್ಯಾಸವಾಗುವುದೆಂದು ತಿಳಿದುಬಂದಿತು. ಒಂದು ಜೀನ್–ಒಂದು ಪ್ರೋಟೀನ್ ಎಂಬ ತತ್ತ್ವ ಕೊಂಚ ಮಾರ್ಪಾಡಾಗಿ ಒಂದು ಜೀನ್–ಒಂದು ಪಾಲಿಪೆಪ್ಟೈಡ್ ಎಂಬ ತತ್ತ್ವ ಪ್ರಚಲಿತವಾಗಿದೆ. ಆಂದರೆ ವರ್ಣತಂತುವಿನ ಒಂದು ಪೃಥಕ್ ಅಂಶವಾದ ಒಂದು ಜೀನ್ ಕೋಶದಲ್ಲಿ ಒಂದು ಪಾಲಿಪೆಪ್ಟೈಡ್ ಉತ್ಪತ್ತಿಗೆ ಕಾರಣವೆಂದರ್ಥ. ಕಿಣ್ವ ಪಾಲಿಪೆಪ್ಟೈಡ್, ಆದ್ದರಿಂದ ಜೀನ್ ಕಿಣ್ವದ ಸಂಶ್ಲೇಷಣೆಗೆ ಕಾರಣ.

ವರ್ಣತಂತುಗಳು ರಾಸಾಯನಿಕವಾಗಿ ನ್ಯೂಕ್ಲಿಯಿಕ್ ಆಮ್ಲಗಳು. ಇವುಗಳಲ್ಲಿ ಡಿ ಆಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲಗಳ (ಡಿಎನ್‌ಎ) ಸರಪಣಿಗಳಿವೆ. ಈ ಆಮ್ಲಗಳು ಅಡಿನೈನ್, ಥಯಮೀನ್, ಗ್ವಾನಿನ್ ಮತ್ತು ಸೈಟೋಸಿನ್ ಎಂಬ ಪ್ರತ್ಯಾಮ್ಲಗಳಿಂದ, ಡಿ ಆಕ್ಸಿರೈಬೋಸ್ ಎಂಬ ಸಕ್ಕರೆಯಿಂದ ಮತ್ತು ಫಾಸ್ಫಾರಿಕ್ ಆಮ್ಲಗಳಿಂದ ರೂಪಿತವಾಗಿವೆ. ರೈಬೋಸ್ ಮತ್ತು ಫಾಸ್ಫೇಟುಗಳು ಸರಪಣಿಯ ಬೆನ್ನೆಲುಬುಗಳು. ಡಿಎನ್‌ಎ ಗಳ ವೈವಿಧ್ಯಕ್ಕೆ ನಾಲ್ಕು ಪ್ರತ್ಯಾಮ್ಲಗಳ ಜೋಡಣೆಯ ಕ್ರಮವೇ ಕಾರಣ. ಜೀನ್‌ಗಳಲ್ಲಿನ ಪ್ರತ್ಯಾಮ್ಲಗಳ ಅನುಕ್ರಮತೆಗೂ ಜೀನುಗಳಿಂದ ನಿರ್ದೇಶಿತವಾದ ಕಿಣ್ವಗಳ ಅಮೈನೋ ಆಮ್ಲಗಳ ಅನುಕ್ರಮತೆಗೂ ಇರುವ ಸಂಬಂಧವನ್ನು ಬಹುಮಟ್ಟಿಗೆ ಅರಿಯಲು ಸಾಧ್ಯವಾಗಿದೆ. ಡಿಎನ್‌ಎ ಬೃಹದಣುವಿನಲ್ಲಿ ಪಕ್ಕಪಕ್ಕದಲ್ಲಿ ಜೋಡಿಸಲ್ಪಟ್ಟಿರುವ ಮೂರು ಪ್ರತ್ಯಾಮ್ಲಗಳ ಗುಂಪು ಒಂದು ಅಮೈನೋ ಆಮ್ಲದ ಸಂಕೇತದಂತೆ ವರ್ತಿಸುತ್ತದೆ. ಪ್ರೋಟೀನುಗಳಲ್ಲಿರುವ ಸು. 20 ಅಮೈನೋ ಆಮ್ಲಗಳ ಸಂಕೇತ ಗುಂಪುಗಳನ್ನು ನಿರ್ಧರಿಸಲಾಗಿದೆ. ಕೋಶಗಳಲ್ಲಿ ಕಿಣ್ವಗಳು ಸಂಶ್ಲೇಷಣೆಯಾಗುವ ವೇಳೆಯಲ್ಲಿ ಡಿಎನ್‌ಎ ತನ್ನಲ್ಲಿರುವ ಪ್ರತ್ಯಾಮ್ಲಗಳ ತ್ರಿವಳಿ ಜೋಡಣೆಯ ಪ್ರಕಾರ ಪ್ರೋಟೀನುಗಳಲ್ಲಿ ಅಮೈನೋ ಆಮ್ಲಗಳು ಯಾವ ಯಾವ ಸ್ಥಾನದಲ್ಲಿ ಸೇರಬೇಕೆಂಬುದನ್ನು ಅರ್ಥಾತ್ ಆಮ್ಲಗಳ ಜೋಡಣೆಯನ್ನು ನಿರ್ದೇಶಿಸುತ್ತದೆ. ಆಂದರೆ, ಪ್ರೋಟೀನಿನ ಭೌತ ಮತ್ತು ರಾಸಾಯನಿಕ ಗುಣಗಳನ್ನು ಡಿಎನ್‌ಎ ತನ್ನ ಹತೋಟಿಯಲ್ಲಿಟ್ಟುಕೊಂಡಿರುತ್ತದೆ. ವರ್ಣತಂತುವಿನ ಪ್ರತಿ ಒಂದು ಜೀನು ಒಂದು ಪಾಲಿಪೆಪ್ಟೈಡಿಗೆ ಬೇಕಾದ ಸಮಾಚಾರವನ್ನು ಅಡಕಮಾಡಿಕೊಂಡಿರುತ್ತದೆ. ಡಿಎನ್‌ಎ ಪ್ರತ್ಯಾಮ್ಲಗಳ ಜೋಡಣೆಯಲ್ಲಿ ಅಕಸ್ಮಾತ್ ವ್ಯತ್ಯಾಸವುಂಟಾದರೆ ಪ್ರೋಟೀನಿನ ಅಮೈನೋ ಆಮ್ಲಗಳ ಜೋಡಣೆಯಲ್ಲಿ ವ್ಯತ್ಯಾಸಗಳುಂಟಾಗಿ ಅದರ ಗುಣಗಳೇ ಬದಲಾವಣೆಯಾಗುತ್ತವೆ. ವ್ಯತ್ಯಯವಾದಾಗ ಡಿಎನ್‌ಎ ಸರಣಿಯ ಅನುಕ್ರಮದಲ್ಲಿ ವ್ಯತ್ಯಾಸವಾಗುತ್ತದೆ. ತತ್ಫಲವಾಗಿ ಉತ್ಪತ್ತಿಯಾಗುವ ಪ್ರೋಟೀನ್ ಕಿಣ್ವವಾಗಿದ್ದ ಪಕ್ಷದಲ್ಲಿ ಅದರ ವೇಗವರ್ಧಕ ಶಕ್ತಿ ಭಾಗಶಃವಾಗಿ ಇಲ್ಲವೆ ಸಂಪೂರ್ಣವಾಗಿ ನಷ್ಟ ಹೊಂದುತ್ತದೆ.

ಮಾನವನ ಆನುವಂಶೀಯತೆಯ ಬಗ್ಗೆ ನಡೆದಿರುವ ಅಧ್ಯಯನಗಳಿಗೆ ಆನುವಂಶಿಕ ರೋಗಗಳ ಬಗ್ಗೆ ನಡೆದಿರುವ ಸಂಶೋಧನೆಗಳಿಂದ ಬಹುಮಟ್ಟಿಗೆ ಪ್ರಯೋಜನವಾಗಿದೆ. ಈ ರೋಗಗಳು ಅಮೈನೋ ಆಮ್ಲಗಳ ಚಯಾಪಚಯ ಮಾರ್ಗದಲ್ಲಿ ಉಂಟಾಗುವ ವ್ಯತ್ಯಾಸಗಳಿಂದ ಉದ್ಭವವಾಗುತ್ತವೆ. ಈಗ ಅರ್ಧ ಶತಮಾನಗಳ ಹಿಂದೆಯೇ ಗ್ಯರಾಡ್ ಎಂಬ ವಿಜ್ಞಾನಿ ಸಿಸ್ಟಿನೂರಿಯ, ಆಲ್‌ಕ್ಯಾಪ್ಟೋನೂರಿಯ, ವರ್ಣಹೀನತೆ (ಆಲ್ಬಿನಿಸಂ) ಮುಂತಾದ ಕಾಯಿಲೆಗಳು ಸಹಜವಾಗಿ ನಡೆಯಬೇಕಾದ ಅಮೈನೋ ಆಮ್ಲಗಳ ಚಯಾಪಚಯ ಹಾದಿಯಲ್ಲಿ ಕಾಣಿಸಿಕೊಳ್ಳುವ ಸ್ವಭಾವಜನ್ಯ ದೋಷದಿಂದ ಉಂಟಾಗುವ ಸ್ವಭಾವಜನ್ಯ ರೋಗಗಳೆಂದು ಗುರುತಿಸಿದ. ಈ ದೋಷಗಳು ಯಾವುದೊಂದು ನಿರ್ದಿಷ್ಟ ಕಿಣ್ವಗಳ ಅಭಾವದಿಂದ ಉಂಟಾಗಿರಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ. ಅಲ್‌ಕ್ಯಾಪ್ಟೋನೂರಿಯ ಕಾಯಿಲೆಯಿಂದ ನರಳುತ್ತಿದ್ದ ರೋಗಿಯಲ್ಲಿ ಹೋಮೋಜಂಟಿಸಿಕ್ ಆಕ್ಸಿಡೇಸ್ ಎಂಬ ಕಿಣ್ವ ಉತ್ಪತ್ತಿಯಾಗುವುದಿಲ್ಲವೆಂದು 1958ರಲ್ಲಿ ತಿಳಿಯಿತು. ಈ ರೋಗದಲ್ಲಿ ರೋಗಿ ಮೂತ್ರವಿಸರ್ಜನೆ ಮಾಡಿದ ನಂತರ ಅದು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಈ ಮೂತ್ರದಲ್ಲಿ ಹೋಮೋ ಜಂಟಿಸಿಕ್ ಆಮ್ಲವಿದ್ದು ಗಾಳಿಯ ಸಂಪರ್ಕದಲ್ಲಿ ಅದು ಕಪ್ಪುಬಣ್ಣಕ್ಕೆ ತಿರುಗುತ್ತದೆ. ಸಹಜವಾಗಿ ಹೋಮೋಜಂಟಿಸಿಕ್ ಆಮ್ಲ ದೇಹದಲ್ಲಿ ಉತ್ಕರ್ಷಣೆ ಹೊಂದುತ್ತದೆ. ಈ ಕ್ರಿಯೆಯನ್ನು ವರ್ಧಿಸುವ ಹೋಮೋಜಂಟಿಸ್ ಆಕ್ಸಿಡೇಸ್ ಕಿಣ್ವ ರೋಗಿಯಲ್ಲಿ ಇಲ್ಲವಾದಾಗ ಈ ಆಮ್ಲ ರಕ್ತದಲ್ಲಿ ಶೇಖರವಾಗಿ ಮೂತ್ರದಲ್ಲಿ ವಿಸರ್ಜಿತವಾಗುತ್ತದೆ. ಹೋಮೋಜಂಟಿಸಿಕ್ ಆಮ್ಲ ಟೈರೋಸೀನ್ ಆಮ್ಲದ ಅಪಚಯದ ಹಾದಿಯಲ್ಲಿ ಒಂದು ಮಧ್ಯವರ್ತಿ.

ಮಾನವನಲ್ಲಿ ಕಿಣ್ವಗಳ ಅಭಾವದಿಂದ ಉಂಟಾಗುವ ಕಾಯಿಲೆಗಳ ಅಧ್ಯಯನ ಕಿಣ್ವದ ಅಭಾವತೆಯ ಸ್ವರೂಪವನ್ನು ನಿಶ್ಚಯಿಸುವುದರಷ್ಟಕ್ಕೆ ಮಾತ್ರ ಸೀಮಿತವಾಗದೆ, ತತ್ಸಂಬಂಧವಾಗಿ ಉಂಟಾಗುವ ಇತರ ಪ್ರತಿಕ್ರಿಯೆಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ ರೋಗಕ್ಕೆ ನೇರವಾಗಿ ಸಂಬಂಧವಿಲ್ಲದಂತೆ ತೋರುವ ಅನೇಕ ಪ್ರತಿಕ್ರಿಯೆಗಳು ತೋರಿಬರುತ್ತವೆ. ಫೀನೈಲ್ ಕಿಟೋನೂರಿಯ ಎಂಬ ಆನುವಂಶಿಕ ರೋಗದಿಂದ ನರಳುವ ರೋಗಿಯ ಬುದ್ಧಿ ಬಹಳ ಮಂದ. ಈ ಕಾಯಿಲೆಯಲ್ಲಿ ರೋಗಿಯ ಮೂತ್ರದಲ್ಲಿ ಫೀನೈಲ್ ಪೈರೂವಿಕ್ ಆಮ್ಲ, ಫೀನೈಲ್ ಅಸಿಟಿಕ್ ಆಮ್ಲ ಮತ್ತು ಫೀನೈಲ್ ಅಲಾನಿನ್ ಆಮ್ಲಗಳು ಸಾಧಾರಣಮಟ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಸರ್ಜಿತವಾಗುತ್ತವೆ. ಇಂಥ ರೋಗಪೀಡಿತರು ಎಕ್ಸಿಮಾ ಮತ್ತು ನಡುಕ ರೋಗಗಳಿಂದ ಬಾಧೆ ಪಡುತ್ತಾರೆ. ಫೀನೈಲ್ ಅಲಾನಿನ್ ಆಮ್ಲ ಟೈರೋಸೀನಿಗೆ ಬದಲಾವಣೆಯಾಗದಿರುವುದೇ ಇದಕ್ಕೆ ಕಾರಣ. ಕ್ರಿಯೆಯನ್ನು ನಡೆಸುವ ಫೀನೈಲ್ ಅಲಾನಿನ್ ಹೈಡ್ರಾಕ್ಸಿಲೇಸ್ ಎಂಬ ಕಿಣ್ವದ ಸಾಮರ್ಥ್ಯ ಬಹುಮಟ್ಟಿಗೆ ಕುಂಠಿತವಾಗಿರುತ್ತದೆ.

ದೇಹದಲ್ಲಿ ನಡೆಯುವ ವಿವಿಧ ಕ್ರಿಯೆಗಳು ಪರಸ್ಪರ ಸಂಬಂಧವನ್ನು ಹೊಂದಿರುವುದರಿಂದ ಒಂದು ಕ್ರಿಯೆಯಲ್ಲಿ ಉಂಟಾಗುವ ದೋಷ ಆ ಕ್ರಿಯೆಗೆ ಮಾತ್ರ ಸೀಮಿತವಾಗದೆ ನಾನಾ ತರಹದ ಉಪಕ್ರಿಯೆಗಳಿಗೆ ಅವಕಾಶಮಾಡಿಕೊಡುತ್ತದೆ. ಒಂದೇ ತರಹದ ಕೋಶಗಳಿಂದ ಪ್ರಾರಂಭವಾಗುವ ಭ್ರೂಣ ಬೆಳೆಯುವಾಗ ಅನೇಕ ತರಹದ ಕೋಶಗಳಾಗಿ ಮಾರ್ಪಡುತ್ತದೆ. ಈ ಸಮಯದಲ್ಲಿ ಯಾವ ಒಂದು ಕ್ರಿಯೆಯಲ್ಲಿ ತಲೆದೋರಬಹುದಾದ ದೋಷ ಅದಕ್ಕೆ ಸಂಬಂಧಪಟ್ಟ, ನಮಗೆ ಪೂರ್ಣವಾಗಿ ಅರ್ಥವಾಗದಿರುವ ಅನೇಕ ಕ್ರಿಯೆಗಳಿಗೆ ಎಡೆಮಾಡಿಕೊಡಬಹುದು. ಮಾನವನ ದೇಹದಲ್ಲಿ ನಡೆಯುವ ಕಿಣ್ವವರ್ಧಿತ ಚಯಾಪಚಯಗಳೆಲ್ಲವಕ್ಕೂ ಇರುವ ಪರಸ್ಪರ ಸಂಬಂಧಗಳು ನಮಗೆ ಅರ್ಥವಾಗುವವರೆಗೆ ಆನುವಂಶಿಕ ಕಾಯಿಲೆಗಳ ಪೂರ್ಣ ಮಾಹಿತಿ ದೊರೆಯಲಾರದು.

***

**ಕಿಪ್ಪರ್ ಮೀನು:** ಸ್ಯಾಮನ್ ಜಾತಿಯ ಗಂಡುಮೀನಿಗೆ ಅದರ ವಂಶಾಭಿವೃದ್ಧಿಯ ಕಾಲದಲ್ಲಿ ಕರೆಯುವ ಸಾಮಾನ್ಯ ಹೆಸರು. ಈ ಸಮಯದಲ್ಲಿ ಮೀನಿನ ಕೆಳದವಡೆ ಉಬ್ಬಿಕೊಂಡು ಕೊಕ್ಕಿನಂತೆ ಕಾಣುವುದೇ ಈ ಹೆಸರಿಗೆ ಕಾರಣ. ಕೊಕ್ಕಿಗೆ ಕಿಪ್ ಎಂಬ ಹೆಸರಿದೆ. ಶೇಖರಿಸಿಟ್ಟ ಮೀನುಗಳು ಕೆಡದಂತೆ ಹೊಗೆಯಾಡಿಸಿ ಹದಮಾಡಿದ ಮೀನಿಗೂ ಸಹ ಕಿಪ್ಪರ್ ಮೀನು ಎನ್ನುವರು. ಮೀನನ್ನು ಸೀಳಿ, ಶುಚಿಮಾಡಿ, ಉಪ್ಪು ಸೇರಿಸಿ, ಹೊಗೆಯಾಡಿಸಿ ಹದಮಾಡುವ ಕ್ರಮಕ್ಕೆ ಕಿಪರಿಂಗ್ ಎನ್ನುವರು. ಸ್ಯಾಮನ್ ಮೀನಲ್ಲದೆ ಹೆರಿಂಗ್ ಮೀನನ್ನೂ ಈ ರೀತಿ ಸಂಸ್ಕರಿಸಿ ಕೆಡದಂತೆ ಶೇಖರಿಸುತ್ತಾರೆ. ಮೊದಲು ಸ್ಯಾಮನ್ ಮತ್ತು ಹೆರಿಂಗ್ ಮೀನುಗಳಿಗೆ ಮಾತ್ರ ಈ ಪದ ಅನ್ವಯವಾಗುತ್ತಿತ್ತು. ಈಗ ಇದರ ಬಳಕೆ ವಿಸ್ತಾರಗೊಂಡು ಹೊಗೆಯಾಡಿಸಿ ಹದಮಾಡಿದ ಯಾವ ಮೀನಿಗಾದರೂ ಅನ್ವಯವಾಗತೊಡಗಿದೆ.

ಕಿಪ್ಪರ್ ಮಾಡಿದ ಸ್ಯಾಮನ್ ಮೀನು ಬ್ರಿಟನಿನಲ್ಲಿ ೧೪೭೭ ರಿಂದಲೂ, ಹೆರಿಂಗ್ ಮೀನು ೧೮೪೩ ರಿಂದಲೂ ಬಳಕೆಯಲ್ಲಿವೆ. ಇವುಗಳನ್ನು ಆಹಾರವಾಗಿ ಬಳಸುತ್ತಾರೆ.

***

**ಕಿಯಾ ಗಿಣಿ:** ಗಿಣಿಗಳನ್ನೊಳಗೊಂಡ ಸಿಟ್ಟಾಸಿಫಾರ್ಮಿಸ್ ಗಣದ ಸಿಟ್ಟಾಸಿಡೆ ಕುಟುಂಬಕ್ಕೆ ಸೇರಿದ ಹಕ್ಕಿ. ವೈಜ್ಞಾನಿಕ ನಾಮ ನೆಸ್ಟರ್ ನೊಟಾಬಿಲಿಸ್. ಇದರ ತವರು ನ್ಯೂಜಿಲೆಂಡ್. ಎತ್ತರವಾದ ಪರ್ವತ ಪ್ರದೇಶಗಳಲ್ಲಿನ ಕಲ್ಲುಪೊಟರೆಗಳಲ್ಲಿ ಗೂಡು ಕಟ್ಟಿಕೊಂಡು ವಾಸಿಸುತ್ತದೆ.

ಇದು ಹೆಚ್ಚು ಕಡಿಮೆ ಕಾಗೆಯಷ್ಟು ದೊಡ್ಡದು. ಗಿಣಿಗಳಲ್ಲಿರುವಂತೆ ಬಾಗಿರುವ ಬಲವಾದ ಕೊಕ್ಕು ಇದೆ. ಮೈಬಣ್ಣ ಕಂದುಮಿಶ್ರಿತ ಹಸಿರು. ಗಿಣಿಗಳಂತೆಯೇ ಹಣ್ಣು, ಮೊಗ್ಗು, ಹುಳು, ಕೀಟ ಮುಂತಾದುವನ್ನು ತಿಂದು ಜೀವಿಸುತ್ತದೆ. ಚಳಿಗಾಲದಲ್ಲಿ ಪರ್ವತದ ಅತೀವ ಚಳಿಯನ್ನು ಸಹಿಸಲಾರದೆ ಕಣಿವೆಗಳಿಗೆ ಇಳಿದು ಬರುತ್ತದೆ. ಆಗ ಕೆಲವೊಮ್ಮೆ ಕುರಿಗಳ ಬೆನ್ನನ್ನು ಕುಕ್ಕಿ, ಮಾಂಸವನ್ನು ಬಗಿದು ತಿನ್ನುವುದುಂಟು. ಇದರಿಂದಾಗಿ ಮಾನವನಿಗೆ ಈ ಹಕ್ಕಿಯನ್ನು ಕಂಡರೆ ಆಗದು.

ಸಂತಾನೋತ್ಪತ್ತಿ ಬೇಸಿಗೆ ತಿಂಗಳುಗಳಲ್ಲಿ. ನೆಲದ ಮೇಲೆ, ಬಂಡೆಗಳ ಕೆಳಗೆ, ಟೊಳ್ಳು ಮರಗಳಲ್ಲಿ ಗೂಡನ್ನು ಕಟ್ಟುತ್ತದೆ. ಈ ಗೂಡು ಕೆಲವೊಮ್ಮೆ 6 ಮೀ. ಉದ್ದವಿರುತ್ತದೆ. ಪುನಃ ಪುನಃ ಇದನ್ನು ಸಂತಾನೋತ್ಪತ್ತಿಗೆ ಉಪಯೋಗಿಸಬಹುದು. ಹೆಣ್ಣು 2–

4 ಮೊಟ್ಟೆಗಳನ್ನಿಟ್ಟು 2–4 ವಾರ ಕಾವು ಕೊಡುತ್ತದೆ. ಗಂಡು ಈ ಸಮಯದಲ್ಲಿ ಗೂಡಿನ ಹೊರಗಿದ್ದು ರಕ್ಷಣೆಯೊದಗಿಸುತ್ತದೆ. (ಜಿ.ಎಂ.ಬಿ.)

**ಕಿರುಮಿದುಳು:** ಹಿಮ್ಮೆದುಳಿನ ಹಿಂಭಾಗ (ಸೆರಿಬೆಲ್ಲಂ). ಶರೀರದ ಚಲನವಲನಗಳನ್ನು ಸಮನ್ವಯ ಮಾಡುವುದು, ಶರೀರದ ಸಮಸ್ಥಿತಿಯನ್ನು ಕಾಪಾಡುವುದು ಇದರ ಕೆಲಸ. ಮೀನುಗಳಿಗಿಂತ ಕೆಳದರ್ಜೆಯ ಪ್ರಾಣಿಗಳಲ್ಲಿ ಇದು ಸಾಕಷ್ಟು ವಿಕಸಿತವಾಗಿಲ್ಲ. ಷಾರ್ಕ್ ಮೊದಲಾದ ಮೀನುಗಳಲ್ಲಿ, ಹಕ್ಕಿಗಳಲ್ಲಿ, ಮನುಷ್ಯನನ್ನೊಳಗೊಂಡಂತೆ ಸ್ತನಿಗಳಲ್ಲಿ ಇದು ಚೆನ್ನಾಗಿ ವಿಕಸಿತವಾಗಿದೆ. (ನೋಡಿ– ಮಿದುಳು) ***

**ಕಿವಿ:** ಮೂರು ಪ್ರಧಾನ ಭಾಗಗಳಿರುವ (ಹೊರಗಿವಿ, ನಡುಗಿವಿ, ಒಳಗಿವಿ), ಒಂದು ಪ್ರಧಾನ ಗ್ರಹಣೇಂದ್ರಿಯ.

ಹೊರಗಿವಿ : ಇದರಲ್ಲಿ ಕರ್ಣ ಮತ್ತು ಕರ್ಣಕುಹರ ಎಂದು ಎರಡು ಭಾಗಗಳಿವೆ. ಕರ್ಣ ತಲೆಯ ಪಕ್ಕದಲ್ಲಿ ಹೊರಕ್ಕೆ ಚಾಚಿದೆ ಮತ್ತು ಪ್ರಶ್ನಾರ್ಥಕ ಚಿಹ್ನೆಯಂತಿದೆ. ಇದರ ಆಕಾರಕ್ಕೆ ಆಧಾರ ಒಳಗಿರುವ ಸ್ಥಿತಿಸ್ಥಾಪಕ ಶಕ್ತಿಯಿರುವ ಮೆಲ್ಲೆಲುಬು. ಮೇಲೆ ಚರ್ಮದ ಹೊದಿಕೆಯಿದೆ. ಆಚೆ ಕಡೆ ಹಳ್ಳವಾಗಿದ್ದು ಕಪ್ಪೆ ಕಾಲುಗಳಿದ್ದಂತಿವೆ. ಇದರ ಅಂಚಿನ ಮೇಲಿನ ಮುಕ್ಕಾಲು ಭಾಗ ಮಡಚಿದೆ. ಸುರುಳಿಗೊಂಡ ಈ ಅಂಚು ಹೆಲಿಕ್ಸ್. ಇದು ಹಿಂದೆ ಕೆಳಕ್ಕೆ ತಿರುಗುವ ಸ್ಥಳದಲ್ಲಿ ಬಹುಜನರಲ್ಲಿ ಡಾರ್ವಿನ್ ಗುಳ್ಳೆಯಿರುತ್ತದೆ. ಮಾನವನ ಪೂರ್ವಜರಲ್ಲಿ ಉದ್ದ ಕಿವಿಯಿದ್ದಿರಬಹುದೆಂಬುದಕ್ಕೆ ಈ ಗುಳ್ಳೆ ಸೂಚಕ. ಹೆಲಿಕ್ಸ್‌ನ ಒಳಗಡೆ ಪ್ರತಿಹೆಲಿಕ್ಸ್ (ಆಂಟಿಹೆಲಿಕ್ಸ್) ಎಂಬುದು ಉಂಟು. ಇದು ಕಿವಿತೂತಿನ ಮೇಲೆ ಕವಲೊಡೆಯುತ್ತದೆ. ಪ್ರತಿಹೆಲಿಕ್ಸ್ ಒಳಗಡೆ ಕಾಂಕ ಎಂಬ ಹಳ್ಳವೂ ಅದರ ಮುಂಭಾಗದಲ್ಲಿ ಕರ್ಣಕುಹರದ ಹೊರಬಾಯಿಯೂ ಇವೆ. ಕುಹರದ ಮುಂದೆ ತ್ರಿಕೋಣದಂತಿರುವ ಟ್ರೇಗಸ್ ಉಂಟು. ಕರ್ಣದ ಅತಿಕೆಳಭಾಗವಾದ ಹಾಲೆ ಮೆಲ್ಲೆಲುಬಿಲ್ಲದೆ ಮೆತ್ತಗಿದೆ. ಇದೇ ಕಿವಿ ಚುಚ್ಚುವ ಭಾಗ. ಮುಂದಿನ, ಮೇಲಿನ ಮತ್ತು ಹಿಂದಿನ ಚಿಕ್ಕ ಕರ್ಣಪೇಶಿಗಳು ಕರ್ಣವನ್ನು ಸ್ವಲ್ಪ ಅಲುಗಾಡಿಸಬಲ್ಲುವು.

ಕರ್ಣಕುಹರದ ಉದ್ದ 2.5 ಸೆಂಮೀ. ಇದರ ಹೊರ 1/3 ಭಾಗದಲ್ಲಿ ಮೆಲ್ಲೆಲುಬಿದೆ. ಒಳ 2/3 ಭಾಗದಲ್ಲಿ ಎಲುಬಿದೆ. ಕಿವಿಯಲ್ಲಿ ಬೆರಳಿಟ್ಟು ದವಡೆ ಆಡಿಸಿದರೆ ಮೆಲ್ಲೆಲುಬಿನ ಭಾಗದಲ್ಲಿ ದವಡೆ ಮೂಳೆ ಆಡುವುದು ಗೊತ್ತಾಗುವುದು. ಗಲ್ಲದ ಮೇಲಿನ ಬಲವಾದ ಏಟು ಕಿವಿಗೆ ಅಪಾಯವಾಗಬಹುದು. ಕುಹರಕ್ಕೆ ಚರ್ಮ ಒಳಹೊದಿಕೆ. ಈ ಚರ್ಮದ ವಿಶೇಷ ಸ್ವೇದಗ್ರಂಥಿಗಳು ಗುಗ್ಗೆಯನ್ನು ಸುರಿಸುತ್ತವೆ. ಚರ್ಮ ಬಿಗಿಯಾಗಿ ಅಂಟಿರುವುದರಿಂದ ಇದರ ಕುರುಗುಳ್ಳೆಗಳು ಬಹಳ ನೋವುಂಟು ಮಾಡುತ್ತವೆ. ಕುಹರದ ಒಳ ಕೊನೆಯಲ್ಲಿ ಕಿವಿದಮಟೆಯಿದೆ. ಕುಹರ S ಅಕಾರದಲ್ಲಿದೆ. ಹೊರಭಾಗ ಒಳಕ್ಕೆ, ಮುಂದಕ್ಕೆ ಮತ್ತು ಸ್ವಲ್ಪ ಮೇಲಕ್ಕೆ. ಮಧ್ಯಭಾಗ ಹಿಂದಕ್ಕೆ, ಮೇಲಕ್ಕೆ ಮತ್ತು ಒಳಭಾಗ ಮುಂದಕ್ಕೆ, ಕೆಳಕ್ಕೆ ತಿರುಗಿವೆ. ಕರ್ಣವನ್ನು ಮೇಲಕ್ಕೆ, ಹಿಂದಕ್ಕೆ ಎಳೆದರೆ ಕುಹರ ಸ್ವಲ್ಪ ನೆಟ್ಟಗಾಗುತ್ತದೆ. ಆಗ ವೈದ್ಯ ತುತ್ತೂರಿಯಂಥ ಏಣಿಯನ್ನಿಟ್ಟು ಒಳಕ್ಕೆ ಬೆಳಕು ಬಿಟ್ಟು ಕಿವಿದಮಟೆಯನ್ನು ನೋಡಬಹುದು. ಮಕ್ಕಳಲ್ಲಿ ಕುಹರ ಕುರುಚಾಗಿದೆ; ಕಿವಿದಮಟೆ ಆಳದಲ್ಲಿಲ್ಲ; ಆದ್ದರಿಂದ ಮಕ್ಕಳ ಕಿವಿಗೆ ಕಡ್ಡಿ ಹಾಕುವುದರಿಂದ ಕಿವಿದಮಟೆಗೆ ಅಪಾಯವುಂಟು. ದೊಡ್ಡವರ ಕಿವಿದಮಟೆಗೆ ಮುತ್ತಿನ ಹೊಳಪಿದೆ. ಇದು ಹೊರಮೈ ಸ್ವಲ್ಪ ಕೆಳಗಾಗುವಂತೆ ವಾಲಿದೆ. ಕೂಸಿನಲ್ಲಿ ಇದರ ಹೊರಮೈ ಪಾದಗಳ ಕಡೆ ತಿರುಗಿದೆ. ಹೊರಮೈಯ ಕೇಂದ್ರದಿಂದ ಮೇಲಕ್ಕೆ ಹೋಗುವ ಕೆಂಪು ಹಳದಿ ಗೀರು ಕಾಣುತ್ತದೆ. ಇದು ಸುತ್ತಿಗೆ ಮೂಳೆಯ ಹಿಡಿಯಿಂದಾದ ಉಬ್ಬು. ಸುತ್ತಿಗೆಯ ಒಳಸೆಳೆತದಿಂದ ಕೇಂದ್ರದಲ್ಲಿ ಅಂಬೊ ಎಂಬ ಮಧ್ಯಗುಳಿ ಕಾಣುತ್ತದೆ. ಹೊರಗಿವಿಯ ಮೂಲಕ ತೂರಿದ ಶಬ್ದತರಂಗಗಳು ಕಿವಿದಮಟೆಯನ್ನು ಅದಿರಿಸುತ್ತವೆ.

ವಿಕಲಕರ್ಣ (ಸೀಳ್ಗಿವಿಯೂ ಇರಬಹುದು), ಎರಡನೆಯ ಕರ್ಣ, ತೂತಿಲ್ಲದಿರುವಿಕೆ, ಕರ್ಣದ ಮುಂದೆ ತೂತುಗಳು ಮತ್ತು ಬುಡ್ಡೆಗಳು ಇವು ಹೊರಗಿವಿಯ ವಿಕಲತೆಗಳು. ಕೆಳದವಡೆ ಮೂಳೆಯಿಲ್ಲದಿರುವಾಗ ಎರಡು ಕಿವಿಗಳೂ ಸೇರಿ ಕತ್ತಿನಲ್ಲಿರಬುಹುದು.

ನಡುಗಿವಿ : ಇದು ಮೂಳೆಯಲ್ಲಿರುವ ಸಣ್ಣ ಪೊಳ್ಳು. ಕಿವಿದಮಟೆಯ ಕಂಪನವನ್ನು ಒಳಗಿವಿಗೆ ಮುಟ್ಟಿಸುವ ಮೂರು ಸಣ್ಣ ಮೂಳೆಗಳ ಸರಣಿ ಇದರಲ್ಲಿದೆ. ಲೋಳ್ಪೊರೆಯ ಒಳಹೊದಿಕೆಯಿದೆ, ಪೊಳ್ಳಿನಲ್ಲಿ ಗಾಳಿಯಿದೆ. ಗಂಟಲಿಗೆ ಸೇರಿದ ಕಿವಿಗಂಟಲು ನಾಳ (ಯುಸ್ಟೇಷಿಯನ್ ನಾಳ) ದಿಂದ ಹೊರಗಾಳಿಯ ಒತ್ತಡವೂ ಪೊಳ್ಳಿನ ಗಾಳಿಯ ಒತ್ತಡವೂ ಒಂದೇ ಇರುತ್ತದೆ. ಕಿವಿದಮಟೆಯ ಹೊರಗಡೆ ಕುಹರದಲ್ಲಿಯೂ ಒಳಗಡೆ ಪೊಳ್ಳಿನಲ್ಲಿಯೂ ಇರುವುದರಿಂದ ಅದು ಶಬ್ದಕ್ಕೆ ಸರಿಯಾಗಿ ಅದಿರಲು ಸಾಧ್ಯವಾಗುತ್ತದೆ. ಒಳಗಾಳಿಯಿಲ್ಲದಿದ್ದರೆ ತಮಟೆ ಕಂಪಿಸಲಾಗದೆ ಕಿವುಡುಂಟಾಗುತ್ತದೆ.

ನಡುಗಿವಿಯ ಮೇಲಿನ, ಕೆಳಗಿನ ಮತ್ತು ಹಿಂದುಮುಂದಿನ ವ್ಯಾಸಗಳು ಸುಮಾರು 15 ಮಿಮೀ. ಪಕ್ಕದಿಂದ ಪಕ್ಕಕ್ಕೆ, ಮೇಲುಗಡೆ 6 ಮಿಮೀ. ಮಧ್ಯೆ (ಅಂಬೊ ಇರುವಲ್ಲಿ) 2 ಮಿಮೀ. ಮತ್ತು ಕೆಳಗೆ 4 ಮಿಮೀ. ಈ ಪೊಳ್ಳಿನ ಹೊರಭಿತ್ತಿಯಲ್ಲಿ ಕಿವಿದಮಟೆ ಉಂಟು. ಒಳಭಿತ್ತಿಯಲ್ಲಿ ಮಧ್ಯೆ ಚಿಕ್ಕ ಉಬ್ಬು (ಪ್ರೊಮೋಟರಿ) ಇವೆ. ಇದು ಒಳಗಿವಿಯ ಶಂಖದ ಮೊದಲ ಸುರುಳಿಯಿಂದಾದುದು. ಈ ಉಬ್ಬಿನ ಮೇಲುಗಡೆ ಹಿಂದು ಮುಂದು ಉದ್ದವಾಗಿರುವ ಅಲಸಂದೆ ಕಾಳಿನಾಕಾರದ ವೆಸ್ಟಿಬ್ಯೂಲ್ ರಂಧ್ರವಿದೆ. ಇದರ ಮೂಲಕ ಚಿಕ್ಕ ಮೂಳೆಗಳ ಸರಣಿ ಶಬ್ದಕಂಪನವನ್ನು ಒಳಕ್ಕೆ ಸಾಗಿಸುತ್ತದೆ. ಉಬ್ಬಿನ ಕೆಳಗಡೆ ಒಂದು ಚಿಕ್ಕ ಗುಂಡು ರಂಧ್ರವಿದ್ದು ಅದು ಪೊರೆಯಿಂದ (ಚಿಕ್ಕ ತಮಟೆ) ಮುಚ್ಚಿಕೊಂಡಿದೆ. ಶಂಖದಲ್ಲಿ ಒಳಒತ್ತಡ ಹೆಚ್ಚಾದಾಗ ಈ ಪೊರೆ ಉಬ್ಬುತ್ತದೆ. ಕಡಿಮೆಯಾದಾಗ ಒಳಹೋಗುತ್ತದೆ. ಒಳ ಭಿತ್ತಿಯ ಮೇಲ್ಭಾಗದಲ್ಲಿ ಮುಖದ ಪೇಶಿಗಳಿಗೆ ಹೋಗುವ ತಲೆಯ 7ನೆಯ ನರ ಹಿಂದಕ್ಕೆ ಹೋಗುತ್ತದೆ. ಪೊಳ್ಳಿನ ಹಿಂದಿನ ಗೋಡೆಯಲ್ಲಿ ಮೇಲುಗಡೆ ಒಂದು ಚಿಕ್ಕ ತೂತು ಇದೆ. ಇದರ ಮೂಲಕ ಗಾಳಿ ಕಿವಿಯ ಹಿಂದಿರುವ ಮೂಳೆಗಾಗಿ ಗೂಡುಗಳಲ್ಲಿ ಒತ್ತಡವನ್ನು ಸಮಮಾಡುತ್ತದೆ. ಈ ತೂತಿನ ಕೆಳಗೆ ಒಂದು ಚಿಕ್ಕ ಮುಳ್ಳಿದೆ. ಇದು ಸ್ಟೆಪೀಡಿಯಸ್ ಎಂಬ ಪೇಶಿಯ ಆಧಾರ. ಹೊರ ಮತ್ತು ಒಳಗೋಡೆಗಳು ಮುಂದುಗಡೆ ಬಹಳ ಹತ್ತಿರವಿರುವುದರಿಂದ ಮುಂದಿನ ಗೋಡೆ ಬಹಳ ಇಕ್ಕಟ್ಟು. ಆದರೂ ಇದರ ಮೇಲ್ಭಾಗದಲ್ಲಿ ಟೆನ್ಸಾರ್ ಟಿಂಪನಿ ಎಂಬ ಚಿಕ್ಕ ಪೇಶಿಗೆ ಒಂದು ಚಿಕ್ಕ ಗೂಡಿದೆ. ಶಬ್ದ ಹೆಚ್ಚಾದಂತೆ ಇದು ಕಿವಿದಮಟೆಗೆ ಅಂಟಿರುವ ಸುತ್ತಿಗೆ ಮೂಳೆಯನ್ನು ಒಳಕ್ಕೆ ಎಳೆದು ತಮಟೆಯ ಅತಿ ಕಂಪನದಿಂದ ಒಳಗಿವಿಗೆ ಆಗುವ ಅಪಾಯವನ್ನು ತಪ್ಪಿಸುತ್ತದೆ. ರಿಕಾಬುಮೂಳೆಗೆ ಅಂಟಿರುವ ಸ್ಟೆಪೀಡಿಯಸ್‌ನ ಕೆಲಸವೂ ಇದೇ ರೀತಿ. ಟೆನ್ಸಾರ್ ಟಿಂಪನಿ ಗೂಡಿನ ಕೆಳಗೆ ಕಿವಿ ಗಂಟಲುನಾಳದ ಹಿಂದಿನ ಬಾಯಿಯಿದೆ. ಈ ನಾಳದ ಉದ್ದ 36 ಮಿಮೀ. ಇದರ ಕಿವಿಕೊನೆಯ ಭಾಗದಲ್ಲಿ ಮೂಳೆಯಿದೆ; ಮುಂದಿನ ಭಾಗದಲ್ಲಿ ಮೆಲ್ಲೆಲುಬಿದೆ. ಇದರ ಮೂಲಕ ಗಂಟಲ ಲೋಳೆಪೊರೆಯೂ ನಡುಗಿವಿಯ ಲೋಳೆಪೊರೆಯೂ ಒಂದೇ ಆಗಿವೆ. ಇದರಿಂದ ಗಂಟಲ ಕ್ರಿಮಿಗಳು ನಡುಗಿವಿಯನ್ನು ಸೇರಿ ಉರಿತ ಉಂಟಾಗಬಹುದು ಮತ್ತು ಕಿವಿದಮಟೆ ತೂತುಬಿದ್ದು ಕಿವಿಯಲ್ಲಿ ಕೀವು ಸೋರಬಹುದು. ಕೂಸಿನಲ್ಲಿ ಈ ನಾಳದ ಉದ್ದ 18 ಮಿಮಿ ಮತ್ತು ಇದು ಸಮಮಟ್ಟದಲ್ಲಿದೆ. ದೊಡ್ಡವರಲ್ಲಿ ಇದರ ಮುಂದಿನ ಬಾಯಿ ಹಿಂದಿನ ಬಾಯಿಗಿಂತ ಕೆಳಮಟ್ಟದಲ್ಲಿದೆ. ನಡುಗಿವಿಯ ಮಾಡಿನಲ್ಲಿ ಮಿದುಳುಪೊರೆಗಳನ್ನು ಬೇರ್ಪಡಿಸುವ ಮೂಳೆಯ ರೇಕಿದೆ; ನೆಲ ಇಕ್ಕಟ್ಟಾಗಿದೆ.

ಕಿವಿದಮಟೆ ನಡುಗಿವಿಯ ಹೊರ ಗೋಡೆಯ ಹೆಚ್ಚು ಭಾಗ. ಇದು ಹೊರ ಮತ್ತು ನಡುಗಿವಿಗಳ ನಡುವೆ ಇರುವ ಮೊಟ್ಟೆಯಾಕಾರದ ರಚನೆ. ಮೇಲುಕೆಳಗಿನ ವ್ಯಾಸ 9–10 ಮಿಮೀ. ಅತಿಚಿಕ್ಕ ವ್ಯಾಸ 8–9 ಮಿಮೀ. ಇದು ವಾಲಿರುವುದರಿಂದ ಇದಕ್ಕೂ ಕರ್ಣಕುಹರದ ತಳಕ್ಕೂ ನಡುವೆ 45$^0$ಗಳಷ್ಟು ಬಾಗು ಉಂಟು. ಇದರ ಅಂಚು ಮೆಲ್ಲೆಲುಬಿನ ಉಂಗುರದಿಂದ ಸ್ವಲ್ಪ ದಪ್ಪವಾಗಿದೆ. ಇದರ ಹೊರಪದರ ಚರ್ಮ, ಒಳಪದರ ಲೋಳೆಪೊರೆ, ಇದಕ್ಕೆ ಮೇಲ್ಮಟ್ಟದಲ್ಲಿ ಮಧ್ಯಕಿವಿಯ ಅಟ್ಟವಿದೆ. ಇದರಲ್ಲಿ ಸುತ್ತಿಗೆ ಮತ್ತು ಅಡ್ಗಣಿಯ (ಅಡಿಗಲ್ಲು) ಹೆಚ್ಚು ಭಾಗಗಳಿವೆ.

ಸುತ್ತಿಗೆ (ಮ್ಯಾಲಿಯಸ್), ಅಡಿಗಲ್ಲು (ಇಂಕಸ್) ಮತ್ತು ರಿಕಾಬು (ಸ್ಟೇಪೀಸ್) ಎಂಬುವು ನಡುಗಿವಿಯಲ್ಲಿರುವ ಚಿಕ್ಕ ಮೂಳೆಗಳು. ಇವುಗಳಲ್ಲಿ ಸುತ್ತಿಗೆ ದೊಡ್ಡದು. ಸುತ್ತಿಗೆಯ ಹಿಡಿ ತಮಟೆಯ ಹೊಕ್ಕುಳಿನವರೆಗೂ ಅಂಟಿದೆ. ಅದರ ತಲೆ ಅಟ್ಟದಲ್ಲಿದೆ. ಇದಕ್ಕೆ ಹಿಂದೆ ಅಡಿಗಲ್ಲಿನೊಡನೆ ಕೀಲಿದೆ. ಅಡಿಗಲ್ಲಿನ ಉದ್ದ ಚಾಚು ಕೆಳಕ್ಕೆ ತಿರುಗಿದೆ. ಇದರ ಕೆಳ ತುದಿಗೆ ಸಿಲ್ವಿಯಸ್‌ನ ಮಣಿಗಂಟು ಎಂದು ಹೆಸರು. ಈ ಗಂಟಿಗೂ ರಿಕಾಬಿಗೂ ನಡುವೆ ಕೀಲಿದೆ. ರಿಕಾಬಿನ ಒಂದು ಕಾಲು ಹಿಂದೆ, ಇನ್ನೊಂದು ಮುಂದು. ಅದರ ಪಾದ ಮಧ್ಯಕಿವಿ ಒಳಗೋಡೆಯ ವೆಸ್ಟಿಬ್ಯೂಲ್ ರಂಧ್ರದಲ್ಲಿ ಸಿಕ್ಕಿಕೊಂಡಿದೆ. ಸುತ್ತಿಗೆ ಮತ್ತು ಅಡಿಗಲ್ಲು ಒಂದೇ ಸನ್ನೆಯಾಗಿ ಅದಿರುತ್ತವೆ. ತಮಟೆ ಹೊರಕ್ಕೆ ಸರಿದಾಗ ರಿಕಾಬಿನ ಪಾದ ಹೊರಕ್ಕೆ ಬರುತ್ತದೆ.

ಒಳಗಿವಿ : ಇದು ತೊಡಕಾಗಿದೆ. ಮೂಳೆಯ ಒಳಗಿವಿ ಮತ್ತು ಪೊರೆಯ ಒಳಗಿವಿ ಎಂದು ಎರಡಿವೆ. ಮೂಳೆಯದರೊಳಗೆ ಪೊರೆಯ ಒಳಗಿವಿಯಿದೆ.

ಮೂಳೆಯ ಒಳಗಿವಿ : ಇದರ ಭಾಗಗಳು ವೆಸ್ಟಿಬ್ಯೂಲ್, ಮೂರು ಅರ್ಧವೃತ್ತ ನಾಳಗಳು ಮತ್ತು ಶಂಖ. ನಡುಗಿವಿಯ ಒಳಪಕ್ಕದ ಹಿಂಭಾಗದಲ್ಲಿ ವೆಸ್ಟಿಬ್ಯೂಲ್ ಇದೆ. ಇವೆರಡಕ್ಕೂ ನಡುವೆ ಇರುವ ವೆಸ್ಟಿಬ್ಯೂಲ್ ರಂಧ್ರದಲ್ಲಿ ರಿಕಾಬಿನ ಪಾದವಿದೆ. ಮಿದುಳುಪೆಟ್ಟಿಗೆಯ ಹಿಂಭಾಗದಲ್ಲಿರುವ ಒಳಕರ್ಣಕುಹರಕ್ಕೂ ವೆಸ್ಟಿಬ್ಯೂಲಿಗೂ ನಡುವೆ ಸ್ಥಿತಿಶ್ರವಣನರದ (ತಲೆಯ 8ನೆಯ ನರ) ಶಾಖೆಗಳು ತೂರುವ ಸಣ್ಣ ತೂತುಗಳಿರುವ

ತೆಳುಮೂಳೆಯಿದೆ. ವೆಸ್ಟಿಬ್ಯೂಲಿನ ಕೆಳಭಾಗದಲ್ಲಿ ಮಿದುಳು ಪೆಟ್ಟಿಗೆಯ ಹಿಂಭಾಗವನ್ನು ಸೇರುವ ವೆಸ್ಟಿಬ್ಯೂಲ್ ನೀರ್ಗೊಳವೆಯಿದೆ. ವೆಸ್ಟಿಬ್ಯೂಲಿನ ಹಿಂಭಾಗಕ್ಕೆ ಮೂರು ಅರ್ಧ ವೃತ್ತನಾಳಗಳೂ ಅಂಟಿಕೊಂಡಿವೆ. ಇವುಗಳಲ್ಲಿ ಪಕ್ಕಕೊಳವೆಗೂ ವೆಸ್ಟಿಬ್ಯೂಲಿಗೂ ನಡುವೆ




ಕಿವಿಯ ರಚನೆ

ಎರಡು ಪ್ರತ್ಯೇಕ ತೂತುಗಳಿವೆ. ಮೇಲ್ಗೊಳವೆಯ ಹೊರಕೊನೆ ಮತ್ತು ಹಿಂಗೊಳವೆಯ ಕೆಳಕೊನೆಗಳಲ್ಲಿ ಪ್ರತ್ಯೇಕ ತೂತುಗಳಿವೆ. ಮೇಲ್ಗೊಳವೆಯ ಹೊರಕೊನೆ ಮತ್ತು ಹಿಂಗೊಳವೆಯ ಕೆಳಕೊನೆಗಳಲ್ಲಿ ಪ್ರತ್ಯೇಕ ತೂತುಗಳಿವೆ. ಪ್ರತಿಯೊಂದು ಕೊಳವೆಯ ಒಂದು ಕೊನೆ ಉಬ್ಬಿದೆ. ಮೇಲ್ಗೊಳವೆ ನೆಟ್ಟಗಿದೆ ಮತ್ತು ಅದಕ್ಕೆ ಹೊರ ಮತ್ತು ಒಳಕಾಲುಗಳಿವೆ. ಪಕ್ಕಕೊಳವೆ ಸಮಮಟ್ಟದಲ್ಲಿದ್ದು ಅದರ ಕಾಲುಗಳು ಮೇಲು ಕೆಳಗಿವೆ. ವೆಸ್ಟಿಬ್ಯೂಲಿಗೆ ಮುಂದುಗಡೆ ಶಂಖ ಅಂಟಿದೆ. ಇದು ಬಸವನಹುಳದ ಗೂಡಿನಂತಿದೆ. ಇದರ ತುದಿಯೂ ಅಕ್ಷವೂ ಮುಂದಕ್ಕೆ ಪಕ್ಕಕ್ಕೆ ತಿರುಗಿವೆ. ಇದರ ಮಧ್ಯಗೂಟದ ಸುತ್ತ 2¾ ಸುರುಳಿಯಿರುವ ಶಂಖಕೊಳವೆಯಿದೆ. ಶಂಖದ ಉದ್ದ 5 ಮಿಮೀ. ಶಂಖಕೊಳವೆಯ ಉದ್ದ 30 ಮಿಮೀ. ಇದು ಬುಡದ ಕಡೆ ಅಗಲವಾಗಿದ್ದು ಶಂಖದ ತುದಿಯ ಕಡೆ ಕ್ರಮೇಣ ಚಿಕ್ಕದಾಗುತ್ತದೆ. ಮಧ್ಯಗೂಡನ್ನು ಬುಡದಿಂದ ತುದಿಯವರೆಗೆ ಬಳಸಿರುವ ಒಂದು ಸುರುಳಿ ಚಜ್ಜವಿದೆ. ಇದು ಶಂಖ ಕೊಳವೆಯೊಳಕ್ಕೆ ಅರ್ಧದಷ್ಟು ಚಾಚಿದೆ. ಶ್ರವಣ ನರಶಾಖೆಗಳು ಇದನ್ನು ತೂರುತ್ತವೆ.

ಪೊರೆಯ ಒಳಗಿವಿ : ಇದು ಮೂಳೆಯ ಒಳಗಿವಿಯ ಒಳಗಿದ್ದರೂ ಅದರ ತುಂಬ ಇಲ್ಲ. ಪೊರೆಯ ಕಿವಿಗೂ ಮೂಳೆಕಿವಿಗೂ ನಡುವೆ ಹೊರನೀರಿದೆ (ಪೆರಿಲಿಂಫ್). ಪೊರೆಯ ಕಿವಿಯೊಳಗೆ ಒಳನೀರಿದೆ (ಎಂಡೊಲಿಂಫ್). ಒಳನೀರೂ ಹೊರನೀರೂ ಬೆರೆಯುವಂತಿಲ್ಲ. ಈ ನೀರುಗಳಿಲ್ಲದಿದ್ದರೆ ಶ್ರವಣಪೊರೆ ಕಂಪಿಸಲಾರದು. ಪೊರೆಯ ಒಳಗಿವಿಯ ಭಾಗಗಳು ಯುಟ್ರಿಕ್ಲ್, ಮೂರು ಅರ್ಧವೃತ್ತನಾಳಗಳು, ಸ್ಯಾಕ್ಯೂಲ್ ಹಾಗು ಶ್ರವಣನಾಳ. ಮೂಳೆಯ ವೆಸ್ಟಿಬ್ಯೂಲ್‌ನೊಳಗೆ ಮುಂದೆ ಸ್ಯಾಕ್ಯೂಲ್, ಹಿಂದೆ ಯುಟ್ರಿಕ್ಲ್ ಇವೆ. ಇವುಗಳಲ್ಲಿ ಮ್ಯಾಕುಲ ಎಂಬ ವಿಶೇಷ ವೇದನವುಳ್ಳ ಕಣಗಳ ಗುಳ್ಳೆಯಿದೆ. ಈ ಗುಳ್ಳೆಯಲ್ಲಿ ವಿಶೇಷವೇದನ ರೋಮಕಣಗಳಿದ್ದು ಇವುಗಳ ಸುತ್ತ ಶ್ರವಣನರದ ಕೆಲವು ಕೊನೆಗಳಿವೆ.

ಮ್ಯಾಕುಲದಲ್ಲಿ ಸುಣ್ಣಕಲ್ಲಿನ ಸಣ್ಣ ಹರಳುಗಳಿವೆ. ಪೊರೆಯ ಅರ್ಧವೃತ್ತನಾಳಗಳು ಮೂಳೆಯ ಅರ್ಧವೃತ್ತನಾಳಗಳಿಗಿಂತ ಅತಿಸಣ್ಣವಾಗಿವೆ. ಇವುಗಳ ಪ್ರತಿಯೊಂದು ಬುಡ್ಡೆಯಲ್ಲೂ ವಿಶೇಷವೇದನ ರೋಮಕಣಗಳ ಬದುವಿದೆ. ಈ ನಾಳಗಳೆಲ್ಲ ಯುಟ್ರಿಕ್ಲ್‌ನೊಳಕ್ಕೆ ತೆರೆಯುತ್ತವೆ. ಸ್ಯಾಕ್ಯೂಲಿನ ಕೆಳಭಾಗದಿಂದ ಹಿಂದಕ್ಕೆ ಬಾಗಿರುವ ಒಳನೀರಿನ ಕೊಳವೆ ಯುಟ್ರಿಕ್ಲನ್ನು ಸೇರುತ್ತದೆ. ಸ್ಯಾಕ್ಯೂಲಿನ ಮುಂದೆ ಶಂಖಕೊಳವೆಯೊಳಗಿರುವ ಶ್ರವಣನಾಳವನ್ನು ಸೇರಿಸುವ ಕುರುಚುನಾಳವಿದೆ. ಶಂಖಕೊಳವೆಯನ್ನು ಅಡ್ಡಕತ್ತರಿಸಿದರೆ ಮಧ್ಯ ಗೂಟಕ್ಕೆ ಅಂಟಿರುವ ಸುರುಳಿ ಚಜ್ಜ ಮತ್ತು ಇದಕ್ಕೆ ಅಂಟಿರುವ ಶ್ರುತಿಪೊರೆ ಶಂಖಕೊಳವೆಯನ್ನು ಇಬ್ಭಾಗಿಸುವುದು ಕಾಣುತ್ತದೆ. ಶ್ರುತಿಪೊರೆ ಶಂಖಕೊಳವೆಯ ಹೊರಗೋಡೆಗೆ ಬಲವಾದ ಸ್ನಾಯುವಿನಿಂದ ಅಂಟಿಕೊಂಡಿದೆ. ಸುರುಳಿ ಚಜ್ಜದ ಇನ್ನೊಂದು ತುದಿಗೆ ರೇಸ್ನಂ ಪೊರೆ ಅಂಟಿಕೊಂಡಿದೆ. ಇದೂ ಶಂಖಕೊಳವೆಯ ಹೊರಗೋಡೆಗೆ ಅಂಟಿರುವುದರಿಂದ ಕೊಳವೆಯ ಮೇಲರ್ಧದಿಂದ ತ್ರಿಕೋಣಭಾಗ ಬೇರ್ಪಡುತ್ತದೆ. ಇದರಿಂದ ಶಂಖಕೊಳವೆಯ ಅಡ್ಡಕತ್ತರಿಕೆಯಲ್ಲಿ ಮೂರು ಭಾಗಗಳು ಕಾಣುತ್ತವೆ. ಮೇಲಿನದು ವೆಸ್ಟಿಬ್ಯೂಲ್‌ನಾಲೆ, ಮಧ್ಯದ್ದು ಶ್ರವಣನಾಳ, ಕೆಳಗಿನದು ನಡುಗಿವಿನಾಲೆ. ಶಂಖದ ತುದಿಯಲ್ಲಿ ವೆಸ್ಟಿಬ್ಯೂಲ್ ಮತ್ತು ನಡುಗಿವಿನಾಲೆಗಳ ಸಂಗಮವಿದೆ. ಇದರಿಂದ ಒಂದು ನಾಲೆಯ ನೀರು ಇನ್ನೊಂದರೊಳಕ್ಕೆ ಹೋಗಬಹುದು. ವೆಸ್ಟಿಬ್ಯೂಲ್ ರಂಧ್ರವನ್ನು ಮುಚ್ಚಿರುವ ರಿಕಾಬು ಪಾದದವರೆಗೂ ವಿಸ್ತರಿಸಿದೆ. ನಡುಗಿವಿನಾಲೆಯೊಳಗಿನ ಹೊರನೀರು ನಡುಗಿವಿಯ ಗುಂಡುರಂಧ್ರದ ಚಿಕ್ಕ ತಮಟೆಯವರೆಗೂ ಹರಡಿದೆ ಮತ್ತು ಶಂಖ ಕೊಳವೆಯ ಮೂಲಕ ಮಿದುಳುಪೆಟ್ಟಿಗೆಯ ಹಿಂಭಾಗದ ಮಧ್ಯ ಮತ್ತು ಒಳ ಮಿದುಳ್ಪೊರೆಗಳ ನಡುವೆ ಇರುವ ಮಿದುಳು ಹುರಿನೀರಿನೊಡನೆ ಬೆರೆಯುತ್ತದೆ. ಇದರಿಂದ ಒಳಗಿವಿಯ ಕಶ್ಮಲಗಳು ಆಚೆಗೆ ಹೋಗಲು ಸಾಧ್ಯ. ಶ್ರವಣನಾಳ ಶಂಖದ ತುದಿಯ ಕಡೆ ಮುಚ್ಚಿಕೊಂಡಿದೆ. ಮತ್ತು ಅದರ ಒಳನೀರು ಹೆನ್ಸನ್ ನಾಳದ ಮೂಲಕ ಸ್ಯಾಕ್ಯೂಲಿನ ನೀರಿನೊಡನೆ ಬೆರೆಯುತ್ತದೆ.

ಶ್ರವಣನಾಳದಲ್ಲಿ ಕಾರ್ಟಿ ಅಂಗವೆಂಬ ನಿಜ ಶ್ರವಣೇಂದ್ರಿಯವಿದೆ. ಇದನ್ನು ಮಾರ್ಕ್ಸ್ ಅಲ್ಫನ್ಸೊ ಕಾರ್ಟಿ (1822–1876) ಎಂಬ ಇಟಲಿಯ ಸೂಕ್ಷ್ಮ ಅಂಗರಚನಾವಿಜ್ಞಾನಿ ಕಂಡುಹಿಡಿದ. ಇದು ಶ್ರತಿಪೊರೆಯ ವೆಸ್ಟಿಬ್ಯೂಲ್‌ನಾಲೆಯ ಕಡೆ ಇದೆ. ಶ್ರುತಿಪೊರೆಯ ಅಗಲ ಶಂಖದ ಬುಡದ ಕಡೆ 0.21 ಮಿಮೀ., ತುದಿಯ ಕಡೆ 0.36 ಮಿಮೀ. ಇದರ ಮೇಲೆ ಕಾರ್ಟಿಸುರಂಗವಿದೆ. ಇದು 2¾ ಸುತ್ತಿನ ಸೂಕ್ಷ್ಮ ಸುರುಳಿ ನಾಳ. ಇದರ ಗೋಡೆಗಳು 6,000 ಒಳ ಮತ್ತು 4,000 ಹೊರಕಾರ್ಟಿಕೋಲುಗಳೆಂಬ ಜೀವಕೋಶಗಳಿಂದಾಗಿವೆ. ಈ ಸಾಲುಗಳಿಗೆ ಆಚೆ ಮತ್ತು ಒಳಗಡೆ ಒಳರೋಮ ಕಣಗಳಿವೆ. ಆಚೆ ರೋಮಕಣಗಳ ನಡುವೆ ಡೀಟರ್ಸ್‌ನ ಆಸರೆ ಕಣಗಳಿವೆ. ತೀರ ಆಚೆ ಹೆನ್ಸನ್‌ನ ದೊಡ್ಡ ಕಣಗಳಿವೆ. ಇವನ್ನು ಮುಚ್ಚಿದಂತೆ ಬಲೆಪೊರೆಯೆಂಬ ಸೂಕ್ಷ್ಮಪರೆಯಿದೆ. ರೋಮಕಣಗಳ ರೊಮಗಳು ಇದನ್ನು ತೂರುತ್ತವೆ. ಇದರ ಮೇಲೆ ಸಡಿಲಾದ, ಡೀಟರ್ಸ್ ಕಣಗಳಿಗೆ ಅಂಟಿರಬಹುದಾದ, ಟಿಕ್ಟೋರಿಯಲ್ ಪೊರೆಯಿದೆ. ಈ ಪೊರೆ ಸುರುಳಿ ಚಜ್ಜದ ಮೇಲ್ತುಟಿಗೆ ಅಂಟಿಕೊಂಡಿದೆ. ಶ್ರವಣನರತಂತುಗಳು ಮಧ್ಯಗೂಟದಲ್ಲಿರುವ ಸುರುಳಿ ನರಗಂಟಿನಿಂದ ಹೊರಟು ಸುರುಳಿಚಜ್ಜವನ್ನು ತೂರಿ ಒಳ ಮತ್ತು ಹೊರರೋಮ ಕಣಗಳಿಗೆ ಹೋಗುತ್ತದೆ.

ಕಿವಿಯ ಕಾರ್ಯವಿಧಾನ : ಪ್ರಾಣಿಗಳ ವಿಕಾಸದಲ್ಲಿ (ಸರಳವಾದ ಬೆನ್ನು ಮೂಳೆ ಪ್ರಾಣಿಗಳಲ್ಲಿ) ಸರಿಯಾದ ದೇಹವಿನ್ಯಾಸವನ್ನು ನಿಯಂತ್ರಿಸುವುದು ಕಿವಿಯ ಮೊದಲ ವಿಕಾಸದ ಹೆಜ್ಜೆ ಮತ್ತು ಕೆಲಸ. ಮೀನು ಮುಂತಾದ ಕೆಳದರ್ಜೆ ಪ್ರಾಣಿಗಳಲ್ಲಿ ಇದೇ ಕಿವಿಯ ಕೆಲಸ; ಕೇಳುವುದಲ್ಲ. ಇದೇ ಒಳಗಿವಿಯ ವಿಕಾಸದ ಪ್ರಾರಂಭ. ದೇಹ ತಲೆ ಕೆಳಗಾಗದ, ಬೆನ್ನುಕೆಳಗಾಗದ, ಬೀಳದ ಅಥವಾ ವಾಲದ ಸಮಸ್ಥಿತಿಗೆ ಕಣ್ಣುಗಳ ಮತ್ತು ಇತರ ದೇಹಭಾಗಗಳ ಪೇಶಿಗಳ ಸಂತುಲಿತ ಕಾರ್ಯ ಅಗತ್ಯ. ಹೀಗೆ ಪೇಶಿಗಳನ್ನು ಶಿಸ್ತಿನಲ್ಲಿಡುವುದು ವೆಸ್ಟಿಬ್ಯೂಲ್ ಅಂಗದ, ಅದರಲ್ಲೂ ಯುಟ್ರಿಕ್ಲ್ ಮತ್ತು ಅರ್ಧ ವೃತ್ತನಾಳಗಳ ಕೆಲಸ. ಕೆಲವು ಮೀನು ಜಾತಿಗಳಲ್ಲಿರುವಂತೆ ಸ್ಯಾಕ್ಯೂಲಿನ ಕೆಲಸ ಶಬ್ದ ತರಂಗವೇದನೆ. ಸಂಚಾರೀ ಕಶೇರುಕಗಳಲ್ಲಿ ಶ್ರವಣಗ್ರಾಹಕಶಕ್ತಿ ಕ್ರಮವಾಗಿ ಹೆಚ್ಚುತ್ತ ಪಕ್ಷಿ ಮತ್ತು ಸ್ತನಿಗಳಲ್ಲಿ ಉಚ್ಚಸ್ಥಾನವನ್ನು ಹೊಂದಿದೆ. ಇದಕ್ಕೆ ಸಮವಾಗಿ ವೆಸ್ಟಿಬ್ಯೂಲ್ ಕೂಡ, ತನ್ನ ದಾರಿಯಲ್ಲಿ, ಸಂಚಾರಿಗಳಲ್ಲಿ ಹೆಚ್ಚು ಸಂಕೀರ್ಣವಾಗಿ ಹಿಂಗಾಲು ಮುಂಗಾಲುಗಳ ಚಲನೆಗಳಿಗೆ ಸರಿಯಾಗಿ ವಿವಿಧವಾಗುತ್ತದೆ ಮತ್ತು ವಿಶೇಷ ವಿಕಾಸವನ್ನು ಹೊಂದುತ್ತದೆ.

ಸರಿಯಾದ ಶ್ರವಣವ್ಯವಸ್ಥೆಯೆಂದರೆ ಶಬ್ದವನ್ನು ಕೇಳುವ ಮತ್ತು ಶಬ್ದ ತರಂಗಗಳಿಗೆ ಸೂಕ್ತ ಪ್ರತಿಕ್ರಿಯೆ ತೋರಿಸುವ ಶಕ್ತಿಯಿರುವುದು. ಸಾಧಾರಣವಾಗಿ ಅಲುಗಾಡುವ ಹೊರಕಿವಿಗಳೇ ಶಬ್ದತರಂಗಗಳನ್ನು ಗ್ರಹಿಸುತ್ತವೆ. ತಲೆಬುರುಡೆಯಾಗಲಿ ಅಥವಾ ದೇಹದ ಇನ್ನು ಯಾವ ಭಾಗವೇ ಆಗಲಿ ಅಲ್ಲ. ಹೊರಗಿವಿಯಲ್ಲಿ ನುಗ್ಗಿದ ಶಬ್ದದ ಅಲೆಗಳು ಕುಹರದ ಮೂಲಕ ಕಿವಿದಮಟೆ ಮತ್ತು ನಡುಗಿವಿ ಸಣ್ಣಮೂಳೆಗಳ ಸರಣಿಯನ್ನು ಅದಿರಿಸುತ್ತದೆ. ಈ ಸರಣಿ ತೂಗುಸೇತುವೆಯಂತೆ ಆಡಿ ವೆಸ್ಟಿಬ್ಯೂಲ್ ರಂಧ್ರದಲ್ಲಿರುವ ರಿಕಾಬುಪಾದ ಅದಿರುತ್ತದೆ. ಮೂಳೆ ಒಳಗಿವಿ ಹಿಗ್ಗದೆ ಬಿಗಿಯಾಗಿರುವುದರಿಂದಲೂ ಅದರಲ್ಲಿರುವ ನೀರು ಒತ್ತಡದಿಂದ ಕುಗ್ಗದಿರುವುದರಿಂದಲೂ ರಿಕಾಬು ಪಾದ ಸ್ವಲ್ಪ ಒಳ ನುಗ್ಗಿದಾಗ ಗುಂಡುರಂಧ್ರವನ್ನು ಮುಚ್ಚಿರುವ ಚಿಕ್ಕ ತಮಟೆ ಹೊರಕ್ಕೆ ಉಬ್ಬುತ್ತದೆ. ಹೀಗಾಗುವುದು ಶಬ್ದ ಕಂಪನಗಳಿಂದುಂಟಾದ ಅಲುಗಾಟದಿಂದ ಅಲೆಗಳು ವೆಸ್ಟಿಬ್ಯೂಲ್ ನಾಲೆ ನೀರಿನಿಂದ ನಡುಗಿವಿನಾಲೆ ನೀರಿಗೆ ಶ್ರುತಿಗೆ ಸರಿಯಾದ ಶ್ರುತಿಪೊರೆಯ ಭಾಗದ ಮೂಲಕ ಹಾಯುವುದರಿಂದ. ಶ್ರುತಿ ಪೊರೆಯ ಅಗಲ ಶಂಖದ ಬುಡದಿಂದ ತುದಿಯ ಕಡೆ ಹೆಚ್ಚುವುದರಿಂದ ಅದರ ಶ್ರುತಿಶಂಖದ ತುದಿಯಿಂದ ಬುಡದ ಕಡೆಗೆ ಕ್ರಮವಾಗಿ ಹೆಚ್ಚುತ್ತದೆ. ಅಂದರೆ ಮಂದ್ರಸ್ಥಾಯಿಯ ಶ್ರುತಿಗಳು ತುದಿಯ ಕಡೆಯಲ್ಲೂ ತಾರಸ್ಥಾಯಿಯ ಶ್ರುತಿಗಳು ಬುಡದ ಕಡೆಯಲ್ಲೂ ಮಧ್ಯಸ್ಥಾಯಿಯ ಶ್ರುತಿಗಳು ಇವೆರಡರ ಮಧ್ಯದಲ್ಲೂ ಅನುಕ್ರಮವಾಗಿ ಹಾಯುತ್ತವೆ. 2¾ ಕ್ಕಿಂತ ಹೆಚ್ಚು ಸುತ್ತುಗಳ ಶಂಖವಿರುವ ಪ್ರಾಣಿಗಳು ಮನುಷ್ಯ

ಕೇಳಲಾರದ ಶಬ್ದಗಳನ್ನು ಕೇಳಬಲ್ಲುವು. ಡಾಲ್ಟನ್ ಪೀಪಿ ಮನುಷ್ಯನಿಗೆ ಕೇಳಿಸದೆ ನಾಯಿಗೆ ಕೇಳಿಸುವುದು ಈ ಕಾರಣದಿಂದ. ಎರಡೂ ಕಿವಿಗಳಿಗೆ ತಲಪುವ ಅಲೆಗಳು ಸ್ವಲ್ಪ ವ್ಯತ್ಯಾಸವಾಗಿರುವುದರಿಂದ ಶಬ್ದದ ದಿಕ್ಕನ್ನು ತಿಳಿಯಲು ಸಾಧ್ಯ; ಸಂಗೀತದ ಇಂಪೂ ಹೆಚ್ಚು, ಶಬ್ದವೂ ಹೆಚ್ಚು ಕೇಳಿಸುತ್ತದೆ.

ಹೋಲಿಕೆ ಅಂಗರಚನೆ : ಒಳಗಿವಿಯಾಗುವ ಭ್ರೂಣದ ಹೊರಚರ್ಮದ ಒಳ ಬುಡ್ಡೆಯ ಮೂಲವೂ ಮೀನಿನ ಪಾರ್ಶ್ವರೇಖಾಂಗಗಳ ಮೂಲವೂ ಬಹುಶಃ ಒಂದೇ. ಕೆಳಮಟ್ಟದ ಕಶೇರುಕಪ್ರಾಣಿಗಳಲ್ಲಿ ಒಳನೀರ್ಗೊಳವೆ (ಪೊರೆ ಒಳಗಿವಿಯಾಗುವ ಭಾಗ) ತಲೆಯ ಮೇಲಿನ ರಂಧ್ರದ ಮೂಲಕ ಹೊರಕ್ಕೆ ತೆರೆಯುತ್ತದೆ. ಕೆಲವು ಮೆಲ್ಲೆಲುಬು ಮೀನುಜಾತಿಗಳಲ್ಲಿ ಸ್ಯಾಕ್ಯೂಲಿನೊಳಕ್ಕೆ ಮರಳು ನುಗ್ಗುವಷ್ಟು ರಂಧ್ರ ದೊಡ್ಡದಾಗಿರುತ್ತದೆ. ಕೆಲವು ಎಲುಬು ಮೀನುಜಾತಿಗಳಲ್ಲಿ ಈಜುಬುಡ್ಡೆಗೂ ಒಳಗಿವಿಗೂ ನಡುವೆ ಸಣ್ಣ ಮೂಳೆಗಳ ಸರಪಣಿಯಿರುತ್ತದೆ. ದವಡೆಯಿಲ್ಲದ ಗುಂಡುಬಾಯಿ ಮೀನುಗಳಲ್ಲಿ ಪಕ್ಕ ಅರ್ಧವೃತ್ತನಾಳವಿಲ್ಲ. ಪೆಟ್ರೊಮೈಜಾನ್ ಮೀನಿನಲ್ಲಿ ಮೇಲಿನ ಮತ್ತು ಹಿಂದಿನ ಅರ್ಧವೃತ್ತನಾಳಗಳು ಮಾತ್ರ ಇವೆ. ಇವೆರಡೂ ಮೈಸೀನ್ ಮೀನಿನಲ್ಲಿ ಒಂದಾಗಿ ಕಾಣುತ್ತವೆ. ಇನ್ನೂ ಹೆಚ್ಚಿನ ದರ್ಜೆಯ ಮೀನುಜಾತಿಗಳಲ್ಲಿ ಮೂರು ಅರ್ಧವೃತ್ತನಾಳಗಳಿವೆ. ಬಹಳ ಕಶೇರುಕಪ್ರಾಣಿಗಳಲ್ಲಿ ಸುಣ್ಣಕಲ್ಲಿನ ಹರಳುಗಳು ಒಳಗಿವಿಯಲ್ಲಿರುತ್ತವೆ. ಇವು ಬಹು ಚಿಕ್ಕವಾಗಿರಬಹುದು. ಆದರೆ ಮೇಲ್ಜಾತಿಗಳ ಮೂಳೆ ಮೀನುಗಳಲ್ಲಿದ್ದಂತೆ ದೊಡ್ಡವಾಗಿದ್ದರೆ ಇವನ್ನು ಕಿವಿಗಲ್ಲುಗಳೆನ್ನುತ್ತಾರೆ. ಮೀನುಗಳಲ್ಲಿ ಯುಟ್ರಿಕ್ಲ್, ಸ್ಯಾಕ್ಯೂಲ್, ಮೂರು ಅರ್ಧ ವೃತ್ತನಾಳಗಳು, ಒಳನೀರ್ಗೊಳವೆ ಮತ್ತು ಒಂದು ಕುರುಚು ಲೇಗೀನ ಮಾತ್ರ ಒಳಗಿವಿಯ ಭಾಗಗಳು. ಜಲಸಂಚಾರಿಗಳಲ್ಲಿ ಲೇಗೀನ ಎಂಬ ನಾಳದ ಮೂಲದಲ್ಲಿ ಮುಖ್ಯ ವೇದನಸ್ಥಾನವಿದೆ. ಇದೇ ಬಹುಶಃ ಶ್ರವಣನಾಳದ ಮೂಲಸ್ವರೂಪ. ಒಳನೀರ್ಗೊಳವೆ ಚರ್ಮಸಂಬಂಧವನ್ನು ಕಡಿದುಕೊಂಡು ಅನೇಕ ಪ್ರಾಣಿಗಳಲ್ಲಿ ಬೆನ್ನು ಮೂಳೆ ನಳಿಗೆಯಲ್ಲಿ ಲಂಬಿಸಿ ಬೆನ್ನುಮಣಿಗಳ ನಡುವೆ ಇರುವ ತೂತುಗಳ ಮೂಲಕ ಹೊಟ್ಟೆಯೊಳಕ್ಕೆ ಚಾಚಿರುತ್ತದೆ. ಸಾಮಾನ್ಯ ಕಪ್ಪೆಯಲ್ಲಿ ಈ ರೀತಿಯಿದೆ. ಮೊದಲು ಈ ಪ್ರಾಣಿವರ್ಗದಲ್ಲಿ ನಡುಗಿವಿ ಮತ್ತು ಕಿವಿ ಗಂಟಲು ನಾಳೆ ಕಾಣಿಸಿ ಕೊಳ್ಳುತ್ತವೆ. ಹೊರಗಿವಿಯಲ್ಲದೆ ಕಿವಿದಮಟೆ ಚರ್ಮಮಟ್ಟದಲ್ಲಿದ್ದು ಒಂದೇ ಸಣ್ಣ ಮೂಳೆಕಡ್ಡಿಯಿಂದ ಶಬ್ದಕಂಪನಗಳು ಒಳಗಿವಿಯನ್ನು ಮುಟ್ಟುತ್ತವೆ.

ಸರೀಸೃಪಗಳಲ್ಲಿ ಒಳಗಿವಿ ಇನ್ನೂ ಹೆಚ್ಚು ಮುಂದುವರಿಯುತ್ತದೆ. ಆಮೆ, ಹಾವುಗಳಲ್ಲಿ ಜಲಸಂಚಾರಿಗಳಲ್ಲಿರುವಂತೆ ಶ್ರವಣನಾಳ ಕುರುಚಾಗಿ ಮೂಲಾವಸ್ಥೆಯಲ್ಲೇ ಇದೆ. ಮೊಸಳೆಗಳಂಥ ಉನ್ನತ ದರ್ಜೆ ಪ್ರಾಣಿಗಳಲ್ಲಿ ಶ್ರವಣನಾಳೆ ಉದ್ದವಾಗಿ ಸ್ವಲ್ಪ ತಿರುಚಿಕೊಂಡು ಕೊನೆಯಲ್ಲಿ ಸೂಕ್ಷ್ಮ ಲೇಗೀನಾವನ್ನು ಹೊಂದಿದೆ. ಇದರೊಡನೆ ವೆಸ್ಟಿಬ್ಯೂಲ್ ಮತ್ತು ನಡುಗಿವಿನಾಲೆಗಳು ಬೆಳೆಯಲು ಪ್ರಾರಂಭಿಸುತ್ತವೆ. ಒಳನೀರ್ಗೊಳವೆ ಕೆಲಪ್ರಾಣಿಗಳಲ್ಲಿ ಮಿದುಳುಪೆಟ್ಟಿಗೆ ಮತ್ತು ಇನ್ನಿತರ ದೇಹಭಾಗಗಳಿಗೆ ವಿಸ್ತರಿಸುತ್ತದೆ. ಹಾವುಗಳಲ್ಲಿ ಕಿವಿದಮಟೆಯೇ ಇಲ್ಲ; ಮತ್ತು ಶ್ರವಣನಾಳವೂ ಇಲ್ಲದಿರುವುದರಿಂದ ಹಾವುಗಳಿಗೆ ಶಬ್ದ ಕೇಳಿಸುವಂತಿಲ್ಲ; ಹಾವಾಡಿಗನ ಸಂಗೀತ ಕೇಳಿಸದೆ ಹಾವು ಅವನ ಚೇಷ್ಟೆಗಳಿಗೆ ಸರಿಯಾಗಿ ನೋಡಿಕೊಂಡು ಆಡುತ್ತದೆ. ಹಕ್ಕಿಗಳಲ್ಲಿ ಶ್ರವಣನಾಳ ಮೊಸಳೆಗಳಲ್ಲಿದ್ದಂತಿದೆ. ಆದರೆ ಮೇಲಿನ ಅರ್ಧವೃತ್ತನಾಳ ಕೂಡುವೆಡೆ ಈ ಹಿಂದಿನದು ಮೇಲ್ಮಟ್ಟದಲ್ಲಿದೆ. ಕೆಲವು ಹಲ್ಲಿಗಳಲ್ಲಿ ಮತ್ತು ಗೂಗೆಗಳಂಥ ಹಕ್ಕಿಗಳಲ್ಲಿ ಒಂದು ಚಿಕ್ಕ ಚರ್ಮದ ಮಡಿಕೆ ಕರ್ಣದಂತೆ ಕಾಣುವುದು. ಕಾಂಗರೂ ಜಾತಿಯಲ್ಲಿ ಶ್ರವಣನಾಳ ಸರೀಸೃಪಗಳಲ್ಲಿದ್ದಂತೆ ಕುರುಚಾಗಿ ನೇರವಾಗಿದೆ. ಇದಕ್ಕಿಂತ ಮೇಲಿನ ಜಾತಿಗಳ ಸ್ತನಿಗಳಲ್ಲಿ ಶ್ರವಣನಾಳ ಸುರುಳಿಯಾಗಿದೆ; ಅತಿ ದೊಡ್ಡ ಜಂತುವಾದ ತಿಮಿಂಗಿಲದಲ್ಲಿ 1½ ಸುತ್ತಿದ್ದರೆ ಇಲಿ ಜಾತಿಯ ಸೀಲೊಗೊನಿಸ್‌ನಲ್ಲಿ 5 ಸುತ್ತುಗಳಿವೆ. ಸ್ತನಿಗಳಲ್ಲಿ ಲೇಗೀನ ಬಹಳ ಚಿಕ್ಕದಾಗಿದೆ. ಕಾರ್ಟಿಯ ಶ್ರವಣಾಂಗ ಸ್ತನಿಗಳಲ್ಲಿ ಮಾತ್ರ ಇದೆ. ಒಂದು ಕೋಲುಮೂಳೆಗೆ ಬದಲು ಮೂರು ಚಿಕ್ಕ ಮೂಳೆಗಳ ಸರಣಿಯಿದೆ. ಕೆಲವು ಸ್ತನಿಗಳಲ್ಲಿ, ಅದರಲ್ಲೂ ಮಾಂಸಾಹಾರಿಗಳಲ್ಲಿ, ನಡುಗಿವಿ ಉಬ್ಬಿ ಬುಡ್ಡೆಯಂತಿದೆ. ಕಿವಿಯ ಹಿಂದಿನ ಮೂಳೆಯಲ್ಲಿ ಸಣ್ಣ ಗಾಳಿಗೂಡುಗಳಲ್ಲಿ ಮನುಷ್ಯನಲ್ಲಿ ಮಾತ್ರ ಇವೆ.

ಮನುಷ್ಯ ನೆಟ್ಟಗೆ ನಿಂತು ತಲೆಯನ್ನು ಮತ್ತು ದೇಹವನ್ನು ಎಲ್ಲಕಡೆಗೂ ಬೇಗ ಬೇಗ ತಿರುಗಿಸಬಲ್ಲವನಾದ್ದರಿಂದ ಅವನಿಗೆ ಅಲುಗಾಡುವ ಲಂಬಕರ್ಣಗಳ ಅಗತ್ಯವಿಲ್ಲ.

ಭ್ರೂಣದಲ್ಲಿ ಶ್ರವಣಾಂಗದ ಬೆಳವಣಿಗೆ: ಭ್ರೂಣದ ಮೊದಲನೆಯ ಮತ್ತು ಎರಡನೆಯ ಕಿವಿರುಗಳ ಮೇಲೆ ಕರ್ಣ ರೂಪುಗೊಳ್ಳುತ್ತದೆ. ಟ್ರೇಗಸ್ ಮತ್ತು ಹೆಲಿಕ್ಸ್‌ನ ಮುಂಭಾಗ ಮೊದಲು ಕಿವಿರಿನ ಮೇಲೆ ಮೊಳೆಯುವ ಗುಳ್ಳೆಗಳಿಂದಲೂ ಪ್ರತಿಟ್ರೇಗಸ್, ಪ್ರತಿಹೆಲಿಕ್ಸ್ ಮತ್ತು ಹಾಲೆಗಳು ಎರಡನೆಯ ಕಿವಿರಿನ 3 ಗುಳ್ಳೆಗಳಿಂದಲೂ ಆಗುತ್ತವೆ. ಡಾರ್ವಿನ್‌ಗುಳ್ಳೆ ಈ ಎರಡು ಕಿವಿರುಗಳು ಬೆನ್ನಕಡೆ ಸೇರುವುದಕ್ಕಿಂತ ಸ್ವಲ್ಪ ಮೇಲಿದೆ. ಇವೆರಡರ ಸಂದಿಯಲ್ಲಿ ಕರ್ಣಕುಹರದ ನಿರ್ಮಾಣವಾಗುತ್ತದೆ. ಭ್ರೂಣದ ಗಂಟಲಲ್ಲಿ ಒಳ ಮೊದಲ ಕಿವಿರು ಸಂದಿನಿಂದ ಕಿವಿಗಂಟಲು ಕೊಳವೆ ಮತ್ತು ಮಧ್ಯಕಿವಿಗಳು ಬೆಳೆಯುತ್ತವೆ. ಕಿವಿದಮಟೆ ಮೊದಲ ಕಿವಿರು ಸಂದುಪಡೆಯಿಂದಾದುದು; ಅದರಿಂದಲೇ ಅದರ ಹೊರಪೊರೆಯು ಭ್ರೂಣದ ಹೊರಚರ್ಮದಿಂದಲೂ ಒಳಲೋಳೆಪೊರೆ ಒಳಚರ್ಮದಿಂದಲೂ ಮಧ್ಯಪೊರೆ ಮಧ್ಯಚರ್ಮದಿಂದಲೂ ಆದುವು. ಮಧ್ಯಕಿವಿಯ ಚಿಕ್ಕ ಮೂಳೆಗಳು ಮೀನುಗಳಂಥ ಕೆಳದರ್ಜೆ ಪ್ರಾಣಿಗಳಲ್ಲಿರುವಂಥ ಕಿವಿರು ಪಂಜರದಿಂದ ರೂಪುಗೊಂಡುವು. ಪೊರೆ ಒಳ ಕಿವಿ ಭ್ರೂಣದ ತಲೆಯ ಒಳಚರ್ಮದಲ್ಲಿ ಗುಳಿಯಂತೆ ಮೊದಲಾಗಿ. ಗುಳಿ ಮುಚ್ಚಿ ಬುಡ್ಡೆಯಾಗಿ, ಈ ಬುಡ್ಡೆಯ ಚರ್ಮದಿಂದ ಬೇರ್ಪಟ್ಟು ಸ್ತನಿಗಳಲ್ಲಿ ಅಂಜೂರದಾಕಾರದ ಕೋಶವಾಗುತ್ತದೆ. ಈ ಕೋಶದ ಕೆಳಭಾಗ ಚಿಗುರಿ ಶ್ರವಣನಾಳವಾಗುತ್ತದೆ. ಮೇಲ್ಭಾಗದಿಂದ ಮೂರು ಚಕ್ರಾಕಾರದ ಪೊಳ್ಳುತಟ್ಟೆಗಳು ಬೆಳೆದು ಇವುಗಳ ಮಧ್ಯಭಾಗಗಳು ಕರಗಿ ಅಂಚುಗಳು ಅರ್ಧವೃತ್ತನಾಳಗಳಾಗುತ್ತವೆ. ಅನಂತರ ಕೋಶದ ಮಧ್ಯಭಾಗ ಬೆಳೆಯದೆ ಸಣ್ಣಗಿದ್ದು ಸ್ಯಾಕ್ಯೂಲ್, ಯುಟ್ರಿಕ್ಲ್ ಆಗುತ್ತವೆ. ಕೋಶದ ಸುತ್ತಲಿರುವ ಮಧ್ಯಚರ್ಮ ಮೆಲ್ಲೆಲುಬಾಗಿ ಕ್ರಮೇಣ ಎಲುಬಾಗಿ ಮೂಳೆ ಒಳಗಿವಿಯಾಗಿ ಕಿವಿಮೂಳೆಯಲ್ಲಿ ಸೇರಿಹೋಗುತ್ತದೆ. ಎರಡೂ ಶ್ರವಣನಾಳೆಗಳಿಲ್ಲದವರು ಹುಟ್ಟು ಕಿವುಡುಮೂಗರು. (ಎಂ.ಡಿ.)

ಕಿವಿಯ ಉಗಮ ಮತ್ತು ವಿಕಾಸ : ಕಿವಿಯ ಉಗಮವನ್ನು ಪ್ರಾಚೀನಕಾಲದ ಮೀನುಗಳಲ್ಲಿ ಕಾಣಬಹುದು. ಮೊದಲು ದೇಹದ ಮೇಲುಮೈಯಲ್ಲಿದ್ದ ಅಂಗವೊಂದು ದೇಹದೊಳಕ್ಕೆ ಇಳಿದು ಒಳಗಿವಿಯಾಗಿ ಮಾರ್ಪಟ್ಟಿರಬಹುದೆಂದು ಊಹಿಸಲಾಗಿದೆ. ಪ್ರಾಚೀನಕಾಲದ ಮೀನುಗಳಾದ ಆಸ್ಟ್ರಕೊಡರ್ಮಿ, ಫುಪ್ಫುಸ ಮೀನು ಮತ್ತು ಅಕ್ಯಾಂತೋಡಿಯ ಗುಂಪಿಗೆ ಸೇರಿದ ಕೆಲವು ಪ್ರಾಣಿಗಳಲ್ಲಿ ಕಾಣಬರುವ ರಂಧ್ರನಾಲಾಮಂಡಲದಿಂದ ಒಳಗಿವಿ ಉದ್ಭವಿಸಿರಬಹುದೆಂದು ಹೇಳಲಾಗಿದೆ. ಇಂದಿನ ಕಶೇರುಕಗಳ ಒಳಗಿವಿಯಲ್ಲಿ ಕಾಣಬರುವ ಅರ್ಧವೃತ್ತನಾಳಗಳು ಇತ್ತೀಚಿನ ರಚನೆಗಳಲ್ಲ. ಅತ್ಯಂತ ಪ್ರಾಚೀನವಾದ ಸೈಲೂರಿಯನ್ ಕಾಲದ ಕಶೇರುಕಗಳಲ್ಲೂ ಇವು ಇದ್ದುವು.

ಮೀನುಗಳಲ್ಲಿ ಪಾರ್ಶ್ವಪಂಕ್ತಿಮಂಡಲವೆಂಬ ಇಂದ್ರಿಯಾಂಗಸಂಗ್ರಹ ಉಂಟು. ಇದು ನೀರಿನ ಚಲನೆಗೆ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಆದರೆ ಶಬ್ದವನ್ನು ಇದು ಗ್ರಹಿಸಲಾರದು. ಆದರೆ ನೀರಿನಲ್ಲಿ ಒಂದು ನಿಜವಾದ ಶಬ್ದಮೂಲ ನೀರಿನ ಚಲನೆಯನ್ನೂ ಸನಿಹದ ಕ್ಷೇತ್ರದಲ್ಲಿ ಒತ್ತಡದ ಅಲೆಗಳನ್ನೂ ಉತ್ಪತ್ತಿ ಮಾಡಿ ಪಾರ್ಶ್ವಪಂಕ್ತಿಯನ್ನು ಪ್ರಚೋದಿಸುತ್ತದೆ. ಆದ್ದರಿಂದ ಪಾರ್ಶ್ವಪಂಕ್ತಿ ಸನಿಹ ಕ್ಷೇತ್ರದ ಶಬ್ದಕ್ಕೆ ಸಂವೇದನೆಯನ್ನು ತೋರುತ್ತದೆ ಎಂದು ಹೇಳಬಹುದು. ಒತ್ತಡದ ಅಲೆಗಳ ಗ್ರಹಿಕೆಯೇ ನಾವು ಸಾಮಾನ್ಯವಾಗಿ ಹೇಳುವ ಶ್ರವಣಕ್ರಿಯೆ. ಪಾರ್ಶ್ವಪಂಕ್ತಿಗೆ ನೇರವಾಗಿ ಶಬ್ದಗಳನ್ನು ಗ್ರಹಿಸುವ ಸಾಮರ್ಥ್ಯ ಇಲ್ಲ. ತಲೆ ಬುರುಡೆಯ ಆಳದಲ್ಲಿರುವ ಒಳಗಿವಿ, ದೇಹದ ಬಾಹ್ಯ ಪರಿಸರದಲ್ಲಿ ಉಂಟಾಗುವ ಸನಿಹಕ್ಷೇತ್ರದ ಚಲನೆಗಳಿಗೆ ದೇಹದ ಹೊರಮೈಯಲ್ಲಿರುವ ಪಾರ್ಶ್ವಪಂಕ್ತಿಯಷ್ಟೇ ಸಮರ್ಥವಾಗಿ ಸಂವೇದನೀಯವಾಗಲಾರದು. ಆದ್ದರಿಂದ ಮೀನುಗಳಲ್ಲಿ ಕೇವಲ ಸಂತುಲನಾಂಗವಾಗಿ ಕಾಣಿಸಿಕೊಂಡ ವಾಯುಕೋಶ ಒತ್ತಡ ಭಿನ್ನತೆಗಳನ್ನು ನೀರಿನ ಚಲನೆಗಳಾಗಿ ಪರಿವರ್ತಿಸುವ ಕ್ರಿಯೆಯನ್ನು ವಹಿಸಿಕೊಂಡಿತು. ಇದರಿಂದಾಗಿ ಹೊಸದೊಂದು ಸಂವೇದನಾ ನಾಲೆ ರೂಪುಗೊಂಡಿತು ಮತ್ತು ಇದುವರೆಗೆ ಹೊರ ಜಗತ್ತಿನ ಸಂಪರ್ಕದಿಂದ ದೂರವಾಗಿದ್ದ ಒಳಗಿವಿ ಹೊರಜಗತ್ತಿನೊಡನೆ ಸಂಪರ್ಕ ಪಡೆಯಿತು. ಈಗ ಅದು ಒತ್ತಡದ ಅಲೆಗಳಿಗೆ ಸಂವೇದನೀಯವಾಯಿತು. ಹೀಗೆ ಸಂವೇದನೀಯ ಸುರಂಗವೊಂದು ಏರ್ಪಟ್ಟಿತು. ಕೆಲವು ಸಣ್ಣ ಮೂಳೆಗಳನ್ನು (ಆಸಿಕಲ್ಸ್) ಒಳಗೊಂಡ ಈ ವಾಯುಕೋಶವನ್ನು ಈಗ ಸ್ಪಷ್ಟವಾಗಿ ನಡುಗಿವಿ ಎಂದು ಕರೆಯಬಹುದು. ಈ ನಡುಗಿವಿಯ ಕ್ರಿಯಾವಿಧಾನ ನೆಲದ ಮೇಲಿನ ಕಶೇರುಕಗಳ ನಡುಗಿವಿಯನ್ನೇ ಹೆಚ್ಚಾಗಿ ಹೋಲುತ್ತದೆ. ಆದರೆ ನೆಲದ ಮೇಲೆ ವಾಸಿಸುವ ಕಶೇರುಕಗಳ ನಡುಗಿವಿ ಫ್ಯಾರಿಂಕ್ಸ್‌ನ ಮೊದಲನೆಯ ಅಥವಾ ಸ್ಪೈರಕಲ್ ಸಂಖ್ಯೆಯಿಂದ ಉದ್ಭವಿಸುತ್ತದೆ. ಫ್ಯಾರಿಂಕ್ಸ್‌ನಿಂದ ಉದ್ಭವಿಸಿದ ಈ ನಡುಗಿವಿ ವಾಯುಕೋಣೆ ನಡುಗಿವಿಗಿಂತಲೂ ಹೆಚ್ಚು ಸಮರ್ಥವಾದುದೆಂದು ತಿಳಿದಿದೆ.

ಆದಿಮೀನುಗಳಲ್ಲಿ ಸ್ಪೈರಕಲ್ ಅಪಸರಣಾಂಗ ಅಗಲವಾದ, ಚಪ್ಪಟೆಯಾದ, ಯಾವ ಭಾಗಕ್ಕೂ ಸಂಬಂಧವಿರದ ಸಂಚಿರೂಪದ ರಚನೆ. ಹೈಯೊಮ್ಯಾಂಡಿಬುಲಾರ್ ಮತ್ತು ಪ್ಯಾರೊಟಿಡ್ ದಂತಫಲಕ ಹಾಗು ಪ್ಯಾಲೆಟೊಕ್ವಾಡ್ರೇಟಗಳ ನಡುವೆ ಅಪ್ಪಚ್ಚಿಯಾಗಿತ್ತು. ವಿಕಾಸದ ಅನಂತರದ ಹಂತಗಳಲ್ಲಿ ಈ ಅಪಸರಣಾಂಗ ಹೈಯೊಮ್ಯಾಂಡಿಬುಲಾರನ್ನು ಇತರ ರಚನೆಗಳಿಗೆ ಬಂಧಿಸುವ ಅಸ್ಥಿರಜ್ಜುವಿಗೆ ನಿಕಟವಾಗಿ ಹೊಂದಿಕೊಂಡು ಇಪ್ಪದರದ ಪಟಲವಾಯಿತು. ಈ ಊಹಾಪಟಲವೇ ಚತುಷ್ಪಾದಿಗಳ ಟಿಂಪನಿಕ ಪಟಲದ ಸಾದೃಶ ರಚನೆ. ಆದ್ದರಿಂದ ಮೀನುಗಳ ಹಂತದಲ್ಲಿಯೇ ಕಿವಿದಮಟೆಯೊಂದು ರೂಪುಗೊಂಡಿತ್ತು. ಇದರ ಬಡಿತಗಳನ್ನು ಒಳಗಿವಿಗೆ ನಿವೇದಿಸುವ ಕ್ರಿಯೆಯನ್ನು ಹೈಯೊಮ್ಯಾಂಡಿಬುಲಾರ್ ಮೂಳೆ ವಹಿಸಿಕೊಂಡಿತು (ಇದನ್ನು ಕಪ್ಪೆಗಳಲ್ಲಿ ಕಾಣಬಹುದು).

ಹೈಯೊಮ್ಯಾಂಡಿಬುಲಾರ್‌ನಿಂದಲೇ ಚತುಷ್ಪಾದಿಗಳ ಸ್ಟೇಪಿಸ್ ಅವತರಿಸಿದುದು. ಆದ್ದರಿಂದ ಪ್ರಾಚೀನ ಮೀನುಗಳಲ್ಲಿ ಕಿವಿದಮಟೆ ಮತ್ತು ಕಿವಿಯ ಸಣ್ಣ ಮೂಳೆಗಳು ಇದ್ದುವು ಎಂದು ಹೇಳಬಹುದು.

ಶಬ್ದವನ್ನು ಒಳಗಿವಿಗೆ ಒಯ್ದು ಮುಟ್ಟಿಸುವ ಅಂಗಗಳ ರಚನೆ ಮತ್ತು ವರ್ತನೆಯಲ್ಲಿ ಮೀನುಗಳಿಗೂ ಚತುಷ್ಪಾದಿಗಳಿಗೂ ವ್ಯತ್ಯಾಸವಿದೆ. ಇದು ನೀರಿನ ಒಳಗೆ ಮತ್ತು ನೆಲದ ಮೇಲಿನ ಶಬ್ದಗ್ರಹಣದಲ್ಲಿ ಇರುವ ಮೂಲ ವ್ಯತ್ಯಾಸದಿಂದ ಉಂಟಾಗಿದೆ. ನೀರಿನ ಮಾಧ್ಯಮದ ಮೂಲಕ ಶಬ್ದದ ಅಲೆಗಳು ಸುಲಭವಾಗಿ ಹಾದುಹೋಗಬಲ್ಲುವು. ಆದರೆ ನೆಲದ ಮೇಲೆ ಇದು ಸಾಧ್ಯವಿಲ್ಲ. ಆದ್ದರಿಂದ ಚತುಷ್ಪಾದಿಗಳ ಶಬ್ದಗ್ರಾಹಿ ಅಂಗದಲ್ಲಿ (ನಡುಗಿವಿ) ಒತ್ತಡದ ಕ್ಷೇತ್ರಕ್ಕೆ ಪ್ರತಿಫಲಿಸುವ ಸಾಮರ್ಥ್ಯವುಳ್ಳ ಪಟಲವೊಂದು (ಟಿಂಪೆನಮ್) ಮತ್ತು ಈ ಪಟಲದ ಆವೇಗಗಳನ್ನು ಒಳಗಿವಿಗೆ ಸಾಗಿಸಬಲ್ಲ ರಚನೆ (ಸ್ಟೇಪಿಸ್) ಅಥವಾ ರಚನೆಗಳು ಹಾಗೂ ಟಿಂಪೆನಮ್ ಮತ್ತು ಸ್ಟೇಪಿಸ್‌ಗಳು ಸರಾಗವಾಗಿ ಚಲಿಸಲು ಸಾಧ್ಯವಾಗುವಂತೆ ಗ್ರಾಹಿಪಟಲದ ಹಿಂಭಾಗದಲ್ಲಿ ವಿಶೇಷ ಕೋಟರವೊಂದು ಬೇಕಾದುವು. ನಡುಗಿವಿ ಕೋಟರ ಅಥವಾ ಟಿಂಪೆನಿಕ್ ಕೋಟರ ಇದ್ದ ಬಗೆಗೆ ಅನೇಕ ಪಳೆಯುಳಿಕೆಗಳಲ್ಲಿ ಸುಳಿವು ಸಿಕ್ಕದಿದ್ದರೂ ಅದು ಇದ್ದಿರಲೇ ಬೇಕು. ಇದೇ ಕ್ರಮೇಣ ಚತುಷ್ಪಾದಿಗಳ ನಡುಗಿವಿಯಾಗಿರಬೇಕು.

ನೀರಿನ ವಾಸ್ತವ್ಯಕ್ಕೂ ನೆಲದ ವಾಸ್ತವ್ಯಕ್ಕೂ ಆಹಾರ ಸೇವನೆಯ ಕ್ರಮದಲ್ಲಿ ವ್ಯತ್ಯಾಸಗಳಿರುವುದರಿಂದ ತನ್ನ ಆಧಾರಕ್ರಿಯೆಯಿಂದ ಹೈಯೊಮ್ಯಾಂಡಿಬುಲಾರ್‌ಗೆ ಬಿಡುಗಡೆ ದೊರಕಿತು. ಅದು ಉಸಿರಾಟಕ್ಕೆ ಪುಪ್ಫುಸಗಳನ್ನೇ ಹೆಚ್ಚಾಗಿ ಅವಲಂಬಿಸಿದುದರಿಂದಾಗಿ ಕಿವಿರುಕವಚ, ಅಂಗಕಮಾನುಗಳ ಅಸ್ಥಿಪಂಜರ ಮತ್ತು ಅವುಗಳಿಗೆ ಸಂಬಂಧಿಸಿದ ಸ್ನಾಯುಗಳು ಈಗ ಅನಗತ್ಯವಾದವು. ಅವು ಕ್ರಮೇಣ ಕ್ಷೀಣಿಸಿ ಮಾರ್ಪಾಡುಗೊಂಡು ಅವನ್ನು ಆವರಿಸಿದ್ದ ಹೈಯೊಮ್ಯಾಂಡಿಬುಲಾರದಲ್ಲಿ ಕರ್ಣೇಂದ್ರಿಯದ ರೂಪರಚನೆಯ ಪುನರ್ನಿರ್ಮಾಣಕ್ಕೆ ಎಡೆಮಾಡಿಕೊಟ್ಟುವು.

ನಡುಗಿವಿಯ ಮಾರ್ಪಾಟುಗಳು ಹೊಂದಾಣಿಕೆಯ ಶಬ್ದಗ್ರಹಣ ಮತ್ತು ಅದರ ಸಂವೇದನೆಗೆ ಪ್ರಧಾನವಾದ ಹೆಜ್ಜೆ. ಸರೀಸೃಪಗಳು ಮತ್ತು ದ್ವಿಚರಿಗಳು ವಿವಿಧ ರೀತಿಯ ಮಾರ್ಪಾಡುಗಳನ್ನು ತೋರುತ್ತವೆ. ಇವೆಲ್ಲವೂ ಕ್ಷೀಣವಾದ ರಚನೆಗಳು ಎಂದು ಹೇಳುವೆವಾದರೂ ವಿವಿಧ ರೀತಿಯ ಜೀವನ ಕ್ರಮಗಳಿಗೆ ಹೊಂದಿಕೊಳ್ಳಲು ನಡೆಸಿದ ಮಾರ್ಪಾಡುಗಳು ಇವು ಎನ್ನುವುದನ್ನು ಮರೆಯಬಾರದು. ಒಂದು ವಾಕ್ಯದಲ್ಲಿ ಕಶೇರುಕಗಳ ಶ್ರವಣೇಂದ್ರಿಯ ವಿಕಾಸವನ್ನು ಹೇಳಬಹುದಾದರೆ ಉಸಿರಾಟದ ಸಹಾಯಕಾಂಗಗಳು ಆಹಾರಸೇವನೆಯ ಸಹಾಯಕಾಂಗಗಳಾಗಿ ಮಾರ್ಪಟ್ಟು ಅಂತಿಮವಾಗಿ ಕರ್ಣೇಂದ್ರಿಯ ಸಹಾಯಕಾಂಗಗಳಾಗಿ ಪರಿರ್ತಿತವಾಗಿವೆ.

19 ಮತ್ತು 20ನೆ ಶತಮಾನದ ತುಲನಾತ್ಮಕ ಅಂಗರಚನಾವಿಜ್ಞಾನದ ಅಭ್ಯಾಸಗಳು ಸ್ತನಿಗಳ ನಡುಗಿವಿಯಲ್ಲಿನ ಮೂರು ಶಬ್ದವಾಹಕ ರಚನೆಗಳಲ್ಲಿ ಎರಡು ಸರೀಸೃಪಗಳ ತಲೆಬುರುಡೆ ಮತ್ತು ದವಡೆಗಳ ನಡುವಿನ ಕೀಲಿನ ಮೂಳೆಗಳು ಎಂದು ಗುರುತಿಸಬಹುದೆಂಬುದನ್ನು ತೋರಿಸಿಕೊಟ್ಟುವು. ಈ ಮೂಳೆಗಳಿಗೆ ಶಬ್ದವಾಹಕ ಕ್ರಿಯೆಯಲ್ಲಿ ಯಾವ ಪಾತ್ರವೂ ಇರಲಿಲ್ಲ. ಜೀವಂತ ಸರೀಸೃಪಗಳ ಹಾಗೂ ಸ್ತನಿಗಳ ವಿವರವಾದ ಅಭ್ಯಾಸಗಳು ಕೂಡ ಈ ಮೂಳೆಗಳು ದವಡೆಗಳಿಂದ ಕಿವಿಗಳಿಗೆ ಏಕೆ ಮತ್ತು ಹೇಗೆ ವರ್ಗಾಯಿಸಲ್ಪಟ್ಟುವು ಎಂಬ ಪ್ರಶ್ನೆಗೆ ಉತ್ತರವನ್ನು ಕೊಡಲಾರದಾದುವು. ಆದರೆ ಈಗ ಪಳೆಯುಳಿಕೆ ವಿಜ್ಞಾನದ ಕೆಲವು ಸಾಕ್ಷ್ಯಗಳು ಈ ಪ್ರಶ್ನೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತಿವೆ. ಬಹುಶಃ ಸ್ತನಿಗಳ ನಡುಗಿವಿ ರೂಪುಗೊಂಡ ವಿವಿಧ ಅವಸ್ಥೆಗಳ ಶ್ರೇಣಿಯನ್ನು ಇವು ಸೂಚಿಸಬಹುದು.

ಸ್ತನಿಗಳಲ್ಲದ ಚತುಷ್ಪಾದಿಗಳಲ್ಲಿ ಮತ್ತು ಸರೀಸೃಪಗಳಲ್ಲಿ ಹೊರಮೈಯಲ್ಲಿರುವ ಟಿಂಪೆನಮ್ ಮತ್ತು ಕರ್ಣಕೋಟರದ ದ್ವಾರವಾದ ಫೆನೆಸ್ಟ್ರ ಓವಾಲಿಸ್‌ಗೆ ಅಂಟಿಕೊಂಡ ಸ್ಟೇಪಿಸ್ ಎಂಬ ಸರಳು ರೂಪದ ಮೂಳೆಗಳೇ ಶಬ್ದವಾಹಕ ತಂತ್ರಜಾಲವಾಗಿದ್ದುವು. ಈ ವ್ಯೂಹ ಕೊಂತದಂತೆ ಕೆಲಸಮಾಡುತ್ತದೆ. ಗಾಳಿಯಲ್ಲಿ ಉತ್ಪತ್ತಿಯಾಗುವ ದುರ್ಬಲ ಒತ್ತಡದ ಬದಲಾವಣೆಗಳು ವಿಶಾಲವಾದ ಟಿಂಪೆನಮ್ ಮತ್ತು ಅದಕ್ಕಂಟಿಕೊಂಡ ಸ್ಟೇಪಿಸನ್ನು ಪಟುಗೊಳಿಸುತ್ತವೆ ಮತ್ತು ಒಳಗಿವಿಯ ಫೆನೆಸ್ಟ್ರ ಓವಾಲಿಸ್ ಬಳಿ ಬಲವಾದ ಒತ್ತಡಗಳಾಗಿ ಪರಿವರ್ತನೆಯಾಗುತ್ತವೆ.

ಸ್ತನಿಗಳ ಇತಿಹಾಸದಲ್ಲಿ ಕಿವಿಯ ಭಾಗದ ಪ್ರಧಾನ ಪುನರ್‌ಚನೆಯೊಂದು ನಡೆಯಿತು. ಆಗ ನಡುಗಿವಿಯ ಪರಿವರ್ತನಾ ತಂತ್ರಜಾಲಕ್ಕೆ ಅನೇಕ ಹೊಸ ರಚನೆಗಳು ಸೇರಿದುವು. ಪ್ರಾಚೀನ ಚತುಷ್ಪಾದಿಗಳ ವ್ಯೂಹಕ್ಕೆ ಸನ್ನೆಗೋಲು ವಿಧಾನವೊಂದು ಸೇರಿತು. ಈ ವಿಧಾನದಲ್ಲಿ ಟಿಂಪೆನಮ್ ಅನ್ನು ಆಧರಿಸುವ ಮ್ಯಾಲಿಯಸ್, ಇಂಕಸ್ ಮತ್ತು ಎಕ್ಟೊಟಿಂಪೆನಿಕ್ ಮುಖ್ಯವಾದುವು.

ಸ್ತನಿಯ ಭ್ರೂಣವೊಂದರ ಕೆಳದವಡೆ ಮತ್ತು ನೆರೆಯ ರಚನೆಗಳನ್ನು ಮುಂದುವರಿದ ಸ್ತನಿ ಆಕಾರದ ಸರೀಸೃಪಗಳೊಡನೆ ಹೋಲಿಸಿ ಸ್ತನಿಗಳ ನಡುಗಿವಿಯ ಮೂಳೆಗಳಿಗೂ ಸರೀಸೃಪಗಳ ದವಡೆಯ ಅಂಶಗಳಿಗೂ ಇರುವ ಸಾದೃಶ್ಯವನ್ನು ತೋರಿಸಬಹುದು. ಸರೀಸೃಪಗಳ ಆರ್ಟಿಕ್ಯುಲಾರ್ ಮೂಳೆ ಸ್ತನಿಗಳ ನಡುಗಿವಿಯ ಮ್ಯಾಲಿಯಸ್ ಸಣ್ಣಮೂಳೆಯಾಗಿದೆ. ಹಾಗೆಯೇ ಸರೀಸೃಪದ ಕ್ವಾಡ್ರೇಟ್ ಇಂಕಸ್ ಆಗಿಯೂ, ಆಂಗ್ಯುಲಾರ್ ಎಕ್ಟೊಟಿಂಪೆನಿಕ್ ಆಗಿಯೂ ಮಾರ್ಪಾಡಾಗಿವೆ.

ಈ ಸಾದೃಶ್ಯಗಳನ್ನು ಗುರುತಿಸಿ ಒಪ್ಪಿಕೊಂಡು ಹಲವು ವರ್ಷಗಳು ಕಳೆದು ಹೋದರೂ ಕೆಲವು ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಸಿಕ್ಕಿಲ್ಲ. ಮೊದಲನೆಯದಾಗಿ ಕೆಳದವಡೆಯ ಆಧಾರರಚನೆಗಳಾದ ಆರ್ಟಿಕ್ಯುಲಾರ್ ಮತ್ತು ಆಂಗ್ಯುಲಾರ್‌ಗಳು ತಮ್ಮ ಪ್ರಾಚೀನ ಕ್ರಿಯೆಯಿಂದ ಬಿಡುಗಡೆಯಾದುದು ಏಕೆ ? ಎರಡನೆಯದಾಗಿ ಈ ಬಿಡುಗಡೆ ದೊರಕಿದ ಮೇಲೆ ಅವು ಹೇಗೆ ಮತ್ತು ಏಕೆ ನಡುಗಿವಿಯ ತಂತ್ರಜಾಲದಲ್ಲಿ ಸೇರಿಹೋದುವು. ಅವಕ್ಕೆ ಕೆಲಸ ಇಲ್ಲದೆ ಹೋಗಿದ್ದರೆ ವರ್ಜಿತವಾಗಿ ಕಳೆದುಹೋಗಬಹುದಾಗಿತ್ತಲ್ಲ?

ಇತ್ತೀಚೆಗೆ ದೊರಕಿದ ಕೆಲವು ಪಳೆಯುಳಿಕೆಗಳು ಈ ಪ್ರಶ್ನೆಗಳ ಮೇಲೆ ಹೊಸ ಬೆಳಕು ಚೆಲ್ಲಲು ಸಹಾಯಕವಾಗಿವೆ. ಈ ಪ್ರಶ್ನೆಗಳಿಗೆ ಅವು ಆಧಾರಪೂರ್ವಕವಾಗಿ ಉತ್ತರ ಕೊಡಲಾರವು. ಆದರೂ ಏನು ನಡೆದಿರಬಹುದೆಂಬುದನ್ನು ಊಹಿಸಲು ನೆರವಾಗಿವೆ. ಆದಿಯ ಟ್ರೈಯಾಸಿಕ್ ಅವಧಿಯ ತ್ರೈನಾಕ್ಸೊಡಾನ್ ಮತ್ತು ಅಂತ್ಯಟ್ರೈಯಾಸಿಕ್‌ನ ಬೈನೊತೀರಿಯಮ್ ಎಂಬ ಸೈಯನೊಡಾಂಟ್‌ಗಳ ಪಳೆಯುಳಿಕೆಗಳು ಈ ದಿಸೆಯಲ್ಲಿ ಮಹತ್ತ್ವದ ಸಾಕ್ಷ್ಯಗಳನ್ನು ಒದಗಿಸುತ್ತವೆ. ಬೈನೊತೀರಿಯಮ್ ಸ್ತನಿಗಳನ್ನು ಬಹಳವಾಗಿ ಹೋಲುವ ಸರೀಸೃಪ. ಈ ಆಧಾರಗಳಿಂದ ಹಿಂದೆ ಹಾಕಿದ ಪ್ರಶ್ನೆಗಳಿಗೆ ಈಗ ಉತ್ತರವನ್ನು ಹೇಳುವ ಸಾಹಸ ಪ್ರಯತ್ನಕ್ಕೆ ತೊಡಗಬಹುದು.

ಸರೀಸೃಪಗಳ ಮತ್ತು ಆದಿ ಸ್ತನಿ ವಿಕಾಸದಲ್ಲಿ ತಲೆಬುರುಡೆಯ ಎತ್ತರ ಕಡಿಮೆಯಾಗುವ ಪ್ರವೃತ್ತಿ ತಲೆದೋರಿತು. ಇದರಿಂದಾಗಿ ಮಾಂಸಗಳು ಮೂಳೆಗಳಿಗೆ ಅಂಟಿಕೊಳ್ಳುವ ಕ್ರಮದಲ್ಲಿ ಪುನಃ ಪರಿಶೀಲನೆ ನಡೆದು ಪುನರ್ ವ್ಯವಸ್ಥೆಯಾಯ್ತು. ಈ ಕಾರಣದಿಂದ ಕೆಳದವಡೆಯ ಡೆಂಟರಿ ಮೂಳೆಯ ಪಶ್ಚಭಾಗದ ಮೂಳೆಗಳು ಕ್ರಮೇಣ ಕ್ಷೀಣವಾದುವು. ಮಾಂಸಗಳು ಡೆಂಟರಿ ಮೂಳೆಗಳಿಗೆ ಅಂಟಿಕೊಂಡುದರಿಂದ ಅವುಗಳ ಗಾತ್ರ ದೊಡ್ಡದಾಯಿತು. ಟ್ರೈಯಾಸಿಕ್ ಅವಧಿಯ ಅಂತ್ಯದ ಹೊತ್ತಿಗೆ ಈ ಪ್ರವೃತ್ತಿಗಳು ಪರಾಕಾಷ್ಠೆಯನ್ನು ತಲುಪಿದುವು. ಹೀಗೆ ವಿಸ್ತಾರವಾಗಿ ಬೆಳೆದ ಡೆಂಟರಿ ಸ್ತನಿಗಳಲ್ಲಿರುವಂತೆ ನೇರವಾಗಿ ಸ್ಕ್ವಾಮೋಸಲ್‌ಗೆ ಅಂಟಿಕೊಂಡಿತು ಮತ್ತು ಕೆಳದವಡೆ ತಲೆ ಬುರುಡೆಯೊಂದಿಗೆ ಹೊಸ ರೀತಿಯಲ್ಲಿ ಕೀಲಿಕೊಂಡಿತು. ಈ ಕಾಲದಿಂದೀಚೆಗೆ ಡೆಂಟರಿ ಪಶ್ಚ ಮೂಳೆಗಳು ತಮ್ಮ ದವಡೆ ಆಧಾರ ಕ್ರಿಯೆಯಿಂದ ವಂಚಿತವಾಗಿ, ವರ್ಜಿತವಾಗಿ, ಡೆಂಟರಿ ವಿಸ್ತಾರವಾದಂತೆ ಸ್ಥಾನಪಲ್ಲಟವಾದುವು. ಈ ಅವಸ್ಥೆಯನ್ನು ಬೈನೊತೀರಿಯಮ್‌ನಲ್ಲಿ ಸ್ಪಷ್ಟವಾಗಿ ಕಾಣಬಹುದು. ಅದರ ಕಿವಿ ಸ್ತನಿಯ ಕಿವಿಯಾಗಲು ಆಗಲೇ ಪೂರ್ವಸಜ್ಜಿತವಾಗಿತ್ತು. ಆದ್ದರಿಂದ ಸ್ತನಿಯ ನಡುಗಿವಿ ತಂತ್ರಜಾಲದ ಉದ್ಭವ ತೀರಾಪ್ಪಿಡದ ಅಗಿಯುವ ಉಪಕರಣದ ಮೇಲೆ ಪ್ರಥಮವಾಗಿ ನಡೆದ ಆಯ್ಕೆಯ ಒತ್ತಡದ ಪರಿಣಾಮ. ಈ ಕ್ರಿಯಾಜಟಿಲತೆ ಉಂಟಾದ ಬಳಿಕ, ಸ್ತನಿಮಟ್ಟದ ರಚನಾ ವಿನ್ಯಾಸವನ್ನು ತಲುಪಿದ ಮೇಲೆ ಆಯ್ಕೆ ತನ್ನ ಪಾತ್ರವನ್ನು ವಹಿಸಿ, ಉಳಿಕೆಯ ರಚನೆಗಳನ್ನು ಫಲಕಾರಿಯಾದ ರೀತಿಯಲ್ಲಿ ಹೊಂದಿಸಿ ಶಬ್ದವನ್ನು ಸಾಗಿಸಲು ಮತ್ತು ಗ್ರಹಿಸಲು ಕಿವಿಯ ರಚನೆಯಲ್ಲಿ ಅಳವಡಿಸಿಕೊಂಡಿತು.

ಡೆಂಟರಿ ಮೂಳೆಯ ಹಿಂದಿನ ತುದಿಯಲ್ಲಿ ಬೆಳೆದ ಗುಬುಟು ವಿಸ್ತರಿಸಿ ಡೆಂಟರಿ ಪಶ್ಚದವಡೆ ಮೂಳೆಗಳ ಕ್ರಿಯೆಯನ್ನು ವಹಿಸಿಕೊಂಡಿತು. ಆದ್ದರಿಂದ ಕೆಲಸವಿಲ್ಲದಂತಾದ ಈ ಅಂಶಗಳು ಕ್ರಮೇಣ ಗಾತ್ರದಲ್ಲಿ ಕಡಿಮೆಯಾದುವು. ಸರೀಸೃಪಗಳಲ್ಲಿ ದವಡೆಗಳನ್ನು ತೆರೆಯುವ ಕ್ರಿಯೆಯಲ್ಲಿ ಡಿಪ್ರೆಸರ್ ಮ್ಯಾಂಡಿಬುಲೆ ಸ್ನಾಯುಗಳಿವೆ. ಪರಿವರ್ತನಾಪರಂಪರೆಯ ಯಾವುದೇ ಹಂತದಲ್ಲಿ ಈ ಸ್ನಾಯುಗಳು ತಮ್ಮ ಕ್ರಿಯಾನಿರ್ವಹಣೆ ಹೊಣೆಯನ್ನು ಕಳೆದುಕೊಂಡು ಇವುಗಳ ಸ್ಥಾನ ಮತ್ತು ಕ್ರಿಯೆಗಳನ್ನು ಸ್ತನಿಗಳ ಡೈಗ್ಯಾಸ್ಟ್ರಿಕ್ ಮ್ಯಾಂಡಿಬುಲೆ ಎಂಬ ಸ್ನಾಯುಗಳು ವಹಿಸಿಕೊಂಡಿರಬೇಕು. ಇದರಿಂದಾಗಿ ಡಿಪ್ರೆಸರ್ ಮ್ಯಾಂಡಿಬುಲೆ ಸ್ನಾಯುಗಳು ಕಣ್ಮರೆಯಾದುವು. ದವಡೆಯ ನಿರ್ವಹಣೆಯಲ್ಲಿ ಭಾಗವಹಿಸುತ್ತಿದ್ದ ಸ್ನಾಯುಗಳು ಡೆಂಟರಿ ಪಶ್ಚಮೂಳೆಗಳಿಗೆ ಅಂಟಿಕೊಂಡಿದ್ದುವು. ಈ ಮೂಳೆಗಳು ಈಗ ಕ್ಷೀಣವಾದ ದೆಸೆಯಿಂದಾಗಿ ಅವು (ಟೆರಿಗಾಯಿಡಿಯಸ್ ಸ್ನಾಯುಗಳು) ಈಗ ರೆಟ್ರೊಆರ್ಟಿಕ್ಯುಲಾರ್ ಪ್ರವರ್ಧಕ್ಕೆ ಅಂಟಿಕೊಂಡುವು.

ಸ್ತನಿಗಳ ವಿಕಾಸದಲ್ಲಿ ಇವುಗಳ ಗಾತ್ರದ ಕ್ಷೀಣತೆಯಾದರೂ ಟಿಂಪೆನಿಕ್‌ನ ಗಾತ್ರ ಕ್ರಮೇಣ ಹೆಚ್ಚಿತು. ಈ ಟಿಂಪೆನಮ್ ರೆಟ್ರೊಆರ್ಟಿಕ್ಯುಲಾರ್ ಪ್ರವರ್ಧವನ್ನು ಸುತ್ತುವರಿಯಿತು. ಈ ಮಾರ್ಪಾಡು ನಡೆದ ಮೇಲೆ ಸ್ತನಿಗಳ ಸಣ್ಣ ಮೂಳೆಗಳು ಕ್ರಿಯಾಸಮರ್ಥವಾದುವು.

ಈಗ ಸರೀಸೃಪಗಳ ಒಂದು ಸಣ್ಣ ಮೂಳೆ ತಾಂತ್ರಿಕತೆಯಿದ್ದ ಕಡೆ ಮೂರು ಸಣ್ಣ ಮೂಳೆಗಳ ಮಂಡಲ ರೂಪುಗೊಂಡಿತು.

ಸ್ತನಿಗಳ ನಡುಗಿವಿಯ ಉದ್ಭವದ ಬಗೆಗೆ ಎರಡು ಸಿದ್ಧಾಂತಗಳಿವೆ : 1 ಟಿ. ಎಸ್. ವೆಸ್ಟಾಲ್ ಸಿದ್ಧಾಂತ, 2 ಹಾಪ್‌ಸನ್ಸ್ ಸಿದ್ಧಾಂತ. ಸ್ತನಿಗಳ ಟಿಂಪೆನಿಕ್ ಪಟಲ (ಕಿವಿದಮಟೆ) ಹೊಸದಾಗಿ ಕಾಣಿಸಿಕೊಂಡ ರಚನೆ ಎಂಬುದು ವೆಸ್ಟಾಲ್ ಸಿದ್ಧಾಂತದ ಮೂಲಸೂತ್ರ. ಯಾವ ರೀತಿಯ ವಿಕಾಸವಾದರೂ ನಡೆದಿರಲಿ ಸ್ತನಿಗಳ ನಡುಗಿವಿ ಮುಖ್ಯವಾಗಿ ಯಾಂತ್ರಿಕ ರಚನೆ. ಗಾಳಿಯ ಬಡಿತಗಳನ್ನು ಒಳಗಿವಿಯ ದ್ರವಗಳನ್ನು ಚಲಿಸಬಲ್ಲ ಬಲವಾದ ಬಡಿತಗಳಾಗಿ ಪರಿವರ್ತಿಸುವುದು ಇದರ ಮುಖ್ಯ ಕ್ರಿಯೆ.

ಸ್ತನಿಗಳ ನಡುಗಿವಿಯಲ್ಲಿ ಮೂರು ಸಣ್ಣ ಮೂಳೆಗಳ ಬಗೆಗೆ ರೋಮರ್ ಹೇಳುವ ಮಾತಿದು : ಸಾದೃಶ್ಯ ರಚನೆಗಳು ಹೇಗೆ ಕ್ರಿಯಾವ್ಯತ್ಯಾಸ ಹೊಂದಬಲ್ಲುವು ಎಂಬುದನ್ನು ತೋರಲು ಸ್ತನಿಗಳ ಕಿವಿಯ ಸಣ್ಣ ಮೂಳೆಗಳು ಒಂದು ಉತ್ಕೃಷ್ಟ ಉದಾಹರಣೆ.

(ಎಚ್.ಬಿ.ಡಿ.)

**ಕಿವೀ:** ಪಕ್ಷಿ ವರ್ಗದ ನೀಯಾರ್ನಿತಿಸ್ ಉಪ ವರ್ಗದ ಪೇಲಿಯೋಗ್ನಾತೆ ಅಥವಾ ರ್‍ಯಾಟಿಟೆ ಅಧಿಗಣದ ಒಂದು ಹಾರಲಾಗದ ಪಕ್ಷಿ. ಅತಿ ಸಣ್ಣ ಪಕ್ಷಿ. ತಲೆಯು ಚಿಕ್ಕದಾಗಿದ್ದು ನೀಳವಾದ, ತೆಳುವಾದ, ಸ್ವಲ್ಪ ಬಾಗಿದ ಕೊಕ್ಕಿದೆ. ಮೂಗಿನ ಹೊಳ್ಳೆಗಳು ಮೇಲಿನ ದವಡೆಯ ತಳಭಾಗದಲ್ಲಿರುವುದಕ್ಕೆ ಬದಲಾಗಿ ತುದಿಯಲ್ಲಿವೆ. ಇದು ಇದರ ಒಂದು ವಿಶಿಷ್ಟ ಗುಣ. ಕಣ್ಣುಗಳು ಅತಿ ಸಣ್ಣದಾಗಿವೆ. ಕತ್ತು ಸಹ ಕಿರಿದಾಗಿದೆ. ಮುಂಡದಲ್ಲಿರುವ ರೆಕ್ಕೆಗಳು ಅತಿ ಸಣ್ಣದಾಗಿವೆ ಮತ್ತು ಇವುಗಳು ಶರೀರದ ನೀಳವಾದ ಕೂದಲಿನಂತಿರುವ ಪುಕ್ಕಗಳಿಂದ ಮುಚ್ಚಲ್ಪಟ್ಟಿವೆ. ಪಾದಗಳಲ್ಲಿ ನಾಲ್ಕು ಬೆರಳುಗಳಿವೆ. ಇದರಲ್ಲಿ ಒಂದು ಬೆರಳು ಸಣ್ಣದಾಗಿದ್ದು ಹಿಂದಕ್ಕೆ ಬಾಗಿ, ಸ್ವಲ್ಪ ಮೇಲಕ್ಕೆ ಎತ್ತಲ್ಪಟ್ಟಿದೆ. ಮಿಕ್ಕ ಮೂರು ಬೆರಳುಗಳು ಉದ್ದವಾಗಿದ್ದು ಬಲವಾದ ಹಿಂದಕ್ಕೆ ಬಾಗಿರುವ ಉಗುರುಗಳಿವೆ. ಇವುಗಳಿಂದ ಪಕ್ಷಿಯು ನೆಲವನ್ನು ಕೆರೆದು ಹುಳು ಹುಪ್ಪಟೆಗಳನ್ನು ಆಹಾರಕ್ಕಾಗಿ ಹುಡುಕುವುದಲ್ಲದೆ ತನ್ನನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಸಹ ಉಪಯೋಗಿಸಿಕೊಳ್ಳುತ್ತದೆ. ಹಾರುವ ಶಕ್ತಿಯನ್ನು ಕಳೆದುಕೊಂಡಿರುವುದರಿಂದ ಕಿವೀಯು ಬಹಳ ವೇಗವಾಗಿ ಓಡಬಲ್ಲುದು. ನ್ಯೂಜಿಲೆಂಡಿನ ತೇವವಾದ ಕಾಡುಗಳಲ್ಲಿ ವಾಸಿಸುತ್ತದೆ. ನಿಶಾಚರಿ. ಹಗಲಿನಲ್ಲಿ ಬಿಲಗಳಲ್ಲಿ ಅಥವಾ ಪೊಟರೆಗಳಲ್ಲಿ ಅಡಗಿದ್ದು ಸೂರ್ಯಾಸ್ತಮದ ಅನಂತರ ಹೊರ ಬಂದು ಹುಳು ಹುಪ್ಪಟೆ ಮತ್ತು ಕೀಟಗಳನ್ನು ಹುಡುಕಿ ಭಕ್ಷಿಸುತ್ತದೆ. ಹೆಣ್ಣು, ಗಂಡು ಜೊತೆಗೂಡಿಯೇ ವಾಸ ಮಾಡುತ್ತವೆ. ಹೆಣ್ಣು, ಗಂಡಿನೊಂದಿಗೆ ಸಂಭೋಗಿಸಿದ ನಂತರ ಒಂದೇ ಒಂದು ಬಿಳಿಯ ಬಣ್ಣದ ಮೊಟ್ಟೆಯನ್ನು ಸುರಂಗದಂತಿರುವ ಬಿಲಗಳಲ್ಲಿ ಇಡುತ್ತದೆ. ಗಂಡು ಪಕ್ಷಿಯು ಮೊಟ್ಟೆಗೆ ಕಾವು ಕೊಟ್ಟು ಮರಿ ಮಾಡುವ ಕೆಲಸವನ್ನು ವಹಿಸಿಕೊಳ್ಳುತ್ತದೆ.

ಹಾರುವ ಪಕ್ಷಿಯೊಂದಿಗೆ ಕಿವೀಯನ್ನು ಹೋಲಿಸಿದಾಗ ಇದರಲ್ಲಿ ಅನೇಕ ಬದಲಾವಣೆಗಳು ಕಂಡು ಬರುತ್ತವೆ. ಶರೀರವನ್ನು ಮುಚ್ಚಿರುವ ಪುಕ್ಕಗಳು ನೀಳವಾದ ರೋಮದಂತಿವೆ. ಸಾಮಾನ್ಯ ಪುಕ್ಕದ ರಚನೆಯೇ ಇಲ್ಲ. ಬಾರ್ಬ್ ಮತ್ತು ಬಾರ್ಬ್ಯೂಲ್‌ಗಳ ಹೆಣಿಕೆ ಮತ್ತು ಕೊಕ್ಕೆಯಂತಿರುವ ಅಡ್ಡ ಎಳೆಗಳು ಇಲ್ಲ. ಪುಕ್ಕಗಳ ಜೋಡಣೆಯೂ ಸಹ ಸರಿಯಾದ ರೀತಿಯಲ್ಲಿಲ್ಲ. ಶರೀರದ ಹಿಂಭಾಗದಲ್ಲಿ ಬಾಲದ ಪುಕ್ಕಗಳಿಲ್ಲ. ಮೊಟಕು ರೆಕ್ಕೆಯಿದ್ದರೂ ರೆಕ್ಕೆಯ ಪುಕ್ಕಗಳಿಲ್ಲ. ಅಸ್ಥಿಪಂಜರವು ಹಗುರವಾಗಿಲ್ಲ. ಮೂಳೆಗಳೆಲ್ಲವೂ ಗಟ್ಟಿಯಾಗಿವೆ. ಆದುದರಿಂದ ಶರೀರದ ಭಾರವು ಹೆಚ್ಚಾಗಿದೆ. ಎದೆ ಎಲುಬಿನಲ್ಲಿ ಅಡ್ಡಗಟ್ಟಿಲ್ಲ. ಪೈಗೋಸ್ಟೈಲ್ ಕಾಣುವುದಿಲ್ಲ. ಸಂಯುಕ್ತ ತ್ರಿಕಾಸ್ಥಿಯಿಲ್ಲ (ಸಿನ್‌ಸೇಕ್ರಮ್). ತ್ರಿಕಾಸ್ಥಿಯಲ್ಲಿರುವ ಬೆನ್ನೆಲುಬುಗಳು ಒಂದಕ್ಕೊಂದು ಪೂರ್ಣವಾಗಿ ಸೇರಿಲ್ಲ. ಎದೆಯ ಮಾಂಸ ಖಂಡಗಳು ಬಲವಾಗಿಲ್ಲ. ಗಾಳಿ ಚೀಲಗಳಿಲ್ಲ. ಹಾಗಾಗಿ ಕಿವೀಯು ಇತರ ಹಾರುವ ಪಕ್ಷಿಗಳಂತೆ ಹಾರಲಾಗುವುದಿಲ್ಲ.

ಗಂಡಿನಲ್ಲಿ ಸಣ್ಣದಾದ ಶಿಶ್ನವಿರುತ್ತದೆ. ಮೊಟ್ಟೆಯ ಚಿಪ್ಪು ಮಂದವಾಗಿಯೂ ಗಟ್ಟಿಯಾಗಿಯೂ ಇರುತ್ತದೆ. ಮೊಟ್ಟೆಯೊಡೆದು ಮರಿ ಕಿವೀಯು ಹೊರ ಬಂದ ಕೂಡಲೇ ಸ್ವತಂತ್ರವಾಗಿ ಓಡಾಡುತ್ತದೆ ಮತ್ತು ತನ್ನ ಆಹಾರವನ್ನು ತಾನೇ ಹುಡುಕಿ ತಿನ್ನುತ್ತದೆ.

ಕಿವೀಗಳಲ್ಲಿ ಮೂರು ಪ್ರಭೇದಗಳಿವೆ. ಇವುಗಳೆಲ್ಲವೂ ನ್ಯೂಜಿಲೆಂಡ್ ದ್ವೀಪದಲ್ಲೇ ವಾಸವಾಗಿವೆ.

ಆಪ್ಟೆರಿಕ್ಸ್ ಮೆನ್‌ಟೆಲಿ – ಇದು ಶರೀರದ ಮೇಲ್ಭಾಗದ ಪುಕ್ಕಗಳಲ್ಲಿ ಹೆಚ್ಚು ಚುಕ್ಕೆಯುಳ್ಳ ಪಕ್ಷಿ. ನ್ಯೂಜಿಲೆಂಡಿನ ಉತ್ತರ ದ್ವೀಪದಲ್ಲಿ ಹೆಚ್ಚಾಗಿ ವಾಸಿಸುತ್ತದೆ.

ಆಪ್ಟೆರಿಕ್ಸ್ ಆಸ್ಟ್ರೇಲಿಸ್ – ಇದು ಸಾಮಾನ್ಯ ಕಂದು ಬಣ್ಣವಿರುವ ಪಕ್ಷಿ. ನ್ಯೂಜಿಲೆಂಡಿನ ದಕ್ಷಿಣ ದ್ವೀಪದಲ್ಲಿ ಹೆಚ್ಚಾಗಿ ವಾಸಿಸುತ್ತದೆ.

ಆಪ್ಟೆರಿಕ್ಸ್ ಓವೇನಿ – ಇದು ಶರೀರದ ಮೇಲ್ಭಾಗದ ಪುಕ್ಕಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಚುಕ್ಕೆಯಿರುವ ಪಕ್ಷಿ. ನ್ಯೂಜಿಲೆಂಡಿನ ಉತ್ತರ ಮತ್ತು ದಕ್ಷಿಣದ ದ್ವೀಪಗಳಲ್ಲಿ ವಾಸಿಸುತ್ತದೆ. ನೋಡಿ: ಆಪ್ಟೆರಿಕ್ಸ್. (ಕೆ.ಪಿ.ಆರ್.)

**ಕಿವಿಯ ಸಾಗಾಲುವೆ:** ನವದ್ವಾರಗಳಲ್ಲೊಂದಾದ ಕಿವಿಯಲ್ಲಿನ ಕಾಲುವೆಯಂಥ ಅವಕಾಶ (ಆರಿಕ್ಯೂಲರ್ ಕೆನಾಲ್). ಕರ್ಣಕುಹರ ಎನ್ನುವುದಿದೆ. ಇದರ ಉದ್ದ 25 ಮಿಮೀ. ವ್ಯಾಸ 6 ಮಿಮೀ. ಸ್ವಲ್ಪ ಬಾಗುಳ್ಳ ಕೊಕ್ಕೆಯಂತಿದೆ. ಇದರ ಹೊರ 1/3 ಭಾಗದಲ್ಲಿ ಮೃದ್ವಸ್ಥಿಯಿದೆ; ಈ ಭಾಗದಲ್ಲಿ ದವಡೆಮೂಳೆಯಾಡುವುದನ್ನು ಬೆರಳಿಂದ ತಿಳಿಯಬಹುದು. ಒಳ 2/3 ಭಾಗ ಮೂಳೆಯಲ್ಲಿದೆ. ಇದರ ಒಳಕೊನೆಯಲ್ಲಿ 8 ರಿಂದ 10 ಮಿಮೀ ವ್ಯಾಸವುಳ್ಳ ಅಂಡಾಕಾರದ ಪೊರೆಯಿದೆ. ಇದೇ ಕಿವಿತಮಟೆ. ಲಾಲಿಕೆಯಂತಿರುವ ಕರ್ಣದರ್ಶಿನಿಯಲ್ಲಿ ಬೆಳಕು ಬಿಟ್ಟು ನೋಡಿದರೆ ಇದು ಆರೋಗ್ಯದಿಂದಿದ್ದರೆ ಮುತ್ತಿನಂತೆ ಥಳಥಳಿಸುತ್ತದೆ. ಹೊರಗಡೆ ಚರ್ಮದಿಂದ ಕೂಡಿರುವ ತೆಳುಪೊರೆಯಿದ್ದು ಶಬ್ದತರಂಗಗಳಿಂದ ಕಂಪಿಸುತ್ತದೆ. ಕಾರಣಾಂತರಗಳಿಂದ ಕಂಪನಶಕ್ತಿಯಿಲ್ಲದಿರುವುದು ಒಂದು ರೀತಿಯ ಕಿವುಡು. ಕಿವಿತಮಟೆ ಕರ್ಣಕುಹರಕ್ಕೂ ಗಾಳಿಗೂಡಾದ ಮಧ್ಯಕರ್ಣಕ್ಕೂ ಮಧ್ಯೆ ಇದೆ.

ಕಿವಿಯ ಬಾಗಿಲಲ್ಲಿ ದೂಳು, ಕೀಟಗಳನ್ನು ತಡೆಯುವ ಕೂದಲಿದೆ. ಕುಹರದ ಒಳಗಡೆ ಗುಗ್ಗೆಯನ್ನು ಸ್ರವಿಸುವ ಸಣ್ಣ ಚರ್ಮ ಗ್ರಂಥಿಗಳಿವೆ. ಇದರ ನರಕ್ಕೂ ಹೃದಯದ ನರಗಳಿಗೂ ಸಂಬಂಧವಿರುವುದರಿಂದ ಕಿವಿಗೆ ಪಿಚಕಾರಿ ಹೊಡೆದರೆ ಕೆಲವರಲ್ಲಿ (ಹೆಚ್ಚಾಗಿ ಸ್ಥೂಲ ಪ್ರಕೃತಿಯವರಲ್ಲಿ) ಹೃದಯಕ್ರಿಯೆ ನಿಂತು ಮೂರ್ಛೆ ಅಥವಾ ಸಾವು ಸಂಭವಿಸಬಹುದು. ಇದರ ನರಕ್ಕೂ ಶ್ವಾಸಕೋಶಗಳ ನರಗಳಿಗೂ ಸಂಬಂಧವಿರುವುದರಿಂದ ಇದರ ಗಾಯ ಮುಂತಾದುವುಗಳಿಂದ ಸಾಮಾನ್ಯ ಕೆಮ್ಮಿನ ಔಷಧಿಗಳಿಗೆ ಜಗ್ಗದಿರುವ ಕೆಮ್ಮು ಬರಬಹುದು.

ಕಾಲುವೆಯ ಚರ್ಮ ಮೂಳೆಗೆ ಬಿಗಿಯಾಗಿ ಅಂಟಿಕೊಂಡಿರುವುದರಿಂದ ಸಣ್ಣ ಗುಳ್ಳೆಯೆದ್ದರೂ ಬಹಳ ನೋವಾಗುವುದು.

ದವಡೆ ಅಥವಾ ತಲೆಗೆ ಏಟು ಬಿದ್ದಾಗ ಕಿವಿಯಲ್ಲಿ ರಕ್ತ ಸೋರುವುದು ಅಪಾಯ ಸೂಚಕ.

***

**ಕಿವಿರು:** ಜಲಚರಗಳಲ್ಲಿ ಅನಿಲ ವಿನಿಮಯಕ್ಕಾಗಿರುವ ವಿಶಿಷ್ಟ ಬಗೆಯ ಶ್ವಾಸಾಂಗ. ಆಂಗ್ಲಭಾಷೆಯಲ್ಲಿ ಗಿಲ್ ಎನ್ನುವರು. ಇವುಗಳ ಹೊರಮೈ ಪದರ ಅತಿ ತೆಳುವಾಗಿದ್ದು, ಅನಿಲ ವಿನಿಮಯ ಮಾಡಲು ಸಹಾಯಕ. ನೀರಿನಲ್ಲಿ ಬೆರೆತಿರುವ ಆಮ್ಲಜನಕ ಈ ಪದರದ ಮೂಲಕ ಹಾದು ರಕ್ತದೊಡನೆ ಬೆರೆಯುತ್ತದೆ. ರಕ್ತದಲ್ಲಿರುವ ಕಾರ್ಬನ್ ಡೈಆಕ್ಸೈಡ್ ಈ ಪದರದ ಮೂಲಕ ಹೊರ ಹಾದು ನೀರಿನೊಂದಿಗೆ ಬೆರೆಯುತ್ತದೆ. ಇದು ಸೂಕ್ಷ್ಮಾಭಿಸರಣೆಗೆ (ಡಿಫ್ಯೂಷನ್) ಅನುಗುಣವಾಗಿದೆ. ಅನಿಲ ವಿನಿಮಯಕ್ಕೆ ಸಹಾಯಕವಾಗುವಂತೆ ಕಿವಿರುಗಳು ಅಗಲವಾದ ತಟ್ಟೆಗಳಂತೆ, ನೇರವಾದ ಗರಿಗಳಂತೆ, ಉದ್ದವಾದ ತಂತುಗಳಂತೆ ರೂಪಾಂತರಗೊಂಡಿವೆ. ಅಕಶೇರುಕ ಜಲವಾಸಿ ವಲಯವಂತಗಳು (ಅನೆಲಿಡ), ಕಠಿಣ ಚರ್ಮಿಗಳು (ಕ್ರಸ್ಟೇಸಿಯ), ನೀರಿನಲ್ಲಿ ವಾಸಿಸುವ ಕೀಟಗಳು, ಮೃದ್ವಂಗಿಗಳು (ಮೊಲಸ್ಕ) ಮತ್ತು ಕಂಟಕಚರ್ಮಿಗಳಲ್ಲಿ (ಎಕಿನೊಡರ್ಮೇಟ್) ಮತ್ತು ಕಶೇರುಕಗಳಾದ ಮೀನುಗಳು ಮತ್ತು ಕೆಲವು ಉಭಯವಾಸಿ (ಆಂಫಿಬಿಯ)ಗಳಲ್ಲಿ ಕಿವಿರುಗಳಿವೆ.

ಹಲವಾರು ಆದಿ ಜಲಚರಗಳಲ್ಲಿ ಹೊರಮೈ ಚರ್ಮವೇ ಶ್ವಾಸಾಂಗ. ಇದರ ಮೂಲಕವೇ ಅನಿಲ ವಿನಿಮಯ ನಡೆಯುತ್ತಿತ್ತು. ಆದರೆ, ವಿಕಾಸದ ಹಂತದಲ್ಲಿ, ಪ್ರಾಣಿಗಳಲ್ಲಿ ಅನಿಲ ವಿನಿಮಯಕ್ಕಾಗಿ ವಿಶೇಷ ಶ್ವಾಸಾಂಗಗಳು ರೂಪುಗೊಂಡುವು. ವಿನಿಮಯ ನಡೆಯುವ ಜಾಗ ಶ್ವಾಸಾಂಗದಲ್ಲಿ ಕೇಂದ್ರೀಕೃತವಾಗಿತ್ತು. ಹೀಗೆ ಕೇಂದ್ರೀಕೃತವಾದ ವಿನಿಮಯಾಂಗಗಳೇ ಕಿವಿರುಗಳು. ವಿವಿಧ ಜಲವಾಸಿಗಳಲ್ಲಿ ವಿಭಿನ್ನ ರೀತಿಯ ಕಿವಿರುಗಳಿವೆ. ಇವು ಸಾಮಾನ್ಯವಾಗಿ ಅಗಲವಾದ ಫಲಕಗಳಂತೆ ಅತಿ ಸೂಕ್ಷ್ಮವಾಗಿ ಕೇಸರಗಳ ಗಂಟಿನಂತೆ ಇವೆ. ಸದಿಪದಿ ಗುಂಪಿನ ಕೀಟವರ್ಗದ ಕೆಲವು ಕೀಟಗಳು ತಮ್ಮ ಪ್ರೌಢಾವಸ್ಥೆಯಲ್ಲಿ ಶ್ವಾಸನಾಳಗಳ ಮೂಲಕ ಉಸಿರಾಡಿದರೂ, ಡಿಂಬಾವಸ್ಥೆಯಲ್ಲಿ ಸಣ್ಣ ತಂತುವಿನಂತಿರುವ ಕಿವಿರುಗಳ ಸಹಾಯದಿಂದ ಉಸಿರಾಡುತ್ತವೆ. ಈ ಕಿವಿರುಗಳೊಂದಿಗೆ ರಕ್ತನಾಳಗಳ ಸಂಪರ್ಕ ಇದೆ. ಕಠಿಣ ಚರ್ಮಿಗಳ ಕಿವಿರುಗಳು ಎದೆಯ ಭಾಗದ ಉಪಾಂಗಗಳಿಗೆ ಹೊಂದಿಕೊಂಡಿವೆ. ಇವು ದೇಹದಿಂದ ಹೊರ ಚಾಚಿಕೊಂಡಿದ್ದು, ಹೊರಮೈಯಲ್ಲಿರುವ ಪದರಗಳೆಲ್ಲಾ ಈ ಕಿವಿರಿನಲ್ಲಿವೆ. ಕಿವಿರುಗಳ ಹೊರಭಾಗದಲ್ಲಿ ದೇಹಕ್ಕೆ ಹೊಂದಿಕೊಂಡಿರುವಂತೆ ತೆಳುವಾದ ಕೈಟಿನ್ ಪದರವಿದೆ. ಇದರ ಕೆಳಗೆ ಎಪಿಥೀಲಿಯಲ್ ಪದರವಿದೆ. ಇದರ ಕೆಳಗೆ ಸಂಯೋಜಕ ಅಂಗಾಂಶವಿದೆ. ಇದರಲ್ಲಿ ರಕ್ತಪರಿಚಲನೆಗಾಗಿ ರಕ್ತನಾಳಗಳು ಮತ್ತು ಗ್ರಂಥಿಗಳಿವೆ. ಕಿವಿರುಗಳನ್ನೆಲ್ಲ ಮೇಲಿಂದ ಮುಚ್ಚಲು ಕಿವಿರು ಮುಚ್ಚಳ ಅಥವಾ ರಕ್ಷಣಾಚಿಪ್ಪು ಇದೆ.

ಕಂಟಕಚರ್ಮಿಗಳಲ್ಲಿ ಉಸಿರಾಡುವಿಕೆ ಕಿವಿರುಗಳ ಮೂಲಕ ನಡೆಯುತ್ತದೆ. ಬಾಯಿಗೆ ವಿರುದ್ಧವಾದ ಮೇಲುಮೈಯಲ್ಲಿ ಸಣ್ಣ ರಂಧ್ರಗಳಿವೆ. ಇವುಗಳ ಮೂಲಕ ಚರ್ಮ ಕಿವಿರುಗಳು (ಡರ್ಮಲ್ ಬ್ರಾಂಕಿಯೆ) ಹೊರ ಚಾಚಿರುತ್ತವೆ. ಇವು ಚಿಕ್ಕದಾಗಿದ್ದು, ಇವುಗಳಲ್ಲಿ ಹೊರಚರ್ಮದ ಎಲ್ಲ ಪದರಗಳಿವೆ. ಚರ್ಮಕಿವಿರುಗಳು ಅನಿಲ ವಿನಿಮಯ ಕಾರ್ಯವನ್ನು




1. ಅರೆನಿಕೊಲ 2. ಯುನಿಸ್ 3. ಸಬೆಲ್ಲ 4. ಒಜೊಬ್ರಾಂಕಸ್ 5. ಗೆಲಿಯೊಲೇರಿಯ

ನಿರ್ವಹಿಸುತ್ತವೆ. ಈ ರೀತಿಯ ಚರ್ಮ ಕಿವಿರುಗಳು ನಕ್ಷತ್ರಮೀನು (ಸ್ಟಾರ್ ಫಿಶ್), ಕಡಲಪೋರದಲ್ಲಿ (ಸೀ ಅರ್ಚಿನ್) ಇವೆ. ಸಮುದ್ರ ಸೌತೆಯಲ್ಲಿ (ಸೀ ಕುಕುಂಬರ್) ಗುದದ್ವಾರಕ್ಕೆ ಅಂಟಿರುವಂತೆ ಕವಲೊಡೆದ ಎರಡು ಶ್ವಾಸವೃಕ್ಷಗಳಿವೆ. ಇವು ಟೊಳ್ಳಾಗಿದ್ದು ದೇಹದ ಮುಂಭಾಗದವರೆಗೂ ಹರಡಿಕೊಂಡಿವೆ. ಶ್ವಾಸವೃಕ್ಷಗಳ ಕವಲುಗಳ ಕೊನೆಯಲ್ಲಿ ಉಬ್ಬಿದ ಭಾಗ (ಅಂಪುಲೆ)ಗಳಿವೆ. ಸಮುದ್ರದ ನೀರು ಗುದದ್ವಾರದ ಮೂಲಕ ಒಳಹೊಕ್ಕು ಈ ಶ್ವಾಸವೃಕ್ಷವನ್ನು ತಲುಪುತ್ತದೆ.

ಮೃದ್ವಂಗಿಗಳಲ್ಲಿ ಉಸಿರಾಡುವಿಕೆ ಕಿವಿರುಗಳ ಮೂಲಕವೇ ನಡೆಯುತ್ತದೆ. ಕಿವಿರುಗಳು ಬಾಳೆಯ ಎಲೆಯಂತಿದ್ದು, ದೇಹದ ಭಾಗಗಳಿಗೂ ಮತ್ತು ಮ್ಯಾಂಟಲ್‌ಗೂ ಮಧ್ಯೆ ಇರುವ ಮ್ಯಾಂಟಲ್ ಕುಹರದಲ್ಲಿ ಅಡಕವಾಗಿವೆ. ಇವು ದೇಹದಿಂದ ಹೊರಚಾಚಿವೆ. ಇವುಗಳಲ್ಲಿ ದೇಹದ ಎಲ್ಲ ಪದರಗಳೂ ಇರುವುದಲ್ಲದೆ ರಕ್ತನಾಳಗಳ ಸಂಪರ್ಕವಿದೆ. ಮ್ಯಾಂಟಲ್ ಕುಹರದ ಒಳಗೆ ಬರುವ ನೀರಿನಲ್ಲಿರುವ ಆಮ್ಲಜನಕವನ್ನು ಉಪಯೋಗಿಸಿಕೊಂಡು ಅನಿಲ ವಿನಿಮಯ ಕ್ರಿಯೆ ನಡೆಯುತ್ತದೆ.




ಸೀಗಡಿಯ ಕಿವಿರು

ಆದಿಕಶೇರುಕಗಳಲ್ಲಿ ಕಿವಿರುಗಳು ಗಂಟಲಿನ ಇಬ್ಬದಿಯಲ್ಲಿವೆ. ಗಂಟಲಿನ (ಫ್ಯಾರಿಂಕ್ಸ್) ಎರಡು ಪಕ್ಕದಲ್ಲಿ ಕಿವಿರು ರಂಧ್ರಗಳಿವೆ. ಬೆಲನೊಗ್ಲಾಸಸ್ ಪ್ರಾಣಿಯಲ್ಲಿ V – ಆಕಾರದ ಕಿವಿರು ರಂಧ್ರಗಳಿವೆ. ಇವು ಕಿವಿರು ಕೋಶಕ್ಕೆ ಸಂಬಂಧ ಕಲ್ಪಿಸುತ್ತವೆ. ಕಿವಿರು ರಂಧ್ರ, ಕಿವಿರು ಕೋಶಗಳು ಒಂದರ ಹಿಂದೆ ಒಂದು ಇವೆ. ಕಿವಿರು ಕೋಶದ ಅಂಚಿನಲ್ಲಿ ಮಡಿಚಿಕೊಂಡಂತೆ ಕಿವಿರುಗಳಿವೆ. ನೀರು ಬಾಯಿಯ ಮೂಲಕ ಹರಿದು. ಗಂಟಲಿಗೆ ಹೋಗಿ ಕಿವಿರು ಕೋಶಗಳ ಮೂಲಕ ಹೊರಕ್ಕೆ ಹರಿಯುವಾಗ ಕಿವಿರುಗಳಲ್ಲಿ ಅನಿಲ ವಿನಿಮಯ ನಡೆಯುತ್ತದೆ.

ಸೀ ಸ್ಕ್ವಿರ್ಟ್ ಪ್ರಾಣಿಯಲ್ಲಿ ದೊಡ್ಡದಾದ ಚೀಲದಂತಿರುವ ಗಂಟಲಿನ ಭಾಗವಿದೆ. ಇದಕ್ಕೆ ಜಲ ಶ್ವಾಸಾಂಗ ಕುಹರ ಎಂದು ಹೆಸರು. ಇದರಲ್ಲಿ ಒಂದರ ಮೇಲೊಂದು ಸಾಲಾಗಿ ಅಳವಡಿಸಿರುವ ಕಿವಿರು ರಂಧ್ರಗಳಿವೆ. ಇವುಗಳ ಮೈಮೇಲೆ ಲೋಮಾಂಗಗಳಿವೆ. ಕಿವಿರು ರಂಧ್ರಗಳ ಮೇಲೆ ಜಲಶ್ವಾಸಾಂಗ ಪದರಗಳು (ಬ್ರಾಂಕಿಯಲ್ ಲ್ಯಾಮೆಲೆ) ಇದ್ದು, ಇವು ಅನಿಲ ವಿನಿಮಯ ಕಾರ್ಯವನ್ನು ಮಾಡುತ್ತವೆ.

ಮೀನನ್ನು ಹೋಲುವ ಪೆಟ್ರೋಮೈಜ಼ಾನ್ (ಕಶೇರುಕ ಜಲಚರದ) ಗಂಟಲಿನ ಭಾಗದಲ್ಲಿ ದೇಹದ ಇಬ್ಬದಿಯಲ್ಲಿ 7 ಕಿವಿರು ರಂಧ್ರಗಳಿವೆ. ಪ್ರೌಢಾವಸ್ಥೆಯಲ್ಲಿ ಕಿವಿರು ರಂಧ್ರಗಳಿಗೂ ಅನ್ನನಾಳದ ಕೆಳಗೆ ಇರುವ ಶ್ವಾಸನಾಳಕ್ಕೂ ಸಂಪರ್ಕವಿದೆ. ಈ ಪ್ರಾಣಿಗಳಲ್ಲಿ ಕಿವಿರು ಕೋಶಗಳು ದ್ವಿಪೀನ ಮಸೂರದಂತಿದ್ದು ಅವುಗಳ ಒಳಮೈಯಲ್ಲಿ ಕಿವಿರು ಫಲಕಗಳು ಇರುತ್ತವೆ. ಇವೇ ಅನಿಲ ವಿನಿಮಯ ಕ್ರಿಯೆಯಲ್ಲಿ ಭಾಗವಹಿಸುವ ಪ್ರಮುಖ ಅಂಗಗಳು. ಇದೇ ಗುಂಪಿಗೆ ಸೇರಿದ, ಮಣ್ಣಿನಲ್ಲಿ ಹುದುಗಿ ಜೀವಿಸುವ ಜಲವಾಸಿ ಮಿಕ್ಸೀನ್ ಪ್ರಾಣಿಯಲ್ಲಿ, ಅನ್ನನಾಳದ ಭಾಗದೊಂದಿಗೆ ನೇರವಾದ ಸಂಪರ್ಕ ಹೊಂದಿದ ಕಿವಿರು ಕೋಶಗಳಿವೆ.

ಎಲಾಸ್ಮೊಬ್ರಾಂಕ್ ಅಥವಾ ಮೃದ್ವಸ್ಥಿ ಮೀನುಗಳಲ್ಲಿ ಕತ್ತಿನ ಭಾಗದ ಇಬ್ಬದಿಯಲ್ಲಿಯೂ ಐದು ಬಿಡಿಬಿಡಿಯಾದ ಕಿವಿರು ರಂಧ್ರಗಳಿವೆ. ಮೊದಲ ನಾಲ್ಕು ಕಿವಿರುಕೋಶಗಳ ಇಬ್ಬದಿಯಲ್ಲಿ ಕಿವಿರು ತಂತುಗಳು ಇವೆ. ಇವಕ್ಕೆ ಪೂರ್ಣ ಕಿವಿರುಗಳೆಂದು (ಹೋಲೊಬ್ರಾಂಕ್) ಹೆಸರು. ಕೊನೆಯ ಕಿವಿರುಕೋಶದ ಮುಂಬದಿಯ ಅಂಚಿನಲ್ಲಿ ಮಾತ್ರ ಕಿವಿರು ತಂತುಗಳಿವೆ. ಇದನ್ನು ಅರ್ಧ ಕಿವಿರೆಂದು (ಹೆಮಿಬ್ರಾಂಕ್) ಕರೆಯಲಾಗುತ್ತದೆ. ಕಿವಿರುಗಳಿಗೆ ಮತ್ತು ಕಿವಿರುಕೋಶಗಳಿಗೆ ಮೃದ್ವಸ್ಥಿ ಪಂಜರದ ಆಸರೆಯಿದೆ. ಕಿವಿರುಮುಚ್ಚಳಗಳಿಲ್ಲ. ಕಿವಿರುಕೋಶಗಳು ಕಿವಿರು ರಂಧ್ರದ ಮೂಲಕ ಹೊರಕ್ಕೆ ಸಂಪರ್ಕ ಪಡೆದಿವೆ.

ಟೀಲಿಯಾಸ್ಪಿಯೈ ಅಥವಾ ಎಲುಬು ಮೀನುಗಳ ಕತ್ತಿನ ಭಾಗದ ಇಬ್ಬದಿಯಲ್ಲಿ ನಾಲ್ಕು ಕಿವಿರುಗಳಿವೆ. ಇವು ನಾಲ್ಕು ಜಲಶ್ವಾಸಾಂಗ ಕಮಾನುಗಳ (ಬ್ರಾಂಕಿಯಲ್ ಆರ್ಚಸ್) ಮೇಲೆ ಜೋಡಣೆಗೊಂಡಿವೆ. ಪ್ರತಿ ಕಿವಿರಿಗೂ ಎರಡು ಕವಲಿದ್ದು ಒಂದೊಂದರಲ್ಲೂ ಹಲವಾರು ಕಿವಿರು ತಂತುಗಳಿವೆ. ಕಿವಿರಿಗೆ ಶುದ್ಧ ರಕ್ತನಾಳದ ಮತ್ತು ಮಲಿನ ರಕ್ತನಾಳದ ಶಾಖೆಗಳಿವೆ. ಇವುಗಳಿಗೆ ಕಿವಿರಿನಲ್ಲಿ ಉಪಶಾಖೆಗಳಿವೆ. ಕಿವಿರುಗಳನ್ನು ಮುಚ್ಚಿರುವಂತೆ ಹಿಂದೆ ಮತ್ತು ಕೆಳಗೆ ಮಾತ್ರ ತೆರೆದಿರುವ ಕಿವಿರು ಮುಚ್ಚಳವಿದೆ. ಕಿವಿರುಗಳ ಶಾಖೆಗಳ ಮಧ್ಯೆ ಅಂತರ ಜಲಶ್ವಾಸಾಂಗ ಪೊರೆ (ಇಂಟರ್ ಬ್ರಾಂಕಿಯಲ್ ಸೆಪ್ಟಮ್) ಇಲ್ಲ. ಆದರೆ ಗಂಟಲಿನ ಭಾಗಕ್ಕೆ ಹೊಂದಿಕೊಂಡಿರುವಂತೆ ಬಾಚಣಿಗೆಯಂತಿರುವ ಕಿವಿರು ಹಲುವೆ ಇದೆ. ಬಾಯಿಯ ಮೂಲಕ ಹರಿದು ಬರುವ ನೀರು, ತನ್ನ ಜೊತೆಯಲ್ಲಿ ಆಮ್ಲಜನಕದೊಂದಿಗೆ ಆಹಾರ ವಸ್ತುಗಳನ್ನು ತರುತ್ತದೆ. ಕಿವಿರು ಹಲುವೆ ಆಹಾರ ವಸ್ತುಗಳು ಕಿವಿರುಕೋಶಕ್ಕೆ ಹೋಗದಂತೆ ತಡೆದು ಆಮ್ಲಜನಕ ಸಹಿತವಾದ ನೀರನ್ನು ಮಾತ್ರ ಕಿವಿರುಕೋಶಕ್ಕೆ ಬಿಡುತ್ತದೆ. ಕಿವಿರುಮುಚ್ಚಳ ಮುಚ್ಚುವಿಕೆ ಮತ್ತು ತೆರೆಯುವಿಕೆಯಿಂದ ಕಿವಿರುಕೋಶದೊಳಕ್ಕೆ ನೀರು ಹರಿಯುವುದನ್ನು ನಿಯಂತ್ರಿಸುತ್ತದೆ. ಇದರಿಂದಾಗಿ ಮೀನಿನಲ್ಲಿ ಉಸಿರಾಡುವಿಕೆ ಕಿವಿರು ಮುಚ್ಚಳದ ಚಲನೆಯನ್ನು ಅನುಸರಿಸುತ್ತದೆ.

ದ್ವಿಚರಿಗಳು ತಮ್ಮ ಪ್ರೌಢಾವಸ್ಥೆಯಲ್ಲಿ ಶ್ವಾಸಕೋಶಗಳಿಂದ ಉಸಿರಾಡಿದರೂ, ಡಿಂಬಾವಸ್ಥೆಯಲ್ಲಿ ಕಿವಿರುಗಳ ಮೂಲಕವೇ ಉಸಿರಾಡುತ್ತವೆ. ಕಪ್ಪೆಯಲ್ಲಿನ ಗೊದಮೊಟ್ಟೆ,

ಪ್ರಾರಂಭದಲ್ಲಿ ಕತ್ತಿನ ಇಕ್ಕೆಡೆಯಲ್ಲಿ ದೇಹದಿಂದ ಮೂರು ಹೊರಕಿವಿರುಗಳನ್ನು ಹೊಂದಿದೆ. ಬೆಳವಣಿಗೆ ಮುಂದುವರಿದಂತೆ ಈ ಒಳಕಿವಿರು, ಕಿವಿರುರಂಧ್ರ ಬದಲಾಗಿ ಗಂಟಲಿನ ಹಿಂಬದಿಯಿಂದ ಎರಡು ತೆಳುವಾದ ಕೋಶಗಳು ಬೆಳೆದು ಶ್ವಾಸಕೋಶಗಳಾಗುತ್ತವೆ. ಕ್ರಮೇಣ ಶ್ವಾಸಕೋಶಗಳಿಗೆ ರಕ್ತನಾಳಗಳ ಸಂಪರ್ಕ ಬೆಳೆದು ಅವು ಗಾಳಿಯಲ್ಲಿನ ಆಮ್ಲಜನಕವನ್ನು ಸ್ವೀಕರಿಸುವ ಶ್ವಾಸಾಂಗಗಳಾಗುತ್ತವೆ. ಆದರೆ, ಯುರೋಡಿಲ ಗಣಕ್ಕೆ ಸೇರಿದ ಕೆಲವು ಉಭಯವಾಸಿ ಪ್ರೌಢಜೀವಿಗಳಲ್ಲಿ ಹೊರ ಕಿವಿರುಗಳೇ ಶ್ವಾಸಾಂಗಗಳು. ಈ ಗಣದ ಟ್ರೈಟಾನ್, ಪ್ರೋಟಿಯಸ್ ಮತ್ತು ಸೈರನ್ ಪ್ರೌಢ ಪ್ರಾಣಿಗಳಲ್ಲಿ ಡಿಂಬದಲ್ಲಿರುವಂತೆ ಶಾಶ್ವತವಾದ ಹೊರಕಿವಿರುಗಳಿವೆ. ಕ್ರಿಪ್ಟೋಬ್ರಾಂಕಸ್ ಮತು ಆಂಫಿಯೂಮಗಳಲ್ಲಿ ಕಿವಿರು ರಂಧ್ರಗಳಿವೆ.



ಯುರೊಡಿಲ ಗುಂಪಿನ ಪ್ರಾಣಿಗಳಲ್ಲಿನ ಕಿವಿರುಗಳು

1. ನೆಕ್ಟೂರಸ್ 2. ಪ್ರೋಟಿಯಸ್ 3. ಸೈರನ್

ಉಸಿರಾಡುವಿಕೆ ಎಲ್ಲಾ ಜಲವಾಸಿಗಳಲ್ಲಿ ಕಿವಿರುಗಳು ಅಥವಾ ಇವುಗಳಿಂದ ಮಾರ್ಪಾಡಾದ ಅಂಗಗಳಿಂದ ನಡೆಯುತ್ತದೆ. ಅಕಶೇರುಕಗಳಲ್ಲಿ ಮತ್ತು ಕಶೇರುಕಗಳಲ್ಲಿ ಕಿವಿರುಗಳ ರೂಪವೈವಿಧ್ಯವಿದೆ. ಅಕಶೇರುಕಗಳಲ್ಲಿ ದೇಹದ ಹೊರಚರ್ಮದ ಭಾಗ ಕಿವಿರಾಗಿ ಮಾರ್ಪಟ್ಟಿದ್ದರೆ, ಕಶೇರುಕಗಳಲ್ಲಿ ಕಿವಿರು ಗಂಟಲಿನ ಭಾಗದಲ್ಲಿ ಹೊರಚಾಚಿದ್ದು, ಗಂಟಲಿನಲ್ಲಿರುವ ಅಂಗಾಂಶಗಳನ್ನು ಮತ್ತು ಪದರಗಳನ್ನು ಹೊಂದಿದೆ. ಇವುಗಳಿಗೆ ರಕ್ತನಾಳಗಳ ಸಂಪರ್ಕವಿದ್ದು, ರಕ್ತದಲ್ಲಿನ ಕಾರ್ಬನ್ ಡೈ ಆಕ್ಸೈಡ್, ನೀರಿನಲ್ಲಿರುವ ಆಮ್ಲಜನಕದೊಂದಿಗೆ ಪರಸ್ಪರ ವಿನಿಮಯವಾಗುತ್ತದೆ. ಕಶೇರುಕಗಳು ಹೆಚ್ಚು ವಿಕಸಿಸಿದಂತೆ ಕಿವಿರುಗಳ ಸಂಖ್ಯೆ ಕಡಿಮೆಯಾಗಿ, ಮೃದ್ವಸ್ಥಿ ಮೀನಿನಲ್ಲಿ ಐದು, ಎಲುಬು ಮೀನಿನಲ್ಲಿ ನಾಲ್ಕು ಮತ್ತು ಕೆಲವು ಪ್ರೌಢ ಉಭಯವಾಸಿಗಳು ಮತ್ತು ಮಿಕ್ಕ ಉಭಯವಾಸಿ ಮರಿ ಅಥವಾ ಗೊದಮೊಟ್ಟೆಯಲ್ಲಿ ಮೂರು ಕಿವಿರುಗಳಿವೆ. ಸರೀಸೃಪ, ಪಕ್ಷಿಗಳು ಮತ್ತು ಸ್ತನಿಗಳಲ್ಲಿ, ಪ್ರೌಢಾವಸ್ಥೆಯಲ್ಲಿ ಉಸಿರಾಟಕ್ಕೆ ಶ್ವಾಸಕೋಶಗಳಿದ್ದರೂ, ಭ್ರೂಣಾವಸ್ಥೆಯಲ್ಲಿ ಕಿವಿರು ರಂಧ್ರಗಳು ಕಂಡುಬರುತ್ತವೆ. ಇದರಿಂದ ಈ ಪ್ರಾಣಿಗಳು ಕಿವಿರುಗಳನ್ನುಳ್ಳ ಪೂರ್ವಜ ಪ್ರಾಣಿಗಳಿಂದ ವಿಕಸಿಸಿರಬೇಕೆಂದು ತಜ್ಞರು ಅಭಿಪ್ರಾಯಪಡುತ್ತಾರೆ. (ಸಿ.ಎಂ.ಎಸ್)

**ಕೀಟಗಳು:** ಸಂದಿಪದಿ (ಆರ್ತ್ರೊಪೊಡ) ವಂಶದ ಇನ್ಸೆಕ್ಟ ವರ್ಗದ ಸದಸ್ಯರು. ಪ್ರಾಣಿ ಸಂಕುಲದಲ್ಲಿ ಅತ್ಯಂತ ವೈವಿಧ್ಯಮಯ ಹಾಗೂ ವರ್ಣರಂಜಿತವಾದ ಪತಂಗ, ಹೂಗಳ ಪರಾಗ ಮತ್ತು ಮಧು ಶೇಖರಿಸುವ ಜೇನು, ಇರುವೆ, ದುಂಬಿ, ಜೀರುಂಡೆ ಮುಂತಾದುವೆಲ್ಲವೂ ಕೀಟಗಳು.

ಕೀಟಗಳ ದೇಹವು ತಲೆ, ಎದೆ ಮತ್ತು ಉದರ ಭಾಗಗಳಿಂದಾಗಿದೆ. ಉಸಿರಾಟವು ಶ್ವಾಸನಾಳಗಳನ್ನುಳ್ಳ ಟ್ರೇಕಿಯದಿಂದ ನಡೆಯುತ್ತದೆ. ಸಣ್ಣಗಾತ್ರದಿಂದ ಹಿಡಿದು ಸೂಕ್ಷ್ಮ ಗಾತ್ರದುವು. ತಲೆಯಲ್ಲಿ ಒಂದು ಜೊತೆ ಆಂಟೆನ (ಕುಡಿಮೀಸೆ), ಬಾಯಿಯಲ್ಲಿ ಒಂದು ಜೊತೆ ಕೆಳದವಡೆ ಮತ್ತು ಎರಡು ಜೊತೆ ಮ್ಯಾಕ್ಸಿಲೆಗಳಿವೆ. ಎದೆಯ ಭಾಗದಲ್ಲಿ ಮೂರು ಜೊತೆ ಕಾಲುಗಳು ಮತ್ತು ಒಂದು ಅಥವಾ ಎರಡು ಜೊತೆ ರೆಕ್ಕೆಗಳಿವೆ. ಉದರ ಭಾಗದಲ್ಲಿ ಚಲನಾಂಗಗಳಿಲ್ಲ. ಉದರದ ಹಿಂತುದಿಯಲ್ಲಿ ಜನನಾಂಗ ದ್ವಾರವಿದೆ. ಜೀವನಕ್ರಮದಲ್ಲಿ ಮರಿಗಳು ಪ್ರೌಢಾವಸ್ಥೆಗೆ ಬರುವಾಗ ಸಾಧಾರಣವಾಗಿ ರೂಪ ಪರಿವರ್ತನೆ ಹೊಂದುತ್ತವೆ.

ಕೀಟವರ್ಗದ ವೈವಿಧ್ಯ: ಇದು ಪ್ರಾಣಿವರ್ಗಗಳಲ್ಲಿ ಅತ್ಯಂತ ದೊಡ್ಡದು. ಈ ವರ್ಗದಲ್ಲಿರುವಷ್ಟು ಪ್ರಭೇದಗಳು ಇನ್ಯಾವ ವರ್ಗದಲ್ಲೂ ಇಲ್ಲ. ಕೀಟವಿಜ್ಞಾನಿಗಳು ಇದುವರೆಗೆ ಸು. ಎಂಟು ಲಕ್ಷಕ್ಕಿಂತ ಹೆಚ್ಚು ಕೀಟಜಾತಿಗಳನ್ನು ಗುರುತಿಸಿ, ವಿವರಿಸಿದ್ದಾರೆ. ಒಟ್ಟು 2 ರಿಂದ 3 ದಶಲಕ್ಷ ಕೀಟ ಪ್ರಭೇದಗಳಿರಬಹುದೆಂದು ಅಂದಾಜಿದೆ. ಒಂದು ಚಿಕ್ಕ ಪ್ರದೇಶದಲ್ಲಿರುವ ಒಂದು ಜಾತಿಯ ಕೀಟದ ಸಂಖ್ಯೆಯನ್ನು ತೆಗೆದುಕೊಂಡಾಗ ಕೀಟಪ್ರಪಂಚದ ಬೃಹತ್ಸಂಖ್ಯೆಗಳ ಅರಿವು ಉಂಟಾಗುತ್ತದೆ. ಉದಾ: ಒಂದು ಎಕರೆ ಶೀತಪ್ರದೇಶದಲ್ಲಿ ನಾಲ್ಕು ದಶಲಕ್ಷ ಕೋಲಂಬೋಲ ಗಣದ ಕೀಟಗಳು ವಾಸಿಸಬಲ್ಲುವು. ಬೇಸಗೆಯಲ್ಲಿ ಒಂದು ಜೊತೆ ನೊಣಗಳ ಸಂತತಿ ಒಟ್ಟು $1.91 \times 10^{20}$ರಷ್ಟು ಆಗಬಲ್ಲುದು. ಈ ಅಪಾರ ಸಂಖ್ಯಾಬಲಕ್ಕೆ ಕಾರಣ ಕೀಟಗಳ ಸಣ್ಣ ಗಾತ್ರ, ಸಂತಾನೋತ್ಪತ್ತಿಯ ತೀವ್ರತೆ ಮತ್ತು ವಿವಿಧ ಬಗೆಯ ಆಹಾರಗಳಿಗೆ ಅವು ತೋರುವ ಹೊಂದಿಕೆಗಳು. ದೇಹದ ಗಾತ್ರ ಸಣ್ಣದಾದ್ದರಿಂದ ಮೊಟ್ಟೆಯಿಂದ ಪ್ರಾಯಕ್ಕೆ ಬರಲು ಅಲ್ಪಕಾಲ ಸಾಕು. ಆಹಾರ ಸೇವನೆ ಕಡಿಮೆ. ಸಂತಾನೋತ್ಪತ್ತಿಯ ವೇಗ ಹೆಚ್ಚು. ಉದಾ: ಗೆದ್ದಲು ರಾಣಿ ಕೀಟ ದಿನಕ್ಕೆ 43,000 ಮೊಟ್ಟೆಗಳನ್ನು ಇಡುತ್ತದೆ. ಜೊತೆಗೆ ತಲೆಮಾರುಗಳು ಅಲ್ಪಾವಧಿಯವು (ಒಂದು ವರ್ಷದಲ್ಲಿ ಹಲವಾರು). ಶೀಡೆ ಜಾತಿಯ ಕೀಟ ಎಂಟು ತಿಂಗಳಲ್ಲಿ 16 ತಲೆಮಾರುಗಳನ್ನು ಉತ್ಪತ್ತಿಮಾಡುತ್ತದೆ. ಕೀಟಗಳಿಗೆ ಹಾರಾಟದ ಶಕ್ತಿ ಇರುವುದರಿಂದ ಅನುಕೂಲಕರ ಪ್ರದೇಶಗಳಿಗೆ ಹಾರಿಹೋಗುತ್ತವೆ. ಕೀಟವರ್ಗದಲ್ಲಿ ಕಾಣುವ ರೂಪ ಪರಿವರ್ತನೆ ವೈವಿಧ್ಯಕ್ಕೆ ಸಹಾಯಕ. ಇದರಿಂದ ಮರಿ ಹುಳು ಮತ್ತು ಪ್ರೌಢಕೀಟಗಳು ತಮಗೆ ತಕ್ಕ ರೀತಿಯಲ್ಲಿ ಬಾಹ್ಯ ಸನ್ನಿವೇಶಕ್ಕೆ ಹೊಂದಿಕೊಂಡು ಬೆಳೆಯಲು ಸಾಧ್ಯ. ಎಲ್ಲಾ ಬಗೆಯ ಜೈವಿಕ ವಸ್ತುಗಳು ಒಂದಲ್ಲ ಒಂದು ಕೀಟಪ್ರಭೇದಕ್ಕೆ ಆಹಾರ. ಆಹಾರ ಲಭ್ಯತೆಯಿರುವ ಎಲ್ಲ ಭೂ ಮತ್ತು ಸಿಹಿ ನೀರು ಪ್ರದೇಶಗಳಲ್ಲೂ ಕೀಟಗಳ ಸಮುದಾಯವಿದೆ. ಉಪ್ಪು ನೀರಿನಲ್ಲಿ ಸಹ ಕೆಲವು ಜಾತಿ ಕೀಟಗಳು ವಾಸಿಸುತ್ತವೆ.

ಕೀಟಗಳಲ್ಲಿರುವ ಹಲವು ವೈಶಿಷ್ಟ್ಯಗಳಲ್ಲಿ ಆಹಾರ ಸಂಪಾದನೆ ರೀತಿ ಹಾಗೂ ಜೀವನಕ್ರಮಗಳು ಮುಖ್ಯವಾದುವು. ಉದಾ: ಕೊಡತಿ ಕೀಟ ಕೆಲವು ಕೀಟಗಳನ್ನು ಬೇಟೆಯಾಡಿ ಆಹಾರ ಸಂಪಾದಿಸಿದರೆ, ಕೆಲವು ಪರಾವಲಂಬಿ ಕೀಟಗಳು ಆತಿಥೇಯ ಪ್ರಾಣಿಗಳ ರಕ್ತನಾಳಗಳಲ್ಲಿ ಜೀವಿಸಿದ್ದು, ಚರ್ಮದ ಮೂಲಕ ರಸರೂಪದ ಆಹಾರವನ್ನು ಹೀರುತ್ತವೆ. ಅನೇಕ ಬಗೆಯ ಕೀಟಗಳಲ್ಲಿ ಮಾನವ ಸಮಾಜದಲ್ಲಿರುವಂತೆ ಸಾಮಾಜಿಕ ವ್ಯವಸ್ಥೆ ಮತ್ತು ಸಹಕಾರ ಪದ್ಧತಿಗಳಿವೆ. ಉದಾ: ಗೆದ್ದಲು, ಜೇನು, ಇರುವೆ ಮತ್ತು ಕಣಜ ಕೀಟಗಳು. ಇವುಗಳ ಸಾಮಾಜಿಕ ವ್ಯವಸ್ಥೆಯಲ್ಲಿ ದುಡಿಮೆಯ ಹಂಚಿಕೆ (ಡಿವಿಷನ್ ಆಫ್ ಲೇಬರ್) ಇದೆ. ಈ ಕೀಟಗಳಲ್ಲಿ ನಿಯಮಿತ ಕರ್ತವ್ಯಗಳಿಗೆ ತಕ್ಕಂತೆ ಕೀಟಗಳ ಅಂಗಾಂಗ ರಚನೆಯಲ್ಲಿ ಬದಲಾವಣೆಗಳಿವೆ. ಕೆಲಸಗಾರ, ಸೈನಿಕ, ದಾದಿ, ರಾಣಿ ಕೀಟಗಳು ವಿವಿಧ ದೇಹ ಗಾತ್ರ ಮತ್ತು ರಚನೆ ಹೊಂದಿವೆ. ಕೆಲವು ಜಾತಿಯ ಇರುವೆಗಳು ಶಿಲೀಂಧ್ರ ಕೃಷಿ (ಫಂಗಸ್ ಗಾರ್ಡನ್) ಮಾಡುತ್ತವೆ. ಇತರ ಕೀಟಗಳು ಸ್ರವಿಸುವ ಸಿಹಿರಸಕ್ಕಾಗಿ ಸಾಕಿ ಅವುಗಳನ್ನು ಆಳಿನಂತೆ ದುಡಿಸಿಕೊಂಡು ಆರಾಮವಾಗಿರುವ ವಿಚಿತ್ರ ಹಾಗೂ ವಿಶೇಷ ಪ್ರವೃತ್ತಿಗಳನ್ನು ಕೆಲವು ಜಾತಿಯ ಇರುವೆಗಳಲ್ಲಿ ಕಾಣಬಹುದು.

ಕೀಟಗಳ ವಿಕಾಸ: ಕೀಟವರ್ಗ ಸು. 25 ಕೋಟಿ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದು, ಆಗಿನಿಂದ ಇಂದಿನವರೆಗೂ ವಿಕಾಸ ಹೊಂದುತ್ತಿದೆಯೆಂದು ಕೀಟತಜ್ಞರ ಅಭಿಪ್ರಾಯ. ಖಚಿತವಾಗಿ ಗೊತ್ತಾಗಿರುವ ಕೀಟ ಪೆನ್ಸಿಲ್ವೇನಿಯನ್ ಕಾಲದ ಶಿಲಾಸ್ತರಗಳಲ್ಲಿ ತಿಳಿದುಬಂದಿದೆ. ಇದು ಇಂದಿನ ಕೊಡತಿಕೀಟಗಳನ್ನು ಹೋಲುತ್ತದೆ. ಕೀಟಗಳು ಬಹುಶಃ ಡಿವೋನಿಯನ್ ಯುಗದಲ್ಲಿ ಅಸ್ತಿತ್ವಕ್ಕೆ ಬಂದು ಕಾರ್ಬಾನಿಫೆರಸ್ ಮತ್ತು ಪರ್ಮಿಯನ್ ಕಾಲಗಳಲ್ಲಿ ವಿಕಾಸದಲ್ಲಿ ಮುಂದುವರಿದು ಟ್ರೈಯಾಸಿಕ್ ಮತ್ತು ಜುರಾಸಿಕ್ ಕಾಲಗಳ ಹೊತ್ತಿಗೆ ಇಂದಿನ ಕೀಟಗಳನ್ನು ಹೋಲುವ ಸ್ಥಿತಿಗೆ ಬಂದಿದ್ದುವು. ಕೀಟಗಳ ಪೂರ್ವಜ ಪ್ರಾಣಿಗಳು ಬಹುಶಃ ಟ್ರೈಲೋಬೈಟ್ ಗುಂಪಿನ ಪ್ರಾಣಿಗಳೊಂದಿಗೆ ಏಕಕಾಲದಲ್ಲಿ ಅಸ್ತಿತ್ವಕ್ಕೆ ಬಂದುವೆಂದೂ ಇವುಗಳಿಂದ ಕಾಲಾನಂತರ ಅರ್ಯಾಕ್ನಿಡ, ಕ್ರಸ್ಟೇಸಿಯ, ಕೈಲೊಪೊಡ ಮತ್ತು ಇನ್ಸೆಕ್ಟ (ಕೀಟಗಳು) ವರ್ಗಗಳು ಉದ್ಭವವಾದುವೆಂದೂ ಊಹೆಯಿದೆ. ಈ ಪೂರ್ವಜ ಪ್ರಾಣಿಗಳನ್ನು ಪ್ರೋಟಾರ್ತ್ರೊಪೊಡ ಎಂಬ ಗುಂಪಿಗೆ ಸೇರಿಸಲಾಗಿದೆ. ಇವುಗಳೆಲ್ಲ ಸಾಗರವಾಸಿಗಳಾಗಿದ್ದುವೆಂದೂ ಮತ್ತು ಇವುಗಳ ದೇಹ ಖಂಡಗಳಾಗಿ ವಿಂಗಡಣೆಯಾಗಿದ್ದು, ಅದರ ಮೇಲೆಲ್ಲ ಕೈಟಿನ್ ವಸ್ತುವಿನ ಕವಚವಿತ್ತೆಂದು ಹೇಳಲಾಗಿದೆ. ಇವುಗಳಲ್ಲಿ ಕೀಲುಕಾಲುಗಳಿರಲಿಲ್ಲ. ಇವು ದೇಹವನ್ನು ನೆಲಕ್ಕೆ ತಾಗಿಸಿ ತೆವಳುತ್ತ ಚಲಿಸುತ್ತಿದ್ದುವು ಅಥವಾ ದೇಹವನ್ನು ಪಕ್ಕದಿಂದ ಪಕ್ಕಕ್ಕೆ ಚಲಿಸಿ ಈಜುತ್ತಿದ್ದುವು. ಕಾಲ ಕ್ರಮೇಣ

ಕೀಲುಕಾಲುಗಳು ಉದ್ಭವಿಸಿದುವು ಹಾಗೂ ದೇಹದ ಖಂಡಗಳ ಸಂಖ್ಯೆಯೂ ಕಡಿಮೆಯಾಗುತ್ತ ಕೊನೆಗೆ 20ಕ್ಕೆ ನಿಂತಿತು.

ಕೀಟಗಳ ತಲೆಯ ಅಂಗಗಳು: ಕೀಟ ವರ್ಗದ ವಿಕಸನ ದೃಷ್ಟಿಯಿಂದ ಕೈಟಿನ್ ಅನುಕೂಲ ಮತ್ತು ಅನಾನುಕೂಲಗಳೆರಡಕ್ಕೂ ಕಾರಣವಾಗಿದೆ. ಒಣಸನ್ನಿವೇಶಗಳಲ್ಲಿ ದೇಹದೊಳಗಿನ ಶೀತಾಂಶ ಹೊರಗೆ ಹೋಗದಂತೆ ಇದು ತಡೆಗಟ್ಟುವುದರಿಂದ ಈ ಜೀವಿಗಳು ಜಲಜೀವನವನ್ನು ತ್ಯಜಿಸಿ, ಭೂ ಭಾಗಗಳಿಗೆ ವಲಸೆ ಬಂದು ಕ್ರಮೇಣ ಮರಳ್ಗಾಡುಗಳಿಗೂ ಹೊಂದಿಕೊಳ್ಳಲು ಸಾಧ್ಯವಾಯಿತು. ಆದರೆ ಚಿಪ್ಪಿನಂತೆ ಗಡುಸಾಗಿರುವ ಈ ಹೊದಿಕೆಯನ್ನು ಬೆಳವಣಿಗೆಯ ಪ್ರತಿಹಂತದಲ್ಲೂ ಕಳಚಬೇಕಾಯಿತು. ಪೊರೆಬಿಟ್ಟ ಹುಳುವಿನ ಮೈ ಮೆತುವಾದ್ದರಿಂದ ಆಕಾರವನ್ನು ಕಳೆದುಕೊಳ್ಳುವ ಅಪಾಯವೇ ಅಲ್ಲದೆ, ಪುನಃ ಪೊರೆಬಲಿಯುವವರೆಗೂ ಕೀಟ ಅಸಹಾಯಕ ಸ್ಥಿತಿಯಲ್ಲಿರುತ್ತದೆ.

ಕೀಟಗಳಲ್ಲಿ ಜ್ಞಾನೇಂದ್ರಿಯಗಳ ಮೂಲಕ ಸನ್ನಿವೇಶದ ಅರಿವು ಪಡೆದೇ ಅಪಾಯದಿಂದ ದೂರವಾಗಿ, ಲಾಭವಿದ್ದೆಡೆಗೆ ಚಲನೆಯನ್ನು ಪ್ರಚೋದಿಸುವಂಥ ನರಮಂಡಲವಿದೆ. ಕೀಟಗಳ ಮಿದುಳು ಅತಿಸೂಕ್ಷ್ಮವಾದರೂ ಇರುವೆ, ಜೇನುಕೀಟಗಳ ಹುಟ್ಟುಗುಣದ ನಡೆವಳಿಕೆ ನೋಡಿದರೆ ಇದು ಬಹಳ ಉನ್ನತಮಟ್ಟದ ರಚನೆಯುಳ್ಳದ್ದೆಂದು ತಿಳಿಯುತ್ತದೆ. ಆದರೂ ಸ್ವ ಅನುಭವದಿಂದ ಜ್ಞಾಪಕಶಕ್ತಿ ಬೆಳೆಸಿಕೊಂಡು, ಜೀವನ ರೀತಿಯನ್ನು ಬದಲಾಯಿಸಿಕೊಳ್ಳುವ ಬುದ್ಧಿಶಕ್ತಿ ಕೀಟಗಳಿಗಿಲ್ಲ.

ಕೀಟಗಳ ದೇಹರಚನೆ ವದನಾಂಗಗಳ ಮತ್ತು ಚಲನಾಂಗಗಳ ಜೋಡಿ ಶ್ರೇಣಿಯಲ್ಲಿದೆ. ಕುಡಿಮೀಸೆಗಳು (ಆಂಟೆನ) ನೆತ್ತಿಯಮೇಲಿವೆ. ಕಣ್ಣುಗಳ ಮುಂದೆ ಅಥವಾ ನಡುವೆ ಹೆಚ್ಚು ಚಲನ ಸ್ವಾತಂತ್ರ್ಯವಿರುವ ಒಂದು ಜೊತೆ ಉಪಾಂಗಗಳು ಇವೆ. ಇವುಗಳಲ್ಲಿ ಹಲವಾರು ಖಂಡಗಳನ್ನು ನೋಡಬಹುದು. ಕೆಲವು ಕೀಟಗಳಲ್ಲಿ ಇವು ಮಣಿಸರದಂತಿವೆ. ಉನ್ನತಮಟ್ಟದ ಕೀಟಗಳ ಕುಡಿಮೀಸೆಗಳ ತುದಿಯಲ್ಲಿ ಬಾಚಣಿಗೆ ಹಲ್ಲುಗಳಂಥ, ಚಮಚದ ಹಿಡಿಯಂಥ, ದೊಣ್ಣೆಯ ಹಿಡಿಯಂಥ, ಫಲಕಗಳ ಕಟ್ಟಿನಂಥ ರಚನೆಗಳಿವೆ. ಕುಡಿಮೀಸೆಗಳು ವಿಶೇಷವಾದ ಜ್ಞಾನೇಂದ್ರಿಯಗಳು. ವದನಾಂಗಗಳು ಮುಖ್ಯವಾಗಿ ಮೂರುಜೊತೆ ರಚನೆಗಳಿಂದ ಕೂಡಿವೆ: (i) ಅಗಿಯಲು ಉಪಯುಕ್ತವಾದ (ಕೆಳದವಡೆ) ಮ್ಯಾಂಡಿಬಲ್ ಜೊತೆ, (ii) ಬಾಯಿಯಿಂದ ಆಹಾರ ಬೀಳದಂತೆ ತಡೆಯುವ ಒಂದು ಜೊತೆ ಮ್ಯಾಕ್ಸಿಲ, (iii) ಒಂದು ಜೊತೆ ದ್ವಿತೀಯ ಮ್ಯಾಕ್ಸಿಲ ಕೂಡಿಕೊಂಡು ಆಗಿರುವ ಲೇಬಿಯಂ ಅಥವಾ ಕೆಳತುಟಿ. ಲೇಬ್ರಂ ಅಥವಾ ಮೇಲ್ತುಟಿ, ಬಾಯಿಯೊಳಗಿನ ಹೈಪೋಫ್ಯಾರಿಂಕ್ಸ್

ನೊಣ


ಕೊರೆಯುವ ಮತ್ತು ಹೀರುವ ವದನಾಂಗಗಳು

ಕಚ್ಚುವ ಮತ್ತು ಅಗಿಯುವ ವದನಾಂಗಗಳು


ಹೀರುವ ಕೊಳವೆಯಂಥ ವದನಾಂಗ (ಚಿಟ್ಟೆ)

ಮತ್ತು ಎಪಿಫ್ಯಾರಿಂಕ್ಸ್ ವದನಾಂಗದ ಭಾಗಗಳು. ಉದಾ: ಜಿರಲೆ ತೆಗೆದುಕೊಳ್ಳುವ ಆಹಾರಕ್ಕನುಗುಣವಾಗಿ ಅದರ ವದನಾಂಗಗಳ ರಚನೆಯಾಗಿದೆ. ಉದಾ: ಗಟ್ಟಿ ಪದಾರ್ಥಗಳನ್ನು ತುಂಡುಮಾಡಿ ಅಗಿದು ತಿನ್ನುವ ಜಿರಲೆ, ಮಿಡತೆ, ಕಂಬಳಿಹುಳು ಮತ್ತು ದುಂಬಿಗಳಲ್ಲಿ ಮೊನಚಾದ ಹಲ್ಲುಗಳಿವೆ. ಸಸ್ಯಗಳ ರಸ, ಪ್ರಾಣಿಗಳ ರಕ್ತ ಹೀರಿ ಜೀವಿಸುವ ಕೀಟಗಳ ವದನಾಂಗಗಳು ಸೂಜಿಯಂತೆ ಚೂಪಾದ ತುದಿಯುಳ್ಳ ಕೊಳವೆಗಳಂತಿವೆ. ಹೂಗಳ ಮಕರಂದ ಕುಡಿಯುವ ಪತಂಗಗಳ ವದನಾಂಗಗಳು ಆನೆಯ ಸೊಂಡಿಲಿನಂತಿವೆ. ಪರಾಗವನ್ನು ಕೂಡಿಸುವ ಜೇನಿನ ಮ್ಯಾಕ್ಸಿಲ ಮತ್ತು ಕೆಳತುಟಿ ಈ ಕಾರ್ಯಕ್ಕೆ ತಕ್ಕಂತೆ ಹೊಂದಿಕೊಂಡಿವೆ. ಆಹಾರ ಕಣಗಳನ್ನು ಜೊಲ್ಲಿನಿಂದ ನೆನೆಸಿ, ಕರಗಿಸಿ ಹೀರಿಕೊಳ್ಳುವ ನೊಣಗಳಲ್ಲಿ ಮೇಲ್ತುಟಿ, ನಾಲಿಗೆ, ಕೆಳತುಟಿ ಮೂರೂ ಸೇರಿ ಸ್ಪಂಜಿನಂಥ ಅಂಗವಾಗಿವೆ.




ಕೀಟಗಳ ಚಲನಾಂಗಗಳು: ಕೀಲುಗಳುಳ್ಳ 3 ಜೊತೆ ಕಾಲುಗಳು ಮತ್ತು ಪ್ರೌಢಾವಸ್ಥೆಯಲ್ಲಿ ಸಾಮಾನ್ಯವಾಗಿ ಎರಡು ಜೊತೆ ರೆಕ್ಕೆಗಳಿವೆ. ಅನೇಕ ಜಾತಿಯ ಕೀಟಗಳ ಮರಿಗಳಿಗೆ ಆರಕ್ಕಿಂತ ಹೆಚ್ಚು ಕಾಲು ಅಥವಾ ಕಾಲಿಲ್ಲದೆ ಇರುವುದು, ಅನೇಕ ಪ್ರೌಢ ಕೀಟಗಳಿಗೆ ಒಂದೇ ಜೊತೆ ರೆಕ್ಕೆ ಅಥವಾ ರೆಕ್ಕೆಗಳೇ ಇಲ್ಲದಿರುವುದು ಇದೆ. ಚಲನಾಂಗಗಳು ದೇಹದ ಎದೆ ಭಾಗದಲ್ಲಿ (ತೊರಾಕ್ಸ್) ಜೋಡಣೆಗೊಂಡಿವೆ. ಸಂದಿಪದಿ ಎಂಬ ಹೆಸರಿಗೆ ಅನುಗುಣವಾಗಿ ಕಾಲಿನಲ್ಲಿ ಐದು ಮುಖ್ಯವಾದ ಸಂಧಿಗಳಿವೆ: ದೇಹದ ಕಡೆಯಿಂದ ಆರಂಭವಾಗಿ ಇವುಗಳಿಗೆ ಕ್ರಮವಾಗಿ ಕಾಕ್ಸ, ಟ್ರೋಕ್ಯಾಂಟರ್, ಫೀಮರ್, ಟಿಬಿಯ ಮತ್ತು ಟಾರ್ಸಸ್ ಎಂದು ಹೆಸರು. ಟಾರ್ಸಸಿನಲ್ಲಿ ಎರಡರಿಂದ ಐದು ಉಪಸಂಧಿಗಳಿವೆ. ಟಾರ್ಸಸಿನ ಕೊನೆಯಲ್ಲಿ 2 ನಖಗಳು ಮತ್ತು ಅವುಗಳ ಮಧ್ಯದಲ್ಲಿ ಒಂದು ಗುಬುಟು ಇದೆ. ಅಡ್ಡಿ ಆತಂಕವಿಲ್ಲದ ಚಲನೆಗೆ ಕಾಲುಗಳು ಸಹಾಯಕವಾಗಿವೆ. ಚಲನೆಯ ಜೊತೆಗೆ ಭೂಮಿಯನ್ನು ಅಗೆದು ತೋಡುವುದು (ಉದಾ: ಚಿಮ್ಮಂಡೆ), ಬೇಟೆಯನ್ನು ಹಿಡಿದುಕೊಳ್ಳುವುದು (ಉದಾ: ಕೊಡತಿಕೀಟ, ಮ್ಯಾಂಟಿಸ್ ಕೀಟ), ಕುಪ್ಪಳಿಸುವುದು (ಉದಾ: ಮಿಡತೆ), ಇನ್ನಿತರ ಉಪಕಾರ್ಯಗಳಿಗೂ ಕಾಲುಗಳು ಸಹಾಯಕ.

ಎದೆಯ 2ನೆ ಮತ್ತು 3ನೆ ಖಂಡಗಳಲ್ಲಿ ತೆಳುವಾಗಿ ವಿಸ್ತರಿಸಿದ ಭಾಗಗಳೇ ರೆಕ್ಕೆಗಳು. ರೆಕ್ಕೆಯ ಮೇಲಿನ ಮತ್ತು ಕೆಳಗಿನ ಪದರಗಳ ಮಧ್ಯೆ ಕವಲೊಡೆದಿರುವ ನಾಳಗಳಿವೆ.


ಹಿಪ್ಪೊಬಾಸಿಡ್ ನೊಣ

ಇವುಗಳಲ್ಲಿ ಕೆಲವು ಶ್ವಾಸನಾಳಗಳು, ಇನ್ನು ಕೆಲವು ರಕ್ತನಾಳಗಳಿವೆ. ರೆಕ್ಕೆಯ ಆಕಾರ ತ್ರಿಕೋಣದಂತೆ ಇದೆ. ದೇಹದ ಒಂದು ಭಾಗದ ಮುಂದಿನ ಮತ್ತು ಹಿಂದಿನ ಎರಡು ರೆಕ್ಕೆಗಳೂ ಒಟ್ಟಿಗೆ ಚಲಿಸಲು ಸೂಕ್ಷ್ಮವಾದ ಕೊಕ್ಕೆ, ಕೂದಲು ಮತ್ತು ಮುಳ್ಳುಗಳ ಮೂಲಕ

ಸಂಪರ್ಕವಿದೆ. ಡಿಪ್ಟರ ಗಣದ ಕೀಟಗಳಲ್ಲಿ ಒಂದೇ ಜೊತೆ ರೆಕ್ಕೆಗಳಿವೆ. ಹಿಂಬದಿಯ ರೆಕ್ಕೆಗಳು ಸಮತೋಲನೆ ಕಾಯುವ ಅಂಗಗಳಾಗಿ (ಹಾಲ್ಟಿಯರ್ಸ್) ಮಾರ್ಪಟ್ಟಿವೆ. ಕೋಲಿಯಾಪ್ಟರ ಗಣದ ಕೀಟಗಳಲ್ಲಿ ಮುಂದಿನ ರೆಕ್ಕೆಗಳು ದಪ್ಪ ಮತ್ತು ಗಡುಸಾದ ಎಲಿಟ್ರಗಳಾಗಿ ರೂಪಾಂತರವಾಗಿವೆ. ಕೀಟ ವಿಶ್ರಾಂತಿಯಲ್ಲಿದ್ದಾಗ ಹಾರಾಟಕ್ಕೆ ಬಳಸುವ ಹಿಂಬದಿಯ ರೆಕ್ಕೆಗಳನ್ನು ಮುಚ್ಚಿ ಸಂರಕ್ಷಿಸುತ್ತವೆ. ಹೆಟಿರಾಪ್ಟರ ಗಣದಲ್ಲಿ ಮುಂದಿನ ರೆಕ್ಕೆಯ ತೊಟ್ಟಿನ ಅರ್ಧಭಾಗ ದಪ್ಪ ಮತ್ತು ಗಡುಸಾದ ಹೆಮಿಲಿಟ್ರ ಆಗಿದೆ. ಆರ್ಥಾಪ್ಟರ ಗಣದಲ್ಲಿ ಮುಂದಿನ ರೆಕ್ಕೆ ಚಕ್ಕಳದಂತೆ ಗಡುಸಾಗಿದೆ. ಇದಕ್ಕೆ ಟೆಗ್ಮೆನ್ ಎಂದು ಹೆಸರು.




ವಿವಿಧ ಪ್ರಭೇದದ ಕೀಟಗಳ ರೆಕ್ಕೆಗಳು

ಜೀರ್ಣಾಂಗ ವ್ಯವಸ್ಥೆ: ದೇಹದ ಉದ್ದ ಅಥವಾ ಅದಕ್ಕಿಂತ ಹೆಚ್ಚು ಉದ್ದದ ಸುತ್ತಿಕೊಂಡಿರುವ ಒಂದು ಕೊಳವೆಯಂತಹ ಅನ್ನನಾಳವಿದೆ. ದ್ರವರೂಪದ ಆಹಾರವನ್ನು ಸೇವಿಸುವ ಕೀಟಗಳಲ್ಲಿ ಇದರ ಉದ್ದ ಹೆಚ್ಚು. ಈ ಕೊಳವೆಯಲ್ಲಿ ಮುಂಗರುಳು, ನಡುಕರುಳು ಮತ್ತು ಹಿಂಗರುಳು ಎಂಬ ಮೂರು ಭಾಗಗಳಿವೆ. ಮುಂಗರುಳು ಮತ್ತು ಹಿಂಗರುಳುಗಳು ದೇಹದೊಳಕ್ಕೆ ಚಾಚಿದ ಹೊರಚರ್ಮದ ಭಾಗಗಳಾದ್ದರಿಂದ ಇವುಗಳಲ್ಲಿ ಚರ್ಮದ ಮೇಲೆ ಇರುವಂಥ ಮೇಲ್ಪೊರೆಯ ಪದರವನ್ನು ಕಾಣಬಹುದು.

ಮುಂಗರುಳಿನ ಮುಖ್ಯ ಭಾಗಗಳಿವು. 1. ಬಾಯಿಯ ಮುಂದಿನ ಆಹಾರ ಕುಳಿ: ಇದು ವದನಾಂಗಗಳಿಗೂ ಮೇಲುತುಟಿಗೂ ಮಧ್ಯದ ಭಾಗ. ತಾತ್ಕಾಲಿಕವಾಗಿ ಆಹಾರ ಶೇಖರಣೆ ಮಾಡುವುದು ಮತ್ತು ಆಹಾರವನ್ನು ಜೊಲ್ಲಿನಿಂದ ತೋಯಿಸುವುದು ಇದರ ಕೆಲಸ. 2. ಗಂಟಲು–ಬಾಯಿಗೂ ಆಹಾರನಾಳಕ್ಕೂ ನಡುವಣ ಭಾಗ. 3. ಆಹಾರನಾಳ–ನೇರವಾದ ಈ ಕೊಳವೆ ತಲೆಯ ಹಿಂಭಾಗದಿಂದ ಎದೆಯ ಮುಂಭಾಗದವರೆಗೂ ಚಾಚಿಕೊಂಡಿದೆ. ಇದರ ಒಳಪದರಲ್ಲಿ ಉದ್ದುದ್ದವಾಗಿರುವ ನೆರಿಗೆಗಳಿವೆ. 4. ಎರೆಚೀಲ: ಆಹಾರ ನಾಳ ಉಬ್ಬಿಕೊಂಡಿರುವ ಹಿಂಭಾಗವಿದು. ಆಹಾರ ಶೇಖರಣೆಗಾಗಿ ಉಪಯೋಗಿಸಲ್ಪಡುತ್ತದೆ. 5. ಜಠರ: ಚೀಲದಂಥ ಭಾಗ. ಇದರ ಒಳಪದರದಲ್ಲಿ ಹಲ್ಲಿನಂತಿರುವ ಏಣುಗಳಿದ್ದು, ಆಹಾರವನ್ನು ಅರೆಯಲು ಸಹಾಯಕವಾಗಿವೆ.

ನಡುಕರುಳನ್ನು ಹೊಟ್ಟೆ ಎನ್ನುತ್ತಾರೆ. ಇದರ ಆಕಾರ, ಧಾರಣಶಕ್ತಿ ಕೀಟ ಸೇವಿಸುವ ಆಹಾರದ ಗುಣ ಮತ್ತು ಪ್ರಮಾಣವನ್ನು ಅನುಸರಿಸಿವೆ. ನಡುಕರುಳು ಕೆಲವು ಕೀಟಗಳಲ್ಲಿ ಚೀಲದಂತೆಯೂ, ಅಥವಾ ಸುರುಳಿ ಸುತ್ತಿಕೊಂಡಿರುವ ಕೊಳವೆಯಂತೆಯೂ ಇದೆ. ಅನೇಕ ಕೀಟಗಳಲ್ಲಿ ಹೊಟ್ಟೆಯ ಮುಂಭಾಗದಲ್ಲಿ ಬೆರಳಿನ ಆಕಾರದ ಕೊಳವೆಗಳ ಗೊಂಚಲು ಇದೆ. ಈ ಕೊಳವೆಗಳಿಗೂ, ಕರುಳಿಗೂ ಸಂಪರ್ಕವಿರುವುದರಿಂದ ಇವು ಕರುಳಿನ ಹೀರುವಲಯವನ್ನು ಹೆಚ್ಚಿಸುತ್ತವೆ.




ಕೀಟಗಳ ಒಳಾಂಗಗಳು

ಹಿಂಗರುಳಿನಲ್ಲಿ ಮೂರು ಭಾಗಗಳಿವೆ. 1. ಸಣ್ಣ ಕರುಳು, (ಇಲಿಯಮ್), 2. ದೊಡ್ಡಕರುಳು (ಕೋಲಾನ್), 3. ಗುದನಾಳ. ಹಿಂಗರುಳಿನ ಪ್ರಾರಂಭದಲ್ಲಿ ಸೂಕ್ಷ್ಮವಾದ ಕೂದಲೆಳೆಯಂತಿರುವ ಮಾಲ್ಪಿಗೀಯನ್ ಟ್ಯೂಬ್ಯೂಲ್ಸ್ (ಕೊಳವೆಗಳ) ಗೊಂಚಲು ಅಂಟಿಕೊಂಡಿದೆ. ರಕ್ತದಿಂದ ವಿಸರ್ಜಿತವಾಗುವ ವಸ್ತುಗಳನ್ನು ಹೀರಿ, ಹಿಂಗರುಳಿಗೆ ಸೇರಿಸುತ್ತವೆ.

ಉಸಿರಾಟ ವ್ಯವಸ್ಥೆ: ಕೀಟಗಳಲ್ಲಿ ಶ್ವಾಸಕೋಶಗಳಿಲ್ಲ. ದೇಹಾದ್ಯಂತ ವ್ಯಾಪಿಸಿಕೊಂಡಿರುವ ಕವಲೊಡೆದಿರುವ ಶ್ವಾಸನಾಳಗಳ (ಟ್ರೇಕಿಯ) ಮೂಲಕ ಉಸಿರಾಟ ನಡೆಯುತ್ತದೆ. ಎದೆ ಮತ್ತು ಉದರಗಳ ಪಕ್ಕಗಳಲ್ಲಿ ಹೊರದೇಹದ ಖಂಡಗಳಿಗನುಸಾರವಾಗಿ ಜೊತೆಯಾಗಿರುವ ಶ್ವಾಸರಂಧ್ರಗಳ (ಸ್ಪೈರಕಲ್ಸ್) ಮೂಲಕ ಗಾಳಿ ಶ್ವಾಸನಾಳಗಳನ್ನು ಪ್ರವೇಶಿಸುತ್ತದೆ. ಜಲವಾಸಿ ಮರಿಕೀಟಗಳಲ್ಲಿ ಕಿವಿರುಗಳಿವೆ. ಶ್ವಾಸರಂಧ್ರಗಳ ಸಂಖ್ಯೆ ಹತ್ತು ಜೊತೆ. ಎದೆ ಭಾಗದಲ್ಲಿ 2, ಉದರ ಭಾಗದಲ್ಲಿ 8.

ಶ್ವಾಸರಂಧ್ರದ ರಚನೆ: ಗಾಳಿಯ ಪ್ರವೇಶಕ್ಕೆ ರಂಧ್ರ, ಅದರ ಸುತ್ತಲೂ ಹೊರ ಚರ್ಮದ ಅಂಗಳ ಮತ್ತು ಮಾಂಸಖಂಡಗಳ ಹಾಗೂ ಹೊರ ಚರ್ಮದ ತುಂಡುಗಳಿಂದ ಕೂಡಿದ ಮುಚ್ಚುವ ವ್ಯವಸ್ಥೆ ಇದೆ. ದೇಹದ ಶೈತ್ಯಾಂಶ ಆವಿರೂಪದಲ್ಲಿ ಕಳೆದು ಹೋಗುವುದನ್ನು ಮುಚ್ಚುವ ವ್ಯವಸ್ಥೆ ತಡೆಗಟ್ಟುತ್ತದೆ. ಅನೇಕ ಕೀಟಗಳಲ್ಲಿ ಅಂಗುಳಕ್ಕೆ ಬದಲು ಹೊರಚರ್ಮದ ಎರಡು ತುಟಿಗಳಿವೆ. ಶ್ವಾಸನಾಳಗಳು ಮತ್ತು ಅವುಗಳ ಸೂಕ್ಷ್ಮ ಕವಲುಗಳು ಗಾಳಿ ತುಂಬಿಕೊಂಡಾಗ ಬಿಳಿ ಬಣ್ಣದಿಂದ ಹೊಳೆಯುತ್ತವೆ. ಇವುಗಳ ಒಳಪದರ ಹೊರ ಚರ್ಮದ್ದು. ಈ ಒಳಪದರ ಸುರುಳಿ ಆಕಾರದಲ್ಲಿ ಉಬ್ಬಿಕೊಂಡಿದೆ. ಇದನ್ನು ಸೂಕ್ಷ್ಮದರ್ಶಕದ ಮೂಲಕ ನೋಡಿದಾಗ ನಾಳಗಳ ಸುತ್ತ ಗೆರೆಗಳಿದ್ದಂತೆ ಕಾಣುತ್ತವೆ. ನಾಳಗಳು ಚಪ್ಪಟೆಯಾಗದಂತೆ ಮತ್ತು ಗಾಳಿಸಂಚಾರ ಸರಾಗವಾಗಿ ನಡೆಯಲು ಈ ಸುರುಳಿಗಳು ಉಪಯುಕ್ತವಾಗಿವೆ. ಶ್ವಾಸನಾಳಗಳ ಕವಲುಗಳು ಅತ್ಯಂತ ಸೂಕ್ಷ್ಮವಾಗಿ ಅಂಗಾಂಶಗಳನ್ನೆಲ್ಲ ಪ್ರವೇಶಿಸಿ ಕೊನೆಗೆ ಜೀವಕಣಗಳ ಗುಂಪುಗಳ ಮಧ್ಯೆ ಅಂತ್ಯಗೊಳ್ಳುತ್ತವೆ. ಈ ರೀತಿ ದೇಹದಾದ್ಯಂತ ಹೊಕ್ಕು, ಜೀವಕಣಗಳಿಗೆ ನೇರವಾಗಿ ಸ್ವಚ್ಛ ಗಾಳಿಯೊದಗಿಸಿ, ಮಲಿನವಾದ ಗಾಳಿ ಮತ್ತು ನೀರನ್ನು ಹೊರಕ್ಕೆ ಸಾಗಿಸುತ್ತವೆ. ಹಾರುವ ಕೀಟಗಳ ದೇಹದ ನಿರ್ದಿಷ್ಟವಾದ ಸ್ಥಳಗಳಲ್ಲಿ ಶ್ವಾಸನಾಳಗಳು ಉಬ್ಬಿಕೊಂಡು ಗಾಳಿಚೀಲಗಳಾಗಿವೆ. ಇವು ಉಸಿರಾಟಕ್ಕೆ ಸಹಾಯಕವಾಗುವುದಲ್ಲದೆ, ಹಾರಾಟದಲ್ಲೂ ಉಪಯುಕ್ತವಾಗಿವೆ.

ರಕ್ತಪರಿಚಲನಾ ವ್ಯವಸ್ಥೆ: ಕೀಟಗಳ ರಕ್ತಪರಿಚಲನಾ ವ್ಯವಸ್ಥೆಯಲ್ಲಿ ಬೆನ್ನು ಭಾಗದಲ್ಲಿನ ರಕ್ತನಾಳ (ಡಾರ್ಸಲ್ ವೆಸಲ್) ಪ್ರಮುಖ ಭಾಗ. ದೇಹದ ಉಳಿದ ಭಾಗಗಳಲ್ಲಿ ಈ ರೀತಿಯ ಪ್ರಮುಖ ರಕ್ತನಾಳಗಳಿಲ್ಲ. ರಕ್ತ ಈ ಭಾಗಗಳಲ್ಲಿ ಅಂಗಾಂಗಗಳ ಮಧ್ಯೆ ಮತ್ತು ಕಾಲುಗಳಲ್ಲಿರುವ ಪೊಟರೆಗಳಲ್ಲಿ ಮಾತ್ರ ಚಲಿಸುತ್ತದೆ. ಡಾರ್ಸಲ್ ರಕ್ತನಾಳ ಹಿಂಭಾಗದಲ್ಲಿ ಮುಚ್ಚಿ ಮುಂಭಾಗದಲ್ಲಿ ತೆರೆದಿರುವಂಥ ಕೊಳವೆ ಇದೆ. ಇದು ತಲೆಯಿಂದ ಉದರಭಾಗದ ತುದಿಯವರೆಗೂ ಹಬ್ಬಿದೆ. ಇದನ್ನು ಹೃದಯ ಮತ್ತು ಅಯೋರ್ಟ ಎಂದು ವಿಂಗಡಿಸಲಾಗಿದೆ. ಹೃದಯದಲ್ಲಿ ಸಂಪೀಡಕಗಳಿಂದ ನಿರ್ಮಿತವಾದ ನಿರ್ದಿಷ್ಟ ಸಂಖ್ಯೆಯ ಕೋಣೆಗಳು ಇವೆ. ಕೋಣೆಗಳ ಪಕ್ಕದಲ್ಲಿರುವ ಆಸ್ಟಿಯ ಎಂಬ ರಂಧ್ರಗಳ ಮೂಲಕ ಹೃದಯವನ್ನು ಪ್ರವೇಶಿಸಿದ ರಕ್ತ ಮುಂದಕ್ಕೆ ಹರಿದು ಅಯೋರ್ಟ ನಾಳದ ಮುಂದಿನ ದ್ವಾರದಿಂದ ಹೊರಕ್ಕೆ ಬಸಿದು ಅಂಗಾಂಗಗಳನ್ನೆಲ್ಲ ತೊಯಿಸುತ್ತದೆ. ರಕ್ತದಲ್ಲಿ ದ್ರವಭಾಗ ಪ್ಲಾಸ್ಮ ಮತ್ತು ರಕ್ತಕಣಗಳಿವೆ. ದ್ರವಭಾಗ ವರ್ಣರಹಿತವಾಗಿದೆ. ಕೆಲವು ಪ್ರಭೇದದ ಕೀಟಗಳಲ್ಲಿನ ರಕ್ತದ

ದ್ರವಭಾಗವು ತಿಳಿಹಸಿರು, ಹಳದಿ, ಕಂದು ಬಣ್ಣಗಳಿಂದ ಕೂಡಿರುತ್ತದೆ. ಕೆಂಪು ಬಣ್ಣ ವಿರಳ (ಉದಾ: ರಕ್ತ ಹುಳುಗಳಲ್ಲಿರುತ್ತದೆ). ಅಂಗಾಂಶಗಳಿಗೆ ಶ್ವಾಸನಾಳಗಳಿಂದ ನೇರವಾಗಿ ಆಮ್ಲಜನಕ ಸರಬರಾಜಾಗುವುದರಿಂದ ರಕ್ತಕ್ಕೆ ಉಸಿರಾಟದ ಜವಾಬ್ದಾರಿ ಅಷ್ಟಾಗಿ ಇಲ್ಲ.

ವಿಸರ್ಜನಾಂಗಗಳು: ಇವು ದೇಹದ ಅಂಗಾಂಶಗಳಿಗೆ ಒಂದೇ ಸಮವಾದ ಅಂತರ ಪರಿಸ್ಥಿತಿಯನ್ನು ಒದಗಿಸುತ್ತವೆ. ಆಹಾರ ಪದಾರ್ಥಗಳು ಜೀರ್ಣಗೊಂಡನಂತರ ಉತ್ಪತ್ತಿಯಾಗುವ ಸಾರಜನಕ ಸಂಬಂಧದ ತ್ಯಾಜ್ಯವಸ್ತುಗಳನ್ನು ಹೊರಕ್ಕೆ ತಳ್ಳುವುದು ಈ ಅಂಗಗಳ ಮುಖ್ಯ ಕೆಲಸ. ಮಾಲ್ಪಿಗಿಯನ್ ಕೊಳವೆಗಳು, ಕೊಬ್ಬಿನ ಅಂಗ (ಫ್ಯಾಟ್ ಬಾಡಿ) ಇವೇ ಮುಖ್ಯವಾದ ವಿಸರ್ಜನಾಂಗಗಳು.



ಕೀಟದ ರಕ್ತಪರಿಚಲನಾವ್ಯೂಹ

ಮಾಲ್ಪಿಗಿಯನ್ ಕೊಳವೆಗಳು: ಉದ್ದವಾಗಿ ನೂಲಿನಂತಿರುವ ಈ ಕೊಳವೆಗಳು ಒಂದು ಕೊನೆಯಲ್ಲಿ ಕರುಳಿಗೆ ಅಂಟಿಕೊಂಡು ರಕ್ತದಿಂದ ಆವರಿಸಲ್ಪಟ್ಟಿವೆ. ಇವಕ್ಕೆ ಹೊರ ತುದಿಯಲ್ಲಿ (ತೊಟ್ಟಿನಿಂದ ದೂರವಿರುವ ತುದಿ) ರಂಧ್ರವಿಲ್ಲ. ತೊಟ್ಟಿನ ರಂಧ್ರದಿಂದ ಕರುಳಿನ ಒಳಭಾಗಕ್ಕೆ ಸಂಪರ್ಕವಿದೆ. ಇವುಗಳ ಸಂಖ್ಯೆ ಕೀಟ ಪ್ರಭೇದಗಳಿಗನುಗುಣವಾಗಿ 2 ರಿಂದ 200. ಕೆಲವು ಕೀಟ ಪ್ರಭೇದಗಳಲ್ಲಿ ಇವುಗಳ ಎರಡು ತುದಿಗಳೂ ಹಿಂಗರುಳಿಗೆ ಅಂಟಿಕೊಂಡಿವೆ. ಇವು ಯೂರಿಕ್ ಆಮ್ಲದಂತಹ ಹಾನಿಕರವಸ್ತುಗಳನ್ನು ರಕ್ತದಿಂದ ಬೇರ್ಪಡಿಸಿ ಕರುಳಿಗೆ ಸಾಗಿಸುತ್ತವೆ.

ಕೊಬ್ಬಿನ ಅಂಗ (ಫ್ಯಾಟ್ ಬಾಡಿ): ಅನೇಕ ರೀತಿಯ ವಸ್ತುಗಳನ್ನು ಶೇಖರಿಸಿಟ್ಟುಕೊಳ್ಳಬಲ್ಲ ಜೀವಕಣಗಳಿಂದ ಕೂಡಿದ ನಿರ್ದಿಷ್ಟ ಆಕಾರವಿಲ್ಲದ ಅಂಗ. ಇದರಲ್ಲಿ ಸೂಕ್ಷ್ಮವಾದ ಅನೇಕ ಕುಹರಗಳಿವೆ. ಇದರ ಬಣ್ಣ ಬಿಳಿ, ಹಳದಿ, ಕಿತ್ತಳೆ ಅಥವಾ ಹಸಿರು. ಯೂರಿಕ್ ಆಮ್ಲ, ಕ್ಯಾಲ್ಸಿಯಂ ಲವಣಗಳು ಈ ಅಂಗದಲ್ಲಿ ಶೇಖರಣೆಯಾಗುತ್ತವೆ. ಈ ಅಂಗದ ಮುಖ್ಯ ಕೆಲಸ ಕೊಬ್ಬು, ಸಕ್ಕರೆ ಮತ್ತು ಪ್ರೋಟೀನ್ ನಂತಹ ಆಹಾರವಸ್ತುಗಳನ್ನು ಶೇಖರಣೆ ಮಾಡುವುದು.

ಗ್ರಂಥಿಗಳು: ಕೀಟಗಳಲ್ಲಿ ಎರಡು ಬಗೆಯ ಗ್ರಂಥಿಗಳಿವೆ. 1. ನಿರ್ದಿಷ್ಟವಾದ ಬಾಯಿ ಅಥವಾ ನಾಳಗಳುಳ್ಳ ಮತ್ತು ರಸವನ್ನು ದೇಹದ ಹೊರಗೆ ಅಥವಾ ಒಂದು ಅಂಗದೊಳಗೆ ಸ್ರವಿಸುವ ಗ್ರಂಥಿಗಳು. 2. ಸ್ರವಿಸಿದ ರಸವನ್ನು ರಕ್ತದಲ್ಲಿ ಬೆರೆಸಿ ಅದು ದೇಹದಾದ್ಯಂತ ಚಲಿಸುವಂತೆ ಮಾಡುವ ನಾಳರಹಿತ ಗ್ರಂಥಿಗಳು.

ಜೇನು ಕೀಟದ ಮೇಣ ಗ್ರಂಥಿ

ಚರ್ಮಗ್ರಂಥಿಗಳು, ನಡುಕರುಳಿನ ಗ್ರಂಥಿಗಳು, ಮಾಲ್ಪಿಗಿಯನ್ ಕೊಳವೆಗಳು ನಾಳವುಳ್ಳ ಗ್ರಂಥಿಗಳು. ಇವಲ್ಲದೆ 1. ಮೇಣಗ್ರಂಥಿಗಳು (ವ್ಯಾಕ್ಸ್ ಗ್ಲಾಂಡ್ಸ್)– ಚರ್ಮದ ಬೇರೆ ಬೇರೆ ಭಾಗಗಳಲ್ಲಿರುವ ಈ ಗ್ರಂಥಿಗಳು ಸಸ್ಯ ತಿಗಣೆಗಳಲ್ಲಿ ಹೆಚ್ಚು. ಮೇಣ ತೆಳ್ಳನೆಯ ಹುಡಿ, ದಾರಗಳ ಗೊಂಚಲು ಅಥವಾ ಹಲಗೆಯ ರೂಪದಲ್ಲಿ ಉತ್ಪತ್ತಿಯಾಗುತ್ತದೆ. ಜೇನು ಕೀಟದ ಎದೆಭಾಗದಲ್ಲಿ ಈ ಗ್ರಂಥಿಗಳಿವೆ.

2. ಅರಗು ಗ್ರಂಥಿಗಳು (ಲ್ಯಾಕ್ ಗ್ಲಾಂಡ್ಸ್): ಅರಗು ಕೀಟ ಮತ್ತು ಅದರ ಸಂಬಂಧಿಗಳಲ್ಲಿ ಇವೆ. ರಾಳದಂತಿರುವ ಅರಗಿನ ರಕ್ಷಣಾ ಕವಚವನ್ನು ಹೆಣ್ಣು ಕೀಟ ಸ್ರವಿಸುತ್ತದೆ. ಈ ಗ್ರಂಥಿಗಳು ಚರ್ಮದಲ್ಲಿವೆ.

3. ಶಿರದ ಗ್ರಂಥಿಗಳು (ಸಿಫ್ಯಾಲಿಕ್ ಗ್ಲಾಂಡ್ಸ್): ದವಡೆ, ಮ್ಯಾಕ್ಸಿಲ ಮತ್ತು ಕೆಳತುಟಿಗೆ ಸೇರಿದ ಗ್ರಂಥಿಗಳಿವು. ಕೆಳತುಟಿ ಗ್ರಂಥಿಗಳನ್ನು ಜೊಲ್ಲುಗ್ರಂಥಿಗಳೆಂದು ಕರೆಯವರು. ಇದರ ಸ್ರಾವ ಆಹಾರಸೇವನೆ ಮತ್ತು ಪಚನ ಕ್ರಿಯೆಗೆ ಸಹಾಯಕ.

4. ರೇಷ್ಮೆ ಗ್ರಂಥಿಗಳು. (ಸಿಲ್ಕ್ ಗ್ಲಾಂಡ್ಸ್): ಪತಂಗಗಳ ಗುಂಪಿನಲ್ಲಿ ಕಂಡುಬರುವ ಕೆಳತುಟಿಗ್ರಂಥಿಗಳು. ಮರಿಕೀಟಗಳ ವಾಸಸ್ಥಾನಗಳಿಗೂ, ಕೋಶಗಳ ಗೂಡುಗಳಿಗೂ, ಬೇಕಾಗುವ ಪ್ರೋಟೀನ್‌ಯುಕ್ತ ರೇಷ್ಮೆದಾರವನ್ನು ಸ್ರವಿಸುತ್ತವೆ. ರೇಷ್ಮೆದಾರ ಬಾಯಿಯಿಂದ ಹೊರಬಂದ ತಕ್ಷಣ ಗಾಳಿಗೆ ಸೋಕಿದಾಗ ಗಡುಸಾದ ಎಳೆಯಾಗಿ ಪರಿವರ್ತನೆ ಹೊಂದುತ್ತದೆ.



ಜಿರಲೆಯ ಲಾಲಾರಸ ಗ್ರಂಥಿ

5. ಅಸಹ್ಯ ಹುಟ್ಟಿಸುವ ಗ್ರಂಥಿಗಳು (ರಿಪಗ್ನಟೋರಿಯಲ್ ಗ್ಲಾಂಡ್ಸ್): ಅನೇಕ ಕೀಟಗಳ ಚರ್ಮದಲ್ಲಿ ಈ ಗ್ರಂಥಿಗಳಿವೆ. ಇವು ಉತ್ಪಾದಿಸುವ ಕೆಟ್ಟವಾಸನೆ ಬೇರೆ ಪ್ರಾಣಿಗಳನ್ನು ದೂರವಿಡುವುದಕ್ಕೆ ಮತ್ತು ಆ ಕೀಟಗಳಿಗೆ ರಕ್ಷಣೆ ನೀಡುವುದಕ್ಕೆ ಸಹಾಯಕ. ಸಸ್ಯ ತಿಗಣೆಗಳ ದುರ್ವಾಸನೆ ಇದಕ್ಕೆ ಉದಾಹರಣೆ.

ಜೇನು ಕೀಟದಲ್ಲಿ ಲಾಲಾರಸಗ್ರಂಥಿ






ರೇಷ್ಮೆ ಗ್ರಂಥಿ

6. ಆಕರ್ಷಕ ಗ್ರಂಥಿಗಳು (ಅಟ್ರ್ಯಾಕ್ಟಂಟ್ ಗ್ಲಾಂಡ್ಸ್): ಅನೇಕ ಪತಂಗಗಳು ಸಂಭೋಗಕ್ಕಾಗಿ ಭಿನ್ನ ಲಿಂಗದ ಕೀಟವನ್ನು ಆಕರ್ಷಿಸುವುದಕ್ಕಾಗಿ ವಿಶೇಷ ಬಗೆಯ ರಸವನ್ನು ಸ್ರವಿಸುವುವು.

7. ವಿಷಗ್ರಂಥಿಗಳು: ಅನೇಕ ಕಣಜಗಳಲ್ಲಿ ಮುಳ್ಳುಕೊಂಡಿ ಅಥವಾ ಬಾಹ್ಯ ಅಂಡೋಪಕರಣಕ್ಕೆ ಸೇರಿದ ವಿಷಗ್ರಂಥಿಗಳಿವೆ.




**ಜೇಡದಲ್ಲಿ ರೇಷ್ಮೆ ಗ್ರಂಥಿ**

ನಾಳರಹಿತ ಗ್ರಂಥಿಗಳಲ್ಲಿ ಮುಖ್ಯವಾದುವುಗಳು: 1. ಎದೆಯ ಮೊದಲಿನ ಖಂಡದ ಗ್ರಂಥಿಗಳು (ಪ್ರೋಥೊರ್ಯಾಸಿಕ್ ಗ್ಲಾಂಡ್ಸ್). ಇವುಗಳ ರಸದಿಂದ ಎಳೆ ವಯಸ್ಸಿನ ಹುಳುಗಳು ಸಕಾಲದಲ್ಲಿ ಪೊರೆ ಕಳಚಿ ಬೆಳೆಯಲು ಸಾಧ್ಯ. 2. ಕಾರ್ಪೊರ ಅಲ್ಲೇಟ– ಮಿದುಳಿನ ಹಿಂದೆ ಅಯೋರ್ಟ ನಾಳದೊಡನೆ ಸಂಬಂಧ ಹೊಂದಿರುವ ಜೋಡಿ ಗ್ರಂಥಿಗಳು. ಎಳೆ ವಯಸ್ಸಿನ ಹುಳಗಳು ಬಲಿತ, ಪ್ರೌಢ ಕೀಟಗಳ ಗುಣಗಳನ್ನು ಹೊಂದದಂತೆ ತಡೆಗಟ್ಟಲು ಇದರ ರಸ ಸಹಾಯಕ. 3. ಕಾರ್ಪೊರ ಕಾರ್ಡಿಯಾಕ– ಮಿದುಳಿನ ಕೆಳಗಿದೆ. ಮೊಟ್ಟೆಗಳ ಉತ್ಪಾದನೆಗೆ ಸಹಕಾರಿಯಾದ ರಸವನ್ನು ಸ್ರವಿಸುತ್ತದೆ.




ಕಣಜ

ಎಪಿಡರ್ಮಿಸ್ ಪದರದ ಕೆಳಗೆ ಒಂದು ಬಗೆಯ ಚರ್ಮಗ್ರಂಥಿಗಳಿವೆ. ಇವು ಫಿರೋಮೋನ್ ಹಾರ್ಮೋನನ್ನು ಸ್ರವಿಸುತ್ತವೆ. ಈ ವಸ್ತು ಕೀಟಗಳನ್ನು ಆಕರ್ಷಿಸಿ ಅವು ಸಮುದಾಯಗಳಲ್ಲಿ ವಾಸಮಾಡುವಂತೆ ಪ್ರಚೋದಿಸುತ್ತದೆ (ಉದಾ: ಇರುವೆಗಳು).

ನರಮಂಡಲದ ನಿರ್ದಿಷ್ಟ ಸ್ಥಳಗಳಲ್ಲಿ ನರಕಣಗಳು ಒಟ್ಟುಗೂಡಿ ನರಗ್ರಂಥಿಗಳಾಗುತ್ತವೆ. ಇವುಗಳಿಂದ ಹೊರಬೀಳುವ ಸೂಕ್ಷ್ಮ ಎಳೆಗಳ ಕಟ್ಟುಗಳೇ ನರಗಳು. ನರಮಂಡಲವನ್ನು ಕೇಂದ್ರ ನರವ್ಯೂಹ, ಒಳವಲಯ ನರವ್ಯೂಹ, ಹೊರವಲಯ ನರವ್ಯೂಹ ಎಂದು ಮೂರುಭಾಗಗಳಾಗಿ ಗುರುತಿಸಿದ್ದಾರೆ. ಇವುಗಳಿಗೆ ನಿಕಟಸಂಬಂಧವಿದೆ.

1. ಕೇಂದ್ರ ನರವ್ಯೂಹ: ಇದು ನರಗ್ರಂಥಿ ಪಂಕ್ತಿಗಳ ಒಂದು ಜೊತೆ. ಈ ಪಂಕ್ತಿಗಳು ಉದ್ದವಾಗಿ ಮತ್ತು ಅಡ್ಡವಾಗಿ ಕೂಡಿಕೊಂಡಿವೆ. ಅಂದರೆ, ಒಂದೊಂದು ಗ್ರಂಥಿಯೂ ಪಕ್ಕದ, ಮೇಲಿನ ಮತ್ತು ಕೆಳಗಿನ ಗ್ರಂಥಿಯೊಡನೆ ಸಂಪರ್ಕ ಪಡೆದಿದೆ. ಕೇಂದ್ರ ನರವ್ಯೂಹವನ್ನು ಅನ್ನನಾಳದ ಮೇಲಿನ ಗ್ರಂಥಿ ಅಥವಾ ಮಿದುಳು, ಅನ್ನನಾಳದ ಕೆಳಗಿನ ಗ್ರಂಥಿ ಮತ್ತು ತಳದ ನರಹುರಿ ಎಂದು ವಿಭಾಗಿಸಲಾಗಿದೆ. ಮಿದುಳಿನಲ್ಲಿ ಭ್ರೂಣಾವಸ್ಥೆಯ ಶಿರದ ಮೊದಲ ಮೂರು ಖಂಡಗಳ ನರಗ್ರಂಥಿಗಳು ಸೇರಿವೆ. ಮಿದುಳಿಗೆ ಕಣ್ಣು, ಕುಡಿಮೀಸೆ, ಮೇಲುತುಟಿಗಳೊಡನೆ ಸಂಪರ್ಕ ಇದೆ. ಅನ್ನನಾಳದ ಕೆಳಗಿನ ಗ್ರಂಥಿ ಶಿರದ ಹಿಂದಿನ ಮೂರು ಖಂಡಗಳ ಗ್ರಂಥಿಗಳಿಂದ ಕೂಡಿದೆ. ದವಡೆ, ಮ್ಯಾಕ್ಸಿಲ ಮತ್ತು ಕೆಳತುಟಿಗಳಿಗೆ ನರಗಳನ್ನು ಒದಗಿಸುತ್ತದೆ. ತಳದ ನರಹುರಿ ಮತ್ತು ಉದರಗಳ ಕೆಳಭಾಗದ ಮಧ್ಯ ರೇಖೆಯಲ್ಲಿರುವ ಗ್ರಂಥಿಗಳ ಜೋಡಿ ಸರಪಣಿ ಅನ್ನನಾಳದ ಕೆಳಗಿನ ಗ್ರಂಥಿಯ ಹಿಂಭಾಗಕ್ಕೆ ಅಂಟಿಕೊಂಡಿದೆ. ಎದೆಯಲ್ಲಿ ಮೂರು, ಉದರದಲ್ಲಿ ಖಂಡಗಳ ಸಂಖ್ಯೆಯಷ್ಟು ಅಥವಾ (ಕೆಲವು ಕೂಡಿ ಸಂಯುಕ್ತ ಗ್ರಂಥಿಗಳಾಗಿರುವುದರಿಂದ) ಕಡಿಮೆ ಸಂಖ್ಯೆಯಲ್ಲಿ ಇವೆ. ಎದೆಯ ಗ್ರಂಥಿಗಳು ಕಾಲು ಮತ್ತು ರೆಕ್ಕೆಗಳಿಗೂ ಉದರ ಗ್ರಂಥಿಗಳು ಅಲ್ಲಿನ ಮಾಂಸಖಂಡಗಳಿಗೂ ನರಗಳ ಸಂಪರ್ಕ ಕಲ್ಪಿಸಿವೆ.

2. ಒಳವಲಯ ನರವ್ಯೂಹ: ಇದನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. (i) ಅನ್ನನಾಳದ ಅನುಕಂಪನ ವ್ಯೂಹ. ಇದು ಮುಂಗರುಳು, ನಡುಕರುಳು, ಹೃದಯ ಈ ಭಾಗಗಳಿಗೆ ನರಸಂಪರ್ಕವನ್ನು ಒದಗಿಸುತ್ತದೆ. (ii). ತಳದ ಅನುಕಂಪನ ವ್ಯೂಹ. ಇದು ಎದೆ ಮತ್ತು ಉದರ ಭಾಗಗಳಲ್ಲಿ ತಳದ ನರಹುರಿಯೊಡನೆ ಸಂಬಂಧ ಹೊಂದಿ ಶ್ವಾಸರಂಧ್ರಗಳಿಗೆ ನರಗಳನ್ನು ಒಯ್ಯುತ್ತವೆ. (iii). ಬಾಲದ ಅನುಕಂಪನ ವ್ಯೂಹ. ತಳದ ನರಹುರಿಯ ಕೊನೆಯ ಸಂಯುಕ್ತ ಗ್ರಂಥಿಯಿಂದ ಕವಲೊಡೆದ ಈ ವ್ಯೂಹ ಜನನಾಂಗಗಳಿಗೂ, ಜೀರ್ಣಾಂಗ ವ್ಯವಸ್ಥೆಯ ಹಿಂಭಾಗಕ್ಕೂ ನರಸಂಪರ್ಕ ಕಲ್ಪಿಸುತ್ತದೆ.

3. ಹೊರವಲಯ ನರವ್ಯೂಹ: ಕೇಂದ್ರ ಮತ್ತು ಒಳವಲಯ ನರವ್ಯೂಹಗಳ ಗ್ರಂಥಿಗಳಿಂದ ಹೊರಟು ದೇಹದ ಹೊರ ಮೈಯನ್ನು ಆವರಿಸಿರುವ ನರಗಳು ಈ ಗುಂಪಿಗೆ ಸೇರಿವೆ.

ಜ್ಞಾನೇಂದ್ರಿಯಗಳು: ಪರಿಸರದ ಬದಲಾವಣೆಗಳ ಅರಿವು ಮೂಡುವಂತೆ ಮಾಡುವುದು ಜ್ಞಾನೇಂದ್ರಿಯಗಳ ಕೆಲಸ. ಬಾಹ್ಯಪರಿಸರದ ವ್ಯತ್ಯಾಸಗಳನ್ನು ನರಸಂಬಂಧದ ಪ್ರಚೋದನೆಯನ್ನಾಗಿ ಪರಿವರ್ತಿಸಿ ಮಿದುಳಿಗೆ, ಬೇರೆ ನರಗ್ರಂಥಿಗೆ ತಲಪಿಸುತ್ತವೆ. ಕೀಟಗಳ ಜ್ಞಾನೇಂದ್ರಿಯಗಳನ್ನು ಯಾಂತ್ರಿಕ ಗ್ರಾಹಕಗಳು (ಮೆಕ್ಯಾನೊರಿಸೆಪ್ಟರ್ಸ್), ಶ್ರವಣೇಂದ್ರಿಯಗಳು (ಆಡಿಟರಿ ಆರ್ಗನ್ಸ್), ರಾಸಾಯನಿಕ ಗ್ರಾಹಕಗಳು (ಕೀಮೊರಿಸೆಪ್ಟರ್ಸ್) ಮತ್ತು ನೇತ್ರೇಂದ್ರಿಯಗಳು ಎಂದು ವಿಭಾಗಿಸಲಾಗಿದೆ.

ಯಾಂತ್ರಿಕ ಗ್ರಾಹಕಗಳು ಸ್ಪರ್ಶ, ಗಾಳಿ, ನೀರು ಮುಂತಾದವುಗಳ ಹೊಡೆತದಿಂದ ವ್ಯತ್ಯಾಸಗೊಳ್ಳುವುದರ ಮೂಲಕ ನರಗಳನ್ನು ಕೆರಳಿಸುತ್ತವೆ. ದೇಹದ ವಿವಿಧ ಭಾಗಗಳಲ್ಲಿರುವ ನರಸಂಪರ್ಕವುಳ್ಳ ಕೂದಲುಗಳು ಮುಖ್ಯ ಯಾಂತ್ರಿಕ ಗ್ರಾಹಕಗಳು. ಕುಡಿಮೀಸೆಯ ಮೇಲಿರುವ ಜಾನ್ಸ್‌ಟನ್ಸ್ ಅಂಗ ಸಮತೋಲನೆಯ ವ್ಯತ್ಯಾಸ, ಗಾಳಿಯ ರಭಸ, ಘನವಸ್ತುಗಳ ಸಂಪರ್ಕ, ನೀರಿನ ಕಂಪನ ಮುಂತಾದ ಬಾಹ್ಯ ಪರಿಸ್ಥಿತಿಗಳ ಅರಿವನ್ನು ನೀಡುತ್ತದೆ.

ಶ್ರವಣೇಂದ್ರಿಯಗಳು: ಇವುಗಳಿಗೆ ಕರ್ಣಪಟಲ ಅಂಗಗಳೆಂದು (ಟಿಂಪನಲ್ ಆರ್ಗನ್ಸ್) ಹೆಸರು. ಇವು ತೆಳುವಾದ ಹೊರಚರ್ಮದ ಪೊರೆಗಳು, ಜೋಡಿಯಾಗಿವೆ. ಇವುಗಳ ಒಳಭಾಗದಲ್ಲಿ ಶ್ರವಣ ನರದ ಸಂಪರ್ಕವುಳ್ಳ ಜ್ಞಾನವಾಹಕ ಕೂದಲುಗಳ ಗೊಂಚಲು ಇದೆ. ಗಾಳಿಯ ಅಲೆ ಕರ್ಣಪಟಲದ ಪೊರೆಗೆ ಬಡಿದಾಗ ಆ ಪೊರೆ ಅಲುಗಾಡುತ್ತದೆ. ಈ ಅಲುಗಾಟವನ್ನು ಜ್ಞಾನವಾಹಕ ಕೂದಲುಗಳು ಶ್ರವಣ ನರದ ಮೂಲಕ ಸಂಬಂಧಪಟ್ಟ ನರಗ್ರಂಥಿಗೆ ಮುಟ್ಟಿಸುತ್ತವೆ. ಕರ್ಣಪಟಲ ಅಂಗಗಳು ದೇಹದ ಬೇರೆ ಬೇರೆ ಭಾಗಗಳಲ್ಲಿ ಅಂದರೆ, ಎದೆ, ಉದರ, ಮುಂಗಾಲುಗಳ ಮೇಲೆ ಇರುತ್ತವೆ.

ರಾಸಾಯನಿಕ ಗ್ರಾಹಕಗಳು: ಇವು ದೇಹದ ನಾನಾ ಭಾಗಗಳಲ್ಲಿ ಮುಖ್ಯವಾಗಿ ಕುಡಿಮೀಸೆ, ವದನಾಂಗಗಳ ಕುಚ್ಚುಗಳು (ಪಾಲ್ಪ್ಸ್), ಕಾಲುಗಳ ಮೇಲಿವೆ. ಇವು ಕೂದಲಿನಂತೆ ಮತ್ತು ತಟ್ಟೆಯಂತೆ ಇವೆ. ಚರ್ಮದ ಮೇಲೆ ಚಾಚಿಕೊಂಡಿದ್ದು ನರಗಳ ಸಂಪರ್ಕ ಹೊಂದಿವೆ. ರಾಸಾಯನಿಕ ಜ್ಞಾನವನ್ನು ಮೂರು ಬಗೆಗಳಾಗಿ ವಿಂಗಡಿಸಬಹುದು. 1. ಉದ್ರೇಕಕಾರಿ ವಸ್ತುಗಳು ಹೆಚ್ಚಾಗಿರುವ ಜಾಗಗಳಿಂದ ದೂರವಿರುವುದು. ಉದಾ: ಕ್ಲೋರೀನ್, ಅಮೋನಿಯದಂತಹ ವಸ್ತುಗಳಿಗೆ ತೋರುವ ಪ್ರತಿಕ್ರಿಯೆ. ಇದಕ್ಕೆ ಸಂಬಂಧಪಟ್ಟ ಗ್ರಾಹಕಗಳು ದೇಹದಲ್ಲೆಲ್ಲಾ ಇವೆ. 2. ವಾಸನೆ: ವಾಯುವಿನಲ್ಲಿ ಅತ್ಯಲ್ಪ ಭಾಗದಷ್ಟು ಆವಿ ರೂಪದಲ್ಲಿರುವ ವಸ್ತುಗಳನ್ನೂ ಪತ್ತೆಹಚ್ಚಿ ಅವನ್ನು ಹುಡುಕಿಕೊಂಡು ಹೋಗುವುದು ಅಥವಾ ಅವುಗಳಿಂದ ದೂರ ಸರಿಯುವುದು ಇದೇ ಘ್ರಾಣಶಕ್ತಿ. ಕುಡಿಮೀಸೆ ಮತ್ತು ವದನಾಂಗಗಳ ಕುಚ್ಚುಗಳ ಮೇಲೆ ಘ್ರಾಣಗ್ರಾಹಕ ರೋಮಗಳು ಇವೆ. 3. ರುಚಿ: ಹೆಚ್ಚು ಪ್ರಮಾಣದಲ್ಲಿ ಕೇಂದ್ರೀಕೃತವಾಗಿರುವ ಉದ್ರೇಕಕಾರಿ ವಸ್ತು ದ್ರವರೂಪದಲ್ಲಿ ಸೂಕ್ತವಾದ ಗ್ರಾಹಕಗಳೊಡನೆ ಸಂಪರ್ಕ ಹೊಂದಿದಾಗ ತೋರುವ ಪ್ರತಿಕ್ರಿಯೆಯೇ ರುಚಿ. ರಸಗ್ರಾಹಕ ರೋಮಗಳು ಕುಡಿಮೀಸೆ, ಬಾಯಿಯ ಒಳಭಾಗ, ವದನಾಂಗಗಳು, ಬಾಹ್ಯ ಅಂಡೋಪಕರಣ, ಮತ್ತು ಕಾಲುಗಳ ಟಾರ್ಸಸ್, ಟಿಬಿಯಗಳ ಮೇಲೆ ಹರಡಿವೆ.

ನೇತ್ರೇಂದ್ರಿಯಗಳು: ಕೀಟಗಳಿಗೆ ಬೆಳಕಿನ ಅರಿವು, ಸರಳ ನೇತ್ರ ಮತ್ತು ಸಂಯುಕ್ತ ನೇತ್ರ ಇವುಗಳ ಮೂಲಕ ಆಗುತ್ತದೆ. ಸರಳನೇತ್ರಗಳು ನೆತ್ತಿಯ ಮೇಲ್ಗಡೆ (ಮೂರು) ಮತ್ತು ಪಕ್ಕಗಳಲ್ಲಿ (1–7) ಇರುತ್ತವೆ. ಅನೇಕ ಪ್ರೌಢ ಕೀಟಗಳಲ್ಲಿ ಇವು ಇಲ್ಲ. ಸರಳನೇತ್ರದ ರಚನೆಯಲ್ಲಿ ಮುಖ್ಯ ಭಾಗಗಳಿವು: ಶುಕ್ಲ ಪಟಲ (ಕಾರ್ನಿಯ), ಯವ (ಲೆನ್ಸ್), ಅಕ್ಷಿಪಟ (ರೆಟಿನ), ವರ್ಣಕೋಶಗಳು (ಪಿಗ್ಮೆಂಟ್ ಸೆಲ್ಸ್) ಮತ್ತು ಕೃಷ್ಣಪಟಲ (ಐರಿಸ್). ಚರ್ಮದ ಮೇಲ್ಪೊರೆ ಸರಳನೇತ್ರದ ಹೊರಸಿಪ್ಪೆಯಾಗಿದ್ದು, ಶುಕ್ಲಪಟಲವೆನಿಸಿಕೊಂಡಿದೆ. ಇದು ಸ್ವಲ್ಪ ಉಬ್ಬಿದ್ದು, ದುಂಡನೆಯ ಯವವಾಗಿ, ಅದರ ಮೂಲಕ ಬೆಳಕು ಹಾಯುತ್ತದೆ. ಯವದ ಕೆಳಗಡೆ ಇರುವ ದೃಷ್ಟಿಸ್ತಂಭದ (ರ್‍ಯಾಬ್ಡಮ್) ಸುತ್ತಲೂ ದೃಷ್ಟಿಕೋಶಗಳ (ವಿಶುಯಲ್ ಸೆಲ್ಸ್) ಕಂತೆಯಿಂದ ಕೂಡಿರುವುದೇ ಅಕ್ಷಿಪಟ. ಪ್ರತಿ ದೃಷ್ಟಿಕೋಶಕ್ಕೂ ದೃಷ್ಟಿನರದ (ಆಪ್ಟಿಕ್ ನರ್ವ್) ಕವಲೊಂದರೊಡನೆ ಸಂಪರ್ಕವಿದೆ. ದೃಷ್ಟಿಕಣದ ಕಂತೆಗಳ ನಡುವೆ ವರ್ಣಕೋಶಗಳಿವೆ. ಕೆಲವು ಕೀಟಗಳಲ್ಲಿ ಯವದ ಅಂಚಿನಿಂದ ಹಿಡಿದು ದೃಷ್ಟಿಕೋಶ ಕೆಳತುದಿಯವರೆಗೂ ಇರುವ ದಟ್ಟವಾದ ಬಣ್ಣದ ಹೊದಿಕೆಯೇ ಕೃಷ್ಣಪಟಲ. ಒಂದೊಂದು ಸರಳ ನೇತ್ರವೂ ಒಂದು ಅಸ್ಪಷ್ಟ ಮತ್ತು ತಲೆಕೆಳಗಾದ ಬಿಂಬವನ್ನು ಕೊಡುತ್ತದೆ. ಹೀಗೆ ಸಿಕ್ಕಿದ ಹಲವಾರು ಚಿತ್ರಗಳ ನೆರವಿನಿಂದ ಕೀಟ ಪರಿಸರದಲ್ಲಿ ಅದರ ಸ್ಥಾನವನ್ನೂ, ಬೆಳಕು ಕತ್ತಲೆ ಪ್ರದೇಶಗಳನ್ನೂ ಗುರುತಿಸುತ್ತದೆ.

ಸಂಯುಕ್ತನೇತ್ರ: ಸರಳನೇತ್ರಕ್ಕೂ ಸಂಯುಕ್ತನೇತ್ರಕ್ಕೂ ಮುಖ್ಯ ವ್ಯತ್ಯಾಸವೆಂದರೆ, ಸರಳನೇತ್ರಕ್ಕೆ ಒಂದೇ ಮುಖ (ಫ್ಯಾಸೆಟ್) ಇದ್ದರೆ, ಸಂಯುಕ್ತನೇತ್ರಕ್ಕೆ ಅನೇಕ ಮುಖಗಳಿವೆ. ಆದ್ದರಿಂದ, ಸಂಯುಕ್ತನೇತ್ರವನ್ನು ಬಹುಸಂಖ್ಯೆಯ ದೃಷ್ಟಿ ಅಂಶಗಳ ಸಮಷ್ಟಿ ಎನ್ನುತ್ತಾರೆ. ಈ ದೃಷ್ಟಿ ಅಂಶಗಳಿಗೆ ಆಮಟಿಡಿಯ ಎಂದು ಹೆಸರು. ಒಂದು ಸಂಯುಕ್ತ ನೇತ್ರದಲ್ಲಿ ಇವುಗಳ ಸಂಖ್ಯೆ 6ರಿಂದ 2,800. ಒಂದು ದೃಷ್ಟಿ ಅಂಶದಲ್ಲಿ: 1. ಶುಕ್ಲಪಟಲ: ಬೆಳಕು ತನ್ಮೂಲಕ ಹಾದುಹೋಗಬಲ್ಲ ಯವವಾಗಿ ಮಾರ್ಪಟ್ಟಿರುವ ಚರ್ಮದ ಮೇಲ್ಪೊರೆ. 2. ಶುಕ್ಲಪಟಲ ಸ್ರವಣಪದರ (ಕಾರ್ನಿಯಾ ಜೆನ್ ಲೇಯರ್): ಚರ್ಮದ ಕೆಳಪದರದ ಎರಡು ಕಣಗಳು ಮೇಲಿನ ಶುಕ್ಲಪಟಲವನ್ನು ಸ್ರವಿಸುತ್ತವೆ. 3. ಸ್ಫಟಿಕ ಶಂಕುಕೋಶಗಳು (ಕ್ರಿಸ್ಟಲೈನ್ ಕೋನ್ ಸೆಲ್ಸ್): ತನ್ಮೂಲಕ ಬೆಳಕು ಹಾದು ಹೋಗಲುಬಿಡುವ ಸ್ಫಟಿಕಾಕಾರದ ಶಂಕುವೆಂಬ ವಸ್ತುವನ್ನು ಸ್ರವಿಸಬಲ್ಲ ನಾಲ್ಕು ಕೋಶಗಳ ಗುಂಪು. 4. ಕೃಷ್ಣಪಟಲದ ಕೋಶಗಳು (ಐರಿಸ್‌ಸೆಲ್ಸ್): ಶುಕ್ಲಪಟಲ ಸ್ರವಣಪದರ ಮತ್ತು ಸ್ಫಟಿಕ ಶಂಕುಕೋಶಗಳ ಸುತ್ತಲೂ ಚಕ್ರಾಕಾರವಾಗಿರುವ ಬಣ್ಣದ ಕೋಶಗಳು. 5. ಸೂಕ್ಷ್ಮ ಅಕ್ಷಿಪಟ (ರೆಟಿನ್ಯುಲ): ದೃಷ್ಟಿ ಅಂಶದ ತೊಟ್ಟಿನಂತಿರುವ ಈ ಭಾಗ ಏಳು ಕಣಗಳಿಂದ ಕೂಡಿದೆ. ಇವೆಲ್ಲ ಸೇರಿ ಮಧ್ಯದಲ್ಲಿ ದೃಷ್ಟಿಸ್ತಂಭವನ್ನು ಸ್ರವಿಸುತ್ತವೆ. ದೃಷ್ಟಿಸ್ತಂಭದ ಬೇರಿನಿಂದ ಹೊರಟ ಸೂಕ್ಷ್ಮ ಎಳೆಗಳು ದೃಷ್ಟಿನರದ ಕವಲುಗಳೊಡನೆ ಸಂಪರ್ಕ ಪಡೆದಿವೆ. ಈ ರೀತಿ ಎಲ್ಲ ದೃಷ್ಟಿ ಅಂಶಗಳೂ ಮಿದುಳಿನ ದೃಷ್ಟಿ ವಿಭಾಗಕ್ಕೆ ಸಂಬಂಧ ಹೊಂದಿವೆ.

ಕೀಟಗಳ ಸಂಯುಕ್ತ ನೇತ್ರ ವಸ್ತುಗಳ ರೂಪ ಮತ್ತು ಚಲನಚಿತ್ರವನ್ನು ಶಬಲ ಖಚಿತ ದೃಷ್ಟಿಯ (ಮೋಸ್ತಾಯಿಕ್ ವಿಷನ್) ತತ್ತ್ವದ ಮೇಲೆ ದರ್ಶಿಸುತ್ತದೆಂದು ವಿಜ್ಞಾನಿಗಳ ಅಭಿಪ್ರಾಯ. ಇದರ ಪ್ರಕಾರ ಒಂದೊಂದು ದೃಷ್ಟಿ ಅಂಶವೂ ತನ್ನ ಯವದ ಮೇಲೆ ಬೀಳುವ ಅಲ್ಪ ಪ್ರದೇಶದ ಚಿತ್ರವನ್ನು ತಯಾರಿಸುತ್ತದೆ. ಹೀಗೆ ಉಂಟಾದ ಅನೇಕ ಭಿನ್ನ ಭಿನ್ನ ದೃಶ್ಯಗಳೆಲ್ಲ ಕೂಡಿ ಬೆಳಕು ಮತ್ತು ಕಪ್ಪು ಚುಕ್ಕೆಗಳಿಂದ ಕೂಡಿದ ಸಮಗ್ರಚಿತ್ರವಾಗಿ ಪರಿಣಮಿಸುತ್ತದೆ.

ಶಬ್ದ ಮತ್ತು ಬೆಳಕು ಉತ್ಪತ್ತಿಮಾಡುವ ಅಂಗಗಳು: ಅನೇಕ ಕೀಟಗಳಲ್ಲಿ ಶಬ್ದೋತ್ಪತ್ತಿ ಅಂಗಗಳಿವೆ. ಈ ಅಂಗಗಳು ಗಂಡು, ಹೆಣ್ಣುಗಳೆರಡರಲ್ಲಿ ಅಥವಾ ಯಾವುದಾದರೊಂದರಲ್ಲಿ ಮಾತ್ರ ಇರುತ್ತದೆ. ಹೆಣ್ಣು, ಗಂಡಿನೊಡನೆ ಕೂಡುವಂತೆ ಆಕರ್ಷಿಸುವುದಕ್ಕೂ, ಒಂದು ಜಾತಿಯ ಕೀಟಗಳ ಗುಂಪಿನಲ್ಲಿರುವ ಎಲ್ಲಾ ಸದಸ್ಯ ಕೀಟಗಳು ಒಟ್ಟಿಗೆ ಇರುವಂತೆ ಮಾಡಲು, ಅಪಾಯದ ಸೂಚನೆಯನ್ನು ಕೊಡುವುದಕ್ಕೂ, ಸಂರಕ್ಷಣೆಗೂ, ಈ ಶಬ್ದ ಉಪಯುಕ್ತವಾಗಿದೆ. ದೇಹದ ಒಂದು ಭಾಗವನ್ನು ಹೊರವಸ್ತುವಿಗೆ ಬಡಿಯುವುದು, ದೇಹದ ಒಂದು ಭಾಗವನ್ನು ಇನ್ನೊಂದು ಭಾಗಕ್ಕೆ ಉಜ್ಜುವುದರಿಂದ ಶಬ್ದಮಾಡುತ್ತವೆ. ಉದಾ: ಮಿಡತೆಗಳ ಹಿಂಬದಿಯ ಕಾಲಿನ ಫೀಮರ್ ತುಂಡಿನ ಒಳಮುಖದ ರಚನೆಗಳನ್ನು ಮುಂದಿನ ರೆಕ್ಕೆಗೆ ಉಜ್ಜುವುದು. ರೆಕ್ಕೆಗಳ ಅತಿವೇಗದ ಕಂಪನ (ಉದಾ: ಸೊಳ್ಳೆ, ನೊಣ), ಮಾಂಸಖಂಡಗಳ ಕ್ರಿಯಾಸಹಾಯ, ಒಂದು ವಿಶೇಷ ಬಗೆಯ ಪೊರೆಯ ಅದುರುವಿಕೆ (ಗಂಡು ಸಿಕ್ಕಾಡ ಪ್ರಾಣಿಯ ಉದರದ ಪಕ್ಕದ ಮೃದಂಗದಂಥ ಪೊರೆ ಶಬ್ದೋತ್ಪಾದನೆ ಅಂಗ) ಮುಂತಾದ ವಿಧಾನಗಳಿಂದ ಕೀಟಗಳು ಶಬ್ದ ಮಾಡುತ್ತವೆ. ಬೆಳಕನ್ನು ಹೊರಸೂಸುವ ಅಂಗಗಳ ಮೂಲಕ, ಅಂಥ ಏಕಾಣು ಜೀವಿಗಳನ್ನು ಹೊಂದಿರುವುದರಿಂದ ಅಥವಾ ಬೆಳಕಿನಿಂದ ಕೂಡಿದ ಆಹಾರ ತಿನ್ನುವುದರಿಂದ ಕೀಟಗಳು ಬೆಳಕನ್ನು ಉತ್ಪತ್ತಿಮಾಡುತ್ತವೆ. ಲೈಂಗಿಕ ಆಕರ್ಷಣೆಯೇ ಬೆಳಕಿನ ಉತ್ಪಾದನೆಯ ಮುಖ್ಯ ಉದ್ದೇಶ. ಮಿಂಚು ಹುಳುವಿನಲ್ಲಿ (ಕೋಲಿಯಾಪ್ಟಿರ ಗಣದ ಲ್ಯಾಂಪೈರಿಡೆ ಕುಟುಂಬ) ಉದರದ ಎರಡು ಕಡೆಯಲ್ಲೂ ಸ್ವಯಂಪ್ರಕಾಶಿತ ಅಂಗಗಳಿದ್ದು ಹಳದಿ ಮಿಶ್ರಿತ ಹಸಿರುಬಣ್ಣದ ಬೆಳಕು ಕ್ಷಣಕ್ಕೊಮ್ಮೆ ಕಾಣಿಸಿಕೊಳ್ಳುತ್ತದೆ.

ಸಂತಾನೋತ್ಪತ್ತಿ ವ್ಯವಸ್ಥೆ: ಸಂತಾನಾಭಿವೃದ್ಧಿಗೆ ಸಂಬಂಧಿಸಿದ ಅಂಗಗಳ ರಚನೆಯಲ್ಲಿ ವೈವಿಧ್ಯವಿದೆ. ಭ್ರೂಣಾವಸ್ಥೆಯಲ್ಲಿ ಗಂಡುಹೆಣ್ಣುಗಳಿಗೆ ಅಷ್ಟು ವ್ಯತ್ಯಾಸವಿಲ್ಲ. ಬೆಳವಣಿಗೆ ಮುಂದುವರಿದಂತೆ ವ್ಯತ್ಯಾಸಗಳು ಸ್ಪಷ್ಟವಾಗುತ್ತವೆ. ಪ್ರಾರಂಭದಲ್ಲಿ ಜನನ ಗ್ರಂಥಿಗಳು ನಡುಚರ್ಮದ ಒಂದು ಜೊತೆ ಚೀಲಗಳಂತಿವೆ. ಕೀಟಗಳ ವಿಕಾಸದ ಮೊದಲ ಹಂತದಲ್ಲಿ ಈ ಚೀಲಗಳ ನಾಳಗಳು ಬೇರೆಬೇರೆಯಾಗಿ ದೇಹದ ಹೊರಭಾಗಕ್ಕೆ ತೆರೆದು, ಗಂಡಿನಲ್ಲಿ ವೀರ್ಯಾಣುವನ್ನು, ಹೆಣ್ಣಿನಲ್ಲಿ ಅಂಡಾಣುವನ್ನೂ ಹೊರದೂಡುತ್ತಿದ್ದವು. ತರುವಾಯ ದೇಹದ ತಳಭಾಗದ ಮಧ್ಯರೇಖೆಯಲ್ಲಿ ಹೊರಚರ್ಮ ಸೀಳಿ ಉಂಟಾದ ಕಾಲುವೆಗೆ (ಹೆಣ್ಣಿನಲ್ಲಿ ಯೋನಿನಾಳ, ಗಂಡಿನಲ್ಲಿ ವೀರ್ಯನಾಳ) ಮೇಲಿನ ಎರಡು ನಾಳಗಳು ಸೇರಿಕೊಂಡು ಒಂದೇ ರಂಧ್ರದ ಮೂಲಕ ತೆರೆಯುವಂತಾಯಿತು. ಈ ಸರಳ ರಚನೆಯ ಜನನೇಂದ್ರಿಯ ಪ್ರದೇಶದಲ್ಲಿ ಕ್ರಮೇಣ ಅನೇಕ ಸಹಾಯಕ ಗ್ರಂಥಿಗಳೂ, ಹೆಣ್ಣು ಕೀಟದಲ್ಲಿ ಒಂದು ಅಥವಾ ಇನ್ನೂ ಹೆಚ್ಚು ವೀರ್ಯಾಣು ಶೇಖರಿಸುವ ಚೀಲಗಳೂ (ಸ್ಪರ್ಮತೀಕ) ಸಂಭೋಗ ಒರೆಯೂ (ಬರ್ಸ ಕಾಪ್ಯುಲೇಟ್ರಿಕ್ಸ್) ಸೇರಿಕೊಂಡವು.

ಮೊಟ್ಟೆ

ಲಾರ್ವ

ಜನನಾಂಗದ ಹೊರರಂಧ್ರ ಗಂಡುಕೀಟದಲ್ಲಿ ಶಿಶ್ನದ ತುದಿಯಲ್ಲಿ, ಉದರದ ತಳದಲ್ಲಿ, 9ನೆಯ ಖಂಡದ ಹಿಂದಿನ ಅಂಚಿನಲ್ಲೂ ಮತ್ತು ಹೆಣ್ಣಿನಲ್ಲಿ 8 ಅಥವಾ 9ನೆಯ ಖಂಡದ ಹಿಂದಿನ ಅಂಚಿನಲ್ಲಿದೆ.

ಗಂಡುಕೀಟದ ಸಂತಾನೋತ್ಪತ್ತಿ ಅಂಗಗಳು. 1. ವೃಷಣಗಳು: ಇವು ಕರುಳಿನ ಮೇಲ್ಭಾಗ, ತಳಭಾಗ ಅಥವಾ ಪಕ್ಕದಲ್ಲಿವೆ. ಇವುಗಳ ಆಕಾರ ಅಂಡದಂತೆ. ಒಂದೊಂದು

| ಹೆಣ್ಣು ಗಂಡು ಕೀಟಗಳಲ್ಲಿ ಜನನೇಂದ್ರಿಯಗಳ ಪಟ್ಟಿ | |
|---|---|
| ಗಂಡು | ಹೆಣ್ಣು |
| 1. ಕುಹರಗಳಿಂದ ಕೂಡಿದ ಒಂದು ಜೊತೆ ವೃಷಣಗಳು | ಅಂಡೋತ್ಪತ್ತಿಯ ಕೊಳವೆಗಳಿಂದ ಕೂಡಿದ ಒಂದು ಜೊತೆ ಅಂಡಾಶಯಗಳು |
| 2. ಒಂದು ಜೊತೆ ವೀರ್ಯಾಣುಗಳನ್ನು ಹೊರಹಾಕುವ ನಾಳ | ಒಂದು ಜೊತೆ ಅಂಡನಾಳ (ಓವಿಡಕ್ಟ್ಸ್) (ವಾಸ ಡಿಫರೆಂಶಿಯ) |
| 3. ವೀರ್ಯ ಕೋಶಗಳು (ಸೆಮೈನಲ್ ವೆಸಿಕಲ್ಸ್) | ಅಂಡಕೋಶಗಳು |
| 4. ಮಧ್ಯರೇಖೆಯಲ್ಲಿರುವ ವೀರ್ಯ ಹೊರಹೊಮ್ಮುವ ಕೊಳವೆ | ಯೋನಿನಾಳ |
| 5. ಸಹಾಯಕ ಗ್ರಂಥಿಗಳು | ಸಹಾಯಕ ಗ್ರಂಥಿಗಳು |
| 6. – | ವೀರ್ಯಾಣು ಉಗ್ರಾಣ (ಸ್ಪರ್ಮತೀಕ) ಸಂಭೋಗ ಒರೆ (ಬರ್ಸ ಕಾಪ್ಯುಲೇಟ್ರಿಕ್ಸ್) |
| 7. ಬಾಹ್ಯ ಜನನೇಂದ್ರಿಯ (ಶಿಶ್ನ) | ಬಾಹ್ಯ ಅಂಡೋಪಕರಣ (ಓವಿಪಾಸಿಟರ್) |

ವೃಷಣದಲ್ಲೂ ಕೆಲವು ಫಾಲಿಕಲ್ಸ್ ಅಥವಾ ಹಾಲೆಗಳಿವೆ. ಈ ಫಾಲಿಕಲ್‌ಗಳಲ್ಲಿ ಪ್ರಥಮ ಸ್ಥಿತಿಯ ಬೀಜಾಣುವಿನಿಂದ ಹಿಡಿದು ರೇತ್ರಾಣುಗಳವರೆಗೆ ಬೇರೆ ಬೇರೆ ವಯಸ್ಸಿನ ಕಣಗಳು ನಿರ್ದಿಷ್ಟ ಸ್ಥಳಗಳಲ್ಲಿ ತುಂಬಿರುತ್ತವೆ. 2. ರೇತಸ್ಸು ನಾಳಗಳು : ಇವು ವೀರ್ಯವನ್ನು ವೃಷಣದಿಂದ ಹೊರಕ್ಕೆ ಒಯ್ಯುವ ನಾಳಗಳು. ಇವುಗಳ ಅಳತೆಯಲ್ಲಿ ಬಹಳ ವ್ಯತ್ಯಾಸವಿದೆ. ಇವು ಮಾರ್ಗದಲ್ಲಿ ಒಂದುಕಡೆ ಉಬ್ಬಿ, ರೇತಸ್ಸಿನ ಶೇಖರಣೆಗಾಗಿ ವೀರ್ಯಕೋಶಗಳಾಗುತ್ತವೆ. ಹಿಂದುಗಡೆ ಎರಡು ನಾಳಗಳೂ ಕೂಡಿ ನಡುರೇಖೆಯ ಒಂಟಿ ಕೊಳವೆಯಾಗಿ, ತುದಿಯಲ್ಲಿರುವ ಹೊರಹೊಮ್ಮುವ ಕೊಳವೆ ಮೂಲಕ ಹೊರಕ್ಕೆ ತೆರೆಯುತ್ತವೆ. 3. ಶಿಶ್ನ: ಬೆರಳಿನಾಕಾರದ ಈ ಭಾಗ ಹೊರಹೊಮ್ಮುವ ಕೊಳವೆಯ ತುದಿಗೆ ಸೇರಿಕೊಂಡಿದೆ. ಹೆಣ್ಣುಕೀಟದ ಬಾಹ್ಯ ಜನನೇಂದ್ರಿಯದೊಳಗೆ ಇದು ಪ್ರವೇಶಿಸಿ ವೀರ್ಯವನ್ನು ಬಿಡುತ್ತದೆ. ಒಂದರಿಂದ ಮೂರು ಜೊತೆ ಸಹಾಯಕ ಗ್ರಂಥಿಗಳು ರೇತಸ್ಸು ನಾಳಗಳೊಡನೆ ಸೇರಿಕೊಂಡಿವೆ. ಚೀಲದಂತೆ ಅಥವಾ ನಾಳದಂತೆ ಇರುವ ಇವುಗಳ ಸ್ರಾವ ವೀರ್ಯದೊಂದಿಗೆ ಮಿಶ್ರಣವಾಗುತ್ತದೆ.

ಹೆಣ್ಣು ಕೀಟದ ಸಂತಾನಾಭಿವೃದ್ಧಿ ಅಂಗಗಳು. 1. ಅಂಡಾಶಯಗಳು ಕರುಳಿನ ಎರಡು ಪಕ್ಕಗಳಲ್ಲಿರುವ ಸಾಂದ್ರವದ ಅಂಗಗಳು. ಪ್ರತಿ ಅಂಡಾಶಯವೂ ನಿರ್ದಿಷ್ಟ ಸಂಖ್ಯೆಯ ಅಂಡೋತ್ಪತ್ತಿನಾಳಗಳಿಂದ ಕೂಡಿದ್ದು, ಎಲ್ಲವೂ ಅಂಡನಾಳದೊಳಕ್ಕೆ ತೆರೆಯುತ್ತವೆ. ಒಂದೊಂದು ಅಂಡಾಶಯದಲ್ಲಿ ಅಂಡೋತ್ಪತ್ತಿ ನಾಳಗಳ ಸಂಖ್ಯೆ ಎಂಟಕ್ಕಿಂತ ಹೆಚ್ಚಾಗಿಲ್ಲ. ಅಂಡೋತ್ಪತ್ತಿನಾಳ ಉದ್ದವಾದ ಕೊಳವೆಯಂತಿದ್ದು ಅದರೊಳಗೆ ಬೆಳೆಯುತ್ತಿರುವ ಮೊಟ್ಟೆಗಳ ಸಾಲು ಇರುತ್ತವೆ. ಇಂಥ ಸಾಲಿನಲ್ಲಿ ಅತ್ಯಂತ ಪಕ್ವವಾದ ಮೊಟ್ಟೆಗಳು ನಾಳದ ಕೆಳತುದಿಯಲ್ಲಿ ಅಂದರೆ ಅಂಡನಾಳವನ್ನು ಸೇರುವ ತುದಿಯಲ್ಲಿರುತ್ತವೆ. ಅಂಡೋತ್ಪತ್ತಿನಾಳದ ಮೇಲು ತುದಿಯಲ್ಲಿ ಸೂಕ್ಷ್ಮವಾದ ಎಳೆ ಇದೆ. ಒಂದು ಅಂಡಾಶಯದ ನಾಳಗಳ ಎಳೆಗಳೆಲ್ಲ ಸೇರಿ ಹುರಿಯಾಗಿ, ಪಕ್ಕದ ಅಂಡಾಶಯದ ಹುರಿಯೊಡನೆ ಕೂಡಿ ನಡುರೇಖೆಯ ಹುರಿಯಾಗುತ್ತವೆ. ನಾಳದ ಮೇಲ್ಭಾಗದಲ್ಲಿ ಮೂಲ ಸ್ಥಿತಿಯ ಬೀಜಾಣುಗಳೂ, ಪೋಷಕಕಣಗಳೂ ಕೆಳಗಡೆ ಬೆಳೆಯುತ್ತಿರುವ ಅಂಡಗಳು, ಪೋಷಕ ಕಣಗಳು ತುಂಬಿವೆ. 2. ಅಂಡನಾಳಗಳು; ಒಂದೊಂದು ಅಂಡಾಶಯದಿಂದ ಹಿಂದಿನಿಂದ ಹೊರಟ ಅಂಡನಾಳವೂ ತನ್ನ ಪಕ್ಕದ ನಾಳದೊಡನೆ ಕೂಡಿ, ಉದರದ 7ನೆಯ ಖಂಡದ ಕೆಳಚಿಪ್ಪಿನ ಹಿಂದೆ ಇರುವ ಅಂಡನಾಳವನ್ನು ಸೇರುತ್ತದೆ. ಈ ನಾಳ 8ನೆಯ ಖಂಡಕ್ಕೂ ವ್ಯಾಪಿಸಿ ಅಲ್ಲಿ ಒಳಮಡಿಕೆಯಂತೆ ಉದ್ಭವಿಸುವ ಯೋನಿಯನ್ನು ಕೂಡಿಕೊಳ್ಳುತ್ತದೆ. ಸಂಭೋಗ ಒರೆ, ಯೋನಿ ಪ್ರದೇಶದಲ್ಲಿ ಒಂದು ಚೀಲದಂತಿದೆ. ಹಲವಾರು ರೂಪಗಳುಳ್ಳ ವೀರ್ಯ ಸಂಗ್ರಹಣ ಚೀಲ ಯೋನಿ ಅಥವಾ ಜನನ ಕುಳಿಯೊಡನೆ ತನ್ನ ನಾಳದ ಮೂಲಕ ಸಂಪರ್ಕ ಹೊಂದಿದೆ. ಅನೇಕ ಬಗೆಯ ಕೀಟಗಳು ತಮ್ಮ ಜೀವಮಾನದಲ್ಲಿ ಒಂದೇ ಸಲ ಸಂಭೋಗ ಮಾಡುವುವಾದರೂ ದೀರ್ಘಕಾಲ ಮೊಟ್ಟೆ ಇಡುವುದರಿಂದ ವೀರ್ಯ ಶೇಖರಣೆ ಅಗತ್ಯ. 3. ಸಹಾಯಕ ಗ್ರಂಥಿಗಳು: ಒಂದೆರಡು ಜೊತೆ ಗ್ರಂಥಿಗಳು ಯೋನಿಯ ಕೆಳತುದಿಯಲ್ಲಿ ತೆರೆಯುತ್ತವೆ. ತತ್ತಿಗಳನ್ನು ಗುತ್ತಿಗಳಾಗಿ ಕೂಡಿಸುವುದಕ್ಕೂ ಅವುಗಳನ್ನು ಇಡುವ ಜಾಗಕ್ಕೆ ಅಂಟಿಸುವುದಕ್ಕೂ ಇವುಗಳ ಸ್ರಾವ ಉಪಯುಕ್ತ.

ಕೀಟಗಳ ಮೊಟ್ಟೆ : ಮೊಟ್ಟೆಯ ಕೋಶದ್ರವ್ಯ ಬಲೆಯಂತಿದ್ದು, ಅದರ ಮಧ್ಯದಲ್ಲಿ ದೊಡ್ಡ ನ್ಯೂಕ್ಲಿಯಸ್ ಮತ್ತು ಹೇರಳವಾಗಿ ಭಂಡಾರ ಗುಳ್ಳೆಗಳಿವೆ. ಅಂಡದ ಸುತ್ತ ತೆಳ್ಳನೆಯ ಸಜೀವ ಪೊರೆ (ವೈಟೆಲೈನ್ ಪೊರೆ) ಮತ್ತು ಅದರ ಹೊರಗೆ ಚಿಪ್ಪು (ಕೋರಿಯಾನ್) ಇವೆ. ಚಿಪ್ಪು ಗಡುಸಾಗಿರುವುದರಿಂದ ಮೊಟ್ಟೆಗೆ ನಿರ್ದಿಷ್ಟ ಆಕಾರವಿರುತ್ತದೆ. ಚಿಪ್ಪಿನ ಮೇಲ್ಮೈಯಲ್ಲಿ ಅನೇಕ ಬಗೆಯ ಕೆತ್ತನೆಗಳು ಅಂದರೆ, ಆರು ಮೂಲೆಯ ಚಿತ್ರಗಳಿವೆ. ಮೊಟ್ಟೆ ಅಂಡಾಕಾರ, ಗೋಳಾಕಾರ, ತಟ್ಟೆ, ಪೀಪಾಯಿ ಆಕಾರಗಳಿಂದಿರುತ್ತದೆ. ಒಂದು ಕೊನೆಯಲ್ಲಿ ತೊಟ್ಟು ಮತ್ತು ಮೇಲ್ತುದಿಯಲ್ಲಿ ಮುಚ್ಚಳ ಇದೆ. ಚಿಪ್ಪಿನಲ್ಲಿ ಎರಡು ಪದರಗಳಿವೆ. ಹೊರಪದರ ತೆಳುವಾದ ಎಕ್ಸೊಕೋರಿಯಾನ್. ಒಳಪದರ ದಪ್ಪವಾದ ಎಂಡೊಕೋರಿಯಾನ್, ಹೊರಗಿನ ಪದರ ಕೈಟಿನ್‌ನಂಥ ಸೀರೋಪ್ರೊಟೀನ್ ಅಥವಾ ಕೋರಿಯಾನಿನ್‌ನಿಂದ ಕೂಡಿದೆ. ಮೊಟ್ಟೆ ಚಿಕ್ಕದಿದ್ದು ಇನ್ನೂ ಹೆಣ್ಣಿನ ಶರೀರದಲ್ಲಿದ್ದಾಗ ಮೊಟ್ಟೆಯ ಒಂದು ಕಡೆ ಒಂದು ಸೂಕ್ಷ್ಮ ರಂಧ್ರವಿರುತ್ತದೆ. ಇದಕ್ಕೆ ಮೈಕ್ರೊಪೈಲ್ ಎನ್ನುವರು. ಇದರ ಮೂಲಕ ವೀರ್ಯಾಣು ಒಳಹೋಗುತ್ತದೆ. ಕೀಟಗಳ ಮೊಟ್ಟೆಗಳು ಅತ್ಯಂತ ಸಣ್ಣಗಾತ್ರದುವು. ಅವುಗಳ ಉದ್ದ 0.1 ಮಿಮೀ ನಿಂದ 5–6 ಮಿಮೀ.

ಸಂತಾನೋತ್ಪತ್ತಿಯ ವಿಧಾನಗಳು: ಹೆಣ್ಣುಕೀಟ ಗರ್ಭಾಂಕುರಗೊಂಡ ಅಂಡವನ್ನು ದೇಹದ ಹೊರಗಡೆ ಇಡುತ್ತದೆ. ಕೆಲವು ದಿನಗಳಾದ ಮೇಲೆ ಅದರೊಳಗಿರುವ ಭ್ರೂಣ ಬೆಳೆದು, ಮೊಟ್ಟೆ ಒಡೆದು, ಮರಿ ಕೀಟ ಹೊರಗೆ ಬರುತ್ತದೆ. ಈ ಕೆಳಗಿನ ಕೆಲವು ವಿಧಾನಗಳನ್ನು ಕಾಣಬಹುದು. 1. ಕೆಲವು ಕೀಟಗಳು ಮರಿ ಕೀಟಗಳಿಗೆ ಜನ್ಮ ನೀಡುತ್ತವೆ. ಇದನ್ನು ವೈವಿಪ್ಯಾರಿಟಿ ಎನ್ನುವರು. ನೇರವಾಗಿ ಮರಿಗಳು ತಾಯಿಕೀಟದ ದೇಹದಿಂದ ಹುಟ್ಟುವುದು. ಉದಾ: ಎಫಿಡ್ ಜಾತಿಯ ಸಸ್ಯಹೇನುಗಳು. 2. ಪಿತೃರಹಿತ ಸಂತಾನ (ಪಾರ್ಥೆನೋಜೆನಿಸಿಸ್)–ಕೆಲವು ಜಾತಿ ಕೀಟಗಳಲ್ಲಿ ಗಂಡುಕೀಟಗಳೇ ಇರುವುದಿಲ್ಲ ಅಥವಾ ಗಂಡು ಕೀಟಗಳು ಅಪೂರ್ವ. ಆದರೂ ಸಂತಾನವೃದ್ಧಿ ಕಂಡುಬರುತ್ತದೆ. ಈ ರೀತಿ ಹುಟ್ಟಿದ ಕೀಟಗಳು ಎರಡು ಲಿಂಗಗಳಿಗೂ ಸೇರಿರಬಹುದು ಅಥವಾ ಬರಿಗಂಡು, ಬರಿಹೆಣ್ಣು ಕೀಟಗಳಾಗಬಹುದು. 3. ಬಾಲ್ಯ ಸಂತಾನ (ಪೀಡೋಜೆನಿಸಿಸ್)–ಮರಿಗಳ ಅಂಡಾಶಯಗಳು ಪಕ್ವಸ್ಥಿತಿಗೆ ಬಂದು ಗಂಡಿನ ಸಂಪರ್ಕವಿಲ್ಲದ ಸಂತಾನೋತ್ಪತ್ತಿಯಾಗುವುದು. ಉದಾ: ಸೆಸಿಡೋಮೈಯಿಡ್ ನೊಣಗಳು 4. ಬಹುಭ್ರೂಣತ್ವ (ಪಾಲಿಎಂಬ್ರಿಯಾನಿ)– ಒಂದು ಮೊಟ್ಟೆಯಿಂದ ಒಂದಕ್ಕೂ ಹೆಚ್ಚು ಭ್ರೂಣಗಳ ಉತ್ಪತ್ತಿಯಾಗುವುದು. ಉದಾ: ಕೆಲವು ಪರಾವಲಂಬಿ ಕಣಜಗಳು. 5. ದ್ವಿಲಿಂಗತ್ವ (ಹರ್ಮಫ್ರೊಡಿಟಿಸಮ್)–ಒಂದೇ ಕೀಟದಿಂದ ಅಂಡ ಹಾಗೂ ವೀರ್ಯೋತ್ಪಾದನೆ ಆಗುವುದು. ಇದು ಅತ್ಯಂತ ವಿರಳ. ಉದಾಹರಣೆಗೆ ಐಸೀರಿಯ ಪರ್ಚೇಸಿ ಎಂಬ ಸಸ್ಯತಿಗಣೆ ಮೊಟ್ಟೆ, ವೀರ್ಯ ಎರಡನ್ನೂ ಉತ್ಪಾದಿಸಬಲ್ಲುದು.

ಬೆಳವಣಿಗೆ ಮತ್ತು ರೂಪಪರಿವರ್ತನೆ (ಮೆಟಮಾರ್ಫಾಸಿಸ್): ಮರಿಗಳ ಬೆಳವಣಿಗೆಗೆ ಅನುಕೂಲವಾಗಿರುವ ಸ್ಥಳಗಳಲ್ಲೇ ಸಾಮಾನ್ಯವಾಗಿ ಕೀಟಗಳು ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳನ್ನು ಒಂಟೊಂಟಿಯಾಗಿ, ಅಥವಾ ಗುಂಪು ಗುಂಪಾಗಿ, ಮರಿಗಳು ತಿನ್ನುವ



ಕೀಟ ಮೊಟ್ಟೆ


ಜಿರಲೆ ಮೊಟ್ಟೆ


ಕೀಟಮೊಟ್ಟೆಗಳ ವಿವಿಧ ಬಗೆಗಳು


ಟೆರೆಬ್ರೆಂಟ್ಸ್‌ನ ವಿವಿಧ ಬಗೆಯ ಮೊಟ್ಟೆಗಳು

ಎಲೆಗಳ ಮೇಲೆ, ಅಥವಾ ಕಾಂಡ ಮುಂತಾದ ಭಾಗಗಳ ಬಿರುಕುಗಳಲ್ಲಿ ಇಡುತ್ತವೆ. ಸಸ್ಯದಲ್ಲಿ ಸ್ವಲ್ಪ ಆಳವಾಗಿ ಮೊಟ್ಟೆ ಇಟ್ಟಾಗ ಗಂಟುಗಳು ಉಂಟಾಗುವುವು. ಒಂದು ಜಾಗಕ್ಕೆ ಮೊಟ್ಟೆಗಳನ್ನು ಅಂಟಿಸುವುದು ಪೊರೆ ಅಥವಾ ಹತ್ತಿಯಂಥ ಕವಚವನ್ನು ಹೊದಿಸುವುದು ಇದೆ. ಇನ್ನೂ ಕೆಲವು ಕೀಟಗಳು ತತ್ತಿಗಳನ್ನು ಬಿರುಸಾದ ಕೋಶದಲ್ಲಿ

(ಉದಾ: ಜಿರಲೆ, ಒಂಟೆಹುಳು) ಅಥವಾ ಕಾಯಿಯಂಥ ಕೋಶಗಳಲ್ಲಿ (ಉದಾ: ಮಿಡತೆಗಳು) ಇಡುತ್ತವೆ. ಪರಾವಲಂಬಿ ಕೀಟಗಳು ಆತಿಥೇಯ ಪ್ರಾಣಿಗಳ ಮೈಮೇಲೆ ಅಥವಾ ಒಳಗೆ ಮೊಟ್ಟೆ ಇಡುತ್ತವೆ. ನೆಲವನ್ನು ತೋಡಿ ಮೊಟ್ಟೆಯಿಡುವ ಕ್ರಮ ಕೆಲವು ಕೀಟಗಳಲ್ಲಿದೆ.

ಮೊಟ್ಟೆಯೊಳಗಿನ ಭ್ರೂಣದ ಬೆಳವಣಿಗೆ ತಾಯಿಯ ದೇಹದಲ್ಲಿದ್ದಾಗಲೂ, ಹೊರಗೆ ಬಂದಮೇಲೂ ಮುಂದುವರಿಯುತ್ತದೆ. ಕೆಲವು ಕೀಟಗಳಲ್ಲಿ ಮೊಟ್ಟೆ ಹೊರಗೆ ಬಂದಮೇಲೆ ಮಾತ್ರ ಭ್ರೂಣ ಬೆಳೆಯುತ್ತದೆ. ಮೊಟ್ಟೆ ಒಡೆದು ಮರಿ ಹೊರಗೆ ಬರುವ ಅವಧಿಯಲ್ಲಿ ಬಹಳ ಅಂತರವಿದೆ. ಈ ಅವಧಿ ನೊಣದಲ್ಲಿ 8–12 ಗಂಟೆಯಾದರೆ, ಕೆಲವು ಪತಂಗಗಳಲ್ಲಿ 9 ತಿಂಗಳು. ಬೆಳವಣಿಗೆ ಯಾವ ತಡೆಯಿಲ್ಲದೆ ನಡೆಯಬಹುದಾದರೂ ಹವಾಗುಣ ಅನುಕೂಲವಿಲ್ಲದಿದ್ದಾಗ ಅಂದರೆ ಅತಿಯಾದ ಉಷ್ಣತೆ ಅಥವಾ ಶೀತವಿದ್ದಾಗ ಅನಿರ್ದಿಷ್ಟ ಕಾಲ ಸ್ಥಗಿತಗೊಳ್ಳಬಹುದು. ಕೆಲವು ಜಾತಿ ಕೀಟಗಳಲ್ಲಿ ದೇಹವ್ಯಾಪಾರಕ್ಕನುಗುಣವಾಗಿ ಇಂಥ ತಡೆಗಾಲ (ಡೈಯಪಾಸ್) ಸ್ವಾಭಾವಿಕ (ಉದಾ: ರೇಷ್ಮೆ ಪತಂಗ).

ಗರ್ಭಧರಿಸಿದ ಅಂಡದ ನ್ಯೂಕ್ಲಿಯಸ್ ಮೊದಲು ವಿಭಜನೆಯಾಗುತ್ತದೆ. ವಿಭಜನೆಯ ಸಂತತಿಗಳು ಒಂದೊಂದೂ ಸ್ವಲ್ಪ ಕೋಶದ್ರವ್ಯದಿಂದ ಸುತ್ತುವರಿಯಲ್ಪಟ್ಟು ಮೊಟ್ಟೆಯ ಹೊರವಲಯಕ್ಕೆ ಬಂದು ಬ್ಲಾಸ್ಟೋಡರ್ಮ್ ಎಂಬ ಪದರವಾಗಿ ಪರಿಣಮಿಸುತ್ತದೆ. ಕ್ರಮೇಣ ಈ ಹೊರಪದರದ ತಳಭಾಗದಲ್ಲಿ ಜೀವಾಣು ಪಟ್ಟಿಯೊಂದು (ಜರ್ಮ್ ಬ್ಯಾಂಡ್) ಮೂಡುತ್ತದೆ. ಇದು ಕ್ರಮೇಣ ಮಡಿಕೆಯಾಗಿ ಎರಡು ಪದರಗಳನ್ನೊಳಗೊಳ್ಳುತ್ತದೆ. ಜೀವಾಣುಪಟ್ಟಿ ಬಂಡಾರದೊಳಗೆ ಪ್ರವೇಶಿಸಿ ಅದನ್ನೇ ಆಹಾರವಾಗಿ ಉಪಯೋಗಿಸುತ್ತ ಬೆಳೆಯತೊಡಗುತ್ತದೆ. ಮುಂದೆ ಅಡ್ಡಗೆರೆಗಳು ಕಾಣಿಸಿಕೊಂಡು ಜೀವಾಣುಪಟ್ಟಿ ನಿರ್ದಿಷ್ಟವಾದ ಖಂಡಗಳಾಗಿ ವಿಭಾಗವಾಗುತ್ತದೆ. ಇದೇ ಭ್ರೂಣ. ಇದರಲ್ಲಿ ಶಿರ, ಎದೆ, ಉದರಭಾಗಗಳನ್ನು ಗುರುತಿಸಬಹುದು. ಉಪಾಂಗಗಳು ಉತ್ಪತ್ತಿಯಾಗುವುದೂ ಈ ಹಂತದಲ್ಲೆ. ಕ್ರಮೇಣ ಭ್ರೂಣ ಬಂಡಾರದ ಸುತ್ತಲೂ ಆವರಿಸಿಕೊಳ್ಳುತ್ತದೆ. ಕೆಲಕಾಲಾನಂತರ ಅಂಗರಚನೆಯಾಗಿ, ಸ್ವತಂತ್ರ ಜೀವನ ನಡೆಸುವ ಸಾಮರ್ಥ್ಯ ದೊರೆತಾಗ, ಮರಿಕೀಟ ಮೊಟ್ಟೆಯೊಡೆದುಕೊಂಡು ಹೊರಬರುತ್ತದೆ.

ರೂಪಪರಿವರ್ತನೆ: ಮರಿಕೀಟಕ್ಕೂ ಮತ್ತು ಬಲಿತ ಕೀಟಕ್ಕೂ ದೇಹರಚನೆ, ದೇಹ ವ್ಯಾಪಾರದಲ್ಲಿ ವ್ಯತ್ಯಾಸಗಳಿವೆ. ಶೈಶವಾವಸ್ಥೆಯಿಂದ ಪ್ರೌಢಾವಸ್ಥೆಗೆ ಬರಬೇಕಾದರೆ ರಚನಾದೃಷ್ಟಿಯಿಂದ ಕಂಡುಬರುವ ಬದಲಾವಣೆಗಳಿಗೆ ಒಟ್ಟಿನಲ್ಲಿ ರೂಪಪರಿವರ್ತನೆ ಎಂದು ಹೆಸರು. ಕೆಲವು ಕೀಟವರ್ಗಗಳಲ್ಲಿ ಮೊಟ್ಟೆಯೊಡೆದು ಬಂದ ಮರಿಕೀಟವನ್ನು ಪ್ರೌಢಕೀಟಕ್ಕೆ ಹೋಲಿಸಿದರೆ ಸಂತಾನೋತ್ಪತ್ತಿಗೆ ಸಂಬಂಧಿಸಿದ ಅಂಗಗಳು ವಿಕಾಸವಾಗದಿರುವುದರಲ್ಲಿ ಮಾತ್ರ ಬೇರೆಯಾಗಿರುತ್ತವೆ. ಮರಿಗೂ, ಪ್ರೌಢಕೀಟಕ್ಕೂ ಇನ್ಯಾವ ವ್ಯತ್ಯಾಸವೂ ಇಲ್ಲ. ಆಪ್ಟೆರಿಗೋಟ ಉಪವರ್ಗದ ಕೀಟಗಳಲ್ಲಿ ಇದು ಸಾಮಾನ್ಯ. ಈ ಕಾರಣದಿಂದ ಈ ಕೀಟಗಳನ್ನು ಅಪರಿವರ್ತಿ (ಏಮೆಟಬೋಲ)ಗಳೆನ್ನುವರು. ಆದರೆ, ಬಹುತೇಕ ಕೀಟಗಳಲ್ಲಿ ರೂಪಪರಿವರ್ತನೆ ಇದೆ. ಪರಿವರ್ತನೆಯುಳ್ಳ ಕೀಟಗಳ ಮರಿಗಳು ಪ್ರೌಢಕೀಟಗಳಿಗಿಂತ ಗಾತ್ರದಲ್ಲಿ ಸಣ್ಣವು. ಇವು ಬೆಳವಣಿಗೆ ಅವಧಿಯ ನಿರ್ದಿಷ್ಟ ಹಂತಗಳಲ್ಲಿ ಪೊರೆ ಕಳಚಿ ತಮ್ಮ ಗಾತ್ರವನ್ನು ಹೆಚ್ಚಿಸಿಕೊಳ್ಳುತ್ತವೆ. ಪ್ರತಿಯೊಂದು ಕೀಟಪ್ರಭೇದದ ಬೆಳವಣಿಗೆಯಲ್ಲೂ ಈ ರೀತಿ ಪೊರೆಬಿಡುವಿಕೆ (ಮೋಲ್ಟಿಂಗ್ ಅಥವಾ ಎಕ್‌ಡೈಸಿಸ್) ಹಲವಾರು ಸಲ ನಡೆಯುತ್ತದೆ. ಎರಡು ಸಾರಿ ಪೊರೆ ಬಿಡುವುದರ ಮಧ್ಯದ ಅವಧಿಗೆ ಅಂತರಿಕೆ ಅಥವಾ ಇನ್ಸ್ಟಾರ್ ಎಂದು ಹೆಸರು. ಒಂದು ಕೀಟದ ಬೆಳವಣಿಗೆಯ ಕಾಲದಲ್ಲಿರುವ ಒಟ್ಟು ಇನ್ಸ್ಟಾರ್‌ಗಳ ಸಂಖ್ಯೆ ನಿರ್ದಿಷ್ಟವಾಗಿದೆ. ಈ ಗುಂಪುಗಳನ್ನು ಅಪೂರ್ಣಪರಿವರ್ತಿಗಳು (ಹೆಮಿಮೆಟಬೋಲ) ಮತ್ತು ಪೂರ್ಣಪರಿವರ್ತಿಗಳು (ಹೋಲೊಮೆಟಬೋಲ) ಎಂದು ವಿಭಾಗಿಸಲಾಗಿದೆ.

ದೇಹದ ಹೊರಭಾಗದಲ್ಲಿ ಉದ್ಭವಿಸುವ ರೆಕ್ಕೆಗಳುಳ್ಳ ಬಾಹ್ಯೋದ್ಭವ ಪಕ್ಷಕ (ಎಕ್ಸೊಟೆರಿಗೋಟ) ಕೀಟಗಳು ಸಾಮಾನ್ಯವಾಗಿ ಅಪೂರ್ಣಪರಿವರ್ತಿಗಳು. ಇವುಗಳಲ್ಲಿ ನೇರ ಅಥವಾ ಸರಳ ರೂಪಪರಿವರ್ತನೆ ಇದೆ. ಇವುಗಳಲ್ಲಿ ಕೋಶಾವಸ್ಥೆ ಇಲ್ಲ. ಮರಿಕೀಟಕ್ಕೆ ಅಪ್ಸರೆ (ನಿಂಫ್) ಎಂದು ಹೆಸರು. ಅಪ್ಸರೆಯಲ್ಲಿ ರೆಕ್ಕೆ ಮತ್ತು ಸಂತಾನೋತ್ಪತ್ತಿಯ ಅಂಗಗಳು ಅಪೂರ್ಣಾವಸ್ಥೆಯಲ್ಲಿರುತ್ತವೆ. ಇದು ಗಾತ್ರದಲ್ಲಿ ಪ್ರೌಢಕೀಟಕ್ಕಿಂತ ಚಿಕ್ಕದು. ದೇಹದ ಆಕಾರ, ವದನಾಂಗ ಮತ್ತು ಸಂಯುಕ್ತ ನೇತ್ರಗಳ ರಚನೆ ಹಾಗೂ ದೈಹಿಕ ಕ್ರಿಯೆಗಳಲ್ಲಿ ಮರಿಗೂ ಪ್ರೌಢಕೀಟಕ್ಕೂ ವ್ಯತ್ಯಾಸವಿಲ್ಲ. ಅಪ್ಸರೆ ನಿರ್ದಿಷ್ಟವಾದ ಅಂತರಗಳಲ್ಲಿ ಪೊರೆ ಕಳಚಿ, ಮೈಗಾತ್ರವನ್ನು ಹೆಚ್ಚಿಸಿಕೊಳ್ಳುತ್ತದೆ.

ಉನ್ನತ ವರ್ಗಕ್ಕೆ ಸೇರಿದ ಅಥವಾ ದೇಹದೊಳಗಿನಿಂದ ಹುಟ್ಟುವ ರೆಕ್ಕೆಗಳುಳ್ಳ ಅಂತರೋದ್ಭವ ಪಕ್ಷಕ (ಎಂಡೋಪ್ಟೆರಿಗೋಟ) ಕೀಟಗಳು ಪೂರ್ಣಪರಿವರ್ತಿಗಳು. ಮೊಟ್ಟೆಯೊಡೆದು ಹೊರ ಬಂದ ಮರಿಗೂ, ಪ್ರೌಢ ಕೀಟಕ್ಕೂ ಆಕಾರ ಮತ್ತು ದೇಹರಚನೆಯಲ್ಲಿ ಬಹಳ ವ್ಯತ್ಯಾಸಗಳಿವೆ. ಮರಿಗಳಲ್ಲಿ ಸಂಯುಕ್ತನೇತ್ರಗಳು ಇಲ್ಲ ಅಥವಾ ಇದ್ದರೂ ಅವು ಉಪಯುಕ್ತವಲ್ಲ. ಈ ವರ್ಗದ ಮರಿ ಕೀಟಗಳನ್ನು ಡಿಂಬಗಳು (ಲಾರ್ವೆ) ಎನ್ನುವರು. ಇವುಗಳ ಜೀವಮಾನದಲ್ಲಿ ನಿರ್ದಿಷ್ಟ ಸಂಖ್ಯೆಯ ಅಂತರಿಕೆಗಳೂ, ಪೊರೆ ಬಿಡುವಿಕೆ ಇದೆ. ಪೂರ್ತಿ ಬೆಳೆದ ಡಿಂಬ ಕೋಶಾವಸ್ಥೆಯ (ಪ್ಯೂಪ) ಮೂಲಕ ಪ್ರೌಢ ಕೀಟವಾಗಿ ಪರಿವರ್ತನೆ ಹೊಂದುತ್ತದೆ. ಈ ವಿಧಾನದ ರೂಪಪರಿವರ್ತನೆಯೆ ಸಂಪೂರ್ಣ ಪರಿವರ್ತನೆ.

1. ಮೂಲಪಾದಿ ಡಿಂಬ (ಪ್ರೋಟೋಪಾಡ್ ಲಾರ್ವ): ಭ್ರೂಣಾವಸ್ಥೆಯಲ್ಲೇ ಮೊಟ್ಟೆಯೊಡೆದು ಹೊರ ಬಂದು ಆತಿಥೇಯ ಕೀಟಗಳ ದೇಹದೊಳಗೆ ಜೀವಿಸುವ ಹೈಮೆನಾಪ್ಟರ ವರ್ಗಕ್ಕೆ ಸೇರಿದ ಪರಾವಲಂಬಿ ಕಣಜಗಳಲ್ಲಿ ಇವು ಹೆಚ್ಚಾಗಿ ಕಾಣಬರುತ್ತವೆ. ಸಾಮಾನ್ಯವಾಗಿ ಇವುಗಳಲ್ಲಿ ಕಾಲುಗಳು ಅಷ್ಟಾಗಿ ವಿಕಾಸಹೊಂದಿರುವುದಿಲ್ಲ. ಉದಾ:ಕಣಜಗಳ ಲಾರ್ವ.

2. ಬಹುಪಾದಿ ಡಿಂಬ (ಪಾಲಿಪಾಡ್ ಲಾರ್ವ): ದೇಹ ಖಂಡಗಳಾಗಿ, ಸ್ಪಷ್ಟವಾಗಿ ವಿಭಾಗವಾಗಿದೆ. ಉದರದ ಖಂಡಗಳಿಗೆ ಅಂಟಿಕೊಂಡ ಕಾಲುಗಳಿವೆ. ದೇಹದ ಎರಡು ಪಕ್ಕಗಳಲ್ಲೂ ಸಾಲಾಗಿ ಶ್ವಾಸದ್ವಾರಗಳಿವೆ. ಕುಡಿಮೀಸೆ ಮತ್ತು ಎದೆಯ ಭಾಗದ ಕಾಲುಗಳಿದ್ದರು, ಅವು ಅಷ್ಟಾಗಿ ಬೆಳೆದಿಲ್ಲ. ಡಿಂಬಗಳು ತಮ್ಮ ಆಹಾರದ ಸಮೀಪದಲ್ಲೆ ವಾಸಿಸುತ್ತವೆ ಮತ್ತು ಸ್ವಲ್ಪ ಜಡಸ್ವಭಾವದವು. ಉದಾ: ಲೆಪಿಡಾಪ್ಟರ ಗಣದ ಕೀಟಗಳು ಮತ್ತು ಸಾಫ್ಲೈ.




3. ಮಿತಪಾದಿ ಡಿಂಬ (ಅಲೆಗೋಪಾಡ್ ಲಾರ್ವ): ಇವುಗಳಲ್ಲಿ ತಕ್ಕಮಟ್ಟಿಗೆ ಬೆಳೆದ ಎದೆಯ ಕೀಲುಕಾಲುಗಳಿವೆ. ದೇಹದ ಹಿಂದಿನ ತುದಿಯಲ್ಲಿ ಒಂದು ಜೊತೆ ಚಿಮಟದಂಥ ರಚನೆಗಳಿವೆ. ಉದರ ಭಾಗದಲ್ಲಿ ಇನ್ಯಾವ ಉಪಾಂಗಗಳಿಲ್ಲ. ತಲೆ ಮತ್ತು ಅದರ ಉಪಾಂಗಗಳು ಚೆನ್ನಾಗಿ ಬೆಳೆದಿವೆ. ಉದಾಹರಣೆ: ನ್ಯೂರಾಪ್ಟರ ಮತ್ತು ಕೋಲಿಯಾಪ್ಟರ ಗಣದ ಕೀಟಗಳು.



ವಿವಿಧ ಪ್ರಭೇದದ ಕಂಬಳಿ ಹುಳುಗಳು

4. ಅಪಾದಿ ಡಿಂಭ (ಏಪೋಡಸ್ ಲಾರ್ವ): ಎದೆ ಮತ್ತು ಉದರಗಳು ಸಂಪೂರ್ಣವಾಗಿ ಉಪಾಂಗರಹಿತವಾಗಿವೆ. ಕೋಲಿಯಾಪ್ಟಿರ, ಹೈಮೆನಾಪ್ಟಿರ ಗಣಗಳ ಅನೇಕ ಕುಟುಂಬಗಳ ಮತ್ತು ಡಿಪ್ಟಿರ ಗಣದ ಕೀಟಗಳಲ್ಲಿ ಈ ಬಗೆಯ ಡಿಂಭಗಳನ್ನು ಕಾಣಬಹುದು.

ಸಾಮಾನ್ಯವಾಗಿ ಲೆಪಿಡಾಪ್ಟಿರ ಗಣದ ಡಿಂಬಗಳನ್ನು ಕಂಬಳಿಹುಳು (ಕ್ಯಾಟರ್ ಪಿಲರ್) ಎಂದು, ಕೋಲಿಯಾಪ್ಟಿರ ಗಣದ ಡಿಂಬಗಳನ್ನು ಗ್ರಬ್ ಎಂದು, ಡಿಪ್ಟಿರ ಗಣದ ಡಿಂಬಗಳನ್ನು ಮ್ಯಾಗಟ್ ಎಂದು ಕರೆಯುವರು.

ಪೊರೆಬಿಡುವಿಕೆ (ಮೋಲ್ಟಿಂಗ್): ಬೆಳೆವಣಿಗೆಯಿಂದ ಕೀಟಗಳ ಗಾತ್ರ ಹೆಚ್ಚುತ್ತ ಹೋಗುತ್ತದೆ. ಆದರೆ, ಈ ಹೆಚ್ಚಳಕ್ಕೆ ಅನುಗುಣವಾಗಿ ಕೀಟಗಳ ಗಡಸು ಚರ್ಮ ಹೊಂದಿಕೊಳ್ಳದೆ ಆಗಾಗ ಪೊರೆಯಂತೆ ಉದುರಿ ಹೋಗುತ್ತದೆ. ಇದರೊಂದಿಗೆ ಶ್ವಾಸನಾಳ, ಮುಂಗರುಳಿನ ಮತ್ತು ಹಿಂಗರುಳಿನ ಒಳಪದರಗಳೂ ಕಳಚಿ ಹೋಗುತ್ತವೆ. ಈ ಕ್ರಿಯೆಯೇ ಪೊರೆಬಿಡುವಿಕೆ. ಪೊರೆಬಿಡುವಿಕೆಯಲ್ಲಿ ಒಳಚರ್ಮ ಸಂಕುಚಿತವಾಗಿ ಹೊರಚರ್ಮ ಸಿಪ್ಪೆಯಂತೆ ಅಳ್ಳಕವಾಗುತ್ತದೆ. ಚರ್ಮದ ಈ ಎರಡು ಪದರಗಳ ನಡುವೆ ಒಂದು ಬಗೆಯ ದ್ರವ ತುಂಬಿಕೊಳ್ಳುತ್ತದೆ. ಈ ದ್ರವ ಹೊರ ಚರ್ಮದ ಒಳಮೈಯನ್ನು ಕರಗಿಸುತ್ತದೆ. ಒಳ ಚರ್ಮದ ಮೇಲ್ಭಾಗದಲ್ಲಿ ಹೊಸ ಚರ್ಮ ಸ್ರವಿಸಲ್ಪಟ್ಟ ತರುವಾಯ ಕೀಟ ಹಳೇಚರ್ಮವನ್ನು ಸೀಳಿಕೊಂಡು ಹೊರಬರುತ್ತದೆ.

ಬೆಳೆವಣಿಗೆ: ಕೀಟಗಳು ಅತ್ಯಂತ ಗಮನಾರ್ಹವಾದ ರೀತಿಯಲ್ಲಿ ಬೆಳೆಯುತ್ತವೆ. ಇವುಗಳ ಬೆಳೆವಣಿಗೆಯ ವೇಗ ಹೆಚ್ಚು. ಪೂರ್ಣಪರಿವರ್ತಿಗಳಲ್ಲಿ ಬೆಳೆವಣಿಗೆಯ ತೀವ್ರತೆಯನ್ನೂ, ಗಾತ್ರದ ಹೆಚ್ಚಳದ ಪ್ರಮಾಣವನ್ನೂ ಅಂದಾಜು ಮಾಡಬಹುದು. ಉದಾ: ರೇಷ್ಮೆ ಹುಳುವಿನ ಪ್ರೌಢಕೀಟ ಮೊಟ್ಟೆಯಿಂದ ಬಂದ ಮರಿಹುಳದ 9,100ರಿಂದ 10,500ರಷ್ಟು ತೂಕವಿರುತ್ತದೆ. ಕಾಸಸ್ ಕಾಸಸ್ ಎಂಬ ಪತಂಗದಲ್ಲಿ ಈ ಪ್ರಮಾಣ 72,000.


ಕೋಶ (ಪ್ಯೂಪ)

ಕೋಶ (ಪ್ಯೂಪ): ಪೂರ್ಣ ಪರಿವರ್ತಿಕೀಟಗಳ ಬೆಳೆವಣಿಗೆಯಲ್ಲಿನ ಸುಪ್ತಾವಸ್ಥೆಯ ಕಾಲಕ್ಕೆ ಕೋಶವೆಂದು ಹೆಸರು. ಈ ಅವಧಿಯಲ್ಲಿ ಆಹಾರ ಸೇವನೆಯಾಗಲಿ, ಚಲನವಲನಗಳಾಗಲಿ ಇಲ್ಲ. ಇದೊಂದು ಸಂದಿಗ್ಧ ಸಮಯ. ಅಂದರೆ ಮರಿಕೀಟದ ದೇಹ, ಅವಯವಗಳು, ಮುಂದಿನ ಪ್ರೌಢಕೀಟದ ಆವಶ್ಯಕತೆಗಳಿಗೆ ಅನುಕೂಲವಾಗುವಂತೆ ಮಾರ್ಪಾಡಾಗುವ ಕಾಲ. ಕೋಶಾವಸ್ಥೆಯಲ್ಲಿ ಕೀಟ ಅಸಹಾಯಕ ಸ್ಥಿತಿಯಲ್ಲಿರುವುದರಿಂದ ಇದಕ್ಕೆ ವಿಶೇಷವಾದ ಸಂರಕ್ಷಣೆ ಆವಶ್ಯಕ. ಆದ್ದರಿಂದ, ಕೋಶವನ್ನು ಶತ್ರುಗಳಿಗೆ, ವಾತಾವರಣದ ವೈಪರೀತ್ಯಗಳಿಗೆ, ಯಾಂತ್ರಿಕ ತೊಂದರೆಗಳಿಗೆ, ಸಿಲುಕದಂತೆ ಸುಭದ್ರವಾದ ಸ್ಥಳದಲ್ಲಿಡುತ್ತವೆ. ಲೆಪಿಡಾಪ್ಟಿರ ಮತ್ತು ಕೋಲಿಯಾಪ್ಟಿರ ಗಣದ ಕೀಟಗಳಲ್ಲಿ ಕೊನೆಯ ಅಂತರಕಾಲದ (ಕೋಶಾವಸ್ಥೆಗೆ ಹಿಂದಿನ) ಡಿಂಬಗಳು ನೆಲದೊಳಗೆ ತೂರಿ ಮಣ್ಣಿನಗೂಡು ಕಟ್ಟಿಕೊಂಡು ಕೋಶಗಳಾಗುತ್ತವೆ. ಆದರೆ ಬಹುತೇಕ ಕೀಟಗಳು ಗೂಡುಗಳನ್ನು (ಕಕೂನ್) ತಯಾರಿಸಿಕೊಳ್ಳುತ್ತವೆ. ತಮ್ಮ ದೇಹದಿಂದ ಉತ್ಪಾದನೆಯಾಗುವ ರೇಷ್ಮೆಎಳೆಗಳನ್ನು ಉಪಯೋಗಿಸಿ ಗೂಡನ್ನು ತಯಾರಿಸುತ್ತವೆ. ಕೆಲವೊಮ್ಮೆ ಮರದ ಪುಡಿ, ಮಣ್ಣು, ಸಣ್ಣಕಲ್ಲು, ಹರಳುಗಳನ್ನು, ಕಡ್ಡಿಗಳನ್ನು ಉಪಯೋಗಿಸುತ್ತವೆ. ಇದು ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿದೆ.



ಲಾರ್ವಗಳಲ್ಲಿ ಕಾಣುವ ಪ್ರೌಢ್ಯ ಕುಡಿಗಳು

ಕೋಶಾವಸ್ಥೆ ಕಳೆದ ಮೇಲೆ ತಲೆ ಹಾಗೂ ಮೈಮೇಲಿರುವ ಮುಳ್ಳುಗಳಿಂದ ಅಥವಾ ದವಡೆಗಳಿಂದ ಗೂಡನ್ನು ಸೀಳಿಕೊಂಡು ಪ್ರೌಢಕೀಟ ಹೊರಬರುತ್ತದೆ. ನಂತರ ಸಮೀಪದ ಯಾವುದಾದರೂ ಆಸರೆಗೆ ನಿಧಾನವಾಗಿ ನಡೆದುಹೋಗಿ, ಮಡಿಕೆಯಾಗಿರುವ ರೆಕ್ಕೆಗಳನ್ನು ಇಳಿಜಾರಾಗಿ ಬಿಟ್ಟುಕೊಂಡು ಕುಳಿತುಕೊಳ್ಳುತ್ತದೆ. ದೇಹದಿಂದ ರೆಕ್ಕೆಗಳಿಗೆ ರಕ್ತ ಹರಿಯುವುದರಿಂದ, ಸಂಬಂಧಪಟ್ಟ ಮಾಂಸಖಂಡಗಳ ಚಲನದಿಂದ, ರೆಕ್ಕೆಗಳು ಹರಡಿಕೊಂಡು ಸಿದ್ಧವಾಗುತ್ತವೆ. ಕೋಶಾವಸ್ಥೆಯಲ್ಲಿ ದೈಹಿಕ ಕ್ರಿಯೆಯಿಂದ ಸೇರಿರುವ ಕಶ್ಮಲ ವಸ್ತು ದ್ರವರೂಪದಲ್ಲಿ ಹನಿಯಾಗಿ ಆಸನದ್ವಾರದಿಂದ ಹೊರಗೆ ಬರುತ್ತದೆ. ತರುವಾಯ ಕೀಟ ತನ್ನ ಮುಂದಿನ ಜೀವನವನ್ನು ಪ್ರಾರಂಭಿಸುತ್ತದೆ. ರೂಪಪರಿವರ್ತನೆಯ ಕಾಲದಲ್ಲಿ ಮರಿಕೀಟದ ಅಂಗಾಂಶಗಳು ಪೂರ್ತಿಯಾಗಿ ನಾಶವಾಗುವುವು. ಈ ಪ್ರಕ್ರಿಯೆಯನ್ನು ಅಂಗಾಂಶವಿನಾಶ (ಹಿಸ್ಟಾಲಿಸಿಸ್) ಎನ್ನಬಹುದು. ಈ ರೀತಿ ಅಳಿದು ಹೋದ ಅಂಗಕಟ್ಟಿನ ಸ್ಥಾನದಲ್ಲಿ ಪ್ರಾಯಕೀಟದ ಅಂಗಾಂಶಗಳು ಪ್ರೌಢ್ಯ ಕುಡಿಗಳೆಂಬ (ಇಮ್ಯಾಜಿನಲ್ ಬಡ್ಸ್) ವಿಕಸಿತ ಜೀವಕಣಗುಂಪುಗಳ ಮೂಲಕ ಉದ್ಭವಿಸುತ್ತವೆ. ಇದನ್ನು ಅಂಗಾಂಶೋತ್ಪತ್ತಿ (ಹಿಸ್ಟೋಜೆನಿಸಸ್) ಎಂದು ಕರೆಯುವರು. ಈ ಕ್ರಿಯೆಗಳು ನಿಯಮಿತ ರೀತಿಯಲ್ಲಿ ನಡೆಯುತ್ತವೆ.

ಕೀಟಜೀವನದಲ್ಲಿ ಬೆಳೆವಣಿಗೆ ಮತ್ತು ರೂಪಪರಿವರ್ತನೆಗೆ ದೇಹದ ಮುಂಭಾಗದಲ್ಲಿರುವ ಕೆಲವು ನಾಳರಹಿತ ಗ್ರಂಥಿಗಳ ಸ್ರಾವಗಳೇ ಕಾರಣ. ಈ ವಿಶೇಷ ಚೋದಕ ಸ್ರಾವಗಳು (ಹಾರ್ಮೋನ್ಸ್) ಎದೆಯ ಪ್ರಥಮ ಖಂಡದ ಗ್ರಂಥಿಗಳಿಂದ ಉತ್ಪತ್ತಿಯಾಗುತ್ತವೆ. ಜೊತೆಗೆ ಕಾರ್ಪೊರ ಅಲ್ಲೇಟ ಗ್ರಂಥಿಗಳ ಸ್ರಾವ, ಪ್ರೌಢಕೀಟಗಳ ಗುಣಗಳು ಮರಿಗಳಲ್ಲಿ ಹುಟ್ಟದಂತೆ ತಡೆದು ಬೆಳೆವಣಿಗೆ ಕ್ರಮಬದ್ಧವಾಗಿ ನಡೆಯುವಂತೆ ಮಾಡುತ್ತದೆ. ಡಿಂಬಾವಸ್ಥೆಯ ಕೊನೆಯ ಅಂತರ ಕಾಲದಲ್ಲಿ ಈ ರಸದೂತದ ಉತ್ಪತ್ತಿ ನಿಲ್ಲುವುದರಿಂದ ಕೀಟ ಪ್ರಾಯಕ್ಕೆ ಬರಲು ಸಾಧ್ಯವಾಗುತ್ತದೆ.

ಬೆಳೆವಣಿಗೆಯಲ್ಲಿ ತಡೆ (ಡೈಯಪಾಸ್): ಅನೇಕ ಕೀಟಗಳ ಬೆಳೆವಣಿಗೆಗೆ ಒಂದು ನಿರ್ದಿಷ್ಟ ಹಂತದಲ್ಲಿ ತಡೆಯುಂಟಾಗುತ್ತದೆ. ಕೆಲವು ವಾರಗಳಿಂದ ಅನೇಕ ವರ್ಷಗಳವರೆಗೂ ಇರಬಹುದಾದ ಈ ತಡೆಯ ಅವಧಿ ಕಳೆದ ಮೇಲೆ ಬೆಳೆವಣಿಗೆ ಮತ್ತೆ ಮುಂದುವರಿಯುತ್ತದೆ. ಈ ತಡೆ, ಜೀವಮಾನದ ಯಾವ ಹಂತದಲ್ಲಾದರೂ ಉಂಟಾಗಬಹುದು.

ಕೀಟ ವರ್ಗೀಕರಣ: ಕೀಟಗಳ ವರ್ಗೀಕರಣ ಬಹಳ ಕ್ಲಿಷ್ಟವಾಗಿದೆ. ಕೀಟಗಳ ಬಗ್ಗೆ ವಿಷಯ ಸಂಗ್ರಹಣೆ ಹೆಚ್ಚಿದಂತೆಲ್ಲ ಈ ವರ್ಗದ ಗಣಗಳ ಸಂಖ್ಯೆ ಹೆಚ್ಚಿದೆ. ವರ್ಗೀಕರಣವು ಬದಲಾವಣೆಗಳಿಗೆ ಒಳಗಾಗಿದೆ. ಕೀಟವರ್ಗದ ಆಧುನಿಕ ಪದ್ಧತಿಯ ವರ್ಗೀಕರಣ 1885ರಲ್ಲಿ ಬ್ರಾಯರ್ ಎಂಬ ವಿಜ್ಞಾನಿಯಿಂದ ಪ್ರಾರಂಭವಾಯಿತು. ಆತನು ಕೀಟಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದ. (1) ರೆಕ್ಕೆ ಇಲ್ಲದ, ಆಪ್ಟೆರಿಗೋಟ. (2) ರೆಕ್ಕೆಗಳುಳ್ಳ, ಟೆರಿಗೋಟ. ಬ್ರಾಯರ್ ತರುವಾಯ ಷಾರ್ಪ್, ಟಿಲ್ಯಾರ್ಡ್, ಹ್ಯಾಂಡಲಿರ್ಷ್, ಎಸಿಗ್ ಮೊದಲಾದ ಕೀಟಶಾಸ್ತ್ರಜ್ಞರು ಈ ಕಾರ್ಯವನ್ನು ಮುಂದುವರಿಸಿದರು.

ಕೀಟವರ್ಗವನ್ನು 2 ಉಪವರ್ಗಗಳನ್ನಾಗಿ ಮತ್ತು 29ರಿಂದ 30 ಗಣಗಳಾಗಿ ವಿಂಗಡಿಸಲಾಗಿದೆ.

ಉಪವರ್ಗ 1. ಆಪ್ಟೆರಿಗೋಟ: ರೆಕ್ಕೆಯಿಲ್ಲದ, ಆದಿ ಕೀಟಗಳ ಗುಂಪು. ರೂಪಪರಿವರ್ತನೆ ಅತ್ಯಲ್ಪ ಅಥವಾ ಇಲ್ಲ. ಪ್ರೌಢಕೀಟದಲ್ಲಿ ಜನನದ ಉಪಾಂಗಗಳಿವೆ. ಹಿಂದೆ ಒಂದು ಅಥವಾ ಹೆಚ್ಚು ಜೊತೆ ಉದರದ ಉಪಾಂಗಗಳಿವೆ. ಸಂಯುಕ್ತ ನೇತ್ರಗಳಿಲ್ಲ. ಈ ಉಪವರ್ಗದಲ್ಲಿ ನಾಲ್ಕು ಗಣಗಳಿವೆ.

ಗಣ 1. ಥೈಸನ್ಯೂರ: ತುಂಡರಿಸುವ ವದನಾಂಗಗಳು; ಕುಡಿಮೀಸೆಯಲ್ಲಿ ಅನೇಕ ಖಂಡಗಳಿವೆ. ಉದರದಲ್ಲಿನ ಖಂಡಗಳ ಸಂಖ್ಯೆ 11. ಅನಿರ್ದಿಷ್ಟವಾದ, ಲೇಖಣಿಯಾಕಾರದ, ಜನನ ಬಾಹ್ಯಾಂಗಗಳ ಹಿಂದೆ ಉಪಾಂಗಗಳು; ಒಂದು ಜೊತೆ ಅನೇಕ ತುಂಡುಗಳ ಸರ್ಸಿ ಎಳೆಗಳು; ದೇಹದ ಹಿಂತುದಿಯಲ್ಲಿ ತುಂಡುಗಳಿಂದ ಕೂಡಿದ ಒಂಟಿ ಬಾಲ, ಇವು ಇದರ ಮುಖ್ಯ ಲಕ್ಷಣಗಳು. ಇದು ಅತ್ಯಂತ ಪುರಾತನ ಗುಂಪು. ಇದಕ್ಕೆ ಸೇರಿದ ಕೀಟಗಳು ಮಣ್ಣು, ಕೊಳೆಯುತ್ತಿರುವ ತರಗು, ಇರುವೆ ಗೆದ್ದಲಗೂಡು, ಮನೆಗಳಲ್ಲಿ ಹಳೆಕಾಗದದಲ್ಲಿ ವಾಸಿಸುತ್ತವೆ.

ಉದಾ: ನುಸಿಹುಳು. ಬೆಳ್ಳಿ ಮೀನು (ಲೆಪಿಸ್ಮ) ಇತ್ಯಾದಿ.

ಗಣ 2. ಡೈಪ್ಲೂರ: ಅನೇಕ ತುಂಡುಗಳ ಕುಡಿಮೀಸೆಗಳಿವೆ. ಸಂಯುಕ್ತ ನೇತ್ರಗಳಿಲ್ಲ. ಉದರದ ಖಂಡಗಳ ಪಕ್ಕಕ್ಕೆ ಚಾಚಿರುವ ಲೇಖಣಿಯಾಕಾರದ ಉಪಾಂಗಗಳಿವೆ. ಖಂಡಕ್ಕೆ

ಒಂದು ಜೊತೆ ಸರ್ಸಿ ಇದೆ. ಒಂಟಿಬಾಲ ಇಲ್ಲ. ಮಾಲ್ಪೀಗಿಯನ್ ಕೊಳವೆಗಳು ಚಿಕ್ಕವು ಅಥವಾ ಇಲ್ಲ. ಉದಾ: ಜಾಪಿಕ್ಸ್.

ಗಣ 3. ಪ್ರೋಟ್ಯೂರ: ಇದಕ್ಕೆ ಸೇರಿದ ಕೀಟಗಳು ಸೂಕ್ಷ್ಮ ಗಾತ್ರದವು. ಚುಚ್ಚುವ ವದನಾಂಗಗಳಿವೆ. ಕುಡಿಮೀಸೆ, ಸಂಯುಕ್ತ ನೇತ್ರಗಳಿಲ್ಲ. ಉದರದಲ್ಲಿ 11 ಖಂಡಗಳು ಮತ್ತು ಕೊನೆಯಲ್ಲಿ ಒಂದು ಕೊಂಡಿ ಇವೆ. ಮೊದಲ ಮೂರು ಖಂಡಗಳಲ್ಲಿ ಒಂದೊಂದು ಜೊತೆ ಸಣ್ಣ ಉಪಾಂಗಗಳಿವೆ. ಉದಾ: ಪ್ರೊಟ್ಯೂರನ್ಸ್.

ಗಣ 4. ಕಾಲೆಂಬೋಲ: ವದನಾಂಗಗಳು ಆಹಾರವನ್ನು ತುಂಡರಿಸಲು ಸಹಕಾರಿಯಾಗಿವೆ. ನಾಲ್ಕು ತುಂಡಿನ ಕುಡಿಮೀಸೆ; ಸಂಯುಕ್ತ ನೇತ್ರಗಳಿಲ್ಲ, ಆರು ಖಂಡಗಳ ಉದರ ಇದೆ. 1, 3, 4 ಖಂಡಗಳಲ್ಲಿ ಉಪಾಂಗಗಳಿವೆ; ಶ್ವಾಸನಾಳಗಳು ಇಲ್ಲ. ಮಾಲ್ಫೀಗೀಯನ್ ಕೊಳವೆಗಳೂ ಇಲ್ಲ. ರೂಪಪರಿವರ್ತನೆ ಇಲ್ಲ. ಶೀತ ಸನ್ನಿವೇಶಗಳಲ್ಲಿರುವ ಸೂಕ್ಷ್ಮ ಕೀಟಗಳು ಇದಕ್ಕೆ ಸೇರಿವೆ. ಉದಾ: ಕಾಲೆಂಬೋಲನ್ಸ್, ಸ್ಪ್ರಿಂಗ್ ಟೈಲ್ಸ್.

ಉಪವರ್ಗ 2. ಟೆರಿಗೋಟ: ರೆಕ್ಕೆಯುಳ್ಳ ಕೀಟಗಳು. ಕೆಲವೊಮ್ಮೆ ರೆಕ್ಕೆಯಿರುವುದಿಲ್ಲ. ರೂಪಪರಿವರ್ತನೆ ಇದೆ. ಬಾಹ್ಯ ಜನನೇಂದ್ರಿಯಗಳ ಹಿಂಭಾಗದ ಖಂಡಗಳಿಗೆ ಉಪಾಂಗಗಳಿಲ್ಲ. ಇದರಲ್ಲಿ ಎಕ್ಸೊಪ್ಟೆರಿಗೋಟ ಮತ್ತು ಎಂಡೊಪ್ಟೆರಿಗೋಟ ಎಂಬ ಎರಡು ಗುಂಪುಗಳಿವೆ.

ಗುಂಪು (i) ಎಕ್ಸೊಪ್ಟೆರಿಗೋಟ: ರೂಪಪರಿವರ್ತನೆ ಸರಳ ಮಾದರಿಯದು. ಕೋಶಾವಸ್ಥೆ ವಿರಳ, ರೆಕ್ಕೆಗಳು ದೇಹದ ಹೊರಭಾಗದಲ್ಲಿ ಉದ್ಭವಿಸುತ್ತವೆ. ಮರಿ ಅಪ್ಸರೆಕೀಟ ದೇಹರಚನೆ ಮತ್ತು ಜೀವನರೀತಿಯಲ್ಲಿ ಪ್ರೌಢಕೀಟವನ್ನು ಹೋಲುತ್ತದೆ. ಈ ಗುಂಪಿನಲ್ಲಿ 16 ಗಣಗಳಿವೆ.

ಗಣ 1. ಎಫಿಮಿರಾಪ್ಟಿರ: ಮೆತುದೇಹದ ಸಣ್ಣ ಕೀಟಗಳು. ಕುಡಿಮೀಸೆಗಳು ರೋಮಾವೃತವಾಗಿವೆ. ವದನಾಂಗಗಳು ನಶಿಸಿಹೋಗುವ ಸ್ಥಿತಿಯಲ್ಲಿವೆ. ರೆಕ್ಕೆಗಳು ಪೊರೆಗಳಂತಿವೆ. ಹಿಂದಿನ ಜೊತೆ ರೆಕ್ಕೆ ಬಹಳ ಸಣ್ಣದಾಗಿವೆ. ವಿಶ್ರಾಂತಿಯಲ್ಲಿರುವ ಕೀಟದಲ್ಲಿ ಮೇಲಕ್ಕೆ ಎತ್ತಿಹಿಡಿದಂತಿವೆ, ಅನೇಕ ಅಡ್ಡನರಗಳಿವೆ. ಉದರದ ಕೊನೆಯಲ್ಲಿ ಉದ್ದವಾದ ಸರ್ಸಿ ಎಳೆಗಳ ಜೊತೆ ಇದೆ. ಒಂಟಿ ಬಾಲದಂತೆ ಒಂದು ಎಳೆ ಇರುತ್ತದೆ. ರೂಪಪರಿವರ್ತನೆ ಅಪೂರ್ಣ. ಅಪ್ಸರೆಕೀಟ ಜಲವಾಸಿ. ಇದರ ದೇಹದ ಹಿಂಭಾಗದಲ್ಲಿ ಮೂರು ಎಳೆಗಳಿವೆ; ಕಿವಿರುಗಳಿವೆ. ಉದಾ: ಮೇ ಫ್ಲೈ.

ಗಣ 2. ಓಡೋನೇಟ: ಮಾಂಸಾಹಾರಿ ಕೀಟಗಳು. ಒಂದೇ ಅಳತೆಯ ಎರಡು ಜೊತೆ ಪೊರೆಯಂಥ ರೆಕ್ಕೆಗಳಿವೆ. ರೆಕ್ಕೆಯಲ್ಲಿ ಒತ್ತಾಗಿ ನೇಯ್ದುಕೊಂಡಿರುವ ನರಗಳು ಮತ್ತು ಗಮನಾರ್ಹವಾದ ಕಪ್ಪು ಮಚ್ಚೆಗಳಿವೆ. ಸಂಯುಕ್ತ ನೇತ್ರಗಳು ಬಹು ದೊಡ್ಡವು. ಅವು ಚಾಚಿಕೊಂಡಿವೆ. ಕುಡಿಮೀಸೆಗಳು ಸಣ್ಣವು ಮತ್ತು ಎಳೆಯಂತಿವೆ. ಉದರ ಉದ್ದವಾಗಿ ತೆಳುವಾಗಿದೆ. ಗಂಡುಕೀಟಕ್ಕೆ ಉದರದ 2, 3ನೆ ಖಂಡಗಳ ಕೆಳಗೆ ಜನನಾಂಗದ ಉಪಕರಣವಿದೆ. ಅಪ್ಸರೆ ಜಲವಾಸಿ. ಅಪ್ಸರೆಯ ಕೆಳತುಟಿ ಸೊಂಡಿಲಿನಂತಿದೆ. ಗುದನಾಳ ಅಥವಾ ಬಾಲಕ್ಕೆ ಅಂಟಿರುವ ಕಿವಿರುಗಳಿವೆ. ಉದಾ: ಕೊಡತಿ ಕೀಟ, ಕನ್ಯಾಕೀಟ.

ಗಣ 3. ಪ್ಲೆಕಾಪ್ಟಿರ: ಮೆತುದೇಹದ ಕೀಟಗಳು. ಕುಡಿಮೀಸೆ ಉದ್ದವಾಗಿ ರೋಮವೃತವಾಗಿದೆ. ಪೊರೆಯಂಥ ರೆಕ್ಕೆಗಳಿವೆ. ಹಿಂದಿನ ರೆಕ್ಕೆಗಳು ದೊಡ್ಡವು, ಕೀಟ ವಿಶ್ರಾಂತಿಯಲ್ಲಿದ್ದಾಗ ಬೆನ್ನಿನಮೇಲೆ ಚಪ್ಪಟೆಯಾಗಿ ಕೂಡುತ್ತವೆ. ಉದರದ ಕೊನೆಯಲ್ಲಿ ಉದ್ದವಾದ ಸರ್ಸಿ ಎಳೆಗಳಿವೆ. ಅಪ್ಸರೆ ಕೀಟ ಜಲವಾಸಿ. ಇದಕ್ಕೆ ಉದ್ದವಾದ ಕುಡಿಮೀಸೆ ಮತ್ತು ಸರ್ಸಿಗಳಿವೆ. ಕಿವಿರುಗಳಿವೆ. ಉದಾ: ಕಲ್ಲು ನೊಣ (ಸ್ಟೋನ್ ಫ್ಲೈ).

ಗಣ 4. ಗ್ರಿಲ್ಲೋಬ್ಲಾಟಾಯ್ಡಿಯ: ಕೀಟಗಳಿಗೆ ರೆಕ್ಕೆಗಳಿಲ್ಲ. ಕಣ್ಣುಗಳು ಸಾಮಾನ್ಯವಾಗಿ ಇಲ್ಲ, ಇದ್ದರೂ ಬಹಳ ಸಣ್ಣವು. ಕುಡಿಮೀಸೆ ಎಳೆಯಂತಿದೆ. ವದನಾಂಗಗಳು ಆಹಾರವನ್ನು ತುಂಡುಮಾಡಲು ಅನುಕೂಲವಾಗಿವೆ. ಕಾಲುಗಳೆಲ್ಲ ಒಂದೇ ಬಗೆಯವು. ಹೆಣ್ಣು ಕೀಟದಲ್ಲಿ ಬಾಹ್ಯ ಅಂಡೋಪಕರಣವಿದೆ. ಸರ್ಸಿ 8 ತುಂಡುಗಳಿಂದಾಗಿದೆ. ಉದಾ: ಮೌಂಟೇನ್ ಕ್ರಾಲರ್ಸ್.

ಗಣ 5. ಆರ್ಥಾಪ್ಟಿರ: ದೊಡ್ಡ ಅಥವಾ ಮಧ್ಯಮ ಗಾತ್ರದ ಕೀಟಗಳು. ರೆಕ್ಕೆಗಳಿವೆ ಅಥವಾ ಇಲ್ಲದಿರಬಹುದು. ಎದೆಯ ಮೊದಲ ಖಂಡ ದೊಡ್ಡದು. ಹಿಂದಿನ ಕಾಲುಗಳು ದೊಡ್ಡವು ಮತ್ತು ನೆಗೆಯಲು ಉಪಯುಕ್ತವಾಗಿವೆ. ಮುಂದಿನ ರೆಕ್ಕೆಗಳು ಸ್ವಲ್ಪ ದಪ್ಪವಾಗಿವೆ. ಹೆಣ್ಣು ಕೀಟಕ್ಕೆ ಬಾಹ್ಯ ಅಂಡೋಪಕರಣವಿದೆ. ಸರ್ಸಿಗಳು ಚಿಕ್ಕವು ಮತ್ತು ವಿಭಾಗವಾಗಿಲ್ಲ. ವಿಶೇಷ ಶ್ರವಣೇಂದ್ರಿಯ ಮತ್ತು ಶಬ್ದೋತ್ಪತ್ತಿ ಅಂಗಗಳಿವೆ. ರೂಪ ಪರಿವರ್ತನೆ ಅತ್ಯಲ್ಪ. ಉದಾ: ಚಿಟ್ಟೆ, ಮಿಡತೆ, ಲೋಕಸ್ಟ್ ಮಿಡತೆ, ಚಿಮ್ಮಂಡೆ (ಕ್ರಿಕೆಟ್).

ಗಣ 6. ಫಾಸ್ಮಿಡ: ದೊಡ್ಡ ಗಾತ್ರದ ಕೀಟಗಳು, ದೇಹ ಉದ್ದ ಹಾಗೂ ತೆಳುವಾಗಿದೆ. ದೇಹದ ಆಕಾರ ಕೊಳವೆಯಂತೆ ಅಥವಾ ಎಲೆಯಂತೆ ಇದೆ. ಎದೆಯ ಮೊದಲ ಖಂಡ ಚಿಕ್ಕದು, ಎರಡನೆಯ ಮತ್ತು ಮೂರನೆಯ ಖಂಡಗಳು ಉದ್ದವಾಗಿವೆ. ಕಾಲುಗಳೆಲ್ಲ ಒಂದೇ ಬಗೆಯವು. ಸರ್ಸಿ ಕಿರಿದು, ಶ್ರವಣೇಂದ್ರಿಯಗಳಾಗಲಿ, ಶಬ್ದೋತ್ಪತ್ತಿ ಅಂಗಗಳಾಗಲಿ ಇಲ್ಲ. ಈ ಕೀಟಗಳು ಮೊಟ್ಟೆಗಳನ್ನು ಒಂಟೊಂಟಿಯಾಗಿ ಇಡುತ್ತವೆ. ಉದಾ: ಕಡ್ಡಿಕೀಟ, (ಸ್ಟಿಕ್ ಇನ್ಸೆಕ್ಟ್), ಎಲೆಕೀಟ (ಲೀಫ್ ಇನ್ಸೆಕ್ಟ್).

ಗಣ 7. ಡರ್ಮಾಪ್ಟಿರ: ಕೀಟಗಳು ಬಲು ಉದ್ದವಾದ ದೇಹ ಹೊಂದಿವೆ. ಇವುಗಳ ಮುಂದಿನ ರೆಕ್ಕೆಗಳು ಚಿಕ್ಕವು ಮತ್ತು ಚಕ್ಕಳದಂತಿವೆ. ಹಿಂದಿನ ರೆಕ್ಕೆಗಳು ಅರ್ಧಚಕ್ರಾಕಾರದಂತಿದ್ದು, ತೆಳುವಾದ ಪೊರೆಯಂತಿವೆ. ರೆಕ್ಕೆ ಇಲ್ಲದಿರುವುದೇ ಸಾಮಾನ್ಯ. ಸರ್ಸಿಗಳು ಸಾಮಾನ್ಯವಾಗಿ ಗಡುಸಾದ ಚಿಮುಟದಂತಿವೆ. ಬಾಹ್ಯ ಅಂಡೋಪಕರಣ ಚಿಕ್ಕದು ಅಥವಾ ಇಲ್ಲ. ರೂಪಪರಿವರ್ತನೆ ಅತ್ಯಲ್ಪ ಅವಧಿಯದು ಅಥವಾ ಇಲ್ಲ. ಉದಾ: ಕರ್ಣಕೀಟ.

ಗಣ 8. ಎಂಬಿಯಾಪ್ಟಿರ: ರೇಷ್ಮೆದಾರದಂತಹ ಎಳೆಯಿಂದಾದ ಸುರಂಗಗಳಲ್ಲಿ ವಾಸಿಸುವ ಈ ಕೀಟಗಳು ಸಾಮಾಜಿಕ ಜೀವಿಗಳು. ಮೊದಲನೆಯ ಕಾಲಿನ ಮೊದಲನೆಯ ಟಾರ್ಸಸ್ ತುಂಡು ಬಹಳ ದಪ್ಪ. ಹೆಣ್ಣಿಗೆ ರೆಕ್ಕೆಗಳಿಲ್ಲ. ಗಂಡಿನ ಎರಡು ರೆಕ್ಕೆಗಳೂ ಸಮವಾಗಿವೆ. ಗಂಡಿನ ಸರ್ಸಿಗಳಲ್ಲಿ ಸಮಪಾರ್ಶ್ವತೆ ಇಲ್ಲ. ಹೆಣ್ಣುಕೀಟ ಆಕಾರದಲ್ಲಿ ಡಿಂಬದಂತಿದೆ. ರೂಪಪರಿವರ್ತನೆ ಗಂಡಿನಲ್ಲಿ ಅತ್ಯಲ್ಪ ಅವಧಿಯದು. ಹೆಣ್ಣಿನಲ್ಲಿ ರೂಪಪರಿವರ್ತನೆ ಇಲ್ಲ. ಉದಾ: ಎಂಬಿಸ್.

ಗಣ 9, ಡಿಕ್ಟಿಯಾಪ್ಟಿರ: ಕುಡಿಮೀಸೆ ಅನೇಕ ಖಂಡಗಳುಳ್ಳ ಕೋಲಿನಂತಿದೆ. ಕಾಲುಗಳು ಒಂದೇ ಬಗೆಯವು ಅಥವಾ ಮುಂದಿನವು ಬೇಟೆ ಹಿಡಿಯಲು ಉಪಯುಕ್ತ. ಕಾಲಿನ ಕಾಕ್ಸ ದೊಡ್ಡದು. ಮುಂದಿನ ರೆಕ್ಕೆಗಳು ದಪ್ಪ. ಹೆಣ್ಣಿನ ಬಾಹ್ಯ ಅಂಡೋಪಕರಣ ಚಿಕ್ಕದು. ಗಂಡಿನ ಉದರದ 9ನೆಯ ಖಂಡಕ್ಕೆ ಒಂದು ಜೊತೆ ಸ್ಟೈಲ್ ಎಂಬ ಉಪಾಂಗಗಳು ಅಂಟಿಕೊಂಡಿವೆ. ಸರ್ಸಿ ಅನೇಕ ತುಂಡುಗಳುಳ್ಳದ್ದು. ವಿಶೇಷ ಶಬ್ದೋತ್ಪತ್ತಿ ಅಂಗಗಳಿವೆ. ಶ್ರವಣೇಂದ್ರಿಯಗಳು ಇಲ್ಲ. ಉದಾ: ಜಿರಲೆ ಮತ್ತು ಒಂಟೆಹುಳು.

ಗಣ 10. ಐಸಾಪ್ಟಿರ: ಇವು ಸಾಮಾಜಿಕ ಮತ್ತು ರೂಪವೈವಿಧ್ಯವನ್ನು ತೋರುವ ಕೀಟಗಳು. ರೆಕ್ಕೆಗಳು ಸಮವಾಗಿವೆ. ಅವು ಬಹಳ ಉದ್ದ ಮತ್ತು ಪೊರೆಯಂತಿವೆ. ಕೀಟ ವಿಶ್ರಾಂತಿಯಲ್ಲಿದ್ದಾಗ ಬೆನ್ನಿನ ಮೇಲೆ ಒಂದರಮೇಲೆ ಒಂದು ಕೂಡುತ್ತವೆ. ಸುಲಭವಾಗಿ ಉದುರುವಂಥವು. ಸರ್ಸಿ ಬಹು ಕಿರಿದು. ರೂಪ ಪರಿವರ್ತನೆ ಅಲ್ಪಾವಧಿಯದು ಅಥವಾ ಇಲ್ಲ. ಉದಾ: ಗೆದ್ದಲು.

ಗಣ 11. ಜ಼ೋರಾಪ್ಟಿರ: ರೆಕ್ಕೆಯುಳ್ಳ ಅಥವಾ ರೆಕ್ಕೆಯಿಲ್ಲದ ಕೀಟಗಳು ಈ ಗುಂಪಿಗೆ ಸೇರಿವೆ. ಕುಡಿಮೀಸೆ ಮಣಿಸರದಂತಿದ್ದು 9 ತುಂಡುಗಳಿಂದ ಕೂಡಿದೆ. ರೆಕ್ಕೆಗಳು ಸಾಮಾನ್ಯವಾಗಿ ಇಲ್ಲ. ಇದ್ದರೆ ತೊಟ್ಟಿನ ಹತ್ತಿರ ಸುಲಭವಾಗಿ ಕಳಚಿಕೊಳ್ಳಬಲ್ಲುವು. ಎದೆಯ ಮೊದಲ ಖಂಡ ದೊಡ್ಡದು. ಬಾಹ್ಯ ಅಂಡೋಪಕರಣವಿಲ್ಲ. ರೂಪಪರಿವರ್ತನೆ ವಿರಳ. ಉದಾ: ಜೋರಾಪ್ಟಿನ್ಸ್.

ಗಣ 12. ಸೋಕಾಪ್ಟಿರ: 15–20 ತುಂಡುಗಳ ಎಳೆಯಂಥ ಕುಡಿಮೀಸೆಯುಳ್ಳ ಕೀಟಗಳು. ಎದೆಯ ಮೊದಲ ಖಂಡ ಕಿರಿದು. ಸರ್ಸಿ ಇಲ್ಲ. ಉದಾ: ಪುಸ್ತಕ ಹೇನು, ದೂಳು ಹೇನು.

ಗಣ 13. ಮ್ಯಾಲೊಫೇಗ: ಇವಕ್ಕೆ ರೆಕ್ಕೆಗಳಿಲ್ಲ. ಇವು ಹಕ್ಕಿಗಳ (ವಿರಳವಾಗಿ ಚತುಷ್ಪಾದ ಪ್ರಾಣಿಗಳ) ಹೊರಮೈಮೇಲಿನ ಪರಾವಲಂಬಿ ಕೀಟಗಳು. ಕಣ್ಣುಗಳು ಸಣ್ಣವು. ಸರಳನೇತ್ರಗಳಿಲ್ಲ. 3 ಅಥವಾ 5 ತುಂಡುಗಳ ಕುಡಿಮೀಸೆ, ತುಂಡರಿಸುವ ವದನಾಂಗಗಳಿವೆ. ಎದೆಯ ಕೆಳಭಾಗದಲ್ಲಿನ ಶ್ವಾಸದ್ವಾರಗಳು ಇವುಗಳ ಮುಖ್ಯ ಲಕ್ಷಣಗಳು. ಇವು ರೆಕ್ಕೆ, ಕೂದಲುಗಳ ತುಣುಕುಗಳನ್ನೇ ತಿನ್ನುತ್ತವೆ. ಉದಾ: ಪಕ್ಷಿಹೇನು.

ಗಣ 14. ಸೈಫಂಕ್ಯುಲೇಟ ಅಥವಾ ಅನಾಪ್ಲೂರ: ಚತುಷ್ಪಾದಿಗಳ ಹೊರಮೈಮೇಲೆ ಜೀವಿಸುವ ರೆಕ್ಕೆ ಇಲ್ಲದ ಪರಾವಲಂಬಿ ಕೀಟಗಳು. ಕಣ್ಣುಗಳು ಚಿಕ್ಕವು ಅಥವಾ ಇಲ್ಲ ಸರಳ ನೇತ್ರಗಳಿಲ್ಲ. 3–5 ತುಂಡುಗಳ ಕುಡಿಮೀಸೆ ಇವೆ. ವದನಾಂಗಗಳು ಚುಚ್ಚಿ ಹೀರುವುದಕ್ಕೆ ಮಾರ್ಪಾಟು ಹೊಂದಿವೆ, ಬೇಕಿಲ್ಲದಾಗ ಹಿಂದಕ್ಕೆ ತಲೆಯೊಳಗೆ ಸರಿಯುತ್ತವೆ. ಎದೆಯ ಶ್ವಾಸದ್ವಾರಗಳು ಮೇಲ್ಭಾಗದಲ್ಲಿವೆ. ಸರ್ಸಿ ಇಲ್ಲ. ರೂಪ ಪರಿವರ್ತನೆ ಇಲ್ಲ. ಉದಾ: ಹೇನು, ಕೂರೆ.

ಗಣ 15. ಹೆಮಿಪ್ಟಿರ. ಈ ಕೀಟಗಳಲ್ಲಿ ಎರಡು ಜೊತೆ ರೆಕ್ಕೆಗಳಿವೆ. ಮುಂದಿನದು ಹಿಂದಿನದಕ್ಕಿಂತ (ಹೋಮಾಪ್ಟಿರದಲ್ಲಿ) ಸಂಪೂರ್ಣವಾಗಿ ಅಥವಾ (ಹೆಟಿರಾಪ್ಟಿರದಲ್ಲಿ) ತೊಟ್ಟಿನ ಸಮೀಪದಲ್ಲಿ ಮಾತ್ರ ಹೆಚ್ಚು ಗಡಸು. ವದನಾಂಗಗಳು ಚುಚ್ಚಿ ಹೀರಲು ಉಪಯುಕ್ತವಾಗಿವೆ. ಕೆಳತುಟಿ ಮೇಲ್ಮುಖದಲ್ಲಿ ಕಾಲುವೆಯಂತಿರುವ ಒರೆಯಂತಿದೆ ಮತ್ತು ಸೂಜಿಗಳಂತೆ ಮಾರ್ಪಾಡಾಗಿರುವ ದವಡೆ, ಮ್ಯಾಕ್ಸಿಲಗಳಾದ ಎರಡು ಜೊತೆ

ಮುಳ್ಳುಗಳು ಇದರೊಳಗೆ ಸೇರಿಕೊಳ್ಳುತ್ತವೆ. ರೂಪಪರಿವರ್ತನೆ ಅಪೂರ್ವವಾಗಿ ಸಂಪೂರ್ಣ ಮಾದರಿಯದು. ಇವು ಸಸ್ಯರಸಗಳನ್ನು ಹೀರಿ ಬದುಕುವ ಪೀಡೆಕೀಟಗಳು. ಉದಾ: ಸಸ್ಯತಿಗಣೆ, ಸಸ್ಯಹೇನು.

ಗಣ 16. ಥೈಸನಾಪ್ಟಿರ. ಅತ್ಯಂತ ಸಣ್ಣ ದೇಹಿಕೀಟಗಳು. 6 ರಿಂದ 10 ತುಂಡುಳ್ಳ ಕುಡಿಮೀಸೆ ಇದೆ. ವದನಾಂಗಗಳು ಚುಚ್ಚುವ ಮಾದರಿಯವು. ರೆಕ್ಕೆಗಳು ಇದ್ದರೆ ಸಣ್ಣಗಾತ್ರದವು. ಅಂಚಿನಲ್ಲಿ ಉದ್ದದ ಕೂದಲುಗಳಿವೆ. ಸರ್ಸಿ ಇಲ್ಲ. ರೂಪಪರಿವರ್ತನೆಯಲ್ಲಿ ಒಂದೆರಡು ಕೋಶಾವಸ್ಥೆಗಳಿವೆ. ಉದಾ: ಥ್ರಿಪ್ಸ್, ನುಸಿ ಕೀಟಗಳು.

ಗುಂಪು (ii), ಎಂಡ್ರೋಪ್ಟೆರಿಗೋಟ: ರೂಪಪರಿವರ್ತನೆ ಜಟಿಲವಾಗಿದೆ. ಕೋಶಾವಸ್ಥೆ ಇದೆ. ರೆಕ್ಕೆಗಳು ದೇಹದೊಳಗಿನಿಂದ ಉದ್ಭವಿಸುತ್ತವೆ. ಈ ಗುಂಪಿನಲ್ಲಿ 9 ಗಣಗಳಿವೆ.

ಗಣ 1. ನ್ಯೂರಾಪ್ಟಿರ: ಸಣ್ಣ ಮತ್ತು ದೊಡ್ಡಗಾತ್ರದ ಮೆತುದೇಹದ ಕೀಟಗಳು. ಕುಡಿಮೀಸೆಗಳು ಉದ್ದವಾಗಿವೆ. ಎರಡು ಜೊತೆ ಸಮನಾದ ಪೊರೆಯಂಥ ರೆಕ್ಕೆಗಳಿವೆ, ವಿಶ್ರಾಂತಿಯಲ್ಲಿದ್ದಾಗ ಮೇಲ್ಚಾವಣಿಯಂತೆ ಮೈಮೇಲೆ ಕೂಡುವುವು. ಸರ್ಸಿ ಇಲ್ಲ. ಮರಿಹುಳು ಮಾಂಸಾಹಾರಿ, ತುಂಡರಿಸುವ ಅಥವಾ ಹೀರುವ ವದನಾಂಗಗಳಿವೆ. ನೀರಿನಲ್ಲಿ ವಾಸಿಸುವ ಡಿಂಬಗಳ ಉದರ ಭಾಗದಲ್ಲಿ ಕಿವಿರುಗಳಿವೆ. ಉದಾ: ಲೇಸ್‌ವಿಂಗ್ಸ್ ಮತ್ತು ಮಿರ್ಮಿಲಿಯಾನ್ (ಆಂಟ್‌ಲಯನ್).

ಗಣ 2. ಮೀಕಾಪ್ಟಿರ: ಸಣ್ಣ ಅಥವಾ ಮಧ್ಯಮ ಗಾತ್ರದ ಮಾಂಸಾಹಾರಿ ಕೀಟಗಳು. ಉದ್ದನೆಯ ಎಳೆಯಂಥ ಕುಡಿಮೀಸೆಗಳಿವೆ. ತಲೆಯ ಮುಂಭಾಗ ಕೊಕ್ಕಿನಂತೆ ಚಾಚಿಕೊಂಡಿದೆ. ತುಂಡರಿಸುವ ವದನಾಂಗಗಳಿವೆ. ಕಾಲುಗಳು ಉದ್ದವಾಗಿದ್ದು, ತೆಳುವಾಗಿವೆ. ರೆಕ್ಕೆಗಳು ಒಂದೇ ಸಮನಾಗಿದ್ದು ಪೊರೆಯಂತಿವೆ. ಕೀಟ ವಿಶ್ರಾಂತಿಯಲ್ಲಿದ್ದಾಗ ಚಪ್ಪಟೆಯಾಗಿ ಕೂಡುತ್ತವೆ. ಉದರ ಉದ್ದವಾಗಿದೆ. ಸರ್ಸಿ ಕಿರಿದು. ಗಂಡಿನ ಬಾಹ್ಯ ಜನನಾಂಗಗಳು ಎದ್ದುಕಾಣುತ್ತವೆ. ಡಿಂಬಗಳಿಗೆ 3 ಜೊತೆ ಎದೆಭಾಗದಲ್ಲಿ ಕಾಲುಗಳಿವೆ. ಉದರಭಾಗದಲ್ಲಿ ಕಾಲುಗಳಿವೆ. ವದನಾಂಗಗಳು ಕಡಿದು ತಿನ್ನಲು ಸಹಾಯಕ. ಉದಾ: ಚೇಳು ಕೀಟಗಳು.



ಚೇಳು ಕೀಟ

ಗಣ 3. ಲೆಪಿಡಾಪ್ಟಿರ. ಈ ಗಣದ ಕೀಟಗಳಿಗೆ ಎರಡು ಜೊತೆ ಪೊರೆಯಂಥ ರೆಕ್ಕೆಗಳಿವೆ. ರೆಕ್ಕೆಗಳಲ್ಲಿ ಅಡ್ಡನರಗಳು ಕಡಿಮೆ. ಮೈ ಮತ್ತು ರೆಕ್ಕೆ ಉಪಾಂಗಗಳ ಮೇಲೆಲ್ಲ ಶಲ್ಕಗಳಿವೆ. ದವಡೆಗಳು ಇಲ್ಲ. ಇದ್ದರೂ ಕ್ಷೀಣವಾಗಿವೆ. ಇದರಿಂದ ಮಾಕ್ಸಿಲಗಳು ರಸ ಹೀರಲು ಸೊಂಡಿಲಾಗಿ ಮಾರ್ಪಾಡಾಗಿವೆ. ಡಿಂಬಗಳ ದೇಹ ನಿರ್ದಿಷ್ಟವಾದ ಖಂಡಗಳಾಗಿಂದಾಗಿದೆ. ದೇಹದ ಪಕ್ಕಗಳಲ್ಲಿ ಸಾಲಾಗಿ ಶ್ವಾಸದ್ವಾರಗಳಿವೆ. ಕಾಲುಗಳು 8 ಜೊತೆ. ಉದಾಹರಣೆ: ಚಿಟ್ಟೆ (ಬಟರ್‌ಫ್ಲೈ), ಪತಂಗ (ಮಾತ್).

ಗಣ 4. ಟ್ರೈಕಾಪ್ಟಿರ: ಪತಂಗಗಳನ್ನು ಹೋಲುವ, ಸಣ್ಣದರಿಂದ ಮಧ್ಯಮ ಗಾತ್ರದ, ರೋಮಾವೃತವಾದ ಕುಡಿಮೀಸೆಗಳುಳ್ಳ ಕೀಟಗಳು. ದವಡೆಗಳು ಸಾಮಾನ್ಯವಾಗಿ ಇಲ್ಲ. ಇದ್ದರೂ ಕ್ಷೀಣವಾಗಿವೆ. ರೆಕ್ಕೆಗಳು ಪೊರೆಯಂತಿದ್ದು ದಟ್ಟವಾದ ಕೂದಲುಗಳಿಂದ ಕೂಡಿವೆ ಮತ್ತು ವಿಶ್ರಾಂತಿಯಲ್ಲಿ ಮೇಲ್ಚಾವಣಿಯಂತೆ ಬೆನ್ನಿನ ಮೇಲೆ ಕೂಡುತ್ತವೆ. ಮುಂದಿನ ರೆಕ್ಕೆಗಳು ಉದ್ದವಾಗಿದ್ದು, ಹಿಂದಿನ ರೆಕ್ಕೆಗಳು ಅಗಲವಾಗಿವೆ. ಡಿಂಬಗಳು ಜಲವಾಸಿಗಳು. ಇವುಗಳ ದೇಹದ ಖಂಡಗಳು ನಿರ್ದಿಷ್ಟವಾಗಿ ವಿಭಾಗಿಸಲ್ಪಟ್ಟಿವೆ ಮತ್ತು ದೇಹದ ಹಿಂದಿನ ತುದಿಯಲ್ಲಿ ಕೊಕ್ಕೆಯುಳ್ಳ ಪತಂಗಗಳಿವೆ. ಉದಾ: ಕ್ಯಾಡಿಸ್ ನೊಣ.

ಗಣ 5. ಡಿಪ್ಟಿರ. ಒಂದು ಜೊತೆ ಪೊರೆಯಂಥ ರೆಕ್ಕೆಯುಳ್ಳ ಕೀಟಗಳು. ಹಿಂದಿನ ಜೊತೆ ರೆಕ್ಕೆಗಳು ಗುಬುಟಾಕಾರದ ಸಮತೋಲನಾಂಗಗಳಾಗಿ ಪರಿವರ್ತನೆಯಾಗಿವೆ. ವದನಾಂಗಗಳು ರಸರೂಪದ ಆಹಾರವನ್ನು ಹೀರುವುದಕ್ಕೆ ಉಪಯುಕ್ತವಾಗಿವೆ. ಕೆಲವು ವೇಳೆ ಸೊಂಡಿಲಿನಂತೆ, ಕೆಲವು ಕೀಟಗಳಲ್ಲಿ ಚುಚ್ಚುವುದಕ್ಕೂ ಹೊಂದಿಕೊಂಡಿವೆ, ದವಡೆಗಳು ಅಪೂರ್ಣ. ಕೆಳತುಟಿ ಒಂದು ಜೊತೆ ದಪ್ಪನಾದ ಹಾಲೆಗಳಂತಿದೆ. ಎದೆಯ ಮೊದಲ ಮತ್ತು ಮೂರನೆಯ ಖಂಡಗಳು ಚಿಕ್ಕವು ಮತ್ತು ಮಧ್ಯದ ಖಂಡದೊಡನೆ ಅಂಟಿಕೊಂಡಿವೆ. ರೂಪಪರಿವರ್ತನೆ ಸಂಪೂರ್ಣವಾಗಿದೆ. ಡಿಂಬದ ದೇಹ ನಿರ್ದಿಷ್ಟವಾದ ಖಂಡಗಳಾಗಿ ವಿಭಾಗವಾಗಿದೆ. ಕಾಲುಗಳಿಲ್ಲ. ತಲೆ ಕಿರಿದು ಮತ್ತು ಒಳಗೆ ಎಳೆದುಕೊಳ್ಳಲ್ಪಟ್ಟಿದೆ. ಉದಾ: ನೊಣ, ಸೊಳ್ಳೆ ಇತ್ಯಾದಿ.

ಗಣ 6. ಸೈಫನಾಪ್ಟಿರ. ಸಣ್ಣ ಗಾತ್ರದ, ರೆಕ್ಕೆಗಳಿಲ್ಲದ, ಪಕ್ಕದಿಂದ ಪಕ್ಕಕ್ಕೆ ಅದುಮಿದ ದೇಹವುಳ್ಳ ಕೀಟಗಳು. ಸಂಯುಕ್ತ ನೇತ್ರಗಳಿಲ್ಲ, 2 ಸರಳ ನೇತ್ರಗಳಿವೆ. ಕುಡಿಮೀಸೆಗಳು ಸಣ್ಣಗಾತ್ರದವು ಮತ್ತು ದಪ್ಪನಾಗಿವೆ. ವದನಾಂಗಗಳು ಚುಚ್ಚುವುದಕ್ಕೂ ಮತ್ತು ಹೀರುವುದಕ್ಕೂ ಉಪಯುಕ್ತ. ಡಿಂಬಗಳು ಉದ್ದವಾಗಿವೆ. ಅವುಗಳ ದೇಹದ ಖಂಡಗಳು ನಿರ್ದಿಷ್ಟವಾಗಿ ಬಿಡಿಸಲ್ಪಟ್ಟಿವೆ. ಕಾಲುಗಳಿಲ್ಲ. ಕೋಶಾವಸ್ಥೆಯನ್ನು ಗೂಡುಗಳಲ್ಲಿ ಕಳೆಯುತ್ತವೆ. ಈ ಕೀಟಗಳು ಪ್ರೌಢಾವಸ್ಥೆಯಲ್ಲಿ ಬಿಸಿರಕ್ತದ ಪ್ರಾಣಿಗಳ ಮೈಮೇಲೆ ಪರಾವಲಂಬಿಗಳಾಗಿ ಜೀವಿಸುತ್ತವೆ. ಉದಾ: ಚಿಗಟ(ಫ್ಲೀ).

ಗಣ 7. ಹೈಮೆನಾಪ್ಟಿರ: ಈ ಗಣದ ಕೀಟಗಳಿಗೆ ಸಾಮಾಜಿಕ ಕೀಟಗಳೆನ್ನುವರು. ಎರಡು ಜೊತೆ ಪೊರೆಯಂಥ ರೆಕ್ಕೆಗಳಿವೆ. ಹಿಂದಿನ ರೆಕ್ಕೆ ಮುಂದಿನದಕ್ಕಿಂತ ಚಿಕ್ಕದು, ಸಣ್ಣ ಕೊಕ್ಕೆಗಳಿಂದ ಎರಡು ರೆಕ್ಕೆಗಳೂ ಸೇರಿಕೊಂಡಿವೆ. ವದನಾಂಗಗಳು ತುಂಡರಿಸುವುದಕ್ಕೂ ಅನೇಕ ವೇಳೆ ನೆಕ್ಕುವುದಕ್ಕೂ, ಹೀರುವುದಕ್ಕೂ, ಅನುಕೂಲವಾಗಿವೆ. ಉದರ ಕಿರಿದಾಗಿದೆ. ಅದರ ಮೊದಲ ಖಂಡ ಎದೆಯ ಮೂರನೆಯ ಖಂಡದೊಡನೆ ಕೂಡಿಕೊಂಡಿದೆ. ಬಾಹ್ಯ ಅಂಡೋಪಕರಣವಿದೆ. ಅದು ಗರಗಸದಾಕಾರದಲ್ಲಿದ್ದು, ಕುಯ್ಯುವುದಕ್ಕೆ, ಚುಚ್ಚುವುದಕ್ಕೆ ಅಥವಾ ಕುಟುಕುವುದಕ್ಕೆ ಮಾರ್ಪಾಡು ಹೊಂದಿದೆ. ರೂಪಪರಿವರ್ತನೆ ಸಂಪೂರ್ಣವಾಗಿದೆ. ಡಿಂಬಗಳಿಗೆ ಕಾಲುಗಳಿಲ್ಲ, ಅಪರೂಪವಾಗಿ ಕಾಲುಗಳಿರಬಹುದು. ಕೋಶಾವಸ್ಥೆ ಗೂಡಿನಲ್ಲೇ ಆಗುತ್ತದೆ. ಈ ಗಣ ಕೀಟವರ್ಗದಲ್ಲಿ ಅತ್ಯಂತ ಉನ್ನತ ಸ್ಥಾನಗಳಿಸಿರುವ ದೊಡ್ಡ ಗಣ. ಉದಾ: ಇರುವೆ, ಜೇನು, ಕಣಜ, ಗರಗಸ ನೊಣ, ಬಡಗಿ ಜೇನು.

ಗಣ 8. ಕೋಲಿಯಾಪ್ಟಿರ. ಸಣ್ಣ ಮತ್ತು ದೊಡ್ಡ ಗಾತ್ರದ ಕೀಟಗಳಿವೆ. ಕೀಟ ಸಂಕುಲದಲ್ಲೇ ಅತಿ ಹೆಚ್ಚಿನ ಪ್ರಭೇದದ ಕೀಟಗಳನ್ನೊಳಗೊಂಡ ಗಣ. ಈ ಕೀಟಗಳ ಮುಂದಿನ ರೆಕ್ಕೆಗಳು ಚಕ್ಕಳದಂತೆ ಗಡಸಾಗಿವೆ. ಕೀಟ ವಿಶ್ರಾಂತ ಸ್ಥಿತಿಯಲ್ಲಿದ್ದಾಗ ಬೆನ್ನಿನ ಮೇಲಿನ ನಡುರೇಖೆಯಲ್ಲಿ ಎರಡೂ ಕೂಡಿಕೊಳ್ಳುತ್ತವೆ. ಕೆಳರೆಕ್ಕೆಗಳು ಪೊರೆಯಂತಿದ್ದು, ಮೇಲಿನ ರೆಕ್ಕೆಯ (ಎಲಿಟ್ರ) ಕೆಳಗೆ ಮಡಿಚಿಕೊಂಡಿವೆ. ಕೆಲವೊಮ್ಮೆ ಕೆಳಗಿನ ರೆಕ್ಕೆಗಳು ಇರುವುದಿಲ್ಲ. ಎದೆಯ ಮೊದಲ ಖಂಡ ದೊಡ್ಡದು. ಎರಡನೆಯ ಖಂಡ ಬಹಳ ಕಿರಿದು. ರೂಪಪರಿವರ್ತನೆ ಸಂಪೂರ್ಣವಾಗಿದೆ. ಪ್ರಾಣಿ ಪ್ರಪಂಚದಲ್ಲೇ ಅತ್ಯಂತ ದೊಡ್ಡ ವರ್ಗವಿದು. ಇದುವರೆಗೆ 2,20,000ಕ್ಕೂ ಹೆಚ್ಚು ಪ್ರಭೇದಗಳನ್ನು ಗುರುತಿಸಿ, ವಿವರಿಸಲಾಗಿದೆ. ಉದಾ: ಜೀರುಂಡೆ, ಚಿಪ್ಪಿನಕೀಟ, ಸೊಂಡಿಲು ಕೀಟ ಇತ್ಯಾದಿ.

ಗಣ 9. ಸ್ಟ್ರೆಪ್ಸಿಪ್ಟಿರ: ಆತಿಥೇಯ ಪ್ರಾಣಿಯ ದೇಹದೊಳಗೆ ವಾಸಿಸುವ ಸೂಕ್ಷ್ಮಗಾತ್ರದ ಪರಾವಲಂಬಿಗಳು. ಗಂಡು ಮಾತ್ರ ಸ್ವತಂತ್ರ ಜೀವಿ. ಕುಡಿಮೀಸೆಗಳು ದಪ್ಪಗಿದ್ದು ಸ್ಪಷ್ಟವಾಗಿವೆ. ಮುಂದಿನ ರೆಕ್ಕೆಗಳು ಸಣ್ಣವು. ಅವುಗಳ ಆಕಾರ ದೊಣ್ಣೆಯಂತೆ. ಹಿಂದಿನ ರೆಕ್ಕೆಗಳು ದೊಡ್ಡವು ಮತ್ತು ಅವುಗಳ ಆಕಾರ ಬೀಸಣಿಗೆಯಂತೆ. ಹೆಣ್ಣು ಕೀಟ ಸಾಧಾರಣವಾಗಿ ತನ್ನ ಹೊರಚರ್ಮದ ಗೂಡಿನಲ್ಲಿ ಸೇರಿಕೊಂಡು, ಆತಿಥೇಯ ಪ್ರಾಣಿಯ ದೇಹದೊಳಗೆ ವಾಸಿಸುತ್ತದೆ. ಕೆಲವು ಪ್ರಭೇದಗಳಲ್ಲಿ ಹೆಣ್ಣು ಕೀಟಗಳು ಆತಿಥೇಯ ಪ್ರಾಣಿಯನ್ನು ಬಿಟ್ಟು ಹೊರಬರುತ್ತವೆ. ಬೆಳವಣಿಗೆಯಲ್ಲಿ ಒಂದಕ್ಕಿಂತ ಹೆಚ್ಚು ರೂಪದ ಡಿಂಬಗಳಿವೆ. (ಡಿ.ಎಸ್.)

**ಕೀಟಗಳ ಮೊಟ್ಟೆಗಳು:** ಕೀಟದ ಮೊಟ್ಟೆಗಳು ಉದ್ದ ಮತ್ತು ಅಂಡಾಕಾರವಾಗಿವೆ. ಮೊಟ್ಟೆಗಳ ಕೋಶದ್ರವ್ಯವು ಬಲೆಯಂತಿದ್ದು ಅದರ ಮಧ್ಯದಲ್ಲಿ ಸಣ್ಣ ಬೀಜಾಣು (ನ್ಯೂಕ್ಲಿಯಸ್) ಇದೆ. ಬಂಡಾರಗುಳ್ಳೆಗಳ ಜೈವಿಕಕಣಗಳ ಸುತ್ತಲೂ ಕೋಶದ್ರವ್ಯ ಆವರಿಸಿದೆ. ಮೊಟ್ಟೆಯ ಸುತ್ತ ತೆಳ್ಳನೆಯ ಸಜೀವ ಪರೆ (ವೈಟಲೈನ್ ಮೆಂಬ್ರೇನ್) ಮತ್ತು ಅದರ ಹೊರಗೆ ಚಿಪ್ಪು (ಕೋರಿಯನ್) ಇದೆ. ಅನೇಕ ಕೀಟಗಳ ಮೊಟ್ಟೆಗಳಿಗೆ ಚಿಪ್ಪು ಇರುವುದಿಲ್ಲ. ಚಿಪ್ಪಿನ ಮೇಲ್ಮೈಯಲ್ಲಿ ಅನೇಕ ಬಗೆಯ ಗುರುತುಗಳಿರುವುವು. ಚಿಪ್ಪಿನಲ್ಲಿ ಎರಡು ಪದರಗಳಿವೆ. ತೆಳುವಾದ ಹೊರಪದರ ಎಕ್ಸೋಕೋರಿಯಾನ್ ಮತ್ತು ದಪ್ಪವಾದ ಒಳಪದರ ಎಂಡೋಕೋರಿಯಾನ್. ಹೊರಗಿನ ಪದರ ಕೈಟಿನ್‌ನಂತಹ ಸಿರೋಪ್ರೋಟೀನ್ ಅಥವಾ ಕೋರಿಯಾನ್‌ನಿಂದ ಕೂಡಿದೆ. ಮೊಟ್ಟೆಯ ಒಂದು ಕಡೆ ಸೂಕ್ಷ್ಮ ರಂಧ್ರ (ಮೈಕ್ರೊಪೈಲ) ಇದೆ. ಈ ರಂಧ್ರದ ಮೂಲಕ ವೀರ್ಯಾಣು ಒಳಗೆ ಹೋಗುತ್ತದೆ.

ಗಾತ್ರದಲ್ಲಿ ಕೀಟಗಳ ಮೊಟ್ಟೆ ವಿಭಿನ್ನವಾಗಿವೆ. ಜಿಗಿಬಾಲದ (ಕಾಲೆಂಬೊಲ) ಮೊಟ್ಟೆಗಳು ಅತಿಸಣ್ಣವು. ಕೀಟಗಳ ಮೊಟ್ಟೆಗಳ ಗಾತ್ರ 0.15 ಮಿಮೀ (ಉದಾ: ನೊಣದ ಮೊಟ್ಟೆ) ದಿಂದ 5.6 ಮಿಮೀ. (ರೇಷ್ಮೆ ಪತಂಗದ ಮೊಟ್ಟೆ). ಕೆಲವು ಮೊಟ್ಟೆಗಳಲ್ಲಿ ತೊಟ್ಟು ಮತ್ತು ಮೇಲ್ತುದಿಯಲ್ಲಿ ಮುಚ್ಚಳ ಇರುತ್ತವೆ.

ಕೀಟಗಳು ಹಲವು ಮೊಟ್ಟೆಗಳನ್ನಿಡುತ್ತವೆ. ತಮ್ಮ ಜೀವಮಾನದಲ್ಲಿ 100 ರಿಂದ 150 ಮೊಟ್ಟೆಗಳನ್ನಿಡುವ ಕೀಟಗಳೇ ಹೆಚ್ಚು. ಅತೀ ಕಡಿಮೆ ಎಂದರೆ ಕೇವಲ ನಾಲ್ಕು ಮೊಟ್ಟೆಗಳನ್ನಿಡುವ ಕೀಟಗಳಿವೆ. (ಉದಾ: ಎಫಿಡ್ಸ್). ಅತಿ ಹೆಚ್ಚು (4000) ಮೊಟ್ಟೆಗಳನ್ನು ಪರತಂತ್ರ ನೊಣಗಳು ಇಡುತ್ತವೆ. ಸಾಮಾಜಿಕ ಕೀಟಗಳು ಅತೀ ಹೆಚ್ಚು ಮೊಟ್ಟೆಗಳನ್ನಿಡುತ್ತವೆ.

ಉದಾ: ರಾಣಿ ಗೆದ್ದಲು ತನ್ನ ಜೀವಮಾನದಲ್ಲಿ 1,00,000 ಮೊಟ್ಟೆಗಳನ್ನಿಡುತ್ತದೆ. ರಾಣಿ ಇರುವೆ ಮತ್ತು ರಾಣಿ ಜೇನು ಸಹ ಲಕ್ಷಾಂತರ ಮೊಟ್ಟೆಗಳನ್ನಿಡುತ್ತವೆ.

ಕೀಟಗಳು ಮೊಟ್ಟೆಗಳನ್ನು ಇಡುವ ರೀತಿ ವೈವಿಧ್ಯಮಯವಾಗಿದೆ. ಉದಾ: ಕಡ್ಡಿಕೀಟಗಳು ತಮ್ಮ ಮೊಟ್ಟೆಗಳನ್ನು ಅಲ್ಲಲ್ಲಿ ಉದುರಿಸುತ್ತವೆ. ಸ್ತನಿ ಹೇನುಗಳು ಮತ್ತು ಪರಾವಲಂಬಿ ಹೇನುಗಳು ಮೊಟ್ಟೆಗಳನ್ನು ಕೂದಲು ಮತ್ತು ಗರಿಗಳಿಗೆ ಅಂಟಿಸುತ್ತವೆ.

ಮಿಡತೆ, ಜಿರಳೆ ಮತ್ತು ಒಂಟೆ ಹುಳಗಳು ಮೊಟ್ಟೆಗಳನ್ನು ಗುಂಪಾಗಿ ಚೀಲಗಳಲ್ಲಿಡುತ್ತವೆ. ವಲಸೆ ಮಿಡತೆಗಳು ಮತ್ತು ಕುಡಿಮೀಸೆ ಮಿಡತೆಗಳು ಮೊಟ್ಟೆಗಳನ್ನು ಗುಂಪಾಗಿ ಭೂಮಿಯಲ್ಲಿಡುತ್ತವೆ. ಜಿರಲೆಗಳು ಮೊಟ್ಟೆಗಳಿಂದ ಕೂಡಿದ ಚೀಲವನ್ನು ವಸ್ತುಗಳ ಮೇಲೆ ಅಂಟಿಸುತ್ತವೆ. ಪರತಂತ್ರಜೀವಿ ಕೀಟಗಳು ಮೊಟ್ಟೆಗಳನ್ನು ಆತಿಥೇಯ ಕೀಟಗಳ ಶರೀರದಲ್ಲಿ ಚುಚ್ಚಿಡುತ್ತವೆ (ಉದಾ: ಊಜಿನೊಣ).

ಕೀಟಗಳು ಮೊಟ್ಟೆ ಇಡುವ ರೀತಿ ಮತ್ತು ಜಾಗವು ವಿಚಿತ್ರವಾಗಿದೆ. ಹೆಣ್ಣು ಕೀಟ ಮೊಟ್ಟೆಗಳನ್ನಿಡುವುದಕ್ಕೆ ಮುಂಚೆ, ಮರಿಗೆ ಬೇಕಾಗುವ ಆಹಾರಕ್ಕೆ ಪ್ರಾಮುಖ್ಯತೆ ಕೊಡುತ್ತದೆ. ಉದಾಹರಣೆಗೆ, ಮೊಟ್ಟೆಗಳಿಂದ ಹೊರ ಬರುವ ಮರಿಗಳ ಆಹಾರ ಎಲೆಗಳಾಗಿದ್ದರೆ ಹೆಣ್ಣು ಕೀಟ ಮೊಟ್ಟೆಗಳನ್ನು ಎಲೆಗಳ ಕೆಳಗೆ ಅಥವಾ ಮೇಲೆ ಇಡುತ್ತದೆ. ಕೀಟದ ಮರಿಗಳ ಆಹಾರ ಎಲೆ, ಹೂ ಅಥವಾ ಕಾಯಿಯಾಗಿದ್ದರೆ, ಅವುಗಳ ಮೇಲೆಯೇ ತಾಯಿ ಕೀಟ ಮೊಟ್ಟೆಗಳನ್ನಿಡುತ್ತದೆ. ಇದೇ ರೀತಿ ಜಲವಾಸಿ ಕೀಟಗಳು ಮೊಟ್ಟೆಗಳನ್ನು ನೀರಿನಲ್ಲಿ ಅಥವಾ ನೀರಿನ ಸಮೀಪದಲ್ಲಿ ಇಡುತ್ತವೆ. ಪರತಂತ್ರ ಕೀಟಗಳು ಆತಿಥೇಯ ಕೀಟದ ಶರೀರದಲ್ಲಿ ಅಥವಾ ಮೇಲೆ ಮೊಟ್ಟೆಗಳನ್ನಿಡುತ್ತವೆ. ಪಕ್ಷಿ ಹೇನು (ಮಲ್ಲೊಫಾಗ) ಮತ್ತು ರಕ್ತ ಹೀರುವ ಹೇನು (ಅನೂಪ್ಲೂರ) ಗಳು ಬಾಹ್ಯ ಪರೋಪಜೀವಿಗಳು, ಮೊಟ್ಟೆಗಳನ್ನು ಪಕ್ಷಿಗಳ ಗರಿಗಳ ಮೇಲೆ ಇಡುತ್ತವೆ. ಇನ್ನೂ ಕೆಲವು ಕೀಟಗಳಲ್ಲಿ ಮೊಟ್ಟೆ



ಅ. ಒಂಟೆಹುಳು ಆ. ಮೊಟ್ಟೆ ಕೋಶ

ಇಡುವ ಸ್ಥಳ ವಿಚಿತ್ರವಾಗಿದೆ. ಉದಾಹರಣೆಗೆ ಕೆಲವು ಕೀಟಗಳು ಮೊಟ್ಟೆಗಳನ್ನು ಎಲೆಗಳ ಮೇಲೆ ಅಥವಾ ಭೂಮಿಯಲ್ಲಿ ಇಡುತ್ತವೆ. ಅಂಥಾ ಸಂದರ್ಭದಲ್ಲಿ ಅವುಗಳಿಂದ ಹೊರಬಂದ ಮರಿಗಳು ತಮ್ಮ ಆಹಾರವನ್ನು ಹುಡುಕಿಕೊಂಡು ಹೋಗಬೇಕು. ಇನ್ನು ಕೆಲವು ಕೀಟಗಳು (ಉದಾ: ಸ್ಟ್ರೆಪ್ಸಿಪ್ಟಿರಾ) ತಮ್ಮ ಶರೀರದಲ್ಲಿಯೇ ಮೊಟ್ಟೆಗಳಲ್ಲಿ ಬೆಳೆದು ಹೊರಬಂದ ಮರಿಗಳನ್ನು ಸಸ್ಯದ ಮೇಲೆ ಬಿಡುತ್ತವೆ. ಆ ಮರಿಗಳು ದುಂಬಿಗಳು ಬರುವವರೆಗೆ ಕಾದಿದ್ದು, ಅವು ಬಂದಾಗ ಅವುಗಳ ಕಾಲುಗಳಿಗೆ ಹತ್ತಿಕೊಂಡು ಮುಂದೆ ಅವುಗಳ ಗೂಡನ್ನು ಸೇರುತ್ತವೆ.

ಚಳಿ ಪ್ರದೇಶದಲ್ಲಿರುವ ಕೀಟಗಳು, ಅತಿ ಚಳಿಯಿಂದ ಉಂಟಾಗುವ ಹಾನಿಯನ್ನು ತಪ್ಪಿಸಿಕೊಳ್ಳಲು ಮೊಟ್ಟೆಗಳ ಸಹಾಯ ಪಡೆಯುತ್ತವೆ. ಉದಾಹರಣೆಗೆ ಕಡ್ಡಿಕೀಟಗಳು ಮೊಟ್ಟೆಗಳನ್ನು ಚಳಿಗಾಲದಲ್ಲಿ ಎಲೆಗಳ ತಳಭಾಗದಲ್ಲಿ ಅಥವಾ ಭೂಮಿಯ ಕಸದ ಮೇಲೆ ಇಡುತ್ತವೆ. ಈ ಮೊಟ್ಟೆಗಳು ವಸಂತಕಾಲದವರೆಗೂ ಸುಪ್ತಾವಸ್ಥೆಯಲ್ಲಿದ್ದು, ನಂತರ ಬೆಳವಣಿಗೆ ಹೊಂದಿ ಅದರಿಂದ ಹೊರಬಂದ ಮರಿಗಳು ಆಹಾರವನ್ನು ಹುಡುಕಿಕೊಂಡು ಹೋಗುತ್ತವೆ. ಇದೇ ರೀತಿ ಬೇಸಿಗೆ ಕಾಲದಲ್ಲಿ ಸಸ್ಯಗಳನ್ನು ತಿಂದು ಬೆಳೆಯುವ ಜಿಗಿಹೇನು ಮತ್ತು ಸಸ್ಯ ಹೇನುಗಳು ಸಹ ಮೊಟ್ಟೆಗಳನ್ನು ಕೊಂಬೆ ಅಥವಾ ರೆಂಬೆಗಳಲ್ಲಿಟ್ಟು ಚಳಿಯ ಹಾವಳಿಯನ್ನು ತಪ್ಪಿಸಿಕೊಳ್ಳುತ್ತವೆ.

ಲೆಪಿಡಾಪ್ಟಿರ, ಕೋಲಿಯಾಪ್ಟಿರ, ಡಿಪ್ಟಿರ, ಹೈಮೆನಾಪ್ಟೆರ ಗಣಕ್ಕೆ ಸೇರಿದ ಕೀಟಗಳು ಎಲೆಯಲ್ಲಿ ಸುರಂಗ ಮಾಡಿ ಬೆಳೆಯುತ್ತವೆ. ಮೊಟ್ಟೆಗಳನ್ನು ಕಾಂಡ, ಎಲೆ, ಹಣ್ಣು ಮತ್ತು ಬೀಜದಂತಹ ಭಾಗದೊಳಗೆ ಇಡುತ್ತವೆ. ಇದರಿಂದ ಹೊರಬಂದ ಮರಿಗಳು ಸುಲಭವಾಗಿ ಆಹಾರ ಪಡೆಯಲು ಅನುಕೂಲವಾಗುತ್ತದೆ. ನೊಣ ಮತ್ತು ಮೂತಿ ಹುಳುಗಳು ಮೊಟ್ಟೆಗಳನ್ನು ನೇರವಾಗಿ ಹಣ್ಣಿನೊಳಕ್ಕೆ ಚುಚ್ಚಿ ಇಡುವುದರಿಂದ ಹೊರಬಂದ ಮರಿಗಳಿಗೆ ತಕ್ಷಣ ಆಹಾರ ದೊರೆತು ಬೆಳೆಯಲು ಅನುಕೂಲವಾಗುತ್ತದೆ. ಇನ್ನೂ ಕೆಲವು ಕೀಟಗಳು ಪರತಂತ್ರ ಜೀವಿಗಳಿಂದ ಹಾನಿಯುಂಟಾಗದಂತೆ ಕಾಪಾಡಲು ಮೊಟ್ಟೆಗಳನ್ನು ಸಸ್ಯದ ಕಾಂಡದೊಳಗೆ ಇಡುತ್ತವೆ. ಉದಾಹರಣೆ: ಮರಗಳ ಚಿಮ್ಮುಂಡೆಗಳು, ಮರಜಿಗಿಗಳು, ಎಲೆಜಿಗಿಗಳು. ಕೆಲವು ಕೀಟಗಳು ಮೊಟ್ಟೆಗಳನ್ನು ಶತ್ರುಗಳ ಹಾನಿಯಿಂದ ತಪ್ಪಿಸಲು ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತವೆ. ಉದಾ: ಹೈಡ್ರಾಫಿಲಿಡ್ ದುಂಬಿ, ಮೇನೊಣ, ಜಿರಲೆ ಹಾಗೂ ದೊಡ್ಡ ಜಲ ತಿಗಣೆಗಳು. ಕೆಲವೊಂದು ಕೀಟಗಳು ಮೊಟ್ಟೆಗಳನ್ನು ಬೇರೆ ಪ್ರಾಣಿಗಳ ಶರೀರಕ್ಕೆ ಅಂಟಿಸುತ್ತವೆ. ಉದಾ: ಈಜುವ ತಿಗಣೆಗಳು ತಮ್ಮ ಮೊಟ್ಟೆಗಳನ್ನು ಮುಳ್ಳಿನ ಮೀನಿನ ಶರೀರಕ್ಕೆ ಅಂಟಿಸುತ್ತವೆ.

ಕೆಲವು ಕೀಟಗಳು ಮೊಟ್ಟೆಗಳನ್ನು ಎಲೆಗಳ ಮೇಲೆ ಇಟ್ಟು ಶರೀರದ ಮಲದಿಂದ ಮುಚ್ಚುತ್ತವೆ. ಹೀಗೆ ಮುಚ್ಚಿದ ಮೊಟ್ಟೆಗಳು ಸಸ್ಯದ ಕೆಲವು ಭಾಗಗಳನ್ನು ಹೋಲುತ್ತವೆ. ಇರುವೆಗಳು ಅಂತಹ ಮೊಟ್ಟೆಗಳನ್ನು ಸಸ್ಯದ ಭಾಗವೆಂದು ತಪ್ಪಾಗಿ ತಿಳಿದುಕೊಂಡು ಗೂಡುಗಳಿಗೆ ತೆಗೆದುಕೊಂಡು ಹೋಗುತ್ತವೆ. ಈ ಮೊಟ್ಟೆಗಳಿಂದ ಹೊರಬಂದ ಮರಿಗಳು ಇರುವೆ ಗೂಡಿನಲ್ಲಿ ಅತಿಥಿ ಜೀವನ ನಡೆಸುತ್ತವೆ. ವಿಚಿತ್ರವೆಂದರೆ, ಕೆಲವು ಕೀಟಗಳು ಮೊಟ್ಟೆಯನ್ನು ಮುಂಚೆ ಹೊರ ಬರುವ ಮರಿಯಿಂದ ತಪ್ಪಿಸಲು ನೀಳವಾದ ದಾರದ ರೀತಿಯಲ್ಲಿ ಇಡುತ್ತವೆ.

ಹೈಮೆನಾಪ್ಟೆರ ಗಣಕ್ಕೆ ಸೇರಿದ ಕೆಲವು ಪರತಂತ್ರ ಕೀಟಗಳ ಮೊಟ್ಟೆಗಳಲ್ಲಿ ಕಂಡು ಬರುವ ಮತ್ತೊಂದು ವಿಚಿತ್ರವೆಂದರೆ ಮೊಟ್ಟೆಯಲ್ಲಿ ಬೆಳೆಯುತ್ತಿರುವ ಭ್ರೂಣವು ನೂರಾರು ಭಾಗಗಳಾಗಿ ಒಡೆದು, ಒಂದೊಂದು ಭಾಗದಿಂದಲೂ ಮರಿಗಳು ಉತ್ಪತ್ತಿಯಾಗುವುದು. ಇದನ್ನು ಪೊಲಿಎಂಬ್ರಿಯಾನಿ ಎಂದು ಕರೆಯುವರು. (ಟಿ.ಎಸ್.ಟಿ.)

**ಕೀಟದಂಶನ:** ಕೀಟ ಕಡಿತ. ಕೀಟ ಕಡಿದಾಗ ತುರಿಕೆ ಉಂಟಾಗುತ್ತದೆ. ನಂಜೇರಿ ಬಾವು ಉಂಟಾಗುತ್ತದೆ. ಕೆಲವು ಕೀಟಗಳು ಕಡಿದಾಗ ಪ್ರಾಣಾಪಾಯವಾಗುತ್ತದೆ. ಕುದುರೆ ನೊಣಗಳು ಕಚ್ಚಿದಾಗ ಅಂತ್ರಾಕ್ಸ್ ಕಾಯಿಲೆ ಬರುತ್ತದೆ. ಕೆಲವು ಜಾತಿಯ ಸೊಳ್ಳೆಗಳು ಕಡಿದಾಗ ಸ್ಟ್ರೆಪ್ಟೋಕಾಕಸ್ ವಿಷಾಣುಗಳಿಂದ ನಂಜುಂಟಾಗುತ್ತದೆ. ಚಿಗಟ ಕಡಿಯುವುದರಿಂದ ಪ್ಲೇಗ್, ಸೊಳ್ಳೆ ಕಡಿಯುವುದರಿಂದ ಮಲೇರಿಯ, ಆನೆಕಾಲಿನ ರೋಗಗಳು ಬರುತ್ತವೆ. ಅನೇಕ ನಿರ್ದಿಷ್ಟ ಕಾಯಿಲೆಗಳ ಉಗಮವನ್ನು ಕೀಟದಂಶನದಲ್ಲಿ ಗುರುತಿಸಬಹುದು. ತುಲಾರೀಮಿಯಾ, ರಿಕೆಟ್ಸಿಯಲ್ ಜ್ವರ, ಟೈಫಾಯಿಡ್, ಡೆಂಗು ಜ್ವರ, ಹಳದಿ ಜ್ವರ, ಕಪ್ಪು ಜ್ವರ ಮುಂತಾದ ರೋಗಗಳು ಕೀಟದಂಶನದಿಂದಲೇ ಬರುವಂಥವು.

ಕೀಟ ಕಡಿದ ಸ್ಥಳದಲ್ಲಿ ವಿಷ ಸೇರಿ ರಕ್ತ ಕಣಗಳು ಹಾಳಾಗುತ್ತವೆ. ನರಗಳಿಗೆ ವಿಷವೇರಬಹುದು. ಆ ಸ್ಥಳದಲ್ಲಿ ಒಂದು ವಿಧವಾದ ವೇದನೆಯುಂಟಾಗಿ, ಉರಿಯೂತ ಕಾಣಿಸಿಕೊಳ್ಳುತ್ತದೆ. ಚರ್ಮ ಉಬ್ಬಿಕೊಳ್ಳುತ್ತದೆ. ದುಂಬಿ, ಕಣಜ, ದೊಡ್ಡ ಕಣಜಗಳು ಕಡಿದಾಗ ತುಂಬ ನೋವಾಗುತ್ತದೆ. ನಾಲಗೆ ಮತ್ತು ಗಂಟಲಲ್ಲಿ ಕಚ್ಚಿದರೆ ಅಲ್ಲಿ ಊದಿಕೊಂಡು ಉಸಿರಾಡುವುದೆ ಕಷ್ಟವಾಗುತ್ತದೆ. ದನಿಪೆಟ್ಟಿಗೆಗೆ ಕಚ್ಚಿದರೆ ಶ್ವಾಸನಾಳದ್ವಾರ ದಪ್ಪವಾಗಿ ಪ್ರಾಣವೇ ಹೋಗಬಹುದು. ಕೆಲವು ಜೀವಿಗಳಿಗೆ ದುಂಬಿಗಳು ಅಥವಾ ಕಣಜಗಳು ಕಡಿದಾಗ ರಕ್ತದ ಒತ್ತಡ ಇಳಿದು ರಕ್ತನಾಳಗಳು ವಿಕಾಸಗೊಂಡು ರಕ್ತಚಲನೆಗೆ ತೊಂದರೆಯಾಗಿ ಜ್ಞಾನತಪ್ಪಿಹೋಗುತ್ತದೆ. ಇದು ಕೆಲವು ವೇಳೆ ಸಾವಿನ ಮೂಲಕ ಅಂತ್ಯವಾಗುತ್ತದೆ.

ಕೀಟದಂಶನದಿಂದ ಒದಗುವ ವಿವಿಧ ವಿಕಾರಗಳಿಗೆ ಯುಕ್ತ ಔಷಧೋಪಚಾರ ತತ್‌ಕ್ಷಣ ನಡೆಯಬೇಕು. ಜಂತು ಚಿಕ್ಕದು ಎಂದು ಅಲಕ್ಷ್ಯ ಕೂಡದು. (ಎ.ಎನ್.ಎ.)

**ಕೀಟನಾಶಕಗಳು:** ಪೈರುಗಳಿಗೆ ಹಾನಿಕಾರಕ, ಜನಜೀವನಕ್ಕೆ ಉಪದ್ರವಕಾರಿಯಾದ ಕೀಟಗಳ ನಿರ್ಮೂಲನಕ್ಕೆ ಬಳಸುವ ರಾಸಾಯನಿಕಗಳು (ಇನ್‌ಸೆಕ್ಟಿಸೈಡ್ಸ್). ಈ ರಾಸಾಯನಿಕಗಳಿಂದ ಕೀಟಗಳ ಜೈವಿಕ ಕ್ರಿಯೆಗಳು ಏರುಪೇರಾಗಿ ಸಾಯುವುವು.

ಕೀಟನಾಶಕಗಳು ಸಾವಯವ ಅಥವಾ ನಿರವಯವ ವಸ್ತುಗಳಿಂದ ತಯಾರಾದವು. ಬಹುತೇಕ ಕೀಟನಾಶಕಗಳು ಸಂಯೋಜಿತವಾದುವು. ಕಾರ್ಯವಿಧಾನಕ್ಕನುಗುಣವಾಗಿ ಕೀಟನಾಶಕಗಳನ್ನು ವಿಂಗಡಿಸಲಾಗಿದೆ.

೧. ಜಠರ ವಿಷಗಳು: ಹಸಿರು ಗಿಡಗಳಿಗೆ ಇವನ್ನು ಸಿಂಪಡಿಸುತ್ತಾರೆ. ಗಿಡಗಳ ಎಲೆಗಳನ್ನು ಅಗಿದು ತಿನ್ನುವ ಕೀಟಗಳಿಗೆ ಇವು ಮಾರಕ. ಕ್ಯಾಲ್ಸಿಯಂ ಮತ್ತು ಸೀಸದ ಆರ್ಸಿನೇಟುಗಳು, ಪ್ಯಾರಿಸ್ ಗ್ರೀನ್ ಮುಖ್ಯವಾದುವು.

೨. ಸಂಪರ್ಕ ವಿಷಗಳು: ಕೀಟಗಳ ಮೇಲೆ ಇವನ್ನು ಪ್ರಯೋಗಿಸುವರು. ಎಲೆಗಳನ್ನು ಕೊರೆದು ದ್ರವರೂಪದ ಆಹಾರವನ್ನು ಹೀರುವ ಕೀಟಗಳ ನಿಯಂತ್ರಣಕ್ಕೆ ಬಳಸುತ್ತಾರೆ. ಉದಾ: ಸುಣ್ಣ–ಗಂಧಕ ಮಿಶ್ರಣ, ನಿಕೊಟಿನ್ ದೂಳು, ಸೀಮೆಎಣ್ಣೆಯ ಎಮಲ್ಷನ್‌ಗಳು.

೩. ಉಳಿವ ಕೀಟನಾಶಕಗಳು: ಇವು ಮಾರಕ ವಿಷಗಳಿಂದಾಗಿವೆ. ತುಂತುರು ರೂಪದಲ್ಲಿ ಗಿಡದ ಹೊರಮೈ ಮೇಲೆ ಹರಡಲಾಗುವುದು. ಇವುಗಳ ಸಂಪರ್ಕಕ್ಕೆ ಬಂದ ಕ್ಷಣವೇ ವಿಷ ಕೀಟಕ್ಕೆ ತಗಲಿ ಸಾಯಿಸುತ್ತದೆ.

೪. ವ್ಯಾಪಕ ಕೀಟನಾಶಕಗಳು: ಸಸ್ಯಾದ್ಯಂತ ವ್ಯಾಪಿಸಿದ್ದು, ಸಸ್ಯದ ಯಾವ ಭಾಗವನ್ನು ತಿಂದರೂ ಕೀಟ ಸಾಯುವುದು.

೫. ಕೀಟನಾಶಕ ಧೂಮಗಳು: ಉಗ್ರಾಣಗಳಲ್ಲಿ ಕೂಡಿಟ್ಟ ಧಾನ್ಯಗಳ ಸಂರಕ್ಷಣೆಗೆ ಇವುಗಳನ್ನು ಬಳಸುವರು. ಸಿಂಪಡಿಸುವ ವಿಧಾನದಿಂದ ನಾಶಪಡಿಸಲು ಸಾಧ್ಯವಾಗದ, ಕೊರೆಯುವ ಕೀಟಗಳ ನಿವಾರಣೆಗೆ ಇವು ಸಹಾಯಕಾರಿ. ಅನಿಲರೂಪದಲ್ಲಿ ಅಥವಾ ಸುಲಭವಾಗಿ ಅನಿಲಸ್ಥಿತಿ ತಳೆಯುವ ದ್ರವರೂಪದಲ್ಲಿ ಬಳಸಿದಾಗ ಇವು ಕೀಟಗಳ ಉಸಿರಿನೊಡನೆ ಬೆರೆತು ಅವುಗಳ ದೇಹಗತವಾಗಿ ಕೊಲ್ಲುವುವು. ಇಂಗಾಲದ ಡೈಸಲ್ಫೈಡ್ ($CS_2$). ಹೈಡ್ರೊಜನ್ ಸಯನೈಡ್ (HCN), ಈಥೈಲ್ ಅಸಿಟೇಟ್ ($CH_3COOC_2H_5$) ಮತ್ತು ಇಂಗಾಲದ ಟೆಟ್ರಕ್ಲೋರೈಡುಗಳ ಮಿಶ್ರಣಗಳಿಂದಾದ ರಾಸಾಯನಿಕಗಳು.

೬. ಆಕರ್ಷಕಗಳು: ಆಹಾರಾಂಶವಿರುವ ಸಸ್ಯಭಾಗಗಳನ್ನು ಕೊರೆದು ತಮ್ಮೆಡೆಗೆ ಬರುವಂತೆ ಕೀಟಗಳನ್ನು ಆಕರ್ಷಿಸುವ ರಾಸಾಯನಿಕಗಳಿವು.

೭. ವಿಕರ್ಷಕಗಳು: ಕೀಟಗಳು ಸಸ್ಯಗಳ ಬಳಿ ಸುಳಿಯದಂತೆ ಹಿಮ್ಮೆಟ್ಟಿಸುವ ರಾಸಾಯನಿಕಗಳು.

ಮೇಲ್ಕಂಡ ವಿಧಾನಗಳಲ್ಲಿ ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಕಾರ್ಯ ನಿರ್ವಹಿಸುವ ಕೀಟನಾಶಕಗಳು ಇವೆ.

ಜಠರ ವಿಷಗಳು: ಬಹುತೇಕ ಇವು ಅರ್ಸೆನಿಕ್ ಸಂಯುಕ್ತಗಳು. ಸೀಸದ ಅರ್ಸಿನೇಟ್, ಕ್ಯಾಲ್ಸಿಯಂ ಆರ್ಸಿನೇಟ್ ಮತ್ತು ಪ್ಯಾರಿಸ್ ಗ್ರೀನ್ ಇವುಗಳಲ್ಲಿ ಮುಖ್ಯವಾದವು. ಇವುಗಳ ತಯಾರಿಕೆಗೆ ಆರ್ಸೆನಿಕ್ ಟ್ರೈಆಕ್ಸೈಡ್ ಅಗತ್ಯ. ತಾಮ್ರ ಮತ್ತು ಸೀಸದ ಅದುರುಗಳನ್ನು ಸಂಸ್ಕರಿಸುವಾಗ ಹೊರಬೀಳುವ ಧೂಮದಲ್ಲಿ ಅರ್ಸೆನಿಕ್ ಟ್ರೈಅಕ್ಸೈಡ್ ($As_2O_3$) ಇರುತ್ತದೆ. ಇದನ್ನು ಕೋಶಗಳಲ್ಲಿ ಸಂಗ್ರಹಿಸುವರು. ಇದು ವಿಷವಾದುದರಿಂದ ಕಾರ್ಖಾನೆಯ ಹೊಗೆಯನ್ನು ಇದರಿಂದ ಪಾರು ಮಾಡಲೇಬೇಕೆಂಬ ನಿಯಮವಿದೆ. ಹೀಗಾಗಿ ಅರ್ಸೆನಿಕ್ ಟ್ರೈಅಕ್ಸೈಡ್ ಅನಿವಾರ್ಯವಾಗಿ ಲಭಿಸುವುದು. ಇದಕ್ಕಾಗಿ ಕಾಟ್ರೆಲ್ ವಿದ್ಯುತ್ ಒತ್ತರ ಕಾರಕವನ್ನು ಉಪಯೋಗಿಸುತ್ತಾರೆ. ತಾಮ್ರದ ಉತ್ಪಾದನೆಯ ವೇಳೆ ಉತ್ಪತ್ತಿಯಾಗುವ ಅರ್ಸೆನಿಕ್ ಟ್ರೈಅಕ್ಸೈಡಿನ ವಾರ್ಷಿಕ ಪ್ರಮಾಣ ಶೇ. ೯೦ ಭಾಗ ಅರ್ಸೆನಿಕ್‌ಯುಕ್ತ ಕೀಟನಾಶಕಗಳನ್ನು ತಯಾರಿಸಲು ವಿನಿಯೋಗವಾಗುವುದು.

ಹೀಗೆ ಉಪವಸ್ತುವಾಗಿ ದೊರೆಯುವ ಆರ್ಸೆನಿಕ್ ಟ್ರೈಆಕ್ಸೈಡನ್ನು ಸೋಡಿಯಂ ಆರ್ಸಿನೇಟ್ ($Na_2HAsO_4$) ಆಗಿಸುವುದು. ಇದನ್ನು ದ್ರಾವಣ ಮಾಡಿಕೊಂಡು ಸೀಸದ ಮತ್ತು ಕ್ಯಾಲ್ಸಿಯಂ ಆರ್ಸಿನೇಟುಗಳನ್ನು ತಯಾರಿಸಬಹುದು.

ಆಮ್ಲೀಯ ಸೀಸದ ಆರ್ಸಿನೇಟ್ ಬಹುಕಾಲ ವಿಲಂಬಿತ ಸ್ಥಿತಿಯಲ್ಲಿ ಇರುವುದರಿಂದ ಕೀಟದ ಮೇಲೆ ತತ್‌ಕ್ಷಣ ಪರಿಣಾಮವಾಗುವುದು. ಗಿಡವನ್ನು ಘಾಸಿ ಮಾಡದೆ ಕೀಟವನ್ನು ನಾಶಪಡಿಸುವ ಶಕ್ತಿ ತಟಸ್ಥ ಲವಣಕ್ಕಿದೆ. ಪೀಚ್ ಮತ್ತು ಪ್ಲಮ್ ಹಣ್ಣಿನ ಗಿಡಗಳಿಗೆ ಇದನ್ನು ಉಪಯೋಗಿಸುವರು. ದ್ರಾವ್ಯ ಆರ್ಸೆನಿಕ್ಕಿನ ಅಂಶ ಶೇ. ೧ ಕ್ಕಿಂತ ಹೆಚ್ಚಿರುವುದು ಮಾನವನಿಗೆ ಅಪಾಯಕಾರಿ. ಆಮ್ಲೀಯ ಮೆಗ್ನೀಸಿಯಂ ಆರ್ಸಿನೇಟ್ ಶ್ರೇಷ್ಠ ಕೀಟನಾಶಕ. ಪುಡಿಮಾಡಿದ ಸೀಸದ ಸಲ್ಫೈಡ್ ಅಥವಾ ಸೀಸವನ್ನೇ ಆರ್ಸೆನಿಕ್ ಟ್ರೈಆಕ್ಸೈಡಿನೊಂದಿಗೆ ಹೈಡ್ರೊಕಾರ್ಬನ್ ಉರುವಲಿನ ಸಂಪರ್ಕದಲ್ಲಿ ದಹಿಸಿಯೂ ಸೀಸದ ಆರ್ಸಿನೇಟ್ ಪಡೆಯಬಹುದು.

ಸೋಡಿಯಂ ಆರ್ಸಿನೇಟಿನ ಕ್ಷಾರೀಯ ದ್ರಾವಣಕ್ಕೆ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣವನ್ನು ಸೇರಿಸಿದಾಗ ಕ್ಯಾಲ್ಸಿಯಂ ಆರ್ಸಿನೇಟ್ ಉತ್ಪತ್ತಿಯಾಗುತ್ತದೆ.

ಕ್ಯಾಲ್ಸಿಯಂ ಆರ್ಸಿನೇಟನ್ನು ಬೇರ್ಪಡಿಸಿ ಒಣಗಿಸಿ ಪುಡಿ ರೂಪದಲ್ಲಿ ಮಾರುಕಟ್ಟೆಗೆ ಒದಗಿಸಲಾಗುವುದು. ಕೋಮಲವಾದ ಎಳೆಗಳಿರುವ ಗಿಡಗಳಿಗೆ ಕ್ಯಾಲ್ಸಿಯಂ ಆರ್ಸಿನೇಟನ್ನು ಪ್ರಯೋಗಿಸಬಾರದು. ಏಕೆಂದರೆ ಅದು ಗಿಡವನ್ನು ಘಾಸಿಪಡಿಸುವ ಸಾಧ್ಯತೆಯಿದೆ. ಉಳಿದ ಸಸ್ಯವರ್ಗಕ್ಕೆ ಬಳಸಲು ಅದು ಸೀಸದ ಆರ್ಸಿನೇಟಿಗಿಂತ ಉತ್ತಮ. ಹತ್ತಿ ಗಿಡವನ್ನು ಕಾಡುವ ಹುಳುವನ್ನು ಇದು ನಿವಾರಿಸುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇದಕ್ಕಾಗಿಯೇ ನಿಯೋಜಿತವಾದ ವಿಮಾನದಳವೊಂದಿದೆ. ಗಿಡದಿಂದ ಸು. ೧೦ ಸೆಂಮೀ ಅಂತರದಲ್ಲಿ ಹಾರುತ್ತ ಗಂಟೆಗೆ ೩೦೦–೪೦೦ ಎಕರೆಗಳಷ್ಟು ಹತ್ತಿಯ ಬೆಳೆಯ ಮೇಲೆ ಕ್ಯಾಲ್ಸಿಯಂ ಆರ್ಸಿನೇಟಿನ ದೂಳನ್ನು ಇದರ ಮೂಲಕ ಚೆಲ್ಲುವರು. ಹತ್ತಿಯ ಬೆಳೆಯ ವ್ಯಾಪಕ ಸಂರಕ್ಷಣೆಗೆ ಬಳಸಿದಾಗ ಹೆಚ್ಚು ವೆಚ್ಚ ತಗಲುತ್ತದೆ. ಆದ್ದರಿಂದ ಅಗ್ಗದ ವಿಧಾನಗಳು ಹುಟ್ಟಿಕೊಂಡಿವೆ. ಅಲ್ಲದೆ ಶುದ್ಧ ಕ್ಯಾಲ್ಸಿಯಂ ಕಾರ್ಬೊನೇಟಿನ ಕಣಗಳ ಮೇಲೆ ಕ್ಯಾಲ್ಸಿಯಂ ಅರ್ಸಿನೇಟ್ ಕೂರಿಸಿ ಅಂಥ ಪುಡಿಯನ್ನು ಚೆಲ್ಲುವುದರಿಂದ ಒಟ್ಟು ವೆಚ್ಚದಲ್ಲಿ ಉಳಿತಾಯುವಾಗುತ್ತದೆ. ಅಲ್ಲದೆ ಶುದ್ಧ ಕ್ಯಾಲ್ಸಿಯುಂ ಆರ್ಸಿನೇಟಿನಷ್ಟೇ ಪರಿಣಾಮಕಾರಿಯಾಗಿರುತ್ತದೆ.

ಸಿಂಪಡಿಸುವ ದ್ರಾವಣವನ್ನು ತಯಾರಿಸಲು ಒಂದು ಪೌಂಡು ಸೀಸದ ಅಥವಾ ಕ್ಯಾಲ್ಸಿಯಂ ಆರ್ಸಿನೇಟನ್ನು ೫೦ ಗ್ಯಾಲನ್ ನೀರಿನಲ್ಲಿ ಬೆರೆಸಬೇಕು. ಆಗ ಇದು ಶೇ. ೦.೨೫ ದ್ರಾವಣವಾಗುತ್ತದೆ. ಪೆಟ್ರೋಲ್‌ಚಾಲಿತ ಪಂಪೊಂದನ್ನು ಟ್ರಾಕ್ಟರಿನ ಮೇಲೆ ಹೂಡಿಕೊಂಡು, ಅದರ ಸಹಾಯದಿಂದ ಒಬ್ಬಾತ ಗಿಡದ ಮೇಲೆ ದ್ರಾವಣ ಎರಚುತ್ತಿರುವಾಗ ಮತ್ತೊಬ್ಬ ಟ್ರಾಕ್ಟರನ್ನು ನಡೆಸುತ್ತಿರಬೇಕು. ಆದ್ದರಿಂದ ಈ ಕೆಲಸಕ್ಕೆ ಇಬ್ಬರ ಅಗತ್ಯವಿದೆ.

ಆಲೂಗಡ್ಡೆಯನ್ನು ತಿಂದುಹಾಕುವ ತಿಗಣೆ ವಿರುದ್ಧ ಪ್ಯಾರಿಸ್ ಗ್ರೀನ್ ಬಳಸುವರು. ಆರ್ಸಿನಿಯಸ್ ಆಮ್ಲಕ್ಕೆ ($H_3AsO_3$) ತಾಮ್ರದ ಅಸಿಟೇಟ್ ದ್ರಾವಣ ಸೇರಿಸಿದರೆ ತಾಮ್ರದ ಅಸಿಟೋ ಆರ್ಸಿನೈಟ್ ಒತ್ತರಿಸುವುದು $[Cu(CH_3COO)_2 3Cu(AsO_2)_2]$. ಇದನ್ನು ಒತ್ತಡದಿಂದ ಶೋಧಿಸಿ ಒಣಗಿಸಿ ಉಪಯೋಗಿಸಬೇಕು. ಸೀಸದ ಆರ್ಸಿನೇಟಿಗಿಂತ ಪ್ಯಾರಿಸ್‌ಗ್ರೀನ್ ಹೆಚ್ಚು ಪ್ರಮಾಣದಲ್ಲಿ ದ್ರಾವ್ಯರೂಪದ ಆರ್ಸೆನಿಕ್ ಧರಿಸಬಲ್ಲುದು. ಆದರೂ ಅದರ ಪ್ರಮಾಣ ಶೇ. ೩.೫ $As_2O_3$ ಮೀರಿರಬಾರದು. ಇದರ ಪ್ರಯೋಗದಿಂದ ಸಸ್ಯ ಸುಟ್ಟು ಹೋಗುವ ಸಂಭವವಿರುವುದರಿಂದ ಅದಕ್ಕೆ ಅಷ್ಟು ಪ್ರಾಶಸ್ತ್ಯವಿಲ್ಲದಂತಾಗಿದೆ.

ಸಂಪರ್ಕ ಕೀಟನಾಶಕಗಳು: ಶಲ್ಕ ಕೀಟಗಳು (ಸ್ಕೇಲ್ ಇನ್‌ಸೆಕ್ಟ್ಸ್), ಸಸ್ಯಹೇನುಗಳು, ಕೆಂಪು ತಿಗಣೆ, ಕೆಂಜೇಡ, ದ್ರಾಕ್ಷಿ ಕೀಟ ಮೊದಲಾದ ಮೃದು ದೇಹರಚನೆಯುಳ್ಳ ಮತ್ತು ಕಾಂಡ ಕೊರೆಯುವ ಕೀಟಗಳಿಗೆ ಇವು ಪರಿಣಾಮಕಾರಿ. ಕೀಟಗಳ ಶರೀರದ ಮೇಲಿರುವ ಶ್ವಾಸರಂಧ್ರಗಳನ್ನು ಮುಚ್ಚಿಯೋ, ಚರ್ಮದ ಮೂಲಕ ಪಸರಿಸಿಯೋ, ಅವನ್ನು ನಿಶ್ಚೇಷ್ಟಿತಗೊಳಿಸಿ ಕೊಲ್ಲುವುವು. ಸುಣ್ಣ–ಗಂಧಕ ಮಿಶ್ರಣ, ನಿಕೊಟಿನ್, ಸಾಬೂನು ದ್ರಾವಣ, ಸೀಮೆಎಣ್ಣೆ ಮತ್ತು ತೈಲದ ಎಮಲ್ಷನ್‌ಗಳು, ಶ್ವಾಸಕ್ರಿಯಾ ನಿರೋಧಕಗಳು. ಪೈರೆತ್ರಮ್, ರೋಟೆನೋನ್, ಡಿಡಿಟಿ ಇತ್ಯಾದಿಗಳು ಚರ್ಮಗತ ವಿಷಗಳು.

ಸುಣ್ಣ–ಗಂಧಕ ಮಿಶ್ರಣವನ್ನು ದ್ರಾವಣ ಅಥವಾ ಧೂಳಿನ ರೂಪದಲ್ಲಿ ಸಿಂಪಡಿಸುತ್ತಾರೆ. ಸುಣ್ಣದ ಕೆನೆಯೊಡನೆ ಗಂಧಕವನ್ನು ಕುದಿಸಿದಾಗ, ಪ್ರಧಾನವಾಗಿ ಕ್ಯಾಲ್ಸಿಯಂ ಪಾಲಿಸಲ್ಫೈಡಿರುವ ಹಳದಿ–ಕಂದು ದ್ರಾವಣ ದೊರೆಯುವುದು. ಶೋಧಿಸಿ ಬಂದ ದ್ರಾವಣದಲ್ಲಿ ಶೇ. ೨೪ ಗಂಧಕವಿರುವಂತೆ ಭಟ್ಟಿ ಇಳಿಸಲಾಗುವುದು. ಇದನ್ನು ಭದ್ರವಾದ ಮರದ ಪೀಪಾಯಿಗಳಲ್ಲಿಟ್ಟು ರವಾನಿಸುವರು. ಇದಕ್ಕೆ ಅಗತ್ಯ ಪ್ರಮಾಣದ ನೀರನ್ನು ಸೇರಿಸಿ (೮–೫೪ ಭಾಗ) ಉಪಯೋಗಿಸಬೇಕು. ಈ ಕೀಟನಾಶಕದ ವಾರ್ಷಿಕ ಉತ್ಪಾದನೆ ಸು. ಹತ್ತು ಮಿಲಿಯನ್ ಟನ್ನುಗಳು. ಸೇಬು, ಪಿಯರ್ ಮತ್ತು ಪೀಚ್ ಹಣ್ಣಿನ ತೋಟಗಳಲ್ಲಿ ಇದರ ಬಳಕೆ ಹೆಚ್ಚು.

ಹೊಗೆಸೊಪ್ಪಿನ ಕಸದಿಂದ ನಿಕೊಟಿನ್ ಸಲ್ಫೇಟನ್ನು ತಯಾರಿಸುತ್ತಾರೆ. ಶೇ. ೪೦ ದ್ರಾವಣ ಮಾರುಕಟ್ಟೆಯ ವಸ್ತು. ೫೦ ಗ್ಯಾಲನ್ ನೀರಿನಲ್ಲಿ ಒಂದು ಕಿಗ್ರಾಂ ಸಾಬೂನನ್ನು ಸೇರಿಸಿ ಅದರಲ್ಲಿ ನಿಕೊಟೆನ್ ಸಲ್ಫೇಟ್ ಬೆರೆಸಿ ಉಪಯೋಗಿಸಿದರೆ ಸಾಬೂನು ವಿಷ ವ್ಯಾಪನೆಗೆ ನೆರವಾಗುವುದು. ಈ ಮಿಶ್ರಣದಲ್ಲಿ ಶೇ. ೦.೦೬ ಕ್ಕಿಂತ ಕಡಿಮೆ ನಿಕೊಟಿನ್ ಇದ್ದರೆ ಪ್ರಯೋಜನವಿಲ್ಲ. ಒಣಗಿದ ಹೊಗೆಸೊಪ್ಪಿನ ಕಾಂಡಗಳನ್ನು ೩೭° ಸೆ ಉಷ್ಣತೆ ಇರುವ ನೀರಿನಲ್ಲಿ ನೆನೆಹಾಕಿ ಮನೆಯಲ್ಲೇ ನಿಕೊಟಿನ್ ಕಷಾಯ ತಯಾರಿಸಬಹುದು. ಕಾಂಡಗಳನ್ನು ಹುಡಿ ಮಾಡಿ ಜಿಪ್ಸಂ (ಕ್ಯಾಲ್ಸಿಯಂ ಸಲ್ಫೇಟ್), ಕೆಯೊಲಿನ್ (ಬಿಳಿ ಜೇಡಿ ಮಣ್ಣು) ಅಥವಾ ಸುಣ್ಣದೊಡನೆ ಮಿಶ್ರಮಾಡಿ ಉಪಯೋಗಿಸುವರು. ನಿಕೊಟಿನ್ನಿನೊಂದಿಗೆ ಸೇರಿಸಬೇಕೆಂದಿರುವ ವಸ್ತು ಯಾವ ಸಸ್ಯದ ರಕ್ಷಣೆಗೆ ಮತ್ತು ಯಾವ ಕೀಟದ ವಿರುದ್ಧ ಬಳಸುತ್ತೇವೆ ಎಂಬುದನ್ನು ಅವಲಂಬಿಸಿದೆ. ನಾಲ್ಕು ಗ್ಯಾಲನ್ ನೀರಿಗೆ ೧ ಪೌಂಡು ಸಾಬೂನನ್ನು ಸೇರಿಸುವರು. ನಿರ್ದಿಷ್ಟ ಕೀಟನಾಶಕವನ್ನು ಬೆರೆಸಬೇಕು. ಮೀನಿನ ಎಣ್ಣೆಯ ದ್ರಾವಣಗಳು ಸಸ್ಯಹೇನುಗಳನ್ನು ನಿರ್ನಾಮ ಮಾಡುವುವು. ಕೇವಲ ಸಾಬೂನಿನ ದ್ರಾವಣವನ್ನು ಉಪಯೋಗಿಸುವುದು ವಿರಳ, ಅದರೊಡನೆ ನಿಕೊಟಿನ್ ಸಲ್ಫೇಟ್, ಸೀಸದ ಆರ್ಸಿನೇಟ್ ಮತ್ತು ಬೋರ್ಡೊ ಮಿಶ್ರಣ ಸೇರಿಸುವರು. ಮೀನಿನ ಎಣ್ಣೆಯಿಂದ ಮಾಡಿದ ಪೊಟ್ಯಾಸಿಯಂ ಸಾಬೂನು ಉತ್ತಮ ಕೀಟನಾಶಕ.

ಸೀಮೆಎಣ್ಣೆ, ಕಚ್ಚಾ ತೈಲ ಮತ್ತು ಕೀಲೆಣ್ಣೆಗಳ ಎಮಲ್ಷನ್‌ಗಳನ್ನು ಸಹ ಉಪಯೋಗಿಸಬಹುದು. ಸೀಮೆಎಣ್ಣೆಯ ಎಮಲ್ಷನನ್ನು ೨೪೦ ಗ್ರಾಂ ಮೀನಿನ ಎಣ್ಣೆಯ ಸಾಬೂನಿಗೆ ೧ ಗ್ಯಾಲನ್ ನೀರಿನಲ್ಲಿ ಕರಗಿಸಿ, ಬಿಸಿ ಮಾಡಿ ೨ ಗ್ಯಾಲನ್ ಸೀಮೆಎಣ್ಣೆಯನ್ನು

ಸೇರಿಸಿ, ಚೆನ್ನಾಗಿ ಕುಲುಕಿದರೆ ಎಮಲ್ಷನ್ ರೂಪಕ್ಕೆ ಬರುವುದು. ತಣಿದಾಗ ಒತ್ತರಿಸದೆ ವಿಲಂಬಿತ ಸ್ಥಿತಿಯಲ್ಲೇ ಉಳಿಯುವುದು. ೧ ಭಾಗ ಎಮಲ್ಷನ್ನಿಗೆ ೭ ಭಾಗ ನೀರು ಬೆರೆಸಿ ಗಿಡಗಳಿಗೆ ಪ್ರಯೋಗಿಸುವರು. ಮೀನಿನ ಎಣ್ಣೆಯ ಸಾಬೂನಿನೊಡನೆ ಸೀಮೆಎಣ್ಣೆ, ಪ್ಯಾರಫಿನ್ ಎಣ್ಣೆ ಮತ್ತು ರೋಸಿನ್ ಎಣ್ಣೆ ಕಾರ್ಬಾಲಿಕಾಮ್ಲಗಳನ್ನು ಸೇರಿಸಿ ಎಮಲ್ಷನ್ ಮಾಡಿ ಬಳಸುವರು.

ತೋಟಗಳಲ್ಲಿ ಮತ್ತು ಮನೆಯಲ್ಲಿ ಬಳಸಲು ಅನುಕೂಲವಾದ ಕೀಟನಾಶಕಗಳೆಂದರೆ: ಪೈರೆತ್ರಮ್ ಮತ್ತು ರೋಟೆನೋನ್. ಇವು ದ್ರಾವಣ ಅಥವಾ ದೂಳಿನ ರೂಪದಲ್ಲಿವೆ. ಚೆಂಡುಮಲ್ಲಿಗೆ ವರ್ಗದ ಹೂಗಳಿಂದ ಪೈರೆತ್ರಮ್ ಮಾಡುವರು. ಇದು ಭಾರತ, ಜಪಾನ್, ಕೀನ್ಯಾ, ಬ್ರಿಟನ್, ಪೂರ್ವ ಆಫ್ರಿಕ, ಬೆಲ್ಜಿಯಂ ಮತ್ತು ಕಾಂಗೊದೇಶಗಳಲ್ಲಿ ಬೆಳೆಯುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನವು ಸಹಸ್ರಾರು ಟನ್ನುಗಳಷ್ಟು ಪೈರೆತ್ರಮ್‌ನ್ನು ಈ ದೇಶಗಳಿಂದ ಪ್ರತಿ ವರ್ಷ ಆಮದು ಮಾಡಿಕೊಳ್ಳುತ್ತದೆ. ನೊಣಗಳಿಗೆ ಇದು ಮಾರಕವಾದ್ದರಿಂದ ನಿತ್ಯ ಬಳಕೆಗೆ ಅನುಕೂಲ. ಇದರ ಸಂಪರ್ಕಕ್ಕೆ ಬಂದ ಕೀಟ ಕೂಡಲೇ ನಿಶ್ಚೇಷ್ಟಿತವಾಗುವುದು. ಡಿಡಿಟಿ ಬೆರೆಸಿದರೆ ಪ್ರಭಾವ ಇನ್ನು ಹೆಚ್ಚುತ್ತದೆ. ಪೈರೆತ್ರಮ್ ಹುಡಿಗಿಂತ ಕಷಾಯ ಹೆಚ್ಚು ಉಪಯುಕ್ತ.

ಮಲಯಾ ಮತ್ತು ಇಂಡೋನೇಷ್ಯ ದೇಶಗಳಲ್ಲಿ ಡೆರ್ರಿಸ್ ಎಲಿಪ್ಟಿಕಾ ಗಿಡ ಹೇರಳವಾಗಿ ಬೆಳೆಯುತ್ತದೆ. ಇದರಿಂದ ತಯಾರಿಸುವ ೬ ಆಲ್ಕಲಾಯ್ಡುಗಳಲ್ಲಿ, ರೋಟೆನೋನ್ ಹೆಚ್ಚು ಕ್ರಿಯಾಶಾಲಿವಾದುದು. ಅದರ ಬೇರನ್ನು ಪುಡಿಮಾಡಿ, ಟಾಲ್ಕ್ ಬೆರೆಸಿ ಶೇ. ೧ ಮಿಶ್ರಣ ಮಾಡುವರು ಅಥವಾ ಬೇರಿನಿಂದ ಕಷಾಯ ತೆಗೆದು ಬಳಸುವರು.

ಕೀಟನಾಶಕವಾಗಿ ಸೋಡಿಯಂ ಫ್ಲೋರೈಡು ಇತ್ತೀಚೆಗೆ ಬಳಕೆಯಾಗುತ್ತಿದೆ. ಇದು ಜಿರಲೆಗಳನ್ನು ನಿರ್ಮೂಲನೆ ಮಾಡುತ್ತದೆ. ಸಾಕುಪ್ರಾಣಿಗಳನ್ನು ಬಾಧಿಸುವ ಹೇನುಗಳನ್ನು ಯಶಸ್ವಿಯಾಗಿ ನಿಯಂತ್ರಿಸುತ್ತದೆ. ಇದು ಸಸ್ಯಗಳಲ್ಲಿ ನಂಜುಂಟುಮಾಡುವುದರಿಂದ, ಅವುಗಳ ಮೇಲೆ ಪ್ರಯೋಗಿಸಬಾರದು.

ಸಂಯೋಜಿತ ಸಾವಯವ ಕೀಟನಾಶಕಗಳು: ಇವುಗಳಲ್ಲಿ ಹೆಸರಾಂತ ಕೀಟನಾಶಕವೆಂದರೆ ಡಿಡಿಟಿ ಇದನ್ನು ಎರಡನೆಯ ಮಹಾಯುದ್ಧದ ಆದಿಭಾಗದಲ್ಲಿ ಉತ್ಪಾದಿಸಲಾಯಿತು. ಪೈರೆತ್ರಮ್ ಮತ್ತು ರೋಟೆನೋನ್‌ಗಳ ಕೊರತೆ'ಯನ್ನು ಇದು ನೀಗಿಸಿತು. ಇದು ವಿಶಿಷ್ಟವಾಸನೆಯುಳ್ಳ ಬಿಳಿ ಪುಡಿ. ಡೈಕ್ಲೋರೋ ಡೈಫೀನೈಲ್ ಟ್ರೈಕ್ಲೋರೋ ಈಥೇನ್ ಎಂಬ ರಾಸಾಯನಿಕ ನಾಮದ ಮೊದಲ ಅಕ್ಷರಗಳನ್ನು ಜೋಡಿಸಿ ಡಿಡಿಟಿಎಂಬ ಸಂಕ್ಷಿಪ್ತ ಹೆಸರನ್ನು ಇಡಲಾಗಿದೆ. ಕ್ಲೋರಾಲ್ ($CCl_3$ CHO) ಮತ್ತು ಅದರ ಎರಡರಷ್ಟು ಪ್ರಮಾಣ ಕ್ಲೋರೊ ಬೆಂಜೀನ್ ($C_6H_5$ Cl) ಸೇರಿಸಿ ಪ್ರಬಲ ಸಲ್ಫ್ಯೂರಿಕ್ ಆಮ್ಲದ ಸಂಪರ್ಕದಲ್ಲಿ ಕಾಯಿಸಿ ಇದನ್ನು ಉತ್ಪಾದಿಸುವರು. ಕ್ರಿಯಾಂತ್ಯದಲ್ಲಿ ಮಿಶ್ರಣವನ್ನು ನೀರಿಗೆ ಸುರಿದರೆ ಡಿಡಿಟಿ ಬೇರ್ಪಡುವುದು. ಪ್ರಾಸಂಗಿಕವಾಗಿ ಇತರ ಕ್ಲೋರಿನ್‌ಯುಕ್ತ ಈಥೇನ್ ಉತ್ಪನ್ನಗಳು ಉಂಟಾಗುವುದರಿಂದ ಮಾರುಕಟ್ಟೆಯ ಡಿಡಿಟಿ ಕೇವಲ ಶೇ. ೭೦ ರಷ್ಟು ಶುದ್ಧವಾಗಿರುತ್ತದೆ. ಅದನ್ನು ಸಾವಯವ ಲೀನಕಾರಿಗಳಲ್ಲಿ ಅಥವಾ ನೀರಿನಲ್ಲಿ ಎಮಲ್ಷನ್ ಮಾಡಿ ಚಿಮುಕಿಸಿದರೆ ನೊಣ ಮತ್ತು ಸೊಳ್ಳೆಯ ಕಾಟ ತಪ್ಪುವುದು. ಏರೊಸಾಲ್ ಬಾಂಬ್‌ಗಳಲ್ಲಿ ಡಿಡಿಟಿ ವಿಶೇಷವಾಗಿ ಬಳಕೆಯಾಗುತ್ತಿದೆ. ಅದರೊಡನೆ ಪೈರೆತ್ರಮ್ ಎಳ್ಳೆಣ್ಣೆ ಮತ್ತು ಸೋಯಾ ಅವರೆ ಎಣ್ಣೆಯನ್ನು ಸೇರಿಸುವರು. ಇವುಗಳ ಸಂಪರ್ಕದಲ್ಲಿ ಡಿಡಿಟಿಯ ಪ್ರಭಾವ ಹೆಚ್ಚುತ್ತದೆ. ಹುಡಿಯೊಡನೆ ಬೆಂಟೊನೈಟ್ ಜಿಪ್ಸಂ ನಂತಹ' ಜಡವಸ್ತುಗಳನ್ನು ಸೇರಿಸಿ ಉಪಯೋಗಿಸುವರು. ಅದಕ್ಕೆ ತೇವಕಾರಕಗಳನ್ನು ಸೇರಿಸಿದರೆ, ಸರಾಗವಾಗಿ ನೀರಿನಲ್ಲಿ ವಿಲಂಬಿತವಾಗುವ ಮಿಶ್ರಣವಾಗುತ್ತದೆ. ಹಣ್ಣಿನ ತೋಟಗಳಲ್ಲಿ ಈ ರೀತಿ ಮಾಡಿ ಬಳಸುವರು. ಡಿಡಿಟಿಯಿಂದ ಸೇಬಿನ ಹಣ್ಣು ಮತ್ತು ಗಿಡವನ್ನು ಬಾಧಿಸುವ ಕ್ರಿಮಿ ನಿರ್ನಾಮವಾಗುವುದು.

ಯುದ್ಧಕಾಲದಲ್ಲಿ ಯೂರೋಪಿನಲ್ಲಿ ಕಾರ್ಯನಿರತರಾಗಿದ್ದ ಸೈನಿಕರಿಗೆ ಡಿಡಿಟಿ ಲೇಪಿತ ಅಂಗಿಗಳನ್ನು ಒದಗಿಸಲಾಗಿತ್ತು. ಇದರಿಂದ ಟೈಫಸ್ ಜ್ವರ ಹರಡದೆ ಸಹಸ್ರಾರು ನಾಗರಿಕರ ಜೀವ ಉಳಿಯಿತು. ನಿಂತ ನೀರಿನಲ್ಲಿ ವೃದ್ಧಿಯಾಗುವ ಮಲೇರಿಯಾ ವಾಹಕ ಸೊಳ್ಳೆಗಳನ್ನು ಇದು ನಿರ್ಮೂಲ ಮಾಡುತ್ತದೆ. ಪ್ರಾಣಿದೇಹದ ಕೊಬ್ಬಿನ ಟಿಷ್ಯೂಗಳಲ್ಲಿ ಡಿಡಿಟಿ ಸಂಗ್ರಹವಾಗುವುದು. ಹಣ್ಣುಗಳನ್ನು ತೊಳೆದರೂ ಅದು ಹೋಗುವುದಿಲ್ಲ. ಹಸುವಿನ ಹಾಲಿನ ಮೂಲಕ ಅದು ನಮ್ಮ ದೇಹಗತವಾಗುವ ಸಂಭವವಿರುವುದರಿಂದ ಡಿಡಿಟಿ ಬಳಕೆ ಕಡಿಮೆಯಾಗಿದೆ.

ಮತ್ತೊಂದು ಪ್ರಮುಖ ಕೀಟನಾಶಕ ಗಾಮ-ಬಿಎಚ್‌ಸಿ. ಇದರ ರಸಾಯನಿಕ ನಾಮ ಹೆಕ್ಸಕ್ಲೋರೋ ಸೈಕ್ಲೊಹೆಕ್ಸೇನ್. ಇದರಲ್ಲಿ ೧೬ ಬಗೆ. ಇವುಗಳ ಪೈಕಿ ಗ್ಯಾಮಾ ಸಂಯುಕ್ತಕ್ಕೆ ಮಾತ್ರ ಕೀಟನಾಶಕ ಗುಣವಿದೆ. ಅಲೆಯುದ್ದ ಕಡಿಮೆ ಇರುವ ಬೆಳಕಿನ ಪ್ರಭಾವದಲ್ಲಿ ಕ್ಲೋರಿನ್ ಬೆಂಜೀನಿನೊಡನೆ ವರ್ತಿಸಿದಾಗ ಬರುವ ಉತ್ಪನ್ನದಲ್ಲಿ ಶೇ. ೧೦-೧೪ ಗ್ಯಾಮಾ ಸಂಯುಕ್ತ ಇರುತ್ತದೆ. ಇದರ ದ್ರವೀಕರಣ ಬಿಂದು ೧೧೨.೫°ಸೆ. ಇದರ ವಾಸನೆ ಬಹುಕಾಲ ಉಳಿದು ಬಿಡುವುದರಿಂದ ಆಹಾರ ಬೆಳೆಗಳಿಗೆ ಸಿಂಪಡಿಸಲು ಅನುಪಯುಕ್ತ. ಹತ್ತಿಯ ಸಂರಕ್ಷಣೆಗೆ ಉಪಯೋಗಿಸುವುದು ಹೆಚ್ಚು. ಡಿಡಿಟಿಗೆ ಇದು ಪೂರಕವಾಗಿದೆಯೇ ಹೊರತು ಅದರ ಸ್ಥಾನವನ್ನು ಆಕ್ರಮಿಸಲಾರದು. ಆಕ್ಟಕ್ಲೋರೋ ಟೆಟ್ರಹೈಡ್ರೋಇಂಡೇನ್ ಎಂಬ ಕೀಟನಾಶಕ ಕ್ಲೋರ್‌ಡೇನ್ ಎಂಬ ಹೆಸರಿನಿಂದ ಬಳಸಲ್ಪಡುತ್ತಿದೆ.

ಮಿಡತೆಗಳು, ಜಿರಲೆಗಳು ಮತ್ತು ಇರುವೆಗಳನ್ನು ಮತ್ತು ತಿಗಣೆಗಳನ್ನು ಇದು ನಾಶಪಡಿಸುತ್ತದೆ. ಡಿಡಿಟಿಗೆ ಹೊಂದಿಕೊಂಡು ಸಾಯದೆ ಇರುವ ಕೀಟಗಳ ನಿವಾರಣೆಗೋಸ್ಕರ ಹಲವು ಕ್ಲೋರಿನ್‌ಯುಕ್ತ ಹೈಡ್ರೋಕಾರ್ಬನ್ ಕೀಟನಾಶಕಗಳ ಉತ್ಪಾದನೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಅವುಗಳಲ್ಲಿ ಡಿಡಿಟಿ ಸಂಬಂಧಿಗಳಾದ ಟಿಡಿಇ, ಡಿಲಾನ್ ಮೀಥಾಕ್ಸಿಕ್ಲೋರ್ ಮತ್ತು ಗಾಮ-ಬಿಎಚ್‌ಸಿ ಸಂಬಂಧಿಗಳಾದ ಹೆಪ್ಟಕ್ಲೋರ್, ಅಲ್ಡ್ರಿನ್, ಡೈಎಲ್ಡ್ರಿನ್, ಎಂಡ್ರಿನ್, ಟಾಕ್ಸಫೀನ್ ಸಂಯೋಜಿತ ಕಾರ್ಬಮೇಟ್ ಕೀಟನಾಶಕಗಳಿಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ. ಇವುಗಳಲ್ಲಿ ಡಿಮೆಟಾನ್, ಪೈರೊಲಾನ್, ಐಸೊಲಾನ್, ಪಿರಮ್ಯಾಟ್ ಮತ್ತು ಸೆವಿನ್ ಮುಖ್ಯವಾದವು. ಇತ್ತೀಚಿನ ವರದಿಗಳ ಪ್ರಕಾರ ಸೊಳ್ಳೆ, ನೊಣ, ಹತ್ತಿಹುಳ ಮತ್ತು ಆಲೂಗೆಡ್ಡೆಗೆ ಬಾಧಿಸುವ ಸೂಕ್ಷ್ಮಾಣುಜೀವಿಗಳು ಮತ್ತು ಕೀಟಗಳು ಕ್ಲೋರೀನ್‌ಯುಕ್ತ ಹೈಡ್ರೋಕಾರ್ಬನ್ ಕೀಟನಾಶಕಗಳ ವಿರುದ್ಧ ಪ್ರತಿರೋಧ್ಯ ಬೆಳೆಸಿಕೊಂಡು ಹೊಸ ಪೀಳಿಗೆಯನ್ನು ಸೃಷ್ಟಿಸಿ ಕೊಂಡಿವೆ. ಹೀಗಾಗಿ ಜನಾರೋಗ್ಯಕ್ಕೆ ಭಾರಿ ಆತಂಕ ಉಂಟಾಗಿದೆ.

ಏರೊಸಾಲ್‌ಗಳು: ಕಲಾಯ್ಡ್ ಸ್ಥಿತಿಯಲ್ಲಿ ಘನ ಅಥವಾ ದ್ರವ ವಸ್ತುಗಳು ಗಾಳಿಯಲ್ಲಿ ವಿಲಂಬಿತವಾಗಿದ್ದರೆ ಅವನ್ನು ಏರೊಸಾಲ್‌ಗಳು ಎನ್ನುತ್ತೇವೆ. ತುಂಬ ಬಳಕೆಯಲ್ಲಿರುವ ಏರೊಸಾಲ್ ಮಿಶ್ರಣದ ತಯಾರಿಕೆ ಹೀಗಿದೆ. ಫ್ರಿಯಾನ್-೧೨ ದ್ರವಿತ ಅನಿಲಗಳನ್ನೂ ಕೀಟನಾಶಕದ ತೈಲದ್ರಾವಣವನ್ನೂ ಬೆರೆಸಿ ಮಿಶ್ರಣವನ್ನು ಒತ್ತಡದಿಂದ ಒಂದು ಬಾಂಬಿನೊಳಗೆ ತುಂಬಲಾಗುವುದು. ಅದಕ್ಕೊಂದು ನಿಯಂತ್ರಿತ ಕವಾಟವಿರುವುದು. ಅದನ್ನು ಸಾಕಷ್ಟು ತೆರೆದರೆ ದ್ರವ ಹೊರಬಿದ್ದು ತತ್‌ಕ್ಷಣ ಅವಿಯಾಗುವುದು. ಈ ರಭಸಕ್ಕೆ ಕೀಟನಾಶಕ ಸಿಂಪಡಿಸಲ್ಪಡುವುದು. ವಿಲಂಬಿತ ಸ್ಥಿತಿಯಲ್ಲಿ ಸಿಂಪಡಿಸಿದ ಜಾಗದಲ್ಲಿ ಉಳಿಯುವುದು. ಕವಾಟವನ್ನು ಮುಚ್ಚಿ, ಉಳಿದ ದ್ರವಮಿಶ್ರಣವನ್ನು ಅಗತ್ಯ ಬೀಳುವವರೆಗೆ ಹಿಡಿದಿಟ್ಟಿರಬಹುದು. ಗುಡಾರ ಅಥವಾ ಮುಚ್ಚಿದ ಆವರಣದಲ್ಲಿರುವ ಸೊಳ್ಳೆಗಳ ನಾಶಕ್ಕೆ ಇದು ಅನುಕೂಲವಾಗಿದೆ. ಬಾಂಬುಗಳಲ್ಲಿರುವ ಮಿಶ್ರಣದಲ್ಲಿ ಶೇ. ೮೦-೯೦ ಭಾಗ ದ್ರವಿತ ಅನಿಲ, ಶೇ. ೨೦-೧೦ ಭಾಗ ಕೀಟನಾಶಕವಿರುತ್ತವೆ. ಮನುಷ್ಯರ ಬಳಿ ಕೀಟಗಳು ಸುಳಿಯದಂತೆ ಮಾಡಬೇಕಾದಾಗ ಡೈಮೀಥೈಲ್‌ಫ್ಯಾಲೇಟ್ ಇರುವ ಬಾಂಬನ್ನು ಬಳಸುವರು. ಹಸಿರುಮನೆ ಪರಿಣಾಮದ ಭೀತಿಯಿಂದ ಏರೊಸಾಲ್‌ಗಳ ಬಳಕೆಯನ್ನು ಜಾಗತಿಕವಾಗಿ ಕಡಿಮೆ ಮಾಡಲಾಗಿದೆ. ಹೀಗಾಗಿ ಈಗ ಫ್ರೀಯಾನ್ ಬದಲಿಗೆ ಇತರೆ ಅನಿಲಗಳನ್ನು ಬಳಸುವರು.

ಕೀಟನಾಶಕ ಧೂಮಗಳು: ಕೂಡಿಟ್ಟ ಗೋಧಿ ಮತ್ತು ಇತರ ಧಾನ್ಯಗಳಿಗೆ ಕೀಟಬಾಧೆ ಹೆಚ್ಚು. ಅವುಗಳ ಮೇಲೆ ಇಂಗಾಲದ ಡೈಸಲ್ಫೈಡ್ ಸುರಿದು ಎಲ್ಲ ದ್ವಾರಗಳನ್ನೂ ಮುಚ್ಚಿದರೆ ಕೀಟಗಳು ಸಾಯುವುವು. ಪೂರ್ಣವಾಗಿ ಮೊಹರು ಮಾಡಬಹುದಾದ ಉಗ್ರಾಣಗಳಲ್ಲಿ ಮಾತ್ರ ಇದು ಸಾಧ್ಯ. ಇಲ್ಲದಿದ್ದರೆ ಇಂಗಾಲದ ಡೈಸಲ್ಫೈಡು ಗಾಳಿಯ ಮಿಶ್ರಣದಿಂದ ಆಸ್ಫೋಟನೆಗೊಂಡು ಬೆಂಕಿಯಿಂದ ಅಪಾಯ ತರುವುದು. ಅದಕ್ಕಿಂತ ಸುಲಭವಾಗಿ ಆವಿಯಾಗುವ, ಅಷ್ಟೇ ಕೀಟನಾಶಕ ಗುಣವುಳ್ಳ ಈಥೈಲ್ ಅಸಿಟೇಟ್ ಮತ್ತು ಇಂಗಾಲದ ಟೆಟ್ರಕ್ಲೋರೈಡಿನ ಮಿಶ್ರಣಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಇದಕ್ಕೆ ಸ್ಫೋಟಕ ಗುಣವಿಲ್ಲ.

ಹೈಡ್ರೋಜನ್ ಸಯನೈಡ್ ಉತ್ತಮ ಕೀಟನಾಶಕ. ಆದರೆ, ಇದು ಮಾನವನಿಗೆ ಉಗ್ರ ವಿಷವಾದುದರಿಂದ ಇದನ್ನು ತುಂಬ ಎಚ್ಚರಿಕೆಯಿಂದ ಉಪಯೋಗಿಸಬೇಕು. ಸೋಡಿಯಂ ಸಯನೈಡನ್ನು (NaCN) ಮತ್ತು ಸಲ್ಫ್ಯೂರಿಕಾಮ್ಲ ಬಳಸಿ ಹೈಡ್ರೋಜನ್ ಸಯನೈಡ್ (HCN) ಉತ್ಪಾದಿಸುವರು. ಕೀಟಗಳಿಂದ ಬಾಧೆಗೊಳಪಟ್ಟ ಸಿಟ್ರಸ್ ಜಾತಿಯ ಗಿಡಗಳ ರಕ್ಷಣೆಗೆ, ಇದನ್ನು ಬಳಸುವರು. ೧:೯ ಪ್ರಮಾಣದಲ್ಲಿ ಎಥಿಲೀನ್ ಆಕ್ಸೈಡ್ ಮತ್ತು ಇಂಗಾಲದ ಡೈಆಕ್ಸೈಡಿನ ಮಿಶ್ರಣಕ್ಕೆ ಕಾರ್ಬಾಕ್ಸೈಡ್ ಎನ್ನುವರು. ಈ ಮಿಶ್ರಣ ಉತ್ತಮ ಕೀಟನಾಶಕ ಹಾಗೂ ಬಳಸಲು ಸುರಕ್ಷಿತ.

ಗೆಡ್ಡೆಗಳು ಮತ್ತು ಬೇರುಗಳನ್ನು ಕೊರೆದು ಹಾಳು ಮಾಡುವ ನೆಮಟೋಡ್ ಜಾತಿಯ ತಂತುವಿನ ಆಕಾರದ ಹುಳುಗಳು ಆಲೂಗೆಡ್ಡೆ, ಬೀಟ್‌ರೂಟ್ ಫಸಲುಗಳಿಗೆ ಅಪಾರ ಹಾನಿ ಮಾಡುತ್ತವೆ. ಆದ್ದರಿಂದ ಇವುಗಳ ನಾಶಕ್ಕಾಗಿ ಕ್ಲೋರೊಪಿಕ್ರಿನ್ ($CCl_3$ $NO_2$) ಮುಖ್ಯವಾದುದು. ಇದು, ಟ್ರೈಕ್ಲೋರೋ ಪ್ರೊಪೇನ್ ಮತ್ತು ಡೈಕ್ಲೋರೋ ಪ್ರೊಪೀನ್ ಮಿಶ್ರಣದಿಂದ ಮಾಡುವರು. ಇದನ್ನು ಡೌಫ್ಯೂಮ್ ಎಮ್ ಎನ್ನುವರು.

ಎಥಿಲೀನ್ ಡೈಬ್ರೋಮೈಡ್ ಮತ್ತು ಮೀಥೈಲ್ ಬ್ರೊಮೈಡುಗಳಿಗೂ ನೆಮಟೋಡ್ ನಾಶಕ ಗುಣವಿದೆ. ಪೀಚ್ ಗಿಡವನ್ನು ಕೊರೆಯುವ ಕೀಟವಿದೆ. ಇದು ಗಿಡದ ಬೇರನ್ನು ಕೊರೆಯುವುದರಿಂದ ಗಿಡದ ಮೇಲೆ ಸಿಂಪಡಿಸುವಿಕೆಯಿಂದ ಈ ಕೀಟ ಸಾಯುವುದಿಲ್ಲ. ಆದ್ದರಿಂದ ಗಿಡದ ಸುತ್ತ ಸಣ್ಣ ಕಂದಕವನ್ನು ತೋಡಿ ಅದರಲ್ಲಿ ಪ್ಯಾರಾ ಡೈಕ್ಲೋರೊ ಬೆಂಜೀನನ್ನು ಇಟ್ಟು ಮುಚ್ಚಿದರೆ ಕೀಟನಾಶವಾಗುವುದು.

ವಿಕರ್ಷಕಗಳು: ಶೇಖರಿಸಿದ ಆಹಾರ ಪದಾರ್ಥ, ಸಾಕುಪ್ರಾಣಿಗಳು, ಬೆಳೆಗಳು, ಬಟ್ಟೆಯನ್ನು ರಕ್ಷಿಸಲು, ಸೊಳ್ಳೆ, ನೊಣ, ತಿಗಣೆ, ಇಲಿ ಮತ್ತು ಹೆಗ್ಗಣಗಳ ವಿರುದ್ಧ ಇವುಗಳನ್ನು ಬಳಸುವರು. ವಿದ್ಯುತ್ ಕೇಬಲ್ಲುಗಳನ್ನು ಕಡಿದು ಹಾಳು ಮಾಡುವ ಅಳಿಲು, ಜಿಗಣೆಯನ್ನು ದೂರವಿರಿಸಲು ಸೂಕ್ತ ವಿಕರ್ಷಕಗಳಿವೆ. ರಕ್ತಹೀರುವ ಕೀಟಗಳ ವಿರುದ್ಧ ನಾಲ್ಕು ವಿಕರ್ಷಕಗಳು ಹೆಚ್ಚಿನ ಬಳಕೆಯಲ್ಲಿವೆ. ಉದಾ: ಸಿಟ್ರೊನೆಲ್ಲಾ ಎಣ್ಣೆ, ಡೈಮೀಥೈಲ್ ಫ್ಥ್ಯಾಲೇಟ್, ಇಂಡಲೋನ್ (ನಾರ್ಮಲ್ ಬ್ಯೂಟೈಲ್ ಮೆಸಿಟಿಲ್ ಆಕ್ಸೈಡ್ ಆಕ್ಸಲೇಟ್) ಮತ್ತು ರಟ್ಗೆರ್ಸ್–೬೧೨ (ಈಥೈಲ್ ಹೆಕ್ಸೇನ್ ಡಯೊಲ್). ಇವುಗಳಲ್ಲಿ, ಈಗ ಯೋಧರು ವಿಶೇಷವಾಗಿ ಉಪಯೋಗಿಸುವ ಕೀಟನಿರೋಧಕವೆಂದರೆ ಎಮ್ ೨೦೨೦. ಇದರಲ್ಲಿ ಡೈಮೀಥೈಲ್ ಫ್ಥ್ಯಾಲೇಟ್, ರಟ್ಗೆರ್ಸ್–೬೧೨ ಮತ್ತು ಡೈಮೀಥೈಲ್ ಕಾರ್ಬೇಟ್ ೪:೩:೩ ಪ್ರಮಾಣದಲ್ಲಿರುತ್ತದೆ. ಸೊಳ್ಳೆಯನ್ನು, ಉಣ್ಣಿ ಮತ್ತು ಹುಳುಗಳನ್ನು ದೂರವಿರಿಸಲು ಒಂದು ಮೀ ಬಟ್ಟೆಗೆ ೧೮ ಗ್ರಾಂ ಮಿಶ್ರಣ ಸವರಿದರೆ ೭ ದಿವಸಗಳ ಕಾಲ ಕೀಟಗಳು ಹತ್ತಿರ ಬರಲಾರವು. ನುಸಿಗುಳಿಗೆಯ ರೂಪದಲ್ಲಿ ನ್ಯಾಫ್ತಲೀನಿನ ಬಳಕೆ ನಮಗೆ ಚಿರಪರಿಚಿತವಾಗಿದೆ. ಒಂದು ಸಾಮಾನ್ಯ ಗಾತ್ರದ ಪೆಟ್ಟಿಗೆಯಲ್ಲಿರುವ ಬಟ್ಟೆಗಳನ್ನು ಕಾಪಾಡಲು ಒಂದು ಕಿಗ್ರಾಂ ಗಳಷ್ಟು ನ್ಯಾಫ್ತಲೀನ್ ಅಗತ್ಯ. ಇಷ್ಟು ಪ್ರಮಾಣದಲ್ಲಿ ಇದನ್ನು ಬಳಸದ ಕಾರಣ, ನಾರ್ಮಲ್ ಬ್ಯೂಟೈಲ್ ಅಸಿಟನಿಲೈಡ್, ನಾರ್ಮಲ್ ಪ್ರೋಪೈಲ್ ಅಸಿಟನಿಲೈಡ್ ಹೆಕ್ಸೈಲ್ ಮ್ಯಾಂಡಲೇಟ್ ಮತ್ತು ಉಂಡೆಕಲೀನಿಕ್ ಆಮ್ಲಗಳ ಮಿಶ್ರಣ ರೂಪದ ಕೀಟನಾಶಕವನ್ನು ಬಳಸುವರು.

ಸಾವಯವ ರಂಜಕಯುಕ್ತ ಕೀಟನಾಶಕಗಳು ೧೯೪೭ರಿಂದ ಇಂದಿನವರೆಗೆ ಸು. ೫೦ ಸಾವಿರ ರಂಜಕಯುಕ್ತ ಕೀಟನಾಶಕಗಳ ಶೋಧವಾಗಿದೆ. ಪ್ಯಾರಾಥಯೋನ್ ಮತ್ತು ಮೀಥೈಲ್ ಪ್ಯಾರಾಥಯೋನ್ ಕೀಟನಾಶಕಗಳು ಒಂದು ಲಕ್ಷ ಟನ್ ಗಳಿಗಿಂತ ಹೆಚ್ಚು. ಬಿಸಿರಕ್ತದ ಪ್ರಾಣಿಗಳಿಗೆ ನಂಜನ್ನುಂಟುಮಾಡುತ್ತವೆ. ಟೆಟ್ರ ಈಥೈಲ್ಪೈರೊಪಾಸ್ಫೇಟ್, ಕ್ಲೋರೊಥಯೋನ್, ಮ್ಯಾಲಥಯೋನ್, ಡಿಡಿವಿಪಿ, ಡೆಲ್ನಾವ್, ಗುಥಯೋನ್, ಟ್ರೈಥಯೋನ್, ಇಥಯೋನ್, ಇಪಿಎನ್ ಮತ್ತು ಡಿಪ್ಟೆರೆಕ್ಸ್ ಇವು ದುಷ್ಪರಿಣಾಮಕಾರಿ ಕೀಟನಾಶಕಗಳು. ಇವು ಚಿಮುಕಿಸಿದ ಸ್ಥಳಕ್ಕೆ ಮಾತ್ರ ಸೀಮಿತವಾಗದೆ, ಸಸ್ಯಗತ ವಿಷವಾಗಿ ಮಾರ್ಪಟ್ಟು, ಸಸ್ಯದ್ರವವನ್ನು ಹೀರಲು ಬಂದ ಕೀಟಗಳ ಮಾರಣ ಹೋಮಮಾಡುತ್ತವೆ. ಸಸ್ಯ ಬೆಳೆದಂತೆಲ್ಲ ಅದರ ಶಾಖೋಪಶಾಖೆಗಳಿಗೂ ಹರಡಿ ರಕ್ಷಿಸುವುದು ಈ ಕೀಟನಾಶಕದ ವೈಶಿಷ್ಟ್ಯ. ಆದರೆ, ಇತರ ಜಠರ ವಿಷಗಳಲ್ಲಿ ಹೀಗಾಗುವುದಿಲ್ಲ. ಸಿಂಪಡಿಸಿದ ಸ್ಥಳಕ್ಕೆ ಮಾತ್ರ ರಕ್ಷಣೆ ಸೀಮಿತವಾಗಿರುತ್ತದೆ. ಬೆಳೆದ ಭಾಗಗಳಿಗೆ ಯಾವ ರಕ್ಷಣೆ ಇರುವುದಿಲ್ಲ. ಇತ್ತೀಚೆಗೆ ಮಾರುಕಟ್ಟೆಗೆ ಬಂದಿರುವ ಡೆಮಟೋನ್, ಡಿ–ಸಿಸ್ಟೀನ್, ಥಿಮೆಟ್ ಮತ್ತು ಫಾಸ್ಡ್ರಿನ್‌ಗಳಿಗೆ ಷ್ರಾದನಷ್ಟೇ ಕೀಟನಾಶಕ ಗುಣವಿರುವ ಬಗ್ಗೆ ವರದಿಸಿದ್ದಾರೆ.

ಕೀಟನಾಶಕ ಉಪಯೋಗಿಸುವಾಗ ಗಮನಿಸಬೇಕಾದ ಅಂಶಗಳು: ೧. ದೂಳಿನ ರೂಪದಲ್ಲಿ ಕೀಟನಾಶಕಗಳನ್ನು ಬಳಸುತ್ತಿದ್ದರೆ ಮುಂಜಾನೆ ಪ್ರಯೋಗಿಸುವುದು ಉತ್ತಮ. ಆಗ ಗಿಡದ ಮೇಲಿರುವ ಹಿಮದ ಹನಿಗಳಿಂದ ಅದು ಗಿಡಕ್ಕೆ ಅಂಟಿಕೊಂಡು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ೨. ಬೀಸುಗಾಳಿ ಇರುವಾಗ ಬಳಸಬಾರದು. ಇಲ್ಲದಿದ್ದರೆ ಬಹುಭಾಗ ಕೀಟನಾಶಕ ಗಾಳಿಯ ಪಾಲಾಗುವುದು. ೩. ಧೂಳಿನ ರೂಪದಲ್ಲಿರುವ ಕೀಟನಾಶಕಗಳನ್ನು ಉಪಯೋಗಿಸುವುದಕ್ಕಿಂತ ನೀರಿನಲ್ಲಿ ಬೆರಸಿ ಸಿಂಪಡಿಸುವ ಪದ್ಧತಿ ತೃಪ್ತಿಕರ. ೪. ನಿರ್ದಿಷ್ಟ ಬಗೆಯ ಕೀಟದ ನಾಶಕ್ಕೆ, ಜೀವ ಚಕ್ರದ ಯಾವ ಹಂತದಲ್ಲಿ ಪ್ರಯೋಗಿಸಿದರೆ ಆ ಕೀಟಗಳಿಗೆ ಮಾರಕ ಎಂಬುದನ್ನು ಅರಿತು ಕೀಟನಾಶಕ ಬಳಸಬೇಕು. ೫. ಬರೀ ಕೀಟನಾಶಕದ ಬದಲು ಅದರೊಡನೆ ನಿರ್ದಿಷ್ಟ ರಾಸಾಯನಿಕಗಳನ್ನು ಕೂಡಿಸಿದರೆ, ಮಿಶ್ರಣದ ಕ್ರಿಯಾಶಕ್ತಿ ವೃದ್ಧಿಯಾಗುತ್ತದೆ. ಸ್ವಯಂ ಕೀಟನಾಶಕಗಳಲ್ಲದ ಉತ್ತೇಜಕಗಳಿಗೆ ಸಿನೆರ್ಜಿಸ್ಟ್ಸ್ ಎನ್ನುತ್ತಾರೆ. ಪಿಪೆರೊನಿಲ್ ಬ್ಯೂಟಾಕ್ಸೈಡ್ ಮತ್ತು ಸೆಸಾಕ್ಸೇನ್ ಎರಡು ಪ್ರಮುಖ ಪೈರೆತ್ರಮ್ ಸಿನೆರ್ಜಿಸ್ಟುಗಳು.

ಇಲಿ ಪಾಷಾಣಗಳು: ಇಲಿ ಪಾಷಾಣಗಳು ಕೀಟನಾಶಕಗಳ ವ್ಯಾಪ್ತಿಯಲ್ಲಿವೆ. ಅಂಟೂ (ಅಲ್ಫಾ ನ್ಯಾಫ್ಥೈಲ್ ಥಯೊಯೂರಿಯಾ) ಪ್ರಮುಖ ಇಲಿ ಪಾಷಾಣ. ಇದು ಮಾನವನಿಗೆ ನಿರುಪದ್ರವಿಯಾಗಿದೆ. ಬೇರಿಯಂ ಕಾರ್ಬೊನೇಟ್ ಸಹ ಇಲಿ ಪಾಷಾಣವಾಗಿ ಬಳಕೆಯಲ್ಲಿದೆ. ಸೋಡಿಯಂ ಫ್ಲೋರಸಿಟ್ರೇಟ್, ಥ್ಯಾಲಿಯಂ ಸಲ್ಫೇಟ್, ಜಿಂಕ್ ಫಾಸ್ಫೇಟ್ ಮತ್ತು ಸ್ಟ್ರಿಕ್‌ನೈನ್ ಉತ್ತಮ ಇಲಿ ಪಾಷಾಣಗಳು.

***

**ಕೀಟಭಕ್ಷಕ ಕೀಟಗಳು:** ಇತರ ಜಾತಿ ಸಣ್ಣ ಕೀಟಗಳನ್ನು ತಿಂದು ಜೀವಿಸುವ ಕೀಟಗಳು. ಇವು ಚಟುವಟಿಕೆಯುಳ್ಳವು. ಒಂದು ಜೀವನ ಚರಿತ್ರೆ ಮುಗಿಸಲು ಹೆಚ್ಚು ಅವಧಿ ತೆಗೆದುಕೊಳ್ಳುತ್ತವೆ. ಎಲ್ಲಾ ಕೀಟ ವರ್ಗಗಳಲ್ಲಿಯೂ ಕೀಟಭಕ್ಷಕ ಕೀಟಗಳಿವೆ. ಕೆಲವು ಪ್ರಭೇದದ ಕೀಟಗಳು ಜೀವಂತ ಕೀಟಗಳನ್ನು ತಿಂದು ಜೀವಿಸುತ್ತವೆ. ಮತ್ತೆ ಕೆಲವು ಪ್ರಭೇದದ ಕೀಟಗಳು ಸತ್ತ ಪ್ರಾಣಿಗಳು ಅಥವಾ ಕೊಳೆತ ಸಸ್ಯಗಳನ್ನು ತಿಂದು ಜೀವಿಸುತ್ತವೆ. ಕೀಟಭಕ್ಷಕ ಕೀಟಗಳಲ್ಲಿ ಮುಖ್ಯವಾದವು: ಓಡೊನೇಟ ಗಣದ ಕೊಡತಿಕೀಟಗಳು, ನ್ಯೂರಾಪ್ಟಿರ ಗಣದ ಸಸ್ಯ ಹೇನು ಸಿಂಹಗಳು (ಅಂಟ್ ಲಯನ್ಸ್) ಕೋಲಿಯಾಪ್ಟಿರ ಗಣದ ನೆಲದುಳಗಳು (ಗ್ರಬ್ಸ್) ಡಿಪ್ಟಿರ ಗಣದ ಹೂನೊಣಗಳು, ಮ್ಯಾಂಟಿಯ್ಡಿ ಗಣದ ಒಂಟೆಹುಳು, ಹೈಮೆನಾಪ್ಟಿರ ಗಣದ ಕಣಜಗಳು ಮತ್ತು ಅಸಿಲಿಡೆ ಕುಟುಂಬದ ದರೋಡೆ ನೊಣಗಳು.

ಕೀಟಭಕ್ಷಕ ಕೀಟಗಳು ಮನುಷ್ಯನಿಗೆ ಬಹು ವಿಧದಲ್ಲಿ ಉಪಕಾರಿ. ಸಸ್ಯಗಳನ್ನು ನಾಶಮಾಡುವ ಕೀಟಗಳನ್ನು ತಿಂದು ಸಹಕಾರಿಗಳಾಗಿವೆ. ಕೊಡತಿಕೀಟಗಳು ಹಾರುವಾಗಲೆ ತಮಗಿಂತ ಸಣ್ಣಗಾತ್ರದ ಇತರ ಕೀಟಗಳನ್ನು ಹಿಡಿದು ತಿನ್ನುತ್ತವೆ. ನೊಣಗಳು ಮತ್ತು ಸೊಳ್ಳೆಗಳು ಇವುಗಳ ಅಚ್ಚು ಮೆಚ್ಚಿನ ಆಹಾರ. ಒಂದು ಕೊಡತಿಕೀಟ ಎರಡು ಘಂಟೆ ಅವಧಿಗಳಲ್ಲಿ ನಲವತ್ತು ನೊಣಗಳನ್ನೂ, ಕೆಲವು ನಿಮಿಷಗಳಲ್ಲಿ ನೂರಾರು ಸೊಳ್ಳೆಗಳನ್ನೂ ತಿನ್ನುವ ಬಗ್ಗೆ ತಜ್ಞರು ವರದಿಸಿದ್ದಾರೆ. ನೆಲದುಂಬಿಗಳು (ಗ್ರೌಂಡ್ ಬೀಟಲ್ಸ್) ರೈತನ ಅತ್ಯುತ್ತಮ ಸ್ನೇಹಿತರು. ವಯಸ್ಕ ಕೀಟಗಳು ಮತ್ತು ಇವುಗಳ ಡಿಂಬಗಳು ಕೃಷಿ ಭೂಮಿಯಲ್ಲಿನ ಬೆಳೆಗಳ ಪೀಡೆಕಾರಕ ಕೀಟಗಳನ್ನು ತಿಂದು ಜೀವಿಸುತ್ತವೆ. ಡಿಂಬಗಳ ದೇಹ ಸ್ವಲ್ಪ ಚಪ್ಪಟೆಯಾಗಿದ್ದು, ಉದ್ದವಾಗಿದೆ. ಉದರದ ತುದಿಯಲ್ಲಿ ಬಾಲ ಚೂಪಾಗಿದ್ದು, ತುದಿಯಲ್ಲಿ ಎರಡು ತೆಳುವಾದ, ಮೊನಚಾದ ಮುಳ್ಳಿನಂಥ ರಚನೆಗಳಿವೆ. ಹಗಲಿನಲ್ಲಿ ಕಲ್ಲುಸಂದಿ, ತೊಗಟೆ, ಕೊಳೆಯುತ್ತಿರುವ ಮರಗಳಲ್ಲಿ ಹುದುಗಿರುತ್ತವೆ. ರಾತ್ರಿ ಕೀಟಗಳನ್ನು ಬೇಟೆಯಾಡುತ್ತವೆ.

ಒಡತಿ ಜೀರುಂಡೆಗಳು (ಲೇಡಿಬರ್ಡ್ ಬೀಟಲ್ಸ್) ಮತ್ತು ಅವುಗಳ ಡಿಂಬಗಳು ಪೀಡೆಕಾರಕ ಹುರುಪೆ ಕೀಟಗಳು, ಸಸ್ಯಹೇನುಗಳು ಮತ್ತು ಮೃದುದೇಹಿ ಕೀಟಗಳನ್ನು ಮತ್ತು ಅವುಗಳ ಮೊಟ್ಟೆಗಳನ್ನು ತಿನ್ನುತ್ತವೆ. ಒಡತಿ ಜೀರುಂಡೆಗಳ ಡಿಂಬಗಳ ದೇಹ ಕಪ್ಪಗಿದ್ದು, ಅದರ ಮೇಲೆ ಹಳದಿ ಅಥವಾ ನೀಲಿಬಣ್ಣದ ಚುಕ್ಕೆಗಳಿವೆ. ಸಸ್ಯಗಳ ಕಾಂಡ ಮತ್ತು ಎಲೆಗಳ ಮೇಲೆ ಆಹಾರ ಕೀಟಗಳನ್ನು ಹಿಡಿದು ತಿನ್ನಲು ತೆವಳುತ್ತವೆ. ಡಿಂಬಗಳು ಆಹಾರ ಸಿಗುವ ಸ್ಥಳದಲ್ಲಿ ಕೋಶಾವಸ್ಥೆ ತಲುಪುತ್ತವೆ.



ಒಡತಿ ಜೀರುಂಡೆ

ಹೂ ನೊಣಗಳು (ಹಾವರ್ ಅಥವಾ ಫ್ಲವರ್ ಫ್ಲೈಸ್): ಇವುಗಳ ಡಿಂಬಗಳು ಅತಿಮುಖ್ಯ ಕೀಟಭಕ್ಷಕಗಳು. ಇವು ಸಸ್ಯಹೇನುಗಳನ್ನು ಹಿಡಿದು ದೇಹದೊಳಗಿನ ಜೀವರಸವನ್ನು ಹೀರಿ ಹೊರಚರ್ಮವನ್ನು ಬಿಸಾಡುತ್ತವೆ. ಬಟಾಣಿ ಸಸ್ಯಗಳನ್ನು ನಾಶ ಪಡಿಸುವ ಲಕ್ಷಾಂತರ ಸಸ್ಯಹೇನುಗಳನ್ನು ತಿಂದು ನಾಶ ಮಾಡುತ್ತವೆ.

ಒಂಟೆಹುಳವು ನೊಣ, ಮಿಡತೆ, ಚಿಟ್ಟೆ ಮತ್ತು ಇತರ ಜಾತಿಯ ಕೀಟಗಳನ್ನು ತಿನ್ನುತ್ತದೆ. ಇದು ಸಾಧಾರಣವಾಗಿ ಉಷ್ಣವಲಯವಾಸಿ. ಭಾರತದಲ್ಲಿ ಸು. ೧೦೦ಕ್ಕೂ ಹೆಚ್ಚು ಪ್ರಭೇದಗಳಿವೆ.

ಕಣಜಗಳು ಕೀಟಾಹಾರಿಗಳು. ಕೃಷಿ ಸಸ್ಯಗಳನ್ನು ನಾಶಪಡಿಸುವ ಕಂಬಳಿ ಹುಳುಗಳನ್ನು ಹುಡುಕಿ ತಿನ್ನುವುದರಿಂದ ಮನುಷ್ಯನಿಗೆ ಅತಿ ಸಹಾಯಕವಾಗಿವೆ. ಸಣ್ಣ ಕಂಬಳಿ ಹುಳುಗಳನ್ನು ಮಣ್ಣಿನಿಂದ ಕಟ್ಟಿದ ಗೂಡುಗಳಲ್ಲಿ ಶೇಖರಿಸಿ ಮರಿಗಳಿಗೆ ಆಹಾರವಾಗಿ ಒದಗಿಸುತ್ತವೆ. ದರೋಡೆ ನೊಣಗಳೆಲ್ಲವೂ (ರಾಬರ್ ಫ್ಲೈಸ್) ಕೀಟಭಕ್ಷಕಗಳು. ಇವು ಇತರ ಕೀಟಗಳ

ಮೇಲೆ ಬಿದ್ದು ದಾಳಿ ಮಾಡಿ ಕೊಲ್ಲುವುದರಿಂದ ಇವಕ್ಕೆ ಈ ಹೆಸರು. ಇವುಗಳ ಡಿಂಭಗಳು ಗೊಬ್ಬರದ ಗುಂಡಿಗಳಲ್ಲಿ, ಕೊಳೆತು ನಾರುವ ಮಣ್ಣಿನಲ್ಲಿ ಜೀವಿಸಿತ್ತವೆ. ಇತರ ಜಾತಿಯ ಕೀಟಗಳ ಡಿಂಬಗಳನ್ನು ನಾಶಪಡಿಸುತ್ತವೆ. ಭೂಮಿಯಲ್ಲಿ ಜೀವಿಸುವ ದುಂಬಿಗಳ ಡಿಂಬಗಳು ಇವುಗಳ ಅಚ್ಚುಮೆಚ್ಚಿನ ಆಹಾರ. ***

**ಕೀಟವಿಜ್ಞಾನ:** ಕೀಟಗಳ ವೈಜ್ಞಾನಿಕ ಅಧ್ಯಯನವೇ ಕೀಟವಿಜ್ಞಾನ ಅಥವಾ ಕೀಟಶಾಸ್ತ್ರ (ಎಂಟೊಮಾಲಜಿ). ಕೀಟಗಳ ಜೀವಶಾಸ್ತ್ರ ವೃತ್ತಾಂತ (ಝೂಅಲಜಿ ಅಫ್ ದಿ ಇನ್ಸೆಕ್ಟ್ಸ್) ಮತ್ತು ಅನ್ವಯಿಕ ಕೀಟವಿಜ್ಞಾನ ಇದರ ಎರಡು ಭಾಗಗಳು. ಕೀಟಗಳ ವರ್ಗೀಕರಣ, ರೂಪರಚನೆ, ಶರೀರವಿಜ್ಞಾನ, ಕೀಟ ಹಾಗೂ ಪರಿಸರ ಸಂಬಂಧ, ವಂಶಾಭಿವೃದ್ಧಿ ಬಗ್ಗೆ ಆಧ್ಯಯನ ಮಾಡಬಹುದು. ಕೀಟಗಳಿಂದ ಮಾನವನಿಗೆ, ಅವನ ಸಾಕುಪ್ರಾಣಿಗಳಿಗೆ, ಕೃಷಿ ಭೂಮಿಯಲ್ಲಿ ಅಗುವ ಹಾನಿ ಮತ್ತು ಉಪಕಾರ, ಕೀಟಗಳ ನಿಯಂತ್ರಣ, ಉಪಯುಕ್ತ ಕೀಟಗಳ ಸಾಕಣೆಗಳ ಅಭ್ಯಾಸ ಮಾಡುವ ವಿಭಾಗವೇ ಅನ್ವಯಿಕ ಕೀಟವಿಜ್ಞಾನ. ಕೀಟವಿಜ್ಞಾನದ ಇತಿಹಾಸ ಸಹ ಒಂದು ಪ್ರಮುಖ ಅಧ್ಯಯನ ವಿಷಯ.

ಇತಿಹಾಸ: ಮಾನವನಿಗೆ ಕೀಟಗಳ ಒಡನಾಟ ಆತನ ಇತಿಹಾಸದಷ್ಟೇ ಪುರಾತನವಾದದ್ದು. ಇವುಗಳ ಬಗ್ಗೆ ಬರೆಹ ರೂಪದಲ್ಲಿ ದೊರೆಯುವ ಆಧಾರ ಸ್ವಲ್ಪ. ವೈಜ್ಞಾನಿಕ ಬರೆಹಗಳು ವಿರಳ. ಉಪಯುಕ್ತ ಕೀಟಗಳಾದ ಜೇನು, ರೇಷ್ಮೆ, ಅರಗು ಕೀಟಗಳು, ಮಾನವ ನಿರ್ಮಿತ ವಾತಾವರಣದಲ್ಲಿ ಸಾಕಣೆ ಮಾಡುವಂಥವು. ಪ್ರಾಚೀನ ಈಜಿಪ್ಟಿನ ದೇವಾಲಯಗಳ ಗೋಡೆಗಳ ಮೇಲೆ ಬರೆಹ ರೂಪದಲ್ಲಿ ಜೇನು ಸಾಕಣೆ (ಕ್ರಿ.ಪೂ. ೨೬೦೦), ಕೀಟಗಳ ನಿಯಂತ್ರಣದಲ್ಲಿ ಬಳಸಲಾಗುವ ನಿರೋಧಕಗಳ ತಯಾರಿಕೆ (ಕ್ರಿ.ಪೂ.೧೫೦೦) ಬಗ್ಗೆ ಉಲ್ಲೇಖವಿದೆ. ಚೀನಾ, ಅರೇಬಿಯ ದೇಶದಲ್ಲೂ ಇವುಗಳ ಅಧ್ಯಯನ ನಡೆದಿತ್ತು. ಭಾರತದಲ್ಲಿ ಚರಕ (ಕ್ರಿ.ಪೂ. ೬೦೦) ಮತ್ತು ಉಮಸ್ವತಿ (ಕ್ರಿ.ಶ.೨ನೇ ಶತಮಾನ) ಇವರಿಂದ ಕೀಟಗಳ ವರ್ಗೀಕರಣದ ಬಗ್ಗೆ ಅಭ್ಯಾಸ ನಡೆದಿತ್ತೆಂದು ತಿಳಿದಿದೆ. ಕೀಟಗಳ ಶಾಸ್ತ್ರೀಯ ಅಧ್ಯಯನ ಅರಂಭವಾದುದು (ಕ್ರಿ.ಪೂ.೩೮೪-೩೨೨) ಅರಿಸ್ಟಾಟಲ್‌ನಿಂದ ಎಂದು ಹೇಳಲಾಗುತ್ತಿದೆ. ಈತ ಕೀಟಗಳಿಗೆ ಎಂಟೋಮ ಎಂಬ ಗ್ರೀಕ್ ಹೆಸರಿಟ್ಟ. ಕೀಟದ ದೇಹದಲ್ಲಿ ತಲೆ, ಎದೆ ಮತ್ತು ಹೊಟ್ಟೆ (ಉದರ) ಎಂಬ ಮೂರು ಭಾಗಗಳಿರುವುದನ್ನು ಪತ್ತೆ ಹಚ್ಚಿದ. ದೇಹದಲ್ಲಿ ಜಠರ, ಹೃದಯ, ಶ್ರವಣ, ಘ್ರಾಣ ಹಾಗೂ ನೇತ್ರೇಂದ್ರಿಯಗಳಿರುವುದನ್ನು ಅವನು ಗಮನಿಸಿದ. ರೆಕ್ಕೆ ಇರುವ, ಇಲ್ಲದಿರುವ ಕೀಟಗಳನ್ನೂ ಅವುಗಳ ವದನಾಂಗಗಳನ್ನು, ರೂಪಪರಿವರ್ತನೆಯನ್ನು ಕಂಡುಹಿಡಿದ. ನಂತರ ರೋಮಿನ ತತ್ತ್ವಜ್ಞಾನಿ ಪ್ಲಿನಿ (ಕ್ರಿ.ಶ. ೨೪-೭೯) ಕೀಟಗಳನ್ನು ಅಭ್ಯಾಸಿಸಿ ಇವುಗಳ ಉಸಿರಾಟವನ್ನು ವಿವರಿಸಿದ. ಪ್ಲಿನಿಯ ನಂತರ ೧೭ನೆಯ ಶತಮಾನದವರೆಗೂ ಕೀಟವಿಜ್ಞಾನದಲ್ಲಿ ಗಮನಾರ್ಹವಾದ ಅಭ್ಯಾಸವೇನೂ ನಡೆಯಲಿಲ್ಲ. ೧೬೦೨ರಲ್ಲಿ ಅಲ್ಡ್ರೊವಾಂಡಿ ಎಂಬಾತ ಕೀಟ ವರ್ಗೀಕರಣದ ಬಗ್ಗೆ ಪುಸ್ತಕವೊಂದನ್ನು ಪ್ರಕಟಿಸಿ ಕೀಟಗಳನ್ನು ಗುರುತಿಸಲು ಸಹಾಯಕವಾದ ಕೆಲವು ವಿವರಗಳನ್ನು ತಿಳಿಸಿದ. ೩೦ ವರ್ಷಗಳ ನಂತರ ಥಾಮಸ್ ಸೊಫೆಟ್‌ನ ಸಚಿತ್ರ ಪುಸ್ತಕ ಪ್ರಕಟವಾಯಿತು. ೧೭ನೆಯ ಶತಮಾನದಲ್ಲಿ ಮುದ್ರಣ ಕಲೆಯ ಪರಿಷ್ಕರಣ, ಹಾಗೂ ಹೊಸ ಖಂಡಗಳ ಪರಿಚಯಗಳು ಕೀಟವಿಜ್ಞಾನದ ಮೇಲೆ ಆಳವಾದ ಪ್ರಭಾವವನ್ನು ಬೀರಿದುವು. ಲೀವೆನ್‌ಹಾಕ್‌ನಿಂದ ಸೂಕ್ಷ್ಮದರ್ಶಕದ ಆವಿಷ್ಕಾರವಾದ ಮೇಲೆ, ಮಾಲ್ಫಿಗಿ, ಸ್ವಾಮರ್‌ಡ್ಯಾಮ್ ಮೊದಲಾದ ಖ್ಯಾತ ತಜ್ಞರು ತಮ್ಮ ದೃಷ್ಟಿಯನ್ನು ಕೀಟಗಳೆಡೆಗೆ ಹರಿಸಿದರು. ಮಾಲ್ಫೀಗಿ ಕೀಟಗಳ ಉಸಿರಾಟದ ಕ್ರಮ, ರೇಷ್ಮೆ ಗ್ರಂಥಿಗಳು, ಮಾಲ್ಪೀಗಿಯನ್ ಕೊಳವೆಗಳು, ಜನನಾಂಗ ವ್ಯವಸ್ಥೆ, ನರಮಂಡಲ, ರೆಕ್ಕೆಗಳ ಹುಟ್ಟುವಿಕೆ ಮೊದಲಾದ ಅಂಶಗಳ ಮೇಲೆ ಬೆಳಕು ಬೀರಿದ. ಸ್ವಾಮರ್‌ಡ್ಯಾಮ್ ಚಿಟ್ಟೆ, ಜೇನು, ಕೊಡತಿಕೀಟ ಮುಂತಾದುವುಗಳ ಜೀವನಚರಿತ್ರೆಯನ್ನು ಚಿತ್ರಸಹಿತವಾಗಿ ವಿವರಿಸಿದ. ಅವುಗಳ ಜೀವನಕ್ರಮಗಳಲ್ಲಿರುವ ಪರಸ್ಪರ ವ್ಯತ್ಯಾಸಗಳನ್ನು ಕಂಡುಹಿಡಿದು ಕೀಟಗಳನ್ನು ನಾಲ್ಕು ಮುಖ್ಯ ಪಂಗಡಗಳಾಗಿ ವಿಂಗಡಿಸಿದ. ಹದಿನೆಂಟನೆಯ ಶತಮಾನದಲ್ಲಿ ಕೀಟವಿಜ್ಞಾನದ ಅಧ್ಯಯನದಲ್ಲಿ ನಿರತರಾದವರಲ್ಲಿ ಮುಖ್ಯರಾದವರು ಡಿ. ರೇಮರ್, ಸ್ವೀಡನ್ನಿನ ಡಿ. ಗೀರ್, ಗೆಡಾರ್ಟ್, ಮೇರಿಯ ಮೇರಿಯನ್, ಜೊಹಾನ್ ಫಿಶ್, ವಿಲಿಯಂ ಗೌಲ್ಡ್ ಮುಂತಾದವರು. ಗೀರ್ ೭ ಸಂಪುಟಗಳಲ್ಲಿ ಮೆಮಾಯರ್ಸ್ ಎಂಬ ಪುಸ್ತಕವನ್ನು ಪ್ರಕಟಿಸಿ ಕೀಟವರ್ಗೀಕರಣದ ಮೂಲತತ್ತ್ವಗಳನ್ನು ಪ್ರತಿಪಾದಿಸಿದ. ನಂತರ ಜಾನ್ ರೇ, ಸ್ವಾಮರ್‌ಡ್ಯಾಮಿನಂತೆ ಕೀಟಗಳ ರೂಪಪರಿವರ್ತನೆಗಳನ್ನು ಇವನಿಗಿಂತ ಹಿಂದಿನವರಂತೆ ರೂಪರಚನೆಯನ್ನು ಕೀಟವರ್ಗೀಕರಣಕ್ಕೆ ಆಧಾರವಾಗಿ ತೆಗೆದು ಕೊಂಡ ನಂತರ ಲಿನಿಯಸ್‌ನ ಹೊಸ ದ್ವಿನಾಮ ಪದ್ಧತಿ ಮತ್ತು ಸಿದ್ಧಾಂತಗಳ ಆಧಾರದ ಮೇಲೆ ಕೀಟಗಳ ವರ್ಗೀಕರಣ ಹಾಗೂ ನಾಮಕರಣಕ್ಕೆ ಹೊಸ ರೂಪ ದೊರೆಯಿತು. ೧೯ನೆಯ ಶತಮಾನದ ವೇಳೆಗೆ ಕೀಟವಿಜ್ಞಾನಕ್ಕೆ ಒಂದು ಪ್ರಮುಖ ಸ್ಥಾನ ಲಭಿಸಿತ್ತು. ಕರ್ಬಿ, ಸ್ಪೆನ್ಸರ್, ಬರ್ಮೆಯಿಸ್ಟರ್ ಮುಂತಾದವರ ಅಭ್ಯಾಸದ ಫಲವಾಗಿ ಕೀಟಗಳ ಬಗ್ಗೆ ಹೆಚ್ಚಿನ ಅರಿವು ಮೂಡಲು ಅನುಕೂಲವಾಯಿತು. ಪ್ಯಾರಿಸ್, ಲಂಡನ್ ಮುಂತಾದೆಡೆ ಕೀಟವಿಜ್ಞಾನ ಸಂಘಗಳು ಸ್ಥಾಪಿತವಾದುವು. ಈ ಕಾಲದ ಅತ್ಯಂತ ಪ್ರಮುಖ ಕೆಲಸ ಎಂದರೆ ಬ್ರಿಟಿಷ್ ಮ್ಯೂಸಿಯಂ, ಕೀಟಗಳ ಬಗ್ಗೆ ೨೦,೦೦೦ ಪುಟಗಳ ಪುಸ್ತಕವನ್ನು ಪ್ರಕಟಿಸಿದ್ದು. ಅಲ್ಲಿಂದೀಚೆಗೆ ವ್ಯಾಲೇಸ್, ಬೇಟ್ಸ್, ಟ್ರಿಮನ್ ಮುಂತಾದವರು ಕೀಟಗಳ ಬಗ್ಗೆ ಹೆಚ್ಚಿನ ವ್ಯಾಸಂಗ ನಡೆಸಿ ಡಾರ್ವಿನ್ನನ ಜೀವಿ ವಿಕಾಸ ಸಿದ್ಧಾಂತಕ್ಕೆ ಹಲವಾರು ನಿದರ್ಶನಗಳನ್ನು ಒದಗಿಸಿದರು. ಕೀಟವಿಜ್ಞಾನದಿಂದ ಜೀವಶವಿಜ್ಞಾನದ ಹಲವು ವಿಭಾಗಗಳಿಗೆ ದೊರೆತ ಕೊಡುಗೆಗಳು ಅಪಾರ. ಅಬ್ರಾಕ್ಸಾಸ್ ಪತಂಗದ ಅಧ್ಯಯನದಿಂದ ಜೀನ್‌ದಲ್ಲಿ ಲಿಂಗ ಸಂಬಂಧಿ ತಳಿಗುಣಗಳ ಬಗ್ಗೆ ಹೆಚ್ಚು ತಿಳಿಯಲು ಸಾಧ್ಯವಾಯಿತು. ಡ್ರಾಸೋಫಿಲ ಕೀಟದಿಂದ ತಳಿವಿಜ್ಞಾನಕ್ಕಾಗಿರುವ ಉಪಯೋಗ ಅಪಾರ (ನೋಡಿ: ಡ್ರಾಸೋಫಿಲ). ಜಾನ್ ಲಬಕ್, ಪೊರೆಲ್, ವ್ಯಾಸ್‌ಮ್ಯಾನ್, ಫೇಬರ್ ವಿಜ್ಞಾನಿಗಳು ಸಂಶೋಧನೆ ನಡೆಸಿ ಕೀಟಗಳ ವರ್ತನೆ ಮತ್ತು ಸಂಪರ್ಕ ವ್ಯವಸ್ಥೆಯ ಬಗ್ಗೆ ಹೆಚ್ಚಿನ ವಿವರಗಳನ್ನು ಒದಗಿಸಿದರು.

ಆಧುನಿಕ ಕೀಟವಿಜ್ಞಾನ: ಮೊದಲು ಕೀಟಗಳ ವರ್ಗೀಕರಣದ ಬಗ್ಗೆ ಕೀಟವಿಜ್ಞಾನ ಸೀಮಿತವಾಗಿದ್ದರೂ, ಇತ್ತೀಚಿಗೆ ಅನ್ವಯಿಕ ಕೀಟವಿಜ್ಞಾನಕ್ಕೆ ಅಗತ್ಯವಾದ ತತ್ತ್ವಗಳನ್ನು ಪ್ರತಿಪಾದಿಸುವುದರ ಕಡೆಗೆ ಹೆಚ್ಚಿನ ಗಮನ ನೀಡಲಾಗಿದೆ. ಆಧುನಿಕ ಕೀಟವಿಜ್ಞಾನದ ಹಲವಾರು ಪ್ರಕಾರಗಳಲ್ಲಿ ಮುಖ್ಯವಾದವು ನಾಲ್ಕು.

೧. ವರ್ಗೀಕರಣ: ಕೀಟಗಳನ್ನು ವಿವಿಧ ಗುಂಪು, ಗಣ, ಕುಟುಂಬಗಳಾಗಿ ವಿಂಗಡಿಸುವುದು, ಅವುಗಳಿಗೆ ಸೂಕ್ತವಾದ ಹೆಸರು ಕೊಡುವುದು ಇದರ ಮುಖ್ಯ ಅಂಶ. ಕೀಟಗಳ ಬಾಹ್ಯ ಹಾಗೂ ಒಳ ರೂಪರಚನೆ, ಭ್ರೂಣವಿಜ್ಞಾನ, ಜೀವರಾಸಾಯನಿಕ ವಿಜ್ಞಾನ ಮುಂತಾದ ಶಾಖೆಗಳಿಂದ ಇದಕ್ಕೆ ಬೇಕಾಗುವ ಘಟಕಗಳನ್ನು ಪಡೆಯುವುದಲ್ಲದೆ ಕೀಟಗಳ ವರ್ತನೆ, ಭೌಗೋಳಿಕ ವಿಸ್ತರಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದರೂ ಇನ್ನೂ ಅಸಂಖ್ಯಾತ ಸಂಖ್ಯೆಯ ವರ್ಗೀಕರಣ, ನಾಮಕರಣ ಆಗಬೇಕಿದೆ. ವರ್ಗೀಕರಣದಿಂದ ಕೀಟವಿಜ್ಞಾನದ ಇತರ ಪ್ರಕಾರಗಳಿಗು ಉಪಯೋಗವಿದೆ. ಯಾವುದೇ ಹೊಸ ಕೀಟಪ್ರಭೇದವೊಂದರ ಶೋಧ ನಡೆದರೂ, ಆಗಲೇ ಗೊತ್ತಾಗಿರುವ ಕೀಟಗಳೊಂದಿಗೆ ಹೊಸದನ್ನು ಹೋಲಿಸಿ ಆ ಕೀಟದ ಸೂಕ್ತ ಸ್ಥಾನವನ್ನು ಪತ್ತೆ ಹಚ್ಚಲು ಇದು ಸಹಾಯಕ. ಇದರಿಂದ ಅದರ ಸ್ವಭಾವ, ಪ್ರಾಮುಖ್ಯತೆ ಮತ್ತು ನಿಯಂತ್ರಣದ ಬಗ್ಗೆ ಸಾರ್ವತ್ರೀಕರಣ ಮಾಡಲು ಸುಲಭ.

೨. ರೂಪರಚನಾ ವಿಜ್ಞಾನ: ಇದು ಕೀಟಗಳ ಹೊರ ಹಾಗೂ ಒಳರಚನೆಗಳ ಅಧ್ಯಯನ. ಇದರಿಂದ ವರ್ಗೀಕರಣಕ್ಕೆ ಬೇಕಾಗುವ ಘಟಕಗಳನ್ನೆಲ್ಲ ಪಡೆಯಬಹುದು. ಅಲ್ಲದೆ, ಕೀಟಗಳ ನೆಲೆ, ಅವು ಪರಿಸರಕ್ಕೆ ಹೊಂದಿಕೊಳ್ಳುವ ಬಗ್ಗೆ ಕೀಟಗಳ ಶಾರೀರಕ ಕ್ರಿಯೆಗಳ ಮೂಲ ತಿಳಿವಳಿಕೆಗೆ ಇದು ಸಹಕಾರಿ. ಇದರಲ್ಲಿ (೧) ಪ್ರಾಚೀನ, (೨) ಆಧುನಿಕ ಪ್ರಕಾರಗಳಿವೆ. ಪ್ರಾಚೀನ ರೂಪರಚನಾ ವಿಜ್ಞಾನ ಸ್ಥೂಲವಾದ ಗುಣಗಳ ಮೇಲೆ ಮಾತ್ರ ಆಧಾರವಾದುದು. ಆಧುನಿಕ ರೂಪರಚನಾ ವಿಜ್ಞಾನ ಇತ್ತೀಚೆಗೆ ಅಭಿವೃದ್ಧಿಗೆ ಬರುತ್ತಿರುವ ಶಾಖೆ. ಇದು ಹೆಚ್ಚಾಗಿ ಜೀವಕೋಶಗಳ ಅತಿಸೂಕ್ಷ್ಮ ಅಧ್ಯಯನಕ್ಕೆ ಸಂಬಂಧಪಟ್ಟುದು ಮತ್ತು ಇದು ಪ್ರಾಯೋಗಿಕವಾದುದು. ಇದಕ್ಕೂ ರಸಾಯನವಿಜ್ಞಾನಕ್ಕೂ ಸಂಬಂಧವಿದೆ. ಜೀವಕೋಶಗಳಲ್ಲಿನ ಮೈಟೋಕಾಂಡ್ರಿಯ, ಗಾಲ್ಗಿ ಭಾಗಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳಲ್ಲಿ ನೋಡಿ ಹೆಚ್ಚು ವಿವರಗಳನ್ನು ತಿಳಿಯಲಾಗಿದೆ. ಕೀಟಗಳನ್ನು ಹಲವಾರು ಪ್ರಯೋಗ ಪರೀಕ್ಷೆಗಳಿಗೆ ಒಳಪಡಿಸಿ ಅವುಗಳ ವರ್ತನೆ, ಅವುಗಳ ಮೇಲಾಗುವ ಪರಿಣಾಮಗಳನ್ನು ಅಭ್ಯಸಿಸಲಾಗಿದೆ.

೩. ಶರೀರವಿಜ್ಞಾನ: ಕೀಟಗಳ ವಿವಿಧ ಅಂಗಗಳ, ಅಂಗಾಂಶಗಳ ಕ್ರಿಯಾವಿನ್ಯಾಸಕ್ಕೆ ಸಂಬಂಧಪಟ್ಟಿದೆ. ಕ್ರಿಯೆಗಳಿಗೂ ಅಂಗಗಳ ರಚನೆಗೂ ಇರವ ಸಂಬಂಧ, ಕೀಟಗಳು ವಿವಿಧ ವಾತಾವರಣ ಪರಿಸ್ಥಿತಿಗಳಲ್ಲಿ ತೋರುವ ಪ್ರತಿಕ್ರಿಯೆಗಳು, ಹೊಂದಾಣಿಕೆಗಳು, ವರ್ತನೆ ಮುಂತಾದುವನ್ನು ಅಭ್ಯಸಿಸಲಾಗಿದೆ. ೧೯೦೦ ರಿಂದೀಚೆಗೆ ಈ ದಿಸೆಯಲ್ಲಿ ಹೆಚ್ಚಿನ ಕೆಲಸ ನಡೆದಿದೆ. ಕೇವಲ ಕೆಲವೇ ಕೀಟಗಳಲ್ಲಿ ಈ ಬಗೆಯ ಅಧ್ಯಯನ ವಿಸ್ತಾರವಾಗಿ ನಡೆದಿದ್ದರೂ, ಇವುಗಳಿಂದ ಲಭಿಸಿರುವ ಜ್ಞಾನ ಅಪಾರವಾದುದು. ಜಿರಲೆ, ಜೇನು, ರೇಷ್ಮೆ, ಸೊಳ್ಳೆಗಳು, ಡ್ರಾಸೋಫಿಲ, ನೊಣ ಮುಂತಾದ ಕೆಲವು ಕೀಟಗಳಲ್ಲಿ ಈ ಬಗೆಯ ಸಂಶೋಧನೆ ನಡೆದಿದೆ. ಇದರ ಅಂಗವಾಗಿ ನಡೆದಿರುವ ಹಲವಾರು ಸಂಶೋಧನೆಗಳು ಕೀಟ ನಿರೋಧಕಗಳಿಂದ ಕೀಟಗಳಲ್ಲಿ ಉಂಟಾಗುವ ಪರಿಣಾಮ, ಕೈಟಿನ್ ಹೊರಕವಚದ ಉತ್ಪಾದನೆ, ಪೊರೆ ಬಿಡುವಿಕೆ, ರೂಪ ಪರಿವರ್ತನೆ, ಹಾರ್ಮೋನುಗಳ ಉತ್ಪತ್ತಿ ಮತ್ತು ಕೀಟಗಳ ಪೋಷಣೆ ಬಗ್ಗೆ ಹೆಚ್ಚು ಬೆಳಕು ಚೆಲ್ಲಿವೆ.

೪. ಕೀಟ ಪರಿಸರವಿಜ್ಞಾನ: ಕೀಟಗಳಿಗೂ ಅವುಗಳ ಪರಿಸರಕ್ಕೂ ಇರುವ ಪರಸ್ಪರ ಸಂಬಂಧದ ಅಧ್ಯಯನವೇ ಕೀಟ ಪರಿಸರವಿಜ್ಞಾನ. ಶರೀರವಿಜ್ಞಾನದಂತೆಯೆ ಇದು ಸಹ

ಕೀಟಗಳ ನಡತೆ, ಕ್ರಿಯಾಚಟುವಟಿಕೆ, ವಾತಾವರಣದ ವಿವಿಧ ಪರಿಸ್ಥಿತಿಗಳಿಗೆ ಕೀಟಗಳ ಹೊಂದಾಣಿಕೆಯನ್ನು ಕುರಿತದ್ದು. ಆದರೆ ಶರೀರವಿಜ್ಞಾನ ಮುಖ್ಯವಾಗಿ ಪ್ರಯೋಗಶಾಲೆಗೆ ಸೀಮಿತವಾಗಿದ್ದರೆ, ಪರಿಸರವಿಜ್ಞಾನ ಬಯಲಿನಲ್ಲಿ (ಫೀಲ್ಡ್ ಸೈನ್ಸ್) ನಡೆಯುವಂಥದು. ಪರಿಸರವಿಜ್ಞಾನ ಕೀಟಗಳ ಗುಂಪು, ಸ್ಥಳೀಯ ಸಂದಣಿ, ಸಮುದಾಯಗಳಿಗೆ ಅನ್ವಯವಾಗುತ್ತದೆ. ಕೀಟಗಳನ್ನೂ ಒಂದೊಂದಾಗಿಯೇ ತೆಗೆದುಕೊಂಡು ಇಲ್ಲವೆ ಕೀಟಸಮುದಾಯಗಳನ್ನು ಆರಿಸಿಕೊಂಡು ಅವುಗಳ ಮೇಲೆ ಪರಿಸರದ ಪ್ರಭಾವವೇನೆಂದು ಅಭ್ಯಸಿಸಬಹುದು. ಆದರೆ ಇವೆರಡೂ ಪರಸ್ಪರ ಪೂರಕಗಳು. ಪರಿಸರವಿಜ್ಞಾನದ ವಿಧಾನಗಳು ವಿವಿಧ ಬಗೆಯವು. ಅಭ್ಯಸಿಸಲಾಗುವ ಸಂದಣಿಯ ಸಂಕೀರ್ಣತೆಯನ್ನು ಅವಲಂಬಿಸಿ ವಿಧಾನಗಳು ಭಿನ್ನವಾಗುತ್ತವೆ. ಪ್ರತಿಯೊಂದು ಕೀಟವೂ ತನ್ನ ಬದುಕಿಗೆ ಮತ್ತು ಸಂತಾನವೃದ್ಧಿಗೆ ಆಹಾರ, ನೆಲೆ ಮತ್ತು ಕೆಲವು ಭೌತಸ್ಥಿತಿಗಳನ್ನು ಅವಲಂಬಿಸಿದೆ. ಈ ಪೂರೈಕೆಗಳ ಗುಣ, ಮೊತ್ತಗಳಲ್ಲಿ ಕಾಲ ಮತ್ತು ಅವಕಾಶಗಳಲ್ಲಿ ವ್ಯತ್ಯಾಸವಿದೆ. ಬೇರೆ ಪ್ರಾಣಿಗಳು ಈ ಅವಶ್ಯಕತೆಗಳಿಗಾಗಿ ಕೀಟಗಳೊಂದಿಗೆ ಸ್ಪರ್ಧಿಸುತ್ತವೆ. ಅಲ್ಲದೆ ಸ್ವಾಭಾವಿಕ ಶತ್ರುಗಳು ಕೀಟಗಳ ಜೀವನಕ್ರಮದ ಮೇಲೆ ಪ್ರಬಾವ ಬೀರುತ್ತವೆ. ಇವೆಲ್ಲ ಸಂಬಂಧಗಳನ್ನು ಕುರಿತು ಪರಿಸರವಿಜ್ಞಾನಿ ಸಂಶೋಧನೆ ನಡೆಸುತ್ತಾನಲ್ಲದೆ ಇವುಗಳನ್ನು ಅಳೆದು, ಪರಿಶೀಲಿಸಿ ನೋಡುತ್ತಾನೆ. ಪ್ರಕೃತಿಯಲ್ಲಿ ಕೀಟಗಳ ಸಂತಾನವೃದ್ಧಿ, ಜೀವನಕ್ರಮದ ನಿಯಂತ್ರಣಗಳಿಗೆ ಒಳಗಾಗಿವೆ ಎಂಬ ತಿಳುವಳಿಕೆಯಿಂದ ಮಾನವ ಕೃತಕವಾಗಿ ತನ್ನ ಅನುಕೂಲಕ್ಕೆ ತಕ್ಕಂತೆ ಕೀಟಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ.

೫. ಅನ್ವಯಿಕ ಕೀಟವಿಜ್ಞಾನ: ಮಾನವನ ಆರೋಗ್ಯ, ಕೃಷಿ ವ್ಯವಸ್ಥೆ, ಸಾಕುಪ್ರಾಣಿಗಳು, ಮಾನವ ನಿರ್ಮಿತ ವಸ್ತುಗಳ ಮೇಲೆ ಕೀಟಗಳಿಂದ ಆಗುವ ಪರಿಣಾಮವನ್ನು ಕುರಿತು ನಡೆಸುವ ಅಭ್ಯಾಸ. ಕೀಟಗಳು ಉಪಯುಕ್ತವಾಗಿದ್ದರೆ ಅವನ್ನು ವೃದ್ಧಿಸುವ ಬಗೆ ಹೇಗೆ ಎಂಬುದರ ಅಧ್ಯಯನವೇ ಇದು. ಇದರಲ್ಲಿ ವೈದ್ಯಕೀಯ ಹಾಗೂ ಪಶುವೈದ್ಯಕೀಯ ಕೀಟವಿಜ್ಞಾನ ಮತ್ತು ಕೃಷಿ ಹಾಗೂ ಅರಣ್ಯಕೀಟವಿಜ್ಞಾನಗಳೆಂಬ ಬಗೆಗಳಿವೆ. ಮಾನವನ ಆರೋಗ್ಯಕ್ಕೆ ಸಂಬಂಧಿಸಿದ ಕೀಟಗಳ ಅಧ್ಯಯನವೇ ವೈದ್ಯಕೀಯ ಕೀಟವಿಜ್ಞಾನ. ಮಾನವನ ಮರಣಗಳಲ್ಲಿ ಶೇ. ೫೦ ರಷ್ಟು ಕೀಟಾಧಾರಿತ ವ್ಯಾಧಿಗಳಿಂದುಂಟಾದುವೆಂದು ಪತ್ತೆ ಹಚ್ಚಲಾಗಿದೆ. ಇವುಗಳಲ್ಲಿ ಟೈಫಾಯಿಡ್, ಮಲೇರಿಯ, ಪ್ಲೇಗ್, ಹಳದಿ ಜ್ವರ, ಆನೆಕಾಲುರೋಗ, ನಿದ್ರಾವಾತ ರೋಗ ಮುಖ್ಯವಾದವು. ಇವನ್ನು ಪೋಷಿಸುವ ಕೀಟಗಳಿಲ್ಲದಿದ್ದರೆ ಬಹುಶಃ ಈ ರೋಗಗಳೇ ಇರುತ್ತಿರಲಿಲ್ಲವೇನೊ. ಕೀಟಾಧಾರಿತ ರೋಗವೊಂದನ್ನು ಮೊಟ್ಟಮೊದಲ ಬಾರಿಗೆ ಕಂಡುಹಿಡಿದ ಕೀರ್ತಿ ಪ್ಯಾಟ್ರಿಕ್ ಮ್ಯಾನ್ಸನ್ ಎಂಬುವನಿಗೆ ಸಲ್ಲಬೇಕು. ಆನೆಕಾಲುರೋಗ ಉಂಟುಮಾಡುವ ವುಚರೇರಿಯ ಬಾಂಕ್ರಾಫ್ಟಿಯೈ ಸೂಕ್ಷ್ಮಾಣು ಕ್ಯೂಲೆಕ್ಸ್ ಸೊಳ್ಳೆಯಿಂದ ಹರಡುತ್ತದೆಂದು ಈತ ೧೮೭೮ರಲ್ಲಿ ತೋರಿಸಿಕೊಟ್ಟ. ಇದರಂತೆ ೧೮೯೮ರಲ್ಲಿ ರಾಸ್ ಎಂಬಾತ ಅನಾಫಿಲೀಸ್ ಸೊಳ್ಳೆಯಿಂದ ಮಲೇರಿಯ ಹರಡುವ ಬಗ್ಗೆ ತೋರಿಸಿದ. ಈ ರೀತಿ ಹಲವಾರು ರೋಗಗಳು ಕೀಟಗಳಿಂದ ಪ್ರಸಾರವಾಗುವುದನ್ನು ಕಂಡುಹಿಡಿಯಲಾಯಿತು. ಇವೆಲ್ಲ ಸಂಶೋಧನೆಗಳಿಂದಾಗಿ ವೈದ್ಯಕೀಯ ಕೀಟವಿಜ್ಞಾನ ಅನ್ವಯಿಕ ಕೀಟವಿಜ್ಞಾನದಲ್ಲಿನ ಒಂದು ಪ್ರಮುಖವಾದ ಅಂಗವಾಗಿದೆ. ವೈದ್ಯಕೀಯ ಕೀಟವಿಜ್ಞಾನದ ಸಮಸ್ಯೆಗಳು ಹಲವಾರು. ಸಮಶೀತೋಷ್ಣವಲಯಗಳಲ್ಲಿ ಈ ಸಮಸ್ಯೆಗಳು ಅಷ್ಟಾಗಿಲ್ಲದಿದ್ದರೂ ರೋಗವನ್ನು ಹರಡುವ ಕೀಟಗಳ ಸಂತಾನಾಭಿವೃದ್ಧಿ ಕ್ರಿಯೆಗೆ ಅನುಕೂಲ ಪರಿಸ್ಥಿತಿಗಳಿರುವ ಉಷ್ಣಪ್ರದೇಶಗಳಲ್ಲಂತೂ ಈ ಸಮಸ್ಯೆಗಳು ಅಪಾರ. ಅತಿಯಾದ ಜನಸಂದಣಿ, ವಸತಿ ಹಾಗೂ ಸುತ್ತಣ ಪ್ರದೇಶದ ನೈರ್ಮಲ್ಯದ ಕೊರತೆ ರೋಗ ಹರಡುವಿಕೆಗೆ ಸಹಾಯಕ ಅಂಶಗಳಾಗಿವೆ. ಮೇಲೆ ಹೇಳಿದ ರೋಗಗಳಲ್ಲದೆ ಜೇನು, ಜೇಡ ಮುಂತಾದ ಕೀಟಗಳ ಕಡಿತ, ಹಲವಾರು ಬಗೆಯ ಕಂಬಳಿ ಹುಳುಗಳಿಂದ ಉಂಟಾಗುವ ಚರ್ಮತುರಿಕೆಗಳು, ಮನುಷ್ಯ ದೇಹದ ಮೇಲೆ ಪರಾವಲಂಬಿಗಳಾಗಿ ಜೀವಿಸುವ ಹೇನು, ಕಜ್ಜಿ ಉಣ್ಣೆ, ಕೀಟಗಳು ಮಾನವನಿಗೆ ಉಪದ್ರವಕಾರಿಗಳೆನಿಸಿವೆ. ಇಂಥ ಕೀಟಗಳ ಅಧ್ಯಯನವನ್ನು ನಿಯಂತ್ರಿಸುವ ಕ್ರಮಗಳ ಆವಿಷ್ಕಾರ ವೈದ್ಯಕೀಯ ಕೀಟವಿಜ್ಞಾನದ ಮುಖ್ಯ ಸಮಸ್ಯೆ ಜಗತ್ತಿನಾದ್ಯಂತ ಈ ದಿಸೆಯಲ್ಲಿ ವಿಪುಲವಾಗಿ ಸಂಶೋಧನೆ ನಡೆಯುತ್ತಿದ್ದು, ಅದರಿಂದ ಲಭಿಸುವ ಜ್ಞಾನವನ್ನು ಮಾನವನ ಕಲ್ಯಾಣಕ್ಕೆ ಬಳಸಬಹುದಾಗಿದೆ. ಮಾನವ ಜನಾಂಗದ ಜೀವನಮಟ್ಟವನ್ನು ಸುಧಾರಿಸಿ, ವೈದ್ಯಕೀಯ ಕೀಟವಿಜ್ಞಾನದ ಜ್ಞಾನ ಮತ್ತು ತಂತ್ರವಿನ್ಯಾಸಗಳ ಪೂರ್ಣ ಅನುಕೂಲತೆ ಜನರಿಗೆ ಲಭ್ಯವಾಗುವಂತೆ ಮಾಡುವುದೇ ಕೀಟಾಧಾರಿತ ರೋಗನಿವಾರಣೆಗೆ ಇರುವ ಒಂದು ಮುಖ್ಯ ಕ್ರಮ.

ಕೀಟಗಳಿಂದ ರೋಗ ಹರಡುವ ವಿಧಾನ ಯಾಂತ್ರಿಕವಾಗಿರಬಹುದು ಅಥವಾ ಜೈವಿಕವಾಗಿರಬಹುದು. ಟೈಫಾಯಿಡ್ ಬ್ಯಾಕ್ಟೀರಿಯ, ನೊಣಗಳ ಕಾಲುಗಳಿಗೆ ಅಂಟಿಕೊಂಡು ಮಲದಿಂದ ಆಹಾರಕ್ಕೆ ವರ್ಗಾವಣೆಯಾಗುತ್ತದೆ. ಇದು ಯಾಂತ್ರಿಕ ರೀತಿ. ಆದರೆ ಮಲೇರಿಯ, ಆನೆಕಾಲುರೋಗ ಮುಂತಾದವುಗಳ ಹರಡುವಿಕೆಯಲ್ಲಿ ರೋಗಾಣು ತನ್ನ ಆತಿಥೇಯ ಪ್ರಾಣಿಯ ದೇಹವನ್ನು ಪ್ರವೇಶಿಸುತ್ತದೆ. ಈ ಕ್ರಮಕ್ಕೆ ಜೈವಿಕ ಸಾಗಣೆ ಎಂದು ಹೆಸರು. ಕೀಟಾಧಾರಿತ ರೋಗ ನಿವಾರಣೆಗೆ ಹಲವಾರು ಉಪಾಯಗಳಿವೆ. ಅವುಗಳಲ್ಲಿ ಮುಖ್ಯವಾದುದು ರೋಗ ಹರಡುವ ಕೀಟಗಳ ನಿವಾರಣೆ. ಶಕ್ತಿಯುತವಾದ ಸಂಶ್ಲೇಷಿತ ಕೀಟನಾಶಕ ಔಷಧಿಗಳನ್ನು ಬಳಸಿ ಕೀಟಗಳನ್ನು ನಿರ್ಮೂಲ ಮಾಡಿ ರೋಗಗಳಿಗೆ ಹತೋಟಿಯಲ್ಲಿಡಬಹುದು. ಆದರೆ, ಇಂಥ ಔಷಧಿಗಳ ಹಲವಾರು ವರ್ಷಗಳ ಬಳಕೆಯಿಂದಾಗಿ ಕೆಲವು ಕೀಟಗಳು ಒಂದು ಬಗೆಯ ನಿರೋಧಕ ಶಕ್ತಿಯನ್ನು ಬೆಳೆಸಿಕೊಂಡು, ರೋಗ ನಿರೋಧಕ ಶಕ್ತಿಯಿರುವ ಕೀಟ ತಳಿಗಳು ಹುಟ್ಟಿಕೊಂಡಿವೆ. ಕಾರಣ, ಕೀಟ ನಿವಾರಕಗಳು ಮೊದಲಿನಷ್ಟು ಪರಿಣಾಮಕಾರಿಯಾಗಿ ಕೀಟಗಳನ್ನು ನಿವಾರಿಸಲಾರದಾಗಿವೆ. ರೋಗ ನಿವಾರಣೆಯ ಎರಡನೆಯ ಕ್ರಮ, ರೋಗಗಳಿಗೆ ನಿರ್ದಿಷ್ಟ ಬಗೆಯ ಔಷಧಿಗಳನ್ನು ಉಪಯೋಗಿಸುವುದು. ಉದಾ: ಮಲೇರಿಯ ನಿವಾರಣೆಗೆ ಕ್ವಿನೀನ್, ಪಾಲುಡ್ರಿನ್ ಬಳಕೆ. ಇವೆಲ್ಲ ವಿಧಾನಗಳಿಂತ ಹೆಚ್ಚು ಸೂಕ್ತವಾದುದು ಮತ್ತು ಖಚಿತ ಫಲಿತಾಂಶ ನೀಡುವಂಥದು ಜೀವನ ಮಟ್ಟದ ಸುಧಾರಣೆ.

ಕೃಷಿ ಸಸ್ಯವಿಜ್ಞಾನ ಮತ್ತು ಅರಣ್ಯಕೀಟವಿಜ್ಞಾನ: ಕೀಟಗಳಿಗೂ ಮಾನವನಿಗೆ ಅಗತ್ಯವಾದ ಆಹಾರ, ಬಟ್ಟೆ ಮುಂತಾದ ವಸ್ತುಗಳ ಮೂಲಗಳಾದ ಸಸ್ಯ ಹಾಗು ಪ್ರಾಣಿಗಳಿಗೂ ಇರುವ ಸಂಬಂಧಗಳ ಅಭ್ಯಾಸವೇ ಕೃಷಿ ಸಸ್ಯವಿಜ್ಞಾನ. ಅರಣ್ಯಗಳಿಂದ ದೊರೆಯುವ ಮರಮುಟ್ಟು ಮತ್ತು ಇತರ ಉಪೋತ್ಪನ್ನಗಳ ಉತ್ಪಾದನೆ, ಸಂರಕ್ಷಣೆ ಮತ್ತು ಕೀಟಗಳ ಸಂಬಂಧದ ಅಧ್ಯಯನವೇ ಅರಣ್ಯಕೀಟವಿಜ್ಞಾನ. ಇವೆರಡು ಕ್ಷೇತ್ರಗಳಿಗೂ ತ'ತ್ತ್ವಗಳಲ್ಲಿ ಏಕತೆ ಇದ್ದು, ವೈದ್ಯಕೀಯ ಹಾಗು ಪಶುವೈದ್ಯಕೀಯ ಕೀಟವಿಜ್ಞಾನಗಳಂತೆ ಪರಸ್ಪರ ಸಂಬಂಧ ಹೊಂದಿದ್ದರೂ ಇವೆರಡರ ನಡುವೆ ಕೆಲವು ಮೂಲ ವ್ಯತ್ಯಾಸಗಳುಂಟು. ವೈದ್ಯಕೀಯ ಕೀಟವಿಜ್ಞಾನದ ಸಮಸ್ಯೆಗಳನ್ನು ಮಾನವನ ಜೀವನಮಟ್ಟವನ್ನು ಸುಧಾರಿಸಿ, ಅಭಿವೃದ್ಧಿಗೊಳಿಸುವ ಮೂಲಕ ಪರಿಹರಿಸಲು ಶಕ್ತವಾಗಿದೆ. ಈ ವಿಧಾನಗಳು ಕೃಷಿ ಕೀಟವಿಜ್ಞಾನದ ಸಮಸ್ಯೆಗಳಿಗೆ ಅನ್ವಯವಾಗುವುದಿಲ್ಲ. ಆಧುನಿಕ ವಿಧಾನಗಳಿಂದ ಕೃಷಿ ಸುಧಾರಣೆ ನಡೆಸುವ ಕಾರ್ಯ ಕೀಟ ನಿಯಂತ್ರಣ ಸಮಸ್ಯೆಯನ್ನು ಕಡಿಮೆ ಮಾಡುವ ಬದಲು ಹೆಚ್ಚು ಮಾಡಿದೆ ಎಂಬುದಾಗಿ ಪರಿಸರ ತಜ್ಞರ ಅಭಿಪ್ರಾಯ. ಉದಾಹರಣೆಗೆ ಅಮೆರಿಕದ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡಿನಿಂದ ವಲಸೆಗಾರರು ಉತ್ತರ ಅಮೆರಿಕಕ್ಕೆ ಹೋಗಿ ನೆಲೆಸುವ ಮುಂಚೆ ಇದ್ದ ಇಂಡಿಯನ್ ಜನಾಂಗದವರು ಪ್ರಾಚೀನ ಕೃಷಿ ವಿಧಾನಗಳನ್ನು ಅನುಸರಿಸುತ್ತಿದ್ದರಲ್ಲದೆ ಅವರು ಬೆಳೆಯುತ್ತಿದ್ದ ಬೆಳೆಗಳಾದ ಮುಸುಕಿನ ಜೋಳ, ಕುಂಬಳ, ಅವರೆ, ಆಲೂಗಡ್ಡೆ, ತಂಬಾಕು, ಹತ್ತಿ ಮುಂತಾದವುಗಳು ಪಶ್ಚಿಮಾರ್ಧಗೋಳದ ಸ್ಥಳೀಯ ಸಸ್ಯಗಳಾಗಿದ್ದುವು. ಕೃಷಿಗಾಗಿ ಬಳಕೆಯಾಗುತ್ತಿದ್ದ ಪ್ರದೇಶಗಳು ಪರಸ್ಪರ ದೂರವಿದ್ದು, ಒಂದು ಕಡೆ ಅಂಟಿದ ಕೀಟಗಳು ಸುಲಭವಾಗಿ ಬೇರೆಡೆಗೆ ಸಾಗುತ್ತಿರಲಿಲ್ಲ. ಕೈಯಿಂದಲೇ ಕೀಟಗಳನ್ನು ತೆಗೆದು ನಾಶ ಮಾಡುತ್ತಿದ್ದರು. ಕೀಟಗಳಿಂದ ಆಗುತ್ತಿದ್ದ ನಷ್ಟ ಇದರಿಂದ ಬಹಳ ಕಡಿಮೆ. ಯೂರೋಪಿನ ವಲಸೆಗಾರರು ಅಮೆರಿಕಕ್ಕೆ ಬಂದಮೇಲೆ, ಅಮೆರಿಕದಲ್ಲಿ ಪಶ್ಚಿಮ ಮತ್ತು ದಕ್ಷಿಣದ ಕಡೆಗೆ ಒಳಸಾಗಿದಂತೆ ಕೃಷಿಯ ಪ್ರದೇಶವೂ ವಿಸ್ತಾರವಾಗುತ್ತ ಬಂತು. ಇದರಿಂದ, ಕೀಟಗಳು ಹರಡುವುದಕ್ಕೂ ಸಹಾಯಕವಾಯಿತು. ಜೊತೆಗೆ ಇವರು ತಮ್ಮ ಆಹಾರಕ್ಕಾಗಿ, ಶೋಕಿಗಾಗಿ ಕೀಟಗಳನ್ನು ಸ್ವಾಭಾವಿಕವಾಗಿ ನಿಯಂತ್ರಿಸುತ್ತಿದ್ದ ಕೀಟಭಕ್ಷಕ ಹಕ್ಕಿಗಳನ್ನು ಕೊಂದು ಹಾಕತೊಡಗಿದ್ದರಿಂದಲೂ ಕೀಟಗಳ ಹಾವಳಿ ಹೆಚ್ಚಾಯಿತು. ಯೂರೋಪಿನಿಂದ ತಮ್ಮ ಜೊತೆಗೆ ಅಲ್ಲಿನ ಧವಸ ಧಾನ್ಯ, ಸಸ್ಯಗಳನ್ನೂ ತಮ್ಮ ಅರಿವಿಲ್ಲದೆ ಅಲ್ಲಿನ ಕೀಟ ಪ್ರಭೇದಗಳನ್ನು ತಂದರು. ಉದಾ: ಜಿಪ್ಸಿ ಪತಂಗ, ಅಸ್ಪರ್ಯಾಗಸ್ ಜೀರುಂಡೆ, ಹಾರನ್ ನೊಣ ವಲಸೆಗಾರರೊಂದಿಗೆ ಬಂದ ಕೀಟಗಳಲ್ಲಿ ಮುಖ್ಯವಾದುವು. ಹೀಗೆ ಬಂದ ಕೀಟಗಳು ಬಲುಬೇಗ ಹೊಸ ವಾತಾವರಣಕ್ಕೆ ಹೊಂದಿಕೊಂಡು ಸಂತಾನಾಭಿವೃದ್ಧಿಯಲ್ಲಿ ತೊಡಗಿ ಅಮೆರಿಕವನ್ನೆಲ್ಲ ಆವರಿಸಿದುವು. ಈ ಬಗೆಯ ಕೀಟಗಳ ವೃದ್ಧಿ ಇತ್ತೀಚಿನ ವರ್ಷಗಳಲ್ಲಿ ಕಾಣತೊಡಗಿದವು. ಉದಾಹರಣೆಗೆ ಆಲ್ಫಾಲ್ಫ ಗಿಡಕ್ಕೆ ಅಂಟುವ ಏಫಿಡ್ ಕೀಟವೊಂದು ೧೯೫೪ರಲ್ಲಿ ಮೊಟ್ಟಮೊದಲ ಬಾರಿಗೆ ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ಕಾಣಿಸಿಕೊಂಡಿತು. ಕೇವಲ ನಾಲ್ಕು ವರ್ಷದ ಅವಧಿಯಲ್ಲಿ ಆ ರಾಜ್ಯವನ್ನೆಲ್ಲ ಆವರಿಸಿತು. ಇದರಿಂದ ಉಂಟಾದ ಬೆಳೆಯ ನಷ್ಟ ಹಾಗೂ ಇದರ ಹತೋಟಿಗೆಂದು ಖರ್ಚಾದ ಹಣ ಸು. ೩ ೧/೨ ಕೋಟಿ ಡಾಲರ್‌ಗಳು. ಹೊಸದಾಗಿ ಬಂದ ಕೀಟಗಳು ತಮ್ಮ ಮೂಲ ನೆಲೆಯಲ್ಲಿರಬಹುದಾದ ಪರಾವಲಂಬಿಗಳ, ಶತ್ರುಗಳ ಕಾಟ, ಹೊಸ ನೆಲೆಯಲ್ಲಿ ಇಲ್ಲದಿರುವುದರಿಂದ ಹಾಗೂ ಬೆಳೆಯುತ್ತಿರುವ ಸಸ್ಯಗಳು ಈ ಕೀಟಗಳಿಗೆ ಆತಿಥೇಯ ಸಸ್ಯಗಳಾಗುವುದರಿಂದ ದ್ವಿಗುಣ ಲಾಭ ಪಡೆಯುತ್ತವೆ. ಈ ಎಲ್ಲಾ ಕಾರಣಗಳಿಂದಾಗಿ ಕೀಟಗಳ ಸಮಸ್ಯೆ ಅಧಿಕಗೊಳ್ಳುತ್ತದೆ. ಬೆಳೆಗಳನ್ನು ನಾಶ ಮಾಡುವುದರ ಮೂಲಕ ನಷ್ಟವುಂಟು ಮಾಡುವುದೊಂದೇ ಅಲ್ಲದೆ ಕೀಟಗಳು ಕೆಲವು ಸಸ್ಯರೋಗಗಳನ್ನು ಹರಡುವುದರಲ್ಲೂ ಸಹಕಾರಿಗಳಾಗಿವೆ.

ಇದರಿಂದಾಗಿ ಕೃಷಿಗೂ, ಕೀಟಗಳಿಗೂ ಇರುವ ನಿಕಟ ಸಂಬಂಧವನ್ನು ಅರಿತುಕೊಂಡು ಹಾನಿಕಾರಕ ಕೀಟಗಳನ್ನು ನಿವಾರಿಸುವ ದಿಸೆಯಲ್ಲಿ ಹಲವಾರು ವಿಧಾನಗಳನ್ನು ಮಾನವ ಅನುಸರಿಸತೊಡಗಿದ್ದಾನೆ. ಇವುಗಳಲ್ಲಿ ಸಾಗುವಳಿ ವಿಧಾನಗಳು (ಕಲ್ಚರಲ್ ಮೆಥಡ್ಸ್), ಭೌತ ಹಾಗೂ ರಾಸಾಯನಿಕ ವಿಧಾನಗಳು ಮತ್ತು ಜೈವಿಕ ವಿಧಾನಗಳು ಮುಖ್ಯವಾದುವು.

ಸಾಗುವಳಿ ವಿಧಾನಗಳು: ಮೊದಲಿನಿಂದಲೂ ಅನುಸರಿಸುವ ಕೃಷಿ ವಿಧಾನಗಳನ್ನು ಬದಲಾಯಿಸುವುದು. ಉದಾಹರಣೆಗೆ ಪರ್ಯಾಯ ಸಾಗುವಳಿ ಕ್ರಮ, ಬೆಳೆಗಳಿಂದ ಉಳಿಯುವ ವಸ್ತುಗಳನ್ನೂ ಪರ್ಯಾಯ, ಅತಿಥೇಯ ಸಸ್ಯಗಳನ್ನು ನಾಶಪಡಿಸುವುದು, ನಾಟಿ ಹಾಕುವ ಅಥವಾ ಕೊಯ್ಲಿನ ಕಾಲವನ್ನು ಬದಲಿಸುವುದು. ವಿಶೇಷ ರೀತಿಯ ಸಾಗುವಳಿ ಕ್ರಮಗಳನ್ನು ಅನುಸರಿಸುವುದು ಇತ್ಯಾದಿ. ಇದರಿಂದ ಕೀಟಗಳಿಂದಾಗುವ ನಷ್ಟವನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ಈ ವಿಧಾನದಲ್ಲಿ ನಿವಾರಣೆಗಿಂತ ಪಿಡುಗು ಅಂಟುವ ಮೊದಲೇ ಅದನ್ನು ತಡೆಯುವ ಕಡೆಗೆ ಹೆಚ್ಚು ಗಮನಹರಿಸಲಾಗುತ್ತಿದೆ. ಈ ವಿಧಾನವನ್ನನುಸರಿಸಲು ಕೀಟ ಪಿಡುಗಿನ ಜೀವನಕ್ರಮ, ಸ್ವಭಾವ, ಅದು ಅಂಟುವ ಸಸ್ಯಜಾತಿಯ ತಿಳಿವಳಿಕೆ ಮುಂತಾದವುಗಳ ಜ್ಞಾನ ಅಗತ್ಯ. ಅಲ್ಲದೆ ಗೊಬ್ಬರಗಳ ಬಳಕೆಯಿಂದ ಸಸ್ಯಗಳು ಹೆಚ್ಚು ಶಕ್ತಿಯುತವಾಗುವಂತೆ ಮಾಡುವುದರ ಮೂಲಕ ಅವು ಕೀಟಗಳನ್ನು ನಿರೋಧಿಸುವಂತೆ ಮಾಡಬಹುದು. ಕೀಟ ನಿರೋಧಕ ಗುಣಗಳುಳ್ಳ ತಳಿಗಳನ್ನು ಅಭಿವೃದ್ಧಿ ಪಡಿಸುವುದರಿಂದ ಕೀಟಗಳನ್ನು ತಡೆಗಟ್ಟಬಹುದು.

ಭೌತ ಹಾಗೂ ರಾಸಾಯನಿಕ ವಿಧಾನಗಳು: ಭೌತ ವಿಧಾನಗಳಾದ ಕೀಟಗಳನ್ನು ಕೈಯಿಂದ ನಾಶಪಡಿಸುವುದು, ತೆರೆ, ಬಲೆ ಮುಂತಾದವನ್ನು ಉಪಯೋಗಿಸಿ ಕೀಟಗಳನ್ನು ಹತೋಟಿಯಲ್ಲಿಡುವುದು. ಕೆಲವು ಬಗೆಯ ರೇಡಿಯೋ ವಿಕಿರಣಗಳನ್ನು (ಎಕ್ಸ್‌ರೇ, ಗಾಮರೇ) ಬಳಸಿ ಗಂಡುಕೀಟಗಳನ್ನು ನಿರ್ವೀರ್ಯಗೊಳಿಸಿ ಸಂತಾನವೃದ್ಧಿಯಾದಂತೆ ನೋಡಿಕೊಳ್ಳುವುದು ಭೌತ ವಿಧಾನ.

ರಾಸಾಯನಿಕ ವಸ್ತುಗಳನ್ನು ಬಳಸಿ ಕೀಟನಾಶ ಮಾಡುವುದು ರಾಸಾಯನಿಕ ವಿಧಾನ. ಪ್ರಪಂಚದಾದ್ಯಂತ ಹೆಚ್ಚು ಜನಪ್ರಿಯವಾದ ಹಾಗೂ ಬಳಕೆಯಲ್ಲಿರುವ ವಿಧಾನ. ಎಲ್ಲ ದೇಶಗಳಲ್ಲೂ ವಿವಿಧ ಬಗೆಯ ಕೀಟನಾಶಕಗಳು ದೊರೆಯುತ್ತವಲ್ಲದೆ, ಅವುಗಳ ಬಳಕೆಯ ಕ್ರಮಗಳು, ಉಪಕರಣಗಳು ಸುಲಭವಾಗಿ ದೊರೆಯುತ್ತವೆ. ಕೀಟನಾಶಕಗಳಲ್ಲಿ ಎರಡು ಮುಖ್ಯ ಬಗೆಗಳಿವೆ. ಒಂದು ಕೀಟವಿಕರ್ಷಕಗಳು. ಇವು ಕೀಟಗಳನ್ನು ಸಸ್ಯದ



ಕೀಟಗಳನ್ನು ಹಿಡಿಯುವ ವಿಧಾನ

ಬಳಿಗೆ ಅಥವಾ ಸಸ್ಯೋತ್ಪನ್ನಗಳ ಬಳಿಗೆ ಬರದಿರುವಂತೆ ತಡೆಯುತ್ತವೆ. ಇನ್ನೊಂದು ಕೀಟ ಆಕರ್ಷಕಗಳು. ಇವು ಹಾನಿಕಾರಕ ಕೀಟಗಳನ್ನು ಆಕರ್ಷಿಸಿ ಈ ವಸ್ತುವನ್ನು ತಿನ್ನುವಂತೆ ಮಾಡಿ ಕೊಂದುಹಾಕುತ್ತವೆ. ಒಂದೊಂದು ಬಗೆಯಲ್ಲೂ ಹಲವಾರು ರೀತಿಯ ಕೀಟನಾಶಕಗಳಿವೆ. ಮೊದಲು ಬಳಸಲಾಗುತ್ತಿದ್ದ ಕೀಟನಾಶಕಗಳಲ್ಲಿ ಬಹುಪಾಲು ವಿಷಪೂರಿತವಾದುವು. ಕೀಟ ಈ ವಸ್ತುವನ್ನು ಸೇವಿಸುವುದರಿಂದ ಅಥವಾ ಅದರ ಸಂಪರ್ಕದೊಂದಿಗೆ ಬರುವುದರಿಂದ ಸಾವಿಗೀಡಾಗುತ್ತದೆ. ಉದಾಹರಣೆಗೆ ಸೋಡಿಯಂ ಆರ್ಸಿನೈಟ್, ಲೆಡ್ ಆರ್ಸಿನೈಟ್, ಕ್ಯಾಲ್ಸಿಯಂ ಆರ್ಸಿನೈಟ್, ಸೋಡಿಯಂ ಫ್ಲೋರೈಡ್, ಪಾದರಸ ಹಾಗೂ ಸತುವಿನ ಸಂಯುಕ್ತಗಳ ಸೇವನೆಯಿಂದ ಸಾವುಂಟುಮಾಡುವಂಥವು. ನಿಕೋಟಿನ್ ಸಲ್ಫೇಟ್, ಡೆರಿಸ್, ಪೈರೆತ್ರಮ್ ಕೀಟದೊಂದಿಗೆ ಸಂಪರ್ಕಕ್ಕೆ ಬರುವುದರಿಂದ ನಾಶಗೊಳಿಸುವಂಥವು. ಸೇವನೆಯಿಂದ ಸಾವುಂಟು ಮಾಡುವ ಕೀಟನಾಶಕಗಳು ಕೀಟಗಳಿಗೊಂದೇ ಅಲ್ಲದೆ ಮಾನವ ಮತ್ತು ಕೆಲವು ಸಾಕುಪ್ರಾಣಿಗಳಿಗೂ ಮಾರಕವಾಗುವುದರಿಂದ ಇವುಗಳ ಬಳಕೆ ಹೆಚ್ಚು ಜನಪ್ರಿಯವಾಗಿಲ್ಲ.




ಉಗ್ರಾಣಗಳನ್ನು, ಮಳಿಗೆಗಳನ್ನು, ಸಸ್ಯಸಂಗೋಪನ ಕೋಣೆಗಳನ್ನು ಕೀಟನಾಶಕಗಳ ಹೊಗೆಯಾಡಿಸುವ ಮೂಲಕ ಕೀಟಗಳನ್ನು ನಾಶಗೊಳಿಸಬಹುದು. ಹೀಗೆ ಬಳಸಲಾಗುವ ಕೀಟನಾಶಕಗಳಲ್ಲಿ ಮುಖ್ಯವಾದುವು ಹೈಡ್ರೋಜನ್ ಸಯನೈಡ್, ಕಾರ್ಬನ್ ಡೈಸಲ್ಫೇಟ್, ಎಥಿಲೀನ್ ಆಕ್ಸೈಡ್ ಅಥವಾ ಎಥಿಲೀನ್ ಡೈಕ್ಲೋರೈಡ್, ಕಾರ್ಬನ್ ಟೆಟ್ರಕ್ಲೋರೈಡ್ ಮಿಶ್ರಣ, ಮೀಥೈಲ್ ಬ್ರೋಮೈಡ್ ಕೃತಕವಾಗಿ ಸಂಶ್ಲೇಷಿತವಾದ ಕೀಟನಾಶಕಗಳಲ್ಲಿ ಅತ್ಯಂತ ಮುಖ್ಯವಾದುದು ಎರಡನೆಯ ಮಹಾಯುದ್ಧದ ತರುವಾಯ ಪ್ರಸಿದ್ಧಿಗೆ ಬಂದ ಡಿಡಿಟಿ ಹಲವಾರು ಬಗೆಯ ಕೀಟಗಳಿಗೆ ಮಾರಕವಾಗಿದೆ. ಬಲುಬೇಗ ಜನಪ್ರಿಯವಾದ ಇದು ಈಗೀಗ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಕಾರಣ ಕೀಟಗಳು ಇದಕ್ಕೆ ವಿರುದ್ಧವಾಗಿ ನಿರೋಧಕ ಗುಣವನ್ನು ಬೆಳೆಸಿಕೊಂಡಿರುವುದು ಮತ್ತು ಮನುಷ್ಯನಿಗೂ ಹಾನಿಕಾರಕವಾಗಿರುವುದು. ಆಲ್ಡ್ರಿನ್, ಕ್ಲೋರ್‌ಡೇನ್, ಬಿಎಚ್‌ಸಿ ಮುಂತಾದುವು ಇತರ ಬಗೆಯ ಸಂಶ್ಲೇಷಿತ ಕೀಟನಾಶಕಗಳು. ಇವಕ್ಕಿಂತ ಹೆಚ್ಚು ಪ್ರಬಲವಾದುವು ಮ್ಯಾಲಥಿಯಾನ್, ಪ್ಯಾರಥಿಯಾನ್, ಶ್ರಾಡಾನ್, ಸಿಸ್ಟೋಕ್ಸ್ ನಂತಹ ಸಾವಯವ ರಂಜಕವುಳ್ಳ ಸಂಯುಕ್ತಗಳು. ಇವುಗಳಲ್ಲಿ ಕೊನೆಯ ಎರಡು ಸಸ್ಯದೇಹದೊಳಗೆ ಪ್ರವೇಶಿಸಿ ಹಲವಾರು ವಾರಗಳ ಕಾಲ ತಮ್ಮ ಮಾರಕ ಗುಣಗಳನ್ನು ಉಳಿಸಿಕೊಂಡಿರುತ್ತವೆ. ಇವು ಏಫಿಡ್ ಮತ್ತು ಕಾಕ್ಸಿಡ್ ಕೀಟಗಳಿಗೆ ತೀವ್ರಹಾನಿಕಾರಕಗಳೆನಿಸಿವೆ. (ನೋಡಿ: ಕೀಟನಾಶಕಗಳು)

ಜೈವಿಕ ವಿಧಾನಗಳು: ಹಾನಿಕಾರಕ ಕೀಟಗಳು ಮೇಲೆ ಪರಾವಲಂಬಿ ಜೀವನ ನಡೆಸುವ ಜೀವಿಗಳನ್ನು, ಕೀಟಭಕ್ಷಕ ಪ್ರಾಣಿಗಳನ್ನು ಅಥವಾ ಕೀಟಗಳಿಗೆ ರೋಗವುಂಟುಮಾಡುವ ಜೀವಿಗಳನ್ನು ಉಪಯೋಗಿಸಿ ಕೀಟಗಳನ್ನು ನಿವಾರಿಸಬಹುದು. ಪ್ರಕೃತಿಯಲ್ಲಿ ನಮಗೆ ಕಾಣದಂತೆ ಈ ಬಗೆಯ ಕೀಟ ನಿಯಂತ್ರಣ ನಡೆಯುತ್ತದಾದರೂ ಮಾನವನಿಂದ ಈ ಕ್ರಮದ ಅನುಕರಣೆ ಇತ್ತೀಚಿನದು. ಉದಾಹರಣೆಗೆ ಅಮೆರಿಕಾದಲ್ಲಿ ಕಿತ್ತಳೆ ಜಾತಿಯ ಸಸ್ಯಗಳಿಗೆ ತೀವ್ರ ಹಾನಿಯುಂಟುಮಾಡುತ್ತಿದ್ದ ಐಸೀರಿಯ ಪರ್ಚೇಸಿ ಎಂಬ ಹುರುಪೆ ಕೀಟವನ್ನು ಆಸ್ಟ್ರೇಲಿಯದಿಂದ ತರಲಾದ ರೊಡೋಲಿಯ ಜೀರುಂಡೆಯನ್ನು ಬಳಸಿ ನಾಶಪಡಿಸಲಾಯಿತು. ಇದರಂತೆ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಮೂಲಂಗಿ ಜಾತಿಯ ಸಸ್ಯಗಳಿಗೆ ಹಾನಿಯುಂಟುಮಾಡುತ್ತಿದ್ದ ಪಯರಿಸ್ ರೇಪೇ ಚಿಟ್ಟೆಯನ್ನು ಯೂರೋಪಿನಿಂದ ತಂದು ಜೇನು ಜಾತಿಯ ಪರಾವಲಂಬಿ ಜೀವಿಯೊಂದರಿಂದ ನಿವಾರಿಸಲಾಯಿತು. ಹಾನಿಕಾರಕ ಕೀಟಗಳಿಗೆ ರೋಗವುಂಟುಮಾಡಿ ನಾಶಪಡಿಸುವ ಹಲವಾರು ಬ್ಯಾಕ್ಟೀರಿಯ, ಬೂಷ್ಟು, ಪ್ರೋಟೋಜೋವ ಗುಂಪಿನ ಪ್ರಾಣಿಗಳು, ವೈರಸ್‌ಗಳನ್ನು ಉಪಯೋಗಿಸಿ ಕೀಟಗಳನ್ನು ನಿವಾರಿಸುತ್ತಾರೆ, ಉದಾಹರಣೆಗೆ ಅಲ್ಫಾಲ್ಫ ಸಸ್ಯಕ್ಕೆ ಅಂಟುವ ಕೋಲಿಯಾಸ್ ಫೈಲೋಡೈಸ್ ಯೂರಿತೀಮ್ ಚಿಟ್ಟೆಯ ಕಂಬಳಿ ಹುಳುವನ್ನು ಒಂದು ಬಗೆಯ ವೈರಸ್ ದಾಳಿಗೆ ಈಡುಮಾಡಿ ನಾಶಪಡಿಸಲಾಗಿದೆ.

ಹೀಗೆ ಕೀಟ ನಿಯಂತ್ರಣಕ್ಕೆ ಹಲವಾರು ವಿಭಿನ್ನ ವಿಧಾನಗಳಿದ್ದರೂ ಯಾವ ಒಂದು ಬಗೆಯೂ ಸಂಪೂರ್ಣವಾಗಿ ಕೀಟಗಳನ್ನು ನಾಶಪಡಿಸಲಾರದು. ಎಲ್ಲ ವಿಧಾನಗಳನ್ನೂ ಪರಸ್ಪರ ಪೂರಕವಾಗಿ ಬಳಸಬೇಕಾಗುತ್ತದೆ. ಕೀಟಗಳನ್ನು ಯಶಸ್ವಿಯಾಗಿ ನಿಯಂತ್ರಿಸುವಲ್ಲಿ ಕೀಟಗಳ ಪ್ರಕೃತಿ, ಸ್ವಭಾವ, ಅವುಗಳಿರುವ ಮೂಲ ನೆಲೆ, ಅವಕ್ಕೂ, ಪರಿಸರಕ್ಕೂ ಇರುವ ಸಂಬಂಧ, ಕೀಟಗಳ ಸ್ವಾಭಾವಿಕ ಶತ್ರುಗಳು ಮೊದಲಾದುವುಗಳ ಜ್ಞಾನ ಅಗತ್ಯ. ಅಲ್ಲದೆ ಕೀಟನಾಶಕಗಳಿಂದಾಗುವ ಇತರ ಪರಿಣಾಮಗಳ ಕಡೆಗೂ ಗಮನ ಹರಿಸುವುದು ಅಗತ್ಯ. ಕೀಟನಾಶಕಗಳ ಬಳಕೆಗೆ ಬೇಕಾಗುವ ಹಣದ ವೆಚ್ಚ ನಾಶವಾಗಬಹುದಾದ ಬೆಳೆಯ ವೆಚ್ಚಕ್ಕಿಂತ ಹೆಚ್ಚಾಗಬಾರದು. ***

**ಕೀಟೊಪೋಡ:** ವಲಯವಂತ (ಅನೆಲಿಡ) ವಂಶಕ್ಕೆ ಸೇರಿದ ಒಂದು ಮುಖ್ಯವರ್ಗ. ಇದರಲ್ಲಿ ಪಾಲಿಕೀಟ ಮತ್ತು ಆಲಿಗೊಕೀಟ ಎಂಬ ಎರಡು ಗಣಗಳಿವೆ. ಕೆಲವರು ಈ ಗಣಗಳಿಗೆ ಪ್ರತ್ಯೇಕವಾದ ವರ್ಗಸ್ಥಾನಗಳನ್ನು ಕೊಟ್ಟು ಅವನ್ನು ಕೀಟೊಪೋಡ ಅಧಿವರ್ಗದ (ಸೂಪರ್‌ಕ್ಲಾಸ್) ಅಡಿಯಲ್ಲಿ ಸೇರಿಸಿದ್ದಾರೆ. ಈ ಗುಂಪಿನ ಪ್ರಾಣಿಗಳಲ್ಲೆಲ್ಲ ಬಿರುಗೂದಲುಗಳು (ಸೀಟೆ ಅಥವಾ ಕೀಟೆ) ಕುಳಿಗಳಲ್ಲಿ ಅಥವಾ ದೇಹದ ಎರಡು ಪಕ್ಕಗಳಲ್ಲಿ ಹೊರಚಾಚಿರುವ ಸ್ನಾಯುಮಯವಾದ ಪಾರ್ಶ್ವಪಾದಗಳ ಮೇಲೆ ಜೋಡಣೆಯಾಗಿರುವುದು ಒಂದು ಮುಖ್ಯ ವೈಶಿಷ್ಟ್ಯ. ಬಿರುಗೂದಲುಗಳ ಸಂಖ್ಯೆಯ ಮತ್ತು ಅವುಗಳ ಅಳವಡಿಕೆಯ ಆಧಾರದ ಮೇಲೆ ಈ ಗುಂಪಿನ ಪ್ರಾಣಿಗಳನ್ನು ಪಾಲಿಕೀಟ (ಬಹು ಬಿರುಗೂದಲಿನ ವಲಯವಂತಗಳು) ಮತ್ತು ಆಲಿಗೊಕೀಟಗಳೆಂದು (ಮಿತ ಬಿರುಗೂದಲಿನ ವಲಯವಂತಗಳು) ವರ್ಗೀಕರಿಸಲಾಗಿದೆ.

ಕೀಟೊಪೋಡ ಗುಂಪಿನ ಪ್ರಾಣಿಗಳ ದೇಹ ಸಾಮಾನ್ಯವಾಗಿ ದ್ವಿಪಾರ್ಶ್ವಸೌಷ್ಠವದಿಂದ ಕೂಡಿದ್ದು ಖಂಡ ಅಥವಾ ವಲಯಗಳಾಗಿ ವಿಭಾಗವಾಗಿದೆ. ಖಂಡಗಳು ಒಂದರ ಹಿಂದೊಂದು ಸರಣಿಯಲ್ಲಿ ಅಳವಡಿಸಿರುತ್ತವೆ. ದೇಹದ ಖಂಡೀಭವನ (ಸೆಗ್ಮೆಂಟೇಷನ್) ದೇಹದ ಮೇಲಾಯದಲ್ಲಿ ಮಾತ್ರ ಸೀಮಿತಗೊಂಡಿರದೆ ಒಳಭಾಗದಲ್ಲೂ ವ್ಯಾಪಿಸಿದೆ. ದೇಹದ ಗೋಡೆಗೂ ಮತ್ತು ಅನ್ನನಾಳದ ಗೋಡೆಗೂ ಮಧ್ಯೆಯಿರುವ ದೇಹಾಂತರಾವಕಾಶ ಅಥವಾ ಸೀಲೋಮು ಕೂಡ ನಡುಪೊರೆಗಳಿಂದ (ಸೆಪ್ಟ) ವಿಭಾಗವಾಗಿದೆ. ಪಾಲಿಕೀಟ ಗುಂಪಿನಲ್ಲಿ ಸ್ವತಂತ್ರವಾಗಿ ತೆವಳುವ ನೀರಿಸ್, ಬಿಲ ತೋಡಿಕೊಂಡು ವಾಸಿಸುವ ಅರೆನಿಕೋಲ, ನೆಲದಲ್ಲಿ ಬಿಲ ತೋಡಿ ತಮ್ಮ ಸುತ್ತಲೂ ನಳಿಕೆಯನ್ನು ರಚಿಸಿಕೊಂಡು ಜೀವಿಸುವ ಕೀಟಾಪ್ಟಿರಸ್, ಟೆರಬೆಲ್ಲ, ಸಬೆಲ್ಲ, ಮೊದಲಾದುವು, ತೇಲು ಜೀವಿಗಳಾದ ಟೋಮಾಪ್ಟಿರಸ್ ಮತ್ತು ನೆಕ್ಟೊಕೀಟ ಮುಂತಾದವನ್ನು ಕಾಣುತ್ತೇವೆ. ಪರಿಹೊಂದಾಣಿಕಾ ವಿಸ್ತರಣಕ್ಕೆ ತಕ್ಕಂತೆ ಮುಖದ ಮತ್ತು ಶಿರದ ಅಂಗಗಳು, ಪಾರ್ಶ್ವಪಾದಗಳು ಮೊದಲಾದುವು ಮಾರ್ಪಾಟು ಹೊಂದಿರುವುವಲ್ಲದೆ ಚಲನೆ, ಶ್ವಸನ, ಪಚನ ಮೊದಲಾದ ದೇಹಕ್ರಿಯೆಗಳೂ ಬದಲಾವಣೆಯನ್ನು ಪ್ರದರ್ಶಿಸುತ್ತವೆ. ದೇಹದ ಅಗ್ರಭಾಗದಲ್ಲಿ ಪ್ರೋಸ್ಟೋಮಿಯಮ್ ಇದೆ. ಸ್ವೇಚ್ಛೆಯಾಗಿ ಈಜಾಡುವ ಮತ್ತು ತೆವಳುವ ವಲಯವಂತಗಳಲ್ಲಿ ಕಣ್ಣುಗಳಿವೆ. ಸ್ಪರ್ಶತಂತುವಿನ (ಟೆಂಟಕಲ್) ರೂಪದ ಜ್ಞಾನೇಂದ್ರಿಯಗಳಿವೆ. ಆದರೆ ಬಿಲವಾಸಿಗಳಲ್ಲಿ ಅಥವಾ ನೆಲವನ್ನು ಕೊರೆದು ಹುದುಗಿಕೊಳ್ಳುವ ಪ್ರಾಣಿಗಳಲ್ಲಿ ಇವು ಇಲ್ಲ. ಇಂಥ ಪ್ರಾಣಿಗಳ ಚಲನೆಯಲ್ಲಿ ಬಿರುಗೂದಲು, ಅವುಗಳಿಗೆ ಸಂಬಂಧಿಸಿದ ಸ್ನಾಯುಗಳು ಮತ್ತು ಸ್ವಲ್ಪಮಟ್ಟಿಗೆ ಸೀಲೋಮಿನಲ್ಲಿರುವ ದ್ರವ ನೆರವಾಗುತ್ತವೆ.

ಈ ಗುಂಪಿನ ಪ್ರಾಣಿಗಳಲ್ಲಿ ಚೆನ್ನಾಗಿ ರೂಪುಗೊಂಡ ರಕ್ತನಾಳಮಂಡಲವಿದೆ. ಇದರಲ್ಲಿ ಡಾರ್ಸಲ್ (ಮೇಲ್ಭಾಗದ) ಮತ್ತು ವೆಂಟ್ರಲ್ (ಕೆಳಭಾಗದ) ರಕ್ತನಾಳಗಳು ಪ್ರಮುಖವಾದ ಭಾಗಗಳು. ಪಚನನಾಳದ ಮೇಲ್ಭಾಗದಲ್ಲಿರುವ ಡಾರ್ಸಲ್ ರಕ್ತನಾಳ ರಕ್ತವನ್ನು ಸಂಗ್ರಹಿಸಿಕೊಳ್ಳುವುದಲ್ಲದೆ ತನ್ನ ಸಂಕೋಚನದಿಂದ ದೇಹದ ಹಿಂಭಾಗದಿಂದ ಮುಂಭಾಗಕ್ಕೆ ಪ್ರವಹಿಸುವಂತೆ ಮಾಡುತ್ತದೆ. ಅನ್ನನಾಳದ ತಳಭಾಗದಲ್ಲಿರುವ ವೆಂಟ್ರಲ್ ರಕ್ತನಾಳ ರಕ್ತವನ್ನು ದೇಹದ ಇತರ ಭಾಗಗಳಿಗೆ ವಿತರಣೆ ಮಾಡುತ್ತದೆ. ಇದರಲ್ಲಿ ರಕ್ತ ದೇಹದ ಅಗ್ರಭಾಗದಿಂದ ಪಶ್ಚಭಾಗಕ್ಕೆ ಹರಿಯುತ್ತದೆ. ಇವೆರಡು ರಕ್ತನಾಳಗಳಿಗೂ ಸಂಬಂಧ ಕಲ್ಪಿಸುವ ಒಂದು ಅಥವಾ ಹಲವು ರಕ್ತನಾಳಗಳಿರುತ್ತವೆ. ಆಲಿಗೊಕೀಟದ ಪ್ರಾಣಿಗಳಲ್ಲಿ ಈ ರಕ್ತನಾಳಗಳು ಪಾರ್ಶ್ವಹೃದಯಗಳಾಗಿ ರೂಪುಗೊಂಡಿವೆ. ರಕ್ತಪರಿಚಲನೆಯ ಈ ಮೂಲವಿನ್ಯಾಸದಲ್ಲಿ ಬಗೆಬಗೆಯ ವ್ಯತ್ಯಾಸಗಳನ್ನು ಕಾಣಬಹುದು. ದೇಹಾಂತರಾವಕಾಶ ವಿಶಾಲವಾಗಿದ್ದು ಪಚನನಾಳದ ಸುತ್ತಲೂ ವ್ಯಾಪಿಸಿದೆ. ಆದರೆ ಅಕ್ಕಪಕ್ಕದ ಎರಡು ಖಂಡಗಳ ದೇಹಾಂತರಾವಕಾಶವನ್ನು ಪ್ರತ್ಯೇಕಿಸುವಂತೆ ಸ್ನಾಯುಮಯವಾದ ನಡುಗೋಡೆಗಳು ರೂಪುಗೊಂಡಿವೆ. ಅಲ್ಲದೆ ಪಚನನಾಳವನ್ನು ದೇಹಾಂತರಾವಕಾಶ ಕುಹರದಲ್ಲಿ ಒಂದು ನಿರ್ದಿಷ್ಟಸ್ಥಾನದಲ್ಲಿಡಲು ಡಾರ್ಸಲ್ ಹಾಗೂ ವೆಂಟ್ರಲ್ ನಡುಗೋಡೆಗಳು ಬೆಳೆದಿರುತ್ತವೆ. ಪಚನಮಂಡಲ ದೇಹದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೂ ವ್ಯಾಪಿಸಿದೆ. ಬಾಯಿ ಒಂದು ತುದಿಯಲ್ಲಿ ಇದ್ದರೆ ಗುದದ್ವಾರ ಮತ್ತೊಂದು ತುದಿಯಲ್ಲಿ ಇದೆ. ಕರುಳಿಗೆ ಸಾಮಾನ್ಯವಾಗಿ ಸಂಕುಚನಾ ಸಾಮರ್ಥ್ಯವಿದೆ. ಶ್ವಸನ ಕಾರ್ಯ ಕಿವಿರು ಅಥವಾ ಕ್ಲೋಮಗಳ ರೂಪದಲ್ಲಿ ಬೆಳೆದಿರುವ ಅಂಗಗಳಿಂದ ನಡೆಯುತ್ತದೆ. ಕೀಟೊಪೋಡ ಪ್ರಾಣಿಗಳ ವಿಸರ್ಜನಾಂಗಗಳಿಗೆ ನೆಫ್ರೀಡಿಯಗಳೆಂದು ಹೆಸರು. ಒಂದೊಂದು ಖಂಡದಲ್ಲಿ ಒಂದು ಜೊತೆ ನೆಫ್ರೀಡಿಯಗಳಿರುತ್ತವೆ. ಮಾದರಿ ರೂಪದ ನೆಫ್ರೀಡಿಯಮ್ ಸಂಕೀರ್ಣ ಸ್ವರೂಪದ ಒಂದು ನಳಿಕೆ. ಅದರಲ್ಲಿ ಶಿಲಕೆಗಳಿಂದ ಕೂಡಿದ ಆಲಿಕೆ (ನೆಫ್ರೋಸ್ಟೋಮ್), ಗ್ರಂಥಿಕೋಶಗಳಿಂದ ಕೂಡಿದ ಭಾಗಗಳಿರುತ್ತವೆ. ನೆಫ್ರೀಡಿಯದ ನಳಿಕೆ ದೇಹದ ಹೊರಭಾಗದಲ್ಲಿ ನೆಫ್ರೀಡಿಯೋಪೋರ್ ಎಂಬ ದ್ವಾರದ ಮೂಲಕ ಹೊರತೆಗೆಯುತ್ತದೆ. ನರಮಂಡಲದಲ್ಲಿ ಒಂದು ಜೊತೆ ಗ್ಯಾಂಗ್ಲಿಯಗಳಿಂದ ಕೂಡಿದ ಮಿದುಳು, ಪೆರಿಈಸೋಫ್ಯಾಗಸಿನ ನರವಲಯ ಮತ್ತು ಪ್ರತಿಖಂಡದಲ್ಲೂ ಗ್ಯಾಂಗ್ಲಿಯಗಳಿಂದ ಕೂಡಿದ ಎರಡು ವೆಂಟ್ರಲ್ ನರಹುರಿಗಳಿವೆ. ಎರಡು ನರಹುರಿಗಳನ್ನು ಕೂಡಿಸುವ ಗ್ಯಾಂಗ್ಲಿಯದಿಂದ ಇಕ್ಕಡೆಗಳಿಗೆ ಸಣ್ಣ ಸಣ್ಣ ನರಗಳು ಹೊರಡುತ್ತವೆ.

ಕೀಟೊಪೋಡಾ ಗುಂಪಿನಲ್ಲಿ ಹೆಣ್ಣು ಗಂಡೆಂಬ ಲಿಂಗಭೇದವಿರಬಹುದು ಅಥವಾ ಒಂದೇ ಪ್ರಾಣಿಯ ದೇಹದಲ್ಲಿ ಗಂಡುಹೆಣ್ಣುಗಳಿಗೆ ಸಂಬಂಧಿಸಿದ ಪ್ರಜನನ ಗ್ರಂಥಿಗಳಿರಬಹುದು. ಇವುಗಳಲ್ಲೆಲ್ಲ ಲಿಂಗಾಣುಗಳು ದೇಹಾಂತರಾವಕಾಶ ಪೊರೆಯಿಂದಲೇ ಉದ್ಭವವಾಗುತ್ತವೆ. ಗರ್ಭಾಂಕುರಿತ ಅಂಡಾಣು ಬೆಳೆವಣಿಗೆ ಹೊಂದಿ ನೇರವಾಗಿ ಪ್ರೌಢಾವಸ್ಥೆಯನ್ನು ತಲುಪಬಹುದು. ಇಲ್ಲವೆ ತನ್ನ ಬೆಳೆವಣಿಗೆಯ ಹಂತದಲ್ಲಿ ಸ್ವತಂತ್ರವಾಗಿ ಈಜಿ ಜೀವಿಸುವ ಟ್ರೋಕೋಫೋರ್ ಎಂಬ ಲಾರ್ವಾವಸ್ಥೆಯಲ್ಲಿ ಕೊಂಚಕಾಲ ಕಳೆದು ಅನಂತರ ಪ್ರೌಢಪ್ರಾಣಿಯಾಗಬಹುದು. ಈ ಲಾರ್ವ ಅಂಜೂರದ ಆಕಾರದಲ್ಲಿದ್ದು, ಇದಕ್ಕೆ ಅಗಲವಾದ ಮುಂತುದಿಯಿದೆ. ಈ ತುದಿಯಲ್ಲಿ ನೀಳವಾದ ಅನೇಕ ಶಿಲಕೆಗಳಿವೆ. ಪಚನಮಂಡಲ ಸಂಪೂರ್ಣವಾಗಿದ್ದು ಅದರಲ್ಲಿ ಬಾಯಿ, ಅನ್ನನಾಳ, ಜಠರ, ಕರುಳು ಮತ್ತು ಗುದದ್ವಾರವನ್ನು ಗುರುತಿಸಬಹುದು. ಕೆಲವು ಲಾರ್ವಗಳಿಗೆ ಕಣ್ಣುಗಳಿರುವುದೂ ಉಂಟು. ಅಲ್ಲದೆ ಇವುಗಳಲ್ಲಿ ಒಂದು ಜೊತೆ ಲಾರ್ವಾವಸ್ಥೆಯ ನೆಫ್ರೀಡಿಯಂ ಮತ್ತು ಸ್ನಾಯುತಂತುಗಳಿರುತ್ತವೆ. ಇಂಥ ತೇಲೀಜುವ ಲಾರ್ವ ರೂಪಪರಿವರ್ತನೆ ಹೊಂದಿ ಪ್ರೌಢಜೀವಿಯಾಗುತ್ತದೆ. (ನೋಡಿ: ಅನೆಲಿಡ : ಅಲಿಗೊಕೀಟ: ಪಾಲಿಕೀಟ.) (ಬಿ.ಎನ್. ಬಿ.)

**ಕೀಟೋಗ್ನಾತ:** ಪ್ರಾಣಿರಾಜ್ಯದ ಅಕಶೇರುಕಗಳ ಒಂದು ಕಿರಿಯ ವಂಶ. ಈ ವಂಶದ ಪ್ರಾಣಿಗಳು ಕಿರಿಯ, ಪಾರದರ್ಶಕವಾದ, ಶರೀರಾಂತರಾವಕಾಶಗಳುಳ್ಳ ಜೀವಿಗಳು. ಸಮುದ್ರದ ನೀರಿನ ಮೇಲ್ಭಾಗದಲ್ಲಿ ವಾಸಿಸುತ್ತವೆ. ಬಾಣಗಳಂತೆ ತೀವ್ರ ಚಲನೆಯಿರುವುದರಿಂದ ಬಾಣದ ಹುಳುಗಳೆಂದು (ಆರೋವರ್ಮ್) ಹೆಸರು. ಇವುಗಳ ಆಹಾರ ಸೂಕ್ಷ್ಮವಾದ ಏಕಕೋಶಜೀವಿಗಳು, ಕಠಿಣ ಚರ್ಮಿಗಳು ಮತ್ತು ಸಾಗರದ ಆಳಗಳಲ್ಲಿ ಸಾಗಿ ಹೋಗುತ್ತ ಇರುವ ತೇಲೀಜುಜೀವಿಗಳು.

ಪ್ರಾಣಿಯ ಶರೀರವು ನೀಳವಾಗಿದ್ದು ಸಣ್ಣಗೆ ದುಂಡಗಿರುವ ತಲೆ, ಮುಂಡ ಮತ್ತು ಬಾಲವೆಂದು ಮೂರು ಭಾಗವಾಗಿ ವಿಂಗಡಿಸಲ್ಪಟ್ಟಿದೆ. ಶರೀರದ ಮುಂಭಾಗದ ತಳಭಾಗದಲ್ಲಿ ಬಾಯಿಯು ಸೀಳಿನಂತಿದೆ. ಇದರ ಎರಡು ಕಡೆಯೂ ಅನೇಕ ಕುಡುಗೋಲಿನಾಕಾರದ ಕೈಟಿನ್‌ನಿಂದ ಮಾಡಲ್ಪಟ್ಟ ಕೊಕ್ಕೆಗಳು ಅಥವಾ ಬಿರುಗೂದಲುಗಳಿರುವ ದವಡೆಗಳಿವೆ. ಹಾಗಾಗಿಯೇ ಕೀಟೋಗ್ನಾತ ಎಂಬ ಹೆಸರು. ಮುಂಡದಲ್ಲಿ ಒಂದು ಅಥವಾ ಎರಡು ಜೊತೆ ಪಾರ್ಶ್ವ ಈಜು ರೆಕ್ಕೆಗಳು ಮತ್ತು ಬಾಲದಲ್ಲಿ ಬಾಲದ ಈಜು ರೆಕ್ಕೆಯಿದೆ.

ಶರೀರದ ಮೇಲ್ಭಾಗದಲ್ಲಿ ಹೊರಪೊರೆಯಿದೆ. ಇದನ್ನು ಪೊರೆಯ ಕೆಳಗಿರುವ ಹೊರಚರ್ಮವು ಸ್ರವಿಸುತ್ತದೆ. ಹೊರ ಚರ್ಮದ ಕೆಳಗೆ ತೆಳುವಾದ ಆಧಾರದ ಪೊರೆಯಿದೆ. ಈ ಪೊರೆಯ ತಳಭಾಗದಲ್ಲಿ ಸ್ನಾಯು ಪದರ ಮತ್ತು ಸೀಲೊಮಿಕ್ ಒಳಪದರಗಳಿವೆ. ಸ್ನಾಯುಗಳು ದುಂಡುಹುಳುಗಳಲ್ಲಿರುವ ಮೂಲರೂಪದ ಸ್ನಾಯುಗಳನ್ನು ಹೋಲುತ್ತವೆ. ಮುಂಡದಲ್ಲಿ ಎರಡು ಸ್ನಾಯುಗಳ ಕಂತೆಗಳು ಮೇಲ್ಭಾಗದಲ್ಲಿ, ಎರಡು ಕೆಳಭಾಗದಲ್ಲಿ ಇವೆ. ವರ್ತುಲ ಸ್ನಾಯುಗಳಿಲ್ಲ. ಪ್ರಾಣಿಯ ಚಲನೆಯು ಶರೀರದ ಪಾರ್ಶ್ವದ ಚಲನೆಯಿಂದಾಗುತ್ತದೆ. ಮುಂಡದಲ್ಲಿ ವಿಶಾಲವಾದ ಶರೀರಾಂತರಾವಕಾಶವಿದೆ. ಇದರ ಒಳಭಾಗದಲ್ಲಿ ಅವಕಾಶದ ಹೊರಚರ್ಮವಿದೆ (ಸೀಲೋಮಿಕ್ ಎಪಿಥೀಲಿಯಂ). ಅವಕಾಶವು ಕೋಶಗಳಿಂದ ಕೂಡಿದ ದ್ರವದಿಂದ ತುಂಬಿದೆ ಮತ್ತು ಲಂಬವಾಗಿರುವ ಅಂತರಪಟಲದ ಮಡಿಕೆಗಳಿಂದ (ಮೀಸೆಂಟರಿ) ಎಡ ಮತ್ತು ಬಲ ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಎರಡು ಅಡ್ಡ ವಿಭಜಕ ಭಿತ್ತಿಗಳು ಅವಕಾಶವನ್ನು ತಲೆ, ಮುಂಡ ಹಾಗೂ ಬಾಲಗಳಿಗೆ ಸರಿ ಹೊಂದುವ ಹಾಗೆ ಮೂರು ಭಾಗವಾಗಿ ವಿಂಗಡಿಸಿದೆ. ದವಡೆಸ್ನಾಯುಗಳಿಂದ ತಲೆಯ ಅವಕಾಶವು ಚಿಕ್ಕದಾಗಿದೆ.

ಜೀರ್ಣನಾಳವು ನೀಳವಾಗಿದೆ. ಬಾಯಿ, ಸ್ನಾಯುಗಂಟಲು, ಅನ್ನ ನಾಳ , ನೀಳವಾದ ಕರುಳು ಹಾಗೂ ಗುದದ್ವಾರಗಳಿವೆ. ಕರುಳಿನ ಒಳಭಾಗದಲ್ಲಿ ಶಿಲಕೆಗಳಿರುವ ಅನುಲೇಪಕ ಪದರವಿದೆ.

ವಿಶೇಷವಾದ ಉಸಿರಾಡುವ ಅಂಗವ್ಯೂಹವಾಗಲಿ ರಕ್ತ ಚಲನೆ ವ್ಯೂಹವಾಗಲಿ ಇರುವುದಿಲ್ಲ. ನರವ್ಯೂಹವು ಗಂಟಲಿನ ಮೇಲಿರುವ ಒಂದು ಶಿರೋನರಗ್ರಂಥಿ (ಸೆಂಟ್ರಲ್ ಗ್ಯಾಂಗ್ಲಿಯಾನ್) ಯನ್ನು ಪಡೆದಿದೆ. ಶರೀರದ ಮಧ್ಯದಲ್ಲಿ ಕೆಳ ನರಗ್ರಂಥಿಯಿದೆ. ಈ ಎರಡು ನರಗ್ರಂಥಿಗಳನ್ನು ಸೇರಿಸುವ ನೀಳವಾದ ನರಗಳು ಗಂಟಲಿನ ಎರಡು ಕಡೆಯಲ್ಲಿದ್ದು ಅನ್ನನಾಳದ ಸುತ್ತಲೂ ಒಂದು ಉಂಗುರಾಕೃತಿಯಾಗಿದೆ. ಈ ನರಗ್ರಂಥಿಗಳಿಂದ ಶರೀರದ ವಿವಿಧ ಭಾಗಗಳಿಗೆ ನರಗಳು ಹೊರಡುತ್ತವೆ.

ತಲೆಯಲ್ಲಿ ಒಂದು ಜೊತೆ ಕಣ್ಣುಗಳು, ಶಿಲಕೆ ಕೋಶಗಳಿಗಿರುವ ಒಂದು ಘ್ರಾಣೇಂದ್ರಿಯ ಅಂಗವೂ ಇವೆ. ಶರೀರ ಹಾಗು ಈಜು ರೆಕ್ಕೆಗಳ ಮೇಲ್ಭಾಗದಲ್ಲಿ ಸ್ಪರ್ಶದ ಕೋಶಗಳು ಗೊಂಚಲು ಗೊಂಚಲಾಗಿವೆ.

ಕೀಟೋಗ್ನಾತಗಳು ದ್ವಿಲಿಂಗ ಪ್ರಾಣಿಗಳು. ಅಂಡಾಶಯಗಳು ಜೋಡಿಯಾಗಿ, ನೀಳವಾಗಿ ಅಂಡಾಶಯ ನಾಳವನ್ನು ಆವರಿಸಿಕೊಂಡಿವೆ. ಈ ಎರಡೂ ನಾಳಗಳು ಮುಂಭಾಗದಲ್ಲಿ ಮುಚ್ಚಲ್ಪಟ್ಟು ಹಿಂಭಾಗದಲ್ಲಿ ಸೆಮಿನಲ್ ಕೋಶವನ್ನು ಪ್ರವೇಶಿಸುಸತ್ತವೆ. ಈ ಕೋಶವು ಹೊರಭಾಗಕ್ಕೆ ಹೆಣ್ಣು ಜನನೇಂದ್ರಿಯ ದ್ವಾರದಿಂದ ತೆರೆಯಲ್ಪಟ್ಟಿದೆ.

ಗರ್ಭಧಾರಣೆ ಶರೀರದ ಒಳಗಡೆಯಾಗುತ್ತದೆ. ಇವುಗಳ ಜೀವನಚಕ್ರದಲ್ಲಿ ಲಾರ್ವಗಳಿರುವುದಿಲ್ಲ. ಮೊಟ್ಟೆಯೊಡೆದು ಬರುವ ಎಳೆಯ ಪ್ರಾಣಿಗಳು ಪ್ರಬುದ್ಧ ಜೀವಿಗಳನ್ನು ಹೋಲುತ್ತವೆ.

ಈ ವಂಶದಲ್ಲಿರುವ ಮುಖ್ಯ ಜಾತಿಗಳು ಮೂರು; ಸಾಜಿಟ್ಟಾ, ಸ್ಪಾಡೆಲ್ಲಾ ಮತ್ತು ಕ್ರೋಹ್ನಿಯಾ. ಇವುಗಳೆಲ್ಲವೂ ಸಮುದ್ರ ನೀರಿನ ಮೇಲ್ಭಾಗದಲ್ಲಿ ವಾಸಿಸುವ ಪ್ರಾಣಿಗಳು. ಕೆಲವು ಸಾರಿ ಬಹಳ ಹೆಚ್ಚು ಸಂಖ್ಯೆಯಲ್ಲಿ ಕಂಡು ಬರುತ್ತವೆ. ಮತ್ತೆ ಕೆಲವು ಸಲ ಬಹಳ ತಳಕ್ಕೆ ಹೊರಟುಹೋಗುತ್ತವೆ.

ಕೀಟೋಗ್ನಾತಗಳನ್ನು 1768 ರಲ್ಲಿ ಸ್ಲಾಬರ್ ರವರು ಮೊದಲಿಗೆ ಕಂಡು ಹಿಡಿದರು. 1954 ರಲ್ಲಿ ಲ್ಯೂಕಾರ್ಟ ರವರು ಕೀಟೋಗ್ನಾತಿ ಎಂಬ ಒಂದು ಗುಂಪನ್ನು ಮಾಡಿ ದುಂಡುಹುಳುಗಳು ಹಾಗೂ ವಲಯವಂತಗಳ ನಡುವೆ ಸೇರಿಸಿದರು.

ಕೀಟೋಗ್ನಾತವನ್ನು ಇತರ ಯಾವ ಸೀಲೋಮೇಟ ವಂಶಗಳೊಡನೆ ಸುಲಭವಾಗಿ ಹೊಂದಾಣಿಕೆ ಮಾಡಲಾಗುವುದಿಲ್ಲ. ಈ ವಂಶದ ಪ್ರಾಣಿಗಳ ಶರೀರಾಂತರಾವಕಾಶವು ಮೂರು ವಿಭಾಗಗಳಿರುವುದರಿಂದ ಕಂಟಕಚರ್ಮಿ ಮತ್ತು ಹೆಮಿಕಾರ್ಡೇಟಗಳ ಮೇಲ್ಮೈನ ಹೋಲಿಕೆಯನ್ನು ಹೊಂದಿವೆ. ಆದರೆ ಬೆಳವಣಿಗೆಯಲ್ಲಿ ವ್ಯತ್ಯಾಸವಿದೆ. ಪ್ರಾಣಿಯಲ್ಲಿರುವ ಬಾಲವು ನಿಜವಾಗಿದ್ದು ಇದು ಕಶೇರುಕಗಳಲ್ಲಿ ಮಾತ್ರ ಕಂಡು ಬರುತ್ತದೆ. ಶರೀರದಲ್ಲಿರುವ ಈಜು ರೆಕ್ಕೆಗಳು, ಉಂಗುರಾಕೃತಿಯ ನರ ಗ್ರಂಥಿಯ ವರ್ತುಲ, ಸ್ನಾಯುಗಂಟಲು, ನಾಲ್ಕು ಸ್ನಾಯು ಕಂತೆಗಳು, ವರ್ತುಲ ಸ್ನಾಯುಗಳು ಇಲ್ಲದಿರುವುದು, ಈ ಗುಣಗಳಲ್ಲಿ ಕೀಟೋಗ್ನಾತವು ದುಂಡುಹುಳುಗಳನ್ನು ಹೋಲುತ್ತವೆ. ಆದರೆ ಶರೀರಾಂತರಾವಕಾಶದ ಬೆಳವಣಿಗೆಯು ಕೀಟೋಗ್ನಾತವನ್ನು ದುಂಡುಹುಳುಗಳಿಂದ ಬೇರ್ಪಡಿಸುತ್ತದೆ. ಹಾಗಾಗಿ ಕೀಟೋಗ್ನಾತವನ್ನು ಬೇರೆ ವಂಶವಾಗಿ ಪರಿಗಣಿಸಲಾಗಿದೆ. ಮೆಕ್ ಬ್ರೈಡ್ (1914) ರವರ ಪ್ರಕಾರ ಈ ವಂಶವು ಇತರ ಯಾವ ವಂಶಗಳೊಡನೆ ಖಚಿತವಾದ ಸಂಬಂಧವನ್ನು ಹೊಂದಿಲ್ಲ. (ಕೆ.ಪಿ.ಆರ್.)

**ಕೀಲುಗಟ್ಟು:** ಮೂಳೆಗಳ ಸಂಧಿಗಳ ಚಲನೆಯಲ್ಲಿ ತೊಂದರೆ. ಎರಡು ಮೂಳೆಗಳು ತುದಿಯಲ್ಲಿ ಸೇರಿ ಕೀಲು ರಚಿಸುತ್ತವೆ. ಚಲನೆ ಕೀಲುಗಳು ಮತ್ತು ಅಚಲ ಕೀಲುಗಳೆಂದು ಎರಡು ವಿಧದ ಕೀಲುಗಳಿವೆ. ಕೆಲವೊಂದು ವೇಳೆ ಕೀಲು ಹಿಡಿದು ಕಟ್ಟಿದ ಹಾಗಾಗಿ ಕೀಲು ಅಲುಗಾಡದಂತಾಗುವುದು. ಇದಕ್ಕೆ ಕಾರಣಗಳು ಕೀಲಿನ ಒಳಗಿರಬಹುದು ಇಲ್ಲವೆ ಕೀಲಿನ ಹೊರಗೆ ಇರಬಹುದು.

ಕೀಲುಗಟ್ಟುವುದರಲ್ಲಿ ಮುಖ್ಯವಾಗಿ ಎರಡು ವಿಧ. ಕೀಲು ಸುತ್ತಲಿನ ಇಲ್ಲವೆ ಒಳಗಿನ ಊತಕ ತಂತುಕದಿಂದಾಗಿ ಕೀಲುಗಟ್ಟಬಹುದು. ಕೀಲಿನ ಮೇಲ್ಮೈಯ ಮೆಲ್ಲೆಲುಬು ಹಾಳಾಗಿ ಅದರ ತಳದೆಲುಬು ಬೆಳೆದು ಕೀಲಿನ ಇನ್ನೊಂದು ಎಲುಬಿನೊಂದಿಗೆ ಕೂಡಿಕೊಂಡು ಕೀಲುಗಟ್ಟಬಹುದು: ಮೊದಲಿನದಕ್ಕೆ ತಂತುಕ ಕೀಲು ಗಟ್ಟು ಎನ್ನುತ್ತಾರೆ: ಎರಡನೆಯದಕ್ಕೆ ಎಲುಬಿನ ಕೀಲುಗಟ್ಟು ಎನ್ನುತ್ತಾರೆ.

ಕೀಲಿಗೆ ಯಾವುದಾದರೂ ಸೋಂಕು ಹತ್ತಿ ಕೀಲಿನ ಮೆಲ್ಲೆಲುಬು, ಕೀಲುಚೀಲ ಇಲ್ಲವೆ ಕೀಲಿನ ಹುರಿಗಳು ಹಾಳಾಗಿ ಅಂಟಿಕೊಂಡು ಕೀಲು ಆಡದಂತಾಗಬಹುದು. ಇಲ್ಲಿ ಮೆಲ್ಲೆಲುಬು ಪೂರ್ತಿ ಹಾಳಾಗುವದಿಲ್ಲ. ಇಂತಹ ಸಂದರ್ಭಗಳಲ್ಲಿ ಕೀಲು ಕೊಂಚ ಅಲುಗಾಡಿದರೂ ತುಂಬಾ ನೋವಾಗುತ್ತದೆ. ಕ್ಷಯದಿಂದ ಕೀಲು ಹಾಳಾದಾಗ ತಂತುಕ ಕೀಲುಗಟ್ಟಾಗುವುದು. ನಂಜಿನ ಸೋಂಕು ಕೀಲುಗಳಲ್ಲಿ ಉಂಟಾದರೆ ಕೀಲು ಮೆಲ್ಲೆಲುಬು ಹಾಳಾಗಿ ಎಲುಬಿನ ಕೀಲುಗಟ್ಟು ಉಂಟಾಗುತ್ತದೆ. ಇಲ್ಲಿ ಕೀಲು ಪೂರ್ಣ ಅಚಲವಾಗುತ್ತದೆ. ಅಲುಗಾಡಲು ಆಸ್ಪದವಿಲ್ಲವಾಗಿ ನೋವು ಸಹ ಇರುವದಿಲ್ಲ.

ಗಾಯ, ಪೆಟ್ಟು, ಸೋಂಕು, ಭಾಗದ ಉಪಯೋಗಹೀನತೆ, ಎಲುಬು ಮುರಿದಾಗ ಅಳವಡಿಸುವ ಪ್ಲಾಸ್ಟರ ದಬ್ಬೆ, ಅಥವಾ ಅಚ್ಚು (ಕಾಸ್ಟ), ಶಸ್ತ್ರ ಕ್ರಿಯೆಯ ನಂತರ ವ್ಯಾಯಾಮದ ಕೊರತೆ ಹಾಗೂ ಕೆಲವೊಮ್ಮೆ ಬೇಕಾಗಿ ಶಸ್ತ್ರಕ್ರಿಯೆಯಿಂದಲೂ ಪಡೆದ ಕೀಲುಗಟ್ಟುವಿಕೆ, ವಯಸ್ಸಾದಂತೆ ಸವೆತದಿಂದಾಗುವ ಎಲುಗೀಲುರಿತ (ಆಸ್ಟಿಯೋ ಆರ್ಥ್ರೊಸಿಸ್), ಬೆನ್ನೆಲುಬುಗಳ ಉರಿತ (ಸ್ಪಾಂಡಿಲೋಸಿಸ್) ರುಮಟಾಯ್ಡ್ ಕೀಲುರಿತ; ಸ್ನಾಯು ಕುಗ್ಗುವಿಕೆಗಳಂಥಹ ರೋಗಕಾರಕ ಸ್ಥಿತಿಗಳಲ್ಲಿ ಕೀಲುಗಟ್ಟುವಿಕೆ ಉಂಟಾಗುವುದು. ಎಲುಬು ಮುರಿದಾಗ ಇಲ್ಲವೆ ಕೀಲು ಬಿಟ್ಟಾಗ ಆ ಭಾಗವನ್ನು ನೀವಿದರೆ, ಬಲವಾಗಿ ಬಿಗಿದು ಕಟ್ಟಿದರೆ, ವ್ಯಾಯಾಮ ಮಾಡದಿದ್ದರೆ, ಸ್ನಾಯುವಿನಲ್ಲಿ ಎಲುಬು ಮೊಳಕೆಯೊಡೆದರೆ (ಮಯೋಸೈಟಿಸ್ ಆಸಿಫಿಕೆನ್ಸ್); ಚರ್ಮಕ್ಕೆ ಗಾಯವಾಗಿ ಚರ್ಮ ಸುಕ್ಕುಗಟ್ಟಿದರೆ ಕೀಲುಗಟ್ಟಿ ಕೀಲಿನ ಚಲನೆ ಇಲ್ಲದಂತಾಗುವುದು. ಹೀಗೆ ಕೀಲುಗಟ್ಟುವಿಕೆಗೆ ಅನೇಕಾನೇಕ ಕಾರಣಗಳಿವೆ.

ಅನೇಕ ಸಂದರ್ಭಗಳಲ್ಲಿ ಕೀಲುಗಟ್ಟುವಿಕೆಯನ್ನು ತಡೆಗಟ್ಟಬಹುದು. ಎಲುಬು ಮುರಿದಾಗ, ಕೀಲು ಸರಿದಾಗ ಆ ಭಾಗದಲ್ಲಿ ನೀವುವುದನ್ನು ಮಾಡಲೇಬಾರದು. ಒರೆಸುವುದು, ತಿಕ್ಕುವುದಕ್ಕೆ ಆಸ್ಪದ ಕೊಡಲೇಬಾರದು. ಭಾಗವನ್ನು ಜೋರಾಗಿ ಬಿಗಿದು ಕಟ್ಟಬಾರದು. ಮುರಿದ ಭಾಗ ಸರಿಕೂಡಿಸಿ ಹಿಡಿದಿಟ್ಟು ಉಪಚರಿಸುವಾಗ ಮುರಿತದ ಕೆಳಗಿನ ಮತ್ತು ಮೇಲಿನ ಕೀಲುಗಳನ್ನು ಚುರುಕಾಗಿ ಆಡಿಸುತ್ತಿರಬೇಕು. ಹೀಗಾದರೆ ಕೀಲುಗಟ್ಟುವುದು ಸಂಭವಿಸುವದಿಲ್ಲ. ಕೆಲವು ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ಮಾಡಿ ತಂತುಗಟ್ಟಿದುವುಗಳನ್ನು ಸಡಿಲಗೊಳಿಸಿ ಕೀಲು ಮತ್ತೆ ಚಲನೆ ಪಡೆಯುವಂತೆ ಮಾಡಲು ಸಾಧ್ಯವಿದೆ. ***

**ಕುಂಜಪಕ್ಷಿ:** ಪ್ಯಾಸೆರಿಫಾರ್ಮಿಸ್ ಗಣದ ಟೈಲನೋರಿಂಕಿಡೆ ಕುಟುಂಬಕ್ಕೆ ಸೇರಿದ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು (ಬೋವರ್ ಬರ್ಡ್). ಗಂಡು ಹಕ್ಕಿ ಹೆಣ್ಣಿನೊಡನೆ ನಡೆಸುವ ಪ್ರಣಯಾಚರಣೆಯ ಸಮಯದಲ್ಲಿ ಸುಂದರವಾದ ಮತ್ತು ಆಕರ್ಷಕವಾದ ಲತಾ ಕುಂಜಗಳನ್ನು ನಿರ್ಮಿಸುವುದರಿಂದ ಇವಕ್ಕೆ ಈ ಹೆಸರು ಬಂದಿದೆ. ಟೈಲನೋರಿಂಕಿಡೆ ಕುಟುಂಬದಲ್ಲಿ ಸುಮಾರು ೧೭ ಪ್ರಭೇದಗಳಿವೆ. ಇವುಗಳಲ್ಲಿ ಮುಖ್ಯವಾದುವು ಟೈಲನೋರಿಂಕಸ್ ವಯೊಲೇಸಿಯಸ್ (ಸ್ಯಾಟಿನ್ ಬೋವರ್ ಬರ್ಡ್), ಸೆರಿಕ್ಯುಲಸ್ ಆರಿಯಸ್ (ಗೋಲ್ಡನ್ ಬೋವರ್ ಬರ್ಡ್), ಸೆರಿಕ್ಯುಲಸ್ ಕ್ರೈಸೋಸಿಫ್ಯಾಲಸ್ (ರೀಜೆಂಟ್ ಬೋವರ್ ಬರ್ಡ್), ಕ್ಲಾಮಿಡೀರ ಮ್ಯಾಕ್ಯುಲೇಟ (ಸ್ಪಾಟೆಡ್ ಬೋವರ್ ಬರ್ಡ್), ಆ್ಯಂಬಿಐಯಾರ್ನಿಸ್ ಇನಾರ್ನೇಟಸ್ (ಕ್ರೆಸ್ಟ್‌ಲೆಸ್ ಗಾರ್ಡನರ್) ಮುಂತಾದುವು. ಎಲ್ಲ ಪ್ರಭೇದಗಳೂ ಆಸ್ಟ್ರೇಲಿಯ ಮತ್ತು ನ್ಯೂಗಿನಿಗಳಲ್ಲಿ ಮಾತ್ರ ಕಾಣಬರುತ್ತವೆ.

ಎಲ್ಲ ಪ್ರಭೇದಗಳ ಹಕ್ಕಿಗಳೂ ಸುಮಾರು ೨೦–೩೫ ಸೆಂಮೀ ಉದ್ದವಿರುವ ಮಧ್ಯಮ ಗಾತ್ರದುವು. ಹೆಣ್ಣು ಹಕ್ಕಿಗೆ ಆಕರ್ಷಕವಾದ ಬಣ್ಣವಿಲ್ಲ. ಗಂಡುಗಳು ಮಾತ್ರ ಅತ್ಯಂತ ವರ್ಣರಂಜಿತವಾಗಿವೆ. ನೇರಳೆ, ಕೆಂಪು, ಕಿತ್ತಳೆ, ಕಪ್ಪು, ಬಂಗಾರ, ಹಸಿರು ಇತ್ಯಾದಿ ಬಣ್ಣಗಳ ವೈವಿಧ್ಯವಲ್ಲದೆ ತಲೆಯ ಮೇಲೆ ಹಲವಾರು ಬಣ್ಣಗಳ ಕಿರೀಟಗಳಿರುವುದೂ ಉಂಟು. ಈ ಲಕ್ಷಣದಲ್ಲಿ ಕುಂಜಪಕ್ಷಿಗಳು ತಮ್ಮ ಹತ್ತಿರದ ಸಂಬಂಧಿಗಳಾದ ದಿವ್ಯಪಕ್ಷಿಗಳನ್ನು (ಬರ್ಡ್ಸ್ ಅಫ್ ಪ್ಯಾರಡೈಸ್) ಹೋಲುತ್ತವೆ.



ಕುಂಜಪಕ್ಷಿ

ಕುಂಜಪಕ್ಷಿಗಳ ಗಂಡುಗಳು ತಮ್ಮ ಪ್ರಣಯಕೇಳಿಗಾಗಿ ಸುಂದರವಾದ ಲತಾ ಕುಂಜಗಳನ್ನು ಕಟ್ಟುತ್ತವೆ. ಎಲೆಗಳಿಂದ ನಿರ್ಮಿಸುವ ಕುಂಜಗಳನ್ನು ಮೂಳೆ ಚೂರುಗಳು, ಜರೀಗಿಡಗಳು, ಆರ್ಕಿಡ್ ಸಸ್ಯಗಳು, ಗರಿಗಳು, ಗಾಜಿನ ಚೂರುಗಳು, ಹೂಗಳು, ಬಸವನ ಹುಳುವಿನ ಚಿಪ್ಪು, ಹೊಳೆಯುವ ಬಣ್ಣದ ಕಾಯಿಗಳು ಮುಂತಾದುವುಗಳಿಂದ ಅಲಂಕರಿಸುತ್ತವೆ. ಇವನ್ನು ಜೋಡಿಸುವಲ್ಲಿ ಒಪ್ಪ, ಓರಣವನ್ನು ಪ್ರದರ್ಶಿಸುತ್ತವೆ. ಕುಂಜವನ್ನು

ನಿರ್ಮಿಸುವ ಮೊದಲು ಅದಕ್ಕೆ ಸರಿಯಾದ ಸ್ಥಳವನ್ನು ಆಯ್ದು, ಶುಚಿಗೊಳಿಸಿ, ಸುಮಾರು ೧.೨ ಚಮೀ ಸ್ಥಳದಲ್ಲಿ ಕಡ್ಡಿಗಳನ್ನು ಹರಡಿ ಅನಂತರ ೪ ಸೆಂಮೀ ಎತ್ತರದ ಎರಡು ದಪ್ಪ ಕಡ್ಡಿಗಳನ್ನು ಆಚೀಚೆ ಸಿಕ್ಕಿಸಿ ಅದರ ಮೇಲೆಲ್ಲ ಓರೆಯಾಗಿ ಚಾವಣಿಯನ್ನು ನಿರ್ಮಿಸುತ್ತವೆ. ರೀಜೆಂಟ್ ಮತ್ತು ಸ್ಯಾಟಿನ್ ಬೋವರ್ ಹಕ್ಕಿಗಳು ತಮ್ಮ ಜೊಲ್ಲಿನೊಂದಿಗೆ ಸಸ್ಯಜನ್ಯ ಬಣ್ಣಗಳನ್ನು ಸೇರಿಸಿ ಕುಂಜಗಳಿಗೆ ಬಳಿಯುವುದೂ ಉಂಟು. ಬಣ್ಣ ಬಳಿಯುವಾಗ ಯಾವುದಾದರೂ ಮರದ ತೊಗಟೆಯನ್ನೊ ಎಲೆಗಳ ಕಂತೆಯನ್ನೊ ಕುಂಚದಂತೆ ಉಪಯೋಗಿಸುತ್ತವೆ. ಈ ಎಲ್ಲ ಲಕ್ಷಣಗಳಲ್ಲಿ ಮಾನವನಿಗೂ ಕಡಿಮೆಯಿಲ್ಲದ ಜಾಣ್ಮೆ, ಕೌಶಲವನ್ನು ಪ್ರದರ್ಶಿಸುತ್ತವೆ. ಲತಾಕುಂಜಗಳನ್ನು ನಿರ್ಮಿಸುವುದೊಂದೇ ಅಲ್ಲದೆ, ಅವನ್ನು ಅತ್ಯಂತ ಶ್ರದ್ಧೆ, ಉತ್ಸಾಹಗಳಿಂದ ಕಾಯುವುದು, ಬೇರೆ ಯಾವ ಗಂಡುಹಕ್ಕಿಯೂ ಇದರ ಹತ್ತಿರ ಬರದಂತೆ ನೋಡಿಕೊಳ್ಳುವುದು, ಬಾಡಿದ ಎಲೆ ಹೂಗಳನ್ನು ಬದಲಿಸುವುದು ಮುಂತಾದ ಕಾರ್ಯಗಳನ್ನು ನಡೆಸುತ್ತವೆ. ಹೀಗೆ ನಿರ್ಮಿಸುವ ಕುಂಜಗಳು ಒಂದೊಂದು ಪ್ರಭೇದದಲ್ಲೂ ಭಿನ್ನವಾಗಿವೆ. ಈ ಕುಂಜಗಳನ್ನು ಗಂಡು, ಹೆಣ್ಣುಗಳೆರಡೂ ತಮ್ಮ ಪ್ರಣಯಾಚರಣೆಯ ರಂಗಭೂಮಿಯಾಗಿ ಉಪಯೋಗಿಸುತ್ತವೆ. ಗಂಡು ಹೆಚ್ಚು ಕಡಿಮೆ ಇಂಥ ಗೂಡಿನ ಬಳಿಯೇ ಯಾವಾಗಲೂ ಇದ್ದು ಬೇರೆ ಗಂಡುಗಳೊಂದಿಗೆ ಜಗಳವಾಡುತ್ತಲೊ ಹೆಣ್ಣು ಹಕ್ಕಿಗಳನ್ನು ಆಕರ್ಷಿಸುವ ಸಲುವಾಗಿ ಕುಣಿಯುತ್ತಲೊ ಕಾಲಕಳೆಯುತ್ತದೆ. ವರ್ಷ ವರ್ಷವೂ ಒಂದೇ ಕುಂಜವನ್ನು ಉಪಯೋಗಿಸುವುದು ವಾಡಿಕೆ. ಅದನ್ನೆ ರಿಪೇರಿಮಾಡುವುದು, ಹೆಚ್ಚಿಸುವುದು ನಡೆದೇ ಇರುತ್ತದೆ. ಇಷ್ಟೆಲ್ಲ ಶ್ರದ್ಧೆ, ಉತ್ಸಾಹಗಳಿಂದ ಕುಂಜಗಳನ್ನು ನಿರ್ಮಿಸುವ ಜಾಣ್ಮೆ ಗಂಡುಹಕ್ಕಿಗಿದ್ದರೂ ಈ ಸಾಮರ್ಥ್ಯವನ್ನು ಮೊಟ್ಟೆಯಿಡುವುದಕ್ಕಾಗಿ ಗೂಡುಕಟ್ಟಲು ಉಪಯೋಗಿಸುವುದಿಲ್ಲ. ಮೊಟ್ಟೆಯಿಡುವ ಕಾಲದಲ್ಲಿ ಹೆಣ್ಣು ಹಕ್ಕಿ ಬೇರೆ ಹೋಗಿ ಮರಗಳ ಮೇಲೆ ಕಡ್ಡಿಗಳನ್ನು ಬಳಸಿಕೊಂಡು ಒರಟಾದ ಗೂಡನ್ನು ನಿರ್ಮಿಸಿ ೨–೪ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳ ಮೇಲೆ ಕಾವುಕೂರುವ ಕೆಲಸ, ಮರಿಗಳ ಪಾಲನೆ ಹೆಣ್ಣಿಗೆ ಸೇರಿದ್ದು.

ಕುಂಜಪಕ್ಷಿಗಳ ಆಹಾರ ಹಣ್ಣು, ಬೀಜ, ಜೀರುಂಡೆ ಮುಂತಾದುವು. ***

**ಕುಂಡೆ ಕುಸುಕ:** ಪ್ಯಾಸೆರಿಫಾರ್ಮಿಸ್ ಗಣದ ಓಸೈನ್ ಗುಂಪಿನ ಮೋಟಸಿಲ್ಲಿಡೆ ಕುಟುಂಬದ ಹಕ್ಕಿ (ವ್ಯಾಗ್ ಟೈಲ್). ದಾಸರ ಹಕ್ಕಿ, ಕಾಡಿಗೆ ಸೊಗಸಿನ ಹಕ್ಕಿ ಇದರ ಪರ್ಯಾಯ ನಾಮಗಳು. ಮೋಟಸಿಲ್ಲ ಎಂಬ ವೈಜ್ಞಾನಿಕ ಹೆಸರಿನ ಜಾತಿಗೆ ಸೇರಿದೆ. ಇದರಲ್ಲಿ ಹಲವಾರು ಪ್ರಭೇದಗಳಿವೆ. ಮುಖ್ಯವಾದುವು ಮೋಟಸಿಲ್ಲ ಕ್ಯಾಸ್ಪಿಕ, ಮೋ. ಸಿಟ್ರಿಯೋಲ ಮತ್ತು ಮೋ. ಅಲ್ಬ. ಎಲ್ಲ ಪ್ರಭೇದಗಳೂ ಗುಬ್ಬಚ್ಚಿಯ ಗಾತ್ರದುವು. ಮೈಬಣ್ಣ ಕಪ್ಪು, ಬಿಳಿ, ಬೂದು, ಹಳದಿ ಇತ್ಯಾದಿ ವೈವಿಧ್ಯಪೂರ್ಣ. ಕೊಕ್ಕಿನ ಬಣ್ಣ ಕಪ್ಪು. ಅಂಗಾಲು ಉದ್ದವಾಗಿ, ತೆಳುವಾಗಿದೆ. ಹಿಂದಿನ ಉಗುರು ಬಾಗಿಕೊಂಡಿದೆ.

ಕುಂಡೆ ಕುಸುಕಗಳು ಸಾಮಾನ್ಯವಾಗಿ ಹೊಳೆ ಮತ್ತು ನಿಂತಿರುವ ನೀರಿನ ಪ್ರದೇಶಗಳಲ್ಲಿರುತ್ತವೆ. ಕೆಲವು ಪ್ರಭೇದಗಳು ಹೊಲಗಳಲ್ಲಿ, ಹುಲ್ಲುಗಾವಲುಗಳಲ್ಲಿರುವುದೂ ಉಂಟು. ಓಲಾಡುತ್ತ ಇವು ಹಾರಾಡುವ ನೋಟ ಆಕರ್ಷಕವಾಗಿದೆ. ಇವುಗಳ ಆಹಾರ ಕೀಟಗಳು, ಹುಳುಗಳು, ಸಣ್ಣ ಮೃದ್ವಸ್ಥಿ ಮೀನುಗಳು ಮತ್ತು ಕಠಿಣ ಚರ್ಮಿಗಳು. ದನಗಳ ಮೈಮೇಲಿರುವ ಕೀಟಗಳಿಗೋಸ್ಕರ ಸುತ್ತ ಹಾರಾಡುವುದೂ ಉಂಟು.

ಕುಂಡೆ ಕುಸುಕ

ಗೂಡುಗಳನ್ನು ಬಂಡೆಗಳ ಬಿರುಕು, ಮರದ ಪೊಟರೆ ಅಥವಾ ಗೋಡೆಯ ಸಂದು, ರಂಧ್ರ, ದೊಡ್ಡ ಕಿಟಕಿಗಳ ಮೇಲೆ ಅಥವಾ ನೆಲದ ಮೇಲೆ ಸಸ್ಯಗಳ ಮಧ್ಯೆ ಮಾಡುತ್ತವೆ. ಪಾಚಿ, ಹುಲ್ಲು ಮತ್ತು ಬೇರುಗಳನ್ನು ಉಪಯೋಗಿಸಿ, ಅವುಗಳ ಮೇಲೆ ಕೂದಲಿನ ಮತ್ತು ಪುಕ್ಕಗಳ ಹೊದಿಕೆಯನ್ನು ಮುಚ್ಚಿ ಗೂಡು ಕಟ್ಟುತ್ತವೆ. ಗೂಡುಕಟ್ಟಲು ಅನುಕೂಲವಾದ ಪ್ರದೇಶದ ಆಯ್ಕೆ ಹೆಣ್ಣುಹಕ್ಕಿಗೆ ಸೇರಿದ್ದು. ಸಾಮಾನ್ಯವಾಗಿ 4–6 ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯ ಬಣ್ಣ ವಿವಿಧ ಪ್ರಭೇದಗಳಲ್ಲಿ ಬೇರೆ ಬೇರೆಯಾಗಿರುವುದು. ಕೆಲವು ಪ್ರಭೇದಗಳಲ್ಲಿ ಮೊಟ್ಟೆಗಳ ಬಣ್ಣ ತಿಳಿಮೇಘ ವರ್ಣ ಅಥವಾ ಕಂದು. ಅವುಗಳ ಮೇಲೆ ಬೂದು, ಕಪ್ಪು, ಅಥವಾ ಕಂದು ಬಣ್ಣದ ಚುಕ್ಕೆಗಳಿರುತ್ತವೆ. ಇನ್ನು ಕೆಲವು ಬಗೆಗಳಲ್ಲಿ ಹಳದಿ ಬಣ್ಣದವಿದ್ದು, ಮೇಲೆ ಗಾಢ ಹಳದಿ ಮತ್ತು ಹಸಿರು ಮಿಶ್ರಿತ ಕಂದು ಚುಕ್ಕೆಗಳಿರುತ್ತವೆ. ಹೆಣ್ಣುಹಕ್ಕಿ 2 ವಾರಗಳ ಕಾಲ ಕಾವು ಕೊಡುತ್ತದೆ. ಮರಿಗಳನ್ನುಣಿಸುವ ಕೆಲಸವನ್ನು ಗಂಡು, ಹೆಣ್ಣುಗಳೆರಡೂ ಮಾಡುತ್ತವೆ. (ಎನ್.ವಿ.ಎ.)

**ಕುಂದಿಲಿ:** ಮೊಲವನ್ನು (ಹೇರ್) ಹೋಲುವ ಒಂದು ಬಿಲವಾಸಿ ಸ್ತನಿ (ರ‍್ಯಾಬಿಟ್). ಲ್ಯಾಗೊಮಾರ್ಫ ಗಣದ ಲೆಪೋರಿಡೆ ಕುಟುಂಬಕ್ಕೆ ಸೇರಿದೆ. ಸಾಮಾನ್ಯವಾಗಿ ಇದನ್ನೂ ಮೊಲವೆಂದೇ ನಿರ್ದೇಶಿಸುವುದುಂಟಾದರೂ ಇದಕ್ಕೂ ಮೊಲಕ್ಕೂ ಹಲವಾರು ವ್ಯತ್ಯಾಸಗಳಿವೆ. ಕುಂದಿಲಿ ಗಾತ್ರದಲ್ಲಿ ಮೊಲಕ್ಕಿಂತ ಚಿಕ್ಕದು; ಬಿಲಗಳಲ್ಲಿ ವಾಸಿಸುತ್ತದೆ; ಅದೇ ತಾನೇ ಜನಿಸಿದ ಮರಿಗಳ ಮೈಮೇಲೆ ಕೂದಲಿರುವುದಿಲ್ಲ; ಕಣ್ಣುಗಳು ತೆರೆದಿರುವುದಿಲ್ಲ. ಮರಿಗಳು ಬಹಳ ಅಸಹಾಯ ಸ್ಥಿತಿಯಲ್ಲಿರುತ್ತವೆ. ಮೊಲ ದೊಡ್ಡ ಗಾತ್ರದ್ದು; ಪೊದೆಗಳಲ್ಲಿ ಅಡಗಿಕೊಂಡಿರುವುದಾದರೂ ಸಾಮಾನ್ಯವಾಗಿ ಇದರ ವಾಸ ಮೈದಾನಗಳಲ್ಲಿ. ಮರಿಗಳು ಹುಟ್ಟಿದಾಗ ಅವಕ್ಕೆ ಮೈತುಂಬ ಕೂದಲುಂಟು. ಕಣ್ಣು ತೆರೆದಿರುತ್ತವೆ. ಹುಟ್ಟಿದ ಕೆಲವೇ ನಿಮಿಷಗಳಲ್ಲಿ ಓಡಾಡುವಷ್ಟು, ಆಹಾರಾನ್ವೇಷಣೆಯಲ್ಲಿ ತೊಡಗುವಷ್ಟು ಶಕ್ತಿಯುತವಾಗಿರುತ್ತವೆ.

ಯುರೋಪ್ ಮತ್ತು ಏಷ್ಯದಲ್ಲಿ ಆರಿಕ್ಟಲ್ಯಾಗಸ್ ಕ್ಯುನಿಕ್ಯುಲಸ್ ಎಂಬ ಪ್ರಭೇದಕ್ಕೂ ಉತ್ತರ ಅಮೆರಿಕದ ಸಿಲ್ವಿಲ್ಯಾಗಸ್ ಜಾತಿಗೆ ಸೇರಿದ ಪ್ಯಾಲುಸ್ಟ್ರಸ್, ಏಕ್ವಾಟಿಕಸ್, ಫ್ಲಾರಿಡೇನಸ್, ನುಟಾಲಿಯೈ ಮತ್ತು ಆಡುಬಾನಿಯೈ ಪ್ರಭೇದಗಳಿಗೂ ಕುಂದಿಲಿಗಳೆಂದು ಹೆಸರಿದೆ. ಆರಿಕ್ಟಲ್ಯಾಗಸ್ ಕ್ಯುನಿಕ್ಯುಲಸ್ ಪ್ರಭೇಧವನ್ನು ಹಲವು ಶತಮಾನಗಳಿಂದ ಸಾಕುಪ್ರಾಣಿಯಾಗಿಯೂ ಬೆಳೆಸಲಾಗಿದೆ. ಸ್ವಾಭಾವಿಕವಾಗಿ ಸಿಕ್ಕುವ ಕುಂದಿಲಿ ಪೊದೆಗಳಲ್ಲಿ, ಬೇಲಿಯ ಸಾಲುಗಳಲ್ಲಿ, ನೆಲದಲ್ಲಿ ಪೊಟರೆಗಳನ್ನು ಮಾಡಿಕೊಂಡು ವಾಸಿಸುತ್ತದೆ. ಸಂಘಜೀವಿಯಾದ ಇದು ಸಣ್ಣ ಸಣ್ಣ ಗುಂಪುಗಳಲ್ಲಿರುವುದೇ ವಾಡಿಕೆ. ಬಲು ಸೌಮ್ಯವಾದ ಮತ್ತು ಪುಕ್ಕಲು ಸ್ವಭಾವದ ನಿಶಾಚರ ಪ್ರಾಣಿಯಿದು. ಎಳೆ ಚಿಗುರು, ಬೇರು, ಗೆಡ್ಡೆಗೆಣಸು, ತೊಗಟೆ, ಕಾಯಿಗಳು ಇದರ ಪ್ರಧಾನ ಆಹಾರ.

ಬೂದು ಅಥವಾ ಬಿಳಿಯ ಬಣ್ಣದ ದೇಹ, ಒತ್ತಾದ ಮತ್ತು ನಯವಾದ ತುಪ್ಪುಳು, ಸೀಳಿದ ಮೇಲ್ತುಟಿ, ಮುಂಗಾಲಿಗಿಂತ ಉದ್ದವಾದ ಹಿಂಗಾಲುಗಳು. ಮೂಗಿನ ಹೊಳ್ಳೆಯ ತುದಿಯಲ್ಲಿದ್ದು ಕೂದಲಿನಿಂದ ಆವೃತವಾಗಿರುವ ಸಂವೇದನಾ ಗ್ರಾಹಿ ಮೆತ್ತೆಗಳು, ಅಂಗಾಲುಗಳಲ್ಲಿರುವ ರೋಮಾವೃತ ಮೆತ್ತೆಗಳು, ಬಾಚಿ ಹಲ್ಲುಗಳು, ತಲೆಗಿಂತ ಬಲು ಉದ್ದವಾದ ಕಿವಿಗಳು, ಮೋಟು ಬಾಲ ಇವು ಕುಂದಿಲಿಯ ಪ್ರಮುಖ ಲಕ್ಷಣಗಳು. ದೃಷ್ಟಿ ಮಂದವಾಗಿದ್ದರೂ ಇದರ ಶ್ರವಣೇಂದ್ರಿಯ ಹಾಗೂ ಘ್ರಾಣೇಂದ್ರಿಯಗಳು ಬಹಳ ಚುರುಕು. ಶತ್ರುವಿನ ಸುಳಿವನ್ನು ದೂರದಿಂದಲೇ ತಿಳಿದು ಕುಪ್ಪಳಿಸುತ್ತ ಓಡುತ್ತದೆ. ಆದರೆ ಓಡುವುದರಲ್ಲಿ ಮೊಲಗಳಷ್ಟು ಚುರುಕಲ್ಲ. ಬಹಳ ದೂರ ಒಂದೇ ಸಮನಾಗಿ ಓಡಲಾರದ ಇದು ಬಲುಬೇಗ ಶತ್ರುವಿನ ಕೈಗೆ ಸಿಕ್ಕಿ ಬೀಳುತ್ತದೆ. ಕೆಲವೊಮ್ಮೆ ಶತ್ರುವಿನ ಸುಳಿವು ತಿಳಿದಾಗ ಕಡೆದ ಪ್ರತಿಮೆಯಂತೆ ಒಂದು ಕಡೆ ನಿಶ್ಚಲವಾಗಿ ಕುಳಿತಿದ್ದು ಇದ್ದಕ್ಕಿದ್ದಂತೆಯೆ ನೆಗೆದು ಓಡಿಬಿಡುತ್ತದೆ. ಹೆದರಿದಾಗ ಹೆಪ್ಪುಗಟ್ಟಿ ಕೂತು ಬಿಡುವುದು ಇಂಥ ಅನೇಕ ಪ್ರಾಣಿಗಳ ಸಹಜ ವರಸೆಗಳಲ್ಲೊಂದು.

ತನ್ನ ಸಂತಾನೋತ್ಪತ್ತಿಯ ಸಾಮರ್ಥ್ಯಕ್ಕೆ ಹೆಸರಾದ ಇದು ಸೂಲಿಗೆ ೪–೭ ಮರಿಗಳಂತೆ ವರ್ಷಕ್ಕೆ ೬–೭ ಸೂಲು ಮರಿ ಹಾಕುತ್ತದೆ. ಗರ್ಭಧಾರಣೆಯ ಅವಧಿ ಸುಮಾರು ೩೦ ದಿವಸಗಳು. ಮರಿ ಹಾಕುವ ಮುನ್ನ ಹೆಣ್ಣು ಕುಂದಿಲಿ ನೆಲದಲ್ಲಿ ಬಿಲ ತೋಡಿ ಕಡ್ಡಿ, ಹುಲ್ಲು ಮುಂತಾದವನ್ನು ಹರಡಿ ಗೂಡನ್ನು ನಿರ್ಮಿಸುತ್ತದೆ. ಮರಿಗಳ ಪಾಲನೆ ಹೆಣ್ಣಿಗೆ ಮಾತ್ರ ಸೇರಿದ್ದು. ಮರಿಗಳು ಸುಮಾರು ೪೦ ವಾರಗಳಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ.

ಕುಂದಿಲಿಗಳನ್ನು ಮಾಂಸ, ತುಪ್ಪುಳಗಳಿಗಾಗಿ ಬೇಟೆಯಾಡುತ್ತಾರೆ. ಮುದ್ದಿಗಾಗಿ ಪಳಗಿಸಿ ಸಾಕುವುದು ಉಂಟು. ನೋಡಿ–ಮೊಲ. ***

**ಕುಚ್ಚು ಮೀನು:** ಓಫಿಯೊಸೆಫಾಲಸ್ ಸ್ಟ್ರಿಕ್ಟಸ್ ಎಂಬ ವೈಜ್ಞಾನಿಕ ಹೆಸರಿನ ಮೀನು. ಇದನ್ನು ಮರಲ್ ಎಂದೂ ಕರೆಯುವುದುಂಟು. ಅಕ್ಯಾಂತೋಟೆರಿಜಿಯೈ ಗಣಕ್ಕೆ ಸೇರಿದ ಅಸ್ಥಿಮೀನು. ಇದಕ್ಕೆ ಹಾವಿನ ತಲೆಯಂಥ ತಲೆಯಿದೆ. ಇದರಿಂದಲೇ ಇದಕ್ಕೆ ಓಫಿಯೊಸೆಫಾಲಸ್ ಎಂಬ ಹೆಸರು ಬಂದಿದೆ (ಓಫಿಯೊಸ್ ಎಂದರೆ ಹಾವು; ಸೆಫಾಲಸ್

ಎಂದರೆ ತಲೆ). ಈ ಮೀನಿನ ತಲೆಯಲ್ಲಿ ಅನೇಕ ಕುಹರಗಳಿದ್ದು, ಅವು ಹೆಚ್ಚುಕಡಿಮೆ ಶ್ವಾಸಕೋಶಗಳಂತೆಯೇ ನೇರವಾಗಿ ಗಾಳಿಯ ಉಸಿರಾಟಕ್ಕೆ ಸಹಕಾರಿಯಾಗಿವೆ. ಇದರಿಂದಾಗಿ ಈ ಮೀನು ನೀರಿನಿಂದ ಹೊರಗೂ ಬಹಳ ಕಾಲ ಜೀವಂತವಾಗಿರಬಲ್ಲುದು. ಕುಚ್ಚುಮೀನಿನ ದೇಹ ನೀಳವಾಗಿದೆ. ದೇಹದ ಬಣ್ಣ ಬೆನ್ನುಭಾಗದಲ್ಲಿ ಕಂದು, ಪಕ್ಕ ಹಾಗೂ ತಳಭಾಗದಲ್ಲಿ ಮಾಸಲು ಬಿಳಿ. ಪಕ್ಕಗಳಲ್ಲಿ ಮಚ್ಚೆಗಳೂ ಇವೆ. ದೇಹದುದ್ದಕ್ಕೂ ಎರಡು ಪಕ್ಕಗಳಲ್ಲೂ ಪಾರ್ಶ್ವರೇಖೆ ಇದೆ. ಈ ರೇಖೆ ಬೆನ್ನಿನ ಈಜು ರೆಕ್ಕೆಯ 12ನೆಯ ರೆಕ್ಕೆಕಡ್ಡಿಯ (ರೇ) ಬಳಿ ಕೊಂಚ ಡೊಂಕಾಗಿದೆ. ತಲೆ ಅಗಲ, ಅದರ ಮೇಲೆಲ್ಲ ಹುರುಪೆಗಳಿವೆ. ಬಾಯಿ ದೊಡ್ಡದು. ನಾಲ್ಕು ಕಿವಿರುಗಳೂ ಅಗಲವಾದ ಕಿವಿರುರಂಧ್ರಗಳೂ ಇವೆ.

ಸಿಹಿನೀರು ಮೀನುಗಳಲ್ಲೆಲ್ಲ ಹೆಸರುವಾಸಿಯಾದ ಕುಚ್ಚುಮೀನು ಆಳವಿಲ್ಲದ ಮತ್ತು ಜೊಂಡು ಬೆಳೆದ ಕೆರೆ, ಕುಂಟೆ ಮತ್ತು ಹೊಂಡಗಳಲ್ಲಿ ವಾಸಿಸುತ್ತದೆ. ಆಹಾರಮೀನುಗಳಲ್ಲಿ ಬಹಳ ರುಚಿಯಾದ ಮೀನೆಂದು ಪರಿಗಣಿಸಲ್ಪಟ್ಟಿರುವ ಇವನ್ನು ಕೆರೆಗಳಲ್ಲಿ ಬೆಳೆಸುವುದುಂಟು. ಸ್ವಜಾತಿಯ ಹಾಗೂ ಕಾರ್ಪ್ ಜಾತಿಯ ಮೀನುಗಳು, ಕಪ್ಪೆ, ಸೀಗಡಿ, ಕೀಟಗಳು ಮುಂತಾದುವು ಇದರ ಪ್ರಧಾನ ಆಹಾರ.

ಕುಚ್ಚುಮೀನಿನ ವಂಶಾಭಿವೃದ್ಧಿ ಮೊಟ್ಟೆಗಳ ಮೂಲಕ. ನೀರಿನ ಮೇಲೆ ತೇಲುವ ಮೊಟ್ಟೆಗಳನ್ನಿಡುವುದು ಇದರ ವೈಶಿಷ್ಟ್ಯ. ವರ್ಷಪೂರ್ತಿ ಮೊಟ್ಟೆಯಿಡುವುದಾದರೂ ಮಳೆಗಾಲದಲ್ಲಿ ಈ ಚಟುವಟಿಕೆ ಹೆಚ್ಚು. ಮೊಟ್ಟೆಗಳು ಒಂದೆರಡು ದಿನಗಳಲ್ಲಿ ಒಡೆದು ಮರಿಯಾಗುತ್ತವೆ. ಮೊಟ್ಟೆ ಮತ್ತು ಮರಿಗಳ ಸಂರಕ್ಷಣೆಯನ್ನು ತಾಯಿಮೀನು ನೋಡಿಕೊಳ್ಳುತ್ತದೆ. ಮರಿಗಳು 5–8 ಸೆಂಮೀ ಉದ್ದ ಬೆಳೆದಾಗ ಅವುಗಳ ಬಣ್ಣ ಕಿತ್ತಳೆಗೆಂಪು. ಸುಮಾರು 30 ಸೆಂಮೀ ಉದ್ದವಾದಾಗ ಪ್ರೌಢಾವಸ್ಥೆಗೆ ಬರುತ್ತವೆ.

ಅತಿರುಚಿಯಾದ ಆಹಾರ ಮೀನಾದ ಕುಚ್ಚುಮೀನಿಗೆ ಬೇಡಿಕೆಯೂ ಅಧಿಕ. ಇದರ ಬೆಲೆಯೂ ಹೆಚ್ಚು. ಇದನ್ನು ಹಿಡಿಯಲು ಬಲೆ, ದಾವಣಿಗಾಳ, ಕುಚ್ಚು ಉರಲು ಮತ್ತು ಇರ್ಗುಳಿ (ಪ್ಲಂಜ್ ಬ್ಯಾಸ್ಕೆಟ್) ಮುಂತಾದವನ್ನು ಉಪಯೋಗಿಸುತ್ತಾರೆ. (ಬಿ.ಎಸ್)

**ಕುಟುಕು ಕಣ:** ಕುಟುಕುಕಣವಂತ (ಸೀಲೆಂಟರೇಟ) ಪ್ರಾಣಿಗಳ ಹೊರಚರ್ಮದಲ್ಲಿರುವ ವಿಶೇಷ ರೀತಿಯ ಜೀವಕೋಶಗಳು. ಆಧಾರ ವಸ್ತುವಿಗೆ ಅಂಟಿಕೊಂಡಿರುವ ಪ್ರಾಣಿಯ ಬುಡದ ಭಾಗವನ್ನು ಬಿಟ್ಟು ಉಳಿದೆಲ್ಲ ಭಾಗಗಳಲ್ಲಿವೆ. ಟೆಂಟಕಲ್‌ಗಳ ಮೇಲೆ ಹೆಚ್ಚು ಕೇಂದ್ರೀಕೃತವಾಗಿರುತ್ತವೆ. ಹೊರಚರ್ಮದಲ್ಲಿ ಮಯೊಎಪಿಥೀಲಿಯಲ್ ಜೀವಕೋಶಗಳ ನಡುವೆ ಬೆಣೆಗಳಂತೆ ಸಿಕ್ಕಿಕೊಂಡಿರುತ್ತವೆ. ಟೆಂಟಕಲ್‌ಗಳಲ್ಲಿ ಮಯೊಎಪಿಥೀಯಲ್ ಜೀವಕೋಶಗಳಲ್ಲಿ ಹುದುಗಿರುತ್ತವೆ. ಇವು ನಿಡೊಬ್ಲಾಸ್ಟ್ ಎಂಬ ಅಂತರಾಲೀಯ ಜೀವಕೋಶದ ಕೋಶಾಂಗವಾಗಿ ರೂಪುಗೊಳ್ಳುತ್ತವೆ. ಕುಟುಕುಕಣವು ನಿಡೊಬ್ಲಾಸ್ಟ್‌ನೊಳಗಿರುವ ಕೋಶ. ಈ ಕೋಶದ ಅಗ್ರ ತುದಿಯು ಟೊಳ್ಳಾದ ಉದ್ದನೆಯ ದಾರದಂತೆ ಮಾರ್ಪಟ್ಟು ಕೋಶದೊಳಗೆ ಸುತ್ತಿಕೊಂಡಿದೆ. ಈ ದಾರದ ಬುಡದಲ್ಲಿ ಬಾರ್ಬ್ ಎಂಬ ಮುಳ್ಳುಗಳಿವೆ. ಕೋಶದೊಳಗೆ ವಿಷಮಿಶ್ರಿತ ದ್ರವವಿದೆ. ಕೋಶಕ್ಕೆ ಇಪ್ಪದರದ, ಸಂಕುಚನ ಶಕ್ತಿ ಇರುವ ಹೊರ ಆವರಣವಿದೆ. ಕುಟುಕುಕಣದ ಹೊರ ತುದಿಯಿಂದ ನಿಡೊಸಿಲ್ ಎಂಬ ಬಿರುಗೂದಲು ಹೊರಕ್ಕೆ ಚಾಚಿರುತ್ತದೆ. ನಿಡೊಸಿಲ್‌ಗೆ ಸಂವೇದನ ಶಕ್ತಿ ಇದೆ. ಇದನ್ನು ಬಂದೂಕಿನ ಕುದುರೆಗೆ ಹೋಲಿಸಿ ಕುದುರೆಕೇಶಿ ಎನ್ನುತ್ತಾರೆ. ಪರಜೀವಿಯೊಂದು ನಿಡೊಸಿಲ್‌ಗೆ ತಾಗಿದಾಗ ಕೋಶದ ಒಳಗಿರುವ ದಾರ ದ್ರವದ ಸಂಕುಚನೆಯಿಂದ ಚಾಟಿಯಂತೆ ಸಿಡಿದು ಹೊರಬೀಳುತ್ತದೆ. ದಾರದ ಬುಡದಲ್ಲಿರುವ ಮುಳ್ಳುಗಳು ಪರಜೀವಿಯ ದೇಹದಲ್ಲಿ ಗಾಯವನ್ನುಂಟು ಮಾಡುತ್ತವೆ. ಈ ಗಾಯದೊಳಗೆ ವಿಷಮಿಶ್ರಿತ ದ್ರವದಲ್ಲಿ ಅದ್ದಿದ ದಾರವು ಪ್ರವೇಶಿಸುತ್ತದೆ. ವಿಷದ ಪರಿಣಾಮದಿಂದಾಗಿ ಪರಜೀವಿಯು ಚಿಕ್ಕದಾಗಿದ್ದರೆ ನಿಶ್ಚೇಷ್ಟಿತವಾಗಿ ಪ್ರಜ್ಞೆ ತಪ್ಪಬಹುದು. ದೊಡ್ಡದಾಗಿದ್ದರೆ ಉರಿ ಉಂಟಾಗಬಹುದು. ಪ್ರಜ್ಞೆ ತಪ್ಪಿದ ಶತ್ರುವನ್ನು ಎದುರಿಸುವಾಗ ಅನೇಕ ಕುಟುಕುಕಣಗಳು ಒಟ್ಟಿಗೆ ಸಿಡಿದು ಉರಿ ಉಂಟುಮಾಡಿ ಓಡಿಸಲು ಪ್ರಯತ್ನಿಸುತ್ತವೆ. ಆದುದರಿಂದ ಕುಟುಕುಕಣಗಳು ಆಕ್ರಮಣ ಮತ್ತು ಆತ್ಮರಕ್ಷಣೆಯ ಕೋಶಾಂಗಗಳು.

ಕುಟುಕುಕಣಗಳಲ್ಲಿ ಸ್ಪೈರೊಸಿಸ್ಟ್ ಮತ್ತು ನೆಮ್ಯಾಟೊಸಿಸ್ಟ್‌ಗಳೆಂಬ ಎರಡು ಮೂಲ ವಿಧಗಳಿವೆ. ಸ್ಪೈರೊಸಿಸ್ಟ್‌ಗಳಲ್ಲಿ ಏಕಪದರದ ಕೋಶ ಭಿತ್ತಿಯು ತೆಳುವಾಗಿದೆ. ನೀರು ಹಾದು ಹೋಗುತ್ತದೆ. ದಾರದ ಅಡ್ಡಳತೆಯು ಸಮಾನವಾಗಿದೆ. ಮುಳ್ಳುಗಳಿಲ್ಲ. ನೆಮ್ಯಾಟೊಸಿಸ್ಟ್‌ಗಳಲ್ಲಿ ದ್ವಿಪದರದ ಕೋಶಭಿತ್ತಿಯು ದಪ್ಪವಾಗಿದೆ. ನೀರು ಹಾದು ಹೋಗಲಾರದು. ದಾರದ ಬುಡವು ಉಬ್ಬಿದೆ ಮತ್ತು ಮುಳ್ಳುಗಳನ್ನು ಹೊಂದಿದೆ. ಇದನ್ನು ಬಟ್ ಎಂದು ಕರೆಯುತ್ತಾರೆ. ಜೂಆಂಥೇಯಗಳಲ್ಲಿ ಸ್ಪೈರೊಸಿಸ್ಟ್‌ಗಳೂ ಉಳಿದೆಲ್ಲ ಕುಟುಕುಕಣವಂತ ಪ್ರಾಣಿಗಳಲ್ಲಿ ನೆಮ್ಯಾಟೊಸಿಸ್ಟ್‌ಗಳು ಇವೆ.

ನೆಮ್ಯಾಟೊಸಿಸ್ಟ್‌ಗಳನ್ನು ದಾರದ ರಚನೆಯ ಮೇಲೆ ಹಲವು ವಿಧಗಳಾಗಿ ವಿಂಗಡಿಸಬಹುದು.

1) ತುದಿ ಮುಚ್ಚಿದ ದಾರಗಳಿರುವ ನೆಮ್ಯಾಟೊಸಿಸ್ಟ್‌ಗಳು: ನೇರ ದಾರಗಳನ್ನು ಹೊಂದಿರುವುವು. ರೊಪಾಲೊನಿಮ್‌ಗಳು ತಿರುಪಿರುವ ದಾರಗಳಿರುವುವು, ಡೆಸ್ಮಾನಿಮ್ ಅಥವ ವಾಲ್ವೆಂಟಗಳು.

2) ಬಟ್‌ರಹಿತ ತೆರೆದ ತುದಿಯ ದಾರಗಳಿರುವ ನೆಮ್ಯಾಟೊಸಿಸ್ಟ್‌ಗಳು:

ಅ) ಐಸೊರೈಜ ಅಥವ ಗ್ಲುಟಿನೆಂಟ್‌ಗಳಲ್ಲಿ ದಾರದ ನಳಿಕೆಯ ಅಗಲವು ಬುಡದಿಂದ ತುದಿಯವರೆಗೆ ಸಮಾನವಾಗಿದೆ. ಇವುಗಳಲ್ಲಿ ದಾರದುದ್ದಕ್ಕೂ ಮುಳ್ಳುಗಳಿದ್ದರೆ ಹೊಲೊಟ್ರೈಕಸ್ ಐಸೊರೈಜ, ಮುಳ್ಳುಗಳು ಇಲ್ಲದಿದ್ದರೆ ಎಟ್ರೈಕಸ್ ಐಸೊರೈಜ, ಬುಡದಲ್ಲಿ ಮಾತ್ರ ಮುಳ್ಳುಗಳಿದ್ದರೆ ಬ್ಯಾಸಿಟ್ರೈಕಸ್ ಐಸೊರೈಜಗಳೆಂದು ಕರೆಯುತ್ತಾರೆ.

ಆ) ಅನೈಸೊರೈಜಗಳಲ್ಲಿ ದಾರದ ನಳಿಕೆಯು ಬುಡದಲ್ಲಿ ಹಿಗ್ಗಿದೆ. ಮುಳ್ಳುಗಳು ದಾರದ ಉದ್ದಕ್ಕೂ ಇವೆ. ಇವುಗಳಲ್ಲಿ ಒಂದೇ ಗಾತ್ರದ ಮುಳ್ಳುಗಳಿದ್ದರೆ ಹೋಮೊಟ್ರೈಕಸ್ ಅನೈಸೊರೈಜಗಳೆಂತಲೂ ವಿವಿಧ ಗಾತ್ರದ ಮುಳ್ಳುಗಳಿದ್ದರೆ ಹೆಟಿರೊಟ್ರೈಕಸ್ ಅನೈಸೊರೈಜಗಳೆಂದೂ ಕರೆಯುತ್ತಾರೆ.

2. ತೆರೆದ ತುದಿಯ, ನಿರ್ದಿಷ್ಟವಾದ ಬಟ್‌ಸಹಿತ ದಾರಗಳನ್ನು ಹೊಂದಿದ ನೆಮ್ಯಾಟೊಸಿಸ್ಟ್‌ಗಳು:

ಅ) ಬಟ್‌ನ ಅಡ್ಡಳತೆ ಸಮಾನವಾಗಿದೆ. ಗಿಡ್ಡ ಬಟ್‌ಗಳಿದ್ದು ನಳಿಕೆಯು ಕೋಶಕ್ಕಿಂತ ಮೂರು ಪಾಲು ಉದ್ದವಾಗಿಲ್ಲದುವುಗಳನ್ನು ಮೈಕ್ರೊಬ್ಯಾಸಿಕ್ ಮ್ಯಾಸ್ಟಿಗೋಫೋರ್ ಎಂದೂ ನಳಿಕೆಯು ಬಟ್‌ಗಿಂತಲೂ ಚಿಕ್ಕದಾಗಿದ್ದರೆ ಮೈಕ್ರೊಬ್ಯಾಸಿಕ್ ಎಮ್ಯಾಸ್ಟಿಗೋಫೋರ್ ಎಂದೂ ಕರೆಯುತ್ತಾರೆ. ಬಟ್ ಕೋಶಕ್ಕಿಂತ ನಾಲ್ಕು ಪಾಲು ಉದ್ದವಾಗಿದ್ದರೆ ಮ್ಯಾಕ್ರೊಬ್ಯಾಸಿಕ್ ಮ್ಯಾಸ್ಟಿಗೋಫೋರ್ ಎಂದೂ ಇಂತವುಗಳಲ್ಲಿ ನಳಿಕೆಯು ಬಟ್‌ಗಿಂತ ಚಿಕ್ಕದಾಗಿದ್ದರೆ ಮ್ಯಾಕ್ರೊಬ್ಯಾಸಿಕ್ ಎಮ್ಯಾಸ್ಟಿಗೋಫೋರ್ ಎಂದೂ ಕರೆಯುತ್ತಾರೆ.

ಆ) ಬಟ್ ಬುಡದಲ್ಲಿ ಊದಿಕೊಂಡಿದ್ದರೆ ಅಥವಾ ವಿಸ್ತೃತವಾಗಿದ್ದರೆ (ಹೈಡ್ರಾ) ಸ್ಟಿನೋಸ್ಟೀಲ್ ಅಥವಾ ಪೆನೆಟ್ರೆಂಟ್‌ಗಳೆಂದು ಹೆಸರು.




**ಹೈಡ್ರದ ನಿಮ್ಯಾಟೊ**
**A. ಒಳಗಿರುವ ನಿಮ್ಯಾಟೊಸಿಸ್ಟ್ B. ಹೊರಬಂದಿರುವ ನಿಮ್ಯಾಟೊಸಿಸ್ಟ್**

ಇ) ಬಟ್‌ನ ತುದಿಯು ಅಗಲವಾಗಿ ಯುರಿಟೀಲ್‌ಗಳು, ಚಿಕ್ಕ ಬಟ್ ಮತ್ತು ಸಮಾನ ಮುಳ್ಳುಗಳಿರುವುವು ಹೋಮೊಟ್ರೈಕಸ್ ಮೈಕ್ರೊಬ್ಯಾಸಿಕ್ ಯುರಿಟೀಲ್‌ಗಳು, ಅಸಮಾನ ಮುಳ್ಳುಗಳು ಮತ್ತು ಚಿಕ್ಕ ಬಟ್‌ಗಳಿರುವವು ಹೆಟಿರೊಟ್ರೈಕಸ್ ಮೈಕ್ರೊಬ್ಯಾಸಿಕ್ ಯುರಿಟೀಲ್‌ಗಳು, ಉದ್ದವಾಗಿರುವ ಬಟ್‌ಗಳು ಮತ್ತು ತುದಿಯಲ್ಲಿ ಮುಳ್ಳುಗಳಿರುವುವು ಟಿಲೊಟ್ರೈಕಸ್ ಮ್ಯಾಕ್ರೊಬ್ಯಾಸಿಕ್ ಯುರಿಟೀಲ್‌ಗಳು, ಉದ್ದವಾಗಿರುವ ಬಟ್‌ನ ತುದಿಯನ್ನು ಬಿಟ್ಟು ಉಳಿದೆಡೆಗಳಲ್ಲಿ ಮುಳ್ಳು ಹರಡಿದ್ದರೆ ಅವುಗಳನ್ನು ಮಿರೊಟ್ರೈಕಸ್ ಮ್ಯಾಕ್ರೊಬ್ಯಾಸಿಕ್ ಯುರಿಟೀಲ್‌ಗಳೆಂದು ಕರೆಯುತ್ತಾರೆ.

ಕುಟುಕು ಕಣಗಳಿರುವ ಕುಟುಕುಕಣವಂತ ಪ್ರಾಣಿಗಳು ನಿಡೇರಿಯ ಉಪವಂಶಕ್ಕೂ ಇವುಗಳಿಲ್ಲದ ಪ್ರಾಣಿಗಳು ಎನಿಡೇರಿಯ ಅಥವ ಟೀನೊಫೋರ ಉಪವಂಶಕ್ಕೂ ಸೇರುತ್ತವೆ.

ಎನಿಡೇರಿಯಗಳಲ್ಲಿ ಕುಟುಕು ಕಣಗಳ ಬದಲು ಅಂಟುಕೋಶ ಅಥವ ಆಸಂಜಕ ಕೋಶಗಳಿವೆ. (ಎಂ.ಎಸ್.)

**ಕುಟುಕುಕಣವಂತಗಳು:** ಅಂಬಲಿ ಮೀನು, ಹೈಡ್ರ, ಗಾರ್ಗೋನಿಯ (ಕಡಲ ಬೀಸಣಿಗೆ), ಪೆರಿಫಿಲ್ಲಾ, ಪೋರ್ಚುಗೀಸ್ ಯುದ್ಧಪೋತ (ಪೋರ್ಚುಗೀಸ್ ಮ್ಯಾನ್ ಆಫ್ ವಾರ್ – ಫೈಸೇಲಿಯ), ಕಡಲ ಹೂ (ಸೀ ಆನಿಮೋನ್) ಮುಂತಾದುವನ್ನೊಳಗೊಂಡ ಒಂದು ಅಕಶೇರುಕಪ್ರಾಣಿ ವಂಶ. ಸೀಲೆಂಟರೇಟ ಎಂದು ಹೆಸರು. ಈ ಪ್ರಾಣಿಗಳಲ್ಲಿ ಜಠರಾವಕಾಶದ ಸುತ್ತ ಅವುಗಳ ದೇಹ ವ್ಯವಸ್ಥೆಯಾಗಿರುವುದೆಂಬುದನ್ನು ಸೂಚಿಸುತ್ತದೆ. ನೈಡೇರಿಯ ಎಂಬ ಹೆಸರನ್ನೂ ಬಳಸುವುದುಂಟು. ಸೂಕ್ಷ್ಮವೇದಿಯೂ ಬಳುಕುವ ರಚನೆಯವೂ ಆದ ಟೆಂಟಕಲ್ ಎಂಬ ಸ್ಪರ್ಶತಂತುಗಳೂ ಜಠರಾವಕಾಶದಲ್ಲಿ ಕುಟುಕುಕಣಗಳೂ (ನಿಮ್ಯಾಟೊಸಿಸ್ಟ್) ಇರುವುದು ಈ ವಂಶದ ಪ್ರಾಣಿಗಳ ವಿಶಿಷ್ಟ ಲಕ್ಷಣಗಳು. ದೇಹ ಸಾಮಾನ್ಯವಾಗಿ ತ್ರಿಜ್ಯಸೌಷ್ಠವವನ್ನು (ರೇಡಿಯಲ್ ಸಿಮೆಟ್ರಿ) ಪ್ರದರ್ಶಿಸುತ್ತದೆ. ಕೆಲವು ಪ್ರಾಣಿಗಳಲ್ಲಿ ದ್ವಿಪಾರ್ಶ್ವಸೌಷ್ಠವವೂ (ಬೈಲ್ಯಾಟರಲ್ ಸಿಮೆಟ್ರಿ) ಕಂಡುಬರುತ್ತದೆ. ಗಾತ್ರದಲ್ಲಿ 0.1 ಸೆಂಮೀ ನಷ್ಟು ಸಣ್ಣದಾದ ಪಾಲಿಪ್‌ಗಳಿಂದ ಹಿಡಿದು 0.9 ಮೀ ವ್ಯಾಸವುಳ್ಳ ಪಾಲಿಪ್‌ಗಳವರೆಗೂ ಇರುವುದುಂಟು. ಹಾಗೆಯೆ, ಅಷ್ಟಾಗಿ ಕಣ್ಣಿಗೆ ಬೀಳದ ಬಹು ಸಣ್ಣ ಅಂಬಲಿಮೀನುಗಳಿಂದ ಹಿಡಿದು 1.8 ಮೀ ವ್ಯಾಸದ ದೈತ್ಯಾಕಾರದ ಅಂಬಲಿ ಮೀನುಗಳವರೆಗೂ ಇರುವುದುಂಟು.

ಪ್ರತಿಯೊಂದು ಪ್ರಾಣಿಯ ಜೀವನಚರಿತ್ರೆಯಲ್ಲೂ ಪಾಲಿಪ್ ಮತ್ತು ಮೆಡೂಸ ಎಂಬ ಎರಡು ಅವಸ್ಥೆಗಳು ಪರ್ಯಾಯವಾಗಿ ಬರುವುದು ಕುಟುಕುಕಣವಂತಗಳ ಮತ್ತೊಂದು ಲಕ್ಷಣ. ಪಾಲಿಪ್‌ರೂಪ ವಸ್ತುವೊಂದಕ್ಕೆ ಅಂಟಿಕೊಂಡು ನೆಟ್ಟಗೆ ಓಲಾಡುತ್ತಿರುತ್ತದೆ. ಅದರ ತುದಿಯಲ್ಲಿ ಬಾಯಿಯೂ ಬಾಯಿಯ ಸುತ್ತ ಸ್ಪರ್ಶತಂತುಗಳೂ ಇರುತ್ತವೆ. ಇದು ಆ ಪ್ರಾಣಿಯ ಸ್ಥಾವರರೂಪ. ಮೆಡೂಸ ಚಲಿಸುವ ರೂಪ. ಸಾಮಾನ್ಯವಾಗಿ ಇದನ್ನು ಅಂಬಲಿ ಮೀನು (ಜೆಲ್ಲಿ ಫಿಷ್) ಎಂದು ಕರೆಯುವರು. ದೇಹ ಕೊಡೆಯಾಕೃತಿಯದು (ಗಂಟೆ – ಬೆಲ್). ಅದರ ಮೇಲ್ಭಾಗದ ಮಧ್ಯದಿಂದ ದೇಹದೊಳಕ್ಕೆ ಇಳಿಯುವ ಮೆನೂಬ್ರಿಯಂ ಎಂಬ ನಾಳವಿದೆ. ಆ ನಾಳದ ತುದಿಯಲ್ಲಿ ಬಾಯಿಯಿದೆ. ಗಂಟೆಯ ಸುತ್ತಣ ಅಂಚಿನಲ್ಲಿ ಸ್ಪರ್ಶತಂತುಗಳಿವೆ (ಟೆಂಟಕಲ್ಸ್). ಈ ವಂಶದ ಹೈಡೊಜ಼ೋವ ಮತ್ತು ಸ್ಕೈಫೊಜ಼ೋವ ಎಂಬ ಎರಡು ವರ್ಗಗಳ ಕುಟುಕುಕಣವಂತಗಳಲ್ಲಿ ಲಿಂಗರೀತಿಯ ವಂಶಾಭಿವೃದ್ಧಿಯಿಂದ ಪ್ಲಾನುಲ ಎಂಬ ಲಾರ್ವ ಉದ್ಭವಿಸುತ್ತದೆ. ಇದು ಯಾವುದಾದರೂ ವಸ್ತುವಿಗೆ ಕಚ್ಚಿಕೊಂಡು ವೃದ್ಧಿಯಾಗಿ ಪಾಲಿಪ್ ರೂಪವನ್ನು ತಾಳುತ್ತದೆ. ಇದು ಏಕಾಂಗಿಯಾಗಿ ಉಳಿಯಬಹುದು ಅಥವಾ ಅಲಿಂಗರೀತಿಯಿಂದ ಕವಲೊಡೆದು ಆ ಮೂಲಕ ವಂಶಾಭಿವೃದ್ಧಿಮಾಡಿ ಸಾಂಘಿಕ ಸ್ವರೂಪವನ್ನು ತಾಳಬಹುದು. ಸ್ಥಾವರ ಜೀವನವನ್ನು ನಡೆಸುವ ಪಾಲಿಪ್ ಆ ಪ್ರಾಣಿಯ ಕಿಶೋರಾವಸ್ಥೆ ಮಾತ್ರ. ಕೊನೆಗೆ ಅದು ಅಲಿಂಗರೀತಿಯಿಂದ ಮೊಗ್ಗೊಡೆದು ಮೆಡೂಸಗಳನ್ನು ಉತ್ಪತ್ತಿಮಾಡುತ್ತದೆ. ಅವು ನೀರಿನಲ್ಲಿ ಚಲಿಸುತ್ತ ಬೆಳೆದು ಲೈಂಗಿಕವಾಗಿ ಪ್ರೌಢಾವಸ್ಥೆಗೇರುತ್ತವೆ. ಅಂದರೆ, ಕುಟುಕುಕಣವಂತಗಳ ಜೀವನ ಚರಿತ್ರೆಯಲ್ಲಿ ಅಲಿಂಗರೀತಿಯಲ್ಲಿ ವಂಶಾಭಿವೃದ್ಧಿ ಮಾಡುವ ಪಾಲಿಪ್ ರೂಪವೂ ಅನಂತರ ಅದರಿಂದ ಲಿಂಗರೀತಿಯಲ್ಲಿ ಸಂತಾನೋತ್ಪತ್ತಿ ಮಾಡುವ ಮೆಡೂಸ ರೂಪವೂ ಬರುವುದರಿಂದ ಇಲ್ಲಿ ಪರ್ಯಾಯ ಸಂತಾನೋತ್ಪತ್ತಿ (ಆಲ್ಟರ್ನೇಷನ್ ಆಫ್ ಜನರೇಷನ್ಸ್) ಕಂಡುಬರುತ್ತದೆ.

ಕುಟುಕುಕಣವಂತಗಳ ದೇಹ ಒಂದೇ ದ್ವಾರವಿರುವ ಕೋಶದಂತಿರುತ್ತದೆ. ಈ ದ್ವಾರವೇ ಬಾಯಿ. ಅದು ಆಹಾರಸೇವನೆಗೂ ಮಲವಿಸರ್ಜನೆಗೂ ಇರುವ ಏಕೈಕ ಮಾರ್ಗ. ಬಾಯಿಯ ಸುತ್ತಲೂ ಕುಟುಕಕಣಗಳಿರುವ ಟೆಂಟಕಲ್‌ಗಳಿವೆ. ಇವು ಪ್ರಾಣಿಯ ಆತ್ಮರಕ್ಷಣೆಗೂ ಸ್ವಲ್ಪ ಮಟ್ಟಿಗೆ ಅದರ ಚಲನೆಗೂ ನೆರವಾಗುವ ಅಂಗಗಳು. ಇವು ಇಪ್ಪದರಿನ (ಡಿಪ್ಲೊಬ್ಲಾಸ್ಟಿಕ್) ಪ್ರಾಣಿಗಳು. ಹೊರದರ್ಮದಲ್ಲಿ ಹಲವು ಬಗೆಯ ಕೋಶಗಳಿವೆ. ಕುಟುಕುಕಣಗಳನ್ನು ರೂಪಿಸುವ ನೀಡೊಬ್ಲಾಸ್ಟ್‌ಗಳು, ಸಂವೇದಿ ಕಣಗಳು, ನರಕೋಶಗಳು (ನ್ಯೂರಾನ್ಸ್), ರಸಸ್ರಾವಕ ಕೋಶಗಳು, ಅಂತರಾಳದ ಕೋಶಗಳು (ಇಂಟರ್‌ಸ್ಟಿಷಿಯಲ್ ಸೆಲ್ಸ್), ಹೊರತೊಕ್ಕಿನ ಕೋಶಗಳು ಇವೇ ಮುಂತಾದ ಕಣಗಳನ್ನು ಅದರಲ್ಲಿ ಕಾಣಬಹುದು. ಹೊರತೊಕ್ಕಿನ ಕೋಶಗಳು ಶಿಲಿಕೆಗಳನ್ನು (ಸಿಲಿಯ) ತಳೆದಿರಬಹುದು. ಅವುಗಳ ತಳದಲ್ಲಿ ಸ್ನಾಯುವಿನ ರಚನೆಗಳಿರುತ್ತವೆ. ದೇಹದ ಒಳಮೈಯನ್ನು ಇನ್ನೊಂದು ವರಿಸೆ ಕಣಗಳು ಆವರಿಸಿರುತ್ತವೆ. ಇದರಲ್ಲೂ ಹೊರಮೈಯನ್ನು ಆವರಿಸಿರುವ ತೊಕ್ಕಿನಲ್ಲಿರುವಂಥ ವಿವಿಧ ರೀತಿಯ ಕಣಗಳಿರುತ್ತವೆ. ಜಠರದ ಒಳಭಾಗವನ್ನು ಆವರಿಸಿರುವ ತೊಕ್ಕು ಜೀರ್ಣಕೋಶಗಳ ವರಿಸೆಯಾಗಿ ಮಾರ್ಪಟ್ಟಿದೆ. ಇವು ಸ್ರವಿಸುವ ಜೀರ್ಣರಸದಲ್ಲಿರುವ ಕಿಣ್ವಕ್ಕೆ ಸಸಾರಜನಕಾದಿವಸ್ತುಗಳನ್ನು (ಪ್ರೋಟೀನ್ಸ್) ವಿಭಜಿಸುವ ಶಕ್ತಿಯಿದೆ. ಅದು ಆಹಾರವನ್ನು ಅಣುರೂಪಕ್ಕೆ ಒಡೆಯುತ್ತದೆ. ಜಠರವನ್ನು ಆವರಿಸಿರುವ ಆ ಕೋಶಗಳು ಅನಂತರ ಅದನ್ನು ಅಂತರ್ಗತಮಾಡಿಕೊಳ್ಳುತ್ತವೆ. ಆಹಾರದ ಅಂತಿಮ ಜೀರ್ಣಕಾರ್ಯವೂ ಆ ಕೋಶಗಳೊಳಗೇ ನಡೆಯುತ್ತದೆ. ಜೀರ್ಣವಾದ ಪೋಷಾಕಾಂಶಗಳು ದೇಹದ ಬೇರೆ ಬೇರೆ ಭಾಗಗಳಿಗೆ ಪ್ರಸರಿಸುವುವು. ಹೊರ ಮತ್ತು ಒಳದರ್ಮಗಳ ನಡುವೆ ಇರುವ ಅಮೀಬೊಸೈಟ್ಸ್ ಎಂಬ ಸಂಚಾರಿಕೋಶಗಳು ಪೋಷಕಾಂಶಗಳನ್ನು ದೇಹದ ಬೇರೆ ಬೇರೆ ಭಾಗಗಳಿಗೆ ಕೊಂಡೊಯ್ಯಲು ನೆರವಾಗುತ್ತವೆ. ಜಠರ ಸರಳವಾದ ಒಂದೇ ಕೋಶದ ರೂಪದಲ್ಲಿರಬಹುದು ಅಥವಾ ಮಧ್ಯದಲ್ಲಿ ಗೋಡೆಗಳಂಥ ರಚನೆಯಿದ್ದು ಹಲವು ಭಾಗಗಳಾಗಿರಬಹುದು.

ಹೈಡ್ರೋಜ಼ೋವ ವರ್ಗದ ಪಾಲಿಪ್‌ಗಳಂಥ ಸೂಕ್ಷ್ಮ ರೂಪದ ಕುಟುಕುಕಣವಂತಗಳಲ್ಲಿ ಚಲನೆಗೆ ನೆರವಾಗತಕ್ಕ ವಿಶಿಷ್ಟ ಅಂಗಗಳಾಗಲಿ ನಿರ್ದಿಷ್ಟ ಸ್ನಾಯುಗಳಾಗಲಿ ಇರುವುದಿಲ್ಲ. ಆದರೆ ಹೊರದರ್ಮದಲ್ಲೂ ಜಠರದ ಒಳಪೊರೆಯಲ್ಲೂ ಅನುಲೇಪಕ ಸ್ನಾಯುಕೋಶಗಳುಂಟು. ಅವುಗಳ ತಳಭಾಗ ಮಿಸೊಗ್ಲಿಯಕ್ಕೆ ಬಂಧಿಸಿದೆ. ಅವು ಹೊರಚರ್ಮದಲ್ಲಿ ನೀಳವಾಗಿಯೂ ಜಠರದ ಒಳಪೊರೆಯಲ್ಲಿ ವರ್ತುಲಾಕಾರದ ಪಟ್ಟಿಯಂತೆ ಅಡ್ಡಡ್ಡಲಾಗಿಯೂ ಜೋಡಿಸಿಕೊಂಡಿರುತ್ತವೆ. ವೃತ್ತ ಸ್ನಾಯುಕೋಶಗಳ ಸಂಕೋಚನದಿಂದ ದೇಹ ನೀಳವಾಗುತ್ತದೆ. ನೀಳಸ್ನಾಯು ಕೋಶಗಳ ಸಂಕೋಚನದಿಂದ ದೇಹ ಕಿರಿದಾಗುತ್ತದೆ. ದೇಹವನ್ನು ಬಾಗಿಸುವುದಕ್ಕೂ ಇದರಿಂದ ಸಾಧ್ಯವಾಗುತ್ತದೆ. ಕಡಲ ಹೂವಿನಂಥ ದೊಡ್ಡ ಪಾಲಿಪ್‌ಗಳಲ್ಲಿ ಸ್ನಾಯುಕೋಶಗಳಿಲ್ಲದಿದ್ದರೂ ಅವುಗಳ ಕಾರ್ಯವನ್ನು ನಿರ್ವಹಿಸಬಲ್ಲ ವಿಶಿಷ್ಟ ಸ್ನಾಯುಕ್ಷೇತ್ರಗಳುಂಟು. ಜಠರವನ್ನು ವಿಭಾಗಿಸುವ ಗೋಡೆಗಳ ಮುಖದುದ್ದಕ್ಕೂ ನೀಳಸ್ನಾಯುಕೋಶಗಳ ವರಿಸೆ ಕಂಡುಬರುತ್ತದೆ. ಈ ಪ್ರಾಣಿಗಳ ಮಿಸೊಗ್ಲಿಯಕ್ಕೆ ಹೆಚ್ಚು ಸ್ಥಿತಿಸ್ಥಾಪನಶಕ್ತಿ ಇದೆ. ಜಠರ ವಿಸ್ತಾರವಾಗಿದ್ದು ನೀರಿನಿಂದ ತುಂಬಿರುತ್ತದೆ. ನೀರಿನ ಒತ್ತಡಕ್ಕೆ ಒದಗೊಟ್ಟುಕೊಂಡು ಈ ಸ್ನಾಯು ಕೋಶಗಳು ಕ್ರಿಯಾಮುಖವಾಗುತ್ತವೆ.

ಮೆಡೂಸಗಳಲ್ಲಿ ಸ್ನಾಯುಗಳು ಅನುಲೇಪಕ ಕೋಶಗಳ ರೂಪದಲ್ಲಿವೆ. ಕೊಡೆಯಂಥ ಮೆಡೂಸಗಳ ದೇಹದ ನಿಮ್ನ ಪ್ರದೇಶದಲ್ಲಿ ಮಾತ್ರವಿರುವ ಇವು ವೃತ್ತಾಕಾರವಾಗಿ, ತ್ರಿಜ್ಯಮುಖದಲ್ಲಿ ಜೋಡಿಸಿಕೊಂಡಿವೆ. ಇವುಗಳ ಸಂಕೋಚನದಿಂದ ಕೊಡೆಯ ಮೇಲ್ಭಾಗದ ದೇಹದಲ್ಲಿ ಸ್ಪಂದನ ಚಲನೆಗಳಾಗುತ್ತವೆ. ಇವು ದೃಢವಾಗಿರುವ ಸ್ಥಿತಿಸ್ಥಾಪನ ಶಕ್ತಿಯುಳ್ಳ ಮಿಸೊಗ್ಲಿಯಕ್ಕೆ ಒದಗೊಟ್ಟುಕೊಂಡು ಕೆಲಸಮಾಡುತ್ತವೆ. ಕೊಡೆಯ ತಳಭಾಗದ ದೇಹಾವಕಾಶದಿಂದ ನೀರನ್ನು ಬಿರುಸಾಗಿ ಎರಚುವುದರಿಂದ ಮೆಡೂಸ ನೀರಿನಲ್ಲಿ ವೇಗವಾಗಿ ಈಜಿಕೊಂಡು ಹೋಗುತ್ತಿರುತ್ತದೆ. ಪ್ರತಿ ಸಂಕೋಚನದ ಅನಂತರ ಮಿಸೊಗ್ಲಿಯ ತನಗಿರುವ ಸಂಕೋಚನ ಶಕ್ತಿಯಿಂದ ದೇಹವನ್ನು ಮತ್ತೆ ಘಂಟಾಕೃತಿಗೆ ತಿರುಗಿಸುತ್ತದೆ.

ಕುಟುಕುಕಣವಂತಗಳ ಚಲನೆ ಬಹುಮಟ್ಟಿಗೆ ಮೈ ಮತ್ತು ಟೆಂಟಕಲ್‌ಗಳನ್ನು ಚಾಚುವುದು, ಬಾಗಿಸುವುದು, ಕಿರಿದುಮಾಡುವುದು, ಇತ್ಯಾದಿ ಕಾರ್ಯಗಳ ರೂಪದಲ್ಲಿರುತ್ತದೆ. ಮೆಡೂಸಗಳೂ ಕೆಲವು ಕಡಲಹೂಗಳೂ ನಿರಾಯಾಸವಾಗಿ ಈಜಬಲ್ಲುವು. ಕಡಲಹೂವಿನಲ್ಲಿ ಚಲನೆ ಬಾಯಿಯಬಿಲ್ಲೆ (ಓರಲ್ ಡಿಸ್ಕ್) ಮತ್ತು ಟೆಂಟಕಲ್‌ಗಳ ಬಡಿತ ಮತ್ತು ಮುಲುಕುವಿಕೆಗಳಿಂದ ನಡೆಯುತ್ತದೆ. ಸೈಫನೋಫೊರ ವರ್ಗದ ಹೈಡ್ರಾಯಿಡ್‌ಗಳು ತಮ್ಮ ದೇಹದಲ್ಲಿ ಮೆಡೂಸಗಳನ್ನು ಅಳವಡಿಸಿಕೊಂಡಿರುವುದರಿಂದ ಮೆಡೂಸಗಳಿಗಿರುವ ಚಲನೆಯ ಸೌಲಭ್ಯವನ್ನು ತಾವೂ ಬಳಸಿಕೊಳ್ಳುತ್ತವೆ. ಕೆಲವು ಪಾಲಿಪ್‌ಗಳು ಪದಾರ್ಥಗಳಿಗೆ ಅಂಟಿಕೊಂಡಿರುವ ತಮ್ಮ ತೊಟ್ಟಿನ ತಳದ ಬಿಲ್ಲೆಯ ಕೋಶಗಳ ಅಮೀಬಾಯಿಡ್ ಚಲನೆಯ ಸಹಾಯದಿಂದ ಸ್ಥಳದಿಂದ ಸ್ಥಳಕ್ಕೆ ಸ್ವಲ್ಪ ಮಟ್ಟಿಗೆ ಚಲಿಸಬಲ್ಲುವು.

ಕುಟುಕುಕಣವಂತಗಳು ಮಾಂಸಾಹಾರಿಗಳು. ಕುಟುಕುಕಣಗಳ ಸಹಾಯದಿಂದ ಸಾಗರದ ಹುಳುಗಳು, ಕ್ರಿಮಿಕೀಟಗಳು, ಲಾರ್ವಗಳು ಮುಂತಾದ ಸಣ್ಣಪುಟ್ಟ ಜೀವಿಗಳನ್ನೂ ಮರಿಮೀನುಗಳನ್ನೂ ಇತರ ಕುಟುಕುಕಣವಂತಗಳನ್ನೂ ಕುಟುಕಿ ಕೊಂದು ಭಕ್ಷಿಸುತ್ತವೆ. ಸ್ಕೈಫೊಜ಼ೋವ ವರ್ಗದ ಅಂಬಲಿ ಮೀನುಗಳಂಥ ಕೆಲವು ಪ್ರಾಣಿಗಳು ಆಹಾರವನ್ನು ಸಂಪಾದಿಸಲು ಕುಟುಕುಕಣಗಳನ್ನು ಬಳಸುವುದಿಲ್ಲ. ತಮ್ಮ ಶಿಲಿಕೆಗಳ ಚಲನೆಯಿಂದ ಬರುವ ಜಲ ಪ್ರವಾಹದಲ್ಲಿರುವ ಸೂಕ್ಷ್ಮಜೀವಿಗಳನ್ನೂ ಸಣ್ಣ ಸಣ್ಣ ಸಾವಯವ ವಸ್ತುಗಳನ್ನೂ ಸೆಳೆದುಕೊಂಡು, ಲೋಳೆಗೆ ಅಂಟಿಸಿಕೊಂಡು ಶಿಲಿಕೆಗಳ ಮತ್ತು ಸ್ಪರ್ಶತಂತುಗಳ ಸಹಾಯದಿಂದ ಬಾಯೊಳಕ್ಕೆ ತಳ್ಳಿಕೊಳ್ಳುತ್ತವೆ. ಕೆಲವು ಕುಟುಕುಕಣವಂತಗಳು ಬಾಯನ್ನು ಮೇಲಕ್ಕೆ ನೀಡಿ ಆಹಾರವನ್ನು ಸೆಳೆದುಕೊಳ್ಳುತ್ತವೆ. ಪಾಲಿಪ್‌ಗಳಲ್ಲಿ ಕೆಲವು ತಮಗಿಂತಲೂ ದೊಡ್ಡ ಜೀವಿಗಳನ್ನು ಈ ರೀತಿಯಾಗಿ ಸೆಳೆದುಕೊಂಡು ಭಕ್ಷಿಸಬಲ್ಲುವು. ಆಳವಿಲ್ಲದ ಸಮುದ್ರದಲ್ಲಿ ವಾಸಿಸುವ ಹವಳಗಳು ತಮ್ಮ ದೇಹದ ಕೋಶಗಳ ನಡುವೆ ಶೈವಲಗಳನ್ನೂ ಹೊಂದಿರುತ್ತವೆ. ಶೈವಲಗಳು ನಡೆಸುವ ದ್ಯುತಿಸಂಶ್ಲೇಷಣ ಕ್ರಿಯೆಯ ಫಲವಾಗಿ ಮೂಡುವ




ಹೈಡ್ರ: 1. ಗಂಡು, 2. ಹೆಣ್ಣು



ಹೈಡ್ರದ ಭಿತ್ತಿಯ ಅಡ್ಡಸೀಳಿಕೆ




ಹೈಡ್ರದ ಚಲನೆಯ ವಿವಿಧಹಂತಗಳು;

A ಕುಣಿತ ಚಲನೆ, B. ಪಲ್ಟಿ ಚಲನೆ



ಒಬೀಲಿಯ



ಕಡಲ ಲೇಖಣಿ



ಪೈಸೀಲಿಯೆ

ಉತ್ಪನ್ನಗಳನ್ನು ಹವಳಗಳು ಸೇವಿಸಬಹುದೆಂಬ ಅಂಶ ಈಚೆಗೆ ಕಂಡುಬಂದಿದೆ. ತಾವು ಆಶ್ರಯಪಡೆದಿರುವ ಹವಳಗಳಿಗೆ ಈ ರೀತಿ ಸಹಾಯ ಮಾಡುತ್ತ ಶೈವಲಗಳು ಒಂದು ರೀತಿಯ ಸಹಜೀವನ ನಡೆಸುತ್ತಿರುವಂತೆ ತೋರುತ್ತದೆ.

ಕುಟುಕುಕಣವಂತಗಳಲ್ಲಿ ಉಸಿರಾಟಕ್ಕಾಗಲಿ ಶುದ್ಧೀಕರಣಕ್ಕಾಗಲಿ ನಿರ್ದಿಷ್ಟ ಅಂಗಗಳಿಲ್ಲ. ಜಠರದಲ್ಲಿ ತುಂಬಿರುವ ದ್ರವದಲ್ಲಿರುವ ಅಥವಾ ವಾತಾವರಣದಲ್ಲಿರುವ ಆಮ್ಲಜನಕವನ್ನು ದೇಹಭಾಗಗಳು ಹೀರಿಕೊಂಡು ದೇಹದ ಕಶ್ಮಲಗಳನ್ನು ಹೊರದೂಡುತ್ತವೆ. ಮೇಲ್ವರ್ಗದ ಪ್ರಾಣಿಗಳಲ್ಲಿ ಕಂಡು ಬರುವ ರಕ್ತದಂಥ ದ್ರವ ಇಲ್ಲ. ಆದರೆ ದೇಹಾಂತರಾಳದಲ್ಲಿ ತುಂಬಿರುವ ದ್ರವ ಸ್ನಾಯುಕೋಶಗಳ ಸಂಕೋಚನ–ವಿಕಾಸಗಳಿಂದಲೂ ಶಿಲಿಕೆಗಳ ಚಲನೆಯಿಂದಲೂ ದೇಹದ ಎಲ್ಲ ಭಾಗಗಳಿಗೆ ಸಂಚರಿಸುವುದು. ಕಡಲ ಹೂವಿನಂಥ ಕೆಲವು ಪಾಲಿಪ್ ಜಾತಿಗಳ ದೇಹದಲ್ಲಿರುವ ನಾಳಗಳು ದ್ರವದ ಚಲನೆಗೆ ಸಹಕಾರಿ. ಮೆಡೂಸಗಳಲ್ಲಿ ದೇಹಾಂತರಾಳ ಕಾಲುವೆಗಳಂತೆ ವಿಭಾಗವಾಗಿದ್ದು ಇಡೀ ದೇಹದಲ್ಲೆಲ್ಲ ದ್ರವದ ಪರಿಚಲನೆಗೆ ವಿಶಿಷ್ಟ ರೀತಿಯಲ್ಲಿ ಸಹಕಾರಿಯೆನಿಸಿದೆ. (ನೋಡಿ–ಅಂಬಲಿಮೀನು)

ನಿರ್ದಿಷ್ಟವೂ ಸುಸ್ಪಷ್ಟವೂ ಆದ ನರಗಳಿಲ್ಲದ್ದರಿಂದ ಕುಟುಕುಕಣವಂತಗಳ ನರವ್ಯೂಹ ತೀರ ಕೆಳಮಟ್ಟದ್ದು. ಅಲ್ಲದೆ, ಅವುಗಳ ಬಹುಧ್ರುವೀ (ಮಲ್ಟಿಪೋಲಾರ್) ನರಕೋಶಗಳು ಅಲ್ಲಲ್ಲಿ ಜಾಲದಂತೆ ಒಟ್ಟುಗೂಡಿರುತ್ತವೆ. ಪಾಲಿಪ್‌ಗಳಲ್ಲಿ ಸಾಮಾನ್ಯವಾಗಿ ಇಂಥ ಒಂದೇ ಒಂದು ಜಾಲವಿರುತ್ತದೆ. ಮೆಡೂಸಗಳಲ್ಲಿ ಇಂಥ ಎರಡು ಜಾಲಗಳಿರುತ್ತವೆ. ಒಂದು ಅದರ ಈಜು ಚಲನೆಗಳಿಗೂ ಇನ್ನೊಂದು ದೇಹದ ಇತರ ಚಲನೆಗಳಿಗೂ ಸಂಬಂಧಿಸಿವೆ. ಮೆಡೂಸಗಳಲ್ಲಿ ಜ್ಞಾನೇಂದ್ರಿಯಗಳುಂಟು. ಇವುಗಳಲ್ಲಿ ಸರಳರೀತಿಯ ನೇತ್ರೇಂದ್ರಿಯ (ಆಸೆಲಸ್) ಮತ್ತು ಸ್ಥಿತಿಜ್ಞಾನೇಂದ್ರಿಯ (ಸ್ಟ್ಯಾಟೊಸಿಸ್ಟ್) ಮುಖ್ಯವಾದುವು. ಪದಾರ್ಥಗಳಿಗೆ ಕಚ್ಚಿಕೊಂಡು ಜೀವಿಸುವ ಸ್ಥಾವರ ರೂಪಿಗಳಾದ ಪಾಲಿಪ್‌ಗಳಲ್ಲಿ ಜ್ಞಾನೇಂದ್ರಿಯಗಳಿಲ್ಲ. ಆದರೆ, ಅವುಗಳಲ್ಲಿ ನರಕೋಶಗಳ ಜಾಲ ಹೆಚ್ಚು ವ್ಯಾಪಕವಾಗಿದೆ. ಅಂಬಲಿಮೀನಿನಂಥ ಕೆಲವು ಮೆಡೂಸಗಳ ಬಾಯಿಯ ಸುತ್ತಣ ಅಂಚಿನಲ್ಲಿ ನರಗಳ ರಚನೆಯಂಥ ಉಂಗುರವುಂಟು. ಯಾವುದಾದರೂ ಪ್ರಚೋದನೆ ಒದಗಿದಾಗ ಉದ್ರೇಕ ಎಲ್ಲ ಮುಖಗಳಿಗೂ ಹರಡುತ್ತದೆ. ಉದ್ರೇಕದ ತೀವ್ರತೆ ಪ್ರಚೋದನೆಯ ತೀವ್ರತೆಯನ್ನೂ ಪುನರಾವರ್ತನೆಯನ್ನೂ ಅವಲಂಬಿಸಿರುತ್ತದೆ. ಒಮ್ಮೆ ದೊರಕಿದ ಪ್ರಚೋದನೆ ಯಾವ ಗಣನೀಯ ಉದ್ರೇಕವನ್ನೂ ಮೂಡಿಸದಿರಬಹುದು. ಆದರೆ ಅದೇ ಪ್ರಚೋದನೆ ಮತ್ತೆ ಮತ್ತೆ ದೊರೆತಾಗ ಉದ್ರೇಕ ಮುಂದುಮುಂದಕ್ಕೆ ಸಾಗಿ ನರಕೋಶಗಳ ಇಡೀ ಜಾಲಕ್ಕೇ ವ್ಯಾಪಿಸುವುದು.

ಈ ವಂಶದ ಪ್ರಾಣಿಗಳು ಜೀವನದ ಹೋರಾಟದಲ್ಲಿ ಯಶಸ್ವಿಯಾಗಿ ಉಳಿದುಕೊಂಡು ಬಂದಿರುವುದಕ್ಕೆ ಅವುಗಳಲ್ಲಿರುವ ಕುಟುಕುಕಣಗಳೇ ಮುಖ್ಯಕಾರಣ. 5–100 ಮೈಮೀ ಗಳಷ್ಟು ಸೂಕ್ಷ್ಮವಾಗಿರುವ ಈ ಕುಟುಕುಕಣಗಳು ಕೋಶಗಳಲ್ಲಿ ಅಡಗಿವೆ. ಅವು ರಚನೆಯಲ್ಲಿ ತುಂಬ ವೈವಿಧ್ಯವನ್ನು ಪ್ರದರ್ಶಿಸುತ್ತವೆ. ಸುಮಾರು ಇಪ್ಪತ್ತು ವಿಧದ ಕುಟುಕಕಣಗಳಿವೆ. (ನೋಡಿ: ಕುಟುಕುಕಣ)

ಇವು ಸಣ್ಣಪುಟ್ಟ ಪ್ರಾಣಿಗಳನ್ನು ಕೊಂದು ನುಂಗಲು ಸಹಾಯ ಮಾಡುತ್ತವೆ. ಕೆಲವು ಪ್ರಾಣಿಗಳ ಕುಟುಕುಕಣಗಳಲ್ಲಿ ಮುಳ್ಳುಗಳಿಲ್ಲ. ಅವು ಆಹಾರ ವಸ್ತುಗಳನ್ನು ಸುಮ್ಮನೆ ಅಂಟಿಸಿಕೊಂಡು ಜೀರುಗುಣಿಕೆಯಂತೆ ಹಿಡಿದುಕೊಳ್ಳುತ್ತವೆ. ಆಹಾರವನ್ನು ಹಿಡಿಯಲು ನೆರವಾಗುತ್ತವೆ. ಅಲ್ಲದೆ ಅವು ಕುಟುಕುಕಣವಂತಗಳ ಆತ್ಮರಕ್ಷಣೆಗೂ ಪದಾರ್ಥಗಳಿಗೆ ಕಚ್ಚಿಕೊಂಡು ಸ್ಥಾವರಸ್ಥಿತಿಯಲ್ಲಿ ಇರುವುದಕ್ಕೂ ಸಹಾಯಮಾಡುತ್ತವೆ. ಒಮ್ಮೆ ಆಸ್ಫೋಟಿಸಿದ ಕುಟುಕುಕಣ ತನ್ನ ಸ್ವಾಭಾವಿಕ ಸ್ಥಾನದಿಂದ ಹೊರಬೀಳುತ್ತದೆ. ಅನಂತರ ಅದರ ಸ್ಥಾನವನ್ನು ಮತ್ತೊಂದು ನೀಡೊಬ್ಲಾಸ್ಟ್ ಕೋಶ ಆಕ್ರಮಿಸಿ ನೂತನವಾಗಿ ಕುಟುಕುಕಣವನ್ನು ಉತ್ಪಾದಿಸುತ್ತದೆ. ಆಹಾರವಸ್ತು ಜಠರಕೋಶವನ್ನು ಪ್ರವೇಶಿಸಿದ ಮೇಲೂ ಅಗತ್ಯವೆನಿಸಿದರೆ ಅದರ ಒಳಮೊರೆಯಲ್ಲಿರುವ ಕುಟುಕುಕಣಗಳು ಆಹಾರವನ್ನು ಮತ್ತೆ ಮತ್ತೆ ಚುಚ್ಚಿ ನಿಸ್ತೇಜ ಮಾಡಿ ಜೀರ್ಣಕಾರ್ಯಕ್ಕೆ ಅಣಿಗೊಳಿಸುತ್ತವೆ.

ಕುಟುಕುಕಣಗಳು ಸ್ರವಿಸುವ ವಿಷದ್ರವದ ರಾಸಾಯನಿಕ ಸ್ವರೂಪದ ಬಗ್ಗೆ ನಿರ್ದಿಷ್ಟ ಅಂಶಗಳು ಇನ್ನೂ ತಿಳಿದಿಲ್ಲ. ಕೆಲವು ಪ್ರಾಣಿಗಳಲ್ಲಿ ಈ ವಿಷವಸ್ತು ತೀವ್ರಸ್ವರೂಪದ್ದಾಗಿರುವುದೆಂದು ದೃಢಪಟ್ಟಿದೆ. ಫೈಸೇಲಿಯದಂಥ ದೊಡ್ಡ ಕುಟುಕುಕಣವಂತಗಳ ವಿಷದ್ರವ ಮಾನವನಿಗೆ ತೀವ್ರತರವಾದ ಯಾತನೆಯನ್ನುಂಟು ಮಾಡಬಲ್ಲುದು. ಚುಚ್ಚುವಿಕೆಗೆ ಒಳಗಾದ ಅಂಗ ತಾತ್ಕಾಲಿಕವಾಗಿ ನಿಷ್ಕ್ರಿಯವಾಗಬಹುದು. ಅಪರೂಪಕ್ಕೆ ಸಾವೂ ಸಂಭವಿಸಬಹುದು.

ಎಲ್ಲ ಕುಟುಕುಕಣವಂತಗಳಲ್ಲೂ ಲಿಂಗರೀತಿಯ ವಂಶಾಭಿವೃದ್ಧಿ ಜೀವನದ ಒಂದು ಘಟ್ಟದಲ್ಲಿ ನಡೆಯುತ್ತದೆ. ಬಹುಸಂಖ್ಯಾತ ಪ್ರಾಣಿಗಳಲ್ಲಿ ಲಿಂಗ ಪ್ರತ್ಯೇಕವಾಗಿದ್ದರೂ ಅಪರೂಪವಾಗಿಯಾದರೂ ಉಭಯಲಿಂಗಿಗಳು ಇರುವದುಂಟು. ತತ್ತಿ ಮತ್ತು ವೀರ್ಯಾಣುಗಳನ್ನು ತಾಯಿ ಅಥವಾ ತಂದೆ ಪ್ರಾಣಿ ಬಾಯಿಯ ಮೂಲಕ ಹೊರದೂಡುವುದು. ದೇಹದಿಂದ ಹೊರಗೆ ತತ್ತಿ ವೀರ್ಯಾಣುವಿನೊಡನೆ ಸಂಯೋಗವಾಗಿ ನಿಷೇಚನಗೊಳ್ಳುವುದು. ಅನಂತರ ತತ್ತಿ ವಿಭಾಗವಾಗಿ ಉದ್ಭವಿಸುವ ಬ್ಲಾಸ್ಟುಲ ಅಷ್ಟಾಗಿ ಟೊಳ್ಳಾಗಿರದೆ ತುಂಬಿಕೊಂಡಂತಿರುತ್ತದೆ. ಬ್ಲಾಸ್ಟುಲದಿಂದ ಗ್ಯಾಸ್ಟ್ರುಲ ಅವಸ್ಥೆಯನ್ನು ಸೇರುವ ವಿಧಾನ ಬೇರೆಬೇರೆ ಪ್ರಾಣಿಗಳಲ್ಲಿ ಬೇರೆಬೇರೆಯಾಗಿರುತ್ತದೆ. ಗ್ಯಾಸ್ಟ್ರುಲ ಕೊನೆಗೆ ಪ್ಲಾನುಲ ಎಂಬ ಲಾರ್ವಾವಸ್ಥೆಯನ್ನು ಹೊಂದುತ್ತದೆ. ಮೈತುಂಬ ಶಿಲಿಕೆಗಳಿವೆ. ನೀರಿನಲ್ಲಿ ಅದು ಈಜುತ್ತಿರುತ್ತದೆ. ಪಾಲಿಪ್‌ನ ಅವಸ್ಥೆಯಿರುವ ಪ್ರಾಣಿಗಳಲ್ಲಿ ಈ ಲಾರ್ವಾ ಸ್ವಲ್ಪಕಾಲದ ಅನಂತರ ತನ್ನ ಮುಂಭಾಗದ ತುದಿಯಿಂದ ಪದಾರ್ಥಕ್ಕೆ ಕಚ್ಚಿಕೊಳ್ಳುತ್ತದೆ. ಕಚ್ಚಿಕೊಂಡಿರುವ ಆ ಭಾಗ ಪಾಲಿಪ್ಪಿನ ತೊಟ್ಟಾಗುತ್ತದೆ. ಅದರ ಇನ್ನೊಂದು ತುದಿಯಲ್ಲಿ ಬಾಯಿಯೂ ಅದರ ಸುತ್ತ ಟೆಂಟಕಲ್‌ಗಳೂ ಹುಟ್ಟುತ್ತವೆ. ಈ ಅವಸ್ಥೆಯನ್ನು ಆಕ್ಟಿನ್ಯೂಲ ಎನ್ನುವರು. ಹೆಚ್ಚು ಕಡಿಮೆ ಇದು ಪಾಲಿಪ್ ರೂಪದಂತೆಯೆ ಇರುತ್ತದೆ. ಇದರ ಹಿಂದಿನ ತುದಿಯಲ್ಲಿ ಮೆನೂಬ್ರಿಯಂ ಕೊಳವೆಯೂ ಆ ಕೊಳವೆಯ ತುದಿಯಲ್ಲಿ ಬಾಯಿಯೂ ಮೂಡುತ್ತವೆ. ಬಾಯಿಯ ಅಪಮುಖದ ಮಧ್ಯಭಾಗ ಮೆಡೂಸದ ಗಂಟೆಯಾಗಿ ರೂಪುಗೊಳ್ಳುತ್ತದೆ.

ಕೂಡುಜೀವನ ಮತ್ತು ಬಹುರೂಪತೆ: ಮೆಡೂಸಗಳು ಕೂಡುಜೀವನವನ್ನು ನಡೆಸುವುದು ಕಂಡುಬಂದಿಲ್ಲವಾದರೂ ಈ ವಂಶದ ಎಲ್ಲ ಜೀವಿಗಳ ಪಾಲಿಪ್‌ನಲ್ಲಿ ಕೂಡುಜೀವನ (ಕಲೋನಿಯಲ್ ಲೈಫ್) ಪ್ರಧಾನವಾಗಿ ಕಂಡುಬರುತ್ತದೆ. ಅಲಿಂಗ ರೀತಿಯ ವಂಶಾಭಿವೃದ್ಧಿಯಿಂದ ಪಾಲಿಪ್ ಕವಲೊಡೆದು ಸಮುದಾಯ ಜೀವನವನ್ನು ರಚಿಸಿಕೊಳ್ಳುತ್ತದೆ. ದೇಹಾಂತರಾಳದ ಜಠರಾವಕಾಶ ಎಲ್ಲ ಪಾಲಿಪ್‌ಗಳಿಗೂ ಸಾಗಿ ಬಂದಿರುತ್ತದೆ. ಒಂದು ಪಾಲಿಪ್ ಗಳಿಸಿದ ಆಹಾರ ಆ ಮೂಲಕ ಎಲ್ಲ ಪಾಲಿಪ್‌ಗಳಿಗೂ ಬೇರೆಬೇರೆ ಕ್ರಿಯೆಗಳನ್ನು ನಿರ್ವಹಿಸಲು ಅನುಕೂಲಿಸುವಂಥ ದೇಹರಚನಾ ವೈಶಿಷ್ಟ್ಯವನ್ನು ತಳೆದಿರುತ್ತವೆ. ಹೈಡ್ರೊಜೋವನ್ ಪಾಲಿಪ್‌ಗಳ ಸಮುದಾಯದಲ್ಲಿ ಕೆಲವು ಪಾಲಿಪ್‌ಗಳು ರಕ್ಷಣಾಕಾರ್ಯವನ್ನೂ ಇನ್ನು ಕೆಲವು ಆಹಾರಾನ್ವೇಷಣೆಯನ್ನೂ ಮತ್ತೆ ಕೆಲವು ಸಂತಾನೋತ್ಪತ್ತಿಯನ್ನೂ ನಿರ್ವಹಿಸುತ್ತವೆ. ಕೆಲವು ಹೈಡ್ರೊಜೋವನ್ ಸಮುದಾಯದಲ್ಲಿ ಗೋಚರಿಸುವ ಮೆಡೂಸಗಳು ಸಂಘದ ಪಾಲನೆಗೆ ನೆರವಾಗುತ್ತವೆ. ಹೀಗೆ ಒಂದು ಪ್ರಭೇದದಲ್ಲಿ ಹಲವು ವಿಧದ ಜೀವಿಗಳಿದ್ದು ಜೀವಿಸುವುದನ್ನು ಬಹುರೂಪತೆ (ಪಾಲಿಮಾರ್ಫಿಸಂ) ಎನ್ನುವರು.

ಇತರ ಜೀವಿಗಳೊಡನೆ ಸಹಜೀವನ ಮತ್ತು ಪರಾವಲಂಬನೆ: ಕುಟುಕುಕಣವಂತಗಳು ಮಾಂಸಾಹಾರಿಗಳಾದರೂ ಇತರ ಪ್ರಾಣಿಗಳೊಡನೆ ಹೊಂದಿಕೊಂಡು ಸಹ ಜೀವನ ನಡೆಸುತ್ತವೆ. ಫೈಸೇಲಿಯವೂ ಅಂಬಲಿಮೀನುಗಳೂ ಸಣ್ಣ ಮೀನುಗಳೊಡನೆ ಸಂಬಂಧ ಹೊಂದಿರುತ್ತವೆ. ಆ ಮೀನುಗಳು ಕುಟುಕುಕಣವಂತಗಳ ಟೆಂಟಕಲ್‌ಗಳಲ್ಲಿ ಅಡಗಿ ಆಶ್ರಯಪಡೆದಿರುತ್ತವೆ. ಅದಕ್ಕೆ ಪ್ರತಿಯಾಗಿ ಮೀನುಗಳು ಆಶ್ರಯದಾತಕ್ಕೆ ಒದಗಬಹುದಾದ ಶತ್ರುಭೀತಿಯ ಬಗ್ಗೆ ಸಕಾಲದಲ್ಲಿ ಎಚ್ಚರಿಕೆ ನೀಡುತ್ತವೆ. ಸ್ಪರ್ಶ ತಂತುವಿನಲ್ಲಿ ಮೀನುಗಳು ಆಶ್ರಯ ಪಡೆದಿದ್ದರೂ ಅಲ್ಲಿರುವ ಕುಟುಕುಕಣಗಳು ಆಸ್ಫೋಟಿಸುವುದಿಲ್ಲ. ಇದೇ ಸಹಜೀವನ (ಸಿಂಬಿಯೋಸಿಸ್). ಕೆಲವು ಕಡಲ ಹೂಗಳು ಸನ್ಯಾಸಿ ಏಡಿ (ಹರ್ಮಿಟ್ ಕ್ರಾಬ್) ಧರಿಸಿರುವ ರಕ್ಷಣೆಯ ಚಿಪ್ಪಿನ ಮೇಲೆ ಆಶ್ರಯ ಪಡೆದಿರುತ್ತವೆ. ಏಡಿ ಹೋದ ಕಡೆಗೆ ಅವೂ ಸಾಗುತ್ತಿರುತ್ತವೆ. ಇನ್ನು ಕೆಲವು ಸ್ಪಂಜುಗಳ ಬುಡದಲ್ಲೊ ಕಡಲಬೀಸಣಿಗೆಗಳ (ಸೀ ಫ್ಯಾನ್) ಮೇಲೊ ವಾಸಿಸುತ್ತವೆ. ಕೆಲವು ಹೈಡ್ರಾಯಿಡ್ ಪ್ರಾಣಿಗಳು ಮೀನು, ಹುಳು, ಚಿಪ್ಪುಮೀನು ಮುಂತಾದ ಪ್ರಾಣಿಗಳೊಡನೆ ಸಹಜೀವನ ನಡೆಸುತ್ತವೆ. ಕೆಲವು ಹೈಡ್ರಗಳಲ್ಲಿ ಶೈವಲಗಳಿವೆ. ಹೈಡ್ರ ಶೈವಲದ ದ್ಯುತಿಸಂಶ್ಲೇಷಣಕ್ರಿಯೆಯಿಂದ ಬಿಡುಗಡೆಯಾಗುವ ಆಮ್ಲಜನಕವನ್ನು ಬಳಸಿಕೊಳ್ಳುತ್ತದೆ. ಆಶ್ರಯದಾತ ಸಂಗ್ರಹಿಸುವ ಆಹಾರದ ಸೇವನೆಯಲ್ಲಿ ತಾವೂ ಭಾಗಿಯಾಗುತ್ತವೆ. ಇಂಥ ಸಂಬಂಧವನ್ನು ಸಹಭೋಜನ ಜೀವನ (ಕಮನ್ಸಲ್) ಎನ್ನುವರು.

ಕೆಲವು ಕುಟುಕುಕಣವಂತಗಳು ಪರಾವಲಂಬಿಗಳು. ಹೈಡ್ರಿಕ್ಟಿಸ್ ಎಂಬ ಪ್ರಾಣಿ ಕೆಲವು ಮತ್ಸ್ಯಪ್ರಭೇದಗಳಲ್ಲೂ ಪಾಲಿಪೋಡಿಯಂ ಎಂಬುದು ಸ್ಟರ್ಜನ್ ಎಂಬ ದೊಡ್ಡ ಮೀನಿನ ತತ್ತಿಯಲ್ಲೂ ಆಶ್ರಯ ಪಡೆದು ಪರಾವಲಂಬಿ ಜೀವನ ನಡೆಸುತ್ತವೆ.

ವಿಕಾಸಕ್ರಮದಲ್ಲಿ ಕುಟುಕುಕಣವಂತಗಳ ಸ್ಥಾನ: ಪ್ರಾಣಿಪ್ರಪಂಚದ ವಿಕಾಸದ ನಿಚ್ಚಣಿಕೆಯಲ್ಲಿ ಕುಟುಕುಕಣವಂತಗಳ ಸ್ಥಾನವನ್ನು ಇನ್ನೂ ನಿರ್ದಿಷ್ಟವಾಗಿ ನಿರ್ಧರಿಸಿಲ್ಲ. ಕೂಡುಏಕಾಣುಜೀವಿಗಳಿಂದ (ಕಲೋನಿಯಲ್ ಪ್ರೊಟೊಜೋವ) ಈ ವಂಶದ ಪ್ರಾಣಿಗಳು ಉದಯಿಸಿವೆಯೆಂದು ಕೆಲವರ ಅಭಿಪ್ರಾಯ. ಇನ್ನು ಕೆಲವರು ಇವು ಚಪ್ಪಟೆಹುಳುಗಳಂಥ (ಫ್ಲಾಟ್‌ವರ್ಮ್) ಆದಿಪೂರ್ವಜರಿಂದ ವಿಕಾಸವಾಗಿವೆಯೆಂದು ವಾದಿಸುವರು. ಇವೆರಡೂ ಸಾಧುವಾಗಿ ತೋರುವುದಿಲ್ಲ. ಏಕಾಣುಜೀವಿಗಳಿಂದ ಉದಿಸಿದುವೆಂದು ನಂಬುವುದಾದರೆ ಇವು ಬಹುಕೋಶ ಜೀವಿಗಳ ವಿಕಾಸದ ನಿಚ್ಚಣಿಕೆಯಲ್ಲಿ ಮೊದಲ ಮೆಟ್ಟಿಲಲ್ಲಿ ತಮ್ಮ ಸ್ಥಾನವನ್ನು ಪಡೆಯುತ್ತವೆ. ಈ ಪ್ರಾಣಿಗಳ ದೇಹದಲ್ಲಿ ಕೇವಲ ಎರಡು ವರಿಸೆಗಳನ್ನು

ಅವುಗಳ ಹೊರ ಮತ್ತು ಒಳಚರ್ಮದ ವರಿಸೆಗಳಿಗೆ ರಚನೆ ಮತ್ತು ಕ್ರಿಯೆಯ ದೃಷ್ಟಿಯಲ್ಲಿ ಹೋಲಿಸಬಹುದು. ಅಂದರೆ, ಈ ವಂಶದ ಪ್ರಾಣಿಗಳು ಮೇಲ್ವರ್ಗದ ಪ್ರಾಣಿಗಳ ಬೆಳವಣಿಗೆಯಲ್ಲಿ ಕಂಡು ಬರುವ ಗ್ಯಾಸ್ಟ್ರುಲ ಅವಸ್ಥೆಗೆ ರಚನಾದಿ ವೈಶಿಷ್ಟ್ಯಗಳ ಸಮವೆನಿಸುತ್ತವೆ. ಚಪ್ಪಟೆಹುಳುಗಳಂಥ ಪೂರ್ವಜರಿಂದ ಉದಯವಾದವೆಂದು ಪರಿಗಣಿಸುವವರು ಆಂಥೊಝೋವದಲ್ಲಿ ಕಂಡುಬರುವ ದ್ವಿಪಾರ್ಶ್ವಸೌಷ್ಠವವನ್ನು ಆಧಾರ ಮಾಡಿಕೊಂಡಿರುವರು. ಕಾಲಕ್ರಮದಲ್ಲಿ ಕಂಡುಬರುವ ದ್ವಿಪ್ರಾರ್ಶಸೌಷ್ಠವ ಒಂದೇ ಸ್ಥಳದಲ್ಲಿ ಸ್ಥಾವರವಾಗುಳಿದ ಪರಿಣಾಮವಾಗಿ ಕೆಲವು ಕುಟುಕುಕಣವಂತಗಳ ದೇಹ ತ್ರಿಜ್ಯ ಸೌಷ್ಠವವನ್ನು ಪಡೆಯಿತೆಂದು ವಾದಿಸಿರುವರು. ಅವರು ಕುಟುಕುಕಣಗಳನ್ನು ಚಪ್ಪಟೆ ಹುಳುಗಳಲ್ಲಿ ಕಂಡುಬರುವ ರಾಬ್ಡೈಟ್‌ಕೋಶಗಳಿಗೆ ಹೋಲಿಸುವರು. ಈ ಎರಡೂ ವಾದಗಳಲ್ಲಿ ಯಾವುದಕ್ಕೂ ಭ್ರೂಣವಿಜ್ಞಾನದ ಆಧಾರಗಳು ದೊರೆತಿಲ್ಲ. ಕೆಲವು ಕುಟುಕುಕಣವಂತಗಳಲ್ಲಿ ಕಂಡು ಬರುವ ಮಧ್ಯದ ಜೀವಕಣಗಳ ವರಿಸೆಯೆನ್ನಬಹುದಾದ ಮಿಸೋಗ್ಲಿಯ ಚಪ್ಪಟೆ ಹುಳುಗಳಲ್ಲಿ ಕಂಡುಬರುವಂತೆ ಹೊರವರಿಸೆ ಜೀವಕಣಗಳಿಂದ ಉದ್ಭವವಾಗುತ್ತದೆ. ಅಲ್ಲದೆ, ಬಹುರೂಪತೆಯನ್ನು ಪ್ರದರ್ಶಿಸುವ ಈ ಪ್ರಾಣಿವಂಶದ ಆದಿಸ್ವರೂಪ ಪಾಲಿಪ್, ಮೆಡೂಸ, ಪ್ಲಾನುಲ–ಇವು ಮೂರರಲ್ಲಿ ಯಾವುದೆಂಬುದು ಇನ್ನೂ ನಿರ್ಧಾರವಾಗಿಲ್ಲ. ಆದ್ದರಿಂದ ಕುಟುಕುಕಣವಂತಗಳ ಸ್ಥಾನ ಅನಿರ್ದಿಷ್ಟವಾಗಿಯೆ ಉಳಿದಂತಾಗಿದೆ.

ವರ್ಗೀಕರಣ: ಕುಟುಕುಕಣವಂತಗಳಲ್ಲಿ ಹೈಡ್ರೊಝೋವ, ಸ್ಕೈಫೊಝೋವ ಮತ್ತು ಆಂಥೊಝೋವ ಎಂಬ ಮೂರುವರ್ಗಗಳು. ಮೊದಲವರ್ಗದ ಪ್ರಾಣಿಗಳು ಅತ್ಯಂತ ಸರಳರೀತಿಯ ದೇಹರಚನೆಯನ್ನೂ ಕೊನೆಯ ವರ್ಗದುವು ಸಂಕೀರ್ಣರೀತಿಯ ದೇಹರಚನೆಯನ್ನೂ ಹೊಂದಿರುತ್ತವೆ.

1 ಹೈಡ್ರೊಝೋವ: ಸಾಗರದ ಹೈಡ್ರಾಯಿಡ್‌ಗಳು, ಹೈಡ್ರೊಮೆಡೂಸಗಳು (ಹೈಡ್ರೊಝೋವನ್ ಅಂಬಲಿಮೀನು), ಸಿಹಿನೀರಿನ ಹೈಡ್ರಾಯಿಡ್‌ಗಳು, ಫೈಸೇಲಿಯ ಇತ್ಯಾದಿ ಪ್ರಾಣಿಗಳು ಈ ವರ್ಗಕ್ಕೆ ಸೇರಿವೆ. ಇವುಗಳ ಜಠರಾವಕಾಶ ಸರಳವಾಗಿದ್ದು ಅದರ ಟೊಳ್ಳುಭಾಗ ಟೆಂಟಕಲ್‌ಗಳಿಗೂ ಹಾದು ಹೋಗಿರುತ್ತದೆ. ಜಠರಾವಕಾಶ ನಾಲ್ಕು ಅಥವಾ ಹೆಚ್ಚು ನಾಳಗಳಾಗಿ ಕವಲೊಡೆದಿರುತ್ತದೆ. ಈ ನಾಳಗಳು ಜಠರದ ಕೇಂದ್ರದಿಂದ ತ್ರಿಜ್ಯಮುಖವಾಗಿ ಹಾದುಹೋಗುತ್ತವೆ. ಗಂಟೆಯಂಥ ಅವುಗಳ ದೇಹದ ಅಂಚಿನಲ್ಲಿ ಸುತ್ತಲೂ ಉಂಗುರದಂತೆ ಹಾದಿರುವ ನಾಳವಿದ್ದು ಎಲ್ಲ ತ್ರಿಜ್ಯನಾಳಗಳನ್ನೂ ಅದು ಕೂಡಿಸಿಕೊಂಡಿರುತ್ತದೆ. ಹೈಡ್ರಾಯಿಡ್ ರೂಪವೇ ಕೆಲವು ಪ್ರಾಣಿಗಳ ಪ್ರೌಢಾವಸ್ಥೆ. ಇನ್ನುಳಿದ ಪ್ರಾಣಿಗಳಲ್ಲಿ ಹೈಡ್ರಾಯಿಡ್ ರೂಪ ಅವುಗಳ ಕಿಶೋರಾವಸ್ಥೆ ಮಾತ್ರ. ಅದು ಅಲಿಂಗ ರೀತಿಯಲ್ಲಿ ಅಂಬಲಿಮೀನುಗಳನ್ನು ಉತ್ಪತ್ತಿಮಾಡಿ ವಂಶಾಭಿವೃದ್ಧಿ ಹೊಂದುತ್ತದೆ. ಸಾಗರದಲ್ಲಿ ವಾಸಿಸುವ ಅನೇಕ ಹೈಡ್ರೊಝೋವಗಳು ಬಹುರೂಪಿ ಜೀವಿಗಳಾಗಿರುತ್ತವೆ.

2 ಸ್ಕೈಫೊಝೋವ: ಇವೆಲ್ಲ ಆಳವಿಲ್ಲದ ಸಮುದ್ರದಲ್ಲಿ ವಾಸಿಸುವ ದೊಡ್ಡ ಅಂಬಲಿಮೀನುಗಳು. ಒಂದು ಜಾತಿಮಾತ್ರ ಆಳವಾದ ಸಾಗರದಲ್ಲೂ ವಾಸಿಸುತ್ತದೆ. ಆದರೆ ಸಿಹಿನೀರಿನಲ್ಲಿ ಜೀವಿಸುವ ಪ್ರಾಣಿಗಳಾವುವೂ ಇದರಲ್ಲಿ ಸೇರಿಲ್ಲ. ಜಠರಾವಕಾಶ ದೇಹದ ಗೋಡೆಗಳಿಂದ ನಾಲ್ಕು ಭಾಗವಾಗಿ ವಿಭಾಗವಾಗಿದೆ. ಈ ಗೋಡೆಗಳ ಪಕ್ಕದ ಚಾಚುಭಾಗಗಳಲ್ಲಿ ಅಲ್ಲಲ್ಲಿ ಟೆಂಟಕಲ್‌ಗಳ ಗುಂಪುಗಳಿರುತ್ತವೆ. ಜಠರ ಕೋಶದಲ್ಲಿ ಕುಟುಕುಕಣಗಳಿವೆ. ಈ ಪ್ರಾಣಿಗಳ ಅಂಬಲಿಮೀನುಗಳ ಕೊಡೆಯಂಚಿನಲ್ಲಿ ಎಂಟು ಅಥವ ಹೆಚ್ಚು ರೋಪೇಲಿಯ ಎಂಬ ಸಂವೇದನಾಂಗಗಳಿವೆ (ಜ್ಞಾನೇಂದ್ರಿಯ). ಬಾಯಿಯನ್ನು ಹೊತ್ತಿರುವಂತೆ ವೇಲಂ ಕೊಳವೆಯಿರುವುದಿಲ್ಲ. ಜಠರದ ಮಧ್ಯದಿಂದ ತ್ರಿಜ್ಯನಾಳಗಳು ಕೊಡೆಯಾಕೃತಿಯ ದೇಹದ ಅಂಚಿಗೆ ಸಾಗಿ, ಅಂಚಿನ ಸುತ್ತ ಹಾದಿರುವ ಉಂಗುರದ ನಾಳಕ್ಕೆ ಸೇರುತ್ತವೆ. ತ್ರಿಜ್ಯನಾಳಗಳು ಬೇಕಾದ ಹಾಗೆ ಕವಲೊಡೆದಿದ್ದು ಒಂದಕ್ಕೊಂದಕ್ಕೆ ಸಂಬಂಧಿಸಿಕೊಂಡಿರುತ್ತವೆ. ಈ ವರ್ಗದ ಎಲ್ಲ ಪ್ರಾಣಿಗಳೂ ನೀರಿನಲ್ಲಿ ಈಜಿಕೊಂಡು ಹೋಗಬಲ್ಲುವು. ಸ್ಟಾರೊಮೆಡೂಸವೆಂಬ ಒಂದು ಪ್ರಾಣಿ ಮಾತ್ರ ಪಾಲಿಪ್‌ಗಳಂತೆ ಪದಾರ್ಥಗಳಿಗೆ ಅಂಟಿಕೊಂಡು ಸ್ಥಾವರ ಜೀವನವನ್ನು ನಡೆಸುತ್ತದೆ. ಜೀವನಚರಿತ್ರೆಯಲ್ಲಿ ಪಾಲಿಪ್ ಕಿಶೋರಾವಸ್ಥೆಯಾಗಿದ್ದು (ಸ್ಕೈಫೊಸ್ಟೋಮ), ಅದರಿಂದ ಪ್ರೌಢಜೀವಿಗಳು ಮೊಗ್ಗೊಡೆದು ಬರುತ್ತವೆ.

3 ಆಂಥೊಝೋವ: ಕಡಲಹೂ, ನೈಜಹವಳ (ರಿಯಲ್ ಕಾರಲ್) ಪ್ರಾಣಿ, ಕಡಲಬೀಸಣಿಗೆ, ಕಡಲಗರಿಗಳು (ಸೀ ಫೆದರ್ಸ್), ಕಡಲ ಸಸ್ಯಗಳು (ಸೀ ಪ್ಯಾನ್ಸ್) ಮುಂತಾದ ಜೀವಿಗಳು ಈ ವರ್ಗದಲ್ಲಿ ಸೇರಿವೆ. ಇವೆಲ್ಲ ವಸ್ತುಗಳಿಗೆ ಅಂಟಿಕೊಂಡು ಸಾಗರದ ತಳದಲ್ಲಿ ಸ್ಥಾವರ ಜೀವನವನ್ನು ನಡೆಸುವ ಪಾಲಿಪ್‌ರೂಪಿಗಳು. ಜಠರದ ಒಳಗೋಡೆಯಲ್ಲಿ ಕುಟುಕುಕಣಗಳಿರುತ್ತವೆ. ಜಠರಾವಕಾಶ ತ್ರಿಜ್ಯಮುಖವಾಗಿ 6, 8 ಅಥವಾ ಹೆಚ್ಚು ವಿಭಾಗಗಳಾಗಿರುತ್ತದೆ. ತಾವು ಕಚ್ಚಿಕೊಂಡಿರುವ ಪದಾರ್ಥದ ಮೇಲೆ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಲು ಅವುಗಳ ತಳದಲ್ಲಿರುವ ಕಾಲುಬಿಲ್ಲೆ (ಪೀಡಲ್ ಡಿಸ್ಕ್) ಸಹಕಾರಿಯಾಗಿದೆ. ಕೆಲವು ಪ್ರಭೇದದ ಕಡಲಹೂಗಳು ನೀರಿನಲ್ಲಿ ತೇಲು ಜೀವನ (ಪೆಲ್ಯಾಜಿಕ್) ನಡೆಸುತ್ತವೆ. ಮತ್ತೆ ಕೆಲವು ಪ್ರಭೇದಗಳು ನೀರಿನಲ್ಲಿ ಸುತ್ತಮುತ್ತ ತಿರುಗುತ್ತ ಅನಿರ್ದೇಶಿತ ರೀತಿಯಲ್ಲಿ ಮಾತ್ರ ಚಲಿಸಬಲ್ಲುವು. ಲಾರ್ವಾವಸ್ಥೆಯಲ್ಲಿ ಈ ವರ್ಗದ ಪ್ರಾಣಿಗಳೆಲ್ಲ ನೀರಿನಲ್ಲಿ ಈಜುತ್ತವೆ. ಲಿಂಗರೀತಿಯಲ್ಲಿ ಉತ್ಪನ್ನವಾಗುವ ಪಾಲಿಪ್‌ಗಳು ಮೊಗ್ಗೊಡೆದು, ಕವಲುಗಳನ್ನು ಮೂಡಿಸಿಕೊಂಡು, ಆ ಮೂಲಕ ಕೂಡುಜೀವನವನ್ನು ಆರಂಭಿಸುತ್ತವೆ. ಕೆಲವು ಪಾಲಿಪ್ ಸಮುದಾಯಗಳು ಬಹುರೂಪತೆಯನ್ನು ಪ್ರದರ್ಶಿಸುತ್ತವೆ. ಹವಳದ ಹುಳುಗಳು ಹೊರಕವಚವನ್ನು ಸುಣ್ಣದಿಂದಲೂ ಕಡಲಬೀಸಣಿಗೆಗಳು ಕಠಿಣವಾದರೂ ಬಳುಕುವಂಥ ಸಸಾರಜನಕ ವಸ್ತುಗಳಿಂದಲೂ ರಚಿಸಿಕೊಳ್ಳುತ್ತವೆ. (ನೋಡಿ: ಕುಟುಕಕಣ; ಆಂತೊಜೋವ, ಹೈಡ್ರೋಜೋವ, ಸ್ಕೈಫೊಜೋವ) ***

**ಕುಟ್ಟೆಹುಳು ಅಥವಾ ಹಿಟ್ಟಿನಹುಳು:** ಬೂಸ, ಹಿಟ್ಟು, ರವೆ, ಅಟ್ಟ, ಮೈದಾ, ನುಚ್ಚಿನಂತಹ ಒಡೆದ ಮತ್ತು ಬೀಸಿದ ಆಹಾರಧಾನ್ಯಗಳನ್ನು ತಿಂದು ಜೀವಿಸುವ ಕೀಟಗಳು. ಆಂಗ್ಲಭಾಷೆಯಲ್ಲಿ ಫ್ಲೋರ್ ಬೀಟಲ್ಸ್ ಎನ್ನುವರು. ದ್ವಿದಳಧಾನ್ಯಗಳ ನುಚ್ಚು ಮತ್ತು ಹಿಟ್ಟು ತಿನ್ನುತ್ತವೆ. ಆದರೆ, ಉಂಡೆ ಕಾಳು, ಬೇಳೆಗಳಿಗೆ ಇವುಗಳ ಕಾಟವಿಲ್ಲ. ಧಾನ್ಯಗಳನ್ನು ಬೀಸುವ ಕಾರ್ಖಾನೆಗಳಲ್ಲಿ ಬೀಸಿದ ವಸ್ತುಗಳನ್ನು ದಾಸ್ತಾನು ಮಾಡುವ ಉಗ್ರಾಣಗಳಲ್ಲಿ ಇವುಗಳ ಹಾವಳಿ ಹೆಚ್ಚು. ಕೋಲಿಯಾಪ್ಟರ ಗಣದ ಟೆನಿಬ್ರಯಾನಿಡೆ ಕುಲದ ಟ್ರೈಬೋಲಿಯಂ ಕ್ಯಾಸ್ಟೇನಿಯಂ ಹಾಗೂ ಟ್ರೈ. ಕನ್ಫ್ಯೂಸಂ ಪ್ರಭೇದಗಳಿಗೆ ಸೇರಿವೆ. ಪ್ರೌಢ ಕೀಟ ಕಂದುಕೆಂಪು ಬಣ್ಣದುವು. ಚಪ್ಪಟೆಯಾಗಿದ್ದು, ೪ ಮಿಮೀ ಉದ್ದ ಇವೆ. ಹೆಣ್ಣು ಕೀಟ ೧೦೦೦ ಮೊಟ್ಟೆಗಳನ್ನು ಆಹಾರ ಸಾಮಗ್ರಿಯೊಳಗೆ ಇಡುತ್ತದೆ. ಪ್ರಥಮ ಹಂತದ ಮರಿಹುಳುಗಳು ತೆಳ್ಳನೆ ತಂತಿ ತುಂಡಿನಂತಿರುತ್ತವೆ. ಬೆಳೆದಂತೆ ಹಳದಿ ವರ್ಣಕ್ಕೆ ತಿರುಗುತ್ತವೆ. ಇವು ೫ ಮಿಮೀ ಉದ್ದ ಬೆಳೆಯುತ್ತವೆ. ಒಂದು ಜೀವನ ಚಕ್ರ ಮುಗಿಸಲು ೪–೬ ವಾರ ತೆಗೆದುಕೊಳ್ಳುತ್ತವೆ. ವರ್ಷಕ್ಕೆ ೬–೮ ಬಾರಿ ಜೀವನ ಚಕ್ರ ಮುಗಿಸುತ್ತವೆ. ಹುಳುಬಿದ್ದ ಹಿಟ್ಟು ಜರಡಿಯಾಡಿ ಮರಿ, ಪ್ರೌಢ ಕೀಟಗಳನ್ನು ಬೇರ್ಪಡಿಸಬೇಕು. ಆದ್ದರಿಂದ, ಬೀಸುವ ಕಾರ್ಖಾನೆ ಮತ್ತು ಉಗ್ರಾಣಗಳನ್ನು ನಿಯಮಾನುಸಾರ ಶುಚಿಪಡಿಸಿ ಈ ಕೀಟಗಳ ಪ್ರವೇಶವನ್ನು ತಡೆಗಟ್ಟುವುದು ಉತ್ತಮ. (ಡಿ.ಎಸ್)

**ಕುಡುಗತ್ತಿ ಮೀನು:** ಟ್ರೈಕಿಯಾರಿಡೆ ಕುಟುಂಬದ ಸದಸ್ಯ. ಇದರ ವೈಜ್ಞಾನಿಕ ನಾಮ ಟ್ರೈಕಿಯಾರಸ್ ಲೆಪ್ಟ್ಯೂರಸ್. ಆಂಗ್ಲ ಭಾಷೆಯಲ್ಲಿ ಕಟ್‌ಲ್ಯಾಸ್ ಫಿಷ್ ಎನ್ನುವರು. ಉಷ್ಣವಲಯದ ಸಮುದ್ರಗಳಲ್ಲಿ ವಾಸಿಸುತ್ತದೆ. ಇದನ್ನು ರಿಬನ್ ಮೀನೆಂದು ಕರೆಯುವರು. ಇದರ ಉದ್ದ ೧.೫ ಮೀ. ದೇಹ ಪಟ್ಟಿಯಂತೆ ಇದೆ. ಬಾಲದ ರೆಕ್ಕೆ ಇಲ್ಲ. ದೇಹದುದ್ದಕ್ಕೂ ಹರಡಿರುವ ಬೆನ್ನಿನ ರೆಕ್ಕೆ ಇದೆ. ಬಾಯಲ್ಲಿ ಕೋರೆಹಲ್ಲುಗಳಿವೆ. ಭಾರತದ ನೆರೆಹೊರೆಯ ಸಮುದ್ರದಲ್ಲಿ ಈ ಪ್ರಭೇದವನ್ನು ಹೋಲುವ ಇನ್ನಿತರ ಮೂರು ಪ್ರಭೇದಗಳಿವೆ. ಭಾರತದ ಪೂರ್ವ ಕರಾವಳಿಯಲ್ಲಿ ಇವುಗಳ ಮೀನುಗಾರಿಕೆ ಮುಖ್ಯ ಉದ್ಯೋಗವಾಗಿದೆ. ಪ್ರತಿವರ್ಷ ೪೧,೦೦೦ ಮೆಟ್ರಿಕ್ ಟನ್ ಮೀನುಗಳನ್ನು ಹಿಡಿದು ಆಹಾರಕ್ಕಾಗಿ ಬಳಸುತ್ತಾರೆ. ***

**ಕುಡುಗೊಕ್ಕು:** ಪ್ಯಾಸೆರಿಫಾರ್ಮೀಸ್ ಗಣದ ಪ್ಯಾರಡೈಸಿಡೆ ಕುಟುಂಬದ ಸದಸ್ಯ. ವೈಜ್ಞಾನಿಕ ಹೆಸರು ಡ್ರೆಪ್ಯಾನಾರ್ನಿಸ್. ಕುಡುಗೋಲಿನಂಥ ಕೊಕ್ಕಿರುವುದರಿಂದ ಈ ಹೆಸರು. ವರ್ಣರಂಜಿತವಾದ ಈ ಹಕ್ಕಿಯ ತಲೆ ಕಂದುಗೆಂಪಾಗಿ, ಗಂಟಲಿನ ಭಾಗ ಹಸಿರಾಗಿ, ಹೊಟ್ಟೆ ಬೆಳ್ಳಗೆ ಮತ್ತು ಎದೆಯ ಭಾಗ ಬೂದುಬಣ್ಣದಿಂದ ಕೂಡಿದೆ. ಕಾಲಿನ ಹಿಂದೆ ಇರುವ ಗರಿಗಳು ಬೀಸಣಿಗೆಯಂತೆ ತೆರೆದು ಕೊಂಡಿವೆ. ಕಣ್ಣಿನ ಸುತ್ತ ನೀಲಿ ಬಣ್ಣದ ಚಿಕ್ಕಚಿಕ್ಕ ಪುಕ್ಕಗಳು ಇದ್ದು ಕಣ್ಣಿನ ಹಿಂದೆ ಅಗಲವಾಗಿ ಜೋಡಿಸಿಕೊಂಡಿವೆ. (ಎಲ್.ಎಸ್.ಜಿ.)

**ಕುಡುಗೋಲು ಕೋಶ ಅನೀಮಿಯ:** ಹೀಮೋಗ್ಲಾಬಿನ್ನಿನ ಆಮ್ಲಜನಕವಾಹಕ ಶಕ್ತಿ ಕಡಿಮೆಯಿರುವುದರಿಂದ ಉಂಟಾಗುವ ಒಂದು ಆನುವಂಶಿಕ ರಕ್ತಹೀನತೆ. ಕುಡುಗೋಲು ಕೋಶಶಕ್ತಿಹೀನತೆಯನ್ನು ಹೊಂದಿರುವ ರೋಗಿಗಳಲ್ಲಿ ಮಧ್ಯಮತರದ ಶಕ್ತಿಹೀನತೆಯಿರುತ್ತದೆ. ಹೆಚ್ಚಿನಂಶ ರೋಗಿಗಳಲ್ಲಿ ರಕ್ತದ ಹೀಮೋಗ್ಲಾಬಿನ್ ಪ್ರಮಾಣದಲ್ಲಿ ಅಂತಹ ಪರಿಣಾಮಕಾರಿ ಬದಲಾವಣೆ ಕಂಡುಬರುವುದಿಲ್ಲ. ಆದರೆ ಕೆಲವರಲ್ಲಿ ಅತಿ ಹೆಚ್ಚಿನ ಸೋಂಕು ತಾಗಿದರೆ ಅಂತಹವರಲ್ಲಿ ಕೆಂಪು ರಕ್ತಕಣಗಳ ಸಂಖ್ಯೆ ಕಡಿಮೆಯಾಗುತ್ತದೆ. ರೋಗದಿಂದ ಅತಿಹೆಚ್ಚು ಬಳಲುತ್ತಿದ್ದರೆ ರೋಗಿ ಕೊನೆಗೆ ಮರಣಿಸಲೂಬಹುದು. ಕೆಂಪು ರಕ್ತಕಣಗಳು ಬೆಳವಣಿಗೆ ಹೊಂದುವಾಗ ಆಮ್ಲಜನಕದ

ಒತ್ತಡ ಕಡಿಮೆಯಾದ ಕಾರಣ ಸಾಮಾನ್ಯ ಆಕಾರದ ಬದಲಿಗೆ ಉದ್ದವಾದ ದಾರದಾಕಾರದ ಅಥವಾ ಅಧಿಕ ಚಂದ್ರಾಕೃತಿಯ ಕುಡುಗೋಲಿನಂತೆ ಮಾರ್ಪಾಡು ಹೊಂದುತ್ತದೆ. ಅದರಿಂದಲೇ ಈ ರೋಗಕ್ಕೆ ಕುಡುಗೋಲು ಕೋಶ ಅನೀಮಿಯ ಅಥವಾ ರಕ್ತಹೀನತೆ ಎಂಬ ಹೆಸರು.

1949 ರಲ್ಲಿ ಜೆ.ವಿ.ನೀಲ್ ಮತ್ತು ಇ.ಎ.ಬೀಟ್ ಸ್ವತಂತ್ರವಾಗಿ ಕುಡುಗೋಲು ಕೋಶ ರಕ್ತಹೀನತೆಗೆ ಒಂದು ಜೀನ್ ಕಾರಣ ಎಂದು ಕಂಡುಹಿಡಿದರು. ಈ ಕುಡುಗೋಲು ಕೋಶದ ಜೀನ್ ಭಿನ್ನಯುಗ್ಮ ಸ್ಥಿತಿಯಲ್ಲಿದ್ದಾಗ ಕುಡುಗೋಲು ಕೋಶ ರಕ್ತಹೀನತೆ ಬರುತ್ತದೆ. ಕುಡುಗೋಲು ಕೋಶ ಜೀನ್ ಇಲ್ಲದಿದ್ದರೆ ಅಥವಾ ಅದು ಸಮಯುಗ್ಮ ಸ್ಥಿತಿಯಲ್ಲಿದ್ದರೆ ಮನುಷ್ಯ ಆರೋಗ್ಯವಂತನಾಗಿರುತ್ತಾನೆ. ಅದೇ ವರ್ಷ ಪಾಲಿಂಗ್ ಮತ್ತು ಆತನ ಸಹೋದ್ಯೋಗಿಗಳು ಕುಡುಗೋಲು ಕೋಶ ರಕ್ತಹೀನತೆ ಇರುವ ರೋಗಿಯ ರಕ್ತವನ್ನು ವಿದ್ಯುತ್ ಕಣ ವಿಭಜನೆ (ಎಲೆಕ್ಟ್ರೋಫೋರೆಸಿಸ್) ಗೊಳಿಸಿ ಸಾಮಾನ್ಯ ಹೀಮೋಗ್ಲಾಬಿನ್ ಮತ್ತು ಕುಡುಗೋಲು ಕೋಶ ರಕ್ತಹೀನತೆಯ ರೋಗಿಯ ಹೀಮೋಗ್ಲಾಬಿನ್‌ಗಳಲ್ಲಿ ವ್ಯತ್ಯಾಸ ಇರುವುದನ್ನು ತೋರಿಸಿದರು.

ಇದಾದ ನಂತರ 1956 ರಲ್ಲಿ ಇಂಗ್ರಾಮ ಎಂಬಾತನು ಬೆರಳು ಮುದ್ರಣ ಎಂಬ ಹೊಸ ತಂತ್ರವನ್ನು ಉಪಯೋಗಿಸಿ ಹೀಮೋಗ್ಲಾಬಿನ್ನಿನಲ್ಲಿರುವ ಅಮೈನೋ ಆಮ್ಲದ ಸರಣಿಯನ್ನು ಕಂಡುಹಿಡಿದನು. ಈ ಅಧ್ಯಯನಗಳ ಪ್ರಕಾರ ಕುಡುಗೋಲು ಕೋಶ ರಕ್ತಹೀನತೆಯ ರೋಗಿಗಳ ಹೀಮೋಗ್ಲಾಬಿನ್‌ನ ನಾಲ್ಕನೇ ಪೆಪ್ಟೈಡಿನ ಆರನೇ ಅಮೈನೊ ಆಮ್ಲ ವ್ಯಾಲಿನ್ ಆಗಿದೆ. ಸಾಧಾರಣ ಹೀಮೋಗ್ಲಾಬಿನ್‌ನಲ್ಲಿ ಈ ಸ್ಥಾನದಲ್ಲಿ ಗ್ಲುಟಾಮಿಕ್ ಆಮ್ಲವಿರುತ್ತದೆ.

ಆಫ್ರಿಕಾ ಖಂಡದಲ್ಲಿ ಕುಡುಗೋಲು ಕೋಶ ಗುಣಾಣುಗಳು ಹೆಚ್ಚಾಗಿ ಕಂಡುಬರುತ್ತದೆ. ಮೆಡಿಟರೇನಿಯನ್ ಸಮುದ್ರದ ತೀರಭಾಗಗಳಲ್ಲಿ, ಮಧ್ಯಪೂರ್ವ ದೇಶಗಳಲ್ಲಿ, ದಕ್ಷಿಣ ಭಾರತ ಮತ್ತು ಇಂಡೋಚೀನ ದೇಶಗಳಲ್ಲಿಯೂ ಈ ಗುಣಾಣುಗಳು ಬೇರೆ ಬೇರೆ ಪ್ರಮಾಣಗಳಲ್ಲಿ ಇರುವುದು ಕಂಡುಬಂದಿದೆ. ಆಫ್ರಿಕಾದ ಮಧ್ಯಭಾಗಗಳಲ್ಲಿ ಈ ಗುಣಾಣುಗಳು ಶೇಕಡಾ 40 ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದೆ. (ಎಸ್.ಎನ್.ಎಚ್.)

**ಕುಣಿಕೆ ಹುಳುಗಳು:** ಕೀಟವರ್ಗದ, ಲೆಪಿಡಾಪ್ಟರ ಗಣದ ಜಿಯೋಮೆಟ್ರಿಡೆ ಮತ್ತು ನಾಕ್ಟುಯಿಡೆ ಕುಟುಂಬಗಳಿಗೆ ಸೇರಿದ ಡಿಂಬಗಳು. ಇವುಗಳನ್ನು ಕೊಂಡಲಿ ಹುಳುಗಳು ಎಂದು ಕರೆಯುವರು. ಇವು ಚಲಿಸುವಾಗ ಮೈಯನು ಕುಣಿಕೆಯಂತೆ ಕೊಂಕಿಸಿ, ದೇಹದ ಹಿಂದಿನ ತುದಿಯನ್ನು ಮುಂದಿನ ತುದಿಯ ಬಳಿ ತಂದು, ಊರಿ ನಂತರ ಮುಂತುದಿಯನ್ನು ಮುಂದಕ್ಕೆ ಚಾಚಿ ಸಾಗುತ್ತವೆ. ಈ ಚಲನೆ ಕೈಯಿಂದ ಗೇಣುಹಾಕುವುದನ್ನು ಹೋಲುತ್ತದೆ. ಈ ವಿಚಿತ್ರ ಚಲನೆಗೆ ಕಾರಣ, ಇವುಗಳಲ್ಲಿ ಇರಬೇಕಾದ ಐದು ಜೊತೆ ಉಪಪಾದಗಳಲ್ಲಿ ಮುಂದಿನ ನಾಲ್ಕು ಜೊತೆ ಪಾದಗಳು ಪೂರ್ತಿ ಅಥವಾ ಭಾಗಶಃ ಇಂಗಿಹೋಗಿರುವುದು. ಇದರಿಂದಾಗಿ ಹುಳು ಮೈಕೊಂಕಿಸದೆ ಚಲಿಸಲೆತ್ನಿಸಿದರೆ ದೇಹದ ನಡುಭಾಗ ಕೆಳಕ್ಕೆ ಜಗ್ಗುವ ಸಾಧ್ಯತೆ ಇದೆ. ಉದಾಹರಣೆ : ಟೀ ಗಿಡಕ್ಕೆ ಹತ್ತುವ ಬಿಸ್ಟನ್ ಸಪ್ರೆಸೇರಿಯ ಮತ್ತು ಅಗಸೆ ಗಿಡಕ್ಕೆ ಅಂಟುವ ಹೈಪೋಸಿಡ್ರ ಸಕ್ಸೆಸೇರಿಯ ಕೀಟದ ಹುಳುಗಳು.

ನಾಕ್ಟುಯಿಡೆ ಕುಟುಂಬದ ಡಿಂಬಗಳನ್ನು ಅರೆಕುಣಿಕೆ ಹುಳುಗಳೆಂದು ಕರೆಯುತ್ತಾರೆ. ಇವುಗಳ ದೇಹದ ಮುಂಭಾಗದಲ್ಲಿರುವ ೧, ೨ ಮತ್ತು ೩ ಜೊತೆ ಕಾಲುಗಳು ಕ್ಷೀಣವಾಗಿದ್ದು, ಹಿಂಭಾಗದ ೪ ಜೊತೆ (ಅಪೂರ್ವವಾಗಿ ೨ ಮತ್ತು ೩ ಜೊತೆಗಳು) ಕಾಲುಗಳಿರುವುದರಿಂದ ಚಲಿಸುವಾಗ ದೇಹದ ನಡುಭಾಗ ಮಾತ್ರ ಕುಣಿಕೆಯಂತೆ ಬಾಗುತ್ತದೆ. ಉದಾ: ಹರಳು ಗಿಡದ ಪಿಡುಗಾದ ಎಕಿಯ ಜೇನೇಟ, ಪಡವಲಕಾಯಿಗೆ ಬೀಳುವ ಫೈಟೋ ಮೆಟ್ರಪೆಪೋನಿಸ್ ಕೀಟದ ಹುಳುಗಳು. (ಡಿ.ಎಸ್)



**ಕುದಿಪ್ಪು:** ಬಂಗುಡೆ ಜಾತಿಗೆ ಸೇರಿದ ಎಲುಬು ಮೀನು. ಆಂಗ್ಲ ಭಾಷೆಯಲ್ಲಿ ಲ್ಯಾಕ್ಟೇರಿಯಸ್ ಎನ್ನುವರು. ಇದು ಭಾರತ ಹಾಗೂ ಚೀನಾ ದೇಶದ ಸಮುದ್ರಗಳಲ್ಲಿ ವಾಸಿಸುತ್ತದೆ. ಪೆಸಿಫಿಕ್ ಮಹಾಸಾಗರದ ಬಂಡೆ ದ್ವೀಪಗಳಲ್ಲಿ ಸಹ ಲಭ್ಯ. ಸಮುದ್ರತೀರಗಳಲ್ಲಿ ವಾಸಿಸುವ ಜನರು ಕುದಿಪ್ಪು ಮೀನನ್ನು ಹಸಿಯಾಗಿ ಅಥವಾ ಉಪ್ಪುಹಾಕಿ ಒಣಗಿಸಿ ಆಹಾರವಾಗಿ ಉಪಯೋಗಿಸುತ್ತಾರೆ. ಮಲಬಾರಿನ ಕ್ವಿಲಾನ್ ಸಮುದ್ರ ತೀರದಲ್ಲಿ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಈ ಮೀನುಗಳು ಹಿಂಡು ಹಿಂಡಾಗಿ ಬರುತ್ತವೆ. ಉಳಿದ ತಿಂಗಳುಗಳಲ್ಲಿ ಇವು ಅತಿ ವಿರಳ. ಮೀನಿನ ಶರೀರ ನೀಳ ಚಪ್ಪಟೆ. ಇದರ ಉದ್ದ ೨೫ ಸೆಂಮೀ. ತಲೆಯ ಉದ್ದ ೬ ಮಿಮೀ ಮತ್ತು ಬಾಲ ೬ ಮಿಮೀ ಶರೀರದ ಎತ್ತರ ಒಟ್ಟು ಉದ್ದದ ೨/೭ ಭಾಗದಷ್ಟಿದೆ. ಮೀನಿನ ರೂಪರೇಖೆ ಬೆನ್ನಿನ ಮೇಲಿರುವ ಈಜುರೆಕ್ಕೆಯವರೆಗೂ ಉಬ್ಬಿರುತ್ತದೆ. ಬಾಯಿಯಲ್ಲಿರುವ ಮೇಲುದವಡೆ ಕಣ್ಣಿನ ಮಧ್ಯ ಕೆಳಭಾಗದವರೆಗೂ ಚಾಚಿಕೊಂಡಿದೆ. ಮೀನು ತನ್ನ ಬಾಯಿಯನ್ನು ಮುಚ್ಚಿಕೊಂಡಿರುವಾಗ ಅದರ ಕೆಳದವಡೆಯ ತುದಿ ಮೇಲ್ಭಾಗದಲ್ಲಿರುವಂತೆ ಕಾಣುತ್ತದೆ. ತಲೆಯ ಹಿಂಭಾಗದ ಶಿಖೆ ಪೂರ್ಣವಾಗಿದೆ. ಕೆಳದವಡೆಯ ಪಾರ್ಶ್ವದಲ್ಲಿ ಒಂದೇ ಪಂಕ್ತಿಯ ಬಾಗಿರುವ ಹಲ್ಲುಗಳಿವೆ. ನಾಲಗೆ, ಪಲಟೈನ್ ಮತ್ತು ವೋಮರ್ ಮೂಳೆಗಳಲ್ಲಿ ಸಹ ಹಲ್ಲುಗಳಿವೆ. ಮ್ಯಾಕ್ಸಿಲ ಮೂಳೆಗಳಲ್ಲಿ ಹಲ್ಲುಗಳಿಲ್ಲ. ನೀರಿನಲ್ಲಿ ಸರಾಗವಾಗಿ ಚಲಿಸಲು ಮುಳ್ಳುಗಳನ್ನೊಳಗೊಂಡ ಈಜು ರೆಕ್ಕೆಗಳಿವೆ. ಇವು ಪಾರದರ್ಶಕವಾಗಿವೆ. ಬೆನ್ನಿನ ಮೇಲೆ ಮೊದಲನೆಯ ಈಜುರೆಕ್ಕೆಯ ಮುಳ್ಳು ಬಲಹೀನವಾಗಿದೆ. ಮೂರನೆಯದು ಉದ್ದವಾಗಿದೆ. ಈಜುರೆಕ್ಕೆಯ ಪೊರೆ ಕಚ್ಚುಕಚ್ಚಾಗಿದೆ. ಎರಡನೆಯ ಈಜುರೆಕ್ಕೆಯ ಎತ್ತರ ಮೊದಲನೆಯ ಈಜುರೆಕ್ಕೆಗೆ ಸಮವಿದೆ. ಇದರ ಎತ್ತರ ಇಡೀ ಶರೀರದ ಎತ್ತರದಲ್ಲಿ ಅರ್ಧದಷ್ಟಿದೆ. ಗುದದ್ವಾರದ ಬಳಿ ಇರುವ ಈಜುರೆಕ್ಕೆ ಬೆನ್ನಿನ ಮೇಲಿರುವ ಎರಡನೆಯ ಈಜುರೆಕ್ಕೆಯನ್ನು ಹೋಲುತ್ತದೆ. ದೇಹದ ಮೇಲೆ ಸೂಕ್ಷ್ಮವಾದ ಸೈಕ್ಲಾಯಿಡ್ ಹುರುಪೆಗಳಿವೆ. ಇವು ತ್ವರಿತ ಚಲನೆಗೆ ಸಹಾಯಕ ಮತ್ತು ಶರೀರಕ್ಕೆ ರಕ್ಷಣೆ ನೀಡುತ್ತವೆ. ಪಾರ್ಶ್ವಿಕ ಜ್ಞಾನೇಂದ್ರಿಯಗಳು ಚಿಕ್ಕ ಹಾಗೂ ಪ್ರತ್ಯೇಕವಾದ ಕೊಳವೆಗಳಲ್ಲಿ ಇವೆ. ಹೊಟ್ಟೆಯಲ್ಲಿ ಹತ್ತು ಬೆನ್ನೆಲುಬುಗಳು ಬಾಲದಲ್ಲಿ ಹದಿನಾಲ್ಕು ಬೆನ್ನೆಲುಬುಗಳಿವೆ. ಇವು ಪೋಣಿಸಿದ ಮಣಿಗಳಂತೆ ಕಾಣುತ್ತವೆ. ಸಮುದ್ರದಲ್ಲಿ ತೇಲುವ ಅಸಂಖ್ಯಾತ ಜೀವರಾಶಿಗಳು ಈ ಮೀನುಗಳ ಆಹಾರ. (ಕೆ.ಪಿ.ಆರ್.)

**ಕುದುರೆ ನೊಣಗಳು:** ಕುದುರೆಯನ್ನು ಹಿಂಸಿಸುವ ನೊಣಗಳು. ಇವು ಡಿಪ್ಟರ ಗಣದಲ್ಲಿರುವ ಟಬಾನಿಡೆ, ಹಿಪ್ಪೋಬಾಸ್ಕಿಡೆ, ಮಸ್ಕಿಡೆ, ಮತ್ತು ಈಸ್ಟ್ರಿಡೆ ಕುಟುಂಬಗಳಿಗೆ ಸೇರಿವೆ. ಟಬಾನಿಡೆ ನೊಣಗಳನ್ನು ಗ್ಯಾಡ್‌ನೊಣಗಳೆನ್ನುತ್ತಾರೆ. ಇವು ದಪ್ಪವಾಗಿದ್ದು, ಚಟುವಟಿಕೆಯಿಂದಿವೆ. ಗಂಡು ನೊಣಗಳು ಕಚ್ಚುವುದಿಲ್ಲ, ಮಕರಂದವನ್ನು ಹೀರುತ್ತವೆ. ಅವುಗಳ ತಲೆ ಮಧ್ಯೆ ದಪ್ಪ ಕಣ್ಣುಗಳಿವೆ. ಹೆಣ್ಣುಗಳು ಮಾತ್ರ ಕುದುರೆ, ದನ, ಮನುಷ್ಯರ ರಕ್ತವನ್ನು ಹೀರುತ್ತವೆ. ವಂಶೋತ್ಪತ್ತಿ ನೀರಿರುವ ಜೌಗು ಪ್ರದೇಶಗಳಲ್ಲಿ ಆಗುತ್ತದೆ. ಕ್ರೈಸಾಪ್ಸ್



ಹಿಪ್ಪೊಬಾಸಿಡ್ ನೊಣ

ಡಿಸ್ಪಾರ್ ನೊಣ, ಪಟ್ಟೆರೆಕ್ಕೆಗಳನ್ನು ಹೊಂದಿದೆ. ಇದು ಲಾಯ, ಗೋದಾಮುಗಳಲ್ಲಿ ಸುಳಿದಾಡುತ್ತಿದ್ದು, ಕುದುರೆಯ ರಕ್ತವನ್ನು ಹೀರುತ್ತವೆ. ಗುಡ್ಡಗಾಡುಗಳಲ್ಲಿ ಹಿಮ್ಯಾಟೊಪೋಟ ಮತ್ತು ಕೊರಿಜೊನ್ಯೂರ ಅಥವ ಪ್ಯಾಂಗೋನಿಯ ನೊಣಗಳು ಕುದುರೆಯ ಪೀಡೆಗಳು ಗ್ಯಾಡ್‌ನೊಣ (ಉದಾ: ಟಬಾನಸ್ ಸ್ಟ್ರಯೇಟಸ್) ಕಪ್ಪು ಅಥವ ಬೂದು ಬಣ್ಣದ್ದು. ಇದು ದಪ್ಪಗಿದೆ. ಕುದುರೆ, ದನಗಳ ಮೇಲೆ ಕುಳಿತು, ಅನೇಕ ಸಲ ಚುಚ್ಚಿ ರಕ್ತವನ್ನು ಹೀರುತ್ತವೆ. ಅಂಥ ಕಡೆಗಳಲ್ಲಿ ರಕ್ತ ಜಿನುಗುತ್ತದೆ. ನೊಣಗಳು ಹೆಚ್ಚಾಗಿದ್ದರೆ, ಕುದುರೆ ಬಹಳ ರಕ್ತವನ್ನು ಕಳೆದುಕೊಳ್ಳುತ್ತವೆ. ಮೇಯುವುದಿಲ್ಲ. ಇತರ ಕುದುರೆಗಳೊಂದಿಗೆ ಜಗಳವಾಡುತ್ತವೆ. ಈ

ನೊಣ ಪಶ್ಚಿಮ ಆಫ್ರಿಕದಲ್ಲಿ ಜನರಿಗೆ ಟುಲರೀಮಿಯ ಎಂಬ ಆನೆಕಾಲುರೋಗವನ್ನು ಮತ್ತು ಆಲ್ಜೀರಿಯದಲ್ಲಿ ಕುದುರೆ, ಒಂಟೆಗಳಿಗೆ, ಎಲ್‌ಡೆಬಾಬ್ ಎಂಬ ರೋಗವನ್ನು ಹರಡುತ್ತದೆ. ಕುದುರೆಗಳ ನೆರಡಿ (ಆಂತ್ರಾಕ್ಸ್) ರೋಗ, ಅನಿಮಿಯ ಅಥವ ಕೊಳಚೆ ಜ್ವರ ಮತ್ತು ಸುಕ್ರ ರೋಗಗಳನ್ನೂ ಹರಡುತ್ತದೆ.

ಉಸುಬಿನ ನೊಣ

ಹೇಸರಕತ್ತೆ, ದನ, ಹಂದಿ, ನಾಯಿ, ಜಿಂಕೆ ಮತ್ತು ಮನುಷ್ಯರಲ್ಲು ರಕ್ತ ಹೀರುವ ಮೂಲಕ ಕಾಡಿಸುತ್ತವೆ. ಪ್ರಪಂಚದಲ್ಲೆಲ್ಲಾ ಇವೆ. ಬೆಟ್ಟ, ಕಾಡುಗಳಲ್ಲಿ ಹೆಚ್ಚು. ಈ ನೊಣಗಳು ನೂರಾರು ಮೊಟ್ಟೆಗಳನ್ನು ನೀರಿನ ಪಕ್ಕದಲ್ಲಿರುವ ಸಸ್ಯ, ಇತರ ವಸ್ತುಗಳ ಮೇಲೆ ಇಡುತ್ತವೆ. ಒಂದು ವಾರದಲ್ಲಿ ಮೊಟ್ಟೆಗಳು ಒಡೆದು, ಸಣ್ಣ ಮ್ಯಾಗಟ್‌ಗಳಾಗಿ, ನೀರಿಗೆ ಬಿದ್ದು, ತಳದ ಮಣ್ಣಿನೊಳಕ್ಕೆ ಸೇರುತ್ತವೆ. ಇವುಗಳ ಆಹಾರ ಸಣ್ಣ ಕೀಟಗಳು, ಎರೆಹುಳು, ಸಣ್ಣ ವಲ್ಕವಂತಗಳು, ಬಸವನ ಹುಳು, ಇತರ ನೊಣಗಳ ಲಾರ್ವ. ಮ್ಯಾಗಟ್ 20–25 ಮಿಮೀ. ಅಂಗುಲ ಉದ್ದವಿರುತ್ತದೆ. ಮೈಮೇಲೆ ಬಿಳುಪು ಅಥವ ಕಪ್ಪು ಬೂದು ಪಟ್ಟೆಗಳಿವೆ. ದೇಹದ ಎರಡು ತುದಿ ಚೂಪಾಗಿದೆ. ಪ್ರತಿ ಖಂಡದ ಮೇಲೆ ಮಾಂಸಲ ಸುತು ಇದೆ.



ಟಾಚಿನಿಡ್ ನೊಣಗಳು

ಚರ್ಮ ಒರಟಾಗಿದೆ. ತುದಿಯು ಮೀನು ಹಿಡಿಯಲು, ಇವನ್ನು ಗಾಳಕ್ಕೆ ಕಟ್ಟುವರು. 4–5 ತಿಂಗಳಲ್ಲಿ ಪೂರ್ತಿ ಬೆಳೆದು ಒದ್ದೆ ಮಣ್ಣಿನಲ್ಲಿ ಕೋಶಗಳಾಗುತ್ತವೆ. 2–6 ವಾರಗಳ ನಂತರ ಪ್ರೌಢ ನೊಣಗಳಾಗುತ್ತವೆ. ಇವುಗಳ ಹತೋಟಿಗೆ, ಜೌಗು ಪ್ರದೇಶಗಳನ್ನು ತಪ್ಪಿಸಲು, ನೀರಿನ ಕುದುರೆಗಳ ಮೈಗೆ ಬಟ್ಟೆಯನ್ನು ಹೊದಿಸಬೇಕು. ಅವುಗಳ ಮೈಗೆ ಪೈರಿತ್ರಂ ಪುಡಿಯನ್ನು ದೂಳೀಕರಿಸಬೇಕು. ಲಾಯದ ನೊಣ–ಸ್ಟೊಮಾಕ್ಸಿಸ್ ಕ್ಯಾಲ್ಸಿಟ್ರಾನ್ ಮಸ್ಕಿಡೆ ಕುಟುಂಬದ ಸದಸ್ಯ. ಈ ನೊಣ ಸಣ್ಣ ಮನೆನೊಣವನ್ನು ಹೋಲುತ್ತದೆ. ವಿಶ್ವದೆಲ್ಲೆಡೆ ಹರಡಿಕೊಂಡಿವೆ. ಕುದುರೆಯ ಕಾಲುಗಳ ಮೇಲೆ ಚುಚ್ಚಿ ರಕ್ತ ಹೀರುತ್ತವೆ. ಗಾಳಿ ವೇಗವಾಗಿ ಬೀಸುವ ಸಮಯದಲ್ಲಿ ಮನೆಗಳನ್ನು ಹೊಕ್ಕು, ಮನುಷ್ಯರ ಕಾಲನ್ನು ಚುಚ್ಚುತ್ತವೆ. ಕುದುರೆಗಳು ಈ ನೊಣಗಳ ಬಾಧೆ ತಾಳಲಾರದೆ, ಕಾಲನ್ನು ಕುಟುಕುತ್ತವೆ. ನೊಣಗಳು ಹೆಚ್ಚಾಗಿದ್ದರೆ ಕುದುರೆಗೆ ಬಹಳ ಹಿಂಸೆ. ನೋವು, ರಕ್ತದ ನಷ್ಟಗಳಿಂದ ಅವುಗಳ ತೂಕ ಕಡಿಮೆಯಾಗುತ್ತದೆ. ಕೆಲವು ವೇಳೆ ವಿಪರೀತ ರಕ್ತ ನಷ್ಟವಾದ ಕಾರಣ, ರಕ್ತಹೀನತೆಯಿಂದ ಸತ್ತು ಹೋಗುತ್ತವೆ. ಈ ನೊಣಗಳು ಮಕ್ಕಳ ಪಾರ್ಶ್ವವಾಯು, ಪ್ರಾಣಿಗಳ ಆಂತ್ರಾಕ್ಸ್, ಕುಷ್ಟರೋಗ, ಸುರ್ರ, ಕೊಳಚೆ ಜ್ವರಗಳನ್ನು ಹರಡುವಲ್ಲಿ ಪಾತ್ರವಹಿಸುತ್ತವೆ. ಈ ನೊಣಗಳ ಆಸರೆ ಜೀವಿಗಳು, ಕುದುರೆ, ಹೇಸರಕತ್ತೆ, ದನ, ಹಂದಿ, ನಾಯಿ, ಬೆಕ್ಕು, ಕುರಿ, ಮೇಕೆ, ಗಿನಿಪಿಗ್, ಮೊಲ, ಇಲಿ, ಮನುಷ್ಯರೂ ಸಹ.

ನೊಣದ ಉದ್ದ 8 ಮಿಮೀ. ನರೆ ಬಣ್ಣ. ಮನೆ ನೊಣದಂತಿದ್ದರೂ, ಇದರ ನಡತೆ ವಿಭಿನ್ನವಾಗಿದೆ. ತಲೆ ಕೆಳಗೆ, ಚೂಪು, ಗಟ್ಟಿ, ಕೊಕ್ಕಿನಂತೆ ಚಾಚಿರುತ್ತದೆ, ಹೊಟ್ಟೆಯ ಮೇಲೆ 8 ಆಕಾರದ 7 ಗುರ್ತುಗಳಿವೆ. ಗಂಡು, ಹೆಣ್ಣುಗಳೆರಡೂ ರಕ್ತವನ್ನು ಹೀರುತ್ತವೆ. ಹಗಲು ಮಾತ್ರ ಚಟುವಟಿಕೆಯಿಂದಿವೆ. ಕೊಳೆಯುತ್ತಿರುವ ವಸ್ತುಗಳಲ್ಲಿ ವಂಶೋತ್ಪತ್ತಿ. ಮೊಟ್ಟೆಗಳು ಕೊಳೆತ, ಶೇಂಗದ ಹಿಂಡಿ, ಹುಲ್ಲು ತುಂಬಿದ ಸಗಣಿ, ಲದ್ದಿಗಳಲ್ಲಿ, ಆಗುತ್ತದೆ. 500–600 ಮೊಟ್ಟೆಗಳನಿಡುತ್ತವೆ. ಮೊಟ್ಟೆಗಳು ಬಿಳುಪು 4–5 ಗುಂಪುಗಳಲ್ಲಿರುತ್ತವೆ. ಬೇಗ ಒಡೆದು ಮರಿಗಳಾಗುತ್ತವೆ.

ಮರಿಗಳ ತಲೆ ಚೂಪು. ಹಿಂಭಾಗ ಮೊಂಡು, 16 ಮಿಮೀ ಉದ್ದ. ಹಳದಿ ಬಿಳುಪು. ಶ್ವಾಸರಂಧ್ರಗಳು ಕೊನೆ ಖಂಡದ ಮೇಲೆ ತ್ರಿಕೋನಾಕಾರದಲ್ಲಿವೆ. ಒಂದು ವಾರದಲ್ಲಿ ಬೆಳೆದು, ಒಣ ಮಣ್ಣಿನಲ್ಲಿ ಕೋಶವಾಗುತ್ತವೆ. ಒಂದು ವಾರದ ನಂತರ, ಪ್ರೌಢ ನೊಣಗಳಾಗುತ್ತವೆ. ವರ್ಷದಲ್ಲಿ ಹಲವು ಬಾರಿ ವಂಶೋತ್ಪತ್ತಿ ನಡೆಸುತ್ತವೆ. ಜೀವನ ಚರಿತ್ರೆಯ ಅವಧಿ 12–15 ದಿನಗಳು.

ಹತೋಟಿಗೆ, ಕುದುರೆಯ ಕಾಲುಗಳಿಗೆ ಪೈರಿತ್ರಂ, ಅಥವ ಡಾಲ್ಫ್ ಪುಡಿಯನ್ನು ದೂಳೀಕರಿಸಬೇಕು. ಕೊಳೆಯುವ ವಸ್ತುಗಳನ್ನು ತಪ್ಪಿಸಿ. ಗಿಡಗಳಿಗೆ, ಶೇಂಗದ ಹಿಂಡಿ ಜತೆಗೆ ಅಮೋನಿಯಂ ಸಲ್ಫೇಟ್, ಸೂಪರ್‌ಫಾಸ್ಫೇಟ್‌ಗಳನ್ನು ಬೆರಸಿ ಹಾಕಬೇಕು.

ಕುದುರೆ ಬಾಟ್ ನೊಣಗಳು: ಗ್ಯಾಸ್ಟ್ರೋಫೈಲಸ್ ಜಾತಿ ನೊಣಗಳು. ಇವುಗಳನ್ನು ಬಾಟ್ ನೊಣ, ಗದ್ದ ಅಥವ ಗಂಟಲು ಬಾಟ್, ತುಟಿ ಅಥವ ಮೂಗಿನ ಬಾಟ್ ಮತ್ತು ಸಿಪ್ಲಿಂಗ್ ಬಾಟ್ ನೊಣಗಳೆನ್ನುವರು. ಇವು ಕುದುರೆಯನ್ನು ಕಚ್ಚುವುದಿಲ್ಲ, ಚುಚ್ಚುವುದಿಲ್ಲ. ಆದರೆ, ಕುದುರೆಗಳನ್ನು ಸಂತಾನೋತ್ಪತ್ತಿ ಸಮಯದಲ್ಲಿ ಅವಲಂಬಿಸಿವೆ. ನೊಣಗಳು, ಮೊಟ್ಟೆಗಳನ್ನು ಕುದುರೆಯ ಹಿಂಗಾಲು, ಭುಜ, ಹೊಟ್ಟೆ, ತಲೆ ಅಥವ ಗಂಟಲು ಕೆಳಗಿನ ಕೂದಲು, ತುಟಿಯ ಕೂದಲುಗಳಲ್ಲಿ ಅಂಟಿಸುತ್ತವೆ. ಮೊಟ್ಟೆಯೊಡೆದ, ನಂತರ ಮ್ಯಾಗಟ್‌ಗಳು, ಕುದುರೆ ತಿಕ್ಕಿಕೊಂಡಾಗ, ತುಟಿಯಿಂದ ಬಾಯಿಗೆ, ನಂತರ,ಹೊಟ್ಟೆಯೊಳಕ್ಕೆ ಸೇರುತ್ತವೆ. ಅಲ್ಲಿ ಬೆಳೆದು, ಲದ್ದಿಯೊಡನೆ ಹೊರಕ್ಕೆ ಬಿದ್ದು, ಭೂಮಿಯೊಳಗೆ ಕೋಶಗಳಾಗಿ, ನಂತರ ನೊಣಗಳಾಗುತ್ತವೆ. ವಿವಿಧ ಬಾಟ್ ನೊಣಗಳ ಜೀವನ ಚರಿತ್ರೆಯೆಲ್ಲ ಒಂದೇ ತರಹ. ಮೊಟ್ಟೆಗಳನ್ನಿಡುವ ಜಾಗ ವಿಭಿನ್ನವಾಗಿದೆ.

ಇವು ಕುದುರೆಯ ದೇಹ ಸೇರಿದಾಗ ನಾಲಗೆ, ತುಟಿ, ಹೊಟ್ಟೆ, ಕರುಳು, ಇನ್ನಿತರೆ ಒಳಭಾಗಗಳಿಗೆ ಹಾನಿ ಮಾಡಿ, ಗಾಯಪಡಿಸಿ, ವಿಷ ವಸ್ತುಗಳನ್ನು ಸ್ರವಿಸುತ್ತವೆ. ಕುದುರೆಗಳು ಹಸಿವಿನಿಂದ ನರಳಿ, ಜೀರ್ಣಶಕ್ತಿಯನ್ನು ಕಳೆದು ಕೊಂಡು, ದುರ್ಬಲವಾಗುತ್ತವೆ.

ಕುದುರೆಗಳನ್ನು ರಾತ್ರಿ ಮೇಯಲು ಬಿಡುವುದಕ್ಕೆ ಕಾರಣ, ನೊಣಗಳ ಹಾರಾಟ ಹಗಲು ಮಾತ್ರ, ಮೊಟ್ಟೆಗಳನ್ನಿಡುವ ಭಾಗಗಳಿಗೆ, ಡಾಲ್ಫ್ ಪುಡಿ ಅಥವ ಪೈರಿತ್ರಂ ಪುಡಿಯನ್ನು ದೂಳೀಕರಿಸುವುದು. ಮೊಟ್ಟೆಯಿಟ್ಟ ಭಾಗಗಳನ್ನು ಬಿಸಿನೀರಿನಿಂದ ತೊಳೆದರೆ ಮ್ಯಾಗಟ್‌ಗಳು ಬಿದ್ದು ಹೋಗುತ್ತವೆ.

ಹಿಪ್ಪೊಬಾಸ್ಕ ಮ್ಯಾಕುಲೇಟ: ಹಿಪ್ಪೊಬಾಸ್ಕಿಡೆ ಕುಟುಂಬದ ಸದಸ್ಯ. ಸಾಮಾನ್ಯವಾಗಿ ತೊಳಚಿ ಎನ್ನುವರು. ಇದು ಕುದುರೆ, ದನ, ಕುರಿಗಳ ಬಾಹ್ಯ ಪರೋಪ ಜೀವಿ. ಕುದುರೆಯ ರಕ್ತವನ್ನು ಹೀರುತ್ತದೆ. ಇವು ಕೂದಲುಗಳಿಗೆ ಅಂಟಿರುತ್ತವೆ. ತೊಳಚಿ ತಲೆ ಸಣ್ಣಗಿದ್ದು, ಚಪ್ಪಟೆಯಾಗಿದೆ. ಕಣ್ಣುಗಳಿವೆ. ಎದೆ ದೊಡ್ಡದು. ಬೂದು, ಕೆಂಪು–ಬೂದು, ಗುರುತುಗಳು, ಪಟ್ಟೆಗಳಿವೆ. ಹೊಟ್ಟೆ ಚೀಲದಂತೆ ಇದೆ. ಕಾಲುಗಳಿಗೆ ಕೊಂಡಿಗಳಿವೆ. ರೆಕ್ಕೆಗಳು ಅಗಲ, ಅಂಚು ಗುಂಡು, ಹೊಟ್ಟೆಗಿಂತ ಉದ್ದ. ಇದು ಹಾರುವುದಿಲ್ಲ; ಸ್ಥಳ ಬದಲಾಯಿಸುತ್ತವೆ. ಹೆಣ್ಣು ಮರಿಗಳನ್ನಿಡುತ್ತದೆ. ಕೂಡಲೆ ಅವು ಪ್ಯೂಪೇರಿಯಗಳಲ್ಲಿ

ಕೋಶಗಳಾಗಿ, 10–12 ದಿನಗಳಲ್ಲಿ ಪ್ರೌಢ ತೊಳಚಿಗಳಾಗುತ್ತವೆ. ಲಾಯ, ಕೊಟ್ಟಿಗೆಗಳ ಬಿರುಕುಗಳಲ್ಲಿರುತ್ತವೆ.

ಹತೋಟಿಗೆ, ಕುದುರೆ ಮೈಗೆ, ಪೈರಿತ್ರಂ ಅಥವ ಡಾಲ್ಫ್ ಪುಡಿಯನ್ನು ದೂಳೀಕರಿಸಿದರೆ ತೊಳಚಿಗಳು ಬಿದ್ದು ಸತ್ತುಹೋಗುತ್ತವೆ. ಲಾಯದಲ್ಲಿನ ಬಿರುಕುಗಳನ್ನು ಮುಚ್ಚಬೇಕು.

***

**ಕುದುರೆ:** ಏಕ ಖುರಗಳ ಗುಂಪಿಗೆ ಸೇರಿದ ಸ್ತನಿ. ಈಕ್ವಸ್ ಕೆಬಲ್ಲಸ್ ವೈಜ್ಞಾನಿಕ ಹೆಸರು. (ಇದರ ಪ್ರಾಣಿಶಾಸ್ತ್ರ ವೃತ್ತಾಂತಕ್ಕೆ ನೋಡಿ–ಈಕ್ವಿಡೇ.) ಪ್ರಾಚೀನ ಕಾಲದಿಂದಲೂ ಕುದುರೆ ಮನುಷ್ಯನ ಜೀವನದೊಡನೆ ಹಾಸುಹೊಕ್ಕಾಗಿ ಬೆಸೆದು ಹೋಗಿದೆ. ಇತಿಹಾಸವೇ ಆಗಲಿ ನಾಗರಿಕತೆಯ ವಿಕಾಸದ ವಿಶ್ಲೇಷಣೆಯೇ ಆಗಲಿ ಕುದುರೆಯ ಪ್ರಸ್ತಾಪದ ವಿನಾ ಅಪೂರ್ಣ. ಅನಾಗರಿಕತೆಯಿಂದ ನಾಗರಿಕತೆಯೆಡೆಗಿನ ಮಾನವನ ನಡೆಯಲ್ಲಿ ಆತನ ಹೆಜ್ಜೆಯ ಗುರುತುಗಳೊಡನೆ ಕುದುರೆ ಗೊರಸಿನ ಗುರುತುಗಳೂ ಎರಕಗೊಂಡಿವೆ ಎಂಬ ಪ್ರಚಲಿತ ಹೇಳಿಕೆ ಈ ಕಾರಣದಿಂದ ಬಂದುದಾಗಿರಬೇಕು. ಭಾರ ಹೊರಲು, ಸವಾರಿ ಮಾಡಲು, ವ್ಯವಸಾಯದಲ್ಲಿ ನಾನಾ ಬಗೆಯ ಕೆಲಸಗಳನ್ನು ನಿರ್ವಹಿಸಲು ಕುದುರೆಯಂಥ ಉಪಯುಕ್ತ ಹಾಗೂ ಸರ್ವಶಕ್ತ ಪ್ರಾಣಿ ಇನ್ನೊಂದಿಲ್ಲ.

ಕುದುರೆಯ ಪ್ರಾಚೀನ ಚರಿತ್ರೆಯನ್ನು ಅಪ್ರತ್ಯಕ್ಷ ನಿದರ್ಶನಗಳಿಂದ ಊಹಿಸಬೇಕಷ್ಟೆ. ಭೂಮಿಯ ಮೇಲೆ ಕುದುರೆ ಮಾನವನ ಉಗಮಕ್ಕಿಂತ ಎಷ್ಟೋ ಶತಮಾನಗಳ ಮೊದಲೇ ಆಗಮಿಸಿದ್ದರೂ ಕ್ರಿ.ಪೂ. ಸುಮಾರು 2000–3000 ವರ್ಷಗಳಿಂದಾಚೆಗೆ ಕುದುರೆಯ ವೃತ್ತಾಂತವನ್ನು ಖಚಿತವಾಗಿ ಹೇಳಬರುವುದಿಲ್ಲ. ದೊರೆತಿರುವ ಪಳೆಯುಳಿಕೆಗಳನ್ನು ಕ್ರಮಬದ್ಧವಾಗಿ ಅಳವಡಿಸಿ ಕುದುರೆಯ ಉಗಮವನ್ನು ವಿವರಿಸಲು ಮಾಡಿರುವ ಹಲವಾರು ಪ್ರಯತ್ನಗಳೂ ಕರಾರುವಾಕ್ಕಾಗಿ ನಿರ್ಧಾರವನ್ನು ನೀಡಲು ಸಮರ್ಥವಾಗಿಲ್ಲ. ಆಧುನಿಕ ಕುದುರೆಯ ಪೂರ್ವಜ ಏಷ್ಯಾಖಂಡದಲ್ಲಿತ್ತೆಂದು ನಂಬಲಾಗಿದೆ. ಉತ್ತರ ಮಧ್ಯ ಏಷ್ಯಾದಲ್ಲಿ ಕುದುರೆಯ ಪೂರ್ವ ಪೀಳಿಗೆಯ ಉಗಮವಾಗಿ ಅಲ್ಲಿಂದ ಮೂರು ಪ್ರಧಾನ ಕವಲುಗಳಾಗಿ ಒಡೆದು ಒಂದು ಪೂರ್ವಕ್ಕೂ ಇನ್ನೊಂದು ಪಶ್ಚಿಮಕ್ಕೂ ಮೂರನೆಯದು ನೈಋತ್ಯಕ್ಕೂ ವಲಸೆ ಹೋದವು. ಪೂರ್ವಕ್ಕೆ ಹೋದ ಕವಲು ಮುಂದೆ ಚೀನ ಹಾಗೂ ಇತರ ಮಂಗೋಲಿಯ ಜಾತಿಯ ಕುದುರೆಗಳಿಗೆ ಜನ್ಮನೀಡಿತು. ಪಶ್ಚಿಮದ ಕವಲು ಇಡೀ ಯೂರೋಪ್ ಖಂಡವನ್ನು ವ್ಯಾಪಿಸಿ ಅಲ್ಲಿ ಹಲವಾರು ಬಗೆಯ ಕುದುರೆ ಜಾತಿಗಳು ರೂಪುಗೊಂಡವು. ನೈಋತ್ಯದ ಕವಲು ಏಷ್ಯಾ ಮೈನರ್, ಇರಾನ್, ಭಾರತ, ಅರೇಬಿಯ, ಆಫ್ರಿಕ–ಈ ವಲಯಗಳಲ್ಲಿ ಕುದುರೆಯ ನಾನಾ ತಳಿಗಳ ಜನ್ಮಕ್ಕೆ ಕಾರಣವಾಯಿತು.

ಮುಂದೆ ಮಾನವನ ಉಗಮವಾದ ಮೇಲೆ ನಾಗರಿಕತೆ ವರ್ಧಿಸಿದಂತೆ ಕುದುರೆ ಆತನ ನಿಕಟ ಸಹವರ್ತಿಯಾಗಿ ವಿಕಾಸಗೊಂಡಿತು. ಅಂದು ಸ್ವಚ್ಛಂದ ಜೀವಿಯಾಗಿ ಅಲೆಯುತ್ತಿದ್ದ ಕುದುರೆಗಳು ಬಹುಶಃ ಇಂದು ಎಲ್ಲಿಯೂ ಇಲ್ಲ. ಪಳಗಿದ ಆಧುನಿಕ ಕುದುರೆ ಹವೆಯ ತೀವ್ರ ಏರಿಳಿತಗಳನ್ನು ನಿರೋಧಿಸಿ ಯಾವ ಸನ್ನಿವೇಶಕ್ಕೂ ಹೊಂದಿಕೊಳ್ಳಬಲ್ಲುದಾದ್ದರಿಂದ ಅದನ್ನು ಮನುಷ್ಯಾವೃತ ಪ್ರಪಂಚವಿಡೀ ನೋಡಬಹುದು.

ವರ್ಗೀಕರಣ: ಇಂದು ಪ್ರಪಂಚದಲ್ಲಿರುವ ಕುದುರೆಯ ಎಲ್ಲ ತಳಿಗಳನ್ನೂ ವರ್ಗೀಕರಿಸುವ ಪ್ರಯತ್ನ ನಡೆದಿಲ್ಲ. ಗಾತ್ರ, ಮಾದರಿ, ಉಗಮಸ್ಥಳ, ಉಪಯೋಗ ಮುಂತಾದ ಹಲವಾರು ದೃಷ್ಟಿಕೋನಗಳಿಂದ ವರ್ಗೀಕರಣ ಮಾಡುವುದು ಸಾಧ್ಯವಿದೆ. ಕುದುರೆಗಳನ್ನು ಸಾಮಾನ್ಯವಾಗಿ ಹೇರುಕುದುರೆ (ಡ್ರಾಫ್ಟ್‌ಹಾರ್ಸ್), ಲಘುಕುದುರೆ ಮತ್ತು ಸಣ್ಣತಳಿ ಕುದುರೆ (ಪೋನಿ, ಎತ್ತರ 56" ಮೀರದ ಕುದುರೆ) ಎಂದು ವರ್ಗೀಕರಿಸುವುದುಂಟು. ಈ ವರ್ಗೀಕರಣ ಬಲು ನಿಷ್ಕೃಷ್ಟವೆಂದೇನೂ ಭಾವಿಸಬೇಕಾಗಿಲ್ಲ. ಆರಂಭದ ಕುದುರೆಗಳು ಎತ್ತರದಲ್ಲಿ (ಭುಜಾಸ್ಥಿಗಳ ಸಮೀಪ) ಸರಿ ಸುಮಾರಾಗಿ 48" ಇದ್ದುವು. 56" ಎತ್ತರವಿದ್ದ ಕುದುರೆಗಳು ತೀರ ವಿರಳ. ಆದರೆ ಅವುಗಳ ಇಂದಿನ ಪೀಳಿಗೆಯಾದರೋ 68"–80" ಎತ್ತರ ಬೆಳೆಯುತ್ತವೆ. ಆದಿಹಯಗಳ ಬಣ್ಣ ಮಬ್ಬುಕಂದು. ಆದರೆ ಇಂದು ಕಪಿಲ, ಕಂದು, ಚೆಸ್ಟ್‌ನಟ್, ಬೂದು, ಕೆಂಗಂದು, ಬಿಳಿಬೂದು ಮುಂತಾದ ನಾನಾಬಣ್ಣಗಳ ಕುದುರೆಗಳಿವೆ. ಒಳ್ಳೆಯ ಕುದುರೆಗೆ ಬಣ್ಣವೂ ಇದೆ ಎಂಬ ಜನಪ್ರಿಯ ಹೇಳಿಕೆ ನಿಜವಾದ ಮಾತು.

ಕುದುರೆ ಪಂದ್ಯ: ಓಟದ ಪರಿಣತಿಯನ್ನು ಪಡೆದ ಕುದುರೆಗಳದೇ ಒಂದು ತಳಿ. ಕುದುರೆ ಪಂದ್ಯವೂ ಕೋಳಿಪಂದ್ಯದಷ್ಟೇ ಹಳತಾದುದು. ಬ್ಯಾಬಿಲೋನಿಯದವರು ಕುದುರೆ ಕಟ್ಟಿ ರಥಗಳ ಓಟದ ಸ್ಪರ್ಧೆ ನಡೆಸುತ್ತಿದ್ದರು. ಯಾವಾಗ ಹೇಗೆ ಇದು ಆರಂಭವಾಯಿತೆಂದು ನಿರ್ಧರಿಸಲಾಗದಿದ್ದರೂ ಇದು ಬಹಳ ಪ್ರಾಚೀನವಾದುದೆಂದು ಹೇಳಬಹುದು. ಇಂಗ್ಲೆಂಡ್ ಅಮೆರಿಕ ಭಾರತಗಳಲ್ಲಿ ಕುದುರೆ ಪಂದ್ಯ ಬಹಳ ಜನಪ್ರಿಯ ಕ್ರೀಡೆ. ಬೆಂಗಳೂರು, ಮೈಸೂರು, ಬೊಂಬಾಯಿ, ಚೆನ್ನೈ, ಸಿಕಂದರಾಬಾದು, ಉದಕಮಂಡಲ, ಕೊಲ್ಕತಾಗಳಲ್ಲಿ ನಡೆಯುವ ಕುದುರೆ ಪಂದ್ಯಗಳು ಹೆಚ್ಚು ಜನರನ್ನು ಆಕರ್ಷಿಸುತ್ತವೆ. ಜಾತಿಯ ಕುದುರೆಗಳನ್ನು ಆರಿಸಿ ಬೆಳೆಸುವ ಬ್ರೀಡರ್, ಅವಕ್ಕೆ ಶಿಕ್ಷಣಕೊಡುವ ಟ್ರೈನರ್ ಮತ್ತು ಪಂದ್ಯ ಕುದುರೆಗಳನ್ನು ಸವಾರಿಮಾಡುವ ಜಾಕಿಗಳು ಇವರ ಉದ್ಯೋಗಕ್ಕೆ ಈ ಕ್ರೀಡೆ ಕಾರಣವಾಗಿದೆ. ಪಂದ್ಯದ ಕುದುರೆಗಳನ್ನು ಬೆಳೆಸುವ ಕೇಂದ್ರಗಳಿಗೆ ಸ್ಟಡ್ ಫಾರಮ್‌ಗಳೆನ್ನುತ್ತಾರೆ. ಇಂಥದೊಂದು ಸ್ಟಡ್ ಫಾರಮ್ ಕರ್ನಾಟಕದ ಕುಣಿಗಲ್ ಬಳಿ ಇದೆ.

ಕುದುರೆ ಹಿಂದೂಧರ್ಮದ ಅನುಸಾರ ಪೂಜ್ಯವಾದ ಪ್ರಾಣಿಯೂ ಹೌದು. ರಾಜನ ಪೂಜ್ಯವಸ್ತುಗಳಲ್ಲಿ ಪಟ್ಟದ ಕುದುರೆಯೂ ಒಂದು ಮುಖ್ಯ ಅಂಶ. ಕುದುರೆ ಕೇವಲ ಮನುಷ್ಯನ ನಾಗರಿಕತೆಯೇ ಅಲ್ಲದೆ, ಇತಿಹಾಸದಲ್ಲಿ ರಾಜ್ಯಗಳ ಚಕ್ರಾಧಿಪತ್ಯಗಳ ಏಳ್ಗೆ ಬೀಳ್ಗೆಗಳಲ್ಲಿಯೂ ಮಹತ್ತರ ಪಾತ್ರವಹಿಸಿದೆ. ಟ್ಯಾಂಕು, ವಿಮಾನಗಳು ಬಳಕೆಗೆ ಬರುವ ಮೊದಲು ಕುದುರೆ ಅತಿಮುಖ್ಯ ವಾಹನವಾಗಿತ್ತು.

ಕೆಲವೆಡೆಗಳಲ್ಲಿ ಕುದುರೆ ಮಾಂಸವನ್ನು ತಿನ್ನುತ್ತಾರೆ. ಚರ್ಮವನ್ನು ಹದಗೊಳಿಸಿ ಬಳಸುತ್ತಾರೆ. ಚರ್ಮ ಮತ್ತು ಕೂದಲಿನಿಂದ ಉಡುಪು ಮೆಟ್ಟು ಮುಂತಾದವನ್ನು ತಯಾರಿಸುತ್ತಾರೆ. ದೇಹದ ಅಂಗಾಂಶಗಳಿಂದ ಅಂಟು, ಸೀರಮ್ ತಯಾರಿಸುತ್ತಾರೆ. ಕುದುರೆ ಹಾಲನ್ನು ಕುಡಿಯುತ್ತಾರೆ. ಕುದುರೆ ಮತ್ತು ಕತ್ತೆಗಳ ನಡುವೆ ತಳಿಸಂಮಿಶ್ರಣದಿಂದ ಹುಟ್ಟುವ ಹೇಸರಗತ್ತೆ ಸಾಮಾನು ಹೊರಲು ಹೆಸರಾಗಿದೆ. (ಎಚ್.ಬಿ.ಡಿ.)

**ಕುದುರೆಯ ವಿಕಾಸ:** ಸ್ತನಿವರ್ಗದ ಪೆರಿಸ್ಸೊಡ್ಯಾಕ್ಟೈಲ್ ಗಣಕ್ಕೆ ಸೇರಿದ ಈಕ್ವಸ್ ಕೆಬಲಸ್ ಪ್ರಭೇದ ತನ್ನ ಪೂರ್ವಜರಿಂದ ವಿವಿಧ ಹಂತಗಳನ್ನು ದಾಟಿ ಒಂದೇ ಗೊರಸುಳ್ಳ ಪ್ರಾಣಿಯಾಗಿ ಮಾರ್ಪಾಡಾದ ಬಗೆ.

ಇದರ ವಿಕಾಸದ ವಿವಿಧ ಹಂತಗಳ ಪಳೆಯುಳಿಕೆಗಳು ಅನೇಕ ಜಾಗಗಳಲ್ಲಿ ಯಥೇಚ್ಛವಾಗಿ ದೊರಕಿವೆ. ಪ್ರಾಚೀನಕಾಲದಲ್ಲಿ ಇವು ಹಿಂಡು ಜೀವನ ನಡೆಸುತ್ತಿದ್ದುದರಿಂದ ಅವುಗಳ ಅವಶೇಷಗಳು ಕೂಡ ಹೇರಳವಾಗಿ ಒಂದೆಡೆ ದೊರಕುತ್ತವೆ.

ಏಲ್ ವಿಶ್ವವಿದ್ಯಾಲಯದ ಮಾರ್ಷಲ್ ಮತ್ತು ಅಮೆರಿಕದ ನ್ಯಾಚುರಲ್ ಹಿಸ್ಟರಿ ಮ್ಯೂಜಿಯಂನ ಆಸ್‌ಬಾರನ್ ಎಂಬುವವರು ಈ ಪಳೆಯುಳಿಕೆಗಳನ್ನು ಸಂಗ್ರಹಿಸಿ, ನಡೆಸಿದ ಸಂಶೋಧನೆಯ ಫಲವಾಗಿ ಕುದುರೆಯ ವಿಕಾಸದ ಬಗ್ಗೆ ಸ್ಪಷ್ಟ ಮಾಹಿತಿ ಸಿಕ್ಕಿದೆ.

ಕುದುರೆಯ ವಿಕಾಸದ ವಿವಿಧ ಹಂತಗಳನ್ನು ಪರಿಶೀಲಿಸಿದಾಗ ವಿಕಾಸವು ಈ ಕೆಳಗಿನ ದಿಕ್ಕಿನಲ್ಲಿ ಮುಂದುವರಿಯುತ್ತಿರುವುದು ಕಂಡುಬರುತ್ತದೆ.

1) ದೇಹದ ಗಾತ್ರ ದೊಡ್ಡದಾಗುತ್ತಾ ಬರುವುದು.

2) ಕಾಲುಗಳು ಕ್ರಮೇಣ ಉದ್ದವಾಗುವುದು.

3) ಅಲ್ನ ಮತ್ತು ಫ಼ಿಬುಲಗಳ ಬೆಳವಣಿಗೆಯಲ್ಲಿ ಇಳಿಮುಖ.

4) ಮುಂಗಾಲು ಮತ್ತು ಹಿಂಗಾಲಿನಲ್ಲಿ 5 ಬೆರಳಿನ ಸ್ಥಿತಿಯಿಂದ ಒಂದೇ ಬೆರಳಿರುವಂತೆ ಮಾರ್ಪಾಟು.

5) ಹಲ್ಲುಗಳ ಜಟಿಲತೆ (ಕಾಂಪ್ಲೆಸಿಟಿ).

6) ಭುಜ ಪಟ್ಟಿಯ ಕ್ಷೀಣಿಕೆ ಮತ್ತು ಕ್ಲ್ಯಾವಿಕಲ್‌ನ ಅಳಿಯುವಿಕೆ.

7) ಅಂಶಿಅಂಗಾಲ ಮೇಲೆ ನಡೆಯುವ (ಸೆಮಿಪ್ಲಾಂಟಿಗ್ರೇಡ್) ಸ್ಥಿತಿಯಿಂದ ಅಂಗುಲಿಗಾಮಿ (ಡಿಜಿಟಿಗ್ರೇಡ್) ಯಾಗುವಿಕೆ.

8) ಕ್ರಮವಾಗಿ ಮಿದುಳು ಬೆಳೆದುದಲ್ಲದೆ ಅದರ ಜಟಿಲಿಕೆಯೂ ಹೆಚ್ಚುತ್ತ ಬಂದದ್ದು.

ಈ ಬದಲಾವಣೆಗಳನ್ನು ಗಮನಿಸಿದರೆ ಈ ಪ್ರಾಣಿಯನ್ನು ವೇಗವಾಗಿ ಚಲಿಸುವುದಕ್ಕಾಗಿಯೇ ಪ್ರಕೃತಿ ಸೃಷ್ಟಿಸಿದಂತಿದೆ. ಉದ್ದವಾದ ಕತ್ತು, ತೆಳ್ಳನೆಯ ದೇಹ, ಉದ್ದವಾದ ಮುಖ ಮುಂತಾದ ಅಂಶ ಕೂಡ ವೇಗವನ್ನು ಹೆಚ್ಚಿಸಲು ನೆರವಾಗುತ್ತದೆ. ಸಮಕಾಲೀನವಾಗಿದ್ದ ಮಾಂಸಾಹಾರಿ ಜೀವಿಗಳಿಂದ ತಪ್ಪಿಸಿಕೊಳ್ಳಲು ಈ ವೇಗವು ಮುಖ್ಯ ಸಾಧನವಾಯಿತು.

ಕುದುರೆಯ ವಿಕಾಸವು ಮುಖ್ಯವಾಗಿ ಅಮೆರಿಕದಲ್ಲಿ ಆಯಿತಾದರೂ ವಿಕಾಸದ ವಿವಿಧ ಹಂತದ ಪ್ರಾಣಿಗಳು ಬೇರಿಂಗ್ ಜಲಸಂಧಿಯ ಪ್ರದೇಶದ ನೆಲಸೇತುವೆಯ ಮೂಲಕ ಪೂರ್ವ ಪ್ರದೇಶಗಳಿಗೆ ವಲಸೆ ಬಂದಿವೆ. ಆರ್. ಎಸ್. ಲಲ್ ಅವರು ಹೇಳಿರುವಂತೆ ಉತ್ತರ ಅಮೆರಿಕವು ಕುದುರೆಯ ವಿಕಾಸದ ನಿಜವಾದ ರಂಗಭೂಮಿ.

ಇಯೋಸೀನ್ ಕಾಲದ ಹೈರ್ಯಾಕೋಥೀರಿಯಂ ಕುದುರೆಯ ಪೂರ್ವಜ. ಇದರ ಅವಶೇಷಗಳು ಲಂಡನ್ ಕ್ಲೇನಲ್ಲಿ ಸಿಕ್ಕಿವೆ. ಇದೇ ಕಾಲದಲ್ಲಿ ಉತ್ತರ ಅಮೆರಿಕದ ಪಶ್ಚಿಮ ಭಾಗದಲ್ಲಿ ಇಯೋಹಿಪ್ಪಸ್ ಎಂಬ ಹೈರಾಕೋಥೀರಿಯಂ ಗಿಂತ ಸ್ವಲ್ಪ ಮುಂದುವರೆದ ಪಂಗಡವಿತ್ತು.

ಇಯೋಸೀನ್ ಅವಧಿಯಲ್ಲಿ ಉಷ್ಣತೆಯಿಂದ ಕೂಡಿದ ತೇವವಾದ ವಾಯುಗುಣವಿತ್ತು. ಆದ್ದರಿಂದ ಹುಲುಸಾದ ದಟ್ಟವಾದ ಕಾಡುಗಳು ಹುಲ್ಲುಗಾವಲುಗಳು ಪ್ರಸರಿಸಲು ಅನುಕೂಲವಾಯಿತು. ಈ ವಾತಾವರಣ ಸಸ್ಯಾಹಾರಿಯಾದ ಕುದುರೆಗೆ ಅನುಕೂಲವಾಗಿ ಪರಿಣಮಿಸಿತು.




ಕುದುರೆಗಳ ಕಾಲುಗಳು

ಅ. ಇಯೊ ಹಿಪ್ಪಸ್
ಆ. ಮಯೊ ಹಿಪ್ಪಸ್
ಇ. ಮೆರಿ ಹಿಪ್ಪಸ್
ಈ. ಈಕ್ವಸ್

ಇಯೋಹಿಪ್ಪಸ್ ಈಗಿನ ಬೆಕ್ಕಿಗಿಂತ ಸ್ವಲ್ಪ ದೊಡ್ಡದಾಗಿತ್ತು. ತಲೆ ಮತ್ತು ಕತ್ತು ಸಣ್ಣದಾಗಿದ್ದು, ಮುಂಗಾಲಿನಲ್ಲಿ 4 ಬೆರಳುಗಳೂ ಹಿಂಗಾಲಿನಲ್ಲಿ 3 ಬೆರಳುಗಳೂ ಚೆನ್ನಾಗಿ ಬೆಳೆದಿದ್ದುವು. ಹಿಂಗಾಲಿನ ಮೊದಲನೇ ಮತ್ತು 5 ನೇ ಬೆರಳುಗಳು ಕ್ಷೀಣವಾಗಿದ್ದವು ಎರಡು ಕಾಲುಗಳಲ್ಲೂ ಮಧ್ಯದ ಬೆರಳು ಉಳಿದವುಗಳಿಗಿಂತ ದೊಡ್ಡದಾಗಿತ್ತು. ಬೆರಳುಗಳಿಗೆ ಗೊರಸಿನಂತಃ ಕವಚವಿತ್ತು.

ಇಯೋಹಿಪ್ಪಸ್‌ನಲ್ಲಿ ಪೂರ್ಣದಂತ ಪಂಕ್ತಿ ಇದ್ದಿತು. ಆದರೆ ಅವು ಗಿಡಬಳ್ಳಿ ಮೇಯುವುದಕ್ಕೆ ಅನುಕೂಲವಾಗಿತ್ತು. ದಂತಪಂಕ್ತಿಯಲ್ಲಿ ಡಯಸ್ಟಿಮ ಅವಕಾಶವಿತ್ತು. ದವಡೆ ಹಲ್ಲುಗಳ ವಸಡಿನ ಮೇಲ್ಭಾಗವು ಹೆಚ್ಚು ಎತ್ತರವಿಲ್ಲದೆ (ಬ್ರೇಕಿಯೊ ಡಾಂಟ್) ಟ್ಯೂನೊಡಾಂಟ್ ರೀತಿಯ ಶೃಂಗಾಗ್ರವಿತ್ತು. ರೇಡಿಯಸ್ ಮತ್ತು ಅಲ್ನ್‌ಗಳು ಟಿಬಿಯ ಮತ್ತು ಫಿಬುಲಗಳಂತೆ ಪ್ರಮಾಣದಲ್ಲಿ ಚಿಕ್ಕದಾಗಿದ್ದವು.

ಇಯೋ ಹಿಪ್ಪಸ್ ನಂತರದ ಪಳೆಯುಳಿಕೆ 35 ಸೆಂಮೀ ಎತ್ತರದ ಓರೊಹಿಪ್ಪಸ್. ಈ ಪ್ರಾಣಿಯ ಕಾಲಿನಲ್ಲಿ 5ನೇ ಬೆರಳು ಮಾಯವಾಗಿ ಮುಂಗಾಲಿನಲ್ಲಿ ಹೊರಬೆರಳು ಕ್ಷೀಣವಾಗಿತ್ತು. ಮೂರನೆ ಮತ್ತು ನಾಲ್ಕನೇ ಪ್ರಿಮೋಲರ್ ಹಲ್ಲುಗಳು ದವಡೆಹಲ್ಲುಗಳಂತೆ ಮಾರ್ಪಾಡಾಗಿದ್ದವು. ಮೀಸೊಹಿಪ್ಪಸ್ ಆಲಿಗೋಸೀನ್ ಕಾಂಡ ಪಳೆಯುಳಿಕೆ 45 ಸೆಂಮೀ ನಿಂದ 60 ಸೆಂಮೀ ಎತ್ತರ ಬೆಳೆಯುತ್ತಿದ್ದ ಈ ಜೀವಿಯ ಮುಂಗಾಲಲ್ಲೂ ಹಿಂಗಾಲಲ್ಲೂ ಮೂರು ಉಪಯುಕ್ತ ಬೆರಳುಗಳಿದ್ದುವು.

ಮುಂದೆ ಮಯೋಸೀನ್ ಕಾಲದಲ್ಲಿ ಮೆರಿಚಿಪ್ಪಸ್, ಹಿಪ್ಪೆರಿಯಾನ್ ಮತ್ತು ಹೈಪೋಹಿಪ್ಪಸ್ ಎಂಬ ಪಂಗಡದ ಕುದುರೆಗಳಿದ್ದುವು.

ಪಾರಹಿಪ್ಪಸ್ ಎಂಬುದು ಮತ್ತೊಂದು ಮುಖ್ಯವಾದ ಘಟ್ಟ. ಹಲ್ಲುಗಳ ಮೇಲೆ ಸಿಮೆಂಟಿನ ಹಲ್ಲುಗಳ ಮೇಲೆ ಸಿಮೆಂಟಿನ ಶೇಖರಣೆ ಮತ್ತು ಮಧ್ಯದ ಬೆಟ್ಟಿನ ಪಕ್ಕದಲ್ಲಿದ್ದ ಬೆರಳುಗಳ ಕ್ಷೀಣತೆ ಇದರ ಲಕ್ಷಣ. ದಂತಪಂಕ್ತಿಯಲ್ಲಿ ಡಯಸ್ಟಿಮ ಅವಕಾಶವಿತ್ತು. ದವಡೆ ಹಲ್ಲುಗಳು ಉದ್ದವಾಗುವ ಸೂಚನೆಗಳಿದ್ದವು. ತಲೆಯು ಉದ್ದವಾದಂತೆ ಕಾಣುತ್ತಿತ್ತು. ಕಣ್ಣುಗಳು ಕೂಡ ಸ್ವಲ್ಪ ಹಿಂದಕ್ಕೆ ಜರುಗಿದಂತೆ ತೋರುತ್ತದೆ. ಮಧ್ಯದ ಬೆರಳು ಪಕ್ಕದ ಬೆರಳುಗಳಿಗಿಂತ ಉದ್ದವಾಗಿದ್ದುದರಿಂದ ಓಡುವಾಗ ಬಹುಶಃ ಪಕ್ಕದ ಬೆರಳುಗಳು ಭೂಮಿಗೆ ತಗಲುತ್ತಿರಲಿಲ್ಲ. ಈ ಪ್ರಾಣಿಯು ಕಾಡು ಪ್ರದೇಶದಲ್ಲಿ ಹಿಂದೆ ವಾಸಿಸುತ್ತಿದ್ದ ಪ್ರಾಣಿಗಳಿಗೂ ಇಂದಿನ ಬಯಲು ಸೀಮೆಯ, ಮೇಯುವ ಪ್ರಾಣಿಗೂ ಅವಸ್ಥಾ ಪರಿವರ್ತನೆಯ ಹಂತವಾಗಿದೆ.

ಪಾರಹಿಪ್ಪಸ್ ನಂತರದ ಪಳೆಯುಳಿಕೆ ಮೆರಿಚಿಪ್ಪಸ್. ಹುಲ್ಲು ತಿನ್ನಲು ಬೇಕಾದ ಹಲ್ಲಿನ ಸಿಮೆಂಟ್ ಮತ್ತು ಅಗಿಯಲು ಹಲ್ಲಿನ ಮೇಲ್ಭಾಗ (ಕ್ರೌನ್) ಇದರಲ್ಲಿ ಚೆನ್ನಾಗಿ ಬೆಳೆದಿತ್ತು. ಕಾಲಿನ ಮಧ್ಯ ಬೆರಳು ಮಾತ್ರ ಭೂಮಿಗೆ ತಗುಲುತಿತ್ತು. ಪಕ್ಕದ ಎರಡು ಬೆರಳುಗಳೂ ಚಿಕ್ಕದಾಗಿದ್ದು ಅವಕ್ಕೆ ಭೂಸ್ಪರ್ಶವಾಗುತ್ತಿರಲಿಲ್ಲ. ಇದು ಸುಮಾರು ಒಂದು ಮೀಟರ್ ಎತ್ತರವಿತ್ತು. ತಲೆಬುರುಡೆಯಲ್ಲಿ ಕಣ್ಣಿನ ಮುಂಭಾಗವು ಹೆಚ್ಚು ಉದ್ದವಾಗಿತ್ತು.

ಪ್ಲಯೋಹಿಪ್ಪಸ್ ಮುಂದಿನ ಹಂತ. ಇವು ನಿಜವಾಗಿಯೂ ಮೊದಲ ಬಾರಿಗೆ ಒಂದು ಬೆರಳಿನ ಕುದುರೆ. ಸು. 110 ಸೆಂಮೀ ಎತ್ತರವಿತ್ತು. ಕಾಲಿನ 2ನೇ ಮತ್ತು 4ನೇ ಬೆರಳುಗಳು ಚಿಕ್ಕ ದೆಬ್ಬೆಲುವುಗಳಾಗಿ ಉಳಿದವು. ದವಡೆಯ ಹಲ್ಲುಗಳು ಇಂದಿನ ಕುದುರೆಯಲ್ಲಿದ್ದಂತೆಯೇ ಇದ್ದುವು.

ಮುಂದಿನ ಹಂತ ಹಿಪ್ಪೇರಿಯಾನ್ 120 ಸೆಂಮೀ ಎತ್ತರವಿದ್ದು ತಲೆ ದೊಡ್ಡದಾಗಿರುವುದು. ಹಲ್ಲುಗಳು ಅಗಿಯಲು ಕಷ್ಟವಾದ ಹುಲ್ಲು ಮೊದಲಾದುವುಗಳನ್ನು ತಿನ್ನಲು ಚನ್ನಾಗಿ ಬೆಳೆದಿತ್ತು. ಇದರ ಅವಶೇಷಗಳು ಉತ್ತರ ಅಮೆರಿಕ ಮತ್ತು ಯೂರೋಪ್‌ಖಂಡಗಳಲ್ಲಿ ದೊರೆತಿವೆ.

ಪ್ಲಯೋಸೀನ್ ಅವಧಿ ಎಂದರೆ ಹೆಚ್ಚಿನ ಅಲ್ಲೋಕಲ್ಲೋಲದ ಯುಗ. ಈ ಕಾಲದಲ್ಲಿ ಖಂಡಗಳ ಮಧ್ಯೆ ಭೂಸಂಪರ್ಕ ಉಂಟಾಯಿತು. ಇದರಿಂದ ಒಂದು ಖಂಡದ ಪ್ರಾಣಿ ಇನ್ನೊಂದು ಖಂಡಕ್ಕೆ ಬರಲು ಅವಕಾಶವಾಯಿತು. ಪ್ಲೆಸಿಪ್ಪಸ್ ಈ ಅವಧಿಯ ಪಳೆಯುಳಿಕೆ.

ಇಂದಿನ ಅರಬ್ಬಿ ಕುದುರೆಯಷ್ಟು ಎತ್ತರವಿದ್ದು ಇಂದಿನ ಕುದುರೆಯಂತೆ ಹಲ್ಲುಗಳನ್ನು ಪಡೆದಿತ್ತು. ಒಂದೇ ಬೆರಳಿದ್ದು ಪಕ್ಕದ ಬೆರಳುಗಳ ಅವಶೇಷಗಳೂ ಇರಲಿಲ್ಲ.

ಪ್ಲೀಸ್ಟೋಸೀನ್ ಯುಗ; ಇಕ್ವಸ್ ಕುದುರೆಯ ವಿಕಾಸದ ಅಂತಿಮ ಘಟ್ಟ. ಈ ಕಾಲದಲ್ಲಿ ಇಕ್ವಸ್‌ನ ವಿವಿಧ ಪ್ರಭೇದ (ಸ್ಪೀಸಿಸ್) ಗಳಿದ್ದವು. ಇಕ್ವಸ್ ಉತ್ತರ ಅಮೆರಿಕದಲ್ಲಿ ಮತ್ತು ಪ್ಲೀಸ್ಟೋಸೀನ್ ಅವಧಿಯಲ್ಲಿ ಉದ್ಭವವಾಯಿತು. ಆದರೆ ಕೆಲವು ಸಹಸ್ರವರ್ಷಗಳ ಕೆಳಗೆ ಅದು ಅಮೆರಿಕದಲ್ಲಿ ಅಳಿದುಹೋಯಿತು. ಆದರೆ ಇದೇ ಯುಗದಲ್ಲಿ ಈ ಕುದುರೆಯು ಅಮೆರಿಕವನ್ನ ಬಿಟ್ಟು ಬೇರೆ ಖಂಡಗಳಿಗೆ ವಲಸೆ ಹೋಗಿದ್ದುದರಿಂದ ಇದನ್ನು ಎಲ್ಲೆಲ್ಲೂ ಕಾಣಬಹುದು. ನಶಿಸಿಹೋದ ಕುದುರೆಗಳಲ್ಲಿ ಮುಖ್ಯವಾದದ್ದು ಇಕ್ವಸ್ ಸ್ಕಾಟ್ ಸು. 150 ಸೆಮೀ ಎತ್ತರವಿದ್ದ ಈ ಕುದುರೆಗೆ ಇಂದಿನ ಕುದುರೆಗಿಂತ ಹೆಚ್ಚು ಹಲ್ಲುಗಳಿದ್ದವು.

ಈಗ ಕುದುರೆಯಂತಿರುವ ಪ್ರಾಣಿಗಳು ಏಷ್ಯಾ ಆಫ್ರಿಕ, ಅಮೆರಿಕ ಮತ್ತು ಯೂರೋಪ್ ಖಂಡಗಳಲ್ಲಿವೆ.

ಇಂದು ಕುದುರೆಯ ಪಂಗಡಕ್ಕೆ ಸೇರಿದ ಈಕ್ವಸ್ ಕಬಲಸ್ ಅಥವಾ ಕುದುರೆ, ಈ.ಅಸಿನಸ್ ಅಥವಾ ಆಫ್ರಿಕದ ಕತ್ತೆ, ಈ.ಹೆಮಿಯೋನಸ್ ಅಥವಾ ಏಷ್ಯಾದ ಕತ್ತೆ ಮತ್ತು 3 ವಿಧವಾದ ಪಟ್ಟೆ ಕುದುರೆಗಳು ಎಂಬ ಆರು ಪ್ರಭೇದಗಳಿವೆ. ಹೀಗೆ ಕುದುರೆಯ ವಿಕಾಸದಲ್ಲಿ ಏಕಮುಖವಾದ ನೇರವಾದ ಪ್ರವೃತ್ತಿಯನ್ನು ಕಾಣಬಹುದು. ಇದಕ್ಕೆ ಆರ್ಥೋಜೆನಿ ಎಂದು ಹೆಸರು.



ಕುದುರೆಯ ವಿಕಾಸ

ಜನನ ವ್ಯತ್ಯಾಸಗಳು ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸಿ ಆಗುವುದೇ ವಿನಾ ಕೇವಲ ಆಕಸ್ಮಿಕವಲ್ಲ ಎಂಬುದು ಈ ವಿಕಾಸ ಪ್ರವೃತ್ತಿಯ ಅರ್ಥ. ***

**ಕುಪ್ಪಳುಕೀಟ:** ಸಂಧಿಪದಿ ವಂಶದ, ಕೀಟವರ್ಗದ, ಆರ್ಥಾಪ್ಟಿರ ಗಣದ ಗ್ರಿಲ್ಲಿಡೆ ಕುಟುಂಬದ ಸದಸ್ಯ. ಇದು ಕುಪ್ಪಳಿಸುತ್ತ ಹಾರುವ ಮಧ್ಯಮಗಾತ್ರದ ಕೀಟ. ಇದಕ್ಕೆ ಚಿಮ್ಮಂಡೆ ಎಂದು ಕರೆಯುವರು. ಇದರ ವದನಾಂಗಗಳು ಕಚ್ಚುವುದಕ್ಕೆ ಅನುಕೂಲವಾಗಿವೆ. ಉದ್ದನೆಯ ಕುಡಿಮೀಸೆಗಳಿವೆ. ಹಿಂದಿನ ಕಾಲುಗಳು ಉದ್ದವಾಗಿ ಮತ್ತು ದಪ್ಪನಾಗಿ ನೆಗೆಯುವುದಕ್ಕೆ ಮಾರ್ಪಟ್ಟಿವೆ. ಕಾಲಿನ ಕೊನೆಯ ಖಂಡ (ಟಾರ್ಸಸ್) ಮೂರು ತುಂಡುಗಳನ್ನೊಳಗೊಂಡಿದೆ. ಮುಂದಿನ ರೆಕ್ಕೆಗಳು ದಪ್ಪವಾಗಿವೆ, ಹೆಣ್ಣಿಗೆ ಸಾಮಾನ್ಯವಾಗಿ ಪ್ರಬಲವಾದ ಬಾಹ್ಯ ಅಂಡೋಪಕರಣ (ಓವಿಪಾಸಿಟರ್) ಇದೆ. ಧ್ವನಿ ಉತ್ಪಾದಕ ಮತ್ತು ಧ್ವನಿಗ್ರಾಹಕ ಅಂಗಗಳು ಮುಂಗಾಲುಗಳ ನಾಲ್ಕನೆಯ ಖಂಡ (ಟಿಬಿಯ)ದ ಮೇಲಿವೆ.

ಇವು ಜಿರ್‍ರೆಂಬ ಶಬ್ದ ಮಾಡುತ್ತವೆ. ಧ್ವನಿ ಉತ್ಪಾದಕ ಅಂಗಗಳೇ ಈ ಶಬ್ದಕ್ಕೆ ಕಾರಣ. ಮುಂದಿನ ಎರಡು ರೆಕ್ಕೆಗಳ ಮೇಲೆ ಒರಟು ಭಾಗವನ್ನು ಪರಸ್ಪರ ಉಜ್ಜುವುದರಿಂದ ಈ ತರಹದ ಶಬ್ದ ಉಂಟಾಗುತ್ತದೆ. ಕೆಲವು ಕುಪ್ಪಳು ಕೀಟಗಳು (ಉದಾ: ಬ್ರಾಕಿಟ್ರೈಪಿಸ್ ಮೆಗಸಿಫ್ಯಾಲಸ್) ಮಾಡುವ ಶಬ್ದ ಸು. ಒಂದು ಮೈಲಿಯವರೆಗೂ ಕೇಳಿಸುತ್ತದೆ.

ಉಷ್ಣವಲಯದಲ್ಲಿ ಕುಪ್ಪಳು ಕೀಟಗಳು ಹೆಚ್ಚು. ಇವು ಸಿಕ್ಕಿದ್ದನ್ನೆಲ್ಲ ತಿಂದು, ಬೆಚ್ಚನೆಯ ಸ್ಥಳದ ಪೊಟರೆಗಳು, ಭೂಮಿಯಲ್ಲಿರುವ ಬಿರುಕುಗಳು, ಮರದ ದಿಮ್ಮಿ, ಕಸಕಡ್ಡಿಗಳಲ್ಲಿ ವಾಸಿಸುತ್ತವೆ. ಮೋಲ್ ಕುಪ್ಪಳು ಕೀಟ ತೇವಾಂಶದಿಂದಿರುವ ಮರಳು ನೆಲದಲ್ಲಿ ಗುಂಡಿ ತೋಡಿ ವಾಸಿಸುತ್ತದೆ. ಅಗಲವಾದ ಈ ಕಾಲುಗಳ ಮೇಲೆ ಚಿಕ್ಕ–ಚಿಕ್ಕ ಮುಳ್ಳುಗಳಿವೆ.

ಇವು ಭೂಮಿಯೊಳಗೆ ಒಂದು ಅಥವಾ ಹಲವು ಮೊಟ್ಟೆಗಳನ್ನಿಡುತ್ತವೆ. ಕೆಲವು ಪ್ರಭೇದದ ಕೀಟಗಳು ಸಸ್ಯಗಳ ಕಾಂಡದೊಳಗೂ ಮೊಟ್ಟೆಯಿಡುತ್ತವೆ. ಕುಪ್ಪಳು ಕೀಟಗಳಲ್ಲಿ ರೂಪ ಪರಿವರ್ತನೆ ಪರಿಪೂರ್ಣವಾಗಿಲ್ಲ. ***

**ಕುರಿ – ಸಾಕು ತಳಿಗಳು:** ಟೊಳ್ಳು ಕೊಂಬಿನ ಮೆಲುಕು ಹಾಕುವ ಸಸ್ಯಾಹಾರಿ ಸ್ತನಿಗಳನ್ನೊಳಗೊಂಡ ಬೋವಿಡೆ ಕುಟುಂಬದ ಕ್ಯಾಪ್ರಿನೆ ಎಂಬ ಉಪಕುಟುಂಬಕ್ಕೆ ಸೇರಿದ ಸ್ತನಿ. ಕುರಿಗಳು ಆಡುಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಸಾಮಾನ್ಯವಾಗಿ ಗಂಡುಹೆಣ್ಣುಗಳೆರಡಕ್ಕೂ ಕೊಂಬಿರಬಹುದಾದರೂ ಹೆಣ್ಣಿನ ಕೊಂಬು ಚಿಕ್ಕದು. ಕೆಲವು ಪ್ರಭೇದಗಳಲ್ಲಿ ಹೆಣ್ಣಿಗೆ ಕೊಂಬೇ ಇರುವುದಿಲ್ಲ. ಕೊಂಬು ಹೊರಮುಖವಾಗಿ ಸುರುಳಿ ಸುತ್ತಿಕೊಂಡಿರುತ್ತದೆ. ಗಂಡು ಕುರಿಗಳು ಗಲ್ಲದ ತಳದಲ್ಲಿ ಗಡ್ಡಗಳಿಲ್ಲ; ಆಡುಗಳಲ್ಲಿ ಕಂಡು ಬರುವ ಕಟುವಾಸನೆ ಇವುಗಳ ದೇಹದಲ್ಲಿ ಇರುವುದಿಲ್ಲ. ಬಾಲ ಮೋಟಕು. ಆಡಿನಂತೆ ಕುರಿಗೂ ಮೇಲ್ದವಡೆಯಲ್ಲಿ ಕಿರಿದಾದ ದವಡೆ ಹಲ್ಲುಗಳಿವೆ. ದನ ಅಥವಾ ಎಮ್ಮೆಗಳಲ್ಲಿ ಅವು ಅಗಲವಾಗಿವೆ. ಕಾಲಿನ ಮಧ್ಯದ ಎರಡು ಬೆರಳುಗಳ ನಡುವೆ ಇರುವ ಗ್ರಂಥಿಯೊಂದರಿಂದ ಕಟುವಾಸನೆಯ ದ್ರವ ಒಸರುತ್ತಿರುತ್ತದೆ. ಆ ದ್ರವದ ವಾಸನೆ ಅದು ಹೋದೆಡೆಯಲ್ಲೆಲ್ಲ ಹರಡುವುದರಿಂದ ಕುರಿಗಳು ತಮ್ಮ ಮಂದೆ ಹೋಗಿರುವ ಮಾರ್ಗವನ್ನು ಗುರುತಿಸ ಬಲ್ಲುವು ಅದಕ್ಕೆ ಅನುಕೂಲಿಸುವಂತೆ ಅವುಗಳ ಘ್ರಾಣೇಂದ್ರಿಯ ತುಂಬ ಪಟುವಾಗಿದೆ.

ಆದಿಮಾನವನ ಕಾಲದಿಂದಲೂ ಕುರಿಗಳು ಮಧ್ಯ ಏಷ್ಯದಿಂದ ಐರ್ಲೆಂಡಿನವರೆಗೂ ಹರಡಿಕೊಂಡು ಜೀವಿಸುತ್ತಿದ್ದುವೆಂಬ ಅಂಶ ಅವುಗಳ ಪಳೆಯುಳಿಕೆಗಳಿಂದ ಸ್ಪಷ್ಟಪಟ್ಟಿದೆ. ನಿಯೋಲಿತಿಕ್ ಯುಗದ ವೇಳೆಗೆ ಮಾನವ ಕುರಿಗಳನ್ನು ಪಳಗಿಸಿ ಸಾಕಲಾರಂಭಿಸಿದ್ದ. ಪ್ರಾಚೀನ ಕಾಲದಿಂದಲೂ ದೇವತೆಗಳಿಗೆ ಈ ಪ್ರಾಣಿಯನ್ನು ಬಲಿಕೊಡುವುದು ಆಚರಣೆಯಲ್ಲಿದೆ.

ಕುರಿಗಳನ್ನು ಮೊದಲು ಏಷ್ಯಾ ಖಂಡದಲ್ಲಿ ಪಳಗಿಸಲಾಯಿತೆಂದು ಹೇಳುವರು. ಆದಿಕಾಲದ ಕುರಿಗಳು ಆಫ್ಘಾನಿಸ್ತಾನದ ಬಲೂಚಿಸ್ತಾನಗಳಲ್ಲಿ ಈಗ ಕಂಡುಬರುವ ಓವಿಸ್ ವಿಗ್ನೇ ಎಂಬ ಪ್ರಭೇದಕ್ಕೆ ಅತ್ಯಂತ ಹೆಚ್ಚಿನ ಹೋಲಿಕೆಯನ್ನು ವ್ಯಕ್ತಪಡಿಸುವಂತಿದ್ದುವು. ತಾಮ್ರಯುಗದ ಹೊತ್ತಿಗೆ ಯೂರೋಪಿನಲ್ಲಿ ಕುರಿಗಳ ನೂತನ ಪೀಳಿಗೆಯೊಂದು ಅಸ್ತಿತ್ವಕ್ಕೆ ಬಂದಿತು. ಈ ದಿನ ಮಾನವ ಪಳಗಿಸಿರುವ ವಿವಿಧ ಪೀಳಿಗೆಯ ಕುರಿಗಳೆಲ್ಲ ತಾಮ್ರಯುಗದಲ್ಲಿ ಕಾರ್ಸಿಕ, ಸಾರ್ಡಿನಿಯ ಮುಂತಾದೆಡೆ ಜೀವಿಸಿದ್ದ ಮೌಫ್ಲಾನ್ ಎಂಬ ಕಾಡುಕುರಿಯ (ಓವಿಸ್ ಮ್ಯೂಸಿಮನ್) ಪ್ರಭೇದದಿಂದ ವಿಕಾಸವಾದವೆಂದು ಊಹಿಸಲಾಗಿದೆ.

ಕಾಡುಕುರಿ: ಇಂದಿಗೂ ಅನೇಕ ಪ್ರದೇಶಗಳಲ್ಲಿ ಕುರಿಗಳು ಕಾಡಿನಲ್ಲಿ ಕಾಡುಪ್ರಾಣಿಗಳಾಗಿ ಜೀವಿಸುತ್ತಿವೆ. ಮಧ್ಯ ಏಷ್ಯದಲ್ಲಿ ಅವು ಹೆಚ್ಚಾಗಿವೆ. ಅವು ಕಾಡಿನಲ್ಲಿ ದೊಡ್ಡ ಮಂದೆಗಳಲ್ಲಿ ಜೀವಿಸುತ್ತವೆ. ಕಾಡುಕುರಿಗಳು ಆಗಾಗ ಆಹಾರಕ್ಕಾಗಿ ಬಯಲು ಪ್ರದೇಶಗಳಿಗೆ ಬಂದು ಹೋಗುವುದೂ ಉಂಟು. ತುರ್ಕಿಸ್ತಾನದ ಪಾಮಿರ್ ಪ್ರಸ್ಥಭೂಮಿಯ ಕಾಡುಗಳಲ್ಲಿ ವಾಸಿಸುವ ಓವಿಸ್ ಪೋಲೈ ಎಂಬ ಪ್ರಭೇದದ ಕಾಡು ಕುರಿಗಳು ಪ್ರಸಿದ್ಧವಾಗಿವೆ. ಅವಕ್ಕೆ ಅಗಲವಾಗಿ ಬಾಗಿರುವ ದೊಡ್ಡ ಕೊಂಬುಗಳಿವೆ. ಇವು ಈ ಪ್ರಭೇದದ ವಿಶಿಷ್ಟ ಲಕ್ಷಣ. ಓವಿಸ್ ಕರೇಲಿನಿ ಎಂಬ ಮತ್ತೊಂದು ಪ್ರಭೇದ ಟಿಯೆನ್‌ಷಾನ್ ಪರ್ವತಶ್ರೇಣಿಗಳಲ್ಲಿ ವಾಸಿಸುತ್ತದೆ. ಮಧ್ಯ ಏಷ್ಯದಲ್ಲೂ ತುರ್ಕಿಸ್ತಾನದ ಬೆಟ್ಟಗುಡ್ಡಗಳಲ್ಲೂ ಇತರ ಪ್ರಭೇದಗಳು ಇವೆ. ಇವಕ್ಕೂ ದೊಡ್ಡ ಆಕೃತಿಯ ಓವಿಸ್ ಅಮ್ಮಾನ್ ಎಂಬ ಇನ್ನೊಂದು ಪ್ರಭೇದ ಲಡಕ್, ಟಿಬೆಟ್, ಗೋಬಿಮರುಭೂಮಿ, ಮಂಗೋಲಿಯ ಮುಂತಾದೆಡೆಗಳಲ್ಲಿ ವಾಸಿಸುತ್ತದೆ. ಅದರ ಎತ್ತರ 1.2 ಮೀ. ತೂಕ 130 ಕಿಗ್ರಾಂ ರಾಕಿ ಪರ್ವತ ಶ್ರೇಣಿಯಲ್ಲೂ ಬ್ರಿಟಿಷ ಕೊಲಂಬಿಯದ ಭಾಗಗಳಲ್ಲೂ ಕಪ್ಪು ತುಪ್ಪಳದ ಕಾಡುಕುರಿಗಳಿವೆ. ಅಲಾಸ್ಕದಲ್ಲಿ ಈ ಪ್ರಭೇದದ ಬಿಳಿಯ ತುಪ್ಪಳದ ಕುರಿಗಳಿವೆ. ಮೆಕ್ಸಿಕೊ ಮತ್ತು ಕ್ಯಾಲಿಫೋರ್ನಿಯ ದೇಶಗಳಲ್ಲೂ ಅವುಗಳ ಬಳಗಗಳು ವಾಸಿಸುತ್ತವೆ.

ಲಡಕ್, ಆಫ್ಘಾನಿಸ್ತಾನ, ಪಂಜಾಬ್ ಮುಂತಾದ ದೇಶಗಳಲ್ಲಿ ಇರುವ ಕಾಡುಕುರಿಗಳು ತೀರ ಚಿಕ್ಕವು. ಪಂಜಾಬಿನ ಕುರಿಗೆ ಊರಿಯಲ್ ಎಂಬ ಹೆಸರುಂಟು. ಇವು ಪರ್ಷಿಯ,

ಆರ್ಮೀನಿಯ, ಸಾರ್ಡೀನಿಯ ಮತ್ತು ಕಾರ್ಸಿಕದ ಕಾಡುಕುರಿಗಳಷ್ಟು ಎತ್ತರವಾಗಿರುತ್ತವೆ. ಹಿಮಾಲಯದ ನೀಲ ತುಪ್ಪುಳದ ಕಾಡುಕುರಿಗಳು (ಸೂಡೂನಾಹುರ) 3000 ಮೀ. ಗಳಿಗಿಂತ ಎತ್ತರದ ಪರ್ವತ ಪ್ರದೇಶಗಳಲ್ಲಿ 10–50 ಸಂಖ್ಯೆಯ ಗುಂಪುಗಳಲ್ಲಿ ವಾಸಿಸುತ್ತವೆ.

ಈ ಪ್ರಭೇದದ ಟಗರಿನ ಉದರದ ಭಾಗದ ಬಣ್ಣ ಬಿಳಿ, ಬೆನ್ನಿನಬಣ್ಣ ನೀಲಿನರೆ. ಅವೆರಡಕ್ಕೂ ಮಧ್ಯ ಒಂದು ಕಪ್ಪು ಪಟ್ಟಿಯಿದೆ; ಕೊಂಬು ಹಿಂದಕ್ಕೆ ಅರ್ಧ ಚಂದ್ರಾಕೃತಿಯಲ್ಲಿ ಬಾಗಿ ನುಲಿದುಕೊಂಡಿದೆ. ಆಫ್ರಿಕದಲ್ಲಿ ಒಂದೇ ಪ್ರಭೇದದ ಕಾಡುಕುರಿ ಜೀವಿಸುತ್ತದೆ. ಅದು ಉತ್ತರದಲ್ಲಿ ಸೂಡಾನಿನ ವರೆಗೂ ಹರಡಿಕೊಂಡು ಜೀವಿಸುತ್ತದೆ. ಅದರ ಗಂಟಲ ಮೇಲೂ ಮುಂಗಾಲುಗಳ ತುದಿಯಲ್ಲೂ ದಟ್ಟವಾದ ಉದ್ದನೆಯ ತುಪ್ಪುಳ ಉಂಟು. ಕೊಂಬು ನಯವಾಗಿ ನೆಟ್ಟಗಿದೆ. ಇವೆರಡು ಲಕ್ಷಣಗಳೂ ಆಡಿನ ಲಕ್ಷಣಗಳನ್ನು ಹೋಲುತ್ತವೆ. (ಎಸ್.ಬಿ.ಆರ್.)

ಕುರಿಗಳ ಸಾಕು ತಳಿಗಳು: ಅತಿ ಸಭ್ಯ ಸಾಕುಪ್ರಾಣಿ ಎನಿಸಿದ ಕುರಿ ಸಾವಿರಾರು ವರ್ಷಗಳಿಂದ ಮಾನವನೊಂದಿಗೆ ಬೆಳೆದು ಬಂದಿದೆ. ಆದಿಮಾನವ ಕುರಿಯ ಚರ್ಮದಿಂದ ಹೊದಿಕೆಗಳನ್ನು ತಯಾರಿಸುತ್ತಿದ್ದ. ಅದರ ಮಾಂಸ ಮತ್ತು ಹಾಲು ಅವನ ಆಹಾರದ ಮುಖ್ಯ ಭಾಗಗಳಾಗಿದ್ದುವು. ಭೂಮಂಡಲದ ಮೇಲೆ ಮಾನವ ವಸತಿಗೆ ಯೋಗ್ಯವಾದ ಎಲ್ಲ ಪ್ರದೇಶಗಳಲ್ಲೂ ಕುರಿಸಾಕುವರು. ಅದರಲ್ಲಿಯೂ ಆರ್ಥಿಕ ದೃಷ್ಟಿಯಿಂದ ಮುಂದುವರಿದ ರಾಷ್ಟ್ರಗಳಲ್ಲಿ ಕುರಿಸಂಗೋಪನೆಗೆ ವಿಶೇಷ ಗಮನವನ್ನೀಯಲಾಗುತ್ತಿದೆ. ಕುರಿಯಿಂದ ಉಣ್ಣೆ ದೊರಕುತ್ತದೆ. ಪ್ರಾಣಿಜನ್ಯ ನಾರುದಾರಗಳಲ್ಲಿ ಕುರಿಯ ಉಣ್ಣೆಗೆ ವಿಶಿಷ್ಟ ಸ್ಥಾನವಿದೆ. ಅದರಿಂದ ತಯಾರಿಸಿದ ಹೊದಿಕೆಗಳು ಬಾಳಿಕೆ ಬರತಕ್ಕ ಬೆಚ್ಚನೆಯ ಆರೋಗ್ಯಕರವಾದ ಉಡುಪೆನಿಸಿದೆ. ಈ ಕಾರಣದಿಂದ ಬೇರೆ ಯಾವುದೇ ನಾರುದಾರಗಳಿಂದ ತಯಾರಿಸಿದ ಹೊದಿಕೆಗಳಿಗಿಂತ ಇವು ಶ್ರೇಷ್ಠವಾಗಿವೆ.

ಕುರಿಗಳು ಬೆಳಸನ್ನು ತಿಂದು ಹಾಳುಮಾಡುವುದಿಲ್ಲ. ಹೊಲಗಳಲ್ಲಿ ಬೆಳೆಯುವ ನಿರುಪಯುಕ್ತ ಕಸಕಡ್ಡಿಗಳನ್ನೂ ಸಾಗುವಳಿಗೆ ಬಾರದ ಬರಡು ಭೂಮಿಯಲ್ಲಿ ಬೆಳೆಯುವ ಕಿರಿದಾದ ಹುಲ್ಲನ್ನು ತಿಂದು ಕುರಿ ಜೀವಿಸಬಲ್ಲುದು. ಹೀಗಾಗಿ ನಾಯಿಯನ್ನು ಬಿಟ್ಟರೆ ಆಯಾ ಪ್ರದೇಶದ ಮಳೆ, ಹವೆ ಮೊದಲಾದ ವೈವಿಧ್ಯಕ್ಕೆ ಹೊಂದಿಕೊಂಡು, ಭೂಮಂಡಲದ ಎಲ್ಲ ವಲಯಗಳಲ್ಲೂ ವೃದ್ಧಿಯಾಗಿರುವ ಸಾಕುಪ್ರಾಣಿ ಕುರಿ. ಜಗತ್ತಿನಲ್ಲಿ ಕುರಿಯ ಸುಮಾರು 200 ಬೇರೆ ಬೇರೆ ತಳಿಗಳಿವೆಯೆಂದು ತಿಳಿದುಬಂದಿದೆ. ಆಯಾ ವಿಭಾಗಗಳ ಭೂಗುಣ, ಹವೆ ಮೊದಲಾದ ಲಕ್ಷಣಗಳಿಗೆ ಒಗ್ಗುವ ಮತ್ತು ಹಾಲು, ಮಾಂಸ ಮತ್ತು ಉಣ್ಣೆ ಕೊಡುವಂಥ ವೈವಿದ್ಯಪೂರ್ಣ ತಳಿಗಳನ್ನು ಉತ್ಪಾದಿಸಲಾಗಿದೆ. ಪ್ರಾಚೀನ ಕಾಲವನ್ನು ಕುರಿತ ವೈಜ್ಞಾನಿಕ ದಾಖಲೆಗಳ ಅಭಾವವಿದ್ದರೂ ಇತಿಹಾಸದ ಸಹಾಯದಿಂದ ಜಗತ್ತಿನ ಕುರಿಯ ತಳಿಗಳನ್ನು ನಾಲ್ಕು ಮುಖ್ಯ ಗುಂಪುಗಳಲ್ಲಿ ವಿಂಗಡಿಸಬಹುದು: 1. ಉತ್ತಮ ಉಣ್ಣೆಯನ್ನು ಕೊಡುವ ಮೆರಿನೋ ಜಾತಿಯ ಕುರಿಗಳು ಹಾಗೂ ಮೆರಿನೋ ಮೂಲದಿಂದ ಹುಟ್ಟಿದ ಮಿಶ್ರತಳಿಗಳು: 2. ಮಧ್ಯಮ ತರಗತಿಯ ಉಣ್ಣೆಯನ್ನು ಕೊಡುವ ಯೂರೋಪ್ ಮತ್ತು ಬ್ರಿಟನಿನ ಕುರಿಗಳು: 3. ಉದ್ದ ಹಾಗೂ ಹೊಳಪುಳ್ಳ ಉಣ್ಣೆಯನ್ನು ಕೊಡುವ ಬ್ರಿಟನಿನ ಕುರಿಗಳು: 4. ಕಂಬಳಿ ಮತ್ತು ಕಾರ್ಪೆಟ್ ಮಾಡಬಹುದಾದ ಕೆಳದರ್ಜೆಯ ಉಣ್ಣೆ ಕೊಡುವ ಏಷ್ಯಾ ಖಂಡದ ಕುರಿಗಳು.

ಭಾರತದ ವಿವಿಧ ತಳಿಗಳು ಮತ್ತು ಅವುಗಳ ವಿಸ್ತರಣೆ: ಭಾರತದಲ್ಲಿ ಸುಮಾರು ನಾಲ್ಕು ಕೋಟಿ ಕುರಿಗಳಿದ್ದು ಸಂಖ್ಯಾ ದೃಷ್ಟಿಯಿಂದ ಜಗತ್ತಿನಲ್ಲಿ ಇವಕ್ಕೆ 5ನೆಯ ಸ್ಥಾನವಿದೆ. ಶುಷ್ಕ ಹವೆಯ ಉತ್ತರ ಭಾರತದ ಬಯಲು ಪ್ರದೇಶ ಮತ್ತು ಹಿಮಾಲಯದ ಪಕ್ಕದ ಪ್ರದೇಶಗಳಲ್ಲಿಯ ಕುರಿಗಳು ಉತ್ತಮ ಉಣ್ಣೆಯ ತಳಿಗಳೆಂದು ಪ್ರಸಿದ್ಧವಾಗಿವೆ. ರಾಜಸ್ಥಾನ, ಕಚ್, ಸೌರಾಷ್ಟ್ರ ಮತ್ತು ಉತ್ತರ ಗುಜರಾತಿನ ಕುರಿಗಳು ಉತ್ತಮ ಉಣ್ಣೆಯನ್ನು ಕೊಡುತ್ತವೆ. ಈ ಕುರಿಗಳಿರುವ ಪ್ರದೇಶ ಟೋರಿಯೂ ವಲಯದಿಂದ ಹೆಸರು ಪಡೆದಿದೆ. ವಿಂಧ್ಯ ಪರ್ವತದಿಂದ ನೀಲಗಿರಿಯವರೆಗೆ ಹಬ್ಬಿದ, ಡೆಕ್ಕನದ ತಪ್ಪಲು ಪ್ರದೇಶದಲ್ಲಿ ಅದರಲ್ಲೂ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಕುರಿಗಳ ಸಂಖ್ಯೆ ಹೆಚ್ಚಾಗಿದೆ. ಈ ತಳಿಗಳು ಕೆಳ ವರ್ಗದ ಉಣ್ಣೆಯನ್ನು ಕೊಡುವುವಲ್ಲದೆ ಅವುಗಳಲ್ಲಿ ಉಣ್ಣೆಯ ಉತ್ಪಾದನೆಯ ಪ್ರಮಾಣವೂ ಬಹಳ ಕಡಿಮೆ. ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಗಢವಾಲ ಪರ್ವತ ಶ್ರೇಣಿಯ ಪಕ್ಕದ ಪ್ರದೇಶಗಳಲ್ಲಿ, ಉತ್ತಮ ತರಗತಿಯ ಉಣ್ಣೆಯನ್ನು ಕೊಡುವ ಕುರಿಗಳನ್ನು ಸಾಕಲು ಹೆಚ್ಚು ಅವಕಾಶವಿದೆ. ಭಾರತದ ಕುರಿ ಸಂಗೋಪನೆಯ ಪ್ರದೇಶಗಳನ್ನು ಭೌಗೋಳಿಕ ದೃಷ್ಟಿಯಿಂದ 3 ವಲಯಗಳಾಗಿ ವಿಂಗಡಿಸಬಹುದು.

1. ಸಮಶೀತೋಷ್ಣ ಹವೆಯ ಹಿಮಾಲಯ ವಲಯ: ಇದರಲ್ಲಿ ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ಉತ್ತರ ಪ್ರದೇಶದ ಗುಡ್ಡಗಾಡು ವಿಭಾಗಗಳು ಸಮಾವೇಶವಾಗುತ್ತವೆ.

2. ರಾಜಸ್ಥಾನ, ಆಗ್ನೇಯ ಪಂಜಾಬ್, ಸೌರಾಷ್ಟ್ರ, ಕಚ್, ಉತ್ತರ ಗುಜರಾತ್ ಮತ್ತು ಉತ್ತರಪ್ರದೇಶ ಹಾಗೂ ಉತ್ತರಾಂಚಲ ಕೆಲಭಾಗಗಳನ್ನೊಳಗೊಂಡ, ಶುಷ್ಕ ಹವೆಯ ಪಶ್ಚಿಮ ವಲಯ.

3. ಮಹಾರಾಷ್ಟ್ರ ರಾಜ್ಯದ ತಪ್ಪಲು ಪ್ರದೇಶ, ಮೈಸೂರು, ಆಂಧ್ರ, ತಮಿಳುನಾಡು, ಮಧ್ಯಪ್ರದೇಶದ ಕೆಲಭಾಗಗಳಿಂದ ಕೂಡಿದ ದಕ್ಷಿಣ ವಲಯ.

ಸಮಶೀತೋಷ್ಣ ಹವೆಯ ಹಿಮಾಲಯ ಪರ್ವತ ವಲಯ: ಇದು ಕಾಶ್ಮೀರದಿಂದ ಉತ್ತರಾಂಚಲದ ಗಢವಾಲ ಜಿಲ್ಲೆಯವರೆಗೆ ಹರಡಿದೆ. ವರ್ಷದ ಎಲ್ಲ ಋತುಗಳಲ್ಲೂ ಮೇಯಲು ಕುರಿಗಳಿಗೆ ಹಸಿರುಹುಲ್ಲು ಈ ಭಾಗದಲ್ಲಿ ದೊರಕುತ್ತದೆ. ಚಳಿಗಾಲದಲ್ಲಿ ಕುರಿಗಳು ಬಯಲು ನಾಡಿನಲ್ಲಿ ಮೇಯುತ್ತವೆ. ಬೇಸಗೆ ಪ್ರಾರಂಭವಾದೊಡನೆ ಎತ್ತರ ಪ್ರದೇಶಗಳಿಗೆ ಹೋಗುತ್ತವೆ. ಈ ಪ್ರದೇಶ ಸಮುದ್ರ ಮಟ್ಟದಿಂದ 2400–3600 ಮೀ. ಎತ್ತರವಾಗಿದ್ದು ಇಲ್ಲಿ ಕುರಿಗಳನ್ನು ಮೇಯಿಸಲು ಸಾಕಷ್ಟು ಹುಲ್ಲುಗಾವಲುಗಳಿವೆ. ಕಾಂಗ್ರಾ, ಚೌಬಾ, ಕುಲು ಮತ್ತು ಕಾಶ್ಮೀರ ಕಣಿವೆಗಳ ಕುರಿಗಳು ಮೇಲ್ತರಗತಿಯ ಉಣ್ಣೆಯನ್ನು ಕೊಡುತ್ತವೆ. ಇಲ್ಲಿ ಬಡವರು ಮಾತ್ರ ಕುರಿಸಾಕುವ ಉದ್ಯೋಗದಲ್ಲಿ ತೊಡಗಿರುವುದರಿಂದ ಉಣ್ಣೆ ಹಾಗೂ ಮಾಂಸದ ದೃಷ್ಟಿಯಿಂದ ತಳಿಗಳ ಅಭಿವೃದ್ಧಿ ಅಷ್ಟಾಗಿ ಆಗಿಲ್ಲ. ಅಲ್ಲದೆ ಈಚೆಗೆ ಹೆಚ್ಚು ನೆಲವನ್ನು ಸಾಗುವಳಿಗೆ ತಂದದ್ದರಿಂದ ಕುರಿಗಳಿಗೆ ಮೇಯಲು ಹುಲ್ಲು ಗಾವಲು ಪ್ರದೇಶ ಕಡಿಮೆಯಾಗಿದೆ.

ಈ ವಲಯದ ಕುರಿಗಳು ಶುದ್ಧ ತಳಿಗಳಲ್ಲ. ಹಿಮಾಲಯ ಪರ್ವತ ಪ್ರದೇಶದ ಮತ್ತು ಉಸುಕಿನ ಬಯಲಿನ ಕುರಿಗಳಿಂದ ಹುಟ್ಟಿದ ಮಿಶ್ರತಳಿ. ಅಲ್ಲದೆ ಕೆಲ ಪ್ರದೇಶದ ಕುರಿಗಳಲ್ಲಿ ವಿಶಿಷ್ಟ ಆನುವಂಶೀಯ ಲಕ್ಷಣಗಳು ಕಂಡು ಬರುತ್ತವೆ. ಹೀಗಾಗಿ ಈ ತಳಿಗಳಲ್ಲಿ ವಿಶಿಷ್ಟ ಆನುವಂಶೀಯ ಲಕ್ಷಣಗಳು ಕಂಡು ಬರುತ್ತವೆ. ಹೀಗಾಗಿ ಈ ತಳಿಗಳಲ್ಲಿ ಏಕರೂಪತೆಯನ್ನು ಕಾಣುವುದು ಸಾಧ್ಯವಾಗಿಲ್ಲ.

ಕಾಶ್ಮೀರದಲ್ಲಿ ಮುಖ್ಯವಾಗಿ ಮೂರು ಜಾತಿಯ ಕುರಿಗಳಿವೆ: ಪೂಂಚ್, ಕಾರ್ನಾ, ಕಾಶ್ಮೀರ ಕೊಳ್ಳದ ಕುರಿಗಳು. ಪೂಂಚ್ ಮತ್ತು ಕಾರ್ನಾ ಜಾತಿಯ ಕುರಿಗಳು ಮೃದುವಾದ ಉಣ್ಣೆಯನ್ನು ಹೆಚ್ಚು ಪ್ರಮಾಣದಲ್ಲಿ ಕೊಡುತ್ತವೆ. ಇವಲ್ಲದೆ ಗದ್ದಿ ಮತ್ತು ಭಾಕರವಾಲ್ ಜಾತಿಯ ಕುರಿಗಳು ಕೂಡ ಸಾಕಷ್ಟು ಹೆಸರುವಾಸಿಯಾಗಿವೆ. ಇವುಗಳ ಮೂಲಸ್ಥಾನ ಹಿಮಾಲಯದ ಅಡಿಪ್ರದೇಶ. ಆದರೂ ಋತುಮಾನಕ್ಕೆ ಅನುಸಾರವಾಗಿ ಕಾಶ್ಮೀರ, ಕುಲು ಮತ್ತು ಕಾಂಗ್ರಾ ಕಣಿವೆಗಳ ಕಡೆಗೆ ಸ್ಥಾನಾಂತರವಾಗುತ್ತಿರುತ್ತವೆ.

ಹಿಮಾಚಲ ಪ್ರದೇಶದ ರಾಮ್‌ಪುರ್‌ಭುಶಾಯರ್ ತಳಿ ಉತ್ತಮ ತರಗತಿಯದಾಗಿದೆ. ಇವು ಹಿಮಾಲಯದ ಅಡಿ ಪ್ರದೇಶದಲ್ಲಿ ಇದ್ದರೂ ಟಿಬೆಟ್ಟಿನ ಸರಹದ್ದಿನವರೆಗೂ ಮೇಯಲು ಹೋಗುತ್ತವೆ. ಈ ಕುರಿಗಳಲ್ಲೂ ತಳಿಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳಲಾಗಿಲ್ಲ. ಇವು ಮುಖ್ಯವಾಗಿ ಕಂದುಬಣ್ಣದ ಉಣ್ಣೆಯನ್ನು ಕೊಡುತ್ತವೆ.

ಕಾರ್ನಾ ಜಾತಿಯ ಕುರಿ: ಉತ್ತರ ಕಾಶ್ಮೀರದ ಕಾರ್ನಾ ತಾಲ್ಲೂಕಿನಿಂದ ಈ ತಳಿಗೆ ಕಾರ್ನಾ ಎಂಬ ಹೆಸರು ಬಂದಿದೆ. ಈ ಪ್ರದೇಶ ಸಮುದ್ರ ಪಾತಳಿಯಿಂದ 1200–4500 ಮೀ. ಎತ್ತರದಲ್ಲಿದೆ. ಇಲ್ಲಿ ಕುರಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಸಾಕುತ್ತಾರೆ. ಬೇಸಗೆಯಲ್ಲಿ ಅಂದರೆ ಮೇ ನಿಂದ ಸೆಪ್ಟೆಂಬರ್‌ವರೆಗೆ ಎತ್ತರ ಹಾಗೂ ಇಳಿಜಾರಾದ ಪರ್ವತ ಪ್ರದೇಶಗಳಲ್ಲಿ ಚೆನ್ನಾಗಿ ಹುಲ್ಲು ಬೆಳೆಯುತ್ತಿದ್ದು ಕುರಿಗಳನ್ನು ಮೇಯಿಸಲು ಅನುಕೂಲವಾಗಿರುತ್ತದೆ. ಚಳಿಗಾಲದಲ್ಲಿ ಮಾತ್ರ ಕುರಿಗಳನ್ನು ಅಡವಿಗೆ ಒಯ್ಯದೆ ಕೊಳ್ಳಪ್ರದೇಶದಲ್ಲಿ ಬೆಳೆಯುವ

ಗಿಡಗಳ ಎಲೆಗಳನ್ನು ತಂದು ದೊಡ್ಡಿಗಳಲ್ಲಿಯೇ ಮೇಯಿಸುತ್ತಾರೆ. ಈ ಕುರಿಗಳ ದೇಹದಾರ್ಢ್ಯ ಉತ್ತಮವಾಗಿರುತ್ತದೆ. ಟಗರುಗಳ ಕೋಡುಗಳು ಕೆಳಕ್ಕೆ ಬಾಗಿರುತ್ತವೆ. ಮೂಗು ನೀಳ. ಮೈಬಣ್ಣ ಬಿಳಿ. ಈ ತಳಿಯಿಂದ ದೊರಕುವ ಉಣ್ಣೆ ಮಧ್ಯಮ ತರಗತಿಯದು. ತುಪ್ಪುಟ ಮೃದು. ತಂತುಗಳ ಉದ್ದ ಸಾಮಾನ್ಯವಾಗಿ 10–15 ಸೆಂಮೀ. ತುಪ್ಪಳವನ್ನು ವರ್ಷದಲ್ಲಿ ಎರಡು ಸಲ ಕತ್ತರಿಸುತ್ತಾರೆ. ಇಲ್ಲಿ ಉತ್ಪಾದಿಸಿದ ಉಣ್ಣೆಯ ಬಹುಭಾಗ ಸ್ಥಳೀಯವಾಗಿಯೇ ಉಪಯೋಗವಾಗುತ್ತದೆ.

ಗುರೇಜ ಜಾತಿಯ ಕುರಿ: ಉತ್ತರ ಕಾಶ್ಮೀರದ ಗುಡ್ಡಗಾಡು ಪ್ರದೇಶದಲ್ಲಿ. ಅಂದರೆ ಕಾರ್ನಾ ತಹಶೀಲಿನ ಪಕ್ಕದಲ್ಲಿರುವ ಗುರೇಜ ತಹಶೀಲಿನಿಂದ ಈ ಜಾತಿಗೆ ಈ ಹೆಸರು ಬಂದಿದೆ. ಇಲ್ಲಿಯ ಜಮೀನುದಾರರು ದೊಡ್ಡ ದೊಡ್ಡ ಸಂಖ್ಯೆಯಲ್ಲಿ ಈ ಬಗೆಯ ಕುರಿಗಳನ್ನು ಸಾಕುತ್ತಾರೆ. ಈ ಪ್ರದೇಶ ಹುಲ್ಲು ಹಾಗು ಗಿಡಗಂಟಿಗಳಿಂದ ಸಮೃದ್ಧವಾಗಿರುವುದರಿಂದ ಕುರಿಗಳಿಗೆ ಸಾಕಷ್ಟು ಆಹಾರ ದೊರಕುತ್ತದೆ. ಆದರೆ ಚಳಿಗಾಲದಲ್ಲಿ ಕುರಿಗಳನ್ನು ಮನೆಯಲ್ಲಿಯೆ ಮೇಯಿಸಬೇಕಾಗುತ್ತದೆ. ಈ ಜಾತಿಯ ಕುರಿಗಳು ಗುಡ್ಡಗಾಡು ಪ್ರದೇಶದಲ್ಲೇ ಅತ್ಯುತ್ತಮ ದೇಹದಾರ್ಢ್ಯವುಳ್ಳವುಗಳೆಂದು ಹೆಸರಾಗಿವೆ. ಬಹು ಸಂಖ್ಯಾತ ಕುರಿಗಳಿಗೆ ಕೋಡುಗಳಿರುವುದಿಲ್ಲ. ಇವುಗಳ ಬಣ್ಣ ಬಿಳುಪು. ಬೇರೆ ಬಣ್ಣದ ಕುರಿಗಳು ಕೂಡ ಅಲ್ಪ ಪ್ರಮಾಣದಲ್ಲಿ ಕಾಣಸಿಗುತ್ತವೆ.

ಹಿಸ್ಸಾರ ಡೇಲ್ ಜಾತಿಯ ಕುರಿ: ಇದು ಬಿಕನೀರ್ ಕುರಿ ಹಾಗೂ ಮೆರಿನೋ ಟಗರುಗಳಿಂದಾದ ಮಿಶ್ರ ತಳಿ, ಪಂಜಾಬಿನ ಹಿಸ್ಸಾರದ ಪಶು ಅಭಿವೃದ್ಧಿ ಕೇಂದ್ರದಲ್ಲಿ ಇದನ್ನು ಬೆಳೆಸಿ ಕುಲುಕಣಿವೆಯಲ್ಲಿ ಸಾಕುತ್ತಾರೆ. ಈ ಕುರಿಗಳು ಮೃದುವಾದ ಉಣ್ಣೆಯನ್ನು ಹೆಚ್ಚು ಪ್ರಮಾಣದಲ್ಲಿ ಕೊಡುತ್ತವೆ. ತೊಡೆಯ ಭಾಗದ ಉಣ್ಣೆ ಕೊಂಚ ಉರುಟಾಗಿರುತ್ತದೆ. ಸಾಮಾನ್ಯವಾಗಿ ಇವು ಬಿಳಿ ಉಣ್ಣೆಯನ್ನು ಕೊಡುತ್ತದೆ. ಕೆಲವು ಕುರಿಗಳು ಹಳದಿಮಿಶ್ರಿತ ಉಣ್ಣೆಯನ್ನೂ ಕೊಡುವುದುಂಟು. ಉಣ್ಣೆ ಮತ್ತು ಮಾಂಸಗಳ ಉತ್ಪಾದನೆಯ ದೃಷ್ಟಿಯಿಂದ ಇದು ಉತ್ತಮವಾದ ತಳಿ. ಪ್ರತಿಕೂಲ ಹವೆ ಹಾಗೂ ರೋಗರುಜಿನಗಳನ್ನು ತಾಳಿಕೊಳ್ಳುವ ಶಕ್ತಿ ಈ ಜಾತಿಯಲ್ಲಿ ಕಂಡು ಬರುತ್ತದೆ. ಸ್ಥಳೀಯ ಕುರಿಗಳ ಮಾಂಸಕ್ಕಿಂತ ಈ ತಳಿಯ ರಾಸುಗಳ ಮಾಂಸ ಉತ್ತಮ. ವರ್ಷದಲ್ಲಿ 2–3 ಸಾರಿ ಉಣ್ಣೆಯನ್ನು ಕತ್ತರಿಸಲಾಗುವುದು. ಉಣ್ಣೆ ಹೊಳಪಾಗಿದ್ದು ಉದ್ದವಾದ – ಎಳೆಗಳಿಂದ ಕೂಡಿರುತ್ತದೆ. ಇದರ ಉಣ್ಣೆಯನ್ನು ಸ್ಥಳೀಯವಾಗಿ ಉಪಯೋಗಿಸಲಾಗುತ್ತದೆ.

ಭಾಕರ್‌ವಾಲ್ ಜಾತಿಯ ಕುರಿ: ಭಾಕರ್‌ವಾಲ್ ಎಂಬ ಸಂಚಾರಿ ಜನಾಂಗಗಳು ಸಾಕುವ ಕುರಿಗಳಿವು. ಬೇಸಗೆಯಲ್ಲಿ ಈ ಕುರಿಗಳನ್ನು ಕಾಶ್ಮೀರ ಕಣಿವೆಯಲ್ಲಿ ಮೇಯಿಸುತ್ತಾರೆ. ಚಳಿಗಾಲದಲ್ಲಿ ಬೆಚ್ಚಗಿನ ಹವೆಯಲ್ಲಿ ದಕ್ಷಿಣದ ಪ್ರದೇಶಗಳಿಗೆ ಒಯ್ಯುತ್ತಾರೆ. ಈ ಕುರಿಗಳು ಗಟ್ಟಿಮುಟ್ಟಾಗಿದ್ದು ಎತ್ತರ ಪರ್ವತಗಳನ್ನು ಏರಿ ಮೇಯಬಲ್ಲವು. ಟಗರುಗಳಿಗೆ ಕೋಡುಗಳುಂಟು, ಹೆಣ್ಣಿಗೆ ಇಲ್ಲ. ಕಿವಿಗಳು ದೊಡ್ಡವಿದ್ದು ನೇತಾಡುತ್ತಿರುತ್ತದೆ. ಉಣ್ಣೆ ಸಾಮಾನ್ಯವಾಗಿ ಬಿಳುಪಾಗಿದ್ದರೂ ಕೆಲವು ಪ್ರದೇಶಗಳ ಕುರಿಗಳು ಬೇರೆ ಬೇರೆ ವರ್ಣದ ಉಣ್ಣೆ ಕೊಡುವುದುಂಡು. ಉಣ್ಣೆ ಉರುಟಾಗಿದ್ದು, ತಂತುಗಳು ಸುಮಾರು 15 ಸೆಂಮೀ. ಉದ್ದವಿರುತ್ತವೆ. ಮಾರ್ಚ್, ಜೂನ್ ಹಾಗು ಸೆಪ್ಟೆಂಬರ್ ತಿಂಗಳುಗಳಲ್ಲಿ ಉಣ್ಣೆಯನ್ನು ಕತ್ತರಿಸುವರು. ಒಂದು ಕುರಿ ವರ್ಷಕ್ಕೆ ಸು. 1.5 ರಿಂದ 2 ಕಿಗ್ರಾಂ ಉಣ್ಣೆ ಕೊಡುತ್ತದೆ. ಅಲ್ಲಿ ಉತ್ಪಾದಿಸಿದ ಎಲ್ಲ ಉಣ್ಣೆಯನ್ನು ಸ್ಥಳೀಯ ನೇಕಾರರು ಕಂಬಳಿ ನೇಯಲು ಉಪಯೋಗಿಸುತ್ತಾರೆ.

ಜಲೌನಿ ಜಾತಿಯ ಕುರಿ: ಉತ್ತರ ಪ್ರದೇಶದ ಜಲೌನಾ ಜಿಲ್ಲೆಯಲ್ಲಿ ಕಂಡು ಬರುತ್ತದೆ. ದಷ್ಟ ಪುಷ್ಟವಾದ ಈ ಕುರಿಗಳು ಗಾತ್ರದಲ್ಲಿ ಮಧ್ಯಮ ತರಗತಿಯವು. ಇದರ ಲಕ್ಷಣಗಳು ಹೀಗಿವೆ. ಕೋಡುಗಳಿಲ್ಲ, ಮೂಗು ಚಪ್ಪಟೆ, ಮೂಗಿನ ಹೊರಳೆಗಳು ದೊಡ್ಡವು, ದೇಹದ ಹಿಂಭಾಗ ಅಗಲ ಮತ್ತು ದೊಡ್ಡ ಹಾಗೂ ಅಗಲವಾದ ಕಿವಿಗಳು. ಮೈಮೇಲೆ ಉಣ್ಣೆ ಒಂದೇ ಸಮವಾಗಿ ಬೆಳೆಯುವುದಿಲ್ಲ. ಉಣ್ಣೆ ಬಿಳಿಯಾಗಿದ್ದು ಉರುಟು ಹಾಗು ಸಣ್ಣ ಎಳೆಗಳಿಂದ ಕೂಡಿರುತ್ತದೆ. ಮುಖ ಹಾಗೂ ಕಣ್ಣಿನ ಸುತ್ತಲಿನ ಭಾಗ ಕಪ್ಪಾಗಿರುತ್ತದೆ. ಇದು ಮಾಂಸ ಕೊಡುವ ಅತ್ಯುತ್ತಮ ತಳಿ.

ಶುಷ್ಕ ಹವಾಮಾನದ ಪಶ್ಚಿಮ ವಲಯ: ಈ ವಲಯದಲ್ಲಿ ವಿವಿಧ ಜಾತಿಯ ಕುರಿಗಳನ್ನು ಸಾಕಲಾಗುತ್ತಿದೆ. ಭಾರತದಿಂದ ಹೊರದೇಶಗಳಿಗೆ ರಫ್ತಾಗುವ ಉಣ್ಣೆಯಲ್ಲಿ ಬಹು ಭಾಗ ಈ ವಲಯದ್ದೇ. ಇಲ್ಲಿ ಒಂದೊಂದು ಹಿಂಡಿನಲ್ಲಿ 50–1000 ಕುರಿಗಳಿರುತ್ತವೆ. ಇಲ್ಲಿನ ಕುರಿಗಾಹಿಗಳು ಒಂದೇ ಕಡೆಗೆ ನಿಲ್ಲದೆ ಹುಲ್ಲುಗಾವಲುಗಳನ್ನು ಹುಡುಕುತ್ತ ನೆರೆ ಹೊರೆಯ ಪ್ರದೇಶಗಳಿಗೆ ಹೋಗುತ್ತಾರೆ. ರಾಜಸ್ಥಾನದ ಸರಸ್ವತೀ ನದಿಯ ಪ್ರದೇಶ, ಉತ್ತರ ಗುಜರಾತ್ ಕಛ್ ಮುಂತಾದುವುಗಳನ್ನೊಳಗೊಂಡ ಪ್ರದೇಶ, ಭಾರತದಲ್ಲಿ ಕುರಿ ಸಂಗೋಪನೆಯ ಮುಖ್ಯ ವಲಯ. ಇಲ್ಲಿಯ ಕುರಿಗಳಿಂದ ಉತ್ತಮ ತರಗತಿಯ ಕಾರ್ಪೆಂಟ್ ಉಣ್ಣೆ ದೊರಕುತ್ತದೆ. ಅದು ಜೋರಿಯಾ ಉಣ್ಣೆಯೆಂದು ಪ್ರಸಿದ್ಧಿ ಪಡೆದಿದೆ. ಅದರ ಎಳೆಗಳು ಸಾಮಾನ್ಯವಾಗಿ ಬಿಳುಪು ಮತ್ತು ಉರುಟು. ಈ ವಲಯದಲ್ಲಿ ಸಾಕುವ ಪ್ರಮುಖ ತಳಿಗಳು ಐದು.

1. ಲೋಹಿ ಜಾತಿಯ ಕುರಿಗಳು: ಬಲೂಚಿಸ್ಥಾನದ ತಳಿ. ಆದರೆ ಈ ಜಾತಿಯ ಸಣ್ಣ ಹಿಂಡುಗಳು ಪಂಜಾಬಿನಲ್ಲೂ ಕಂಡುಬರುತ್ತದೆ. ಗಾತ್ರದಲ್ಲಿ ಇವು ದೊಡ್ಡವು. ಮೈ ಬಣ್ಣ ಸಾಮಾನ್ಯವಾಗಿ ಬಿಳಿ. ಮೈಮೇಲೆ ಕಂದು ಅಥವಾ ಕಪ್ಪು ಚುಕ್ಕೆಗಳುಳ್ಳ ಕುರಿಗಳೂ ಉಂಟು. ಮುಖದ ಬಣ್ಣ ಕಪ್ಪು ಅಥವಾ ಕಂದು. ಮುಖದ ಮೇಲೆ ಉಣ್ಣೆ ಇರುವುದಿಲ್ಲ. ಕಿವಿಗಳು ಉದ್ದವಾಗಿದ್ದು, ಮೇಯುವಾಗ ನೆಲಕ್ಕೆ ತಾಗುತ್ತವೆ. ಸಾಮಾನ್ಯವಾಗಿ ಈ ಜಾತಿಯ ಕುರಿಗಳಿಗೆ ಕೋಡುಗಳಿರುವುದಿಲ್ಲ. ಕಾಲುಗಳು ಬಹಳ ಬಲವಾಗಿದ್ದು ಖುರಗಳು ಕಪ್ಪಾಗಿರುತ್ತವೆ. ಕೆಚ್ಚಲು ಹಾಗೂ ಮೊಲೆತೊಟ್ಟುಗಳು ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ಈ ಕುರಿಗಳ ಉಣ್ಣೆ ಎಳೆ ಉರುಟು, ಉದ್ದ 8–10 ಸೆಂಮೀ. ಕಂಬಳಿ ಹಾಗೂ ಉಣ್ಣೆಬಟ್ಟೆಗಳನ್ನು ತಯಾರಿಸಲು ಇದರ ಉಪಯೋಗ. ಇದು ಉತ್ತಮ ದರ್ಜೆಯ ಮಾಂಸವನ್ನು ಹೆಚ್ಚು ಪ್ರಮಾಣದಲ್ಲಿ ಕೊಡುವ ಜಾತಿಯೆಂದು ಪ್ರಸಿದ್ಧಿ ಪಡೆದಿದೆ. ಇದನ್ನು ದೊಡ್ಡಿಯಲ್ಲಿ ಕಟ್ಟಿ ಮೇಯಿಸಿದರೂ ಚೆನ್ನಾಗಿ ಬೆಳೆದು ಮಾಂಸಖಂಡಗಳಿಂದ ತುಂಬಿಕೊಳ್ಳುತ್ತದೆ. ಹಾಲನ್ನು ಕೂಡ ಹೆಚ್ಚಿನ ಪ್ರಮಾಣದಲ್ಲಿ ಕೊಡುತ್ತದೆ. ಹಾಲಿನಲ್ಲಿ ಕೊಬ್ಬಿನ ಪ್ರಮಾಣ ಹೆಚ್ಚು ಇರುವುದರಿಂದ, ಎಮ್ಮೆಯ ಹಾಲು ಮತ್ತು ಈ ಕುರಿಗಳ ಹಾಲು ಮಿಶ್ರಮಾಡಿ ತುಪ್ಪ ತಯಾರಿಸಲು ಉಪಯೋಗಿಸುತ್ತಾರೆ. ಒಂದು ಕುರಿ ದಿನಕ್ಕೆ 4 ಕಿಗ್ರಾಂ ಗಳವರೆಗೆ ಹಾಲು ಕೊಡುತ್ತದೆ. ಇವು ನಿಯತಕಾಲಗಳಲ್ಲಿ ಗರ್ಭಧರಿಸಿ ಒಂದು ಸಾರಿಗೆ 2 ಮರಿಗಳನ್ನು ಹಾಕುತ್ತವೆ.

2. ಬಿಕನೀರ್ ಜಾತಿಯ ಕುರಿಗಳು : ಮೂಲತಃ ಬಿಕನೀರಿನ ಮರುಭೂಮಿ ಪ್ರದೇಶದವು. ಅದರೂ ಇವನ್ನು ಪಂಜಾಬಿನ ಹಿಸ್ಸಾರ್, ರೋಹಚಕ್, ಗುರುಗಾಂವ್, ಅಂಬಾಲ, ಫಿರೋಜಪುರ ಮತ್ತು ಲೂಧಿಯಾನ, ಜಿಲ್ಲೆಗಳಲ್ಲಿ ಕಾಣಬಹುದು. ತಳಿಸಂಕರಣ ಇಲ್ಲಿ ವಿಶೇಷವಾಗಿಲ್ಲ. ಈ ಕುರಿಗಳ ಮೂಲ ಸ್ಥಾನವಾದ ಬಿಕನೀರ್‌ನಲ್ಲಿ ಇವುಗಳನ್ನು ಕಾಯ್ದಿಟ್ಟ ಹುಲ್ಲುಗಾವಲುಗಳಲ್ಲಿ ಸಾಕಲಾಗುತ್ತದೆ. ದೃಢಕಾಯದ ಈ ಕುರಿಗಳು ಬರಗಾಲದ ಅತ್ಯಂತ ಕಠಿಣ ಪರಿಸ್ಥಿತಿಯನ್ನು ತಾಳಿಕೊಳ್ಳಬಲ್ಲವು. ಮರುಭೂಮಿಯಂಥ ಬಯಲು ಪ್ರದೇಶಗಳಲ್ಲಿ ಸಹ ಲಾಭದಾಯಕವಾಗುವಂತೆ ಸಾಕಬಹುದು. ಇವು ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಮದ್ರಾಸಿನ ಕೆಲ ಪ್ರದೇಶಗಳಲ್ಲೂ ಸಿಗುತ್ತವೆ. ಈ ಕುರಿಗಳ ಗಾತ್ರ ಮಧ್ಯಮ ತರಗತಿಯದು; ತಲೆ ಸಣ್ಣ ; ಮುಖ ಉದ್ದ, ಮೂಗು ನೀಳವಾಗಿ ತುದಿಯಲ್ಲಿ ಬಗ್ಗಿದೆ. ಕೋಡುಗಳಿಲ್ಲ. ಮುಖದ ಬಣ್ಣ ಬಿಳಿ, ಕಂದು ಅಥವಾ ಕಪ್ಪು, ಕೆಲವೊಮ್ಮೆ ಈ ಬಣ್ಣ ಕೇವಲ ಕಣ್ಣುಗಳ ಸುತ್ತ ಇರಬಹುದು. ಮೈ ಚರ್ಮ ಬಿಗಿಯಾಗಿರುತ್ತದೆ. ಉಣ್ಣೆಯ ಬಣ್ಣ ಬಿಳುಪು. ಹೊಟ್ಟೆಯ ಭಾಗಗಳಲ್ಲಿ ಕಪ್ಪು ಚುಕ್ಕೆಗಳಿವೆ. ಕಪ್ಪು ಮುಖದ ಕುರಿಗಳಿಗೆ ಕಪ್ಪಾದ ಖುರಗಳಿದ್ದರೆ ಕಂದು ಮತ್ತು ಬಿಳಿ ಕುರಿಗಳಿಗೆ ಬಿಳಿ ಬಣ್ಣದ ಖುರಗಳಿರುತ್ತವೆ. ಉಣ್ಣೆ ಉರುಟಾಗಿದ್ದು ಎಳೆಗಳು ಉದ್ದವೂ ಸಹಜವಾಗಿ ತುಂಡಾಗುವಂಥವೂ ಆಗಿವೆ. ಈ ಉಣ್ಣೆಯಿಂದ ರತ್ನಗಂಬಳಿ, ಜಮಖಾನಗಳನ್ನು ಮಾಡಬಹುದಾದ್ದರಿಂದ ಇದಕ್ಕೆ ಬಹಳ ಬೇಡಿಕೆ ಇದೆ. ಉತ್ಪಾದಿಸಲಾದ ಉಣ್ಣೆಯ ಬಹುಭಾಗ ಇಂಗ್ಲೆಂಡ್, ಅಮೆರಿಕ ದೇಶಗಳಿಗೆ ರಫ್ತಾಗುತ್ತದೆ. ಈ ಉಣ್ಣೆಯಿಂದ ಟ್ವಿಲ್ ಮಾದರಿ ಬಟ್ಟೆಗಳನ್ನು ಸಹ ಮಾಡಲಾಗುತ್ತದೆ. ಈ ಜಾತಿಯ ಕುರಿ ಸಾಮಾನ್ಯವಾಗಿ ವರ್ಷಕ್ಕೆ ಒಮ್ಮೆ ಒಂದು ಮರಿಯನ್ನು ಈಯುತ್ತದೆ. ಕೆಲವು ಕುರಿಗಳು ವರ್ಷದಲ್ಲಿ ಎರಡು ಬಾರಿ ಈಯುವುದೂ ಉಂಟು.

3. ಮಾರವಾಡಿ ಜಾತಿಯ ಕುರಿಗಳು : ಈ ಜಾತಿಯ ಕುರಿಗಳನ್ನು ಜೋಧ್‌ಪುರ ಹಾಗೂ ಜೈಪುರ ಜಿಲ್ಲೆಗಳಲ್ಲಿ ಸಾಕಲಾಗುತ್ತಿದೆ. ಇವು ಪ್ರಮುಷ್ಠವಾಗಿವೆ. ಕಾಲುಗಳು ಬಲಿಷ್ಠ ಮತ್ತು ಉದ್ದವಾಗಿವೆ. ಮುಖದ ಬಣ್ಣ ಕಪ್ಪು. ಈ ತಳಿಗಳು ಉರುಟಾದ ಬಿಳಿ ಉಣ್ಣೆಯನ್ನು ನೀಡುತ್ತವೆ. ವಾರ್ಷಿಕ ತಲಾ ಉತ್ಪಾದನೆ 1 ರಿಂದ 2 ಕಿಗ್ರಾಂ.

4. ಚೋಕಲಾ ಜಾತಿಯ ಕುರಿಗಳು : ಇವು ರಾಜಸ್ತಾನ, ಚೊ ಹಾಗೂ ಪಿಕಾರ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಎತ್ತರ ಕಿರಿದು, ಗಾತ್ರ ಸಣ್ಣ. ಮುಖದ ಮೇಲಿನ ಕಪ್ಪು ಅಥವಾ ಕಂದು ಕಲೆಗಳು ಈ ತಳಿಯ ವಿಶಿಷ್ಟ ಲಕ್ಷಣ; ಉಣ್ಣೆ ಮೇಲ್ದರಗತಿಯ ಕಾರ್ಪೆಟ್ ಉಣ್ಣೆಯೆಂದು ಪ್ರಸಿದ್ಧಿ ಪಡೆದಿದೆ. ಒಂದು ಕುರಿಯಿಂದ ವರ್ಷಕ್ಕೆ ಸುಮಾರು 1 ರಿಂದ 2 ಕಿಗ್ರಾಂ ಉಣ್ಣೆ ದೊರಕುತ್ತದೆ.

5. ಕಾಠಿಯಾವಾಡ್ ಜಾತಿಯ ಕುರಿಗಳು : ಕಾಠಿಯಾವಾಡ್, ಕಛ್ ಹಾಗೂ ಉತ್ತರ ಗುಜರಾತ್‌ಗಳಲ್ಲಿ ಈ ತಳಿಗಳನ್ನು ಕಾಣಬಹುದು. ಮುಖ ಕಂದು ಅಥವಾ ಕಪ್ಪಾಗಿದ್ದರೂ ದೇಹ ಮಾತ್ರ ಬಿಳಿ ಉಣ್ಣೆಯಿಂದ ಆಚ್ಛಾದಿತವಾಗಿರುವುದು. ಕಂದು ಬಣ್ಣದ ಮುಖ ಕಾಠಿಯಾವಾಡ್ ಕುರಿಗಳ ಪ್ರಧಾನ ಲಕ್ಷಣವಾಗಿದ್ದರೆ ಕಪ್ಪು ಮುಖ ಕಛ್

ವಲಯದ ಕುರಿಗಳ ಮುಖ್ಯ ಲಕ್ಷಣ. ಇವು ಎತ್ತರವಾದ ಕುರಿಗಳು. ಉತ್ತಮ ಜಾತಿಯ ಉಣ್ಣೆಯನ್ನು ಕೊಡುತ್ತವೆ. ಎಳೆಗಳ ಉದ್ದ ಸಾಮಾನ್ಯವಾಗಿ 10–12 ಸೆಂಮೀ. ವಿದೇಶಗಳಲ್ಲಿ ಜೋರಿಯಾ ಉಣ್ಣೆಯೆಂದು ಇದು ಪ್ರಸಿದ್ಧಿ ಹೊಂದಿದೆ. ಉಣ್ಣೆಯನ್ನು ವರ್ಷದಲ್ಲಿ 2 ಸಾರಿ ಜನವರಿ ಹಾಗೂ ನವಂಬರ್ ತಿಂಗಳುಗಳಲ್ಲಿ ಕತ್ತರಿಸುತ್ತಾರೆ. ಇವು ಮೇಲ್ದರಗತಿಯವು. ಹಾಲು ಕೂಡ ಈ ಜಾತಿಗೆ ಅಧಿಕ. ವರ್ಷದಲ್ಲಿ ಸಾಮಾನ್ಯವಾಗಿ ಈ ಕುರಿಗಳು ಎರಡುಸಾರಿ ಈಯುತ್ತವಾದರೂ ಒಂದು ಸೂಲಿಗೆ ಒಂದೇಮರಿ ಇರುವುದು ಸಾಮಾನ್ಯ.

ದಕ್ಷಿಣ ವಲಯ : ಉತ್ತರದಲ್ಲಿ ಮಧ್ಯ ಪರ್ವತಾವಳಿಗಳಿಂದ ದಕ್ಷಿಣದ ನೀಲಗಿರಿ ಪರ್ವತಗಳ ವರೆಗೆ ಹಬ್ಬಿದ ಪ್ರದೇಶಕ್ಕೆ ದಕ್ಷಿಣ ವಲಯ ಎಂದು ಹೇಳ ಬಹುದು. ಉತ್ತರದ ಬಯಲು ನಾಡಿಗಿಂತ ಈ ಪ್ರದೇಶದಲ್ಲಿ ಕುರಿಗಳ ಸಂಖ್ಯೆ ಹೆಚ್ಚಾಗಿದ್ದು ಅವು ಹೆಚ್ಚು ನಿಬಿಡವಾಗಿ ಹರಡಿವೆ. ಇವನ್ನು ಎರಡು ಮುಖ್ಯ ವರ್ಗಗಳನ್ನಾಗಿ ವಿಂಗಡಿಸಬಹುದು. ಮೈಸೂರು, ಆಂಧ್ರದ ಕೆಲವು ಭಾಗ, ಮಹಾರಾಷ್ಟ್ರ ರಾಜ್ಯದ ತಪ್ಪಲು–ಈ ಪ್ರದೇಶಗಳ ಕುರಿಗಳು ಒಂದು ವರ್ಗದವು. ಇವು ರಾಜಾಸ್ಥಾನೀ ಕುರಿ ಹಾಗು ಕೂದಲು ವರ್ಗದ ಉಣ್ಣೆಯನ್ನು ಕೊಡುವ ತಮಿಳು ನಾಡಿನ ಕುರಿಗಳ ಮಿಶ್ರಣದಿಂದ ಹುಟ್ಟಿದವು. ಇವನ್ನು ದಖನೀ ಜಾತಿಯ ಕುರಿಗಳೆಂದು ನಾಮಕರಣಮಾಡಲಾಗಿದೆ. ಇವುಗಳಿಂದ ಬೇರೆ ಬೇರೆ ವರ್ಣದ ಉಣ್ಣೆ ದೊರಕುತ್ತದೆ. ಅದರಲ್ಲೂ ಕಪ್ಪು ಅಥವ ಬೂದು ಬಣ್ಣದ ಉಣ್ಣೆ ಹೆಚ್ಚಾಗಿರುವುದು. ಉಣ್ಣೆ ಕೂದಲು ಮತ್ತು ನಯವಾದ ತಂತುಗಳ ಮಿಶ್ರಣ. ಕುರಿಗಳು ಗಾತ್ರದಲ್ಲಿ ಚಿಕ್ಕವಾಗಿದ್ದರೂ ಬಲಿಷ್ಠವಾಗಿರುತ್ತವೆ. ಮೇಲಿಂದ ಮೇಲೆ ಒದಗುವ ಬರಗಾಲ ಹಾಗು ಅಭಾವ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬಲ್ಲವು. ಉಣ್ಣೆಯ ವಾರ್ಷಿಕ ತಲಾ ಉತ್ಪಾದನೆ ಅರ್ಧ ಕಿಗ್ರಾಂ ದಖನಿನ ತಪ್ಪಲಿನ ಪೂರ್ವ ಭಾಗದಲ್ಲಿ ಕುರಿಗಳ ಸಂಖ್ಯೆ ನಿಬಿಡವಾಗಿದೆ. ಇಲ್ಲಿಯ ಹವೆ ಉಷ್ಣ ಮತ್ತು ಆರ್ದ್ರತೆಯುಳ್ಳದ್ದು. ಕುರಿಗಳು ಕೂದಲು ವರ್ಗದ ಉಣ್ಣೆಯನ್ನು ಕೊಡುತ್ತವೆ. ಉದ್ದ ಕಾಲಿನ, ಬಡಕಲು ದೇಹದ ಈ ಕುರಿಗಳು ಅಲ್ಪ ಪ್ರಮಾಣದಲ್ಲಿ ಉಣ್ಣೆ ಕೊಡುತ್ತವೆ. ಈ ವಲಯದಲ್ಲಿ ಮುಖ್ಯವಾಗಿ ಕೆಳಗೆ ಕಾಣಿಸಿದ ಐದು ತಳಿಗಳನ್ನು ಸಾಕಲಾಗುತ್ತದೆ.

1. ದಖನಿ ಕುರಿಗಳು : ಸು. 35–5 ಸೆಂಮೀ ಮಳೆಯಾಗುವ ದಖನಿನ ಎತ್ತರವಾದ ತಪ್ಪಲು ಪ್ರದೇಶ ಈ ತಳಿಗಳ ಮೂಲಸ್ಥಾನ. ಇಲ್ಲಿನ ಬಹು ಸಂಖ್ಯಾತ ಕುರಿ ಸಾಕುವವರು ವರ್ಷದ ಬಹುಭಾಗದಲ್ಲಿ ತಮ್ಮ ಹಿಂಡುಗಳೊಂದಿಗೆ ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಾರೆ. ಮಾನ್‌ಸೂನ್ ಮಳೆಗಳ ಕಾಲದಲ್ಲಿ ಅಂದರೆ ಜೂನ್ ನಿಂದ ನವಂಬರ್ ವರೆಗೆ ಬೀಳು ಭೂಮಿಯಲ್ಲಿ ಅಥವಾ ಗುಡ್ಡಗಾಡು ಪ್ರದೇಶಗಳಲ್ಲಿ ಕುರಿಗಳನ್ನು ಮೇಯಿಸುತ್ತಾರೆ. ನವಂಬರ್ ಅನಂತರ ಹುಲ್ಲು ನೀರಿನ ಆಸರೆ ಹುಡುಕುತ್ತ ಹೆಚ್ಚು ಮಳೆಯಾಗುವ ಪ್ರದೇಶಗಳಿಗೆ ಹೋಗುತ್ತಾರೆ. ಇದೊಂದು ಪ್ರತ್ಯೇಕ ಜಾತಿಯೆಂದು ಪರಿಗಣಿಸಲ್ಪಟ್ಟಿದ್ದರೂ ಇದರಲ್ಲಿ ತಳಿಯ ಪರಿಶುದ್ಧತೆ ಇಲ್ಲ. ಇದರ ಮೈ ಬಣ್ಣ ಬಿಳಿ ಅಥವಾ ಕಪ್ಪು. ಬಿಳಿಯಾಗಿದ್ದು ಮುಖ ಮಾತ್ರ ಕಪ್ಪಾಗಿರುವುದೂ ಉಂಟು. ಮೈ ಬಣ್ಣ ಬಿಳಿಯಾಗಿದ್ದು ಮೂಗು, ಬಾಯಿ ಗುಲಾಬಿ ವರ್ಣದ್ದಿದ್ದರೆ ಅಂಥ ಕುರಿಗಳು ಸಾಮಾನ್ಯವಾಗಿ ದುರ್ಬಲವಾಗಿರುತ್ತವೆ. ಕಪ್ಪು ಮುಖದ ಬಿಳಿ ಕುರಿಯನ್ನು ತಳಿವೃದ್ಧಿಗಾಗಿ ಆಯ್ಕೆ ಮಾಡಲಾಗುತ್ತದೆ. ಕುರಿಗಳು ಗಾತ್ರದಲ್ಲಿ ಚಿಕ್ಕವಾಗಿದ್ದರೂ ದೃಢವಾಗಿರುತ್ತವೆ. ಉಣ್ಣೆ ಕೆಳದರ್ಜೆಯದಾಗಿದ್ದು ಉರುಟಾಗಿರುತ್ತದೆ. ಇದರಲ್ಲಿ ಕೂದಲು ಹಾಗೂ ಉಣ್ಣೆಯ ತಂತುಗಳು ಬೇರೆ ಬೇರೆ ಪ್ರಮಾಣದಲ್ಲಿ ಮಿಶ್ರವಾಗಿರುತ್ತವೆ. ಉಣ್ಣೆ ಸ್ಥಳೀಯವಾಗಿ ವಿನಿಯೋಗವಾಗುತ್ತದೆ.

2. ನೆಲ್ಲೂರು ಜಾತಿಯ ಕುರಿಗಳು : ಮೂಲತಃ ಆಂಧ್ರಪ್ರದೇಶದ ನೆಲ್ಲೂರಿನವಾದರೂ ಈಗ ತೀರ ದಕ್ಷಿಣದ ಎಲ್ಲ ಪ್ರದೇಶಗಳಲ್ಲಿಯೂ ಇವು ಹರಡಿವೆ. ಮಸಾರಿ ಮತ್ತು ಎರೆನಾಡುಗಳೆರಡರಲ್ಲಿಯೂ ಈ ಕುರಿಗಳನ್ನು ಸಾಕುತ್ತಾರೆ. ಮಳೆಗಾಲದಲ್ಲಿ ಗುಡ್ಡದ ಜಾತಿಗಳಲ್ಲಿ ಮತ್ತು ಅಡವಿಗಳಲ್ಲಿ ಹಾಗೂ ನದಿಗಳ ದಂಡೆಗಳಲ್ಲಿ ಮೇಯಿಸಲಾಗುತ್ತದೆ. ಇವು ಗಾತ್ರದಲ್ಲಿ ದೊಡ್ಡವಾದ ಬಲಿಷ್ಠ ಮೈಕಟ್ಟಿನ ಕುರಿಗಳು. ಇವುಗಳಿಂದ ಕೂದಲು ವರ್ಗದ ಉಣ್ಣೆ ದೊರೆಯುತ್ತದೆ. ಈ ಪ್ರದೇಶದ ಉತ್ತರ ಭಾಗದಲ್ಲಿ ಸಂಪೂರ್ಣ ಬಿಳಿಯಾದ ಇಲ್ಲವೆ ಮುಖ, ಹೊಟ್ಟೆ, ಕಾಲುಗಳ ಮೇಲೆ ಕಪ್ಪು ಮತ್ತು ಕಂದು ಕಲೆಗಳಿರುವ ಬಿಳಿಯ ಕುರಿಗಳು ಕಾಣಸಿಗುತ್ತವೆ. ಮೈಮೇಲೆ ದಟ್ಟವಾಗಿ ಬೆಳೆದ ಕಿರಿದಾದ ಕೂದಲುಗಳಿವೆ. ಎಲ್ಲ ಕುರಿಗಳಿಗೆ ಕೊರಳು ಮೊಲೆಗಳುಂಟು. ಟಗರುಗಳಿಗೆ ಮುರಿಗೆಕೋಡುಗಳಿವೆ. ಕುರಿಗಳಿಗೆ ಕೋಡುಗಳಿರುವುದಿಲ್ಲ. ತೀರ ದಕ್ಷಿಣದಲ್ಲಿರುವ ಕುರಿಗಳು ಗಾತ್ರದಲ್ಲಿ ಸಣ್ಣವಿದ್ದು ನಸುಗೆಂಪು ಬಣ್ಣದವಿರುತ್ತವೆ. ಈ ಕುರಿಗಳು ಸುಮಾರು 9 ತಿಂಗಳು ಅಂತರದಲ್ಲಿ ಮರಿಹಾಕುತ್ತವೆ. ಒಂದುವೇಳೆಗೆ ಒಂದೇ ಮರಿ. ಟಗರು ಮರಿಗಳಿಗೆ ಕೊಬ್ಬು ಬೆಳೆಯುವಂತೆ ಪ್ರಯತ್ನಿಸಿ ಒಂದು ವರ್ಷವಾದೊಡನೆ ಮಾಂಸಕ್ಕಾಗಿ ಮಾರುತ್ತಾರೆ. ಕುರಿಗಳನ್ನು ಮಾತ್ರ 5–6 ಮರಿಗಳನ್ನು ಹಾಕಿದ ಅನಂತರ ಮಾರಿಬಿಡುತ್ತಾರೆ. ಇದು ಉತ್ತಮವಾದ ಮಾಂಸದ ತಳಿಯೆಂದು ಪ್ರಸಿದ್ಧಿ ಪಡೆದಿದೆ.

3. ಮಂಡ್ಯ ಜಾತಿಯ ಕುರಿ: ಮೈಸೂರು ರಾಜ್ಯದಲ್ಲಿ ಇದು ಮಾಂಸದ ಜಾತಿಯ ತಳಿಯೆಂದು ಪ್ರಸಿದ್ಧಿ ಪಡೆದಿದೆ. ಈ ತಳಿಯಿಂದ ಕೂದಲು ವರ್ಗದ ಉಣ್ಣೆ ದೊರಕುತ್ತಿದೆ. ಅದರಲ್ಲಿ ಉಣ್ಣೆಯ ಅಂಶ ಬಹಳ ಕಡಿಮೆ. ಒಳ್ಳೆಯ ಮೇವು ದೊರಕಿದಲ್ಲಿ ಈ ಕುರಿಗಳು ಬಹು ಬೇಗ ಕೊಬ್ಬುತ್ತವೆ. ಇದರಿಂದ ಈ ಕುರಿಗಳಿಗೆ ಪೇಟೆಯಲ್ಲಿ ಬೇಡಿಕೆ ಬಹಳ. ಸಾಮಾನ್ಯವಾಗಿ ಇವುಗಳ ಬಣ್ಣ ಬಿಳುಪು. ಆದರೂ ಕಂದು ತಲೆಯ ಕಪ್ಪು ಕಲೆಗಳಿರುವ ಕುರಿಗಳೂ ಕಂಡು ಬರುತ್ತವೆ.

4. ಹಾಸನ ಜಾತಿಯ ಕುರಿ: ಈ ತಳಿಯನ್ನು ಮಲೆನಾಡನ್ನು ಬಿಟ್ಟು ಮೈಸೂರು ರಾಜ್ಯದ ಮಿಕ್ಕ ದಕ್ಷಿಣ ಭಾಗದಲ್ಲಿ ಸಾಕ್‌ಲಾಗುತ್ತದೆ. ಇವು ಸಣ್ಣ ಗಾತ್ರದ ಗಿಡ್ಡಕುರಿಗಳಾಗಿದ್ದು ಚೆನ್ನಾಗಿ ಮೈ ತುಂಬಿಕೊಂಡು ಬೆಳೆಯುತ್ತವೆ. ಬಣ್ಣ ಕಪ್ಪು, ಬಿಳಿ ಅಥವಾ ಕಂದು. ಸಾಮಾನ್ಯವಾಗಿ ದೇಹದ ಬಹು ಭಾಗದಲ್ಲಿ ಉಣ್ಣೆ ಬೆಳೆಯುತ್ತದೆ. ಉಣ್ಣೆ ಉರುಟಾಗಿದ್ದು ಎಳೆಗಳು 5–8 ಸೆಂಮೀ ಉದ್ದವಾಗಿರುತ್ತವೆ. ಜನವರಿ ಮತ್ತು ಜೂನ್‌ನಲ್ಲಿ ಹೀಗೆ ವರ್ಷದಲ್ಲಿ 2 ಸಾರಿ ಉಣ್ಣೆಯನ್ನು ಕತ್ತರಿಸುತ್ತಾರೆ. ಉತ್ಪಾದಿಸಲಾಗುವ ಈ ಉಣ್ಣೆಯ ಬಹು ಭಾಗವನ್ನು ಗೃಹ ಕೈಗಾರಿಕೆಗಳಿಗೆ ಬಳಸಲಾಗುತ್ತದೆ; ಮಿಲ್ಲುಗಳಿಂದಲೂ ಈ ಉಣ್ಣೆಗೆ ಬೇಡಿಕೆ ಇದೆ.

5. ಬಳ್ಳಾರಿ ಜಾತಿಯ ಕುರಿ : ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿಯೂ ಕರ್ನೂಲ್ ಜಿಲ್ಲೆಯ ಕೆಲ ತಾಲೂಕುಗಳಲ್ಲಿಯೂ ಈ ಕುರಿಗಳನ್ನು ಹೆಚ್ಚಾಗಿ ಸಾಕಲಾಗುತ್ತದೆ. ಸಾಮಾನ್ಯವಾಗಿ ಒಂದು ಹಿಂಡಿನಲ್ಲಿ 100ರ ವರೆಗೆ ಕುರಿಗಳಿರುತ್ತವೆ. ರಾತ್ರಿಯ ವೇಳೆಯಲ್ಲಿ ಕುರಿಗಳನ್ನು ಗ್ರಾಮದ ಸುತ್ತು ಮುತ್ತಲಿನ ಬಯಲು ಪ್ರದೇಶದಲ್ಲಿ ಕೂಡಿ ಹಾಕುತ್ತಾರೆ. ಬೀಳು ಭೂಮಿಯಲ್ಲಿ ಹಾಗೂ ಸಮೀಪದ ಗುಡ್ಡಗಾಡು ಪ್ರದೇಶದಲ್ಲಿ ಬೆಳೆದ ಗಿಡಗಂಟಿಗಳನ್ನೂ ಹುಲ್ಲನ್ನೂ ತಿಂದು ಈ ಕುರಿಗಳು ಜೀವಿಸುತ್ತವೆ. ಇದೊಂದು ಮಿಶ್ರತಳಿ, ಬಣ್ಣ ಸಾಮಾನ್ಯವಾಗಿ ಕಪ್ಪು, ಬೂದು ಇಲ್ಲವೆ ಬಿಳಿ. ಬಿಳಿಯ ಕುರಿಗಳ ಮುಖ ಕಪ್ಪು. ಬೇರೆಕೆ ಬಣ್ಣಗಳ ಕುರಿಗಳೂ ಇವೆ. ಆದರೆ ಕಪ್ಪು ಕುರಿಗಳೇ ಹೆಚ್ಚು. ಟಗರುಗಳಿಗೆ ಮುರಿಗೆಕೋಡುಗಳಿರುತ್ತವೆ. ಹೆಣ್ಣಿಗೆ ಕೋಡು ಇರುವುದಿಲ್ಲ. ಉಣ್ಣೆ ಉರುಟು. ತಂತುಗಳು ಗುಂಗುರಾಗಿರದೆ ನೆಟ್ಟಗೆ ಇರುತ್ತವೆ. ಉತ್ಪಾದಿಸಲಾಗುವ ಉಣ್ಣೆಯ ಸುಮಾರು ಅರ್ಧ ಭಾಗ ಸ್ಥಳೀಯವಾಗಿ ಕಂಬಳಿ ಮಾಡಲು ಉಪಯೋಗಿಸಲ್ಪಡುತ್ತದೆ. ಈ ಕುರಿಯ ಮಾಂಸದಲ್ಲಿ ಕೊಬ್ಬಿನ ಪ್ರಮಾಣ ಕಡಿಮೆ. ಮಾಂಸಕ್ಕಾಗಿ ಇದನ್ನು ಸಾಕುವುದು ಅಷ್ಟೊಂದು ಲಾಭದಾಯಕವಾಗಿಲ್ಲ.

ವಿದೇಶಿ ತಳಿಗಳು: ಉತ್ತಮ ದರ್ಜೆಯ ಉಣ್ಣೆ, ಯಥೇಚ್ಛವಾಗಿ ಮಾಂಸ ಮತ್ತು ಹಾಲನ್ನು ಪಡೆಯುವುದಕ್ಕಾಗಿ, ಸ್ವದೇಶೀ ತಳಿಗಳ ಮೇಷ್ಟಿಗಳೊಡನೆ ಅನ್ಯ ತಳಿಗಳಾದ ಮೆರೀನೋ, ರ‍್ಯಾಂಬುಲಿ, ಶೆವಿಯೋ, ಸೌತ್‌ಡಾನ್, ಲೀಸೆಸ್ಟರ್ ಮತ್ತು ಲಿಂಕನ್‌ಗಳ ಟಗರುಗಳನ್ನು ಅಡ್ಡಹಾಯಿಸುವ ಪದ್ಧತಿಯನ್ನು ಅನೇಕ ವರ್ಷಗಳಿಂದಲೂ ಭಾರತದಲ್ಲಿ ಅನುಸರಿಸುತ್ತಿದ್ದಾರೆ.

ಮೆರಿನೋ: ಇದು ಪ್ರಪಂಚದಲ್ಲೆಲ್ಲ ಅತ್ಯುತ್ತಮ ದರ್ಜೆಯ ಉಣ್ಣೆಯನ್ನು ಕೊಡಬಲ್ಲ ಸ್ಪೇನ್ ದೇಶದ ತಳಿ. ಕುರಿಗಳ ಪಾದ ಮತ್ತು ಮುಖಗಳೆರಡೂ ಸಮೃದ್ಧಿಯಾಗಿ ಬೆಳೆದ ಬಿಳುಪಾದ ಉಣ್ಣೆಯಿಂದ ಆವರಿಸಲ್ಪಟ್ಟಿವೆ. ಇವು ಅತ್ಯಂತ ಗಟ್ಟಿಯಾದ್ದರಿಂದ ಎಂಥ ವಿಷಮ ವಾತಾವರಣ ಅಥವಾ ಬರಗಾಲವನ್ನೂ ಸಹಿಸಬಲ್ಲವು.

ರ‍್ಯಾಂಬುಲೀ: ಇದು ವಾಸ್ತವವಾಗಿ ಫ್ರಾನ್ಸಿನ ತಳಿಯಾದರೂ ಮೆರೀನೋ ತಳಿಯ ವಂಶಜ ಎಂದು ಊಹಿಸಲಾಗಿದೆ. ದಪ್ಪವಾದ ತಲೆಯುಳ್ಳ ಈ ಕುರಿಗಳ ಮೂಗು ಮತ್ತು ಕಿವಿಗಳ ಸುತ್ತ ಬಿಳಿ ಕೂದಲುಗಳಿವೆ. ಭಾರವಾದ ತುಪ್ಪಟ ಶರೀರವನ್ನೆಲ್ಲ ಒತ್ತಾಗಿ ಆವರಿಸಿದೆ. ಆದ್ದರಿಂದ ಉತ್ತಮ ದರ್ಜೆಯ ಮಾಂಸ ದೊರಕದಿದ್ದರೂ ಸುಂದರವಾದ ಮರಿಗಳೂ ನಾಜೂಕಾದ ಉಣ್ಣೆಯೂ ಈ ತಳಿಯಿಂದ ಸಿಗುತ್ತವೆ. ಟಗರುಗಳು 125 ಕಿಗ್ರಾಂ ಮತ್ತು ಮೇಷ್ಟಿಗಳು 90 ಕಿಗ್ರಾಂ ತೂಗುತ್ತವೆ. ಇದು ಅತಿ ಫಲಪ್ರದ ತಳಿ. ಸಾಮಾನ್ಯ ದರ್ಜೆಯ ಸ್ವದೇಶೀ ಕುರಿಗಳೊಡನೆ ಅಡ್ಡಹಾಯಿಸುವುದರಿಂದ ಹುಟ್ಟುವ ಮರಿಗಳು ಹೆಚ್ಚು ಪ್ರಮಾಣದಲ್ಲಿ ಮಾಂಸ ಉತ್ತಮ ಪೀಳಿಗೆಯನ್ನು ಸೃಷ್ಟಿಸುತ್ತವೆ.

ಶೇವಿಯೋ : ಇದು ಸ್ಕಾಟ್ಲೆಂಡ್ ತಳಿ. ಸೆಟೆದು ನಿಂತ ಕಿವಿ, ಕಪ್ಪಾದ ಮೂಗು, ತುಟಿ ಮತ್ತು ಪಾದ, ಬಿಳಿಯ ಮುಖ ಮತ್ತು ಕಾಲುಗಳು ಇದರ ಮುಖ್ಯ ಲಕ್ಷಣಗಳು. ಇವು ಮಧ್ಯಮ ದರ್ಜೆಯ ಹಗುರವಾದ ಉಣ್ಣೆಗೆ ಪ್ರಸಿದ್ಧಿಯಾದವು.

ಸೌತ್‌ಡೌನ್ : ಇದು ಇಂಗ್ಲೆಂಡಿನ ಪ್ರಾಚೀನ ತಳಿಗಳಲ್ಲೊಂದು. ಅಗಲವಾದ ತಲೆ ಮತ್ತು ನಸು ಕಂದುಬಣ್ಣದ ಮುಖವುಳ್ಳ ಈ ಕುರಿಗಳ ಶರೀರ ನೀಳವಾಗಿದ್ದರೂ ಎತ್ತರ ಕಡಿಮೆ. ಕಾಲುಗಳು ಚಿಕ್ಕವು. ಪ್ರೌಢಾವಸ್ಥೆಯಲ್ಲಿ ಟಗರುಗಳು 80 ಕಿಗ್ರಾಂ ಮೇಷ್ಟಿಗಳು 55 ಕಿಗ್ರಾಂ ತೂಗುತ್ತವೆ. ಪ್ರತಿ ಕುರಿಯೂ 2–3 ಕಿ.ಗ್ರಾಂ ಗಳಷ್ಟು ತುಪ್ಪಟ ಕೊಡುತ್ತದೆ. ಇತರ ಉಪತಳಿಗಳ ಉಗಮ ಕಾರ್ಯದಲ್ಲಿ ಈ ತಳಿ ಪ್ರಶಂಸನೀಯ ಪಾತ್ರವಹಿಸುತ್ತದೆ.

ಲೀಸೆಸ್ಟರ್: ಇದೂ ಸಹ ಇಂಗ್ಲಿಷ್ ತಳಿ. ಸಾಧಾರಣ ಗಾತ್ರದ ಈ ಕುರಿಗಳ ಮುಖ ಮತ್ತು ಕಾಲುಗಳಲ್ಲಿ ಕೂದಲಿರುವುದಿಲ್ಲ. ನೀಳವಾದ ತುಪ್ಪುಟಕ್ಕೆ ಈ ತಳಿ ಪ್ರಸಿದ್ಧಿಯಾದುದು.

ಲಿಂಕನ್: ಇದು ಇಂಗ್ಲೆಂಡಿನ ನಾಡು ತಳಿ. ದಪ್ಪವಾದ ಕಿವಿಗಳು ಅಗಲವಾದ ತಲೆ ಮತ್ತು ಮಾಂಸಭರಿತ ಸ್ಥೂಲ ಶರೀರ ಈ ತಳಿಯ ವೈಶಿಷ್ಟ್ಯ. ಅತಿ ಫಲವತ್ಕಾರಿಯಾದ ಪ್ರತಿ ಮೇಷ್ಟಿಯಿಂದಲೂ ವರ್ಷಕ್ಕೆ 5–7 ಕಿಗ್ರಾಂಗಳಷ್ಟು ಉತ್ತಮ ದರ್ಜೆಯ ಉಣ್ಣೆ ಪಡೆಯುತ್ತಾರೆ. ಈ ತಳಿಯ ಟಗರುಗಳನ್ನು ವಿಶೇಷವಾಗಿ ತಳೀ ಕಾರಣಕ್ಕಾಗಿ ಉಪಯೋಗಿಸುತ್ತಾರೆ.

ಪ್ರಪಂಚದ ಒಟ್ಟು ಉಣ್ಣೆಯಲ್ಲಿ 1/8 ಭಾಗದಷ್ಟು ತುಪ್ಪುಟ ಆಸ್ಟ್ರೇಲಿಯದ ಮೆರೀನೋ ತಳಿಯೊಂದರಿಂದಲೇ ದೊರಕುತ್ತದೆ. ಇವಲ್ಲದೆ ನ್ಯೂಜೀಲೆಂಡಿನ ರೋಮ್ನಿ ಮಾರ್ಷ್ ಮತ್ತು ಕಾರಿಡೇಲ್ಸ್ ತಳಿಗಳು ಉತ್ತಮ ದರ್ಜೆಯ ತುಪ್ಪುಟಕ್ಕೂ ಮತ್ತು ತಳೀಕರಣ ಸಾಮರ್ಥ್ಯಕ್ಕೂ ಪ್ರಸಿದ್ದಿಯಾಗಿವೆ.

ಕುರಿ ತಳೀಕರಣ : ತಳೀಕರಣಕ್ಕಾಗಿ ಆರಿಸುವ ಟಗರಿಗೆ ಅದರ ಪಿತೃತಳಿಯ ಎಲ್ಲ ಒಳ್ಳೆಯ ಗುಣಗಳೂ ಇರಬೇಕು. ಅದರಲ್ಲಿ ಯಾವ ನ್ಯೂನತೆಗಳೂ ಇರಬಾರದು. ವರ್ಷದ ಎಲ್ಲ ಕಾಲಗಳಲ್ಲೂ ದೃಢಕಾಯವಾಗಿರಬೇಕು. ಅಗಲವಾದ ಕಟಿ, ದಪ್ಪವಾದ ಕತ್ತು, ಹೊರಹೊಮ್ಮಿದ ಎಲುಬುಳ್ಳ ಅಂದವಾದ ಶರೀರ, ವಿಶಾಲವಾದ ಎದೆ, ಮಟ್ಟಸವಾದ ಬೆನ್ನು, ಚಂದದ ಪಾದ ಮತ್ತು ಸುಂದರ, ಆಕಾರದ ತಲೆ ಇರುವ ಟಗರನ್ನು ಆರಿಸಿ ಪೋಷಿಸಬೇಕು. ಅಡ್ಡಹಾಯಿಸಲು ಬಿಡುವುದಕ್ಕೆ ಮೊದಲು ಕುರಿ ಮಂದೆಗೆ ಚೆನ್ನಾಗಿ ಒಗ್ಗಿಸಬೇಕು. ಟಗರಿನಷ್ಟೇ ವಯಸ್ಸಾದ ಸಮಕಾಲೀನ ಕುರಿ ಮಂದೆಗೆ ಬಿಡಬಾರದು. ಮೇಷ್ಟಿಗಳ ವಯಸ್ಸು ಟಗರಿನ ವಯಸ್ಸಿಗಿಂತ ಅಧಿಕ ಅಥವಾ ಕಡಿಮೆ ಇದ್ದರೆ ಉತ್ತಮ ಫಲ ದೊರೆಯುವುದೆಂದು ತಿಳಿದು ಬಂದಿದೆ. ಬೆದೆಗಾಲದಲ್ಲಿ ಟಗರುಗಳು ಸಾಮಾನ್ಯವಾಗಿ ಮೇಯುವುದನ್ನು ನಿಲ್ಲಿಸುವುದರಿಂದ ಅವುಗಳಿಗೆ ಪೌಷ್ಟಿಕ ಆಹಾರವನ್ನು ಕೊಟ್ಟು ಕಾಪಾಡಬೇಕು. ಒಳ್ಳೆಯ ಮೈಕಟ್ಟುಳ್ಳ ಒಂದು ಟಗರು ಸುಮಾರು 30–40 ಕುರಿಗಳಿಗೆ ಗರ್ಭಾದಾನ ಮಾಡಬಲ್ಲದು. ಬೆದೆಕಾಲದ ಅನಂತರ ಟಗರನ್ನು ಮಂದೆಯಿಂದ ಬೇರ್ಪಡಿಸಬೇಕು. ಉತ್ತಮ ತಳಿಯ ಪ್ರಾಯದ ಕುರಿಗಳು ಅಗ್ಗವಾಗಿ ದೊರಕುವುದು ಅಸಂಭವವಾದ್ದರಿಂದ, ತಳಿಯ ಹೆಣ್ಣುಮರಿಗಳು ಹಾಲುಣ್ಣುವುದನ್ನು ಬಿಟ್ಟಕೂಡಲೇ ತಂದು ಸಾಕುವುದು ಉತ್ತಮ. ಹುಟ್ಟಿದ ಮೇಲೆ 7–14 ತಿಂಗಳೊಳಗೆ ಕುರಿ ಬೆದೆಗೆ ಬರಲು ಪ್ರಾರಂಭಿಸಿ, 7 ವರ್ಷಗಳ ವರೆಗೂ ಗರ್ಭಧರಿಸಬಲ್ಲುದು. ಉತ್ಕೃಷ್ಟವಾದ ಫಲ ಪಡೆಯಲು 2– 2½ ವರ್ಷದ, ಅಂದರೆ ನಾಲ್ಕು ಹಲ್ಲಿಕ್ಕಿದ ಕುರಿಯನ್ನು ಆರಿಸಬೇಕು. ಕ್ಷಾಮಪೀಡಿತ ಪ್ರದೇಶಗಳಲ್ಲಿ 3–4 ಮರಿಗಳನ್ನು ಹಾಕಿದ ಮೇಲೆ ಕುರಿಗಳು ಪುನರ್ಗರ್ಭಧಾರಣೆಗೆ ಯೋಗ್ಯವಲ್ಲ. ತಳದೂಗುವ ನೀಳವಾದ ಮೈಕಟ್ಟು , ಚೆನ್ನಾಗಿ ರೂಪುಗೊಂಡ ಕೆಚ್ಚಲು, ಚಟುವಟಿಕೆಯಿಂದ ಮೇಯುವ ಹಾಗು ಮರಿಗಳಿಗೆ ಹಾಲುಣಿಸುವುದರಲ್ಲಿ ಅತ್ಯುತ್ಸಾಹ ತೋರುವ ಕುರಿಗಳನ್ನು ಆರಿಸುವುದರಿಂದ ಉತ್ತಮ ಫಲ ದೊರಕುವುದು. ಉಣ್ಣೆಗಾಗಿ ಉಪಯೋಗಿಸುವ ಕುರಿಗಳನ್ನು ಉಣ್ಣೆಗೆ ಪ್ರಸಿದ್ಧಿಯಾದ ತಳಿಗಳಿಂದಲೇ ಆಯ್ಕೆ ಮಾಡಬೇಕು. ಬೆದೆಗೆ ಬರುವುದಕ್ಕೆ ಎರಡು ವಾರ ಮೊದಲೇ ಕಾಳು ಮುಂತಾದ ಧಾನ್ಯಗಳಿಂದ ಪೋಷಿಸಬೇಕು. ಗರ್ಭಧರಿಸಿದ ಕುರಿಗಳಿಗೆ ಪೌಷ್ಟಿಕಾಹಾರವನ್ನು ಕೊಟ್ಟರೆ, ಊನ ಹಾಗು ದುರ್ಬಲವಾದ ಮರಿಗಳು ಕಡಿಮೆಯಾಗಿ ರೋಗರುಜಿನಗಳಿಲ್ಲದೆ ಉತ್ತಮವಾದ ಮರಿಗಳ ಸಂಖ್ಯೆ ಹೆಚ್ಚುತ್ತದೆ. ಶ್ರೇಷ್ಠದರ್ಜೆಯ ಉಣ್ಣೆಯು ಹೆಚ್ಚುತ್ತದೆ. ಈಯುವ ಕಾಲ ಬಂದಾಗ ಕುರಿಗಳನ್ನು ವಾತವರಣದ ವೈಪರೀತ್ಯದಿಂದ ರಕ್ಷಿಸಿದ ಕುರಿಹಟ್ಟಿಗಳಲ್ಲಿಡಬೇಕು. ಬಾಣಂತಿ ಕುರಿಗಳನ್ನು ಕೆಲವು ದಿನಗಳವರೆಗೆ ಬಹು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಅಂತೆಯೇ ಮೊದಲ 48 ಗಂಟೆಗಳ ಕಾಲ ಅಥವಾ ತಾವೇ ಹಾಲುಣ್ಣಲು ಪ್ರಯತ್ನಿಸುವ ತನಕ ಮರಿಗಳಿಗೆ ಆರೈಕೆ ಮಾಡುವುದು ಒಳಿತು. ಹುಟ್ಟಿದ 7–14 ದಿವಸಗಳ ಅವಧಿಯ ಮರಿಗಳಿಗೆ ಹಿಡಮಾಡಲು ಯೋಗ್ಯವಾದ ಕಾಲ. ಈ ಅವಧಿಯಲ್ಲೇ ಚಾಕು ಅಥವ ಕಾದ ಕಬ್ಬಿಣದಿಂದ ಬಾಲವನ್ನು ಕತ್ತರಿಸಬಹುದು(ಡಾಕಿಂಗ್). ಇದರಿಂದ ಮಲಶೇಖರಣೆಯಿಂದ ಉದ್ಭವಿಸುವ ಕೀಟವ್ಯಾಧಿಗಳಿಂದ ಕುರಿಗಳನ್ನು ರಕ್ಷಿಸಬಹುದು. ಕುರಿಹಟ್ಟಿಗಳ ನಿರ್ಮಾಣಕ್ಕೆ ಅಷ್ಟೇನೂ ಖರ್ಚು ತಗುಲುವುದಿಲ್ಲ. ಎತ್ತರವಾದ ಪ್ರದೇಶಗಳಲ್ಲಿ ಹಗುರವಾದ ಗೂಟಗಳನ್ನು ನೆಟ್ಟು ರಕ್ಷಿಸಬಹುದು. ಕೂಡಿಟ್ಟು ಸಾಕುವ ಕುರಿಗಳಿಗೆ ಕುರಿಹಟ್ಟಿಗಳಲ್ಲಿ ಚರಣೆಗೆ ಮತ್ತು ತೊಟ್ಟಿ ಮುಂತಾದ ಸೌಲಭ್ಯಗಳಿರಬೇಕು.

ಕುರಿಗಳ ಆಹಾರ: ಸಸಾರಜನಕ ವಸ್ತುಗಳು, ಕ್ಯಾಲ್ಸಿಯಂ ಮತ್ತು ರಂಜಕವೇ ಮುಂತಾದ ಖನಿಜಾಂಶಗಳು, ಶರ್ಕರ ಪಿಷ್ಟಾದಿಗಳು, ಕೊಬ್ಬು ಮತ್ತು ಜೀವಸತ್ವಗಳು ಕುರಿಗಳ ಬೆಳವಣಿಗೆಗೆ ಅತ್ಯವಶ್ಯಕವಾದ ಪದಾರ್ಥಗಳು. ಸಾಮಾನ್ಯವಾಗಿ ತೇವಾಂಶವಿಲ್ಲದ ಎಳಸಾದ ಹುಲ್ಲು, ಗರಿಕೆ, ಚಿಗುರು, ದ್ವಿದಳ ಧಾನ್ಯ, ತವುಡು, ಹಿಂಡಿ ಮುಂತಾದ ವಸ್ತುಗಳನ್ನು ಕೊಡಬೇಕು. ದ್ವಿದಳ ಸಸ್ಯಗಳಾದ ಅಲಸಂದೆ, ಹುರುಳಿ, ಹೆಸರು, ಉದ್ದು, ಕುದುರೆಮಸಾಲೆಸೊಪ್ಪು, ಮುಂತಾದ ಗಿಡಗಳ ಎಲೆಗಳನ್ನೂ ಅಗಸೆ ಮತ್ತು ಗೊಬ್ಬಳಿಯ ಕಾಯಿ ಮತ್ತು ಎಲೆಗಳೆರಡನ್ನೂ ಕಂಡರೆ ಕುರಿಗಳಿಗೆ ಬಲು ಪ್ರೀತಿ. ಗೆಣಸಿನ ಬಳ್ಳಿಗಳು ಕುರಿಮರಿಗಳಿಗೆ ಬಲು ಅಚ್ಚುಮೆಚ್ಚಿನ ಆಹಾರ.

ವಯಸ್ಸು ಮತ್ತು ತೂಕಕ್ಕನುಗುಣವಾಗಿ ದಿನಕ್ಕೆ ತಲಾ 1–2 ಕಿ.ಗ್ರಾಂ ಗಳಷ್ಟು ದ್ವಿದಳಸಸ್ಯಗಳ ಸೊಪ್ಪು ಬೇಕಾಗುವುದು. ಅಭಾವ ಕಾಲದಲ್ಲಿ 110–225 ಗ್ರಾಂ ಗಳಷ್ಟು ಕಡಲೇಕಾಯಿ ಮತ್ತು ಎಳ್ಳು ಹಿಂಡಿಯನ್ನುಕೊಟ್ಟು ಸಾಕಬಹುದು. ಸುಣ್ಣ ಮತ್ತು ಉಪ್ಪನ್ನು ಸಮಪ್ರಮಾಣದಲ್ಲಿ ಬೆರಸಿ, ಹುಲ್ಲು ಮತ್ತು ಚಿಗುರೆಲೆಗಳೊಡನೆ ಮಿಶ್ರಾಹಾರವಾಗಿ ಕೊಡುವುದು ಉತ್ತಮ. ಹುಲ್ಲು ಬಲಿತಿದ್ದರೆ ಸಸಾರಜನಕಾಂಶ ಕಡಿಮೆಯಾಗಿಯೂ ತೇವದಿಂದ ಕೂಡಿದ್ದರೆ ಪರತಂತ್ರ ಜೀವಿಗಳ ಕಾಟ ಅತಿಯಾಗಿಯೂ ಇರುವುದರಿಂದ ಯಾವಾಗಲೂ ತೇವರಹಿತವಾದ ಮತ್ತು ಎಳಸಾದ ಹುಲ್ಲನ್ನೇ ಕೊಡಬೇಕು. ಗರ್ಭಾದಾನಕ್ಕಾಗಿ ಉಪಯೋಗಿಸುವ ಟಗರುಗಳಿಗೆ ದಿನಕ್ಕೆ 200–450 ಗ್ರಾಂ ಮಿಶ್ರಾಹಾರ ಕೊಡಬೇಕು. ಪ್ರಾಯದ ಕುರಿಗಳು ಬೇಗ ಬೆದೆಗೆ ಬರುವುದಕ್ಕಾಗಿ ದಿನಕ್ಕೆ 200–250 ಗ್ರಾಂ ಗಳಷ್ಟು ಬಾರ್ಲಿ, ಓಟ್ಸ್, ಮತ್ತು ಜೋಳವನ್ನು ಕೊಡಬೇಕು. ಕುರಿಗಳು ಬಹು ಸ್ಥೂಲವಾಗಿದ್ದರೆ ಮೊದಲು ಶರೀರವನ್ನು ಕ್ಷೀಣಿಸಿ, ಅನಂತರ ಬೆದೆಗೆ ಬರಲು ಅನುಕೂಲವಾಗುವ ಆಹಾರವನ್ನು ಕೊಡುವುದು ಉತ್ತಮ. ಎಲ್ಲ ಕುರಿಗಳಿಗೂ ಕುಡಿಯಲು ದಿನವೂ ಸಾಕಷ್ಟು ನೀರನ್ನು ಒದಗಿಸಬೇಕು. ಗರ್ಭ ಧರಿಸಿದ ಕುರಿಗೆ ಮೊದಲು ಕೊಡುತ್ತಿದ್ದ ಆಹಾರದ ಜೊತೆಗೆ, 110 ಗ್ರಾಂನಿಂದ ಕ್ರಮೇಣ 225 ಗ್ರಾಂ ಗಳಷ್ಟು ಹೆಚ್ಚುವರಿ ಧಾನ್ಯ ಕೊಡಬೇಕು. ಮಾಂಸಕ್ಕಾಗಿಯೇ ಬೆಳೆಸುವ ಪ್ರತಿ ಕುರಿಮರಿಗೆ ದಿನಕ್ಕೆ 110–450 ಗ್ರಾಂಗಳಷ್ಟು ಮಿಶ್ರಾಹಾರವನ್ನು ( 1 ಭಾಗ ತವುಡು + 2 ಭಾಗ ಧಾನ್ಯ + 3 ಭಾಗ ಹಿಂಡಿಯ ಮಿಶ್ರಣ) ಕೊಡುವುದು ಉತ್ತಮ.

ಭಾರತೀಯ ತಳಿಗಳ ಗುಣಮೌಲ್ಯ ಹಾಗೂ ಸಂಖ್ಯಾಭಿವೃದ್ಧಿಗಾಗಿ ಕೆಳಕಂಡ ಮೂರು ವಿಧಾನಗಳನ್ನು ಅನುಸರಿಸುವರು. 1. ಸ್ವಕೀಯ ತಳೀಕರಣ, 2. ಪರಕೀಯ ತಳೀಕರಣ, 3. ಅಂತಸ್ತು ಗೊಳಿಸುವಿಕೆ(ಗ್ರೇಡಿಂಗ್).

1. ಸ್ವಕೀಯ ತಳೀಕರಣ: ಶ್ರೇಷ್ಠ ಗುಣಗಳುಳ್ಳ ಅನೇಕ ಟಗರುಗಳನ್ನಾರಿಸಿ ಒಂದು ಮಂದೆಗೆ ಒಂದರಂತೆ ಅದೇ ತಳಿಯ ವಿವಿಧ ಕುರಿಮಂದೆಗಳಿಗೆ ಬಿಡುವುದರಿಂದ, ತಾಯಿಕುರಿಗಳಿಗಿಂತಲೂ ಶ್ರೇಷ್ಠಗುಣಗಳುಳ್ಳ ಉತ್ಕೃಷ್ಟ ಮರಿಗಳನ್ನು ಯಾವ ಟಗರಿನಿಂದ ಪಡೆಯಬಹುದೆಂಬ ಅಂಶವನ್ನು ನಿರ್ಧರಿಸಬಹುದು. ಅನಂತರ ಅಂಥ ಉತ್ತಮ ಟಗರುಗಳನ್ನೇ ತಳೀಕರಣಕ್ಕಾಗಿ ಉಪಯೋಗಿಸಿದರೆ ಮುಂಬರುವ ಪೀಳಿಗೆಯ ಗುಣಮೌಲ್ಯ ಉತ್ತಮಗೊಳ್ಳುತ್ತದೆ. ಈ ಬಗೆಯ ಸ್ವಕೀಯ ತಳೀಕರಣದಿಂದ ದುರ್ಬಲ ಮರಿಗಳು ಆಕಸ್ಮಿಕವಾಗಿ ಉದ್ಭವಿಸಿದರೆ ಅವನ್ನು ತ್ಯಜಿಸಬೇಕು.

2. ಪರಕೀಯ ತಳೀಕರಣ: ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ, ಪಂಜಾಬು, ಜಮ್ಮು ಮತ್ತು ಕಾಶ್ಮೀರಗಳಲ್ಲಿ ನಾಜೂಕಾದ ಉಣ್ಣೆಗಾಗಿ ನವ್ಯ ತಳಿಯನ್ನು ಪಡೆಯಲು ಈ ವಿಧಾನವನ್ನು ಅನುಸರಿಸುತ್ತಾರೆ. ಸ್ವದೇಶಿ ತಳಿಯ ಕುರಿಗಳಿಗೆ ಅನ್ಯ ತಳಿಯಾದ ಮೆರಿನೋ ಟಗರನ್ನು ಅಡ್ಡಹಾಯಿಸುವರು. ಇದರಿಂದ ತಾಯಿ ತಳಿಗಿಂತಲೂ ಶ್ರೇಷ್ಠದರ್ಜೆಯ ಉಣ್ಣೆ ನೀಡುವ ಮೊದಲ ಪೀಳಿಗೆಯ ಮರಿಗಳು ಹುಟ್ಟುತ್ತವೆ. ಈ ಪೀಳಿಗೆಯ ಮರಿಗಳಿಗೆ ಮೆರಿನೋ ಟಗರುಗಳನ್ನು ಮತ್ತೆ ಹಾಯಿಸುವುದರಿಂದ ಉದ್ಭವಿಸುವ ಎರಡನೆ ಪೀಳಿಗೆ ಮೊದಲ ಪೀಳಿಗೆಗಿಂತ ಶ್ರೇಷ್ಠವಾಗಿರುತ್ತವೆ. ಈ ಬಗೆಯ, ಅಡ್ಡಹಾಯುವಿಕೆಯನ್ನು ಮುಂದುವರಿಸಿದರೆ, ಕ್ರಮೇಣ ಸ್ವದೇಶೀ ಮತ್ತು ಅನ್ಯ ತಳಿಗಳ ಶ್ರೇಷ್ಠ ಗುಣಗಳುಳ್ಳ ಒಂದು ನೂತನ ಮಿಶ್ರತಳಿ ಉದ್ಭವವಾಗುತ್ತದೆ. ಈ ರೀತಿಯ ಪರಕೀಯ ತಳೀಕರಣದಿಂದ ನಾಜೂಕಾದ ತುಪ್ಪಟವೀಯುವ ಹಿಸಾರ್ಡೇಲ್ ಎಂಬ ವಿನೂತನ ತಳಿಯನ್ನು ಹರಿಯಾಣದ ಹಿಸ್ಸಾರ್ ಪಟ್ಟಣದಲ್ಲಿ ಪಡೆಯಲಾಗಿದೆ.

3. ಅಂತಸ್ತುಗೊಳಿಸಿಕೆ: ಯಾವುದಾದರೊಂದು ತಳಿಯ ಕುರಿಗಳ ಮಾಂಸ ಅಥವ ತುಪ್ಪುಟವನ್ನು ಸುಧಾರಿಸಲು ಈ ಕ್ರಮವನ್ನು ಅನುಸರಿಸುತ್ತಾರೆ. ಯಾವ ತಳಿಯಲ್ಲಿ ಇಚ್ಚಿಸಿದಗುಣ ವೃದ್ಧಿಯಾಗಬೇಕೋ ಆ ತಳಿಯ ಕುರಿಮಂದೆಗೆ ಉತ್ಕೃಷ್ಠ ಗುಣವುಳ್ಳ ಒಂದು ಶುದ್ಧ ತಳಿಯ ಟಗರನ್ನು ಬಿಡುತ್ತಾರೆ. ಇದರಿಂದ ಪ್ರಥಮ ಪೀಳಿಗೆಯ 50%ರಷ್ಟು ಸುಧಾರಿಸುತ್ತದೆ. ಆದರೂ ಐದನೆಯ ಪೀಳಿಗೆಯ ತನಕವೂ ಎಲ್ಲ ಪೀಳಿಗೆಯ ಕುರಿಗಳಿಗೂ ಸತತವಾಗಿ ಶುದ್ಧ ತಳಿಯ ಟಗರನ್ನು ಅಡ್ಡ ಹಾಯಿಸುತ್ತಾರೆ. ನಿರೀಕ್ಷಿಸಿದ ಮಟ್ಟಕ್ಕೆ ಎಲ್ಲ ಕುರಿಗಳ ಗುಣವರ್ಧನೆಯಾಗುವವರೆಗೂ ಪ್ರತಿ ಪೀಳಿಗೆಯ ಗಂಡು ಮರಿಗಳಿಗೆ ಅವು ಪ್ರಾಯಕ್ಕೆ ಬರುವುದಕ್ಕೆ ಮೊದಲೇ ಗರ್ಭಾದಾನಕ್ಕೆ ಅವಕಾಶಕೊಡುವುದಿಲ್ಲ.

ಕೃತಕ ಗರ್ಭಾಧಾನ: ಕುರಿಗಳ ಪಾಲನೆ, ಪೋಷಣೆ ಮತ್ತು ಸಂತಾನಕ್ರಿಯೆಗಳನ್ನು ಮೇಲ್ಕಂಡ ಸುಧಾರಿತ ಕ್ರಮಗಳಿಂದ ಉತ್ತಮಪಡಿಸಿದರೂ ಸ್ವದೇಶೀ ತಳಿಗಳ ದೇಹ ಪ್ರಕೃತಿಯನ್ನು ಸುಧಾರಿಸಿದ ಹೊರತೂ ಭಾರತದಲ್ಲಿ ಕುರಿಕೃಷಿ ಏಳಿಗೆ ಹೊಂದಲಾರದು. ಉತ್ತಮವಾದ ವಿದೇಶೀ ತಳಿಗಳು ಭಾರತದ ಹವೆಗೆ ಒಗ್ಗದಿರುವುದರಿಂದಲೂ ಉತ್ಕೃಷ್ಟಗುಣವುಳ್ಳ ಟಗರುಗಳ ಸಂಖ್ಯೆ ಅತ್ಯಲ್ಪವಾದ್ದರಿಂದಲೂ ಅಧಿಕ ಸಂಖ್ಯೆಯ ಕುರಿಗಳು ಏಕಕಾಲದಲ್ಲಿ ಬೆದೆಗೆ ಬರುವುದರಿಂದಲೂ ಕೃತಕ ಗರ್ಭಾಧಾನ ಕ್ರಮ ಅನಿವಾರ್ಯ. ಟಗರು ಸ್ಖಲಿಸಿದ ವೀರ್ಯವನ್ನು ಕಡಿಮೆ ಉಷ್ಣತೆಯಲ್ಲಿಟ್ಟರೆ ಒಂದುವಾರದವರೆಗೂ ಕೆಡದಂತೆ ರಕ್ಷಿಸಬಹುದು. ಅಲ್ಲದೆ ವೀರ್ಯಕಾರಕಗಳಾದ ಎಗ್–ಯೋಕ್ ಸಿಟ್ರೇಟ್ ಮತ್ತು ಬೈಕಾರ್ಬೊನೇಟ್–ಫಾಸ್ಫೇಟ್‌ಗಳಲ್ಲಿ $0^0$ಸೆ. ಉಷ್ಣತೆಯಲ್ಲಿ ಶೇಖರಿಸಿಟ್ಟರೆ ಬಹು ದೀರ್ಘಕಾಲ ರಕ್ಷಿಸಬಹುದೆಂದು ತಿಳಿದುಬಂದಿದೆ. ಹೀಗೆ ಶೇಖರಿಸಿಟ್ಟ ವೀರ್ಯದ ಪ್ರಮಾಣವನ್ನು ಹಿಚ್ಚಿಸಿ ಕುರಿಗಳು ಬೆದೆಗೆ ಬಂದಾಗ ಯೋನಿಯ ಮೂಲಕ ಕೃತಕವಾಗಿ ಸೇರಿಸಿ ಗರ್ಭಾಧಾನ ಮಾಡಬಹುದು. ಒಂದು ಶ್ರೇಷ್ಠ ಟಗರು ಒಮ್ಮೆ ಸ್ಖಲಿಸಿದ ವೀರ್ಯದಿಂದ ಸುಮಾರು 30–40 ಕುರಿಗಳಿಗೆ ಗರ್ಭಾಧಾನ ಮಾಡಬಹುದು.

ಕುರಿಸಾಕಣೆಯ ಉದ್ಯೋಗ: ಕುರಿಯಿಂದ ನಮಗೆ ಮಾಂಸ, ಹೊದಿಕೆ ತಯಾರಿಸಲು ಉಣ್ಣೆ, ದೊರಕುತ್ತವೆ; ಇವಲ್ಲದೆ ಗೊಬ್ಬರ, ಚರ್ಮ, ಹಾಲು ಮುಂತಾದವುಗಳೂ ದೊರಕುತ್ತವೆ. ಭಾರತದ ಒಟ್ಟು ಉಣ್ಣೆಯ ವಾರ್ಷಿಕ ಉತ್ಪಾದನೆ 30000 ಟನ್ನುಗಳಷ್ಟಾಗುವುದು. ಉಣ್ಣೆ ಸಾಮಾನ್ಯವಾಗಿ ಕೆಳದರ್ಜೆಯದಾಗಿದ್ದು ಕೂದಲು ಮಿಶ್ರಿತವಾಗಿರುತ್ತದೆ. ಅಲ್ಲದೆ ಅದರಲ್ಲಿ ಕಪ್ಪು ಮತ್ತು ಬೇರೆ ಬೇರೆ ಬಣ್ಣದ ಉಣ್ಣೆಯೇ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಉಣ್ಣೆಯ ತಲಾವಾರ್ಷಿಕ ಉತ್ಪಾದನೆ ಬೇರೆ ಬೇರೆ ತಳಿಗಳಲ್ಲಿ ಬೇರೆ ಬೇರೆಯಾಗಿದೆ. ಅಂದರೆ ಸುಮಾರು 1.5–3 ಕಿಗ್ರಾಂವರೆಗೆ ಇರುತ್ತದೆ. ಬಿಳಿಯ ಉಣ್ಣೆಗೆ ವಿದೇಶಗಳಿಂದ ಚೆನ್ನಾಗಿ ಬೇಡಿಕೆ ಇದ್ದು ಜಮಖಾನೆ, ರತ್ನಗಂಬಳಿಗಳನ್ನು ತಯಾರಿಸಲು ಅದನ್ನು ಬಳಸಲಾಗುತ್ತಿದೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಸುಮಾರು ಅರ್ಧದಷ್ಟು ಎಂದರೆ ಸುಮಾರು 8 ಕೋಟಿ ರೂಪಾಯಿಗಳ ಬೆಲೆಯ ಉಣ್ಣೆಯನ್ನು ಪರದೇಶಗಳಿಗೆ ರಫ್ತುಮಾಡಲಾಗುತ್ತದೆ. ದೇಶದ ಆಂತರಿಕ ಬೇಡಿಕೆ ಅಂದರೆ ಮಿಲ್ಲುಗಳಿಗೆ ಹಾಗೂ ಗೃಹಕೈಗಾರಿಕೆಗಳಿಗೆ ವರ್ಷಕ್ಕೆ ಸುಮಾರು 15000–25000 ಟನ್ನು ಉಣ್ಣೆಯ ಆವಶ್ಯಕತೆ ಇದೆ. ದೇಶದ ಬಹು ಸಂಖ್ಯಾತ ಜನರಿಗೆ ಉಣ್ಣೆಯ ಆವಶ್ಯಕತೆ ಇರುವುದಲ್ಲದೆ ನಮ್ಮ ಸಂರಕ್ಷಣಾ ಪಡೆಗಳಿಗೂ ಉಣ್ಣೆಯ ಬಟ್ಟೆಗಳ ಆವಶ್ಯಕತೆ ಅಧಿಕವಾಗಿದೆ. ದೇಶದ ಉಣ್ಣೆಯ ಆಂತರಿಕ ಬಳಕೆಯ ಶೇಕಡಾ ಪ್ರಮಾಣವನ್ನು ಕೆಳಗಿನಂತೆ 5 ಭಾಗಗಳಾಗಿ ವರ್ಗೀಕರಿಸಬಹುದು. (1) ಕಂಬಳಿಗಳ ತಯಾರಿಕೆಗೆ 49.6, (2) ಬಟ್ಟೆ ಹಾಗೂ ಹೆಣೆಯುವ ನೂಲು ತಯಾರಿಸಲು 28.7, (3) ಜಮಖಾನೆ ಹಾಗೂ ಹಾಸುಗಂಬಳಿಗಳಿಗೆ 11.6, (4) ಗೃಹಕೈಗಾರಿಕೆಗೆ ಬೇಕಾದ ನೂಲು ತಯಾರಿಕೆಗೆ 6.8 (5) ಶಾಲು ತಯಾರಿಕೆ ಮುಂತಾದ ಇತರ ಉದ್ಯೋಗಗಳಿಗೆ 3.3.

ಉಣ್ಣೆಯ ಗಿರಣಿಗಳು ಪಂಜಾಬ್, ಉತ್ತರ ಪ್ರದೇಶ, ಮುಂಬಯಿ, ಬೆಂಗಳೂರು ಮತ್ತು ಕಾಶ್ಮೀರಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ.

ಕುರಿಯ ಮಾಂಸ ಒಳ್ಳೆಯ ಪೌಷ್ಟಿಕ ಆಹಾರವಾಗಿದ್ದು ಭಾರತದ ಬಹುಸಂಖ್ಯಾತ ಜನರಿಗೆ ಅತ್ಯವಶ್ಯವಾಗಿದೆ. ಕೇವಲ ಮಾಂಸದ ಮಾರಾಟದಿಂದ ಭಾರತ ಸರ್ಕಾರಕ್ಕೆ 20 ಕೋಟಿ ರೂಪಾಯಿ ವಾರ್ಷಿಕ ಆದಾಯವಿದೆಯೆಂದು ಅಂದಾಜು ಮಾಡಲಾಗಿದೆ. ಭಾರತದ ಆಂತರಿಕ ಬೇಡಿಕೆ ದಿನೇ ದಿನೇ ಹೆಚ್ಚುತ್ತ ನಡೆದಿದೆ. ಕುರಿಯಿಂದ ದೊರೆಯುವ ಮತ್ತೊಂದು ಹೆಚ್ಚುವಳಿಯೆಂದರೆ ಅದರ ಗೊಬ್ಬರ. ಕುರಿಯ ಗೊಬ್ಬರ ಬೆಳೆಗಳಿಗೆ ಮಹತ್ವದ ಆಹಾರಘಟಕಗಳನ್ನು ಒದಗಿಸುತ್ತದೆ. ಸಾಗುವಳಿ ಪ್ರದೇಶಗಳಲ್ಲಿ ಇದಕ್ಕೆ ಬಹಳ ಬೇಡಿಕೆಯುಂಟು. ಒಂದು ಕುರಿಯಿಂದ ವರ್ಷಕ್ಕೆ ಸುಮಾರು 0.5 ಟನ್ನಿನಿಂದ 0.7 ಟನ್ನಿನಷ್ಟು ಗೊಬ್ಬರ ದೊರಕುತ್ತದೆ. ಕುರಿಯ ಗೊಬ್ಬರದಲ್ಲಿ ಸಾರಜನಕ ಮತ್ತು ರಂಜಕಗಳ ಪ್ರಮಾಣ ದನಗಳ ಗೊಬ್ಬರದಲ್ಲಿರುವ ಪ್ರಮಾಣಕ್ಕಿಂತ ಇಮ್ಮಡಿ. ಕುರಿಗಳ ಹಾಲು, ಚರ್ಮದಿಂದಲೂ ಕೊಂಚಮಟ್ಟಿಗೆ ಉತ್ಪನ್ನ ಬರುತ್ತದೆ. ಕುರಿಗಳು ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ಜೀವಿಸಲಾರವು. ಕಡಿಮೆ ಮಳೆಯಾಗುವ ಮತ್ತು ಒಣಹವೆಯ ಪ್ರದೇಶಗಳಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದುತ್ತವೆ. 70 ಸೆಂಮೀ ಗಿಂತ ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿಯೇ ಕುರಿಗಳ ಸಂಖ್ಯೆ ನಿಬಿಡವಾಗಿದೆ. ಮಳೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕುರಿಗಳ ರಕ್ಷಣೆಗೆ ಕೊಟ್ಟಿಗೆ ಅವಶ್ಯವಾಗಿ ಬೇಕು. ಜೌಗು ಪ್ರದೇಶ ಕುರಿಗಳಿಗೆ ಮಾರಕವೆನಿಸುವುದು. ತಮ್ಮ ಮುಂದಾಳನ್ನು ಹಿಂಬಾಲಿಸಿ ಹೋಗುವುದು ಕುರಿಗಳಲ್ಲಿ ಬಂದ ರಕ್ತಗತ ಗುಣ. ಈ ಕಾರಣದಿಂದ ಕುರಿಸಾಕುವವರು ತಮ್ಮ ಹಿಂಡುಗಳಲ್ಲಿ ಕೆಲವು ಆಡುಗಳನ್ನು ಸಾಕುತ್ತಾರೆ. ಸ್ಥಳದಿಂದ ಸ್ಥಳಕ್ಕೆ ಹೋಗುವಾಗ ಕುರಿಗಳು ಈ ಆಡುಗಳನ್ನು ಹಿಂಬಾಲಿಸಿ ಹೋಗುತ್ತವೆ. ಸಾಗುವಳಿ ಪ್ರದೇಶಗಳಲ್ಲಿ ಕುರಿಗಳನ್ನು ಸಾಕಿದವರು, ಕುರಿಗಳ ಈ ಸ್ವಭಾವದ ಲಾಭವನ್ನು ಚೆನ್ನಾಗಿ ಮಾಡಿಕೊಳ್ಳುತ್ತಾರೆ. ಕುರಿಗಳ ಆಯುರ್ಮಾನ ಸಾಮಾನ್ಯವಾಗಿ 10 ರಿಂದ 12 ವರ್ಷಗಳು. ಆದರೆ ಕುರಿ ಸಹಜವಾಗಿ ಸಾಯುವವರೆಗೆ ಅದನ್ನು ಯಾರೂ ಇರಗೊಡುವುದಿಲ್ಲ. ಅದರಿಂದ ಉತ್ಪಾದನೆ ಕಡಿಮೆಯಾದೊಡನೆ ಅದನ್ನು ಮಾಂಸಕ್ಕಾಗಿ ಮಾರುವುದುಂಟು. ಚೆನ್ನಾಗಿ ಸಾಕಿದ ನಿರೋಗಿ ಕುರಿಯನ್ನು 7 ವರ್ಷ ವಯಸ್ಸಿನವರೆಗೆ ಸಾಕುವರು. ಆದರೆ ಅಭಾವ ಪ್ರದೇಶಗಳಲ್ಲಿ 4 ಅಥವಾ 5 ವರ್ಷಗಳ ಅನಂತರ ಮಾರಿಬಿಡುವರು. ಟಗರು ಸರಿಯಾಗಿ ಬೆಳೆವಣಿಗೆ ಹೊಂದಿದ ಮೇಲೆ ಅಂದರೆ ಸುಮಾರು 10–12 ತಿಂಗಳ ವಯಸ್ಸಿಗೆ ಮಾರಲು ಯೋಗ್ಯವಾಗುತ್ತದೆಂದು ಹೇಳಬಹುದು.

ಸಂತಾನೋತ್ಪತ್ತಿ: ಕುರಿ ಸುಮಾರು 9 ರಿಂದ 14 ತಿಂಗಳು ವಯಸ್ಸಿನಲ್ಲಿ ಮೊದಲನೆಯ ಬಾರಿ ಗರ್ಭಧರಿಸುತ್ತದೆ. ಈ ವಯೋಮಿತಿ ವಿವಿಧ ತಳಿಗಳಲ್ಲಿ ವಿವಿಧ ರೀತಿ, ಆದರೆ ಇಷ್ಟು ಚಿಕ್ಕ ವಯಸ್ಸಿನಲ್ಲಿ ಗರ್ಭ ಧರಿಸುವುದರಿಂದ ಅವುಗಳ ಬೆಳೆವಣಿಗೆ ಸರಿಯಾಗಿ ಆಗುವುದಿಲ್ಲ. ಅಲ್ಲದೆ ಹುಟ್ಟಿದ ಮರಿಯೂ ಸದೃಢವಾಗಲಾರದು. ಕಾರಣ ವಯಸ್ಸಿನ 15 ನೆಯ ತಿಂಗಳ ಅನಂತರ ಟಗರು ಕೊಡುವುದು ಒಳ್ಳೆಯದು. ಒಂದು ವರ್ಷ ವಯಸ್ಸಿಗೆ ಟಗರು ಗರ್ಭದಾನ ಮಾಡಲು ಸಮರ್ಥವಾಗುತ್ತದೆ. ಆದರೆ ಟಗರನ್ನು 2 ವರ್ಷ ವಯಸ್ಸಿನವರೆಗೆ ಬೀಜಕ್ಕಾಗಿ ಉಪಯೋಗಿಸುವುದು ಒಳ್ಳೆಯದಲ್ಲ. ಮುಂದೆ 7 ವರ್ಷ ವಯಸ್ಸಿನವರೆಗೆ ಬೀಜಕ್ಕಾಗಿ ಉಪಯೋಗಿಸಬಹುದು. ಸುಮಾರು 30 ರಿಂದ 50 ಕುರಿಗಳಿಗೆ ಒಂದು ಟಗರು ಬೇಕಾಗುವುದು. ಕುರಿ ಗರ್ಭಧರಿಸಿದ ಅನಂತರ 147 ರಿಂದ 152 ದಿವಸಗಳಲ್ಲಿ ಮರಿಹಾಕುವುದು. ಕುರಿಗಳಲ್ಲಿ ಗರ್ಭೋತ್ಪತ್ತಿ ಕಾಲಗಳು 1. ಬೇಸಗೆ ಕಾಲ: ಮಾರ್ಚ್ – ಏಪ್ರಿಲ್ 2. ಶರದೃತುವಿನ ಕಾಲ: ಜೂನ್ – ಜುಲೈ 3. ಚಳಿಗಾಲ: ಅಕ್ಟೋಬರ್ – ನವೆಂಬರ್.

ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ಹಿಂಡಿನಲ್ಲಿಯ ಕುರಿಗಳ 15%–20% ಕುರಿಗಳು ಗರ್ಭ ಧರಿಸುವುವು. ಬಹುಸಂಖ್ಯಾತ ಕುರಿಗಳು ಅಂದರೆ ಹಿಂಡಿನಲ್ಲಿಯ 50%–80% ಕುರಿಗಳು ಜೂನ್ ಜುಲೈ ತಿಂಗಳುಗಳಲ್ಲಿ ಬೆದೆಗೆ ಬರುತ್ತವೆ. ಉಳಿದ ಅಲ್ಪಸ್ವಲ್ಪ ಕುರಿಗಳು ಅಕ್ಟೋಬರಿನಲ್ಲಿ ಗರ್ಭಧರಿಸುವುವು. ಕುರಿಗಳ ಗರ್ಭಧಾರಣೆಯ ಮೇಲೆ ಹತೋಟಿ ಇರುವುದು ಒಳ್ಳೆಯದು. ಆಹಾರದ ಅಭಾವದ ಮೂಲಕ ಕುರಿಗಳು ಅಶಕ್ತವಾದರೆ ವೇಳೆಗೆ ಸರಿಯಾಗಿ ಬೆದೆಗೆ ಬಾರದೆ ಗರ್ಭಧಾರಣೆ ವಿಲಂಬವಾಗಬಹುದು. ತಡವಾಗಿ ಗರ್ಭಧರಿಸಿದ ಕುರಿಗಳು ಚಳಿಗಾಲದ ಮಧ್ಯದ ಸುಮಾರಿಗೆ ಇಲ್ಲವೆ ಬೇಸಗೆ ಆರಂಭವಾದ ಮೇಲೆ ಮರಿಹಾಕುವುವು. ಆ ವೇಳೆಗೆ ಹುಲ್ಲುಗಾವಲುಗಳಲ್ಲಿ ಹುಲ್ಲು ಒಣಗಿರುತ್ತದೆ. ಮರಿಹುಟ್ಟಿದಾಗ ತಾಯಿಕುರಿಗೆ ಸಾಕಷ್ಟು ಹಸಿರು ಹುಲ್ಲು ಸಿಗದಿದ್ದರೆ ಹಾಲು ಕಡಿಮೆಯಾಗಿ ಮರಿಗಳ ಬೆಳವಣಿಗೆ ಕುಂಠಿತವಾಗುತ್ತದೆ. ಬೇಸಗೆಯಲ್ಲಿ ಮೇವಿನ ಅಭಾವದ ಮೂಲಕ ಸಾಕುವವರು ತಮ್ಮ ಕುರಿಹಿಂಡುಗಳೊಂದಿಗೆ ದೂರದವರೆಗೆ ಪ್ರಯಾಣಕ್ಕೆ ಅಲೆಯಬೇಕಾಗುವುದು. ಚಿಕ್ಕ ಚಿಕ್ಕ ಮರಿಗಳೊಂದಿಗೆ ದೂರದ ವರೆಗೆ ಪ್ರಯಾಣ ಮಾಡುವುದು ಹಿತಕರವಲ್ಲ. ಈ ಕಾರಣದಿಂದ ಬೆದೆಯಕಾಲದ ಮೇಲೆ ಹತೋಟಿ ಇಟ್ಟರೆ ಕುರಿಗಳಿಗೆ ಸಾಕಷ್ಟು ಹುಲ್ಲು ಲಭ್ಯವಿದ್ದಾಗಲೇ ಮರಿಗಳು ಹುಟ್ಟಿ ಕುರಿಸಂಗೋಪನೆ ಲಾಭದಾಯಕವಾಗುವುದು.

ಬೆದೆಯ ಕಾಲ ಕುರಿಗಳಲ್ಲಿ ಸರಾಸರಿ 27 ಗಂಟೆಗಳವರೆಗೆ ಇರುವುದು. ಗರ್ಭೋತ್ಪತ್ತಿಯಾದ 5ನೆಯ ತಿಂಗಳ ಅನಂತರ ಈಯುವುವು. ಗರ್ಭಕಾಲದ ಅವಧಿಯಲ್ಲಿ ಕುರಿಗಳಿಗೆ ಸರಿಯಾದ ಆಹಾರದ ಅಭಾವ ಮತ್ತಿತರ ಕಾರಣಗಳ ಮೂಲಕ ಕುರಿಗಳು ಅಶಕ್ತವಾದರೆ ಗರ್ಭಪಾತವಾಗುವ ಸಂಭವ ಹೆಚ್ಚು. ಗಬ್ಬವಿದ್ದ ಕುರಿಯನ್ನು ಚೆನ್ನಾಗಿ ಆರೈಕೆಮಾಡಿದರೆ ಗರ್ಭಸ್ಥ ಮರಿ ಸರಿಯಾಗಿ ಬೆಳೆಯುವುದು; ಹುಟ್ಟಿದ ಮೇಲೂ ಅದಕ್ಕೆ ಸಾಕಷ್ಟು ಹಾಲು ಲಭ್ಯವಾಗಿ ಬೆಳೆವಣಿಗೆ ಚೆನ್ನಾಗಿ ಆಗುವುದು. ಈಯುವ ವೇಳೆ ಸಮೀಪಿಸಿದಂತೆ ಕುರಿಯ ನಡಿಗೆ ಮಂದವಾಗುತ್ತದೆ; ಬಾಲವನ್ನು ವಿಚಿತ್ರರೀತಿಯಲ್ಲಿ ಅಲ್ಲಾಡಿಸುತ್ತದೆ. ಮರಿಹಾಕುವಾಗ ಹಿಂಡಿನಿಂದ ಬೇರೆಯಾಗಿಬಿಡುತ್ತದೆ. ಮುಂಗಾಲಿನಿಂದ ನೆಲವನ್ನು ಕೆರೆಯುತ್ತ ಮಲಗುವುದು, ಏಳುವುದು, ಹೊರಳಾಡುವುದು, ಒದರುವುದು, ನಾಲ್ಕು ಕಾಲುಗಳನ್ನು ನೆಟ್ಟಗೆ ಚಾಚುವುದು ಸಾಮಾನ್ಯ. ನೀರಿನ ಚೀಲ ಕಂಡಮೇಲೆ ಮರಿ ಹಾಕುವ ವೇಳೆ ಸಮೀಪಿಸಿತೆಂದು ತಿಳಿಯಬೇಕು. ಆ ವೇಳೆಗೆ ಕುರಿ ಮಗ್ಗಲಾಗಿ ಮಲಗಿ ನಾಲ್ಕೂ ಕಾಲು ಚಾಚಿ ಮರಿಯನ್ನು ಹೊರಗೆ ಹಾಕಲು ಪ್ರಯತ್ನಿಸುತ್ತದೆ. ಸಾಮಾನ್ಯವಾಗಿ ಮರಿ ಜನಿಸುವಾಗ ತನ್ನ ತಲೆಯನ್ನು ಎರಡೂ ಮುಂಗಾಲುಗಳ ಮಧ್ಯದಲ್ಲಿಟ್ಟುಕೊಂಡಿರುತ್ತದೆ. ಈ ರೀತಿಯಾಗದಿದ್ದಲ್ಲಿ ಅನುಭವಿ ಮನುಷ್ಯನ ಸಹಾಯ ಕೂಡಲೇ ಪಡೆದುಕೊಳ್ಳಬೇಕು. ಇಲ್ಲವಾದರೆ ಈಯುವಾಗ ಕುರಿಗಳಿಗೆ ಯಾವ ಸಹಾಯವೂ

ಬೇಕಾಗುವುದಿಲ್ಲ. ಆರೋಗ್ಯಕರವಾದ ಮರಿ ಹುಟ್ಟಿದ ಕೆಲವೇ ಮಿನಿಟುಗಳಲ್ಲಿ ನಿಂತು ಮೊಲೆ ಉಣ್ಣಲಾರಂಭಿಸುತ್ತದೆ. ಮರಿಗಳು ಅಶಕ್ತವಿದ್ದರೆ ಮೊಲೆ ಕುಡಿಯಲು ಸಹಾಯ ಮಾಡಬೇಕಾಗುವುದು. ಬಹಳ ಚಳಿ ಇದ್ದರೆ ಅದೇ ಹುಟ್ಟಿದ ಮರಿಯನ್ನು ಬೆಚ್ಚಗಿನ ಸ್ಥಳದಲ್ಲಿ ಇಡಬೇಕು. ರಾತ್ರಿಯ ಕಾಲದಲ್ಲಿ ಕುರಿ ಈಯುವುದಿದ್ದರೆ ಅದನ್ನು ಸಾಕಷ್ಟು ಸ್ಥಳಾವಕಾಶ ಇರುವಲ್ಲಿಗೆ ಸ್ಥಳಾಂತರಿಸುವುದು ಒಳ್ಳೆಯದು. ಏಕೆಂದರೆ ತಾಯಿಕುರಿಗೆ ಬೇರೆಯಾಗಲು ಮತ್ತು ಮರಿಯನ್ನು ಆರೈಕೆ ಮಾಡಲು ಸಾಕಷ್ಟು ಸ್ಥಳ ಬೇಕಾಗುತ್ತದೆ. ಅದೇ ಹುಟ್ಟಿದ ಮರಿಯ ತೂಕ ಸುಮಾರು 2–5 ಕಿ.ಗ್ರಾಂ ಇರುತ್ತದೆ. ಮೊದಲ ಮೂರು ತಿಂಗಳುಗಳಲ್ಲಿ ಮರಿ ಶೀಘ್ರಗತಿಯಿಂದ ಬೆಳೆಯುತ್ತದೆ. ಮುಂದೆ 12 ತಿಂಗಳ ವಯಸ್ಸಿನ ವರೆಗೆ ಬೆಳವಣಿಗೆ ಸಾಮಾನ್ಯವಾಗಿರುತ್ತದೆ. 1 1/2 ಯಿಂದ 2 ವರ್ಷಗಳ ನಡುವೆ ದೇಹದ ಸಂಪೂರ್ಣ ಬೆಳವಣಿಗೆಯಾಗುತ್ತದೆಂದು ಹೇಳಬಹುದು. ಪೂರ್ಣಬೆಳೆದ ಕುರಿಯ ತೂಕ 20–30 ಕಿಗ್ರಾಂ ಇದ್ದರೆ, ಟಗರಿನ ತೂಕ 35–50 ಕಿಗ್ರಾಂ ಗಳವರೆಗೆ ಇರುತ್ತದೆ. ಕುರಿ ಸಂಗೋಪನೆಯಲ್ಲಿ ಮರಿಗಳ ಆರೈಕೆಯ ಕಡೆ ತಕ್ಕಷ್ಟು ಗಮನ ಕೊಡಬೇಕು. ಎಳೆಯವಿದ್ದಾಗ ಮರಿಗಳಿಗೆ ಸಹಜವಾಗಿ ಪಚನವಾಗುವಂಥ ರಸಭರಿತ ಮತ್ತು ಪೌಷ್ಟಿಕ ಆಹಾರವನ್ನು ಒದಗಿಸಬೇಕು. ತಾಯಿಕುರಿಗಳಿಗೆ ಉತ್ತಮ ಆಹಾರ ಪೂರೈಸಿದರೆ ಮರಿಗಳಿಗೆ ಸಾಕಷ್ಟು ಹಾಲು ದೊರಕುವುದು. ಮರಿಗಳು ಪುಷ್ಟವಾಗಿ ಕುರಿ ಸಾಕುವಿಕೆ ಲಾಭದಾಯಕವಾಗಿ ಪರಿಣಮಿಸುವುದು. (ಎಸ್.ಬಿ.ಆರ್.; ಎಸ್.ಎಚ್.ಒ.)

**ಕುರುಡು ವಿದ್ಯುತ್ ಮೀನು:** ಮೃದ್ವಸ್ಥಿ ಮೀನುಗಳ ಗುಂಪಿನ ಎಲ್ಯಾಸ್ಮೊಬ್ರಾಂಕಿಯ ಗಣದ ಸದಸ್ಯ. ಇದರ ವೈಜ್ಞಾನಿಕ ನಾಮ ಬೆಂಥೊಬೇಟಿನಸ್ ಮೋರ್ಸ್ಬಿಯೈ. ಇದು ಸಮುದ್ರದ ಆಳದಲ್ಲಿ ವಾಸಿಸುತ್ತದೆ. ಆಂಗ್ಲ ಭಾಷೆಯಲ್ಲಿ ಎಲೆಕ್ಟ್ರಿಕ್ ರೇ ಎನ್ನುವರು. ಕೇರಳ ಸಮೀಪದ ಅರೇಬಿಯನ್ ಸಮುದ್ರದ ೧೮೦ ಮೀ ಆಳದಲ್ಲಿ ವಾಸಿಸುತ್ತದೆ. ಇದರ ಉದ್ದ ೪೦ ಸೆಂಮೀ. ಈ ಮೀನಿಗೆ ಬಹಳ ಕ್ಷೀಣವಾದ ಕಣ್ಣುಗಳಿವೆ. ತಲೆಯ ಇಕ್ಕೆಡೆಗಳಲ್ಲಿರುವ ಸಣ್ಣಚುಕ್ಕೆಗಳೇ ಕಣ್ಣುಗಳನ್ನು ಪ್ರತಿನಿಧಿಸುತ್ತವೆ. ಇದು ತಿನ್ನಲು ಯೋಗ್ಯವಾಗಿಲ್ಲದ ಕಾರಣ ಆಹಾರವನ್ನಾಗಿ ಬಳಸುವುದು ವಿರಳ. ***

**ಕುರುಡು ಹುಳು:** ಆಂಗ್ವಿಸ್ ಫ್ರಾಜಿಲಿಸ್ ಎಂಬ ವೈಜ್ಞಾನಿಕ ಹೆಸರಿನ ಸರೀಸೃಪ (ಬ್ಲೈಂಡ್ ವರ್ಮ್) ಹಲ್ಲಿಗಳನ್ನೊಳಗೊಂಡ ಲ್ಯಾಸರ್ಟೀಲಿಯ ಗಣಕ್ಕೆ ಸೇರಿದೆ. ಇದನ್ನು ಕುರುಡು ಹಲ್ಲಿ ಅಥವಾ ಮಂದಹಲ್ಲಿ ಎಂದೂ ಕರೆಯುತ್ತಾರೆ. ಇದರ ದೇಹ ಹಾವಿನಂತೆ ಇದೆ. ಇದಕ್ಕೆ ಕಾಲಿಲ್ಲ. ಎದೆಯ ಮೂಳೆ ಮತ್ತು ಭುಜಕಟ್ಟು ಕ್ಷೀಣಿಸಿವೆ. ಬಾಲ ಬೇಕಾದಾಗ ತುಂಡಾಗಬಲ್ಲುದು. ಕುರುಡುಹುಳು ಜರಾಯುಜ. ಮೊಟ್ಟೆಗಳು ತಾಯಿ ದೇಹದಲ್ಲಿಯೇ ಒಡೆದು ಮರಿಗಳು ಹೊರಬೀಳುತ್ತವೆ. ***

**ಕುರ್ಚಿಮೀನು:** ಟೀಲಿಯೋಸ್ಟಿಯೈ ಗಣದ ಲಿಯೋನ್ಯಾತಿಡೆ ಕುಟುಂಬಕ್ಕೆ ಸೇರಿದ ಸಣ್ಣ ಗಾತ್ರದ ಎಲುಬು ಮೀನು (ಸಿಲ್ವರ್ ಬೇಯ್ಲಿ ಅಥವಾ ಪೋನಿ ಫಿಶ್). ಲಿಯೋನ್ಯಾತಸ್ ಮತ್ತು ಗಸ್ಸ ಎಂಬ ಎರಡು ಜಾತಿಯ ಮೀನುಗಳಿಗೆ ಈ ಹೆಸರಿದೆ. ಸಮುದ್ರವಾಸಿಯಾದ ಈ ಮೀನು ಆಳ ಹೆಚ್ಚಾಗಿಲ್ಲದ ನೀರಿನಲ್ಲಿ ದೊಡ್ಡ ದೊಡ್ಡ ಗುಂಪುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಳಿವೆಗಳಿಂದ ನದಿಗಳೊಳಕ್ಕೂ ಈಜಿಬರುವುದುಂಟು. ಭಾರತದ ಕರಾವಳಿ ಪ್ರದೇಶಗಳಲ್ಲಿ ಲಿಯೋನ್ಯಾತಸ್ ಜಾತಿಯ ಸುಮಾರು 16 ಪ್ರಭೇದಗಳು ಸಿಕ್ಕುತ್ತವೆ. ಇವುಗಳಲ್ಲಿ ಮುಖ್ಯವಾದವು ಲಿ.ಸ್ಪಂಡೆನ್ಸ, ಲಿ.ಈಕ್ವಲಸ್, ಲಿ.ಬಿಂಡಸ್, ಲಿ.ಇನ್ಸಿಡೇಟರ್, ಲಿ.ರುಕೋನಿಯಸ್. ಇನ್ಸಿಡೇಟರ್ ಪ್ರಭೇದ ಮೈಸೂರು ಮತ್ತು ಮಹಾರಾಷ್ಟ್ರಗಳ ಕರಾವಳಿಯಲ್ಲಿ ಬಲುಸಾಮಾನ್ಯವಾಗಿ ಕಾಣಬರುತ್ತದೆ. ಬಿಂಡಸ್ ಪ್ರಭೇದದ ಈಜುರೆಕ್ಕೆಗಳು ಕಿತ್ತಳೆ ವರ್ಣದವಾಗಿರುವುದರಿಂದ ಇದನ್ನು ಕಿತ್ತಳೆರೆಕ್ಕೆಯ ಕುರ್ಚಿಮೀನು ಎಂದು ಕರೆಯುವುದುಂಟು. ಗಸ್ಸ ಜಾತಿಯ ಮೈನ್ಯೂಟ ಎಂಬ ಪ್ರಭೇದವೂ ಭಾರತದಲ್ಲಿ ಸಿಕ್ಕುತ್ತದೆ. ಕುರ್ಚಿಮೀನಿನ ದೇಹ ಸುಮಾರು 14 ಸೆಮೀ ಗಿಂತ ಉದ್ದವಿರುವುದಿಲ್ಲ. ಅಕ್ಕಪಕ್ಕಕ್ಕೆ ಚಪ್ಪಟೆಯಾಗಿದೆ. ದೇಹದ ಮೇಲಿರುವ ಹುರುಪೆಗಳು ಸೈಕ್ಲಾಯಿಡ್ ಮಾದರಿಯವು. ಕುರ್ಚಿಮೀನುಗಳು ತಮ್ಮ ಬಾಯನ್ನು ಬಹಳ ಮುಂದಕ್ಕೆ ಚಾಚಬಲ್ಲವು. ಬಾಯಿ ಅಂಗುಳಿನಲ್ಲಿ ಹಲ್ಲುಗಳಿಲ್ಲ. ದವಡೆಹಲ್ಲುಗಳು ಬಹಳ ಸಣ್ಣವು. ಈ ಮೀನುಗಳು ಬಹಳ ರುಚಿಯಾದ ಆಹಾರಮೀನುಗಳೆಂದು ಹೆಸರಾಗಿವೆ. ಇವುಗಳ ದೇಹದಲ್ಲಿ ಕೊಬ್ಬು ಅತ್ಯಲ್ಪ ಪ್ರಮಾಣದಲ್ಲಿರುವುದರಿಂದ ಇವನ್ನು ಸುಲಭವಾಗಿ ಬಿಸಿಲಿನಲ್ಲಿ ಒಣಗಿಸಬಹುದು. ಒಣಗಿಸುವಾಗ ಉಪ್ಪು ಸೇರಿಸುವ ಕ್ರಮ ಇದೆ. ಸಂಸ್ಕರಿಸಿದ ಮೀನುಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಾರೆ. (ಎನ್.ವಿ.ಎ.)

**ಕುಲಾಂತರಿ ಪ್ರಾಣಿಗಳು:** ವಿವಿಧ ಗುಣಗಳಿಗೆ ಕಾರಣವಾದ ಜೀನ್‌ಗಳನ್ನು ಯಾವುದೇ ಜೀವಿಯಿಂದ ಬೇರ್ಪಡಿಸಿ, ಅವುಗಳನ್ನು ಇನ್ನೊಂದು ಜೀವಿಯ ಡಿಎನ್ಎ ಒಂದಿಗೆ (ಡಿ ಆಕ್ಸಿರೈಬೋಸ್ ನ್ಯೂಕ್ಲಿಯಿಕ್ ಆಮ್ಲ) ಮರುಜೋಡಣೆ ಮಾಡುವುದರಿಂದ ಅಂದರೆ ತನ್ನ ಕುಲದ್ದಲ್ಲದ ಬೇರೊಂದು ಜೀವಿಯ ತಳಿಗುಣವನ್ನು ಸೇರಿಸಿಕೊಂಡು ಜನಿಸಿದ ಪ್ರಾಣಿಗಳು.

ಒಂದು ಪ್ರಾಣಿಯ ಡಿಎನ್ಎ ದಲ್ಲಿರುವ ಅಪೇಕ್ಷಿತ ತಳಿಗುಣ ಅಥವಾ ಜೀನ್‌ಗಳನ್ನು ಬೇರ್ಪಡಿಸಿ, ಹೊರತೆಗೆದು, ಬೇಕಾದ ಇನ್ನೊಂದು ಪ್ರಾಣಿಯ ಡಿಎನ್ಎ ಗೆ ಮರುಜೋಡಣೆ ಮಾಡಲಾಗುವುದು. ಇವುಗಳ ಕಾರ್ಯ ಪ್ರವೃತ್ತಿಯಿಂದ ಮೂಲ ತಳಿಗುಣಗಳಲ್ಲಿ ಅಂತರ್ಗತಗೊಂಡ ಗುಣಗಳು ಮಾರ್ಪಾಡಾಗಿ, ಆ ಪ್ರಾಣಿಯಿಂದ ಉದ್ದೇಶಿತ ಗುಣಗಳನ್ನು ಪಡೆಯಲು ಕುಲಾಂತರಿ ಪ್ರಾಣಿಗಳನ್ನು ಸೃಷ್ಟಿಸಲಾಗುತ್ತದೆ. ಉದಾ : ಮನುಷ್ಯನಿಗೆ ಬೆಕ್ಕಿನ ಅಥವಾ ಹಾವಿನ ತಳಿಗುಣ ಸೇರಿಸಿದರೆ ಅವನು ಟ್ರಾನ್ಸ್‌ಜೆನಿಕ್ ಅರ್ಥಾತ್ ಕುಲಾಂತರಿ.

1972 ರಲ್ಲಿ ಭಾರತೀಯ ಜೀವವಿಜ್ಞಾನಿ ಆನಂದ ಚಕ್ರವರ್ತಿ ಸ್ಯೂಡೋಮೊನಾಸ್ ಬ್ಯಾಕ್ಟೀರಿಯವನ್ನು ಪೆಟ್ರೋಲ್ ತೈಲ ಹೀರಿಕೊಂಡು ಅರಗಿಸಬಲ್ಲ ರೀತಿಯಲ್ಲಿ ಮಾರ್ಪಾಡುಗೊಳಿಸಿ, ಸೃಷ್ಟಿಸಿದರು. ಪೆಟ್ರೋಲ್ ಕುಡಿಯುವ ಬ್ಯಾಕ್ಟೀರಿಯಗಳ ಸೃಷ್ಟಿ ಕುಲಾಂತರಿ ಜೀವಿಗಳ ಉತ್ಪಾದನೆಯ ಮೊದಲ ಯಶಸ್ಸಿಗೆ ಕಾರಣ. 1973 ರಲ್ಲಿ ಸ್ಟಾನ್ಲಿ ಕೊಹನ್ ಮತ್ತು ಹರ್ಬರ್ಟ್ ಬಾಯರ್ ಮನುಷ್ಯನ ಒಂದು ತಳಿಗುಣವನ್ನು ಬ್ಯಾಕ್ಟೀರಿಯ ಕೋಶಕ್ಕೆ ವರ್ಗಾಯಿಸಿ ಕುಲಾಂತರಿ ಬ್ಯಾಕ್ಟೀರಿಯ ಸೃಷ್ಟಿಸಿದರು. ಇದನ್ನು ಜೈವಿಕ ಕಾರ್ಖಾನೆಯಂತೆ ಬಳಸಿ, ಇನ್ಸುಲಿನ್ ಮತ್ತು ಇಂಟರ್‌ಫೆರಾನ್‌ಗಳನ್ನು ಉತ್ಪಾದಿಸತೊಡಗಿದರು. ಈ ಕುಲಾಂತರಿ ಬ್ಯಾಕ್ಟೀರಿಯಗಳನ್ನು ಬಯೋರಿಯಾಕ್ಟರ್‌ಗಳಲ್ಲಿ ಬಳಸಿ, ಪ್ರಚೋದಿಸಿ, ಅಧಿಕ ಪ್ರಮಾಣದ ಇನ್ಸುಲಿನ್ ತಯಾರಿಸಲಾಗುತ್ತಿದೆ. ಅನಂತರ ಈ ತಂತ್ರಜ್ಞಾನವು ಸಸ್ಯ ಮತ್ತು ಪ್ರಾಣಿವರ್ಗವನ್ನು ಆವರಿಸಿಕೊಂಡಿತು. ಈಗಾಗಲೇ ವಿಶ್ವದ ಹನ್ನೊಂದು ದೇಶಗಳಲ್ಲಿ ಕುಲಾಂತರಿ ತಂತ್ರಜ್ಞಾನದಿಂದ ಅನೇಕ ಸಸ್ಯ ಮತ್ತು ಪ್ರಾಣಿಗಳನ್ನು ಸೃಷ್ಟಿಸಲಾಗಿದೆ. ಅಮೇರಿಕ, ಜರ್ಮನಿ, ಆಸ್ಟ್ರಿಯಾ, ನಾರ್ವೆ, ಫ್ರಾನ್ಸ್, ರಷ್ಯಾ, ಜಪಾನ್, ಆಸ್ಟ್ರೇಲಿಯ, ಲಕ್ಸಂಬರ್ಗ್, ಚೀನಾ ಮತ್ತು ಭಾರತ ದೇಶಗಳಲ್ಲಿ ಕುಲಾಂತರಿ ತಂತ್ರಜ್ಞಾನದಿಂದ ಜನಿಸಿದ ಕುರಿ, ಹಂದಿ, ಮೇಕೆಗಳಿಂದ ಮಾನವನ ದೇಹದೊಳಗೆ ವೈದ್ಯಕೀಯ ಮಹತ್ವವಿರುವ ಹಲವು ಪ್ರೊಟೀನ್‌ಗಳ (ಉದಾ : ಕ್ಲಾಟಿಂಗ್ ಫ್ಯಾಕ್ಟರ್ಸ್, ಥ್ರಾಂಬಿನ್), ಹಾರ್ಮೋನ್‌ಗಳ (ಉದಾ : ಇನ್ಸುಲಿನ್, ಇಂಟರ್‌ಫೆರಾನ್) ಮತ್ತು ಕಿಣ್ವಗಳ ಉತ್ಪಾದನೆ ಮಾಡಲಾಗುತ್ತಿದೆ.

ಇಂತಹ ಪ್ರೊಟೀನ್‌ಗಳ ತಯಾರಿಕೆಗೆ ಮತ್ತು ಉತ್ಪಾದನೆಗೆ ಕಾರಣವಾಗಿರುವ ಜೀನ್‌ಗಳನ್ನು ಪತ್ತೆಹಚ್ಚಿ, ಅವುಗಳನ್ನು ಮಾನವಕೋಶದಿಂದ ಬೇರ್ಪಡಿಸಿ, ಕುರಿ, ಮೇಕೆ, ಹಂದಿಗಳ ಸಕಲ ಜೀವಕೋಶಗಳೊಳಗೂ ಈ ಜೀನ್‌ಗಳು ಅಂತರ್ಗತಗೊಂಡು ಕಾರ್ಯಪ್ರವೃತ್ತಗೊಳ್ಳುವಂತೆ ಮಾಡಿದಾಗ ಅಲ್ಲಿಯೂ ಈ ಮಹತ್ವದ ಪ್ರೊಟೀನ್‌ಗಳ ಉತ್ಪಾದನೆಯಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಕುಲಾಂತರಿ ಇಲಿ, ಕುರಿ, ಹಸು, ಮೇಕೆ, ಹಂದಿ, ಕೋಳಿ, ಮೀನು ಮತ್ತು ಸೊಳ್ಳೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವುಗಳ ಸೃಷ್ಟಿಯ ಮೂಲ ಉದ್ದೇಶ ಮಾನವನ ದೇಹದೊಳಗೆ ವೈದ್ಯಕೀಯ ಮಹತ್ವವಿರುವ ಹಲವು ಪ್ರೊಟೀನ್‌ಗಳ, ಬೆಳವಣಿಗೆ ಹಾರ್ಮೋನ್‌ಗಳ ಉತ್ಪಾದನೆ ಮಾಡುವುದು.

ಕುಲಾಂತರಿ ಮೇಕೆ: ಲೂಸಿಯನಾ ಸ್ಟೇಟ್ ವಿಶ್ವವಿದ್ಯಾಲಯ ಮತ್ತು ಟಫ್ಟಸ್ ವಿಶ್ವವಿದ್ಯಾಲಯದ ಪಶುಸಂಗೋಪನೆ ಮತ್ತು ವೈದ್ಯಶಾಲೆಯ ಸಂಶೋಧಕರು ವಿಶ್ವದ ಪ್ರಪ್ರಥಮ ಕುಲಾಂತರಿ ಮೇಕೆಯನ್ನು 1998 ರಲ್ಲಿ ಸೃಷ್ಟಿಸಿರುವ ಬಗ್ಗೆ ಮೇ ತಿಂಗಳ 1998 ರ ಜೈವಿಕ ತಂತ್ರಜ್ಞಾನ ನೇಚರ್ ಪತ್ರಿಕೆ ವರದಿಸಿದೆ. ಸ್ಪಾನಿಷ್ ಮೌಂಟನ್ ಮೇಕೆ (ಕಪ್ರಾ ಪೈರ್ನೀನಿಯಕ್ ಪೈರ್ನೀಯಕ್) ಎಂಬುದು ಕುಲಾಂತರಿ ಮೇಕೆಯ ಹೆಸರು. ಸ್ಥಳೀಯವಾಗಿ ಈ ಮೇಕೆಗೆ ಬುರ್ಕಡೊ ಎನ್ನುವರು. 1998 ರಲ್ಲಿ ಚೀನಾ ದೇಶ ಪ್ರಥಮ ಕುಲಾಂತರಿ ಮೇಕೆಯನ್ನು ಸೃಷ್ಟಿಸಿತು. ಅಲ್ಲಿನ ವಿಜ್ಞಾನಿಗಳು ಮಾನವನ ರಕ್ತದಲ್ಲಿರುವ ಕ್ಲಾಟಿಂಗ್ ಫ್ಯಾಕ್ಟರ್ IX ಅನ್ನು ಮೇಕೆಯ ಅಂಡಾಣುವಿಗೆ ಸೇರಿಸಿ ಅನಂತರ ಹೆಣ್ಣು ಮೇಕೆಯ ಗರ್ಭಕೋಶಕ್ಕೆ ಸೇರಿಸಿದರು. ಇದರಿಂದ ಜನಿಸಿದ ಕುಲಾಂತರಿ ಮೇಕೆ ಉತ್ಪಾದಿಸುವ ಪ್ರತೀ ಲೀಟರ್ ಹಾಲಿನಲ್ಲಿ 1,400 ನ್ಯಾನೋ ಗ್ರಾಂ. ಫ್ಯಾಕ್ಟರ್ IX ಇರುವ ಬಗ್ಗೆ ವಿಜ್ಞಾನಿಗಳು ದೃಢಪಡಿಸಿದರು.

ಮೆಸಾಚುಸೆಟ್ಸ್ ಜೆನ್‌ಜೈಮ್ ಕುಲಾಂತರಿ ಫಾರ್ಮ್‌ನಲ್ಲಿ ಅಕ್ಟೋಬರ್ ಮತ್ತು ನವೆಂಬರ್ 1998 ರಲ್ಲಿ ಕುಲಾಂತರಿ ಮೇಕೆ ಸೃಷ್ಟಿಸಲಾಯಿತು. ಈ ಮೇಕೆಯಲ್ಲಿ, ಮಾನವನ ರಕ್ತದ ಪ್ಲಾಸ್ಮದಲ್ಲಿರುವ ಆಂಟಿಥ್ರಾಂಬಿನ್ III (ಆರ್‌ಎಚ್‌ಎಟಿ III) ಉತ್ಪತ್ತಿ ಮಾಡುವಂತೆ ಪ್ರಚೋದಿಸಲಾಗಿದೆ. ಈ ಮೇಕೆ ನೀಡುವ ಹಾಲಿನಲ್ಲಿ ಥ್ರಾಂಬಿನ್ ಇದೆ. ಇದರಿಂದ ರಕ್ತ ಹೆಪ್ಪುಗಟ್ಟುವಿಕೆಗೆ ಬೇಕಾಗುವ ಅಂಟಿಥ್ರೋಂಬಿನ್ III ಉತ್ಪಾದಿಸಲು ಸಾಧ್ಯ. ಹೃದಯ ಸಂಬಂಧಿ ಕಾಯಿಲೆಗಳ ಉಪಶಮನಕ್ಕೆ ಈ

ಹಾಲು ಪರಿಣಾಮಕಾರಿಯಾಗಿದೆ. ಆಂಟಿಥ್ರಾಂಬಿನ್ ಉಪಯೋಗಿಸಿ ಪಾರ್ಶ್ವವಾಯು ಅಥವಾ ಹೃದಯ ಸ್ಥಂಬನ ಆಗುವುದನ್ನು ತಪ್ಪಿಸಲು ವಿಜ್ಞಾನಿಗಳು ಸಂಶೋಧನೆ ಕೈಗೊಂಡಿದ್ದಾರೆ. ಆಂಟಿಥ್ರಾಂಬಿನ್ ಉತ್ಪತ್ತಿಗೆ ಕಾರಣವಾಗಿರುವ ತಳಿಗುಣವನ್ನು ಮೇಕೆಯ ಅಂಡಾಣುವಿಗೆ ಸೇರಿಸಿ ಪ್ರಯೋಗ ಮಾಡಲಾಯಿತು. ಇದು ಹಾಲು ಗ್ರಂಥಿಗಳಲ್ಲಿ ಪ್ರೊಟೀನ್‌ಯುಕ್ತ ಥ್ರಾಂಬಿನ್ ಉತ್ಪತ್ತಿಗೆ ಮಾರ್ಗದರ್ಶಿಯಾಗಿರುವುದನ್ನು ಖಚಿತಪಡಿಸಿಕೊಂಡ ವಿಜ್ಞಾನಿಗಳು, ಅನಂತರ ತಳಿ ತಂತ್ರಜ್ಞಾನದಿಂದ ಮೇಕೆ ಹಾಲಿನಲ್ಲಿ ಲಸಿಕೆಗಳನ್ನು (ಚುಚ್ಚುಮದ್ದು) ಉತ್ಪತ್ತಿ ಮಾಡುವತ್ತ ದಾಪುಗಾಲು ಹಾಕಿದ್ದಾರೆ. ಇದರಿಂದ ಬಡ ರಾಷ್ಟ್ರಗಳಲ್ಲಿ ಪ್ಲೇಗು, ಕಾಲರದಂತಹ ಮಾರಕ ರೋಗಗಳನ್ನು ಸುಲಭವಾಗಿ ನಿಯಂತ್ರಿಸಬಹುದೆಂಬ ಯೋಜನೆ ಅವರದು. ಅಮೇರಿಕ ಸಂಯುಕ್ತ ಸಂಸ್ಥಾನದಿಂದ ಜೆನ್‌ಜೈಮ್ ಟ್ರಾನ್ಸ್‌ಜೆನ್ಸ್ ಸಂಶೋಧನೆ ಸಂಸ್ಥೆಯವರು ಕುಲಾಂತರಿ ಮೇಕೆ ಹಾಲಿನಲ್ಲಿ ಆರ್.ಎಚ್.ಎ. I ಮತ್ತು III ಉತ್ಪತ್ತಿಮಾಡಲು ಪೇಟೆಂಟ್ ಪಡೆದಿದ್ದಾರೆ.

ಕುಲಾಂತರಿ ಹಂದಿ: 1997 ರಲ್ಲಿ ವೆಲೆಂಡರ್ ಮತ್ತು ಸಹೋದ್ಯೋಗಿಗಳು ಕುಲಾಂತರಿ ಹಂದಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಮನುಷ್ಯನ ದೇಹದಲ್ಲಿ ಉತ್ಪತ್ತಿಯಾಗುವ ಪ್ರೊಟೀನ್–ಸಿ ಗೆ ಕಾರಣವಾದ ತಳಿಗುಣವನ್ನು ಹಂದಿ ದೇಹಕ್ಕೆ ವರ್ಗಾಯಿಸಿದರು. ಹಂದಿಯ ಯುಗ್ಮಜಕ್ಕೆ ಫ್ಯಾಕ್ಟರ್ VIII ಕ್ಕೆ ಕಾರಣವಾದ ಸೇರಿಸಲಾಯಿತು. ಅನಂತರ, ಈ ಯುಗ್ಮಜಗಳಿಂದ ಹುಟ್ಟಿದ ಹಂದಿಗಳ ಹಾಲಿನಲ್ಲಿ ಫ್ಯಾಕ್ಟರ್ VIII ಅನ್ನು ಗುರುತಿಸಲಾಯಿತು. ಈ ಹಾಲಿನಿಂದ ಫ್ಯಾಕ್ಟರ್ VIII ಬೇರ್ಪಡಿಸಿ, ಶುದ್ಧೀಕರಿಸಿ, ಹಿಮೋಫಿಲಿಯ (ಕುಸುಮ ರೋಗ) ರೋಗಿಗಳ ಚಿಕಿತ್ಸೆಗೆ ಉಪಯೋಗಿಸಬಹುದು.

ವಿವಿಧ ಹಂದಿಗಳಿಗೆ ಮಾನವನ ಬೀಟಾ–ಗ್ಲೊಬ್ಯುಲಿನ್ ಉತ್ಪಾದನೆಗೆ ಕಾರಣವಾದ ಜೀನ್ ಸೇರಿಸಿ, ಸೃಷ್ಟಿಸಿದ ಕುಲಾಂತರಿ ಹಂದಿಗಳಿಂದ ಮಾನವ ರಕ್ತದಲ್ಲಿರುವಂತಹ ಹಿಮೋಗ್ಲೋಬಿನ್ ಕಣಗಳನ್ನು ಉತ್ಪಾದಿಸುವರು. ಆಸ್ಟ್ರಿಡ್ ಎಂಬ ಕುಲಾಂತರಿ ಹಂದಿಗಳಿಂದ ಮಾನವ ದೇಹದೊಳಕ್ಕೆ ಕಸಿಮಾಡಲು ಯೋಗ್ಯವಾದಂತಹ ಹೃದಯ, ಕಿಡ್ನಿ, ಯಕೃತ್, ಶ್ವಾಸಕೋಶ ಮತ್ತು ಮೇಧೋಜೀರಕ ಗ್ರಂಥಿಯಂತಹ ಅಂಗಾಂಗಗಳನ್ನು ಬೆಳೆಯಲು ಈಗಾಗಲೇ ಪ್ರಯತ್ನಗಳು ಸಾಗಿದ್ದು, ಕೆಲವು ವಿಜ್ಞಾನಿಗಳು ಯಶಸ್ಸು ಕಂಡಿದ್ದಾರೆ. ಪ್ರಾಣಿಗಳ ದೇಹದಲ್ಲಿನ ಅಂಗಾಂಗಗಳನ್ನು ಮನುಷ್ಯನ ದೇಹದೊಳಕ್ಕೆ ಕಸಿ ಮಾಡುವ ಈ ಪದ್ಧತಿಗೆ ಕ್ಸೀನೋಟ್ರಾನ್ಸ್‌ಪ್ಲಾಂಟೇಶನ್ ಎನ್ನಲಾಗುವುದು.

ಕುಲಾಂತರಿ ಕುರಿ: ಮಾನವನ ದೇಹದಲ್ಲಿ ಉತ್ಪತ್ತಿಯಾಗುವ ಆಲ್ಫ–1 ಆ್ಯಂಟಿಟ್ರಿಪ್ಸಿನ್ ಅನ್ನು ಕುಲಾಂತರಿ ಕುರಿಗಳಿಂದ ಸೃಷ್ಟಿಸಲಾಗಿದೆ. ಆಲ್ಫ–1 ಆಂಟಿಟ್ರಿಪ್ಸಿನ್ ಉತ್ಪತ್ತಿಗೆ ಕಾರಣವಾದ ತಳಿಗುಣವನ್ನು ಬೀಟ–ಲ್ಯಾಕ್ಟೋಗ್ಲೋಬಿನ್ ಪ್ರಮೋಟರ್‌ಗೆ ಜೊತೆಗೂಡಿಸಿ, ಅನಂತರ ಗರ್ಭಾಂಕುರಗೊಳಿಸಿದ ಅಂಡಾಣುವಿನಲ್ಲಿರುವ ವೀರ್ಯಾಣುವಿನ ಕೋಶಬೀಜಕ್ಕೆ (ಪ್ರೋನ್ಯೂಕ್ಲಿಯಸ್) ಸೇರಿಸುವರು. ಈ ಯುಗ್ಮಜದಿಂದ ಜನಿಸಿದ ಕುಲಾಂತರಿ ಕುರಿಗಳು ಪ್ರೌಢಾವಸ್ಥೆ ತಲುಪಿದ ನಂತರ ನೀಡುವ ಪ್ರತಿ ಲೀ. ಹಾಲಿನಲ್ಲಿ 1 ರಿಂದ 35 ಗ್ರಾಂ ಆಲ್ಫ–1 ಆಂಟಿಟ್ರಿಪ್ಸಿನ್ ಇರುವ ಬಗ್ಗೆ ವಿಜ್ಞಾನಿಗಳು ಖಚಿತಪಡಿಸಿದ್ದಾರೆ. ಇದೇ ರೀತಿ ಕುಲಾಂತರಿ ಕುರಿಗಳು ನೀಡುವ ಹಾಲಿನಲ್ಲಿ ಫ್ಯಾಕ್ಟರ್ IX ಬೇರ್ಪಡಿಸಿ, ಶುದ್ಧೀಕರಿಸಿ, ಹಿಮೋಫಿಲಿಯ ರೋಗದಿಂದ ಬಳಲುವ ಜನರಿಗೆ ಚಿಕಿತ್ಸೆ ನೀಡಲು ಬಳಸುತ್ತಾರೆ. ಕುಲಾಂತರಿ ಕುರಿಗಳಿಂದ ಅತಿ ಹೆಚ್ಚು ಉಣ್ಣೆ ಉತ್ಪಾದಿಸಲು ಬೆಳವಣಿಗೆ ಹಾರ್ಮೋನ್ ಸೇರಿಸುವ ತಂತ್ರಜ್ಞಾನ ಲಭ್ಯವಿದೆ. ಬೆಳವಣಿಗೆ ಹಾರ್ಮೋನ್‌ಗೆ ಕಾರಣವಾದ ಜೀನ್, ಕೆರಾಟಿನ್ ಅಥವಾ ಸಿಸ್ಟೀನ್ ಜೀನ್‌ಗಳನ್ನು ಕುಲಾಂತರಿ ಕುರಿಗಳಲ್ಲಿ ಸೃಷ್ಟಿಸಿ ಅವುಗಳಿಂದ ಉತ್ಕೃಷ್ಟ ಗುಣಮಟ್ಟದ, ಅಧಿಕ ಪ್ರಮಾಣದ ಉಣ್ಣೆ ಪಡೆಯಲಾಗಿದೆ.

ಕುಲಾಂತರಿ ಹಸು: ಬಲಿತ ಅಂಡವನ್ನು ಹಸುಗಳ ಪ್ರಜನನಾಂಗಗಳಿಂದ ಹೊರತೆಗೆದು, ಕೃತಕ ಪರಿಸರದಲ್ಲಿ (ಇನ್‌ವಿಟ್ರೋ ಕಂಡಿಷನ್) ಗಂಡು ಹಸುವಿನ ವೀರ್ಯಾಣುಗಳಿಂದ ಗರ್ಭಾಂಕುರಗೊಳಿಸುವರು. ಗರ್ಭಾಂಕುರಗೊಳಿಸಿದ ಅಂಡಾಣುಗಳನ್ನು ಸೆಂಟ್ರಿಫ್ಯೂಜ್ ಮಾಡಿ, ಅಂಡಾಣುವಿನ ಭಂಡಾರ ಒಂದು ತುದಿಯಲ್ಲಿ ನಿಲ್ಲುವಂತೆ ಮಾಡುವರು. ಈ ಅಂಡಾಣುವಿಗೆ ಉದ್ದೇಶಿತ ಜೀನ್‌ನ್ನು ವೀರ್ಯಾಣುವಿನ ಪ್ರೋನ್ಯೂಕ್ಲಿಯಸ್‌ಗೆ ಮೈಕ್ರೊಇಂಜೆಕ್ಷನ್ ಮೂಲಕ ಸೇರಿಸಲಾಗುವುದು. ಅಂಡಾಣು ಬ್ಲಾಸ್ಟೋಸಿಸ್ಟ್ ಹಂತದವರೆಗೆ ಬೆಳೆದ ಅನಂತರ ಈ ಭ್ರೂಣವನ್ನು ಆರೋಗ್ಯವಂತ ಹಸುವಿನ ಗರ್ಭಾಶಯಕ್ಕೆ ಸೇರಿಸಲಾಗುವುದು. ಗರ್ಭಾಶಯದಲ್ಲಿ ಬೆಳೆದ ಭ್ರೂಣವು ಕುಲಾಂತರಿ ಹಸುವಿನ ಮರಿಯಾಗಿ ಜನಿಸುವುದು. ಈ ವಿಧಾನದಿಂದ ಕೆ–ಕೇಸಿನ್ ಪ್ರೊಟೀನ್ ಹೆಚ್ಚಿಗೆ ಇರುವ ಹಾಲನ್ನು ಉತ್ಪಾದಿಸಬಹುದು. ಈ ಹಾಲಿನಿಂದ ಉತ್ತಮ ಗುಣಮಟ್ಟದ ಚೀಸ್ ತಯಾರಿಸಬಹುದು. ಇದೇ ರೀತಿ ಲ್ಯಾಕ್ಟೋಸ್ ಅಸಹಿಷ್ಣುಗಳಿಗೆ ನೀಡುವ ಕಡಿಮೆ ಲ್ಯಾಕ್ಟೋಸ್ ಉಳ್ಳ ಹಾಲನ್ನು ಉತ್ಪಾದಿಸುವ ಕುಲಾಂತರಿ ಹಸುಗಳ ಅಭಿವೃದ್ಧಿಯೂ ನಡೆದಿದೆ.

ಕುಲಾಂತರಿ ಮೊಲ: ಕುಲಾಂತರಿ ಮೊಲಗಳನ್ನು ಇಂಟಲ್ಯೂಕಿನ್–II ಉತ್ಪಾದನೆಗೆ ಸೃಷ್ಟಿಮಾಡಲಾಗಿದೆ. ಮಾನವನ ದೇಹದಲ್ಲಿ ಉತ್ಪತ್ತಿಯಾಗುವ ಇಂಟರ್–ಲ್ಯೂಕಿನ್–II ಕ್ಕೆ ಕಾರಣವಾದ ಜೀನ್‌ನ್ನು ಬೀಟಾ–ಕೇಸಿನ್ ಪ್ರಮೋಟರ್‌ಗೆ ಜೊತೆಗೂಡಿಸಿ ಮೊಲದ ಯುಗ್ಮಜದಲ್ಲಿ ಸೇರಿಸಲಾಗುವುದು. ಈ ಯುಗ್ಮಜವನ್ನು ಆರೋಗ್ಯವಂತ ಹೆಣ್ಣುಮೊಲದ ಗರ್ಭಾಶಯಕ್ಕೆ ಸೇರಿಸಲಾಗುವುದು. ಇದರಿಂದ ಜನಿಸಿದ ಕುಲಾಂತರಿ ಮೊಲಗಳು ನೀಡುವ ಹಾಲಿನಲ್ಲಿ ಭಾರಿ ಪ್ರಮಾಣದ ಇಂಟರ್‌ಲ್ಯೂಕಿನ್– II ಇರುತ್ತದೆ. ಇಂಟರ್ ಲ್ಯೂಕಿನ್–II ಬೇರ್ಪಡಿಸಿ, ಶುದ್ಧೀಕರಿಸಿ, ಗಂತಿ ರೋಗ (ಕ್ಯಾನ್ಸರ್) ಚಿಕಿತ್ಸೆಗೆ ಬಳಸಲಾಗುವುದು. ಇದೇ ರೀತಿ ಬೆಳವಣಿಗೆ ಹಾರ್ಮೋನ್ ಇರುವ ಕುಲಾಂತರಿ ಮೊಲವನ್ನು ಅಭಿವೃದ್ಧಿಪಡಿಸಿ ಅದರಿಂದ ಹೆಚ್ಚಿನ ಪ್ರಮಾಣದಲ್ಲಿ ಉತ್ಕೃಷ್ಟವಾದ ಮಾಂಸವನ್ನು ಪಡೆಯಲಾಗಿದೆ.

ಕುಲಾಂತರಿ ಇಲಿ: 1980 ರಲ್ಲಿ ಮೊಟ್ಟಮೊದಲು ಕುಲಾಂತರಿ ಇಲಿಯ ಸೃಷ್ಟಿಯಾಯಿತು. ಉದ್ದೇಶಿತ ಜೀನ್‌ನ್ನು ಯುಗ್ಮಜದಲ್ಲಿನ ಗಂಡು ಇಲಿಯ ಪ್ರೋನ್ಯೂಕ್ಲಿಯಸ್‌ಗೆ ರಿಟ್ರೋವೈರಸ್ ಮುಖಾಂತರ ಸೇರಿಸುವರು. ಇದರಿಂದ ಉತ್ಪತ್ತಿಯಾಗುವ ರಿಕಾಂಬಿನೆಂಟ್ ಡಿಎನ್‌ಎ ಅನ್ನು 8 ಕೋಶಗಳ ಹಂತದ ಭ್ರೂಣಕ್ಕೆ ಸೇರಿಸಿ, ಈ ಭ್ರೂಣವನ್ನು ಆರೋಗ್ಯವಂತ ಹೆಣ್ಣು ಇಲಿಯ ಗರ್ಭಾಶಯಕ್ಕೆ ಸೇರಿಸಲಾಗುವುದು. ಇದರಿಂದ ಕುಲಾಂತರಿ ಇಲಿಯ ಸೃಷ್ಟಿಯಾಯಿತು. ಇದೇ ರೀತಿ, 1982 ರಲ್ಲಿ ರಾಲ್ಫ ಬ್ರಿನ್‌ಸ್ಟರ್ ಬೆಳೆವಣಿಗೆ ಹಾರ್ಮೋನ್‌ಗೆ ಕಾರಣವಾದ ಜೀನ್ ಸೇರಿಸಿ ಕುಲಾಂತರಿ ಇಲಿಯನ್ನು ಅಭಿವೃದ್ಧಿಗೊಳಿಸಿದ. ಈ ಇಲಿಗಳನ್ನು ಸೂಪರ್ ಮೌಸ್ ಎಂದು ಕರೆಯಲಾಯಿತು. ಕಾರಣ, ಸಾಮಾನ್ಯವಾಗಿ ಜನಿಸುವ ಇಲಿಗಳ ತೂಕ 29 ಗ್ರಾಂ ಆದರೆ ಸೂಪರ್ ಮೌಸ್‌ಗಳ ತೂಕ 40 ಗ್ರಾಂ.

ಕುಲಾಂತರಿ ಇಲಿಗಳನ್ನು ಮಾನವನಿಗೆ ಬರುವ ಏಡ್ಸ್, ಸಕ್ಕರೆ ಕಾಯಿಲೆ, ಗಂತಿ ರೋಗ ಮತ್ತು ರೋಗನಿರೋಧಕ ಶಕ್ತಿ ಕುಂದಿಸುವ ಖಾಯಿಲೆಗಳ ಮಾದರಿ ಅಧ್ಯಯನಕ್ಕೆ ಬಳಸಲಾಗುತ್ತದೆ. ಇವುಗಳನ್ನು ಈ ಮಾರಕ ಖಾಯಿಲೆಗಳ ನಿಯಂತ್ರಣಕ್ಕೆ ಬಳಸುವ ಔಷಧಗಳನ್ನು ಪರೀಕ್ಷಿಸಲು ಬಳಸಲಾಗುತ್ತಿದೆ. ಮಾನವನಿಗೆ ಬೇಕಾಗುವ ಅಮೂಲ್ಯ ಪ್ರೊಟೀನ್‌ಗಳ ಉತ್ಪಾದನೆಯಲ್ಲಿ ಸಹ ಕುಲಾಂತರಿ ಇಲಿಗಳ ಬಳಕೆ ಇದೆ.

ಕುಲಾಂತರಿ ಕೋತಿ: ಅಮೇರಿಕದ ಒರೆಗಾನ್ ಪ್ರಾಂತೀಯ ವಾನರ ಸಂಶೋಧನಾ ಕೇಂದ್ರದಲ್ಲಿ ವಿಜ್ಞಾನಿಗಳು ಅಂಬಲಿ ಮೀನಿನ ಡಿಎನ್‌ಎ ಯಿಂದ ಹಸಿರು ಮಿನುಗಿಸುವ ಜೀನ್ ಹೊರತೆಗೆದು, ನಿರುಪದ್ರವಿ ವೈರಾಣುವಿಗೆ ಸೇರಿಸಿ, ನಂತರ ಈ ವೈರಾಣುವನ್ನು ಕೋತಿಯ ಅಂಡಾಣುವಿಗೆ ಸೇರಿಸಿದರು. ಇದರ ಹೆಸರು ಆ್ಯಂಡಿ. ಇದರ ಉದ್ದೇಶ, ದೇಹವನ್ನು ಹಸಿರು ಬೆಳಕಿನಿಂದ ಮಿನುಗಿಸುವಂತೆ ಮಾಡಿ, ರೋಗಗಳಿರುವ ಬಗ್ಗೆ ಪತ್ತೆ ಹಚ್ಚಿ, ಸರಿಯಾದ ಚಿಕಿತ್ಸೆ ನೀಡುವುದು.

ಕುಲಾಂತರಿ ಪಕ್ಷಿಗಳು: ಇದು ಕೋಳಿಗಳಲ್ಲಿ ಹೆಚ್ಚು ಪ್ರಚಲಿತ. ಆಗತಾನೆ ಇಟ್ಟ ಮೊಟ್ಟೆಯಿಂದ ಕೆಲವು ಬ್ಲಾಸ್ಟೊಸೈಟ್‌ಗಳನ್ನು ಬೇರ್ಪಡಿಸಿ, ಉದ್ದೇಶಿತ ತಳಿಗುಣಗಳನ್ನು ಲಿಪೊಫೆಕ್ಸನ್ ಮೂಲಕ ಸೇರಿಸಿ, ಸಾಕಾರಗೊಳಿಸುವರು. ಅನಂತರ ಬ್ಲಾಸ್ಟೊಸೈಟ್‌ಗಳನ್ನು ವಿಕಿರಣತೆಗೊಳಪಟ್ಟ ಅಂಡಾಣುವಿನ ಬ್ಲಾಸ್ಟೋಸೀಲ್‌ಗೆ ವರ್ಗಾಯಿಸಲಾಗುವುದು. ಇದರಿಂದ ಕುಲಾಂತರಿ ಕೋಳಿಗಳು ಜನಿಸುವುವು. ಈ ಕೋಳಿಗಳು ಏವಿಯನ್ ಲ್ಯೂಕೋಸಿಸ್ ವೈರಾಣು ರೋಗದ ನಿರೋಧಕ ಶಕ್ತಿ ಹೊಂದಿವೆ. ಇದೇ ರೀತಿ ಅತಿ ಶೀಘ್ರವಾಗಿ ಬೆಳೆಯುವ ಕುಲಾಂತರಿ ಕೋಳಿಗಳನ್ನೂ ಅಭಿವೃದ್ಧಿಗೊಳಿಸಲಾಗಿದೆ. ಮಾನವನ ದೇಹದಲ್ಲಿ ಉತ್ಪಾದಿಸುವ ಬೆಳವಣಿಗೆ ಹಾರ್ಮೋನ್‌ನ ಜೀನ್‌ನ್ನು ಹೊಂದಿರುವ ಕುಲಾಂತರಿ ಕೋಳಿಗಳನ್ನು ಸೃಷ್ಟಿಸಲಾಗಿದೆ. ಈ ಕೋಳಿಗಳು ಶೀಘ್ರವಾಗಿ ಬೆಳೆದು, ಹೆಚ್ಚು ಮಾಂಸ ನೀಡುತ್ತವೆ. ಈ ಮಾಂಸವು ರುಚಿಕರವಾಗಿದ್ದು, ಕಡಿಮೆ ಕೊಬ್ಬು ಮತ್ತು ಕೊಲೆಸ್ಟಿರಾಲ್ ಹೊಂದಿದೆ.

ಕುಲಾಂತರಿ ಮೀನುಗಳು: ಉದ್ದೇಶಿತ ತಳಿಗುಣಗಳನ್ನು ನಾಲ್ಕು ಕೋಶಗಳ ಹಂತದಲ್ಲಿರುವ ಮೀನಿನ ಯುಗ್ಮಜಕ್ಕೆ ಮೈಕ್ರೊಇಂಜೆಕ್ಷನ್ ಮೂಲಕ ಸೇರಿಸಿ, ಉಷ್ಣಾಂಶ ನಿಯಂತ್ರಣಕ್ಕೊಳಪಟ್ಟ ನೀರಿನ ತೊಟ್ಟಿಯಲ್ಲಿ ಭ್ರೂಣವನ್ನು ಬೆಳೆಸಿ, ಕುಲಾಂತರಿ ಮೀನುಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಉದಾ : ಕುಲಾಂತರಿ ಕಾರ್ಪ್, ಕ್ಯಾಟ್ ಫಿಶ್, ಸಾಲ್ಮನ್, ಟಲಪಿಯ ಮೀನುಗಳು.

ಮಾನವನ ದೇಹದಲ್ಲಿರುವ ಬೆಳವಣಿಗೆ ಹಾರ್ಮೋನ್‌ಗೆ ಕಾರಣವಾದ ಜೀನ್‌ನ್ನು ಬೆಳೆಯುತ್ತಿರುವ ಮೀನಿನ ಭ್ರೂಣಕ್ಕೆ ಸೇರಿಸಿ, ಕುಲಾಂತರಿ ಗೋಲ್ಡ್ ಮೀನು ಅಭಿವೃದ್ಧಿಪಡಿಸಲಾಗಿದೆ. ಇದರ ಬೆಳವಣಿಗೆ ಶೀಘ್ರ. ಇದೇ ರೀತಿ, ಆಂಟಿಫ್ರೀಜ್

ಪ್ರೊಟೀನ್ (ಎಎಫ್‌ಪಿ) ಗೆ ಕಾರಣವಾದ ಜೀನ್‌ನ್ನು ಮೀನಿನ ಭ್ರೂಣಕ್ಕೆ ಸೇರಿಸಿ ಕುಲಾಂತರಿ ಮೀನುಗಳನ್ನು ಅಭಿವೃದ್ಧಿಸಿದ್ದಾರೆ. ಈ ಮೀನುಗಳು ಅತಿ ಕಡಿಮೆ ಉಷ್ಣಾಂಶವನ್ನು ತಡೆದುಕೊಳ್ಳಬಲ್ಲವು. ಉದಾ : ಸಾಲ್ಮನ್ ಮೀನುಗಳು.

ಕುಲಾಂತರಿ ಸೊಳ್ಳೆಗಳು: ಸೊಳ್ಳೆ ಉತ್ಪಾದಿಸುವ ಎಂಡೊಟಾಕ್ಸಿನ್ ಪ್ರೊಟೀನ್‌ಗೆ ಕಾರಣವಾದ ಜೀನ್‌ನ್ನು ಪ್ಲಾಸ್ಮೋಡಿಯಂ ವೈವಾಕ್ಸ್ ಸೊಳ್ಳೆಯ ಯುಗ್ಮಜಕ್ಕೆ ಮೈಕ್ರೊಇಂಜೆಕ್ಷನ್ ಮೂಲಕ ಸೇರಿಸುವರು. ಇದರಿಂದ ಕುಲಾಂತರಿ ಸೊಳ್ಳೆಗಳ ಅಭಿವೃದ್ಧಿ ಮಾಡುವರು. ಈ ಸೊಳ್ಳೆಗಳ ಲಾಲಾರಸದಲ್ಲಿ ಮಲೇರಿಯ ರೋಗಾಣುಗಳು ಉತ್ಪಾದಿಸುವ ವಿಷ (ಟಾಕ್ಸಿನ್) ಇರುತ್ತದೆ. ಕುಲಾಂತರಿ ಸೊಳ್ಳೆಗಳು ಮನುಷ್ಯನ ರಕ್ತ ಹೀರುವಾಗ ಲಾಲಾರಸದಲ್ಲಿರುವ ಎಂಡೋಟಾಕ್ಸಿನ್ ರಕ್ತಕ್ಕೆ ಸೇರುವುದು. ಅನಂತರ ಮಾನವನ ದೇಹದಲ್ಲಿ ರೋಗನಿರೋಧಕ ಕಾರ್ಯನಿರ್ವಹಿಸುವ ವ್ಯವಸ್ಥೆಯು ಮಲೇರಿಯ ರೋಗಾಣು ವಿರುದ್ಧ ಹೋರಾಡುವ ಪ್ರತಿರೋಧಕಗಳನ್ನು (ಆಂಟಿಬಾಡೀಸ್) ಉತ್ಪತ್ತಿ ಮಾಡುತ್ತದೆ. ಇದರಿಂದ ಮಲೇರಿಯ ರೋಗಾಣುಗಳು ನಾಶವಾಗಿ, ವ್ಯಕ್ತಿ ಮಲೇರಿಯ ರೋಗಕ್ಕೆ ತುತ್ತಾಗುವುದಿಲ್ಲ. ಇದು ಮಲೇರಿಯ ರೋಗದ ನಿವಾರಣೆಗೆ ಸಹಾಯಕವಾಗಿದೆ. ಇದೇ ರೀತಿ, ಸೊಳ್ಳೆಗಳಿಂದ ಹರಡುವ ವಿವಿಧ ರೋಗಾಣುಗಳಿಂದ ಬರುವ ರೋಗಗಳ ನಿಯಂತ್ರಣ ಮಾಡಬಹುದು.

ಈ ರೀತಿ ಮಾನವನಿಗೆ ಅನೇಕ ರೀತಿಯಲ್ಲಿ ಕುಲಾಂತರಿ ಪ್ರಾಣಿಗಳು ಉಪಯುಕ್ತವಾಗಿವೆ. ರೋಗಮುಕ್ತ ಜೀವನ ನಡೆಸಲು, ಪೌಷ್ಟಿಕಾಂಶಯುಕ್ತ ಮಾಂಸದ ಉತ್ಪಾದನೆಗೆ, ಅಧಿಕ ಪ್ರೊಟೀನ್‌ಯುಕ್ತ ಹಾಲಿನ ಉತ್ಪಾದನೆಗೆ ಕುಲಾಂತರಿ ಪ್ರಾಣಿಗಳ ಬಳಕೆ ತುಂಬಾ ಪ್ರಚಲಿತದಲ್ಲಿದೆ. (ಬಿ.ಎಸ್.)

**ಕುಲುಕು ಮೆಲುಕಿನ ಬಾತು:** ಪಕ್ಷಿವರ್ಗದ ಆನ್ಸೆರಿಫಾರ್ಮಿಸ್ ಗಣದ ಅನಾಟಿಡೆ ಕುಟುಂಬಕ್ಕೆ ಸೇರಿದ ಡ್ಯಾಫಿಲ ಅಕ್ಯೂಟ ಅಥವಾ ಅನಾಸ್ ಅಕ್ಯೂಟ ಎಂಬ ವೈಜ್ಞಾನಿಕ ಹೆಸರಿನ ಹಕ್ಕಿ (ಪಿನ್ ಟೇಲ್). ಇದರ ಬಾಲದಲ್ಲಿನ ಮಧ್ಯದ ಗರಿಗಳು ಬಲು ಉದ್ದ ಹಾಗು ಚೂಪಾಗಿದ್ದು ನೀರಿನಲ್ಲಿ ಈಜುವಾಗ ಕುಲುಕಾಡುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಉತ್ತರ ಅಮೇರಿಕ, ಸಿಂಹಳ, ಭಾರತ, ಪನಾಮ ಮುಂತಾದೆಡೆಗಳಲ್ಲಿ ಸಾಮಾನ್ಯವಾಗಿ ಕಾಣಬರುತ್ತದೆ. ಬಾತು ಕೋಳಿಯನ್ನು ಹೋಲುತ್ತದೆ. ಇದರ ಉದ್ದ ಸುಮಾರು 0.75–0.9 ಮೀ. ಗಂಡುಹಕ್ಕಿಗೆ ಆಲಿವ್–ಕಂದು ಬಣ್ಣದ ಕತ್ತು ಮತ್ತು ತಲೆ, ಬೂದಿ ಬಣ್ಣದ ಬೆನ್ನುಭಾಗ ಹಾಗು ಬಿಳಿಯ ಹೊಟ್ಟೆಭಾಗ ಇವೆ. ಹೊಟ್ಟೆಭಾಗದ ಬಿಳಿಯ ಬಣ್ಣ ಕತ್ತಿನ ಎರಡು ಪಕ್ಕಗಳಲ್ಲಿ ವಿಸ್ತರಿಸಿದೆ. ಹೆಣ್ಣು ಹಕ್ಕಿ ಮಾಸಲು ಕಂದುಬಣ್ಣದ್ದು. ಗಂಡು ಸಿಳ್ಳು ಹಾಕುವಂತೆ ಕೂಗುತ್ತದೆ. ಇದು ಬಲು ರುಚಿಯಾದ ಆಹಾರವೆಂದು ಹೆಸರಾಗಿರುವುದರಿಂದ ಈ ಹಕ್ಕಿಗೆ ಬೇಡಿಕೆಯಿದೆ.



ಕಲುಕು ಮೆಲುಕಿನ ಬಾತು

ನೆಲದ ಮೇಲೆ ಹುಲ್ಲುಗಳ ಮಧ್ಯ ತೋಡಿದ ಗುಂಡಿಯೇ ಇದರ ಗೂಡು. ಇಲ್ಲಿ 7 ರಿಂದ 9 ಮೊಟ್ಟೆಗಳನ್ನಿಟ್ಟು ಹೆಣ್ಣು ಕಾವು ಕೊಡುತ್ತದೆ. ಗಂಡಿನ ಕೆಲಸ ಇವಕ್ಕೆ ರಕ್ಷಣೆ ಒದಗಿಸುವುದು. 22 ರಿಂದ 23 ದಿನಗಳಲ್ಲಿ ಮೊಟ್ಟೆಯೊಡೆದು ಮರಿಗಳು ಹೊರಬರುತ್ತವೆ. ಸ್ವಲ್ಪ ಕಾಲದಲ್ಲಿಯೇ ಇವುಗಳನ್ನು ಆಹಾರಕ್ಕೋಸ್ಕರ ತಂದೆ, ತಾಯಿ ಹಕ್ಕಿಗಳು ನೀರಿನೆಡೆಗೆ ಕರೆದುಕೊಂಡು ಹೋಗುತ್ತವೆ. (ಎಲ್.ಎಸ್.ಜಿ.)

**ಕುಷ್ಠ:** ಮೈಕ್ರೊಬ್ಯಾಕ್ಟೀರಿಯ ಲೆಪ್ರೇ ಎಂಬ ಹೆಸರಿನ ಆಮ್ಲಸ್ಥಾಯಿ (ಆಸಿಡ್–ಫಾಸ್ಟ್) ದಂಡಾಣು ಜೀವಿಗಳಿಂದ (ಬ್ಯಾಸಿಲೈ) ಹರಡುವ ತೀವ್ರವ್ಯಾಧಿ (ಲೆಪ್ರಸಿ). ಹ್ಯಾನ್ಸನ್ನನ ವ್ಯಾಧಿ ಪರ್ಯಾಯನಾಮ. ರೋಗ ಗ್ರಸ್ತ ಭಾಗಗಳು ಮುಖ್ಯವಾಗಿ ಚರ್ಮ, ಕಣ್ಣುಗಳು, ಮೂಗು ಮತ್ತು ಗಂಟಲಿನ ಲೋಳೆಪೊರೆಗಳು, ಕೆಲವು ಹೊರವಲಯದ ನರಗಳು ಮತ್ತು ವೃಷಣಗಳು. ರೋಗಿಯೊಡನೆ ನಿಕಟ ದೀರ್ಘಕಾಲಿಕ ಸಂಪರ್ಕವಿದ್ದಾಗ ಕುಷ್ಠರೋಗ ಸಾಂಕ್ರಾಮಿಕವೂ ಹೌದು.

ಇತಿಹಾಸ : ಕುಷ್ಠರೋಗ ಬಹು ಪುರಾತನ ಕಾಲದಿಂದ ಇರುವ ರೋಗ. ಉಷ್ಣವಲಯದಲ್ಲಿ ಇದರ ವ್ಯಾಪ್ತಿ ಹಾಗೂ ತೀವ್ರತೆ ಹೆಚ್ಚು. ಇದು ಹೇಗೆ ಅಂಕುರಿಸಿತು. ಹೇಗೆ ಹರಡಿತು–ಎಂಬುದು ಇನ್ನೂ ಊಹೆಯಾಗಿಯೇ ಇದೆ. ಇದು ಬಹುಶಃ ಆಫ್ರಿಕ ದೇಶದಲ್ಲಿ ಅಂಕುರಿಸಿ ಭಾರತ ಚೀನಗಳಿಗೂ ಈಜಿಪ್ಟಿನ ಮಾರ್ಗವಾಗಿ ಯೂರೋಪಿಗೂ, ಅನಂತರ ಅಮೆರಿಕ ದೇಶಗಳಿಗೂ ಹರಡಿರಬೇಕು. ಇಷ್ಟು ದೇಶಗಳನ್ನು ಈ ರೋಗ ಕಾಡಿದ್ದರೂ ಭಾರತದ ಪುರಾತನ ಗ್ರಂಥಗಳಲ್ಲಿ ಮಾತ್ರ ಇದರ ಬಗ್ಗೆ ವರದಿ ಉಂಟು. ೧ನೆಯ ಶತಮಾನದಲ್ಲಿದ್ದ ಚರಕ ಸುಶ್ರುತರ ಕಾವ್ಯಗಳಲ್ಲೂ ೬ನೆಯ ಶತಮಾನದ ವಾಗ್ಭಟ ಬರೆದ ಸಂಹಿತೆಗಳಲ್ಲಿಯೂ ರೋಗದ ಲಕ್ಷಣ ಮತ್ತು ಚಿಕಿತ್ಸಾ ಕ್ರಮಗಳನ್ನು ವಿವರಿಸಿದ್ದಾರೆ. ಕ್ರಿ.ಪೂ. ೫ನೆಯ ಶತಮಾನದ ಮನುಸ್ಮೃತಿ ಮತ್ತು ಅದಕ್ಕೂ ಹಿಂದಿನ ಅಥರ್ವವೇದದಲ್ಲಿ (ಕ್ರಿ.ಪೂ. ೧೧ನೆಯ ಶತಮಾನ) ಸಹ ಕುಷ್ಠರೋಗದ ಪ್ರಸ್ತಾಪ ಬಂದಿದೆ. ಚರಕ ಸಂಹಿತದಲ್ಲಿ ಕುಷ್ಠರೋಗದ ಏಳು ಭಿನ್ನರೂಪಗಳನ್ನು ವಿವರಿಸಲಾಗಿದೆ. ಇದರಲ್ಲಿ ಕೆಲವು ರೂಪಗಳು ಆಧುನಿಕ ವೈದ್ಯಶಾಸ್ತ್ರದ ರೀತ್ಯಾ ಕುಷ್ಠರೋಗ ಚಿಹ್ನೆಗಳಿಗೆ ಹೋಲುತ್ತವೆ. ಮತ್ತೆ ಕೆಲವು ಬೇರೆ ಚರ್ಮರೋಗವಿದ್ದರೂ ಇರಬಹುದೆಂಬ ಶಂಕೆ ಬರುವುದು. ಚರ್ಮದ ಅರಿವಳಿಕೆ, ಬಣ್ಣಗುಂದಿಕೆ. ಕುಸಿದ ಮೂಗು, ಅಂಗವಿಕಾರ ಮೊದಲಾದ ಈ ರೋಗದ ಲಕ್ಷಣಗಳನ್ನು ಮಾತ್ರವಲ್ಲ ಇದು ಅಂಟುರೋಗವೆಂಬುದನ್ನೂ ಆ ಕಾಲದಲ್ಲಿಯೇ ಜನ ಸ್ಪಷ್ಟವಾಗಿ ತಿಳಿದಿದ್ದರು. ಕುಷ್ಠರೋಗಿಯೊಬ್ಬ ಅಂದು ತನ್ನ ಸ್ವಂತ ಹಕ್ಕುಗಳನ್ನೂ ಮತಧರ್ಮವನ್ನೂ ಕಳೆದುಕೊಳ್ಳುತ್ತಿದ್ದ. ಆದರೆ ಜನಜೀವನದಿಂದ ಅವನನ್ನು ಬಹಿಷ್ಕರಿಸುತ್ತಿರಲಿಲ್ಲ, ಪಾಶ್ಚಾತ್ಯ ರಾಷ್ಟ್ರಗಳಲ್ಲಾದರೂ ಕುಷ್ಠರೋಗಿ ಜನ ಸಂಪರ್ಕಕ್ಕೆ ಬರುವಂತಿರಲಿಲ್ಲ ಅವನನ್ನು ಪ್ರತ್ಯೇಕಿಸುತ್ತಿದ್ದರು. ಮಧ್ಯಯುಗದ ಯೂರೋಪು ಕುಷ್ಠರೋಗ ಪೀಡಿತವಾಗಿತ್ತು. ಆದರೆ ಬರಬರುತ್ತ ಇದು ವಿಮುಕ್ತಗೊಂಡದ್ದು ಒಂದು ಸೋಜಿಗ.

ಕೈಗಾರಿಕಾ ಕ್ರಾಂತಿಯಿಂದ ಜೀವನಮಟ್ಟ ಏರಿದ್ದೂ ಕುಷ್ಠರೋಗಿಗಳನ್ನೆಲ್ಲ ಕಡ್ಡಾಯವಾಗಿ ಅದಕ್ಕಾಗಿಯೇ ಊರ ಹೊರಗಡೆ ಕಟ್ಟಿದ ಕುಷ್ಠಗೃಹಗಳಲ್ಲಿ ಬೇರೆಯಾಗಿಡುತ್ತಿದ್ದ ಪದ್ಧತಿಗಳೂ ಇದಕ್ಕೆ ಸಹಾಯಕವಾಗಿರಬೇಕು. ಪ್ರಪಂಚದಲ್ಲಿ ಇಂದು ೧೨ ದಶಲಕ್ಷಕ್ಕೂ ಕಡಿಮೆ ಇಲ್ಲದಷ್ಟು ಜನ ಕುಷ್ಠರೋಗಿಗಳಿದ್ದಾರೆಂದು ಅಂದಾಜು. ಭಾರತದಲ್ಲಿ ಸುಮಾರು ೨.೫ ದಶಲಕ್ಷ ರೋಗಿಗಳಿರಬಹುದು. ಕರ್ನಾಟಕದಲ್ಲಿ ಸುಮಾರು ೧.೫ ಲಕ್ಷ ಜನ ರೋಗಪೀಡಿತರಿರುವರೆಂದು ಅಂದಾಜಾಗಿದೆ. ಭಾರತದಲ್ಲಿ ಪ್ರತಿ ೧,೦೦೦ ಜನರಲ್ಲಿ ೬ ಮಂದಿ ಕುಷ್ಠರೋಗಗ್ರಸ್ತರಾಗಿರುವರೆಂದು ತಿಳಿದಿದೆ.

ಲಕ್ಷಣಗಳು : ಕುಷ್ಠ ಮಂದಗತಿಯ ಆದರೆ ತೀವ್ರಪರಿಣಾಮದ ಅಂಟುರೋಗ. ಈ ರೋಗದ ಸೋಂಕು ಒಬ್ಬರಿಂದ ಇನ್ನೊಬ್ಬರಿಗೆ ಹರಡಲು ದೀರ್ಘವಾದ ನಿಕಟ ದೈಹಿಕ ಸಂಪರ್ಕ ಪದೇ ಪದೇ ಅಗತ್ಯ. ಚರ್ಮದ ಮೇಲಿರಬಹುದಾದ ಗೀಚಲು ಇಲ್ಲವೇ ಗಾಯಗಳ ಮೂಲಕ ರೋಗದ ಜೀವಿಗಳು ದೇಹವನ್ನು ಸೇರುತ್ತವೆ. ಇದಾಗಿ ೨ ರಿಂದ ೫ ವರ್ಷಗಳ ವರೆಗೆ ರೋಗಲಕ್ಷಣಗಳು ಪ್ರಕಟಗೊಳ್ಳಲು ಕಾಲಾವಕಾಶ ಬೇಕು. ಈ ಕಾಲಾವಧಿಗೆ ಕುಮಲುವ ಕಾಲ ಎಂದು ಹೆಸರು. ಕುಷ್ಠರೋಗದ ಮೂಲ ಬದಲಾವಣೆ ಹೊರ ಮೈ ಚರ್ಮದ ನರಗಳಲ್ಲಿದ್ದು, ಅವುಗಳ ಹತೋಟಿಯಲ್ಲಿರುವ ಸ್ಪರ್ಶಜ್ಞಾನ ಚಲನ ಶಕ್ತಿಯ ವ್ಯತ್ಯಾಸಗಳೇ ಮುಖ್ಯ ತೋರಿಕೆಗಳು. ರೋಗದ ಮೊಟ್ಟಮೊದಲ ಅಂಗದ ಗಾಯ (ಲೀಶನ್) ಸಾಮಾನ್ಯವಾಗಿ ಅಸ್ಪಷ್ಟವಾಗಿರುವುದು. ಅನೇಕ ವೇಳೆ ಇದು ರೋಗಿಗೆ ಗೋಚರವಾಗದೆ ಇರಬಹುದು. ಸಾಮಾನ್ಯವಾಗಿ ಆರೋಗ್ಯ ಮೋಜಣಿಗಳಲ್ಲಿ ದೇಹಪರೀಕ್ಷೆ ಮಾಡಿದಾಗ ಇವು ಕಂಡು ಬರುವುದುಂಟು. ಒಂಟಿಯಾದ ಮಂದ ಪ್ರತಿಕ್ರಿಯೆಯ ಈ ಸಣ್ಣ ಮಚ್ಚೆಗಳು ದೇಹದ ಯಾವ ಭಾಗದ ಮೇಲಾದರೂ ಕಾಣಬಹುದು. ಮಚ್ಚೆಗಳ ಅಂಚೂ ಇರವೂ ಬಲುಮಸಕು. ರೋಗದ ಪ್ರಾರಂಭದಿಶೆಯನ್ನು ಅನಿಶ್ಚಿತ ಕುಷ್ಠ ಎನ್ನುತ್ತಾರೆ. ಇದರ ಮುಂದಿನ ಗತಿ ರೋಗಿಯ ನಿರೋಧಕ ಶಕ್ತಿಯ ಮಟ್ಟವನ್ನು ಅವಲಂಬಿಸಿದ್ದು. ಆ ಶಕ್ತಿ ಸಾಕಷ್ಟು ಇರುವವರಲ್ಲಿ ಅಸ್ಪಷ್ಟವಾದ ಮೊದಲ ಮಚ್ಚೆಗಳ ಅಂಚು ಮಂದವಾಗಿ, ಮಚ್ಚೆಯೂ ಮಂದವಾಗಿ, ಸ್ಪಷ್ಟವಾಗಿ ಕಾಣದಂತೆ ಬದಲಾಗುತ್ತದೆ. ಚರ್ಮದ ನರಗಳ ಅರಿವಳಿಕೆ ವ್ಯಕ್ತವಾಗುತ್ತದೆ. ಮಚ್ಚೆಗಳ ಚರ್ಮದ ಬಣ್ಣ ಪಕ್ಕದ ಚರ್ಮಕ್ಕಿಂತ ಮಂದ. ರೋಗದ ದಂಡಾಣುಗಳು ಇಂಥ ಮಚ್ಚೆಗಳಲ್ಲಿ ಹೆಚ್ಚಾಗಿರುವುದಿಲ್ಲ. ಆದ್ದರಿಂದ ಸಾಮಾನ್ಯ ಪರಿಕ್ಷಾಕ್ರಮಗಳಿಂದ ದಂಡಾಣುಗಳನ್ನು ಕುಷ್ಠರೋಗದ ಮಚ್ಚೆಗಳಿಂದ ಪ್ರತ್ಯೇಕಿಸಿ ತೋರಿಸಲಾಗುವುದಿಲ್ಲ. ರೋಗದ ಈ ರೂಪ ಕೆಲವು ವೇಳೆ ತಾನಾಗಿ ಗುಣವಾಗುವುದು. ಚಿಕಿತ್ಸೆಯಿಂದ ಇದನ್ನು ಚೆನ್ನಾಗಿ ಗುಣಪಡಿಸಬಹುದು. ಕುಷ್ಠರೋಗದ ಇಂಥ ರೂಪಕ್ಕೆ ಕ್ಷಯಗತಿಯಂಥ ಕುಷ್ಠ ಎಂದು ಹೆಸರು. ಈ ರೋಗಕ್ಕೆ ಒಳಗಾದ ಊತಕಗಳ ರಚನೆ

ಕ್ಷಯಗಂತಿಯ ಸೂಕ್ಷ್ಮ ರಚನೆಗೆ ಹೋಲುವುದರಿಂದ ಈ ಹೆಸರು ಬಂದಿದೆ. ಭಾರತದಲ್ಲಿ ೮೦% ರೋಗ ಈ ರೂಪದ್ದು.

ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಮೊದಲ ಮಚ್ಚೆಗಳು ಅಸ್ಪಷ್ಟವಾಗಿದ್ದರೂ ಅವು ಇಡೀ ದೇಹವನ್ನು ಆವರಿಸಿ ಭಯಾನಕವಾಗಿ ಕಾಣುತ್ತವೆ. ಈ ರೂಪದಲ್ಲಿ ಚರ್ಮದ ಕಲೆಗಳಿಂದ ಸಾಮಾನ್ಯಪರೀಕ್ಷಾಕ್ರಮಗಳನ್ನು ಬಳಸಿ ಅತಿ ಸುಲಭವಾಗಿ ಕುಷ್ಠರೋಗದ ದಂಡಾಣುಗಳನ್ನು ಪ್ರತ್ಯೇಕಿಸಿ ತೋರಿಸಬಹುದು. ರೋಗಿಗೂ ಸಮಾಜಕ್ಕೂ ಅಪಾಯಕರವಾದ ರೂಪವಿದು. ಅಗೋಚರವಾದ  ಕಲೆಗಳು ರೋಗ ಮುಂದುವರಿದಂತೆ ರುಂಡ, ಮುಂಡ, ಕೈಕಾಲುಗಳ ಮೇಲೆ ಹರಡಿ ಅಂಗದ ಗಾಯ, ದಪ್ಪ ದಪ್ಪ ಗಂಟುಗಳು ಆಗುವುವು. ಮುಖದ ಚರ್ಮವೆಲ್ಲಾ ಅಂಗದ ಗಾಯದ ಒಳಪಸರಿಕೆಯಿಂದಲೂ ಗಂಟುಗಳಿಂದಲೂ ಮಂದವಾಗಿ ಸಿಂಹದ ಮುಖದಂತೆ ಕಾಣುವುದು. ಇಂಥ ಗಂಟುಗಳಲ್ಲಿ ಕುಷ್ಠ ದಂಡಾಣುಗಳು ತುಂಬಿರುವ ವಿಶಿಷ್ಟವಾದ ನೊರೆ ಜೀವಕಣಗಳಿರುತ್ತವೆ. ಆದ್ದರಿಂದ ಈ ತೆರನಾದ ರೋಗದ ರೂಪಕ್ಕೆ ಕುಷ್ಠಗತಿಯ ತೆರನ ಕುಷ್ಠ ಎಂದು ಹೆಸರು.

ಈ ಎರಡು ಪರಸ್ಪರ ವಿರುದ್ಧ ರೂಪಗಳಲ್ಲದೆ ಮಧ್ಯವರ್ತಿ ರೂಪ ಇದೆ. ಇದನ್ನು ದ್ವಿರೂಪಿ ಕುಷ್ಠ ಎನ್ನಬಹುದು. ಇಂಥ ರೋಗ ಪೀಡಿತನ ದೇಹದಲ್ಲಿ  ರೋಗದ ತೀವ್ರ ಮತ್ತು ಸೌಮ್ಯರೂಪದ ಲಕ್ಷಣಗಳು ಬೇರೆ ಬೇರೆ ಕಡೆಗಳಲ್ಲಿ ಕಾಣಬಹುದು. ಮತ್ತು ಕಾಲಕ್ರಮೇಣ ರೋಗಿಯ ನಿರೋಧಕ ಶಕ್ತಿಯ ಮಟ್ಟಕ್ಕೆ ಅನುಗುಣವಾಗಿ ಎರಡು ರೂಪಗಳಲ್ಲಿ ಯಾವುದಾದರೊಂದು ಕಡೆ ಸಾಗಬಹುದು. ನಿರೋಧಕಶಕ್ತಿ ಬದಲಾಯಿಸಿ ರೋಗದ ಲಕ್ಷಣಗಳು ಬದಲಾಗಬಹುದು. ತ್ರೀವವಾದ ನಿಗ್ರಹಣಶಕ್ತಿ  ಇರುವ ಕ್ಷಯಗಂತಿಯಂಥ ಕುಷ್ಠರೋಗಿಯ ನಿಗ್ರಹಣಶಕ್ತಿ ಕುಗ್ಗಿದಾಗಲೂ ಅಲ್ಲದೇ ಇಳಿಮುಖದ ಪ್ರತಿ ಕ್ರಿಯೆಯಿಂದಲೂ ರೋಗಿ ಕುಷ್ಠಗಂತಿತೆರನ ರೂಪಕ್ಕೆ ಮಾರ್ಪಾಡಾಗಬಹುದು. ಹಾಗೆಯೇ ಮೇಲೆ ಹೇಳಿದ ಗುಂಪಿನ ರೋಗಿಯಲ್ಲಿ ನಿರೋಧಶಕ್ತಿ ಹೆಚ್ಚಿ ತಿರುಗು ಪ್ರತಿಕ್ರಿಯೆಯಾಗಬಹುದು. ಈ ಎರಡು ಸಂದರ್ಭಗಳಲ್ಲಿ ಪ್ರತಿಕ್ರಿಯೆ ಒಂದೇ ರೀತಿಯದು – ಸ್ಥಳೀಯ ಲಕ್ಷಣಗಳಾದ ಚರ್ಮದ ಕೆಂಪೇರುವಿಕೆ. ಊತ ಮತ್ತು ನೋವು ಇರುತ್ತವೆ. ಸಾಮಾನ್ಯವಾಗಿ ಕುಷ್ಠಗಂತಿತೆರನ ಕುಷ್ಠದಲ್ಲಿ ಇನ್ನೂ ಎರಡು ರೀತಿಯ ಪ್ರತಿಕ್ರಿಯೆಗಳಾಗಬಹುದು. ಮೇಲಿನ ಎರಡು ಪ್ರತಿಕ್ರಿಯೆಗಳು ನಿರೋಧಶಕ್ತಿಯ ಏರಿಳಿತಗಳಿಂದಾದರೆ, ಇವು ದಂಡಾಣುಗಳ ಬದಲಾವಣೆಗಳಿಂದ ಆಗುವುವು. ಚಿಕಿತ್ಸೆಯಿಲ್ಲದ ರೋಗಿ ಅಥವಾ ರೋಗ ಮರುಕಳಿಸಿದವರಲ್ಲಿ ಹಿಡಿತಕ್ಕೆ ಸಿಕ್ಕದೆ ದಂಡಾಣುಗಳು ವೃದ್ಧಿಯಾಗಿ ಮೈ ಮೇಲೆ ಕಾಣುವ ಗಂಟುಗಳಿಗೆ ಉದ್ರೇಕಿತ ಕಿಗ್ಗಂಟುಗಳು ಎಂದು ಹೆಸರು. ಇದು ಒಂದು ತೆರನ ಪ್ರತಿಕ್ರಿಯೆ. ಎರಡನೆಯ ಪ್ರತಿಕ್ರಿಯೆ ಅತಿ ತೀವ್ರವಾದುದು. ಇದಕ್ಕೆ ಕೆಂಪು ಗಂಟು ಕುಷ್ಠಾಂದ ಎಂದು ಹೆಸರು. ಸ್ಥಳೀಯ ಅಂಗದ ಗಾಯಗಳು ಹೆಚ್ಚುವುವಲ್ಲದೆ ಇಡೀ ದೇಹಸ್ಥಿತಿ ಕಲಕಿ ಮೈನೋವು, ಜ್ವರ ಹೆಚ್ಚಾಗಿ ರೋಗಿ ತೆಗೆದುಕೊಳ್ಳುತ್ತಿದ್ದ ಔಷಧಿಗಳನ್ನು ನಿಲ್ಲಿಸಬೇಕಾಗಬಹುದು. ಈ ಪ್ರತಿಕ್ರಿಯೆ ಅಪೂರ್ವವಾಗಿ ಚಿಕಿತ್ಸೆ ಪಡೆಯದಿರುವವರಲ್ಲಿಯೂ ಬರಬಹುದು. ಇದಕ್ಕೆ ದಂಡಾಣುಗಳ ಮೇಲೆ ಡ್ಯಾಪಸೋನ್ ರಾಸಾಯನಿಕ ಮದ್ದುಗಳ ಪರಿಣಾಮವಾಗಿ ಅಥವಾ ಕೊಲ್ಲಲ್ಪಟ್ಟ ಮತ್ತು ಚೂರಾದ ದಂಡಾಣುಗಳಿಂದ ಬಿಡುಗಡೆಯಾದ ಪ್ರೋಟೀನ್ ವಸ್ತುಗಳು ದೇಹದ ಮೇಲೆ ಬೀರುವ ಪ್ರಭಾವವೇ ಕಾರಣ.

ಚರ್ಮದ ಅಂಗದ ಗಾಯಗಳ ಜೊತೆ ಹೊರ ಮೈನರಗಳ ಅಂಗದ ಗಾಯಗಳಿಂದ ರೋಗದ ಚಿಹ್ನೆಗಳು ಕಾಣಬರುವುವು. ನರದುರಿತದಿಂದ ನರಗಳು ದಪ್ಪವಾಗುತ್ತವೆ. ಕೈಯಿಂದ ಮುಟ್ಟಲು ಸುಲಭವಾಗಿ ಸಿಕ್ಕುವ ಕತ್ತಿನ ಪಕ್ಕದ ಕಿವಿಯ ಹಿಂದಿನ ನರಗಳೂ ಮೊಣಕೈ ಹಿಂದಿನ ನರಗಳೂ ಮೊಣಕಾಲಿನ ಪಕ್ಕದಲ್ಲಿರುವ ನರಗಳೂ ದಪ್ಪವಾಗಿ ಮುಟ್ಟಿದರೆ ನೋಯುತ್ತವೆ. ನರಗಳ ಸುತ್ತಲಿರುವ ಶ್ವಾನ್ ಜೀವಕೋಶಗಳಲ್ಲಿ ಕುಷ್ಠ ದಂಡಾಣುಗಳು ಯಥೇಚ್ಛವಾಗಿ ಬೆಳೆಯುತ್ತವೆ. ಹೊರ ಮೈ ನರಗಳನ್ನು ರೋಗಾಣುಗಳು ಆಕ್ರಮಿಸುವುದರಿಂದ ಕುಷ್ಠ ರೋಗದ ಅತ್ಯಂತ ಕ್ರೂರ ಲಕ್ಷಣಗಳು ಪ್ರಕಟವಾಗುತ್ತವೆ. ಇದರಿಂದ ಎರಡು ಕೆಡುಕುಗಳಾಗಬಹುದು. ಚಾಲಕ ನರಗಳ ಅರನಾರಿಯಿಂದ ಚಾಲನ ಕ್ರಿಯೆ ಸ್ಥಗಿತಗೊಂಡು ರೋಗಿ ಬೀಳುಪಾದವನಾಗಬಹುದು. ಕಣ್ಣು ರೆಪ್ಪೆ ಆಡಿಸದಂತೆ ಕೆಳಬೀಳಬಹುದು, ಅಥವಾ ಪಂಜಗೈಯಾಗಬಹುದು. ಅರಿವಳಿಕೆಯಿಂದ ಚರ್ಮ  ಮತ್ತು ಲೋಳೆಪೊರೆಗಳಿಗೆ ಪೆಟ್ಟುಗಳು ತಾಕಿ ದುಷ್ಪರಿಣಾಮಗಳಾಗುತ್ತವೆ. ಇವುಗಳಲ್ಲಿ ಸಹಿಸಲಾಗದ ಕಷ್ಟತರದ್ದು ಪುಷ್ಟಿಗೇಡಿನ ಪಾದದ ಹುಣ್ಣು. ಅರಿವಳಿದ ಕರಿಗುಡ್ಡೆಯ ಜೊತೆಗೆ ಬೀಳುರೆಪ್ಪೆಯ ಪರಿಣಾಮದಿಂದ ಕಣ್ಣು ಸದಾ ಅಪಾಯಗಳಿಗೆ ಈಡಾಗಿ ಗಾಯಗೊಂಡು, ಕೀವು ಸೇರಿ, ತೂತಾಗಿ ಕೊನೆಗೆ ಕಣ್ಣು ಹಿಂಗಿ ಕುರುಡುತನ ಬರಬಹುದು. ೨೫% ರೋಗಿಗಳಿಗೆ ಇದು ಸಂಭವಿಸಬಹುದು. ಇದನ್ನು ತಪ್ಪಿಸಬೇಕಾದರೆ ಎಲ್ಲ ಕುಷ್ಠ ರೋಗಿಗಳ ಕಣ್ಣುಗಳನ್ನು ೬ ತಿಂಗಳಿಗೆ ಒಂದು ಸಲ ಪರೀಕ್ಷೆ ಮಾಡಿ ಸೂಕ್ತ ಚಿಕಿತ್ಸೆ ಕೊಡಬೇಕು. ಕುಷ್ಠ ದಂಡಾಣು ಆವರಿಸುವ ದೇಹದ ಬೇರೆ ಭಾಗಗಳು ಮೂಳೆ ಮತ್ತು ತರಡು ಬೀಜಗಳು. ಮೂಗಿನ ಕಂಬ ಕುಸಿಯುವುದು, ಹಸ್ತದ ಮೂಳೆಗಳು ಟೊಳ್ಳಾಗುವುದು. ಇದಕ್ಕೆ ನಿದರ್ಶನ. ಮುಂದುವರಿದ ಕುಷ್ಠಗಂತಿ ತೆರನ ಕುಷ್ಠದಲ್ಲಿ ದೇಹಾದ್ಯಂತ ರೋಗ ಹರಡಿದ ಸೂಚನೆಗಳಿವೆ. ಆದರೆ ಈ ರೋಗದ ಇತರ ರೂಪಗಳ'ಲ್ಲಿ ದೇಹದ ಕೆಲವೇ ಭಾಗಗಳಲ್ಲಿ ಚಿಹ್ನೆಗಳಿರುತ್ತವೆ. ಕುಷ್ಠ ದಂಡಾಣುಗಳು ದೇಹದ ತಂಪಾದ ಅಂಗಾಂಶಗಳನ್ನೇ ಆರಿಸಿಕೊಳ್ಳುವುವೆಂಬ ಸೂಚನೆಗಳಿವೆ. ಚರ್ಮ, ತರಡು, ಕಣ್ಣಿನ ಮುಂದಿನ ಅರ್ಧಭಾಗ, ಹೊರ ಮೈ ನರಗಳು, ಶ್ವಾಸನಾಳದ ಲೋಳೆಪೊರೆ – ಈ ಭಾಗಗಳಲ್ಲಿ ದೇಹದ ಉಷ್ಣತೆಯ ಮಟ್ಟ ತಗ್ಗಾಗಿರುತ್ತದೆ. ಚರ್ಮದಲ್ಲಿ ಕಡಿಮೆ ಉಷ್ಣತೆ ಇರುವ ಕಡೆ ನರಗಳು ಮೊದಲು ನಾಶವಾಗುವುದೆಂದು ತಿಳಿದು ಬಂದಿದೆ.

ರೋಗ ನಿದಾನ : ರೋಗ ತಗುಲಿದ ಮೇಲೆ ಚಿಹ್ನೆಗಳು ಕಾಣಿಸುವ ಮೊದಲು ಅಂದರೆ, ಕುಮಲುವ ಕಾಲದಲ್ಲಿ ರೋಗವನ್ನು  ಗುರುತಿಸಲಾಗುವುದಿಲ್ಲ. ಇದಕ್ಕೆ ಯಾವ ಸುಲಭ ಪ್ರಯೋಗ ಪರೀಕ್ಷೆಯೂ ಇಲ್ಲ. ಕುಷ್ಠ ರೋಗದ ಕಲೆಗಳು ಅನೇಕ ಚರ್ಮರೋಗಗಳನ್ನು ಹೋಲುತ್ತವೆ. ಸಂಶಯವಾದ ಕಲೆಗಳಿದ್ದರೆ ವೈದ್ಯರಿಂದ ಪರೀಕ್ಷೆ ಅಗತ್ಯ. ಚರ್ಮ ಮತ್ತು ಹೊರ ಮೈ ನರಗಳ ಪರೀಕ್ಷೆಗಳಿಂದ ವೈದ್ಯರು ರೋಗದ ಚಿಹ್ನೆಗಳನ್ನು ಗುರುತಿಸುತ್ತಾರೆ. ಚರ್ಮದ ಕಲೆಗಳಿಂದ ಊತಕದ ತಿರುಳನ್ನು ಚಾಕುವಿನಿಂದ ತೆಗೆದು ಸವರಿ ಬಣ್ಣ ಕೊಟ್ಟು ಪರೀಕ್ಷೆ ಮಾಡುವುದರಿಂದ ಸೂಕ್ಷ್ಮದರ್ಶಕದಲ್ಲಿ ಕುಷ್ಠ ದಂಡಾಣುಗಳನ್ನು ಕಂಡುಹಿಡಿಯಬಹುದು. ಕುಷ್ಠಗಂತಿ ತೆರನ ರೂಪದಲ್ಲಿ ದಂಡಾಣುಗಳು ಹೇರಳವಾಗಿ ಊತಕದ ಬಳಿತದಲ್ಲಿ ಕಂಡು ಬರುವುವು. ದ್ವಿರೂಪ ಕುಷ್ಠದಲ್ಲಿ ಇದನ್ನು ಒಮ್ಮೊಮ್ಮೆ ಕಾಣಬಹುದು. ಆದರೆ ಕ್ಷಯಗಂತಿಯಂಥ ರೂಪದಲ್ಲಿ ಪ್ರತಿಕ್ರಿಯೆ ಸಮಯಗಳಲ್ಲಲ್ಲದೆ ಬೇರೆ ಕಾಲದಲ್ಲಿ ಕಾಣವು.

ರೋಗದ ವರ್ಗೀಕರಣಕ್ಕೆ ಮತ್ತು ರೋಗದ ಮುನ್ನರಿಕೆಗೆ ಕುಷ್ಠಾಣುಸಾರ ಸಹಾಯಕ. ರೋಗನಿದಾನಕ್ಕೆ ಉಪಯೋಗವಲ್ಲ. ಕುಷ್ಠಗಂತಿಗಳನ್ನು ರೋಗಿಗಳಿಂದ ತೆಗೆದು ಅದರಿಂದ ತಯಾರಿಸಿದ ರಸವನ್ನು ಚರ್ಮಕ್ಕೆ ಚುಚ್ಚಿ ಚರ್ಮದ ಪ್ರತಿಕ್ರಿಯೆಯನ್ನು ನೋಡುತ್ತಾರೆ. ನಿಗ್ರಹಣಶಕ್ತಿ ಹೆಚ್ಚಿರುವ ಕುಷ್ಠರೋಗದ ರೂಪಗಳಲ್ಲಿ ಇದೊಂದು ಶಿಷ್ಟ ಪರೀಕ್ಷೆ. ನಿಗ್ರಹಣ ಶಕ್ತಿ ಇಲ್ಲದ ಕುಷ್ಠಗಂತಿ ತೆರನ ರೂಪದಲ್ಲಿ ಈ ಪರೀಕ್ಷೆ ತರವಲ್ಲ.

ಚಿಕಿತ್ಸೆ : ಹಿಂದೆ ಚಾಲಮೂಗ್ರ ಮತ್ತು ಹಿಡಿನೋಕಾರ್ಪಸ್ ಎಣ್ಣೆಗಳಿಂದ ತಯಾರಾದ ಔಷಧಿಗಳನ್ನು ಬಿಟ್ಟರೆ ಬೇರೆ ಯಾವ ಔಷಧಿಗಳೂ ಇರಲ್ಲಿಲ್ಲ. ಇವೂ ಅಷ್ಟು ಪ್ರಯೋಜನಕಾರಿಗಳಾಗಿರಲಿಲ್ಲ. ಇತ್ತೀಚೆಗೆ' ಬಳಕೆಯಲ್ಲಿರುವ ಡ್ಯಾಪ್‌ಸೋನ್ ಅತ್ಯುಪಯುಕ್ತವಾಗಿ ಕಂಡುಬಂದಿದೆ. ಈ ಸಣ್ಣ ಗುಳಿಗೆಗಳನ್ನು ನುಂಗಬಹುದು. ಬೆಲೆ ಸುಲಭ. ಕುಷ್ಠರೋಗದ ಔಷಧಿಗಳಿಗೆ ಇವೆರಡೂ ಮುಖ್ಯ ಗುಣಗಳು. ಡ್ಯಾಪ್‌ಸೋನನ್ನು ಪ್ರಾರಂಭಾವಸ್ಥೆಯಲ್ಲಿ  ಸೇವಿಸಿದರೆ ಆ ರೋಗಿ ತನ್ನ ಅಂಗವಿಕಾರವಾಗುವ ಮೊದಲೇ ಪೂರ್ಣವಾಗಿ ಗುಣ ಹೊಂದುವನು. ಸುಮಾರು ೬ ರಿಂದ ೧೨ ತಿಂಗಳ ಸೇವನೆಯಿಂದ ಅಂಟುರೋಗಿಗಳು ಅಂಟಿಲ್ಲದಂತೆ ಆಗುತ್ತಾರೆ. ರೋಗ ಮುಂದುವರಿದ ಮೇಲೆ ಚಿಕಿತ್ಸೆಯನ್ನು ಪ್ರಾರಂಭಿಸಿದರೆ ಅಂಗವಿಕಾರಗಳನ್ನು ಗುಣಪಡಿಸಲಾಗದು, ರೋಗ ಮಾತ್ರ ವಾಸಿಯಾಗಬಹುದು. ಈ ಔಷಧಿಯ ಉಪಯೋಗದಲ್ಲಿ ಕೆಲವು ಭಿನ್ನಾಭಿಪ್ರಾಯಗಳಿವೆ. ದಿನವಹಿ ಸೇವಿಸಬೇಕಾದ ಪರಿಮಾಣ ಎಷ್ಟು ಮತ್ತು ಸೇವನೆಯ ಕಾಲಾವಧಿ ಎಷ್ಟು ಎಂಬ ವಿಚಾರದಲ್ಲಿ ಒಮ್ಮತವಿಲ್ಲ. ವರ್ಷಗಳ ಹಿಂದೆ ಕೊಡುತ್ತಿದ್ದ ಪರಿಮಾಣಕ್ಕಿಂತ ಬಹು ಕಡಿಮೆ ಸಾಕು ಎನ್ನುವುದು ಈಚಿನ ಮತ. ಈ ಔಷಧಿಗಳನ್ನು ವೈದ್ಯರ ಸಲಹೆಯಂತೆ ಸೇವಿಸಬೇಕು. ಡ್ಯಾಪ್‌ಸೋನ್ ಚಿಕಿತ್ಸೆಯಲ್ಲಿ ಎರಡು ಮುಖ್ಯ ತೊಡಕುಗಳಿವೆ. ಕೆಲವು ವೇಳೆ ದಂಡಾಣುಗಳು ಈ ಔಷಧಿಗೆ ಪ್ರತಿರೋಧ (ರೆಸಿಸ್ಟೆನ್ಸ್) ಪಡೆಯಬಹುದು. ಅಂಥ ರೋಗಿಗಳಲ್ಲಿ ಬೇರೆ ಔಷಧಿ ಪ್ರಯೋಗ ಮಾಡಬೇಕಾಗಬಹುದು. ಮತ್ತೆ ಕೆಲವುವೇಳೆ ಅದರಲ್ಲೂ ಕುಷ್ಠಗಂತಿ ತೆರನ ರೂಪದಲ್ಲಿ ಆಗುವ ಕೆಂಪು ಗಂತಿ ಕುಷ್ಠಾಂದ ಪ್ರತಿಕ್ರಿಯೆಯನ್ನು ಹತೋಟಿಗೆ ತರುವುದು ಕಷ್ಟ. ಡ್ಯಾಪ್ಸೋನ್ ಪ್ರತಿರೋಧವಿರುವ ರೋಗಿಗಳಲ್ಲಿ ಉಪಯೋಗಿಸಬಹುದಾದ ತಯಾಂಬೂಟೋಸೋನ್, ತಯಾಸಿಟಾಮೈಡ್, ಇಟಿಸಲ್ ಮತ್ತು ಲ್ಯಾಮಪ್ರೀನ್ ಎಂಬ ಹೊಸ ಔಷಧಗಳಿವೆ. ಇವನ್ನೆಲ್ಲಾ ಡ್ಯಾಪ್‌ಸೋನ್ ಪ್ರತಿರೋಧದಲ್ಲಿ ಬದಲಿ ಔಷಧಿಗಳಾಗಿ ಉಪಯೋಗ ಮಾಡಬಹುದು. ಲ್ಯಾಮಪ್ರೀನ್ ಕೆಂಪುಗಂತಿ ಕುಷ್ಠಾಂದ ಪ್ರತಿಕ್ರಿಯೆ ಶಮನಕ್ಕೂ ಸಹಾಯಕ. ರೋಗದ ಪ್ರಾರಂಭದಲ್ಲಿ ಚಿಕಿತ್ಸೆ ಪಡೆಯುವವರಿಗೆ ಕಾಲು ಕೈ ಮತ್ತು ಮುಖದಲ್ಲಿ ಅಂಗವಿಕಾರಗಳಾಗುತ್ತವೆ. ಇಂಥ ರೋಗಿಗಳಿಗೆ ಶಸ್ತ್ರ ಚಿಕಿತ್ಸೆಯಿಂದ ಕೈ ಕಾಲುಗಳ ಬಳಕೆಯನ್ನು ತಕ್ಕಮಟ್ಟಿಗೆ ಮೊದಲ ಸ್ಥಿತಿಗೆ ತರಬಹುದು. ಮುಖದ ವಿಕಾರಗಳನ್ನು ಸರಿಪಡಿಸಬಹುದು. ಭೌತರೋಗ ಚಿಕಿತ್ಸೆಯಿಂದ ನಾಶವಾದ ನರಗಳಿಂದಾಗುವ ಪರಿಣಾಮಗಳನ್ನು ಸರಿಪಡಿಸಬಹುದು.

ಕುಷ್ಠರೋಗ ನಿವಾರಣೆ ಮತ್ತು ಹತೋಟಿ: ರೋಗ ಹರಡುವ ಮಾರ್ಗ ತಿಳಿಯದಾಗ ಅದರ ನಿವಾರಣೆ ಕಷ್ಟ. ಕುಷ್ಠರೋಗ ಹರಡುವ ಮಾರ್ಗ ನಿರ್ದಿಷ್ಟವಾಗಿ ಗೊತ್ತಿಲ್ಲ.

ಆದರೂ ಬೇರೆ ದಂಡಾಣುಜೀವಿಗಳಿಂದ ಮನುಷ್ಯರಲ್ಲಿ ಹರಡುವ ಕ್ಷಯರೋಗದ ನಿವಾರಣೆಯಲ್ಲಿ ಉಪಯುಕ್ತವಾದ ಮೂರು ಮಾರ್ಗಗಳನ್ನು ಇಲ್ಲಿಯೂ ಅನುಸರಿಸಬಹುದು. ೧. ಅಂಟುರೋಗಿಯನ್ನು ಬೇರೆಯಾಗಿಡುವುದು ಮತ್ತು ಚಿಕಿತ್ಸೆ : ೨. ಲಸಿಕೆ ಹಾಕುವುದರಿಂದ ರೋಗ ನಿಗ್ರಹಣ ಶಕ್ತಿಯನ್ನು ಹೆಚ್ಚಿಸುವುದು : ೩. ಔಷಧಿಗಳನ್ನು ಜನಸಾಮಾನ್ಯರಿಗೆ ಕೊಟ್ಟು ರೋಗವನ್ನು ಹತೋಟಿಗೆ ತರುವುದು.

ಇತರ ಸಾಂಕ್ರಾಮಿಕ ರೋಗಗಳೊಡನೆ ಹೋಲಿಸಿದಾಗ ಕುಷ್ಠರೋಗ ಅತಿ ಸುಲಭವಾಗಿ ಅಂಟುವುದಿಲ್ಲವಾದ್ದರಿಂದ ಈ ರೋಗಿಗಳನ್ನು ಬೇರೆ ಆಸ್ಪತ್ರೆಗಳಲ್ಲಿಡಬೇಕಿಲ್ಲ. ಹೊರ ರೋಗಿಗಳಾಗಿ ಚಿಕಿತ್ಸೆ ಮಾಡಬಹುದು. ತೀವ್ರ ಪ್ರತಿಕ್ರಿಯೆ, ಶಸ್ತ್ರ ಚಿಕಿತ್ಸೆ, ಉಲ್ಬಣಾವಸ್ಥೆಗಳಲ್ಲಿ ಮಾತ್ರ ಆಸ್ಪತ್ರೆಗಳಿಗೆ ಸೇರಿಸಬೇಕು. ಬಾಕಿಯಂತೆ ಮನೆಯಲ್ಲಿದ್ದುಕೊಂಡೇ ಚಿಕಿತ್ಸೆ ಪಡೆಯಬಹುದು. ಕ್ಷಯರೋಗ ನಿವಾರಣೆಗೆ ಉಪಯೋಗಮಾಡುವ ಬಿಸಿಜಿ ಲಸಿಕೆಯನ್ನು ಕುಷ್ಠರೋಗ ತಡೆಗಟ್ಟಲು ಉಪಯೋಗಿಸಲಾಗಿದೆ. ಇದರ ಉಪಯುಕ್ತತೆ ಸಂಪೂರ್ಣವಾಗಿ ತಿಳಿದಿಲ್ಲ. ಆದರೂ ಆಶಾದಾಯಕವಾಗಿದೆ. ಕುಷ್ಠರೋಗಿಯ ಮನೆಯಲ್ಲಿ ವಾಸಮಾಡುವವರಿಗೆ ಡ್ಯಾಪ್‌ಸೋನ್ ಗುಳಿಗೆಗಳನ್ನು ಕೊಡುವುದರಿಂದ ಅವರಿಗೆ ರೋಗ ತಗುಲದಂತೆ ಮಾಡಬಹುದು. ಪ್ರಾದೇಶಿಕ ವ್ಯಾಪ್ತಿಯಿರುವ ಕುಷ್ಠರೋಗ ಕೆಲವು ಹಳ್ಳಿಗಳಲ್ಲಿ ಹೆಚ್ಚಾಗಿರುತ್ತದೆ. ಅಂಥ ಹಳ್ಳಿ ಕೇರಿಗಳಲ್ಲಿರುವ ಎಲ್ಲರಿಗೂ ಮುನ್ನೆಚ್ಚರಿಕೆಯಾಗಿ ಒಂದೆರಡು ವರ್ಷಕಾಲ ಡ್ಯಾಪ್‌ಸೋನ್ ಕೊಡುವುದರಿಂದ ರೋಗಿಗಳಿಗೆ ಗುಣವಾಗುವುದಲ್ಲದೇ ಬೇರೆಯವರಿಗೆ ರೋಗ ಹರಡುವುದೂ ತಡೆದಂತಾಗುವುದು. ಈ ಪ್ರಯೋಗವನ್ನು ಕೆಲವು ದೇಶಗಳಲ್ಲಿ ಪ್ರಪಂಚದ ಆರೋಗ್ಯ ಸಂಸ್ಥೆ ನಡೆಸಿದೆ. ಭಾರತದಲ್ಲಿಯೂ ನಡೆಸಿದ ಪ್ರಯೋಗದಿಂದ ಇದು ರೋಗನಿವಾರಣೆಗೆ ಪರಿಣಾಮಕಾರಿ ಎಂದು ತಿಳಿದುಬಂದಿದೆ. ***

**ಕುಸುಮ ರೋಗ:** ಗಾಯವಾದಲ್ಲಿ ರಕ್ತ ಒಡನೆಯೇ ಹೆಪ್ಪುಗಟ್ಟದೆ ದೀರ್ಘಕಾಲ ರಕ್ತಸ್ರಾವವಾಗಲು ಕಾರಣವಾದ ಆನುವಂಶಿಕ ವ್ಯಾಧಿ (ಹೀಮೋಫೀಲಿಯ). ರಕ್ತದಲ್ಲಿ ಸ್ವಾಭಾವಿಕವಾಗಿ ಇರಬೇಕಾದ ಕುಸುಮರೋಗನಿವಾರಣಾ ಗ್ಲಾಬ್ಯುಲಿನ್ (ಏಂಟಿಹೀಮೋಫೀಲಿಕ್ ಗ್ಲಾಬ್ಯುಲಿನ್) ಕೊರತೆಯೇ ಈ ರೋಗದ ಕಾರಣ. ಇಂಥ ವಸ್ತು ಇರುವ ರಕ್ತವನ್ನು ಒಂದು ಗಾಜಿನ ಪಾತ್ರೆಯಲ್ಲಿ ಸಂಗ್ರಹಿಸಿ ಇಟ್ಟರೆ ಅದು ೫–೧೦ ಮಿನಿಟುಗಳ ಅಂತರದಲ್ಲಿ ಹೆಪ್ಪುಗಟ್ಟುತ್ತದೆ. ಕುಸುಮ ರೋಗಿಗಳಲ್ಲಿ ರಕ್ತ ಅನೇಕ ಗಂಟೆಗಳಾದರೂ ಹೆಪ್ಪುಗಟ್ಟದೆ ಇರಬಹುದು. ಆದರೂ ಆ ರಕ್ತದಲ್ಲಿ ತಕ್ಕಷ್ಟು ರಕ್ತದ ಸೂಕ್ಷ್ಮತರ ಕಣಗಳು ಇದ್ದಲ್ಲಿ, ಅಥವಾ ನೂತನ ರಕ್ತದ್ರವವನ್ನು ಸೇರಿಸಿದರೆ ಅದು ಹೆಪ್ಪುಗಟ್ಟುತ್ತದೆ. ಕುಸುಮ ರೋಗಿಗಳಲ್ಲಿ ರಕ್ತದ ಸೂಕ್ಷ್ಮತರ ಕಣಗಳು ಬಹಳ ನಿಧಾನವಾಗಿ ಛಿದ್ರಗೊಳ್ಳುವಂತೆ ಕಾಣುತ್ತದೆ. ರಕ್ತ ಸ್ವಾಭಾವಿಕವಾಗಿ ಹೆಪ್ಪುಗಟ್ಟಲಾರದ ಈ ಸ್ಥಿತಿ ಕುಸುಮರೋಗಿಗಳನ್ನು ಬಹಳ ಅನಾನುಕೂಲತೆಗೆ ಎಡೆಮಾಡಿದೆ. ಸಣ್ಣ ಪುಟ್ಟ ಕೊಯ್ತ ಅಥವಾ ಅಗೆಯುವುದು, ಕಾಲ್ಚೆಂಡು ಆಡುವಂಥ ಸಾಧಾರಣ ಚಟುವಟಿಕೆಯಲ್ಲಿ ಆಗುವ ಘಾತ ಸಹ ಹತೋಟಿಗೆ ಬಾರದೆ ಪ್ರಾಯಶಃ ದಿನಗಟ್ಟಲೆ ಆಗುವ ರಕ್ತಸ್ರಾವದಿಂದ ನರಳಬೇಕಾಗುತ್ತದೆ. ಇಂಥವರಲ್ಲಿ ಶಸ್ತ್ರವೈದ್ಯವಿರಲಿ, ದಂತನಿರ್ಮೂಲನ ಸಹ ಪ್ರಾಣಾಂತಕವೇ ಆಗಬಹುದು. ಓಡಾಡುವ ಹುಡುಗ ಬಿದ್ದು ಮಂಡಿ ಮೊಳಕೈಯನ್ನು ಒಡೆದುಕೊಂಡರೆ ಆ ಕೀಲುಗಳಲ್ಲಿ ಯಥೇಚ್ಛವಾಗಿ ರಕ್ತ ಸ್ರಾವವಾಗುತ್ತದೆ. ಶೈಶವದಿಂದ ಪದೇ ಪದೇ ಆಗುವ ಈ ರಕ್ತಸ್ರಾವ ಪ್ರಸಂಗಗಳು ಕೀಲುಗಳ ದೀರ್ಘಕಾಲಿಕ ಊತವನ್ನುಂಟು ಮಾಡಿ, ಪ್ರೌಢಾವಸ್ಥೆಗೆ ಬರುವುದರೊಳಗೆ ಈ ಪೀಡನೆಯ ಫಲಗಳು ಅಂಗವಿಕಲತೆಯಾಗಿ ಪರಿಣಮಿಸುತ್ತವೆ. ಕುಸುಮ ರೋಗಿಗಳು ಸಾಮಾನ್ಯವಾಗಿ ಅಲ್ಪಾಯುಗಳು. ಮಕ್ಕಳನ್ನು ಪಡೆಯುವಷ್ಟು ದೀರ್ಘ ವಯಸ್ಕರಾಗುವುದು ವಿರಳ. ಇದರ ಫಲವಾಗಿ ಮನೆತನದಿಂದ ಮತ್ತು ಸಮುದಾಯದಿಂದಲೇ ಈ ರೋಗ ಅದೃಶ್ಯವಾಗುವ ಸಂದರ್ಭ ಸದಾ ಇರುತ್ತದೆ. ಲೆಕ್ಕಾಚಾರ ಪ್ರಕಾರ ಕುಸುಮರೋಗ ಸಾಮಾನ್ಯವಾಗಿ ಮೂರು ತಲೆಮಾರುಗಳಲ್ಲಿ ನಿರ್ನಾಮವಾಗಬೇಕು. ಆದರೆ ಅನೇಕವೇಳೆ ಕುಸುಮರೋಗರಹಿತ ಮನೆತನಗಳಲ್ಲಿ ಇದ್ದಕಿದ್ದಂತೆ ಈ ರೋಗ ಮೂಡುವುದರಿಂದ ಜನತೆಯಲ್ಲಿ ಈ ರೋಗದ ಮರುಸೃಷ್ಟಿ ಆಗುತ್ತಲೇ ಇದೆ. ಕುಸುಮರೋಗದ ಈ ಹೊಸ ಉದ್ಭವ ಮಿಕ್ಕ ಆನುವಂಶಿಕ ರೋಗಗಳ ಉದ್ಭವಕ್ಕಿಂತ ಹೆಚ್ಚಾಗಿ ಕಾಣಬರುತ್ತದೆ.

ಕುಸುಮರೋಗ ಪಾಶ್ಚಾತ್ಯರಲ್ಲಿ ಬೈಬಲ್ ಕಾಲದಿಂದಲೂ ಗಣನೆಗೆ ಬಂದಿದೆ. ಹೀಬ್ರೂ ಗ್ರಂಥಕಾರ ಟಾಲ್‌ಮುಡ್ ಗ್ರಂಥದಲ್ಲಿ, ಶಿಶ್ನದ ಮುಂದೊಗಲನ್ನು ತೆಗೆಯುವ ಕರ್ಮ ಸಂಬಂಧದಲ್ಲಿ ಈ ರೋಗ ಉಕ್ತವಾಗಿದೆ. ಆಯುರ್ವೇದದಲ್ಲಿ ಇದನ್ನು ವಿಶೇಷ ರೀತಿಯ ರಕ್ತಸ್ರಾವವೆಂದು ಪರಿಗಣಿಸಿರುವುದು ಕಾಣುವುದಿಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನದ ಫಿಲಡೆಲ್ಫಿಯದ ಜಾನ್.ಸಿ.ಅಟ್ಟೊ ಎಂಬುವನು ಮೊದಲಬಾರಿಗೆ (೧೮೦೩) ಈ ರೋಗದ ಪರಿಮಿತಿಯನ್ನು– ಕೆಲವು ಮನೆತನಗಳಲ್ಲಿ ಗಂಡಸರಲ್ಲಿ ಮಾತ್ರ ಕಾಣಬರುವ ಆದರೆ ಸ್ವತಃ ನಿರೋಗಿಗಳಿಂದ ಹೆಂಗಸರಿಂದ ಅವರ ಗಂಡುಮಕ್ಕಳಿಗೆ ದತ್ತಕವಾಗುವ ರಕ್ತಸ್ರಾವಸ್ವಭಾವ ಎಂದು ಖಚಿತಪಡಿಸಿದ್ದಾನೆ. ಸಕಾರಣವಾಗಿಯೇ ಇದನ್ನು ರಕ್ತಸ್ರಾವಿಗಳ ವ್ಯಾಧಿ ಎಂದು ಕರೆದಿದ್ದಾರೆ. ಯೂರೋಪಿನಲ್ಲಿ ೧೯ನೆಯ ಶತಮಾನದ ಕೊನೆ, ೨೦ನೆಯ ಶತಮಾನದ ಪ್ರಾರಂಭ ಕಾಲದಲ್ಲಿದ್ದು ಒಳಸಂಬಂಧವನ್ನೇ ಬೆಳಸುತ್ತಿದ್ದ ರಾಜಮನೆತನಗಳಲ್ಲಿ ಈ ರೋಗ ಅಧಿಕವಾಗಿ ಕಾಣಬಂದದ್ದರಿಂದ ಇದನ್ನು ರಾಜರೋಗವೆಂದೂ ಕರೆದಿದ್ದಾರೆ. ಈ ರೋಗ ಆನುವಂಶಿಕವೇ ಆಗದೆ ಒಂದು ಮನೆತನದಲ್ಲಿ ಮೊಟ್ಟಮೊದಲಿಗೆ ಇದ್ದಕಿದ್ದ ಹಾಗೆ ಮೂಡಬಹುದು. ಆನುವಂಶಿಕವೇ ಆಗಿ ಆ ಸಂಸಾರದ ಗಂಡುಮಕ್ಕಳಲ್ಲಿ ರೋಗ ಕಂಡುಬಂದಿದ್ದರೆ ಅದು ತಾಯಿಯ ಅಪ್ಪನೋ ಅಪ್ಪನ ಸಹೋದರರೋ ಸೋದರಮಾವಂದಿರೋ ಅಥವಾ ಅವಳ ಸಹೋದರರೋ ಈ ರೋಗದಿಂದ ಪೀಡಿತರಾಗಿರುವ ಮನೆತನದಿಂದ ಎನ್ನುವುದು ಸ್ಪಷ್ಟ. ಆ ತಾಯಿಗೆ ಮಾತ್ರ ಯಾವ ರಕ್ತಸ್ರಾವ ವೈಚಿತ್ರ್ಯವೂ ಇರುವುದಿಲ್ಲ. ಕುಸುಮರೋಗ ತಂದೆ ಮತ್ತು ನಿರೋಗಿ ತಾಯಿಯ ಗಂಡು ಮಕ್ಕಳೆಲ್ಲ ಮತ್ತು ಅವರ ಮಕ್ಕಳು ಕುಸುಮ ರೋಗರಹಿತರಾಗಿಯೇ ಇರುತ್ತಾರೆ.

ಉಪಶಮನ : ಕುಸುಮರೋಗಿಗಳ ಗಾಯದಿಂದ ಆಗುವ ರಕ್ತಸ್ರಾವ ಥ್ರಾಂಬಿನ್, ಥ್ರಾಂಬೋಪ್ಲಾಸ್ಟಿನ್ ಅಥವಾ ಇದನ್ನುಳ್ಳ ಮಂಡಲ ಹಾವಿನವಿಷವನ್ನು (ಅದಕ್ಕೆ ೧೦,೦೦೦ ದಷ್ಟೂ ಇನ್ನೂ ಹೆಚ್ಚಾಗಿಯೋ ನೀರು ಬೆರೆಸಿರುವುದು) ಸ್ಥಳೀಕವಾಗಿ ಉಪಯೋಗಿಸಿದರೆ ನಿಲ್ಲುತ್ತದೆ. ಒಗ್ಗುವ ರೋಗರಹಿತರ ನೂತನ ರಕ್ತ ಅಥವಾ ನೂತನ ರಕ್ತದ್ರವವನ್ನು ಬೇಕಾದಷ್ಟು ಸಾರಿ ಚುಚ್ಚಿ ನೀಡಿದರೆ, ರೋಗಿಯಲ್ಲಿ ಲೋಪವಾಗಿರುವ ಕುಸುಮರೋಗ ನಿವಾರಣಾ ಗ್ಲಾಬ್ಯುಲಿನ್ ಒದಗಿ ಬಂದು ರಕ್ತ ಹೆಪ್ಪುಗಟ್ಟುವ ಕಾಲವನ್ನು ಕಡಿಮೆ ಮಾಡಿ ರಕ್ತಸ್ರಾವದ ಉಪಶಮನಕ್ಕೆ ಸಹಾಯವಾಗುತ್ತದೆ. ಇದರ ಮುಖ್ಯ ಘಟಕವಾದ ಕುಸುಮರೋಗ ನಿವಾರಣಾ ಗ್ಲಾಬ್ಯುಲಿನನ್ನು ಹಂದಿ ಮತ್ತು ದನಗಳ ರಕ್ತದಿಂದ ಬೇರ್ಪಡಿಸಿ, ೧೦೦ರಿಂದ ೩೦೦ ಮಿಲಿಗ್ರಾಂ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿರುವಷ್ಟು ಶುದ್ಧಪಡಿಸಿ ಇಟ್ಟುಕೊಳ್ಳಬಹುದು. ಪರಿಣಾಮ ಖಾತರಿಯಾದ ವಸ್ತು ಹೆಚ್ಚಿಗೆ ಒದಗುವ ಹಾಗಿದ್ದರೆ, ಮಧುಮೂತ್ರರೋಗಿ ತನ್ನ ರಕ್ತದ ಶರ್ಕರ ಪ್ರಮಾಣವನ್ನು ಕಡಿಮೆಮಾಡಲು ಇನ್ಸುಲಿನ್ ಮದ್ದನ್ನು ಸ್ವತಃ ಚುಚ್ಚಿ ತೆಗೆದುಕೊಳ್ಳುವಂತೆಯೇ ಕುಸುಮರೋಗಿಯೂ ತನಗೆ ಬೇಕಾದಾಗ ಬೇಕಾದಷ್ಟು ವಸ್ತುವನ್ನು ಸ್ವತಃ ಚುಚ್ಚಿಕೊಳ್ಳಬಹುದು. ಆದರೆ ಈ ವಸ್ತು ದೇಹಕ್ಕೆ ಹೊರತಾದ ಸಸಾರಜನಕ ಪದಾರ್ಥವಾದ್ದರಿಂದ ಅದನ್ನು ತೆಗೆದುಕೊಂಡಾಗ ರೋಗಿಯ ದೇಹದಲ್ಲಿ ಅದಕ್ಕೆ ಪ್ರತಿರೋಧಕ ವಸ್ತುಗಳು ಉತ್ಪತ್ತಿಯಾಗುವ ಅವಕಾಶವಿದೆ. ಹಾಗಾದಲ್ಲಿ ತೆಗೆದುಕೊಂಡ ಗ್ಲಾಬ್ಯುಲಿನ್ ಅದರ ಉಪಯುಕ್ತತೆಯನ್ನು ಕಳೆದುಕೊಳ್ಳುವುದೇ ಅಲ್ಲದೆ ಪ್ರಾಣಾಂತಕವಾಗುವಷ್ಟು ಕಂಟಕಕಾರಿಯೂ ಆಗಬಹುದು. ಆದ್ದರಿಂದ ಕುಸುಮರೋಗ ನಿವಾರಣ ಗ್ಲಾಬ್ಯುಲಿನ್ನನ್ನು ಸರ್ವೇಸಾಧಾರಣವಾಗಿ ತೆಗೆದುಕೊಳ್ಳುವ ಬದಲು ಪ್ರಾಣಸಂರಕ್ಷಣ ಸನ್ನಿವೇಶದಲ್ಲಿ ಮಾತ್ರ ತೆಗೆದುಕೊಳ್ಳುವುದು ಉತ್ತಮ.

ಕುಸುಮರೋಗಿಗಳಲ್ಲಿ ರಕ್ತಸ್ರಾವ ಸ್ವಭಾವ ಮೇಲೆಯೇ ಹೇಳಿದಂತೆ ಸ್ವತಃ ನಿರೋಗಿ ಹೆಂಗಸರಿಂದ ಅವರ ಗಂಡುಸಂತಾನಗಳಿಗೆ ದತ್ತಕವಾಗುತ್ತದೆ. ಈ ಆನುವಂಶಿಕತೆ ಮೆಂಡೆಲನ ಆನುವಂಶಿಕ ತತ್ತ್ವಗಳಿಗೆ ಪೂರ್ಣಾನುಸಾರವಾಗಿ ಇದ್ದು ಅನೇಕ ತಲೆಮಾರುಗಳಲ್ಲಿ ಕಂಡುಬರಬಹುದು. ಕುಸುಮರೋಗ ಸ್ವಭಾವ ರೋಗಿಷ್ಠ ವ್ಯಕ್ತಿಯಲ್ಲಿ X ಕ್ರೊಮೋಸೋಮಿನಲ್ಲಿ ಒಯ್ಯಲ್ಪಡುವ ಅಪ್ರಮುಖ ಗುಣ. ಮತ್ತು ಜೊತೆಗಾರ ಕ್ರೊಮೋಸೋಮಿನಲ್ಲಿ ಅದಕ್ಕೆ ವ್ಯತಿರಿಕ್ತ ಪ್ರಬಲ ಗುಣದ ಗೈರುಹಾಜರಿಯಲ್ಲಿ ಮಾತ್ರ ಈ ಗುಣ ವ್ಯಕ್ತವಾಗುತ್ತದೆ. ವ್ಯತಿರಿಕ್ತ ಪ್ರಬಲ ಗುಣಹೀನವಾದ Y ಕ್ರೊಮೋಸೋಮೇ ಜೊತೆಗಾರ ಕ್ರೊಮೋಸೋಮಾಗಿರುವುದು ಗಂಡಸರಲ್ಲಿ ಮಾತ್ರ ಕುಸುಮರೋಗ ವ್ಯಕ್ತವಾಗುವುದಕ್ಕೆ ಕಾರಣ. ರೋಗವಾಹಕ ಸ್ತ್ರೀಯಲ್ಲಿ ಜೊತೆಗಾರ ಕ್ರೊಮೋಸೋಮ್ ಆದ ಇನ್ನೊಂದು X ಕ್ರೊಮೋಸೋಮ್ ಪ್ರಬಲ ಗುಣವನ್ನು ಹೊಂದಿರುವುದರಿಂದ ಕುಸುಮ ರೋಗ ಆಕೆಯಲ್ಲಿ ಅವ್ಯಕ್ತಸ್ಥಿತಿಯಲ್ಲಿರುತ್ತದೆ. ಅಪೂರ್ವವಾಗಿ ಸ್ತ್ರೀಯರಲ್ಲಿ ಜೋಡಿಯ ಎರಡು ಕ್ರೊಮೋಸೋಮಗಳು ಅಪ್ರಮುಖ ಗುಣವನ್ನೇ ಹೊಂದಿರಬಹುದು. ಅಂಥ ಸಂದರ್ಭದಲ್ಲಿ ಸ್ತ್ರೀಯೂ ರಕ್ತಸ್ರಾವ ಸ್ವಭಾವವನ್ನು ವ್ಯಕ್ತಪಡಿಸಬಹುದು. ಕುಸುಮರೋಗದ ಆನುವಂಶಿಕತೆಯನ್ನು ಈ ಕೆಳಕಂಡ ನಕ್ಷೆಗಳಿಂದ ಅರಿಯಬಹುದು.

ಚಿತ್ರ ೧

| ತಂದೆ | X | ತಾಯಿ |
|---|---|---|
| ರೋಗಿ | | ನಿರೋಗಿ |
| (h) | | (HH) |
| ಗಂಡು | | ಹೆಣ್ಣು |
| ನಿರೋಗಿ | | ವಾಹಕ |
| (H) | | (Hh) |

ಚಿತ್ರ. ೨

| ತಂದೆ | X | ತಾಯಿ |
|---|---|---|
| ರೋಗಿ | | ರೋಗಿ |
| (H) | | (hh) |
| ಗಂಡು | | ಹೆಣ್ಣು |
| ರೋಗಿ | | ವಾಹಕ |
| (h) | | (Hh) |

ಚಿತ್ರ. ೩

| ತಂದೆ | X | ತಾಯಿ |
|---|---|---|
| ರೋಗಿ | | ನಿರೋಗಿ |
| (h) | | (HH) |
| ಗಂಡು | | ಹೆಣ್ಣು |
| ನಿರೋಗಿ | | ವಾಹಕ |
| (H) | | (Hh) |

ಚಿತ್ರ. ೪

| ತಂದೆ | | X | | ತಾಯಿ |
|---|---|---|---|---|
| ನಿರೋಗಿ | | | | ವಾಹಕ |
| (h) | | | | (HH) |
| ಗಂಡು | ಗಂಡು | | ಹೆಣ್ಣು | ಹೆಣ್ಣು |
| ನಿರೋಗಿ | ರೋಗಿ | | ನಿರೋಗಿ | ವಾಹಕ |
| (H) | (h) | | (HH) | (Hh) |

೪ನೆಯ ಚಿತ್ರದಿಂದ ನಿರೋಗಿ ತಂದೆ ವಾಹಕಸ್ತ್ರೀಯ ಗಂಡುಮಕ್ಕಳ ಪೈಕಿ ಅರ್ಧಜನ ಕುಸುಮರೋಗಿಯಾಗಿಯೇ ತೀರುತ್ತಾರೆ. ಉಳಿದ ಅರ್ಧಜನ ನಿರೋಗಿಗಳಾಗಿರುತ್ತಾರೆ. ತಂದೆ ನಿರೋಗಿಯಾಗಿದ್ದರೆ ಹೆಣ್ಣು ಮಕ್ಕಳ ಪೈಕಿ ಅರ್ಧಜನ ತಾಯಿಯರಂತೆಯೇ ವಾಹಕರಾಗಿರುತ್ತಾರೆ. ಉಳಿದ ಅರ್ಧಜನ ನಿರೋಗಿಗಳಾಗಿರುತ್ತಾರೆ. ತಂದೆ ಕುಸುಮರೋಗಿಯಾಗಿದ್ದರೆ ಹೆಣ್ಣುಮಕ್ಕಳಲ್ಲೆಲ್ಲ ರೋಗಗುಣ ಇದ್ದು ಲೆಕ್ಕಾಚಾರದ ಪ್ರಕಾರ ಅರ್ಧಜನರಲ್ಲಿ ಅದು ಅವ್ಯಕ್ತವಾಗಿದ್ದು ಅವರು ವಾಹಕರಾಗಿರುವರು. ತಂದೆ ನಿರೋಗಿ ತಾಯಿ ರೋಗಿ (ಚಿತ್ರ ೨)ಯಾಗಿದ್ದರೆ, ಗಂಡು ಮಕ್ಕಳಲ್ಲಿ ರೋಗಿಗಳಾಗಿಯೂ ಹೆಣ್ಣು ಮಕ್ಕಳು ವಾಹಕರಾಗಿಯೂ ಇರುವರು. ಆದರೆ ಸ್ತ್ರೀ ಕುಸುಮರೋಗಿಗಳು ಹುಟ್ಟುವುದೇ ಅಪೂರ್ವ. ಏಕೆಂದರೆ ಅಂಥ ಸಂತತಿಗಳು ಸಾಧಾರಣವಾಗಿ ಗರ್ಭಧಾರಣ ಕಾಲದಲ್ಲಿಯೇ ನಾಶವಾಗಿ ಬಿಡುತ್ತವೆ. ಹಾಗೆ ಹುಟ್ಟಿದರೆ ಚಿಕ್ಕ ವಯಸ್ಸಿನಲ್ಲಿ ಕುಸುಮರೋಗದಿಂದಲೋ ಬೇರೆ ರೋಗದಿಂದಲೋ ಮರಣಹೊಂದುತ್ತಾರೆ. ಯೂರೋಪಿನ ರಾಜಮನೆತನಗಳಲ್ಲಿ ಒಳಸಂಬಂಧವೇ ರೂಢಿಯಾಗಿದ್ದುದರಿಂದ ರೋಗಿ ಗಂಡು, ವಾಹಕ ಹೆಣ್ಣುಗಳ ಮಿಲನವೇ ಸಾಮಾನ್ಯವಾಗಿದ್ದು ಸಂತತಿಯಲ್ಲಿ ಅನೇಕ ತಲೆಮಾರುಗಳಾದರೂ ಕುಸುಮರೋಗ ವ್ಯಕ್ತವಾಗುತ್ತಿದೆ. ಕುಸುಮರೋಗ ಅಂಗಸಂಬಂಧವಾದ ಅಪ್ರಮುಖ ಸ್ವಭಾವದ ಆನುವಂಶಿಕತೆ ಪಡೆದಿರುವ ವಿಚಾರವೂ ಅಂತೆಯೇ ಮನದಟ್ಟಾಗುತ್ತದೆ.

ಕುಸುಮರೋಗದಂತೆಯೇ ಹೆಚ್ಚು ಕಡಿಮೆ ಆನುವಂಶಿಕ ರಕ್ತಸ್ರಾವ ಸ್ವಭಾವ ಪ್ಯಾರಾಹೀಮೋಫೀಲಿಯಾ ಎ (ಕ್ರಿಸ್‌ಮಸ್ಸನ ರೋಗ) ಮತ್ತು ಪ್ಯಾರಾಹೀಮೋಫಿಲಿಯಾ ಬಿ ಎಂಬ ರೋಗಗಳಲ್ಲಿ ಕಾಣಬರುತ್ತದೆ. ಪ್ಯಾರಾಹೀಮೋಫೀಲಿಯಾಗಳಲ್ಲಿ ಕುಸುಮರೋಗ ನಿವಾರಣ ಗ್ಲಾಬ್ಯುಲಿನ್ ಸ್ವಾಭಾವಿಕವಾಗಿ ಇರುವಂತೆಯೇ ಇರುತ್ತದೆ. ಆದರೆ ರಕ್ತದಲ್ಲಿ ಅದರಂತೆಯೇ ಸ್ವಾಭಾವಿಕವಾಗಿ ಇದ್ದು ರಕ್ತ ಹೆಪ್ಪುಗಟ್ಟುವುದಕ್ಕೆ ಸಹಾಯಕವಾಗಿರುವ ಪಿಟಿಸಿ ಎಂಬ ವಸ್ತು ಪ್ಯಾರಾಹೀಮೋಫೀಯಾ ಎ ಯಲ್ಲಿಯೂ, ಪಿಟಿಎ ಎಂಬ ವಸ್ತು ಪ್ಯಾರಾಹೀಮೋಫೀಯಾ ಬಿ ಯಲ್ಲಿಯೂ ಲೋಪವಾಗಿರುತ್ತದೆ. ಆದ್ದರಿಂದ ಇವುಗಳಲ್ಲಿ ರಕ್ತಸ್ರಾವ ಸ್ವಭಾವ ಕಂಡುಬರುತ್ತದೆ. ಪ್ಯಾರಾಹೀಮೋಫೀಲಿಯಾ ಎಯ ಆನುವಂಶಿಕತೆ ಕುಸುಮರೋಗದಂತೆಯೇ ಇರುವುದು. ಇದನ್ನು ಕ್ರಿಸ್‌ಮಸ್ ಎಂಬಾತನಲ್ಲಿ ಮೊದಲಿಗೆ ಗುರುತಿಸಿದಾಗ ಈ ರೋಗಕ್ಕೆ ಕ್ರಿಸ್‌ಮಸ್ ರೋಗವೆಂದು ಹೆಸರಾಯಿತು. ಪ್ಯಾರಾಹೀಮೋಫೀಲಿಯಾ ಬಿ ತಂದೆ ತಾಯಿ ಇಬ್ಬರಿಂದಲೂ ದತ್ತಕವಾಗುವ ರೋಗ. ಪ್ಯಾರಾಹೀಮೋಫೀಲಿಯಾಗಳು ಕುಸುಮರೋಗದಷ್ಟು ಹೇರಳವಾಗಿಯಾಗಲಿ, ಅದರಷ್ಟು ಘಾಸಿಮಾಡುವಂತೆಯಾಗಲಿ ಇರುವುದಿಲ್ಲ. ***

**ಕುಹರಗಳು:** ಕುಹರಗಳು ಸಾಮಾನ್ಯವಾಗಿ ಪ್ರಾಣಿಗಳ ಮತ್ತು ಸಸ್ಯಗಳ ಜೀವಕೋಶಗಳಲ್ಲಿ ಕಾಣಸಿಗುತ್ತವೆ. ಇವು ತೆಳುವಾದ ಪೊರೆಯಿಂದ ಆವರಿಸಲ್ಪಟ್ಟಿದ್ದು, ಇವುಗಳಲ್ಲಿ ನೀರಿನಲ್ಲಿ ಕರಗುವ ಕೆಲವು ರಾಸಾಯನಿಕ ವಸ್ತುಗಳಿರುತ್ತವೆ. ಸಸ್ಯಗಳ ಜೀವಕೋಶದಲ್ಲಿ ಇವುಗಳು ಪ್ರಮುಖವಾಗಿದ್ದು ಕೆಲವು ಬಾರಿ ಇಡೀ ಜೀವಕೋಶವನ್ನು ಆವರಿಸಿಕೊಂಡು, ಜೀವಧಾತುವನ್ನೂ ಕೋಶಕೇಂದ್ರವನ್ನೂ ಒಂದು ಬದಿಗೆ ಸರಿಸುತ್ತವೆ. ಇವುಗಳ ಮುಖ್ಯವಾದ ಕೆಲಸ ಜೀವಕೋಶದ ಒತ್ತಡವನ್ನು ಒಂದೇ ಸಮನಾಗಿ ಇರಿಸುವುದು. ಕೆಲವು ಬಾರಿ ಜೀವಧಾತುವಿನ ಕಾರ್ಯ ನಿರ್ವಹಣೆಗೆ ಬೇಕಾದ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತವೆ. ಒಮ್ಮೊಮ್ಮೆ ಕೆಲವು ಬೇಡದ ವಸ್ತುಗಳಿಗೆ ಸ್ಥಳವನ್ನೊದಗಿಸಿಕೊಡುತ್ತವೆ. ಹಲವು ಏಕಕೋಶ ಜೀವಿಗಳಲ್ಲಿ ಮತ್ತು ರಕ್ತದ ಬಿಳಿ ರಕ್ತಕಣಗಳಲ್ಲಿರುವ ಆಹಾರ ಕುಹರಗಳಿಗೆ ಪೊರೆಯ ಆವರಣವಿರುವುದಿಲ್ಲ.

ಕುಹರಗಳು ಸಸ್ಯಗಳ ಬೆಳೆಯುವ ಜೀವಕೋಶಗಳಲ್ಲಿ ಚಿಕ್ಕ ಚಿಕ್ಕದಾಗಿ ಕಾಣಿಸಿಕೊಳ್ಳುತ್ತವೆ. ಅವುಗಳ ಉಗಮವು ಯಾವ ರೀತಿಯಾದುದೆಂದು ಇನ್ನೂ ಸರಿಯಾಗಿ ತಿಳಿದಿಲ್ಲ. ಜೀವಕೋಶಗಳು ಬೆಳೆಯುತ್ತ ಹೋದಂತೆ ಈ ಚಿಕ್ಕ ಚಿಕ್ಕ ಕುಹರಗಳು ಒಂದಕ್ಕೊಂದು ಅಂಟಿಕೊಂಡು ಜೀವಕೋಶದ ಬಹು ಭಾಗವನ್ನು ಆಕ್ರಮಿಸುವ ಒಂದು ದೊಡ್ಡ ಕುಹರವಾಗುತ್ತದೆ. ಕೆಲವು ಜೀವಕೋಶಗಳಲ್ಲಿ ಈ ರೀತಿಯ ಒಂದಕ್ಕಿಂತ ಹೆಚ್ಚು ಕುಹರಗಳಿರಬಹುದು. ಇದು ಜೀವಧಾತುವಿನ ಕಾರ್ಯ ನಿರ್ವಹಣೆಗೆ ಅನುಕೂಲವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಜೀವಕೋಶಗಳ ವಿಭಜನೆಯಾದಾಗ ಕುಹರಗಳು ಸಮಭಾಗದಲ್ಲಿ ಎರಡೂ ಜೀವಕೋಶಗಳಿಗೆ ಹಂಚಲ್ಪಡುತ್ತವೆ. ಈ ಕಾರ್ಯದಲ್ಲಿ ಕೆಲವು ಕುಹರಗಳು ವಿಭಜನೆ ಹೊಂದುತ್ತವೆ.

ಪ್ರಾಣಿಗಳ ಜೀವಕೋಶಗಳಲ್ಲಿ ಕುಹರಗಳು ಕಂಡರೂ ಸಸ್ಯಗಳಲ್ಲಿದ್ದಷ್ಟು ಸಾರ್ವತ್ರಿಕವಾಗಿರುವುದಿಲ್ಲ. ಹಲವು ಕುಹರಗಳು ಪೈನೊಸೈಟಿಕ್ ಅಥವಾ ಜೀವಕೋಶಗಳ ಹೀರುವ ಚಟುವಟಿಕೆಯಿಂದಾಗಿ ಉದ್ಭವಿಸುತ್ತವೆ. ಜೀವಕೋಶಗಳ ಹೊರಗಿರುವ ದ್ರವಗಳಲ್ಲಿ ಒಂದು ಸಣ್ಣ ಭಾಗವು ಕುಹರದ ರೂಪದಲ್ಲಿ ಒಳಗೆ ಸೇರುತ್ತದೆ. ಅನಂತರ ಅದರಲ್ಲಿನ ನೀರು ಮತ್ತು ಇತರ ಮೆಟಬೊಲೈಟ್ಸ್‌ಗಳು ಜೀರ್ಣವಾಗುತ್ತವೆ ಮತ್ತು ಜೀವಕೋಶದ ಇತರ ಭಾಗಗಳಿಂದ ಉಪಯೋಗಿಸಲ್ಪಡುತ್ತವೆ. ಇದೇ ರೀತಿಯಲ್ಲಿ ಕುಹರಗಳಲ್ಲಿ ಸಂಗ್ರಹಿಲ್ಪಟ್ಟ ಬೇಡದ ವಸ್ತುಗಳು ಹೊರಗೆ ಹಾಕಲ್ಪಡುತ್ತವೆ.

ಏಕಕೋಶ ಜೀವಿಗಳಲ್ಲಿ ಬಹಳವಾಗಿ ಕಾಣಸಿಗುವ ಕುಹರಗಳು ಇವೇ ಕಾರ್ಯಗಳನ್ನು ನಿರ್ವಹಿಸುತ್ತವೆ. ಅಮೀಬದಲ್ಲಿ, ಆಹಾರವನ್ನು ಹಿಡಿದಾಗ ಒಂದು ಕುಹರವು ಉಂಟಾಗಿ, ಕೋಶದೊಳಗೆ ಸೇರಿ, ಇದರಲ್ಲಿ ಜೀರ್ಣಕ್ರಿಯೆಯೂ ನಡೆಯುತ್ತದೆ. ಸಂಕುಚಿತವಾಗುವ ಮತ್ತು ವಿಕಾಸಗೊಳ್ಳುವ ಕುಹರಗಳೂ ಈ ಜೀವಿಗಳಲ್ಲಿ ಕಾಣಸಿಗುತ್ತವೆ. ಇದು ಜೀವಕೋಶದೊಳಗಿನ ಭಾಗವನ್ನು ಶುಚಿಯಾಗಿಡುತ್ತದೆ. ಜೀರ್ಣವಾಗದೆ ಅಳಿದುಳಿದ ವಸ್ತುಗಳು ಮತ್ತು ಜೀವನಿರ್ವಾಹಕ ಕ್ರಿಯೆಯಿಂದ ಉಂಟಾದ ಬೇಡದ ಉಪಪದಾರ್ಥಗಳನ್ನು ಹೊರಗೆಸೆಯುತ್ತದೆ. ಈ ಕುಹರಗಳು ಬೇರೆ ಬೇರೆ ಏಕಕೋಶ ಜೀವಿಗಳಲ್ಲು ಒಂದೊಂದು ತೆರದ ವಿಶಿಷ್ಟ ಆಕಾರವನ್ನು ಹೊಂದಿವೆ. ಪ್ಯಾರಮೀಸಿಯಂನಲ್ಲಿ ಇದು ನಕ್ಷತ್ರದ ರೂಪದಲ್ಲಿದೆ. ಇದರ ಕಿರಣಗಳಂತಿರುವ ಸಣ್ಣ ಸಣ್ಣ ಕುಹರಗಳು ಕೋಶದ ವಿವಿಧ ಭಾಗಗಳಿಂದ ಕೊಳೆಯನ್ನು ಸಂಗ್ರಹಿಸಿ, ಮಧ್ಯದಲ್ಲಿರುವ ದೊಡ್ಡ, ದುಂಡಗಿನ ಕುಹರಕ್ಕೆ ಹಾಕುತ್ತವೆ. ಅನಂತರ ಇದು ಹೊರಗೆಸೆಯಲ್ಪಡುತ್ತದೆ.

ಯುಪ್ಲೋಟಿಸ್‌ನಲ್ಲಿ ಸಣ್ಣ ಸಣ್ಣ ಕುಹರಗಳು ಒಂದಾಗಿ ದೊಡ್ಡದಾಗುತ್ತವೆ. ಎಂಡಿಪ್ಲೊಡಿನಿಯಮ್‌ನಲ್ಲಿ ಕುಹರಗಳ ಪೊರೆಯ ಮೂಲಕ ದ್ರವಗಳು ಸಂಗ್ರಹವಾಗುತ್ತವೆ. ಒಂದು ಸಣ್ಣ ರಂಧ್ರದಿಂದ ಈ ದ್ರವಗಳು ಹೊರಗೆಸೆಯಲ್ಪಡುತ್ತವೆ. ಕೆಲವು ಸೀಲಿಯೇಟುಗಳಲ್ಲಿ ಈ ರಂಧ್ರವು ಒಂದು ನಿರ್ದಿಷ್ಟ ಸ್ಥಾನದಲ್ಲಿರುತ್ತದೆ. ಅಮೀಬದಲ್ಲಿ ಈ ರಂಧ್ರವು ತಾತ್ಕಾಲಿಕವಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ ಈ ವಿಧದ ಕುಹರಗಳಿಗೆ ಜನ್ಮ, ಬೆಳವಣಿಗೆ ಮತ್ತು ಅವುಗಳ ಒಂದು ಮಾಡುವಿಕೆ ಎಂಬ ನಿರ್ದಿಷ್ಟ ಮತ್ತು ತಾಳಬದ್ಧವಾದ ಕ್ರಿಯೆಯಿದೆ. ಇದರ

ಅವಧಿಯಲ್ಲಿ, ಜೀವಿಯ ಕ್ರಿಯೆ, ಉಷ್ಣತೆ ಮತ್ತು ವಾತಾವರಣದಿಂದಾಗಿ ಬದಲಾವಣೆಗಳು ಉಂಟಾಗುತ್ತವೆ. ಇದು ಹೆಚ್ಚಾದ ನೀರಿನ ಅಂಶವನ್ನು ಹೊರಹಾಕುವುದರಿಂದ ನೀರಿನಲ್ಲಿ ವಾಸಿಸುವ ಈ ಜೀವಿಗಳಿಗೆ ಅನುಕೂಲಕರವಾದ ಒಳ ವಾತಾವರಣವನ್ನುಂಟುಮಾಡುತ್ತದೆ.

ಸಾಮಾನ್ಯವಾಗಿ ಸಸ್ಯ ಮತ್ತು ಪ್ರಾಣಿಗಳ ಜೀವಕೋಶದಲ್ಲಿರುವ ಕುಹರಗಳಲ್ಲಿ ಕೋಶ ದ್ರವ ಇರುತ್ತದೆ. ಇದು ಕಣ್ಣಿಗೆ ಪಾರದರ್ಶಕವಾಗಿ ಕಂಡರೂ ರಾಸಾಯನಿಕವಾಗಿ ಹಲವು ವಸ್ತುಗಳನ್ನೊಳಗೊಂಡಿದೆ. ಹೆಚ್ಚಾಗಿ ನೀರಿನಲ್ಲಿ ಕರಗುವ ಗ್ಲೈಕೊಸೈಡ್‌ಗಳೆಂಬ ರಾಸಾಯನಿಕ ವಸ್ತುಗಳಿರುತ್ತವೆ. ಕೆಲವು ರೀತಿಯ ಬಣ್ಣಕೊಡುವ ವಸ್ತುಗಳೂ ಇದರಲ್ಲಿರುತ್ತವೆ. ಇವು ಸಸ್ಯದ ಭಾಗಗಳಿಗೆ ಅದರಲ್ಲೂ ಮುಖ್ಯವಾಗಿ ಹೂವಿಗೆ ವಿವಿಧ ಬಣ್ಣಗಳನ್ನು ಕೊಡುತ್ತವೆ. ಕೆಲವು ಸಸ್ಯಗಳಲ್ಲಿ ಕಂಡು ಬರುವ ಅಂಟು, ಗೋಂದು ಮತ್ತು ಲೇಟೆಕ್ಸ್‌ಗಳನ್ನು ಕುಹರಗಳೇ ಸಂಗ್ರಹಿಸಿಕೊಂಡಿರುತ್ತವೆ. (ಎಂ.ವಿ.ಸಿ.)

**ಕುಳ್ಳಿ ಮೀನು:** ಇದನ್ನು ಸಿಹಿ ನೀರಿನ ಶಾರ್ಕ್ ಎನ್ನುವರು. ವೈಜ್ಞಾನಿಕವಾಗಿ ಬಗಾರಿಯಸ್ ಯಾರೆಲ್ಲಿಯೈ ಎಂಬ ಹೆಸರಿದೆ. ಭಾರತ, ಬರ್ಮ, ಮಲಯ ದ್ವೀಪ ಸಮುದಾಯ, ಸಯಾಂ ಮತ್ತು ಇಂಡೋ–ಚೀನಾ ದೇಶದ ಸಿಹಿನೀರಿನಲ್ಲಿ ವಾಸಿಸುತ್ತದೆ. ದೊಡ್ಡ ನದಿಗಳಲ್ಲಿ ನೆಲೆಸುವ ಇದು ಅಳಿವೆಗಳಿಗೆ ಪ್ರವೇಶಿಸುವುದುಂಟು. ಇದರ ಉದ್ದ ೧೨–೧೫ ಸೆಮೀ. ಇದರ ಕಣ್ಣುಗಳು ಚಿಕ್ಕವು. ತಲೆಯ ಮಧ್ಯಭಾಗದಲ್ಲಿವೆ. ಮೇಲಿನ ದವಡೆ ಉದ್ದವಾಗಿದೆ. ತೆರೆದಿರುವ ಬಾಯಿಯ ಬಿರುಕು ತಲೆಯ ಉದ್ದದ ಅರ್ಧದಷ್ಟಿದೆ. ಬಾಯಿಯಸುತ್ತ ಎಂಟು ದಾಡಿಗಳಂತಿರುವ ಸ್ಪರ್ಶಾಂಗಗಳಿವೆ. ಮೇಲುದವಡೆಯ ಸ್ಪರ್ಶಾಂಗಗಳು ತಲೆಗಿಂತ ಉದ್ದವಾಗಿವೆ. ನಾಸಿಕದ ಬಳಿಯಿರುವ ಸ್ಪರ್ಶಾಂಗಗಳು ಚಿಕ್ಕವು. ಹಲ್ಲುಗಳು ಚೂಪಾಗಿದ್ದು ಅಸಮ ಆಕಾರವುಳ್ಳವು. ಈ ಮೀನಿಗೆ ಅಂಗುಳಿನ ಹಲ್ಲುಗಳಿಲ್ಲ. ಬೆನ್ನಿನ ಈಜುರೆಕ್ಕೆಯ ಮುಳ್ಳು ನುಣುಪಾಗಿದೆ. ಎದೆಯ ಈಜುರೆಕ್ಕೆಯ ಮುಳ್ಳು ಬೆನ್ನಿನ ಈಜುರೆಕ್ಕೆಯ ಮುಳ್ಳಿನಷ್ಟೆ ಉದ್ದವಿದೆ. ಅದು ಬಲಯುತವಾಗಿದೆ. ಅದರ ಒಳಭಾಗದ ಅಂಚು ಗರಗಸದಂತಿದೆ. ಬಾಲದ ಈಜುರೆಕ್ಕೆ ವಿಪುಲವಾಗಿ ಕವಲೊಡೆದಿದೆ. ಕುಳ್ಳಿಮೀನಿನ ಚರ್ಮ ಒರಟಾಗಿದ್ದು, ಬೂದಿ ಹಾಗೂ ಹಳದಿ ಬಣ್ಣದಿಂದ ಕೂಡಿದೆ. ಅಲ್ಲಲ್ಲಿ ಕಂದು ಮತ್ತು ಕರಿಯ ಬಣ್ಣದ ದೊಡ್ಡ ಮಚ್ಚೆಗಳಿವೆ. ಎಲ್ಲ ಈಜುರೆಕ್ಕೆಗಳ ತಳಭಾಗ ಕಪ್ಪು ಬಣ್ಣದ್ದಾಗಿದ್ದು ಕೆಲವು ವೇಳೆ ಅದರ ಮೇಲೆ ಕರಿ ಬಣ್ಣದ ಪಟ್ಟೆಯಿರುತ್ತದೆ.

***

**ಕೂಕೂ ಹಕ್ಕಿ:** ಕೊರಾಸಿಯಿಫಾರ್ಮಿಸ್ ಗಣದ ಊಪೂಪಿಡೆ ಕುಟುಂಬಕ್ಕೆ ಸೇರಿದ ಕೀಟಭಕ್ಷಕ ಹಕ್ಕಿ (ಹೂಪೂ). ವೈಜ್ಞಾನಿಕ ನಾಮ ಊಪೂಪ ಎಪೋಪ್ಸ್. ಕೊಕ್ಕಿನ ತುದಿಯಿಂದ ಹಿಡಿದು ಬಾಲದ ಗರಿಯ ತುದಿಯವರೆಗೂ ಇದರ ಉದ್ದ ಸುಮಾರು ೩೧ ಸೆಮೀ ತಲೆ ಮತ್ತು ಕುತ್ತಿಗೆಯ ಬಣ್ಣ ಹಳದಿ ಮಿಶ್ರಿತ ಮಾಸಲು ಕೆಂಪು. ತಲೆಯ ಮೇಲಿರುವ ಸುಂದರವಾದ ಅರ್ಧ ಚಂದ್ರಾಕಾರದ ನಿಮಿರಿ ನಿಲ್ಲುವ ಕಪ್ಪು ತುದಿಯ

ಕೂಕೂ ಹಕ್ಕಿ

ಗರಿಶಿಖೆ, ತೆಳುವಾದ ಬಾಗಿದ ಕೊಕ್ಕು, ಬಹು ಚಿಕ್ಕ ನಾಲಗೆ, ಬಾಲದಲ್ಲಿನ ಉದ್ದನೆಯ ಹತ್ತು ಗರಿಗಳು, ಮೂರು ಮತ್ತು ನಾಲ್ಕನೆಯ ಬೆರಳುಗಳು ಬುಡಭಾಗದಲ್ಲಿ ಅಂಟಿಕೊಂಡಿರುವುದು–ಇವು ಈ ಹಕ್ಕಿಯ ವಿಶಿಷ್ಟ ಗುಣಗಳು. ತನ್ನ ಶಿಖೆಯ ಗರಿಗಳನ್ನು ಮಡಿಸಿಕೊಂಡಾಗ ಇದರ ತಲೆ ಪಿಕಾಸಿಯಂತೆ ಕಾಣುತ್ತದೆ. ಬಾಲದ ಗರಿಗಳ ಮಧ್ಯಭಾಗದಲ್ಲಿ ಒಂದು ಬಿಳಿಯ ಅಡ್ಡ ಪಟ್ಟೆಯಿದೆ. ದೇಹದ ಬಣ್ಣ ನಸುಗೆಂಪು. ಬೆನ್ನಿನ ಹಾಗೂ ರೆಕ್ಕೆಗಳ ಮೇಲೆ ಬಿಳಿಯ ಮತ್ತು ಕರಿಯ ಪಟ್ಟೆಗಳಿವೆ. ಕೆಲವು ಉಪಪ್ರಭೇದಗಳಲ್ಲಿ ಈ ವರ್ಣವಿನ್ಯಾಸ ಜೀಬ್ರಾದ ಮೈಮೇಲೆ ಇರುವಂತೆ ಕಾಣುತ್ತದೆ. ಹೆಣ್ಣು ಹಕ್ಕಿಯ ದೇಹದಿಂದ ಅಸಹ್ಯಕರವಾದ ಹಳಸಲು ವಾಸನೆ ಸೂಸುತ್ತದೆ. ಶತ್ರುಗಳನ್ನು ದೂರವಿಡಲು ಈ ವಾಸನೆ ಸಹಕಾರಿ ಎಂದು ಹೇಳಲಾಗಿದೆ. ಮಧ್ಯ ಮತ್ತು ದಕ್ಷಿಣ ಯೂರೋಪು, ಆಫ್ರಿಕಾ, ಏಷ್ಯಾ (ಸೈಬೀರಿಯಾ ಹೊರತಾಗಿ) ಖಂಡಗಳಲ್ಲೆಲ್ಲಾ ಕೂಕೂ ಹಕ್ಕಿ ವ್ಯಾಪಿಸಿದೆ. ಮರಗಿಡಗಳಿಂದ ಕೂಡಿದ ಬಯಲು ಮತ್ತು ಸಾಗುವಳಿ ಪ್ರದೇಶಗಳಲ್ಲಿ ಇದನ್ನು ಕಾಣಬಹುದು. ಸ್ವಲ್ಪ ದೂರ ವಲಸೆ ಹೋಗುವ ಪರಿಪಾಠವಿದೆ. ಇದು ಸಾಮಾನ್ಯವಾಗಿ ಒಂಟೊಂಟಿಯಾಗಿ ವಾಸಿಸಿದರೂ ಕೆಲವು ವೇಳೆ ಸಣ್ಣ ಸಣ್ಣ ಗುಂಪು ಕೂಡಿಕೊಂಡು ಹಾರಾಡುವುದುಂಟು. ಇದರ ಹಾರಾಟ ಮಂದಗತಿಯದು; ತರಂಗರೂಪದ್ದು. ಆದರೆ ಗಾಬರಿಗೊಂಡಾಗ ವೇಗವಾಗಿ ಹಾರಬಲ್ಲದು. ಕೀಟ, ಜೇಡ ಮತ್ತು ಕ್ರಿಮಿಗಳೇ ಇದರ ಮುಖ್ಯ ಆಹಾರ. ಸಗಣಿ, ಗೊಬ್ಬರಗುಂಡಿ, ನೆಲ ಮುಂತಾದೆಡೆ ತನ್ನ ಕೊಕ್ಕಿನಿಂದ ಕುಕ್ಕಿ ಕೀಟಗಳನ್ನು ಆರಿಸುತ್ತ ಸಾಗುತ್ತದೆ. 'ಕೂ–ಕೂ– ಕೂ–ಕೂ' ಎಂದು ವಿಚಿತ್ರವಾಗಿ ಕೂಗುತ್ತದೆ. ಇದರಿಂದಲೇ ಇದಕ್ಕೆ ಕೂಕೂ ಹಕ್ಕಿ ಎಂದು ಹೆಸರು ಬಂದಿದೆ. ಹೆಣ್ಣು, ಗಂಡುಗಳ ಬಾಹ್ಯರೂಪದಲ್ಲಿ ವ್ಯತ್ಯಾಸ ಬಹಳ ಕಡಿಮೆ. ಸಂತಾನೋತ್ಪತ್ತಿಕಾಲದಲ್ಲಿ ಮರಗಳ ಪೊಟರೆ, ಗೋಡೆಯ ಅಗಲವಾದ ಬಿರುಕು, ಗೆದ್ದಲುಗಳ ಗೂಡು, ಏರಿ, ತೆವರುಗಳ ಡೊಗರಗಳಲ್ಲಿ ಗೂಡುಕಟ್ಟುತ್ತದೆ. ಗೂಡನ್ನು ಸ್ವಲ್ಪ ಮೆತ್ತಗೆ ಮಾಡಲು ಅಲ್ಪ ಸ್ವಲ್ಪ ಹುಲ್ಲು, ಗರಿ, ಎಲೆ, ಉಣ್ಣೆಗಳನ್ನು ಸೇರಿಸುವುದುಂಟು. ಆದರೆ ತನ್ನ ಉಚ್ಚಿಷ್ಟವನ್ನಾಗಲಿ ಹಿಕ್ಕೆಯನ್ನಾಗಲಿ ಗೂಡಿನಿಂದ ತೆಗೆದು ಹಾಕುವುದಿಲ್ಲವಾಗಿ ಇದರ ಗೂಡು ಅತ್ಯಂತ ಕೊಳಕಾಗಿಯೂ ದುರ್ವಾಸನೆಯುಳ್ಳದ್ದೂ ಆಗಿರುತ್ತದೆ. ಗೂಡಿನಲ್ಲಿ ೪–೬ ಮೊಟ್ಟೆಗಳಿಡುತ್ತದೆ. ಹೆಣ್ಣು ಹಕ್ಕಿ ಮಾತ್ರ ೧೬–೧೮ ದಿವಸಗಳವರೆಗೆ ಹಗಲಿರುಳು ಮೊಟ್ಟೆಗಳ ಮೇಲೆ ಕೂತು ಕಾವುಕೊಡುತ್ತದೆ. ಈ ಕಾಲದಲ್ಲಿ ಹಾಗೂ ಮೊಟ್ಟೆಗಳಿಡುವ ಮುನ್ನ ಪ್ರೇಮಾಚರಣೆಯ ಕಾಲದಲ್ಲಿ ಗಂಡು ತನ್ನ ಹೆಂಡತಿಗೆ ಆಹಾರವನ್ನು ಉಣಿಸುತ್ತದೆ. ಮರಿಗಳು ಕೊಂಚ ದೊಡ್ಡವಾದ ಅನಂತರ ಗಂಡು, ಹೆಣ್ಣುಗಳೆರಡೂ ಆಹಾರವನ್ನು ಹುಡುಕಿ ತಂದು ಮರಿಗಳಿಗೆ ತಿನ್ನಿಸಿ ಪೋಷಣೆ ಮಾಡುತ್ತವೆ. (ಬಿ.ಎನ್.ಬಿ)

**ಕೂಗರ್:** ಅಮೆರಿಕ ಖಂಡಗಳಿಗೆ ಸೀಮಿತವಾಗಿರುವ ಒಂದು ಹೆಬ್ಬೆಕ್ಕು. ಕಾರ್ನಿವೂರ ಗಣದ ಫಲಿಡೆ ಕುಟುಂಬಕ್ಕೆ ಸೇರಿದೆ. ಇದಕ್ಕೆ ಪ್ಯೂಮ, ಮೌಂಟನ್ ಲಯನ್, ಪ್ಯಾಂಥರ್, ಕ್ಯಾಟಮೌಂಟ್, ಪಯಿಂಟರ್ (ಬಹುಶಃ ಪ್ಯಾಂಥರ್ ಎಂಬುದರ ಅಪಭ್ರಂಶ) ಎಂಬ ಹೆಸರುಗಳೂ ಇವೆ. ಫೆಲಿಸ್ ಕಾನ್‌ಕವರ್ ಎಂಬ ವೈಜ್ಞಾನಿಕ ಹೆಸರಿನ ಈ ಜಾತಿಯಲ್ಲಿ ಸುಮಾರು 15 ಉಪಪ್ರಭೇದಗಳನ್ನು ಗುರುತಿಸಲಾಗಿದೆ. 19ನೆ ಶತಮಾನದ ಕೊನೆಯ ವರೆಗೂ ಕೆನಡದ ಬ್ರಿಟಿಷ್ ಕೊಲಂಬಿಯದಿಂದ ಹಿಡಿದು ದಕ್ಷಿಣ ಅಮೆರಿಕದ ಅರ್ಜೆಂಟೀನ, ಪಟಗೋನಿಯ ಗಳವರೆಗೂ ಕೂಗರ್ ಹರಡಿತ್ತು. ಆದರೆ ಬೇಟೆಯಿಂದಾಗಿ ಇದರ ವ್ಯಾಪ್ತಿ ಕುಗ್ಗಿದೆ. ಈಗ ಕೆನಡದ ಪಶ್ಚಿಮ ಪರ್ವತ ಪ್ರದೇಶಗಳಲ್ಲಿ ರಾಕಿ ಪರ್ವತಗಳಲ್ಲಿ ಮತ್ತು ದಕ್ಷಿಣ ಅಮೆರಿಕದ ಕಾಡುಗಳಲ್ಲಿ ಮಾತ್ರ ಕಂಡುಬರುತ್ತದೆ. ವಿವಿಧ ಬಗೆಯ ವಾಯುಗುಣಗಳಲ್ಲಿ ಜೀವಿಸಬಲ್ಲ ಪರಿಹೊಂದಾಣಿಕೆಯ ಸಾಮರ್ಥ್ಯವನ್ನು ಪಡೆದಿದೆ. ಸಮುದ್ರಮಟ್ಟದಿಂದ ಹಿಡಿದು 4200 ಮೀ ಎತ್ತರದ ಪರ್ವತ ಪ್ರದೇಶಗಳಲ್ಲೂ ಬದುಕಬಲ್ಲದು.

ಅಮೆರಿಕದಲ್ಲಿ ಕಾಣಬರುವ ಬೆಕ್ಕಿನ ಜಾತಿಯ ಪ್ರಾಣಿಗಳಲ್ಲಿ ಗಾತ್ರದ ದೃಷ್ಟಿಯಿಂದ ಇದಕ್ಕೆ ಎರಡನೆಯ ಸ್ಥಾನ (ಮೊದಲನೆಯ ಜಾಗ್ವಾರ್–ನೋಡಿ). ಬೆಳವಣಿಗೆಯ ಪೂರ್ಣಾವಸ್ಥೆಯನ್ನು ತಲಪಿದ ಗಂಡು ಕೂಗರ್ 190–270 ಸೆಂಮೀ ಉದ್ದವೂ (ಬಾಲವೂ ಸೇರಿ) 69–75 ಸೆಂಮೀ ಎತ್ತರವೂ ಇರುತ್ತದೆ. 36–45 ಕಿಗ್ರಾಂ ತೂಗುತ್ತದೆ. ಕೆಲವು ಗಂಡುಗಳು 90 ಕಿಗ್ರಾಂ ತೂಗಿರುವ ದಾಖಲೆಯೂ ಉಂಟು. ಹೆಣ್ಣು ಗಂಡಿಗಿಂತ ಚಿಕ್ಕದು. ಕೂಗರಿನ ಮೈಬಣ್ಣ ಕೆಂಪುಮಿಶ್ರಿತ ಕಂದು. ಕಾಲು, ಹೊಟ್ಟೆ, ಕತ್ತಿನ ತಳಭಾಗ ಮತ್ತು ಮೇಲ್ತುಟಿ ಮಾಸಲು ಬಿಳುಪು. ಕೂಗರ್ ಕೊಂಚಮಟ್ಟಿಗೆ ಸಿಂಹವನ್ನು ಹೋಲುವುದಾದರೂ ಸಿಂಹಕ್ಕಿರುವಂತೆ ಕೇಸರ ಇದರಲ್ಲಿಲ್ಲ. ಕಿವಿಗಳು ಅಗಲವಾಗಿ ದುಂಡು ಆಕಾರದವಾಗಿವೆ. ಬಾಲ ದಪ್ಪ ಹಾಗೂ ಉರುಳೆಯಂತಿದೆ. ಬಾಲದ ಮತ್ತು ಕಿವಿಯ ತುದಿಗಳು ಸ್ವಲ್ಪ ಕಪ್ಪುಬಣ್ಣದವು. ಬಾಲದ ತುದಿಯಲ್ಲಿ ಕೂದಲಿನ ಸಣ್ಣ ಗೊಂಡೆಯಿದೆ. ಕೂಗರ್ ಹಗಲಿನಲ್ಲಿ ಸಾಮಾನ್ಯವಾಗಿ ಬೆಟ್ಟಗಳ ಗುಹೆಗಳಲ್ಲಿ ನಿದ್ದೆ ಮಾಡುತ್ತಲೊ ಇಲ್ಲವೆ ಎತ್ತರವಾದ ಬಂಡೆಗಳ ಮೇಲೆ ಬಿಸಿಲಿಗೆ ಮೈಯೊಡ್ಡಿ ವಿಶ್ರಾಂತಿ ಪಡೆಯುತ್ತಲೊ ಕಾಲ ಕಳೆಯುತ್ತದೆ. ಸಂಜೆಯಾದ ಮೇಲೆ ಆಹಾರಾನ್ವೇಷಣೆಗೆ ಹೊರಡುತ್ತದೆ. ಜಿಂಕೆ, ಮೊಲ, ಕಾಡುಕುರಿ, ಗಿನಿಹಂದಿ ವಿವಿಧ ಬಗೆಯ ಹಕ್ಕಿಗಳು ಇದರ ಆಹಾರ. ದನ, ಕುರಿ, ಮುಂತಾದ ಸಾಕುಪ್ರಾಣಿಗಳನ್ನು ಬೇಟೆಯಾಡಿ ತಿನ್ನುತ್ತವೆ. ಆಹಾರಕ್ಕಾಗಿ ತನ್ನ ವಾಸಸ್ಥಳದಿಂದ ಬಲುದೂರ ಸಂಚಾರ ಹೊರಡುವ ಇದು ಅಗಲವಾದ ನದಿಗಳನ್ನು ಸರಾಗವಾಗಿ

ಈಜಿಕೊಂಡು ಸಾಗುತ್ತದೆ. ಹುಲಿ, ಸಿಂಹಗಳಂತೆಯೇ ಬೇಟೆಯಲ್ಲಿ ಬಹಳ ಕುಶಲಿ. ಎರೆ ಕಣ್ಣಿಗೆ ಬಿದ್ದರೆ ಅದಕ್ಕೆ ತನ್ನ ಸುಳಿವು ಸಿಕ್ಕದಂತೆ ನಿಶ್ಶಬ್ದವಾಗಿ ಅದರ ಹತ್ತಿರ ಬರುತ್ತದೆ. ಸಾಕಷ್ಟು ಹತ್ತಿರ ಬಂದ ಮೇಲೆ ಎರೆಯ ಮೇಲೆ ಚಂಗನೆ ನೆಗೆದು ಅದರ ಎದೆ ಅಥವಾ ಕುತ್ತಿಗೆಗೆ ಬಾಯಿಹಾಕಿ ಹಿಡಿದು ನೆಲಕ್ಕುರುಳಿಸುತ್ತದೆ. ಸು. 6 ಮೀ ದೂರಕ್ಕೆ ನೆಗೆಯಬಲ್ಲುದೆಂದು ಹೇಳಿಕೆಯಿದೆ. ತುಂಬ ಬಲಶಾಲಿಯಾದ ಇದು ತನಗಿಂತ ಐದುಪಟ್ಟು ಭಾರವಾದ ಎರೆಯನ್ನು 90–100 ಮೀ ದೂರದವರೆಗೂ ಎಳೆದೊಯ್ಯಬಲ್ಲುದು. ಸಂತೃಪ್ತಿಯಾಗಿ ತಿಂದ ಮೇಲೆ ಉಳಿಯುವ ಮಾಂಸವನ್ನು ಪೊದೆಯಲ್ಲಿ ಮುಚ್ಚಿಟ್ಟು ಮತ್ತೆ ಮಾರನೆಯ ದಿನ ಬಂದು ತಿನ್ನುತ್ತವೆ. ಮನುಷ್ಯನಿಗೆ ಉಪದ್ರವ ಕೊಡುವುದು ಬಲು ವಿರಳ. ಅವನನ್ನು ಕಂಡರೆ ಹೆದರುತ್ತದೆ. ಆದರೂ ಕೆಲವೊಮ್ಮೆ ಮನುಷ್ಯನನ್ನು ಕೊಲ್ಲುವುದುಂಟು. ಬಹುಶಃ ರೇಗಿಸಿದರೆ ಘಾಸಿ ಮಾಡಿದರೆ ಮಾತ್ರ ದಾಳಿಮಾಡುತ್ತದೆ. ಕೂಗರ್‌ಗೆ ನಿರ್ದಿಷ್ಟವಾದ ಸಂತಾನೋತ್ಪತ್ತಿಯ ಕಾಲ ಇಲ್ಲ. ವರ್ಷದ ಯಾವ ತಿಂಗಳಿನಲ್ಲಾದರೂ ಮರಿ ಹಾಕಬಲ್ಲುದು. 2–3 ವರ್ಷಗಳಿಗೊಮ್ಮೆ ಮರಿ ಹಾಕುತ್ತದೆ. ಮರಿಗಳ ಸಂಖ್ಯೆ ಸೂಲಿಗೆ 1–6. ಗರ್ಭಾವಧಿ 90–96 ದಿವಸಗಳು. ಆಗತಾನೆ ಹುಟ್ಟಿದ ಮರಿ ಸುಮಾರು 30 ಸೆಂಮೀ ಉದ್ದವಿದ್ದು 500 ಗ್ರಾಂ ತೂಗುತ್ತದೆ. ಮರಿ ಕಣ್ಣು ತೆರೆದಿರುವುದಿಲ್ಲ. ಇದರ ಮೈಬಣ್ಣ ಹಳದಿ. ಅದರ ಮೇಲೆಲ್ಲ ಚಿಕ್ಕ ಕಪ್ಪು ಮಚ್ಚೆಗಳಿರುತ್ತವೆ. ಆರು ತಿಂಗಳ ಅನಂತರ ಮಚ್ಚೆಗಳು ಮಾಯವಾಗುತ್ತವೆ. ಮರಿಗಳು 1–2 ವರ್ಷ ವಯಸ್ಸಿನ ವರೆಗೂ ತಾಯಿಯೊಂದಿಗೇ ಇದ್ದು ಅನಂತರ ಸ್ವತಂತ್ರ ಜೀವನ ಆರಂಭಿಸುತ್ತವೆ. ಕೂಗರ್‌ನ ಆಯಸ್ಸು ಸುಮಾರು 20 ವರ್ಷಗಳು. ***

**ಕೂಡುಜೀವನ:** ಭಿನ್ನಜಾತಿಯ ಪ್ರಾಣಿಗಳ ಪರಸ್ಪರಾವಲಂಬನೆಯೇ 'ಕೂಡುಜೀವನ'. ಒಂದು ಪ್ರಾಣಿ ಹಾಗೂ ಸಸ್ಯದ ಸಂಬಂಧದಿಂದ ಎರಡು ಜೀವಿಗಳಿಗೆ ಉಂಟಾಗುವ ಪರಸ್ಪರ ಅನುಕೂಲ ಸಹ ಕೂಡುಜೀವನವಾಗಬಹುದು.



ಕಲ್ಲು ಹೂವಿನಲ್ಲಿ (ಶಿಲಾವಲ್ಕ) ಪಾಚಿ (ಆಲ್ಗೆ) ಮತ್ತು ಫಲಜೈಗಳಿಗಿರುವ ಸಂಬಂಧ ಸಹಜೀವನಕ್ಕೆ ಉತ್ತಮ ನಿದರ್ಶನವಾಗಿದೆ. ಈ ರೀತಿಯ ಕೂಡುಜೀವನದಲ್ಲಿ ಎರಡು ಜೀವಿಗಳಿಗೂ ಲಾಭವುಂಟಾಗುತ್ತದೆ. ಹೇಗೆಂದರೆ ಪಾಚಿಗೆ, ಫಲಜೈ (ಶಿಲೀಂಧ್ರ) ಆಶ್ರಯವಾಗಿರುವುದಲ್ಲದೆ. ತೇವವನ್ನೊದಗಿಸುತ್ತದೆ. ಇದಕ್ಕೆ ಬದಲಾಗಿ ಪಾಚಿ, ಶಿಲೀಂಧ್ರಕ್ಕೆ ಆಹಾರವನ್ನೊದಗಿಸುತ್ತದೆ. ಹೀಗೆ ಕೂಡುಜೀವನದಿಂದ ಎರಡು ಜೀವಿಗಳ ಸಂಬಂಧ ಒಂದು ವಿಧದ ಪರೋಪಜೀವನದ ರೀತಿಯದಾಗಿದೆ.

ಇನ್ನೊಂದು ಉತ್ತಮ ಉದಾಹರಣೆ ಕೊಡುವುದಾದರೆ ನೈಲ್ ಪ್ಲೋವರ್ ಹಕ್ಕಿಯ ಹಾಗೂ ಮೊಸಳೆಯ ಕೂಡು ಜೀವನ. ಮೊಸಳೆಯ ಬಾಯಿಯೊಳಗೆ, ಜಿಗಣೆಯು ರಕ್ತವನ್ನು ಹೀರುತ್ತಾ ಪರಾವಲಂಬಿಯಾಗಿರುತ್ತದೆ. ಆದರೆ ನೈಲ್ ಪ್ಲೋವರ್ ಹಕ್ಕಿಯು, ಬಹಳ ಜಾಣತನದಿಂದ ಮೊಸಳೆಯ ಅಗಲವಾದ ಬಾಯಿಯೊಳಗೆ ನುಗ್ಗಿ ಪರಾವಲಂಬಿಯಾಗಿರುವ ಜಿಗುಣೆಯನ್ನು ಹೆಕ್ಕಿಕೊಳ್ಳುತ್ತದೆ. ಹೀಗೆ ಹಕ್ಕಿಯ ದೃಷ್ಟಿಯಿಂದ ಆಹಾರವೂ, ಮೊಸಳೆಯ ದೃಷ್ಟಿಯಿಂದ ಶತ್ರುವನ್ನು ನಾಶಮಾಡುವಂಥದೂ, ಪರಸ್ಪರ ಹೊಂದಿಕೆಯುಳ್ಳ ಕೂಡುಜೀವನಕ್ಕೆ ಇನ್ನೊಂದು ಮುಖ್ಯ ನಿದರ್ಶನ.

ಇದರಂತೆ, ಸಾರಜನಕವು ಬ್ಯಾಕ್ಟೀರಿಯ ಮೂಲಕ ಸಸ್ಯಗಳಲ್ಲಿ ಬೇರಿನಲ್ಲಿ ಗಂಟಾಗಿ ಮಾರ್ಪಟ್ಟು ಸ್ಥಿರತೆಹೊಂದುತ್ತದೆ. ಕೆಸವಿನ ಎಲೆ ಮತ್ತು ಇರುವೆ ಸಹಾ ಕೂಡು ಜೀವನಕ್ಕೆ ಒಂದು ಉತ್ತಮ ರೀತಿಯ ಉದಾಹರಣೆಯಾಗಿದೆ.

ಹೀಗೆ ಅನ್ಯೋನ್ಯ ಸಂಬಂಧ ಬೆಳೆಸುವ ಜೀವಿಗಳಿಗೆ ಪರಸ್ಪರ ಲಾಭವಿರುತ್ತದೆ. ಇಂತಹ ಸಂಬಂಧವು ಕೂಡ ಬಹಳ ನಿಕಟವಾದುದು. ಕಾರಣ, ಒಂದು ಸಂಬಂಧದಿಂದ ಮತ್ತೊಂದು ಜೀವಿಯನ್ನು ಬೇರ್ಪಡಿಸಿದರೆ, ಎರಡನೆಯದರ ಜೀವನ ಕಷ್ಟವಾದುದೇ. (ಎಂ.ಎನ್.ವಿ.)

**ಕೂಡೂ:** ಆಫ್ರಿಕದ ನಿವಾಸಿಯಾದ ಸಮಾಂಗುಲಿ ಪಾದವುಳ್ಳ ಒಂದು ಸ್ತನಿ. ಆರ್ಟಿಯೊಡ್ಯಾಕ್ಟೈಲ ಗಣಕ್ಕೂ ಬೋವಿಡೆ ಕುಟುಂಬಕ್ಕೂ ಸೇರಿದೆ. ಟ್ರಜೆಲಫಸ್ ಎಂಬುದು ಈ ಜಾತಿಯ ವೈಜ್ಞಾನಿಕ ನಾಮ. ಇದರಲ್ಲಿ ಟ್ರ. ಸ್ಟ್ರೆಪ್ಸಿಸಿರಸ್ (ಹಿರಿಯ ಕೂಡೂ) ಮತ್ತು ಟ್ರ. ಇಂಬರ್ಬಿಸ್(ಕಿರಿಯ ಕೂಡೂ) ಎಂಬ ಎರಡು ಪ್ರಭೇದಗಳಿವೆ. ಮೊದಲನೆಯ ಬಗೆ ಝಾಂಬೆಸಿ ನದಿಯ ದಕ್ಷಿಣಕ್ಕೆ ಅಂಗೋಲದಿಂದ ಹಿಡಿದು ಎಥಿಯೋಪಿಯದ ವರೆಗೂ ವ್ಯಾಪಿಸಿದೆ. ಎರಡನೆಯ ಬಗೆಯದು ಸೋಮಾಲಿಯ ರಾಜ್ಯ ಮತ್ತು ಪೂರ್ವ ಆಫ್ರಿಕದ ಪೂರ್ವಭಾಗಗಳಲ್ಲಿ ಕಂಡುಬರುತ್ತದೆ.

ಸಾರಂಗ ಮತ್ತು ಕಡವೆಗಳನ್ನು ಹೆಚ್ಚು ಕಡಿಮೆ ಹೋಲುವ ಕೂಡೂ ಬಹಳ ಚೆಲುವಾದ ಪ್ರಾಣಿಯೆಂದು ಹೆಸರಾಗಿದೆ. ಹಿರಿಯ ಕೂಡೂವಿನ ಗಂಡು ಸುಮಾರು 127–180 ಸೆಂಮೀ ಎತ್ತರವೂ (ಭುಜದ ಬಳಿ) 210–245 ಸೆಂಮೀ ಉದ್ದವೂ ಇದೆ. ಬಾಲ ಸುಮಾರು 45 ಸೆಂಮೀ ಉದ್ದ ಇದೆ. ತೂಕ ಸುಮಾರು 270 ಕಿಗ್ರಾಂ ಮೈಬಣ್ಣ ಕೆಂಗಂದಿನಿಂದ ಹಿಡಿದು ನೀಲಿಮಿಶ್ರಿತ ಬೂದು ಬಣ್ಣದವರೆಗೆ ವ್ಯತ್ಯಾಸವಾಗುತ್ತದೆ. ಮೈಮೇಲೆ ಭುಜದಿಂದ ಪೃಷ್ಠದವರೆಗೆ 4–10 ಬಿಳಿಯ ಅಡ್ಡಪಟ್ಟಿಗಳಿವೆ. ಮುಖದ ಮೇಲೆ ಬಿಳಿಯ ನಾಮದಂತಿರುವ ಎರಡು ಪಟ್ಟಿಗಳಿವೆ. ಕೆನ್ನೆ ಮತ್ತು ಎದೆಯ ಮೇಲೆ ಬಿಳಿಮಚ್ಚೆಗಳಿವೆ. ಗಂಟಲು ಭಾಗದಲ್ಲಿ ಇಳಿಬಿದ್ದಿರುವ ಉದ್ದಕೂದಲಿನ ಕೇಸರವಿದೆ. ಗಂಡು ಕೂಡೂವಿನಲ್ಲಿ ಉದ್ದನೆಯ ಬಿರಡೆ ತಿರುಪಿನಂಥ ಎರಡು ಕೊಂಬುಗಳಿವೆ. ಹೆಣ್ಣಿನಲ್ಲಿ ಕೊಂಬುಗಳಿಲ್ಲ.

ಸಾಮಾನ್ಯವಾಗಿ ಇವು ಕುರುಚಲು ಕಾಡಿನ ಅಥವಾ ವೃಕ್ಷಭರಿತ ಪರ್ವತಪ್ರದೇಶಗಳಲ್ಲೇ ವಾಸಿಸುತ್ತವೆ. ಗಂಡು ಹೆಣ್ಣು ಜೊತೆಯಾಗಿ ಇಲ್ಲವೆ 6–7 ಪ್ರಾಣಿಗಳ ಸಣ್ಣ ಹಿಂಡುಗಳಲ್ಲಿ ಇರುವುದೇ ವಾಡಿಕೆ. ಅಪರೂಪವಾಗಿ ಒಂಟೊಂಟಿಯಾಗಿರುವುದೂ ಉಂಟು. ಮರಗಿಡಗಳ ಚಿಗುರುಗಳನ್ನು ಮೆಲ್ಲುವ ಇವು ಸಾಧಾರಣವಾಗಿ ಹಗಲೆಲ್ಲ ಬೆಟ್ಟದ ಕಮರಿಗಳ ವಿವಿಕ್ತ ಸ್ಥಳಗಳಲ್ಲಿ ಹುದುಗಿದ್ದು ಸಂಜೆ ಇಲ್ಲವೆ ಬೆಳಗಿನ ಜಾವ ಹೊರಬರುತ್ತವೆ. ಇವುಗಳ ಶ್ರವಣಶಕ್ತಿ ಬಲುಚುರುಕು. ಶತ್ರುಗಳ ಬರವಿನ ಸುಳಿವನ್ನು ತಿಳಿದು ಕ್ಷಣಾರ್ಧದಲ್ಲಿ ನೆಗೆದು ಮಾಯವಾಗುತ್ತವೆ. ನೆಗೆತಕ್ಕೆ ಹೆಸರಾದ ಇವು ಸುಮಾರು 2–2.5 ಮೀ ಎತ್ತರದ ಪೊದೆಗಳನ್ನು ಸರಾಗವಾಗಿ ನೆಗೆಯಬಲ್ಲವು. ಹೆಣ್ಣು ಸುಮಾರು 212 ದಿನಗಳ ಗರ್ಭಧಾರಣೆಯ ಅವಧಿಯ ಅನಂತರ ಒಂದು ಮರಿಯನ್ನು ಈಯುತ್ತದೆ.

ಕಿರಿಯ ಕೂಡೂ ಹಿರಿಯದಕ್ಕಿಂತ ಗಾತ್ರದಲ್ಲಿ ಚಿಕ್ಕದು; ಸು. 101 ಸೆಂಮೀ ಎತ್ತರ ಇರುತ್ತದೆ. ಇದರ ಕೊಂಬುಗಳೂ ಚಿಕ್ಕವು. ಮೈ ಬಣ್ಣ ಹಳದಿಮಿಶ್ರಿತ ಬೂದು. ಇದರಲ್ಲಿ ಗಂಟಲಿನ ಕೇಸರ ಇಲ್ಲ. ***

**ಕೂದಲು:** ಸ್ತನಿಗಳ ಹೊರ ಚರ್ಮದ (ಎಪಿಡರ್ಮಿಸ್) ಪದರದಿಂದ ಹುಟ್ಟಿ ಬೆಳೆದು ದೇಹದ ತುಪ್ಪುಳು ಅಥವಾ ಹೊದಿಕೆಯನ್ನು ಉಂಟುಮಾಡುವ ಎಳೆರೂಪದ ನಿರ್ಜೀವ ಬಾಹ್ಯ ಬೆಳೆವಣಿಗೆ. ಕೂದಲು ಬಹಳ ಉದ್ದವಾಗಿಯೊ ಇಲ್ಲವೆ ಅತಿ ಕಿರಿದಾಗಿಯೊ ಇರಬಹುದು. ಇದರಲ್ಲಿ ಕೆರಟಿನ್ ಎಂಬ ವಿಶೇಷ ಬಗೆಯ ವಸ್ತುವಿನಿಂದ ಆವೃತವಾದ ಹಲವಾರು ಜೀವಕೋಶಗಳಿವೆ. ಇವೆಲ್ಲ ಒಟ್ಟಿಗೆ ಕೂಡಿಕೊಂಡು ಎಳೆಯಂಥ ರಚನೆಯಾಗುತ್ತದೆ. ಸ್ತನಿಗಳಲ್ಲಿ ಮಾತ್ರ ಕಂಡುಬರುವ ಈ ವಿಶೇಷ ರಚನೆ ಪ್ರಾಣಿಪ್ರಪಂಚದ ಬೇರಾವ ಪ್ರಾಣಿಗಳಲ್ಲೂ ಇಲ್ಲ. ಈ ಕಾರಣದಿಂದ ಸ್ತನಿ ಗುಂಪಿಗೆ ಫೈಲಿಫೆರ(ಅಂದರೆ ಕೂದಲುಳ್ಳ ಪ್ರಾಣಿಗಳು) ಎಂಬ ಹೆಸರನ್ನು ಕೊಡಬೇಕೆಂಬ ಸೂಚನೆಯೂ ಇದೆ. ಸ್ತನಿಗಳಲ್ಲಿ ಮಾತ್ರ ಕೂದಲು ಕಂಡುಬಂದರೂ ಸ್ತನಿಗಳಲ್ಲದ ಬೇರೆ ಪ್ರಾಣಿಗಳ ದೇಹದ ಮೇಲಿರುವ ಒರಟಾದ, ಬಿರುಸಾದ ಎಳೆಗಳಂಥ ರಚನೆಗಳಿಗೂ, ಸಸ್ಯಗಳ ಕಾಂಡ ಬೇರು ಮತ್ತು ಎಲೆಗಳ ಮೇಲೆ ಕಾಣಬರುವ ಏಕಕೋಶಿ ಅಥವಾ ಬಹುಕೋಶಿ ಎಳೆಗಳಿಗೂ ಕೂದಲು ಎಂಬ ಹೆಸರೇ ಇದೆ. ಆದರೆ ಇವಕ್ಕೂ ಸ್ತನಿಗಳ ಕೂದಲಿಗೂ ಭಿನ್ನತೆಯಿದೆ. ಈ ಲೇಖನದಲ್ಲಿ ಸ್ತನಿಗಳ (ಮನುಷ್ಯನೂ ಸೇರಿ) ಕೂದಲನ್ನು ಮಾತ್ರ ವಿವರಿಸಲಾಗಿದೆ.

ಕೂದಲು ಇಲ್ಲದ ಸ್ತನಿಯೇ ಇಲ್ಲ. ಆದರೆ ಇದರ ಮೊತ್ತದಲ್ಲಿ ವ್ಯತ್ಯಾಸವಿದೆ. ಕೆಲವು ಪ್ರಾಣಿಗಳ ದೇಹದಲ್ಲಿ ಕೂದಲು ಬಲು ವಿರಳವಾಗಿದೆ. ಉದಾಹರಣೆಗೆ ಜಲವಾಸಿಯಾದ ತಿಮಿಂಗಿಲದಲ್ಲಿ ಅದರ ಮೂತಿಯ ಮೇಲೆ ಮಾತ್ರ ಕೆಲವೇ ಕೂದಲುಗಳಿವೆ. ಈ ಸ್ಥಿತಿಗೆ ಹೈಪೊಟ್ರೈಕೋಸಿಸ್ ಎಂದು ಹೆಸರು. ಇನ್ನು ಕೆಲವು ಪ್ರಾಣಿಗಳ ದೇಹವೆಲ್ಲ ಕೂದಲುಮಯ. ಉದಾಹರಣೆಗೆ ಕರಡಿ, ಈ ಸ್ಥಿತಿಗೆ ಹೈಪರ್‌ಟ್ರೈಕೋಸಿಸ್ ಎಂದು ಹೆಸರು. ಆದರೆ ಎಲ್ಲ

ಸ್ತನಿಗಳಲ್ಲೂ ಅವುಗಳ ಗರ್ಭಾವಸ್ಥೆಯಲ್ಲಿ ಕೂದಲು ಇದ್ದೇ ಇರುತ್ತದೆ. ಮನುಷ್ಯನಲ್ಲಿ ಅಂಗೈ, ಅಂಗಾಲು, ತುಟಿ, ಮೊಲೆತೊಟ್ಟು, ಹೊಕ್ಕುಳು ಮುಂತಾದ ಕೆಲವು ಭಾಗಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳಲ್ಲೂ ಕೂದಲು ಇದೆ.

ಕೂದಲಿನ ಬಗೆಗಳು: ಕೂದಲಿನ ಬಾಹ್ಯರೂಪದಲ್ಲಿ ಬಣ್ಣದಲ್ಲಿ ವೈವಿಧ್ಯ ಉಂಟು. ಕೆಲವು ರೀತಿಯ ಕೂದಲುಗಳು ನಯ, ನುಣುಪು ಮತ್ತು ಮೃದು. ಇನ್ನು ಕೆಲವು ಗಡುಸು ಮತ್ತು ಒರಟು. ಹಾಗೆಯೇ ಕೂದಲು ನೀಳವಾಗಿರಬಹುದು(ಸ್ಟ್ರೇಟ್), ಅಲೆಗಳಂತಿರಬಹುದು(ವೇವಿ) ಇಲ್ಲವೆ ಗುಂಗುರುಗುಂಗುರಾಗಿರಬಹುದು (ಕರ್ಲಿ). ಮಾನವನ ವಿವಿಧ ಬುಡಕಟ್ಟುಗಳಲ್ಲಿ ಈ ವ್ಯತ್ಯಾಸಗಳನ್ನು ಚೆನ್ನಾಗಿ ಕಾಣಬಹುದು. ಮಂಗೋಲಾಯ್ಡ್‌ಗಳ ಕೂದಲು ಉದ್ದ. ನೀಳ ಮತ್ತು ಒರಟು. ವಿಪರೀತ ಗುಂಗುರಾಗಿರುವ ಕೂದಲು ನೀಗ್ರಾಯಿಡ್‌ಗಳಲ್ಲಿ ಹೆಚ್ಚು. ಮೃದುವಾದ, ರೇಷ್ಮೆಯಂಥ, ಅಲೆಗಳ ರೂಪದ ಕೂದಲು ಕಾಕಸಾಯಿಡ್‌ಗಳಲ್ಲಿ ಕಂಡುಬರುತ್ತದೆ. ಇವು ಮೂರು ಮುಖ್ಯ ಬಗೆಗಳಾದರೆ ಇವುಗಳ ಮಧ್ಯವರ್ತಿ ಬಗೆಯ ಕೂದಲುಗಳನ್ನೂ ಕಾಣಬಹುದಾಗಿದೆ. ವಿವಿಧ ಬಗೆಯ ಕೂದಲುಗಳ ಅಡ್ಡಸೀಳಿಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಅವುಗಳ ಆಕಾರಗಳಲ್ಲಿನ ವ್ಯತ್ಯಾಸಗಳನ್ನು ಗಮನಿಸಬಹುದು. ನೀಳವಾದ ಕೂದಲಿನಲ್ಲಿ ಅಡ್ಡಸೀಳಿಕೆ ಗುಂಡಗಿರುತ್ತದೆ. ಅಲೆಗಳಂಥ ಕೂದಲಿನ ಅಡ್ಡಸೀಳಿಕೆ ಅಂಡಾಕಾರವನ್ನು ತೋರುತ್ತದೆ. ಗುಂಗುರುಕೂದಲಿನ ಅಡ್ಡಸೀಳಿಕೆ ಚಪ್ಪಟೆಯಾಗಿ ಅವರೆ ಬೀಜದಾಕಾರದಲ್ಲಿ ಇರುತ್ತದೆ.

ಕೂದಲಿನ ಬಣ್ಣದಲ್ಲಿ ನಸುಕಂದಿನಿಂದ ಹಿಡಿದು ಕರಿಬಣ್ಣದವರೆಗೂ ವ್ಯತ್ಯಾಸವನ್ನು ಕಾಣಬಹುದು. ಕಾಕಸಾಯಿಡ್ ಬುಡಕಟ್ಟಿನಲ್ಲಿ ನಸುಕಂದು ಬಣ್ಣ ಪ್ರಮುಖವಾದರೆ ನೀಗ್ರಾಯಿಡ್‌ಗಳಲ್ಲಿ ಕಪ್ಪುಬಣ್ಣ ಹೆಚ್ಚು ಪ್ರಾಮುಖ್ಯ. ಕೂದಲಿನ ಬಣ್ಣಕ್ಕೆ ಮುಖ್ಯ ಕಾರಣ ಇದರ ಒಳಗಿನ ಜೀವಕೋಶ'ಗಳಲ್ಲಿರುವ ಮೆಲನಿನ್ ಎಂಬ ವರ್ಣಕ. ಇದರ ಪ್ರಮಾಣ ವಿವಿಧ ಬಗೆಯ ಕೂದಲುಗಳಲ್ಲಿ ಬೇರೆಬೇರೆಯಾಗಿದ್ದು ಕೂದಲಿನ ಒಟ್ಟು ಬಣ್ಣದ ವೈವಿಧ್ಯಕ್ಕೆ ಕಾರಣವಾಗಿದೆ. ಅಲ್ಲದೆ ಕೂದಲಿನ ಕೇಂದ್ರಭಾಗದ ಜೀವಕೋಶಗಳ ನಡುವೆ ಇರುವ ಸೂಕ್ಷ್ಮವಾದ ಗಾಳಿಗುಳ್ಳೆಗಳೂ ಕೂದಲಿನ ಹೊರಮೈಯೂ ಕೂದಲಿನ ವರ್ಣ ವ್ಯತ್ಯಾಸಕ್ಕೂ ಹೊಳಪಿಗೂ ಕಾರಣಗಳೆಂದು ತಿಳಿದುಬಂದಿದೆ.

ಮೆಲನಿನ್ ವರ್ಣಕದ ಉತ್ಪತ್ತಿ ನಿಂತಾಗ ಕೂದಲಿನಲ್ಲಿರುವ ವರ್ಣಕ ನಾಶವಾಗಿ ಕೂದಲು ನೆರೆಯುತ್ತದೆ. ಸಾಮಾನ್ಯವಾಗಿ ಮನುಷ್ಯರಲ್ಲಿ ಕೂದಲಿನ ನೆರೆಯುವಿಕೆ ೪೦-೪೫ ವರ್ಷ ವಯಸ್ಸಾದ ಮೇಲೆ ತಲೆಯ ಎರಡೂ ಬದಿಗಳಲ್ಲಿ ಕಿವಿಯ ಮೇಲ್ಗಡೆ ಆರಂಭವಾಗಿ ಕ್ರಮೇಣ ತಲೆಯನ್ನೆಲ್ಲ ಆವರಿಸುತ್ತದೆ. ದೇಹದ ಉಳಿದ ಭಾಗಗಳಲ್ಲೂ ಕೆಲಕಾಲಾನಂತರ ಕೂದಲು ನೆರೆಯುವುದುಂಟು. ಆದರೆ ಅನೇಕ ವೇಳೆ ಕೆಲವು ಕಾಯಿಲೆಗಳಿಂದ, ಮಾನಸಿಕ ಆಘಾತದಿಂದ ಕೂದಲು ಬೇಗನೆ ನೆರೆಯುವುದೂ ಇದೆ. ಅಲ್ಲದೆ ಬಹಳ ಚಿಕ್ಕ ವಯಸ್ಸಿನಲ್ಲೆ ಕೂದಲು ನೆರೆಯಬಹುದು. ಹೀಗಾಗುವುದನ್ನು ಅಕಾಲನೆರೆ ಎನ್ನುತ್ತಾರೆ. ಇದು ಆನುವಂಶಿಕ ದೋಷವೆಂದು ತಿಳಿದಿದೆ. ಮನುಷ್ಯರಲ್ಲಿ ಕೂದಲ ನೆರೆ ಜೀವಮಾನದಲ್ಲಿ ಒಂದು ಬಾರಿ ಮಾತ್ರ ಆಗುವುದಾದರೆ ಕೆಲವು ಪ್ರಾಣಿಗಳಲ್ಲಿ ವರ್ಷದ ಋತುಗಳಿಗನುಗುಣವಾಗಿ ಬಿಳಿ ಮತ್ತು ಕರಿಯ ಕೂದಲುಗಳು ಪರ್ಯಾಯವಾಗಿ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಮೇರು ಪ್ರದೇಶದ ಮೊಲ ಬೇಸಗೆಯಲ್ಲಿ ಕಪ್ಪಗಿರುವ ಇವುಗಳ ಕೂದಲು ಚಳಿಗಾಲ ಬಂದಂತೆ ವರ್ಣರಹಿತವಾಗುತ್ತ ಬಂದು ಕೊನೆಗೆ ಬಿಳಿಬಣ್ಣವಾಗುತ್ತವೆ ಮತ್ತೆ ಬೇಸಗೆ ಬಂದಾಗ ಕೂದಲು ಕಪ್ಪಗಾಗುತ್ತವೆ.

ಕೂದಲಿನ ರೂಪರಚನೆ ಮತ್ತು ಕಾರ್ಯವ್ಯಾಪ್ತಿಯ ಆಧಾರದ ಮೇಲೆ ಮನುಷ್ಯನ ದೇಹದಲ್ಲಿ ಮೂರು ಬಗೆಯ ಕೂದಲನ್ನು ಇತರ ಸ್ತನಿಗಳ ದೇಹದಲ್ಲಿ ಎರಡು ಬಗೆಯ ಕೂದಲನ್ನು ಗುರುತಿಸಬಹುದು.

ಮನುಷ್ಯನ ಕೂದಲು ೩ ಬಗೆ: ೧. ಲ್ಯಾನುಗೋ-ಗರ್ಭದೊಳಗಿನ ಶಿಶುವಿನ ದೇಹದ ಮೇಲಿರುವ ಬಗೆ. ಈ ಬಗೆಯಕೂದಲು ಸಾಮಾನ್ಯವಾಗಿ ಕೂಸು ಹುಟ್ಟುವುದಕ್ಕೆ ೫-೬ ತಿಂಗಳ ಮುಂಚೆಯೆ ಹುಟ್ಟಿ ಸುಮಾರು ೨ ತಿಂಗಳ ತನಕ ಬೆಳೆಯುತ್ತದೆ. ಇದು ಬಲು ಮೃದುವಾಗಿಯೂ ಸೂಕ್ಷ್ಮವಾಗಿಯೂ ತೆಳುವಾಗಿಯೂ ಇದೆ. ಬಣ್ಣ ಇಲ್ಲ. ಕೂಸು ಹುಟ್ಟುವುದಕ್ಕೆ ಸ್ವಲ್ಪ ಮುಂಚೆ ಇಲ್ಲವೆ ಹುಟ್ಟಿದ ಕೆಲವೇ ದಿನಗಳಲ್ಲಿ ಉದುರಿಹೋಗುತ್ತದೆ. ೨. ವೆಲಸ್- ಕೂಸು ಹುಟ್ಟಿದ ಮೇಲೆ ಕ್ರಮೇಣ ದೇಹದ ಮೇಲೆಲ್ಲ ಬೆಳೆಯುವ ಕೂದಲು. ಇದು ಸಹ ಮೃದುವಾಗಿ ಚಿಕ್ಕದಾಗಿ ಇದೆ. ಬಣ್ಣ ಹೆಚ್ಚಾಗಿಲ್ಲ. ವೆಲಸ್ ಕೂದಲು ಬೆಳೆಯುತ್ತಿರುವಂತೆಯೆ ಹುಬ್ಬು, ತಲೆ, ರೆಪ್ಪೆಗಳ ಮೃದುವಾದ ಲ್ಯಾನುಗೊ ಕೂದಲುಗಳು ಕ್ರಮೇಣ ಉದ್ದವಾಗುತ್ತ ಬರುತ್ತವೆ. ಕೆಲ ಕಾಲಾನಂತರ ಉದ್ದವಾದ ಹೆಚ್ಚು ಬಿರುಸಾದ ಕೂದಲುಗಳು ಇಲ್ಲೆಲ್ಲ ಬೆಳೆಯುತ್ತವೆ. ೩.ಟರ್ಮಿನಲ್- ಪ್ರೌಢಾವಸ್ಥೆಯನ್ನು ತಲುಪಿದ ಅನಂತರ ಮೂಡುವ ಕೂದಲು. ಉಳಿದೆರಡು ಬಗೆಗಳಿಗಿಂತ ಹೆಚ್ಚು ಉದ್ದವೂ ಒರಟೂ ಬಣ್ಣವುಳ್ಳದ್ದೂ ಆಗಿದೆ. ಇದು ಸಾಮಾನ್ಯವಾಗಿ ಕಂಕುಳು, ಮುಂಡದ ಕೆಲವು ನಿರ್ದಿಷ್ಟ ಪ್ರದೇಶಗಳು, ಕೈಕಾಲುಗಳು, ಜನನೇಂದ್ರಿಯಗಳ ಸುತ್ತಣ ಪ್ರದೇಶ ಮತ್ತು ಗಂಡಸರಲ್ಲಿ ಕೆನ್ನೆ ಮತ್ತು ಮೇಲ್ತುಟಿಯ ಮೇಲ್ಭಾಗದಲ್ಲಿ ಬೆಳೆಯುತ್ತದೆ. ಅಪವಾದವಾಗಿ ಹೆಂಗಸರಲ್ಲೂ ಕೆನ್ನೆಯ ಮೇಲೆ, ತುಟಿಯ ಮೇಲೆ ಕಾಣಿಸಿಕೊಳ್ಳುವುದುಂಟು. ಟರ್ಮಿನಲ್ ಕೂದಲಿನ ಒಟ್ಟು ಪ್ರಮಾಣ ವ್ಯಕ್ತಿ, ಬುಡಕಟ್ಟು, ವ್ಯಕ್ತಿಯ ಲಿಂಗ ಇವುಗಳಿಗೆ ಅನುಗುಣವಾಗಿ ಭಿನ್ನತೆಯನ್ನು ಪ್ರದರ್ಶಿಸುತ್ತದೆ. ಸಾಮಾನ್ಯವಾಗಿ ಗಂಡಸಿನಲ್ಲಿ ಇದರ ಪ್ರಮಾಣ ಹೆಚ್ಚು. ಹೆಂಗಸಿನಲ್ಲಿ ವೆಲಸ್ ಕೂದಲಿನ ಪ್ರಮಾಣವೇ ಹೆಚ್ಚು. ಒಟ್ಟಾರೆ ಹೇಳುವುದಾದರೆ ಮನುಷ್ಯನಲ್ಲಿ ಟರ್ಮಿನಲ್ ಕೂದಲಿನ ಪ್ರಮಾಣ ಕಡಿಮೆ. ಇತರ ಸ್ತನಿಗಳಲ್ಲಿ ಹೆಚ್ಚು.

ಪ್ರಾಣಿಗಳಲ್ಲಿ ಸ್ಪರ್ಶಗ್ರಾಹಿ (ಟ್ಯಾಕ್ಟೈಲ್) ಕೂದಲು ಮತ್ತು ಹೊದಿಕೆಯ (ಕೋಟ್) ಕೂದಲು ಎಂಬ ಎರಡು ಬಗೆಗಳಿವೆ. ಸ್ಪರ್ಶಗ್ರಾಹಿ ಕೂದಲುಗಳ ಬುಡದಲ್ಲಿ ವಿಪುಲವಾಗಿ ಕವಲೊಡೆದ ರಕ್ತನಾಳ ಮತ್ತು ನರಗಳಿದ್ದು ಈ ಕೂದಲುಗಳು ಇವುಗಳ ಹೆಸರೆ ಹೇಳುವಂತೆ ಸ್ಪರ್ಶಕ್ಕೆ ಸೂಕ್ಷ್ಮವೇದಿಗಳಾಗಿವೆ. ಇವಕ್ಕೆ ವೈಬ್ರಿಸೀ ಎಂಬ ಹೆಸರೂ ಇದೆ. ಉದಾಹರಣೆಗೆ ಬೆಕ್ಕು , ಇಲಿ ಮುಂತಾದ ಪ್ರಾಣಿಗಳ ಮೂತಿಯಲ್ಲಿ ಈ ಬಗೆಯ ಕೂದಲುಗಳಿವೆ. ಹೊದಿಕೆಯ ಕೂದಲುಗಳು ಪ್ರಾಣಿಯ ದೇಹಕ್ಕೆ ರಕ್ಷಣೆಯೊದಗಿಸುತ್ತವೆ. ಇವುಗಳಲ್ಲಿ ದೇಹದ ಬೆನ್ನುಭಾಗದ ಉದ್ದವಾದ ಮತ್ತು ಬಿರುಸಾದ ಕೂದಲು, ಹಾಗೂ ಹೊಟ್ಟೆಯ ಭಾಗದ ಸ್ವಲ್ಪ ಚಿಕ್ಕದಾದ ಮತ್ತು ಮೃದುವಾದ ಕೂದಲು ಎಂದು ಎರಡು ಬಗೆಗಳುಂಟು.

ಕೂದಲಿನ ರಚನೆ: ಕೂದಲಿನಲ್ಲಿ ಮೂರು ಮುಖ್ಯ ಭಾಗಗಳನ್ನು ಗುರುತಿಸಬಹುದು. ೧.ಚೂಪಾಗಿರುವ ಕೂದಲಿನ ತುದಿ. ೨.ರೋಮದಂಡ(ಹೇರ್ ಶಾಫ್ಟ್) ಮತ್ತು ೩. ಕೂದಲಿನ ಬೇರು ಅಥವಾ ಬುಡ (ಹೇರ್ ರೂಟ್). ಕೂದಲಿನ ಬೇರು ರೋಮಕೂಪ (ಹೇರ್ ಫಾಲಿಕಲ್) ಎಂಬ ವಿಶಿಷ್ಟ ಬಗೆಯ ಕೊಳವೆಯಂಥ ರಚನೆಯಲ್ಲಿ ಹುದುಗಿದೆ. ಎಪಿಡರ್ಮಿಸ್ ಪದರ ಡರ್ಮಿಸ್ ಪದರದೊಳಗೆ ನುಗ್ಗಿ ಉಂಟಾಗುವ ಕಿರಿದಾದ ರಚನೆಯೇ ರೋಮಕೂಪ. ಕೂದಲಿನ ಬೇರುಭಾಗ ಪೂರ್ಣವಾಗಿ ಬೆಳೆದು ನಿಂತಿರುವ ಕೂದಲುಗಳಲ್ಲಿ ಗೆಡ್ಡೆಯಂತೆ ಉಬ್ಬಿಕೊಂಡಿದೆ. ರೋಮಕೂಪದಿಂದ ಹೊರಚಾಚಿದ ಭಾಗವೆ ರೋಮದಂಡ. ಇದರ ಅಡ್ಡಸೀಳಿಕೆಯನ್ನು ಸೂಕ್ಷ್ಮದರ್ಶಕದಲ್ಲಿ ಪರಿಶೀಲಿಸಿದಾಗ ಇದರ ಕೇಂದ್ರಭಾಗದಲ್ಲಿ ಚಪ್ಪಟೆಯಾದ ಜೀವಕೋಶಗಳಿಂದ ಕೂಡಿದ ಮೆಡುಲ ಪ್ರದೇಶವೂ ಇದರ ಸುತ್ತ ಉದ್ದನೆಯ ಹಾಗೂ ಕೂದಲಿನ ಲಂಬಾಕ್ಷಕ್ಕೆ ಸಮಾಂತರವಾಗಿ ಜೋಡಣೆಗೊಂಡಿರುವ ಜೀವಕೋಶಗಳನ್ನೊಳಗೊಂಡ ಕಾರ್ಟೆಕ್ಸ್ ಪದರವೂ ಹೊರಭಾಗದಲ್ಲಿ ಹುರುಪುಗಳಂಥ ರಚನೆಗಳಿಂದ ಕೂಡಿದ ಕ್ಯೂಟಿಕಲ್ ಪದರವೂ ಇವೆ. ಮೆಡುಲದ ಜೀವಕೋಶಗಳ ನಡುವಣ ಪ್ರದೇಶಗಳಲ್ಲಿ ಅನೇಕ ಅವಕಾಶಗಳಿದ್ದು ಇಲ್ಲೆಲ್ಲ ಗಾಳಿ ತುಂಬಿರುತ್ತದೆ. ಕಾರ್ಟೆಕ್ಸಿನ ಜೀವಕೋಶಗಳಲ್ಲಿ ಮೆಲನಿನ್ ವರ್ಣಕವಿದೆ. ಹುರುಪೆಗಳು ಒಂದರ ಮೇಲೊಂದು ಚಾವಣಿಯ ಹಂಚುಗಳಂತೆ ಕೂದಲ ಮುಂತುದಿಯ ಕಡೆ ಮುಖ ಮಾಡಿದಂತೆ ಜೋಡಣೆಯಾಗಿವೆ. ಆದರೆ ಅಮೆರಿಕದ ಎರಿತಿಜಾನ್ ಎಂಬ ಮುಳ್ಳುಹಂದಿಯ ಬಿರುಗೂದಲುಗಳಲ್ಲಿ ಹುರುಪೆಗಳು ಕೂದಲಿನ ಬುಡದ ಕಡೆ ಮುಖ ಮಾಡಿದಂತೆ ಜೋಡಣೆಯಾಗಿವೆ. ರೋಮಕೂಪದ ಒಂದು ಪಕ್ಕದಲ್ಲಿ ಒಂದು ಮೇದೋಗ್ರಂಥಿಯೂ (ಸಿಬೇಷಿಯಸ್ ಗ್ಲಾಂಡ್) ಒಂದು ಬೆವರು ಗ್ರಂಥಿಯೂ ಇವೆ. ಮೇದೋಗ್ರಂಥಿ ಒಂದು ಬಗೆಯ ಜಿಡ್ಡು ಪದಾರ್ಥವನ್ನು ಸ್ರವಿಸುತ್ತದೆ. ಇದರಿಂದ ಚರ್ಮ ಮೃದುವಾಗಿರುವುದಲ್ಲದೆ ಒಣಹವೆಯಲ್ಲಿ ಬಿರುಕು ಬಿಡದಂತೆ ಇರುತ್ತದೆ. ದಿನಕ್ಕೆ ಸುಮಾರು ೧-೪ ಗ್ರಾಮಿನಷ್ಟು ಜಿಡ್ಡು ಒಟ್ಟು ದೇಹದಲ್ಲಿ ತಯಾರಾಗುತ್ತದೆ. ಚಳಿಗಾಲದಲ್ಲಿ ಜಿಡ್ಡಿನ ಉತ್ಪತ್ತಿ ಕಡಿಮೆ. ರೋಮಕೂಪಕ್ಕೆ ಹಲವಾರು ಸೂಕ್ಷ್ಮ ನರಗಳ ಮತ್ತು ರಕ್ತನಾಳಗಳ ಸಂಪರ್ಕ ಇದೆ. ಅಲ್ಲದೆ ಒಂದು ಪಕ್ಕದಲ್ಲಿ ಒಂದು ಸೂಕ್ಷ್ಮವಾದ ಸ್ನಾಯುವೂ ಇದೆ. ಈ ಸ್ನಾಯುವಿಗೆ ಅರೆಕ್ಟರ್ ಪೈಲಿ ಸ್ನಾಯು ಎಂದು ಹೆಸರು. ಇದರ ಕುಗ್ಗುವಿಕೆಯಿಂದ ಕೂದಲುಗಳು ನಿಮಿರುತ್ತವೆ. ನವುರೇಳುವುದು, ರೋಮಾಂಚನ ಇವೆಲ್ಲ ಇದರಿಂದ ಆಗುವ ಕ್ರಿಯೆಗಳೇ. ಬೆಕ್ಕು ರೇಗಿದಾಗ ಮೈಯುಬ್ಬಿಸುವುದು ಇದೇ ಕ್ರಿಯೆಯಿಂದ. ಡರ್ಮಿಸಿನ ವಿಶೇಷ ರಚನೆಯೊಂದು ಕೂದಲಿನ ಬೇರುಭಾಗದೊಳಗೆ ಚಾಚಿಕೊಂಡಿದೆ. ಇದಕ್ಕೆ ಪ್ಯಾಪಿಲ ಎಂದು ಹೆಸರು. ಇದರಲ್ಲಿ ಸೂಕ್ಷ್ಮವಾದ ಹಲವಾರು ರಕ್ತನಾಳಗಳಿವೆ. ಇದು ಕೂದಲಿನ ಬೆಳವಣಿಗೆಗೆ ಅವಶ್ಯವಾದ ಪೋಷಕಾಂಶಗಳನ್ನು ಪೂರೈಸುತ್ತದೆ.

ಕೂದಲಿನ ಬೆಳವಣಿಗೆ: ರೋಮಕೂಪದ ಬುಡದಲ್ಲಿರುವ ಕೆಲವು ವಿಶೇಷ ಬಗೆಯ ಜೀವಕೋಶಗಳ ವಿಭಜನೆಯಿಂದ ಕೂದಲು ಬೆಳೆಯುತ್ತದೆ. ಎಲ್ಲ ಬಗೆಯ ಕೂದಲುಗಳೂ ತಮ್ಮ ಬೆಳವಣಿಗೆಯಲ್ಲಿ ಏಕಪ್ರಕಾರವಾಗಿಲ್ಲ. ಕೂದಲಿನ ಬೆಳವಣಿಗೆಯಲ್ಲಿ ಎರಡು ಮುಖ್ಯ ಹಂತಗಳನ್ನು ಗುರುತಿಸಬಹುದು. ಒಂದು ಅನಾಜೆನ್ ಎಂಬ ಬೆಳವಣಿಗೆಯ ಹಂತ, ಇನ್ನೊಂದು ಟಿಲೋಜೆನ್ ಎಂಬ ವಿಶ್ರಾಂತಿಯ ಹಂತ. ಇವು ಒಂದರೊಡನೊಂದು

ಪರ್ಯಾಯವಾಗಿ ಸಾಗುತ್ತವೆ. ಇದರಿಂದ ಕೂದಲಿನ ಬೆಳವಣಿಗೆಯಲ್ಲಿ ಒಂದು ರೀತಿಯ ಚಕ್ರಗತಿಯನ್ನು ಕಾಣಬಹುದು. ಇದಕ್ಕೆ ಕೂದಲಿನ ಚಕ್ರ(ಹೇರ್ ಸೈಕಲ್) ಎಂದು ಹೆಸರು. ಇವೆರಡು ಹಂತಗಳಲ್ಲಿ ರೋಮಕೂಪ ಮತ್ತು ರೋಮದಂಡಗಳೆರಡೂ ಅವುಗಳಿಗೆ ವಿಶಿಷ್ಟವಾದ ಬದಲಾವಣೆಗಳನ್ನು ತೋರಿಸುತ್ತವೆ. ಅನಾಜೆನ್ ಸ್ಥಿತಿಯಲ್ಲಿ ರೋಮಕೂಪದ ನಾಳಗಳು ಪೂರ್ಣವಾಗಿ ತೆರೆದಿದ್ದು ಹೇರಳ ಪ್ರಮಾಣದಲ್ಲಿ ಪೋಷಕಾಂಶಗಳನ್ನು ಪೂರೈಸುತ್ತವೆ. ಟಿಲೋಜೆನ್ ಅವಧಿಯಲ್ಲಿ ರಕ್ತನಾಳಗಳ ಸಂಖ್ಯೆ ಕುಗ್ಗಿ ಪೋಷಕಾಂಶಗಳ ಪೂರೈಕೆ ಸ್ಥಗಿತವಾಗುತ್ತದೆ. ಮನುಷ್ಯನಲ್ಲಿ ಕೂದಲಿನ ಬೆಳವಣಿಗೆಯ ಅವಧಿ ಸುಮಾರು ೩ ಅಥವಾ ಹೆಚ್ಚು ವರ್ಷದಷ್ಟು ಇದೆ. ಇಲಿ ಮುಂತಾದ ಪ್ರಾಣಿಗಳಲ್ಲಿ ಇದು ಕೇವಲ ೧೭ ದಿವಸಗಳ ಕಾಲ ಇರುತ್ತದೆ. ಮನುಷ್ಯನ ತಲೆಗೂದಲು ದಿನಕ್ಕೆ ೦.೨–೦.೫ ಮಿಮೀ ಉದ್ದ ಬೆಳೆಯುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದು ಸಾಮಾನ್ಯವಾಗಿ ೫೫–೭೦ ಸೆಂಮೀ ಉದ್ದ ಬೆಳೆಯುತ್ತದೆ. ೧೫–೩೦ ವರ್ಷಗಳವರೆಗೆ ಶೀಘ್ರಗತಿಯಲ್ಲಿ ಬೆಳೆದು ಅನಂತರ ಕೆಲವು ವರ್ಷ ಏಕಪ್ರಕಾರವಾಗಿದ್ದು ೫೦–೬೦ ವರ್ಷದ ಅನಂತರ ವೇಗ ಕುಂಠಿತವಾಗುತ್ತದೆ. ಕೂದಲಿನ ಬೆಳವಣಿಗೆ ಹಲವಾರು ಕಾರಕಗಳಿಂದ ನಿಯಂತ್ರಿತವಾಗಿದೆ. ಪೋಷಕಾಂಶಗಳ ಪೂರೈಕೆ, ರೋಮಕೂಪದ ಗೆಡ್ಡೆಯ ಜೀವಕೋಶಗಳ ವಿಭಜನೆ ಮತ್ತು ಬೆಳವಣಿಗೆಗಳ ದರ, ಶೈತ್ಯ ಹಾಗೂ ಉಷ್ಣತೆ, ದೇಹದಲ್ಲಿ ಉತ್ಪತ್ತಿಯಾಗುವ ಥೈರಾಕ್ಸಿನ್ ಮುಂತಾದ ವಿಶೇಷ ರೀತಿಯ ಹಾರ್ಮೋನುಗಳು, ದೇಹದ ಆರೋಗ್ಯಸ್ಥಿತಿ ಮುಂತಾದುವು ಈ ಕಾರಕಗಳಲ್ಲಿ ಮುಖ್ಯವಾದುವು. ಜ್ವರ, ವಿಪರೀತ ರಕ್ತಸ್ರಾವ, ಶಸ್ತ್ರಚಿಕಿತ್ಸೆ, ಮುಂತಾದ ಪರಿಸ್ಥಿತಿಗಳಲ್ಲಿ ಕೂದಲಿನ ಬೆಳವಣಿಗೆಯ ಚಕ್ರ ನಿಂತು ಹೋಗಿರುತ್ತದೆ. ಈ ಸ್ಥಿತಿಗಳು ಪೂರ್ಣಗೊಂಡ ೨–೩ ತಿಂಗಳ ಅನಂತರ ಹೊಸ ಚಕ್ರ ಆರಂಭವಾಗಿ ಹೊಸ ಕೂದಲು ಹುಟ್ಟುತ್ತದೆ. ಹೀಗೆ ಹೊಸದಾಗಿ ಹುಟ್ಟುವ ಕೂದಲು ಹಳೆಯದನ್ನು ಬದಲಾಯಿಸುತ್ತದೆ. ಆಗ ಹಳೆಯ ಕೂದಲೆಲ್ಲ ಒಟ್ಟಿಗೆ ಉದುರಿ ಹೋಗುತ್ತವೆ. ಹೆರಿಗೆಯ ಅನಂತರ ಹಳೆಯ ಕೂದಲು ಉದುರಿ ಹೊಸ ಕೂದಲು ಹುಟ್ಟುವುದು ಈ ವಿಧಾನದಿಂದಲೇ.

ಕೂದಲನ್ನು ಮೇಲಿಂದ ಮೇಲೆ ಕತ್ತರಿಸುವುದರಿಂದ ಇದರ ಬೆಳವಣಿಗೆ ಹೆಚ್ಚುತ್ತದೆ ಎಂಬ ಭಾವನೆಯೂ ಸತ್ತಮೇಲೂ ಕೂದಲು ಬೆಳೆಯುತ್ತದೆ ಎಂಬುದೂ ನಿರಾಧಾರವಾದುವು. ಸತ್ತಮೇಲೆ ಚರ್ಮ ಆಕುಂಚನಗೊಂಡು ಕೂದಲು ಬೆಳೆದಂತೆ ಕಾಣುವುದೇ ಬಹುಶಃ ಈ ಭಾವನೆಗೆ ಕಾರಣವಾಗಿರಬಹುದು. ಯಾವ ಸ್ತನಿಯ ದೇಹದ ಮೇಲೂ ಒಮ್ಮೆ ಹುಟ್ಟಿದ ಕೂದಲು ಶಾಶ್ವತವಾಗಿರುವುದಿಲ್ಲ. ಪ್ರತಿಯೊಂದು ಪ್ರಾಣಿಯ ಜೀವಮಾನದಲ್ಲೂ ನಿರಂತರವಾಗಿ ಬದಲಾಗುತ್ತಿರುತ್ತದೆ.

ಕೆಲವು ಸ್ತನಿಗಳಲ್ಲಿ ಈ ಬದಲಾವಣೆ ದೇಹದ ಒಂದು ಭಾಗದಲ್ಲಿ ಆರಂಭವಾಗಿ ಕ್ರಮೇಣ ಇತರ ಭಾಗಗಳಿಗೆ ವಿಸ್ತರಿಸುತ್ತದೆ. ಉದಾಹರಣೆಗೆ ಇಲಿ, ಮೊಲ ಇತ್ಯಾದಿ. ಬೆಕ್ಕು, ಗಿನಿ ಹಂದಿ, ಮನುಷ್ಯ ಮುಂತಾದವುಗಳಲ್ಲಿ ಒಂದೊಂದು ಕೂದಲು ಒಂದೊಂದು ಕಾಲದಲ್ಲಿ ಬದಲಾಗುತ್ತಿದ್ದು ಇತರ ಕೂದಲುಗಳ ಬೆಳವಣಿಗೆಯಿಂದ ಸ್ವತಂತ್ರವಾಗಿದೆ.

ಕೂದಲು ಚರ್ಮಕ್ಕೆ ಹತ್ತಿಕೊಂಡಿರುವ ರೀತಿ ಮತ್ತು ಅದರ ಬೆಳವಣಿಗೆಯ ದಿಕ್ಕು ವಿವಿಧ ಪ್ರಾಣಿಗಳಲ್ಲಿ ಭಿನ್ನತೆಯನ್ನು ಪ್ರದರ್ಶಿಸುತ್ತವೆ. ಕೂದಲುಗಳು ಚರ್ಮಕ್ಕೆ ವಿಶೇಷ ಸಾಲುಗಳಲ್ಲಿ ಹತ್ತಿಕೊಂಡಿರುತ್ತವೆ. ಈ ಸಾಲುಗಳಿಗೆ ರೋಮಾಳಿಗಳು (ಹೇರ್ ಟ್ರಾಕ್ಟ್ಸ್) ಎಂದು ಹೆಸರು. ರೋಮಾಳಿಗಳು ಪ್ರತ್ಯೇಕಗೊಳ್ಳುವ ಭಾಗದಲ್ಲಿ ಬೈತಲೆಯಂಥ ರೇಖೆ ಕಾಣುತ್ತದೆ. ಈ ರೇಖೆಗುಂಟ ಕೂದಲುಗಳು ಬೆಳೆಯುತ್ತಿದ್ದು ಅವು ದೇಹದ ಹಿಂಭಾಗದೆಡೆಗೆ (ಅಂದರೆ ಹೊಟ್ಟೆಯ ಕಡೆಗೆ) ಬಾಗಿರುತ್ತವೆ. ಕೈಕಾಲುಗಳಲ್ಲೂ ಕೂದಲುಗಳು ಅಂಗದ ಹಿಂಭಾಗದೆಡೆಗೆ ಹಾಗೂ ಪಾದದೆಡೆಗೆ ಬಾಗಿರುತ್ತವೆ. ಸ್ಲಾತ್ ಎಂಬ ಪ್ರಾಣಿಯಲ್ಲಿ ಮಾತ್ರ ಈ ಬಾಗುವಿಕೆ ವಿರುದ್ಧ ಬಗೆಯದು. ಈ ಪ್ರಾಣಿ ಯಾವಾಗಲೂ ಮರದ ರೆಂಬೆಗಳಿಗೆ ನೇತು ಬಿದ್ದು ಚಲಿಸುವುದರಿಂದ ಇದರ ಮೈಮೇಲೆ ಬಿದ್ದ ಮಳೆಯ ನೀರು ಸುಲಭವಾಗಿ ಹರಿದು ಹೋಗಲೆಂದು ಈ ಮಾರ್ಪಾಡು ಆಗಿರಬೇಕೆಂದು ತಜ್ಞರು ಊಹಿಸಿದ್ದಾರೆ. ಕೆಲವು ಬಾರಿ ರೋಮಾಳಿಗಳು ವರ್ತುಲಾಕಾರದಲ್ಲಿರುತ್ತವೆ. ಇವನ್ನು ಸುಳಿಗಳು (ವಾರ್ಟಿಸೀಸ್ ಅಥವಾ ಹ್ವರ್ಲ್ಸ್) ಎನ್ನಲಾಗುತ್ತದೆ.

ಕೂದಲಿನ ಪ್ರಥಮ ಹಾಗೂ ಅತಿಮುಖ್ಯವಾದ ಕಾರ್ಯ ಪ್ರಾಣಿಗಳ ದೇಹದ ಉಷ್ಣತೆಯನ್ನು ಕಾಪಾಡುವುದು ಮತ್ತು ದೇಹಕ್ಕೆ ಶೈತ್ಯದಿಂದ ರಕ್ಷಣೆಯೊದಗಿಸುವುದು. ಅತಿನೇರಳೆ ಕಿರಣಗಳಿಂದ ರಕ್ಷಿಸಿ ಚರ್ಮದ ಏಡಿಗಂತಿ ರೋಗದ ಅಪಾಯವನ್ನು ಕಡಿಮೆ ಮಾಡುತ್ತದೆ. ಎರಡನೆಯದಾಗಿ ಕೂದಲು ಸ್ಪರ್ಶಗ್ರಾಹಿ ಅಂಗವಾಗಿ ಕಾರ್ಯ ನಿರ್ವಹಿಸುತ್ತದೆ. ಸಾಮಾನ್ಯವಾಗಿ ನಿಶಾಚರ ಪ್ರಾಣಿಗಳಲ್ಲಿ ಇದು ಮುಖ್ಯವಾದ ಕೆಲಸ. ಅಲ್ಲದೆ ತನ್ನ ವಿವಿಧ ಬಣ್ಣಗಳಿಂದ ಮತ್ತು ವಿನ್ಯಾಸಗಳಿಂದ ಸೂಕ್ಷ್ಮವಾದ ಛದ್ಮವಾಗಿ ಶತ್ರುಗಳ ಕಣ್ಣಿಗೆ ಬೀಳದಂತೆ ಮಾಡಲು, ಸಂಗಾತಿಯನ್ನು ಆಕರ್ಷಿಸಲು ಸಹಕಾರಿಯಾಗಿದೆ.

ಕೂದಲಿನ ಉಪಯೋಗಗಳು : ವಿವಿಧ ಬಗೆಯ ಕೂದಲುಗಳಿಗೆ ಬೇರೆ ಬೇರೆ ರೀತಿಯ ಉಪಯೋಗಗಳಿವೆ. ಮನೆಕಟ್ಟುವುದಕ್ಕೆ ಉಪಯೋಗಿಸುವ ಗಾರೆಯನ್ನು ಬಂಧಿಸಲು ಮತ್ತು ಕೃತಕವಾಗಿ ತಯಾರಿಸುವ ಚಾವಣಿಗಳಿಗೆ ದನಗಳ ಕೂದಲನ್ನು ಬಳಸುತ್ತಾರೆ. ಒಂಟೆಯ ಕೂದಲನ್ನು ಜಮಖಾನ ಬಟ್ಟೆ, ಡೇರೆಗಳ ಹೊದಿಕೆ ಮುಂತಾದುವನ್ನು ಮಾಡಲು ಉಪಯೋಗಿಸುತ್ತಾರೆ. ಅರೇಬಿಯದ ಒಂಟೆಯ ಕೂದಲು ಹೆಚ್ಚು ಮೃದುವಾಗಿಯೂ ಬೆಲೆಬಾಳುವಂಥದೂ ಆಗಿದೆ. ಹಂದಿ ಮತ್ತು ಅಳಿಲುಗಳ ಕೂದಲಿನಿಂದ ಕುಂಚ ಮಾಡುತ್ತಾರೆ. ಕುರಿ, ಮೇಕೆ ಮುಂತಾದುವುಗಳ ಉಣ್ಣೆಯ ಉಪಯೋಗವಂತೂ ಎಲ್ಲರಿಗೂ ತಿಳಿದದ್ದೇ. ಕುದುರೆಯ ಬಾಲ ಮತ್ತು ಅಯಾಲಿನ ಕೂದಲನ್ನು ಬಟ್ಟೆ, ಬಲೆ ಮತ್ತು ಕುಂಚಗಳ ತಯಾರಿಕೆಯಲ್ಲೂ, ಉದ್ದನೆಯ ಬಗೆಯನ್ನು ಪಿಟೀಲಿನ ಕಮಾನುಗಳ ತಯಾರಿಕೆಯಲ್ಲೂ ಚಿಕ್ಕ ಬಗೆಯದನ್ನು ಸೋಫ, ಹಾಸಿಗೆಗಳಿಗೆ ತುಂಬಲೂ ಬಳಸುತ್ತಾರೆ. ಮನುಷ್ಯರ ಕೂದಲನ್ನು ಚೌರಿ,ವಿಗ್, ಟೋಫಸ್ ಮುಂತಾದುವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ವೈದ್ಯಕೀಯ ನ್ಯಾಯಶಾಸ್ತ್ರದಲ್ಲಿ ಕೂದಲಿನ ಪರೀಕ್ಷೆಯಿಂದ ಅಪರಾಧಿಗಳನ್ನು ಪತ್ತೆಹಚ್ಚಬಹುದೆಂದು ಗೊತ್ತಾಗಿದೆ. ಕೂದಲಿನ ಬಣ್ಣ, ಗುಣ ಅದು ಕತ್ತರಿಸಿದ್ದೊ ಸುಟ್ಟಿದ್ದೊ ಎಂಬ ವಿವರಗಳನ್ನು ಅಪರಾಧ ಪತ್ತೆಯಲ್ಲಿ ಬಳಸಬಹುದು.

***

**ಕೂರಲು ಮೀನು:** ಬಾರ್ಬಸ್ ಜಾತಿಯ ಸಿಹಿನೀರು ಮೀನು. ತಲೆಯನ್ನು ಬಿಟ್ಟು ಮೈಮೇಲೆಲ್ಲ ದೊಡ್ಡ ದೊಡ್ಡ ಹುರುಪೆಗಳಿವೆ. ಹಲ್ಲುಗಳಿಲ್ಲ. ಸಾಮಾನ್ಯವಾಗಿ ಎರಡು ಜೋಡಿ ಮೀಸೆಗಳುಂಟು (ಬಾರ್ಬಲ್ಸ್).

ಇದು ಬಹಳ ಚುರುಕಾದ ಮೀನು. ಇದನ್ನು ಸಾಕಲು ಬಹಳ ವಿಶಾಲವಾದ ಜಲೋದ್ಯಾನಗಳು(ಅಕ್ವೇರಿಯ) ಅಗತ್ಯ. ಇತರ ಶಾಂತ ಮೀನುಗಳೊಂದಿಗೆ ಸಹಜೀವನ ನಡೆಸಬಲ್ಲುದು. ವಿವಿಧ ಬಗೆಯ ಆಹಾರವನ್ನು ಸೇವಿಸುತ್ತದೆ. ಈ ಮೀನುಗಳನ್ನು ತಿನ್ನುತ್ತಾರೆ.

***

**ಕೃತಕ ಅಂಗಗಳು:** ಸ್ವಾಭಾವಿಕವಾದ ಅಂಗಗಳ ಬದಲಾಗಿ ನೆಲೆಗೊಳಿಸುವ ದೇಹಭಾಗಗಳು (ಆರ್ಟಿಫಿಶಿಯಲ್ ಆರ್ಗನ್ಸ್).

ಇತಿಹಾಸ : ಋಗ್ವೇದದ ಒಂದು ಮಂತ್ರದಲ್ಲಿಸೂಕ್ತ 116, ಅಧ್ಯಾಯ 8, ವರ್ಗ 10, ಮಂತ್ರ 15) ಇರುವ ನಿರೂಪಣೆ ಹೀಗಿದೆ–'ಖೇಲನೆಂಬ ಅರಸನ ಹೆಂಡತಿಯಾದ ವಿಶ್ವಲೆಯ ಒಂದು ಕಾಲು ಯುದ್ಧದಲ್ಲಿ ಹಕ್ಕಿಯ ರೆಕ್ಕೆಯಂತೆ ತುಂಡರಿಸಲ್ಪಟ್ಟಿತ್ತು; ನೀವು (ಅಶ್ವಿನೀ ಕುಮಾರರು) ಅದೇ ರಾತ್ರಿಯಲ್ಲಿ ಯುದ್ಧಭೂಮಿಗೆ ಹೋಗಿ ಶತ್ರುನ್ಯಸ್ತವಾದ ಧನವನ್ನು ಗಳಿಸುವುದಕ್ಕಾಗಿ ವಿಶ್ವಲೆಗೆ ಲೋಹಮಯ ತೊಡೆಯನ್ನು ಕೊಟ್ಟಿದ್ದಿರಿ'. ಅಂದ ಮಾತ್ರಕ್ಕೆ ಕೃತಕ ಅಂಗಗಳ ಬಳಕೆ ಭಾರತದಲ್ಲಿ ಸಾಮಾನ್ಯವಾಗಿತ್ತೆಂದು ಭಾವಿಸಲಾಗದು. ಇಂಗ್ಲಿಷ್ ಭಾಷೆಯಲ್ಲಿ ಕೃತಕ ಅಂಗದ ಜೋಡಣೆಗೆ ಬಳಸುತ್ತಿರುವ ಪ್ರಾಸ್ಥೆಸಿಸ್ ಎಂಬ ಶಬ್ದ ಗ್ರೀಕ್ ಮೂಲವಾದುದ್ದು. ಸ್ಪಾರ್ಟಾದೇಶದ ಚರಿತ್ರೆಯಲ್ಲಿ (ಕ್ರಿಪೂ. 5ನೆಯ ಶತಮಾನ) ಉಕ್ತವಾಗಿರುವ ಒಂದು ವರದಿಯ ಪ್ರಕಾರ ಹೆಜಿಸ್ಟ್ರೇಟಸ್ ಎಂಬ ಬಂದಿ ತನ್ನ ಪಾದವನ್ನು ಕತ್ತರಿಸಿಕೊಂಡು ಓಡಿಹೋಗಿದ್ದನೆಂದೂ ಅವನನ್ನು ಪುನಃ ಕೈದು ಮಾಡಿದಾಗ ಅವನು ಕೃತಕ ಪಾದಧಾರಿಯಾಗಿದ್ದನೆಂದೂ ಇದೆ. ಆದ್ದರಿಂದ ಗ್ರೀಸ್ ದೇಶದಲ್ಲಿ ಅಷ್ಟು ಪ್ರಾಚೀನಕಾಲದಲ್ಲಿಯೇ ಕೃತಕ ಅಂಗಗಳ ವಿಚಾರ ತಿಳಿದಿತ್ತೆಂದು ತರ್ಕಿಸಬಹುದು. ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಸರ್ಜನ್ನಿನ ವಸ್ತುಸಂಗ್ರಹಾಲಯದಲ್ಲಿ ಕ್ರಿ.ಪೂ ಸು.300ರ ವೇಳೆಯದು ಎನ್ನಲಾದ ಒಂದು ಕೃತಕಕಾಲನ್ನು ಪ್ರದರ್ಶಿಸಿದ್ದಾರೆ. ಕ್ರಿ.ಶ.ಸು.1509ರಲ್ಲಿ ಮಾಡಿ ಉಪಯೋಗಿಸುತ್ತಿದ್ದರೆನ್ನಲಾದ ಒಂದು ಕೃತಕ ಕೈ ನ್ಯೂರೆಂಬರ್ಗಿನ ವಸ್ತುಸಂಗ್ರಹಾಲಯದಲ್ಲಿದೆ. 19ನೆಯ ಶತಮಾನದ ಕಡೆಯ ಭಾಗದಲ್ಲಿ ಸಂವೇದನಾರಹಿತ ಹಾಗೂ ವಿಷಾಣುರಹಿತ ಶಸ್ತ್ರಕ್ರಿಯೆ ಆರಂಭವಾದ ಮೇಲೆ ಕೃತಕ ಅಂಗಗಳ ಉದ್ಯಮಕ್ಕೆ ವ್ಯಾಪಕವಾದ ಬಳಕೆ, ಉಪಯೋಗ, ಉದ್ದೇಶ ಮುಂತಾದುವು ಪ್ರಾಪ್ತವಾದುವು. ಕೃತಕಾಂಗ ನಿಜಾಂಗದೊಡನೆ ಆಕಾರಸಾಮ್ಯ ಹೊಂದಿರಬೇಕು; ಅದರ ಜೋಡಣೆಯಿಂದ ದೇಹದ ಸಹಜ ಸೌಂದರ್ಯ ಒದಗಬೇಕು ಮತ್ತು ಇಂಥ ಕೃತಕಾಂಗ ನಿಜ ಅಂಗದಷ್ಟಲ್ಲದಿದ್ದರೂ ಅದಕ್ಕೆ ಸರಿಸುಮಾರಾಗಿಯಾದರೂ ಸಮಾನವಾಗಿರುವಂತೆ ಉಪಯೋಗಾರ್ಹವಾಗಬೇಕು ಎಂದು ಜನ ಬಯಸಿದ್ದು ಸಹಜವೆ.

ವೃದ್ಧಾಪ್ಯದಿಂದಲೊ, ರೋಗರುಜಿನದಿಂದಲೊ ಅಥವಾ ಅಪಘಾತಕ್ಕೆ ಸಿಲುಕಿಯೋ ದೇಹದ ಅಂಗವು ಹಾನಿ ಆದ ಸಂದರ್ಭದಲ್ಲಿ ಔಷಧಿ–ಉಪಚಾರದಿಂದ ರೋಗಿಯನ್ನು ಗುಣಪಡಿಸಲು ಸಾಧ್ಯವಾಗದೇ ಇದ್ದರೆ ಹಾನಿಗೊಳಗಾದ ಅಂಗವನ್ನು ಬದಲಾಯಿಸಿ ರೋಗಿಯನ್ನು ಉಳಿಸಬೇಕಾಗುತ್ತದೆ. ಆದರೆ ಹಾಗೆ ಬದಲಾಯಿಸಲು ಯಂತ್ರಗಳ ಬಿಡಿಭಾಗಗಳಂತೆ ಮಾನವನ ಅಂಗಗಳು ಮಾರುಕಟ್ಟೆಯಲ್ಲಿ ಸಿಗುವುದಿಲ್ಲ ಮತ್ತು ತಯಾರಿಸಲು

ಅವುಗಳು ಪ್ಲಾಸ್ಟಿಕ್ ಅಥವಾ ಲೋಹಗಳಿಂದ ಮಾಡಿರುವುದು ಅಲ್ಲ; ಅಂಗಗಳು ಜೀವಕೋಶಗಳಿಂದ ಮಾಡಲ್ಪಟ್ಟಿದ್ದು ಒಂದು ವೇಳೆ ಯಂತ್ರಗಳ ಬಿಡಿಭಾಗಗಳಂತೆ ಮಾನವನ ಅಂಗಗಳು ಸಿಗುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು, ಅಲ್ಲವೇ? ಇಂದು ವೈದಕೀಯ ವಿಜ್ಞಾನ, ತಂತ್ರಜ್ಞಾನ ಬಹಳಷ್ಟು ಮುಂದುವರೆದಿದ್ದು ಅಂತಹ ಕಲ್ಪನೆಯನ್ನು ನನಸು ಮಾಡುವತ್ತ ಸಾಗಿದೆ. ಈ ನಿಟ್ಟಿನಲ್ಲಿ ಕೈಗೊಂಡ ಸಂಶೋಧನಾ ಫಲವೇ ಕೃತಕ ಅಂಗಗಳು.

ಕೃತಕ ಅಂಗಗಳು ಎನ್ನುವ ತಂತ್ರಜ್ಞಾನವು ತೀರ ಇತ್ತೀಚಿನ ಸಂಶೋಧನೆಯ ವಿಷಯವಾದರೂ ಅದರ ಹಿಂದಿನ ಅಧ್ಯಾಯ ಪ್ರಾರಂಭವಾಗಿದ್ದು ಅಂಗಗಳನ್ನು ನಾಟಿಮಾಡುವಿಕೆ ತಂತ್ರಜ್ಞಾನದಿಂದ. ಈ ತಂತ್ರಜ್ಞಾನದಲ್ಲಿ ದೇಹದ ಯಾವುದಾದರೂ ಅಂಗವು ಕೆಟ್ಟುಹೋದಾಗ ಆ ಅಂಗದ ಸ್ಥಾನದಲ್ಲಿ ಬೇರೊಬ್ಬರ ದೇಹದ ಅಂತಹುದೇ ಅಂಗವನ್ನು ಜೋಡಿಸಲಾಗುವುದು.

ಒಬ್ಬ ರೋಗಿಯ ಹಾನಿಯಾದ ಅಂಗವನ್ನು ಬದಲಾಯಿಸಬೇಕಿದ್ದರೆ ಇನ್ನೊಬ್ಬ ವ್ಯಕ್ತಿಯು ತನ್ನ ದೇಹದ ಅಂಗವನ್ನು ದಾನವಾಗಿ ನೀಡಬೇಕು. ಈ ದಾನ ಎರಡು ಬಗೆಯದಾಗಿರಬಹುದು. ವ್ಯಕ್ತಿ ಜೀವಂತವಿರುವಾಗಲೇ ತನ್ನ ದೇಹದದಲ್ಲಿರುವ ಎರಡು ಅಂಗಗಳಲ್ಲಿ (ಮೂತ್ರಪಿಂಡ, ಕಣ್ಣು) ಒಂದನ್ನು ಯಾವುದೇ ಪ್ರಾಣಾಪಾಯಕ್ಕೆ ಒಳಗಾಗದೇ ದಾನಮಾಡುವಂತದ್ದು, ಇನ್ನೊಂದು ಸತ್ತನಂತರ ಕೆಲವು ಸಮಯದೊಳಗೆ ಅಂಗಗಳನ್ನು ದಾನವಾಗಿ ನೀಡುವಂತದ್ದು. ಅಂಗ ಕಸಿಯಲ್ಲಿ ತಲೆದೋರಿದ ಅನೇಕ ತಾಂತ್ರಿಕ ಸಮಸ್ಯೆಗಳಿಗೆ ವಿಜ್ಞಾನವು ಪರಿಹಾರವನ್ನು ಕಂಡುಹಿಡಿದು ಯಶಸ್ವಿಯೇನೋ ಆಗಿದೆ. ಆದರೆ ಅಂಗವನ್ನು ನೀಡುವಂತಹ ಉದಾರಿಗಳು ತುಂಬಾ ವಿರಳ. ಒಂದು ಲೆಕ್ಕಾಚಾರದ ಪ್ರಕಾರ ಬದಲಿ ಅಂಗಗಳ ಅವಶ್ಯವಿರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಶೇಕಡ 10–15 ರಷ್ಟು ಹೆಚ್ಚಾಗುತ್ತಿದೆ. ಅಂದರೆ ಮಾನವನ ಅಂಗಗಳಿಗೆ (ಬಿಡಿ ಭಾಗಗಳಿಗೆ) ಪೂರೈಕೆಯನ್ನು ಮೀರಿದ ಬೇಡಿಕೆ ಇದೆ. ಈ ಸಮಸ್ಯೆಗೆ ಕಂಡುಹುಡುಕಿದ ಪರಿಹಾರವೇ ಕೃತಕ ಅಂಗಗಳ ತಯಾರಿಕೆ.

ಕೃತಕ ಅಂಗಗಳನ್ನು ತಯಾರಿಕೆಯ ಆಧಾರದ ಮೇಲೆ ಎರಡು ರೀತಿಯಾಗಿ ವಿಂಗಡಿಸಬಹುದು; 1. ಅಜೈವಿಕ ಮತ್ತು 2) ಜೈವಿಕ ಕೃತಕ ಅಂಗಗಳು. ಅಜೈವಿಕ ಕೃತಕ ಅಂಗಗಳು ಅಂದರೆ ದೇಹದ ಭಾಗಗಳನ್ನು ವ್ಯಕ್ತಿಯ ಎರಡೂ ಮೂತ್ರಪಿಂಡಗಳಿಗೂ ಹಾನಿಯಾಗಿ ಕಾರ್ಯನಿರ್ವಹಿಸದೆ ಇದ್ದಾಗ ಆ ಕಾರ್ಯವನ್ನು ಕಿಡ್ನಿ–ಡಯಾಲೈಜರ್ ಎಂಬ ಉಪಕರಣದ ಮೂಲಕ ಮಾಡುತ್ತಾರೆ. ಡಯಾಲೈಜರ್ಎನ್ನುವ ಉಪಕರಣವು ದೇಹದ ಹೊರಗೆ ಇರುತ್ತದೆ. ದೇಹದ ಒಳಗಡೆಯೇ ಕೃತಕವಾಗಿ ನಿರ್ಮಿಸಿರುವ ಭಾಗವನ್ನು ಜೋಡಿಸುವ ತಂತ್ರಜ್ಞಾನ ಪ್ರಥಮ ಬಾರಿ ಯಶಸ್ವಿಯಾಗಿ 2001ರಲ್ಲಿ ನಡೆಯಿತು. ಅಬಯೋಕೋರ್ ಎನ್ನುವ ಕೃತಕ ಹೃದಯವನ್ನು ಜುಲೈ 2001ರಲ್ಲಿ ಒಬ್ಬ ಹೃದ್ರೋಗಿಗೆ ಅಳವಡಿಸಲಾಯಿತು. ಈ ಉಪಕರಣವು ಹೃದಯದಂತೆ ನಿಮಿಷಕ್ಕೆ 5 ಲೀಟರಿನಷ್ಟು ರಕ್ತವನ್ನು ಪಂಪ್ ಮಾಡಬೇಕಿರುವುದರಿಂದ ಗಾತ್ರದಲ್ಲಿ ತುಂಬಾ ದೊಡ್ಡದಿದ್ದು ದೇಹದ ಒಳಗಡೆ ಅಳವಡಿಸಲು ಪ್ರಾರಂಭದಲ್ಲಿ ಸಮಸ್ಯೆಯಿತ್ತು. ಆದರೂ ಕೂಡ ಬದಲೀ ಹೃದಯ ಸಿಗುವ ತನಕ ಇದನ್ನು ಹೊಟ್ಟೆಯೊಳಗೆ ಅಳವಡಿಸಿ, ಆ ಮೂಲಕ ರೋಗಿಯನ್ನು ಬದುಕಿಸಲು ಇದು ಉಪಯೋಗವಾಗುತ್ತಿತ್ತು. ಇತ್ತೀಚೆಗೆ ಈ ಕೃತಕ ಹೃದಯವನ್ನು ಹೆಬ್ಬೆರಳು ಗಾತ್ರಕ್ಕೆ ಇಳಿಸಿ ನೈಜ ಹೃದಯದಷ್ಟೇ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ರೂಪಿಸಲಾಗಿದೆ; ಮಾತ್ರವಲ್ಲ, ಅಮೇರಿಕ ಮತ್ತು ಯುರೋಪ್ ರಾಷ್ಟ್ರಗಳಲ್ಲಿ ಅನೇಕ ಹೃದಯ ರೋಗಿಗಳಿಗೆ ಈ ಕೃತಕ ಹೃದಯವನ್ನು ಯಶಸ್ವಿಯಾಗಿ ನಾಟಿಮಾಡಲಾಗಿದೆ. ಇದೇ ರೀತಿಯಲ್ಲಿ ಕೃತಕ ಪಿತ್ತಕೋಶ ತಯಾರಿಕೆಯತ್ತ ಸಂಶೋಧನೆ ನಡೆಯುತ್ತಿದ್ದು ಕೆಲಮಟ್ಟಿಗೆ ಯಶಸ್ಸು ದೊರೆತಿದೆ.

ಜೈವಿಕ ಕೃತಕ ಅಂಗಗಳನ್ನು ತಯಾರಿಕೆಯ ವಿಧಾನದ ಮೇಲೆ ಎರಡು ರೀತಿಯಾಗಿ ವಿಂಗಡಿಸಬಹುದು. ಅರೆನೈಜ ಜೈವಿಕ ಕೃತಕ ಅಂಗಗಳು ಹಾಗೂ ನೈಜ ಜೈವಿಕ ಕೃತಕ ಅಂಗಗಳು. ಅರೆನೈಜ ಜೈವಿಕ ಕೃತಕ ಅಂಗಗಳನ್ನು ಮಾನವನ (ರೋಗಿಯ) ದೇಹದಿಂದಲೇ ಜೀವಕೋಶವನ್ನು ತೆಗೆದು ಪ್ರಯೋಗಶಾಲೆಯಲ್ಲಿ ಕೃಷಿಮಾಡಿ ಅನಂತರ ವಿಘಟನೆಗೆ ಒಳಪಡುವ ಮೂರು–ಆಯಾಮಗಳ ಪಾಲಿಮರ್ ರಚನೆಯೊಂದಿಗೆ ಸಂಯೋಜಿಸಿ ದೇಹದಲ್ಲಿ ನಾಟಿ ಮಾಡುವುದು. ಹೀಗೆ ಸಂಯೋಜಿಸಲ್ಪಟ್ಟ ಜೀವಕೋಶಗಳು ವಿಭಜನೆ ಹೊಂದುತ್ತಾ ಅಂಗವಾಗುತ್ತವೆ. ಅಂಗ ನಿರ್ಮಾಣದ ವೇಳೆ ಆಕಾರ ಕೊಡುವ ಪಾಲಿಮರ್ ವಿಘಟನೆಗೊಂಡು ನಿರ್ಮಿಸುವ ಮುಖ್ಯ ಉದ್ದೇಶ ಅಂಗಗಳನ್ನು ದೇಹದ ಒಳಗಡೆಯೇ ಕೃಷಿಮಾಡುವಂತದ್ದು. ಇದರಿಂದ ಅಂಗಗಳಿಗೆ ಆಮ್ಲಜನಕ ಮತ್ತು ಆಹಾರವನ್ನು ಸರಬರಾಜು ಮಾಡಲು ಬೇಕಾದ ರಕ್ತನಾಳಗಳು ಅದರೊಂದಿಗೆ ಬೆಳೆಯುತ್ತವೆ. ಈ ವಿಧಾನದಲ್ಲಿ ಹೃದಯ, ಮೂತ್ರಪಿಂಡದಂತಹ ಸಂಕೀರ್ಣವಾದ ಅಂಗಗಳನ್ನು ತಯಾರಿಸಲು ಅನೇಕ ಸವಾಲುಗಳನ್ನು ದಾಟಬೇಕು ಹಾಗೂ ಈ ಸಾಧನೆ ಫಲಪ್ರದವಾಗಲು ಇನ್ನೂ ಹತ್ತಿಪ್ಪತ್ತು ವರ್ಷಗಳಾಗಬಹುದು. ಸದ್ಯಕ್ಕೆ ಚರ್ಮ, ರಕ್ತನಾಳ, ಹೃದಯ–ಕವಾಟಗಳಂತಹ ಚಿಕ್ಕಮಟ್ಟ ಭಾಗಗಳನ್ನು ಈ ವಿಧಾನದಿಂದ ಕೃಷಿ ಮಾಡಲು ಸಾಧ್ಯವಿದೆ. ಮೂಳೆಯು ತೀವ್ರವಾಗಿ ಹಾನಿಗೊಳಗಾದಾಗ ಹವಳಜೀವಿಯ ಅಸ್ಥಿಪಂಜರವನ್ನು ಹಾನಿಯಾದ ಮೂಳೆಯ ಸ್ಥಾನದಲ್ಲಿ ಕುಲುಮೆ ಮಾಡಿ ಸರಿಪಡಿಸುವ ಶಸ್ತ್ರಚಿಕಿತ್ಸೆ ಈಗಾಗಲೇ ಇದೆ.

ನೈಜಜೈವಿಕ ಕೃತಕ ಅಂಗಗಳು ಸಂಪೂರ್ಣವಾಗಿ ಮಾನವನ ಜೀವಕೋಶಗಳಿಂದ ಮಾಡಿರುವಂತದ್ದು. 1997ರಲ್ಲಿ ಡಾಲಿ ಎನ್ನುವ ತದ್ರೂಪಿ ಕುರಿಯನ್ನು ಸೃಷ್ಟಿಸಿರುವುದು ಒಂದು ವೈಜ್ಞಾನಿಕ ಕ್ರಾಂತಿ. ದೇಹದ ಎಲ್ಲಾ ಬಗೆಯ ಅಂಗಗಳು ಮತ್ತು ಅಂಗಾಂಶಗಳಿಗೂ ಜನ್ಮ ನೀಡುವ ಸಾಮರ್ಥ್ಯ ಭ್ರೂಣಸೃಷ್ಟಿಸುವ ಕೋಶಗಳಿಗಿವೆ. ಈ ನಿಟ್ಟಿನಲ್ಲಿ ಸ್ವಲ್ಪ ಯಶಸ್ಸು ದೊರೆತಿದೆ. (ಈ ವಿಷಯದಲ್ಲಿ ಅಧ್ಯಯನ ಮಾಡಲು ಕಾಂಡಕೋಶ ತಂತ್ರಜ್ಞಾನ ಎಂಬ ಒಂದು ವಿಭಾಗವೇ ಇದೆ). ಪ್ರಸ್ತುತ, ಹಂದಿಯ ಅಂಗಗಳ ರಚನೆ ಹಾಗೂ ಕಾರ್ಯವಿಧಾನ ಮಾನವನ ಅಂಗಗಳೊಂದಿಗೆ ತುಂಬಾ ಹೋಲಿಕೆ ಇರುವುದರಿಂದ, ಆ ಪ್ರಾಣಿಯ ಅಂಗಗಳನ್ನು ಹಾನಿಯಾದ ಮಾನವನ ಅಂಗಗಳ ಸ್ಥಾನದಲ್ಲಿ ಜೋಡಿಸುವ ವಿಧಾನ ಪ್ರಗತಿಯಲ್ಲಿದೆ.

ದೇಹದ ಹೊರಗೆ ಕೃತಕವಾಗಿ ಜೋಡಿಸುವ ನಿರ್ಜೀವ ಅಂಗಗಳು : ಇವನ್ನು ಈ ಮುಂದೆ ಬರೆದಿರುವ ನಾಲ್ಕು ಪ್ರಧಾನ ಶೀರ್ಷಿಕೆಗಳಲ್ಲಿ ವಿವರಿಸಿದೆ–1. ಕೃತಕ ಕೈಕಾಲುಗಳು. 2. ಕೃತಕ ಕಣ್ಣು, 3. ಕೃತಕ ಶ್ವಾಸಕೋಶ, ಮೂತ್ರಜನಕಾಂಗಗಳು, 4.ಕೃತಕ ಹೃದಯ–ಶ್ವಾಸಕೋಶ ಯಂತ್ರ.

1.ಕೃತಕ ಕೈಕಾಲುಗಳು : ಕೃತಕ ಕೈಕಾಲುಗಳನ್ನು ಅಳವಡಿಸಿ ಆಕಾರ ಮಾತ್ರ ಸರಿಹೋಗುವಂತೆ ಮಾಡುವುದು ಪ್ರಯೋಜನವಿಲ್ಲ. ಅಳವಡಿಸಿದ ಅಂಗಗಳು ಸಾಧ್ಯವಾಗಿರುವಷ್ಟು ಕ್ರಿಯಾರ್ಹವಾಗಿರುವಂತೆ ಮಾಡುವುದು ಅಗತ್ಯ. ಈ ರೀತಿ ಉಪಯುಕ್ತವಾಗುವಂತೆ ಅವನ್ನು ಅಳವಡಿಸಿದ ಮೇಲೆ ಅವುಗಳ ಉಪಯೋಗವಿಧಾನದ ಶಿಕ್ಷಣವನ್ನು ಸಹ ಅಂಗಧಾರಿಗೆ ಕೊಡಬೇಕಾಗುತ್ತದೆ. ಕೃತಕ ಕಾಲಿಗೆ ಚಲನ ಸಾಮರ್ಥ್ಯದ ಜೊತೆಗೆ ದೇಹದ ಭಾರವನ್ನು ಹೊತ್ತು ದೃಢವಾಗಿ ನಿಂತುಕೊಳ್ಳುವ ದೃಢತೆಯೂ ಇರಬೇಕು. ಮರದಿಂದ, ಹಗುರವಾದ ಲೋಹದಿಂದ ಅಥವಾ ಕ್ಯಾನ್ವಾಸಿನ ಮೇಲೆ ಪದರಪದರವಾಗಿ ಬಳಿದ ಪ್ಲಾಸ್ಟಿಕ್ಕಿನಿಂದ ಕೃತಕ ಕಾಲನ್ನು ತಯಾರು ಮಾಡುತ್ತಾರೆ. ಪಾದದ ಮುಂಭಾಗ ಮಾತ್ರ ರಬ್ಬರಿನದು. ಕಾಲಿನ ಮೋಟಿಗೆ ಇದನ್ನು ಸಿಕ್ಕಿಸಿಕೊಂಡು ಪಟ್ಟಿಯಿಂದ ಭುಜಕ್ಕೊ ಎದೆಗೊ ಕಟ್ಟಿಕೊಳ್ಳುವಂತೆ ಇರುತ್ತದೆ. ಇಲ್ಲವೇ ವಾಯು ಒತ್ತಡದಿಂದಲೇ ಕಾಲಿನ ಮೋಟಿಗೆ ಅಂಟಿಕೊಳ್ಳುವಂತೆ ಇರುತ್ತದೆ. ಹೇಗಿದ್ದರೂ ದೇಹದ ಭಾರ ಮೋಟಿನ ತುದಿಯಿಂದ ಕೃತಕ ಕಾಲಿನ ಮೇಲೆ ನೇರವಾಗಿ ಬೀಳದೆ ಇರುವಂತೆ ಇವನ್ನು ತಯಾರುಮಾಡಿದೆ.

ಮಂಡಿಭಾಗದಲ್ಲಿ (ಮೊಳಕಾಲು) ಮಡಚುವ ಹಾಗೆ, ನಡೆಯುವಾಗ ಮಾತ್ರ ನೆಟ್ಟುಕೊಂಡಿರುವಂತೆ ಕೆಲವು ಕೃತಕ ಕಾಲುಗಳನ್ನು ಮಾಡಿರುತ್ತಾರೆ. ಕೃತಕ ಕಾಲುಗಳು ಭಾರವನ್ನು ಹೊತ್ತುಕೊಂಡು ನಡೆಯಲು ತಕ್ಕವಲ್ಲ ಮತ್ತು ಹಳ್ಳದಿಣ್ಣೆ ಪ್ರದೇಶಗಳಲ್ಲೂ ಉಪಯೋಗಿಸಲಾಗದಂಥವು. ಕೃತಕ ಕೈಗಳ ನಿರ್ಮಾಣ ಕೃತಕ ಕಾಲಿನ ನಿರ್ಮಾಣಕ್ಕಿಂತ ಕಷ್ಟಸಾಧ್ಯ. ಏಕೆಂದರೆ ಕೈಯಲ್ಲಿ ಚಲನೆ ಪ್ರಧಾನ. ಕೃತಕವಾಗಿ ಇಷ್ಟಬಂದಂಥ ಚಲನೆಯನ್ನು ಒದಗಿಸಿಕೊಳ್ಳುವುದು ಸುಲಭವಲ್ಲ. ಕೃತಕ ಕೈಯಲ್ಲಿ ಮೊಳಕೈ ಚಲನೆಯನ್ನು ಏರ್ಪಡಿಸಬಹುದಾದರೂ ಹಸ್ತದ ಚಲನಗಳನ್ನು ಒದಗಿಸುವುದು ಕಷ್ಟ ಅದರಲ್ಲೂ ನೆಲದ ಮೇಲಿನಿಂದ ಸಾಮಾನುಗಳನ್ನು ಎತ್ತಿಕೊಳ್ಳಲು ಮತ್ತು ಅವನ್ನು ಹಿಡಿದುಕೊಳ್ಳಲು ಅಗತ್ಯವಾದ ಹೆಬ್ಬೆರಳು ಮಿಕ್ಕ ಬೆರಳುಗಳೊಡನೆ ಮುಚ್ಚಿಕೊಳ್ಳಬೇಕಾದ ಚಲನೆಯನ್ನು ಕೃತಕವಾಗಿ ಏರ್ಪಡಿಸುವುದು ಬಹುಕಷ್ಟ.

ಕೃತಕ ಕೈ ಕೆಲವು ಸಾಮಾನುಗಳನ್ನು ಸ್ವಾಭಾವಿಕ ಕೈಗಿಂತ ಚೆನ್ನಾಗಿಯೂ ಬಿಗಿಯಾಗಿಯೂ ಹಿಡಿದುಕೊಳ್ಳಬಲ್ಲುದು. ಆದರೆ ಎಲ್ಲ ಸಾಮಾನುಗಳನ್ನೂ ಉಪಯುಕ್ತರೀತಿಯಲ್ಲಿ ಹಿಡಿದುಕೊಳ್ಳುವುದು ಕೃತಕಕೈಗೆ ಅಸಾಧ್ಯ. ಏಕೆಂದರೆ ಹಾಗೆ ಹಿಡಿದುಕೊಳ್ಳಲು ಸ್ಪರ್ಶಜ್ಞಾನವೂ, ಅದರಿಂದ ಸಾಧ್ಯವಾಗುವ ಅನೇಕ ಸ್ನಾಯುಗಳ ಸಂಯುಕ್ತ ಕ್ರಿಯೆಯೂ ಅತ್ಯಗತ್ಯ. ಕೈಮೋಟಿಗೆ ಸಿಕ್ಕಿಸಿಕೊಳ್ಳಬಹುದಾದ ಅನೇಕ ಕೃತಕ ಹಸ್ತಗಳು ಇವೆ. ಆಯಾ ಸಂದರ್ಭದಲ್ಲಿ ತಕ್ಕ ರೀತಿಯ ಹಸ್ತವನ್ನು ಅಳವಡಿಸಿಕೊಳ್ಳಬಹುದಾದ ರೀತಿ ಸಾಮಾನ್ಯವಾಗಿ ವಾಡಿಕೆಯಲ್ಲಿದೆ. ಕೃತಕ ಕೈಯ ಹೆಬ್ಬೆರಳಿನಿಂದ ಒಯ್ದು ಒಂದು ತಂತಿಯನ್ನು ಭುಜದ ಮೇಲುಗಡೆಯಿಂದ ಬೆನ್ನಿಗೆ ಹಾಯಿಸಿ ಕಟ್ಟುವಂತೆ ಏರ್ಪಾಡು ಮಾಡಿರುವುದು ಉಂಟು. ಬೆನ್ನಿನ ಸ್ನಾಯುಗಳನ್ನು ಬೇಕಾದಂತೆ ಐಚ್ಛಿಕವಾಗಿ ಚಲಿಸಿ ಕೃತಕ ಹೆಬ್ಬೆರಳನ್ನು ತಕ್ಕಮಟ್ಟಿಗೆ ಬೇಕಾದ ಹಾಗೆ ಚಲಿಸಬಹುದಾಗಿದೆ. ಕೈಮೋಟಿನ ಸ್ನಾಯುಗಳ ತುದಿಗೆ ಪ್ಲಾಸ್ಟಿಕ್ ಬೆಣೆಗಳನ್ನು ಅಡ್ಡವಾಗಿ ತೂರಿಸಿ, ಆ ಬೆಣೆಗಳಿಗೆ ಕೃತಕಹಸ್ತದ

ಬೆರಳುಗಳನ್ನು ತಂತಿಯಿಂದ ಬಿಗಿದು ಮೋಟಿನ ಸ್ನಾಯುಗಳ ಐಚ್ಛಿಕ ಕ್ರಿಯೆಯಿಂದ ಕೃತಕ ಬೆರಳುಗಳು ತಕ್ಕಮಟ್ಟಿಗೆ ಐಚ್ಛಿಕವಾಗಿ ಚಲಿಸುವಂತೆಯೂ ಹಲವು ಸಾರಿ ಏರ್ಪಾಡು ಮಾಡಬಹುದು. ಇತ್ತೀಚೆಗೆ ಕೈಮೋಟಿನ ಸ್ನಾಯುಗಳಿಂದಾಗುವ ಒತ್ತಡ ವ್ಯತ್ಯಾಸ ಅಥವಾ ಆಕಾರ ವ್ಯತ್ಯಾಸದಿಂದ ಚಲಿಸಲ್ಪಡುವ ಸಣ್ಣವಿದ್ಯುಚ್ಚಾಲಿತ ಮೋಟಾರುಗಳಿಂದ ಕೃತಕಹಸ್ತದ ಬೆರಳುಗಳು ತೆರೆದುಕೊಳ್ಳುವಂತೆಯೂ ಮುಚ್ಚಿಕೊಳ್ಳುವಂತೆಯೂ ಏರ್ಪಾಡುಮಾಡಲಾಗಿದೆ. ಪ್ರತಿಯೊಂದರಲ್ಲಿಯೂ ಯಾಂತ್ರಿಕವಾಗಿ ಶಕ್ತಿಯನ್ನು ಒದಗಿಸಿ ಬೆರಳುಗಳು ಮಡಚಿಕೊಳ್ಳುವಂತೆ ಮಾಡುವುದೇ ಪ್ರಧಾನವಾಗಿರುವುದರಿಂದ ಮಡಚುವಿಕೆ ಅನೇಕವೇಳೆ ತಕ್ಕಷ್ಟು ಶಕ್ತಿಯುತವಾಗಿಲ್ಲದೆಯೂ ಕೆಲವುವೇಳೆ ಅನಾವಶ್ಯಕವಾಗಿ ಬಹು ಬಿಗಿತ ಉಂಟಾಗಿ ಕಾರ್ಯ ಸಾಫಲ್ಯ ಸಹಜಸ್ಥಿತಿಗಿಂತ ಬಹುಕಡಿಮೆ ಮಟ್ಟದ್ದಾಗಿಯೇ ಇರುತ್ತದೆ. ಕೃತಕ ಕೈಗಳನ್ನು ಹಗುರಲೋಹದಿಂದ ಮಾಡಿರುತ್ತಾರೆ. ಇಡೀ ಕೈಯನ್ನು ಮುಚ್ಚಿಕೊಳ್ಳುವಂಥ ಮೃದುವಾದ ಪ್ಲಾಸ್ಟಿಕ್ ಕೈಚೀಲವಿರುತ್ತದೆ. ಇದಕ್ಕೆ ಬುದ್ಧಿವಂತ ಕುಶಲಿಗಳು ಬಣ್ಣ, ಕೂದಲು, ಗೆರೆಗಳು ಎಲ್ಲವನ್ನೂ ತೀರ ಸ್ವಾಭಾವಿಕವಾಗಿ ಕಾಣುವಂತೆ ಅಳವಡಿಸಬಲ್ಲರು. ಹೊರನೋಟಕ್ಕೆ ಕೃತಕ ಕೈಗೂ ಸ್ವಾಭಾವಿಕ ಕೈಗೂ ವ್ಯತ್ಯಾಸವೇ ತೋರದಂತೆ ಇರುತ್ತದೆ.

2. ಕೃತಕ ಕಣ್ಣು : ಆಕಾರದ ಪುನಃಪ್ರಾಪ್ತಿಗೆ ಮಾತ್ರ ಇದು ಸಹಾಯಕ. ನೋಡಲು ಇದರಿಂದ ಆಗದು. ಒಂದು ಕಣ್ಣುಗುಡ್ಡೆ ಯಾವ ಕಾರಣದಿಂದಲಾದರೂ ಇಂಗಿಹೋದಾಗ ಅಥವಾ ಶಸ್ತ್ರಕ್ರಿಯೆಯಿಂದ ತೆಗೆದು ಹಾಕಲ್ಪಟ್ಟಾಗ ಕೃತಕವಾದ ಬೇರೆ ಗುಡ್ಡೆಯನ್ನು ಆ ಸ್ಥಳದಲ್ಲಿ ಹುದುಗಿಸಿ ಕಣ್ಣು ಊನವೇ ಆಗಿಲ್ಲವೇನೋ ಎನ್ನುವಷ್ಟು ವ್ಯವಸ್ಥೆಮಾಡಬಹುದು. ಮೊದಲು ಒಂದು ಪ್ಲಾಸ್ಟಿಕ್ ಅಥವಾ ಲೋಹದ ಗೋಳವನ್ನು ಗುಡ್ಡೆ ಇದ್ದ ಸ್ಥಳದಲ್ಲಿ ಇಟ್ಟು ಕಣ್ಣಿನ ಸ್ನಾಯುಗಳನ್ನು ಅದರ ಮುಂದೆ ಸೇರಿಸಿ ಹೊಲಿಯುತ್ತಾರೆ. ಆಮೇಲೆ ಒಂದು ಡುಬ್ಬಾದ ಮತ್ತು ಹಗುರವಾದ ಪ್ಲಾಸ್ಟಿಕ್ ಅಥವಾ ಗಾಜಿನ ಚಿಪ್ಪನ್ನು ಅದರ ಮುಂದೆ ಇಟ್ಟು ಅದನ್ನು ಕಣ್ಣು ಎವೆಗಳ ಹಿಂದೆ ಹುದುಗಿಸುತ್ತಾರೆ. ಈ ಚಿಪ್ಪಿನಮೇಲೆ ತಕ್ಕ ಬಣ್ಣಗಳಲ್ಲಿ ಕಣ್ಣು ಹೇಗಿರುತ್ತದೋ ಅದೇ ಮಾದರಿಯ ವಿನ್ಯಾಸವಿರುತ್ತದೆ. ಆ ವ್ಯಕ್ತಿಯ ಇನ್ನೊಂದು ಕಣ್ಣಿನ ಚಿಪ್ಪಿನ ಹಾಗೆಯೆ ಇರುವಂಥ ಚಿಪ್ಪನ್ನು ಆರಿಸಿಕೊಂಡು ಅಳವಡಿಸುತ್ತಾರೆ. ಒಳಗಿನ ಪ್ಲಾಸ್ಟಿಕ್ ಅಥವಾ ಲೋಹದ ಗೋಳದ ಮುಂದೆ ಒಂದು ತುಂಡು ಕಡ್ಡಿಯನ್ನು ಅಕ್ಷದ ಹಾಗೆ ನೆಟ್ಟಿದ್ದರೆ ಕೃತಕ ಚಿಪ್ಪನ್ನು ತಕ್ಕಮಟ್ಟಿಗೆ ಸ್ವಾಭಾವಿಕ ಕಣ್ಣಿನಂತೆಯೇ ಚಲಿಸಬಹುದು.

3.ಕೃತಕ ಶ್ವಾಸಕೋಶ ಮತ್ತು ಕೃತಕ ಮೂತ್ರಜನಕಾಂಗಗಳು : ಕೃತಕ ಕೈಕಾಲುಗಳಂತೆ ಕ್ರಿಯಾಶೀಲವಾಗಿರುವ ಕೃತಕಸಾಧನಗಳನ್ನು ದೇಹದ ಹೊರಗೆ ಅಳವಡಿಸಿ ಅವುಗಳ ಅನುಕೂಲತೆ ಪಡೆಯುವುದನ್ನು ಕೃತಕ ಶ್ವಾಸಕೋಶದಲ್ಲಿ ಕಾಣಬಹುದು. ನೀರಿನಲ್ಲಿ ಮುಳುಗಿದುದರಿಂದ, ಇಂಗಾಲದ ಮಾನಾಕ್ಸೈಡ್ ವಿಷವೇರುವಿಕೆಯಿಂದ, ವಿದ್ಯುದಾಘಾತದಿಂದ ಅಥವಾ ಪೋಲಿಯೋ ಮೈಯಲೈಟಿಸ್ ರೋಗದ ಪರಿಣಾಮದಿಂದ ಶ್ವಾಸಸ್ತಂಭನವಾಗಿದ್ದರೆ ಅಂಥವರಲ್ಲಿ ಕೃತಕಶ್ವಾಸಕ್ರಿಯೆಯ ಅಗತ್ಯವಿರುತ್ತದೆ. ಉಸಿರುತಡೆಯಾಗಿದ್ದಾಗ ಈ ವ್ಯಕ್ತಿಗಳನ್ನು ಕೃತಕಶ್ವಾಸಕೋಶಗಳಿಗೆ ಜೋಡಿಸಿ ಇಟ್ಟು ಎಷ್ಟು ಹೊತ್ತು ಬೇಕಾದರೂ ಯಾವ ಪ್ರಮಾಣದಲ್ಲಿ ಬೇಕಾದರೂ ಶ್ವಾಸಕ್ರಿಯೆ ಕೃತಕವಾಗಿ ನಡೆಯುತ್ತಿರುವಂತೆ ಏರ್ಪಾಡು ಮಾಡಬಹುದು. ಕೃತಕ ಶ್ವಾಸಕೋಶದ ಒಳಗಡೆ ಒತ್ತಡ ಕ್ರಮವಾಗಿ ಹೆಚ್ಚು ಅಥವಾ ಕಡಿಮೆ ಆಗುವ ಏರ್ಪಾಡಿದ್ದು ಒತ್ತಡ ಕಡಿಮೆಯಾದಾಗ ಉಸಿರು ಎಳೆದುಕೊಳ್ಳುವುದೂ ಹೆಚ್ಚಾದಾಗ ಉಸಿರುಬಿಡುವುದೂ ಕಂಡುಬರುತ್ತದೆ. ಸಹಜ ಶ್ವಾಸಕ್ರಿಯೆ ಏರ್ಪಡುವವರೆಗೂ ಈ ಕೃತಕ ಶ್ವಾಸಕೋಶವನ್ನು ಉಪಯೋಗಿಸುತ್ತಿರಬೇಕು. ಮೂತ್ರಪಿಂಡಗಳು ರೋಗಪೀಡಿತವಾಗಿ ಮೂತ್ರೋತ್ಪತ್ತಿಗೆ ತಡೆಯುಂಟಾದಾಗ ಸಹಜಮೂತ್ರೋತ್ಪತ್ತಿ ಏರ್ಪಡುವವರೆಗೂ ಕೃತಕ ಮೂತ್ರಜನಕಾಂಗವನ್ನು ಉಪಯೋಗಿಸಬೇಕಾಗುತ್ತದೆ. ಹದಗೆಟ್ಟ ಮೂತ್ರಪಿಂಡಗಳು ಕೆಲವು ವೇಳೆ ತಮ್ಮ ಕಾರ್ಯವನ್ನು ಪುನಃ ಆರಂಭಿಸಲಾರವು. ಅವು ಅಷ್ಟು ಕ್ಷತಿಗೊಂಡಿರುತ್ತವೆ. ಹಾಗಾದಾಗ ಬೇರೆ ಮೂತ್ರಪಿಂಡಗಳನ್ನು ಇವುಗಳ ಬದಲು ಅಳವಡಿಸುವತನಕ, ಅಂದರೆ ಬಹುಶಃ ದೀರ್ಘಕಾಲ, ಕೃತಕಮೂತ್ರಜನಕಾಂಗವನ್ನು ಉಪಯೋಗಿಸುತ್ತಿರಬೇಕು. ದೇಹದಲ್ಲಿನ ರಕ್ತವನ್ನು ಹೆಪ್ಪುಗಟ್ಟದಂತೆ ಏರ್ಪಾಡುಮಾಡಿ, ಅದು ಹೊರಪ್ರವಹಿಸಿ ಕೃತಕಮೂತ್ರಜನಕಾಂಗದಲ್ಲಿ ಹೊಕ್ಕುಬರುವಂತೆ ಮಾಡುತ್ತಾರೆ. ಆಗ ಅದು ತನ್ನ ಕಶ್ಮಲವನ್ನೆಲ್ಲ ಕಳೆದುಕೊಂಡು ಶುದ್ಧವಾಗುತ್ತದೆ. ಆಮೇಲೆ ಆ ರಕ್ತವನ್ನು ಪುನಃ ದೇಹದ ಒಳಹೊಗಿಸುತ್ತಾರೆ.

4.ಕೃತಕ ಹೃದಯ–ಶ್ವಾಸಕೋಶ ಯಂತ್ರ : 1868ರಿಂದಲೂ ರಕ್ತವನ್ನು ಕೃತಕವಾಗಿ ಗಾಳಿಯ ಪರಿಣಾಮಕ್ಕೆ ಒಡ್ಡುವ ಪ್ರಯತ್ನ ನಡೆದಿದೆ. ಆದರೆ ಸುಮಾರು 1953ರ ತನಕ ಹೆಚ್ಚು ಸಾಧಿಸಲಾಗಲಿಲ್ಲ. ಇದರ ಜೊತೆಗೆ ಇದರಲ್ಲಿ ಹೃದಯದ ಕೆಲಸವನ್ನೂ ಕೃತಕವಾಗಿ ಸೇರಿಸುವ ವಿಧಾನವನ್ನೂ ಯೋಜಿಸಲಾಯಿತು. ಅಂತೆಯೇ ಆ ಸುಮಾರಿನಲ್ಲಿ ಜಾನ್ ಗಿಬ್ಬನ್ ಎಂಬಾತ ಕೃತಕ ಹೃದಯ–ಶ್ವಾಸಕೋಶ ಯಂತ್ರವನ್ನು ಕಂಡುಹಿಡಿದ. ಇಲ್ಲೂ ದೇಹದ ರಕ್ತ ಹೆಪ್ಪುಗಟ್ಟದಂತೆ ನಾಳಗಳ ಮೂಲಕ ಹೊರಸಾಗಿಸಿ ಕೃತಕ ಹೃದಯ–ಶ್ವಾಸಕೋಶಯಂತ್ರಕ್ಕೆ ಒಯ್ಯುತ್ತಾರೆ. ಅಲ್ಲಿ ರಕ್ತ ಗಾಳಿಗೆ ಒಡ್ಡಲ್ಪಟ್ಟು ಆಮ್ಲಜನಕವನ್ನು ಹೀರಿಕೊಂಡು ಇಂಗಾಲದ ಡೈ ಆಕ್ಸೈಡನ್ನು ಕಳೆದುಕೊಂಡು ಬೇರೆ ನಾಳದ ಮೂಲಕ ಎಷ್ಟು ಬೇಕೋ ಅಷ್ಟು ಒತ್ತಡದಿಂದ ಅಯೋರ್ಟಕ್ಕೆ ದಬ್ಬಲ್ಪಡುತ್ತದೆ. ರಕ್ತ ಸ್ವಾಭಾವಿಕ ಹೃದಯ–ಶ್ವಾಸಕೋಶಗಳಿಂದ ಹೊರಗೇ ಇದ್ದು ಆ ಅಂಗಗಳಲ್ಲಿ ರಕ್ತಪರಿಚಲನೆಯೇ ಇಲ್ಲದಿರುವುದರಿಂದ ಅವುಗಳಲ್ಲಿ ಬೇಕಾದ ಶಸ್ತ್ರ ಚಿಕಿತ್ಸೆಗಳನ್ನು ಸುಲಭವಾಗಿ ಮಾಡಿ ಮುಗಿಸಬಹುದು.

ದೇಹದ ಒಳಗೆ ಕೃತಕವಾಗಿ ಜೋಡಿಸುವ ನಿರ್ಜೀವ ಅಂಗಗಳು : ದೇಹದ ಒಳಗೆ ನಿರ್ಜೀವ ಕೃತಕ ಅಂಗಗಳನ್ನು ಅಳವಡಿಸಿಯೂ ದೇಹಕಾರ್ಯಗಳು ಸ್ವಾಭಾವಿಕವಾಗಿ ಜರಗುವಂತೆ ಮಾಡಿರುತ್ತಾರೆ. ಕೃತಕ ಅಂಗಗಳು ಪೂರ್ಣವಾಗಿ ತಾವೇ ಒಂದು ಜೀವಕಾರ್ಯವನ್ನು ಜರಗಿಸಬಹುದು ಅಥವಾ ಸಹಾಯಕವಾಗಿ ಇರಬಹುದು. ಇಂಥವನ್ನು ಲೋಹ, ಪ್ಲಾಸ್ಟಿಕ್ ಅಥವಾ ಪ್ರಾಣಿಗಳ, ಮನುಷ್ಯರ ನಿರ್ಜೀವ ಅಂಗಗಳಿಂದ ಮಾಡಿರುತ್ತಾರೆ. ಮುಖ್ಯವಾಗಿ ಸರಳ ರೀತಿಯ ಯಾಂತ್ರಿಕತೆಯೇ ಪ್ರಧಾನವಾದ ಜಡಸ್ವಭಾವದ ಅಂಗಗಳಾದ ಇವು ಶುದ್ಧ ರಕ್ತನಾಳಗಳು, ಕೀಲುಗಳು ಇತ್ಯಾದಿಗಳಿಗೆ ಬದಲಾಗಿ ಉಪಯೋಗಕ್ಕೆ ಬರುತ್ತವೆ. ಹೀಗೆ ನಿರ್ಜೀವ ಹೊರವಸ್ತುಗಳನ್ನು ಒಳಹೊಗಿಸುವಾಗ ಸೋಂಕು ಇರಬಾರದು. ಇದ್ದರೆ ಇವು ದೇಹದಿಂದ ವಿಸರ್ಜಿಸಲ್ಪಡುತ್ತವೆ. ಸುತ್ತಮುತ್ತಲಿನ ಸ್ವಾಭಾವಿಕ ಅಂಗಗಳಿಗೆ ಭೌತಿಕವಾಗಿ ಮತ್ತು ರಾಸಾಯನಿಕವಾಗಿ ಇವು ಹೊಂದಿಕೊಳ್ಳುವಂತಿರಬೇಕು. ರಂಧ್ರಗಳಿರಬಹುದು. ನೀರಿನಲ್ಲಿ ಕಿಂಚಿತ್ತೂ ಕರಗದೇ ಇರುವಂಥವಾಗಿರಬೇಕು. ಇಲ್ಲದಿದ್ದರೆ ವಿಷಾಣುರಹಿತ ಊತ ಉಂಟಾಗಿ ಈ ವಸ್ತುಗಳು ವಿಸರ್ಜಿಸಲ್ಪಡುತ್ತವೆ. ವೈಟಾಲಿಯಂ, ಸ್ಟೇನ್‍ಲೆಸ್‍ಸ್ಟೀಲ್, ಏರೋಪ್ಲೇನ್ ಲೋಹ, ನೈಲಾನ್, ಟೆರಿಲೀನ್, ಪಾಲಿಥೀನ್ ಇವುಗಳಿಗೆ ಈ ಸ್ವಭಾವ ಇರುವುದರಿಂದ ಇವು ಅನುಕೂಲವಸ್ತುಗಳು. ಇವುಗಳಿಂದ ತಯಾರುಮಾಡಿದ ಅಂಗಗಳನ್ನು ದೇಹದ ಒಳಗೆ ಜೋಡಿಸಿದಾಗ ಇವು ದೇಹದ ಸ್ವಾಭಾವಿಕ ತುಯ್ತ ಧಕ್ಕೆಗಳಿಗೆ ಜಗ್ಗದೆ ಇರುವಷ್ಟು ಶಕ್ತಿಯುತವಾಗಿದ್ದು ಇರಬೇಕಾದ ಸ್ಥಾನಗಳಲ್ಲಿ ಕದಲದೆ ಇರುವಂತೆ ಬಿಗಿಯಾಗಿ ಬಂಧಿಸಲ್ಪಡಬೇಕು. ಸೊಂಟ ಪ್ರದೇಶದಲ್ಲಿ ಕೀಲನ್ನು ನಿರ್ಮಿಸಿ ಕೃತಕಕಾಲನ್ನು ಅಳವಡಿಸಿದರೆ ಆ ಕೀಲು ಕೆಲವೇ ವರ್ಷಗಳಲ್ಲಿ ಒಂದು ಮೋಟಾರು ಕಾರಿಗೆ ಅದೇ ಕಾಲದಲ್ಲಿ ಆಗುವಷ್ಟು ಧಕ್ಕೆಯನ್ನು ತಡೆದುಕೊಳ್ಳಬೇಕಾಗುತ್ತದೆ. ಅಂದಮೇಲೆ ಕೃತಕಕೀಲು ಯಾವ ಸ್ವಭಾವದ್ದಾಗಿರಬೇಕು ಎನ್ನುವುದು ಅರ್ಥವಾಗುತ್ತದೆ. ಈ ವಿಭಾಗವನ್ನು ಮುಂದಿನ ಆರು ಉಪಶೀರ್ಷಿಕೆಗಳಲ್ಲಿ ಚರ್ಚಿಸಿದೆ.

1, ಕೃತಕ ಕೀಲುಗಳು : ವೈಟಾಲಿಯಂ ಲೋಹವನ್ನು ದೇಹದ ಒಳಗೆ ಸೇರಿಸಿದಾಗ ಅದು ಯಾವ ಪ್ರತಿಕೂಲ ಪ್ರತಿಕ್ರಿಯೆಯನ್ನೂ ತೋರಿಸುವುದಿಲ್ಲವೆಂದು ಸ್ಮಿತ್ ಪೀಟರ್‍ಸನ್ ಎಂಬಾತ ಕಂಡುಹಿಡಿದ (1938). ಅಂದಿನಿಂದ ಈ ಲೋಹವನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಲು ತೊಡಗಿದ್ದಾರೆ. ತಲೆ ಒಡೆದು ಹೋದಾಗ, ಮುರಿದ ತಲೆಚಿಪ್ಪಿನ ಬದಲು ಇದರ ತಗಡನ್ನು ಉಪಯೋಗಿಸಲಾಗಿದೆ. ತೊಡೆಯ ಮೂಳೆ ಅಥವಾ ಕೀಲಿನಲ್ಲಿ ವ್ಯಾಧಿ ಅಥವಾ ಆಘಾತವಾಗಿದ್ದರೆ ಮತ್ತು ಯಾವ ಕಾರಣದಿಂದಲಾದರೂ ಆ ಭಾಗಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಬೇಕಾಗಿದ್ದರೆ ವೈಟಾಲಿಯಂ ತಗಡನ್ನು ಉಪಯೋಗಿಸಿ ಆಯಾ ಭಾಗಗಳ ಜೀರ್ಣೋದ್ಧಾರ ಮಾಡಿದೆ. ಹೀಗೆ ತೊಡೆಮೂಳೆಯ ತಲೆಭಾಗ, ಕೀಲಿನ ಎದುರು ಬದಿರಾದ ಸವೆಯುವ ಭಾಗಗಳು, ಪೂರ್ಣವಾಗಿ ತೊಡೆ ದೇಹಕ್ಕೆ ಸೇರಿಕೊಳ್ಳುವ ಕೀಲು ಇವನ್ನೆಲ್ಲ ಮಾಡಿ ನಿಷ್ಕ್ರಿಯಗೊಂಡ ಭಾಗಗಳ ಬದಲು ಅಳವಡಿಸಲಾಗಿದೆ. ಕೀಲಿನ ಒಂದು ಭಾಗದ ಮೂಳೆಯನ್ನು ಮಾತ್ರ ಪಲ್ಲಟಿಸಿದ್ದರೆ ಈ ಕೃತಕಕೀಲು ಸ್ವಾಭಾವಿಕವಾಗಿರುವಂತೆಯೆ ಕೆಲಸ ಮಾಡಲು ಶಕ್ತವಾಗಿರುತ್ತದೆ. ಏಕೆಂದರೆ ಕಾಲ ಕ್ರಮೇಣ ಅಭಿಮುಖವಾದ ಆರೋಗ್ಯವಾದ ಮೂಳೆಯ ನಿರಂತರ ಸ್ವಾಭಾವಿಕ ಮಾರ್ಪಾಡಿನಿಂದ ಸವೆತ ಸಕ್ರಮಗೊಳ್ಳುತ್ತಲೇ ಇರುತ್ತದೆ. ಕೀಲಿನಲ್ಲಿ ಸಂಧಿಸುವ ಎರಡೂ ಮೂಳೆಗಳನ್ನು ಲೋಹದ ಅಳವಡಿಕೆಯಿಂದ ಸಹಜಸ್ಥಿತಿಗೆ ತಂದು ಜೋಡಿಸಿದ್ದರೆ ಕಾಲಕ್ರಮೇಣ ಆಗುವ ಸವೆತಕ್ಕೆ ತಕ್ಕ ಪ್ರತಿಕ್ರಿಯೆ ಒದಗದೆ ಕ್ರಮೇಣ ಕೀಲು ಅಪ್ರಯೋಜಕವಾಗುವುದು. ಸಾಮಾನ್ಯವಾಗಿ ಈ ರೀತಿ ಕೃತಕಕೀಲನ್ನು ವಯಸ್ಸಾದವರಲ್ಲಿ ಮಾತ್ರ ಅಳವಡಿಸುವುದರಿಂದ ಅದರ ಬಹುಕಾಲಿಕ ಉಪಯುಕ್ತತೆ ಅಥವಾ ಅನುಪಯುಕ್ತತೆಯನ್ನು ಅಳೆದು ಅಂದಾಜು ಮಾಡಲು ಸಾಧ್ಯವಾಗಿಲ್ಲ. ಲೋಹದ ಭಾಗಗಳನ್ನು ಸುತ್ತಲಿನ ಆರೋಗ್ಯವಾದ ಮೂಳೆಗಳಿಗೆ ಜರಗುವಂತೆ ಸೇರಿಸುವುದೂ ಒಂದು ತೊಡಕಿನ ವಿಷಯ. ಮೊಳೆ ಹೊಡೆದು ಸೇರಿಸಿದರೆ ಕ್ರಮೇಣ ಮೊಳೆಗಳು ಸಡಿಲವಾಗುತ್ತವೆ. ಇದನ್ನು ತಪ್ಪಿಸಲು ಇನ್ನೂ ಯಾವ ಉಪಾಯವೂ ತಿಳಿದಿಲ್ಲ. ಮೂಳೆಚೂರುಗಳನ್ನು ಬೆಣೆ ಮೊಳೆಗಳ ಹಾಗೆ ಉಪಯೋಗಿಸಿದರೆ ಮುಂದೆ ಪರಿಣಮಿಸುವ ಪ್ರತಿಕ್ರಿಯೆ ಸ್ವಲ್ಪಮಟ್ಟಿಗೆ ಸಹಜ ರೀತಿಯದಾಗಿದ್ದು ಅನುಕೂಲವಾಗಿರುವುದೇನೋ ಎಂದು ಯೋಚಿಸಲಾಗಿದೆ.

ಸಂಧಿವಾತದಿಂದ ಅಥವಾ ಬೇರೆ ಕಾರಣಗಳಿಂದ ಘಾತವಾದ ಬೆರಳು ಕೀಲುಗಳನ್ನೂ ಮೊಣಕೈ ಮೊಣಕಾಲುಗಳನ್ನೂ ಇದೇ ರೀತಿ ಕೃತಕವಾಗಿ ಪುನರ್ವ್ಯವಸ್ಥೆಗೊಳಿಸಿ ಸ್ವಾಭಾವಿಕ ಆಕಾರ ಮತ್ತು ಕ್ರಿಯೆ ಒದಗುವಂತೆ ಪ್ರಯತ್ನಿಸಿದ್ದಾರೆ. ಆದರೆ ಕೀಲು ಅಥವಾ ಮೂಳೆಗಳು ಸಣ್ಣದಾದ ಹಾಗೆ ಲೋಹದ ತಗಡನ್ನು ಅಲ್ಲಿ ಜೋಡಿಸುವುದು ಪ್ರಯಾಸದ ಕೆಲಸವೆನ್ನುವುದು ವ್ಯಕ್ತವಾಗಿಯೇ ಇದೆ.

2.ಕೃತಕ ಶುದ್ಧ ರಕ್ತನಾಳಗಳು : 1950ರಿಂದ ಈಚೆಗೆ ಈ ಪ್ರಯತ್ನ ನಡೆದಿದೆ. ಶುದ್ಧರಕ್ತನಾಳಗಳನ್ನು ಒಂದಕ್ಕೊಂದು ಸೇರಿಸಿ ಹೊಲೆಯುವ ವಿಧಾನ ಈ ಶತಮಾನದ ಪ್ರಾರಂಭದಲ್ಲೇ ತಿಳಿದು ಬಂದಿದ್ದರೂ ಅದನ್ನು ಪ್ರಾಣಿಗಳಲ್ಲಿ ಪ್ರಯೋಗಗಳಿಗಾಗಿ ಮಾತ್ರ ಅನುಸರಿಸುತ್ತಿದ್ದರು. ಅಳವಡಿಸಲು ಯೋಗ್ಯವಾದ ವಸ್ತು ದೊರೆತಾಗ ಕೃತಕವಾಗಿ ರಕ್ತನಾಳವನ್ನು ಸೃಷ್ಟಿಸಿ ಅಳವಡಿಸುವುದು ಸಾಧ್ಯವಾಯಿತು. ವಾಸ್ತವವಾಗಿ ಯೋಗ್ಯವಾದ ವಸ್ತು ದೊರೆಯುವತನಕ ಕಾಯಲೇ ಇಲ್ಲ. ಏಕೆಂದರೆ ಮೊತ್ತಮೊದಲಾಗಿ ಶುದ್ಧ ರಕ್ತನಾಳವನ್ನು ಸೃಷ್ಟಿಸಿ ಸೇರಿಸಿ ಹೊಲೆದದ್ದು ವಾಸ್ತವಿಕವಾಗಿ ರೋಗಿ ಧರಿಸಿದ ಷರಟಿನ ಎರಡು ಉದ್ದನೆಯ ಚೂರುಗಳನ್ನು ಉಪಯೋಗಿಸಿಯೇ ಎಂದು ತಿಳಿದು ಬಂದಿದೆ. ಟೆರಿಲೀನ್ ವಸ್ತು ಕೃತಕಶುದ್ಧರಕ್ತನಾಳದ ನಿರ್ಮಾಣಕ್ಕೆ ಅನುಕೂಲ ವಸ್ತು. ಆದರೆ ಈ ವಸ್ತುವಿನ ಗಮನಾರ್ಹವಾದ ಒಂದು ಕೊರತೆ ಏನೆಂದರೆ ಅದು ಅನೇಕ ವೇಳೆ ಹೊರಚಲನದ ದೆಸೆಯಿಂದ ಮಡಚಿಕೊಂಡುಬಿಡುವುದು. ಟೆರಿಲೀನ್ ನಾಳಗಳನ್ನು ಶುದ್ಧರಕ್ತನಾಳಗಳಿಗೆ ಸೇರಿಸಿ ಹೊಲೆದಾಗ ಉಂಟಾದ ತೂತುಗಳು ರಕ್ತಹೆಪ್ಪು ಗಟ್ಟುವಿಕೆಯಿಂದ ಮುಚ್ಚಲ್ಪಡುವುದರಿಂದ ರಕ್ತಸ್ರಾವದ ಹೆದರಿಕೆ ಇರುವುದಿಲ್ಲ. ಹೊಲೆದ ಸ್ಥಳ ಕ್ರಮೇಣ ರಕ್ತನಾಳಕ್ಕೆ ಸೇರ್ಪಡೆಯಾಗುವುದರಿಂದ ಸೃಷ್ಟಿಸಿದ ರಕ್ತನಾಳ ಕಳಚಿಕೊಂಡು ಬರುತ್ತದೆ ಎನ್ನುವ ಹೆದರಿಕೆಯೂ ಇರುವುದಿಲ್ಲ. ಮಡಚಿಕೊಳ್ಳದಂತೆ ಏನಾದರೂ ಏರ್ಪಾಡು ಮಾಡಿದರೆ, ಕೃತಕ ರಕ್ತನಾಳಗಳಲ್ಲಿ ರಕ್ತ ವೇಗವಾಗಿ ಪ್ರವಹಿಸುತ್ತಿರುವವರೆಗೂ, ಹೆಪ್ಪುಗಟ್ಟುವುದಕ್ಕೆ ಅವಕಾಶವಿಲ್ಲದೆ, ಈ ಸಾಧನ ಬಹು ಉಪಯುಕ್ತವಾಗಿಯೇ ಇರುತ್ತದೆ. ಆದರೆ ಈ ಹೆದರಿಕೆಗಳು ಇದ್ದೇ ಇರುತ್ತವೆ.

3.ಕೃತಕ ಹೃದಯಕವಾಟಗಳು : ಅಯೋರ್ಟದ ಕವಾಟಗಳೇ ಮಿಕ್ಕ ಎಲ್ಲ ಕವಾಟಗಳಿಗಿಂತ ಹೆಚ್ಚಾಗಿ ವ್ಯಾಧಿಗ್ರಸ್ತವಾಗಿ ನಿಷ್ಪ್ರಯೋಜಕವಾಗುತ್ತವಾದ್ದರಿಂದ ಆ ಕವಾಟಗಳನ್ನು ಕೃತಕವಾಗಿ ನಿರ್ಮಿಸುವುದು ವಾಡಿಕೆ. ಸೀಮೆಎಣ್ಣೆ ಪಂಪಿನಲ್ಲಿರುವಂತೆ ಒಂದು ಲೋಹದ ಅಥವಾ ಪ್ಲಾಸ್ಟಿಕ್ ಗೋಲಿಗಳನ್ನು ಅಯೋರ್ಟದ ಒಳಗೆ ಅಳವಡಿಸಿ ಅದು ಕವಾಟದಂತೆ ಕ್ರಿಯೆಗೊಳ್ಳುವ ಹಾಗೆ ಮಾಡುವುದಾಗಿದೆ. ಇದನ್ನು ಸ್ಟಾರ್ ಎಂಬ ವೈದ್ಯ ವಿಜ್ಞಾನಿಯ ಹೆಸರಿನಿಂದ ಸ್ಟಾರ್ ಕವಾಟವೆಂದು ಕರೆಯುತ್ತಾರೆ. ಮರಣಾನಂತರ ಪ್ರಾಣಿಗಳಿಂದ, ಮುಖ್ಯವಾಗಿ ಹಂದಿಗಳಿಂದ, ಅಯೋರ್ಟದ ಕವಾಟಗಳನ್ನು ತೆಗೆದುಕೊಂಡು ಅವನ್ನು ಶೈತ್ಯಾಧಿಕ್ಯದಿಂದ ನಿರ್ಜಲೀಕರಿಸಿದರೆ ಅಂಥ ಸ್ವಾಭಾವಿಕ ಕವಾಟಗಳನ್ನು ಸಹ ಶಸ್ತ್ರಕ್ರಿಯೆಯಿಂದ ಅನುಪಯುಕ್ತವಾದ ಕವಾಟಗಳಿಗೆ ಬದಲಾಗಿ ಅಳವಡಿಸಬಹುದು. ರಕ್ಷಿಸಿಡಲ್ಪಟ್ಟ ಇಂಥ ಕವಾಟಗಳು ವಾಸ್ತವವಾಗಿ ನಿರ್ಜೀವ ವಸ್ತುಗಳೇ ಆದ್ದರಿಂದ ಜೋಡಣೆ ಆದ ವ್ಯಕ್ತಿಯಲ್ಲಿ ಯಾವ ವಿಶೇಷ ಪ್ರತಿಕ್ರಿಯೆಯನ್ನೂ ಉಂಟುಮಾಡದೆ ಹೊಂದಿಕೊಂಡು ತಮ್ಮ ಕೆಲಸವನ್ನು ಜರುಗಿಸುತ್ತವೆ. ಇದೇ ರೀತಿ ರೋಗದಿಂದ ಅಕ್ರಮ ಕ್ರಿಯೆಗೊಂಡಿರುವ ಇತರ ಹೃದಯ ಕವಾಟಗಳನ್ನು ಮುಖ್ಯವಾಗಿ ತ್ರಿದಳ ಮತ್ತು ದ್ವಿದಳ ಕವಾಟಗಳನ್ನು ಕೃತಕ ಕವಾಟಗಳಿಂದ ಪಲ್ಲಟಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಈ ಮೂರು ಕವಾಟಗಳನ್ನೂ ಒಂದೇ ಹೃದಯದಲ್ಲಿ ಕೃತಕವಾಗಿ ಅಳವಡಿಸಲಾಗಿದೆ. ಕೃತಕ ಕವಾಟ ಸ್ಟಾರ್‌ಕವಾಟವಾಗಿದ್ದರೆ ಹೃದಯದಿಂದ ರಕ್ತ ರಭಸದಿಂದ ಹೊರದಬ್ಬಲ್ಪಟ್ಟಾಗ ಗೋಲಿಯೊಡನೆ ಪದೇ ಪದೇ ತಿಕ್ಕಾಟವಾಗಿ ರಕ್ತಕಣಗಳು ಅತಿಯಾಗಿ ನಾಶಹೊಂದಬಹುದು. ಈ ಕಾರಣದಿಂದ ರಕ್ತಹೀನತೆಯೂ ಉಂಟಾಗಬಹುದು. ಜೊತೆಗೆ ಗೋಲಿಯ ಮೇಲೆ ರಕ್ತ ಹೆಪ್ಪುಗಟ್ಟಿಕೊಳ್ಳಬಹುದಾದ್ದರಿಂದ ಆ ಹೆಪ್ಪು ಆ ಮೇಲೆ ವಿಷಾಣುಗಳಿಂದ ಆವೃತವಾಗಿ ಹೃದಯದ ಒಳಪೊರೆಗೆ ಸೋಂಕು ತಗಲಿ ಊತವುಂಟಾಗಿ ಪ್ರಾಣಾಂತಕ ಆಗಬಹುದು. ಸ್ಟಾರ್ ಕವಾಟಗಳನ್ನು ಅಳವಡಿಸಿದ ಮೇಲೆ ಅವು 1 ವರ್ಷಕಾಲ ಕೆಲಸ ಮಾಡಿರುವುದನ್ನು ಅವನ್ನು ಅಳವಡಿಸಿದ 70% ರಷ್ಟು ವ್ಯಕ್ತಿಗಳಲ್ಲಿ ನೋಡಲಾಗಿದೆ. ಕೆಲವಂತೂ 5 ವರ್ಷಗಳ ಮೇಲೂ ಕ್ರಿಯಾಶಕ್ತಿಗುಂದದೆ ಕೆಲಸಮಾಡುತ್ತಿರುವುದು ತಿಳಿದುಬಂದಿದೆ. ಎಷ್ಟಾದರೂ ಶೈತ್ಯಾಧಿಕ್ಯದಿಂದ ನಿರ್ಜಲೀಕರಿಸಿ ಸಂಗ್ರಹಿಸಿಟ್ಟ ಪ್ರಾಣಿಹೃದಯದ ಕವಾಟಗಳನ್ನು ಅಳವಡಿಸುವುದು ಉತ್ತಮ. ಈಚೆಗೆ ಷೂ ಮೇಕರ್ ಮುಂತಾದವರು ಸಿಲಿಕಾನ್ ಮತ್ತು ರಬ್ಬರನ್ನು ಉಪಯೋಗಿಸಿ ಒಂದೇ ಚೂರಿನಲ್ಲಿ ಕೃತಕ ಕವಾಟವನ್ನು ತಯಾರಿಸುತ್ತಾರೆ. ಇವು ಪೂರ್ಣವಾಗಿ ತೆರೆದಿದ್ದಾಗ ದುಂಡು ರಂಧ್ರದಂತೆಯೂ ಮುಚ್ಚಿಕೊಂಡಾಗ C ಅಥವಾ S ಆಕಾರವಾಗಿ ಇರುವಂತೆಯೂ ತಯಾರುಮಾಡಲ್ಪಟ್ಟಿವೆ. ರಕ್ತ ಒಳಬರುವ ಕವಾಟಗಳಲ್ಲಿ C ರೀತಿ ಕವಾಟಗಳನ್ನೂ ಹೊರಬರುವಲ್ಲಿ S ರೀತಿಯ ಕವಾಟಗಳನ್ನೂ ಅಳವಡಿಸುತ್ತಾರೆ. ಇವನ್ನು ಉಪಯೋಗಿಸಿದಾಗ ರಕ್ತಕಣಗಳು ಉಜ್ಜುವಿಕೆಯಿಂದ ನಾಶಹೊಂದುವುದಾಗಲಿ ರಕ್ತ ಹೆಪ್ಪುಗಟ್ಟುವುದಾಗಲಿ ಕಾಣಬರುವುದಿಲ್ಲ.

4. ಕೃತಕ ಹೃದಯ : ಹೃದಯ ಮಿಡಿದು ರಕ್ತವನ್ನು ಹೆಚ್ಚು ಒತ್ತಡದಿಂದ ಹೊರನೂಕುವ ವಿಧಾನವನ್ನು ಪೂರ್ಣವಾಗಿ ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಎಡಹೃತ್ಕುಕ್ಷಿಯ ರಕ್ತವನ್ನು ಹೆಚ್ಚು ಒತ್ತಡದಿಂದ ಅಯೋರ್ಟಕ್ಕೆ ವರ್ಗಾಯಿಸುವ ಕ್ರಿಯೆಯನ್ನು ಮಾತ್ರ ಕೃತಕಹೃದಯದಿಂದ ಸಾಧಿಸಲಾಗಿದೆ. ಹೃದಯದ ಕವಾಟಗಳು ಅತಿಯಾಗಿ ವ್ಯಾಧಿಗ್ರಸ್ತವಾಗಿ ನಿಷ್ಕ್ರಿಯೆಗೊಂಡಾಗ ಅಥವಾ ಹೃದಯದ ಸ್ನಾಯು ವ್ಯಾಧಿಯಿಂದ ಭಾಗಶಃ ಶಿಥಿಲಗೊಂಡಾಗ ಕೃತಕಹೃದಯ–ಶ್ವಾಸಕೋಶ ಯಂತ್ರದ ಹೃದಯ ಭಾಗವನ್ನು ಮಾತ್ರ ಉಪಯೋಗಿಸಿಕೊಂಡು ಹೆಚ್ಚು ಕಾಲ ಹೃದ್ರೋಗಿಗಳ ರಕ್ತಪರಿಚಲನೆಯನ್ನು ದೇಹದ ಹೊರಗಡೆಯಿಂದಲೇ ಕ್ರಮಗೊಳಿಸಬಹುದಾಗಿದೆ. ದೇಹದ ಒಳಗೇ ಅಳವಡಿಸಬಹುದಾದಂಥ ಕೃತಕ ಹೃದಯ, ಒಂದರ ಪಕ್ಕದಲ್ಲಿ ಒಂದು ಇರುವ, ಎರಡು ಸಂಕುಚಿತವಾಗಬಲ್ಲ ಕೋಶಗಳು. ಇವೆರಡನ್ನೂ ಸುಮಾರಾಗಿ ಗಡುಸಾದ ಇನ್ನೊಂದು ಕೋಶದೊಳಗಿಟ್ಟು ಒಳಗಿನ ಕೋಶಗಳನ್ನೂ ಹೊರಕೋಶವನ್ನೂ ಒಂದು ದ್ರವದಿಂದ ಬೇರ್ಪಡಿಸಿರುತ್ತಾರೆ. ಈ ದ್ರವದ ಒತ್ತಡವನ್ನು ಯಾಂತ್ರಿಕವಾಗಿ ಮಾರ್ಪಾಡು ಮಾಡಿ ಒಳಗಿನ ಕೋಶಗಳಲ್ಲಿ ಒಂದು ಸಂಕುಚಿತವಾದಾಗ ಇನ್ನೊಂದು ಹಿಗ್ಗುವಂತೆ ಏರ್ಪಾಡು ಮಾಡಿರುತ್ತಾರೆ. ಈ ಕ್ರಮಕ್ಕೆ ಬೇಕಾದ ಒತ್ತಡದ ಏರುವಿಕೆ ಇಳಿಯುವಿಕೆಗಳನ್ನು ಒಂದು ವಿದ್ಯುತ್ ಮೋಟಾರಿನಿಂದ ನಡೆಸಲ್ಪಡುವ ಪಂಪಿನಿಂದ ಸಾಧಿಸಲಾಗಿದೆ. ಮೋಟಾರನ್ನೂ ಪಂಪನ್ನೂ ಎದೆಯಲ್ಲಿ ಸ್ಥಾಪಿಸಲು ಸ್ಥಳವಿಲ್ಲದೆ ಅವನ್ನು ಹೊಟ್ಟೆಯೊಳಗಿಟ್ಟು ಒಂದು ದೊಡ್ಡ ನಾಳದಿಂದ ಎದೆಯಲ್ಲಿರುವ ಕೃತಕ ಹೃದಯಕ್ಕೆ ಸಂಪರ್ಕ ಉಂಟುಮಾಡಿರುತ್ತಾರೆ. ಮೋಟಾರನ್ನು ನಡೆಸಬೇಕಾದ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಕಷ್ಟ. ದೇಹದ ಬೇರೆ ಸ್ನಾಯುಗಳಿಂದ ಈ ಶಕ್ತಿಯನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ದೇಹದ ಬೇರೆ ಯಾವ ಸ್ನಾಯುವಿಗೂ ಹೃದಯದಂತೆ ನಿರಂತರ ಚಟುವಟಿಕೆಯನ್ನು ತಡೆದುಕೊಳ್ಳಲು ಸಾಧ್ಯವಿಲ್ಲ. ದೇಹದ ಹೊರಗೆ ಅಥವಾ ಒಳಗೆ ವಿದ್ಯುತ್ ಕೋಶಗಳನ್ನಿಟ್ಟು ಶಕ್ತಿಯನ್ನು ಪೂರೈಸುವುದೂ ಅಷ್ಟು ಅನುಕೂಲಕರವಾಗಿರುವುದಿಲ್ಲ. ಎಚ್ಚರಿಕೆಯಿಂದ ಪದೇಪದೇ ವಿದ್ಯುತ್‌ಕೋಶಗಳನ್ನು ಬದಲಿಸುತ್ತಲೇ ಇರಬೇಕು. ಪದೇಪದೇ ಬದಲಿಸದೇ ಇರಬಹುದಾದ, ಬಹುಕಾಲಿಕವಾಗಿ ಬಾಳಿಕೆಬರುವ ವಿದ್ಯುತ್‌ಕೋಶಗಳು ದೊಡ್ಡದಾಗಿದ್ದು ದೇಹದ ಒಳಗೆ ಸೇರಿಸಲು ಅನುಕೂಲವಾಗಿರುವುದಿಲ್ಲ. ದೇಹದ ಇತರ ಸ್ನಾಯುಗಳ ಚಲನೆಯಿಂದ ಒಳಗೆ ಸೇರಿಸಿರುವ ವಿದ್ಯುತ್‌ಕೋಶಗಳ ಶಕ್ತಿಯನ್ನು ಭಾಗಶಃ ವರ್ಧಿಸುತ್ತ ಇರಬಹುದಾದರೂ ಅನಾನುಕೂಲತೆ ನಿವಾರಣೆ ಆದ ಹಾಗೆ ಆಗಲಿಲ್ಲ. ಅದಕ್ಕೆ ಹೊರಗಡೆಯಿಂದಲೇ ಹೇಗಾದರೂ ಒಳಗಿನ ಮೋಟಾರಿಗೆ ವಿದ್ಯುತ್‌ಪೂರೈಕೆ ಮಾಡುವ ಏರ್ಪಾಡನ್ನು ಯೋಚಿಸಲಾಗಿದೆ. ಇದನ್ನು ಹೃದಯದ ಕೃತಕ ನರ ಅಳವಡಿಕೆಯಲ್ಲಿ ಕಾರ್ಯಶೀಲವಾಗಿ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕವಾಟಗಳೇ ಇಲ್ಲದ ಹೃದಯವನ್ನು ಅಳವಡಿಸಲಾಗಿದೆ. ಇವು ಬೆರಳಿನಾಕಾರದ ಪಂಪುಗಳಂತೆ ಇದ್ದು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಕ್ರಮವಾಗಿ ಸಂಕುಚಿತವಾಗುವಂತೆ ಇರುತ್ತವೆ. ಇದರಿಂದ ರಕ್ತಪರಿಚಲನೆ ಏಕಮಾರ್ಗಿಕವಾಗಿಯೇ (ಕವಾಟಗಳಿಲ್ಲದಿದ್ದರೂ) ಸಾಗುವಂತಿರುತ್ತದೆ. ಕೃತಕ ಹೃದಯ ವಾಸ್ತವವಾಗಿ ಕೃತಕ ಎಡಹೃತ್ಕುಕ್ಷಿ ಮಾತ್ರವಾಗಿ ತಾತ್ಕಾಲಿಕವಾಗಿ ಹೃದಯ ಕವಾಟಗಳನ್ನು ಕೃತಕವಾಗಿ ಅಳವಡಿಸಿದಾಗ ಅಥವಾ ಹೃದಯಸ್ನಾಯು ಭಾಗಶಃ ಶಿಥಿಲಗೊಂಡಾಗ ಉಪಯೋಗಿಸಲು ಅನುಕೂಲವಾಗಿದೆ. ಒಟ್ಟಿನಲ್ಲಿ ಹೃದಯದಲ್ಲಿ ಮೂರು ಕವಾಟಗಳು ಮತ್ತು ಎಡಹೃತ್ಕುಕ್ಷಿಗಳನ್ನು ಕೃತಕವಾಗಿ ಅಳವಡಿಸಬಹುದೆಂದಾಯಿತು. ಸದ್ಯದ ಸ್ಥಿತಿಯಲ್ಲಿ ಕೃತಕವಾಗಿ ಇಷ್ಟು ಮಾಡಲು ಮಾತ್ರ ಸಾಧ್ಯವಾಗಿದೆ.

5.ಕೃತಕ ನರಗಳು : ಬೆನ್ನುಮೂಳೆ ರೋಗದಿಂದ ಅಥವಾ ಆಘಾತದಿಂದ ಮುರಿದು ಹೋದಾಗ ಅದರೊಳಗಿರುವ ನರಮಂಡಲ ಬಹುವಾಗಿ ಹಿಸುಕಲ್ಪಟ್ಟು ಅಥವಾ ಕತ್ತರಿಸಿಯೇ ಹೋಗಿ ನಿಷ್ಕ್ರಿಯವಾಗುತ್ತದೆ. ಹೀಗಾದಾಗ ಸಾಮಾನ್ಯವಾಗಿ ಕಾಲುಗಳ ಸ್ವಾಧೀನ ತಪ್ಪುವುದೇ ಅಲ್ಲದೆ ಮೂತ್ರಕೋಶದ ಸ್ವಾಧೀನವೂ ತಪ್ಪುತ್ತದೆ. ಮೂತ್ರಕೋಶ ಯಥಾವತ್ತಾಗಿ ಕೆಲಸ ಮಾಡಬೇಕಾದರೆ, ಅದಕ್ಕೆ ಕ್ರಿಯಾವಾಹಿ ನರಗಳು ನರಮಂಡಲದಿಂದ ಒದಗಿಸುತ್ತಿದ್ದ ಪ್ರಚೋದನೆಯಂತೆಯೇ ಕೃತಕ ಪ್ರಚೋದನೆ ದೊರೆಯುವಂತೆ ಮಾಡಬೇಕು. ದೇಹದ ಹೊರಗಡೆ ಇರುವ ವಿದ್ಯುತ್‌ಕೋಶಗಳಿಂದ ಒದಗುವ ವಿದ್ಯುಚ್ಛಕ್ತಿಯನ್ನು ತಂತಿಗಳ ಮೂಲಕ ಮೂತ್ರಕೋಶದಲ್ಲಿ ಒಂದು ನಿರ್ದಿಷ್ಟ ಕ್ರಮದಲ್ಲಿ ಪ್ರವಹಿಸುವಂತೆ ಮಾಡಿದರೆ ಅಂಥ ಕೃತಕ ಪ್ರಚೋದನೆಯಿಂದ ಅದು ಸಂಕುಚಿತವಾಗುವಂತೆ ಮಾಡಬಹುದು. ವಿದ್ಯುಚ್ಛಕ್ತಿಯನ್ನು ಒಯ್ಯುವ ತಂತಿಗಳನ್ನು ಹೊಟ್ಟೆಯಲ್ಲಿ ರಂಧ್ರ ಮಾಡಿ ನುಗ್ಗಿಸಿ ಮೂತ್ರಕೋಶದ ಮೇಲೆ ಸರಿಯಾದ ಸ್ಥಳದಲ್ಲಿ ಕೂರಿಸಿ ಸೇರಿಸಿ ಹೊಲಿಯಬೇಕಾಗುತ್ತದೆ. ತಂತಿಗಳ ಈ ಭಾಗಗಳಾದರೂ ಬೆಳ್ಳಿ ತಂತಿಗಳಾಗಿರಬೇಕು. ಹೊಸ ವಸ್ತುವನ್ನು ದೇಹದೊಳಗೆ

ಅಳವಡಿಸಿ, ನಿರ್ದಿಷ್ಟ ಸ್ಥಾನದಲ್ಲಿ ಪ್ರತಿಷ್ಠಿಸಬೇಕಾದರೆ ಏನೇನು ಎಚ್ಚರಿಕೆ ತೆಗೆದುಕೊಳ್ಳಬೇಕೋ ಅಷ್ಟು ಎಚ್ಚರಿಕೆಯನ್ನು ಇಲ್ಲೂ ತೆಗೆದುಕೊಳ್ಳಬೇಕು. ಮೂತ್ರಕೋಶ ಮೂತ್ರದಿಂದ ಅತಿಯಾಗಿ ಹಿಗ್ಗಲ್ಪಟ್ಟು, ತಡೆ ಮಿತಿಮೀರಿ ಮೂತ್ರ ತೊಟ್ಟು ತೊಟ್ಟಾಗಿ ಸ್ರವಿಸುತ್ತಲೇ ಇರಬಹುದಾದ ಸಂದರ್ಭದಲ್ಲಿಯೂ ಇದೇ ರೀತಿಯಲ್ಲಿ, ಮೂತ್ರಕೋಶದ ಬಾಯಲ್ಲಿದ್ದು ನಲ್ಲಿಯಂತೆ ವರ್ತಿಸುವ ಉಂಗುರಸ್ನಾಯುವನ್ನೂ ಕೃತಕ ಪ್ರಚೋದನೆಯಿಂದ ಸಂಕುಚಿತವಾಗಿರುವಂತೆಯೇ ಇಟ್ಟುಕೊಂಡು, ಬೇಕಾದಾಗ ಅದು ಸಡಿಲ ಬಿಡುವಂತೆ ಮಾಡಿಕೊಳ್ಳಬಹುದು. ಮೂತ್ರ ವಿಸರ್ಜನೆಯನ್ನು ಕೃತಕವಾಗಿ ಈ ವಿಧಾನಗಳಿಂದ ಸಕ್ರಮಿಸಿಕೊಳ್ಳಬಹುದಾಗಿದೆ. ಇಂಥ ಸಂದರ್ಭಗಳಲ್ಲಿ ಹೀಗೆಯೇ ನಿಷ್ಕ್ರಿಯೆಗೊಳ್ಳುವ ಮಲಕೋಶದ ಉಂಗುರಸ್ನಾಯುವನ್ನೂ ಕೃತಕವಾದ ನರಪ್ರಚೋದನೆ ಕ್ರಮದಿಂದ ಬೇಕಾದಾಗ ಸಡಿಲಗೊಳ್ಳುವಂತೆ ಏರ್ಪಾಡು ಮಾಡಿ ಕೊಳ್ಳಬಹುದು. ಈ ರೀತಿ ಹೊರಗಿನಿಂದ ರಂಧ್ರಮಾಡಿ ತಂತಿಗಳನ್ನು ಒಳಹೊಗಿಸಿ ಕೃತಕನರಗಳನ್ನು ಒದಗಿಸುವ ಬದಲು ಒಂದು ತಂತಿಯ ಸುರುಳಿಯನ್ನು ದೇಹದ ಒಳಗೆ ಇಟ್ಟು ಅದರ ಎರಡು ತುದಿಗಳನ್ನೂ ಈ ಅಂಗಗಳಿಗೆ ಬೇರೆಬೇರೆಯಾಗಿ ಸೇರಿಸಿ ಹೊಲಿದು ಅದೇ ನರದಲ್ಲಿ ಹೊಲಿದು ಹೊರಗಡೆ ಇನ್ನೊಂದು ತಂತಿ ಸುರುಳಿಯನ್ನು ಇಟ್ಟು ಈ ಹೊರಗಿನ ಸುರುಳಿಯನ್ನು ಹೊರಗೇ ಇರುವ ವಿದ್ಯುತ್ ಕೋಶಕ್ಕೆ ಒಂದು ಸ್ವಿಚ್ಚನ್ನಿಟ್ಟು ಸೇರಿಸಿರಬಹುದು. ಹೊರಗಿನ ಸುರುಳಿಯಲ್ಲಿ ವಿದ್ಯುತ್ಪ್ರವಾಹವನ್ನುಂಟುಮಾಡಿದಾಗ ಒಳಗಿನ ತಂತಿ ಸುರುಳಿಯಲ್ಲಿ ಕ್ಷಣಿಕವಾಗಿ ವಿದ್ಯುತ್ ಪ್ರೇರಣೆ ಉಂಟಾಗುತ್ತದೆ. ಮತ್ತು ಅದು ಅಂಗದಲ್ಲಿ ಪ್ರವಹಿಸಿ, ಅದನ್ನು ಪ್ರಚೋದಿಸಿ ಅದು ಸಂಕುಚಿಸುವಂತೆ ಮಾಡುತ್ತದೆ. ಇದರಿಂದ ಮಲಮೂತ್ರ ವಿಸರ್ಜನೆಯನ್ನು ಕೃತಕವಾಗಿ ಹತೋಟಿಯಲ್ಲಿಟ್ಟುಕೊಂಡಿರಬಹುದಾಗಿದೆ. ಆದರೆ ಸದ್ಯದಲ್ಲಿ ಮಲಮೂತ್ರ ಕೋಶಗಳ ಸ್ನಾಯುಗಳನ್ನು ಕೃತಕವಾಗಿ ಹೊರಗಡೆ ತಂತಿಗಳಿಂದಲೇ ಹತೋಟಿಯಲ್ಲಿಟ್ಟುಕೊಳ್ಳುವುದು ವಾಡಿಕೆ.

ಹೃದಯಕ್ಕೆ ಕೃತಕನರ ಪೂರೈಕೆ : ಬಲಹೃತ್ಕರ್ಣದ ಒಂದು ಭಾಗ ನಿಯಮಿತವಾಗಿ ಸ್ವಪ್ರಚೋದನೆಗೊಳ್ಳುವುದರಿಂದ ಮತ್ತು ಆ ಪ್ರಚೋದನೆ ಹೃದಯದ ಮಿಕ್ಕ ಭಾಗಗಳಿಗೆ ನಿರ್ದಿಷ್ಟ ಮಾರ್ಗದಲ್ಲಿ ಒಯ್ಯಲ್ಪಡುವುದರಿಂದ ಹೃದಯ ಸಹಜವಾಗಿ ನಿಯಮಿತವಾಗಿ ಮಿಡಿಯುವುದು. ಹೃದಯದ ಈ ವೇಗನಿಷ್ಕರ್ಷಕಸ್ಥಾನ ಮತ್ತು ಪ್ರಚೋದನಾವಾಹಕ ಮಾರ್ಗ ರೋಗದಿಂದಲೋ ಆಘಾತದಿಂದಲೋ ತಾತ್ಕಾಲಿಕವಾಗಿ ಅಥವಾ ಕಾಯಂ ಆಗಿ ನಿಷ್ಕ್ರಿಯಗೊಂಡಾಗ ಹೃದಯದ ಮಿಡಿತದಲ್ಲಿ ಅಕ್ರಮ ತಲೆದೋರುವುದು. ಹೃದಯಮಿಡಿತ ಅತಿ ಕಡಿಮೆ ಆದರೂ ಸಾಮಾನ್ಯವಾಗಿ ರಕ್ತದ ಒತ್ತಡ ಕಡಿಮೆ ಆಗಿಬಿಡುತ್ತದೆ. ರಕ್ತದ ಒತ್ತಡ ನೈಜಪ್ರಮಾಣದಲ್ಲಿದ್ದು ಬದುಕು ನಿರ್ವಿಘ್ನವಾಗಿ ಮುಂದುವರಿಯಬೇಕಾದರೆ ಹೃದಯದ ಈ ಅಕ್ರಮವನ್ನು ಹೋಗಲಾಡಿಸಬೇಕು. ಇದನ್ನು ಕೃತಕ ವೇಗನಿಷ್ಕರ್ಷಕಸ್ಥಾನವನ್ನು ಅಳವಡಿಸಿ ಸಾಧಿಸಬಹುದು. ವೇಗನಿಷ್ಕರ್ಷಕಸ್ಥಾನ ಹೃತ್ಕರ್ಣಗಳನ್ನು ಪ್ರಚೋದಿಸಿ ಪುನಃ ತಂತಿಗಳಿಂದ ಹೃತ್ಕುಕ್ಷಿಗಳನ್ನು ಪ್ರಚೋದಿಸುವಂತೆ ಇರುತ್ತದೆ. ಕೃತಕ ವೇಗನಿಷ್ಕರ್ಷಕ ದೇಹದ ಹೊರಗಿರುತ್ತದೆ. ಅದು ಒಂದು ವಿದ್ಯುತ್ಕೋಶದಿಂದ ವಿದ್ಯುತ್ತನ್ನು, ಗಡಿಯಾರ ಸಾಧನದ ನೆರವಿನಿಂದ ನಿಯಮಿತವಾಗಿ, ತಂತಿಗಳ ಮೂಲಕ ಒದಗಿಸುತ್ತದೆ. ಮಲಮೂತ್ರಕೋಶಗಳ ಕೃತಕ ಹತೋಟಿಯಲ್ಲಿಯಂತೆಯೇ ಇಲ್ಲೂ ತಂತಿಗಳು ಒಳಹೋಗುವ ರಂಧ್ರಗಳೆಡೆಯಲ್ಲಿ ಕೀತುಕೊಳ್ಳಬಹುದು. ಹೊರಗಿನ ವಿದ್ಯುತ್ಕೋಶಗಳು ದುರ್ಬಲಗೊಳ್ಳುವುದಕ್ಕೆ ಮೊದಲೇ ಎಚ್ಚರಿಕೆಯಿಂದ ಅದನ್ನು ಬದಲಾಯಿಸುತ್ತಿರಬೇಕು. ಆದ್ದರಿಂದ ಬಹುಕಾಲ ಬಾಳಿಕೆ ಬರುವ ವಿದ್ಯುತ್ಕೋಶಗಳನ್ನೂ ಗಡಿಯಾರ ಸಾಧನಗಳನ್ನೂ ದೇಹದ ಒಳಗೇ ಅಳವಡಿಸುವ ಏರ್ಪಾಡು ನಡೆದಿದೆ. ಬಹುಕಾಲಿಕವಾಗಿಯಾದರೂ ವಿದ್ಯುತ್ಕೋಶವನ್ನು ಬದಲಿಸಬೇಕಾದ ಅವಶ್ಯಕತೆ ಇರುವುದರಿಂದ ಪ್ರತಿಸಾರಿಯೂ ಶಸ್ತ್ರಕ್ರಿಯೆಯನ್ನು ಮಾಡಿ ಬದಲಿಸುತ್ತಿರಬೇಕಾಗಿದೆ. ಆದ್ದರಿಂದ ಇಲ್ಲೂ ಹೊರಗಡೆ ಇರುವ ತಂತಿ ಸುರುಳಿಯಿಂದ ಒಳಗಡೆ ತಂತಿ ಸುರುಳಿಯಲ್ಲಿ ವಿದ್ಯುತ್‌ಪ್ರೇರಣೆ ಉಂಟಾಗುವ ವಿಧಾನವನ್ನು ಬಳಸಿಕೊಂಡು ಕೃತಕವೇಗನಿಷ್ಕರ್ಷಕವನ್ನು ದೇಹದ ಒಳಗೆ ಅಳವಡಿಸಿದ್ದಾರೆ. ಹೊರಗಡೆ ತಂತಿ ಸುರುಳಿಯಲ್ಲಿ ಗಡಿಯಾರ ಸಾಧನ ಮತ್ತು ಹೊರಗಡೆಯ ವಿದ್ಯುತ್ಕೋಶಗಳಿಂದ ನಿಯಮಿತವಾಗಿ ವಿದ್ಯುತ್ ಪ್ರವಾಹವಾದಾಗಲೆಲ್ಲ ಅದೇ ನಿಯಮದಂತೆ ಕ್ಷಣಿಕವಾಗಿ ಒಳಸುರುಳಿಯಲ್ಲಿ ವಿದ್ಯುತ್ ಪ್ರವಾಹವುಂಟಾಗಿ ಹೃದಯಮಿಡಿತವೇರ್ಪಡುತ್ತದೆ. ಇದು ಕಾಯಂ ಆಗಿ ಕೃತಕವೇಗ ನಿಷ್ಕರ್ಷಕವನ್ನು ಅಳವಡಿಸಬೇಕಾಗುವಾಗ ಅನುಸರಿಸುವುದಕ್ಕೆ ಯೋಗ್ಯವಾದ ಮಾರ್ಗ. ಜೊತೆಗೆ ವಾಸ್ತವವಾಗಿ ಇದರ ಕ್ರಿಯೆ ಹೊರಗಡೆಯೇ ಇರುವ ವಿದ್ಯುತ್ಕೋಶದಿಂದಲೇ ಜರಗುವುದರಿಂದ ವಿಷಾಣುಗಳಿಂದ ಕೀತುಕೊಳ್ಳುವ, ವಿದ್ಯುತ್ಕೋಶದ ಆಯುಸ್ಸು ಮುಗಿದುಹೋಗುವಂತಿದೆಯೇನೋ ಎನ್ನುವ ಆತಂಕದ, ತಂತಿಗಳು ಮುರಿದುಹೋಗುವ, ಇತ್ಯಾದಿ ಯಾವ ತೊಂದರೆಗಳೂ ಇರುವುದಿಲ್ಲವೆಂಬುದನ್ನು ಗಮನಿಸಬಹುದು. ದೇಹದ ಒಳಗಿರುವ ತಂತಿ ಸುರುಳಿಯಲ್ಲಿ ವಿದ್ಯುತ್ತಿನ ಉತ್ಪತ್ತಿಯನ್ನು ದೇಹದ ಇತರ ಸ್ನಾಯುಗಳ ಕ್ರಿಯೆಯಿಂದಲೇ ಉಂಟುಮಾಡಬಹುದಾದ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತದೆ. ತಾತ್ಕಾಲಿಕವಾಗಿ ಹೃದಯದ ಮಿಡಿತದ ವೇಗವನ್ನು ನಿಷ್ಕರ್ಷಿಸುವುದಕ್ಕೆ ಹೊರಗಡೆಯಿಂದ ತಂತಿಯನ್ನು ಒಳಹೊಗಿಸಿ ಅದನ್ನು ಹೃದಯಕ್ಕೆ ಸಂಪರ್ಕಿಸುವ ಸಾಧನವನ್ನೆ ಉಪಯೋಗಿಸುತ್ತಾರೆ.

ಕೃತಕ ಸೈನೋ ಅಯೋರ್ಟಿಕ್ ನರ : ಕೊನೆಯದಾಗಿ, ನರದಂತೆಯೇ ಸ್ವಾಭಾವಿಕ ರೀತಿಯ ಪ್ರಚೋದನೆಯನ್ನು ಉಂಟುಮಾಡಿ ಕಾರ್ಯಸಿದ್ಧಿಯನ್ನು ಸಾಧಿಸುವ ಈ ವಿಧಾನ ರಕ್ತದ ಒತ್ತಡವನ್ನು ಕೃತಕವಾಗಿ ನಿಯಂತ್ರಿಸಲು ಉಪಯೋಗಕಾರಿಯಾದೀತೇ ಎಂದು ಸಹ ಪರಿಶೀಲಿಸಲಾಗುತ್ತದೆ. ಸ್ವಾಭಾವಿಕವಾಗಿ ರಕ್ತದ ಒತ್ತಡ ಸೈನೋಅಯೋರ್ಟಿಕ್ ನರಗಳ ನಿಯಮಿತ ಪ್ರಚೋದನೆಯಿಂದ ನಿಯಂತ್ರಿಸಲ್ಪಡುತ್ತದೆ. ಸ್ವಾಭಾವಿಕ ನಿಯಂತ್ರಣಕ್ಕೆ ಚ್ಯುತಿ ಉಂಟಾದಾಗ ಅದರ ಬದಲಾಗಿ ಸೈನೋಅಯೋರ್ಟಿಕ್ ನರಗಳಂತೆಯೇ ನಿಯಮಿತವಾಗಿ ಪ್ರಚೋದನೆಯನ್ನು ಉಂಟುಮಾಡುವ ವಿದ್ಯುತ್ ಸಾಧನವನ್ನು ತಯಾರು ಮಾಡಲಾಗುತ್ತದೆ.

6. ಇತರ ನಿರ್ಜೀವ ವಸ್ತುಗಳ ಅಳವಡಿಕೆ : ಇದೇ ರೀತಿ ಶಬ್ದಜನಕ ಕೋಶ, ಹೊರಕಿವಿ ಪೊರೆ, ಕಣ್ಣಿನ ಮಸೂರ–ಇವನ್ನೂ ಕೃತಕವಾಗಿ ಅಳವಡಿಸಲಾಗಿದೆ. ಕಿವಿಪೊರೆ ಬಹುವಾಗಿ ಘಾತದಿಂದಲೊ ರೋಗದಿಂದಲೊ ಹರಿದುಹೋಗಿ ಕಿವಿಗೆ ಬಿದ್ದ ಶಬ್ದಗಳು ಒಳಕಿವಿಯ ಸ್ಪಂದನವನ್ನುಂಟುಮಾಡದೇ ಇರುವ ಸ್ಥಿತಿಯಲ್ಲಿ ಕೃತಕ ಹೊರಕಿವಿ ಪೊರೆಯನ್ನು ಅಳವಡಿಸುವುದು ಪ್ರಯೋಜನಕಾರಿ. ಇದನ್ನು ನಿರ್ಜೀವ ವಸ್ತುಗಳಿಂದ ತಯಾರು ಮಾಡುತ್ತಾರೆ. ಇದೇ ರೀತಿ ನಡುಕಿವಿಯ ಮೂಳೆಗಳು ಅಥವಾ ಒಳಕಿವಿ ಪೊರೆಯ ಭಾಗ ನಿಷ್ಕ್ರಿಯಗೊಂಡು, ಕಿವಿಗೆ ಬಿದ್ದ ಶಬ್ದ ಕೇಳಿಸದಂತಿದ್ದರೆ, ಹೊರವಸ್ತುಗಳನ್ನು ಉಪಯೋಗಿಸಿ ಇವನ್ನು ಕೃತಕವಾಗಿ ಸೃಷ್ಟಿಸಿ ಕೇಳುವಿಕೆಯನ್ನು ಉತ್ತಮಪಡಿಸಲು ಪ್ರಯತ್ನ ನಡೆದಿದೆ. ಆದರೆ ಇವನ್ನು ಜೀವಂತನಾಟಿ ವಿಧಾನದಲ್ಲಿ ಹೆಚ್ಚು ಉಪಯುಕ್ತವಾಗುವಂತೆ ಮಾಡಲಾಗಿದೆ. ಇದೇ ರೀತಿ ಏಡಿಗಂತಿ ಇರುವ ಶಬ್ದಜನಕ ಕೋಶವನ್ನು ಪೂರ್ಣವಾಗಿ ತೆಗೆದು ಹಾಕಿದ ಮೇಲೆ ಶವದಿಂದ ತೆಗೆದ (ಅಂದರೆ ನಿರ್ಜೀವವಾದ) ಇನ್ನೊಂದು ಶಬ್ದಜನಕ ಕೋಶವನ್ನು ಅಳವಡಿಸುವ ಪ್ರಯತ್ನ ನಡೆದಿದೆ. ಶವಗಳಿಂದ ಅಂಗಗಳನ್ನು ಪಡೆಯುವುದು ಬಲು ಜಟಿಲಕಾರ್ಯ. ಈ ಅಳವಡಿಕೆ ಬಲು ಕ್ಲಿಷ್ಟ. ಇಂಥ ಪ್ರಯತ್ನವನ್ನು 1969ರಲ್ಲಿ ಒಂದೇ ಸಾರಿ ಮಾಡಲಾಗಿದೆ. ಅಳವಡಿಸಿದ ವ್ಯಕ್ತಿಯಲ್ಲಿ ಕೃತಕ ಶಬ್ದಜನಕ ಕೋಶ 5 ತಿಂಗಳು ಕಾರ್ಯವೆಸಗಿ ಅವನು ತಕ್ಕಮಟ್ಟಿಗೆ ಮಾತಾಡಬಲ್ಲವನಾಗಿದ್ದನೆಂದೂ 5 ತಿಂಗಳ ಮೇಲೆ ಅವನಲ್ಲಿದ್ದ ಏಡಿಗಂತಿ ರೋಗ ಮರುಕಳಿಸಿ ಅವನು ಮರಣ ಹೊಂದಿದ. ಕಣ್ಣುಪೊರೆ ಬಂದಾಗ ಅಥವಾ ಇನ್ನಾವ ಕಾರಣದಿಂದಲಾದರೂ ಕಣ್ಣೊಳಗಿರುವ ಮಸೂರ ನಿರುಪಯುಕ್ತವಾಗಿ ದೃಷ್ಟಿನಾಶವಾಗಿದ್ದರೆ ಅಂಥ ಮಸೂರವನ್ನು ತೆಗೆದುಬಿಟ್ಟು ಅದರ ಸ್ಥಳದಲ್ಲಿ ಪ್ಲಾಸ್ಟಿಕ್ ಮಸೂರವನ್ನಿಟ್ಟು ದೃಷ್ಟಿ ಸರಿಹೋಗುವಂತೆ ಮಾಡುವ ವಾಡಿಕೆ ಸ್ವಲ್ಪ ಹಿಂದೆ ಇತ್ತು. ಆದರೆ ಇದರ ಉಪಯುಕ್ತತೆ ಬಹು ಕಡಿಮೆಯಾದ್ದರಿಂದ ಮತ್ತು ಇದರಿಂದ ತೊಂದರೆಯಾಗುವ ಸಂದರ್ಭವೇ ಜಾಸ್ತಿ ಆದ್ದರಿಂದ ಈಚೆಗೆ ಈ ಅಳವಡಿಕೆ ಅಷ್ಟಾಗಿ ನಡೆಯುತ್ತಿಲ್ಲ.

ದೇಹದ ಒಳಗಡೆ ಜೀವಂತ ವಸ್ತುಗಳ ಅಳವಡಿಕೆ ನಾಟಿ: ದೇಹದ ಒಳಗೆ ಜೀವಂತ ಭಾಗಗಳನ್ನು ಕೃತಕವಾಗಿ ಅಳವಡಿಸುವುದು ನಾಟಿ ವಿಧಾನ. ದೇಹದ ಹೊರಗೆ ಜೀವಂತ ಭಾಗಗಳನ್ನು ಅಳವಡಿಸುವ ವಿಧಾನವನ್ನು, ಮೂಗುಕಿವಿಗಳು ಛಿದ್ರವಾಗಿದ್ದಾಗ ಅವನ್ನು ಪುನರ್ವ್ಯವಸ್ಥೆ ಮಾಡುವುದಕ್ಕೆ ಕೈಗೊಳ್ಳುತ್ತಾರೆ. ದೃಢತೆಗೆ ಮೃದ್ವಸ್ಥಿಯನ್ನೂ ಆಕಾರ ನಿರ್ಮಾಣಕ್ಕೆ ಚರ್ಮವನ್ನೂ ತೆಗೆದುಕೊಂಡು ನಾಟಿ ಹಾಕಬೇಕಾಗುತ್ತದೆ. ಹತ್ತಿರದ ಸ್ಥಳದಿಂದ ಅದೇ ಭಾಗದ ಚರ್ಮವನ್ನು ತೆಗೆದು, ಬೇಕಾದ ಸ್ಥಳದಲ್ಲಿ ತಕ್ಕ ಸಿದ್ಧತೆ ಮಾಡಿ ಅದನ್ನು ನೆಟ್ಟು, ವಿಷಾಣುಗಳಿಂದ ಕೀತುಕೊಳ್ಳುವುದನ್ನು ತಡೆಗಟ್ಟಿದರೆ, ಈ ಚರ್ಮ ನಾಟಿ ಹಾಕಿದ ಸ್ಥಳದಲ್ಲಿ ಸ್ಥಿರವಾಗಿ ನಿಂತು, ಬೆಳೆದು ಸುತ್ತಲಿನ ಚರ್ಮಕ್ಕೆ ಸೇರಿಕೊಳ್ಳುತ್ತದೆ. ಇದೇ ರೀತಿ ನಿಷ್ಕ್ರಿಯಗೊಂಡ ಕಿವಿಯ ಹೊರ ಪೊರೆಯನ್ನೂ ನಾಟಿ ವಿಧಾನದಲ್ಲಿ ಪಲ್ಲಟಿಸಬಹುದು. ಸುಟ್ಟ ಗಾಯಗಳಲ್ಲಿ ಚರ್ಮ ಅಧಿಕವಾಗಿ ನಾಶಹೊಂದಿ, ಗುಣವಾದ ಮೇಲೆ ಅಸಹ್ಯವಾದ ಅಡಚಣೆಯನ್ನುಂಟುಮಾಡುವ ಗಾಯದಕಲೆ ಆದಲ್ಲಿ, ಆ ಸ್ಥಳದಲ್ಲೂ ನಶಿಸಿದ ಭಾಗವನ್ನು ತೆಗೆದುಹಾಕಿ ಹೊಸ ಚರ್ಮವನ್ನು ನಾಟಿ ಹಾಕಬೇಕಾಗುತ್ತದೆ. ದೇಹದ ಒಳಗಡೆಯೂ ಇದೇ ರೀತಿ ನಶಿಸಿದ ಜೀರ್ಣವಾದ ಒಂದು ಭಾಗಕ್ಕೆ ಬದಲು ಸ್ವಲ್ಪ ಹೆಚ್ಚೂಕಡಿಮೆ ಅದೇ ಲಕ್ಷಣವುಳ್ಳ ಬೇರೊಂದು ಭಾಗವನ್ನು ಅಳವಡಿಸಬಹುದಾಗಿದೆ. ಮೂತ್ರಕೋಶದ ಭಾಗವನ್ನು ಸಣ್ಣ ಕರುಳಿನ ಭಾಗದಿಂದಲೂ, ಅನ್ನನಾಳವನ್ನು ದೊಡ್ಡಕರುಳಿನ ಭಾಗದಿಂದಲೂ ಈ ರೀತಿ ಪಲ್ಲಟಿಸಿರುವುದು ಆಗಲೇ ಸಾಮಾನ್ಯ ವಿಷಯ. ಹೀಗಿದ್ದರೂ ಹಣೆಗೆ ಚರ್ಮವನ್ನು ನಾಟಿ ಹಾಕಬೇಕಾದಾಗ ತಲೆಯಿಂದ ಅಥವಾ ಹೊಟ್ಟೆಯಿಂದ

ಚರ್ಮವನ್ನು ತೆಗೆದುಕೊಂಡು ನಾಟಿ ಹಾಕಬಾರದು. ಪಲ್ಲಟವಾದ ಅಂಗಭಾಗಗಳಿಗೆ ತಕ್ಕಷ್ಟು ರಕ್ತ ಪೂರೈಕೆಯಾಗುವುದೊಂದೇ ಇಲ್ಲಿ ಗಣನೀಯವಾದ ಅಗತ್ಯತೆ. ನಿರ್ನಾಳ ಗ್ರಂಥಿಗಳ ನಾಟಿಯಂತೆಯೇ ಈ ನಾಟಿಗಳು ಜೀವಂತವಾಗಿದ್ದು ಕ್ರಿಯಾಗತವಾಗಿರಬೇಕಾದರೆ ಅವು ರಕ್ತ ಪೂರೈಕೆಗೆ ಸಹ ಗ್ರಾಹಕ ಭಾಗದ ಮೇಲೆ ಹೆಚ್ಚು ಅವಲಂಬಿಸದೆ ಇರುವಂಥ ನರಪ್ರಚೋದನೆ ಬೇಡವೇ ಆದ ರೀತಿಯವಾಗಿರಬೇಕು. ಈ ರೀತಿಯ ನಾಟಿ ಒಂದು ವ್ಯಕ್ತಿಯಲ್ಲಿ ಅಂಗದ ಅಥವಾ ಅಂಗಭಾಗದ ಸ್ಥಾನಪಲ್ಲಟ ಅಷ್ಟೆ. ಬೇರೆ ಪ್ರಾಣಿಗಳ ಜೀವಂತ ಅಂಗ ಅಥವಾ ಅಂಗಭಾಗಗಳನ್ನು ಹೀಗೆ ನಾಟಿ ಹಾಕಿ ಕಾರ್ಯಗತವಾಗುವಂತೆ ಮಾಡಲು ಆಗುವುದಿಲ್ಲ. ಬೇರೆ ಮನುಷ್ಯರ ಜೀವಂತ ನಾಟಿಗಳನ್ನು ಹಾಕಿದರೂ ಅವು ನೆಲೆಯಾಗಿನಿಂತುಕೊಳ್ಳುತ್ತವೆಂದು ನೆಚ್ಚಿಕೆ ಇಲ್ಲ. ಈ ಮೂರು ರೀತಿಯ ನಾಟಿಗಳನ್ನು ಅನುಕ್ರಮವಾಗಿ ಸ್ವಕೀಯ ನಾಟಿ (ಆಟೋ ಗ್ರಾಫ್ಟ್), ಅಂತರ್ಜಾತಿಯ ನಾಟಿ (ಹೆಟಿರೋ ಗ್ರಾಫ್ಟ್) ಮತ್ತು ಸ್ವಜಾತೀಯ ನಾಟಿ (ಹೋಮೋಗ್ರಾಫ್ಟ್) ಎಂದು ಕರೆಯುತ್ತಾರೆ. ಅಂತರ್ಜಾತಿಯ ನಾಟಿಗಳು ಯಾವಾಗಲೂ ಮತ್ತು ಸ್ವಜಾತಿಯ ನಾಟಿಗಳು ಸಾಮಾನ್ಯವಾಗಿಯೂ ನೆಲೆಗೊಳ್ಳದೆ ನಿಷ್ಫಲವಾಗಿ ವಿಸರ್ಜಿಸಲ್ಪಡುವುವು. ಸ್ವಕೀಯ ನಾಟಿಗಳಂತೆ ಸ್ವಜಾತಿಯ ನಾಟಿಗಳು ರಕ್ತಪೂರೈಕೆಗೆ ಗ್ರಾಹಕ ದೇಹದ ಮೇಲೆ ಹೆಚ್ಚು ಅವಲಂಬಿಸದೆ, ನರಪ್ರಚೋದನೆ ಬೇಡವೇ ಆಗಿರುವಂತಾದರೆ, ಅವು ಮಾತ್ರ ಗ್ರಾಹಕ ದೇಹದಲ್ಲಿ ನೆಲೆನಿಂತುಕೊಳ್ಳುತ್ತವೆ. ಅವಳಿ ಜವಳಿಗಳಲ್ಲಿ ಒಬ್ಬರ ಅಂಗ ಇನ್ನೊಬ್ಬರಲ್ಲಿ ಸಾಮಾನ್ಯವಾಗಿ ವಿಸರ್ಜಿಸಲ್ಪಡದೆ ನೆಲೆನಿಂತುಕೊಳ್ಳುತ್ತದೆ. ಏಕೆಂದರೆ ಇಂಥ ನಾಟಿಯನ್ನು ಒಂದು ರೀತಿಯ ವಿಶೇಷವಾದ ಸ್ವಕೀಯ ನಾಟಿಯೆಂದೇ ಪರಿಗಣಿಸಬೇಕಾಗಿದೆ. ಸ್ವಜಾತೀಯ ನಾಟಿಗಳು ಸಾಮಾನ್ಯವಾಗಿ ಗ್ರಾಹಕ ದೇಹದಲ್ಲಿ ನೆಲೆನಿಂತುಕೊಳ್ಳುವಂಥವು. ರಕ್ತನಾಟಿ, ಮೃದ್ವಸ್ಥಿನಾಟಿ ಕಣ್ಣಿನ ಪಾರದರ್ಶಕ ಭಾಗದ ನಾಟಿ ಇವು ಮಾತ್ರ. ಇನ್ನು ಕೆಲವು ಸ್ವಜಾತೀಯ ನಾಟಿಗಳು ಮತ್ತು ಕೆಲವು ಸಂದರ್ಭಗಳಲ್ಲಿ ಪರಜಾತೀಯ ನಾಟಿಗಳು, ಅವು ಮೃತವಾದ ಮೇಲೂ ಅವುಗಳ ದೃಢತೆ ಹಾಗೂ ಆಕಾರ ವಿಶೇಷಗಳಿಂದ ಉಪಯುಕ್ತವಾಗಿರುತ್ತವೆ. ಮಿಕ್ಕ ನಾಟಿಗಳು ಹೊರವಸ್ತುಗಳಂತೆ ಗಣಿಸಲ್ಪಟ್ಟು ವಿಸರ್ಜಿಸಲ್ಪಡುತ್ತವೆ. ಈ ವಿಸರ್ಜನಸಾಮರ್ಥ್ಯ ದೇಹವನ್ನು ವಿಷಾಣುಗಳಿಂದ, ಹೊರ ಪ್ರೊಟೀನ್ ಪದಾರ್ಥಗಳಿಂದ ರಕ್ಷಿಸಿಕೊಳ್ಳುವುದಕ್ಕೋಸ್ಕರ ನಿರೋಧ ವಸ್ತುಗಳು ಉತ್ಪತ್ತಿಯಾಗುವ ಸಾಮರ್ಥ್ಯದಂತೆಯೇ ಇರುತ್ತದೆ ಮತ್ತು ಅದೇ ರೀತಿ ಕಾರ್ಯವೆಸಗುತ್ತದೆ. ದೇಹಕ್ಕೆ ಸಹಜವಾದ ಒಂದು ಗುಣದಿಂದ ತನ್ನೊಳಗೆ ಕೃತಕವಾಗಿ ಅಳವಡಿಸಲಾದ ಅಂಗ ತನ್ನದೋ ಅಥವಾ ಬೇರೊಂದು ದೇಹದ್ದೋ ಎಂಬ ಭೇದ ತಿಳಿಯುತ್ತದೆ. ಹಾಗೆ ತಿಳಿದ ಮೇಲೆ ತಕ್ಕ ಪ್ರತಿಕ್ರಿಯೆಯಿಂದ ಹೊರಗಿನದಾದ ಅಂಗದ ಅಳವಡಿಕೆಯನ್ನು ವಿಸರ್ಜಿಸಬಲ್ಲುದು. ದೇಹ ನಿರೋಧ ವಸ್ತುವನ್ನು ಉತ್ಪತ್ತಿ ಮಾಡಿಯೇ ಸಾಮಾನ್ಯವಾಗಿ ಈ ವಿಸರ್ಜನಕ್ರಿಯೆಯನ್ನು ತೋರಿಸುವುದರಿಂದ, ನಿರೋಧವಸ್ತು ಉತ್ಪತ್ತಿಯಾಗುವುದನ್ನು ತಡೆದುಬಿಟ್ಟರೆ ಸ್ವಜಾತೀಯ ನಾಟಿ, ಬಹುಶಃ ಪರಜಾತೀಯ ನಾಟಿಯೂ ನೆಲೆಗೊಳ್ಳಬಹುದೇನೋ ಎನ್ನುವ ಅಂಶ ಅರಿಕೆಯಾಗುತ್ತದೆ. ನಾಟಿ ಮಾಡಲು ಅಂಗವನ್ನು ದಾನಿಯಿಂದ ತೆಗೆದುಕೊಂಡ ಮೇಲೆ, ಅದನ್ನು ಅತಿಶೈತ್ಯದಲ್ಲಿ ($4^0$ ಸೆ.) ಸಂರಕ್ಷಿಸಿಟ್ಟಿರಬೇಕು. ತೆಗೆದ ಸುಮಾರು 4–6 ಗಂಟೆಗಳೊಳಗೆ ಗ್ರಾಹಕದೇಹದಲ್ಲಿ ನಾಟಿ ಹಾಕಿಬಿಡಬೇಕು. ಸ್ವಾಭಾವಿಕವಾಗಿಯೇ ಅಂಗವನ್ನು ತೆಗೆಯುವಾಗ, ಶೈತ್ಯದಲ್ಲಿ ಸಂಗ್ರಹಿಸಿಟ್ಟಾಗ, ನಾಟಿ ಹಾಕುವಾಗ, ಮತ್ತೆ, ಆ ಮೇಲೆಯೂ ವಿಷಾಣುರಹಿತಸ್ಥಿತಿಯನ್ನು ಬಹು ಎಚ್ಚರಿಕೆಯಿಂದ ಕಾಪಾಡಿಕೊಂಡಿರಬೇಕು. ನಾಟಿ ಹಾಕುವಾಗ ಮೊದಲು ರಕ್ತನಾಳಗಳನ್ನು ಸೇರಿಸಿ ಹೊಲೆದುಬಿಡಬೇಕು. ಇದು 10–20 ಮಿನಿಟುಗಳೊಳಗೆ ಮುಗಿಸಿಬಿಡಬೇಕಾದ ಕಾರ್ಯ. ನಾಟಿ ವಿಸರ್ಜನೆ ಆಗದಂತಿರಬೇಕಾದರೆ ಮತ್ತು ನಾಟಿ ಊರ್ಜಿತವಾಗಬೇಕಾದರೆ ದಾನಿ ಮತ್ತು ಗ್ರಾಹಕ ಇಬ್ಬರ ರಕ್ತಪಂಗಡವೂ ಒಂದೇ ಆಗಿರಬೇಕು. ಇಲ್ಲವಾದರೆ ನಾಟಿ ಹಾಕಿದ ಕೂಡಲೇ ರಕ್ತಕಣಗಳು ಗಂಟು ಕಟ್ಟಿಕೊಂಡು ನಾಟಿಯ ರಕ್ತ ಪೂರೈಕೆಗೆ ಅಡಚಣೆಯುಂಟಾಗಿ ನಾಟಿ ಸತ್ತು ಹೋಗುತ್ತದೆ. ಹೀಗೆ ಕೂಡಲೇ ಆಗದಿದ್ದರೂ ಸ್ವಜಾತೀಯ ನಾಟಿ ಹೊರವಸ್ತುವೇ ಆದ್ದರಿಂದ ಗ್ರಾಹಕ ದೇಹದಲ್ಲಿ ನಿರೋಧ ವಸ್ತುಗಳು ಕ್ಷಿಪ್ರವಾಗಿಯೋ, ನಿಧಾನವಾಗಿಯೋ (ಇದು ಕೆಲವು ತಿಂಗಳುಗಳೇ ಆಗಬಹುದು) ಉತ್ಪತ್ತಿಯಾಗಿ ನಾಟಿ ವಿಸರ್ಜಿಸಲ್ಪಡುತ್ತದೆ. ನಾಟಿ ವಿಸರ್ಜನೆ ಸ್ಥಳೀಯ ಜೀವಾಣುಗಳ ಪ್ರತಿಕ್ರಿಯೆಯಿಂದಲೂ ಅನೇಕ ವೇಳೆ ಉಂಟಾಗುತ್ತದೆ. ನಾಟಿಗೆ ವಿರೋಧ ವಸ್ತುಗಳು ದೇಹದಲ್ಲಿ ಉತ್ಪತ್ತಿ ಆಗುವ ತನಕ ಅನೇಕ ವೇಳೆ ಅವಕಾಶವೇ ಇರುವುದಿಲ್ಲ. ಆದ್ದರಿಂದ ನಾಟಿ ಊರ್ಜಿತವಾಗಬೇಕಾದರೆ ನಾಟಿ ಮಾಡಿದ ಅಂಗ ಸ್ಥಳೀಕ ಪ್ರತಿಕ್ರಿಯೆಯನ್ನು ಉಂಟುಮಾಡದಂತಿರಬೇಕು. ಇದು ಸ್ವಕೀಯ ನಾಟಿ ಮತ್ತು ಅವಳಿ ನಾಟಿಗಳಲ್ಲಿ ಮಾತ್ರ ಕಾಣಬರುವ ವಿಷಯ. ಹೀಗೆ ನಾಟಿ ಹಾಕಿದ ಮೂತ್ರಪಿಂಡಗಳು 6–8 ವರ್ಷಗಳು ಕ್ರಿಯಾಶೀಲವಾಗಿವೆ; ಮತ್ತು ಇಂಥ ನಾಟಿಯನ್ನಾದರೂ ಅಳವಡಿಸಲು ಬಲವತ್ತರವಾದ ಕಾರಣವನ್ನು ಒದಗಿಸಿವೆ. ಆದರೆ ಇಂಥ ಅವಕಾಶ ಎಷ್ಟು ತಾನೇ ಇದ್ದೀತು? ಸ್ವಜಾತೀಯ ನಾಟಿ ಊರ್ಜಿತವಾಗಬೇಕಾದರೆ ಗ್ರಾಹಕ ವ್ಯಕ್ತಿಯಲ್ಲಿ ನಾಟಿಯನ್ನು ವರ್ಜಿಸುವ ಸ್ಥಳೀಕ ಪ್ರತಿಕ್ರಿಯೆ ಲೋಪವಾಗಿರಬೇಕು. ಇದನ್ನು ಎಕ್ಸ್‌–ಕಿರಣ ಪ್ರಯೋಗದಿಂದ ಗ್ರಾಹಕನಲ್ಲಿ ಉಂಟುಮಾಡಿ ನಾಟಿ ಹಾಕಿದ ಮೇಲೆ ಸ್ಥಳೀಯವಾಗಿ ಎಕ್ಸ್‌–ಕಿರಣವನ್ನು ಪ್ರಯೋಗಿಸುವುದನ್ನು ಮುಂದುವರಿಸಿ ಸಾಧಿಸಿದ್ದಾರೆ. ನಾಟಿಯ ಊರ್ಜಿತಕ್ಕೆ ನಿರೋಧವಾದ ವಸ್ತುಗಳು ಲಿಂಫೋಸೈಟುಗಳೆಂಬ ಒಂದು ವಿಧವಾದ ಬಿಳಿರಕ್ತ ಕಣಗಳಿಂದ ಉತ್ಪತ್ತಿಯಾಗುವುದರಿಂದ ಲಿಂಫೋಸೈಟುಗಳು ಗ್ರಾಹಕದೇಹದಲ್ಲಿ ಕ್ಷೀಣಿಸುವಂತೆ ಮಾಡುವುದಕ್ಕೋಸ್ಕರವೇ ಎಕ್ಸ್‌ಕಿರಣವನ್ನು ಪ್ರಯೋಗಿಸುವುದು. ಆದರೆ ಇದು ಎಲ್ಲ ಬಿಳಿರಕ್ತಕಣಗಳನ್ನೂ ಕೆಂಪುರಕ್ತಕಣಗಳನ್ನೂ ತಾರತಮ್ಯವಿಲ್ಲದೆ ಕ್ಷಯಗೊಳಿಸಬಹುದು. ಇದಕ್ಕಿಂತಲೂ ಹೆಚ್ಚು ಜೀವಾಣುಮಾರಕಗಳಾದ ಕಾರ್ಟಿಸೋನ್, ಆಸೋಥೈಯಾಪ್ರಿನ್ ಅಥವಾ ಆಕ್ಟಿನೋಮೈಸಿನ್ ಸಿ, ನೈಟ್ರೋಜನ್ ಮಸ್ಟರ್ಡ್–ಇವನ್ನು ಉಪಯೋಗಿಸಿ ಸಾಧಿಸಬಹುದು. ಸಹಜವಾಗಿಯೇ ರಕ್ತಕಣಗಳನ್ನೆಲ್ಲ ನಾಶಪಡಿಸುವ ಈ ಮಾರ್ಗ ಸಲ್ಲದ ಮಾರ್ಗ. ಲಿಂಫೋಸೈಟುಗಳನ್ನು ಮಾತ್ರ ನಾಶ ಮಾಡುವ ಲಸಿಕೆಗಳನ್ನು ಈಚೆಗೆ ಕುದುರೆಗಳ ದೇಹದಲ್ಲಿ ತಯಾರುಮಾಡಿ ಪಡೆದಿರುವುದರಿಂದ ಅಂಥ ಲಸಿಕೆಯನ್ನು ಉಪಯೋಗಿಸಿ ಅಳವಡಿಸಿದ ನಾಟಿ ಸಫಲವಾಗುವಂತೆ ಮಾಡಬಹುದು. ಜೊತೆಗೆ ಹೊರವಸ್ತುಗಳಿಗೆ ನಿರೋಧ ವಸ್ತುಗಳು ದೇಹದಲ್ಲಿ ಬೇರೆ ರೀತಿಯಲ್ಲೂ ಉತ್ಪತ್ತಿಯಾಗುವುದನ್ನು ಪ್ರೆಡ್ನಿಸೋನ್ ಮತ್ತು ಇಮ್ಯಾರಾನ್ ಎಂಬ ಔಷಧಿಗಳು ತಡೆಗಟ್ಟುವ ವಿಧಾನಗಳನ್ನೂ ಲಿಂಫೋಸೈಟ್ ನಿರೋಧಕಗಳು ವರ್ಧಿಸುವುದರಿಂದ ಇವೆರಡು ರೀತಿಯಲ್ಲೂ ಅವುಗಳ ಸಹಾಯದಿಂದ, ನಾಟಿಗೆ ನಿರೋಧವನ್ನು ಹೋಗಲಾಡಿಸಿ ಕೊಳ್ಳಬಹುದು. ಜೊತೆಗೆ ಕಡಿಮೆ ಪ್ರಮಾಣದಲ್ಲಿ ಪ್ರೆಡ್ನಿಸೋನ್ ಮತ್ತು ಇಮ್ಯಾರಾನನ್ನು ಉಪಯೋಗಿಸಬಹುದಾದ್ದರಿಂದ ಅವುಗಳ ನಂಜು ದೇಹಕ್ಕೆ ಕಡಿಮೆ ಮೊತ್ತದಲ್ಲಿ ತಟ್ಟುತ್ತದೆ. ಆದ್ದರಿಂದ ಲಿಂಫೋಸೈಟು ನಿರೋಧಕಗಳು ನಿಜವಾಗಿಯೂ ಸಹಾಯಕವಾಗಿವೆ. ಇದರ ಜೊತೆಗೆ ದಾನಿ ಗ್ರಾಹಕರ ಅಂಗಹೋಲಿಕೆಗಳನ್ನು ಮುಖ್ಯವಾಗಿ ಲಿಂಫೋಸೈಟುಗಳ ಹೋಲಿಕೆಗಳನ್ನೂ ಮಾಡಿ ನಾಟಿ ಮಾಡುವ ಅಂಗ ಗ್ರಾಹಕದೇಹಕ್ಕೆ ಒಗ್ಗುತ್ತದೋ ಇಲ್ಲವೋ ಎನ್ನುವುದನ್ನು ಕಂಡುಕೊಳ್ಳಲಾಗುತ್ತದೆ. ನಾಟಿ ಮಾಡುವುದಕ್ಕೋಸ್ಕರ ನಾಟಿಗೆ ನಿರೋಧವನ್ನು ತಗ್ಗಿಸುವ ಪ್ರಯತ್ನದಲ್ಲಿ ಒಟ್ಟಿನಲ್ಲಿ ಗ್ರಾಹಕ ದೇಹದ ನಿರೋಧ ಶಕ್ತಿಯನ್ನೇ ತಗ್ಗಿಸಲಾಗುತ್ತದೆ. ಇದರಿಂದ ಕ್ಷಣಕ್ಷಣಕ್ಕೂ ವಿಷಾಣುಗಳಿಂದ ದೇಹಕ್ಕೆ ಸೋಂಕು ಉಂಟಾಗುವ ಹೆದರಿಕೆ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ವಿಷಾಣುಗಳನ್ನು ಎದುರಿಸುವುದಕ್ಕೆ ಮಾತ್ರವೇ ಅಲ್ಲದೆ ಬೇರೆ ಇನ್ನಾವ ಕಾರಣಗಳಿಗೂ ನಿರೋಧವಸ್ತುಗಳು ಬೇಕಾಗಿದ್ದಲ್ಲಿ ಅದಕ್ಕೂ ತಡೆಯುಂಟಾಗುತ್ತದೆ ಎನ್ನುವುದನ್ನು ಸಹ ಇಲ್ಲಿ ಗಮನಿಸಬೇಕಾಗಿದೆ.

ಗುಂಡಿಗೆಯ ನಾಟಿ : ಗುಂಡಿಗೆಯನ್ನು ನಾಟಿ ಹಾಕಲು ಪ್ರಯತ್ನಿಸುವುದಕ್ಕೆ ಮೊದಲು ಗುಂಡಿಗೆಯ ಮೇಲೆ ಯಾವ ಶಸ್ತ್ರಚಿಕಿತ್ಸೆಯನ್ನು ಮಾಡಲೂ ಹೆದರುವ ಕಾಲವಿತ್ತು. ಅದು ಘಾತದಿಂದ ಹರಿದುಹೋಗಿದ್ದುದನ್ನು ಹೊಲಿದು ಪುನರ್ವ್ಯವಸ್ಥೆ ಮಾಡುವುದು, ಅದರ ಮೇಲು ಪೊರೆಯನ್ನು ತೆಗೆದು ಹಾಕುವುದು ಮತ್ತು ಗುಂಡಿಗೆಯ ಕವಾಟಗಳನ್ನು ಅಳವಡಿಸುವ ಪ್ರಯತ್ನ ಇವು ಅತಿ ವಿರಳವಾಗಿ ಜರಗುತ್ತಿದ್ದು ಅನೇಕ ವೇಳೆ ಸಫಲವಾಗುತ್ತಿರಲಿಲ್ಲ. ಸಾಮಾನ್ಯವಾಗಿ ಗುಂಡಿಗೆಯ ಮೇಲಿನ ಶಸ್ತ್ರಕ್ರಿಯೆ ಅಸಾಧ್ಯವೆಂದೇ ಸುಮಾರು 35–40 ವರ್ಷಗಳ ಹಿಂದಿನವರೆಗೂ ನಂಬಲಾಗಿತ್ತು. 1935–40ರ ಕಾಲದಲ್ಲಿ ಎದೆಮೂಳೆಗಳನ್ನು ಕತ್ತರಿಸಿ ತೆಗೆದಿಟ್ಟು ಗುಂಡಿಗೆ ಅಥವಾ ಶ್ವಾಸಕೋಶಗಳಲ್ಲಿ ನೇರವಾದ ಶಸ್ತ್ರಕ್ರಿಯೆಯನ್ನು ಜರಗಿಸಿ ಎದೆಮೂಳೆಗಳನ್ನು ಪುನಃ ಸ್ವಸ್ಥಾನದಲ್ಲಿ ಇಟ್ಟು ಬಂಧಿಸುವ ಏರ್ಪಾಡನ್ನು ಕಂಡುಹಿಡಿದರು. ಇದು ವಿಶೇಷ ರೀತಿಯ ಅರಿವಳಿಕೆ ಮತ್ತು ಕೃತಕ ಶ್ವಾಸಕ್ರಮವನ್ನು ಅವಲಂಬಿಸಿದ್ದರಿಂದ ಸಾಧ್ಯವಾಯಿತು. ಗುಂಡಿಗೆಯನ್ನು ಹೀಗೆ ಬಹಿರಂಗಿಸುವುದು ಸಾಧ್ಯವಾಗಿ ನೇರವಾಗಿ ಅದರ ಪರೀಕ್ಷೆಗೂ ಸಾಧ್ಯವಾದಷ್ಟು ಮಟ್ಟಿಗೆ ಚಿಕಿತ್ಸೆಗೂ ಸುಲಭ ದಾರಿಯಾಯಿತು. ಹಾಗೇ ಗುಂಡಿಗೆಯ ಭಾಗಗಳನ್ನು ಅಳವಡಿಸುವುದೂ ಕೊನೆಗೆ ಗುಂಡಿಗೆಯನ್ನೇ ನಾಟಿ ಹಾಕುವುದೂ ಸಾಧ್ಯವಾಯಿತು. ಅಂದರೆ ಈ ನಾಟಿ ಹಾಕುವ ಯೋಚನೆ ಹುಟ್ಟುವುದಕ್ಕೆ ಮೊದಲು ಗುಂಡಿಗೆಯ ಮೇಲೆ ಅನೇಕ ಶಸ್ತ್ರಕ್ರಿಯೆಗಳು ಆಚರಣೆಗೆ ಬಂದು ಅವುಗಳ ಅನುಭವ ಸಿದ್ಧಿಸಿತ್ತು. ಮುಖ್ಯವಾಗಿ ಈ ಘಟನೆಗಳಲ್ಲಿ ನಾವು ಈ ಕೆಳಗಿನವುಗಳನ್ನು ಪರಿಗಣಿಸಬಹುದಾಗಿದೆ : (I) ಅರಿವಳಿಕೆಯ ಕ್ರಿಯೆ, (ii) ಗುಂಡಿಗೆಯೊಳಗೆ ನಳಿಕೆಯನ್ನು ಹೂಗಿಸುವುದು ಮತ್ತು ರಕ್ತನಾಳಗಳ ಎಕ್ಸ್ ಕಿರಣ ಚಿತ್ರವನ್ನು ತೆಗೆಯುವ ವಿಧಾನ, (iii) ರಕ್ತದ ಒತ್ತಡ ಮುಂತಾದವುಗಳ ನಿಖರವಾದ ಅಳತೆ, (iv) ರಕ್ತದ ವಿಷಯ–ಮುಖ್ಯವಾಗಿ ಅದು ಹೆಪ್ಪುಗಟ್ಟುವ ವಿಚಾರದಲ್ಲಿ–ಪರಿಶೀಲನೆ, (v) ದೇಹದ ಉಷ್ಣತೆಯನ್ನು ತಗ್ಗಿಸಿ ಅರಿವಳಿಕೆಯನ್ನು ತಂದಿಟ್ಟುಕೊಳ್ಳುವಿಕೆ, (vi) ದೇಹಕ್ಕೆ ಹೊರಗಿನಿಂದ ರಕ್ತಚಲನೆಯನ್ನು ಒದಗಿಸುವುದು, (vii) ಗುಂಡಿಗೆಯ ಮಿಡಿತವನ್ನು

ಕೃತಕವಾಗಿ ನಿರ್ವಹಿಸುವಿಕೆ, (viii) ಈಗಿನ ಕಾಲದ ಪ್ಲಾಸ್ಟಿಕ್ ವಸ್ತ್ರಗಳ ಅಳವಡಿಕೆ, (ix) ಹೊಸತಾಂತ್ರಿಕ ವಸ್ತುಗಳು ಮತ್ತು ವಿಧಾನಗಳನ್ನು ಕಂಡುಹಿಡಿದಿರುವಿಕೆ, (x) ದೇಹದ ನಿರೋಧ ವಿಷಯಕ ಜ್ಞಾನದ ಅಧ್ಯಯನ ಇತ್ಯಾದಿ.

ಗುಂಡಿಗೆ ನಾಟಿಯಲ್ಲಿ ಒಂದು ಪ್ರಧಾನವಾದ ಕ್ರಮವನ್ನು ಶಂವೇ ಎಂಬಾತ 1960–61ರಲ್ಲಿ ಕ್ಯಾಲಿಫೋರ್ನಿಯಾದ ಸ್ಟಾನ್‌ಫರ್ಡ್ ಆಸ್ಪತ್ರೆಯಲ್ಲಿ ಆಚರಿಸಿ ತೋರಿಸಿದ. ಗ್ರಾಹಕನಲ್ಲಿ ಹೃತ್ಕರ್ಣಗಳನ್ನು ಇಟ್ಟುಕೊಂಡು ಗುಂಡಿಗೆಯ ಮಿಕ್ಕಭಾಗಗಳನ್ನು ತೆಗೆದುಹಾಕಿ, ಈ ಹೃತ್ಕರ್ಣ ಶೇಷಭಾಗಕ್ಕೆ ದಾನಿಯ ಹೃದಯ ಭಾಗವನ್ನು ಸೇರಿಸಿ ಹೊಲಿಯುವುದೇ ಈ ವಿಧಾನ. ಇದೇ ಕಾಲದಲ್ಲಿ ಶ್ವಾಸಕೋಶಗಳನ್ನು ಪಲ್ಲಟಿಸಿದರೆ ಅನುಕೂಲವೇನೋ ಎಂದು ಭಾವಿಸಿ ಪ್ರಾಣಿಗಳ ಮೇಲೆ ಅನೇಕ ವಿಧದ ನಾಟಿ ಪ್ರಯೋಗಗಳನ್ನು ಮಾಡಿ ಅಧ್ಯಯನ ನಡೆಸಿದರು. ಆದರೆ ಅದು ಮಾನವರಲ್ಲಿ ಎಷ್ಟುಮಟ್ಟಿಗೆ ಸಾಧ್ಯ ಎನ್ನುವುದು ಪ್ರಶ್ನೆಯೇ ಆಗಿದೆ. ಇದುವರೆಗೆ ಪಟ್ಟಿರುವ ಪ್ರಯತ್ನಗಳೆಲ್ಲ ಗುಂಡಿಗೆಯನ್ನು ಮಾತ್ರ ನಾಟಿ ಹಾಕಿರುವುದಾಗಿದೆ. 1965ರಲ್ಲಿ ಹಾರ್ಡಿ ಎಂಬ ವೈದ್ಯ ಮಿಸಿಸಿಪಿ ಆಸ್ಪತ್ರೆಯಲ್ಲಿ ಒಬ್ಬ ಹುಡುಗನಿಗೆ ಚಿಂಪಾಂಜಿಯ ಗುಂಡಿಗೆಯನ್ನು ನಾಟಿ ಹಾಕಿಸಿದ. ಅದು ಸ್ವಾಭಾವಿಕವಾಗಿಯೇ ಒಂದು–ಒಂದೂವರೆ ಗಂಟೆಯೊಳಗೆ ನಿಂತುಹೋಯಿತು. ಪರಜಾತಿಯ ನಾಟಿಯಾಗಿ ಅದು ಅಷ್ಟು ಹೊತ್ತಾದರೂ ಕೆಲಸ ಮಾಡಿದ್ದೇ ಆಶ್ಚರ್ಯ. ಸ್ವಜಾತೀಯ ನಾಟಿಯಾಗಿ ಗುಂಡಿಗೆಯನ್ನು  ಮೊದಲು 1967ರಲ್ಲಿ ಬ್ರೂಕ್ಲೀನ್ ಆಸ್ಪತ್ರೆಯಲ್ಲಿ ಕಾಂಟ್ರೋವಿಟ್ಸ್ ಎಂಬಾತ 19 ದಿವಸಗಳ ಶಿಶುವಿನಲ್ಲಿ ಜರುಗಿಸಿದ.  ಈ ಶಿಶುವಿಗೆ ತ್ರಿದಳ ಕವಾಟ ಹುಟ್ಟಿದಾಗಿನಿಂದ ಕುಗ್ಗಿಹೋಗಿಬಿಟ್ಟಿದ್ದರಿಂದ ಹೀಗೆ ಏನಾದರೂ ಪುನರ್‌ವ್ಯವಸ್ಥೆ ಮಾಡದೇ ಇದ್ದರೆ ಅದು ಬದುಕುವ ಆಸೆಯೇ ಇರಲಿಲ್ಲ. ಆಗ ತಾನೆ ಮೃಯ ಹೊಂದಿದ ಇನ್ನೊಂದು ಶಿಶುವಿನ ಗುಂಡಿಗೆಯನ್ನು ತೆಗೆದು ಈ ಶಿಶುವಿನ ಹೃದಯಕ್ಕೆ ಬದಲಾಗಿ ಸುಮಾರು ಎರಡೂವರೆ ಗಂಟೆಗಳ ಕಾಲ  ಶಸ್ತ್ರಕ್ರಿಯೆಯಿಂದ ಅಳವಡಿಸಲಾಯಿತು. ಹೀಗೆ ಅಳವಡಿಸಿದ ಗುಂಡಿಗೆ ಸುಮಾರು 6 ಗಂಟೆಗಳ ಕಾಲ ಕ್ರಿಯೆ ಜರಗಿಸಿ ಆಮೇಲೆ ನಿಂತುಹೋಯಿತು. ಬಹುಶಃ ಎರಡು ಶಿಶುಗಳ ರಕ್ತಗಳು ಹೊಂದಾಣಿಕೆ ಆಗದ್ದರಿಂದ ಹೀಗಾಯಿತು ಎಂದು ಕಾಣಿಸುತ್ತದೆ. ಏಕೆಂದರೆ ವಿಶೇಷ ಕ್ರಿಯೆಯಿಂದ ನಾಟಿ ವಿಸರ್ಜಿತವಾಗಿ ನಿರುಪಯುಕ್ತವಾಗಬೇಕಾದರೆ ಕೆಲವೇ ಗಂಟೆಗಳ ಅವಕಾಶ ಸಾಲದು.

1967ರ ಡಿಸೆಂಬರ್ 3ನೆಯ ತಾರೀಖು ದಕ್ಷಿಣ ಆಫ್ರಿಕಾದ ಕೇಪ್‌ಟೌನಿನಲ್ಲಿ ಹೃದಯ ವೈದ್ಯನಾದ ಕ್ರಿಶ್ಚನ್ ಬರ್ನಾರ್ಡ್ ಮತ್ತು ಅವನ ತಂಡದವರು 55 ವರ್ಷ ವಯಸ್ಸಿನ ವಾಷ್ಕಂಸ್ಕಿ ಎಂಬುವನಿಗೆ ಆಗತಾನೆ ವಾಹನಾಪಘಾತದಿಂದ ಮೃತಹೊಂದಿದ್ದ 25 ವರ್ಷ ವಯಸ್ಸಿನ ಮಹಿಳೆಯೋರ್ವಳ ಹೃದಯವನ್ನು ಮೊತ್ತಮೊದಲು ಅಳವಡಿಸಿದರು. ಡಿಸೆಂಬರ್ 21ರ ತನಕ ವಾಷ್ಕಂಸ್ಕಿ ಬದುಕಿದ್ದು, ಅಂದು ನ್ಯೂಮೋನಿಯಾದಿಂದ ಮೃತಪಟ್ಟ. ನಾಟಿ ವಿಸರ್ಜನೆಯ ಕ್ರಮದಲ್ಲಿ ನ್ಯೂಮೋನಿಯಾ ಬರಬಹುದಾದರೂ ವಾಷ್ಕಂಸ್ಕಿಯ ವಿಷಯದಲ್ಲಿ ಹೀಗಾಯಿತೆಂದು ಹೇಳುವ ಹಾಗಿಲ್ಲ. ಬರ್ನಾರ್ಡ್‌ನ ಅಭಿಪ್ರಾಯದಂತೆ ಸಾವು ನಾಟಿ ವಿಸರ್ಜನೆಯಿಂದ ಉಂಟಾಯಿತು ಎಂದು ಹೇಳುವಂತಿರಲಿಲ್ಲ. ವಾಷ್ಕಂಸ್ಕಿಯಲ್ಲಿ ಗುಂಡಿಗೆ ನಾಟಿ ಹಾಕಿದ ತರುಣದಲ್ಲೇ ಇಂಥ ಇನ್ನೊಂದು ಸಂದರ್ಭ ಒದಗಿ ಬ್ಲೈಬರ್ಗ್ ಎಂಬ ದಂತವೈದ್ಯನಿಗೆ ನೀಗ್ರೋ ತರುಣಿಯ ಗುಂಡಿಗೆಯನ್ನು ನಾಟಿ ಹಾಕಲಾಯಿತು. ಇದನ್ನು ಸಹ ಕ್ರಿಶ್ಚನ್ ಬರ್ನಾರ್ಡ್‌ನೆ ಸಾಧಿಸಿದ್ದು. ಬ್ಲೈಬರ್ಗ್‌ನು ಅನೇಕ  ತಿಂಗಳುಗಳ ಕಾಲ ನಾಟಿ ಗುಂಡಿಗೆಯ ಬಲದಿಂದಲೇ ಜೀವಂತನಾಗಿದ್ದು,  ಕೊನೆಗೆ ಸತ್ತುಹೋದ. ಇದು ನಾಟಿ ಹಾಕುವ ಕ್ರಮದ ಜಯವೋ, ಸೋಲೋ ಎಂಬ ನಿರ್ಧಾರದ ಮಾತನ್ನು ಸದ್ಯದಲ್ಲಿ ತಡೆಯಲ್ಲಿಟ್ಟಿರುವ ಹಾಗೆ ಕಾಣಿಸುತ್ತದೆ. ಗುಂಡಿಗೆಯ ನಾಟಿಯಲ್ಲಾಗಲೀ ಇನ್ನಾವ ನಾಟಿಯಲ್ಲಾಗಲೀ ವಿಷಯವನ್ನು ಇನ್ನೂ ಹೆಚ್ಚಿಗೆ ಅರಿಯುವತನಕ ಮುಂದುವರಿಯಬಾರದು ಎನ್ನುವ ಅಭಿಪ್ರಾಯ ಮೂಡಿರುವಂತೆ ಕಾಣುತ್ತದೆ. ಮೂತ್ರಪಿಂಡದ ನಾಟಿಯ ವಿಷಯದಲ್ಲಿ ಇಷ್ಟು ಹಿಂದುಮುಂದು ನೋಡಬೇಕಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಮನುಷ್ಯದೇಹದಲ್ಲಿ ಎರಡು ಮೂತ್ರಪಿಂಡಗಳಿವೆ. ಸಾಮಾನ್ಯ ಮೂತ್ರೋತ್ಪತ್ತಿ, ವಿಸರ್ಜನೆಗಳಿಗೆ ಒಂದೇ ಮೂತ್ರಪಿಂಡದ 1/3, 1/4  ಭಾಗವಿದ್ದರೂ ಸಾಕಾಗುತ್ತದೆ. ಆದ್ದರಿಂದ ಇನ್ನೊಂದು ಮೂತ್ರಪಿಂಡವನ್ನು ಬದುಕಿರುವ ದಾನಿಯಿಂದಲೇ ತೆಗೆದುಕೊಳ್ಳಬಹುದು. ದಾನಿ ಯಾರಾಗಿರಬೇಕು, ಗ್ರಾಹಕನಿಗೆ ಇರಬೇಕಾದ ವೈಶಿಷ್ಟ್ಯಗಳೇನು ಎಂಬ ಪ್ರಶ್ನೆಗಳು ಗುಂಡಿಗೆಯ ವಿಷಯದಲ್ಲಿ ಇರಬೇಕಾದಷ್ಟು ಸಂದಿಗ್ಧವಾಗಿ ಇಲ್ಲಿ ಇರಬೇಕಾಗಿಲ್ಲ. ಜೊತೆಗೆ ಅನೇಕ ವೇಳೆ ದಾನಿಯು, ಗ್ರಾಹಕನೂ ಅವಳಿಜವಳಿಯಾಗಿರುವುದರಿಂದ ಇದು ಒಂದು ವಿಶೇಷವಾದ ಸ್ವಕೀಯ ನಾಟಿಯೆಂದೇ ಪರಿಗಣಿಸಬೇಕಾಗಿದೆ. ಬೇರೆ ಸ್ವಜಾತಿ ಮೂತ್ರಪಿಂಡದ ನಾಟಿಯಲ್ಲಿ ಸಹ, ರಕ್ತ ಪಂಗಡದ ಒಗ್ಗುವಿಕೆ, ವಿಸರ್ಜನಾ ಸಾಮರ್ಥ್ಯವನ್ನು ಅಡಗಿಸುವಿಕೆ ಮುಂತಾದ ಎಚ್ಚರಗಳನ್ನು ತೆಗೆದುಕೊಳ್ಳುವುದರಿಂದ ಅವು ಫಲಿತವಾಗುವುದು ಹೆಚ್ಚೇನೂ ಅಲ್ಲ.

ಮೂತ್ರಪಿಂಡ, ಗುಂಡಿಗೆಗಳಂತೆಯೇ ಬೇರೆ ಅಂಗಗಳನ್ನು ನಾಟಿ ಹಾಕಿದ್ದಾರೆ. ಯಕೃತ್ತು, ಶ್ವಾಸಕೋಶಗಳ ನಾಟಿಗಳು ಫಲಿಸಿವೆ. ಯಕೃತ್ತಿನ ನಾಟಿ ಪ್ರಾಣಿಗಳಲ್ಲಿ ಸಾಧ್ಯವಾಗಿದ್ದರೂ ಬಹುಕಾಲದಿಂದ ಮನುಷ್ಯರಲ್ಲಿ ಅಸಾಧ್ಯವಾಗಿತ್ತು. ಈಚೆಗೆ ಕಾಲೋರಾಡೋವಿನಲ್ಲಿ ಸೇಗಲ್ ಎಂಬಾತ ಕೆಲವು ಯುವತಿಯರಲ್ಲಿ ಯಕೃತ್ತನ್ನು ನಾಟಿಹಾಕಿ ಅವರನ್ನು ಜೀವಂತವಾಗಿಟ್ಟಿದ್ದಾನೆ. ಅದೇ ರೀತಿ ಶ್ವಾಸಕೋಶದ ನಾಟಿಯೂ ಸಿದ್ಧಿಸಿದೆ. ಆದರೆ ಕೃತಕವಾಗಿ ಅಳವಡಿಸಿ ನಾಟಿಯಾದ ಶ್ವಾಸಕೋಶ ಒಂದು ವರ್ಷದೊಳಗೆ ನಿರುಪಯುಕ್ತವಾಗಿರುವುದು ಕಂಡುಬಂದಿದೆ. ಒಟ್ಟಿನಲ್ಲಿ ಯಾವ ಅಂಗವಾದರೂ ಸುಮಾರು ಅರ್ಧಗಂಟೆ ರಕ್ತ ಪೂರೈಕೆಯೆ ಇಲ್ಲದಿರುವುದನ್ನು ತಡೆದುಕೊಳ್ಳಬಲ್ಲದ್ದೇ. ಆದರೆ ಅಂತ ಅಂಗವನ್ನು ಇಂದಲ್ಲದಿದ್ದರೆ ನಾಳೆ ನಾಟಿ ವಿಧಾನದಿಂದ ಅಳವಡಿಸಬಹುದು ಎಂದು ತೋರುತ್ತದೆ. ಜನರಲ್ಲಿ ಬೇಕಾದಾಗ ರಕ್ತವನ್ನು ನಳಿಕೆಯ ಮೂಲಕ ದೇಹಕ್ಕೆ ಹೊಗಿಸುವ ಬದಲು ಸ್ವಜಾತೀಯ ರಕ್ತಜನಕ ಮಜ್ಜೆಯನ್ನು ನಾಟಿಹಾಕುವುದು ಬಹಳ ವರ್ಷಗಳಿಂದ ನಡೆಯುತ್ತಿರುವ ಪ್ರಯತ್ನ. ನಾಟಿ ವಿಸರ್ಜನ ವಿಧಾನದಿಂದ ಗ್ರಾಹಕ ದೇಹದಲ್ಲಿ ಸಾಧಾರಣವಾಗಿ ಇವು ಸಫಲವಾಗುತ್ತಿರಲಿಲ್ಲ. ಈಚೆಗೆ ಲಿಂಫೋಸೈಟು ನಿರೋಧ ಲಸಿಕೆಯಿಂದ ಉತ್ತೇಜಿತರಾಗಿ  ಸ್ವಜಾತೀಯ ಮಜ್ಜೆ ನಾಟಿ ಹಾಕುವುದನ್ನು ಪುನರಾರಂಭಿಸಿದ್ದಾರೆ.

ಕೃತಕ ಗುಂಡಿಗೆಯ ವಿಷಯವಾಗಿ ಡಿ ಬೇಕಿ ಎಂಬ ಲೋಕಪ್ರಸಿದ್ಧ ವೈದ್ಯ ಹೀಗೆ ಹೇಳಿದ್ದಾನೆ: ಗುಂಡಿಗೆಯ ನಾಟಿ ಸರಿಯಾದ ಮಾರ್ಗವಲ್ಲ ; ಹದಗೆಟ್ಟ ಗುಂಡಿಗೆಗೆ ಪೂರ್ಣ ಕೃತಕ ಗುಂಡಿಗೆಯ ಅಳವಡಿಕೆಯೆ ತಕ್ಕ ಮಾರ್ಗ. ಮಿಕ್ಕ ನಾಟಿಗಳಿಗೂ ಈ ಮಾತನ್ನು ಅನ್ವಯಿಸಬಹುದು.

ಭಾರತದಲ್ಲಿ ಕೃತಕ ಅಂಗಗಳ ಅಳವಡಿಕೆ :  ಪುಣೆಯಲ್ಲಿರುವ ಕೃತಕ ಅಂಗಗಳ ಕೇಂದ್ರವನ್ನು (ಆರ್ಟಿಫಿಶಿಯಲ್ ಲಿಂಬ್ ಸೆಂಟರ್) 1944ರಲ್ಲಿ ಸ್ಥಾಪಿಸಲಾಯಿತು. ಪ್ರೋಸ್ಥೆಟಿಕ್ಸ್ (ನ್ಯೂನತಾಪೂರಣಶಾಸ್ತ್ರ) ಮತ್ತು ಆರ್ಥೋಟಿಕ್ಸ್ (ತಿರುಚಿಹೋದ ಅಂಗವನ್ನು ನೇರಗೊಳಿಸುವ ಚಿಕಿತ್ಸೆ) ವಿಭಾಗಗಳಲ್ಲಿ ಏಷ್ಯದಲ್ಲಿ ಮುಂದುವರಿದ ಕೇಂದ್ರಗಳಲ್ಲಿ ಇದು ಸಹ ಒಂದು. ಈ ಕೇಂದ್ರದ ಆಡಳಿತ ಭಾರತ ಸೈನ್ಯ ವಿಭಾಗಕ್ಕೆ ಸೇರಿದೆ. 1964ರಲ್ಲಿ ಎರಡು ಉಪಕೇಂದ್ರಗಳನ್ನು ದೆಹಲಿಯಲ್ಲೂ ಲಖನೌದಲ್ಲೂ ಆಯಾ ಸ್ಥಳಗಳ ಸೈನ್ಯಾಸ್ಪತ್ರೆಗಳಿಗೆ ಹಾಗೂ ತಾಂತ್ರಿಕ ನೆರವು ತ್ರಿವೇಂಡ್ರಂ, ಅಹಮದಾಬಾದ್, ಪಾಟ್ನ, ಹೈದರಾಬಾದ್, ಚೆನ್ನೈ, ಪಾಟಿಯಾಲ ಮತ್ತು ಕೊಲ್ಕತ್ತ ನಗರಗಳ ಸರ್ಕಾರೀ ಮುಖ್ಯ ಆಸ್ಪತ್ರೆಗಳಲ್ಲಿ ದೊರೆಯುವ ಏರ್ಪಾಡನ್ನು ಮಾಡಲಾಗಿದೆ. ಯುದ್ಧ ಪ್ರಹಾರದಿಂದ ಪುಣೆ ಕೇಂದ್ರ (ಮತ್ತು ಅದರ ಉಪಕೇಂದ್ರಗಳು) ಈಗ ಸೈನಿಕೇತರ ನಾಗರಿಕರನ್ನು ಸಹ ಸ್ವೀಕರಿಸಿ ಯುಕ್ತ ಚಿಕಿತ್ಸೆ ಮತ್ತು ಶುಶ್ರೂಷೆ ನೀಡುತ್ತದೆ. ಅಂಗವಿಕಲರಾಗಲಿ ಅಂಗವಿಹೀನರಾಗಲಿ ತಮ್ಮ ದೈಹಿಕ ಕೊರತೆಯೊಡನೆ ಮಾನಸಿಕವಾಗಿಯೂ ಕೊರೆ ಉಳ್ಳವರಾಗಿರುತ್ತಾರೆ. ಸಮಾಜದ ಮುಖ್ಯ ಪ್ರವಾಹದಲ್ಲಿ ತಮಗೆ ಸಕ್ರಿಯವಾಗಿ ಭಾಗವಹಿಸಲು ಆಗದಿರುವುದು ಒಂದು ಕಾರಣವಾದರೆ ಜೀವನ ನಿರ್ವಹಣೆ ಸಮಸ್ಯೆ ಇನ್ನೊಂದು ಕಾರಣ. ಇಂಥವರಿಗೆ ಚಿಕಿತ್ಸೆ ನೀಡುವಾಗ ಎರಡು ಪ್ರಧಾನ ಅಂಶಗಳನ್ನು ಪುಣೆ ಕೇಂದ್ರದಲ್ಲಿ ಗಮನಿಸುತ್ತಾರೆ. ಒಂದು, ಮಾನಸಿಕವಾಗಿ ಅಂಗವಿಕಲರನ್ನು ಸಹಜವ್ಯಕ್ತಿಗಳ ಮಟ್ಟಕ್ಕೆ ಬರುವಂತೆ ಸಿದ್ಧಪಡಿಸುವುದು: ಎರಡು, ಶಸ್ತ್ರಕ್ರಿಯೆ ಹಾಗೂ ಯೋಗ್ಯಮಟ್ಟಕ್ಕೆ ಬರುವಂತೆ ಏರ್ಪಡಿಸುವುದು. ಈ ಕ್ರಿಯೆ ತೀರಾ ವೈಯಕ್ತಿಕವಾದುದು. ಇದನ್ನು ಯಶಸ್ವಿಯಾಗಿ ನಿರ್ವಹಿಸಲು ಪುಣೆ ಕೇಂದ್ರ ಹಾಗೂ ಅದರ ಉಪಕೇಂದ್ರಗಳಲ್ಲಿ ಸೌಕರ್ಯಗಳಿವೆ. ಅಂಗವಿಕಲರಿಗೆ ಪುಣೆ ಕೇಂದ್ರದಲ್ಲಿ ಒದಗಿಸುವ ಕೃತಕ ಅಂಗಗಳ ಯಾದಿ ಇಲ್ಲಿ ಬರೆದಿದೆ: (1) ಕೆಳಕಾಲಿನ ಶಸ್ತ್ರನಿರ್ಮೂಲನವಾದಾಗ ಉಪಯೋಗಿಸಲು ನಿಜ ಆಕಾರವಿರುವ ಕಾಲುಗಳು ಮತ್ತು ಗೂಟ ಕಾಲುಗಳು, (2) ಕೆಲಸಮಾಡುವ ಕೈಗಳು ಮತ್ತು ಉಡುಪುಧಾರಣೆಗೋಸ್ಕರ ಕೈಗಳು, (3)ಗಿಡ್ಡ ಕಾಲಿರುವಾಗ ಅಥವಾ ಪಾದನ್ಯೂನತೆ ಇರುವಾಗ ಉಪಯೋಗಿಸಲು ಸರ್ಜಿಕಲ್ ಪಾದರಕ್ಷೆಗಳು, (4) ಪಾರ್ಶ್ವವಾಯು ಮುಂತಾದವುಗಳಿಂದ ಕಾಲಿನ ಸ್ವಾಧೀನ ಕಳೆದುಕೊಂಡವರ ಅಥವಾ ಕಾಲು ವಿಕಾರವಾದವರ ಉಪಯೋಗಾರ್ಥ ಕ್ಯಾಲಿಪರುಗಳು, (5) ಹರ್ನಿಯಾ ಟ್ರಸ್ಸುಗಳು, (6) ಕೆಳಹೊಟ್ಟೆಯ ಬೆಲ್ಟುಗಳು, (7) ಬೆನ್ನು ಮೂಳೆಯ ಬ್ರೇಸುಗಳು ಮತ್ತು ಜ್ಯಾಕೆಟ್ಟುಗಳು, (8) ಸರ್ವಿಕಲ್ ಕಾಲರುಗಳು, (9) ಬೇರೆ ಬೇರೆ ರೂಪದ ಪಟ್ಟಿಗಳು, (10) ಮಂಡಿಯಿಂದ ಮೇಲೆ ಶಸ್ತ್ರ ನಿರ್ಮೂಲನವಾದಾಗ ಉಪಯೋಗಿಸಲು ಕಿರುಗೂಟಗಳು, (11) ಒರಗು ಪ್ಯಾಡುಗಳು (12) ಮೂಳೆಗೆ ಸಂಬಂಧಿಸಿದ ಇತರ ಆಧಾರಗಳು, (13) ನಡೆಯಲಾಗದವರ ಚಲನೆಗೋಸ್ಕರ ಚರಕುರ್ಚಿಗಳು,  (14) ಕಂಕುಳು ಅಥವಾ ಊರುಗೋಲುಗಳು, (15) ಕೈಕೋಲುಗಳು ಇತ್ಯಾದಿ.

ಆಧುನಿಕ ವಿಜ್ಞಾನವು ಕಾಂಡಕೋಶ ತಂತ್ರಜ್ಞಾನದಲ್ಲಿ ಯಶಸ್ಸಿನತ್ತ ದಾಪುಗಾಲು ಹಾಕುತ್ತಿದ್ದರೂ ಕೆಲವೊಂದು ಮೂಲಭೂತ ಪ್ರಶ್ನೆಗಳನ್ನು ಅದು ಎದುರಿಸಲೇಬೇಕಾಗಿದೆ. ಈ ತಂತ್ರಜ್ಞಾನವನ್ನು ಅನುಷ್ಠಾನಗೊಳಿಸುವಲ್ಲಿ ಕೆಲವೊಂದು ಧಾರ್ಮಿಕ, ಸಾಮಾಜಿಕ ಹಾಗೂ ನೈತಿಕ ಪ್ರಶ್ನೆಗಳು ಎದುರಾಗಿವೆ, ಮಾತ್ರವಲ್ಲ ಕಾನೂನಿನ ಅಡೆತಡೆಗಳೂ ಇವೆ. ಇದೇನಿದ್ದರೂ ವಿಜ್ಞಾನ ಹಾಗೂ ಸಾಮಾಜಿಕ ಸಂಬಂಧಗಳ ಆರೋಗ್ಯಪೂರ್ಣ ಬೆಳೆವಣಿಗೆಯ ಪ್ರಶ್ನೆಯನ್ನು ಒಳಗೊಂಡಿರುವುದರಿಂದ ಸೂಕ್ಷ್ಮವಾಗಿ ವಿಶ್ಲೇಷಿಸಿ ಬಗೆಹರಿಸಿಕೊಳ್ಳಬೇಕಾಗಿದೆ. (ಪಿ.ಎನ್.)

**ಕೃತಕ ಉಸಿರಾಟ:** ಆಕಸ್ಮಿಕದ ಪರಿಣಾಮವಾಗಿ ಸ್ವಾಭಾವಿಕ ಉಸಿರಾಟಕ್ಕೆ ತೊಂದರೆ ಆದಾಗ ಅಥವಾ ಅದು ನಿಂತುಹೋದಾಗ ಸ್ವಾಭಾವಿಕ ಉಸಿರಾಟದ ಪುನಶ್ಚೇತನಕ್ಕೆ ಅನುಸರಿಸುವ ವಿಧಾನ. ಅಕಸ್ಮಾತ್ತಾಗಿ ನೀರಿನಲ್ಲಿ ಮುಳುಗಿ ಹೋದಾಗ, ವಿದ್ಯುದಾಘಾತವಾದಾಗ, ಕುತ್ತಿಗೆಯನ್ನು ಇತರರು ಹಿಸುಕಿದಾಗ, ಬಾಹ್ಯ ಪದಾರ್ಥ ಉಸಿರ್ನಾಳದಲ್ಲಿ ಸಿಕ್ಕಿ ಹಾಕಿಕೊಂಡಾಗ, ಕ್ಲೋರೋಫಾರಂ ಮುಂತಾದ ಜ್ಞಾನಹಾರಿಗಳ ಅತಿಪ್ರಯೋಗವಾದಾಗ, ಹೊಗೆ, ಇಂಗಾಲದ ಮಾನಾಕ್ಸೈಡ್ ತುಂಬಿದ ವಾತಾವರಣದಲ್ಲಿ ಸಾಕಷ್ಟು ಕಾಲ ಇದ್ದಾಗ–ಇವೇ ಮುಂತಾದ ಸಂದರ್ಭಗಳಲ್ಲಿ ಫುಪ್ಪುಸಗಳ ಕ್ರಿಯೆಗೆ ಬೇಕಾಗುವ ಆಕ್ಸಿಜನ್ ಪೂರೈಕೆ ನಿಂತುಹೋಗಿ ಅಥವಾ ಅದರಲ್ಲಿ ಕೊರೆ ಉಂಟಾಗಿ ಸ್ವಾಭಾವಿಕ ಉಸಿರಾಟದಲ್ಲಿ ನ್ಯೂನತೆ ತಲೆದೋರುತ್ತದೆ. ಇದರಿಂದ ಒದಗುವ ಪ್ರಾಣಾಪಾಯದಿಂದ ವ್ಯಕ್ತಿಯನ್ನು ರಕ್ಷಿಸಲು ಇತರ ಯುಕ್ತ ಪ್ರಥಮ ಚಿಕಿತ್ಸೆಗಳ ಜೊತೆಗೆ ಕೃತಕ ಉಸಿರಾಟದಲ್ಲಿ ಸಹ ತೊಡಗಬೇಕು. ಇದರ ಮುಖ್ಯ ಗುರಿ ಗಾಳಿಗೂಡಿನಲ್ಲಿ ಅನಿಲದ ಬದಲಾವಣೆಮಾಡಿ ಹೃದಯ ಮತ್ತು ನರಮಂಡಲವನ್ನು ಸುಸ್ಥಿತಿಯಲ್ಲಿಡುವುದು.

ಕೃತಕ ಉಸಿರಾಟವನ್ನು ದೈಹಿಕವಾಗಿ ಇಲ್ಲವೆ ಯಾಂತ್ರಿಕವಾಗಿ ಕೈಗೊಳ್ಳಬಹುದು. ಏಕಾಏಕಿ ಉಸಿರಾಟದ ನಿಲುಗಡೆಯುಂಟಾದಾಗ ದೈಹಿಕ ಕ್ರಮಗಳಿಂದ ಉಸಿರಾಟದ ಗತಿಯನ್ನು ಹಿಂತಿರುಗಿಸಿ ಪುನಶ್ಚೇತನಗೊಳಿಸಬಹುದು. ಉಸಿರಾಟ ಕ್ರಮದಲ್ಲಿ ದೀರ್ಘಕಾಲ ಅಸಮರ್ಪಕತೆಯುಂಟಾದಾಗ ಯಾಂತ್ರಿಕ ವಿಧಾನಗಳು ಪರಿಣಾಮಕಾರಿಯಾಗಿ ಕೆಲಸಮಾಡಬಲ್ಲುವು. ದೈಹಿಕ ವಿಧಾನಗಳಲ್ಲಿ ಶೇಫರ್, ಸಿಲ್ವೆಸ್ಟರ್, ಈವ್, ಹೋಲ್ಗರ್–ನೀಲ್ಸೆನ್‌ರ ಮತ್ತು ಬಾಯಿಯಿಂದ ಬಾಯಿ ಉಸಿರಾಟಕ್ರಮಗಳು ಬಳಕೆಯಲ್ಲಿವೆ. ಈ ವಿಧಾನಗಳನ್ನು ಯಾವುದೆ ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬಹುದು.

ಶೇಫರ್ ವಿಧಾನ : ವ್ಯಕ್ತಿಯ ಉಸಿರಾಟದ ಪುನಶ್ಚೇತನ ಕಾರ್ಯದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಬಹುಮುಖ್ಯ ವಿಧಾನ. ನೀರಿನಲ್ಲಿ ಮುಳುಗಿ ಉಸಿರಾಟದ ತೊಂದರೆಯಿಂದ ಬಳಲುವ ವ್ಯಕ್ತಿಯಲ್ಲಿ ಈ ವಿಧಾನ ಪರಿಣಾಮಕಾರಿಯಾಗಿ ಬಳಕೆಯಾಗಿದೆ. ವ್ಯಕ್ತಿಯ ಬಾಯಿಯನ್ನು ಶುದ್ಧಗೊಳಿಸಿ ನಾಲಗೆಯನ್ನು ಮುಂದಕ್ಕೆಳೆದು ಕವುಚಿ ಮಲಗಿಸಬೇಕು. ತಲೆಯನ್ನು ಒಂದು ಪಕ್ಕಕ್ಕೆ ತಿರುಗಿಸಬೇಕು. ಎದೆಯ ಕೆಳಗೆ ದಿಂಬನ್ನೋ ಇಲ್ಲವೇ ಬಟ್ಟೆಯನ್ನೋ ಮಡಿಸಿ ಇಡಬೇಕು. ಈ ರೀತಿ ಮಲಗಿಸುವುದರಿಂದ ಜೊಲ್ಲು, ಲೋಳೆ ಪದಾರ್ಥಗಳು ಬಾಯಿಯಿಂದ ಹೊರಕ್ಕೆ ಬರುತ್ತವೆ. ಇದರಿಂದಾಗಿ ಉಚ್ಛ್ವಾಸ ನಿಶ್ವಾಸ ಯಾವ ತಡೆಯೂ ಇಲ್ಲದೆ ನಡೆಯಲು ಅನುಕೂಲವಾಗುತ್ತದೆ. ಪುನಶ್ಚೇತಕ ತನ್ನ ಮಂಡಿಯನ್ನೂರಿ ವ್ಯಕ್ತಿಯ ತಲೆಯತ್ತ ಮುಖಮಾಡಿ ಒಂದು ಪಕ್ಕದಲ್ಲಿ ಕುಳಿತುಕೊಳ್ಳಬೇಕು. ತನ್ನ ಎರಡೂ ಹಸ್ತಗಳನ್ನು ವ್ಯಕ್ತಿಯ ಎದೆಗೂಡಿನ ಕೆಳ ಪಕ್ಕೆಲುಬುಗಳ ಮೇಲಿಟ್ಟು ಮುಂದೆ ಬಾಗಿ, ಎರಡು ಕ್ಷಣ ಇಡೀ ದೇಹದ ಭಾರವನ್ನು ಹಸ್ತದ ಮೇಲೆ ಹಾಕಿ ಶಕ್ತಿಯಿಂದ ಸೊಂಟದತ್ತ ಒತ್ತಬೇಕು. ಇದರ ಫಲವಾಗಿ ಹೊಟ್ಟೆಯೊಳಗಿನ ಒತ್ತಡ ಹೆಚ್ಚಿ ವಪೆ ಮೇಲಕ್ಕೆ ತಳ್ಳಲ್ಪಡುತ್ತದೆ. ಆಗ ಗಾಳಿ ಎದೆಗೂಡಿನಿಂದ ಹೊರಕ್ಕೆ ದಬ್ಬಲ್ಪಡುತ್ತದೆ. ಅನಂತರ ಒತ್ತುವಿಕೆಯನ್ನು ಸಡಿಲಗೊಳಿಸಿ ಎರಡು ಕ್ಷಣ ಹಿಂದಕ್ಕೆ ಬಾಗಬೇಕು. ಆಗ ಹೊಟ್ಟೆಯಲ್ಲಿನ ಒತ್ತಡ ಕಡಿಮೆಯಾಗಿ ವಪೆ ಕೆಳಕ್ಕಿಳಿಯುತ್ತದೆ. ಫುಪ್ಪುಸ ತನ್ನ ಸ್ಥಿತಿಸ್ಥಾಪಕಶಕ್ತಿಯಿಂದ ಹಿಗ್ಗಿ ಗಾಳಿಯನ್ನು ಒಳಕ್ಕೆಳೆದುಕೊಳ್ಳುತ್ತದೆ. ಇದರ ಫಲವಾಗಿ ಒಟ್ಟು ಫುಪ್ಪುಸದ ಉಸಿರಾಟದ ಆಳವು ದೊರೆಯುತ್ತದೆ. ಅಷ್ಟು ಆಕ್ಸಿಜನ್ ರಕ್ತಶುದ್ಧೀಕರಣಕ್ಕೆ ಸಾಕು.

ಸಿಲ್ವೆಸ್ಟರ್ ವಿಧಾನ : ಈ ವಿಧಾನದಲ್ಲಿ ವ್ಯಕ್ತಿಯನ್ನು ಅಂಗಾತ ಮಲಗಿಸಬೇಕು. ನಾಲಗೆಯನ್ನು ಹೊರಕ್ಕೆ ಎಳೆದಿಟ್ಟು ಮುಖವನ್ನು ಒಂದು ಪಕ್ಕಕ್ಕೆ ತಿರುಗಿಸಿ, ಬಾಯಿಯಿಂದ ಒಸರುವ ಲೋಳೆ ಪದಾರ್ಥವನ್ನು ಒರಸುತ್ತಿರಬೇಕು. ಅಲ್ಲಿ ಇರಬಹುದಾದ ಕೃತಕ ಹಲ್ಲುಗಳು, ಸಸ್ಯಭಾಗಗಳನ್ನು ತೆಗೆಯಬೇಕು. ಪುನಶ್ಚೇತಕ ವ್ಯಕ್ತಿಯ ತಲೆಯ ಬಳಿ ಬಗ್ಗಿ ಕುಳಿತುಕೊಳ್ಳಬೇಕು. ಆತನ ಎರಡೂ ತೋಳುಗಳನ್ನು ಹಿಡಿದು ಮೇಲೆತ್ತಿ ಅನಂತರ ಕೈಗಳನ್ನು ಹಿಂದಕ್ಕೆ ಎಳೆದು ಎದೆಯ ಮೇಲಿರಿಸಿ ಒತ್ತಬೇಕು. ಈ ತೆರನಾದ ಚಲನೆಯಿಂದ ಎದೆಗೂಡು ಹಿಗ್ಗಿ ಕುಗ್ಗಿ ಕ್ರಮವಾಗಿ ಗಾಳಿ ಒಳಕ್ಕೂ ಹೊರಕ್ಕೂ ಹೋಗುವಂತೆ ಮಾಡಲು ಸಹಾಯಕವಾಗುವುದು. ಗಾಳಿಯ ಚಲನೆಗೆ ಯಾವ ತಡೆಯೂ ಉಸಿರುನಾಳದಲ್ಲಿ ಇರಬಾರದು. ಹಾಗಲ್ಲದಿದ್ದರೆ ಗಾಳಿಗೂಡಿನಲ್ಲಿ ಒತ್ತಡ ಹೆಚ್ಚಿ ಅದು ಒಡೆದು ಹೋಗುವ ಸಾಧ್ಯತೆಯಿದೆ.

ನೀರಿನಲ್ಲಿ ಮುಳುಗಿದ ವ್ಯಕ್ತಿಯನ್ನು ಹೊರಕ್ಕೆ ಎಳೆದ ಮೇಲೆ ಅವನ ಎರಡು ಕಾಲುಗಳನ್ನು ಹಿಡಿದೆತ್ತಿ ತಲೆ ಕೆಳಕ್ಕೆ ಮಾಡಿಯೋ(ಬ್ಯಾಂಟಿಂಗ್‌ನ ವಿಧಾನ) ಇಲ್ಲವೆ ಕಾಲುಗಳೆರಡನ್ನೂ ಹಿಡಿದು ಸುತ್ತ ತಿರುಗಿಸಿಯೋ ಒಳಕ್ಕೆ ಸೇರಿದ ನೀರು ಹೊರ ಹೋಗುವಂತೆ ಮಾಡಬೇಕು. ಇದರಿಂದ ಜಠರ ಮತ್ತು ಶ್ವಾಸಕೋಶಗಳಲ್ಲಿ ಸೇರಿದ ನೀರು ಹೊರಕ್ಕೆ ಬರುತ್ತದೆ. ಅನಂತರ ಕೃತಕ ಉಸಿರಾಟ ಕ್ರಮವನ್ನು ಕೈಗೊಳ್ಳಬೇಕು.

ಈವ್‌ನ ತೂಗು ವಿಧಾನ : ಚೇತನಗೊಳಿಸಬೇಕಾದ ವ್ಯಕ್ತಿಯನ್ನು ಅಸ್ವಸ್ಥರನ್ನು ಹೊರುವ ಮಂಚಕ್ಕೆ ಕಟ್ಟಿ ಮಲಗಿಸಬೇಕು. ಬಳಿಕ ಅನುಕ್ರಮವಾಗಿ ತಲೆ ಮತ್ತು ಪಾದಗಳನ್ನು ೪೫ ಡಿಗ್ರಿ ಕೋನದಷ್ಟು ಮೇಲಕ್ಕೂ ಕೆಳಕ್ಕೂ ಮಾಡಬೇಕು. ನಿಮಿಷಕ್ಕೆ ೮–೧೦ ಬಾರಿ ಈ ತೆರನಾದ ಚಲನೆಯನ್ನು ಮಾಡಿಸಬೇಕು. ನಾಲ್ಕು ಸೆಕೆಂಡು ಕಾಲ ತಲೆಯನ್ನು ಕೆಳಕ್ಕೆ ಮಾಡಬೇಕು. ಆಗ ಹೊಟ್ಟೆಯೊಳಗಿನ ಅವಯವಗಳ ಭಾರ ವಪೆಯ ಮೇಲೆ ಬಿದ್ದು ಗಾಳಿ ಒತ್ತಡದಿಂದ ಹೊರದೂಡಲ್ಪಡುತ್ತದೆ. ತರುವಾಯ ಮೂರು ಸೆಕೆಂಡು ಕಾಲ ಪಾದವನ್ನು ಕೆಳಕ್ಕೆ ಮಾಡಬೇಕು. ಆಗ ವಪೆ ಕೆಳಕ್ಕೆ ಇಳಿದು ಗಾಳಿ ಒಳಕ್ಕೆ ಎಳೆಯಲ್ಪಡುತ್ತದೆ.

ಹೋಲ್ಗರ್–ನೀಲ್ಸೆನ್‌ರ ವಿಧಾನ : ಚೇತನಗೊಳಿಸಬೇಕಾದ ವ್ಯಕ್ತಿಯನ್ನು ಕವುಚಿ ಮಲಗಿಸಿ ಮುಖವನ್ನು ಒಂದು ಪಕ್ಕಕ್ಕೆ ತಿರುಗಿಸಬೇಕು. ಮೊಳಕೈಯನ್ನು ಮಡಿಸಿ ತೋಳನ್ನು ದೇಹದಿಂದ ಹೊರಕ್ಕೆಳೆದು ಇರಿಸಬೇಕು. ಪ್ರಾರಂಭದಲ್ಲಿ ಬಾಯಿಯನ್ನು ಚೊಕ್ಕಟಗೊಳಿಸಿ ಅಲ್ಲಿರುವ ನೀರು, ಲೋಳೆ ಪದಾರ್ಥಗಳನ್ನು ಹೊರಕ್ಕೆ ತೆಗೆದುಹಾಕಬೇಕು. ಪುನಶ್ಚೇತಕ ವ್ಯಕ್ತಿಯ ಮುಂದೆ ಬಗ್ಗಿ, ಅವನ ತಲೆಯತ್ತ ಮುಖಮಾಡಿ ಕುಳಿತುಕೊಳ್ಳಬೇಕು. ತನ್ನ ಎರಡು ಹಸ್ತಗಳನ್ನೂ ವ್ಯಕ್ತಿಯ ಬೆನ್ನಮೇಲೆ ಇಟ್ಟು ಮುಂದಕ್ಕೆ ಬಗ್ಗಿ ತನ್ನ ದೇಹಭಾರವನ್ನು ವ್ಯಕ್ತಿಯ ಬೆನ್ನ ಮೇಲೆ ಹೇರಬೇಕು. ಇದರ ಫಲವಾಗಿ ಎದೆ ಬಗ್ಗಿ ಉಸಿರು ಹೊರಕ್ಕೆ ಬರುವುದು. ಅನಂತರ ಪುನಶ್ಚೇತಕ ಈ ಸ್ಥಾನದಿಂದ ಹಿಂದೆ ಸರಿದು ಮೊದಲಿನ ಸ್ಥಿತಿಗೆ ಬರಬೇಕು: ಮತ್ತು ವ್ಯಕ್ತಿಯ ಮೊಳಕೈ ಹಿಡಿದು ತೋಳನ್ನು ಅಗಲಗೊಳಿಸಬೇಕು. ಇದರಿಂದ ಗಾಳಿ ಒಳಹೋಗಲು ಸಹಾಯಕವಾಗುವುದು. ಈ ಕ್ರಮವನ್ನು ನಿಮಿಷಕ್ಕೆ ೧೦–೧೨ ಬಾರಿ ಮಾಡಬೇಕು.

ಬಾಯಿಯಿಂದ ಬಾಯಿ ಉಸಿರಾಟ: ಶ್ವಾಸಕೋಶದ ಸೋಲುವಿಕೆ ಏಕಾಏಕಿ ಉಂಟಾದಾಗ, ಹೃದಯಸ್ತಂಭನವಾದಾಗ ಹೃದಯದ ಒತ್ತುವಿಕೆಗೆ ಪೂರಕವಾಗಿ ಬಾಯಿಯಿಂದ ಬಾಯಿ ಉಸಿರಾಟ ನೀಡಿ ರಕ್ತ ಆಕ್ಸಿಜನ್ನಿನಿಂದ ಕೂಡಿರುವಂತೆ ಮಾಡಬೇಕು. ವ್ಯಕ್ತಿಯನ್ನು ಮುಖ ಮೇಲೆ ಮಾಡಿ ಮಲಗಿಸಬೇಕು. ಪುನಶ್ಚೇತಕ ವ್ಯಕ್ತಿಯ ತಲೆಯ ಬಳಿ ಕುಳಿತುಕೊಂಡು ಆತನ ಕತ್ತನ್ನು ಮೇಲ್ಮುಖವಾಗಿ ಹಿಡಿದಿಡಬೇಕು. ಒಂದು ಕೈಯ ಹೆಬ್ಬೆರಳು ಮತ್ತು ತೋರುಬೆರಳಿನ ಸಹಾಯದಿಂದ ಮೂಗಿನ ಹೊಳ್ಳೆಯನ್ನು ಮುಚ್ಚಬೇಕು. ಇದು ಶ್ವಾಸಕೋಶದೊಳಕ್ಕೆ ಯೋಗ್ಯ ಪ್ರಮಾಣದಲ್ಲಿ ಗಾಳಿಸೇರಲು ಸಹಾಯಕವಾಗುವುದು. ಪುನಶ್ಚೇತಕ ತನ್ನ ಬಾಯಿಯನ್ನು ವ್ಯಕ್ತಿಯ ಬಾಯಿಯ ಮೇಲಿಟ್ಟು ತನ್ನೆಲ್ಲ ಶಕ್ತಿಯನ್ನೂ ಉಪಯೋಗಿಸಿ ಜೋರಾಗಿ ಗಾಳಿಯನ್ನು ಊದಬೇಕು. ಇದರಿಂದ ಎದೆಗೂಡು ಮತ್ತು ಫುಪ್ಪುಸ ಹಿಗ್ಗುತ್ತದೆ. ಅನಂತರ ಪುನಶ್ಚೇತಕ ತನ್ನ ಬಾಯಿಯನ್ನು ಹೊರಕ್ಕೆ ತೆಗೆಯಬೇಕು. ಈ ಕ್ರಮವನ್ನು ನಿಮಿಷಕ್ಕೆ ೧೦–೧೨ ಬಾರಿ ಮಾಡಬೇಕು. ಈ ವಿಧಾನವನ್ನು ಎಲ್ಲ ವಯಸ್ಸಿನವರಲ್ಲಿಯೂ ಪರಿಣಾಮಕಾರಿಯಾಗಿ ಮಾಡಬಹುದು.

ಹೊಸದಾಗಿ ಹುಟ್ಟಿದ ಕೂಸಿನಲ್ಲಿ ಉಸಿರಾಟ ನಿಧಾನವಾದರೆ ಕೂಸನ್ನು ತಲೆಕೆಳಗೆ ಮಾಡಿ ಹಿಡಿದು ಬೆನ್ನ ಮೇಲೆ ತಟ್ಟಬೇಕು. ಇದರಿಂದ ಉಸಿರಾಟ ಪ್ರಾರಂಭಗೊಂಡು ಮಿದುಳಿಗೆ ರಕ್ತಪ್ರಸರಣ ನಿರಾತಂಕವಾಗಿ ಜರಗುವುದು. ಇಲ್ಲವೆ ಕ್ರಮವಾಗಿ ಕೂಸನ್ನು ಬಿಸಿ ಮತ್ತು ತಣ್ಣೀರಿನಲ್ಲಿಡಬೇಕು ಅಥವಾ ಮಗುವಿನ ಬಾಯಿ ತೆರೆದು ಮೂಗು ಮುಚ್ಚಿ ಜೋರಾಗಿ ಉಸಿರನ್ನು ಬಿಡಬೇಕು. ಇದರಿಂದ ರಕ್ತದಲ್ಲಿ ಇಂಗಾಲದ ಡೈಆಕ್ಸೈಡ್ ಮೊತ್ತ ಹೆಚ್ಚಿ ಉಸಿರಾಟಕೇಂದ್ರ ಚೇತನಗೊಳ್ಳುವುದು.

ಯಾಂತ್ರಿಕ ವಿಧಾನಗಳು : ದೈಹಿಕಕ್ರಮಗಳಿಂದ ದೀರ್ಘಾವಧಿ ಕಾಲ ಕೃತಕ ಉಸಿರಾಟ ಮಾಡುವುದು ಕಷ್ಟಸಾಧ್ಯ. ಯೋಗ್ಯರೀತಿಯಲ್ಲಿ ಶ್ವಾಸಕ್ರಿಯೆಯನ್ನು ನಡೆಸಲು ಚೈತನ್ಯವಿಲ್ಲದ ವ್ಯಕ್ತಿಯಲ್ಲಿ ನಳಿಗೆ ಅಥವಾ ಮುಖವಾಡದ ಮೂಲಕ ಆಕ್ಸಿಜನ್ನನ್ನು ಫುಪ್ಪುಸದೊಳಗೆ ಸೇರಿಸಬೇಕು. ರಾಸಾಯನಿಕ ವಸ್ತುಗಳಿಂದ ಉಸಿರಾಟಕೇಂದ್ರವನ್ನು ಚೇತನಗೊಳಿಸಿ ಉಸಿರಾಟವನ್ನು ಕ್ರಮಗೊಳಿಸಬಹುದು. ಇದು ಅಸಾಧ್ಯವಾದಾಗ ಯಾಂತ್ರಿಕ ಉಸಿರಾಟಕ್ರಮಕ್ಕೆ ಶರಣು ಹೋಗಬೇಕಾಗುವುದು. ಪೋಲಿಯೋ, ಧನುರ್ವಾಯುವಿನಂಥ ನರಕ್ಕೆ ಸಂಬಂಧಿಸಿದ ರೋಗಗಳು, ಸ್ನಾಯು ಶಕ್ತಿಹೀನತೆಯ ಕುತ್ತಿನ ಸಮಯದಲ್ಲಿ,

ಬಾರ್ಬಿಟುರೇಟ್, ಮಾರ್ಫಿಯದಂಥ ಔಷಧಗಳ ವಿಪರೀತ ಸೇವನೆ, ಇಂಗಾಲದ ಮಾನಾಕ್ಸೈಡಿನ ಸೇವನೆ, ಜಜ್ಜಲ್ಪಟ್ಟ ಎದೆ, ತೆರೆದ ಹೃದಯ ಚಿಕಿತ್ಸೆ ಮತ್ತು ಜನ್ಮ ತಳೆದ ಕೂಸಿನಲ್ಲಿ ತಲೆದೋರುವ ಮೃದು ಪೊರೆಯ ರೋಗ– ಇಲ್ಲೆಲ್ಲ ಯಾಂತ್ರಿಕ ಉಸಿರಾಟ ಕ್ರಮವನ್ನು ಕೈಗೊಂಡು ಉಸಿರಾಟದ ದೈಹಿಕಶ್ರಮವನ್ನು ಕಡಿಮೆ ಮಾಡಬೇಕಾಗುವುದು. ಈ ವಿಧಾನಗಳಿಂದ ಗಾಳಿಗೂಡಿನಲ್ಲಿ ಗಾಳಿಯ ಆಳವು ಹೆಚ್ಚುತ್ತದೆ. ದೀರ್ಘಕಾಲೀನ ಕೆಮ್ಮು ರೋಗ, ಬಿಡದ ಗೂರಲುಬ್ಬಸ ರೋಗಗಳಲ್ಲಿ ಉಂಟಾಗುವ ಉಸಿರಾಟದ ಸೋಲುವಿಕೆಯಲ್ಲಿಯೂ ಈ ತೆರನಾದ ಚಿಕಿತ್ಸೆ ಬೇಕಾಗಬಹುದು. ಯಾಂತ್ರಿಕ ವಿಧಾನಗಳು ಎರಡು ಮೂಲಭೂತ ತತ್ತ್ವಗಳ ಮೇಲೆ ಕೆಲಸಮಾಡುತ್ತವೆ; ಕ್ರಮವಾಗಿ ಎದೆಗೂಡನ್ನು ಹಿಗ್ಗಿಸುವುದು ಮತ್ತು ಕುಗ್ಗಿಸುವುದು; ಗಾಳಿ ಅಥವಾ ಆಕ್ಸಿಜನ್ನನ್ನು ನೇರವಾಗಿ ಫುಪ್ಫುಸದೊಳಗೆ ಬಿಟ್ಟೂ ಬಿಟ್ಟೂ ಇಲ್ಲವೆ ಬಿಡದೆ ಸೇರಿಸುವುದು.

ಕಬ್ಬಿಣ ಶ್ವಾಸಕೋಶ : ಯಾಂತ್ರಿಕ ವಿಧಾನಗಳ ಶೋಧದ ಪ್ರಾರಂಭಿಕ ದಿಶೆಗಳಲ್ಲಿ ಡ್ರಿಂಕರ್‌ನ ಗಾಳಿಯಿಲ್ಲದ ಕೋಶಾಗಾರವನ್ನು ಉಸಿರಾಟದ ಪುನಶ್ಚೇತನಕ್ಕೆ ಉಪಯೋಗಿಸಲಾಗುತ್ತಿದ್ದಿತು. ಈ ಕ್ರಮದಲ್ಲಿ ರೋಗಿಯ ತಲೆ ಮಾತ್ರ ಹೊರಗಿರುತ್ತದೆ. ಯಂತ್ರದ ಸಹಾಯದಿಂದ ಕೋಶಾಗಾರದ ಒತ್ತಡವನ್ನು ಹೆಚ್ಚು ಕಡಿಮೆ ಮಾಡಬಹುದು. ಕೋಶಾಗಾರದ ಒತ್ತಡ ಕಡಿಮೆಯಾದಾಗ ಎದೆಗೂಡು ಹಿಗ್ಗಿ ಗಾಳಿಯನ್ನೊಳಕ್ಕೆ ಎಳೆದುಕೊಳ್ಳುತ್ತದೆ. ಕೋಶಾಗಾರದ ಒತ್ತಡ ಹೆಚ್ಚಾದಾಗ ಎದೆಗೂಡು ಸಂಕುಚನಗೊಂಡು ಗಾಳಿ ಹೊರಹೋಗುತ್ತದೆ.

ಒತ್ತಡ ಉಸಿರಾಟ ವಿಧಾನಗಳು : ಒತ್ತಡ ಮತ್ತು ವಿಸ್ತಾರದ ಘನ ಸಾಮರ್ಥ್ಯದ ಸಾಧನಗಳು ಕೃತಕ ಉಸಿರಾಟಕ್ರಮದಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ತಂದಿವೆ. ನಿರ್ದಿಷ್ಟ ಪಡಿಸಿದ ಒತ್ತಡದಲ್ಲಿ ಗಾಳಿ ಫುಪ್ಫುಸವನ್ನು ಸೇರುವುದು.

ಒತ್ತಡಕ್ರಮ : ಒತ್ತಡಕ್ರಮದಲ್ಲಿ ಕೆಲಸಮಾಡುವ ಬರ್ಕ್, ಬೆನೆಟ್ ಎಂಬ ಸಣ್ಣ ಯಂತ್ರಗಳು ಮೊದಲೇ ನಿರ್ಧರಿಸಲ್ಪಟ್ಟ ಒತ್ತಡ ಗಾಳಿಯನ್ನು ರೋಗಿಯ ಶ್ವಾಸಕೋಶಗಳ ಒಳಕ್ಕೆ ತಳ್ಳಿ ಅವನ್ನು ಹಿಗ್ಗಿಸುತ್ತವೆ. ಆ ಕಾಲದಲ್ಲಿ ಶ್ವಾಸಕೋಶಗಳಲ್ಲಿ ಇರಬಹುದಾದ ಜಲಸಂಚಯ, ಉಸಿರುನಾಳದಲ್ಲಿ ಲೋಳೆ ಸೇರಿಕೆ, ಮುರುಚಿಕೊಂಡ ರಬ್ಬರ್ ನಳಿಗೆ ಮತ್ತು ಪಂಗುಸಿರ್ನಾಳದ ಸ್ನಾಯುಸೆಳಕು–ಸಮರ್ಪಕ ಉಸಿರಾಟಕ್ಕೆ ಯೋಗ್ಯ ಸನ್ನಿವೇಶವನ್ನು ಒದಗಿಸುವುದಿಲ್ಲ.

ಘನವಿಸ್ತಾರಕ್ರಮ : ಕೇಪ್, ರ್ಯಾಡ್‌ಕ್ಲಿಫ್ ಮತ್ತು ಸ್ಮಿತ್ ಕ್ಲಾರ್ಕರ ವಿಸ್ತಾರ ಸಾಮರ್ಥ್ಯದ ಯಂತ್ರಗಳು ದೊಡ್ಡವು ಮತ್ತು ತೊಡಕಿನವು ಆಗಿದ್ದರೂ ಅವು ರೋಗಿಗೆ ಹೆಚ್ಚು ಉಪಯುಕ್ತವಾಗಿವೆ, ಅವುಗಳ ಉಪಯೋಗದಿಂದಾಗಿ ರೋಗಿಯ ಶ್ವಾಸಕೋಶದ ಉಸಿರಾಟಕ್ರಮದಲ್ಲಿ ಏನೇ ವ್ಯತ್ಯಯವಿದ್ದರೂ ಆತನ ಫುಪ್ಫುಸದೊಳಗೆ ನಿರ್ದಿಷ್ಟಪಡಿಸಿದ ಪರಿಮಾಣದಲ್ಲಿ ಗಾಳಿ ಒಳಸೇರುವುದು. ಹೆಚ್ಚು ಒತ್ತಡದಿಂದ ಸಂಕುಚನಗೊಳಿಸಿದ ಗಾಳಿಯನ್ನು ಬಿಸಿನೀರಿನ ಮೂಲಕ ಹಾಯಿಸಿ ಅದನ್ನು ಉಸಿರುನಾಳದೊಳಕ್ಕೆ ಸೇರಿಸಬೇಕು.

ನಳಿಗೆಯೊಂದನ್ನು ಉಸಿರುನಾಳದ ಮೂಲಕವಾಗಲಿ ಅಥವಾ ಕತ್ತರಿಸಿದ ಉಸಿರುನಾಳದ ತೂತಿನ ಮೂಲಕವಾಗಲಿ ಸೇರಿಸಿ ಗಾಳಿ ಅಥವಾ ಆಕ್ಸಿಜನ್‌ನ ಪ್ರವಾಹವನ್ನು ಅದರ ಮೂಲಕ ಹರಿಯಬಿಟ್ಟು ಫುಪ್ಫುಸದೊಳಕ್ಕೆ ಸೇರುವಂತೆ ಮಾಡಬೇಕು. ದೀರ್ಘಕಾಲ ಕೃತಕ ಉಸಿರಾಟ ಕ್ರಮ ಬೇಕಾದರೆ ಉಸಿರುನಾಳದಲ್ಲಿ ತೂತುಮಾಡಿ ನಳಿಗೆ ಸೇರಿಸಬೇಕು. ಅದರಿಂದಾಗಿ ಶ್ವಾಸಮಾರ್ಗವನ್ನು ಶುದ್ಧವಾಗಿರಿಸಬಹುದು. ರೋಗಿಯ ಉಸಿರಾಟದ ಸಾಮರ್ಥ್ಯವನ್ನು ಯಂತ್ರದೊಡನೆ ಹೊಂದಾಣಿಕೆಗೊಳಿಸಬಹುದು. ಅದು ಸಾಧ್ಯವಾಗದಿದ್ದರೆ ಕ್ಯುರಾರೆಯಂಥ ಔಷಧಗಳನ್ನು ಕೊಟ್ಟು ವ್ಯಕ್ತಿಗತ ಶ್ರಮವನ್ನು ನಷ್ಟಗೊಳಿಸಿ ಯಂತ್ರದ ಮೂಲಕ ಆಕ್ಸಿಜನ್ ಪೂರಿತ ಗಾಳಿಯನ್ನು ಫುಪ್ಫುಸದೊಳಸೇರಿಸಬೇಕು. ಇದರ ಫಲವಾಗಿ ರೋಗಿಯ ಅರಿವು ತಿಳಿಗೊಳ್ಳುವುದು. ರಕ್ತದಲ್ಲಿನ ಇಂಗಾಲದ ಡೈಆಕ್ಸೈಡ್ ಪ್ರಮಾಣ ಕಡಿಮೆಯಾಗುವುದು. ಉಸಿರಾಟದ ಗತಿ ಸಮರ್ಪಕವಾದ ಮೇಲೆ ಯಾಂತ್ರಿಕ ಸಾಧನದ ಉಪಯೋಗವನ್ನು ನಿಲ್ಲಿಸಬೇಕು. ***

**ಕೃತಕ ಗರ್ಭಧಾರಣೆ:** ಗಂಡು ಪ್ರಾಣಿಗಳ ವೀರ್ಯವನ್ನು ಕೃತಕ ರೀತಿಯಿಂದ ಸಂಗ್ರಹಿಸಿ ಅದನ್ನು ಯುಕ್ತರೀತಿಯಲ್ಲಿ ತೆಳುಮಾಡಿ ಶೇಖರಿಸಿಟ್ಟು ಬೇಕಾದ ಸಮಯದಲ್ಲಿ ಅದನ್ನು ಅದೇ ಜಾತಿಯ ಹೆಣ್ಣು ಪ್ರಾಣಿಗಳಿಗೆ ಕೃತಕ ರೀತಿಯಿಂದ ಕೊಟ್ಟು ಗರ್ಭಧಾರಣೆ ಮಾಡಿಸುವಿಕೆ. ತಾತ್ತ್ವಿಕವಾಗಿ ಇದನ್ನು ಎಲ್ಲ ಜಾತಿಯ ಪ್ರಾಣಿಗಳಲ್ಲೂ ನಡೆಸಬಹುದು. ಇತ್ತೀಚೆಗೆ ಪಶುಸಂಗೋಪನ ಕಾರ್ಯದಲ್ಲಿ ಈ ಏರ್ಪಾಡು ಬಹಳ ಪ್ರಾಮುಖ್ಯ ಗಳಿಸಿದೆ. ಇದರಿಂದಾಗಿ ಶ್ರೇಷ್ಠ ತಳಿಯ ಹೋರಿಯಿಂದ ಅಥವಾ ಕೋಣದಿಂದ ವೀರ್ಯವನ್ನು ಸಂಗ್ರಹಿಸಿ ಶೇಖರಿಸಿಟ್ಟು ಅಸಂಖ್ಯಾತ ಹಸುಗಳಿಗೆ ಅಥವಾ ಎಮ್ಮೆಗಳಿಗೆ ಗರ್ಭಧಾರಣೆ ಮಾಡಿಸಿ ಒಳ್ಳೆತರದ ತಳಿಗಳನ್ನು ಪಡೆಯಲಾಗುತ್ತಿದೆ. ಕೃತಕ ಗರ್ಭಧಾರಣೆಯ ಮುಖ್ಯ ಪ್ರಯೋಜನಗಳು ಈ ಕೆಳಗಿನಂತಿವೆ : ೧. ಒಂದೇ ಒಂದು ಒಳ್ಳೆ ತಳಿಯ ಬೀಜದ ಹೋರಿಯಿಂದ ಅನೇಕ ಹಸುಗಳಿಗೆ ಗರ್ಭಧಾರಣೆ ಮಾಡಿಸಬಹುದು. ನ್ಯೂಯಾರ್ಕಿನಲ್ಲಿ ಈ ತರದ ವ್ಯವಸ್ಥೆಯಿಂದಾಗಿ ಒಂದು ಹೋರಿಯಿಂದ ಏಳು ವರ್ಷದಲ್ಲಿ ೬೦,೦೦೦ ಹಸುಗಳಿಗೆ ಗರ್ಭಧಾರಣೆ ಮಾಡಿಸಿದ್ದಾರೆ. ೨. ಹೋರಿಗಳ ವೀರ್ಯವನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಅಥವಾ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸುಲಭವಾಗಿ ಒಯ್ದು ಪ್ರಯೋಜನ ಪಡೆಯಬಹುದು. ೩. ಹಸುಗಳ ನೈಸರ್ಗಿಕ ಗರ್ಭಧಾರಣೆಗಳಿಗೆ ಬೇಕಾಗುವ ಬಹುಸಂಖ್ಯೆಯ ಹೋರಿಗಳನ್ನು ಇಟ್ಟುಕೊಳ್ಳುವ ಪ್ರಸಂಗವನ್ನು ಕಡಿಮೆ ಮಾಡಿ ಬೇಕಾದಷ್ಟು ಉಳಿತಾಯವನ್ನು ಸಾಧಿಸಬಹುದು. ೪.ಕೃತಕ ಗರ್ಭಧಾರಣೆಗೆ ಬೇಕಾದ ಕೆಲವು ಹೋರಿಗಳನ್ನು ಸರಿಯಾಗಿ ಪರೀಕ್ಷಿಸಿ, ರೋಗರುಜಿನಗಳಿಲ್ಲದವನ್ನು ಮಾತ್ರ ಇಟ್ಟುಕೊಂಡು ಉಳಿತಾಯವನ್ನು ಸಾಧಿಸಬಹುದು. ದನಗಳಲ್ಲಿ ನೈಸರ್ಗಿಕ ಜೋಡಿಯಿಂದಾಗಿ ಹರಡುವ ಕಾಯಿಲೆಗಳನ್ನು ಈ ವಿಧಾನದಿಂದ ತಡೆಗಟ್ಟಬಹುದು. ೫. ಕೃತಕ ಗರ್ಭಧಾರಣೆಯಿಂದ ಬೇಕಾದ ದಾಖಲೆಗಳನ್ನು ಸುಲಭವಾಗಿ ಪಡೆದುಕೊಂಡು, ತಳಿ ಅಭಿವೃದ್ಧಿಗೆ ಉಪಯೋಗಿಸಬಹುದು. ೬. ಸಣ್ಣ ಗಾತ್ರದ ಹಸುಗಳಿಗೆ ದೊಡ್ಡ ಹೋರಿಗಳಿಂದ ಜೋಡಿ ಮಾಡಿಸುವ ಕಷ್ಟಗಳನ್ನು ಮತ್ತು ಆಗಬಹುದಾದ ಅಪಾಯಗಳನ್ನು ನಿವಾರಿಸಬಹುದು. ೭. ಅಂಗಹೀನ ಹೋರಿಗಳು ಅಥವಾ ಹಸುಗಳು ಜೋಡಿಯಾಗಲು ಸಾಧ್ಯವಿಲ್ಲದಿರುವಾಗ ರಾಸುಗಳು ಉತ್ತಮವಾಗಿದ್ದರೆ ಕೃತಕ ಗರ್ಭಧಾರಣೆ ಅವುಗಳ ಪೀಳಿಗೆಯನ್ನು ಮುಂದುವರಿಸಲು ಸಹಕಾರಿ.

ತಜ್ಞ ತಾಂತ್ರಿಕರ ಉಸ್ತುವಾರಿ ಇಲ್ಲದೆ ಮಾಡಿಸಿದ ಕೃತಕ ಗರ್ಭಧಾರಣೆ ಫಲಕಾರಿ ಆಗದಿರುವುದು ಮಾತ್ರವಲ್ಲ, ಹಲವಾರು ವೇಳೆ ಉಪದ್ರವಕಾರಿಯೂ ಆಗಬಹುದು.

ಕೃತಕ ಗರ್ಭಧಾರಣೆಯಲ್ಲಿ ವೀರ್ಯ ಸಂಗ್ರಹಿಸುವ ಕೆಲಸ ಹೀಗಿದೆ: ಹೆಚ್ಚಿನ ಕಡೆಗಳಲ್ಲಿ ರಬ್ಬರಿನ ಕೃತಕ ಯೋನಿಯೊಂದನ್ನು ತಯಾರು ಮಾಡಿ, ಹೋರಿ ಹಸುವಿನೊಡನೆ ಜೋಡಿಯಾಗುವ ಸಮಯದಲ್ಲಿ ಅದನ್ನು ಹಸುವಿನ ಬದಿಯಲ್ಲೆ ಇಟ್ಟುಕೊಂಡು ಹೋರಿಯ ಲಿಂಗ ಅದರೊಳಕ್ಕೆ ನೇರವಾಗಿ ಹೋಗುವಂತೆ ತೂರಿಸುತ್ತಾರೆ. ಆಗ ಹೊರಹಾಕಲ್ಪಟ್ಟ ವೀರ್ಯ ಕೃತಕ ಯೋನಿಯೊಳಗೆ ಸಂಗ್ರಹವಾಗುವುದು. ಕೃತಕ ಯೋನಿ ಸಾಧಾರಣವಾಗಿ ೪೫ ಸೆಂಮೀ ಉದ್ದವೂ ೬.೫ ಸೆಂಮೀ ಅಗಲವೂ ಇರುವ ಕೊಳವೆ. ಅದರೊಳಗೆ ಸುತ್ತಲೂ ಬಿಸಿನೀರನ್ನೊಳಗೊಂಡ ರಬ್ಬರಿನ ಚೀಲವನ್ನು ಇಟ್ಟಿರುತ್ತಾರೆ. ಈ ಚೀಲದ ಕೊನೆಯಲ್ಲಿ ಒಂದು ಗಾಜಿನ ಪ್ರನಾಳವಿದ್ದು ವೀರ್ಯ ಇದರೊಳಗೆ ಬಂದು ಕೂರುವುದು. ಕೆಲವು ಕಡೆಗಳಲ್ಲಿ ವಿದ್ಯುತ್ತಿನ ಉದ್ದೀಪನೆಯಿಂದ ವೀರ್ಯವನ್ನು ಶೇಖರಿಸುವರು. ಇದಕ್ಕೆ ಗಾಜಿನ ಕೊಳವೆಯಂತಿರುವ ಯಂತ್ರದಲ್ಲಿ ವಿದ್ಯುತ್ತಿನ ಉದ್ದೀಪನೆಯನ್ನು ಮಲದ್ವಾರಕ್ಕೆ ತೂರಿಕೊಟ್ಟು ಉದ್ದೀಪಿಸಿದರೆ ಸೊಂಟದ ಹತ್ತಿರವಿರುವ ನರಗಳು ಉತ್ತೇಜಿತವಾಗಿ ವೀರ್ಯಸ್ಖಲನವಾಗುತ್ತದೆ. ಮಲದ್ವಾರದ ಮುಖಾಂತರ ಆಂಪ್ಯುಲ್ಲವನ್ನು ತಿಕ್ಕಿದಾಗ ಸಹ ಹೀಗಾಗುವುದು. ವೀರ್ಯವನ್ನು ಈ ಪ್ರಕಾರ ಸಂಗ್ರಹಿಸಿದ ಬಳಿಕ ಅದನ್ನು ತೆಳು ಮಾಡಿ ಶೇಖರಿಸಿಡುವ ಕೆಲಸ ಸ್ವಲ್ಪ ಪ್ರಯಾಸದ್ದು. ತಜ್ಞರೇ ಅದನ್ನು ನಿರ್ವಹಿಸಬೇಕು. ಇದಕ್ಕಾಗಿ ಕೆಲವೆಡೆಗಳಲ್ಲಿ ಕೋಳಿಮೊಟ್ಟೆಯ ಹಳದಿ ಭಾಗವನ್ನು ಫಾಸ್ಫೇಟ್ ದ್ರವದಿಂದಲೋ ಸಿಟ್ರೇಟ್ ದ್ರವದಿಂದಲೋ ಸಂಸ್ಕರಿಸಿ ವೀರ್ಯವನ್ನು ಸುಮಾರು ನಾಲ್ಕು ಪಾಲಿನಷ್ಟು ತೆಳು ಮಾಡಿ ಉಪಯೋಗಿಸುತ್ತಾರೆ. ಕೆಲವರು ಕುದಿಸಿದ ಹಾಲಿನಿಂದ ತೆಳು ಮಾಡುತ್ತಾರೆ. ಇತ್ತೀಚೆಗೆ ತೆಂಗಿನಕಾಯಿಯ ನೀರಿನಿಂದ ತೆಳುಮಾಡುವ ವಿಧಾನವನ್ನೂ ಕಲ್ಪಿಸಿದ್ದಾರೆ. ಹೀಗೆ ತೆಳುಮಾಡಿದ ವೀರ್ಯಕ್ಕೆ ಕೆಲವು ಪ್ರತಿಜೀವಿ ಔಷಧಿಗಳನ್ನು ಸೇರಿಸಿ ಇಟ್ಟುಕೊಳ್ಳುತ್ತಾರೆ. ಈ ರೀತಿಯಲ್ಲಿ ತೆಳುಮಾಡಿ ಒದಗಿಸಿದ ವೀರ್ಯವನ್ನು ಒಂದು ವಾರದವರೆಗೆ ಶೀತಕ ಯಂತ್ರದಲ್ಲಿ ಇಟ್ಟುಕೊಂಡು ಬೇಕಾದ ಹಾಗೆ ೧ ಮಿಲಿ–೨ ಮಿಲಿ ನಷ್ಟು ತೆಗೆದು ಕೃತಕ ಗರ್ಭಧಾರಣೆ ಮಾಡಿಸಬಹುದು. ಇತ್ತೀಚೆಗೆ ವೀರ್ಯವನ್ನು ಗ್ಲಿಸರೋಲ್‌ನೊಡನೆ ಸೇರಿಸಿ ಗಡ್ಡೆ ಕಟ್ಟುವಂತೆ ಶೀತಲ ಮಾಡಿ ಅಂದರೆ ತೇವವನ್ನು ಸುಮಾರು–೭೯° ಸೆ. ನಷ್ಟು ಕೆಳಗಿಳಿಸಿದರೆ ಬೇಕಾದಷ್ಟು ಸಮಯ ಶೇಖರಿಸಿ ಇಟ್ಟುಕೊಳ್ಳುವ ಪ್ರಸಂಗವನ್ನು ಕಲ್ಪಿಸಿದ್ದಾರೆ. ಹೀಗೆ ಕಲ್ಪಿಸಿದ ವೀರ್ಯವನ್ನು ಒಂದೆರಡು ವರ್ಷಗಳ ಕಾಲ ಕೂಡ ಶೇಖರಿಸಬಹುದು. ಇಂಥ ತೆಳು ಮಾಡಿದ ವೀರ್ಯವನ್ನು ಪಿಚಕಾರಿಯಲ್ಲಿ ತೆಗೆದುಕೊಂಡು ಸುಮಾರು ೪೦ ಸೆಂಮೀ ಉದ್ದವಿರುವ ಗಾಜಿನ ಅಥವಾ ಪ್ಲಾಸ್ಟಿಕ್ ಸಪುರ ಕೊಳವೆಯ ಮುಖಾಂತರ ಹಸುಗಳ ಯೋನಿಯೊಳಕ್ಕೆ ಹಾಕುವರು. ಹಸುಗಳು ಸರಿಯಾದ ಬೆದೆಯ ಸಮಯದಲ್ಲಿರಬೇಕಾದುದು ಅವಶ್ಯ. ಇಲ್ಲದಿದ್ದಲ್ಲಿ ಗರ್ಭಧಾರಣೆ ಫಲಕಾರಿಯಾಗುವುದಿಲ್ಲ.

(ವಿ.ಆರ್.ವಿ.ಎಚ್.)

**ಕೃತಕ ವೀರ್ಯಕ್ಷೇಪ:** ವೀರ್ಯಾಣುಗಳನ್ನು ಸಂಗ್ರಹಿಸಸಿ, ಶೇಖರಿಸಿ, ಸ್ವಾಭಾವಿಕ ಸಂಭೋಗ ಕ್ರಿಯೆಯಲ್ಲದ ವಿಧಾನದಿಂದ, ಹೆಣ್ಣು ಪ್ರಾಣಿಯ ಯೋನಿಯಲ್ಲಿ ಸೇರ್ಪಡಿಸುವ ಕ್ರಿಯೆ.

ವೃಷಣದಲ್ಲಿ ಉತ್ಪತ್ತಿಯಾದ ವೀರ್ಯಾಣುಗಳನ್ನು ಸಂಭೋಗ ನಡೆಯುವವರೆಗೆ ಕೂಡಿಟ್ಟುಕೊಂಡಿರಲು, ಆ ಕಾಲದಲ್ಲಿ ಅವುಗಳ ಚಯಾಪಚಯ ಕ್ರಿಯೆಯನ್ನು ನಿಗ್ರಹಿಸಿ, ಅವುಗಳ ಸಾಮರ್ಥ್ಯಕ್ಕೆ ಕುಂದುಬರದಂತೆ ಎಚ್ಚರಿಕೆ ವಹಿಸಲು ಮತ್ತು ಸಂಭೋಗಕಾಲದಲ್ಲಿ ಅವುಗಳಿಗೆ ಯಾವ ರೀತಿಯ ಅಪಾಯವೂ ಆಗದ ರೀತಿಯಲ್ಲಿ ಹೆಣ್ಣು ಪ್ರಜನನಾಂಗಗಳಿಗೆ ಅವುಗಳನ್ನು ವರ್ಗಾಯಿಸಲು ಹಾಗೂ ಹೆಣ್ಣು ಪ್ರಜನನಾಂಗಗಳ ಪರಕೀಯ ಪರಿಸರದಲ್ಲಿ ಯಾವ ಹಾನಿಯೂ ಆಗದರೀತಿಯಲ್ಲಿ ರಕ್ಷಿಸುವಂತೆ ಕೆಲವೊಂದು ಸ್ರವಿಕೆಗಳನ್ನು ಪುರುಷಾಣುಗಳ ಜೊತೆಯಲ್ಲಿ ಗಂಡು ಪ್ರಜನನಾಂಗಗಳು ಬೆರಸಿ ನಿಕ್ಷೇಪಿಸುತ್ತವೆ. ಈ ಸ್ರವಿಕೆಗಳು ಮತ್ತು ವೀರ್ಯಾಣುಗಳ ಸಂಕೀರ್ಣವೇ ವೀರ್ಯ. ಈ ವೀರ್ಯವನ್ನು ಹೆಣ್ಣು ಪ್ರಾಣಿಯ ದೇಹದಲ್ಲಿ ನಿಕ್ಷೇಪಿಸುವುದೇ ವೀರ್ಯಕ್ಷೇಪ. ಪ್ರಜನನ ಕ್ರಿಯೆ ಯಶಸ್ವಿಯಾಗಬೇಕು ಎಂಬ ಉದ್ದೇಶದಿಂದ ವೀರ್ಯವನ್ನು ಹೆಣ್ಣು ಪ್ರಾಣಿಯ ಯೋನಿಯೊಳಕ್ಕೊ ಅಥವಾ ಗರ್ಭಕೋಶಕ್ಕೊ ನಿಕ್ಷೇಪಿಸುತ್ತವೆ.

ಸ್ತನಿಗಳ ಸ್ವಾಭಾವಿಕ ಸಂತಾನೋತ್ಪತ್ತಿ ಕ್ರಮವನ್ನು ಅಭ್ಯಾಸಮಾಡಿದಾಗ ಒಂದು ಮುಖ್ಯ ಅಂಶ ವೇದ್ಯವಾಗುತ್ತದೆ. ಇದು ಸ್ತನಿಗಳಿಗೆ ಮಾತ್ರವಲ್ಲದೆ ಉಳಿದೆಲ್ಲ ಪ್ರಾಣಿಗಳ ಮಟ್ಟಿಗೂ ಕೂಡ ನಿಜ. ಅದೇನೆಂದರೆ ಹೆಣ್ಣು ಪ್ರಾಣಿಯಲ್ಲಿ ಉತ್ಪತ್ತಿಯಾಗಬಹುದಾದ ಪ್ರತಿತತ್ತಿಗೂ ಸಂಬಂಧಿಸಿದಂತೆ ಗಂಡು ಪ್ರಾಣಿಯು ಲಕ್ಷಾಂತರ, ಕೋಟ್ಯಾಂತರ ಅನುಪಾತದಲ್ಲಿ ವೀರ್ಯಾಣುಗಳನ್ನು ಉತ್ಪತ್ತಿಮಾಡುತ್ತದೆ. ಇದಕ್ಕೆ ಅನೇಕ ಕಾರಣಗಳಿರುವಂತೆ ಕಂಡುಬರುತ್ತದೆ. ನಿಷೇಚನವು ಯಶಸ್ವಿಯಾಗಿ ನಡೆಯಬೇಕಾದರೆ ಸ್ವಾಭಾವಿಕ ವೀರ್ಯಕ್ಷೇಪದಲ್ಲಿ ಎಷ್ಟು ಪುರುಷಾಣುಗಳು ಇರಬೇಕು ಎನ್ನುವುದು ಇನ್ನೂ ಕರಾರುವಕ್ಕಾಗಿ ತಿಳಿಯದು. ಆದರೆ ಒಂದು ಅಂದಾಜಿನ ಪ್ರಕಾರ 1 ಮಿಲಿ ವೀರ್ಯದಲ್ಲಿ 80 ಸಾವಿರದಿಂದ 1 ಲಕ್ಷದವರೆಗೆ ವೀರ್ಯಾಣುಗಳಿರಬೇಕು. ಕೆಳಗಿನ ಪಟ್ಟಿಯಲ್ಲಿ ಮನುಷ್ಯ ಮತ್ತು ಕೆಲವು ಸಾಕು ಪ್ರಾಣಿಗಳ ವೀರ್ಯಮೊತ್ತ ಹಾಗು ವೀರ್ಯಾಣು ಸಾಂದ್ರತೆಯನ್ನು ಕೊಟ್ಟಿದೆ. ಇದರ ಪರಿಶೀಲನೆಯು ಕೃತಕ ವೀರ್ಯಕ್ಷೇಪದ ಚರ್ಚೆಗೆ ಮತ್ತು ಅದನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಸ್ತನಿ ಪ್ರಾಣಿಗಳ ಸ್ಖಲಿತ ವೀರ್ಯದ ಮೊತ್ತ ಮತ್ತು ಸಾಂದ್ರತೆ:

| ಪ್ರಾಣಿ | 1. ಸ್ಖಲಿತದ ಮೊತ್ತ | | ವೀರ್ಯದಲ್ಲಿರುವ ವೀರ್ಯಾಣುಗಳ ಸಾಂದ್ರತೆ | |
|---|---|---|---|---|
| | ವ್ಯಾಪ್ತಿ (ಮಿಲಿ) | ಸರಾಸರಿ | ವ್ಯಾಪ್ತಿ (ಪ್ರತಿ ಮೈಲಿ * ಗೆ ವೀರ್ಯಾಣುಗಳ ಸಂಖ್ಯೆ) | ಸರಾಸರಿ |
| ಮನುಷ್ಯ | 2–6 | 3.5 | 50,000 ರಿಂದ 150,000 | 100,000 |
| [illegible] | 2–15 | 6 | 70,000 ರಿಂದ 900,000 | 200,000 |
| ಮೊಲ | 0.4 ರಿಂದ 6 | 1 | 100,000 ರಿಂದ 2,000,000 | 700,000 |
| [illegible] | 150 ರಿಂದ 500 | 250 | 25,000 ರಿಂದ 300,000 | 100,000 |
| [illegible] | 0.7 ರಿಂದ 2 | 1 | 2,000,000 ರಿಂದ 5,000,000 | 3,000,000 |
| [illegible] | 30 ರಿಂದ 300 | 70 | 30,000 ರಿಂದ 800,000 | 120,000 |

* ಒಂದು ಮಿಲಿಲೀಟರ್‌ನ ಸಾವಿರದ ಒಂದನೆಯ ಭಾಗಕ್ಕೆ ಒಂದು ಮೈಕ್ರೋ ಲೀಟರ್ (ಮೈಲಿ).

ಸಂಶೋಧನೆಗಳಿಂದ ಮನುಷ್ಯನಲ್ಲಿ 20 ಮಿಲಿಯನ್ ವೀರ್ಯಾಣುಗಳು ಸಾಕೆಂದು ತಿಳಿದುಬಂದಿದೆ. ಸಾಕುಪ್ರಾಣಿಯಾದ ದನಗಳಲ್ಲಿ ಅದರ ಒಟ್ಟು ವೀರ್ಯವನ್ನು 500 ರಿಂದ 1,000 ಪಟ್ಟಿನ ವರೆಗೆ ದುರ್ಬಲಗೊಳಿಸಿ ಪ್ರಯೋಗಿಸಬಹುದಾದ ಸಾಧ್ಯತೆ ಇದೆ. ಆದುದರಿಂದ ಸ್ವಾಭಾವಿಕ ಪ್ರಜನನದಲ್ಲಿ ಪುರುಷಾಣುಗಳು ವಿನಾಕಾರಣ ವ್ಯಯವಾಗುವುದು ಕಂಡುಬರುತ್ತದೆ. ಪ್ರಜನನ ವಿಜ್ಞಾನವು ಬೆಳೆದಂತೆ ವೀರ್ಯಾಣುಗಳನ್ನು ಸಂಗ್ರಹಿಸಿ, ಶೇಖರಿಸಿಟ್ಟು ಅನೇಕ ಹೆಣ್ಣು ಪ್ರಾಣಿಗಳ ಮೇಲೆ ಪ್ರಯೋಗಿಸಬಹುದಾದ ಸಾಧ್ಯತೆ ಬೆಳೆದುಬಂದಿತು. ಇದೇ ಕೃತಕವೀರ್ಯಕ್ಷೇಪ. ಇಂದು ಇದು ಕೃತಕಗರ್ಭಧಾರಣೆಯೆಂದು ಹೆಸರಾಗಿದೆ. ವೈಜ್ಞಾನಿಕವಾಗಿ ಇದನ್ನು ಕೇವಲ 50 ವರ್ಷಗಳಿಂದೀಚೆಗೆ ಬಳಸುತ್ತಿದ್ದರೂ 14ನೆಯ ಶತಮಾನದಲ್ಲಿ ಅರೇಬಿಯಾದ ಷೇಕ್ ಒಬ್ಬ ಇದನ್ನು ಯಶಸ್ವಿಯಾಗಿ ನಡೆಸಿದ ನಿದರ್ಶನವಿದೆ. ಒಬ್ಬ ಷೇಕ್‌ನ ಹತ್ತಿರ ಉತ್ತಮ ದರ್ಜೆಯ ಹೆಣ್ಣುಕುದುರೆ ಇತ್ತು. ಮತ್ತೊಬ್ಬನ ಬಳಿ ಉತ್ತಮ ದರ್ಜೆಯ ಕಾಡು ಕುದುರೆ ಇತ್ತು. ಇವರಿಬ್ಬರ ನಡುವೆ ಇದ್ದ ಮನಸ್ತಾಪ ಇವುಗಳ ಸ್ವಾಭಾವಿಕ ಸಂಭೋಗಕ್ಕೆ ಅಡ್ಡಿಬಂದಿತ್ತು. ಆಗ ಹೆಣ್ಣು ಕುದುರೆಯ ಮಾಲೀಕ ರಾತ್ರಿಯ ಕತ್ತಲಿನಲ್ಲಿ ಕದ್ದು ಹೋಗಿ ಗಂಡು ಕುದುರೆಯಿಂದ ವೀರ್ಯವನ್ನು ಸಂಗ್ರಹಿಸಿತಂದು ಯಶಸ್ವಿಯಾಗಿ ಪ್ರಯೋಗಿಸಿದ. ಮೊದಲ ಬಾರಿಗೆ ಮೀನುಗಳಲ್ಲಿ ಈ ಕ್ರಮವನ್ನು 1765 ರಲ್ಲಿ ಜಾರ್ಜ್ ಎಂಬ ವಿಜ್ಞಾನಿ ಪ್ರಯತ್ನಿಸಿದ. 1784 ರಲ್ಲಿ ಸ್ಪಾಲೆಂಜನಿ ನಾಯಿಗಳ ಮೇಲೆ ಪ್ರಯತ್ನಿಸಿದ. 1799 ರಲ್ಲಿ ಹೋಮ್ ಎನ್ನುವಾತ ಮನುಷ್ಯನಲ್ಲಿ ಪ್ರಯತ್ನಿಸಿದ. ಇಂದು ಇದು ಬಹಳ ಸಾಮಾನ್ಯ ಕ್ರಮವಾಗಿದೆ.

ವೀರ್ಯವನ್ನು ಸಂಗ್ರಹಿಸಲು ಮತ್ತು ಕೂಡಿಡಲು ಸಮರ್ಥವಾದ ವಿಧಾನಗಳು ಬೆಳೆದುದರಿಂದಾಗಿ, ಈ ಕ್ರಮ ಇಂದು ಯಶಸ್ವಿಯಾಗಿದೆ. ಪ್ರಜನನದ ಶಾರೀರಿಕಕ್ರಿಯೆ, ವರ್ತನೆಗಳ ಅಭ್ಯಾಸದಲ್ಲಿ, ಪ್ರಾಣಿಗಳ ಸಂತಾನೋತ್ಪತ್ತಿಯ ನಿಯಂತ್ರಣ ಕ್ರಮದಲ್ಲಿ ಈ ವಿಧಾನವು ಪ್ರಮುಖ ಪಾತ್ರವಹಿಸಿದೆ. ಈ ವಿಧಾನವನ್ನು ಸರಳಗೊಳಿಸಿ ಜನಪ್ರಿಯ ಮಾಡುವುದರಲ್ಲಿ ರಷ್ಯಾ ಸಂಶೋಧಕರ ಪಾತ್ರ ಅಪಾರ. ಈ ಕ್ರಮದಿಂದ ಉಂಟಾಗುವ ಅನೇಕ ಉಪಯೋಗಗಳಲ್ಲಿ ಕೆಲವನ್ನು ಕೆಳಗೆ ತಿಳಿಸಿದೆ.

1) ಆರಿಸಿದ ಉತ್ತಮ ರಾಸಿನಿಂದ ನಿಯಂತ್ರಿತ ರೀತಿಯಲ್ಲಿ ಅನೇಕ ಹೆಣ್ಣು ಪ್ರಾಣಿಗಳ ಮೇಲೆ ಸಮರ್ಥ ರೀತಿಯಲ್ಲಿ ವೀರ್ಯಕ್ಷೇಪ ನಡೆಸುವುದು ಸಾಧ್ಯ.

2) ವಿವಿಧ ಗಾತ್ರದ ಜಾತಿಯ ರಾಶಿಗಳ ನಡುವೆ ತಳಿಸಂಕರ ಸಾಧ್ಯ.

3) ಸ್ವಾಭಾವಿಕವಾಗಿ ಸಂಭೋಗ ನಡೆಸದ ಪ್ರಭೇದಗಳ ನಡುವೆ ಈ ವಿಧಾನದಿಂದ ಸಂಕರ ನಡೆಸಬಹುದು.

4) ಸಂಶೋಧನೆಯಲ್ಲಿ ನಿರ್ದಿಷ್ಟ ಪ್ರಾಣಿಗಳಿಗೆ ಯಶಸ್ವಿ ನಿಷೇಚನಕ್ಕೆ ಅಗತ್ಯವಾದ ಪುರುಷಾಣು ಸಂಖ್ಯೆಯನ್ನು ಕಂಡುಹಿಡಿಯುವಲ್ಲಿ ನೆರವಾಗುತ್ತದೆ.

5) ಮನುಷ್ಯ ಮತ್ತು ಸಾಕುಪ್ರಾಣಿಗಳಲ್ಲಿ ಯಾಂತ್ರಿಕ ತೊಂದರೆಗಳಿಂದ ಉದ್ಭವಿಸಬಹುದಾದ ಬಂಜೆತನವನ್ನು ಈ ವಿಧಾನದಿಂದ ಪರಿಹರಿಸಬಹುದು.

6) ತಳಿ ಸಂವರ್ಧನೆಯ ದೃಷ್ಟಿಯಿಂದ ಪುರುಷಾಣುಗಳ ಮೇಲೆ ವಿಕಿರಣತೆ, ಶೀತಲೀಕರಣ, ಶಾಖಕೆಟ್ಟುವುದು, ಪ್ರತಿಸಾರ, ವಿಷಪದಾರ್ಥಗಳು ಮುಂತಾದ ಸಂಸ್ಕರಣಗಳ ಪ್ರಭಾವವನ್ನು ತಿಳಿದುಕೊಳ್ಳುವುದರಲ್ಲಿ ನೆರವಾಗುತ್ತದೆ.

7) ಹೆಣ್ಣು ಸ್ತನಿ ಪ್ರಾಣಿಯು ಬೆದೆಗೆ ಬಂದಾಗ ಮಾತ್ರ ಗಂಡು ಪ್ರಾಣಿಯ ಜೊತೆ ಸಂಭೋಗಿಸುತ್ತದೆ. ಮಿಕ್ಕಂತೆ ಅದನ್ನು ಹತ್ತಿರ ಸೇರಿಸುವುದಿಲ್ಲ. ಆದರೆ ಪ್ರಾಯೋಗಿಕವಾಗಿ ಮಿಥ್ಯಗರ್ಭ ಮುಂತಾದ ಇತರ ಕಾಲಗಳಲ್ಲಿ ವೀರ್ಯಕ್ಷೇಪ ನಡೆಸಿ ಅದರ ಪ್ರಭಾವವನ್ನು ತಿಳಿದುಕೊಳ್ಳಬಹುದು.

$-79^{0}$C ನಂತಹ ಗಾಢ ಶೀತಲೀಕರಣದಲ್ಲಿ ದನಗಳ ಪುರುಷಾಣುಗಳನ್ನು ಕೆಲವಾರು ವಾರಗಳ ವರೆಗೆ ಸಂಗ್ರಹಿಸಿಡಬಹುದು ಮತ್ತು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ರವಾನಿಸಿ ಬಳಸಬಹುದು. ಈ ದಿಸೆಯಲ್ಲಿ ದ್ರವ ನೈಟ್ರೋಜೆನ್ ಅನುಕೂಲವಾಗಿ ಕಂಡುಬಂದಿದೆ.

ವೀರ್ಯವನ್ನು ಸಂಗ್ರಹಿಸಲು ಅನೇಕ ವಿಧಾನಗಳನ್ನು ಬಳಸುತ್ತಾರೆ. ಸಾಮಾನ್ಯವಾಗಿ ಸ್ವಾಭಾವಿಕ ಸಂಭೋಗಕಾಲದಲ್ಲಿ ಸ್ಖಲನವನ್ನು ಸಂಗ್ರಹಿಸುತ್ತಾರೆ. ಮೊಲ ಮುಂತಾದ ಪ್ರಾಣಿಗಳಲ್ಲಿ ಕೃತಕ ಯೋನಿಗಳನ್ನು ಬಳಿಸಿ ಸಂಗ್ರಹಿಸುತ್ತಾರೆ. ಹಂದಿಯಂತಹ ಪ್ರಾಣಿಗಳಲ್ಲಿ ಹೆಣ್ಣು ಹಂದಿಯನ್ನು ಹೋಲುವ ಗೊಂಬೆಗಳನ್ನು ಬಳಸಿ ಸಂಗ್ರಹಿಸುತ್ತಾರೆ. ಗಿನಿ ಇಲಿಯಲ್ಲಿ ವಿದ್ಯುತ್ ಶಕ್ತಿಯನ್ನು ತಲೆಯ ಮೂಲಕ ಹಾಯಿಸುವುದರಿಂದ ಇದನ್ನು ಸಂಗ್ರಹಿಸುತ್ತಾರೆ. ಮನುಷ್ಯನಲ್ಲಿ ಸಂಭೋಗದ ಉಪ ಉತ್ಪನ್ನವಾಗಿ ಅಥವಾ ಮುಷ್ಟಿ ಮೈಥುನದ ಉತ್ಪನ್ನವಾಗಿ ಸಂಗ್ರಹಿಸುತ್ತಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಅನೇಕ ದಶಕಗಳಿಂದ ಈ ಕ್ರಮವು ಮನುಷ್ಯನಲ್ಲಿ ಬಳಕೆಯಲ್ಲಿದ್ದರೂ ಅದು ತಂದೊಡ್ಡಬಹುದಾದ ಧಾರ್ಮಿಕ ನೀತಿ, ಸಾಮಾಜಿಕ ಮತ್ತು ಕಾನೂನಿನ ಸಮಸ್ಯೆಗಳಿಂದಾಗಿ ಇದು ಹೆಚ್ಚು ಪ್ರಚಾರಕ್ಕೆ ಬಂದಿಲ್ಲ. ಸ್ವಾಭಾವಿಕ ಲೈಂಗಿಕ ಆಸಕ್ತಿ ಇರುವ ದಂಪತಿಗಳಲ್ಲಿ ಗಂಡನ ಪ್ರಜನನಾಂಗಳಲ್ಲಿರಬಹುದಾದ ದೋಷಗಳಿಂದ ಸಂತಾನರಹಿತರಾಗುವ ಸಂದರ್ಭಗಳಲ್ಲಿ ಈ ವಿಧಾನವನ್ನು ಅನುಸರಿಸಿ ಗಂಡನಿಂದಲೇ ವೀರ್ಯವನ್ನು ಸಂಗ್ರಹಿಸಿ ಹೆಂಡತಿಯ ಮೇಲೆ ಪ್ರಯೋಗಿಸಬಹುದು.

ಕೃತಕ ವೀರ್ಯಕ್ಷೇಪವು ದನಗಳು ಮತ್ತು ಕೋಳಿಗಳ ಉತ್ಪನ್ನದಲ್ಲಿ ಹೆಚ್ಚಳಕ್ಕೆ ಕಾರಣವಾಗಿದೆ. ತಳಿ ಸಂವರ್ಧನೆಯೇ ಅಲ್ಲದೆ, ಪ್ರಾಣಿಗಳ ಪ್ರಜನನವನ್ನು ಉತ್ತಮ ಪಡಿಸುವ ಹೆಚ್ಚು ವೆಚ್ಚವಿಲ್ಲದ ವಿಧಾನವನ್ನು ಒದಗಿಸಿದೆ. ಸಂಭೋಗ ಕಾಲದಲ್ಲಿ ವರ್ಗಾಯಿಸಲ್ಪಟ್ಟು ಬಂಜೆತನಕ್ಕೆ ಕಾರಣವಾಗುವ ಕೆಲವು ಕಾಯಿಲೆಗಳನ್ನು ನಿಗ್ರಹಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಸಮರ್ಥವಾಗಿದೆ. (ಎಚ್.ಎಚ್.ಎಸ್.)

**ಕೃಷ್ಣಮೃಗ:** ಕೃಷ್ಣಮೃಗ ಆಂಟಿಲೋಪ್ ಜಾತಿಗೆ ಸೇರಿದ ಸ್ತನಿ. ಆಂಗ್ಲ ಭಾಷೆಯಲ್ಲಿ ಬ್ಲ್ಯಾಕ್ ಬಕ್ ಎನ್ನುವರು. ದೇಹದ ಗಾತ್ರದಲ್ಲಿ ಮೇಕೆ ಅಥವಾ ಜಿಂಕೆಯನ್ನು ಹೋಲುವ ಕೃಷ್ಣಮೃಗದ ವೈಜ್ಞಾನಿಕ ನಾಮ ಆಂಟಿಲೋಪ್ ಸರ್ವಿಕಾಪ್ರ. ಗೊರಸುಳ್ಳ ಸ್ತನಿಗಳಾದ ಆರ್ಟಿಯೊಡ್ಯಾಕ್ಟೈಲಾ ಗಣಕ್ಕೆ ಸೇರಿದೆ.

ಕೃಷ್ಣಮೃಗಗಳು ಕರ್ನಾಟಕ ರಾಜ್ಯದ ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕು ಮೈದನಹಳ್ಳಿಯ ರಕ್ಷಿತ ವನ್ಯ ಧಾಮಗಳಲ್ಲಿವೆ. ಕರ್ನಾಟಕ ಹೊರತುಪಡಿಸಿದರೆ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶದ ರಾಜ್ಯಗಳಲ್ಲಿನ ಹುಲ್ಲುಗಾವಲು ಪ್ರದೇಶಗಳಲ್ಲಿ ಕೃಷ್ಣಮೃಗಗಳು ಕಂಡು ಬರುತ್ತವೆ. ತಜ್ಞರ ವರದಿಗಳ ಪ್ರಕಾರ, ಭಾರತ ಉಪ ಖಂಡದಲ್ಲಿ 40 ಲಕ್ಷಕ್ಕೂ ಹೆಚ್ಚು ಕೃಷ್ಣಮೃಗಗಳಿದ್ದವು. ಮಾನವನ ಮೋಜಿನ ಬೇಟೆಗೆ ಬಲಿಯಾಗಿ ಕೃಷ್ಣಮೃಗಗಳ ಸಂತತಿ ದಿನೇ ದಿನೇ ಕ್ಷೀಣಿಸುತ್ತಿದೆ. ಪ್ರಸಕ್ತ

ಅಂದಾಜಿನ ಪ್ರಕಾರ ಭಾರತದಲ್ಲಿ ಕೇವಲ 25 ಸಾವಿರಕ್ಕೂ ಕಡಿಮೆ ಕೃಷ್ಣಮೃಗಗಳಿವೆ. ರಕ್ಷಿತ ಪ್ರಾಣಿ ಸಂಗ್ರಹಾಲಯಗಳಲ್ಲಿ, ರಾಷ್ಟ್ರೀಯ ಉದ್ಯಾನಗಳಲ್ಲಿ ಸಹ ಕೃಷ್ಣಮೃಗಗಳಿವೆ.

ಕೃಷ್ಣಮೃಗ ಪುಕ್ಕಲು ಸ್ವಭಾವದ, ಮೆಲುಕು ಹಾಕುವ ವಿಶಿಷ್ಟ ಪ್ರಾಣಿ. ಸಮ ಶೀತೋಷ್ಣವಲಯದ ಪೊದೆಗಳು ಮತ್ತು ಕುರುಚಲು ಗಿಡಗಳಿಂದ ಕೂಡಿದ ಶುಷ್ಕ ಹವಾಮಾನ (ವಾರ್ಷಿಕ ಸರಾಸರಿ 25–35 ಸೆಂಮೀ ಮಳೆಯಾಗುವ, 10 ರಿಂದ 42 ಸೆ ಉಷ್ಣಾಂಶವಿರುವ ಮತ್ತು ಸಮುದ್ರ ಮಟ್ಟದಿಂದ 600–650 ಮೀ ಎತ್ತರದಲ್ಲಿರುವ ವಾತಾವರಣ)ದ ಹುಲ್ಲು ಗಾವಲುಗಳಲ್ಲಿ ಗುಂಪು ಗುಂಪಾಗಿ ವಾಸಿಸುತ್ತವೆ. ಒಂದು ಗುಂಪಿನಲ್ಲಿ 10 ರಿಂದ 30 ಮೃಗಗಳಿರುತ್ತವೆ. ಈ ಗುಂಪಿನ ನೇತೃತ್ವವನ್ನು ಶಕ್ತಿಶಾಲಿಯಾದ ಗಂಡು ವಹಿಸುತ್ತದೆ. ಸಾಮಾನ್ಯವಾಗಿ 19 ರಿಂದ 23 ತಿಂಗಳುಗಳಲ್ಲಿ ಪ್ರಾಯಕ್ಕೆ ಬರುವ ಗಂಡು ಗುಂಪಿನ ಉಳಿದ ಕೃಷ್ಣಮೃಗಗಳ ಜೊತೆ ಹೋರಾಟ ನಡೆಸಬೇಕು. ಈ ಹೋರಾಟದಲ್ಲಿ ಗೆದ್ದ ಗಂಡಿಗೆ ಹೆಣ್ಣು ಒಲಿಯುತ್ತದೆ. ಈ ಹೋರಾಟ 'ಸ್ಟೇರಿಂಗ್' ಎಂದೇ ಪ್ರಖ್ಯಾತಿ ಪಡೆದಿದೆ. ಸಾಮಾನ್ಯವಾಗಿ ಫೆಬ್ರವರಿ – ಮಾರ್ಚ್ ತಿಂಗಳಲ್ಲಿ ಬಿರುಸಿನ ಲೈಂಗಿಕ ಚಟುವಟಿಕೆ ನಡೆಯುತ್ತದೆ.



ಕೃಷ್ಣ ಮೃಗ

ಗರ್ಭಧರಿಸಿದ ಹೆಣ್ಣು 7 ತಿಂಗಳಲ್ಲಿ 2–3 ಮರಿಗಳಿಗೆ ಜನ್ಮ ನೀಡುತ್ತದೆ. ಹುಟ್ಟಿದಾಗ ಹೆಣ್ಣು ಮತ್ತು ಗಂಡು ಮರಿಗಳೆರಡೂ ಒಂದೇ ಬಣ್ಣದ್ದಾಗಿರುತ್ತವೆ. ಮರಿಗಳು ಬೆಳೆದಂತೆ ಗಂಡಿನ ಬೆನ್ನಿನ ಭಾಗ ಮತ್ತು ಪಕ್ಕೆಗಳು ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಹೊಟ್ಟೆ ಮತ್ತು ಕಾಲುಗಳ ಒಳಭಾಗಗಳು ಬಿಳಿ ಬಣ್ಣದಿಂದ ಕೂಡಿರುತ್ತವೆ. ಮುಖದಲ್ಲಿ ಬಿಳಿಯ ಮಚ್ಚೆಗಳಿರುತ್ತವೆ. ಗಂಡು ಸು. 75 ಸೆಂಮೀ ಉದ್ದದ ಸುರುಳಿಯಾಕಾರದ ಕೊಂಬಿನಿಂದ ಸುಂದರವಾಗಿರುತ್ತದೆ.

ಕೃಷ್ಣಮೃಗಗಳ ಆಹಾರ ಹುಲ್ಲು ಮತ್ತು ಸೊಪ್ಪು. ಏಕದಳ ಸಸ್ಯಗಳ ಸೊಪ್ಪುಗಳೆಂದರೆ ಇವುಗಳಿಗೆ ತುಂಬ ಇಷ್ಟ. ಆಹಾರಕ್ಕೆಂದು ಅಲೆದಾಡುವಾಗ ಈ ಮೃಗಗಳು ಮಾಂಸಾಹಾರಿ ಪ್ರಾಣಿಗಳಿಗೆ ಬಲಿಯಾಗುವ ಸಾಧ್ಯತೆ ಇದೆ. ಪ್ರಾಣಿ ಪ್ರಪಂಚದಲ್ಲಿ ಚಿರತೆಯನ್ನು ಬಿಟ್ಟರೆ ಅತಿ ವೇಗವಾಗಿ ಓಡುವ ಪ್ರಾಣಿಗಳೆಂದರೆ ಕೃಷ್ಣಮೃಗಗಳು. ತಮ್ಮ ದೇಹ ರಕ್ಷಣೆಗೆ ಈ ತಂತ್ರ ಬಳಸುವುದು ವಿಸ್ಮಯಕರ. ಕೃಷ್ಣಮೃಗಗಳನ್ನು ಬೇಟೆಯಾಡುವುದು, ಬೇಟೆ ಮಾಡಲು ಪ್ರಯತ್ನಿಸುವುದು, ಹಿಡಿದು ಸಾಕುವುದು ಕಾನೂನು ಬಾಹಿರ. ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರ 9ನೇ ವಿಧಿ ಪ್ರಕಾರ ಕೃಷ್ಣಮೃಗಗಳನ್ನು ಸಂರಕ್ಷಿಸಲು ಸರಕಾರ ಕ್ರಮ ತೆಗೆದುಕೊಂಡಿದೆ.

***

**ಕೆಂಜಿಗ:** ಕೆಂಪುಬಣ್ಣದ ಇರುವೆಗೆ ಕೆಂಜಿಗ ಎನ್ನುವರು. ದೇಹದ ಬಣ್ಣ ಕೆಂಪುಮಿಶ್ರಿತ ಕಂದು ಅಥವಾ ನಸುಹಳದಿ ಮಿಶ್ರಿತ ಕೆಂಪು. ಕೆಂಜಿಗಗಳ ದೇಹದಲ್ಲಿ ತಲೆ, ಎದೆ ಮತ್ತು ಉದರ ಭಾಗಗಳಿವೆ. ಭಾರತದಲ್ಲಿ ಸು. ಐದು ಜಾತಿಯ ಕೆಂಜಿಗಗಳಿವೆ. ಎಲ್ಲವೂ ಫಾರ್ಮಿಸಿಡೆ ಕುಟುಂಬಕ್ಕೆ ಸೇರಿವೆ. ಇವು ಉನ್ನತಮಟ್ಟದ ಸಂಘ ಜೀವನವನ್ನು ನಡೆಸುತ್ತವೆ. ಹಾಗಾಗಿ ಇವುಗಳನ್ನು ಸಾಮಾಜಿಕ ಕೀಟಗಳೆನ್ನುವರು (ನೋಡಿ: ಸಾಮಾಜಿಕ ಕೀಟಗಳು).

ಕೆಂಜಿಗ

ಭಾರತದಲ್ಲಿ ಕಂಡುಬರುವ ಕೆಂಜಿಗಗಳು:

೧. ಈಕೋಫಿಲ ಸ್ಮರಾಗ್ಡಿನ : ಮರಗಳಲ್ಲಿ ಗೂಡು ಕಟ್ಟಿಕೊಂಡು ವಾಸಿಸುವ ಕೆಂಜಿಗ. ಡಿಂಬಗಳು ಉತ್ಪಾದಿಸುವ ನಯವಾದ ದಾರವನ್ನು ಉಪಯೋಗಿಸಿ, ಎಲೆಗಳನ್ನು ಅಂಟಿಸಿ, ಕೆಲಸಗಾರ ಕೆಂಜಿಗಗಳು ಗೂಡನ್ನು ನಿರ್ಮಿಸುತ್ತವೆ. ಇವುಗಳ ಪ್ರಧಾನ ಆಹಾರ ಹುರುಪೆ ಕೀಟಗಳು (ಸ್ಕೇಲ್ ಇನ್‌ಸೆಕ್ಟ್ಸ್) ಉತ್ಪಾದಿಸುವ ಕೆಲವು ಬಗೆಯ ಪದಾರ್ಥಗಳು. ಕೆಂಜಿಗದ ಕಡಿತ ಬಹಳ ಉರಿತ ಮತ್ತು ನೋವನ್ನುಂಟುಮಾಡುತ್ತದೆ. ತೋಟಗಳಲ್ಲಿ ಕೀಟಪೀಡೆಗಳನ್ನು ನಾಶಪಡಿಸುವ ಮೂಲಕ ಇವು ಮಾನವನಿಗೆ ಸಹಕಾರಿಯೆನಿಸಿವೆ.

೨. ಕ್ರೆಮಟೋಗ್ಯಾಸ್ಟರ್ ಡಾರ್ನ್ರಿ : ಇದು ಮರಗಳಲ್ಲಿ ವಾಸಿಸುವ ಒಂದು ಕೆಂಜಿಗ. ಸಾಮಾನ್ಯವಾಗಿ ೨೦,೦೦೦ ದಿಂದ ೧,೦೦,೦೦೦ ಕೆಂಜಿಗಗಳು ಒಟ್ಟುಗೂಡಿ ದುಂಡಾದ ಗೂಡನ್ನು ಕಟ್ಟಿಕೊಂಡು ವಾಸಿಸುತ್ತವೆ.

೩. ಮಾನೋಮೋರಿಯಂ ಗ್ಲೈಸೆಫಿಲಂ: ಮರಗಳಲ್ಲಿ ಗೂಡು ಕಟ್ಟಿ ವಾಸಿಸುವ ಕೆಂಜಿಗ. ಕೆಲವು ಬಾರಿ ಮಾನವ ವಸತಿಗೂ ಬರುವುದುಂಟು. ಹುರುಪೆ ಕೀಟಗಳು ಉತ್ಪಾದಿಸುವ ಜೇನಿನಂಥ ರಸವನ್ನು ಕುಡಿದು ಬದುಕುತ್ತವೆ. ಮಾ. ಗ್ರಾಸಿಲಿ ಮತ್ತು ಮಾ. ಡಿಸ್ಟ್ರಕ್ಟರ್ ಪ್ರಭೇದಗಳು ಮನೆಗಳಲ್ಲಿ ವಾಸಿಸುತ್ತವೆ. ಇವನ್ನು ಸಾಮಾನ್ಯವಾಗಿ ಕೆಂಪಿರುವೆಗಳೆನ್ನುತ್ತಾರೆ. ಗೋಡೆ ಮತ್ತು ನೆಲವನ್ನು ಕೊರೆದು ಬಿಲ ಮಾಡಿಕೊಂಡು ಇವು ವಾಸಿಸುತ್ತವೆ.

೪. ಇರಿಡೊಮರ್ಮಿಕ್ಸ್ ಆನ್‌ಸೆಪ್ಸ್ : ನೆಲದಲ್ಲಿ ಬಿಲ ತೋಡಿ ವಾಸಿಸುವ ಕೆಂಜಿಗ. ಏಫಿಡ್ ಕೀಟಗಳು ವಾಸಿಸುವ ಜಾಗದ ಸಮೀಪ ಗೂಡು ಕಟ್ಟಿ ವಾಸಿಸುತ್ತವೆ. ಏಫಿಡ್‌ಗಳು ಉತ್ಪಾದಿಸುವ ರಸವನ್ನೇ ಕುಡಿದು ಬದುಕುತ್ತವೆ.

೫ ಫೈಡೋಲ್ ಇಂಡಿಕ: ನೆಲದಲ್ಲಿ ಬಿಲ ತೋಡಿ ವಾಸಿಸುವ ಕೆಂಜಿಗ. ಗೂಡನ್ನು ಎಲೆಗಳಿಂದ ಮರೆ ಮಾಡುತ್ತದೆ. ಸತ್ತ ಕೀಟಗಳನ್ನು ಗೂಡಿಗೆ ಹೊತ್ತು ತಂದು ತಿಂದು ಬದುಕುತ್ತವೆ.

೬ ಸೊಲೆನಾಪ್ಸಿಸ್ ಜೆಮಿನೇಟ: ಇದು ಸಣ್ಣ ಗಾತ್ರದ ಕೆಂಜಿಗ. ಮರಳಲ್ಲಿ ಸಣ್ಣ ಬಿಲಗಳನ್ನು ನಿರ್ಮಿಸಿಕೊಂಡು ವಾಸಿಸುತ್ತದೆ. ಬಿಲಗಳ ಸುತ್ತ ಸಣ್ಣ ಮರಳಿನ ಚಿಕ್ಕ ಚಿಕ್ಕ ದಿಣ್ಣೆಗಳಿರುವುದು ಇದರ ವಿಶೇಷ ಗುಣ. ಕಿತ್ತಳೆ, ನಿಂಬೆ ಜಾತಿಯ ಗಿಡಗಳು, ಹತ್ತಿ ಮತ್ತು ತರಕಾರಿ ಗಿಡಗಳಿಗೆ ಇದು ಉಪದ್ರವಕಾರಿ. ಕೆಲವು ಸಲ ಬೇರೆ ಕೀಟಗಳನ್ನು ತಿನ್ನುವುದರಿಂದ ಇದನ್ನು ಕೀಟ ಪೀಡೆಗಳ (ಉದಾ: ಸಂಗ್ರಹಿಸಲಾದ ಅರಗನ್ನು ತಿನ್ನುವ ಕೀಟ ಪೀಡೆಗಳು) ನಿವಾರಣೆಗೆ ಬಳಸುವರು. (ಕೆ.ಜಿ.ಎನ್.)

**ಕೆಂಡಲ್, ಎಡ್ವರ್ಡ್ ಕ್ಯಾಲ್ವನ್ (೧೮೮೬–೧೯೭೨):** ಅಮೆರಿಕ ದೇಶದ ಪ್ರಖ್ಯಾತ ಜೀವರಸಾಯನ ವಿಜ್ಞಾನಿ. ಮಾರ್ಚ್ ೮, ೧೮೮೬ರಂದು ಅಮೆರಿಕದ ಕನ್ನೆಕ್ಟಿಕಟ್ಟಿನ ಸೌತ್ ನಾರ್‌ವಾರ್ ಎಂಬಲ್ಲಿ ಜನಿಸಿದ. ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿ ಪಿಎಚ್.ಡಿ. ಪದವಿಯನ್ನು ೧೯೧೦ರಲ್ಲಿ ಪಡೆದ. ಸೇಂಟ್ ಲೂಕನ ಆಸ್ಪತ್ರೆಯಲ್ಲಿ ಮೊದಲ ಹುದ್ದೆ. ಅಲ್ಲಿ ಕೆಲಸ ಮಾಡುತ್ತಿದ್ದಾಗ (೧೯೧೦ರ ಆರಂಭ) ಥೈರಾಯಿಡ್ ಗ್ರಂಥಿಯ ಚಟುವಟಿಕೆಗಳ ವಿಚಾರ ಈತನಿಗೆ ತೀವ್ರ ಕುತೂಹಲ ಮೂಡಿತು. ಮುಂದೆ ೧೯೧೪ರವರೆಗೂ ಇದೇ ವಿಷಯದಲ್ಲಿ ಬೇಕಾದಷ್ಟು ಪ್ರಯೋಗಗಳನ್ನು ನಡೆಸಿದ. ಹಾರ್ಮೋನಿನ ಅಸ್ತಿತ್ವವನ್ನು ಹಿಂದಿನ ದಶಕದಲ್ಲಿ ಸ್ಟಾರ್ಲಿಂಗ್ ಮತ್ತು ಬೇಲಿಸ್ ಎಂಬವರು ಸೂಚಿಸಿದ್ದರು.



ಥೈರಾಯಿಡ್ ಗ್ರಂಥಿ ಇಂಥ ಒಂದು ಹಾರ್ಮೋನನ್ನು ಉತ್ಪತ್ತಿ ಮಾಡುತ್ತಿರುವುದು ಖಚಿತ ಎಂದು ಕೆಂಡಲ್‌ನ ಪ್ರಯೋಗಗಳಿಂದ ವೇದ್ಯವಾಯಿತು. ಮಾನವದೇಹದಲ್ಲಿನ ಸಮಗ್ರ ಜೀವವಸ್ತುಕರಣದ ವೇಗವನ್ನು ನಿಯಂತ್ರಿಸುವುದು ಥೈರಾಯಿಡೆಂದು ಆಗ ತಿಳಿದಿತ್ತು. ಈ ಗ್ರಂಥಿಯ ಚಟುವಟಿಕೆಯನ್ನು ನಿಯಂತ್ರಿಸುವ ಹಾರ್ಮೋನಿನ ಅನ್ವೇಷಣೆ ಕೆಂಡಲ್‌ನ ಎದುರಿದ್ದ ಗುರಿ. ಈ ಹಾದಿಯಲ್ಲಿ ಅವನು ಥೈರಾಕ್ಸಿನ್ ಎಂಬ ಹಾರ್ಮೋನನ್ನು ಬೇರ್ಪಡಿಸಿ ಮೊದಲ ಜಯ ಪಡೆದ. ಮುಂದೆ ಗ್ಲೂಟೋಥಿಯೋನ್ ಎಂಬ ವಸ್ತುವನ್ನು

ಸ್ಫಟಿಕೀಕರಿಸಿ ಅದರ ರಾಸಾಯನಿಕ ರಚನೆಯನ್ನು ಸ್ಥಾಪಿಸಿದ. ಅನಂತರ ಪ್ರಯೋಗವನ್ನು ಮುಂದುವರಿಸಿ ಅಡ್ರಿನಲ್ ಕಾರ್ಟೆಕ್ಸ್‌ನಿಂದ ಕಾರ್ಟಿಸೋನ್ ಮತ್ತು ಹೈಡ್ರೋಕಾರ್ಟಿಸೋನ್ ಎಂಬ ಹಾರ್ಮೋನುಗಳನ್ನು ಬೇರ್ಪಡಿಸಿದ. ಹೆಂಚ್ ಎಂಬಾತನೊಡನೆ ಸೇರಿ ಕಾರ್ಟಿಸೋನನ್ನು ಬೇರ್ಪಡಿಸಿ ಔಷಧವಾಗಿ ಉಪಯೋಗಿಸಿ ಕೀಲುನೋವನ್ನು ಗುಣಪಡಿಸಬಹುದು ಎಂಬುದನ್ನು ತೋರಿಸಿದ. ಈ ಸಿದ್ಧಿಗೋಸ್ಕರ ಈತನಿಗೆ ಫಿಲಿಪ್ ಹೆಂಚ್ ಹಾಗೂ ಸ್ವಿಟ್ಜರ್ಲೆಂಡಿನ ಟಾಡ್ಯೂಜ್ ರೈಖ್‌ಸ್ಟೈನ್ ಎಂಬ ವಿಜ್ಞಾನಿಗಳ ಸಮೇತ ನೊಬೆಲ್ ಬಹುಮಾನ ದೊರೆಯಿತು (೧೯೫೦). ಇದಲ್ಲದೇ ಲ್ಯಾಸ್ಕರ್ ಬಹುಮಾನ, ಕ್ಯಾಮರಾನ್ ಬಹುಮಾನ, ಕೋಬರ್ ಪದಕ ಮುಂತಾದ ಅಸಂಖ್ಯಾತ ಪ್ರಶಸ್ತಿಗಳು ಕೆಂಡಲನಿಗೆ ಲಭಿಸಿವೆ. ೧೯೧೫ರಿಂದ ೧೯೫೧ರಲ್ಲಿ ನಿವೃತ್ತನಾಗುವ ವರೆಗೂ ಕೆಂಡಲ್ ಮೇಯೋ ಕ್ಲಿನಿಕ್‌ನಲ್ಲಿ ಜೀವರಸಾಯನವಿಜ್ಞಾನ ವಿಭಾಗದ ಮುಖ್ಯಸ್ಥನಾಗಿದ್ದ. ೧೯೫೨ರಲ್ಲಿ ಆತ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನದ ಪ್ರೊಫೆಸರ್ ಆದ. ಈತ ಮರಣ ಹೊಂದಿದ್ದು ಮೇ ೪, ೧೯೭೨ರಂದು. (ಎಚ್.ಎಸ್.ಪಿ.)

**ಕೆಂಡ್ರೂ, ಜಾನ್ ಕೌಡೆರಿ (1917–1997):** ಇಂಗ್ಲೆಂಡಿನ ಜೀವರಸಾಯನ ವಿಜ್ಞಾನಿ. ಆಕ್ಸ್‌ಫರ್ಡ್‌ನಲ್ಲಿ ಮಾರ್ಚ್ 24, 1917ರಲ್ಲಿ ಜನಿಸಿದ. ಈತನ ವಿದ್ಯಾಭ್ಯಾಸ ಆಕ್ಸ್‌ಫರ್ಡ್‌ನಲ್ಲಿಯೂ ಮುಂದೆ ಕೇಂಬ್ರಿಜ್ ವಿಶ್ವವಿದ್ಯಾಲಯದ ಕ್ಲಿಫ್ಟನ್ ಕಾಲೇಜ್ ಮತ್ತು ಟ್ರಿನಿಟಿ ಕಾಲೇಜುಗಳಲ್ಲಿಯೂ ನಡೆಯಿತು. 1939ರಲ್ಲಿ ಬಿಎಸ್‌ಸಿ ಪದವಿ ಪಡೆದ ಮೇಲೆ ಎರಡನೆಯ ಮಹಾಯುದ್ಧದ ಕಾಲದಲ್ಲಿ (1940–45) ವಿಮಾನ ನಿರ್ಮಾಣ ಇಲಾಖೆಯಲ್ಲಿ ಕೆಲಸ ಮಾಡಿದ ಅನಂತರ ತನ್ನ ವಿಶ್ವವಿದ್ಯಾಲಯಕ್ಕೆ ಮರಳಿದ. ಕ್ಯಾವೆಂಡಿಶ್ ಪ್ರಯೋಗಾಲಯದಲ್ಲಿ ಮಾಡಿದ ನಾಲ್ಕು ವರ್ಷಗಳ ಸಂಶೋಧನೆಯ ಫಲವಾಗಿ 1949ರಲ್ಲಿ ಈತನಿಗೆ ಪಿಎಚ್.ಡಿ. ಪದವಿ ದೊರೆಯಿತು.

ಮೆಡಿಕಲ್ ಕೌನ್ಸಿಲ್ ಪ್ರಯೋಗಾಲಯದ ಉಪಾಧ್ಯಕ್ಷ (1953 ರಿಂದ), ರಾಯಲ್ ಇನ್‌ಸ್ಟಿಟ್ಯೂಟಿನ ಡೇವಿ–ಫ್ಯಾರಡೆ ಪ್ರಯೋಗಾಲಯದಲ್ಲಿ ರೀಡರ್ (1954 ರಿಂದ), ರಕ್ಷಣಾ ಇಲಾಖೆಗೆ ವೈಜ್ಞಾನಿಕ ಸಲಹೆಗಾರ(1960–62), ಅಣುಜೀವ ರಸಾಯನ ವಿಜ್ಞಾನದ ಪತ್ರಿಕೆಯ ಮುಖ್ಯ ಸಂಪಾದಕ–ಇವೇ ಮೊದಲಾದ ಹುದ್ದೆಗಳಲ್ಲಿ ಈ ವಿಜ್ಞಾನಿ ನಿರಂತರ ಸೇವೆ ಸಲ್ಲಿಸಿದ. ಮಯೋಗ್ಲೋಬಿನ್ ಎಂಬ ಪ್ರೋಟೀನಿನ ಅಣು ಮತ್ತು ವಿನ್ಯಾಸರಚನೆಯನ್ನು ಎಕ್ಸ್‌ಕಿರಣ ಸ್ಫಟಿಕಮಾಪನ ವಿಧಾನದಿಂದ ಸಾಧಿಸಿದ ಸಂಶೋಧನೆಗಾಗಿ ಈತನಿಗೆ ರಸಾಯನಶಾಸ್ತ್ರ ವಿಭಾಗದ ನೊಬೆಲ್ ಪಾರಿತೋಷಕ ದೊರೆಯಿತು (1962). 1965ರಲ್ಲಿ ರಾಯಲ್ ಸೊಸೈಟಿಯ ರಾಯಲ್ ಪದಕವೂ ದೊರೆಯಿತು. ಪ್ರೋಟೀನುಗಳನ್ನು ಕುರಿತ ದಿ ತ್ರೆಡ್ ಆಫ್ ಲೈಫ್ ಎಂಬ ಇವನ ಪುಸ್ತಕ 1966ರಲ್ಲಿ ಪ್ರಕಟವಾಯಿತು. 1974–1979ರವರೆಗೆ ಬ್ರಿಟಿಷ್ ವಸ್ತು ಸಂಗ್ರಹಾಲಯದ ಟ್ರಸ್ಟಿಯಾಗಿಯೂ, ನಿವೃತ್ತನಾದ ಬಳಿಕ 1981–1987 ಅವಧಿಯಲ್ಲಿ ಆಕ್ಸ್‌ಫರ್ಡ್‌ನ ಪ್ರತಿಷ್ಠಿತ ಸೈಂಟ್‌ಜಾನ್ಸ್ ಕಾಲೇಜಿನ ಅಧ್ಯಕ್ಷನಾಗಿಯೂ ಕೆಂಡ್ರೂ ಸೇವೆ ಸಲ್ಲಿಸಿದ. ಆಗಸ್ಟ್ 23, 1997 ರಂದು ಕೇಂಬ್ರಿಜಿನಲ್ಲಿ ನಿಧನ ಹೊಂದಿದ. ***

**ಕೆಂದಲೆ ಹಾವು:** ಕ್ರೋಟಾಲಿಡೆ (ಪಿಟ್‌ವೈಪರ್ಸ್) ಕುಟುಂಬಕ್ಕೆ ಸೇರಿದೆ (ಕಾಪರ್ ಹೆಡ್ ಸ್ನೇಕ್). ಅಗ್ಕಿಸ್ಟ್ರಡಾನ್ ಕಂಟಾರ್ಟ್ರಿಕ್ಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಇದರ ತಲೆಯ ಮೇಲ್ಭಾಗ ತಾಮ್ರದಂತೆ ಕೆಂಪಗಿರುವುದರಿಂದ ಈ ಹೆಸರು ಬಂದಿದೆ. ಇದು ಮಂಡಲದ ಹಾವುಗಳಿಗೆ ಹತ್ತಿರದ ಸಂಬಂಧಿ. ಅಮೆರಿಕದಲ್ಲಿ ವಿಷಪೂರಿತ ಸರ್ಪಗಳಲ್ಲಿ ಇದು ಒಂದು. ಇದು ಅಮೆರಿಕ ಸಂಯುಕ್ತ ಸಂಸ್ಥಾನದ ಟೆಕ್ಸಾಸ್ ರಾಜ್ಯದ ಪಶ್ಚಿಮ ಭಾಗ, ಮಸ್ಸಾಚೂಸೆಟ್ಸ್ ಮತ್ತು ಫ್ಲಾರಿಡ ರಾಜ್ಯಗಳ ಉತ್ತರ ಭಾಗಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ವರ್ಣವೈವಿಧ್ಯದ ಆಧಾರದ ಮೇಲೆ ನಾಲ್ಕು ಬಗೆಯ ಕೆಂದಲೆ ಹಾವುಗಳನ್ನು ಗುರುತಿಸಲಾಗಿದೆ. ಇದೊಂದು ಸಣ್ಣ ಹಾವು. ಅಪೂರ್ವವಾಗಿ 1.2 ಮೀ. ಉದ್ದವಿರುವುದಾದರೂ 1.0 ಮೀ. ಉದ್ದವೇ ಸಾಮಾನ್ಯ. ದೇಹದ ಬಣ್ಣ ಕಂದು. ದೇಹದುದ್ದಕ್ಕೂ ಅಲ್ಲಲ್ಲಿ 15–25 ಕಗ್ಗಂದು ಬಣ್ಣದ ಅಡ್ಡಪಟ್ಟೆಗಳಿವೆ. ಪಟ್ಟೆಗಳು ಬೆನ್ನ ಮೇಲೆ ಕಿರಿದಾಗಿಯೂ ಪಕ್ಕಗಳಲ್ಲಿ ಅಗಲವಾಗಿಯೂ ಇವೆ. ದೇಹದ ತಳಭಾಗದ ಬಣ್ಣ ಹಳದಿ ಮಿಶ್ರಿತ ಕಂದು. ಕಣ್ಣಿಗೂ ನಾಸಿಕರಂಧ್ರಕ್ಕೂ ನಡುವೆ ತಲೆಯ ಎರಡೂ ಪಕ್ಕಗಳಲ್ಲಿಯೂ ಒಂದೊಂದು ಕುಳಿ(ಪಿಟ್) ಇರುವುದು ಈ ಹಾವಿನ ವೈಶಿಷ್ಟ್ಯವೂ ಹೌದು. ಈ ಕುಳಿಗಳು ಉಷ್ಣಗ್ರಾಹಕಗಳಾಗಿ ಬಿಸಿರಕ್ತದ ಪ್ರಾಣಿಗಳ ಸುಳಿವನ್ನು ತಿಳಿಯಲು ಸಹಾಯಕವಾಗಿವೆ ಎಂದು ತಿಳಿದುಬಂದಿದೆ.

ಇದು ಸಾಮಾನ್ಯವಾಗಿ ಜೌಗುನೆಲ, ಹುಲ್ಲುಗಾವಲು ಮತ್ತು ಕಲ್ಲುಬಂಡೆಗಳಿರುವ ಪ್ರದೇಶಗಳಲ್ಲಿ ಕಂಡುಬರುತ್ತದೆ. ವಸಂತಋತುವಿನಲ್ಲಿ ಹಗಲು ಹೊತ್ತಿನಲ್ಲೆ ಸಂಚರಿಸುತ್ತವೆ. ಆದರೆ ಬೇಸಗೆಯ ಸೆಕೆ ತಾಳಲಾರದೆ ಮರೆಯಲ್ಲಿದ್ದು ರಾತ್ರಿ ಹೊತ್ತಿನಲ್ಲಿ ಮಾತ್ರ ಹೊರ ಹೊರಡುತ್ತದೆ. ಚಳಿಗಾಲದಲ್ಲಿ ಹಲವಾರು ಹಾವುಗಳು ಗುಂಪುಗೂಡಿ ಭೂಮಿಯ ಬಿರುಕುಗಳಲ್ಲಿ ಮತ್ತು ಬಂಡೆಗಳ ಸಂದುಗಳಲ್ಲಿ ಶಿಶಿರಸ್ವಾಪತೆಯಲ್ಲಿ (ಹೈಬರ್‌ನೇಷನ್) ತೊಡಗುತ್ತವೆ. ಈ ಸಮಯದಲ್ಲಿ ಬುಡುಬುಡುಕೆ ಹಾವು (ರ್‍ಯಾಟಲ್ ಸ್ನೇಕ್) ಮುಂತಾದವೂ ಇವುಗಳ ಜೊತೆ ಸೇರುತ್ತವೆ. ಸಣ್ಣ ಗಾತ್ರದ ಸ್ತನಿ, ಹಲ್ಲಿ, ಕಪ್ಪೆ, ಹಕ್ಕಿ ಮತ್ತು ಕೀಟಗಳನ್ನು ತಿನ್ನುವುದಾದರೂ ಇಲಿಗಳೇ ಇದರ ಮೆಚ್ಚಿನ ಆಹಾರ. ಕೆಂದಲೆ ಹಾವು ಸ್ವಭಾವತ: ಸಾಧುಪ್ರಾಣಿಯಾದರೂ ಹೆದರಿಸಿದರೆ, ಗಾಯಗೊಳಿಸಿದರೆ, ರೇಗಿಸಿದರೆ ಕಚ್ಚುತ್ತದೆ. ಇದರ ವಿಷ ರಕ್ತಸಂಚಾರದ ಮೇಲೆ ಪರಿಣಾಮವುಂಟು ಮಾಡುತ್ತದೆ. ಸಾಮಾನ್ಯವಾಗಿ ವಯಸ್ಕರಿಗೆ ಈ ವಿಷ ಕಂಟಕಪ್ರಾಯವಲ್ಲದಿದ್ದರೂ, ಮಕ್ಕಳಿಗೆ ಮಾರಕವಾಗಬಹುದು.

ಕೆಂದಲೆ ಹಾವಿನ ಸಂತಾನೋತ್ಪತ್ತಿಯ ಕಾಲ ಏಪ್ರಿಲ್–ಮೇ ತಿಂಗಳು. ಒಂದು ಸೂಲಿಗೆ 4–8 ಮರಿಗಳನ್ನು ಈಯುತ್ತವೆ. (ಎಸ್.ಎಚ್.ಬಿ.)

**ಕೆಂಪು ಕೊಕ್ಕರೆ:** ಇಕ್ಸೊಬ್ರೈಕಸ್ ಜಾತಿಯ ಎಕ್ಸೈಲಿಸ್ ಮತ್ತು ಸಿನಮೋಮಿಯಸ್ ಪ್ರಭೇದಗಳಿಗೆ ಸೇರಿದ ಕೊಕ್ಕರೆಯಂಥ ಹಕ್ಕಿ. ಸಿಕೋನೈಯಿಫಾರ್ಮಿಸ್ ಗಣ, ಆರ್ಡೀಯಿಡೆ ಕುಟುಂಬಕ್ಕೆ ಸೇರಿದೆ. ಭಾರತದಲ್ಲಿ ಸಿನಮೋಮಿಯಸ್ ಪ್ರಭೇದ ಇದೆ. ದಕ್ಷಿಣ ಕೆನಡದಿಂದ ಹಿಡಿದು ದಕ್ಷಿಣ ಅಮೆರಿಕದವರೆಗೂ ವ್ಯಾಪಿಸಿದಂತೆ ಎಕ್ಸೈಲಿಸ್ ಪ್ರಭೇದ ಕಂಡು ಬರುತ್ತದೆ. ನೀರು ನಿಂತಿರುವ ಪ್ರದೇಶಗಳು ಹಾಗೂ ಬತ್ತದ ಗದ್ದೆಗಳಲ್ಲಿ ವಾಸಿಸುವ ಹಕ್ಕಿಯಿದು. ಕೊಳ ಮತ್ತು ಜವುಗು ಪ್ರದೇಶಗಳಲ್ಲಿರುವ ಎತ್ತರವಾದ ಹುಲ್ಲುಗಳ ಪೊದೆಗಳ ಮಧ್ಯೆ ವಾಸವಾಗಿರುತ್ತದೆ. ಬಹಳ ಪುಕ್ಕಲು ಸ್ವಭಾವದ ಈ ಹಕ್ಕಿ ಇತರರ ಕಣ್ಣಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನೀರಿನಲ್ಲಿರುವ ಗಿಡಗಳ ಮಧ್ಯೆ ಓಡಾಡುವುದಲ್ಲದೆ ಗಿಡಗಳ ಮೇಲೇರಿ ಅಡಗಿಕೊಳ್ಳುತ್ತದೆ. ಕೆಲವು ಸಾರಿ ತನ್ನ ದೇಹ ಮತ್ತು ಕೊಕ್ಕನ್ನು ನೆಟ್ಟಗೆ ಮೇಲಕ್ಕೆತ್ತಿಕೊಂಡು ಹೆಪ್ಪುಗಟ್ಟಿದಂತೆ ನಿಶ್ಚಲವಾಗಿ, ನೀರಿನಲ್ಲಿರುವ ಜೊಂಡನ್ನು ಹೋಲುವಂತೆಯೇ ನಟಿಸಿ ನಿಂತುಕೊಳ್ಳುತ್ತದೆ. ಹಾಗೆ ಅಲುಗಾಡದೆ ನಿಂತಿದ್ದರೂ ತನ್ನ ಕಣ್ಣುಗಳನ್ನು ನಿಧಾನವಾಗಿ ಚಲಿಸುತ್ತ ಸುತ್ತಲೂ ನೋಡುತ್ತದೆ. ಈ ಚಲನೆ ತಿರುಗಣಿ ಮಣೆ ತಿರುಗುವ ಹಾಗೆ ಇರುತ್ತದೆ.

ಕೆಂಪು ಕೊಕ್ಕರೆ ಸುಮಾರು 40 ಸೆಂಮೀ ಉದ್ದದ ಸಣ್ಣ ಗಾತ್ರದ ಹಕ್ಕಿ. ಗಂಡುಹಕ್ಕಿಯ ಮೇಲ್ಭಾಗದ ಗರಿಗಳು ಮತ್ತು ತಲೆಯ ಪಕ್ಕಗಳು ಕೆಂಪು ಮಿಶ್ರಿತ ಕಂದುಬಣ್ಣದುವು. ಗಂಟಲು ಮತ್ತು ಕೆಳಭಾಗದ ಗರಿಗಳು ಕಿತ್ತಳೆಮಿಶ್ರಿತ ಕಂದು ಬಣ್ಣದುವು. ಗಂಟಲಿನ ಎರಡು ಕಡೆ ಬಿಳಿಯ ಗೆರೆಯಿದೆ. ಕತ್ತಿನ ಮುಂಭಾಗದಲ್ಲಿ ಕೆಳಕ್ಕೆ ಚಾಚಿಕೊಂಡಿರುವ ಹಾಗೆ ಕಂದುಬಣ್ಣದ ಗೆರೆಯಿದೆ. ಹೆಣ್ಣು ಹಕ್ಕಿ ಮಾಸಲು ಬಣ್ಣದ್ದು.

ಇದರ ಪ್ರಧಾನ ಆಹಾರ ಮೀನು. ಕೆಲವು ಸಾರಿ ಸಣ್ಣ ಸಣ್ಣ ಹಕ್ಕಿ, ಹಲ್ಲಿ, ಹಾವು, ಕಪ್ಪೆ, ಮಿಡತೆ, ಮೃದ್ವಂಗಿಗಳು, ಸೀಗಡಿ, ಏಡಿ ಮುಂತಾದುವನ್ನು ತಿನ್ನುತ್ತದೆ. ಮೊಟ್ಟೆಯಿಡುವುದು ಮಳೆಗಾಲದಲ್ಲಿ. ಪ್ರತಿ ಸೂಲಿಗೂ 4 ಮೊಟ್ಟೆಗಳನ್ನಿಡುತ್ತದೆ. ಬತ್ತದ ಗದ್ದೆಗಳಲ್ಲಿ ಈ ಹಕ್ಕಿಗಳು ಹೇರಳವಾಗಿ ಗೂಡುಗಳನ್ನು ಕಟ್ಟುತ್ತವೆ. ಕೊಳಗಳ ಬಳಿ ನೇತಾಡುತ್ತಿರುವ ಪೊದರುಗಳು ಅಥವಾ ಎತ್ತರವಾದ ಜೊಂಡುಗಳ ಮಧ್ಯೆ ಹುಲ್ಲು ಅಥವಾ ಹುಲ್ಲಿನ ಜೊತೆಗೆ ಬತ್ತದ ಕಡ್ಡಿಗಳನ್ನು ಸೇರಿಸಿ ಗೂಡು ಕಟ್ಟುತ್ತದೆ. (ಕೆ.ಪಿ.ಆರ್.)

**ಕೆಂಪು ಸಾರಂಗ:** ಆರ್ಟಿಯೊಡ್ಯಾಕ್ಟೈಲ ಗಣದ ಸರ್ವಿಡೆ ಕುಟುಂಬಕ್ಕೆ ಸೇರಿದ ಒಂದು ಸ್ತನಿ (ರೆಡ್ ಡಿಯರ್). ಸರ್ವಸ್ ಎಲ್ಯಾಫಸ್ ಎಂಬುದು ಇದರ ಶಾಸ್ತ್ರೀಯ ನಾಮ. ಯೂರೋಪ್, ಉತ್ತರ ಆಫ್ರಿಕ, ಏಷ್ಯ ಮೈನರ್ ಮತ್ತು ಉತ್ತರ ಇರಾನ್‌ಗಳ ಕಾಡುಗಳಲ್ಲಿ ವಾಸಿಸುತ್ತದೆ. ಬ್ರಿಟಿಷ್ ದ್ವೀಪಗಳಲ್ಲಿ ಸ್ಕಾಟ್ಲೆಂಡಿನ ಪ್ರಸ್ಥಭೂಮಿಯಲ್ಲೂ ಕಂಬರ್‌ಲ್ಯಾಂಡ್ ಮತ್ತು ಎಕ್ಸ್‌ಮೂರ್‌ಗಳಲ್ಲೂ ಕಂಡು ಬರುತ್ತದೆ.

ಮಿಣಮಿಣನೆ ಮಿರುಗುವ ಕೆಂಗಂದು ಬಣ್ಣದ ದೇಹ, ಮಾಟವಾದ ಹಾಗೂ ಪ್ರಮಾಣಬದ್ಧವಾದ ಅಂಗಸೌಷ್ಠವ, ಶ್ರೀಮಂತಿಕೆಯ ಠೀವಿ, ಬೆಡಗಿನ ನಡಿಗೆ–ಇವು ಕೆಂಪುಸಾರಂಗದ ವಿಶಿಷ್ಟ ಗುಣಗಳು. ಜಿಂಕೆಗಳ ಕುಟುಂಬದಲ್ಲೇ ಇದು ಅತ್ಯಂತ ಚೆಲುವಾದ ಪ್ರಾಣಿ. ಚೆನ್ನಾಗಿ ಬೆಳೆದ ವಯಸ್ಕ ಗಂಡು ಸಾರಂಗದ ಎತ್ತರ 1.25–1.5 ಮೀ.; ಉದ್ದ 1.65–2.5 ಮೀ.; ತೂಕ100–250 ಕಿಗ್ರಾಂ ಗಂಡು ಸಾರಂಗದ ತಲೆಯ ಮೇಲೆ ಸುಂದರವಾದ ಎರಡು ಕೊಂಬುಗಳಿವೆ. ಉದ್ದ ಸು. 75 ಸೆಂಮೀ. 3–6 ಕವಲುಗಳಿವೆ. ಈ ಕೊಂಬುಗಳಿಂದಾಗಿ ಸಾರಂಗವನ್ನು ರಾಜಸಾರಂಗ ಎಂದು ಕರೆಯಲಾಗುತ್ತದೆ. ಕೊಂಬುಗಳು ಫೆಬ್ರುವರಿ–ಮಾರ್ಚ್ ತಿಂಗಳಿನ ಸುಮಾರಿಗೆ ಉದುರಿಹೋಗುತ್ತವೆ. ಮತ್ತೆ ಏಪ್ರಿಲ್ ತಿಂಗಳಿನಲ್ಲಿ ಹೊಸ ಕೊಂಬುಗಳು ಮೊಳೆಯಲಾರಂಭಿಸಿ ಜುಲೈ ವೇಳೆಗೆ

ಪೂರ್ಣವಾಗಿ ಬೆಳೆದು ನಿಲ್ಲುತ್ತವೆ. ಈ ಸಮಯದಲ್ಲಿ ಕೊಂಬುಗಳ ಮೇಲೆ ಮಕಮಲ್ಲಿನಂಥ ಮೃದುವಾದ ಹೊದಿಕೆಯಿದ್ದು ಕೊಂಬುಗಳು ಸೂಕ್ಷ್ಮವೇದಿಗಳಾಗಿರುತ್ತವೆ. ಆಗಸ್ಟ್ ತಿಂಗಳಿನ ಅನಂತರ ಈ ಹೊದಿಕೆ ಸುಲಿದು ಬೀಳುತ್ತದೆ. ಅಪರೂಪವಾಗಿ, ಕೊಂಬುಗಳಿಲ್ಲದ ಗಂಡು ಸಾರಂಗಗಳೂ ಇವೆ. ಕೆಂಪು ಸಾರಂಗದ ದೇಹದ ಬಣ್ಣ ಮಾಗಿಯಲ್ಲಿ ಬೂದು ಬಣ್ಣಕ್ಕೆ ತಿರುಗುತ್ತದೆ. ಕೆಲವು ಸಾರಂಗಗಳಲ್ಲಿ ಬೆನ್ನಿನ ಮೇಲೆ ಕಗ್ಗಂದು ಬಣ್ಣದ ಪಟ್ಟೆಯೊಂದಿರುವುದುಂಟು. ಎಲ್ಲ ಸಾರಂಗಗಳಲ್ಲೂ ಪೃಷ್ಠ ಭಾಗದಲ್ಲಿ ಕಿತ್ತಳೆ ಬಣ್ಣದ ಗುರುತಿರುತ್ತದೆ.

ಇವು ಸಣ್ಣ ಗುಂಪುಗಳಲ್ಲಿ ಜೀವನ ನಡೆಸುತ್ತವೆ. ಗುಂಪಿನ ಎಲ್ಲ ಸಾರಂಗಗಳಿಗಿಂತ ಹೆಚ್ಚು ವಯಸ್ಸಾದ ಆದರೆ ಇನ್ನೂ ಮರಿಹಾಕುವ ಸಾಮರ್ಥ್ಯವಿರುವ ಹೆಣ್ಣುಸಾರಂಗವೇ ಗುಂಪಿನ ಮುಂದಾಳು, ಅವುಗಳ ಮರಿಗಳೇ ಗುಂಪಿನ ಇತರ ಸದಸ್ಯರು. ವಯಸ್ಕ

ಗಂಡು ಸಾರಂಗಗಳು ಸಂತಾನೋತ್ಪತ್ತಿಯ ಕಾಲದಲ್ಲಿ ಮಾತ್ರ ಗುಂಪಿನಲ್ಲಿದ್ದು ಉಳಿದ ತಿಂಗಳುಗಳಲ್ಲಿ ಒಂಟಿಯಾಗಿ ಜೀವಿಸುತ್ತವೆ. ಗುಂಪಿನ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುವ ಮುಂದಾಳು ಗುಂಪಿಗೆ ಅಪಾಯ ಸನ್ನಿಹಿತವಾಗಿದೆಯೆಂದು ಅರಿತಾಗ ಉಚ್ಚಸ್ವರದಲ್ಲಿ ಕೂಗುತ್ತದೆ. ತತ್‌ಕ್ಷಣ ಇಡೀ ಗುಂಪೇ ಮೇಯುವುದನ್ನು ನಿಲ್ಲಿಸಿ ಸ್ತಬ್ಧವಾಗುತ್ತದೆ. ಎಲ್ಲ ಸರಿಯಾಗಿದೆ ಎಂದು ನಾಯಕಿ ಮತ್ತೊಮ್ಮೆ ಸೂಚನೆ ಕೊಡುವ ತನಕ ಹೀಗೆಯೇ ನಿಂತಿದ್ದು ಅನಂತರ ಅದನ್ನು ಹಿಂಬಾಲಿಸಿ ಮುಂದೆ ಸಾಗುತ್ತವೆ.

ಕೆಂಪು ಸಾರಂಗಕ್ಕೆ ಅತ್ಯಂತ ಚುರುಕಾದ ದೃಷ್ಟಿ, ಘ್ರಾಣ ಹಾಗೂ ಶ್ರವಣಶಕ್ತಿಗಳಿವೆ. ಇದು ಚೆನ್ನಾಗಿ ಈಜಲೂ ಬಲ್ಲುದು. ಲೈಮ್, ಬೀಚ್, ಬರ್ಚ್, ಆಲ್ಡರ್, ಹೇಜಲ್, ಮುಂತಾದ ಮರಗಳ ಹಾಗೂ ಕುರುಚಲು ಗಿಡಗಳ ಚಿಗುರೆಲೆಗಳು ಮತ್ತು ಎಳೆಯ ಗರಿಕೆ ಇದರ ಅಚ್ಚುಮೆಚ್ಚಿನ ಆಹಾರ. ಮೇಯುವ ಕಾಲ ಮುಸ್ಸಂಜೆ ಹಾಗೂ ಬೆಳಗಿನ ಜಾವ.

ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳು ಕೆಂಪುಸಾರಂಗದ ಬೆದೆಗಾಲ. ಈ ಕಾಲದಲ್ಲಿ ಗಂಡುಗಳು ಹೆಣ್ಣುಗಳನ್ನು ಹುಡುಕುತ್ತ ಅಲೆದಾಡುತ್ತವೆ. ಸಾಮಾನ್ಯವಾಗಿ 1.5 ಕಿಮೀ ಸುತ್ತಳತೆಯಲ್ಲೇ ಸುತ್ತಾಡುವುದಾದರೂ ಕೆಲವೊಮ್ಮೆ ದಿನವೊಂದಕ್ಕೆ 30 ಕಿಮೀ ದೂರ ಕ್ರಮಿಸುವುದುಂಟು. ಹೆಣ್ಣುಗಳಿಗಾಗಿ ಗಂಡು ಸಾರಂಗಗಳು ಆಕ್ರೋಶದಿಂದ, ಅಸೂಯೆಯಿಂದ ಜೋರಾಗಿ ಗರ್ಜಿಸುತ್ತ, ಪರಸ್ಪರ ಹೋರಾಡುತ್ತವೆ. ಈ ರೀತಿ ಹೋರಾಡಿ ಒಂದೊಂದು ಗಂಡೂ ಹಲವಾರು ಹೆಣ್ಣುಗಳನ್ನು ಪಡೆಯುವುದುಂಟು. ಮರಿಹಾಕುವ ಕಾಲ ಮೇ–ಜೂನ್ ತಿಂಗಳುಗಳು. ಗರ್ಭಧಾರಣೆಯ ಅವಧಿ 8 ತಿಂಗಳುಗಳು. ಸೂಲಿಗೆ ಒಂದೇ ಮರಿ. ಮರಿಯ ಮೈಮೇಲೆ ಬಿಳಿಯ ಚುಕ್ಕೆಗಳಿರುತ್ತವೆ. ಹುಟ್ಟಿದ ಕ್ಷಣದಿಂದಲೇ ಮರಿ ನಿಲ್ಲಲೂ ಓಡಾಡಲೂ ಸಾಮರ್ಥ್ಯವುಳ್ಳದ್ದಾದರೂ ಅದರ ತಾಯಿ, ಮರಿಯನ್ನು ಯಾವುದಾದರೂ ಪೊದೆಯಲ್ಲಿ ಅಡಗಿಸಿಟ್ಟು ಅದರಿಂದ ಹೆಚ್ಚು ದೂರ ಹೋಗದೆ, ಆಗಿಂದಾಗ್ಗೆ ಮರಿಯ ಬಳಿ ಬಂದು ಹಾಲುಣ್ಣಿಸುತ್ತದೆ.

ಕೆಂಪು ಸಾರಂಗದ ಮಾಂಸ ಬಹಳ ರುಚಿಗೆ ಹೆಸರಾಗಿದೆ. ಮಾಂಸಕ್ಕಾಗಿಯೂ ಕೊಂಬುಗಳಿಗಾಗಿಯೂ ಯೂರೋಪ್ ಮುಂತಾದೆಡೆಗಳಲ್ಲಿ ಇದನ್ನು ಬೇಟೆಯಾಡುತ್ತಾರೆ. ಹೀಗಾಗಿ ಇದರ ವಂಶ ಕ್ಷೀಣಿಸುತ್ತಿದೆ. ***

**ಕೆಂಬೂತ:** ಕ್ಯುಕಲಿಫಾರ್ಮಿಸ್ ಗಣ, ಕ್ಯುಕಲಿಡೆ ಕುಟುಂಬ ಹಾಗೂ ಸೆಂಟ್ರೋಪೊಡಿನೆ ಉಪಕುಟುಂಬಕ್ಕೆ ಸೇರಿದ ಹಕ್ಕಿ (ಕ್ರೋ ಫೆಸಂಟ್ ಅಥವಾ ಕೂಕಲ್). ಶಾಸ್ತ್ರೀಯ ನಾಮ ಸೆಂಟ್ರೋಪಸ್ ಸೈನೆನ್ಸಿಸ್. ಭಾರತ, ಸಿಂಹಳ, ಪಾಕಿಸ್ತಾನ ಮತ್ತು ಬರ್ಮಗಳ ಕುರುಚಲು ಕಾಡುಗಳಲ್ಲಿ, ಜನವಸತಿಯ ನೆರೆಯಲ್ಲಿರುವ ತೋಪುಗಳಲ್ಲಿ ವಾಸಿಸುತ್ತದೆ. ಸಾಂಬಾರ ಕಾಗೆ ಎಂದೂ ಹೆಸರಿದೆ. ಇದೇ ಜಾತಿಗೆ ಸೇರಿದ ಸೆಂಟ್ರೋಪಸ್ ಫಾಸಿಯೇನಸ್ ಮತ್ತು ಸೆಂಟ್ರೋಪಸ್ ಸೂಪರ್‌ಸಿಲಿಯೋಸಸ್ ಆಫ್ರಿಕ, ಆಸ್ಟ್ರೇಲಿಯ, ಮಡಗಾಸ್ಕರ್ ದ್ವೀಪಗಳಲ್ಲಿ ಕಾಣಬರುತ್ತವೆ. ಗಾತ್ರದಲ್ಲಿ ಕಾಗೆಗಿಂತ ಕೊಂಚ ದೊಡ್ಡದಾದ, ಒಡ್ಡೊಡ್ಡಾದ ಹಕ್ಕಿಯಿದು. ನುಣುಪಾಗಿಯೂ ಅಚ್ಚ ಕಪ್ಪಾಗಿಯೂ ಹೊಳೆಯುವ ದೇಹ, ಕೆಂಗೆಂದು ಬಣ್ಣದ ರೆಕ್ಕೆಗಳು, ಉದ್ದ ಹಾಗೂ ಅಗಲವಾದ ಕರಿಯ ಬಣ್ಣದ ಬಾಲ, ನಸುಬಾಗಿರುವ ಬಲಯುತವಾದ ಕೊಕ್ಕು, ಉದ್ದವಾದ ಚೂಪಾದ ನಖಗಳು ಇದರ ಮುಖ್ಯ ಲಕ್ಷಣಗಳು. ಈ ಹಕ್ಕಿ ಚೆನ್ನಾಗಿ ಹಾರಲಾರದು. ಸಾಮಾನ್ಯವಾಗಿ ಇದು ನೆಲದ ಮೇಲೆ, ಪೊದೆಗಳ ಸಂದಿಯಲ್ಲಿ ಕೊಂಚ ದೂರ ಹಾರುತ್ತ, ಕೊಂಚ ದೂರ ಕುಪ್ಪಳಿಸುತ್ತ ಸಾಗುತ್ತದೆ. ಕಂಬಳಿಹುಳು, ಕೀಟಗಳು, ಓತಿಗಳು, ಇಲಿಗಳು, ಹಕ್ಕಿಗಳ ಮೊಟ್ಟೆ ಹಾಗೂ ಮರಿಗಳು ಇದರ ಪ್ರಧಾನ ಆಹಾರ. ಕೆಂಬೂತ ನೆಲದ ಮೇಲೆ ಇಲ್ಲವೆ ಮುಳ್ಳುಕಂಟಿಯಲ್ಲಿ ದಟ್ಟ, ಒರಟೊರಟಾದ ಗೂಡು ಕಟ್ಟುತ್ತದೆ. ಮೆತ್ತಗಿರಲೆಂದು ಹಸಿರು ಎಲೆಗಳನ್ನು ಹರಡುತ್ತದೆ. ಗೂಡು ಕಟ್ಟುವ ಕಾಲ ಫೆಬ್ರವರಿಯಿಂದ ಸೆಪ್ಟೆಂಬರ್. ಮೊಟ್ಟೆಗಳ ಸಂಖ್ಯೆ 3–5. ಗಂಡು, ಹೆಣ್ಣು ಹಕ್ಕಿಗಳೆರಡೂ 20 ದಿನ ಕಾವು ಕೂತು ಮರಿಮಾಡುತ್ತವೆ. ಈ ಹಕ್ಕಿಯನ್ನು ಕಂಡರೆ ಸಿಹಿ ಊಟ ಸಿಗುತ್ತದೆಂದು ನಂಬಿಕೆ. (ಎಚ್.ಎ.ಆರ್.)

**ಕೆಮ್ಮೀನು:** ಆಂಗ್ಲಭಾಷೆಯಲ್ಲಿ ರೆಡ್‌ಫಿಷ್ ಎನ್ನುವರು. ಸಬಾಸ್ಟಿಸ್ ಮ್ಯಾರಿನಸ್ ಮತ್ತು ಎನ್‌ಗ್ರಾಲಿಸ್ ಕಮರ್‌ಸೋನಿಯಾನಸ್ ಎಂಬ ಎರಡು ಜಾತಿಗಳಿವೆ. ಸ. ಮ್ಯುರಿನಸ್ ಮೀನು ಉತ್ತರ ಅಟ್ಲಾಂಟಿಕ್ ಸಮುದ್ರದಲ್ಲಿ ೯೦–೨೦೦ ಮೀ ಆಳದ ಬಂಡೆಗಳ ಸಮೀಪ ವಾಸಿಸುತ್ತದೆ. ಇದರ ಉದ್ದ ೬೦ ಸೆಂಮೀ. ಕೆಲವೊಮ್ಮೆ ೯೦ ಸೆಂಮೀ ಉದ್ದಕ್ಕೂ ಬೆಳೆಯುತ್ತದೆ. ಇದರ ತೂಕ ೬ ಕಿಗ್ರಾಂ. ಈ ಮೀನು ಮೊಟ್ಟೆ ಇಡುವುದಿಲ್ಲ. ನೇರವಾಗಿ ಮರಿಗಳಿಗೆ ಜನ್ಮ ನೀಡುತ್ತದೆ. ಒಂದು ಮೀನು ಒಂದೇ ಸಲ ಇಪ್ಪತ್ತು ಸಾವಿರ ಮರಿಗಳಿಗೆ ಜೀವ ನೀಡುತ್ತದೆ. ಈ ಜಾತಿಯ ಮೀನುಗಳು ವಲಸೆ ಹೋಗುವುದಿಲ್ಲ. ಇದು ಒಳ್ಳೆಯ ಆಹಾರದ ಮೀನು.

ಎನ್‌ಗ್ರಾಲಿಸ್ ಕಮರ್‌ಸೋನಿಯಾನಸ್ ಕೆಮ್ಮೀನು ಭಾರತ ಹಾಗೂ ಮಲಯ ದೇಶಗಳ ಸಮುದ್ರಗಳಲ್ಲಿ ವಾಸಿಸುತ್ತದೆ. ಇದರ ಉದ್ದ ಸು. ೨೦ ಸೆಂಮೀ. ಇದು ಉತ್ತಮ ಆಹಾರವೆಂದು ಹೆಸರು ಪಡೆದಿದೆ. ಇದನ್ನು ಸಂಸ್ಕರಿಸಿ ಒಂದು ರೀತಿಯ ಮಸಾಲೆ ಮೀನನ್ನು ತಯಾರಿಸುತ್ತಾರೆ. ಮೊದಲಿಗೆ ಮೀನಿನ ತಲೆಯನ್ನು ತೆಗೆದು ದೇಹವನ್ನು ಶುಚಿಗೊಳಿಸುತ್ತಾರೆ. ಅನಂತರ ಮೀನಿಗೆ ಉಪ್ಪು ಬೆರೆಸಿ, ಮಣ್ಣಿನ ಪಾತ್ರೆಯಲ್ಲಿ ಹಾಕಿ, ಪಾತ್ರೆಯ ಮೇಲೆ ತೆಳುವಾದ ಹಲಗೆ ಅಥವಾ ಬಾಳೆ ಎಲೆ ಹಾಸಿ, ದೊಡ್ಡ ಕಲ್ಲುಗಳನ್ನು ಹೇರುತ್ತಾರೆ. ೩–೪ ದಿವಸಗಳ ನಂತರ ಮೀನನ್ನು ಉಪ್ಪಿನಿಂದ ಬೇರ್ಪಡಿಸಿ ಹೆಂಡದಿಂದ ಸಂತೃಪ್ತಗೊಳಿಸುತ್ತಾರೆ. ಆಮೇಲೆ ಅದಕ್ಕೆ ಶುಂಠಿ ಪುಡಿ, ಮೆಣಸು, ಬ್ರಾಂದಿ ಮತ್ತು ಕೆಂಪು ಅಕ್ಕಿ ಹಿಟ್ಟನ್ನು ಬೆರೆಸಿ ಮೂರು ದಿವಸಗಳ ತರುವಾಯ ಮತ್ತೊಂದಿಷ್ಟು ಹೆಂಡವನ್ನು ಸೇರಿಸಿ ಸೀಸೆಗಳೊಳಗೆ ತುಂಬುತ್ತಾರೆ. ನಾಲ್ಕು ಐದು ತಿಂಗಳುಗಳ ನಂತರ ಇದನ್ನು ಉಪಯೋಗಿಸುತ್ತಾರೆ. ಇದಕ್ಕೂ ಕೆಮ್ಮೀನೆಂದೇ ಹೆಸರು. ***

**ಕೆರಟೊಮೆಲಾಶಿಯ:** ಜಿಡ್ಡಿನಲ್ಲಿ ಕರಗುವ ಜೀವಸತ್ತ್ವ–ಎ ಯ ಕೊರತೆ ಆಹಾರದಲ್ಲಿದ್ದಾಗ ತಲೆದೋರುವ ವ್ಯಾಧಿ. ಪುಷ್ಟಿಕರ ಆಹಾರ ದೊರೆಯದ ಮಕ್ಕಳಲ್ಲಿ ಇದು ಸಾಮಾನ್ಯ. ಎಳೆಗೂಸುಗಳಲ್ಲಿ ನಿವಾರಿಸಬಹುದಾದ ಕುರುಡುತನಕ್ಕೆ, ಹೆಚ್ಚಾಗಿ ಹಳ್ಳಿಗಳಲ್ಲಿ, ಮುಖ್ಯಕಾರಣವಿದು. ಈ ವ್ಯಾಧಿಯ ಚಿಹ್ನೆಗಳು ಮುಖ್ಯವಾಗಿ ಹೊಟ್ಟೆ ಊದುವುದು, ರಕ್ತಹೀನತೆ, ಸುಲಭವಾಗಿ ನೆಗಡಿ, ಕೆಮ್ಮು ಬರುವಿಕೆ, ಶ್ವಾಸಕೋಶಗಳ ಉರಿತ, ಕಿವಿ ಸೋರಿಕೆ. ಅಲ್ಲದೆ ಹಲ್ಲು, ಮೂಳೆ, ಮೆಲ್ಲೆಲು ಬೆಳೆಯದೆ ಕೂಸು ಬಡಕಲಾಗಿರುವುದು. ಸಂಜೆ ಹೊತ್ತಿನಲ್ಲಿ ಕಣ್ಣು ಮಬ್ಬಾಗಿ ರಾತ್ರಿಕುರುಡೂ ಅತಿಸಾರವೂ ಕಂಡು ಬಂದಾಗ ತಂದೆತಾಯಿ ಇವನ್ನು ಹಲ್ಲುಬರುವುದಕ್ಕಾಗಿ ಎಂದು ಭಾವಿಸಿ ಅಷ್ಟಾಗಿ ಗಮನಿಸುವುದಿಲ್ಲ. ಕಣ್ಣುಗುಡ್ಡೆಯ ಮುಂದಿರುವ ಪಾರದರ್ಶಕ ಪಟಲ ಕಾರ್ನಿಯ ಮಸುಕುಮಸುಕಾದ ಮೇಲೆಯೇ ವೈದ್ಯರಲ್ಲಿಗೆ ಕೂಸನ್ನು ತರುವರು. ಆ ಹೊತ್ತಿಗೆ ಕೈಮೀರಿರುತ್ತದೆ. ಬಹುಪಾಲು ಕೂಸುಗಳು ಸತ್ತುಹೋಗುತ್ತವೆ. ಇದರ ಲಕ್ಷಣಗಳು ಕಾಣಿಸಿಕೊಳ್ಳುವುದು ಎಷ್ಟು ನಿಧಾನವೋ ಇದು ವಾಸಿಯಾಗುವುದು ಅಷ್ಟೇ ತಡ. ಕಣ್ಣಿನ ಕೂಡುಪೊರೆ (ಕಂಜಂಕ್ಟಿವ) ಕಣ್ಣೀರಿಲ್ಲದೆ ಒಣಗಿ ಒಣಗಣ್ಣಾಗುವುದು. ಕಾರ್ನಿಯಾದ ಪಕ್ಕಗಳಲ್ಲಿ ರೆಪ್ಪೆಯಂಚಿನ ಗ್ರಂಥಿಗಳಿಂದ ಬರುವ ಸುರಿತವೇ ಪಟ್ಟೆಚೂರಿನಂತೆ ಅಮಟಿಕೊಂಡು

ಸಾಬೂನಿನ ನೊರೆಯಂತೆ ಬಿಳುಪಾಗಿ ಕಾಣುವುದು. ಇದನ್ನು ಬಿಟಟ್‌ನ ಚುಕ್ಕೆಗಳೆನ್ನುವರು. ಬರುಬರುತ್ತ ಕಾರ್ನಿಯ ಒಣಗಿ, ಇದರಲ್ಲಿ ಅರವೇ ಇಲ್ಲದಂತಾಗಿ, ಕೆಲವೇ ಗಂಟೆಗಳಲ್ಲಿ ಕರಗಿ ಹುಣ್ಣಾಗುವ ಹೊತ್ತಿಗೆ ಪ್ರಾಣಕ್ಕೆ ಊನವಾಗಬಹುದು. ಕೂಸು ಅಪ್ಪಿತಪ್ಪಿ ಉಳಿದರೂ ಕಣ್ಣು ಪೂರಾ ಹಿಂತಿ ಕುರುಡಾಗಿ ದಟ್ಟ ಕಲೆಗಟ್ಟುತ್ತದೆ. ಶ್ವಾಸಕೋಶಗಳಿಗೆ ಸುಲಭವಾಗಿ ಸೋಂಕು ಹತ್ತಿ ಕೂಸು ಸಾಯುವುದು. ಸಾಕಾದಷ್ಟು ಹಾಲು, ಮೊಸರು, ಬೆಣ್ಣೆ, ಗಜ್ಜರಿ, ಹಸಿರು, ಹಳದಿ ಬಣ್ಣಗಳ ತರಕಾರಿಗಳು, ಅನಾನಸು, ನಿಂಬೆ, ಕಿತ್ತಳೆ ಹಣ್ಣುಗಳನ್ನು ಆಹಾರದೊಂದಿಗೆ ಸೇವಿಸುವುದರಿಂದ ಎ ಜೀವಸತ್ತ್ವದ ಕೊರೆಯನ್ನು ತಡೆಯಬಹುದು. ಇಲ್ಲವೇ ಷಾರ್ಕ್ ಮೀನೆಣ್ಣೆಯಲ್ಲಿ ಹೇರಳವಾಗಿರುವಂಥ ಎ ಜೀವಸತ್ತ್ವವನ್ನು ದಿನವೂ ಇಂಥ ರೋಗಿಗೆ 5,000, ಬಸುರಿಯರಿಗೆ 6,000, ಹಾಲೂಡಿಸುವವರಿಗೆ 8,000– ಹೀಗೆ ಅಂತರರಾಷ್ಟ್ರೀಯ ಏಕಮಾನಗಳಲ್ಲಿ ಕೊಡಬೇಕು. ಒಣಗಣ್ಣು ಸ್ವಲ್ಪ ಕಂಡಕೂಡಲೆ ತುರ್ತಿನ ಚಿಕಿತ್ಸೆ ಕೊಟ್ಟರೆ ಉಳಿಯುವ ಕೆಡುಕನ್ನು ತಪ್ಪಿಸಿ ಕೂಸನ್ನು ಉಳಿಸಬಹುದು.

***

**ಕೆರಾಟಿನ್‌ಗಳು:** ಸ್ಕ್ಲಿರೋಪ್ರೋಟೀನ್ ವರ್ಗಕ್ಕೆ ಸೇರಿದ ಕೆಲವು ವಿಶಿಷ್ಟ ಅದ್ರಾವ್ಯ ಸಸಾರಜನಕಗಳ ಗುಂಪು. ಪ್ರಾಣಿಗಳ ಚರ್ಮ, ಕೂದಲು, ಉಗುರು, ಗೊರಸು, ಪಂಜ ಮತ್ತು ಉಣ್ಣೆಯಲ್ಲಿ ಕೆರಾಟಿನ್‌ಗಳಿರುತ್ತವೆ. ಸಾಮಾನ್ಯವಾಗಿ ಸಸಾರಜನಕಗಳು ಲೀನವಾಗುವ ದ್ರವಗಳಲ್ಲಿ ಇವು ಕರಗುವುದಿಲ್ಲ. ಪೆಪ್ಸಿನ್ ಮತ್ತು ಟ್ರಿಪ್ಸಿನ್ ಕಿಣ್ವಗಳು ಕೆರಾಟಿನ್‌ಗಳೊಡನೆ ವರ್ತಿಸಲಾರವು. ಮೇಲ್ಕಂಡ ಯಾವುದಾದರೂ ಕೆರಾಟಿನ್‌ಯುಕ್ತ ವಸ್ತುವನ್ನು ಆಲ್ಕೊಹಾಲ್, ಈಥರ್ ಮತ್ತು ನೀರಿನಿಂದ ಸಂಸ್ಕರಿಸಿದಾಗ ಸಸಾರಜನಕಗಳು ಲಭಿಸುವುವು. ಇವನ್ನು ಕಿಣ್ವಗಳ ನೆರವಿನಿಂದ ಜಲವಿಶ್ಲೇಷಣೆಗೊಳಿಸಿದರೆ ಕೆರಾಟಿನ್ ಮಾತ್ರ ಉಳಿಯುವುದು. ಜಲವಿಶ್ಲೇಷಣೆಗೆ ಪ್ರಬಲ ಆಮ್ಲವನ್ನು ಬಳಸಿದರೆ ಗಂಧಕಯುಕ್ತ ಅಮೈನೋ ಆಮ್ಲವಾದ ಸಿಸ್ಟೈನ್ ಅಧಿಕ ಪ್ರಮಾಣದಲ್ಲಿ ದೊರೆಯುವುದು. ಅಂದರೆ ಕೆರಾಟಿನ್‌ಗಳ ಪ್ರಧಾನಾಂಶ ಸಿಸ್ಟೈನ್ ಎಂದಾಯಿತು. ಸೆರೈನ್, ಆರ್ಜಿನೈನ್, ಪ್ರೋಲೀನ್ ಮತ್ತು ಹೈಡ್ರಾಕ್ಸಿ ಪ್ರೋಲೀನ್ ಮುಂತಾದ ಅಮೈನೊ ಆಮ್ಲಗಳೂ ಇರುವುದುಂಟು.

ಭೌತಲಕ್ಷಣಗಳು, ಅಂಗಾಂಶ ಮತ್ತು ರಾಸಾಯನಿಕ ರಚನೆಗಳನ್ನು ಅವಲಂಬಿಸಿ ಗಡುಸು ಮತ್ತು ಮೆದು ಕೆರಾಟಿನ್‌ಗಳೆಂದು ಎರಡು ಸ್ಥೂಲ ವರ್ಗಗಳಾಗಿ ವಿಂಗಡಿಸಲಾಗಿದೆ. ಪ್ರಾಣಿಗಳ ಚರ್ಮದ ಹೊರಪೊರೆ ಮೆದು ಕೆರಾಟಿನ್‌ಗೂ ಕೊಂಬು, ಉಗುರು, ಗೊರಸು ಇತ್ಯಾದಿಗಳು ಗಡಸು ಕೆರಾಟಿನ್‌ಗೂ ಉದಾಹರಣೆಗಳು. ಮೆದು ಕೆರಾಟಿನ್‌ನಲ್ಲಿ ಸಿಸ್ಟೈನ್ ಪ್ರಮಾಣ ಕಡಿಮೆ; ಮೆಥಯೊನೈನ್ ಪ್ರಮಾಣ ಹೆಚ್ಚು. ಪೋಷಣೆಗೆ ಅಗತ್ಯ ಎನಿಸಿಕೊಂಡಿರುವ ಅಮೈನೋ ಆಮ್ಲಗಳಾದ ಹಿಸ್ಟಿಡಿನ್, ಮೆಥಯೊನೈನ್ ಮತ್ತು ಟ್ರಿಪ್ಟೊಫ್ಯಾನ್‌ಗಳು ಅಲ್ಪಪ್ರಮಾಣಗಳಲ್ಲಿ ಇರುವುದು ಗಡಸು ಕೆರಾಟಿನ್‌ಗಳ ವೈಶಿಷ್ಟ್ಯ.

ಕೆರಾಟಿನ್‌ಗಳ ರಚನಾ ವಿನ್ಯಾಸವನ್ನು ಕುರಿತು ಆಸ್ಟಬರಿ ಎಂಬಾತ ವಿಶೇಷ ಅಧ್ಯಯನ ನಡೆಸಿದ್ದಾನೆ. ಎಕ್ಸ್ ಮತ್ತು ಅತಿರಕ್ತ ಕಿರಣಗಳನ್ನು ಬಳಸಿ ಪರೀಕ್ಷಿಸಿದಾಗ ಕೆರಾಟಿನ್‌ಗಳಲ್ಲಿ ಆಲ್ಫ ಮತ್ತು ಬೀಟ ರೂಪಗಳಿರುವುದು ವ್ಯಕ್ತವಾಗಿದೆ. ಬೀಟ ಕೆರಾಟಿನ್‌ನಲ್ಲಿ ನೇರ ಸರಣಿ (ಸ್ಟ್ರೇಟ್ ಚೇನ್) ರಚನೆಯೂ ಆಲ್ಫರೂಪದಲ್ಲಿ ನಿರಿಗೆ (ಫೋಲ್ಡೆಡ್) ವಿನ್ಯಾಸವೂ ಇರುವುವೆಂದು ಗೊತ್ತಾಗಿದೆ.

ಹಬೆಯ ವರ್ತನೆಯಿಂದ ಆಲ್ಫ ಕೆರಾಟಿನ್ ಬೀಟರೂಪಕ್ಕೆ ಪರಿವರ್ತಿತವಾಗುವುದು. ಕೆರಾಟಿನ್‌ಗಳು ಅದ್ರಾವ್ಯ ವಸ್ತುಗಳಷ್ಟೆ. ಸಿಸ್ಟೈನ್ ಅಮೈನೋ ಆಮ್ಲದ ಅಣುಗಳು ಗಂಧಕದ ಪರಮಾಣುಗಳ ಮೂಲಕ ಹಾಸುಹೊಕ್ಕಾಗಿ ಹೆಣೆದುಕೊಂಡಿರುವುದೇ ಹೀಗಾಗಲು ಕಾರಣ. ಉತ್ಕರ್ಷಣ, ಅಪಕರ್ಷಣ ಅಥವಾ ಜಲವಿಶ್ಲೇಷಣೆ ಮೊದಲಾದ ಕ್ರಿಯೆಗಳಿಗೆ ಗುರಿಪಡಿಸಿದಾಗ ಈ ಜಟಿಲ ರಚನೆ ಶಿಥಿಲವಾಗುವುದು. ಲಭ್ಯವಸ್ತುಗಳು ಯೂರಿಯದ ಪ್ರಬಲ ದ್ರಾವಣ, ಅಮೋನಿಯ ದ್ರಾವಣ ಮತ್ತು ಆನ್‌ಅಯಾನಿಕ್ ಮಾರ್ಜಕಗಳ ದ್ರಾವಣಗಳಲ್ಲಿ ಸರಾಗವಾಗಿ ಲೀನವಾಗುವುವು.

***

**ಕೆರಾಬಿಡೆ:** ಕೀಟವರ್ಗದ ಕೋಲಿಯಾಪ್ಟರ ಗಣದಲ್ಲಿರುವ ಕುಟುಂಬ. ಈ ಕುಟುಂಬದಲ್ಲಿ ಕೆಲವು ಬಗೆಯ ಜೀರುಂಡೆಗಳಿವೆ. ಇವುಗಳನ್ನು ನೆಲಜೀರುಂಡೆಗಳೆನ್ನುತ್ತಾರೆ. ಇವು ನಿಶಾಚರಿಗಳು. ಹಗಲಿನಲ್ಲಿ ಮರದ ಪೊಟರೆ ಅಥವಾ ನೆಲದಲ್ಲಿ ನಿರ್ಮಿಸಿಕೊಂಡ ಬಿಲದಲ್ಲಿ ಅವಿತುಕೊಂಡಿರುತ್ತವೆ. ಕಾಲುಗಳ ಮುಂಭಾಗದಲ್ಲಿ (ಟಾರ್ಸಿ) ಕೀಲುಗಳಿವೆ. ದಾರದಂಥ ಕುಡಿಮೀಸೆಗಳಿವೆ. ಬಹಳ ಕ್ಷೀಣಗೊಂಡ ಒಂದು ಜೊತೆ ರೆಕ್ಕೆಗಳು ಮತ್ತು ದೃಢವಾದ ಕವಚದಂತೆ ಮಾರ್ಪಟ್ಟಿರುವ ಎರಡನೆಯ ಜೊತೆ ರೆಕ್ಕೆಗಳು (ಎಲಿಟ್ರ) ಇವೆ. ಈ ಕೀಟಗಳು ಹೊಳೆವ ಕಪ್ಪು ಅಥವಾ ಕಂದು ಬಣ್ಣ ಹೊಂದಿವೆ. ಕೆಲವು ಹಸಿರು ಮತ್ತು ನೀಲಿ ಬಣ್ಣದವು. ಇತರ ಬಗೆಯ ಕೀಟಗಳನ್ನು ತಿಂದು ಜೀವಿಸುವ ಈ ಜೀರುಂಡೆಗಳು ಕೃಷಿ ಭೂಮಿಯಲ್ಲಿ ಪಿಡುಗುಗಳಾದ ಹಲವು ಪ್ರಭೇದದ ಕೀಟಗಳನ್ನು ತಿಂದು ಮಾನವನಿಗೆ ಉಪಕಾರಿಗಳಾಗಿವೆ. ನೆಲದಲ್ಲಿ ವಾಸಿಸುವ ಜೀರುಂಡೆ ಕ್ಯಾಲಸೋಮ ಸ್ಕ್ರುಟೇಟರ್ ಸುಂದರವಾಗಿದೆ. ಇದಕ್ಕೆ ಸರ್ಚರ್ ಎಂಬ ಹೆಸರಿದೆ. ಇದರ ದೇಹ ಕವಚದ ಬಣ್ಣ ಹಸಿರು. ಅದರ ಅಂಚು ಕೆಂಪಗಿರುತ್ತದೆ. ದೇಹದ ಉಳಿದ ಭಾಗ ಬಂಗಾರ, ನೀಲಿ ಅಥವಾ ತಾಮ್ರದಂತಿದೆ. ಇನ್ನೊಂದು ನೆಲದಲ್ಲಿ ವಾಸಿಸುವ ಜೀರುಂಡೆ ಕ್ಯಾಲಸೋಮ ಸಯಕೊಫ್ಯಾಂಟ ಯೂರೋಪಿನಲ್ಲಿ ವಾಸಿಸುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಕೃಷಿಭೂಮಿಯಲ್ಲಿ ಪಿಡುಗುಗಳಾದ ಜಿಪ್ಸಿ ಪತಂಗಗಳು ಮತ್ತು ಕಂದು ಬಾಲದ ಪತಂಗಗಳನ್ನು ನಾಶಮಾಡುವುದಕ್ಕೆ ಇದನ್ನು ಯೂರೋಪಿನಿಂದ ಅಮೆರಿಕಕ್ಕೆ ತರಲಾಯಿತು. ಹಾರ್ಪಾಲಸ್ ಕ್ಯಾಲಜಿನೋಸಸ್ ಮತ್ತು ಪಾಯಿಸಿಲಸ್ ಲ್ಯೂಕೊಬ್ಲಾಂಡಸ್‌ಗಳು ಸಂಯುಕ್ತ ಸಂಸ್ಥಾನದಲ್ಲಿ ವಾಸಿಸುವ ಇತರ ನೆಲಜೀರುಂಡೆಗಳು. ಭಾರತದಲ್ಲಿ ಅಂತಿಯ ಸೆಕ್ಸ್‌ಗಟೇಟ ಮತ್ತು ಫೀರಾಪ್ಸೋಫಸ್ ಹಿಲೇರಿಸ್ ಎಂಬ ನೆಲಜೀರುಂಡೆಗಳಿವೆ. ಇವುಗಳಲ್ಲಿ ಫಿರಾಪ್ಸೋಫಸ್ ಹಿಲೇರಿಸ್ ನೆಲದ ಬಿರುಕುಗಳಲ್ಲಿ ವಾಸಿಸುತ್ತದೆ. ಇದರ ದೇಹದ ಬಣ್ಣ ಕಪ್ಪು. ಅಲ್ಲಲ್ಲೆ ಹಳದಿ ಪಟ್ಟೆಗಳಿವೆ. ಇದು ಸಹ ಮಾನವನಿಗೆ ಉಪಕಾರಿಯಾಗಿದೆ. (ಜಿ.ಎಸ್.ಆರ್.)

**ಕೆರೊಟಿನಾಯ್ಡಗಳು:** ಕ್ಯಾರಟ್‌ನಲ್ಲಿ ಪ್ರಥಮವಾಗಿ ಕಂಡದ್ದರಿಂದ ಕೆರೊಟೀನ್ ಎಂಬ ಹೆಸರು ಪಡೆದ ಮೂರು ವರ್ಣದ್ರವ್ಯಗಳಿಗೆ ($\alpha$–, $\beta$–ಮತ್ತು $\psi$ ಕೆರೊಟೀನ್) ನಿಕಟ ರಾಸಾಯನಿಕ ಸಂಬಂಧವಿರುವ ವರ್ಣದ್ರವ್ಯಗಳ ವರ್ಗ. ಇವು ಮೇದಸ್ಸಿನಲ್ಲಿ ದ್ರಾವ್ಯ. ಕೆರೊಟಿನಾಯ್ಡುಗಳು ಸಸ್ಯಗಳಲ್ಲಿಯೂ ಪ್ರಾಣಿಗಳಲ್ಲಿಯೂ ವ್ಯಾಪಕವಾಗಿ ಹರಡಿವೆ. ಇವು ಅಸ್ಥಿರ ವಸ್ತುಗಳು. ಇವನ್ನು ಸುಲಭವಾಗಿ ಉತ್ಕರ್ಷಣೆಗೊಳಿಸಬಹುದು. ತಿಳಿ ಅರಿಸಿನ, ಅರಿಸಿನ, ಕಿತ್ತಳೆ ಅರಿಸಿನ, ಕೆಂಪು ಮತ್ತು ಊದಾ ಬಣ್ಣಗಳಲ್ಲಿ ಇವು ದೊರೆಯುತ್ತವೆ.

ಪ್ರಕೃತಿಸಹಜವಾಗಿ ದೊರೆಯುವ ವರ್ಣಸಮುದಾಯದಲ್ಲಿ ಕೆರೊಟಿನಾಯ್ಡಗಳು ವ್ಯಾಪಕವಾಗಿ ಹರಡಿವೆ. ಜೀವರಸಾಯನ ವಿಜ್ಞಾನದ ಆಧುನಿಕ ವಿಧಾನಗಳಾದ ಕ್ರೊಮಟಾಗ್ರಫಿ, ಸ್ಪೆಕ್ಟ್ರೊಫೋಟೋಮಿಟ್ರಿ ಮತ್ತು ಟ್ರೇಸರ್ ತಂತ್ರಗಳ ಉಪಯೋಗದಿಂದ ಕೆರೊಟಿನಾಯ್ಡಗಳ ಅಧ್ಯಯನದಲ್ಲಿ ಸಾಕಷ್ಟು ಪ್ರಗತಿಯನ್ನು ಗಳಿಸಲಾಗಿದೆ. ಕೆರೊಟಿನಾಯ್ಡಗಳ ದೊರೆಯುವಿಕೆ, ವಿತರಣೆ ಮತ್ತು ಗುರುತಿಸುವಿಕೆಯ ಬಗ್ಗೆ ಸಾಕಷ್ಟು ಜ್ಞಾನ ನಮಗೆ ತಿಳಿದಿದ್ದರೂ ಅವು ರೂಪಗೊಳ್ಳುವ ರೀತಿ ಮತ್ತು ಅವುಗಳ ಪಾತ್ರದ ಬಗ್ಗೆ ನಾವು ತಿಳಿದಿರುವುದು ಅತ್ಯಲ್ಪ.

ಸಸ್ಯವರ್ಗಗಳಲ್ಲಿ ಮಾತ್ರ ಕೆರೊಟಿನಾಯ್ಡಗಳು ಸಂಯೋಜಿಸಲ್ಪಡುವುವು. ಪ್ರಾಣಿಗಳು ಇವನ್ನು ತಮ್ಮ ಆಹಾರದ ಮೂಲಕ ಸೇವಿಸಿ ಅನಂತರ ನಾನಾ ರೀತಿಗಳಲ್ಲಿ ಶೇಖರಿಸಿಡುತ್ತವೆ. ಇವನ್ನು ದೇಹ ಆಯ್ದೋ ಆಯದೆಯೋ ಸ್ವೀಕರಿಸಬಹುದು. ದೇಹದ ಬೇರೆ ಬೇರೆ ಅಂಗಗಳಲ್ಲಿ ಕೆರೊಟಿನಾಯ್ಡಗಳನ್ನು ಸಂಗ್ರಹಿಸಿ ಇಡುವ ಮೊದಲು ಅವು ಉತ್ಕರ್ಷಣೆಗೆ ಒಳಗಾಗಿ ಮಾರ್ಪಾಡುಗೊಳ್ಳಬಹುದು. ನಿರ್ದಿಷ್ಟ ರಚನೆಗಳಿರುವ ಕೆಲವು ಕೆರೊಟಿನಾಯ್ಡಗಳು ವಿಟಮಿನ್ ಎ ಆಗಿ ಪರಿವರ್ತನೆ ಹೊಂದಬಹುದು. ಈ ವಿಟಮಿನ್ ರಾತ್ರಿಕುರುಡುತನವನ್ನು ತಡೆಗಟ್ಟುತ್ತದೆ. ಸ್ತನಿ, ಪಕ್ಷಿ ಮತ್ತು ಮೀನುಗಳಿಗೆ ಕೆಲವು ಕೆರೊಟಿನಾಯ್ಡಗಳನ್ನು ವಿಟಮಿನ್ ಎ ಆಗಿ ಮಾರ್ಪಡಿಸುವ ವಿಶೇಷ ಸಾಮರ್ಥ್ಯ ಉಂಟು.

ಕೆರೊಟಿನಾಯ್ಡಗಳನ್ನು ವಿಟಮಿನ್ ಎ ಆಗಿ ಪರಿವರ್ತಿಸುವಲ್ಲಿ ಪ್ರಾಣಿಯ ಕರುಳಿನಲ್ಲಿರುವ ಕಿಣ್ವಗಳ ಪಾತ್ರ ಅತಿಮುಖ್ಯ. ಆಡುಗಳಲ್ಲಿಯೂ ಎಮ್ಮೆಗಳಲ್ಲಿಯೂ ಇರುವ ಮೇದಸ್ಸಿನ ಅಂಗಾಂಶಗಳಲ್ಲಿ ಕೆರೊಟಿನಾಯ್ಡಗಳಿರುವುದಿಲ್ಲ. ಇದರ ಕಾರಣ ಆ ಪ್ರಾಣಿಗಳ ಕರುಳುಗಳಲ್ಲಿರುವ ಕಿಣ್ವ ವ್ಯವಸ್ಥೆಗಳ ದಕ್ಷತೆ–ಒಂದಿಷ್ಟು ವರ್ಣದ್ರವ್ಯವೂ ರಕ್ತಕ್ಕೆ ಸಾಗದಂತೆ ಅವು ತಡೆ ಹಾಕಿರುತ್ತವೆ. ಆದರೆ ಮನುಷ್ಯ ಮತ್ತು ಹಸುವಿನಲ್ಲಿ ಹೀಗಲ್ಲ. ಈ ಪರಿವರ್ತನಕಾರಿಗಳು ದುರ್ಬಲವಾಗಿರುವುದರಿಂದ ವರ್ಣದ್ರವ್ಯಗಳು ರಕ್ತವನ್ನು ಸೇರುತ್ತವೆ. ಆದ್ದರಿಂದ ಮನುಷ್ಯ ಮತ್ತು ಹಸುವಿನ ಹಾಲು ತಿಳಿ ಹಳದಿಯಾಗಿದೆ. ಆಡು, ಎಮ್ಮೆಯದು ಸ್ವಚ್ಛ ಬಿಳಿ.

ಮೊಟ್ಟೆಗಳಲ್ಲಿ ಕ್ಸ್ಯಾಂತೋಫಿಲ್ ಎಂಬ ಉತ್ಕರ್ಷಣ ರೂಪದ ಕೆರೊಟಿನ್ ಹೇರಳವಾಗಿ ಉಂಟು. ಸಸ್ಯಗಳಲ್ಲಿನ ದ್ಯುತಿಸಂಶ್ಲೇಷಣೆ (ಫೋಟೋಸಿಂಥೆಸಿಸ್) ಮತ್ತು ದ್ಯುತಿ ಆಕರ್ಷಣ (ಫೋಟೋಟ್ರಾಪಿಸಂ) ಕಾರ್ಯಗಳು ಬಹುಶಃ ಕೆರೊಟಿನಾಯ್ಡಗಳಿಂದ ರೂಪಗೊಳ್ಳುವುವು. ಅಧಿಕ ಪ್ರಮಾಣದಲ್ಲಿ ವಿಟಮಿನ್ ಎ ಆಗಿ ಮಾರ್ಪಾಡಾಗುವ ಅತಿ ಮುಖ್ಯ ಕೆರೊಟಿನಾಯ್ಡ ಎನಿಸಿಕೊಂಡ ಬೀಟ ಕೆರೊಟೀನ್ ಗುಲ್‌ಮೊಹರ್ ಮರದ ಹೂ, ಮಾವು, ಪರಂಗಿ ಮತ್ತು ಇತರ ಹಣ್ಣುಗಳಲ್ಲಿ ಯಥೇಚ್ಛವಾಗಿ ಅಡಗಿದೆ ಎಂದು ಈಚಿನ ಅಧ್ಯಯನಗಳು ತೋರಿಸಿಕೊಟ್ಟಿವೆ.

ಕರುಳಿನಲ್ಲಿ ಕೇವಲ ಅಲ್ಪ ಪ್ರಮಾಣದಲ್ಲಿ ಕೆರೊಟಿನಾಯ್ಡಗಳು ವಿಲೀನಗೊಳ್ಳುವುವು ಎಂಬ ವಿಷಯ ತಿಳಿದಿರುವುದು ಮುಖ್ಯ. ಅದರಂತೆ ಮಕ್ಕಳಲ್ಲಿ, ಯುವಕರಲ್ಲಿ ದೃಷ್ಟಿದೋಷ ಕಾಯಿಲೆ ಬರದಂತೆ ತಡೆಯುವುದಕ್ಕೆ ಅಗತ್ಯ ಪ್ರಮಾಣದಲ್ಲಿ ವಿಟಮಿನ್ ದೊರಕಲು

ಗಣನೀಯವಾಗಿ ಹಣ್ಣುಗಳು, ತರಕಾರಿ, ಮೊಟ್ಟೆ, ಹಾಲು, ಹಾಲಿನ ಪದಾರ್ಥಗಳು ಮತ್ತು ಮೀನಿನ ಎಣ್ಣೆ ಮುಂತಾದವನ್ನು ಸೇವಿಸುವುದು ವಿಹಿತ. (ಎಚ್.ಆರ್.ಸಿ.)

**ಕೆಸರು ಮೀನು:** ಹೋಲೋಸ್ಪಿಯೈ ಅದಿಗಣದ ಏಮಿಡೆ ಕುಟುಂಬಕ್ಕೆ ಸೇರಿದ ಅಸ್ಥಿಮೀನು. ಏಮಿಯ ಕಾಲ್ವ ಇದರ ವೈಜ್ಞಾನಿಕ ನಾಮ. ಉತ್ತರ ಅಮೆರಿಕದ ಒಳನಾಡಿನ ಜಲಾಶಯಗಳಲ್ಲಿ ವಾಸಿಸುತ್ತದೆ. ಇದರ ಉದ್ದ ೬೦ ರಿಂದ ೯೦ ಸೆಂಮೀ ಮತ್ತು ತೂಕ ೩.೫ ಕಿಗ್ರಾಂ. ನೀಳವಾದ ಬೆನ್ನಿನ ರೆಕ್ಕೆ ಮತ್ತು ಬಾಲದ ರೆಕ್ಕೆಯ ಮೇಲ್ಭಾಗದಲ್ಲಿರುವ ಕಪ್ಪು ಮಚ್ಚೆಯಿಂದ ಈ ಮೀನನ್ನು ಗುರುತಿಸುತ್ತಾರೆ. ಗೂಡು ಕಟ್ಟಿ, ಮೊಟ್ಟೆ ಮತ್ತು ಮರಿಗಳನ್ನು ಪಾಲಿಸುವುದು ಗಂಡು ಮೀನಿನ ಕೆಲಸ. ಫುಪ್ಫುಸ ಮೀನನ್ನು (ಲಂಗ್‌ಫಿಶ್) ಮತ್ತು ಅಂಬ್ರಿಡೆ ಕುಟುಂಬದ ಮೀನುಗಳನ್ನು ಕೆಸರು ಮೀನುಗಳೆಂದು ಕರೆಯುವರು. ***

**ಕೆಳತಿ ಮೀನು:** ಇದು ಬಾಗ್ರಿಡೆ ಕುಟುಂಬದ ಸದಸ್ಯ. ಭಾರತ, ಪಾಕಿಸ್ತಾನ, ಬರ್ಮ, ಶ್ರೀಲಂಕ, ಸಯಾಂ ಮತ್ತು ಥೈಲ್ಯಾಂಡ್ ದೇಶಗಳ ನಿಂತಿರುವ ಹಾಗೂ ಹರಿಯುವ ಸಿಹಿನೀರಿನಲ್ಲಿ ವಾಸಿಸುವ ಮೀನು. ಇದರ ವೈಜ್ಞಾನಿಕ ಹೆಸರು ಮಿಸ್ಟಸ್ ಅಥವಾ ಮ್ಯಾಕ್ರೊನಸ್ ವಿಟೇಟಸ್. ಸಣ್ಣ ಗಾತ್ರದ ಮೀನಿನ ಉದ್ದ ೧೮ ರಿಂದ ೨೦ ಸೆಂಮೀ. ತಲೆಯ ಮೇಲೆ ಕಣ್ಣಿನ ಹಿಂಭಾಗದಿಂದ ದೇಹದ ಮಧ್ಯಭಾಗದವರೆಗೂ ಉದ್ದ ಗೆರೆಯಿದೆ. ತಲೆಯ ಹಿಂಭಾಗದಲ್ಲಿ ಉದ್ದವಾದ ಹಾಗೂ ಒರಟಾದ ರಚನೆಯಿದೆ. ಈ ರಚನೆ ಬೆನ್ನ ಕೆಳಗಿನ ಮೂಳೆಯಿಂದ ಚಿಕ್ಕ ಅಂತರದಿಂದ ಬೇರ್ಪಟ್ಟಿದೆ. ಕೆಳತಿ ಮೀನಿನ ಬಾಯಿ ಸುತ್ತ ಎಂಟು ಸ್ಪರ್ಶಾಂಗಗಳಿವೆ. ಇವುಗಳನ್ನು ಬಾರ್ಬೆಲ್ಸ್ ಎನ್ನುವರು. ಮೇಲು ದವಡೆಯ ಸ್ಪರ್ಶಾಂಗಗಳು ಹಿಂದಕ್ಕೆ ಬಾಗಿದಾಗ ನಡುವಿನ ಈಜುರೆಕ್ಕೆಗಳವರೆಗೂ ವಿಸ್ತೃತವಾಗಿವೆ. ಕೆಳತಿ ಮೀನಿನ ಸಂತಾನೋತ್ಪತ್ತಿ ಕಾರ್ಯ ಮಳೆಗಾಲ (ಜೂನ್–ಸೆಪ್ಟೆಂಬರ್)ದಲ್ಲಿ ಆಗುತ್ತದೆ.

ಕೆಳತಿ ಮೀನಿನ ದೇಹದ ಬಣ್ಣ ನವುರಾದ ಬೂದಿ ಮಿಶ್ರಿತ ಬಿಳಿಯ ಬಣ್ಣದಿಂದ ಹೊಳೆಯುವ ಚಿನ್ನದ ಬಣ್ಣದಂತಿದೆ. ತಿಳಿ ನೀಲಿ ಅಥವಾ ಕಡು ಕಂದು ಬಣ್ಣದಿಂದ ಅತಿ ಕಪ್ಪಗಿರುವ ಉದ್ದನೆಯ ಪಟ್ಟೆಗಳಿವೆ. ಈ ಪಟ್ಟೆಗಳ ಸಂಖ್ಯೆ ಮೀನುಗಳ ಆರೋಗ್ಯಸ್ಥಿತಿ ಮತ್ತು ಮೀನುಗಳು ವಾಸಿಸುವ ಸ್ಥಳಗಳಿಗನುಗುಣವಾಗಿ ಮಾರ್ಪಟ್ಟಿದೆ. ಜಲವಾಸಿ ಕ್ರಿಮಿಕೀಟಗಳು ಕೆಳತಿ ಮೀನಿನ ಆಹಾರ. ***

**ಕೆಳದವಡೆ:** ಬಾಯಿಯನ್ನು ತೆರೆದು ಮತ್ತೆ ಮುಚ್ಚುವಾಗ ಆಡುವ ಮೂಳೆಯ ರಚನೆ. ಮನುಷ್ಯೇತರ ಕಶೇರುಕ ಪ್ರಾಣಿಗಳಲ್ಲಿ ಮುಸುಡಿ ಚಾಚಿಕೊಂಡಿರುವುದರಿಂದ ಕೆಳದವಡೆ ಮೂಳೆಯು (ಹನ್ವಸ್ಥಿ, ಮ್ಯಾಂಡಿಬಲ್) ಉದ್ದವಾಗಿದೆ. ಇದು ಆಕಾರದಲ್ಲಿ ಹೆಚ್ಚು ಕಡಿಮೆ ಕುದುರೆ ಲಾಳವನ್ನು ಹೋಲುತ್ತದೆ. ಮನುಷ್ಯರಲ್ಲಿ ಚಾಚುಮೂತಿ ಇಲ್ಲದಿರುವುದರಿಂದ ಕೆಳದವಡೆ ಮೂಳೆ ಉದ್ದವಾಗಿಲ್ಲ. ಆದರೆ, ಅದರ ಅಗಲ ಹೆಚ್ಚಿದ್ದು ಮಾತನಾಡುವಾಗ ಅದರ ಮಧ್ಯೆ ನಾಲಿಗೆ ಆಡಲು ಹೆಚ್ಚು ಅವಕಾಶವುಂಟು.

ದವಡೆಯ ಕೀಲು ಮೇಲ್ದವಡೆಯ ಹಿಂದೆ, ಮಿದುಳು ಬುರುಡೆಯ ಕೆಳಗೆ, ಕಿವಿಯ ಮುಂದೆ ಇದೆ. ಈ ಕೀಲು ಒಂದೇ ಅಕ್ಷದ ಮೇಲೆ ತಿರುಗುವುದಿಲ್ಲ. ಇದರಲ್ಲಿ ಹನ್ವಸ್ಥಿಯ ತಲೆಯಂತಿರುವ ಗಂಟು ಹಿಂದಕ್ಕೆ ಮುಂದಕ್ಕೆ ಆಡುವುದನ್ನು ಬಾಯಾಡಿಸುವಾಗ ಕಿವಿಯ ಮುಂದೆ ಮುಟ್ಟಿ ತಿಳಿಯಬಹುದು. ಈ ಗಂಟು ಮುಂದಕ್ಕೆ ಸರಿದಾಗ ಹನ್ವಸ್ಥಿ ಸ್ವಲ್ಪ ಕೆಳಕ್ಕೆ ತಗ್ಗುವುದು. ತೆರೆದ ಬಾಯಿ ಹೆಚ್ಚು ಅಗಲವಾಗಲು ಈ ಏರ್ಪಾಡು ಸಹಾಯಕಾರಿ. ಹನ್ವಸ್ಥಿ ತಗ್ಗಿದಾಗ ಒಮ್ಮೊಮ್ಮೆ ದವಡೆ ಕೀಲು ತಪ್ಪಬಹುದು.

ಮಾಂಸಾಹಾರಿ ಪ್ರಾಣಿಗಳಲ್ಲಿ ಕೆಳದವಡೆ ಅಕ್ಕಪಕ್ಕಕ್ಕೆ ಆಡದೆ ಕೀಲು ಒಂದೇ ಅಕ್ಷದ ಮೇಲೆ ತಿರುಗುತ್ತದೆ. ಸಸ್ಯಾಹಾರಿಗಳಲ್ಲಿ ಇದು ಅಕ್ಕಪಕ್ಕಕ್ಕೆ ಆಡುತ್ತದೆ. ಮಾನವ, ಮರ್ಕಟೇತ್ಯಾದಿಗಳಲ್ಲಿ ಇವೆರಡೂ ವಿಧಗಳು ಕೂಡಿರುವ ದವಡೆ ಕೀಲು ಉಂಟು. ಮನುಷ್ಯ ಕೆಳದವಡೆಯನ್ನು ಮುಂಚಾಚಬಲ್ಲ. ಹನ್ವಸ್ಥಿಯ ತಲೆಯ ಮುಂದೆ ಒಂದು ಮೊನಚು ಶಿಖರದಂತಿರುವ ಭಾಗಕ್ಕೆ ದವಡೆ ಸ್ನಾಯುಗಳಲ್ಲಿ ಅತಿಬಲವಾದ ಟೆಂಪೋರಾಲಿಸ್ ಎಂಬುದರ ಸ್ನಾಯು ಬಂಧನವಿದೆ. ಪ್ರೌಢಾವಸ್ಥೆ ದಾಟಿದವರಲ್ಲಿ ಇದರ ಮುಂದೆ 16 ಹಲ್ಲುಗಳಿರುತ್ತವೆ. 5 ವರ್ಷದ ಮಗುವಿನಲ್ಲಿ 10 ಹಲ್ಲುಗಳಿರುತ್ತವೆ. ಇತರ ಪ್ರಾಣಿಗಳಲ್ಲಿ ಹಲ್ಲುಗಳ ಸಂಖ್ಯೆ ಬೇರೆ ಬೇರೆ. ಮನುಷ್ಯನಲ್ಲಿ ಕೋರೆಗಳಿಲ್ಲ ಮತ್ತು ಹಲ್ಲು ತುದಿಗಳೆಲ್ಲಾ ಒಂದೇ ಮಟ್ಟದಲ್ಲಿವೆ. ಲಕ್ಷಾಂತರ ವರ್ಷಗಳ ಹಿಂದೆ ಆದಿಮಾನವ ಬೇಟೆಗಾರನಾಗಿದ್ದು ಕೆಲವು ಸಾವಿರ ವರ್ಷಗಳಿಂದೀಚೆಗೆ ತನ್ನ ಬುದ್ಧಿಶಕ್ತಿಯಿಂದ ಬೇಸಾಯ, ಅಡಿಗೆಗಳನ್ನು ಕಲಿತು ಅವನ ಆಹಾರ ಮೃದುವಾದಂತೆ ಅವನ ದವಡೆಗಳು ಸಣ್ಣವಾಗುತ್ತಾ ಬಂದು ಹನುಮನ ಮೂತಿ ಇಲ್ಲದಂತಾಗಿದೆ; ಮತ್ತು ಆದಿಮಾನವನಲ್ಲಿದ್ದಂತೆ ಹಲ್ಲುಗಳು ಸಮವಾಗಿ ಬಲವಾಗಿ ಇಲ್ಲದೆ ಕಾಲಕ್ರಮೇಣ ವಕ್ರವಾಗುತ್ತಾ ಬಂದಿವೆ. ಹನ್ವಸ್ಥಿಯ ಹಲ್ಲು ಭಾಗ ಮಿಕ್ಕ ಭಾಗಕ್ಕಿಂತ ಹೆಚ್ಚು ಸಣ್ಣದಾಗಿರುವುದರಿಂದ ಮುಂದಿನ ಹಲ್ಲುಗಳು ಗಡ್ಡದ ಭಾಗಕ್ಕಿಂತ ಹಿಂದಿವೆ. ಹೀಗೆ ಮುಂಚಾಚಿರುವ ಗಡ್ಡದ ಭಾಗ ಮನುಷ್ಯೇತರ ಪ್ರಾಣಿಗಳಲ್ಲಿಲ್ಲ. ಗಡ್ಡ ಮುಂದಕ್ಕಿರುವುದು ಮಾನವನ ಬುದ್ಧಿಸೂಚಕ ಎಂದು ಹೇಳುತ್ತಾರೆ.

ಕೆಳದವಡೆಯನ್ನು ಮೇಲಕ್ಕೆತ್ತಲು ಟೆಂಪೋರಾಲಿಸ್, ಮ್ಯಾಸಿಟರ್, ಒಳಟೆರಿಗಾಯಿಡ್ ಸ್ನಾಯುಜೊತೆಗಳಿವೆ. ಬಾಯಿಯನ್ನು ತೆರೆಯಲಿರುವ ಸ್ನಾಯುಗಳು ಇಷ್ಟು ಬಲವಾಗಿಲ್ಲ;. ಇವುಗಳಲ್ಲಿ ಹೊರಟೆರಿಗಾಯಿಡ್ ಸ್ನಾಯುಜೊತೆ ಬಲವಾದುದು. ಹನ್ವಸ್ಥಿಯ ಹೊರಗೆ ಚರ್ಮ ಮತ್ತು ಮುಖದ ಕೆಲವು ಸ್ನಾಯುಗಳು ಅಂಟಿಕೊಂಡಿವೆ. ಒಳಗೆ, ಬಾಯಿಯ ಲೋಳೆಪೊರೆ ಮತ್ತು ನಾಲಿಗೆಯ ಕೆಲವು ಸ್ನಾಯುಗಳು ಅಂಟಿಕೊಂಡಿವೆ. ಹಲ್ಲುಗಳು ಬುಡಗಳ ಪಕ್ಕಗಳಲ್ಲಿ, ಒಸಡುಗಳಲ್ಲಿ ಗಟ್ಟಿಯಾಗಿ ಅಂಟಿಕೊಂಡಿವೆ.

ಗರ್ಭಾವಸ್ಥೆಯಲ್ಲಿ ಕೆಳದವಡೆಯ ಬಲ, ಎಡ ಭಾಗಗಳು ಪ್ರತ್ಯೇಕ ಬೆಳೆದು ಗಡ್ಡದಲ್ಲಿ ಕೂಡಿಕೊಳ್ಳುತ್ತವೆ. ಹೀಗೆ ಕೂಡದಿದ್ದರೆ ಹುಟ್ಟಿದ ಮಗುವಿನಲ್ಲಿ ಸೀಳುಗಡ್ಡ ಅಥವಾ ಸೀಳುದವಡೆಯಿರುವುದು. ಸೀಳುಗಡ್ಡವಿಲ್ಲದಾಗಲೂ ಕೂಸಿಗೆ 2 ವರ್ಷ ವಯಸ್ಸಾಗುವವರೆಗೂ ಹನ್ವಸ್ಥಿಯ ಎಡ, ಬಲ ಭಾಗಗಳು ಗಡ್ಡದಲ್ಲಿ ಮೃದ್ವಸ್ಥಿಯಿಂದ ಬಂಧಿತವಾಗಿರುತ್ತವೆ. ಆಮೇಲೆ ಮೃದ್ವಸ್ಥಿ ಎಲುಬಾಗುವುದರಿಂದ ಹನ್ವಸ್ಥಿ ಒಂದೇ ಮೂಳೆಯಾಗುತ್ತದೆ. ಕೆಳದವಡೆ ಬೆಳೆಯದಿದ್ದರೆ ಹುಟ್ಟಿದ ಕೂಸಿನ ಕತ್ತಿನಲ್ಲಿ ಕಿವಿಗಳು ಅಕ್ಕಪಕ್ಕದಲ್ಲಿರುತ್ತವೆ; ಈ ಸ್ಥಿತಿ ಅತಿ ವಿರಳ. ***

**ಕೇಂದ್ರೀಯ ಆಡು ಸಂಶೋಧನಾ ಸಂಸ್ಥೆ:** ಆಡು, ಕುರಿಗಳ ಬಗ್ಗೆ ಸಮಗ್ರವಾಗಿ ಸಂಶೋಧನೆ ನಡೆಸುತ್ತಿರುವ ರಾಷ್ಟ್ರೀಯ ಸಂಸ್ಥೆ. ಉತ್ತರ ಪ್ರದೇಶದ ಮಥುರಾದಲ್ಲಿದೆ. 1975 ರಲ್ಲಿ ಉತ್ತರ ಪ್ರದೇಶದ ಪಶುಸಂಗೋಪನಾ ವಿಭಾಗ ಹಾಗೂ ಬರೇಲಿಯ ಭಾರತೀಯ ಪಶು ವಿಜ್ಞಾನ ಸಂಶೋಧನಾ ಕೇಂದ್ರದ ಅಡಿಯಲ್ಲಿ ಪ್ರಾರಂಭವಾದ ಹೋರಿ ಅಭಿವೃದ್ಧಿ ಕೇಂದ್ರವನ್ನು 1979 ರ ಜುಲೈ 12 ರಂದು ರಾಷ್ಟ್ರೀಯ ಆಡು ಸಂಶೋಧನಾ ಕೇಂದ್ರವೆಂದು ಘೋಷಿಸಲಾಯಿತು. 1981 ರಲ್ಲಿ ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಈ ಕೇಂದ್ರವನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡು ಕೇಂದ್ರೀಯ ಆಡು ಸಂಶೋಧನಾ ಸಂಸ್ಥೆ ಎಂದು ಹೆಸರಿಸಿತು.

ಸಂಸ್ಥೆಯ ಧ್ಯೇಯೋದ್ದೇಶಗಳು :

1) ಆಡುಗಳನ್ನು ಅಭಿವೃದ್ಧಿ ಪಡಿಸಲು ಅವಶ್ಯಕವಿರುವ ಮೂಲಭೂತ ಹಾಗೂ ಅನ್ವಯಿಕ ಸಂಶೋಧನೆಗಳನ್ನು ಕೈಗೊಳ್ಳುವುದು

2) ಆಡುಗಳ ಮೇವು, ನಿರ್ವಹಣೆ, ಸಂತಾನಾಭಿವೃದ್ಧಿ ಹಾಗೂ ಸಾಮಾನ್ಯ ಆರೋಗ್ಯ ಕುರಿತಂತೆ ನಿರ್ದಿಷ್ಟ ವಿಧಿ ವಿಧಾನಗಳನ್ನು ಅಭಿವೃದ್ಧಿ ಪಡಿಸುವುದು.

3) ಆಡುಗಳನ್ನು ಕುರಿತಂತೆ ವಿಶೇಷ ಅಧ್ಯಯನ ಹಾಗೂ ಸಂಶೋಧನೆಗಳಿಗೆ ತರಬೇತಿ ನೀಡುವುದು.

4) ಆಡು ಮಾಂಸ, ಹಾಲು ಹಾಗೂ ತುಪ್ಪಳದ ಉತ್ಪಾದನೆಗೆ ಸಂಬಂಧಿಸಿದಂತೆ ತಂತ್ರಜ್ಞಾನ ಕಂಡುಹಿಡಿದು ಅದರ ವರ್ಗಾವಣೆಗೆ ಕಾರ್ಯಕ್ರಮಗಳನ್ನು ರೂಪಿಸುವುದು.

5) ಉಪಯುಕ್ತವಲ್ಲದ ಭೂಮಿಯನ್ನು ಆಡಿಗಾಗಿ ಮೇವು ಬೆಳೆಯುವ ಪ್ರದೇಶವನ್ನಾಗಿ ಪರಿವರ್ತಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಸಂಸ್ಥೆಯಲ್ಲಿ ನಡೆಯುತ್ತಿರುವ ಅಧ್ಯಯನಗಳು:

1) ತಳಿ ವಿಜ್ಞಾನ ಹಾಗು ತಳಿ ಅಭಿವೃದ್ಧಿ ವಿಭಾಗ: ಭಾರತೀಯ ಆಡು ತಳಿಗಳ ಸಂಶೋಧನೆ, ಅಧ್ಯಯನ, ಜಮುನಾಪುರಿ ಆಡುಗಳ ಹಾಲು ಉತ್ಪಾದನೆಯಲ್ಲಿ ಹೆಚ್ಚಳ, ಬಾರ್‌ಬರಿ ಆಡುಗಳನ್ನು ಮಾಂಸಕ್ಕೆ ಅಭಿವೃದ್ಧಿ ಪಡಿಸಿರುವುದು, ತಳಿ ವಿಜ್ಞಾನ ಅಧ್ಯಯನಕ್ಕಾಗಿ ತಳಿ ವಸ್ತುವಿನ ಶೇಖರಣೆ.

2) ಕ್ರಿಯಾವಿಜ್ಞಾನ, ಸಂತಾನಾಭಿವೃದ್ಧಿ ಹಾಗೂ ವಸತಿ ಪ್ರದೇಶದ ನಿರ್ವಹಣೆ: ವಿವಿಧ ವಾತಾವರಣದಲ್ಲಿ ಆಡು ತಳಿಗಳ ಸಂತಾನಾಭಿವೃದ್ಧಿ, ಸಾಮಾನ್ಯ ಆರೋಗ್ಯ ಹಾಗು ಅವುಗಳ ಕೊಟ್ಟಿಗೆಯ ವೈಜ್ಞಾನಿಕ ನಿರ್ವಹಣೆ ಕುರಿತು ಸಂಶೋಧನೆಗಳು.

3) ಆಡು ಆರೋಗ್ಯ: ಆಡುಗಳಿಗೆ ಬರುವ ರೋಗಗಳ ವಿರುದ್ಧ ಲಸಿಕೆಯ ಅಭಿವೃದ್ಧಿ, ಔಷಧ ತಯಾರಿಕೆ, ಪರಾವಲಂಬಿಗಳ ನಿವಾರಣೆ ಹಾಗು ರೋಗ ನಿರೋಧಕ ಗುಣ ಹೊಂದಿರುವ ಮೇವು ಅಭಿವೃದ್ಧಿ

4) ಆಹಾರ ಹಾಗೂ ಉತ್ಪಾದನಾ ತಂತ್ರಜ್ಞಾನ: ಪಶು ಸಂಗೋಪನಾ ಅಭಿವೃದ್ಧಿಗಾಗಿ ಉತ್ಕೃಷ್ಟ ಮೇವನ್ನು ಗುರುತಿಸುವಿಕೆ, ಅಪೇಕ್ಷಿತ ಲವಣಾಂಶದ ಸೇರ್ಪಡೆ, ಸಣ್ಣ ಪ್ರಮಾಣದ ಆಡು ಸಾಕಣೆದಾರರಿಗೆ ಲಾಭದಾಯಕ ಆಡು ಮೇವಿನ ಅಭಿವೃದ್ಧಿ ಹಾಗೂ ಹಾಲು, ಮಾಂಸ ಮತ್ತು ತುಪ್ಪಳದ ಪ್ರಮಾಣವನ್ನು ಹೆಚ್ಚಿಸುವ ಸಂಶೋಧನೆಗಳು.

5) ಹೆಚ್ಚಿನ ಶಿಕ್ಷಣ, ಸಾಮಾಜಿಕ ಮತ್ತು ಆರ್ಥಿಕ ವಿಷಯಾಭಿವೃದ್ಧಿ: ಗ್ರಾಮಾಂತರ ಪ್ರದೇಶದಲ್ಲಿ ಸಮನ್ವಯ ಸಂಶೋಧನೆ ಹಾಗು ಇದರಿಂದ ಸುಧಾರಿತ ಆಡು ತಳಿಗಳ ಅಭಿವೃದ್ಧಿ, ದೇಶೀಯ ಪಶು ಸಂಗೋಪನಾ ವಿಧಾನಗಳನ್ನು ಪ್ರೋತ್ಸಾಹಿಸುವುದು., ಭಾರತದಲ್ಲಿ ಆಡು ತಳಿಗಳ ಅಭಿವೃದ್ಧಿಗಾಗಿ ಹೆಚ್ಚಿನ ಗಮನ ಕೊಡುವುದು.

6) ಆಡಿನೊಂದಿಗೆ ಕುರಿ ಅಭಿವೃದ್ಧಿಯ ಜಾಲ ನಿರ್ಮಿಸುವುದು. (ಎಸ್.ಎಂ.ಜಿ.)

**ಕೇಂದ್ರೀಯ ಆಹಾರ ಸಂಶೋಧನಾಲಯ:** ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿಎಫ್‌ಟಿಆರ್‌ಐ): ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಮಂಡಲಿಯ ಅಂಗವಾಗಿ ೧೯೫೦ರ ಅಕ್ಟೋಬರಿನಲ್ಲಿ ಮೈಸೂರು ನಗರದ ರಾಜಕುಮಾರಿ ಚೆಲುವಾಂಬಾ ಅರಮನೆಯಲ್ಲಿ ಆಹಾರ ರಂಗಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ಕೈಗೊಳ್ಳಲು ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಉತ್ಪಾದನೆಯ ಹಂತದಿಂದ ಸೇವಿಸುವವರೆಗಿನ ವಿವಿಧ ಮಟ್ಟಗಳಲ್ಲಿ ಆಹಾರವನ್ನು ಸಂರಕ್ಷಿಸಿ, ಲಾಭದಾಯಕವಾಗಿ ಬಳಸುವ ವಿಧಾನಗಳ ಬಗ್ಗೆ ಸಂಶೋಧನೆ ನಡೆಸಿ, ರಾಷ್ಟ್ರದ ಆಹಾರ, ಸಮಸ್ಯೆಗೆ ಪರಿಹಾರ ದೊರಕಿಸುವ ಕಾರ್ಯದಲ್ಲಿ ಗಣನೀಯ ಸೇವೆ ಸಲ್ಲಿಸುತ್ತ ಬಂದಿರುವ ಈ ಸಂಸ್ಥೆ ಚಿನ್ನದ ಹಬ್ಬವನ್ನು ಆಚರಿಸಿದೆ.

ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆ, ಎಣ್ಣೆ ಹಿಂಡಿಯಿಂದ ಪೌಷ್ಟಿಕಾಂಶಗಳ ತಯಾರಿಕೆ, ಸದ್ಯದಲ್ಲಿ ಬಳಕೆಯಲ್ಲಿರುವ ಆಹಾರ ಸಾಮಗ್ರಿಗಳಿಂದ ನೂತನ ಆಹಾರ ವಸ್ತುಗಳನ್ನು ತಯಾರಿಸಿ ಬಳಸುವ ವಿಧಾನಗಳ ಸಂಶೋಧನೆ, ಆಹಾರ ತಯಾರಿಕೆಯ ಉದ್ಯಮಗಳಿಗೆ ತಾಂತ್ರಿಕ ನೆರವು ನೀಡುವುದು, ಆಹಾರೋದ್ಯಮದ ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರ, ಆಹಾರ ಸಿದ್ಧವಸ್ತುಗಳ ಗುಣನಿಯಂತ್ರಣ ಮಾಡುವುದು ಇವೇ ಮುಂತಾದ ಕ್ಷೇತ್ರಗಳಲ್ಲಿ ಇದು ಸಲ್ಲಿಸಿರುವ ಸೇವೆಯ ಫಲವಾಗಿ ರಾಷ್ಟ್ರದ ಆಹಾರ ಕ್ಷೇತ್ರದ ಅನೇಕ ಜಟಿಲ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ.

ಆಹಾರ ವಸ್ತುಗಳ ಸಂರಕ್ಷಣೆ : ಭಾರತದಲ್ಲಿ ಕೀಟಾದಿಗಳ ಕಾಟದಿಂದಲೂ ಸಂಗ್ರಹಣೆಯ ನ್ಯೂನತೆಗಳಿಂದಲೂ ಗಣನೀಯ ಪ್ರಮಾಣದಲ್ಲಿ ಆಹಾರ ನಷ್ಟವಾಗುತ್ತಿದೆ. ಇದನ್ನು ತಪ್ಪಿಸಿ ರಾಷ್ಟ್ರದ ಆಹಾರ ಸಮಸ್ಯೆಯ ಸಂಕಟವನ್ನು ಪರಿಹರಿಸಲು ಈ ಸಂಸ್ಥೆ ಕೀಟನಿಯಂತ್ರಣಕ್ಕೂ ಆಹಾರ ಸಂಗ್ರಹಣಕ್ಕೂ ಪರಿಣಾಮಕಾರಿ ವಿಧಾನಗಳನ್ನು ಕಂಡುಹಿಡಿದು ಪ್ರಚಾರಕ್ಕೆ ತಂದಿದೆ. ದೊಡ್ಡ ಪ್ರಮಾಣದಲ್ಲಿ ಉಗ್ರಾಣಗಳಲ್ಲಿ ಆಹಾರವನ್ನು ಸಂಗ್ರಹಿಸಿ ರಕ್ಷಿಸಿಡಲು ನೆರವಾಗುವಂತೆ ಇದು ಸಂಶೋಧಿಸಿರುವ ಪ್ರಧೂಪನ (ಹೊಗೆಯಾಡಿಸುವ) ವಿಧಾನ ತುಂಬ ಪರಿಣಾಮಕಾರಿಯೆನಿಸಿದೆ. ಗೃಹಬಳಕೆಗಾಗಿ ಸಣ್ಣ ಪ್ರಮಾಣದಲ್ಲಿ ರಕ್ಷಿಸಿಡಲು ನೆರವಾಗುವಂತೆ ಅಲ್ಪ ಬೆಲೆಯ ಪ್ರಧೂಪನ ಗುಳಿಗೆಗಳನ್ನು ತಯಾರಿಸಿದೆ. ಒಂದು ಗುಳಿಗೆಯಿಂದ ಒಂದು ಮೂಟೆ ಧಾನ್ಯ ಅಥವಾ ಬಿತ್ತನೆಯ ಬೀಜವನ್ನು ಸಂಸ್ಕರಿಸಿ, ಸಂರಕ್ಷಿಸಿ ಇಡಬಹುದು. ಕೀಟನಾಶಕವಾಗಿ ಇದು ತಯಾರಿಸಿರುವ ಲಿಂಡೇನ್ ಎಂಬ ರಾಸಾಯನಿಕ ವಸ್ತು ಈಗ ಎಲ್ಲೆಲ್ಲೂ ಬಳಕೆಗೆ ಬರುತ್ತಿದೆ. ಇದರ ತಯಾರಿಕೆಯಲ್ಲಿ ದೊರಕಿರುವ ಎಕ್ಸ್‌ಫ್ಯಾಕ್ಟರ್ ಎಂಬ ಉಪ-ಉತ್ಪನ್ನ ಗೆದ್ದಲು ಮುಂತಾದ ಕೀಟನಾಶಕ್ಕೆ ಪರಿಣಾಮಕಾರಿಯೆನಿಸಿದೆ. ತಮಿಳುನಾಡಿನ ಹಾಗೂ ಗುಜರಾತಿನ ಸಂಸ್ಥೆಗಳು ಲಿಂಡೇನನ್ನು ತಯಾರಿಸಿ ಮಾರಾಟಕ್ಕೆ ಒದಗಿಸುತ್ತಿವೆ. ಗಿರಣಿಗಳಲ್ಲಿ ಅಕ್ಕಿ ತಯಾರಿಕೆಯಲ್ಲಿ ಆಗುವ ನಷ್ಟವನ್ನು ತಪ್ಪಿಸಲು ಹೊಸತಂತ್ರವನ್ನು ರೂಪಿಸಿದೆ. ಕುಸುಬಲು ಅಕ್ಕಿ ಮಾಡಲು ನಾಲ್ಕೈದು ದಿನಗಳ ತನಕ ಹಬೆಗೊಡ್ಡುವ ಬದಲು ಕೇವಲ ಕೆಲವೇ ಗಂಟೆಗಳಲ್ಲಿ ಈ ಕಾರ್ಯ ಸಾಧಿಸುವ ನೂತನ ವಿಧಾನವನ್ನು ಅನುಷ್ಠಾನಕ್ಕೆ ತಂದಿದೆ. ಹೊಸ ಅಕ್ಕಿಯನ್ನು ಬಳಸಿದಾಗ ಉಂಟಾಗುವ ಕೆಲವು ತೊಂದರೆಗಳನ್ನು ತಪ್ಪಿಸಿ ಹಬೆಯಾಡಿಸಿ ಹಳೆಯ ಅಕ್ಕಿಯ ಗುಣಧರ್ಮಗಳನ್ನು ಹೊಂದಿರುವಂತೆ ಮಾಡುವ ವಿಧಾನವನ್ನು ಕಂಡುಹಿಡಿದು ಗ್ರಾಹಕರಿಗೆ ಉಪಕಾರ ಮಾಡಿದೆ.

ಅಕ್ಕಿತೌಡಿನಿಂದ ಖಾದ್ಯತೈಲ : ಭಾರತದಲ್ಲಿ ಬತ್ತದ ತೌಡು ಅಧಿಕ ಪ್ರಮಾಣದಲ್ಲಿ ಲಭ್ಯವಾಗುತ್ತದೆ. ಅದರ ಬಹುಭಾಗ ಇಂಧನದ ರೂಪದಲ್ಲಿ ವ್ಯಯವಾಗುತ್ತಿತ್ತು. ಆದರೆ ಅದರಲ್ಲಿ ಪುಷ್ಟಿಕರವಾದ ಖಾದ್ಯತೈಲ ಅಡಗಿದೆ. ಈ ಸಂಸ್ಥೆ ಅದರಿಂದ ಎಣ್ಣೆಯನ್ನು ತೆಗೆಯುವ ವಿಧಾನವನ್ನು ಕಂಡುಹಿಡಿದಿದೆ. ಈಚೆಗೆ ತೌಡಿನಿಂದ ಎಣ್ಣೆಯನ್ನು ಹಿಂಡುವ ಕಾರ್ಖಾನೆಗಳನ್ನು ಸ್ಥಾಪಿಸಲು ನೆರವು ನೀಡಿ ವ್ಯರ್ಥವಾಗುತ್ತಿದ್ದ ಲಕ್ಷಾಂತರ ಟನ್ ತೌಡು ಉಪಯುಕ್ತ ಆಹಾರವಾಗಲು ಸಹಾಯಮಾಡಿದೆ.

ತರಕಾರಿ, ಹಣ್ಣು ಮುಂತಾದುವುಗಳ ಸಂಸ್ಕರಣ : ಭಾರತದಲ್ಲಿ ವಿವಿಧ ತರಕಾರಿಗಳು ಹೇರಳವಾಗಿ ಬೆಳೆದರೂ ಕೆಲವೇ ದಿನಗಳಲ್ಲಿ ಕೆಟ್ಟುಹೋಗುತ್ತವೆ. ಒಂದು ನಿರ್ದಿಷ್ಟ ಕಾಲದಲ್ಲಿ ದೊರೆಯುವ ತರಕಾರಿಯನ್ನು ದೀರ್ಘಕಾಲ ಇಟ್ಟು ಬಳಸಲು ಅನುಕೂಲವಾಗುವಂತೆ ನೂತನ ಸಂಸ್ಕರಣ ವಿಧಾನಗಳನ್ನು ಈ ಸಂಸ್ಥೆ ರೂಪಿಸಿದೆ. ಹಾಗೆಯೇ ದೇಶದಲ್ಲಿ ಅನೇಕ ಜಾತಿಯ ಖಾದ್ಯ ಹಣ್ಣು ಹಂಪಲುಗಳು ವರ್ಷದ ವಿವಿಧ ಕಾಲದಲ್ಲಿ ದೊರಕುತ್ತವೆ. ಹಿಂದೆ ಅವನ್ನೆಲ್ಲ ಅದೇ ಕಾಲದಲ್ಲಿ ಉಪಯೋಗಿಸಬೇಕಾಗಿತ್ತು. ಈಚೆಗೆ ಅವನ್ನು ಹಲವಾರು ತಿಂಗಳು ರಕ್ಷಿಸಿಡುವ ವಿಧಾನಗಳನ್ನು ಕಂಡುಹಿಡಿದು ಅದಕ್ಕಾಗಿ ಭಾರಿ ಕಾರ್ಖಾನೆಗಳನ್ನು ಸ್ಥಾಪಿಸಲು ನೆರವು ನೀಡಿದೆ. ಬಾಳೆಹಣ್ಣು ಬೇಕಾದ ಹಾಗೆ ದೇಶದಲ್ಲಿ ಬೆಳೆದರೂ ರಫ್ತು ಮಾಡಲು ಬರುತ್ತಿರಲಿಲ್ಲ. ಸಂಶೋಧನಾಲಯ ಅದಕ್ಕೆ ಬೂಷ್ಟು ಹಿಡಿದು ಕೆಡದಂಥ ರೀತಿಯಲ್ಲಿ ಸಂರಕ್ಷಿಸಿ ರಫ್ತುಮಾಡಲು ನೆರವಾಗುವಂಥ ಬೂಷ್ಟು ನಿರೋಧಕಗಳನ್ನೂ ತಯಾರಿಸಿದೆ. ಜೊತೆಗೆ ಮಾಗುವಿಕೆಯನ್ನು ನಿಧಾನಗೊಳಿಸುವ ಸಂರಕ್ಷಣಾ ಕ್ರಮಗಳು, ಪ್ಯಾಕೇಜುಗಳನ್ನು ಅಭಿವೃದ್ಧಿಪಡಿಸಿ ಶೀಘ್ರವಾಗಿ ಹಣ್ಣಾಗುವ ಬಾಳೆ, ಮಾವು ಮುಂತಾದ ಫಲಗಳನ್ನು ಹಡಗಿನ ಮೂಲಕ ಸಾಗಿಸುವ ತಂತ್ರವನ್ನು ನಿರ್ಮಿಸಿದೆ. ಅದರಿಂದ ಈಗ ಬಾಳೆಹಣ್ಣು, ಮಾವಿನಹಣ್ಣುಗಳು ಅನ್ಯದೇಶಗಳಿಗೆ ರಫ್ತಾಗುತ್ತಿದ್ದು ವಿದೇಶೀ ವಿನಿಮಯ ಗಳಿಸುತ್ತಿದೆ. ಕೆಲವು ಹಣ್ಣುಗಳಿಂದ ಪಾನೀಯಗಳನ್ನೂ ಪುಡಿಮಿಠಾಯಿಯನ್ನೂ ತಯಾರಿಸುವ ವಿಧಾನವನ್ನು ಕಾರ್ಖಾನೆಗಳಿಗೆ ರೂಪಿಸಿಕೊಟ್ಟಿದೆ. ಪಪಾಯಿ ಹಣ್ಣಿನಿಂದ ಪೆಕ್ಟಿನ್ ಮತ್ತು ಪಪಾಯಿನ್ ಎಂಬ ವಸ್ತುಗಳನ್ನೂ ನಿಂಬೆಹಣ್ಣಿನಿಂದ ಪೆಕ್ಟಿನ, ನಿಂಬೆಎಣ್ಣೆ, ಕ್ಯಾಲ್ಸಿಯಂ ಸಿಟ್ರೇಟ್ ಮುಂತಾದ ಉಪಯುಕ್ತ ಆಹಾರಾಂಶಗಳನ್ನು ತಯಾರಿಸಿದೆ. ಅದನ್ನು ಮಹಾರಾಷ್ಟ್ರದ ಕಾರ್ಖಾನೆ ಇಂದು ದೊಡ್ಡ ಪ್ರಮಾಣದಲ್ಲಿ ತಯಾರಿಸಿ ಮಾರುಕಟ್ಟೆಗೆ ತಂದಿದೆ. ಅದು ಕಂಡುಹಿಡಿದ ಹುಣಿಸೆಹಣ್ಣಿನ ರಸವೂ ಈಗ ಮಾರಾಟಕ್ಕೆ ಬಂದಿದೆ.

ಭಾರತದಲ್ಲಿ ಬೆಳೆಯುವ ಹಲವಾರು ಸಂಬಾರ ಪದಾರ್ಥಗಳಿಗೆ ಅನ್ಯದೇಶಗಳಲ್ಲಿ ಹೆಚ್ಚಿನ ಬೇಡಿಕೆಯಿದ್ದರೂ ಅಲ್ಲಿನವರ ರುಚಿಗೊಪ್ಪುವಂತೆ ಸಂಸ್ಕರಿಸುವ ವಿಧಾನ ಪ್ರಚಾರದಲ್ಲಿರಲಿಲ್ಲ. ಆಹಾರ ಸಂಶೋಧನಾಲಯ ಆ ಕ್ಷೇತ್ರದಲ್ಲೂ ಸಂಶೋಧನೆ ನಡೆಸಿದೆ. ಕಪ್ಪುಮೆಣಸಿನ ಸಿಪ್ಪೆಯನ್ನು ತೆಗೆದು ಸ್ವಚ್ಛ ಬಿಳಿಮೆಣಸು ಮಾಡುವ ಯಂತ್ರವನ್ನೂ ಹಸಿರು ಮೆಣಸನ್ನು ನಿರ್ದ್ರವಗೊಳಿಸುವ ವಿಧಾನವನ್ನೂ ಕಂಡುಹಿಡಿದಿದೆ. ಕೆಲವು ಸಂಬಾರ ವಸ್ತುಗಳ ಎಣ್ಣೆಯನ್ನು ತಯಾರಿಸುವ ವಿಧಾನವನ್ನೂ ಕಂಡುಹಿಡಿದಿದೆ. ಇದರಿಂದ ಮೇಲೆ ಸಂಸ್ಕರಿಸಿದ ಸಂಬಾರ ವಸ್ತುಗಳ ರಫ್ತು ಹೆಚ್ಚಿ ವಿದೇಶೀ ವಿನಿಮಯ ಲಭ್ಯವಾಗುತ್ತಿದೆ.

ಮಾಂಸಾಹಾರದ ಕ್ಷೇತ್ರದಲ್ಲಿ : ಮಾಂಸಾಹಾರಕ್ಕೆ ಸಂಬಂಧಿಸಿದಂತೆಯೂ ಸಂಸ್ಥೆ ಹಲವು ಮೌಲಿಕ ಸಂಶೋಧನೆಗಳನ್ನು ನಡೆಸಿದೆ. ಮಾಂಸ ಮತ್ತು ಮೊಟ್ಟೆ ಹೆಚ್ಚು ಕಾಲ ಕೆಡದಂತೆ ರಕ್ಷಿಸಿಡುವ ವಿಧಾನವನ್ನು ರೂಪಿಸಿರುವುದರ ಜೊತೆಗೆ ಮಾಂಸ, ತರಕಾರಿ, ಸಂಬಾರವಸ್ತು-ಇವುಗಳ ಸಂಯೋಜನೆಯಿಂದ ಬಹು ರುಚಿಕರವಾದ ಆಹಾರವಸ್ತುಗಳನ್ನು ತಯಾರಿಸಿದೆ. ಕೋಳಿಮೊಟ್ಟೆಯಿಂದ ಶೀಘ್ರ(ದಿಢೀರ್) ಬಳಕೆಗೆ ಬರುವ ಒಂದು ರೀತಿಯ ಪುಡಿಯನ್ನು ತಯಾರಿಸಿದೆ.

ಸಸಾರಜನಕಾದಿ ಪುಷ್ಟಿಕರವಾದ ಆಹಾರ : ದ್ವಿದಳಧಾನ್ಯಗಳು ಹಾಗೂ ಕೆಲವು ಎಣ್ಣೆಬೀಜಗಳು ಪ್ರಮುಖ ಪುಷ್ಟಿದಾಯಕ ಆಹಾರ ವಸ್ತುಗಳು. ಆಹಾರ ಸಂಶೋಧನಾಲಯ ದ್ವಿದಳ ಧಾನ್ಯಗಳನ್ನು ಒಡೆದು ಒಪ್ಪವಾಗಿ ಬೇಳೆಮಾಡುವ ನೂತನ ಯಂತ್ರಗಳನ್ನು ತಯಾರಿಸಿದೆ. ಕೆಲವು ಅನುಪಯುಕ್ತ ಎಣ್ಣೆಬೀಜಗಳಿಂದ ಪುಷ್ಟಿಕರವಾದ ಆಹಾರವಸ್ತುಗಳನ್ನು ತಯಾರಿಸಿದೆ. ಹೀಗೆ ತಯಾರಿಸಿದ ಆಹಾರ ಕರ್ನಾಟಕದಾದ್ಯಂತ ಮಕ್ಕಳಿಗೆ ಪೌಷ್ಟಿಕ ಆಹಾರಾಂಶ ಕಾರ್ಯಕ್ರಮದಲ್ಲಿ ಬಳಕೆಯಾಗುತ್ತಿದೆ. ಗೋದಿಹಿಟ್ಟು, ಕಡಲೆಹಿಟ್ಟು, ಕಡಲೆಕಾಯಿಹಿಟ್ಟು ಮತ್ತು ಬೆಲ್ಲ ಇವುಗಳಿಂದ ತಯಾರಿಸಿದ ಬಹುರುಚಿಕರವಾದ ತಿಂಡಿ ಆ ಕಾರ್ಯಕ್ರಮದಲ್ಲಿ ಬಳಕೆಯಲ್ಲಿದೆ. ಈ ಸಂಸ್ಥೆ ತಯಾರಿಸಿರುವ ವಿವಿಧೋದ್ದೇಶ ಆಹಾರ ಈಗಾಗಲೆ ವಾಣಿಜ್ಯ ವಸ್ತುವಾಗಿ ಬಳಕೆಗೆ ಬಂದಿದೆ. ಮೈಸೂರಿನಲ್ಲೂ ಉತ್ತರ ಪ್ರದೇಶದ ಕೋಟ ದ್ವಾರದಲ್ಲೂ ಅದನ್ನು ತಯಾರಿಸುವ ಕಾರ್ಖಾನೆಗಳು ಆರಂಭವಾಗಿವೆ. ಗುಜರಾತಿನ ಆನಂದ್‌ನಲ್ಲಿ ತಯಾರಾಗುತ್ತಿರುವ ಅಮೂಲ್ ಸ್ಪ್ರೇ ಮತ್ತು ಅಮೂಲ್ ಆಹಾರ ವಸ್ತುಗಳು ಎಳೆಯಮಕ್ಕಳಿಗೂ ಬೆಳೆದ ಐದು ವರ್ಷದ ವಯಸ್ಸಿನ ಮಕ್ಕಳಿಗೂ ಉಪಯುಕ್ತ ಆಹಾರವಾಗಿದ್ದು ದೇಶಾದ್ಯಂತ ಪ್ರಚಾರದಲ್ಲಿದೆ. ಇದನ್ನು ಕಂಡುಹಿಡಿದು ಆ ಸಂಸ್ಥೆಯನ್ನು ಸ್ಥಾಪಿಸಲು ಈ ಸಂಶೋಧನಾಲಯ ಮುಖ್ಯ ಪಾತ್ರವಹಿಸಿತ್ತು. ಕಡಲೆಕಾಯಿ ಹಿಂಡಿಯಿಂದ ಪ್ರೋಟೀನ್ ತಯಾರಿಸುವ ವಿಧಾನವನ್ನು ಈ ಸಂಸ್ಥೆ ಕಂಡುಹಿಡಿದಿದೆ. ಅದರಿಂದ ತಯಾರಾಗುವ ಮಿಲ್ಟೋನ್ ಎಂಬ ಪೇಯ ಈ ಸಂಸ್ಥೆಗೆ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿಕೊಟ್ಟಿದೆ. ಇದು ಕಂಡುಹಿಡಿದ ವಿಧಾನಗಳು ಉದ್ಯಮ ಕ್ಷೇತ್ರದಲ್ಲಿ ಬಳಕೆಗೆ ಬಂದ ಮೇಲೆ ದುಗ್ಧಾಹಾರಕ್ಕಾಗಿ ವ್ಯಯವಾಗುತ್ತಿದ್ದ ಕೋಟ್ಯಂತರ ರೂಪಾಯಿಗಳ ವಿದೇಶೀ ವಿನಿಮಯವನ್ನು ಉಳಿಸಿದಂತಾಗಿದೆ.

ಇಡ್ಲಿ, ದೋಸೆ, ವಡೆ, ರಸಂ, ಸಾಂಬಾರ್, ಚಕ್ಕುಲಿ, ಮುಚ್ಚೋರೆ, ಗುಲಾಬ್ ಜಾಮೂನ್, ಜಿಲೇಬಿ ಮುಂತಾದವನ್ನು ಶೀಘ್ರವಾಗಿ ತಯಾರಿಸಲು ಅನುಕೂಲಿಸುವ

ಪುಡಿಗಳನ್ನೂ, ದೋಸೆ, ಇಡ್ಲಿ, ಚಪಾತಿ ಮಾಡುವ ಸ್ವಯಂಚಾಲಿತ ಯಂತ್ರಗಳನ್ನು ಈ ಸಂಸ್ಥೆ ಕಂಡುಹಿಡಿದಿದೆ.

***

**ಕೇಮಾನ್:** ಮಧ್ಯ ಹಾಗೂ ದಕ್ಷಿಣ ಅಮೆರಿಕಗಳ ನದಿಗಳಲ್ಲಿ ವಾಸಿಸುವ ಒಂದು ಜಾತಿಯ ಮೊಸಳೆ. ಕ್ರಾಕೊಡಿಲಿಡೆ ಕುಟುಂಬಕ್ಕೆ ಸೇರಿದೆ. ಈ ಜಾತಿಯ ಶಾಸ್ತ್ರೀಯ ಹೆಸರು ಕೇಮಾನ್ (ಪರ್ಯಾಯ ನಾಮ, ಮೆಲನೋಸೂಕಸ್). ಇದರಲ್ಲಿ 5 ಪ್ರಭೇದಗಳಿವೆ. ಬಹುಪಾಲು ಪ್ರಭೇದಗಳಲ್ಲಿ ದೇಹದ ಉದ್ದ ಸುಮಾರು 2.4 ಮೀ. ಬ್ರೆಜಿಲ್ ಮತ್ತು ಗಯಾನಗಳಲ್ಲಿ ಕಾಣಬರುವ ನೈಜರ್ ಎಂಬ ಪ್ರಭೇದ (ಕಪ್ಪು ಕೇಮಾನ್) 4.5–4.8 ಮೀ. ಗಳಿಗೂ ಹೆಚ್ಚು ಉದ್ದ ಬೆಳೆಯುವುದುಂಟು. ಚಿಕ್ಕದಾದ ಹಾಗೂ ಮೊಂಡಾದ ಮೂತಿ, ಬಾಯಿ ಮುಚ್ಚಿಕೊಂಡಾಗ ಕೆಳದವಡೆಯ ನಾಲ್ಕನೆಯ ಹಲ್ಲು ಮೇಲ್ದವಡೆಯಲ್ಲಿರುವ ಗುಳಿಯಲ್ಲಿ ಹುದುಗಿರುವುದು–ಮುಂತಾದ ಲಕ್ಷಣಗಳಲ್ಲಿ ಕೇಮಾನ್ ಮೊಸಳೆ ಅಲಿಗೇಟರ್ ಮೊಸಳೆಯನ್ನು ಹೋಲುತ್ತದೆ. ಆದರೆ ಕೇಮಾನ್ ಮೊಸಳೆಯ ನಾಸಿಕ ಮೂಳೆಗಳು ಮುಂಚಾಚಿಕೊಂಡಿವೆ. ಅಲಿಗೇಟರ್‌ನಲ್ಲಿ ಈ ಲಕ್ಷಣ ಇಲ್ಲ.

ಕೇಮಾನ್ ಮೊಸಳೆಯ ಮೊಟ್ಟೆಗಳನ್ನು ಸುರಿನಮ್ ದ್ವೀಪವಾಸಿಗಳು ಆಹಾರವಾಗಿ ಬಳಸುತ್ತಾರೆ. ನೋಡಿ–ಮೊಸಳೆ.

***

**ಕೇವಿ:** ರಾಡೆನ್ಷಿಯ ವರ್ಗದಲ್ಲಿನ ಕವ್ಯೆಯಿಡೆ ಕುಟುಂಬಕ್ಕೆ ಸೇರಿದ ಹಲವಾರು ಪ್ರಾಣಿಗಳಿಗಿರುವ ಸಾಮಾನ್ಯ ಹೆಸರು. ಇವುಗಳಲ್ಲಿ ಮುಖ್ಯವಾದವು ಪಟಗೋನಿಯದ ಕೇವಿ ಅಥವಾ ಮೊಲ(ಡಾಲಿಕೋಟಿಸ್ ಪಟಗೋನ), ಗಿನಿ ಹಂದಿ(ಕೇವಿಯ ಜಾತಿ) ಮತ್ತು ಮೋಕೋ (ಕೆರಾಡಾನ್ ಜಾತಿ).

ಬಿರುಸಾದ ಮೈಗೂದಲು, ಚೆನ್ನಾಗಿ ಬೆಳೆದ ಕಿವಿಗಳು, ಮುಂಗಾಲಿನಲ್ಲಿ 4 ಮತ್ತು ಹಿಂಗಾಲಿನಲ್ಲಿ 3 ಬೆರಳುಗಳು, ಬಾಲವಿಲ್ಲದಿರುವುದು ಇವುಗಳ ಮುಖ್ಯ ಲಕ್ಷಣಗಳು. ಪಟಗೋನಿಯದ ಕೇವಿ ಅರ್ಜೆಂಟೀನ, ಪಟಗೋನಿಯ ದೇಶಗಳ ಕುರುಚಲು ಕಾಡುಗಳಲ್ಲಿ ವಾಸಿಸುತ್ತದೆ. ಇದರ ಉದ್ದ ಸು. 69–75 ಸೆಂಮೀ. ತೂಕ ಸು. 15 ಕಿಗ್ರಾಂ. ದೇಹದ ಬಣ್ಣ ಬೂದು ಮಿಶ್ರಿತ ಕಂದು. ನೆಲವನ್ನು ತೋಡಿ ನಿರ್ಮಿಸಿಕೊಂಡ ಬಿಲಗಳಲ್ಲಿ ವಾಸಿಸುತ್ತದೆ. ಇದು ಶಾಕಾಹಾರಿ. ಹಗಲಿನಲ್ಲಿ ಕ್ರಿಯಾಶೀಲವಾಗಿರುತ್ತದೆ. ಮೊಲಗಳಂತೆ ಕುಪ್ಪಳಿಸುತ್ತ ಓಡಾಡುತ್ತದೆ.

ಪಟಗೋನಿಯದ ಕೇವಿ ಒಂದು ಸಲಕ್ಕೆ 2–5 ಮರಿಗಳನ್ನು ಈಯುತ್ತದೆ. ಗಿನಿಹಂದಿ (ನೋಡಿ) ಮತ್ತು ಮೋಕೋಗಳು ಪಟಗೋನಿಯದ ಕೇವಿಯನ್ನು ಬಹುವಾಗಿ ಹೋಲುವುದಾದರೂ ಅವಕ್ಕೂ ಇವಕ್ಕೂ ಅನೇಕ ವ್ಯತ್ಯಾಸಗಳಿವೆ. (ವಿ.ಕೆ.ವಿ.)

**ಕೇಸೀನ್:** ಸ್ತನಿಗಳ ಹಾಲಿನಲ್ಲಿ ಕ್ಯಾಲ್ಸಿಯಂ ಕೇಸಿನೇಟ್ ಎಂಬ ಲವಣದ ರೂಪದಲ್ಲಿರುವ ಒಂದು ಪ್ರಮುಖ ಪ್ರೊಟೀನು. ಇದರ ಪ್ರಮಾಣ ಹಾಲಿನಲ್ಲಿನ ಒಟ್ಟು ಪ್ರೋಟೀನುಗಳ 80% ರಷ್ಟು. ಕೇಸೀನಿನಲ್ಲಿ ಹೆಚ್ಚು ಕಡಿಮೆ ಎಲ್ಲಾ ಬಗೆಯ ಅಮೈನೋ ಆಮ್ಲಗಳು ಇರುವುದರಿಂದ ಇದು ಹಾಲಿನ ಪ್ರಧಾನ ಪೌಷ್ಟಿಕಾಂಶಗಳಲ್ಲಿ ಒಂದು ಎನ್ನಿಸಿದೆ. ಇದನ್ನು ಹಾಲಿನಿಂದ ಬೇರ್ಪಡಿಸಿ ಶುದ್ಧೀಕರಿಸಿ ಬಿಳಿ ಇಲ್ಲವೆ ಕೆನೆ ಬಣ್ಣದ ಪುಡಿಯಾಗಿ ಪಡೆಯಬಹುದು. ಕೇಸೀನನ್ನು ಹಾಲಿನಿಂದ ನೇರವಾಗಿ ಪಡೆಯುವುದಿಲ್ಲ. ಕೆನೆ ತೆಗೆದ ಹಾಲಿಗೆ (ಸ್ಕಿಮ್ಡ್ ಮಿಲ್ಕ್) ಹೈಡ್ರೋಕ್ಲೋರಿಕ್ ಇಲ್ಲವೆ ಸಲ್ಫ್ಯೂರಿಕ್ ಆಮ್ಲವನ್ನು ಸೇರಿಸಿ ಅಥವಾ ಕರುಗಳ ಜಠರದಿಂದ ಪಡೆಯಲಾಗುವ ರೆನೆಟ್ ಎಂಬ ವಸ್ತುವನ್ನು ಸೇರಿಸಿ ಆ ಹಾಲು ಗರಣೆಗಟ್ಟುವಂತೆ ಮಾಡುತ್ತಾರೆ. ಈ ಕ್ರಿಯೆಗೆ ನಿಗದಿಯಾದ ಒತ್ತಡ ಮತ್ತು ಉಷ್ಣತೆ ಬೇಕು. ಹೀಗೆ ತಯಾರಾಗುವ ಗರಣೆಯೆ ಕೇಸೀನ್ ಸಂಯುಕ್ತ. ಗರಣೆಗಟ್ಟಿ ಉಳಿಯುವ ದ್ರವಾಂಶದಿಂದ ಗರಣೆಯನ್ನು ಬೇರ್ಪಡಿಸಿ, ಹಲವಾರು ಬಾರಿ ತೊಳೆದು ಬಿಸಿಗಾಳಿಯ ಸಹಾಯದಿಂದ ಒಣಗಿಸಿ ಪುಡಿಮಾಡಿ, ಚೀಲಗಳಲ್ಲಿ ಶೇಖರಿಸುತ್ತಾರೆ. ಆಮ್ಲವನ್ನು ಸೇರಿಸಿ ಪಡೆಯುವ ಕೇಸೀನಿಗೆ ಆಮ್ಲಿಯ ಕೇಸೀನೆಂದು, ರೆನೆಟ್ ಬಳಸಿ ಪಡೆಯುವ ಕೇಸೀನಿಗೆ ರೆನೆಟ್ ಕೇಸೀನೆಂದು ಹೆಸರು.

ಶುದ್ಧರೂಪದ ಕೇಸೀನ್ ನೀರಿನಲ್ಲಾಗಲಿ ಸಾವಯವ ವಿಲೀನಕಗಳಲ್ಲಾಗಲೀ ಕರಗುವುದಿಲ್ಲ. ಆದರೆ ಕೆಲವು ಲವಣಗಳ ರೂಪದಲ್ಲಿ ಕರಗುತ್ತದೆ. ಆಮ್ಲಗಳೊಂದಿಗೂ ಕ್ಷಾರಗಳೊಂದಿಗೂ ವರ್ತಿಸಿ ಹಲವಾರು ಬಗೆಯ ಸಂಯುಕ್ತಗಳಾಗಿ ಪರಿವರ್ತಿತವಾಗುತ್ತದೆ.

ಕೇಸೀನಿಗೆ ಹಲವಾರು ಕೈಗಾರಿಕಾ ಉಪಯೋಗಗಳಿವೆ. ಇವುಗಳಲ್ಲಿ ಮುಖ್ಯವಾದುವು ಕಾಗದ, ಬಣ್ಣ, ಗೋಂದು, ಕೃತಕ ರೇಷ್ಮೆ ಹಾಗೂ ಪ್ಲಾಸ್ಟಿಕ್ ಕೈಗಾರಿಕೆಗಳು. ಕಾಗದದ ಮೇಲೆ ಕೇಸೀನಿನ ತೆಳುವಾದ ಲೇಪಕೊಡುವುದರಿಂದ ಅದರ ಮೇಲೆ ಛಾಯಾಚಿತ್ರಗಳನ್ನು ಮುದ್ರಿಸುವುದು ಸುಲಭವಾಗುತ್ತದೆ. ವಿವಿಧ ಬಗೆಯ ಬಣ್ಣಗಳಿಗೆ ಕೇಸೀನನ್ನು ಸೇರಿಸಿ ಅವನ್ನು ಉತ್ತಮಗೊಳಿಸುವುದು ರೂಢಿಯಲ್ಲಿದೆ. ಆಮ್ಲಿಯ ಕೇಸೀನನ್ನು ಸುಣ್ಣ, ಸೋಡಿಯಂ ಸಂಯುಕ್ತ ಮತ್ತು ಯಾವುದಾದರೂ ಒಂದು ಬೂಸ್ಟು ನಿರೋಧಕ ವಸ್ತುವಿನೊಂದಿಗೆ ಸೇರಿಸಿ ಮರದ ಸಾಮಾನುಗಳನ್ನು ಬಂಧಿಸಲು ಬಳಸುವ ಗೋಂದನ್ನು ತಯಾರಿಸಬಹುದು. ಉಣ್ಣೆಯನ್ನು ಹೋಲುವ ಹಲವಾರು ರೀತಿಯ ಕೃತಕ ರೇಷ್ಮೆ ಎಳೆಗಳನ್ನು ತಯಾರಿಸುವುದಕ್ಕೂ ಕೇಸೀನನ್ನು ಉಪಯೋಗಿಸುತ್ತಾರೆ. ರೆನೆಟ್ ಕೇಸೀನನ್ನು ಪ್ಲಾಸ್ಟಿಕ್ ತಯಾರಿಕೆಯಲ್ಲಿ ವಿಪುಲವಾಗಿ ಬಳಸುತ್ತಾರೆ. ಕೊಂಬು, ದಂತ ಮುಂತಾದುವನ್ನು ಈ ಪ್ಲಾಸ್ಟಿಕ್ ಹೋಲುತ್ತದೆ. ಇದನ್ನು ಮುಖ್ಯವಾಗಿ ಗುಂಡಿ, ಬ್ರಷ್ಷುಗಳ ಎಳೆಗಳು, ಬಿಲಿಯರ್ಡ್ ಚೆಂಡುಗಳು ಮುಂತಾದವುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಮೇಲೆ ಹೇಳಿದ ಬಳಕೆಗಳಲ್ಲದೆ ಕೇಸೀನನ್ನು ಔಷಧಿ ಹಾಗೂ ಅಲಂಕಾರ ವಸ್ತುಗಳ ಉತ್ಪಾದನೆಯಲ್ಲಿ, ಚರ್ಮ ಹದಗೊಳಿಸುವುದಕ್ಕೆ, ಬಿಳಿಯ ಪಾದರಕ್ಷೆಗಳನ್ನು ಶುಭ್ರಗೊಳಿಸುವ ಹಾಗೂ ಹೊಳಪುಕೊಡುವ ವಸ್ತುಗಳ ತಯಾರಿಕೆಯಲ್ಲಿ ಮತ್ತು ಸಾಬೂನು ಮತ್ತು ಕೀಟನಾಶಕ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸುವುದುಂಟು.

***

**ಕೇಳುವಿಕೆ:** ಶಬ್ದ ಕಿವಿಗೆ ಬಿದ್ದಾಗ ಆಗುವ ಅನುಭವವೇ ಕೇಳುವಿಕೆ. ಶಬ್ದ ಒಂದು ಶಕ್ತಿ. ಇದು ಒಂದು ಮಾಧ್ಯಮದ ಮೂಲಕ, ಸಾಮಾನ್ಯವಾಗಿ ಗಾಳಿಯ ಮೂಲಕ ಚಲಿಸಿ ಕಿವಿಗೆ (ಶ್ರವಣೇಂದ್ರಿಯ) ತಲುಪಿದಾಗ ನರಪ್ರಚೋದನೆ ಉಂಟಾಗುತ್ತದೆ. ಇದು ಮಿದುಳಿನ ಒಂದು ವಿಶಿಷ್ಟ ಭಾಗಕ್ಕೆ ತಲುಪಿದಾಗ ಆಗುವ ಪರಿಣಾಮವೆ ಕೇಳುವಿಕೆ. ಈ ಕ್ರಿಯೆ ಹಲವಾರು ಬಿಡಿ ಕ್ರಿಯೆಗಳ ಸಂಕೀರ್ಣ ಫಲ.

ಪ್ರಸಕ್ತ ಲೇಖನವನ್ನು ಈ ಮುಂದೆ ಬರೆದಿರುವ ನಾಲ್ಕು ಪ್ರಧಾನ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗಿದೆ: 1 ಕೇಳುವಿಕೆಯ ವೈಜ್ಞಾನಿಕಾಭ್ಯಾಸದ ಇತಿಹಾಸ, 2 ಶಬ್ದ, 3 ಶ್ರವಣೇಂದ್ರಿಯ, 4 ಶಬ್ದಗ್ರಹಣ ವಿಧಾನ 5 ಕಿವುಡು ಮತ್ತು ಅದರ ನಿವಾರಣೋಪಾಯಗಳು.

1 ಇತಿಹಾಸ : ಕೇಳುವಿಕೆಯ ವೈಜ್ಞಾನಿಕಾಭ್ಯಾಸವನ್ನು ಮಾಡಿದ ಮೊದಲಿಗರು ಇಟಲಿಯ ವೆಸೇಲಿಯಸ್ (1515–64), ಫ್ಯಾಲೋಪಿಯಸ್ (1523–62), ಯೂಸ್ಟೇಕಿಯಸ್ (1510–74), ವ್ಯಾಲ್ಸಾಲ್ವ (1666–1723), ಮಾರ್ಗಾಗಿ (1682–1771), ಸ್ಕಾರ್ಪ್ (1747–1832), ಇಂಗ್ಲೆಂಡಿನ ವಿಲ್ಲಿಸ್ (1622–75), ಮತ್ತು ಫ್ರಾನ್ಸಿನ ಡ್ಯೂವರೆ (1648–1730). ಇವರುಗಳ ಅಧ್ಯಯನದಿಂದ ಕಿವಿ ಮತ್ತು ಕೇಳುವಿಕೆಯ ವಿಷಯವಾಗಿ ಆಗಿನ ಕಾಲಕ್ಕೆ ಎಷ್ಟು ಸಾಧ್ಯವೋ ಅಷ್ಟು ವಿಷಯಗಳು ಸಂಗ್ರಹಿತವಾಗಿದ್ದುವು. 19ನೆಯ ಶತಮಾನದಲ್ಲಿ ತುಲನಾತ್ಮಕ ಶರೀರವಿಜ್ಞಾನ ಮತ್ತು ಅಂಗಾಂಶವಿಜ್ಞಾನಗಳು ಬಹುವಾಗಿ ಅಧ್ಯಯನಗೊಂಡುವು. ಕಾರ್ಟಿ (1822–1876) ಮತ್ತು ರೀಸ್ನರ್ (1824–75) ಎಂಬುವರು ಕಿವಿಯ ವಿಚಾರದಲ್ಲಿ ಈ ವಿಧಾನಗಳನ್ನು ವಿಶೇಷವಾಗಿ ಅಭ್ಯಸಿಸಿ ಕೇಳುವಿಕೆಯ ವಿಧಾನವೆಂದು ಸ್ಥೂಲವಾಗಿ ಒಂದು ಅಭಿಪ್ರಾಯವನ್ನು ಪ್ರತಿಪಾದಿಸುವಷ್ಟು ಜ್ಞಾನವನ್ನು ಗಳಿಸಿಕೊಟ್ಟರು. ಕೇಳುವಿಕೆಯನ್ನು ಶಬ್ದದ ಭೌತಸ್ವಭಾವಗಳಿಗೆ ಅಳವಡಿಸಿ ಶಬ್ದಗ್ರಹಣ ಆಗುವ ವಿಧಾನವನ್ನು ಪ್ರಥಮವಾಗಿ ತಿಳಿಯಪಡಿಸಿದ್ದು ಹೆಲ್ಮ್‌ಹೋಲ್ಟ್ಸ್ (1821–1894) ಎಂಬ ಭೌತಶಾಸ್ತ್ರಜ್ಞ. ಇವನ ಪ್ರಾಯೋಗಿಕ ಅಧ್ಯಯನಗಳಿಂದ ಕೇಳುವಿಕೆಯ ವಿಷಯದಲ್ಲಿ ನಿಖರ ಜ್ಞಾನ ಲಭಿಸುವುದು ಸಾಧ್ಯವಾಯಿತು. ಜೊತೆಗೆ ಇನ್ನೆಷ್ಟೋ ಹೊಸ ಸಂಶಯಗಳು ತಲೆದೋರಿದುವು. ಇಂದಿಗೂ ನಿರ್ದಿಷ್ಟವಾಗಿ ಪರಿಹರಿಸಲಾಗದ ಸಮಸ್ಯೆಗಳಿವೆ. ಹೆಲ್ಮ್‌ಹೋಲ್ಟ್ಸ್ ಕೇಳುವಿಕೆಯ ವಿಚಾರವನ್ನೊಳಗೊಂಡ ಒಂದು ಪುಸ್ತಕವನ್ನು ಪ್ರಚುರಿಸಿದ (1863). ಕೇಳುವಿಕೆಯ ವಿಧಾನ ಅನುನಾದತತ್ತ್ವವನ್ನು (ರೆಸೊನೆನ್ಸ್) ಅನುಸರಿಸುತ್ತದೆಂದು ಸಂಯುಕ್ತಶಬ್ದದ ವಿಶ್ಲೇಷಣೆ ಮತ್ತು ಅದರ ಎಲ್ಲಾ ಘಟಕಗಳ ಆವರ್ತಾಂಕಗಳಿಗೆ (ಫ್ರಿಕ್ವೆನ್ಸಿಸ್) ಅನುಗುಣವಾದ ಪ್ರತಿಕ್ರಿಯೆಗಳು ಏಕಕಾಲಿಕವಾಗಿ ಬೇಸಿಲಾರ್ ಪೊರೆಯಲ್ಲಿ ಉಂಟಾಗುತ್ತದೆಂದು ಆ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾನೆ. ಅವನ ಈ ತತ್ತ್ವವನ್ನು ಎಲ್ಲರೂ ಒಪ್ಪದಿದ್ದರೂ ಈ ಶತಮಾನದ ಆದಿಯ ತನಕ ಕೇಳುವಿಕೆಯ ವಿಷಯವಾಗಿ ಇದಕ್ಕಿಂತ ಹೆಚ್ಚಿನ ಗಮನಾರ್ಹ ಸಂಶೋಧನೆ ಏನೂ ನಡೆಯಲಿಲ್ಲ. ಜೈವಿಕವಿದ್ಯುತ್ತು, ಅದರ ವರ್ಧನೆ, ಶಕ್ತಿ ಮತ್ತು ಗತಿಮಾಪನೆ–ಇವುಗಳ ವಿಚಾರವಾಗಿ ಅನೇಕ ಪ್ರಯೋಗಗಳನ್ನು ಈ ಶತಮಾನದ ಆದಿಯಲ್ಲಿ ನಡೆಸಿದರು. 1930ರಲ್ಲಿ ವೇವರ್ ಮತ್ತು ಬ್ರೇ ಎಂಬ ವಿಜ್ಞಾನಿಗಳು ಶ್ರವಣನರ ಪ್ರಚೋದನೆಯಲ್ಲಿ ಆಗುವ ವಿದ್ಯುತ್ ಪ್ರವಾಹವನ್ನು ವರ್ಧಿಸಿ ಕಿವಿಯಿಂದ ಕೇಳಲ್ಪಟ್ಟ ಮೂಲ ಶಬ್ದಗಳ ಪುನರ್ನಿರ್ಮಾಣವನ್ನು ಅದರಿಂದ ಮಾಡಿದರು. ಇದಾದ ಮೇಲೆ ಕೇಳುವಿಕೆಯನ್ನು ಕುರಿತು ವೈದ್ಯರ, ಜೀವಕ್ರಿಯಾ ವಿಜ್ಞಾನಿಗಳ ಮತ್ತು ಇತರ ವಿಜ್ಞಾನಿಗಳ ಅಧ್ಯಯನಗಳಿಂದ ಹೊಸ ಸಂಗತಿಗಳು ಬೆಳಕಿಗೆ ಬಂದಿವೆ.

2 ಶಬ್ದ: ಪದಾರ್ಥಗಳು ಒಂದಕ್ಕೊಂದು ತಗುಲಿದಾಗ, ಯಾವುದಾದರೂ ಸ್ಫೋಟವಾದಾಗ, ಸಂಗೀತ ಸಲಕರಣೆಗಳ ಉಪಯೋಗವಾದಾಗ ಮನುಷ್ಯ, ಮೃಗಪಕ್ಷಿ ಕೀಟಾದಿಗಳು ಧ್ವನಿಗೈವಾಗ ಉತ್ಪತ್ತಿಯಾಗುವ ಶಬ್ದ ಎಲ್ಲರಿಗೂ ಪರಿಚಿತ. ಕಂಪಿಸುವ

ವಸ್ತುವಿನಿಂದ ಉತ್ಪತ್ತಿಯಾದ ಒಂದು ವಿಧವಾದ ಶಕ್ತಿಯೇ ಶಬ್ದ. ಇದು ಅಲೆಅಲೆಯಾಗಿ ಸುತ್ತಲೂ ಪಸರಿಸುತ್ತದೆ. ಉಷ್ಣ, ಬೆಳಕು ಮುಂತಾದ ಶಕ್ತಿಗಳು ಅಲೆಅಲೆಯಾಗಿ ಹರಡಿದರೂ ಅವು ಶೂನ್ಯದಲ್ಲೂ ಹಾದುಹೋಗಬಲ್ಲ ಅಡ್ಡಕಂಪನ ತರಂಗಗಳು. ಶಬ್ದತರಂಗಗಳು ಉದ್ದ ಕಂಪನ ರೀತಿಯವಾದ್ದರಿಂದ ಶಬ್ದವ್ಯಾಪಿಸಬೇಕಾದರೆ ಘನ, ದ್ರವ, ಅಥವಾ ಅನಿಲ ಮಾಧ್ಯಮ ಇರಲೇಬೇಕು. ರೈಲುಗಾಡಿಗಳ ಸಾಲಿಗೆ ಹಿಂದಿನಿಂದ ಡಿಕ್ಕಿಹೊಡೆದರೆ ಹೇಗೆ ಪ್ರತಿಗಾಡಿಯೂ ಮುಂದೆ ಚಲಿಸುತ್ತ ಚಲನೆಯನ್ನು ಅದರ ಮುಂದಿನ ಗಾಡಿಗೆ ವರ್ಗಾಯಿಸುತ್ತದೆಯೊ ಅದೇ ರೀತಿಯಲ್ಲಿ ವಸ್ತು ಕಂಪನದಿಂದ ಉಂಟಾದ ಶಬ್ದ ಅಲೆಗಳು ಮಾಧ್ಯಮ ವಸ್ತುವಿನ ಕಣಗಳನ್ನು ಮುಂದು ಹಿಂದಾಗಿಸುತ್ತ, ಮಾಧ್ಯಮ ವಸ್ತುವಿನಲ್ಲಿ ಮುಂದು ಮುಂದಕ್ಕೆ ಪಸರಿಸುತ್ತವೆ. ಒಂದು ಶ್ರುತಿ ಕವಲನ್ನು (ಟ್ಯೂನಿಂಗ್ ಫೋರ್ಕ್) ಮಿಡಿದರೆ ಅದು ಮುಂದು ಹಿಂದಾಗಿ ಕಂಪಿಸುತ್ತ ಶಬ್ದವನ್ನು ಉಂಟುಮಾಡುತ್ತದೆ. ಆ ಕಂಪನ ಸುತ್ತಲಿನ ಗಾಳಿಗೆ ಸಂಘಟಿಸಿ ಅದರಲ್ಲಿಯೂ ಅನುಗುಣಕಂಪನ ಉಂಟಾಗಿ ಗಾಳಿಯ ಕಣಗಳು ರೈಲು ಗಾಡಿಯ ಸಾಲಿನ ಗಾಡಿಯಂತೆ ಮುಂದು ಹಿಂದಕ್ಕೆ ಕಂಪಿಸುತ್ತ ಶಬ್ದವನ್ನು ಮುಂದು ಮುಂದಕ್ಕೆ ಒಯ್ಯುತ್ತವೆ.




ಪ್ರಬಲ ಶಬ್ದದ ಮತ್ತು ದುರ್ಬಲ ಶಬ್ದದ ಕಂಪನಗಳು ಮಾಧ್ಯಮದಲ್ಲಿ ಚಲಿಸುವ ಬಗ್ಗೆ

3 ಶ್ರವಣೇಂದ್ರಿಯ : ಇಡೀ ಪ್ರಾಣಿವರ್ಗದಲ್ಲಿ ಶಬ್ದಾನುಭವ ವಿಕಾಸಗೊಂಡು ಉಪಯುಕ್ತತೆ ಪಡೆದಿರುವುದು ಕೀಟ ಮತ್ತು ಕಶೇರುಕಗಳಲ್ಲಿ ಮಾತ್ರ. ಎರಡು ಗುಂಪುಗಳಲ್ಲಿಯೂ ಶ್ರವಣೇಂದ್ರಿಯ ಬಹುಸರಳರೂಪದ ಕಂಪನಶಕ್ತಿಯುಳ್ಳ ಅಂಗಗಳಿಂದ ಪ್ರಾರಂಭವಾಗಿದ್ದರೂ ವಿಕಾಸದ ಹಾದಿಯಲ್ಲಿ ಬೇರೆ ರೀತಿಯಲ್ಲಿ ಮುಂದುವರೆದಿವೆ.

ಕೀಟವರ್ಗದಲ್ಲಿ ಕೇಳುವಿಕೆ ಸ್ವಾಭಾವಿಕವಾಗಿಯೇ ಶಬ್ದೋತ್ಪತ್ತಿಮಾಡುವ ಕೀಟಗಳಲ್ಲಿ ಸಾಮಾನ್ಯವಾಗಿಯೂ, ಯಾವ ಶಬ್ದವನ್ನೂ ಮಾಡದ ಕೆಲವು ಪತಂಗಗಳಲ್ಲಿ ವಿರಳವಾಗಿಯೂ ಉಂಟು. ಇವುಗಳಲ್ಲಿ ಶ್ರವಣೇಂದ್ರಿಯ ತಲೆಭಾಗದಲ್ಲಿ ಇಲ್ಲ; ಬದಲು ಅದು ಇರುವುದು ದೇಹದ ಇತರ ಭಾಗಗಳಲ್ಲಿಯೇ. ಚಿಮ್ಮಂಡೆಗಳಲ್ಲಿ ಮುಂದಿನ ಕಾಲುಗಳಲ್ಲಿಯೂ, ಪತಂಗಗಳಲ್ಲಿ ಎದೆಭಾಗದಲ್ಲಿಯೂ, ಹಸಿರು ಮಿಡತೆಗಳಲ್ಲಿ ಹೊಟ್ಟೆ ಭಾಗದಲ್ಲಿಯೂ ಶ್ರವಣೇಂದ್ರಿಯದ ಸ್ಥಾನ ಉಂಟು. ರಚನೆ ಅತಿಸರಳವಾಗಿರುವ ಕಡೆಗಳಲ್ಲಿ ಶ್ರವಣೇಂದ್ರಿಯ ಅದು ಇರುವ ಮುಂದಿನ ಕಾಲು ಅಥವಾ ಎದೆ ಅಥವಾ ಹೊಟ್ಟೆಯಲ್ಲಿ ಅಡ್ಡಗಲಕ್ಕೂ ವ್ಯಾಪಿಸಿ ಆ ಭಾಗದ ಎದುರುಬದುರು ಭಿತ್ತಿಯನ್ನು ಸಂಪರ್ಕಿಸುವ ಮೂರು ಜೀವಾಣುಗಳ ಒಂದು ಸರಪಣಿಮಾತ್ರವಾಗಿರುತ್ತದೆ. ಇದರಲ್ಲಿ ಪ್ರತಿಕ್ರಿಯೆಯನ್ನು ತೋರಿಸಬಲ್ಲ ಸೂಕ್ಷ್ಮತೆ ಇರುವುದು ಸಾಮಾನ್ಯವಾಗಿ ಮಧ್ಯದ ಜೀವಾಣುವಿಗೆ ಮಾತ್ರ. ಶಬ್ದತರಂಗಗಳು ಶ್ರವಣೇಂದ್ರಿಯ ಇರುವ ಈ ಭಾಗಗಳನ್ನು ಕಂಪಿಸಿದಾಗ ಆಗುವ ಒತ್ತಡ ವ್ಯತ್ಯಾಸಗಳಿಂದ ಈ ಜೀವಾಣು ಸರಪಣಿಯ ಆಕಾರ ವ್ಯತ್ಯಾಸವಾಗುತ್ತದೆ ಮತ್ತು ಸೂಕ್ಷ್ಮಜೀವಾಣುವಿನ ಸುತ್ತ ಇರುವ ನರಗಳಲ್ಲಿ ಪ್ರಚೋದನೆಯುಂಟಾಗುತ್ತದೆ. ಶ್ರವಣೇಂದ್ರಿಯ ಇನ್ನೂ ಸ್ವಲ್ಪ ಜಟಿಲವಾಗಿರುವ




ಮಧುರಶಬ್ದದ ವಕ್ರರೇಖೆ (a) ಸರಾಗವಾಗಿದ್ದರೆ ಗಲಭೆಯ ವಕ್ರರೇಖೆ (b) ಯಾವ ನಿಯಮವನ್ನೂ ಪಾಲಿಸದಂತೆ ಕಾಣುತ್ತದೆ.




ಒಂದು ವಾದ್ಯದಿಂದ ಅಥವಾ ಹಾಡುಗಾರನಿಂದ ಹೊರಹೊಮ್ಮುವ ಶಬ್ದದ ಒತ್ತಡ ವಕ್ರರೇಖೆಯನ್ನು 'a' ಯಲ್ಲಿ ಕಾಣಿಸಿದೆ. ಇದನ್ನು ಭಿನ್ನ ಆವರ್ತಾಂಕಗಳಿರುವ ಹಲವಾರು ವಕ್ರರೇಖೆಗಳ ಸರಾಸರಿ ಎಂದು ಭಾವಿಸಬಹುದು. ಒಂದೊಂದಕ್ಕೂ–ಒಂದೊಂದಕ್ಕೂ ನಿರ್ದಿಷ್ಟ ಕಂಪನ ವೈಶಾಲ್ಯವಿರುವ ಈ ಭಿನ್ನ ವಕ್ರರೇಖೆಗಳನ್ನು 'b' ಯಲ್ಲಿ ಕಾಣಿಸಿದೆ. ಇವುಗಳ ಸರಾಸರಿಯೇ 'a'. ಆವರ್ತಾಂಕಗಳ ವ್ಯಾಪ್ತಿಯನ್ನು 'c' ಯಲ್ಲಿ ತೋರಿಸಿದೆ.

ಕೀಟಗಳಲ್ಲಿ ಈ ಇಂದ್ರಿಯ ಶಬ್ದಕಂಪನದಿಂದ ಒತ್ತಡ ವ್ಯತ್ಯಾಸವಾಗುವ ಗಾಳಿತುಂಬಿದ ಕೋಶದ ಒಳಗಡೆ ಇರುತ್ತದೆ ಮತ್ತು ಆ ಕೋಶದ ಗಾಳಿಯ ಕಂಪನ ಶ್ರವಣೇಂದ್ರಿಯವನ್ನು ಆ ಮೇಲೆ ಪ್ರಚೋದಿಸುತ್ತದೆ. ಶೀಶೆಯಲ್ಲಿ ಚಿರುಗುಟ್ಟುತ್ತಿರುವ ಗಂಡು ಚಿಮ್ಮಂಡೆ ಹುಳುವಿರುವ ಕೊಠಡಿಯಲ್ಲಿ ಹೆಣ್ಣು ಚಿಮ್ಮಂಡೆಯನ್ನು ಹಾರಿಬಿಟ್ಟರೆ ಅದು ಗಂಡಿರುವ ಕಡೆಗೆ ಹೋಗುತ್ತದೆ. ಟೆಲಿಫೋನಿನಲ್ಲಿ ಗಂಡಿನ ಚಿರುಗುಟ್ಟುವಿಕೆಯನ್ನು ಪ್ರಸರಿಸಿದರೆ ಹೆಣ್ಣು ಚಿಮ್ಮಂಡೆಯು ಟೆಲಿಫೋನಿನ ಬಳಿಗೇ ಹಾರಿಹೋಗುತ್ತದೆ. ಹೆಣ್ಣು ಚಿಮ್ಮಂಡೆಯ ಶ್ರವಣೇಂದ್ರಿಯವನ್ನು ಪ್ರಯೋಗಾರ್ಥವಾಗಿ ಘಾಸಿಪಡಿಸಿದಾಗ ಅದು ಹೀಗೆ ವರ್ತಿಸುವುದಿಲ್ಲ. ಪ್ರಾಸಂಗಿಕವಾಗಿ ಈ ಪ್ರಯೋಗ ಶಬ್ದೋತ್ಪತ್ತಿ ಮತ್ತು ಕೇಳುವಿಕೆಗೆ ಸಂತಾನೋತ್ಪತ್ತಿಯಲ್ಲಿರುವ ಪ್ರಾಮುಖ್ಯವನ್ನು ತೋರಿಸುತ್ತದೆ. ಕೀಟಗಳಲ್ಲಿ ಉತ್ಪತ್ತಿಯಾಗುವ ಮತ್ತು ಅವು ಕೇಳಿಸಿಕೊಳ್ಳಬಲ್ಲ ಶಬ್ದಗಳು ಅನೇಕ ವೇಳೆ ಮನುಷ್ಯರ ಶ್ರವಣಶಕ್ತಿಯನ್ನು ಮೀರಿರುವ ವಿಷಯ. ಕೀಟಗಳ ಶಬ್ದಲೋಕ ಮನುಷ್ಯರ ಶಬ್ದಲೋಕಕ್ಕಿಂತ ವ್ಯತ್ಯಾಸವಾಗಿರುವುದು ಇದರಿಂದ ವೇದ್ಯ.

ಕಶೇರುಕಗಳಾದ ಕೆಲವು ಮೀನು ಮತ್ತು ಭೂ ಜಲಚರಿಗಳಲ್ಲಿ ಶ್ರವಣೇಂದ್ರಿಯ ಸರಳರೂಪದಲ್ಲಿ ಕಾಣಬರುತ್ತದೆ. ಇವುಗಳಲ್ಲಿ ಹೊರಗಡೆಯೇ ಕಾಣಿಸುವ ಸಮತೂಕ ಸಾಧಕ ಅಂಗವಾದ ಪಕ್ಕ ಸೀಮಾಂಗದ ಒಂದು ಅಂಶವಾಗಿ ಶ್ರವಣೇಂದ್ರಿಯ ಬೆಳೆದಿದೆ. ಅನೇಕ ಮೀನುಗಳಲ್ಲಿ ಸುತ್ತಮುತ್ತ ಮೂಳೆಗಳ ಮೂಲಕ ಒಯ್ಯಲ್ಪಟ್ಟ ಶಬ್ದತರಂಗಗಳನ್ನು ಗುರುತಿಸುವ ಸಾಧನವಾಗಿ ಒಂದು ಕೋಶ ಅಥವಾ ನಿಬಿಡವಾದ ಸ್ಥಳವಿರುತ್ತದೆ ಮತ್ತು ಅದರಲ್ಲಿ ತಾರಸ್ವರ ಶಬ್ದಗ್ರಹಣವಾಗುತ್ತದೆ. ವಿಶಿಷ್ಟಶಬ್ದವನ್ನು ಮಾಡಿದಾಗ ಮಾತ್ರ ಆಹಾರ ತೆಗೆದುಕೊಳ್ಳಲು ಬರುವಂತೆ ತರಬೇತು ಮಾಡಿದ ಮೀನುಗಳ ಮೇಲಿನ ಪ್ರಯೋಗಗಳಿಂದ ಈ ವಿಷಯಗಳನ್ನು ತಿಳಿಯಲಾಗಿದೆ. ಗಾಳಿಯಲ್ಲಿ ಸಾಗುವ ಶಬ್ದ ಸಾಮಾನ್ಯವಾಗಿ ನಿಷ್ಫಲ ಎಂದೂ ನೀರಿನಲ್ಲಿ ಗಮಿಸುವ ಶಬ್ದ ಮಾತ್ರ ಗ್ರಾಹ್ಯವೆಂದೂ ಈ ಪ್ರಯೋಗಗಳು ತೋರಿಸುತ್ತವೆ.

ಇನ್ನು ಕೆಲವು ಭೂಜಲಚರಿಗಳಲ್ಲಿ ಸ್ವಲ್ಪ ಜಟಿಲತೆಯುಳ್ಳ ಶ್ರವಣೇಂದ್ರಿಯ ರೂಪತಳೆದಿದೆ. ಇವುಗಳಲ್ಲಿ ಗಾಳಿಯಲ್ಲಿ ಪಸರಿಸುವ ತರಂಗಗಳು ಮೈ ಚರ್ಮದ ಒಂದು ಭಾಗದಲ್ಲಿ ಬಡಿದು ಅದು ಕಂಪಿಸುವಂತೆ ಮಾಡುತ್ತವೆ. ಈ ಕಂಪನ ಆಮೇಲೆ ಶ್ರವಣೇಂದ್ರಿಯಕ್ಕೆ ಪಸರಿಸುತ್ತದೆ. ಕಪ್ಪೆಗಳು ತಾರಸ್ವರಗಳಿಗೆ ಪ್ರತಿಕ್ರಿಯೆ ತೋರಿಸುವುದು ಕಡಿಮೆ ಎಂದೂ ಮಂದ್ರಸ್ವರಗಳಿಗೆ ಮಾತ್ರ ಅವು ಸೂಕ್ಷ್ಮಗ್ರಾಹಿಗಳೆಂದೂ ಪ್ರಯೋಗದಿಂದ ಕಂಡುಬಂದಿದೆ. ಮೊಸಳೆಗಳನ್ನು ಬಿಟ್ಟರೆ ಬೇರಾವ ಸರೀಸೃಪದಲ್ಲಿಯೂ ಶ್ರವಣೇಂದ್ರಿಯ ಜಟಿಲವಾಗಿಲ್ಲ. ಮೊಸಳೆಗಳಲ್ಲಿ ಮಾತ್ರ ಇದು ಜಟಿಲವಾಗಿ ಸು. 4,000 ಆವರ್ತಾಂಕದ ಶಬ್ದಗಳನ್ನು ಗ್ರಹಿಸುತ್ತದೆ.

ಪಕ್ಷಿಗಳು ಬೇರೆಬೇರೆ ತಾರಸ್ಥಾಯಿಯಲ್ಲಿ ಇಂಚರಗೈಯುವ ವಿಷಯ ಎಲ್ಲರಿಗೂ ಗೊತ್ತಿದೆ. ಅದಕ್ಕೆ ತಕ್ಕಂತೆ ಪಕ್ಷಿಗಳ ಶ್ರವಣೇಂದ್ರಿಯಕ್ಕೆ ಸು. 10,000 ಆವರ್ತಾಂಕದ ಶಬ್ದಗಳನ್ನು ಗ್ರಹಿಸುವ ಸೂಕ್ಷ್ಮತೆ ಉಂಟು. ಸಹಜವಾಗಿರುವ ಈ ಅರ್ಥವತ್ತಾದ ಏರ್ಪಾಡು ಪಕ್ಷಿಜಾತಿಯ ವೈಶಿಷ್ಟ್ಯವೇನಲ್ಲ. ಅನೇಕ ಸ್ತನಿಗಳು ತಾರಸ್ವರ ಉತ್ಪತ್ತಿಯನ್ನೂ ಅದನ್ನು ಕೇಳಿಸಿಕೊಳ್ಳುವ ಸೂಕ್ಷ್ಮತೆಯನ್ನೂ ಇನ್ನೂ ಹೆಚ್ಚಾಗಿಯೇ ತೋರಿಸುತ್ತವೆ. ಬಾವಲಿಗಳಲ್ಲಿ 98,000 ಆವರ್ತಾಂಕದ ಶಬ್ದವನ್ನು ಮಾಡಬಲ್ಲ ಮತ್ತು ಕೇಳಬಲ್ಲ ಶಕ್ತಿ ಅವುಗಳ ರಾತ್ರಿಕಾಲದ ಹಾರಾಟಕ್ಕೆ ಅತ್ಯವಶ್ಯಕವಾಗಿದೆ. ಸಾಮಾನ್ಯವಾಗಿ ಬಾವಲಿಗಳಲ್ಲಿ ರಾತ್ರಿಕಾಲದಲ್ಲಿ ದೃಷ್ಟಿ ಹಗಲಿಗಿಂತ ಮಂದ. ಆದರೂ ಅವು ಕಗ್ಗತ್ತಲಿನಲ್ಲಿ ನಿರಾತಂಕವಾಗಿ ಹಾರಬಲ್ಲುವು. ಕಣ್ಣು ಕುರುಡು ಮಾಡಿದರೂ ಅವುಗಳ ಈ ಸಾಮರ್ಥ್ಯಕ್ಕೆ ಚ್ಯುತಿಬರುವುದಿಲ್ಲ. ಹಾರಾಡುವಾಗ ಬಾವಲಿಗಳು ಮಾನವ ಶ್ರವಣಾತೀತ ಶಬ್ದಗಳನ್ನುಂಟುಮಾಡಿ ಆ ಶಬ್ದಗಳು ಪ್ರತಿಧ್ವನಿತವಾಗುವುದನ್ನು ಕೇಳಿಸಿಕೊಂಡು ಹಾರುವ ದಿಕ್ಕನ್ನು ನಿರ್ಧರಿಸಿಕೊಳ್ಳುವುದರಿಂದ ಅಡ್ಡಬಂದ ಯಾವ ವಸ್ತುವಿಗೂ ಕತ್ತಲಿನಿಂದಾಗಿ ಅದು ಕಾಣಿಸದೇ ಇರುವುದಾದರೂ ಡಿಕ್ಕಿಹೊಡೆಯದೆ ಮುಂದುವರಿಯುತ್ತವೆ. ಬಾವಲಿಯ ಒಂದು ಕಿವಿಯನ್ನು ಪ್ರಾಯೋಗಿಕವಾಗಿ ಘಾತಿಸಿದರೆ ಅದು ರಾತ್ರಿಕಾಲದಲ್ಲಿ ಮೊದಲಿನಷ್ಟು ಚುರುಕಾಗಿ ಹಾರಾಡಲಾರದು. ಎರಡು ಕಿವಿಗಳನ್ನೂ ಧ್ವಂಸಮಾಡಿ ಅದನ್ನು ಪೂರ್ತಿ ಕಿವುಡುಮಾಡಿದರೆ ಅದಕ್ಕೆ ರಾತ್ರಿ ಹಾರಾಡುವುದಕ್ಕೆ ಆಗುವುದೇ ಇಲ್ಲ. ಬಾವಲಿಗಳಂತೆಯೆ ಅವುಗಳ ಆವರ್ತಾಂಕದ ಹೆಚ್ಚಳದಿಂದ ಮನುಷ್ಯರಿಗೆ ಕೇಳಲು ಆಗದ 30,000–40,000 ಆವರ್ತಾಂಕಗಳ ಶಬ್ದಗಳನ್ನು ನಾಯಿ, ಬೆಕ್ಕುಗಳು ಕೇಳಬಲ್ಲವು.

ಮನುಷ್ಯರ ಕಿವಿಯ ಸೂಕ್ಷ್ಮವಿವರಣೆ : ಕಿವಿಯಲ್ಲಿ ಮೂರು ಭಾಗಗಳಿವೆ–ಹೊರಗಿವಿ, ಮಧ್ಯಗಿವಿ ಮತ್ತು ಒಳಗಿವಿ. ಹೊರಗಿವಿ ನಮಗೆ ಗೋಚರವಾಗುವ ಕಿವಿಯ ಭಾಗ. ಮಧ್ಯಗಿವಿ ಹೊರಕಿವಿಯಲ್ಲಿ ಗ್ರಹಿತವಾದ ಶಬ್ದವನ್ನು ಒಳಗಿವಿಗೆ ತಲುಪಿಸುವ ಮೂರು ಸಣ್ಣ ಮೂಳೆಗಳಿಂದ ಕೂಡಿದ ಪ್ರದೇಶ. ಒಳಗಿವಿ ಶಬ್ದದ ಕಂಪನಗಳನ್ನು ನರಗಳ ಆವೇಗಗಳನ್ನಾಗಿ (ಇಂಪಲ್ಸ್) ಪರಿವರ್ತಿಸಿ ಮಿದುಳಿಗೆ ಸಂದೇಶಗಳನ್ನು ಕಳುಹಿಸುವ ಸಾಧನ. (ನೋಡಿ–ಕಿವಿ)

ಹೊರಗಿವಿ : ಹೊರಗಿವಿಗೆ ಎರಡು ಭಾಗಗಳುಂಟು. ಕಿವಿ ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಕಿವಿಯ ರೆಕ್ಕೆ ಅಥವಾ ಹಾಳೆ. ಬೇರೆ ಬೇರೆ ಪ್ರಾಣಿಗಳಲ್ಲಿ ಇದರ ಆಕಾರ, ಗಾತ್ರಗಳು ಬೇರೆ ಬೇರೆ. ಹಲವು ಪ್ರಾಣಿಗಳಲ್ಲಿ ಇದು ಇರುವುದಿಲ್ಲ. ಮೀನು, ಪಕ್ಷಿಗಳು, ಕಪ್ಪೆ, ಕೀಟಗಳಿಗೆ ಕಿವಿಯ ರೆಪ್ಪೆಯೇ ಇಲ್ಲ. ಮೊಲದ ಕಿವಿ ಅದರ ಗಾತ್ರವನ್ನು ಗಮನಿಸಿದರೆ ಅತಿ ದೊಡ್ಡದಾಗಿರುತ್ತದೆ. ಮಾನವನಿಗೆ ಹೊರಗಿವಿಯಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಇದನ್ನು ಅಲ್ಲಾಡಿಸುವುದು ಅಸಾಧ್ಯವಾದ್ದರಿಂದ ಹಸು ಅಥವಾ ಆನೆಯಂತೆ ನೊಣ ಇತ್ಯಾದಿಗಳನ್ನು ಓಡಿಸುವುದಕ್ಕೂ ಇದು ನಿಷ್ಪ್ರಯೋಜಕ. ಶಬ್ದಗಳನ್ನು ಲಾಳಿಕೆಯಂತೆ ಗ್ರಹಿಸಿ ಕಿವಿಯ ನಾಲೆಯೊಳಕ್ಕೆ ಹೆಚ್ಚಿನ ಮೊತ್ತದಲ್ಲಿ ಪ್ರವಹಿಸುವಂತೆ ಮಾಡಲು ಮಾನವನ ಕಿವಿಗಳ ಗಾತ್ರ ಏನೇನೂ ಸಾಲದು. ಈ ರೀತಿ ಕೆಲಸ ಮಾಡಬೇಕಾದರೆ ಕಿವಿಯ ರೆಕ್ಕೆಗಳ ಉದ್ದ ಶಬ್ದದ ಅಲೆಯ ಉದ್ದಕ್ಕಿಂತ ಹೆಚ್ಚಾಗಿರಬೇಕು. ಮಾನವನ ಕಿವಿಗೆ ಕೇಳುವ ಸ್ವರಗಳ ಅಲೆಯ ಉದ್ದಗಳು ಗಾಳಿಯಲ್ಲಿ ಸುಮಾರು 1.7 ಸೆಂಮಿ –1,650 ಸೆಂಮಿ ವರೆಗೂ ಇರುವುದರಿಂದ ಕಿವಿಯ ಅಳತೆಗಳು ಇವಕ್ಕಿಂತ ಚಿಕ್ಕದಾಗಿವೆ. ಹೆಚ್ಚು ಶ್ರುತಿಯ ಶಬ್ದಗಳನ್ನು ಮಾತ್ರ ಕಿವಿ ಸ್ವಲ್ಪಮಟ್ಟಿಗೆ ಸುಧಾರಿಸಿದ ದಕ್ಷತೆಯಿಂದ ಗ್ರಹಿಸಲು ಕಿವಿಯ ರೆಕ್ಕೆ ಸಹಾಯ ಮಾಡೀತೋ ಏನೋ. ಎರಡನೇಯದು ಅದರ ಮಧ್ಯದಲ್ಲಿರುವ ಹಾದಿ, ಕಿವಿಯ ಶಬ್ದನಾಲೆ. ಸು. 27 ಮಿಮೀ ಉದ್ದ, 10 ಮಿಮೀ ವ್ಯಾಸದ ಒಂದು ವಕ್ರವಾದ ಕೊಳವೆ. ಈ ನಾಲೆಯ ಹೊರಭಾಗ ವಾತಾವರಣಕ್ಕೆ ತೆರೆದಿದ್ದು ಶಬ್ದಗಳನ್ನು ಸ್ವೀಕರಿಸುತ್ತದೆ. ಒಳಗಿನ ತುದಿತಮಟೆ (ಟಿಂಪನಂ) ಎಂದು ಕರೆಯಲಾದ ಚರ್ಮದ ಪೊರೆಯಿಂದ (ಮೆಂಬ್ರೇನ್) ಮುಚ್ಚಲ್ಪಟ್ಟಿದೆ. ಶಬ್ದ ತಮಟೆಯನ್ನು ಬಡಿದಾಗ ಅದನ್ನು ಉದ್ರೇಕಿಸಿ ಮಧ್ಯಕಿವಿಯನ್ನು ಪ್ರವೇಶಿಸುತ್ತದೆ. ಕಿವಿಯ ನಾಲೆಯ ಒಳಗೋಡೆಗಳು ಮೇಣದಂಥ ಪದಾರ್ಥದಿಂದ ಆವೃತವಾಗಿವೆ. ಅಲ್ಲಿ ಕೂದಲುಗಳಿವೆ. ಈ ಸಹಜ ಸೋಸಣಿಗೆಗಳ ಪರಿಣಾಮವಾಗಿ ಧೂಳಿನ ಕಣಗಳೂ ಸಣ್ಣ ಕೀಟಗಳೂ ಕಿವಿಯ ತಮಟೆಯನ್ನು ತಲುಪಲಾರವು.

ಕಿವಿಯ ನಾಲೆಯ ಇರುವಿಕೆಯಿಂದ ಶ್ರವಣದ ಆವರ್ತಾಂಕ ಪ್ರತಿಕ್ರಿಯೆ (ಫ್ರೀಕ್ವೆನ್ಸಿ ರೆಸ್ಪಾನ್ಸ್) ಸ್ವಲ್ಪಮಟ್ಟಿಗೆ ಬದಲಾಗಿರುತ್ತದೆ. ನಾಲೆ ಒಂದು ತುದಿಯಲ್ಲಿ ತೆರೆದು ಇನ್ನೊಂದು ತುದಿಯಲ್ಲಿ ಮುಚ್ಚಿದ ಗಾಳಿಯಿಂದ ತುಂಬಿದ ಕೊಳವೆಯಂತಿರುವುದರಿಂದ ಅದಕ್ಕೆ ತನ್ನದೇ ಆದ ಒಂದು ಅನುನಾದ ಆವರ್ತಾಂಕ (ರೆಸೊನೆನ್ಸ್ ಫ್ರೀಕ್ವೆನ್ಸಿ) ಉಂಟು. ಶಬ್ದಗಳಲ್ಲಿ ಇರಬಹುದಾದ ಈ ಆವರ್ತಾಂಕದ ಸ್ವರಗಳನ್ನು ಕೊಳವೆಯ ಗಾಳಿ ಅನುಕಂಪನದಿಂದ ಸ್ವೀಕರಿಸಿ ಸಹಜವಾಗಿಯೆ ಹೆಚ್ಚು ಶಕ್ತಿಯಿಂದ ಈ ಆವರ್ತಾಂಕದಲ್ಲಿಯೆ ಕಂಪಿಸುತ್ತದೆ. ಇತರ ಆವರ್ತಾಂಕಗಳಿಗೆ ಹೆಚ್ಚು ಅನುಕಂಪನವಿಲ್ಲದೆ ಕಡಿಮೆ ಶಕ್ತಿಯಿಂದ ಕಂಪಿಸುತ್ತದೆ. ಆದ್ದರಿಂದ ಜಟಿಲವಾದ ಶಬ್ದಗಳಲ್ಲಿ ಒಂದು ಆವರ್ತಾಂಕದ ಸ್ವರಗಳನ್ನು ಕಿವಿ ಎತ್ತಿತೋರಿಸುವುದು. ನಾಲೆಯ ಅಳತೆಯಿಂದ ಈ ಸ್ವರದ ಆವರ್ತಾಂಕವನ್ನು ಗಣಿಸಬಹುದು.

$$\text{ಅನುನಾದ ಆವರ್ತಾಂಕ} = \frac{\text{ಶಬ್ದದ ವೇಗ (ಗಾಳಿಯಲ್ಲಿ)}}{4 \times \text{ಕೊಳವೆಯ ಉದ್ದ}}$$

$$= \frac{33{,}000 \text{ ಸೆಂಮೀ/ಸೆಕೆಂಡ್}}{4 \times 2.7 \text{ ಸೆಂಮೀ}}$$

$$= 3{,}000 \ / \ \text{ಸೆಕೆಂಡ್ (ಸು.)}$$

ಕೊಳವೆಯ ತುದಿ ಭದ್ರವಾಗಿ ಮುಚ್ಚಿರುವುದಿಲ್ಲ. ಅದರಲ್ಲಿ ವಕ್ರತೆ ಉಂಟು; ಮೇಲಿನ ಸಮೀಕರಣದಲ್ಲಿಯೆ ಕೆಲವು ನ್ಯೂನತೆಗಳಿವೆ– ಈ ಕಾರಣಗಳಿಂದ ಮೇಲೆ ಪಡೆದ ಬೆಲೆ ಬದಲಾದೀತು. ಸು. 2,000–4,000ದ ವರೆಗಿನ ಆವರ್ತಾಂಕಗಳ ಶಬ್ದಗಳಿಗೆ ಕಿವಿಯ ನಾಲೆ 5–10 ಡೆಸಿಬಲಗಳಷ್ಟು ಹೆಚ್ಚಿನ ಶಕ್ತಿಯನ್ನು ಒದಗಿಸುತ್ತದೆ. ಕಿವಿಯ ಶಬ್ದನಾಲೆಯ ಇನ್ನೊಂದು ಕಾರ್ಯವೆಂದರೆ ಒಳಗಿವಿಯನ್ನು ಹೊರಗಿನ ಉಷ್ಣತೆಯ ವ್ಯತ್ಯಾಸಗಳಿಂದ ರಕ್ಷಿಸಲು ಉಷ್ಣತೆಯನ್ನು ಒಂದು ಮಟ್ಟದಲ್ಲಿ ನಿಯಂತ್ರಿಸುತ್ತದೆ. ಇತ್ತೀಚೆಗೆ ಮಾನವದೇಹದ ಉಷ್ಣತೆಯನ್ನು ಅಳೆಯಲು ಇತರ ಭಾಗಗಳಿಗಿಂತ ಶಬ್ದನಾಲೆಯೊಳಗೆ ತಮಟೆಯ

ಸಮೀಪದ ಪ್ರದೇಶವೆ ಅತ್ಯುತ್ಕೃಷ್ಟವೆಂದು ಹೇಳಲಾಗುತ್ತಿದೆ. ಉಷ್ಣತೆ ಮತ್ತು ಆರ್ದ್ರತೆಗಳ ವ್ಯತ್ಯಾಸದಿಂದ ಒಳಗಿವಿ ಸುಲಭವಾಗಿ ಪ್ರಭಾವಿತವಾಗುತ್ತದೆ. ಕಿವಿಯ ತಮಟೆ ಹೊರಗಿವಿ ಮತ್ತು ಮಧ್ಯಕಿವಿಗಳ ನಡುವಿನ ಸೀಮಾಪ್ರದೇಶ.

ಮಧ್ಯಕಿವಿ: ತಮಟೆಯಿಂದ ಹಿಡಿದು ಒಳಗಿವಿಯವರೆಗಿನ ಪ್ರದೇಶವೇ ಮಧ್ಯಕಿವಿ. ಇದು ಗಾಳಿಯಿಂದ ತುಂಬಿದ ಒಂದು ಸಣ್ಣ ಭಾಗ. ಇದರಲ್ಲಿ ತಮಟೆಯಿಂದ ಹಿಡಿದು ಒಳಗಿವಿಯ ಬಾದಾಮಿಯಾಕಾರದ ಕಿಟಕಿಯ ವರೆಗೆ ಹಬ್ಬಿರುವ ಮೂರು ಸಣ್ಣ ಅಸ್ಥಿಗಳ ಒಂದು ಸರಪಣಿ ಉಂಟು. ಈ ಪ್ರದೇಶದಿಂದ ಯೂಸ್ಟೇಷಿಯನ್ ಕೊಳವೆ ಗಂಟಲಿನ ಹಿಂಭಾಗಕ್ಕೆ ಗಾಳಿ ಹೋಗಿಬರುವ ಮಾರ್ಗವನ್ನು ಕಲ್ಪಿಸಿದೆ. ಆದ್ದರಿಂದ ಮಧ್ಯಕಿವಿಯಲ್ಲಿ ಗಾಳಿಯ ಒತ್ತಡ ಹೊರಗಿನ ವಾತಾವರಣದ ಒತ್ತಡದಷ್ಟೇ ಆಗಿರುವುದು. ಸಾಮಾನ್ಯವಾಗಿ ಚಪ್ಪಟೆಯಾಗಿ ಗಾಳಿಯ ಮಾರ್ಗವನ್ನು ತಡೆದಿರುವ ಈ ಕೊಳವೆ ನಾವು ಉಗುಳು ನುಂಗಿದಾಗ ತೆರೆಯಲ್ಪಟ್ಟು ಬಾಯಿಯಲ್ಲಿರುವ ಗಾಳಿಯೊಡನೆ ಸಂಪರ್ಕವುಂಟಾಗುವುದು. ವಿಮಾನದಲ್ಲಿ ಪ್ರಯಾಣ ಮಾಡುವಾಗಲೋ, ಎತ್ತರದಲ್ಲಿ ಶೀಘ್ರವಾಗಿ ಏರಿ ಇಳಿಯುತ್ತಿರುವಾಗಲೋ ಒಳಗಿವಿಯ ಗಾಳಿಯ ಒತ್ತಡ ಏರುಪೇರಾದಾಗ ಎಂಜಲು ನುಂಗಿಕೊಂಡರೆ ಒತ್ತಡ ಕಿವಿಯ ತಮಟೆಯ ಎರಡೂ ಭಾಗಗಳಲ್ಲಿ ಸಮವಾಗಿ ಕಿವಿಯಲ್ಲಿನ ಅಸ್ವಸ್ಥತೆ ದೂರವಾಗುತ್ತದೆ. ಈ ಕೊಳವೆಯಿಂದ ಮಧ್ಯ ಕಿವಿಯಲ್ಲಿ ಜನಿತವಾದ ದ್ರವಗಳೂ ಹೊರಗೆ ಹರಿಯುತ್ತವೆ. ಗಂಟಲಿನ ರೋಗಗಳಿಂದ ಉತ್ಪತ್ತಿಯಾದ ರೋಗಾಣುಗಳು ಕಿವಿಗೂ ಸೇರಿ ಕಿವಿಯ ನೋವನ್ನು ಉಂಟುಮಾಡುತ್ತವೆ.

ಮಧ್ಯಕಿವಿಯ ಹೊರಭಾಗ ತಮಟೆ. ಇದು ಒಂದು ಅತಿ ಸೂಕ್ಷ್ಮವಾದ ಚರ್ಮದ ಪೊರೆ. ಇದರ ದಪ್ಪ ಸು. 0.01 ಮಿಮೀ. ತಮಟೆಯ ಆಕಾರ ಚಪ್ಪಟೆಯಾಗಿಲ್ಲ. ಇದರ ಮಧ್ಯಭಾಗ ಕಿವಿಯ ಒಳಕ್ಕೆ ಸ್ವಲ್ಪ ಎಳೆಯಲ್ಪಟ್ಟಿರುವುದರಿಂದ ಇದು ಅಗಲವಾದ ಬುಡ ಮತ್ತು ಗಿಡ್ಡವಾದ ಎತ್ತರವುಳ್ಳ ಸಕ್ಕರೆಯ ಪೊಟ್ಟಣದ ಆಕಾರ ತಾಳಿದೆ. ತಮಟೆ ಶಬ್ದನಾಲೆಯಿಂದ ಬಂದ ಶಬ್ದಗಳನ್ನು ಕಂಪನಗಳ ಮೂಲಕ ಸಣ್ಣ ಅಸ್ಥಿಗಳಿಗೆ ತಲುಪಿಸುತ್ತದೆ. ಮೂಳೆಗಳ ಸರಪಣಿಯಲ್ಲಿ ಮೂರು ಅಸ್ಥಿಗಳಿವೆ. ಅವುಗಳ ಆಕಾರವನ್ನು ಅನುಸರಿಸಿ ಮ್ಯಾಲಿಯಸ್ (ಲ್ಯಾಟನ್ನಿನಲ್ಲಿ ಸುತ್ತಿಗೆ), ಇಂಕಸ್ (ಲ್ಯಾಟಿನ್ನಿನಲ್ಲಿ ಬಡಿಗಲ್ಲು) ಮತ್ತು ಸ್ಟೆಪಿಸ್ (ಲ್ಯಾಟಿನ್ನಿನಲ್ಲಿ ರಿಕಾಪು) ಎಂದು ಕರೆಯುತ್ತಾರೆ. ಸುತ್ತಿಗೆ ತಮಟೆಯ ಒಂದು ಭಾಗಕ್ಕೆ ಜೋಡಿಸಲ್ಪಟ್ಟಿದೆ. ಮಧ್ಯಕಿವಿ ಎರಡು ಮುಖ್ಯವಾದ ಕೆಲಸಗಳನ್ನು ನಿರ್ವಹಿಸುತ್ತದೆ. ಮೊದಲನೆಯದಾಗಿ ಇದು ಗಾಳಿಯಲ್ಲಿನ ಶಬ್ದವನ್ನು ಹೆಚ್ಚು ನಷ್ಟವಿಲ್ಲದೆ ಒಳಗಿವಿಯ ದ್ರವಗಳಿಗೆ ತಲುಪಿಸುತ್ತದೆ. ಗಾಳಿಗೂ ಭಾರವಾದ ದ್ರವಗಳಿಗೂ ವಿಷಮವಾದ ಪ್ರತಿಬಾಧಾ (ಇಂಪೆಡೆನ್ಸ್) ಸಾಮರ್ಥ್ಯಗಳಿರುವುದರಿಂದ ನೇರವಾದ ಸಂಪರ್ಕದಿಂದ ಶಕ್ತಿಯ ಬದಲಾವಣೆ ದಕ್ಷವಾಗಿ ನಡೆಯದು; ತಮಟೆ ಮತ್ತು ಅಸ್ಥಿಗಳ ಮೂಲಕ ಬದಲಾವಣೆ ದಕ್ಷವಾಗಿ ನಡೆಯುತ್ತದೆ. ಏಕೆಂದರೆ ಈ ವ್ಯವಸ್ಥೆಯಲ್ಲಿ ಪ್ರತಿಬಾಧಾಸಾಮರ್ಥ್ಯಗಳು ಸಾಮ್ಯವಾಗಿಸಲ್ಪಟ್ಟಿವೆ. ಎರಡನೆಯದಾಗಿ ಮೂಳೆಗಳು ಸನ್ನೆಗೋಲುಗಳಂತೆ ವರ್ತಿಸುವುದರಿಂದ ಕಂಪನಗಳನ್ನು ಯಶಸ್ವಿಯಾಗಿ ಪಸರಿಸುತ್ತವೆ. ಒಳಗಿವಿಯ ಬಾದಾಮಿಯಾಕಾರದ ಕಿಟಕಿ ಸಣ್ಣದು, ಇದರ ವಿಸ್ತೀರ್ಣ ಸುಮಾರು 3 ಚಮಿಮಿ ನಷ್ಟು ಮಾತ್ರ. ಕಿವಿಯ ತಮಟೆ ಇದಕ್ಕಿಂತ ಸುಮಾರು 30ರಷ್ಟು ವಿಸ್ತಾರವಾಗಿದೆ (ಆಯ ಸುಮಾರು 60 ಚಮಿಮೀ). ಕಿವಿಯ ತಮಟೆ ಹೆಚ್ಚು ಶಬ್ದ ಶಕ್ತಿಯನ್ನು ಗ್ರಹಿಸಿ ಅದನ್ನು ಮೂಳೆಗಳ ಮೂಲಕ ಒಳಗಿವಿಗೆ ತಲುಪಿಸುತ್ತದೆ. ಒಳಗಿವಿಗೆ ಹೊರಗಿವಿಯಲ್ಲಿದ್ದ ಕಂಪನಗಳಿಗಿಂತ ಹೆಚ್ಚಿನ ಒತ್ತಡದ ಕಂಪನಗಳು ದೊರೆಯುತ್ತವೆ. ಅತಿ ಗಟ್ಟಿಯಾದ ಶಬ್ದ ಕಿವಿಯ ಮೇಲೆ ಬಿದ್ದಾಗ ಕಿವಿ ತನ್ನನ್ನು ತಾನೇ ಪ್ರತಿವರ್ತಿಕ್ರಿಯೆಯಿಂದ (ರಿಫ್ಲೆಕ್ಸ್ ಆಕ್ಷನ್) ರಕ್ಷಿಸಿಕೊಳ್ಳುತ್ತದೆ. ಈ ವ್ಯವಸ್ಥೆಯಿಂದ ಗಟ್ಟಿಯಾದ ಶಬ್ದ ಕೇಳಿದೊಡನೆಯೇ ಒಂದು ಮಾಂಸಖಂಡ ತಮಟೆಯನ್ನು ಒಳಗೆ ಎಳೆದು ಅದನ್ನು ಹೆಚ್ಚು ಕಠಿಣವನ್ನಾಗಿ ಮಾಡುತ್ತದೆ. ಇನ್ನೊಂದು ಮಾಂಸಖಂಡ ರಿಕಾಪನ್ನು ಒಳಗಿವಿಯಿಂದ ಹಿಂದೆ ಎಳೆಯುತ್ತದೆ, ಕಾರಿನಲ್ಲಿ ಕ್ಲಚ್ ಎಂಜಿನನ್ನೂ ಗಿಯರನ್ನೂ ಬೇರ್ಪಡಿಸುವಂತೆ. ಆದರೆ ಹಠಾತ್ತಾಗಿ ಗಟ್ಟಿಯಾದ ಶಬ್ದ ಉಂಟಾದರೆ ಈ ರಕ್ಷಣಾಸಾಧನಗಳು ಸಾಕಷ್ಟು ಶೀಘ್ರವಾಗಿ ಪ್ರತಿಕ್ರಿಯೆಯನ್ನು ತೋರಲಾರದೆ ಕಿವಿ ಅಪಾಯಕ್ಕೆ ಒಳಗಾಗುತ್ತದೆ.

ಒಳಗಿವಿ : ಡೊಂಕು ಡೊಂಕಾದ ಸುತ್ತುಗಳಿಂದ ಒಳಗೂಡಿದ, ಸುರಂಗ ಮಾರ್ಗಗಳಿಂದ ಕೂಡಿದ ಮತ್ತು ಗಟ್ಟಿಯಾದ ಮೂಳೆಯಿಂದ ನಿರ್ಮಿತವಾದ ಸಂಪುಟ ಒಳಗಿವಿ. ಇದರಲ್ಲಿ ಎರಡು ಮುಖ್ಯ ಭಾಗಗಳುಂಟು; ಕಾಕ್ಲಿಯ ಮತ್ತು ಅರ್ಧವರ್ತುಲಾಕಾರದ ನಾಲೆಗಳು. ಕಾಕ್ಲಿಯ (ಇದರ ಅರ್ಥ ಬಸವನ ಹುಳು ಅಥವಾ ಶಂಖದ ಹುಳು; ಏಕೆಂದರೆ ರೂಪದಲ್ಲಿ ಇದು ಬಸವನ ಹುಳುವನ್ನು ಹೋಲುತ್ತದೆ.) ಎಂದು ಕರೆಯಲ್ಪಡುವ ಭಾಗ ಶ್ರವಣಕಾರ್ಯದಲ್ಲಿ ಅತಿಮುಖ್ಯ. ಇದರೊಂದಿಗೆ, ಶ್ರವಣ ಕ್ರಿಯೆಯಲ್ಲಿ ಸಹಾಯಕವಲ್ಲದ, ಅರ್ಧವರ್ತುಲಾಕಾರದ ನಾಲೆಗಳಿಗೆ ನಿಕಟ ಸಾಮೀಪ್ಯ ಮತ್ತು ಸಂಪರ್ಕ ಉಂಟು. ಇವು ದೇಹದ ಸಮತೋಲವನ್ನು ಕಾಯ್ದಿಡಲು ಅಗತ್ಯ. ನಾಲೆಗಳ ಮತ್ತು ಕಾಕ್ಲಿಯದ ನಡುವೆ ನಾಲೆಗಳ ಕೆಲಸದಲ್ಲಿ ಸಹಕರಿಸುವ ವೆಸ್ಟಿಬ್ಯೂಲ್ (ಎಂದರೆ ಅಂಗಳ ಅಥವಾ ಹಜಾರ) ಎಂಬ ಕ್ಷೇತ್ರವುಂಟು. ಒಳಗಿವಿಯ ಅತಿ ದೊಡ್ಡದಾದ ಅಳತೆ ಸು. 2 ಸೆಂಮೀ ಅಸ್ಥಿನಿರ್ಮಿತವಾದ ಪೆಟ್ಟಿಗೆಯ ಒಳಗೆ ಅದೇ ಆಕಾರದ ಪ್ರಕೃತಿ ದತ್ತವಾದ, ದ್ರವಗಳಿಂದ ತುಂಬಿದ ಸುರಂಗಮಾರ್ಗಗಳಿವೆ. ಶ್ರವಣನರಗಳೆಲ್ಲ ಈ ಸುರಂಗಮಾರ್ಗಗಳಲ್ಲಿಯೇ ಕೊನೆಗಾಣುತ್ತವೆ. ನರಗಳ ಒಂದು ಗುಂಪು ಕಾಕ್ಲಿಯದಲ್ಲಿ ಪ್ರವೇಶಿಸಿ ಶಬ್ದಗಳನ್ನೂ ಇನ್ನೊಂದು ಗುಂಪು ಅರ್ಧವರ್ತುಲಾಕಾರದ ನಾಲೆಗಳನ್ನು ಪ್ರವೇಶಿಸಿ ಸಮತೋಲನದ ಸ್ಥಿತಿಯನ್ನೂ ಮಿದುಳಿಗೆ ತಿಳಿಸುತ್ತದೆ.

ಕಾಕ್ಲಿಯ: ಕಿವಿಯ ಅತಿಮುಖ್ಯಭಾಗ ಕಾಕ್ಲಿಯ (ಶಂಖ ಸುರುಳಿ ನಾಳ). ಮನುಷ್ಯನ ಕಿವಿಯಲ್ಲಿ ಇದು ಎರಡೂ ಮುಕ್ಕಾಲು ಸುತ್ತುಗಳಿಂದ ಕೂಡಿದ ಒಂದು ಸುರುಳಿಯಾಕಾರದ ಕೊಳವೆ (ನೋಡಿ–ಕಿವಿ). ಕಾಕ್ಲಿಯಾದ ಸುರುಳಿಯನ್ನು ಬಿಡಿಸಿ ಅದನ್ನು ಉದ್ದವಾಗಿ ಎಳೆದರೆ ಸು. 30 ಮಿಮೀ ಉದ್ದದ 3–4 ಮಿಮೀ ವ್ಯಾಸದ ಕೊಳವೆಯಾಗುತ್ತದೆ. ಕೊಳವೆಯನ್ನು ಅಡ್ಡವಾಗಿ ಕತ್ತರಿಸಿದರೆ ಅದರ ಮೂರು ಮಾರ್ಗಗಳನ್ನು ನೋಡಬಹುದು. ಮೇಲುಭಾಗದಲ್ಲಿ ಸ್ಕೇಲ ವೆಸ್ಟಿಬ್ಯುಲ ಇದೆ. ಸ್ಕೇಲ ವೆಸ್ಟಿಬ್ಯುಲ ಎಂದರೆ ವೆಸ್ಟಿಬ್ಯೂಲಿನ ಸೋಪಾನಮಾರ್ಗ ಎಂದರ್ಥ. ಈ ಹೆಸರಿಗೆ ಕಾರಣವೇನೆಂದರೆ ಈ ಮಾರ್ಗಕ್ಕೆ ಒಳಗಿವಿಯ ವೆಸ್ಟಿಬ್ಯೂಲಿನೊಂದಿಗೆ ಸಂಪರ್ಕ ಉಂಟು. ತೆಳುವಾದ ಪೊರೆಯಿಂದ ಆವೃತವಾದ ಸಣ್ಣ ರಂಧ್ರವೊಂದರ ಮೂಲಕ ಶಬ್ದಕಂಪನಗಳು ಮಧ್ಯಕಿವಿಯ ರಿಕಾಪಿನಿಂದ ವೆಸ್ಟಿಬ್ಯೂಲಿನ ಬುಡದ ಅಗಲವಾದ ತುದಿಯನ್ನು ಪ್ರವೇಶಿಸುತ್ತವೆ. ಈ ರಂಧ್ರದ ಹೆಸರು ಓವಲ್ ವಿಂಡೋ (ಬಾದಾಮಿಯಾಕಾರದ ಕಿಟಕಿ ಎಂದು ಅರ್ಥ). ಇದರ ವಿಸ್ತೀರ್ಣ ಸುಮಾರು 3 ಚ.ಮಿಮೀ. ಸ್ಕೇಲ ವೆಸ್ಟಿಬ್ಯೂಲಿನ ಕೆಳಭಾಗವನ್ನು ರೈಸ್ನರನ ಪೊರೆ ಎಂಬ ತೆಳುವಾದ ಚರ್ಮ ಕಾಕ್ಲಿಯದ ಒಳನಾಲೆಯಿಂದ ಪ್ರತ್ಯೇಕಿಸಿದೆ. ಸ್ಕೇಲ ವೆಸ್ಟಿಬ್ಯೂಲಿನ ಸಣ್ಣತುದಿ ಹೆಲಿಕೊಟ್ರಿಮ ಎಂಬ ಸ್ಥಳದಲ್ಲಿ ಕೊನೆಗೊಂಡು ಇಲ್ಲಿ ಕಾಕ್ಲಿಯದ ಕೆಳಭಾಗದ ಮಾರ್ಗವಾದ ಸ್ಕೇಲ ವೆಸ್ಟಿಬ್ಯೂಲ, ಸ್ಕೇಲ ಟಿಂಪನಿಯೊಂದಿಗೆ ಸಂಪರ್ಕ ಪಡೆದಿದೆ. ಸ್ಕೆಲ ವೆಸ್ಟಿಬ್ಯುಲ, ಸ್ಕೆಲ ಟಿಂಪನಿ ಮತ್ತು ವೆಸ್ಟಿಬ್ಯೂಲ್‌ಗಳು ಪೆರಿಲಿಂಫ್ ಎಂಬ ದ್ರವದಿಂದ ತುಂಬಿವೆ. ಸ್ಕೇಲ ಟಿಂಪನಿ ಎಂದರೆ ಟಿಂಪನಂ ಸೋಪಾನಮಾರ್ಗ ಎಂದು ಅರ್ಥ. ಈ ಮಾರ್ಗ ಕಾಕ್ಲಿಯದ ಬುಡದ ಭಾಗದಲ್ಲಿರುವ ರೌಂಡ್ ವಿಂಡೋ (ಗುಂಡು ಕಿಟಕಿ ಎಂದು ಅರ್ಥ) ಎಂಬ ಹೆಸರಿನ ಸಣ್ಣ ವರ್ತುಲಾಕಾರದ ತೆಳುವಾದ ಪದರದಿಂದ ಆವೃತವಾದ ರಂಧ್ರದ ಮೂಲಕ ಟಿಂಪನಂ ಸ್ಥಳ ಎಂಬ ಹೆಸರಿನ ಮಧ್ಯಕಿವಿಯೊಡನೆ ಸಂಬಂಧ ಪಡೆದಿದೆ. ಸ್ಕೇಲ ಟಿಂಪನಿ ಮಧ್ಯದ ನಾಲೆಯಾದ ಸ್ಕೇಲ ಮೀಡಿಯದಿಂದ ಬೇಸಿಲರ್ ಮೆಂಬ್ರೇನ್ (ಎಂದರೆ ಬುಡದ ಚರ್ಮ) ಕಾಕ್ಲಿಯಾ ಉದ್ದಕ್ಕೂ ಹರಡಿ ಮಧ್ಯದ ಅಂಚಿನಲ್ಲಿ ಸುರುಳಿಯಾಗಿರುವ ಮೂಳೆಯ ಒಂದು ಬಡುವಿನ (ಶೆಲ್ಫ್) ಆಧಾರವನ್ನು ಪಡೆದಿರುವ ಒಂದು ಮಂದವಾದ ಪದರದಿಂದ ಪ್ರತ್ಯೇಕಿಸಲ್ಪಟ್ಟಿದೆ. ಸ್ಕೇಲ ಮೀಡಿಯದಲ್ಲಿರುವ ಜಟಿಲವಾದ ರಚನೆಗಳನ್ನು ಕಾಕ್ಲಿಯದೊಳಗೆ ಪ್ರವೇಶಿಸಿರುವ ನರಗಳ ತುದಿಗಳೂ ಕೇಶಕೋಶ (ಹೇರ್ ಸೆಲ್ಸ್) ಎಂಬ ಹೆಸರಿನ ಕೂದಲಿನಂಥ ಸಣ್ಣಕೋಶಗಳನ್ನು ಒಳಗೊಂಡಿರುವ ಕಾರ್ಟಿಯ ಅವಯವವೂ ಇವೆ. ಸ್ಕೇಲಮೀಡಿಯವೂ ಕಾಕ್ಲಿಯದ ಹೊರಗೆ ಇರುವ ಅರ್ಧವರ್ತುಲಾಕಾರದ ನಾಲೆಗಳೂ ಎಂಡೋಲಿಂಫ್ ಎಂಬ ದ್ರವದಿಂದ ತುಂಬಿವೆ. ಎಂಡೋಲಿಂಫ್ ವಿಕಾಸಶ್ರೇಣಿಯಲ್ಲಿ ಪುರಾತನವಾದ ಪ್ರಾಣಿಗಳ ಕಿವಿಯಲ್ಲಿ ಸಹ ಉಂಟು. ಪೆರಿಲಿಂಫ್ ವಿಕಾಸದ ಅತ್ಯುಚ್ಚ ಪ್ರಾಣಿಗಳಲ್ಲಿ ಮಾತ್ರ ಇರುತ್ತದೆ. ಉದಾಹರಣೆಗೆ ಮೀನುಗಳಲ್ಲಿ ಪೆರಿಲಿಂಫ್ ಇಲ್ಲ. ಕಿಟಕಿಗಳೂ ಇಲ್ಲ. ಬಾದಾಮಿಕಿಟಕಿಯೂ ಗುಂಡುಕಿಟಕಿಯೂ ಪದರದಿಂದ ಆವೃತವಾಗಿರುವುದರಿಂದ ಪೆರಿಲಿಂಫ್ ಕಾಕ್ಲಿಯದ ಹೊರಗೆ ಚೆಲ್ಲುವುದಿಲ್ಲ. ಶಬ್ದಕಂಪನಗಳು ಹೊರಗಿವಿ, ಮಧ್ಯಕಿವಿಗಳ ಮಾರ್ಗವಾಗಿ ಬಾದಾಮಿಕಿಟಕಿಯನ್ನು ತಲುಪುತ್ತವೆ; ಅಲ್ಲಿ ಎಂಡೋಲಿಂಫನ್ನು ಕಂಪನಗಳಿಗೆ ಒಳಪಡಿಸುತ್ತದೆ. ಕಂಪನಗಳ ಚಲನೆ ಬಾದಾಮಿಕಿಟಕಿಯಿಂದ ಸ್ಕೇಲ ವೆಸ್ಟಿಬ್ಯೂಲವನ್ನು ಹಾದು ಹೆಲಿಕೊಟ್ರಿಮದ ಮೂಲಕ ಸ್ಕೇಲ ಟಿಂಪನಿಯನ್ನು ಪ್ರವೇಶಿಸಿ ಕಡೆಗೆ ಗುಂಡು ಕಿಟಕಿಯನ್ನೂ ಕಂಪಿಸುವಂತೆ ಮಾಡುತ್ತದೆ. ದ್ರವಪದಾರ್ಥವನ್ನು ಸಂಕುಚಿಸುವುದು ಅತಿ ಕಷ್ಟವಾದುದರಿಂದ ಬಾದಾಮಿಕಿಟಕಿಯ ಚಲನೆಗಳು ಎಂಡೋಲಿಂಫನ್ನೂ ಚಲಿಸುವಂತೆ ಮಾಡಬೇಕಾದರೆ ಗುಂಡುಕಿಟಕಿಯು ವಿರುದ್ಧ ಗತಿಯಲ್ಲಿ ಚಲಿಸುವುದರಿಂದಲೇ ಅದು ಸಾಧ್ಯ. ಆದ್ದರಿಂದಲೇ ಒಂದು ಕಿಟಕಿ ಯಾವುದಾದರೂ ಕಾರಣದಿಂದ ಅನಾರೋಗ್ಯಯುತವಾದ ಗಡುಸಾದ ಪೊರೆಯಿಂದ ಮುಚ್ಚಿಹೋದರೆ ಕಿವುಡು ಉಂಟಾಗುತ್ತದೆ. ಇದನ್ನು ನಿವಾರಿಸಲು ಶಸ್ತ್ರವೈದ್ಯ ಒಂದು ಶಸ್ತ್ರಕ್ರಿಯೆಯಿಂದ ಒಳಗಿವಿಯ ಅಸ್ಥಿ ಸಂಪುಟದಲ್ಲಿ ಇನ್ನೊಂದು ರಂಧ್ರವನ್ನು ಕೊರೆದು ಅದನ್ನು ಹೊರಗಿವಿಯ ಶಬ್ದನಾಲೆಯಿಂದ ತೆಗೆಯಲ್ಪಟ್ಟ ಸಣ್ಣ ಪದರದ ಚೂರಿನಿಂದ ಮುಚ್ಚುತ್ತಾನೆ. ಈ ಚರ್ಮ ಸರಿಯಾಗಿ ಬೆಳೆದುಕೊಂಡರೆ ಕಿವುಡು ನಿವಾರಣೆಯಾಗುತ್ತದೆ.

ರೈಸನ್ನರ ಪೊರೆ ಅತಿ ನಾಜೂಕಾದುದರಿಂದ ಸ್ಕೇಲ ವೆಸ್ಟಿಬ್ಯೂಲಿಯ ಎಂಡೋಲಿಂಫ್ ಕಂಪನಗಳು ಅತಿ ಸುಲಭವಾಗಿ ಸ್ಕೇಲ ಮೀಡಿಯವನ್ನು ಪ್ರವೇಶಿಸಿ ಕಾರ್ಟಿಯ ಅವಯವದಲ್ಲಿರುವ ಕೇಶಕೋಶಗಳನ್ನು ಕಂಪನಗಳ ಪ್ರಭಾವಕ್ಕೆ ಒಳಗಾಗಿಸುತ್ತವೆ.

ಕಾಕ್ಲಿಯದಲ್ಲಿ ನರಗಳ ಆವೇದನೆ ಹೇಗೆ ಜನಿಸುತ್ತವೆ ಎಂಬ ಪ್ರಶ್ನೆಗೆ ಉತ್ತರವಾಗಿ ಎರಡು ಮುಖ್ಯ ಅಭಿಪ್ರಾಯಗಳುಂಟು. ಕೆಲವರು ಬೇಸಿಲಾರ್ ಪೊರೆಯ ಸಮೀಪದಲ್ಲಿರುವ ದ್ರವಗಳು ಆವೇದನೆಗಳನ್ನು ಉಂಟು ಮಾಡುತ್ತವೆ ಎಂದು ತಿಳಿದಿದ್ದಾರೆ. ಕೇಶಕೋಶಗಳಲ್ಲಿಯೇ ಇವು ಹುಟ್ಟುತ್ತವೆ ಎಂದು ಹೆಚ್ಚಿನ ಸಂಖ್ಯೆಯ ಶ್ರವಣವಿಜ್ಞಾನಿಗಳು ನಂಬುತ್ತಾರೆ.

ಒಳಗಿವಿಯ ರಚನೆ, ಕಾರ್ಯಗಳ ವಿವರಗಳೆಲ್ಲವನ್ನೂ ನಾವು ಜಾರ್ಜ್ ವಾನ್ ಬೆಕೆಸಿ ನಡೆಸಿದ ಸಂಶೋಧನೆಗಳಿಂದ ತಿಳಿದಿದ್ದೇವೆ. ಉದಾಹರಣೆಗೆ 1940ರಲ್ಲಿ ಆತ ನಡೆಸಿದ ಒಂದು ಪ್ರಯೋಗದಲ್ಲಿ ಒಂದು ಮಾನವಶವವನ್ನು ಕತ್ತರಿಸಿ ಅದರ ಕಾಕ್ಲಿಯವನ್ನು ಇದಕ್ಕಾಗಿಯೇ ಆತನೇ ನಿರ್ಮಿಸಿದ ವಿಶೇಷ ಉಪಕರಣಗಳಿಂದ ಜೋಪಾನವಾಗಿ ಹೊರತೆಗೆದು, ನೀರಿನಲ್ಲಿಟ್ಟು ಅಲ್ಲಿಯೇ ಪರಿಶೀಲಿಸಿದ. ಒಂದು ವಿದ್ಯುತ್ಕಾಂತ ಚಾಲಕ(ಡ್ರೈವರ್) ಉಪಕರಣವನ್ನು ಬಾದಾಮಿಕಿಟಕಿಗೆ ಜೋಡಿಸಿ ವಿದ್ಯುತ್ತಿನ ಸಹಾಯದಿಂದ ಅದನ್ನು ಕಂಪಿಸುವಂತೆ ಮಾಡಿದ. ಕಾಕ್ಲಿಯದ ಗೋಡೆಯಲ್ಲಿ ಒಂದು ರಂಧ್ರಮಾಡಿ ಒಳಗಿನ ಚಲನೆಗಳನ್ನು ನಿರೀಕ್ಷಿಸಿದ. ಬಾದಾಮಿ ಕಿಟಕಿ ಕಂಪಿಸಿದಾಗ (ಶಬ್ದ ಕಿವಿಯಲ್ಲಿ ಬಿದ್ದಾಗಲೂ ರಿಕಾಪಿನಿಂದ ಈ ಕಿಟಕಿ ಕಂಪಿಸುತ್ತದೆ) ಬೇಸಿಲಾರ್ ಪೊರೆ ಕಂಪಿಸುವುದು ಕಂಡುಬಂತು. ಬೇರೆ ಬೇರೆ ಆವರ್ತಾಂಕದ ಕಂಪನಗಳು ಬೇಸಿಲಾರ್ ಪೊರೆಯೂ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಶಕ್ತಿಯುತವಾದ ಕಂಪನಗಳನ್ನು ಉತ್ಪಾದಿಸುವುದು ಕಂಡಿತು. ಈ ಪ್ರಯೋಗದಿಂದ ಶ್ರವಣ ಸ್ಥಾನವಾದಕ್ಕೆ ಬೆಂಬಲ ದೊರೆಯಿತು. ಬೆಕೆಸಿಯ ಸಂಶೋಧನೆಗಳು ಅಪಾರವಾದ ಕೌಶಲ, ಸಹನೆಗಳಿಂದ ಕೂಡಿದ್ದು ಸಾರ್ವತ್ರಿಕವಾದ ಮೆಚ್ಚುಗೆಯನ್ನು ಗಳಿಸಿವೆ. ಅಭೇದ್ಯವಾದ ಮೂಳೆಯ ಕೋಟೆಯಲ್ಲಿ ಸೆರೆ ಹಿಡಿಯಲ್ಪಟ್ಟ ಕಾಕ್ಲಿಯವನ್ನು ಹೊರಗಿನ ಬೆಳಕಿಗೆ ತರುವುದೇನೂ ಸಾಮಾನ್ಯವಾದ ಸಾಧನೆಯಲ್ಲ.

ಕಿವಿ ಶಬ್ದವನ್ನು ಗ್ರಹಿಸುತ್ತದೆ. ಮಿದುಳು ಶಬ್ದದ ಅನುಭವವನ್ನು ಪಡೆಯುತ್ತದೆ. ನರಗಳು ಕಿವಿಯಿಂದ ಮಿದುಳಿಗೆ ಶಬ್ದದ ಸಂದೇಶವನ್ನು ತಲುಪಿಸುವ ಸೇತುವೆಗಳು. ಶ್ರವಣನರಗಳ ನಾಶ ಅಥವಾ ರೋಗಗಳಿಂದ ಕಿವುಡು ತಲೆದೋರುತ್ತದೆ.

ಶ್ರವಣ ನರ : ಶ್ರವಣ ನರದಲ್ಲಿ ಸುಮಾರು 30,000 ಪ್ರತ್ಯೇಕ ನ್ಯೂರಾನ್‌ಗಳಿವೆ (ನರಕೋಶಗಳು). ನರಗಳು ಕಾಕ್ಲಿಯದ ಮಧ್ಯಭಾಗದಿಂದ ಹೊರಟು ಕಾಕ್ಲಿಯದ ಸುತ್ತುಗಳನ್ನೇ ಅನುಸರಿಸಿ ಸುತ್ತಿಕೊಂಡಿವೆ. ಕಾಕ್ಲಿಯದ ಇಡೀ ಉದ್ದವನ್ನು ಮುಟ್ಟಲು ನ್ಯೂರಾನ್‌ಗಳು ಮುಖ್ಯವಾದ ನ್ಯೂರಾನ್‌ಗಳ ಹೊರೆಯಿಂದ ಅಲ್ಲಲ್ಲಿ ದಾರಿಯುದ್ದಕ್ಕೂ ಬಿಡಿಸಿಕೊಳ್ಳುತ್ತವೆ. ಕಾಕ್ಲಿಯದ ಮಧ್ಯದ ವಿಂಗಡಿಸುವ ಪೊರೆಯ ಒಳಹೊಕ್ಕು ಕಾರ್ಟಿ ಅವಯವದ ಒಳಕ್ಕೆ ಕೇಶಕೋಶಗಳ ಸಮೀಪವನ್ನು ತಲುಪುತ್ತವೆ. ಶ್ರವಣನರದ ಇನ್ನೊಂದು ತುದಿ ಕೇಂದ್ರನರವ್ಯವಸ್ಥೆಯನ್ನು ಸೇರುತ್ತದೆ. ಹೀಗೆ ಸೇರುವ ಸ್ಥಳಕ್ಕೆ ಕಾಕ್ಲಿಯ ಕೇಂದ್ರಪ್ರದೇಶ (ಕಾಕ್ಲಿಯರ್ ನ್ಯೂಕ್ಲಿಯಸ್) ಎಂದು ಹೆಸರು. ಇಲ್ಲಿ ಅಸಂಖ್ಯಾತವಾದ ಕೋಶಗಳು ಸೇರಿಹೋಗಿವೆ. ಈ ಕೇಂದ್ರದಿಂದ ಹೊರಡುವ ನ್ಯೂರಾನ್‌ಗಳಲ್ಲಿ ಕೆಲವು ಇನ್ನೊಂದು ನರಗಳ ಕೇಂದ್ರವನ್ನೂ ಕೆಲವು ನ್ಯೂರಾನ್‌ಗಳು ವಿವಿಧ ಕೇಂದ್ರ ಪ್ರದೇಶಗಳ ಮೂಲಕ ಮಿದುಳಿನ ಕೆಳಕಾಂಡವನ್ನೂ ಕೆಲವು ಇನ್ನೊಂದು ಕಿವಿಯಿಂದ ಬರುವ ತಮ್ಮಂಥವೇ ನರಗಳನ್ನೂ ತಲುಪುತ್ತವೆ. ಹೀಗೆ ಎರಡು ಕಿವಿಗಳ ನರಗಳೂ ಮಿದುಳನ್ನು ತಲುಪುವ ಮೊದಲೇ ಪರಸ್ಪರ ಸಂಪರ್ಕ ಹೊಂದಿರುತ್ತವೆ. ಕೆಲವು ನ್ಯೂರಾನ್‌ಗಳು ಕಾಕ್ಲಿಯ ಕೇಂದ್ರಪ್ರದೇಶದಿಂದ ಹೊರಟು ಎರಡು ಕೇಂದ್ರಗಳ ಮೂಲಕವಾಗಿ ಮಿದುಳಿನ ಸೆರೆಬ್ರಲ್ ಕಾರ್ಟೆಕ್ಸ್‌ನ (ಮೇಲು ಮಿದುಳಿನ ತೊಗಟೆ) ಶ್ರವಣದ ಭಾಗಗಳನ್ನು ಸೇರುತ್ತವೆ. ಈ ಭಾಗಗಳು ಮಿದುಳಿನ ಎರಡೂ ಪಕ್ಕಗಳಲ್ಲಿ ಇವೆ. ನೇರವಾದ ಮಾರ್ಗವಲ್ಲದೆ ಇನ್ನೂ ಎರಡು ದಾರಿಗಳನ್ನು ಸಹ ಗುರುತಿಸಲಾಗಿದೆ. ಇವಲ್ಲದೆ ಮಿದುಳಿನಿಂದ ಕೆಳಗೆ ಇಳಿಯುವ ಮಾರ್ಗಗಳನ್ನು ಕೂಡ ಕಂಡುಹಿಡಿಯಲಾಗಿದೆ. ಇವು ಮಿದುಳಿನಿಂದ ಆಜ್ಞೆಯ ಸಮಾಚಾರಗಳನ್ನು ಕಿವಿಯ ಕಡೆಗೆ ತಲುಪಿಸುತ್ತವೆ. ಇದು ಅತ್ಯಂತ ಜಟಿಲವಾದ ಸಮಸ್ಯೆ. ಒಂದೊಂದು ನರವೂ ಹಲವು ಕೇಂದ್ರಗಳ ಮೂಲಕ ನೂರಾರು ನರಗಳ ಸಂಪರ್ಕವನ್ನು ಪಡೆಯಬಹುದಾಗಿದೆ. ಇದರಿಂದ ಉಂಟಾಗಬಹುದಾದ ಮಾರ್ಗಗಳ ಸಂಖ್ಯೆ ಅಸಂಖ್ಯಾತ. ಈ ಜಟಿಲ ಸಮಸ್ಯೆಯನ್ನು ನಾವು ಕಿಂಚಿತ್ತಾದರೂ ಅರ್ಥಮಾಡಿಕೊಂಡಿರುವುದೇ ಆಶ್ಚರ್ಯ.

ಶಬ್ದವೈಶಾಲ್ಯ : ಒಂದು ನರದ ಡೆಂಡ್ರೈಟ್‌ಗಳಿಗೆ ಹೆಚ್ಚು ಹೆಚ್ಚು ಮೌಲ್ಯದ ಶಕ್ತಿಯನ್ನು ಮುಟ್ಟಿಸುತ್ತ ಹೋದರೆ ಅದು ಎಲ್ಲ ಅಥವಾ ಏನೂ ಇಲ್ಲ ತತ್ತ್ವದಂತೆ ಶಕ್ತಿಪರಿಮಿತಿಯ ಮೌಲ್ಯಕ್ಕಿಂತ ಕಡಿಮೆಯಾಗಿದ್ದಾಗ ನರದಲ್ಲಿ ಪ್ರತಿಕ್ರಿಯೆ ಇರದು. ಪರಿಮಿತಿಯ ಮೌಲ್ಯಕ್ಕಿಂತ ಹೆಚ್ಚಿನ ಶಕ್ತಿ ದೊರೆತಾಗ ನರ ಒಂದು ವಿದ್ಯುತ್ತಿನ ಸ್ಪಂದನವನ್ನು ಹರಿಸುತ್ತದೆ. ಶಕ್ತಿಯ ಮೌಲ್ಯ ಎಷ್ಟೇ ಹೆಚ್ಚಾದರೂ ಸ್ಪಂದನದ ರೂಪ ಅದೇ, ಬದಲಾಗದು. ಶಕ್ತಿಯ ಮೌಲ್ಯವನ್ನು ಅಳೆಯಲು ನರಗಳು ಸ್ಪಂದನಗಳ ಆವರ್ತಾಂಕವನ್ನು ಬಳಸುತ್ತವೆ. ನರ ಶಬ್ದದ ಗಾತ್ರವನ್ನು ಸ್ಪಂದನಗಳ ಆವರ್ತಾಂಕವನ್ನಾಗಿ ಪರಿವರ್ತಿಸುತ್ತದೆ. ಹೆಚ್ಚು ಗಾತ್ರವಿದ್ದರೆ ಹೆಚ್ಚು ಸಂಖ್ಯೆಯ ಸ್ಪಂದನಗಳು ಒಂದನ್ನೊಂದು ಹಿಂಬಾಲಿಸಿಕೊಂಡು ಬರುತ್ತವೆ. ಆದರೆ ನರದಲ್ಲಿ ಆವರ್ತಾಂಕಕ್ಕೆ ಮಿತಿಯುಂಟು. ಸ್ಪಂದನದ ಅಗಲವೇ 102 ಮಿಲಿ ಸೆಕೆಂಡುಗಳು. ಅದು ಹರಿದ ಮೇಲೆ ರಿಫ್ರಾಕ್ಟರಿ ಕಾಲ ಇನ್ನೊಂದು ಮಿಲಿಸೆಕೆಂಡು. ಹೀಗೆ ಒಂದು ಸ್ಪಂದನ ಹರಿದ ಮೇಲೆ ಇನ್ನೊಂದು ತೊಡಗಲು ಸುಮಾರು 3 ಮಿಲಿ ಸೆಕೆಂಡ್‌ಗಳು ಬೇಕು. ಸೆಕೆಂಡಿನಲ್ಲಿ ಸಾವಿರ ಮಿಲಿಸೆಕೆಂಡುಗಳಿವೆಯಾದ್ದರಿಂದ ಒಂದು ನರದಲ್ಲಿ ಸೆಕೆಂಡಿಗೆ ಸು. 300 ಸ್ಪಂದನಗಳು ಮಾತ್ರ ಹರಿಯಲು ಸಾಧ್ಯ. (1000/3=333). ಇದಕ್ಕಿಂತ ಹೆಚ್ಚಿನ ಆವರ್ತಾಂಕ ಒಂದೇ ನರದಲ್ಲಿ ದೊರೆಯುವುದಿಲ್ಲ. ಹಲವು ನರಗಳು ಒಂದೇ ಶಬ್ದದ (ಅಥವಾ ಬೇರೆ ಪ್ರಚೋದಕಶಕ್ತಿಯ) ವೈಶಾಲ್ಯವನ್ನು ಹಂಚಿಕೊಂಡು ತಾವು ಸ್ಪಂದನಗಳನ್ನು ಬೇರೆ ಬೇರೆ ಕಾಲಗಳಲ್ಲಿ ಹೊರಡಿಸುವುದರಿಂದ ಒಟ್ಟಿನ ಸ್ಪಂದನಗಳ ಸಂಖ್ಯೆ ಶಬ್ದವೈಶಾಲ್ಯವನ್ನು ತೋರಿಸುತ್ತದೆ.

ಶಕ್ತಿಯ ಆವರ್ತಾಂಕ: ನರಗಳಲ್ಲಿ ಹರಿಯುವ ಸ್ಪಂದನಗಳ ಆವರ್ತಾಂಕ ಶಕ್ತಿಯ ವೈಶಾಲ್ಯವನ್ನು ತೋರಿಸುತ್ತದಾದರೆ ಶಕ್ತಿಯ ಆವರ್ತಾಂಕ ನರದಲ್ಲಿ ಯಾವ ರೀತಿಯಲ್ಲಿ ಪ್ರತಿಫಲಿತವಾಗುವುದು? ಬೆಳಕು, ಶಬ್ದ ಎರಡೂ ಶಕ್ತಿಯ ವಿವಿಧ ರೂಪದ ಅಲೆಗಳಾಗಿರುವುದರಿಂದ ಅವುಗಳಿಗೆ ವಿಶಿಷ್ಟವಾದ ಆವರ್ತಾಂಕಗಳಿವೆ. ಶಬ್ದದ ಶ್ರುತಿ (ಪಿಚ್) ಅದರ ಆವರ್ತಾಂಕವನ್ನು ಅವಲಂಬಿಸಿದೆ. ಶಬ್ದದ ಶ್ರುತಿ ಮತ್ತು ಗುಣವನ್ನು ಶ್ರವಣೇಂದ್ರಿಯ ಹೇಗೆ ಗುರುತಿಸುತ್ತದೆ ಎಂಬುದೊಂದು ಅತಿಮುಖ್ಯ ಪ್ರಶ್ನೆ. ಶ್ರವಣದ ಹಲವು ಸಿದ್ಧಾಂತಗಳು ಸಮಸ್ಯೆಗೆ ಉತ್ತರವನ್ನು ಹುಡುಕಲು ಸಹಾಯ ಮಾಡುತ್ತವೆ.

4. ಶಬ್ದಗ್ರಹಣ ವಿಧಾನ : ಶಬ್ದತರಂಗಗಳು ಶಬ್ದನಾಲೆಯನ್ನು ಪ್ರವೇಶಿಸಿ ಕಿವಿಯ ತಮಟೆಯನ್ನು ತಟ್ಟಿ ಮಧ್ಯಕಿವಿಯ ಮೂರು ಕಿರುಮೂಳೆಗಳ ಮೂಲಕ ಒಳಗಿವಿಯ ಕಾಕ್ಲಿಯವನ್ನು ತಲುಪುವುದು ಯಾಂತ್ರಿಕ ಕ್ರಿಯೆ. ಅದೂ ಪರಿಶೀಲನೆಗೆ ಸುಲಭವಾಗಿ ಒಳಪಡಬಹುದಾದ ಸ್ಥಳದಲ್ಲಿ ನಡೆಯುತ್ತದೆ. ಕಾಕ್ಲಿಯದಲ್ಲಿ ಶಬ್ದ–ಸಮಾಚಾರ ಹೇಗೆ ವಿದ್ಯುತ್–ಸಮಾಚಾರವಾಗಿ ಮಾರ್ಪಡುವುದು? ಎಲ್ಲಿ ಮಾರ್ಪಡುವುದು? ಹೇಗೆ ನರಗಳು ಸಮಾಚಾರವನ್ನು ಮಿದುಳಿಗೆ ತಲುಪಿಸುವುವು? ಮಿದುಳಿನಲ್ಲಿ ನಡೆಯುವ ಕ್ರಿಯೆ ಏನು? ಶಬ್ದವನ್ನು ಅನುಭವಿಸುವ ಮನಸ್ಸು, ಬುದ್ಧಿ, ಆತ್ಮ ಎಂಬ ಬೇರೆ ಬೇರೆ ತತ್ತ್ವಗಳಿವೆಯೆ? ಇವೆಲ್ಲ ವಿವಾದಾಸ್ಪದವಾದ, ಹಲವು ಅಭಿಪ್ರಾಯಭೇದಗಳಿಗೆ ಎಡೆಕೊಟ್ಟಿರುವ ಸಮಸ್ಯೆಗಳು.

ಹೆಲ್ಮ್‌ಹೋಲ್ಟ್ಸ್‌ನ ಅನುನಾದ ಸಿದ್ಧಾಂತ : ಕಳೆದ ಶತಮಾನದ ಮಧ್ಯದಲ್ಲಿ ಖ್ಯಾತ ಭೌತವಿಜ್ಞಾನಿ ಹೆಲ್ಮ್‌ಹೋಲ್ಟ್ಸ್ ಈ ಸಿದ್ಧಾಂತವನ್ನು ಮಂಡಿಸಿದ. ಇದನ್ನು ಸ್ಥಳಸಿದ್ಧಾಂತ (ಪ್ಲೇಸ್ ಥಿಯೊರಿ) ಎಂದೂ ಕರೆಯುವುದುಂಟು. ಇದರ ಪ್ರಕಾರ ಶಬ್ದದ ಪ್ರತಿ ಶ್ರುತಿಗೂ ಒಂದು ಪ್ರತ್ಯೇಕ ನರ ಉಂಟು. ಕಾಕ್ಲಿಯವನ್ನು ಆ ಶಬ್ದ ತಲುಪಿದಾಗ ಅಲ್ಲಿ ಅನುನಾದದಿಂದ ಸಂಬಂಧಪಟ್ಟ ನರ ಉತ್ತೇಜಿತವಾಗುತ್ತದೆ ಮತ್ತು ಸಮಾಚಾರವನ್ನು ಮಿದುಳಿಗೆ ಒಯ್ಯುತ್ತದೆ. ಜಟಿಲವಾದ ಹಲವು ಶ್ರುತಿಗಳನ್ನೊಳಗೊಂಡ ಗಾನಸ್ವರ ಕಿವಿಗೆ ಬಿದ್ದಾಗ ಸಂಬಂಧಪಟ್ಟ ಹಲವು ನರಗಳು ಏಕಕಾಲದಲ್ಲಿ ಮಿಡಿಯುವುದರಿಂದ ಜಟಿಲವಾದ ಶಬ್ದದ ಅನುಭವವಾಗುವುದು. ಕಾರ್ಟಿಯ ಅವಯವ ಮತ್ತು ಬೇಸಿಲಾರ್ ಪೊರೆಯ ವಿವಿಧ ಭಾಗಗಳು ವಿವಿಧ ಅನುನಾದ ವ್ಯವಸ್ಥೆಗಳಾಗಿದ್ದು ಅವು ವಿವಿಧ ನರಗಳಿಗೆ ಸುದ್ದಿಯನ್ನು ತಲುಪಿಸುವುವು. ಕಾಕ್ಲಿಯದಲ್ಲಿ ನರಗಳ ಶ್ರೇಣಿಯಂಥ ರಚನೆ ಸಿದ್ಧಾಂತಕ್ಕೆ ಪುಷ್ಟಿಕೊಡುತ್ತದೆ. ಆದರೆ ಇದಕ್ಕೆ ಹಲವು ಅಡ್ಡಿಗಳೂ ಉಂಟು. ಮೊದಲನೆಯದಾಗಿ ಬೇಸಿಲಾರ್ ಪೊರೆಯ ಮೇಲೆ ಇರುವ ತಂತುಗಳು ಹ್ರಸ್ವವಾಗಿವೆ. ಇವು ಮಂದ್ರಶ್ರುತಿಯ ಶಬ್ದಗಳನ್ನು ಹೇಗೆ ಅನುನಾದಿಸುತ್ತವೆ? ತಂತುಗಳ ಉದ್ದದಲ್ಲಿ ವ್ಯತ್ಯಾಸ ಹೆಚ್ಚಿಲ್ಲ, ಇವು ಹಲವು ಅಷ್ಟಕಗಳ (ಆಕ್ಟೇವ್ಸ್) ಶ್ರುತಿಗಳನ್ನು ಅನುನಾದಿಸುವುದು ಹೇಗೆ? ತಂತುವಿನ ಎಳೆತ ಒಂದೇ ಸಮವಾಗಿದ್ದಾಗ ಶ್ರುತಿ ಅದರ ಉದ್ದಕ್ಕೆ ವಿಲೋಮಾನುಪಾತವಾಗಿರಬೇಕು, ಎಂದರೆ ಒಂದು ಶ್ರುತಿಗೂ ಅದರ ಒಂದು ಅಷ್ಟಕ ಮೇಲಿನ ಶ್ರುತಿಗೂ 1:2 ಆವರ್ತಾಂಕದ ನಿಷ್ಪತ್ತಿ ಇರುವುದರಿಂದ ಉದ್ದಗಳೂ 1:2 ನಿಷ್ಪತ್ತಿಯಲ್ಲಿರಬೇಕು. ಹಾಗಿಲ್ಲದೆ ಇರಬೇಕಾದರೆ ತಂತುಗಳ ಕರ್ಷಣವಾದರೂ (ಟೆನ್ಷನ್) ಈ ನಿಷ್ಪತ್ತಿಯಲ್ಲಿರಬೇಕು. ಉದ್ದಗಳಂತೂ ಈ ನಿಷ್ಪತ್ತಿಯಲ್ಲಿ ಇಲ್ಲ; ಕರ್ಷಣ ಈ ನಿಷ್ಪತ್ತಿಯಲ್ಲಿರುವುದು ಅತ್ಯಂತ ಸಂದೇಹವಾಗಿದೆ. ಆದರೆ ಈ ಸಿದ್ಧಾಂತಕ್ಕೆ ಅನುಕೂಲವಾದ ಅಂಶಗಳೂ ಇವೆ. ಎತ್ತರದ ಶ್ರುತಿಗಳ ಕಿವುಡುತನದಲ್ಲಿ ಅತಿಸಣ್ಣ ತಂತುಗಳು ನಾಶವಾಗಿರುವುದು ಕಂಡುಬಂದಿದೆ. ಪ್ರಾಣಿಗಳ ಮೇಲೆ ಮಾಡಿದ ಪ್ರಯೋಗಗಳಲ್ಲಿ ಒಂದೇ ಶ್ರುತಿಯನ್ನು ಗಟ್ಟಿಯಾಗಿ ನುಡಿಸಿ ಆ ಶ್ರುತಿಗೆ ಕಿವುಡನ್ನು ಉಂಟುಮಾಡಿದಾಗ ಕಾರ್ಟಿಯ ಅವಯವದ ಒಂದು ಭಾಗ ನಾಶವಾಗಿರುವುದು

ಕಂಡುಬಂದಿದೆ. ಒಂದೇ ಶ್ರುತಿಯ ಕೇಳುವಿಕೆಯಿಂದ ಶ್ರವಣಾಯಾಸವನ್ನು (ಹಿಯರಿಂಗ್ ಫೆಟೀಗ್) ಉಂಟುಮಾಡಿದಾಗ ಆಯಾಸ ಆ ಶ್ರುತಿಗೆ ಮಾತ್ರ ಸೀಮಿತವಾಗಿದ್ದು ಕಿವಿ ಇತರ ಶ್ರುತಿಗಳನ್ನು ಸುಖವಾಗಿ ಕೇಳುವುದು. ಸಣ್ಣ ಬೇಸಿಲಾರ್ ಪೊರೆ ಉಳ್ಳ ಪ್ರಾಣಿಗಳು ಎತ್ತರದ ಶ್ರುತಿಗಳನ್ನು ಮಾತ್ರ ಕೇಳುತ್ತವೆ. ಅನುನಾದ ಇಲ್ಲದಿದ್ದರೂ ಬೇಸಿಲಾರ್ ಪೊರೆಯಲ್ಲಿ ನರದ ಸ್ಥಾನ ಶ್ರುತಿಯನ್ನು ಗುರುತಿಸುವುದು ಎನ್ನಬಹುದಾಗಿದೆ.

ಹೆಲ್ಮ್ ಹೋಲ್ಟ್ಸ್‌ನ ಸಿದ್ಧಾಂತವನ್ನು ಹಿಂಬಾಲಿಸಿ ಹಲವು ಸಿದ್ಧಾಂತಗಳು ಬಂದುವು. ನರದ ವಿದ್ಯುದ್ವಾಹಕತೆಯ ಎಲ್ಲ ಅಥವಾ ಏನೂ ಇಲ್ಲ ತತ್ವ ಕಂಡುಹಿಡಿದ ಮೇಲೆ(1912) ಶಬ್ದದ ಘೋಷ (ಇಂಟೆನ್ಸಿಟಿ) ನರದ ಪ್ರವಾಹದಿಂದ ಪ್ರತಿನಿಧಿಸಲ್ಪಟ್ಟಿದೆಯೆಂದು ನಂಬಿದ ಎಲ್ಲ ವಾದಗಳ ಪತನವಾಯಿತು. ವಿದ್ಯುನ್ಮಾನ (ಎಲೆಕ್ಟ್ರಾನಿಕ್ಸ್) ಉಪಕರಣಗಳಿಂದ ಹೊಸ ಹೊಸ ಸತ್ಯಾಂಶಗಳು ಹೊರಬಿದ್ದುವು. ವೀವರ್ ಮತ್ತು ಬ್ರೇ ಎಂಬುವರು ಬೆಕ್ಕಿನ ಶ್ರವಣ ನರದಲ್ಲಿನ ವಿದ್ಯುತ್ಪ್ರವಾಹದ ರೂಪ ಅದನ್ನು ಉಂಟು ಮಾಡಿದ ಶಬ್ದದ ರೂಪವನ್ನೇ ಹೋಲುವುದೆಂದು ತೋರಿಸಿದರು. ಕಾಕ್ಲಿಯ ಒಂದು ಮೈಕ್ರೋಫೋನಿನ ಹಾಗೆ ವರ್ತಿಸುವುದು.

ವಾಲಿ ಸಿದ್ಧಾಂತ : ಮೇಲಿನ ಸತ್ಯಾಂಶಗಳನ್ನು ವಿವರಿಸಲು ವೀವರ್ ಮತ್ತು ಬ್ರೇ ಮಂಡಿಸಿದ ಸಿದ್ಧಾಂತವಿದು. ವಾಲಿ ಎಂದರೆ ಯುದ್ಧದಲ್ಲಿ ಗುಂಡುಗಳು ಹೆಚ್ಚುಕಡಿಮೆ ಒಟ್ಟಿಗೆ ಹಾರಿಸುವುದರಿಂದ ಒಂದು ವಾಲಿ ಹಾರುತ್ತದೆ. ಇಲ್ಲಿ ನರಗಳ ಹಾರುವಿಕೆಯೇ ವಾಲಿ. ಸ್ತಬ್ಧವಾಗಿದ್ದ ನರ ವಾಹಕವಾದಾಗ ಆ ಪರಿವರ್ತನೆಯನ್ನು ಹಾರುವಿಕೆ ಎನ್ನಬಹುದು. ಒಂದೇ ನರ ಸೆಕೆಂಡಿಗೆ ಸುಮಾರು 300 ರಷ್ಟು ಸಲಕ್ಕಿಂತ ಹೆಚ್ಚಾಗಿ ಹಾರಲಾರದು–ಆದ್ದರಿಂದ ಇದಕ್ಕಿಂತ ಹೆಚ್ಚಿನ ಆವರ್ತಾಂಕಗಳನ್ನು ಉಂಟುಮಾಡಲು ಹಲವು ನರಗಳು ಒಟ್ಟಿಗೇ ಒಂದು ವಾಲಿಯಾಗಿ ಹಾರುತ್ತವೆ. ಮೊದಲೇ ತಿಳಿಸಿದಂತೆ ನರಗಳ ಹಾರುವಿಕೆಯ ಸಂಖ್ಯೆಯ ದರ ಶಬ್ದಶಕ್ತಿಯನ್ನು ಸೂಚಿಸುತ್ತದೆ. ವಾಲಿ ಸಿದ್ಧಾಂತದ ಪ್ರಕಾರ ವಾಲಿಗಳ ಆವರ್ತಾಂಕವೇ ಶಬ್ದದ ಆವರ್ತಾಂಕವನ್ನು ತೋರಿಸುತ್ತದೆ. ಇವೆರಡೂ ಸಿದ್ಧಾಂತಗಳ ಪ್ರಕಾರ ಕಾಕ್ಲಿಯವೇ ಶಬ್ದವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮುಖ್ಯಸಾಧನ. ಆದರೆ ಕೆಲವು ಪ್ರಯೋಗಗಳು ಈ ಸಾಧನ ಮಿದುಳಿನಲ್ಲಿ ಇದೆ ಎಂದು ತೋರಿಸುತ್ತವೆ.

ಮಿದುಳಿನ ಪಾತ್ರ: ಒಂದು ಪ್ರಯೋಗದಲ್ಲಿ ಗಾನಸ್ವರವೊಂದರ (ಮ್ಯೂಸಿಕಲ್ ನೋಟ್) ಮೂಲಸ್ವರವನ್ನು ಎಲೆಕ್ಟ್ರಾನಿಕ್ ಉಪಕರಣಗಳಿಂದ ತೆಗೆದುಹಾಕಿ ಉಳಿದ ಶಬ್ದದ ಭಾಗವನ್ನು ಮಾತ್ರ ಕಿವಿಗೆ ಕೇಳಿಸಲಾಯಿತು. ಎಂದರೆ ಪ್ರತಿ ಸೆಕೆಂಡಿಗೆ 100 ಆವರ್ತಾಂಕದ ಪ್ರಧಾನ ಸ್ವರ ಮತ್ತು ಅದರ ಸಂಗತಾಂಗಗಳಾದ ಪ್ರತಿ ಸೆಕೆಂಡಿಗೆ 200,300, 400, 500 . . . . ಆವರ್ತಾಂಕದ 2, 3, 4, 5 ಸಂಗತಾಂಗಗಳು ಇರುವಾಗ ಸಂಗತಾಂಗಗಳನ್ನು ಮಾತ್ರ ಕಿವಿಗೆ ಕೇಳಿಸಿದರೆ ಕಿವಿ ಸಂಗತಾಂಗಗಳನ್ನು ಮಾತ್ರವಲ್ಲ, ಗಾನಸ್ವರದಿಂದ ತೆಗೆದುಹಾಕಲ್ಪಟ್ಟ ಪ್ರಧಾನಸ್ವರವನ್ನು (100 ಆವರ್ತಾಂಕ) ಕೇಳುವ ಅನುಭವವನ್ನು ಪಡೆಯುತ್ತದೆ. ಹೀಗೆ ಕಾಕ್ಲಿಯವಾಗಲೀ ನರಗಳಾಗಲೀ ಅನುಭವಿಸದಿದ್ದ ಸ್ವರ ಕೇಳಿಸಬೇಕಾಗಿದ್ದರೆ ಇದರ ಜನನ ಮಿದುಳಿನಲ್ಲಿಯೇ ಆಯಿತೆಂದು ತಿಳಿಯಬಹುದಲ್ಲವೆ? ಹಾಲೆಂಡಿನ ಷೌಟೆನ್ ಈ ಪ್ರಖ್ಯಾತವಾದ ಪ್ರಯೋಗವನ್ನು ಮಾಡಿದ. ಇಲ್ಲಿ ಇನ್ನೊಂದು ವಿಶೇಷವೇನೆಂದರೆ ಪ್ರಧಾನಸ್ವರವನ್ನು ಮುಸುಕುವಂಥ ಶಬ್ದವನ್ನು ಈ ಸಂಗತಾಂಗಗಳ ಜೊತೆಯಲ್ಲಿ ಸೇರಿಸಿದಾಗಲೂ ಇಲ್ಲದಿದ್ದ ಪ್ರಧಾನಸ್ವರ ಸ್ಪಷ್ಟವಾಗಿ ಕೇಳುತ್ತದೆ. ಆದ್ದರಿಂದ ಕಾಕ್ಲಿಯವೇ ಶ್ರವಣಕ್ಕೆ ಅತಿಮುಖ್ಯ. ಮಿದುಳು ಸಾಕ್ಷಿರೂಪವಾಗಿ ಮಾತ್ರ ಶಬ್ದಾನುಭವವನ್ನು ಪಡೆಯುತ್ತದೆ ಎಂಬ ಸಿದ್ಧಾಂತ ಈ ಪ್ರಯೋಗದ ಮುಂದೆ ಬಿದ್ದುಹೋಗುತ್ತದೆ. ಎರಡು ಹತ್ತಿರದ ಆವರ್ತಾಂಕಗಳ (ಉದಾಹರಣೆಗೆ ಸೆಕೆಂಡಿಗೆ 100, 102) ಸ್ವರಗಳನ್ನು ಒಟ್ಟಿಗೆ ನುಡಿಸಿದರೆ ಆಗ ಶಬ್ದದ ಘೋಷ ಪ್ರತಿಸೆಕೆಂಡಿನಲ್ಲೂ ಆವರ್ತಾಂಕಗಳ ವ್ಯತ್ಯಾಸದಷ್ಟು ಸಲ (ಈ ಉದಾಹರಣೆಯಲ್ಲಿ 102–100=2 ಸಲ) ಏರಿ ತಗ್ಗುತ್ತ ಇರುತ್ತದೆ. ಇದನ್ನು ವಿಸ್ಪಂದಗಳು (ಬೀಟ್ಸ್) ಎನ್ನುತ್ತಾರೆ. ಎರಡು ಸ್ವರಗಳೂ ಒಂದೇ ಕಿವಿಯಲ್ಲಿ ನುಡಿದರೆ ಬೇಸಿಲಾರ್ ಪೊರೆ ಎರಡೂ ಸ್ವರಗಳ ಪ್ರಭಾವದಿಂದ ಹೇಗೆ ವಿಸ್ಪಂದಗಳನ್ನು ಉಂಟುಮಾಡುವುದೆಂಬುದನ್ನು ಸುಲಭವಾಗಿ ತೋರಿಸಬಹುದು. ಆದರೆ ಎರಡು ಸ್ವರಗಳನ್ನು ಬೇರೆ ಬೇರೆ ಕಿವಿಗಳಲ್ಲಿ ಕೇಳಿದಾಗಲೂ ವಿಸ್ಪಂದಗಳು ಉಂಟಾಗುತ್ತವೆ. ಇದಕ್ಕೆ ಕಾರಣವೇನು? ಮಿದುಳೇ ಶಬ್ದದ ಅಂತಿಮ ಗ್ರಾಹಕ ಹಾಗು ವಿಶ್ಲೇಷಕ ಎಂದು ಹೇಳದೆ ವಿಧಿಯಿಲ್ಲ. ಶಬ್ದದ ವಿಶ್ಲೇಷಣೆ ಕಾಕ್ಲಿಯದಲ್ಲಿಯೇ ಆಗುತ್ತದೆ ಎಂದು ಹೇಳುವುದು ತಪ್ಪು.

ಪ್ರಾಣಿಗಳ ಮೇಲೆ ಮಾಡಿದ ಕೆಲವು ಪ್ರಯೋಗಗಳು ಇದನ್ನು ಪುಷ್ಟೀಕರಿಸುತ್ತವೆ. ಒಂದು ಬೆಕ್ಕಿನ ಮೇಲೆ ಶಸ್ತ್ರಕ್ರಿಯೆ ಮಾಡಿ ಶ್ರವಣನರದಲ್ಲಿ ವಿದ್ಯುದ್ವಾಹಕ ತಂತಿಯ ತುದಿಯೊಂದನ್ನು ಜೋಡಿಸಿ ಇನ್ನೊಂದು ತುದಿಯನ್ನು ತಲೆಯ ಹೊರಗೆ ತಂದು ಚರ್ಮವನ್ನು ಮತ್ತೆ ಸೇರಿಸಿ ಹೊಲೆಯಲಾಯಿತು. ಇದಕ್ಕೆ ಹುಟ್ಟುಹಾಕಿದ (ಇಂಪ್ಲಾಂಟೆಡ್) ಎಲೆಕ್ಟ್ರೋಡ್ ಎಂದು ಹೆಸರು. ಶಸ್ತ್ರಕ್ರಿಯೆಯ ಗಾಯ ಮಾಗಿದ ಮೇಲೆ ಬೆಕ್ಕಿನ ಕಿವಿಯಲ್ಲಿ ಕ್ಲಿಕ್ ಎಂದು ಶಬ್ದವನ್ನು ಮಾಡಿದಾಗಲೆಲ್ಲ ಅದೇ ರೂಪದ ವಿದ್ಯುತ್ಪ್ರವಾಹವನ್ನು ಎಲೆಕ್ಟ್ರೋಡ್ ನಲ್ಲಿಯೂ ಕಾಕ್ಲಿಯದ ಮೈಕ್ರೊಫೋನ್ ಕಾರ್ಯದಿಂದ ಕಾಣಲಾಯಿತು. ಆದರೆ ಶಬ್ದ ಮಾಡುವಾಗ ಬೆಕ್ಕಿನ ಎದುರಿಗೆ ಮೀನನ್ನು ತಂದಿಟ್ಟಾಗ ನರದಲ್ಲಿನ ಕಾರ್ಯ ನಿಂತುಹೋಯಿತು. ಈಗ ಬೆಕ್ಕಿನ ಮಿದುಳು (ಮನಸ್ಸು) ತನ್ನ ಕಾಕ್ಲಿಯ–ಮೈಕ್ರೊಫೋನನ್ನು (ನಮಗೆ ಇಷ್ಟವಿಲ್ಲದ ಕಾರ್ಯಕ್ರಮ ಮೂಡಿಬಂದಾಗ ನಾವು ರೇಡಿಯೋವನ್ನು ಆರಿಸುವಂತೆ) ಆರಿಸಿಬಿಟ್ಟಿರುತ್ತದೆ; ಇನ್ನೊಂದು ಪ್ರಯೋಗದಲ್ಲಿ ಪ್ರಾಣಿಗಳಿಗೆ ಹಲವು ದಿವಸಗಳ ಕಾಲ ಕ್ಲಿಕ್ ಶಬ್ದಗಳನ್ನು ಕೇಳಿಸುತ್ತಲೇ ಇದ್ದರೆ ಆ ಮೇಲೆ ಅವುಗಳಿಗೆ ಈ ಶಬ್ದ ಕೇಳಿಸುವುದೇ ಇಲ್ಲ ಎಂಬುದನ್ನು ನೋಡಬಹುದು. ಎಂದರೆ ಮೈಕ್ರೊಫೋನ್ ಆರಿಸಲ್ಪಟ್ಟಿರುತ್ತದೆ. ಈಗ ಕ್ಲಿಕ್ ಶಬ್ದ ಬಂದಾಗಲೆಲ್ಲ ಜೊತೆಯಲ್ಲಿ ಒಂದು ಷಾಕ್ ಹೊಡೆಯುವಂತೆ ಏರ್ಪಡಿಸಿದರೆ ಬೆಕ್ಕು ಆಸ್ಥೆಯಿಂದ ಆಲಿಸಲು ಆರಂಭಿಸುತ್ತದೆ. ನರದಲ್ಲಿ ಆವೇದನಗಳು ಕಂಡುಬರುತ್ತವೆ. ಈ ಪ್ರಯೋಗವೂ ಶ್ರವಣದ ಮೇಲೆ ಮಿದುಳಿನ ಸ್ವಾಮ್ಯವನ್ನು ತೋರಿಸುವುದು.

ಸಮನ್ವಯ ಸಿದ್ಧಾಂತ: ಮೇಲೆ ತಿಳಿಸಿದ ವಿವರಗಳನ್ನು ನೋಡಿದರೆ ಈ ಎಲ್ಲ ಸಿದ್ಧಾಂತಗಳಲ್ಲೂ ತಥ್ಯಾಂಶಗಳಿವೆಯೆಂಬುದು ತಿಳಿಯುತ್ತದೆ. ಇವನ್ನೆಲ್ಲ ಸಮಗ್ರದೃಷ್ಟಿಯಿಂದ ನೋಡಿ ಸಮನ್ವಯ ಮಾಡಿದರೆ ಸತ್ಯವನ್ನು ಸಮೀಪಿಸುತ್ತೇವೆಂದು ತೋರುತ್ತದೆ. ಬೆಲ್ ಟೆಲಿಫೋನ್ ಪ್ರಯೋಗಮಂದಿರದ ಶಬ್ದ ಸಂಶೋಧನೆಯ ನಿರ್ದೇಶಕ ಆಗಿದ್ದ ಹಾರ್ವೆ ಫ್ಲೆಚರ್ ಈ ರೀತಿಯ ಒಂದು ದೃಷ್ಟಿಯನ್ನು 1930ರಲ್ಲಿಯೇ ಪ್ರಚುರಪಡಿಸಿದ. ಇದನ್ನೇ ಮುಂದೆ ಸಮರ್ಥಿಸಿ ಬೆಳೆಸಿದ. ಈ ದೃಷ್ಟಿಯಲ್ಲಿ ಎಲ್ಲ ಪ್ರಯೋಗಗಳ ಫಲಿತಾಂಶಗಳನ್ನೂ ಒಳಗೊಳ್ಳುವ ಪ್ರಯತ್ನವಿದೆ. ಆದ್ದರಿಂದ ಫ್ಲೆಚರನ ಸ್ಥಳ–ಕಾಲ–ಚಿತ್ರ ಸಿದ್ಧಾಂತವನ್ನು (ಸ್ಪೇಸ್–ಟೈಂ–ಪ್ಯಾಟರ್ನ್ ಥಿಯೊರಿ) ಇಲ್ಲಿ ಸೂಕ್ಷ್ಮವಾಗಿ ತಿಳಿಸಬಹುದು. ಶಬ್ದದ ಶ್ರುತಿ ಬೇಸಿಲಾರ್ ಪೊರೆಯ ಅತಿ ತೀಕ್ಷ್ಣ ಕಂಪನದ ಸ್ಥಳದಿಂದಲೂ (ಸ್ಥಳ ಸಿದ್ಧಾಂತ) ಮಿದುಳಿಗೆ ಕಳುಹಿಸಲ್ಪಟ್ಟ ಕಾಲಚಿತ್ರದಿಂದಲೂ (ವಾಲಿ ಸಿದ್ಧಾಂತ) ನಿರ್ಧರಿತವಾಗುತ್ತದೆ. ಬಹುಶಃ ಮೊದಲ ವಿಧಾನ ತಾರ ಶ್ರುತಿಗಳಿಗೂ ಎರಡನೆಯ ವಿಧಾನ ಮಂದ್ರ ಶ್ರುತಿಗಳಿಗೂ ಮುಖ್ಯವಾಗಿರುತ್ತದೆ. ಶಬ್ದದ ಗಾತ್ರ ಮಿದುಳನ್ನು ಪ್ರತಿ ಸೆಕೆಂಡಿನಲ್ಲಿಯೂ ಮುಟ್ಟುವ ನರಗಳ ಹಾರುವಿಕೆಯಿಂದಲೂ (ವಾಲಿ ಸಿದ್ಧಾಂತ) ಸ್ವಲ್ಪಮಟ್ಟಿಗೆ ಬೇಸಿಲಾರ್ ಪೊರೆಯ ಎಷ್ಟು ಹೆಚ್ಚಿನ ಭಾಗ ಉದ್ರಿಕ್ತವಾಗಿದೆ ಎಂಬುದರಿಂದಲೂ (ಸ್ಥಳ ಸಿದ್ಧಾಂತ) ನಿರ್ಧರಿತವಾಗುವುದು. ಮನಶ್ಶಾಸ್ತ್ರಜ್ಞರು ಶಬ್ದಘೋಷ (ವಾಲ್ಯೂಂ) ಎಂದು ಕರೆಯುವ ಅನುಭವ ಬೇಸಿಲಾರ್ ಪೊರೆ ಎಷ್ಟು ಉದ್ದ ಉದ್ರಿಕ್ತವಾಗಿದೆ ಎಂಬುದನ್ನು ಅವಲಂಬಿಸಿದೆ. ಮಂದ್ರ ಶ್ರುತಿಗಳಿಗೆ ಹೆಚ್ಚಿನ ಘೋಷ ಉಂಟು. ಅತಿ ಹೆಚ್ಚಿನ ಶ್ರುತಿಗಳಿಗೆ ಕಡಿಮೆ ಘೋಷ ಉಂಟು. ಗಾಳಿಯಲ್ಲಿನ ಕಾಲಚಿತ್ರ ಬೇಸಿಲಾರ್ ಪೊರೆಯಲ್ಲಿ ಸ್ಥಳಚಿತ್ರವಾಗಿ ಪ್ರತಿಫಲಿತವಾಗುವುದು. ನರಗಳ ತುದಿಗಳ ಉದ್ರೇಕದ ರೀತಿ ಹೇಗಿರುತ್ತದೆಂದರೆ ಸ್ಥಳಚಿತ್ರ ಒಂದನ್ನೊಂದು ಹೋಲುವ ಎರಡು ಸ್ಥಳಚಿತ್ರಗಳನ್ನು ಮಿದುಳಿನ ಎರಡು ಭಾಗಗಳಲ್ಲಿ ಉಂಟುಮಾಡುವುದು. ಈ ಚಿತ್ರಗಳ ಬದಲಾವಣೆಗಳನ್ನು ಗುರುತಿಸುವುದೇ ಶ್ರವಣದ ಎಲ್ಲ ಕಾರ್ಯಗಳಿಗೂ ಕಾರಣ.

ಮಾನವನ ಶ್ರವಣಶಕ್ತಿ : ಸಾವರ್ಟ್ ಎಂಬಾತ ತನ್ನ ಯಂತ್ರದ ಸಹಾಯದಿಂದ ಮಾನವನ ಕಿವಿ 8–24,000 ಪ್ರತಿ ಸೆಕೆಂಡಿನ ಆವರ್ತಾಂಕದ ಶಬ್ದಗಳನ್ನು ಕೇಳುವುದು ಎಂದು ತೋರಿಸಿದ (1830). ಇತರರು ಈ ಶ್ರೇಣಿಯನ್ನು 20–20,000ದ ವರೆಗೂ ಇದೆ ಎನ್ನುತ್ತಾರೆ. ಎಂದರೆ ಹತ್ತು ಅಷ್ಟಕಗಳಿಗೂ (ಅಷ್ಟಕ ಎಂದರೆ ಒಂದು ಶ್ರುತಿಯಿಂದ ಅದರ ಎರಡರಷ್ಟು ಆವರ್ತಾಂಕ ಶ್ರುತಿಯವರೆಗೂ ಇರುವ ಶ್ರುತಿಗಳ ವ್ಯಾಪ್ತಿ. 20–40ರ ವರೆಗೆ ಒಂದು ಅಷ್ಟಕ, 40–80ರ ವರೆಗೆ ಇನ್ನೊಂದು, 80–160 ಇನ್ನೊಂದು ಇತ್ಯಾದಿ) ಹೆಚ್ಚು. ಕಣ್ಣಿಗೆ ಕಾಣುವುದೆಲ್ಲ ಒಂದು ಅಷ್ಟಕಕ್ಕಿಂತ ಕಡಿಮೆಯ ಬೆಳಕಿನ ಕಿರಣಗಳು ಮಾತ್ರ. ಶ್ರುತಿ ಮತ್ತು ಗಾತ್ರಗಳೆರಡರ ದೃಷ್ಟಿಯಿಂದಲೂ ಮಾನವನ ಶ್ರವಣಶಕ್ತಿಗೆ ಮಿತಿಗಳು ಉಂಟು. ಪ್ರತಿ ಸೆಕೆಂಡಿಗೆ 20ರ ಆವರ್ತಾಂಕಕ್ಕಿಂತ ಕಡಿಮೆಯಾದರೂ 20,000 ಕ್ಕಿಂತ ಜಾಸ್ತಿಯಾದರೂ ಆ ಶಬ್ದಗಳು ನಮಗೆ ಕೇಳಿಸುವುದಿಲ್ಲ. ಇತರ ಪ್ರಾಣಿಗಳು (ಉದಾಹರಣೆ ನಾಯಿ, ಬಾವಲಿ, ಜೀರುಂಡೆ) ಮುಂತಾದವುಗಳಿಗೆ 20,000 ಕ್ಕಿಂತ ಹೆಚ್ಚಿನ ಆವರ್ತಾಂಕದ ಶಬ್ದಗಳನ್ನೂ ಕೇಳುವ ಸಾಮರ್ಥ್ಯ ಉಂಟು. ಹೀಗೆಯೇ ಶಬ್ದದ ಗಾತ್ರ ಅತಿಕ್ಷೀಣವಾದರೂ ಕಿವಿಗೆ ಕೇಳಿಸುವುದಿಲ್ಲ. ಗಾತ್ರ ಅತಿ ಹೆಚ್ಚಿದಾಗ ಶಬ್ದ ಕೇಳುವುದರ ಬದಲು ಯಾತನೆ ಉಂಟಾಗುವುದು. ಈ ಶಕ್ತಿಗಳನ್ನು ಶ್ರವಣದೇಹಲಿ (ಥ್ರೆಷೋಲ್ಡ್ ಆಫ್ ಹಿಯರಿಂಗ್) ಮತ್ತು ಯಾತನಾದೇಹಲಿ ಎಂದು ಕರೆಯಲಾಗುತ್ತದೆ. ವಿವಿಧ ವ್ಯಕ್ತಿಗಳಲ್ಲಿ ದೇಹಲಿಗಳ ವ್ಯತ್ಯಾಸ ಇರುತ್ತದೆ. ಶ್ರವಣಮಾಪಕ (ಆಡಿಯೋಮೀಟರ್) ಯಂತ್ರದ ಸಹಾಯದಿಂದ

ಮಾನವನ ಶ್ರವಣಶಕ್ತಿಯನ್ನು ಅಳೆಯುತ್ತಾರೆ. ಮಾನವನ ಶ್ರವಣಶಕ್ತಿಯ ಆವರ್ತಾಂಕಗಳ ಮುಖ್ಯ ಭಾಗಗಳನ್ನು ಪ್ರತಿನಿಧಿಸಿರುವ 8–10 ಗಾನಸ್ವರಗಳನ್ನು ವಿವಿಧ ಗಾತ್ರಗಳಲ್ಲಿ ಈ ಯಂತ್ರ ಉತ್ಪಾದಿಸುತ್ತದೆ. ಸ್ವರ ಕಿವಿಗೆ ಕೇಳಿಸುವಂತೆ ಇಯರ್‌ಫೋನ್‌ಗಳನ್ನು ವ್ಯಕ್ತಿಯ ಕಿವಿಗೆ ಜೋಡಿಸಲಾಗಿರುತ್ತದೆ. ಪ್ರತಿ ಆವರ್ತಾಂಕದ ಸ್ವರವನ್ನೂ ಬಹುಕಡಿಮೆ ಮಟ್ಟದ ಗಾತ್ರದಿಂದ ಕ್ರಮೇಣ ಹೆಚ್ಚಿಸುತ್ತ ಹೋಗಿ ಯಾವ ಮಟ್ಟದಲ್ಲಿ ಶಬ್ದ ಕೇಳಿಸಿತು ಎಂಬುದನ್ನೂ ಹೆಚ್ಚಿನ ಗಾತ್ರದಿಂದ ಕುಗ್ಗಿಸುತ್ತ ಬಂದು ಯಾವ ಮಟ್ಟದ ಗಾತ್ರದಲ್ಲಿ ಶಬ್ದ ಕೇಳಿಸದೆ ಹೋಯಿತೆಂಬುದನ್ನೂ ವ್ಯಕ್ತಿ ಸೂಚಿಸುತ್ತಾನೆ. ಈ ಎರಡು ಮಟ್ಟಗಳ ಸರಾಸರಿಯೇ ಆ ವ್ಯಕ್ತಿಯ ಶ್ರವಣದೇಹಲಿ. ಕಿವುಡರಿಗೆ ಶ್ರವಣದೇಹಲಿ ಜಾಸ್ತಿಯಾಗಿರುತ್ತದೆ. ಸೂಕ್ಷ್ಮವಾದ ಶ್ರವಣಶಕ್ತಿಯುಳ್ಳವರಿಗೆ ದೇಹಲಿ ಅಲ್ಪವಾಗಿರುತ್ತದೆ.

ಅಮೆರಿಕ ಸಂಯುಕ್ತಸಂಸ್ಥಾನದ ಸಾರ್ವಜನಿಕ ಆರೋಗ್ಯ ಇಲಾಖೆಯವರು ಕೇಳುವಿಕೆಯನ್ನು ಕುರಿತು ಒಂದು ಪ್ರಾತಿನಿಧಿಕ ಮೋಜಣಿಯನ್ನು ನಡೆಸಿದರು. ಡೆಸಿಬೆಲ್ (dB) ಮಾಪನವನ್ನು ಬಳಸಿಕೊಂಡು ತಾವು ಆಯ್ದ ಜನರ ಶ್ರವಣ ದೇಹಲಿಗಳನ್ನು ಗುರುತಿಸಿಕೊಂಡರು. ಒಂದು ಶಬ್ದ ಇನ್ನೊಂದಕ್ಕಿಂತ ಎಷ್ಟು ಡೆಸಿಬೆಲ್ ದೊಡ್ಡದಾಗಿದೆಯೆಂದು dB ತೋರಿಸುತ್ತದೆ.

$$dB = 10 \log_{10} \frac{\text{1ನೆಯ ಶಬ್ದದ ಶಕ್ತಿ}}{\text{2ನೆಯ ಶಬ್ದದ ಶಕ್ತಿ}}$$

ಇಲ್ಲಿ ಎರಡನೆಯ ಶಬ್ದ ಯಾವಾಗಲೂ ಶ್ರವಣದೇಹಲಿಯ ಒಂದು ಶಿಷ್ಟಶಬ್ದದ ಪಾತ್ರ. ಶಬ್ದದ ಶಕ್ತಿಯನ್ನು ಪ್ರತಿ ಚದರ ಸೆಂಟಿಮೀಟರಿಗೆ ವಾಟುಗಳಲ್ಲಿಯೂ ಅಥವಾ ಇದಕ್ಕೆ ಸಮಾನವಾದ ಶಬ್ದದ ಒತ್ತಡವನ್ನು ಪ್ರತಿ ಚದರ ಸೆಂಟಿಮೀಟರಿಗೆ ಡೈನ್‌ಗಳಲ್ಲಿಯೂ ಅಳೆಯಬಹುದು. ಈ ರೀತಿ ದತ್ತಾಂಶಗಳನ್ನು ಸಂಗ್ರಹಿಸಿ ಒಂದು ಗ್ರಾಫನ್ನು ಇಲಾಖೆಯವರು ತಯಾರಿಸಿದರು. ವಿವಿಧ ಆವರ್ತಾಂಕಗಳನ್ನು x' ದಿಶೆಯಲ್ಲಿಯೂ ಶ್ರವಣ ದೇಹಲಿಯನ್ನು y' ದಿಶೆಯಲ್ಲಿಯೂ ಅಳೆದು ವಕ್ರರೇಖೆಗಳನ್ನು ಚಿತ್ರಿಸಿದರು. ಹೀಗೆ ದೊರೆತ ಶ್ರವಣಲೇಖನಗಳಿಂದ ಗುಂಪಿನ ಅರ್ಧ ಜನರು ಸೆಕೆಂಡಿಗೆ 60–10,000 ವರೆಗಿನ ಆವರ್ತಾಂಕದ ಸ್ವರಗಳನ್ನು ಕೇಳುವರೆಂದೂ ಎಲ್ಲರ ಕಿವಿಗಳೂ ಪ್ರತಿ ಸೆಕೆಂಡಿಗೆ 3,000 ಆವರ್ತಾಂಕದ ನೆರೆಹೊರೆಯಲ್ಲಿ ಅತಿ ಸೂಕ್ಷ್ಮವಾಗಿರುವುದೆಂದೂ ತಿಳಿಯುತ್ತದೆ.

ಮುಸುಕುವಿಕೆ : ಕಿವಿ A ಎಂಬ ಒಂದು ಶಬ್ದವನ್ನು ಕೇಳುತ್ತಿರುವಾಗ B ಎಂಬ ಇನ್ನೊಂದು ಶಬ್ದವನ್ನು ಕ್ರಮವಾಗಿ ಹೆಚ್ಚು ಹೆಚ್ಚು ಗಟ್ಟಿಯಾಗಿ ಕೇಳುವಂತೆ ಅದರ ಗಾತ್ರವನ್ನು ಹೆಚ್ಚಿಸುತ್ತ ಹೋದರೆ ಒಂದು ಘಟ್ಟದಲ್ಲಿ A ಶಬ್ದ ಕಿವಿಗೆ ಕೇಳುವುದೇ ಇಲ್ಲ. ಆಗ B ಶಬ್ದ A ಯನ್ನು ಮುಸುಕಿತು ಎಂದು ಹೇಳುತ್ತೇವೆ. ಕಳೆದ ಶತಮಾನದಲ್ಲಿಯೇ ಮೇಯರ್ ಎಂಬಾತ ಮುಸುಕುವ ಪ್ರಯೋಗಗಳನ್ನು ಮಾಡಿದ್ದನಾದರೂ ಈ ವಿಷಯವಾಗಿ ವಿಸ್ತಾರವಾದ ಕೆಲಸ ನಡೆದಿರುವುದು ಅಮೆರಿಕದ ಬೆಲ್ ಟೆಲಿಫೋನ್ ಪ್ರಯೋಗಾಲಯದಲ್ಲಿ. ಮೇಯರನ ಪ್ರಕಾರ ಕಡಿಮೆ ಶ್ರುತಿಯ (ಎಂದರೆ ಮಂದ್ರತರವಾದ) ಶಬ್ದ ಹೆಚ್ಚಿನ ಶ್ರುತಿಯ ಹೆಚ್ಚು ಗಾತ್ರದ ಶಬ್ದಗಳನ್ನು ಮುಸುಕುತ್ತದೆ; ಹೆಚ್ಚಿನ ಶ್ರುತಿಯ ಶಬ್ದ (ತಾರತರವಾದುದು) ಕಡಿಮೆ ಶ್ರುತಿಯ ಶಬ್ದವನ್ನು ಮುಸುಕಲಾರದು. ಆದರೆ ಈಚೆಗೆ ನಡೆದ ಪ್ರಯೋಗಗಳು ಈ ಫಲಿತಾಂಶಗಳು ಯಾವಾಗಲೂ ಸರಿಯಲ್ಲವೆಂದು ತೋರಿಸಿವೆ. ಎರಡು ಸ್ವರಗಳ ಆವರ್ತಾಂಕಗಳ ವ್ಯತ್ಯಾಸ ಹೆಚ್ಚಾಗಿದ್ದಾಗ ಕಡಿಮೆ ಶ್ರುತಿಯ ಗಾತ್ರ ಕಡಿಮೆಯಾಗಿದ್ದರೆ ಹೆಚ್ಚಿನ ಶ್ರುತಿಯ ಶಬ್ದವನ್ನು ಮುಸುಕುವುದಿಲ್ಲ. ಹಾಗೆಯೇ ಎರಡು ಶ್ರುತಿಗಳೂ ಅತಿ ಸಮೀಪವಾಗಿದ್ದರೆ ಹೆಚ್ಚಿನ ಶ್ರುತಿಯ ಶಬ್ದ ಕಡಿಮೆಯದನ್ನು ಮುಸುಕುತ್ತದೆ. ಮುಸುಕುವ ಶಬ್ದ ಗಲಭೆ ಅಥವಾ ಘಾತಶಬ್ದದ ರೂಪವನ್ನು ಹೊಂದಿದ್ದರೆ ಅದರಲ್ಲಿ ಎಲ್ಲ ಆವರ್ತಾಂಕದ ಶಬ್ದಗಳೂ ಕಲಸಿಕೊಂಡಿರುತ್ತವೆ. ಆದ್ದರಿಂದ ಅದು ಎಲ್ಲ ಶ್ರುತಿಗಳನ್ನೂ ಸುಲಭವಾಗಿ ಮುಸುಕುತ್ತದೆ. ಈ ಪ್ರಯೋಗಗಳಲ್ಲಿ ಎರಡು ಶಬ್ದಗಳನ್ನೂ ಒಂದೇ ಕಿವಿಗೆ ಕೇಳಿಸಲಾಯಿತು. ಎರಡು (ಮುಸುಕುವ, ಮುಸುಕಲ್ಪಡುವ) ಶಬ್ದಗಳನ್ನೂ ಬೇರೆ ಬೇರೆ ಕಿವಿಗಳಿಗೆ ಕೇಳಿಸಿದಾಗ ಮುಸುಕುವಿಕೆ ಬಹಳ ಕಡಿಮೆಯಾಗಿರುತ್ತದೆ. ಮುಸುಕುವ ಶಬ್ದ ಎದುರು ಕಿವಿಯಿಂದ ತಲೆಯ ಮೂಲಕ ಬಂದು ಮೊದಲನೆಯ ಕಿವಿಯನ್ನೂ ಸೇರಿ ಅಲ್ಲಿಯೇ ಮುಸುಕುವ ಕಾರ್ಯವನ್ನು ಮಾಡುತ್ತದೆ ಎಂದು ಸುಲಭವಾಗಿ ನಿಶ್ಚಯಿಸಬಹುದಾಗಿದೆ. ನಾವು ಟೆಲಿಫೋನಿನಲ್ಲಿ ಮಾತನಾಡುವಾಗ ಗ್ರಾಹಿಯಿಂದ (ರಿಸೀವರ್) ಮುಚ್ಚಲ್ಪಡದೆ ಇರುವ ಕಿವಿಯನ್ನು ಕೆಲವರು ಕೈಯಿಂದ ಮುಚ್ಚಿಕೊಳ್ಳುವುದುಂಟು. ಇದರ ಉಪಯೋಗ ಸಂದೇಹಕರವಾಗಿದೆ. ತೆರೆದ ಕಿವಿಯಿಂದ ಕೇಳುವ ಶಬ್ದಗಳು ಗ್ರಾಹಿಯಿಂದ ಬರುತ್ತಿರುವ ಸಂಭಾಷಣೆಯನ್ನು ಮುಸುಕಬೇಕಾದರೆ ಅವು ಸುಮಾರು 40 dB ಹೆಚ್ಚಿನ ಗಾತ್ರದವಾಗಿರಬೇಕಾಗುತ್ತದೆ. ಏಕೆಂದರೆ ಅವು ತೆರೆದ ಕಿವಿಯಿಂದ ತಲೆಯ ಮೂಲಕ ಹಾದು ಗ್ರಾಹಿಯಿರುವ ಕಿವಿಯನ್ನು ಸೇರಿ ಅಲ್ಲಿಯೇ ಮುಸುಕುವಿಕೆಯನ್ನು ನೆರವೇರಿಸಬೇಕು. ಮುಸುಕುವಿಕೆ ಶ್ರವಣ ಸಿದ್ಧಾಂತಗಳಲ್ಲಿ ಅತಿಮುಖ್ಯವಾದ ಸಾಕ್ಷ್ಯಸಾಮಗ್ರಿಯನ್ನು ಒದಗಿಸುತ್ತದೆ.

ಶಬ್ದಘೋಷದ ಅಳತೆ : ಎರಡು ವಿವಿಧ ಆವರ್ತಾಂಕಗಳ ಸ್ವರಗಳಲ್ಲಿ ಇರುವ ಭೌತ ಶಕ್ತಿ ಸಮವಾಗಿದ್ದರೂ ಕಿವಿಗೆ ಅವುಗಳ ಗಾತ್ರದಲ್ಲಿ ವ್ಯತ್ಯಾಸ ತೋರುತ್ತದೆ. ಡೆಸಿಬೆಲ್ ಶ್ರುತಿಯಲ್ಲಿರುವ ಶಕ್ತಿಯನ್ನು ಸೂಚಿಸುತ್ತದೆ. ಶಬ್ದಘೋಷದ ಮಟ್ಟವನ್ನು ಸೂಚಿಸಲು ಫೋನ್ ಎಂಬ ಅಳತೆಯನ್ನು ಉಪಯೋಗಿಸುವರು. ಇದರಲ್ಲಿ ಸೆಕೆಂಡಿಗೆ 1,000 ಆವರ್ತಾಂಕದ ಶ್ರುತಿಯೇ ಶಿಷ್ಟಮಾನ. ಪ್ರತಿ ಸೆಕೆಂಡಿಗೆ 1,000 ಆವರ್ತಾಂಕದ ಶಬ್ದದ 60 dB ಯಷ್ಟೆ ಘೋಷವನ್ನು ಹೊಂದಿದಂತೆ ತೋರಲು 60 ಆವರ್ತಾಂಕದ ಶಬ್ದ 76dB , 10,000 ಆವರ್ತಾಂಕದ ಶಬ್ದ 72 dB ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಈ ಮೂರು ಶಕ್ತಿಯ ಮಟ್ಟವನ್ನೂ ನಾವು 60 ಫೋನ್ ಶಬ್ದದ ಘೋಷವನ್ನು ಹೊಂದಿವೆ ಎನ್ನುತ್ತೇವೆ. ಹೀಗೆಯೇ ಪ್ರತಿ ಸೆಕೆಂಡಿಗೆ 1,000 ಆವರ್ತಾಂಕಗಳು P ಡೆಸಿಬೆಲ್‌ಗಳಷ್ಟೇ ಘೋಷವನ್ನು ಹೊಂದಿರುವ ಎಲ್ಲ ಶಬ್ದಗಳ ಘೋಷವನ್ನೂ (P) ಫೋನ್‌ಗಳೆಂದು ಅಳೆಯುತ್ತೇವೆ. ಇದು ಶಬ್ದದ ಘೋಷದ ಮಟ್ಟದ (ಲೌಡ್‌ನೆಸ್ ಲೆವೆಲ್) ಅಳತೆ. ಶಬ್ದಘೋಷದ ವೈಯಕ್ತಿಕ ಅನುಭವವನ್ನು ಸೋನ್ ಎಂಬ ಅಳತೆಗೋಲಿನಿಂದ ಅಳೆಯುತ್ತೇವೆ. 40 ಫೋನ್‌ಗಳಿಗೆ 1 ಸೋನ್ ಸಮ ಎಂದು ನಿಶ್ಚಯಿಸಲಾಗಿದೆ.

ಕಿವಿಯ ವಿವೇಚನಾಸಾಮರ್ಥ್ಯ : ಕಿವಿಯ ವಿವೇಚನಾಸಾಮರ್ಥ್ಯ ವಿವಿಧ ಮಟ್ಟಗಳಲ್ಲಿ ವಿವಿಧ ಹಂತದಲ್ಲಿರುತ್ತದೆ. ಉದಾಹರಣೆಗೆ ಪ್ರತಿ ಸೆಕೆಂಡಿಗೆ 1,000 ಆವರ್ತಾಂಕದ ಶಬ್ದದಲ್ಲಿ ದೇಹಲಿಗಿಂತ 5 dB ಶಕ್ತಿಯನ್ನು ಹೊಂದಿದ್ದಾಗ ಕಿವಿ ಗುರುತಿಸಬಹುದಾದ ಅತಿ ಕಿರಿದಾದ ಘೋಷದ ಬದಲಾವಣೆ 3 dB ಯಷ್ಟು. ಅದೇ 100 dB ಯ ಶಬ್ದದಲ್ಲಿ 0.25 dB ಯಷ್ಟು ಬದಲಾವಣೆಯನ್ನೇ ಗಮನಿಸುವುದು ಸಾಧ್ಯ. ವಿವೇಚನಾಸಾಮರ್ಥ್ಯ ಆವರ್ತಾಂಕವನ್ನು ಸಹ ಅವಲಂಬಿಸಿದೆ. ಹೀಗೆಯೇ ಶ್ರುತಿಯ ಬದಲಾವಣೆಗಳನ್ನು ನೋಡಿದರೆ ಕಿವಿ 1,400 ಪ್ರತ್ಯೇಕ ಶ್ರುತಿಗಳನ್ನು ವಿವೇಚಿಸಿ ಗುರುತಿಸಬಲ್ಲುದು. ಆದರೆ 280 ಮತ್ತು 1,400 ನ್ನು ಗುಣಿಸಿ 3,92,000 ವಿವಿಧ ಶ್ರುತಿಗಳ ವಿವಿಧ ಘೋಷಗಳ ಶಬ್ದಗಳನ್ನು ನಾವು ಗುರುತಿಸಬಲ್ಲೆವೆಂದು ಹೇಳಬಹುದೆ? ಇದು ತಪ್ಪು. ಕಿವಿ ಕೇಳಿ, ಗುರುತಿಸಿ, ಜ್ಞಾಪಕದಲ್ಲಿಟ್ಟುಕೊಳ್ಳಲು ಸಾಧ್ಯವಾದುದು ಸು. 7 ಶ್ರುತಿಗಳ 7 ಶಬ್ದ ಘೋಷಗಳನ್ನು ಮಾತ್ರ ಎಂದರೆ 7 X 7 = 49 ವಿವಿಧ ಶ್ರುತಿಘೋಷಗಳ ಗುಂಪು ಮಾತ್ರ. ವಿವೇಚನಾಸಾಮರ್ಥ್ಯವೂ ಶ್ರವಣಸಿದ್ಧಾಂತಗಳಲ್ಲಿ ಮುಖ್ಯಪಾತ್ರವನ್ನು ವಹಿಸಿದೆ. ಎಲ್ಲ ಸಿದ್ಧಾಂತಗಳೂ ಈ ಸಾಮರ್ಥ್ಯವನ್ನು ವಿವರಿಸಬೇಕು.

ಶಬ್ದಮೂಲದ ದಿಕ್ಕು: ವಾನ್‌ಬರ್ಗ್ಯೆಕ್, ಪಿಯರ್ಸ್ ಮತ್ತು ಡೇವಿಡ್ ಒಂದು ಅನುಭವವನ್ನು ವಿವರಿಸಿದ್ದಾರೆ. ಇದರಲ್ಲಿ ಹೊರಗಿನ ಬೇಡದ ಶಬ್ದಗಳು ಯಾವುವೂ ಒಳಗೆ ಬರದಂತೆ ಭದ್ರಪಡಿಸಿದ ಕೋಣೆಯಲ್ಲಿ ಗುರುತಿಸಿದ ಒಂದು ಭಾಗದಲ್ಲಿ ಶ್ರಾವಕವನ್ನು ನಿಲ್ಲಿಸಲಾಯಿತು. ಆಗ ಸಮದೂರದಲ್ಲಿರಿಸಿದ ಎರಡು ಧ್ವನಿವರ್ಧಕಗಳಲ್ಲಿ ಎರಡು ಧ್ವನಿಗಳನ್ನು ಅವೆರಡೂ ಒಂದು ಇನ್ನೊಂದರ ಅನುರೂಪವಾಗಿರುವಂತೆ ಹೊರಡಿಸಿದಾಗ ಶ್ರಾವಕನಿಗೆ ಹೊರಗೆ ಯಾವ ಶಬ್ದಮೂಲವೂ ಇಲ್ಲ, ಧ್ವನಿ ತನ್ನ ತಲೆಯೊಳಗೇ ಹುಟ್ಟುತ್ತಿದೆ ಎಂದು ಭಾಸವಾಗುತ್ತದೆ. ಧ್ವನಿ ಹೀಗೆ ಹೇಳಿತು. ಎರಡನೆಯ ಅಂತರರಾಷ್ಟ್ರೀಯ ಶಬ್ದಸಮ್ಮೇಳನದ ಸದಸ್ಯರೆ, ನಾನು ಸಮ್ಮೇಳನದ ಉಸಿರು (ಸ್ಪಿರಿಟ್). ನಾನೆಲ್ಲಿರುವೆನೋ ನಿಮಗೆ ತಿಳಿಯದು. ನಾನು ಆ ನಿಮ್ಮ ಅವಿಶ್ರಾಂತವಾಗಿ ದುಡಿಯುತ್ತಿರುವ ಮನಸ್ಸಿನಲ್ಲಿ ಉಲಿಯುತ್ತಿದ್ದೇನೆ. ಶಬ್ದ ಎಷ್ಟು ದೂರದಿಂದ, ಯಾವ ದಿಕ್ಕಿನಿಂದ ಜನಿಸಿ ಬರುತ್ತದೆ ಎಂದು ಗುರುತಿಸಲು ಎರಡು ಕಿವಿಗಳೂ ಆವಶ್ಯಕ. ಅಷ್ಟೇ ಅಲ್ಲದೆ ನಮಗೆ ತಿಳಿಯದ ಹಾಗೆಯೇ ತಲೆ ಅತಿಸ್ವಲ್ಪ ಪ್ರಮಾಣದಲ್ಲಿ ಚಲಿಸುವುದೂ ಈ ಕಾರ್ಯದಲ್ಲಿ ನೆರವಾಗುತ್ತದೆ. ಎರಡು ಕಿವಿಗಳನ್ನೂ ತಲುಪುವ ಶಬ್ದಗಳು ಘೋಷದಲ್ಲಿ ಹೊಂದಿರುವ ವ್ಯತ್ಯಾಸ ಶಬ್ದದ ದಿಕ್ಕು ಮತ್ತು ದೂರಗಳನ್ನು ಗುರುತಿಸಲು ಅತಿಮುಖ್ಯವಾದ ಸಾಧನ. ಪ್ರಾಣಿಗಳ, ಅದರಲ್ಲಿಯೂ ಮಾನವನ ಶ್ರವಣಶಕ್ತಿಯೂ ಅದರ ವಿವರಗಳೂ ನಾವು ವಿಚಾರಿಸಿದಷ್ಟೂ ಹೆಚ್ಚುಹೆಚ್ಚಾದ ವಿಸ್ಮಯಕಾರಕವಾದ ಹೊಸ ವಿವರಗಳನ್ನೂ ಹೊಸ ಸಮಸ್ಯೆಗಳನ್ನೂ ಒದಗಿಸುತ್ತವೆ. ಈ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಇಂದಿಗೂ ಸಂಶೋಧನೆಗಳು ನಡೆಯುತ್ತಿವೆ.

5. ಕಿವುಡು ಮತ್ತು ಅದರ ನಿವಾರಣೋಪಾಯಗಳು : ಕೇಳುವಿಕೆಯ ಯಾಂತ್ರಿಕ ವಿಧಾನದಲ್ಲಿ ಯಾವ ಘಟ್ಟದಲ್ಲಿ ಅವ್ಯವಸ್ಥೆ ಉಂಟಾದರೂ ಕಿವುಡು ಉಂಟಾಗುತ್ತದೆ.

ಹಾಗೆ ಉಂಟಾದ ಕಿವುಡು ಪೂರ್ಣವಾಗಿರಬಹುದು ಅಥವಾ ಆಂಶಿಕವಾಗಿರಬಹುದು. ಕಿವುಡು ಒಂದೇ ಕಿವಿಯಲ್ಲಿರಬಹುದು ಇಲ್ಲವೇ ಎರಡು ಕಿವಿಗಳಿಗೂ ವ್ಯಾಪಿಸಿ ಇರಬಹುದು. ಕಿವುಡು ಹುಟ್ಟಿದಂದಿನಿಂದ ಪ್ರಾಪ್ತವಾಗಿರಬಹುದು ಇಲ್ಲವೇ ಆ ಮೇಲೆ ಉಂಟಾಗಿರಬಹುದು. ಹುಟ್ಟು ಕಿವುಡು ಸಾಧಾರಣವಾಗಿ ಶಬ್ದಘೋಷಮಟ್ಟ ಕಡಿಮೆ ಇರುವ ಶಬ್ದಗಳಿಗೆ ಕಂಡುಬಂದು ಅಂಥವರಲ್ಲಿ ಬೇರೆಯವರು ಆಡಿದ ಮಾತನ್ನು ಕೇಳಿ ಅರ್ಥ ಮಾಡಿಕೊಳ್ಳುವುದು ಪ್ರಯಾಸವಾಗಿರುತ್ತದೆ. ನಡುಗಿವಿ ಅಥವಾ ಒಳಗಿವಿ ಭ್ರೂಣಾವಸ್ಥೆಯಲ್ಲಿ ಸರಿಯಾಗಿ ಬೆಳೆಯದೇ ಇರುವುದರಿಂದ ಹುಟ್ಟು ಕಿವುಡು ಪ್ರಾಪ್ತವಾಗುತ್ತದೆ. ಗರ್ಭಿಣಿಯರಿಗೆ ರೂಬೆಲ್ಲ ಎಂಬ ದಡಾರದಂಥ ರೋಗ ಅಂಟಿದಾಗ ಗರ್ಭದೊಳಗಿರುವ ಶಿಶುವಿಗೆ ಆಗುವ ದುಷ್ಪರಿಮಾಣದಿಂದ ಸಾಮಾನ್ಯವಾಗಿ ಕಾಣಬರುವ ಸ್ಥಿತಿ ಇದು. ಆಮೇಲೆ ಪ್ರಾಪ್ತವಾಗುವ ಕಿವುಡಿಗೆ ಅನೇಕ ಕಾರಣಗಳಿವೆ. ಹೊರಗಿವಿಯ ನಾಳದಲ್ಲಿ ಗುಗ್ಗೆ ತುಂಬಿಕೊಂಡು ಅಥವಾ ಬೇರೆ ಬಾಹ್ಯವಸ್ತು ಒಳಹೊಕ್ಕು ಶಬ್ದದ ಗತಿಗೆ ಅಡಚಣೆಯುಂಟಾಗಿ ಶಬ್ದ ಕೇಳಿಸದೇ ಇರುವುದೂ, ನೆಗಡಿಯಾದಾಗ ಅಥವಾ ಗಣಿಯೊಳಕ್ಕೆ ಶೀಘ್ರವಾಗಿ ಒಯ್ಯಲ್ಪಟ್ಟಾಗ ಹೊರಗಿವಿ ಪೊರೆಯ ಇಕ್ಕಡೆಗಳಲ್ಲೂ ಒತ್ತಡವ್ಯತ್ಯಾಸವಿರುವುದರಿಂದ ಇದು ಸಹಜರೀತಿಯಲ್ಲಿ ಕಂಪಿಸುವುದಕ್ಕೆ ಅಡಚಣೆಯುಂಟಾಗಿ ಕೇಳಿಸದೇ ಇರುವುದೂ ಮುಂತಾದುವು. ನಡುಗಿವಿಯ ಮೂಳೆಗಳ ವ್ಯಾಧಿಯಿಂದ ಮತ್ತು ಇದೇ ಕಾರಣವಾಗಿ, ಅಥವಾ ನೇರವಾದ ಆಘಾತದಿಂದ ಹೊರಗಿವಿಪೊರೆ ಅಗಲವಾಗಿ ತೂತುಬಿದ್ದಾಗ ಶಬ್ದತರಂಗಗಳು ಒಳಗಿವಿಗೆ ವರ್ಗಾವಣೆ ಆಗುವುದಕ್ಕೆ ಕಷ್ಟಸಾಧ್ಯವಾಗಿ ಕೇಳುವುದಕ್ಕೆ ಧಕ್ಕೆಯಾಗಬಹುದು. ಕಡಾಯಿಪಾತ್ರೆ, ಸಿಮೆಂಟು ಮುಂತಾದವನ್ನು ತಯಾರು ಮಾಡುವ ಕಡೆ ನಿರಂತರವಾದ ಅಗಾಧಶಬ್ದದಿಂದ ಅಥವಾ ಒಳಗಿವಿಯ ಸೋಂಕು ರೋಗದಿಂದ ಬೇಸಿಲಾರ್ ಪೊರೆಯ ಭಾಗಗಳು ಕ್ರಮೇಣ ಅವನತಿ ಹೊಂದುವುದರಿಂದ ಕಿವುಡು ಸಂಭವಿಸಬಹುದು. ಸ್ಟ್ರೆಪ್ಟೋಮೈಸಿನ್ ಮುಂತಾದ ಔಷಧಗಳ ಗೌಣ ಕ್ರಿಯೆಯಿಂದ ಶ್ರವಣನರ ದುರ್ಬಲಗೊಂಡು ಕೇಳುವಿಕೆಯ ಅವ್ಯವಸ್ಥೆಯುಂಟಾಗಬಹುದು. ಆಘಾತದಿಂದ ತಲೆಚಿಪ್ಪು ಒಡೆದಾಗ ಮತ್ತು ಮೆನಿಂಜೈಟಿಸ್, ಮಿದುಳಿನ ಬಾವು ಇವುಗಳಿಂದ ಶ್ರವಣನರಘಾತ ಅಥವಾ ಅವ್ಯವಸ್ಥೆಯಾಗಿ ಕಿವುಡಾಗಬಹುದು. ಒಳಗಿವಿ, ಶ್ರವಣನರ ಅಥವಾ ಸಂಬಂಧಪಟ್ಟ ಮಿದುಳಿನ ಘಾತ ಅವ್ಯವಸ್ಥೆಗಳಿಂದುಂಟಾದ ಕಿವುಡು ಅನಿವಾರ್ಯ. ನಡುಗಿವಿ, ಒಳಗಿವಿಯ ಅವ್ಯವಸ್ಥೆಯಿಂದ ಅತಿಕಿವುಡಾಗಿದ್ದರೆ ಕೇಳುವಿಕೆಯನ್ನು ಉತ್ತಮಪಡಿಸಿಕೊಳ್ಳಲು ಕೃತಕಸಾಧನಗಳನ್ನು ಉಪಯೋಗಿಸಬೇಕು. ಹಾಗಿಲ್ಲದೆ ಕೇಳುವಿಕೆಯ ಲೋಪ ಮುಂದುವರಿಯುವುದಕ್ಕೆ ಬಿಟ್ಟರೆ ಕಾಲಕ್ರಮದಲ್ಲಿ ಅನೇಕ ವೇಳೆ ಅದು ಮಾನಸಿಕ ಬದಲಾವಣೆಗಳನ್ನೂ ಮಾಡಬಹುದು. ಶೈಶವಾವಸ್ಥೆಯಲ್ಲಿ ಕಿವುಡುಂಟಾದರೆ ಅಂಥ ಕಿವುಡು ಶಿಶುಗಳು ಅನೇಕ ವೇಳೆ ತಕ್ಕ ಚಿಕಿತ್ಸೆ, ತಯಾರಿಕೆಯನ್ನು ಕೊಟ್ಟರೆ, ಬಹುಬುದ್ಧಿವಂತರಾಗಿ ದೊಡ್ಡವರಾದಮೇಲೆ ಉಪಯುಕ್ತ ಜೀವನವನ್ನು ನಡೆಸಬಲ್ಲವರಾಗಿರುತ್ತಾರೆ. ಏಕೆಂದರೆ ಅನೇಕರು ವಾಸ್ತವವಾಗಿ ಮೂಕರಾಗಿರುವುದಿಲ್ಲ.

ಕೇಳುವಿಕೆಯನ್ನು ಉತ್ತಮಪಡಿಸಲು ಉಪಯೋಗಿಸುವ ಕೃತಕ ಸಾಧನಗಳನ್ನು ಸಾಮಾನ್ಯವಾಗಿ ಹೊರಗಿವಿನಾಳದೊಳಗೆ ಅಳವಡಿಸಬೇಕಾಗುತ್ತದೆ. ಈ ಸಾಧನಗಳು, ಮೂಳೆಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಅಥವಾ ಗಾಳಿಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಎರಡು ರೀತಿಯವಾಗಿರುತ್ತವೆ. ಸ್ವಾಭಾವಿಕವಾಗಿಯೇ ಗಾಳಿಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಸಾಧನಗಳು ಉತ್ತಮ ರೀತಿಯವು. ಈ ಕೃತಕ ಸಾಧನಗಳು ಸಾಮಾನ್ಯವಾಗಿ ಸಂಭಾಷಣೆ ಧ್ವನಿಯ ಶ್ರುತಿಮಟ್ಟದಲ್ಲಿ ಧ್ವನಿಯ ಘೋಷವನ್ನು ವರ್ಧಿಸಿ ನಡುಗಿವಿಯ ಗಾಳಿಯಲ್ಲಿ ಅದೇ ರೀತಿ ವರ್ಧಿಸಿದ ಕಂಪನವನ್ನುಂಟುಮಾಡಿಯೋ ಅಥವಾ ಅಂಥ ವರ್ಧಿತವಾದ ಕಂಪನವನ್ನು ಒಳಗಿವಿ ಇರುವ ಮೂಳೆಗೆ ವರ್ಗಾವಣೆ ಮಾಡಿಯೋ ಕೇಳುವಿಕೆಯನ್ನು ಉತ್ತಮಪಡಿಸುತ್ತವೆ. ಅಂಡಾಕಾರದ ಪೊರೆ ಕಂಪಿಸಬಲ್ಲುದೇ ಆಗಿದ್ದರೆ ಗಾಳಿವಾಹಕತೆಯನ್ನು ಉಪಯೋಗಿಸಿಕೊಳ್ಳುವ ಸಾಧನಗಳೇ ಬಹು ಉಪಯುಕ್ತವಾದುವು. ಅಂಡಾಕಾರದ ಪೊರೆ ಕಂಪನಗೊಳ್ಳುವ ಸ್ಥಿತಿಯಲ್ಲಿಲ್ಲದಿದ್ದರೆ ಮೂಳೆಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಸಾಧನವನ್ನೇ ಬಳಸಬೇಕಾಗುತ್ತದೆ. ಇಲ್ಲದಿದ್ದರೆ ಶಸ್ತ್ರಚಿಕಿತ್ಸೆಯಿಂದ ಅಂಡಾಕಾರದ ಪೊರೆ ಪುನಃ ಕಂಪನಗೊಳ್ಳುವ ಅನುಕೂಲತೆಯನ್ನು ಉಂಟುಮಾಡಬೇಕು. ಇದೂ ಇಲ್ಲದಿದ್ದರೆ ಬೇರೆಯೇ ಒಂದು ಪೊರೆಯನ್ನು ವೆಸ್ಟಿಬ್ಯುಲ್ ನಳಿಕೆಯಲ್ಲಿ ಕೃತಕವಾಗಿ ಅಳವಡಿಸಿ ಕಂಪನವರ್ಗಾವಣೆಗೆ ಅನುಕೂಲ ಮಾಡಿಕೊಡಬೇಕು. ಕೃತಕ ಉಪಕರಣವನ್ನು ಉಪಯೋಗಿಸಿದಾಗ ಯಾವ ವಿಧವಾದ ಸಾಧನವನ್ನು ಉಪಯೋಗಿಸಿದರೆ ಕೇಳುವಿಕೆ ಅತ್ಯಂತ ಉಪಯುಕ್ತತೆಯನ್ನು ಪಡೆಯುತ್ತದೆ ಎನ್ನುವುದನ್ನು ತಿಳಿಯಬೇಕಾದರೆ ಕೇಳುವಿಕೆ ಆ ವ್ಯಕ್ತಿಯಲ್ಲಿ ಎಷ್ಟರಮಟ್ಟಿಗೆ ಲೋಪವಾಗಿದೆ ಎನ್ನುವುದನ್ನು ಅರಿಯಬೇಕು. ಇದನ್ನು ಶ್ರವಣಮಾಪಕ (ಆಡಿಯೋಮೀಟರ್) ಎಂಬ ಯಂತ್ರದಿಂದ ತಿಳಿಯಲಾಗುತ್ತದೆ. ಶ್ರವಣಮಾಪನವನ್ನು ಶುದ್ಧಸ್ವರ ಶ್ರವಣಮಾಪನ ಮತ್ತು ಆಡುಮಾತಿನ ಶ್ರವಣಮಾಪನ ಎಂದು ಎರಡು ರೀತಿಯಲ್ಲಿ ಮಾಡುತ್ತಾರೆ. ಶುದ್ಧ ಸ್ವರ ಶ್ರವಣಮಾಪಕದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಯಾವ ಆವರ್ತಾಂಕದ ಶುದ್ಧ ಸ್ವರವನ್ನಾದರೂ ಎಷ್ಟು ಘೋಷಮಟ್ಟದಲ್ಲಿಯಾದರೂ ಉತ್ಪತ್ತಿಮಾಡಬಹುದು; ಒಂದು ಆವರ್ತಾಂಕದ ಶಬ್ದ ಒಂದು ಕಿವುಡು ವ್ಯಕ್ತಿಗೆ ಕೇಳಿಸಬೇಕಾದರೆ ಆ ಸ್ವರದ ಘೋಷ ಎಷ್ಟರ ಮಟ್ಟಿಗಿರಬೇಕು ಎಂದು ಈ ಯಂತ್ರದಿಂದ ನಿಷ್ಕರ್ಷಿಸಿ ಅದನ್ನು ಸಹಜ ಶ್ರವಣಶಕ್ತಿಗೆ ಹೋಲಿಸಿ ಕಿವುಡಿನ ಪರಿಮಿತಿಯನ್ನು ತಿಳಿಯಬಹುದು. ಈ ಶ್ರುತಿಮಟ್ಟದಲ್ಲಿ ಶಬ್ದಘೋಷವನ್ನು ಸಾಕಾದಷ್ಟುಮಟ್ಟಿಗೆ ವರ್ಧಿಸಿ ಕೇಳುವಿಕೆಯನ್ನು ಉತ್ತಮಪಡಿಸಬಲ್ಲ ಸಾಧನವನ್ನು ಉಪಯೋಗಿಸಬೇಕು. ಕೇಳುವಿಕೆಯನ್ನು ಉತ್ತಮಪಡಿಸಬಲ್ಲ ಸಾಧನ ಪ್ರಾರಂಭದಲ್ಲಿ ಕಿವಿಯೊಳಗೆ ಸಿಕ್ಕಿಸಿಕೊಳ್ಳಬಹುದಾದ ತುತ್ತೂರಿಯಾಕಾರದ ಕೊಳವೆಯಂತೆ ಇದ್ದವು. ಇದು ಆದಷ್ಟು ಹೆಚ್ಚು ಶಬ್ದತರಂಗಗಳನ್ನು ಸಂಗ್ರಹಿಸಿ ಕಿವಿಗೆ ಒಯ್ದು ಕೇಳುವಿಕೆಯನ್ನು ಉತ್ತಮಪಡಿಸಬಹುದಾದ ಒರಟು ಸಾಧನ. ಆದರೆ ಇದು ಅಷ್ಟು ಉಪಯುಕ್ತವಲ್ಲ. ಈಚಿನ ಕೃತಕ ಸಾಧನಗಳೆಲ್ಲವೂ ಶಬ್ದಘೋಷಮಟ್ಟವನ್ನು ವರ್ಧಿಸುವಂಥವೇ. 1930–35ರ ತನಕ ಇದ್ದ ಈ ಕೃತಕ ಸಾಧನಗಳು ಹೆಚ್ಚು ಕಡಿಮೆ, ಕಿವಿಯ ಒಳಗೇ ಇಡಬಹುದಾದ ಪುಟ್ಟ ಟೆಲಿಫೋನ್‌ಗಳು. ಆದರೆ ಇವುಗಳಲ್ಲಿ ಶಬ್ದಘೋಷವೂ ವೃದ್ಧಿಯಾಗುತ್ತಿತ್ತು. ಸುಮಾರು 1930–1950ರ ತನಕ ಇದ್ದ ಕೃತಕ ಸಾಧನಗಳು, ಶಬ್ದತರಂಗವನ್ನು ವೃದ್ಧಿ ಮಾಡಲು ರೇಡಿಯೋನಲ್ಲಿರುವ ವಾಲ್ವ್‌ಗಳಂಥ ಸಣ್ಣ ವಾಲ್ವ್ ಗಳನ್ನು ಉಪಯೋಗಿಸಿ ಪರಿಣಮಿಸುವ ವರ್ಧಿತಕಂಪನ ನಡುಗಿವಿಯ ಗಾಳಿಯನ್ನೋ ಒಳಗಿವಿ ಇರುವ ತಲೆ ಚಿಪ್ಪಿನ ಭಾಗವನ್ನೋ ಕಂಪನಗೊಳಿಸಬಹುದಾಗಿ ಮಾಡಲ್ಪಟ್ಟಿದ್ದವು. 1950ರಿಂದ ಈಚಿನ ಕೃತಕ ಶ್ರವಣಸಹಾಯಕ ಸಾಧನಗಳು ಟ್ರಾನ್‌ಸಿಸ್ಟರ್ ಮತ್ತು ಅಯಸ್ಕಾಂತವುಳ್ಳ ಮೈಕ್ರೋಫೋನನ್ನು ಬಳಸುವುದರಿಂದ, ಅವಕ್ಕೆ ಬೇಕಾದ ವಿದ್ಯುತ್ ಜನಕ ಕೋಶವನ್ನೂ ಒಳಗೊಂಡು ಅವು 5 ಸೆಂಮೀ x 2.5 ಸೆಂಮೀ x 1.25 ಸೆಂಮೀ ಗಾತ್ರದಲ್ಲಿ ತಯಾರಾಗಿ ಇನ್ನೂ ಅನುಕೂಲವಾಗಿವೆ. ಇವನ್ನು ಕನ್ನಡಕದ ಫ್ರೇಮಿನಲ್ಲಿ ಕೂಡ ಗುಟ್ಟಾಗಿ ಅಳವಡಿಸಬಹುದು. ನೋಡಿ– ಕೇಳುವಿಕೆಗೆ ಸಹಾಯಕಗಳು, ಕಿವಿ.

**ಕೇಳುವಿಕೆಗೆ ಸಹಾಯಕಗಳು:** ಕೇಳುವಿಕೆ ಮಂದವಾಗಿರುವವರು ಉಪಯೋಗಿಸುವ ಉಪಕರಣಗಳು (ಹಿಯರಿಂಗ್ ಏಡ್ಸ್). ಮಾನವನ ಶ್ರವಣೇಂದ್ರಿಯ ಹಲವು ಕಾರಣಗಳಿಂದ ಸರಿಯಾಗಿ ಕೆಲಸಮಾಡದೆ ಇರಬಹುದು. ಇದರ ಪರಿಣಾಮ ಕಿವುಡು. ಇದರಿಂದ ಕೇಳುವಿಕೆ ಮಂದವಾಗಿ ಇತರರಿಗೆ ಸಹಜವಾಗಿ ಕೇಳಿಸುವ ಶಬ್ದಗಳು ಕಿವುಡನಿಗೆ ಕ್ಷೀಣವಾಗಿ ಭಾಸವಾಗುತ್ತವೆ. ಅವನನ್ನು ಮಾತನಾಡಿಸುವಾಗ ಇತರರು ಗಟ್ಟಿಯಾಗಿ ಕಿರುಚಬೇಕಾಗುತ್ತದೆ; ಅವನ ಮಾತುಗಾರಿಕೆಯೂ ಅಸಮರ್ಪಕವಾಗಿರುವುದು. ಕಿವುಡಿನ ಅನನುಕೂಲತೆಯನ್ನು ನಿವಾರಿಸಲು ಶಸ್ತ್ರಚಿಕಿತ್ಸೆ ಮತ್ತು ಔಷಧೋಪಚಾರಗಳ ಜೊತೆಗೆ ಕೇಳುವಿಕೆಗೆ ಸಹಾಯಕಗಳಾದ ಹಲವಾರು ಉಪಕರಣಗಳು ಸಹ ನೆರವಾಗುತ್ತವೆ. ಇವು ಶಬ್ದಗಳನ್ನು ಬೃಹತ್ಕರಿಸಿ ಕಿವಿಯ ಹೊರಭಾಗಕ್ಕೆ ಹೊಗಿಸುತ್ತವೆ. ಶ್ರವಣಸಹಾಯಕಗಳ ನಿರ್ಮಾಣಕ್ಕೆ ಮೊದಲು ಕೊಂಬು, ಕೊಳವೆ ಇತ್ಯಾದಿಗಳನ್ನು ಉಪಯೋಗಿಸಿ ಶಬ್ದ ಹೆಚ್ಚಾಗಿ ಚದರಿಹೋಗದೆ ಕಿವಿಯನ್ನೇ ಹೆಚ್ಚಿನ ಸಾಂದ್ರತೆಯಿಂದ ಪ್ರವೇಶಿಸುವಂತೆ ಮಾಡುವುದರಿಂದ ಕಿವುಡರು ಸ್ವಲ್ಪ ಪ್ರಯೋಜನವನ್ನು ಹೊಂದುತ್ತಿದ್ದರು. ಈ ಸಾಧನಗಳೂ, 1936ರ ರಿಂದ ಉಪಯೋಗಕ್ಕೆ ಬಂದ ಶ್ರವಣಸಹಾಯಕ ನಳಿಗೆ (ಹಿಯರಿಂಗ್ ಏಡ್ ಟ್ಯೂಬ್) ಎಂಬ ಹೆಸರಿನ ಕಿರುಬೆರಳಿಗಿಂತ ಸಣ್ಣದಾದ ಎಲೆಕ್ಟ್ರಾನ್ ವಾಲ್ವ್‌ಗಳನ್ನು ಉಪಯೋಗಿಸಿಕೊಂಡು ನಿರ್ಮಿತವಾದ ಶ್ರವಣಸಹಾಯಕಗಳೂ ಈಗ ಮರೆಯಾಗಿವೆ. 1948ರಿಂದ ಈಚೆಗೆ ಟ್ರಾನ್ಸಿಸ್ಟರ್‌ಗಳಿಂದ ತಯಾರಿಸಲ್ಪಡುವ ಲಘುತರವಾದ ಅತಿ ಸಣ್ಣ ಶ್ರವಣಸಹಾಯಕಗಳು ಬಳಕೆಗೆ ಬಂದಿವೆ.

ರಚನೆ : ಶ್ರವಣಸಹಾಯಕದಲ್ಲಿ ಮೂರು ಭಾಗಗಳಿವೆ. ಎಲ್ಲ ಭಾಗಗಳೂ ಚಿಕ್ಕದಾಗಿ ಹಗುರವಾಗಿರಬೇಕಾದುದು ಅಗತ್ಯ. ಮೊದಲ ಭಾಗ ಮೈಕ್ರೋಫೋನ್. ತನ್ನ ಮೇಲೆ ಬೀಳುವ ಶಬ್ದವನ್ನು ತದ್ರೂಪವಾದ ವಿದ್ಯುತ್ ವಿಭವಗಳನ್ನಾಗಿ ಪರಿವರ್ತಿಸುವುದೇ ಮೈಕ್ರೋಫೋನಿನ ಕರ್ತವ್ಯ. ಹೀಗೆ ಜನಿತವಾದ ವಿದ್ಯುತ್ ವಿಭವಗಳನ್ನು ಪ್ರವರ್ಧಕ (ಆಂಪ್ಲಿಫೈಯರ್) ದೊಡ್ಡದನ್ನಾಗಿಸಿ ಇಯರ್‌ಫೋನಿನಲ್ಲಿ ಹಾಯಿಸುತ್ತದೆ. ಕಿವಿಯಲ್ಲಿ ಧರಿಸಲಾಗುವ ಇಯರ್‌ಫೋನ್ ವಿದ್ಯುತ್ಪ್ರವಾಹವನ್ನು ಮತ್ತೆ ಶಬ್ದವನ್ನಾಗಿ ಪರಿವರ್ತಿಸಿ ಕಿವಿಯ ಒಳಗೆ ಕಳುಹಿಸುತ್ತದೆ. ಹೀಗೆ ಶ್ರವಣ ಸಹಾಯಕ ಶಬ್ದವನ್ನು ಆಯ್ದು ದೊಡ್ಡದನ್ನಾಗಿ ಮಾಡಿ ಕಿವಿಗೆ ಮುಟ್ಟಿಸುತ್ತದೆ. ಇಯರ್‌ಫೋನಿನ ರಚನೆಯೂ ಮೈಕ್ರೋಫೋನಿನ ಹಾಗೆಯೇ ಇರುತ್ತದೆ. ಇದು ಮಾಡುವ ಕೆಲಸ ಮಾತ್ರ ತದ್ವಿರುದ್ಧ.

ಇಯರ್‌ಫೋನಿನಲ್ಲಿ ಎರಡು ಬಗೆ– ವಾಯುವಾಹಕ ಹಾಗು ಅಸ್ಥಿವಾಹಕ. ವಾಯುವಾಹಕ ಇಯರ್ ಫೋನನ್ನು ಕಿವಿಯಲ್ಲಿ ಧರಿಸುತ್ತಾರೆ. ಇದು ಶಬ್ದವನ್ನು

ಕಿವಿಯ ಒಳಭಾಗಕ್ಕೆ ತಲುಪಿಸುತ್ತದೆ. ಒಳಗಿವಿಯ ದೋಷಗಳ ನಿವಾರಣೆಗೆ ಈ ವಿಧಾನ ಬಲು ಸೂಕ್ತ. ಸಾಮಾನ್ಯವಾಗಿ ಇಂಥ ಇಯರ್‌ಫೋನ್ ಹೆಚ್ಚಾಗಿ ಬಳಕೆಯಲ್ಲಿವೆ. ಅಸ್ಥಿವಾಹಕ ಇಯರ್‌ಫೋನನ್ನು ಕಿವಿಯ ಹಿಂದೆ ಇರುವ ಒಂದು ಮೂಳೆಯ ಹೊರಭಾಗಕ್ಕೆ ಜೋಡಿಸುತ್ತಾರೆ. ಶಬ್ದದ ಕಂಪನಗಳು ಅಸ್ಥಿವಾಹಕ ಇಯರ್‌ಫೋನಿನಿಂದ ಮೂಳೆಯ ಮೂಲಕ ಗಾಳಿಯ ಮಾಧ್ಯಮವಿಲ್ಲದೆಯೇ ಒಳಗಿವಿಗೆ ರವಾನೆಯಾಗುತ್ತವೆ.

ಹೊರಗಿವಿಯಲ್ಲಿ ದೋಷವಿದ್ದಾಗ ಅಥವಾ ಶ್ರವಣಮಾಪನ ಪರೀಕ್ಷೆಯಲ್ಲಿ ಅಸ್ಥಿವಾಹಕ ಶ್ರವಣಮಾತ್ರ ಚೆನ್ನಾಗಿದ್ದಾಗ ಅಸ್ಥಿವಾಹಕ ಇಯರ್‌ಫೋನ್ ಉಪಯೋಗಕ್ಕೆ ಬರುತ್ತದೆ. ಇದಕ್ಕೆ ಪ್ರವರ್ಧಕದಿಂದ ಹೆಚ್ಚಿನ ಶಕ್ತಿಯನ್ನು ಒದಗಿಸಬೇಕಾಗುತ್ತದೆ. ಮಧ್ಯಕಿವಿಯ ದೋಷಗಳಿಗೆ ಎರಡೂ ವಿಧದ ಇಯರ್‌ಫೋನುಗಳೂ ಉಪಯೋಗ ಆಗುತ್ತವೆ.

ಶ್ರವಣಸಹಾಯಕದ ಗಾತ್ರವನ್ನು ಕುಗ್ಗಿಸುವ ಕಾರ್ಯ ನಡೆದೇ ಇದೆ. ಮೈಕ್ರೋಫೋನ್, ಇಯರ್‌ಫೋನ್‌ಗಳನ್ನು ಸಣ್ಣಗಾತ್ರದಲ್ಲಿ ತಯಾರಿಸಲಾಗಿದೆ. ಟ್ರಾನ್ಸಿಸ್ಟರ್‌ಗಳ ಉಪಯೋಗದಿಂದ ಪ್ರವರ್ಧಕದ ಗಾತ್ರವೂ ಸಣ್ಣದಾಗಿದೆ. ಎರಡನೆಯ ಮಹಾಯುದ್ಧದ ಮೊದಲಿನಲ್ಲಿ ಬಳಕೆಯಲ್ಲಿದ್ದ ಎಲೆಕ್ಟ್ರಾನ್ ನಳಿಗೆ ಶ್ರವಣ ಸಹಾಯಕಗಳಿಗೆ ಇಂದಿನ ಸಣ್ಣ ಪಾಕೆಟ್ ಟ್ರಾನ್ಸಿಸ್ಟರ್ ರೇಡಿಯೋಗಳ ಗಾತ್ರ ಇತ್ತು. ಇವಕ್ಕೆ 1 1/2 ವೋಲ್ಟಿನ ಮತ್ತು 22 ವೋಲ್ಟಿನ ಎರಡು ಬ್ಯಾಟರಿಗಳ ಅಗತ್ಯವೂ ಇತ್ತು. ಟ್ರಾನ್ಸಿಸ್ಟರ್ ಪ್ರವರ್ಧಕ ಸಣ್ಣದಾಗಿರುವುದು ಮಾತ್ರವಲ್ಲ ಇದು ಬಳಸುವ ವಿದ್ಯುಚ್ಛಕ್ತಿಯೂ ಅತ್ಯಲ್ಪ. ಗುಂಡಿಯಷ್ಟೆ ಸಣ್ಣದಾದ ಮತ್ತು ಹೆಚ್ಚಿನ ಜೀವಿತಾವಧಿ ಇರುವ 1–3 ವೋಲ್ಟಿನ ಪಾದರಸದ ಸೆಲ್‌ಗಳನ್ನು ಇವುಗಳಲ್ಲಿ ಉಪಯೋಗಿಸುತ್ತಾರೆ.

ಫಿಲಿಪ್ಸ್ ಸಂಸ್ಥೆಯವರು ತಮ್ಮ ಫಿಲಿಪ್ಸ್ ಸೆಮಿಕಂಡಕ್ಟರ್ಸ್ (1962) ಎಂಬ ಕಿರುಹೊತ್ತಗೆಯಲ್ಲಿ ತೋರಿಸಿರುವ ಒಂದು ಶ್ರವಣಸಹಾಯಕದ ಮಂಡಲವನ್ನು ಚಿತ್ರ 1 ರಲ್ಲಿ ಕೊಡಲಾಗಿದೆ. ಇದರಲ್ಲಿ ನಾಲ್ಕು ಟ್ರಾನ್ಸಿಸ್ಟರ್‌ಗಳ ಸಹಾಯದಿಂದ ಮೈಕ್ರೋಫೋನ್‌ನಲ್ಲಿ ಜನಿತವಾದ (M) ವಿದ್ಯುತ್ಪ್ರವಾಹಗಳನ್ನು ನಾಲ್ಕು ಹಂತಗಳಲ್ಲಿ ಪ್ರವರ್ಧಿಸಿ ಕೊನೆಗೆ ಇಯರ್‌ಫೋನ್ ನಲ್ಲಿ ಶಬ್ದವನ್ನು ಉಂಟುಮಾಡಲಾಗುತ್ತದೆ. ಮುಲ್ಲಾರ್ಡ್‌ರವರ ರೆಫರೆನ್ಸ್




ಚಿತ್ರ 1 ನಾಲ್ಕು ಟ್ರಾನ್ಸಿಸ್ಟರ್‌ಗಳ ಶ್ರವಣಸಹಾಯಕ. ಚಿತ್ರದಲ್ಲಿ *M*- ಮೈಕ್ರೊಫೋನ್, *T*-ಇಯರ್‌ಫೋನ್, *R*-ರೆಸಿಸ್ಟರ್, *C*-ಕೆಪಾಸಿಟರ್, *OC* 57, *OC* 58, *OC* 59, *OC* 60-ಟ್ರಾನ್ಸಿಸ್ಟರ್‌ಗಳು




ಚಿತ್ರ 2 ಮೂರು ಟ್ರಾನ್ಸಿಸ್ಟರ್ ಮತ್ತು ಇತರ ಏಳು ಭಾಗಗಳನ್ನೊಳಗೊಂಡ ಶ್ರವಣಸಹಾಯಕ

ಮ್ಯಾನ್ಯುಯಲ್ ಆಫ್ ಟ್ರಾನ್ಸಿಸ್ಟರ್ ಸರ್ಕ್ಯೂಟ್ಸ್ (1961) ಎಂಬ ಪುಸ್ತಕದಲ್ಲಿ ಮೂರು ಟ್ರಾನ್ಸಿಸ್ಟರ್, ಮೂರು ರೆಸಿಸ್ಟರ್ ಮತ್ತು ಒಂದು ಕೆಪಾಸಿಟರ್‌ಗಳನ್ನು ಉಪಯೋಗಿಸಿರುವ ಶ್ರವಣಸಹಾಯಕದ ಮಂಡಲ ಇದೆ (ಚಿತ್ರ 2). ಈ ಮಂಡಲದಲ್ಲಿ ಉಪಯೋಗಿಸಿರುವ ಟ್ರಾನ್ಸಿಸ್ಟರ್‌ಗಳೂ ಸಣ್ಣ ಗಾತ್ರದವೂ (3–4 ಮಿಮೀ ಉದ್ದ 1–2 ಮಿಮೀ ವ್ಯಾಸ). ಆದ್ದರಿಂದ ಇಡೀ ಪ್ರವರ್ಧಕವನ್ನೇ ಕನ್ನಡಕದ ಕಿವಿಯ ಮೇಲಿರುವ ಭಾಗದಲ್ಲಿಯೋ ತಲೆಗೂದಲಿನಲ್ಲಿ ಧರಿಸಿರುವ ಬ್ರೂಚಿನಲ್ಲಿಯೋ ಜೋಡಿಸಿರಬಹುದು. ಶ್ರವಣಸಹಾಯಕವನ್ನು ಧರಿಸಿರುವುದೇ ಗೋಚರವಾಗುವುದಿಲ್ಲ.

ಆವರ್ತಾಂಕಪ್ರತಿಕ್ರಿಯೆ (ಫ್ರೀಕ್ವೆನ್ಸಿ ರೆಸ್ಪಾನ್ಸ್) : ಪ್ರತಿ ಪ್ರವರ್ಧಕ್ಕೂ ಪ್ರತಿ ಶಕ್ತಿರೂಪಾಂತರಕಾರಕ್ಕೂ (ಟ್ರಾನ್ಸ್‌ಡ್ಯೂಸರಿ) ತನ್ನದೇ ಆದ ಆವರ್ತಾಂಕ ಪ್ರತಿಕ್ರಿಯೆ ಉಂಟು. ಕಡಿಮೆ ಮೌಲ್ಯದ ಆವರ್ತಾಂಕದಿಂದ ಹೆಚ್ಚಿನ ಮೌಲ್ಯದವುಗಳವರೆಗೆ ವಿವಿಧ ಆವರ್ತಾಂಕಗಳ ಒಂದೇ ಮಟ್ಟದ ಶಕ್ತಿಯನ್ನು ಒಂದು ಸಾಧನಕ್ಕೆ ಒದಗಿಸಿದಾಗ ಅದು ಈ ಶಕ್ತಿಯನ್ನು ಯಾವ ಯಾವ ಆವರ್ತಾಂಕಗಳಲ್ಲಿ ಯಾವ ಯಾವ ಮಟ್ಟಕ್ಕೆ ಹಿಗ್ಗಿಸುವುದು ಅಥವಾ ಕುಗ್ಗಿಸುವುದು ಎಂಬುದನ್ನು ಅದರ ಆವರ್ತಾಂಕ ಪ್ರತಿಕ್ರಿಯೆ ತೋರಿಸುವುದು. ಸಾಮಾನ್ಯವಾಗಿ ಇದನ್ನು ಒಂದು ಗ್ರಾಫಿನ ಸಹಾಯದಿಂದ ಸೂಚಿಸಲಾಗುತ್ತದೆ x-ಅಕ್ಷದಲ್ಲಿ ಆವರ್ತಾಂಕವನ್ನು (ಲಘುಗಣಕದ ಮಾನಕದಲ್ಲಿ) y- ಅಕ್ಷದಲ್ಲಿ ಸಾಧನದ ಲಾಭವನ್ನೂ (dB ಅಥವಾ ವೋಲ್ಟೇಜ್ ರೂಪದಲ್ಲಿ) ಗುರುತಿಸಿದಾಗ ದೊರೆಯುವ ರೇಖೆಯೇ ಆವರ್ತಾಂಕ ಪ್ರತಿಕ್ರಿಯೆಯ ರೇಖೆ. ಮಾನವನ ಕಿವಿ ಸಾಮಾನ್ಯವಾಗಿ 20 ರಿಂದ 20,000 ಪ್ರತಿ ಸೆಕೆಂಡಿನ ಆವರ್ತಾಂಕದ ಶಬ್ದಗಳನ್ನು ಕೇಳಬಲ್ಲುದು. ಆದರೂ ಮಾತುಕತೆಗಳನ್ನು ವಿವರವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ 250–4,000 ಪ್ರತಿ ಸೆಕೆಂಡಿನ ಆವರ್ತಾಂಕದ ಶಬ್ದಗಳೇ ಸಾಕು. ಇದಕ್ಕಿಂತ ಕೆಳಗಿನ ಸಂಖ್ಯೆಯ ಶಬ್ದಗಳು ಶಬ್ದದ ಗುಣವನ್ನು ಮಾತ್ರ ಉತ್ತಮಗೊಳಿಸುತ್ತವೆ. ಹೆಚ್ಚಿನ ಆವರ್ತಾಂಕದ ಶಬ್ದಗಳಿಂದ ಹಿಸ್ ಕಾರದಿಂದ ಕೂಡಿದವು ಮಾತ್ರ ಉತ್ತಮಗೊಳ್ಳುತ್ತವೆ. ಸಂಗೀತದ ಗುಣವೂ ಆವರ್ತಾಂಕದ ವಿಸ್ತಾರದಿಂದ ಉತ್ತಮಗೊಳ್ಳುತ್ತದೆ. ಶ್ರವಣಸಹಾಯಕ 250–4,000 ಪ್ರತಿಸೆಕೆಂಡಿನ ಶಬ್ದಗಳಿಗೆ ಪ್ರತಿಕ್ರಿಯೆ ತೋರಿಸಿದರೆ ಸಾಕು.

ಆದರೆ ಯಾವುದೇ ಒಂದು ವ್ಯಕ್ತಿಗೆ ಬೇಕಾದ ಶ್ರವಣಸಹಾಯಕ ಎಂಥದೆಂದು ನಿರ್ಧರಿಸಲು ಮೊದಲು ಆ ವ್ಯಕ್ತಿಯ ಶ್ರವಣಲೇಖನವನ್ನು (ಆಡಿಯೋಗ್ರಾಂ) ಪಡೆಯಬೇಕು. ಶ್ರವಣಮಾಪಕ (ಆಡಿಯೋಮೀಟರ್) ಎಂಬ ಯಂತ್ರದ ಸಹಾಯದಿಂದ ವ್ಯಕ್ತಿಯ ಕಿವಿಗಳ ಆವರ್ತಾಂಕ ಪ್ರತಿಕ್ರಿಯೆಯನ್ನು ಕಂಡುಹಿಡಿಯಲಾಗುತ್ತದೆ. ಕಿವಿಗಳು ಯಾವ ಯಾವ ಆವರ್ತಾಂಕಗಳಿಗೆ ಎಷ್ಟು ಎಷ್ಟು ಚುರುಕಾಗಿವೆ ಎಂಬುದನ್ನು ಈ ಯಂತ್ರ ಅಳೆಯುತ್ತದೆ. ಯಾವ ಆವರ್ತಾಂಕಗಳಲ್ಲಿ ಎಷ್ಟರಮಟ್ಟಿನ ಶ್ರವಣನಷ್ಟ ಇದೆಯೆಂದು ತೋರಿಸುವ ಗ್ರಾಫನ್ನು ಶ್ರವಣಲೇಖನ ಎಂದು ಕರೆಯುತ್ತೇವೆ. ಶ್ರವಣನಷ್ಟ ಎಲ್ಲ ಆವರ್ತಾಂಕಗಳಲ್ಲಿಯೂ ಒಂದೇ ಸಮವಾಗಿದ್ದರೆ ಎಷ್ಟರಮಟ್ಟಿಗೆ ಶ್ರವಣನಷ್ಟವಿದೆಯೋ ಅಷ್ಟೇ dBಯ ಲಾಭವನ್ನು ಎಲ್ಲ ಆವರ್ತಾಂಕಗಳಲ್ಲಿಯೂ ಸಮವಾಗಿ ಹೊಂದಿರುವ ಶ್ರವಣಸಹಾಯಕವನ್ನು ಉಪಯೋಗಿಸಬೇಕು (ಸಮಶ್ರುತಿಶ್ರವಣ ಸಹಾಯಕ). ಉದಾಹರಣೆಗೆ 50dBಯ ಕಿವುಡು ಎಲ್ಲ ಆವರ್ತಾಂಕಗಳಲ್ಲಿಯೂ ಇದ್ದರೆ ಆಗ 250ರಿಂದ 4,000 ಪ್ರತಿಸೆಕೆಂಡಿನ ಆವರ್ತಾಂಕಗಳ ನಡುವೆ ಎಲ್ಲ ಸಮವಾಗಿ 50dB ಲಾಭವನ್ನು ಹೊಂದಿರುವ ಶ್ರವಣ ಸಹಾಯಕವನ್ನು ಉಪಯೋಗಿಸಬೇಕು. ಕಿವಿಯಲ್ಲಿ ಉಚ್ಚ ಆವರ್ತಾಂಕಗಳಲ್ಲಿ ಶ್ರವಣನಷ್ಟವಿದ್ದರೆ ಅದೇ ಆವರ್ತಾಂಕಗಳಲ್ಲಿ ಹೆಚ್ಚಿನ ಲಾಭವನ್ನು ಹೊಂದಿರುವ ಶ್ರವಣಸಹಾಯಕವನ್ನು (ತಾರಶ್ರುತಿ ಶ್ರವಣಸಹಾಯಕ) ಉಪಯೋಗಿಸಬೇಕು. ನಿಮ್ನ ಆವರ್ತಾಂಕದ ಶ್ರವಣನಷ್ಟವನ್ನು ಹೊಂದಿರುವ ಕಿವಿಗೆ ನಿಮ್ನ ಆವರ್ತಾಂಕಗಳಲ್ಲಿ ಹೆಚ್ಚಿನ ಲಾಭವನ್ನು ಹೊಂದಿರುವ ಶ್ರವಣಸಹಾಯಕವನ್ನು (ಮಂದಶ್ರುತಿ ಶ್ರವಣಸಹಾಯಕ) ತೊಡಿಸಬೇಕು. ಎಲ್ಲ ತರಹೆಯ ಕಿವುಡಿಗೂ ಮಟ್ಟವಾದ ಆವರ್ತಾಂಕ ಪ್ರತಿಕ್ರಿಯೆಯ ಶ್ರವಣಸಹಾಯಕವನ್ನು ಉಪಯೋಗಿಸಿದರೆ ಶ್ರವಣನಷ್ಟವಿಲ್ಲದೆ ಇರುವ ಆವರ್ತಾಂಕದ ಶಬ್ದಗಳು ಅತಿ ಹೆಚ್ಚಿನ ಶಕ್ತಿಯಮಟ್ಟದಲ್ಲಿ ಕಿವಿಯನ್ನು ಪ್ರವೇಶಿಸಿ ಅಪಾಯವನ್ನು ಉಂಟುಮಾಡುತ್ತವೆ. ಆದ್ದರಿಂದ ಕಿವಿಯ ಮತ್ತು ಶ್ರವಣಸಹಾಯಕದ ಆವರ್ತಾಂಕ ಪ್ರತಿಕ್ರಿಯೆಗಳು ಪರಸ್ಪರ ಪೂರಕವಾಗಿರಬೇಕು.

ಶ್ರವಣಸಹಾಯಕದ ಲಾಭ : ಕಿವಿಯ ಶ್ರವಣನಷ್ಟ 30dB ಗಿಂತ ಕಡಿಮೆಯಾಗಿದ್ದರೆ ಶ್ರವಣಸಹಾಯಕ ಅಷ್ಟು ಉಪಯೋಗಕಾರಿಯಾಗಲಾರದು. ಏಕೆಂದರೆ ಅತಿ ನಿಶ್ಶಬ್ದವಾದ ಆವರಣಗಳನ್ನು ಬಿಟ್ಟರೆ ಇತರ ಸ್ಥಳಗಳಲ್ಲಿ ಸುತ್ತಮುತ್ತಲಿನ ಗದ್ದಲವೇ 30dB ಗಿಂತ ಹೆಚ್ಚಿನ ಶಕ್ತಿಯುಳ್ಳದ್ದಾಗಿರುತ್ತದೆ. ಶ್ರವಣಸಹಾಯಕದಲ್ಲಿಯೂ ಸುಮಾರು ಇದೆ ಮಟ್ಟದ ಗಲಭೆ ಜನಿಸುತ್ತಿರುತ್ತದೆ. ಆದ್ದರಿಂದ 30dB ಗಿಂತ ಕ್ಷೀಣವಾದ ಶಬ್ದಗಳು ಈ ಗಲಭೆಗಳಲ್ಲಿ ಮುಳುಗಿ ಹೋಗುವುವು. ಹೀಗೆಯೇ 95 dB ಗಿಂತ ಹೆಚ್ಚಿನ ಕಿವುಡು ಇದ್ದರೂ ಶ್ರವಣಸಹಾಯಕ ನಿರುಪಯೋಗಿಯಾಗುತ್ತದೆ. ಏಕೆಂದರೆ ಆಗ ಶ್ರವಣಸಹಾಯಕದ ಲಾಭ ಶಬ್ದವನ್ನು 120 dB ಗಿಂತ ಹೆಚ್ಚಿನದನ್ನಾಗಿ ಮಾಡುವುದರಿಂದ ಕಿವಿಯಲ್ಲಿ ನೋವು ಉಂಟಾಗುವುದೇ ಹೊರತು ಶಬ್ದ ಕೇಳಿಸುವುದಿಲ್ಲ.

ಇದು ಯಾವ ಆವರ್ತಾಂಕದಲ್ಲಿಯೂ ಆಗಬಾರದು. ಆದ್ದರಿಂದ ಶ್ರವಣಸಹಾಯಕ 30 ರಿಂದ 95 dB ವರೆಗಿನ ಶ್ರವಣನಷ್ಟವನ್ನು ಮಾತ್ರ ತುಂಬಿಕೊಡುವುದು. ಶ್ರವಣಸಹಾಯಕದ ಪ್ರಯೋಜನವನ್ನು ಅಂದಾಜು ಮಾಡಲು ನಿಶ್ಶಬ್ದವಾದ ಕೋಣೆಯಲ್ಲಿ ಬೇರೆಬೇರೆ ಮಟ್ಟದ ಬೇರೆ ಆವರ್ತಾಂಕದ ಶುದ್ಧಸ್ವರದ ಶಬ್ದಗಳನ್ನು ಪ್ರಯೋಗಿಸಿ ರೋಗಿ ಈ ಶಬ್ದಗಳನ್ನು ಬರಿಯ ಕಿವಿಯಿಂದಲೂ ಶ್ರವಣಸಹಾಯಕದ ನೆರವಿನಿಂದಲೂ ಎಷ್ಟರಮಟ್ಟಿಗೆ ಕೇಳುವನೆಂಬುದನ್ನು ನೋಡಬಹುದು. ಇನ್ನೊಂದು ವಿಧಾನದಲ್ಲಿ ಮೊದಲೇ ನಿರ್ಧರಿತವಾದ ಪಟ್ಟಿಯೊಂದರಿಂದ ಪದಗಳನ್ನು ಓದಿ ಹೇಳಿದಾಗ ರೋಗಿ ಅವುಗಳಲ್ಲಿ ಎಷ್ಟನ್ನು ಸರಿಯಾಗಿ ಗ್ರಹಿಸುತ್ತಾನೆ ಎಂಬುದನ್ನು ಶ್ರವಣಸಹಾಯಕವನ್ನು ಧರಿಸಿರುವಾಗ, ಧರಿಸದೆ ಇರುವಾಗ ಪರಿಗಣಿಸಿ ಈ ಯಂತ್ರದ ಪ್ರಭಾವವನ್ನು ಅಳೆಯಬಹುದು.

ಮುಂದೆ ಸಂಯುಕ್ತಮಂಡಲ (ಇಂಟಿಗ್ರೇಟೆಡ್ ಸರ್ಕಿಟ್) ಎಂಬ ಹೊಸ ತಂತ್ರದಿಂದ ಶ್ರವಣಸಹಾಯಕವನ್ನು ಅತಿಹ್ರಸ್ವರೂಪಕ್ಕೆ ತರುವುದು ಸಾಧ್ಯವಾದೀತು. ಆಗ ಮೈಕ್ರೊಫೋನ್ ಮತ್ತು ಇಯರ್‌ಫೋನ್‌ಗಳೇ ಶ್ರವಣಸಹಾಯಕದ ಅತಿದೊಡ್ಡ ಭಾಗಗಳಾಗುತ್ತವೆ.

***

ದೇಹ ವಿಜ್ಞಾನದ ದೃಷ್ಟಿಯಿಂದ ಹೇಳುವುದಾದರೆ ಸದ್ದು ಹಿಡಿತ, ಆವರ್ತಾಂಕಗಳ ಮಾರುವರ್ತನೆ, ಇಳುವರಿ-ಇವು ಕೇಳುವ ಸಾಧನಗಳ ಸುಗುಣಗಳು. ಇವುಗಳೊಂದಿಗೆ ರೋಗಿಯ ಕಿವುಡಿನ ಬಗೆ, ಪ್ರಮಾಣಗಳಿಗೆ ತಕ್ಕಂತೆ ಕೇಳುವ ಸಾಧನವನ್ನು ಆರಿಸಿಕೊಳ್ಳಬೇಕು. ಒಂಟಿಗಿವಿ ಕಿವುಡಿಗಾಗಿ ಬಳಸುವ ಕ್ರಾಸ್ ಮಾದರಿಯೊಂದು ಹೊಸದಾಗಿ ಬಂದಿದೆ. ಸಾಮಾನ್ಯವಾಗಿ ಶ್ರವಣತಜ್ಞರೋ ಕಿವಿವೈದ್ಯರೋ ಕಿವಿಕೇಳಿಸುವ ಪರೀಕ್ಷೆಗಳನ್ನು ಮಾಡಿ ಶ್ರವಣಸಾಧನಗಳನ್ನು ನಿಯಮಿಸುವರು. ಮೈಸೂರಿನ ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆಯಲ್ಲಿ ಈ ಏರ್ಪಾಡು ಉಂಟು.

ವಯಸ್ಸು, ಹೆಣ್ಣುಗಂಡು ಎಂಬ ಭೇದವೆಣಿಸದೆ ಕಿವುಡರೂ ಮಂದಗಿವಿಯವರೂ ಯಾರೇ ಆಗಿರಲಿ ಎಲ್ಲರೂ ಕೇಳುವ ಸಾಧನವನ್ನು ಹಾಕಿಕೊಳ್ಳಬೇಕು. ಒಬ್ಬೊಬ್ಬನಿಗೆ ಒಂದೊಂದು ತೆರನಾಗಿ ಅನುಕೂಲವಾದರೂ ಈ ಸಾಧನದಿಂದ ಎಲ್ಲರಿಗೂ ಅನುಕೂಲ ಇದ್ದೇ ಇರುವುದು. ಕೆಲವು ಬಗೆಗಳ ಕಿವುಡಿನಲ್ಲಿ ಇದನ್ನು ಹಾಕಿಕೊಂಡರೆ ಪ್ರಯೋಜನವಿಲ್ಲ. ಆ ನಿರ್ಧಾರವನ್ನು ಪರಿಣತರಿಗೆ ಬಿಡಬೇಕು. ಕಿವುಡ ಮಗುವಿನ ಕಲಿಕೆಗೆ ಕೇಳುವ ಸಾಧನ ಬಲು ಮುಖ್ಯ. ವೈದ್ಯದಿಂದಾಗಲಿ ಶಸ್ತ್ರಕ್ರಿಯೆಯಿಂದಾಗಲಿ ಸರಿಪಡಿಸಲಾಗದ ಕಿವುಡು ಗೊತ್ತಾದ ಮೇಲೆ ಮಗು ಯಾವಾಗಲೂ ಕೇಳುವ ಸಾಧನವನ್ನು ಹಾಕಿಕೊಂಡಿರಲೇಬೇಕು. ಮಗುವಿಗೆ ಬೇಕೆನಿಸಿದಾಗ ಅದಕ್ಕೆ ಇಲ್ಲವಾದರೆ ಕೇಳುವ ಸಾಧನ ಕೆಲಸಕ್ಕೆ ಬಾರದ್ದೆನಿಸುತ್ತದೆ. ಇಂದಿನ ಶಿಕ್ಷಣಪರಿಣತರ ಅಭಿಪ್ರಾಯದಲ್ಲಿ ಕಿವುಡಾಗಿರುವುದು ಗೊತ್ತಾದರೆ ಹಸುಗೂಸಿಗೂ ಕೇಳುವ ಸಾಧನವನ್ನು ಹಾಕಬೇಕು. (ಎಂ.ಎನ್.ವಿ.ಎಂ.)

**ಕೈಟಿನ್:** ಸಂದಿಪದಿಗಳ, ವಲಯವಂತಗಳ ಮತ್ತು ಬಹುಪಾಲು ಬಗೆಯ ಶಿಲೀಂಧ್ರಗಳ ಶರೀರರಚನೆಯಲ್ಲಿ ಕಾಣಬರುವ ಪ್ರಮುಖ ಬಗೆಯ ಬಹುಶರ್ಕರ (ಪಾಲಿಸ್ಯಾಕರೈಡ್). ಕವಲೊಡೆಯದ ಬಲು ಉದ್ದವಾದ ಸರಪಳಿಯಂತಿರುವ ಕೈಟಿನ್ ಅಣು ಎನ್-ಅಸಿಟೈಲ್-ಡಿ-ಗ್ಲೂಕೋಸಮೈನಿನ ಸಾವಿರಾರು ಘಟಕಗಳಿಂದ ರಚಿತವಾಗಿದೆ. ಈ ಘಟಕಗಳು β -1, 4 ಗ್ಲೈಕೊಸಿಡಿಕ್ ಬಂಧಗಳಿಂದ ಪರಸ್ಪರ ಸೇರಿಕೊಂಡಿವೆ. ಎಕ್ಸ್‌ಕಿರಣ ನಮನ ಅಭ್ಯಾಸಗಳ ಫಲವಾಗಿ ಕೈಟಿನ್ನಿನಲ್ಲಿ α, β ಮುಂತಾದ ಹಲವಾರು ಸ್ಫಟಿಕಸಂರಚನಾತ್ಮಕ ಪ್ರರೂಪಗಳಿರುವುದು ಕಂಡುಬಂದಿದೆ. ಸ್ವಾಭಾವಿಕವಾಗಿ ಕೈಟಿನ್ ಪ್ರೋಟೀನುಗಳೊಂದಿಗೆ ಕೂಡಿಕೊಂಡು ಗ್ಲೈಕೋಪ್ರೋಟೀನ್ ರೂಪದಲ್ಲಿ ಸ್ಥಿತವಾಗಿರುತ್ತದೆ. ಪೊಟಾಸಿಯಮ್ ಇಲ್ಲವೆ ಸೋಡಿಯಮ್ ಹೈಡ್ರಾಕ್ಸೈಡುಗಳೊಂದಿಗೆ ಕಾಯಿಸಿ ಅನಂತರ ಸಾರರಿಕ್ತ ಆಮ್ಲ ಮತ್ತು ಪ್ರಬಲವಾದ ಉತ್ಕರ್ಷಣಕಾರಿಯೊಂದಿಗೆ ವರ್ತಿಸುವುದರಿಂದ ಕೈಟಿನ್ನನ್ನು ಶುದ್ಧ ರೂಪದಲ್ಲಿ ಪಡೆಯಬಹುದು. ಶುದ್ಧರೂಪದ ಕೈಟಿನ್ ಬಣ್ಣವಿಲ್ಲದ ಪುಡಿಯಂತಿರುತ್ತದೆ; ನೀರಿನಲ್ಲಾಗಲಿ ಸಾರರಿಕ್ತ ಆಮ್ಲ ಇಲ್ಲವೆ ಕ್ಷಾರಗಳಲ್ಲಾಗಲೀ ಕರಗುವುದಿಲ್ಲ. ಆದರೆ ಸಾರ ಆಮ್ಲಗಳೊಂದಿಗೆ ಇಲ್ಲವೆ ಕೈಟಿನೇಸ್ ಎಂಬ ಕಿಣ್ವದೊಂದಿಗೆ ಸೇರಿಸಿ ಬಹುಕಾಲ ಇಟ್ಟರೆ ಜಲವಿಶ್ಲೇಷಣೆಗೊಳಗಾಗುತ್ತದೆ. ಕೈಟಿನ್ನಿನ ಸ್ವಾಭಾವಿಕ ಸಂಶ್ಲೇಷಣೆಗೆ ಯುಡಿಪಿ-ಎನ್-ಓ-ಅಸಿಟೈಲ್ ಗ್ಲೂಕೋಸಮೈನ್ ಎಂಬ ಪೂರ್ವಗಾಮಿ ಸಂಯುಕ್ತ ಹಾಗೂ ನಿರ್ದಿಷ್ಟ ಬಗೆಯ ಕಿಣ್ವ ಬೇಕು. ಅಲ್ಲದೆ ಅತ್ಯಲ್ಪ ಮೊತ್ತದಲ್ಲಿ ಮೊದಲೇ ತಯಾರಾದ ಈ ಬಹುಶರ್ಕರವಾಗಲೀ ಅದರಿಂದ ಉತ್ಪತ್ತಿಯಾಗುವ ಕಡಿಮೆ ಅಣುತೂಕದ ಡೆಕ್ಸ್‌ಟ್ರಿನ್ ಆಗಲಿ ಅವಶ್ಯಕ ಎಂದು ತೋರುತ್ತದೆ. ಇವು ಹೊಸ ಕೈಟಿನ್ ಅಣುಗಳ ಸಂಶ್ಲೇಷಣೆಗೆ ಮಾದರಿಗಳಾಗುತ್ತವೆ. ಬಸವನಹುಳು, ಭೂಮಿಯಲ್ಲಿ ವಾಸಿಸುವ ಬ್ಯಾಕ್ಟೀರಿಯ, ಎರೆಹುಳು ಮುಂತಾದ ಪ್ರಾಣಿಗಳಲ್ಲಿ ಕೈಟಿನ್ನನ್ನು ವಿಭಜಿಸುವ ಕಿಣ್ವವಾದ ಕೈಟಿನೇಸ್ ಎಂಬುದು ಕಂಡುಬರುತ್ತದೆ. (ಎಂ.ಆರ್.ಆರ್.)

**ಕೈಮೀರ ಮೀನು:** ಕಾಂಡ್ರಿಕ್ತಿಸ್ ವರ್ಗದ ಹಾಲೊಸಿಫ್ಯಾಲೀ ಉಪವರ್ಗದಲ್ಲಿರುವ ಕೈಮೀರಿಡೆ ಕುಟುಂಬದ ಸದಸ್ಯ. ಇದು ಸಮುದ್ರಾಂತರಾಳದಲ್ಲಿ ಜೀವಿಸುತ್ತದೆ. ಇದಕ್ಕೆ ಮೊಲಮೀನು ಅಥವಾ ಇಲಿಮೀನು ಎಂಬ ಪರ್ಯಾಯ ನಾಮಗಳಿವೆ. ಅಟ್ಲಾಂಟಿಕ್, ಮೆಡಿಟರೇನಿಯನ್ ಸಾಗರಗಳೇ ಇದರ ವಾಸಸ್ಥಾನ. ಇದರ ಉದ್ದ 5-8 ಸೆಂಮೀ. ಇದರ ಚಲನೆ ಬಲು ನಿಧಾನ. ಇದರ ಆಹಾರ ಮೃದ್ವಂಗಿಗಳು ಮತ್ತು ಇತರ ಜಾತಿಯ ಚಿಕ್ಕ ಮೀನುಗಳು. ಇದರ ಮೇಲೆ ಪ್ಲೆಕಾಯಿಡ್ ಹುರುಪೆಗಳಿವೆ. ನಯವಾದ ಚರ್ಮ ಚೆನ್ನಾಗಿ ರೂಪುಗೊಂಡಿರುವ ಪಾರ್ಶ್ವರೇಖೆಯ ಜ್ಞಾನೇಂದ್ರಿಯ, ತಲೆಬುರುಡೆಯೊಂದಿಗೆ ಐಕ್ಯವಾಗಿರುವ ಮೇಲ್ದವಡೆ, ತಲೆಯ ಇಕ್ಕೆಡೆಗಳಲ್ಲಿ ನಾಲ್ಕು ಕಿವಿರು ರಂಧ್ರಗಳು ಹಾಗೂ ಅವನ್ನು ಮುಚ್ಚುವ ಕಿವಿರು ಮುಚ್ಚಳಗಳಿವೆ. ಚಾವಟಿಯಂತಿರುವ ಬಾಲವಿದೆ. ಇದಕ್ಕೆ ಕ್ಲೋಯೆಕ ವಿಸರ್ಜನ ದ್ವಾರವಾಗಲಿ ಮತ್ತು ಅನುಷಂಗಿಕ ಶ್ವಾಸೇಂದ್ರಿಯಗಳಾಗಲಿ ಇಲ್ಲ. ಗಂಡು ಕೈಮೀರ ಮೀನಿಗೆ 5 ಆಲಿಂಗನಾಂಗಗಳಿವೆ (ಕ್ಲಾಸ್ಪರ್ಸ್). ತಲೆಯ ಭಾಗದಲ್ಲಿರುವ ಆಲಿಂಗನಾಂಗಕ್ಕೆ ಸಿಫ್ಯಾಲಿಕ್ ಕ್ಲಾಸ್ಪರ್ ಎಂದು ಹೆಸರು. ಸಂಭೋಗಕಾಲದಲ್ಲಿ ಇದು ನೆಟ್ಟಗಾಗಿ, ಹೆಣ್ಣಿನ ಪೃಷ್ಠ ಭಾಗದ ಈಜುರೆಕ್ಕೆಗಳನ್ನು ಬಲವಾಗಿ ತಬ್ಬಿಕೊಳ್ಳಲು ಸಹಾಯಕವಾಗಿದೆ. (ಆರ್.ಸಿ.)

**ಕೈಮೊಟ್ರಿಪ್ಸಿನ್:** ಜಠರ ಮತ್ತು ಕರುಳಲ್ಲಿ ಆಹಾರದ ಪ್ರೊಟೀನನ್ನು ಜಲವಿಶ್ಲೇಷಣೆ ಮಾಡಿ ಪೆಪ್ಟೈಡು ಮತ್ತು ಅಮೈನೋ ಆಮ್ಲಗಳಿಗೆ ಪರಿವರ್ತಿಸುವ ಪ್ರೊಟೀನ್ ವಿಶ್ಲೇಷಕ ಎನ್‌ಜೈಮು(ಕಿಣ್ವ)ಗಳಲ್ಲಿ ಒಂದು. ಇದರಲ್ಲಿ ಪ್ರೋಸ್ತೆಟಿಕ್ ಗುಂಪು ಇರುವುದಿಲ್ಲ ಮತ್ತು ಕಾರ್‍ಯನಿರ್ವಹಣೆಗೆ ಕೋಎನ್‌ಜೈಮು (ಸಹಕಿಣ್ವ) ಯಾವುದೂ ಬೇಕಾಗಿಲ್ಲ. ಇದು ಟ್ರಿಪ್ಟೊಫೇನ್, ಫೀನೈಲ್ ಅಲನಿನ್ ಮತ್ತು ಟೈರೊಸಿನ್ ಗುಂಪುಗಳಿರುವ ಪೆಪ್ಟೈಡ್ ಬಂಧಗಳನ್ನು ಬಹು ಚುರುಕಾಗಿಯೂ ಲ್ಯೂಸೈನ್, ಮೀಥಿಯೊನ್ ಮತ್ತು ಅಸ್ಪರಾಜಿನಿಲ್ ಪೆಪ್ಟೈಡ್ ಬಂಧಗಳನ್ನು ತಕ್ಕಮಟ್ಟಿಗೂ ಜಲವಿಶ್ಲೇಷಣೆಗೆ ಒಳಪಡಿಸುತ್ತದೆ. ಅಲ್ಲದೆ ಪೆಪ್ಟೈಡ್ ಉತ್ಪನ್ನಗಳನ್ನು ಹೋಲುವ ಅಸಿಟೈಲ್-ಎಲ್-ಟೈರೋಸಿನ್, ಈಥೈಲ್ ಎಸ್ಟರ್ ಮತ್ತು ಅಸಿಟೈಲ್-ಎಲ್-ಟೈರೋಸಿನ್ ಅಮೈಡ್ ಇಂಥ ಸಬ್‌ಸ್ಟ್ರೇಟುಗಳೊಡನೆ ಪ್ರಬಲ ಜಲವಿಶ್ಲೇಷಣಾ ಕ್ರಿಯೆಯನ್ನು ತೋರ್ಪಡಿಸುತ್ತದೆ. ಟ್ರಿಪ್ಸಿನ್ನಿನಂತೆಯೇ ಇದು ಸಹ ಮೇದೋಜೀರಕ ಗ್ರಂಥಿಯಲ್ಲಿ ಸಂಶ್ಲೇಷಿತವಾಗುತ್ತದೆ. ಮೊದಲು ಅಲ್ಲಿ ಇದರ ಪ್ರೊಎನ್‌ಜೈಮು ಅಥವಾ ಜೈಮೋಜೆನ್ ಆದ ಕೈಮೊಟ್ರಿಪ್ಸಿನೋಜೆನ್ ಉತ್ಪತ್ತಿಯಾಗುತ್ತದೆ. ಇದಕ್ಕೆ ಕ್ರಿಯಾಶಕ್ತಿ ಇರುವುದಿಲ್ಲ. ಇದರಲ್ಲಿ ೨೪೫ ಅಮೈನೋ ಆಮ್ಲ ಅವಶೇಷಗಳಿಂದಾದ ಒಂದೇ ಒಂದು ಪಾಲಿಪೆಪ್ಟೈಡ್ ಸರಣಿ ಇದೆ. ಈ ಸರಣಿಯಲ್ಲಿಯೇ ಐದು ಅಡ್ಡವಾದ ಡೈಸಲ್ಫೈಡ್ ಬಂಧಗಳಿವೆ. ಟ್ರಿಪ್ಸಿನ್ ಅಥವಾ ಕೈಮೊಟ್ರಿಪ್ಸಿನಿಂದ ಕರುಳಿನಲ್ಲಿ ಪರಿಮಿತ ಮೊತ್ತದಲ್ಲಿ ನಿರ್ದಿಷ್ಟ ರೀತಿಯಲ್ಲಿ ಕೈಮೊಟ್ರಿಪ್ಸಿನೋಜೆನ್ನಿನ ಜಲವಿಶ್ಲೇಷಣೆಯಾದಾಗ ಕ್ರಿಯಾಶಕ್ತ ಕೈಮೊಟ್ರಿಪ್ಸಿನ್ ಉತ್ಪತ್ತಿಯಾಗುತ್ತದೆ. ಈ ಪರಿವರ್ತನೆಯಲ್ಲಿ ಮೂರು ಹಂತಗಳಿವೆ. ಕೈಮೊಟ್ರಿಪ್ಸಿನೋಜೆನ್ನಿನ ಒಂದು ನಿರ್ದಿಷ್ಟ ಪೆಪ್ಟೈಡು (ಆರ್ಜಿನಿನ್-ಐಸೋಲ್ಯೂಸಿನ್) ಬಂಧದ ಜಲವಿಶ್ಲೇಷಣೆಯಿಂದ π-ಕೈಮೊಟ್ರಿಪ್ಸಿನ್ ಬರುತ್ತದೆ. ಇದರಿಂದ ಸೆರೀನ್-ಆರ್ಜಿನೀನ್, ಈ ಡೈಪೆಪ್ಟೈಡು ಬಿಡಿಸಿ ಹೋದಾಗ δ-ಕೈಮೊಟ್ರಿಪ್ಸಿನ್ನೂ ಈ δ-ಎನ್‌ಜೈಮಿನಿಂದ ಥ್ರಿಯೊನೀನ್-ಆಸ್ಪರ್‌ಜೀನ್, ಈ ಡೈಪೆಪ್ಟೈಡು ಕಳಚಿಹೋದಾಗ α-ಕೈಮೊಟ್ರಿಪ್ಸಿನ್ನೂ ಬರುತ್ತವೆ. ಒಂದೇ ಸರಣಿಯ ಕೈಮೊಟ್ರಿಪ್ಸಿನೋಜೆನ್ನಿನಿಂದ ಮೂರು ಸರಣಿಗಳ α-ಕೈಮೊಟ್ರಿಪ್ಸಿನ್ನು ಬರುತ್ತದೆ. ಇದು ಇವುಗಳಲ್ಲೆಲ್ಲ ಸ್ಥಿರತಮವಾದುದು.

ಡೈಐಸೊಪ್ರೊಪೈಲ್ ಫಾಸ್ಫೊ ಫ್ಲೋರಿಡೇಟು ಕೈಮೊಟ್ರಿಪ್ಸಿನ್ನನ್ನು ಕ್ರಿಯಾಹೀನವನ್ನಾಗಿ ಮಾಡುತ್ತದೆ. ಎನ್‌ಜೈಮಿನಲ್ಲಿ ೨೮ ಸೆರೀನ್ ಅವಶೇಷಗಳಿದ್ದರೂ ಇದು ಅವುಗಳಲ್ಲಿ ನಿರ್ದಿಷ್ಟವಾದ ಒಂದು ಸೆರೀನ್ ಗುಂಪಿನೊಡನೆ ಮಾತ್ರ ಡೈಐಸೊ ಪ್ರೊಪೈಲ್ ಫಾಸ್ಫಾರಿಕ್ ಉತ್ಪನ್ನವನ್ನು ಉಂಟು ಮಾಡುತ್ತದೆ. ಕೈಮೊಟ್ರಿಪ್ಸಿನ್ನಿನ ಕ್ರಿಯಾಕೇಂದ್ರದಲ್ಲಿರುವ ಸೆರೀನಿನ ಸುತ್ತಲಿನ ಅಮೈನೋ ಆಮ್ಲ ಅನುಕ್ರಮವಾಗಿ ಟ್ರಿಪ್ಸಿನ್, ಕೈಮೊಟ್ರಿಪ್ಸಿನ್ ಮತ್ತು ಎಲಾಸ್ಟೇಸ್‌ಗಳೆಲ್ಲದರಲ್ಲೂ ಗ್ಲೈಸೀನ್-ಆಸ್ಪಾರ್‌ಜೀನ್-ಸೆರೀನ್-ಗ್ಲೈಸೀನ್ ಆಗಿರುತ್ತದೆ. ಈ ಎನ್‌ಜೈಮುಗಳೆಲ್ಲಕ್ಕೂ ಆನುವಂಶಿಕ ಮೂಲ ಒಂದೇ ಆಗಿರಬೇಕೆಂದು ಇದು ತೋರಿಸುತ್ತದೆ.

ದನದ ಮೇದೋಜೀರಕ ಗ್ರಂಥಿಯ ಕೈಮೊಟ್ರಿಪ್ಸಿನ್ನನ್ನು ಪ್ರತ್ಯೇಕಿಸಿ ಸ್ಫಟಿಕೀಕರಿಸಿದ್ದಾರೆ. ಇದರ ಅಣುತೂಕ ೨೪,೩೦೦. (ಎಂ.ಆರ್.ಆರ್.)

**ಕೈರಾಪ್ಟರ:** ಕಶೇರುಕ ವಂಶದ, ಸ್ತನಿವರ್ಗದ, ಯುಥೀರಿಯಾ ಉಪವರ್ಗದ ಒಂದು ಗಣ. ಬಾವಲಿಗಳು ಈ ಗಣಕ್ಕೆ ಸೇರುತ್ತವೆ. ಕೈ ಎಂದರೆ ಹಸ್ತ, ಪ್ಟರ ಅಂದರೆ ರೆಕ್ಕೆ. ಆದುದರಿಂದ ಬಾವಲಿಗಳಿಗೆ ಹಸ್ತರೆಕ್ಕೆಯುಳ್ಳ ಪ್ರಾಣಿಗಳೆಂದು ಪರ್ಯಾಯ ಹೆಸರು. ಇವುಗಳ ಮುಂಗಾಲುಗಳು ರೆಕ್ಕೆಗಳಂತೆ ಮಾರ್ಪಾಡಾಗಿವೆ. ಆದ್ದರಿಂದ ಇವು ಅಂತರಿಕ್ಷದಲ್ಲಿ ಪಕ್ಷಿಗಳಂತೆ ಸರಾಗವಾಗಿ ಹಾರಬಲ್ಲುವು. ಪ್ರಾರಂಭದಲ್ಲಿ ಜೀವವಿಜ್ಞಾನಿಗಳು ಇವುಗಳ

ಹಾರುವಿಕೆಯನ್ನು ಕಂಡು ಪಕ್ಷಿಗಳೆಂದು ತಿಳಿದು, ಪಕ್ಷಿಗಳ ವರ್ಗದಲ್ಲಿ ಸೇರಿಸಿ, ಕರಪಕ್ಷಿಗಳೆಂದು ಹೆಸರಿಸಿದ್ದರು. ಕೆಲವರು ಇವುಗಳ ನಾಲ್ಕು ಕಾಲಿನ ಚಲನೆಯನ್ನು ನೋಡಿ ಚತುಷ್ಪಾದಿಗಳೆಂದರು, ತರುವಾಯ ಇವು ಸ್ತನಿಗಳೆಂದು ತಿಳಿದ ನಂತರ ಪಕ್ಷಿಗಳು ಮತ್ತು ಸ್ತನಿಗಳ ನಡುವೆ ಸೇರಿಸಿದರು. ಹಾರುವ ಶಕ್ತಿಯಿರುವ ಈ ಸ್ತನಿಗಳನ್ನು ಹಾರುವ ಸ್ತನಿಗಳೆಂದೇ ಕರೆಯಲಾಗುತ್ತದೆ. ಹಾರುವಿಕೆಯಲ್ಲಿ ಇವುಗಳನ್ನು ಮೀರಿಸುವ ಇನ್ನಾವ ಸ್ತನಿಯೂ ಇಲ್ಲ.

**ಕೆಲವು ಕೈರಾಪ್ಟರ**



ರೂಪಸ್



ಉದ್ದನೆಯ ಕಿವಿಯ ಬಾವಲಿ



ಹಿಮಾಲಯದ ಎಲೆ ಮೂಗಿನ ಬಾವಲಿ

ಯುರೋಪಿಯಾದ ಬಾವಲಿ



ಮಸಾಯ್ ದೇಶದ ವಾಂಪೈರ್



ಇಂಡಿಯಾ ವಾಂಪೈರ್

ಮಹಾಸಾಗರಗಳ ನಡುವಿನ ದ್ವೀಪಗಳನ್ನು ಒಳಗೊಂಡಂತೆ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಕೈರಾಪ್ಟಿರಗಳಿವೆ. ಇದಕ್ಕೆ ಕಾರಣ ಇವುಗಳ ಹಾರುವಿಕೆಯ ಜೀವನ. ಈಗ ಜೀವಂತವಾಗಿರುವುವುಗಳಲ್ಲಿ 95 ಜಾತಿ ಮತ್ತು 520 ಪ್ರಭೇದಗಳಿವೆ. ಇವುಗಳು ನಿಶಾಚಾರಿಗಳು. ಹಗಲು ಹೊತ್ತಿನಲ್ಲಿ, ಕತ್ತಲು, ಅಥವಾ ಹೆಚ್ಚು ನೆರಳಿರುವ ಸ್ಥಳಗಳಲ್ಲಿ ತಲೆಕೆಳಗಾಗಿ ನೇತಾಡುತ್ತಿರುತ್ತವೆ. ದೊಡ್ಡ ಮರಗಳ ನೆರಳಿನಲ್ಲಿ ಗುಂಪಾಗಿ ನೇತಾಡುತ್ತಿರುವುದನ್ನು ನೋಡಬಹುದು. ಇವು ಕಪ್ಪಗೆ ಭಾರಿ ಹಣ್ಣುಗಳ ಗುಂಪಂತೆ ಕಾಣುತ್ತವೆ. ತೊಂದರೆ ಪಡಿಸಿದರೆ ಕೀಚಲು ಶಬ್ದದಿಂದ ಕೂಗಾಡಿಕೊಂಡು ಹಾರಾಡುತ್ತ ಮತ್ತೆ ಪುನಃ ಬಂದು ಸೇರಿದಾಗ ಪಕ್ಷಿಗಳಂತೆ ತಮ್ಮ ಮೊದಲಿನ ಜಾಗಕ್ಕಾಗಿ ಜಗಳವಾಡುವುದನ್ನು ಕಾಣಬಹುದು. ಟೆಕ್ಸಾಸ್‌ನ ಸಮೀಪದ ಗುಹೆಯೊಂದರಲ್ಲಿ ಪ್ರಪಂಚದ ಅತಿದೊಡ್ಡ ಬಾವಲಿಗಳ ಗುಂಪು ಇದೆ. ಗುಂಪಿನ ಗಾತ್ರ ಎಷ್ಟಿದೆ ಎಂದರೆ ಗುಹೆಯೊಳಗಿರುವ ಎಲ್ಲ ಬಾವಲಿಗಳು ಹೊರಬರಲು ಸುಮಾರು ಎರಡು ಗಂಟೆ ತಗುಲುತ್ತದೆ. ಇವುಗಳ ಮಲವನ್ನು ಹೊರತೆಗೆಯಲು ವಿಶೇಷವಾಗಿ ತಯಾರಿಸಿದ ಅಗೆಯುವ ಶಲಾಕೆಗಳನ್ನು ಉಪಯೋಗಿಸಬೇಕು. ಕೈರಾಪ್ಟಿರಗಳು ಕತ್ತಲಾದ ಕೂಡಲೇ ಆಹಾರವನ್ನು ಹುಡುಕಿಕೊಂಡು ಹೊರಬರುತ್ತವೆ ಮತ್ತು ತಮ್ಮ ಕಾರ್ಯ ಚಟುವಟಿಕೆಯನ್ನು ಪ್ರಾರಂಭಿಸುತ್ತವೆ. ಕೈರಾಪ್ಟಿರಗಳು ಸಾಮಾನ್ಯವಾಗಿ ಕೀಟಗಳನ್ನು, ಹಣ್ಣುಗಳನ್ನು ಆಹಾರವಾಗಿ ತೆಗೆದುಕೊಳ್ಳುತ್ತವೆ. ಕೆಲವು ಮಾತ್ರ ಇತರ ಸ್ತನಿಗಳ (ಮಾನವನನ್ನು ಸೇರಿ) ರಕ್ತವನ್ನು ಹೀರಿಕುಡಿಯುತ್ತವೆ. ಕೀಟಗಳನ್ನು ಭಕ್ಷಿಸುವ ಕೈರಾಪ್ಟರಗಳನ್ನು ಕೀಟಾಹಾರಿಗಳೆಂದು, ಹಣ್ಣುಗಳನ್ನು ತಿನ್ನುವ ಕೈರಾಪ್ಟರಗಳನ್ನು ಫಲಾಹಾರಿಗಳೆಂದು, ರಕ್ತಹೀರುವ ಕೈರಾಪ್ಟರಗಳನ್ನು ರಕ್ತಾಹಾರಿಗಳೆಂದು ವಿಂಗಡಿಸಲಾಗುತ್ತದೆ.

ಶರೀರದ ಗಾತ್ರ 3 ಸೆಂಮೀ ನಿಂದ 40 ಸೆಂಮೀ. ಗಾತ್ರದ ಆಧಾರದಿಂದ ಸಣ್ಣ, ಮಧ್ಯಮ ಮತ್ತು ಭಾರಿಗಾತ್ರದ ಬಾವಲಿಗಳೆಂದು ಗುರುತಿಸಲಾಗುತ್ತದೆ. ರೆಕ್ಕೆಯ ಉದ್ದ 18 ರಿಂದ 140 ಸೆಂಮೀ. ತೂಕ 4 ಗ್ರಾಂ ನಿಂದ 900 ಗ್ರಾಂ. ಎದೆಯ ಭಾಗವು ಭದ್ರವಾಗಿ ಬೆಳೆದಿದ್ದು, ಹಿಂಭಾಗ ಹಾಗೂ ಕಾಲುಗಳು ಶಕ್ತಿ ಹೀನವಾಗಿರುವುದರಿಂದ ಭಾರದ ಕೇಂದ್ರ ಶರೀರದ ಮಧ್ಯದಲ್ಲಿರುತ್ತದೆ. ಆದ್ದರಿಂದ ಹಾರುವಾಗ ಶರೀರವು ಸುಲಭವಾಗಿ ಮೇಲಕ್ಕೇರುತ್ತದೆ.

ಕೈರಾಪ್ಟರಗಳ ಶರೀರವನ್ನು ತಲೆ, ಕತ್ತು, ಮುಂಡ ಮತ್ತು ಬಾಲವೆಂಬ ಭಾಗಗಳಾಗಿ ವಿಂಗಡಿಸಬಹುದು. ಕೆಲವು ಭಾಗಗಳನ್ನು ಬಿಟ್ಟು ಶರೀರ ಕೂದಲಿನಿಂದಾವೃತವಾಗಿದೆ. ಇದು ಸ್ತನಿಗಳ ಒಂದು ಮುಖ್ಯ ಗುಣ. ಕೂದಲಿನ ಬಣ್ಣ ಕಪ್ಪು ಅಥವಾ ಕಂದು. ಸಿಲೋನ್ ಬಾವಲಿಯ ಗಂಡು ಗಾಢವಾದ ಹಳದಿ ಕಂದು ಬಣ್ಣವಿರುತ್ತದೆ. ಬೆನ್ನು ಮತ್ತು ಎದೆಯ ಮೇಲೆ ಬಿಳಿ ಪಟ್ಟಿಗಳೂ ಕತ್ತು ಮತ್ತು ತಲೆಯ ಮೇಲ್ಭಾಗ ಬಿಳಿ ಬಣ್ಣವೂ ಕಾಲು ಮತ್ತು ಬೆರಳುಗಳಲ್ಲಿ ಕೆಲವು ಬಣ್ಣವೂ ಇರುವುದು.

ತಲೆಯ ಭಾಗವು ಮುಖ್ಯವಾಗಿದ್ದು ಉದ್ದವಾದ ಅಥವಾ ಚಿಕ್ಕದಾದ ಮುಸುಡಿಯಿರುತ್ತದೆ. ಮುಸುಡಿಯ ಮುಂಭಾಗ ಬಾಯಿ ಇದೆ. ಮೇಲ್ಭಾಗದಲ್ಲಿ ಒಂದು ಜೊತೆ ಹೊರನಾಸಿಕ ರಂಧ್ರಗಳಿವೆ. ನಾಸಿಕ ರಂಧ್ರಗಳ ಸುತ್ತ ಇರುವ ಚರ್ಮದ ಮೇಲೆ ವಿಚಿತ್ರವಾದ ಗಂತಿಗಳಿವೆ. ಗಂತಿಗಳು ಅವುಗಳ ಮುಖಕ್ಕೆ ವಿಚಿತ್ರ ರೂಪ ಕೊಡುತ್ತವೆ. ಇವುಗಳಿಗೆ ಮೂಗಿನ ಎಲೆಗಳೆಂದು ಹೆಸರು. ಈ ಎಲೆಗಳಲ್ಲಿ ಅನೇಕ ಶ್ವೇತ ಹಾಗೂ ಬೆವರಿನ ಗ್ರಂಥಿಗಳಿದ್ದು, ಅವುಗಳ ಸ್ರಾವಕಗಳಿಂದ ಮೂಗಿನ ಹೊರಭಾಗ ಮೃದುವಾಗಿ ಮತ್ತು ಹೆಚ್ಚು ಸೂಕ್ಷ್ಮವಾಗಿ ಇರುತ್ತವೆ. ಮುಸುಡಿಯಲ್ಲಿ ಬಿರುಗೂದಲುಗಳಿವೆ. ಕಣ್ಣುಗಳು ಸಣ್ಣದಾಗಿರುವುವು. ಉದ್ದ ಹಾಗೂ ಚಲಿಸುವ ಎರಡು ಹೊರಕಿವಿಗಳಿರುತ್ತವೆ. ಈ ಕಿವಿಗಳು ತಲೆಗಿಂತ ಬಹಳ ಉದ್ದವಾಗಿರುತ್ತವೆ. ಕಿವಿಗಳ ಬೆಳವಣಿಗೆ ಹಾಗೂ ವೈವಿಧ್ಯತೆ ಇವುಗಳಲ್ಲಿ ಕಾಣುವಷ್ಟು ಬೇರಾವ ಸ್ತನಿಗಳಲ್ಲೂ ಕಂಡುಬರುವುದಿಲ್ಲ. ಕೆಲವು ಬಾವಲಿಗಳಲ್ಲಿ ಶರೀರದ ಉದ್ದ ಮತ್ತು ಕಿವಿಯ ಉದ್ದ ಸಮನಾಗಿರುತ್ತವೆ.

ಮುಂಡ ದೊಡ್ಡದಾಗಿದೆ. ಶರೀರದ ಭಾರವೆಲ್ಲವೂ ಇದರ ಮೇಲೆ ಕೇಂದ್ರಿಕೃತವಾಗಿರುತ್ತದೆ. ಕತ್ತು ಚಿಕ್ಕದು. ಮುಂಡದಲ್ಲಿ ಎರಡು ಮುಂಗಾಲುಗಳು ಮತ್ತು ಎರಡು ಹಿಂಗಾಲುಗಳಿವೆ. ಆದುದರಿಂದ ಕೈರಾಪ್ಟರಗಳನ್ನು ಇತರ ಸ್ತನಿಗಳ ಹಾಗೆ ಚತುಷ್ಪಾದಿಗಳೆಂದು ಕರೆಯಲಾಗುತ್ತದೆ. ಮುಂಗಾಲುಗಳು ಹಿಂಗಾಲುಗಳಿಗಿಂತ ಬಹಳ ಉದ್ದವಾಗಿಯೂ, ಬಲವಾಗಿಯೂ ಇದ್ದು ರೆಕ್ಕೆಗಳಾಗಿ ಮಾರ್ಪಾಡಾಗಿವೆ. ಮುಂಗಾಲಿನಲ್ಲಿ ಮೇಲಿನ ತೋಳು ಚಿಕ್ಕದಾಗಿರುತ್ತದೆ. ಮುಂತೋಳು ಉದ್ದವಾಗಿರುತ್ತದೆ. ಹೆಬ್ಬೆರಳು ಚಿಕ್ಕದಾಗಿದ್ದು ಮಿಕ್ಕ ನಾಲ್ಕು ಬೆರಳುಗಳು ಉದ್ದವಾಗಿರುತ್ತವೆ. ಅದರಲ್ಲೂ ಮೂರನೇ ಬೆರಳು ಎಲ್ಲಕ್ಕಿಂತಲೂ ಉದ್ದವಾಗಿದೆ. ರೆಕ್ಕೆಯು ಪೆಟೇಜಿಯಂ ಎಂಬ ಚರ್ಮದ ಪೊರೆಯಿಂದಾವೃತವಾಗಿದೆ. ಈ ಪೊರೆಯು ಭುಜದಿಂದ ಪ್ರಾರಂಭವಾಗಿ ತೋಳಿನ ಮೇಲ್ಭಾಗ, ಹೆಬ್ಬೆರಳಿನ ತಳಭಾಗದ ತನಕ ಹರಡಿಕೊಂಡು, ಅನಂತರ, ನೀಳವಾದ ಬೆರಳುಗಳ ನಡುವೆ ಹರಡಿ, ಶರೀರದ ಪಕ್ಕಗಳಿಂದ ಹಿಂಗಾಲುಗಳ ತನಕ ಹರಡಿರುತ್ತದೆ. ಕೆಲವು ಬಾವಲಿಗಳಲ್ಲಿ ಬಾಲದ ತನಕ ಚಾಚಿಕೊಂಡಿದೆ. ಬೆರಳುಗಳ ನಡುವೆ ಹರಡಿರುವ ಚರ್ಮದ ಪೊರೆಯನ್ನು ಇಂಟರ್ ಡಿಜಿಟಲ್ ಪೊರೆಯೆಂತಲೂ, ಶರೀರ ಮತ್ತು ಮುಂಗಾಲುಗಳ ನಡುವೆ ಇರುವ ಚರ್ಮವನ್ನು ಪಾರ್ಶ್ವ ಪೊರೆಯೆಂತಲೂ ಹೆಸರಿಸಲಾಗಿದೆ. ರೆಕ್ಕೆಯ ಪೊರೆಯು ಹೆಚ್ಚಾಗಿ ಹಿಗ್ಗುವಂತಹುದು. ಇದರಲ್ಲಿ ನವುರಾದ ಮಾಂಸದ ಎಳೆಗಳು, ನರಗಳು ಮತ್ತು ರಕ್ತನಾಳಗಳಿರುತ್ತವೆ. ಈ ರಕ್ತನಾಳಗಳು ತಮ್ಮ ಸ್ವತಂತ್ರ ಹಾಗೂ ಲಯಬದ್ಧ ಮಿಡಿತಗಳಿಂದ, ರಕ್ತವು ಸತತವಾಗಿ ಚರ್ಮದ ಎಲ್ಲಾ ಭಾಗಗಳಿಗೂ ಹರಿಯುವಂತೆ ಮಾಡುತ್ತವೆ. ಹೆಬ್ಬೆರಳನ್ನು ಬಿಟ್ಟು ಮಿಕ್ಕ ನಾಲ್ಕು ಬೆರಳುಗಳು ಚರ್ಮದ ರೆಕ್ಕೆಗಳಿಗೆ ಆಧಾರವಾಗಿರುತ್ತವೆ. ಹೆಬ್ಬೆರಳಿನಲ್ಲಿ ಬಲವಾದ ಹಾಗೂ ಚೂಪಾದ ಕೊಕ್ಕೆಯಂತಿರುವ ಉಗುರಿದೆ. ಇತರ ಬೆರಳುಗಳಲ್ಲಿ ಇಷ್ಟು ಬಲವಾದ ಉಗುರುಗಳಿಲ್ಲ. ಹೆಬ್ಬೆರಳಿನ ಉಗುರು ಕೊಂಬೆ ಅಥವಾ ಇನ್ನಾವುದಾದರೂ ವಸ್ತುವನ್ನು ಭದ್ರವಾಗಿ ಹಿಡಿದುಕೊಂಡು ತೂಗಾಡಲು ಮತ್ತು ನೆಲದ ಮೇಲೆ ತೆವಳುವಾಗ ತಳವನ್ನು ಭದ್ರವಾಗಿ

ಹಿಡಿದುಕೊಳ್ಳಲು ನೆರವಾಗುತ್ತದೆ. ಇನ್ನೂ ಕೆಲವು ಬಾವಲಿಗಳ ಹೆಬ್ಬೆರಳಿನಲ್ಲಿ ದುಂಡಗಿರುವ ಅಂಟು ತಟ್ಟೆಯಿರುವುದು. ಇದರ ಸಹಾಯದಿಂದ ಬಾಳೆಎಲೆಯಂತಹ ನುಣುಪಾದ ತಳಕ್ಕೆ ಅಂಟಿಕೊಂಡು ವಿಶ್ರಮಿಸುತ್ತವೆ. ರೆಕ್ಕೆಗಳು ಅಂತರಿಕ್ಷದಲ್ಲಿ ಹಾರಲು ಅಥವಾ ತೇಲಿಕೊಂಡು ಹೋಗಲು ಸಹಾಯಕವಾಗಿರುವುದಲ್ಲದೆ ಹಾರುವಾಗ ದಿಕ್ಕನ್ನು ನಿಯಂತ್ರಿಸುತ್ತವೆ. ಹಿಂಗಾಲುಗಳು ಚಿಕ್ಕದಾಗಿದ್ದು, ಶಕ್ತಿ ಹೀನವಾಗಿರುತ್ತವೆ. ಆದರೆ ಹಿಂದಕ್ಕೆ ಮತ್ತು ಮುಂದಕ್ಕೆ ಅತಿಸುಲಭವಾಗಿ ಬಗ್ಗುತ್ತವೆ. ಹಿಂಗಾಲುಗಳು ಪಾರ್ಶ್ವ ಪೊರೆಗೆ ಆಧಾರವಾಗಿರುತ್ತವೆ. ತೊಡೆಗಳು ಶರೀರಕ್ಕೆ ಸಮಕೋನದಲ್ಲಿ ಚಾಚಿಕೊಂಡಿವೆ. ಮಂಡಿಯು ಮೊಣಕೈ ತರಹ ಹಿಂದಕ್ಕೆ ಬಾಗಿದೆ. ಪಾದಗಳು ಮುಂದಕ್ಕೆ ಚಾಚಿಕೊಂಡು ಬಲಹೀನವಾಗಿವೆ. ಇದರಿಂದ ಬಾವಲಿಗಳು ಪಾದಗಳ ಮೇಲೆ ನಿಂತುಕೊಳ್ಳಲಾರವು. ಪಾದಗಳು ಚರ್ಮದ ಪೊರೆಯಿಂದ ಬೇರೆಯಾಗಿದ್ದು ಬೆರಳುಗಳಲ್ಲಿ ಬಲವಾದ ಬಾಗಿದ ಚೂಪಾದ ಉಗುರುಗಳಿರುತ್ತವೆ. ಪಾದಗಳು ನಮ್ಮ ಕೈಗಳಂತೆ ಸುತ್ತುತ್ತವೆ. ತಲೆಕೆಳಗಾಗಿ ಕೊಂಬೆಯನ್ನು ಕಾಲಿನ ಬೆರಳುಗಳಿಂದ ಹಿಡಿದುಕೊಂಡು ನಡೆಯಬಲ್ಲುವು. ನೆಲದ ಮೇಲೆ ಕಾಲು ಮತ್ತು ಹೊಟ್ಟೆಯಿಂದ ತೆವಳಬಲ್ಲುವು. ತೆವಳುವಾಗ ಮಂಡಿ ಮೇಲ್ಭಾಗ ಹಾಗೂ ಹೊರಭಾಗಕ್ಕೆ ಚಾಚಿಕೊಂಡಿರುತ್ತದೆ. ಮುಂಡದ ಹಿಂಭಾಗದಲ್ಲಿ ಅಸನ ದ್ವಾರವಿದೆ. ಎದೆಯಲ್ಲಿ ಅಥವಾ ಕಂಕುಳು ಸಂದಿಯಲ್ಲಿ ಒಂದು ಅಥವಾ ಎರಡು ಜೊತೆ ಸ್ತನಗಳಿರುತ್ತವೆ. ಹೆಣ್ಣಿನಲ್ಲಿ ಸ್ತ್ರೀ ಜನನೇಂದ್ರಿಯ ದ್ವಾರವಿದೆ. ಗಂಡಿನಲ್ಲಿ ಶಿಶ್ನ ಹಾಗೂ ವೃಷಣ ಚೀಲಗಳಿವೆ.

ಬಾಲವು ಉದ್ದವಾಗಿದ್ದು, ಚರ್ಮದ ಪೊರೆಯಿಂದ ಬೇರೆಯಾಗಿರಬಹುದು ಅಥವಾ ಮೊಟಕಾಗಿದ್ದು ಪೊರೆಯೊಂದಿಗೆ ಸೇರಿಕೊಂಡಿರಬಹುದು ಅಥವಾ ಬಾಲವಿಲ್ಲದೆಯೇ ಇರಬಹುದು. ಬಾಲ ಮತ್ತು ಬಾಲದ ಪೊರೆ ಹಾರುವಾಗ ವೇಗವನ್ನು ತಡೆಯಲು ಉಪಯೋಗವಾಗುತ್ತದೆ. ಬಾವಲಿಯು ವೇಗವಾಗಿ ಹಾರುತ್ತಿರುವಾಗ ಬಾಲ ಅಥವಾ ಬಾಲದ ಪೊರೆಯನ್ನು ಶರೀರದ ಮುಂಭಾಗಕ್ಕೆ ತಂದಾಗ ತಡೆಯುಂಟಾಗಿ ಹಾರಾಟದ ವೇಗ ಕಡಿಮೆಯಾಗುತ್ತದೆ.

ಚರ್ಮದಲ್ಲಿ ವಾಸನೆ ಗ್ರಂಥಿಗಳಿವೆ. ಜೊತೆಗೆ ಚರ್ಮದ ಮೇಲ್ಭಾಗಕ್ಕೆ ತೆರೆಯಲ್ಪಡುವ ಚೀಲಗಳಿರುತ್ತವೆ. ಇವುಗಳಲ್ಲಿ ಮುಖ್ಯವಾದುವುಗಳು ಮುಖದ ಚೀಲಗಳು, ಭುಜದ ಗ್ರಂಥಿಗಳು ಮತ್ತು ಚೀಲಗಳು, ಗುಲಾರ್ ಗ್ರಂಥಿಗಳು ಮತ್ತು ಚೀಲಗಳು, ಕಟಿ ಮತ್ತು ಗುದದ ಗ್ರಂಥಿಗಳು ಮತ್ತು ರೆಕ್ಕೆಯ ಚೀಲಗಳು.

ಮಾಂಸಖಂಡಗಳಲ್ಲಿ ಹಾರಲು ಸಹಾಯ ಮಾಡುವ ಎದೆಯ ಮಾಂಸಗಳು ಬಲವಾಗಿ ಬೆಳೆದಿರುವುದರಿಂದ ಹೆಚ್ಚು ಶಕ್ತಿಯನ್ನು ಪಡೆದಿವೆ. ಇವು ಮುಂಗಾಲುಗಳನ್ನು ಮತ್ತು ರೆಕ್ಕೆ ಪೊರೆಗಳನ್ನು ಗಾಳಿಗೆ ಎದುರಾಗಿ ಬಡಿಯಲು ಮತ್ತು ಅವುಗಳನ್ನು ಮುಂದೂಡಲು ಸಹಾಯಕವಾಗಿರುತ್ತವೆ. ಈ ಮಾಂಸಗಳು ಎದೆ ಮೂಳೆಯ ಅಡಿಗಟ್ಟಿಗೆ (ಕೀಲ್) ಸೇರಿಕೊಂಡಿರುತ್ತವೆ. ಹೆಚ್ಚು ರಕ್ತವು ಹರಿಯುತ್ತಿರುವುದರಿಂದ ಈ ಮಾಂಸಖಂಡಗಳು ರಕ್ತ ವರ್ಣವಾಗಿರುತ್ತವೆ. ಕಾಲಿನಲ್ಲಿರುವ ಮಾಂಸವು ಅಷ್ಟು ಬಲವಾಗಿರುವುದಿಲ್ಲ. ಮಲಯಾದೇಶದ ಕಲಾಂಗ್ ಎಂಬ ಬಾವಲಿ ಮಾಂಸವು ತಿನ್ನಲು ರುಚಿಯಾಗಿರುತ್ತದೆ. ಆದುದರಿಂದ ಇದನ್ನು ಬೇಟೆಯಾಡುತ್ತಾರೆ.

ಕೈರಾಪ್ಟರಗಳ ಅಸ್ಥಿಪಂಜರವು ಬಹಳ ಹಗುರವಾಗಿರುವುದರಿಂದ ಶರೀರದ ಭಾರವು ಕಡಿಮೆಯಾಗಿ ಸರಾಗವಾಗಿ ಹಾರಲು ಅನುಕೂಲವಾಗಿರುತ್ತದೆ. ಇತರ ಸ್ತನಿಗಳಲ್ಲಿರುವಂತೆ ತಲೆಬುರುಡೆ, ಬೆನ್ನೆಲುಬು, ಅಸ್ಥಿವಲಯಗಳು, ಕೈ ಮತ್ತು ಕಾಲಿನ ಮೂಳೆಗಳು ಎಲ್ಲವೂ ಇರುತ್ತವೆ. ಕೈ ಮತ್ತು ಕಾಲಿನ ಮೂಳೆಗಳಲ್ಲಿ ದೊಡ್ಡದಾದ ಮೆಡುಲರಿ ಪೊಳ್ಳುಗಳಿರುತ್ತವೆ. ಈ ಪೊಳ್ಳುಗಳು ಅಸ್ಥಿಗಳನ್ನು ಹಗುರವಾಗಿಡುತ್ತವೆ. ತಲೆಬುರುಡೆ ಗಾತ್ರದಲ್ಲಿ ಚಿಕ್ಕದು. ಹಣೆಯ ಮೂಳೆಯಲ್ಲಿರುವ ಕಣ್ಣುಕುಳಿಗಳ ಹಿಂಭಾಗದ ಭಾಗವು ದೊಡ್ಡ ಬಾವಲಿಗಳಲ್ಲಿ ಮೊಟಕಾಗಿರಬಹುದು ಅಥವಾ ಇರದೇ ಇರಬಹುದು. ಸಣ್ಣಬಾವಲಿಗಳಲ್ಲಿ ಉದ್ದವಾಗಿರುವುದಲ್ಲದೆ, ಪೂರ್ಣವಾಗಿರುತ್ತದೆ. ಮೇಲಿನ ದವಡೆಯಲ್ಲಿ ಪ್ರೀಮ್ಯಾಕ್ಸಿಲ್ಲಾಗಳು ಇಲ್ಲದಿರಬಹುದು ಅಥವಾ ತೆಳುವಾಗಿರಬಹುದು. ಕೆನ್ನೆಯ ಕಮಾನು ಮೂಳೆಗಳು ಬಲವಾಗಿರಬಹುದು, ತೆಳುವಾಗಿರಬಹುದು ಅಥವಾ ಇಲ್ಲದೆ ಇರಬಹುದು.

ಬೆನ್ನೆಲುಬು ಚಿಕ್ಕದಾಗಿದ್ದು, ಕತ್ತು, ಎದೆ, ನಡು ಮತ್ತು ಕಟಿ ಎಂಬ ವಿವಿಧ ಕಶೇರುಮಣಿಗಳಿವೆ. ಚೆನ್ನಾಗಿ ಬೆಳೆದಿರುವ ಭುಜಾಸ್ಥಿಗಳಲ್ಲಿ ಅಗಲವಾದ ಹೆಗಲೆಲುಬು ಇರುತ್ತದೆ. ಈ ಎಲುಬಿನಲ್ಲಿ ದೊಡ್ಡದಾದ ಆ್ಯಕ್ರೋಮಿಯನ್ ಮುಳ್ಳಿರುವುದು. ಕೋರಕಾಯ್ಡ್ ದೊಡ್ಡದಾಗಿರುವುದಲ್ಲದೆ, ಹೊರಕ್ಕೆ ಚಾಚಿಕೊಂಡಿದೆ. ಕೊರಳ ಪಟ್ಟಿಯ ಮೂಳೆಯು ಬಲವಾಗಿದೆ, ಬಗ್ಗಿದೆ. ಎದೆಯ ಮೂಳೆಯು T ಆಕಾರದಲ್ಲಿರುವ ಮುಂಭಾಗದ ಎದೆಯ ಮೂಳೆ, ಮಧ್ಯಭಾಗದ ಎದೆಮೂಳೆ ಮತ್ತು ಖಡ್ಗಾಕಾರದ ಎದೆಯ ಮೂಳೆ ಎಂಬ ಮೂರು ಭಾಗವಾಗಿದೆ. ಮುಂಭಾಗದ ಎದೆ ಮೂಳೆ ದೊಡ್ಡದಾಗಿದ್ದು, ಅದರಲ್ಲಿ ಬಲವಾದ ಅಡಿಗಟ್ಟು (ಕೀಲ್) ಇದೆ. ಅಡಿಗಟ್ಟು ಎದೆಯ ಮೂಳೆಯ ಕೆಳಭಾಗಕ್ಕೆ ಚಾಚಿಕೊಂಡು, ಶರೀರದ ಕೆಳಭಾಗಕ್ಕೆ ಬಂದಿರುತ್ತದೆ. ಇದು ಪಕ್ಷಿಗಳ ಒಂದು ಗುಣ. ಅಡಿಗಟ್ಟಿನ ಎರಡು ಕಡೆಯೂ ಬಲವಾದ ಹಾರುವ ಮಾಂಸಗಳು ಸೇರಿಕೊಂಡಿರುತ್ತವೆ. ಖಡ್ಗಾಕಾರದ ಎದೆಮೂಳೆ ಚಿಕ್ಕದಾಗಿದ್ದು, ಅಗಲವಾಗಿದೆ. ಎದೆಯ ಗುಡಿ ದೊಡ್ಡದಾಗಿದೆ ಮತ್ತು ಗಡುಸಾಗಿದೆ. ಇದು ದೊಡ್ಡದಾದ ಹೃದಯ ಮತ್ತು ಶ್ವಾಸಕೋಶಗಳಿಗೆ ರಕ್ಷಣೆ ನೀಡುತ್ತದೆ. ಗೂಡಿನ ಪಕ್ಕೆಲುಬುಗಳು ಚಪ್ಪಟೆಯಾಗಿದ್ದು, ಒತ್ತಾಗಿರುತ್ತವೆ.

ಇತರ ಸ್ತನಿಗಳಿಗೆ ಹೋಲಿಸಿದಾಗ ಕೈರಾಪ್ಟರದ ಮುಂಗಾಲಿನ ಮೂಳೆಗಳು ಸಾಕಷ್ಟು ಬದಲಾವಣೆಯಾಗಿವೆ. ಮೇಲಿನ ತೋಳಿನ ಭುಜಾಸ್ಥಿ (ಹ್ಯೂಮರಸ್) ಉದ್ದವಾಗಿದೆ. ಹಾರುವ ಬಾವಲಿಗಳಲ್ಲಿ ಭುಜಾಸ್ಥಿ ಹೆಗೆಲೆಲುಬಿನ ಜೊತೆ ಒರಳು ಗುಂಡಿನಂತೆ ಜೋಡಿಸಿಕೊಂಡಿದೆ. ವೇಗವಾಗಿ ಹಾರುವ ಬಾವಲಿಗಳಲ್ಲಿ ಭುಜಾಸ್ಥಿ ಮತ್ತು ಹೆಗೆಲೆಲುಬಿನ ನಡುವೆ ಎರಡನೇ ಕೀಲು ಬೆಳೆದಿರುತ್ತದೆ. ಡೆಲ್ಟಾಯಿಡ್ ಶಿಖೆಯು ಭುಜಾಸ್ಥಿಯಲ್ಲಿ ಪೂರ್ಣ ಬೆಳೆದಿರುವುದು. ಇದಕ್ಕೆ ಎದೆಯ ಮಾಂಸಖಂಡಗಳು ಸೇರಿಕೊಂಡಿವೆ. ಮುಂತೋಳಿನಲ್ಲಿ ಎರಡು ಮೂಳೆಗಳಿವೆ. ಇದರಲ್ಲಿ ರೇಡಿಯಸ್ ಮೂಳೆಯು ಬಲವಾಗಿದ್ದು ಬಹಳ ಉದ್ದವಿದೆ. ಅಲ್ನ ಮೂಳೆ ನೀಳವಾಗಿ, ತೆಳುವಾಗಿರುವುದಲ್ಲದೆ ರೇಡಿಯಸ್‍ನೊಂದಿಗೆ ಸೇರಿ ಕೊಂಡಿದೆ. ಮೊಣಕೈಬಳಿ ಇರುವ ಟ್ರೈಸೆಪ್ಸ್ ಮಾಂಸದ ಸ್ನಾಯುರಜ್ಜಿನಲ್ಲಿ (ಟೆಂಡನ್) ಮೂಳೆಯು ಬೆಳೆದು ಅದು ಮಂಡಿಯ ಮೂಳೆಯಂತಿದ್ದು ಅದರಂತೆ ಕಾರ್ಯನಿರ್ವಹಿಸುತ್ತದೆ. ಮಣಿಕಟ್ಟಿನಲ್ಲಿ (ಶಲಾಕಾಶಯ) ಕಾರ್ಪಲ್ ಗಳೆಂಬ ಆರು ಸಣ್ಣಮೂಳೆಗಳಿರುತ್ತವೆ. ಅಂಗೈನಲ್ಲಿ ಉಪಶಲಾಕಾಶಯ (ಮೇಟಾಕಾರ್‍ಪೆಲ್) ಎಂಬ ಅಂಗೈ ಮೂಳೆಗಳಿರುತ್ತವೆ. ಹೆಬ್ಬೆರಳಿಗೆ ಸಂಬಂಧ ಪಟ್ಟ ಮೊದಲನೆಯ ಅಂಗೈ ಮೂಳೆಯನ್ನು ಬಿಟ್ಟು ಮಿಕ್ಕ ನಾಲ್ಕು ಅಂಗೈ ಮೂಳೆಗಳು ಬಹಳ ಉದ್ದವಾಗಿ ರೆಕ್ಕೆಗೆ ಮುಖ್ಯವಾದ ಆಧಾರ ಸ್ತಂಭಗಳಂತಿವೆ. ಹೆಬ್ಬೆರಳಿನಲ್ಲಿ ಮಾತ್ರ ಕೊಕ್ಕೆಯಂತಿರುವ ಉಗುರಿರುತ್ತದೆ. ಎರಡನೆಯ ಬೆರಳಿನಲ್ಲಿ ತುದಿಯ ಕೀಲುಗಳು ಇಲ್ಲ. ಇದರಲ್ಲಿ ಬರಿ ಅಂಗೈ ಮೂಳೆ ಮಾತ್ರ ಇರುತ್ತದೆ. ಇದು ಮಧ್ಯದ ಬೆರಳಿನೊಂದಿಗೆ ಸೇರಿಕೊಂಡು ಅದನ್ನು ಬಲಪಡಿಸುತ್ತದೆ. 3,4 ಮತ್ತು 5ನೇ ಬೆರಳುಗಳಲ್ಲಿ, ಉದ್ದವಾಗಿರುವ ಎರಡು ಬೆರಳೆಲುಬುಗಳಿರುವುವು. ಬಾವಲಿಗಳು ವಿಶ್ರಮಿಸುವಾಗ ಈ ಬೆರಳುಗಳು ಬಾಗಿ ರೆಕ್ಕೆಗಳು ಪೂರ್ಣವಾಗಿ ಮಡಿಸಿಕೊಳ್ಳುತ್ತವೆ.

ಕಟಿ ಅಸ್ಥಿಯು ಶಕ್ತಿಹೀನದ್ದು. ಅದರಲ್ಲಿ ಇಲಿಯಂ, ಆಸನಾಸ್ಥಿ (ಇಸ್ಕೀಯಂ) ಮತ್ತು ಜಘನಾಸ್ಥಿ (ಪ್ಯುಬೀಸ್) ಎಂಬ ಮೂರು ಮೂಳೆಗಳಿರುತ್ತವೆ. ಇವುಗಳು ಒಂದಾಗಿರುತ್ತವೆ. ಅಸಿಟ್ಯಾಬ್ಯುಲಂ ಅಪೂರ್ಣವಾಗಿರುವುದು. ತೊಡೆಯ ಫೀಮರ್ ಮೂಳೆಯ ಶಿರೋಭಾಗವು ಆ್ಯಸಿಟ್ಯಾಬ್ಯುಲಂನ ಜೊತೆಗೆ ಒರಳು ಗುಂಡಿನಂತೆ ಸೇರಿಕೊಂಡಿದೆ. ಮುಂಗಾಲಿನಲ್ಲಿ ಟಿಬಿಯಾ ಮತ್ತು ಫಿಬುಲ್ಲಾ ಮೂಳೆಗಳಿರುತ್ತವೆ. ಇವುಗಳಲ್ಲಿ ಟಿಬಿಯಾ ಬಲವಾಗಿದ್ದು, ಫೀಬುಲ್ಲಾ ತೆಳುವಾಗಿದೆ. ಹಿಮ್ಮಡಿಯಲ್ಲಿ ಅಡ್ಡೆಲುಬು (ಟಾರ್ಸಲ್) ಬಹಳ ಸಣ್ಣದಾಗಿದೆ. ಕ್ಯಾಲ್‍ಕೇನಿಯಂನ ಅಡ್ಡೆಲುಬಿನಲ್ಲಿ ಕೈಲ್‍ಕಲ್ ಎಂಬ ಅಸ್ಥಿ ಅಥವಾ ಮೃದ್ವಸ್ಥಿಯ ನಾಳವಿರುತ್ತದೆ. ಇದು ತೊಡೆಯ ಭಾಗದ ಚರ್ಮದ ಪೊರೆಗೆ ಆಧಾರ. ಅಂಗಾಲಿನಲ್ಲಿ ಉಪ ಅಡ್ಡೆಲುಬುಗಳಿದ್ದು ಬೆರಳುಗಳಲ್ಲಿ ಬೆರಳೆಲುಬುಗಳಿವೆ. ಕಾಲಿನ ದೊಡ್ಡಬೆರಳು ಹೊರಭಾಗಕ್ಕಿದೆ. ಪ್ರತಿಯೊಂದು ಬೆರಳಲ್ಲೂ ಚೂಪಾದ ಬಾಗಿದ ಬಲವಾದ ಉಗುರುಗಳಿರುವುವು.

ಮೇಲ್‍ದವಡೆ ಮತ್ತು ಕೆಳದವಡೆಗಳಲ್ಲಿ ಹಲ್ಲುಗಳಿವೆ. ಉಳಿದ ಸ್ತನಿಗಳಲ್ಲಿರುವ ನಾಲ್ಕೂ ಬಗೆಯ ಹಲ್ಲುಗಳು ಕೈರಾಪ್ಟಿರಾದಲ್ಲೂ ಇವೆ. ಈ ಗುಂಪಿನ ದಂತ ಸೂತ್ರ

$$\text{ಐ(I)}\ \frac{1\text{-}2}{0\text{-}3},\ \ \text{ಸಿ (C)}\ \frac{1}{1},\ \ \text{ಪಿ. ಎಂ. (p. m.)}\ \frac{1\text{-}3}{2\text{-}3},\ \ \text{ಎಂ(m)}\ \frac{1\text{-}3}{1\text{-}3}$$

ಒಟ್ಟು ಹಲ್ಲುಗಳ ಸಂಖ್ಯೆ 20 ರಿಂದ 38. ಫಲಾಹಾರಿ ಬಾವಲಿಗಳ ದವಡೆಹಲ್ಲುಗಳಲ್ಲಿ ಬಹುಸೂಕ್ಷ್ಮವಾದ ಮೊನೆ (ಕಸ) ಗಳಿರುತ್ತವೆ. ಕೀಟಾಹಾರಿ ಬಾವಲಿಗಳಲ್ಲಿ 'W' ಆಕಾರದ ಮೊನೆಗಳಿರುತ್ತವೆ. ರಕ್ತ ಹೀರುವ ಬಾವಲಿಗಳಲ್ಲಿ ಹರಿತವಾದ ಕತ್ತರಿಸುವಂತಹ ಮೊನೆಗಳಿರುತ್ತವೆ. ಹೊಟ್ಟೆಯಲ್ಲಿ ಮೂರು ವಿಧಗಳಿವೆ. ಕೀಟಾಹಾರಿ ಬಾವಲಿಗಳಲ್ಲಿ ಚಿಕ್ಕದಾಗಿ ದುಂಡಾಗಿಯೂ ಫಲಾಹಾರಿ ಬಾವಲಿಗಳಲ್ಲಿ ದೊಡ್ಡದಾಗಿಯೂ ರಕ್ತಾಹಾರಿ ಬಾವಲಿಗಳಲ್ಲಿ ಉದ್ದನೆಯ ನಾಳದಂತೆಯೂ ಇವೆ. ಕೀಟಾಹಾರಿಗಳ ಕರುಳು ಚಿಕ್ಕದಾಗಿದ್ದರೆ ಫಲಾಹಾರಿಗಳಲ್ಲಿ ಶರೀರಕ್ಕಿಂತ ನಾಲ್ಕರಷ್ಟು ಉದ್ದವಿರುತ್ತದೆ.

ಹಾರಾಟಕ್ಕೆ ಹೆಚ್ಚು ಆಮ್ಲಜನಕ ಪೂರೈಕೆ ಅಗತ್ಯವಿರುವುದರಿಂದ ಹೃದಯ ದೊಡ್ಡದಾಗಿದೆ. ರಕ್ತವು ಕೆಂಪುವರ್ಣವಿದ್ದು ಅದರಲ್ಲಿ ಹೆಚ್ಚು ಕೆಂಪುಕಣಗಳಿರುತ್ತವೆ. ಬಿಳಿ ರಕ್ತಕಣಗಳು ಕಡಿಮೆ.

ಹೆಚ್ಚು ಆಮ್ಲಜನಕವನ್ನು ಶರೀರಕ್ಕೆ ಒದಗಿಸಲು ಅನುಕೂಲವಾಗುವಂತೆ ಶ್ವಾಸಕೋಶಗಳೂ ದೊಡ್ಡದಾಗಿವೆ. ಹೆಚ್ಚಿನ ಆಮ್ಲಜನಕದಿಂದಾಗಿ ಶರೀರದಲ್ಲಿ ಹೆಚ್ಚು ಶಕ್ತಿ

ಉತ್ಪಾದನೆಯಾಗುತ್ತದೆ. ಅಂತರಿಕ್ಷದಲ್ಲಿ ಅಡಚಣೆಯಿಲ್ಲದೆ, ಸುಲಭವಾಗಿ, ವೇಗವಾಗಿ ಹಾರಾಡಲು ಇದರಿಂದ ಅನುಕೂಲ.

ಮೆದುಳಿನ ಬೆಳವಣಿಗೆ ಕಡಿಮೆ. ಪ್ರಧಾನ ಮಸ್ತಿಷ್ಕವು (ಸೆರೆಬ್ರಮ್) ನುಣುಪಾಗಿದ್ದು ಚಿಕ್ಕದಾಗಿದೆ. ಬೇರೆ ಸ್ತನಿಗಳಂತೆ ಹಿಂಭಾಗಕ್ಕೆ ಬಾಗಿರುವುದಿಲ್ಲ ಆದುದರಿಂದ ಉಪಮಸ್ತಿಷ್ಕವು (ಸೆರೆಬೆಲ್ಲಮ್) ಎದ್ದು ಕಾಣುವಂತಿದೆ. ಬಾವಲಿಗಳು ಬುದ್ಧಿವಂತ ಪ್ರಾಣಿಗಳಲ್ಲ. ಕಣ್ಣುಗಳು ಇದ್ದರೂ ಹಗಲಿನಲ್ಲಿ ಅವುಗಳ ಅವಶ್ಯಕತೆಯಿಲ್ಲ. ಬಾಯಿಯ ಸುತ್ತ, ಕಿವಿಗಳು ಮತ್ತು ಹಾರುವ ಚರ್ಮಗಳಲ್ಲಿ ಅನೇಕ ಸ್ಪರ್ಶ ಕೂದಲುಗಳಿವೆ. ಪ್ರತಿಯೊಂದು ಕೂದಲಿನ ಬುಡಕ್ಕೆ ನರ ಸಂಪರ್ಕವಿದ್ದು, ಅವುಗಳು ಸ್ಪರ್ಶೇಂದ್ರಿಯಗಳಾಗಿ ಕಾರ್ಯನಿರ್ವಹಿಸುತ್ತವೆ. ವಾಸನೆ ಗ್ರಹಣಶಕ್ತಿ ಸಾಮಾನ್ಯವಾಗಿದೆ. ಆದರೆ ಶಬ್ದವನ್ನು ಗ್ರಹಿಸುವ ಶಕ್ತಿ ಮಾನವನಿಗಿಂತ ಚೆನ್ನಾಗಿದೆ. ಇದು ಹಾರುವ ಜೀವನಕ್ಕೆ ಮಾಡಿಕೊಂಡ ಮಾರ್ಪಾಡು. ಕೀಚುಧ್ವನಿಯನ್ನು ಗ್ರಹಿಸಿದ ಬಾವಲಿಗೆ ಮಧ್ಯೆ ಇರುವ ಅಡಚಣೆ ಅರಿವಾಗಿ ಅದಕ್ಕೆ ಡಿಕ್ಕಿ ಹೊಡೆಯದ ಹಾಗೆ ಸರಾಗವಾಗಿ ಹಾರಾಡುತ್ತದೆ. ಈ ಧ್ವನ್ಯಾನುಕರಣ ಶಕ್ತಿ ಮಾನವ ನಿರ್ಮಿತ ಶ್ರವಣಾತೀತ (ಅಲ್ಟ್ರಾಸೋನಿಕ್) ಶಬ್ದಗಳ ಗ್ರಹಣಕ್ಕೆ ಸಮನಾದುದು. ಪೂರ್ಣಕತ್ತಲಿರುವ ಸ್ಥಳಗಳಲ್ಲಿ ಮತ್ತು ಪ್ರಯೋಗಕ್ಕಾಗಿ ನಿರ್ಮಿಸಿದ ಕತ್ತಲು ಕೋಣೆಗಳಲ್ಲಿ ಬಾವಲಿಗಳು ಹೆಚ್ಚು ಧೃಡತೆಯಿಂದ ಹಾರಾಡುತ್ತವೆ. ಕಣ್ಣುಗಳನ್ನು ಕಟ್ಟಿ ಹಾರಾಡಲು ಬಿಟ್ಟರೆ ಯಾವ ವಸ್ತುವಿಗೂ ಡಿಕ್ಕಿ ಹೊಡೆಯದೆ ಹಾರಾಡುತ್ತವೆ. ಆದರೆ ಕಿವಿಗಳನ್ನು ಮುಚ್ಚಿಬಿಟ್ಟರೆ, ಸುತ್ತಮುತ್ತಲಿರುವ ವಸ್ತುಗಳಿಗೆ ಡಿಕ್ಕಿ ಹೊಡೆಯುತ್ತವೆ. ಇದು ಅವುಗಳ ಕಿವಿಗಳ ಪ್ರಾಮುಖ್ಯತೆ ತೋರಿಸುತ್ತದೆ. ಮಾನವನ ಶಬ್ದ ಗ್ರಹಣ ಶಕ್ತಿ ಸೆಕೆಂಡಿಗೆ 20,000 ಚಕ್ರಗಳು. ಆದರೆ ಬಾವಲಿಗಳು ಸೆಕೆಂಡಿಗೆ 100,000 ಚಕ್ರವೇಗದ ಶಬ್ದಗಳನ್ನು ಗ್ರಹಿಸಬಲ್ಲವು.

ಕೈರಾಪ್ಟರ ಏಕಲಿಂಗಿಗಳು. ಹೆಣ್ಣು ಗಂಡುಗಳು ಬೇರೆಯಿರುತ್ತವೆ. ಹೆಣ್ಣಿನಲ್ಲಿ ಅಂಡಾಶಯಗಳಿದ್ದು, ಗರ್ಭ ಚೀಲ ದುಂಡಾಗಿ ಅಥವಾ ಎರಡು ಭಾಗವಾಗಿರಬಹುದು. ಜರಾಯು ತಟ್ಟೆಯಂತಿದ್ದು, ಮರಿಯು ಹೊರ ಬರುವಾಗ ಅದರ ಜೊತೆಯಲ್ಲಿಯೇ ಹೊರಬರುತ್ತದೆ. ಹೆಣ್ಣಿನ ಭಗ್ನಾಂಕುರ ಮೂತ್ರ ವಿಸರ್ಜನ ನಾಳದೊಡನೆ ಸೇರಿದೆ. ಗಂಡಿನಲ್ಲಿ ಶಿಶ್ನವು ತೂಗಾಡುತ್ತಿರುತ್ತದೆ. ಕೆಲವು ಪ್ರಭೇದಗಳಲ್ಲಿ ಮೂಳೆಯೊಂದು ಅದಕ್ಕೆ ಆಧಾರವಾಗಿರುವುದು. ವೃಷಣಗಳು ಉದರದಲ್ಲಿದ್ದು ಸಂತಾನೋತ್ಪತ್ತಿ ಕಾಲದಲ್ಲಿ ಮಾತ್ರ ಉದರದ ಕೆಳಭಾಗ ವೃಷಣಚೀಲಕ್ಕೆ ಇಳಿಯುತ್ತದೆ. ಶರತ್ಕಾಲ ಸಂತಾನೋತ್ಪತ್ತಿ ಕಾಲ. ಆಗ ಮಾತ್ರ ಗಂಡು ಹೆಣ್ಣುಗಳು ಒಂದಾಗಿರುವುವು. ಮಿಕ್ಕ ಸಂದರ್ಭಗಳಲ್ಲಿ ಬೇರೆಯಾಗಿ ವಾಸಮಾಡುತ್ತವೆ. ಶರತ್ಕಾಲದಲ್ಲಿಯೇ ಸಂಭೋಗವೂ ನಡೆಯುತ್ತದೆ. ಆದರೆ ವಸಂತ ಕಾಲದ ಅನಂತರ ಮೊಟ್ಟೆಯು ಪಕ್ವವಾಗುವುದಿಲ್ಲ. ಗಂಡಿನಿಂದ ಪಡೆದ ವೀರ್ಯಾಣುಗಳು ಹೆಣ್ಣಿನ ಗರ್ಭಚೀಲದಲ್ಲಿಯೇ ಚಳಿಗಾಲವೆಲ್ಲಾ ಬದುಕಿರುತ್ತವೆ. ಕೆಲವು ಪ್ರಭೇದಗಳಲ್ಲಿ ವಸಂತ ಕಾಲದಲ್ಲೇ ಲೈಂಗಿಕ ಕ್ರಿಯೆಗಳು ನಡೆಯುತ್ತವೆ. ಒಮ್ಮೆ ಒಂದು ಅಥವಾ ಎರಡು ಮರಿ ಜನಿಸುತ್ತವೆ. ಇವುಗಳನ್ನು ತಾಯಿ ತನ್ನ ರೆಕ್ಕೆಗಳ ಸಂಧಿಯಲ್ಲಿಟ್ಟುಕೊಂಡು ಹಾರಾಡುತ್ತದೆ. ಮರಿಗಳು ತಾಯಿಯ ಸ್ತನದ ಕೆಚ್ಚಲುಭಾಗವನ್ನು ಚೂಪಾಗಿ ಹಿಂದಕ್ಕೆ ಬಾಗಿರುವ ಹಾಲು ಹಲ್ಲುಗಳಿಂದ ಭದ್ರವಾಗಿ ಕಚ್ಚಿಕೊಂಡಿರುತ್ತವೆ. ಸ್ವಲ್ಪ ಕಾಲಾನಂತರ ಈ ಹಲ್ಲುಗಳು ಬಿದ್ದು ಹೊಸ ಹಲ್ಲುಗಳು ಬೆಳೆಯುತ್ತವೆ.

ಕೈರಾಪ್ಟರಗಳ ಹಾರಾಟದ ವೇಗವು ಶರೀರದ ಗಾತ್ರ ಅವಲಂಬಿಸಿದೆ. ದೊಡ್ಡಗಾತ್ರದ ಬಾವಲಿಗಳು ಗಂಟೆಗೆ 50 ಕಿಮೀ ವೇಗದಲ್ಲಿ ಹಾರಿದರೆ ಸಣ್ಣ ಬಾವಲಿಗಳು 15 ರಿಂದ 16 ಕಿಮೀ ವೇಗದಲ್ಲಿ ಹಾರುತ್ತವೆ. ಹಾರುವಾಗ ರೆಕ್ಕೆಗಳು ಹಕ್ಕಿಗಳಂತೆ ಮೇಲಿನಿಂದ ಕೆಳಕ್ಕೆ ಮತ್ತು ಕೆಳಗಿನಿಂದ ಮೇಲಕ್ಕೆ ಚಲಿಸದೆ ಸುತ್ತುವ ಚಲನೆ ತೋರುವುವು. ದೊಡ್ಡ ಬಾವಲಿಗಳಲ್ಲಿ ರೆಕ್ಕೆ ಸೆಕೆಂಡಿಗೆ 10 ರಿಂದ 12 ಬಾರಿ ಬಡಿಯುತ್ತದೆ. ಸಣ್ಣ ಬಾವಲಿಗಳಲ್ಲಿ ಸೆಕೆಂಡಿಗೆ 15 ರಿಂದ 16 ಬಡಿತವಿರುತ್ತದೆ.

ಚಳಿಗಾಲದಲ್ಲಿ ಕೈರಾಪ್ಟರಗಳು ಶಿಶಿರ ನಿದ್ರೆಗೊಳಗಾಗುತ್ತವೆ. ಈ ಕಾಲದಲ್ಲಿ ಕೀಟವಾಗಲೀ, ಹಣ್ಣಾಗಲೀ ಸಿಗದಿರುವುದರಿಂದ ಬಾವಲಿಗಳ ಆಹಾರ ಸರಬರಾಜು ಕಡಿಮೆಯಾಗುತ್ತದೆ. ಯಾವುದಾದರೂ ಕತ್ತಲು ಪ್ರದೇಶಗಳನ್ನು ಹುಡುಕಿಕೊಂಡು ಬಾವಲಿಗಳು ತಮ್ಮ ಚಳಿಗಾಲದ ನಿದ್ರೆಯನ್ನು ಪ್ರಾರಂಭಿಸುತ್ತವೆ. ಉಸಿರಾಟ ಮತ್ತು ಜೀರ್ಣಕ್ರಿಯೆಗಳು ಸ್ಥಗಿತಗೊಳ್ಳುತ್ತವೆ. ಹೃದಯದ ಬಡಿತವೂ ಒಂದು ಸೆಕೆಂಡಿಗೆ ಒಂದು ಬಡಿತಕ್ಕಿಂತ ಕಡಿಮೆಯಾಗುತ್ತದೆ. ಈ ರೀತಿಯಾಗಿ ಸುಮಾರು 3 ತಿಂಗಳಿಂದ 6 ತಿಂಗಳುಗಳ ಕಾಲದ ದೀರ್ಘ ನಿದ್ರೆಗೊಳಗಾಗುತ್ತವೆ. ಇದಕ್ಕಾಗಿಯೇ ಬಾವಲಿಗಳು ತಮ್ಮ ಶರೀರದಲ್ಲಿ ಈ 6 ತಿಂಗಳಿಗಾಗುವಷ್ಟು ಕೊಬ್ಬನ್ನು ಬಾಲದ ಬಳಿ ಸೇರಿಸಿಟ್ಟಿರುತ್ತವೆ. ಇದರಿಂದ ಬಾಲವು ಬಹಳ ದಪ್ಪವಾಗಿರುತ್ತದೆ. ನಿದ್ರೆಯ ಅನಂತರ ಬಾಲವು ಬಹಳ ಸಣ್ಣಗಾಗಿರುತ್ತದೆ, ಅಂದರೆ ನಿದ್ರೆಯ ಕಾಲದಲ್ಲಿ ಶೇಖರಿಸಿಟ್ಟಿರುವ ಕೊಬ್ಬನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡಿರುತ್ತವೆ.

ಇಂದಿನ ಬಾವಲಿಗಳು ಇಯೋಸಿನ್ ಕಾಲದ ಬಾವಲಿಗಳಂತಿರುವುದರಿಂದ ಕೈರಾಪ್ಟರ ಅತಿ ಪ್ರಾಚೀನ ಗಣಗಳಲ್ಲಿ ಒಂದು ಎಂದು ಭಾವಿಸಲಾಗಿದೆ. ಇವುಗಳನ್ನು ಇತರ ಸ್ತನಿಗಳೊಂದಿಗೆ ಹೊಂದಾಣಿಸುವ ಪ್ರಾಣಿಗಳಾವುವು ಇಲ್ಲದಿರುವುದರಿಂದ, ಕೈರಾಪ್ಟರಗಳನ್ನು ಬೇರೆ ಗಣವಾಗಿಯೇ ವಿಂಗಡಿಸಲಾಗಿದೆ. ಕೀಟಾಹಾರಿ ಗಣದ ಪ್ರಾಣಿಗಳಿಗೆ ಹೆಚ್ಚು ಸಾಮ್ಯವಿರುವುದರಿಂದ ಕೈರಾಪ್ಟರ ಕೀಟಾಹಾರಿಗಳಿರಬಹುದೆಂದು ಊಹಿಸಲಾಗಿದೆ.



ಬಾವಲಿ

ಕೈರಾಪ್ಟರ ಗಣವನ್ನು ಎರಡು ಉಪಗಣಗಳಾಗಿ ವಿಂಗಡಿಸಲಾಗಿದೆ.

1. ಮೆಗಾಕೈರಾಪ್ಟರ
2. ಮೈಕ್ರೊಕೈರಾಪ್ಟರ

ಮೆಗಾಕೈರಾಪ್ಟರ: ಇವು ಗಾತ್ರದಲ್ಲಿ ದೊಡ್ಡವು. ಆದುದರಿಂದ ಈ ಹೆಸರು. ಎಲ್ಲವೂ ಫಲಾಹಾರಿಗಳು. ಕಿವಿಗಳ ಹೊರಭಾಗವು ಒಂದಾಗಿ ಸೇರಿಕೊಂಡು ಕೆಳಭಾಗದಲ್ಲಿ ಉಂಗುರಾಕೃತಿಯಿರುತ್ತದೆ. ಬಾಲ ಇಲ್ಲ. ಇದ್ದರೂ ಚಿಕ್ಕದು, ಚರ್ಮದ ಪೊರೆಯಿಂದ ಬೇರೆಯಾಗಿರುತ್ತದೆ. ದವಡೆ ಹಲ್ಲುಗಳ ಮೇಲ್ಭಾಗದಲ್ಲಿ ಬಲಹೀನವಾದ ಮೊನೆಗಳಿವೆ. ಭುಜಾಸ್ಥಿಮೂಳೆ ಭುಜದ ಮೂಳೆಯೊಂದಿಗೆ ಚಲಿಸುವುದಿಲ್ಲ. ಎರಡನೇ ಕೈ ಬೆರಳು ಮೂರನೇ ಬೆರಳಿನಿಂದ ಬೇರೆಯಾಗಿದ್ದು ಮೂರು ಬೆರಳೆಲುಬುಗಳನ್ನು ಪಡೆದಿದೆ. ತುದಿಯಲ್ಲಿ ಉಗುರಿದೆ. ಈ ಕೈರಾಪ್ಟರಗಳು ಹೆಚ್ಚಾಗಿ ಪ್ರಪಂಚದ ಪಶ್ಚಿಮಭಾಗದ ಉಷ್ಣವಲಯದ ಪ್ರದೇಶಗಳಲ್ಲಿ ವಾಸವಾಗಿವೆ. ಎಲ್ಲಾ ಪ್ರಭೇದಗಳನ್ನು ಟೀರೊಪೊಡಿಡೆ ಎಂಬ ಕುಟುಂಬಕ್ಕೆ ಸೇರಿಸಲಾಗಿದೆ. ಈ ಕುಟುಂಬದಲ್ಲಿ 1. ಟಿರೊಪೊಡಿನೆ, 2. ನೀಕ್ಟಿಮಿನ್ನೈನೆ, 3. ಹರ್‌ಪೈಯೊನಿಕ್ಟೈನೆ, 4. ಮೆಕ್ರೋಗ್ಲಾಸೀನೆ ಎಂಬ ನಾಲ್ಕು ಉಪಕುಟುಂಬಗಳಿವೆ. ಟಿರೊಪೊಡಿನೆ ಉಪಕುಟುಂಬದ ಬಾವಲಿಗಳು ಫಲಾಹಾರಿಗಳು. ಕೆಲವು ಸಣ್ಣ ಮರಗಳ ತೊಗಟೆಯನ್ನು ಅಗಿದು ತಿನ್ನುತ್ತವೆ. ಈ ಬಾವಲಿಗಳ ಮೂತಿ ಉದ್ದ. ನಾಲಿಗೆ ಸಾಧಾರಣವಾಗಿದೆ. ದವಡೆ ಹಲ್ಲುಗಳಲ್ಲಿ ಮೊಂಡು ಮೊನೆಗಳಿವೆ. ಟೆರೊಪಸ್ ಬಾವಲಿಗೆ ನರಿಯಂತಿರುವ ಮುಖವಿರುವುದರಿಂದ ಇದಕ್ಕೆ "ಹಾರುವ ನರಿ" ಎಂದು ಹೆಸರಿದೆ. ಇದು ಕೋಮರೊ ದ್ವೀಪಗಳಿಂದ, ಮಡಗಾಸ್ಕರ್‌ನಿಂದ ದಕ್ಷಿಣ ಜಪಾನ್, ಸಾಮೋವ ಮತ್ತು ಟಾಸ್‌ಮೇನಿಯಾಗಳಲ್ಲಿ ವಾಸವಾಗಿರುತ್ತದೆ. ಶರೀರದ ಬಣ್ಣ ಹಳದಿ ಬೂದು ಅಥವಾ ಬಿಳುಪು, ಗಾಢವಾದ ಕಂದು ಅಥವಾ ಕಪ್ಪು. ಬಾಲವಿರುವುದಿಲ್ಲ. ರಸೆಟ್‌ಟಸ್ ಆಫ್ರಿಕಾ ದೇಶದಲ್ಲಿ ವಾಸವಾಗಿರುವ ನಾಯಿಯ ಮುಖವಿರುವ ಬಾವಲಿ. ಮೊಟಕು ಬಾಲ, ಸಣ್ಣಮೂತಿ, ಗಾಢವಾದ ಬೂದು ಬಣ್ಣ. ಈಡೊಲಾನ್ ಆಫ್ರಿಕಾ, ದಕ್ಷಿಣ ಅರೇಬಿಯಾ ಮತ್ತು ಸೂಡಾನ್‌ನಲ್ಲಿ ವಾಸಿಸುವ ಹಳದಿ ಬಣ್ಣದ ಬಾವಲಿ. ಇದರಲ್ಲಿ ಅಸ್ಥಿಯ ಹೊರಕಿವಿನಾಳವಿದೆ. ಡಾಬ್‌ಸೋನೀಯಾ ಸೇಲಿಬೆಸ್ ಬಾಲಿ ದ್ವೀಪಗಳಿಂದ, ಸಾಲೋಮನ್ ದ್ವೀಪಗಳು ಮತ್ತು ಕ್ವೀನ್ಸ್‌ಲೆಂಡ್‌ನಲ್ಲಿ ವಾಸವಾಗಿರುವ ಬೆನ್ನು ಮೂಳೆ ರೆಕ್ಕೆಯ ಬಾವಲಿ. ಇದರಲ್ಲಿ ರೆಕ್ಕೆಗಳು ಶರೀರದ ಪಕ್ಕಕ್ಕೆ ಸೇರಿಕೊಂಡಿರುವುದಕ್ಕೆ ಬದಲಾಗಿ ಬೆನ್ನಿನ ಮಧ್ಯಭಾಗಕ್ಕೆ ಸೇರಿಕೊಂಡಿದೆ. ಈಪಾಲೇಟ್ ಬಾವಲಿಯ ಶರೀರ ಕಂದುಬಣ್ಣವಿದೆ. ಗಂಡು ಬಾವಲಿಯಲ್ಲಿ ಎದ್ದು ನಿಲ್ಲುವಂತಹ ಬಿಳಿಯ ಅಥವಾ ಹಳದಿ ಬಣ್ಣದ ಭುಜದ ಚೀಲಗಳಿವೆ. ಆದುದರಿಂದ ಈಪಾಲೆಟ್ ಎಂಬ ಹೆಸರು. ಹಿಪ್‌ಸಿಗ್ನಾತಸ್ ಬಾವಲಿಯ ತಲೆ ಸುತ್ತಿಗೆಯಂತಿರುವುದರಿಂದ ಅದನ್ನು ಸುತ್ತಿಗೆ ತಲೆಯ ಬಾವಲಿ ಎನ್ನುತ್ತಾರೆ. ಇದು ಪಶ್ಚಿಮ ಆಫ್ರಿಕಾದ ಕಾಂಗೋದಲ್ಲಿ ವಾಸವಾಗಿರುತ್ತದೆ. ಗಂಡು ಬಾವಲಿಗೆ ಉದ್ದವಾದ ಮೂತಿ ಇದೆ. ತುಟಿಗಳು ಉಬ್ಬಿಕೊಂಡು ನೇತಾಡುತ್ತಿರುತ್ತವೆ. ದವಡೆ ಚೀಲಗಳು ಅಗಲವಾಗಿವೆ. ಶರೀರ ಕಂದುಬಣ್ಣ. ಗಂಡು ಬಾವಲಿಗಳು ರಾತ್ರಿಯಲ್ಲಿ ದೊಡ್ಡಧ್ವನಿಯಲ್ಲಿ ಶಬ್ದಮಾಡುತ್ತಿರುತ್ತವೆ.

ನೀಕ್ಟಿಮಿನ್ನೈನೆ ಉಪಕುಟುಂಬದ ಬಾವಲಿಗಳಿಗೆ ಸಣ್ಣಮೂತಿ, ನಾಸಿಕ ರಂಧ್ರಗಳು ನಾಳದಂತೆ ಹೊರಕ್ಕೆ ಚಾಚಿವೆ. ಕೆಳದವಡೆಯಲ್ಲಿ ಬಾಚಿ ಹಲ್ಲುಗಳಿಲ್ಲ. ಪ್ರೀಮ್ಯಾಕ್ಸಿಲಗಳೂ

ಬಲವಾಗಿ ಸೇರಿಕೊಂಡಿವೆ. ರೆಕ್ಕೆ ಮತ್ತು ಕಿವಿಗಳ ಮೇಲೆ ಹಳದಿ ಚುಕ್ಕೆಗಳಿವೆ. ಇವು ಮಿಶ್ರಾಹಾರಿಗಳು. ಹಣ್ಣಿನ ಜೊತೆಗೆ ಕೀಟಗಳನ್ನು ಭಕ್ಷಿಸುತ್ತವೆ.

ಹರ್‌ಪೈಯೊನಿಕ್ಟಿರೈನೆ ಬಾವಲಿಗಳಲ್ಲಿ ಪ್ರೀಮ್ಯಾಕ್ಸಿಲ ಬಲವಾಗಿ ಸೇರಿಕೊಂಡಿವೆ. ಕೋರೆಹಲ್ಲುಗಳು ಅಡ್ಡ ಅಡ್ಡವಾಗಿವೆ. ದವಡೆಹಲ್ಲುಗಳಲ್ಲಿ 5 ಅಥವಾ 6 ಮೊನೆಗಳಿವೆ. ಮೂತಿಯು ಉದ್ದ. ಶರೀರ ಕಂದು ಬಣ್ಣ. ಬಾಲ ಇಲ್ಲ. ಫಿಲಿಪೈನ್ಸ್ ದ್ವೀಪಗಳಲ್ಲಿ ವಾಸವಾಗಿದೆ.

ಮೆಕ್ರೋಗ್ಲಾಸೀನೆ ಬಾವಲಿಗಳು ಉದ್ದಮೂತಿಯುಳ್ಳ ಸಣ್ಣ ಪ್ರಾಣಿಗಳು. 10 ಸೆಂಮೀ ಗಿಂತಲೂ ಕಡಿಮೆ ಇರುತ್ತವೆ. ನಾಲಿಗೆಯು ಉದ್ದ ಹಾಗೂ ಕಿರಿದು. ಬಾಚಿಹಲ್ಲುಗಳು ಸಣ್ಣ, ದವಡೆಹಲ್ಲುಗಳು ಕಿರಿದಾಗಿವೆ. ಮೃದುವಾದ ಹಣ್ಣು, ಜೇನು, ಹೂವಿನ ಪರಾಗ ಇವುಗಳು ಆಹಾರ. ಭಾರತ, ಫೀಜಿದ್ವೀಪಗಳು, ಆಸ್ಟ್ರೇಲಿಯಾ, ಪಶ್ಚಿಮ ಆಫ್ರಿಕಾಗಳಲ್ಲಿ ವಾಸಿಸುತ್ತವೆ.

ಮೈಕ್ರೊಕೈರಾಪ್ಟರಗಳು ಗಾತ್ರದಲ್ಲಿ ಚಿಕ್ಕವು. ಆದ್ದರಿಂದಲೇ ಈ ಹೆಸರು. ಸಾಮಾನ್ಯವಾಗಿ ಕೀಟಾಹಾರಿಗಳು. ಕೆಲವು ರಕ್ತವನ್ನು ಹೀರುತ್ತವೆ. ಕೈರಾಪ್ಟರದಲ್ಲಿ ದೊಡ್ಡ ಉಪಗಣ. ಸುಮಾರು 600 ಕ್ಕಿಂತಲೂ ಹೆಚ್ಚು ಪ್ರಭೇದಗಳಿವೆ. ಹಲ್ಲುಗಳು ಕೀಟಗಳ ಗಡಸು ಶರೀರವನ್ನು ಕತ್ತರಿಸುವುದಕ್ಕೆ ಅನುಕೂಲವಾಗಿವೆ. ಹಲ್ಲಿನ ಮೊನೆಗಳು ಹರಿತವಾಗಿದ್ದು **'W'** ಆಕಾರದಲ್ಲಿವೆ. ಹೊರಕಿವಿ ಉಂಗುರಾಕಾರವಲ್ಲ. ದವಡೆ ಮೂಳೆಯು ಉದ್ದ ಹಾಗೂ ತೆಳುವಾಗಿರುತ್ತದೆ. ಭುಜಾಸ್ಥಿ ಭುಜದ ಮೂಳೆಯೊಂದಿಗೆ ಚಲಿಸುತ್ತದೆ. ಎರಡನೇ ಕೈ ಬೆರಳಿಗೆ ಉಗುರಿಲ್ಲ.

ಮೈಕ್ರೊಕೈರಾಪ್ಟರ ಉಪಗಣವನ್ನು ನಾಲ್ಕು ಉಚ್ಚ ಕುಟುಂಬಗಳಾಗಿ ವಿಂಗಡಿಸಿದ್ದಾರೆ. 1. ಎಂಬಲೊನುರಾಯ್‌ಡೆ 2. ರೈನೋಲೊಫೊಡೆ 3. ಫೀಲೊಸ್ಟೋಮಟಾಯಿಡೆ 4. ವೆಸ್‌ಪರ್ಟಿಲಿಯೋನಾಯಿಡೆ

ಎಂಬಲೊನುರಾಯಿಡೆಯಲ್ಲಿ ಪ್ರಿಮ್ಯಾಕ್ಸಿಲಗಳು ಸಾಮಾನ್ಯವಾಗಿ ಬೇರ್ಪಡೆಯಾಗಿವೆ. ಹಲ್ಲುಗಳು ಸಹಜಸ್ಥಿತಿಯಲ್ಲಿವೆ. ಮೂರನೆಯ ಕೈಬೆರಳಿನಲ್ಲಿ ಎರಡು ಬೆರಳೆಲುಬುಗಳಿವೆ. ಇದರಲ್ಲಿ ರೈನೋಪೊಮೀಡೆ, ಎಂಬಲೋನುರೀಡೆ ಮತ್ತು ನಾಕ್ಟಿಲಿಯೋನಿಡೆ ಎಂಬ ಮೂರು ಕುಟುಂಬಗಳಿವೆ. ರೈನೋಪೊಮಿಡೆ ಕುಟುಂಬದ ಬಾವಲಿಗಳನ್ನು ಇಲಿಯ ಬಾಲದ ಬಾವಲಿಗಳು ಎನ್ನುವುದುಂಟು. ಈಜಿಪ್ಟ್, ಬರ್ಮಾ ಮತ್ತು ಸುಮಾತ್ರ ಗಳಲ್ಲಿ ವಾಸವಾಗಿರುತ್ತವೆ. ಮೂತಿ ಅಗಲವಾಗಿದೆ. ಮೂಗಿನ ಎಲೆಗಳು ಚೆನ್ನಾಗಿ ಬೆಳೆದಿಲ್ಲ. ಕೆಲವು ಉದ್ದವಾಗಿವೆ. ಬಾಲ ಉದ್ದ, ತೊಡೆಯ ನಡುವೆ ಇರುವ ಚರ್ಮದ ಪೊರೆ ಚಿಕ್ಕದಾಗಿದೆ. ಎರಡನೇ ಕೈ ಬೆರಳಿನಲ್ಲಿ ಎರಡು ಬೆರಳೆಲುಬುಗಳಿರುತ್ತವೆ. ಉದಾ: ರೈನೋಪೋಮಾ. ಲೋನುರೀಡೆ ಕುಟುಂಬದ ಬಾವಲಿಗಳನ್ನು ಚರ್ಮದಪೊರೆಯ ಬಾಲದ ಬಾವಲಿಗಳು ಎನ್ನುತ್ತಾರೆ. ಮಡಗಾಸ್ಕರ್, ಆಫ್ರಿಕಾ, ದಕ್ಷಿಣ ಏಷ್ಯಾ, ಅಸ್ಟ್ರೇಲಿಯ. ಫಿಲಿಫೈನ್ಸ್‌ಗಳಲ್ಲಿ ವಾಸವಾಗಿವೆ. ಮೂತಿ ಚೂಪಾಗಿದೆ. ಮೂಗಿನ ಎಲೆಗಳಿಲ್ಲ. ಬಾಲವು ತೊಡೆಗಳ ನಡುವೆ ಇರುವ ಚರ್ಮದ ಪೊರೆಯ ಮಾರ್ಗವಾಗಿ ಚಾಚಿಕೊಂಡು ಶರೀರದ ಮೇಲ್ಭಾಗಕ್ಕೆ ಬಂದಿದೆ. ಆದುದರಿಂದ ಇದಕ್ಕೆ ಚರ್ಮದ ಪೊರೆಯ ಬಾವಲಿ ಎಂಬ ಹೆಸರು. ಹಾರುವ ರೆಕ್ಕೆಗಳಲ್ಲಿ ಭುಜಕ್ಕೆ ಎದುರಾಗಿ ಚೀಲಗಳಿರುತ್ತವೆ. ಉದಾ: ಎಂಬಲೋನ್ಯುರಾ.

ನಾಕ್ಟಿಲಿಯೋನಿಡೆ ಕುಟುಂಬದ ಬಾವಲಿಗಳನ್ನು ಮೊಲದ ತುಟಿಯ ಬಾವಲಿಗಳೆಂದು ಕರೆಯುವುದುಂಟು. ಅಮೆರಿಕ, ವೆಸ್ಟ್‌ಇಂಡೀಸ್‌ಗಳಲ್ಲಿ ವಾಸವಾಗಿವೆ. ಮೇಲಿನ ತುಟಿಯು ವಿಚಿತ್ರವಾಗಿ ಮೇಲಕ್ಕೆ ಮಡಿಚಿಕೊಂಡಿದೆ. ಮಧ್ಯಭಾಗವು ತಲೆ ಕೆಳಗಾಗಿರುವ V ಯಂತಿದೆ. ಮೂಗಿನ ಎಲೆಗಳಿಲ್ಲ. ಕಿವಿಯು ಉದ್ದ ಹಾಗೂ ಚೂಪಾಗಿದೆ. ಹಿಂಗಾಲುಗಳು ಮತ್ತು ಉಗುರುಗಳು ನೀಳವಾಗಿವೆ ಮತ್ತು ಬಲವಾಗಿವೆ. ಇದರಿಂದ ಬಾವಲಿಯು ನೀರಿನಲ್ಲಿರುವ ಮೀನುಗಳನ್ನು ಹಿಡಿದು ಭಕ್ಷಿಸುತ್ತದೆ. ಉದಾ: ನಾಕ್ಟಿಲೀಯೊ ರೈನೋಲೊಪೊಯ್‌ಡಿಯೆಯಲ್ಲಿ ಪ್ರಿಮ್ಯಾಕ್ಸಿಲ ನಶಿಸಿಹೋಗಿವೆ. ನಾಸಿಕ ರಂಧ್ರಗಳು ಮೂಗಿನ ಎಲೆಗಳಲ್ಲಿರುತ್ತವೆ. ಕಿವಿ ಉದ್ದ, ಕೈಯ ಮೂರನೇ ಬೆರಳಿನಲ್ಲಿ ಎರಡು ಬೆರಳೆಲುಬುಗಳಿವೆ. ಇದರಲ್ಲಿ – ನೀಕ್ಟಿರಿಡೇ, ಮೆಗಾಡರ್ಮಿಡೆ ಮತ್ತು ರೈನೊಲೋಪಿಡೆ ಎಂಬ ಮೂರು ಕುಟುಂಬಗಳಿವೆ.

ನೀಕ್ಟಿರಿಡೆ ಕುಟುಂಬದ ಬಾವಲಿಗಳ ಮುಖವು ಮಧ್ಯಭಾಗಕ್ಕೆ ಸೀಳಿರುತ್ತದೆ. ಆದುದರಿಂದ ಇವುಗಳನ್ನು ಸೀಳಿದ ಮುಖದ ಬಾವಲಿಗಳೆನ್ನಲಾಗುತ್ತದೆ. ನಾಸಿಕ ರಂಧ್ರಗಳು ಸೀಳಿದ ಭಾಗದೊಳಕ್ಕೆ ತೆರೆಯುತ್ತವೆ. ಇವುಗಳ ಅಂಚು ಊದಿಕೊಂಡಿದೆ. ಮೂಗಿನ ಎಲೆಗಳಿಲ್ಲ. ಬಾಲ, ಕಿವಿ ಉದ್ದ. ಭುಜಾಸ್ಥಿ ಭುಜದ ಮೂಳೆಯೊಂದಿಗೆ ಚಲಿಸುವುದಿಲ್ಲ. ಆಫ್ರಿಕಾ, ಬೋರ್ನಿಯಾ, ಜಾವಗಳಲ್ಲಿ ವಾಸಿಸುತ್ತವೆ.

ಮೆಗಾಡರ್ಮಿಡೆ ಕುಟುಂಬದ ಬಾವಲಿಗಳನ್ನು ಭಾರತ, ದಕ್ಷಿಣ ಚೈನಾ, ಜಾವ, ಫಿಲಿಫೈನ್ಸ್, ಆಸ್ಟ್ರೇಲಿಯಾ, ಆಫ್ರಿಕಾಗಳಲ್ಲಿ ನೋಡಬಹುದು. ಈ ಬಾವಲಿಗಳಿಗೆ ಮೇಲಿನ ದವಡೆಯಲ್ಲಿ ಬಾಚಿಹಲ್ಲುಗಳಿಲ್ಲ. ಮೂಗಿನ ಎಲೆಗಳಿವೆ. ಕಿವಿ ಉದ್ದವಾಗಿದ್ದು ಇಬ್ಭಾಗವಾಗಿದೆ. ಬಾಲ ಚಿಕ್ಕದು. ನೋಡಲು ರಕ್ತವನ್ನು ಹೀರುವ ವಾಂಪೈರ್‌ನಂತೆ ಇರುವುದರಿಂದ ಇವುಗಳಿಗೆ ಮಧ್ಯವಾಂಪೈರ್ ಎಂಬ ಹೆಸರು ಬಂದಿದೆ.

ರೈನೊಲೋಪಿಡೆ ಕುಟುಂಬದ ಬಾವಲಿಗಳು ಇಂಗ್ಲೆಂಡ್, ಜಪಾನ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಫಿಲಿಫೈನ್ಸ್‌ಗಳಲ್ಲಿ ವಾಸವಾಗಿವೆ. ಕುದುರೆಲಾಳದಂತಿರುವ ಮೂಗಿನ ಎಲೆಗಳಿವೆ. ಮೂತಿ ಸಣ್ಣ, ಕಿವಿಉದ್ದ, ಬಾಲಚಿಕ್ಕದು, ಮೂಗಿನ ಒಳಭಾಗ ಉಬ್ಬಿಕೊಂಡಿದೆ. ಫೀಲೊಸ್ಟೋಮಟಾಯ್ಡಿಯದಲ್ಲಿ ಪ್ರಿಮ್ಯಾಕ್ಸಿಲ ಮೂಳೆಗಳು ಮ್ಯಾಕ್ಸಿಲ ಮೂಳೆಗಳೊಂದಿಗೆ ಸೇರಿಕೊಂಡಿವೆ. ಕಿವಿಗಳು ಬಹಳ ಉದ್ದ, ಮೂಗಿನ ಎಲೆಗಳಿವೆ, ಕೈಯ ಮೂರನೆಯ ಬೆರಳಿನಲ್ಲಿ ಮೂರು ಬೆರಳೆಲುಬುಗಳಿವೆ, ಎರಡನೇ ಬೆರಳಿನಲ್ಲಿ ಒಂದೇ ಬೆರಳಿದೆ. ಇದರಲ್ಲಿ 1. ಫೀಲೋಸ್ಟೋಮಟಿಡೆ 2. ಡೆಸ್‌ಮೋಡಾಂಟಿಡೆ ಎಂಬ ಎರಡು ಕುಟುಂಬಗಳಿವೆ. ಫೀಲೋಸ್ಟೋಮಟಿಡೆ ಬಾವಲಿಗಳಲ್ಲಿ ಬಲವಾದ ದವಡೆಹಲ್ಲುಗಳಿವೆ. ಇವು ಕೀಟಗಳನ್ನು, ಹಣ್ಣುಗಳನ್ನು ಜಜ್ಜಲು ಅನುಕೂಲವಾಗಿವೆ. ಕೆಳತುಟಿಯಿಂದ ಮೇಲ್ಭಾಗ ತಟ್ಟೆಯಂತಿರುವ ಚರ್ಮದ ಹೊರಚಾಚು ಇದೆ. ವೆಂಪೈರಸ್ ಬಾವಲಿ ಅಮೆರಿಕಾದಲ್ಲಿ ವಾಸವಾಗಿರುವ ದೊಡ್ಡಬಾವಲಿ. ಶರೀರದ ಉದ್ದ ಸುಮಾರು 15 ಸೆಂಮೀ. ರೆಕ್ಕೆಯ ಉದ್ದ 60 ಸೆಂಮೀ. ಇದು ಕೀಟಗಳನ್ನು, ಹಣ್ಣುಗಳನ್ನು ಭಕ್ಷಿಸುವುದರ ಜೊತೆಗೆ ಹಕ್ಕಿಗಳು ಮತ್ತು ಸಣ್ಣ ಸ್ತನಿಗಳನ್ನು ಸಹ ಭಕ್ಷಿಸುತ್ತದೆ. ಡೆಸ್‌ಮೋಡಾಂಟಿಡೆ ಬಾವಲಿಗಳು ರಕ್ತ ಹೀರುವ ಬಾವಲಿಗಳು. ಇವು ಉತ್ತರ ಅಮೆರಿಕಾದಿಂದ ದಕ್ಷಿಣ ಮೆಕ್ಸಿಕೊ ತನಕ ಹರಡಿವೆ. ಮೂಗಿನ ರಂಧ್ರಗಳ ಚರ್ಮ ಮಡಿಚಿಕೊಂಡಿದೆ. ಆದ್ದರಿಂದ ಮೂಗಿನ ಎಲೆಗಳು ಅಪೂರ್ಣ. ಹಲ್ಲುಗಳಲ್ಲಿ ಜಜ್ಜುವ ಮೊನೆಗಳ ಬದಲು ಕತ್ತರಿಸುವ ಮೊನೆಗಳಿವೆ. ಹೊಟ್ಟೆ ಉದ್ದವಾದ ನಾಳದಂತಿದೆ. ರಕ್ತವನ್ನು ಬಿಟ್ಟು ಬೇರೆ ಇನ್ಯಾವ ಆಹಾರವನ್ನು ತೆಗೆದುಕೊಳ್ಳುವುದಿಲ್ಲ.

ವೆಸ್‌ಪರ್ಟಿಲಿಯೋನಾಯ್ಡಿಯೆಗಳಲ್ಲಿ ಪ್ರಿಮ್ಯಾಕ್ಸಿಲಗಳು ಪೂರ್ಣವಾಗಿರುತ್ತವೆ. ಮೂಗಿನ ಎಲೆಗಳಿಲ್ಲ. ದವಡೆ ಹಲ್ಲುಗಳಲ್ಲಿ **'W'** ಆಕಾರದ ಮೊನೆಗಳಿವೆ. ಇವು ಸಾಮಾನ್ಯ ಬಾವಲಿಗಳು. ಕಿವಿ ಆಲಿಕೆಯಂತಿದೆ. ಕಾಲು ಉದ್ದವಾಗಿದೆ. ಮೂತಿ ಉದ್ದ ಮತ್ತು ಅಗಲ. ಹೆಬ್ಬೆರಳು ಮತ್ತು ಪಾದದ ಕೆಳಭಾಗದಲ್ಲಿ ಹೀರುವ ಕಪ್ಪಿ ಇದೆ. (ಕೆ.ಪಿ.ಆರ್.)

**ಕೈರೋನಾಮಿಡೆ:** ಕೀಟವರ್ಗದ ಡಿಪ್ಟರ ಗಣದಲ್ಲಿರುವ ಕುಟುಂಬ. ಟೆಂಡಿಪೆಡಿಡೆ ಎಂಬುದು ಇದರ ಪರ್ಯಾಯ ನಾಮ. ಈ ಕುಟುಂಬದ ಕೀಟಗಳು ಸೊಳ್ಳೆಗಳನ್ನು ಹೋಲುತ್ತವೆ. ಇವುಗಳನ್ನು ಮಶಕಗಳೆಂದು (ಮಿಡ್ಜಸ್) ಕರೆಯುತ್ತಾರೆ. ಈ ಕುಟುಂಬದಲ್ಲಿ 2,000 ಪ್ರಭೇದಗಳಿವೆ. ಪ್ರಪಂಚದಾದ್ಯಂತ ಇವುಗಳ ವ್ಯಾಪ್ತಿ ಹರಡಿದೆ. ಬಹುತೇಕ ಪ್ರಭೇದಗಳು ಜಲವಾಸಿಗಳು. ನದಿ, ಕೊಳ, ಸರೋವರ ಮತ್ತು ಜಲಾಶಯಗಳ ನೀರಿನಲ್ಲಿ ವಾಸಿಸುತ್ತವೆ. ಜಲವಾಸಿ ಮಶಕಗಳು ಸೂಕ್ಷ್ಮವಾದ ಕೊಳವೆಗಳನ್ನು ಅಥವಾ ಗೂಡುಗಳನ್ನು ರಚಿಸಿಕೊಂಡು, ಅದರೊಳಗೆ ವಾಸಿಸುತ್ತವೆ. ಕೆಲವು ಪ್ರಭೇದಗಳು ಸಮುದ್ರತೀರಗಳಲ್ಲಿ ವಾಸಿಸುತ್ತವೆ. ಕೆಲವು ಭೂವಾಸಿಗಳು. ಕೊಳೆಯುತ್ತಿರುವ ಸಸ್ಯರಾಶಿ, ಸಗಣಿ, ಮರದ ತೊಗಟೆಯಲ್ಲಿ ಜೀವಿಸುತ್ತವೆ.

ಇವು ಚಿಕ್ಕ ಗಾತ್ರದ ಕೀಟಗಳು. ಉದ್ದ 5 ಮಿಮೀ. ತಲೆ ಚಿಕ್ಕದು. ಕುಡಿಮೀಸೆಗಳು 5–14 ತುಂಡುಗಳನ್ನೊಳಗೊಂಡಿವೆ. ಗಂಡು ಕೀಟದ ಕುಡಿಮೀಸೆಗಳ ಮೇಲೆ ನವುರಾದ ಕೂದಲಿನಂಥ ರಚನೆಗಳಿವೆ. ಬಾಯಿತುದಿಯಲ್ಲಿ ಚಿಕ್ಕದಾದ ಸೊಂಡಿಲಿದೆ. 3 ಜೊತೆ ಕಾಲುಗಳು ಉದ್ದವಾಗಿ ಮತ್ತು ತೆಳುವಾಗಿವೆ. ಚೆನ್ನಾಗಿ ರೂಪುಗೊಂಡ ಅಥವ ಕ್ಷೀಣವಾಗಿರುವ 2 ರೆಕ್ಕೆಗಳಿವೆ. ಕೆಲವು ಪ್ರಭೇದಗಳಲ್ಲಿ ರೆಕ್ಕೆಗಳೇ ಇಲ್ಲ (ಉದಾ: ಜಪಾನಿನಲ್ಲಿರುವ ಕ್ಲೂನಿಯೊ ಪ್ಯಾಸಿಫಿಕಸ್ ಎಂಬ ಪ್ರಭೇದದ ಹೆಣ್ಣು ಮಶಕಗಳು). ಮಶಕಗಳ ಉದರ ಭಾಗ ತುಂಬಾ ಉದ್ದವಾಗಿದ್ದು, ತೆಳುವಾಗಿದೆ.

ಈ ಕೀಟಗಳು ಸಂಜೆಯ ವೇಳೆ ದೊಡ್ಡ ಗುಂಪುಗಳಲ್ಲಿ ಗುಂಯ್‌ಗುಡುತ್ತ ಹಾರಾಡುತ್ತವೆ. ಕೊಳೆಯುತ್ತಿರುವ ಸಾವಯವ ವಸ್ತುಗಳ ಮೇಲೆ, ಇಲ್ಲವೆ ಲೋಳೆಯಂಥ ವಸ್ತುವಿನಿಂದ ರಚಿತವಾದ ಉದ್ದನೆಯ ಪಟ್ಟಿಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಡಿಂಬಗಳು ಜಲವಾಸಿಗಳು. ನೀರಿನಲ್ಲಿ ಸೊಳ್ಳೆಗಳ ಡಿಂಬಗಳಂತೆಯೇ ಈಜಾಡುತ್ತ ಕೆಲವು ದಿನಗಳಾದ ಮೇಲೆ ಕೋಶಾವಸ್ಥೆಯ ಹಂತ ದಾಟಿ ಪ್ರೌಢಾವಸ್ಥೆ ಸೇರುತ್ತವೆ. ಕೆಲವು ಪ್ರಭೇದಗಳ ಡಿಂಬಗಳಲ್ಲಿ ಹೀಮೋಗ್ಲಾಬಿನ್ ವರ್ಣಕವಿದೆ. ಇದರಿಂದಾಗಿ ಕೆಂಪಾದ ಡಿಂಬಗಳಿಗೆ ರಕ್ತಹುಳುಗಳೆಂದು ಕರೆಯುವರು. ಇವು ಮೀನುಗಳ ಪ್ರಮುಖ ಆಹಾರ.

ಈ ಕುಟುಂಬದ ಕೈರೊನಾಮಸ್ ಕ್ರಿಸ್ಟೇಟಸ್, ಕೈ. ಜಿಲ್ಯಾಂಡಿಸ್, ಕೈ. ಫೆರುಜಿನಿಯವಿಟೇಟಸ್, ಹ್ಯಾಲಿರೈಟಸ್, ಕ್ಲೂನಿಯೊ ಮ್ಯೂರಿನಸ್, ತಲಾಸೊಮೈಯಿಯ

ಫ್ರಾಯೆನ್‌ಫೀಲ್ಡಿ, ಪಾಂಟೊಮೈಯಿಯ ನೇಟನ್ಸ್, ಪಾಲಿಪೋಡಿಯಮ್ ವ್ಯಾಂಡರ್‌ಪ್ಲಾಂಕೈ ಮುಖ್ಯ ಪ್ರಭೇದಗಳು. (ವಿ.ಕೆ.ವಿ.)

**ಕೈಲೊಪೋಡ:** ಸಂದಿಪದಿಗಳ ವಂಶದಲ್ಲಿ ಮಿರಿಯಾಪೋಡ ವರ್ಗದಲ್ಲಿ ಒಂದು ಗಣ. ಈ ಗಣದಲ್ಲಿ ಸೇರಿರುವ ಪ್ರಾಣಿಗಳನ್ನು ಶತಪದಿ (ಲಕ್ಷ್ಮೀಚೇಳು)ಗಳೆಂದು ಕರೆಯುತ್ತಾರೆ. ಉಷ್ಣವಲಯ ಹಾಗೂ ಸಮಶೀತೋಷ್ಣವಲಯಗಳಲ್ಲಿ ಹೆಚ್ಚಾಗಿ ವಾಸಿಸುತ್ತವೆ. ಹಗಲಿನಲ್ಲಿ ಸೂರ್ಯನ ಬೆಳಕಿನಿಂದ ರಕ್ಷಿಸಲ್ಪಟ್ಟ ತೇವವಾದ ಸ್ಥಳಗಳಲ್ಲಿ, ಅಂದರೆ ಕಲ್ಲುಗಳ ಸಂದುಗಳು, ತೊಗಟೆಗಳ ಕೆಳಭಾಗ, ಕಲ್ಲುಗಳ ಕೆಳಭಾಗ, ದಿಮ್ಮಿಗಳ ಕೆಳ ಭಾಗ, ಸಣ್ಣ ಪೊಟರೆಗಳು, ಚೀಲಗಳು, ಹೂ ದಾನಿಗಳ ಕೆಳಭಾಗ, ಮಣ್ಣಿನ ಮೇಲ್ಭಾಗ ಹಾಗೂ ಮನೆಗಳಲ್ಲಿ ಅದರಲ್ಲೂ ಬಚ್ಚಲು ಮನೆ ಮತ್ತು ನೆಲಮಾಳಿಗೆ ಇವುಗಳಲ್ಲಿ ವಾಸವಾಗಿದ್ದು ಸೂರ್ಯಾಸ್ತದ ನಂತರ ಹೊರಬರುತ್ತವೆ. ನಿಶಾಚರಿಗಳು. ಬಹಳ ಚುರುಕು ಮತ್ತು ವೇಗವಾಗಿ ಚಲಿಸುವ ಜೀವಿಗಳು. ಅತಿಸೂಕ್ಷ್ಮಗ್ರಾಹಿಗಳು. ಮಾಂಸಾಹಾರಿ ಹಾಗೂ ಹೊಟ್ಟೆಬಾಕ. ಹೆಚ್ಚಾಗಿ ಕೀಟಗಳು, ಜೇಡಗಳು, ಹುಳುಗಳು ಹಾಗೂ ಸಣ್ಣ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುತ್ತವೆ. ತಮ್ಮ ಬೇಟೆಯನ್ನು ವಿಷದ ಕೊಂಡಿಗಳಿಂದ ಕಚ್ಚಿ ಗಾಯಮಾಡಿ ವಿಷದ ಗ್ರಂಥಿಗಳಿಂದ ಉತ್ಪತ್ತಿಯಾಗುವ ವಿಷವನ್ನು ಗಾಯದೊಳಕ್ಕೆ ಹರಿಸಿ ಬೇಟೆಯನ್ನು ಕೊಲ್ಲುತ್ತವೆ ಅಥವಾ ನಿಶ್ಚೇತನಗೊಳಿಸುತ್ತವೆ.

ಸಣ್ಣ ಗಾತ್ರದ ಕೈಲೊಪೋಡಗಳು ಅಷ್ಟಾಗಿ ಮಾನವನಿಗೆ ಹಾನಿಕರವಲ್ಲ. ಆದರೆ ಕೆಲವು ಉಷ್ಣವಲಯದ ದೊಡ್ಡ ಗಾತ್ರದ ಪ್ರಭೇದಗಳು ಮಾನವನಿಗೆ ಅಪಾಯಕಾರಿ! ಇವು ಕಚ್ಚುವುದರಿಂದ ಬಹಳ ನೋವುಂಟಾಗುವುದಲ್ಲದೆ ಜ್ವರ, ತಲೆನೋವು, ತಲೆತಿರುಗುವಿಕೆ ಮುಂತಾದ ತೊಂದರೆಗಳು, ಕೆಲವು ಸಾರಿ ಮರಣವು ಸಹ ಉಂಟಾಗಬಹುದು. ಸ್ಕೋಲೋಪೆಂಡ್ರ ಜಾತಿಗೆ ಸೇರಿದ ಕೆಲವು ಪ್ರಭೇದಗಳು ಸುಮಾರು 5 ಮೀ ಇರುತ್ತವೆ! ಮನೆಯಲ್ಲಿರುವ ಸಾಮಾನ್ಯ ಶತಪಧಿ ಸ್ಕುಟಿಜೆರ ಜಾತಿಗೆ ಸೇರಿದೆ. ಇದಕ್ಕೆ 15 ಜೊತೆ ಉದ್ದನೆಯ ಕಾಲುಗಳಿವೆ. ಕೆಲವು ಉಪದ್ರವ ಕೀಟಗಳನ್ನು ನಾಶಪಡಿಸುವುದರಿಂದ ಮಾನವನಿಗೆ ಉಪಕಾರಿ.

ಕೈಲೊಪೋಡ ಜೀವಿಯ ಶರೀರ ಚಪ್ಪಟೆಯಾಗಿದ್ದು ಅನೇಕ ಖಂಡಗಳಿಂದ ಮಾಡಲ್ಪಟ್ಟಿದೆ. ಮೇಲ್ಭಾಗದಲ್ಲಿ ಕೈಟಿನ್‌ನಿಂದ ಮಾಡಲ್ಪಟ್ಟ ರಕ್ಷಾಕವಚವಿದೆ. ಪ್ರತಿ ಖಂಡದಲ್ಲಿಯೂ ಮೇಲಿನ ಟರ್ಗ, ಕೆಳಗಿನ ಸ್ಟರ್ನ ಫಲಕಗಳಿವೆ. ಇವೆರಡರ ನಡುವೆ ಪಕ್ಕಗಳಲ್ಲಿ ತೆಳುವಾದ ಪ್ಲೂರ ಪೊರೆಯಿರುತ್ತದೆ. ಶರೀರವನ್ನು ತಲೆ ಮತ್ತು ಮುಂಡಗಳೆಂದು ವಿಭಾಗಿಸಬಹುದು. ತಲೆಯು ಸೆಫಲೈಟ್ ಎಂಬ ಅಗಲವಾದ ಶೀರೋಫಲಕದಿಂದ ರಕ್ಷಿಸಲ್ಪಟ್ಟಿದೆ. ಮುಂಡದಲ್ಲಿ ಎದೆ, ಉದರಗಳೆಂಬ ಭಾಗಗಳಿರುವುದಿಲ್ಲ. ತಲೆಯ ಹಿಂದೆ ಅನೇಕ ಖಂಡಗಳಿರುತ್ತವೆ. ತಲೆಯಲ್ಲಿ ನಾಲ್ಕು ಜೊತೆ ಉಪಾಂಗಗಳಿವೆ. ಇವುಗಳಲ್ಲಿ ಒಂದು ಜೊತೆ ನೀಳವಾಗಿರುವ ಸ್ಪರ್ಶಾಂಗಗಳು, ನಂತರ ಕುಡಿಗಳಿಲ್ಲದ ಒಂದು ಜೊತೆ ದವಡೆಗಳು ಹಾಗು ಎರಡು ಜೊತೆ ಮ್ಯಾಕ್ಸಿಲಗಳು ಬಾಯಿಯ ಸುತ್ತಲೂ ಜೋಡಿಸಲ್ಪಟ್ಟಿವೆ. ಸ್ಪರ್ಶಾಂಗಗಳ ಹಿಂಬದಿಯಲ್ಲಿ, ಶೀರೋಫಲಕದ ಎರಡು ಕಡೆಗಳಲ್ಲೂ ಸರಳ ರಚನೆಯ ಕಣ್ಣುಗಳಿವೆ. ಕೆಲವಲ್ಲಿ ಸಂಯುಕ್ತ ರಚನೆಯ ಕಣ್ಣುಗಳಿವೆ.

ಮುಂಡದ ಖಂಡಗಳೆಲ್ಲವೂ ಒಂದನ್ನೊಂದು ಹೋಲುತ್ತವೆ. ಮುಂಡದ ಹಿಂಭಾಗದಲ್ಲಿರುವ ಎರಡು ಖಂಡಗಳ ಹೊರತು ಪ್ರತಿಯೊಂದು ಖಂಡದಲ್ಲೂ ಒಂದು ಜೊತೆ ಕಾಲುಗಳಿರುತ್ತವೆ. ಈ ಕಾಲುಗಳು ಶರೀರದ ಕೆಳಭಾಗದ ಇಕ್ಕೆಲಗಳಲ್ಲಿವೆ. ಪ್ರತಿ ಕಾಲಿನಲ್ಲೂ ಏಳು ಭಾಗಗಳಿದ್ದು ಕೊನೆಯಲ್ಲಿ ಚೂಪಾದ ಉಗುರುಗಳಿವೆ. ಶರೀರದ ಕೊನೆಯಲ್ಲಿರುವ ಕಾಲುಗಳು ಇತರ ಕಾಲುಗಳಿಗಿಂತ ಬಹಳ ಉದ್ದವಾಗಿರುತ್ತವೆ. ದೇಹದ ಮುಂಭಾಗದ ತುದಿಯಲ್ಲಿ ಬಾಯಿ, ಹಿಂದಿನ ತುದಿಯಲ್ಲಿ ಆಸನ ದ್ವಾರ, ಪಕ್ಕಗಳಲ್ಲಿರುವ ಮೃದುವಾದ ಪೊರೆಯಲ್ಲಿ ಶ್ವಾಸಾಂಗಗಳ ಹೊರದ್ವಾರ ಪ್ರತಿ ಖಂಡದಲ್ಲಿಯೂ ಒಂದೊಂದು ಜೊತೆ ಇರುತ್ತವೆ. ಮುಂಡದ ಮೊದಲಿನ ಖಂಡದಲ್ಲಿ ಒಂದು ಜೊತೆ ವಿಷದ ಕೊಂಡಿಗಳಿವೆ. ಈ ಕೊಂಡಿಗಳು ಬಹಳ ಬಲವಾಗಿಯೂ ಹಾಗೂ ಚೂಪಾಗಿಯೂ ಇದ್ದು ಪ್ರಾಣಿ ಕಚ್ಚಿದ ಕೂಡಲೇ ಗಾಯವನ್ನುಂಟು ಮಾಡುತ್ತವೆ. ಕೊಂಡಿಗಳಲ್ಲಿ ಉಪ ಗ್ರಂಥಿಗಳ ನಾಳದ ದ್ವಾರವಿರುತ್ತವೆ. ಆಸನದ್ವಾರವಿರುವ ಖಂಡವು ಇತರ ಖಂಡಗಳಿಗಿಂತ ಅತಿ ಚಿಕ್ಕದಾಗಿದ್ದು ಯಾವ ಉಪಾಂಗಗಳನ್ನೂ ಹೊಂದಿರುವುದಿಲ್ಲ. ಜನನೇಂದ್ರಿಯದ ಖಂಡವು ಮಧ್ಯದಲ್ಲಿ ಜನನೇಂದ್ರಿಯ ದ್ವಾರವನ್ನು ಹೊಂದಿರುವುದಲ್ಲದೆ ಒಂದು ಜೊತೆ ಜನನೇಂದ್ರಿಯ ಉಪಾಂಗಗಳನ್ನು ಹೊಂದಿರುತ್ತದೆ. ಈ ಉಪಾಂಗಗಳು ಹೆಣ್ಣು ಪ್ರಾಣಿಯಲ್ಲಿ ಬಹಳ ಚೆನ್ನಾಗಿ ಬೆಳೆದಿದ್ದು ಮೊಟ್ಟೆಯಿಡಲು ಸಹಕರಿಸುತ್ತವೆ. ಜರಿಯಲ್ಲಿ ಈ ಉಪಾಂಗಗಳು ಕಂಡುಬರುವುದಿಲ್ಲ. ಕಾಲಿನ ಸಂಖ್ಯೆ ಹೆಚ್ಚಾಗಿರುವುದರಿಂದ ಈ ಪ್ರಾಣಿಗಳನ್ನು ಬಹುಪಾದಿ ವರ್ಗದಲ್ಲಿ ಸೇರಿಸಿದ್ದಾರೆ.

ಪ್ರಾಣಿಯ ಅನ್ನನಾಳವು ಇತರ ಸಂಧಿಪದಿಗಳಂತೆ ಮುನ್ನಾಳ, ಮಧ್ಯನಾಳ ಹಾಗೂ ಹಿನ್ನಾಳವೆಂದು ಮೂರುಭಾಗವಾಗಿ ವಿಂಗಡಿಸಲ್ಪಟ್ಟಿದೆ. ಮುನ್ನಾಳ ಮತ್ತು ಹಿನ್ನಾಳಗಳು ಕೈಟಿನ್‌ನ ಒಳ ಆವರಣವನ್ನು ಹೊಂದಿವೆ. ಎರಡರಿಂದ ಐದು ಜೋಡಿ ಜೊಲ್ಲು ಗ್ರಂಥಿಗಳಿವೆ.

ಹೃದಯವು ಶರೀರದ ಮಧ್ಯ ಭಾಗದಲ್ಲಿ ಹೃದಯಾವರಣದಲ್ಲಿ ಉದ್ದಕ್ಕೂ ಚಾಚಿಕೊಂಡಿದೆ. ಇದು ಸಂಕುಚಿಸುವ ಶಕ್ತಿಯುಳ್ಳದ್ದು. ಪ್ರತಿ ಖಂಡದಲ್ಲೂ ಎರಡು ಆಸ್ಟಿಯ ದ್ವಾರಗಳಿವೆ. ಹೃದಯದ ಮುಂಭಾಗದಿಂದ ಶಿರೋಭಾಗಕ್ಕೆ ಒಂದು ಧಮನಿ ನಾಳವು ರಕ್ತವನ್ನು ಹರಿಸುತ್ತದೆ. ಪ್ರತಿಯೊಂದು ಆಸ್ಟಿಯದಿಂದ ಒಂದೊಂದು ಧಮನಿ ನಾಳಗಳಿದ್ದು, ಈ ರಕ್ತನಾಳಗಳು ಕವಲೊಡೆದು ಸಂಯೋಜಿತ ಅಂಗಾಂಶಗಳಲ್ಲಿರುವ ಅವಕಾಶಗಳಲ್ಲಿ ಕೊನೆಗೊಂಡಿವೆ. ರಕ್ತವು ಬಣ್ಣ ರಹಿತವಾಗಿದೆ. ಆದರೆ ಲೀಥೋಬಿಯಸ್‌ನಲ್ಲಿ ಮಾತ್ರ ಸ್ವಲ್ಪ ನೇರಳೆ ಬಣ್ಣವಿದೆ.

ಉಸಿರಾಡುವುದಕ್ಕೆ ಶ್ವಾಸನಾಳಗಳಿವೆ. ಈ ನಾಳಗಳು ಕವಲೊಡೆದು ಒಂದಕ್ಕೊಂದು ಬಲೆಯಂತೆ ಹೆಣೆದುಕೊಂಡು ಶರೀರವನ್ನೆಲ್ಲಾ ವ್ಯಾಪಿಸಿಕೊಂಡಿವೆ. ಇದರಿಂದ ಗಾಳಿಯಲ್ಲಿರುವ ಆಮ್ಲಜನಕವು ಶರೀರದಲ್ಲೆಲ್ಲಾ ಪ್ರವಹಿಸುತ್ತದೆ. ಶ್ವಾಸನಾಳಗಳು ಶರೀರದ ಹೊರಭಾಗದಲ್ಲಿರುವ ಶ್ವಾಸರಂಧ್ರಗಳ ಮುಖಾಂತರ ಗಾಳಿಯನ್ನು ಒಳಕ್ಕೆ ತೆಗೆದುಕೊಳ್ಳುತ್ತವೆ ಹಾಗೂ ಹೊರಕ್ಕೆ ಕಳುಹಿಸುತ್ತವೆ.

ಶರೀರದ ಮಧ್ಯದಲ್ಲಿ ನರ ಮಂಡಲವಿದೆ. ತಲೆಯಲ್ಲಿರುವ ಇಬ್ಭಾಗದ ಶೀರೋನರಗ್ರಂಥಿಯು ಸ್ಪರ್ಶಾಂಗಗಳು ಹಾಗೂ ಕಣ್ಣುಗಳಿಗೆ ನರಗಳನ್ನು ಒದಗಿಸುತ್ತದೆ. ಅನ್ನನಾಳದ ಕೆಳಗಿರುವ ನರಗ್ರಂಥಿಯು ದವಡೆಗಳು ಹಾಗೂ ವಿಷದ ಕೊಂಡಿಗಳಿಗೆ ನರಗಳನ್ನು ಒದಗಿಸುತ್ತದೆ. ಮುಂಡದಲ್ಲಿರುವ ಸರಪಣಿ ಆಕಾರದ ನರಗ್ರಂಥಿಗಳು ಒಂದೊಂದು ಖಂಡಗಳಲ್ಲಿರುವ ಅಂಗಗಳಿಗೆ ನರಗಳನ್ನು ಒದಗಿಸುತ್ತವೆ.

ಕೈಲೊಪೋಡಗಳು ಏಕಲಿಂಗ ಪ್ರಾಣಿಗಳು. ಜನನೇಂದ್ರಿಯಗಳು ದೇಹದ ಹಿಂಭಾಗದ ಮಧ್ಯದಲ್ಲಿ, ಅನ್ನಕೋಶದ ಮೇಲ್ಭಾಗದಲ್ಲಿರುತ್ತವೆ. ಹೆಣ್ಣಿನಲ್ಲಿ ಅಂಡಾಶಯ ಒಂದೇ. ಅಂಡನಾಳವು ಎರಡು ಭಾಗವಾಗಿ ಕರುಳಿನ ಕೆಳಭಾಗವನ್ನು ಸುತ್ತಿಕೊಂಡು ಒಂದೇ ಜನನೇಂದ್ರಿಯ ದ್ವಾರದ ಮೂಲಕ ಹೊರಸೂಸುವುದು. ಗಂಡಿನಲ್ಲಿ ವೃಷಣ ಒಂದೇ. ಇದು ಉದ್ದಕ್ಕೆ ನಾಳದಂತಿರಬಹುದು ಅಥವಾ ಅನೇಕ ಸಣ್ಣ ಸಣ್ಣ ಕದಿರಿನಾಕಾರದಂತಿರಬಹುದು. ವೃಷಣದ ನಾಳವೂ ಒಂದೇ. ಇದು ಒಂದೇ ಜನನೇಂದ್ರಿಯ ದ್ವಾರದ ಮೂಲಕ ಹೊರಸೂಸುವುದು. ಜನನೇಂದ್ರಿಯ ದ್ವಾರವು ಪ್ರಾಣಿಯ ಹಿಂಭಾಗದಲ್ಲಿರುವುದರಿಂದ ಕೈಲೊಪೋಡ್‌ಗಳನ್ನು ಒಫಿಸ್ಥೋಗೋನಿಯೇಟ ಎಂದು ಕರೆಯುತ್ತಾರೆ.

ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಹೆಣ್ಣು ಮೊಟ್ಟೆಗಳನ್ನಿಡುತ್ತದೆ. ಗಂಡು ಪ್ರಾಣಿ ವೀರ್ಯಾಣುಗಳ ಸಮೂಹವನ್ನು ಉತ್ಪತ್ತಿ ಮಾಡಿ ಹೆಣ್ಣು ಪ್ರಾಣಿಗಳು ಹೆಚ್ಚಾಗಿರುವ ಕಡೆ ಇಡುತ್ತದೆ. ಈ ಸಮೂಹಗಳನ್ನು ಹೆಣ್ಣುಗಳು ಉಪಯೋಗಿಸಿಕೊಂಡು ಗರ್ಭದಾರಣೆಯಾಗಿ ಮೊಟ್ಟೆಗಳನ್ನಿಡುತ್ತವೆ. ಒಂದು ಹೆಣ್ಣು ಸುಮಾರು 15 ರಿಂದ 33 ಮೊಟ್ಟೆಗಳನ್ನಿಡುತ್ತದೆ. ಪ್ರತಿ ಮೊಟ್ಟೆಯು 3 ಮಿಮೀ ಉದ್ದವಿರುತ್ತದೆ. ತಾಯಿಯು ಮಣ್ಣಿನಲ್ಲಿ 2 ರಿಂದ 8 ಸೆಂಮೀ ಆಳದ ಗುಂಡಿಯನ್ನು ಮಾಡಿ, ಅದರಲ್ಲಿ ಮೊಟ್ಟೆಗಳನ್ನಿಟ್ಟು, ಅವುಗಳ ಸುತ್ತ ಸುತ್ತಿಕೊಂಡು ಮೊಟ್ಟೆಗಳನ್ನು ರಕ್ಷಿಸುತ್ತದೆ. ತನ್ನ ಶರೀರದಿಂದ ಒಂದು ರೀತಿಯ ದ್ರವವನ್ನು ಉತ್ಪತ್ತಿಮಾಡಿ ಮೊಟ್ಟೆಗಳಿಗೆ ತೇವಾಂಶವನ್ನು ಒದಗಿಸುತ್ತದೆ. ಕೆಲವು ಕೈಲೊಪೋಡಗಳು ಮೊಟ್ಟೆಗಳನ್ನಿಡದೆ ಮರಿಗಳಿಗೆ ಜನ್ಮಕೊಡುತ್ತವೆ. ಮರಿಗಳೆಲ್ಲವೂ ಪೂರ್ಣವಾಗಿ ಬೆಳೆದಿರುವುದರಿಂದ ಇವುಗಳಲ್ಲಿ ರೂಪಪರಿವರ್ತನೆ ಕಂಡು ಬರುವುದಿಲ್ಲ.

ಲಿಥೊಬಿಯಸ್, ಸ್ಕೂಟಿಜೆರ, ಸ್ಕೋಲೋಪೆಂಡ್ರ (ಜರಿ) ಕೆಲವು ಉದಾಹರಣೆಗಳು, (ಕೆ.ಪಿ.ಆರ್.)

ಜೀವವಿಜ್ಞಾನಿ ವಾನ್ಡೆಲ್‌ರ ವರ್ಗೀಕರಣದ ಪ್ರಕಾರ ಕೈಲೊಪೊಡ ವರ್ಗದಲ್ಲಿ 4 ಗಣಗಳಿವೆ.

1. ಸ್ಕುಟಿಜೆರೊಮಾರ್ಫ: ಈ ಗಣದ ಜರಿಗಳಲ್ಲಿ ಬಹಳ ಉದ್ದವಾದ 15 ಜೊತೆ ಕಾಲುಗಳಿವೆ. ಕಣ್ಣುಗಳು ಸಂಕೀರ್ಣ ರೀತಿಯವು. ಕುಡಿಮೀಸೆಗಳು ಬಹಳ ಉದ್ದ ಇವೆ. ಸಾಮಾನ್ಯವಾಗಿ ಉದರದ ಎಲ್ಲ ಖಂಡಗಳ ಬೆನ್ನ ಮಧ್ಯಭಾಗದಲ್ಲಿ ಒಂದೊಂದು ಸ್ಪೈರಕಲ್‌ಗಳಿವೆ. ತಲೆಯ ಮೇಲ್ಭಾಗ ಕಮಾನಿನ ಆಕಾರದ್ದಾಗಿದೆ. ಉದಾ: ಸ್ಕುಟಿಜೆರ.

2. ಲಿಥೊಬಿಯೊಮಾರ್ಫ: ಇವುಗಳಲ್ಲಿ ಮೊಟಕಾದ 15 ಜೊತೆ ಕಾಲುಗಳಿವೆ. ತಲೆ ಮತ್ತು ಉದರದ ಮೇಲ್ಭಾಗ ಚಪ್ಪಟೆಯಾಗಿದೆ. ಸ್ಪೈರಕಲ್‌ಗಳು ಪಾರ್ಶ್ವಗಳಲ್ಲಿವೆ. ಉದಾ: ಲಿಥೊಬಿಯಸ್.

3. ಸ್ಕೊಲೊಪೆಂಡ್ರೊಮಾರ್ಫ : ಈ ಗಣದಲ್ಲಿ ಬಲವಾದ ದೇಹವುಳ್ಳ ಜರಿಗಳಿವೆ. 21–23 ಜೊತೆ ಕಾಲುಗಳನ್ನು ಪಡೆದಿವೆ. ಉದರದ ಅಗ್ರಭಾಗದ ಪಾರ್ಶ್ವಗಳಲ್ಲಿ ಮಾತ್ರ ಸ್ವೈರಕಲುಗಳಿವೆ. ಉದರದ ಮೇಲ್ಭಾಗದಲ್ಲಿರುವ ದೊಡ್ಡ ಫಲಕಗಳು ಮತ್ತು ಸಣ್ಣ ಫಲಕಗಳು ಒಂದಾದ ಮೇಲೆ ಮತ್ತೊಂದು ಕ್ರಮವಾಗಿ ಅಳವಡಿಕೆಯಾಗಿವೆ. ಉದಾ: ಸ್ಕೊಲೊಪೆಂಡ್ರ.

4. ಜಿಯೊಫೈಲೊಮಾರ್ಫ : ದೇಹವು ನೀಳವಾಗಿ ಹುಳುವಿನ ಹಾಗಿದೆ. ಕಾಲುಗಳು 35 ರಿಂದ 181ರ ವರೆಗೆ ಇರುತ್ತವೆ. ಕಾಲುಗಳು ಸಣ್ಣವು. ಕಣ್ಣುಗಳಿಲ್ಲ. ಸ್ವೈರಕಲುಗಳು ಪಾರ್ಶ್ವಗಳಲ್ಲಿವೆ. ಉದಾ: ಜಿಯೊಫೈಲಸ್. (ಎನ್.ವಿ.ಎ.)

**ಕೊಂಟಿ ಮೀನು:** ಇದು ಸಿಹಿನೀರು ಮೀನು. ಇದರ ವೈಜ್ಞಾನಿಕ ನಾಮ ಆಸ್ಟಿಯೊಕೈಲಸ್. ಪಶ್ಚಿಮ ಏಷ್ಯ, ಭಾರತದ ಸಿಂಧ್ ಪ್ರದೇಶ, ದಕ್ಷಿಣ ಭಾರತದಲ್ಲಿ ಪಶ್ಚಿಮ ಘಟ್ಟಗಳು, ದಕ್ಷಿಣ ಕನ್ನಡ, ಹಾಗೂ ನೀಲಗಿರಿ ಬೆಟ್ಟಗಳ ಝರಿಗಳಲ್ಲಿ ಇದು ವಾಸಿಸುತ್ತದೆ. ಕರ್ನಾಟಕದಲ್ಲಿ ಆಸ್ಟಿಯೊಕೈಲಸ್ ನ್ಯಾಶಿಯೈ, ಆ. ಥಾಮಸಿಯೈ ಮತ್ತು ಆ. ಬ್ರೆವಿಡಾರ್ಸಾಲಿಸ್ ಎಂಬ ಮೂರು ಪ್ರಭೇದಗಳಿವೆ. ಇವಕ್ಕೆ ಬಗರಿಕೊಂಟಿ ಮತ್ತು ಕಿಲ್ಲಿಕೊಂಟಿ ಮೀನುಗಳೆನ್ನುತ್ತಾರೆ. ಇವುಗಳ ಉದ್ದ ೧೫–೨೦ ಸೆಂಮೀ. ಕೋಳವೆಯಂಥ ದೇಹ, ಮೂತಿಯ ಕೆಳಭಾಗದಲ್ಲಿರುವ ಬಾಯಿ, ಕೆಳದವಡೆಯ ಒಳಭಾಗದಲ್ಲಿರುವ ಕೊಂಬಿನ ಪದರ, ಕೆಳದುಟಿ ಇಲ್ಲದಿರುವುದು, ನೇಗಿಲಿನ ಆಕಾರದ ಗಂಟಲಿನ (ಫ್ಯಾರಿಂಜಿಯಲ್) ಹಲ್ಲುಗಳು, 4 ಅಥವಾ 2 ಉದ್ದನೆಯ ಸ್ಪರ್ಶಾಂಗಗಳು, ಯಾವುದೇ ನಿಯಮಬದ್ಧ ಜೋಡಣೆಯನ್ನು ತೋರದ ಸಣ್ಣ ಹುರುಪೆಗಳು ಈ ಕೊಂಟಿಮೀನಿನ ಕೆಲವು ವಿಶೇಷ ಲಕ್ಷಣಗಳು. ಕೊಂಟಿ ಮೀನಿನ ಸಂತಾನಾಭಿವೃದ್ಧಿಯ ಕಾಲ ಜೂನ್–ಜುಲೈ ತಿಂಗಳು.

***

**ಕೊಂಡನ್ ಮೀನು:** ಸಾರ್ಡಿನ್ ಜಾತಿಗೆ ಸೇರಿದ ಒಂದು ಬಗೆಯ ಎಲುಬು ಮೀನು. ಇದರ ವೈಜ್ಞಾನಿಕ ಹೆಸರು ದಸುಮಿಯೆರ ಹ್ಯಾಸೆಲ್ಟಿಯೈ. ಭಾರತದ ಕೋರಮಂಡಲ ತೀರದಿಂದ ಮಲಯ ದ್ವೀಪ ಸಮುದಾಯದವರೆಗೂ ಮತ್ತು ಆಸ್ಟ್ರೇಲಿಯ, ಜಪಾನ್, ಈಸ್ಟ್‌ಇಂಡೀಸ್ ಹಾಗೂ ಚೀನಾದ ಸಮುದ್ರ ತೀರಗಳಲ್ಲಿ ವಾಸಿಸುತ್ತದೆ. ಇದರ ಉದ್ದ ಸು. 20 ಸೆಂಮೀ. ತಲೆಯ ಉದ್ದವೇ 10 ಸೆಂಮೀ. ದೇಹ ಚಪ್ಪಟೆಯಾಗಿದೆ. ತಲೆಯ ಮೇಲ್ಭಾಗವನ್ನು ಬಿಟ್ಟು ದೇಹದ ಮೇಲೆಲ್ಲ ಅಸ್ಥಿರವಾದ ಹುರುಪೆಗಳಿವೆ. ಬಾಯಿ ಅಗಲ. ಮೇಲಿನ ಹಾಗೂ ಕೆಳಗಿನ ದವಡೆಗಳು ಒಂದೇ ಸಮನಾಗಿ ಚಾಚಿರುತ್ತದೆ, ಅಥವಾ ಕೆಳದವಡೆ ಸ್ವಲ್ಪ ಮುಂದಕ್ಕೆ ಚಾಚಿ ಕೊಂಡಿರುತ್ತದೆ. ಹಲ್ಲುಗಳು ದವಡೆಗಳಲ್ಲಿ ಮಾತ್ರವಲ್ಲದೆ ಪೈಲಟೈನ್ ಮತ್ತು ಟೆರಿಗಾಯಿಡ್ ಮೂಳೆಗಳಲ್ಲಿ ಇರುತ್ತವೆ. ಬೆನ್ನಿನ ಮೇಲಿರುವ ಒಂದು ಈಜುರೆಕ್ಕೆ ಕಣ್ಣಿನ ಕೊನೆಯ ಭಾಗದಿಂದ ಬಾಲದವರೆಗೂ ವಿಸ್ತರಿಸಿದೆ. ಉದರದ ಕೆಳಭಾಗ ಹಾಗೂ ಎದೆಯ ಭಾಗಗಳಲ್ಲಿ ಈಜು ರೆಕ್ಕೆಗಳಿವೆ. ಇದು ಕಿವಿರುಗಳ ಸಹಾಯದಿಂದ ಉಸಿರಾಡುತ್ತದೆ. ಕಿವಿರುಗಳ ಜೊತೆಗೆ ಸರಳವಾದ, ದೊಡ್ಡದಾದ ಗಾಳಿಯ ಚೀಲವಿದೆ. ಈ ಚೀಲ ಸಾಮಾನ್ಯವಾಗಿ ಮೂತ್ರಪಿಂಡಗಳ ತಳ ಭಾಗಕ್ಕೆ ಅಂಟಿಕೊಂಡು ಅನ್ನಕೋಶದ ಮೇಲ್ಭಾಗದಲ್ಲಿ ಬೆನ್ನೆಲುಬಿಗೆ ತಾಗಿಕೊಂಡಿದೆ. ಈ ಚೀಲದಲ್ಲಿ ಆಕ್ಸಿಜನ್, ನೈಟ್ರೋಜನ್ ಮತ್ತು ಸ್ವಲ್ಪ ಕಾರ್ಬಾನಿಕ್ ಆಮ್ಲ ಇವೆ. ಚೀಲದ ಮುಂಭಾಗ, ತಲೆಯ ಹಿಂಭಾಗದ ಬೇಸಿಆಕ್ಸಿಪಿಟಲ್ ಮೂಳೆಯಲ್ಲಿರುವ ನಾಳವನ್ನು ಪ್ರವೇಶಿಸಿ ಎರಡು ಕವಲುಗಳಾಗಿ ಒಡೆದು ಅನಂತರ ಮೂಳೆಯ ಒಳಗಡೆ ಉಬ್ಬಿಕೊಂಡು ಮತ್ತೆ ಎರಡಾಗಿ ಒಡೆದು, ಉದರದ ತುದಿಯಲ್ಲಿ ಉಬ್ಬಿದ ಚೀಲಗಳಾಗಿ ರೂಪುಗೊಂಡಿದೆ. ಈ ಚೀಲಗಳಿಗೂ, ಒಳಕಿವಿಯಲ್ಲಿರುವ ಯುಟ್ರಿಕಲ್ ಎಂಬ ಅಂಗಕ್ಕೂ ಒಂದು ನಾಳದ ಮೂಲಕ ಸಂಪರ್ಕವಿದೆ. ದೇಹದ ಎರಡು ಕಡೆಯ ಯುಟ್ರಿಕಲ್‌ಗಳು ಒಂದು ಅಡ್ಡನಾಳದಿಂದ ಪರಸ್ಪರ ಸೇರಿಕೊಂಡಿವೆ. ಇವು ಶಬ್ದವನ್ನು ಗ್ರಹಿಸಲು, ಅದನ್ನು ಒಳಕಿವಿಗೆ ಕಳುಹಿಸಲು ಸಹಾಯ ಮಾಡುತ್ತವೆ. ಸಾಧಾರಣವಾಗಿ ಎಲ್ಲ ಮೀನುಗಳಿಗಿರುವ ಪಾರ್ಶ್ವರೇಖಾ ಜ್ಞಾನೇಂದ್ರಿಯಗಳು ಈ ಮೀನಿನಲ್ಲಿ ಇಲ್ಲ.

ಕೊಂಡನ್ ಮೀನು ವರ್ಣರಂಜಿತವಾಗಿದೆ. ದೇಹದ ಬಣ್ಣ ನೀಲಿ ಮಿಶ್ರಿತ ಹಸಿರು. ಉದರಭಾಗ ಬಿಳಿ. ಕಿವಿರುಗಳ ಮುಚ್ಚಳದ ಮೇಲಿನ ಅಂಚು ಮತ್ತು ಹಿಂಭಾಗ ತಿಳಿನೀಲಿ. ಬಾಲ ನೀಲಿಹಸಿರು ಮಿಶ್ರಿತ ಬಂಗಾರದ ಬಣ್ಣ. ಕಣ್ಣು, ಬೆನ್ನಿನ ಈಜುರೆಕ್ಕೆ ಹಳದಿಮಿಶ್ರಿತ ಹಸಿರು. ಉಳಿದ ಈಜು ರೆಕ್ಕೆಗಳು ಬಿಳಿ ಬಣ್ಣದಿಂದ ಕೂಡಿದೆ. ಇದರಿಂದಾಗಿ ಕೊಂಡನ್ ಮೀನು ಸುಂದರವಾಗಿ ಕಾಣುವುದರಿಂದ ಕಾಮನ ಬಿಲ್ಲಿನ ಬೈಗೆ ಮೀನು ಎಂಬ ಹೆಸರು ಇದೆ. ಇದರ ಆಹಾರ ಸಮುದ್ರದಲ್ಲಿ ತೇಲುವ ಪ್ರಾಣಿಗಳು ಹಾಗೂ ಸಸ್ಯಗಳು. ವರ್ಷದ ಕೆಲವು ತಿಂಗಳಲ್ಲಿ ಮಾತ್ರ ಈ ಮೀನು ಹಿಂಡುಹಿಂಡಾಗಿ ಕಾಣಿಸಿಕೊಳ್ಳುತ್ತದೆ. ಇದು ಉತ್ತಮ ಆಹಾರ ಮೀನು. (ಕೆ.ಪಿ.ಆರ್.)

**ಕೊಂಬು:** ಅಂಗ್ಯುಲೇಟ ಗುಂಪಿಗೆ ಸೇರಿದ ಅನೇಕ ಸ್ತನಿಗಳ ತಲೆಯ ಮೇಲೆ ಬೆಳೆಯುವ ಗಡುಸಾದ ರಚನೆ (ಹಾರ್ನ್). ಕೆರಾಟಿನ್ ಎಂಬ ರಾಸಾಯನಿಕ ವಸ್ತುವಿನಿಂದಾಗಿದೆ. ಸಾಮಾನ್ಯವಾಗಿ ಜೋಡಿಗಳಲ್ಲೇ ರೂಪುಗೊಂಡಿರುವ ಇದು ರೂಪರಚನೆಯಲ್ಲಿಯೂ ಬೆಳವಣಿಗೆಯ ಕ್ರಮದಲ್ಲೂ ವೈವಿಧ್ಯವನ್ನು ಪ್ರದರ್ಶಿಸುತ್ತದೆ. ಕಿವಿಗಳ ನಡುವೆ ನೆತ್ತಿಯ ಎರಡು ಪಕ್ಕಗಳಲ್ಲಿ ಸಣ್ಣ ಗುಬುಟುಗಳಂತೆ ಮೂಡಿಬರುವ ಜಿರಾಫೆಯ ಕೊಂಬುಗಳು ಸರಳ ಮಾದರಿಯವು. ಬೆಳವಣಿಗೆಯ ಪ್ರಾರಂಭದಲ್ಲಿ ಮೃದ್ವಸ್ಥಿಯಿಂದ ಕೂಡಿದ ಇವು ಪ್ರಾಣಿ ಬೆಳೆದಂತೆಲ್ಲ ನಿಧಾನವಾಗಿ ಮೂಳೆಯ ಕೇಂದ್ರಭಾಗವನ್ನೂ ಚರ್ಮ ಹಾಗೂ ಕೂದಲಿನ ಹೊರಭಾಗವನ್ನೂ ಒಳಗೊಳ್ಳುತ್ತವೆ. ಜಿರಾಫೆಯ ಜೀವಮಾನವಿಡೀ ಕೊಂಬುಗಳು ಬೆಳೆಯುತ್ತವಾದರೂ ಬೆಳವಣಿಗೆಯ ಗತಿ ಬಹಳ ನಿಧಾನ. ಗಂಡು ಮತ್ತು ಹೆಣ್ಣು ಜಿರಾಫೆಗಳೆರಡರಲ್ಲೂ ಕೊಂಬುಂಟು. ಅಲ್ಲದೆ ಜಿರಾಫೆಯಲ್ಲಿ ಕೊಂಬುಗಳ ಮುಂಭಾಗದಲ್ಲಿ ಹೆಚ್ಚು ಕಡಿಮೆ ಕಣ್ಣುಗಳ ನಡುವೆ ನೆತ್ತಿಯ ಮೇಲೆ ಮೂರನೆಯ ಕೊಂಬೂ ಇರುತ್ತದೆ. ಹಸು, ಎಮ್ಮೆ ಮುಂತಾದ ಪ್ರಾಣಿಗಳಲ್ಲಿ ಹಣೆಯ ಮೂಳೆಯ ಮೇಲ್ಭಾಗದಲ್ಲಿ ಆಚೀಚೆ ಒಂದೊಂದು ಕೊಂಬು ಹೊರಡುತ್ತದೆ. ನೇರವಾಗಿ ಇಲ್ಲವೆ ಕೊಂಚ ಬಾಗಿಕೊಂಡು ಕವಲೊಡೆಯದೆ ಬೆಳೆಯುವ ಇದು ಟೊಳ್ಳಾಗಿದೆ. ಈ ಪ್ರಾಣಿಗಳಲ್ಲಿ ಗಂಡು ಹಾಗೂ ಹೆಣ್ಣುಗಳೆರಡರಲ್ಲೂ ಕೊಂಬು ಇದೆ. ಆಡು, ಕುರಿ ಮುಂತಾದ ಪ್ರಾಣಿಗಳಲ್ಲಿ ಕೊಂಬು ಸುರುಳಿಯಂತೆ ಸುತ್ತಿಕೊಂಡಿದೆ. ಜಿಂಕೆಗಳಲ್ಲಿ ಸಾಮಾನ್ಯವಾಗಿ ಗಂಡಿನಲ್ಲಿ ಮಾತ್ರ ಕೊಂಬಿರುತ್ತದೆ. ಈ ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಕೊಂಬು ಕವಲೊಡೆದಿದ್ದು ಒಳಗೆಲ್ಲ ಗಟ್ಟಿಯಾಗಿರುತ್ತದೆ. ಕೊಂಬು ಎಳೆಯದಿದ್ದಾಗ ಅದರ ಮೇಲೆಲ್ಲ ಮಕಮಲ್ಲಿನಂಥ ಮೃದುವಾದ ಚರ್ಮದ ಹೊದಿಕೆಯಿರುತ್ತದೆ. ಕಾಲಕ್ರಮೇಣ ಈ ಹೊದಿಕೆ ಸುಲಿದುಹೋಗಿ ಬರಿಯ ಗಟ್ಟಿಯಾದ ಒಳಭಾಗ ಮಾತ್ರ ಉಳಿಯುತ್ತದೆ. ಜಿಂಕೆಗಳಲ್ಲಿ ಕೊಂಬುಗಳು ವರ್ಷ ವರ್ಷವೂ ಉದುರಿಹೋಗಿ ಮತ್ತೆ ಹುಟ್ಟಿಕೊಳ್ಳುತ್ತವೆ. ಖಡ್ಗಮೃಗದ ಮೂತಿಯ ಮೇಲಿರುವ ಕೊಂಬು ಮಾರ್ಪಾಡಾದ ಕೂದಲ ಗುಂಪು.

ಬಾಚಣಿಕೆ, ಗುಂಡಿ, ಕೊಡೆಗಳ ಹಿಡಿಗಳು, ಸಣ್ಣ ಡಬ್ಬಿಗಳು ಮುಂತಾದ ಉಪಯುಕ್ತ ವಸ್ತುಗಳನ್ನು ತಯಾರು ಮಾಡಲು ಕೊಂಬನ್ನು ಬಳಸುತ್ತಾರೆ. ***

ಕೊಂಬು ತೆಗೆತ: ಕೆಲವು ಉದ್ದೇಶಗಳಿಗಾಗಿ ದನಗಳು ಮತ್ತಿತರ ಪ್ರಾಣಿಗಳಲ್ಲಿ ಕೊಂಬುಗಳನ್ನು ಬೆಳೆಯಲು ಬಿಡದಿರುವುದು ಅಥವಾ ಇದ್ದುದನ್ನು ಕಿತ್ತು ಹಾಕುವುದು (ಡಿಹಾರ್ನಿಂಗ್). ಬೆಳೆದ ದನಗಳಲ್ಲಿ ಕೊಂಬುಗಳನ್ನು ತುಂಡರಿಸಿ ತೆಗೆದು ಹಾಕಬಹುದು. ಕರು ಹುಟ್ಟಿದ ವಾರದೊಳಗಾಗಿ, ಅಂತೂ 10 ದಿವಸಗಳೊಳಗಾಗಿ, ಕೊಂಬುಗಳನ್ನು ಬುಡಮಟ್ಟ ಕೀಳುವುದರಿಂದ ಮುಂದೆ ಅವು ಬೆಳೆಯುವುದನ್ನು ತಪ್ಪಿಸಬಹುದು. ಕಾಡುದನಗಳಿಗೆ ಆತ್ಮರಕ್ಷಣೆಗಾಗಿ ಕೊಂಬುಗಳು ಬೇಕಾಗುತ್ತವೆ. ಸಾಕುಪ್ರಾಣಿಗಳಿಗೆ ಅವು ಬೇಕಿಲ್ಲ. ಅಲ್ಲದೆ ಕೊಂಬಿನಲ್ಲಿ ಏಡಿಗಂತಿಯಂಥ ತೀವ್ರ ವ್ರಣವಾದಾಗ ಕೊಂಬನ್ನು ಅವಶ್ಯ ತೆಗೆಯಬೇಕಾಗುತ್ತದೆ. ತುಂಟದನಗಳು ಮತ್ತು ಕೊಂಬಿನ ರೋಗವಿರುವ ದನಗಳು ಇತರ ದನಗಳನ್ನು ಇರಿದು ಗಾಯಗೊಳಿಸುವುದನ್ನು ತಡೆಯಲು ಈ ಕಟಾವು ಅಗತ್ಯವೆನಿಸುತ್ತದೆ.

ಕರಾವಿನ ದನಗಳ ಕೊಂಬುತೆಗೆತದ ಯೋಗ್ಯವಿಧಾನ ಮೊಳೆಚಿವುಟಿಕೆ (ಡಿಬಡ್ಡಿಂಗ್). ಕೊಂಬಿನ ಮೊಳಕೆಗೆ ಕಾಸ್ಟಿಕ್ ರಾಸಾಯನಿಕಗಳನ್ನು ಹಚ್ಚಿ ಅಥವಾ ಕೊಂಬಿನ ಮೊಳಕೆಯ ಸುತ್ತಲೂ ಬರೆಗುಳವನ್ನು ಲೇಪಿಸಿ ಅಥವಾ ಕೊಂಬಿನ ಮೊಳಕೆಯಲ್ಲಿ ಮೊಳವ ಪದರವನ್ನು ಶಸ್ತ್ರಕ್ರಿಯೆಯಿಂದ ಸುಲಿದು ಮೊಳೆ ಚಿವುಟಬಹುದು. ಕರುವಿಗೆ ಹಾಲು ಬಿಡಿಸುವ ಮುಂಚೆ ಇಲ್ಲವೇ ಕೊಂಬು ಒಂದಂಗುಲ ಬೆಳೆವುದರೊಳಗಾಗಿ ಕೊಂಬುಗತ್ತರಿಯಿಂದ ಅದನ್ನು ಕತ್ತರಿಸಿ ಹಾಕಬಹುದು. ***

**ಕೋಆಟಿ:** ಕಾರ್ನಿವೊರ ಗಣದ ಪ್ರೋಸಿಯಾನಿಡೆ ಕುಟುಂಬಕ್ಕೆ ಸೇರಿದ ಸ್ತನಿ. ವೈಜ್ಞಾನಿಕ ಹೆಸರು ನಾಸುವ. ನಾ. ನಾಸುವ (ಉಂಗುರಬಾಲದ ಕೋಆಟಿ), ನಾ.ನೆಲ್ಸೋನಿ ಮತ್ತು ನಾ. ನಾರಿಕ ಎಂಬ ಮೂರು ಪ್ರಭೇದಗಳಿವೆ. ಇವುಗಳಲ್ಲಿ ಮೊದಲನೆಯದು ದಕ್ಷಿಣ ಅಮೆರಿಕದಲ್ಲೂ ಎರಡನೆಯದು ಮೆಕ್ಸಿಕೋ ಖಾರಿಯಲ್ಲಿನ ಕೊಸೊಮೆಲ್ ದ್ವೀಪಗಳಲ್ಲೂ ಮೂರನೆಯದು ದಕ್ಷಿಣ ಮತ್ತು ಉತ್ತರ ಅಮೆರಿಕದ ದಕ್ಷಿಣ ಭಾಗದಲ್ಲೂ ಕಾಣಬರುತ್ತವೆ.

ಇದು ರಕೂನ್‌ಗಳನ್ನು ಬಹುವಾಗಿ ಹೋಲುತ್ತದೆ. ಆದರೆ ರಕೂನ್‌ಗಿಂತ ಹೆಚ್ಚು ಉದ್ದ. ಹಂದಿಗಿರುವಂಥ ಉದ್ದವಾಗಿ ಚಾಚಿರುವ ಮೂತಿಯಿದೆ. ಮೂತಿಯನ್ನು ಅತ್ತಿತ್ತ ಚಲಿಸಬಲ್ಲುದು. ಉದ್ದ ಹಾಗೂ ನೀಳವಾದ ದೇಹ, ದೇಹಕ್ಕಿಂತಲೂ ಉದ್ದವಾದ ಬಾಲ. ಉದ್ದವಾದ ಹಾಗೂ ಕತ್ತಿಯಂತೆ ಮೊನಚಾದ ಹಲ್ಲುಗಳು ಇದರ ವಿಶೇಷ ಲಕ್ಷಣಗಳು. ರಕೂನ್‌ನಲ್ಲಿರುವಂತೆಯೇ ಕೋಆಟಿಯ ಬಾಲದ ಮೇಲೂ ಬಿಳಿಯ ಬಣ್ಣದ

ಉಂಗುರಗಳಿವೆ. ದೇಹದ ಬಣ್ಣ ಹಳದಿ, ಕಂದು, ಕೆಂಪು, ಕಪ್ಪು – ಹೀಗೆ ವೈವಿಧ್ಯಮಯ. ಕೊಆಟಿ ಓಡಾಡುವಾಗ ತನ್ನ ಬಾಲವನ್ನು ಮೇಲೆಕ್ಕೆತ್ತಿಕೊಂಡಿರುತ್ತದೆ. ಬಾಲದ ತುದಿ ಮಾತ್ರ ಕೊಂಚ ಬಾಗಿರುತ್ತದೆ.

ಕೊಆಟಿ 5–12 ಪ್ರಾಣಿಗಳಿರುವ ಗುಂಪುಗಳಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಒಂದು ಗುಂಪಿನಲ್ಲಿ ಹೆಣ್ಣುಗಳು ಮತ್ತು ಮರಿಗಳೆಲ್ಲ ಇರುತ್ತವೆ. ಬೆದೆಗಾಲದಲ್ಲಿ ಮಾತ್ರ ಗಂಡು ಕೊಆಟಿಗಳು ಗುಂಪಿಗೊಂದರಂತೆ ಸೇರಿಕೊಳ್ಳುತ್ತವೆ. ಬೇರಾವ ಗಂಡುಪ್ರಾಣಿಯನ್ನೂ ಸಹಿಸದ ಒಂದು ಗಂಡು ಹೆಣ್ಣುಗಳಿಗೆ ಮಾತ್ರ ವಿಧೇಯವಾಗಿರುತ್ತದೆ. ಕೊಆಟಿಯ ಆಹಾರ ವೈವಿಧ್ಯಮಯ. ಸಣ್ಣ ಹಕ್ಕಿಗಳು, ಹಲ್ಲಿಗಳು, ಕೀಟಗಳು, ಹಣ್ಣುಗಳು, ಲಾರ್ವಗಳು ಇದರ ಪ್ರಧಾನ ಆಹಾರ. ತನ್ನ ಚೂಪಾದ ಮೂತಿಯಿಂದ ದಾರಿಯಲ್ಲಿ ಸಿಕ್ಕುವ ಎಲ್ಲ ಸಂದುಗಳನ್ನೂ ಕಲ್ಲು ಪೊಟರೆಗಳನ್ನೂ ಕೆದಕಿ ಆಹಾರವನ್ನು ಅರಸುತ್ತ ಸಾಗುತ್ತದೆ. ಬಲು ಚೆನ್ನಾಗಿ ಮರವನ್ನೂ ಹತ್ತಬಲ್ಲದು.

ಕೊಆಟಿಯ ಸಂತಾನೋತ್ಪತ್ತಿಯ ಕಾಲ ವಸಂತ ಋತು. ಗರ್ಭಧರಿಸಿದ ಹೆಣ್ಣು ಕೊಆಟಿ ಗುಂಪಿನಿಂದ ಬೇರ್ಪಟ್ಟು ಯಾವುದಾದರೂ ಒಂದು ಮರದಲ್ಲಿ ಗೂಡು ಕಟ್ಟುತ್ತದೆ. ಸುಮಾರು 11 ವಾರಗಳ ಗರ್ಭಧಾರಣೆಯ ಅವಧಿಯ ಅನಂತರ 2–6 ಮರಿಗಳನ್ನು ಈಯುತ್ತದೆ. ಸು. 1 ತಿಂಗಳ ಕಾಲ ಮರಿಗಳನ್ನು ಏಕಾಂತದಲ್ಲಿಯೆ ಸಾಕಿ ಅನಂತರ ಮರಿಗಳೊಂದಿಗೆ ಗುಂಪಿಗೆ ಮರಳಿ ಬರುತ್ತದೆ.

ಮೆಕ್ಸಿಕೊದ ಮೂಲವಾಸಿಗಳು ಕೊಆಟಿಯನ್ನು ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ನಾಯಿಗಳನ್ನು ಇದರ ಬೇಟೆಗೆಂದೇ ಸಾಕುವುದುಂಟು. ಹೀಗೆ ನಾಯಿಗಳಿಂದ ಸುತ್ತುವರಿದಾಗ ಕೊಆಟಿ ಉಗ್ರವಾಗಿ ಹೋರಾಡುತ್ತದೆ. ಅಲ್ಲದೆ ತನ್ನ ಚೂಪಾದ ಕೋರೆ ಹಲ್ಲುಗಳಿಂದ ತೀವ್ರವಾದ ಗಾಯ ಮಾಡುವುದುಂಟು. ಕೆಲವೆಡೆ ಕೊಆಟಿಯನ್ನು ಪಳಗಿಸಿ ಸಾಕುತ್ತಾರೆ.

***

**ಕೊಆಲ:** ಆಸ್ಟ್ರೇಲಿಯ ಖಂಡದ ವಿಶಿಷ್ಟ ಹಾಗೂ ವಿಚಿತ್ರವಾದ ಪ್ರಾಣಿಗಳಲ್ಲಿ ಒಂದು. ಮ್ಯಾಮೇಲಿಯ ವರ್ಗ, ಮಾರ್ಸ್ಯುಪಿಯೇಲಿಯ ಗಣ, ಫೆಲಾಂಜಿಡೆ ಕುಟುಂಬಕ್ಕೆ ಸೇರಿದೆ. ಫ್ಯಾಸ್ಕೊಲಾರ್ಕ್ಟಸ್ ಸಿನೆರಿಯಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಇದು ಸಂಪೂರ್ಣ ವೃಕ್ಷವಾಸಿ. ಪೂರ್ವ ಆಸ್ಟ್ರೇಲಿಯದ ಯೂಕಲಿಪ್ಟಸ್ ವನಗಳಲ್ಲೇ ಇದರ ವಾಸ. ಇದರ ಗಾತ್ರ ಸಣ್ಣ ನಾಯಿಮರಿಯಷ್ಟಿದೆ. ದೇಹದ ಉದ್ದ 600–850 ಮಿಮೀ, ತೂಕ 4–15 ಕಿಗ್ರಾಂ. ಮೈಮೇಲೆಲ್ಲ ದಟ್ಟವಾದ ಮೃದು ಉಣ್ಣೆಯಿದೆ. ದೇಹದ ಬೆನ್ನು ಭಾಗದ ಬಣ್ಣ ಬೂದು, ಉದರಭಾಗದ ಬಣ್ಣ ಬಿಳಿ. ಕಿವಿಯ ಅಂಚಿನ ಮೇಲೆ ಉದ್ದವಾದ ಬಿಳಿ ಕೂದಲುಗಳಿವೆ. ದೊಡ್ಡತಲೆ, ಅಗಲವಾದ ಮತ್ತು ಪೊದೆಯಂಥ ಕಿವಿಗಳು, ಮುಂಚಾಚಿದ ಮೂಗು, ಬಾಲವಿಲ್ಲದಿರುವುದು, ಸಣ್ಣ ಆದರೆ ಹೊಳೆಯುವ ಕಣ್ಣುಗಳು ಇದರ ಪ್ರಮುಖ ಲಕ್ಷಣಗಳು. ಈ ಲಕ್ಷಣಗಳಿಂದಾಗಿ ಕೊಆಲ ನೋಡಲು ಆಟದ ಕರಡಿಯಂತೆ ಮುದ್ದಾಗಿ ಕಾಣುತ್ತದೆ. ಕೊಆಲದ ಕೈಯಲ್ಲಿನ ಮೊದಲರೆಡು ಬೆರಳುಗಳು ಉಳಿದ ಮೂರು ಬೆರಳುಗಳಿಗೆ ಅಭಿಮುಖವಾಗಿವೆ. ಈ ಏರ್ಪಾಡಿನಿಂದ ಮರ ಹತ್ತುವಾಗ ರೆಂಬೆಗಳನ್ನು ಹಿಡಿಯಲು ಅನುಕೂಲ. ಮಾರ್ಸ್ಯುಪಿಯೇಲಿಯ ಗಣದ ಉಳಿದ ಪ್ರಾಣಿಗಳಿಗಿರುವಂತೆಯೆ ಕೊಆಲದಲ್ಲೂ ಗರ್ಭಚೀಲವಿದೆ.

ಯೂಕಲಿಪ್ಟಸ್ ಎಲೆಗಳು ಮತ್ತು ತೊಗಟೆಯನ್ನು ಬಿಟ್ಟು ಉಳಿದ ಯಾವ ಬಗೆಯ ಆಹಾರವನ್ನೂ ಕೊಆಲ ತಿನ್ನುವುದಿಲ್ಲ. ಅದರಲ್ಲೂ ನಿರ್ದಿಷ್ಟ ಬಗೆಯ ಮಣ್ಣಿನಲ್ಲಿ ಬೆಳೆಯುತ್ತಿದ್ದು ನಿರ್ದಿಷ್ಟ ವಯಸ್ಸಾದ ಸುಮಾರು 12 ಯೂಕಲಿಪ್ಟಸ್ ಪ್ರಭೇದಗಳ ಎಲೆಗಳೇ ಆಗಬೇಕು. ಪ್ರೌಢವಯಸ್ಸಿನ ಒಂದು ಕೊಆಲ ದಿನಕ್ಕೆ 1–1.5 ಕಿಗ್ರಾಂ ಎಲೆಗಳನ್ನು ಭಕ್ಷಿಸುತ್ತದೆ. ಈ ರೀತಿಯ ಆಹಾರಕ್ರಮಕ್ಕೆ ಸಹಾಯಕವಾಗುವಂತೆ ಕೊಆಲದ ಕರುಳಿನ ಬಳಿ 1.8–2.4 ಮೀ ಉದ್ದದ ಸೀಕಮ್ ಎಂಬ ಅನುಬಂಧಿಕೆ ಇದೆ. ಯೂಕಲಿಪ್ಟಸ್ ಎಲೆಗಳನ್ನು ಮಾತ್ರ ತಿನ್ನುವುದರಿಂದ ಕೊಆಲಗಳಿಗೆ ಅದೇ ವಾಸನೆ ಇದೆ.

ಕೊಆಲಗಳು ಒಂಟೊಂಟಿಯಾಗಿ ಇಲ್ಲವೆ ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. ಇವುಗಳ ಸಂತಾನೋತ್ಪತ್ತಿಯ ಕಾಲ ಸೆಪ್ಟೆಂಬರಿನಿಂದ ಜನವರಿವರೆಗೆ. ಹೆಣ್ಣು ವರ್ಷ ಬಿಟ್ಟು ವರ್ಷಕ್ಕೊಂದು ಸೂಲಿನಂತೆ ಮರಿ ಹಾಕುತ್ತದೆ. ಸೂಲಿಗೆ ಒಂದೇ ಒಂದು ಮರಿ ಹುಟ್ಟುತ್ತದೆ. ಗರ್ಭಧಾರಣೆಯ ಅವಧಿ ಸುಮಾರು 30–35 ದಿವಸಗಳು. ಹುಟ್ಟಿದಾಗ ಮರಿ ಸುಮಾರು 5 ½ ಗ್ರಾಂ ತೂಗುತ್ತಿದ್ದು ಬಹಳ ಅಸಹಾಯಕ ಸ್ಥಿತಿಯಲ್ಲಿರುತ್ತದೆ. ಸುಮಾರು 6 ತಿಂಗಳ ಕಾಲ ತಾಯಿಯ ಗರ್ಭಚೀಲದಲ್ಲೇ ಹುದುಗಿಕೊಂಡಿದ್ದು ಅನಂತರ ಹೊರಬಂದು ತಾಯಿಯ ಆರೈಕೆಯಲ್ಲೇ ಸು. ಒಂದು ವರ್ಷ ಕಾಲ ಕಳೆದು ಮುಂದೆ ಸ್ವತಂತ್ರ ಜೀವನ ಆರಂಭಿಸುತ್ತದೆ. ಸುಮಾರು 4 ವರ್ಷ ವಯಸ್ಸಾದಾಗ ಲೈಂಗಿಕ ಪ್ರಬುದ್ಧತೆಯನ್ನು ಪಡೆಯುತ್ತದೆ. ಕೊಆಲದ ಒಟ್ಟು ಆಯಸ್ಸು 20 ವರ್ಷಗಳು. ಒಂದೊಂದು ಮರಿಯೂ ತನ್ನ ತಾಯ ಬಳಿಯಿರುವುದೇ ಸಾಮಾನ್ಯವಾದರೂ ಕೆಲವೊಮ್ಮೆ ಹಲವಾರು ತಾಯಂದಿರು ಒಟ್ಟಿಗೆ ಗುಂಪಾಗಿ ಹಾಲುಣ್ಣಿಸುತ್ತಿರುವಾಗ ಮರಿಗಳ ಅದಲು ಬದಲಾಗುವುದುಂಟು. ಆಗ ಯಾವ ಕೊಆಲದ ಹಾಲನ್ನು ಯಾವ ಮರಿಯಾದರೂ ಕುಡಿಯಬಹುದು. ಹಾಲು ಕುಡಿದಾದ ಮೇಲೆ ಮರಿಗಳು ತಮ್ಮ ತಮ್ಮ ಸ್ವಂತ ತಾಯಿಪ್ರಾಣಿಗಳ ಬಳಿ ಹೋಗುತ್ತವೆ. ಈ ಕ್ರಮ ಇನ್ನಾವ ಪ್ರಾಣಿಯಲ್ಲೂ ಕಂಡುಬರುವುದಿಲ್ಲ.

ಕೊಆಲಗಳು ಯೂಕಲಿಪ್ಟಸ್ ಎಲೆಗಳನ್ನು ಮಾತ್ರವೆ ಆಹಾರವಾಗಿ ಸೇವಿಸುವುದರಿಂದ ಇವುಗಳ ಸಂಖ್ಯೆ ಸ್ವಾಭಾವಿಕವಾಗಿಯೇ ಕಡಿಮೆ. 20ನೆಯ ಶತಮಾನದ ಆದಿಯಲ್ಲಿ ಒಂದು ಬಗೆಯ ನಿಗೂಢರೋಗಕ್ಕೆ ತುತ್ತಾಗಿ ಇವುಗಳ ಸಂತತಿ ಬಹಳವಾಗಿ ಕ್ಷೀಣಿಸಿತು. ಇವುಗಳ ಮೃದುವಾದ ತುಪ್ಪುಳಕ್ಕಾಗಿ ಇವನ್ನು ಬೇಟೆಯಾಡುತ್ತಿದ್ದುದರಿಂದಲೂ ನಿರ್ವಂಶವಾಗುವ ಸ್ಥಿತಿ ಬಂತು. ಈಗ ಆಸ್ಟ್ರೇಲಿಯ ಸರ್ಕಾರ ಇವುಗಳ ಬೇಟೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಕಾನೂನು ಮಾಡಿರುವುದರಿಂದ ಇವುಗಳ ಸಂಖ್ಯೆ ನಿಧಾನವಾಗಿ ಏರುತ್ತಿದೆ. ಇವನ್ನು ಬೇರೆ ದೇಶಗಳಿಗೆ ಕಳಿಸುವುದನ್ನೂ ನಿಷೇಧಿಸಲಾಗಿದೆ. ***

**ಕೊಕ್ಕರೆ:** ಗ್ರೂಯಿಫಾರ್ಮೀಸ್ ಗಣದ ಗ್ರೂಯಿಡೆ ಕುಟುಂಬದ ಸದಸ್ಯ. ಹಲವು ಜಾತಿಯ ಹಕ್ಕಿಗಳಿರುವ ಈ ಕುಟುಂಬದ ಸದಸ್ಯರನ್ನು ಕ್ರೇನ್ ಎನ್ನುವರು. ದಕ್ಷಿಣ ಅಮೆರಿಕ, ಮಲಯ ದ್ವೀಪ ಸಮೂಹ, ಪೆಸಿಫಿಕ್ ದ್ವೀಪಗಳು ಮತ್ತು ನ್ಯೂಜ಼ೀಲೆಂಡ್‌ಗಳನ್ನು ಬಿಟ್ಟು ಪ್ರಪಂಚದ ಉಳಿದೆಲ್ಲ ಪ್ರದೇಶಗಳಲ್ಲಿ ಕೊಕ್ಕರೆಗಳಿವೆ. ಭಾರತದಲ್ಲಿರುವ ಗ್ರಸ್ ಆಂಟಿಗೋನ್ (ಸಾರಸ ಕೊಕ್ಕರೆ), ಸೈಬೀರಿಯದಲ್ಲಿನ ಗ್ರಸ್ ಗ್ರಸ್ ಲಿಲ್‌ಫೋರ್ಡಿ (ಸಾಮಾನ್ಯ ಕೊಕ್ಕರೆ), ಯೂರೋಪ್ ಮತ್ತು ಮಧ್ಯಏಷ್ಯಗಳ ಮೂಲವಾಸಿಯಾದ ಆಂತ್ರೊಪಾಯ್ಡಿಸ್ ವರ್ಗೊ (ಡೆಮಾಸ್ಸಿಲ್ ಕೊಕ್ಕರೆ), ಉತ್ತರ ಅಮೆರಿಕದಲ್ಲಿನ ಗ್ರಸ್ ಕೆನಡೆನ್ಸಿಸ್ ಮತ್ತು ಗ್ರಸ್ ಅಮೆರಿಕಾನ (ಹೂಪಿಂಗ್ ಕ್ರೇನ್), ಆಫ್ರಿಕದಲ್ಲಿ ಕಾಣಬರುವ ಬಾಲಿಯೇರಿಕ ಪ್ಯಾವೊಲಿನ (ಕಿರೀಟ ಕೊಕ್ಕರೆ) ಮುಂತಾದುವು ಮುಖ್ಯವಾದ ಕೊಕ್ಕರೆಗಳು. ಡೆಮಾಸ್ಸಿಲ್ ಕೊಕ್ಕರೆ ಮತ್ತು ಸಾಮಾನ್ಯ ಕೊಕ್ಕರೆಗಳು ಚಳಿಗಾಲದಲ್ಲಿ ಭಾರತಕ್ಕೆ ವಲಸೆ ಬರುತ್ತವೆ.

ಬತ್ತದ ಗದ್ದೆಗಳು, ಜೌಗುಭೂಮಿ, ಬಯಲುಪ್ರದೇಶದಲ್ಲಿ ಕೊಕ್ಕರೆಗಳು ವಾಸಿಸುತ್ತವೆ. ಕೊಕ್ಕರೆಗಳು ದೊಡ್ಡಗಾತ್ರದ ಹಕ್ಕಿಗಳು. ಉದ್ದವಾದ ಕಾಲುಗಳು ಹಾಗೂ ಕತ್ತು, ಚಿಕ್ಕದಾದ ಮತ್ತು ಅಗಲವಾದ ತೋಕೆ, ವಿಸ್ತಾರವಾದ ರೆಕ್ಕೆಗಳು, ಕಾಲಿನ ಉಳಿದೆಲ್ಲ ಬೆರಳುಗಳಿಗಿಂತ ಕೊಂಚ ಎತ್ತರದಲ್ಲಿರುವ ಕಿರುಬೆರಳು ಕೊಕ್ಕರೆಗಳ ಮುಖ್ಯ ಲಕ್ಷಣಗಳು. ಹಾರುವಾಗ ಕತ್ತನ್ನು ನೇರವಾಗಿ ಮುಂದಕ್ಕೂ, ಕಾಲುಗಳನ್ನು ಹಿಂದಕ್ಕೂ ಚಾಚಿರುವುದು ಕೊಕ್ಕರೆಗಳ ಇನ್ನೊಂದು ವಿಶೇಷ ಲಕ್ಷಣ. ಕೊಕ್ಕರೆಗಳ ಟ್ರೇಕಿಯ (ವಿಂಡ್ ಪೈಪ್) ಅಥವಾ ಗಾಳಿ ಕೊಳವೆ ಕಹಳೆಯ ಸುರುಳಿಯಂತೆ ಹಲವಾರು ಬಾರಿ ಸುತ್ತಿಕೊಂಡಿದ್ದು ಬೇರಾವ ಹಕ್ಕಿಗಳಲ್ಲಿ ಈ ರೀತಿ ಇಲ್ಲ. ಕೆಲವು ಪ್ರಭೇದಗಳಲ್ಲಿ ಇದು ಎದೆಮೂಳೆಯನ್ನು ಹಾರಲು ನೆರವಾಗುವ ಸ್ನಾಯುಗಳನ್ನು ಭೇದಿಸಿರುವುದು. ಕೊಕ್ಕರೆಗಳು ಹಾರುತ್ತಿರುವಾಗ, ನೆಲದ

ಮೇಲಿರುವಾಗ, ಮಾಡುವ ಕಹಳೆ ಶಬ್ದದಂಥ ಅನುರಣಿತ ಕೂಗಿಗೆ ಈ ಗಾಳಿಕೊಳವೆ ಕಾರಣ. ಕೊಕ್ಕರೆಗಳು ಗುಂಪು-ಗುಂಪುಗಳಲ್ಲಿ ವಾಸಿಸುತ್ತವೆ. ಭಾರತದ ಸಾರಸ ಕೊಕ್ಕರೆಗಳಲ್ಲಿ ಗಂಡು ಒಂದೇ ಒಂದು ಹೆಣ್ಣನ್ನು ತನ್ನ ಸಂಗಾತಿಯಾಗಿ ಆರಿಸಿಕೊಂಡು ಅದರೊಡನೆ ತನ್ನ ಜೀವಮಾನವನ್ನೆಲ್ಲ ಕಳೆಯುತ್ತದೆ. ಕೊಕ್ಕರೆಗಳಲ್ಲಿ ವಲಸೆ ಹೋಗುವ ಪರಿಪಾಠವಿದೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ತಮ್ಮ ಮೂಲ ನೆಲೆಯನ್ನು ಬಿಟ್ಟು ಉಷ್ಣ ಪ್ರದೇಶಗಳಿಗೆ ದೊಡ್ಡ ಗುಂಪುಗಳಲ್ಲಿ ಹಾರಿ ಹೋಗುತ್ತವೆ. ವಲಸೆ ಹೋಗುವಾಗ ಅಥವಾ ದೈನಂದಿನ ಹಾರುವಿಕೆಯಲ್ಲಿ ವಿಶಿಷ್ಟವಾದ V – ಆಕಾರದ ಸರಪಳಿಯಂತೆ ಹಾರುತ್ತವೆ. ಈ ಚಿಹ್ನೆಯ ಮುಂತುದಿಯಲ್ಲಿ ಗುಂಪಿನ ನಾಯಕ ಇರುತ್ತದೆ. ಕೊಕ್ಕರೆಗಳು ಆಕಾಶದಲ್ಲಿ ಬಹಳ ಎತ್ತರದಲ್ಲಿ (ಕೆಲವೊಮ್ಮೆ 3 ಕಿಮೀಗೂ ಎತ್ತರದಲ್ಲಿ) ಹಾರುವುದಲ್ಲದೆ ಹಾರುವಾಗ ಕ್ರಮಬದ್ಧವಾಗಿ, ಗಂಭೀರವಾಗಿ, ರೆಕ್ಕೆಗಳನ್ನು ಬಡಿಯುತ್ತ ಮುಂದುವರೆಯುತ್ತವೆ.

ಕೊಕ್ಕರೆಗಳು ಕೀಟ ಮತ್ತು ಅವುಗಳ ಡಿಂಬ (ಹುಳುಗಳು), ಬಸವನ ಹುಳುಗಳು, ಕಪ್ಪೆ, ಹಲ್ಲಿಗಳು, ಸಣ್ಣಪುಟ್ಟ ಹಕ್ಕಿಗಳು, ಸಣ್ಣಗಾತ್ರದ ಸ್ತನಿಗಳನ್ನು ತಿನ್ನುತ್ತವೆ. ಕಾಳು, ಹಣ್ಣು, ಎಳೆಯ ಚಿಗುರು, ಬೇರುಗಳನ್ನು ಸೇವಿಸುತ್ತವೆ. ಸಸ್ಯಾಹಾರವೇ ಇವುಗಳ ಮೆಚ್ಚಿನ ಆಹಾರ. ಮೀನುಗಳನ್ನು ತಿನ್ನುವುದು ಕಡಿಮೆ. ಬಲವಾದ ಕೊಕ್ಕಿನಿಂದ ನೆಲವನ್ನು ಕುಕ್ಕಿ ಬೇರು, ಹುಳುಗಳನ್ನು ಆಯ್ದು ತಿನ್ನುತ್ತ ಸಾಗುವುದು ಇವುಗಳ ಆಹಾರ ಸೇವನೆಯ ಕ್ರಮ. ಒಣ ನೆಲದಲ್ಲಿ ಆಹಾರವನ್ನು ಹುಡುಕುತ್ತಿರುವಾಗ ಆಗಿಂದಾಗ್ಗೆ ಇವು ಹತ್ತಿರದ ನೀರಿನ ನೆಲೆಗೆ ಹಾರಿಹೋಗಿ ನೀರು ಕುಡಿಯುತ್ತವೆ.

ಕೊಕ್ಕರೆಗಳ ಅತ್ಯಂತ ಕೌತುಕಮಯ ಹಾಗೂ ಆಕರ್ಷಕ ಪದ್ಧತಿ ಎಂದರೆ ನೃತ್ಯಾಚರಣೆ. ಆಗಿಂದಾಗ್ಗೆ ಹಲವಾರು ಕೊಕ್ಕರೆಗಳು ಗುಂಪುಗೂಡಿಕೊಂಡು ರೆಕ್ಕೆಗಳನ್ನು ಅರ್ಧ ವಿಸ್ತರಿಸಿ ಲಘು ಹೆಜ್ಜೆ ಹಾಕುತ್ತ ಒಂದರ ಸುತ್ತ ಇನ್ನೊಂದು ಕುಣಿಯುತ್ತವೆ. ಆಗಾಗ ಕಾಲುಗಳನ್ನು ನೀಳವಾಗಿ ಚಾಚಿಕೊಂಡು ಮೇಲಕ್ಕೆ ನೆಗೆಯುತ್ತವೆ. ದೇಹವನ್ನು ಉದ್ದಕ್ಕೆ ಚಾಚುವುದು,



ಕೊಕ್ಕರೆ

ಮತ್ತೆ ಬಾಗಿಸುವುದು ಮುಂತಾಗಿ ವಿಚಿತ್ರ ಗತಿಯಲ್ಲಿ ನರ್ತಿಸುತ್ತವೆ. ಹುಲ್ಲಿನ ಎಸಳನ್ನು ಇಲ್ಲವೆ ಕಡ್ಡಿಗಳನ್ನು ಕೊಕ್ಕಿನಿಂದ ಹಿಡಿದು ಗಾಳಿಯಲ್ಲಿ ತೂರಿ ಅದು ಕೆಳಕ್ಕೆ ಬೀಳುತ್ತಿರುವಾಗ ಕೊಕ್ಕಿನಿಂದ ಹೊಡೆಯುತ್ತವೆ. ಈ ವಿಚಿತ್ರ ಬಗೆಯ ನೃತ್ಯವನ್ನು ಬೇಸಗೆಯಲ್ಲಿ ಮಾತ್ರವಲ್ಲದೆ, ವರ್ಷದ ಯಾವ ಕಾಲದಲ್ಲಾದರೂ ಪ್ರದರ್ಶಿಸಬಹುದು. ಇದು ಕೊಕ್ಕರೆಗಳ ತೃಪ್ತಿ ಮತ್ತು ಸಂತೋಷಗಳ ಸೂಚನೆ ಎಂದು ತಜ್ಞರ ಅಭಿಪ್ರಾಯ.

ಕೊಕ್ಕರೆಗಳು ಜೌಗುಭೂಮಿಯಲ್ಲಿ ನೀರಿನಿಂದ ಆವೃತವಾದ ಸಣ್ಣ ಸಣ್ಣ ಜೊಂಡಿನ ಪೊದೆಗಳಲ್ಲಿ ಗೂಡುಕಟ್ಟುತ್ತವೆ. ಹೆಣ್ಣು ವರ್ಷಕ್ಕೊಂದು ಬಾರಿ 2 ಮೊಟ್ಟೆಗಳನ್ನಿಡುತ್ತದೆ. ಅಪರೂಪಕ್ಕೆ 1 ಇಲ್ಲವೆ 3 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಬಣ್ಣ ಮಾಸಲು ಬಿಳಿ ಅಥವಾ ಕಂದು. ಮೇಲೆಲ್ಲಾ ಕಗ್ಗಂದು ಬಣ್ಣದ ಚುಕ್ಕೆಗಳಿವೆ. ಗೂಡು ಕಟ್ಟಿ ಮೊಟ್ಟೆಗಳಿಗೆ ಕಾವುಕೊಟ್ಟು ಮರಿ ಮಾಡಿ ಅವುಗಳನ್ನು ಪಾಲಿಸುವ ಕಾರ್ಯವನ್ನು ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ಮಾಡುತ್ತವೆ. ಸು. 28–35 ದಿನಗಳ ಅನಂತರ ಮೊಟ್ಟೆಗಳೊಡೆದು ಮರಿಗಳು ಹೊರಬರುತ್ತವೆ. ಸು. 10 ವಾರಗಳಾದ ಮೇಲೆ ಅವು ಹಾರಲು ಶಕ್ತವಾಗುತ್ತವೆ.

ಕೊಕ್ಕರೆಗಳು ದೀರ್ಘಾಯುಷಿಗಳು. ಇವು 100 ಕ್ಕೂ ಹೆಚ್ಚು ವರ್ಷಗಳ ಕಾಲ ಬದುಕುವುವೆಂದು ನಂಬಿಕೆ. ಇದು ನಿಜವಿರದಿದ್ದರೂ ವಾಷಿಂಗ್‌ಟನ್ ಪ್ರಾಣಿ ಸಂಗ್ರಹಾಲಯದಲ್ಲಿರುವ ಕೊಕ್ಕರೆಯೊಂದು 55 ವರ್ಷಕ್ಕಿಂತ ಹೆಚ್ಚು ಕಾಲ ಬದುಕಿದ್ದ ದಾಖಲೆ ಇದೆ. ಜಪಾನಿನಲ್ಲಿಯಂತೂ ಕೊಕ್ಕರೆಯನ್ನು ದೀರ್ಘಾಯುಷ್ಯದ ಸಂಕೇತವೆಂದು ಭಾವಿಸುತ್ತಾರೆ.

ಭಾರತದಲ್ಲಿ ವಾಸಿಸುವ ಕೊಕ್ಕರೆಗಳು: 1. ಗ್ರಸ್ ಆಂಟಿಗೋನ್ (ಸಾರಸ ಕೊಕ್ಕರೆ): ಎತ್ತರ 1.5–1.75 ಮೀ. ಮೈಬಣ್ಣ ಬೂದು. ಕಾಲು, ತಲೆ ಮತ್ತು ಕತ್ತಿನ ಮೇಲ್ಭಾಗ ಕೆಂಪು. ಹೊಲಗದ್ದೆಗಳ ಬಳಿಯೇ ಇದರ ವಾಸ.

2. ಗ್ರಸ್ ಗ್ರಸ್ ಲಿಲ್‌ಫೋರ್ಡಿ (ಸಾಮಾನ್ಯ ಕೊಕ್ಕರೆ): ಚಳಿಗಾಲದಲ್ಲಿ ಉತ್ತರ ಯೂರೋಪಿನಿಂದ ಸೆಪ್ಟೆಂಬರ್ ವೇಳೆಗೆ ವಲಸೆ ಬರುತ್ತದೆ. ಎತ್ತರ ಸು. 1.2 ಮೀ. ಮೈಬಣ್ಣ ಬೂದು. ತಲೆ ಮತ್ತು ಕತ್ತು ಕಪ್ಪುಬಣ್ಣಕ್ಕಿದ್ದರೂ ನೆತ್ತಿಯ ಮೇಲೆ ಕೆಂಪು ಬಣ್ಣದ ಗುರುತಿದೆ.

3. ಆಂತ್ರೊಪಾಯ್ಡಿಸ್ ವರ್ಗೊ (ಡೆಮಾಸಿಲ್ ಕೊಕ್ಕರೆ): ಇದು ಚಳಿಗಾಲದಲ್ಲಿ ಯೂರೋಪಿನಿಂದ ವಲಸೆ ಬರುತ್ತದೆ. ನೋಡುವುದಕ್ಕೆ ಸಾಮಾನ್ಯ ಕೊಕ್ಕರೆಯಂತೆ ಕಂಡರೂ ಅಷ್ಟು ದೊಡ್ಡ ಗಾತ್ರದ್ದಲ್ಲ. ಇದರ ಎತ್ತರ ಸು. ಒಂದು ಮೀ. ನೆತ್ತಿಯ ಮೇಲೆ ಕೆಂಪು ಬಣ್ಣದ ಗುರುತಿಲ್ಲ. ಕಣ್ಣಿನ ಹಿಂಭಾಗದಲ್ಲಿ ಬಿಳಿಯ ಬಣ್ಣದ ಕುಚ್ಚುಗಳಿವೆ. ಕತ್ತಿನ ಕೆಳಭಾಗದಲ್ಲಿನ ಪುಕ್ಕಗಳು ಉದ್ದವಾಗಿದ್ದು ಎದೆಯ ಮೇಲೆ ಇಳಿಬೀಳುತ್ತವೆ. (ಕೆ.ಎಂ.ವಿ.)

**ಕೊಕ್ಕು:** ಹಕ್ಕಿಗಳಲ್ಲಿ ಮೇಲ್ದವಡೆ ಮತ್ತು ಕೆಳದವಡೆಗಳ ಮುಂಭಾಗದ ಎಲುಬುಗಳು ನೀಳವಾಗಿ ಚಾಚಿಕೊಂಡು ಕೊಂಬಿನಿಂದ ಕೂಡಿದ ಒರೆಯಿಂದ ಆವೃತವಾಗಿರುವ ರಚನೆ. ಇದರ ಉಪಯೋಗಗಳು ವೈವಿಧ್ಯಮಯ: ಆಹಾರವನ್ನು ಹಿಡಿಯುವಲ್ಲಿ ಮತ್ತು ಗೂಡು ಕಟ್ಟುವ ಕಾರ್ಯದಲ್ಲಿ ಇದು ಕೈಯಂತೆಯೂ ಆಹಾರ ಸೇವನೆಯಲ್ಲಿ ಬಾಯಿಯಂತೆಯೂ ಮರಿಗಳಿಗೆ ಗುಟುಕು ಕೊಡುವ ಕಾರ್ಯದಲ್ಲಿ ಚಮಚದಂತೆಯೂ ಶತ್ರುಗಳನ್ನು ಎದುರಿಸುವುದರಲ್ಲಿ ಆಯುಧದಂತೆಯೂ ಕೆಲಸಕ್ಕೆ ಬರುತ್ತದೆ.

ಕೊಂಬಿನ ಭಾಗಕ್ಕೆ ಚುಂಚು (ಬಿಲ್) ಎಂದು ಹೆಸರು. ಇದು ವಾಸ್ತವವಾಗಿ ಚರ್ಮದ ಎಪಿಡರ್ಮಿಸ್ ಭಾಗ. ಇದರಲ್ಲಿ ಹೊರಗಿನ ಸ್ಟ್ರಾಟಮ್ ಕಾರ್ನಿಯಮ್, ಕೆರಟೊಹೈಯಲಿನ್ ಕಣಗಳಿಂದ ರಚಿತವಾದ ಮಧ್ಯದ ಸ್ಟ್ರಾಟಮ್ ಗ್ರಾನ್ಯುಲೋಸಮ್ ಮತ್ತು ಸ್ಟ್ರಾಟಮ್ ಜರ್ಮಿನೇಟಮ್ ಎಂಬ ಮೂರು ಪದರಗಳಿವೆ. ಮೊಟ್ಟೆಯಿಂದ ಹೊರಬರುವ ಮರಿಹಕ್ಕಿಗಳ ಕೊಕ್ಕುಗಳಲ್ಲಿ ಮೇಲೆ ಹೇಳಿದ ಮೂರು ಪದರಗಳು ಮಾತ್ರ ಇದ್ದು ಕೊಕ್ಕು ಮೃದುವಾಗಿರುತ್ತದೆ. ಮರಿಗಳು ಬೆಳೆದು ದೊಡ್ಡವಾದಂತೆಲ್ಲ ಈ ಪದರಗಳಿಂದ ಕೆರಾಟಿನ್ ಎಂಬ ವಸ್ತು ಉತ್ಪತ್ತಿಯಾಗಿ ಉದ್ದಕ್ಕೆ ಚಾಚಿದಂತಾಗಿ ಸಹಜವಾದ ಕೊಕ್ಕು ರೂಪುಗೊಳ್ಳುತ್ತದೆ. ಕೆಲವು ಬಗೆಯ ಹಕ್ಕಿಗಳಲ್ಲಿ ಕೊಕ್ಕಿನ ಮೇಲ್ಭಾಗದ ಬುಡದಲ್ಲಿ ಚರ್ಮ ದಪ್ಪವಾಗಿದ್ದು ಸಿರೆ ಎಂಬ ವಿಶಿಷ್ಟವಾದ ಅಂಗವೊಂದು ರೂಪುಗೊಂಡಿರುತ್ತದೆ. ಹಕ್ಕಿಗಳ ಮೂಗಿನ ಹೊಳ್ಳೆಗಳು ಇದರಲ್ಲಿ ಅಡಕವಾಗಿರುತ್ತವೆ. ನ್ಯೂಜಿಲೆಂಡ್ ನಿವಾಸಿಗಳಾದ ಕಿವೀ ಹಕ್ಕಿಗಳಲ್ಲಿ ಮಾತ್ರ ಮೂಗಿನ ಹೊಳ್ಳೆಗಳು ಸಿರೆಯಿಂದ ಆಚೆ ಬಂದು ಕೊಕ್ಕಿನ ತುದಿಯಲ್ಲಿ ಸ್ಥಿತವಾಗಿರುತ್ತವೆ. ಸಾಮಾನ್ಯವಾಗಿ ಕೊಕ್ಕನ್ನು ಆವರಿಸಿರುವ ಕೊಂಬುವಸ್ತು ಏಕಪ್ರಕಾರವಾಗಿ ಲೇಪಿತವಾಗಿರುತ್ತದೆ. ಇದು ಸವೆದಂತೆಲ್ಲ ಕೊಕ್ಕಿನ ತಳ ಭಾಗದಿಂದ ಹೊಸಪದರ ಉತ್ಪತ್ತಿಯಾಗುತ್ತದೆ. ಆದರೆ ಅಟ್ಲಾಂಟಿಕ್ ಸಾಗರದ ತೀರಪ್ರದೇಶಗಳಲ್ಲಿ ವಾಸಿಸುವ ಫ್ರಾಟೆರ್‌ಕ್ಯುಲ ಎಂಬ ಶಾಸ್ತ್ರೀಯ ಹೆಸರಿನ ಪಫಿನ್ ಹಕ್ಕಿಗಳ ಕೊಕ್ಕಿನಲ್ಲಿ ಪರಸ್ಪರ ಪ್ರತ್ಯೇಕವಾಗಿರುವ 9 ಕೊಂಬಿನ ಫಲಕಗಳಿವೆ. ಈ ಹಕ್ಕಿಗಳ ಸಂತಾನೋತ್ಪತ್ತಿಯ ಕಾಲ ಕೊನೆಗೊಳ್ಳುತ್ತ ಬಂದಂತೆ (ಆಗಸ್ಟ್ ತಿಂಗಳಿನ ವೇಳೆಗೆ) ಕೊಂಬಿನ ಫಲಕಗಳು ಉದುರಿಹೋಗಿ ಮತ್ತೆ ಚಳಿಗಾಲದ ವೇಳೆಗೆ ಹೊಸ ಫಲಕಗಳು ಉತ್ಪತ್ತಿಯಾಗುತ್ತವೆ. ಈ ಫಲಕಗಳಿಗೂ ಹಕ್ಕಿಗಳ ಪೂರ್ವಜ ಪ್ರಾಣಿಗಳಾದ ಸರೀಸೃಪಗಳ ಹುರುಪೆಗಳಿಗೂ ಸಾದೃಶ್ಯವಿದೆಯೆಂದೂ ಕೊಂಬಿನ ಫಲಕಗಳು ಪ್ರತಿವರ್ಷ ಉದುರುವುದರಿಂದ ಪಫಿನ್ ಹಕ್ಕಿಗಳ ಕೊಕ್ಕು ಆದಿಮ ಕೊಕ್ಕೆಂದೂ ಪರಿಗಣಿಸಲಾಗಿದೆ.

ಈಗ ಜೀವಂತವಾಗಿರುವ ಯಾವ ಹಕ್ಕಿಯ ಕೊಕ್ಕಿನಲ್ಲೂ ಹಲ್ಲುಗಳಿಲ್ಲ. ಆದರೆ ಆರ್ಕಿಯಾಪ್ಟೆರಿಕ್ಸ್‌ನಂತಹ ಗತಕಾಲದ ಹಕ್ಕಿಗಳ ಕೊಕ್ಕಿನಲ್ಲಿ ಹಲ್ಲುಗಳನ್ನು ಕಾಣಬಹುದು.

ಹಕ್ಕಿಗಳ ಆಹಾರ ಕ್ರಮವನ್ನೂ ಕೊಂಚಮಟ್ಟಿಗೆ ಜೀವನ ರೀತಿಯನ್ನೂ ಅವಲಂಬಿಸಿ ಕೊಕ್ಕು ತನ್ನ ಆಕಾರ ಮತ್ತು ಗಾತ್ರಗಳಲ್ಲಿ ವಿವಿಧತೆಯನ್ನು ಪ್ರದರ್ಶಿಸುತ್ತದೆ. ಕೊಕ್ಕಿನ ವಿವಿಧ ಆಕಾರಗಳನ್ನು ಗಮನಿಸಿ ಹಕ್ಕಿಗಳ ಆಹಾರ ಕ್ರಮವನ್ನು ಸ್ಥೂಲವಾಗಿ ಅರಿಯಬಹುದು. ಕೊಕ್ಕುಗಳ ವಿವಿಧತೆಯನ್ನು ಅಭ್ಯಸಿಸುವುದರಿಂದ ಸ್ವಲ್ಪ ಮಟ್ಟಿಗೆ ಕೊಕ್ಕಿನ ವಿಕಾಸಕ್ರಮವನ್ನೂ ತಿಳಿದುಕೊಳ್ಳಬಹುದು. ಆದರೂ ಪ್ರರೂಪೀ ಬಗೆಯದು ಎನಿಸಿಕೊಳ್ಳುವ ಕೊಕ್ಕು ಕಾಣಸಿಗುವುದು ಕಷ್ಟ. ಕಾಗೆಯ ಕೊಕ್ಕು ಈ ಬಗೆಯದು. ಸರ್ವಭಕ್ಷಿಯಾದ ಕಾಗೆಯ ಕೊಕ್ಕು ದೊಡ್ಡದು, ಗಡಸು ಮತ್ತು ಬಲಯುತವಾದುದು. ಇದರ ತುದಿ

ಚೂಪಾಗಿರುವುದರಿಂದ ಕಾಗೆ ಸಣ್ಣಪುಟ್ಟ ಕೀಟಗಳನ್ನು ಸುಲಭವಾಗಿ ಹಿಡಿಯಬಲ್ಲುದು; ಬಲಯುತವಾಗಿರುವುದರಿಂದ ಇಲಿ, ಅಳಿಲು, ಮುಂತಾದ ಪ್ರಾಣಿಗಳನ್ನು ಕುಕ್ಕಿ ತಿನ್ನಬಲ್ಲುದು. ಅಲ್ಲದೆ ಗೆಡ್ಡೆಗಳನ್ನು ಕೆದಕುವುದಕ್ಕೂ ಗಟ್ಟಿಯಾದ ಕಾಯಿಗಳನ್ನೊಡೆಯುವುದಕ್ಕೂ ಇದು ಸಹಾಯಕ.

ಹದ್ದು, ಗಿಡುಗ, ಗೂಬೆ ಮುಂತಾದ ಹಕ್ಕಿಗಳ ಕೊಕ್ಕು ಮಾಂಸಾಹಾರ ಸೇವನೆಗೆ ಅನುಕೂಲವಾಗಿದೆ. ಕೊಕ್ಕಿನ ಮೇಲುದವಡೆಯ ಭಾಗ ಬಲಯುತ; ತುದಿ ಚೂಪಾಗಿದ್ದು ಕೊಂಚ ಬಾಗಿದೆ. ಇದರಿಂದ ಎರೆಪ್ರಾಣಿಯನ್ನು ಹಿಡಿಯಲೂ ಅದರ ಮಾಂಸವನ್ನು ಹರಿದು ತಿನ್ನಲೂ ನೆರವಾಗುತ್ತದೆ.




ವಿವಿಧ ಮಾದರಿಯ ಕೊಕ್ಕುಗಳು: 1. ಪೆಲಿಕನ್, 2. ಕಾಗೆ, 3. ಹದ್ದು, 4. ಹಾರ್ನ್‌ಬಿಲ್, 5. ಸ್ಪೂನ್‌ಬಿಲ್, 6. ಆಯಿಸ್ಟರ್ ಕ್ಯಾಚರ್, 7. ಆಲ್‌ಬಟ್ರಾಸ್, 8. ಗುಬ್ಬಚ್ಚಿ, 9. ಮರಕುಟಿಗ, 10a. ಗಂಡು ಹೂಯಿಯ, 10b ಹೆಣ್ಣು ಹೂಯಿಯ, 11. ಮಿಂಚುಳ್ಳಿ, 12. ಹಮಿಂಗ್ ಬರ್ಡ್, 13. ಮ್ಯಾಂಡರಿನ್ ಬಾತು, 14. ಕ್ರಾಸ್ ಬಿಲ್, 15. ಗಿಳಿ.

ಸಸ್ಯಾಹಾರಿಯಾದ ಗಿಳಿಯ ಕೊಕ್ಕು ಹಣ್ಣುಹಂಪಲನ್ನು ಹಿಡಿದುಕೊಳ್ಳುವುದಕ್ಕೆ ಸಹಾಯಕವಾಗಿದೆ. ಹೂವಿನ ಮಕರಂದವನ್ನು ಕುಡಿಯುವ ಹಮಿಂಗ್‌ಬರ್ಡ್ ಮತ್ತು ಕಳ್ಳಿಪೀರ (ಬೀ ಈಟರ್) ಹಕ್ಕಿಗಳ ಕೊಕ್ಕು ಮಕರಂದವನ್ನು ಹೀರಲು ಅನುಕೂಲವಾಗುವಂತೆ ನೀಳವಾಗಿಯೂ ತೆಳುವಾಗಿಯೂ ಇದೆ. ಕೀಟ, ಲಾರ್ವಾ ಮುಂತಾದುವನ್ನು ತಿನ್ನುವ ಪರಿಪಾಠವಿರುವ ಮರಕುಟಿಗಗಳಲ್ಲಿ ಕೊಕ್ಕು ನೀಳವಾಗಿರುವುದಲ್ಲದೆ ಗಡುಸಾಗಿಯೂ ದಪ್ಪವಾಗಿಯೂ ಇದೆ. ಇದರಿಂದ ಮರದ ಪೊಟರೆಗಳನ್ನು ಕುಕ್ಕಿ, ಒಳಗೆ ಅಡಗಿರುವ ಕೀಟಗಳನ್ನು ತಿನ್ನಲು ಈ ಹಕ್ಕಿಗಳಿಗೆ ಸಾಧ್ಯವಾಗಿದೆ. ಸ್ವಿಫ್ಟ್ ಹಕ್ಕಿಗಳ ಕೊಕ್ಕು ಬಲುಚಿಕ್ಕದು. ಆದರೆ ಇದು ಬಹಳ ಅಗಲವಾಗಿ ತೆರೆಯಬಲ್ಲುದು. ಇದರಿಂದ ಈ ಹಕ್ಕಿಗಳು ತಾವು ಹಾರುತ್ತಿರುವಾಗಲೆ ಬಾಯಿತೆರೆದು ಗಾಳಿಯಲ್ಲಿ ಹಾರಾಡುತ್ತಿರುವ ಕೀಟಗಳನ್ನು ಹಿಡಿಯಬಲ್ಲುವು. ಮತ್ಸ್ಯಾಹಾರಿ ಹಕ್ಕಿಗಳ ಕೊಕ್ಕೂ ವೈವಿಧ್ಯಮಯ. ಬಾತು, ಹಂಸ ಮುಂತಾದುವುಗಳ ಕೊಕ್ಕು ಅಗಲವಾಗಿಯೂ ಚಪ್ಪಟೆಯಾಗಿಯೂ ಇದೆ. ಕೊಕ್ಕಿನ ಎಡಬಲ ಪಕ್ಕಗಳಲ್ಲಿ ಜರಡಿಯಂಥ ರಚನೆಗಳಿವೆ. ಈ ಹಕ್ಕಿಗಳು ನೀರಿನಲ್ಲಿ ಈಜುವಾಗ ಆಹಾರ ತುಂಬಿದ ನೀರನ್ನು ಬಾಯಿತುಂಬ ತುಂಬಿಕೊಂಡು ಕೊಕ್ಕನ್ನು ಮುಚ್ಚುತ್ತವೆ. ಆಗ ಆಹಾರ ವಸ್ತುಗಳು ಮಾತ್ರ ಬಾಯಲ್ಲಿ ಉಳಿದು ನೀರೆಲ್ಲ ಹೊರಬಂದುಬಿಡುತ್ತದೆ. ಸ್ಪೂನ್‌ಬಿಲ್ ಬಾತಿನ ಕೊಕ್ಕು ಇವುಗಳ ಕೊಕ್ಕಿನಂತೆಯೇ ಇದ್ದರೂ ಅವಕ್ಕಿಂತ ಹೆಚ್ಚು ಉದ್ದ. ಪೆಲಿಕನ್, ಗ್ಯಾನೆಟ್, ಕಾರ್ಮೊರಾಂಟ್ ಹಕ್ಕಿಗಳ ಕೊಕ್ಕು ತುಂಬ ಉದ್ದ. ಇದರಿಂದ ನೀರಿನಲ್ಲಿನ ಮೀನು, ಬಸವನಹುಳು ಮುಂತಾದ ಪ್ರಾಣಿಗಳನ್ನು ಹಿಡಿಯಲು ಅನುಕೂಲ. ಪೆಲಿಕನ್ ಕೊಕ್ಕಿನ ಕೆಳಭಾಗದಲ್ಲಿ ಒಂದು ರೀತಿಯ ಚರ್ಮದ ಚೀಲ ಇದೆ. ನೀರಿನಲ್ಲಿ ಈಜುತ್ತಲೆ ಕೊಕ್ಕನ್ನು ಅಗಲಿಸಿ ಈ ಚೀಲವನ್ನು ಮುಳುಗುಬಲೆಯಂತೆ ಉಪಯೋಗಿಸಿ ಮೀನುಗಳನ್ನು ಅದು ಹಿಡಿಯಬಲ್ಲುದು. ಆಲ್ಬಟ್ರಾಸ್, ಸ್ಕಿಮರ್ ಮುಂತಾದ ಹಕ್ಕಿಗಳ ಕೊಕ್ಕು ನೀರಿನಿಂದ ಆಗಿಂದಾಗ್ಗೆ ಹೊರನೆಗೆಯುವ ಮೀನುಗಳನ್ನು ನೀರಿನ ಮೇಲೆ ಹಾರುತ್ತಿರುವಂತೆಯೇ ಹಿಡಿಯಲು ಅನುಕೂಲವಾಗಿದೆ. ಆಯಿಸ್ಟರ್ ಕ್ಯಾಚರ್ ಹಕ್ಕಿಯ (ಹಿಮಟೋಪಸ್ ಪ್ರಭೇದ) ಕೊಕ್ಕು ಮೃದ್ವಂಗಿ ಪ್ರಾಣಿಗಳನ್ನು ಹಿಡಿಯುವುದಕ್ಕೂ ಅವುಗಳ ಚಿಪ್ಪನ್ನು ಒಡೆದು ಒಳಗಿನ ಪ್ರಾಣಿಗಳನ್ನು ತಿನ್ನುವುದಕ್ಕೂ ಹೇಳಿ ಮಾಡಿಸಿದಂತಿದೆ. ಈ ಹಕ್ಕಿ ತನ್ನ ನೀಳವಾದ, ಗಡುಸಾದ ಹಾಗೂ ಎಡಪಕ್ಕಗಳಲ್ಲಿ ಚಪ್ಪಟೆಯಾದ ಕೊಕ್ಕನ್ನು ಮೃದ್ವಂಗಿಗಳ ಚಿಪ್ಪಿನೊಳಕ್ಕೆ ತೂರಿಸಿ ತರುವಾಯ ಚಿಪ್ಪುಗಳನ್ನು ಬೇರ್ಪಡುವಂತೆ ಮಾಡಿ ಒಳಗಿನ ಮೃದುವಾದ ಮಾಂಸವನ್ನು ತಿನ್ನುತ್ತದೆ. ಗುಬ್ಬಚ್ಚಿ, ಪಾರಿವಾಳ, ಕೋಳಿ, ಗೀಜುಗಗಳಲ್ಲಿ ಕಾಳುಗಳನ್ನು ಆರಿಸಿ ತಿನ್ನಲು ಅನುಕೂಲವಾಗಿರುವ ಕೊಕ್ಕು ಇದೆ. ಹಾರ್ನ್‌ಬಿಲ್ ಹಕ್ಕಿಯ ಕೊಕ್ಕು ಬಹಳ ದೊಡ್ಡದು ಮತ್ತು ಉದ್ದವಾದುದು. ಹಣ್ಣುಗಳನ್ನು ತಿನ್ನುವುದರಲ್ಲಿ ಸಹಾಯಕ. ಕ್ರಾಸ್‌ಬಿಲ್ ಎಂಬ ಹಕ್ಕಿಯ ಕೊಕ್ಕು ವಿಚಿತ್ರ ಬಗೆಯದು. ಕೊಕ್ಕಿನ ಮೇಲ್ಭಾಗ, ಕೆಳಭಾಗಗಳು ಒಂದನ್ನೊಂದು ಅಡ್ಡ ಹಾಯುತ್ತವೆ. ಮೇಲ್ಭಾಗ ಬಲಕ್ಕೂ ಕೆಳಭಾಗ ಎಡಕ್ಕೂ ತಿರುವಿಕೊಂಡಿರುತ್ತವೆ. ಅಲ್ಲದೆ, ಕೊಕ್ಕು ಮುಚ್ಚಿರುವಾಗಲೂ ತುದಿಗಳು ಅಡ್ಡಡ್ಡಲಾಗಿ ಚಲಿಸಬಲ್ಲವು. ಇಂಥ ರಚನೆಯಿಂದಾಗಿ ಕ್ರಾಸ್‌ಬಿಲ್ ಹಕ್ಕಿಗಳಿಗೆ ಪೈನ್ ಮರದ ಶಂಕುಗಳನ್ನು ಬಿಡಿಸಿಕೊಂಡು ಒಳಗಿರುವ ಬೀಜಗಳನ್ನು ತಿನ್ನುವ ನೈಪುಣ್ಯ ಬಂದಿದೆ.

ನ್ಯೂಜಿಲೆಂಡ್ ವಾಸಿಯಾದ ಹೂಯಿಯ ಎಂಬ ಹಕ್ಕಿಗಳಲ್ಲಿ ಗಂಡುಹಕ್ಕಿಯ ಕೊಕ್ಕು ಒಂದು ತೆರನಾದರೆ ಹೆಣ್ಣಿನ ಕೊಕ್ಕು ಇನ್ನೊಂದು ತೆರ. ಗಂಡಿನ ಕೊಕ್ಕು ಚಿಕ್ಕದಾಗಿದ್ದು ಗಡುಸಾಗಿಯೂ ಶಂಕುವಿನಾಕಾರದ್ದೂ ಆಗಿದೆ. ಇದರಿಂದ ಗಂಡು ಹಕ್ಕಿ ಕೀಟಗಳು ವಾಸಿಸುತ್ತಿರುವ ಮರಗಳನ್ನು ಕುಕ್ಕಿ ಕೀಟಗಳ ಗೂಡುಗಳನ್ನು ತೆರವು ಮಾಡಬಲ್ಲುದು. ಹೆಣ್ಣು ಹಕ್ಕಿಯ ಕೊಕ್ಕು ತೆಳುವಾಗಿಯೂ ನೀಳವಾಗಿಯೂ ಇದ್ದು ಕುಡುಗೋಲಿನಂತೆ ಬಾಗಿದೆ. ಇದರಿಂದ ಇದು ಕೀಟಗಳನ್ನು ಹಿಡಿಯಲು ಮಾತ್ರ ಅನುಕೂಲವಾಗಿದೆ. ಆದರೆ ಗಂಡಿನಂತೆ ಕೀಟಗಳ ಗೂಡುಗಳನ್ನು ಕುಕ್ಕಲು ಸಹಾಯಕವಾಗಿಲ್ಲ. ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ತಮ್ಮ ಆಹಾರಸೇವನೆಯಲ್ಲಿ ಪರಸ್ಪರ ಪೂರಕಗಳಾಗಿ ಕಾರ್ಯನಿರ್ವಹಿಸುತ್ತವೆ.

ಕೊಕ್ಕು ತನ್ನ ಆಕಾರ ಮತ್ತು ಗಾತ್ರಗಳಲ್ಲಿ ವೈವಿಧ್ಯಮಯವಾಗಿರುವಂತೆಯೇ ಬಣ್ಣದಲ್ಲೂ ವಿವಿಧತೆಯನ್ನು ಪ್ರದರ್ಶಿಸುತ್ತದೆ. ಕಾಗೆಯ ಕೊಕ್ಕು ಕಪ್ಪಾಗಿದ್ದರೆ, ಗಿಳಿ, ಮೈನ ಮುಂತಾದ ಹಕ್ಕಿಗಳ ಕೊಕ್ಕು ಹಳದಿ, ಕೆಂಪು, ಕಿತ್ತಳೆ, ನೇರಳೆ ಇತ್ಯಾದಿ ಬಣ್ಣಗಳಿಂದ ಕೂಡಿ ವರ್ಣರಂಜಿತವಾಗಿರುತ್ತದೆ.

***

**ಕೊಕ್ಕೆಹುಳು:** ಆಂಕೈಲೊಸ್ಟೋಮ ಡ್ಯುಯೊಡಿನೇಲ್ ಎಂಬ ಶಾಸ್ತ್ರೀಯ ಹೆಸರಿನ ಪರತಂತ್ರ ಜೀವಿ (ಹುಕ್ ವರ್ಮ್). ನೆಮಟೋಡ ವರ್ಗದ ಸ್ಟ್ರಾಂಗೈಲಿಡೆ ಕುಟುಂಬಕ್ಕೆ ಸೇರಿದೆ. ಮನುಷ್ಯನ ಸಣ್ಣಕರುಳಿನ ಜೆಜುನಮ್ ಎಂಬ ಭಾಗದ ಒಳಪದರಕ್ಕೆ ಕಚ್ಚಿಕೊಂಡು ವಾಸಿಸುತ್ತದೆ. ಇದು ಉಷ್ಣ ಹಾಗೂ ಉಪೋಷ್ಣವಲಯ ಪ್ರದೇಶಗಳಲ್ಲಿ ಕೊಕ್ಕೆಹುಳು ರೋಗ (ಆಂಕೈಲೊಸ್ಟೋಮಿಯಾಸಿಸ್–ಹುಕ್‌ವರ್ಮ್ ಡಿಸೀಸ್) ಎಂಬ ಪ್ರಬಲವಾದ ಸಾಂಕ್ರಾಮಿಕ ರೋಗವನ್ನುಂಟುಮಾಡುತ್ತದೆ. ರಕ್ತ ಹೀನತೆ ಮತ್ತು ದುರ್ಬಲತೆ ಈ ರೋಗದ ಮುಖ್ಯ ಚಿಹ್ನೆಗಳು.

ಪ್ರೌಢಹುಳುಗಳು ಕೊಳವೆಯಾಕಾರದವು. ದೇಹದ ಮುಂತುದಿ ಕೊಂಚ ಬಾಗಿದೆ. ಹೆಣ್ಣು ಹುಳು ಗಂಡಿಗಿಂತ ಹೆಚ್ಚು ಉದ್ದವಾಗಿಯೂ ದಪ್ಪವಾಗಿಯೂ ಇರುತ್ತದೆ. ಹೆಣ್ಣು ಹುಳುವಿನ ಉದ್ದ 10–13 ಮಿಮೀ. ಗಂಡಿನ ಉದ್ದ 8–10 ಮಿಮೀ. ಹೆಣ್ಣಿನ ದೇಹದ ಹಿಂತುದಿ ಮೊಂಡಾಗಿಯೂ ನೇರವಾಗಿಯೂ ಇದೆ. ದೇಹದ ತಳಭಾಗದಲ್ಲಿ, ದೇಹದ 1/3 ಭಾಗದಷ್ಟು ಹಿಂದಕ್ಕೆ ಜನನದ್ವಾರವಿದೆ. ಗಂಡಿನಲ್ಲಿ ಜನನದ್ವಾರ ದೇಹದ ಹಿಂತುದಿಯಲ್ಲಿರುವ ಕ್ಲೋಯಕ ದ್ವಾರದ ಬಳಿ ತೆರೆದಿರುತ್ತದೆ. ಅಲ್ಲದೆ ಇದರ ಅಕ್ಕಪಕ್ಕಗಳಲ್ಲಿ ಕ್ಯುಟಿಕಲ್ ಪದರ ಅಗಲವಾಗಿ ಹರಡಿಕೊಂಡಿದ್ದು ಒಂದು ಬಗೆಯ ಮುಚ್ಚಳವಾಗಿ ಮಾರ್ಪಟ್ಟಿದೆ. ಇದಕ್ಕೆ ಕಾಪ್ಯುಲೇಟರಿ ಬರ್ಸ ಎಂಬ ಹೆಸರಿದೆ. ಸಂಭೋಗ ಕಾಲದಲ್ಲಿ ಹೆಣ್ಣನ್ನು ಹಿಡಿದುಕೊಳ್ಳಲು ಇದು ನೆರವಾಗುತ್ತದೆ. ದೇಹದ ಮುಂದಿನ ತುದಿಯ ಮೇಲ್ಭಾಗದಲ್ಲಿ ಬಾಯಿ ಇದೆ. ಬಾಯಿ ಸುತ್ತಲೂ ಕೊಕ್ಕೆಯಂಥ 6 ಹಲ್ಲುಗಳಿವೆ. ಗಂಟಲಿನಲ್ಲಿ

ತ್ರಿಕೋನಾಕಾರದ ಮತ್ತು ಚೂಪಾದ ಎರಡು ಹಲ್ಲುಗಳಿವೆ. ಇವುಗಳ ಸಹಾಯದಿಂದ ಕರುಳಿನ ಗೋಡೆಯಲ್ಲಿ ರಂಧ್ರ ಮಾಡಿ ರಕ್ತವನ್ನು ಹೀರಿ ಜೀವಿಸುತ್ತದೆ.

ಪೋಷಕಜೀವಿಯ ಕರುಳಿನಲ್ಲಿ ಗಂಡು ಹೆಣ್ಣು ಹುಳುಗಳ ಸಂಭೋಗ ಕ್ರಿಯೆ ನಡೆಯುತ್ತದೆ. ಹೆಣ್ಣಿನ ಗರ್ಭಕೋಶದಲ್ಲಿ ಗರ್ಭಾಂಕುರತೆಯಾಗಿ, ಗರ್ಭಕಟ್ಟಿದ ಮೊಟ್ಟೆಗಳು ಸ್ವಲ್ಪಮಟ್ಟಿಗೆ ಬೆಳೆದು ಪೋಷಕಜೀವಿಯ ಮಲದೊಡನೆ ಹೊರಬರುತ್ತವೆ. ಜೌಗು ಮಣ್ಣು ಮತ್ತು ಸಾಕಷ್ಟು ಉಷ್ಣತೆ ದೊರೆತರೆ 24–48 ಗಂಟೆಗಳ ಕಾಲದಲ್ಲಿ ಲಾರ್ವಗಳು ಮೊಟ್ಟೆಯಿಂದ ಹೊರಬೀಳುತ್ತವೆ. ಇವುಗಳ ಮೈ ಸುತ್ತಲೂ ತೆಳುವಾದ ಪಾರದರ್ಶಕ ಪೊರೆ ಉಂಟು. ಈ ಹಂತದ ಲಾರ್ವಗಳಿಗೆ ರ್‍ಯಾಬ್ಡೈಟಿಫಾರ್ಮ್ ಲಾರ್ವಗಳೆಂದು ಹೆಸರು. ಇದು ಕೊಕ್ಕೆಹುಳುವಿನ ಜೀವನಚರಿತ್ರೆಯಲ್ಲಿ ಮೊದಲನೆಯ ಹಂತ. ಲಾರ್ವದ ಅನ್ನನಾಳ ಮೊಟಕಾಗಿದ್ದು ಒಂದು ಗೋಳಾಕಾರದ ಉಬ್ಬಿನಂತೆ ಇರುತ್ತದೆ. ಲಾರ್ವಗಳು ಜೌಗು ಮಣ್ಣಿನಲ್ಲಿರುವ ಸಾವಯವ ಪದಾರ್ಥವನ್ನು ಆಹಾರವಾಗಿ ಉಪಯೋಗಿಸಿಕೊಳ್ಳುತ್ತವೆ. ಮೂರು ದಿವಸಗಳ ಅನಂತರ ಫೈಲೆರಿಫಾರಂ ಎಂಬ ಎರಡನೆಯ ಘಟ್ಟವನ್ನು ತಲುಪುತ್ತವೆ. ಈ ಹಂತದಲ್ಲಿ ಇವುಗಳ ಅನ್ನನಾಳ ಸ್ವಲ್ಪ ಹೆಚ್ಚಿನ ಉದ್ದವಿರುತ್ತದೆ. ಲಾರ್ವಗಳು ಕ್ರಮೇಣ ಬೆಳೆದು ಹೊರಗಿನ ನಿರಾಹಾರಿ ಫೈಲೆರಿಫಾರಂ ಲಾರ್ವ ಎಂಬ ಮೂರನೆಯ ಘಟ್ಟಕ್ಕೆ ಬರುತ್ತವೆ. ಈ ಘಟ್ಟದಲ್ಲಿ ಇವಕ್ಕೆ ಮನುಷ್ಯನ ದೇಹವನ್ನು ಪ್ರವೇಶಿಸುವ ಸಾಮರ್ಥ್ಯ ಬರುತ್ತದೆ. ಸೂಕ್ತ ಪೋಷಕಜೀವಿಯ ಆಸರೆ ಸಿಕ್ಕದಿದ್ದರೆ ಇವು ಜೌಗು ಮಣ್ಣಿನಲ್ಲಿ ಒಂದೆರಡು ತಿಂಗಳುಗಳ ಕಾಲ ಜೀವಿಸಿರಲೂ ಬಲ್ಲವು. ಮೂರನೆಯ ಘಟ್ಟದ ಲಾರ್ವಗಳು ಹೊರಗಿನಿಂದ ಆಹಾರ ತೆಗೆದುಕೊಳ್ಳದೆ, ತಮ್ಮ ಹಿಂದಿನ ಹಂತಗಳಲ್ಲಿ ಕೂಡಿಟ್ಟ ಆಹಾರಪದಾರ್ಥಗಳನ್ನು ಉಪಯೋಗಿಸಿಕೊಂಡು ಜೀವಿಸುತ್ತವೆ. ಜೌಗು ಪ್ರದೇಶದಲ್ಲಿ ಕಾಲುಗಳಿಗೆ ರಕ್ಷಣೆಯಿಲ್ಲದೆ ನಡೆಯುವ ಅಥವಾ ಕೆಲಸ ಮಾಡುತ್ತಿರುವವರ ಕಾಲಿನ ಚರ್ಮವನ್ನು ಕೊರೆದು ಅವರ ದೇಹವನ್ನು ಪ್ರವೇಶಿಸುತ್ತವೆ. ಮನುಷ್ಯಚರ್ಮದ ಸ್ಪರ್ಶವಾದ ಕೂಡಲೆ ಲಾರ್ವದ ಹೊರಕವಚ ಕಳಚಿ ಬೀಳುತ್ತದೆ. ಕ್ರಮೇಣ ಚರ್ಮವನ್ನು ಕೊರೆದು, ಒಳತೂರಿ, ರಕ್ತ ಪರಿಚಲನಾಮಂಡಲದಲ್ಲಿ ಸೇರುತ್ತವೆ. ರಕ್ತ ಅಥವಾ ಲಿಂಫ್ ನಾಳಗಳ ಮೂಲಕ ಶ್ವಾಸಕೋಶಗಳು, ಶ್ವಾಸನಾಳ, ಅನ್ನನಾಳ ಮತ್ತು ಜಠರವನ್ನು ಹಾಯ್ದು ಸಣ್ಣ ಕರುಳನ್ನು ಪ್ರವೇಶಿಸುತ್ತವೆ. ಹೀಗೆ ಪೋಷಕಜೀವಿಯ ಅಂಗಾಂಗಗಳಲ್ಲಿ ಚಲಿಸುವ ಕಾಲದಲ್ಲಿ ಅವುಗಳ ಬೆಳವಣಿಗೆ ಮುಂದುವರಿಯುತ್ತದೆ. ಕೊನೆಗೆ ಸಣ್ಣ ಕರುಳಿನ ಜೆಜುನಮ್ ಭಾಗಕ್ಕೆ ಬಂದು, ಒಳಪದರಕ್ಕೆ ಕಚ್ಚಿಕೊಂಡು ಒಂದು ವಾರದಲ್ಲಿ ಪ್ರೌಢಜೀವಿಯಾಗುತ್ತವೆ. ಕೊಕ್ಕೆಹುಳುವಿನ ಆಯಸ್ಸು ಸುಮಾರು 3–4 ವರ್ಷಗಳು. ಇದು ರಕ್ತಹೀರಿ ಜೀವಿಸುವುದರಿಂದ ಹುಳುಗಳ ಸಂಖ್ಯೆ ಅತಿಯಾಗಿದ್ದರೆ ರೋಗಿ ರಕ್ತಕೊರೆಯಾಗಿ ಬಿಳಿಚಿಕೊಳ್ಳುತ್ತಾನೆ. ಈ ಸಾಂಕ್ರಾಮಿಕ ರೋಗದ ಪ್ರಾಬಲ್ಯವನ್ನು ತಡೆಗಟ್ಟಲು ರೋಗಿಗಳ ಮಲವನ್ನು ನಾಶ ಮಾಡಬೇಕು. ಲಾರ್ವಗಳ ಬೆಳವಣಿಗೆಗೆ ನೆರವಾಗುವ ಸನ್ನಿವೇಶಗಳನ್ನು ಹತೋಟಿಯಲ್ಲಿಡಬೇಕು. ಜನ ಕಾಲಿಗೆ ರಕ್ಷಣೆಯಿಲ್ಲದೆ ಜೌಗುಪ್ರದೇಶಗಳಲ್ಲಿ ಓಡಾಡಬಾರದು.

***

**ಕೊಕ್ಕೆಹುಳು ರೋಗ:** ನೆಮಟೋಡ ವರ್ಗದ ಆಂಕೈಲೋಸ್ಟೋಮ ಡ್ಯುಯೊಡಿನೇಲ್ ಎಂಬ ಪರತಂತ್ರ ಜೀವಿಯಿಂದ ಉಂಟಾಗುವ ಸಾಂಕ್ರಾಮಿಕ ರೋಗ. ಆಂಗ್ಲಭಾಷೆಯಲ್ಲಿ ಆಂಕೈಲೋಸ್ಟೋಮಿಯಾಸಿಸ್ ಅಥವಾ ಹುಕ್‌ವರ್ಮ್ ಡಿಸೀಸ್ ಎಂದು ಕರೆಯುತ್ತಾರೆ.

ಇಟಲಿ ದೇಶದಲ್ಲಿ ಏಂಜೆಲೊ ಡುಬಿನಿ ಎಂಬುವವರು 1838 ರಲ್ಲಿ ಕೊಕ್ಕೆ ಹುಳುವನ್ನು ಮೊದಲಬಾರಿಗೆ ಕಂಡರಾದರೂ ಈಜಿಪ್ಟಿನ ಲೂಸ್ 1898 ರಲ್ಲಿ ಇವುಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿದರು. ಹುಳುವು ಅಂಕುಡೊಂಕಾಗಿದ್ದು ಆಕಾರದಲ್ಲಿ ಕೊಂಡಿಯನ್ನು ಹೋಲುತ್ತದೆ. ಆದುದರಿಂದ ಈ ಹುಳುವಿಗೆ ಆನ್‌ಕೈಲೋಸ್ಟೋಮ (ಆನ್‌ಕೈಲೋ=ಕೊಕ್ಕೆ; ಸ್ಟೋಮ=ಬಾಯಿ) ಎಂದು ನಾಮಕರಣವಾಗಿದೆ. ಸ್ಟಿಲ್ಸ ಎಂಬುವವರು 1902 ರಲ್ಲಿ ಕೊಕ್ಕೆಹುಳುವಿನ ಮತ್ತೊಂದು ಉಪಜಾತಿಯನ್ನು ಅಮೇರಿಕದಲ್ಲಿ ಪತ್ತೆ ಹಚ್ಚಿ ಇವಕ್ಕೆ ಅಮೇರಿಕದ ಕೊಲೆಪಾತಕ (ನೆಕ್ಟರ್ ಅಮೇರಿಕಾನ್ಸ್) ಎಂದು ಕರೆದಿದ್ದಾರೆ. ಈ ಹುಳುಗಳ ಉಗಮಸ್ಥಾನ ಆಫ್ರಿಕಾವಾಗಿದ್ದು, ಅಲ್ಲಿನ ಜೀತದಾಳುಗಳೊಂದಿಗೆ ಇವು ಅಮೇರಿಕಾವನ್ನು ಪ್ರವೇಶಿಸಿವೆ ಎಂದು ಭಾವಿಸಲಾಗಿದೆ. ಈಗ ಕೊಕ್ಕೆಹುಳುಗಳು ವಿಶ್ವವ್ಯಾಪಿ.

ಭಾರತದ 200 ಮಿಲಿಯನ್ ಪ್ರಜೆಗಳಿಗೆ ಕೊಕ್ಕೆಹುಳುಗಳ ಬಾಧೆ ಇದೆ ಎಂದು ಸಮೀಕ್ಷೆಗಳು ತಿಳಿಸಿವೆ. ಅಸ್ಸಾಂ, ಬಂಗಾಲ, ಉತ್ತರ ಪ್ರದೇಶ, ಬಿಹಾರ, ಒರಿಸ್ಸಾ, ಪಂಜಾಬ್, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಶೇ. 80 ರಷ್ಟು ಜನರಿಗೆ ಕೊಕ್ಕೆಹುಳುಗಳ ಸೋಂಕು ತಗುಲಿದೆ. ಕೇರಳ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿಯೂ ಈ ವ್ಯಾಧಿ ವ್ಯಾಪಕವಾಗಿಯೇ ಇದೆ. ಉತ್ತರ ಭಾರತೀಯರನ್ನು ಆನ್‌ಕೈಲೋಸ್ಟೋಮ ಜಾತಿಯ ಹುಳು ಕಾಡುತ್ತಿದೆ. ದಕ್ಷಿಣದವರನ್ನು ಹೆಚ್ಚಾಗಿ ಕಾಡುತ್ತಿರುವುದು ನೆಕ್ಟರ್ ಅಮೇರಿಕಾನಸ್ ಜಾತಿಯ ಕೊಕ್ಕೆಹುಳುಗಳು. ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಹೊರತುಪಡಿಸಿದಲ್ಲಿ, ಎರಡು ಜಾತಿ ಕೊಕ್ಕೆಹುಳುಗಳ ಆಕಾರ ಮತ್ತು ಜೀವನಕ್ರಮದಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ. ಕೊಕ್ಕೆಹುಳುಗಳನ್ನು ಚಿಲುಮೆ ಹುಳು, ಚಿಕ್ಕ ಜಂತು ಎಂದೂ ಕರೆಯುವುದಿದೆ.



ಕೊಕ್ಕೆ ಹುಳು

ಚಿಲುಮೆ ಹುಳುಗಳಿಗೆ ಹಾಲು ಬಿಳುಪಿನ ಬಣ್ಣವಿದೆ. ಕೇವಲ ಎಂಟು ಹತ್ತು ಮಿಮೀ ಉದ್ದ ಮತ್ತು ಅರ್ಧ ಮಿಮೀ ದಪ್ಪ ಇರುತ್ತದೆ. ದೇಹ ಅಂಕು ಡೊಂಕಾಗಿದೆ. ಬಾಯಿಯ ಭಾಗ ಕೊಕ್ಕೆಯಂತೆ ಬಾಗಿದೆ. ಬಾಯಿಯಲ್ಲಿ ರಕ್ತ ಹೀರಲು ಅನುಕೂಲವಾಗಿರುವ ಗಟ್ಟಿಯಾದ ಆರು ಹಲ್ಲುಗಳಿವೆ. ಲಿಂಗಭೇದವಿದ್ದು ಗಂಡಿಗಿಂತ ಹೆಣ್ಣು ಸ್ವಲ್ಪ ದೊಡ್ಡದಾಗಿದೆ. ಇವುಗಳ ಜೊಲ್ಲಿನಲ್ಲಿರುವ ರಾಸಾಯನಿಕಕ್ಕೆ ರಕ್ತವನ್ನು ಹೆಪ್ಪುಗಟ್ಟದಂತೆ ಇರಿಸುವ ಗುಣವಿದೆ. ಹೀಗಾಗಿ, ಬಾಯಿಯ ಹಲ್ಲುಗಳಿಂದ ಆಶ್ರಯದಾತನ ಕರುಳನ್ನು ಚುಚ್ಚಿ ರಕ್ತ ಹೀರುತ್ತಾ ಬದುಕುತ್ತವೆ.

ಚಿಲುಮೆ ಹುಳುಗಳು ಚಿಕ್ಕ ಕರುಳಿನ ಪ್ರಥಮ ಭಾಗವಾದ ಜೆಜುನಮ್‌ನಲ್ಲಿ ವಾಸಿಸುತ್ತವೆ. ಮಾನವ ರಕ್ತವೇ ಇವುಗಳ ಆಹಾರ. ದಕ್ಷಿಣ ಭಾರತದಲ್ಲಿನ ನೆಕ್ಟರ್ ಅಮೇರಿಕಾನಸ್ ಜಾತಿಯ ಹುಳುಗಳು ದಿನಕ್ಕೆ 0.04 ಮಿಲೀ ರಕ್ತ ಹೀರುತ್ತವೆ. ಕೇವಲ 25 ಹುಳುಗಳು ದೇಹದಲ್ಲಿದ್ದರೂ ದಿನಪ್ರತಿ ಒಂದು ಮಿಲೀ ರಕ್ತ ನಾಶವಾದಂತೆ. ಉತ್ತರ ಭಾರತದಲ್ಲಿ ಹೆಚ್ಚಾಗಿ ಕಾಣಸಿಗುವ ಆನ್‌ಕೈಲೋಸ್ಟೋಮ ಜಾತಿಯ ಕೊಕ್ಕೆ ಹುಳು ಹೆಚ್ಚು ಭಯಂಕರವಾಗಿದ್ದು ಪ್ರತಿಹುಳು 0.2 ಮಿಲೀ ನಂತೆ ಕೇವಲ ಐದು ಹುಳುಗಳು ಒಂದು ದಿನದಲ್ಲಿ ಒಂದು ಮಿಲೀ ರಕ್ತವನ್ನು ಕುಡಿದುಬಿಡುತ್ತವೆ.

ಹರೆಯದ ಹೆಣ್ಣುಹುಳು ಪ್ರತಿದಿನ 15 ರಿಂದ 20 ಸಾವಿರದಂತೆ ತನ್ನ ಜೀವಿತಾವಧಿಯಲ್ಲಿ 50 ರಿಂದ 60 ಮಿಲಿಯನ್‌ಗಳಷ್ಟು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆ ಅಂಡಾಕಾರವಾಗಿದ್ದು 60 ಮೈ ಉದ್ದ, 40 ಮೈ ದಪ್ಪವಿರುತ್ತದೆ. ಮೊಟ್ಟೆಗೆ ಬಿಳಿಯ ಬಣ್ಣದ ಪಾರದರ್ಶಕ ಕವಚವಿದೆ. ಒಳಗಡೆಯ ತಿರುಳು ನಾಲ್ಕು ಭಾಗವಾಗಿ ವಿಂಗಡಣೆಯಾಗಿರುತ್ತದೆ.

ಕೊಕ್ಕೆಹುಳುವಿನ ವ್ಯಾಧಿಗೆ ಒಳಗಾದವರ ಮಲದೊಂದಿಗೆ ಅಸಂಖ್ಯಾತ ಸಂಖ್ಯೆಯ ಮೊಟ್ಟೆಗಳು ವಿಸರ್ಜನೆಯಾಗುತ್ತಿರುತ್ತವೆ. ನಮ್ಮ ದೇಶದ ಬಹುಪಾಲು ಜನರು ಮಲ ವಿಸರ್ಜಿಸುವುದು ಬಯಲಿನಲ್ಲಿ. ಹೀಗಾಗಿ ಮೊಟ್ಟೆಗಳು ಮಲದೊಂದಿಗೆ ಭೂಮಿಯನ್ನು ಸೇರುತ್ತವೆ. ನಮ್ಮ ದೇಶದ ಜಿಗುಟು ಅಥವಾ ಮರಳು ಮಣ್ಣು ಹಾಗೂ ಹವಾಮಾನ ಮೊಟ್ಟೆಗಳ ಬೆಳವಣಿಗೆಗೆ ಸೂಕ್ತವಾಗಿದೆ. ಒಂದೆರಡು ದಿನಗಳಲ್ಲಿ ಭೂಮಿಯ ಉಷ್ಣತೆಗೆ ಮೊಟ್ಟೆಗಳು ಒಡೆದು ಪುಟ್ಟ ಪುಟ್ಟ ಮರಿಗಳು ಹೊರಬರುತ್ತವೆ. ಇವು ಮತ್ತೆ ಬೆಳವಣಿಗೆ ಹೊಂದಿ ಒಂದೆರಡು ಸಾರಿ ಪೊರೆ ಕಳಚಿಕೊಂಡು ಮಾನವನ ಚರ್ಮವನ್ನು ಚುಚ್ಚಿಕೊಂಡು ಹೋಗಬಲ್ಲ ರ್‍ಯಾಬ್‌ಡೈಟಿಫಾರಂ ಎಂಬ ಲಾರ್ವವಾಗುತ್ತವೆ. ಭೂಮಿಯಲ್ಲಿ ಹರಿದಾಡಿಕೊಂಡಿದ್ದು, ಹುಲ್ಲಿನ ಎಲೆಯನ್ನು ಏರಿಕೊಂಡು, ಆತಿಥೇಯರಿಗಾಗಿ ಕಾಯುತ್ತಾ ತಿಂಗಳು ತನಕ ಬದುಕುತ್ತವೆ.

ಇತರೆ ಜಂತುಗಳಂತೆ ಕೊಕ್ಕೆಹುಳುಗಳು ಆಹಾರದ ಮೂಲಕ ದೇಹ ಸೇರದೆ ಲಾರ್ವಾಗಳು ತಮ್ಮ ಸೂಜಿಯಂತಹ ದೇಹವನ್ನು ಚರ್ಮದಲ್ಲಿ ತೂರಿಸಿಕೊಂಡು ದೇಹದೊಳಗೆ ಪ್ರವೇಶಿಸುತ್ತವೆ. ಮಾನವ ದೇಹದ ಉಷ್ಣದಿಂದ ಆಕರ್ಷಿತವಾದ ಲಾರ್ವಾಗಳು ಬರಿಗಾಲಿನ ಚರ್ಮ ತೂರಿಕೊಂಡು ಒಳ ಪ್ರವೇಶಿಸಿ ರಕ್ತವನ್ನು ಸೇರಿಕೊಳ್ಳುತ್ತವೆ. ಹೊಸ ಆಶ್ರಯ ಸ್ಥಾನದಲ್ಲಿ ಚುರುಟಿಯಾಗಿ ಚಲಿಸುತ್ತ ಯಕೃತ್, ಹೃದಯ, ಶ್ವಾಸಕೋಶ, ಶ್ವಾಸನಾಳಗಳಲ್ಲೆಲ್ಲಾ ಸಂಚರಿಸಿ ಕೊನೆಗೆ ಅನ್ನನಾಳದ ಮೂಲಕ ಚಿಕ್ಕ ಕರುಳನ್ನು ಸೇರುತ್ತವೆ. ಕರುಳಿನ ಗೋಡೆಗೆ ಬಾಯಿಹಚ್ಚಿ ರಕ್ತವನ್ನು ಹೀರುತ್ತಾ ಬೆಳೆಯುತ್ತವೆ. ಬಲಿತ ಹೆಣ್ಣು ಮೊಟ್ಟೆಗಳನ್ನಿಡಲಾರಂಭಿಸುತ್ತದೆ. ಲಾರ್ವ ಚರ್ಮದ ಮೂಲಕ ದೇಹ ಸೇರಿದ ಆರು ವಾರಗಳ ಅನಂತರ ಬೆಳೆದು ದೊಡ್ಡದಾಗಿ ಮೊಟ್ಟೆ ಇಡುವ ಹಂತವನ್ನು ತಲುಪುತ್ತದೆ. ಹುಳುಗಳ ಆಯುಷ್ಯ 3 ರಿಂದ 4 ವರ್ಷಗಳು.

ಯಾವುದೇ ವಯಸ್ಸಿನವರಿಗೆ ಕೊಕ್ಕೆಹುಳುವಿನ ಬಾಧೆ ತಗುಲಬಹುದಾದರೂ 15 ರಿಂದ 25 ವರ್ಷದ ಗ್ರಾಮೀಣ ಕೃಷಿಕರಿಗೆ ಹುಳುಗಳ ಉಪಟಳ ಅಧಿಕ. ಹುಳುವಿನ ಬಾಧೆಗೊಳಗಾದವರಿಗೆ ರಕ್ತಹೀನತೆ ಉಂಟಾಗುತ್ತದೆ. ರಕ್ತಹೀನತೆಯಿಂದ ಅಶಕ್ತತೆ, ಆಯಾಸ, ಮುಖ ಬಿಳಿಚಿಕೊಳ್ಳುವಿಕೆ, ದೇಹದಲ್ಲಿ ಬಾವು, ಹೃದಯ ದೌರ್ಬಲ್ಯ ಮುಂತಾದ

ತೊಂದರೆಗಳು ಉದ್ಭವಿಸುತ್ತವೆ. ದುಡಿವ ಸಾಮರ್ಥ್ಯ ಕಡಿಮೆಯಾಗುತ್ತದೆ. ಆರ್ಥಿಕ ಪರಿಸ್ಥಿತಿಯೂ ಹದಗೆಡುತ್ತದೆ.

ರಕ್ತಹೀನತೆಯಿಂದ ಬಳಲುವವರಿಗೆ ರೋಗಗಳನ್ನೆದುರಿಸುವ ಸಾಮರ್ಥ್ಯ ಕುಗ್ಗುತ್ತದೆ. ಪದೇ ಪದೇ ಕಾಯಿಲೆ ಬೀಳುತ್ತಾರೆ. ರಕ್ತಹೀನತೆಗೊಳಗಾದ ಗರ್ಭಿಣಿಯರು ಅಪೌಷ್ಟಿಕ ಮಗುವನ್ನು ಹೆರುತ್ತಾರೆ. ಮಕ್ಕಳು ಆಟ ಪಾಠದಲ್ಲಿ ಹಿಂದೆ ಬೀಳುತ್ತಾರೆ. ಇವರ ಬೆಳವಣಿಗೆಯೂ ಸಮರ್ಪಕವಾಗಿರಲಾರದು.

ಕೊಕ್ಕೆಹುಳುವಿನ ಮರಿಗಳು ಚರ್ಮವನ್ನು ತೂರಿಕೊಂಡು ದೇಹವನ್ನು ಪ್ರವೇಶಿಸುವುದರಿಂದ ಅವು ಹೊಕ್ಕ ಜಾಗದಲ್ಲಿ ನವೆ, ಉರಿ, ಕೀವಿನ ಗುಳ್ಳೆ ಉಂಟಾಗುವುದಿದೆ. ಕಾಲ್ಬೆರಳುಗಳ ಸಂದಿಯಲ್ಲಿ ಹೀಗಾಗುವುದು ಹೆಚ್ಚು. ಹುಳುಗಳು ಶ್ವಾಸಕೋಶದಲ್ಲೂ ಕೆಲಕಾಲ ಕಳೆದು ಆಶ್ರಯದಾತನನ್ನು ಕೆಮ್ಮಿಸುತ್ತವೆ. ಕೆಲವರಿಗೆ ಹುಳುವಿನಿಂದ ಅಲರ್ಜಿಯಾಗಿ ಮೈ ಕಡಿತ, ದದ್ದು ಉಂಟಾಗುತ್ತದೆ.

ಕೊಕ್ಕೆಹುಳುಗಳನ್ನು ಸಂಹರಿಸಲು ಕಾರ್ಬನ್ ಟೆಟ್ರಾಕ್ಲೋರೈಡ್, ಥೈಮಾಲ್, ಚೆನೊಪೋಡಿಯಂ ಎಣ್ಣೆ, ಹೆಕ್ಸೈಲ್ ರೆಸೋರ್ಸಿನಾಲ್, ಮುಂತಾದುವು ಪರಿಣಾಮಕಾರಿಯಾದ ಔಷಧಗಳು. ಕೊಕ್ಕೆಹುಳುಗಳು ದೇಹಕ್ಕೆ ಸೇರದಂತೆ ಕಾಲಿಗೆ ಚಪ್ಪಲಿ ಧರಿಸಿಕೊಳ್ಳಬೇಕು. ರೈತರು ಮಣ್ಣು ಮತ್ತು ಗೊಬ್ಬರವನ್ನು ಮುಟ್ಟುವಾಗ ಕೈ ಮತ್ತು ಕಾಲಿಗೆ ರಕ್ಷಕ ಕವಚ ಹಾಕಿಕೊಂಡರೆ ಚಿಲುಮೆ ಹುಳುಗಳಿಂದ ರಕ್ಷಣೆ ದೊರೆಯುತ್ತದೆ.

ಹುಳುಗಳನ್ನು ಶಾಶ್ವತವಾಗಿ ಹೊರಗಟ್ಟಬೇಕಾದರೆ ಸರ್ವರಿಗೂ ಶೌಚಾಲಯದ ಸೌಲಭ್ಯ ಸಿಗಬೇಕು. ನೆಲದಲ್ಲಿ ಮಲ ವಿಸರ್ಜಿಸುವ ಪದ್ಧತಿ ನಿಲ್ಲುವವರೆಗೆ ನಮಗೆ ಕೊಕ್ಕೆಹುಳುಗಳ ಬಾಧೆ ತಪ್ಪುವುದೇ ಅಸಾಧ್ಯ. ಶೌಚಾಲಯದ ಕ್ರಾಂತಿಯಿಂದ ಕೊಕ್ಕೆ ಹುಳುವಿಗೆ ವಿದಾಯ ಕೋರಲೆಂದೇ ರಾಕ್ ಫೆಲರ್ ಫೌಂಡೇಶನ್ ಎಂಬ ಸಂಸ್ಥೆ 1913 ರಲ್ಲಿ ಸ್ಥಾಪಿತಗೊಂಡಿದೆ. ಈ ಸಂಸ್ಥೆ ವಿಶ್ವಾದ್ಯಂತ ತನ್ನ ಚಟುವಟಿಕೆಗಳನ್ನು ನಡೆಸುತ್ತಿದೆ.

***

**ಕೊಡತಿಕೀಟ:** ಓಡೊನೇಟ ಗಣದ, ಅನೈಸಾಪ್ಟರ ಉಪಗಣದಲ್ಲಿ 8 ಕುಟುಂಬಗಳಿಗೆ ಸೇರಿದ ಹಲವಾರು ಜಾತಿಯ ಕೀಟ (ಡ್ರಾಗನ್ ಫ್ಲೈ). ಉಷ್ಣವಲಯ ಪ್ರದೇಶಗಳಲ್ಲಿನ ಹಳ್ಳ, ನದಿ, ಕೆರೆ, ಕೊಳಗಳ ಬಳಿ, ಇವು ವೇಗವಾಗಿ ಚುರುಕಾಗಿ ಹಾರಾಡುತ್ತಿರುತ್ತವೆ. ಸೊಳ್ಳೆ, ಕುದುರೆನೊಣ ಮತ್ತು ಇತರ ಕೀಟಗಳನ್ನು ಭಕ್ಷಿಸಿ ಜೀವಿಸುತ್ತವೆ. ಇವು ಹಾರುತ್ತಿರುವಾಗಲೇ ಆಹಾರಕ್ಕಾಗಿ ಜೀವಿಯನ್ನು ಹಿಡಿಯಬಲ್ಲುವು. ದಕ್ಷಿಣ ಅಮೆರಿಕದ ಮೆಗಲೊಪ್ರೆಸಸ್ ಸೀರುಲೆಟಸ್ ಎಂಬುದು 18 ಸೆಂಮೀ ಅಗಲವಿದೆ. ಗಂಡು ಹೆಣ್ಣುಗಳೆರಡು ವರ್ಣರಂಜಿತವಾಗಿವೆ. ದೇಹವು ಹಸಿರು, ಕೆಂಪು, ಹಳದಿ, ನೀಲಿ, ಕಂದು ಬಣ್ಣದಿಂದಾಗಿದೆ. ಬಿಸಿಲಿನಲ್ಲಿ ಹಾರಾಡುತ್ತಿರುವಾಗ ಇವು ಅತ್ಯಂತ ಸುಂದರವಾಗಿ ಕಾಣುತ್ತವೆ. ಕನ್ಯಾಕೀಟಗಳಲ್ಲಿ ಕಣ್ಣುಗಳು ತಲೆಯಿಂದ ಸ್ವಲ್ಪ ಹೊರಚಾಚಿಕೊಂಡಿರುತ್ತವೆ. ಆದರೆ, ಕೊಡತಿ ಕೀಟಗಳಲ್ಲಿ ಹೀಗಿಲ್ಲ. ಕನ್ಯಾಕೀಟಗಳು ಕುಳಿತಾಗ ರೆಕ್ಕೆಗಳು ದೇಹದ ಹಿಂಭಾಗಕ್ಕೆ ಮಡಿಚಿಕೊಂಡಿದ್ದರೆ, ಕೊಡತಿ ಕೀಟಗಳಲ್ಲಿ ರೆಕ್ಕೆಗಳು ಅಗಲವಾಗಿ ಹರಡಿಕೊಂಡಿರುತ್ತವೆ. ಅಲ್ಲದೆ ಕೊಡತಿಕೀಟಗಳ ಹಿಂದಿನ ಜೊತೆ ರೆಕ್ಕೆಗಳು ಮುಂದಿನ ಜೊತೆಗಿಂತ ಅಗಲವಾಗಿವೆ. ಡಿಂಬಗಳ ಗುದದ್ವಾರದ ಬಳಿ ಏಣುಗಳ ರೂಪದ ಕೆಲವು ಕಿವಿರುಗಳಿವೆ. ಸಂಭೋಗಕ್ರಿಯೆ ವಿಚಿತ್ರವಾಗಿದೆ. ಹೊಟ್ಟೆ ಬಹುಮಟ್ಟಿಗೆ ವರ್ತುಳ, ತುದಿ ಕಡೆ ಅಗಲ, ಅಥವ ಚಪ್ಪಟೆ ಮತ್ತು ಚೂಪು. ಗಂಡಿನಲ್ಲಿ 3–4, ಹೆಣ್ಣಿನಲ್ಲಿ 2 ಬಾಲದ ಅನುಬಂಧಗಳಿವೆ. ಗಂಡಿನ ಅನುಬಂಧಗಳು, ಹೆಣ್ಣನ್ನು ಹಿಡಿದುಕೊಳ್ಳಲು ಮಾರ್ಪಟ್ಟಿವೆ. ಗಂಡಿನ ಸಂಯೋಜಕಾಂಗಗಳು ಹೊಟ್ಟೆಯ 2ನೆ ಸಂಧಿಯಲ್ಲಿ ರೇತ್ರನಾಳಗಳ ತೆರೆಯಿಂದ ಪ್ರತ್ಯೇಕವಾಗಿವೆ. ಗಂಡು ಹೆಣ್ಣು ಒಟ್ಟುಗೂಡಿದಾಗ, ರೇತ್ರಾಣುಗಳು ಹೊಟ್ಟೆ ತುದಿಯಿಂದ ಮುಂಭಾಗಕ್ಕೆ ಸಾಗುತ್ತವೆ. ಹೆಣ್ಣಿನ ತಲೆಯ ಹಿಂಭಾಗ ಮಾರ್ಪಟ್ಟು, ಗಂಡು ತನ್ನ ಆಲಿಂಗನಾಂಗಗಳಿಂದ (ಕ್ಲಾಸ್ಪರ್) ಹಿಡಿದುಕೊಂಡು, ಒಟ್ಟಾಗಿಯೇ ಹಾರುತ್ತವೆ. ಕೆಲವು ಜಾತಿಯ ಕೊಡತಿ ಕೀಟಗಳು ಮೊಟ್ಟೆಗಳನ್ನಿಡುವಾಗಲೂ, ಒಟ್ಟಾಗಿಯೇ ಇರುತ್ತವೆ. ಇನ್ನು ಕೆಲವು ಪ್ರತ್ಯೇಕವಾಗುತ್ತವೆ.

ಈ ಕೀಟ ಸು. 1,00,000 ಮೊಟ್ಟೆಗಳನ್ನು ಇಡುತ್ತದೆ. ಕೆಲವು ಹಾರಾಡುತ್ತಲೇ ಮೊಟ್ಟೆಗಳನ್ನು ನೀರಿನ ಮೇಲೆ ಉದುರಿಸುತ್ತವೆ. ಕೆಲವು ತಮ್ಮ ಹೊಟ್ಟೆ ತುದಿಯನ್ನು ನೀರಿನಲ್ಲಿ ಅದ್ದಿ ಮೊಟ್ಟೆಗಳನ್ನು ಬೀಳಿಸುತ್ತವೆ. ಇನ್ನೂ ಕೆಲವು ನೀರಿನ ತಳದಲ್ಲಿನ ಕಸದ ಕೆಳಗೆ ಅಥವ ಜಲಸಸ್ಯಗಳ ಎಲೆಗಳ ಮೇಲೆ ಇಡುತ್ತವೆ.

ನಿಂಫ್‌ಗಳೆಲ್ಲ ಜಲಚರಿಗಳು. ಕೆಲವು ನೀರಿನ ತಳದಲ್ಲಿ ಹರಿದಾಡುತ್ತವೆ. ಕೆಲವು ಮಣ್ಣಿನಲ್ಲಿ ಹುದುಗಿಕೊಳ್ಳುತ್ತವೆ. ಇನ್ನು ಕೆಲವು ಜಲಸಸ್ಯಗಳ ಬಳಿ ಕಸದಲ್ಲಿ ಕೊಳ್ಳೆಯನ್ನು ಹುಡುಕಿಕೊಂಡು ಅಡ್ಡಾಡುತ್ತವೆ. ಇವೆಲ್ಲ ಪರಭಕ್ಷಕಗಳು. ನೀರಿನಲ್ಲಿರುವ ಇತರ ಸಣ್ಣ ಕೀಟ, ಮೀನು, ಕಪ್ಪೆ ಮರಿ, ಸೀಗಡಿ, ಸೊಳ್ಳೆ ಮರಿಗಳನ್ನು ತಿನ್ನುತ್ತವೆ.

ನಿಂಫ್‌ಗಳು ಬೂದು ಬಣ್ಣದಿಂದಿವೆ. ಅವು ಚಪ್ಪಟೆಯಾಗಿ ಉದ್ದವಾಗಿವೆ. ತಲೆ ಸ್ವಲ್ಪ ದಪ್ಪ, ಎದೆ ಸಣ್ಣ, ಹೊಟ್ಟೆ 10 ಖಂಡಗಳಿಂದ ಕೂಡಿದೆ. ತುದಿಯಲ್ಲಿ ಒಂದು ಜತೆ ಸರ್ಸಿ ಮತ್ತು ಮೇಲ್ಗಡೆ ಒಂದು ಅನುಬಂಧ ಇದೆ. ಗುದ ಕಿವಿರುಗಳು ಇವೆ. ಅದರೊಳಕ್ಕೆ ನೀರನ್ನು ಎಳೆದುಕೊಂಡು ಹೊರದೂಡುತ್ತವೆ. ಹೊರದೂಡುವ ಒತ್ತಡದಿಂದ ಕೀಟ ಮುಂದಕ್ಕೆ ಚಲಿಸುತ್ತದೆ. ಈ ಚಲನೆ ಸಾಮಾನ್ಯವಲ್ಲ. ಸಣ್ಣ ಮೋಟು ಕಾಲುಗಳಿಂದ ನಿಧಾನವಾಗಿ ಹರಿದಾಡುತ್ತವೆ.



ಕೊಡತಿಕೀಟ (ಡ್ರಾಗನ್ ಫ್ಲೈ)

ನಿಂಫ್‌ಗಳ ಕೆಳ ತುಟಿ (ಲೆಬಿಯಂ) ದೊಡ್ಡದು. ಬುಡದಲ್ಲಿ ಕೀಲುಗಳು ಇವೆ. ತುದಿ ಅಗಲವಾಗಿದ್ದು ಬಟ್ಟಲಿನಂತೆ ಇದೆ. ಕೊಳ್ಳೆಯನ್ನು ಹಿಡಿಯಲು ಪಕ್ಕದಲ್ಲಿ ಎರಡು ಕೊಂಡಿಗಳಿವೆ. ಕೆಳತುಟಿಯನ್ನು ಬೇಗ ಚಾಚಿ ಕೊಳ್ಳೆಯನ್ನು ಹಿಡಿದು ಒಳಕ್ಕೆಳೆದುಕೊಳ್ಳುತ್ತದೆ. ಉಪಯೋಗಿಸದಿದ್ದಾಗ, ಅದು ಮುಖವಾಡವಾಗಿ ಬಾಯಿ ಭಾಗಗಳನ್ನು ಮುಚ್ಚುತ್ತದೆ.

ಹುಟ್ಟಿದಾಗ ನಿಂಫ್ ಅಥವ ನೆಯಾಡ್‌ಗಳು ಒಂದು ಪೊರೆಯೊಳಗಿರುತ್ತವೆ. ಅಗ ಅವು ಪ್ರೊನಿಂಫ್‌ಗಳು. ಒಂದೆರಡು ನಿಮಿಷಗಳಲ್ಲಿ ಅವು ಹೊರಕ್ಕೆ ಬಂದಾಗ, ಮೊದಲನೆ ಹಂತವನ್ನು ಕಳೆದಿರುತ್ತವೆ. ಒಟ್ಟು 10–15 ಸಲ ಪೊರೆ ಬಿಡುತ್ತವೆ. ಪೂರ್ತಿ ಬೆಳೆದ ಅನಂತರ ರೆಕ್ಕೆಗಳು ಅಂಕುರಿಸುತ್ತವೆ.

ಬೆಳವಣಿಗೆ ಪೂರ್ತಿಯಾದಾಗ, ನಿಂಫ್ ನೀರಿನಿಂದ ಹರಿದಾಡಿ, ಯಾವದಾದರೂ ಕಲ್ಲಿಗೊ, ಜಲಸಸ್ಯದ ಕಾಂಡಕ್ಕೊ, ಅಥವ ಒಂದು ಮರದ ಬುಡಕ್ಕೊ ಅಂಟಿಕೊಳ್ಳುತ್ತದೆ. ನೀರಿನಿಂದ ಬಹಳ ದೂರ ಹರಿದು ಹೋಗದಿದ್ದರೂ, ಕೆಲವು 50–100 ಮೀ ಹರಿದು, ಸರಿಯಾದ ಮರದ ಬುಡ ಸಿಕ್ಕಿದಾಗ, ಅಂಟಿಕೊಂಡು, ಮಾರ್ಪಾಡಾಗಿ, ಪ್ರಾಯ ಸ್ಥಿತಿ ತಲುಪುತ್ತವೆ. ಕಾಲು ಕೊಂಡಿಗಳಿಂದ ಹಿಡಿದುಕೊಂಡಾಗ, ಎದೆಯ ಚರ್ಮ ಹಿಂಭಾಗಕ್ಕೆ ಸೀಳುತ್ತದೆ. ಒಳಗಡೆ ಕೀಟ ಒದ್ದಾಡಿ, ಮೊದಲು ಎದೆ, ಆಮೇಲೆ ತಲೆ, ಕಾಲುಗಳು, ಕಡೆಯಲ್ಲಿ ಹೊಟ್ಟೆ ಭಾಗ, ಹೊರಕ್ಕೆ ಬರುತ್ತವೆ. ಆಗ ಪ್ರಾಯಕ್ಕೆ ಬಂದಿದ್ದರೂ, ಕೀಟದ ಶರೀರ ಇನ್ನೂ ಮೃದುವಾಗಿರುತ್ತದೆ. ಸ್ವಲ್ಪ ಕಾಲದ ಅನಂತರ ರೆಕ್ಕೆಗಳು ಅಡ್ಡಗಲಿ ಗಟ್ಟಿಯಾಗುತ್ತದೆ. ಅದುವರೆಗೂ ಕೀಟ ಅಚಲಿತ.

ಸಾಮಾನ್ಯವಾಗಿ ಕೊಡತಿಹುಳುಗಳು ಬಿಸಿಲಿದ್ದಾಗ ಹಾರಾಡುತ್ತವೆ. ಕೆಲವು ನಿಶಾಚರಿಗಳು. ರಾತ್ರಿ ಹೊತ್ತು ಮತ್ತು ಮಳೆ ಬೀಳುತಿದ್ದಾಗ, ಮರ ಅಥವ ಗಿಡದ ಕಾಂಡದ ಮೇಲೆ ತಲೆಯನ್ನು ಮೇಲಕ್ಕೆತ್ತಿಕೊಂಡು ಕುಳಿತಿರುತ್ತವೆ. ಅವು ಸಾಮಾನ್ಯವಾಗಿ ನೀರಿನ ಬಳಿ ಇದ್ದರೂ, ಕೆಲವು ಅನೇಕ ಮೈಲಿಗಳ ದೂರ ಹಾರಿ ಹೋಗುತ್ತವೆ.

ಕೊಡತಿಹುಳುಗಳು, ಒಣಗಿದ ಕಾಂಡ, ಕೊಂಬೆ ಅಥವ ನೀರಿನ ಮಧ್ಯೆ ಇರುವ ಬಂಡೆ, ಹುಲ್ಲುಗಾವಲು ಅಥವ ರಸ್ತೆ ಪಕ್ಕ ಕುಳಿತುಕೊಳ್ಳುವುದು ರೂಢಿ. ಓಡಿಸಿದರೂ ಅದೇ ಜಾಗಕ್ಕೆ ಬರುತ್ತವೆ. ಹಗಲು ಹಾರಾಡುವ ಕೀಟಗಳು, ಬೆಳಗಿನ ವೇಳೆ ಮತ್ತು ಸಂಜೆಗೆ ಮುಂಚೆ ಆಹಾರವನ್ನು ತಿನ್ನುತ್ತವೆ. ಇವು ವಲಸೆ ಹೋಗುತ್ತವೆ. ಸಂತಾನೋತ್ಪತ್ತಿ ಮಾಡುವ ನೀರಿನ ಜಾಗಗಳು ಒಣಗಿ ಹೋದರೆ, ಆಗ, ನೀರಿನ ಜಾಗಗಳನ್ನು ಹುಡುಕಿಕೊಂಡು ಹೊಗುತ್ತವೆ. ಅವು ಹಾರಾಡುತ್ತಲೇ ಇತರ ಕೀಟ, ಪತಂಗ, ಚಿಟ್ಟೆ ಮೊದಲಾದ ಸಣ್ಣ ಪ್ರಾಣಿಗಳನ್ನು ಹಿಡಿದು ತಿನ್ನುತ್ತವೆ. ಸೊಳ್ಳೆಗಳನ್ನು ಬಹಳವಾಗಿ ತಿನ್ನುತ್ತವೆ. ಇವು ಉಪಕಾರಿ ಕೀಟಗಳು.

ಡಿಂಬಗಳ ಬೆಳವಣಿಗೆ ಮುಗಿದ ಅನಂತರ ಪ್ರೌಢಾವಸ್ಥೆ ಸೇರುತ್ತವೆ. (ನೋಡಿ– ಕನ್ಯಾಕೀಟ). ಕೊಡತಿಕೀಟಗಳ ಪ್ರಭೇದಗಳು ಇವು–ಮ್ಯಾಕ್ರೊಮಿಯ ಮ್ಯಾಗ್ನಿಫಿಕ, ಮೆಗಲೊಪ್ರೆಪಸ್, ಸೀರುಲೇಟಸ್, ಗಾಂಫಸ್ ಕ್ವಾಡ್ರಿಕಲರ್, ಅನಾಕ್ಸ್, ಟ್ಯಾಕೊಟೆರಿಕ್ಸ್, ಲೆಸ್ಟಿಸ್, ಲಿಬೆಲ್ಲೂಲ ಪಲ್ಚೆಲ ಮುಂತಾದುವು. (ಎಂ.ಪಿ.)

**ಕೊರಕ ಜೀರುಂಡೆಗಳು:** ಸಸ್ಯಗಳ ವಿವಿಧ ಅಂಗಗಳನ್ನು ಕೊರೆದು, ಒಳಗಿನ ಅಂಗಾಂಶಗಳನ್ನು ಭಕ್ಷಿಸಿ, ಸಸ್ಯಗಳಿಗೆ ಹಾನಿಯುಂಟುಮಾಡುವ ಕೀಟಗಳು (ಬೋರರ್ ಬೀಟಲ್ಸ್). ಕೀಟವರ್ಗದ ಲೆಪಿಡಾಪ್ಟರ, ಕೋಲಿಯಾಪ್ಟರ ಮತ್ತು ಡಿಪ್ಟರ ಗಣಗಳಿಗೆ ಸೇರಿದ ಹಲವಾರು ಬಗೆಯ ಕೀಟಗಳಿಗೆ ಈ ಹೆಸರಿದೆ.

ಕೊರಕ ಜೀರುಂಡೆಗಳ ಹಾವಳಿಗೆ ಸಸ್ಯಗಳ ಎಲ್ಲ ಮುಖ್ಯಾಂಗಗಳೂ–ಬೇರು, ಕಾಂಡ, ಚಿಗುರು, ಮೊಗ್ಗು, ಹೀಚು, ಹಣ್ಣು, ಎಲೆ–ತುತ್ತಾಗುತ್ತವೆ. ಸಾಮಾನ್ಯವಾಗಿ ಈ ಕೀಟಗಳ ಅಪ್ರಬುದ್ಧ ಘಟ್ಟದಲ್ಲಿನ ಮರಿ ಇಲ್ಲವೆ ಲಾರ್ವ ಸಸ್ಯಗಳನ್ನು ಕೊರೆದು ಹಾನಿ ಮಾಡುವುದಾದರೂ ಬಲಿತ ಜೀರುಂಡೆ ಗಿಡವನ್ನು ಕೊರೆಯುವ ನಿದರ್ಶನಗಳಿಲ್ಲದೆ ಇಲ್ಲ.

ಕೋಲಿಯಾಪ್ಟರ ಗಣದ ಕೊರಕಗಳು ಡೈನಾಸ್ಟಿಡೆ, ಬ್ಯೂಪ್ರೆಸ್ಟಿಡೆ, ಸೆರಾಂಬೈಸಿಡೆ, ಬ್ರೂಕಿಡೆ, ಆಂಥ್ರಿಬಿಡೆ, ಕರ್ಕ್ಯೂಲಿಯಾನಿಡೆ ಮತ್ತು ಸ್ಕೊಲೈಟಿಡೆ ಕುಟುಂಬಗಳಿಗೆ ಸೇರಿವೆ. ಬೇರೆ ಕುಟುಂಬಗಳಲ್ಲಿ ಕೊರಕ ಕೀಟದ ಲಕ್ಷಣಗಳುಳ್ಳ ಕೀಟಗಳಿಲ್ಲವೆಂದಾಗಲೀ ಇಲ್ಲಿ ಪಟ್ಟಿ ಮಾಡಲಾದ ಕುಟುಂಬಗಳ ಎಲ್ಲ ಪ್ರಭೇದಗಳೂ ಕೊರಕಗಳೆಂದಾಗಲೀ ಅಲ್ಲ.

ಈ ಕುಟುಂಬಗಳ ಲಾರ್ವಗಳನ್ನು ಎದೆಭಾಗದಲ್ಲಿ ಮೂರು ಜೊತೆ ಕಾಲುಗಳುಳ್ಳವು, ಆದರೆ ಉದರ ಭಾಗಕ್ಕೆ ಸೇರಿದಂತೆ ಉಪಪಾದಗಳಿಲ್ಲದುವು ಎಂದೂ ಎದೆಭಾಗದ ಪಾದಗಳೂ, ಉಪಪಾದಗಳೂ ಇಲ್ಲದುವು ಎಂದೂ ಎರಡು ಸ್ಥೂಲ ವಿಭಾಗಗಳಾಗಿ ವಿಂಗಡಿಸಬಹುದು. ಕರ್ಕ್ಯೂಲಿಯಾನಿಡೆ ಕುಟುಂಬದ ಕೀಟಗಳು ಎರಡನೆಯ ಬಗೆಯವು. ಹೊರವಾತಾವರಣದ ಸಂಪರ್ಕವಿಲ್ಲದುದರಿಂದ ಕೊರಕ ಗ್ರಬ್‌ಗಳ (ಕೋಲಿಯಾಪ್ಟರ ಗಣದ ಲಾರ್ವಗಳು) ಮೈಬಣ್ಣ ವರ್ಣಮಯವಾಗಿರದೆ ಮಾಸಲು ಬಿಳುಪಿನಿಂದ ಹಿಡಿದು ಹಳದಿ ಛಾಯಾಂತರಗಳಿಂದ ಕೂಡಿದೆ.

ಬೇರು ಕೊರೆಯುವ ಜೀರುಂಡೆಗಳು : ಬ್ಯೂಪ್ರೆಸ್ಟಿಡೆ ಕುಟುಂಬದ ಸ್ಫೀನಾಪ್ಟರ ಪೆರೋಟೆಟಿ ಎಂಬುದು ಹೊಳೆಯುವ ಕಂದುಬಣ್ಣದ್ದು. ಇದಕ್ಕೆ ಜುಯೆಲ್ ಬೀಟಲ್ ಎಂಬ ಹೆಸರಿದೆ. ಇದರ ಮಾಸಲು ಬಿಳಿ ಬಣ್ಣದ, ಚಪ್ಪಟೆ ತಲೆಯುಳ್ಳ ಲಾರ್ವ ಭೂಮಟ್ಟದಲ್ಲಿ ಕಡಲೇಕಾಯಿ ಗಿಡಗಳ ಕಾಂಡ ಮತ್ತು ಬೇರು ಭಾಗಗಳನ್ನು ಕೊರೆದು, ಅವು ಸಾಯಲು ಕಾರಣವಾಗುತ್ತದೆ.

ಚಿಗುರು ಕೊರೆಯುವ ಜೀರುಂಡೆಗಳು : ಕರ್ಕ್ಯೂಲಿಯಾನಿಡೆ ಕುಟುಂಬದ ಆಲ್ಸಿಡೋಡೀಸ್ ಬ್ಯೂಬೊ ಎಂಬುದು ಅಗಸೆಗಿಡದ ಚಿಗುರನ್ನೂ ಆಲ್ಸಿಡೋಡೀಸ್ ಅಫಾಬರ್ ಎಂಬ ಪ್ರಭೇದ ಹತ್ತಿಗಿಡದ ಚಿಗುರುಗಳನ್ನೂ ಕೊರೆದು, ಅವು ಬಾಡಲು ಕಾರಣವಾಗುತ್ತವೆ. ಇದೇ ಕುಟುಂಬದ ಸ್ಯೂಥೋರಿಂಕಸ್ ಆಸ್ಪರ‍್ಯುಲಸ್ ಎಂಬ ಜೀರುಂಡೆ ತೊಗರಿ ಗಿಡಗಳ ಮತ್ತು ಓಕಿರೋಮೀರ ಆರ್ಟೊಕಾರ್ಪಿ ಎಂಬ ಪ್ರಭೇದ ಹಲಸಿನ ಮೊಗ್ಗು ಮತ್ತು ಚಿಗುರುಗಳನ್ನು ಕೊರೆಯುತ್ತವೆ.

ಎಲೆ ಕೊರೆಯುವ ಜೀರುಂಡೆಗಳು : ಬ್ಯೂಪ್ರೆಸ್ಟಿಡೆ ಕುಟುಂಬದ ಟ್ರಾಕಿಸ್ ಐಪೋಮಿಯೆ ಎಂಬ ಜೀರುಂಡೆಯ ಲಾರ್ವ ಗೆಣಸಿನ ಎಲೆಯನ್ನು ಕೊರೆದು ಸುರಂಗವನ್ನು ನಿರ್ಮಿಸುತ್ತದೆ. ಕರ್ಕ್ಯೂಲಿಯಾನಿಡೆ ಕುಟುಂಬದ ರಿಂಕೇಸಸ್ ಮ್ಯಾಂಜಿಫೆರೀ ಎಂಬ ಜೀರುಂಡೆ ಮಾವಿನ ಎಲೆಗಳನ್ನು ಕೊರೆಯುತ್ತದೆ.

ಹಣ್ಣುಗಳನ್ನು ಕೊರೆಯುವ ಜೀರುಂಡೆಗಳು: ಕರ್ಕ್ಯೂಲಿಯಾನಿಡೆ ಕುಟುಂಬಕ್ಕೆ ಸೇರಿದ ಕ್ರಿಪ್ಟೊರಿಂಕಸ್ ಮ್ಯಾಂಜಿಫೆರೇ (ಮಾವಿನ ಓಟೆಯ ಸೊಂಡಿಲು ಜೀರುಂಡೆ) ಎಂಬುದು ಗಿಡದ ಮೇಲೆ ಮಾಗುತ್ತಿರುವ ಮಾವಿನ ಕಾಯಿಯ ಸಿಪ್ಪೆಯ ಕೆಳಗೆ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯೊಡೆದು ಹೊರಬರುವ ಲಾರ್ವ ತಿರುಳಿನ ಮೂಲಕ ಹಾದು ಬಲಿಯುತ್ತಿರುವ ಓಟೆಯನ್ನು ಹೊಕ್ಕು ಅದರೊಳಗೆ ಕೋಶಾವಸ್ಥೆಯನ್ನು ತಲುಪುತ್ತದೆ. ಆಂಥ್ರಿಬಿಡೆ ಕುಟುಂಬದ ಅರೀಸೀರಸ್ ಫ್ಯಾಸಿಕ್ಯುಲೇಟಸ್ ಎಂಬ ಜೀರುಂಡೆಯ ಲಾರ್ವ ಕಾಫಿ ಮತ್ತು ಅಡಿಕೆ ಕಾಯಿಗಳನ್ನು ಕೊರೆಯುತ್ತದೆ.

ಬೀಜಗಳನ್ನು ಕೊರೆಯುವ ಜೀರುಂಡೆಗಳು: ಬ್ರೂಕಿಡೆ ಕುಟುಂಬದ ಬ್ರೂಕಸ್ ಮತ್ತಿತರ ಜಾತಿಯ ಜೀರುಂಡೆಗಳ ಲಾರ್ವಗಳು ಶೇಖರಿಸಿಟ್ಟ ದ್ವಿದಳ ಧಾನ್ಯಗಳನ್ನು ಕೊರೆದು, ಅವನ್ನು ಟೊಳ್ಳು ಮಾಡಿ ಹಾಳುಮಾಡುತ್ತವೆ.

ತೆಂಗಿನ ಜೀರುಂಡೆ: ಡೈನಾಸ್ಟಿಡೆ ಕುಟುಂಬದ ರೈನಾಸೆರಸ್ ಜೀರುಂಡೆಯೆಂಬುದು ಪ್ರೌಢಾವಸ್ಥೆಯಲ್ಲೇ ತೆಂಗಿನ ಸುಳಿಯನ್ನು ಕೊರೆದು ಹಾನಿಯುಂಟುಮಾಡುತ್ತದೆ. ನೋಡಿ: ಕಾಂಡಕೊರಕ ಜೀರುಂಡೆಗಳು. (ಡಿ.ಎಸ್.)

**ಕೊರಕೆಗಳು:** ಸಮುದ್ರ ತಳದಲ್ಲಿ ವಾಸಿಸುವ ಮೃದ್ವಸ್ಥಿ ಮೀನುಗಳು. ಇವುಗಳನ್ನು ಆಂಗ್ಲ ಭಾಷೆಯಲ್ಲಿ ಸ್ಕೇಟ್ಸ್ ಎನ್ನುವರು. ದೇಹ ಚಪ್ಪಟೆಯಾಗಿದೆ. ಭುಜದ ಈಜು ರೆಕ್ಕೆಗಳು ಅಗಲವಾಗಿದ್ದು, ದೇಹದ ಎಡಬಲ ಪಕ್ಕಗಳಿಗೆ ಕೂಡಿಕೊಂಡಿವೆ. ಬಾಯಿ, ತಲೆಯ ತಳಭಾಗದಲ್ಲಿದೆ. ಇದರೊಳಗೆ ಮೊನಚಾದ ಅನೇಕ ಸಾಲು ಹಲ್ಲುಗಳು ವರ್ತುಲಾಕಾರದಲ್ಲಿ ಜೋಡಣೆಗೊಂಡಿವೆ. ಬಾಯಿಯ ಮುಂಭಾಗದಲ್ಲಿ ಹೊರ ನಾಸಿಕ ರಂಧ್ರಗಳು, ಹಿಂಭಾಗದಲ್ಲಿ ೫ ಜೊತೆ ಕಿವಿರಿನ ರಂಧ್ರಗಳಿವೆ. ತಲೆಯ ಮೇಲ್ಭಾಗದಲ್ಲಿ ೨ ಕಣ್ಣುಗಳಿವೆ. ಒಂದೊಂದು ಕಣ್ಣಿನ ಹಿಂಭಾಗದಲ್ಲಿ ಸ್ಪೈರಕಲ್ ಎಂಬ ದ್ವಾರವಿದೆ. ಈ ದ್ವಾರ ಬಾಯಿಯ ಅಂಗುಳದಲ್ಲಿ ತೆರೆಯುತ್ತದೆ. ಬಾಲದ ಭಾಗ ತೆಳ್ಳಗಿದ್ದು, ಚಿಕ್ಕದಾಗಿದೆ. ಕೆಲವೊಮ್ಮೆ ಚಾಟಿಯಂತೆ ಉದ್ದವಾಗಿದೆ. ಕೊರಕೆಗಳು ಸಮುದ್ರ ತಳದಲ್ಲಿ ನಿಧಾನವಾಗಿ ಚಲಿಸುತ್ತವೆ. ***

**ಕೊರಚ ಮೀನು:** ಸೈಪ್ರಿನಿಫಾರ್ಮೀಸ್ ಗಣದಲ್ಲಿನ ಸೈಪ್ರಿನಾಯ್ಡಿಯ ಉಪಗಣದ ಸೈಪ್ರನೀಡೆ ಕುಟುಂಬದ ಸದಸ್ಯ. ಪಂಟಿಯಸ್ ಕೋಲಸ್ ಅಥವಾ ಬಾರ್ಬಸ್ ಕೋಲಸ್ ಎಂಬ ವೈಜ್ಞಾನಿಕ ಹೆಸರಿನ ಎಲುಬು ಮೀನು. ಇದು ಸಿಹಿ ನೀರುವಾಸಿ. ಭಾರತದ ಕೃಷ್ಣ, ತುಂಗಭದ್ರಾ, ಗೋದಾವರಿ ನದಿಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸುತ್ತದೆ. ಇದರ ಉದ್ದ ಒಂದು ೩೦ ಸೆಂಮೀ ಕಣ್ಣು ಮಧ್ಯೆ ಮಟ್ಟಸವಾದ ಮೂಳೆಯೂ, ದಾಡಿಗಳಂತಿರುವ ಎರಡು ಸ್ಪರ್ಶಾಂಗಗಳು, ಪಾರ್ಶ್ವರೇಖೆಯಲ್ಲಿ ೪೦–೪೩ ಹುರುಪೆಗಳಿರುವುದು ಇದರ ಮುಖ್ಯ ಲಕ್ಷಣಗಳು. ದೇಹದ ಬಣ್ಣ ಹಳದಿ ಮಿಶ್ರಿತ ಬಿಳಿ. ಬೆನ್ನು, ಬಾಲ ಮತ್ತು ಗುದದ ಈಜು ರೆಕ್ಕೆಗಳ ತುದಿ ಬೂದುಬಣ್ಣಕ್ಕಿರುತ್ತದೆ. ***

**ಕೊರಾಸಿಯಿಫಾರ್ಮಿಸ್:** ಕಶೇರುಕಗಳ ಪಕ್ಷಿವರ್ಗದ ಒಂದು ಗಣ. ಮೀಂಚುಳ್ಳಿ (ಕಿಂಗ್‌ಫಿಶರ್) ಹೂಪೊ, ಕೊಂಬು ಕೊಕ್ಕಿನ (ಹಾರ್ನಬಿಲ್) ಹಕ್ಕಿಗಳನ್ನೊಳಗೊಂಡಿದೆ. ಇವು ಪ್ರಪಂಚದಾದ್ಯಂತ ವಾಸಿಸುತ್ತವೆ. ಆದರೆ, ಉಷ್ಣವಲಯಗಳಲ್ಲಿ ಹೇರಳವಾಗಿವೆ. ಗಾತ್ರದಲ್ಲಿ ಸಣ್ಣವು. ಪುಕ್ಕಗಳು ವಿವಿಧ ಬಣ್ಣಗಳಿಂದಾಗಿದ್ದು, ಸುಂದರವಾಗಿವೆ. ಕೊಕ್ಕು ದೊಡ್ಡದಾಗಿದ್ದು, ಉದ್ದ ಮತ್ತು ದಪ್ಪವಾಗಿದೆ. ಕಾಲು ಚಿಕ್ಕವು. ಪ್ರತಿ ಕಾಲಿನಲ್ಲಿ ನಾಲ್ಕು ಬೆರಳು, ಒಂದನ್ನು ಹಿಂದಕ್ಕೆ ತಿರುಗಿಸಬಲ್ಲುದು ಮತ್ತು ಬೆರಳುಗಳು ಬಂಧಿತವಾಗಿರುವುದರಿಂದ ಇವುಗಳನ್ನು ಯುಗ್ಮಾಂಗುಲಿಗಳು (ಜೈಗೊಡ್ಯಾಕ್ಟೈಲ್) ಎನ್ನುವರು. ಇವು ಮರಗಳ ಪೊಟರೆ, ನೆಲದ ಬಿಲ ಮತ್ತು ಬಂಡೆಗಳ ಸಂದುಗಳಲ್ಲಿ ಜೀವಿಸುತ್ತವೆ. ಮೀನು, ಕೀಟಗಳನ್ನು ಮತ್ತು ಹುಳುಗಳನ್ನು ತಿಂದು ಜೀವಿಸುತ್ತವೆ.

ಈ ಗಣದಲ್ಲಿ 9 ಕುಟುಂಬಗಳಿವೆ.

1) ಅಲ್‌ಸಿಡಿನಿಡೆ. ಉದಾ: ಕಿಂಗ್ ಫಿಶರ್ಸ್
2) ಟೊಡಿಡೆ. ಉದಾ: ಟೊಡಿಸ್
3) ಮೊಮಟಿಡೆ. ಉದಾ: ಮೊಟ್ಮಟ್ಸ್
4) ಮೆರಾಪಿಡೆ. ಉದಾ: ಬೀ ಈಟರ್ಸ್
5) ಲಿಪಾಟ್‌ಸಾಮಾಟಿಡೆ. ಉದಾ: ಕುಕ್ಕೂ – ರೋಲರ್ಸ್
6) ಕೊರಾಸಿಯಿಡೆ. ಉದಾ: ರೋಲರ್ಸ್
7) ಉಪೂಪಿಡೆ ಉದಾ: ಹೂಪಿ
8) ಪ್ಯೊಯಿನಿಕುಲಿಡೆ. ಉದಾ: ವುಡ್ ಹಾಪರ್ಸ್
9) ಬ್ಯೂಸಿರಾಂಟಿಡೆ, ಉದಾ: ಹಾರ್ನ್ ಬಿಲ್ಸ್

ಅಲ್‌ಸಿಡಿನಿಡೆ ಕುಟುಂಬದಲ್ಲಿ ಜಲವಾಸಿ ಪಕ್ಷಿ (ಮೀಂಚುಳ್ಳಿ) ಗಳಿವೆ. ರಂಗುರಂಗಿನ ಪುಕ್ಕಗಳನ್ನು ಹೊಂದಿರುವುದರಿಂದ ಅತ್ಯಂತ ಸುದರವಾಗಿವೆ. ಈ ಕುಟುಂಬದಲ್ಲಿ ಮೂರು ಉಪ ಕುಟುಂಬಗಳಿವೆ. ಅಲ್‌ಸಿನಿನೆ ಯೂರೋಪ್ ಮತ್ತು ಏಷ್ಯಾದೇಶಗಳಲ್ಲಿ; ಡಾಸಿಲಾನಿನೆ ಏಷ್ಯಾ, ಆಸ್ಟ್ರೇಲಿಯ ಮತ್ತು ಆಫ್ರಿಕಾ ದೇಶಗಳಲ್ಲಿ; ಸಿರಿಲಿನೆ ಉತ್ತರ ಮತ್ತು ದಕ್ಷಿಣ ಅಮೇರಿಕಾ ದೇಶಗಳಲ್ಲಿ ವಾಸಿಸುತ್ತವೆ. ಕಾಮನ್‌ಕಿಂಗ್‌ಫಿಶರ್, ಪಿಗ್ಮಿ ಕಿಂಗ್‌ಫಿಶರ್ ಮತ್ತು ಬೆಲ್‌ಟೆಡ್ ಕಿಂಗ್‌ಫಿಶರ್ ಪ್ರಮುಖವಾದುವು. ಜಲವಾಸಿ ಪಕ್ಷಿಗಳು ನದಿತೀರದ ಮರದಕೊಂಬೆ ಮೇಲೆ ಚಲಿಸದೆ ಮೀನಿನ ಚಲನವಲನಗಳನ್ನು ನೋಡುತ್ತಾ ಕೂತಿರುತ್ತವೆ. ಮೀನು ಕಣ್ಣಿಗೆ ಬಿದ್ದಕೂಡಲೇ ವೇಗವಾಗಿ ಚಲಿಸಿ, ಮುಳುಗಿ ನೀರಿನಿಂದ ಮೀನನ್ನು ಹಿಡಿದು ಮರಳಿ ಗೂಡಿಗೆ ಬರುತ್ತವೆ. ಉದ್ದ ಮತ್ತು ದಪ್ಪನಾದ ಕೊಕ್ಕು ಮೀನು ಹಿಡಿಯಲು ಬಹಳ ಸಹಾಯಕ. ಮರದ ಪೊಟರೆಯಲ್ಲಿ ಜೀವಿಸುತ್ತವೆ. ತತ್ತಿಗಳಿಗೆ ಕಾವುಕೊಡುವುದು ಹೆಣ್ಣು ಮಾತ್ರ. ಮರಿಗಳಾದ ನಂತರ ಗಂಡು, ಹೆಣ್ಣುಗಳೆರಡೂ ಕೂಡಿ ಕಾಪಾಡುತ್ತವೆ.

ಟೊಡಿಡೆ ಕುಟುಂಬದಲ್ಲಿ ಟೊಡೀಸ್ ಹಕ್ಕಿ ವೆಸ್ಟ್ ಇಂಡೀಸ್‌ನ ಸುತ್ತಮುತ್ತಲಿನ ದ್ವೀಪಗಳಲ್ಲಿ ವಾಸಿಸುತ್ತವೆ. ಇವುಗಳ ವಾಸ ನೆಲದ ಬಿಲಗಳಲ್ಲಿ. ಕೀಟಗಳನ್ನು ತಿಂದು ಜೀವಿಸುತ್ತವೆ.

ಮೊಮಟಿಡೆ ಕುಟುಂಬದ ಹಕ್ಕಿಗಳು ಮೆಕ್ಸಿಕೊದಿಂದ ಅರ್ಜಂಟೈನ ದೇಶದವರೆಗೂ ಹರಡಿಕೊಂಡಿವೆ. ಇವು ನೆಲದ ಬಿಲಗಳಲ್ಲಿ ವಾಸಿಸುತ್ತವೆ. ಕೀಟ, ಮೃದ್ವಂಗಿ ಮತ್ತು ಹಣ್ಣು ಹಂಪಲಗಳನ್ನು ತಿನ್ನುವುವು.

ಮಿಂಚುಳ್ಳಿ

ಸೂರಕ್ಕಿ (ಸನ್‌ಬರ್ಡ್)

ನೀಲಕಂಠ (ಬ್ಲೂ ಜೆ)

ಮರಕುಟಿಕ (ವುಡ್ ಪೆಕರ್)

ಮಂಗಟ್ಟೆ (ಹಾರ್ನ್ ಬಿಲ್)

ಮೆರಾಪಿಡೆ ಕುಟುಂಬದ ಪಕ್ಷಿಗಳನ್ನು ಬೀಇಟರ್ (ಜೇನುಭಕ್ಷಕ) ಎನ್ನುವರು. ಇವು ಏಷ್ಯಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ವಾಸಿಸುತ್ತವೆ. ಇವುಗಳು ಸಾಮಾನ್ಯವಾಗಿ ಜೇನುನೊಣ ಅಥವ ಕಣಜವನ್ನು ತಿನ್ನುತ್ತವೆ.

ಲಿಪ್‌ಟಾಸಾಮಟಿಡೆ ಕುಟುಂಬದಲ್ಲಿ ಬೀಇಟರ್ಸ್ ನಂತಿರುವ ಪಕ್ಷಿಗಳಿವೆ. ಬಣ್ಣದಲ್ಲಿ ಮಾತ್ರ ವ್ಯತ್ಯಾಸವಿದೆ.

ಕೊರಾಸಿಯಿಡೆ ಕುಟುಂಬದ ಪಕ್ಷಿಗಳು ಯೂರೋಪ್ ಮತ್ತು ಏಷ್ಯಾ ದೇಶದಲ್ಲಿ ಹೇರಳವಾಗಿವೆ. ಮರದಪೊಟರೆಗಳಲ್ಲಿ ಅಥವಾ ಬಂಡೆಗಳ ಸಂದುಗಳಲ್ಲಿ ವಾಸಿಸುತ್ತವೆ. ಇವುಗಳ ಕಾಲುದಪ್ಪ.

ಉಪೂಪಿಡೆ ಕುಟುಂಬದಲ್ಲಿ ಹೂಪೊಗಳಿವೆ. ಇವುಗಳ ತಲೆಮೇಲೆ ಅಂದವಾದ ಗರಿಗುಚ್ಛ ಇದೆ. ಒಂಟಿಯಾಗಿ ಚಲಿಸುತ್ತವೆ. ತಿಪ್ಪೆ, ಚರಂಡಿ ಮುಂತಾದಕಡೆ ದೊರಕುವ ಹುಳಗಳನ್ನು ಹುಡುಕಿ ತಿನ್ನುತ್ತವೆ. ಇದು ಬಹಳ ಪುಕ್ಕಲು ಜೀವಿ. ಇದು ಎಷ್ಟು ಸುಂದರವೋ ಅಷ್ಟೇ ಇದರ ಗೂಡು ಗಲೀಜಿರುತ್ತದೆ.

ಪೊಯಿನಿಕುಲಿಡೆ ಕುಟುಂಬದಲ್ಲಿ ಉಪೂಪಿಡೆ ಜಾತಿಯಂತಹ ಪಕ್ಷಿಗಳಿವೆ. ಇವು ಸಂಘಜೀವಿಗಳು. ಆಫ್ರಿಕಾದೇಶದಲ್ಲಿ ಹೇರಳವಾಗಿವೆ.

ಬ್ಯುಸಿರಾಂಟಿಡೆ ಕುಟುಂಬದಲ್ಲಿ ಹಾರ್ನ್‌ಬಿಲ್ಸ್ (ಕೊಂಬು ಕೊಕ್ಕಿನ ಪಕ್ಷಿಗಳು) ಇವೆ. ಈ ಹಕ್ಕಿಗಳಲ್ಲಿ ಕೊಕ್ಕು ಉದ್ದ ಮತ್ತು ದಪ್ಪವಾಗಿದ್ದು, ಕೊಂಬಿನಂತೆ ಕಾಣುವುದು. ಕೊಕ್ಕಿನ ಮೇಲ್‌ಭಾಗದಲ್ಲಿ ಉದ್ದಕ್ಕೂ ದಿಂಡು ಇದೆ. ಇದರಲ್ಲಿ ಗಾಳಿಯನ್ನು ತುಂಬಿಕೊಂಡು ವಿಚಿತ್ರ ಶಬ್ದಮಾಡುವುದು. ಮರದ ಪೊಟರೆಯಲ್ಲಿ ಇವು ಗೂಡುಮಾಡುತ್ತವೆ. ಗಂಡು, ಹೆಣ್ಣು ಪಕ್ಷಿಯನ್ನು ಪೊಟರೆಗೆ ತೂರಿಸಿ, ಪೊಟರೆಯ ಬಾಯನ್ನು ಜಿಗುಟಿನಂತಹ ಮಣ್ಣಿನಿಂದ ಮುಚ್ಚಿ ಅದರ ಕೊಕ್ಕು ಮಾತ್ರ ಹೊರ ಬರಲು ಅನುಕೂಲವಾದ ರಂಧ್ರವನ್ನು ಬಿಡುತ್ತವೆ. ಹೀಗಾಗಿ ಹೆಣ್ಣು ಪಕ್ಷಿ ಬಂಧನದಲ್ಲಿರುವುದು. ಈ ಸಮಯದಲ್ಲಿ ಗಂಡು ಆಹಾರವನ್ನು ಒದಗಿಸುತ್ತದೆ. ಮೊಟ್ಟೆಗಳು ಮರಿಗಳಾದನಂತರ ಮತ್ತು ಅವು ಕೆಲ ಸಮಯ ಬೆಳೆದ ನಂತರ ಗೂಡಿನ ಬಾಯಿಯನ್ನು ದೊಡ್ಡದುಮಾಡಿ ತಾಯಿ ಮರಿಗಳು ಹೊರಬರುವುವು. ಇವು ಭಾರತ, ಇಂಡೊನೇಶಿಯಾ ಮತ್ತು ಮಲಯ ದೇಶಗಳಲ್ಲಿ ವಾಸಿಸುತ್ತವೆ. (ಜಿ.ಎಂ.ಬಿ.)

**ಕೊರೈಡೆ:** ಸಂದಿಪದಿ ವಂಶದ, ಕೀಟವರ್ಗದಲ್ಲಿರುವ ಹೆಮಿಪ್ಟೀರ ಗಣದ ಕುಟುಂಬ. ಇದರಲ್ಲಿ ತಿಗಣೆ ಜಾತಿಯ ಕೀಟಗಳಿವೆ. ಈ ಗುಂಪು ಸಾಮಾನ್ಯವಾಗಿ ಮಧ್ಯಮ ಗಾತ್ರದ ಕೀಟಗಳಿಂದ ಹಿಡಿದು ದೊಡ್ಡಗಾತ್ರದವರೆಗಿನ ಕೀಟಗಳನ್ನೊಳಗೊಂಡಿದೆ. ದೇಹದ ಬಣ್ಣ ಮಾಸಲು. ತಲೆ ಸಣ್ಣದು. ಕಣ್ಣು ಉಬ್ಬಿವೆ. ಕುಡಿಮೀಸೆಗಳು ತಲೆಯ ಎರಡು ಪಕ್ಕಗಳ ಮೇಲೆ ಚನ್ನಾಗಿ ಬೆಳೆದಿವೆ. ರಾಸ್ಟ್ರಮ್ ಭಾಗವು ನಾಲ್ಕು ಖಂಡಗಳಿಂದಾಗಿದೆ. ಮೇಲುಚಿಪ್ಪು (ಪ್ರೊನೋಟ್‌ಂ) ಸಂಕುಚಿತಗೊಂಡಿದ್ದು, ರೆಕ್ಕೆಗಳ ಕೆಳಗೆ ಬಾಗಿವೆ. ಕೆಲವೊಮ್ಮೆ ಇದರ ಅಂಚು ಮೇಲ್ಮುಖವಾಗಿದ್ದು, ಮುಳ್ಳುಗಳಿಂದ ಕೂಡಿವೆ. ತಟ್ಟೆಗಟ್ಟು (ಸ್ಕುಟಿಲ್‌ಂ) ಹೆಚ್ಚು ದೊಡ್ಡದಾಗಿಲ್ಲ. ರೆಕ್ಕೆಯ ಪದರಗಳು ದೊಡ್ಡದಾಗಿದ್ದು ಬಣ್ಣ ಬಣ್ಣದ ಚಿತ್ತಾರಗಳಿಂದ ಕೂಡಿವೆ. ಹೊಟ್ಟೆಯ ಅಂಚಿನ ಭಾಗವು ರೆಕ್ಕೆಯ ಎರಡೂ ಕಡೆ ಚಾಚಿಕೊಂಡಿದೆ. ಮೆಟಥೊರಾಸಿಕ್ ಗ್ರಂಥಿಯ ದ್ವಾರವು ಕಾಣಿಸುತ್ತದೆ. ಪೊರೆಯು ಬಹಳವಾಗಿ ಕವಲೊಡೆದ ಸಿರೆ ಅಥವಾ ನಾರುಗಳ ವ್ಯವಸ್ಥೆಯನ್ನು ಹೊಂದಿದೆ. ಕಾಲಿನ ಕೊನೆಯ ಭಾಗದಲ್ಲಿ ಟಾರ್ಸಿಯ ಮೂರು ಖಂಡಗಳಿಂದಾಗಿದೆ. ಇದರ ಕೊನೆಯಲ್ಲಿ ಪಲ್ವಿಲ್ಲೈ (ಕೀಟಗಳ ಕಾಲಿನ ಕೊನೆಯ ಭಾಗ) ಇದೆ. ಸಿಂಬೆಯ ಎರಡು ಪಕ್ಕಗಳಲ್ಲಿ ಒಂದು ಮೊನಚಾದ ಉಗುರು ಇದೆ.

ಸು. 2000 ಪ್ರಭೇದಗಳಿವೆ. ಎಲ್ಲಾ ಪ್ರಭೇದಗಳ ಶರೀರವು ಮಂಕಾದ ಬಣ್ಣದಿಂದಾಗಿದೆ. ಆದರೆ, ಸೆರಿನೋಥ ಮತ್ತು ಕೆಲವು ಪ್ರಭೇದಗಳು ಪ್ರಕಾಶಮಾನವಾದ ಬಣ್ಣವನ್ನು ಪಡೆದಿವೆ. ಅವು ಭಾರತ, ಆಫ್ರಿಕ, ದಕ್ಷಿಣ ಅಮೇರಿಕಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತವೆ.

ಈ ಗುಂಪಿಗೆ ಸೇರಿದ ಕೀಟಗಳು ಸಸ್ಯಾಹಾರಿಗಳು. ಕೆಲವು ಸಾಗುವಳಿ ಮಾಡುವ ಸಸ್ಯಗಳಿಗೆ ಉಪದ್ರವಕಾರಿಗಳಾಗಿವೆ. ಅನಾಸಟ್ರಿಸ್ಟೀಸ್ ಎಂಬುದು ಕರಬೂಜ, ಕಲ್ಲಂಗಡಿ ಕುಕರಬಿಟೆಸಿ ವಂಶಕ್ಕೆ ಸೇರಿದ ಹಣ್ಣುಗಳಿಗೆ ಹಾನಿಕಾರಕವಾಗಿದೆ. ಲೆಪ್ಟೋಕೊರಿಸ ವರಿಕಾರ್ನಿಸ್ ಪ್ರಭೇದ ಅಕ್ಕಿ, ನವಣೆ, ಸಾಸ್ವೆ ಮತ್ತು ಸಜ್ಜುಗಳಿಗೆ ಉಪದ್ರವಕಾರಿ.

ಕೊರೈಡೆ ಗುಂಪಿನ ಕೀಟಗಳು ವ್ಯಾಪಕವಾದ ಅಸಹ್ಯವಾಗುವ ಓಕರಿಕೆ ಬರಿಸುವಂತ ವಾಸನೆಯನ್ನು ಉತ್ಪಾದಿಸುತ್ತವೆ. ಕೆಲವು ಜಾತಿಯ ಅಂಟೆನಾ ಮತ್ತು ಟಿಬಿಯಗಳು ಅದ್ಭುತವಾದ ವಿಸ್ತರಿಸುವಿಕಾ ಗುಣವನ್ನು ತೋರಿಸುತ್ತವೆ.

ಉದಾ –1 : ಜಜ್ಜು ತಗಣಿ (ಸ್ಕ್ವಾಶ್ ಬಗ್) ಅನಸಾಟ್ರಿಸ್ಟಿಸ್; ಇದರ ಉದ್ದ 12–18 ಮಿಮೀ. 16 ಮಿಮೀ ಅಗಲವಾಗಿದ್ದು ಕಡು ಕೆಂದು ಬಣ್ಣದಿಂದ ಕೂಡಿದೆ. ಅಪ್ಸರೆಕೀಟ (ನಿಂಫ್) ಗಳು ಬೂದುಬಣ್ಣದಿಂದ ಕೂಡಿವೆ. ಈ ಕೀಟವು ಸ್ಕ್ವಾಶ್, ಸೌತೇಕಾಯಿ, ಮತ್ತಿತರ ಬಳ್ಳಿಗಳ ಮೇಲೆ ಹೆಚ್ಚಾಗಿ ಕಂಡು ಬರುತ್ತದೆ. ಚಳಿಗಾಲದಲ್ಲಿ ಕಸ ಮತ್ತು ಸಂದು–ಗೊಂದಿಗಳಲ್ಲಿ ಕಾಲ ಕಳೆದು, ವಸಂತಋತುವಿನಲ್ಲಿ ಹಸಿರು ಬೆಳೆದು ನಿಂತಾಗ ಹೊರಬರುತ್ತದೆ. ಈ ಕೀಟಗಳು ಸಾಮಾನ್ಯವಾಗಿ ಎಲೆಗಳ ಕೆಳಗೆ ಮೊಟ್ಟೆಗಳನ್ನಿಡುತ್ತವೆ. ಒಂದು ಹೆಣ್ಣು ಕೀಟವು ಸಾಯುವುದರೊಳಗೆ ನೂರಾರು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳು ಒಂದರಿಂದ ಎರಡು ವಾರಗಳಲ್ಲಿ ಒಡೆಯುತ್ತವೆ. ಇವುಗಳಿಂದ ಅಪ್ಸರೆ ಕೀಟಗಳು ಹೊರಬರುತ್ತವೆ. ಅಪ್ಸರೆಕೀಟಗಳು ಹಲವು ಇನ್‌ಸ್ಟಾರ್ ಹಂತಗಳನ್ನು ದಾಟಿದ ಅನಂತರ ಪ್ರೌಢಾವಸ್ಥೆಯ ಹಂತ ತಲುಪುತ್ತವೆ. ಇದಕ್ಕೆ 45 ರಿಂದ 60 ದಿನಗಳು ಬೇಕಾಗುತ್ತವೆ. ಈ ಕೀಟಗಳು ಅನೇಕ ಬೆಳೆಗಳಿಗೆ ಹಾನಿಯುಂಟುಮಾಡುತ್ತವೆ.

ಉದಾ–2: ಎಲೆಯಾಕಾರದ ಕಾಲಿನ ತಗಣಿ (ಲೆಪ್ಟೊಗ್ಲೊಸಸ್ ಫಿಲ್ಲೊಪಸ್)

ಇದು ಬಟಾಣಿ, ಅವರೆಕಾಯಿ, ತಿಂಗಳ ಹುರುಳಿ, ಆಲೂಗೆಡ್ಡೆ, ಟೊಮೋಟೋ ಮತ್ತಿತರ ಗಿಡಗಳಿಗೆ ಹಾನಿಯನ್ನುಂಟು ಮಾಡುತ್ತದೆ. ಗಿಡದ ಹಣ್ಣು ಮತ್ತು ಇತರೆ ಭಾಗಗಳನ್ನು ತಿಂದು ಜೀವಿಸುತ್ತದೆ. ಇದು ಕಂದು ಬಣ್ಣದ ಶರೀರವುಳ್ಳದ್ದಾಗಿದ್ದು ದುಂಡಾಗಿದೆ. ಗಾತ್ರದಲ್ಲಿ 20 ಮಿಮೀ ಉದ್ದವಿದೆ. ಕಣಕಾಲುಗಳು ಅಗಲವಾಗಿ ಅಥವಾ ಎಲೆಯಾಕೃತಿಯಲ್ಲಿ ಇವೆ.

ಉದಾ–3: ಬಾಕ್ಸೆಲ್ವರ್ ತಗಣಿ (ಲೆಪ್ಟೊಕೋರಿಸ್ ಟ್ರೈವಿಟ್ಟೇಟಸ್)

ಮಾಗಿಯ ಕಾಲ ಮತ್ತು ಚಳಿಗಾಲದಲ್ಲಿ ಹೆಚ್ಚಾಗಿ ಮನೆಗಳಲ್ಲಿ ಕಂಡು ಬರುವ ಪೀಡೆಕೀಟ. ಈ ಅವಧಿಯಲ್ಲಿ ಕೀಟಗಳು ಅಸಂಖ್ಯವಾಗಿ ಮರಗಿಡಗಳ ಕಾಂಡಗಳ ಮೇಲೆ ಅಥವಾ ಮನೆಗಳಲ್ಲಿ ಸೇರುತ್ತವೆ. ಈ ಕೀಟಗಳು ಪ್ರೌಢಾವಸ್ಥೆಯಲ್ಲಿ ಚಳಿಗಾಲವನ್ನು ಮನೆಗಳಲ್ಲಿ ಕಳೆಯುತ್ತವೆ. ಕಡುಕಂದು ಬಣ್ಣದ ದೇಹವಿದ್ದು, ಎದೆಯಭಾಗದಲ್ಲಿ ಮೂರು ಉದ್ದವಾದ ಕೆಂಪುಗೆರೆಗಳಿಂದ ಕೂಡಿರುತ್ತದೆ. ಗಾತ್ರದಲ್ಲಿ ಈ ಕೀಟಗಳು 35 ಮಿಮೀ ವರೆಗೆ ಬೆಳೆಯುತ್ತವೆ. ಬಾಕ್ಸೆಲ್ಡರ್ ಗಿಡವನ್ನು ಇದು ಹೆಚ್ಚಾಗಿ ಆಕ್ರಮಿಸುವುದಾದರೂ ಇತರೇ ಸಸ್ಯಗಳನ್ನು ಹಾನಿಗೊಳಿಸುತ್ತದೆ.

ಉದಾ–4: ಲೆಪ್ಟೊಕೊರಿಸಾ ವೇರಿಕೊರ್ನಿಸ್

ಭಾರತ ಮತ್ತು ನೆರೆಯ ದೇಶಗಳಲ್ಲಿ ಬತ್ತ, ರಾಗಿ ಮತ್ತಿತರ ಗಿಡಗಳನ್ನು ಮುತ್ತಿ ಹಾನಿಯನ್ನುಂಟುಮಾಡುತ್ತದೆ. (ವಿ.ಕೆ.ವಿ.)

**ಕೊರ್ಸುಲ ಮೀನು:** ಸಿಹಿ ನೀರಿನ ಒಂದು ಬಗೆಯ ಮಲೆಟ್ ಮೀನು. ಟೆಲಿಯೋಸ್ಟಿಯೈ ಗಣದ, ಆಕ್ಯಾಂತೋಟೆರಿಜಿಯೈ ಉಪಗಣದಲ್ಲಿನ ಮ್ಯುಜಿಲಿಡೆ ಕುಟುಂಬದ ಸದಸ್ಯ. ಇದರ ವೈಜ್ಞಾನಿಕ ನಾಮ ರೈನೋಮ್ಯುಜಿಲ್ ಕೊರ್ಸುಲ. ನದಿ ಮುಖಜ ಪ್ರದೇಶಗಳಲ್ಲಿ, ಉಬ್ಬರವಿಳಿತಗಳಿಗೆ ಸಿಗದ ನೀರಿನಲ್ಲಿ ವಾಸಿಸುತ್ತದೆ. ಇದರ ಉದ್ದ ೪೫–೫೦ ಸೆಂಮೀ. ಇದರ ತಲೆ ಮೇಲಿನಿಂದ ಕೆಳಕ್ಕೆ ಚಪ್ಪಟೆಯಾಗಿದ್ದು, ಮೇಲಿನ ದವಡೆ ಸ್ವಲ್ಪ ಉದ್ದವಾಗಿ ದಪ್ಪವಾಗಿರುತ್ತದೆ. ಹಲ್ಲುಗಳು ಸಣ್ಣವು. ದೇಹದ ಮೇಲೆ ಹುರುಪೆಗಳಿವೆ. ದೇಹದ ಬೆನ್ನುಭಾಗ ನಸುಕಂದು ಬಣ್ಣ, ಉದರ ಭಾಗ ಸ್ವಲ್ಪ ಬಿಳಿ, ಪೃಷ್ಠದ ಈಜುರೆಕ್ಕೆ ಮತ್ತು ಬಾಲದ ಈಜು ರೆಕ್ಕೆ ಬೂದುಬಣ್ಣಕ್ಕಿವೆ. ಕಣ್ಣುಗಳು ಹೊಂಬಣ್ಣದವು. (ಎನ್.ವಿ.ಎ)

**ಕೊಲಂಬಿಫಾರ್ಮಿಸ್:** ವಿವಿಧ ರೀತಿಯ ಪಾರಿವಾಳಗನ್ನೊಳಗೊಂಡ ಪಕ್ಷಿ ವರ್ಗದ ಗಣ. ಈ ಗಣಕ್ಕೆ ಸೇರಿದ ಪಕ್ಷಿಗಳು ಗಾತ್ರದಲ್ಲಿ ಸಾಧಾರಣ, ನಡಿಗೆ ಮಂದ, ಹಾರಾಟದಲ್ಲಿ ಅತಿ ಚುರುಕು, ದೇಹದ ಮಾಟ ಸುಂದರ; ಕತ್ತು, ಕಾಲುಗಳು ಸಣ್ಣ. ಪ್ರತಿ ಕಾಲಿನಲ್ಲಿ ನಾಲ್ಕು ಬೆರಳು. ಮೂರು ಮುಂಚಾಚಿರುತ್ತವೆ, ಒಂದು ಹಿಂಚಾಚಿರುತ್ತದೆ. ಪ್ರತಿ ಬೆರಳಿನಲ್ಲಿಯೂ ತುದಿಯಲ್ಲಿ ಮಾಟವಾದ ಉಗುರು. ಗುಂಪಾಗಿ ಜೀವಿಸುವುವು. ಒಂದು ಗಂಡು ಒಂದೇ ಹೆಣ್ಣು ಪಕ್ಷಿಯಲ್ಲಿ ಅನುರಕ್ತವಾಗಿರುವುದು. ಮೊಟ್ಟೆ ಕಾಪಾಡುವುದು, ಗೂಡು ಕಟ್ಟುವುದು ಮುಂತಾದ ಕೆಲಸ ಗಂಡಿನದೇ. ಮರಿಗಳಾದ ನಂತರ ತನ್ನ ಕಾಳು ಸಂಚಿಯಿಂದ ಹಾಲನ್ನು ತೆಗೆದು ಗುಟುಕು ಕೊಡುವುದು ಇವುಗಳಲ್ಲಿನ ವೈಶಿಷ್ಟ್ಯ. ಬೀಜಗಳು, ಹಣ್ಣು ಮುಂತಾದುವು ಇವುಗಳ ಆಹಾರ. ಟೀರೋಕ್ಲಿಡೆ ಮತ್ತು ಕೊಲಂಬಿಡೆ ಈ ಗಣದ ಎರಡು ಕುಟುಂಬಗಳು.

ಟೀರೋಕ್ಲಿಡೆ ಗುಂಪಿನ ಪಕ್ಷಿಗಳು ಮರಳುಗಾಡಿನಲ್ಲಿ ವಾಸ ಮಾಡುವುವು. ಹದಿನಾರು ಪ್ರಭೇದಗಳಿವೆ. ಪಾರಿವಾಳಗಳಿಗಿಂತ ವಿಭಿನ್ನ. ಬೆಂಗಾಡಿನಲ್ಲಿ ವಾಸ ಮಾಡುವುದರಿಂದ ಮೈ ಬಣ್ಣ ಮಾಸಲು. ಬಿಲಗಳಲ್ಲಿ ಅಥವಾ ಪೊದೆಗಳಲ್ಲಿ ಜೀವಿಸುವುವು. ಮರಿಗಳು ತತ್ತಿಯಿಂದ ಹೊರ ಬಂದ ಮರು ಕ್ಷಣದಲ್ಲಿ ಲೀಲಾಜಾಲವಾಗಿ ಚಲಿಸಿ ಆಹಾರವನ್ನು ಹುಡುಕಬಲ್ಲುವು. ತಂದೆ ತಾಯಿಯಿಂದ ಕಾಳ ಸಂಚಿ ಹಾಲನ್ನೂ ಪಡೆಯುತ್ತವೆ. ಹೆಬ್ಬೆರಳು ಇರುವುದಿಲ್ಲ. ಆದ್ದರಿಂದ ಮೂರೇ ಬೆರಳುಗಳು. ವೈಟ್ ಬೆಲ್ಲೀಡ್ ಗ್ರೌಸ್, ಪಾಲ್ಲಾಸ್ ಸ್ಯಾಂಡ್ ಗ್ರೌಸ್ ಈ ಕುಟುಂಬದ ಪಕ್ಷಿಗಳು. ನಶಿಸಿ ಹೋಗಿರುವ ಡೊಡೊ (ರ್‍ಯಾಫಸ್ ಅಥವಾ ಡೈಡಸ್) ಹಕ್ಕಿ ಕೂಡ ಇದೇ ಕುಟುಂಬಕ್ಕೆ ಸೇರಿದೆ.

ಕೊಲಂಬಿಡೆ ಗುಂಪಿನ ಪಕ್ಷಿಗಳು ನಿಜವಾದ ಪಾರಿವಾಳಗಳು. ಶರೀರದ ಗಾತ್ರಕ್ಕೆ ಹೊಂದಿಕೊಳ್ಳದ ಪುಟ್ಟ ತಲೆ, ಸಣ್ಣ ಕತ್ತು, ಮಾಟವಾದ ರೆಕ್ಕೆ ಪುಕ್ಕಗಳು, ಹಿಸುಕಿದಂತಿರುವ ಕೊಕ್ಕಿನ ನಡುಭಾಗ, ಪಾದದ ಭಾಗದಲ್ಲಿ ಪುಕ್ಕಗಳಿಲ್ಲದಿರುವುದು ಈ ಪಕ್ಷಿಗಳ ಕೆಲವು ವೈಶಿಷ್ಟ್ಯಗಳು. ನಸು ಬೆಳಗಿನಲ್ಲಿ, ಹಿತ ವಾತಾವರಣದಲ್ಲಿ ಆಹಾರವನ್ನು ಹುಡುಕಲು ಹೋಗುವುವು; ಬಿಸಿಲೇರಿದ ಕೂಡಲೇ ಮರಳಿ ಗೂಡಿಗೆ ಬರುವುವು. ಗುಂಪುಗುಂಪಾಗಿ ಚಲಿಸುವುವು. ಇವು ಸಂಘಜೀವಿಗಳು. ಆದರೂ ಒಂದು ಗಂಡು ಜೀವನ ಪರ್ಯಂತ ಒಂದೇ ಹೆಣ್ಣು ಪಕ್ಷಿಯ ಜೊತೆ ಜೀವಿಸುವುದು. ಇವುಗಳು ಬೆಳೆದಂತೆಲ್ಲಾ ಧ್ವನಿ ಮಾರ್ಪಾಟಾಗುತ್ತಾ ಹೋಗುವುದು. ಗಂಡು ಪ್ರಣಯದಲ್ಲಿ ಗುಟುರು ಹಾಕುತ್ತ, ನಲಿಯುತ್ತಾ ಕಾಳುಸಂಚಿಯಿಂದ ಉತ್ಪಾದನವಾದ ಹಾಲನ್ನು ಹೆಣ್ಣಿಗೆ ಗುಟುಕು ಕೊಡುವುದು. ಈ ಗುಟುಕಿನಿಂದಾಗಿ ಹೆಣ್ಣು ಪ್ರಣಯದಲ್ಲಿ ಸಹಕರಿಸುವುದು. ಹೆಣ್ಣು ಎರಡು ತತ್ತಿಗಳನ್ನು ಇಡುವುದು. ಹದಿನೇಳನೆ ದಿನ ಮರಿಗಳು ತತ್ತಿಯಿಂದ ಹೊರಬರುವುವು. ಮರಿಗಳನ್ನು ತಂದೆ ತಾಯಿ ಹಕ್ಕಿಗಳೇ ಪೋಷಿಸಿ, ಸಂರಕ್ಷಿಸುವುವು. ಈ ಗುಂಪಿನ ಪಕ್ಷಿಗಳು ಅತೀ ವೇಗದಲ್ಲಿ ಚಲಿಸಬಲ್ಲುವು. ಆಂಗ್ಲ ಭಾಷೆಯಲ್ಲಿ ಪಿಜನ್ ಮತ್ತು ಡೊವ್ ಎಂಬ ಎರಡು ಪದಗಳ ಅರ್ಥವೂ ಒಂದೆ. ರಾಕ್ ಪಿಜನ್, ಸ್ಟಾಕ್ ಡೊವ್, ರಿಂಗ್ ಡೊವ್, ರೋಮನ್ ಪಿಜನ್, ಟಂಬ್ಲರ್, ಟರ್ಟಲ್ ಡೊವ್, ಪ್ಯಾರಟ್ ಪಿಜನ್ ಮತ್ತು ಪ್ಯಾಸೆಂಜರ್ ಪಿಜನ್ ಈ ಕುಟುಂಬಕ್ಕೆ ಸೇರಿವೆ. (ಜಿ.ಎಂ.ಬಿ)

**ಕೊಲಾಜೆನ್:** ಸ್ಕ್ಲೆರೋಪ್ರೊಟೀನ್ಸ್ ಅಥವಾ ಆಲ್ಬು ಮಿನಾಯ್ಡ್ಸ್ ವರ್ಗಕ್ಕೆ ಸೇರಿದ ಪ್ರೊಟೀನ್. ಇದು ವಿಶಿಷ್ಟವಾಗಿ ಕಶೇರುಕಗಳ ಕಂಡರ (ಟೆಂಡನ್), ಮೃದು ಮೂಳೆ, ಮೂಳೆ ಮತ್ತು ಚರ್ಮದಲ್ಲಿ ನೀಳ ಎಳೆಯ ರೂಪದಲ್ಲಿ ಶೇಖರವಾಗಿರುತ್ತದೆ. ನೀಳ ಎಳೆಯಂತಿರುವುದರಿಂದ ಇದು ದೇಹಭಾಗಗಳ ರಚನೆಗೆ ಅನುಕೂಲವಾಗಿದೆ. ನೀರಿನಲ್ಲಿ ಮತ್ತು ಉಪ್ಪಿನ ದ್ರಾವಣದಲ್ಲಿ ಕೊಲಾಜೆನ್ ವಿಲೀನವಾಗುವುದಿಲ್ಲ. ದುರ್ಬಲ ಆಮ್ಲ ಮತ್ತು ಕ್ಷಾರಗಳಲ್ಲಿ ಊದಿಕೊಳ್ಳುತ್ತದೆ. ನೀರಿನಲ್ಲಿ ಲಘುವಾಗಿ ಕುದಿಸುವುದರಿಂದ, ಹೆಚ್ಚು ಒತ್ತಡದ ನೀರಾವಿಯಿಂದ ಅಥವಾ ದುರ್ಬಲ ಆಮ್ಲಗಳೊಡನೆ ಕುದಿಸುವುದರಿಂದ ಜಲವಿಶ್ಲೇಷಣೆಗೊಳಪಡಿಸಿದರೆ ಜಿಲಾಟಿನ್ ಎಂಬ ಮತ್ತೊಂದು ಪ್ರೊಟೀನ್ ಆಗಿ ಪರಿವರ್ತನೆಗೊಳ್ಳುತ್ತದೆ.

ಕೊಲಾಜೆನ್‌ನಲ್ಲಿ ಹೈಡ್ರಾಕ್ಸಿ ಅಮೈನೋ ಆಮ್ಲ ಹೈಡ್ರಾಕ್ಸಿ ಪ್ರೊಟೀನಿನ ಅಂಶ ನೂರಕ್ಕೆ $13.5\pm0.24$. ಈ ವಿಶಿಷ್ಟತೆ ಪ್ರಾಣಿಗಳ ಅಂಗಾಂಗಗಳ ಕಾಲಜನ್ ಪ್ರಮಾಣ ವಿಶ್ಲೇಷಣ ವಿಧಾನವೊಂದರ ಆಧಾರವಾಗಿದೆ. ಕಾಲಜನ್ ಮುಖ್ಯವಾಗಿ ಜಿಲಾಟಿನ್ ತಯಾರಿಕೆಯಲ್ಲಿ ಉಪಯೋಗವಾಗುವುದು.

***

**ಕೊಲೆಂಬೋಲ:** ಕೀಟವರ್ಗದ ಆಪ್ಟೆರಿಗೋಟ ಉಪವರ್ಗಕ್ಕೆ ಸೇರಿದ ಒಂದು ಪ್ರಮುಖ ಗಣ. ಇದಕ್ಕೆ ಸೇರಿದ ಕೀಟಗಳನ್ನು ಸಾಮಾನ್ಯವಾಗಿ ಸ್ಪ್ರಿಂಗ್‌ಟೇಯ್ಲ್ಸ್ (ಜಿಗಿಬಾಲ) ಎನ್ನುತ್ತಾರೆ. ದೇಹದ ಹಿಂತುದಿಯಲ್ಲಿ ಫರ್ಕ್ಯುಲ ಎಂಬ ಕವಲೊಡೆದ ರಚನೆಯಿದೆ. ಇದರ ಸಹಾಯದಿಂದ ಇವು ಕುಪ್ಪಳಿಸಬಲ್ಲುವು. ಇದರಿಂದಲೇ ಸ್ಪ್ರಿಂಗ್ ಟೇಯ್ಲ್ಸ್ ಎಂಬ ಹೆಸರು. ಇವು ಬಹಳ ಸೂಕ್ಷ್ಮಗಾತ್ರದ ಕೀಟಗಳು. ದೇಹದ ಉದ್ದ ಸು. 1–5 ಮಿಮೀ. ವಿವಿಧ ಬಗೆಯ ನೆಲೆಗಳಲ್ಲಿ ವಾಸಿಸುತ್ತವೆ. ತೇವಪೂರಿತ ಸ್ಥಳಗಳಲ್ಲಿ ಹೆಚ್ಚು. ಕೊಳೆಯುವ ಸಸ್ಯಭಾಗಗಳು, ಹಸಿ ಮಣ್ಣು, ಕೆರೆ, ನದಿಗಳ ದಂಡೆ, ರಸಯುಕ್ತ ಶಿಲೀಂಧ್ರಗಳ ಅಡಿಯಲ್ಲಿ ಇವು ಕಾಣಬರುತ್ತವೆ. ಕೆಲವು ಬಗೆಗಳು ನೀರಿನಲ್ಲೂ ಮಂಜುಗಡ್ಡೆಯ ಮೇಲೂ ಇರಬಹುದು.

ದೇಹದ ಬಣ್ಣ ಕಪ್ಪು, ಬೂದಿ, ಬಿಳಿ, ನೀಲಿ ಇತ್ಯಾದಿ ವೈವಿಧ್ಯಪೂರ್ಣ. ದೇಹದ ಮೇಲೆ ಹುರುಪೆ ಇಲ್ಲವೆ ಕೂದಲ ಹೊದಿಕೆಯಿರಬಹುದು. ಕೆಲವೊಮ್ಮೆ ಯಾವ ಬಗೆಯ ಹೊದಿಕೆಯೂ ಇಲ್ಲದಿರಬಹುದು. ವದನಾಂಗಗಳು ಆಹಾರವನ್ನು ಕಡಿಯುವುದಕ್ಕೆ ಅನುಕೂಲವಾಗಿವೆ. ಕೆನ್ನೆಗಳು (ಜೀನೆ) ತಲೆಯ ಆಚೀಚೆ ಬೆಳೆದಿರುವುದರಿಂದ ವದನಾಂಗಗಳು ಆವರಿಸಲ್ಪಟ್ಟು ಹೊರಗೆ ಸುಲಭವಾಗಿ ಕಾಣುವುದಿಲ್ಲ. ಸ್ಪರ್ಶಾಂಗ (ಆಂಟೆನ) 4–6 ಖಂಡಗಳನ್ನು ಒಳಗೊಂಡಿದೆ. ಈ ಕೀಟಗಳಲ್ಲಿ ಕಣ್ಣುಗಳು ಇರಬಹುದು ಅಥವಾ ಇಲ್ಲದಿರಬಹುದು. ಉದರ ಭಾಗ 4–6 ಖಂಡಗಳನ್ನೊಳಗೊಂಡಿದೆ. ಇದರಲ್ಲಿ 4 ನೆಯ ಇಲ್ಲವೆ 5ನೆಯ ಖಂಡದಲ್ಲೇ ಫರ್ಕ್ಯುಲ ಇರುವುದು. ಕೀಟ ಸುಮ್ಮನೆ ಕುಳಿತಿರುವಾಗ ಫರ್ಕ್ಯುಲ ಉದರದ ಮೂರನೆಯ ಖಂಡದ ತಳಭಾಗದಲ್ಲಿರುವ ಟೆನಾಕ್ಯುಲಮ್ ಎಂಬ ರಚನೆಗೆ ಅಂಟಿಕೊಂಡಿರುತ್ತದೆ. ಕೀಟ ಕುಪ್ಪಳಿಸುವಾಗ ಫರ್ಕ್ಯುಲವನ್ನು ಹಿಂಭಾಗಕ್ಕೂ ಕೆಳಕ್ಕೂ ಚಾಚಿ ನೆಲದ ಮೇಲೆ ಒತ್ತಿ ಹಾರುತ್ತದೆ. ತುಂಬಾ ದೂರಕ್ಕೆ ನೆಗೆಯಬಲ್ಲುದು. ಜಿಗಿಬಾಲಗಳಲ್ಲಿ ಶ್ವಾಸನಾಳಗಳ ಗುಂಪು ಅತ್ಯಲ್ಪ. ಮಾಲ್ಪಿಜಿಯನ್ ನಾಳಗಳಿರುವುದಿಲ್ಲ. ಉದರದ ಮೊದಲನೆಯ ಖಂಡದಲ್ಲಿ ಅಂಟು ಅಂಗವಿದೆ. ರೆಕ್ಕೆಗಳಿಲ್ಲ.

ಕೊಲೆಂಬೋಲ ಗಣದ ಕೀಟಗಳ ಆಹಾರ ಪ್ರಧಾನವಾಗಿ ಸಸ್ಯಮೂಲದ್ದು. ಕೊಳೆಯುವ ಎಲೆ, ಬೂಷ್ಟು, ಕಲ್ಲುಹೂ, ಬೀಜಕಣಗಳು, ಪರಾಗ, ನೀರಿನಲ್ಲಿ ಬೆಳೆಯುವ ಪಾಚಿ ಮುಂತಾದುವೇ ಇವುಗಳ ಆಹಾರ. ಕೊಳೆಯುವ ಪ್ರಾಣಿ ಅವಶೇಷಗಳನ್ನು ಮತ್ತು ಇತರ ಕೀಟಗಳನ್ನು ತಿನ್ನುವ ಕೀಟಗಳೂ ಇಲ್ಲದಿಲ್ಲ.

ಇವುಗಳ ಜೀವನಕ್ರಮದ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿಲ್ಲ. ಇವು ಮಣ್ಣು, ಗೊಬ್ಬರದ ಗುಂಡಿ, ತೊಗಟೆಗಳ ತಳಭಾಗ ಮುಂತಾದ ಸ್ಥಳಗಳಲ್ಲಿ ಒಂಟೊಂಟಿಯಾಗಿಯೊ ಇಲ್ಲವೆ ಗುಂಪುಗಳಲ್ಲಿಯೊ ಮೊಟ್ಟೆಯಿಡುತ್ತವೆ. ಮೊಟ್ಟೆಯೊಡೆದು ಹೊರಬರುವ ಮರಿಗಳು ಪ್ರೌಢಕೀಟಗಳಂತೆಯೆ ಕಾಣುತ್ತವೆ. ಈ ಕೀಟಗಳಲ್ಲಿ ಸಾಮಾನ್ಯವಾಗಿ ರೂಪಪರಿವರ್ತನೆ ಇಲ್ಲ. ಇದ್ದರೂ ಬಹಳ ಹಿಂದುಳಿದ ಬಗೆಯದು.

ಈ ಗಣವನ್ನು ಆರ್ತ್ರೋಪ್ಲಿಯೋನ, ಆಕ್ಟಲೆಟಾಯ್ಡಿಯ ಮತ್ತು ಸಿಂಫೈಪ್ಲಿಯೋನ ಎಂಬ ಮೂರು ಉಪಗಣಗಳಾಗಿ ವಿಂಗಡಿಸಲಾಗಿದೆ. ಇವುಗಳಿಗೆ ಸೇರಿದಂತೆ ಎಂಟಮಾಬ್ರೈಯಿಡೆ, ಪಾಡ್ಯುರಿಡೆ, ಸ್ಮಿಂತುರಿಡೆ, ಆಕ್ಟಾಲೆಟಿಡೆ ಮತ್ತು ನೀಲಿಡೆ ಎಂಬ

ಐದು ಕುಟುಂಬಗಳಿವೆ. ಎಂಟಮೊಬ್ರಯಾ, ಹೈಪೊಗ್ಯಾಸ್ಟ್ರುರಾ, ಸ್ಮಿಂತೂರಸ್ ಕೆಲವು ಉದಾಹರಣೆಗಳು. ಐಸೋಟೋಮ ಮೈನಾಸ್ ದಕ್ಷಿಣ ಭಾರತದಲ್ಲಿರುವ ಒಂದು ಪ್ರಭೇದ.

***

**ಕೊಲೆಸ್ಟಿರಾಲ್:** ಬಹುಮಟ್ಟಿಗೆ ಎಲ್ಲ ಉಚ್ಚದರ್ಜೆಯ ಜೀವಿಗಳಲ್ಲೂ ಅಧಿಕ ಮೊತ್ತದಲ್ಲಿ ಇರುವ ಸ್ಟಿರಾಲ್ ಅಥವಾ ಸ್ಟಿರಾಯ್ಡ್ ಆಲ್ಕೊಹಾಲ್. ಇದರ ರಾಸಾಯನಿಕ ಸೂತ್ರ $C_{27}H_{45}OH$. ಇದು ಬಿಳುಪಾದ ಮೇಣದಂಥ ಆಲ್ಕೊಹಾಲಿನ ಘನವಸ್ತು. ಕೊಬ್ಬಿನೊಡನೆ ಸೇರುತ್ತದೆ. ಆದರೆ ರಾಸಾಯನಿಕವಾಗಿ ಕೊಬ್ಬಿನಿಂದ ಭಿನ್ನವಾದುದು. ರೋಗಕ್ಕೊಳಗಾದ ಪಿತ್ತಜನಕಾಂಗಗಳಲ್ಲಿ ದೊರೆಯುವ ಹರಳುಗಳಲ್ಲಿನ ಮುಖ್ಯ ಸಂಯುಕ್ತ ಕೊಲೆಸ್ಟಿರಾಲ್. ಈ ಸಂಯುಕ್ತದ ರಚನಾರಹಸ್ಯವನ್ನು ವಿಂಡಾಸ್ ಮತ್ತು ವೀಲೆಂಡ್‌ರೂ, ಜೈವಿಕಸಂಯೋಜನೆಯ ರಹಸ್ಯವನ್ನು ಬ್ಲಾಕ್ ಕಾರ್ನ್‌ಫೋರ್ತ್ ಮತ್ತು ಪೋಪ್ ಜಾಕ್‌ರೂ ಬಿಡಿಸಿರುತ್ತಾರೆ.

ವಿದ್ಯುತ್ ಆವೇದನೆಗಳ (ಎಲೆಕ್ಟ್ರಿಕ್ ಇಂಪಲ್ಸಸ್) ಮೂಲಕ ಸಂದೇಶಗಳನ್ನು ಸ್ವೀಕರಿಸುವ, ಸಾಗಿಸುವ ಮತ್ತು ನೀಡುವ ಮಿದುಳು, ಮಿದುಳುಬಳ್ಳಿ ಮತ್ತು ನರಮಂಡಲಗಳಲ್ಲಿ ಕೊಲೆಸ್ಟಿರಾಲ್ ಸಾಂದ್ರೀಕೃತವಾಗಿದ್ದು ಅವುಗಳಲ್ಲಿನ ವಿವಿಧ ವಿದ್ಯುದ್ವಾಹಕ ಕೋಶಗಳ ನಡುವಣ ವಿದ್ಯುತ್ಪ್ರತಿಬಂಧಕವಾಗಿ ಇದು ಕೆಲಸ ಮಾಡುವುದೆಂದು ಭಾವಿಸಲಾಗಿದೆ. ದೇಹದಲ್ಲಿರುವ ಹಲವು ಹಾರ್ಮೋನುಗಳು ಮತ್ತು ಪಿತ್ತರಸದ ಆಮ್ಲಗಳಿಗೆ ಕೊಲೆಸ್ಟಿರಾಲ್ ಪೂರ್ವಗಾಮಿ (ಪ್ರೀಕರ್ಸರ್) ಆಗಿದೆ. ವಾಣಿಜ್ಯಗಾತ್ರದಲ್ಲಿ ಕೊಲೆಸ್ಟಿರಾಲ್ ಅನ್ನು ಹಸು, ಎಮ್ಮೆಗಳ ಮಿದುಳು ಬಳ್ಳಿಗಳಿಂದ ಪಡೆಯಬಹುದು. ಈ ಸಂಯುಕ್ತವನ್ನು ಹಲವು ಔಷಧಗಳಲ್ಲೂ ಔಷಧೀಯ ಮಧ್ಯವರ್ತಿಯಾಗಿಯೂ ಹಲವು ಅಂಗರಾಗಗಳ ತಯಾರಿಕೆಯಲ್ಲಿಯೂ ಉಪಯೋಗಿಸಲಾಗುತ್ತಿದೆ.

ವಿತರಣೆ: ಕೊಲೆಸ್ಟಿರಾಲ್ ಶರೀರದ ಎಲ್ಲ ಅಂಗಾಂಶಗಳಲ್ಲಿಯೂ ದ್ರವವಸ್ತುಗಳಲ್ಲಿಯೂ ಇರುತ್ತದೆ. ಮಿದುಳಿನಲ್ಲಿ, ಮೂತ್ರಜನಕಾಂಗಗಳ ಮೇಲಿರುವ ಅಡ್ರೀನಲ್‌ಗಳೆಂಬ ನಿರ್ನಾಳಗ್ರಂಥಿಗಳಲ್ಲಿ ಮತ್ತು ಬೆನ್ನುಹುರಿಯಲ್ಲಿ ಇದರ ವಿತರಣೆ ಗರಿಷ್ಠ. ೭೦ ಕಿಗ್ರಾಂ ತೂಕದ ಮನುಷ್ಯನ ಅಂಗಾಂಗಗಳಲ್ಲಿ ಇರುವ ಒಟ್ಟು ಕೊಲೆಸ್ಟಿರಾಲ್ ೧೦೦ ಗ್ರಾಂಗಳಿಗಿಂತ ಸ್ವಲ್ಪ ಹೆಚ್ಚು. ಇದರಲ್ಲಿ ೩೦ ಗ್ರಾಂ ಮೇದಸ್ಸಿನಿಂದ ಕೂಡಿದ ಅಂಗಾಂಗಗಳಲ್ಲಿಯೂ, ೨೫ ಗ್ರಾಂ ಮಿದುಳಿನಲ್ಲಿಯೂ ೨೦ ಗ್ರಾಂ ಮಾಂಸಖಂಡಗಳಲ್ಲಿಯೂ, ೫ ಗ್ರಾಂಗಿಂತಲೂ ಸ್ವಲ್ಪ ಹೆಚ್ಚು ರಕ್ತದಲ್ಲಿಯೂ, ೫ ಗ್ರಾಂ ಪಿತ್ತಜನಕಾಂಗದಲ್ಲಿಯೂ ಹಾಗು ೦.೫ ಗ್ರಾಂ ಅಡ್ರೀನಲ್ ಗ್ರಂಥಿಯಲ್ಲಿಯೂ ಇರುತ್ತದೆ. ಪಿತ್ತಜನಕಾಂಗ ಕೊಲೆಸ್ಟಿರಾಲನ್ನು ಬಿಡಿಯಾಗಿ ಸ್ರವಿಸುತ್ತದೆ. ಇಲ್ಲಿಂದ ಪಿತ್ತರಸದ ಸಂಗಡ ಮುಂಗರುಳನ್ನು ಸೇರುತ್ತದೆ. ದಿನ ಒಂದಕ್ಕೆ ಸುಮಾರು ೧–೨ ಗ್ರಾಂ ಕೊಲೆಸ್ಟಿರಾಲ್ ಪಿತ್ತರಸದ ಸಂಗಡ ಸ್ರವಿಸುತ್ತದೆ. ಇದು ಸಾಮಾನ್ಯವಾಗಿ ಊಟದಲ್ಲಿ ತೆಗೆದುಕೊಳ್ಳುವ ಅಂಶಕ್ಕಿಂತ ಹೆಚ್ಚು.. ಕರುಳಿನ ಒಳಪೊರೆಯಿಂದಲೂ ಸ್ವಲ್ಪ ಕೊಲೆಸ್ಟಿರಾಲ್ ಕರುಳಿನಲ್ಲಿರುವ ಆಹಾರದ ಜೊತೆ ಸೇರುತ್ತದೆ. ಗಮನಾರ್ಹವಾದಷ್ಟು ಕೊಲೆಸ್ಟಿರಾಲ್ ಕರುಳಿನಿಂದ ಹಿಂದಕ್ಕೆ ಹೀರಿಕೊಳ್ಳಲ್ಪಡುತ್ತದೆ. ಕೊಲೆಸ್ಟಿರಾಲ್‌ನ ಸ್ವಲ್ಪ ಭಾಗ ಕರುಳಿನಲ್ಲಿರುವ ಕಿಣ್ವಕಾರಕ ಜೀವಾಣುಗಳಿಂದ ಸ್ಟಿರಾಲ್‌ಗಳಾಗಿ ಪರಿವರ್ತನೆ ಹೊಂದುತ್ತದೆ. ಮಲವಿಸರ್ಜನೆಯಲ್ಲಿ ದಿನವಹಿ ೦.೩–೧ ಗ್ರಾಂ ವರೆಗೂ ಸ್ಟಿರಾಲ್‌ಗಳು, ಕೊಪ್ರೊಸ್ಟಿರಾಲ್ ಮತ್ತು ಕೊಲೆಸ್ಟಿರಾಲ್ ರೀತಿ ಹೊರಹಾಕಲ್ಪಡುತ್ತವೆ.

ಸಂಶ್ಲೇಷಣೆ: ಕೊಲೆಸ್ಟಿರಾಲಿನ ಇಂಗಾಲದ ಅಸ್ಥಿಪಂಜರ ಅಸಿಟೇಟಿನಿಂದ ಸಂಶ್ಲೇಷಿಸಲ್ಪಟ್ಟಿದೆ. ಪಿತ್ತಜನಕಾಂಗ ಬಹಳವಾಗಿ ಕೊಲೆಸ್ಟಿರಾಲನ್ನು ಸಂಯೋಜಿಸುತ್ತದೆ. ಪಿತ್ತಜನಕಾಂಗವನ್ನು ತೆಗೆದ ಸಂದರ್ಭದಲ್ಲಿ ಸಣ್ಣಕರುಳು, ಮೂತ್ರ ಜನಕಾಂಗಗಳು, ವೃಷಣಗಳು ಮತ್ತು ಚರ್ಮ ಕೊಲೆಸ್ಟಿರಾಲನ್ನು ಸಂಯೋಜಿಸುತ್ತವೆ. ಅಡ್ರಿನಲ್ ಎಂಬ ನಿರ್ನಾಳಗ್ರಂಥಿಗಳಲ್ಲಿ ಕೊಲೆಸ್ಟಿರಾಲ್ ಹಾರ್ಮೋನುಗಳಾಗಿ ಪರಿವರ್ತನೆಯಾಗುತ್ತದೆ. ಕೊಲೆಸ್ಟಿರಾಲನ್ನು ಅಂಡಕೋಶಗಳೂ ಗರ್ಭವೇಷ್ಟನಗಳೂ ಹಾರ್ಮೋನುಗಳ ಉತ್ಪತ್ತಿಗೆ ಉಪಯೋಗಿಸುತ್ತವೆ. ಕೊಲೆಸ್ಟೀನ್ ಎಂಬ ಮೂಲ ರಾಸಾಯನಿಕದಿಂದ ಕೊಲೆಸ್ಟಿರಾಲ್ ಉತ್ಪನ್ನವಾಗಿರುತ್ತದೆ.

ಕೊಲೆಸ್ಟಿರಾಲಿನ ಶರೀರವಿಜ್ಞಾನ ಕಾರ್ಯಶಕ್ತಿಯನ್ನು ಸ್ಪಷ್ಟವಾಗಿ ನಿರ್ಣಯಿಸಲಾಗಿಲ್ಲ. ಆದರೂ ಇದು ಜೀವಚಲನೆಗೆ ಅತ್ಯವಶ್ಯಕವಾದ ವಸ್ತುವಾಗಿ ಕಂಡುಬರುತ್ತದೆ. ಶರೀರದಲ್ಲಿ ಅತಿ ಹೆಚ್ಚಾಗಿ ಕೊಲೆಸ್ಟಿರಾಲ್ ಶೇಖರಿಸಿಕೊಂಡರೆ ಕೆಲವು ರೋಗಗಳಿಗೆ ಕಾರಣಕಾರಿಯಾಗುತ್ತದೆ. ಶರೀರದಲ್ಲಿ ಹೆಚ್ಚಿಗೆ ಕೊಲೆಸ್ಟಿರಾಲ್ ಶೇಖರಿಸಿರುವುದಕ್ಕೂ ಅಥಿರೋಸ್ಕ್ಲಿರೋಸಿಸ್ ಎನ್ನುವ ರಕ್ತನಾಳಗಳ ರೋಗಕ್ಕೂ ಸಂಬಂಧವಿರುವಂತೆ ತೋರುತ್ತದೆ. ಇದೇ ಸಂದರ್ಭಗಳಲ್ಲಿ ಪಿತ್ತಾಶ್ಮರಿಗಳೂ (ಗಾಲ್ ಸ್ಟೋನ್ಸ್) ಉತ್ಪತ್ತಿಯಾಗುವ ಸೂಚನೆ ಇರುತ್ತದೆ. ಅಥಿರೋಸ್ಕ್ಲಿರೋಸಿಸ್ ಎನ್ನುವ ರೋಗದಲ್ಲಿ ಶುದ್ಧರಕ್ತನಾಳಗಳ ಒಳ ಮೈಮೇಲೆ ಕ್ರಮವಾಗಿ ಕೊಲೆಸ್ಟಿರಾಲ್‌ನಿಂದ ಕೂಡಿದ ಕೊಬ್ಬಿನ ವಸ್ತು ಶೇಖರಿಸಲ್ಪಡುತ್ತದೆ. ಊಟದಲ್ಲಿ ತೆಗೆದುಕೊಳ್ಳುವ ಕೊಲೆಸ್ಟಿರಾಲಿನ ಪರಿಮಾಣಕ್ಕೂ ಅಥಿರೊಸ್ಕ್ಲಿರೋಸಿಸ್ ಬರುವುದಕ್ಕೂ ಸಂಬಂಧವಿರುವುದಿಲ್ಲ. ಊಟದಲ್ಲಿ ತೆಗೆದುಕೊಳ್ಳುವ ಎರಡರಷ್ಟು ಮೊತ್ತದಲ್ಲಿ ಪಿತ್ತಜನಕಾಂಗ ಕೊಲೆಸ್ಟಿರಾಲನ್ನು ಉತ್ಪತ್ತಿಮಾಡುತ್ತದೆ. ಪ್ರಾಣಿಗಳ ಕೊಬ್ಬಿನಲ್ಲಿ ಮಾತ್ರ ಕೊಲೆಸ್ಟಿರಾಲ್ ಇರುತ್ತದೆ. ಸಸ್ಯಾಧಾರದ ಕೊಬ್ಬಿನಲ್ಲಿ ಇದು ಇರುವುದಿಲ್ಲ. ಊಟದಲ್ಲಿ ಹೆಚ್ಚಿಗೆ ತೆಗೆದುಕೊಳ್ಳುವಿಕೆಗೂ ಪಿತ್ತಜನಕಾಂಗದಲ್ಲಿ ಉತ್ಪತ್ತಿಯಾಗುವ ಕೊಲೆಸ್ಟಿರಾಲಿಗೂ ಸರಿದೂಗಿಸುವಂತೆ ಒಂದು ನಿಯಂತ್ರಿಸುವ ಕಟ್ಟುಪಾಡು ಉಂಟು. ಊಟದಲ್ಲಿ ತೆಗೆದುಕೊಳ್ಳುವ ಪ್ರಮಾಣ ಕಡಿಮೆಯಾದಾಗ ಪಿತ್ತಜನಕಾಂಗ ಹೆಚ್ಚಿಗೆ ಕೊಲೆಸ್ಟಿರಾಲನ್ನು ಉತ್ಪತ್ತಿಮಾಡುತ್ತದೆ. ಊಟದಲ್ಲಿ ತೆಗದುಕೊಳ್ಳುವ ಪ್ರಮಾಣ ಹೆಚ್ಚಿಗೆಯಾದಲ್ಲಿ ಪಿತ್ತಜನಕಾಂಗದಲ್ಲಿ ಕೊಲೆಸ್ಟಿರಾಲಿನ ಉತ್ಪತ್ತಿ ಕಡಿಮೆಯಾಗುತ್ತದೆ.

ಅಥಿರೊಸ್ಕ್ಲಿರೋಸಿಸ್ ಎಂಬ ರೋಗಕ್ಕೆ ಈಡಾಗುವ ಪ್ರಾಣಿ ಮನುಷ್ಯ ಮಾತ್ರ.. ರಕ್ತದಲ್ಲಿನ ಕೊಲೆಸ್ಟಿರಾಲಿನ ಮಟ್ಟಕ್ಕೂ ಅಥಿರೊಸ್ಕ್ಲಿರೋಸಿಸ್‌ಗೂ ಸಂಬಂಧ ಉಂಟು ಎನ್ನುವುದಕ್ಕೆ ಸಕಾರಣಗಳಿವೆ. ಮಾನವನ ರಕ್ತದಲ್ಲಿನ ಕೊಲೆಸ್ಟಿರಾಲಿನ ಮಟ್ಟ ಇತರ ಪ್ರಾಣಿಗಳಲ್ಲಿಯ ಮತ್ತು ಪ್ರಯೋಗಶಾಲೆಯಲ್ಲಿಯ ಪ್ರಾಣಿಗಳಲ್ಲಿರುವುದಕ್ಕಿಂತ ಹೆಚ್ಚು.. ರಕ್ತದಲ್ಲಿ ಕೆಳಮಟ್ಟದ ಪ್ರಮಾಣವಿರತಕ್ಕ ಜನಗಳ ಗುಂಪಿನಲ್ಲಿ ಅಥಿರೊಸ್ಕ್ಲಿರೋಸಿಸ್ ಕೂಡ ಕೆಳಮಟ್ಟದಲ್ಲಿರುವುದು. ಪ್ರಯೋಗಶಾಲೆಯ ಪ್ರಾಣಿಗಳಲ್ಲಿ ರಕ್ತದ ಕೊಲೆಸ್ಟಿರಾಲ್ ಪ್ರಮಾಣವನ್ನು ಹೆಚ್ಚಿಸಿ ಅವುಗಳಲ್ಲಿ ಅಥಿರೊಸ್ಕ್ಲಿರೋಸಿಸ್ ಎಂಬ ರೋಗವನ್ನು ಬರುವಂತೆ ಮಾಡಿ ತೋರಿಸಿರುತ್ತಾರೆ. ಇಷ್ಟಾದರೂ ಸಹ ರಕ್ತದಲ್ಲಿನ ಕೊಲೆಸ್ಟಿರಾಲಿನ ಮಟ್ಟದ ಪ್ರಮಾಣವೇ ಅಥಿರೊಸ್ಕ್ಲಿರೋಸಿಸ್ ಬರುವುದಕ್ಕೂ ಅಥವಾ ಬರದೆ ಇರುವುದಕ್ಕೂ ಕಾರಣಕಾರಿ ಎನ್ನುವುದನ್ನು ಯಾರೂ ಇಲ್ಲಿಯವರೆಗೆ ನಿರ್ದಿಷ್ಟವಾಗಿ ದೃಢಪಡಿಸಿಲ್ಲ. ಇತರ ಕಾರಕಗಳು ಇದಕ್ಕೆ ಕಾರಣ ಎನ್ನುವ ಭಾವನೆ ಉಂಟು. ಇಂಥ ಕಾರಕಗಳು ಊಟ, ವಯಸ್ಸು, ಲಿಂಗ ಮತ್ತು ಹಲವು ಬಗೆಯ ಹಾರ್ಮೋನುಗಳು ಎಂದು ತಿಳಿದುಬಂದಿದೆ. ಅತಿಕಡಿಮೆ ಕೊಬ್ಬು ಇರುವ ಊಟ ಮತ್ತು ಅತಿಕಡಿಮೆ ಪ್ರಮಾಣದಷ್ಟು ಕೆಲೊರಿಗಳಿರುವ ವಸ್ತುಗಳನ್ನು ತಿನ್ನುವುದರಿಂದಲೂ ರಕ್ತದಲ್ಲಿನ ಕೊಲೆಸ್ಟಿರಾಲಿನ ಮಟ್ಟದ ಪ್ರಮಾಣ ಕಡಿಮೆ ಮಾಡುವುದರಿಂದಲೂ ಅಥಿರೋಸ್ಕ್ಲಿರೋಸಿಸ್ ಎನ್ನುವ ರೋಗ ಬರುವುದನ್ನು ತಡೆಹಿಡಿಯಬಹುದೆಂದು ಕೆಲವು ವಿಜ್ಞಾನ ಸಂಶೋಧಕರ ಅಭಿಪ್ರಾಯ. ಯಾವ ತರಹ ಕೊಬ್ಬು ಮತ್ತು ಸಸಾರಜನಕಗಳು ಊಟದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿವೆ ಎನ್ನುವುದಕ್ಕೂ ಅಥಿರೋಸ್ಕ್ಲಿರೋಸಿಸ್ ಎನ್ನುವ ರೋಗ ಬರುವುದಕ್ಕೂ ಸಂಬಂಧವುಂಟು. ಈ ವಿಷಯದಲ್ಲಿ ಸಂಶೋಧನೆ ಮುಂದುವರಿದಿದೆ.

***

**ಕೊಲ್ಲಿಕರ್, ರೂಡಾಲ್ಫ್ ಆಲ್ಬರ್ಟ್ ಫಾನ್ ೧೮೧೭–೧೯೦೫:** ಸ್ವಿಟ್ಸರ್ಲೆಂಡಿನ ಭ್ರೂಣ ಮತ್ತು ಕೋಶರಚನ ವಿಜ್ಞಾನ ಪರಿಣತ. ಜನನ ೧೮೧೭ನೆಯ ಜುಲೈ ೬ ರಂದು ಜ್ಯೂರಿಕ್‌ನಲ್ಲಿ. ಲೊವೆನ್ಸ್ಟೋಕನ್ ಹೆನ್ಲೆ ಮತ್ತು ಮುಲ್ಲರ್ ಅವರಲ್ಲಿ ವಿದ್ಯಾಭ್ಯಾಸ ಮಾಡಿ ೧೮೪೪ರಲ್ಲಿ ಜ್ಯೂರಿಕ್‌ನಲ್ಲಿ ಶರೀರಕ್ರಿಯಾವಿಜ್ಞಾನ ಮತ್ತು ಅಂಗರಚನಾವಿಜ್ಞಾನದ ಮುಖ್ಯ ಪ್ರಾಧ್ಯಾಪಕನಾದ. ಈತನ ಮುಂದಾಳುತನದಲ್ಲಿ ಲೇಡಿಗ್, ವಿರ್‌ಚೌ ಮತ್ತು ಗೆಗನ್‌ಬಾರ್ ಅವರೊಂದಿಗೆ ವರ್ಜ್‌ಬರ್ಗ್ ಜರ್ಮನಿಯಲ್ಲೇ ಅತ್ಯಂತ ಮುಖ್ಯವಾದ ವೈದ್ಯವಿದ್ಯೆಯ ಸಂಸ್ಥೆಯಾಯಿತು. ಶಿರೋಪಾದಿಗಳ (ಸೆಫಲಾಪೊಡ) ಬೆಳೆವಣಿಗೆ, ಸ್ನಾಯುವಿನ ರಚನೆ, ಕೆಂಪು ರಕ್ತಕಣಗಳ ಹುಟ್ಟು ಮತ್ತು ಬೆಳೆವಣಿಗೆ ಮತ್ತು ಬೆಳೆವಣಿಗೆಯಲ್ಲಿ ಜೀವಾಂಕುರ ಸಂಸ್ತರದ ಮುಖ್ಯಸ್ಥಾನ– ಇವು ಕೊಲ್ಲಿಕರ್‌ನ ಸಂಶೋಧನೆಗಳಲ್ಲಿ ಮುಖ್ಯವಾದುವು. ವೀರ್ಯಾಣು ಕೋಶಗಳಿಂದಲೇ ಉತ್ಪತ್ತಿಯಾಗುತ್ತದೆ ಎಂಬುದನ್ನು ವಿವರಿಸಿದವರಲ್ಲಿ ಇವನೇ ಮೊದಲಿನವ. ನರಕೋಶಸಿದ್ಧಾಂತವನ್ನು ಪ್ರತಿಪಾದಿಸುವುದಕ್ಕೆ ಮುಖ್ಯ ನಿದರ್ಶನಗಳನ್ನೂ ಒದಗಿಸಿಕೊಟ್ಟ.



ಡಾರ್ವಿನ್ನನ ವಿಕಾಸ ಸಿದ್ಧಾಂತವನ್ನು ಕೊಲ್ಲಿಕರ್ ಕೇವಲ ಮೂಲಸಂಕಲ್ಪವಾದ (ಟೆಲಿಯೋಲಾಜಿಕಲ್) ಎಂದು ಭಾವಿಸಿದ. ಪ್ರಾಣಿಗಳು ಕಾಲಕ್ರಮೇಣ ಪರಿವರ್ತನೆಗೊಳ್ಳುತ್ತವೆ ಎನ್ನುವ ವಿಕಾಸವಾದದ ತತ್ತ್ವಕ್ಕೆ ವಿರುದ್ಧವಾಗಿ ಅವು ತ್ವರಿತವಾದ ಬದಲಾವಣೆಯನ್ನು ಹೊಂದುತ್ತವೆ ಎಂದು

ಸೂಚಿಸಿದ. ೧೮೫೨ರಲ್ಲಿ ಭ್ರೂಣ ವಿಜ್ಞಾನದ ಬಗ್ಗೆಯೂ, ೧೮೬೧ರಲ್ಲಿ ಕೋಶರಚನಾವಿಜ್ಞಾನದ ಬಗ್ಗೆಯೂ ಎರಡು ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿದ. ಈತ ನಿಧನ ಹೊಂದಿದ್ದು ನವೆಂಬರ್ ೨, ೧೯೦೫ರಲ್ಲಿ. ***

**ಕೊಳವೆ ಹುಳು:** ಪ್ರಾಣಿರಾಜ್ಯದ ಫೊರೋನಿಡ ಎಂಬ ಕಿರುವಂಶಕ್ಕೆ ಸೇರಿದ ಸಮುದ್ರಜೀವಿ (ಟ್ಯೂಬ್ ವರ್ಮ್). ಸಣ್ಣ ಜಂತುಗಳನ್ನು ಹೋಲುತ್ತದೆ. ತಾನೇ ನಿರ್ಮಿಸಿಕೊಂಡ ಕೊಳವೆಯಲ್ಲಿ ಈ ಹುಳ ವಾಸಿಸುತ್ತದೆ. ಈ ಕೊಳವೆಹುಳು ಸಮುದ್ರದ ತಳವನ್ನೋ ಇತರ ವಸ್ತುಗಳನ್ನೋ ಕಚ್ಚಿಕೊಂಡಿರುತ್ತದೆ. ಇದರ ವಾಸ ಉಷ್ಣ ಮತ್ತು ಸಮಶೀತೋಷ್ಣವಲಯಗಳ ಆಳವಿಲ್ಲದ ಸಮುದ್ರಗಳಲ್ಲಿ. ಪ್ರಾಣಿರಾಜ್ಯದಲ್ಲಿ ಇದರ ಸ್ಥಾನಮಾನದ ಬಗ್ಗೆ ಬಹಳ ದಿನಗಳವರೆಗೂ ಸರಿಯಾದ ಅರಿವು ಇರಲಿಲ್ಲ. ಹಿಂದೆ ಇದನ್ನು ಅನೆಲಿಡ (ವಲಯವಂತ ವಂಶ), ಮೊಲಸ್ಕ (ಮೃದ್ವಂಗಿ), ಕಾರ್ಡೇಟ ಮುಂತಾದ ವಿಭಾಗಗಳಲ್ಲಿ ಸೇರಿಸಲಾಗಿತ್ತು. ಆದರೆ ತನ್ನ ಕೆಲವು ವಿಶಿಷ್ಟ ರಚನೆಗಳಿಂದಾಗಿ ಈ ಯಾವ ವಿಭಾಗದೊಂದಿಗೂ ಇದು ಸಮರ್ಪಕವಾಗಿ ಹೊಂದಿಕೊಳ್ಳುತ್ತಿರಲಿಲ್ಲ. ಇದರಿಂದಾಗಿ ಈಚೆಗೆ ಇದನ್ನೇ ಪ್ರತ್ಯೇಕ ವಿಭಾಗವೊಂದರಲ್ಲಿ ಸೇರಿಸಲಾಗಿದೆ.

ದೇಹ ನೀಳವಾಗಿ ಹಲವು ಸೆಂಮೀ ಉದ್ದವಾಗಿದೆ. ಇದು ಖಂಡಗಳಾಗಿ ವಿಭಾಗವಾಗಿಲ್ಲ. ಇದರ ಒಂದು ತುದಿಯಲ್ಲಿ ಎರಡು ಸುತ್ತುಗಳಲ್ಲಿರುವ ಸಂವೇದಿ ತಂತುಗಳಿವೆ (ಟೆಂಟಕಲ್ಸ್). ಇವುಗಳ ನಡುವೆ ಅರ್ಧಚಂದ್ರಾಕೃತಿಯ ಬಾಯಿ ಉಂಟು. ಎಪಿಸ್ಟೋಮ್ ಎಂಬ ಮಾಂಸದ ಮುಚ್ಚಳ ಬಾಯಿಯನ್ನು ಭಾಗಶಃ ಮುಚ್ಚಿಕೊಂಡಿದೆ. ಮಲದ್ವಾರವೂ ದೇಹದ ಇದೇ ತುದಿಯಲ್ಲಿ, ಆದರೆ ಬಾಯಿಯ ಎದುರು ಪಾರ್ಶ್ವದಲ್ಲಿ ತಂತುಗಳ ಹೊರಗಡೆಯಿರುವ ಒಂದು ತೊಟ್ಟಿನ ತುದಿಯಲ್ಲಿದೆ. ಇದರಿಂದಾಗಿ ಜೀರ್ಣನಾಳಕ್ಕೆ U ಆಕಾರ ಬಂದಿದೆ. ತಂತುಗಳ ಮೇಲೆ ಸೂಕ್ಷ್ಮಗ್ರಾಹಿ ರೋಮಗಳಿವೆ. ತಂತುಗಳ ಬುಡದಲ್ಲಿ ಸಂಬಂಧಕ ಸ್ನಾಯುಗಳಿಂದಾದ ಲೊಫೋಫೋರ್ ಎಂಬ ಅಂಗವಿದೆ. ತಂತುಗಳ ಮೇಲಿನ ಕೂದಲುಗಳ ಚಲನೆಯಿಂದ ಉದ್ಭವಿಸುವ ಜಲಪ್ರವಾಹ ಬಾಯಿಗೆ ಆಹಾರ ವಸ್ತುಗಳನ್ನು (ತೇಲುವ ಏಕಾಣುಜೀವಿ) ಸೆಳೆದುಕೊಡುವುದರಲ್ಲಿ ಸಹಾಯಕವಾಗಿದೆ.

ಆಹಾರನಾಳ, ಜಠರ, ಕರುಳು, ಗುದನಾಳ–ಇವು ಜೀರ್ಣಾಂಗದ ಮುಖ್ಯ ಭಾಗಗಳು. ಇವಕ್ಕೆ ಸಂಬಂಧಿಸಿದ ಯಾವ ಬಗೆಯ ಗ್ರಂಥಿಗಳೂ ಇಲ್ಲ. ಅಫರೆಂಟ್ ಮತ್ತು ಇಫರೆಂಟ್ ಎಂಬ ಎರಡು ರಕ್ತನಾಳಗಳೇ ರಕ್ತಚಲನಾಂಗದ ಪ್ರಮುಖ ಭಾಗಗಳು. ಇವುಗಳಲ್ಲಿ ಒಂದು ಜೀರ್ಣಾಂಗ ಕೊಳವೆಗಳ ಮಧ್ಯದಲ್ಲೂ, ಇನ್ನೊಂದು ಜೀರ್ಣಾಂಗ ಕೊಳವೆ ಮತ್ತು ದೇಹದ ಹೊರಗೋಡೆಯ ನಡುವೆಯೂ ಇವೆ. ಇವೆರಡು ರಕ್ತನಾಳಗಳೂ ಲೋಫೋಫೋರಿನ ಬಳಿ ಕೂಡಿಕೊಂಡಿವೆ. ಇವನ್ನು ಆವರಿಸಿಕೊಂಡು ಒಂದು ರಕ್ತ ಕುಹರವೂ ಹಲವು ಕುರುಡು ನಾಳಗಳೂ ಇವೆಯಲ್ಲದೆ ರಕ್ತನಾಳಗಳಿಗೆ ಸೇರಿದಂತೆ ವ್ಯಾಸೊಪೆರಿಟೋನಿಯಲ್ ಮಾಂಸಖಂಡಗಳಿವೆ. ಇವನ್ನು ಮೇದೋರಚನೆ (ಫ್ಯಾಟ್‌ಬಾಡಿ) ಎಂದೂ ಕರೆಯುವರು. ಇವುಗಳಲ್ಲಿ ಕೆಲವು ವಿಸರ್ಜಿತ ವಸ್ತುಗಳಿಂದಲೂ ಇನ್ನು ಕೆಲವು ಸಿಡಿದ ಹೀಮೋಗ್ಲಾಬಿನ್‌ನಿಂದಲೂ ಆಗಿರುವಂತೆ ತೋರುತ್ತದೆ.

ರಕ್ತನಾಳಗಳಲ್ಲಿ ದೀರ್ಘವೃತ್ತಾಕಾರದ ರಕ್ತಕಣಗಳಿವೆ. ಕಣಬೀಜ ಮತ್ತು ಮಾನವ ರಕ್ತದಲ್ಲಿನ ಹೀಮೋಗ್ಲಾಬಿನನ್ನು ಹೋಲುವ ಕೆಂಪು ಬಣ್ಣದ ಹೀಮೋಗ್ಲಾಬಿನ್ ಇರುವುದು ಕೊಳವೆ ಹುಳುವಿನ ರಕ್ತಕಣಗಳ ವಿಶೇಷ ಲಕ್ಷಣ.

ದೇಹದ ಕುಹರ : ದೇಹಾಂತರಾವಕಾಶ ಎಂದು ಕರೆಯಲಾಗುವ ದೇಹದ ಪೊಳ್ಳಿನ ಭಾಗ ನಾಲ್ಕು ಮೀಸೆಂಟರಿಗಳಿಂದ ನಾಲ್ಕು ವಿಭಾಗವಾಗಿದೆ. ಮೀಸೆಂಟರಿಗಳು ಜೀರ್ಣಾಂಗಗಳಿಂದ ಆರಂಭವಾಗಿ ದೇಹದ ಗೋಡೆಗೆ ಅಂಟಿಕೊಂಡಿವೆ. ತಂತುಗಳ ತುದಿಯ ದೇಹದ ಟೊಳ್ಳಿನಲ್ಲಿ ಒಂದು ಸಮತಲ ಮೀಸೆಂಟರಿ ಲೋಫೋಫೋರ್ ಕುಹರವನ್ನು ದೇಹದ ಇತರ ನಾಲ್ಕು ಕುಹರಗಳಿಂದ ಪ್ರತ್ಯೇಕಿಸುತ್ತದೆ. ದೇಹದ ಈ ಟೊಳ್ಳುಗಳಲ್ಲಿ ಒಂದು ದ್ರವ ತುಂಬಿದ್ದು ದೇಹ ಉಬ್ಬಿಕೊಂಡಿರುವಂತೆ ಮಾಡುತ್ತದೆ.

ಮಲದ್ವಾರದ ಇಕ್ಕೆಡೆಗಳಲ್ಲಿ ನೆಫ್ರೀಡಿಯ ಎಂಬ ವಿಸರ್ಜನಾಂಗಗಳಿವೆ. ಇವು ನುಲಿನಾಳಗಳ ಮೂಲಕ ದೇಹದ ಎರಡು ದೊಡ್ಡ ಟೊಳ್ಳುಭಾಗಗಳೊಡನೆ ಸಂಬಂಧಿಸಿದ್ದು ಇವುಗಳಿಂದ ವಿಸರ್ಜಿತವಾದ ವಸ್ತುವನ್ನು ಹೊರಹಾಕಲು ಸಹಾಯ ಮಾಡುತ್ತವೆ.

ದೇಹದ ಗೋಡೆಯಲ್ಲಿ ಅನುಲೇಪಕ ಜೀವಕೋಶಗಳ ಒಂದು ಹೊರ ಸಾಲೂ ಸ್ನಾಯು ತಂತುಗಳ ಎರಡು ಒಳಸಾಲುಗಳೂ ಇವೆ. ಹೊರಗಿನದು ವೃತ್ತಸ್ನಾಯುವಿನ ಸಾಲು, ಒಳಗಿನದು ಲಂಬಸ್ನಾಯುವಿನ ಸಾಲು. ಅನುಲೇಪಕ ಜೀವಕೋಶಗಳು ಸ್ರವಿಸುವ ಒಂದು ದ್ರವದ ಸಹಾಯದಿಂದ ಹುಳು ತಾನು ವಾಸಿಸುವ ಕೊಳವೆಗೂಡನ್ನು ನಿರ್ಮಿಸಿಕೊಳ್ಳುತ್ತದೆ. ಸ್ರವಿಸಿದಾಗ ಪಾರದರ್ಶಕವಾಗಿ ಅಂಟುಅಂಟಾಗಿರುವ ಈ ದ್ರವ ನೀರಿನ ಸಂಪರ್ಕದಿಂದ ಗಟ್ಟಿಯಾಗುತ್ತದೆ. ಕೆಲವು ವೇಳೆ ಹಾಗೆ ನಿರ್ಮಿಸಿದ ಕೊಳವೆಗೆ ಮರಳು, ಚಿಪ್ಪು ಮುಂತಾದ ವಸ್ತುಗಳು ಅಂಟಿಕೊಳ್ಳುವುದುಂಟು. ಈ ಕೊಳವೆ ಮುಂಭಾಗದಲ್ಲಿ ಮುಚ್ಚಿದ್ದು ಹಿಂಭಾಗದಲ್ಲಿ ತೆರೆದಿರುತ್ತದೆ. ಹಿಂಭಾಗದ ದ್ವಾರದಿಂದ ದೇಹವನ್ನು ಹುಳು ನೀಳವಾಗಿ ಚಾಚಬಲ್ಲುದು.

ಅನುಲೇಪಕ ಜೀವಕೋಶದ ಸಾಲಿನ ಕೆಳಗೆ ನರಗಳ ಜಾಲದಂತೆ ನರಮಂಡಲ ಆವರಿಸಿದೆ. ಲೋಫೋಫೋರ್ ಟೊಳ್ಳಿನೊಳಗಿರುವ ಸಮತಳ ಮೀಸೆಂಟರಿಯೊಳಕ್ಕೆ ಈ ನರ ಜಾಲ ಮುಂದುವರಿದು, ಸಾಂದ್ರವಾಗಿ ಕೇಂದ್ರೀಕರಿಸಿದೆ. ಈ ಕೇಂದ್ರದಿಂದ ಹೊರಟು ದೇಹದ ಗೋಡೆಯ ಮೇಲ್ತೊಕ್ಕಿನಲ್ಲಿ ಒಂದು ಅಥವಾ ಎರಡು ನೀಳವಾದ ದೊಡ್ಡ ನರಗಳು ದೇಹದ ಹಿಂತುದಿಯವರೆಗೂ ಹಾಯುತ್ತವೆ. ಇವುಗಳ ಸಹಾಯದಿಂದ ಹುಳು ದೇಹವನ್ನು ಕೊಳವೆಯೊಳಕ್ಕೆ ಸೆಳೆದುಕೊಳ್ಳಲು ಸಾಧ್ಯವಾಗುತ್ತದೆ.

ಕೊಳವೆಹುಳು ದ್ವಿಲಿಂಗಿ. ದೇಹದ ಮುಂಭಾಗದಲ್ಲಿರುವ ಲಘುಮೂಗು(ಬ್ಲೈಂಡ್) ರಕ್ತನಾಳಗಳ ಗೋಡೆಯಲ್ಲಿರುವ ಜೀವಕೋಶಗಳಿಂದ ಲಿಂಗಾಣುಗಳು ಉತ್ಪತ್ತಿಯಾಗುತ್ತವೆ. ಬಲಿತ ಅಂಡ ಮತ್ತು ವೀರ್ಯಾಣುಗಳು ದೇಹದ ಕುಹರಕ್ಕೆ ಬಿದ್ದು ನೆಫ್ರೀಡಿಯ ಕೊಳವೆಯ ಮೂಲಕ ಸಾಗಿ ಹೊರಬರುತ್ತವೆ. ಗರ್ಭಧಾರಣೆ ಸಂವೇದಿತಂತುಗಳ ನಡುವೆ ನಡೆಯುತ್ತದೆ. ಗರ್ಭಧರಿಸಿದ ಅಂಡಗಳು ಸಂವೇದಿತಂತುಗಳಲ್ಲೊ ಇಲ್ಲವೆ ಹೊರಗೆ ನೀರಿನಲ್ಲೊ ವೃದ್ಧಿಯಾಗುತ್ತವೆ. ಅನಂತರ ಅವುಗಳಿಂದ ನೀರಿನಲ್ಲಿ ಈಜಿಕೊಂಡು ಚಲಿಸುವ ಲಾರ್ವಗಳು ಹೊರಬರುತ್ತವೆ. ಲಾರ್ವಕ್ಕೆ ಆಕ್ಟಿನೊಟ್ರೋಕ ಎಂದು ಹೆಸರು. ಇದಕ್ಕೆ ರೋಮಗಳಿಂದ ಕೂಡಿದ ಸಂವೇದಿತಂತುಗಳ ಉಂಗುರವೂ ಬಾಯಿಯ ಮೇಲೆ ಮಾಂಸಖಂಡದ ಮುಚ್ಚಳವೂ ಇವೆ. ಲಾರ್ವ ನೀರಿನಲ್ಲಿರುವ ಸೂಕ್ಷ್ಮ ತೇಲುಜೀವಿಗಳನ್ನು ಭಕ್ಷಿಸುತ್ತ ಇದ್ದು ಒಂದು ತಿಂಗಳ ಅನಂತರ ನೀರಿನ ತಳವನ್ನು ಸೇರಿ, ರೂಪಪರಿವರ್ತನೆ ಹೊಂದಿ ಪ್ರೌಢಪ್ರಾಣಿಯಾಗುತ್ತದೆ. ಕೆಲವು ವೇಳೆ ದೇಹದ ಒಂದು ಭಾಗ ಹೊರಬಂದು ಪ್ರತ್ಯೇಕ ಪ್ರಾಣಿಯಾಗಿ ಬೆಳೆದು ಅಲಿಂಗ ರೀತಿಯಲ್ಲೂ ವಂಶಾಭಿವೃದ್ಧಿ ಮಾಡಬಹುದು. ***

**ಕೋಎನ್‌ಜೈಮ್:** ಕಿಣ್ವಗಳು ಪ್ರಧಾನವಾಗಿ ಪ್ರೋಟೀನುಗಳಾದರೂ ಅವು ಕ್ರಿಯಾಯುತವಾಗಲು ಅನೇಕ ವೇಳೆ ಕಡಿಮೆ ಅಣುತೂಕದ, ಉಷ್ಣ ಸ್ಥಿರವಾದ (ಥರ್ಮೋಸ್ಟೇಬಲ್) ಕೆಲವು ಕಾರ್ಬನಿಕ ಸಂಯುಕ್ತಗಳು ಪ್ರೋಟೀನಿನೊಂದಿಗೆ ಸಂಯೋಗಗೊಂಡಿರಬೇಕಾಗುತ್ತದೆ. ಅಂಥ ಸಂಯುಕ್ತಗಳೆ ಕೋಎನ್‌ಜೈಮುಗಳು. ಕೋಎನ್‌ಜೈಮನ್ನುಳಿದ ಪ್ರೋಟೀನು ಭಾಗಕ್ಕೆ ಅಪೋಎನ್‌ಜೈಮ ಎಂದು ಹೆಸರು. ಹೀಮೊಗ್ಲಾಬಿನ್ನಿನಲ್ಲಿ ಪ್ರೋಟೀನಿನೊಂದಿಗೆ ಸೇರಿಕೊಂಡಿರುವ ಹೀಮಟಿನ್ ಇಂಥದೇ ಸಂಯುಕ್ತವಾದರೂ ಅದನ್ನು ಕೋಎನ್‌ಜೈಮು ಎಂದು ಪರಿಗಣಿಸುವುದಿಲ್ಲ. ಪ್ರೋಟೀನಿನೊಂದಿಗೆ ಭದ್ರವಾಗಿ ಸಂಯೋಗಗೊಂಡಿರುವ ಹೀಮಟಿನ್ನಿನಂಥ ಸಂಯುಕ್ತಗಳನ್ನು ಪೂರಕ ಗುಂಪುಗಳು (ಪ್ರಾಸ್ಥೆಟಿಕ್ ಗ್ರೂಪ್ಸ್) ಎಂದು ಕರೆಯುತ್ತಾರೆ. ಪ್ರೋಟೀನಿನೊಂದಿಗೆ ಹೆಚ್ಚು ಕಡಿಮೆ ಸಡಿಲವಾಗಿ ಸಂಯೋಗಗೊಂಡಿದ್ದು ಅವುಗಳ ಕ್ರಿಯಾಪಟುತ್ವಕ್ಕೆ ಕಾರಣವಾದ ಸಂಯುಕ್ತಗಳಿಗೆ ಮಾತ್ರ ಕೋಎನ್‌ಜೈಮು ಎಂಬ ಹೆಸರು ಸಲ್ಲುತ್ತದೆ.

ಅಂಥ ಕೋಎನ್‌ಜೈಮ್‌ಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಹೆಸರಿಸಬಹುದು. ಆಲ್ಕೊಹಾಲಿಕ್ ಕಿಣ್ವನದಲ್ಲಿ (ಆಲ್ಕೊಹಾಲಿಕ್ ಫರ್ಮೆಂಟೇಷನ್) ಅತ್ಯಂತ ಪ್ರಮುಖ ಪಾತ್ರವಹಿಸುವ ಕೋಎನ್‌ಜೈಮ್ I ಅನೇಕ ಡಿಹೈಡ್ರಾಜಿನೇಸ್ ಎನ್‌ಜೈಮುಗಳಿಗೆ ಕೋಎನ್‌ಜೈಮಾಗಿ ವರ್ತಿಸುತ್ತದೆ. ಡೈಫಾಸ್ಫೊ ಪಿರಿಡೀನ್ ನ್ಯೂಕ್ಲಿಯೋಟೈಡ್ ಎಂದೂ ಹೆಸರು ಪಡೆದಿರುವ ಈ ಕೋಎನ್‌ಜೈಮಿನಲ್ಲಿ ಅಡೆನೀನ್, ನಿಕೊಟಿನಮೈಡ್, ಎರಡು ಡಿ–ರೈಬೋಸ್ ಅಣುಗಳು ಮತ್ತು ಎರಡು ಫಾಸ್ಫಾರಿಕ್ ಆಮ್ಲದ ಅಣುಗಳು ಸೇರಿಕೊಂಡಿವೆ. ಕೋಎನ್‌ಜೈಮ್ Iರ ವಿಷಯವಾಗಿ ಎಚ್. ಫಾನ್ ಯೂಲರ್ ಎಂಬಾತ ವಿಶೇಷ ಸಂಶೋಧನೆ ನಡೆಸಿದ್ದಾನೆ. ವಾರ್‌ಬರ್ಗ್ ಎಂಬಾತ ಸ್ತನಿಗಳ ಎಂಥ್ರೋಸೇಟಿಸಿನಿಂದ ಅಪೋಹನಕರಿಸಬಲ್ಲ (ಡಯಾಲಿಸಿಸ್) ಮತ್ತು ಉಷ್ಣಸ್ಥಿರವಾದ ಒಂದು ಪದಾರ್ಥವನ್ನು ತಯಾರಿಸಿದ.

ಕೋಎನ್‌ಜೈಮ್ II: ಇನ್ನು ಕೆಲವು ಡಿಹೈಡ್ರಾಜಿನೇಸುಗಳಿಗೆ ಅಗತ್ಯವಾಗಿರುವ ಕೋಎನ್‌ಜೈಮ್ II ಅಥವಾ ಟ್ರೈಫಾಸ್ಫೊ ಪಿರಿಡೀನ್ ನ್ಯೂಕ್ಲಿಯೊಟೈಡಿನಲ್ಲಿ ಇನ್ನೊಂದು ಫಾಸ್ಫಾರಿಕ್ ಆಮ್ಲ ಹೆಚ್ಚಾಗಿರುತ್ತದೆ. ಕಾರ್ಬಾಕ್ಸಿಲೇಸ್ ಎನ್‌ಜೈಮಿಗೆ ಅಗತ್ಯವಾದ ಕೊಕಾರ್ಬಾಕ್ಸಿಲೇಸ್‌ನಲ್ಲಿ ಥಯಮೀನ್ (ವಿಟಮಿನ್ ಬಿ$_1$) ಎರಡು ಫಾಸ್ಫಾರಿಕ್ ಆಮ್ಲದ ಅಣುಗಳೊಡನೆ ಸಂಯೋಗಗೊಂಡಿರುತ್ತದೆ.

ಅಸಿಟೈಲ್ ಕೋಲೀನ್ ತಯಾರಿಕೆಗೆ ಅಗತ್ಯವಾದ ಕೋಎನ್‌ಜೈಮ್ ಎ ಯಲ್ಲಿ ಬಿ ಗುಂಪಿನ ಇನ್ನೊಂದು ವಿಟಮಿನ್ ಪ್ಯಾಂಟೊತೆನಿಕ್ ಆಮ್ಲವಿದೆ.

ನಮ್ಮ ದೇಹದಲ್ಲಿ ವಿಟಮಿನ್‌ಗಳ ಪಾತ್ರ ಬಹುಮಟ್ಟಿಗೆ ಕೋಎನ್‌ಜೈಮ್‌ಗಳ ರೂಪದಲ್ಲಿ ಎಂದು ನಂಬಲಾಗಿದೆ. (ಜೆ.ಆರ್.ಎಲ್.)

**ಕೋಗಿಲೆ:** ಯೂಡಿನಾಮಿಸ್ ಸ್ಕೋಲೊಪೇಸಿಯ ಎಂಬ ವೈಜ್ಞಾನಿಕ ಹೆಸರಿನ ಹಕ್ಕಿ. ಕ್ಯುಕಲಿಫಾರ್ಮಿಸ್ ಗಣ, ಕ್ಯುಕಲಿಡೆ ಕುಟುಂಬ. ಭಾರತ, ಶ್ರೀಲಂಕಾ, ಬರ್ಮ ಮುಂತಾದ ಉಷ್ಣವಲಯಗಳ ಮೂಲವಾಸಿ ಇದು. ಊರುಗಳ ಬಳಿಯಿರುವ ತೋಟಗಳು, ನಂದನವನಗಳು, ಮಾವಿನ ತೋಪುಗಳು ಮತ್ತಿತರ ಹಣ್ಣಿನ ಮರಗಳ ಮೇಲೆ ಕಂಡು ಬರುತ್ತದೆ. ಮರದ ಎಲೆಗಳಲ್ಲಿ, ರೆಂಬೆಗಳಲ್ಲಿ ಅವಿತುಕೊಂಡೇ ಇರುವ ಇದನ್ನು ಕೂಗುವಾಗಲೊ ಇಲ್ಲವೆ ಒಂದು ಮರದಿಂದ ಮತ್ತೊಂದು ಮರಕ್ಕೆ ಹಾರುವಾಗಲೊ ಸುಲಭವಾಗಿ ಗುರುತಿಸಬಹುದು. ಗಾತ್ರದಲ್ಲಿ ಕಾಗೆಯಷ್ಟಿದೆ. ಬಾಲ ಮಾತ್ರ ಸ್ವಲ್ಪ ಉದ್ದ. ಗಂಡು ಹಕ್ಕಿಯ ಬಣ್ಣ ಮಿರಮಿರನೆ ಮಿಂಚುವ ಕಪ್ಪು. ಕೊಕ್ಕು ಹಳದಿ ಮಿಶ್ರಿತವಾದ ಹಸಿರು ಬಣ್ಣಕ್ಕಿದೆ. ಕಣ್ಣು ಕೆಂಪು. ಹೆಣ್ಣು ಹಕ್ಕಿಯ ಬಣ್ಣ ಕಂದು. ಅದರ ರೆಕ್ಕೆಗಳ ಮೇಲೆ ಬಿಳಿ ಚುಕ್ಕೆಗಳು ಮತ್ತು ಸಣ್ಣ ಸಣ್ಣ ಪಟ್ಟೆಗಳು ಇವೆ. ಉದರ ಭಾಗ ಸ್ವಲ್ಪ ಬಿಳುಪು ಮತ್ತು ಸಣ್ಣ ಸಣ್ಣ ಪಟ್ಟೆಗಳಿಂದ ಕೂಡಿದೆ. ಆಲ, ಅರಳಿ, ಎಲಚಿ, ಹಿಪ್ಪನೇರಳೆ, ಗಂಧದಮರ–ಇವುಗಳಲ್ಲಿನ ಹಣ್ಣುಗಳೇ ಇದರ ಪ್ರಧಾನ ಆಹಾರ. ಕೆಲವು ವೇಳೆ ಕೀಟಗಳು, ಕಂಬಳಿಹುಳುಗಳು, ಸಣ್ಣಪಕ್ಷಿಗಳ ಮೊಟ್ಟೆಗಳು, ಕೆಲವು ಬಗೆಯ ಹೂಗಳ ಮಕರಂದ ಇವನ್ನೂ ಸೇವಿಸುವುದುಂಟು. ಕೋಗಿಲೆ ವಿಶಿಷ್ಟವಾದ ಹಾಗೂ ಇಂಪಾದ **'ಕುವೂ ಕುವೂ'** ಎಂಬ ಕೂಗಿನಿಂದಾಗಿ ಹೆಸರಾಗಿದೆ. ಸಾಮಾನ್ಯವಾಗಿ ಗಂಡು ಕೋಗಿಲೆಯೇ ಕೂಗುವುದು. ಹೆಣ್ಣು ಮಾತ್ರ ಮರದಿಂದ ಮರಕ್ಕೆ ಹಾರುವಾಗ **'ಕಿಕ್–ಕಿಕ್–ಕಿಕ್'** ಎಂದು ಸದ್ದು ಮಾಡುತ್ತದೆ.

ಕೋಗಿಲೆ ಮೊಟ್ಟೆಯಿಡುವ ಕಾಲ ಮಾರ್ಚ್‌ನಿಂದ ಆಗಸ್ಟ್‌ವರೆಗೆ. ಊರು ಕಾಗೆ ಮತ್ತು ಕಾಡು ಕಾಗೆಗಳ ಗೂಡುಗಳಲ್ಲಿ ಮೊಟ್ಟೆಗಳನ್ನಿಡುವುದು ಇದರ ವೈಶಿಷ್ಟ್ಯ. ಆದ್ದರಿಂದಲೇ ಕವಿಗಳು ಇದನ್ನು ಪರಪುಟ್ಟನೆಂದು ಕರೆದಿದ್ದಾರೆ. ಮೊಟ್ಟೆಗಳು ಕಾಗೆಗಳ ಮೊಟ್ಟೆಗಳಂತೆಯೇ ಇವೆ. ಆದರೆ ಗಾತ್ರದಲ್ಲಿ ಸ್ವಲ್ಪ ಚಿಕ್ಕವು. ಬಣ್ಣ ಹಸಿರು ಮಿಶ್ರಿತ ಬೂದು. ಅಲ್ಲಲ್ಲಿ ಕಂದು ಚುಕ್ಕೆಗಳಿವೆ. ತನ್ನ ಮೊಟ್ಟೆಗಳಿಗೂ ಕೋಗಿಲೆಯ ಮೊಟ್ಟೆಗಳಿಗೂ ಇರುವ ವ್ಯತ್ಯಾಸವನ್ನು ಕಂಡುಹಿಡಿಯಲಾಗದ ಕಾಗೆ ಅವಕ್ಕೆ ಕಾವು ಕೊಟ್ಟು ಮರಿಮಾಡುವುದೇ ಅಲ್ಲದೆ ಮರಿಗಳಿಗೂ ಗುಟುಕು ಕೊಟ್ಟು ಸಲಹುತ್ತದೆ. ಮರಿಗಳು ದೊಡ್ಡವಾದ ಮೇಲೆ ಅವು ತನ್ನವಲ್ಲ ಎಂದು ಗೊತ್ತಾದೊಡನೆ ಕಾಗೆ ಅವನ್ನು ಕುಕ್ಕಿ ಓಡಿಸುತ್ತದೆ. ಕೋಗಿಲೆ ಮರಿಯ ಇನ್ನೊಂದು ಗಮನಾರ್ಹ ಅಂಶವೆಂದರೆ ಮೊಟ್ಟೆಯೊಡೆದು ಹೊರಬರುವ ಮೊದಲನೆಯ ಮರಿ ಗೂಡಿನಲ್ಲಿರುವ ಇತರ ಮೊಟ್ಟೆಗಳನ್ನು ಇಲ್ಲವೇ ಬೇರೆ ಮರಿಗಳನ್ನು ಹೊರಕ್ಕೆ ನೂಕಿ ತನ್ನ ರಕ್ಷಣೆಯ ಕಡೆಗೆ ಗಮನ ಕೊಡುವುದು. ಕೆಲವು ವೇಳೆ ಒಂದೇ ಗೂಡಿನಲ್ಲಿ ಒಂದಕ್ಕಿಂತ ಹೆಚ್ಚು ಕೋಗಿಲೆ ಮರಿಗಳು ಇದ್ದರೆ ಎಲ್ಲಕ್ಕಿಂತ ಬಲಿಷ್ಠವಾದ ಮರಿ ಮಾತ್ರ ಉಳಿದುಕೊಳ್ಳುತ್ತದೆ. ಹೀಗೆ ಕೋಗಿಲೆ ತನ್ನ ಪ್ರಾರಂಭದಲ್ಲೇ ಬಾಳುವುದಕ್ಕೆ ಹೋರಾಟ ನಡೆಸುತ್ತದೆ. ಕೋಗಿಲೆಯಲ್ಲೂ ಬೇರೆ ಹಕ್ಕಿಗಳಲ್ಲಿರುವಂತೆ ವಲಸೆ ಹೋಗುವ ಪರಿಪಾಠವಿದೆ. ಇದು ಚಳಿಗಾಲದಲ್ಲಿ ದಕ್ಷಿಣ ಭಾರತದಿಂದ ಆಫ್ರಿಕದ ಕಡೆಗೆ ಧಾವಿಸುತ್ತದೆ. ಕೋಗಿಲೆಯ ವಲಸೆ ಹೋಗುವಿಕೆಯ ವಿಶಿಷ್ಟ ಲಕ್ಷಣವೆಂದರೆ ತಾಯಿಹಕ್ಕಿ ವಲಸೆ ಹೋದ ಒಂದು ತಿಂಗಳ ಅನಂತರ ಮರಿಗಳು ತಮ್ಮ ಸ್ವಬುದ್ಧಿಯಿಂದ ವಲಸೆಯ ದಿಕ್ಕನ್ನು ಕಂಡುಕೊಂಡು ತಾಯಿಹಕ್ಕಿಗಳನ್ನು ಹಿಂಬಾಲಿಸುವುದು.

ಕುಕ್ಕೂಗಳೆಂದೇ ಪ್ರಚಲಲಿತವಾಗಿರುವ ಇದರ ಸಂಬಂಧಿಗಳು ಹಲವು. ಕ್ಯುಕಲಸ್ ಕೆನೊರಸ್ (ಸಾಮಾನ್ಯ ಕುಕ್ಕೂ), ಕ್ಲಾಮೇಟರ್ ಕೋರೊಮಂಡಸ್ (ಕೆಂಪು ರೆಕ್ಕೆಯ ಭಾರತದ ಕುಕ್ಕೂ), ಕ್ರೈಸೋಕಾಕ್ಸಿಕ್ಸ್ ಕ್ಯುಪ್ರಿಯಸ್ (ಎಮರಾಲ್ಡ್ ಕುಕ್ಕೂ) ಮತ್ತು ಕಾಕ್ಸಿಜಸ್ ಎರಿತ್ರೋಪ್ತಾಲಮಸ್ (ಕಪ್ಪು ಕೊಕ್ಕಿನ ಕುಕ್ಕೂ) ಇವುಗಳಲ್ಲಿ ಕೆಲವು. (ಎನ್.ಎಂ.)

**ಕೋಡಾನ್:** ಜೀವಕೋಶದಲ್ಲಿ ಪ್ರೋಟೀನಿನ ಅಣು ತಯಾರಾಗುವಾಗ ಅದರಲ್ಲಿನ ಅಮೈನೋ ಆಮ್ಲಗಳ ಅನುಕ್ರಮತೆಯನ್ನು (ಅಂದರೆ ಅವು ಪ್ರೋಟೀನಿನ ಅಣುವಿನಲ್ಲಿ ಯಾವ ಯಾವ ಸ್ಥಾನದಲ್ಲಿ ಇರಬೇಕು ಎಂಬುದನ್ನು) ನಿರ್ದೇಶಿಸಿ ತೀರ್ಮಾನಿಸುವ ಸಂಕೇತವಾಹಕ ಆರ್‌ಎನ್‌ಎಯ (ರಿಬೊ ನ್ಯೂಕ್ಲಿಯಿಕ್ ಆಮ್ಲ) ಮೂರು ನ್ಯೂಕ್ಲಿಯೊಟೈಡುಗಳನ್ನೊಳಗೊಂಡ ಭಾಗ. ಒಂದು ಪ್ರೋಟೀನಿನ ತಯಾರಿಕೆಗೆ ಒಂದು ಆರ್‌ಎನ್‌ಎ ಇದ್ದು ಅದು ಕ್ರೊಮೋಸೋಮಿನಲ್ಲಿರುವ ಡಿಎನ್‌ಎ ಎಂಬ ರಸಾಯನ ವಸ್ತುವಿನ ಆಧಾರದ ಮೇಲೆ ಕಣಕೇಂದ್ರದಲ್ಲಿ ತಯಾರಾಗುತ್ತದೆ. ಆದರೆ ಅಣುವಿನಲ್ಲಿ ಸಾವಿರದಷ್ಟು ನ್ಯೂಕ್ಲಿಯೊಟೈಡುಗಳು ಸರಪಳಿಯಂತೆ ಒಂದಕ್ಕೊಂದು ಸೇರಿಕೊಂಡಿರುತ್ತವೆ. ಒಂದೊಂದು ನ್ಯೂಕ್ಲಿಯೋಟೈಡಿನಲ್ಲಿಯೂ ಒಂದು ರೈಬೋಸ್ (ಇಂಗಾಲದ 5 ಪರಮಾಣುಗಳನ್ನು ಹೊಂದಿದ ಸಕ್ಕರೆ) ಅಣು, ಒಂದು ಫಾಸ್ಫೇಟ್ ಮತ್ತೆ ಮೂರನೆಯದು ಒಂದು ಕ್ಷಾರವಸ್ತು ಯುರಾಸಿಲ್, ಸೈಟೋಸೀನ್, ಅಡೆನೀನ್ ಅಥವಾ ಗ್ವಾನೀನ್ ಇರುತ್ತವೆ. ಅವನ್ನು ಕ್ಷಾರಗಳ ಹೆಸರುಗಳನ್ನು ಅನುಸರಿಸಿ ಕ್ರಮವಾಗಿ U,C,A,G ಎಂಬ ಅಕ್ಷರಗಳಿಂದ ಗುರುತಿಸುತ್ತಾರೆ. ಪ್ರೋಟೀನಿನ ಸಂಶ್ಲೇಷಣೆಯಲ್ಲಿ ಒಂದು ಅಮೈನೋ ಆಮ್ಲದ ನಿರ್ದೇಶನ ಕ್ರಿಯೆಗೆ ಒಂದು ನ್ಯೂಕ್ಲಿಯೊಟೈಡು ಇರಲು ಸಾಧ್ಯವಿಲ್ಲ. ಏಕೆಂದರೆ ಅಂಥವು ಇರುವುದು ನಾಲ್ಕು ಮಾತ್ರ. ಹಾಗೆಯೇ ಎರಡಿರುವ ದ್ವಿವಳಿಗಳು ಸಾಧ್ಯವಿಲ್ಲ. ಅಂಥವು 16 ಮಾತ್ರ ಇವೆ. ಪ್ರೋಟೀನಿನ ಅಣುವಿನಲ್ಲಾದರೂ 20ಕ್ಕಿಂತ ಹೆಚ್ಚು ಅಮೈನೋ ಆಮ್ಲಗಳಿವೆ. ಆದ್ದರಿಂದಲೇ ಒಂದು ಅಮೀನೋ ಆಮ್ಲದ ಈ ನಿರ್ದೇಶನ ಸಂಕೇತವಾದ ಕೋಡಾನಿನಲ್ಲಿ ಮೂರು ನ್ಯೂಕ್ಲಿಯೋಟೈಡ್‌ಗಳ ತ್ರಿವಳಿ (ಟ್ರಿಪ್ಲೆಟ್) ಇರಬೇಕೆಂದಾಯಿತು.

ಪ್ರತಿಯೊಂದು ಅಮೈನೋ ಆಮ್ಲದ ಕೋಡಾನುಗಳು ಯಾವುವು ಎಂಬುದನ್ನು ಕಂಡುಹಿಡಿಯುವ ಕೆಲಸಕ್ಕೆ ನಿರೆನ್‌ಬರ್ಗ್ ಮತ್ತು ಮಥಾಯ್ ಎಂಬ ಅಮೆರಿಕದ ವಿಜ್ಞಾನಿಗಳು ನಡೆಸಿದ ಪ್ರಯೋಗ ನಾಂದಿಯಾಯಿತು. ಪ್ರೋಟೀನಿನ ಸಂಶ್ಲೇಷಣೆಗೆ ಬೇಕಾದ ಎಲ್ಲ ಕಿಣ್ವಗಳನ್ನು, ಎಲ್ಲ ಅಮೈನೋ ಆಮ್ಲಗಳನ್ನು, ಎಶ್ಚೆರಿಷಿಯ ಕೋಲೈನ ಡಿಎನ್‌ಎ ಹಾಗೂ ಯುರೇಸಿಲ್ ಒಳಗೊಂಡ ಪಾಲಿಯುರಿಡಿಲಿಕ್ ಆಮ್ಲವೆಂಬ ನ್ಯೂಕ್ಲಿಯೊಟೈಡನ್ನು ಸೇರಿಸಿದಾಗ ಫೀನೈಲ್ ಅಲನೀನನ್ನು ಒಳಗೊಂಡ ಪ್ರೋಟೀನು ತಯಾರಾಯಿತು. ಈ ಪ್ರಯೋಗ ಫಲಿತಾಂಶದ ಆಧಾರದ ಮೇಲೆ ಫಿನೈಲ್ ಅಲನೀನಿನ ಕೋಡಾನು ಮೂರು ಯುರಿಡಿಲಿಕ್ ಆಮ್ಲಗಳನ್ನೊಳಗೊಂಡ UUU ಎಂಬ ತ್ರಿವಳಿ ಎಂದು ಅವರು ತೀರ್ಮಾನಿಸಿದರು. ಗೊತ್ತಾದ ನ್ಯೂಕ್ಲಿಯೊಟೈಡುಗಳು ಗೊತ್ತಾದ ಕ್ರಮದಲ್ಲಿರುವ ಆರ್‌ಎನ್‌ಎಗಳನ್ನು ತಯಾರಿಸಿ ಅವನ್ನು ಇದೇ ರೀತಿಯ ಪ್ರಯೋಗಕ್ಕೆ ಒಳಪಡಿಸಿ ಉಳಿದ ಅಮೈನೋ ಆಮ್ಲಗಳ ಕೋಡಾನುಗಳನ್ನು ಕಂಡುಹಿಡಿಯಲಾಗಿದೆ. ಉದಾಹರಣೆಗೆ-GUUGUU ಎಂಬ ಅನುಕ್ರಮ ಇರುವ ಆರ್‌ಎನ್‌ಎಯಿಂದ ಬರಿಯ ವ್ಯಾಲೀನ್ ಇರುವ ಪ್ರೋಟೀನೂ, -UGUUGU- ಆರ್‌ಎನ್‌ಎಯಿಂದ ಬರಿಯ ಸಿಸ್ಟೀನ್ ಇರುವ ಪ್ರೋಟೀನೂ ತಯಾರಾದುವು. ಆದ್ದರಿಂದ ವ್ಯಾಲೀನ್‌ನ ಕೋಡಾನ್ GUU ಎಂದೂ, ಸಿಸ್ಟೀನಿನ ಕೋಡಾನ್ UGU ಎಂದೂ ಗೊತ್ತಾಯಿತು.

ಹೆಚ್ಚು ಕಾಲ ಬೇಕಿಲ್ಲದ ನಿರೆನ್‌ಬರ್ಗನ ಈ ಹೊಸಮಾರ್ಗ, ಪರಿಶೋಧನೆಯಲ್ಲಿ ಬಲು ಫಲಕಾರಿಯಾಗಿದೆ. ಅದು ಹೀಗಿದೆ. ಗೊತ್ತಿರುವ ಮತ್ತು ವಿಕಿರಣ ಪಟು ಅಮೈನೋ ಆಮ್ಲ–ಕ್ರಿಯಾಶಕ್ತಿಯುತ ರೂಪದಲ್ಲಿ–ಅದರೊಂದಿಗೆ ವಾಹಕ ಆರ್‌ಎನ್‌ಎ ಮತ್ತು ತಯಾರಿಸಿದ ನ್ಯೂಕ್ಲಿಯೋಟೈಡ್ ತ್ರಿವಳಿ ಇವನ್ನು ಬೆರೆಸಿ ಕೊಂಚ ಹೊತ್ತಿನ ಮೇಲೆ ವಿಶೇಷ ರೀತಿಯ ಸೋಸು ವ್ಯವಸ್ಥೆಗೆ ಒಳಪಡಿಸಿದಾಗ ಆ ಅಮೈನೋ ಆಮ್ಲ ತನ್ನ ಕೋಡಾನ್ ಆಗಿದ್ದರೆ ಮಾತ್ರ ಅದರೊಂದಿಗೆ ಸೇರಿಕೊಂಡು ಮೇಲೆಯೇ ನಿಲ್ಲುತ್ತದೆ. ಇಲ್ಲದಿದ್ದರೆ ಶೋಧಿಸಿದ ನೀರಿನಲ್ಲಿ ಹೊರಟು ಹೋಗುತ್ತದೆ. ಅದು ಎಲ್ಲಿದೆ ಎಂಬುದನ್ನು ಅದರ ವಿಕಿರಣ ಪಟುತ್ವದಿಂದ ಸುಲಭವಾಗಿ ಕಂಡುಹಿಡಿಯಬಹುದು. ಈ ಪ್ರಯೋಗದಿಂದ ಸಿದ್ಧವಾದ ಕೋಡಾನುಗಳೆಲ್ಲವನ್ನೂ ಪರೀಕ್ಷಿಸಲು ಸಾಧ್ಯವಾಯಿತು. ಇವೆಲ್ಲ ಪ್ರಯೋಗಗಳಿಂದ ಬಂದ ಫಲಿತಾಂಶವನ್ನು–ಅಮೈನೋ ಆಮ್ಲ ಮತ್ತು ಅವುಗಳ ಕೋಡಾನುಗಳು–ಇಲ್ಲಿ ಕೊಟ್ಟಿದೆ.

ಅಮೈನೋ ಆಮ್ಲ ಮತ್ತು ಅವುಗಳ ಕೋಡಾನುಗಳು;

| ಅಮೈನೋ ಆಮ್ಲ | ಕೋಡಾನು |
|---|---|
| 1 | 2 |
| ಫೀನೈಲ್ ಅಲನೀನ್ | UUU |
| " | UUC |
| ಲ್ಯೂಸೀನ್ | CUU |
| " | CUC |
| " | CUA |
| ಐಸೋ ಲ್ಯೂಸೀನ್ | AUC |
| | AUA |
| | AUU |
| ಮೆಥಯೋನೀನ್ | AUG |
| ಟೈರೋಸೀನ್ | UAU |
| " | UAC |
| ಅಂತ್ಯಮಾಡುವ | UAA |
| " | UAG |
| ಹಿಸ್ಟಿಡೀನ್ | CAU |
| " | CAC |

| | |
|---|---|
| ಗ್ಲೂಟಮೀನ್ | CAA |
| ” | CAG |
| ಅಸ್ಪಾರ್‌ಜೀನ್ | AAU |
| ” | AAC |
| ಲೈಸೀನ್ | AAA |

ಕೋಡಾನುಗಳ ಗಮನಾರ್ಹವಾದ ವಿಷಯಗಳು : ಇವುಗಳ ನಿರ್ದೇಶನ ಶಕ್ತಿಯ ಮೂಲ ಮೊದಲ ಎರಡು ನ್ಯೂಕ್ಲಿಯೋಟೈಡುಗಳಲ್ಲಿ ಇದೆ. ಮೂರನೆಯದರ ಪಾತ್ರ ಅಷ್ಟು ಹಿರಿದಲ್ಲ. ಒಂದೇ ರೀತಿಯ ಅಮೈನೋ ಆಮ್ಲಗಳಿಗೆ ಒಂದೇ ತೆರನ ಕೋಡಾನ್ (ಉದಾಹರಣೆಗೆ, ಗ್ಲುಟಾಮಿಕ್ ಮತ್ತು ಅಸ್ಪಾರ್ಟಿಕ್ ಆಮ್ಲಗಳ ಕೋಡಾನುಗಳು) ಇರುತ್ತದೆಂದು ಕಾಣುತ್ತದೆ. ಹೈಡ್ರಾಕ್ಸಿಪ್ರೋಲೀನ್, ಹೈಡ್ರಾಕ್ಸಿಲೈಸೀನ್‌ಗಳಿಗೆ ಸ್ವಂತ ಕೋಡಾನುಗಳಿಲ್ಲ. ಅಂದರೆ ಪ್ರೋಲೀನ್ ಮತ್ತು ಲೈಸೀನ್ ಪ್ರೊಟೀನಿನಲ್ಲಿ ಸೇರಿದ ತರುವಾಯ ಹೈಡ್ರಾಕ್ಸಿ ಗುಂಪು ಸೇರುತ್ತದೆ ಎಂದಾಯಿತು. ಗ್ಲುಟಮೀನ್ ಮತ್ತು ಅಸ್ಪಾರ್ಜೀನ್‌ಗಳಿಗೆ (ಅನುಕ್ರಮವಾಗಿ ಗ್ಲುಟಾಮಿಕ್ ಆಮ್ಲ, ಅಸ್ಪಾರ್ಟಿಕ್ ಆಮ್ಲಗಳಿಂದ ಬಂದವು) ಸ್ವಂತ ಕೋಡಾನ್ ಇರುವುದನ್ನು ನೋಡಿದರೆ ಪ್ರೊಟೀನಿನಲ್ಲಿ ಸೇರುವುದಕ್ಕಿಂತ ಮುಂಚೆಯೇ ಅವುಗಳ ತಯಾರಿಕೆ ಆಗಿರಬೇಕು. ಪ್ರೊಟೀನಿನ ತಯಾರಿಕೆ ಅಂತ್ಯಮಾಡುವ ಕೋಡಾನುಗಳೂ ಉಂಟು. ಈ ಸಂಕೇತಭಾಷೆ ಎಲ್ಲ ಜೀವಿಗಳಲ್ಲಿಯೂ ಒಂದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಹೇಳುವಷ್ಟರಮಟ್ಟಿಗೆ ಸಾಕಷ್ಟು ಪ್ರಯೋಗ ಸಾಕ್ಷ್ಯಗಳು ಬಂದಿವೆ. ಏಕೆಂದರೆ ಬೇರೆ ಬೇರೆ ಕೋಡಾನುಗಳನ್ನು ಬೇರೆ ಬೇರೆ ಜೀವಿಗಳಿಂದ ಪ್ರಾಣಿ, ಸಸ್ಯ ಮತ್ತು ವೈರಸುಗಳಿಂದ ಬಂದ ಜೀವರಸದೊಂದಿಗೆ ಪ್ರಯೋಗಿಸಿದಾಗ ಬಂದ ಉತ್ತರ ಒಂದೇ. ಕೋಡಾನುಗಳ ಇರುವು, ಅವುಗಳ ಕೆಲಸ ಪರಿಚಯ. ಕೋಡಾನ್‌ಗಳ ಬಗ್ಗೆ ಈಗ ಗೊತ್ತಾಗಿರುವುದರಿಂದ ಆನುವಂಶಿಕ ಗುಣ ವ್ಯತ್ಯಾಸ ಅಂದರೆ ವ್ಯತ್ಯಯವನ್ನು (ಮ್ಯುಟೇಷನ್) ಹೀಗೆ ವಿವರಿಸಬಹುದು. ಕ್ರೋಮೋಸೋಮಿನ ಡಿಎನ್‌ಎ ಬದಲಾವಣೆ, ಅದರ ಆಧಾರದ ಮೇಲೆ ತಯಾರಾದ ಆರ್‌ಎನ್‌ಎಯಲ್ಲಿನ ಕೋಡಾನಿನಲ್ಲಿ ಒಂದು ನ್ಯೂಕ್ಲಿಯೋಟೈಡು ಹೋಗಿ ಬೇರೊಂದು ಆಗಬಹುದು. ಅರಿವು ತಪ್ಪಿದ (ಮಿಸ್–ಸೆನ್ಸ್) ಅಥವಾ ಜ್ಞಾನರಹಿತ (ನಾನ್–ಸೆನ್ಸ್) ಕೋಡಾನ್ ಆಗಬಹುದು. ಆದ್ದರಿಂದ ಅದು ನಿರ್ದೇಶಿಸಿದ ಪ್ರೊಟೀನಿನ ಅಮೈನೋ ಆಮ್ಲಗಳ ಸರಪಳಿ ಸರಿಯಾಗಿರದೆ ಅದಕ್ಕೆ ಇರಬೇಕಾದ ಗುಣ, ಶಕ್ತಿ ಇರುವುದಿಲ್ಲ ಅಥವಾ ಬೇರೆ ಗುಣ ಬರುತ್ತದೆ. ಅಂದರೆ ಜೀವಕೋಶಕ್ಕೆ ಹಳೆಯ ಗುಣ ಹೋಗಿ ಹೊಸದು ಬರುತ್ತದೆ. ಇದೇ ವ್ಯತ್ಯಯ ಕ್ರಿಯೆ. ಹೀಗೆಯೇ ಆನುವಂಶಿಕ ದೋಷಗಳಿಗೂ ಇದೇ ರೀತಿಯ ವಿವರಣೆ ಕೊಡಬಹುದು.

ಕೋಡಾನುಗಳ ರೂಪ ಪ್ರೊಟೀನಿನ ತಯಾರಿಕೆಯಲ್ಲಿ ಅವುಗಳ ಪಾತ್ರ ಮುಂತಾದುವನ್ನು ವಿಶೇಷವಾಗಿ ಪರಿಶೋಧನೆ ನಡೆಸಿದವರು ಮುಖ್ಯವಾಗಿ ನಿರೆನ್‌ಬರ್ಗ್, ಖೊರಾನಾ, ಹಾಲಿ (ಇವರೆಲ್ಲರಿಗೂ ಒಟ್ಟಿಗೆ ನೊಬೆಲ್ ಪಾರಿತೋಷಕ ಬಂತು) ಮತ್ತು ಒಚಾವಾ. ಪ್ರೊಟೀನಿನ ತಯಾರಿಕೆಗೆ ಬೇಕಾಗುವ ವಾಹಕ ಆರ್‌ಎನ್‌ಎಗಳ ಅಣುರಚನೆಯ ಪರಿಶೋಧನೆ ನಡೆಸಿದವ ಹಾಲಿ. ಪ್ರತಿಯೊಂದು ಅಮೈನೊ ಆಮ್ಲಕ್ಕೂ ಒಂದು ವಾಹಕ ಆರ್‌ಎನ್‌ಎ ಇದೆ. ಅದು ತನ್ನ ಅಮೈನೋ ಆಮ್ಲವನ್ನು ಹಿಡಿದುಕೊಂಡು ಅದರ ಕೋಡಾನಿನ ಬಳಿ ತೆಗೆದುಕೊಂಡು ಹೋಗುತ್ತದೆ. ಆ ಕೋಡಾನನ್ನು ಹುಡುಕುವುದು ಕಷ್ಟವೇನಿಲ್ಲ. ಈ ವಾಹಕ ಆರ್‌ಎನ್‌ಎ ತನ್ನ ಅಣುವಿನ ಒಂದು ಭಾಗದಲ್ಲಿ ಪ್ರತಿಕೋಡಾನ್ (ಆಂಟಿ ಕೋಡಾನ್) ಅಥವಾ ರಸಾಯನ ಗುಣಗಳಲ್ಲಿ ವಿರುದ್ಧದ ತ್ರಿವಳಿ ಹೊಂದಿದೆ. ಕೋಡಾನ್ ಪ್ರತಿಕೋಡಾನನ್ನು ಆಕರ್ಷಿಸಿ ತನ್ನೆಡೆಗೆ ಅಮೈನೊ ಆಮ್ಲ ಬರುವಂತೆ ಮಾಡುತ್ತದೆ. ಈ ಪ್ರತಿಕೋಡಾನುಗಳು ಯಾವುವು ಎಂಬ ವಿವರ ಸ್ವಲ್ಪಮಟ್ಟಿಗೆ ತಿಳಿದಿದೆ. ಉದಾಹರಣೆಗೆ ಅಲನೀನಿನ ಕೋಡಾನ್ GCU ಆದರೆ ಪ್ರತಿಕೋಡಾನ್ CGI (I ಎಂಬುದು ಹೈಪೊಕ್ಸಾನ್‌ಥೀನ್ ಇರುವ ನ್ಯೂಕ್ಲಿಯೋಟೈಡ್); ಟೈರೋಸೀನ್‌ಗೆ UAC ಕೋಡಾನ್; ಅದರ ಪ್ರತಿಕೋಡಾನ್ AΨG (Ψ ಎಂಬುದು ಸೂಡೊಯುರಿಡಿಲಿಕ್ ಆಮ್ಲ).

***

**ಕೋತಿಗಳು:** ಪ್ರೈಮೇಟುಗಣದ ಸಿಮಿಯೈ ಉಪಗಣಕ್ಕೆ ಸೇರುವ ಎಲ್ಲ ಸ್ತನಿಗಳು. ಆಂತ್ರಪಾಯಿಡಿಯ ಪರ್ಯಾಯ ಹೆಸರು. ಮನುಷ್ಯ, ಏಪ್ಸ್ ಹಾಗೂ ಕೋತಿಗಳನ್ನು ಈ ಉಪಗಣಕ್ಕೆ ಸೇರಿಸಲಾಗಿದೆ. ಕೆಲವು ವರ್ಗೀಕರಣ ಶಾಸ್ತ್ರಜ್ಞರು ಏಪ್ಸ್‌ಗಳನ್ನು ಸೇರಿಸಿ ಈ ಉಪಗಣದ ಸದಸ್ಯರನ್ನು ಕೋತಿಗಳೆನ್ನುವರು. ಅಳಿಲು ಗಾತ್ರದ ಜೀವಿಗಳಿಂದ ಗೊರಿಲ್ಲಾ ಗಾತ್ರದ ಜೀವಿಗಳವರೆಗಿವೆ. ದೇಹ 70 ಗ್ರಾಂ ನಿಂದ 250 ಕಿಗ್ರಾಂ ತೂಕವಿದೆ. ಸಾಮಾನ್ಯ ನೋಟಕ್ಕೆ ವೈವಿಧ್ಯವಾಗಿ ಕಾಣುತ್ತವೆ. ಕೆಲವು ಪ್ರಭೇದದಲ್ಲಿ ತಲೆಗುಂಡಗಿದ್ದರೆ ಕೆಲವುದರಲ್ಲಿ ಮುಂದಕ್ಕೆ ಚಾಚಿರುವ ದವಡೆಗಳಿವೆ. ಇನ್ನೂ ಕೆಲವು ಕೋತಿಗಳಲ್ಲಿ ಕಪಿ ಮುಖ ತೀರಾ ನೀಳವಾಗಿದೆ. ಕಣ್ಣುಗಳು ಸದಾ ಮುಂದಕ್ಕೆ ಚಾಚಿರುತ್ತವೆ. ಕಿವಿಗಳು ಮನುಷ್ಯನಲ್ಲಿರುವಂತೆ ಇವೆ. ಬೆತ್ತಲೆ ಮುಖವಿರಬಹುದು ಅಥವಾ ಗಡ್ಡದೋಪಾದಿಯಲ್ಲಿ ಕೂದಲುಗಳಿರಬಹುದು. ಹಿಡಿದುಕೊಳ್ಳಲು ಸಹಾಯಕವಾಗುವ ಕೈಕಾಲುಗಳಿವೆ. ಮೊದಲ ಬೆರಳು ಉಳಿದ ಬೆರಳುಗಳಿಗೆ ವಿರುದ್ಧವಾಗಿದೆ. ಮುಖ, ನಿತಂಬ ಮತ್ತು ಗುಪ್ತಾಂಗ ಬೆತ್ತಲೆಯಾಗಿರುತ್ತವೆ. ನೈಜ ಬೆವರು ಗ್ರಂಥಿಗಳಿವೆ. ವಾಸನಾಗ್ರಂಥಿಗಳು ಚೆನ್ನಾಗಿ ರೂಪುಗೊಂಡಿಲ್ಲ. ಎದೆಯಲ್ಲಿ ಎರಡು ಸ್ತನಗಳಿವೆ. ಪ್ರಾಚೀನ ಲೋಕದವುಗಳಲ್ಲಿ ಹಾಗೂ ಗಿಬ್ಬನ್‌ಗಳಲ್ಲಿ ಕಡಿ–ಜಡ್ಡುಗಳಿವೆ (ಇಸ್ಕಿಯಲ್ ಕ್ಯಾಲೊಸಿಟಿಗಳು). ಬಾಲ ಉದ್ದ ಅಥವಾ ಮೋಟಾಗಿರಬಹುದು. ಕೆಲವು ನವೀನ ಲೋಕದ ಕೋತಿಗಳಲ್ಲಿ ಮಾತ್ರ ಬಾಲ ಸುರುಳಿಗೊಂಡಿದೆ. ಬಾಲ ಸಮತೋಲನೆಗೆ ಹಾಗೂ ಹಿಡಿತಕ್ಕೆ ಸಹಾಯಕವಾಗಿದೆ. ದಂತ ಸಮೂಹದಲ್ಲಿ 32 ಅಥವಾ 36 ಹಲ್ಲುಗಳಿರುತ್ತವೆ. ಕೋರೆಹಲ್ಲು ಅಗಲವಾಗಿ ಮತ್ತು ಮೊನಚಾಗಿರಬಹುದು. ಬಹುತೇಕ ಕೋತಿಗಳು ಮರವಾಸಿಗಳು, ಕೆಲವು ನೆಲವಾಸಿಗಳು. ಜಠರ ಸರಳವಾಗಿದೆ. ಮೂಲತಃ ಸಸ್ಯಾಹಾರಿಗಳಾದ ಎಲೆಕೋತಿಗಳಲ್ಲಿ ಮಾತ್ರ ಜಠರವು ದೊಡ್ಡದಾಗಿದ್ದು ಅನೇಕ ಕೋಣೆಗಳಾಗಿ ವಿಭಾಗಗೊಂಡಿದೆ. ಚಿಕ್ಕ ಕರುಳು ನೀಳವಾಗಿದೆ. ಕೆಳದರ್ಜೆಯ ಕೋತಿಗಳಲ್ಲಿ ದೊಡ್ಡಕರುಳು ಉನ್ನತ ಕೋತಿಗಳಿಗಿಂತ ಹೆಚ್ಚು ಸಂಕೀರ್ಣವಾಗಿದೆ. ಲ್ಯಾರಿಂಕ್ಸ್ ದೇಹಕ್ಕೆ ಗಾಳಿ ಸರಬರಾಜು ಜೊತೆಗೆ ಧ್ವನಿಯನ್ನು ಮಾರ್ಪಡಿಸಲು ಮತ್ತು ಹೆಚ್ಚಿಸಲು ಸಹಾಯಕವಾಗಿದೆ.

ಕಣ್ಣು ಮನುಷ್ಯರಂತೆಯೇ ಇದೆ. ರಾತ್ರಿ ಕೋತಿಗಳ ರೆಟಿನಾದಲ್ಲಿ ವರ್ಣಮಯ ನೋಟಕ್ಕೆ ಅಗತ್ಯವಾದ ಕೋನ್‌ಗಳಾಗಲಿ ಅಥವಾ ಫೋವಿಯಾಗಳಾಗಲಿ ಇರುವುದಿಲ್ಲ. ಇಕ್ಕಣ್ಣು ನೋಟ (ಬೈನಾಕ್ಯುಲರ್ ವಿಷನ್) ಇದೆ. ನವೀನ ಲೋಕದ ಕೋತಿಗಳ ಅಂಗೈ ಅಂಗಾಲುಗಳ ಮೇಲೆ ಮಾತ್ರವಲ್ಲದೆ ಬಾಲದ ಕೆಳಗೂ ಸಂವೇದನಾಂಗಗಳಿವೆ. ಘ್ರಾಣೇಂದ್ರಿಯಗಳು ಹೆಚ್ಚು ಬೆಳೆದಿಲ್ಲ. ಸರಳ ಕೋತಿಗಳಲ್ಲಿ ಸೆರೆಬ್ರಲ್ ಕಾರ್ಟೆಕ್ಸ್ ಮಡಿಕೆಗೊಂಡಿಲ್ಲ. ಸಮತೆ ಮತ್ತು ಸಂವಾಹಕ ಕ್ರಿಯೆಗಳ ನಡುವೆ ನಿಯಂತ್ರಣವನ್ನು ಉಳಿಸಿಕೊಳ್ಳಲು ಸೆರೆಬೆಲ್ಲಮ್ ಸಂಕೀರ್ಣವಾಗಿದೆ.

ಸಂತಾನಾಭಿವೃದ್ಧಿ ಮನುಷ್ಯನಲ್ಲಿರುವಂತೆಯೇ ಇದೆ. ಹೆಣ್ಣಿನಲ್ಲಿ ಮಾಸಿಕ ಚಕ್ರವಿದೆ. ಪ್ರಾಚೀನ ಲೋಕದ ಹೆಣ್ಣು ಕೋತಿ ಮಂಗಾಟೆ, ಮೋಟು ಬಾಲದ ಮೆಕಾಕು ಹಾಗೂ ಆಫ್ರಿಕಾದ ಕೋತಿಗಳಲ್ಲಿ ಈಸ್ಟ್ರಸ್ ಹಂತದಲ್ಲಿ ಜನನಾಂಗದ ಸುತ್ತ ಊದಿಕೊಂಡು ಬಣ್ಣ ಬದಲಾಗುತ್ತದೆ. ಇದು ಗಂಡಿಗೆ ಒಂದು ಮುಕ್ತ ಹಾಗೂ ಪ್ರಚೋದಕ ಅಂಗವಾಗಿ ಲೈಂಗಿಕ ಆಸಕ್ತಿಯನ್ನು ಹೆಚ್ಚಿಸುತ್ತದೆ. ಹೆಣ್ಣು ಬಬೂನ್‌ಗಳಲ್ಲಿ ಈ ಅಂಗ ವ್ರಣದ ಗಡ್ಡೆಗಳಂತೆ ತೋರುವುದು. ಇವು ನಿರ್ದಿಷ್ಟ ತಿಂಗಳಲ್ಲಿ ಮರಿ ಹಾಕುತ್ತವೆ. ಪ್ರಾಯಶಃ ಪರಿಸರ – ಪ್ರದೇಪಕಗಳ ನಿಯಂತ್ರಣ ಅಥವಾ ಹಿತ–ಅಹಿತಕರ ಋತುಗಳ ಏರಿಳಿತಗಳು ಕಾರಣವಿರಬಹುದು. ಲಿಂಗಬೇಧವಿದೆ. ಪ್ರಬುದ್ಧ ಗಂಡುಗಳು ಗಾತ್ರದಲ್ಲಿ ದೊಡ್ಡವು ಮತ್ತು ಮಾಂಸಾಹಾರಿಗಳ ದಂತರಚನೆ ಪಡೆದಿರುತ್ತವೆ. ಆಫ್ರಿಕಾದ ಹೌಲರ್‌ಗಳ ಶಿಶ್ನವು ಹೊಳೆಯುತ್ತಿರುತ್ತದೆ. ಪ್ರಬಲ ಗಂಡುಗಳು ಶಿಶ್ನವನ್ನು ಪ್ರದರ್ಶಿಸಿ ತನ್ನ ಗುಂಪನ್ನು ನಿಯಂತ್ರಿಸುತ್ತವೆ. ಪ್ರಾಚೀನ ಲೋಕದ ಕೋತಿಗಳಿಗಿಂತ ನವೀನ ಲೋಕದ ಕೋತಿಗಳಲ್ಲಿ ಹೆಣ್ಣಿನ ಬಾಹ್ಯಜನನಾಂಗವು ಭಿನ್ನವಾಗಿದೆ. ಇವುಗಳಲ್ಲಿ ಲೇಬಿಯ ಮೇಜರ್ ದೊಡ್ಡದಾಗಿ ಉಬ್ಬಿರುತ್ತದೆ. ಕ್ಲೈಟೋರಿಸ್ ಮುಂದಕ್ಕೆ ಬಾಗಿರುತ್ತದೆ. ಜೇಡ ಕೋತಿಗಳಲ್ಲಿ ಮೊದಲನೋಟಕ್ಕೆ ಇದು ಶಿಶ್ನದಂತೆ ಕಾಣುತ್ತದೆ. ಗರ್ಭಕೋಶ ಏಕರೀತಿಯಲ್ಲಿರುತ್ತದೆ. ಪ್ಲಾಸೆಂಟ ಚಿಕ್ಕ ಬಟ್ಟಲಿನಂತಿದೆ.

ನವೀನ ಲೋಕದ ಚಿಕ್ಕ ಕೋತಿಗಳಲ್ಲಿ ಗರ್ಭಧಾರಣೆಯ ಕಾಲ ಕೇವಲ ಐದು ತಿಂಗಳು. ಕೆಳಮಟ್ಟದ ಪ್ರಾಚೀನ ಕೋತಿಗಳಲ್ಲಿ 165 ರಿಂದ 240 ದಿನಗಳು ಸಾಕಷ್ಟು ರಕ್ತ ಸ್ರಾವವಾಗುತ್ತದೆ. ಒಮ್ಮೆ ಒಂದು ಮರಿಹಾಕುತ್ತದೆ. ಕೆಲವೊಮ್ಮೆ ಅವಳಿಮರಿಗಳು ಜನಿಸುವುದುಂಟು. ಮರಿ ಮೊದಲ ವಾರಗಳಲ್ಲಿ ತಾಯಿಯ ಹಾಲನ್ನೇ ಆಶ್ರಯಿಸಿರುತ್ತದೆ. ಕ್ರಮೇಣ ಇತರೆ ಆಹಾರವನ್ನು ತಿನ್ನಲಾರಂಭಿಸುತ್ತದೆ.

ಮೂಲತಃ ಎಲ್ಲ ಕೋತಿಗಳು ಮತ್ತು ವಾನರಗಳು ಪ್ರಾಯಶಃ ಬೆಚ್ಚಗಿನ ವಲಯಗಳಲ್ಲಿ ವಾಸಿಸುತ್ತಿದ್ದುವು. ಅನಂತರ ಕೆಲವು ಪ್ರಭೇದಗಳು ತಂಪಾದ ವಲಯಗಳನ್ನು ಆಕ್ರಮಿಸಿಕೊಂಡವು. ಇತ್ತೀಚಿನ ಸಂಶೋಧನೆಯ ಪ್ರಕಾರ ಪ್ರಾಚೀನಲೋಕದ ಹಾಗೂ ನವೀನ ಲೋಕದ ಕೋತಿಗಳು ಒಂದೇ ಪ್ರೊಸೆಮಿಯನ್ ಕವಲಿನಿಂದ ಉಗಮವಾಗಿರಬೇಕು. ಪ್ರೊಸೆಮಿಯನ್ ಕುಟುಂಬಕ್ಕೆ ಸೇರಿದ ಒಮೊಮ್ಯೆಯಿಡೆ ಉತ್ತರ ಅಮೆರಿಕ ಮತ್ತು ಯೂರೋಪಿನಲ್ಲೆಲ್ಲಾ ಟರ್‌ಷಿಯರಿಯ ಆರಂಭದಲ್ಲಿ ಹರಡಿದ್ದುವು. ಅಲ್ಲಿಂದ ಪ್ಲಟಿರ್‌ಹೈನಾ ಪೂರ್ವಿಕರು ದಕ್ಷಿಣ ಅಮೆರಿಕಾಕ್ಕೂ ಮತ್ತು ಕ್ಯಾಟರ್‌ಹೈನಾ ಪೂರ್ವಿಕರು ಆಫ್ರಿಕಾಕ್ಕೂ ಹರಡಿದುವು. ಅನಂತರ ಈ ಎರಡು ಖಂಡಗಳಲ್ಲಿ ಅವು ವೃದ್ಧಿಗೊಂಡು, ಬೆಳೆವಣಿಗೆಯ ಭಿನ್ನ ಜಾಡನ್ನೂ ಹಿಡಿದುವು.

ಪ್ರಾಚೀನಲೋಕದ ಕೋತಿಗಳ ವಿಕಾಸವನ್ನು ತಿಳಿಯಲು ಸಾಕಷ್ಟು ಪಳೆಯುಳಿಕೆಗಳಿವೆ. ಆದರೆ ನವೀನಲೋಕದ ಕೋತಿಗಳಿಗೆ ತೀರಾ ಕಡಿಮೆ ಆಧಾರಗಳಿವೆ. ಭೂಗರ್ಭೀಯವಾಗಿ, ಅರ್ಜೆಂಟೈನಾದ ಮೇಲಿನ ಟರ್‌ಷಿಯರಿಯಲ್ಲಿ ಅತ್ಯಂತ ಆದಿಮ ಪ್ಲಾಟಿರೈನವಿದೆ. ಇದು ದಕ್ಷಿಣ ಅಮೇರಿಕವನ್ನು ದ್ವೀಪ ಕುಪ್ಪಳಿಕೆ ಮೂಲಕ ತಲುಪಿರಬಹುದು. ಏಕೆಂದರೆ ಉತ್ತರ ಮತ್ತು ದಕ್ಷಿಣ ಅಮೇರಿಕಾಗಳನ್ನು ಸಂಧಿಸುವ ಭೂ ಸೇತುವೆ ಆಗ ಇರಲಿಲ್ಲ. ಆಲಿಗೋಸೀನ್ ವೇಳೆಯಲ್ಲಿ ಈ ಪ್ರೈಮೇಟ್‌ಗಳು ಉತ್ತರ ಅಮೇರಿಕಾದಲ್ಲಿ ಲುಪ್ತವಾದುವು. ದಕ್ಷಿಣ ಅಮೇರಿಕಾದಲ್ಲಿ ದೊರೆತ ಡೋಲಿಕೊಸಿಬಸ್ ಗಯಿಮನೆನ್ಸಿಸ್ ಹೆಚ್ಚಿನ ವಿಶೇಷತೆಯನ್ನು ಪಡೆದಿದೆ. ಏಕೆಂದರೆ ಇದರ ದಂತ ಸೂತ್ರ ಈಗಿನ ವಿಶೇಷತೆ ಪಡೆದ ಮಾರ್ಮೊಸೆಟ್ ಮತ್ತು ಟ್ಯಾಮರಿನ್‌ಗಳ ದಂತ ಸೂತ್ರವನ್ನು ಹೋಲುತ್ತದೆ. ಮಯೋಸಿನ್ ಅನಂತರ ದಕ್ಷಿಣ ಅಮೇರಿಕಾ ಪಳಿಯುಳಿಕೆಗಳು ಸಿಕ್ಕಿರುವುದರಿಂದ ಅವು ಉತ್ತರ ಅಮೇರಿಕಾದ ಸೀಬಿಡೆಗಳಿಗೆ ಸೇರಿದುವು ಎಂಬುದರಲ್ಲಿ ಅನುಮಾನವೇ ಇಲ್ಲ. ಇಂದು ನವೀನ ಲೋಕದ ಕೋತಿಗಳು ಶಾಖೆಗೊಂಡಿರುವುದು ಟರ್‌ಷಿಯರಿಯ ಮಧ್ಯದಲ್ಲಿ ಎನ್ನಬಹುದು. ಪ್ರಾಚೀನ ಲೋಕದ ಕೋತಿಗಳ ಪಳೆಯುಳಿಕೆಗಳು ಸಾಕಷ್ಟಿದ್ದರೂ ಸಾರ್ರೊಪಿತೆಕಾಯ್ಡಿಯಾ ಮತ್ತು ಹೊಮಿನಿಡೆಗಳಿಗೆ ನೇರ ಪೂರ್ವಿಕರಾರು ಎಂಬುದು ಇನ್ನೂ ತಿಳಿದಿಲ್ಲ. ಉತ್ತರ ಅಮೇರಿಕಾದಲ್ಲಾದಂತೆ ಈ ಪ್ರೈಮೇಟ್‌ಗಳು ಕೂಡ ಯೂರೋಪಿನಲ್ಲಿ ಮೇಲಿನ ಟರ್‌ಷಿಯರಿಯಲ್ಲಿ ಅದೃಶ್ಯವಾದುವು. ವಾಯುಗುಣದ ವ್ಯತ್ಯಾಸ ಇದಕ್ಕೆ ಕಾರಣವಿರಬಹುದು. ಉಷ್ಣ ಮತ್ತು ಉಪಉಷ್ಣವಲಯವಾಗಿದ್ದ ಈ ಪ್ರದೇಶ ಮಧ್ಯ ಇಯೊಸೀನ್ ಅನಂತರ ತಂಪಾಗಲಾರಂಭಿಸಿತು. ಈ ವೇಳೆಯಲ್ಲಿ ಅವು ಮಾನವ ಮತ್ತು ವಾನರಗಳಿಂದ ಪ್ರತ್ಯೇಕಗೊಂಡುವು ಎಂಬುದಕ್ಕೆ ಆಧಾರವಿದೆ. ವಾನರ ಮತ್ತು ಮನುಷ್ಯ ಆದಿಯ ದಂತ ರಚನೆಯಲ್ಲಿ ದ್ವಿ–ಲೋಫೊಡಾಂಟ್ ದವಡೆಹಲ್ಲುಗಳು, ಬಲಿಷ್ಠ ಕೋರೆಹಲ್ಲುಗಳು ಮತ್ತು ಅಲುಗಿನ ಕೆಳಮುಂದವಡೆಗಳು ಇದ್ದುವು. ಕೆಳ ಮುಂದವಡೆಹಲ್ಲು ಮೇಲಿನ ಲೋಕದ ಕೋತಿಯಾದ ಆಲಿಗೊಪಿತೇಕಸ್‌ನಲ್ಲೂ ಈ ಕೋತಿಗಳು ಮತ್ತು ಮಹಾವಾನರಗಳು ಒಂದೇ ಪೂರ್ವಿಕರ ಮೂಲದಿಂದ ವಿಕಾಸಗೊಂಡಿವೆ ಎಂಬುದಕ್ಕೆ ಅನುಮಾನವಿಲ್ಲ.

ವರ್ಗೀಕರಣ:

ಸೀಮಿಯೆ ಉಪಗಣದಲ್ಲಿ 1) ಪ್ಲಾಟರ್‍ಹೈನ (ನವೀನ ಲೋಕದ ಕೋತಿಗಳು) 2) ಕ್ಯಾಟರ್‍ಹೈನ (ಪ್ರಾಚೀನ ಲೋಕದ ಕೋತಿಗಳು) ಎರಡು ಹೀನ ಗಣಗಳಿವೆ (ಇನ್‌ಫ್ರಾಆರ್ಡರ್)

ಹೀನ ಗಣ 1: ಪ್ಲಾಟರ್‍ಹೈನ (ನವೀನ ಲೋಕದ ಕೋತಿಗಳು): ದಕ್ಷಿಣ ಅಮೇರಿಕದಲ್ಲಿರುವ ಕೋತಿಗಳ ಗುಂಪು. ಚಪ್ಪಟೆ ಮೂಗಿನ ಕೋತಿಗಳಾದುದರಿಂದ ಪ್ಲಾಟರ್‍ಹೈನ್ ಕೋತಿಗಳು ಎಂಬುದು ಪರ್ಯಾಯ ಹೆಸರು. 1000 ದಿಂದ 1500 ಮೀಟರ್ ಎತ್ತರದ ಪರ್ವತಗಳಲ್ಲಿ ಹರಡಿವೆ. ಅಗಲವಾದ ಮತ್ತು ಆಳವಾದ ನದಿಗಳು ಇವಕ್ಕೆ ದಾಟಲಾರದ ಮೇರೆಗಳಾಗಿವೆ. ಇವಕ್ಕೂ ಮತ್ತು ಪ್ರಾಚೀನ ಲೋಕದ ಕೋತಿಗಳಿಗೂ ಸ್ವಲ್ಪಮಟ್ಟಿನ ವ್ಯತ್ಯಾಸವಿದೆ. ನಾಸಿಕರಂಧ್ರಗಳು ತೀರಾ ದೂರದಲ್ಲಿದ್ದು ಪ್ರತ್ಯೇಕಗೊಂಡಿವೆ. ಮರವಾಸಕ್ಕೆ ಚೆನ್ನಾಗಿ ಹೊಂದಿಕೊಂಡಿವೆ. ದೇಹ ಮತ್ತು ಪಾದಗಳು ಕೃಶವಾಗಿವೆ. ಉದ್ದವಾದ ಕಾಲು ಮತ್ತು ನಯವಾದ ಹಸ್ತಗಳಿವೆ. ಚೆನ್ನಾಗಿ ಬೆಳೆದ ನೀಳ ಬಾಲವಿದೆ. ಕೆಲವಲ್ಲಿ ಮೋಟುಬಾಲವಿದೆ. ಬಹುತೇಕ ಪ್ರಭೇದಗಳಲ್ಲಿ ಬಾಲ ಸುರುಳಿಯಾಗಿ ಕೊಂಬೆಗೆ ಸುತ್ತಿಕೊಂಡು ದೇಹಕ್ಕೆ ಆಧಾರ, ಸಮತೋಲನೆಯನ್ನು ನೀಡುತ್ತದೆ. ಬಾಲದ ಮೆತ್ತೆಗೆ ಬೆರಳಿನಲ್ಲಿರುವಂತೆ ಏಣುಗಳಿದ್ದು ವಿಶೇಷ ಸ್ಪರ್ಶ ಜ್ಞಾನವಿದೆ. ಇವು ಸ್ವತಂತ್ರವಾಗಿ ರೆಂಬೆಗಳಲ್ಲಿ ತೂಗಾಡಬಲ್ಲುವು ಹಾಗು ಹಾರಾಡಬಲ್ಲುವು ಮೇಲಿನಿಂದ ಕೆಳಕ್ಕೆ ಧುಮುಕಬಲ್ಲುವು. ಕ್ಯಾಟರ್‍ಹೈನ್‌ಗಳಿಗಿಂತಲೂ ಕಡಿಮೆ ಸಾಮರ್ಥ್ಯವಿರುವ ಹಾಗು ಸಂಕೀರ್ಣವಾದ ಮೆದುಳಿದೆ. ಆದರೂ ಅನೇಕ ಕೋತಿಗಳು (ಉದಾ: ಕಪುಚಿನ್) ಪ್ರಾಚೀನ ಕಾಲದ ಕೋತಿಗಳ ಮೆದುಳನ್ನು ಮೀರಿಸುತ್ತವೆ. ಮಾರ್ಮೊಸೆಟ್‌ಗಳಲ್ಲಿ ಮೆದುಳು ಮನುಷ್ಯನ ಮೆದುಳಿಗಿಂತಲೂ ಸರಾಸರಿಯಲ್ಲಿ ದೊಡ್ಡದು.

ದಂತಸೂತ್ರ = $\frac{2.1.3.3}{2.1.3.3} = 36$

ಇಲ್ಲಿ ಎರಡನೆ ಮುಂದವಡೆ ಹಲ್ಲುಗಳು ಉಳಿದುಕೊಂಡಿವೆ. ದವಡೆ ಹಲ್ಲುಗಳು ಕ್ವಾಡ್ರಿಟ್ಯುಬರ್‌ಕ್ಯುಲಾರ್ ಮಾದರಿಯವು. ಮುಖದಲ್ಲಿ ಮೀಸೆಗಳಿವೆ; ಅವು ತೀರಾ ಚಿಕ್ಕವು. ಕಿವಿಯಲ್ಲಿ ಟಿಂಪೇನಿಕ್ ಮೂಳೆಯು ಉಂಗುರವಾಗಿದೆ ಮತ್ತು ಪೆಟ್ರೋಸೆಲ್‌ನೊಂದಿಗೆ ಕೂಡಿದೆ. ಕ್ಯಾಟರ್‍ಹೈನ್‌ಗಳಲ್ಲಿ ಇಲ್ಲದ ಒಂದು ಗುಳುಪು ಇದೆ. ಸೀಕಂ ಸರಾಸರಿಯಲ್ಲಿ ತುಂಬಾದೊಡ್ಡದು. ಸಂಘಜೀವನ ಚೆನ್ನಾಗಿದೆ. ಸರಳ ಲೈಂಗಿಕ ಸಂಜ್ಞಾನಿರೂಪಣವ್ಯೂಹವಿದೆ. ದಕ್ಷಿಣ ಅಮೇರಿಕಾ ಕಾಡಿನ ಪ್ರದೇಶಗಳು ಭೂಮಿಯ ತೀರಾ ಕಡಿಮೆ ಪರಿಚಿತ ಪ್ರದೇಶಗಳಾದುದರಿಂದ ಇವನ್ನು ಜಾತಿ, ಪ್ರಭೇದ, ಉಪಪ್ರಭೇದಗಳನ್ನಾಗಿ ವರ್ಗೀಕರಿಸುವುದು ಕಠಿಣ. ಈ ಹೀನ ಗಣದಲ್ಲಿ ಸೀಬಿಡೆ, ಕ್ಯಾಲಿಮಿಕೊನಿಡೆ, ಕ್ಯಾಲಿತ್ರಿಸಿಡೆ ಎಂಬ ಮೂರು ಕುಟುಂಬಗಳಿವೆ.

ಈ ಮೂರು ಕುಟುಂಬಗಳನ್ನು ಒಟ್ಟಿಗೆ ಸೇರಿಸಿ ಸೀಬಾಯ್ಡಿಯ ಅಭಿಕುಟುಂಬವನ್ನಾಗಿ ಕರೆಯುವುದುಂಟು.

ಎ.ಕುಟುಂಬ: ಸೀಬಿಡೆ. (ಸೀಬಸ್‌ಕೋತಿಗಳು)

ಅಳಿಲಿನಿಂದ ಬೆಕ್ಕಿನ ಗಾತ್ರದವರೆಗಿವೆ. ದಂತ ಸೂತ್ರ = $\frac{2\,1\,3\,3}{2\,1\,3\,3} = 36$

ಇದರಲ್ಲಿ ಐದು ಉಪಕುಟುಂಬಗಳಿವೆ.

1. ಉಪಕುಟುಂಬ: ಆಟಿನೆ;

ಉದಾ: 1. ಟೈಟಿಸ್ ಅಥವಾ ಟಿಟಿ ಕೋತಿಗಳು. ತೀರಾ ಆದಿಮಕೋತಿಗಳು. ಪನಾಮದಿಂದ ದಕ್ಷಿಣ ಅಂಚಿನ ಕಾಡಿನಲ್ಲಿವೆ. ಹಣ್ಣು, ಕೀಟ, ಹಕ್ಕಿ ಮತ್ತು ಹಕ್ಕಿಮೊಟ್ಟೆಗಳನ್ನು ತಿನ್ನುತ್ತವೆ.

2. ಆಟೆಸ್ ಟ್ರೈವಿರ್‌ಗೇಟಸ್ ಅಥವಾ ಮಿರಿಗುಯಿನಾಸ್‌ಗಳು ನಿಶಾಚರಿಗಳು. ನವೀನ ಲೋಕದ ಕೋತಿಗಳಲೆಲ್ಲಾ ಆದಿಮವಾದುವು. ಪನಾಮ, ಪೆರು ಹಾಗು ಬ್ರೆಜಿಲ್‌ಗಳವರೆಗಿವೆ.

2. ಉಪಕುಟುಂಬ: ಪಿತೆಸಿನೆ:



ಎರಡು ಪ್ರಭೇದದ ಬಾನೆಟ್ ಕೋತಿಗಳು



ರ್‍ಹೀಸ್ಸ್ ಕೋತಿ



ಲಂಗೂರ್

ಸಾಕಿ ಮತ್ತು ಅದರ ಸಂಬಂಧಿಗಳು. ಕೆಳಮಟ್ಟದ ಬಾಚಿ ಹಲ್ಲುಗಳಿವೆ. ಕೋರೆ ಹಲ್ಲು ಮತ್ತು ಬಾಚಿಹಲ್ಲುಗಳ ನಡುವೆ ಖಾಲಿ ಪ್ರದೇಶವಿದೆ. ಬಾಲ ಸುರುಳಿಗೊಂಡಿಲ್ಲ.

ಪಿತೆಸಿಯ ಪಿತೆಕಸ್ (ಬಿಳಿತಲೆಯ ಸಾಕಿ), ಪಿ.ಮೊನಾಕ (ಮಾಂಕ್‌ಸಾಕಿ) ಪಿ.ಆಲ್ಬಿಕ್ಯಾನಸ್, ಪಿ. ಕೈರೊಪೊಟೆಸ್ (ಕೆಂಪು ಬೆನ್ನಿನ ಸಾಕಿ) ಪಿ. ಸಟನಸ್ (ಕಪ್ಪುಸಾಕಿ) ಗಳು ಸೇರಿವೆ. ಪಿ. ಮೆಲನೊಸಿಫಲಾ, ಪಿ.ರುಬಿಕುಂಡರ್ ಮತ್ತು ಪಿ.ಕಾಲ್ವಸ್‌ಗಳನ್ನು ಉಕಾರಿಗಳೆನ್ನುತ್ತಾರೆ.

3. ಉಪಕುಟುಂಬ: ಸೀಬಿನೆ: ಕಪುಚಿನ್ ಕೋತಿಗಳು, ಸೈಮಿರಿ ಅಥವಾ ಅಳಿಲು ಕೋತಿಗಳು, ಸೈಮಿರಿ ಸೈಯೂರಿಯ, ಸೈ. ಒಯರ್‌ಸ್ಟಡಿ, ಸೈ.ಬೊಲಿವಿಯನಿಸ್ ಮತ್ತು ಸೈ.ಮಡಿರೆ ಉದಾಹರಣೆಗಳು.

ಕಪುಚಿನ್ ಅಥವಾ ಸಪಜಾನ್ ಕೋತಿಗಳು ಚುರುಕಿನ ಹಾಗು ದಿಟ್ಟಕೋತಿಗಳು. ಸಿಬಸ್ ಕಪುಚಿನ್, ಸಿ.ಆಲ್ಬಿಫ್ರಸ್, ಸಿ.ಅಪೆಲ್ಲ ಮತ್ತು ಸಿ.ಘುಟುಎಲ್ಲ ಉದಾಹರಣೆಗಳು.

4. ಉಪಕುಟುಂಬ: ಅಲೌಟ್ಟಿನೆ: ಹೌಲರ್ ಕೋತಿಗಳು. ನವೀನ ಲೋಕದ ಕೋತಿಗಳೆಲ್ಲ ದೊಡ್ಡವು. ನಾಯಿಯಗಾತ್ರ ಇರುತ್ತವೆ. ಬಾಲದ ಉದ್ದ 50 ಸೆಂಮೀ.

ಸುರುಳಿಯಾದ ಬಲಿಷ್ಠ ಬಾಲವನ್ನು ಐದನೆಯ ಕೈ ಯೆಂದು ಪರಿಗಣಿಸಲಾಗುತ್ತದೆ. ವಿಶೇಷ ಲ್ಯರಂಜಿಯ ಚೀಲಗಳಿವೆ. ಕಿರಿಚುವಿಕೆಯಿಂದ ತಂಡದ ನಿಯಂತ್ರಣ ಸಾಧಿಸುತ್ತವೆ. ಅಲೌಡ ಸೆನಿಕ್ಯುಲ (ಕೆಂಪು ಹೌಲರ್), ವಿಲ್ಲೋಸ, ಪೇಲಿಯೇಟ, ಫಸ್ಕ, ಬೆಲ್ಜೆಬುಲ್ ಮತ್ತು ಕರಯ ಇದಲ್ಲದೆ ಉಣ್ಣೆ ಕೋತಿಗಳು ಮತ್ತು ಉಣ್ಣೆ ಜೇಡ ಕೋತಿಗಳು ಸೇರಿವೆ.

5. ಉಪಕುಟುಂಬ: ಅಟಿಲೆಸ್: ಜೇಡ ಕೋತಿಗಳು ಅಟಿಲಿಸ್ ಜಿಯೊಫ್ರಾಯ್, ಅ.ಫೂಸಿಸೆಪ್ಸ್, ಅ.ಬೆಲ್ಜೆಬುಲ, ಅ.ಪ್ಯಾನಿಸ್ಕಸ್.

ಬಿ. ಕುಟುಂಬ: ಕ್ಯಾಲ್ಲಿಮೈಕೊನಿಡೆ: ಇದೊಂದು ವಿಚಿತ್ರ ಕೋತಿ. ಹಿಂದೆ ಕ್ಯಾಲ್ಲಿತ್ರಿಸಿಕೆಯಲ್ಲಿ ಸೇರಿಸಲಾಗಿತ್ತು. ಕ್ಯಾಲ್ಲಿತ್ರಿಸಿಡೆಯನ್ನು ಹೋಲುತ್ತಿದ್ದರೂ ತಲೆಬುರುಡೆ ಮಾರ್ಮೊಸೆಟ್‌ನಂತಿದೆ. ಮೂರನೆ ದವಡೆಹಲ್ಲನ್ನು ಉಳಿಸಿಕೊಂಡಿರುವುದರಿಂದ ಹೊಸ ಕುಟುಂಬವನ್ನಾಗಿ ಪರಿಗಣಿಸಲಾಗಿದೆ. ವಾಸ್ತವವಾಗಿ ಸೀಬಿಡೆ ಮತ್ತು ಕ್ಯಾಲ್ಲಿತ್ರಿಸಿಡೆಗಳ ನಡುವಣ ಒಂದು ಜೀವಂತ ಕೊಂಡಿ.

ಉದಾ: ಗೊಯಲ್ಡೀಸ್ ಮಾರ್ಮೊಸೆಟ್ (ಗೊಯಲ್ಡಿಸ್ ಕೋತಿಗಳು)

ಸಿ. ಕುಟುಂಬ 3: ಕ್ಯಾಲ್ಲಿತ್ರಿಸಿಡೆ: ಹೆಚ್ಚು ಪ್ರಾಚೀನವಾದ ಸುಂದರ ಪುಟ್ಟ ಪ್ರಾಣಿಗಳು. ಸೀಬಿಡೆಗಳು ಕುಬ್ಜ ಭಿನ್ನ ಮತೀಯ ಜೀವಿಗಳು. ಮೂರು ಮುಂದವಡೆ ಹಲ್ಲುಗಳಿವೆ, ಆದರೆ ದವಡೆಹಲ್ಲು ಕ್ಷಯಿಸಿ ಎರಡಾಗಿವೆ. ( $\frac{2133}{2133}$ ). ಹೆಬ್ಬೆರಳನ್ನು ಬಿಟ್ಟು ಉಳಿದವುಗಳಲ್ಲಿ ಕೊಂಡಿಯುಗುರುಗಳಿವೆ. ಇದರಿಂದ ತಬ್ಬಲಾರದ ಮರಗಳನ್ನು ಏರಬಹುದು. ಇವು ಮಾರ್ಪಟ್ಟ ಉಗುರುಗಳಲ್ಲ. ಎರಡು ಅಥವಾ ಮೂರು ಮರಿಹಾಕುತ್ತವೆ. ಕೀಟ ಮತ್ತು ಹಣ್ಣುಗಳನ್ನು ತಿನ್ನುತ್ತವೆ.

ಉದಾ: ಮಾರ್ಮೊಸೆಟ್‌ಗಳು ಮತ್ತು ಟ್ಯಾಮರಿನ್‌ಗಳು

ನವೀನ ಲೋಕದ ಕೋತಿಗಳೂ ಹಾಗು ಪಳೆಯುಳಿಕೆಗಳು ವಿಕಾಸದ ಔನ್ನತ್ಯವನ್ನು ತಲುಪಿವೆ. ಇವುಗಳಲ್ಲಿ ಯಾವುವು ಆದಿಮವಾದುವು ಎನ್ನುವುದು ಕಷ್ಟ. ಆದರೆ ತಲೆಬುರುಡೆ ಮತ್ತು ಹಲ್ಲುಗಳ ಲಕ್ಷಣಗಳಿಂದ ಸೀಬಿಡೆ ಕುಟುಂಬ ಅದರಲ್ಲಿ ಆಟಸ್, ಟಿಟಿ ಕೋತಿಗಳು ಹಾಗೂ ಕ್ಯಾಲಿಸೀಬಸ್‌ಗಳು ಚಿಕ್ಕವು ಮತ್ತು ಆದಿಮವೆಂದು ಭಾವಿಸಲಾಗಿದೆ. ಆಟಸ್ ಉತ್ತರ ಅಮೆರಿಕಾದ ಇಯೋಸೀನ್‌ನ ಟಾರ್‌ಪಿಯಾಯ್ಡ ದಂತ ಸಮೂಹ ಹಾಗು ತಲೆಬುರುಡೆಯನ್ನು ಹೋಲುತ್ತವೆ. ಆದರೆ ಟಾರ್ಸಲ್ ಮೂಳೆ ನೀಳವಾಗಿಲ್ಲವಾದ್ದರಿಂದ ಭಿನ್ನವಾಗಿದೆ. ದ.ಅಮೆರಿಕಾದ ಕೋತಿಗಳ ಅಸ್ಥಿಪಂಜರ ಉ.ಅಮೆರಿಕಾದ ಇಯೊಸೀನಿನ ನೋಟಾರ್ಕಟಸ್ ಮಾದರಿಯಿಂದ ಉದ್ಭವಿಸಿತೆನ್ನಬಹುದು. ಆದರೆ ತಲೆಬುರುಡೆ ಮತ್ತು ದಂತರಚನೆ ಭಿನ್ನವಾಗಿರುವುದರಿಂದ ಇದು ಸಾಧ್ಯವಿಲ್ಲ. ಮೊದಲೇ ಉಪವಾದ ಆರ್ಕಿಯೋ ಲೆಮೂರ್‌ಗಳನ್ನು ಹೋಲುವ ಲೆಮುರಾಯ್ಡಿಡ್‌ಗಳಿಂದ ನವೀನಲೋಕದ ಕೋತಿಗಳು ಉದ್ಭವವಾದ ಸಾಧ್ಯತೆ ಇದೆ.

ಹೀನಗಣ: ಕ್ಯಾಟರ್ಹೈನ್ ಕೋತಿಗಳು: ಹೋಮಿನಾಯಿಡ್‌ನಿಂದ ತುಂಬಾ ಹಿಂದೆಯೇ ಬೇರ್ಪಟ್ಟ ಪ್ರಾಚೀನ ಲೋಕದ ಕೋತಿಗಳು. ಗಾತ್ರದಲ್ಲಿ ದೊಡ್ಡವು; ಆಹಾರ ಕೂಡಿಡುವ ಸೋಟೆಸಂಚಿಗಳಿವೆ. ಜಟಿಲವಾದ ಲ್ಯಾರಿಂಜಿಯಲ್ ಸಂಚಿಗಳಿವೆ. ಇದರ ಬಾಲ ಸುರುಳಿಗೊಂಡಿಲ್ಲ. ಘ್ರಾಣೇಂದ್ರಿಯ ಟರ್ಬೈನಲ್ ಕ್ಷಯಿಸಿರುವುದರಿಂದ ಎರಡೂ ನಾಸಿಕಗಳೂ ಒಟ್ಟಾಗಿ ಕೆಳ ಮುಖವಾಗಿವೆ. ದಂತಸೂತ್ರ 2133 / 2133 = 36 ಮೇಲುದವಡೆ ಹಲ್ಲುಗಳಲ್ಲಿ ನಾಲ್ಕು ಕೋಡುಗಳಿವೆ. ಐದಿರುವ ಕೊನೆಯದರ ವಿನಾ: ಕೆಳದವಡೆ ಹಲ್ಲುಗಳಲ್ಲಿ ನಾಲ್ಕು ಇವೆ. ಕೀಟ, ಹಲ್ಲಿ, ಮೊಟ್ಟೆ ಮತ್ತು ಹಣ್ಣುಗಳನ್ನೊಳಗೊಂಡ ಸರ್ವಾಹಾರ ಭಕ್ಷಕಗಳು. ದವಡೆಹಲ್ಲುಗಳಲ್ಲಿ ನಾಲ್ಕು ಕೋನಾಕಾರದ ಕೋಡುಗಳಿವೆ. ಅವು ಅಂಗುಲೇಟಗಳಲ್ಲಿರುವಂತೆ ಕೂಡಿ ಅರೆಯಲು ಉಪಯುಕ್ತವಾಗುವ ಅಡ್ಡದಿಂಡುಗಳಾಗಿವೆ. ಜಠರ ಸರಳವಾಗಿದೆ. ಪುಟ್ಟ ಸೀಕಂ ಮತ್ತು ಅಪೆಂಡಿಕ್ಸ್‌ಗಳು ಇವೆ ರಜಸ್ಸಿನಲ್ಲಿ ರಕ್ತ ಸ್ರಾವವಿದೆ. ಹೀಮೊ ಕೋರಿಯಲ್ ಪ್ಲಾಸೆಂಟ ಮಾದರಿ ಇದೆ. ಹಣೆಯ ಭಾಗ ಚೆನ್ನಾಗಿ ಬೆಳೆದಿದೆ. ಗ್ರಹಣಶಕ್ತಿ ಹೆಚ್ಚು. ಸಂಘ ಜೀವನ ತೀರಾ ವಿರಳ. ಬಹು ಪತ್ನಿತ್ವ ಕಂಡುಬರುತ್ತದೆ. ಇಲ್ಲಿ ಎರಡು ಕುಟುಂಬಗಳಿವೆ.

ಎ ಕುಟುಂಬ: ಸಾರ್ಕೊಪಿತಿಸಿನೆ: ಸೋಟಿಸಂಚಿಗಳಿವೆ, ಕೈಕಾಲುಗಳು ಅಗಲವಾಗಿವೆ. ಸುಮಾರು 8 ಜಾತಿಗಳಿವೆ.

1) ಮಕಾಕು ಕೋತಿ: ಭಾರತ, ಈಸ್ಟ್ ಇಂಡಿಸ್, ಉತ್ತರದಿಂದ ಚೀನಾದವರೆಗೆ ಹಾಗು ಜಪಾನು, ಉತ್ತರ ಆಫ್ರಿಕ ಮತ್ತು ಜಿಬ್ರಾಲ್ಟರ್ ಬಂಡೆಯಲ್ಲಿವೆ. ಸಂಪೂರ್ಣ ಮರವಾಸಿಗಳು. ವೇಗವಾಗಿ ಮರ ಹತ್ತಬಲ್ಲುವು. ಮ.ಸಿಲ್ವಾನ, ಮ.ಸಿಲೇನಸ್, ಮ.ಸಿಮಿಯ, ಮ.ಮುಲೇಟ, ಮ.ಅಸ್ಸನೆನ್ಸಿಸ್, ಮ.ರೇಡಿಯೇಟ, ಮ.ಸೈಕ್ಲೊಪ್ಸಿಸ್, ಮ.ನೆಮೆಸ್ಟ್ರೀನ್, ಮ.ಸ್ಪೇಇಯಸ್ ಮತ್ತು ಮ. ಪ್ಯೂಸ್ ಮುಂತಾದುವು ಉದಾಹರಣೆಗಳು.

2) ಸೈನೊಪಿಥೆಕಸ್ ನೈಗರ್: ಬಬೂನ್ ರೀತಿ ಇವೆ. ಸಲೆಬಸ್ ಮತ್ತು ಬಾಟ್ಜನ್ ದ್ವೀಪಗಳಲ್ಲಿವೆ.

3) ಸಾರ್ಕೊಸೀಬಸ್: ಮಂಗಾಬೆ ಇನ್ನೊಂದು ಹೆಸರು. ಆಫ್ರಿಕಾದ ಉಷ್ಣವಲಯದಲ್ಲಿವೆ. ಸಾ.ಎಟಿಸ್, ಸಾ.ಗಲೆರಿಟಸ್, ಸಾ.ಆಲ್ಬಿಜೀನ, ಸಾ.ಟಾರ್‌ಕ್ವೆಟಸ್, ಮತ್ತು ಸಾ.ಅಟೆರ್ರೀನಸ್ ಉದಾಹರಣೆಗಳು.

4) ಥೀರೋಪಿಥೇಕಸ್ ಜೆಲಾಡ: ಜೆಲಾಡ ಅಥವಾ ಸಿಂಹ ಬಬೂನ್‌ಗಳು. ಇಥಿಯೋಪಿಯಾದ ಪರ್ವತಗಳಲ್ಲಿವೆ.

5) ಪಾಪಿಯೋ: ನೈಜಬಬೂನ್‌ಗಳು. ದೊಡ್ಡ ನೆಲವಾಸಿಕೋತಿಗಳು. ಈಜಿಪ್ಟ್‌ನ ಪ್ರಾಚೀನ ಸಂಸ್ಕೃತಿಯ ದ್ಯೋತಕಗಳು. ಸೂಡಾನ್, ಇಥಿಯೋಪಿಯ ಹಾಗು ನೈರುತ್ಯ ಅರೇಬಿಯಾದಲ್ಲಿವೆ. ಪಾ.ಕೊಮ್ಯಾಟಸ್, ಪಾ.ಡೊಗುವರ, ಪಾ.ಸೈನೊಸಿಫಾಲ, ಪಾ.ಕಿಂಡೆ, ಪಾ.ಪಾಫಿಯಾ ಉದಾಹರಣೆಗಳು;

6) ಮ್ಯಾಂಡ್ರಿಲ್ ಮತ್ತು ಡ್ರಿಲ್‌ಗಳು.

ಹಳದಿ ಗಡ್ಡ, ಮುಸುಡಿಯ ಎರಡು ಕಡೆ ಏಣುಗಳು, ತುಂಡುಬಾಲ ಮತ್ತು ಅನುಷಂಗಿಕವಾಗಿ ನೆಲವಾಸದಿಂದ ಚತುಷ್ಪಾದಿಗಳಾಗಿವೆ. ಕ್ಯಮರಾನ್, ಸಾಂಗನದಿ ಮತ್ತು ಈಕ್ವೆಡಾರ್‌ನ ಮಧ್ಯ ಕಾಂಗೊನಲ್ಲಿವೆ.

7) ಸಾರ್ಕೊಪಿತಿಕಸ್: ಗುಯಿನಾನ್‌ಗಳು

ಚಿಕ್ಕ ಮರವಾಸಿಗಳು. ಹಣ್ಣು ಎಲೆ ಹಾಗು ಕೀಟಾಹಾರಿಗಳು. ಸೋಟೆಸಂಚಿ ಚೆನ್ನಾಗಿ ರೂಪುಗೊಂಡಿವೆ. ದ.ಆಫ್ರಿಕಾದ ಬಹುಭಾಗಗಳಲ್ಲಿವೆ. ಸಾ.ಡೈಯಾನ, ಸಾ.ಡೈಯಾಸ್, ಸಾ.ನೆಗ್ಲೆಕ್ಟಸ್, ಸಾ.ಇಥಿಯೋಪ್ಸ್, ಸಾ.ಸಿಕ್ಟಿಟಸ್ ಇತ್ಯಾದಿ.

8) ಎರಿತ್ರೊಸೀಬಸ್ ಪಟಾಸ್:

ಎಲೆಗಳನ್ನು ತಿನ್ನುವುದರಿಂದ ಎಲೆ ಕೋತಿಗಳೆನ್ನುತ್ತಾರೆ. ಕೋಶಯುತ ಜಠರವಿದೆ. ಸೋಟೆ ಸಂಚಿಗಳಿಲ್ಲ. ಎಲೆಚಿಗುರು, ಎಲೆ, ಎಳೆಯ ಶಾಖೆಗಳೇ ಆಹಾರ. ಸಂಪೂರ್ಣ ಮರವಾಸಿಗಳು. ಜಠರ ವಿಭಾಗವಾಗಿದೆ. ಆಫ್ರಿಕಾದ ಉಷ್ಣಪ್ರದೇಶಗಳಲ್ಲಿ ಕೊಲೊಬಸ್ ಜಾತಿಯೊಂದಿದೆ. ಕೊಸಿ ಪಾಲಿನೋಮಸ್, ಕೊ.ಸಟಾನಸ್ ಉದಾಹರಣೆಗಳು. ಉಳಿದೆಲ್ಲ ಕೊಲುಬಿನೆಗಳು ದಕ್ಷಿಣ ಏಷ್ಯಾದಲ್ಲಿವೆ.

1) ಲಂಗೂರ್‌ಗಳು: ಟ್ರಾಕಿಪಿಡೆಕಸ್ ಪೈರಸ್‌ಟ್ರಾ ಫಯರ್ರಿ ಮತ್ತು ಪ್ರಾ. ಒಬ್‌ಸ್ಕಸ್, ಪ್ರಿಸ್ಬೈಟಸ್‌ನ 25 ಪ್ರಭೇದಗಳು ಉದಾಹರಣೆ. ಲಂಗೂರ್‌ಗಳು ಭಾರತ, ಸಿಲೋನ್, ಮಲಯ, ಬೋರ್ನಿಯೊ, ಸುಮಾತ್ರ, ಜಾವ ಹಾಗು ಬಾಲಿಗಳಲ್ಲಿವೆ. ಸಿಲೋನ್‌ನಲ್ಲಿ ಎಂಟೆಲ್ಲಸ್ ಎಂಬ ಜಾತಿ ಇದೆ.

2) ಗಂಟು ಮಾಗಿನ ಕೋತಿಗಳು: ರೈನೊಪಿಥೆಕಸ್ ಚೀನ, ಬರ್ಮ, ಪೂರ್ವ ಟಿಬೆಟ್ ಮತ್ತು ಉತ್ತರ ವಿಯಟ್ನಾಂನಲ್ಲಿವೆ. ಇಂಡೋಚೀನಾದ ಸೊಂಡಿಲು ಕೋತಿಗಳು.

4) ನೇಸಾಲಿಸ್ ಲಾರ್ಮಟಸ್: ಬೋರ್ನಿಯಾ, ಸುಮಾತ್ರ ದ್ವೀಪಗಳಲ್ಲಿವೆ.

5) ಹಂದಿಬಾಲದ ಕೋತಿಗಳು (ಸಿಮಾಸ್ ಕಾಂಕೋಲಾರ್): ಮಾಂಟವಿ ದ್ವೀಪಗಳಲ್ಲಿವೆ.

ಪ್ರಾಚೀನ ಲೋಕದ ಕೋತಿಗಳು ವ್ಯಾಪಕವಾಗಿ ಹಂಚಿಹೋಗಿವೆ. ಪ್ಲಯೋಸೀನಿನ ಪಳಿಯುಳಿಕೆಗಳು ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ, ಗ್ರೀಸ್, ಉತ್ತರ ಆಫ್ರಿಕ, ಭಾರತದಲ್ಲಿ ಸಿಕ್ಕಿವೆ. ಈಜಿಪ್ಟಿನ ಕೆಳ ಆಲಿಗೊಸೀನಿನ ಕೆಳದವಡೆಯ ಚೂರೊಂದು ಅಪಿಡಿಯಂ ಪ್ರೈಮೇಟ್‌ಗೆ ಹತ್ತಿರವಾದ ತೀರಾ ಹಿಂದಿನ ಕ್ಯಾಟರ್ಹೈನ್ ಇರಬಹುದು. ದವಡೆಹಲ್ಲಿನಲ್ಲಿ ನಾಲ್ಕು ಕೋಡುಗಳ ಚಚ್ಚಾರವಿದೆ ಮತ್ತು ಹೈಪೊಕೊನೊಲಿಕ್ ಇದೆ. ಅದೇ ಪದರದಲ್ಲಿದ್ದ ಪ್ಯಾರಾಪಿತಿಕಸ್ ಕೇವಲ ಒಂದು ಮ್ಯಾಂಡಿಬಲ್ ಪಡೆದಿತ್ತು. ಇದು ಅನಾಪ್ಟೊ ಮಾರ್ಫಿಡ್ ಗಳಿಂದ ಉದ್ಭವಿಸಿರಬಹುದು ಮತ್ತು ಕ್ಯಾಟರ್ಹೈನ್‌ಗಳ ವಿಕಾಸಕ್ಕೆ ದಾರಿ ತೋರಿರಬಹುದು. ಈ ಎರಡೂ ಮ್ಯಾಂಡಿಬಲ್ ಭಾಗಗಳು ಸಮಾಂತರವಾಗಿ ಹಬ್ಬುವ ಬದಲು ಟಾರ್ಸಿಯಾಯಿಡ್‌ಗಳಲ್ಲಿ ಅಗಲವಾಗುತ್ತಾ ಹೋಗುತ್ತವೆ. ಆದರೆ ಹಲ್ಲುಗಳ ಸಂಖ್ಯೆ ಕ್ಯಾಟರ್ಹೈನ್ ಹಲ್ಲುಗಳ ಸಂಖ್ಯೆಗಿಳಿದಿವೆ. ದವಡೆಹಲ್ಲುಗಳಲ್ಲಿ ಐದು ಕೋಡುಗಳಿವೆ. ಮೈಯೋಸೀನಿನ ಹೊತ್ತಿಗೆ ಸಾರ್ಕೊಪಿತಿಕಾಯಿಡ್ ಮಾದರಿ ಚೆನ್ನಾಗಿ ಸ್ಥಾಪಿತವಾಗಿರುವ ದವಡೆಹಲ್ಲಿನ ಕೋಡುಗಳು ಮತ್ತು ಏಣುಗಳಿಂದ ಕೂಡಿರುವ ಮೀಸೊಪಿತಿಕಸ್‌ನ ಅನೇಕ ಅವಶೇಷಗಳು ದೊರಕುತ್ತವೆ. ಈ ಪಂಗಡ ಆಫ್ರಿಕ ಅಥವಾ ಯೂರೋಪು – ಏಷ್ಯಾ ನೆಲಪ್ರದೇಶಗಳಲ್ಲಿ ಉಗಮವಾಗಿವೆ. ಅಮೆರಿಕ – ಆಸ್ಟ್ರೇಲಿಯಾಗಳಲ್ಲಿ ಪಳೆಯುಳಿಕೆಗಳು ಇಲ್ಲವಾಗಿರುವುದೇ ಮತ್ತೊಂದು ಆಧಾರ.

ಪುರಾಣದ ರಾಮಾಯಣ ಕಥೆಯ ರಾಮಭಕ್ತ ಹನುಮಂತನಿಂದಾಗಿ ಎಲ್ಲ ಕೋತಿಗಳು ಹಿಂದೂಗಳಿಗೆ ಪೂಜನಿಯವಾಗಿವೆ. ಕಾಡಿನಿಂದ ನಾಡಿಗೆ ಬಂದು ಸಣ್ಣಪುಟ್ಟ ವಸ್ತುಗಳಿಗೆ

ಹಾನಿಮಾಡಿದರೂ ಅವುಗಳನ್ನು ಹಿಂಸಿಸುವುದಿಲ್ಲ. ಆದರೂ ಅನೇಕ ಕೋತಿ ಪ್ರಭೇದಗಳು ವಿನಾಶದಂಚಿನಲ್ಲಿವೆ.

ಕೋತಿಗಳನ್ನು ಪ್ರಾಣಿ ಸಂಗ್ರಹಾಲಯದಲ್ಲಿಡಲಾಗುತ್ತದೆ. ಸಂದರ್ಶಕರು ಅವಕ್ಕೆ ಆಹಾರ ಕೊಡುವುದನ್ನು ನಿಷೇಧಿಸಿದೆ. ಜೊತೆಗೆ ಸಂದರ್ಶಕರನ್ನು ಒಳಬಾಗಿಲು, ಕನ್ನಡಿಗೋಡೆಗಳನ್ನು ಹಾಕಿ ಅವುಗಳಿಂದ ಬೇರ್ಪಡಿಸುವುದು ಸೂಕ್ತ. ಇದರಿಂದ ಇನ್‌ಫ್ಲೂಯಂಜ, ಶೀತ ಇತ್ಯಾದಿ ಮಾನವ ಜನಿತ ಸೋಂಕುಗಳಿಗೆ ಅವು ಸುಲಭವಾಗಿ ತುತ್ತಾಗುವುದನ್ನು ತಪ್ಪಿಸಿದಂತಾಗುತ್ತದೆ. (ಬಿ.ಕೆ.ಜೆ.)

**ಕೋನಿ:** ಲ್ಯಾಗೊಮಾರ್ಫ ಗಣದ (ಮೊಲ ಮುಂತಾದುವುಗಳನ್ನೊಳಗೊಂಡ) ಆಕೊಟೋನಿಡೆ ಕುಟುಂಬಕ್ಕೆ ಸೇರಿದ ಸ್ತನಿ. ಆಕೊಟೋನ ಪ್ರಿನ್ಸೆಪ್ಸ್ ಇದರ ವೈಜ್ಞಾನಿಕ ನಾಮ. ರಷ್ಯ, ಕೊರಿಯ, ಟಿಬೆಟ್, ಇರಾನ್, ಆಫ್ಘಾನಿಸ್ತಾನ್, ಉತ್ತರ ಅಮೆರಿಕದ ರಾಕಿ ಪರ್ವತಗಳಲ್ಲಿ ಇದು ಕಂಡುಬರುತ್ತದೆ. ಬೆಟ್ಟಗುಡ್ಡಗಳಲ್ಲ ಇದರ ವಾಸ.

ಗಾತ್ರದಲ್ಲಿ ಗಿನಿ ಹಂದಿಗಿಂತ ಚಿಕ್ಕದು. ಈ ಪ್ರಾಣಿಯ ಉದ್ದ ಸು. 15 ಸೆಂಮೀ. ತೂಕ ಸು.130 ಗ್ರಾಂ. ನೋಡಲು ಪುಟ್ಟ ಮೊಲದಂತೆಯೇ ಕಂಡರೂ ಇದಕ್ಕೆ ಮೊಲಕ್ಕಿರುವಂಥ ದೊಡ್ಡ ಕಿವಿಗಳಿಲ್ಲ, ಬಾಲವೂ ಇಲ್ಲ. ಮೈಮೇಲೆಲ್ಲ ಮೃದುವಾದ ದಟ್ಟವಾದ ತುಪ್ಪುಳವಿದೆ. ಬಣ್ಣ ಬೂದುಮಿಶ್ರಿತ ಕಂದು. ಕೈಕಾಲುಗಳು ಚಿಕ್ಕವು. ಅಂಗಾಲಿನ ಮೇಲೆ ದಟ್ಟವಾದ ತುಪ್ಪುಳವಿದೆ. ಗಂಡು ಕೋನಿಯ ವೃಷಣಗಳು ಬೆದೆಗಾಲವನ್ನು ಬಿಟ್ಟು ಉಳಿದ ಕಾಲದಲ್ಲಿ ಉದರಭಾಗದಲ್ಲಿ ಹುದುಗಿರುತ್ತವೆ. ಕೋನಿ ಸಿಳ್ಳು ಹಾಕಿದಂತೆ ಕೂಗುತ್ತದೆ. ಬೆಟ್ಟಪ್ರದೇಶಗಳಲ್ಲಿ ವಾಸಿಸುವ ಕೋನಿ ಕಲ್ಲುಗಳ ಪೊಟರೆಗಳಲ್ಲೂ ಬಯಲು ಇಲ್ಲವೆ ಮರುಭೂಮಿಗಳಲ್ಲಿ ವಾಸಿಸುತ್ತವೆ. ನೆಲವನ್ನು ತೋಡಿ ಮಾಡಿಕೊಂಡ ಬಿಲಗಳಲ್ಲೂ ವಾಸಿಸುತ್ತದೆ. ಸಸ್ಯಾಹಾರಿಯಾದ ಕೋನಿ ಹುಲ್ಲು, ಜೊಂಡು, ಚಿಗುರು ಮುಂತಾದವನ್ನು ತಿನ್ನುತ್ತದೆ. ಇದರ ಒಂದು ವಿಶಿಷ್ಟ ಲಕ್ಷಣವೆಂದರೆ ಚಳಿಗಾಲಕ್ಕೆಂದು ಆಹಾರವನ್ನು ಶೇಖರಿಸಿಡುವುದು. ಬೇಸಗೆಯ ಕೊನೆಯ ಹೊತ್ತಿಗೆ ಹುಲ್ಲು ಮುಂತಾದ ವಸ್ತುಗಳನ್ನು ಆಯ್ದು ಕಲ್ಲುಗಳ ಮೇಲಕ್ಕೆ ಕೊಂಡೊಯ್ದು ಬಿಸಿಲಿನಲ್ಲಿ ಒಣಗಿಸಿ ಒಣಮೇವು ಮಾಡಿಕೊಳ್ಳುತ್ತದೆ. ಚಳಿಗಾಲದಲ್ಲಿ ಆಹಾರದ ಅಭಾವವಿದ್ದಾಗ ಇದನ್ನೇ ತಿನ್ನುತ್ತ ಕಾಲಕಳೆಯುತ್ತದೆ. ಹುಲ್ಲನ್ನು ಒಣಗಿಸುತ್ತಿರುವಾಗ ಮಳೆಬರುವ ಸೂಚನೆ ಕಂಡುಬಂದರೆ ಒಂದು ಸ್ಥಳದಲ್ಲಿ ವಾಸಿಸುವ ಎಲ್ಲ ಕೋನಿಗಳೂ ಒಟ್ಟುಗೂಡಿ ಹುಲ್ಲನ್ನೆಲ್ಲ ತಮ್ಮ ಗೂಡಿನ ಸುರಕ್ಷಿತ ಸ್ಥಳಗಳಿಗೆ ಕೊಂಡೊಯ್ದು ಹುಲ್ಲು ನೆನೆಯದಂತೆ ಕಾಪಾಡುತ್ತವೆ.

ಕೋನಿಗಳಲ್ಲಿ ಇನ್ನೊಂದು ಸೋಜಿಗವನ್ನು ಕಾಣಬಹುದು. ರಾತ್ರಿವೇಳೆ ಇವು ಕಪ್ಪು ಬಣ್ಣದ ಸ್ನಿಗ್ಧವಾದ ಹಿಕ್ಕೆಗಳನ್ನು ವಿಸರ್ಜಿಸುತ್ತವೆ. ಹಿಕ್ಕೆಗಳ ಸುತ್ತ ಲೋಳೆಯಂಥ ವಸ್ತುವಿನ ಆವರಣವೂ ಇರುತ್ತದೆ. ಕೆಲ ಕಾಲಾನಂತರ ಕೋನಿಗಳು ಈ ಹಿಕ್ಕೆಗಳನ್ನು ತಿಂದುಬಿಡುತ್ತವೆ. ಬಹುಶಃ ಹಿಕ್ಕೆಗಳ ಮೂಲಕ ದೇಹದಿಂದ ಹೊರಬೀಳುವ ಕೆಲವು ಅತ್ಯಾವಶ್ಯಕ ಜೀವಸತ್ವಗಳನ್ನು ಮರಳಿ ಪಡೆಯುವುದೇ ಇದರ ಉದ್ದೇಶವಿರಬೇಕು. ಕೋನಿಗಳ ಸಂತಾನೋತ್ಪತ್ತಿಯ ಕಾಲ ಮೇ–ಸೆಪ್ಟೆಂಬರ್ ತಿಂಗಳುಗಳು. ಸೂಲಿಗೆ 3–4 ಮರಿಗಳು ಹುಟ್ಟುತ್ತವೆ. ಒಂದು ಹೆಣ್ಣು ವರ್ಷಕ್ಕೆ 2–3 ಸಲ ಈಯಬಲ್ಲುದು. ಹುಟ್ಟಿದಾಗ ಮರಿಗಳಿಗೆ ತುಪ್ಪುಳ ಇರುವುದಿಲ್ಲ. ಮರಿಗಳು ಸುಮಾರು 6–7 ವಾರಗಳ ಅನಂತರ ಸ್ವತಂತ್ರ ಜೀವನ ಆರಂಭಿಸುತ್ತವೆ. ***

**ಕೋಪಿಪೋಡ:** ಸಂದಿಪದಿ ವಂಶದ, ಕ್ರಸ್ಟೇಸಿಯ (ಕಠಿಣ ಚರ್ಮಿಗಳ) ವರ್ಗಕ್ಕೆ ಸೇರಿದ ಉಪವರ್ಗ. ಇದರಲ್ಲಿ ೬,೦೦೦ ಪ್ರಭೇದಗಳಿವೆ. ಬಹುತೇಖ ಪ್ರಭೇದಗಳು ಸೂಕ್ಷ್ಮಜೀವಿಗಳು ಮತ್ತು ಜಲವಾಸಿಗಳು. ಇವುಗಳ ಉದ್ದ ಅರ್ಧಮಿಲಿಮೀಟರ್. ಕೆಲವು ಪ್ರಭೇದದ ಜೀವಿಗಳು ಸ್ವತಂತ್ರಜೀವನ ನಡೆಸಿದರೆ, ಇನ್ನು ಕೆಲವು ಪರತಂತ್ರಜೀವಿಗಳು. ಈ ಗುಂಪಿನ ಪ್ರಾಣಿಗಳಿಗೆ ಸಂಯುಕ್ತಾಕ್ಷಿಗಳಾಗಲಿ, ಕ್ಯಾರಪೇಸ್‌ಗಳಾಗಲಿ ಇಲ್ಲ. ಎದೆಯ ಭಾಗದಲ್ಲಿ ಆರು ಜೊತೆ ಉಪಾಂಗಗಳಿವೆ. ಇವುಗಳಲ್ಲಿ ಮೊದಲನೆಯ ಮತ್ತು ಆರನೆಯದು ಒಕ್ಕವಲು ಉಪಾಂಗಗಳು. ಮಿಕ್ಕೆಲ್ಲವು ಇಕ್ಕವಲು ಉಪಾಂಗಗಳು. ಸ್ವತಂತ್ರಜೀವನ ನಡೆಸುವ ಪ್ರಾಣಿಗಳಲ್ಲಿ ದೇಹ ಬುಗುರಿಯಾಕಾರ ಅಥವಾ ಗದೆಯಾಕಾರದ್ದಾಗಿದ್ದು, ಖಂಡವಿಂಗಡಣೆಯನ್ನು ಪ್ರದರ್ಶಿಸುತ್ತದೆ. ಪರತಂತ್ರ ಜೀವಿಗಳಲ್ಲಿ ಖಂಡವಿಂಗಡಣೆ ಇಲ್ಲ. ಕಾಲುಗಳು ಇಲ್ಲ. ಖಂಡವಿಂಗಡಣೆ ಕಾಣಬರುವ ಪ್ರಾಣಿಗಳಲ್ಲಿ ನಿರ್ದಿಷ್ಟವಾಗಿ ೧೬ ಖಂಡಗಳಿವೆ. ಆದ ಕಾರಣ, ಇಂತಹ ಪ್ರಾಣಿಗಳ ದೇಹದಲ್ಲಿ ತಲೆ, ಎದೆ ಮತ್ತು ಉದರ ಭಾಗಗಳನ್ನು ನಿಖರವಾಗಿ ಗುರುತಿಸುವುದು ಕಷ್ಟ.

ಇವುಗಳ ಬೆಳೆವಣಿಗೆಯಲ್ಲಿ ನಾಪ್ಲಿಯಸ್ ಡಿಂಬಾವಸ್ಥೆ ಇದೆ. ಉದಾ: ಸೈಕ್ಲೋಪ್‌ಗಳು ಸಿಹಿನೀರಿನಲ್ಲಿ ವಾಸಿಸುವ ಬುಗುರಿಯಾಕಾರದ ಪ್ರಾಣಿಗಳು. ನಾರುಹುಣ್ಣಿನ ಡಿಂಬಗಳನ್ನು ಒಬ್ಬರಿಂದ ಒಬ್ಬರಿಗೆ ಹರಡುವಲ್ಲಿ ಇವು ಮಧ್ಯಸ್ತಿಕೆ ವಹಿಸುತ್ತವೆ.

ಡಯಾಪ್ಟೊಮಸ್ ಪ್ರಭೇದದ ಜೀವಿ ಸಿಹಿನೀರವಾಸಿ. ಇದು ಮತ್ತು ಸೈಕ್ಲೋಪ್‌ಗಳು ಲಾಡಿಹುಳುವಿನ (ಲಿಗ್ಯುಲ) ಪ್ರಸರಣದಲ್ಲಿ ಅಂತರವರ್ತಿ ಆತಿಥೇಯಗಳಾಗಿ ವರ್ತಿಸುತ್ತವೆ. ಆರ್‍ಗುಲಸ್, ಲರ್ನಿಯ, ಕ್ಯಾಂಡ್ರೊ ಕ್ಯಾಂತಸ್ ಜಾತಿ ಮೀನುಗಳಲ್ಲಿ ಪರತಂತ್ರಜೀವಿಗಳಾಗಿವೆ. ಕಲಾನಸ್ ಎಂಬುದು ಕಡಲಿನಲ್ಲಿ ಹೇರಳವಾಗಿ ವಾಸಿಸುತ್ತದೆ. ಇದು ಮೀನುಗಳ ಮುಖ್ಯ ಆಹಾರ.

ಕೋಪಿಪೋಡ ಗುಂಪಿನ ಪ್ರಾಣಿಗಳು ಸಾಮಾನ್ಯವಾಗಿ ಮೀನುಗಾರಿಕೆ ದೃಷ್ಟಿಯಿಂದ ಬಹಳ ಮುಖ್ಯವಾದುವು. ಇವು ಅನೇಕ ಮೀನುಗಳ ಪ್ರಧಾನ ಆಹಾರ. ಪ್ಲಾಂಕ್ಟಾನ್‌ನ (ತೇಲುಜೀವಿ ಸಮುದಾಯ) ಬಹುಭಾಗ ಈ ಪ್ರಾಣಿಗಳನ್ನೊಳಗೊಂಡಿದೆ.

(ಎನ್.ವಿ.ಎ.)

**ಕೋರಿ ದಂಪತಿಗಳು:** ಕಾರ್ಲ್ ಫರ್ಡಿನಾಂಡ್ ಕೋರಿ ಮತ್ತು ಆತನ ಪತ್ನಿ ಗರ್ಟಿ ತೆರೇಸ ರ್‍ಯಾಡ್ನಿಟ್ಸ್ ಕೋರಿ. ಜೀವರಸಾಯನ ವಿಜ್ಞಾನ ಪರಿಣತರು. ಇವರಿಗೆ ೧೯೪೭ರಲ್ಲಿ ಶರೀರವಿಜ್ಞಾನ ಮತ್ತು ವೈದ್ಯವಿಜ್ಞಾನಗಳ ನೊಬೆಲ್ ಪಾರಿತೋಷಕ ದೊರೆಯಿತು. ಇವರಿಬ್ಬರೂ ಪ್ರಾಗ್ ನಗರದಲ್ಲಿ (ಈಗಿನ ಜೆಕೊಸ್ಲೊವಾಕಿಯ) ೧೮೯೬ರಲ್ಲಿ ಜನಿಸಿದರು. ೧೯೨೦ರಲ್ಲಿ ಅಲ್ಲಿಯ ಜರ್ಮನ್ ವಿಶ್ವವಿದ್ಯಾಲಯದ ಎಂಡಿ ಪದವಿ ಗಳಿಸಿದರು. ಕೆಲವು ವರ್ಷಗಳು ವಿಯೆನ್ನದ ವೈದ್ಯ ಮಂದಿರದಲ್ಲಿ ಕೆಲಸ ಮಾಡಿ ಅನಂತರ ೧೯೨೨ರಲ್ಲಿ ಅಮೆರಿಕೆಗೆ ಹೋಗಿ ನೆಲೆಸಿದರು. ಸೇಂಟ್ ಲೂಯಿಸ್ ಪಟ್ಟಣದ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ವೈದ್ಯಶಾಲೆಯಲ್ಲಿ ೧೯೩೧–೧೯೬೭ರ ವರೆಗೆ ಕಾರ್ಲ್ ಕೋರಿ ಜೀವರಸಾಯನವಿಜ್ಞಾನ ಮತ್ತು ಫಾರ್ಮಕಾಲಜಿಯ ಪ್ರಾಧ್ಯಾಪಕನಾಗಿದ್ದ. ಗರ್ಟಿ ಕೋರಿ ೧೯೪೭ರಿಂದ ಅಲ್ಲಿಯೇ ಪ್ರೊಫೆಸರ್ ಆಗಿದ್ದು ೧೯೫೭ರಲ್ಲಿ ಗತಿಸಿದಳು. ಈ ದಂಪತಿಗಳು ಪ್ರಖ್ಯಾತರಾದದ್ದು ಶರ್ಕರಪಿಷ್ಟಗಳ ಚಯಾಪಚಯಕ್ರಿಯೆ ಮತ್ತು ಹಾರ್ಮೋನುಗಳ ಪ್ರಭಾವ ಇವನ್ನು ಕುರಿತ ಕ್ಷೇತ್ರಗಳಲ್ಲಿ ನಡೆಸಿದ ಸಂಶೋಧನೆಗಳಿಂದ. ಪ್ರಾಣಿಗಳ ಶರೀರದಲ್ಲಿ ಗ್ಲೂಕೋಸ್ ಏನೇನು ಪರಿವರ್ತನೆ ಹೊಂದುತ್ತದೆಂದು ಅಧ್ಯಯನ ಮಾಡಿ ಮಾಂಸಖಂಡಗಳ ಗ್ಲೈಕೊಜೆನ್ ಹೇಗೆ ವಿಭಜನೆ ಹೊಂದುತ್ತದೆ ಎನ್ನುವುದನ್ನು ಕಂಡುಹಿಡಿದರು. ಈ ಕ್ರಿಯೆಯ ಮಧ್ಯವರ್ತಿ ಸಂಯುಕ್ತವಾದ ಗ್ಲೂಕೋಸ್–೧–ಫಾಸ್ಫೇಟನ್ನು ಗ್ಲೈಕೊಜೆನ್ನಿನ ಫಾಸ್ಫಾರಿಲೈಸಿಸ್ ಕ್ರಿಯೆಯ ಮೂಲಕ ಪ್ರತ್ಯೇಕಿಸಿದರು (೧೯೩೧). ಈ ಸಂಯುಕ್ತಕ್ಕೆ ಕೋರಿ ಎಸ್ಟರ್ ಎಂದೇ ಹೆಸರು. ಮಾಂಸಖಂಡಗಳು ಕೆಲಸ ಮಾಡಿದಾಗ ಅವುಗಳ ಗ್ಲೈಕೊಜೆನ್ ಲ್ಯಾಕ್ಟಿಕ್ ಆಮ್ಲವಾಗುತ್ತದೆ. ಇದು ಆಮ್ಲಜನಕದ ಪ್ರಭಾವಕ್ಕೊಳಗಾಗಿ ಪಿತ್ತಜನಕಾಂಗದಲ್ಲಿ ಗ್ಲೈಕೊಜೆನ್ ರೂಪದಲ್ಲಿ ಸಂಗ್ರಹವಾಗುತ್ತದೆ. ಅಲ್ಲಿ ಗ್ಲೈಕೊಜೆನ್ ಗ್ಲೂಕೋಸ್ ರೂಪದಲ್ಲಿ ರಕ್ತವನ್ನು ಸೇರಿ ಅಲ್ಲಿಂದ ಮಾಂಸಖಂಡಗಳಲ್ಲಿ ಗ್ಲೈಕೊಜೆನ್ ಆಗಿ ಬದಲಾವಣೆಯಾಗಿ ಕೆಲಸ ಮಾಡುವಾಗ ತಿರುಗಿ ಲ್ಯಾಕ್ಟಿಕ್ ಆಮ್ಲವಾಗುತ್ತದೆ. ಈ ಚಕ್ರಕ್ಕೆ ಕೋರಿ ಚಕ್ರ ಎಂದು ಹೆಸರು. ಈ ಕ್ರಿಯೆಗಳಲ್ಲಿ ಭಾಗವಹಿಸುವ ಕೆಲವು ಎನ್‌ಜೈಮುಗಳನ್ನು ಕೋರಿಗಳು ಸ್ಫಟಿಕೀಕರಿಸಿ ಪ್ರತ್ಯೇಕಿಸಿದರು. ಶರ್ಕರಪಿಷ್ಟಗಳ ಚಯಾಪಚಯಕ್ರಿಯೆಗಳಲ್ಲಿ ಇನ್ಸುಲಿನ್ ಮತ್ತು ಎಪಿನೆಫ್ರಿನ್‌ಗಳ ಪಾತ್ರವನ್ನು ಅಧ್ಯಯನ ಮಾಡಿದರು. ಸೇಂಟ್ ಲೂಯಿಸ್ಸಿನ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ಅತ್ಯುತ್ತಮವಾದ ಜೀವರಸಾಯನವಿಜ್ಞಾನದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದ ಹಿರಿಮೆ ಕೋರಿ ದಂಪತಿಗಳದು. ಶರ್ಕರಪಿಷ್ಟ ಚಯಾಪಚಯಕ್ರಿಯೆಗಳ ಕ್ಷೇತ್ರದಲ್ಲಿರುವ ಪ್ರಮುಖ ಸಂಶೋಧಕರಲ್ಲಿ ಅನೇಕರು ಇವರುಗಳ ವಿದ್ಯಾರ್ಥಿಗಳೋ ಸಂಗಡಿಗರೋ ಆಗಿದ್ದಾರೆ.

(ಎಂ.ಆರ್.ಆರ್.)

**ಕೋರಿಯಾನ್:** ಆಮ್ನಿಯೋಟಗಳ ಬೆಳವಣಿಗೆಯಲ್ಲಿ ಭ್ರೂಣದ ಸುತ್ತ ಬೆಳೆಯುವ ನಾಲ್ಕು ಬಹಿರ್ ಭ್ರೂಣೀಯ ಪಟಲಗಳಲ್ಲಿ ಒಂದು. ಇತರ ಪಟಲಗಳು ಆಮ್ನಿಯಾನ್, ಅಲ್ಲಂಟಾಯಿಸ್ ಮತ್ತು ಬಂಡಾರಸಂಚಿ.

ಅಂಡಜ ಸರೀಸೃಪಗಳಲ್ಲಿ ಮತ್ತು ಪಕ್ಷಿಗಳಲ್ಲಿ ಕೋರಿಯಾನ್ ಚಿಪ್ಪಿನ ಒಳಭಾಗಕ್ಕೆ ಅಂಟಿಕೊಂಡಿರುತ್ತದೆ. ಇದು ಅಲ್ಲಂಟಾಯಿಸ್ ಪಟಲದೊಡನೆ ಸೇರಿ ಕೋರಿಯೊ ಅಲ್ಲಂಟಾಯಿಸ್ ನಿರ್ಮಾಣವಾಗುತ್ತದೆ. ಇದರಲ್ಲಿರುವ ರಕ್ತನಾಳಗಳು ಭ್ರೂಣಕ್ಕೆ ಆಮ್ಲಜನಕವನ್ನು ಒದಗಿಸುವುವಲ್ಲದೆ, ಇದು ಭ್ರೂಣಕ್ಕೆ ರಕ್ಷಣೆಯನ್ನು ಕೊಡುತ್ತದೆ. ಜರಾಯು ಸ್ತನಿಗಳಲ್ಲಿ ಭ್ರೂಣವನ್ನು ಆವರಿಸಿರುವ ಕೋರಿಯಾನ್ ಗರ್ಭಕೋಶದ ಒಳ ಪದರದ ಜೊತೆ ಸೇರಿ ಗರ್ಭವೇಷ್ಟನ (ಜರಾಯು) ಬೆಳೆಯುತ್ತದೆ. ಇದು ತಾಯಿಯಿಂದ ಭ್ರೂಣಕ್ಕೆ ಆಹಾರ ಮತ್ತು ಆಮ್ಲಜನಕ ಸಾಗಿಸುತ್ತದೆ. ಹಾಗೂ ಭ್ರೂಣದಿಂದ ವಿಸರ್ಜನಾ ವಸ್ತುಗಳನ್ನು ತಾಯಿಯ ದೇಹಕ್ಕೆ ಕೊಂಡೊಯ್ಯುತ್ತದೆ.

ಕೋರಿಯಾನ್ ಬೆಳವಣಿಗೆಯಲ್ಲಿ ಆಮ್ನಿಯಾನ್ ಪಟಲದೊಂದಿಗೆ ರೂಪುಗೊಳ್ಳುತ್ತದೆ. ಕೋಳಿಮೊಟ್ಟೆಯಲ್ಲಿ, ಹೇಂಟೆಯು ಕಾವು ಕೊಡಲಾರಂಭಿಸಿದ ಮೂರನೇಯ ದಿನ ಇದು ಕಾಣಿಸಿಕೊಳ್ಳುತ್ತದೆ. ಭ್ರೂಣದ ಮುಂಭಾಗದಿಂದ ದ್ವಿಪದರದ ತಲೆಮಡಿಕೆ, ಇಕ್ಕಡೆಗಳಿಂದ ಒಂದು ಜೊತೆ ಪಾರ್ಶ್ವ ಮಡಿಕೆಗಳು ಮತ್ತು ಹಿಂಭಾಗದಿಂದ ಬಾಲದ ಮಡಿಕೆ ಬೆಳೆಯುತ್ತದೆ. ಪ್ರತಿ ಮಡಿಕೆಯಲ್ಲಿ ಹೊರಗೆ ಹೊರದರ್ಮ ಮತ್ತು ಒಳಗೆ ಮಧ್ಯದರ್ಮವಿದೆ. ಬೆಳೆದ ಈ ನಾಲ್ಕು ಮಡಿಕೆಗಳು ಒಂದನ್ನೊಂದು ಸಂಧಿಸಿದಾಗ ಎರಡು ಪಟಲಗಳು ಭ್ರೂಣವನ್ನು ಆವರಿಸುತ್ತವೆ. ಇವುಗಳಲ್ಲಿ ಒಳಗಿನ ಪಟಲ ಆಮ್ನಿಯಾನ್ ಮತ್ತು ಹೊರ ಪಟಲವೇ ಕೋರಿಯಾನ್. ಆಮ್ನಿಯಾನ್‌ನಲ್ಲಿ ಒಳಗೆ ಹೊರದರ್ಮ, ಹೊರಗೆ ಮಧ್ಯದರ್ಮವಿದೆ. ವ್ಯತಿರಿಕ್ತವಾಗಿ ಕೋರಿಯಾನ್‌ನಲ್ಲಿ ಒಳಗೆ ಮಧ್ಯದರ್ಮ ಹಾಗೂ ಹೊರಗೆ ಹೊರದರ್ಮವಿದೆ. ಆದುದರಿಂದ ಕೋರಿಯಾನ್ ಅನ್ನು ಮಿಥ್ಯ ಆಮ್ನಿಯಾನ್ ಎಂದೂ ಕರೆಯುವರು. ಈ ಎರಡು ಪಟಲಗಳ ನಡುವಣ ಅವಕಾಶವೆ ಬಹಿರ್ಭ್ರೂಣೀಯ ಸೀಲೋಮ್ (ಎಕ್ಸೊಸೀಲ್) ಎನ್ನುವರು. ಈ ಅವಕಾಶವನ್ನು ಅನಂತರ ಬಂಡಾರ ಸಂಚಿ ಮತ್ತು ಅಲ್ಲಂಟಾಯಿಸ್ ಪಟಲಗಳು ಆಕ್ರಮಿಸುತ್ತವೆ.

ಹಲವೊಮ್ಮೆ ಕೀಟಗಳ, ಎಸಿಡಿಯಾ ಮುಂತಾದ ಪ್ರಾಣಿಗಳ ತತ್ತಿಯ ಹೊರ ಆವರಣಕ್ಕೂ ಕೋರಿಯಾನ್ ಎಂದು ಕರೆಯಲಾಗಿದೆ. (ಎಮ್.ಎಸ್.)

**ಕೋರ್ವಿಡೆ:** ಕಾಗೆಗಳ ಕುಟುಂಬ. ಪಕ್ಷಿವರ್ಗದ ಪ್ಯಾಸೆರಿಫಾರ್ಮಿಸ್ ಗಣಕ್ಕೆ ಸೇರಿದೆ. ಈ ಕುಟುಂಬದ ಪ್ರಮುಖ ಹಕ್ಕಿಗಳೆಂದರೆ ಕಾಗೆಗಳು ಮತ್ತು ಜೇ ಎನ್ನುವ ಪಕ್ಷಿಗಳು. ಇದರಲ್ಲಿ ಸುಮಾರು ನೂರು ಪ್ರಭೇದಗಳಿವೆ. 17–70 ಸೆಂಮೀ ಉದ್ದ ಇರುತ್ತವೆ. ಮೈ ಬಣ್ಣ ಕಪ್ಪು ಅಥವಾ ಕಪ್ಪು ಮತ್ತು ಬಿಳುಪು ಮಿಶ್ರಿತವಾದುದು. ಜೇಗಳಿಗೆ ಮಾತ್ರ ಪ್ರಕಾಶಮಾನವಾದ ನೀಲಿ, ಹಸಿರು, ಹಳದಿ, ಕಡು ಕೆಂಪು ಅಥವಾ ಬೂದಿಬಣ್ಣದ ಗರಿಗಳಿವೆ. ಬಹಳ ಉದ್ದವಾದ ಬಾಲದಲ್ಲಿ ಪಟ್ಟೆಗಳಿವೆ. ಕೆಲವಕ್ಕೆ ತಲೆಯ ಮೇಲೆ ಶಿಖೆಗಳಿವೆ. ಬಹಳ ಉದ್ದವಾದ ಬಾಲದ ಗರಿಗಳು ಕೆಲವು ಜಾತಿಗಳಲ್ಲಿ ಉಂಟು. ಈ ಕುಟುಂಬದ ಪ್ರಧಾನ ಲಕ್ಷಣವಾಗಿ ರೆಕ್ಕೆಯಲ್ಲಿ 10 ಅಥವಾ 12 ದ್ವಿತೀಯಕ ಗರಿಗಳಿವೆ. ಈ ಕುಟುಂಬದ ಹಕ್ಕಿಗಳು ಚೆನ್ನಾಗಿ ಹಾರಬಲ್ಲುವು; ಹಾರುತ್ತಲೆ ಆಹಾರವನ್ನು ಬೇಟೆಯಾಡಬಲ್ಲುವು. ಸ್ವಾಭಾವಿಕವಾಗಿ ಲಿಂಗ ದ್ವಿರೂಪತೆ ಕಾಣಬರುವುದಿಲ್ಲ. ಹೆಣ್ಣುಗಂಡುಗಳೆರಡೂ ಹೆಚ್ಚುಕಡಿಮೆ ಒಂದೇ ರೀತಿಯಾಗಿವೆ. ನ್ಯೂಜಿಲೆಂಡ್ ಮತ್ತು ಕೆಲವು ಸಾಗರದ್ವೀಪಗಳ ವಿನಾ ಈ ಹಕ್ಕಿಗಳು ಪ್ರಪಂಚಾದ್ಯಂತ ಹರಡಿವೆ. ಬಹುಪಾಲು ಪ್ರಭೇದಗಳು ವಲಸೆಹೋಗವು. ಹೋಗುವಂಥವು ಸಾಮಾನ್ಯವಾಗಿ ಹಗಲಿನಲ್ಲಿ ಮಾಡುತ್ತವೆ.

ಇವು ಸರ್ವಭಕ್ಷಕಗಳು. ದ್ವಿಚರಿಗಳೇ ಮುಂತಾದ ಎಲ್ಲ ರೀತಿಯ ಪುಟ್ಟ ಪ್ರಾಣಿಗಳನ್ನೂ ಸಸ್ಯಾಹಾರವನ್ನೂ ತಿನ್ನುತ್ತವೆ. ಕೆಲವು ಪ್ರಭೇದಗಳು ಆಹಾರ ಹೇರಳವಾಗಿ ದೊರಕುವಾಗ ಕೂಡಿಟ್ಟಿದ್ದು, ಅಭಾವ ತೋರಿದಾಗ ಉಪಯೋಗಿಸುತ್ತವೆ. ಅನೇಕ ಹಕ್ಕಿಗಳು ಆಹಾರಕ್ಕಾಗಿ ತಮ್ಮಲ್ಲಿಯೇ ಕಾದಾಡಿದರೂ ಕಾಗೆಗಳು ಮಾತ್ರ ಆಹಾರವನ್ನು ಕಂಡಾಗ ಇತರ ಕಾಗೆಗಳನ್ನೂ ಆಹ್ವಾನಿಸುತ್ತವೆ.

ಇವು ಸ್ವಾಭಾವಿಕವಾಗಿ ಗುಂಪುಜೀವಿಗಳು. ಧೈರ್ಯಶಾಲಿಗಳು. ನಿರ್ಭೀತಿಯಿಂದ ಮುನ್ನುಗ್ಗುತ್ತವೆ. ಕೆಲವೊಮ್ಮೆ ಮಾಂಸಾಹಾರಿ ಪಕ್ಷಿಗಳನ್ನು ಕೂಡ (ಹದ್ದು, ಗಿಡಗ) ಎದುರಿಸಿ ಹೋರಾಡುತ್ತವೆ. ಇವುಗಳ ಧ್ವನಿ ಸಾಮಾನ್ಯವಾಗಿ ಕರ್ಕಶ ಮತ್ತು ಜೋರು. ಕೆಲವು ಮಾತ್ರ ಮಧುರವಾದ ಶಬ್ದವನ್ನು ಮಾಡುವುವಲ್ಲದೆ ಹಾಡುವುದೂ ಉಂಟು.

ಮರಗಿಡಗಳಲ್ಲಿ ಅಥವಾ ಪ್ರಪಾತಗಳ ಬಳಿ ಕಡ್ಡಿಗಳಿಂದ ಗೂಡುಗಳನ್ನು ಕಟ್ಟುತ್ತವೆ. ಗೂಡು ಕಟ್ಟುವುದರಲ್ಲಿ ಗಂಡುಹೆಣ್ಣುಗಳೆರಡೂ ಭಾಗವಹಿಸುತ್ತವೆ. ಒಮ್ಮೆಗೆ 3–10 ಮೊಟ್ಟೆಗಳನ್ನಿಡುತ್ತವೆ. ಮರಿಗಳು ಬೇಗ ಹೊರಬರುತ್ತವೆ. ಮರಿಗಳ ಪೋಷಣೆಯನ್ನು ತಾಯಿತಂದೆ ಪಕ್ಷಿಗಳೆರಡೂ ನಿರ್ವಹಿಸುತ್ತವೆ. (ಎಚ್.ಎಚ್.ಎಸ್.)

**ಕೋಲಿಕ್ ಆಮ್ಲ:** ಪಿತ್ತರಸದಲ್ಲಿ ಟಾರೀನ್ ಮತ್ತು ಗ್ಲೈಸಿನ್‌ಗಳೊಡನೆ ಸಂಯೋಜಿತವಾಗಿ ಲವಣ ರೂಪದಲ್ಲಿರುವ, ಸ್ಟಿರಾಯ್ಡ್‌ಗಳ ಗುಂಪಿಗೆ ಸೇರಿದ ಒಂದು ಮುಖ್ಯ ಆಮ್ಲ.

ಟಾರೋ ಕೋಲಿಕ್ ಆಮ್ಲ ಮತ್ತು ಗ್ಲೈಕೋ ಕೋಲಿಕ್ ಆಮ್ಲ ಲವಣಗಳು ಎಣ್ಣೆ, ಕೊಬ್ಬುಗಳನ್ನು ಸಣ್ಣ ಕಣಗಳಾಗಿ ಒಡೆದು ನೀರಿನಲ್ಲಿ ವಿರಳವಾಗಿ ಹರಡುವಂತೆ ಮಾಡುವುದರಿಂದ ಕಿಣ್ವಗಳ ವರ್ತನೆಗೆ ಅನುಕೂಲವಾಗಿ ಜೀರ್ಣಕಾರ್ಯ ಸುಲಭವಾಗುತ್ತದೆ. ಪ್ರಾಣಿಗಳ ಪಿತ್ತರಸದಿಂದ ಕೋಲಿಕ್ ಆಮ್ಲವನ್ನು ಮುಕ್ತಸ್ಥಿತಿಯಲ್ಲಿ ತಯಾರಿಸಬಹುದು. ಕೆಲವು ಔಷಧಿಗಳಲ್ಲಿ ಇದರ ಉಪಯೋಗ ಉಂಟು. ಹಲವಾರು ಔಷಧೀಯ ರಾಸಾಯನಿಕಗಳ ತಯಾರಿಕೆಯಲ್ಲಿ ಮಧ್ಯವರ್ತಿಯಾಗಿ ಇದನ್ನು ಬಳಸುತ್ತಾರೆ. ***

**ಕೋಲಿಯಾಪ್ಟರ:** ಜೀರುಂಡೆ ಮತ್ತು ಸೊಂಡಿಲು ಕೀಟಗಳನ್ನೊಳಗೊಂಡ ಗಣ. ಸು. 2,50,000 ಪ್ರಭೇದಗಳನ್ನೊಳಗೊಂಡಿದೆ. ಪ್ರಾಣಿ ಪ್ರಪಂಚದಲ್ಲಿಯೇ ದೊಡ್ಡಗುಂಪು. ಇದುವರೆಗೆ ವರ್ಣಿಸಲಾದ ಕೀಟಗಳ ಒಟ್ಟು ಸಂಖ್ಯೆಯ ಶೇ. 40 ರಷ್ಟು ಈ ಗಣದಲ್ಲಿವೆ. ಇವುಗಳ ಸಂಖ್ಯೆ ಎಷ್ಟು ಅಗಾಧವೊ, ಹಾಗೆಯೇ ವ್ಯಾಪ್ತಿಯೂ ಅಷ್ಟೇ ವಿಸ್ತಾರವಾಗಿದೆ. ಸಮುದ್ರಗಳನ್ನು ಬಿಟ್ಟು ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿ ಈ ಕೀಟಗಳು ವಾಸಿಸುತ್ತವೆ. ಬಹುತೇಕ ಪ್ರಭೇದಗಳು ಭೂವಾಸಿಗಳು. ಕೆಲವು ಜಾತಿಯ ಪ್ರಭೇದಗಳು $50^0$ ಸೆ. ಉಷ್ಣತೆ ಇರುವ ಬಿಸಿ ನೀರಿನ ಚಿಲುಮೆಗಳಲ್ಲೂ ವಾಸಿಸುತ್ತವೆ. ಕೆಲವು ಜಾತಿಯ ಕೀಟಗಳು ಬೇರೆ ಜಾತಿ ಕೀಟಗಳ ಗೂಡುಗಳಲ್ಲಿ ಅತಿಥಿಗಳಾಗಿ ಜೀವಿಸಿದರೆ. ಇನ್ನೂ ಕೆಲವು ಬೇರೆ ಕೀಟಗಳ ಅಥವಾ ಸ್ತನಿಗಳ ದೇಹದೊಳಗೊ, ಚರ್ಮದ ಮೇಲೂ ಪರಾವಲಂಬಿ ಜೀವನ ನಡೆಸುತ್ತವೆ. ಅನೇಕ ಜಾತಿಯ ಕೀಟಗಳು ದವಸಧಾನ್ಯಗಳ ಮತ್ತು ದಿನಬಳಕೆ ವಸ್ತುಗಳ, ಪಿಡುಗುಗಳೆಂದು ಹೆಸರಾಗಿವೆ.

ದೇಹರಚನೆ: ಕೀಟಗಳ ಸ್ವಭಾವ ಮತ್ತು ವಾಸಿಸುವ ನೆಲೆಯನ್ನವಲಂಬಿಸಿ ದೇಹರಚನೆ ವಿಭಿನ್ನವಾಗಿದೆ. ಅತಿದೊಡ್ಡ ಮತ್ತು ಅತಿ ಚಿಕ್ಕ ಗಾತ್ರದ ಕೀಟಗಳಿವೆ. ಉದಾ: ಡೈನಾಸ್ಟಸ್ ಹರ್ಕ್ಯೂಲಿಸ್ (ಖಡ್ಗಮೃಗ ಜೀರುಂಡೆ) 17 ಸೆಂಮೀ ಉದ್ದವಿದೆ. ಇನ್ನು ಕೆಲವು ಬರಿಗಣ್ಣಿಗೆ ಕಾಣದಿರುವಷ್ಟು ಚಿಕ್ಕವಾಗಿವೆ. ಉದಾ: ಅಕ್ಕಿ ಜೋಳದ ನುಸಿಗಳು. ಪ್ರೌಢಕೀಟಗಳ ದೇಹವನ್ನು ತಲೆ, ಎದೆ ಮತ್ತು ಉದರ ಎಂದು 3 ಭಾಗಗಳಾಗಿ ವಿಂಗಡಿಸಲಾಗಿದೆ. ಎದೆಭಾಗದಲ್ಲಿ 3 ಖಂಡಗಳಿವೆ. ಇವುಗಳಲ್ಲಿ ಹಿಂದಿನವೆರಡು ಉದರಭಾಗಕ್ಕೆ ಅಂಟಿಕೊಂಡಿವೆ. ಮುಂದಿನ ಖಂಡ (ಪ್ರೋತೋರ್‍ಯಾಕ್ಸ್) ಮಾತ್ರ ಬೇರೆಯಾಗಿದ್ದು ಪ್ರೋನೋಟಮ್ ಫಲಕದಿಂದ ಆವೃತವಾಗಿದೆ. ದೇಹವನ್ನೆಲ್ಲ ಆವರಿಸಿರುವ ಕವಚ (ಎಕ್ಸೊಸ್ಕೆಲಿಟನ್) ಗಡುಸಾಗಿದೆ. ಇದು ಮೃದುವಾಗಿ ಸುಲಭವಾಗಿ ಬಾಗುವಂತೆ ಇರುತ್ತದೆ. ಕುಡಿಮೀಸೆಗಳು (ಆಂಟೆನಾ) ತಲಾ ಹನ್ನೊಂದು ಖಂಡಗಳಿಂದ ಕೂಡಿವೆ. ದವಡೆಗಳು ತ್ರಿಕೋಣಾಕಾರದುವು. ಆಹಾರವನ್ನು ಕಡಿಯಲು ಅಥವಾ ಮೆಲುಕು ಹಾಕಲು ಅನುಕೂಲವಾಗಿವೆ. ಕೆಲವು ಜಾತಿಯ ಕೀಟಗಳ ದವಡೆಗಳು ಬಲುದೊಡ್ಡವಾಗಿದ್ದು, ದೇಹದಷ್ಟೆ ಉದ್ದ ಇವೆ. ಇನ್ನು ಕೆಲವು ಬಗೆಗಳಲ್ಲಿ ಬಲು ಚಿಕ್ಕವಾಗಿವೆ. ಸ್ಪರ್ಶಾಂಗಗಳು (ಪ್ಯಾಲ್ಪಿ) ಸಾಮಾನ್ಯವಾಗಿ ಚಿಕ್ಕ ಗಾತ್ರದುವು. ಆಹಾರವನ್ನು ಹಿಡಿಯಲು, ಸ್ಪರ್ಶಿಸಲು ಮಾತ್ರ ಉಪಯೋಗವಾಗುತ್ತವೆ. ಕಣ್ಣುಗಳು ಸಂಯುಕ್ತ ಮಾದರಿಯವು. ಅಪರೂಪವಾಗಿ ಸರಳ ನೇತ್ರಗಳೂ ಇವೆ. ಪ್ರೋನೋಟಮ್ ಫಲಕ ಕೆಲವೊಮ್ಮೆ ಹಲವಾರು ಬಗೆಯ ಮುಳ್ಳು, ಕುಳಿ, ತೋಡು ಮುಂತಾದವುಗಳಿಂದ ಅಲಂಕೃತವಾಗಿರುತ್ತದೆ. ಪ್ರೋತೋರ್‍ಯಾಕ್ಸಿನ ತಳಭಾಗದಿಂದ ಮುಂದಿನ ಜೊತೆ ಕಾಲುಗಳಿವೆ. ಎದೆಯ ಮಧ್ಯದ ಖಂಡದಿಂದ (ಮೀಸೊತೋರ್‍ಯಾಕ್ಸ್) ಎಲಿಟ್ರ ಎಂಬ ಮೇಲಿನ ರೆಕ್ಕೆಗಳು ಮತ್ತು ಎರಡನೆಯ ಜೊತೆ ಕಾಲುಗಳಿವೆ. ಎದೆಯ ಹಿಂಬದಿಯ ಖಂಡದಿಂದ (ಮೆಟತೋರ್‍ಯಾಕ್ಸ್) ಕೆಳಗಿನ ಜೊತೆರೆಕ್ಕೆಗಳು ಮತ್ತು ಮತ್ತೊಂದು ಜೊತೆ ಕಾಲುಗಳಿವೆ. ಕೆಳಗಿನ ಜೊತೆ ರೆಕ್ಕೆಗಳು ತೆಳುವಾಗಿ ಪಾರದರ್ಶಕವಾಗಿ ಇದ್ದು, ಇವು ಮಾತ್ರ ಹಾರುವಿಕೆಯಲ್ಲಿ ಬಳಕೆಯಾಗುತ್ತವೆ. ಎಲಿಟ್ರಗಳು ಬಹಳ ಗಡುಸು. ಕೀಟ ಹಾರದಿದ್ದಾಗ ಕೆಳಗಿನ ಜೊತೆ ರೆಕ್ಕೆಗಳನ್ನು ಆವರಿಸಿಕೊಂಡು ಅವನ್ನು ರಕ್ಷಿಸುತ್ತವೆ. ಎಲಿಟ್ರಗಳು ಈ ಕೀಟಗಳ ಪ್ರಮುಖ ಮತ್ತು ವಿಶೇಷ ಲಕ್ಷಣ. ಕೆಲವು ಬಗೆಯ ಜೀರುಂಡೆಗಳಲ್ಲಿ ಎಲಿಟ್ರಗಳಿಲ್ಲ. ಇನ್ನು ಕೆಲವು ಜಾತಿ ಜೀರುಂಡೆಗಳಲ್ಲಿ ರೆಕ್ಕೆಗಳೇ ಇಲ್ಲ. ಕಾಲುಗಳು ಓಡಲು, ಈಜಲು, ನೆಗೆಯಲು, ನೆಲವನ್ನು ತೋಡಲು ಮತ್ತು ಆಹಾರವನ್ನು ತಬ್ಬಿ ಹಿಡಿಯಲು ಅನುಕೂಲವಾಗುವಂತೆ ಮಾರ್ಪಾಡಾಗಿರುವ ಕಾಲುಗಳಿವೆ. ಉದರಭಾಗದಲ್ಲಿ 10 ಖಂಡಗಳಿವೆ. ಸಾಮಾನ್ಯವಾಗಿ 5–8 ಖಂಡಗಳಷ್ಟೆ ಚೆನ್ನಾಗಿ ರೂಪುಗೊಂಡಿವೆ. ಉಳಿದವು ಬರಿಯ ಮೋಟುಗಳಂತೆ ಕಾಣುತ್ತವೆ. ಪ್ರತಿಯೊಂದು ಖಂಡದಲ್ಲೂ ಒಂದು ಜೊತೆ ಶ್ವಾಸರಂಧ್ರಗಳಿವೆ. ಇವೇ ಉಸಿರಾಟ ಅಂಗವ್ಯವಸ್ಥೆಯ ಬಾಹ್ಯ ರಂಧ್ರಗಳು. ಜನನಾಂಗಗಳು ದೇಹದ ಹಿಂತುದಿಯಲ್ಲಿ ಅನುಬಂಧಗಳಂತೆ ಕಾಣುತ್ತವೆ. ಗಂಡಿನ ಜನನಾಂಗದಲ್ಲಿ ಶಿಶ್ನ ಮತ್ತು ಟಗ್ಮೆನ್ ಎರಡು ಭಾಗಗಳಿವೆ. ಹೆಣ್ಣಿನ ಜನನಾಂಗದಲ್ಲಿ ಪ್ಯಾರಪ್ರಾಕ್ಟ್, ಪ್ರಾಕ್ಟಿಜರ್, ವಾಲ್ವಿಫರ್, ಕಾಕ್ಸೈಟ್ ಮತ್ತು ಸ್ಟೈಲೈ ಎಂಬ 5 ಭಾಗಗಳಿವೆ.

ದೇಹದ ಒಳರಚನೆ: ಆಹಾರ ಕ್ರಮವನ್ನು ಅನುಸರಿಸಿ ಅನ್ನನಾಳದ ಉದ್ದ ವಿಭಿನ್ನವಾಗಿದೆ. ಇದನ್ನು ಸ್ಟೋಮೋಡಿಯಂ, ಮೀಸೆಂಟರಾನ್ ಅಥವಾ ಜಠರ, ಮತ್ತು ಪ್ರೋಕ್ಟೋಡಿಯಮ್ ಅಥವಾ ಕರುಳು ಎಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಸ್ಟೋಮೋಡಿಯಂ ಭಾಗದಲ್ಲಿ ಬಾಯಿ, ಗಂಟಲ ಕುಹರ, ಈಸಾಫಗಸ್ ನಾಳ ಮತ್ತು ಪ್ರೊವೆಂಟ್ರಿಕ್ಯುಲಸ್ ಭಾಗಗಳಿವೆ. ಆಹಾರವನ್ನು ಅರೆಯಲು ಅನುಕೂಲವಾಗುವಂಥ ಹಲ್ಲುಗಳು ಪ್ರೊವೆಂಟ್ರಿಕ್ಯುಲಸ್ ಭಿತ್ತಿಯ ಮೇಲೆ ಜೋಡಣೆಗೊಂಡಿವೆ. ಜಠರದ ಒಂದು ತುದಿ ಮುಚ್ಚಿದ ಹಲವಾರು ಕೊಳವೆಗಳು (ಸೀಕೆ) ಅಂಟಿಕೊಂಡಿವೆ. ಪ್ರೋಕ್ಟೋಡಿಯಮ್

ಭಾಗ ಹಲವಾರು ಮಾಲ್ಫೀಗಿಯನ್ ಕೊಳವೆಗಳನ್ನು ಗುದನಾಳವನ್ನು ಒಳಗೊಂಡಿದೆ. ಆಹಾರವನ್ನು ಜೀರ್ಣಿಸಲು ನೆರವಾಗುವಂಥ ಅನೇಕ ಬಗೆಯ ಗ್ರಂಥಿಗಳು, ರಚನೆಗಳು ಆಹಾರನಾಳದೊಂದಿಗೆ ಸೇರಿಕೊಂಡಿವೆ.

ಬೇರೆ ಕೀಟಗಳಲ್ಲಿರುವಂತೆ ಜೀರುಂಡೆಗಳಲ್ಲಿ ಉಸಿರಾಟ ದೇಹದಾದ್ಯಂತ ಹರಡಿರುವ ಶ್ವಾಸನಾಳ ವ್ಯವಸ್ಥೆಯ ನೆರವಿನಿಂದ ನಡೆಯುತ್ತದೆ. ಸ್ವೈರಕಲ್ಲುಗಳೆಂಬ ಬಾಹ್ಯರಂಧ್ರಗಳ ಮುಚ್ಚುವಿಕೆ ಮತ್ತು ತೆರೆಯುವಿಕೆಗಳಿಂದ ದೇಹದಿಂದ ಹೊರಕ್ಕೆ ಮತ್ತು ದೇಹದೊಳಕ್ಕೆ ಗಾಳಿಯ ವಿನಿಮಯ ನಡೆಯುತ್ತದೆ. ಅತ್ಯಂತ ಚಟುವಟಿಕೆಯನ್ನು ಪ್ರದರ್ಶಿಸುವ ಕೆಲವು ಬಗೆಯ ಜೀರುಂಡೆಗಳಲ್ಲಿ ದೇಹದೊಳಗೆ ಅಲ್ಲಲ್ಲಿ ಗಾಳಿಚೀಲಗಳಿವೆ. ಇವು ಗಾಳಿಯ ಸಂಗ್ರಹಣೆಯಲ್ಲಿ ನೆರವಾಗುತ್ತವೆ. ಜಲವಾಸಿ ಜೀರುಂಡೆಗಳಲ್ಲಿ ಅನೇಕ ಬಗೆಯ ಅನುಷಂಗಿಕ ರಚನೆಗಳನ್ನು ಕಾಣಬಹುದು. ಇವುಗಳ ಸಹಾಯದಿಂದ ಕೀಟಗಳು ನೀರಿನೊಳಗೆ ಮುಳುಗಿದ್ದರೂ ಉಸಿರಾಡುತ್ತವೆ. ಸ್ವೈರಕಲ್ಲುಗಳ ಚಲನೆ ರಕ್ತದಲ್ಲಿನ ಲ್ಯಾಕ್ಟಿಕ್ ಆಮ್ಲದ ಮೊತ್ತದಿಂದ ಪ್ರಭಾವಿತವಾಗಿದೆಯೆಂದು ಕಂಡುಬಂದಿದೆ. ಆಮ್ಲಜನಕದ ಪ್ರಮಾಣ ಇಳಿದಾಗ ಲ್ಯಾಕ್ಟಿಕ್ ಆಮ್ಲದ ಮಟ್ಟ ಹೆಚ್ಚಾಗಿ ಉದರಭಾಗದ ನರಗ್ರಂಥಿಗಳಲ್ಲಿರುವ ಕೆಲವು ನರಕೇಂದ್ರಗಳು ಪ್ರಚೋದಿತವಾಗುತ್ತವೆ. ಇವು ಸ್ವೈರಕಲ್ಲುಗಳ ಮೇಲೆ ಪ್ರಭಾವ ಬೀರಿ ಅವು ತೆರೆಯುವಂತೆ ಮಾಡುತ್ತವೆ. ಆಗ ಗಾಳಿಯಲ್ಲಿನ ಆಮ್ಲಜನಕ ಸುಲಭವಾಗಿ ಒಳಹೋಗುತ್ತದೆ. ಜೀರುಂಡೆಗಳಲ್ಲಿ ಶ್ವಾಸನಾಳ ವ್ಯವಸ್ಥೆಗೂ, ರಕ್ತ ಪರಿಚಲನಾ ವ್ಯವಸ್ಥೆಗೂ ಸಂಪರ್ಕವಿದೆ. ದೇಹದ ಬಹುಪಾಲು ಜೀವಕೋಶಗಳಿಗೆ ಆಮ್ಲಜನಕದ ಪೂರೈಕೆ ರಕ್ತದ ಮುಖಾಂತರವೇ ನಡೆಯುತ್ತದೆ. ಲ್ಯಾಂಪೈರಿಡೆ, ಇಲ್ಯಾಟೆರಿಡೆ ಮತ್ತು ಫೆಂಗೋಡಿಡೆ ಕುಟುಂಬಗಳ ಜೀರುಂಡೆಗಳಲ್ಲಿ ಬೆಳಕನ್ನು ಉತ್ಪಾದಿಸುವ ಅಂಗಗಳಿವೆ. ಈ ಅಂಗಗಳಿಗೂ ಮತ್ತು ಉಸಿರಾಟದ ವ್ಯವಸ್ಥೆಗೂ ನಿಕಟಸಂಬಂಧವಿದೆ. ಮಿಣುಕು ಹುಳಗಳಿಂದ ಉತ್ಪತ್ತಿಯಾಗುವ ಬೆಳಕು ಈ ಅಂಗಗಳ ಚಟುವಟಿಕೆಯಿಂದಾಗುವ ವಿಶೇಷ ಜೈವಿಕ ಕ್ರಿಯೆ.

ಚೆನ್ನಾಗಿ ರೂಪುಗೊಂಡ ರಕ್ತಪರಿಚಲನ ವ್ಯವಸ್ಥೆಯನ್ನು ಜೀರುಂಡೆಗಳಲ್ಲಿ ಕಾಣಬಹುದು. ದೇಹದ ವಿವಿಧ ಅಂಗಾಶಗಳಿಗೆ ಆಹಾರವನ್ನು ಸಾಗಿಸುವುದೇ ಇದರ ಮುಖ್ಯ ಕಾರ್ಯ. ಉಳಿದೆಲ್ಲ ಸಂಧಿಪದಿಗಳಲ್ಲಿರುವಂತೆ ಜೀರುಂಡೆಗಳಲ್ಲಿ ಈ ವ್ಯವಸ್ಥೆ ಇದೆ. ಅಂದರೆ, ರಕ್ತನಾಳಗಳಲ್ಲಿ ಮಾತ್ರ ಪ್ರವಹಿಸದೆ ವಿವಿಧ ಬಗೆಯ ಪೊಳ್ಳು ಇಲ್ಲವೆ ತೆರಪುಗಳಲ್ಲಿ ಸಾಗುತ್ತದೆ. ರಕ್ತಪರಿಚಲನಾವ್ಯವಸ್ಥೆಗೆ ಕೇಂದ್ರವಾಗಿ ಹೃದಯವೊಂದಿದೆ. ಇದರ ನಿಯಮಿತ ತುಡಿತದಿಂದ ಒತ್ತಲ್ಪಟ್ಟ ರಕ್ತ ಒಂದು ದೊಡ್ಡ ಕೊಳವೆಯ ಮೂಲಕ ಮಿದುಳಿನ ಭಾಗದೆಡೆಗೆ ಚಲಿಸುತ್ತದೆ. ಅಲ್ಲಿಂದ ದೇಹದ ಉಳಿದೆಲ್ಲ ಭಾಗಕ್ಕೂ ರಕ್ತದ ಪೂರೈಕೆಯಾಗುತ್ತದೆ. ರಕ್ತದಲ್ಲಿರುವ ಹೀಮೊಸೈಟ್ ಜೀವಕೋಶಗಳನ್ನೊಳಗೊಂಡ ದುಗ್ಧರಸದಲ್ಲಿ ಹಳದಿ ಅಥವಾ ಹಸಿರು ಅಥವಾ ಕೆಂಪುಬಣ್ಣದ ವರ್ಣಕಗಳಿವೆ.

ಕೋಲಿಯಾಪ್ಟರ ಕೀಟಗಳ ನರವ್ಯೂಹ ದೇಹದ ತಳಭಾಗದಲ್ಲಿನ ಹಲವಾರು ನರಗ್ರಂಥಿಗಳಿಂದ ಕೂಡಿದೆ. ಇವುಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ನರಸಂಬಂಧಗಳಿವೆ.

ಜೀರುಂಡೆಗಳಲ್ಲಿ ಲಿಂಗಭೇದವಿದೆ. ಗಂಡು ಕೀಟದ ಜನನಾಂಗ ಒಂದು ಜೊತೆ ವೃಷಣಗಳು, ಜೊತೆ ಪಾರ್ಶ್ವ ಕೊಳವೆಗಳು (ಡೆಫರೆಂಟ್ ಕಾಲುವೆಗಳು), ವೀರ್ಯಕೋಶ ಮತ್ತು ವೀರ್ಯವನ್ನು ಹೊರಚೆಲ್ಲುವ ಒಂದು ಕಾಲುವೆಗಳನ್ನು ಹೊಂದಿದೆ. ಹೆಣ್ಣು ಕೀಟಗಳಲ್ಲಿ ಜೊತೆ ಅಂಡಾಶಯಗಳು, ಇವುಗಳಿಂದ ಹೊರಡುವ ಅಂಡನಾಳ, ಇವೆರಡೂ ಕೂಡಿ ಉಂಟಾಗಿರುವ ಸಾಮಾನ್ಯ ಕೊಳವೆ ಮತ್ತು ಯೋನಿ ಇದೆ. ಎಲ್ಲಾ ಜೀರುಂಡೆಗಳೂ ಸಂಪೂರ್ಣ ಬಗೆಯ ರೂಪಪರಿವರ್ತನೆ ಹೊಂದುತ್ತವೆ. ಮೊಟ್ಟೆಗಳನ್ನು ಗುಂಪು–ಗುಂಪಾಗಿ, ಒಂಟೊಂಟಿಯಾಗಿ ಇಡುತ್ತವೆ. ಕೆಲವು ದಿನಗಳಿಂದ ಕೆಲವು ತಿಂಗಳುಗಳ ನಂತರ ಮೊಟ್ಟೆಯೊಡೆದು, ಡಿಂಬಗಳು ಹೊರಬರುತ್ತವೆ. ಡಿಂಬಗಳು ಪ್ರೌಢಕೀಟಗಳಂತೆಯೇ ಸಸ್ಯಹಾರಿಗಳಾಗಿವೆ. ಕೆಲವು ಮಾಂಸಾಹಾರಿಗಳು. ಕೆಲವು ಪರಾವಲಂಬಿ ಜೀವನ ನಡೆಸುತ್ತವೆ. ನಿರ್ದಿಷ್ಟವಾದ ತಲೆ, 3 ಖಂಡಗಳುಳ್ಳ ಎದೆ ಮತ್ತು 9 ಖಂಡಗಳುಳ್ಳ ಉದರ ಭಾಗಗಳಿವೆ. ಡಿಂಬಗಳಲ್ಲಿ ರೆಕ್ಕೆಗಳಿಲ್ಲ. ಈ ಹಂತದಲ್ಲಿ ಡಿಂಬದ ಬೆಳವಣಿಗೆಯ ಗತಿ ತೀವ್ರವಾಗಿದ್ದು ಅದು ಗಾತ್ರದಲ್ಲಿ ಮತ್ತು ತೂಕದಲ್ಲಿ ಹಲವಾರು ಪಟ್ಟು ಹೆಚ್ಚುತ್ತದೆ. ಗಾತ್ರ ಬೆಳೆದಂತೆ ಮೈಮೇಲಿನ ಚರ್ಮವನ್ನು ಕಳಚಿ ಹೊಸ ಚರ್ಮವನ್ನು ಬೆಳೆಸಿಕೊಳ್ಳುತ್ತವೆ. ಈ ಚರ್ಮಕವಚ ಕಳಚುವ ಕ್ರಿಯೆ 3 ಬಾರಿ, ಕೆಲವು ಪ್ರಭೇದಗಳಲ್ಲಿ 10–15 ಬಾರಿ ನಡೆಯುತ್ತದೆ. ಡಿಂಬಗಳು ದೇಹ ಗಾತ್ರದ ಗರಿಷ್ಠ ಮಿತಿ ತಲುಪಿದ ನಂತರ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ, ಉಬ್ಬಿಕೊಂಡು ಕೋಶಾವಸ್ಥೆಯನ್ನು ಸೇರುತ್ತವೆ. ಕೋಶಾವಸ್ಥೆಯಲ್ಲಿ ಜನನಾಂಗಗಳ ರೂಪುಗೊಳ್ಳುವಿಕೆ, ಕುಡಿಮೀಸೆ ಹಾಗೂ ಸಂಯುಕ್ತಾಕ್ಷಿಗಳು ಮೂಡುವ ಬದಲಾವಣೆಗಳಾಗುತ್ತವೆ. ಈ ಬದಲಾವಣೆಗಳಿಗೆ ಬೇಕಾಗುವ ಅವಧಿ ಕೆಲವು ಗಂಟೆಗಳಿಂದ ಹಿಡಿದು ಹಲವಾರು ದಿವಸಗಳು. ಕ್ರಮೇಣ ಕೋಶಾವಸ್ಥೆ ಕೊನೆಗೊಂಡು ಪ್ರೌಢಕೀಟ ಕೋಶದಿಂದ ಹೊರಬರುತ್ತದೆ. ಕೆಲವು ಜಾತಿಯ ಜೀರುಂಡೆಗಳು ನೇರವಾಗಿ ಸಣ್ಣ ಮರಿ ಕೀಟಕ್ಕೆ ಜೀವ ನೀಡುತ್ತವೆ. ಇನ್ನೂ ಕೆಲವು ಜಾತಿಯ ಜೀರುಂಡೆಗಳ ಡಿಂಬವೇ ಲೈಂಗಿಕ ಪ್ರಬುದ್ಧತೆಯನ್ನು ಪಡೆದು ಮೊಟ್ಟೆಯಿಡುತ್ತದೆ. (ಉದಾ: ಮೈಕ್ರೊಮ್ಯಾಲ್ಥಸ್). ಡೈಟಿಸ್ಕಿಡೆ ಮತ್ತು ಬ್ರೂಕಿಡೆ ಕುಟುಂಬದ ಜೀರುಂಡೆಗಳಲ್ಲಿ ಡಿಂಬ ಮತ್ತು ಪ್ರೌಢಾವಸ್ಥೆಗೂ ನಡುವೆ ಹಲವಾರು ಮಧ್ಯವರ್ತಿ ಹಂತಗಳಿರುತ್ತವೆ.

ಕೋಲಿಯಾಪ್ಟರ ಗಣವನ್ನು ಸ್ಟ್ರೆಪ್ಸಿಪ್ಟರ (ಅರ್ಕೊಸ್ಟಮ್ಯಾಟ), ಏಡಿಫ್ಯಾಗ ಮತ್ತು ಪಾಲಿಫೇಗ ಎಂಬ ಮೂರು ಉಪಗಣಗಳಾಗಿ ವಿಂಗಡಿಸಲಾಗಿದೆ. ಮೊದಲ ಉಪಗಣದಲ್ಲಿ ಕ್ಯೂಪಿಸಾಯ್ಡಿಯ, ಕ್ಯಾರಬೀಯಾಯ್ಡಿಯ ಮತ್ತು ಗೈರಿನಾಯಡಿಯ ಕುಟುಂಬಗಳಿವೆ. ಪಾಲಿಫೇಗ ಉಪಗಣದಲ್ಲಿ ಲೈಮೆಕ್ಸಿಲಾನಾಯ್ಡಿಯ, ಹೈಡ್ರೊಫಿಲಾಯ್ಡಿಯ, ಸ್ಟಾಫಿಲಿನಾಯ್ಡಿಯ, ಕ್ಯಾಂತರಾಯ್ಡಿಯ, ಕ್ಲೀರಾಯ್ಡಿಯ, ಇಲ್ಯಾಟರಾಯ್ಡಿಯ, ಡ್ಯಾಸ್ಕಿಲಾಯ್ಡಿಯ, ಬಿರಾಯ್ಡಿಯ, ಡ್ರಯೋಪಾಯ್ಡಿಯ, ಕ್ಯುಕ್ಯುಜಾಯ್ಡಿಯ, ಮೆಲಾಯ್ಡಿಯ, ಟೆನಿಬ್ರಿಯಾನಾಯ್ಡಿಯ, ಬಾಸ್ಟ್ರಿಕಾಯ್ಡಿಯ, ಸ್ಕ್ಯಾರಬಿಯಾಯ್ಡಿಯ, ಸೆರ್ಯಾಮ್‌ಬೈಕಾಯ್ಡಿಯ, ಕ್ರೈಸೊಮೆಲಾಯ್ಡಿಯ ಮತ್ತು ಕರ್ಕ್ಯೂಲಿಯೊನಾಯ್ಡಿಯ , ಕುಟುಂಬಗಳಿವೆ.

ಆರ್ಥಿಕ ಪ್ರಮುಖ್ಯ: ಜೀರುಂಡೆಗಳ ಮರಿಗಳು ಮತ್ತು ಪ್ರೌಢ ಕೀಟಗಳು ಉಪದ್ರವಕಾರಿಗಳು. ಉದಾಹರಣೆಗೆ ತಂತಿಹುಳು, ಫ್ಲೀಬೀಟ್ಸ್, ಕಾಲರಾಡೊ ಆಲೂಗೆಡ್ಡೆ ಹುಳು, ಜಪಾನೀಸ್ ಜೀರುಂಡೆ, ಕಾಕ್‌ಷೇಫರ್ ಜೀರುಂಡೆಗಳು, ಮೂತಿಹುಳುಗಳು, ಕುಟ್ಟಿಹುಳುಗಳು ವಿವಿಧ ರೀತಿಯಲ್ಲಿ ಮನುಷ್ಯನಿಗೆ ಹಾನಿಕಾರಕಗಳಾಗಿವೆ. ಗುಲಗಂಜಿ ಹುಳುಗಳು ಉಪಕಾರಿಗಳು. ಆಸ್ಟ್ರೇಲಿಯದ ರೊಡೋಲಿಯ ಕಾರ್ಡಿನಾಲಿಸ್ ಗುಲಗಂಜಿ ಹುಳದ ಸಹಾಯದಿಂದ ಕ್ಯಾಲಿಫೋರ್ನಿಯದಲ್ಲಿ ಕಿತ್ತಳೆ ಹಣ್ಣಿನ ಪಿಡುಗಾದ ಐಸಿರಿಯ ಪರ್ಚೇಸ್ ಎಂಬ ಕೀಟಗಳನ್ನು ನಿಯಂತ್ರಣಗೊಳಿಸಿ ಹತೋಟಿಗೆ ತರಲಾಗಿದೆ. ಇಂಥದೇ ಇನ್ನೊಂದು ಉಪಕಾರಿ ಕ್ರಿಪ್ಟೋಲೀಮಸ್ ಮಾಂಟ್ರೋಜಿಯರಿ ಮತ್ತು ಕ್ಯಾಲೊಸೋಮ ಸೈಕೋಫಾಂಟಗಳು ಉಪಕಾರಿಗಳು.

ಕೆಲವು ಜೀರುಂಡೆಗಳು ವೈದ್ಯಕೀಯ ಪ್ರಮುಖ್ಯವನ್ನು ಪಡೆದಿವೆ. ಪೀಡೆರೆಸ್ ಎಂಬ ರೋಟ್ ಜೀರುಂಡೆ ಮತ್ತು ಬ್ಲಿಸ್ಟರ್ ಜೀರುಂಡೆ ಚರ್ಮದ ಮೇಲೆ ಬೊಬ್ಬೆಗಳನ್ನು ಮಾಡುತ್ತವೆ. ಕೆಲವು ದೇಶಗಳಲ್ಲಿ ಇಂಥ ಜೀರುಂಡೆಗಳು ಹೆಚ್ಚಿದಾಗ, ಚರ್ಮದ ಬೊಬ್ಬೆರೋಗ ಸಾಂಕ್ರಾಮಿಕವಾಗುತ್ತದೆ. ಲಿಟ್ಟವೆಸಿಕ ಟೋರಿಯ ಎಂಬ ಜೀರುಂಡೆಯಿಂದ ಕ್ಯಾಂಥಾರಿಡಿನ್ ಎಂಬ ಗುಳ್ಳೆಗಳೆಬ್ಬಿಸುವ ರಾಸಾಯನಿಕವನ್ನು ಮಾಡುತ್ತಾರೆ. ಇನ್ನೂ ಕೆಲವು ಜೀರುಂಡೆಗಳು ಮಕ್ಕಳ ಮತ್ತು ಸಸ್ಯಗಳ ರೋಗಗಳನ್ನು ಹರಡುತ್ತವೆ. ***

**ಕೋಲೀನ್ ಎಸ್ಟರೇಸ್:** ಅಸಿಟೈಲ್ ಕೋಲೀನಿನ ಜಲವಿಶ್ಲೇಷಣೆಯಲ್ಲಿ ವೇಗವರ್ಧಕವಾಗಿ ಕಾರ್ಯನಿರ್ವಹಿಸುವ ಕಿಣ್ವ. ಇದರಲ್ಲಿ ಮಿಥ್ಯ ಕೋಲೀನ್ ಎಸ್ಟರೇಸ್ ಮತ್ತು ನೈಜ ಕೋಲೀನ್ ಎಸ್ಟರೇಸ್ ಎಂಬ ಎರಡು ಬಗೆಗಳಿವೆ. ಮಿಥ್ಯಕೋಲೀನ್ ಎಸ್ಟರೇಸ್ ಅಸಿಟೈಲ್ ಕೋಲೀನ್ ಅಲ್ಲದೆ ಬ್ಯುಟಿರಿಲ್, ಸಕ್ಸಿನಿಲ್, ಮತ್ತು ಬೆಂಜೈಲ್ ಕೋಲೀನುಗಳನ್ನೂ ಟ್ರೈಬ್ಯುಟಿರಿಲ್ ಮತ್ತು ಅದರಂಥ ಇತರ ಕೆಲವು ಎಸ್ಟರ್‌ಗಳನ್ನೂ ಜಲವಿಶ್ಲೇಷಣೆಗೆ ಒಳಪಡಿಸುತ್ತದೆ. ನೈಜ ಕೋಲೀನ್ ಎಸ್ಟರೇಸ್ ಮಾತ್ರ ನಿರ್ದಿಷ್ಟವಾಗಿ ಅಸಿಟೈಲ್ ಕೋಲೀನಿನ ಜಲವಿಶ್ಲೇಷಣೆಯಲ್ಲಿ ವೇಗವರ್ಧಕವಾಗಿದ್ದು ಕೋಲೀನ್ ಮತ್ತು ಅಸಿಟೇಟುಗಳನ್ನು ಉತ್ಪತ್ತಿಮಾಡುತ್ತದೆ. ನರಗಳ ಚೋದನೆಗಳ ಚಾಲನೆಯಲ್ಲಿ ಇದರ ಪಾತ್ರ ಬಹು ಮುಖ್ಯವಾದುದು. ಸಂದೇಶವಾಹಕ ನರಗಳಲ್ಲಿ ಈ ಎನ್‌ಜೈಮ್ ಮತ್ತು ಅಸಿಟೈಲ್ ಕೋಲೀನುಗಳು ಇವೆ. ಮಿದುಳು, ನರಕೋಶಗಳು, ಮಾಂಸಖಂಡಗಳು, ಕೆಂಪು ರಕ್ತಕಣಗಳು, ಮಾನವನ ಸೀರಂ ಮತ್ತು ಥೈಮಸ್‌ಗಳಲ್ಲೂ ಈ ಕಿಣ್ವ ಇರುವುದೆಂದು ತಿಳಿದುಬಂದಿದೆ. ಒಂದು ಮೋಲ್ ಅಸಿಟೈಲ್ ಕೋಲೀನ್ ಎಸ್ಟರೇಸು $2x10^9$ ಮೋಲ್ ಅಸಿಟೈಲ್ ಕೋಲೀನನ್ನು ಒಂದು ನಿಮಿಷದಲ್ಲಿಲ ಜಲವಿಶ್ಲೇಷಣೆಗೊಳಪಡಿಸುತ್ತದೆ. ಟಾರ್ಪೀಡೋಮೀನು ಮತ್ತು ಎಲೆಕ್ಟ್ರೋಫೋರಸ್ ಎಲೆಕ್ಟ್ರಿಕಸ್ ಎಂಬ ಮೀನುಗಳ ವಿದ್ಯುದುತ್ಪಾದಕ ಅಂಗಗಳ ಫಲಕಗಳಲ್ಲಿ ಇದು ಕೇಂದ್ರೀಕೃತವಾಗಿರುತ್ತದೆ. ಎಲೆಕ್ಟ್ರೋಫೋರಸ್ ಎಲೆಕ್ಟ್ರಿಕಸ್ಸಿನಿಂದ ಇದನ್ನು ತೆಗೆದು ಸ್ಫುಟೀಕರಿಸಿದ್ದಾರೆ. ಇದರ ಅಣುತೂಕ 25,000. ಇದರಲ್ಲಿ ಕಾರ್ಬೊಹೈಡ್ರೇಟ್ ಸಹ ಇರುತ್ತದೆ. ಈ ಅಣುವಿನಲ್ಲಿ ಹತ್ತಿರಹತ್ತಿರದವಾಗಿ ಎರಡು ಬಂಧನ ಸ್ಥಳಗಳಿವೆ (ಬೈಂಡಿಂಗ್ ಸೈಟ್ಸ್). ಇವುಗಳಲ್ಲಿ ಒಂದು ಅನ್ ಅಯಾನಿಕ್ ಆಗಿದ್ದು ಅಸಿಟೈಲ್‌ಕೋಲೀನಿನ $N^+$ ಕ್ಯಾಟ್‌ಅಯಾನನ್ನು ಬಂಧಿಸುತ್ತದೆ. ಮತ್ತೊಂದು ಎಸ್ಟರೇಟಿಕ್ ಸ್ಥಳವಾಗಿದ್ದು ಅಲ್ಲಿ ಸೆರೀನ್ ಅವಶೇಷ ಮತ್ತು ನ್ಯೂಕ್ಲಿಯೋಫೈಲಿಕ್ ಹಿಸ್ಟಿಡೀನ್ ಗುಂಪುಗಳಿರುತ್ತವೆ. ಈ ಕಿಣ್ವದ ಪ್ರತಿಬಂಧಕಗಳಾದ ಫೈಸೊಸ್ಟಿಗ್ಮಿನ್ ಮತ್ತು ಪ್ರಾಸ್ಟಿಗ್ಮಿನ್ನುಗಳು ಅನ್‌ಅಯಾನಿಕ್ ಮತ್ತು ಎಸ್ಟರೇಟಿಕ್ ಸ್ಥಳಗಳೆರಡರ ಜೊತೆಗೂ ಸೇರಿಕೊಳ್ಳುತ್ತವೆ. ಈ ಕಿಣ್ವದ ಎಸ್ಟರೇಟಿಕ್ ಪ್ರದೇಶದಲ್ಲಿ ವಿವಿಧ ಆಲ್ಕೈಲ್ ಫಾಸ್ಫೇಟುಗಳೂ ಡೈಐಸೊಪ್ರೊಪೈಲ್

ಫಾಸ್ಫೋಫ್ಲೋರಿಡೇಟೂ ಸೇರಿ ಅದನ್ನು ನಿಷ್ಕ್ರಿಯಗೊಳಿಸುತ್ತವೆ. ಇವನ್ನು ಕೀಟನಾಶಕಗಳನ್ನಾಗಿಯೂ ನರವಾಯು (ನರ್ವ್‌ಗ್ಯಾಸ್) ಆಗಿಯೂ ಉಪಯೋಗಿಸಿದ್ದಾರೆ. ಸೀರಂನಲ್ಲಿರುವ ಎನ್‌ಜೈಮಿನ ಕ್ರಿಯೆಯ ಮಾಪನ ರೋಗನಿದಾನದಲ್ಲಿ ಉಪಯೋಗವಾಗುತ್ತದೆ. ***

**ಕೋಲೀನ್:** ಮೇದಸ್ಸಿನ ಚಯಾಪಚಯದಲ್ಲಿ ಮುಖ್ಯ ಪಾತ್ರವಹಿಸುವ, ಜೀವಕೋಶಗಳಲ್ಲಿರುವ ಒಂದು ರಾಸಾಯನಿಕ ವಸ್ತು. ಇದಕ್ಕೆ ಲೈಪೊಟ್ರಾಪಿಕ್ ಕಾರಕ ಎಂದೂ ಹೆಸರಿದೆ. ಇದು ಅಸಿಟೈಲ್ ಕೋಲೀನಿನ ಒಂದು ಘಟಕ ಮತ್ತು ಪೂರ್ವಗಾಮಿ. ಇದರ ಉತ್ಪನ್ನ ಬೀಟೈನ್ ಎನ್ನುವ ಸಸ್ಯ ವಸ್ತುವಿನಿಂದ ಆಗುತ್ತದೆ. ಇವೆಲ್ಲವೂ ಲೈಪೊಟ್ರಾಪಿಕ್ ಕಾರಕಗಳೆ. ದೇಹಕ್ಕೆ ಕೋಲೀನಿನ ಅವಶ್ಯಕತೆಯ ತಿಳುವಳಿಕೆ ಬಂದದ್ದು 1932ರಲ್ಲಿ. ಸಾಧಾರಣವಾಗಿ ತೆಗೆದುಕೊಳ್ಳುವ ಆಹಾರದಲ್ಲಿ ಕೋಲೀನ್, ಬೀಟೈನ್ ಮತ್ತು ಮಿಥಿಯೋನೀನ್ ಎನ್ನುವ ಪದಾರ್ಥಗಳು ಇದ್ದೇ ಇರುತ್ತವೆ.

ಆಹಾರದಲ್ಲಿ ಕೋಲೀನ್ ಅಭಾವ ದೀರ್ಘಕಾಲ ಇದ್ದರೆ ಪಿತ್ತಜನಕಾಂಗದಲ್ಲಿ ದೇಹಕ್ಕೆ ಅಹಿತಕಾರಿಯಾದ ಕೊಬ್ಬು ಶೇಖರಿಸುತ್ತದೆ. ಇದರ ಪರಿಣಾಮವಾಗಿ ಸಿರ್ರೋಸಿಸ್ ಎನ್ನುವ ಯಕೃತ್ತಿನ ರೋಗ ಬರುತ್ತದೆ. ಅಲ್ಲದೆ ಹೃದಯದ ಬಡಿತದ ಎಣಿಕೆ ಕಡಿಮೆಯಾಗುತ್ತದೆ ಮತ್ತು ಮಾಂಸಖಂಡಗಳಲ್ಲಿನ ಶಕ್ತಿ ಕಡಿಮೆಯಾಗುತ್ತದೆ. ಹಂದಿ ಮತ್ತು ಇಲಿಗಳ ಮೇಲೆ ಮಾಡಿದ ಪ್ರಯೋಗಗಳಲ್ಲಿ ಈ ತೀರ್ಮಾನಗಳು ಸ್ಥಿರೀಕೃತವಾಗಿವೆ. ಕೋಲೀನಿಗಿರುವ ಗುಣಪಡಿಸುವ ಒಂದೇ ಉಪಯೋಗವನ್ನು ಲೆನೆಕ್ ಎನ್ನುವ ಯಕೃತ್ತಿನ ಸಿರ್ರೋಸಿಸ್ ರೋಗದಲ್ಲಿ ಕಾಣಬಹುದು. ಲೆನೆಕ್ ಸಿರ್ರೋಸಿಸ್ ಎಂಬ ರೋಗ ಅತಿಮದ್ಯಸೇವನೆಯಿಂದಲೂ ಜೊತೆಗೆ ಕಡಿಮೆ ಊಟ ಮಾಡುವುದರಿಂದಲೂ ಕಾಣಿಸಿಕೊಳ್ಳುವುದುಂಟು. ಸಾಂಕ್ರಾಮಿಕ ಹೆಪಟೈಟಿಸ್ ಎನ್ನುವ ಯಕೃತ್ತಿನ ರೋಗದಲ್ಲಿ ಕೋಲೀನನ್ನು ಉಪಯೋಗಿಸಿದಾಗ ಅದು ಗುಣಮುಖವಾಗಿದೆ. ಕೋಲೀನ್ ಕರುಳುಗಳಿಂದ ಶರೀರಕ್ಕೆ ಸೇರುತ್ತದೆ. ಬಾಯಿಯ ಮೂಲಕ ತೆಗೆದುಕೊಂಡ ಕೋಲೀನಿನ 1% ಭಾಗ ಮೂತ್ರಜನಕಾಂಗದ ಮೂಲಕ ವಿಸರ್ಜಿಸಲ್ಪಡುತ್ತದೆ.

ಕೋಲೀನಿನ ರಾಸಾಯನಿಕ ರಚನೆಯಲ್ಲಿ ಸ್ವಲ್ಪ ಬದಲಾವಣೆ ಮಾಡುವುದರಿಂದ ಅತಿ ವಿಷವುಳ್ಳ ವಸ್ತುಗಳು ಉತ್ಪತ್ತಿಯಾಗುತ್ತವೆ. ಕೋಲೀನಿನಲ್ಲಿರುವ ನೀರಿನ ಭಾಗವನ್ನು ತೆಗೆದರೆ ಹೆಚ್ಚಿನ ವಿಷವುಳ್ಳ ನ್ಯೂರೀನ್ ಎನ್ನುವ ವಸ್ತು ಉತ್ಪತ್ತಿಯಾಗುತ್ತದೆ. ಕೋಲೀನಿಗೂ ಅಸಿಟೈಲ್ ಕೋಲೀನಿಗೂ ನಿಕಟಸಂಬಂಧ ಉಂಟು. ನರಗಳಲ್ಲಿ ಆವೇಗಗಳ ಸಾಗಣೆಗೆ ಬೇಕಾಗುವ ವಸ್ತು ಅಸಿಟೈಲ್ ಕೋಲೀನ್. ಇದು ಕೋಲಿನೆರ್ಜಿಕ್ ಎನ್ನುವ ನರಗಳ ಕೊನೆಗಳ ತುದಿಯಲ್ಲಿ ಬಿಡುಗಡೆ ಆಗುತ್ತದೆ. ಕೂಡಲೇ ಇದು ಕೋಲೀನ್ ಎಸ್ಟರೇಸ್ ಎಂಬ ಕಿಣ್ವದ ಸಹಾಯದಿಂದ ಕೋಲೀನ್ ಮತ್ತು ಅಸಿಟೇಟ್ ಎನ್ನುವ ವಸ್ತುಗಳಾಗಿ ಪರಿವರ್ತನೆಯಾಗುತ್ತದೆ. ಈ ರೀತಿಯ ರಾಸಾಯನಿಕ ಪ್ರತಿಕ್ರಿಯೆ ನರಗಳನ್ನು ಪ್ರಚೋದಿಸಿದಾಗ ಕಾಣುತ್ತದೆ. ಆದರೆ ನರಗಳು ಚೇತರಿಸಿಕೊಳ್ಳುವ ಸಮಯದಲ್ಲಿ ಮತ್ತೆ ಕೋಲೀನ್ ಮತ್ತು ಅಸಿಟೇಟ್‌ಗಳು ಒಂದುಗೂಡುತ್ತವೆ. ಹೀಗೆ ಒಂದುಗೂಡಿಕೆಯಿಂದ ಉಂಟಾದ ಅಸಿಟೈಲ್ ಕೋಲೀನ್ ನರಗಳಲ್ಲಿ ಸೇರಿಕೊಳ್ಳುತ್ತದೆ. ಇದು ಮತ್ತೊಂದು ನರದ ಆವೇಗ ಸಾಗಣೆಗೆ ಸಿದ್ಧವಾಗಿ ನಿಂತಿರುತ್ತದೆ. ಕೋಲೀನ್ ಎಸ್ಟರೇಸನ್ನು ತಡೆಯುವ ವಸ್ತುಗಳು ಅಸಿಟೈಲ್ ಕೋಲೀನಿಗೆ ಹೆಚ್ಚು ಕಾಲ ಬಾಳಲು ಅವಕಾಶ ಕೊಡುತ್ತವೆ. ಎಸ್ಸರೀನ್ ಮತ್ತು ನಿಯೋಸ್ಟಿಗ್ಮಿನುಗಳು ಕೋಲೀನ್ ಎಸ್ಟರೇಸಿನ ಚಟುವಟಿಕೆಯನ್ನು ತಡೆಹಿಡಿಯುತ್ತವೆ. ***

**ಕೋಶಕತಳಿವಿಜ್ಞಾನ:** ಜೀವಕೋಶದ ರಚನೆ, ಕೋಶಾಂಗಗಳು, ಅವುಗಳ ಕ್ರಿಯೆ ಹಾಗೂ ಆನುವಂಶೀಯ ವಸ್ತುಗಳ ಅಧ್ಯಯನ (ಸೈಟೋಜೆನಿಟಿಕ್ಸ್). ಕೋಶಕ ತಳಿವಿಜ್ಞಾನದ ಅಧ್ಯಯನ ಜೀವಕೋಶದ ಶೋಧನೆಯಿಂದ ಆರಂಭವಾದರೂ ಪುರಾತನ ತತ್ವಶಾಸ್ತ್ರಜ್ಞರು, ಜೀವಿಗಳ ರಚನೆ ಎಷ್ಟೇ ಕ್ಲಿಷ್ಟವಾಗಿದ್ದರೂ ಅವು ಒಂದನ್ನೊಂದು ಹೋಲುವ ಸೂಕ್ಷ್ಮ ವಿಭಾಗಗಳಿಂದ ಮಾಡಲ್ಪಟ್ಟಿವೆ ಎಂದು ಅಭಿಪ್ರಾಯಪಟ್ಟಿದ್ದರು. ಹಲವಾರು ಶತಮಾನಗಳ ನಂತರ ವಿವಿಧ ರೀತಿಯ ಆವರ್ಧಕ ಮಸೂರಗಳು ಹಾಗೂ ಸೂಕ್ಷ್ಮದರ್ಶಕ ಯಂತ್ರಗಳ ವಿವಿಧ ಮಾದರಿಗಳ ಶೋಧನೆ ಸೂಕ್ಷ್ಮಜೀವಿಗಳ ಹಾಗೂ ಕೋಶಗಳ ಅಧ್ಯಯನಕ್ಕೆ ತಕ್ಕ ತಳಹದಿಯನ್ನು ಹಾಕಿಕೊಟ್ಟಿತು. ಏಕಕೋಶ ಜೀವಿಗಳಂತ ಒಂದು ಜೀವಿ ಒಂದೇ ಜೀವಕೋಶದಿಂದ ಮಾಡಲ್ಪಟ್ಟಿರಬಹುದು ಅಥವಾ ಬಹುಕಣಜೀವಿಗಳಂತೆ ಹಲವಾರು ಕೋಶಗಳು ಕೂಡಿ ಅಂಗಾಂಶಗಳಾಗಿ ವಿಭೇಧೀಕರಣ ಹೊಂದಿ ಬಹುಕಣ ಜೀವಿಗಳಾಗಬಹುದು. ಆದರೂ ಜೀವಿಗಳ ಬುನಾದಿ ಅಥವಾ ತಳಪಾಯ ಜೀವಕೋಶಗಳೇ ಸರಿ. ಅದರಿಂದ ಜೀವಕೋಶಗಳನ್ನೆ ಒಂದು ಜೀವಿಯನ್ನಾಗಿ ಪರಿಗಣಿಸಿದ, ಕೋಶವೇ (ಗಳೇ) ಹಲವಾರು ವಸ್ತುಗಳೊಂದಿಗೆ ಮಾರ್ಪಾಡುಹೊಂದಿ ಜೀವಿಗಳಿಗೆ ಒಂದು ಅಸ್ತಿತ್ವ ನೀಡುತ್ತವೆ ಎಂಬುದು ಕೋಶಕ ತಳಿವಿಜ್ಞಾನದ ಸಂಶೋಧನೆಗಳ ಸಾರ.

ಕೋಶಕ ತಳಿವಿಜ್ಞಾನದ ಮಾಪನಗಳು: ಮಾನವನ ಕಣ್ಣುಗಳು 0.1 ಮಿಮೀ ಗಿಂತ ಚಿಕ್ಕವಸ್ತುಗಳನ್ನು ಗುರುತಿಸಲಾರವು. ಜೀವಕೋಶ ವಿಜ್ಞಾನಿಗಳು ಕೋಶಗಳನ್ನು ಹಾಗೂ ಕೋಶಾಂಗಗಳನ್ನು ತಮ್ಮದೇ ಆದ ಬೇರೆ ಮಾಪನಗಳಲ್ಲಿ ಅಳೆಯುತ್ತಾರೆ. ಏಕೆಂದರೆ ಜೀವಕೋಶಗಳು ಸಾಮಾನ್ಯವಾಗಿ 0.1 ಮಿಮೀ ಅಳತೆಗಿಂತಲೂ ಚಿಕ್ಕದಾಗಿರುತ್ತವೆ.

ಕೋಶಕ ವಿಜ್ಞಾನದಲ್ಲಿ ಬಳಸುವ ಕೆಲವು ಮಾಪನಗಳು ಈ ರೀತಿ ಇವೆ.

ಅಳತೆ :

1 ಮಿಮೀ = 1000 ಮೈಕ್ರಾನುಗಳು ಅಥವಾ ಮೈಕ್ರೊಮೀಟರ್

1 ಮೈಕ್ರಾನು $\mu$ = 1000 ಮಿಲಿ ಮೈಕ್ರಾನುಗಳು ಅಥವಾ ನ್ಯಾನೋ ಮೀಟರುಗಳು

1 ಮಿಲಿ ಮೈಕ್ರಾನು = 10 ಆಂಗ್ಸ್ಟ್ರಾನುಗಳು (Å)

1 ಮೈಕ್ರಾನು = 10,000 ಆಂಗ್ಸ್ಟ್ರಾನುಗಳು

ತೂಕ :

1 ಗ್ರಾಂ = 1000 ಮಿಲಿಗ್ರಾಂಗಳು

1 ಮಿಗ್ರಾಂ = 1000 ಮೈಕ್ರೊಗ್ರಾಂಗಳು (ಮೈ.ಗ್ರಾಂ)

1 ಮೈಗ್ರಾಂ = 1000 ನಾನೋಗ್ರಾಂಗಳು

1 ನಾನೋಗ್ರಾಂ = 1000 ಪೈಕೊಗ್ರಾಂಗಳು

1 ಗ್ರಾಂ = $10^{-12}$ ಪೈಕೋಗ್ರಾಂಗಳು

ಜೀವಕೋಶದ ರಚನೆ, ವರ್ಣ ತಂತುಗಳು ಹಾಗೂ ಕೋಶವಿಭಜನೆ ಇವೇ ಕೋಶಕ ತಳಿವಿಜ್ಞಾನದಲ್ಲಿ ಬರುವ ಮುಖ್ಯ ವಿಷಯಗಳು. ಜೀವಿಗಳ ಅಸ್ತಿತ್ವದಲ್ಲಿ ವರ್ಣತಂತುಗಳ ಸ್ಥಾನ, ಅವುಗಳ ಕಾರ್ಯ, ಆನುವಂಶೀಯತೆಯಲ್ಲಿ ವರ್ಣತಂತುಗಳ ಕೊಡುಗೆ ಇವೂ ಕೋಶಿಕಾ ತಳಿವಿಜ್ಞಾನದ ಪರಿಧಿಯಲ್ಲಿಯೇ ಬರುತ್ತವೆ.

ರಾಬರ್ಟ್ ಹುಕ್ 1665 ರಲ್ಲಿ ಮೊಟ್ಟಮೊದಲಿಗೆ ಮರದ ಬಿರಡೆಗಳಲ್ಲಿ ಚಿಕ್ಕ ಚಿಕ್ಕ ಕೋಶಿಕೆಗಳನ್ನು ಮಸೂರಗಳಿಂದ ದರ್ಶಿಸಿ ಅವುಗಳಿಗೆ ಕೋಶ ಎಂದು ಕರೆದನು. ಲ್ಯೂವೆನ್ ಹಾಕ್ 1674 ರಲ್ಲಿ ಸ್ವತಂತ್ರ ಜೀವಕೋಶವನ್ನು, ಕೆಲವು ಪ್ರಾಣಿಗಳ ರಕ್ತಕಣಗಳನ್ನು, ಅವುಗಳ ಕೋಶಕೇಂದ್ರವನ್ನೂ ದರ್ಶಿಸಿದನು.

ಜೀವಕೋಶ ಸಿದ್ಧಾಂತ : ಕೋಶಕ ತಳಿವಿಜ್ಞಾನದ ಉಗಮಕ್ಕೆ ಕಾರಣವಾದದ್ದು ಜೀವವಿಜ್ಞಾನದ ಮೂಲಭೂತ ಹಾಗೂ ವಿಸ್ತೃತ ಸಿದ್ಧಾಂತಗಳಲ್ಲಿ ಒಂದಾದ ಜೀವಕೋಶ ಸಿದ್ಧಾಂತ. ಎಲ್ಲಾ ಜೀವ ವಸ್ತುಗಳೂ ಜೀವಕೋಶಗಳಿಂದ ಹಾಗೂ ಜೀವಕೋಶದಿಂದ ಉಗಮವಾದ ವಸ್ತುಗಳಿಂದ ಕೂಡಿರುತ್ತವೆ ಹಾಗೂ ಜೀವಕೋಶಗಳೇ ಎಲ್ಲಾ ಜೀವಿಗಳ ಮೂಲ ಎಂಬುದು ಜೀವಕೋಶ ಸಿದ್ಧಾಂತದ ತತ್ವ. ಹತ್ತೊಂಬತ್ತನೆಯ ಶತಮಾನದಲ್ಲಿ ನಡೆದ ಹಲವಾರು ಶೋಧನೆಗಳಿಂದ ಸಸ್ಯವಿಜ್ಞಾನಿ ಶ್ಲೀಡನ್ (1838) ಮತ್ತು ಪ್ರಾಣಿವಿಜ್ಞಾನಿ ಶ್ವಾನ್ (1839) ಈ ಸಿದ್ಧಾಂತವನ್ನು ಪ್ರತಿಪಾದಿಸಿದರು. ಜೀವಕೋಶ ಸಿದ್ಧಾಂತ ಜೀವವಿಜ್ಞಾನದ ಸಂಶೋಧನೆಗಳಿಗೆ ವಿಶೇಷ ಪುರಸ್ಕಾರಗಳನ್ನು ದೊರಕಿಸಿಕೊಟ್ಟಿತು. ಇದರ ಜೊತೆಯಲ್ಲಿಯೇ ಜೀವಕೋಶಗಳ ವಿಭಜನೆಯಿಂದಲೇ ಇನ್ನೊಂದು ಜೀವಕೋಶ ಉದ್ಭವಿಸುತ್ತದೆ ಎಂದು ಕಂಡುಹಿಡಿಯಲಾಯಿತು.

ನಂತರ ಜೀವಕೋಶ ಸಿದ್ಧಾಂತವನ್ನು 1858 ರಲ್ಲಿ ವಿರ್‌ಕೋವ್ ರೋಗವಿಜ್ಞಾನದ ಅಧ್ಯಯನಕ್ಕೆ ಅಳವಡಿಸಿದನು. ಜೀವಿಗಳು ಎರಡು ಜೀವಕೋಶಗಳ ಅಂದರೆ ವೀರ್ಯಾಣು ಹಾಗು ಅಂಡಾಣುಗಳ ಸಂಯೋಗ ಕ್ರಿಯೆಯಿಂದ ಉದ್ಭವಿಸಿ ನಂತರ ಬೆಳವಣಿಗೆ ಹೊಂದಿ ಜೀವಿಗಳಾಗುತ್ತವೆ ಎಂದು ತಿಳಿದುಬಂದ ನಂತರ ಕೊಲ್ಲಿಕರ್ ಈ ಸಿದ್ಧಾಂತವನ್ನು ಭ್ರೂಣವಿಜ್ಞಾನಕ್ಕೆ ಅಳವಡಿಸಿದನು. ಬ್ರೌನ್ ಎಂಬುವನು 1931 ರಲ್ಲಿ ಪ್ರತಿ ಜೀವಕೋಶವೂ ಕೋಶಕೇಂದ್ರವನ್ನು ಹೊಂದಿರುತ್ತದೆ ಎಂದು ತಿಳಿಸಿದನು. ಇದೇ ವೇಳೆಗೆ ಬೇರೆ ಬೇರೆ ಜೀವವಿಜ್ಞಾನಿಗಳು ಜೀವಕೋಶದ ವಿವಿಧ ಭಾಗಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಕೋಶದ ಒಳಭಾಗದಲ್ಲಿರುವ ಎಲ್ಲಾ ಅಂಗಗಳನ್ನೂ ಸೇರಿಸಿ ಜೀವದ್ರವ್ಯ ಎಂದು ಹೆಸರಿಸಿದರು.

ಹೀಗೆ ಜೀವಕೋಶದ ಬಗ್ಗೆ ಸಂಶೋಧನೆಗಳು ಮುಂದುವರೆದು ಹೆಚ್ಚು ಹೆಚ್ಚು ಮಾಹಿತಿಗಳು ಹಾಗೂ ವಿವರಗಳು ಬಹಿರಂಗಗೊಂಡುವು. ಜೀವಕೋಶದಲ್ಲಿ ಕೋಶಪಟಲ ಅಥವಾ ಕೋಶಪೊರೆಯಿದ್ದು, ಇದು ಕೋಶಕೇಂದ್ರವನ್ನೊಳಗೊಂಡ

ಜೀವದ್ರವ್ಯವನ್ನು ಆವರಿಸಿರುತ್ತದೆ ಎಂಬುದು ಈ ಸಂಶೋಧನೆಗಳ ಸಾರ. ಕೋಶಪಟಲ ಹಾಗೂ ಕೋಶಕೇಂದ್ರವನ್ನು ಹೊರತುಪಡಿಸಿದ ಜೀವಕೋಶದೊಳಗಿನ ಎಲ್ಲಾ ಭಾಗಗಳಿಗೆ ಕೋಶದ್ರವ್ಯ ಎಂದು ಹೆಸರು. ಕೋಶಕೇಂದ್ರದಲ್ಲಿಯೂ ಕೋಶದ್ರವ್ಯದಂತೆಯೇ ಇರುವ ಕೋಶಕೇಂದ್ರ ದ್ರವ್ಯವಿರುತ್ತದೆ.

ಜೀವಕೋಶ ಸಿದ್ಧಾಂತದ ಆವಿಷ್ಕಾರದೊಂದಿಗೆ ಕೋಶಕ ತಳಿವಿಜ್ಞಾನದ ಸಂಶೋಧನೆಗಳು ತ್ವರಿತಗತಿಯಲ್ಲಿ ಸಾಗತೊಡಗಿದವು ಹಾಗೂ ಕೋಶವಿಜ್ಞಾನದಲ್ಲಿ ಹಲವಾರು ಮಾರ್ಪಾಡುಗಳಾದವು. ಅವುಗಳಲ್ಲಿ ಅತಿ ಮುಖ್ಯವಾದುದು ಕೋಶವಿಭಜನೆಯ ಶೋಧನೆ. ಕೋಶಕೇಂದ್ರದಲ್ಲಿ ವಿಭಜನಾ ಹಂತದಲ್ಲಿ ಆಗುವ ಬದಲಾವಣೆಗಳು ಹಲವಾರು ಜೀವವಿಜ್ಞಾನಿಗಳ ಗಮನ ಸೆಳೆಯಿತು. ಅಮೈಟಾಸಿಸ್ ಅಥವಾ ಅನೇಕ ವಿಭಜನೆ ಮತ್ತು ಮೈಟಾಸಿಸ್ ಅಥವಾ ನೇರವಿಭಜನೆಯನ್ನು ಫ್ಲೇಮಿಂಗ್ ಎನ್ನುವವನು ಪ್ರಾಣಿಗಳಲ್ಲಿಯೂ, ಸ್ಟ್ರಾಸ್‌ಬರ್ಗರ್ ನು ಸಸ್ಯಗಳಲ್ಲಿಯೂ ಕಂಡುಹಿಡಿದರು. ಮೈಟಾಸಿಸನ್ನು ಕೋಶಕೇಂದ್ರ ವಿಭಜನೆ ಎಂದೂ ಕರೆದರು. ಈ ವಿಭಜನೆಯ ಮೂಲಕ ಕೋಶಕೇಂದ್ರದಲ್ಲಿನ ಕ್ರೊಮ್ಯಾಟಿನ್ ವಸ್ತು ಸೂಕ್ಷ್ಮ ತಂತುಗಳಾಗಿ ಅಥವಾ ವರ್ಣತಂತುಗಳಾಗಿ ಮಾರ್ಪಡುತ್ತದೆ. ಈ ವರ್ಣತಂತುಗಳು ಸಮನಾಗಿ ವಿಭಜನೆ ಹೊಂದಿ ಮರಿಕೋಶಗಳಿಗೆ ಸಮನಾಗಿ ಹಂಚಲ್ಪಡುತ್ತವೆ. ಇದೇ ಸಮಯಕ್ಕೆ ಹರ್ಟ್‌ವಿಗ್ (1875) ಎಂಬ ಮಹಾಶಯನು ಅಂಡಾಣು ಮತ್ತು ವೀರ್ಯಾಣುಗಳು ನಿಶೇಚನಗೊಳ್ಳುವಾಗ ಅವುಗಳ ಕೋಶಕೇಂದ್ರಗಳು ಸಂಯೋಗ ಹೊಂದುತ್ತವೆ ಎಂದು ಶೋಧಿಸಿದ. ಕೋಶದ್ರವ್ಯದಲ್ಲಿ ತಾರಕಗಳು, ಮೈಟೋಕಾಂಡ್ರಿಯ ದ್ರವ್ಯಜಾಲಕ ಹಾಗು ಗಾಲ್ಗೀ ಸಂಕೀರ್ಣಗಳೂ ಇರುತ್ತವೆ ಎಂದು ವಾನ್ ಬೆನೆಡೀನ್, ಬವೇರಿ, ಆಲ್ಟಮನ್, ಬೆಂಡಾ ಮತ್ತು ಗಾಲ್ಗೀ ಮುಂತಾದವರು ಕಂಡುಹಿಡಿದರು ಜೀವಕೋಶಗಳನ್ನು ಅಥವಾ ಜೀವಕೋಶ ಸಂಕೀರ್ಣಗಳನ್ನು ಅಭ್ಯಸಿಸುವಾಗಲೂ ಜೀವವಿಜ್ಞಾನಿಗಳು ಜೀವಕೋಶವನ್ನೆ ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ನಡೆಸಲು ಪ್ರಾರಂಭಿಸಿದರು.

ತಳಿವಿಜ್ಞಾನದ ಬೆಳೆವಣಿಗೆ ಹಾಗೂ ಕೋಶಿಕಾ ತಳಿವಿಜ್ಞಾನದ ಉಗಮ: ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಕೋಶವಿಭಜನೆಯೇ ಸಂತಾನಾಭಿವೃದ್ಧಿಯ ಆಧಾರಸೂತ್ರ ಎಂದು ವಿರ್‌ಕೋವ್ ತಿಳಿಯಪಡಿಸಿದ ಈತನ ಸಿದ್ಧಾಂತ ಸೆಲ್ಯುಲಾ ಎ ಸೆಲ್ಯುಲಾ ಇದನ್ನೆ ಪ್ರತಿಪಾದಿಸುತ್ತದೆ. ವಿಲ್ಸನ್‌ನ ಪ್ರಕಾರ ಕೋಶವಿಭಜನೆಯಿಂದಾಗಿಯೇ ಆನುವಂಶೀಯತೆ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹರಿಯುತ್ತದೆ ಎಂದು ಪ್ರತಿಪಾದಿಸಿದನು. ಈ ಪ್ರತಿಪಾದನೆಯೊಂದಿಗೆ ಆನುವಂಶೀಯತೆ ಹಾಗು ವಿಕಾಸವಾದದ ಅಧ್ಯಯನದ ಕಡೆ ಅನೇಕ ಜೀವವಿಜ್ಞಾನಿಗಳ ಗಮನಹೋಯಿತು.

ವೀಸ್‌ಮನ್ (1883) ಜರ್ಮ್‌ಪ್ಲಾಸಂ ಸಿದ್ಧಾಂತವನ್ನು ಪ್ರತಿಪಾದಿಸಿದನು. ಬೆನೆದೇವ್, ಫ್ಲೇಮಿಂಗ್, ಸ್ಟ್ರಾಸ್ ಬರ್ಗರ್, ಬವೇರಿ ಮುಂತಾದವರ ಸಂಶೋಧನೆಗಳು ಈ ಸಿದ್ಧಾಂತಕ್ಕೆ ಪುಷ್ಟಿನೀಡಿದವು. ಈ ಸಿದ್ಧಾಂತದ ಪ್ರಕಾರ ಆನುವಂಶೀಯ ಘಟಕಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಲಿಂಗ ಘಟಕಗಳಾದ ವೀರ್ಯಾಣು ಮತ್ತು ಅಂಡಾಣುಗಳಲ್ಲಿರುವ ಜರ್ಮ್‌ಪ್ಲಾಸಂ ಮೂಲಕ ಸಾಗಿಸಲ್ಪಡುತ್ತವೆ. ದೇಹದ ಇತರೆ ಕಾಯಕೋಶಗಳು ಈ ಕ್ರಿಯೆಯಲ್ಲಿ ಯಾವುದೇ ರೀತಿ ಭಾಗವಹಿಸುವುದಿಲ್ಲ.

ನಿಶೇಚನ ಕ್ರಿಯೆಯನ್ನು ಹರ್ಟವಿಗ್ ಮಹಾಶಯನು ಪ್ರಾಣಿಗಳಲ್ಲಿ ಕಂಡುಹಿಡಿದರೂ ಫಾಲ್ ಎಂಬಾತನು 1879 ಇದನ್ನು ಸಸ್ಯಗಳಲ್ಲಿ ನೇರವಾಗಿ ದರ್ಶಿಸಿದನು. ಸ್ಟ್ರಾಸ್‌ಬರ್ಗರನು ಜೀವಕೋಶದಲ್ಲಿನ ಕೋಶಕೇಂದ್ರವೇ ಆನುವಂಶೀಯತೆಯ ಭೌತಿಕ ತಳಪಾಯ ಎಂಬ ತೀರ್ಮಾನಕ್ಕೆ ಬಂದನು. ರೂಕ್ಸ್ ಮಹಾಶಯನ ಪ್ರಕಾರ ಕ್ರೊಮ್ಯಾಟಿನ್ ಎಂಬ ಕೋಶ ಕೇಂದ್ರದಲ್ಲಿರುವ ವಸ್ತುವೇ ವರ್ಣತಂತುಗಳಾಗಿ ಮಾರ್ಪಡುತ್ತವೆ. ವೀಸ್‌ಮನ್ನನ ಪ್ರಕಾರ ಆನುವಂಶೀಯ ಮೂಲಗಳು ವರ್ಣತಂತುಗಳ ಮೇಲೆ ಒಂದು ನಿರ್ದಿಷ್ಟ ಪ್ರಕಾರದಲ್ಲಿ ಕೂಡಿಕೊಂಡಿರುತ್ತವೆ. ಆನುವಂಶೀಯತೆಗೆ ಭದ್ರ ಬುನಾದಿ ದೊರೆತುದು ಜಾನ್ ಗ್ರೆಗರ್ ಮೆಂಡಲನ ಆನುವಂಶೀಯ ನಿಯಮಗಳ ಪ್ರತಿಪಾದನೆಯೊಂದಿಗೆ. 1965 ರಲ್ಲಿ ಮೆಂಡಲನು ಆನುವಂಶೀಯ ಗುಣಗಳ ಪ್ರತ್ಯೇಕತಾ ನಿಯಮ ಹಾಗೂ ಸ್ವತಂತ್ರ ವಿಂಗಡನಾ ನಿಯಮಗಳಿಗೆ ಪ್ರತಿಪಾದಿಸಿದರೂ ಲೈಂಗಿಕ ಜೀವಕೋಶಗಳಲ್ಲಾಗುವ ಕೋಶೀಯ ಬದಲಾವಣೆಗಳ ಬಗ್ಗೆ ಸ್ಪಷ್ಟ ಮಾಹಿತಿಗಳಿಲ್ಲದ ಕಾರಣ ಈ ನಿಯಮಗಳಿಗೆ ವಿವರಣೆಯನ್ನು ನೀಡುವದು ಸಾಧ್ಯವಾಗಲಿಲ್ಲ. ಇದೇ ಮತ್ತು ಇನ್ನಿತರ ಕಾರಣಗಳಿಂದ ಮೆಂಡಲನ ನಿಯಮಗಳಿಗೆ 1900 ರ ವರೆಗೆ ಪುಷ್ಟಿ ದೊರೆತಿರಲಿಲ್ಲ. 1900 ರಲ್ಲಿ ಸಸ್ಯವಿಜ್ಞಾನಿಗಳಾದ ಕೊರೆನ್ಸ್, ಶೆರ್ಮಾರ್ಕ್ ಮತ್ತು ಡಿ ವ್ರೈಸ್ ಪ್ರತ್ಯೇಕವಾಗಿ ಮೆಂಡಲನ ನಿಯಮಗಳನ್ನು ಪುನರ್ವಿಮರ್ಶಿಸಿದರು. ಆ ವೇಳೆಗೆ ಕೋಶಕ ಶಾಸ್ತ್ರದಲ್ಲಿಯೂ ಸಾಕಷ್ಟು ಸಂಶೋಧನೆಗಳು ನಡೆದಿತ್ತಾದ್ದರಿಂದ ಮೆಂಡಲನ ನಿಯಮಗಳಿಗನುಸಾರವಾಗಿ ಆನುವಂಶೀಯ ವಸ್ತುಗಳ ಗುಣವನ್ನು ವಿವೇಚಿಸುವುದಕ್ಕೆ ಸಾಧ್ಯವಾಯಿತು.

ಇವೆಲ್ಲವುಗಳಿಗೆ ನೇರ ಸಂಬಂಧ ಹೊಂದಿರುವಂತೆ 1901 ರಲ್ಲಿ ಮ್ಯಾಕ್‌ಲಂಗ್ ಎಂಬಾತನು ಜೀವಿಗಳಲ್ಲಿ ಲಿಂಗನಿರ್ಧಾರವು ಕೆಲವು ವಿಶೇಷ ವರ್ಣತಂತುಗಳನ್ನವಲಂಬಿಸಿರುತ್ತದೆ ಎಂದು ಪ್ರತಿಪಾದಿಸಿದನು. 1905 ರಲ್ಲಿ ಸ್ಟಿವಾನ್ಸ್ ಮತ್ತು ವಿಲ್ಸನ್ ಎಂಬುವವರು ಇದಕ್ಕೆ ಪ್ರಾಯೋಗಿಕವಾಗಿ ಪುಷ್ಟಿ ನೀಡಿದರು. ಈ ವೇಳೆಗೆ ಬವೇರಿ ಮತ್ತು ಬೊಟ್ಟರ್ ಆನುವಂಶೀಯತೆಯ ವರ್ಣತಂತು ಸಿದ್ಧಾಂತವನ್ನು ಪ್ರತಿಪಾದಿಸಿದರು. ಜೊಹಾನ್‌ಸೆನ್ (1902) ಈ ಆನುವಂಶೀಯ ಮೂಲಗಳಿಗೆ ಜೀನ್ ಅಥವಾ ಗುಣಾಣು ಎಂದು ಹೆಸರಿಸಿದನು. ಅನಂತರ ಸ್ಟುರ್ಟೆವಾಂಟ್, ಬ್ರಿಡ್ಜಸ್ ಹಾಗೂ ಮೋರ್ಗನ್ ಮುಂತಾದವರು ವರ್ಣತಂತುಗಳ ಮೇಲೆ ಕೆಲವು ಜೀನ್‌ಗಳ ಸ್ಥಾನವನ್ನು ಗುರುತಿಸಿದರು. ಮೆಂಡಲನ ಸಂಶೋಧನೆಗಳ ಪುನರ್‌ಪ್ರತಿಪಾದನೆಯಾದ ನಂತರ ಜೀವವಿಜ್ಞಾನದಲ್ಲಿ ತಳಿವಿಜ್ಞಾನವೆಂಬ ಹೊಸ ಶಾಸ್ತ್ರದ ಉಗಮವಾಯಿತು. ಆದರೆ ಆದಿಯಿಂದಲೂ ಈ ತಳಿವಿಜ್ಞಾನವು ಕೋಶವಿಜ್ಞಾನದೊಂದಿಗೆ ತನ್ನ ಸಂಬಂಧವನ್ನು ಕಲ್ಪಿಸಿಕೊಂಡಿತ್ತಾದ್ದರಿಂದ ಒಂದನ್ನೊಂದು ಪೂರ್ತಿ ಬೇರ್ಪಡಿಸಲಾಗದೆ ಕೋಶಿಕಾ ತಳಿಶಾಸ್ತ್ರ ಎಂಬ ಹೊಸ ಶಾಸ್ತ್ರವು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಉದಯವಾಯಿತು.

ಕೋಶಕತಳಿವಿಜ್ಞಾನದ ಸಾಧನೆಗಳು : ಜೀವಕೋಶಗಳನ್ನು ಮತ್ತು ಕೋಶಾಂಗಗಳನ್ನು ಬರಿಗಣ್ಣಿನಲ್ಲಿ ಅವಲೋಕಿಸುವದು ಅಸಾಧ್ಯ. ಅದಕ್ಕಾಗಿ ಹಲವಾರು ರೀತಿಯ ಸೂಕ್ಷ್ಮದರ್ಶಕಯಂತ್ರಗಳನ್ನು ಉಪಯೋಗಿಸುತ್ತಾರೆ. ಸಾಮಾನ್ಯ ಪ್ರಕಾಶ ಸೂಕ್ಷ್ಮದರ್ಶಕವು ಬೆಳಕಿನ ಆವರ್ಧನೆ, ತರಂಗಾಂತರ ಹಾಗು ಸಂಖ್ಯಾತ್ಮಕ ರಂಧ್ರವನ್ನು ಅವಲಂಬಿಸಿರುತ್ತದೆ. ಅವಸ್ಥಾಭಿನ್ನ ಸೂಕ್ಷ್ಮದರ್ಶಕ (ಫೇಸ್ ಕಾಂಟ್ರಾಕ್ಟ್ ಮೈಕ್ರೊಸ್ಕೋಪ್) ವು ಪಾರದರ್ಶಕ ಜೀವಕೋಶಗಳನ್ನು ಅಭ್ಯಸಿಸುವುದಕ್ಕೆ ಸಹಾಯಕಾರಿ. ಒಂದು ವಸ್ತುವಿನ ಮೇಲೆ ಬೀಳುವ ಬೆಳಕಿನ ಅಪಕರ್ಷಣೆ ಅಥವಾ ಅವಸ್ಥೆಯಲ್ಲಿನ ಬದಲಾವಣೆಯನ್ನು ದರ್ಶಿಸಲಾಗುವುದಿಲ್ಲ. ಆದರೆ ಹೀಗೆ ಹಾಯುವ ಕಿರಣಗಳ ತರಂಗಾಂತರವು, ಕಿರಣವು ವಸ್ತುಗಳ ಮೇಲೆ ಹಾಯ್ದಾಗ 1/4 ರಷ್ಟು ಕಡಿಮೆಯಾಗುತ್ತದೆ. ಈ ತತ್ವವನ್ನೆ ಉಪಯೋಗಿಸಿಕೊಂಡು ಅವಸ್ಥಾಭಿನ್ನ ಸೂಕ್ಷ್ಮದರ್ಶಕವನ್ನು ರಚಿಸಲಾಗಿದೆ. ಅವಸ್ಥಾ ಬೆಳೆವಣಿಗೆಗಳನ್ನು ಬೆಳಕಿನ ತೀವ್ರತೆಯ ಬದಲಾವಣೆಯನ್ನಾಗಿ ಪರಿವರ್ತಿಸಿ ಜೀವಕೋಶದ ವಿವಿಧ ಅಂಗಗಳನ್ನು ದರ್ಶಿಸಲಾಗುವುದು. ಕತ್ತಲು ವಲಯ ಸೂಕ್ಷ್ಮದರ್ಶಕ (ಡಾರ್ಕ್‌ಫೀಲ್ಡ್ ಮೈಕ್ರೊಸ್ಕೋಪ್) ದಲ್ಲಿ ಬೆಳಕನ್ನು ವಿಸ್ತರಿಸಿ ಒಂದು ಕತ್ತಲು ವಲಯ ಸಂಧಾರಿತ್ರವನ್ನು (ಕಂಡೆನ್ಸರ್) ಉಪಯೋಗಿಸಲಾಗುತ್ತದೆ. ಈ ಸೂಕ್ಷ್ಮದರ್ಶಕದಿಂದ ಬೆಳಕಿನ ಕಿರಣಗಳ ತರಂಗಾಂತರಕ್ಕಿಂತ ಚಿಕ್ಕವಸ್ತುಗಳನ್ನು ಅವಲೋಕಿಸಬಹುದು. ಧ್ರುವೀಕೃತ ಸೂಕ್ಷ್ಮದರ್ಶಕ (ಪೋಲರೈಜ್ಡ್ ಮೈಕ್ರೊಸ್ಕೋಪ್) ದಲ್ಲಿ ಧ್ರುವೀಕೃತ ಬೆಳಕನ್ನು ಉಪಯೋಗಿಸುತ್ತಾರೆ. ಇದರಲ್ಲಿ ಒಂದು ಧ್ರುವೀಕಾರಕ (ಪೋಲರೈಜರ್) ಮತ್ತು ಒಂದು ವಿಶ್ಲೇಷಕ (ಅನಲೈಸರ್) ಇರುತ್ತದೆ. ಜೀವವಸ್ತುವಿನ ದ್ವಿಅಪವರ್ತನವನ್ನು ಇದರಿಂದ ವಿಶ್ಲೇಷಿಸಬಹುದು. ಇಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ಇನ್ನೂ ಸೂಕ್ಷ್ಮವಾಗಿ ಜೀವಕೋಶದ ಭಾಗಗಳನ್ನು ಅಭ್ಯಸಿಸಬಹುದು. ಇದರಲ್ಲಿ ಇಲೆಕ್ಟ್ರಾನುಗಳನ್ನು ಒಂದು ನಿರ್ವಾತ ಕೊಳವೆಯಲ್ಲಿ ಹಾಯಿಸಲಾಗುವುದು. ಈ ಇಲೆಕ್ಟ್ರಾನ್‌ಗಳನ್ನು ವಿದ್ಯುತ್ಕಾಂತದ ಸುರುಳಿಗಳಲ್ಲಿ ಪರಾವರ್ತಿತಗೊಳಿಸಲಾಗುತ್ತದೆ. ಇದು ಸಂಧಾರಕ, ವಸ್ತುಯವ ಮತ್ತು ಪ್ರಕ್ಷೇಪಿತ ಮಸೂರದಂತೆ ಕೆಲಸ ಮಾಡುತ್ತದೆ. ಒಂದು ಸ್ವಯಂಸ್ಪುರಕ ತೆರೆಯ ಮೇಲೆ ಇಲೆಕ್ಟ್ರಾನುಗಳ ಪ್ರಸಾರ ವಸ್ತುಗಳ ದಪ್ಪವನ್ನು ಅವಲಂಬಿಸುತ್ತದೆ.

ಕೋಶಕತಳಿವಿಜ್ಞಾನ ಅಧ್ಯಯನವು ವಿವಿಧ ಪ್ರಭೇದಗಳ ಸಂಬಂಧ ಹಾಗೂ ಅವುಗಳ ವಿಂಗಡನೆಗೆ ಮಹತ್ವದ ಕೊಡುಗೆಯನ್ನು ನೀಡಿದೆ. ಪ್ರಾಣಿಗಳ ವಿಕಾಸದ ಹಿನ್ನೆಲೆಯನ್ನು ಅರಿಯಲೂ ಇದು ಸಹಾಯಕವಾಗಿದೆ. ವರ್ಣತಂತುಗಳ ಮೇಲಿನ ಜೀನ್‌ಗಳ ಸ್ಥಾನಬದ್ಧತೆ ಅಪಸರಣಕ್ರಿಯೆಯಿಂದ ಉಂಟಾಗುತ್ತದೆ. ಜೀನ್‌ಗಳ ಸ್ಥಾನಪಲ್ಲಟಗೊಂಡಾಗ ಅವುಗಳ ಕ್ರಿಯೆಯಲ್ಲಿಯೂ ವ್ಯತ್ಯಾಸವಾಗುತ್ತದೆ. ಇದು ವಿಕಾಸಕ್ಕೆ ನಾಂದಿ. ವರ್ಣತಂತುಗಳ ರಚನೆಯಲ್ಲಿ ಅಥವಾ ಸಂಖ್ಯೆಯಲ್ಲಿ ವ್ಯತ್ಯಾಸಗೊಂಡಾಗ ಅದು ಪ್ರಭೇದದ ಜೀವಿಯ ಮೇಲೆ ಅಗಾಧ ಪರಿಣಾಮವುಂಟುಮಾಡುತ್ತದೆ. ಯಾವುದೋ ಒಂದು ಹಂತದಲ್ಲಿ ಒಂದೇ ಪ್ರಭೇದದ ಬೇರೆ ಬೇರೆ ಗುಂಪಿನಲ್ಲಿ ಲೈಂಗಿಕ ಕ್ರಿಯೆ ನಡೆಯದಾದಾಗ ಹೊಸ ಪ್ರಭೇದವುಂಟಾಯಿತು ಎನ್ನುತ್ತೇವೆ. ವರ್ಣತಂತುಗಳ ರಚನೆ ಮತ್ತು ಸಂಖ್ಯೆಯನ್ನು ಅಭ್ಯಸಿಸಿ ಒಂದು ಪ್ರಭೇದಕ್ಕೆ ಇನ್ನೊಂದು

ಪ್ರಭೇದ ಎಷ್ಟು ಸಂಬಂಧ ಹೊಂದಿದೆ ಎಂದು ನಿಖರವಾಗಿ ಹೇಳಬಹುದು. ಸಸ್ಯಗಳಲ್ಲಿ ಬಹುಅಂಶೀಯತೆ ವಿಕಾಸದಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ, ಆದರೆ ಪ್ರಾಣಿಗಳಲ್ಲಿ ಅಪಸರಣ ಹಾಗೂ ವಿಕೃತಿಗಳು ಮುಖ್ಯ ಪಾತ್ರ ವಹಿಸಿವೆ.

ವಿಕಾಸವಾದದ ಅಧ್ಯಯನದಲ್ಲಿ ವರ್ಣತಂತುಗಳ ಸಂಖ್ಯೆ, ಕೇಂದ್ರೀಯ ಪ್ರತಿಯು ಗುಣಗಳು, ವರ್ಣತಂತುಗಳ ಒಟ್ಟು ಕ್ಷೇತ್ರ ಹಾಗೂ ವರ್ಣತಂತುಗಳಲ್ಲಿನ ಡಿಎನ್‌ಎ ಪ್ರಮಾಣ ಇವುಗಳನ್ನು ಕಂಡುಹಿಡಿಯುತ್ತಾರೆ. ಮಧ್ಯಪರಿಕೇಂದ್ರೀಯ ವರ್ಣತಂತು ಎರಡು ಅಪರಿಕೇಂದ್ರೀಯ ವರ್ಣತಂತುಗಳ ಸಂಯೋಗದಿಂದ ಉಂಟಾಗಬಹುದು ಅಥವಾ ಎರಡು ಅಪರಿಕೇಂದ್ರೀಯ ವರ್ಣತಂತುಗಳು ಒಂದು ಮಧ್ಯಪರಿಕೇಂದ್ರೀಯ ವರ್ಣತಂತುವಿನ ವಿಭಜನೆಯಿಂದ ಆಗಬಹುದು. ಇದು ವರ್ಣತಂತು ಸಂಖ್ಯೆಯಲ್ಲಿ ವ್ಯತ್ಯಾಸವನ್ನುಂಟು ಮಾಡುತ್ತದೆ. ಇದೇ ರೀತಿ ಹಲವಾರು ಮಾರ್ಪಾಡುಗಳು ವರ್ಣತಂತುವಿನಲ್ಲಿ ಆದಾಗ ಅದು ವಿಕಾಸಕ್ಕೆ ಪ್ರಥಮ ಹೆಜ್ಜೆಯಾಗುತ್ತದೆ. ವಿಕಾಸವಾದದ ಪ್ರಶ್ನೆ ಬಹು ಕ್ಲಿಷ್ಟವಾದರೂ ಕೋಶತಳಿವಿಜ್ಞಾನದ ಅಧ್ಯಯನವು ವಿಕಾಸವಾದದ ಅನೇಕ ಸಮಸ್ಯೆಗಳನ್ನು ಬಿಡಿಸಲು ಸಹಾಯಕವಾಗಿದೆ. (ಎಸ್.ಎನ್.ಎಚ್.)

**ಕೋಶಕರಸಾಯನವಿಜ್ಞಾನ:** ಜೀವಕೋಶದೊಳಗಿನ ರಾಸಾಯನಿಕತೆ, ರಾಸಾಯನಿಕಕ್ರಿಯೆ ಇತ್ಯಾದಿಗಳನ್ನು ಅಭ್ಯಸಿಸುವ ಕೋಶವಿಜ್ಞಾನದ ಶಾಖೆ (ಸೈಟೊಕೆಮಿಸ್ಟ್ರಿ). ಜೀವ ವಸ್ತುಗಳ ರಾಸಾಯನಿಕ ಹಾಗು ಭೌತರಾಸಾಯನಿಕ ವಿಶ್ಲೇಷಣೆಯಿಂದ ಈ ಹೊಸ ವಿಜ್ಞಾನದ ಉದಯವಾಯಿತು. 1902 ರಲ್ಲಿ ಫಿಷರ್ ಮತ್ತು ಹಾಫ್‌ಮೀಸ್ಟರ್ ಇವರು ಜೀವರಸಾಯನವಿಜ್ಞಾನದಲ್ಲಿ ನಡೆಸಿದ ಅದ್ವಿತೀಯ ಸಂಶೋಧನೆಗಳೇ ಇದರ ಬೆಳವಣಿಗೆಯ ಮೂಲ. ಇವರು ಪ್ರೋಟೀನು ಕಣಗಳಲ್ಲಿ ಹಲವಾರು ಅಮೈನೋ ಆಮ್ಲಗಳ ಸಂಯೋಗದಿಂದಾದ ಪೆಪ್ಟೈಡು ಬಂಧಗಳಿರುತ್ತವೆ ಎಂದು ತೋರಿಸಿದರು. 1869 ರಲ್ಲಿ ಫ್ರೆಡ್ರಿಕ್ ಮಿಷರ್ ಮತ್ತು 1891 ರಲ್ಲಿ ಕೊಸೆಲ್ ಲಸಿಕೆಯ ಜೀವಕೋಶಗಳನ್ನು, ವೀರ್ಯಾಣು, ಹಕ್ಕಿಗಳ ಕೆಂಪುರಕ್ತ ಕಣಗಳು ಮುಂತಾದ ಜೀವಕೋಶಗಳಿಂದ ರಂಜಕಯುಕ್ತ ವಸ್ತುವೊಂದನ್ನು ಬೇರ್ಪಡಿಸಿದರು. ಮಿಷರ್ ಈ ವಸ್ತು ಹೆಚ್ಚಾಗಿ ಕೋಶಕೇಂದ್ರದಲ್ಲಿ ಕಂಡುಬರುವುದರಿಂದ ಅದನ್ನು ನ್ಯೂಕ್ಲಿಯಿನ್ ಎಂದು ಹೆಸರಿಸಿದನು. ಆಮ್ಲೀಯತೆ ಹೆಚ್ಚಾಗಿರುವುದರಿಂದ ಅದನ್ನು ಹಲವಾರು ವರ್ಷಗಳ ನಂತರ ನ್ಯೂಕ್ಲೀಯಿಕ್ ಆಮ್ಲ ಎಂದು ಹೆಸರಿಸಿದರು. 20ನೇ ಶತಮಾನದ ಮಧ್ಯಭಾಗದಲ್ಲಿ ನ್ಯೂಕ್ಲೀಯಿಕ್ ಆಮ್ಲದ ರಚನೆ, ಆನುವಂಶೀಯತೆ ಹಾಗೂ ಪ್ರೋಟೀನು ಸಂಶ್ಲೇಷಣೆಯಲ್ಲಿ ಅವುಗಳ ಪಾತ್ರವನ್ನೂ ಬೇರೆ ಬೇರೆ ಕೋಶಕತಳಿವಿಜ್ಞಾನಿಗಳು ವಿವರಿಸಿದರು.

ಕೋಶಕರಸಾಯನವಿಜ್ಞಾನದ ಬೆಳವಣಿಗೆಯಲ್ಲಿ ಇನ್ನೊಂದು ಪ್ರಮುಖ ಹಂತವೆಂದರೆ ಓಸ್ವಾಲ್ಡ್ ಪ್ರತಿಪಾದಿತ ವೇಗವರ್ಧಕ ಕ್ರಿಯೆ ಮತ್ತು ಕಿಣ್ವಗಳ ಸಂಶೋಧನೆ. ಕಿಣ್ವಗಳು ಜೀವಕೋಶದಲ್ಲಿನ ಶಕ್ತಿಯ ಹಲವಾರು ಬದಲಾವಣೆ ಹಾಗೂ ಚಯಾಪಚಯ ಕ್ರಿಯೆಗಳಿಗೆ ಸಹಾಯಕವಾಗುವ ವೇಗವರ್ಧಕಗಳು. 1903 ರಲ್ಲಿ ವೀಲ್ಯಾಂಡ್ ಮತ್ತು 1908 ರಲ್ಲಿ ವಾರ್‌ಬರ್ಗ್ ಎಂಬುವರು ಜೀವಕೋಶದಲ್ಲಿನ ಉತ್ಕರ್ಷಣ ಕ್ರಿಯೆಯನ್ನು ಕಂಡುಹಿಡಿದರು.

19ನೇ ಶತಮಾನದಲ್ಲಿ ಮತ್ತು 20ನೇ ಶತಮಾನದ ಆದಿಭಾಗದಲ್ಲಿ ಶಾರೀರಿಕ ರಚನೆಯ ಬಗ್ಗೆ ಹೆಚ್ಚು ಮಹತ್ವ ಕೊಡುತ್ತಿದ್ದ ಜೀವವಿಜ್ಞಾನಿಗಳು ಜೀವರಸಾಯನದ ದೃಷ್ಟಿಯಿಂದ ಯೋಚಿಸುವುದು ಅಥವಾ ಅದನ್ನು ಜೀವರಸಾಯನವಿಜ್ಞಾನಕ್ಕೆ ಅಳವಡಿಸಲು ಹಿಂತೆಗೆದರು. ಹಾಗೆಯೇ ಜೀವರಸಾಯನವಿಜ್ಞಾನಿಗಳೂ ಕೂಡ ಜೀವ ಮತ್ತು ಜೀವಕೋಶಗಳ ಬಗ್ಗೆ ಹೆಚ್ಚು ಗಮನಕೊಡದೆ, ಸಾವಯವ ರಸಾಯನ ವಿಜ್ಞಾನದ ಬಗ್ಗೆಯೇ ಹೆಚ್ಚು ಲಕ್ಷ್ಯ ವಹಿಸಿದರು. ಅವರು ಕೇವಲ ಕೆಲವು ರಸಾಯನಿಕ ವಸ್ತುಗಳನ್ನು ವಿಶ್ಲೇಷಿಸಿ ತತ್ಸಂಬಂಧವಾದ ಕೆಲವು ಪ್ರಾಥಮಿಕ ಕ್ರಿಯೆಗಳ ಅಧ್ಯಯನ ಹಾಗೂ ಅವುಗಳಲ್ಲಿ ಕಿಣ್ವಗಳ ಪಾತ್ರ ಇಂತಹ ಅಧ್ಯಯನವನ್ನೇ ಮುಂದುವರಿಸಿದರು. 1934 ರಲ್ಲಿ ಬೆನ್‌ಸ್ಲಿ ಮತ್ತು ಹೋಯೆರ್ ಎಂಬುವರು ಮೈಟೊಕಾಂಡ್ರಿಯವನ್ನು ಜೀವಕೋಶದಿಂದ ಬೇರ್ಪಡಿಸಿ ಅದರ ರಾಸಾಯನಿಕ ಹಾಗೂ ಭೌತರಸಾಯನಿಕ ಅಧ್ಯಯನವನ್ನು ಪ್ರಾರಂಭಿಸಿದರು. ತದನಂತರ ಜೀವರಸಾಯನವಿಜ್ಞಾನಕ್ಕೆ ಒಂದು ತಿರುವು ದೊರೆತು ಕೋಶಕರಸಾಯನ ಶಾಸ್ತ್ರದ ಬೆಳವಣಿಗೆಯಾಯಿತು. ಆಮೇಲೆ ಕ್ಲಾಡೆ ಮುಂತಾದವರು ಮೈಟೊಕಾಂಡ್ರಿಯವೇ ಜೀವಕೋಶದಲ್ಲಿ ನಡೆಯುವ ಉತ್ಕರ್ಷಣ ಕ್ರಿಯೆಯ ಕೇಂದ್ರವೆಂದು ಸೂಚಿಸಿದರು.

ಕೋಶಕ ರಸಾಯನ ವಿಜ್ಞಾನದ ತಾಂತ್ರಿಕ ವಿಧಾನಗಳು : ರಾಸಾಯನಿಕ ವಸ್ತುಗಳನ್ನು ಜೀವಕೋಶದಲ್ಲಿ ಗುರುತಿಸುವುದು ಹಾಗೂ ಅವುಗಳ ಕಾರ್ಯವಿಧಾನವನ್ನು ತಿಳಿಯುವುದು ಕೋಶಕರಸಾಯನವಿಜ್ಞಾನದ ಪರಿಧಿಯಲ್ಲಿ ಬರುತ್ತದೆ. ಕೋಶಕ ರಸಾಯನವಿಜ್ಞಾನದ ಅಧ್ಯಯನದಲ್ಲಿ ನಾಲ್ಕು ತೌಲನಿಕ ತಂತ್ರಗಳು ಬಹುಮುಖ್ಯವಾದವು. ಅವುಗಳೆಂದರೆ 1) ಕೋಶ ಅಪಮರ್ಧನಗಳನ್ನು ಸರಿಯಾದ ರೀತಿಯಲ್ಲಿ ಬೇರ್ಪಡಿಸುವುದು 2) ಅತಿಸೂಕ್ಷ್ಮಪದ್ಧತಿಗಳಿಂದ ಚಿಕ್ಕ ಚಿಕ್ಕ ಅಂಗಾಂಶಗಳನ್ನು, ಜೀವಕೋಶಗಳನ್ನು ಬೇರ್ಪಡಿಸುವುದು 3) ರಸಾಯನಿಕ ವರ್ಣಸೇಚನದಿಂದ ನೇರವಾಗಿ ಜೀವಕೋಶ ಹಾಗೂ ಕೋಶಾಂಗಗಳನ್ನು ಗುರುತಿಸುವುದು 4) ಭೌತಿಕ ಮಾಪನಗಳನ್ನು ಅಳತೆಗೋಲಾಗಿ ಉಪಯೋಗಿಸುವುದು.

ಕೋಶಕರಸಾಯನವಿಜ್ಞಾನದ ಬೆಳವಣಿಗೆಯಿಂದ ಜೀವಕೋಶ, ಕೋಶಾಂಗಗಳು, ಕೋಶದ್ರವ್ಯ ಹಾಗು ಕೋಶಕೇಂದ್ರದ ರಸಾಯನಿಕ ಪ್ರಕೃತಿ, ಡಿಎನ್‌ಎ ಮತ್ತು ಆರ್‌ಎನ್‌ಎ ಗಳ ರಚನೆ, ಅವುಗಳ ಕಾರ್ಯ ಹಾಗು ಪ್ರೋಟೀನು ಸಂಶ್ಲೇಷಣೆ ಇತ್ಯಾದಿಗಳ ಬಗ್ಗೆ ನಿರ್ದಿಷ್ಟ ಮಾಹಿತಿಗಳು ದೊರೆತಿವೆ.

ಕೋಶದೊಳಗೆ ಜರುಗುವ ರಾಸಾಯನಿಕ ಪ್ರಕ್ರಿಯೆಗಳು ಜೀವ ಪ್ರಕ್ರಿಯೆಯ ಮೂಲಾಧಾರ ಎಂಬ ತಿಳಿವು ಉಂಟಾಗಿದೆ. ಈ ಪ್ರಕ್ರಿಯೆಗಳ ವಿವಿಧ ಹಂತಗಳನ್ನು ಗುರುತಿಸಿ, ಅವಶ್ಯವಿದ್ದೆಡೆ ತಿದ್ದುವ, ಗತಿ ಬದಲಿಸುವ ಸಾಮರ್ಥ್ಯವೂ ಒದಗಿಬಂದಿದೆ. ನಿರ್ದಿಷ್ಟ ಬಗೆಯ ಜೀವಕೋಶಗಳ (ಉದಾಹರಣೆಗೆ – ಸ್ನಾಯುಕೋಶಗಳು) ಚಟುವಟಿಕೆಗಳನ್ನು ಈ ಬಗೆಯಲ್ಲಿ ತಿದ್ದುವ ಮೂಲಕ ಕೆಲವು ಖಾಯಿಲೆಗಳನ್ನು ಗುಣಪಡಿಸಲೂ ಪ್ರಯತ್ನಿಸಲಾಗಿದೆ. (ಎಸ್.ಎನ್.ಎಚ್)

**ಕೋಶದ್ರವ್ಯ (ಸೈಟೊಪ್ಲಾಸಂ):** ಜೀವಕೋಶದಲ್ಲಿ ಕೋಶಪಟಲ ಮತ್ತು ಕೋಶಕೇಂದ್ರವನ್ನು ಹೊರತು ಪಡಿಸಿದ ಮುಖ್ಯಭಾಗ. ಕೋಶ ಹಾಗೂ ಜೀವದ ಭೌತಿಕ ಮೂಲ. ಸಾಮಾನ್ಯ ಸೂಕ್ಷ್ಮದರ್ಶಕದಲ್ಲಿ ಕಾಚಾಭ ವಸ್ತುವಿನಂತಿದ್ದು ಮೈಟೊಕಾಂಡ್ರಿಯ, ವರ್ಣಕಗಳು, ಗಾಲ್ಗೀಕಾಯಗಳು, ಪರಿಕೇಂದ್ರ ಇತ್ಯಾದಿ ಹಲವಾರು ಕೋಶಾಂಗಗಳನ್ನು ಒಳಗೊಂಡಿದೆ. ಇದು ಜೀವಕೋಶದಲ್ಲಿನ ನಿಜವಾದ ಆಂತರಿಕ ಕೋಶ ವಾತಾವರಣವನ್ನುಂಟು ಮಾಡುತ್ತದೆ. ಜೀವಕೋಶದ, ಕಲಲ್ಪ–ಅಕಲಲ್ಪ ವ್ಯತ್ಯಾಸಗಳಿಗೆ ಅವಶ್ಯಕವಾದ ಸ್ಥಿತಿ, ಸ್ನಿಗ್ಧತೆಯ ಬದಲಾವಣೆಗಳು, ಅಂತರ್ ಮತ್ತು ಬಾಹ್ಯ ಕಣಗಳಲ್ಲಿನ ವ್ಯತ್ಯಾಸಗಳು, ಜೀವಕೋಶದ ಒಡೆಯುವಿಕೆ ಮುಂತಾದ ಕಲಿಲ ಗುಣಗಳು ಕೋಶದ್ರವ್ಯ ಮಾತೃಕೆಯನ್ನು ಅವಲಂಬಿಸಿವೆ. ಕೆರಾಟಿನ್ ತಂತು, ಮಜತಂತುಕ (ಮೈಯೊಫೈಬ್ರಿಲ್) ಸೂಕ್ಷ್ಮ ಕೊಳವೆಗಳು ಮತ್ತು ದಾರಗಳು (ಮೈಕ್ರೊಟುಬ್ಯೂಲ್ ಮತ್ತು ಮೈಕ್ರೊಫೈಬ್ರಿಲ್) ಮುಂತಾದ ಹಲವಾರು ವಿಭೇದೀಕೃತ ತಂತುಗಳು ವಿವಿಧ ಜೀವಕೋಶದ ಕೋಶದ್ರವ್ಯದಲ್ಲಿವೆ.

ಕೋಶದ್ರವ್ಯವನ್ನು ಕೋಶಕರಸಾಯನವಿಜ್ಞಾನ, ಕೋಶ ಅಪವರ್ಧನ ಇಲೆಕ್ಟ್ರಾನ್ ಸೂಕ್ಷ್ಮದರ್ಶಕ ಮುಂತಾದುವುಗಳಿಂದ ವಿವರವಾಗಿ ಅಧ್ಯಯನ ಮಾಡಲಾಗಿದೆ. ಕೋಶದ್ರವ್ಯದಲ್ಲಿ, ಕೋಶಕೇಂದ್ರ, ಮೈಟೋಕಾಂಡ್ರಿಯ ಹಾಗೂ ಇತರ ಸೂಕ್ಷ್ಮಕಾಯಗಳನ್ನು ಬೇರ್ಪಡಿಸಿದ ನಂತರ, ಉಳಿಯುವ ಕರಗುವ ಅಪವರ್ಧನಗಳು, ಕರಗುವ ಪ್ರೋಟೀನು ಮತ್ತು ಕಿಣ್ವಗಳು ಕೂಡ ಇವೆ. ಈ ಪ್ರೋಟೀನುಗಳು ಶೇ. 20 ರಿಂದ 25 ರಷ್ಟು ಇಂಥ ಪ್ರೋಟೀನುಗಳು ಕೋಶದ್ರವ್ಯದಲ್ಲಿವೆ. ಕೋಶದ್ರವ್ಯ ಮಾತೃಕೆಯಲ್ಲಿನ ಕರಗುವ ಪ್ರೋಟೀನುಗಳ ಪೈಕಿ ಪ್ರೋಟೀನು ಸಂಶ್ಲೇಷಣೆಯಲ್ಲಿ ಅಮೈನೋ ಆಮ್ಲವನ್ನು ಕ್ರಿಯಾಶೀಲಗೊಳಿಸುವ ಕಿಣ್ವಗಳು ಹಾಗೂ ಕೋಶ ಉಸಿರಾಟದ ಗ್ಲೈಕಾಲಿಸಿಸ್ ಹಂತದ ಕಿಣ್ವಗಳು ಮುಖ್ಯವಾದುವು. ಕ್ರಿಯಾಶೀಲತೆಗೆ ಶಕ್ತಿಯ ಅವಶ್ಯಕತೆಯಿರುವ ಎಲ್ಲಾ ಕಿಣ್ವಗಳೂ ಕೋಶದ್ರವ್ಯ ಮಾತೃಕೆಯಲ್ಲಿರುತ್ತವೆ. ವಾಹಕ ಆರ್‌ಎನ್‌ಎ ಕೂಡಾ ಇರುತ್ತದೆ. ಇಷ್ಟೆಲ್ಲ ರಸಾಯನಿಕಗಳಿಂದ ಕೂಡಿದ ಕೋಶದ್ರವ್ಯದ ರಚನೆ ತುಂಬ ಸಂಕೀರ್ಣವಾದುದು.

ವಿಜ್ಞಾನಿಗಳಿಗೆ ಕೋಶದ್ರವ್ಯದ ರಚನೆಯನ್ನು ಕಂಡು ಹಿಡಿಯಲು ಒಂದು ಶತಮಾನವೇ ಬೇಕಾಯಿತು. 19ನೇ ಶತಮಾನದ ಅಂತ್ಯಭಾಗದಲ್ಲಿ, ವಿಭೇದಿಕೃತ ವರ್ಣಸಿಂಚನ ತಂತ್ರ (ಡಿಫರೆನ್ಷಿಯಲ್ ಸ್ಟೇನಿಂಗ್) ದಿಂದ ಕೋಶದ್ರವ್ಯದ ವಿವಿಧ ಭಾಗಗಳಿಗೆ ವಿವಿಧ ವರ್ಣಗಳನ್ನು ಹಿಡಿದುಕೊಳ್ಳುವ ಶಕ್ತಿಯಿದೆ ಎಂದು ತಿಳಿದುಬಂತು. ಈ ಕ್ಷೇತ್ರಗಳನ್ನು ಕ್ಷಾರೀಯ ವರ್ಣಗಳಿಂದ ಸೇಚನಗೊಳಿಸಲು ಸಾಧ್ಯವಾದ್ದರಿಂದ ಕೋಶದ್ರವ್ಯವನ್ನು ಕ್ಷಾರೀಯ ಪರ ಅಥವಾ ವರ್ಣೀಯ ಕೋಶದ್ರವ್ಯ ಎಂದು ಕರೆಯಲಾಯಿತು. ಕೋಶದ್ರವ್ಯವು ಸಂಶ್ಲೇಷಣೆಯಲ್ಲಿ ಮುಖ್ಯ ಪಾತ್ರವಹಿಸುವುದನ್ನು ಕಂಡುಹಿಡಿದ ಗಾರ್ನಿಯರ್ (1887) ಎಂಬಾತ ಕೋಶದ್ರವ್ಯಕ್ಕೆ ಎರ್ಗ್ಯಾಸ್ಟೋ ಪ್ಲಾಸ್ಮಂನಲ್ಲಿ, ನರಕೋಶದ ನಿಸ್ಸಲ್ ಕಾಯಗಳು, ಮೇದೋಜೀರಕಾಂಗದ ಕೋಶಗಳಲ್ಲಿನ ಕ್ಷಾರೀಯಪರ ಗುಪ್ಪೆಗಳು ಎಲ್ಲವೂ ಸೇರಿಕೊಳ್ಳುತ್ತವೆ. ಅನಂತರ ಬ್ರಾಕ್ಸೆ, ಕ್ಯಾಸ್ಪರ್‌ಸನ್ ಮತ್ತು ಸಂಗಡಿಗರೂ ಕೋಶದ್ರವ್ಯದ ಕ್ಷಾರೀಯ ಪರಗುಣವು ಆರ್‌ಎನ್‌ಎ ಯಿಂದ ಈ ಕ್ಷಾರೀಯ ಪರಗುಣ ನಾಶವಾಗುತ್ತದೆ ಎಂದೂ ತೋರಿಸಿದರು. ರೈಬೋನ್ಯೂಕ್ಲಿಯೆಸ್ ಆರ್‌ಎನ್‌ಎ ಯನ್ನು ಜಲವಧೆಯಿಂದ ನಿಷ್ಕ್ರಿಯಗೊಳಿಸುವ ಒಂದು ಕಿಣ್ವ. ಆರ್‌ಎನ್‌ಎ ಸಾಮಾನ್ಯವಾಗಿ ರೈಬೋಸೋಮುಗಳಲ್ಲಿದ್ದು, ಅದಕ್ಕೂ ಪ್ರೋಟೀನು

ಸಂಶ್ಲೇಷಣೆಗೂ ಸಂಬಂಧವಿರುವುದರಿಂದ ಎರ್‌ಗ್ಯಾಸ್ಟೋಪ್ಲಾಸಂ ಮತ್ತು ಪ್ರೋಟೀನು ಸಂಶ್ಲೇಷಣೆಗೂ ಸಂಬಂಧ ಕಲ್ಪಿಸಲಾಯಿತು.

ಕೋಶಕೇಂದ್ರವೂ ಸೇರಿದಂತೆ ಕೋಶಪಟಲದ ಒಳಗಿನ ಎಲ್ಲಾ ಭಾಗಗಳನ್ನೂ ಸೇರಿಸಿ ಜೀವದ್ರವ್ಯ ಎಂದು ಕರೆಯಲಾಗುತ್ತದೆ. ಪಟಲಯುಕ್ತ ಕೋಶದ್ರವ್ಯ ಬಹಳ ಭಿನ್ನರೂಪಿಯಾಗಿದ್ದು ಕಲಿಲ ವ್ಯೂಹದಂತಿದೆ. ಕೋಶ ಪಟಲವು ಕೋಶದ್ರವ್ಯರೂಪಿಯಾಗಿರುತ್ತದೆ. ಕೋಶದ್ರವ್ಯದ ತಾಂತ್ರಿಕ ಗುಣಗಳಾದ ಸ್ಥಿತಿಸ್ಥಾಪಕತ್ವ, ಆಕುಂಚನ–ಸಂಕುಚನ ಶಕ್ತಿ, ಅಂಟುವಿಕೆ, ದೃಢತೆ ಮತ್ತು ಅಂತರ್ ಕೋಶ ಚಲನೆ ಇತ್ಯಾದಿಗಳು ಕೋಶದ್ರವ್ಯ ಮಾತೃಕೆ ಹಾಗೂ ಅವಕಾಶಗಳನ್ನು (ವ್ಯಾಕ್ಯೂಲ) ಅವಲಂಬಿಸಿವೆ.

ಜಲಸ್ಥೈತಿಕ ಭಾರವನ್ನು ಅವಲಂಬಿಸಿ ಈ ಗುಣಗಳನ್ನು ಪ್ರಾಯೋಗಿಕವಾಗಿ ಬದಲಾಯಿಸಬಹುದು. ಅಂತರ್‌ಕೋಶಚಲನೆ, ಅಮೀಬಾ ರೀತಿಯ ಚಲನೆ, ಕೋಶವಿಭಜನೆ, ಕ್ರೊಮೋಸೋಮುಗಳ ಚಲನೆ ಮುಂತಾದುವುಗಳನ್ನೂ ನಿಲ್ಲಿಸಬಹುದು ಅಥವಾ ಬದಲಾಯಿಸಬಹುದು. ಈ ಎಲ್ಲ ಬದಲಾವಣೆಗಳಿಗೆ ಕೋಶದ್ರವ್ಯದಲ್ಲಿನ ಒತ್ತಡದಿಂದ ಕಲಿಲ ಭಾಗಗಳಲ್ಲಿ ಉಂಟಾಗುವ ದ್ರಾವಣ ಕಾರಣ.

ವಾತಾವರಣದ ಅಥವಾ ಆಂತರಿಕ ಘಟಕಗಳು ಕೋಶದ್ರವ್ಯದ ಸ್ನಿಗ್ಧತೆಯನ್ನು ಬದಲಾಯಿಸಬಹುದು. ಅಮೀಬಾದಲ್ಲಿ ಸ್ನಿಗ್ಧತೆಯು ಉಷ್ಣವನ್ನು ಅವಲಂಬಿಸಿದ್ದು, $30^0$ ಗಿಂತ ಹೆಚ್ಚು ಉಷ್ಣಾಂಶವಿದ್ದಾಗ ಶಾಖದ ಪ್ರಭಾವದಿಂದ ಸ್ನಿಗ್ಧತೆ ಹಠಾತ್ತನೆ ಏರುತ್ತದೆ. ಅಧಿಪದಾಸಾರಿ ದ್ರಾವಣ ಮತ್ತು ಆಮ್ಲಜನಕರಹಿತ ವಾತಾವರಣಗಳಲ್ಲಿ ಸ್ನಿಗ್ಧತೆ ಇಳಿಯುತ್ತದೆ. ಕೋಶವಿಭಜನೆ ಯಾಗುವಾಗ ಕೂಡಾ ಸ್ನಿಗ್ಧತೆಯಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿರುತ್ತದೆ. ಜಲಜನಕ ಅಣುಸಾಂದ್ರತೆ (ಪಿಎಚ್) ಸಾಮಾನ್ಯವಾಗಿ ಸ್ವಲ್ಪ ಆಮ್ಲೀಯವಾಗಿರುತ್ತದೆ. ಕೋಶದ್ರವ್ಯದ ವಿವಿಧ ಕ್ಷೇತ್ರಗಳಲ್ಲಿ ಜಲಜನಕ ಅಣುಸಾಂದ್ರತೆಯಲ್ಲಿ ವ್ಯತ್ಯಾಸವಿರುವುದು. ಅವಕಾಶಗಳಲ್ಲಿ ವಿಶೇಷವಾಗಿ ಏಕಕೋಶಜೀವಿಗಳಲ್ಲಿ ಕೆಲವು ಬಾರಿ ಆಮ್ಲೀಯತೆಯೂ ಹಾಗೂ ಉಳಿದ ಸಮಯಗಳಲ್ಲಿ ಕ್ಷಾರೀಯತೆಯೂ ಇರುವುದು. ನ್ಯೂಕ್ಲಿಯೊ ಪ್ಲಾಸಂನ ಮಾತೃಕೆಯಲ್ಲಿ ಕೂಡಾ ಇಂಥ ವ್ಯತ್ಯಾಸಗಳಿವೆ. ಕೋಶದ್ರವ್ಯದ ಉತ್ಕರ್ಷಣ – ಅಪಕರ್ಷಣ ಕ್ರಿಯೆಯಲ್ಲಿ ಕೂಡಾ ಈ ರೀತಿಯ ವ್ಯತ್ಯಾಸವಿರುವುದು ಕಂಡುಬಂದಿದೆ.

ಮೈಟೋಕಾಂಡ್ರಿಯ, ವರ್ಣಕಗಳು, ಗಾಲ್ಗೀ ಸಂಕೀರ್ಣ, ಅಂತರ್ ದ್ರವ್ಯ ಜಾಲಕ, ರೈಬೋಸೋಮುಗಳು, ಲೈಸೋ ಸೂಕ್ಷ್ಮ ತಂತುಗಳು, ಸೂಕ್ಷ್ಮ ನಳಿಗೆಗಳು, ಪರಿಕೇಂದ್ರ ಮುಂತಾದುವು ಕೋಶದ್ರವ್ಯದ ಮುಖ್ಯಭಾಗಗಳು. ಮೈಟೋಕಾಂಡ್ರಿಯ, ವರ್ಣಕ, ಅಂತರ್‌ದ್ರವ್ಯ ಜಾಲಕ ಮುಂತಾದುವು ಮೂಲಮಾನ ಪಟಲದಿಂದಲೇ (ಯೂನಿಟ್ ಮೆಂಬ್ರೇನ್) ರಚಿತವಾಗಿವೆ. ಆದರೆ ಇವುಗಳ ಕಾರ್ಯ ಮಾತ್ರ ವಿಭಿನ್ನ. ಕಾರ್ಯವನ್ನವಲಂಬಿಸಿ ಅವುಗಳಲ್ಲಿ ವಿವಿಧ ರೀತಿಯ ಕಿಣ್ವ ಹಾಗೂ ರಾಸಾಯನಿಕಗಳಿರುತ್ತವೆ. ಅದೇ ರೀತಿ ಅವುಗಳ ಆಕಾರ, ರಚನೆಗಳೂ, ವಿಭಿನ್ನವಾಗಿವೆ. ಇಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಹಾಯದಿಂದ ವಿವಿಧ ಕೋಶಾಂಗಗಳನ್ನು ವಿವರವಾಗಿ ಅಧ್ಯಯನ ಮಾಡಲಾಗಿದೆ. ನೋಡಿ: ಈ ಕೋಶಾಂಗಗಳ ಕುರಿತು ಪ್ರತ್ಯೇಕ ಲೇಖನಗಳಿವೆ.

ಸೂಕ್ಷ್ಮ ತಂತುಗಳು: ಕೋಶದ್ರವ್ಯ ಮಾತೃಕೆಯಲ್ಲಿ ಪ್ಲಾಸ್ಮ ಪಟಲದ ರಚನೆಗೆ ಹೊಂದಿಕೊಳ್ಳು ವಂತಹ ಸೂಕ್ಷ್ಮ ತಂತುಗಳು ಇರುವುದು ಇಲೆಕ್ಟ್ರಾನ್‌ಸೂಕ್ಷ್ಮ ದರ್ಶಕದಲ್ಲಿ ಕಂಡು ಬಂದಿದೆ. ಅವು ಸಮಾನಾಂತರದಲ್ಲಿದ್ದಾಗ ತುಂಬಾ ಚೆನ್ನಾಗಿ ಕಾಣಲು ಸಾಧ್ಯವಿದೆ. ಕೆಲವು ಸೂಕ್ಷ್ಮತಂತುಗಳು ವಾತಾವರಣದಲ್ಲಿನ ಬದಲಾವಣೆ ಅಥವಾ ಕೋಶ ಚಲನೆಯಿಂದ ಹಲವಾರು ಪ್ರೋಟೀನುಗಳು ಬಹುರೂಪಗೊಳ್ಳುವುದರ ಮೂಲಕ ಉದ್ಭವಿಸುತ್ತದೆ. ಕೇವಲ 4 ರಿಂದ 6 ನಾಮೀ ವ್ಯಾಸವುಳ್ಳ ಈ ಸೂಕ್ಷ್ಮ ತಂತುಗಳಲ್ಲಿ ಎರಡು ವಿಧ S ವಿಧ ಮತ್ತು L ವಿಧ. L ವಿಧಗಳು ಸಾಮಾನ್ಯವಾಗಿ ಚಿಕ್ಕ ಚಿಕ್ಕ ತುಂಡುಗಳಾಗಿದ್ದು, ಪ್ಲಾಸ್ಮ ಪಟಲದ ಹತ್ತಿರ ಒಳಭಾಗಕ್ಕೆ ಅಂಟುಕೊಂಡು ಬಂದು ಒಲೆಯನ್ನು ನಿರ್ಮಿಸುತ್ತವೆ. S ವಿಧದ ಸೂಕ್ಷ್ಮತಂತುಗಳು ಪ್ಲಾಸ್ಮಪಟಲದ ಒಳಭಾಗದಲ್ಲಿ ಬಂದು ಹೊದಿಕೆಯನ್ನೆ ನಿರ್ಮಿಸುತ್ತವೆ. ಅವು ಸಾಧಾರಣವಾಗಿ ಉದ್ದವಾಗಿದ್ದು ಸಮಾನಾಂತರದಲ್ಲಿವೆ. ಕೋಶದ ಚಲನೆ, ಕೋಶ ದ್ರವ್ಯದ ಅಂತರ್ ಚಲನೆ ಇತ್ಯಾದಿಗಳನ್ನು ಈ ಸೂಕ್ಷ್ಮತಂತುಗಳು ನಿಯಂತ್ರಿಸುತ್ತವೆ.

ಸೂಕ್ಷ್ಮ ಕೊಳವೆಗಳು: ಮಾತೃಕೆ ನಡುವೆ ಇರುವ ಉರುಳೆಯಾಕಾರದ ಕೊಳವೆಗಳಿವು. ಮೊಟ್ಟಮೊದಲಿಗೆ ನರತಂತುಗಳಲ್ಲಿ ಇವನ್ನು ಕಂಡುಹಿಡಿಯಲಾಯಿತು. ಟೊಳ್ಳಾಗಿದ್ದು ಅನಿರ್ದಿಷ್ಟ ಉದ್ದ ಹಾಗೂ 25 ನಾಮೀ ವ್ಯಾಸವಿರುತ್ತದೆ. ಉಂಡೆಯಾಕಾರದ ಹಲವು ಪ್ರೋಟೀನುಗಳು ಕೂಡಿ ಕೊಳವೆಗಳಾಗುತ್ತವೆ. ಅವುಗಳ ಗೋಡೆಗಳಲ್ಲಿ 4 ರಿಂದ 5 ನಾಮೀ ವ್ಯಾಸವುಳ್ಳ 13 ಸಹ ತಂತುಗಳಿರುತ್ತವೆ. ಶಿಲಿಕಾಂಗ, ಕಶಾಂಗಗಳು ಮತ್ತು ವಿಭಜನಾ ಕದುರುಗಳಲ್ಲಿ ಈ ಕೊಳವೆಗಳು ಕಂಡುಬರುತ್ತವೆ. ಪರಿಕೇಂದ್ರದ ಈ ರೀತಿಯ ಸೂಕ್ಷ್ಮ ತಂತುಗಳಿಂದ ನಿರ್ಮಾಣವಾಗುತ್ತದೆ. (ಎಸ್.ಎನ್.ಎಚ್.)

**ಕೋಶದ್ರವ್ಯ ಆನುವಂಶೀಯತೆ (ಸೈಟೋಪ್ಲಾಸ್ಮಿಕ್ ಇನ್‌ಹರಿಟೆನ್ಸ್):** ಕೋಶದ್ರವ್ಯದ ಘಟಕಗಳಿಂದ ಆನುವಂಶೀಯತೆಯ ನಿರ್ಧಾರವಾಗುವಿಕೆ. ಮೆಂಡಲನ ಆನುವಂಶೀಯತೆ ಅಥವಾ ವರ್ಣತಂತು ಆನುವಂಶೀಯತೆಯಲ್ಲಿ ಮಾತೃ ಮತ್ತು ಪಿತೃ ಆನುವಂಶೀಯ ವಸ್ತುಗಳು ಸಮನಾಗಿ ಸೇರಿ ಮುಂದಿನ ಪೀಳಿಗೆಯಾಗುತ್ತದೆ. ಕೋಶದ್ರವ್ಯ ಆನುವಂಶೀಯತೆಯಲ್ಲಿ ಆನುವಂಶೀಯ ವಸ್ತುಗಳ ಸಂಯೋಗವಿಲ್ಲದೆ ಮಾತೃಕೋಶದ ಪ್ರಭಾವವೇ ಪೀಳಿಗೆಯ ಮೇಲೆ ಪ್ರಭಾವ ಬೀರುತ್ತದೆ.

ಕೋಶದ್ರವ್ಯ ಆನುವಂಶೀಯತೆ ಮೂರು ರೀತಿಯಲ್ಲಿ ನಿರ್ಧಾರವಾಗುವುದು. ಅ) ಕೋಶದ್ರವ್ಯದ ಸ್ಥಿರ ಘಟಕಗಳಾದ ವರ್ಣಕಗಳು ಪ್ಲಾಸ್ಟಿಡ್ ಮೈಟೊಕಾಂಡ್ರಿಯ ಮುಂತಾದವುಗಳಿಂದ ಆ) ಪರಾವಲಂಬಿ ಸೂಕ್ಷ್ಮ ಕಣಗಳಾದ ಕಪ್ಪ ಕಣಗಳು (ಕಪ್ಪ ಪಾರ್ಟಿಕಲ್ಸ್), ಮೆಟಾಗಾನ್, ಲಿಂಗಪ್ರಮಾಣ, ಇ) ಕೋಶದ್ರವ್ಯದಲ್ಲಿರುವ ಡಿಎನ್‌ಎ ಯಿಂದ ಕೋಶದ್ರವ್ಯ ಆನುವಂಶೀಯತೆಯನ್ನು ಅನುಸರಿಸುವ ಜೀನ್‌ಗಳನ್ನು ಸಂಕರಗೊಳಿಸಿದಾಗ ಅದರ ಪಾರಸ್ಪರಿಕ ಸಂಕರಗಳ ಫಲಿತಾಂಶ ಭಿನ್ನವಾಗಿರುತ್ತದೆ. ಈ ಕೆಳಗಿನವು ಕೋಶದ್ರವ್ಯ ಆನುವಂಶೀಯತೆಗೆ ಉದಾಹರಣೆಗಳು.

ವರ್ಣಕದಿಂದ ಬಣ್ಣದ ಆನುವಂಶೀಯತೆ : ಗಡಿಯಾರದ ಗಿಡ ಮಿರಾಬಿಲಸ್ ಜಲಪ ಸಸ್ಯದ ವರ್ಣವು ವರ್ಣಕಗಳಿಂದ ನಿರ್ಧರಿಸಲ್ಪಟ್ಟು ಕೋಶದ್ರವ್ಯ ಆನುವಂಶೀಯತೆ ನಿಯಮವನ್ನು ಅನುಸರಿಸುವುದು ಎಂದು 1908 ರಲ್ಲಿ ಕೊರೆನ್ಸ ಎಂಬಾತ ಕಂಡುಹಿಡಿದ. ಕೋಶದ್ರವ್ಯದ ಅಂಗವಾದ ವರ್ಣಕಗಳಿಗೆ ಸ್ವಯಂ ಪುನರುತ್ಪಾದನೆಯ ಶಕ್ತಿಯಿದ್ದು ಕೋಶ ವಿಭಜನೆಯ ನಂತರ ಮರಿಕೋಶಗಳಿಗೆ ಸಮವಾಗಿಯಲ್ಲದಿದ್ದರೂ ಮಾತೃಕೋಶದಿಂದಲೇ ಸಾಗುತ್ತವೆ.

ಈ ಗಡಿಯಾರ ಸಸ್ಯದ ಕೆಲವು ಟೊಂಗೆಗಳಲ್ಲಿ ಎಲೆಗಳು ಸಂಪೂರ್ಣ ಹಸಿರಾಗಿದ್ದು, ಕೆಲವು ಬಿಳುಪಾಗಿದ್ದು ಹಸಿರು ತೇಪೆಗಳಂತಿವೆ (ಶಬಲತೆಯಿಂದ ಕೂಡಿದುವು). ಉಳಿದುವು ಸಂಪೂರ್ಣ ಬಿಳಿ ಎಲೆಗಳು. ಬಿಳಿ ಭಾಗಗಳಲ್ಲಿ ವರ್ಣಕಗಳಿಲ್ಲದಿರುವುದರಿಂದ ಹರಿತ್ತು ಇರುವುದಿಲ್ಲ. ಇಂತಹ ಟೊಂಗೆಗಳಲ್ಲಿ ಬಿಳಿಭಾಗಕ್ಕೆ ಹಸಿರು ಭಾಗಗಳಿಂದಲೇ ಆಹಾರ ಸರಬರಾಜಾಗುತ್ತದೆ. ಹಸಿರು ಟೊಂಗೆಗಳ ಮೇಲೆ ಬೆಳೆಯುವ ಹೂಗಳಿಂದ ಕೇವಲ ಹಸಿರು ತಳಿಗಳೂ, ಬಿಳಿಭಾಗದ ಹೂಗಳಿಂದ ಬಿಳಿ ತಳಿಗಳೂ ಬರುತ್ತವೆ. ಇಲ್ಲಿ ಪರಾಗ ಯಾವುದೇ ರೀತಿಯಾಗಿದ್ದರೂ ತಳಿಗಳ ಮೇಲೆ ಅವುಗಳ ಪ್ರಭಾವವಿಲ್ಲ. ಬಿಳಿ ಸಸ್ಯಗಳು ದ್ಯುತಿ ಸಂಶ್ಲೇಷಣೆ ಕ್ರಿಯೆಯಿಲ್ಲದೆ ಸತ್ತು ಹೋಗುತ್ತವೆ. ಶಬಲ ಟೊಂಗೆಗಳಿಂದ ಬಿಡುವ ಹೂಗಳು ಹಸಿರು ಮತ್ತು ಶಬಲ ತಳಿಗಳನ್ನು ಬೇರೆ ಬೇರೆ ಪ್ರಮಾಣದಲ್ಲಿ ತಯಾರಿಸುತ್ತವೆ ಎಂದು ಕೊರೆನ್ಸ ಕಂಡುಹಿಡಿದ ತಳಿಯ ತೋರು ಮಾದರಿ (ಫೀನೋಟೈಪ್) ತಾಯಿಗಿಡವನ್ನು ಅವಲಂಬಿಸಿರುತ್ತದೆ ಎಂದು ಈತನ ಪ್ರಯೋಗಗಳಿಂದ ತಿಳಿದುಬಂತು.

ಹಸಿರು, ಬಿಳಿ ಮತ್ತು ಶಬಲ ಟೊಂಗೆಗಳಲ್ಲಿಯ ಅಂಡಾಣುಗಳನ್ನು ಅಧ್ಯಯನ ಮಾಡಲಾಗಿ ಕ್ರಮವಾಗಿ ಅವುಗಳ ಕೋಶದ್ರವ್ಯದಲ್ಲಿ ಹಸಿರು, ಬಿಳಿ ಮತ್ತು ಮಿಶ್ರ ವರ್ಣಕಗಳು ಇರುತ್ತವೆ, ಪರಾಗಗಳಲ್ಲಿ ಅತಿ ಕಡಿಮೆ ಕೋಶದ್ರವ್ಯವಿರುವುದರಿಂದ ಅವುಗಳಲ್ಲಿ ವರ್ಣಕಗಳಿರುವುದಿಲ್ಲ ಅಥವಾ ಅತಿ ಕಡಿಮೆ ಸಂಖ್ಯೆಯಲ್ಲಿರುತ್ತವೆ ಎಂದೂ ಕಂಡು ಬಂತು. ಆದ್ದರಿಂದ ಪರಾಗವು ತಳಿಗಳ ತೋರು ಮಾದರಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಹೆಣ್ಣು ಮತ್ತು ಗಂಡು ಎಂಬ ಲಿಂಗ ಭೇದವಿರುವ ಪ್ರಭೇದಗಳಲ್ಲಿ ಈ ಆನುವಂಶೀಯತೆಗೆ ಮಾತೃ ಆನುವಂಶೀಯತೆ (ಮ್ಯಾಟರ್ನಲ್ ಇನ್ಹರಿಟೆನ್ಸ್) ಎಂದು ಹೆಸರು.

ಮಾತೃ ಆನುವಂಶೀಯತೆ ಬಾರ್ಲಿ, ಜೋಳ, ಭತ್ತ ಮುಂತಾದುವುಗಳಲ್ಲಿಯೂ ಇದೆ. ಅನೇಕ ಸಂದರ್ಭಗಳಲ್ಲಿ ವರ್ಣತಂತುಗಳ ಮೇಲಿನ ಜೀನ್‌ಗಳು ವರ್ಣಕಗಳಲ್ಲಿ ವಿಕೃತಿಯನ್ನು ಪ್ರಚೋದಿಸುತ್ತವೆ ಅಥವಾ ಅವುಗಳಲ್ಲಿ ವಿಕೃತಿಗಳನ್ನುಂಟು ಮಾಡುತ್ತವೆ. ಮೆಕ್ಕೆ ಜೋಳದ ಎಲೆಗಳ ಮೇಲೆ ಹಸಿರು ಮತ್ತು ಬಿಳಿ ಪಟ್ಟೆಗಳಿರುತ್ತವೆ. ಈ ಗುಣವು ಗಡಿಯಾರ ಗಿಡದ ವರ್ಣದಂತೆಯೇ ಆನುವಂಶೀಯತೆಯಲ್ಲಿ ಭಾಗವಹಿಸುತ್ತದೆ. ಎರಡು ಹಸಿರು ಸಸ್ಯಗಳ ನಡುವಿನ ಸಂಕರದಲ್ಲಿ ಕೆಲವು ಹಸಿರಾಗಿಯೂ ಕೆಲವು ಪಟ್ಟೆಗಳಿಂದಲೂ ಕೂಡಿರುತ್ತವೆ. ಪಟ್ಟೆಗಳಿರುವ ಸಸ್ಯಗಳು ಐಜಾಪ್ (ಐಜೆ) ಎಂಬ ಅಪ್ರಭಾವೀ ಜೀನ್‌ಗಳೊಂದಿಗೆ ಸಮಯುಗ ಸ್ಥಿತಿಯಲ್ಲಿರುತ್ತವೆ. ಆದರೆ ಅವುಗಳ ಪಿತೃಗಳು ಭಿನ್ನಯುಗ್ಮ ಸ್ಥಿತಿಯವು. ಅಪ್ರಭಾವಿ ಜೀನ್‌ಗಳಿರುವ ಸಸ್ಯದಲ್ಲಿ ಕೇವಲ ಬಿಳಿ ವರ್ಣಕಗಳಿದ್ದು ಅವುಗಳಲ್ಲಿ ಹರಿತ್ತು ಇರುವುದಿಲ್ಲ. ಜೀನ್‌ಗಳು ಅಂಡಾಣು ಕೋಶದ್ರವ್ಯದಿಂದ ಬರುತ್ತವೆ ಎಂದಿದ್ದರೆ ಎಲ್ಲ ಸಸ್ಯಗಳೂ ಹಸಿರಾಗಿರಬೇಕಿತ್ತು ಅಥವಾ ವರ್ಣತಂತುಗಳ ಮೇಲಿದ್ದರೆ ಮೆಂಡಲನ ನಿಯಮದ ಪ್ರಕಾರ ಬೇರೆ ಬೇರೆ ವರ್ಣಗಳಿರಬೇಕು. ಇವೆರಡೂ ಬಗೆಯ ಆನುವಂಶೀಯತೆ ಇಲ್ಲಿ ಇಲ್ಲ. ಅಂದರೆ

ಈ ಸಸ್ಯದ ಕೋಶದ್ರವ್ಯದಲ್ಲಿರುವ ಜೀನ್ ಹರಿತ್ತನ್ನು ಸಂಶ್ಲೇಷಿಸಲು ಸಹಾಯಕಾರಿಯಾಗಿರಬೇಕು. ಇದಕ್ಕೆ ಕಾರಣ ವರ್ಣಕಗಳಲ್ಲಾಗುವ ವಿಕೃತಿ. ಅಂದರೆ ವರ್ಣತಂತುವಿನ ಈ ಐಜೆ ವರ್ಣಕದ ಮೇಲಿನ ಜೀನ್‌ಗಳ ವಿಕೃತಿಗೆ ಕಾರಣ ಎಂದರಿವಾಗುತ್ತದೆ.

ಯೀಸ್ಟ್ ಸಮುದಾಯದ ಆನುವಂಶೀಯತೆ : ಯೀಸ್ಟ್‌ನ ಕೆಲವು ತಳಿಗಳು ಅಗಾರ್ ಮಾಧ್ಯಮದ ಮೇಲೆ ಚಿಕ್ಕ ಚಿಕ್ಕ ಸಮುದಾಯ (ಕಾಲನಿ) ಗಳನ್ನು ನಿರ್ಮಿಸುತ್ತವೆ. ಈ ಸಮುದಾಯದ ಬೆಳೆವಣಿಗೆ, ಕೋಶಗಳು ವಾಯುಶ್ವಸನದ ಕೆಲವು ಕಿಣ್ವಗಳನ್ನು ಕಳೆದುಕೊಳ್ಳುವುದರಿಂದ ಮತ್ತು ಕಡಿಮೆ ಹುದುಗುವಿಕೆಯಿಂದ ನಿಧಾನವಾಗುತ್ತದೆ. ಈ ಚಿಕ್ಕ ಸಮುದಾಯವನ್ನು ಸಾಮಾನ್ಯ ಗಾತ್ರದ ಸಮುದಾಯದ ಕೋಶಗಳೊಂದಿಗೆ ಸಂಕರಗೊಳಿಸಿದಾಗ 1:1 ಪ್ರಮಾಣದಲ್ಲಿ ಸಮುದಾಯಗಳುಂಟಾಗುತ್ತವೆ. ಈ ಚಿಕ್ಕ ಸಮುದಾಯಗಳು ಕೋಶಕೇಂದ್ರದ ಜೀನ್ ವಿಕೃತಿಯಿಂದ ಉಂಟಾಗುತ್ತವೆ. ಇವುಗಳನ್ನು ಪ್ರತ್ಯೇಕತಾ ಪಟಿತ (ಪೆಟೈಟ್) ಎನ್ನುತ್ತಾರೆ. ಕೆಲವು ಅಕ್ರಿಡೀನ್ ವರ್ಣಗಳಿಂದ ಕೂಡಾ ಪಟಿತಗಳನ್ನು ಪಡೆಯಬಹುದು. ಇವುಗಳಿಗೆ ಕಾಯ (ಸೊಮಾಟಿಕ್) ಪಟಿತ ಎಂದು ಹೆಸರು. ಈ ಕಾಯ ಪಟಿತಗಳನ್ನು ಸಾಮಾನ್ಯ ಕೋಶಗಳೊಂದಿಗೆ ಸಂಕರಗೊಳಿಸಿದರೆ ಪಟಿತಗಳು ಪ್ರತ್ಯೇಕವಾಗುವುದಿಲ್ಲ. ಆದ್ದರಿಂದ ಈ ಕಾಯಿ ಪಟಿತಗಳು ಕೋಶದ್ರವ್ಯ ಜೀನ್‌ಗಳ ಮೇಲಿರುತ್ತವೆ ಎಂದು ತಿಳಿದುಬರುತ್ತದೆ. ಪ್ರತ್ಯೇಕತಾ ಮತ್ತು ಕಾಯ ಪಟಿತಗಳನ್ನು ಸಂಕರಗೊಳಿಸಿದರೆ ಸಾಮಾನ್ಯ ಸಮುದಾಯಗಳೇ ದೊರೆಯುತ್ತವೆ. ಈ ಪಟಿತಗಳ ಸಂಯೋಗಿಯಿಂದ ಸಾಮಾನ್ಯ ಸಮುದಾಯ ಉಂಟಾಗಬೇಕಾದರೆ ಪ್ರತ್ಯೇಕತಾ ಪಟಿತಗಳಿಂದ ಕೋಶದ್ರವ್ಯ ಹಾಗೂ ಕಾಯ ಸಮುದಾಯದಿಂದ ಕೋಶಕೇಂದ್ರಗಳ ಸಂಯೋಗವಾಗಬೇಕಾಗುತ್ತದೆ.

ನ್ಯೂರೊಸ್ಪೊರಾದಲ್ಲಿ ಪೋಕಿ ಎಂಬ ವಿಧ ಕಿಣ್ವದ ಅಸಮಗ್ರತೆಯಿಂದ ನಿಧಾನವಾಗಿ ಬೆಳೆಯುವುದು. ಪೋಕಿ ಸಾಮಾನ್ಯ ಕಾಡು ಮಾದರಿ (ವೈಲ್ಡ್ ಟೈಪ್) ಯೊಂದಿಗೆ ಸಂಕರಗೊಳಿಸಿದಾಗ ಪ್ರತ್ಯೇಕತೆ (ಸೆಗ್ರೇಷನ್) ಯಾಗುವುದಿಲ್ಲ. ಪೋಕಿ ಮತ್ತು ಪಟಿತಗಳ ವ್ಯತ್ಯಾಸ ಕಿಣ್ವಗಳಲ್ಲಿ ಮಾತ್ರ. 1964 ರಲ್ಲಿ ಲಕ್ ಮತ್ತು ರೀಷ ಎಂಬುವವರು ಮೈಟೋಕಾಂಡ್ರಿಯದಿಂದ ಡಿಎನ್‌ಎ ಯನ್ನು ಪ್ರತ್ಯೇಕಿಸಿ ಪೋಕಿ ಜೀನ್ ಮೈಟೊಕಾಂಡ್ರಿಯದಲ್ಲಿರುತ್ತದೆ ಎಂದು ತೋರಿಸಿದರು.

ಪ್ಯಾರಾಮೇಸಿಯಂನಲ್ಲಿ ಕಪ್ಪ ಕಣಗಳು : ಪ್ಯಾರಾಮೇಸಿಯಂನಲ್ಲಿ ನಿರ್ಲಿಂಗ ಪುನರುತ್ಪತ್ತಿ ಸಾಮಾನ್ಯ. ಅಪರೂಪಕ್ಕೆ ಲೈಂಗಿಕ ಪುನರುತ್ಪತ್ತಿಯಾಗುತ್ತದೆ. ನಿರ್ಲಿಂಗ ತಳಿಗಳ ಒಂದು ವಿಧವು ಸಾಯುತ್ತದೆ. ಇದನ್ನು ಸಂವೇದಿ ಎಂದೂ, ಸಾಯದೇ ಉಳಿಯುವ ವಿಧವನ್ನು ಮಾರಕ ಎಂದೂ ಹೆಸರಿಸಲಾಗಿದೆ. ಇದರ ಆನುವಂಶೀಯತೆಯ ನಿರ್ಧಾರವು ಅನುಬಂಧನೆ (ಕಾಂಜುಗೇಶನ್) ಅವಲಂಬಿಸಿದೆ. ಅನುಬಂಧನೆಯಲ್ಲಿ ಸೂಕ್ಷ್ಮಕೋಶ ಕೇಂದ್ರ ದಾನಿಯಿಂದ ಗ್ರಾಹಕಕ್ಕೆ (ರಿಸಿಪಿಯಂಟ್) ಕೋಶದ್ರವ್ಯದ ಸೇತುವೆಯ ಮೂಲಕ ಸಾಗಣೆಯಾಗುತ್ತದೆ. ಕೋಶದ್ರವ್ಯದ ಸೇತುವೆ ಕೆಲವು ಸಂದರ್ಭಗಳಲ್ಲಿ ಕೋಶ ಕೇಂದ್ರದ ಸಾಗಣೆಯಾದ ನಂತರವೂ ಬಹಳ ಸಮಯದವರೆಗೆ ಉಳಿಯುತ್ತದೆ. ಇಂಥ ಸಂದರ್ಭಗಳಲ್ಲಿ ಕೋಶದ್ರವ್ಯ ಒಂದು ಕೋಶದಿಂದ ಇನ್ನೊಂದು ಕೋಶಕ್ಕೆ ಹರಿಯುತ್ತದೆ. ನಂತರ ಕೋಶದ್ರವ್ಯ ಬಂಧ ಕಡಿದು ಎರಡೂ ಕೋಶಗಳು ಬೇರ್ಪಡುತ್ತವೆ. ಮಾರಕ ಮತ್ತು ಸಂವೇದಿಗಳ ಮಧ್ಯೆ ಅನುಬಂಧನ ಕ್ರಿಯೆ ನಡೆಯುವುದರಿಂದ ಸಂವೇದಿಗಳು ಈ ಸಮಯದಲ್ಲಿ ನಿರೋಧಕಗಳಂತೆ ವರ್ತಿಸುತ್ತವೆ. ಸೊನೆಬಾರ್ನ್ಸ್ ಎಂಬಾತ 1938 ರಲ್ಲಿ ಮಾರಕ 51 ಮತ್ತು ಸಂವೇದಿ 52ನೇ ತಳಿಗಳನ್ನು ಸಂಕರಗೊಳಿಸಿದಾಗ ಮಾರಕಗಳು ಮಾರಕಗಳಾಗಿಯೂ ಸಂವೇದಿಗಳು ಸಂವೇದಿಗಳೇ ಆಗಿರುತ್ತವೆ ಎಂದು ಕಂಡುಹಿಡಿದ. ಏಕೆಂದರೆ ಇಲ್ಲಿ ಕೋಶದ್ರವ್ಯ ಬಂಧ ಕೋಶಕೇಂದ್ರದ ಸಾಗಣೆಯೊಂದಿಗೇ ಕೊನೆಗೊಳ್ಳುತ್ತದೆ. ಆದರೆ ಮಾರಕ 51 ಮತ್ತು ಸಂವೇದಿ 7ನೇ ತಳಿಗಳನ್ನು ಸಂಕರಗೊಳಿಸಿದಾಗ ಸಂವೇದಿಗಳು ಮಾರಕಗಳಾಗಿ ಪರಿವರ್ತನೆಗೊಂಡಿದ್ದವು. ಏಕೆಂದರೆ ಇಲ್ಲಿ ಕೋಶದ್ರವ್ಯ ಬಂಧ ಬಹಳ ಸಮಯದವರೆಗೆ ಇರುತ್ತದೆ. ಕಪ್ಪ ಎಂಬ ಕೋಶದ್ರವ್ಯದಲ್ಲಿನ ಘಟಕ ಮಾರಕದಿಂದ ಸಂವೇದಿಯ ಕೋಶದ್ರವ್ಯಕ್ಕೆ ದಾಟಿ ಸಂವೇದಿಯು ಮಾರಕವಾಗಿ ಪರಿವರ್ತನೆಯಾಗುತ್ತದೆ ಎಂದು ನಂತರದ ಸಂಶೋಧನೆಗಳಿಂದ ಕಂಡುಬಂತು. ಈ ಕಪ್ಪ ಘಟಕ ಮಾರಕ ಸಂಬಂಧವಾದ ಜೀನ್ ಕೋಶಕೇಂದ್ರದಲ್ಲಿರಬೇಕೆ ಬೇಡವೇ ಎಂಬುದನ್ನು ನಿರ್ಧರಿಸುತ್ತದೆ. ಈ ಕಪ್ಪ ಘಟಕವು ಪ್ಯಾರಾಮೇಸಿನ್ ಎಂಬ ವಸ್ತುವನ್ನು ಮಾಧ್ಯಮದಲ್ಲಿ ಸ್ರವಿಸಿ ಸಂವೇದಿ ತಳಿಗೆ ವಿಷಯುಕ್ತ ವಾತಾವರಣವನ್ನು ನೀಡಿ ಅದನ್ನು ಸಾಯಿಸುತ್ತದೆ.

ಡ್ರೊಸಾಫಿಲಾಗಳಲ್ಲಿ ಲಿಂಗ ಪ್ರಮಾಣ : ಯಾವುದೇ ಜೀವಿಯಲ್ಲಿ ಒಮ್ಮೆ ಜನಿಸುವ ಗಂಡುಹೆಣ್ಣುಗಳ ಪ್ರಮಾಣವನ್ನು ಲಿಂಗ ಪ್ರಮಾಣ ಎಂದು ಹೇಳಲಾಗುತ್ತದೆ. ಡ್ರೊಸಾಫಿಲಾದ ಕೆಲವು ಹೆಣ್ಣುಗಳಲ್ಲಿ ಕೇವಲ ಹೆಣ್ಣು ತಳಿಗಳೆ ಅಥವಾ ಹೆಚ್ಚು ಸಂಖ್ಯೆಯ ಹೆಣ್ಣುಗಳೇ ಜನಿಸುತ್ತವೆ. ಡ್ರೊಸಾಫಿಲಾ ವಿಲ್ಲಿಸ್ಟೊನಿ ಹೆಣ್ಣುಗಳು ಏಕ ಲಿಂಗಸ್ಥಿತಿಯನ್ನು ಹೊಂದಿದ್ದರೂ ಕೆಲವು ಬಾರಿ ಅಪರೂಪದ ಗಂಡು ಸಂತಾನ ಪಡೆಯುತ್ತವೆ. ಈ ಗಂಡುಗಳನ್ನು ಸಾಮಾನ್ಯ ಹೆಣ್ಣುಗಳೊಂದಿಗೆ ಸಂಕರಗೊಳಿಸಿದಾಗ ಅವುಗಳ ಸಂತಾನಗಳು ಸಾಮಾನ್ಯ ಮಾದರಿಯವು. ಗಂಡುಗಳನ್ನು ಅಸಾಮಾನ್ಯ ಹೆಣ್ಣುಗಳೊಡನೆ ಸಂಕರಗೊಳಿಸಿದರೆ ಅಸಾಮಾನ್ಯ ಹೆಣ್ಣುಗಳೇ ಜನಿಸುವುವು. ಲಿಂಗ ಪ್ರಮಾಣ ಸ್ಥಿತಿ ಕೇವಲ ಹೆಣ್ಣುಗಳಿಂದ ಮಾತ್ರ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗುತ್ತದೆ ಎಂದು ಈ ಪ್ರಯೋಗ ತೋರಿಸುತ್ತದೆ. ಅಸಾಮಾನ್ಯ ಲಿಂಗ ಪ್ರಮಾಣದ ಹೆಣ್ಣಿನ ಎಲ್ಲಾ ವರ್ಣತಂತುಗಳನ್ನೂ ಸಾಮಾನ್ಯ ಹೆಣ್ಣುಗಳ ವರ್ಣತಂತುವಿಗೆ ಬದಲಾಯಿಸಿದಾಗ ಕೂಡಾ, ಸಾಮಾನ್ಯ ಹೆಣ್ಣಿನ ಸಾಮಾನ್ಯ ಲಿಂಗ ಪ್ರಮಾಣ ಮುಂದುವರಿಯುವುದು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ಈ ಹೆಣ್ಣುಗಳ ಅಂಗಾಂಶವನ್ನು ಅಧ್ಯಯನ ಮಾಡಿದಾಗ ಈ ಕೋಶಗಳ ಕೋಶದ್ರವ್ಯದಲ್ಲಿ ಟ್ರೆಪೋನೀಮಾ ಎಂಬ ಸ್ಪೈರೋಕೇಟ ಗುಂಪಿನ ಪರಾವಲಂಬಿಗಳು ಕಂಡುಬಂದುವು. ಇವೇ ಈ ಲಿಂಗ ಪ್ರಮಾಣ ಸ್ಥಿತಿಗೆ ಕಾರಣ ಎಂದು ಕಲ್ಪಿಸಲಾಯಿತು. ಈ ಪರಾವಲಂಬಿಯತ್ತ ಅಂಡಾಣುಗಳು ವೀರ್ಯಾಣುವಿನೊಂದಿಗೆ ಸಂಯೋಗವಾದಾಗ ಅವು ಸತ್ತುಹೋಗುತ್ತವೆ ಎಂದೂ ಕಂಡು ಹಿಡಿಯಲಾಯಿತು.

ಎಪಿಸೋಮುಗಳು : ಕೋಶದ್ರವ್ಯದಲ್ಲಿ ಕೋಶಕೇಂದ್ರದ ಹೊರಭಾಗದಲ್ಲಿರುವ ಸ್ವಾಯತ್ತ ವರ್ಣತಂತುಗಳು (ಕ್ರೊಮೋಸೋಮ್). ಇವು ಬಾಹ್ಯ ವರ್ಣತಂತು (ಎಕ್ಸ್ಟ್ರಾ ಕ್ರೊಮೋಸೋಮ್) ಆನುವಂಶೀಯತೆಯಲ್ಲಿ ಭಾಗವಹಿಸುತ್ತವೆ. ಬ್ಯಾಕ್ಟೀರಿಯಾಗಳಲ್ಲಿ ಪರಾವಲಂಬಿಯಾಗಿ ಪುನರುತ್ಪತ್ತಿಯಾಗುವ ವೈರಸ್ಸು ಇದಕ್ಕೆ ಉತ್ತಮ ಉದಾಹರಣೆ.

ಟಿ–4 ವೈರಸ್ಸು ಸೋಂಕಿನಿಂದ ಬ್ಯಾಕ್ಟೀರಿಯಾ ಸಾಯುತ್ತದೆ. ಏಕೆಂದರೆ ಆ ವೈರಸ್ಸು ಬ್ಯಾಕ್ಟೀರಿಯಾ ವೃದ್ಧಿಯಾಗಿ ಆನಂತರ ಮರಿ ವೈರಸ್ಸುಗಳು ಬ್ಯಾಕ್ಟೀರಿಯಾ ಕೋಶವನ್ನು ಛಿದ್ರಗೊಳಿಸಿ ಹೊರಬರುತ್ತದೆ. ಇವು ಸಾಂಕ್ರಾಮಿಕ (ವಿರುಲಂಟ್) ವೈರಸ್ಸುಗಳು. ಕೆಲವು ಸಂದರ್ಭಗಳಲ್ಲಿ ಈ ವೈರಸ್ಸಿನ ವರ್ಣತಂತು ಅತಿಥೇಯ ವರ್ಣತಂತುವಿನೊಂದಿಗೆ ಸಂಯೋಗವಾಗುತ್ತದೆ. ಈ ಹಂತವನ್ನು ಕಾಯ ಹಂತ (ವೆಜಿಟೇಟಿವ್) ಎನ್ನುವರು. ಈ ಕ್ರಿಯಾಹೀನ ವರ್ಣತಂತು ಅಥವಾ ಪ್ರೊವೈರಸ್ಸು ಅಪರೂಪವಾಗಿ ಸಾಂಕ್ರಾಮಿಕವಾಗಿ ಮಾರ್ಪಡುತ್ತದೆ. ಆಗ ವೈರಸ್ಸಿನ ವರ್ಣತಂತು ಬ್ಯಾಕ್ಟೀರಿಯಾದ ವರ್ಣತಂತುವಿನಿಂದ ಹೊರಬಂದು ವೈರಸ್ಸುಗಳು ವೃದ್ಧಿಯಾಗಿ ಬ್ಯಾಕ್ಟೀರಿಯಾ ಸಾಯುತ್ತದೆ.

ಮಾತೃವಿನ ಆದಿಯ ನಿರ್ಧಾರಕಗಳು : ಈ ಆನುವಂಶೀಯತೆಯಲ್ಲಿ ವಿವಿಧ ಕಾರಣಗಳಿಂದ ತೋರು ಮಾದರಿಯಲ್ಲಿ ಉಂಟಾದ ವ್ಯತ್ಯಾಸವು ಒಂದೆರಡು ಪೀಳಿಗೆಗಳ ನಂತರ ನಶಿಸಿಹೋಗುತ್ತದೆ. ಇಲ್ಲಿ ಯಾವುದೋ ಬಾಹ್ಯ ಶಕ್ತಿ ಅಂಡಾಣುವಿನ ಕೋಶದ್ರವ್ಯದ ಮೇಲೆ ಪರಿಣಾಮ ಬೀರುತ್ತದೆ. ಈ ನಿರ್ಧಾರ ಕ್ರಿಯೆಯನ್ನು ಆನುವಂಶೀಯತೆ ಎನ್ನಲಾಗದಿದ್ದರೂ ಮೆಂಡಲೀಯ ಅಥವಾ ಬಾಹ್ಯ ವರ್ಣತಂತು ಆನುವಂಶೀಯತೆಯಲ್ಲಿ ಸೇರಿಸಲಾಗುತ್ತದೆ.

ಬಸವನಹುಳುವಿನ ಶಂಖುಸುರುಳಿ ಮಾತೃವಿನ ಆದಿಮ ನಿರ್ಧಾರಕ್ಕೆ ಉತ್ತಮ ಉದಾಹರಣೆ. ಬಾಯಕಾಟ ಮತ್ತು ಸಹೋದ್ಯೋಗಿಗಳು 1930 ರಲ್ಲಿ ಇದನ್ನು ಕಂಡುಹಿಡಿದರು. ಬಸವನ ಹುಳುವಿನಲ್ಲಿ (ಲಿಮ್ನಿಯ ಪೆರೆಗ್ರ) ಬಲಮುರಿ ಹಾಗೂ ಎಡಮುರಿ ಶಂಖಗಳಿವೆ. ಬಲಮುರಿಯು ಎಡಮುರಿಗಿಂತ ಪ್ರಬಲವಾದದ್ದು. ಆದರೆ ಸುರುಳಿ ವಿಧಾನ ಜೀನ್‌ಗಳನ್ನು ಅನುಸರಿಸಿದೆ. ಅದರ ತಾಯಿಯನ್ನು ಅನುಸರಿಸುತ್ತದೆ. ಬಲಮುರಿಯ ಜೀನ್ ಅನ್ನು ಭಿನ್ನಯುಗ್ಮ ಅಥವಾ ಸಮಯುಗ್ಮ ಸ್ಥಿತಿಯಲ್ಲಿರುವ ತಾಯಿಯಿಂದ ಉದ್ಭವಿಸುವ ಪೀಳಿಗೆಗಳು ಸಾಮಾನ್ಯವಾಗಿ ಬಲಮುರಿಯಾಗಿಯೂ ಎಡಮುರಿಯ ಜೀನ್ ಇರುವ ತಾಯಿಯಿಂದ ಕೇವಲ ಎಡಮುರಿಯ ಪೀಳಿಗೆಗಳೂ ಜನಿಸುತ್ತವೆ.

ಮಿಯಾಸಿಸ್‌ನಲ್ಲಿ ಕದುರಿನ (ಸ್ಪಿಂಡಲ್) ಸ್ಥಾನವಿನ್ಯಾಸ ಶಂಕು ಸುರುಳಿಗೆ ನಿರ್ದೇಶನ ನೀಡುತ್ತದೆ. ಕದುರಿನ ತುದಿ ಎಡಭಾಗಕ್ಕೆ ಚಾಚಿಕೊಂಡಿದ್ದರೆ ಎಡಮುರಿಯಾಗಿಯೂ, ಬಲಕ್ಕೆ ಚಾಚಿಕೊಂಡಿದ್ದರೆ ಬಲಮುರಿ ಶಂಖವೂ ಬೆಳೆಯುತ್ತದೆ. ಯಾವುದೋ

ಅಗೋಚರ ಶಕ್ತಿ ತಾಯಿಯ ಜೀನ್ ಮಾದರಿಯ ಮೇಲೆ ಪರಿಣಾಮ ಬೀರಿ, ಅದು ಅಂಡಾಣು ಬೆಳೆವಣಿಗೆಯಾಗುವಾಗ ನಿರ್ದೇಶಿಸುತ್ತದೆ. ಇದೇ ಮಾತೃವಿನ ಆದಿಮ ನಿರ್ಧಾರಕ್ಕೆ ಕಾರಣ ಎಂದು ಭಾವಿಸಲಾಗಿದೆ. (ಎಸ್.ಎನ್.ಎಚ್.)

**ಕೋಶಾವಸ್ಥೆ:** ಹೋಲೊಮೆಟಬೋಲ ವಿಭಾಗದಲ್ಲಿರುವ ಕೋಲಿಯಾಪ್ಟೆರ, ಮೆಗಲಾಪ್ಟೆರ, ರ್‍ಯಾಫಿಡಿಯಾಪ್ಟೆರ, ಪ್ಲ್ಯಾನಿಪೆನ್ನಿಯ, ಮೆಕಾಪ್ಟೆರ, ಟ್ರೈಕಾಪ್ಟೆರ, ಲಿಪಿಡಾಪ್ಟೆರ, ಡಿಪ್ಟೆರ, ಹೈಮನಾಪ್ಟೆರ, ಸ್ಟ್ರೆಪ್ಸಿಪ್ಟೆರ ಮತ್ತು ಸೈಫೊನಾಪ್ಟೆರ ಗಣದಲ್ಲಿನ ಕೀಟಗಳ ಜೀವನ ಚರಿತ್ರೆಯಲ್ಲಿ ತತ್ತಿಯಿಂದ ಹೊರಬರುವ ಮರಿಯು ಪಿತೃಗಳಂತೆ ದೇಹ ರಚನೆಯಲ್ಲಿ ಭಿನ್ನವಾಗಿರುತ್ತವೆ. ಇವುಗಳಿಗೆ ಲಾರ್ವಗಳೆಂದು ಹೆಸರು. ಇವು ಗಾತ್ರದಲ್ಲಿ ಬೆಳೆಯುತ್ತವೆ ಮತ್ತು ಕಾಲಕಾಲಕ್ಕೆ ನಿರ್ಮೋಜನೆಯನ್ನು ನಡೆಸುತ್ತವೆ ಮತ್ತು ಪ್ರಬುದ್ಧವಸ್ಥೆಯನ್ನು ತಲುಪುವ ಮೊದಲು ಕೋಶವನ್ನು ಸೃಷ್ಟಿಸಿ ಕೊಂಡು ಕೆಲವು ಕಾಲ ಗುಪ್ತವಾಗಿದ್ದು, ನಂತರ ಪ್ರಬುದ್ಧಜೀವಿಯು ಈ ಕೋಶವನ್ನು ಭೇದಿಸಿಕೊಂಡು ಹೊರಬರುತ್ತದೆ. ಈ ಅವಸ್ಥೆಗೆ ಪ್ಯೂಪ ಅಥವಾ ಕೋಶಾವಸ್ಥೆ ಎಂದು ಹೆಸರು. ಇದು ಹೊರನೋಟಕ್ಕೆ ಚಟುವಟಿಕೆಗಳಿಲ್ಲದ ಹಂತವಾಗಿ ಕಂಡುಬಂದರೂ, ವಾಸ್ತವವಾಗಿ ಹೆಚ್ಚಿನ ಶಾರೀರ ಕ್ರಿಯಾ ಹಾಗೂ ಬೆಳೆವಣಿಗೆಯ ಚಟುವಟಿಕೆಯ ಹಂತ. ಈ ಹಂತದಲ್ಲಿ ಸ್ನಾಯುಗಳು, ಅನ್ನನಾಳದಂತಹ ಲಾರ್ವ ಅಂಗಾಂಶಗಳು ನಶಿಸಿ ಹೊಸ ಪ್ರಬುದ್ಧಾವಸ್ಥೆಯ ಅಂಗಾಂಶಗಳ ನಿರ್ಮಾಣವಾಗುತ್ತವೆ. ಈ ಕ್ರಿಯೆಗಳಿಗೆ ಕ್ರಮವಾಗಿ ಅಂಗಾಂಶ ಕ್ಷಯ (ಹಿಸ್ಟಾಲಿಸಿಸ್) ಮತ್ತು ಅಂಗಾಂಶೋದ್ಭವ (ಹಿಸ್ಟೊಜೆನಿಸಿಸ್) ಎಂದು ಹೆಸರು. ಈ ರೀತಿ ಬೆಳೆವಣಿಗೆಯಲ್ಲಿ ಲಾರ್ವ ಮತ್ತು ಕೋಶಾವಸ್ಥೆಗಳಿರುವುದನ್ನು ರೂಪಪರಿವರ್ತನೆ ನಡೆಯುವ ಜೀವನಚರಿತ್ರೆ ಎನ್ನುವರು.

ಕೋಶಾವಸ್ಥೆಯ ಅವಧಿ ಮತ್ತು ಅದರ ಚಟುವಟಿಕೆಗಳು ಹಾರ್ಮೋನುಗಳ ನಿಯಂತ್ರಣಕ್ಕೆ ಒಳಪಟ್ಟಿವೆ. ಕೆಲವು ಕೀಟಗಳಲ್ಲಿ ಕೋಶಾವಸ್ಥೆಯಲ್ಲಿ ನಡೆಯಬೇಕಾದ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡು ಸುಪ್ತಾವಸ್ಥೆಯಲ್ಲಿ ಕಂಡುಬರುತ್ತದೆ. ಇದನ್ನು ಡೈಯಪಾಸ್ ಎಂದು ಕರೆಯುತ್ತಾರೆ. ಇದು ಪ್ರತಿಕೂಲವಾದ ಪರಿಸರದ ಪ್ರಭಾವಗಳನ್ನು ತಾಳಿಕೊಳ್ಳುವ ಮತ್ತು ಬಗೆಹರಿಸಿಕೊಳ್ಳುವ ಅನುಕೂಲಕರ ಹೊಂದಾಣಿಕೆ. ಇದರಿಂದಾಗಿ ಕೀಟಗಳು ತಮ್ಮ ಎಳೆಯ ಮರಿಗಳನ್ನು ಅನುಕೂಲವಾದ ಪರಿಸ್ಥಿತಿಗಳಲ್ಲಿ ಹೆರಲು ಅವಕಾಶವಾಗುತ್ತದೆ. ಈ ರೀತಿಯ ಡೈಯಪಾಸ್ ಸುಪ್ತಾವಸ್ಥೆಯನ್ನು ರೇಷ್ಮೆ ಚಿಟ್ಟೆ, ಒಂಟಿ ಸಂತಾನಿ (ಯೂನಿವೊಲ್ಟೈನ್) ತಳಿಗಳಲ್ಲಿ ಕಾಣಬಹುದು. ಇಲ್ಲಿ ಬೆಳೆವಣಿಗೆ ಶರದೃತುವಿನಲ್ಲಿ ಸ್ಥಗಿತಗೊಂಡು ಮರಿಗಳು ವಸಂತಋತುವಿನಲ್ಲಿ ಹೊರಬರುತ್ತವೆ. ನರಸ್ರಾವಿ ಹಾರ್ಮೋನುಗಳ ಸಂಶ್ಲೇಷಣೆ ಮತ್ತು ಬಿಡುಗಡೆಯ ಮೇಲೆ ಪ್ರಭಾವ ಬೀರುವುದು. ಇದೇ ರೀತಿ ಅರಾಶ್ನಿಯ ಲೆವಾನಾ ಚಿಟ್ಟೆಗಳಲ್ಲಿ ದೀಪ್ತಿ ಕಾಲವು ಡೈಯಪಾಸ್ ನಡೆಯುವುದನ್ನು ನಿರ್ಧರಿಸುತ್ತದೆ. ಕೋಶಾವಸ್ಥೆಯ ಡೈಯಪಾಸ್‌ನಲ್ಲಿ ಬೆಳೆವಣಿಗೆ ಸಂಪೂರ್ಣವಾಗಿ ಸ್ಥಗಿತಗೊಳ್ಳುತ್ತದೆಯಾದರೂ ಹೃದಯದ ಬಡಿತ ಅವಿಚ್ಛಿನ್ನವಾಗಿ ನಡೆಯುತ್ತದೆ. ಆಕ್ಸಿಜನ್‌ನನ್ನು ಬಳಸಿಕೊಂಡು ಕಾರ್ಬನ್ ಡೈಆಕ್ಸೈಡ್‌ನ್ನು ವಿಸರ್ಜಿಸುವ ಉಸಿರಾಟಕ್ರಿಯೆ ನಿರಂತರವಾಗಿ ನಡೆಯುತ್ತದೆ. ಆದರೆ ಉಳಿದೆಲ್ಲ ಚಯಾಪಚಯ ಕ್ರಿಯೆಗಳು ಸ್ಥಗಿತಗೊಳ್ಳುತ್ತವೆ. ಈ ರೀತಿ ಪ್ರಾಣಿಯು ಕೋಶಾವಸ್ಥೆಯಲ್ಲಿ 8 ರಿಂದ 10 ತಿಂಗಳವರೆಗೆ ಕಳೆಯುತ್ತವೆ.

ಕಂಟಕ ಚರ್ಮಿ ವಂಶಕ್ಕೆ ಸೇರಿದ ಹೋಲೊಥುರಾಯಿಡಿಯ ವರ್ಗದ ಪ್ರಾಣಿಗಳ ಬೆಳೆವಣಿಗೆಯಲ್ಲಿಯೂ ಕೋಶಾವಸ್ಥೆ ಕಂಡುಬರುತ್ತದೆ. (ಎಚ್.ಎಚ್.ಎಸ್.)

**ಕೋಳಿ:** ಏವಿಸ್, ವರ್ಗ, ಗ್ಯಾಲಿಫಾರ್ಮೀಸ್ ಗಣ, ಫೇಸಿಯಾನಿಡೆ ಕುಟುಂಬಕ್ಕೆ ಸೇರಿದ ಹಕ್ಕಿ. ಮಾನವ ಸಾಕಿರುವ ವಿವಿಧ ಬಗೆಯ ಕೋಳಿಗಳೆಲ್ಲ ಗ್ಯಾಲಸ್ ಗ್ಯಾಲಸ್ ಎಂಬ ಶಾಸ್ತ್ರೀಯ ಹೆಸರಿನ ಕಾಡುಕೋಳಿಯಿಂದ ಪಡೆದವಾಗಿವೆ. ಕೋಳಿ ನೆಲದ ಮೇಲೆ ಮಾತ್ರ ವಾಸಿಸಬಲ್ಲುದು. ಹಾರುವ ಸಾಮರ್ಥ್ಯ ಹೆಚ್ಚಾಗಿಲ್ಲ. ರೆಕ್ಕೆಗಳನ್ನು ವೇಗವಾಗಿ ಬಡಿಯುತ್ತ ಒಂದು ರೀತಿಯಲ್ಲಿ ಕುಪ್ಪಳಿಸುತ್ತ ಸಾಗಬಲ್ಲುದು. ಬೇರೆ ಹಕ್ಕಿಗಳಿಗೆ ಹೋಲಿಸಿದರೆ ಇದರ ದೇಹರಚನೆ ಮತ್ತು ಗುಣಲಕ್ಷಣಗಳು ಬಹಳ ಹಿಂದುಳಿದ ರೀತಿಯವು. ಮೂಗಿನ ಹೊಳ್ಳೆಯ ಮೇಲೆ ಪುಕ್ಕಗಳಿಲ್ಲ.

ನಸುಬಾಗಿದ ಚಿಕ್ಕ ಮತ್ತು ದೃಢವಾದ ಕೊಕ್ಕು, 4 ಬೆರಳುಗಳುಳ್ಳ ಪಾದಗಳು (ಇವುಗಳಲ್ಲಿ 3 ಬೆರಳುಗಳು ಮುಂಭಾಗದೆಡೆಗೂ ಒಂದು ಹಿಂದಕ್ಕೂ ಚಾಚಿವೆ). ಪಾದಗಳ ಮೇಲೆ ಪುಕ್ಕಗಳಿಲ್ಲದಿರುವುದು, ಕತ್ತಿನೊಳಗೆ ಗಾಳಿಚೀಲಗಳಿಲ್ಲದಿರುವುದು ಚಿಕ್ಕ ರೆಕ್ಕೆಗಳು–ಇವು ಕೋಳಿಯ ಮುಖ್ಯ ಲಕ್ಷಣಗಳು. ಕಾಳುಗಳೇ ಇದರ ಪ್ರಧಾನ ಆಹಾರ. ಕಾಡುಕೋಳಿ ಒಂದು ಸಲಕ್ಕೆ 8–12 ಮೊಟ್ಟೆಯಿಡುವುದಾದರೂ ಸಾಕಿದ ಕೋಳಿಗಳಲ್ಲಿ ನಾಡುಕೋಳಿಗಳು ದಿನಕ್ಕೊಂದರಂತೆ ಸುಮಾರು 20 ದಿನ ಇಡುತ್ತವೆ. ಅನಂತರ ಸುಮಾರು 3–4 ತಿಂಗಳು ಕಳೆದ ಮೇಲೆ ಮತ್ತೆ ಮೊಟ್ಟೆಯಿಡಲು ಆರಂಭಿಸುತ್ತವೆ. ಫಾರಮ್ ಕೋಳಿಗಳು ದಿನಕ್ಕೆ ಒಂದು ಮೊಟ್ಟೆಯಂತೆ ವರ್ಷಕ್ಕೆ ಸುಮಾರು 240–250 ದಿನಗಳ ಕಾಲ ಮೊಟ್ಟೆಯಿಡುತ್ತವೆ.

ಕೋಳಿಗಳನ್ನು ಬಹು ಹಿಂದಿನಿಂದಲೂ ಮಾಂಸಕ್ಕಾಗಿ ಮತ್ತು ಮೊಟ್ಟೆಗಾಗಿ ಮಾನವ ಸಾಕುತ್ತಿದ್ದಾನೆ. ಅವನು ಸಾಕಿರುವ ಪಕ್ಷಿಗಳಲ್ಲೆಲ್ಲ ಕೋಳಿಯೇ ಬಹು ಪ್ರಮುಖವಾದುದು. ನೂರಾರು ವರ್ಷಗಳಿಂದ ಹಲವಾರು ಬಗೆಯ ಕೋಳಿಗಳನ್ನು ಅಡ್ಡತಳಿಯೊಡ್ಡಿಕೆಗಳಿಂದ ಪಡೆಯಲಾಗಿದ್ದು ಎಲ್ಲ ಬಗೆಗಳೂ ಕಾಡುಕೋಳಿಯಿಂದ ಭಿನ್ನವಾಗಿವೆ. ಇವುಗಳ ಸಾಕಣೆಯೂ ಒಂದು ಪ್ರಮುಖ ಉದ್ಯಮವಾಗಿ ಬೆಳೆದಿದೆ. ಕೋಳಿ ಸಾಕಣೆ ಯಾವಾಗ ಆರಂಭವಾಯಿತೆಂದು ಹೇಳುವುದು ಕಷ್ಟ. ಕ್ರಿ.ಪೂ 3,200ಕ್ಕೂ ಹಿಂದೆ ಭಾರತದಲ್ಲಿ ಕೋಳಿ ಸಾಕಣೆ ಆರಂಭವಾಯಿತೆಂದು ಅಭಿಪ್ರಾಯಪಡಲಾಗಿದೆ. ನೋಡಿ–ಕೋಳಿಸಾಕಣೆ. ***

**ಕೋಳಿ ರೋಗಗಳು:** ಕೋಳಿಯ ರೋಗಗಳನ್ನು ಗಾಯಗಳು, ಭೇದಿ, ಸಾಂಸರ್ಗಿಕ ರೋಗಗಳು ಎಂದು ಮೂರು ಸ್ಥೂಲವರ್ಗಗಳಾಗಿ ವಿಭಾಗಿಸಬಹುದು.

ಗಾಯಗಳು : ಕೋಳಿ ಹಾರಿ ಜಿಗಿದು ಬಿರುಸಾದ ಜಾಗದಲ್ಲಿ ಕುಳಿತರೆ ಅಂಗಾಲುಗಳಿಗೆ ಪೆಟ್ಟು ತಗಲಿ ಮೊದಲು ಚಿಕ್ಕ ಗಾಯವಾಗಿ ಮುಂದೆ ಕೀವು ತುಂಬಿ ಹೆಚ್ಚು ನೋವಾಗಬಹುದು. ಇದರಿಂದ ಅದು ತಿಂಡಿ ತಿನ್ನುವುದನ್ನೂ ನೀರು ಕುಡಿಯುವುದನ್ನೂ ತೊರೆಯುತ್ತದೆ ಮತ್ತು ನೋವಿನಿಂದ ಸೊರಗುತ್ತದೆ. ಇದಕ್ಕೆ ಯೋಗ್ಯ ಚಿಕಿತ್ಸೆ ಅಗತ್ಯ. ಇಂಥ ಗಾಯಗಳು ಆಗದಂತೆ ನಿವಾರಣೋಪಾಯಗಳು ಪರಿಣಾಮಕಾರಿ ಆಗುತ್ತವೆ. ಕೋಳಿಯ ಎದೆಯ ಮೇಲೆ ಗಾಯ ಆಗದಂತೆ ವಿಶೇಷ ಎಚ್ಚರಿಕೆವಹಿಸಬೇಕು. ಎದೆಯ ಮೂಳೆಯನ್ನು ಕೊರೆಯದಂಥ ತಿಂಡಿಯ ಮತ್ತು ನೀರಿನ ಪಾತ್ರೆಗಳನ್ನು ಉಪಯೋಗಿಸುವುದು ಒಳ್ಳೆಯದು. ಕಾಲುಗಳು ನಿಶ್ಯಕ್ತವಾದಾಗ ಕೋಳಿ ತನ್ನ ಎದೆಯ ಮೇಲೆ ಕೂತುಕೊಳ್ಳುವುದುಂಟು. ಇದು ಸಂಭವಿಸದಂತೆ ನೋಡಿಕೊಳ್ಳಬೇಕು. ಕೋಳಿಯ ಆಹಾರ ಸಮತೂಕವಾಗಿರುವಂತೆ ನೋಡಿಕೊಂಡಾಗ ಕಾಲುಗಳು ಬಲಿಷ್ಠವಾಗಿದ್ದು ಎದೆಯ ಮೇಲೆ ಕೂರುವ ಸಂದರ್ಭ ಒದಗುವುದಿಲ್ಲ.

ಭೇದಿ ರೋಗ : ಈ ಕೆಳಗೆ ಕಾಣಿಸಿದ ಕಾರಣಗಳಿಂದ ಕೋಳಿಗಳಲ್ಲಿ ಭೇದಿ ರೋಗ ಉಂಟಾಗಬಹುದು. 1. ಕೋಳಿಗಳು ಕುಡಿಯುವ ನೀರಿನಲ್ಲಿ ಲವಣಾಂಶ ಹೆಚ್ಚಾಗಿರುವುದು. 2.ತಿಂಡಿಯಲ್ಲಿ ಕಾಕಂಬಿಯ ಭಾಗ ಹೆಚ್ಚಾಗಿರುವುದು. 3. ಉಪಯೋಗಿಸುವ ಮೀನಿನ ಪುಡಿಯಲ್ಲಿ ಉಪ್ಪಿನ ಅಂಶ ಹೆಚ್ಚಾಗಿರುವುದು. 4. ನೀರಿನ ಪಾತ್ರೆಯನ್ನು ಚೆನ್ನಾಗಿ ಉಜ್ಜದಿದ್ದಾಗ ಅದರೊಳಗೆ ಬೆಳೆದ ಹಾವಸೆ ಮಿಶ್ರಿತ ನೀರನ್ನು ಕುಡಿಯುವುದು. 5. ಅನ್ನನಾಳಿಕೆಯ ರೋಗ. 6. ಜಂತುಹುಳುಗಳ ಏರಿಕೆ.

ರಕ್ತಭೇದಿ : ಇದು ಚಿಕ್ಕ ಮರಿಗಳಲ್ಲಿ ಹೆಚ್ಚಾಗಿ ಕಂಡುಬರುವುದು. 2.ವಾರದ ವಯಸ್ಸಿನಿಂದ 12 ವಾರದ ವಯಸ್ಸಿನವರೆಗೆ ಇರುವ ಕೋಳಿಗಳ ಗುಂಪುಗಳಲ್ಲಿ ಈ ರೋಗ ಹೆಚ್ಚಾಗಿ ಕಂಡುಬರುತ್ತದೆ. ಇದರಿಂದ ಬಳಲುವ ಕೋಳಿಮರಿಗಳು ಮುದುಡಿಕೊಂಡು ರೆಕ್ಕೆಗಳನ್ನು ಜೋತುಬಿಟ್ಟಿರುತ್ತವೆ. ಕುತ್ತಿಗೆಯನ್ನು ಒಳಗೆ ಬಗ್ಗಿಸಿಕೊಂಡು ತೂಕಡಿಸುತ್ತಿರುತ್ತವೆ. ಆಹಾರಸೇವನೆಯನ್ನು ನಿಲ್ಲಿಸಿಯೇ ಬಿಡುತ್ತವೆ. ಈ ರೋಗವನ್ನು ಸೂಕ್ತ ಔಷಧಿಗಳ ಅನುಪಾನದಿಂದ ಗುಣಪಡಿಸಬೇಕು.

ಸಾಂಸರ್ಗಿಕ ರೋಗಗಳು : 1. ರಾಣಿಖೇತ ಅಥವಾ ಕೊಕ್ಕರೆರೋಗ–ಇದು ಎಲ್ಲ ವಯಸ್ಸಿನ ಕೋಳಿಗಳಿಗೂ ತಗಲುವುದುಂಟು. ಒಮ್ಮೆ ಬಂದರೆ ಪಿಡುಗಿನಂತೆ ಹಬ್ಬಿ ಎಲ್ಲ ಕೋಳಿಗಳನ್ನೂ ಧ್ವಂಸಮಾಡುತ್ತದೆ. ತೂಕಡಿಕೆ, ತುರಾಯಿ ಮತ್ತು ಪದರಗಳು ಕಳೆಗುಂದಿರುವಿಕೆ, ಉಸಿರಾಟದಲ್ಲಿ ಆಗುವ ತೊಂದರೆ ಮತ್ತು ಸದ್ದು ಈ ವ್ಯಾಧಿಯ ಲಕ್ಷಣಗಳು. ಹಸಿರಾದ ಮತ್ತು ಕೆಟ್ಟ ವಾಸನೆಯ ಭೇದಿಯಿಂದ ಕೋಳಿ ಸಂಕಟಪಡುತ್ತಿರುತ್ತದೆ.

2. ಪಾರ್ಶ್ವವಾಯು : ಈ ಕಾಯಿಲೆಯಿಂದ ಕೋಳಿಯ ಕುತ್ತಿಗೆ ಒಂದು ಕಡೆ ತಿರುಗಬಹುದು ಅಥವಾ ಒಂದು ಕಡೆ ಮುದುಡಿಕೊಳ್ಳಬಹುದು. ಒಂದು ಕಾಲು ಅಥವಾ ಎರಡು ಕಾಲುಗಳು ಪಾರ್ಶ್ವನೋವಿನಿಂದ ಬಳಲುತ್ತಿರಬಹುದು. ಕಾಲಿಗೆ ಪಾರ್ಶ್ವವಾಯು ಬಂದಾಗ ಕೋಳಿ ನಿಲ್ಲಲು ಸಾಧ್ಯವಾಗದ್ದರಿಂದ ಅದು ಒಂದೇ ಕಡೆ ಬೀಳುವುದು. ರೋಗಬಂದಮೇಲೆ ಚಿಕಿತ್ಸೆ ಅಪ್ರಯೋಜಕ. ಆದ್ದರಿಂದ ಮುನ್ನೆಚ್ಚರಿಕೆ ಅವಶ್ಯ.

3. ಮೈಲಿಬೇನೆ : ಬೇಸಗೆ ಕಾಲದಲ್ಲಿ ಈ ಬೇನೆ ಕೋಳಿಗಳಿಗೆ ತಗಲುವ ಸಂಭವವುಂಟು. ವಯೋಪರಿಮಿತಿ ಇಲ್ಲ. ಈ ರೋಗದಿಂದ ಕೋಳಿಗಳು ಅಶಕ್ತವಾಗಿ ಉತ್ಪನ್ನ ಕಡಿಮೆಯಾಗುವುದು. ಕೋಳಿಗಳ ತುರಾಯಿ ಅಥವಾ ಜುಟ್ಟುಗಳಲ್ಲಿ ಮತ್ತು ಪದರಗಳಲ್ಲಿ ಗುಳ್ಳೆಗಳು ಕಾಣಿಸಿಕೊಳ್ಳುವುದು ಮೈಲಿಬೇನೆಯ ಲಕ್ಷಣ. ಬಾಯಿಯ ಸಂದಿನಲ್ಲಿ ಮತ್ತು ಕಾಲುಬೆರಳುಗಳ ಸಂದಿನಲ್ಲಿ ಸಹ ಈ ಗುಳ್ಳೆಗಳು ಕಾಣಿಸಿಕೊಳ್ಳಬಹುದು. ಇವು ಕಣ್ಣುಗಳ

ಮೇಲೆ ಆದರೆ ಕಣ್ಣುನೋವಿನಿಂದ ಕುರುಡು ಸಂಭವಿಸುವುದು. ಮುಂದೆ ಈ ಗುಳ್ಳೆಗಳು ಕೀವು ತುಂಬಿಕೊಂಡು ಅನಂತರ ಒಣಗಿ ಕರ್‍ರಗೆ ಆಗುವುವು.

4. ನೆಗಡಿ : ಹವಾಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆ ತಲೆದೋರಿದರೆ, ಸ್ವಲ್ಪವೇ ಜಾಗದಲ್ಲಿ ಕೋಳಿಗಳು ಹೆಚ್ಚು ಸಂಖ್ಯೆಯಲ್ಲಿದ್ದರೆ, ಲಿಟ್ಟರ್ ತೇವವಾಗಿದ್ದರೆ ಗಾಳಿಸಂಚಾರ ಚೆನ್ನಾಗಿಲ್ಲದಿದ್ದರೆ, ಲಿಟ್ಟರಿನಲ್ಲಿ ಮಲ ತುಂಬಿ ಅಮೋನಿಯ ವಾಸನೆ ಹೆಚ್ಚುತ್ತಿದ್ದರೆ ಆಗೆಲ್ಲ ಕೋಳಿಗಳಿಗೆ ನೆಗಡಿರೋಗ ಆಗುವ ಸಂಭವವುಂಟು. ಆಹಾರದಲ್ಲಿ ಜೀವಸತ್ತ್ವಗಳ ಅಂಶ ಕಡಿಮೆ ಇದ್ದಾಗ ಸಹ ಈ ರೋಗ ತಲೆದೋರುವುದುಂಟು. ಕಣ್ಣು ಮೂಗುಗಳಿಂದ ನೀರು ಸೋರುತ್ತದೆ. ಕಣ್ಣುಗಳು ಮತ್ತು ತಲೆ ಊದಿಕೊಳ್ಳುತ್ತವೆ. ಆಗ ಕೋಳಿಗಳು ತಿಂಡಿ ತಿನ್ನುವುದು ಕಡಿಮೆ ಮಾಡುತ್ತವೆ.

5. ಸ್ಪೈರೋಕೀಟ ಗ್ಯಾಲಿನೇರಮ್ : (ಈಚೆಗೆ ಬೊರಿಲ್ಲಾ ಗ್ಯಾಲಿನೇರಮ್ ಎಂದು ಕರೆಯಲಾಗಿದೆ) ಎಂಬ ಜೀವಿಯಿಂದ ಕೋಳಿಗಳಲ್ಲಿ ಸ್ಪೈರೋಕೀಟ ರೋಗ ಉಂಟಾಗುತ್ತದೆ. ಈ ಜೀವಿಯ ಅನೇಕ ಸಮೀಪ ಸಂಬಂಧಿಗಳು ಮನುಷ್ಯ ಮತ್ತು ಪ್ರಾಣಿಗಳಲ್ಲಿ ರೋಗ ಉಂಟುಮಾಡಬಲ್ಲವು. ಅವುಗಳಲ್ಲಿ ಮನುಷ್ಯನ ಪರಂಗಿ (ಸಿಫಿಲಿಸ್) ರೋಗಕ್ಕೆ ಕಾರಣವಾದ ಟ್ರಿಪೊನಿಮ ಪಲ್ಲಿಡ ಕೂಡ ಒಂದು. ಏಕಕೋಶ ಜೀವಿಗಳ ವಂಶದಲ್ಲಿ ಹಿಂದೆ ಸೇರಿಸಲಾಗಿದ್ದ ಸ್ಪೈರೋಕೀಟ ಜೀವಿ ಈಗ ಬ್ಯಾಕ್ಟೀರಿಯ ಎಂದು ಸ್ಪಷ್ಟಪಡಿಸಲಾಗಿದೆ. ಪಕ್ಷಿಗಳ ದೇಹಗಳನ್ನು ಸ್ಪೈರೋಕೀಟ ಆಕ್ರಮಿಸಿದಾಗ ಅವುಗಳಲ್ಲಿ ಭೇದಿ ಕಂಡುಬಂದು, ಕ್ರಮೇಣ ಹಸಿವು ಅಡಗಿ, ತಲೆಯ ಶಕ್ತಿ ಕುಗ್ಗುತ್ತ ಅಂತ್ಯದಲ್ಲಿ ವಾಯುರೋಗದಿಂದ ಸಾಯುತ್ತವೆ. ಕೆಲವು ವೇಳೆ ದೀರ್ಘಾವಧಿ ನರಳುವುದೂ ಉಂಟು. ಅಂಥ ಸಂದರ್ಭಗಳಲ್ಲಿ ಪಕ್ಷಿಗಳು ಪಾರ್ಶ್ವವಾಯು ರೋಗಕ್ಕೆ ತುತ್ತಾಗಿ ಕ್ರಮೇಣ ಕೃಶವಾಗಿ ಹದಿನೈದು ದಿವಸಗಳಲ್ಲಿ ಸಾವಿಗೀಡಾಗುತ್ತವೆ. ಕೋಳಿಗಳ ಮೇಲೆ ಜೀವಿಸುವ ಆರ್ಗಸ್ ಪರ್ಸಿಕಸ್ ಎಂಬ ಜಾತಿಯ ಉಣ್ಣಿಗಳಿಂದ ಈ ರೋಗ ಹರಡುತ್ತದೆ. ರೋಗಾಣುಜೀವಿಗಳನ್ನುಳ್ಳ ಉಣ್ಣಿ ತನ್ನ ಮೊಟ್ಟೆಗಳ ಮೂಲಕ ರೋಗಾಣು ಜೀವಿಯನ್ನು ತನ್ನ ಮರಿಗಳಿಗೆ ಸಾಗಿಸಿ ಅವುಗಳಿಂದ ಪುನಃ ಇತರ ಪಕ್ಷಿಗಳಿಗೆ ಹರಡಬಹುದು. (ಎಸ್.ಎಚ್.ಒ.)

**ಕೋಳಿಸಾಕಣೆ:** ಮೊಟ್ಟೆ, ಮಾಂಸ ಪಡೆಯುವ ಉದ್ದೇಶದಿಂದ ಕೋಳಿ ವರ್ಗದ ಪಕ್ಷಿಗಳ ಶಾಸ್ತ್ರೀಯ ಪಾಲನೆ ಮತ್ತು ಪೋಷಣೆ (ಪೋಲ್ಟ್ರಿ ಫಾರ್ಮಿಂಗ್). ವಿಶಾಲಾರ್ಥದಲ್ಲಿ ಕೋಳಿಗಳು, ಬಾತುಕೋಳಿಗಳು, ಟರ್ಕಿ ಕೋಳಿ ಮೊದಲಾದ ಉಪಯುಕ್ತ ಸಾಕುಪ್ರಾಣಿಗಳನ್ನೆಲ್ಲ ಕೋಳಿವರ್ಗದ ಪಕ್ಷಿಗಳೆಂದು ಕರೆಯುವ ಪದ್ಧತಿ ಉಂಟು.

ಭಾರತದಲ್ಲಿ ಕೋಳಿಸಾಕಣೆ ಒಂದು ಉಪಕಸುಬು, ಹಳ್ಳಿಗಳಲ್ಲಿ ರೈತಾಪಿ ಸಂಸಾರ ಸರಾಸರಿ 10–12 ಕೋಳಿಗಳನ್ನು ಸಾಕುವುದುಂಟು. ಆದರೆ ಇಲ್ಲಿ ಶಾಸ್ತ್ರೀಯ ವಿಧಾನವನ್ನು ಆಚರಣೆಯಲ್ಲಿ ತಂದಿಲ್ಲ. ಬಹುತೇಕವಾಗಿ ಬೇಕಾಬಿಟ್ಟಿ ಅಲೆದು ಆಹಾರ ಸಂಪಾದಿಸಿ ರಾತ್ರಿವೇಳೆ ಗೂಡುಸೇರುವ ಈ ಸಾಕುಕೋಳಿಗಳಿಂದ ರೈತರಿಗೆ ಒದಗುವ ಆರ್ಥಿಕ ಲಾಭ ತೀರ ಅಂಚಿನದಷ್ಟೆ. ಇಂಥ ಕೋಳಿಗಳಿಂದ ದೊರೆಯುವ ಉತ್ಪನ್ನ ಕಡಿಮೆ. ಅಲ್ಲದೆ ಇವು ಸ್ವತಃ ರೋಗರುಜಿನಗಳಿಗೆ ಮತ್ತು ಅವಘಡಗಳಿಗೆ ತುತ್ತಾಗಿ ಸಾಯುವುದರ ಜೊತೆಗೆ ಅಂಟುಜಾಡ್ಯಗಳ ವಾಹಕಗಳಾಗುವುದೂ ಉಂಟು.

ಕೋಳಿಸಾಕಣೆಯನ್ನು ಒಂದು ವ್ಯವಸ್ಥಿತ ಕೈಗಾರಿಕೆ ಎಂದು ಪರಿಗಣಿಸಿ ಆ ರೀತಿ ನಡೆಸದಿದ್ದರೆ ಅದರಿಂದ ನಿರೀಕ್ಷಿಸಿದ ಪ್ರತಿಫಲ ದೊರೆಯಲಾರದು. ಈಚೆಗೆ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳ ಸಹಾಯದಿಂದ ಕೋಳಿ ಸಾಕಣೆಯಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಲಾಗಿದೆ. ವೈಜ್ಞಾನಿಕ ರೀತಿಯಲ್ಲಿ ಸಾಕಿ ಹೆಚ್ಚು ಲಾಭವನ್ನು ಪಡೆಯಬೇಕಾದರೆ ಸುಧಾರಿಸಿದ ಒಳ್ಳೆ ತಳಿಯ ಕೋಳಿಗಳು, ಅವುಗಳಿಗೆ ಸಾಕಷ್ಟು ಸ್ಥಳಾವಕಾಶವುಳ್ಳ ಹಿತಕರವಾದ ಮನೆ, ಯೋಗ್ಯವಾದ ಸಲಕರಣೆಗಳು ಸಮತೂಕವಾದ ಆಹಾರ ಸರಬರಾಜು ಮತ್ತು ರೋಗ ಪ್ರತಿಬಂಧಕ ಯೋಜನೆಗಳನ್ನು ಅನುಸರಿಸಬೇಕಾಗುತ್ತದೆ.

ಉತ್ತಮ ತಳಿಯ ಕೋಳಿಗಳು : ಕೋಳಿಗಳು ಹೆಚ್ಚು ಮೊಟ್ಟೆಗಳನ್ನು ಕೊಡಬೇಕೆಂದು ತಜ್ಞರು ತಳಿ ಅಭಿವೃದ್ಧಿ ಮಾಡಿದ್ದಾರೆ. ಲೆಗ್ ಹಾರ್ನ್, ಮಿನಾರ್ಕಾ, ರೋಡ್ ಐಲೆಂಡ್ ರೆಡ್ ಎಂಬ ತಳಿಯ ಕೋಳಿಗಳಿವೆ. ಮಾಂಸಕ್ಕಾಗಿಯೇ ಕೋಳಿಗಳ ತಳಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಕೋಳಿಗಳ ಬೆಳವಣಿಗೆಯ ಗತಿ ತೀವ್ರ, ಇವುಗಳ ಮೈ ಮಾಂಸ ಬೇಗನೆ ಬೆಳೆದು ತುಂಬಿಕೊಳ್ಳುತ್ತದೆ. ರಾಕ್, ವೈಯಾನೆಟ್, ಕಾರ್ನಿಕ್ ಎಂಬ ಕೋಳಿಗಳು ಈ ಜಾತಿಗೆ ಸೇರಿದವು. ಇತ್ತೀಚಿನಲಾಗಿ ತಳಿಸುಧಾರಕರು ಅನುಕೂಲವಾದ ತಳಿಗಳಿಂದ ಅತಿ ಹೆಚ್ಚು ಲಾಭ ಕೊಡುವ ಮಿಶ್ರ ಜಾತಿಯ ಕೋಳಿಗಳನ್ನು ಒದಗಿಸುತ್ತಿದ್ದಾರೆ. ಹ್ವೈಟ್ ಲೆಗ್‍ಹಾರ್ನ್ ಮತ್ತು ರೋಡ್ ಐಲೆಂಡ್ ರೆಡ್ ಜಾತಿಯ ಕೋಳಿಗಳಿಂದ ಮಿಶ್ರ ಜಾತಿಯ ಕೋಳಿಗಳನ್ನು ಪಡೆಯುತ್ತಾರೆ. ಆಸ್ಟ್ರೇಲಿಯದಲ್ಲಿ ಆಸ್ಟ್ರೋಲಾರ್ಪ್ ಮತ್ತು ಹ್ವೈಟ್ ಲೆಗ್‍ಹಾರ್ನ್ ಜಾತಿಗಳ ಮಿಶ್ರ ತಳಿಗಳನ್ನು ಉತ್ಪಾದಿಸುವುದು ವಾಡಿಕೆಯಲ್ಲಿದೆ. ಮಿಶ್ರ ತಳಿ ಕೋಳಿಗಳು ಬಲು ಶೀಘ್ರವಾಗಿ ಬೆಳೆಯುತ್ತವೆ. ಇವು ಮಿಶ್ರತಳಿಯ ಸಾಮರ್ಥ್ಯ (ಹೈಬ್ರಿಡ್ ವಿಗರ್) ಪಡೆದಿರುವುದರಿಂದ ದೃಢವಾಗಿರುತ್ತವೆ. ಹಳ್ಳಿಗಳಲ್ಲಿಯ ಮನೆ, ತಿಂಡಿ ಮುಂತಾದ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತದೆ. ಮಿಶ್ರ ತಳಿಯ ಗಂಡು ಮರಿಗಳು ಬೇಗನೆ ಮೈ ತುಂಬಿಕೊಂಡು ಬೆಳೆಯುವುದರಿಂದ ಅವನ್ನು ಕೂಡಲೆ ಮಾಂಸಕ್ಕಾಗಿ ಉಪಯೋಗಿಸಬಹುದು. ಇದೇ ಜಾತಿಯ ಹೆಣ್ಣು ಕೋಳಿಗಳು ಅಂದರೆ( ಹೇಂಟೆಗಳು) ಬೇಗನೆ ಮೊಟ್ಟೆ ಇಡುವ ಸ್ಥಿತಿಗೆ ಬರುತ್ತವೆ. ಇಡೀ ವರ್ಷ ಇವು ಅಧಿಕ ಸಂಖ್ಯೆಯಲ್ಲಿ ಮೊಟ್ಟೆಗಳನ್ನು ಕೊಡುತ್ತವೆ.



ಕೋಳಿ ಮನೆಗಳು : ಚಳಿ, ಮಳೆ, ಗಾಳಿ, ಕಾವಿನ ಬಾಧೆಗಳನ್ನು ತಡೆಗಟ್ಟಿ ಹಿತಕರವಾದ ವಾತಾವರಣವನ್ನು ಕಲ್ಪಿಸಲು ಯೋಗ್ಯವಾದ ಮನೆಗಳು ಬೇಕು. ಒಳ್ಳೆಯ ತಳಿಯ

ತಿಂಡಿಯ ಶಿಷ್ಟಪ್ರಮಾಣಗಳನ್ನು ಇಲ್ಲಿ ಕೊಟ್ಟಿದೆ

| ವಿವರಗಳು | ಕೋಳಿ ಮರಿಗಳ ಆಹಾರ ಶೇಕಡಾ | ಬೆಳೆಯುವ ಕೋಳಿಗಳ ತಿಂಡಿ ಶೇಕಡಾ | ಮೊಟ್ಟೆಯಿಡುವ ಕೋಳಿಗಳ ತಿಂಡಿ ಶೇಕಡಾ |
|---|---|---|---|
| ಆರ್ದ್ರತೆ | 10 | 10 | 10 |
| ಸಸಾರಜನಕ | 20–25 | 18–23 | 15–20 |
| ಕೊಬ್ಬು (ಅತಿಕಡಿಮೆ) | 3 | 3 | 3 |
| ನಾರು | 7 | 8 | 10 |
| ಬೂದಿ | 10 | 10.5 | 11 |
| ಕ್ಯಾಲ್ಸಿಯಂ ಲವಣಗಳು | 1–1.3 | 1–1.3 | 2–2.3 |
| ಫಾಸ್ಫರಸ್ | 0.8–1 | 0.8–1 | 0.8–1 |

ಕೋಳಿಗಳನ್ನು ಆಯ್ದು ಅವುಗಳಿಗೆ ಸಮತೂಕದ ಆಹಾರವನ್ನು ಒದಗಿಸಬೇಕು. ಅವಕ್ಕೆ ಹಿತಕರವಾದ ಪರಿಸರವಿರುವ ನೆಲೆಗಳನ್ನೂ ಒದಗಿಸಿದರೆ ಮೊಟ್ಟೆಗಳ ಉತ್ಪತ್ತಿ ಹೆಚ್ಚುತ್ತದೆ. ತೇವ ಮತ್ತು ನೀರು ನಿಲ್ಲುವಂಥ ತಗ್ಗುಪ್ರದೇಶಗಳನ್ನು ಬಿಟ್ಟು ಎತ್ತರವಾದ ಜಾಗದಲ್ಲಿ ಕೋಳಿ ಮನೆಗಳನ್ನು ಕಟ್ಟಬೇಕು. ತಳಪಾಯವನ್ನು ಇಲಿ, ಹೆಗ್ಗಣ ಮುಂತಾದವು ಕೊರೆಯದಂತೆ ಸು. 60–90 ಸೆಂಮೀ ಆಳವಾಗಿ ಹಾಕುವುದು ಒಳ್ಳೆಯದು. ನೆಲಮಟ್ಟ ಹೊರಮಟ್ಟಕ್ಕಿಂತ ಒಂದು ಅಡಿ ಎತ್ತರವಾಗಿರಬೇಕು. ಹೊರಗಿನಿಂದ ತೇವ ಮತ್ತು ನೀರು ಒಳಗೆ ಬರದಂತೆ ಇದು ಸಹಕಾರಿ. ನೆಲದಮೇಲೆ ಒಣಗಿದ ಎಲೆಯ ಚೂರು, ಕಬ್ಬಿನ ಸಿಪ್ಪೆ, ರಾಗಿ ಉಬ್ಬಲು, ಮರದ ಹೊಟ್ಟು, ನೆಲಗಡಲೆಕಾಯಿ ಅಥವಾ ಬತ್ತದ ಹೊಟ್ಟನ್ನು ದಪ್ಪವಾಗಿ ಹಾಕಬಹುದು. ನೆಲಮಟ್ಟದಿಂದ 75–90 ಸೆಂಮೀ ಎತ್ತರದ ಮತ್ತು 12 ಮಿಮೀ ದಪ್ಪದ, 2.7 ಮೀ ಎತ್ತರದ ಇಟ್ಟಿಗೆ ಅಥವಾ ಕಲ್ಲಿನ ಗೋಡೆಯನ್ನು ಕಟ್ಟಬೇಕು. ಈ ಗೋಡೆಯ ಮೇಲೆ 90 ಸೆಂಮೀ ಅಗಲದ 1.25 ಸೆಂಮೀ ಬಲೆ ಕಣ್ಣಿನ ತಂತಿಯ ಜಾಳಿಗೆಯನ್ನು ಚಾವಣಿ ವರೆಗೆ ಸಾಧ್ಯವಿದ್ದಷ್ಟು ಒಳಗಿನ ಜಾಗದಿಂದ ಗಟ್ಟಿಯಾಗಿ ಪೋಣಿಸಬೇಕು. ಮೇಲ್ಛಾವಣಿಗಾಗಿ ಹೆಂಚು ಅಥವಾ ಕಲ್ನಾರು ತಗಡುಗಳನ್ನು ಉಪಯೋಗಿಸಬಹುದು. ಹುಲ್ಲು, ತೆಂಗಿನ ಗರಿಗಳ ಅಥವಾ ಈಚಲ ಎಲೆಗಳ ಚಾಪೆಗಳನ್ನು ಸಹ ಉಪಯೋಗಿಸಬಹುದು. ಸತುವಿನ ತಗಡುಗಳನ್ನು ಉಪಯೋಗಿಸಿದರೆ ಬೇಸಗೆಯಲ್ಲಿ ಬಲು ಸೆಕೆಯಾಗಿಯೂ ಚಳಿಗಾಲದ ರಾತ್ರಿಯಲ್ಲಿ ಬಲು ಚಳಿಯಾಗಿಯೂ ಕೋಳಿಗಳ ಆರೋಗ್ಯಕ್ಕೆ ಅಪಾಯವಾಗಬಹುದು. ಮನೆ ನಡುವಿನ ಎತ್ತರ 3 ಮೀ ಗಳಿಗಿಂತ ಹೆಚ್ಚು ಇರಬಾರದು. ಬಿಸಿಲು ಮತ್ತು ಮಳೆಯ ನೀರು ಒಳಗಡೆ ಬರದಂತೆ ತಡೆಯಲು ಮನೆಯ

ಮೇಲ್ಚಾವಣಿಯ ಸೂರನ್ನು ಎರಡು ಬದಿಗಳಲ್ಲಿಯೂ 75–90 ಸೆಂಮೀ ಮುಂದಕ್ಕೆ ಚಾಚಿರಬೇಕು.

ಕೋಳಿಗಳಿಗೆ ಸ್ಥಳಾವಕಾಶ : ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ 250 ಚಸೆಂಮೀಗಳಷ್ಟು ಮತ್ತು ಹೆಚ್ಚು ಮಳೆ ಬೀಳುವ ಮಲೆನಾಡು ಪ್ರದೇಶದ 300–350 ಚಸೆಂಮೀಗಳಷ್ಟು ಜಾಗ ಪ್ರತಿಯೊಂದು ಕೋಳಿಗೂ ಬೇಕು.

ಕೋಳಿಗಳನ್ನು ಬೆಳೆಸಲು ಉಪಯೋಗಿಸುವ ಉಪಕರಣಗಳು : ಇವುಗಳಿಗೆ ಒಟ್ಟಾಗಿ ಬ್ರೂಡಲ್ ಎಂದು ಹೆಸರು. ಇದೊಂದು ವಿಶಿಷ್ಟವಾದ ರಚನೆಯ ಪೆಟ್ಟಿಗೆ. ಇದರಲ್ಲಿ ಎರಡು ವಿಧ–ತಂತಿ ಜಾಳಿಗೆಯ ಮೇಲೆ ಮರಿಗಳ ಬೆಳವಣಿಗೆಗೆ ಅವಕಾಶವುಳ್ಳ ಬ್ರೂಡರುಗಳು (ಬ್ಯಾಟರಿ ಬ್ರೂಡರ್ಸ್) ಮತ್ತು ನೆಲಮಟ್ಟದ ಮರಿಗಳ ಬೆಳವಣಿಗೆಗೆ ಅವಕಾಶ ಸಲ್ಲಿಸುವ ಬ್ರೂಡರುಗಳು (ಫ್ಲೋರ್ ಬ್ರೂಡರ್ಸ್). ಬ್ರೂಡರುಗಳನ್ನು ಕಡಿಮೆ ಖರ್ಚಿನಲ್ಲಿ ಯಶಸ್ವಿಯಾಗಿ ಮನೆಯಲ್ಲಿಯೇ ತಯಾರಿಸಬಹುದು. 25–30 ಸೆಂಮೀ ಎತ್ತರವಿರುವ ಬಹಳ ವಿಶಾಲವಾದ ಬುಟ್ಟಿಯನ್ನು ತೆಗೆದುಕೊಳ್ಳಬೇಕು. ಇದನ್ನು ಡಬ್ಬುಮಾಡಿ ಮೇಲ್ಚಾವಣಿಯಿಂದ ತೂಗುಹಾಕಬಹುದು. ಒಳಭಾಗದಲ್ಲಿ ಬುಟ್ಟಿಯ ಮಧ್ಯದಲ್ಲಿ ಒಂದೆರಡು ವಿದ್ಯುಚ್ಛಕ್ತಿ ಬಲ್ಬುಗಳನ್ನು ಹಾಕಲು ಬರುವಂತೆ ಯೋಜಿಸಬೇಕು. ಬುಟ್ಟಿಯ ಸುತ್ತಲೂ ನೆಲದ ಮೇಲೆ 25–30 ಸೆಂಮೀ ಎತ್ತರ ಮತ್ತು 30–35 ಸೆಂಮೀ ಉದ್ದವಿರುವ ಚಾಪೆಯನ್ನು ಅಥವಾ ಕಾರ್ಡ್‌ಬೋರ್ಡ್‌ಗಳನ್ನು ವರ್ತುಲಾಕಾರವಾಗಿ ನಿಲ್ಲಿಸಬೇಕು. ಈ ವರ್ತುಲದ ಆಕಾರವನ್ನು ದಿನವೂ ಹೆಚ್ಚಿಸುತ್ತ ಮರಿ ಸಾಕುವುದನ್ನು ಆರಂಭಿಸಿದ ದಿನದಿಂದ 4–6 ದಿವಸಗಳವರೆಗೆ ಇದನ್ನು ಇಟ್ಟು ಆಮೇಲೆ ತೆಗೆಯಬಹುದು. ವರ್ತುಲಾಕಾರದ ಉಪಕರಣಕ್ಕೆ ಮರಿಗಳ ಮಾರ್ಗದರ್ಶಿ (ಚೆಕ್ ಗಾರ್ಡ್) ಎಂದು ಹೆಸರು. ನೆಲದ ಮೇಲೆ ಹೊಟ್ಟಿನ ಹಾಸನ್ನು ಹರಡಬೇಕು ಮತ್ತು ಚಿಕ್ಕ ಚಿಕ್ಕ ತಿಂಡಿ ಮತ್ತು ನೀರಿನ ಪಾತ್ರೆಗಳನ್ನು ಯೋಗ್ಯಸ್ಥಳಗಳಲ್ಲಿ ಸಮಾಂತರವಾಗಿ ಇಡಬೇಕು. ವಿದ್ಯುತ್ತಿನ ಸೌಕರ್ಯವಿಲ್ಲದವರು ಇದೇ ಬುಟ್ಟಿಯ ಮಧ್ಯದಲ್ಲಿ ಒಂದು ತೂತನ್ನು ಮಾಡಿ ಅಲ್ಲಿ ಒಂದು ಲಾಂದ್ರವನ್ನು ಉಪಯೋಗಿಸಬಹುದು. ಲಾಂದ್ರದ ಹೊಗೆ ಸುಸೂತ್ರವಾಗಿ ಹೊರಗೆ ಹೋಗುವಂತೆ ವ್ಯವಸ್ಥೆ ಮಾಡಿರಬೇಕು. ಪಾಶ್ಚಾತ್ಯ ದೇಶಗಳಲ್ಲಿ ಉಷ್ಣತೆಯನ್ನು ನಿಯಂತ್ರಿಸುವ ಸೌಕರ್ಯವಿರುವ ದೊಡ್ಡ ದೊಡ್ಡ ಬ್ರೂಡರುಗಳಿವೆ. ಇಂಥ ಬ್ರೂಡರುಗಳಲ್ಲಿ ಸಾವಿರಾರು ಮರಿಗಳನ್ನು ಏಕಕಾಲದಲ್ಲಿ ಬೆಳೆಸಬಹುದು. ಇವುಗಳಲ್ಲಿ ಹೆಚ್ಚಾಗಿ ಮಾಂಸದ ತಳಿಯ ಕೋಳಿಮರಿಗಳನ್ನೇ ಬೆಳೆಸುತ್ತಾರೆ.

ಹೇಂಟೆಗಳ ಮನೆಗಳಲ್ಲಿಯ ಉಪಕರಣಗಳು, ತಿಂಡಿಯ ಪಾತ್ರೆಗಳು : ಕಾಲುಗಳಿಂದ ಮೊದಲು ಕೆದರಿ ಆ ಮೇಲೆ ಆರಿಸಿ ತಿನ್ನುವ ಸ್ವಭಾವ ಕೋಳಿಗಳದು. ಇದರಿಂದ ತಿಂಡಿಯಲ್ಲಿ ಹೆಚ್ಚಿನ ಅಪವ್ಯಯವಾಗುವುದು. ಕೋಳಿ ಸಾಕಣೆಯಲ್ಲಿ ತಿಂಡಿಯ ಬಾಬತ್ತೇ 60% ಖರ್ಚು ಬರುವುದರಿಂದ ಅದು ಸದುಪಯೋಗವಾಗುವಂತೆ ನೋಡಿಕೊಳ್ಳಬೇಕು. ತಿಂಡಿಪಾತ್ರೆಗಳನ್ನು ಬಿದಿರಿನಿಂದಾಗಲೀ ಮರದ ಹಲಗೆಗಳಿಂದಾಗಲೀ ಸತುವಿನ ತಗಡುಗಳಿಂದಾಗಲೀ ತಯಾರಿಸಬಹುದು. ಕೋಳಿಗಳು ಈ ಪಾತ್ರೆಗಳಲ್ಲಿ ಕಾಲಿಡಲು ಅವಕಾಶವಾಗದಂತೆ ಮರದ ತುಂಡುಗಳಿಂದಾಗಲೀ ಅಥವಾ 3 ಮಿಮೀ ಗಾತ್ರದ ಮೆತ್ತನೆಯ ತಂತಿಯಿಂದಾಗಲೀ ಅವುಗಳಿಗೆ ಕವಚವನ್ನು ಹೊದಿಸಿರಬೇಕು. ಕೋಳಿಗಳು ತಿಂಡಿ ತಿನ್ನುವಾಗ ಹೊರಬೀಳುವ ಆಹಾರವನ್ನು ತಡೆಗಟ್ಟಲು ತಿಂಡಿ ಪಾತ್ರೆಯ ಎರಡು ಬದಿಗೆ ಒಳಭಾಗದಲ್ಲಿ 2.5 ಸೆಂಮೀ ತಡೆಪಟ್ಟಿ ಇರಬೇಕು.

2. ನೀರಿನ ಪಾತ್ರೆಗಳು: ಇವುಗಳಲ್ಲಿ ಕೋಳಿಗಳು ಕಾಲಿಡಲು ಸಾಧ್ಯವಾಗದಂತೆ ಏರ್ಪಡಿಸಿರಬೇಕು. ಸ್ವಚ್ಛವಾದ ನೀರು ಯಾವಾಗಲೂ ಕೋಳಿಗಳಿಗೆ ದೊರೆಯಬೇಕು. ಅವು ನೀರು ಕುಡಿಯುವಾಗ ನೆಲದ ಮೇಲೆ ನೀರು ಬೀಳಕೂಡದು. ನೀರಿನ ಪಾತ್ರೆಗಳ ಬದಲಾಗಿ ಮೆಲ್ಲನೆ ನೀರು ಹರಿಯುವ ಎರಡು ಅಗಲವಾದ ನಾಲೆಗಳನ್ನು ಕೋಳಿಮನೆಯಲ್ಲಿ ಒಂದು ಬದಿಗೆ ಕಟ್ಟಿಸುವುದು ಉತ್ತಮ.

3. ಮೊಟ್ಟೆ ಇಕ್ಕುವ ಗೂಡುಗಳು: ಐದು ಹೇಂಟೆಗಳಿಗೆ ಒಂದು ಗೂಡಿನ ಪ್ರಮಾಣದಂತೆ ಇವು ಇರಬೇಕು. ಗೂಡುಗಳನ್ನು ಸ್ವಚ್ಛವಾಗಿ ತೊಳೆದಿಡಲು ಮತ್ತು ಕೋಳಿಗಳು ಅವುಗಳಲ್ಲಿ ಸುಲಭವಾಗಿ ಹೋಗಿಬರಲು ಅನುಕೂಲವಾಗುವಂತೆ ಅವುಗಳನ್ನು ರಚಿಸಬೇಕು. ಖಾಲಿ ಎಣ್ಣೆ ಪೀಪಾಯಿಯಿಂದ ಇಂಥ ಗೂಡನ್ನು ತಯಾರಿಸಬಹುದು.

ಕೋಳಿಯ ತಿಂಡಿಯಲ್ಲಿ ಆಹಾರ ಘಟಕಗಳು: ಸಾಮಾನ್ಯವಾಗಿ ಕೋಳಿಯ ಆಹಾರದಲ್ಲಿನ ಸತ್ತ್ವ ಅದರ ಘಟಕಗಳಾದ ನೀರು, ಸಸಾರಜನಕ, ಪಿಷ್ಟ, ಮೇದಸ್ಸು ಲವಣಗಳು ಮತ್ತು ವಿಟಮಿನ್ನುಗಳನ್ನವಲಂಬಿಸಿದೆ. ಕೋಳಿಗಳಿಗೆ ಆಹಾರಕ್ಕೆಂದು ಉಪಯೋಗಿಸುವ ಖಾದ್ಯಪದಾರ್ಥಗಳಲ್ಲಿ ಸಾಮಾನ್ಯವಾಗಿ 10% ರಂತೆ ನೀರಿನ ಅಂಶವುಂಟು. ಇದಕ್ಕಿಂತ ನೀರಿನ ಅಂಶ ಹೆಚ್ಚಾಗಿದ್ದರೆ ಆ ಆಹಾರಕ್ಕೆ ಬೂಷ್ಟು ಬರುವುದುಂಟು. ಕೋಳಿ ಮಾಂಸ ಮತ್ತು ಮೊಟ್ಟೆಗಳಲ್ಲಿರುವ ಸಸಾರಜನಕ ಕೋಳಿತಿನ್ನುವ ಆಹಾರ ಪದಾರ್ಥಗಳಿಂದಲೇ ದೊರೆಯುವುದು. ಕೋಳಿ ತಿಂಡಿಯಲ್ಲು ಸಸಾರಜನಕ ಭಾಗ ಸರಿಯಾದ ಪ್ರಮಾಣದಲ್ಲಿಲ್ಲದಿದ್ದಲ್ಲಿ ಅಧಿಕ ಉತ್ಪಾದನೆ ಸಿಕ್ಕಲಾರದು. ಕೋಳಿಗಳಿಗೆ ಮುಖ್ಯವಾದ ಆರ್ಜಿನಿನ್, ಸಿಸ್ಟಿನ್, ಲ್ಯೂಸಿನ್, ಮೀಥಿಯೋನಿನ್, ಟ್ರಿಪ್ಟೋಫೆನ್, ಲೈಸೀನ್ ಎಂಬ ಅಮೈನೋ ಆಮ್ಲಗಳು ಹೆಚ್ಚು ಅವಶ್ಯಕ. ಈ ಎಲ್ಲ ಅಮೈನೋ ಆಮ್ಲಗಳೂ ಒಂದೇ ತರದ ಸಸಾರಜನಕ ಖಾದ್ಯದಲ್ಲಿ ಸಾಕಷ್ಟು ಸಿಕ್ಕುವುದಿಲ್ಲ. ಇವು ಸಾಕಷ್ಟು ಮೊತ್ತದಲ್ಲಿ ಸಿಕ್ಕಬೇಕಾದರೆ ಅನೇಕ ತರದ ಸಸಾರಜನಕ ಖಾದ್ಯಗಳನ್ನು ಉಪಯೋಗಿಸಬೇಕು. ಉದಾಹರಣೆಗೆ ಕಡಲೇಕಾಯಿ, ಹಿಂಡಿ, ಮೀನಿನ ಪುಡಿ, ರೇಷ್ಮೆ ಹುಳುವಿನ ಗೂಡು, ಒಣಗಿದ ಮಾಂಸದ ಪುಡಿ ಇತ್ಯಾದಿ ಪದಾರ್ಥಗಳನ್ನು ಕೂಡಿಸಿಕೊಂಡು ಆಹಾರದಲ್ಲಿ ಬೆರೆಸಬೇಕಾಗುತ್ತದೆ. ಕೋಳಿಗಳಿಗೆ ಕ್ಯಾಲ್ಸಿಯಂ, ಮೆಗ್ನೀಸಿಯಂ, ಪೊಟ್ಯಾಸಿಯಂ, ಸೋಡಿಯಂ, ಕಬ್ಬಿಣ, ಮ್ಯಾಂಗನೀಸ್ ಸತು, ತಾಮ್ರ, ಕ್ಲೋರಿನ್, ಅಯೋಡೀನ್, ಗಂಧಕ, ಕೋಬಾಲ್ಟ್ ಮೊದಲಾದ ಲವಣಗಳು ಅವಶ್ಯ. ಕೋಳಿಗಳಿಗಾಗಿ ಉಪಯೋಗಿಸುವ ಆಹಾರ ಪದಾರ್ಥಗಳಲ್ಲಿ ಸಾಮಾನ್ಯವಾಗಿ ಕ್ಯಾಲ್ಸಿಯಂ, ಫಾಸ್ಫರಸ್, ಸೋಡಿಯಂ, ಕ್ಲೋರೀನ್, ಮ್ಯಾಂಗನೀಸ್ ಲವಣಗಳು ಸಾಕಷ್ಟು ಮೊತ್ತದಲ್ಲಿ ಇರುವುದಿಲ್ಲ. ಉಳಿದ ಎಲ್ಲ ಲವಣಗಳು ಸಾಕಾಗುವಷ್ಟು ಇರುವುದು. ಕೋಳಿಯ ತಿಂಡಿಯಲ್ಲಿ ಡೈಕ್ಯಾಲ್ಸಿಯಂ, ಫಾಸ್ಫೇಟ್, ಮೂಳೆಯ ಮತ್ತು ಕಪ್ಪೆಚಿಪ್ಪಿನ ಪುಡಿಯನ್ನು ಉಪಯೋಗಿಸಿ ಕ್ಯಾಲ್ಸಿಯಂ, ಫಾಸ್ಫರುಗಳ ಅಭಾವವನ್ನು ದೂರಮಾಡುತ್ತಾರೆ. ಕ್ಲೋರೀನ್ ಮತ್ತು ಸೋಡಿಯಂ ಲವಣಗಳಿಗಾಗಿ ಅಡುಗೆಯ ಉಪ್ಪನ್ನು 0.5% ಪ್ರಮಾಣದಲ್ಲಿ ಕೋಳಿಯ ತಿಂಡಿಯಲ್ಲಿ ಉಪಯೋಗಿಸುತ್ತಾರೆ. ಮೀನಿನ ಪುಡಿಯಲ್ಲಿ ಉಪ್ಪಿನ ಅಂಶ ಹೆಚ್ಚಾಗಿದ್ದರೆ ಅಡುಗೆಯ ಉಪ್ಪಿನ ಪ್ರಮಾಣವನ್ನು ಇನ್ನೂ ಕಡಿಮೆಯಾಗಿ ಉಪಯೋಗಿಸಬಹುದು. ಕೋಳಿಗಳ ಆಹಾರದಲ್ಲಿ ಮ್ಯಾಂಗನೀಸ್ ಸಲ್ಫೇಟ್ ಅಥವಾ ಮ್ಯಾಂಗನೀಸ್ ಆಕ್ಸೈಡುಗಳನ್ನು ಉಪಯೋಗಿಸಿದರೆ ಈ ಲವಣದ ಅಭಾವವನ್ನು ನೀಗಿಸಿದಂತಾಗುವುದು. ಈ ಲವಣಗಳು ಆಹಾರವನ್ನು ಶರೀರದಲ್ಲಿ ಇಂಗಿಸಿಕೊಳ್ಳಲು ಸಹಾಯ ಮಾಡುತ್ತವೆ. ಕೋಳಿಗಳಿಗೆ ಅನೇಕ ವಿಟಮಿನ್ನುಗಳು ಅವಶ್ಯಕ. ಹಸಿರು ಹುಲ್ಲು, ಕುದುರೆ ಮಸಾಲೆ, ಗೋವಿನ ಜೋಳ(ಮುಸುಕಿನ ಜೋಳ), ಮೀನಿನ ಎಣ್ಣೆಯಲ್ಲಿರುವ ಜೀವಸತ್ವ ಎ ಕೋಳಿಗಳ ಅಭಿವೃದ್ಧಿಗೆ ಬಲು ಉಪಯುಕ್ತ.

ಕೋಳಿಗಳಿಗಾಗಿ ತಿಂಡಿಗಳು: ಮನುಷ್ಯನಿಗೆ ನಿರುಪಯುಕ್ತವಾದ ಆಹಾರ ಪದಾರ್ಥಗಳನ್ನು ತಿಂದು ಅತಿ ಉಪಯುಕ್ತವಾದ ಮೊಟ್ಟೆ ಮತ್ತು ಮಾಂಸ ಕೊಡುವ ಒಂದು ಜೀವಯಂತ್ರ ಕೋಳಿ. ಎಲ್ಲ ಕುಕ್ಕುಟ ಕೇಂದ್ರಗಳಲ್ಲೂ ಕೋಳಿ ತಿಂಡಿ ತಯಾರಿಸುವವರು ಮುಖ್ಯವಾಗಿ ಅಕ್ಕಿತೌಡು, ಬೂಸ, ಕಡಲೆಕಾಯಿ ಹಿಂಡಿಪುಡಿ, ಮೀನಿನ ಪುಡಿ, ಗೋವಿನ ಜೋಳ, ಉಗ್ರಾಣ ಮತ್ತು ಹಿಟ್ಟಿನ ಗಿರಣಿಗಳ ಕಸ, ಲವಣತತ್ವ ಮತ್ತು ವಿಟಮಿನ್ನುಗಳನ್ನು ಬೆರಕೆಮಾಡಿ ಕೋಳಿತಿಂಡಿಯನ್ನು ತಯಾರಿಸುವರು. ಇವನ್ನು ಬೆರಕೆ ಮಾಡುವಾಗ ಆಹಾರದ ಘಟಕಗಳಾದ ಸಸಾರಜನಕ, ಕೊಬ್ಬುಪದಾರ್ಥಗಳು, ಲವಣಗಳು, ಜೀವಸತ್ವ, ರೋಗನಿವಾರಕ ಔಷಧಗಳು ಸರಿಯಾದ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳುತ್ತಾರೆ. ಈ ಪ್ರಕಾರ ತಯಾರಿಸಿದ ಆಹಾರಕ್ಕೆ ಸಮತೂಕ ಆಹಾರವೆಂದು ಹೆಸರು. ಇಂಡಿಯನ್ ಸ್ಟ್ಯಾಂಡರ್ಡ್ ಇನ್‌ಸ್ಟಿಟ್ಯೂಟಿನ ಅಧಿಕಾರಿಗಳು ಕೋಳಿಗಳ ತಿಂಡಿಯಲ್ಲಿ ಕಣಗಳ ಗಾತ್ರ ಮತ್ತು ಅದರಲ್ಲಿರುವ ಘಟಕಗಳ ಪ್ರಮಾಣದ ನಿಯಂತ್ರಣಗಳನ್ನು ಹೇಳಿದ್ದಾರೆ. ಈ ಪ್ರಕಾರ ಕೋಳಿಗಳ ತಿಂಡಿಯನ್ನು ತಯಾರಿಸಿದರೆ ಕೋಳಿಸಾಕಣೆ ಉದ್ಯಮಗಾರನ ಕೆಲಸ ಎಷ್ಟೋ ಕಡಿಮೆ ಆಗುವುದಲ್ಲದೆ ಕೋಳಿಗಳ ಮೇಲ್ವಿಚಾರಣೆ ಮತ್ತು ಪಾಲನೆ ವಿಧಾನಗಳಲ್ಲಿ ಹೆಚ್ಚು ಗಮನ ಕೊಟ್ಟು ಅಧಿಕ ಉತ್ಪಾದನೆ ಪಡೆಯಲು ಸಾಧ್ಯವಾಗುವುದು. 1961 ರಲ್ಲಿ ಭಾರತದಲ್ಲಿ ಕೋಳಿಗಳ ಸಂಖ್ಯೆ 114 ಮಿಲಿಯನ್ ಇತ್ತು. ಅಂದು ಉಪಕಸುಬಾಗಿ ಸಾಗುತ್ತಿದ್ದ ಕೋಳಿಸಾಕಣೆ ಇಂದು ಉದ್ಯಮದ ಮಟ್ಟದಲ್ಲಿ ನಡೆಯುತ್ತಿದೆ. ನೂರಾರು ಸಣ್ಣ ಉದ್ದಿಮೆದಾರರು, ಕೆಲವು ದೊಡ್ಡ ಉದ್ದಿಮೆದಾರರು ಕೋಳಿಸಾಕಣೆಯಲ್ಲಿ ತೊಡಗಿದ್ದಾರೆ. ಸಾಕಣೆಯಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. 500 ಮಿಲಿಯಕ್ಕಿಂತ ಹೆಚ್ಚು ಕೋಳಿಗಳನ್ನು ಸಾಕಲಾಗುತ್ತಿದೆ. ಮೊಟ್ಟೆ ಹಾಗೂ ಕೋಳಿ ಮಾಂಸವನ್ನು ರಫ್ತು ಕೂಡ ಮಾಡಲಾಗುತ್ತಿದೆ. (ಕೆ.ವಿ.ಜಿ.ಓ.)

**ಕ್ಯಾಂಕರ್ ಹುಳು:** ಜಿಯೋಮಿಟ್ರಿಡೆ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಪತಂಗ (ಮಾತ್). ಪ್ರಪಂಚದ ಎಲ್ಲ ಕಡೆಯಲ್ಲೂ ವಾಸಿಸುತ್ತದೆ. ಪೇಲಿಯೊಕ್ರಿಟ ವರ್ನೇಟ (ವಸಂತದ ಕ್ಯಾಂಕರ್ ಹುಳು) ಮತ್ತು ಆಲ್ಸೊಫಿಲ ಪೊಮೆಟೇರಿಯ (ಮಾಗಿ ಕ್ಯಾಂಕರ್ ಹುಳು) ಎಂಬ ಎರಡು ಪ್ರಭೇದಗಳು ಮುಖ್ಯವಾದುವು. ಇವು ನಿಶಾಚರಿಗಳು. ಗಂಡು

ಪತಂಗಗಳ ಅಗಲವಾದ ರೆಕ್ಕೆಯ ಮೇಲೆ ಅಲೆಅಲೆಯಾದ ಮಚ್ಚೆಗಳನ್ನು ಕಾಣಬಹುದು. ಪ್ರೌಢ ಹೆಣ್ಣುಗಳಿಗೆ ರೆಕ್ಕೆಗಳಿಲ್ಲ. ಗಂಡು ಹೆಣ್ಣುಗಳ ಬಣ್ಣದಲ್ಲಿ ವ್ಯತ್ಯಾಸ ಉಂಟು. ಎಲ್ಲ ಪತಂಗಗಳಂತೆ ಇವು ಸಹ ಬೆಳಕಿನಿಂದ ಆಕರ್ಷಿತವಾಗುತ್ತವೆ.

ಕ್ಯಾಂಕರ್ ಹುಳುವಿನ ಲಾರ್ವ ವಿಶಿಷ್ಟ ರೀತಿಯದು. ಇದರ ದೇಹದ ಹಿಂದಿನ ತುದಿಯಲ್ಲಿ 2–3 ಜೊತೆ ಮಿಥ್ಯಾಪಾದಗಳಿರುತ್ತವೆ. ಮಧ್ಯ ಭಾಗದಲ್ಲಿ ಕಾಲುಗಳಿಲ್ಲ. ಏನಾದರೂ ತೊಂದರೆಯಾದಾಗ ಇದು ಹಿಂದಿನ ಕಾಲಿನ ಮೇಲೆ ನಿಂತು ದೇಹವನ್ನು ನೆಟ್ಟಗೆ ನಿಲ್ಲಿಸುತ್ತದೆ. ಆಗ ಇದು ಕಡ್ಡಿಯಂತೆ ಕಾಣುವುದರಿಂದ ಶತ್ರುಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಅನುಕೂಲವಾಗುವುದು. ಆ ಸ್ಥಿತಿಯಲ್ಲಿ ಲಾರ್ವ ನೆಲವನ್ನು ಅಳೆಯುತ್ತಿರುವ ಟೇಪಿನಂತೆ ಕಾಣುತ್ತದೆ. ಆದ್ದರಿಂದ ಇದನ್ನು ಅಳತೆಯ ಹುಳು (ಮೆಶರಿಂಗ್ ವರ್ಮ್) ಎಂದು ಕರೆಯುವುದುಂಟು. ಚಲನೆಯಲ್ಲಿ ಇದು ಕುಣಿಕೆ ಹುಳುಗಳನ್ನು ಹೋಲುತ್ತದೆ. ಲಾರ್ವಗಳು ಗಿಡಮರಗಳ ಎಲೆಗಳನ್ನು ತಿಂದು ಬೆಳೆಯುತ್ತವೆ.

ವಸಂತ ಕ್ಯಾಂಕರ್ ಹುಳುವಿನ ಲಾರ್ವ ಚಳಿಗಾಲದಲ್ಲಿ ಕೋಶಾವಸ್ಥೆಯನ್ನು ಸೇರುತ್ತದೆ. ಹೊರಬರುವ ಹೆಣ್ಣುಚಿಟ್ಟೆ ವಸಂತಕಾಲದಲ್ಲಿ ಮೊಟ್ಟೆಯಿಡುತ್ತದೆ. ಮಾಗಿ ಕ್ಯಾಂಕರ್ ಹುಳು ಚಳಿಗಾಲವನ್ನು ಮೊಟ್ಟೆಯ ಅವಸ್ಥೆಯಲ್ಲಿ ಕಳೆಯುತ್ತದೆ. ಚಳಿಗಾಲ ಕಳೆದ ನಂತರ ಹೊರಬರುವ ಹೆಣ್ಣುಪತಂಗ ಮೊಟ್ಟೆಯಿಡುತ್ತದೆ. ವಸಂತ ಕ್ಯಾಂಕರ್ ಹುಳುವಿನ ಲಾರ್ವದ ಉದರಭಾಗದಲ್ಲಿ ಎರಡು ಜೊತೆ ಮಿಥ್ಯಾಪಾದಗಳೂ ಮಾಗಿ ಕ್ಯಾಂಕರ್ ಹುಳುವಿನ ಲಾರ್ವಕ್ಕೆ ಮೂರು ಜೊತೆ ಮಿಥ್ಯಾಪಾದಗಳೂ ಇರುತ್ತವೆ.

ಕ್ಯಾಂಕರ್ ಹುಳುಗಳು ಫಲವೃಕ್ಷಗಳಿಗೂ ಇತರ ಬೆಲೆಬಾಳುವ ಮರಗಳಿಗೂ ದೊಡ್ಡ ಪಿಡುಗಾಗಿ ಪರಿಣಮಿಸುವುದುಂಟು. ಇವುಗಳ ಲಾರ್ವಗಳು ಎಲೆಗಳನ್ನೆಲ್ಲ ತಿಂದುಹಾಕಿ ಮರವನ್ನು ಬೋಳು ಮಾಡುತ್ತವೆ. ಇದರಿಂದ ಹಣ್ಣಿನ ಫಸಲು ಗಣನೀಯವಾಗಿ ಕಡಿಮೆಯಾಗುತ್ತದೆ. ***

**ಕ್ಯಾಂತರಿಡೆ:** ಕೋಲಿಯಾಪ್ಟರ ಗಣದಲ್ಲಿರುವ ಕುಟುಂಬ. ಈ ಕುಟುಂಬದಲ್ಲಿ 3500 ಕ್ಕೂ ಹೆಚ್ಚು ಜಾತಿಯ ಭಕ್ಷಕ ಕೀಟಗಳಿವೆ. ಮರಿ ಮತ್ತು ಪ್ರೌಢ ಕೀಟಗಳನ್ನು ತಿಂದು ಜೀವಿಸುವ ಈ ಕೀಟಗಳು ಮಾನವನಿಗೆ ಉಪಕಾರಿಯಾಗಿವೆ. ಇವುಗಳಲ್ಲಿ ಕೆಲವು ಪ್ರಭೇದದ ಸಸ್ಯಹಾರಿ ಜೀರುಂಡೆಗಳು ಸೋಲ್ಜರ್ ಹಲವು ಬಗೆಯ ಹೂವುಗಳ ಮೇಲೆ ಇರುತ್ತವೆ. ಗಂಡು ಹೆಣ್ಣುಗಳ ವಿಭಿನ್ನವಾಗಿವೆ. ಹೆಣ್ಣಿಗೆ ರೆಕ್ಕೆಗಳಿಲ್ಲ. ಮಣ್ಣು ಅಥವಾ ಪಾಚಿಯಲ್ಲಿ ವಾಸಿಸುವ ಈ ಕೀಟಗಳ ಚಟುವಟಿಕೆ ರಾತ್ರಿಯಲ್ಲೆ ಹೆಚ್ಚು. ಹಗಲಿನಲ್ಲಿ ಎಲೆ, ಗಿಡಗಳ ಬುಡದಲ್ಲಿ ಮರೆಯಾಗಿರುತ್ತವೆ.

3 ರಿಂದ 18 ಮಿಮೀ ಉದ್ದ ಇವೆ. ಮೃದುವಾದ ಶರೀರ, ಚಪ್ಪಟೆಯಾಕಾರವಿದೆ. ಹಳದಿ–ನೀಲಿ–ಕಪ್ಪು ಮಿಶ್ರಿತ ಮೈ ಬಣ್ಣವಿದೆ. ಬಾಗಿದ ತಲೆ, ಉಬ್ಬಿದ ಕಣ್ಣು ತಲೆಯ ಹಿಂಭಾಗ ವೃತ್ತಾಕಾರ, ಚಪ್ಪಟೆ, ಸ್ವಲ್ಪ ಮಟ್ಟಿಗೆ ತಲೆಯನ್ನು ಮೇಲ್ಭಾಗದಿಂದ ಆವರಿಸಿಕೊಂಡಿದೆ. ಕುಡಿಮೀಸೆ ಗರಗಸದಂತೆ, ಅಥವ ಮಣಿಸರದಂತೆ ಇದೆ. ರೆಕ್ಕೆ ನುಣುಪು. ಈ ಗುಣಗಳು ಕ್ಯಾಂತರಿಡೆ ಬೀಟ್ಲ್‌ಗಳ ಲಕ್ಷಣಗಳು. ಎಲಿಟ್ರಗಳು ಚಕ್ಕಳದಂತಿವೆ. ಕೆಲವು ಕೀಟಗಳಲ್ಲಿ ವೆಲ್ವೆಟಿನಂತಿರುತ್ತದೆ. ಕತ್ತು ಬಹಳ ಕಿರಿದು. ೨ ಕುಡಿ ಮೀಸೆಗಳಿವೆ. ಒಂದೊಂದು ಕುಡಿ ಮೀಸೆಯಲ್ಲಿ ಹನ್ನೊಂದು ಖಂಡಗಳಿವೆ. ಎದೆಯ ಮುಂಭಾಗ (ಪ್ರೋಥೊರ್‍ಯಾಕ್ಸ್) ಮಧ್ಯಭಾಗಕ್ಕಿಂತ ಹೆಚ್ಚು ಸ್ಪಷ್ಟ ಹಾಗೂ ಕಿರಿದು. ಮುಂಗಾಲುಗಳು ಬಲವಾಗಿವೆ. ಕಾಲಿನ ಟಾರ್ಸಸ್ ಭಾಗ ೫ ಖಂಡಗಳಿಂದ ಕೂಡಿದೆ. ಈ ಕೀಟಗಳ ಡಿಂಬ ಬಲು ಉದ್ದ. ಡಿಂಬಗಳ ಕುಡಿ ಮೀಸೆಗಳ ಪಕ್ಕದಲ್ಲೊಂದು ಆಸೆಲಸ್ ಇದೆ. ಡಿಂಬ ಹಾಗೂ ಪ್ರೌಢಜೀವಿಗಳೆರಡೂ ಹಗಲಿನಲ್ಲೇ ಹೆಚ್ಚು ಕಾರ್ಯಶೀಲ. ಪರಾಗವೇ ಇವುಗಳ ಪ್ರಧಾನ ಆಹಾರ. ಕೆಲವು ಜಾತಿಯ ಕೀಟಗಳು ಮಾತ್ರ ಬೇರೆ ಕೀಟಗಳನ್ನು ತಿನ್ನುತ್ತವೆ.

ಕ್ಯಾಂತರಿಡೆ ಕುಟುಂಬದಲ್ಲಿ ೧,೩೦೦ ಪ್ರಭೇದಗಳಿವೆ. ಇವುಗಳಲ್ಲಿ ಕ್ಯಾಂಥರಿಸ್, ಚೌಲಿಯಾನ್ಯಾತಸ್, ಡಾಸಿಟಸ್, ಮಾಲ್ತಿನಸ್, ಮಾಲ್ತೋಡಸ್, ಪೋಡೋಬ್ರಸ್, ಪೋಲೇಮಿಯಸ್ ಮತ್ತು ರ್‍ಯಾಗೋನೈಕ ಪ್ರಭೇದದ ಕೀಟಗಳು ಮುಖ್ಯವಾದವು.

ಡಿಂಬ ದಪ್ಪವಾಗಿದೆ. ಕ್ಯಾಂಪೊಡಿಫಾರಂ ಮೈ ಮಕ್ಮಲ್ಲಿನಂತೆ ಮೃದುವಾದ ಕೂದಲಿನಿಂದ ಮುಚ್ಚಿದೆ. ಬಣ್ಣ ಕಂದು, ಕಪ್ಪು ಅಥವ ನೀಲಿ, ಮಣ್ಣಿನಲ್ಲಿ ವಾಸ, ಪರಭಕ್ಷಕ ಮರಿಗಳ ದವಡೆಗಳ ಒಳಭಾಗ ಒಣಿಯಂತೆ ರಂಧ್ರಾಕಾರವಿರುವುದರಿಂದ ಇತರೆ ಪ್ರಾಣಿಗಳನ್ನು ಹಿಡಿದು ಜಗಿದು ಹೀರಲು ಅನುಕೂಲವಾಗಿದೆ. ಉದಾಹರಣೆ: ರ್‍ಯಾಗೊನಿಖ, ಕೆಂಪು ಕಪ್ಪುಮಿಶ್ರಿತ ಸೊಲ್ಜರ್ ಬೀಟ್ಲ್ ಕ್ಯಾಂತೊರಿಸ್ ಪ್ರಭೇದ, ನೀಲಿ–ಕಪ್ಪು ಸೈಲರ್ ಬೀಟ್ಲ್ (ಜಿ.ಕೆ.ವಿ.)

**ಕ್ಯಾಟರೈನಿ:** ಪ್ರೈಮೇಟ್ ಗಣದ ಆಂತ್ರಪಾಯ್ಡಿಯ ಉಪಗಣಕ್ಕೆ ಸೇರಿದ ಒಂದು ಆದಿಕುಟುಂಬ (ಸೂಪರ್ ಫ್ಯಾಮಿಲಿ). ಸರ್ಕೊಪಿತಿಕಾಯ್ಡಿಯ ಎಂಬುದು ಇದರ ಇತ್ತೀಚಿನ ಹೆಸರು. ಒಂದಕ್ಕೊಂದು ಬಹು ಹತ್ತಿರದಲ್ಲಿರುವ ಎರಡು ನಾಸಿಕರಂಧ್ರಗಳು, ದವಡೆಸಂಚಿಗಳು, ಬಾಲ ಇಲ್ಲದಿರುವಿಕೆ ಇವುಗಳ ಮುಖ್ಯ ಲಕ್ಷಣಗಳು. ರಜಸ್ಸಿನ ಚಕ್ರದಲ್ಲಿ ರಕ್ತಸ್ರಾವವಾಗುವುದು ಈ ಗುಂಪಿನ ಕೋತಿಗಳ ಇನ್ನೊಂದು ವಿಶೇಷಗುಣ.

ಮಾನವನನ್ನೂ ಏಷ್ಯ ಮತ್ತು ಆಫ್ರಿಕಗಳಲ್ಲಿ ಕಾಣಬರುವ ಹಲವಾರು ಬಗೆಯ ವಾನರಗಳನ್ನೂ ಒಳಗೊಂಡಿರುವ ಸುಮಾರು ೧೭ ಜಾತಿಯ ಕಪಿಗಳು ಈ ಗುಂಪಿಗೆ ಸೇರಿವೆ. (ಎಚ್.ಬಿ.ಡಿ.)

**ಕ್ಯಾಟಲೇಸುಗಳು:** ಕಬ್ಬಿಣ–ಪಾರ್ಫಿರನ್ ಕಿಣ್ವಗಳ ಒಂದು ಸಮೂಹ. ಇವು ಆಮ್ಲಜನಕ ಬೇಕಾದ ಜೀವಿಗಳಲ್ಲೆಲ್ಲ ಇವೆ. ಕೆಲವು ಕ್ಯಾಟಲೇಸುಗಳನ್ನು ಸ್ಫಟಿಕೀಕರಿಸಲಾಗಿದೆ. ಇವುಗಳ ಬಣ್ಣ ಕೆಂಪು ಛಾಯೆಯ ಕಂದು. ಅಣುತೂಕ 2,25,000–2,50,000. ಒಂದು ಅಣುವಿನಲ್ಲಿ ನಾಲ್ಕು ಹೀಮ್ ಗುಂಪುಗಳಿವೆ. ಇದರಲ್ಲಿ ಕಬ್ಬಿಣ ಫೆರಿಕ್ ಸ್ಥಿತಿಯಲ್ಲಿರುವುದು. ಈ ಕಿಣ್ವ ಹೈಡ್ರೋಜನ್ ಪೆರಾಕ್ಸೈಡಿನ ಮತ್ತು ಕಾರ್ಬನಿಕ್ ಹೈಡ್ರಾಪೆರಾಕ್ಸೈಡುಗಳ ವಿಭಜನೆಯಲ್ಲಿ ಪಾತ್ರವಹಿಸುತ್ತದೆ. ಇದರ ಒಂದು ಅಣು $0^0$ ಸೆ. ನಲ್ಲಿ ಒಂದು ನಿಮಿಷಕ್ಕೆ 44,000 ಪೆರಾಕ್ಸೈಡ್ ಅಣುಗಳನ್ನು ವಿಭಜಿಸಬಲ್ಲದು. (ಎಂ.ಆರ್.ಆರ್)

**ಕ್ಯಾಟಾಸ್ಟೋಮಿಡೆ:** ಇದು ಆಸ್ಟಿಕ್ಟಿಸ್ ವಿಭಾಗದ ಸೈಪ್ರಿನಿಫಾರ್ಮಿಸ್ ಗಣದ ಸೈಪ್ರಿನಿಡೆ ಕುಟುಂಬದ ಉಪಕುಟುಂಬ. ಈ ಉಪಕುಟುಂಬದಲ್ಲಿ ಸಿಹಿನೀರಿನ ಮೀನುಗಳಿವೆ. ಚೀನಾ, ಸೈಬೀರಿಯದ ಈಶಾನ್ಯ ಮತ್ತು ಉತ್ತರ ಅಮೇರಿಕದಲ್ಲಿರುವ ಸಿಹಿ ನೀರು ತಾಣಗಳಲ್ಲಿ ವಾಸಿಸುತ್ತವೆ. ಗರಿಷ್ಠ ಉದ್ದ 1 ಮೀ. ಆದರೆ, ಬಹುತೇಕ ಜಾತಿಯ ಮೀನುಗಳು 60 ಸೆಂಮೀ ಉದ್ದದವರೆಗೆ ಬೆಳೆಯುತ್ತವೆ. ದೇಹವು ಶಲ್ಕಗಳ ಹೊದಿಕೆಯಿಂದ ಕೂಡಿದೆ.

ಈ ಜಾತಿಯ ಮೀನುಗಳನ್ನು ಹೀರು ಮೀನುಗಳೆನ್ನುವರು. ಇವು ಆಹಾರವನ್ನು ಅಥವಾ ಆಹಾರವಿರುವ ಪದಾರ್ಥವನ್ನು ಪದೇಪದೇ ಬಾಯಿಯೊಳಕ್ಕೆ ಹಾಕಿಕೊಂಡು ಹೀರುತ್ತವೆ. ಇದಕ್ಕಾಗಿ ಬಾಯಿಯ ಅಂಚಿನಲ್ಲಿರುವ ದಪ್ಪತುಟಿಗಳು ವಿವಿಧ ರೀತಿಯಲ್ಲಿ ಹೊರ ಚಾಚುವಂತೆ ಮಾರ್ಪಾಟಾಗಿವೆ. ಬಾಯಿಯ ಸುತ್ತ ದಾಡಿಗಳಂತಿರುವ ಸ್ಪರ್ಶಾಂಗಗಳಿಲ್ಲ. ಈ ಮೀನುಗಳಲ್ಲಿ ದವಡೆ ಹಲ್ಲುಗಳಿಲ್ಲ. ಮೇಲ್ದವಡೆಯ ಅಂಚಿನಲ್ಲಿ ಪ್ರಿಮ್ಯಾಕ್ಸಿಲ್ಲ ಹಾಗೂ ಮ್ಯಾಕ್ಸಿಲ್ಲದಲ್ಲಿ ಹಲ್ಲುಗಳಿವೆ. ಕೊನೆಯ ಜಲಶ್ವಾಸಕೋಶದ ಕಮಾನಿನ ಕೆಳಗಿನ ಗಂಟಲು ಕುಹರದ ಆಳದಲ್ಲಿರುವ ಹಲ್ಲುಗಳೇ ಅವುಗಳ ಕಾರ್ಯನಿರತ ಹಲ್ಲುಗಳು. ಗಂಟಲು ಕುಹರದ ಹಲ್ಲುಗಳು ಸೆರೆಟೋಬ್ರಾಂಖಿಯಲ್‌ಗಳ ನಾಲ್ಕನೆಯ ಜೊತೆಯ ಮೇಲೆ ಇವೆ. 16 ಕ್ಕಿಂತ ಹೆಚ್ಚಿರುವ ಈ ಗಂಟಲು ಕುಹರದ ಹಲ್ಲುಗಳು ಒಂದು ಪಂಕ್ತಿಯಲ್ಲಿವೆ. ಇವುಗಳ ಸ್ನಾಯು ವಿಭಾಜಕ ಭಿತ್ತಿಗಳಲ್ಲಿ ಸಣ್ಣ ಹಬ್ಬೆ ಮೂಳೆಗಳಿವೆ. ಇವುಗಳನ್ನು ಮಧ್ಯಮ ಸ್ನಾಯು ಮೂಳೆಗಳೆಂದು ಕರೆಯುವರು. ಮೂಳೆಗಳು Y ಆಕಾರವುಳ್ಳವು. ಇವುಗಳಲ್ಲಿನ ಈಜು ಚೀಲವು ಉದ್ದವಾಗಿದ್ದು ಎರಡು ಅಥವಾ ಮೂರು ಭಾಗಗಳಾಗಿ ಕುಗ್ಗಿದೆ.

ಈ ಮೀನುಗಳಲ್ಲಿ ಬೆನ್ನಿನ ಈಜು ರೆಕ್ಕೆಯು ಉದ್ದವಾಗಿದ್ದು, ಉದರದ ಮೇಲಿನ ಈಜು ರೆಕ್ಕೆಗಳ ಎದುರುಭಾಗದಲ್ಲಿದೆ. ಗುದದ್ವಾರದ ಈಜುರೆಕ್ಕೆಯು ಚಿಕ್ಕದು. ಮೇದಸ್ಸಿನ ಈಜುರೆಕ್ಕೆಯು ಇವುಗಳಲ್ಲಿಲ್ಲ. ಪಾರ್ಶ್ವಸ್ಥರೇಖೆಯು ನಿಕೃಷ್ಟವಾಗಿ ಬೆಳೆದಿದೆ. ಅದರೆ, ಪ್ರಾಯಸ್ಥ ಮೀನುಗಳಲ್ಲಿ ಇದು ಚೆನ್ನಾಗಿ ಬೆಳೆದಿರಬಹುದು.

ಈ ಮೀನುಗಳ ಮೊಟ್ಟೆಗಳು ನೀರಿನ ತಳಭಾಗದಲ್ಲಿರುವ ವಸ್ತುಗಳಿಗೆ ಅಂಟಿಸುತ್ತವೆ. ಕೆಲವು ಮೀನುಗಳು ವೇಗವಾಗಿ ಹರಿಯುವ ನದಿನೀರಿನಲ್ಲಿರುವ ತಳಭಾಗದ ಕಲ್ಲಿನ ಮೇಲೆ ಮರಿ ಮಾಡುತ್ತವೆ. ಇನ್ನು ಕೆಲವು ಪ್ರಶಾಂತ ಸ್ಥಳಗಳಲ್ಲಿ, ಆಗಾಗ್ಗೆ ಸಸ್ಯಗಳ ಮೇಲೆ ಮರಿಮಾಡುತ್ತವೆ. ಸಂತಾನಾಭಿವೃದ್ಧಿಯು ಸಾಮಾನ್ಯವಾಗಿ ವಸಂತಋತು ಹಾಗೂ ಬೇಸಗೆಯ ಪೂರ್ವಾರ್ಧದಲ್ಲಿ ಕಂಡುಬರುತ್ತದೆ. ಗಂಡುಗಳು ಸಾಧಾರಣವಾಗಿ ಹೆಣ್ಣುಗಳಿಗಿಂತ ಚಿಕ್ಕವು. ಮೊಟ್ಟೆಯಿಡುವ ಕಾಲದಲ್ಲಿ ದೇಹದ, ಬಣ್ಣ ಬದಲಾಯಿಸುತ್ತವೆ. ಅವು ಉಜ್ವಲ ವರ್ಣ ವಿನ್ಯಾಸ ಮತ್ತು ಕೊಂಬಿನ ಗಂತಿಗಳನ್ನು ಸಹ ಪಡೆಯುತ್ತವೆ. ಮೊಟ್ಟೆಗಳು ಸಾಮಾನ್ಯವಾಗಿ ಸಣ್ಣವು. ನೈಸರ್ಗಿಕ ವಂಶಗಳ ಮಧ್ಯದ ಅನಂತರ ಸಾಧ್ಯತೆಯು ವಿಶಿಷ್ಟವಾಗಿ ಒಂದು ಪುನರಾವರ್ತಕ ಘಟನೆಯಾಗಿದೆ. ಉತ್ತರ ಅಮೇರಿಕದಲ್ಲಿ ಈ ಮೀನುಗಳು ಮೂಳೆಗಳಿಂದ ತುಂಬಿದ್ದರು, ಸ್ವಲ್ಪ ಪ್ರಮಾಣದ ವಾಣಿಜ್ಯದ ಪ್ರಾಮುಖ್ಯತೆಯನ್ನು ಪಡೆದಿವೆ. ಈ ಕುಟುಂಬದಲ್ಲಿ ಸು. 30 ಜಾತಿ ಮೀನುಗಳಿವೆ. ***

**ಕ್ಯಾಡಿಸ್ ನೊಣಗಳು:** ಕೀಟವರ್ಗದ ಟ್ರೈಕಾಪ್ಟರ ಗಣದ ಸದಸ್ಯರು. ನೋಡಲು ಪತಂಗಗಳಂತಿವೆ. ದೇಹ ಮತ್ತು ರೆಕ್ಕೆಗಳ ಮೇಲೆ ಕೂದಲಿನ ಹೊದಿಕೆ ಇದೆ. ಇವಕ್ಕೆ ತೆಳುವಾದ ಪೊರೆಯಂಥ ಎರಡು ಜೊತೆ ರೆಕ್ಕೆಗಳಿವೆ. ಆಹಾರವನ್ನು ಕಡಿದು ತಿನ್ನಲು

ಅನುಕೂಲವಾಗುವಂಥ ವದನಾಂಗಗಳಿವೆ. ಬೆಳೆವಣಿಗೆಯಲ್ಲಿ ಪೂರ್ಣ ರೂಪ ಪರಿವರ್ತನೆ ಹೊಂದುತ್ತವೆ. ಡಿಂಬಗಳು ಜಲವಾಸಿಗಳು. ನಿಂತ ನೀರು ಅಥವಾ ಹರಿವ ನೀರಿನಲ್ಲಿ ವಾಸಿಸುತ್ತವೆ. ಡಿಂಬಗಳು ಮರಳು, ಚಿಕ್ಕಪುಟ್ಟ ಚಿಪ್ಪುಗಳು ಮತ್ತು ಇತರ ಸಸ್ಯ ವಸ್ತುಗಳಿಂದ ಗೂಡುಗಳನ್ನು ರಚಿಸಿ ಅವುಗಳಲ್ಲಿ ಜೀವಿಸುತ್ತವೆ. ಈ ಗೂಡು ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿದೆ. ಕೆಲವು ಪ್ರಭೇದದ ನೊಣಗಳು ತೆಳುವಾದ, ನಯವಾದ ದಾರದಿಂದ ಬಲೆ ನೇಯ್ದು ಸಣ್ಣಜೀವಿಗಳನ್ನು ಆಹಾರಕ್ಕಾಗಿ ಹಿಡಿಯುತ್ತವೆ. ಕ್ಯಾಡಿಸ್ ನೊಣಗಳ ಡಿಂಬಗಳು ಮೀನು ಮತ್ತಿತರ ಜಲವಾಸಿ ಪ್ರಾಣಿಗಳ ಪ್ರಮುಖ ಆಹಾರವೆನಿಸಿವೆ.

(ಎನ್.ವಿ.ಎ.)

**ಕ್ಯಾನಾನ್, ವಾಲ್ಟರ್ ಬ್ರಾಡ್‌ಫರ್ಡ್** (೧೮೭೧–೧೯೪೫): ದೇಹವಿಜ್ಞಾನಶಾಸ್ತ್ರ, ಪಚನಕ್ರಿಯೆ ಮತ್ತು ಹಾರ್ಮೋನುಗಳ ಬಗ್ಗೆ ನಿಷ್ಣಾತ. ಮನಶ್ಶಾಸ್ತ್ರದ ಕ್ಷೇತ್ರದಲ್ಲಿ ಜೇಮ್ಸ್–ಲಾಂಗ್ ಅವರ ಭಾವನಿಷ್ಪತ್ತಿ ಸಿದ್ಧಾಂತವನ್ನು ನಿರಾಕರಿಸಿ ವಿಖ್ಯಾತನಾದ. ೧೯೨೦, ೧೯೩೦ರಲ್ಲಿ ನಿರೂಪಣೆಗೊಂಡ ಜೇಮ್ಸ್–ಲಾಂಗ್ ಸಿದ್ಧಾಂತ ದೈಹಿಕ ವಿಪರ್ಯಾಸಗಳ ಪ್ರಾಮುಖ್ಯವನ್ನು ಒತ್ತಿ ಹೇಳಿತು. ಇದನ್ನು ಪ್ರಯೋಗದಿಂದ ಸಿದ್ಧಪಡಿಸಲು ಯತ್ನಿಸಿದ ಕೀರ್ತಿ ಕ್ಯಾನ್‌ನದು. ಮೂವತ್ತು ವರ್ಷಗಳ ಅನಂತರ ಈತ ತನ್ನ ಪ್ರಯೋಗಗಳನ್ನು ನಾಯಿ, ಬೆಕ್ಕುಗಳ ಮೇಲೆ ನಡೆಸಿದ. ಈ ಪ್ರಯೋಗಗಳ ಫಲವಾಗಿ ಸಹಾನುಕಂಪ ನರಮಂಡಲದ ಉತ್ತೇಜನ ಮತ್ತು ರಕ್ತದಲ್ಲಿ ಅಡ್ರೆನಲಿನ್ ದ್ರವದ ಸ್ರಾವ, ಇವು ಭಾವೋತ್ಪಾದನೆಗೆ ಕಾರಣವೆಂದು ತಿಳಿದುಬಂತು. ಈತನ ಗ್ರಂಥಗಳಲ್ಲಿ ಬಾಡಿಲಿ ಚೇಂಜಸ್ ಇನ್ ಪೇನ್, ಹಂಗರ್, ಫಿಯರ್ ಅಂಡ್ ರೇಜ್(೧೯೧೫), ಫೀಲಿಂಗ್ಸ್ ಅಂಡ್ ಎಮೋಷನ್ಸ್ (೧೯೨೮) – ಇವು ಮುಖ್ಯವಾದುವು. (ಎಸ್.ಕೆ.ಆರ್)

**ಕ್ಯಾಪಿಬಾರ:** ದಂಶಕವರ್ಗಕ್ಕೆ ಸೇರಿದ ಪ್ರಾಣಿಗಳಲ್ಲೆಲ್ಲ ಅತ್ಯಂತ ದೊಡ್ಡದು. ಹೈಡ್ರೋಕೀರಿಡೆ ಕುಟುಂಬಕ್ಕೆ ಸೇರಿದೆ. ಹೈಡ್ರೋಕೀರಸ್ ಎಂಬುದು ಇದರ ಶಾಸ್ತ್ರೀಯನಾಮ. ದಕ್ಷಿಣ ಅಮೇರಿಕದ ಮೂಲವಾಸಿ. ಮಧ್ಯ ಅಮೇರಿಕದಲ್ಲೂ ಕಾಣಬರುತ್ತದೆ. ಅರೆಜಲವಾಸಿಯಾದ ಇದು ಕೆರೆ, ಕೊಳ, ನದಿಗಳಲ್ಲೂ ಅವುಗಳ ಸುತ್ತಲಿನ ದಟ್ಟವಾದ ಕಾಡುಗಳಲ್ಲೂ ಜೀವಿಸುತ್ತದೆ. ಕ್ಯಾಪಿಬಾರ ನೋಡಲು ಗಿನಿಹಂದಿಯಂತೆಯೆ ಕಾಣುವುದಾದರೂ ಗಾತ್ರದಲ್ಲಿ ಅದಕ್ಕಿಂತ ಬಲು ದೊಡ್ಡದು. ಸಾಧಾರಣವಾಗಿ ಪೂರ್ಣ ಬೆಳೆದ ಪ್ರಾಣಿ ಸುಮಾರು ೧.೨ ಮೀ ಉದ್ದ ಇರುತ್ತದೆ. ತೂಕ ೪೫–೬೦ ಕಿಗ್ರಾಂ ಜಾಲವಿರುವ ಕಾಲ್ಬೆರಳುಗಳು(ಮುಂಗಾಲಿನಲ್ಲಿ ನಾಲ್ಕು ಮತ್ತು ಹಿಂಗಾಲಿನಲ್ಲಿ ಮೂರು ಬೆರಳುಗಳಿವೆ), ಗೊರಸಿನಂಥ ಉಗುರು, ವಿರಳವಾದ ಮೈಗೂದಲು, ಮೊಟಕಾದ ಕಿವಿಗಳು, ಸೀಳಿದ ಮೇಲ್ತುಟಿ, ಬಲು ಮೊಟಕಾದ ಬಾಲ, ಮೊಂಡುಮೂತಿ– ಇವು ಕ್ಯಾಪಿಬಾರದ ಪ್ರಮುಖ ಲಕ್ಷಣಗಳು.

ಕ್ಯಾಪಿಬಾರ ಸಂಘಜೀವಿ: ಸಾಮಾನ್ಯವಾಗಿ ೧೦–೨೦ ಪ್ರಾಣಿಗಳು ಗುಂಪುಗುಂಪಾಗಿ ವಾಸಿಸುತ್ತವೆ. ಇದು ಹಗಲೆಲ್ಲ ಮರೆಗಳಲ್ಲಿ ಅಡಗಿದ್ದು ಬೆಳಗಿನ ಜಾವ ಮತ್ತು ಸಂಜೆಯ ಹೊತ್ತು ಹೊರಬಂದು ಆಹಾರಾನ್ವೇಷಣೆಯಲ್ಲಿ ತೊಡಗುತ್ತದೆ. ಜಲಸಸ್ಯಗಳು ಮತ್ತು ಎಳೆಯ ಮರಗಳ ತೊಗಟೆ ಇದರ ಪ್ರಧಾನ ಆಹಾರ. ಕೆಲವೊಮ್ಮೆ ಹೊಲಗಳಿಗೆ ನುಗ್ಗಿ ವಿಪರೀತ ನಷ್ಟ ಮಾಡುವುದೂ ಉಂಟು. ಕ್ಯಾಪಿಬಾರ ನೆಲದ ಮೇಲೆ ಅಷ್ಟು ಚುರುಕಾಗಿ ನಡೆಯಲಾರದು. ಶತ್ರುಗಳು ಬೆನ್ನಟ್ಟಿದಾಗ ಕೊಂಚಮಟ್ಟಿಗೆ ಓಡುವುದಾದರೂ ಬಲುಬೇಗ ನೀರಿಗೆ ಹಾರಿಬಿಡುತ್ತದೆ; ನೀರಿನಲ್ಲಿ ಮಾತ್ರ ವೇಗವಾಗಿ ಈಜಬಲ್ಲುದು. ನೀರಿನೊಳಗೆ ೭–೮ ಮಿನಿಟುಗಳ ಕಾಲ ಮುಳುಗಿರಲೂ ಬಲ್ಲುದು.

ಸ್ವಭಾವತಃ ಇದು ಬಲು ಸಾಧುಪ್ರಾಣಿ. ಆದರೆ ಬೆಳೆಗಳನ್ನು ನಾಶ ಮಾಡುತ್ತದೆ. ಹೊಟ್ಟೆ ತುಂಬಿದಾಗ ಹಂದಿಯಂತೆ ಗುಟುರುಹಾಕುತ್ತ ತಿರುಗಾಡುತ್ತದೆ. ಇದು ವರ್ಷಕ್ಕೆ ಒಂದುಬಾರಿ ಮಾತ್ರ ಮರಿ ಹಾಕುತ್ತದೆ. ಮರಿಗಳ ಸಂಖ್ಯೆ ಒಂದು ಸೂಲಿಗೆ ೨–೮; ಗರ್ಭಧಾರಣೆಯ ಕಾಲ ೧೫–೧೮ ವಾರಗಳು. ಹುಟ್ಟುವಾಗಲೆ ಚೆನ್ನಾಗಿ ಬೆಳೆದಿರುವ ಮರಿಗಳು ಬಹಳ ಕಾಲ –ತಾಯಿಯೊಡನೆ ಇರುತ್ತವೆ. ಕ್ಯಾಪಿಬಾರ ಸುಮಾರು ೮–೧೦ ವರ್ಷ ಬದುಕಿರುತ್ತದೆ. ಮಾಂಸಕ್ಕಾಗಿ ಈ ಪ್ರಾಣಿಯನ್ನು ಬೇಟೆಯಾಡುವುದುಂಟು.

***

**ಕ್ಯಾಪ್ಸಿಡೆ:** ಹೆಮಿಪ್ಟರ (ಚುಚ್ಚುವ – ಹೀರುವ ವದನಾಂಗಗಳು, ಎರಡು ಜತೆ, ಭಾಗಶಃ ಗಡಸು ಮತ್ತು ದಪ್ಪವಾಗಿರುವ ರೆಕ್ಕೆಗಳನ್ನು ಹೊಂದಿರುವಂತಹ ಕೀಟಗಳನ್ನೊಳಗೊಂಡ) ಗಣದಲ್ಲಿರುವ ಕುಟುಂಬ. ದೇಹದ ಹೊರಭಾಗದಿಂದ ವಿಕಾಸಗೊಳ್ಳುವ ರೆಕ್ಕೆಗಳುಳ್ಳ ಅಪೂರ್ಣ ರೂಪಾಂತರ ಹೊಂದುವ ಕೀಟಗಳು. ಪೊರೆಹುಳುವಿನ ಅವಸ್ಥೆ ಇಲ್ಲ. ಪ್ರೌಢ ಕೀಟವನ್ನೇ ಹೋಲುವ ಮರಿಕೀಟಕ್ಕೆ ಅಪ್ಸರಕೀಟ ಎಂದು ಹೆಸರು.

ಆಕಾರದಲ್ಲಿ ಸೊಳ್ಳೆಗಳಂತಿವೆ. ಕಾರಣ, ಸೊಳ್ಳೆ ತಗಣೆ (ಮಸ್ಕಿಟೊ ಬಗ್ಸ್) ಎನ್ನುವರು. 5000 ಪ್ರಭೇದಗಳಿವೆ. ಇವು ಸಣ್ಣಗಾತ್ರದ ಕೀಟಗಳು. ಕಾಲಿನ ಟಾರ್ಸಸ್ ಭಾಗದಲ್ಲಿ 3 ಖಂಡಗಳು, ಹೀರುಕೊಳವೆಯಲ್ಲಿ 4 ಖಂಡಗಳು ಇವೆ. ಹೆಣ್ಣು ತಿಗಣೆಗೆ ನಾಳಾಂಗ (ಓವಿಪಾಸಿಟರ್) ಇದೆ. ಸಸ್ಯ ರಸಗಳನ್ನು ಹೀರಿ ಬದುಕುತ್ತವೆ. ವಿಶ್ವದ ವಿವಿಧ ಭಾಗಗಳಲ್ಲಿ ಕೆಲವು ಪ್ರಭೇದಗಳು ಬೆಳೆಗಳಿಗೆ ತೀವ್ರರೂಪದ ಪೀಡೆಗಳಾಗಿ ಪರಿಣಮಿಸಿವೆ.

ಚಹ ಸೊಳ್ಳೆ (ಟೀ ಮಸ್ಕಿಟೊ) ಪೂರ್ವ ಮತ್ತು ದಕ್ಷಿಣ ಭಾರತ, ಶ್ರೀಲಂಕಾಗಳಲ್ಲಿ ಚಹ ತೋಟಗಳಿಗೆ ಅತ್ಯಂತ ಹಾನಿಕರವಾದ ಈ ಕೀಟ ಹೀಲೋಪೆಲ್ಟಿಸ್ ಜಾತಿಗೆ ಸೇರಿದ್ದು, ಹೀ. ಆಂಟೊನೈ ಮತ್ತು ಹೀ. ಥಿಈವೋರ ಎಂಬ ಎರಡು ಪ್ರಭೇದಗಳನ್ನೊಳಗೊಂಡಿದೆ.

ಇವು ಕೆಂಪು, ಕಪ್ಪು ಮತ್ತು ಬಿಳಿ ಬಣ್ಣದ, ಸೊಳ್ಳೆಯಂತಿವೆ. ತುಂಬಾ ಚಟುವಟಿಕೆಯಿಂದಿರುತ್ತವೆ. ಮೊಟ್ಟೆಗಳನ್ನು ಎಳೆ ಎಲೆಗಳ ಮೃದುಭಾಗದಲ್ಲಿ ಇಡುತ್ತವೆ. 5–10 ದಿನಗಳಲ್ಲಿ ಮೊಟ್ಟೆಗಳೊಡೆದು ಹೊರಬರುವ ಅಪ್ಸರೆ ಕೀಟಗಳು 9–13 ದಿನಗಳಲ್ಲಿ 5 ಬಾರಿ ಪೊರೆಕಳಚಿ ಪ್ರೌಢಾವಸ್ಥೆಗೆ ಬರುವುವು.

ಮರಿಕೀಟಗಳು, ಪ್ರೌಢಕೀಟಗಳು ಎಳೆ ಕುಡಿ ಎಲೆಗಳಿಂದ ರಸ ಹೀರುವುವು. ಇದರಿಂದ ಆ ಭಾಗಗಳು ಸುರುಳಿ ಸುತ್ತಿಕೊಂಡು ಬಾಡುವುವು. ಒಂದು ತಗಣೆ ಒಂದು ದಿನದಲ್ಲಿ ಎರಡು ಕುಡಿಗಳನ್ನು ಹಾಳುಮಾಡುವಷ್ಟು ತೀವ್ರತರದಲ್ಲಿ ಚಹ ಬೆಳೆಗೆ ನಷ್ಟ ಮಾಡುತ್ತದೆ. ರಸ ಹೀರಲ್ಪಟ್ಟ ಎಲೆ ಮತ್ತು ಕುಡಿಗಳು ಮೊದಲು ಕಂದು ಬಣ್ಣಕ್ಕೆ, ತಿರುಗಿ, ನಂತರ ಕಪ್ಪು ಬಣ್ಣಕ್ಕೆ ತಿರುಗುವುವು. ಎಲೆಯ ಮೇಲೆ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುವುವು.

ಚಹ ಸೊಳ್ಳೆಯ ಹತೋಟಿಗೆ ಶೇ. 0.1 ಡಿಡಿಟಿ ಅಥವ ಶೇ. 0.5 ಪ್ಯಾರಾಥಯೋನ್ ಹೆಕ್ಟೇರಿಗೆ 650 ರಿಂದ 850 ಲೀಟರಿನಂತೆ ಸಿಂಪಡಿಸಬೇಕು. ಶೇ. 5 ಡಿಡಿಟಿ ಪುಡಿ ಉದುರಿಸಬಹುದು. ಔಷಧಿ ಪ್ರಯೋಗಿಸಿದ 3–4 ವಾರಗಳವರೆಗೆ ಎಲೆಗಳನ್ನು ಬಿಡಿಸಬಾರದು.

ಪೂರ್ವ ಭಾರತದಲ್ಲಿ ಚಹ ಬೆಳೆಗೆ ಹೀಲೋಪೆಲ್ಟಿಸ್ ಥೀಈವೋರ ಕೀಟ ಭಾರಿ ಕಂಟಕಪ್ರಯವಾದರೆ, ದಕ್ಷಿಣ ಭಾರತದಲ್ಲಿ ಹೀ. ಆಂಟೊನೈ ಹಾವಳಿ ಹೆಚ್ಚು. ಕರ್ನಾಟಕ ಪ್ರಾಂತದಲ್ಲಿ ಚಹ ಬೆಳೆ, ಸೀಬೆ, ಗೋಡಂಬಿ, ದ್ರಾಕ್ಷಿ, ಅವಕ್ಯಾಡೊ ಮಹಾಗನಿ, ಬೇವು, ಸಿಂಕೋನ, ಮೆಣಸು, ಹುಣಸೆ, ದಾಲ್ಚಿನ್ನಿಮರಗಳಿಗೆ ಹಾನಿ ಉಂಟುಮಾಡುತ್ತದೆ.

ಸೀಬೆಯ ಹೀಚು, ಕಾಯಿಗಳ ಮೇಲೆ ತಗಣೆಗಳು ಕುಳಿತು ರಸಹೀರುವುದರಿಂದ ಕಜ್ಜಿಯಂತೆ ಹೊಪ್ಪಳೆಗಳು ಕಾಣಿಸಿಕೊಳ್ಳುತ್ತವೆ. ಇಂಥ ಫಲವನ್ನು ಕಜ್ಜಿಕಾಯಿ ಎನ್ನುವರು. ಇದಕ್ಕೆ ಮಾರುಕಟ್ಟೆಯಲ್ಲಿ ಬೆಲೆ ಕಡಿಮೆ. ಇದರ ಹತೋಟಿಗೆ ಹೂವುಗಳು ಅರಳಿದಾಗಿನಿಂದ ಕಾಯಿಗಳು ಹಣ್ಣಾಗುವವರೆಗೂ ಎರಡು ವಾರಕ್ಕೊಮ್ಮೆ ಶೇ. 5 ಬಿಎಚ್‌ಸಿ ಅಥವ ಶೇ. 2 ಪ್ಯಾರಾಥಯಾನ್ ಪುಡಿ ಉದುರಿಸಬೇಕು ಅಥವ ಶೇ. 0.3 ಡಿಡಿಟಿ ಅಥವ ಶೇ. 0.05 ಪ್ಯಾರಾಥಯಾನ್ ಸಿಂಪಡಿಸಬೇಕು.

ಗೋಡಂಬಿ ಗಿಡದ ಚಿಗುರು, ಎಲೆ, ಹೂವು ಗೊಂಚಲು, ಎಳೆಕಾಯಿಗಳಿಂದೆಲ್ಲಾ ಈ ತಗಣೆಗಳು ರಸಹೀರುವುದರಿಂದ ಆ ಭಾಗಗಳೆಲ್ಲಾ ಬಳಲಿ ಬಾಡುವುವು. ಹೂವು ಗೊಂಚಲುಗಳು ಸುಟ್ಟ ಹಾಗೆ ಕಾಣುವುವು. ಕಾಟ ತೀವ್ರ ರೂಪದ್ದಾದರೆ ರೆಂಬೆಗಳು ತುದಿಯಿಂದ ಹಿಂದಕ್ಕೆ ಒಣಗುವುವು ಮತ್ತು ಇಳುವರಿಯೂ ಕಡಿಮೆಯಾಗುವುದು.

ದ್ರಾಕ್ಷಿ ಗೊಂಚಲಿನಲ್ಲಿರುವ ಎಳೆಕಾಯಿಗಳನ್ನು ತಗಣೆಗಳು ಚುಚ್ಚಿ ಬಲಿಯದಂತೆ ಮಾಡುವುವು. ಹತೋಟಿಗೆ ಕಸಿ ಮಾಡಿದ ತರುವಾಯ ಎಲೆ ಮೊಗ್ಗುಗಳು ಅರಳುವಂತಿರುವಾಗ ಶೇ. 0.2 ಡಿಡಿಟಿ ಅಥವ ಶೇ. 0.05 ಪ್ಯಾರಾಥಯಾನ್ ಸಿಂಪರಿಸಬೇಕು.

ಜೋಳದ ತೆನೆ ತಗಣೆ: ಕ್ಯಾಲೋಕೊರಿಸ್ ಆ್ಯಂಗಸ್ಟೇಟಿಸ್ ತಗಣಿ ಜೋಳದ ಪೈರಿನ ಮೃದು ಭಾಗಗಳಿಂದ ಮತ್ತು ಹಾಲು ತುಂಬುತ್ತಿರುವ ಕಾಳುಗಳಿಂದ ರಸ ಹೀರುವುದು. ಇದರಿಂದ ಕಾಳುಗಳು ಮುದುಡಿಕೊಂಡು ಜೊಳ್ಳಾಗುವುವು. ಬೆಳೆಯ ಮೇಲೆ ಶೇ. 5 ಬಿಹೆಚ್‌ಸಿ ಪುಡಿ (ಹೆಕ್ಟೇರಿಗೆ 24–37 ಕಿಗ್ರಾಂ.) ಉದುರಿಸಿ ಈ ಪೀಡೆಯನ್ನು ಹತೋಟಿಯಲ್ಲಿಡಬಹುದು.

ವೀಳ್ಯದೆಲೆ ತಗಣಿ (ಬೀಟಲ್ ಬಗ್): ಡೈಸ್ಫಿಂಕ್ಟಸ್ ಪೊಲ್ಲೈಟಸ್ ತಗಣಿ ಕುಡಿ ಹಾಗೂ ಎಲೆಗಳಿಂದ ರಸ ಹೀರುವುದು. ಕುಡಿಗಳು ಬಾಡುವುವು ಮತ್ತು ಎಲೆಗಳ ಮೇಲೆ ಕಪ್ಪುಚುಕ್ಕೆಗಳು ಕಾಣಿಸಿಕೊಳ್ಳುವುವು. ಹತೋಟಿಗೆ ಶೇ 0.05 ಪ್ಯಾರಾಥಯಾನ್ ಅಥವ ಶೇ. 0.8 ಮಾಲಾಥಯಾನ್ ಅಥವ ಶೇ. 0.16 ಡಿಡಿಟಿ ಸಿಂಪರಿಸಬೇಕು.

***

**ಕ್ಯಾರಕ್ಯಾಲ್:** ಕಾರ್ನಿವೊರ ಗಣದ ಫೆಲಿಡೆ ಕುಟುಂಬಕ್ಕೆ ಸೇರಿದ ಮಾಂಸಾಹಾರಿಯಾದ ಚತುಷ್ಪಾದ ಪ್ರಾಣಿ. ಫೆಲಿಸ್ ಅಥವಾ ಲಿಂಕ್ಸ್ ಕ್ಯಾರಕ್ಯಾಲ್ ಎಂಬುದು ಇದರ ವೈಜ್ಞಾನಿಕ ಹೆಸರು. ಪರ್ಶಿಯನ್ ಲಿಂಕ್ಸ್ ಎಂದೂ ಇದನ್ನು ಕರೆಯುವುದಿದೆ. ಆಫ್ರಿಕ ಮತ್ತು ನೈರುತ್ಯ ಏಷ್ಯಗಳಲ್ಲಿ ಇದರ ವ್ಯಾಪ್ತಿ ಹೆಚ್ಚು. ಗಾತ್ರದಲ್ಲಿ ತೋಳಕ್ಕಿಂತ ದೊಡ್ಡದು.

ದೇಹದ ಬಣ್ಣ ಅಚ್ಚ ಕಂದು ಅಥವಾ ದ್ರಾಕ್ಷಾರಸದ ಕೆಂಪು. ಕಣ್ಣಿನ ಮೇಲ್ಭಾಗದಲ್ಲಿ ಬಿಳಿಯಬಣ್ಣದ ಒಂದು ಚುಕ್ಕೆ ಇದೆ. ಕಿವಿಯ ತುದಿಯಲ್ಲಿ ಉದ್ದವಾದ ಕಪ್ಪು ಕೂದಲಿನ



ಕ್ಯಾರಕ್ಯಾಲ್

ಗೊಂಚಲು ಇದೆ. ಕ್ಯಾರಕ್ಯಾಲ್ ಅತ್ಯಂತ ಬಲಶಾಲಿ ಮತ್ತು ಕ್ರೂರಿ. ಹುಲ್ಲು ಪೊದೆ ಮುಂತಾದೆಡೆ ವಾಸಿಸುತ್ತದೆ. ಸಣ್ಣಜಿಂಕೆಗಳು, ಮೊಲ, ಕಾಡುಕೋಳಿ ಮೊದಲಾದುವು ಇದರ ಮೆಚ್ಚಿನ ಆಹಾರ. ಈ ಪ್ರಾಣಿಯನ್ನು ಪಳಗಿಸಿ ಚಿಕ್ಕ ಚತುಷ್ಪಾದಿಗಳನ್ನೂ ಪಕ್ಷಿಗಳನ್ನೂ ಹಿಡಿಯುವುದಕ್ಕೆ ಉಪಯೋಗಿಸುತ್ತಾರೆ. ***

**ಕ್ಯಾರಾಬಿಡೆ:** ಸಾವಿರಾರು ಪ್ರಭೇದಗಳನ್ನೊಳಗೊಂಡ ದೊಡ್ಡ ಕೀಟ ಕುಟುಂಬ, ನೆಲಕೀಟ ಸಾಮಾನ್ಯ ಹೆಸರು. ಈ ಕುಟುಂಬದ ಕೀಟಗಳು ಭೂವಾಸಿಗಳು. ಇವುಗಳ ಉದ್ದ 1 ಮಿಮೀ ನಿಂದ 35 ಮಿಮೀ. ಇವು ಚಪ್ಪಟೆಯಾಗಿವೆ. ಮೈ ಬಣ್ಣ ಕಪ್ಪು. ಮರ, ಎಲೆ, ಚಕ್ಕೆ, ಕಸದ ರಾಶಿ, ಹುಲ್ಲು ಮಣ್ಣಿನ ಕೆಳಗಡೆ ಇವು ವಾಸಿಸುತ್ತವೆ. ರಭಸದಿಂದ ಓಡಬಲ್ಲವು, ಆದರೆ ಹಾರಲಾರವು. ಇವು ನಿಶಾಚರಿಗಳು. ಹಗಲಿನಲ್ಲಿ ಅಡಗಿಕೊಂಡಿದ್ದು, ರಾತ್ರಿ ಆಹಾರ ಸಂಪಾದಿಸುತ್ತವೆ. ಇವು ಮಾಂಸಾಹಾರಿಗಳಾಗಿದ್ದು, ಇತರೇ ಕೀಟಗಳನ್ನು ತಿಂದು ಜೀವಿಸುತ್ತವೆ. ಬಸವನಹುಳು, ಕ್ರಿಮಿಗಳು, ಬೆಳೆಯದ ಮರಿ ಕೀಟಗಳು ಇವುಗಳ ಮುಖ್ಯ ಆಹಾರ. ಪ್ರೌಢಾವಸ್ಥೆಯ ಕೀಟಗಳು, ಕೀಟಗಳ ಡಿಂಬಗಳು ಸಹ ಮಾಂಸಾಹಾರಿಗಳಾಗಿದ್ದು ಅನೇಕ ಕಂಟಕಪ್ರಾಯವಾದ ಕೀಟಗಳನ್ನು ತಿಂದು ಹಾಕುತ್ತವೆ. ನೆಲದ ಮೇಲೆ ವಾಸಿಸುವ ಕೆಲವು ಪ್ರಭೇದದ ಜೀರುಂಡೆಗಳು ರೈತನ ಪರಮ ಸ್ನೇಹಿತರೆನಿಸಿಕೊಂಡಿವೆ. ಕ್ಯಾರಬಿಡೆ ಕುಟುಂಬದ ಕೆಲವು ಪ್ರಭೇದಗಳು ಹಣ್ಣು ಮತ್ತು ಬೀಜಗಳನ್ನು ತಿಂದು ಹಾಕಿ ಹಾನಿಯುಂಟು ಮಾಡುತ್ತವೆ. ಈ ಕೀಟಗಳನ್ನು ಕೆಣಕಿದಾಗ ಅಸಹ್ಯವಾದ ದುರ್ಗಂಧವನ್ನು ಹೊರಸೂಸುತ್ತವೆ.

ಈ ಕೀಟಗಳಿಗೆ ಉದ್ದವಾದ ಕುಡಿಮೀಸೆಗಳಿವೆ. ವೇಗವಾಗಿ ಓಡಲು ಉದ್ದ ಕಾಲುಗಳಿವೆ. ಚೆನ್ನಾಗಿ ಬೆಳೆದ ವದನಾಂಗಗಳಿವೆ. ದವಡೆಗಳು ಉದ್ದವಾಗಿದ್ದು, ಗಟ್ಟಿಯಾಗಿವೆ. ಇವು ಹರಿತವಾಗಿವೆ. ಇವುಗಳ ಡಿಂಬಗಳು ಚಪ್ಪಟೆಯಾಗಿದ್ದು, ಉದರದಭಾಗದಲ್ಲಿ ಹತ್ತು ಖಂಡಗಳಿವೆ. ಬಾಲದ ತುದಿಯಲ್ಲಿ ಎರಡು ಕೂದಲೆಳೆಯಂತೆ ಅಥವಾ ಮುಳ್ಳಿನಂತೆ ಇರುವ ಅಂಗಗಳಿವೆ. ಡಿಂಬಗಳು ಮಾಂಸಾಹಾರಿಗಳಾಗಿದ್ದು, ಇತರೇ ಕೀಟಗಳನ್ನು ತಿಂದು ಜೀವಿಸುತ್ತವೆ. ಈ ಕುಟುಂಬದಲ್ಲಿ 20,000 ಪ್ರಭೇದಗಳನ್ನು ಗುರುತಿಸಲಾಗಿದ್ದು ಪ್ರಪಂಚದಾದ್ಯಂತ ಇವು ಹರಡಿಕೊಂಡಿವೆ. ಕ್ಯಾರಬಿಡೆ ಕುಟುಂಬವನ್ನು ಅನೇಕ ಉಪಕುಟುಂಬಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಮುಖ್ಯವಾದುದು ಸ್ಕೀರೋಸ್ಟಿಕಿನೀ. ಈ ಉಪಕುಟುಂಬದಲ್ಲಿ ಸು. 5,000 ಪ್ರಭೇದಗಳಿವೆ.

ಕ್ಯಾಲೋಸೋಮ ಜಾತಿಯ ಕೀಟ ಕ್ಯಾರಬಿಡೆ ಕುಟುಂಬದ ಪ್ರಮುಖ್ಯ ಸದಸ್ಯ. ಇವು ಗಾತ್ರದಲ್ಲಿ ದೊಡ್ಡದಾಗಿದ್ದು, ಆಕರ್ಷಕ ಬಣ್ಣಗಳಿಂದಲೂ ಕೂಡಿವೆ. ಇವು ಹೆಚ್ಚಾಗಿ ಕಂಬಳಿಹುಳು (ಕ್ಯಾಟರ್ ಪಿಲ್ಲರ್) ಗಳನ್ನು ತಮ್ಮ ಆಹಾರವನ್ನಾಗಿ ಬಳಸುವುದರಿಂದ ಕಂಬಳಿಹುಳುಗಳನ್ನು ಬೇಟೆಯಾಡುವ (ಕ್ಯಾಟರ್‌ಪಿಲ್ಲರ್ ಹಂಟರ್ಸ್) ಕೀಟಗಳೆನ್ನುವರು. ಗಾತ್ರದಲ್ಲಿ ಒಂದು ಅಂಗುಲ ಅಥವಾ ಅದಕ್ಕಿಂತಲೂ ಸ್ವಲ್ಪ ಹೆಚ್ಚಾಗಿರುತ್ತವೆ. ಮುಟ್ಟಿದಾಗ ಈ ಜಾತಿಯ ಕೀಟಗಳು ಅಹಿತಕರವಾದ ಗಂಧವನ್ನು ಹೊರಸೂಸಿ ಶತ್ರುಗಳಿಂದ ರಕ್ಷಣೆ ಪಡೆಯುತ್ತವೆ.

ಬ್ರಾಂಕೈನಸ್ ಜಾತಿಯ ಕೀಟಗಳು ಸುರಿಕ ಜೀರುಂಡೆಗಳೆಂದು ಹೆಸರಾಗಿವೆ. ಇದಕ್ಕೆ ಕಾರಣ ಈ ಕೀಟಗಳನ್ನು ಹಿಡಿದಾಗ ಅಥವಾ ತೊಂದರೆಯನ್ನುಂಟು ಮಾಡಿದಾಗ ತಮ್ಮ ಗುದದ್ವಾರದಿಂದ ಹೊರಚಿಮ್ಮುವ ಒಂದು ರೀತಿಯ ರಸಾಯನಿಕ ಪದಾರ್ಥ. ಇದು ಕೀಟದೊಳಗಿನ ಒಂದು ಕಿರುಗ್ರಂಥಿಯಿಂದ ಉತ್ಪತ್ತಿಯಾಗುವ ದ್ರವ. ಶಬ್ದದೊಡನೆ ಈ ದ್ರವವು ಗುದದ್ವಾರದಿಂದ ಹೊರ ಬಂದೊಡನೆ ವಾಯುರೂಪಕ್ಕೆ ಪರಿವರ್ತನೆ ಹೊಂದುತ್ತದೆ. ಇದು ಅಸಹನೀಯವಾದ ವಾಸನೆಯಿಂದ ಕೂಡಿರುವುದರಿಂದ ಶತ್ರುಗಳಿಂದ ತಪ್ಪಿಸಿಕೊಳ್ಳಲು ಸಹಾಯಕ.

ಕ್ಯಾರಬಸ್ ಜಾತಿಯ ಕೀಟಗಳು ಗಾತ್ರದಲ್ಲಿ ದೊಡ್ಡದಾಗಿವೆ. ಇವನ್ನು ಕ್ಯಾರಬಿನಿ ಉಪಕುಟುಂಬದಲ್ಲಿ ವಿಂಗಡಿಸಲಾಗಿದೆ. (ಎಸ್.ಕೆ.ಆರ್.)

**ಕ್ಯಾರಿನೇಟ:** ನಿಯಾರ್ನಿತಿಸ್ ಉಪವರ್ಗದ ಪಕ್ಷಿಗಳ ಅಧಿಗಣ. ನಿಯೋಗ್ನಾತ ಎಂದೂ ಹೆಸರಿದೆ. ಈ ಗುಂಪಿಗೆ ಸೇರಿದ ಪಕ್ಷಿಗಳು ಗಟ್ಟಿಮುಟ್ಟಾದ ಎದೆಯ ಮಾಂಸಖಂಡ ಮತ್ತು ಕೀಲಿ ಮೂಳೆಯನ್ನು ಹೊಂದಿವೆ. ಪೈಗೋಸ್ಟೈಲ್ ಇದೆ. ಬಾಲದಲ್ಲಿ 5–6 ಕಶೇರುಮಣಿಗಳಿವೆ. ಕೆಲವು ಹಾರಲಾರದ ಪಕ್ಷಿಗಳನ್ನು ಬಿಟ್ಟು ಇತರ ಎಲ್ಲಾ ಪಕ್ಷಿಗಳೂ ಈ ಗುಂಪಿನ ವಿವಿಧ ಗಣಗಳಿಗೆ ಸೇರುತ್ತವೆ.

1) ಸ್ಫೆನಿಸಿಫಾರ್ಮಿಸ್ ಗಣ : ಪೆಂಗ್ವಿನ್‌ಗಳು ಈ ಗುಂಪಿನವು. ಅತಿ ಶೀತ ಪ್ರದೇಶದಲ್ಲಿ ವಾಸಿಸುತ್ತವೆ. ಹಾರಲಾಗದಿದ್ದರೂ ನೀರಿನಲ್ಲಿ ಹೆಚ್ಚು ಈಜುವುದರಿಂದ ಬಲಿಷ್ಠವಾದ ಎದೆಯ ಮಾಂಸಖಂಡಗಳನ್ನು ಹೊಂದಿವೆ. ಇವುಗಳಿಗೆ ಮೀನೇ ಮುಖ್ಯ ಆಹಾರ. ಉದಾ : ಸ್ಫೆನಿಸ್ಕಸ್ (ಪೆಂಗ್ವಿನ್), ಆಪ್ಟೆನೊಡೈಟ್ಸ್ ಫಾರ್ಸ್ಟೇರಿ (ರಾಜ ಪೆಂಗ್ವಿನ್)

2) ಪ್ರೊಸೆಲ್ಲೇರಿಫಾರ್ಮಿಸ್ ಗಣ : ಈ ಗುಂಪಿಗೆ ಸೇರಿದ ಪಕ್ಷಿಗಳು ಸಾಗರ ತೀರದಲ್ಲಿ ಕಂಡುಬರುತ್ತವೆ. ಕೆಲವು ಪಕ್ಷಿಗಳು ಬಹಳ ದೊಡ್ಡವು. ಮೊಟ್ಟೆಗಳನ್ನು ಯಾವುದಾದರೂ ಬಿಲದಲ್ಲಿಡುತ್ತವೆ. ಒಂದು ಸಾರಿಗೆ ಒಂದೇ ಮೊಟ್ಟೆಯಿಡುವುವು. ಪಕ್ಷಿಗಳು ಸಣ್ಣ, ನೀಳವಾದ ರೆಕ್ಕೆಗಳನ್ನು ಹೊಂದಿದ್ದು ಗಾಳಿಯಲ್ಲಿ ತೇಲುತ್ತಾ ಚಲಿಸುತ್ತವೆ. ಉದಾ : ಡಯೊಮೆಡಿಯ (ಆಲ್ಬಟ್ರಾಸ್), ಪ್ರೊಸೆಲ್ಲೇರಿಯಾ (ಪೆಟ್ರಲ್), ಪಫಿನಸ್ (ಶೀಯರ್ ವಾಟರ್).

3) ಪೆಲಿಕನಿಫಾರ್ಮಿಸ್ ಗಣ: ಈ ಗುಂಪಿನ ಪಕ್ಷಿಗಳು ನೀರಿನಲ್ಲಿ ಮುಳುಗಿ ಮೀನುಗಳನ್ನು ಹಿಡಿದು ಬದುಕುತ್ತವೆ. ಮರಗಳ ಮೇಲೆ ಅಥವಾ ದೊಡ್ಡ ಬಂಡೆಗಳ




ಯುಟಿಪ್ಟಸ್ ಆ್ಯಂಟಿಪೊಡಮ್

ಮೇಲೆ ಗುಂಪಾಗಿ ಗೂಡುಗಳನ್ನು ನಿರ್ಮಿಸಿ ಮರಿಮಾಡುತ್ತವೆ. ಒಂದು ಸಾರಿಗೆ ಮೂರರಿಂದ ನಾಲ್ಕು ಮೊಟ್ಟೆಗಳನ್ನಿಡುತ್ತವೆ. ಉದಾ : ಪೆಲಿಕನ್, ಮೋರಸ್ (ಗಾನ್ನೆಟ್), ಸೂಲಾ, ನೀರುಕಾಗೆ

4) ಆನ್ಸೆರಿಫಾರ್ಮಿಸ್ ಗಣ : ಬಾತುಗಳು ಮತ್ತು ಹಂಸಗಳ ಗುಂಪು. ನೀರಿನಲ್ಲಿ ವಾಸಿಸಲನುಕೂಲವಾಗುವಂತೆ ಜೀವನ ಕ್ರಮವಿದೆ. ಸ್ವಲ್ಪ ಚಪ್ಪಟೆಯಾಕಾರದ ಕೊಕ್ಕುಗಳನ್ನು ಹೊಂದಿವೆ. ಮೀನು, ಏಡಿ ಮುಂತಾದ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಅನೇಕ ಜಾತಿಯ ಬಾತುಗಳು ಕೇವಲ ಕಾಳು, ಕಡ್ಡಿಗಳನ್ನು ತಿಂದು ಬದುಕುತ್ತವೆ. ಒಂದು ಸಾರಿಗೆ 10 ರಿಂದ 12 ಬಿಳಿಯ ಅಥವ ಬೂದು ಬಣ್ಣದ ಮೊಟ್ಟೆಗಳನ್ನಿಡುತ್ತವೆ. ಉದಾ : ಆನ್ಸರ್ ಇಂಡಿಕಸ್ (ಬೋಳು ತಲೆಯ ಬಾತು), ಆನಾಸ್ (ಸಾಮಾನ್ಯ ಬಾತು)

5) ಸಿಕೊನಿಯಿಫಾರ್ಮಿಸ್ ಗಣ : ಕೊಕ್ಕರೆ, ಸ್ಪೂನ್ ಬಿಲ್, ರಾಜಹಂಸ ಮತ್ತು ಐಬಿಸ್‌ಗಳು ಈ ಗುಂಪಿಗೆ ಸೇರಿವೆ. ಮೀನೇ ಮುಖ್ಯ ಆಹಾರ. ಇವುಗಳು ನೀಳವಾದ ಕೊಕ್ಕು ಮತ್ತು ಕಾಲುಗಳನ್ನು ಹೊಂದಿದ್ದು ಹೆಚ್ಚು ಕಾಲ ಹಾರಾಡಬಲ್ಲವು. ಬಹಳಷ್ಟವು ವಲಸೆ ಪಕ್ಷಿಗಳು. ಗುಂಪಾಗಿ ಗೂಡುಗಳನ್ನು ನಿರ್ಮಿಸಿ ಮೂರರಿಂದ ನಾಲ್ಕು ಮೊಟ್ಟೆಗಳನ್ನಿಡುತ್ತವೆ. ಉದಾ : ಬ್ಯುಬಲ್ಕಸ್ ಐಬಿಸ್ (ಕ್ಯಾಟಲ್ ಇಗ್ರೆಟ್), ಆರ್ಡಿಯಾ (ಕಬ್ಬಾರೆ ಹಕ್ಕಿ), ಫೀನಿಕೊಪ್ಟರಸ್ (ರಾಜಹಂಸ), ಸಿಕೊನಿಯ (ಕಂಚುಗಾರ ಹಕ್ಕಿ)

6) ಫಾಲ್ಕನಿಫಾರ್ಮಿಸ್ ಗಣ : ಹಗಲಿನಲ್ಲಿ ಬೇಟೆಯಾಡುವ ಗರುಡ, ಹದ್ದು, ರಣಹದ್ದುಗಳು ಸೇರುತ್ತವೆ. ಈ ಗುಂಪಿನ ಪಕ್ಷಿಗಳು ಸ್ವಲ್ಪ ಬಾಗಿರುವ, ಗಟ್ಟಿಯಾದ, ಚೂಪಾಗಿರುವ ಕೊಕ್ಕುಗಳನ್ನು ಹೊಂದಿವೆ. ಕಾಲು ಮತ್ತು ಉಗುರುಗಳೂ ಸಹ ಬಲಿಷ್ಟವಾಗಿವೆ. ಎತ್ತರವಾದ ಮರ ಅಥವಾ ಕಲ್ಲುಬಂಡೆಗಳ ಮೇಲೆ ಗೂಡುಗಳನ್ನು ನಿರ್ಮಿಸಿ 2 ರಿಂದ 3 ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ಉದಾ : ವಲ್ಚರ್ ಗ್ರೈಫಸ್ (ಕಾಂಡಾರ್ ಹಕ್ಕಿ), ಸಾರ್ಕೊರಾಂಫಸ್ ಪಾಪಾ (ರಾಜ ರಣಹದ್ದು), ಮಿಲ್ವಸ್ ಮಿಲ್ವಸ್ (ಕೆಂಪು ಗಿಡುಗ), ಪಾಂಡಿಯೊನ್ ಹ್ಯಾಲಿಯೇಟಸ್ (ಆಸ್ಪ್ರೆ ಹಕ್ಕಿ).

7) ಗ್ಯಾಲ್ಲಿಫಾರ್ಮಿಸ್ ಗಣ: ಈ ಗುಂಪಿಗೆ ಮಾನವ ಬೇಟೆಯಾಡಲು ಇಚ್ಛಿಸುವ ಅನೇಕ ಜಾತಿಯ ಪಕ್ಷಿಗಳು ಸೇರುತ್ತವೆ. ಈ ಪಕ್ಷಿಗಳು ಹೆಚ್ಚಾಗಿ ನೆಲದ ಮೇಲೆ ಜೀವಿಸುತ್ತವೆ. ಕಾಳು, ಕಡ್ಡಿಗಳೇ ಮುಖ್ಯ ಆಹಾರ. ಹೆಚ್ಚು ದೂರ ಹಾರಲಾರವು. ಅನೇಕ ಪಕ್ಷಿಗಳಲ್ಲಿ ಗಂಡು ಹೆಚ್ಚು ವರ್ಣರಂಜಿತವಾದ ಗರಿಗಳನ್ನು ಹೊಂದಿದೆ. ಒಂದು ಗಂಡು ಪಕ್ಷಿ ಅನೇಕ ಹೆಣ್ಣುಗಳನ್ನು ಆಕರ್ಷಿಸುತ್ತದೆ. ಮರಿಗಳ ಪಾಲನೆ, ಪೋಷಣೆ ಹೆಣ್ಣಿಗೆ ಸೇರಿದ್ದು. ನೆಲದ ಮೇಲೆ ಅನೇಕ ಮೊಟ್ಟೆಗಳನ್ನಿಟ್ಟು ಮರಿಮಾಡುತ್ತವೆ. ಉದಾ: ಗ್ಯಾಲಸ್ ಗ್ಯಾಲಸ್ (ಕೆಂಪು ಕಾಡುಕೋಳಿ), ಪಾವೊ ಕ್ರಿಸ್ಟೇಟಸ್ (ನವಿಲು), ಸೆಂಟ್ರೊಪಸ್ (ಫೆಸೆಂಟ್), ಲೋಫೊರ್ಟಿಕ್ಸ್ ಕ್ಯಾಲಿಫೋರ್ನಿಕ (ಕ್ವೇಲ್)

8) ಗ್ರೂಯಿಫಾರ್ಮಿಸ್ ಗಣ: ಈ ಗುಂಪಿನ ಪಕ್ಷಿಗಳು ನೀರಿನಲ್ಲಿ ಇಲ್ಲವೆ ಜೌಗು ಪ್ರದೇಶದಲ್ಲಿ ಕಂಡುಬರುತ್ತವೆ. ಹೆಚ್ಚು ದೂರ ಹಾರಲಾರವು. ಈ ಗುಂಪಿಗೆ ಸೇರಿದ ಬಕಪಕ್ಷಿಗಳು ನೀಳವಾದ ಕಾಲುಗಳನ್ನು ಹೊಂದಿವೆ. ಹೆಚ್ಚು ಕ್ಲಿಷ್ಟವಲ್ಲದ ಗೂಡುಗಳನ್ನು ನಿರ್ಮಿಸಿ 10 ರಿಂದ 12 ಮೊಟ್ಟೆಗಳನ್ನಿಡುತ್ತವೆ. ಉದಾ: ಫುಲಿಕಾ ಅಟ್ರ (ಕೂಟ್ ಹಕ್ಕಿ), ಗ್ರಸ್ ಗ್ರಸ್ (ಕೊಕ್ಕರೆ), ಗ್ರಸ್ ಆಂಟಿಗೋನ್ (ಸಾರಸ್ ಕೊಕ್ಕರೆ).

9) ಕೆರಾಡ್ರಿಯಿಫಾರ್ಮಿಸ್ ಗಣ: ಜಕಾನಗಳು, ಸ್ಯಾಂಡ್ ಪೈಪರುಗಳು ಈ ಗುಂಪಿನವು. ಹೆಚ್ಚಾಗಿ ಸಣ್ಣ ಸಣ್ಣ ಕೊಳಗಳು ಹಾಗೂ ಇನ್ನಿತರ ಜೌಗು ಪ್ರದೇಶದಲ್ಲಿ ಕಂಡುಬರುತ್ತವೆ. ಸಂಘಜೀವಿಗಳು. ಇದೇ ಗುಂಪಿಗೆ ಸೇರಿದ ತಿತ್ತಿರಿಗಳು (ಲ್ಯಾಪ್‌ವಿಂಗ್) ನೆಲದ ಮೇಲೆ ಜೀವಿಸುತ್ತವೆ. ಗಲ್ ಪಕ್ಷಿಗಳು ಸಮುದ್ರ ತೀರದಲ್ಲಿ ಮಾತ್ರ ಕಂಡುಬರುತ್ತವೆ. ಉದಾ: ಆಲ್ಕಾ ಇಂಪೆನ್ನಿಸ್ (ಆಕ್ ಹಕ್ಕಿ), ಕೆರಾಡ್ರಿಯಸ್ ಪ್ಲೂವಿಯಸ್ (ಗೋಲ್ಡನ್ ಪ್ಲೋವರ್), ಲಾರಸ್ (ಗಲ್), ಸ್ಟರ್ನ (ಟರ್ನ್).

10) ಕೊಲಂಬಿಫಾರ್ಮಿಸ್ ಗಣ : ಈ ಗುಂಪಿನ ಪಕ್ಷಿಗಳು ಪ್ರಪಂಚದಾದ್ಯಂತ ವಿಸ್ತರಿಸಿವೆ. ಬಹಳ ದೂರ ಹಾರಬಲ್ಲವು. ಹೆಚ್ಚಾಗಿ ಮರಗಳ ಮೇಲೆ ಜೀವಿಸುತ್ತವೆ. ಕಾಳು, ಕಡ್ಡಿ ಮತ್ತು ಇನ್ನಿತರ ಹಣ್ಣುಗಳು ಇವುಗಳ ಮುಖ್ಯ ಆಹಾರ. ಸಣ್ಣ ಕಡ್ಡಿಗಳನ್ನು ಉಪಯೋಗಿಸಿ ಚಪ್ಪಟೆಯಾಕಾರದ ಗೂಡುಗಳನ್ನು ನಿರ್ಮಿಸುತ್ತವೆ. ಒಂದು

ಸಾರಿಗೆ ಎರಡು ಮೊಟ್ಟೆಗಳನ್ನಿಡುತ್ತವೆ. ಗಂಡು ಮತ್ತು ಹೆಣ್ಣೆಗಳೆರಡೂ ಮರಿಗಳ ಪಾಲನೆ, ಪೋಷಣೆಯಲ್ಲಿ ಭಾಗವಹಿಸುತ್ತವೆ. ಇದೇ ಗುಂಪಿಗೆ ಸೇರಿದ ಡೊಡೊ ಎಂಬ ಜಾತಿಯ ಪಾರಿವಾಳವು ಮಾರಿಷಿಯಸ್ ದ್ವೀಪಗಳಲ್ಲಿ ವಿಕಾಸ ಹೊಂದಿ ದೊಡ್ಡ ಪಕ್ಷಿಗಳಾಗಿ ಬೆಳೆದಿದ್ದವು. ಆದರೆ ಇವುಗಳ ಸಂತತಿಯು ಮಾನವನಿಂದ 17ನೆ ಶತಮಾನದಲ್ಲಿಯೇ ನಶಿಸಿಹೋಯಿತು. ಉದಾ: ಕೊಲಂಬ ಲಿವಿಯ (ಪಾರಿವಾಳ), ಸ್ಟ್ರೆಪ್ಟೊಪಿಲಿಯ ಚೈನೆನ್ಸಿಸ್ (ಸ್ಪಾಟೆಡ್ ಪಾರಿವಾಳ), ಸ್ಟ್ರೆಪ್ಟೊಪಿಲಿಯ ಟರ್ಟರ್ (ಟರ್ಟರ್ ಪಾರಿವಾಳ)

11) ಸಿಟ್ಟಾಸಿಫಾರ್ಮಿಸ್ ಗಣ: ಗಿಳಿಗಳ ಗುಂಪು. ಹೆಚ್ಚಾಗಿ ಉಷ್ಣವಲಯದಲ್ಲಿ ಕಂಡುಬರುತ್ತವೆ. ಪಕ್ಷಿಗಳಲ್ಲಿಯೇ ಇವುಗಳನ್ನು ಅತ್ಯಂತ ಬುದ್ಧಿವಂತವೆಂದು ಪರಿಗಣಿಸಬಹುದು. ಇವುಗಳ ಜ್ಞಾಪಕಶಕ್ತಿಯೂ ಅಗಾಧ. ಬಹಳ ಚೆನ್ನಾಗಿ ಮಾನವನ ಧ್ವನಿಯನ್ನು ಅನುಕರಿಸಬಲ್ಲವು. ಸಸ್ಯಾಹಾರಿಗಳು ಎತ್ತರವಾದ ಮರಗಿಡಗಳಲ್ಲಿ ತೂತುಗಳನ್ನು ಕೊರೆದು ಮೊಟ್ಟೆಗಳನ್ನಿಡುತ್ತವೆ. ಗಂಡು ಮತ್ತು ಹೆಣ್ಣುಗಳೆರಡೂ ಮರಿಗಳ ಪಾಲನೆ, ಪೋಷಣೆಯಲ್ಲಿ ಭಾಗವಹಿಸುತ್ತವೆ. ಮರಿಗಳು ಬಹಳ ಕಾಲ ಗೂಡಿನಲ್ಲಿಯೇ ಇರುತ್ತವೆ. ಉದಾ: ಸಿಟ್ಟಾಕ್ಯುಲಾ ಕ್ರೆಮೇರಿ (ಗುಲಾಬಿ ಉಂಗುರದ ಗಿಳಿ), ಸಿಟ್ಟಾಕ್ಯುಲಾ ಯುಪಾಟ್ರಿಕ (ದೊಡ್ಡಗಿಳಿ), ಅಗಪಾರ್ನಿಸ್ ಫಿಷೇರಿ (ಒಲವಿನ ಹಕ್ಕಿ)

12) ಕ್ಯುಕ್ಯುಲಿಫಾರ್ಮಿಸ್ ಗಣ: ಇವುಗಳಲ್ಲಿ ಕೆಲವೊಂದು ಹಕ್ಕಿಗಳನ್ನು ಬಿಟ್ಟರೆ ಮಿಕ್ಕವಾವೂ ಗೂಡುಗಳನ್ನು ನಿರ್ಮಿಸುವುದಿಲ್ಲ. ಸಂತಾನೋತ್ಪತ್ತಿಗೆ ಮಿಕ್ಕ ಪಕ್ಷಿಗಳ ಗೂಡುಗಳನ್ನು ಆಶ್ರಯಿಸುತ್ತವೆ. ಈ ಗುಂಪಿನ ಅನೇಕ ಪಕ್ಷಿಗಳು ಪರ್ವಕಾಲದಲ್ಲಿ ಮಧುರವಾಗಿ ಹಾಡುತ್ತವೆ. ಉದಾ: ಕ್ಯುಕ್ಯುಲಸ್ ಮೈಕ್ರೊಪ್ಟರಸ್ (ಭಾರತದ ಕೋಗಿಲೆ), ಕಾಕ್ಸಿಸ್ಸಿಸ್ ಗ್ಲಾಂಡೇರಿಯಸ್ (ಯುರೋಪಿನ ಕೋಗಿಲೆ).

13) ಸ್ಟ್ರೈಜಿಫಾರ್ಮಿಸ್ ಗಣ: ರಾತ್ರಿಯಲ್ಲಿ ಬೇಟೆಯಾಡುವ ಗೂಬೆಯಂತಹ ಅನೇಕ ಮಾಂಸಾಹಾರಿ ಪಕ್ಷಿಗಳು ಸೇರುತ್ತವೆ. ಇವುಗಳ ಕೊಕ್ಕು, ಉಗುರುಗಳು ಇನ್ನಿತರ ಮಾಂಸಾಹಾರಿ ಪಕ್ಷಿಗಳಲ್ಲಿರುವಂತೆ ಚೂಪಾಗಿ ಬಾಗಿದೆ. ತಮ್ಮ ಬೇಟೆಯನ್ನು ಹೆಚ್ಚಾಗಿ ಶಬ್ದವನ್ನನುಸರಿಸಿ ಹಿಡಿಯುತ್ತವೆ. ಹಾರುವಾಗ ಹೆಚ್ಚು ಶಬ್ದವಾಗದಂತೆ ಪುಕ್ಕಗಳ ಹೊಂದಾಣಿಕೆಯಲ್ಲಿ ಮಾರ್ಪಾಟುಗಳಾಗಿವೆ. ಇವುಗಳು ಯಾವುದಾದರೂ ಪೊಟರೆಗಳಲ್ಲಿ ಮೊಟ್ಟೆಗಳನ್ನಿಟ್ಟು ಮರಿಮಾಡುತ್ತವೆ. ಉದಾ : ಟೈಟೊ ಆಲ್ಬ (ಬಾರ್ನ್ ಗೂಬೆ), ಬುಬೊ ಬುಬೊ (ಭಾರತದ ಗೂಬೆ)

14) ಮೈಕ್ರೊಪೋಡಿಫಾರ್ಮಿಸ್ ಗಣ : ಈ ಗುಂಪಿನ ಪಕ್ಷಿಗಳು ಇತರ ಯಾವುದೇ ಜಾತಿಯ ಪಕ್ಷಿಗಳಿಗಿಂತ ಹೆಚ್ಚು ಕಾಲ ಗಾಳಿಯಲ್ಲಿರಬಲ್ಲವು. ಇದಕ್ಕೆ ತಕ್ಕಂತೆ ಅವುಗಳ ಅಂಗರಚನೆಯಲ್ಲಿಯೂ ಸಹ ಕೆಲವೊಂದು ಮಾರ್ಪಾಟುಗಳಾಗಿವೆ. ನೀಳವಾದ ರೆಕ್ಕೆಗಳನ್ನು ಹೊಂದಿವೆ. ಸಾರಪಕ್ಷಿಗಳು (ಸ್ವಿಫ್ಟ್) ಹಾರಾಡುತ್ತಾ ಕ್ರಿಮಿಕೀಟಗಳನ್ನು ಹಿಡಿದು ತಿಂದು ಬದುಕುತ್ತವೆ. ಝೇಂಕಾರ ಪಕ್ಷಿಗಳು ಹೂವಿನ ಮಧುವನ್ನು ಹೀರಿ ಜೀವಿಸುತ್ತವೆ. ಉದಾ: ಮೈಕ್ರೊಪಸ್ ಅಫಿನಿಸ್ (ಬೈರುಂಡೆ ಹಕ್ಕಿ), ಸಿಪ್ಸಿಸೂರಸ್ ಪಾರ್ವಸ್ (ತಾಳೆ ಬೈರುಂಡೆ).

15) ಕೊರ್ಯಾಸಿಯಿಫಾರ್ಮಿಸ್ ಗಣ: ಈ ಗುಂಪಿಗೆ ಸೇರಿದ ಪಕ್ಷಿಗಳು ಅತ್ಯಂತ ವರ್ಣರಂಜಿತವಾದ ಗರಿಗಳನ್ನು ಹೊಂದಿವೆ. ಮೀಂಚುಳ್ಳಿಗಳು ನೀರಿನಲ್ಲಿ ಮುಳುಗಿ ಮೀನುಗಳನ್ನು ಹಿಡಿದು ತಿಂದು ಜೀವಿಸುತ್ತವೆ ಒಂದೇ ಸಮನೆ ರೆಕ್ಕೆ ಬಡಿಯುತ್ತಾ ಒಂದು ಸ್ಥಳದಲ್ಲಿ ಸ್ಥಿರವಾಗಿ ನಿಂತಿದ್ದು ತಟಕ್ಕನೆ ಮೇಲೆರಗಿ ಮೀನುಗಳನ್ನು ಹಿಡಿಯುವ ನೈಪುಣ್ಯವೂ ಕೆಲವಕ್ಕಿದೆ. ಮರಗಿಡಗಳ ಪೊಟರೆಗಳಲ್ಲಿ ಗೂಡುಗಳನ್ನು ನಿರ್ಮಿಸಿ ಮೊಟ್ಟೆಗಳನ್ನಿಡುತ್ತವೆ. ಉದಾ: ಮೆರಾಪ್ಸ್ ಓರಿಯೆಂಟಾಲಿಸ್ (ಕಳ್ಳೀಪೀರ), ಆಲ್ಸಿಡೋ ಆಲ್ತಿಸ್ (ಮೀಂಚುಳ್ಳಿ).

16) ಪಿಸಿಫಾರ್ಮಿಸ್ ಗಣ : ಮರಕುಟಿಕಗಳ ಗುಂಪು. ಚಾಣದಂತಿರುವ ಕೊಕ್ಕುಗಳನ್ನು ಹೊಂದಿದ್ದು ಮರಗಿಡಗಳನ್ನು ಸುಲಭವಾಗಿ ಕೊರೆಯಬಲ್ಲವು. ನಾಲಿಗೆಯೂ ಸಹ ನೀಳವಾಗಿದ್ದು, ಮರಗಿಡಗಳ ತೊಗಟೆಗಳ ಮಧ್ಯದಿಂದ ಹುಳುಹುಪ್ಪಟೆಗಳನ್ನು ಹಿಡಿಯಬಲ್ಲವು. ಬಾಲವು ಅಗಲವಾಗಿದ್ದು ಮರ ಹತ್ತಲು ಸಹಾಯ ಮಾಡುತ್ತದೆ. ಇವುಗಳೂ ಸಹ ಮರಗಿಡಗಳ ಪೊಟರೆಗಳಲ್ಲಿ ಗೂಡುಗಳನ್ನು ನಿರ್ಮಿಸಿ ಮರಿಗಳನ್ನು ಪೋಷಿಸುತ್ತವೆ. ಉದಾ : ಬ್ರೇಕಿಪ್ಟರ್ನಸ್ ಬೆಂಗಾಲೆನ್ಸಿಸ್ (ಹೊನ್ನಬೆನ್ನಿನ ಮರಕುಟಿಕ), ಡ್ರಯೋಬೇಟ್ಸ್ ಮಹ್ರಾಟೆನ್ಸಿಸ್ (ಮಹ್ರಾಟ ಮರಕುಟಿಕ).

17) ಪ್ಯಾಸ್ಸೆರಿಫಾರ್ಮಿಸ್ : ಪಕ್ಷಿಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಗುಂಪು. ಪ್ರಪಂಚದಾದ್ಯಂತ ಗೊತ್ತಿರುವ ಅರ್ಧಕ್ಕೂ ದೊಡ್ಡ ಜಾತಿಯ ಪಕ್ಷಿಗಳು ಈ ಗುಂಪಿಗೆ ಸೇರುತ್ತವೆ. ಪಕ್ಷಿಗಳು ಚಿಕ್ಕದಾಗಿದ್ದು, ಇವುಗಳ ಜೀವನ ರೀತಿಯಲ್ಲಿ ವೈವಿಧ್ಯತೆಗಳಿವೆ. ಬುಲ್‌ಬುಲ್‌ಗಳು ಪೊದೆಗಳ ಮಧ್ಯದಲ್ಲಿ ಗೂಡುಗಳನ್ನು ನಿರ್ಮಿಸುತ್ತವೆ. ಸೂರ್ಯಮುಖಿಯು ಸುಂದರವಾದ ನೇತಾಡುವ ಗೂಡುಗಳನ್ನು ನಿರ್ಮಿಸುತ್ತದೆ.

ಗೂಡು ನಿರ್ಮಿಸುವಿಕೆ ಮತ್ತು ಕಾವು ಕೊಡುವುದು ಹೆಣ್ಣಿನ ಕೆಲಸ. ಮರಿಗಳಿಗೆ ಆಹಾರ ಒದಗಿಸುವುದು ಗಂಡಿನ ಕೆಲಸ. ಈ ಜಾತಿಯ ಪಕ್ಷಿಗಳಲ್ಲಿ ಹೆಣ್ಣಿಗಿಂತ ಗಂಡೇ ಹೆಚ್ಚು ಸುಂದರ. ಕಾಗೆ ಮತ್ತು ಗುಬ್ಬಚ್ಚಿಗಳೂ ಸಹ ಈ ಗುಂಪಿಗೆ ಸೇರುತ್ತವೆ. ಉದಾ: ಕೋರ್ವಸ್ ಸ್ಪ್ಲೆಂಡೆನ್ಸ್ (ಕಾಗೆ), ಗ್ಯಾರುಲಸ್ ಗ್ಲ್ಯಾಂಡುಲಾರಿಸ್ (ಜೇ ಹಕ್ಕಿ), ಪ್ಯಾಸರ್ ಡೊಮೆಸ್ಟಿಕಸ್ (ಗುಬ್ಬಚ್ಚಿ), ಮೊಟಸಿಲ್ಲ ಸಿನೆರಿಯ (ಕುಂಡೆ ಕುಸುಕ), ಹಿರುಂಡೊ ರಸ್ಟಿಕ (ಕವಲು ತೋಕೆ ಹಕ್ಕಿ).

18) ಕ್ಯಾಪ್ರಿಮುಲ್ಲಿಫಾರ್ಮಿಸ್ ಗಣ: ಕಾಡುಗಳಲ್ಲಿರುವ ಕೀಟಾಹಾರಿ ಪಕ್ಷಿಗಳ ಗುಂಪು. ನೈಟ್ ಜಾರ್ಸ್ ಅಥವಾ ಗೋಟ್ ಸಕರ್ಸ್ ಎಂದೇ ಪ್ರಚಲಿತ. ಬಾಯಿ ಅಗಲವಾಗಿದೆ. ಹಾಗಾಗಿ ಹಾರುತ್ತಿರುವಾಗಲೇ ಕೀಟಗಳನ್ನು ಹಿಡಿದು ತಿನ್ನಬಹುದು. ಉದಾ: ಕ್ಯಾಪ್ರಿಮುಲ್ಗಸ್ ಏಷಿಯಾಟಿಕಸ್ (ಭಾರತದ ನೈಟ್‌ಜಾರ್).

19) ಪೊಡಿಸಿಫಾರ್ಮಿಸ್ ಗಣ : ನೀರಿನಲ್ಲಿ ಜೀವನ ಸಾಗಿಸುವ ಪಕ್ಷಿಗಳ ಗುಂಪು. ತೇಲುವ ಜಲಸಸ್ಯಗಳಿದ ಗೂಡನ್ನು ನಿರ್ಮಿಸಿ ಅನೇಕ ಬಿಳಿಯ ಮೊಟ್ಟೆಗಳನ್ನಿಡುತ್ತವೆ. ಉದಾ : ಪೊಡಿಸಿಪೆಸ್ (ಗ್ರೆಬ್ ಹಕ್ಕಿ). (ಎಚ್.ಸಿ.ಎಸ್.)

**ಕ್ಯಾಲಿಪ್ಟೊಬ್ಲಾಸ್ಟಿಯ:** ಕುಟುಕುಕಣವಂತಗಳ ವಂಶ, ಹೈಡ್ರೋಜೋವ ವರ್ಗದ ಹೈಡ್ರಾಯಿಡ ಗಣದ ಉಪಗಣ. ಕ್ಯಾಲಿಪ್ಟೊಬ್ಲಾಸ್ಟಿಯಗಳಲ್ಲಿ ಪಾಲಿಪ್‌ಗಳನ್ನು ಹೈಡ್ರೋಥೀಕಗಳು ರಕ್ಷಿಸುತ್ತವೆ. ಬ್ಲಾಸ್ಟೊಸ್ಟೈಲ್‌ಗಳ ಸುತ್ತ ಗೋನೋಥೀಕಗಳಿವೆ. ಆದುದರಿಂದ ಈ ಉಪಗಣವನ್ನು ಥಿಕೇಟ ಎನ್ನುತ್ತಾರೆ. ಬಹುಪಾಲು ಪ್ರಾಣಿಗಳಲ್ಲಿ ಸ್ವತಂತ್ರ ಮೆಡ್ಯೂಸ ಅವಸ್ಥೆ ಇಲ್ಲ. ಸಾಸರ್ ಅಥವಾ ಬಟ್ಟಲಿನಾಕಾರದಲ್ಲಿರುತ್ತವೆ. ಹಾಗಾಗಿ ಈ ಉಪಗಣವನ್ನು ಲೆಪ್ಟೊಮೆಡ್ಯೂಸೆ ಎನ್ನುತ್ತಾರೆ. ಜನನೇಂದ್ರಿಯಗಳು ತ್ರಿಜ್ಯ ನಾಳಗಳ ಮೇಲೆ ಬೆಳೆಯುತ್ತವೆ. ಹೊರದರ್ಮ ಮೂಲದ ಸಂತುಲನಾಂಗಗಳಿವೆ. ಅನೇಕ ಟೆಂಟಕಲ್‌ಗಳಿವೆ. ಆಸೆಲ್ಲಸ್‌ಗಳಿಲ್ಲ. ಈ ಉಪಗಣದ ಸಮೂಹಗಳು ಉತ್ತಲ ನೀರಿನಲ್ಲಿ ಕಲ್ಲುಗಳು, ಮರಮುಟ್ಟು, ಚಿಪ್ಪುಗಳು ಮತ್ತು ಗಿಡಗಳ ಮೇಲೆ ಬೆಳೆಯುತ್ತವೆ. ಹಲವು ಸಮೂಹಗಳಲ್ಲಿ ಪಾಲಿಪ್‌ಗಳು ಜೀವಸಂದೀಪ್ತಿಯನ್ನು ಪ್ರದರ್ಶಿಸುತ್ತವೆ. ಅಗ್ಲಾ ಓಫಿನಿಯದ ಒಳದರ್ಮದಲ್ಲಿ ಹಳದಿ ಅಥವ ಕಂದು ಜೂಜಾಂತಲ್ಲೆಗಳಿರುತ್ತವೆ. ಸರ್ಟುಲಾರೆಲ್ಲದ ಹೊರ ಮತ್ತು ಒಳದರ್ಮಗಳಲ್ಲಿ ಜೂಕ್ಲೊರೆಲ್ಲಗಳನ್ನು ಕಾಣಬಹುದು. ಇವು ಸಹಜೀವನವನ್ನು ನಡೆಸಬಹುದು. ಪಾಲಿಪ್‌ಗಳ ವ್ಯವಸ್ಥೆಯನ್ನು ಅನುಸರಿಸಿ ಈ ಉಪಗಣದಲ್ಲಿ ಕೆಳಗಿನ ವಿಧಗಳನ್ನು ಗುರುತಿಸಬಹುದು.

ಕಂಪ್ಯಾನುಲೇರಿನೆ: ಸಮೂಹವು ಕವಲೊಡೆದಿರಬಹುದು ಅಥವ ಕವಲೊಡೆಯದೆ ಸರಳವಾಗಿರಬಹುದು. ವೃಂತವಿರುವ ಗಂಟೆಯಾಕಾರದ ಹೈಡ್ರೋಥೀಕಗಳಿರುತ್ತವೆ. ಹೈಡ್ರೋಥೀಕಗಳಿಗೆ ಮುಚ್ಚಳವಿಲ್ಲ. ಅಂಚಿನಲ್ಲಿ ಹಲ್ಲಿನಂತಹ ರಚನೆಗಳಿರಬಹುದು. ಅಥವಾ ಇಲ್ಲದಿರಬಹುದು. ಇವಕ್ಕೆ ಪೂರ್ತಿ ಅಥವ ಆಂಶಿಕವಾಗಿ ಖಂಡಗಳು ಇರಬಹುದು. ವದನಾಕಾರವು ತುತ್ತೂರಿಯ ರೂಪದಲ್ಲಿರಬಹುದು. ಗೊನಾಂಜಿಯಗಳು ಅಂಡಾಕಾರದ ರಚನೆಗಳು. ಇದಕ್ಕೆ ಗೊನೋಥೀಕ ರಚನೆಗಳ ರಕ್ಷಣೆಯುಂಟು. ಬ್ಲಾಸ್ಟೊಸ್ಟೈಲ್‌ಗಳು ಸ್ವತಂತ್ರ ಮೆಡ್ಯೂಸಗಳನ್ನು ಉತ್ಪತ್ತಿ ಮಾಡಬಹುದು. ಕ್ಲ್ಯಾಷಿಯದಲ್ಲಿ ಸ್ವತಂತ್ರ ಮೆಡ್ಯೂಸಗಳು ಬಿಡುಗಡೆಯಾಗುವಾಗ 16 ಟೆಂಟಕಲ್‌ಗಳು ಮತ್ತು 16 ಸಂತುಲನಾಂಗಗಳಿರುತ್ತವೆ. ಉದಾ: ಕಂಪ್ಯಾನುಲೇರಿಯ ಮತ್ತು ಒಬಿಲಿಯ.

ಸರ್ಟುಲೇರಿನೆ: ಸಮೂಹದಲ್ಲಿ ಆಧಾರವಸ್ತುವಿನ ಮೇಲೆ ಹರಡಿದ ಹೈಡ್ರೋರೈಜದಿಂದ ನೇರವಾಗಿ ಬೆಳೆಯುವ ಕಾಂಡಗಳಿವೆ. ಈ ಕಾಂಡಗಳು ಗೆಣ್ಣು ಮತ್ತು ಅಂತರಗೆಣ್ಣುಗಳಾಗಿ ವಿಭಾಗವಾಗಿವೆ. ಪ್ರತಿ ಗೆಣ್ಣಿನಲ್ಲಿ ಪರಸ್ಪರ ವಿಮುಖವಾಗಿರುವ ನಿವೃಂತ ಹೈಡ್ರೋಥೀಕಗಳಿವೆ. ಈ ಹೈಡ್ರೋಥೀಕಗಳು ತುಂಬಾ ದೊಡ್ಡದಾಗಿದ್ದು ಪಾಲಿಪ್‌ಗಳು ಸಂಪೂರ್ಣವಾಗಿ ಇವುಗಳೊಳಗೆ ಸಂಕುಚಿಸಬಹುದು. ಪ್ರತಿ ಹೈಡ್ರೋಥೀಕದ ಬಾಯಿಗೂ ಒಂದು ಮುಚ್ಚಳವಿದೆ. ಗೊನಾಂಜಿಯಗಳು ನಿವೃಂತ ಅಂಡಾಕಾರದ ರಚನೆಗಳು. ಇವುಗಳ ಅಂಚುಗಳು ಸರಳವಾಗಿರಬಹುದು ಅಥವ ಆಕ್ರೊಸಿಸ್ಟ್‌ಗಳನ್ನು ಧರಿಸಿರಬಹುದು. ಅಂದರೆ ಬ್ಲಾಸ್ಟೊಸ್ಟೈಲ್‌ಗಳು ಗೊನಾಂಜಿಯದ ಬಾಯಿಯಿಂದ ಹೊರಕ್ಕೆ ಚಾಚಿಕೊಂಡು ವಿಶಾಲವಾದ ಸಂಪುಟಕಗಳು ಅಥವ ಸಂತಾನ ಸಂಚಿಗಳನ್ನು ನಿರ್ಮಿಸುವುದು. ಇಲ್ಲಿ ತತ್ತಿಗಳು ಬೆಳೆಯುತ್ತವೆ. ಗಂಡು ಗೊನಾಂಜಿಯಗಳು ಹೆಣ್ಣು ಗೊನಾಂಜಿಯಗಳಿಗಿಂತಲೂ ಸಣ್ಣವು. ಉದಾ:ಸರ್ಟುಲೇರಿಯ ಮತ್ತು ಸರ್ಟುಲಾರೆಲ್ಲ. ಸರ್ಟುಲಾರೆಲ್ಲದಲ್ಲಿ ಹೈಡ್ರೊಥೀಕಗಳು ಸರ್ಟುಲೇರಿಯಗಳಂತೆ ಪರಸ್ಪರ ವಿಮುಖವಾಗಿರದೆ ಪರ್ಯಾಯವಾಗಿವೆ ಮತ್ತು ಬಾಯಿಗೆ ಒಂದೇ ಮುಚ್ಚಳವಿದೆ. ಗೊನಾಂಜಿಯದ ಅಂಚಿನಲ್ಲೂ ನಾಲ್ಕು ಹಲ್ಲುಗಳಿವೆ.

ಪ್ಲುಮುಲೇರಿನೆ: ಆಧಾರ ವಸ್ತುವಿನ ಮೇಲೆ ಹರಡಿರುವ ಹೈಡ್ರೋರೈಜದಿಂದ ಹಕ್ಕಿಯ ಗರಿಗಳಂತಿರುವ ಕಾಂಡಗಳು ಹುಟ್ಟುತ್ತವೆ. ಈ ಕಾಂಡಗಳಿಂದ ಪರ್ಯಾಯವಾಗಿ ಅಥವ ನೇರವಾಗಿ ಇಕ್ಕಡೆಗಳಲ್ಲಿಯೂ ವ್ಯವಸ್ಥಿತವಾಗಿರುವ ಹೈಡ್ರೊಕ್ಲಾಡಿಯಗಳೆಂಬ ಪಕ್ಕದ ಕವಲುಗಳು ಹುಟ್ಟುತ್ತವೆ. ಈ ಹೈಡ್ರೊಕ್ಲಾಡಿಯಗಳ ಉದ್ದಕ್ಕೂ ಒಂದು ಪಕ್ಕದಲ್ಲಿ ಒಂದು ಶ್ರೇಣಿಯಂತೆ ನಿವೃಂತ ಹೈಡ್ರೋಥೀಕಗಳು ಬೆಳೆಯುತ್ತವೆ. ಹೈಡ್ರೋಥೀಕಗಳು ಸಣ್ಣವಾದುದರಿಂದ ಪಾಲಿಪ್‌ಗಳು ಸಂಪೂರ್ಣವಾಗಿ ಅವುಗಳೊಳಗೆ ಸಂಕುಚಿಸಲಾರವು. ಆಹಾರ ಸೇವನೆಗೆ ಮೀಸಲಾದ ಪಾಲಿಪ್‌ಗಳಲ್ಲದೆ ನೆಮೆಟೊಫೋರ್ ಅಥವ ಸಾರ್ಕೊಸ್ಟೈಲ್‌ಗಳೆಂಬ ಸಣ್ಣ ಡಾಕ್ಟೈಲೊಜೂಆಯಿಡ್‌ಗಳು ಕಂಡುಬರುತ್ತವೆ. ಇವು ಚಲಿಸಬಲ್ಲವು. ಇವುಗಳಿಗೆ ಸಣ್ಣ ನೆಮೆಟೊಥೀಕಗಳೆಂಬ ರಕ್ಷಣಾ ರಚನೆಗಳಿವೆ. ಬಾಯಿ ಇಲ್ಲ. ಕೊಳೆಯುತ್ತಿರುವ ಪಾಲಿಪ್‌ಗಳು, ಪ್ರೊಟೊಜೋವಗಳು, ಸೂಕ್ಷ್ಮ ಲಾರ್ವ ಮತ್ತು ಡಯಾಟಮ್ ಗಳನ್ನು ಸೇವಿಸುತ್ತವೆ. ಶ್ಲೇಷ್ಮವನ್ನು ಸ್ರವಿಸಿ ಇವುಗಳನ್ನು ಹಿಡಿಯುತ್ತವೆ. ಈ ಶೇಷ್ಮಗ್ರಂಥಿಕೋಶಗಳು ಉದ್ದವಾದ ಅಮೀಬರೂಪಿ ಪ್ರವರ್ಧಗಳ ಮೇಲಿವೆ. ಹೈಡ್ರೋಥೀಕದ ಮೇಲೆ ಸಾಮಾನ್ಯವಾಗಿ ಮೂರು ನೆಮೆಟೊಫೋರ್‌ಗಳು ಕಂಡು ಬರುತ್ತವೆ. ಗೊನಾಂಜಿಯಗಳು ಸ್ವಲ್ಪ ಉದ್ದವಾದ ರಚನೆಗಳು. ಗೊನೊಥೀಕಗಳು ಇವನ್ನು ರಕ್ಷಿಸುತ್ತವೆ. ಗೊನಾಂಜಿಯಗಳಲ್ಲಿ ಮೆಡ್ಯೂಸಗಳು ಕ್ಷಯಿಸಿ ಕೇವಲ ಅಂಡಾಣುಗಳನ್ನು ಉತ್ಪತ್ತಿ ಮಾಡುವ ರಚನೆಗಳಾಗಿ ಕಂಡು ಬರುತ್ತವೆ. ಉದಾ: ಪ್ಲುಮುಲೇರಿಯ, ಆಂಟೆನ್ನುಲೇರಿಯ. ಅಗ್ಲಾಓಫಿನಿಯದಲ್ಲಿ ಹೈಡ್ರೊಕ್ಲಾಡಿಯಗಳು ಗೊನಾಂಜಿಯಗಳನ್ನು ರಕ್ಷಿಸಲು ಎಲೆಯಾಕಾರವನ್ನು ತಾಳಿವೆ. ಹೀಗೆ ರೂಪುಗೊಂಡ ಹೈಡ್ರೊಕ್ಲಾಡಿಯಗಳನ್ನು ಕಾರ್ಬುಲಗಳೆಂದು ಕರೆಯುತ್ತಾರೆ. (ಎಂ.ಎಸ್.)

**ಕ್ಯಾಲ್ಕೇರಿಯ:** ಪೋರಿಫೇರಾ ವಂಶದ ಒಂದು ವರ್ಗ. ಸಮುದ್ರದಲ್ಲಿ ವಾಸಿಸುವ ಸ್ಪಂಜುಪ್ರಾಣಿಗಳಲ್ಲಿ ಒಂದು ನಮೂನೆ. ಕ್ಯಾಲ್ಸಿಯಂ ಕಾರ್ಬೊನೇಟ್‌ನಿಂದಾದ ಸೂಚ್ಯಾಂಗಗಳಿವೆ. ಪ್ರಪಂಚದ ಎಲ್ಲಾ ಕಡೆಗಳಲ್ಲೂ ಹರಡಿವೆ. ಸಮುದ್ರದ ತಳದಲ್ಲಿ ಬಂಡೆಗೊ ಅಥವಾ ಗಿಡಗಂಟೆಗಳಿಗೋ ಭದ್ರವಾಗಿ ಅಂಟಿಕೊಂಡಿರುವ ಚಲನರಹಿತ ನಿರ್ವ್ಯಂತಜೀವಿಗಳು. ಸಾಮಾನ್ಯವಾಗಿ ಶರೀರದ ಗಾತ್ರ ಕಿರಿದಾಗಿದ್ದು ಬಣ್ಣರಹಿತವಾಗಿರುತ್ತದೆ. ಅತಿದೊಡ್ಡ ಕ್ಯಾಲ್ಕೇರಿಯ ಸ್ಪಂಜು 10 ಸೆಮೀ ಎತ್ತರವಿದೆ.

ಅಸಮ ಪಾರ್ಶ್ವ (ಅಸಿಮೆಟ್ರಿಕಲ್) ಶರೀರ ಕವಲೊಡೆದ ಗಿಡದಂತಿರುವುವು. ಇದರಿಂದ ಇವುಗಳನ್ನು ಗಿಡ ಪ್ರಾಣಿಗಳೆಂದು ಕರೆಯುವುದುಂಟು. ಕೆಲವು ತ್ರಿಜ್ಯ ಪಾರ್ಶ್ವತೆಯುಳ್ಳ (ರೇಡಿಯಲ್ ಸಿಮೆಟ್ರಿ) ಸಣ್ಣ ಹೂದಾನಿಯಂತಿರುವುವು. ಶರೀರದ ತುಂಬಾ ಆಸ್ಟೀಯಾ ಎಂಬ ಚಿಕ್ಕ ಹಾಗೂ ಕೆಲವು ಆಸ್ಕ್ಯುಲ ಎಂಬ ದೊಡ್ಡ ರಂಧ್ರಗಳಿವೆ. ಸಣ್ಣ ರಂಧ್ರಗಳ ಮೂಲಕ ನೀರು ಶರೀರದೊಳಕ್ಕೆ ಪ್ರವೇಶಿಸಿ ದೊಡ್ಡ ರಂಧ್ರಗಳ ಮೂಲಕ ಹೊರಬರುತ್ತದೆ. ಶರೀರದಲ್ಲಿ ರಂಧ್ರಗಳಿರುವುದರಿಂದ ಈ ಪ್ರಾಣಿಗಳನ್ನು ರಂಧ್ರಮಯ ಪ್ರಾಣಿಗಳು ಅಥವಾ ಪೋರಿಫೇರಾ ಎಂದು ಕರೆಯಲಾಗುತ್ತದೆ.

ಕ್ಯಾಲ್ಕೇರಿಯ ಶರೀರ ರೂಪದ ಆಧಾರದ ಆಸ್ಕಾನ್, ಸೈಕಾನ್ ಹಾಗೂ ಲ್ಯುಕಾನ್ ಎಂಬ ಮೂರು ವಿಧಗಳನ್ನು ಗುರುತಿಸಬಹುದು. ಇವುಗಳಲ್ಲಿ ಆಸ್ಕಾನ್ ನಮೂನೆಯು ಬಹಳ ಸರಳ. ಶರೀರದ ಒಳಭಾಗದಲ್ಲಿ ಯಾವುದೇ ರೀತಿಯ ಅಂಗಾಂಶಗಳಾಗಲಿ, ಅಂಗಾಂಗಗಳಾಗಲಿ ಇಲ್ಲ. ಶರೀರದಲ್ಲಿ ನೀರು ಹರಿಯಲು ಕಾಲುವೆಯಿದೆ. ಇದು ಸ್ಪಂಜು ಪ್ರಾಣಿಗಳ ಒಂದು ಮುಖ್ಯ ಗುಣ. ದೇಹದ ಮಧ್ಯೆ ಸ್ಪಾಂಜೂಸಿಲ್ ಎಂಬ ಪೊಳ್ಳು ಭಾಗವಿದೆ. ಈ ಪೊಳ್ಳಿನ ಗೋಡೆಯಲ್ಲಿ ಅನೇಕ ಕಶಾಂಗಿ ಕಂಠಾಕೋಶಗಳು (ಫ್ಲಾಜೆಲ್ಲೆಟೆಡ್ ಕಾಲರ್ ಸೆಲ್ಸ್) ಆವರಿಸಿಕೊಂಡಿವೆ. ದೇಹದಲ್ಲಿರುವ ಆಸ್ಟಿಯ ರಂಧ್ರಗಳು ಪೊಳ್ಳುಭಾಗಕ್ಕೆ ನೀರನ್ನು ತರುತ್ತವೆ ಮತ್ತು ನೀರು ಪೊಳ್ಳುಭಾಗದ ಮೇಲ್ಭಾಗದಲ್ಲಿರುವ ಆಸ್ಕುಲಂ ಮೂಲಕ ಹೊರಗೆ ಬರುತ್ತದೆ. ಸೈಕಾನ್ ನಮೂನೆಯಲ್ಲಿ ಶರೀರದ ಹೊರಪದರವು ಒಳಭಾಗಕ್ಕೆ ಮಡಿಸಲ್ಪಟ್ಟು ಅನೇಕ ಸಣ್ಣ ಬೆರಳಿನಾಕಾರದ ತ್ರಿಜ್ಯಗಳಂತಿರುವ ಕಾಲುವೆಗಳಾಗಿವೆ (ರೇಡಿಯಲ್). ಇವುಗಳ ನಡುವೆ ಒಳಪ್ರವಾಹ ಕಾಲುವೆಗಳಿವೆ. ಇದರಿಂದ ಮಧ್ಯದಲ್ಲಿರುವ ಪೊಳ್ಳುಭಾಗವು ಕಿರಿದಾಗಿದೆ. ಈ ಕಾಲುವೆಯನ್ನು ಸೈಕಾನ್ ಕಾಲುವೆ ವ್ಯೂಹವೆನ್ನುವರು. ಲ್ಯುಕಾನ್ ನಮೂನೆಯಲ್ಲಿ ಪ್ರತಿ ತ್ರಿಜ್ಯ ಕಾಲುವೆಯು ಇನ್ನೂ ಹೆಚ್ಚಾದ ಮಡಿಸುವಿಕೆಯಿಂದ ಸಣ್ಣ ಸಣ್ಣ ಕಶಾಂಗಿ ಕೋಶಗಳ ಅಲೆಗಳಂತಾಗುತ್ತವೆ. ಪೊಳ್ಳುಭಾಗವು ಇನ್ನೂ ಕಿರಿದಾಗುತ್ತದೆ. ಇದಕ್ಕೆ ಲ್ಯುಕಾನ್ ಕಾಲುವೆ ವ್ಯೂಹ ಎಂದು ಹೆಸರು.

ಸ್ಪಂಜುಗಳು ಕೋಶ ಹಂತದಲ್ಲಿಯೇ ಇರುವ ಪ್ರಾಣಿಗಳು. ಶರೀರದ ಮೇಲ್ಭಾಗದಲ್ಲಿರುವ ಹೊರಚರ್ಮದಲ್ಲಿ ಅನುಲೇಪಕ ಕೋಶಗಳಿವೆ. ಇವುಗಳ ನಡುವೆ ರಂಧ್ರಗಳಿದ್ದು ಅವುಗಳ ಇಕ್ಕೆಲಗಳಲ್ಲಿ ರಂಧ್ರಕೋಶಗಳಿವೆ. ಹೊರಚರ್ಮದ ಕೆಳಭಾಗದಲ್ಲಿ ಮೀಸೊಗ್ಲಿಯ ಇದೆ. ಇದರಲ್ಲಿ ಅನೇಕ ರೀತಿಯ ಅಮೀಬಕೋಶಗಳು, ಮಾಂಸಕೋಶಗಳು, ಗ್ರಂಥಿಕೋಶಗಳು, ಸೂಚ್ಯಾಂಗ ಕೋಶಗಳು ಹಾಗೂ

ಲಿಂಗಕೋಶಗಳಿರುತ್ತವೆ. ಮೀಸೊಗ್ಲಿಯದ ಕೆಳಭಾಗದಲ್ಲಿ ಕಶಾಂಗಿ ಕಂಠಕೋಶಗಳಿರುತ್ತವೆ. ನರಕೋಶಗಳಾಗಲಿ, ಜ್ಞಾನೇಂದ್ರಿಯ ಕೋಶಗಳಾಗಲಿ ಇಲ್ಲ.




ಸೈಕಾನ್ ಸ್ಪಂಜು

ಶರೀರದ ರಕ್ಷಣೆಗೋಸ್ಕರ ಸೂಕ್ಷ್ಮವಾದ ಸೂಚ್ಯಾಂಗಗಳಿವೆ. ಸೂಚ್ಯಾಂಗ ಕೋಶಗಳು ಸೂಚ್ಯಾಂಗಗಳನ್ನು ಸೃಷ್ಟಿಸುತ್ತವೆ. ಪರಿಸರದಲ್ಲಿರುವ ಸುಣ್ಣವನ್ನು ಮುಖ್ಯವಾಗಿ ಕ್ಯಾಲ್ಸೈಟ್ ಖನಿಜವನ್ನು ಉಪಯೋಗಿಸಿಕೊಂಡು ಕ್ಯಾಲ್ಕೇರಿಯಸ್ ಸೂಚ್ಯಾಂಗಗಳನ್ನು (ಕ್ಯಾಲ್ಕೇರಿಯಸ್ ಸ್ಪಿಕ್ಯೂಲ್ಸ್) ರಚಿಸುವುದರಿಂದ ಈ ಸ್ಪಂಜುಗಳಿಗೆ ಕ್ಯಾಲ್ಕೇರಿಯ ಎಂದು ಹೆಸರು. ಕೆಲವು ಪ್ರಭೇದಗಳಲ್ಲಿ ಸೂಚ್ಯಾಂಗಗಳು ಬಲೆಯಾಕಾರದಂತೆ ಹೆಣೆದುಕೊಂಡಿರುತ್ತವೆ. ಸೂಚ್ಯಾಂಗಗಳೆಲ್ಲ ಏಕ ಅಕ್ಷಯವು (ಮಾನಾಕ್ಸಾನ್) ಹಾಗೂ ತ್ರಿಕಿರಣ (ಟ್ರೈರೇಡಿಯೇಟ್) ಮತ್ತು ಚತುರ್ಕಿರಣ (ಟೆಟ್ರಾರೇಡಿಯೇಟ್) ನಮೂನೆಯವು. ಈ ಸೂಚ್ಯಾಂಗಗಳ ರೂಪದ ಆಧಾರದ ಮೇಲೆ ಸ್ಪಂಜುಗಳನ್ನು ವರ್ಗೀಕರಿಸಬಹುದು.

ಸ್ಪಂಜುಗಳ ಕ್ರಿಯಾ ಚಟುವಟಿಕೆಗಳನ್ನು ಅಧ್ಯಯನ ಮಾಡಲು ಕ್ಯಾಲ್ಕೇರಿಯ ಸ್ಪಂಜುಗಳನ್ನು ಉಪಯೋಗಿಸುವುದುಂಟು. ಚಲನೆಯಿಲ್ಲದಿರುವುದರಿಂದ ಇವುಗಳಿಗೆ ಬೇಕಾದ ಆಹಾರ, ಆಮ್ಲಜನಕ ಹಾಗೂ ಇತರ ಅವಶ್ಯಕತೆಗಳು ನೀರಿನ ಚಲನೆಯಿಂದಲೇ ಆಗಬೇಕು. ಒಂದು ಸಣ್ಣ ಲ್ಯುಕಾನ್ ಸ್ಪಂಜಿನಲ್ಲಿ ಸುಮಾರು 2,250,000 ಕಶಾಂಗಿ ಕೋಶಗಳ ಅಲೆಗಳಿರುವುದೆಂದು (ಫ್ಲಾಜೆಲ್ಲೇಟೆಡ್ ಚೇಂಬರ್ಸ್) ಅಂದಾಜಿಸಲಾಗಿದೆ. ಇವುಗಳಲ್ಲಿ ಹರಿಯುವ ನೀರಿನ ವೇಗ ಸೆಕೆಂಡಿಗೆ 8.5 ಸೆಂಮೀ 10 ಸೆಂಮೀ ಉದ್ದವಿರುವ ಸ್ಪಂಜಿನಲ್ಲಿ ಒಂದು ದಿನಕ್ಕೆ ಸು. 22.5 ಲೀ. ನಷ್ಟು ನೀರು ಹರಿಯುತ್ತದೆ. ಕಶಾಂಗಗಳ ಬಡಿತದಿಂದ ನೀರು ಶರೀರದ ಕಾಲುವೆಯಲ್ಲಿ ಚಲಿಸುವುದಲ್ಲದೆ, ನೀರಿನಲ್ಲಿರುವ ಸಣ್ಣ ಆಹಾರ ಪದಾರ್ಥಗಳನ್ನು ಕೋಶಗಳ ಒಳಭಾಗಕ್ಕೆ ಸಾಗಿಸುತ್ತದೆ. ಆಹಾರವು ಕಶಾಂಗಿ ಕೋಶಗಳಲ್ಲಿರುವ ಆಹಾರಾವಕಾಶಗಳಲ್ಲಿ ಜೀರ್ಣವಾಗಿ ನಂತರ ಅಮೀಬ ಕೋಶಗಳ ಸಹಾಯದಿಂದ ಶರೀರದ ಇತರ ಭಾಗಗಳಿಗೆ ವಿತರಣೆಯಾಗುತ್ತದೆ. ಶರೀರದಲ್ಲಿ ಉತ್ಪತ್ತಿಯಾಗುವ ಕಲ್ಮಶಗಳು ಹೊರಕ್ಕೆ ಹೋಗುವ ನೀರಿನ ಮುಖಾಂತರ ಬಿಸಾಡಲ್ಪಡುತ್ತವೆ.

ಕ್ಯಾಲ್ಕೇರಿಯ ಸ್ಪಂಜುಗಳಲ್ಲಿ ಪ್ರಜನನವು ನಿರ್ಲಿಂಗ ಹಾಗೂ ಲಿಂಗ ರೀತಿಯಿಂದ ಉಂಟಾಗುತ್ತವೆ. ಅಂಕುರಣ ನಿರ್ಲಿಂಗ ಸಂತಾನೋತ್ಪತ್ತಿಯ ಮುಖ್ಯ ವಿಧಾನ. ಪ್ರಬುದ್ಧ ಸ್ಪಂಜಿನ ಶರೀರದಿಂದ ಸಣ್ಣ ಅಂಕುರಗಳು ಮೊಗ್ಗುಗಳಂತೆ ಬೆಳೆದು ನಂತರ ಅಂಕುರಗಳು ಬೇರ್ಪಟ್ಟು ಸ್ಪಂಜುಗಳಾಗಿ ಬೆಳೆಯುತ್ತವೆ. ಕೆಲವು ಸಾರಿ ಬೇರ್ಪಡದೆಯೇ ತಾಯಿ ಸ್ಪಂಜಿನ ಶರೀರದೊಂದಿಗೆ ಸೇರಿಕೊಂಡು ಬೆಳೆದು ಒಂದು ಸಮೂಹವಾಗುತ್ತದೆ. ಪ್ರತಿಕೂಲ ಪರಿಸ್ಥಿತಿಗಳಲ್ಲಿ ದುರ್ಬಲ ಭಾಗಗಳು ಉಂಟಾಗುತ್ತವೆ. ಈ ದುರ್ಬಲ ಭಾಗಗಳು ಅನುಕೂಲವಾದ ಪರಿಸ್ಥಿತಿಗಳಲ್ಲಿ ಬೆಳೆದು ಪ್ರಬುದ್ಧ ಸ್ಪಂಜುಗಳಾಗುತ್ತವೆ. ಪುನರುತ್ಥಾನದ (ರೀಜನರೇಶನ್) ಇನ್ನೊಂದು ಬಗೆಯ ನಿರ್ಲಿಂಗ ಪ್ರಜನನ.

ಲಿಂಗ ಸಂತಾನೋತ್ಪತ್ತಿಯಲ್ಲಿ ತತ್ತಿ ಹಾಗೂ ರೇತಸ್ಸು ಉದ್ಭವಿಸುತ್ತವೆ. ಕ್ಯಾಲ್ಕೇರಿಯ ಸ್ಪಂಜುಗಳು ಏಕಲಿಂಗ ಅಥವಾ ದ್ವಿಲಿಂಗ ಪ್ರಾಣಿಗಳು. ತತ್ತಿ ಮತ್ತು ರೇತಸ್ಸು ಅಮೀಬ ಕೋಶಗಳಾದ ಆರ್ಕಿಯೋಸೈಟ್‌ಗಳಿಂದ ಬೇರೆ ಬೇರೆಯಾಗಿ ಹುಟ್ಟುತ್ತವೆ. ಗರ್ಭಧಾರಣೆಯು ಸ್ಪಂಜಿನ ಶರೀರದೊಳಗಾಗುತ್ತದೆ. ಗರ್ಭಕಟ್ಟಿದ ತತ್ತಿಯು ವಿಭಜಿಸಿ ಬೆಳೆದು ಸ್ವೇಚ್ಛೆಯಾಗಿ ಈಜುವ ಸೂಕ್ಷ್ಮ ಆಂಫಿಬ್ಲಾಸ್ಟುಲ ಅಥವಾ ಪ್ಯಾರೆನ್‌ಕೈಮುಲ ಲಾರ್ವಗಳಾಗುತ್ತವೆ. ಈ ಲಾರ್ವಗಳು ತಾಯಿಯ ಸ್ಪಂಜಿನ ಶರೀರದಿಂದ ಹೊರಬಂದು ನೀರಿನಲ್ಲಿ ಈಜಾಡಿ ಕೊಂಡಿದ್ದು ನಂತರ ಸಮುದ್ರದ ತಳದಲ್ಲಿರುವ ಯಾವುದಾದರೂ ವಸ್ತುವಿಗೆ ಅಂಟಿಕೊಂಡು ರೂಪಪರಿವರ್ತನೆಯ ನಂತರ ಸ್ಪಂಜುಗಳಾಗುತ್ತವೆ.

ಕೆಲವು ಮುಖ್ಯ ಕ್ಯಾಲ್ಕೇರಿಯ ಸ್ಪಂಜುಗಳು – ಲ್ಯುಕೋಸೊಲಿನಿಯಾ, ಲ್ಯುಕೋನಿಯಾ, ಸೈಕಾನ್ ಗ್ರಾಂಷಿಯಾ. (ಕೆ.ಪಿ.ಆರ್.)

**ಕ್ಯಾಸನೂರು ಕಾಡಿನ ಕಾಯಿಲೆ:** ೧೯೫೭ನೆ ಇಸವಿ ಬೇಸಗೆಯಲ್ಲಿ ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕಿನ ಕ್ಯಾಸನೂರು ಗ್ರಾಮದಲ್ಲಿ ಹೊಸ ಕಾಯಿಲೆಯೊಂದು ಕಾಣಿಸಿಕೊಂಡಿತ್ತು. ಕಾಡಿನ ಮಂಗಗಳು ಸಾಯುತ್ತಿದ್ದರಿಂದ ಈ ಕಾಯಿಲೆಗೆ ಹಳ್ಳಿಗರು ಮಂಗನ ಕಾಯಿಲೆ ಎಂದು ಕರೆದರು. ಜಗತ್ತಿನ ಬೇರಾವ ದೇಶದಲ್ಲೂ ಕಾಣದ ಕಾಯಿಲೆ, ಕ್ಯಾಸನೂರಿನಲ್ಲಿ ಮಾತ್ರ ಮೊದಲು ಕಾಣಿಸಿಕೊಂಡಿದ್ದರಿಂದ, ವೈದ್ಯ ವಿಜ್ಞಾನಿಗಳು ಕ್ಯಾಸನೂರು ಕಾಡಿನ ಕಾಯಿಲೆ ಎಂದು ಹೆಸರಿಟ್ಟರು.

ಈ ರೋಗ ಕಾಣಿಸಿಕೊಂಡು ಹಲವು ದಶಕಗಳಾದರು, ಶಿಕಾರಿಪುರ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕಿನ ಮಲೆನಾಡ (೬೦೦ ಚಕಿಮೀ) ಪ್ರದೇಶಕ್ಕೆ ಸೀಮಿತ ಗೊಂಡಿತ್ತು. ರೋಗಪೀಡಿತ ಕೋತಿಗಳು ಕೆಲವು ಕಾರಣಗಳಿಂದ ಬೇರೆ ಕಾಡನ್ನು ಹುಡುಕುತ್ತಾ ಹೋದಂತೆ, ರೋಗಪೀಡಿತ ಪ್ರದೇಶವೂ ವಿಸ್ತರಿಸುತ್ತಾ ಹೋಯಿತು. ಹೀಗಾಗಿ ಕ್ಯಾಸನೂರು ಕಾಡಿನ ಕಾಯಿಲೆ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೂ ವ್ಯಾಪಿಸಿದೆ. ೬,೦೦೦ ಚಕಿಮೀ ಪ್ರದೇಶವನ್ನು ಆಕ್ರಮಿಸಿರುವ ಈ ಕಾಯಿಲೆ ಪ್ರತಿವರ್ಷ ಬೇಸಗೆಯಲ್ಲಿ ಮರುಕಳಿಸುತ್ತಿದ್ದು, ನೂರಾರು ಜನರನ್ನು ಬಲಿ ತೆಗೆದುಕೊಳ್ಳುತ್ತದೆ. ಸಾವಿರಾರು ಜನರು ಈ ರೋಗದಿಂದ ಬಳಲುತ್ತಾರೆ.

ಈ ಕಾಯಿಲೆಗೆ ಮುಖ್ಯ ಕಾರಣ ವೈರಸ್. ಸೈಬೀರಿಯದಿಂದ ವಲಸೆ ಬಂದ ಹಕ್ಕಿಗಳು ಈ ವೈರಸ್‌ನ್ನು ಮಲೆನಾಡಿಗೆ ತಂದಿರಬಹುದೆಂದು ಊಹೆ. ಈ ವೈರಸ್‌ಗಳನ್ನೇ ಹೋಲುವ ವೈರಸ್‌ಗಳು ನಮ್ಮ ದೇಶದ ಇತರೆ ಭಾಗಗಳಲ್ಲಿ ಕಂಡಿವೆ. ಕಾಡಿನಲ್ಲಿ ವಾಸಿಸುವ ಇಲಿ, ಅಳಿಲು, ಬಾವಲಿಗಳು ಈ ವೈರಸ್‌ಗಳ ಮೂಲ ಆಗರವಾದರೂ, ಪಕ್ಷಿಗಳಿಗೂ ಈ ವೈರಸ್ ಸೋಂಕುತ್ತದೆ.

ಮೂಲತಃ ಇದು ವನ್ಯ ಪ್ರಾಣಿಗಳ ರೋಗ. ಕಾಡಿನ ರಕ್ತಹೀರುವ ಉಣ್ಣಿಗಳು ರೋಗಕಾರಕ ವೈರಸ್‌ಗಳನ್ನು ಒಂದು ಪ್ರಾಣಿಯಿಂದ ಇನ್ನೊಂದು ಪ್ರಾಣಿಗೆ ಅಂಟಿಸುತ್ತವೆ. ಕಾಡಿನಲ್ಲಿ ವಾಸಿಸುವ ಕಪ್ಪು ಮೂತಿಯ ಲಾಂಗರ್ (ಮುಸ್ಯ) ಹಾಗೂ ಬಾನೆಟ್ ಜಾತಿಯ ಮಂಗಗಳು ಸೋಂಕಿಗೆ ಬಲಿಯಾಗುತ್ತವೆ. ರೋಗಗ್ರಸ್ತ ಉಣ್ಣಿಗಳು ಮನುಷ್ಯರನ್ನು ಕಚ್ಚುವುದರಿಂದ ಸೋಂಕು ತಗಲುತ್ತದೆ. ಆದರೆ ಮಾನವನಿಂದ ಮಾನವನಿಗೆ ಈ ಸೋಂಕು ಹರಡುವುದಿಲ್ಲ.

ರೋಗಗ್ರಸ್ತ ಪ್ರಾಣಿಯ ರಕ್ತ ಹೀರಿದ ಉಣ್ಣಿಗಳು ರೋಗವಾಹಕಗಳಾಗಿ ಪ್ರಾಣಿಯಿಂದ ಪ್ರಾಣಿಗೆ ರೋಗ ಹರಡುತ್ತವೆ. ರೋಗಾಣುಯುಕ್ತ ಉಣ್ಣಿಗಳು ಇಡುವ ಮೊಟ್ಟೆ ಮತ್ತು ಮರಿಗಳು ವೈರಸ್ ಸಂತತಿಯನ್ನು ಮುಂದುವರೆಸುತ್ತವೆ.

ಕ್ಯಾಸನೂರು ಕಾಡಿನ ಕಾಯಿಲೆ ಪೀಡುಗಾಗಿ ಕಾಡುವುದು ಬೇಸಿಗೆ ದಿನಗಳಲ್ಲಿ. ಜನವರಿಯಿಂದ ಜೂನ್ ತಿಂಗಳವರೆಗೆ ಉಣ್ಣಿಗಳ ಸಂತತಿ ವಿಪರೀತವಾಗುತ್ತದೆ. ಸ್ಥಳೀಯರು, ರೈತರು, ಸೌದೆಗೆ, ಜಾನುವಾರುಗಳ ಮೇವಿಗೆ ಕಾಡಿಗೆ ಭೇಟಿ ನೀಡಿದಾಗ, ಸತ್ತ ಮಂಗನ ಮೈಮೇಲೆ ನೆಲಸಿದ್ದ ಉಣ್ಣಿಗಳು ಕಾಡಿಗೆ ಬಂದ ಮನುಷ್ಯರ ಅಥವಾ ಜಾನುವಾರುಗಳನ್ನು ಕಚ್ಚುವ ಸಂಭವ ಹೆಚ್ಚಾಗಿರುತ್ತದೆ. ಕಾಡಿಗೆ ಭೇಟಿ ನೀಡುವ ಕೃಷಿಕ ಗಂಡಸರೇ ಹೆಚ್ಚಾಗಿ ಕಾಯಿಲೆಗೆ ತುತ್ತಾಗುತ್ತಾರೆ. ಕಾಡಿಗೆ ಹೋದ ಜಾನುವಾರುಗಳಿಗೆ ಅಂಟಿದ ಉಣ್ಣಿಗಳಿಂದ ಊರಿನ ಇತರರಿಗೂ ಕಾಯಿಲೆ ತಗಲುವ ಸಾಧ್ಯತೆ ಇರುತ್ತದೆ.

ಉಣ್ಣಿಗಳ ಕಡಿತದಿಂದ ವೈರಸ್‌ಗಳು ದೇಹ ಸೇರಿ, ಒಂದು ವಾರದ ನಂತರ ರೋಗ ಲಕ್ಷಣಗಳು ಪ್ರಕಟವಾಗುವಂತೆ ಮಾಡುತ್ತವೆ. ವಿಪರೀತ ಜ್ವರ, ಮೈಕೈ ಮತ್ತು ತಲೆನೋವು, ನರದೌರ್ಬಲ್ಯ, ಆಯಾಸ ಉಂಟಾಗುತ್ತದೆ. ಬಾಯಿ, ವಸಡು, ಮೂಗು ಹಾಗೂ ಕರುಳಿನಲ್ಲಿ ರಕ್ತಸ್ರಾವವಾಗುತ್ತದೆ. ಮೆದುಳಿನ ಉರಿಯೂತದಿಂದಾಗಿ ಮಂಪರು

ಕವಿಯುವುದು, ಪ್ರಜ್ಞೆಹೀನ ಸ್ಥಿತಿ ಉಂಟಾಗುವುದು ಹಾಗೂ ಲಕ್ವಾದ ತೊಂದರೆ ಸಹ ಕಾಣಬಹುದು. ೧೫–೨೦ ದಿನಗಳವರೆಗೆ ರೋಗಿಯ ಸ್ಥಿತಿ ಗಂಭೀರವಾಗಿರುತ್ತದೆ. ಶೇ. ೯೦ ರಷ್ಟು ರೋಗಿಗಳು ನಿಧಾನವಾಗಿ ಚೇತರಿಸಿಕೊಳ್ಳುತ್ತಾರೆ.

ನಿವಾರಣೋಪಾಯಗಳು : ಆರಂಭದಲ್ಲೇ ಕಾಯಿಲೆ ಬಗ್ಗೆ ವಿಶೇಷ ನಿಗಾ ಹರಿಸಬೇಕು. ಹಳ್ಳಿಗರಿಗೆ ಕಾಯಿಲೆ ಬಗ್ಗೆ ತಿಳಿಯಪಡಿಸಬೇಕು. ಮಂಗಗಳು ಸತ್ತು ಬೀಳುತ್ತಿರುವುದು ತಿಳಿದ ತಕ್ಷಣ ಅ ಪ್ರದೇಶದ ಕಾಡಿಗೆ ಜನರು ಹೋಗುವುದನ್ನು ತಡೆಗಟ್ಟಬೇಕು. ಹೆಲಿಕ್ಯಾಪ್ಟರ್ ಮೂಲಕ ಉಣ್ಣಿ ನಾಶಕ ಔಷಧಿ ಸಿಂಪಡಿಸಬೇಕು.

ಈ ಕಾಯಿಲೆ ಉಪಶಮನಕ್ಕೆ ಲಸಿಕೆಗಳಿವೆ. ರೋಗ ಆರಂಭವಾದ ನಂತರ ಈ ಲಸಿಕೆ ಬಳಸುವುದರಿಂದ ಯಾವುದೇ ಪ್ರಯೋಜನವಿಲ್ಲ. ರೋಗ ಆರಂಭಗೊಳ್ಳುವ ಮೂರು ತಿಂಗಳ ಮುಂಚೆ ತಿಂಗಳಿಗೆ ಒಂದು ಇಂಜೆಕ್ಷನ್‌ನಂತೆ ಎರಡು ಇಂಜೆಕ್ಷನ್ ತೆಗೆದುಕೊಳ್ಳಬೇಕು.

ಕಾಯಿಲೆ ಆರಂಭಗೊಂಡಾಗ ಕೃಷಿಕರು ಕಾಡಿಗೆ ಹೋಗುವುದನ್ನು ನಿಲ್ಲಿಸಬೇಕು. ಅನಿವಾರ್ಯವಾಗಿ ಕಾಡಿಗೆ ಹೊಗಲೇಬೇಕಾದರೆ, ಮೈತುಂಬಾ ಬಟ್ಟೆ, ಕಾಲಿಗೆ ಬೂಟು, ಕೈಗೆ ಗ್ಲೌಸ್, ತಲೆಗೆ ಟೋಪಿ ಧರಿಸಿಕೊಳ್ಳಬೇಕು. ಜಾನುವಾರುಗಳ ಮೈಗೆ ಉಣ್ಣಿ ನಾಶಕ ಪುಡಿ ಲೇಪಿಸಬೇಕು. ಕಾಡಿನಲ್ಲಿ ಕೂರುವುದು, ಮಲಗುವುದು, ಅನಾವಶ್ಯಕ ತಿರುಗಾಡುವುದು ಸಲ್ಲದು. ಕಾಡಿನಿಂದ ಹಿಂದಿರುಗಿದ ತಕ್ಷಣ ಸ್ನಾನ ಮಾಡಬೇಕು. ಜಾನುವಾರುಗಳ ಮೈಗೆ ಹತ್ತಿದ ಉಣ್ಣಿಗಳನ್ನು ಕಿತ್ತೆಸೆಯಬೇಕು.

***

**ಕ್ಯಾಸೊವರಿ:** ಕ್ಯಾಸ್ಯುಯರಿಫಾರ್ಮಿಸ್ ಗಣದ ಕ್ಯಾಸ್ಯುಯರೈಯಿಡೆ ಕುಟುಂಬಕ್ಕೆ ಸೇರಿದ ಕ್ಯಾಸ್ಯುಯೇರಿಯಸ್ ಎಂಬ ಜಾತಿಗೆ ಸೇರಿದ 3 ಪ್ರಭೇದಗಳ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು. ಈಮ್ಯೂ ಹಕ್ಕಿಗೆ ಬಲು ಹತ್ತಿರದ ಸಂಬಂಧಿ. ಅದರಂತೆಯೇ ಇದು ಕೂಡ ಹಾರಲಾಗದ ಹಕ್ಕಿ. ಆಸ್ಟ್ರೇಲಿಯದ ಈಶಾನ್ಯ ಭಾಗದಲ್ಲಿ ಕ್ಯಾಸ್ಯುಯೇರಿಯಸ್ ಕ್ಯಾಸ್ಯುಯೇರಿಯಸ್ ಎಂಬ ಪ್ರಭೇದವೂ ಜೋಬಿ ದ್ವೀಪದಲ್ಲಿ ಕ್ಯಾಸ್ಯುಯೇರಿಯಸ್ ಬೆನೆಟಿಯೈ ಎಂಬುದೂ ಕಾಣಸಿಕ್ಕುತ್ತವೆ. ನ್ಯೂ ಗಿನಿಯಲ್ಲಿ ಇವೆರಡಲ್ಲದೆ ಕ್ಯಾಸ್ಯುಯೇರಿಯಸ್ ಅನ್‌ಅಪೆಂಡಿಕ್ಯುಲೇಟಸ್ ಪ್ರಭೇದವೂ ಇದೆ. ದಟ್ಟವಾದ ಕಾಡುಗಳಲ್ಲಿ ವಾಸಿಸುತ್ತವೆ. ನೋಡಲು ಹೆಚ್ಚು ಕಡಿಮೆ ಈಮ್ಯೂ ಹಕ್ಕಿಯಂತೆಯೇ ಇವೆ. ಆದರೆ ಗಾತ್ರದಲ್ಲಿ ಅದಕ್ಕಿಂತ ಚಿಕ್ಕವು. ಪೂರ್ಣ ಬೆಳೆದ ಗಂಡು ಕ್ಯಾಸೊವರಿ ಸುಮಾರು 1.5 ಮೀ ಎತ್ತರ ಇದೆ. ಸ್ಥೂಲವಾದ ದೇಹ, ದೇಹದ ಗಾತ್ರಕ್ಕೆ ಹೋಲಿಸಿದರೆ ಚಿಕ್ಕವಾಗಿ ಕಾಣುವ ದೃಢವಾದ ಕಾಲುಗಳು, ಉದ್ದವಾಗಿ ದೇಹದಿಂದ ಇಳಿಬಿದ್ದಿರುವ ಮತ್ತು ಕೂದಲಿನಂತೆ ಕಾಣಬರುವ ಪುಕ್ಕಗಳು,



ಕ್ಯಾಸೊವರಿ

ಕ್ಷೀಣವಾಗಿರುವ ರೆಕ್ಕೆಗಳು, ನೆತ್ತಿಯ ಮೇಲಿರುವ ಕೊಂಬಿನ ಕಿರೀಟದಂಥ ರಚನೆ, ಕತ್ತಿನಿಂದ ಮತ್ತು ತಲೆಯ ಎರಡು ಪಕ್ಕಗಳಿಂದ ಇಳಿಬಿದ್ದಿರುವ ಕೆಂಪುಬಣ್ಣದ ಮಾಂಸಲ ಭಾಗ (ವ್ಯಾಟಲ್), ಇವು ಕ್ಯಾಸೊವರಿಯ ಪ್ರಮುಖ ಲಕ್ಷಣಗಳು. ರೆಕ್ಕೆಗಳ ತುದಿಯಲ್ಲಿ ಉದ್ದವಾದ ತಂತಿಗಳಂಥ 3–5 ಗರಿಗಳಿವೆ. ದಟ್ಟವಾದ ಪೊದೆಗಳಲ್ಲಿ ನುಗ್ಗಿ ಸಾಗುವಾಗ ಮತ್ತು ತನ್ನ ದೇಹದ ರಕ್ಷಣೆಗಾಗಿ ಇವನ್ನು ಬಳಸಿಕೊಳ್ಳುತ್ತದೆ. ದೇಹದ ಬಣ್ಣ ಕಪ್ಪು. ಮರಿಗಳ ದೇಹ ಮಾತ್ರ ಕಂದು ಬಣ್ಣಕ್ಕಿದೆ. ಕ್ಯಾಸೊವರಿಯಲ್ಲಿ ಕಾಣಬರುವ ಸೋಜಿಗದ ಸಂಗತಿಯೆಂದರೆ ಹೆಣ್ಣುಹಕ್ಕಿ ಗಂಡಿಗಿಂತ ದೊಡ್ಡದಿರುವುದು. ಕಾಲುಗಳಲ್ಲಿ 3 ಬೆರಳುಗಳಿವೆ. ಅತ್ಯಂತ ಒಳಗಿನ ಬೆರಳಿನಲ್ಲಿ ಬಲು ಹರಿತವಾದ ನಖವಿದೆ. ಶತ್ರುಗಳಿಂದ ಆವೃತವಾದಾಗ ಇದನ್ನು ಪರಿಣಾಮಕಾರಿಯಾದ ಆಯುಧವಾಗಿ ಉಪಯೋಗಿಸಬಲ್ಲದು.

ಕ್ಯಾಸೊವರಿಗಳು ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. ತುಂಬ ಎಚ್ಚರಿಕೆಯಿಂದ ಶತ್ರುಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಓಡಾಡುತ್ತವೆ. ಶತ್ರುಪ್ರಾಣಿಗಳಾಗಲಿ ಮನುಷ್ಯನಾಗಲಿ ಆಕ್ರಮಿಸಿದಾಗ ಸಾಮಾನ್ಯವಾಗಿ ಓಡಲು ಹವಣಿಸುತ್ತವೆ. ಇವಕ್ಕೆ ಹಾರಲಾಗದಿದ್ದರೂ ವೇಗವಾಗಿ ಓಡುವ ಸಾಮರ್ಥ್ಯವಿದೆ. ಗಂಟೆಗೆ 65 ಕಿಮೀ ವೇಗದಲ್ಲಿ ಕ್ರಮಿಸಬಲ್ಲುವು. ಅಲ್ಲದೆ ದಾರಿಯಲ್ಲಿ ಅಡಚಣೆಗಳು ಸಿಕ್ಕಿದರೆ ಸುಮಾರು 1.8 ಮೀ. ಎತ್ತರಕ್ಕೂ ನೆಗೆದು ದಾಟಬಲ್ಲುವು. ನೀರು ಸಿಕ್ಕಿದರೂ ಅಷ್ಟೆ, ಸರಾಗವಾಗಿ ಈಜಿ ದಾಟುತ್ತವೆ. ನೀರು ಕಂಡರೆ ಕ್ಯಾಸೊವರಿಗಳಿಗೆ ಇಷ್ಟ ಸಮುದ್ರದಲ್ಲೂ ಈಜುತ್ತ ಕಾಲಕಳೆಯುತ್ತವೆ ಎಂದು ಹೇಳಲಾಗಿದೆ. ತುಂಬ ನಾಚುವ ಸ್ವಭಾವದ ಈ ಹಕ್ಕಿಗಳು ತಮ್ಮ ಆಹಾರಾನ್ವೇಷಣೆಗೆ ಬೆಳಗಿನ ಜಾವ ಮತ್ತು ಸಂಜೆ ಮಾತ್ರ ಹೊರಡುತ್ತವೆ. ವಿವಿಧ ಬಗೆಯ ಹಣ್ಣುಗಳು, ಕೀಟಗಳು ಇವೇ ಇವುಗಳ ಪ್ರಧಾನ ಆಹಾರ. ಕೆಲವು ಬಾರಿ ಸಣ್ಣ ಗಾತ್ರದ ಪ್ರಾಣಿಗಳನ್ನು ತಿನ್ನುವುದೂ ಉಂಟು.

ಕ್ಯಾಸೊವರಿ ದಟ್ಟವಾದ ಪೊದೆಗಳ ನಡುವೆ ನೆಲದ ಮೇಲೆ ಕಡ್ಡಿ, ಎಲೆ ಮುಂತಾದುವನ್ನು ಉಪಯೋಗಿಸಿ ಗೂಡು ಕಟ್ಟುತ್ತದೆ. ಹೆಣ್ಣು 3–6 ನಸು ಹಸಿರು ಬಣ್ಣದ ಮೊಟ್ಟೆಗಳನ್ನಿಟ್ಟ ಬಳಿಕ ಗಂಡು ಕಾವು ಕೊಡಲು ಆರಂಭಿಸುತ್ತದೆ. ಕಾವು ಕೊಡುವ ಕಾಲ ಸುಮಾರು 7 ವಾರಗಳು. ಮೊಟ್ಟೆಯೊಡೆದು ಬರುವ ಮರಿಗಳ ಪಾಲನೆಯ ಹೊಣೆಯೂ ಗಂಡಿನದೆ. ಮರಿಗಳ ಮೈಮೇಲೆ ಬೂದಿ ಬಣ್ಣದ ಪಟ್ಟೆಗಳಿವೆ.

ಪಾಪುವ ದ್ವೀಪದ ಮೂಲವಾಸಿಗಳು ಕ್ಯಾಸೊವರಿಯನ್ನು ಅಚ್ಚುಮೆಚ್ಚಿನ ಆಹಾರವಾಗಿ ಬಳಸುತ್ತಾರೆ. ಇದರ ಯಕೃತ್ತಂತೂ ಉತ್ಕೃಷ್ಟವಾದ ತಿನಿಸು ಎನಿಸಿದೆ. (ಜಿ.ಎಂ.ಬಿ.)

**ಕ್ಯು ಜ್ವರ:** ಕ್ವೀನ್ಸ್‌ಲೆಂಡ್ ಜ್ವರ ಅಥವಾ ಪ್ರಶ್ನಾರ್ಥಕ ಜ್ವರ ಎಂಬುದರ ಸಂಕ್ಷಿಪ್ತ ಹೆಸರು. ಡೆರಿಕ್ ಎಂಬಾತ 1937ರಲ್ಲಿ ಮೊತ್ತಮೊದಲ ಬಾರಿಗೆ ಕ್ವೀನ್ಸ್‌ಲೆಂಡಿನ ಬ್ರಿಸ್ಟೇನ್ ಕಾರ್ಮಿಕರಲ್ಲಿ ಈ ರೋಗ ಬರುವುದೆಂದು ಕಂಡುಹಿಡಿದುದಲ್ಲದೆ ಗಿನಿಹಂದಿಗಳಲ್ಲಿ ಈ ರೋಗ ಕಾರಕಗಳಿರುವುದನ್ನು ಕಂಡು ಅವನ್ನು ಬೇರ್ಪಡಿಸಿದ. ಈ ಕಾರಕ ಕಾಕ್ಸಿಯೆಲ್ಲ (ಸಿ) ಬರ್ನೆಟಿ ಎಂಬ ರಿಕೆಟ್ಸಿಯ–ತರ ಸೂಕ್ಷ್ಮಾಣುಜೀವಿಯೆಂದು ಅನಂತರ ತಿಳಿದು ಬಂತು. ಪ್ರಪಂಚದ ಬಹುಪಾಲು ದೇಶಗಳಲ್ಲೆಲ್ಲ ಇದರ ವ್ಯಾಪ್ತಿಯಿದೆ. ದನಕರುಗಳು, ಕುರಿ ಮೇಕೆ ಮತ್ತು ಮಾನವರಲ್ಲಿ ಇದರ ಸೋಂಕು ಬಹಳ. ನಾಯಿ, ಕುದುರೆ, ಪಾರಿವಾಳ, ಬಾತು, ಕೋಳಿ ಮತ್ತು ಕೆಲವು ವನ್ಯಪ್ರಾಣಿಗಳಲ್ಲೂ ಇದು ಇರುವುದು ಕಂಡು ಬಂದಿದೆ. ಪ್ರಾಣಿಗಳು ಮತ್ತು ಪ್ರಾಣಿ ಉತ್ಪನ್ನಗಳೊಂದಿಗೆ ಸಂಪರ್ಕವಿರುವವರಲ್ಲಿ ಈ ರೋಗ ಹೆಚ್ಚು ತೀಕ್ಷ್ಣ.

ದನಕರುಗಳು ಮತ್ತು ಕುರಿಗಳ ಸಂಪರ್ಕದ ಮೂಲಕವಾಗಿ ಈ ಅಣುಜೀವಿಯ ಸೋಂಕು ತಗುಲಿದ ದೂಳಿನ ಮತ್ತು ಪದಾರ್ಥಗಳ ಸೇವನೆಯಿಂದ ರೋಗ ತಲೆದೋರುತ್ತದೆ. ದೇಹದಲ್ಲಿ ಒಂದೆರಡು ವಾರ ಹುದುಗಿ ಕುಳಿತು ಬೆಳೆದ ಮೇಲೆ, ರೋಗದ ಲಕ್ಷಣಗಳು ಏಕಾಏಕಿಯಾಗಿ ಕಾಣಿಸಿಕೊಳ್ಳತೊಡಗುತ್ತವೆ. ಪ್ರಾರಂಭದಲ್ಲಿ ಜ್ವರ, ವಿಪರೀತ ತಲೆನೋವು, ಸುಸ್ತು, ಮೈಕೈ ನೋವು ಮತ್ತು ಆಹಾರದಲ್ಲಿ ನಿರಾಸಕ್ತಿ ಇದ್ದು ಕೆಲವು ದಿನಗಳಲ್ಲಿ ಕೆಮ್ಮು ಮತ್ತು ಉಬ್ಬಸ ತೋರಿಬರುತ್ತದೆ. ಬಲುಬೇಗ ತೂಕ ಕಡಿಮೆಯಾಗುತ್ತದೆ. ನಾಡಿ ಮಿಡಿತ ಮಂದವಾಗುತ್ತದೆ. ಎದೆಬಡಿತವನ್ನಾಲಿಸಿದಾಗ ಶ್ವಾಸೋಚ್ಛ್ವಾಸದೊಡನೆ ಪಿಟಿಪಿಟಿ ಶಬ್ದಗಳು ಕೇಳಿಬರುತ್ತವೆ. ಎದೆಯ ಎಕ್ಸ್ ಕಿರಣ ಚಿತ್ರದಲ್ಲಿ ಅಪಾರಕ ಛಾಯೆಗಳು ಅಲ್ಲಲ್ಲಿ ಹರಡಿರುವುದು ಕಾಣಿಸುತ್ತವೆ.

ರೋಗದಿಂದ ಚೇತರಿಸಿಕೊಳ್ಳುವಾಗ ರಕ್ತರಸದಲ್ಲಿ ರೋಗದ ವಿರುದ್ಧದ ಪ್ರತಿವಸ್ತುಗಳ ಸಂಖ್ಯೆ ಏರಿರುವುದು ರೋಗದ ಕುರುಹಾಗಿ ಉಳಿಯುತ್ತದೆ. ಹೃದಯದ ಒಳಪದರಿನ ಉರಿ ಕೆಲವರಲ್ಲಿ ಪ್ರಮುಖ ತೊಡಕಾಗಿ ತೋರಿಬರಬಹುದು. ಇನ್ನು ಕೆಲವರಲ್ಲಿ ರೋಗದಿಂದ ಚೇತರಿಸಿಕೊಳ್ಳಲು ದೀರ್ಘಾವಧಿ ಸಮಯ ಹಿಡಿಯಬಹುದು. ರೋಗ ಸ್ವಯಂ ತಹಬಂದಿಗೆ ಬರಬಲ್ಲುದು.

ಡೊಕ್ಸಿಸೈಕ್ಲಿನನ್ನು ಮೊದಲನೆ ದಿನ 200 ಮಿಗ್ರಾಂ ನಂತರ ಎರಡು ವಾರಗಳು ಪ್ರತಿದಿನ 100 ಮಿ. ಗ್ರಾಂ ಪ್ರಮಾಣದಲ್ಲಿ ಬಾಯಿಂದ ಕೊಡಬೇಕು. ಅದರ ಬದಲು ಪ್ರತಿ 6 ಘಂಟೆಗೆ 500 ಮಿ. ಗ್ರಾಂ ನಂತೆ ಟೆಟ್ರಸೈಕ್ಲಿನನ್ನು ಎರಡು ವಾರ ಕೊಟ್ಟರೂ ಈ ಸೋಂಕುನ್ನು ವಾಸಿಮಾಡಬಹುದು.

***

**ಕ್ಯೂಕಲಿ ಫಾರ್ಮೀಸ್:** ಕೋಗಿಲೆ, ರಸ್ತೆ ಓಟಗಾರ, ಮತ್ತು ಟುರಕಾಸ್ ಅಥವಾ ಬಾಳೆಹಣ್ಣು ಭಕ್ಷಕ ಪಕ್ಷಿಗಳನ್ನೊಳಗೊಂಡಿರುವ, ಗಿಳಿಗಳನ್ನು ಹೋಲುವ ನಿಯಾರ್ನಿತಿಸ್ ಗುಂಪಿನ ಒಂದು ವರ್ಗ. ಈ ವರ್ಗದ ಪಕ್ಷಿಗಳು ಉದ್ದವಾದ ಮತ್ತು ಚೂಪಾದ ರೆಕ್ಕೆಗಳನ್ನು ಹಾಗು 1 ಮತ್ತು 4ನೆ ಬೆರಳುಗಳು ಹಿಂದುಗಡೆಗು, 2 ಮತ್ತು 3ನೆ ಬೆರಳುಗಳು ಮುಂದುಗಡೆಗು ತಿರುಗಿಕೊಂಡಿರುವ ಪಾದಗಳನ್ನು (ಜೈಗೋಡ್ಯಾಕ್ಟೈಲಸ್) ಹೊಂದಿರುತ್ತವೆ.

ಪಾದಗಳ ಈ ರೀತಿಯ ರಚನೆಯು ಮರದ ಕೊಂಬೆಯ ಮೇಲೆ ಸ್ಥಿರವಾದ ಹಿಡಿತವನ್ನು ಕೊಡುತ್ತದೆ. ಕೆಲವು ವೇಳೆ 4ನೆ ಬೆರಳು ಪೂರ್ಣವಾಗಿ ತಲೆಕೆಳಗಾಗಿರುತ್ತದೆ (ಸೆಮಿಜೈಗೋಡ್ಯಾಕ್ಟಿಲಸ್). ಕೊಕ್ಕು ಸ್ವಲ್ಪ ಬಾಗಿರುತ್ತದೆ ಮತ್ತು ಅತಿಯಾಗಿ ಬಿರುಕು ಬಿಟ್ಟಿರುತ್ತದೆ. ಈ ಪಕ್ಷಿಗಳ ಆಹಾರವು ಸಾಮಾನ್ಯವಾಗಿ ಹಣ್ಣುಗಳು, ಕೆಲವು ಪ್ರಭೇದಗಳು ತಾವೆ ಸ್ವತಃ ಗೂಡುಗಳನ್ನು ಕಟ್ಟಿಕೊಂಡು ಅಲ್ಲೆ ಮೊಟ್ಟೆ ಇಟ್ಟು ಮರಿಮಾಡಿ, ಮರಿಗಳನ್ನು ಸಾಕುತ್ತವೆ, ಮತ್ತೆ ಕೆಲವು ಪ್ರಭೇದಗಳು ಬೇರೆ ಪಕ್ಷಿಗಳು ಕಟ್ಟಿದ ಗೂಡಿನಲ್ಲಿ ನೇರವಾಗಿ ಮೊಟ್ಟೆ ಇಡುತ್ತವೆ ಅಥವಾ ಮೊದಲು ಮೊಟ್ಟೆಗಳನ್ನು ಭೂಮಿಯ ಮೇಲೆ ಇಡುತ್ತವೆ, ಅನಂತರ ಬೇರೆ ಪಕ್ಷಿಗಳ ಗೂಡಿಗೆ ಸ್ಥಳಾಂತರಿಸುತ್ತವೆ. ಈ ರೀತಿ ಸ್ಥಳಾಂತರಗೊಂಡ ಮೊಟ್ಟೆಗಳ ಮರಿಗಳು ಆತಿಥೇಯ ಮೊಟ್ಟೆಗಳ ಮರಿಗಳಿಗಿಂತ ಮೊದಲೆ ಹೊರಬರುತ್ತವೆ. ಅನಂತರ ಅತಿಥಿ ಮೊಟ್ಟೆಗಳ ಮರಿಗಳು ಆತಿಥೇಯ ಪಕ್ಷಿಯಿಂದ ಹೊರದೂಡಲ್ಪಡುತ್ತವೆ.

ಈ ವರ್ಗದ ಕ್ಯೂಕಲಿಡೆ ಕುಟುಂಬಕ್ಕೆ ಸೇರಿದ ಭಾರತ ಮತ್ತು ಶ್ರೀಲಂಕಾ ದೇಶಗಳಲ್ಲಿ ಎಲ್ಲ ಕಡೆಯೂ ಕಾಣಿಸಿಕೊಳ್ಳುವ ಇಂಡಿಯ ಕೋಗಿಲೆಯಲ್ಲಿ ಗಂಡು ಕೋಗಿಲೆಯು ನೀಲಿ ಮಿಶ್ರಿತ ಹಸಿರು ಮೆರುಗಿನಿಂದ ಕೂಡಿದ ಕಪ್ಪು ಬಣ್ಣವನ್ನು ಹೊಂದಿರುತ್ತದೆ. ಹೆಣ್ಣು ಕೋಗಿಲೆಯು ರೆಕ್ಕೆ, ಬಾಲ, ಕೊಕ್ಕು ಮತ್ತು ಹೊಟ್ಟೆಯ ಭಾಗಗಳು ಬಿಳಿಕಲೆಗಳಿಂದ ಹೊರತಾಗಿರುವುದನ್ನು ಬಿಟ್ಟು ಬಿಳಿ ಚುಕ್ಕೆಗಳಿಂದ ಕೂಡಿದ ಬೂದು ಬಣ್ಣವನ್ನು ಹೊಂದಿರುತ್ತದೆ. ಈ ಕೋಗಿಲೆಯು ಕಾಗೆಗಳು ಇಟ್ಟಿರುವ ಮೊಟ್ಟೆಗಳಲ್ಲಿ ಒಂದು ಅಥವಾ ಎರಡು ಮೊಟ್ಟೆಗಳನ್ನು ನಾಶಪಡಿಸುತ್ತದೆ. ಕೋಗಿಲೆಯ ಮೊಟ್ಟೆಗಳು ಸಣ್ಣವಾದರು ಸ್ವಲ್ಪ ಹೆಚ್ಚು ಕಡಿಮೆ ಕಾಗೆಯ ಮೊಟ್ಟೆಗಳನ್ನು ಹೋಲುತ್ತವೆ. ಇವುಗಳು ಕೀಟ ಭಕ್ಷಿಗಳು. ಕೆಲವು ಜೀವಿ ಪ್ರಭೇದಗಳು ಸಾಮಾಜಿಕ ಪರೋಪಜೀವಿಗಳು.

ಕ್ಯೂಕಲಿನೆ ಉಪಕುಟುಂಬಕ್ಕೆ ಸೇರಿದ ಸಮಗ್ರವಾಗಿ ಹರಡಿರುವ ಹಳೆ ಪ್ರಪಂಚದ ಸಾಂಕೇತಿಕ ಕೋಗಿಲೆಗಳು ಸಂಪೂರ್ಣವಾಗಿ ಪರೋಪ ಜೀವಿಗಳಾಗಿವೆ. ಕ್ಯೂಕಲಿಸ್ ಪಕ್ಷಿಯು ಯುರೇಶಿಯ, ಹಿಮಾಲಯದ ದಕ್ಷಿಣ, ಆಫ್ಘಾನಿಸ್ತಾನ, ಪರ್ಶಿಯ, ಆಫ್ರಿಕ ಮತ್ತು ಸಹರಾದ ಉತ್ತರ ಭಾಗಗಳಲ್ಲಿ ಸಾಮಾನ್ಯವಾಗಿ ಮರಿಮಾಡುತ್ತದೆ. ಸಾಮಾನ್ಯ ಕೋಗಿಲೆಗಳು ಯೂರೋಪ್, ಉತ್ತರ ಏಶಿಯಾಗಳಿಗೆ ಬೇಸಿಗೆಯಲ್ಲಿ ಹೋಗುತ್ತವೆ. ಈ ಪಕ್ಷಿಗಳು ಎಲೆಗಳಿಂದ ಕೂಡಿದ ಮರಗಳಲ್ಲಿ ಸಾಮಾನ್ಯವಾಗಿ ತಮ್ಮನ್ನು ತಾವೆ ಮರೆಮಾಡಿಕೊಳ್ಳುತ್ತವೆ. ಉತ್ತರ ಅಮೆರಿಕದ ಹಳದಿ ಮತ್ತು ಕಪ್ಪುಕೊಕ್ಕಿನ ಕೋಗಿಲೆಗಳು ಪರೋಪ ಜೀವಿಗಳಲ್ಲ ಮತ್ತು ಅವುಗಳು ಗೂಡುಗಳನ್ನು ತಾವೆ ಸ್ವತಃ ಕಟ್ಟಿಕೊಳ್ಳುತ್ತವೆ. ಚಳಿಗಾಲದಲ್ಲಿ ದಕ್ಷಿಣ ಮತ್ತು ಉತ್ತರ ಅಮೆರಿಕಗಳ ಕಡೆಗೆ ವಲಸೆ ಹೋಗುತ್ತವೆ. ಮತ್ತೊಂದು ಗುಂಪಿನ ಪರೋಪಜೀವಿಗಳಲ್ಲದ ಕೋಗಿಲೆಗಳಾದ ರಸ್ತೆ ಓಟಗಾರ ಪಕ್ಷಿಗಳು ಉತ್ತರ ಅಮೆರಿಕದ ನೀರಸ ಭಾಗಗಳಲ್ಲಿ ವಾಸಿಸುತ್ತವೆ. ಇವುಗಳ ಒಂದು ಜಾತಿಯು ಉತ್ತರ–ಪೂರ್ವ–ಏಶಿಯಾದಲ್ಲಿ ಕಾಣಿಸಿಕೊಳ್ಳುತ್ತದೆ. ರಸ್ತೆ ಓಟಗಾರ ಪಕ್ಷಿ ಅಥವಾ ಚಪಾರ್ರಲ್ ಕೋಳಿಯು ಬಾಂಟಮ್ ಎಂಬ ಒಂದು ಜಾತಿಯ ಸಣ್ಣಕೋಳಿಯಷ್ಟೆ ದೊಡ್ಡದಾಗಿರುತ್ತದೆ ಮತ್ತು ಉದ್ದವಾದ ಶಕ್ತಿಯುತವಾದ ಕಾಲುಗಳು ಮತ್ತು ಒಂದು ಉದ್ದನಾದ ಬಾಲವನ್ನು ಹೊಂದಿರುತ್ತದೆ. ಈ ಮೂಲಕ ಬಾಂಟಮ್ ಕೋಳಿಯನ್ನು ಸ್ವಲ್ಪ ಹೆಚ್ಚುಕಡಿಮೆ ಹೋಲುತ್ತದೆ. ಹೆಸರೆ ಸೂಚಿಸುವಂತೆ ಇದು ಮುಖ್ಯವಾಗಿ ಭೂಮಿಯ ಮೇಲಿನ ಪಕ್ಷಿ ಮತ್ತು ಮರಳುಗಾಡಿನ ಕುರುಚಲುಗಿಡಗಳಲ್ಲಿ ವಾಸಿಸುತ್ತದೆ. ಇದರ ಆಹಾರ ಹಲ್ಲಿಗಳು ಮತ್ತು ಸಣ್ಣಹಾವುಗಳು. ಇದು ಬಹಳ ವೇಗವಾಗಿ ಓಡುತ್ತದೆ. ಗಂಟೆಗೆ 25 ಕಿಮೀ ವೇಗದಲ್ಲಿ ಓಡುತ್ತದೆ. ಮತ್ತೊಂದು ಪರೋಪ ಜೀವಿಯಲ್ಲದ 10 ಪ್ರಭೇಧಗಳ ಜೀವ ಜಾತಿಯಾದ ಕೊವಾಸ ಕೋಗಿಲೆಯು ಮೆಡಗಾಸ್ಕರ್‌ನಲ್ಲಿ ನೆಲದ ಮೇಲೆ ವಾಸಿಸುತ್ತದೆ. ಇದು ತನ್ನ ಗೂಡನ್ನು ತಾನೆ ಕಟ್ಟಿಕೊಳ್ಳುತ್ತದೆ. ಇದರ ಆಹಾರವು ಮರದಿಂದ ಕೆಳಗಡೆ ಬಿದ್ದ ಹಣ್ಣುಗಳು ಮತ್ತು ಕೀಟಗಳಾಗಿರುತ್ತದೆ. ತೊಂದರೆಗೆ ಸಿಕ್ಕಿಕೊಂಡಾಗ ಹಾರುವುದರ ಬದಲಾಗಿ ಓಡುವುದರ ಮೂಲಕ ಸುರಕ್ಷಿತ ಸ್ಥಾನವನ್ನು ಸೇರಿಕೊಳ್ಳುತ್ತದೆ. ಮತ್ತೊಂದು ನೆಲದ ಮೇಲೆ ವಾಸಿಸುವ ಆಫ್ರಿಕದಿಂದ ಆಸ್ಟ್ರೇಲಿಯಾ, ಉತ್ತರ ಏಷ್ಯಾಗಳಲ್ಲೆಲ್ಲ ವ್ಯಾಪಿಸಿರುವ 28 ಜೀವ ಪ್ರಭೇಧಗಳ ಜೀವಜಾತಿ ಕೌಮಸ್ ಕೋಗಿಲೆ. ಇವುಗಳು ನಿಧಾನವಾಗಿ ಹಾರುವ ದೊಡ್ಡ ಪಕ್ಷಿಗಳು, ಪ್ರಧಾನವಾಗಿ ಕಪ್ಪು ಬಣ್ಣದ ಗರಿಗಳು, ಚಿಕ್ಕದಾದ ಕೆಳಗಡೆಗೆ ಬಾಗಿದ ಕೊಕ್ಕು, ದುಂಡಾದ ರೆಕ್ಕೆಗಳು, ಉದ್ದವಾದ ಬಾಲ ಮತ್ತು ಉದ್ದನಾದ ಶಕ್ತಿಯುತವಾದ ಕಾಲುಗಳನ್ನು ಹೊಂದಿರುತ್ತವೆ. ಹಸಿರುಎಲೆ ಮತ್ತು ಹುಲ್ಲುಗಳ ಸಹಾಯದಿಂದ ದೊಡ್ಡ ಆಕಾರದ ಗೂಡನ್ನು ಕಟ್ಟುತ್ತವೆ. ಅವುಗಳ ಕರೆಯು ಒಂದು ಗಂಭೀರವಾದ ಬೊಬ್ಬಳದ ಚಿಹ್ನೆಯಾಗಿರುತ್ತದೆ.

ಮುಸಫಾಜಿಡೆ ಕುಟುಂಬಕ್ಕೆ ಸೇರಿದ ಟುರಕಾಸ್ ಅಥವಾ ಬಾಳೆ ಹಣ್ಣು ಭಕ್ಷಿಗಳು ನೋಡುವುದಕ್ಕೆ ಸುಮಾರು ಚಿಕ್ಕ ಬೆಟ್ಟೆಯ ಪಕ್ಷಿಗಳಂತಿರುತ್ತವೆ. ಹೊರಗಡೆಯ ಬೆರಳು ಮುಂದಕ್ಕಾಗಲಿ, ಹಿಂದಕ್ಕಾಗಲಿ ತಿರುಗಿಕೊಂಡಿರುವುದರಿಂದ ನೋಡುವುದಕ್ಕೆ ವಿಚಿತ್ರವಾಗಿ ಕಾಣಿಸುತ್ತದೆ. ಅಮೆರಿಕದ ಕಾಡುಗಳಲ್ಲಿ ಸಣ್ಣಗುಂಪಿನಲ್ಲಿ ಸಾಲಾಗಿ ನಿಂತಿರುತ್ತವೆ ಮತ್ತು ಗಿಳಿಗಳ ರೀತಿ ಗದ್ದಲ ಮಾಡುತ್ತಿರುತ್ತವೆ. ಅವುಗಳು ಹಣ್ಣುಭಕ್ಷಿಗಳು. ಅವುಗಳ ವೈಜ್ಞಾನಿಕ ಹೆಸರು ಮತ್ತು ಸಾಮಾನ್ಯ ನಾಮಾಂಕಿತವು ಅವುಗಳು ಚಿಕ್ಕ ಕಾಡುಬಾಳೆಹಣ್ಣುಗಳನ್ನು ತಿನ್ನುತ್ತವೆ ಎಂಬ ತಪ್ಪು ನಂಬಿಕೆಯಿಂದ ಪಡೆದದ್ದಾಗಿದೆ. (ವಿ.ಕೆ.ವಿ)

**ಕ್ಯೂಟಿಕಲ್:** ಕೀಟ ದೇಹದ ಹೊರ ರಕ್ಷಣಾ ಪೊರೆ ಅಥವಾ ಹೊರ ಅಸ್ಥಿ ಪಂಜರವೇ ಈ ಕ್ಯೂಟಿಕಲ್. ಇದು ಎಪಿಡರ್ಮಿಸ್ (ಹೊರದರ್ಮ) ಪದರಿನಿಂದ ಉತ್ಪನ್ನವಾದುದು. ಈ ಪೊರೆಯ ಗಾತ್ರ ವಿಭಿನ್ನವಾಗಿದೆ. ಪ್ರಭೇದಕ್ಕನುಗುಣವಾಗಿ ವೈವಿಧ್ಯತೆ ತೋರುತ್ತದೆ. ಬಣ್ಣದ ವೈಖರಿ ಮತ್ತು ಗಡುಸುತನದಲ್ಲಿ ವ್ಯತ್ಯಾಸವಿದೆ. ಸೂಕ್ಷ್ಮ ಕೀಟಗಳಲ್ಲಿ ಕ್ಯೂಟಿಕಲ್ ತೆಳುವಾದ ಬಳುಕುವ ಪಾರದರ್ಶಕ ವಸ್ತುವನ್ನೊಳಗೊಂಡ ಶರ್ಕರಪಿಷ್ಠದಿಂದಾಗಿದೆ. ಈ ಪೊರೆ ದೇಹದ ಒಳಗಡೆ ಕೆಲವು ಭಾಗದಲ್ಲಿದೆ. ಈ ಪೊರೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಮೂರು ಉಪ ಪದರುಗಳಿರುವುದು ಕಾಣುತ್ತದೆ. ಎಪಿಕ್ಯೂಟಿಕಲ್, ಎಕ್ಸೊಕ್ಯೂಟಿಕಲ್ ಮತ್ತು ಎಂಡೊಕ್ಯೂಟಿಕಲ್.




ಕೀಟದ ಮೈಗೋಡೆಯ ರಚನೆ

bm-ಆಧಾರ ಪೊರೆ; br-ಸೀಟ; ex-ಹೊರದರ್ಮ; sec-ಸ್ರಾವ; gl-ಗ್ರಂಥಿ; end-ಒಳದರ್ಮ

ಕ್ಯೂಟಿಕಲ್ ಪೊರೆ ಕೀಟಗಳ ಗಾತ್ರ ಮತ್ತು ರೂಪ ರಚನೆಯನ್ನು ನಿರ್ದಿಷ್ಟಗೊಳಿಸುವುದು. ಬಾಹ್ಯದಲ್ಲಿನ ಚಲನಾಂಗ, ಜೀರ್ಣಾಂಗ, ಪ್ರಜನಾಂಗ, ಅಥವಾ ಹೊರ ಅಸ್ಥಿಪಂಜರ ಅದರ ಬಣ್ಣ ವಿನ್ಯಾಸ, ಹೊಳಪುತನವನ್ನು ಸಹ ನಿರ್ದಿಷ್ಟಗೊಳಿಸುತ್ತದೆ. ಹೊರನೋಟಕ್ಕೆ ನುಣುಪಾಗಲಿ, ಒರಟಾಗಿರಲಿ ರೋಮಭರಿತವಾಗಿರಲಿ, ಬಿರುಗೂಲು ಅಥವಾ ಫಲಕಗಳನ್ನು ಹೊಂದಿರುತ್ತದೆ. ಈ ಕ್ಯೂಟಿಕಲ್ ಬಾಹ್ಯ ರಕ್ಷಣೆ ಒದಗಿಸುತ್ತದೆ. ವಿವಿಧ ಬಗೆಯ ಒತ್ತಡದಿಂದ ಸಂರಕ್ಷಿಸಿ ಅಂಗಾಂಗಗಳನ್ನು ಸುರಕ್ಷಿತವಾಗಿಡುತ್ತದೆ.

ಕ್ಯೂಟಿಕಲ್ ಅತ್ಯಂತ ಮೃದು ಅಥವಾ ಗಡುಸಾಗಿದೆ. ಇದಕ್ಕೆ ಕಾರಣ ಉತ್ಪತ್ತಿಯ ಹಂತದಲ್ಲಿ ಈ ಪೊರೆ ಸ್ಕ್ಲೀರಟಿನೈಸ್ ಆಗುವುದು. ಈ ಕ್ರಿಯೆಯನ್ನೇ ಸ್ಕ್ಲೀರಟಿನೈಸೇಷನ್ ಎನ್ನುವರು.

ಕೆಲವು ಬಗೆಯ ಕೀಟಗಳಲ್ಲಿ ಸ್ಕ್ಲೀರೈಟ್ ಫಲಕಗಳಿದ್ದು, ಇವು ಮೃದುವಾದ ಪೊರೆಯಿಂದ ಬಂಧಿತವಾಗಿವೆ. ಬಳುಕಲು, ಚಲನೆಯಲ್ಲಿ ಸಹಕರಿಸಲು ಮತ್ತು ರಕ್ಷಣೆಯಲ್ಲಿ ವಿಶೇಷ ಪಾತ್ರವಹಿಸಲು ಅನುಕೂಲಕರ. ಕಾರಣ, ಕ್ಯೂಟಿಕಲ್ ಅಡಿಯಲ್ಲಿ ಸ್ನಾಯುಗಳಿವೆ. ಇವೆರಡರ ಕ್ರಿಯೆ ವ್ಯವಸ್ಥಿತವಾಗಿರುವುದರಿಂದ ಕೀಟಗಳಲ್ಲಿ ಅಸ್ಥಿ–ಸ್ನಾಯು ಸಂಗಮದಿಂದಾಗಿ ಒಂದು ವ್ಯೂಹವೇ ಏರ್ಪಟ್ಟಿದೆ. ಕೀಲುಗಳು, ಕೀಲುಗೂಡುವ ಕ್ರಿಯೆಯಲ್ಲಿ ಭಾಗಿಗಳಾಗುವುದರಿಂದ ಕೀಲಿನ ಭಾಗದ ಕ್ಯೂಟಿಕಲ್‌ನಲ್ಲಿ ಬಂದು ಬಗೆಯ ರೆಸಿಲಿನ್ ವಸ್ತು ಇದ್ದು, ಸಹಾಯಕವಾಗಿದೆ. ಈ ಪೊರೆ ನೀರು ಹೀರದ ಕವಚಾಂಗ. ಇದರಿಂದ ದೇಹಾಂತರದಲ್ಲಿನ ದ್ರವ ಯಾವಕಾರಣಕ್ಕೂ ಇಂಗದಂತೆ ರಕ್ಷಿಸುವುದು. ಇದರಿಂದ ಭೂವಾಸಿ ಕೀಟಗಳಿಗೆ ಸಹಾಯಕ. ನೀರು ಹೀರದ ಗುಣಕ್ಕೆ ಕಾರಣ ಈ ಪೊರೆಯ ಮೇಲ್ ಭಾಗದ ಎಪಿಕ್ಯೂಟಿಕಲ್ ಭಾಗವೆಲ್ಲಾ ಒಂದು ಬಗೆಯ ಮೇಣದಿಂದ ಲೇಪಿತವಾಗಿದೆ. ದೇಹಾಂತರದಲ್ಲಿ ಕ್ಯೂಟಿಕಲ್ ಪೊರೆಯೊಳಗೊಂಡ ವೈವಿಧ್ಯಮಯ ಅನಿಲ ವಿನಿಮಯ ಮಾಡಲು ನಾಳಗಳ ವ್ಯೂಹವೇ ರಚಿತವಾಗಿ ಉಸಿರಾಟ ಕ್ರಿಯೆಯಲ್ಲಿ ಸಹಾಯಕವಾಗಿದೆ.

ಕ್ಯೂಟಿಕಲ್ ಹಿಗ್ಗುವುದಿಲ್ಲ. ಇದರಿಂದಾಗಿ ಕೀಟಗಳು ಬೆಳೆಯುತ್ತಿರುವಾಗ ಈ ರಚನೆ ಹಿಗ್ಗದಿರುವುದರಿಂದ ಇದು ಸೀಳಬೇಕು ಅಥವ ತುಂಡರಿಸಬೇಕು. ಈ ಕ್ರಿಯೆಯೇ ಪೊರೆಬಿಡುವ ಕ್ರಿಯೆ. ಈ ಕ್ರಿಯೆ ಸಂಧಿ ಪದಿವಂಶದಲ್ಲಿರುವ ಎಲ್ಲಾ ಪ್ರಾಣಿಗಳಲ್ಲಿದೆ. ಕಾರಣ ಕ್ಯೂಟಿಕಲ್, ಸಂಧಿ ಪದಿ ವಂಶದಲ್ಲಿ, ವಿಶೇಷವಾಗಿ ಕೀಟಗಳಲ್ಲಿ ಮಹತ್ತರ ಪಾತ್ರ ವಹಿಸಿದೆ. (ಜಿ.ಎಂ.ಬಿ.)

**ಕ್ಯೂಬೊಮಿಡ್ಯೂಸೆ:** ಸೀಲೆಂಟರೇಟ (ಕುಟುಕು ಕಣವಂತಗಳ) ವಂಶದ ಸ್ಕೈಫೋಜೋವ ಗಣ. ಈ ಗಣದಲ್ಲಿ ಅಂಬಲಿ ಮೀನುಗಳಿವೆ. ಈ ಪ್ರಾಣಿಗಳು ಮೀನುಗಳಲ್ಲ, ಆದರೆ, ಮೀನಿನಂತೆ ಈಜಬಲ್ಲವು. ಇವುಗಳಲ್ಲಿ ಆಳವಾದ ಘನಾಕಾರದ ಗಂಟೆ ಇದೆ.




ಮೆಡುಸಾ

ಗಂಟೆಯ ಮೇಲ್ತುದಿಯು ಚಪ್ಪಟೆಯಾಗಿದೆ. ಅಡ್ಡಸೀಳಿಕೆಯಲ್ಲಿ ಚೌಕಾಕಾರವಾಗಿದೆ. ಗಂಟೆಯ ನಾಲ್ಕು ಮೂಲೆಗಳಲ್ಲಿ ಒಂದು ಅಥವ ಹೆಚ್ಚು ಸಂಕುಚಿಸಬಲ್ಲ, ಟೊಳ್ಳಾದ ಕುಟುಕು ಕಣಗಳಿರುವ ಅಂತರ್‌ತ್ರಿಜ್ಯ ಕರಬಳ್ಳಿಗಳಿವೆ. ಕರಬಳ್ಳಿಗಳ ಬುಡವು ಹಿಗ್ಗಿ ಪೆಡೇಲಿಯ ಅಥವ ಲ್ಯಾಪ್ಪೆಟ್ ಎಂಬ ಜೆಲ್ಲಿಯ ಪಾಲಿಗಳಾಗಿವೆ. ಕರಬಳ್ಳಿಗಳ ನಡುವೆ ಇರುವ ತೆಳುವಾದ ಕಚ್ಚುಗಳಲ್ಲಿ ನಾಲ್ಕು ಜಟಿಲವಾದ ಪ್ರಧಾನ ತ್ರಿಜ್ಯ ರೊಪೇಲಿಯ ಅಥವ ಟೆಂಟಾಕ್ಯುಲೊಸಿಸ್ಟ್‌ಗಳಿವೆ. ಗಂಟೆಯ ಅಂಚು ಮಿಥ್ಯ ವೀಲಮ್‌ಆಗಿ ಒಳಬಾಗಿದೆ. ಅರೀಲಿಯದ ವೆಲೇರಿಯಮ್ ತರಹ ಒಳಚರ್ಮ ನಾಲಗೆಳಿವೆ. ರೊಪೇಲಿಯಮ್‌ನ ಕೆಳಗಿರುವ ಫ್ರೆನುಲಗಳೆಂಬ ಜೆಲ್ಲಿಯ ಮಡಿಕೆಗಳು ವೆಲೇರಿಮ್‌ಗೆ ಆಧಾರವಾಗಿವೆ.

ಸಬ್‌ಅಂಬ್ರೆಲ್ಲದ ನಡುವೆ ಚಿಕ್ಕ ಮೆನುಬ್ರಿಯಮ್ ಇದೆ. ಇದರ ಬಿಡಿತುದಿಯಲ್ಲಿನ ಬಾಯಿ ಗಂಟೆಯಲ್ಲಿರುವ ಜಠರಕ್ಕೆ ತೆರೆಯುತ್ತದೆ. ಜಠರದಿಂದ ನಾಲ್ಕು ಉತ್ತಲ ಪ್ರಧಾನ ತ್ರಿಜ್ಯ ಜಠರಸಂಚಿಗಳು ಹುಟ್ಟುತ್ತವೆ. ಜಠರಾವಕಾಶದಲ್ಲಿ ನಾಲ್ಕು ಅಡ್ಡತಡಿಕೆಗಳಿವೆ. ಇವು ಗಂಟೆಯ ಮೂಲೆ, ಎಕ್ಸ್‌ಅಂಬ್ರೆಲ್ಲ ಮತ್ತು ಸಬ್‌ಅಂಬ್ರೆಲ್ಲಕ್ಕೆ ಅಂಟಿಕೊಂಡಿವೆ. ಬಿಡಿ ತುದಿಯಲ್ಲಿ ಗ್ಯಾಸ್ಟ್ರಿಕ್‌ತಂತುಗಳ ಗುಚ್ಛವನ್ನು ಹೊಂದಿವೆ. ಗಂಟೆಯ ಅಂಚಿನಲ್ಲಿ ವೃತ್ತೀಯ ನಾಲೆಯಿದೆ. ಜಠರ ಸಂಚಿಗಳು ಅಡ್ಡತಡಿಕೆಯ ರಂಧ್ರಗಳ ಮೂಲಕ ಇದಕ್ಕೆ ಕೂಡಿಕೊಂಡಿವೆ. ವೃತ್ತೀಯ ನಾಲೆಯ ಕವಲುಗಳು ಕರಬಳ್ಳಿ ಮತ್ತು ವೆಲೇರಿಯಮ್‌ಗೆ ವ್ಯಾಪಿಸಿದೆ.

ಗಂಟೆಯ ಅಂಚಿನಲ್ಲಿ ಪೂರ್ಣವಾದ ನರವರ್ತುಲವಿದೆ. ಇದು ನಾಲ್ಕು ರೂಪೇಲಿಯಗಳಿಗೂ ಚಾಚಿಕೊಂಡಿದೆ. ಗಂಟೆಯ ಸಂದಿನಲ್ಲಿರುವ ರೊಪೇಲಿಯಮ್ ವಿವೃತ ಗುಬುಟು ಆಕಾರದಲ್ಲಿದೆ. ಇದರ ಅವಕಾಶವು ಜಠರ ಸಂಚಿಕೆಯೊಂದಿಗೆ ಕೂಡಿಕೊಂಡಿದೆ. ಗುಬುಟಿನ ಒಳಗಡೆ ಒಂದು ದೊಡ್ಡ ಒಳಚರ್ಮದ ಸಂತುಲನಾಶ್ಮ ಮತ್ತು ಕೆಲವು ಒಸೆಲ್ಲೈಗಳು ಅನುಲೇಪಕದ ಒಳಮೇಲ್ಮೈಯಲ್ಲಿವೆ. ಒಸೆಲ್ಲೈಗಳಲ್ಲಿ ದೊಡ್ಡ ಜಟಿಲ ಕಣ್ಣು ಮತ್ತು ಸಣ್ಣ ಸರಳ ಕಣ್ಣುಗಳಿವೆ. ಸರಳ ಕಣ್ಣುಗಳಲ್ಲಿ ಮಸೂರ ರೀತಿಯ ಕಾಯವಿದೆ. ತಗ್ಗಿಗೆ ಲಂಬಿತ ವರ್ಣ ಅನುಲೇಪಕದ ಲೇಪನವಿದೆ. ಜಟಿಲ ಕಣ್ಣಿಗೆ ಎಪಿಡರ್ಮಿಸ್‌ನ ಹೊದಿಕೆ, ಉಭಯೋತ್ತಲ ಮಸೂರ ಮತ್ತು ಲಂಬಿತ ರೆಟಿನಲ್ (ಅಕ್ಷಿಪಟಲ) ಕೋಶಗಳಿಂದಾದ ಎರಡು ಮಸೂರಗಳಿವೆ. ಅಕ್ಷಿಪಟಲದ ಕೋಶಗಳ ವಿಟ್ರಿಯಸ್ ಕಾಯದ ಮೂಲಕ ಅಕ್ಷಿಪಟಲ ಕೋಶಗಳ ಸಂವೇದನ ಕೋಶಗಳು ವಿಸ್ತರಿಸಿವೆ. ಜಠರ ಸಂಚಿಗಳಲ್ಲಿ ನಾಲ್ಕು ಜೊತೆ ಎಲೆಯಾಕಾರದ ಲಿಂಗಾಂಗಳಿವೆ.

ಈ ಪ್ರಾಣಿಗಳು ಉಷ್ಣಪ್ರದೇಶದ ಕಡಲುಗಳಲ್ಲಿ ವಾಸಿಸುತ್ತವೆ. ಇವು ಹೊಟ್ಟೆಬಾಕಗಳು. ದೊಡ್ಡ ಮೀನುಗಳನ್ನು ನುಂಗುತ್ತವೆ. ವೆಲೇರಿಯಮ್‌ನ ಉಪಸ್ಥಿತಿ ಮತ್ತು ಇವುಗಳ ಈಜು ಚಲನೆಗಳು ಹೈಡ್ರೋಜೋವ ಮೆಡುಸದ ನಿಕಟ ಸಂಬಂಧವನ್ನು ಸೂಚಿಸುತ್ತದೆ. ಉದಾ: ಕ್ಯಾರಿಬ್ಡಿಯಗಳಲ್ಲಿ 4 ಪೆಡೇಲಿಯಗಳು, 4 ಕರಬಳ್ಳಿಗಳಿವೆ. ಪ್ರತಿ ರೊಪೇಲಿಯಮ್‌ನಲ್ಲಿ 2 ಜಟಿಲ, 4 ಸರಳ ಕಣ್ಣುಗಳಿವೆ. ಇವು ಕುಟುಕುವುದರಿಂದ ಕಡಲು ಕಣಜಗಳೆನ್ನುತ್ತಾರೆ. ಕಡಲಿನಲ್ಲಿ ಸ್ನಾನ ಮಾಡುವವರಿಗೆ ತುಂಬಾ ಅಪಾಯದ ಪ್ರಾಣಿಗಳು. ಚಿರೊಸಾಲ್ಮಸ್‌ಗಳನ್ನು ಜಪಾನ್ ಮತ್ತು ಫಿಲಿಪೈನಿನ ನಿವಾಸಿಗಳು ಉರಿ ಅಂಬಲಿ ಮೀನುಗಳೆನ್ನುತ್ತಾರೆ. ಗಂಟೆಯ ಪ್ರತಿ ಮೂಲೆಯಲ್ಲಿ ದೊಡ್ಡ ಪೆಡೇಲಿಯ, ಹಲವು ಸಣ್ಣ ಪೆಡೇಲಿಯ ಮತ್ತು ಕರಬಳ್ಳಿಗಳಿವೆ. ಇವು ಅಪಾಯಕಾರಿಗಳು. (ಎಂ.ಎಸ್.)

**ಕ್ಯೂಲಿಸಿಡೆ:** ಸೊಳ್ಳೆ ಜಾತಿಯ ಕೀಟಗಳ ಕುಟುಂಬ. ಇವುಗಳ ಮೈ, ಕಾಲು, ರೆಕ್ಕೆಗಳ ಮೇಲೆ ಶಲ್ಕಗಳ ಹೊದಿಕೆ ಇದೆ. ತೆಳುವಾದ ದೇಹ, ಉದ್ದನೆಯ ಚುಚ್ಚುವ ಹೀರುಕೊಳವೆ, ಬಳುಕದಿರುವ ಕೆಳದವಡೆ ಮತ್ತು ಕೆಳತುಟಿಯ ಸ್ಪರ್ಶಾಂಗಗಳು (ಸ್ಪಿಫ್ ಪಲ್ಪ್) ಗಂಡಿನಲ್ಲಿ ಗರಿಗಳುಳ್ಳ (ಪ್ಲುಮೋಸ್) ಮತ್ತು ಹೆಣ್ಣಿನಲ್ಲಿ ರೋಮಶ (ಪೈಲೋಸ್) ಕುಡಿಮಿಸೆಗಳಿವೆ. ರೆಕ್ಕೆಗಳ ಧಮನಿ (ವೈನ್ಸ್) ಗಳ ಉದ್ದಕ್ಕೂ ಮತ್ತು ರೆಕ್ಕೆಗಳ ಹಿಂದಿನ ಅಂಚಿನಲ್ಲೂ ಶಲ್ಕಗಳ ಕುಚ್ಚುಪಟ್ಟಿ ಇದೆ. ಮೈಮೇಲಿನ ಶಲ್ಕಗಳ ಮೂಲಕ ಸೊಳ್ಳೆ ತನ್ನ ವಿಶೇಷ ಬಣ್ಣವನ್ನು ಹೊಂದುವುದು.




ಹೆಣ್ಣು ಸೊಳ್ಳೆಯಲ್ಲಿ ಮಾತ್ರ ಚುಚ್ಚುವ, ಹೀರುವ ವದನಾಂಗವಿದೆ. ಇದು ಮನುಷ್ಯ, ಜಾನುವಾರುಗಳ ಮತ್ತು ಮೃಗಗಳ ರಕ್ತ ಹೀರುತ್ತದೆ. ರೋಗದ ಸೋಂಕು ಅಂಟಿಸಬಲ್ಲದು. ಗಂಡು ಸೊಳ್ಳೆ ಸಸ್ಯಹಾರಿ. ಸಸ್ಯರಸವನ್ನು ಮಾತ್ರ ಸೇವಿಸುತ್ತದೆ.

ಸೊಳ್ಳೆಯ ಸಂತಾನೋತ್ಪತ್ತಿ ನೀರಿನಲ್ಲಿ ನಡೆಯುತ್ತದೆ. ನೀರಿನಿಂದ ಮೇಲಿಟ್ಟ ಮೊಟ್ಟೆಗಳು ಒಡೆದು ಲಾರ್ವ ಬೆಳೆಯುತ್ತವೆ. ಲಾರ್ವ ಜಲವಾಸಿಗಳು. ಸೂಕ್ಷ್ಮ ಜೀವಿಗಳನ್ನು ಭಕ್ಷಿಸುವುವು. ಉದರದ ತುದಿಯಲ್ಲಿರುವ ಒಂದು ಜತೆ ಶ್ವಾಸರಂಧ್ರಗಳ ಮೂಲಕ ಉಸಿರಾಡುವುವು. ಲಾರ್ವ ನಾಲ್ಕು ಹಂತ (ಇನ್‌ಸ್ಟಾರ್) ಗಳಲ್ಲಿ ಬೆಳೆಯುತ್ತವೆ.

ಐದು ದಿನಗಳಲ್ಲಿ ಲಾರ್ವ ಕೋಶಾವಸ್ಥೆಯಾಗಿ ಪರಿವರ್ತನೆಗೊಳ್ಳುವುದು. ಇದು ಅಲ್ಪ ವಿರಾಮ (ಕಾಮ) ಚಿನ್ಹೆಯ ಆಕಾರವುಳ್ಳದ್ದು. ಚಟುವಟಿಕೆಯಿಂದ ನೀರಿನಲ್ಲಿ ಚಲಿಸುವುದು. ಆದರೆ ಆಹಾರ ಸೇವನೆ ಮಾಡುವುದಿಲ್ಲ. ಶಿರದ ಮೇಲಿನ ತುತ್ತೂರಿಯಾಕಾರದ ಎರಡು ತೊಟ್ಟುಗಳ ತುದಿಯಲ್ಲಿರುವ ಶ್ವಾಸ ರಂಧ್ರಗಳ ಮೂಲಕ ಉಸಿರಾಡುವುದು. ಎರಡು ಮೂರು ದಿನಗಳಲ್ಲಿ ಕೋಶಾವಸ್ಥೆಯಿಂದ ಪ್ರೌಢಸೊಳ್ಳೆಯಾಗಿ ಪರಿವರ್ತನೆ ಹೊಂದಿ ಹಾರಿಹೋಗುತ್ತದೆ.

ರೋಗ ಸಂಸರ್ಗಿ (ವೆಕ್ಟರ್) ಸೊಳ್ಳೆಗಳು, ಸೋಂಕು ಹೊತ್ತು ತರುವಂಥವು. ಮಾನವ ಗೃಹಗಳಲ್ಲಿ, ಲಾಯ, ಕೊಟ್ಟಿಗೆಗಳಲ್ಲಿ ಇರುತ್ತವೆ. ರಕ್ತದಾಹವಿರುವ ಹೆಣ್ಣು ಸೊಳ್ಳೆ ಮಾತ್ರ ಅಂಟುರೋಗಗಳನ್ನು ಹರಡುತ್ತದೆ. ಅಂಥ ಸೊಳ್ಳೆ ಮನುಷ್ಯ ಅಥವ ಪ್ರಾಣಿಯನ್ನು ಕಚ್ಚಿದಾಗ ಅವನ (ಅದರ) ರಕ್ತದೊಳಕ್ಕೆ ಲಾಲಾರಸದೊಡನೆ ರೋಗಕಾರಕ ಸೂಕ್ಷ್ಮಜೀವಿಯನ್ನು ರಕ್ತದ ಜೊತೆ ಹೀರುವುದು.

ಸೊಳ್ಳೆಗಳಲ್ಲಿ ಎರಡು ಗುಂಪುಗಳಿವೆ. ಎಲ್ಲಾ ಜೀವನ ಹಂತಗಳಲ್ಲಿಯು, ಜೀವನ ರೀತಿಯಲ್ಲು ಇವುಗಳ ನಡುವೆ ನಿರ್ದಿಷ್ಟ ವ್ಯತ್ಯಾಸಗಳಿವೆ.

1) ಕ್ಯೂಲಿಸೈನ್ ಗುಂಪು: ಕ್ಯುಲೆಕ್ಸ್ ಜಾತಿಯ ಕೀಟ. ಗಾತ್ರದಲ್ಲಿ ದೊಡ್ಡವು ಮತ್ತು ಈ ಸೊಳ್ಳೆಗಳ ಕಡಿತ ಬಹಳ ನೋವು ಉಂಟುಮಾಡುತ್ತದೆ. ಕ್ಯೂಲೆಕ್ಸ್ ಅಡೀಸ್ ಅಥವಾ ಸ್ಟಿಗೋಮೈಯ, ಮ್ಯಾನ್ಸೋನಿಯಾ ಅಥವಾ ಮ್ಯಾನ್ಸೋನಾಯ್ಡಿಸ್ ಜಾತಿಯ ಸೊಳ್ಳೆಗಳು ಮುಖ್ಯವಾದವು. ಇವು ಆನೆಕಾಲು ರೋಗ (ಫೈಲೇರಿಯಸಿಸ್) ಕ್ಕೆ ಕಾರಣವಾದ ಸೂಕ್ಷ್ಮ ಜೀವಿಗಳನ್ನು, ವೈರಸ್ ಸಂಬಂಧದ ಸೋಂಕುಗಳಾದ ಪೀತಜ್ವರ (ಎಲೋ ಫಿವರ್) ಡೆಂಗುಜ್ವರ ಮೆದುಳಿನ ಊತರೋಗ (ಎನ್‌ಸೆಫಲೈಟಲಿಸ್) ಹರಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

2) ಅನಾಫಿಲೈನ್ ಗುಂಪು: ಅನಾಫಿಲೀಸ್ ಜಾತಿಯ ಕೀಟಗಳಿವೆ. ಈ ಸೊಳ್ಳೆಗಳಿಂದ ಚಳಿಜ್ವರ ಮಲೇರಿಯಾ ಮತ್ತು ಆನೆಕಾಲು ರೋಗ ಹರಡುವುದು. ಈ ಕೆಳಗಿನ ಪ್ರಭೇದಗಳು ಕರ್ನಾಟಕದಲ್ಲಿ ಮಲೇರಿಯ ಸೋಂಕನ್ನು ಹರಡುತ್ತವೆ. ಅನಾಫಿಲೀಸ್ ಕ್ಯುಲಿಸಿಫಾರ್ಮಿಸ್ ಮೈದಾನ ಪ್ರದೇಶಗಳಲ್ಲಿ ಅ. ಫ್ಲೂವಿಯಾಟಿಲಿಸ್ ಮಲೆನಾಡಿನಲ್ಲಿ. ಅ. ಸ್ಟೀಫನ್ಸಿ ನಗರ ಪ್ರದೇಶಗಳಲ್ಲಿ. ಅ. ಸುಂಡೈಯಿಕಸ್ ಕರಾವಳಿ ಪ್ರದೇಶಗಳಲ್ಲಿ ಮಲೇರಿಯ ಹರಡುತ್ತವೆ (ನೋಡಿ: ಅನಾಫಿಲೀಸ್ ಸೊಳ್ಳೆ).

ಕ್ಯೂಲಿಸೈನ್ ಮತ್ತು ಅನಾಫಿಲೈನ್ ಸೊಳ್ಳೆಗಳ ವ್ಯತ್ಯಾಸಗಳು: ಪ್ರೌಢಾವಸ್ಥೆ: 1) ಕ್ಯುಲಿಸೈನ್ ಸೊಳ್ಳೆಗಳು: ಹೆಣ್ಣುಗಳಿಗೆ ಕೆಳದವಡೆಯ ಮತ್ತು ಕೆಳತುಟಿಯ ಸ್ಪರ್ಶಾಂಗಗಳು ಸಣ್ಣವು. ವಿಶ್ರಾಂತಿಯಲ್ಲಿರುವಾಗ ಉದರ ಮೇಲ್ಮೈಗೆ ಸಮಾನಾಂತರವಾಗಿರುತ್ತದೆ. ಶಿರ ಮತ್ತು ಹೀರುಕೊಳವೆಯೊಂದಿಗೆ ಅಧಿಕ ಕೋನದ (ಅಬ್‌ಟ್ಯೂಸ್ ಆಂಗಲ್) ಆಕಾರ ಹೊಂದಿರುತ್ತದೆ. ಅಂದರೆ ಉದರವನ್ನು ನೇರವಾಗಿ ಚಾಚಿ, ತಲೆ ಮತ್ತು ಹೀರುಕೊಳವೆಯನ್ನು ಕೋನಾಕೃತಿಯಲ್ಲಿ ಕೊಂಕಿಸಿರುವುದು.

2) ಅನಾಫಿಲೈನ್ ಸೊಳ್ಳೆಗಳು : ಹೆಣ್ಣಿನ ಕೆಳದವಡೆಯ ಮತ್ತು ಕೆಳತುಟಿಯ ಸ್ಪರ್ಶಾಂಗಗಳು ಹೀರುಕೊಳವೆಯಷ್ಟೇ ಉದ್ದವಾಗಿವೆ. ಉದರದ ಮೇಲೆ ಶಲ್ಕಗಳಿಲ್ಲ. ವಿಶ್ರಾಂತಿಯಲ್ಲಿರುವಾಗ ಹೀರುಕೊಳವೆ ಮತ್ತು ಉದರ ನೇರವಾದ ಗೆರೆಯಂತಿರುವುವು ಮತ್ತು ಅದು ಮೇಲ್ಮೈಗೆ ಕೋನದಲ್ಲಿರುತ್ತದೆ. ಅಂದರೆ, ಹೀರುಕೊಳವೆ ಮತ್ತು ಉದರ ಒಂದೇ ನೀಟಾದ ರೇಖೆಯಲ್ಲಿರುವುವು, ಮುಂತುದಿಯನ್ನು ಕುಳಿತ ಜಾಗಕ್ಕೆ ಮುಟ್ಟಿಸಿ ಮಿಕ್ಕ ದೇಹವನ್ನು ಮೇಲಕ್ಕೆ ಎತ್ತಿ ಕೊಂಡಿರುವುದು.

ಮೊಟ್ಟೆಗಳು: ಸೊಳ್ಳೆಯ ಕದಿರು ಆಕಾರದ ಮೊಟ್ಟೆಗಳು 2–3 ಮಿಮೀ ಉದ್ದ ಇವೆ. ನೀರಿನಲ್ಲಿ ಮೊಟ್ಟೆಗಳನ್ನಿಡುತ್ತವೆ. ಅಥವಾ ಒಣಜಾಗಗಳಲ್ಲಿ ಮೊಟ್ಟೆ ಇದ್ದರೂ ನೀರಿನ ಸಂಪರ್ಕವಿಲ್ಲದೆ ಅವು ಒಡೆಯಲಾರವು.

1) ಕ್ಯೂಲಿಸೈನ್: ಕೆಲವು ಪ್ರಭೇದಗಳಲ್ಲಿ ಮೂಲಂಗಿ ಆಕಾರದ (ಫೂಸಿಫಾರ್ಮ್) ಮೊಟ್ಟೆಗಳು ನಿಂತಿರುವಂತೆ ಅಂಟಿಕೊಂಡು, ತೆಪ್ಪವನ್ನು ಹೋಲುವುದು. ಈ ಮೊಟ್ಟೆ ಗುಂಪಿಗೆ ತೇಲು ಸಾಧನ (ಫ್ಲೋಟ್) ಇಲ್ಲ.

2) ಅನಾಫಿಲೈನ್: ಮೊಟ್ಟೆಗಳು ಒಂಟೊಂಟಿಯಾಗಿ ಇಡಲ್ಪಟ್ಟರೂ ಕೆಲವು ಪ್ರಭೇದಗಳಲ್ಲಿ ತ್ರಿಕೋಣಾಕಾರದಲ್ಲಿ ಒಟ್ಟುಗೂಡುವುವು. ಇವಕ್ಕೆ ಭಕ್ಷಣೆಯ ಕುಚ್ಚು (ಫೀಡಿಂಗ್ ಬ್ರಶ್) ಗಳೆಂದು ಹೆಸರು. ಇವುಗಳ ಚಲನೆಯಿಂದ ನೀರಿನ ಹರಿವು ಉಂಟಾಗಿ ಶೈವಲ, ಬ್ಯಾಕ್ಟೀರಿಯಾ, ಶಿಲೀಂಧ್ರ ಬೀಜಾಣು, ಪರಾಗ ಕಣ ಮುಂತಾದ ಸೂಕ್ಷ್ಮ ಆಹಾರ ವಸ್ತುಗಳನ್ನು ಬಾಯಿಗೆ ತರುವುದು.

ಎದೆಯ ಮೂರು ಖಂಡಗಳು ಕೂಡಿ ಒಂದಾಗಿರುತ್ತದೆ. ಉದರದ ಕೊನೆಯ ಖಂಡದಲ್ಲಿ ನಾಲ್ಕು ಶ್ವಾಸನಾಳದ ಕಿವಿರುಗಳಿವೆ (ಟ್ರೆಕೀಯಲ್ ಗಿಲ್ಸ್) ಇದು ಜಲಜೀವನಕ್ಕೆ ಬೇಕಾದ ಹೊಂದಾಣಿಕೆ. ಉದರದ ಒಂದೇ ಒಂದು ಜತೆ ಶ್ವಾಸರಂಧ್ರಗಳು ತೆರೆದುಕೊಂಡಿವೆ (ಮೆಟ್ಟನೂಸ್ಟಿಕ್) ಇವು ಎಂಟನೇ ಖಂಡದ ಬೆನ್ನು ಪಾರ್ಶ್ವದಲ್ಲಿವೆ ಮತ್ತು ಸಾಮಾನ್ಯವಾಗಿ ತುತ್ತೂರಿಯಾಕಾರದ ಕೊಳವೆಯ ತುದಿಯಲ್ಲಿರುವುವು.

1) ಕ್ಯುಲಿಸೈನ್: ತಲೆಕೆಳಗೆ ಮಾಡಿಕೊಂಡು ನೀರಿನ ಮೇಲ್ಪೊರೆಗೆ ಕೋನವಾಗುವಂತೆ ನೇತಾಡುವ ಲಾರ್ವ ಉಸಿರಿನ ಕೊಳವೆಯ ತುದಿಯನ್ನು ನೀರಿನ ಮೇಲ್ಪೊರೆಗೆ ಲಗತ್ತಿಸಿ ತನ್ಮೂಲಕ ಗಾಳಿ ಸೇವಿಸುವುದು. ಮೈಮೇಲಿನ ಬಿರುಗೂದಲುಗಳು ಸರಳರಚನೆಯುಳ್ಳವು.



ಅನಾಫಿಲಿಸ್ ಸೊಳ್ಳೆಯ ಮೊಟ್ಟೆಗಳು



ಕ್ಯುಲೆಕ್ಸ್ ಸೊಳ್ಳೆಯ ಮೊಟ್ಟೆಗಳು

2) ಅನಾಫಿಲೈನ್: ನೀರಿನಿಂದ ಮೇಲ್ಮೈಯ ತುಸು ಕೆಳಗೆ ಲಾರ್ವ ಚಪ್ಪಟೆಯಾಗಿ ಪವಡಿಸಿರುವಂತೆ ಇದೆ. ಉದರದ ಎಂಟನೆಯ ಖಂಡದ ಶ್ವಾಸರಂಧ್ರಗಳಿಗೆ ತುತ್ತೂರಿಯಾಕಾರದ ಕೊಳವೆ ಇಲ್ಲ. ನೇರವಾಗಿ ಗಾಳಿಗೆ ತೆರೆದುಕೊಂಡಿದೆ. ಮೈ ಮೇಲಿನ ಬಿರುಗೂದಲುಗಳು ಪುಕ್ಕಗಳಂತಿರುವುವು. ಒಂದು ರೀತಿಯ ಥಟ್ಟನೆಯ ಚಲನೆಯ ಮೂಲಕ ನೀರಿನಲ್ಲಿ ಸಾಗುವುದು.

ಪ್ಯೂಪ: ಇದು ಸಾಮಾನ್ಯವಾಗಿ ಅರ್ಧ ವಿರಾಮ ಚಿನ್ಹೆಯ ಆಕಾರದ್ದು. ತಲೆ ಎದೆ ಮತ್ತು ಸುರಳಿಸುತ್ತಿದ ಕಾಯಗಳು ಎಲ್ಲವು ಸೇರಿ ಗೋಳಾಕಾರ ಹೊಂದಿ ತೆಳುವಾದ ಉದರ, ಎದೆಯ ಕೆಳಗೆ ಚಾಚಿರುತ್ತದೆ. ಎದೆಯ ಮೇಲೆ ಒಂದು ಜತೆ ಉಸುರಿನ ತುತ್ತೂರಿಗಳಿವೆ.

1) ಕ್ಯೂಲಿಸೈನ್: ಉಸುರಿನ ತುತ್ತೂರಿಗಳು ಉರುಳೆಯಾಕಾರದವು.

2) ಅನಾಫಿಲೈನ್: ಅವು ಶಂಕುವಿನಾಕಾರದವು. ಬಲಿತ ಸೊಳ್ಳೆ ಹೊರಗೆ ಬರುವಾಗ ಪ್ಯೂಪ ನೀರಿನ ಮೇಲೆ ಬಂದು ಅದರ ಚರ್ಮ ನಡುಗೆರೆಯಲ್ಲಿ ಸೀಳಿಕೊಂಡು ಪ್ರಾಯದ ಸೊಳ್ಳೆ ಹೊರಬರುತ್ತದೆ.

ಸೊಳ್ಳೆಗಳ ಹತೋಟಿ: ಕೆರೆ, ಕೊಳ, ಕಾಲುವೆ, ಚರಂಡಿ, ಜಲದಾರಿ, ನಾಲೆ, ನಿಂತ ಮಳೆನೀರು, ನೀರು ಶೇಖರಿಸಬಲ್ಲ ತೆಂಗಿನ ಚಿಪ್ಪುಗಳಲ್ಲಿ (ಸ್ನಾನ ಪಾನಾದಿಗಳಿಗೆ ಉಪಯೋಗಿಸುವವನ್ನು ಬಿಟ್ಟು) ಸೊಳ್ಳೆ ಬೆಳವಣಿಗೆಯಾಗದಂತೆ ಮಾಡುವುದು. ಪ್ರಾಯದ ಸೊಳ್ಳೆಯನ್ನು ಮನೆ, ಮನುಷ್ಯರಿಂದ ದೂರವಿರಿಸುವುದು.

ನೀರಿನ ಮೇಲೆ ಎಣ್ಣೆ ಮಿಶ್ರಿತ ಮಲೇರಿಯಾಲ್ ಎಂಬ ವಸ್ತುವನ್ನು ಸಿಂಪಡಿಸುವುದರಿಂದ, ತೆಳುವಾಗಿ ನೀರಿನ ಮೇಲೆ ಹರಡಿಕೊಂಡು ಸೊಳ್ಳೆ ಮೊಟ್ಟೆ ಇಡದಂತೆ ಮಾಡುತ್ತದೆ. ಮರಿಹುಳು ಮತ್ತು ಕೋಶಾವಸ್ಥೆಯ ಹುಳುಗಳು ಉಸಿರುಕಟ್ಟಿ ಸಾಯುತ್ತವೆ.



ಸೊಳ್ಳೆಗಳು ಕೂರುವ ಭಂಗಿ: ಎಡಕ್ಕೆ– ಅನಾಫಿಲಿಸ್‌ಸಿ; ಬಲಕ್ಕೆ– ಕ್ಯೂಲೆಕ್ಸ್;

ಮನೆಯ ಕಿಟಕಿಗಳಿಗೂ, ಬಾಗಿಲುಗಳಿಗೂ ಸಣ್ಣ ಕಣ್ಣಿನ ತಂತಿಜಾಲರಿ ಜೋಡಿಸುವುದು, ಹಾಸಿಗೆಗೆ ಸೊಳ್ಳೆ ಪರದೆ ಕಟ್ಟಿಕೊಳ್ಳುವುದು, ಮನೆಯಲ್ಲಿ ಸೊಳ್ಳೆ ಕೂಡಬಹುದಾದ ಗೋಡೆ, ಮೇಲ್ಛಾವಣಿ ಮುಂತಾದವುಗಳಿಗೆ ಸೂಕ್ತ ಕೀಟನಾಶಕಗಳ ಸಿಂಪರಣೆ, ರಾತ್ರಿ ವೇಳೆ ಸೊಳ್ಳೆ ಕಚ್ಚದಂತೆ ಮುಖ, ಕೈ ಕಾಲುಗಳಿಗೆ ಡೈಮೀಥೈಲ್ ಪ್ಥಾಲೇಟ್ ಮುಂತಾದ ವಿಕರ್ಷಕ (ರಿಪಲೆಂಟ್) ತಯಾರಿಕೆಗಳ ಲೇಪನ, ಮುಂತಾದ ವಿಧಾನಗಳಿಂದ ಸೊಳ್ಳೆಯನ್ನು ದೂರವಿಡಬಹುದು.

**ಕ್ಯೂಲೆಕ್ಸ್ ಸೊಳ್ಳೆ:** ಡಿಪ್ಟರ ಗಣದ ಕ್ಯೂಲಿಸಿಡೆ ಕುಟುಂಬದ ಸದಸ್ಯ. ಇದು ನೀರಿನ ಬಳಿ ವಾಸಿಸುತ್ತದೆ. ಇದಕ್ಕೆ ಒಂದು ಜೊತೆ ರೆಕ್ಕೆಗಳಿವೆ. ಎರಡನೆಯ ಜೊತೆ ರೆಕ್ಕೆಗಳು ಕೊಡತಿಯಾಕಾರದ ಉಪಾಂಗಗಳಾಗಿ ಮಾರ್ಪಾಡಾಗಿವೆ. ಇವುಗಳಿಗೆ ಹಾಲ್ಟಿಯರ್ಸ್ ಅಥವಾ ಬ್ಯಾಲೆನ್ಸರ್ಸ್ ಎನ್ನುವರು. ಸೊಳ್ಳೆಯ ದೇಹವನ್ನು ತಲೆ, ಎದೆ ಮತ್ತು ಹೊಟ್ಟೆ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಗಂಡು ಮತ್ತು ಹೆಣ್ಣು ಸೊಳ್ಳೆಗಳಿಗೆ ವ್ಯತ್ಯಾಸಗಳಿವೆ. ಗಂಡು ಸೊಳ್ಳೆಯ ಕುಡಿ ಮೀಸೆ ಚಿಕ್ಕದಾಗಿದ್ದು, ಅದರ ಮೇಲೆ ದಟ್ಟವಾಗಿ ಸೂಕ್ಷ್ಮ ಕೂದಲುಗಳಿವೆ. ಹೆಣ್ಣುಸೊಳ್ಳೆಯ ಕುಡಿಮೀಸೆ ನೀಳವಾಗಿದ್ದು ಕೆಲವೇ ಸೂಕ್ಷ್ಮ ಕೂದಲುಗಳಿವೆ. ಹೆಣ್ಣು ಸೊಳ್ಳೆಗಳು ರಕ್ತವನ್ನು ಹೀರಿ ಜೀವಿಸುತ್ತವೆ. ಗಂಡು ಸೊಳ್ಳೆಗಳು ಸಸ್ಯಾಹಾರಿಗಳು. ಹೂಗಳ ಮಕರಂದ, ಗಿಡಗಳ ರಸವನ್ನು ಹೀರಿ ಬದುಕುತ್ತವೆ. ಇವು ಸೇವಿಸುವ ಆಹಾರವನ್ನು ಅವಲಂಬಿಸಿ ವದನಾಂಗಗಳು ವಿಭಿನ್ನವಾಗಿವೆ. ಕ್ಯೂಲೆಕ್ಸ್ ಸೊಳ್ಳೆ ಬೇರೆ ಪ್ರಭೇದದ ಸೊಳ್ಳೆಗಳಿಂದ ವಿಭಿನ್ನವಾಗಿದೆ. ಇದು ನೆಲದ ಮೇಲೆ ಕುಳಿತಾಗ ದೇಹ ಭೂಮಿಗೆ ಸಮಾಂತರವಾಗಿರುತ್ತದೆ. ಇದಕ್ಕೆ ಸಣ್ಣ ಪಾಲ್ಪಿ ಇದೆ. ದೇಹದ ಮಧ್ಯಭಾಗದ ಮೇಲಿರುವ ಕೂದಲುಗಳು ಮೂರು ಗುಂಪುಗಳಾಗಿದ್ದು, ಸಣ್ಣ ಸ್ಕುಟೆಲಂ ಎಂಬ ಏಣಿಗೆ ಜೋಡಣೆಗೊಂಡಿವೆ. ಇದರ ಬೆಳವಣಿಗೆ ಪೂರ್ಣರೂಪಾಂತರದಿಂದಾಗಿದೆ. ಒಂದು ಜೀವನಚಕ್ರ ಸಂಪೂರ್ಣಗೊಳ್ಳಲು 10–15 ದಿವಸಗಳು ಬೇಕು. ಇದು ಮೊಟ್ಟೆಗಳನ್ನು ಒಂದಕ್ಕೊಂದು ಅಂಟಿಸಿ, ನೀರಿನ ಮೇಲೆ ತೆಪ್ಪದ ಹಾಗೆ ತೇಲುವಂತೆ ಮಾಡುತ್ತದೆ. ಡಿಂಬಗಳ ದೇಹದ 8ನೆಯ ಖಂಡದಲ್ಲಿ ಒಂದು ಉದ್ದನೆಯ ಶ್ವಾಸನಾಳವಿದೆ. ಡಿಂಬಗಳು ಕೋಶಾವಸ್ಥೆ ಹೊಂದಿ, ನಂತರ ಪ್ರೌಢಾವಸ್ಥೆ ಸೇರುತ್ತವೆ. ಕ್ಯೂಲೆಕ್ಸ್ ಸೊಳ್ಳೆಗಳು

ಆನೆಕಾಲುರೋಗವನ್ನು ಉಂಟು ಮಾಡುವ ಫೈಲೇರಿಯ ಹುಳುಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತವೆ. ಕೆಲವು ಸೊಳ್ಳೆಗಳು ಮಿದುಳಿನ ಅಂಗಾಂಶಗಳನ್ನು ಬಾಧಿಸುವ ಎನ್‌ಸೆಫಲೈಟಿಸ್ ಎಂಬ ರೋಗಕಾರಕ ವೈರಸ್ಸನ್ನು ಹರಡುತ್ತವೆ. (ಎನ್.ಬಿ.ಕೆ.)

**ಕ್ರಾಕೊಡಿಲಿಯ:** ಕಶೇರುಕ ಗುಂಪಿನ ಸರೀಸೃಪ ವರ್ಗದ ಗಣ. ಪ್ರಾಚೀನ ಉಪವರ್ಗ ಆರ್ಖೋಸಾರಿಯದಿಂದ ವಿಕಾಸವಾಗಿದೆ. ಮೊಸಳೆಗಳು, ಮಕರಗಳು ಮತ್ತು ಗ್ಯಾವಿಯಲ್‌ಗಳು ಈ ಗಣಕ್ಕೆ ಸೇರಿವೆ. ಮೊಟ್ಟಮೊದಲನೇ ಕ್ರಾಕೊಡಿಲಿಯವು ಕಂಡುಬಂದಿದ್ದು, ಟ್ರೈಯಾಸ್ಸಿಕ್ ಕಾಲದಲ್ಲಿ. ಪ್ರಾಚೀನ ಕಾಲದಲ್ಲಿ ಪ್ರಾಬಲ್ಯ ಪಡೆದಿದ್ದರೂ ಈಗ ಸುಮಾರು 25 ಪ್ರಭೇದಗಳು ಮಾತ್ರ ಇವೆ. ವಿಕಾಸ ದೃಷ್ಟಿಯಲ್ಲಿ ಈ ಗಣ ಬಹಳ ಕುತೂಹಲಕಾರಿಯಾದದ್ದು. ಮಧ್ಯ ಪ್ರಾಗ್‌ಯುಗದಲ್ಲಿ ಪ್ರಬಲವಾಗಿದ್ದು ಅನಂತರ ಗತವಂಶಿ ಮಹಾ ಸರೀಸೃಪಗಳಾದ ಡೈನೊಸಾರ್‌ಗಳೊಂದಿಗೆ ಸಂಬಂಧ ಹೊಂದಿವೆ. ಇನ್ನೊಂದೆಡೆ ಈ ಕಾಲದ ಪಕ್ಷಿಗಳು ಹತ್ತಿರ ಸಂಬಂಧಿಗಳು. 4 ಉಪಗಣಗಳಲ್ಲಿ 3 ನಿರ್ನಾಮವಾಗಿವೆ. ಹಲವು ಪಳೆಯುಳಿಕೆಗಳು ಸಿಕ್ಕಿವೆ. ಈ ಪಳೆಯುಳಿಕೆಯ ದಾಖಲೆ ಕ್ರಾಕೊಡಿಲಿಯ ಹಾಗೂ ಇತರೇ ಕಶೇರುಕಗಳ ಮಧ್ಯೆ ಸಂಬಂಧವನ್ನು ಕಲ್ಪಿಸಲು ಸಾಧ್ಯವಾಗಿದೆ.



ಘಡಿಯಾಲ್

ಈಗಿನ ಕ್ರಾಕೊಡಿಲಿಯಗಳನ್ನು 1) ಕ್ರಾಕೊಡಿಲಿಡೆ – ನಿಜವಾದ ಮೊಸಳೆಗಳು, 2) ಅಲಿಗೇಟೊರಿಡೆ – ಮಕರಗಳು ಮತ್ತು ಕ್ಲೆಮನ್ ಮತ್ತು 3) ಗೆವಿಯಲಿಡೆ – ಗ್ಯಾವಿಯಲ್‌ಗಳೆಂದು ಮೂರು ಕುಟುಂಬಗಳಾಗಿ ವಿಂಗಡಿಸಲಾಗಿದೆ. ಗೆವಿಯಾಲಿಡೆ ಪ್ರತಿನಿಧಿಗಳಿಗೆ ಉದ್ದವಾದ ಮತ್ತು ತೆಳುವಾದ ಮೂತಿಯುಂಟು. ಪ್ರತಿಯೊಂದು ದವಡೆಯಲ್ಲೂ 22 ಹಲ್ಲುಗಳಿಗಿಂತಲೂ ಜಾಸ್ತಿ ಇವೆ. ತಲೆಬುರುಡೆಯ ಮೂಳೆಗಳು ಬೇರೆ ಬೇರೆಯಾಗಿವೆ. ಸೇಪಲ್ ಮತ್ತು ಪ್ರಿಮ್ಯಾಕ್ಸಿಲ ಮೊದಲ ಎರಡು ಕುಟುಂಬಗಳಲ್ಲಿ ಕೂಡಿಕೊಂಡಿವೆ. ಅಲಿಗೇಟೊರಿಡೆ ಮತ್ತು ಕ್ರಾಕೊಡಿಲಿಡೆ ಕುಟುಂಬಗಳ ಪ್ರತಿಯೊಂದು ದವಡೆಯಲ್ಲಿ 22 ಕ್ಕಿಂತ ಕಡಿಮೆ ಹಲ್ಲುಗಳಿವೆ. ಅಲಿಗೇಟೊರಿಡೆಯಲ್ಲಿ ಕೆಳದವಡೆಯ ಹಲ್ಲುಗಳು ಮೇಲು ದವಡೆಯ ಹಲ್ಲುಗಳಿಗೆ ಸರಿಯಾಗಿ ಕೂತುಕೊಳ್ಳುತ್ತವೆ. ಆದರೆ ಕ್ರಾಕೊಡಿಲಿಡೆಯಲ್ಲಿ ಎರಡು ದವಡೆಗಳು ಕೂಡಿದಾಗ ಹಲ್ಲುಗಳು ಬಿಡಿಯಾಗಿರುವುವು. ಮೊಸಳೆಗಳಲ್ಲಿ ಕೆಳದವಡೆಯ 4ನೇ ಹಲ್ಲು ಬಾಯಿ ಮುಚ್ಚಿದಾಗ ಹೊರಕ್ಕೆ ತೆರೆದುಕೊಳ್ಳುವುದು. ಮಕರ ಮತ್ತು ಕ್ಲೆಮನ್‌ಗಳಲ್ಲಿ ಕೆಳದವಡೆಯ 4ನೇ ಹಲ್ಲು ಮೇಲು ದವಡೆಯ ತೋಡಿನಲ್ಲಿ ಕುಳಿತುಕೊಳ್ಳುವುದರಿಂದ ಬಾಯಿ ಮುಚ್ಚಿದಾಗ ಅದು ಹೊರಗಡೆಯಿಂದ ಕಾಣಿಸುವುದಿಲ್ಲ.

ಕ್ರಾಕೊಡಿಲಯಗಳು ನೋಡುವುದಕ್ಕೆ ಹೆಚ್ಚುಕಡಿಮೆ ಹಲ್ಲಿಗಳ ಹಾಗೇ ಕಾಣುವುವು. ಭಾರವಾದ, ವರ್ತುಲಸ್ತಂಭಾಕೃತಿಯ ದೇಹ, ದೊಡ್ಡ ತ್ರಿಕೋನಾಕಾರದ ತಲೆ, ಚಿಕ್ಕ ಕಾಲುಗಳ ಜೊತೆಗೆ ಮೊನೆಯುಗುರು, ಬಲೆಯ ಕಾಲ್ಬೆರಳುಗಳು, ಮತ್ತು ಪಕ್ಕಕ್ಕೆ ಚಪ್ಪಟೆಯಾದ ಬಾಲ ಇವೆ. ದೇಹದ ಮೇಲೆ ದಪ್ಪ ಶಲ್ಕಗಳಿಂದ ಕೂಡಿದ ಚರ್ಮವಿದೆ. ಹೊಟ್ಟೆಯ ಮೇಲೆ ಹಲಗೆಯ ರೀತಿಯ, ದೊಡ್ಡದಾದ ಶಲ್ಕಗಳು ಬೆನ್ನಿನ ಮೆಲೆ ಮೊನಚಾದ ಶಲ್ಕಗಳು ಇರುವುದು. ವಿವಿಧ ಜಾತಿ ಮತ್ತು ಪ್ರಭೇದಗಳಲ್ಲಿ ತಲೆ ಮತ್ತು ಮೂತಿಯ ಆಕೃತಿಗಳಲ್ಲಿ ವ್ಯತ್ಯಾಸಗಳಿವೆ.

ನಿಜವಾದ ಮೊಸಳೆಗಳು (ಕುಟುಂಬ : ಕ್ರಾಕೊಡಿಲಿಡೆ) ಆಫ್ರಿಕಾ ಖಂಡದ ಬಹಳ ಭಾಗಗಳಲ್ಲಿ – ಸಹರಾ ಮರುಭೂಮಿಯ ದಕ್ಷಿಣಕ್ಕೂ, ಮಡಗಾಸ್ಕರ್, ಇಂಡಿಯಾ, ಸಿಲೋನ್, ಈಸ್ಟ್ ಇಂಡೀಸ್, ಉತ್ತರ ಆಸ್ಟ್ರೇಲಿಯಾ, ಮೆಕ್ಸಿಕೋ, ಮಧ್ಯ ಅಮೇರಿಕಾ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಅಮೇರಿಕಾದ ಆಂಡಿಯ ಪೂರ್ವಕ್ಕೂ ಸಿಕ್ಕುತ್ತವೆ. ಕ್ಲೆಮಾನ್ ದಕ್ಷಿಣ ಅಮೆರಿಕಾದಲ್ಲಿ ಕಂಡುಬರುತ್ತವೆ. ಗ್ಯಾವಿಯಲ್‌ಗಳು ಭಾರತದಲ್ಲಿ ಸಿಕ್ಕುತ್ತವೆ. ಅಮೇರಿಕಾದ ಮಕರ (ಅಲಿಗೇಅರ್ ಮಿಸಿಸಿಪ್ಪಿ ಎನ್‌ಸಿಸ್) ಮತ್ತು ಚೈನಾದ ಮಕರ (ಅಲಿಗೇಟರ್ ಸೈನೆನ್ಸಿಸ್) ಇವು ಎರಡನ್ನು ಬಿಟ್ಟು, ಎಲ್ಲಾ ಸಮಕಾಲಿಕ ಕ್ರಾಕೊಡಿಲಿಯಗಳು ಉಷ್ಣವಲಯಗಳಲ್ಲಿ ವಾಸಿಸುತ್ತವೆ. ಎಲ್ಲವೂ ಉಭಯ ಜೀವಿಗಳು. ಕೆರೆಗಳಲ್ಲಿ, ನದಿಗಳಲ್ಲಿ ಮತ್ತು ಜವುಗು ಪ್ರದೇಶಗಳಲ್ಲಿ ವಾಸಮಾಡುತ್ತವೆ ಮತ್ತು ಎಲ್ಲವೂ ಚೆನ್ನಾಗಿ ಈಜಬಲ್ಲುವು. ದೇಹದ ಮೇಲಿನ ರಂಧ್ರಗಳ ಮೂಲಕ ನೀರು ದೇಹದ ಒಳಕ್ಕೆ ಹೋಗದಂತೆ ನಿಯಂತ್ರಿಸಲು ಕವಾಟಗಳಿವೆ. ಈ ನಿಶಾಚರ ಪ್ರಾಣಿಗಳು ತಮ್ಮ ಹೆಚ್ಚಿನ ಸಮಯವನ್ನು ನೀರಿನಲ್ಲಿ ಕಳೆಯುತ್ತವೆ. ಮೊಸಳೆಗಳು 10 ಮೀ ಉದ್ದ ಇರುತ್ತವೆ ಎಂಬ ನಂಬಿಕೆ ಇದ್ದರೂ, ಇದುವರೆಗೆ ದಾಖಲಾದ ಹೆಚ್ಚು ಉದ್ದ 8 ಮೀ. ಉಪ್ಪು ನೀರಿನ ಮೊಸಳೆ ಕ್ರಾಕೊಡೈಲಸ್ ಪೊರೊಸಸ್ ಮತ್ತು ಗ್ಯಾವಿಯಲ್ ಗೈವಿಎಲಿಸ್ ಗ್ಯಾಂಜೆಟಿಕಸ್ 4 ರಿಂದ 5 ಮೀ ಉದ್ದವಿರುತ್ತವೆ, 4 ಬೇರೆ ಪ್ರಭೇದಗಳಾದ – ಕರಿ ಕ್ಲೆಮಾನ್ ಮೆಲನೊಸೂಚಸ್ ನೈಜರ್, ನೈಲ್ ನದಿಯ ಮೊಸಳೆ ಕ್ರಾಕೊಡೈಲಸ್ ನೈಲೊಟಿಕಸ್, ಅಮೇರಿಕಾದ ಮೊಸಳೆ ಕ್ರಾಕೊಡೈಲಸ್ ಎಕ್ಯುಲಸ್ ಮತ್ತು ಒರಿನೋಕೋ ಮೊಸಳೆ ಕ್ರಾಕೊಡೈಲಸ್ ಇಂಟರ್ಮಿಡಿಯಸ್, ಸಾಮಾನ್ಯವಾಗಿ 3.2 ಮೀಗಿಂತ ಹೆಚ್ಚು ಉದ್ದವಿರುತವೆ. ನುಣುಪಾದ ಕ್ಲೆಮಾನ್‌ನ 2 ಪ್ರಭೇದಗಳು (ಪೆಲಿಯೊಸುಚಸ್) ಮತ್ತು ಆಫ್ರಿಕಾದ ಕುಳ್ಳು ಮೊಸಳೆಗಳ 2 ಪ್ರಭೇದಗಳು (ಆಸ್ಟಿಯೊಲೇಮಸ್) 2 ಮೀ ಉದ್ದವಿರುವುವು.

ಮೀನು, ಆಮೆ, ಹಕ್ಕಿ ಮತ್ತು ಸ್ತನಿಗಳು ಇವುಗಳ ಆಹಾರ. ಮರಿ ಕ್ರಾಕೊಡಿಲಿಯಗಳು ಕೀಟ ಮತ್ತು ಚಿಕ್ಕ ಅಕಶೇರುಕಗಳನ್ನು ತಿಂದು ಜೀವಿಸುತ್ತವೆ. ಉಪ್ಪು ನೀರಿನ ಮೊಸಳೆ ಮತ್ತು ನೈಲ್ ನದಿಯ ಮೊಸಳೆಗಳು ಕೆಲವು ಸಂದರ್ಭಗಳಲ್ಲಿ ದನಗಳನ್ನು ಮತ್ತು ಮನುಷ್ಯರನ್ನು ತಿಂದದ್ದುಂಟು. ಗೈವಿಯಲ್ ಮತ್ತು ತೆಳ್ಳ ಮೂತಿಯ ಮೊಸಳೆ ಸುಳ್ಳು ಗ್ಯಾವಿಯಲ್ (ಟೊಮಿಸ್ಟೋಮ ಶ್ಲೇಗಿಲ್ಲೈ) ಮೀನುಗಳನ್ನು ಮಾತ್ರ ತಿನ್ನುತ್ತವೆ. ಕ್ರೊಕೊಡಿಲಿಯಗಳು ಬಾಯಿಯಲ್ಲಿ ಆಹಾರವನ್ನು ಅಗಿಯಲಾರವು. ಜಠರದ ಸುತ್ತ ಬಿರುಸಾದ ಮಾಂಸಖಂಡಗಳಿದ್ದು ಚಿಕ್ಕ ತುಣುಕುಗಳಾಗಿ ಪರಿವರ್ತಿಸಿ ಜೀರ್ಣಿಸಿಕೊಳ್ಳುತ್ತವೆ.

ಕ್ರಾಕೊಡಿಲಿಯಗಳು ನೀರಿನಲ್ಲಿ ಈಜುತ್ತವೆ. ನೆಲದ ಮೇಲೆ ಸ್ವಲ್ಪ ದೂರ ನಡೆಯಲು ಮತ್ತು ಓಡಲು ಸಾಧ್ಯ. ರಾತ್ರಿ ವೇಳೆಯಲ್ಲಿ ನೀರಿನ ಹತ್ತಿರ ಬಹಳ ಚಟುವಟಿಕೆಯಿಂದ ಇರುತ್ತವೆ. ದಡಕ್ಕೆ ಬಂದು ಸೂರ್ಯ ಶಾಖವನ್ನು ಪಡೆಯುತ್ತವೆ. ಮಿದುಳು ಎಲ್ಲಾ ಸರೀಸೃಪಗಳಿಗಿಂತ ಪ್ರಬುದ್ಧವಾಗಿ ಬೆಳವಣಿಗೆಯಾಗಿದೆ. ಕ್ರಾಕೊಡಿಲಿಯ ಬಹಳ ವರ್ಷ ಬದುಕಬಲ್ಲುವು.

ಕ್ರಾಕೊಡಿಲಿಯ ಮೊಟ್ಟೆಯಿಡುವ ಪ್ರಾಣಿಗಳು. ಮಣ್ಣಿನಲ್ಲಿ ಗೂಡುಕಟ್ಟಿ ಮೊಟ್ಟೆ ಇಡುತ್ತವೆ. ಅಮೇರಿಕಾದ ಹೆಣ್ಣು ಮಕರವು ಮಣ್ಣು ಮತ್ತು ಕೊಳೆಯುತ್ತಿರುವ ಪದಾರ್ಥಗಳಿಂದ ಗೂಡನ್ನು ಕಟ್ಟುತ್ತದೆ. ಒಂದು ಮೀ ಎತ್ತರ ಮತ್ತು 2 ಮೀ ಅಗಲವಿರುತ್ತದೆ. ಗೂಡಿನ ಮಧ್ಯದಲ್ಲಿ 7.5 ಸೆಂಮೀ ಉದ್ದವಿರುವ, ಬಿಳಿ ಬಣ್ಣದ, ಗಟ್ಟಿಯಾದ ಕವಚವಿರುವ 20 ರಿಂದ 70 ಮೊಟ್ಟೆಗಳನ್ನು ಇಡುತ್ತವೆ. ಆಮೇಲೆ ಈ ಗೂಡನ್ನು ಬೇಡದ ಪದಾರ್ಥಗಳಿಂದ ಮುಚ್ಚುತ್ತವೆ. ನೈಲ್ ನದಿಯ ಮೊಸಳೆಯು 30 ರಿಂದ 50 ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಬೆಳವಣಿಗೆಗೆ ಅಗತ್ಯವಾದ ಕಾವು ಸೂರ್ಯನ ಶಾಖಗಳಿಂದ ಸಿಕ್ಕುತ್ತದೆ. ಹೆಣ್ಣುಗಳು ಮೊಟ್ಟೆಗಳನ್ನು ವೈರಿಗಳಿಂದ ಕಾಪಾಡುತ್ತವೆ. ಉತ್ತರ ಅಮೇರಿಕಾದ ದಕ್ಷಿಣ ಭಾಗಗಳಲ್ಲಿ ಕೆಲವು ಸ್ತನಿಗಳು ಈ ಮೊಟ್ಟೆಗಳನ್ನು ತಿನ್ನುತ್ತವೆ. ಸು. 9 ವಾರಗಳ ನಂತರ ಮೊಟ್ಟೆಯಿಂದ ಮರಿಯು ಹೊರಬರುತ್ತದೆ. ಮರಿಗಳ ಕೂಗಿನಿಂದ ಹೆಣ್ಣು ಮೊಸಳೆಯು ಗೂಡಿನ ಹತ್ತಿರ ಬಂದು ಅವುಗಳನ್ನು ಗೂಡಿನಿಂದ ಬೇರ್ಪಡಿಸುತ್ತದೆ. ಮರಿಯು ಸುಮಾರು 22 ಸೆಂಮೀ ಉದ್ದವಿರುತ್ತವೆ.

ಕ್ರಾಕೊಡಿಲಿಯದ ವಿವಿಧ ಕುಟುಂಬ ಹಾಗೂ ಜಾತಿಗಳನ್ನು ಅವುಗಳ ತಲೆ ಬುರುಡೆ ಮೂಳೆಗಳ ಲಕ್ಷಣಗಳಿಂದ ಗುರುತಿಸಲಾಗುವುದು. ಪ್ರಭೇದಗಳನ್ನು ಮೂತಿಯ ಶಲ್ಕಗಳ ಲಕ್ಷಣಗಳಿಂದ ವಿಭಾಗಿಸಲಾಗುವುದು. ಅಲಿಗೇಟರ್ ಹಾಗು ಮೊಸಳೆಗಳ ನಡುವೆ ಗೆವಿಯಲ್‌ಗಳಿಗಿಂತ ಹೆಚ್ಚು ಸಂಬಂಧವಿದೆ. ಮಾನವ ಇವುಗಳ ವೈರಿ. ಚರ್ಮ ತುಂಬಾ ಬೆಲೆ ಬಾಳುವುದರಿಂದ ಕೊಲ್ಲಲಾಗುತ್ತದೆ. ಚರ್ಮದಿಂದ ಚೀಲ, ಚಪ್ಪಲಿಗಳನ್ನು ತಯಾರಿಸಲಾಗುತ್ತದೆ. ಆಫ್ರಿಕಾದ ನೈಲ್ ನದಿಯ ಮೊಸಳೆಗಳು ಹಸುಗಳನ್ನು ತಿನ್ನುವುದರಿಂದ ಅವುಗಳನ್ನು ಕೊಲ್ಲುತ್ತಾರೆ. ಹೀಗೆ ಇವು ವಿನಾಶದತ್ತ ಸಾಗಿವೆ. ಕೆಲವು ಮಕರೋದ್ಯಾನಗಳಲ್ಲಿ ಸಾಕಿ ಸಂರಕ್ಷಿಸುವ ಪ್ರಯತ್ನ ಸಾಗಿದೆ. (ಕೆ.ಆರ್.ಕೆ.)

**ಕ್ರಾಕೋತಿ:** ಮಕಾಕ ಇರಸ್ ಅಥವಾ ಸೈನೊಮಾಲ್ಗಸ್ ಇರಸ್ ಎಂಬ ಶಾಸ್ತ್ರೀಯ ಹೆಸರಿನ ಪ್ರಭೇದದ ಹಲವಾರು ಉಪಪ್ರಭೇದಗಳ ಕೋತಿಗಳಿಗೆ ಇರುವ ಸಾಮಾನ್ಯ

ಹೆಸರು. ಪ್ರೈಮೇಟ್ ಗಣದ ಸೈನೊಪಿತಿಕಾಯ್ಡೀ ಕುಟುಂಬಕ್ಕೆ ಸೇರಿದೆ. ಮಲಯ ಪರ್ಯಾಯದ್ವೀಪದ ಕ್ರಾ ಭೂಕಂಠ, ನಿಕೋಬಾರ್, ಸುಮಾತ್ರ, ಜಾವ, ಬಾಲಿ, ಬೋರ್ನಿಯೊ ಮುಂತಾದ ದೇಶಗಳ ಸಮುದ್ರತೀರ ಪ್ರದೇಶಗಳಲ್ಲಿ ವಾಸಿಸುತ್ತದೆ. ಭಾರತದಲ್ಲಿ ಇದನ್ನು ಬಂಗಾಳದಲ್ಲಿ ಕಾಣಬಹುದು.

ಕ್ರಾಕೋತಿ ನೋಡಲು ಹೆಚ್ಚು ಕಡಿಮೆ ಭಾರತದಲ್ಲಿ ಎಲ್ಲೆಡೆ ಕಾಣಬರುವ ರೀಸಸ್ ಕೋತಿಯಂತೆಯೇ ಇದೆ. ದೇಹದ ಬಣ್ಣ ಕಂದು, ಹಳದಿಮಿಶ್ರ ಇಲ್ಲವೆ ಬೂದು ಮಿಶ್ರ ಕಂದು ಮುಂತಾಗಿ ವ್ಯತ್ಯಾಸ ವಾಗುತ್ತದೆ. ಬಾಲ ಬಲು ಉದ್ದ, ಮುಖದ ಸುತ್ತ ಅಂಚು ಕಟ್ಟಿದಂತೆ ಕೂದಲಿವೆ. ಪೃಷ್ಠದ ಮೇಲೆ ನಸುಗೆಂಪು ಬಣ್ಣದ ಗುರುತುಗಳಿವೆ.

ಸಾಮಾನ್ಯವಾಗಿ ಸಮುದ್ರ ತೀರಗಳಲ್ಲೆ ಇದರ ವಾಸ. ಬಹುಪಾಲು ಪ್ರಭೇದಗಳು ಕಡಲತೀರದಲ್ಲಿನ ಮ್ಯಾಂಗ್ರೋವ್ ತೋಟಗಳಲ್ಲಿದ್ದು ಹಗಲೆಲ್ಲ ಏಡಿಗಳನ್ನು ಹಿಡಿಯುತ್ತ, ಈಜುತ್ತ ಕಾಲ ಕಳೆಯುತ್ತವೆ. ಏಡಿಗಳು, ಕಠಿಣಚರ್ಮಿಗಳು ಮತ್ತು ಕೆಲವು ಬಗೆಯ ಮೃದ್ವಂಗಿಗಳೇ ಇದರ ಪ್ರಧಾನ ಆಹಾರ. ಏಡಿಗಳಂತೂ ಇದಕ್ಕೆ ಬಲು ಅಚ್ಚುಮೆಚ್ಚು. ಇದರಿಂದಾಗಿಯೇ ಈ ಕೋತಿಗೆ ಏಡಿಭಕ್ಷಕ ಕೋತಿ (ಕ್ರ್ಯಾಬ್ ಈಟಿಂಗ್ ಮಕಾಕ್) ಎಂಬ ಹೆಸರು ಬಂದಿದೆ. ಈ ಬಗೆಯ ಆಹಾರ ಸೇವನೆ ಕೋತಿಗಳಲ್ಲಿ ಬಹಳ ಅಪರೂಪ. ಬಹುಶಃ ಈ ಕೋತಿಗಳು ತಾವು ಈಗ ವಾಸ ಮಾಡುವ ನೆಲೆಗಳಿಗೆ ಬೇರೆಲ್ಲಿಂದಲೋ ಬಂದುವೆಂದೂ, ಇವು ಬರುವ ವೇಳೆಗೆ ಅಲ್ಲಿನ ಬಹುಪಾಲು ಪ್ರದೇಶವೆಲ್ಲ ಬೇರೆ ಬಗೆಯ ಕೋತಿಗಳಿಂದ ತುಂಬಿಕೊಂಡಿದ್ದು ಕ್ರಾಕೋತಿಗಳು ಸಮುದ್ರ ತೀರವಾಸಿಗಳಾಗಬೇಕಾಯಿತೆಂದೂ ಊಹೆಯಿದೆ. ಕಡಲತೀರಗಳಲ್ಲಿ ಬೇರೆ ಬಗೆಯ ಆಹಾರ ವಿರಳವಾಗಿರುವುದರಿಂದ ಇವು ಏಡಿ ಮುಂತಾದ ಕಡಲ ಪ್ರಾಣಿಗಳನ್ನೆ ತಿನ್ನಬೇಕಾಯಿತು. ಏಡಿ ಮುಂತಾದವು ಮಾತ್ರ ಈ ಕೋತಿಗಳ ಆಹಾರವೆಂದು ಇದರ ಅರ್ಥವಲ್ಲ. ಹಣ್ಣು, ಧಾನ್ಯ ಮುಂತಾದ ಸಸ್ಯಾಹಾರಗಳನ್ನು ಮೆಚ್ಚಿನಿಂದ ಇವು ಭಕ್ಷಿಸುತ್ತವೆ.

ಬಾಲಿ ದ್ವೀಪಗಳಲ್ಲಿ ಕ್ರಾಕೋತಿಯನ್ನು ಪೂಜ್ಯ ಭಾವನೆಯಿಂದ ನೋಡುತ್ತಾರೆ.

***

**ಕ್ರಾಸ್‌ಬಿಲ್:** ಲೋಕ್ಸಿಯ ಜಾತಿಗೆ ಸೇರಿದ ಮೂರು ಪಕ್ಷಿ ಪ್ರಭೇದಗಳಿಗೆ ಬಳಸುವ ಸಾಮಾನ್ಯ ಹೆಸರು. ಪ್ಯಾಸೆರಿಫಾರ್ಮಿಸ್ ಗಣ, ಫ್ರಿಜಿಲ್ಲಿಡೆ ಕುಟುಂಬಕ್ಕೆ ಸೇರಿದೆ. ಗಿಳಿಗಳನ್ನು ಹೋಲುವ ಈ ಹಕ್ಕಿಗಳ ಕೊಕ್ಕಿನ ಎರಡು ಭಾಗಗಳು ಅಡ್ಡ ಹಾಯ್ದಿರುವುದರಿಂದ ಇವಕ್ಕೆ ಈ ಹೆಸರು. ಕೊಕ್ಕಿನ ಈ ಮಾರ್ಪಾಡು ಇವು ಶಂಕುಧಾರಿ ಸಸ್ಯಗಳ (ಕೋನಿಫರ್ಸ್) ಫಲಗಳನ್ನು ಸೀಳಿ, ಅವುಗಳಲ್ಲಿ ಅಡಗಿರುವ ಬೀಜಗಳನ್ನು ನಾಲಗೆಯಿಂದ ಆರಿಸಿಕೊಳ್ಳಲು ಅನುಕೂಲವಾಗಿದೆ. ಲೋಕ್ಸಿಯ ಕರ್ವಿರಾಸ್ಟ್ರಿಸ್ ಎಂಬ ಕೆಂಪು ಕ್ರಾಸ್‌ಬಿಲ್ ಉತ್ತರ ಅಮೆರಿಕದ ಉತ್ತರದ ನಿತ್ಯಹರಿದ್ವರ್ಣದ ಅರಣ್ಯಗಳಿಂದ ಹಿಡಿದು ದಕ್ಷಿಣದಲ್ಲಿರುವ ಉತ್ತರ ಕೆರೋಲಿನ ಮತ್ತು ಪಶ್ಚಿಮ ಮೆಕ್ಸಿಕೊವರೆಗೂ ಕಂಡುಬರುತ್ತದೆ. ವಯಸ್ಸಾದಾಗ ಗಂಡುಹಕ್ಕಿ ಇಟ್ಟಿಗೆ ಕೆಂಪಾಗಿರುತ್ತದೆ. ಇದರ ರೆಕ್ಕೆ ಮತ್ತು ಪುಕ್ಕಗಳು ಮಾತ್ರ ಮಾಸಲು ಬಣ್ಣದವಾಗಿರುತ್ತವೆ.

ಕ್ರಾಸ್‌ಬಿಲ್

ಹೆಣ್ಣು ಹಕ್ಕಿ ಮತ್ತು ಮರಿಗಳು ಮಾಸಲು ಹಳದಿ ಮಿಶ್ರಿತ ಹಸಿರಾಗಿರುತ್ತವೆ. ಸ್ನೇಹಭಾವದಿಂದ ಜೀವಿಸುವ ಸಂಘಜೀವಿ ಹಕ್ಕಿಗಳಿವು. ಸಾಮಾನ್ಯವಾಗಿ ಶಂಕುಧಾರಿ ಮರಗಳನ್ನು ಹುಡುಕಿಕೊಂಡು ಒಂದು ಪ್ರದೇಶದಿಂದ ಇನ್ನೊಂದಕ್ಕೆ ತಿರುಗಾಡುವ ಇವು ಆಹಾರ ಯಥೇಚ್ಛವಾಗಿರುವೆಡೆ ಚಳಿಗಾಲವಾದರೂ ನೆಲೆಯೂರಿ ಗೂಡು ಕಟ್ಟುತ್ತವೆ. ಒರಟೊರಟಾಗಿ ಕಟ್ಟುವ ಗೂಡಿನಲ್ಲಿ ಎಳೆ ಹಸಿರು ಬಣ್ಣದ 3–4 ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಮೇಲೆ ಹೆಣ್ಣುಪಕ್ಷಿ ಕಾವು ಕುಳಿತಿರುವಾಗ ಗಂಡು ಪಕ್ಷಿ ಅದಕ್ಕೆ ಆಹಾರ ಒದಗಿಸುತ್ತದೆ. ಕೆಲವು ವೇಳೆ ಕ್ರಾಸ್‌ಬಿಲ್ ಪಕ್ಷಿಗಳು ಮನಮೋಹಕವಾಗಿ ಹಾಡುತ್ತವೆ. ಆದರೆ ಇವು ಒಟ್ಟುಗೂಡುವಾಗ ಮಾಡುವ ಧ್ವನಿ ಒಂದು ವಿಶೇಷ ರೀತಿಯದಾಗಿರುತ್ತದೆ.

ಲೋಕ್ಸಿಯ ಲ್ಯೂಕಾಪ್ಟರ ಎಂಬ ಬಿಳಿರೆಕ್ಕೆಯ ಅಥವಾ ಇಗ್ಗೆರೆಯ ಕ್ರಾಸ್‌ಬಿಲ್ ಉಷ್ಣ ಮತ್ತು ಸಮಶೀತೋಷ್ಣವಲಯಗಳೆರಡಲ್ಲೂ ವಾಸಿಸುತ್ತದೆ. ವೆಸ್ಟ್‌ಇಂಡೀಸಿನ ಹಿಸ್ಪೇನಿಯೋಲ ಬೆಟ್ಟಗಾಡುಗಳಲ್ಲಿ ಇದರ ಒಂದು ತಳಿ ಜೀವಿಸುತ್ತದೆ. ಸ್ಕಾಂಡಿನೇವಿಯ ದೇಶಗಳಲ್ಲಿ ಲೋಕ್ಸಿಯ ಪಿಟೋಸಿಟ್ಟಾಕಸ್ ಎಂಬ ಒಂದು ಪ್ರಭೇದ ವಾಸಿಸುತ್ತದೆ.

(ಜಿ.ಎಂ.ಬಿ.)

**ಕ್ರಿಪ್ಟಾರ್ಕಿಸಮ್:** ವೃಷಣಗಳು ತಮ್ಮ ಸ್ವಾಭಾವಿಕ ಸ್ಥಾನವಾದ ವೃಷಣ ಚೀಲ (ಸ್ಕ್ರೋಟಮ್) ಗಳಲ್ಲಿರದೆ ಉದರ ಭಾಗದಲ್ಲಿ ಕಂಡುಬರುವ ಸ್ಥಿತಿ. ಗಂಡು ಸ್ತನಿಗಳಲ್ಲಿ ವೃಷಣಗಳು ದೇಹದ ಒಳಗಿರದೆ, ದೇಹದಿಂದ ಹೊರಕ್ಕೆ ನೇತುಬಿದ್ದಿರುವ ವೃಷಣ ಚೀಲಗಳಲ್ಲಿ ಅಥವಾ ಸಂಚಿಗಳಲ್ಲಿ (ಸ್ಕ್ರೋಟಮ್) ಇರುತ್ತವೆ. ಇದಕ್ಕೆ ಆನೆ, ತಿಮಿಂಗಿಲಗಳು ಅಪವಾದಗಳು. ವೃಷಣ ಚೀಲಗಳ ಹಾಗು ಉದರಾವಕಾಶಕ್ಕೂ ನಡುವೆ $4^0$ ಸೆ ಶಾಖ ವ್ಯತ್ಯಾಸವಿದೆ. ವೃಷಣಗಳು ತಮ್ಮ ಕ್ರಿಯೆಗಳನ್ನು ಸ್ವಾಭಾವಿಕವಾಗಿ ನಿರ್ವಹಿಸಬೇಕಾದರೆ ಅವು ವೃಷಣ ಚೀಲಗಳಲ್ಲಿರ ಬೇಕಾದುದು ಅಗತ್ಯವಾಗಿದೆ. ಲಿಂಗ ಪ್ರೌಢತನ ಗಳಿಸಿದ ಮೇಲೆ ವೃಷಣಗಳು ಇಲ್ಲಿರುತ್ತವೆ. ಅವಿಚ್ಛಿನ್ನವಾಗಿ ಪ್ರಜನನ ನಡೆವ ಸ್ತನಿಗಳಲ್ಲಿ ನಿರಂತರವಾಗಿ ವೃಷಣಗಳು ಈ ರಚನೆಗಳಲ್ಲಿದ್ದರೆ ಋತುಮಾನೀಯವಾಗಿ ಪ್ರಜನನ ನಡೆಸುವ ಸ್ತನಿಗಳಲ್ಲಿ ಋತುಮಾನದಲ್ಲಿ ಮಾತ್ರ ವೃಷಣಗಳು ಇಳಿಯುತ್ತವೆ ಮತ್ತು ಉಳಿದ ಕಾಲದಲ್ಲಿ ಉದರಾವಕಾಶದಲ್ಲಿರುತ್ತವೆ. ಉದರಾವಕಾಶಕ್ಕೂ–ಸ್ಕ್ರೋಟಮ್‌ಗೂ ನಡುವೆ ಸಂಪರ್ಕ ಏರ್ಪಡಿಸುವ ಇಂಗ್ವಿನಲ್ ನಾಲೆಯುಂಟು.

ಮನುಷ್ಯ ಹಾಗೂ ಸಾಕು ಸ್ತನಿ ಪ್ರಾಣಿಗಳಲ್ಲಿ ಕೆಲವೊಮ್ಮೆ ವೃಷಣಗಳು ಸಂಚಿಗೆ ಇಳಿಯದೆ ಉದರಾವಕಾಶದಲ್ಲಿಯೆ ಉಳಿಯಬಹುದು. ಈ ಪರಿಸ್ಥಿತಿಗೆ ಕ್ರಿಪ್ಟಾರ್ಕಿಸಮ್ ಎಂದು ಹೆಸರು. ಇದು ಅಡಗಿದ ವೃಷಣ ಎಂಬ ಅರ್ಥದಲ್ಲಿ ಗ್ರೀಕ್ ಭಾಷೆಯಿಂದ ಬಂದ ಪದ. ಎರಡೂ ವೃಷಣಗಳು ಕ್ರಿಪ್ಟಾರ್ಕಿಸಮ್ ಪರಿಸ್ಥಿತಿಯನ್ನು ತೋರಿದರೆ ಅದು ಬಂಜೆತನಕ್ಕೆ ಕಾರಣವಾಗುತ್ತದೆ. ಇಂಗ್ವಿನಲ್ ನಾಲೆಯಲ್ಲಿ ಏನಾದರೂ ಅಡ್ಡಿಗಳು ಬಂದು ಹೀಗಾಗ ಬಹುದು ಅಥವಾ ವೃಷಣಗಳ ಕ್ರಿಯೆಯನ್ನು ನಿರ್ವಹಿಸುವ ಪಿಟ್ಯುಟರಿ ಕ್ರಿಯೆಯಲ್ಲಿ ದೋಷಕಂಡರೂ ಹೀಗಾಗಬಹುದು. ಇಲಿ, ಮೊಲಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ಉತ್ಪತ್ತಿ ಮಾಡಬಹುದು. ಹೀಗಾದಾಗ ವೃಷಣಗಳು ಗಾತ್ರದಲ್ಲಿ ಸಣ್ಣದಾಗುತ್ತವೆ ಮತ್ತು ಮೃದುವಾಗುತ್ತವೆ. ಅಂಗಾಂಶೀಯವಾಗಿ ವೃಷಣಗಳ ಒಳಗಿರುವ ವೀರ್ಯಾಣುಗಳ ಉತ್ಪಾದನೆಗೆ ಕಾರಣವಾಗುವ ಅಂಗಾಂಶವು ಕೆಡುತ್ತದಾದರೂ, ಸರ್ಟೋಲಿ ಕೋಶಗಳು ಹಾಗೂ ಅಂತರಾಲೀಯ ಕೋಶಗಳಲ್ಲಿ ಯಾವ ಧಕ್ಕೆಯೂ ಉಂಟಾಗುವುದಿಲ್ಲ. ಹೀಗಾಗಲು ಉದರಾವಕಾಶದ ಹೆಚ್ಚಿನ ಶಾಖವೇ ಕಾರಣ ಎಂದು ಪ್ರಯೋಗಗಳು ತಿಳಿಸುತ್ತವೆ. ಆದರೂ ಆನೆ, ತಿಮಿಂಗಿಲಗಳಲ್ಲಿ ಹಾಗೂ ಸ್ತನಿಗಳಲ್ಲದ ಕಶೇರುಕಗಳಲ್ಲಿ ವೃಷಣಗಳು ಉದರಾವಕಾಶದಲ್ಲಿಯೆ ಉಳಿದರೂ ಅವುಗಳಿಗೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ. ಹುಟ್ಟಿದ ಮೇಲೆ ಆದಷ್ಟು ಬೇಗನೆ, ಇದನ್ನು ಪತ್ತೆಹಚ್ಚಿದರೆ, ಶಸ್ತ್ರಕ್ರಿಯೆಯ ಮೂಲಕ ವೃಷಣಗಳನ್ನು ಸ್ಕ್ರೋಟಮ್‌ಗೆ ಸ್ಥಳಾಂತರಿಸಿ ಈ ದೋಷವನ್ನು ಪರಿಹರಿಸಬಹುದು.

(ಎಚ್.ಬಿ.ಡಿ.)

**ಕ್ರಿಪ್ಟೊಬ್ರಾಂಕಸ್:** ಯೂರೋಡೀಲ ಗಣದ ಬಾಲವಿರುವ ಉಭಯ ಜೀವಿ. ಇದರ ವೈಜ್ಞಾನಿಕ ಹೆಸರು ಕ್ರಿಪ್ಟೊಬ್ರಾಂಕಸ್ ಅಲ್ಲೀಗನಿಯನ್ಸಿಸ್. ಉತ್ತರ ಅಮೇರಿಕ ಹಾಗೂ ಪೂರ್ವ ಏಷ್ಯದಲ್ಲಿ ವಾಸಿಸುತ್ತದೆ. ಇದು ಹರಿಯುವ ನೀರಿನಲ್ಲಿ, ಬಂಡೆಗಳ ಹಾಸಲಿನಲ್ಲಿ ನೆಲಸಿರುತ್ತದೆ. ಇದರ ಉದ್ದ 60 ಸೆಮೀ.

ಚರ್ಮವು ಮೃದುವಾಗಿದೆ. ಪಾರ್ಶ್ವಗಳಲ್ಲಿ ಇದು ಮಾಂಸಲ ಮಡಿಕೆಗಳನ್ನು ಪಡೆದಿದೆ. ಇದಕ್ಕೆ ಕಣ್ಣು ರೆಪ್ಪೆಗಳು ಇಲ್ಲ. ಈ ಜೀವಿ ಮರಿಹುಳುವಿನ (ಲಾರ್ವ್ ಹಂತ) ಸ್ಥಿತಿಯನ್ನು ಉಳಿಸಿಕೊಂಡಿದೆ. ಪ್ರಾಪ್ತವಯಸ್ಕ ಪ್ರಾಣಿಗಳಲ್ಲಿ ಜಲಘುಪ್ಪುಸಗಳಿಲ್ಲ. ಆದರೆ ಮೊದಲನೆಯ ಜಲಘುಪ್ಪುಸ ರಂಧ್ರಗಳು ಉಳಿದುಕೊಂಡಿವೆ. ಕೆಲವು ವೇಳೆ ಒಂದೇ ಒಂದು ಕತ್ತಿನ ಪಕ್ಕದಲ್ಲಿರುತ್ತದೆ. ಕಿವಿರು ಮುಚ್ಚಳ ಬೆಳೆದಿಲ್ಲ. ಶ್ವಾಸರಂಧ್ರವು ತೆರೆದುಕೊಂಡಿದ್ದು ಉಸಿರಾಟದಲ್ಲಿ ನೀರು ಹೊರಗೆ ಹೋಗಲು ಉಪಯೋಗವಾಗುತ್ತದೆ. ದೇಹದ ಪಾರ್ಶ್ವಗಳಲ್ಲಿರುವ, ರಕ್ತ ನಾಳಗಳಿಂದೊಡಗೂಡಿದ ಚರ್ಮದ ಮಡಿಕೆಗಳು ಚರ್ಮದ ಉಸಿರಾಟಕ್ಕೆ ಸಹಾಯಕ. ಇದರ ಆಹಾರ ಸಣ್ಣ ಮೀನುಗಳು ಹಾಗೂ ಅಕಶೇರುಕಗಳು. ಇದರಲ್ಲಿ ಗರ್ಭಾದಾನವು ಬಾಹ್ಯರೀತಿಯದ್ದು. ಬೇಸಿಗೆಯ ಕೊನೆಯಲ್ಲಿ ಹೆಣ್ಣು ಜೊತೆಗೂಡಿದ ನಂತರ ಸು. 300 ಮೊಟ್ಟೆಗಳನ್ನು ಜಪಸರದಂತಿರುವ ದಾರಗಳಲ್ಲಿ ಇಡುತ್ತದೆ. ನವೆಂಬರ ತಿಂಗಳಿನಲ್ಲಿ ಮರಿಗಳು ಹೊರಬರುತ್ತವೆ. ಈ ಪ್ರಾಣಿಗೆ ಲೈಂಗಿಕ ಪ್ರೌಢದೆಶೆಗೆ ಬರಲು ಬಹಳ ವರ್ಷಗಳು ಬೇಕಾಗುತ್ತವೆ.

***

**ಕ್ರಿಪ್ಟೊಮಾನಡೈನ:** ಪ್ರೊಟೋಜೋವ ವಂಶ, ಮ್ಯಾಸ್ಟಿಗೋಫೋರ ವರ್ಗ, ಫೈಟೊಮ್ಯಾಸ್ಟಿಜಿನ ಉಪವರ್ಗಕ್ಕೆ ಸೇರಿದ ಒಂದು ಗಣ. ಈ ವರ್ಗದ ಮುಖ್ಯ ಲಕ್ಷಣ, ಚಾಟಿಯಂತಿರುವ ಒಂದು ಅಥವಾ ಎರಡು ಕಶಾಂಗವನ್ನು ಪಡೆದಿರುವುದು. ಇದರ ನೆರವಿನಿಂದ ಅವು ನೀರಿನಲ್ಲಿ ಈಜುತ್ತವೆ. ದ್ಯುತಿ ಸಂಶ್ಲೇಷಣ ಕ್ರಿಯೆಯಲ್ಲಿ ನೆರವಾಗುವ ಕ್ರೊಮೆಟೊಫೋರ್‌ಗಳನ್ನು ಪಡೆದಿವೆ.

ಪೆಲಿಕಲ್ ತೆಳುವಾಗಿದೆ. ಕೆಲವು ಪಡೆದ ಪುಟ್ಟ ಜೀವಿಗಳು ಅಮೀಬ ರೂಪಿಗಳಾಗಿ ಕಂಡು ಬರುತ್ತವೆ. ವರ್ಣ ರಹಿತ ಅಥವಾ ಹಸಿರು, ಹಳದಿ, ಬೂದು ಕ್ರೊಮೆಟೊಫೋರ್ ಗಳಿರುತ್ತವೆ. ಸ್ವಪೋಷಕಗಳು ಅಥವಾ ಕೊಳೆತಿನಿಗಳು. ಸಂಚಿತ ಆಹಾರವು ಪಿಷ್ಟ ಪದಾರ್ಥ. ಕೆಲವು ವೇಳೆ ಎಣ್ಣೆಯ ಹನಿಗಳ ರೂಪದಲ್ಲಿರುತ್ತದೆ. ಒಂದೇ ಒಂದು ಸಂಕೋಚನಾವಕಾಶವಿದೆ. ಇಲ್ಲಿ ಗಂಟಲುನಾಳ ಅಥವಾ ನೀಳವಾದ ಜಾಡೊಂದು ಇರುತ್ತದೆ. ಈ ಗಣಕ್ಕೆ ಸೇರಿದ ಹಳದಿ ಬಣ್ಣದ ಸದಸ್ಯ ಜೀವಿಗಳು ತಮ್ಮ ವಿಶ್ರಾಂತ ಜೀವನವನ್ನು ಇತರ ಜೀವಿಗಳೊಂದಿಗೆ ಸಹ ಜೀವಿಗಳಾಗಿ ಕಳೆಯುತ್ತವೆ. ಇವು ಸಿಹಿ ನೀರು ಮತ್ತು ಕಡಲುಗಳಲ್ಲಿ ಅಧಿಕವಾಗಿವೆ. ಈ ಗುಂಪಿನಲ್ಲಿ ಹಲವು ಜಾತಿಗಳಿವೆ. ಕ್ರೆಸೆಡೆಲ್ಲಾ: ಇವಕ್ಕೆ ಎರಡು ಕಶಾಂಗಗಳು, ಎರಡು ಹಳದಿ ಕ್ರೊಮೊಟೊಫೋರ್‌ಗಳು ಮತ್ತು ಒಂದು ಅಗ್ರಭಾಗದ ಜಾಡು ಇವೆ. ಫೊರಾಮಿನಿಫೆರ, ರೇಡಿಯೋ ಲೇರಿಯ ಗಣಕ್ಕೆ ಸೇರಿದ ಜೀವಿಗಳೊಂದಿಗೆ ಕೂಡು ಜೀವಿಗಳಾಗಿ ವಾಸಿಸುತ್ತವೆ.

ಸೈಯಾಥೊಮಾನಸ್: ಕ್ರೊಮೆಟೊಫೊರ್ ರಹಿತ, ಎರಡು ಕಶಾಂಗಗಳನ್ನು ಪಡೆದ ಜೀವಿ. ಇದು ಸಿಹಿನೀರುವಾಸಿ, ಪರಪೋಷಕ ಜೀವಿ. ಗಂಟಲಿನಲ್ಲಿರುವ ಟ್ರೈಕೊಸಿಸ್ಟ್ ಗಳ ನೆರವಿನಿಂದ ಆಹಾರವನ್ನು ಹಿಡಿಯುತ್ತದೆ.

ಕೈಲೊಮಾನಸ್: ಎರಡು ಕಶಾಂಗಗಳಿರುವ, ಕ್ರೊಮೆಟೊಫೋರ್ ರಹಿತ ಕೊಳೆತಿನಿ ಜೀವಿ. ಕೊಳೆಯುತ್ತಿರುವ ಸಿಹಿ ನೀರಿನಲ್ಲಿ ಕಂಡುಬರುತ್ತದೆ.

ಕ್ರಿಪ್ಟೊಮಾನಸ್: ಎರಡು ಕಶಾಂಗಗಳು, ಸಾಮಾನ್ಯವಾಗಿ ಹಳದಿ ಬಣ್ಣದ ಎರಡು ಕ್ರೊಮೆಟೊಫೋರ್‌ಗಳಿವೆ. ಒಂದು ಗಂಟಲು ನಾಳ ಇದೆ. ಸಿಹಿನೀರು ಮತ್ತು ಕಡಲು ವಾಸಿ (ಎಚ್.ಎಚ್.ಎಸ್)

**ಕ್ರಿಯಾಟಿನ್ ಮತ್ತು ಕ್ರಿಯಾಟಿನಿನ್:** ಮೀಥೈಲ್ ಗ್ವಾನಿಡಿನೋ ಅಸಿಟಿಕ್ ಆಮ್ಲ. ದೇಹದಲ್ಲಿ ಸಾರಜನಕದ ಚಯಾಪಚಯದ ಒಂದು ಅಂತಿಮ ಉತ್ಪನ್ನ ಕ್ರಿಯಾಟಿನ್ ಅದರ ಅಜಲರೂಪ. ಆರೋಗ್ಯಶಾಲಿ ವಯಸ್ಕನ ಮೂತ್ರದಲ್ಲಿ ಬಹು ಸ್ವಲ್ಪ ಮೊತ್ತದಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಗರ್ಭಿಣಿಯರ ಮತ್ತು ಮಕ್ಕಳ ಮೂತ್ರದಲ್ಲಿ ಇದರ ಮೊತ್ತ ಹೆಚ್ಚು. ಆಹಾರ ಕೊರತೆಯಿಂದ ಮಾಂಸಖಂಡಗಳು ಜೀರ್ಣವಾಗಲು ಪ್ರಾರಂಭಿಸಿದಾಗ, ಇಲ್ಲವೆ ಜ್ವರಬಾಧೆ ಉಂಟಾದಾಗ, ಇಲ್ಲವೆ ಯಕೃತ್ತಿನ ಕ್ಯಾನ್ಸರಿನಲ್ಲಿ ಇದರ ಮೊತ್ತ ಮೂತ್ರದಲ್ಲಿ ಹೆಚ್ಚುತ್ತದೆ. ಇದು ಗಮನಾರ್ಹವಾಗಿ ಅಧಿಕವಾದ ಪರಿಸ್ಥಿತಿಗೆ ಕ್ರಿಯಾಟಿನೂರಿಯ ಎಂದು ಹೆಸರು. ದೇಹದಲ್ಲಿ ಕ್ರಿಯಾಟಿನಿನ ಸಂಶ್ಲೇಷಣೆ ಆಗುತ್ತದೆ. ಒಂದು ಕ್ರಿಯಾಶ್ರೇಣಿಯಲ್ಲಿ ಆರ್ಜಿನಿನ್ ತನ್ನ ಗ್ವಾನಿಡಿನೋ ಪುಂಜವನ್ನು ಗ್ಲೈಸಿನ್ನಿಗೆ ನೀಡುತ್ತದೆ. ಉತ್ಪತ್ತಿಯಾಗುವ ಮಧ್ಯವರ್ತಿ ಗ್ವಾನಿಡಿನೋ ಅಸಿಟಿಕ್ ಆಮ್ಲ ಕೋಲಿನ್ ಅಥವಾ ಮೆಥಿಯೋನ್ನಿನಿಂದ ಮೀಥೈಲ್ ಪುಂಜವನ್ನು ಪಡೆದು ಕ್ರಿಯಾಟಿನ್‌ಗೆ ಪರಿವರ್ತನೆಯಾಗುತ್ತದೆ.

ಕ್ರಿಯಾಟಿನ್ ಫಾಸ್ಫೇಟ್ ರೂಪದಲ್ಲಿರುವ ಕ್ರಿಯಾಟಿನ್ ಮಾಂಸಖಂಡಗಳ ಸಂಕೋಚನ ಕ್ರಿಯೆಯಲ್ಲಿ ಶಕ್ತಿಯನ್ನು ಒದಗಿಸುವ ಒಂದು ಮೂಲ. ಜಡಮಾಂಸ ಖಂಡದಲ್ಲಿ ಕ್ರಿಯಾಟಿನ್ ಫಾಸ್ಫೇಟ್ ಸಂಯುಕ್ತದ ಮೊತ್ತ ಹೆಚ್ಚಾಗಿರುತ್ತದೆ. ಮಾಂಸ ಖಂಡದಲ್ಲಿ ಕ್ರಿಯಾಟಿನ್ ಕೈನೇಸ್ ಎಂಬ ಕಿಣ್ವವಿದೆ. ಶಕ್ತಿಯ ಅಗತ್ಯ ಉಂಟಾದಾಗ ಈ ಕಿಣ್ವ ಕೆಳಗಿನ ಕ್ರಿಯೆಯನ್ನು ವರ್ಧಿಸುತ್ತದೆ :

ಕ್ರಿಯಾಟಿನ್ ಫಾಸ್ಫೇಟ್ + ಎಡಿಪಿ $\Longleftrightarrow$ ಕ್ರಿಯಾಟಿನ್ + ಎಟಿಪಿ

ಉತ್ಪತ್ತಿಯಾಗುವ ಎಟಿಪಿ (ಅಡಿನೋಸಿನ್ ಟ್ರೈ ಫಾಸ್ಫೇಟ್) ಮಾಂಸಖಂಡಗಳ ಸಂಕೋಚನ ಕ್ರಿಯೆಗೆ ಬೇಕಾದ ಶಕ್ತಿಯನ್ನು ಒದಗಿಸುತ್ತದೆ.

ಕ್ರಿಯಾಟಿನ್ ನೀರಿನಲ್ಲಿ ವಿಲೀನವಾಗುತ್ತದೆ. ದ್ರಾವಣ ಅಸ್ಥಿರ ಮತ್ತು ನಿಧಾನವಾಗಿ ಅಣುವಿನಲ್ಲಿರುವ ಜಲಾಂಶದ ನಷ್ಟದಿಂದ ಅದರ ಅಜಲರೂಪ (ಅನ್‌ಹೈಡ್ರಸ್) ಕ್ರಿಯಾಟಿನ್ನಿಗೆ ಪರಿವರ್ತನೆಯಾಗುತ್ತದೆ. ದ್ರಾವಣವನ್ನು ಕಾಯಿಸಿದಾಗ ಇಲ್ಲವೆ ಆಮ್ಲದ ಇರವಿನಲ್ಲಿದ್ದಾಗ ಈ ಬದಲಾವಣೆ ಶೀಘ್ರವಾಗಿ ಜರುಗುತ್ತದೆ. ಈ ಕ್ರಿಯೆಯ ಆಧಾರದ ಮೇಲೆ ಕ್ರಿಯಾಟಿನ್ನನ್ನು ಪ್ರಮಾಣಾತ್ಮಕವಾಗಿ ನಿರ್ಧರಿಸುವ ವಿಧಾನವೊಂದನ್ನು ರೂಪಿಸಲಾಗಿದೆ.

ಕ್ರಿಯಾಟಿನಿನ್ ಮಾನವನ ಮೂತ್ರದಲ್ಲಿ ತಪ್ಪದೆ ಕಂಡು ಬರುವ ವಸ್ತು. ಸಾಧಾರಣ ಪರಿಸ್ಥಿತಿಯಲ್ಲಿ ಒಬ್ಬ ವಯಸ್ಕ ವ್ಯಕ್ತಿ 24 ಗಂಟೆಯ ಅವಧಿಯಲ್ಲಿ ಸುಮಾರು 1–1.8 ಗ್ರಾಂ ಕ್ರಿಯಾಟಿನಿನ್ ವಿಸರ್ಜಿಸುತ್ತಾನೆ. ಈ ಮೊತ್ತ ಆತ ಸ್ವೀಕರಿಸುವ ಆಹಾರವನ್ನು ಸ್ವಲ್ಪಮಟ್ಟಿಗೆ ಅವಲಂಬಿಸುತ್ತದೆ. ಏಕೆಂದರೆ ತಿನ್ನುವ ಆಹಾರದಲ್ಲಿರಬಹುದಾದ ಕ್ರಿಯಾಟಿನಿನ್ ದೇಹದಲ್ಲಿ ಯಾವ ಬದಲಾವಣೆಗೂ ಒಳಗಾಗದೆ ಮೂತ್ರದಲ್ಲಿ ವಿಸರ್ಜಿತವಾಗುತ್ತದೆ. ಕ್ರಿಯಾಟಿನಿನ್ ನಿರ್ವರ್ಣವಾದ ಮತ್ತು ಹೊಳೆಯುವ ಹರಳುಗಳಂತೆ ಸ್ಫಟಿಕೀಕರಿಸುತ್ತದೆ. ಇದು ತಣ್ಣನೆಯ ನೀರಿಗಿಂತ ಬಿಸಿನೀರಿನಲ್ಲಿ ಹೆಚ್ಚಿಗೆ ವಿಲೀನವಾಗುತ್ತದೆ. ಸಾರ ಆಮ್ಲಗಳೊಂದಿಗೆ ವರ್ತಿಸಿ ಲವಣಗಳನ್ನೂ ಪಿಕ್ರಿಕ್ ಆಮ್ಲದೊಂದಿಗೆ ವರ್ತಿಸಿ ಕೆಂಪು ಬಣ್ಣವನ್ನೂ ಕೊಡುತ್ತದೆ. ಈ ಕ್ರಿಯೆಯ ಆಧಾರದ ಮೇಲೆ ಮೂತ್ರದಲ್ಲಿ ಕ್ರಿಯಾಟನಿನ್ ಮೊತ್ತವನ್ನು ಪ್ರಮಾಣಾತ್ಮಕವಾಗಿ ಅಳೆಯುವ ವಿಧಾನವನ್ನು ರೂಪಿಸಲಾಗಿದೆ. ***

**ಕ್ರಿಯೋಡಾಂಟ:** ಸ್ತನಿ ವರ್ಗದ ಕಾರ್ನಿವೋರ ಗಣಕ್ಕೆ ಸೇರುವ ಉಪಗಣ. ಈ ಉಪಗಣದ ಸದಸ್ಯಗಳೆಲ್ಲ ವಿನಾಶವಾಗಿ ಪಳೆಯುಳಿಕೆಗಳಾಗಿವೆ. ಮಾಂಸ ತಿನ್ನಲು ಹೊಂದಿಕೊಂಡ ಇನ್ಸೆಕ್ಟಿವೋರಗಳಿಂದ ಉದ್ಭವಿಸಿದ ವಿಶಿಷ್ಟ ಪೇಲಿಯೋಜೋಯಿಕ್ ಕಾಲದ ಆದಿಭಾಗದಲ್ಲಿ ಉಗಮವಾದುವು. ಇಯೋಸಿನ್ ಕಾಲದಲ್ಲಿ ಪ್ರಬಲವಾಗಿ ಬೆಳೆದು ಮುಂದೆ ನಶಿಸಲಾರಂಭಿಸಿದುವು. ಅವುಗಳ ವಿಶಿಷ್ಟವಾದ ಆದಿಮ ಗುಣಗಳಿಂದ ಸುಲಭವಾಗಿ ಗುರುತಿಸಬಹುದು. ಆಧುನಿಕ ಕಾರ್ನಿವೋರಗಳಲ್ಲಿರುವಂತೆ ಮಣಿಕಟ್ಟಿನ ಮೂಳೆಗಳು ಸಂಯೋಜಿತವಾಗಿರದೆ ಪ್ರತ್ಯೇಕವಾಗಿಯೇ ಇವೆ. ಇವುಗಳಲ್ಲಿ ಮಣಿಕಟ್ಟಿನ ಸ್ಕಾಫೈಡ್, ಲೂನಾರ್ ಮತ್ತು ಸೆಂಟ್ರೇಲ್ ಮೂಳೆಗಳು ಬೇರೆ ಬೇರೆಯಾಗಿವೆ. ಮಿದುಳು ಸಣ್ಣದಾಗಿದ್ದು, ಕೆಳಮಟ್ಟದ್ದಾಗಿತ್ತು. ತಲೆಬುರುಡೆ ಉದ್ದವಾಗಿ ಚಿಕ್ಕದಾಗಿತ್ತು. ಬುರುಡೆಯ ಮೇಲಿರುವ ಏಣುಗಳು ಪುಷ್ಟವಾಗಿರುವ ಮಾಂಸಖಂಡಗಳು ಅಂಟಿಕೊಳ್ಳಲು ಸಹಾಯಕವಾಗಿದ್ದುವು. ಕೋರೆಹಲ್ಲುಗಳು ಚೆನ್ನಾಗಿ ಬೆಳೆದಿದ್ದುವು. ದವಡೆ ಹಲ್ಲುಗಳು ಮಾಂಸ ಕತ್ತರಿಸಲು ಅನುಕೂಲವಾಗುವಂತೆ ವಿಶೇಷವಾಗಿ ಮಾರ್ಪಾಡಾಗಿದ್ದುವು. ಕಾರ್ನಾಸಿಯಲ್ ಹಲ್ಲುಗಳು ಹಲ್ಲುಗಳ ಸಾಲಿನಲ್ಲಿ ಆಧುನಿಕ ಕಾರ್ನಿವೊರಗಳಿಗಿಂತ ಬಹಳ ಹಿಂದಿದ್ದುವು. ಕಿವಿಯ ಬುಲ್ಲಾವು ಮಾರ್ಪಾಡುಗೊಂಡಿದೆ. ಬೆರಳಿನ ಕೊನೆಯ ಮೂಳೆಯಲ್ಲಿ ಪಂಜಗಳನ್ನು ಎಳೆದುಕೊಳ್ಳಲು ಕೀಲುಗಳಿದ್ದುವು.

ಈ ಉಪಗಣವನ್ನು ಆರ್ಕ್ಟೊಸೈಯಾನಿಡೆ, ಮೀಸೊನಿಕಾಯ್ಡೆ, ಆಕ್ಸಿಯೇನಾಯ್ಡೆ ಮತ್ತು ಮಿಯಕಾಯ್ಡೆ ಎಂಬ ನಾಲ್ಕು ಕುಟುಂಬಗಳಾಗಿ ವರ್ಗೀಕರಿಸಲಾಗಿದೆ.

ಆರ್ಕ್ಟೊಸೈಯಾನಿಡೆ ಸದಸ್ಯರು ಕರಡಿಗಳಂತೆ ಇದ್ದು, ಅವುಗಳ ಮಿದುಳು ಚಿಕ್ಕದಾಗಿತ್ತು. ಮೀಸೊನಿಕಾಯ್ಡ್‌ಗಳಿಗೆ ಕಾರ್ನಾಸಿಯಲ್ ಹಲ್ಲುಗಳಿರಲಿಲ್ಲ. ದವಡೆ ಹಲ್ಲುಗಳು ಅಗಲವಾಗಿ ಮೊಂಡಾಗಿದ್ದುವು. ಬೆರಳುಗಳಲ್ಲಿ ಗೊರಸುಗಳಿದ್ದು, ಈ ಗುಂಪಿನ ಕೆಲವು ಸಣ್ಣ ಪ್ರಾಣಿಗಳು ಆರ್ಟಿಯೊಡಾಕ್ಟೈಲದ ಮೂಲಪ್ರಾಣಿಗಳಾಗಿದ್ದಿರಬಹುದೆಂದು ಕೆಲವರ ಅಭಿಪ್ರಾಯ. ಆಕ್ಸಿಯೇನಾಯ್ಡೆ ಕುಟುಂಬಕ್ಕೆ ಸೇರಿದ ಕ್ರಿಯೋಡಾಂಟಗಳಲ್ಲಿ ಕಾರ್ನಾಸಿಯಲ್ ಹಲ್ಲುಗಳಿದ್ದುವು. ಆದರೆ ಆಧುನಿಕ ಕಾರ್ನಿವೋರಗಳಲ್ಲಿರುವ ಜೊತೆಯೇ ಅಲ್ಲ. ಆದ್ದರಿಂದ ಇವಕ್ಕೆ ಮಿಥ್ಯ ಕಾರ್ನಾಸಿಯಲ್ ಎನ್ನುತ್ತಾರೆ. ಮಿಯಕಾಯ್ಡೆ ಕುಟುಂಬಕ್ಕೆ ಸೇರಿದ ಪ್ರಾಣಿಗಳಿಗೆ ಆಧುನಿಕ ಕಾರ್ನಿವೋರಗಳಲ್ಲಿರುವಂತಹ ಕಾರ್ನಾಸಿಯಲ್ ಹಲ್ಲುಗಳೇ ಇದ್ದುವು. ***

**ಕ್ರೆಬ್ಸ್ ಚಕ್ರ:** ಆಮ್ಲಜನಕಯುಕ್ತ ಉಸಿರಾಟ ವ್ಯವಸ್ಥೆಯಲ್ಲಿ, ಕಿಣ್ವಗಳಿಂದ ಪ್ರಚೋದಿತವಾದ ಚಕ್ರಪಥದಲ್ಲಿ ನಡೆಯುವ ಉತ್ಕರ್ಷಕ ಕ್ರಿಯೆಗಳು. ಸಿಟ್ರಿಕ್ ಆಮ್ಲ ಚಕ್ರ ಪರ್ಯಾಯ ನಾಮ. ಶರ್ಕರಪಿಷ್ಟಗಳ (ಕಾರ್ಬೊಹೈಡ್ರೇಟ್) ಮತ್ತು ಮೇದೋ ಆಮ್ಲಗಳೆರಡರ ಉತ್ಕರ್ಷಣ ಕ್ರಿಯೆಯಿಂದ ಉತ್ಪತ್ತಿಯಾಗುವ ಅಸಿಟಿಕ್ ಆಮ್ಲ ಸಂಪೂರ್ಣವಾಗಿ ಉತ್ಕರ್ಷಣಗೊಂಡು ಇಂಗಾಲಾಮ್ಲ ವಾಯು ಆಗಿ ತನ್ನಲ್ಲಿನ ಶಕ್ತಿಯನ್ನು, ವಿಟಮಿನುಗಳನ್ನು ಒಳಗೊಂಡ ಸಹ ಕಿಣ್ವಗಳಿಗೆ ವರ್ಗಾಯಿಸುವ ಕಾರ್ಯ ನಡೆಯಲು ಪ್ರಕೃತಿ ಮಾಡಿರುವ ವಿಶೇಷ ಪಥವೇ ಈ ಸಿಟ್ರಿಕ್ ಆಮ್ಲ ಚಕ್ರ.

ಒಂದು ರಾಸಾಯನಿಕ ಕ್ರಿಯೆಗೆ ಒಂದು ಕಿಣ್ವ ಇದ್ದು ಅದು ವೇಗೋತ್ಕರ್ಷಕವಾಗಿ ಕೆಲಸ ಮಾಡುವುದು ಒಂದು ಪಥ. ಹಂತ ಹಂತದಲ್ಲಿ ಕ್ರಿಯೆಗಳು ನಡೆದು ಒಂದು ರಾಸಾಯನಿಕ ಕ್ರಿಯೆ ಪೂರ್ಣವಾಗುವುದು ಎರಡನೆಯ ಪಥ. ಅಪಕರ್ಷಕ ರೂಪದಲ್ಲಿರುವ ಸಹ ಎನ್‌ಜೈಮ್‌ಗಳು ತಮ್ಮಲ್ಲಿನ ಜಲಜನಕಗಳನ್ನು ಆಮ್ಲಜನಕಕ್ಕೆ ಸಾಗು ಹಾಕುವ ಪಥ ಎರಡನೆಯ ಪಥಕ್ಕೆ ಸೇರಿದುದು. ಜಟಿಲವಾದ ರಾಸಾಯನಿಕ ಸಮಗ್ರ ಕ್ರಿಯೆಯನ್ನು ಸಾಕಷ್ಟು ವೇಗದಲ್ಲಿ ನಡೆಸಲು ಪ್ರಕೃತಿಯ ಬತ್ತಳಿಕೆಯಲ್ಲಿರುವ ಮೂರನೆಯ ಅಸ್ತ್ರ ಚಕ್ರಪಥ. ಕ್ರೆಬ್ಸ್ ಚಕ್ರ ಇದಕ್ಕೆ ಉತ್ತಮ ಉದಾಹರಣೆ.

ಶಕ್ತಿ ಜನನ ಕ್ರಿಯೆಯ ಸಂಶೋಧನೆಯನ್ನು ಮಾಡಿ ಸಿಟ್ರಿಕ್ ಆಮ್ಲ ಚಕ್ರದ ಈಗಿನ ಜ್ಞಾನಕ್ಕೆ ತಳಹದಿ ಹಾಕಿದಾತ ಶೆಂಟ್–ಜ್ಯಾರ್ಜಿ. ಈತ ಪಾರಿವಾಳದ ಎದೆಯ ಮಾಂಸಖಂಡವನ್ನು ತೆಗೆದು ಚೆನ್ನಾಗಿ ಅರೆದು ಶರ್ಕರಪಿಷ್ಟದಿಂದ ಬರುವ ಪೈರುವೇಟನ್ನು

ಹಾಕಿದಾಗ ಅದು ಉತ್ಕರ್ಷಣ ಕ್ರಿಯೆಗೆ ಒಳಪಡುತ್ತದೆ ಎಂದೂ, ಫ್ಯೂಮರೇಟ್, ಮ್ಯಾಲೇಟ್ ಆಕ್ಸಾಲೊ ಅಸಿಟೇಟುಗಳನ್ನು ಹಾಕಿದಾಗ ಈ ಕ್ರಿಯೆಯ ವೇಗ ಹೆಚ್ಚುವುದೆಂದು ಕಂಡು ಹಿಡಿದ. ಮುಂದೆ ಕ್ರೆಬ್ಸ್ ಸಂಶೋಧನೆ ನಡೆಸಿ ವೇಗವರ್ಧಕ ಶಕ್ತಿ ಆಲ್ಫಕೀಟೋ ಗ್ಲುಟರೇಟಿಗೂ, ಸಿಟ್ರೇಟಿಗೂ ಇದೆಯೆಂದು ಕಂಡು ಹಿಡಿದ. ಈ ಫಲಿತಾಂಶಗಳನ್ನು ವಿವರವಾಗಿ ಅಭ್ಯಾಸ ಮಾಡಿ ಉತ್ಕರ್ಷಣ ಕ್ರಿಯೆ ಒಂದು ಚಕ್ರಪಥದಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳ ಕೂಟ ಎಂಬ ಸಿದ್ಧಾಂತವನ್ನು ಮುಂದಿಟ್ಟ. ಅದೇ ಈಗ ಸುಪ್ರಸಿದ್ಧವಾಗಿರುವ ಕ್ರೆಬ್ಸ್ ಚಕ್ರ. ಈ ಚಕ್ರದಲ್ಲಿ ಯಾವ ಯಾವ ರಾಸಾಯನಿಕ ವಸ್ತುಗಳು ಹೇಗೆ ಭಾಗವಹಿಸುತ್ತವೆ ಎಂಬುದರ ವಿವರಗಳನ್ನು ಚಿತ್ರದಲ್ಲಿ ಕಾಣಬಹುದು.

ಕ್ರೆಬ್ಸ್ ಚಕ್ರದಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳನ್ನು ಕೂಡಿ ನೋಡಿದರೆ ಒಟ್ಟಿನಲ್ಲಿ ಒಂದು ಅಸಿಟೇಟ್ ಉತ್ಕರ್ಷಣ ಹೊಂದಿ ಅಪಕರ್ಷಣ ರೂಪದಲ್ಲಿರುವ




ನಾಲ್ಕು ಸಹ ಕಿಣ್ವಗಳು ಬಿಡುಗಡೆಯಾಗುವುದು ಕಂಡು ಬರುತ್ತದೆ. ಇಂಥ ಒಂದು ಸಹಕಿಣ್ವ ಎನ್ಎಡಿಎಚ್ ತನ್ನಲ್ಲಿನ ಜಲಜನಕಗಳನ್ನು ಆಮ್ಲಜನಕಕ್ಕೆ ಸಾಗು ಹಾಕಿದಾಗ ಸುಮಾರು ಮೂರು ಎಟಿಪಿ ಅಣುಗಳು ತಯಾರಾಗುತ್ತವೆ. ಅಪಕರ್ಷಣ ರೂಪದಲ್ಲಿನ ಎಫ್ಎಡಿಯಿಂದ ಎರಡೇ ಎಟಿಪಿ ಗಳಿಕೆ ಸಾಧ್ಯ. ಆದ್ದರಿಂದ ಒಂದು ಸುತ್ತಿನಲ್ಲಿ ಜಿಟಿಪಿ ಸೇರಿ ಒಟ್ಟು 12 ಶಕ್ತಿಯ ನಾಣ್ಯಗಳು (ಎಟಿಪಿ) ಜೀವಕೋಶಕ್ಕೆ ದೊರೆಯುತ್ತವೆ.

ಸಿಟ್ರಿಕ್ ಆಮ್ಲ ಚಕ್ರ ಶರ್ಕರಪಿಷ್ಟ, ಮೇದೋಆಮ್ಲಗಳಿಗೆ ಮತ್ತು ಅಮ್ಯೆನೋಆಮ್ಲಗಳಿಗೆ ಸಂಬಂಧ ಕಲ್ಪಿಸುವುದಲ್ಲದೆ ಎಲ್ಲದಕ್ಕೂ ಇದು ಸಾಮಾನ್ಯ ಉತ್ಕರ್ಷಕ ಮಾರ್ಗವಾಗಿದೆ. ಕೊಬ್ಬು, ಶರ್ಕರಪಿಷ್ಟದ ಒಲೆಯಲ್ಲಿ ಉರಿಯುತ್ತದೆ ಎಂದು ಹೇಳುವುದು ಸತ್ಯವಿದೆ. ಆದ್ದರಿಂದ ಕಾರಣಾಂತರದಿಂದ ಶರ್ಕರ ಚಯಾಪಚಯ ಸರಿಯಾಗಿಲ್ಲದಿದ್ದರೆ ಅದು ಮೇದೋ ಆಮ್ಲದ ಚಯಾಪಚಯದ ಮೇಲೆ ಪ್ರಭಾವ ಬೀರುತ್ತದೆ. ಇನ್ಸುಲಿನ್ನಿನ ಅಭಾವ ಆ ರೀತಿಯ ಪರಿಸ್ಥಿತಿಗೆ ಒಂದು ಕಾರಣ. ಅಂಥ ಸಂದರ್ಭದಲ್ಲಿ ಮೇದೋ ಆಮ್ಲಗಳು ಹೆಚ್ಚು ಹೆಚ್ಚಾಗಿ ಉತ್ಕರ್ಷಣ ಹೊಂದಿ ಅಸಿಟೇಟನ್ನು ಬಿಡುಗಡೆ ಮಾಡುತ್ತವೆ. ಆಗ ಸಾಕಷ್ಟು ಆಕ್ಸಾಲೋ ಅಸಿಟೇಟುಗಳು ಇರದಿದ್ದರೆ ಅಸಿಟೇಟುಗಳು ಸೇರಿಕೊಂಡು ಅಸಿಟೋನ್ (ವಿಷವಸ್ತುಗಳು) ಆಗುವ ಪರಿಸ್ಥಿತಿಯುಂಟು. ಆದರೆ ಆಕ್ಸಾಲೋ ಅಸಿಟೇಟಿನ ಮಟ್ಟ ಪ್ರೋಟೀನುಗಳಲ್ಲಿರುವ ಆಸ್ಪಾರ್ಟಿಕ್ ಅಮ್ಯೆನೊ ಆಮ್ಲದಿಂದ ಒಂದೇ ಸಮವಾಗಿರಲು ಸಾಧ್ಯ. ಅಲ್ಲದೆ ಪೈರುವಿಕ್ ಆಮ್ಲವೂ ಇಂಗಾಲಾಮ್ಲ ವಾಯುವಿನೊಂದಿಗೆ ಸೇರಿಕೊಂಡು ಆಕ್ಸಾಲೋ ಅಸಿಟೇಟ್ ಆಗಲು ಕಿಣ್ವದ ಏರ್ಪಾಟು ಉಂಟು. ಆದರೂ ಅಸಿಟೋನ್ ರಾಸಾಯನಿಕ ವಸ್ತುಗಳು ರಕ್ತದಲ್ಲಿ ಹೆಚ್ಚಲು ಇದರ ಮಟ್ಟದ ವ್ಯತ್ಯಾಸವೂ ಕಾರಣ ಇರಬಹುದು ಎನ್ನುತ್ತಾರೆ.

ಕ್ರೆಬ್ಸ್ ಚಕ್ರಕ್ಕೂ ಪ್ರೋಟೀನಿನಲ್ಲಿರುವ ಕೆಲವು ಅಮ್ಯೆನೊ ಆಮ್ಲಗಳಿಗೂ ನಂಟು ಉಂಟು. ಗ್ಲುಟಾಮಿಕ್ ಆಮ್ಲ ಮತ್ತು ಆಸ್ಪಾರ್ಟಿಕ್ ಆಮ್ಲ ಇವುಗಳ ತಯಾರಿಕೆ ಚಕ್ರದಲ್ಲಿನ ಆಲ್ಫಕೀಟೊ ಗ್ಲುಟಾರಿಕ್ ಆಮ್ಲ ಮತ್ತು ಆಕ್ಸಾಲೊ ಅಸಿಟಿಕ್ ಆಮ್ಲದಿಂದ ಆಗುತ್ತದೆ. ಕ್ರೆಬ್ಸ್ ಚಕ್ರದಲ್ಲಿ ಸಿಟ್ರಿಕ್ ಆಮ್ಲ ಮುಂತಾದ ಆಮ್ಲಗಳ ತಯಾರಿಕೆಯಾದರೂ ನಿವ್ವಳ ತಯಾರಿಕೆಯಿಲ್ಲ. ಆದರೆ ಇದಕ್ಕೆ ಎರಡು ರಾಸಾಯನಿಕ ಕ್ರಿಯೆಗಳನ್ನು ಸೇರಿಸಿ ಬರುವ ವಿಶೇಷಪಥವಾದ ಗ್ಲೈಆಕ್ಸಲೇಟ್ ಚಕ್ರದಿಂದ ನಿವ್ವಳ ತಯಾರಿಕೆ ಸಾಧ್ಯ. ಈ ವಿಶೇಷ ಚಕ್ರ ಹಣ್ಣು ಮತ್ತು ಕಾಯಿಗಳಲ್ಲಿ ಇದ್ದು ಅವುಗಳಲ್ಲಿ ಸಿಟ್ರಿಕ್ ಆಮ್ಲ ಮುಂತಾದ ಆಮ್ಲಗಳು ಶೇಖರವಾಗಲು ಕಾರಣವಾಗಿವೆ. ಇದರಲ್ಲಿ ಒಂದು ಸುತ್ತಿನ ಕ್ರಿಯೆಯಲ್ಲಿ ಎರಡು ಆಕ್ಸಾಲೊ ಅಸಿಟೇಟುಗಳು (ಒಂದು ಗ್ಲೈಆಕ್ಸಲೇಟಿನ ಮುಖಾಂತರ, ಎರಡನೆಯದು ಸಕ್ಸಿನೇಟಿನ ಮುಖಾಂತರ) ಬರುವುದನ್ನು ಕಾಣಬಹುದು. ಅಂದರೆ ಎರಡು ಅಸಿಟೇಟುಗಳಿಂದ ಒಂದು ನಿವ್ವಳ ಆಕ್ಸಾಲೊ ಅಸಿಟೇಟ್ ಬಂದು ಅದು ಮೂರನೆಯ ಅಸಿಟೇಟಿನೊಂದಿಗೆ ಸಿಟ್ರಿಕ್ ಆಮ್ಲ ಆಗುವುದು. ಅಂದರೆ ಅಸಿಟೇಟುಗಳಿಂದ ಆಮ್ಲಗಳ ನಿವ್ವಳ ತಯಾರಿಕೆ ಆದಂತಾಯಿತು.

ಕ್ರೆಬ್ಸ್ ಚಕ್ರದ ರಾಸಾಯನಿಕ ಕ್ರಿಯೆಗಳು ಸರಿಯಾಗಿ ನಡೆಯಬೇಕಾದರೆ ಅದರಲ್ಲಿ ಭಾಗವಹಿಸುವ ರಾಸಾಯನಿಕ ವಸ್ತುಗಳು ಮತ್ತು ಕ್ರಿಯೆಯ ವೇಗೋತ್ಕರ್ಷಕಗಳಾದ ಕಿಣ್ವಗಳು ಅನುಕ್ರಮವಾಗಿ ಇರಬೇಕು; ಹಾಗೂ ಸುವ್ಯವಸ್ಥಿತವಾಗಿರಬೇಕು. ಈ ವ್ಯವಸ್ಥೆ ಜೀವಕೋಶದಲ್ಲಿನ ಜೀವರಸದಲ್ಲಿ ಕಾಳಿನ ರೂಪದಲ್ಲಿರುವ ಮೈಟೋಕಾಂಡ್ರಿಯಾಗಳಲ್ಲಿ ಇದೆ. ಇವುಗಳಲ್ಲಿ ಜಿಡ್ಡಿನ ಗುಂಪಿನ ರಾಸಾಯನಿಕ ವಸ್ತುಗಳು ಇದ್ದು ಇವು ಈ ಆವಶ್ಯಕ ವ್ಯವಸ್ಥೆಯನ್ನು ಮಾಡಿರುತ್ತವೆ. ಹೆಚ್ಚು ಶಕ್ತಿಯ ಬಿಡುಗಡೆ ಇಲ್ಲಿಯೆ. ಆದ್ದರಿಂದಲೇ ಮೈಟೋಕಾಂಡ್ರಿಯಾವನ್ನು ಶಕ್ತಿಜನನನಿಲಯ ಎಂದು ಕರೆಯಬಹುದು. ಈ ಚಕ್ರಕ್ಕೆ ಬೇಕಾಗುವ ಎಲ್ಲ ಕಿಣ್ವಗಳು ಪ್ರಾಣಿಗಳಲ್ಲಿಯೂ, ಸಸ್ಯ, ಬ್ಯಾಕ್ಟೀರಿಯ ಮುಂತಾದುವುಗಳಲ್ಲಿಯೂ ಇರುವುದನ್ನು ನೋಡಿದರೆ ಆಮ್ಲಜನಕವನ್ನು ಅವಲಂಬಿಸಿರುವ ಎಲ್ಲ ಜೀವಕೋಶಗಳಲ್ಲಿ ಈ ಚಕ್ರವಿದ್ದು ಶಕ್ತಿ ಜನನ ಕ್ರಿಯೆಯಲ್ಲಿ ಇದು ಹಿರಿಯ ಪಾತ್ರ ವಹಿಸುವುದು ಕಂಡುಬರುತ್ತದೆ. ***

**ಕ್ರೆಬ್ಸ್, ಹ್ಯಾನ್ಸ್ ಅಡಾಲ್ಫ್** (೧೯೦೦–೧೯೮೧): ಬ್ರಿಟಿಷ್ ಜೀವ ರಸಾಯನ ವಿಜ್ಞಾನಿ. ವಿದ್ಯಾರ್ಥಿ ದೆಸೆಯಲ್ಲಿ ವೈದ್ಯಕೀಯ ಶಿಕ್ಷಣ ಪಡೆದ. ಆದರೆ ಆಸಕ್ತಿ ಕುದುರಿದ್ದು ಜೀವ ರಸಾಯನ ವಿಜ್ಞಾನದಲ್ಲಿ. ದೇಹದಲ್ಲಿ ಅಮ್ಯೆನೊ ಆಮ್ಲಗಳು ಮತ್ತು ಕಾರ್ಬೊಹೈಡ್ರೇಟುಗಳು ಹೊಂದುವ ರಾಸಾಯನಿಕ ಪರಿವರ್ತನೆಗಳ ಪಥಗಳ ಬಗ್ಗೆ ಸಂಶೋಧನೆಗಳನ್ನು ಕೈಗೊಂಡು ಮೂಲಭೂತ ಆವಿಷ್ಕಾರಗಳನ್ನು ಮಾಡಿದ್ದಕ್ಕಾಗಿ ನೊಬೆಲ್ ಬಹುಮಾನವನ್ನು ಪಡೆದ (೧೯೫೩).

೧೯೦೦ರ ಆಗಸ್ಟ್ ೨೫ರಂದು ಜರ್ಮನಿಯ ಹಿಲ್ಡೆಶೈಮಿನಲ್ಲಿ ಜನಿಸಿದ ಕ್ರೆಬ್ಸ್ ೧೯೧೯ರಿಂದ ೧೯೨೫ರ ವರೆಗೆ ಬೇರೆ ಬೇರೆ ಜರ್ಮನ್ ವಿಶ್ವವಿದ್ಯಾಲಯಗಳಲ್ಲಿ ವೈದ್ಯಕೀಯ ಶಿಕ್ಷಣ ಪಡೆದು ೧೯೨೫ರಲ್ಲಿ ಹ್ಯಾಂಬರ್ಗ್ ವಿಶ್ವವಿದ್ಯಾಲಯದ ವೈದ್ಯಕೀಯ ಡಿಗ್ರಿಯನ್ನು ಗಳಿಸಿದ. ಅದಾದ ಬಳಿಕ ರಸಾಯನ ವಿಜ್ಞಾನವನ್ನು ಅಭ್ಯಸಿಸಿ ಬರ್ಲಿನ್–ಡಾಲೆಮಿನಲ್ಲಿ, ನೊಬೆಲ್ ಪ್ರಶಸ್ತಿ ವಿಜೇತ ವಾರ್ಬುರ್ಗನ ಸಹಾಯಕನಾಗಿ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದ. ತರುವಾಯ ಕೆಲಕಾಲ ವೈದ್ಯಕೀಯಕ್ಕೆ ಹಿಂತಿರುಗಿ ವೈದ್ಯಕೀಯ ಶಿಕ್ಷಕನಾಗಿದ್ದ. ನಾಜಿಗಳು ಅಧಿಕಾರಕ್ಕೆ ಬಂದು ಪ್ರಬಲರಾಗಿದ್ದಾಗ ಕ್ರೆಬ್ಸ್ ಜರ್ಮನಿಯನ್ನು ತೊರೆದು ನಿರಾಶ್ರಿತನಾಗಿ ಬ್ರಿಟನ್ನಿಗೆ ವಲಸೆ ಹೋಗಬೇಕಾಯಿತು. ೧೯೩೩ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಜೀವರಸಾಯನ ವಿಜ್ಞಾನ ವಿಭಾಗವನ್ನು ಸೇರಿ ಎರಡು ವರ್ಷಗಳಾದ ಮೇಲೆ ಷೆಫೀಲ್ಡ್ ವಿಶ್ವವಿದ್ಯಾಲಯಕ್ಕೆ ಹೋದ (೧೯೩೫). ೧೯೫೪ರಲ್ಲಿ ಕ್ರೆಬ್ಸ್ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಜೀವ ರಸಾಯನ ವಿಭಾಗದ ಪ್ರಾಧ್ಯಾಪಕನಾದ. ೧೯೪೭ರಲ್ಲಿ ಈತ ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ. ೧೯೫೮ರಲ್ಲಿ ಬ್ರಿಟಿಷ್ ಸರ್ಕಾರ ಇವನಿಗೆ ನೈಟ್ ಪದವಿ ನೀಡಿ ಗೌರವಿಸಿತು. ೧೯೬೪ರಲ್ಲಿ ಅಮೆರಿಕದ ನ್ಯಾಷನಲ್ ಅಕಾಡಮಿ ಆಫ್ ಸೈನ್ಸಸ್ ಕ್ರೆಬ್ಸ್‌ನನ್ನು ತನ್ನ ಓರ್ವ ವಿದೇಶೀ ಸದಸ್ಯನನ್ನಾಗಿ ಚುನಾಯಿಸಿ ಸನ್ಮಾನಿಸಿತು.

ಆಹಾರದ ಮೂಲಕ ದೇಹವನ್ನು ಪ್ರವೇಶಿಸುವ ಪ್ರೋಟೀನುಗಳು ಜಲವಿಭಜನೆ (ಹೈಡ್ರಾಲಿಸಿಸ್) ಹೊಂದಿ ಅಮ್ಯೆನೊ ಆಮ್ಲಗಳಾದ ಬಳಿಕ ಆ ಅಮ್ಯೆನೊ ಆಮ್ಲಗಳು ದೇಹಕ್ಕೆ ಅಗತ್ಯವಾದ ವಿವಿಧ ಪ್ರೋಟೀನುಗಳ ಸಂಶ್ಲೇಷಣೆಯಲ್ಲಿ ಉಪಯೋಗ ಪಡೆಯುವುದು ಸರಿಯಷ್ಟೆ. ಕೆಲವು ವೇಳೆ ಅವು ಉತ್ಕರ್ಷಣೆ ಹೊಂದಿ ಶಕ್ತಿಯನ್ನು ಒದಗಿಸುವುದೂ ಉಂಟು. ಅಂಥ ಸಂದರ್ಭಗಳಲ್ಲಿ ಅಮ್ಯೆನೊ ಆಮ್ಲಗಳಲ್ಲಿನ $-NH_2$ ಗುಂಪು ಮೊದಲು ಬಿಡುಗಡೆಯಾಗಬೇಕು. ಹಾಗೆ ಬಿಡುಗಡೆಯಾದ $-NH_2$ ಯೂರಿಯ ರೂಪದಲ್ಲಿ ದೇಹದಿಂದ ಹೊರಬರುವುದು. ಇದು ನಡೆಯುವುದು ಹೇಗೆ ಎಂಬುದರ ಬಗ್ಗೆ ಕ್ರೆಬ್ಸ್ ಕುತೂಹಲ ತಳೆದು ಅದಕ್ಕೆ ಸಂಬಂಧಿಸಿದ ರಾಸಾಯನಿಕ ಕ್ರಿಯೆಗಳ ಪಥಗಳ ಪತ್ತೆ ಹಚ್ಚಿದ. ಆರ್ನಿಥೀನ್ ಎಂಬ ಅಮ್ಯೆನೊ ಆಮ್ಲ ಅಮೋನಿಯ ಮತ್ತು ಕಾರ್ಬನ್ ಆಕ್ಸೈಡುಗಳನ್ನು ತೆಗೆದುಕೊಂಡು ಮೊದಲು ಸಿಟ್ರುಲ್ಲೀನ್ ಆಗಿ ಅದು ಇನ್ನೊಂದು ಅಮೋನಿಯ ಅಣುವನ್ನು ತೆಗೆದುಕೊಂಡು ಆರ್ಜಿನೀನ್ ಆಗುವುದೆಂದೂ ಅನಂತರ ಆರ್ಜಿನೀನ್ ವಿಭಜನೆ ಹೊಂದಿ ಯೂರಿಯಾವನ್ನು ನೀಡುವುದಲ್ಲದೆ ಆರ್ನಿಥೀನನ್ನು

ಪುನರುತ್ಪಾದಿಸುವುದೆಂದೂ ತೋರಿಸಿದ. ಹಾಗೆ ಉತ್ಪತ್ತಿಯಾದ ಆರ್ನಿಥೀನ್ ಪುನಃ ಇದೇ ಕ್ರಿಯಾ ಸರಣಿಯಲ್ಲಿ ಪಾಲುಗೊಳ್ಳುವುದು. ಹೀಗೆ ಕ್ರಿಯೆಗಳು ಚಕ್ರೀಯವಾಗಿ ಮುಂದುವರಿಯುವುದರಿಂದ ಈ ಕ್ರಿಯಾಸರಣಿಗೆ ಆರ್ನಿಥೀನ್ ಚಕ್ರ ಅಥವಾ ಕ್ರೆಬ್ಸ್ ಯೂರಿಯ ಚಕ್ರ ಎಂಬ ಹೆಸರು ಬಂದಿದೆ.

ಕ್ರೆಬ್ಸ್ ಜರ್ಮನಿಯನ್ನು ಬಿಟ್ಟು ಬ್ರಿಟನ್ನಿಗೆ ಬಂದ ಬಳಿಕ ಆತನ ಗಮನ ಕಾರ್ಬೊಹೈಡ್ರೇಟುಗಳ ಚಯಾಪಚಯದ (ಮೆಟಬಾಲಿಸಂ) ಕಡೆ ಹರಿಯಿತು. ಕಾರ್ಬೊಹೈಡ್ರೇಟುಗಳು ನಿರ್ದಿಷ್ಟ ಕ್ರಿಯಾಸರಣಿಯನ್ನು ಅನುಸರಿಸಿ ಲ್ಯಾಕ್ಟಿಕ್ ಆಮ್ಲವನ್ನು ಉತ್ಪತ್ತಿ ಮಾಡುವುದು ತಿಳಿದಿತ್ತು. ಲ್ಯಾಕ್ಟಿಕ್ ಆಮ್ಲ ಉತ್ಕರ್ಷಣೆ ಹೊಂದಿ ಅಂತಿಮವಾಗಿ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ಉತ್ಪತ್ತಿ ಮಾಡುವುದು ಹೇಗೆ ಎಂಬುದು ಗೊತ್ತಿರಲಿಲ್ಲ. ಕ್ರೆಬ್ಸ್ ಇದನ್ನು ಪತ್ತೆ ಮಾಡಿದ. ಈ ಕ್ರಿಯಾ ಸರಣಿಯೂ ಒಂದು ಚಕ್ರೀಯ ಪಥದಲ್ಲಿ ನಡೆಯುವುದರಿಂದ ಮತ್ತು ಈ ಚಕ್ರದಲ್ಲಿ ಸಿಟ್ರಿಕ್ ಆಮ್ಲ ಒಂದು ಮುಖ್ಯ ಹಂತವಾದುದರಿಂದ ಈ ಚಕ್ರೀಯ ಕ್ರಿಯಾ ಸರಣಿಗೆ ಸಿಟ್ರಿಕ್ ಆಮ್ಲ ಅಥವಾ ಕ್ರೆಬ್ಸ್ ಚಕ್ರ ಎಂದು ಹೆಸರಾಯಿತು. ಚಕ್ರವನ್ನು ಕಂಡುಹಿಡಿದುದಕ್ಕಾಗಿಯೇ ಕ್ರೆಬ್ಸ್‌ನಿಗೆ ನೊಬೆಲ್ ಬಹುಮಾನದ ಒಂದು ಪಾಲು ದೊರೆತದ್ದು. ಕ್ರೆಬ್ಸ್ ಚಕ್ರದ ವಿಶದೀಕರಣಕ್ಕೆ ನೆರವಾಗುವ ಅಮೂಲ್ಯ ಸಂಶೋಧನೆಗಳನ್ನು ನಡೆಸಿದ ಲಿಪ್‌ಮನ್ ಆ ಬಹುಮಾನದ ಉಳಿದೊಂದು ಪಾಲನ್ನು ಪಡೆದ.

ಇನ್ನೂ ಅನೇಕ ಜೀವ ರಾಸಾಯನಿಕ ಕ್ರಿಯೆಗಳ ಪಥಗಳನ್ನು ಪೂರ್ತಿಯಾಗಿ ಇಲ್ಲವೇ ಭಾಗಶಃ ಕ್ರೆಬ್ಸ್ ಪತ್ತೆ ಮಾಡಿರುವನಾದರೂ ಸಿಟ್ರಿಕ್ ಆಮ್ಲ ಚಕ್ರದ ಆವಿಷ್ಕಾರ ಅವನಿಗೆ ಅತ್ಯಂತ ಹೆಚ್ಚಿನ ಕೀರ್ತಿಯನ್ನು ತಂದು ಕೊಟ್ಟಿದೆ ಎಂದು ಹೇಳಬಹುದು. ನವೆಂಬರ್ ೨೨, ೧೯೮೧ರಂದು ಕ್ರೆಬ್ಸ್‌ನ ನಿಧನವಾಯಿತು. (ಜೆ.ಆರ್.ಎಲ್.)

**ಕ್ರೈನಾಯ್ಡಿಯ:** ಎಕಿನೋಡರ್ಮೇಟ ವಿಭಾಗಕ್ಕೆ (ಕಂಟಕಚರ್ಮಿಗಳು) ಸೇರಿದ ಒಂದು ವರ್ಗ. ಇದಕ್ಕೆ ಸೇರಿದ ಪ್ರಾಣಿಗಳೆಲ್ಲವೂ ಸಮುದ್ರ ನಿವಾಸಿಗಳು. ಆಡುಮಾತಿನಲ್ಲಿ ಕಡಲ ತಾವರೆಗಳು (ಸೀ ಲಿಲೀಸ್) ಮತ್ತು ಗರಿ ನಕ್ಷತ್ರಗಳು (ಫೆದರ್ ಸ್ಟಾರ್ಸ್) ಎಂದು ಕರೆಯಲಾಗುತ್ತದೆ. ಕಂಟಕಚರ್ಮಿಗಳ ಉಳಿದ ಪ್ರಾಣಿಗಳಲ್ಲಿರುವಂತೆ ಇವುಗಳಲ್ಲೂ ಪಂಚ ಭುಜೀಯ ಸಮಾಂಗತೆ, ಜಲ ಪರಿಚಲನಾಂಗ ವ್ಯವಸ್ಥೆ ಮತ್ತು ಸುಣ್ಣಕಲ್ಲಿನಿಂದ ಕೂಡಿದ ಫಲಕಗಳನ್ನುಳ್ಳ ಬಾಹ್ಯ ಕವಚಗಳು ಇವೆ. ತಮ್ಮ ಜೀವಮಾನವಿಡೀ ಸಾಗರದ ತಳಕ್ಕೆ ಅಂಟಿಕೊಂಡು ಜೀವಿಸುವ ಸ್ಥಾವರ ಪ್ರಾಣಿಗಳಾಗಿದ್ದು ಉಳಿದ ಕಂಟಕಚರ್ಮಿಗಳಿಂದ ಭಿನ್ನವಾಗಿವೆ.

ದೇಹದ ಉದ್ದ ಕೆಲವೇ ಸೆಂಮೀ ಗಳಿಂದ ಹಲವಾರು ಅಡಿಗಳವರೆಗೆ ವ್ಯತ್ಯಾಸವಾಗುತ್ತದೆ. ಕೆಲವು ಪ್ರಭೇದಗಳ ದೇಹ ವರ್ಣರಂಜಿತವಾಗಿರುವುದುಂಟು. ಹಲವಾರು ಸುತ್ತುಗಳಲ್ಲಿ ಜೋಡಣೆಗೊಂಡಿರುವ ತಟ್ಟೆಗಳಿಂದ ಕೂಡಿದ ಕೇಲಿಕ್ಸ್ ಬಟ್ಟಲಿನಾಕಾರದ ರಚನೆಯೊಳಗೆ ದೇಹ ಹುದುಗಿದೆ. ಕೆಲವು ಪ್ರಭೇದಗಳಲ್ಲಿ ಈ ಬಟ್ಟಲಿಗೆ ಅಂಟಿಕೊಂಡಂತೆ ಒಂದು ಉದ್ದನೆಯ ತೊಟ್ಟು ಇದೆ. ಇದರ ಸಹಾಯದಿಂದ ಪ್ರಾಣಿಯ ದೇಹ ಸಾಗರ ತಳಕ್ಕೆ ಅಂಟಿರುತ್ತದೆ. ಹಲವಾರು ಸಣ್ಣ ತಟ್ಟೆಗಳಿಂದ ಕೂಡಿದ ಕಂಬದಂಥ ರಚನೆಯಿದು. ತಟ್ಟೆಗಳು ಸ್ನಾಯುಗಳ ಸಹಾಯದಿಂದ ಒಂದಕ್ಕೊಂದು ಅಂಟಿರುವುದರಿಂದ ತೊಟ್ಟು ಸುಲಭವಾಗಿ ಬಾಗುತ್ತದೆ. ಈ ಕಂಬ ಕವಲೊಡೆದಿರಬಹುದು ಇಲ್ಲವೆ ಏಕವಾಗಿದ್ದು ಅಲ್ಲಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಬೇರುಗಳಂಥ ರಚನೆಗಳನ್ನು ಪಡೆದಿರಬಹುದು. ಇವುಗಳಿಗೆ ಸಿರ್ರಿಗಳೆಂದು ಹೆಸರು. ಸಾಮಾನ್ಯವಾಗಿ ಗರಿನಕ್ಷತ್ರಗಳಲ್ಲಿ (ಉದಾ: ಅಂಟಿಡಾನ್ ಜಾತಿ) ತೊಟ್ಟಿನ ಮೊದಲನೆಯ ಖಂಡ ಮಾತ್ರ ಇರುತ್ತದೆ. ಕಡಲತಾವರೆಗಳಲ್ಲಿ (ಉದಾ: ರೈಜೊಕ್ರೈನಸ್, ಪೆಂಟಕ್ರೈನಸ್, ಬಾಟ್ರಿಯೊಕ್ರೈನಸ್, ಇತ್ಯಾದಿ) ತೊಟ್ಟು ಬಲು ಉದ್ದ ಮತ್ತು ಅದರ ತುದಿಯಲ್ಲಿರುವ ಬಟ್ಟಲಿನಲ್ಲಿ ದೇಹ ಹುದುಗಿರುತ್ತದೆ. ಎರಡೂ ಬಗೆಯ ಪ್ರಾಣಿಗಳಲ್ಲೂ ಬಟ್ಟಲಿನ ಅಂಚಿನಿಂದ ಉದ್ದವಾದ ಹಾಗೂ ಸುಲಭವಾಗಿ ಬಾಗುವಂಥ ಕೈಗಳು ಹೊರಡುತ್ತವೆ. ಇವುಗಳ ಮೂಲಸಂಖ್ಯೆ 5. ಆದರೆ ಹೆಚ್ಚು ಕಡಿಮೆ ಎಲ್ಲ ಬಗೆಯ ಕ್ರೈನಾಯಿಡುಗಳಲ್ಲೂ ಒಂದೊಂದು ಕೈಯೂ ಬುಡದಲ್ಲಿ ಇಬ್ಭಾಗವಾಗಿ ಸೀಳುಗೊಂಡು ಒಟ್ಟು 10 ಕೈಗಳಾಗುತ್ತವೆ. ಉಷ್ಣವಲಯದಲ್ಲಿ ವಾಸಿಸುವ ಕಡಲತಾವರೆಗಳಲ್ಲಿ ಇವು ಹೆಚ್ಚು ವಿಭಾಗವಾಗಿ ಕೈಗಳ ಒಟ್ಟು ಸಂಖ್ಯೆ ಹೆಚ್ಚಾಗುತ್ತದೆ. ಒಂದೊಂದು ಕೈಯಲ್ಲೂ ಪಿನ್ನ್ಯೂಲುಗಳೆಂಬ ಹಲವಾರು ರಚನೆಗಳಿದ್ದು ಇಡೀ ಕೈ ಒಂದು ಗರಿಯಂತೆ ಕಾಣುವ ಹಾಗೆ ಇವು ಮಾಡುತ್ತವೆ.

ಬಟ್ಟಲಿನ ಮೇಲಿನ ಹಾಗೂ ಕೈಗಳ ಬುಡಗಳ ಬಳಿಯ ಭಾಗಕ್ಕೆ ತಟ್ಟೆ (ಡಿಸ್ಕ್) ಎಂದು ಹೆಸರು. ಇದರ ಕೇಂದ್ರಭಾಗದಲ್ಲಿ ಬಾಯಿಯೂ ಒಂದು ಪಕ್ಕಕ್ಕೆ, ಕೊಂಚ ಮೇಲಕ್ಕೆ ಎತ್ತಿರುವಂತಿರುವ ಗುದದ್ವಾರವೂ ಇವೆ. ದೇಹದೊಳಗೆ ಉದ್ದವಾದ ಮತ್ತು ಸುರುಳಿ ಸುತ್ತಿರುವ ಆಹಾರನಾಳ ಉಂಟು. ಬಾಯ ಸುತ್ತ ಒಂದು ತೋಡು ಇದ್ದು ಇದರಿಂದ ಸಣ್ಣ ಗಾತ್ರದ ಹಲವಾರು ತೋಡುಗಳು ಉತ್ಪತ್ತಿಯಾಗುತ್ತವೆ. ಇವು ಒಂದೊಂದೂ ಕೈಯ ಒಳಭಾಗಕ್ಕೆ ಸಾಗಿ ಪಿನ್ನ್ಯೂಲುಗಳಿರುವೆಡೆಯಲ್ಲೆಲ್ಲ ಒಂದೊಂದು ಕವಲಾಗಿ ಭಾಗವಾಗುತ್ತವೆ. ತೋಡಿನ ಈ ವ್ಯವಸ್ಥೆಗೆ ಆಂಬುಲ್ಯಾಕ್ರಲ್ ತೋಡು ವ್ಯವಸ್ಥೆ ಎಂದು ಹೆಸರು. ಇದು ಬೇರೆ ಕಟಂಕಚರ್ಮಿಗಳಲ್ಲಿರುವ ಆಂಬುಲ್ಯಾಕ್ರಲ್ ತೋಡಿಗೆ ಸಮಾನವಾಗಿರುವುದಾದರೂ ಇದರಿಂದ ಹುಟ್ಟುವ ನಳಿಕೆಪಾದಗಳು ಬರಿಯ ಆಹಾರವನ್ನು ಹಿಡಿಯುವ ಕಾರ್ಯವನ್ನು ಮಾತ್ರ ನಿರ್ವಹಿಸುತ್ತವೆ. ಪ್ರಾಣಿ ಚಲನೆಯಲ್ಲಿ ಪಾಲುಗೊಳ್ಳುವುದಿಲ್ಲ. ಕ್ರೈನಾಯಿಡುಗಳ ಆಹಾರ ಸಾಗರದಲ್ಲಿ ಕಾಣಬರುವ ಸೂಕ್ಷ್ಮಗಾತ್ರದ ತೇಲುಜೀವಿಗಳು. ಕೈಗಳಲ್ಲಿನ ಪಿನ್ನ್ಯೂಲುಗಳಲ್ಲಿ ಹುದುಗಿರುವ ಶಿಲಕೆಗಳ ಚಲನೆಯಿಂದ ಆಹಾರವನ್ನು ಬಾಯೆಡೆಗೆ ಎಳೆದುಕೊಳ್ಳುತ್ತವೆ.

ಬಟ್ಟಲಿನ ಬುಡದಲ್ಲಿ ಒಂದು ಪುಟ್ಟ ನರಸಮೂಹವಿದೆ. ಇದೇ ಮಿದುಳು. ಇದರಿಂದ ಒಂದೊಂದು ಕೈಯೆಡೆಗೂ ಒಂದೊಂದು ನರಹುರಿ ಹೊರಡುತ್ತದೆ.

ಕ್ರೈನಾಯಿಡ್ ಪ್ರಾಣಿಗಳಲ್ಲಿ ಲಿಂಗಭೇದವಿದೆ. ಪ್ರತಿಯೊಂದು ಕೈಯ ಮಧ್ಯಭಾಗದಲ್ಲಿರುವ ಪಿನ್ನ್ಯೂಲುಗಳಲ್ಲಿ ಉಬ್ಬುಗಳಂತೆ ಇರುವ ರಚನೆಗಳೇ ಜನನಾಂಗಗಳು. ಕಡಲತಾವರೆಗಳ ಸಂತಾನ ಕ್ರಮಗಳ ಬಗ್ಗೆ ಏನೂ ತಿಳಿದಿಲ್ಲ. ಗರಿನಕ್ಷತ್ರಗಳಲ್ಲಿ ಮಾತ್ರ ಈ ಬಗ್ಗೆ ಅಧ್ಯಯನ ಕೊಂಚ ನಡೆದಿದೆ. ಅಂಡಗಳ ನಿಷೇಚನ ಸಮುದ್ರದಲ್ಲಿ, ಪ್ರಾಣಿದೇಹದ ಹೊರಭಾಗದಲ್ಲಿ ನಡೆಯುತ್ತದೆ. ಕ್ರಮೇಣ ಇವು ಪೀಪಾಯಿ ಆಕಾರದ ಡೋಲಿಯೊಲೇರಿಯ ಲಾರ್ವಗಳಾಗಿ ಬೆಳೆಯುತ್ತವೆ. ಇವಕ್ಕೆ ಬಾಯಿಯಿಲ್ಲ. ಮೊಟ್ಟೆಗಳಲ್ಲಿ ಶೇಖರಣೆಗೊಂಡ ಬಂಡಾರವನ್ನು ತಮ್ಮ ಪೋಷಣೆಗೆ ಬಳಸಿಕೊಳ್ಳುತ್ತವೆ. ಕೆಲವು ದಿನಗಳ ಅನಂತರ ಇವು ಸಾಗರ ತಳಕ್ಕೆ ಇಳಿದು ಉದ್ದವಾದ ತೊಟ್ಟುಳ್ಳ ಲಾರ್ವಗಳಾಗಿ ಪರಿವರ್ತಿತವಾಗಿ ನೆಲಕ್ಕೆ ಅಂಟಿಕೊಳ್ಳುತ್ತವೆ. ಇವಕ್ಕೆ ಪೆಂಟಕ್ರೈನಾಯಿಡ್ ಲಾರ್ವಗಳೆಂದು ಹೆಸರು. ಇವುಗಳ ದೇಹದ ಮೇಲ್ತುದಿಯಲ್ಲಿ ಬಟ್ಟಲು ರೂಪುಗೊಂಡು ಲಾರ್ವಗಳು ಆಹಾರ ಸೇವನೆಯಲ್ಲಿ ತೊಡಗುತ್ತವೆ. ಕಾಲಕ್ರಮೇಣ ಲಾರ್ವಗಳು ಬೆಳೆದು ಗರಿ ನಕ್ಷತ್ರಗಳಾಗಿ ರೂಪುಗೊಳ್ಳುತ್ತವೆ. ದಕ್ಷಿಣ ಮೇರು ಪ್ರದೇಶದಲ್ಲಿ ಕಾಣಬರುವ ಪ್ರಾಣಿಗಳಲ್ಲಿ ಬೆಳವಣಿಗೆಯ ಪ್ರಾರಂಭದ ಹಂತಗಳು ತಾಯಿ ದೇಹದೊಳಗಿನ ಕಾವುಗೂಡುಗಳಲ್ಲಿ ನಡೆಯುತ್ತವೆ.

ಕ್ರೈನಾಯ್ಡಿಯ ವರ್ಗದಲ್ಲಿ ಸುಮಾರು 600–700 ಪ್ರಭೇದಗಳಿವೆ. ಇಂದು ಜೀವಿಸಿರುವ ಬಗೆಗಳನ್ನು ಆರ್ಟಿಕ್ಯುಲೇಟ ಎಂಬ ಗಣಕ್ಕೆ ಸೇರಿಸಲಾಗಿದೆ. ಈ ಗಣದ ಮೂರು ಮುಖ್ಯ ಕುಟುಂಬಗಳು ಇವು–ಐಸೊಕ್ರೈನಿಡೆ, ಆಂಟಿಡಾನಿಡೆ ಮತ್ತು ಕೊಮಾಸ್ಟರಿಡೆ. ನೋಡಿ– ಎಕಿನೊಡರ್ಮೇಟ, ಕಂಟಕಚರ್ಮಿಗಳು. (ಪಿ.ಎ.ಆರ್.)

**ಕ್ರೈಸಾಪಿಡೆ:** ಕೀಟವರ್ಗದ ನ್ಯೂರಾಪ್ಟರ ಗಣದಲ್ಲಿರುವ ಕುಟುಂಬ. ಇದಕ್ಕೆ ಸೇರಿದ ಕೀಟಗಳು ಸಸ್ಯಗಳಿಗೆ ಹಾನಿಯುಂಟು ಮಾಡುವ ಏಫಿಡ್ದುಗಳನ್ನು ತಿಂದು ಜೀವಿಸುತ್ತವೆ. ಕಾರಣ ಏಫಿಡ್ ಲಯನ್ಸ್ ಎಂದು ಕರೆಯುವರು. ಆಕರ್ಷಕವಾದ ಮತ್ತು ಕೃಶವಾದ ದೇಹ, ಹಸಿರು ಬಣ್ಣದ ವೈವಿಧ್ಯಮಯ ವಿನ್ಯಾಸದಿಂದ ಕೂಡಿದ ಎರಡು ಜೊತೆ ರೆಕ್ಕೆಗಳು ಮತ್ತು ಸುಂದರವಾದ, ಚಿನ್ನದ ಬಣ್ಣದಂತಿರುವ ಕಣ್ಣುಗಳು ಇವೆ. ಆದ್ದರಿಂದ ಇವುಗಳನ್ನು ಜರಿ ರೆಕ್ಕೆ ಕೀಟ (ಲೇಸ್ ವಿಂಗ್ಸ್)ಗಳೆನ್ನುವರು. ಕೆಲವು ಪ್ರಭೇದದ ಕೀಟಗಳು ದುರ್ವಾಸನೆಯನ್ನು ಹೊರ ಸೂಸುತ್ತವೆ. ಇದರಿಂದಾಗಿ ಇವನ್ನು ಸ್ಟಿಂಕ್ ಫ್ಲೈಸ್ ಎಂದೂ ಕರೆಯಲಾಗುತ್ತದೆ. ಗಿಡಗಂಟೆಗಳಿಗೆ ಅಂಟಿಕೊಂಡೇ ವಾಸಿಸುತ್ತವೆ. ಎರಡು ಜೊತೆ ರೆಕ್ಕೆಗಳಿದ್ದರೂ, ಹಾರಲು ಹೆಚ್ಚು ಸಾಮರ್ಥ್ಯವಿಲ್ಲ. ಈ ಕೀಟಗಳ ತಲೆ ಚಿಕ್ಕದು. ಕುಡಿ ಮೀಸೆಗಳು ಉದ್ದವಾಗಿ, ತೆಳುವಾಗಿವೆ. ಕೆಲವೊಮ್ಮೆ ಕುಡಿ ಮೀಸೆಗಳು ದೇಹಕ್ಕಿಂತ ಉದ್ದ ಇವೆ. ವದನಾಂಗಗಳು ಆಹಾರವನ್ನು ಕಡಿಯುವುದಕ್ಕೆ ಅನುಕೂಲವಾಗಿವೆ. ಎರಡು ಜೊತೆ ರೆಕ್ಕೆಗಳೂ ರಚನೆಯಲ್ಲಿ, ಆಕಾರದಲ್ಲಿ ಒಂದೇ ತೆರನಾಗಿವೆ. ಮುಂದಿನ ಜೊತೆ ರೆಕ್ಕೆಗಳು ಹಿಂದಿನ ಜೊತೆ ರೆಕ್ಕೆಗಳಿಗಿಂತ ಗಾತ್ರದಲ್ಲಿ ದೊಡ್ಡವು. ಇವು ಪಾರದರ್ಶಕವಾಗಿವೆ. ಕೆಲವು ಪ್ರಭೇದಗಳಲ್ಲಿ ಮಾತ್ರ ರೆಕ್ಕೆಗಳ ಮೇಲೆ ಅಲ್ಲಲ್ಲಿ ಮಾಸಲು ಛಾಯೆಗಳಿವೆ.

ಈ ಕುಟುಂಬದ ಕೀಟಗಳು ಮರಗಿಡಗಳ ಕಾಂಡ ಮತ್ತು ಎಲೆಗಳ ಮೇಲೆ ಗುಂಪು ಗುಂಪಾಗಿ ಮೊಟ್ಟೆಯಿಡುತ್ತವೆ. ಒಂದೊಂದು ಮೊಟ್ಟೆಗೂ ಉದ್ದವಾದ ಹಾಗೂ ತೆಳುವಾದ ತೊಟ್ಟು ಇದೆ. ಡಿಂಬಗಳು ಕದಿರಿನಾಕಾರದುವು. ಇವಕ್ಕೆ ರಕ್ತ ಹೀರಲು ಸಹಾಯಕವಾಗಿರುವ ಕುಡುಗೋಲಿನಾಕಾರದ ವದನಾಂಗಗಳಿವೆ. ತಂತುರೂಪದ ಕುಡಿ ಮೀಸೆಗಳು, ಕೃಶವಾದ ಕಾಲುಗಳು ಮತ್ತು ದೇಹದ ಎರಡು ಪಕ್ಕಗಳ ತಳಭಾಗದಲ್ಲಿ ಸಣ್ಣ ಸಣ್ಣ ಮುಳ್ಳುಗಳಂತಿರುವ ರಚನೆಗಳಿವೆ. ಇವುಗಳ ದೇಹ ಸಾಮಾನ್ಯವಾಗಿ ಬೂದಿ ಮಿಶ್ರಿತ ಕೆಂಪು, ಕಪ್ಪು, ಹಳದಿ ಬಣ್ಣಗಳಿಂದ ಕೂಡಿದೆ. ಒಂದು ವಾರದ ಅನಂತರ ಡಿಂಬಗಳು ಮರಗಳಿಗೆ ಅಥವಾ ಇತರ ವಸ್ತುಗಳಿಗೆ ಅಂಟಿಕೊಂಡು ಬಿಳಿಯ ಬಣ್ಣದ ನಯವಾದ ದಾರದಿಂದಾದ ಕೋಶಗಳಲ್ಲಿ

ದೇಹವನ್ನು ಮುದುರಿಕೊಂಡು ಕೋಶಾವಸ್ಥೆಯನ್ನು ಸೇರುತ್ತವೆ. ಡಿಂಬಗಳು ಮತ್ತು ಪ್ರೌಢಕೀಟಗಳು ಇತರ ಕೀಟಗಳನ್ನು ತಿಂದು ಜೀವಿಸುತ್ತವೆ.

ಇವು ಸಸ್ಯಗಳಿಗೆ ಪಿಡುಗುಗಳಾದ ಏಫಿಡ್ಡುಗಳನ್ನು ಮತ್ತು ಇತರ ಹಾನಿಕಾರಕ ಕೀಟಗಳನ್ನು ತಿನ್ನುವುದರಿಂದ ರೈತರಿಗೆ ಬಹಳ ಉಪಯುಕ್ತವೆನಿಸಿವೆ. ಉದಾ: ಹತ್ತಿ ಮತ್ತು ಜೋಳದ ಪೈರಿಗೆ ಅಂಟುವ ಏಫಿಡ್ಡುಗಳನ್ನು ಕ್ರೈಸೋಪ ಜಾತಿಯ ಕೀಟ ತಿಂದು ರೈತರಿಗೆ ಉಪಕಾರಿಯಾಗಿದೆ. (ಎಸ್.ಕೆ.ಆರ್.)

**ಕ್ರೈಸೊಮಾನಡೈನ:** ಪ್ರೋಟೋಜೋವ ವಂಶ, ಮ್ಯಾಸ್ಟಿಗೋಫೋರ ವರ್ಗ, ಫೈಟೊಮ್ಯಾಸ್ಟೀಜಿನ ಉಪವರ್ಗಕ್ಕೆ ಸೇರಿದ ಗಣ. ಈ ವರ್ಗದ ಮುಖ್ಯ ಲಕ್ಷಣ ಚಾಟಿಯಂತಿರುವ ಕಶಾಂಗವನ್ನು ಪಡೆದಿರುವುದು. ಇದರ ಸಹಾಯದಿಂದ ಪ್ರಾಣಿಗಳು ನೀರಿನಲ್ಲಿ ಈಜುತ್ತವೆ. ಈ ಉಪವರ್ಗದ ಪ್ರಮುಖ ಲಕ್ಷಣವೆಂದರೆ ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ನೆರವಾಗುವ ಕ್ರೊಮೆಟೊಫೋರ್‌ಗಳನ್ನು ಪಡೆದಿರುವುದು. ಅವು ಹೋಲೋಫೈಟಿಕ್ ರೀತಿಯ ಪೋಷಣೆಯನ್ನು ಪ್ರದರ್ಶಿಸುತ್ತವೆ. ಒಂದು ಮತ್ತು ಅಪರೂಪವಾಗಿ ಎರಡು ಕಶಾಂಗಗಳಿರುತ್ತವೆ. ಇಲ್ಲಿ ಸಂಚಿತ ಆಹಾರವು ಪಿಷ್ಟ ಅಥವಾ ಇತರ ಅಮೈಲಾಯಿಡ್ ವಸ್ತುಗಳ ರೂಪದಲ್ಲಿರುತ್ತದೆ.

ಕ್ರೈಸೊಮಾನಡೈನ ಗಣಕ್ಕೆ ಪುಟ್ಟ ಕಶಾಂಗಿಗಳು ಸೇರುತ್ತವೆ. ಇವುಗಳಿಗೆ ಒಂದು ಅಥವಾ ಎರಡು ಕಶಾಂಗಗಳಿರಬಹುದು. ಇವುಗಳ ಹೊದಿಕೆಯು ತುಂಬಾ ತೆಳುವಾಗಿರುತ್ತದೆ. ಬಹಳೊಮ್ಮೆ ಅಮೀಬ ರೂಪ ತಾಳುತ್ತವೆ. ಕೆಲವಲ್ಲಿ ಸಿಲಿಕ ಮತ್ತು ಕ್ಯಾಲ್ಕೇರಿಯಾದ ಕಂಕಾಲ ರಚನೆಗಳಿರಬಹುದು. ಇವುಗಳಲ್ಲಿ ಕಂಡು ಬರುವ ಕ್ರೊಮೆಟೋಫೋರ್‌ಗಳು ಹಳದಿ ಅಥವಾ ಬೂದು ಬಣ್ಣದಾಗಿರುತ್ತವೆ. ಸ್ವಪೋಷಕಗಳಾದರೂ ಕೆಲವೊಮ್ಮೆ ಕೊಳೆತಿನಿಗಳಾಗಿಯೂ ವರ್ತಿಸುತ್ತವೆ. ದೇಹದಲ್ಲಿ ಪಿಷ್ಟ ಸಂಚಿತ ಆಹಾರವು ಇರುವುದಿಲ್ಲ. ಇರುವ ಸಂಚಿತ ಆಹಾರವೆಲ್ಲವೂ ಎಣ್ಣೆಯ ರೂಪದ್ದು. ಎಣ್ಣೆಯು ಲ್ಯೂಕೊಸಿನ್ ರೀತಿಯಲ್ಲಿ ಇರುತ್ತದೆ. ಇವು ಸಿಹಿನೀರಿನ ಮತ್ತು ಕಡಲಿನ ಪ್ಲಾಂಕ್ಟಾನ್ ಗುಂಪುಗಳಲ್ಲಿ ಅಸಂಖ್ಯಾತ ಸಂಖ್ಯೆಯಲ್ಲಿ ದೊರಕುತ್ತವೆ. ಈ ಗುಂಪಿನ ಕೆಲವು ಪ್ರಭೇದಗಳು ಹೀಗಿವೆ.

ಹೈಡ್ರೂರಸ್: ಇದರಲ್ಲಿ ಒಂದು ಕಶಾಂಗ ಮತ್ತು ಒಂದು ಕ್ರೊಮೆಟೊಫೋರ್ ಇದೆ. ಸಿಹಿನೀರಿನಲ್ಲಿ ವಾಸಿಸುತ್ತದೆ.

ರೈಜೊಕ್ರೈಸಿಸ್: ಇದರ ದೇಹವು ಬೆತ್ತಲೆಯಾಗಿದ್ದು ಪೆಲಿಕಲ್ ಇಲ್ಲ. ಶಾಶ್ವತವಾಗಿ ಅಮೀಬರೂಪಿಯಾಗಿ ಬದುಕುತ್ತಾದ್ದರಿಂದ ಕಶಾಂಗವು ಇರುವುದಿಲ್ಲ. ಒಂದು ಕ್ರೊಮೆಟೋಫೋರ್ ಇರುತ್ತದೆ.

ಸಿಲಿಕೋಫ್ಲಾಜಲ್ಲೇಟ: ಒಂದು ಕಶಾಂಗ, ಅನೇಕ ಹಳದಿ ಕ್ರೊಮೆಟೊಫೋರ್‌ಗಳು ಇರುವ ಕಡಲ ಪ್ಲಾಂಕ್ಟಾನ್ ಜೀವಿ.

ಕಾಕೊಲಿಥೊಫೋರಿಡೆ: ಒಂದು ಅಥವಾ ಎರಡು ಸಮಾಕೃತಿಯ ಕಶಾಂಗಗಳಿರುತ್ತವೆ. ಎರಡು ಕ್ರೊಮೆಟೊಫೋರ್‌ಗಳಿವೆ. ದೇಹವನ್ನು ಆವರಿಸಿದಂತೆ ಕ್ಯಾಲ್ಕೇರಿಯಾದ ಫಲಕಗಳ ಅಥವಾ ಸರಳುಗಳ ಕವಚವೊಂದಿದೆ. ಕಡಲು ಪ್ಲಾಂಕ್ಟಾನ್ ಜೀವಿ.

ಕ್ರೈಸ್‌ಅಮೀಬ: ಒಂದು ಕಶಾಂಗ, ಎರಡು ಹಳದಿ ಕ್ರೊಮೆಟೊಫೋರ್‌ಗಳು ಮತ್ತು ಕಂಕಾಲ ಇಲ್ಲದಿರುವ ಜೀವಿ. ಮೊಟ್ಟೆಯ ಆಕಾರದಲ್ಲಿರುತ್ತದೆ. ಆದರೆ, ಕಡಲಿನ ಆಧಾರ ವಸ್ತುಗಳ ಮೇಲೆ ಚಲಿಸುವಾಗ ಅಮೀಬ ರೂಪವನ್ನು ತಾಳುತ್ತದೆ. ಆಗ ಕಶಾಂಗವನ್ನು ಕಳೆದುಕೊಳ್ಳುತ್ತದೆ. ಮಿಥ್ಯಾಪಾದಗಳನ್ನು ಉತ್ಪತ್ತಿ ಮಾಡಿ ಆಹಾರವನ್ನು ಸೇವಿಸುತ್ತದೆ. ಸಿಹಿನೀರಿನಲ್ಲಿ ವಾಸಿಸುತ್ತದೆ.

ಆಲಿಗೊಮಾನಸ್: ಇದು ರಚನೆಯಲ್ಲಿ ಬಹು ಮಟ್ಟಿಗೆ ಕ್ರೈಸ್‌ಅಮೀಬವನ್ನೇ ಹೋಲುತ್ತದೆ. ಆದರೆ ಇದರಲ್ಲಿ ಎರಡು ಅಸಮವಾದ ಕಶಾಂಗಗಳಿವೆ ಮತ್ತು ಒಂದು ಕ್ರೊಮೆಟೊಫೋರ್ ಇದೆ.

ಡೈನೊಬ್ರಿಯಾನ್: ಇದರಲ್ಲಿಯೂ ಎರಡು ಅಸಮ ಕಶಾಂಗಗಳು ಮತ್ತು ಎರಡು ಹಳದಿ ಕ್ರೊಮೆಟೊಫೋರ್‌ಗಳು ಇವೆ. ತನ್ನ ಸುತ್ತ ಹೂಜಿಯ ಆಕಾರದ ಪೆಲಿಕಲ್ ಅನ್ನು ಸ್ರವಿಸುತ್ತದೆ. ಕೆಲವೊಮ್ಮೆ ಈ ಪೆಲಿಕಲ್ ನೆರೆ ಪೆಲಿಕಲ್‌ನೊಂದಿಗೆ ಅಂಟಿಕೊಂಡು ಮಿಥ್ಯ ಸಮೂಹಗಳು ಉತ್ಪತ್ತಿಯಾಗಬಹುದು. ಇದು ಸಿಹಿನೀರು ವಾಸಿ.

ಕ್ರೈಸೊಮಾನಡೈನ ಗಣವನ್ನು ಕಶಾಂಗ ವರ್ಗದಲ್ಲಿಯೇ ಅತ್ಯಂತ ಆದಿಮವೆಂದು ಪರಿಗಣಿಸಲಾಗಿದೆ. (ಎಚ್.ಎಚ್.ಎಸ್.)

**ಕ್ರೊನೊಬಯಾಲಜಿ:** ಜೀವಿಗಳ ಲಯಬದ್ಧ ಚಟುವಟಿಕೆಗಳ ಅಧ್ಯಯನ (ಕಾಲಾನುಕ್ರಮ ಜೀವ ವಿಜ್ಞಾನ). 1959 ರಲ್ಲಿ ಮಿನ್ನೆಸೊಟ ವಿಶ್ವವಿದ್ಯಾಲಯದ ಫ್ರಾನ್ಸ್ ಹಾಲ್‌ಬರ್ಗ್ ಇಂತಹ ಚಟುವಟಿಕೆಗಳಿಗೆ ಸರ್ಕಾಡಿಯನ್ ರಿದಮ್ (ದೈನಿಕ ಲಯ) ಎಂದು ಕರೆದನು. ಲ್ಯಾಟಿನ್‌ನಲ್ಲಿ ಸರ್ಕಾಡಿಯನ್ ಎಂದರೆ ಭೂಮ್ಯಾವರ್ತನೆಯ ಜೊತೆ ಸಮಗತಿಯ ಕ್ರಿಯೆ. ಜೀವಿಗಳ ದೇಹದಲ್ಲಿರುವ ಒಂದು ಜೈವಿಕ ಗಡಿಯಾರ ಇದನ್ನು ನಿಯಂತ್ರಿಸುತ್ತದೆ. ಹೊರಗಿನ ಪರಿಸರದ ವ್ಯತ್ಯಾಸಗಳಿಂದ ಉಂಟಾದರೂ ಆಂತರಿಕವಾಗಿಯೇ ನಿಯಂತ್ರಿತವಾಗುತ್ತದೆ. ಬೆಳಗಾಗುತ್ತಿದ್ದಂತೆಯೇ ಜೀವಿಗಳು ಚಟುವಟಿಕೆಯಲ್ಲಿ ತೊಡಗುವುದು, ರಾತ್ರಿಯಾಗುತ್ತಿದ್ದಂತೆಯೇ ನಿದ್ರಿಸುವುದು, ಹೀಗೆ ಹೆಚ್ಚು ಕಡಿಮೆ ದಿನಕ್ಕೊಮ್ಮೆ ಬರುವ ಅಥವಾ ಮರುಕಳಿಸುವ ಜೈವಿಕ ಅಥವಾ ಶರೀರ ಶಾಸ್ತ್ರೀಯ ಪ್ರಕ್ರಿಯೆಯನ್ನು ಈ ವಿಜ್ಞಾನದಲ್ಲಿ ಅಧ್ಯಯನ ಮಾಡಲಾಗುವುದು.

ಇದು ಕೇವಲ ದೈನಂದಿನ ಘಟನೆಯ ಪುನರಾವರ್ತನೆಯಾಗಿರದೆ ಮಾಸಿಕ ಅಥವಾ ವಾರ್ಷಿಕ ಚಟುವಟಿಕೆಯೂ ಆಗಿರಬಹುದು. ಗಡಿಯಾರದ ಲೋಲಕ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಪುನಃ ವಾಪಸ್ಸಾಗುವಂತೆ ತಾಳಗತಿಯಲ್ಲಿ ಲಯಬದ್ಧವಾಗಿ ಈ ಚಟುವಟಿಕೆಗಳು ಘಟಿಸುತ್ತವೆ. ಇದು ಜೀವಿಗಳ ಕೋಶ ವಿಭಜನೆಯಾಗಿರಬಹುದು, ನಿರ್ದಿಷ್ಟ ಋತುವಿನಲ್ಲಿ ಹೂಬಿಡುವ ಪ್ರಕ್ರಿಯೆ ಆಗಿರಬಹುದು ಇಲ್ಲವೆ, ಹಸಿವಾಗುವಿಕೆ ಇರಬಹುದು. ವಲಸೆ, ಗ್ರೀಷ್ಮ ನಿದ್ರೆ, ಶಿಶಿರ ನಿದ್ರೆ ಮುಂತಾದುವೂ ಪ್ರಾಣಿಗಳಲ್ಲಿ ಕಂಡು ಬರುವ ಇಂಥ ಲಯಬದ್ಧ ಚಟುವಟಿಕೆಗಳು (ನೋಡಿ: ವಲಸೆ, ಗ್ರೀಷ್ಮ ನಿದ್ರೆ, ಶಿಶಿರ ನಿದ್ರೆ).

ಈ ಎಲ್ಲ ರೀತಿಯ ಜೈವಿಕ ಚಟುವಟಿಕೆಗಳಿಗೆ ಮುಖ್ಯ ಕಾರಣ ವಿಕಾಸದಲ್ಲಿ ಯಶಸ್ಸನ್ನು ಹೊಂದಿ ಪ್ರಕೃತಿಯ ಆಯ್ಕೆಗೆ ಒಳಪಡುವುದು ಎನ್ನುವುದು ವಿಜ್ಞಾನಿಗಳ ಅಭಿಮತ. ಉದಾಹರಣೆಗೆ ಹುಲ್ಲುಗಾವಲಿನಲ್ಲಿ ವಾಸಿಸುವ ಮೊಲ ಬೆಳಗಿನ ಹಾಗೂ ರಾತ್ರಿ ವೇಳೆಯಲ್ಲಿ ವಿಭಿನ್ನ ವಾತಾವರಣವನ್ನು ಅನುಭವಿಸುತ್ತದೆ. ಅಂತೆಯೇ ಚಂದ್ರನಿಲ್ಲದ ಹಾಗೂ ಚಂದ್ರನಿರುವ ರಾತ್ರಿಯಲ್ಲಿ ಅದರ ವಾತಾವರಣ ಬದಲಾಗುತ್ತದೆ. ಹಾಗೆಯೇ ಬೇಸಿಗೆಯಲ್ಲಿ ಒಂದು ವಾತಾವರಣವಿದ್ದರೆ, ಚಳಿಗಾಲದಲ್ಲಿ ಮತ್ತೊಂದು ವಾತಾವರಣವಿರುತ್ತದೆ. ಆದರೆ ಮೊಲ ಇವೆಲ್ಲವನ್ನೂ ಮೀರಿ ತನ್ನ ಜೀವನದಲ್ಲಿ ಒಂದು ವೇಳಾಪಟ್ಟಿಯನ್ನು ಅನುಸರಿಸುತ್ತದೆ. ದೇಹದಲ್ಲಿ ನಡೆಯುವ ಜೀವ ರಾಸಾಯನಿಕ ಪ್ರಕ್ರಿಯೆಗಳು ವಾತಾವರಣದ ಬದಲಾವಣೆಯಿಂದ ಸಂಪೂರ್ಣವಾಗಿ ಬದಲಾಗದೇ ತಮ್ಮದೇ ಆದ ಜೈವಿಕ ಗಡಿಯಾರವನ್ನು ಅನುಸರಿಸುವುದು ಕಂಡುಬರುತ್ತದೆ

ಈ ರೀತಿಯ ಜೀವಿಯ ಲಯಬದ್ಧ ಚಟುವಟಿಕೆಯನ್ನು ಅಧ್ಯಯನ ಮಾಡಲು ಸಾಮಾನ್ಯವಾಗಿ ವಿಜ್ಞಾನಿಗಳು ಮೂರು ವಿಧಾನಗಳನ್ನು ಅನುಸರಿಸುತ್ತಾರೆ. ಶರೀರ ಕ್ರಿಯಾ ವಿಜ್ಞಾನ, ಜೀವರಾಸಾಯನಿಕ ವಿಜ್ಞಾನ ಹಾಗೂ ಸ್ಥಾಯಿ ಪರಿಸ್ಥಿತಿ (ಹೋಮಿಯೊಸ್ಟಾಸಿಸ್) ವಿಜ್ಞಾನಗಳೇ ಈ ವಿಧಾನಗಳು.

ಜೀವರಾಸಾಯನಿಕ ಬದಲಾವಣೆಗಳ ಲಯಬದ್ಧತೆಯಿಂದ ಹೃದಯ, ಮಿದುಳಿನಂತಹ ಅಂಗಾಂಗಗಳ ತೊಂದರೆಯ ಚಿಕಿತ್ಸೆಯಲ್ಲಿ ಹೊಸ ಬದಲಾವಣೆಗಳಾಗುತ್ತಿವೆ. ಔಷಧಗಳ ಸೇವನೆಯ ವಿಧಾನವೂ ನವೀಕರಣಗೊಳ್ಳುತ್ತಿದೆ. ಶರೀರ ಕ್ರಿಯಾ ವಿಜ್ಞಾನದಲ್ಲಿ ಜೀವಿಯ ವಿವಿಧ ಶರೀರ ಕ್ರಿಯೆಗಳ ಲಯಬದ್ಧತೆಯನ್ನು ತಿಳಿಯಲಾಗುತ್ತಿದೆ. ಸಂತಾನಾಭಿವೃದ್ಧಿ ಕಾಲ, ಅವಧಿ, ವಿಸರ್ಜನಾಂಗದ ನಿಯಮಬದ್ಧತೆಗಳ ನಿಯಂತ್ರಣವನ್ನು ಅರಿಯಲು ಸಾಧ್ಯವಾಗಿದೆ. 19ನೆಯ ಶತಮಾನದಲ್ಲಿ ಕ್ಲಾಡ್ ಬರ್ನಾಡ್ ಸ್ಥಾಯಿ ಪರಿಸ್ಥಿತಿಯನ್ನು ಅನುಸರಿಸಿ ವಾತಾವರಣದಲ್ಲಾಗುವ ಬದಲಾವಣೆ ಹಾಗು ಜೈವಿಕ ಕ್ರಿಯೆಗಳ ಲಯಬದ್ಧತೆಯ ಅಭ್ಯಾಸ ಮಾಡಿದ. ಇದರಿಂದಾಗಿ ಹಲವಾರು ಜೀವಿಗಳಲ್ಲಿ ವಾತಾವರಣ ಬದಲಾದರೂ ಜೈವಿಕ ಗಡಿಯಾರದ ಕಾರ್ಯವಿಧಾನದಲ್ಲಿ, ಬದಲಾವಣೆಯಾಗದಿರುವುದು ಕಂಡುಬಂದಿತು.

ಕ್ರೋನೊ ಬಯಾಲಜಿ, ಜೀವಿಯ ಚಟುವಟಿಕೆಯ ಲಯವನ್ನು ಅರಿಯಲು ಅದರ ನಿಯಂತ್ರಣ ವಿಧಾನವನ್ನು ತಿಳಿಯಲು ಹಾಗೂ ಈ ತಿಳುವಳಿಕೆಯ ಸಹಾಯದಿಂದ ವೈದ್ಯಕೀಯ ವಿಜ್ಞಾನದಲ್ಲಿ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸುತ್ತಿದೆ. (ಎಸ್.ಎಂ.ಜಿ.)

**ಕ್ರೊಮಟಾಗ್ರಫಿ:** ವಸ್ತುಗಳ ಮಿಶ್ರಣಗಳನ್ನು ಬೇರ್ಪಡಿಸುವ ಮತ್ತು ವಿಶ್ಲೇಷಿಸುವ ಒಂದು ವಿಧಾನ. ಇದರಲ್ಲಿ ಅನಿಲ, ದ್ರವ ಅಥವಾ ದ್ರಾವಕಗಳಲ್ಲಿ (ಸಾಲ್ವೆಂಟ್ಸ್) ವಿಲೀನವಾದ ಘನಗಳ ಅಂಶಗಳ ನಡುವೆ ಮಿಶ್ರಣದ ಘಟಕಗಳನ್ನು ವಿತರಣೆಮಾಡಿ ಬೇರ್ಪಡಿಸಬಹುದು. ವಸ್ತುಗಳು ಅಲ್ಪಗಾತ್ರದಲ್ಲಿದ್ದಾಗ ಅವನ್ನು ಬೇರ್ಪಡಿಸಲು ಸಹ ಕ್ರೊಮಟಾಗ್ರಫಿಯನ್ನು ಬಳಸಬಹುದು. ಈ ವಿಧಾನವನ್ನು ಸ್ವೆಟ್ ಎಂಬಾತ ಮೊದಲಬಾರಿ ನೈಸರ್ಗಿಕ ಬಣ್ಣಗಳ ದ್ರಾವಣ ಮಿಶ್ರಣವನ್ನು ಬೇರ್ಪಡಿಸಲು ಉಪಯೋಗಿಸಿದ. ಇದರ ಪ್ರಕಾರ ಬಣ್ಣಗಳ ಮಿಶ್ರಣದ ದ್ರಾವಣವನ್ನು ಘನ ಕ್ಯಾಲ್ಸಿಯಂ ಕಾರ್ಬೊನೇಟ್ ತುಂಬಿರುವ ಸ್ತಂಭದಲ್ಲಿ ಹಾಯಿಸಿದಾಗ ಅವುಗಳ ಅಧಿಶೋಷಣ ದರದಲ್ಲಿ (ಅಡ್ಸಾರ್ಪ್ಷನ್ ರೇಟ್)

ವ್ಯತ್ಯಾಸವಿರುವುದರಿಂದ ಅವು ಬೇರ್ಪಡೆಯಾಗಿ ಸ್ತಂಭದಲ್ಲಿ ಬಣ್ಣದ ಪಟ್ಟಿಗಳು ಕಂಡುಬರುತ್ತವೆ. ಈ ಪಟ್ಟಿಗಳಿಗೆ ಕ್ರೊಮಟಾಗ್ರಾಮ್ ಎಂದು ಹೆಸರು. ಆಧುನಿಕ ಕ್ರೊಮಟಾಗ್ರಫಿ ವಿಧಾನದಲ್ಲಿ ಬಣ್ಣಗಳ ಮಿಶ್ರಣಗಳಲ್ಲದೆ ಅಯಾನಿಕ ವಸ್ತುಗಳು, ಸಾವಯವ ರಾಸಾಯನಿಕಗಳು ಮತ್ತು ಅನಿಲಗಳ ಮಿಶ್ರಣಗಳನ್ನು ಸಹ ಬೇರ್ಪಡಿಸಬಹುದು. ಈ ವಿಧಾನಗಳಲ್ಲಿ ಹಲವಾರು ವರ್ಗಗಳಿವೆ. ಇವುಗಳಲ್ಲಿ ಮುಖ್ಯವಾದುವು ಅಯಾನುವಿನಿಮಯ ಕ್ರೊಮಟಾಗ್ರಫಿ, ಅಧಿಶೋಷಣ ಕ್ರೊಮಟಾಗ್ರಫಿ ಮತ್ತು ಭಾಗೀಕರಣ (ಪಾರ್ಟಿಷನ್) ಕ್ರೊಮಟಾಗ್ರಫಿ. ಇವುಗಳ ಜೊತೆಗೆ ವಿದ್ಯುತ್ ಕ್ರೊಮಟಾಗ್ರಫಿ ಮತ್ತು ಅನಿಲ ಕ್ರೊಮಟಾಗ್ರಫಿಗಳನ್ನು ಸಹ ಸೇರಿಸಿಕೊಳ್ಳಬಹುದು. ಇವೆಲ್ಲವುಗಳಲ್ಲೂ ಮಿಶ್ರಣದಲ್ಲಿನ ವಸ್ತುಗಳು ಆಯ್ಕೆಯ ಮೂಲಕ ಅಧಿಶೋಷಣೆಯಾಗಿದ್ದರೂ ಸ್ವಲ್ಪಮಟ್ಟಿಗಾದರೂ ಅಧಿಶೋಷಣಕಾರ್ಯ ಉಂಟಾಗುತ್ತದೆ.

೧. ಅಯಾನುವಿನಿಮಯ ಕ್ರೊಮಟಾಗ್ರಫಿ: ಇದರಲ್ಲಿ ದ್ರಾವಣದಲ್ಲಿರುವ ಅಯಾನುಗಳ ಮಿಶ್ರಣವನ್ನು ಘನರೂಪದಲ್ಲಿರುವ ಅಯಾನುವಿನಿಮಯ ರಾಳವನ್ನು ಉಪಯೋಗಿಸಿ ಬೇರ್ಪಡಿಸಬಹುದು. ಈ ರಾಳವನ್ನು ಒಂದು ಸ್ತಂಭದಲ್ಲಿ ತುಂಬಿ ಅದರ ಮೂಲಕ ಅಯಾನುಮಿಶ್ರಣ ದ್ರಾವಣವನ್ನು ಹಾಯಿಸಿದಲ್ಲಿ ಅಯಾನುಗಳು ರಾಳದಲ್ಲಿ ಅಧಿಶೋಷಿತವಾಗುತ್ತವೆ. ಅಧಿಶೋಷಿತವಾದ ಅಯಾನುಗಳನ್ನು ಅನುಕ್ರಮವಾಗಿ ಬಿಡುಗಡೆಮಾಡಲು ಹಲವು ಅಭಿಕರ್ಮಕಗಳನ್ನು (ರೀಏಜೆಂಟ್ಸ್) ಉಪಯೋಗಿಸುತ್ತಾರೆ. ಈ ಅಭಿಕರ್ಮಕ ದ್ರಾವಣಗಳಿಗೆ ಸ್ಥಪನಕಾರಿಗಳೆಂದು (ಎಲ್ಯೂಟಂಟ್ಸ್) ಹೆಸರು. ಎಲ್ಲಕ್ಕಿಂತ ಸಾರರಿಕ್ತವಾಗಿ ಅಧಿಶೋಷಿಸಲ್ಪಟ್ಟ ಅಯಾನು ಮೊದಲು ಬಿಡುಗಡೆಯಾಗಿ ಸ್ತಂಭದಿಂದ ಹೊರಬರುತ್ತದೆ. ಇತರ ಅಯಾನುಗಳ ಬಿಡುಗಡೆ ಅವುಗಳ ಅಧಿಶೋಷಿತ ಸಾಮರ್ಥ್ಯವನ್ನು ಅವಲಂಬಿಸಿರುವುದು. ಅಧಿಶೋಷಿತವಾದ ಅಯಾನು ಕೊನೆಯಲ್ಲಿ ಬಿಡುಗಡೆಯಾಗುತ್ತದೆ. ಅಯಾನ್, ವಿನಿಮಯ ರಾಳಗಳು ಸಾಮಾನ್ಯವಾಗಿ ಫೀನಾಲ್ ಮತ್ತು ಫಾರ್ಮಾಲ್‍ಡಿಹೈಡ್ ಅಥವಾ ಸ್ಟೈರೀನ್ ಮತ್ತು ಡೈವೀನೈಲ್ ಬೆಂಜೀನುಗಳ ಬಹ್ವಂಶ ಕ್ರಿಯೆಯಿಂದ ಉತ್ಪತ್ತಿಯಾದ ಪಾಲಿಮರುಗಳು. ಇವುಗಳಲ್ಲಿ ಅಯಾನುಶೀಲ ಪುಂಜಗಳಿರುತ್ತವೆ. ಈ ರಾಳಗಳನ್ನು ಧನ ಮತ್ತು ಋಣ ಅಯಾನುವಿನಿಮಯ ರಾಳಗಳೆಂದು ವಿಂಗಡಿಸಬಹುದು. ಇಂಥ ವರ್ಗೀಕರಣ ರಾಳದಲ್ಲಿರುವ ಅಯಾನಿಕ ಅಥವಾ ವಿನಿಮಯವಾಗುವ ಪುಂಜದ ಮೇಲೆ ಅವಲಂಬಿಸಿದೆ. ಧನ ಅಯಾನುವಿನಿಮಯ ರಾಳಗಳಲ್ಲಿ ಸಲ್ಫೋನಿಕ್ ಆಮ್ಲ ($-SO_3H$) ಅಥವಾ ಕಾರ್ಬಾಕ್ಸಿಲಿಕ್ ಆಮ್ಲ (-COOH) ಪುಂಜಗಳಿದ್ದು ಅಯಾನಿಕ ರೂಪದಲ್ಲಿ $H^+$ ಅಯಾನನ್ನು $Na^+, Ca^{2+} La^{3+}, Th^{4+}$ ಮುಂತಾದ ಲೋಹದ ಅಯಾನುಗಳ ಕೂಡ ಉತ್ತಮಣ ರೀತಿಯಲ್ಲಿ ವಿನಿಮಯ ಮಾಡಿಕೊಳ್ಳುವ ಸಾಮರ್ಥ್ಯ ಪಡೆದಿರುತ್ತದೆ. ಈ ಪುಂಜಗಳು ರಾಳದಲ್ಲಿ $-SO_3Na$ ಅಥವಾ -COONa ಮುಂತಾದ ಲವಣಗಳ ರೂಪದಲ್ಲಿದ್ದಾಗ $Na^+$ ಅಯಾನು $H^+$ ಅಯಾನು ಮತ್ತು ಇತರ ಲೋಹದ ಅಯಾನುಗಳ ಕೂಡ ವಿನಿಮಯ ಮಾಡಿಕೊಳ್ಳಬಹುದು. ಸಲ್ಫೋನಿಕ್ ಆಮ್ಲವಿರುವ ರಾಳಗಳನ್ನು ಸಾರ ಆಮ್ಲ ರಾಳಗಳೆಂದು ಕರೆಯಬಹುದು. ಏಕೆಂದರೆ ಇಲ್ಲಿ ಪುಂಜದ ಅಯಾನೀಕರಣ ಪೂರ್ತಿಯಾಗಿರುತ್ತದೆ. ಕಾರ್ಬಾಕ್ಸಿಲಿಕ್ ಆಮ್ಲ ಇದ್ದಾಗ ಪುಂಜದ ಅಯಾನೀಕರಣ ಪೂರ್ತಿಯಾಗಿಲ್ಲವಾದ್ದರಿಂದ ಇಂಥ ರಾಳಗಳನ್ನು ಸಾರರಿಕ್ತ ಆಮ್ಲರಾಳಗಳೆಂದು ಕರೆಯುತ್ತಾರೆ. ಆದರೆ ರಾಳ ಲವಣದ ರೂಪದಲ್ಲಿದ್ದರೆ ಅಯಾನೀಕರಣ ಪೂರ್ತಿಯಾಗಿರುತ್ತದೆ. ಲವಣರೂಪದಲ್ಲಿದ್ದಾಗ ರಾಳದಲ್ಲಿ ಅಯಾನುವಿನಿಮಯ ವೇಗವಾಗಿಯೂ ಆಮ್ಲರೂಪದಲ್ಲಿ ನಿಧಾನವಾಗಿಯೂ ಆಗುತ್ತದೆ. ಋಣ ಅಯಾನು ವಿನಿಮಯ ರಾಳಗಳಲ್ಲಿ ಚತುರ್ಥಿಕ ಅಮೋನಿಯಂ ಪ್ರತ್ಯಾಮ್ಲ ($\equiv N—OH$) ಅಥವಾ ಅಮೈನುಗಳಿರುತ್ತವೆ. ಮೊದಲ ವರ್ಗದ ಪುಂಜಗಳು ರಾಳಗಳಲ್ಲಿದ್ದಾಗ ಅವು ಸಾರ ಕ್ರಿಯಾಶೀಲಪುಂಜಗಳೆನಿಸಿಕೊಳ್ಳುತ್ತವೆ. ಇವು ಪ್ರತ್ಯಾಮ್ಲ ಅಥವಾ ಲವಣರೂಪದಲ್ಲಿದ್ದಾಗ $Cl^-, FeCl_4^-$ ಮುಂತಾದ ಋಣ ಅಯಾನುಗಳೊಂದಿಗೆ ಶೀಘ್ರವಾಗಿ ವಿನಿಮಯ ಹೊಂದುತ್ತವೆ. ಅಮೈನ್ ಪುಂಜಗಳಿದ್ದಾಗ ಅದು ಸಾರರಿಕ್ತ ರಾಳವೆಂದು ಗೊತ್ತು ಮಾಡಬಹುದು. ಸಾಮಾನ್ಯವಾಗಿ ರಾಳದ ಅಯಾನುವಿನಿಮಯ ಸಾಮರ್ಥ್ಯ ಅದರಲ್ಲಿರುವ ಬಹ್ವಂಶಿ ಮತ್ತು ಕ್ರಿಯಾಶೀಲ ಪುಂಜಗಳ ಮೇಲೆ ಅವಲಂಬಿಸಿದೆ. ಸಾರರಿಕ್ತ ಆಮ್ಲ ಅಥವಾ ಪ್ರತ್ಯಾಮ್ಲ ಪ್ರವೃತ್ತಿಯ ರಾಳಗಳ ವಿನಿಮಯ ಸಾಮರ್ಥ್ಯ ಅಯಾನು ಮಿಶ್ರಣವುಳ್ಳ ದ್ರಾವಣದ pH ಮೇಲೂ ಅವಲಂಬಿಸಿರುತ್ತದೆ. ರಾಳದ ವಿನಿಮಯ ಸಾಮರ್ಥ್ಯವನ್ನು ಒಂದು ಗ್ರಾಂ ತೂಕ ಒಣ ರಾಳ ಅಥವಾ ಒಂದು ಮಿಲಿಲೀಟರಿನಷ್ಟು ಒದ್ದೆ ರಾಳ ವಿನಿಮಯ ಮಾಡುವ ಮಿಲಿ ಸಮತುಲ್ಯಗಳಲ್ಲಿ (ಮಿಲಿ ಈಕ್ವಿವಲೆಂಟ್ಸ್) ಕೊಡಬಹುದು. ಉದಾಹರಣೆಗೆ, ಧನ ಅಯಾನು ವಿನಿಮಯ ರಾಳ ಡೊವೆಕ್ಸ್–೫೦ ಉಪಯೋಗಿಸಿದ ಸಂದರ್ಭಗಳಲ್ಲಿ ಈ ಬೆಲೆಗಳು ೫.೦ ಮತ್ತು ೧.೯ ಮಿಲಿ ಸಮತುಲ್ಯಗಳೆಂದು ಕಂಡುಹಿಡಿಯಲಾಗಿದೆ. ಸಾಮಾನ್ಯವಾಗಿ ೦.೧ ಪ್ರಸಾಮಾನ್ಯ (ನಾರ್ಮಲ್) ಅಯಾನು ದ್ರಾವಣವನ್ನು ಉಪಯೋಗಿಸಿದರೆ ಧನ ಅಯಾನು ವಿನಿಮಯ ರಾಳದಲ್ಲಿ ಅಯಾನಿನ ವಾತ್ಸಲ್ಯ (ಅಫಿನಿಟಿ) ಧನ ಅಯಾನಿನ ವಿದ್ಯುದಾವೇಶದ ಮೇಲೆ ಅವಲಂಬಿಸಿರುತ್ತದೆ. ಧನ ವಿದ್ಯುದಾವೇಶ ಹೆಚ್ಚಿದಂತೆ ಈ ವಾತ್ಸಲ್ಯವೂ ಹೆಚ್ಚುತ್ತದೆ. ಆದರೆ ಜಲಸಂಯೋಜಿತ ಧನ ಅಯಾನಿನ ಗಾತ್ರ ಹೆಚ್ಚಿದಂತೆ ಕಡಿಮೆ ಆಗುವುದು. ಅಯಾನುಗಳ ಸಾಪೇಕ್ಷ ವಿನಿಮಯ ವಾತ್ಸಲ್ಯಕ್ರಮ ರಾಳದ ಮತ್ತು ಪ್ರಯೋಗದ ಸ್ಥಿತಿಗಳ ಮೇಲೆ ಅವಲಂಬಿಸಿರುತ್ತದೆ.

ಅಯಾನು ಮಿಶ್ರಣಗಳ ಬೇರ್ಪಡೆಯನ್ನು ಅಯಾನುವಿನಿಮಯ ಸ್ತಂಭಗಳಲ್ಲಿ ಮಾಡಬಹುದು. ಹಲವು ವಿಧವಾದ ಸ್ತಂಭಗಳನ್ನು ಚಿತ್ರ ೧ ರಲ್ಲಿ ತೋರಿಸಿದೆ. ಇವುಗಳಲ್ಲಿ ರಾಳವನ್ನು ತುಂಬಲು ಮತ್ತು ಹೊರಬರುವ ಅಯಾನು ದ್ರಾವಣದ ಪ್ರವಾಹವನ್ನು ನಿಯಂತ್ರಣ ಮಾಡಲು ಅನುಕೂಲ ಉಂಟು. ಅಯಾನು ವಿನಿಮಯ ಸ್ತಂಭವನ್ನು ಅತಿಸರಳ ವಿಧಾನದಲ್ಲಿ ರಚಿಸಬೇಕಾದರೆ ಒಂದು ಬ್ಯೂರೆಟ್ಟಿನ ತಳದಲ್ಲಿ ಗಾಜಿನ ಹತ್ತಿ ಇಟ್ಟು ಅದರ ಮೇಲೆ ರಾಳವನ್ನು ೫–೬ ಸೆಂಮೀ ಎತ್ತರದ ವರೆಗಾದರೂ ತುಂಬಬೇಕು. ರಾಳವನ್ನು ಬ್ಯೂರೆಟ್ಟಿಗೆ ತುಂಬಬೇಕಾದರೆ ಅದನ್ನು ನೀರಿನಲ್ಲಿ ಗಂಜಿಯಂತೆ ಮಾಡಿ ಅದಕ್ಕೆ ಸುರಿಯುವುದು ಸುಲಭವಿಧಾನ. ಆಗ ಗಾಳಿಯ ಅಥವಾ ಯಾವ ಅನಿಲದ ಗುಳ್ಳೆಗಳೂ ರಾಳದೊಳಗೆ ಸೇರೆಯಾಗದಂತೆ ಎಚ್ಚರಿಕೆ ವಹಿಸಬೇಕು. ಈ ರೀತಿ ತಯಾರು ಮಾಡಿದ ಅಯಾನು ವಿನಿಮಯ ಸ್ತಂಭದಲ್ಲಿ ಅಯಾನುಗಳುಳ್ಳ ಮಿಶ್ರಣ ದ್ರಾವಣವನ್ನು ಸುರಿದರೆ ಎಲ್ಲ ಅಥವಾ ಕೆಲವು ಅಯಾನುಗಳು ರಾಳದಲ್ಲಿ ಅಧಿಶೋಷಿತವಾಗಬಹುದು. ಅಧಿಶೋಷಿತವಾಗದಿರುವ ಅಯಾನುಗಳನ್ನು ಬಟ್ಟಿ ಇಳಿಸಿದ ನೀರು, ಸಾರರಿಕ್ತ ಆಮ್ಲ ಅಥವಾ ವಿಶೇಷ ತರದ ಅಭಿಕರ್ಮಕಗಳನ್ನು ಉಪಯೋಗಿಸಿ ಬಿಡುಗಡೆ ಮಾಡಬಹುದು. ರಾಳದಲ್ಲಿ ಅಧಿಶೋಷಿತವಾದ ಅಯಾನುಗಳನ್ನು ಅನುಕ್ರಮವಾಗಿ ಬಿಡುಗಡೆಮಾಡಲು ಆಮ್ಲ, ಪ್ರತ್ಯಾಮ್ಲ ಅಥವಾ ಲವಣ ದ್ರಾವಣಗಳನ್ನು ಉಪಯೋಗಿಸಬೇಕಾಗುತ್ತದೆ. ಇವನ್ನೇ




ಚಿತ್ರ 1. ಅಯಾನು ವಿನಿಮಯ ಸ್ತಂಭಗಳು : A,B,C-ಗಾಜಿನ ಹತ್ತಿ ಇಟ್ಟಿರುವ ಸ್ತಂಭಗಳು : D,F-ಇತರ ಸಲಕರಣೆಗಳು. 1 ಲಾಳಿಕೆ, 2 ರಾಳ, 3 ಹೆಪ್ಪುಗಟ್ಟಿದ ಗಾಜಿನ ತುಂಡು ತಗಡು, 4 ಸ್ಟಾಪ್ ಕಾಕ್, 5 ಹೊರ ಬಂದ ದ್ರಾವಣ, 6 ಮಿಶ್ರಣ, 7 ರಾಳದ ಸ್ತಂಭ, 8 ಹೆಪ್ಪುಗಟ್ಟಿದ ಗಾಜಿನ ತುಂಡು ತಗಡು.

ಸ್ಥಪನಕಾರಿಗಳೆಂದು ಕರೆಯುವುದು. ಧನ ಅಯಾನು ವಿನಿಮಯ ರಾಳವನ್ನು ಉಪಯೋಗಿಸಿದರೆ ೩–೪ ಮೋಲಾರ್ ಹೈಡ್ರೊಕ್ಲೋರಿಕ್ ಆಮ್ಲ ಸ್ಥಪನಕಾರಿಯಾಗುತ್ತದೆ. ಋಣ ಅಯಾನು ವಿನಿಮಯ ರಾಳಕ್ಕೆ ಆಮ್ಲ, ಪ್ರತ್ಯಾಮ್ಲ ಹಾಗೂ ತಟಸ್ಥ ಲವಣದ್ರಾವಣಗಳನ್ನು ಉಪಯೋಗಿಸಬಹುದು. ಸ್ಥಪನಕಾರಿಗಳನ್ನು ಉಪಯೋಗಿಸಿದಾಗ ಹೊರಬಂದ

ಪ್ರತಿಯೊಂದು ಅಯಾನಿನ ಅಂಶ ಮತ್ತು ಹೊರಬರುತ್ತಿರುವ ದ್ರಾವಣದ ಗಾತ್ರದ ಅಥವಾ ದ್ರಾವಣ ಒಂದೇ ದರದಲ್ಲಿ ಹೊರಬರಲು ಬೇಕಾಗುವ ಕಾಲದ ನಕ್ಷೆಯನ್ನು ಬರೆದಲ್ಲಿ ಮಿಶ್ರಣದಲ್ಲಿನ ಅಯಾನುಗಳನ್ನು ಗುರುತಿಸಿ ಅಂದಾಜುಮಾಡಬಹುದು.

ಹಲವು ಬಾರಿ ಮಿಶ್ರಣದ ಕೆಲವು ಅಯಾನುಗಳು ರಾಳದಲ್ಲಿ ಜಟಿಲ ಋಣ ಅಯಾನುಗಳಾಗಿ ಬದಲಾವಣೆ ಹೊಂದಿ ಅಧಿಶೋಷಿತವಾಗುವ ಸಾಧ್ಯತೆ ಇದೆ. ಇವನ್ನು ಋಣ ಅಯಾನು ವಿನಿಮಯ ಸ್ತಂಭವನ್ನು ಉಪಯೋಗಿಸಿ ಇತರ ಅಯಾನುಗಳಿಂದ ಬೇರ್ಪಡಿಸಬಹುದು.

೨. ಅಧಿಶೋಷಣ ಕ್ರೊಮಟಾಗ್ರಫಿ : ಈ ವಿಧಾನದಲ್ಲಿ ವಸ್ತುಗಳ ಮಿಶ್ರಣವನ್ನು ಬೇರ್ಪಡಿಸಲು ಘನರೂಪದಲ್ಲಿರುವ ಅಧಿಶೋಷಕ ಮತ್ತು ದ್ರಾವಕಗಳ ನಡುವೆ ಹಲವಾರು ಬಾರಿ ವಿತರಣೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಪಟುಗೊಳಿಸಿದ ಇದ್ದಲು ಅಥವಾ ಅಲ್ಯೂಮಿನ್, ಕ್ಯಾಲ್ಸಿಯಂ ಕಾರ್ಬೊನೇಟ್, ಸಿಲಿಕ ಜೆಲ್ ಮುಂತಾದುವುಗಳನ್ನು ಅಧಿಶೋಷಕಗಳಾಗಿ ಮತ್ತು ಹೈಡ್ರೊಕಾರ್ಬನುಗಳನ್ನು ಅಥವಾ ಆಲ್ಕೊಹಾಲುಗಳನ್ನು ದ್ರಾವಕಗಳಾಗಿ ಉಪಯೋಗಿಸುತ್ತಾರೆ. ವಸ್ತುಗಳು ಮಿಶ್ರಣದಿಂದ ಬೇರ್ಪಡೆಯಾಗುವ ದಕ್ಷತೆ ಅವುಗಳ ಚಲನಶೀಲತೆಯಲ್ಲಿರುವ (ಮೊಬಿಲಿಟಿ) ವ್ಯತ್ಯಾಸಗಳನ್ನು ಅವಲಂಬಿಸಿದೆ. ಒಂದು ಗೊತ್ತಾದ ಅಧಿಶೋಷಕ ಮತ್ತು ದ್ರಾವಕಗಳಲ್ಲಿ ವಸ್ತುವಿನ ಚಲನಶೀಲತೆಯನ್ನು $R_f$ ಪ್ರಮಾಣದಲ್ಲಿ ತಿಳಿಸಬಹುದು.

$$R_f = \frac{\text{ವಸ್ತು ಚಲಿಸಿದ ದೂರ}}{\text{ದ್ರಾವಕ ಚಲಿಸಿದ ದೂರ}}$$

ಅಧಿಶೋಷಣ ಕ್ರೊಮಟಾಗ್ರಫಿ ಅತಿ ಸೂಕ್ಷ್ಮವಿಧಾನವಾದ್ದರಿಂದ ಸ್ವಲ್ಪಮಟ್ಟಿಗೆ ರಚನಾತ್ಮಕ ಭಿನ್ನತೆಯಿರುವ ಆರ್ಗ್ಯಾನಿಕ್ ಅಣುಗಳನ್ನು ಬೇರ್ಪಡಿಸಿ ಗುರುತಿಸಬಹುದು.

೩. ಭಾಗೀಕರಣ ಕ್ರೊಮಟಾಗ್ರಫಿ : ಇಲ್ಲಿ ವಸ್ತುಗಳ ಬೇರ್ಪಡೆ ದ್ರಾವಕ ಆಸವೀಕರಣ ತತ್ತ್ವದ (ಸಾಲ್ವೆಂಟ್ ಎಕ್ಸ್ ಟ್ರ್ಯಾಕ್ಷನ್ ಪ್ರಿನ್ಸಿಪಲ್) ಮೇಲೆ ಅವಲಂಬಿಸಿದೆ. ವಸ್ತುಗಳ ಮಿಶ್ರಣವನ್ನು ಹರಿಯುತ್ತಿರುವ ಆರ್ಗ್ಯಾನಿಕ್ ದ್ರಾವಕ ಮತ್ತು ಸ್ಥಿರವಾದ ನೀರಿನ ಅಂಶಗಳ ನಡುವೆ ವಿತರಣೆ ಮಾಡಬೇಕು. ನೀರಿನ ಅಂಶಕ್ಕೆ ಆಧಾರವಾಗಿ ಸೋಸುಕಾಗದದ ಚೂರುಗಳು ಅಥವಾ ಸೋಸುಕಾಗದದ ಹಾಳೆಗಳನ್ನೆ ಉಪಯೋಗಿಸಬಹುದು. ಆಗ ಇದನ್ನು ಸೋಸುಕಾಗದ ಕ್ರೊಮಟಾಗ್ರಫಿಯೆನ್ನುತ್ತಾರೆ. ಸಿಲಿಕ ಜೆಲ್ ಮುಂತಾದವನ್ನು ಉಪಯೋಗಿಸಿದರೆ ಆ ವಿಧಾನಕ್ಕೆ ತೆಳು ಪದರ ಕ್ರೊಮಟಾಗ್ರಫಿಯೆಂದು ಹೆಸರು. ಸೋಸುಕಾಗದ ಕ್ರೊಮಟಾಗ್ರಫಿಯಲ್ಲಿ ವಾಟ್‌ಮನ್ ೧, ೩ ಮತ್ತು ೪ MM ಸೋಸುಕಾಗದಗಳನ್ನು ಉಪಯೋಗಿಸಬಹುದು. ಪ್ರಯೋಗ ವಿಧಾನದಲ್ಲಿ ಮಿಶ್ರಣ ದ್ರಾವಣದ ಒಂದು ತೊಟ್ಟನ್ನು ಸೋಸುಕಾಗದದ ಒಂದು ಅಂಚಿನಲ್ಲಿ ಅಂದರೆ ಸುಮಾರು ೩-೬ ಸೆಂಮೀ ಎತ್ತರದಲ್ಲಿಡಬೇಕು. ಹಲವಾರು ಮಿಶ್ರಣಗಳಿದ್ದರೆ ಅವುಗಳ ತೊಟ್ಟುಗಳನ್ನು ಒಂದೊಂದಕ್ಕೂ ೨-೩ ಸೆಂಮೀ ಅಂತರವಿರುವಂತೆ ಒಂದೇ ಹಾಳೆಯ ಮೇಲಿಡಬಹುದು. ಆಮೇಲೆ ಈ ಅಂಚನ್ನು ದ್ರಾವಕವಿರುವ ತೊಟ್ಟಿಯೊಂದರಲ್ಲಿ ಮುಳುಗಿಸಿ ಒಂದು ಘಂಟಾಪಾತ್ರೆಯಿಂದ ತೊಟ್ಟಿಯನ್ನು ಮುಚ್ಚಬೇಕು. ಸೋಸುಕಾಗದದಲ್ಲಿ ದ್ರಾವಕ ಮೇಲೇರಿದಾಗ ಮಿಶ್ರಣದಲ್ಲಿರುವ ವಸ್ತುಗಳು ದ್ರಾವಕ ಹರಿಯುವ ದಿಕ್ಕಿನಲ್ಲಿ ಚಲಿಸುತ್ತವೆ. ಆದರೆ ಚಲನಶೀಲತೆಯಲ್ಲಿರುವ ವ್ಯತ್ಯಾಸದಿಂದ ಬೇರೆ ಬೇರೆ ಚುಕ್ಕೆಗಳ ರೂಪದಲ್ಲಿ ಬೇರ್ಪಡೆಯಾಗುತ್ತವೆ. ವಸ್ತುಗಳ ಬೇರ್ಪಡೆಯ ದಕ್ಷತೆಯನ್ನು ಅವುಗಳ $R_f$ ಪ್ರಮಾಣದಿಂದ ತಿಳಿಯಬಹುದು. $R_f$ ಬೆಲೆ ಸೊನ್ನೆಯಿಂದ ಒಂದರವರೆಗಿರಬಹುದು. ಈ ಬೆಲೆ ಸಾಮಾನ್ಯವಾಗಿ ದ್ರಾವಕದ ವ್ಯವಸ್ಥೆ ಮತ್ತು ಅಭಿಕರ್ಮಕಗಳ ಸಾರತೆಯ (ಕಾನ್‌ಸಂಟ್ರೇಷನ್) ಮೇಲೆ ಅವಲಂಬಿಸಿದೆ. ಅನೇಕ ವಸ್ತುಗಳಿಗೆ ಪ್ರಮಾಣಪಟ್ಟಿಗಳನ್ನು ತಯಾರು ಮಾಡಿದೆ. ಮಿಶ್ರಣದಲ್ಲಿನ ಎರಡು ವಸ್ತುಗಳ ಬೇರ್ಪಡೆಯ ದಕ್ಷತೆಯನ್ನು ಅವುಗಳ ಪ್ರಮಾಣ ವ್ಯತ್ಯಾಸದಲ್ಲಿ ($\Delta R_f$) ತಿಳಿಸಬಹುದು. ಈ ವ್ಯತ್ಯಾಸ ಹೆಚ್ಚಿದಷ್ಟೂ ಮಿಶ್ರಣದ ಬೇರ್ಪಡೆ ಉತ್ತಮವಾಗಿರುತ್ತದೆ. ಸೋಸುಕಾಗದ ಕ್ರೊಮಟಾಗ್ರಫಿಯಲ್ಲಿ ಕೆಲವು ಮಿಶ್ರಣಗಳಿಗೆ ಎರಡು ದ್ರಾವಕಗಳನ್ನು ಉಪಯೋಗಿಸಿದಾಗ ಅವುಗಳ ಬೇರ್ಪಡೆ ಉತ್ತಮವಾಗುತ್ತದೆ. ಮೊದಲನೆಯ ದ್ರಾವಕವನ್ನು ಮಿಶ್ರಣದ ತೊಟ್ಟಿ ಇರುವ ದಿಕ್ಕಿನಲ್ಲಿ ಹರಿಯಲು ಬಿಟ್ಟು ಅನಂತರ ಎರಡನೆಯ ದ್ರಾವಕವನ್ನು ಇದಕ್ಕೆ ಸಮಕೋನದ ದಿಕ್ಕಿನಲ್ಲಿ ಹರಿಯಲು ಬಿಡಬೇಕು. ಈ ವಿಧಾನಕ್ಕೆ ಎರಡು ಆಯಾಮಗಳ (ಟೂ ಡೈಮೆನ್ಷನಲ್) ಕ್ರೊಮಟಾಗ್ರಫಿಯೆಂದು ಹೆಸರು. ಸೋಸುಕಾಗದ ಕ್ರೊಮಟಾಗ್ರಾಮ್‌ಗಳ ವರ್ಗೀಕರಣ ದ್ರಾವಕವನ್ನು ಉಪಯೋಗಿಸುವ ವಿಧಾನ ಮತ್ತು ಸೋಸುಕಾಗದಗಳ ಆಕಾರದ ಮೇಲೆ ತಿಳಿಸಬಹುದು. ಸೋಸುಕಾಗದದಲ್ಲಿ ದ್ರಾವಕ ಮೇಲೇರಿದರೆ ಊರ್ಧ್ವಮುಖ ಕ್ರೊಮಟಾಗ್ರಾಮ್ ಎಂದೂ ಮೇಲಿನಿಂದ ಕೆಳಗಿಳಿದರೆ ಅಧೋಮುಖ ಕ್ರೊಮಟಾಗ್ರಾಮ್ ಎಂದೂ ಕರೆಯುತ್ತಾರೆ. ಸೋಸುಕಾಗದವನ್ನು ಉದ್ದವಾಗಿ ಸೀಳಿನ ಅಥವಾ ದೊಡ್ಡ ಹಾಳೆಗಳ ರೂಪದಲ್ಲಿ ಉಪಯೋಗಿಸಬಹುದು. ಈ ಕಾಗದ ವರ್ತುಲಾಕಾರದಲ್ಲಿದ್ದಾಗ ದ್ರಾವಕವನ್ನು ಕೇಂದ್ರಕ್ಕೆ ತಾಗುವಂತೆ ಇಡಬೇಕು. ಆಗ ಬೇರ್ಪಡೆಯಾದ ವಸ್ತುಗಳು ಸಹ ಕೇಂದ್ರೀಯ ಉಂಗುರಗಳ ರೂಪದಲ್ಲಿ ಕಾಣುತ್ತವೆ. ಸೋಸುಕಾಗದ ಕ್ರೊಮಟಾಗ್ರಫಿಯಲ್ಲಿ ಆಲ್ಕೊಹಾಲ್, ಈಥರ್, ಕೀಟೋನುಗಳು, ಕ್ಲೋರಿನ್ ಒಳಗೊಂಡ ಹೈಡ್ರೊಕಾರ್ಬನುಗಳು, ಆರ್ಗ್ಯಾನಿಕ್ ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ದ್ರಾವಕಗಳಾಗಿ ಉಪಯೋಗಿಸುತ್ತಾರೆ. ನೀರಿನ ಜೊತೆಯಲ್ಲಿ ಬೆರೆಯದಿರುವ N-ಬ್ಯುಟನಾಲ್ ಮುಂತಾದುವನ್ನು ಹೆಚ್ಚಿನ ನೀರು ಅಥವಾ ಆಮ್ಲಗಳ ಜೊತೆಯಲ್ಲಿ ಸೇರಿಸಿ ದ್ವಿಅಂಶಿಗಳ ರೂಪದಲ್ಲಿ ಉಪಯೋಗಿಸಬಹುದು. ಒಂದು ಕ್ರೊಮಟಾಗ್ರಾಂ ತಯಾರು ಮಾಡಲು ಸುಮಾರು ೧-೨೪ ಗಂಟೆಗಳ ಕಾಲಬೇಕಾಗಬಹುದು. ಸೋಸುಕಾಗದ ಮತ್ತು ದ್ರಾವಕಗಳನ್ನು ಈ ಕಾಲ ಅವಲಂಬಿಸಿದೆ. ಕ್ರೊಮಟಾಗ್ರಾಮಿನಲ್ಲಿ ಬೇರ್ಪಡೆಯಾದ ವಸ್ತುಗಳ ಚುಕ್ಕೆಗಳನ್ನು ಅವುಗಳ ಬಣ್ಣಗಳಿಂದ ಅಥವಾ ಅತಿನೇರಿಳೆ ಕಾಗದದ ಮೇಲೆ ಪತನವಾದಾಗ ಕಂಡುಬರುವ ಭಿನ್ನ ವರ್ಣಗಳಿಂದ ಗುರುತಿಸಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ವಸ್ತುಗಳನ್ನು ಗುರುತಿಸಲು ಒಂದು ವಿಶಿಷ್ಟ ಅಭಿಕರ್ಮಕವನ್ನು ಕಾಗದದ ಮೇಲೆ ಸಿಂಪಡಿಸಬೇಕಾಗುತ್ತದೆ. ಇದಕ್ಕೆ ಕ್ರೊಮಟಾಗ್ರಾಮಿನ ವಿಕಾಸ ವಿಧಾನವೆಂದು ಹೆಸರು. ವಸ್ತುಗಳ ಚುಕ್ಕೆಗಳನ್ನು ಗುರುತಿಸಿದ ಮೇಲೆ ಆ ಕಾಗದದ ಭಾಗಗಳನ್ನು ಕತ್ತರಿಸಿ ವಿವಿಧ ಅಭಿಕರ್ಮಗಳಲ್ಲಿ ಶೋಷಿಸಿದರೆ ವಸ್ತುಗಳು ದ್ರಾವಣದಲ್ಲಿ ಉಳಿಯುತ್ತವೆ. ಇವುಗಳ ಪ್ರಮಾಣವನ್ನು ಸ್ಪೆಕ್ಟ್ರೊಫೋಟೊಮೀಟರ್, ಪೋಲರೋಗ್ರಾಫ್ ಮುಂತಾದ ಸಾಧನಗಳನ್ನು ಉಪಯೋಗಿಸಿ ನಿರ್ಧರಿಸಬಹುದು. ಮಿಶ್ರಣದಲ್ಲಿ ವಿಕಿರಣಪಟುವಸ್ತುಗಳಿದ್ದರೆ ಕತ್ತರಿಸಿದ ಭಾಗಗಳನ್ನು ಗೈಗರ್‌ಮುಲ್ಲರ್ ಗುಣಕ ಅಥವಾ ಸಿಂಟಿಲೇಷನ್ ಗುಣಕಗಳಲ್ಲಿಟ್ಟು ಅವನ್ನು ಗುರುತಿಸಿ ನಿರ್ಧರಿಸಬಹುದು. ವಿಕಿರಣಪಟು ಇಂಗಾಲವನ್ನು (14C) ಉಪಯೋಗಿಸಿ ದ್ಯುತಿಸಂಶ್ಲೇಷಣಕ್ರಿಯೆಯನ್ನು ಅರಿತುಕೊಳ್ಳಲು ಈ ವಿಧಾನವನ್ನು ಪ್ರಯೋಗಿಸಲಾಗಿದೆ.

೪. ವಿದ್ಯುತ್ ಕ್ರೊಮಟಾಗ್ರಫಿ : ಅಯಾನು ಮಿಶ್ರಣವಿರುವ ದ್ರಾವಣದಲ್ಲಿ ಎಲೆಕ್ಟ್ರೋಡುಗಳ ಮೂಲಕ ವಿದ್ಯುಚ್ಛಕ್ತಿಯನ್ನು ಹರಿಸಿದಲ್ಲಿ ಅಯಾನುಗಳು ಎಲೆಕ್ಟ್ರೋಡುಗಳ ದಿಕ್ಕಿನಲ್ಲಿ ಗಮಿಸುತ್ತವೆ. ಇವು ಗಮಿಸುವ ವೇಗದಲ್ಲಿ ಸಾಮಾನ್ಯವಾಗಿ ವ್ಯತ್ಯಾಸವಿರುವುದರಿಂದ ಅಯಾನುಗಳ ಬೇರ್ಪಡೆ ಸಾಧ್ಯವಾಗುತ್ತದೆ. ಎಲೆಕ್ಟ್ರೋಡುಗಳ ನಡುವೆ ಕಾಗದ, ಜೆಲಟಿನ್, ಗಾಜಿನಪುಡಿ ಅಥವಾ ಅಯಾನುವಿನಿಮಯ ರಾಳದ ಆಸರೆಯಿದ್ದರೆ, ಅದರ ಮೇಲೆ ಬೇರ್ಪಡೆಯಾದ ಅಯಾನುಗಳು ನಿಂತು ಚುಕ್ಕೆಗಳನ್ನುಂಟುಮಾಡುತ್ತವೆ. ವಿದ್ಯುತ್ ಕ್ರೊಮಟಾಗ್ರಫಿಯಲ್ಲಿ ಸುಮಾರು ೧೦೦-೪೦೦ ವೋಲ್ಟುಗಳಷ್ಟು ವೋಲ್ಟೇಜ್ ಮತ್ತು ೫೦-೧೦೦ ರಷ್ಟು ಮಿಲಿ ಆಂಪೇರ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಹರಿಸಬೇಕಾಗುತ್ತದೆ.

೫. ಅನಿಲ ಕ್ರೊಮಟಾಗ್ರಫಿ: ಮಿಶ್ರಣವನ್ನು ಸ್ತಂಭವೊಂದರಲ್ಲಿರುವ ಘನ ಪದಾರ್ಥದಲ್ಲಿ ಅಧಿಶೋಷಣೆ ಮಾಡಿ ಆಮೇಲೆ ಅನಿಲವೊಂದನ್ನು ಹಾಯಿಸಿ ಬಿಡುಗಡೆ ಮಾಡಿಯಾಗಲಿ ಅಥವಾ ಈ ಅನಿಲ ಮತ್ತು ಜಡ ಆಧಾರವೊಂದರಲ್ಲಿ ಮಿಶ್ರಿತವಾದ ಶೋಷಕ ದ್ರವದ ನಡುವೆ ವಿತರಣೆಮಾಡಿಯಾಗಲಿ ಬೇರ್ಪಡಿಸುವ ವಿಧಾನ ಅನಿಲ ಕ್ರೊಮಟಾಗ್ರಫಿ. ಮೊದಲ




ಚಿತ್ರ 2 ಅನಿಲದ್ರವ ಕ್ರೊಮಟಾಗ್ರಾಫಿನ ರಚನೆಯ ಸ್ಥೂಲಚಿತ್ರ :
1 ಒತ್ತಡ ನಿಯಂತ್ರಕ, 2 ವಾಹಕಾನಿಲ, 3 ಒತ್ತಡಮಾಪಕ, 4 ಅನಿಲ ನಿರ್ಗಮನ ಮಾರ್ಗ, 5 ಶೋಧಕ, 6 ವೀಟ್‌ಸ್ಟನ್ ಬ್ರಿಜ್, 7 ಅನಿಲ ಮಿಶ್ರಣ, 8 ಸ್ತಂಭ, 9 ದಾಖಲೆ ಮಾಡುವ ಯಂತ್ರ

ವಿಧಾನಕ್ಕೆ ಅನಿಲ ಅಧಿಶೋಷಣ ಕ್ರೊಮಟಾಗ್ರಫಿಯೆಂದು ಹೆಸರು. ಎರಡನೆಯದು ಅನಿಲ-ದ್ರವ ಕ್ರೊಮಟಾಗ್ರಫಿ. ಅನಿಲ ಅಧಿಶೋಷಣ ಕ್ರೊಮಟಾಗ್ರಫಿಯಲ್ಲಿ ಪಟುತ್ವಗೊಳಿಸಿದ

ಇದ್ದಲು ಅಥವಾ ಅಲ್ಯುಮಿನ ಮತ್ತು ಸಿಲಿಕ ಜೆಲ್ಲುಗಳನ್ನು ಅಧಿಶೋಷಕಗಳಾಗಿ ಉಪಯೋಗಿಸಬಹುದು. ಇಲ್ಲಿ ಮೊದಲು ಅನಿಲ ಮಿಶ್ರಣವನ್ನು ಸ್ತಂಭದಲ್ಲಿ ಅಧಿಶೋಷಿತವಾಗುವಂತೆ ಮಾಡಿ ಒಂದು ಜಡ ಅನಿಲವನ್ನು (ಉದಾ : ಸಾರಜನಕ, ಆರ್ಗಾನ್, ಹೀಲಿಯಂ) ಸ್ಥಪನಕಾರಿಯಾಗಿ ಸ್ತಂಭದಲ್ಲಿ ಹಾಯಿಸಬೇಕು. ಇದನ್ನು ವಾಹಕಾನಿಲವೆಂದು ಕರೆಯಬಹುದು. ಸ್ತಂಭದಲ್ಲಿ ವಾಹಕಾನಿಲ ಪ್ರವಹಿಸಿದಾಗ ಅಧಿಶೋಷಿತವಾದ ಅನಿಲಗಳು ಒಂದಾದ ಮೇಲೊಂದು ಬಿಡುಗಡೆಯಾಗಿ ವಾಹಕಾನಿಲಕ್ಕಿಂತ ನಿಧಾನವಾಗಿ ಚಲಿಸುತ್ತವೆ. ಇವುಗಳ $R_f$ ಪ್ರಮಾಣವನ್ನು ವಾಹಕಾನಿಲದ ವೇಗಕ್ಕೆ ಸಾಪೇಕ್ಷವಾಗಿ ಕಂಡುಹಿಡಿಯಬಹುದು.

ಅನಿಲದ್ರವ ಕ್ರೊಮಟಾಗ್ರಫಿಯಲ್ಲಿ ಕೀಸಲ್‌ಗರ್ ಅಥವಾ ಇಟ್ಟಿಗೆಪುಡಿಯನ್ನು ಶೋಷಕದ್ರವದಲ್ಲಿ ನೆನೆಸಿ ಒಣಗಿಸಿ ಸ್ತಂಭದಲ್ಲಿ ಹಾಯಿಸಬೇಕು.

ಮಿಶ್ರಣದ ವಸ್ತುಗಳ ಗಮನದರದಲ್ಲಿ (ಮೈಗ್ರೇಷನ್ ರೇಟ್) ವ್ಯತ್ಯಾಸಗಳಿರುತ್ತವೆ. ಪ್ರತಿಯೊಂದು ವಸ್ತುವಿಗೂ ಸ್ತಂಭದಲ್ಲಿರುವ ಧಾರಣಸಾಮರ್ಥ್ಯದಲ್ಲಿ ವ್ಯತ್ಯಾಸಗಳಿರುವುದರಿಂದ ಅವು ಒಂದಾದ ಮೇಲೊಂದು ವಾಹಕಾನಿಲದ ಜೊತೆಯಲ್ಲಿ ಹೊರಬಂದು ಒಂದು ಸೋಸಣಿಗೆಯ ಮೇಲೆ ಹಾಯ್ದುಹೋಗುವಂತೆ ಏರ್ಪಡಾಗಿರುತ್ತದೆ. ಅನಿಲ ದ್ರವ ಕ್ರೊಮಟಾಗ್ರಫಿಯಲ್ಲಿ ಬರುವ ಕ್ರೊಮಟಾಗ್ರಾಮನ್ನು ಸರಿಯಾದ ವ್ಯವಸ್ಥೆಯಿಂದ ದಾಖಲು ಮಾಡಿಕೊಳ್ಳಬಹುದು. ಇದರಲ್ಲಿ ಪ್ರತ್ಯೇಕಿತವಾದ ಪ್ರತಿಯೊಂದು ವಸ್ತುವಿನ ಪ್ರಮಾಣ ಕ್ರೊಮಟಾಗ್ರಾಮಿನಲ್ಲಿ ತತ್ಸಂಬಂಧಿತ ಶೃಂಗದ ವಿಸ್ತೀರ್ಣಕ್ಕೆ ಅನುಪಾತದಲ್ಲಿರುತ್ತದೆ. ಅನಿಲದ್ರವ ಕ್ರೊಮಟಾಗ್ರಫಿಯಿಂದ ಪೆಟ್ರೋಲಿಯಂ ಫಲಿತಗಳು, ಸುವಾಸನಾದ್ರವಗಳು, ಗಂಧಗಳು ಮತ್ತು ಜೈವಿಕ ಮೂಲವಸ್ತುಗಳನ್ನು ಗುರುತಿಸಿ ಅಂದಾಜು ಮಾಡಬಹುದು. ಅನಿಲ ಮಿಶ್ರಣವನ್ನು ಬೇರ್ಪಡಿಸುವ ಅನಿಲದ್ರವ ಕ್ರೊಮಟಾಗ್ರಫಿನ ರಚನೆಯನ್ನು ಚಿತ್ರ ೨ ರಲ್ಲಿ ತೋರಿಸಲಾಗಿದೆ. (ಡಿ.ಎಸ್.ಎಂ)

**ಕ್ರೊಮೋನೀಮ್:** ಮೈಟಾಸಿಸ್ ವಿಭಜನಾ ಚಕ್ರದಾದ್ಯಂತ ಕ್ರೊಮೋಸೋಮ್‌ನಲ್ಲಿ ಇರುವ ತಂತು. ಬ್ಯಾರನೆಟ್ಸ್ಕಿ (1880) ಎಂಬಾತ ಟ್ರಾಡೆಸ್ಕಾನಿಷಿಯ ಗಿಡದ ಪರಾಗ ಮತ್ತು ಜೀವಕೋಶಗಳಲ್ಲಿ ಕಂಡುಹಿಡಿದ. ಕ್ರೊಮೋನೀಮ್‌ಗೆ ಅದರದೇ ಆದ ವಿಶಿಷ್ಟ ಸುರುಳಿ ಚಕ್ರವಿದೆ. ಮೈಟಾಸಿಸ್ ಚಕ್ರದ ಇಂಟರ್‌ಫೇಸ್‌ನಲ್ಲಿ ಕ್ರೊಮೋನೀಮ್ ಬಹು ತೆಳುವಾಗಿಯೂ ಉದ್ದವಾಗಿಯೂ ಸುರುಳಿಯಾಗಿಯೂ ಇರುತ್ತದೆ. ಪ್ರೊಫೇಸ್ ಹಂತದಲ್ಲಿ ಒಂದೊಂದು ಕ್ರೊಮೋಸೋಮಿನಲ್ಲಿ ಎರಡು ಕ್ರೊಮೋನೀಮ್‌ಗಳು ಇರುವುವು. ಪ್ರೊಫೇಸ್ ಅಂತ್ಯದಲ್ಲಿ ಸೊಮ್ಯಾಟಿಕ್ ಸುರುಳಿಗಳು ಆರಂಭವಾಗುತ್ತವೆ. ಮೆಟಫೇಸ್‌ನಲ್ಲಿ ಇನ್ನಷ್ಟು ಸುರುಳಿಯಾಗುವುದರಿಂದ ಕ್ರೊಮೋಸೋಮ್ ದಪ್ಪನಾಗಿ, ಮೋಟಕಾಗಿ ಕಾಣುತ್ತದೆ. ಅನಫೇಸ್ ಆದಮೇಲೆ ಸೊಮ್ಯಾಟಿಕ್ ಸುರುಳಿಗಳು ಬಹುಮಟ್ಟಿಗೆ ಸಡಿಲವಾಗುತ್ತವೆ. ಉಳಿದಿರುವ ಸುರುಳಿಗಳಿಗೆ ಉಳಿಕೆ ಸುರುಳಿಗಳೆಂದು ಹೆಸರು.

ಮಿಯಾಸಿಸ್ ಕ್ರೊಮೋಸೋಮುಗಳಲ್ಲಿ ಮುಖ್ಯ ಸುರುಳಿ ಮತ್ತು ಉಪ ಸುರುಳಿಗಳೆಂಬ ಎರಡು ಬಗೆಯ ಸುರುಳಿಗಳಿರುವುವು. ಒಂದು ಕ್ರೊಮೋಸೋಮಿನಲ್ಲಿ ಸುಮಾರು 10–30 ಮುಖ್ಯ ಸುರುಳಿಗಳೂ, ಅನೇಕ ಉಪಸುರುಳಿಗಳೂ ಇವೆ. ಉಪಸುರುಳಿಗಳ ಸಂಖ್ಯೆ ಹೆಚ್ಚು. ಉಪಸುರುಳಿಗಳು ಮುಖ್ಯ ಸುರುಳಿಗಳಿಗೆ ಲಂಬವಾಗಿರುವುವು.

ಒಂದು ಕ್ರೊಮೋಸೋಮಿನಲ್ಲಿ 2 ಕ್ರೊಮೋನೀಮುಗಳಿದ್ದಾಗ, ಅವು ಪ್ಯಾರನೀಮಿಕ್ ಅಥವಾ ಪ್ಲೆಕ್ಟೊನೀಮಿಕ್ ರೀತಿಯಲ್ಲಿರುವುವು. ತಂತುಗಳು ಒಂದರ ಪಕ್ಕದಲ್ಲಿ ಇನ್ನೊಂದು ಇದ್ದು ಸುಲಭವಾಗಿ ಬೇರ್ಪಡುವಂತಿದ್ದರೆ ಪ್ಯಾರಾನೀಮಿಕ್ ಎಂದೂ, ಒಂದಕ್ಕೊಂದು ಸುತ್ತಿಕೊಂಡು ಹೊಸೆದ ಹಗ್ಗದಂತಿದ್ದರೆ ಅದನ್ನು ಪ್ಲೆಕ್ಟೊನೀಮಿಕ್ ಎಂದೂ ಕರೆಯುತ್ತಾರೆ.

ಒಂದು ಕ್ರೊಮೋಸೋಮಿನಲ್ಲಿ ಎಷ್ಟು ಕ್ರೊಮೋನೀಮುಗಳಿರುವುವು ಎಂಬುದು ಅನೇಕ ವರ್ಷಗಳ ಕಾಲ ವಿವಾದಾಸ್ಪದವಾಗಿತ್ತು. ಈಗ ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಅಧ್ಯಯನಗಳ ಆಧಾರದ ಮೇಲೆ ಇಂದು ಕ್ರೊಮ್ಯಾಟಿಡ್‌ನಲ್ಲಿ ಒಂದು ಡಿಎನ್‌ಎ ಜೋಡಿ ಸುರುಳಿ ಮಾತ್ರ ಇರುವುದೆಂದೂ ಅದು ಪುನಃ ದೊಡ್ಡ ಸುರುಳಿಗಳಾಗುವುದರಿಂದ ಅನೇಕ ಕ್ರೊಮೋನೀಮ್‌ಗಳಿರುವ ಹಾಗೆ ಕಾಣುವುದೆಂದು ಕಂಡುಹಿಡಿಯಲಾಗಿದೆ.

ಕ್ರೊಮೋನೀಮ್ ಸುರುಳಿಗಳನ್ನು ಅಭ್ಯಸಿಸಲು ಬಿಸಿ ನೀರು, ಕ್ಷಾರ, ಕ್ಷಾರಗಳ ಹಬೆ, ಪೊಟಾಸಿಯಮ್ ಸಯನೈಡ್ ಮುಂತಾದುವುಗಳನ್ನು ಉಪಯೋಗಿಸುತ್ತಾರೆ. ಇವು ಸುರುಳಿಗಳನ್ನು ಬಹುಮಟ್ಟಿಗೆ ಸಡಿಲಿಸುವುದರಿಂದ ಕ್ರೊಮೋನೀಮುಗಳು ಚೆನ್ನಾಗಿ ಕಾಣಿಸಲು ಸಾಧ್ಯ. (ಎನ್.ವಿ.ಎ.)

**ಕ್ರೊಮೋಮಿಯರ್:** ಮೈಟಾಸಿಸ್ ಮತ್ತು ಮಿಯಾಸಿಸ್‌ಗಳ ಪ್ರೊಫೇಸ್ ಹಂತದ ಆದಿಯಲ್ಲಿ ತಂತುಗಳಂತಿರುವ ಕ್ರೊಮೋಸೋಮುಗಳ ಮೇಲೆ ಮಣಿಗಳಂತೆ ಕಾಣುವ ಬಣ್ಣಗ್ರಾಹಕ ರಚನೆಗಳು. ವಿಲ್ಸನ್ (1890) ಎಂಬಾತ ಈ ಮಣಿಗಳಿಗೆ ಕ್ರೊಮೋಮಿಯರ್‌ಗಳೆಂದು ಹೆಸರಿಸಿದ. ಕ್ರೊಮೋಮಿಯರ್‌ಗಳ ನಡುವಣ ತೆಳುವಾದ ತಂತು ಖಂಡಗಳಿಗೆ ಕ್ರೊಮೋಮಿಯರ್ ಮಧ್ಯಂತರ ಪ್ರದೇಶಗಳೆಂದು ಹೆಸರು. ಜೊಲ್ಲುರಸ ಗ್ರಂಥಿಗಳ ದೈತ್ಯ ಕ್ರೊಮೋಸೋಮುಗಳ ಹಾಗೂ ಲ್ಯಾಂಪ್ ಬ್ರಷ್ ಕ್ರೊಮೋಸೋಮುಗಳಲ್ಲಿ ಕ್ರೊಮೋಮಿಯರ್ ರಚನೆಯನ್ನು ಚೆನ್ನಾಗಿ ತಿಳಿಯಲು ಸಾಧ್ಯ. ಒಂದು ಕ್ರೊಮೋಸೋಮಿನಲ್ಲಿ ಕ್ರೊಮೋಮಿಯರ್‌ಗಳ ಸ್ಥಾನ ಮತ್ತು ಗಾತ್ರ ನಿರ್ದಿಷ್ಟವಾಗಿರುವುದು. ಕ್ರೊಮೋಮಿಯರ್‌ನಲ್ಲಿ ಡಿಎನ್‌ಎ ಜೋಡಿಸುರುಳಿ ಅನೇಕ ಸುತ್ತುಗಳಿರುತ್ತವೆಂದು ಇತ್ತೀಚಿನ ಸಂಶೋಧನೆಗಳಿಂದ ಕಂಡುಬಂದಿದೆ. ಕ್ರೊಮೋಮಿಯರ್‌ಗಳ ಮಧ್ಯೆ ಸುರುಳಿಗಳು ಸಡಿಲವಾಗಿರುವುದರಿಂದ ಆ ಭಾಗಗಳು ತಂತು ಖಂಡಗಳಂತೆ ಕಾಣುವುವು. ಸುರಳಿಯು ಸುರಳಿಗಳಿಂದಾದ ಕ್ರೊಮೋಮಿಯರ್‌ಗಳು ಹೆಚ್ಚು ಬಣ್ಣವನ್ನು ಗ್ರಹಿಸುತ್ತವೆ, ಸೂಕ್ಷ್ಮದರ್ಶಕದಲ್ಲಿ ನಿಚ್ಚಳವಾಗಿ ಕಾಣುತ್ತವೆ. ಜೊಲ್ಲುಗ್ರಂಥಿ ಕ್ರೊಮೋಸೋಮುಗಳಲ್ಲಿ ಸದೃಶ ಕ್ರೊಮೋಸೋಮುಗಳು ದ್ವಿಪ್ರತಿಗೊಂಡು ಸಂಪೂರ್ಣವಾಗಿ ಜೊತೆಯಾಗಿಯೇ ಇರುವುದರಿಂದ ಕ್ರೊಮೋಮಿಯರ್‌ಗಳೆಲ್ಲ ಒಂದೇ ಸಾಲಿನಲ್ಲಿ ಅಂಟಿಕೊಂಡಂತಿದ್ದು ಪಟ್ಟಿಗಳಂತೆ ಕಾಣುವುವು. ಕೆಲವು ವೇಳೆ ಸಮೀಪವಿರುವ ಕ್ರೊಮೋಮಿಯರ್‌ಗಳು ದೊಡ್ಡಗಾತ್ರದ ಸಂಕೀರ್ಣ ಕ್ರೊಮೋಮಿಯರ್ ಆಗುತ್ತದೆ. (ಎನ್.ವಿ.ಎ.)

**ಕ್ರೊಮೋಸೆಂಟರ್:** ಉನ್ನತ ಜೀವಿಗಳ ಇಂಟರ್‌ಫೇಸ್ ನ್ಯೂಕ್ಲಿಯಸ್‌ಗಳಲ್ಲಿ ಕಂಡುಬರುವ ಬಣ್ಣ ಗ್ರಹಿಸುವ ಒತ್ತಾದ ಕಣಗಳ ಗುಂಪು. ಒಂದು ಅಥವಾ ಎರಡು ಕ್ರೊಮೋಸೆಂಟರ್‌ಗಳಿರಬಹುದು. ಇವು ಕ್ರೊಮೋಸೋಮಿನ ಭಾಗ ಅಥವಾ ಪುರ್ಣ ಕ್ರೊಮೋಸೋಮುಗಳಿಂದಾಗಿರಬಹುದು. ಅದು ಹೆಟರೊಕ್ರೊಮ್ಯಾಟಿನ್ ಅನ್ನು ಪ್ರತಿನಿಧಿಸುತ್ತದೆ. ಕ್ರೊಮೋಸೆಂಟರ್ ಆಟೊಸೋಮ್ ಮತ್ತು/ಅಥವಾ ಲಿಂಗ ಕ್ರೊಮೋಸೋಮಿನ ಹೆಟರೊ ಕ್ರೊಮ್ಯಾಟಿನ್‌ನಿಂದಾಗಬಹುದು.

ಡ್ರೊಸಾಫಿಲ ಡಿಂಬದ ಜೊಲ್ಲುರಸಗ್ರಂಥಿ ಜೀವಕೋಶ ನ್ಯೂಕ್ಲಿಯಸ್‌ಗಳಲ್ಲಿ ಕ್ರೊಮೋಸೆಂಟರ್ ಬಹು ದೊಡ್ಡದಾಗಿರುವುದು. ಇದರ ದೈತ್ಯ ಕ್ರೊಮೋಸೋಮುಗಳ ಸೆಂಟ್ರೊಮಿಯರ್ ಹಾಗೂ ಪಕ್ಕದ ಭಾಗದ ಹೆಟರೊಕ್ರೊಮ್ಯಾಟಿನ್ ಒಂದುಗೂಡಿ ಕ್ರೋಮೋಸೆಂಟರ್ ಆಗುವುದು.

ಹೆಣ್ಣು ಸ್ತನಿಗಳ ಜೀವಕೋಶಗಳಲ್ಲಿ ಎರಡು ಎಕ್ಸ್ ಕ್ರೊಮೋಸೋಮುಗಳಿರುವುವು. ಇವುಗಳಲ್ಲಿ ಒಂದು ಎಕ್ಸ್ ಕ್ರೊಮೋಸೋಮು ಜಡತ್ವ ಹೊಂದಿ ದೈಹಿಕ ಜೀವಕೋಶಗಳಲ್ಲಿ ಕ್ರೊಮೋಸೆಂಟರ್ ರೂಪತಾಳುತ್ತದೆ. ಇದನ್ನೇ ಲಿಂಗ ಕ್ರೊಮ್ಯಾಟಿನ್ ಅಥವಾ ಬಾರ್ರ್ ಕಾಯ ಎನ್ನುವುದು. ಅಂದರೆ ಎರಡು ಎಕ್ಸ್ ಕ್ರೊಮೋಸೋಮುಗಳಿರುವ ಇಂಟರ್‌ಫೇಸ್ ನ್ಯೂಕ್ಲಿಯಸ್‌ನಲ್ಲಿ ಒಂದು ಲಿಂಗ ಕ್ರೊಮ್ಯಾಟಿನ್ ಇರುತ್ತದೆ. ಅನೇಕ ಹೆಣ್ಣು ಸ್ತನಿಗಳಲ್ಲಿ (ಮನುಷ್ಯನೂ ಸೇರಿ) ಲಿಂಗ ಕ್ರೊಮ್ಯಾಟಿನ್ ಸೂಕ್ಷ್ಮದರ್ಶಕದಲ್ಲಿ ಚೆನ್ನಾಗಿ ಕಾಣಿಸುತ್ತದೆ. ಇದು ಸಾಮಾನ್ಯವಾಗಿ ಇಬ್ಬದಿಯಾಗಿ ಉಬ್ಬಿದ ಮಸೂರದಂತಿದ್ದು ನ್ಯೂಕ್ಲಿಯಸ್ ಪಟಲದ ಒಳಭಾಗಕ್ಕೆ ಅಂಟಿಕೊಂಡಿರುವುದು. ಆದರೆ ಕೆಲವು ಹೆಣ್ಣು ಸ್ತನಿಗಳ ಇಂಟರ್‌ಫೇಸ್ ನ್ಯೂಕ್ಲಿಯಸ್‌ಗಳಲ್ಲಿ ಕೆಲವು ಆಟೊಸೋಮುಗಳ ಕ್ರೋಮೋಸೆಂಟರ್‌ಗಳಿರುವುದರಿಂದ ಲಿಂಗ ಕ್ರೊಮ್ಯಾಟಿನ್ ಅನ್ನು ಗುರುತಿಸಲಾಗುವುದಿಲ್ಲ. ಒಂದೇ ಎಕ್ಸ್ ಕ್ರೊಮೋಸೋಮ್ ಇರುವುದರಿಂದ ಗಂಡು ಸ್ತನಿಗಳಲ್ಲಿ ಬಾರ್ರ್ ಕಾಯವಿರುವುದಿಲ್ಲ.

ಮನುಷ್ಯರಲ್ಲಿ ಲಿಂಗ ಕ್ರೊಮ್ಯಾಟಿನ್ ಅಧ್ಯಯನವು ಬಹು ಉಪಯುಕ್ತವಾದುದು. ಎಕ್ಸ್ ಕ್ರೊಮೋಸೋಮುಗಳು ಸಂಖ್ಯೆಯಲ್ಲಿ ವ್ಯತ್ಯಾಸವಾದಾಗ ವಿವಿಧ ರೋಗಕೂಟವುಂಟಾಗುತ್ತವೆ. ಟರ್ನರ್ ರೋಗಕೂಟವಿರುವ ರೋಗಿಯಲ್ಲಿ ಹೆಣ್ಣಾದರೂ ಲಿಂಗ ಕ್ರೊಮ್ಯಾಟಿನ್ (ಬಾರ್ರ್ ಕಾಯ) ಇರುವುದಿಲ್ಲ. ಅಂದರೆ ಆ ರೋಗಿಯಲ್ಲಿ ಒಂದೇ ಎಕ್ಸ್ ಕ್ರೊಮೋಸೋಮು ಇರುತ್ತದೆ. ಆದರೆ ಕ್ಲೈನೆಫೆಲ್ಟರ್ ರೋಗಕೂಟವಿರುವ ರೋಗಿಯಲ್ಲಿ ಒಂದು ಲಿಂಗ ಕ್ರೊಮ್ಯಾಟಿನ್ ಇರುವುದು. ಇಲ್ಲಿ ಎಕ್ಸ್ ಎಕ್ಸ್ ವೈ ಲಿಂಗ ಕ್ರೊಮೋಸೋಮುಗಳಿರುವುವು.

ಈಗಿನ ಸಂಶೋಧನೆಗಳಿಂದ ಬೆಳೆಯುತ್ತಿರುವ ಭ್ರೂಣವನ್ನು ಆವರಿಸಿರುವ ಅಮ್ನಿಯಾನ್ ಚೀಲದ ದ್ರವದಲ್ಲಿರುವ ಜೀವಕೋಶಗಳನ್ನು ಕೃಷಿ ಮಾಡಿ ಭ್ರೂಣದ ಲಿಂಗವನ್ನು ಮತ್ತು ಕೆಲವು ಲಿಂಗರೋಗಕೂಟವನ್ನು ತಿಳಿಯಲು ಸಾಧ್ಯವಾಗಿದೆ. (ಎನ್.ವಿ.ಎ)

**ಕ್ರೊಮೋಸೋಮುಗಳು:** ಸೂಕ್ಷ್ಮ ರಚನಾ ವ್ಯವಸ್ಥೆಯುಳ್ಳ, ಎಳೆಗಳಂತೆ ಕಾಣುವ, ಪ್ರತಿಯೊಂದು ಜೀವಿಯ ಜೀವಕೋಶದ ಕೋಶಕೇಂದ್ರದಲ್ಲಿರುವ ರಚನೆಗಳು. ವರ್ಣತಂತುಗಳು ಪರ್ಯಾಯ ನಾಮ. ಸೂಕ್ಷ್ಮದಾರದೋಪಾದಿಯ ಎಳೆ ಎಳೆಯಾಗಿ

ಕಾಣುವ ಇವುಗಳಲ್ಲಿ ಅನುವಂಶೀಯ ಘಟಕಗಳಾದ ಜೀನ್‌ಗಳು ಸಾಲು ಸಾಲಾಗಿ ವ್ಯವಸ್ಥಿತವಾಗಿರುತ್ತವೆ. ಕ್ರೊಮೊಸೋಮ್ ಎಂಬುದು ಗ್ರೀಕ್ ಶಬ್ದ (ಕ್ರೋಮೋ=ವರ್ಣ; ಸೋಮ=ವಸ್ತು). ಬಣ್ಣ ಕಟ್ಟಿದಾಗ (ಸ್ಟೇಯ್ನಿಂಗ್) ಬಣ್ಣ ಅಥವಾ ವರ್ಣವನ್ನು ಗ್ರಹಿಸುವುದರಿಂದ ಈ ಹೆಸರು. ಟ್ರಾಡಸ್‌ಕೆಂಷಿಯಾ ಗಿಡಗಳ ಪರಾಗಮಾತೃಜೀವಕೋಶಗಳಲ್ಲಿ ಹಾಫ್‌ಮಿಸ್ಟರ್ ಎಂಬಾತನು 1848 ರಲ್ಲಿ ಮೊಟ್ಟ ಮೊದಲಿಗೆ ಈ ರಚನೆಗಳನ್ನು ಗುರುತಿಸಿದನು. 1888 ರಲ್ಲಿ ವಾಲ್ಡೆಯರ್ ಇವುಗಳಿಗೆ ಕ್ರೊಮೋಸೋಮುಗಳು ಎಂದು ಹೆಸರನ್ನು ಕೊಟ್ಟನು.

ಕ್ರೊಮೋಸೋಮುಗಳು ಜೀವಕೋಶಗಳ ವಿಭಜನೆಯ ಕಾಲದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಫ್ಲೆಮಿಂಗ್ 1880 ರಲ್ಲಿ ಜೀವಕೋಶ ವಿಭಜನೆಯ ಕಾಲದಲ್ಲಿ ಇವುಗಳ ವರ್ತನೆಯನ್ನು ವಿಶದಿಸಿದ. ಮೈಟಾಸಿಸ್ ಕೋಶವಿಭಜನೆ ಶರೀರದ ಅಂಗಾಂಶಗಳ ಜೀವಕೋಶಗಳಲ್ಲಿ ನಡೆಯುವಂತಹ ಕ್ರಿಯೆ. ಈ ವಿಭಜನೆಯಿಂದ ಉದ್ಭವಿಸುವ ಎರಡು ಮರಿಕೋಶಗಳ ಕ್ರೊಮೋಸೋಮುಗಳು ಪಿತೃಕೋಶದಲ್ಲಿರುವ ಸಂಖ್ಯೆಗೆ ಸಮನಾಗಿರುತ್ತವೆ. ಅವು ಸಾಮಾನ್ಯವಾಗಿ ದ್ವಿಗುಣಿತ (ದ್ವಿಪ್ರತಿ) ಸಂಖ್ಯೆಯಲ್ಲಿಯೇ ಕಾಣಿಸಿಕೊಳ್ಳುವುದು. ಇದೇ ಡಿಪ್ಲಾಯಿಡ್ ಸಂಖ್ಯೆ ( 2n ). ಮಿಯಾಸಿಸ್ ಕೋಶ ವಿಭಜನೆಯಿಂದ ಉದ್ಭವಿಸುವ ಲಿಂಗಕೋಶಗಳಲ್ಲಿ ಕ್ರೊಮೋಸೋಮುಗಳ ಸಂಖ್ಯೆ ದ್ವಿಪ್ರತಿಯಿಂದ ಏಕಪ್ರತಿಗೆ (ಏಕ ಗುಣಿತ) ಇಳಿಯುತ್ತದೆ. ಇದು ಹ್ಯಾಪ್ಲಾಯಿಡ್ ಸಂಖ್ಯೆ (n). ಇಲ್ಲಿ 'n' ಅಂಕಿತ ಒಟ್ಟು ಒಂಟಿ ಕ್ರೊಮೋಸೋಮುಗಳ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಸಂಖ್ಯೆ 3n ಆಗಿದ್ದರೆ ಅವುಗಳನ್ನು ತ್ರಿಗುಣಿತ (ಟ್ರಿಪ್ಲಾಯ್ಡ್) ಎಂದೂ 4n ಆಗಿದ್ದರೆ ಚತುರ್‌ಗುಣಿತ (ಟೆಟ್ರಾಪ್ಲಾಯ್ಡ್) ಎಂದೂ ನಾಲ್ಕಕ್ಕಿಂತ ಹೆಚ್ಚಿದ್ದರೆ ಅವುಗಳನ್ನು ಬಹುಗುಣಿತ (ಪಾಲಿಪ್ಲಾಯ್ಡ್) ಎಂದೂ ಕರೆಯುವರು. ಬಹುತೇಕ ಜೀವಿಗಳಲ್ಲಿ ಕ್ರೊಮೋಸೋಮುಗಳು ದ್ವಿಪ್ರತಿಯಲ್ಲಿರುತ್ತವೆ. ಮಿಸೊಟೋಮ (ಚಪ್ಪಟೆ ಹುಳು) ಮತ್ತು ಆಸ್ಕಾರಿಸ್ ಮೆಗಲೊಸೆಫಲಾ (ಜಂತುಹುಳ)ಗಳಲ್ಲಿ ಅಂಗಕೋಶದಲ್ಲಿ 2n=2 ಆಗಿದ್ದರೆ ಲಿಂಗ ಕೋಶದಲ್ಲಿ ಕ್ರೊಮೋಸೋಮುಗಳ ಸಂಖ್ಯೆ n=1. ರೇಡಿಯೋಲೇರಿಯಾದಲ್ಲಿ ಅತಿ ಹೆಚ್ಚು ಅಂದರೆ 1,600 ಕ್ರೊಮೋಸೋಮುಗಳು ಇರುತ್ತವೆ. ಪ್ರಾಣಿಗಳಿಗಿಂತ ಸಸ್ಯಗಳಲ್ಲಿ ಕ್ರೊಮೋಸೋಮುಗಳ ಸಂಖ್ಯೆ ಕಡಿಮೆ ಇರುತ್ತದೆ.

ಕೆಲವು ಜೀವಿಗಳ ಕೋಶದಲ್ಲಿನ ಕ್ರೊಮೋಸೋಮುಗಳ ಡಿಪ್ಲಾಯ್ಡ್ ಸಂಖ್ಯೆ:

| ಪ್ರಾಣಿಕೋಶದಲ್ಲಿ ಕ್ರೊಮೋಸೋಮುಗಳ ಸಂಖ್ಯೆ | | ಸಸ್ಯಕೋಶದಲ್ಲಿ ಕ್ರೊಮೋಸೋಮುಗಳ ಸಂಖ್ಯೆ | |
|---|---|---|---|
| ಆಸ್ಕಾರಿಸ್ ಮೆಗಲೊಸೆಫೆಲಾ – | 2 | ಅವರೆ – | 12 |
| ಸೊಳ್ಳೆ – | 6 | ಬಟಾಣಿ – | 14 |
| ಡ್ರಾಸೊಫಿಲಾ – | 12 | ನೀರುಳ್ಳಿ – | 16 |
| ಬಫೊ – | 22 | ಎಲೆಕೋಸು – | 18 |
| ಜಿರಳೆ – | 24 | ಅಕ್ಕಿ – | 22 |
| ಕಪ್ಪೆ – | 24 | ಬಾಳೆ – | 22 |
| ಹಸು – | 60 | ಟೊಮ್ಯಾಟೊ – | 24 |
| ಕುದುರೆ – | 66 | ಸೂರ್ಯಕಾಂತಿ – | 34 |
| ನಾಯಿ – | 78 | ಸೇಬು – | 34 |
| ಬಾತು – | 78 | ಕಾಫಿ – | 42 |
| ಕಾಗೆ – | 200 | ಆಲೂಗಡ್ಡೆ – | 48 |
| ಸನ್ಯಾಸಿ ಏಡಿ (ಹರ್ಮಿಟ್ ಕ್ರ್ಯಾಬ್) | 254 | ಹತ್ತಿ – | 52 |
| ಅಲೊಕ್ಯಾಂತ (ರೇಡಿಯೊಲೇರಿಯ) | 1600 | ಕಬ್ಬು – | 80 |

ಕ್ರೊಮೋಸೋಮುಗಳ ಉದ್ದ 1 ಮೈ. (ಶಿಲೀಂದ್ರ) ನಿಂದ 20 ಮೈ. (ಟ್ರಿಲಿಯಮ್) ಗಳವರೆಗೆ ವ್ಯತ್ಯಾಸ ಇರುತ್ತದೆ. ಮನುಷ್ಯನ ಕ್ರೊಮೋಸೋಮುಗಳ ಕನಿಷ್ಠ ಉದ್ದ 4 ರಿಂದ 6 ಮೈ. ಕೋಶವಿಭಜನೆಯ ಸಮಯದಲ್ಲಿ ಕ್ರೊಮೋಸೋಮು ದ್ವಿಪ್ರತಿಗೊಳ್ಳುತ್ತದೆ. ಈ ರಚನೆಗಳನ್ನು ಪ್ರತ್ಯೇಕವಾಗುವವರೆಗೂ ಕ್ರೊಮ್ಯಾಟಿಡ್ ಎನ್ನುತ್ತಾರೆ. ರಾಸಾಯನಿಕವಾಗಿ ಡೀಆಕ್ಸಿರೈಬೊ ನ್ಯೂಕ್ಲಿಯಿಕ್ ಆಮ್ಲ, ಹಿಸ್ಟೋನ್‌ಗಳೆಂಬ ಪ್ರೊಟೀನುಗಳು ಹಾಗೂ ಕೊಂಚ ರೈಬೊನ್ಯೂಕ್ಲಿಯಿಕ್ ಆಮ್ಲ ಮತ್ತು ಸಂಕೀರ್ಣ ಬಗೆಯ ನ್ಯೂಕ್ಲಿಯೊಪ್ರೊಟೀನುಗಳನ್ನೊಳಗೊಂಡಿದೆ. ಸೆಂಟ್ರೊಮಿಯರ್, ಕೈನೆಟೊಕೋರ್, ಕ್ರೊಮ್ಯಾಟಿನ್, ದ್ವಿತೀಯಕ ಸಂಪೀಡನೆ (ಸೆಕೆಂಡರಿ ಕನ್‌ಸ್ಟ್ರಿಕ್ಷನ್), ನ್ಯೂಕ್ಲಿಯೊಲಾರ್ ಆರ್ಗನೈಸರ್, ಟಿಲೋಮಿಯರ್ ಮತ್ತು ಸ್ಯಾಟಿಲೈಟ್ ಇವು ಸೂಕ್ಷ್ಮರಚನೆಯಲ್ಲಿ ಕಂಡು ಬರುವ ಭಾಗಗಳು.

ಪ್ರತಿಯೊಂದು ಕ್ರೊಮೋಸೋಮಿನಲ್ಲೂ ಎರಡು ಬಾಹುಗಳಿವೆ. ಈ ಎರಡು ಬಾಹುಗಳ ಮಧ್ಯಭಾಗದ ಕೇಂದ್ರೀಕೃತ ಬಿಂದು ಸೆಂಟ್ರೊಮಿಯರ್. ಈ ಭಾಗ ಉಳಿದ ಭಾಗಗಳಿಗಿಂತ ಕಡಿಮೆ ಬಣ್ಣವನ್ನು ಗ್ರಹಿಸುತ್ತದೆ. ಸೆಂಟ್ರೊಮಿಯರ್ ಭಾಗದಲ್ಲಿ ಎರಡು ಬಾಹುಗಳು ಸಂಪೀಡಿತವಾದಂತೆ ಕಂಡುಬರುತ್ತದೆ. ಇದು ಪ್ರಥಮ ಸಂಪೀಡನ (ಪ್ರೈಮರಿ ಕನ್‌ಸ್ಟ್ರಿಕ್ಷನ್). ಪ್ರಥಮ ಸಂಪೀಡನದ ಎರಡೂ ಪಕ್ಕಗಳಲ್ಲಿ ಒಂದೊಂದು ತಟ್ಟೆಯಾಕಾರದ ಕೈನೆಟೊಕೋರ್ ಉಂಟು. ಕೋಶವಿಭಜನೆಯ ಸಮಯದಲ್ಲಿ ವಿಭಜನಾ ಕದಿರು ಕೈನೆಟೊಕೋರ್‌ಗೆ ಬಂಧಿಸಿಕೊಂಡು ವಿಭಜನೆಯಾದ ಕ್ರೊಮೋಸೋಮುಗಳನ್ನು ಕೋಶದ ಎರಡು ಧ್ರುವಗಳಿಗೆ ಕೊಂಡೊಯ್ಯುತ್ತದೆ.

ಸಾಮಾನ್ಯವಾಗಿ ಒಂದು ಸೆಂಟ್ರೊಮಿಯರ್ ಇದ್ದೇ ಇರುತ್ತದೆ. ಇದು ಏಕಕೇಂದ್ರಿಕ (ಮಾನೊಸೆಂಟ್ರಿಕ್) ಕ್ರೊಮೋಸೋಮು. ಅಪರೂಪಕ್ಕೆ ದ್ವಿಕೇಂದ್ರಿಕ (ಡೈಸೆಂಟ್ರಿಕ್) ಮತ್ತು ಬಹುಕೇಂದ್ರಿಕ (ಪಾಲಿಸೆಂಟ್ರಿಕ್) ಗಳಿರಬಹುದು. ಕೆಲವೊಮ್ಮೆ ಒಂದೇ ಕಡೆ ಕೇಂದ್ರೀಕೃತವಾಗಿರದೆ ಕ್ರೋಮೋಸೋಮಿನ ಉದ್ದಕ್ಕೂ ಹರಡಿರಬಹುದು (ಡಿಫ್ಯೂಸಡ್). ಉದಾಹರಣೆಗೆ, ಹೆಮಿಪ್ಟರ ಗಣದ ಕೀಟಗಳು, ಆಸ್ಕಾರಿಸ್ ಮೆಗಲೊಸೆಫಾಲ, ಲುಜುಲ ಎಂಬ ಸಸ್ಯ. ಸೆಂಟ್ರೊಮಿಯರ್ ಇರುವ ಸ್ಥಾನವನ್ನು ಅನುಸರಿಸಿ ಕ್ರೊಮೋಸೋಮುಗಳ ಆಕಾರ ಬದಲಾಗುವುದೂ ಉಂಟು. ಇವು ಸರಳು, L ಅಥವಾ V ಆಕಾರ ತಳೆಯಬಹುದು. ಈ ಆಧಾರದ ಮೇಲೆ ಆಕ್ರೊಸೆಂಟ್ರಿಕ್, ಸಬ್‌ಮೆಟಾಸೆಂಟ್ರಿಕ್, ಮೆಟಸೆಂಟ್ರಿಕ್ ಮತ್ತು ಟಿಲೊಸೆಂಟ್ರಿಕ್ ಎಂದು ಇವುಗಳನ್ನು ವಿಂಗಡಿಸಲಾಗಿದೆ. ಆಕ್ರೊಸೆಂಟ್ರಿಕ್ ಕ್ರೊಮೋಸೋಮಿನಲ್ಲಿ ಒಂದು ಬಾಹು ಇನ್ನೊಂದು ಬಾಹುಗಿಂತ ಉದ್ದವಾಗಿದ್ದು ಸೆಂಟ್ರೊಮಿಯರ್ ಒಂದು ತುದಿಗಿಂತ ಸ್ವಲ್ಪ ಹಿಂದಕ್ಕೆ ಇರುತ್ತದೆ. ಇವುಗಳು ಸರಳಿನ ರೂಪ ತಾಳುತ್ತವೆ. ಸಬ್‌ಮೆಟಾಸೆಂಟ್ರಿಕ್ ಕ್ರೊಮೋಸೋಮಿನ ಬಾಹುಗಳು ಉದ್ದದಲ್ಲಿ ಅಸಮ ಮತ್ತು ಸೆಂಟ್ರೊಮಿಯರ್ ನಡುಭಾಗದಲ್ಲಿರದೆ ಸ್ವಲ್ಪ ಅತ್ತಿತ್ತ ಇದ್ದು L ಆಕಾರ ತಾಳುತ್ತದೆ. ಮೆಟಾಸೆಂಟ್ರಿಕ್ ಕ್ರೊಮೋಸೋಮಿನಲ್ಲಿ ಬಾಹುಗಳೆರಡೂ ಸಮವಾಗಿದ್ದು ಸೆಂಟ್ರೊಮಿಯರ್ ನಟ್ಟ ನಡುವಿನಲ್ಲಿದ್ದು V ಆಕಾರ ತಾಳುತ್ತದೆ. ಸೆಂಟ್ರೊಮಿಯರ್ ಸ್ಥಾನವು ಬಾಹುವಿನ ತುಟ್ಟ ತುದಿಯಲ್ಲಿದ್ದರೆ ಅದನ್ನು ಟಿಲೊಸೆಂಟ್ರಿಕ್ ಕ್ರೊಮೋಸೋಮು ಎನ್ನುತ್ತಾರೆ. ಟ್ರಿಲಿಯಂ ಮತ್ತು ಟ್ರಾಡಸ್‌ಕೆಂಷಿಯದಲ್ಲಿ ಎಲ್ಲ ಕ್ರೊಮೋಸೋಮುಗಳು ಮೆಟಾಸೆಂಟ್ರಿಕ್ ಆಗಿದ್ದು ಮನುಷ್ಯನಲ್ಲಿ ಮೆಟಾಸೆಂಟ್ರಿಕ್, ಆಕ್ರೊಸೆಂಟ್ರಿಕ್ ಮತ್ತು ಸಬ್‌ಮೆಟಾಸೆಂಟ್ರಿಕ್ ಕ್ರೊಮೋಸೋಮುಗಳಿವೆ.




ಸೆಂಟ್ರೊಮಿಯರ್ ಒಂದು ಜಟಿಲವಾದ ರಚನೆ. ಲಿಮ ಡಿ ಫೆರಿಯ ಎಂಬ ವಿಜ್ಞಾನಿಯಂತೆ ಸೆಂಟ್ರೊಮಿಯರ್‌ನಲ್ಲಿ ಮೂರು ಮುಖ್ಯ ಭಾಗಗಳಿವೆ. ಅವು ಪರಸ್ಪರ ಎದುರು ಬದುರಾಗಿ ಕೂಡಿಕೊಂಡಿರುತ್ತವೆ. ಅವುಗಳನ್ನು ಕ್ರಮವಾಗಿ ಬಾಹ್ಯ, ಮಧ್ಯ ಮತ್ತು ಒಳ ಭಾಗಗಳೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಬಾಹ್ಯ ಭಾಗವು ದಟ್ಟವಾಗಿದ್ದು ಸೆಂಟ್ರೊಮಿಯರ್ ಫಲಕ ಎನ್ನುವರು. ಒಳಭಾಗವು ಒತ್ತಾಗಿ ಜೋಡಿಸಿರುವ

ಕ್ರೊಮ್ಯಾಟಿನ್ ಎಳೆಗಳಿಂದ ಮಾಡಲ್ಪಟ್ಟಿದೆ. ಮಧ್ಯ ಭಾಗವು ಪಾರದರ್ಶಕವಾಗಿದ್ದು ಕ್ರೊಮೋಸೋಮಿಗೂ ವಿಭಜನಾ ಕದಿರಿಗೂ ಪರಸ್ಪರ ಸಂಬಂಧವನ್ನು ಕಲ್ಪಿಸುತ್ತದೆ ಮತ್ತು ಕ್ರೊಮೋಸೋಮಿನ ಚಲನೆಗೆ ಸಹಾಯಕವಾಗುತ್ತದೆ.

ಪ್ರಥಮ ಅಥವಾ ಪ್ರಧಾನ ಸಂಪೀಡನದ ಜೊತೆಗೆ ಗೌಣ ಅಥವಾ ದ್ವಿತೀಯಕ ಸಂಪೀಡನ ಇರಬಹುದು. ಕೆಲವು ವೇಳೆ ಈ ದ್ವಿತೀಯಕ ಸಂಪೀಡನ ಒಂದು ತುದಿಯಲ್ಲಿದ್ದು ಅದಕ್ಕೆ ಹೊಂದಿಕೊಂಡಂತೆ ನ್ಯೂಕ್ಲಿಯೋಲಸ್ ಕಂಡು ಬರುತ್ತದೆ. ಈ ನ್ಯೂಕ್ಲಿಯೋಲಸ್‌ನಲ್ಲಿ ಕ್ರೊಮೋಸೋಮಿನ 0.3% ಡಿಎನ್‌ಎ ಇರುತ್ತದೆ. ದ್ವಿತೀಯಕ ಸಂಪೀಡನ ನ್ಯೂಕ್ಲಿಯೋಲಸ್ ಅನ್ನು ಸಂಘಟಿಸುವುದರಿಂದ ನ್ಯೂಕ್ಲಿಯೋಲಸಿನ ಸಂಘಟಕ (ನ್ಯೂಕ್ಲಿಯೋಲಾರ್ ಆರ್ಗನೈಸರ್) ಎಂಬ ಹೆಸರಿದೆ. ದ್ವಿತೀಯಕ ಸಂಪೀಡನದ ಒಂದು ತುದಿಯಲ್ಲಿ ಪುಟ್ಟ ಕ್ರೊಮೋಸೋಮುಗಳ ಕೇಂದ್ರ ನಿರ್ಮಾಣವಾಗಬಹುದು. ಈ ಪುಟ್ಟ ಖಂಡವನ್ನು ಸ್ಯಾಟಲೈಟ್ ಎನ್ನುವರು. ಇದನ್ನು ಹೊಂದಿರುವ ಕ್ರೊಮೋಸೋಮುಗಳಿಗೆ ಸ್ಯಾಟ್ ಕ್ರೊಮೋಸೋಮುಗಳು ಎನ್ನುವರು. ಮನುಷ್ಯನ 13, 14, 15 ನೇ ಕ್ರೊಮೋಸೋಮುಗಳು ಸ್ಯಾಟ್ ಕ್ರೊಮೋಸೋಮುಗಳು.

ಕ್ರೊಮೋಸೋಮಿನ ಬಿಡಿಯಾದ ಎರಡು ತುದಿಗಳಿಗೆ ಟಿಲೊಮಿಯರ್ (ಮುಲ್ಲರ್ 1940) ಗಳೆಂದು ಹೆಸರು. ಟಿಲೊಮಿಯರಿಗೂ ವಿಶೇಷ ಲಕ್ಷಣಗಳಿರುವುದನ್ನು ಜಾನ್ ಮತ್ತು ಲೂಯಿಸ್ 1965 ತಿಳಿಸಿದ್ದಾರೆ. ಟಿಲೊಮಿಯರ್ ಭಾಗವನ್ನು ಪ್ರಾಯೋಗಿಕವಾಗಿ ಕ್ರೊಮೋಸೋಮಿನ ಯಾವ ಭಾಗಕ್ಕೂ ಸ್ಥಳಾಂತರಿಸುವುದು ಸಾಧ್ಯವಿಲ್ಲ. ಕೋಶವಿಭಜನೆ ನಡೆಯುವ ಕಾಲದಲ್ಲಿ ಕಾರಣಾಂತರದಿಂದ ಟಿಲೊಮಿಯರ್ ಕಳೆದು ಹೋದರೆ ಕ್ರೊಮೋಸೋಮಿನ ವರ್ತನೆಯ ಮೇಲೆ ಮಹತ್ಪರಿಣಾಮ ಉಂಟಾಗುತ್ತದೆ. ಒಂದು ಕ್ರೊಮೋಸೋಮ್ ಪರಿಪೂರ್ಣವಾಗಬೇಕಾದರೆ, ಅದು ತನ್ನ ಸ್ವಾಭಾವಿಕತೆಯನ್ನು ಉಳಿಸಿಕೊಂಡು ತನ್ನ ನಿಯಮಿತ ಕೆಲಸವನ್ನು ನಿರ್ವಹಿಸಬೇಕಾದರೆ, ಅದರಲ್ಲಿ ಒಂದು ಸೆಂಟ್ರೊಮಿಯರ್ ಮತ್ತು ಎರಡೂ ಟಿಲೊಮಿಯರ್‌ಗಳು ಕಡ್ಡಾಯವಾಗಿ ಇರಲೇ ಬೇಕು. ಟಿಲೊಮಿಯರಿನಲ್ಲಿ ಪ್ರೊಟಿಲೊಮಿಯರ್ ಮತ್ತು ಯೂಟಿಲೊಮಿಯರ್ ಎಂಬ ಎರಡು ಪ್ರತ್ಯೇಕ ಭಾಗಗಳಿರುವ ವರದಿಗಳಿವೆ. ಇದು ಕ್ರೊಮೋಸೋಮಿನ ತುದಿಯಾದರೂ ಕ್ರೋಮೊನಿಮೇಟಗಳು ಇಲ್ಲಿ ಅಂತ್ಯವಾಗದೆ ಮಡಿಚಿಕೊಂಡಿವೆ. ಟಿಲೊಮಿಯರಿನ ಭಾಗಾಂಶಗಳೆಲ್ಲಕ್ಕೂ ಏಕ ಧ್ರುವತೆಯ ಮುಖ್ಯ ಲಕ್ಷಣಗಳಿವೆ.

ಕ್ರೊಮ್ಯಾಟಿಡ್‌ಗಳಲ್ಲಿನ ಡಿಎನ್‌ಎ ಎಳೆಯೇ ಕ್ರೊಮೋನಿಮೇಟ. ಇದು ಸುರುಳಿಸುತ್ತಿಕೊಂಡಿರುತ್ತದೆ. ಕ್ರೊಮೋನಿಮದಲ್ಲಿ ಕ್ರೊಮೋಮಿಯರ್‌ಗಳಿವೆ. ಸಂಖ್ಯಾಕ್ಷೀಣ (ಮಿಯಾಸಿಸ್) ವಿಭಜನೆಯ ಪ್ರೊಫೇಸ್ ಹಂತದಲ್ಲಿ ಕ್ರೊಮೋಸೋಮುಗಳಲ್ಲಿ ಪರ್ಯಾಯವಾಗಿ ಜೋಡಿಸಿದ ದಪ್ಪ ಮತ್ತು ತೆಳು ಭಾಗಗಳು ಮಣಿಗಳನ್ನು ಪೋಣಿಸಿದ ಸರದಂತೆ ಕಾಣಿಸಿಕೊಳ್ಳುತ್ತವೆ. ಈ ಮಣಿಗಳಂತಿರುವ ರಚನೆಗಳೇ ಕ್ರೊಮೋಮಿಯರ್‌ಗಳು. ಇವುಗಳ ಸಂಖ್ಯೆ ಮತ್ತು ಸ್ಥಾನ ಬಹಳ ನಿಖರವಾದುದು. ನ್ಯೂಕ್ಲಿಯೊ ಪ್ರೋಟೀನಿನ ಕ್ರೋಡೀಕೃತ ರಚನೆಗಳಿವು. ಪ್ರೊಫೇಸ್ ಹಂತ ಮುಂದುವರಿದಂತೆ ಕ್ರೊಮೋಸೋಮುಗಳು ಹೆಚ್ಚು ದಪ್ಪವಾಗಿ ಮತ್ತು ಮೋಟಾಗಿ ಕಾಣಿಸಿಕೊಂಡಂತೆ ಕ್ರೊಮೋಮಿಯರುಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಕ್ರೊಮೋಸೋಮಿನ ವಸ್ತುವನ್ನು ಕ್ರೊಮ್ಯಾಟಿನ್ ಎನ್ನುತ್ತಾರೆ. ಇದರಲ್ಲಿ ಎರಡು ವಿಧ: ಹೆಟರೊಕ್ರೊಮ್ಯಾಟಿನ್ ಮತ್ತು ಯುಕ್ರೊಮ್ಯಾಟಿನ್. ಹೆಟರೊಕ್ರೊಮ್ಯಾಟಿನ್ ಭಾಗವು ಯುಕ್ರೊಮ್ಯಾಟಿನ್‌ಗಿಂತ ಹೆಚ್ಚು ಬಣ್ಣ ಗ್ರಹಿಸುತ್ತದೆ. ಯುಕ್ರೊಮ್ಯಾಟಿನ್ ಭಾಗ ಸಾಮಾನ್ಯವಾಗಿ ಕೋಶವಿಭಜನೆಯ ಕಾಲದಲ್ಲಿ ಬಣ್ಣ ಗ್ರಹಿಸುವ ಗುಣವನ್ನು ಪ್ರದರ್ಶಿಸುತ್ತದೆ. ಕೋಶದ ಅಂತರಾವಸ್ಥೆಯಲ್ಲಿ ಈ ಗುಣ ಇಲ್ಲ. ವಿಭಜನೆಯ ಕಾಲದಲ್ಲಿ ಮಿಕ್ಕೆಲ್ಲ ಕ್ರೊಮ್ಯಾಟಿನ್ ಭಾಗ ಬಣ್ಣ ಗ್ರಹಿಸಿ ಸ್ಪಷ್ಟವಾಗಿ ಕಾಣಿಸಿಕೊಳ್ಳುವಾಗ ಕೆಲವು ಭಾಗಗಳು ಬಣ್ಣ ಗ್ರಹಿಸದೆ ಅಸ್ಪಷ್ಟವಾಗಿದ್ದು ಭಿನ್ನ ಗುಣವನ್ನು ಪ್ರದರ್ಶಿಸಬಹುದು. ಕೋಶದ ಅಂತರಾವಸ್ಥೆಯಲ್ಲಿ ಇವು ಬಣ್ಣಗ್ರಹಿಸಿ ಗೋಚರವಾಗಬಹುದು. ಹೀಗೆ ಭಿನ್ನ ವರ್ತನೆಯನ್ನು ಪ್ರದರ್ಶಿಸುವ ಭಾಗಕ್ಕೆ ಹೆಟರೊಕ್ರೊಮ್ಯಾಟಿನ್ ಎಂದು ಹೆಸರು. ಈ ವರ್ತನೆಯನ್ನು ಪ್ರದರ್ಶಿಸುವ ಗುಣವನ್ನು ಹೆಟರೂಪಿಕ್ನಾಸಿಸ್ ಎನ್ನುವರು. ಹೆಟರೊಕ್ರೊಮ್ಯಾಟಿನ್ ಗಳಲ್ಲಿ ಎರಡು ಬಗೆಗಳನ್ನು ಗುರುತಿಸಬಹುದು. ಕಾನ್‌ಸ್ಟಿಟ್ಯೂಟಿವ್ ಮತ್ತು ಫ್ಯಾಕಲ್ಟೆಟಿವ್ ಹೆಟರೊಕ್ರೊಮ್ಯಾಟಿನ್‌ಗಳು. ಕಾನ್‌ಸ್ಟಿಟ್ಯೂಟಿವ್ ಹೆಟರೊಕ್ರೊಮ್ಯಾಟಿನ್ ಯಾವಾಗಲೂ ಜಡವಾಗಿದ್ದು ಯಾವ ಬಗೆಯ ಕಾರ್ಯ ಜೀನ್‌ಗಳನ್ನೂ ಹೊಂದಿರುವುದಿಲ್ಲ. ಫ್ಯಾಕಲ್ಟೆಟಿವ್ ಹೆಟರೊಕ್ರೊಮ್ಯಾಟಿನ್ ತಾತ್ಕಾಲಿಕವಾಗಿ ಜಡವಾಗಿದ್ದು ಯುಕ್ರೊಮ್ಯಾಟಿಕ್ ಸ್ಥಿತಿಗೆ ಹಿಂದಿರುಗಬಹುದು. ಹೆಟರೊಕ್ರೊಮ್ಯಾಟಿನ್ ಭಾಗವು ದಟ್ಟವಾದ ಸುರುಳಿಗಳನ್ನು ಹೊಂದಿರುತ್ತದೆ. ಈ ಭಾಗದಲ್ಲಿ ಗಸಿಪ್ರೊಟೀನುಗಳು, ಫಾಸ್ಫೊಲಿಪಿಡ್ ಮತ್ತು ಒಟ್ಟು ಆರ್‌ಎನ್‌ಎ ಅಂಶಗಳು ಬಹಳ ಕಡಿಮೆ. ಆದುದರಿಂದ ಈ ಭಾಗ ಆನುವಂಶೀಯವಾಗಿ ಜಡ ಎಂಬ ಭಾವನೆಯೂ ಉಂಟು. ಯುಕ್ರೊಮ್ಯಾಟಿನ್ ಭಾಗ ಸ್ವಾಭಾವಿಕವಾಗಿ ಸುರುಳಿ ಆವರ್ತನವನ್ನು ತೋರುತ್ತದೆ. ಇದರಲ್ಲಿ ಕ್ರೊಮೋನಿಮುಗಳು ಅಡಕವಾಗಿ ಬಿಗಿ ಸುರುಳಿಗಳನ್ನು ಹೊಂದಿರುತ್ತದೆ ಮತ್ತು ಒಟ್ಟು ಡಿಎನ್‌ಎ ಅಂಶ ಹೆಚ್ಚಾಗಿರುತ್ತದೆ.

ಕ್ರೊಮೋಸೋಮುಗಳ ಸೂಕ್ಷ್ಮಾತೀತ ರಚನೆ:– ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಕ್ರೊಮೋಸೋಮಿನ ಸೀಳಿಕೆಗಳನ್ನು ವೀಕ್ಷಿಸಿದಾಗ ಒಂದೊಂದರಲ್ಲೂ 200 Å ವ್ಯಾಸದ ಮೂಲ ಎಳೆಗಳಿರುವುದು ಕಂಡು ಬರುತ್ತದೆ. ಈ ಎಳೆಗಳು ಒಂದಕ್ಕೊಂದು ಹೊಸೆದುಕೊಂಡು ಕ್ರೊಮೋಸೋಮುಗಳಾಗಿ ರೂಪುಗೊಂಡಿವೆ ಎಂದು ಹ್ಯಾನ್ಸ್ ರೀಸ್‌ನ ಅಭಿಪ್ರಾಯ. ಈ ಎಳೆಗಳಲ್ಲಿ ಎ ಮತ್ತು ಬಿ ಮಾದರಿಯ ಎರಡು ರೀತಿಯ ಎಳೆಗಳಿವೆ. ಎ ಎಳೆಗಳು ದಟ್ಟವಾಗಿವೆ ಮತ್ತು ಇವುಗಳ ವ್ಯಾಸ 30–35 Å. ಬಿ ಎಳೆಗಳು 200–300 Å ವ್ಯಾಸದುವು. ಈ ಎಳೆಗಳು ಕ್ರೊಮೋಸೋಮಿನ ಸೆಂಟ್ರೊಮಿಯರ್ ಭಾಗದಲ್ಲಿಯೂ ಇವೆ. ಆದರೆ ಇಲ್ಲಿ ಎಳೆಗಳು ಹೆಚ್ಚು ಅಡಕವಾಗಿವೆ. ಸೆಂಟ್ರೊಮಿಯರ್ ಮೂಲಕ 5 ರಿಂದ 7 ಬಿ ಮಾದರಿಯ ತಂತುಗಳು ಕ್ರೊಮೋಸೋಮಿನ ಒಂದು ಬಾಹುವಿನಿಂದ ಇನ್ನೊಂದು ಬಾಹುವಿಗೆ ಹಾದು ಹೋಗಿವೆ ಎಂದು ಡುಪ್ರಾ ಮತ್ತು ಬ್ರಾಹ್ ತಿಳಿಸಿದ್ದಾರೆ (1968). ಎಕ್ಸ್ ಕಿರಣ ನಮನ (ಡಿಫ್ರಾಕ್ಷನ್) ತಂತ್ರದಿಂದ ಕ್ರೊಮೋಸೋಮುಗಳು ಸಮಾನಾಂತರವಾಗಿ ಜೋಡಿಸಿದ ಅನೇಕ ಡಿಎನ್‌ಎ ಸುರುಳಿಗಳು ಸೇರಿ ಆಗುತ್ತವೆ ಎಂದು ತಿಳಿದುಕೊಳ್ಳಲಾಯಿತು.

ಕ್ರೊಮ್ಯಾಟಿನ್ ಅನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದಾಗ ಮಣಿಗಳಂತಿರುವ ಸಂಘಟಕಗಳು ಕಾಣಿಸಿಕೊಳ್ಳುತ್ತವೆ. ಇವನ್ನು ನ್ಯೂಕ್ಲಿಯೊಸೋಮುಗಳು ಎನ್ನುವರು. ನ್ಯೂಕ್ಲಿಯೊಸೋಮ್‌ಗಳು ಹಿಸ್ಟೋನ್ ಪ್ರೋಟೀನ್ ಮತ್ತು ಡಿಎನ್‌ಎ. ಗಳಿಂದಾಗಿವೆ. ವ್ಯಾಸ 11 ನ್ಯಾಮೀ. ಪ್ರತಿಯೊಂದು ನ್ಯೂಕ್ಲಿಯೊಸೋಮ್‌ನಲ್ಲಿ ಹಿಸ್ಟೋನ್ ಆಕ್ಟಾಮರ್ ಇದೆ. $H_{2A}$,$H_{2B}$,$H_3$ ಮತ್ತು $H_4$ ಎಂಬ ನಾಲ್ಕು ಬಗೆಯ ಹಿಸ್ಟೋನ್‌ಗಳು ಎರಡೆರಡರಂತೆ ಈ ಆಕ್ಟಾಮರ್‌ನಲ್ಲಿವೆ. ಈ ಹಿಸ್ಟೋನ್ ಆಕ್ಟೋಮರ್‌ಗಳನ್ನು ಡಿಎನ್‌ಎ ಸುರುಳಿಗಳು ಎರಡು ಸುತ್ತು ಸುತ್ತಿಕೊಂಡಿರುತ್ತವೆ. ಡಿಎನ್‌ಎ ಯನ್ನು ಒಂದು ನ್ಯೂಕ್ಲಿಯೊಸೋಮ್‌ನ ಜೊತೆಗೆ ಇನ್ನೊಂದು ನ್ಯೂಕ್ಲಿಯೊಸೋಮ್ ಸುತ್ತಿಕೊಳ್ಳಲು ಹಿಸ್ಟೋನ್ $H_1$ ಪ್ರೊಟೀನ್ ಸಹಕರಿಸುತ್ತದೆ. ಎರಡು ನ್ಯೂಕ್ಲಿಯೊಸೋಮ್ ಗಳ ಮಧ್ಯ ಇರುವ ಡಿಎನ್‌ಎ. ಯನ್ನು ಲಿಂಕರ್ ಅಥವಾ ಸ್ಪೇಸರ್ ಡಿಎನ್‌ಎ ಎನ್ನುವರು. ಕ್ರೊಮ್ಯಾಟಿನ್ ಸೋಲೆನಾಯಿಡ್ ಸುರುಳಿ ಆಕಾರವನ್ನು ಹೊಂದಿದೆ. ಹಲವಾರು ಮೀ ಉದ್ದವಾದ ಡಿಎನ್‌ಎ ಸುರುಳಿಯನ್ನು ಜೋಡಿಸಲು ಹಿಸ್ಟೋನ್ ಪ್ರೊಟೀನ್‌ಗಳು ನೆರವಾಗುತ್ತವೆ. ನ್ಯೂಕ್ಲಿಯೊಸೋಮ್ ವಿಚಾರವನ್ನು ಮೊದಲು ಮಂಡಿಸಿದವರು ಆರ್.ಡಿ.ಕೊರನ್‌ಬರ್ಗ್ ಮತ್ತು ಜೆ.ಓ.ಥಾಮಸ್ (1984). ಈ ಪದವನ್ನು ಮೊದಲು ಬಳಸಿದವನು ಪಿ.ಎಮ್.ಔಟ್‌ಡೆಟ್ (1975).




ವಿಶೇಷ ರೀತಿಯ ಕ್ರೊಮೋಸೋಮುಗಳು: ಕೆಲವು ಕೀಟಗಳಲ್ಲಿ ಮನುಷ್ಯನದಕ್ಕಿಂತ 100 ಪಟ್ಟು ಉದ್ದನೆಯ ಕ್ರೊಮೋಸೋಮುಗಳು ಇರುತ್ತವೆ. ಇವನ್ನು ದೈತ್ಯ ಕ್ರೊಮೋಸೋಮುಗಳು ಎನ್ನುತ್ತಾರೆ. ಇವುಗಳಲ್ಲಿ ಎರಡು ವಿಧ; ಪಾಲಿಟೀನ್ ಮತ್ತು ಲ್ಯಾಂಪ್‌ಬ್ರಷ್ ಕ್ರೊಮೋಸೋಮುಗಳು. ತಮ್ಮ ಭಿನ್ನ ಆಕಾರ, ರಚನೆ ಮತ್ತು ಬೃಹತ್ ಗಾತ್ರಗಳಿಂದ ವಿಶಿಷ್ಟವಾಗಿವೆ. ಸಾಮಾನ್ಯ ಕ್ರೊಮೋಸೋಮುಗಳಲ್ಲಿ ಕಾಣಲು ಸಾಧ್ಯವಿಲ್ಲದ ರಚನಾ ವಿವರಗಳನ್ನು ಮತ್ತು ವಿಶೇಷತೆಯನ್ನು ಇವುಗಳಲ್ಲಿ ಕಾಣಬಹುದು. ಬಾಲ್ಬಿಯಾನಿ

(1801) ಪಾಲಿಟೀನ್ ಕ್ರೊಮೋಸೋಮುಗಳನ್ನು ಕೈರಾನಮಸ್ ಚಿಟ್ಟೆಯ ಲಾರ್ವದ ಜೊಲ್ಲು ಗ್ರಂಥಿಗಳಲ್ಲಿ ಮೊದಲು ಕಂಡ. ಜೊಲ್ಲು ಗ್ರಂಥಿ ಕ್ರೊಮೋಸೋಮುಗಳು



ನ್ಯೂಕ್ಲಿಯೊಸೋಮ್ ಮಾದರಿ


ಪಾಲಿಟೀನ್ ಕ್ರೊಮೋಸೋಮ್

ಡಿಪ್ಟರ ಗಣದ ಕೀಟಗಳ (ಡ್ರೊಸಾಫಿಲ, ನೊಣ, ಸೊಳ್ಳೆ, ಕೈರಾನಮಸ್ ಚಿಟ್ಟೆ) ಲಾರ್ವಗಳಲ್ಲಿನ ಜೊಲ್ಲು ಗ್ರಂಥಿ, ಅನ್ನನಾಳ, ಶ್ವಾಸನಾಳ, ಯಕೃತ್, ಮಲಾಶಯ, ಮಾಲ್ಪಿಜಿಯನ್ ನಾಳ ಮುಂತಾದ ಅಂಗಗಳ ಜೀವಕೋಶಗಳಲ್ಲಿವೆ. ಈ ಕ್ರೊಮೋಸೋಮುಗಳು ಏಕಗುಣಿತವಾಗಿ ಕಾಣಬರುವುದು ಇವುಗಳ ವಿಶಿಷ್ಟತೆ. ಅಂದರೆ ಜೋಡಿಯಲ್ಲಿರುವ ಸದೃಶ ಕ್ರೊಮೋಸೋಮುಗಳು ಸಂಪೂರ್ಣ ಜೊತೆಗೂಡಿವೆ. ಒಂದು ಜೊಲ್ಲು ಗ್ರಂಥಿ ಕ್ರೊಮೋಸೋಮಿನಲ್ಲಿ ನಾಲ್ಕು ಜೊತೆ ಕ್ರೊಮೋಸೋಮುಗಳ ಬಾಹುಗಳು ಕ್ರೋಮೊಸೆಂಟರ್ ಎಂಬ ಕೇಂದ್ರ ರಚನೆಯೊಂದಕ್ಕೆ ಅಂಟಿಕೊಂಡಿವೆ. ಇವುಗಳ ಒಟ್ಟು ಉದ್ದ 2000 ಮೈ. ಒಂದೊಂದರ ವ್ಯಾಸವೂ 20 ಮೈ. ಬಾಹುಗಳ ಉದ್ದಕ್ಕೂ ತೆಳುವಾದ ಹಾಗೂ ದಟ್ಟವಾದ ಪಟ್ಟೆ ಮಾದರಿಗಳು ಕಂಡುಬರುತ್ತವೆ. ದಟ್ಟವಾದ ಪಟ್ಟಿ ಹೆಟರೊಕ್ರೊಮ್ಯಾಟಿನ್ ಆಗಿದ್ದು ಹೆಚ್ಚು ಬಣ್ಣವನ್ನು ಗ್ರಹಿಸುತ್ತದೆ. ಡ್ರೊಸಾಫಿಲಾದ ನಾಲ್ಕು ಜೊತೆ ಕ್ರೊಮೋಸೋಮುಗಳ ಬಾಹುಗಳಲ್ಲಿ 5000 ಪಟ್ಟೆಗಳಿವೆ. ಪ್ರತಿಯೊಂದು ದಟ್ಟವಾದ ಮತ್ತು ತೆಳುವಾದ ಪಟ್ಟಿಯಲ್ಲಿ ಜೀನ್‌ಗಳು ಇವೆ. ಪಟ್ಟಿಗಳನ್ನು ಗುರುತಿಸಿ ಕ್ರೊಮೋಸೋಮ್ ನಕ್ಷೆಗಳನ್ನು ತಯಾರಿಸಬಹುದು. ಅಲ್ಲಲ್ಲಿ ಪಟ್ಟೆಗಳು ಸಡಿಲವಾಗಿ ಬಿಡಿಸಿಕೊಂಡ ಹಗ್ಗದ ಗಂಟಿನ ಭಾಗದಂತೆ ಊದಿಕೊಂಡು ಉರುವುಗಳಾಗುತ್ತವೆ. ಇವನ್ನು ಬಾಲ್ಬಿಯಾನಿ ಪಫ್ ಎನ್ನುತ್ತಾರೆ. ಇವುಗಳಲ್ಲಿ ಆರ್‌ಎನ್‌ಎ ಮತ್ತು ಡಿಎನ್‌ಎ ಹೆಚ್ಚಾಗಿರುತ್ತವೆ. ಆರ್‌ಎನ್‌ಎ. ಸಂಶ್ಲೇಷಣೆ ತೀವ್ರವಾಗಿ ನಡೆಯುತ್ತಿರುತ್ತದೆ. ಒಂದೊಂದು ಅಂಗಾಂಶದಲ್ಲಿ ಒಂದೊಂದು ಪಟ್ಟಿಭಾಗವೂ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಕೆಲವು ನಿರ್ದಿಷ್ಟ ರೂಪ ತಾಳುತ್ತವೆ. ಹೀಗಾಗುವುದು ಜೀನ್ ಚಟುವಟಿಕೆಯ ಭೌತಾಭಿವ್ಯಕ್ತಿ. ಕ್ರೊಮೋಸೋಮುಗಳು ಅನೇಕ ಸಾರಿ ದ್ವಿಪ್ರತಿಗೊಂಡು ಬೇರ್ಪಡದೆ ಉಳಿದು ಈ ಕ್ರೊಮೋಸೋಮುಗಳಾಗಿವೆ ಎಂದು ಭಾವಿಸಲಾಗಿದೆ. ಆದ್ದರಿಂದ ಇವಕ್ಕೆ ಪಾಲಿಟೀನ್ ಕ್ರೊಮೋಸೋಮುಗಳೆಂದು ಹೆಸರಿದೆ.

ಲ್ಯಾಂಪ್‌ಬ್ರಷ್ ಕ್ರೊಮೋಸೋಮುಗಳು ಹಿಂದಿನ ಕಾಲದ ದೀರ್ಘ ಚಿಮಣಿಯನ್ನು ತೊಳೆಯಲು ಉಪಯೋಗಿಸುತ್ತಿದ್ದ ಬ್ರಷ್ ನಂತೆ ಕಾಣಿಸುತ್ತದೆ. 1882 ರಲ್ಲಿ ಫ್ಲೆಮಿಂಗ್ ಈ ಬೃಹದ್ ಗಾತ್ರದ ಕ್ರೊಮೋಸೋಮುಗಳನ್ನು ಉಭಯವಾಸಿಯ ಊಸೈಟ್ ನಲ್ಲಿ ಕಂಡ. 1892 ರಲ್ಲಿ ರಕರ್ಟ್ ಇವುಗಳಿಗೆ ಲ್ಯಾಂಪ್‌ಬ್ರಷ್ ಕ್ರೊಮೋಸೋಮುಗಳು ಎಂಬ ಹೆಸರನ್ನು ಸೂಚಿಸಿದ. ಇವು ಮೀನು, ದ್ವಿಚರಿ, ಸರೀಸೃಪ ಮತ್ತು ಪಕ್ಷಿಗಳ ಊಸೈಟುಗಳಲ್ಲಿ (ಹೆಚ್ಚು ಬಂಡಾರವುಳ್ಳಂಥವು) ಕಂಡು ಬರುತ್ತವೆ. ಜೊಲ್ಲು ಗ್ರಂಥಿ ಕ್ರೊಮೋಸೋಮುಗಳಿಗಿಂತಲೂ ಉದ್ದವಾಗಿರುತ್ತವೆ. ಕೆಲವು ಯೂರೊಡಿಲಗಳ


ಲ್ಯಾಂಪ್‌ಬ್ರಷ್ ಕ್ರೋಮೊಸೋಮ್

ಊಸೈಟ್‌ನಲ್ಲಿ ಒಟ್ಟು 5900 ಮೈಮೀ ಉದ್ದವಿರುತ್ತವೆ. ಮಿಯಾಸಿಸ್‌ನ ಡಿಪ್ಲೋಟಿನ್ ಅವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತವೆ. ಒಂದು ಲ್ಯಾಂಪ್‌ಬ್ರಷ್ ಕ್ರೊಮೋಸೋಮ್‌ನಲ್ಲಿ ಎರಡು ಸದೃಶ ಕ್ರೊಮ್ಯಾಟಿನ್ ಕುಣಿಕೆಗಳು ಇರುತ್ತವೆ. ಈ ಎರಡು ಕ್ರೊಮ್ಯಾಟಿನ್ ಕುಣಿಕೆಗಳು ಮಧ್ಯದ ಸ್ತಂಭಾಕೃತಿಯ ಅಕ್ಷಕ್ಕೆ ಕೂಡಿಕೊಂಡಿರುತ್ತವೆ. ಕುಣಿಕೆಗಳ ಬುಡದಲ್ಲಿ ಕ್ರೊಮೋಮಿಯರುಗಳಿವೆ. ಒಂದು ಅಕ್ಷದ ಮೇಲೆ ಇಂತಹ ಸಾವಿರಾರು ಕುಣಿಕೆಗಳಿರುತ್ತವೆ ಮತ್ತು ಅದರ ಬುಡದಲ್ಲಿ ಡಿಎನ್‌ಎ ಇರುತ್ತದೆ. ಪಾರ್ಶ್ವ ಕುಣಿಕೆಗಳ ಮೇಲೆ ಆರ್‌ಎನ್‌ಎ ಸಂಶ್ಲೇಷಣೆ ನಡೆಯುತ್ತದೆ. ಕುಣಿಕೆಗಳು ಜೀನ್ ಚಟುವಟಿಕೆಯ ಭೌತಾಭಿವ್ಯಕ್ತಿ. ಡ್ರೊಸಾಫಿಲಾ ಹೈಡಿ ಪ್ರಭೇದದ ಸ್ಪರ್ಮಟೋಸೈಟ್‌ಗಳಲ್ಲಿ Y –ಕ್ರೊಮೋಸೋಮುಗಳಿಂದಲೂ ಕ್ರೊಮ್ಯಾಟಿನ್ ಕುಣಿಕೆಗಳು ಬೆಳೆಯುತ್ತವೆ. ಇವನ್ನು Y – ಕ್ರೊಮೋಸೋಮ್ ಕುಣಿಕೆಗಳೆಂದು ಕರೆಯುತ್ತಾರೆ.

ಲಿಂಗಕ್ರೊಮೋಸೋಮುಗಳು:– ಲಿಂಗವನ್ನು ನಿರ್ಧರಿಸುವ ಕ್ರೊಮೋಸೋಮುಗಳು. ಮಾನವನಂತಹ ಬಹುತೇಕ ದ್ವಿಲಿಂಗ ಜೀವಿಗಳಲ್ಲಿ ಎರಡು ಬಗೆಯ ಕ್ರೊಮೋಸೋಮುಗಳಿವೆ – ಕಾಯ ಕ್ರೊಮೋಸೋಮುಗಳು ಮತ್ತು ಲಿಂಗ ಕ್ರೊಮೋಸೋಮುಗಳು. ಮಾನವನಲ್ಲಿ 46 ಕ್ರೊಮೋಸೋಮುಗಳಿದ್ದು ಅವುಗಳಲ್ಲಿ 44 ಕಾಯ ಕ್ರೊಮೋಸೋಮುಗಳು ಮತ್ತು ಇನ್ನೆರಡು ಲಿಂಗ ಕ್ರೊಮೋಸೋಮುಗಳು. ಪುರುಷನಲ್ಲಿ ಭಿನ್ನವಾದ X ಮತ್ತು Y ಎಂಬ ಎರಡು ಲಿಂಗ ಕ್ರೊಮೋಸೋಮುಗಳಿವೆ. ಸ್ತ್ರೀಯರಲ್ಲಿ ಲಿಂಗ ಕ್ರೊಮೋಸೋಮುಗಳು ಒಂದೇ ರೀತಿಯಾದ ಎರಡು X ಕ್ರೊಮೋಸೋಮುಗಳು. ಪುರುಷನಲ್ಲಿ ವೀರ್ಯಾಣು ಉತ್ಪತ್ತಿಯಾಗುವಾಗ ನಡೆಯುವ ಸಂಖ್ಯಾ ಕ್ಷೀಣ ವಿಭಜನೆಯಿಂದಾಗಿ ಎರಡು ರೀತಿಯ ವೀರ್ಯಾಣುಗಳು ಉದ್ಭವಿಸುತ್ತವೆ 22 ಕಾಯ ಕ್ರೊಮೋಸೋಮುಗಳು ಮತ್ತು X ಲಿಂಗ ಕ್ರೊಮೋಸೋಮು ಇರುವ ವೀರ್ಯಾಣುಗಳು ಹಾಗೂ 22 ಕಾಯ ಕ್ರೊಮೋಸೋಮುಗಳು ಮತ್ತು Y ಲಿಂಗ ಕ್ರೊಮೋಸೋಮು ಉಳ್ಳ ವೀರ್ಯಾಣುಗಳು. ಸ್ತ್ರೀಯರಲ್ಲಿ ಹುಟ್ಟುವ ಅಂಡಾಣುಗಳು ಒಂದೇ ರೀತಿಯಾಗಿದ್ದು 22 ಕಾಯ ಕ್ರೊಮೋಸೋಮುಗಳು ಮತ್ತು ಒಂದು X ಲಿಂಗ ಕ್ರೊಮೋಸೋಮನ್ನು ಹೊಂದಿರುತ್ತವೆ. ನಿಷೇಚನೆಯ ಕಾಲದಲ್ಲಿ ಯಾವ ಪುರುಷಾಣು ಅಂಡಾಣುವನ್ನು ಕೂಡುತ್ತದೆ ಎನ್ನುವುದನ್ನು ಅನುಸರಿಸಿ ಭ್ರೂಣದ ಲಿಂಗ ನಿರ್ಧಾರವಾಗುತ್ತದೆ. X ಲಿಂಗ ಕ್ರೊಮೋಸೋಮನ್ನು ಹೊಂದಿರುವ ವೀರ್ಯಾಣು ಅಂಡಾಣುವಿನೊಂದಿಗೆ ಸಂಯೋಗವಾದರೆ ಜನಿಸುವ ಮಗು ಹೆಣ್ಣಾಗುತ್ತದೆ. Y ಲಿಂಗ ಕ್ರೊಮೋಸೋಮನ್ನು ಹೊಂದಿರುವ ವೀರ್ಯಾಣು ಅಂಡಾಣುವಿನೊಂದಿಗೆ ಸಂಯೋಗವಾದಾಗ ಜನಿಸುವ ಶಿಶು ಗಂಡಾಗಿರುತ್ತದೆ. ಗಂಡಸರಲ್ಲಿನ ಒಂದು X ಕ್ರೊಮೋಸೋಮು ಹೆಂಗಸರ X ಕ್ರೊಮೋಸೋಮನ್ನು ಹೋಲುತ್ತದೆ ಮತ್ತು Y ಲಿಂಗ ಕ್ರೊಮೋಸೋಮು ಭಿನ್ನವಾಗಿದ್ದು X ಗಿಂತಲೂ ಚಿಕ್ಕದಾಗಿರುತ್ತದೆ. ಇತರ ಪ್ರಾಣಿಗಳಲ್ಲಿ ಹೀಗೆಯೇ ಲಿಂಗ ನಿರ್ಧಾರ ನಡೆಯುತ್ತದೆ. ಕೆಲವು ಕೀಟಗಳ ಹೆಣ್ಣುಗಳಲ್ಲಿ X X ಗಳಿದ್ದು ಗಂಡಿನಲ್ಲಿ ಒಂದೇ ಒಂದು X ಇರುತ್ತದೆ. ಪಕ್ಷಿಗಳಲ್ಲಿ, ರೇಷ್ಮೆ ಹುಳುವಿನಲ್ಲಿ, ಚಿಟ್ಟೆ, ಪತಂಗಗಳಲ್ಲಿ ಲಿಂಗ ನಿರ್ಧಾರ ವಿಭಿನ್ನ ರೀತಿಯಲ್ಲಿ ನಡೆಯುತ್ತದೆ. ಗಂಡಿನಲ್ಲಿರುವ ಎರಡು (Z Z) ಲಿಂಗ

ಕ್ರೊಮೋಸೋಮುಗಳು ಒಂದೇ ರೀತಿಯಲ್ಲಿರುತ್ತವೆ. ಹೆಣ್ಣಿನಲ್ಲಿ W ಮತ್ತು Z ಎಂಬ ಭಿನ್ನ ಕ್ರೊಮೋಸೋಮುಗಳು ಇರುತ್ತವೆ. ಮಾನವನ ಲಿಂಗ ನಿರ್ಧಾರದ ಬಗೆಯನ್ನು XX – XY ವಿಧ ಎಂದೂ ಮಿಡತೆಗಳಲ್ಲಿ XX – XO ವಿಧವೆಂದೂ ಪಕ್ಷಿಗಳಲ್ಲಿ ಮತ್ತು ರೇಷ್ಮೆ ಹುಳುವಿನಲ್ಲಿ ZZ – ZW ವಿಧವೆಂದೂ ಗುರುತಿಸಲಾಗುತ್ತದೆ. ಎರಡು ರೀತಿಯ ಲಿಂಗಾಣುಗಳನ್ನು ಉತ್ಪತ್ತಿ ಮಾಡುವ ಗುಣಕ್ಕೆ ಹೆಟರೋಗ್ಯಾಮಿಟಿಕ್ ಲಿಂಗ ಎಂದೂ ಒಂದೇ ರೀತಿಯ ಲಿಂಗಾಣುಗಳನ್ನು ಉತ್ಪತ್ತಿ ಮಾಡುವ ಗುಣಕ್ಕೆ ಹೋಮೊಗ್ಯಾಮಿಟಿಕ್ ಲಿಂಗ ಎಂದೂ ಕರೆಯುತ್ತಾರೆ. ಬಹುತೇಕ ಪ್ರಾಣಿಗಳಲ್ಲಿ ಗಂಡು ಹೆಟರೊಗ್ಯಾಮಿಟಿಕ್ ಲಿಂಗ. ಪಕ್ಷಿಗಳು ಮತ್ತು ಚಿಟ್ಟೆಗಳಲ್ಲಿ ಹೆಣ್ಣು ಹೆಟರೊಗ್ಯಾಮಿಟಿಕ್ ಲಿಂಗವಾಗಿರುತ್ತದೆ.

1960 ರಲ್ಲಿ ಕ್ರೊಮೋಸೋಮುಗಳ ರಚನಾತ್ಮಕ ವಿಶ್ಲೇಷಣೆ ಅಧ್ಯಯನದಲ್ಲಿ ಹಲವಾರು ರಾಸಾಯನಿಕ ಬಣ್ಣ ಹಚ್ಚುವ ವಿಧಾನಗಳು ಆರಂಭವಾದುವು. ಅವುಗಳನ್ನು ಅಡ್ಡ ಪಟ್ಟಿ ತಂತ್ರ ಜ್ಞಾನ (ಬ್ಯಾಂಡಿಂಗ್ ಟೆಕ್ನಿಕ್) ಎನುತ್ತಾರೆ. ವಿಶೇಷ ರಾಸಾಯನಿಕ ಬಣ್ಣಗಳಿಂದ ಕ್ರೊಮೋಸೋಮುಗಳ ಕೆಲವು ಭಾಗಗಳಲ್ಲಿ ದಟ್ಟ ಹಾಗೂ ತೆಳುವಾದ ಅಡ್ಡಪಟ್ಟಿಗಳು ಕಾಣ ಬರುವಂತೆ ಮಾಡಬಹುದು. ಪ್ರತಿಯೊಂದು ಅಡ್ಡ ಪಟ್ಟಿಯೂ ಕ್ರೊಮೋಸೋಮಿನ ವಿಭಜಿತ ಭಾಗವನ್ನು ಮತ್ತು ನೆರೆಯ ಬೇರೆ ಬೇರೆ ವಿಭಜಿತ ಭಾಗಗಳನ್ನು ಬೇರ್ಪಡಿಸುವುದು. ಈ ಅಡ್ಡಪಟ್ಟಿ ತಂತ್ರಜ್ಞಾನವು ಸದೃಶ ಕ್ರೊಮೋಸೋಮುಗಳ ಹೋಲಿಕೆಗೆ ಹಾಗೂ ನಿರ್ದಿಷ್ಟ ಸಂಖ್ಯೆಯನ್ನು ಗುರುತಿಸಿಕೊಳ್ಳಲು ಸಹಾಯಕವಾಗುತ್ತದೆ. ಅಡ್ಡ ಪಟ್ಟಿ ತಂತ್ರಜ್ಞಾನದಲ್ಲಿ ನಾಲ್ಕು ವಿಧ; ಕ್ಯೂಜಿಆರ್‌ಸಿ ಬ್ಯಾಂಡಿಂಗ್‌ಗಳು – ಇವುಗಳಲ್ಲಿ ಜಿ ಮತ್ತು ಸಿ ಅಡ್ಡ ಪಟ್ಟಿಗಳು ಹೆಚ್ಚು ಬಳಕೆಯಲ್ಲಿವೆ; ಕ್ಯೂ ಅಡ್ಡ ಪಟ್ಟಿಗಳಲ್ಲಿ ಕ್ವಿನಾಕ್ರೈನ್ ಡೈ ಹೈಡ್ರೋಕ್ಲೋರೈಡ್ ಫ್ಲೂರಸೆಂಟ್ ಬಣ್ಣವನ್ನು ಬಳಸುತ್ತಾರೆ. ಈ ಬಣ್ಣವು ಕೆಲವು ಭಾಗಗಳಿಗೆ ಮಾತ್ರ ಸೀಮಿತವಾಗಿರುತ್ತದೆ; ಜಿ – ಅಡ್ಡ ಪಟ್ಟಿಯಲ್ಲಿ ಜಿಮ್‌ಸಾ ಬಣ್ಣವನ್ನು ಬಳಸಲಾಗುತ್ತದೆ. ಈ ಬಣ್ಣದ ಬಳಕೆಯಿಂದ ಹೆಟಿರೊಕ್ರೊಮ್ಯಾಟಿನ್ ಜಾಗವು ಯುಕ್ರೊಮ್ಯಾಟಿನ್ ಭಾಗಕ್ಕಿಂತ ಹೆಚ್ಚು ಬಣ್ಣವನ್ನು ಗ್ರಹಿಸುತ್ತವೆ; ಸಿ – ಅಡ್ಡ ಪಟ್ಟಿಯಲ್ಲಿ ಕ್ಷಾರೀಯ ದ್ರವ್ಯದ ಜೊತೆಗೆ ಜಿಮ್‌ಸಾ ಬಣ್ಣವನ್ನು ಕೂಡಿ ಬಳಸಲಾಗುತ್ತದೆ. ಇದರಿಂದ ಸೆಂಟ್ರೊಮಿಯರ್, ಟಿಲೊಮಿಯರ್ ಮತ್ತು ನ್ಯೂಕ್ಲಿಯೊಲಾರ್ ಆರ್ಗನೈಸರ್ ಭಾಗಗಳು ಮಾತ್ರ ಬಣ್ಣಗ್ರಹಿಸುತ್ತವೆ.

ಕ್ರೊಮೋಸೋಮುಗಳಿಗೆ ರಾಸಾಯನಿಕ ಬಣ್ಣ ಹಚ್ಚುವುದರ ಜೊತೆಗೆ ಸೂಕ್ಷ್ಮದರ್ಶಕದ ಸಹಾಯದಿಂದ ಛಾಯಾ ಚಿತ್ರವನ್ನೂ ತೆಗೆಯಬಹುದು ಮತ್ತು ಅವುಗಳ ಉದ್ದ, ಆಕಾರದ ಮೇರೆಗೆ ಜೊತೆ ಜೊತೆಯಾಗಿ ಜೋಡಿಸಬಹುದು. ಹೀಗೆ ಜೋಡಿಸಲ್ಪಡುವ ಗುಂಪಿಗೆ ಕ್ಯಾರಿಯೊಟೈಪ್ ಎನ್ನುವರು. ಕ್ಯಾರಿಯೊಟೈಪ್‌ಗಳ ವಿಧಾನವು ಕ್ರೊಮೊಸೋಮುಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗಿದ್ದರೆ ಮತ್ತು ಅಪಸರಣೆಯನ್ನು ಗುರುತಿಸಿಕೊಳ್ಳಲು ನೆರವಾಗುತ್ತದೆ. ಮನುಷ್ಯನ 46 ಕ್ರೊಮೋಸೋಮುಗಳನ್ನು 22 ಗುಂಪಿನ ಕಾಯ ಕ್ರೊಮೋಸೋಮುಗಳು ಮತ್ತು ಒಂದು ಗುಂಪಿನ ಲಿಂಗ ಕ್ರೊಮೋಸೋಮುಗಳನ್ನಾಗಿ ಜೋಡಿಸಲಾಗುತ್ತದೆ. ಮನುಷ್ಯನ ಒಂದು ಮೆಟಾಸೆಂಟ್ರಿಕ್ ಕ್ರೊಮೋಸೋಮಿನಲ್ಲಿ ಸೆಂಟ್ರೊಮಿಯರ್ ಮೇಲ್ಭಾಗದ ಚಿಕ್ಕ ಬಾಹುವನ್ನು ಪಿ ಎಂದೂ ಉದ್ದವಾದ ಬಾಹುವನ್ನು ಕ್ಯೂ ಎಂದೂ ಸೂಚಿಸಲಾಗುತ್ತದೆ.

ಕ್ರೊಮೋಸೋಮುಗಳ ಅಪಸರಣೆಗಳು (ಕ್ರೊಮೋಸೋಮಲ್ ಅಬರೇಷನ್ಸ್): ಒಂದು ಜೀವಿಯ ಆನುವಂಶೀಯ ಯೋಜನೆ ಸಾಮಾನ್ಯವಾಗಿ ಕ್ರೊಮೋಸೋಮುಗಳ ಮೇಲಿರುವ ಜೀನ್‌ಗಳಿಂದ ಪ್ರಭಾವಿತವಾಗಿರುತ್ತದೆ. ಜೀವಿಗಳ ಪ್ರತಿಯೊಂದು ಗುಣಲಕ್ಷಣಕ್ಕೂ ಜೀನ್‌ಗಳೇ ಕಾರಣ. ಗುಣಲಕ್ಷಣಗಳು ಪ್ರಕಟವಾಗಲು ಕ್ರೊಮೋಸೋಮುಗಳ ಮೇಲೆ ತಾವು ಆಕ್ರಮಿಸಿಕೊಳ್ಳುವ ಸ್ಥಾನವನ್ನು ಮತ್ತು ತಮ್ಮ ನೆರೆಯಲ್ಲಿರುವ ಇತರ ಜೀನ್‌ಗಳನ್ನು ಇವು ಅನುಸರಿಸುತ್ತವೆ. ಆಕಸ್ಮಿಕವಾಗಿ ಈ ಸ್ಥಾನ ಬದಲಾದಾಗ ಅವುಗಳ ಅಭಿವ್ಯಕ್ತಿಯಲ್ಲಿಯೂ ವ್ಯತ್ಯಾಸವಾಗಬಹುದು. ಹೀಗೆ ಒಂದು ನಿರ್ದಿಷ್ಟ ಪ್ರಭಾವ ಬೀರಿ ಒಂದು ನಿರ್ದಿಷ್ಟ ಗುಣಲಕ್ಷಣ ಕಾಣಿಸಿಕೊಳ್ಳಲು ಕಾರಣವಾಗುವುದನ್ನು ಸ್ಥಾನ ಪ್ರಭಾವ (ಪೊಸಿಷನ್ ಎಫೆಕ್ಟ್) ಎನ್ನುತ್ತಾರೆ. ಸಾಮಾನ್ಯವಾಗಿ ಒಂದು ಕ್ರೊಮೋಸೋಮಿನ ಮೇಲೆ ನೂರಾರು ಜೀನ್‌ಗಳು ಇರಬಹುದು. ಆನುವಂಶೀಯತೆಯಲ್ಲಿ ಈ ಎಲ್ಲ ಜೀನ್‌ಗಳು ಒಂದು ಗುಂಪಾಗಿ ಮುಂದಿನ ಪೀಳಿಗೆಯನ್ನು ಸೇರುತ್ತವೆ. ಇದಕ್ಕೆ ಸಂಲಗ್ನತೆ (ಲಿಂಕೇಜ್) ಎಂದು ಹೆಸರು. ಕೋಶ ವಿಭಜನೆಯ ಕಾಲದಲ್ಲಿ ಅದರಲ್ಲಿಯೂ ವಿಶೇಷವಾಗಿ ಸಂಖ್ಯಾಕ್ಷೀಣ ವಿಭಜನೆಯಲ್ಲಿ (ಮಿಯಾಸಿಸ್) ಸದೃಶ ಕ್ರೊಮೋಸೋಮುಗಳ ಜೊತೆಗೂಡುವಿಕೆ (ಸೈನಾಪ್ಸಿಸ್) ಮತ್ತು ಅಡ್ಡ ಹಾಯುವಿಕೆಗಳಿಂದ (ಕ್ರಾಸಿಂಗ್ ಓವರ್) ತಮ್ಮ ಖಂಡ ಭಾಗಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಕಾಲದಲ್ಲಿ ಕೆಲವು ಅಸಾಂಗತ್ಯಗಳು ಕಾಣಿಸಿಕೊಳ್ಳಬಹುದು. ಇವುಗಳನ್ನು ವ್ಯತ್ಯಯ (ವಿಕೃತಿ) ಅಥವಾ ಮ್ಯಾಕ್ರೊಮ್ಯುಟೇಷನ್‌ಗಳು ಎನ್ನುತ್ತಾರೆ. ಇವುಗಳು ಜೀನ್ ಮಟ್ಟದಲ್ಲಿ ನಡೆಯಬಹುದಾದ ವ್ಯತ್ಯಯಗಳಾದ್ದರಿಂದ ಜೀನ್‌ವ್ಯತ್ಯಯ ಎಂದು ಒಟ್ಟಾರೆ ಕರೆಯುತ್ತಾರೆ. ಕ್ರೊಮೋಸೋಮುಗಳ ಆಕಾರ, ಉದ್ದ, ಗಾತ್ರ ಮತ್ತು ಸ್ಥಿತಿಯಲ್ಲಿ, ಯಾವುದೇ ರಚನೆ ಅಥವಾ ಸಂಖ್ಯೆಯಲ್ಲಿ ವ್ಯತ್ಯಾಸವುಂಟಾಗಬಹುದು. ಈ ವ್ಯತ್ಯಾಸವನ್ನು ಕ್ರೊಮೋಸೋಮ್ ಅಪಸರಣೆಗಳೆನ್ನುತ್ತಾರೆ. ಈ ಅಪಸರಣೆಗಳನ್ನು ಸುಲಭವಾಗಿ ಸೂಕ್ಷ್ಮದರ್ಶಕಗಳ ಸಹಾಯದಿಂದ ವೀಕ್ಷಿಸಬಹುದು. ಸಂಖ್ಯೆಯಲ್ಲಿ ವ್ಯತ್ಯಾಸವಾದರೆ ಸಂಖ್ಯಾ ಅಪಸರಣೆ ಮತ್ತು ರಚನೆಯಲ್ಲಿ ವ್ಯತ್ಯಾಸ ಉಂಟಾದರೆ ರಚನಾತ್ಮಕ ಅಪಸರಣೆ ಎಂದು ಕರೆಯುವರು.

ಸಂಖ್ಯಾ ಅಪಸರಣೆಯಲ್ಲಿ (ನ್ಯೂಮರಿಕಲ್ ಅಬರೇಷನ್ಸ್) ಇರಬೇಕಾದ ಕ್ರೊಮೋಸೋಮುಗಳ ಸಂಖ್ಯೆ ಹೆಚ್ಚಾಗುವುದನ್ನು ಪಾಲಿಪ್ಲಾಯಿಡಿ ಎನ್ನುತ್ತಾರೆ. ಪಾಲಿಪ್ಲಾಯಿಡಿಯಲ್ಲಿ ಮುಖ್ಯವಾಗಿ ಎರಡು ವಿಧ–ಯುಪ್ಲಾಯಿಡಿ ಮತ್ತು ಅನ್ಯುಪ್ಲಾಯಿಡಿ.

1) ಯುಪ್ಲಾಯಿಡಿ:– ದ್ವಿಗುಣಿತದಲ್ಲಿ ಕ್ರೊಮೋಸೋಮುಗಳ ಸಂಖ್ಯೆ ಇರುತ್ತದೆ. ತ್ರಿಗುಣಿತ, ಚತುರ್‌ಗುಣಿತ, ಷಡ್‌ಗುಣಿತ ಇತ್ಯಾದಿ ಆಗುವುದು. ಅಂದರೆ, ಇರಬೇಕಾದ ಕ್ರೊಮೋಸೋಮುಗಳ ಒಟ್ಟು ಸಂಖ್ಯೆ ಬಹುಗುಣಿತವಾಗುವುದು. ಯುಪ್ಲಾಯಿಡಿಯಲ್ಲಿ ಮುಖ್ಯವಾಗಿ ಎರಡು ವಿಧ–ಆಟೊಪಾಲಿಪ್ಲಾಯಿಡಿ ಮತ್ತು ಆಲೊಪಾಲಿಪ್ಲಾಯಿಡಿ.

ಆಟೊಪಾಲಿಪ್ಲಾಯಿಡಿಯಲ್ಲಿ ಒಂದೇ ಪ್ರಭೇದದ ಕ್ರೊಮೋಸೋಮುಗಳು ಒಟ್ಟು ಸಂಖ್ಯೆಯಲ್ಲಿ ಹೆಚ್ಚಳವಾಗಿರುತ್ತವೆ.

ಆಲೊಪಾಲಿಪ್ಲಾಯಿಡಿಯಲ್ಲಿ ಎರಡು ಬೇರೆ ಬೇರೆ ಪ್ರಭೇದಗಳ ತಳಿಗಳಿಂದ ಬಂದು ಸೇರಿಕೊಂಡ ಕ್ರೊಮೋಸೋಮುಗಳಿಂದ ಮೂಲ ಕ್ರೊಮೋಸೋಮುಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುತ್ತದೆ.

2) ಅನ್ಯುಪ್ಲಾಯಿಡಿ: ಎಲ್ಲಾ ಸದೃಶ ಕ್ರೊಮೋಸೋಮುಗಳ ಸಂಖ್ಯೆ ಹೆಚ್ಚಾಗದೆ ಯಾವುದಾದರೂ ಒಂದು ಅಥವಾ ಹೆಚ್ಚು ಕ್ರೊಮೋಸೋಮುಗಳ ಜೋಡಿಯಲ್ಲಿ ಸಂಖ್ಯೆ ಹೆಚ್ಚಾಗುತ್ತದೆ. ಇದರಲ್ಲಿ ಎರಡು ವಿಧ – ಪಾಲಿಸೋಮಿ ಮತ್ತು ದೇಹೀಯ ಅನ್ಯುಪ್ಲಾಯಿಡಿ.

ಪಾಲಿಸೋಮಿ: ಈ ಬದಲಾವಣೆ ಪ್ರಜನನ ಜೀವಕೋಶಗಳಲ್ಲಿ ಕಾಣಿಸಿಕೊಂಡು ಲಿಂಗಾಣುಗಳ ಮೂಲಕ ಮುಂದಿನ ಪೀಳಿಗೆಯನ್ನು ಸೇರುವುದರಿಂದ ಆ ಜೀವಿಯ ಪೂರ್ತಿ ಈ ಬದಲಾವಣೆ ಇರುತ್ತದೆ. ಉದಾಹರಣೆಗೆ, ಟ್ರೈಸೋಮಿ $(2n + 1)$, ಟೆಟ್ರಾಸೋಮಿ $(2n+2)$, ಇತ್ಯಾದಿ.

ದೇಹೀಯ ಅನ್ಯುಪ್ಲಾಯಿಡಿ: ಈ ಬದಲಾವಣೆ ಒಂದು ಅಂಗಾಂಶದ ಕೆಲವು ಜೀವಕೋಶಗಳಿಗೆ ಮೀಸಲಾಗಿದೆ. ಉದಾಹರಣೆಗೆ, ವ್ರಣಗಳಲ್ಲಿ (ಟ್ಯೂಮರ್) ಮತ್ತು ಕೃತಕ ಮಾಧ್ಯಮಗಳಲ್ಲಿ ಬೆಳೆಸಿದ ಜೀವಕೋಶಗಳಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಕೋಶ ವಿಭಜನೆಯ ಕಾಲದಲ್ಲಿ ನಡೆದ ಆಕಸ್ಮಿಕಗಳಿಂದ ಈ ಪರಿಸ್ಥಿತಿ ಉದ್ಭವಿಸಬಹುದು. ಒಂದೆರಡು ಮರಿಕ್ರೊಮೋಸೋಮುಗಳು ಪ್ರತ್ಯೇಕಗೊಳ್ಳದೆ ಯಾವುದಾದರೂ ಒಂದು ಮರಿ ಜೀವಕೋಶದಲ್ಲಿ ಸೇರಿ ಹೋದಾಗ ಅಥವಾ ಅನಾಫೇಸ್ ಹಂತದಲ್ಲಿ ನಡೆಯುವ ಧ್ರುವ ಚಲನೆಯಲ್ಲಿ ಕಾರಣಾಂತರದಿಂದ ಭಾಗವಹಿಸದೆ, ಮರಿಕೋಶಗಳನ್ನು ಸೇರದೆ ಉಳಿದು ಹೋದಾಗ ಈ ಬದಲಾವಣೆಗಳು ಕಾಣಿಸಿಕೊಳ್ಳಬಹುದು.

ರಚನಾ ಅಪಸರಣೆಗಳಲ್ಲಿ (ಸ್ಟ್ರಕ್ಚರಲ್ ಅಬರೇಷನ್ಸ್) ನಾಲ್ಕು ವಿಧ:

1) ಅಸಮತೆ ಅಥವಾ ಖಂಡ ವಿಸರ್ಜನೆ (ಡಿಲಿಷನ್): ಕಾರಣಾಂತರದಿಂದ ಕ್ರೊಮೋಸೋಮಿನ ಸ್ವಲ್ಪ ಭಾಗ ಅಥವಾ ಖಂಡ ಕಳಚಿಕೊಂಡು ವಿಭಜನೆಯ ಕಾಲದಲ್ಲಿ ಕಳೆದುಹೋಗಬಹುದು. ಹೀಗೆ ಕಳಚಿಕೊಂಡ ತುಂಡಿನಲ್ಲಿ ಸೆಂಟ್ರೊಮಿಯರ್ ಇಲ್ಲದಿದ್ದರೆ ಅದು ಸಮಗ್ರ ಕ್ರೊಮೋಸೋಮಿನಂತೆ ವರ್ತಿಸುವುದು ಸಾಧ್ಯವಿಲ್ಲ. ಸಾಮಾನ್ಯವಾಗಿ ಅದೃಶ್ಯವಾಗಿಬಿಡುತ್ತದೆ. ಹೀಗಾದಾಗ ಒಂದು ಕ್ರೊಮೋಸೋಮಿನಲ್ಲಿ ಇರಬೇಕಾದ ಜೀನ್‌ಗಳ ಸಂಖ್ಯೆ ಕಡಿಮೆಯಾಗುತ್ತದೆ. ಹೀಗಾಗದೆ ಒಂದು ಕ್ರೊಮೋಸೋಮ್ ಎರಡು ಕಡೆಗಳಲ್ಲಿ ತುಂಡಾಗಿ ಈ ತುಂಡುಗಳು ಮುಂಚಿನ ಕ್ರಮಕ್ಕೆ ಭಿನ್ನವಾದ ರೀತಿಯಲ್ಲಿ ಪುನಃ ಕೂಡಿಕೊಂಡಾಗ ಅಸಮತೆ ಉಂಟಾಗುತ್ತದೆ.

ಅಸಮತೆ ಅಥವಾ ಖಂಡ ವಿಸರ್ಜನೆಗಳು ಯಾವುದಾದರೂ ಒಂದು ಸದೃಶ ಕ್ರೊಮೋಸೋಮಿನಲ್ಲಿ ಮಾತ್ರ ಕಾಣಿಸಿಕೊಂಡಾಗ ಹೆಚ್ಚು ಪರಿಣಾಮಕಾರಿಯಾಗದಿರಬಹುದು. ಏಕೆಂದರೆ, ಇನ್ನೊಂದು ಸದೃಶ ಕ್ರೊಮೋಸೋಮ್ ಸ್ವಾಭಾವಿಕವಾಗಿರುತ್ತದೆ. ಗುಣ ಲಕ್ಷಣಗಳು ಪ್ರಕಟವಾಗಲು ಒಂದು ಗುಂಪು ಜೀನ್‌ಗಳು ಮಾತ್ರ ಸಾಕು. ಇಲ್ಲಿ ಒಂದು ಸ್ವಾಭಾವಿಕ ಗುಂಪು ಇರುವುದರಿಂದ ಪರಿಣಾಮವಿಲ್ಲ. ಆದರೆ ಜೋಡಿಯ ಎರಡೂ ಸದೃಶಗಳು ಈ ಭಿನ್ನತೆಯನ್ನು ತೋರಿದಾಗ ಅನೇಕ ಬಾರಿ ಇದು ಮಾರಕವಾಗಿ ಜೀವಿಗಳು ಭ್ರೂಣಾವಸ್ಥೆಯಲ್ಲಿಯೇ ಸಾವಿಗೀಡಾಗಬಹುದು.

2) ಸ್ಥಳಾಂತರಣ (ಟ್ರಾನ್ಸ್‌ಲೊಕೇಷನ್) : ಕ್ರೊಮೋಸೋಮುಗಳು ತುಂಡುಗಳಾಗಿ ಈ ತುಂಡುಗಳು ಪುನಃ ಕೂಡಿಕೊಳ್ಳುವಾಗ ಅದಲು ಬದಲಾಗಿ ಒಂದು ಕ್ರೊಮೋಸೋಮಿನಲ್ಲಿ ಇರಬೇಕಾದ ಜೀನ್ ಇನ್ನೊಂದು ಕ್ರೊಮೋಸೋಮಿಗೆ

ವರ್ಗಾಂತರವಾಗುವ ಅಥವಾ ಸ್ಥಳಾಂತರವಾಗುವ ಪ್ರಕ್ರಿಯೆ. ಸ್ಥಳಾಂತರಣ ಒಂದು ಜೋಡಿಯ ಎರಡು ಸದೃಶಗಳ ನಡುವೆ ಇಲ್ಲವೆ ಭಿನ್ನ ಜೋಡಿಯ ಅಸದೃಶ ಕ್ರೋಮೋಸೋಮುಗಳ ನಡುವೆ ನಡೆಯಬಹುದು ಅಥವಾ ಒಂದು ಕ್ರೋಮೋಸೋಮಿನ ತುಂಡು ಅದೇ ಕ್ರೋಮೋಸೋಮಿನ ಇನ್ನೊಂದು ಭಾಗಕ್ಕೆ ಸ್ಥಳಾಂತರಣಗೊಳ್ಳಬಹುದು. ಇದನ್ನು ಕ್ರಮವಾಗಿ ಪರಸ್ಪರ ಸ್ಥಳಾಂತರಣ ಮತ್ತು ಸರಳ ಸ್ಥಳಾಂತರಣ ಎಂದು ಕರೆಯುತ್ತಾರೆ. ಇವು ಕೂಡ ಅಸಮತೆಯಂತೆಯೇ ವರ್ತಿಸುತ್ತವೆ.

3) ದ್ವಿಪ್ರತೀಕರಣ (ಡೂಪ್ಲಿಕೇಷನ್): ಒಂದು ಕ್ರೋಮೋಸೋಮಿನಲ್ಲಿ ಕೆಲವು ಜೀನ್‌ಗಳಿಗೆ ಸಂಬಂಧಿಸಿದಂತೆ ದ್ವಿಪ್ರತೀಕರಣ ನಡೆದು ಅವು ಅದೇ ಕ್ರೋಮೋಸೋಮಿನಲ್ಲಿ ಉಳಿದು ಹೋಗುವುದು. ಆಗ ಆ ಕ್ರೋಮೋಸೋಮಿನಲ್ಲಿ ಕೆಲವು ಜೀನ್‌ಗಳ ಸಂಖ್ಯೆ ದ್ವಿಗುಣಗೊಳ್ಳುತ್ತದೆ. ಇದು ಸ್ಥಾನ ಪ್ರಭಾವದಿಂದ ಗುಣಲಕ್ಷಣ ಪ್ರಕಟಣೆಯ ಮೇಲೆ ಪ್ರಭಾವ ಬೀರಬಹುದು.

4) ವಿಪರ್ಯಯ: (ಇನ್‌ವರ್ಷನ್) : ಒಂದು ಕ್ರೋಮೋಸೋಮ್ ತುಂಡು ಪುನಃ ಕೂಡಿಕೊಳ್ಳುವಾಗ $180^0$ ಕೋನದಲ್ಲಿ ತಿರುಗಿ ಹಿಂದು ಮುಂದಾಗಿ ಕೂಡಿಕೊಳ್ಳುವುದು. ಉದಾಹರಣೆಗೆ ಕ ಗ ಚ ಜ ಟ ಡ ತ ದ ಕ್ರಮದಲ್ಲಿ ಇರಬೇಕಾದ ಜೀನ್‌ಗಳು ಕ ಗ ಡ ಟ ಜ ಚ ತ ದ ಕ್ರಮದಲ್ಲಿ ವ್ಯವಸ್ಥೆಗೊಳ್ಳಬಹುದು. ಇದರಲ್ಲಿ ಸೆಂಟ್ರೊಮಿಯರ್ ಸೇರಿದ್ದರೆ ಪೆರಿಸೆಂಟ್ರಿಕ್ ವಿಪರ್ಯಯ ಎಂದೂ ಸೆಂಟ್ರೊಮಿಯರ್ ಸೇರದೆ ವಿಪರ್ಯಯದ ಹೊರಗಿದ್ದರೆ ಪ್ಯಾರಸೆಂಟ್ರಿಕ್ ವಿಪರ್ಯಯ ಎಂದೂ ಹೆಸರು. ಸ್ಥಳಾಂತರಣ, ದ್ವಿಪ್ರತೀಕರಣ ಮತ್ತು ವಿಪರ್ಯಯ ಸಾಮಾನ್ಯವಾಗಿ ಡ್ರೊಸಾಫಿಲಾ ಪ್ರಭೇದಗಳಲ್ಲಿ ಕಾಣಬಹುದು. ಇವು ಆ ಪ್ರಭೇದದ ವಿಕಾಸದಲ್ಲಿ ಮತ್ತು ಹೊಂದಾಣಿಕೆ ಪ್ರಸರಣದಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಜೀವಿಗಳು ತಮ್ಮ ಜೀವನವನ್ನು ಉತ್ತಮಗೊಳಿಸಲು, ಸುಧಾರಿಸಿಕೊಳ್ಳಲು ಬದುಕಿನಲ್ಲಿ ಎಲ್ಲ ಕಾಲದಲ್ಲಿ ಪ್ರಯೋಗಗಳನ್ನು ನಡೆಸಿರುತ್ತವೆ. ಈ ಪ್ರಯೋಗಗಳಿಗೆ ಜೀನ್ ಜೋಡಣಾ ವ್ಯವಸ್ಥೆಯೇ ವಸ್ತು. ಪ್ರಯತ್ನ ಮತ್ತು ತಪ್ಪು ತಿದ್ದಿಕೆಗಳಿಂದಾಗಿ ಒಳ್ಳೆಯ ಜೀನ್ ಜೋಡಣೆಗಳನ್ನು ಕಂಡುಕೊಂಡು ಅವನ್ನು ಅನುಷ್ಠಾನಕ್ಕೆ ತಂದುಕೊಂಡು ಮುಂದುವರಿದಿದೆ ಮತ್ತು ಮುಂದುವರಿಯುತ್ತಿದೆ.

ಈ ಅಪಸರಣೆಗಳಿಂದಾಗಿ ಒಂದು ಜೀವಿ ಸಂದಣಿಯಲ್ಲಿ ಹೊಸ ಪ್ರಭೇದಗಳು ಕಾಣಿಸಿಕೊಳ್ಳಬಹುದು. ಕ್ರೋಮೋಸೋಮ್ ಬಹುರೂಪಗಳಂತೂ ಕಾಣಿಸಿಕೊಂಡೇ ಇವೆ. ಒಂದು ಜಾತಿ, ಕುಟುಂಬ ಅಥವಾ ಗಣಕ್ಕೆ ಸಂಬಂಧಿಸಿದ ಜೀವಿಗಳಲ್ಲಿ ಈ ರೀತಿಯ ಕ್ರೋಮೋಸೋಮ್ ಬಹುರೂಪತೆಗಳು ಕಾಣಿಸಿಕೊಂಡಿರುವುದಕ್ಕೆ ಮತ್ತು ಈ ಲಕ್ಷಣ ವಿಕಾಸಕ್ಕೆ ಆಧಾರವಾದ ಬಗ್ಗೆ ಅನೇಕ ನಿದರ್ಶನಗಳಿವೆ. ಸರಳ ಉದಾಹರಣೆಯನ್ನು ಕೊಡಬಹುದಾದರೆ XO ವಿಧದ ಲಿಂಗ ಕ್ರೋಮೋಸೋಮುಗಳಿದ್ದ ಗುಂಪಿನಲ್ಲಿ ಖಂಡ ವಿಸರ್ಜನೆಯಿಂದ, ಸ್ಥಳಾಂತರಣದಿಂದ XY ವಿಧ ಕಾಣಿಸಿಕೊಳ್ಳಬಹುದು. ಅಥವಾ XY ವಿಧ XO ಆಗಬಹುದು. ಆದ್ದರಿಂದ ಜೀವವಿಕಾಸದಲ್ಲಿ ಕ್ರೋಮೋಸೋಮ್ ಅಪಸರಣೆಗಳು ಪ್ರಧಾನ ಪಾತ್ರ ವಹಿಸಿರಬಹುದು ಎನ್ನಲು ಸಾಕಷ್ಟು ಕಾರಣಗಳಿವೆ. ಕ್ರೋಮೋಸೋಮುಗಳಲ್ಲಿ ಜೀನ್‌ಗಳಿರುವುದು ಸರಿಯೇ. ಯಾವ ಕ್ರೋಮೋಸೋಮುಗಳ ವಿವಿಧ ಜಾಗಗಳಲ್ಲಿ ಯಾವ ಬಗೆಯ ಜೀನ್‌ಗಳಿವೆ ಎಂಬುದನ್ನು ಕಂಡು ಕೊಳ್ಳುವುದಕ್ಕೆ ಕ್ರೋಮೋಸೋಮ್ ನಕ್ಷೆ ಎನ್ನುತ್ತಾರೆ. ಇವುಗಳನ್ನು ಶೇಖಡವಾರು ಅಡ್ಡ ಹಾಯುವಿಕೆ ಮತ್ತು ಸಂಲಗ್ನತೆ ಮೂಲಕ ತಿಳಿದುಕೊಳ್ಳಲಾಗುತ್ತದೆ. ಇದರಿಂದ ಒಂದು ಕ್ರೋಮೋಸೋಮಿನ ಮೇಲಿರುವ ಜೀನ್‌ಗಳ ಮಧ್ಯದ ಅಂತರ ತಿಳಿಯುತ್ತದೆ. ಈ ಬಗೆಯ ಕ್ರೋಮೋಸೋಮುಗಳ ನಕ್ಷೆಗೆ ಅಪಸರಣೆ ಮತ್ತು ಮ್ಯುಟೇಷನ್ (ವ್ಯತ್ಯಯ)ಗಳು ಸಹಾಯಕಾರಿಯಾಗುತ್ತವೆ.

***

**ಕ್ರೊಮ್ಯಾಗ್ನನ್ ಮಾನವ:** ಕ್ರೊಮ್ಯಾಗ್ನನ್ ಮಾನವ ಕ್ರಿ.ಪೂ ಸುಮಾರು ೩೫,೦೦೦–೮,೦೦೦ ಅವಧಿಯಲ್ಲಿ ಜೀವಿಸಿದ್ದ ಮಾನವ ಬುಡಕಟ್ಟಿನ ಫಾಸಿಲ್. ಫ್ರಾನ್ಸ್ ದೇಶದ ಡಾರ್ಡೋಗ್ನೆ ವಿಭಾಗಕ್ಕೆ ಸೇರಿದ ಲೇಝೂಜೆಸ್ ಗತಕಾಲದ ಐದು ಮಾನವ ಕಂಕಾಲಗಳನ್ನು ಕಂಡುದಾಗಿ ವರದಿಮಾಡಿದ (೧೮೬೮). ಅವುಗಳ ಜೊತೆಯಲ್ಲಿ ಪ್ರಾಣಿಗಳ ಎಲುಬುಗಳು, ಸಾಗರಪ್ರಾಣಿಗಳ ಚಿಪ್ಪುಗಳಿಂದ ರಚಿತವಾದ ಕಂಠಹಾರಗಳು ಮತ್ತು ಆಯುಧಗಳು ಸಹ ಇದ್ದುವು. ಈ ಮಾನವ ಬುಡಕಟ್ಟಿಗೆ ಕ್ರೊಮ್ಯಾಗ್ನನ್ ಮಾನವ ಎಂಬ ಹೆಸರು ಬಂತು. ಅಲ್ಲಿ ದೊರೆತ ಶಿಲಾಯುಧಗಳು ಎಡ್ವರ್ಡ್ ಲಾರೆಟ್ ಹಿಂದೆ ಅರಿಗ್ನಾತ್ ಎಂಬ ಸ್ಥಳದಿಂದ ಪಡೆದು ವರ್ಣಿಸಿದ್ದ ಶಿಲಾಯುಧಗಳನ್ನು ಹೋಲುತ್ತಿದ್ದುದರಿಂದ ಕ್ರೊಮ್ಯಾಗ್ನನ್ ಮಾನವ ಹಳೆ ಶಿಲಾಯುಗದ ಆದಿಯ ಆರಿಗ್ನೇಷಿಯನ್ ಕಾಲದವನೆಂದು ಹೇಳಬಹುದು. ಅನಂತರ ಇದೇ ಮಾದರಿ ಅಸ್ಥಿಗಳು ಕೂಂಬ್–ಕ್ಯಾಪೆಲ್, ಮೆಂಟಾನ್ ಮತ್ತಿತರ ಕಡೆಗಳಲ್ಲೂ ದೊರೆತಿವೆ. ಈಗ ಆರಿಗ್ನೇಷಿಯನ್ ಕಾಲದಲ್ಲಿ ಪಶ್ಚಿಮ ಯೂರೋಪಿನಲ್ಲಿ ನೆಲೆಸಿದ್ದ ಮಾನವ ಕುಲಕ್ಕೆಲ್ಲ ಕ್ರೊಮ್ಯಾಗ್ನನ್ ಮಾನವ ಎಂಬ ಹೆಸರನ್ನು ಅನ್ವಯಿಸಲಾಗಿದೆ. ಕ್ರೊಮ್ಯಾಗ್ನನ್ ಮಾನವ ಬುಡಕಟ್ಟು ಆ ಕಾಲದಲ್ಲಿ ಯೂರೋಪಿನ ಆದ್ಯಂತ ಹಬ್ಬಿತ್ತು. ಫ್ರಾನ್ಸಿನಿಂದ ಬೆಲ್ಜಿಯಂ ಮತ್ತು ವೇಲ್ಸ್‌ನಿಂದ ಪೂರ್ವ ಯೂರೋಪಿನವರೆಗಿನ ಪ್ರದೇಶಗಳಲ್ಲಿ ಈ ಬುಡಕಟ್ಟಿನ ಸಾಂದ್ರತೆ ಹೆಚ್ಚಾಗಿತ್ತು.

ಆರಿಗ್ನೇಷಿಯನ್ ಕಾಲಕ್ಕಿಂತ ಹಿಂದೆ, ಅಂದರೆ ಮೌಸ್ಟೀರಿಯನ್ ಕಾಲದಲ್ಲಿ ಪಶ್ಚಿಮ ಯೂರೋಪಿನಲ್ಲಿ ಬೇರೊಂದು ಮಾನವ ಬುಡಕಟ್ಟು ಇತ್ತು. ನಿಯಾಂಡ್ರತಲ್ ಮಾನವ ಎಂದು ಅದರ ಹೆಸರು. ಇವೆರಡು ಜನಾಂಗಗಳ ಮೈಕಟ್ಟು, ಸಂಸ್ಕೃತಿ ಮತ್ತು ಬುಡಕಟ್ಟಿನ ಉಗಮಗಳಲ್ಲಿ ಭಿನ್ನತೆ ಎದ್ದುಕಾಣುತ್ತದೆ. ಆದ್ದರಿಂದ ಕ್ರೊಮ್ಯಾಗ್ನನ್ ಮಾನವ ಬೇರೆ ಕಡೆಗಳಿಂದ ಪಶ್ಚಿಮ ಯೂರೋಪಿಗೆ ವಲಸೆ ಬಂದು, ಸ್ಥಳೀಯ ನಿಯಾಂಡ್ರತಲ್ ಮಾನವನನ್ನು ನಿರ್ನಾಮಮಾಡಿ, ನೆಲೆಸಿರಬೇಕೆಂದು ಅಭಿಪ್ರಾಯಪಡಲಾಗಿದೆ. ಹೆಚ್ಚು ಬುದ್ಧಿಶಾಲಿಯೂ ಚತುರನೂ ಆಗಿದ್ದ ಕ್ರೊಮ್ಯಾಗ್ನನ್ ಮಾನವ ಈ ದಿಶೆಯಲ್ಲಿ ಜಯಗಳಿಸಿದುದು ಸ್ವಾಭಾವಿಕವೇ ಆಗಿದೆ. ನೀರ್ಗಲ್ಲುಯುಗದ ಅತಿಶೀತವಾಯುಗುಣ ಅವನಿಗೆ ಸಹಕಾರಿಯಾಗಿದ್ದಿರಬಹುದು. ಅವನ ಉಗಮ ಏಷ್ಯದಲ್ಲಿ ಆಗಿ ಆತ ಪಶ್ಚಿಮಾಭಿಮುಖವಾಗಿ ವಲಸೆ ಬಂದಿರಬೇಕೆಂದು ತಜ್ಞರ ಅಭಿಪ್ರಾಯ.

ಕ್ರೊಮ್ಯಾಗ್ನನ್ ಮಾನವನ ವಿಶೇಷ ಲಕ್ಷಣಗಳು : ಇವನಲ್ಲಿ ಆಧುನಿಕ ಮಾನವನಲ್ಲಿರುವ ಲಕ್ಷಣಗಳೇ ಅತ್ಯಧಿಕವಾಗಿರುವುದು ಒಂದು ವೈಶಿಷ್ಟ್ಯ. ಈತ ಹಾಲಿ ಜೀವಿಸುತ್ತಿರುವ

ಕ್ರೊಮ್ಯಾಗ್ನನ್

ಕಾಕಸಾಯಿಡ್ ಬುಡಕಟ್ಟಿನ ಒಂದು ಪ್ರಭೇದ ಎನ್ನಬಹುದು. ಆಧುನಿಕ ಮಾನವನಿಗಿಂತ ಎತ್ತರವಾಗಿಯೂ ದೃಢಕಾಯನಾಗಿಯೂ ಇದ್ದ. ಇವನ ಮಿದುಳು ಸಹ (೧೫೫೦–೧೭೫೦ ಘ.ಸೆಂಮೀ) ಆಧುನಿಕ ಮಾನವನ ಮಿದುಳಿಗಿಂತ (೧೩೫೦ ಘ.ಸೆಂಮೀ) ದೊಡ್ಡದು. ಇವನು ಪಂಚಭುಜಾಕೃತಿಯ ಅಡ್ಡತಲೆಯ ದೊಡ್ಡ ಬುರುಡೆಯ ಮಾನವ. ಮುಖ ಅಗಲ, ಆದರೆ ಚಿಕ್ಕದು. ದವಡೆಗಳು ಮುಂಚಾಚಿವೆ. ಆಯಾಕಾರದ ಕಣ್ಣುಗುಳಿಗಳು. ಎರಡರ ಅಂತರ ಸ್ವಲ್ಪ ದೂರವೆಂದೇ ಹೇಳಬೇಕು.

ಪ್ಲೀಸ್ಟೋಸೀನ್ ನೀರ್ಗಲ್ಲುಯುಗದ ಮೊದಲನೆಯ ಹಂತ ಮುಗಿದಮೇಲೆ ಯೂರೋಪಿನಲ್ಲಿ ನೀರ್ಗಲ್ಲುಗಳು ಉತ್ತರಕ್ಕೆ ಹಿಂಜರಿದುವು. ಯೂರೋಪು ಹುಲ್ಲುಗಾವಲು ಪ್ರದೇಶವಾಯಿತು. ಇಲ್ಲಿ ಕಾಡೆಮ್ಮೆಗಳು, ದನಗಳು, ಕುದುರೆಗಳು ಹೇರಳವಾಗಿ ಜೀವಿಸಿದ್ದುವು. ಉತ್ತರದ ಶೀತವಾಯುಗುಣ ಪ್ರದೇಶದಲ್ಲಿ ರೋಮ ಬೃಹದ್ಗಜಗಳು, ಹಿಮಸಾರಂಗಗಳು ಮತ್ತು ಖಡ್ಗಮೃಗಗಳು ಹೇರಳವಾಗಿದ್ದುವು. ಅಲ್ಲಿ ಕ್ರೊಮ್ಯಾಗ್ನನ್ ಮಾನವರು ಗುಂಪು ಕಟ್ಟಿಕೊಂಡು ಬೇಟೆಯಾಡುತ್ತಿದ್ದರು. ಈ ಪ್ರಾಣಿಗಳನ್ನು ಕಂಗೆಡಿಸಿ ಕಡಿದಾದ ಪ್ರಪಾತ, ಇಕ್ಕಟ್ಟಾದ ಕಮರಿ ಅಥವಾ ಕೊರಕಲಿನ ಕಡೆಗೆ ಪಲಾಯನ ಮಾಡುವಂತೆ ಮಾಡಿ ಆಯಕಟ್ಟಿನ ಸ್ಥಳಗಳಲ್ಲಿ ಎದುರಿಸುವುದು ಬೇಟೆಯ ಕೌಶಲವಾಗಿತ್ತು. ಈ ಪ್ರಾಣಿಗಳ ಮಾಂಸವೇ ಇವರ ಆಹಾರ. ಇವುಗಳ ಚರ್ಮವನ್ನು ಹೊದೆಯುವುದಕ್ಕೂ, ಕೊಬ್ಬನ್ನು ದೀಪ ಉರಿಸುವುದಕ್ಕೂ, ಎಲುಬನ್ನು ಆಯುಧಗಳ ತಯಾರಿಕೆಗೂ ಉಪಯೋಗಿಸುತ್ತಿದ್ದರು. ಜೊತೆಗೆ ಕ್ರೊಮ್ಯಾಗ್ನನ್ ಮಾನವರು ಮೀನು ಹಿಡಿಯುವುದರಲ್ಲಿಯೂ ನಿಪುಣರಾಗಿದ್ದರು. ಚಳಿಗಾಲದ ಹೆಚ್ಚು ಭಾಗವನ್ನು ಇವರು ಶಿಲೆಗಳ ಸಂದು ಅಥವಾ ಗವಿಗಳಲ್ಲಿ ಕಳೆಯುತ್ತಿದ್ದರು. ಇವರು ಸತ್ತವರನ್ನು ಹೂಳುತ್ತಿದ್ದರು. ಇವರಿಗಿಂತ ಹಿಂದೆ ಇದ್ದ ನಿಯಾಂಡ್ರತಲ್ ಮಾನವರಲ್ಲಿಯೂ ಇದೇ ಪದ್ಧತಿ ಇತ್ತು. ಆದ್ದರಿಂದ ಇವರಿಗೆ ಪುನರ್ಜನ್ಮದಲ್ಲಿ ನಂಬಿಕೆ ಇದ್ದ ಹಾಗೆ ಕಾಣುತ್ತದೆ. ಹೆಣಗಳಿಗೆ ಕಾವಿಮಣ್ಣನ್ನು ಸವರಿ ಹೂಳುತ್ತಿದ್ದರು. ಜೀವಿಸಿದ್ದಾಗಲೂ ತಮ್ಮ ಮೈಗೆ ಕೆಂಪು ಪಟ್ಟೆಗಳನ್ನು ಬಳಿದುಕೊಳ್ಳುವುದಿತ್ತು. ಕ್ರೊಮ್ಯಾಗ್ನನ್ ಮಾನವರು

ನಯವಾದ ಶಿಲಾಯುಧಗಳು ಮತ್ತು ಅಸ್ಥಿ ಆಯುಧಗಳ ತಯಾರಿಕೆಗೆ ಶಂಕುಸ್ಥಾಪನೆ ಮಾಡಿದುದೇ ಅಲ್ಲದೆ, ಪ್ರಪ್ರಥಮ ಕಲಾವಿದರಾಗಿ ಕಲೆಯ ಉಗಮಕ್ಕೆ ಕಾರಣೀಭೂತರೂ ಆಗಿದ್ದಾರೆ. ಅವರು ಕಂಡು ಮೆಚ್ಚಿದ ಮತ್ತು ಬೇಟೆಯಾಡಿದ ಪ್ರಾಣಿಗಳ ಚಿತ್ರಗಳನ್ನು ಕೆತ್ತನೆ, ಉಬ್ಬುಚಿತ್ರ ಮತ್ತು ಮೂರ್ತಿಶಿಲ್ಪಗಳ ಮೂಲಕ ಅಮರವಾಗಿಸಿದ್ದಾರೆ. ಅತಿಸೂಕ್ಷ್ಮಕಣಶಿಲೆಗಳು ಮತ್ತು ದಂತಗಳಲ್ಲಿ ಹೆಂಗಸರ ಚಿತ್ರ ಮತ್ತು ಪ್ರತಿಮೆಗಳನ್ನು ತಯಾರಿಸಿದ್ದಾರೆ. ಗರ್ಭಿಣಿಯರ ಉತ್ಪ್ರೇಕ್ಷಿತ ಚಿತ್ರ, ಕೆಲವು ಮಹಿಳೆಯರ ವಿಕಟ ಅಥವಾ ವಿರೂಪ ಚಿತ್ರ ಮತ್ತು ಮೂರ್ತಿಗಳನ್ನು ತಯಾರಿಸಿದ್ದಾನೆ. ದಂತದ ಆಯುಧಗಳಿಗೆ ಬಣ್ಣಹಾಕಿದ್ದಾರೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಎಲ್ಲೋರ, ಅಜಂತ ಗುಹೆಗಳಲ್ಲಿರುವ ಹಾಗೆ ಕಲ್ಲುಗುಹೆಗಳಲ್ಲಿ ವರ್ಣಚಿತ್ರಗಳನ್ನು ಇವರು ತಯಾರಿಸಿರುವುದು ಮಹತ್ತ್ವದ ಸಂಗತಿ. ಗುಹೆಗಳ ಗೋಡೆಗಳ ಮೇಲೆ ಆ ಕಾಲದ ಪ್ರಾಣಿಗಳ ಆಕೃತಿ, ನಿಸರ್ಗದಲ್ಲಿ ಕಂಡ ಅವುಗಳ ಬಣ್ಣ, ಅವನ್ನು ಬೇಟೆಯಾಡುವ ವಿಧಾನ ಮುಂತಾದುವನ್ನು ಚಿತ್ರಿಸಿದ್ದಾರೆ. ಇವು ಮೃಗಾನ್ವೇಷಣೆಯ ಕಾರ್ಯದಲ್ಲಿ ಪ್ರಭಾವ ಹಾಗೂ ಚಾತುರ್ಯವನ್ನು ಇಮ್ಮಡಿಸುವ ಉದ್ದೇಶವಿರಬಹುದು. ಈ ಬುಡಕಟ್ಟಿನವರು ಸ್ಪಷ್ಟವಾದ ಭಾಷೆಯನ್ನು ಬಳಸುತ್ತಿದ್ದಿರಬೇಕು ಎಂದು ನಂಬಲಾಗಿದೆ. ಕ್ರೊಮ್ಯಾಗ್ನನ್ ಮಾನವರು ದೈಹಿಕ ಮತ್ತು ಬೌದ್ಧಿಕ ಶಕ್ತಿಗಳೆರಡರಲ್ಲೂ ಉನ್ನತ ಹಂತವನ್ನು ತಲಪಿದ್ದರು.

ಕ್ರೊಮ್ಯಾಗ್ನನ್ ಮಾನವರ ಕಾಲ : ಇವನು ಕ್ರಿ.ಪೂ ೩೦,೦೦೦ ವರ್ಷಗಳ ಹಿಂದೆ ಇದ್ದನೆಂದು ಕಾರ್ಬನ್–೧೪ ಕಾಲಮಾಪನೆ ಸೂಚಿಸುತ್ತದೆ. ಆದರೆ ಇವನ ಸಂಸ್ಕೃತಿಯ ಅವಶೇಷಗಳು ೫,೦೦೦–೧೦,೦೦೦ ವರ್ಷಗಳ ಹಿಂದೆ ಇದ್ದುದನ್ನು ಸೂಚಿಸುತ್ತದೆ. ಕ್ರೊಮ್ಯಾಗ್ನನ್ ಮಾನವರ ಅವಶೇಷಗಳು ಆರಿಗ್ನೇಷಿಯನ್ ಕಾಲದಿಂದ ವರ್ತಮಾನ ಕಾಲದವರೆಗಿನ ಎಲ್ಲ ಕಾಲಗಳ ಶಿಲೆಗಳಲ್ಲಿಯೂ ದೊರೆತಿವೆ. ಡಾರ್ಡೊಗ್ನೆ, ಸ್ಕ್ಯಾಂಡಿನೇವಿಯ, ಸ್ಪೇನ್ ದೇಶದ ಕೆಲವು ಭಾಗ ಮತ್ತು ಕ್ಯಾನರಿ ದ್ವೀಪಗಳಲ್ಲಿ ವಾಸಿಸುವ ಕೆಲವು ಜನಾಂಗಗಳಲ್ಲಿ ಕ್ರೊಮ್ಯಾಗ್ನನ್ ಲಕ್ಷಣಗಳು ಇವೆ ಎಂಬುದು ಮಾನವಶಾಸ್ತ್ರಜ್ಞರ ಅಭಿಪ್ರಾಯ.

(ಡಿ.ಆರ್.)

**ಕ್ರೊಮ್ಯಾಟಿಡ್:** ಪ್ರೊಫೇಸ್ ಮತ್ತು ಮೆಟಫೇಸ್ ಹಂತದ ಕ್ರೊಮೋಸೋಮಿನಲ್ಲಿರುವ ಎರಡು ಬಾಹುಗಳು. ಮೆಕ್‌ಕ್ಲುಂಗ್ (1909) ಎಂಬಾತ ಈ ಬಾಹುಗಳನ್ನು ಕ್ರೊಮ್ಯಾಟಿಡ್ ಎಂದು ಕರೆದ. ಕ್ರೊಮೋಸೋಮ್‌ನಲ್ಲಿ ಎರಡು ಕ್ರೊಮ್ಯಾಟಿಡ್‌ಗಳು ಒಂದರ ಪಕ್ಕದಲ್ಲೊಂದು ಇರುವುವು. ಕೆಲವು ವೇಳೆ ಇವು ಸಂಬಂಧಿತ ಸುರಳಿಗಳಿಂದ ಸುತ್ತಿಕೊಂಡಿರುತ್ತವೆ. ಬಹುತೇಕ ಜೀವಿಗಳಲ್ಲಿ ಈ ಬಾಹುಗಳು ಸೆಂಟ್ರೊಮಿಯರ್‌ಗೆ ಭದ್ರವಾಗಿ ಬಂಧಿಸಿರುತ್ತವೆ. ಎರಡು ಕ್ರೊಮ್ಯಾಟಿಡ್‌ಗಳು ಕ್ರೊಮೋಸೋಮಿನ ತಳಿಸಮಭಾಗಗಳು (ಜೆನೆಟಿಕ್ ಈಕ್ವಿವೆಲೆಂಟ್ಸ್). ಇವುಗಳನ್ನು ಸೋದರಿ ಕ್ರೊಮ್ಯಾಟಿಡ್ (ಸಿಸ್ಟರ್ ಕ್ರೊಮ್ಯಾಟಿಡ್ಸ್) ಗಳೆಂದೂ ಕರೆಯಲಾಗುತ್ತದೆ. ಕ್ರೊಮ್ಯಾಟಿಡ್‌ಗಳು ಸಹಜವಾಗಿ ಒಂದರ ಪಕ್ಕದಲ್ಲೊಂದಿದ್ದರೂ ಕಾಲ್ಚಿಸಿನ್ ಎಂಬ ರಾಸಾಯನಿಕದೊಡನೆ ಪರಿಷ್ಕರಿಸಿದಾಗ ದೂರ ಸರಿದು V–ಆಕಾರವನ್ನು ತಳೆಯುವುವು.

ಅನಫೇಸ್ ಹಂತದಲ್ಲಿ ಕ್ರೊಮೋಸೋಮಿನ 2 ಕ್ರೊಮ್ಯಾಟಿಡ್‌ಗಳು ವಿಭಜನಾಕದರಿನ ಎರಡು ಧ್ರುವಗಳೆಡೆಗೆ ಸಾಗುತ್ತವೆ. ಕ್ರೊಮ್ಯಾಟಿಡ್‌ಗಳು ಬೇರೆಯಾದ ಮೇಲೆ ಅವುಗಳನ್ನು ಕ್ರೊಮೋಸೋಮುಗಳೆಂದೇ ಕರೆಯಲಾಗುವುದು. ತಂತು ರೀತಿಯ ಕ್ರೊಮ್ಯಾಟಿಡ್‌ನ ಸ್ಥೂಲರಚನೆ ವಿಚಾರವಾಗಿ (ಉಪಘಟಕ, ಮಾತೃಕೆ ಮತ್ತು ಪೆಲಿಕಲ್) ನಿಂದ ವಿವಾದಗಳು ಬಹುಕಾಲದಿಂದಲೂ ಇತ್ತು. ಹಿಂದೆ ಒಂದು ಕ್ರೊಮ್ಯಾಟಿಡ್‌ನಲ್ಲಿ ಕ್ರೊಮೋನಿಮೇಟ ಎಂಬ ಉಪಘಟಕಗಳೂ, ಅವುಗಳನ್ನಾವರಿಸಿ ಮಾತೃಕೆ ಎಂಬ ಪದಾರ್ಥವೂ, ಅದರ ಸುತ್ತ ಪೆಲಿಕಲ್ ಎಂಬ ಹೊದಿಕೆ ಇರುವುದೆಂದು ಭಾವಿಸಲಾಗಿತ್ತು. ಕ್ರೊಮೋನಿಮೇಟಗಳ ಸಂಖ್ಯೆ ಬಗ್ಗೆ ಭಿನ್ನಾಭಿಪ್ರಾಯಗಳಿದ್ದುವು. ಆದರೆ ಈಗಿನ ಸಂಶೋಧನೆಗಳಿಂದ ಒಂದು ಕ್ರೊಮ್ಯಾಟಿಡ್‌ನಲ್ಲಿ ಒಂದು ಡಿಎನ್‌ಎ ಜೋಡಿ ಸುರುಳಿ ಪ್ರೊಟೀನುಗಳೊಡನೆ ಕೂಡಿರುವುದೆಂದು ಕಂಡುಹಿಡಿಯಲಾಗಿದೆ. ಇವುಗಳನ್ನು ನ್ಯೂಕ್ಲಿಯೊಸೋಮ್‌ಗಳೆನ್ನುತ್ತಾರೆ. (ಎನ್.ವಿ.ಎ.)

**ಕ್ಲಾಡೊಸೆಲಾಚಿ:** ಡಿವೊನಿಯನ್ ಕಾಲದಲ್ಲಿ ವಾಸಿಸುತ್ತಿದ್ದ ಶಾರ್ಕ್ ಮೀನು. ಇದು ಮೃದ್ವಸ್ಥಿಮೀನುಗಳ ಪೂರ್ವಜ ಎಂದು ತಿಳಿಯಲಾಗಿದೆ. ದೇಹವು ಕದಿರಿನ ಆಕಾರದಲ್ಲಿದ್ದಿತು. ದೇಹಕ್ಕೆ ಸಣ್ಣ ಹಲ್ಲಿನಂಥ ಚಾಚುಗಳ ಹೊದಿಕೆಯಿದೆ. ಮೂತಿಯು ಇತರೆ ಜಾತಿಯ ಶಾರ್ಕ್‌ಗಳಲ್ಲಿದ್ದಂತೆ ಸ್ಪಷ್ಟವಾಗಿಲ್ಲ. ಜೊತೆಯಾದ ಈಜು ರೆಕ್ಕೆಗಳು ದೇಹದ ಭಿತ್ತಿಯ ಪಾರ್ಶ್ವದ ಮಡಿಕೆಗಳಿಗಿಂತ ಕಡಿಮೆ ಉದ್ದ ಇವೆ. ಎದೆಯ ಈಜು ರೆಕ್ಕೆಗಳು ಅನೇಕ ಸಮಾಂತರ ಅಂತಸ್ಥ ರೇಖೆಗಳ ಆಧಾರವಿರುವ ಅಗಲ ತಳಹದಿಯನ್ನು ಹೊಂದಿದ್ದು ಬಹಳ ಪ್ರಾಚೀನ ರೀತಿಯದ್ದೆಂದು ಭಾವಿಸಲಾಗಿದೆ. ಈ ಮೀನಿಗೆ ಮುಳ್ಳು ಮುಂದಿರುವ ಎರಡು ಬೆನ್ನಿನ ಈಜುರೆಕ್ಕೆಗಳಿವೆ. ಗುದದ್ವಾರದ ಈಜುರೆಕ್ಕೆ ಇದಕ್ಕಿಲ್ಲ. ಹೆಟಿರೋಸರ್ಕಲ್ ರೀತಿಯ ಬಾಲವಿತ್ತು. ವಿಲಕ್ಷಣವೆಂದರೆ, ಈ ಮೀನಿನಲ್ಲಿ ಜೀವಿಸಿರುವ ಆಧುನಿಕ ಶಾರ್ಕ್‌ಗಳಲ್ಲಿದ್ದಂತೆ ಆಲಿಂಗನಾಂಗಗಳು ಬೆಳೆದಿಲ್ಲ. ಈ ಮೀನಿನ ಜೀವನ ಚರಿತ್ರೆಯುದ್ದಕ್ಕೂ ಆದ್ಯಮೃದ್ವಸ್ಥಿ ಪಟ್ಟಿಯು ದೃಢವಾಗಿ ಉಳಿದುಕೊಂಡಿದೆ. ಕಶೇರು ಖಂಡಗಳಲ್ಲಿ ಸೆಂಟ್ರಗಳ ರಚನೆ ಇಲ್ಲ. ಈ ಮೀನು ಟೆರಿಗೋಪೋಡಿಯವನ್ನು ಹೊಂದಿಲ್ಲ.

ಕ್ಲಾಡೊಸೆಲಾಚಿಯು ಜೊತೆಯಾದ ನಾಸಿಕ ರಂಧ್ರಗಳನ್ನು ಪಡೆದಿತ್ತು. ಕಣ್ಣುಗಳು ದೊಡ್ಡದಾಗಿದ್ದು ಮುಂಭಾಗಕ್ಕೆ ನಿರ್ದೇಶಿತವಾಗಿದ್ದುವು. ದೊಡ್ಡದಾದ, ಶಲ್ಕಗಳಂತಿರುವ ಸಣ್ಣಹಲ್ಲುಗಳ ಚಾಚುಗಳು ಕಣ್ಣುಗಳನ್ನು ಸುತ್ತುವರಿದಿದ್ದುವು. ದೊಡ್ಡದಾದ ಬಾಯಿ ಕೊನೆಯಲ್ಲಿತ್ತು. ಉದ್ದವಾಗಿದ್ದ ಇದರ ಹಲ್ಲುಗಳು ಚೂಪಾಗಿದ್ದುವು. ದವಡೆಗಳ ಹಿಂದೆ ಒಂದು ಜಿಹ್ವಾಸ್ಥಿಯ ಕಮಾನು ಹಾಗೂ ಐದು ಜೊತೆ ಜಲಶ್ವಾಸಾಂಗದ ಕಮಾನುಗಳಿದ್ದುವು. ಪ್ರಾಣಿ ಭಕ್ಷಕಗಳಾದ ಇವು ಸಮುದ್ರದಲ್ಲಿ ಜೀವಿಸುತ್ತಿದ್ದ ಸಣ್ಣ ಮೀನುಗಳಾಗಿದ್ದು ಇತರೆ ಸಣ್ಣ ಮೀನುಗಳನ್ನು ಹಾಗೂ ಸ್ವತಂತ್ರವಾಗಿ ಈಜುವ ಅಕಶೇರುಕಗಳನ್ನು ತಿನ್ನುತ್ತಿದ್ದುವು. ಡಿವೋನಿಯನ್ ಕಾಲದಲ್ಲಿ ಕಾಣಿಸಿಕೊಂಡ ಈ ಮೀನು ಮೇಲಿನ ಕಾರ್ಬಾನಿಫೆರಸ್ ಕಾಲದವರೆಗೂ ಬದುಕಿದ್ದು, ನಂತರ ನಿರ್ನಾಮವಾಗಿ ಹೋದುವು. ***

**ಕ್ಲಿಪ್ಯಾಸ್ಟ್ರಿಯ್ಡ:** ಎಕೈನೊಡರ್ಮೇಟ ವಂಶ, ಎಕಿನಾಯ್ಡಿಯ ವರ್ಗ ಮತ್ತು ಇಲೆಗ್ಯುಲೇರಿಯ ಉಪವರ್ಗಕ್ಕೆ ಸೇರಿದ ಗಣ. ಮರಳು ನಾಣ್ಯ (ಡಾಲರ್), ದೋಸೆ ಚಿಳ್ಳೆ ಅಥವಾ ದೋಸೆಪೋರ, ಕೇಕ್ ಆರ್ಚಿನ್ ಈ ವರ್ಗಕ್ಕೆ ಸೇರುತ್ತವೆ. ಮುಳ್ಳುಗಳಿಂದ ಆವರಿತವಾದ ಗೋಳಾಕಾರದ ಕಡಲು ಚಿಳ್ಳೆಗಳ ವರ್ಗಕ್ಕೆ ಸೇರಿದ ಈ ಪ್ರಾಣಿಗಳು ಅತೀವವಾಗಿ ಚಪ್ಪಟೆಯಾಗಿ ದುಂಡು ಅಥವಾ ಅಂಡಾಕಾರ ತಾಳಿವೆ. ಚಪ್ಪಟೆಯಾದ ಶರೀರದ ಒಂದು ಮುಖದ ಕೇಂದ್ರಭಾಗದಲ್ಲಿ ಬಾಯಿ ತೆರವು ಇದೆ. ಎದುರು ಮುಖದ ಅತೀಂದ್ರಿಯ ಬಾಗದಲ್ಲಿ ಗುದದ್ವಾರವು ತೆರೆಯುತ್ತದೆ. ವಿಮುಖ ಭಾಗದಲ್ಲಿ ಕಂಡುಬರುವ ಆಂಬ್ಯುಲಾಕ್ರಲ್ ಪ್ರದೇಶಗಳು ಹೂವಿನ ದಳದಂತೆ ಕಂಡುಬರುತ್ತವೆ. ದೇಹವು ಗರಿಷ್ಠ ಮಿತಿಯವರೆಗೆ ಚಪ್ಪಟೆಯಾಗಿದೆ, ಕಡಲ ತೀರದ ಮರಳಿಗೆ ಹತ್ತಿರದಲ್ಲಿ ಇವು ವಾಸಿಸುತ್ತವೆ. ತಮಗಿರುವ ಅಸಂಖ್ಯಾತ ಕೊಳವೆಪಾದಿಗಳ ನೆರವಿನಿಂದ ಮರಳಿನ ಮೇಲೆ ನಡೆಯುತ್ತವೆ. ಮರಳನ್ನು ಬಾಯಿಗೆ ತೂರಿ ಹಲ್ಲುಗಳ ನೆರವಿನಿಂದ ಅದರಲ್ಲಿರುವ ಆಹಾರ ಪದಾರ್ಥಗಳನ್ನು ಪ್ರತ್ಯೇಕಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಈ ಪ್ರಾಣಿಗಳು ಕ್ರೆಟೇಸಿಯಸ್ ಅವಧಿಯ ಉತ್ತರಾರ್ಧದಲ್ಲಿ ಕಾಣಿಸಿಕೊಂಡು ಇಂದಿನವರೆಗೂ ಬದುಕಿವೆ.

ಕ್ಲಿಪಿಯಾಸ್ಟರ್, ಎಕಿನೊಸಯಾನಸ್, ಉದಾಹರಣೆಗಳು. ಮೊದಲನೆಯದು ವಿಸ್ತಾರ ಗಾತ್ರದ ಈ ಗುಂಪಿನ ಮಾದರಿ ಪ್ರಾಣಿ. ಉಷ್ಣವಲಯದ ಕಡಲುಗಳಲ್ಲಿ ವ್ಯಾಪಕವಾಗಿ ದೊರಕುತ್ತದೆ. ಎರಡನೆಯದು ಗಾತ್ರದಲ್ಲಿ ಸಣ್ಣದು, ಅಂಡಾಕಾರವಾಗಿದೆ.

(ಎಚ್.ಎಚ್.ಎಸ್)

**ಕ್ಲೆಬ್ಸ್, ಥಿಯೊಡೊರ್ ಆಲ್‌ಬ್ರೆಷ್ಟ್ ಎಡ್ವಿನ್ ೧೮೩೪–೧೯೧೩:** ಜರ್ಮನಿಯ ಏಕಕೋಶವಿಜ್ಞಾನಿ. ಮೂತ್ರಕೋಶದ ರೋಗವಾದ ಗ್ಲಾಮೆರುಲೊ ನೆಫ್ರೈಟಿಸನ್ನು ಆವಿಷ್ಕರಿಸಿದವ (೧೮೭೦). ಆದ್ದರಿಂದ ಅದಕ್ಕೆ ಕ್ಲೆಬ್ಸ್ ಕಾಯಿಲೆ ಎಂದು ಹೆಸರಾಯಿತು. ಉಪದಂಶ (ಸಿಫಿಲಿಸ್) ರೋಗವನ್ನು ಕೋತಿಗಳಿಗೆ ವರ್ಗಾಯಿಸಿ ಪ್ರಯೋಗ ನಡೆಸಿದ. ಫ್ರೆಡರಿಕ್ ಲಾಫೆಲರ್‌ನೊಡನೆ ಸಹಕರಿಸಿ ಡಿಫ್ತೀರಿಯಾ ದಂಡಾಣು ಜೀವಿಗಳನ್ನು ಆವಿಷ್ಕರಿಸಿದ. ಆದ್ದರಿಂದ ಅವುಗಳಿಗೆ ಕ್ಲೆಬ್ಸ್–ಲಾಫೆಲರ್ ದಂಡಾಣು ಜೀವಿಗಳೆಂದು ಹೆಸರು ಬಂದಿದೆ.

ಕ್ಲೆಬ್ಸ್ ಜನಿಸಿದ್ದು ಜರ್ಮನಿಯ ಕೊನಿಗ್ಸ್ ಬರ್ಗ್ ಎಂಬಲ್ಲಿ, ೧೮೩೪ರ ಫೆಬ್ರುವರಿ ೬ ರಂದು. ಬರ್ಲಿನ್ನಿನ ರೋಗವಿಜ್ಞಾನ ಸಂಸ್ಥೆಯಲ್ಲಿ (ಪ್ಯಾಥಾಲಾಜಿಕಲ್ ಇನ್‌ಸ್ಟಿಟ್ಯೂಟ್) ೧೮೬೧–೧೮೬೬ರ ವರೆಗೆ ರುಡೋಲ್ಫ್ ವರ್ಷೊ ಎಂಬಾತನ ಸಹಾಯಕನಾಗಿ ಕೆಲಸ ಮಾಡಿದ. ಅನಂತರ ರೋಗವೈಜ್ಞಾನಿಕ ಅಂಗರಚನಾ ವಿಜ್ಞಾನದ (ಪ್ಯಾಥಾಲಾಜಿಕಲ್ ಅನಾಟಮಿ) ಪ್ರಾಧ್ಯಾಪಕನಾಗಿ ಬರ್ನ್ (೧೮೬೬), ವಾರ್ಟ್ಸ್‌ವರ್ಗ್ (೧೮೭೧), ಪ್ರೇಗ್ (೧೮೭೩), ಝುರಿಕ್ (೧೮೮೮) ಮತ್ತು ಚಿಕಾಗೊ (೧೮೯೬) ಪ್ರದೇಶಗಳಲ್ಲಿ ಕೆಲಸ ಮಾಡಿದ. ಫ್ರಾನ್ಸ್ ಮತ್ತು ಜರ್ಮನಿಗಳ ನಡುವೆ ನಡೆದ ಯುದ್ಧದಲ್ಲಿ, ಕೆಲವು ಗಾಯಗಳನ್ನು ಆಧರಿಸಿ ಗಾಯಗಳ ಸಾಂಕ್ರಾಮಿಕ ಜೀವಿಗಳನ್ನು ಕುರಿತು ಸಂಶೋಧನೆ ನಡೆಸಿದ. ದೇಹದ ಯಾವುದೇ ಭಾಗದಲ್ಲಿರುವ ಸೋಂಕು ಹೃದಯದ ಒಳಪೊರೆಯ ಊತವನ್ನು (ಎಂಡೊಕಾರ್ಡೈಟಿಸ್) ಉಂಟುಮಾಡಬಹುದು ಎಂಬುದನ್ನು ಪ್ರಯೋಗದಿಂದ

ತೋರಿಸುವುದರಲ್ಲಿ ಯಶಸ್ವಿಯಾದ (೧೮೭೬). ಕ್ಷಯರೋಗಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳನ್ನು ನಡೆಸಿ ಹಾಲಿನ ಮೂಲಕ ಕ್ಷಯರೋಗ ಹರಡುವುದನ್ನು ಕಂಡುಹಿಡಿದ. ೧೯೧೩ರ ಅಕ್ಟೋಬರ್ ೨೩ರಂದು ಬರ್ಲಿನಲ್ಲಿ ಕ್ಲೆಬ್ಸ್ ಗತಿಸಿದ. ***

**ಕ್ಲೈನ್‌ಫೆಲ್ಟರ್ ರೋಗಕೂಟ:** ಮಾನವನಲ್ಲಿ ಕ್ರೊಮೋಸೋಮು (ವರ್ಣತಂತು) ಗಳ ಸಂಖ್ಯಾ ಬದಲಾವಣೆಯಿಂದಾಗುವ ಒಂದು ರೋಗಕೂಟ. 1942 ರಲ್ಲಿ ಕ್ರೈನ್‌ಫೆಲ್ಟರ್, ರೈಫೆನ್‌ಸ್ಟೈ ಮತ್ತು ಆಲ್‌ಬ್ರೈಟ್ ಎಂಬ ಮೂವರು ವೈದ್ಯರು ವೃಷಣದ ಅಕ್ರಮವೊಂದನ್ನು ವಿವರಿಸಿದರು. ಅಂದಿನಿಂದೀಚೆಗೆ ಈ ರೀತಿಯ ರೋಗಗಳ ಕೂಟವು ಕ್ರೈನ್‌ಫೆಲ್ಟರ್ ರೋಗಕೂಟ (ಕ್ಲೆನ್‌ಫೆಲ್ಟರ್ ಸಿಂಡ್ರೋಮ್) ವೆಂದು ಹೆಸರಾಗಿದೆ. ಗಂಡಸರಲ್ಲಿ ಇದು ಕೋಜ ಪ್ರವೃತ್ತಿಯ ಭಿನ್ನತೆಯೊಂದನ್ನು ಪ್ರದರ್ಶಿಸುತ್ತದೆ. ಕೌಮಾರ್ಯದಲ್ಲಿ ಆರಂಭವಾಗುತ್ತದೆ. ಇದಕ್ಕೆ ವೀರ್ಯಾಣು ಜನ್ಯಕ ನಾಳಗಳಲ್ಲಿನ ದೋಷ ಕಾರಣವಿರಬಹುದೆಂದು ನಂಬಲಾಗಿದೆ. ಅಡ್ರೀನಲ್ ಮತ್ತು ಥೈರಾಯಿಡ್ ಗ್ರಂಥಿಗಳು ದೊಡ್ಡವಾಗುತ್ತವೆ. ಗಂಡಸು ಮೊಲೆಗಳ ಅಸಾಧಾರಣ ಬೆಳವಣಿಗೆಯಿಂದ ಗೈನಕೊಮ್ಯಾಸ್ಟಿಯ ಎಂಬ ನ್ಯೂನತೆಯ ಲಕ್ಷಣಗಳನ್ನು ತೋರುತ್ತಾನೆ. ಇದಕ್ಕೆ ಆನುವಂಶೀಯ ಹಾಗೂ ಗ್ರಂಥೀಯ ದೋಷಗಳು ಕಾರಣ. ವೃಷಣವು ಹೆಣ್ಣು ಲೈಂಗಿಕ ಹಾರ್ಮೋನಾದ ಇಸ್ಟ್ರೋಜನ್ ಅನ್ನು ಹೆಚ್ಚಾಗಿ ಉತ್ಪಾದಿಸುತ್ತದೆ. ಇವರ ದೇಹದ ಜೀವಕೋಶಗಳು ವಿಜಾತೀಯವಾದ XXY ಅಥವಾ XXXY ಲಿಂಗ ಕ್ರೊಮೋಸೋಮು ಲಕ್ಷಣವನ್ನು ತೋರುತ್ತವೆ. ಅಂದರೆ ಗಂಡಸಿನಲ್ಲಿ ಸಾಮಾನ್ಯವಾಗಿರಬೇಕಾದ ಒಂದು X ಕ್ರೊಮೋಸೋಮಿನ ಬದಲು ಎರಡು XX ಗಳಿರುವುದು ಇದರ ವಿಶೇಷ ಲಕ್ಷಣ. ವೃಷಣಗಳು ಸಣ್ಣವಾಗಿದ್ದು ತಂತು ಅಂಗಾಂಶ ಬೆಳೆದು ಮೃದುವಾಗಿರುತ್ತವೆ. ಟೆಸ್ಟಾಸ್ಟಿರಾನ್ ಹಾರ್ಮೋನು ಸ್ರವಿಕೆಗೆ ಕಿಣ್ವ ಪ್ರತಿಬಂಧಕವಿದೆ ಎಂಬ ವರದಿಗಳಿವೆ. ಆದರೆ ಲಿಡಿಗ್ ಕೋಶಗಳಿಗೆ ಯಾವ ಬಾಧೆಯೂ ಆಗಿರುವುದಿಲ್ಲ. ವೀರ್ಯಾಣುಗಳ ಸಂಖ್ಯೆ ಕಡಿಮೆಯಾಗುತ್ತದೆ. ಬುದ್ಧಿಮಾಂದ್ಯವೂ ಕಾಣಿಸಿಕೊಳ್ಳುತ್ತದೆ. ವೀರ್ಯಾಣುಗಳ ಉತ್ಪಾದನೆ ಸ್ಥಗಿತಗೊಳ್ಳುತ್ತದೆ. ಗಡ್ಡ ಬೆಳೆಯುವುದು ಕುಂದುತ್ತದೆ. ಆತನ ಪುರುಷ ಲಕ್ಷಣಕ್ಕೆ ಧಕ್ಕೆ ಬರುತ್ತದೆ.

(ಎಚ್.ಬಿ.ಡಿ.)

**ಕ್ಲೋಯಕ:** ಹೆಚ್ಚಿನ ಕಶೇರುಕ ಪ್ರಾಣಿಗಳಲ್ಲಿ ಕಂಡುಬರುವ ಪಚನ ವ್ಯವಸ್ಥೆಯ ಕೊನೆಯ ಭಾಗ. ಇದರಲ್ಲಿ ಮೂತ್ರನಾಳ ಮತ್ತು ಜನನೇಂದ್ರಿಯ ನಾಳಗಳು ತೆರೆಯುತ್ತವೆ. ಇಂತಹ ಪ್ರಾಣಿಗಳ ಶರೀರದಲ್ಲಿ ಒಂದೇ ಒಂದು ದ್ವಾರವಿರುತ್ತದೆ. ಆ ದ್ವಾರವೆ ಕ್ಲೋಯಕದ್ವಾರ. ಇದರ ಮೂಲಕ ಮಲ, ಮೂತ್ರ ಮತ್ತು ವಿರ್ಯಾಣುಗಳು ದೇಹದಿಂದ ವಿಸರ್ಜನೆಯಾಗುತ್ತವೆ. ಅದರೇ ಹೆಚ್ಚಿನ ಸ್ತನಿಗಳಲ್ಲಿ ಕ್ಲೋಯಕ ದ್ವಾರಕ್ಕೆ ಬದಲಾಗಿ ಗುದದ್ವಾರ ಮತ್ತು ಮೂತ್ರ ಜನನೇಂದ್ರಿಯ ದ್ವಾರ ಎಂಬ ಎರಡು ಬೇರೆ ದ್ವಾರಗಳಿರುತ್ತವೆ. ಗುದದ್ವಾರದ ಮೂಲಕ ಜೀರ್ಣವಾಗದ ಶರೀರಕ್ಕೆ ಬೇಡದ ಮಲ ಪದಾರ್ಥವು ಹೊರಹಾಕಲ್ಪಡುತ್ತದೆ. ಮೂತ್ರ ಜನನೇಂದ್ರಿಯ ದ್ವಾರದ ಮೂಲಕ ಮೂತ್ರ ವಿಸರ್ಜನೆ ಮತ್ತು ವಿರ್ಯಾಣುಗಳ ವರ್ಗಾವಣೆ ನಡೆಯುತ್ತದೆ. ಕೆಲವು ಅಕಶೇರುಕ ಪ್ರಾಣಿಗಳಾದ ಸಮುದ್ರ ಸವತೆ ಮುಂತಾದ ಪ್ರಾಣಿಗಳಲ್ಲೂ ಸಹ ಪಚನ ವ್ಯವಸ್ಥೆಯ ಕೊನೆಯ ಭಾಗವು ಕ್ಲೋಯಕವಾಗಿರುತ್ತದೆ.

ಎಲ್ಲಾ ಸರಿಸೃಪ ಪ್ರಾಣಿಗಳಲ್ಲಿ ಕ್ಲೋಯಕವು ಒಂದು ಸಂಯೋಜಿತ ರಚನೆಯಾಗಿದೆ. ಇದರ ಕೋಣೆಯು ಮಲವನ್ನು ತೆಗೆಯುವುದಕ್ಕೆ ಬೇಕಾದ ಕಾರ್ಪೊಡಿಯಮ್ ಮೂತ್ರ ನಾಳ ಮತ್ತು ಜನನೇಂದ್ರಿಯ ಭಾಗಗಳನ್ನೊಳಗೊಂಡಿರುವ ಯುರೋಡಿಯಮ್ ಮತ್ತು ಕೊನೆಯ ಭಾಗವಾಧ ಪ್ರಾಕ್ಟೋಡಿಯಮ್ ಎಂಬ ಮೂರು ಭಾಗಗಳಾಗಿ ಬೇರ್ಪಟ್ಟಿರುತ್ತದೆ. ಕ್ಲೋಯಕದ ಮೊದಲೆರಡು ಕೋಣೆಗಳು ಮೂರನೆಯ ಪ್ರಾಕ್ಟೋಡಿಯಮ್ ಜೊತೆ ಸಂಬಂಧ ಹೊಂದಿರುತ್ತವೆ. ಈ ಕೊನೆಯ ಕೋಣೆಯು ಕ್ಲೋಯಕದ ಕವಾಟದಿಂದ ಮುಚ್ಚಿರುತ್ತದೆ. ಈ ರೀತಿ ಮೂರು ಕೋಣೆಗಳಾಗಿ ವಿಸ್ತರಿತವಾದ ಕ್ಲೋಯಕವು ಮೂತ್ರ ಮತ್ತು ಮಲದಲ್ಲಿರುವ ನೀರಿನ ಅಂಶವನ್ನು ಪುನಃ ಹೀರಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಈ ರೀತಿಯ ರಕ್ಷಣಾಕಾರ್ಯವು ನೆಲದ ಮೇಲೆ, ಅದರಲ್ಲೂ ಮರಳುಕಾಡಿನಲ್ಲಿ ವಾಸಮಾಡುವ ಎಲ್ಲಾ ಕಶೇರುಕ ಪ್ರಾಣಿಗಳಿಗೂ ಅತಿ ಅವಶ್ಯಕವಾದ ಕ್ರಿಯೆ.

ಇದೇ ರೀತಿ ಪಕ್ಷಿಗಳ ಕ್ಲೋಯಕವು ಸಹ ಮೂರುಭಾಗಗಳಾಗಿ ಬೇರ್ಪಟ್ಟಿರುತ್ತದೆ. ಕಾರ್ಪೊಡಿಯಮ್ ರೆಕ್ಟಮ್ ಭಾಗವನ್ನು, ಯುರೋಡಿಯಮ್, ಮೂತ್ರ ಮತ್ತು ಜನನೇಂದ್ರಿಯ ನಾಳಗಳನ್ನು ಹೊಂದಿರುತ್ತದೆ ಮತ್ತು ಪ್ರಾಕ್ಟೋಡಿಯಮ್ ಹೊರಗಡೆ ಕ್ಲೋಯಕ ದ್ವಾರಕ್ಕೆ ತೆರೆಯುತ್ತದೆ. ಒಂದು ಕವಾಟವು (ವರ್ತುಲಾಕಾರದ ಮೆದುಸ್ನಾಯುಗಳು) ಪ್ರಾಕ್ಟೋಡಿಯಮ್‌ನ ದ್ವಾರವನ್ನು ಹಿಡಿತದಲ್ಲಿಟ್ಟಿರುತ್ತದೆ. ಇಲ್ಲೂ ಸಹ ವಿಸ್ತರಿಸಿದ ಕ್ಲೋಯಕವು ಮೂತ್ರ ಮತ್ತು ಮಲದಲ್ಲಿರುವ ನೀರನ್ನು ಪುನಃ ಹೀರುವುದಕ್ಕೆ ಸಹಾಯಕವಾಗಿರುತ್ತದೆ.

ಎಳೆಯ ಪಕ್ಷಿಗಳಲ್ಲಿ ಪ್ರಾಕ್ಟೋಡಿಯಮ್‌ಗೆ ಸಂಬಂಧಿಸಿದಂತೆ ಅದರ ಮೇಲು ಭಾಗದಲ್ಲಿ ಹೇರಳವಾದ ದುಗ್ಧ ರಸದಿಂದ ತುಂಬಿದ ಒಂದು ಸಣ್ಣ ಗುಪ್ತ ಚೀಲವಿದೆ ಇದಕ್ಕೆ ಬರ್ಸಾಫ್ಯಾಬ್ರಿಸಿ ಎಂದು ಹೆಸರು. ಬಹುಶಃ ಇದರ ಕಾರ್ಯ ಕ್ಲೋಯಕದಲ್ಲಿನ ಅಂಟುಜಾಡ್ಯಗಳ ವಿರುದ್ಧ ಹೋರಾಡುವುದು. ಇದು ಎಳೆಯ ಪಕ್ಷಿಗಳಲ್ಲಿ ಚುರುಕಾಗಿದ್ದು ಪ್ರೌಢ ಪಕ್ಷಿಗಳಲ್ಲಿ ನಶಿಸಿ ಹೋಗುವುದರಿಂದ ಇದನ್ನು ಕ್ಲೋಯಕ್‌ದ ಥೈಮಸ್ ಎಂತಲೂ ಕರೆಯುತ್ತಾರೆ.

(ವಿ.ಕೆ)

**ಕ್ಲೋನಿಂಗ್:** ತಳಿಗುಣದಲ್ಲಿ ಯಥಾವತ್ತಾಗಿ ಇರುವ ಡಿಎನ್‌ಎ, ಕೋಶ, ಅಥವಾ ಜೀವಿಗಳ ಉತ್ಪಾದನೆ. ತದ್ರೂಪಿಗಳ ಸೃಷ್ಟಿ ಪರ್ಯಾಯ ಪದ. ಕ್ಲೋನಿಂಗ್ ಎಂಬ ಇಂಗ್ಲಿಷ್ ಪದದ ಮೂಲ ಕ್ಲೋನ್ ಎಂಬ ಗ್ರೀಕ್ ಪದ. ಗ್ರೀಕ್‌ನಲ್ಲಿ ಕ್ಲೋನ್ ಎಂದರೆ ಸಸ್ಯದ ಟೊಂಗೆ (ಟ್ವಿಗ್) ಎಂದು ಅರ್ಥ. ಅಂದರೆ ಸಸ್ಯದ ಟೊಂಗೆಯೊಂದನ್ನು ಅಥವಾ ಕಾಂಡವನ್ನು ಕತ್ತರಿಸಿ ಅದರಿಂದ ಅಂತಹುದೇ ಮತ್ತೊಂದು ಸಸ್ಯವನ್ನು ಅಭಿವೃದ್ಧಿಪಡಿಸುವುದು ಎಂದು ಅರ್ಥ. ಪ್ರಚಲಿತದಲ್ಲಿರುವ ಪ್ರಾಣಿಗಳ ತದ್ರೂಪಿಗಳನ್ನು ಸೃಷ್ಟಿಸುವ ಈ ಸಂಕೀರ್ಣ ಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ವಿವಿಧ ಬಗೆಯ ಕ್ಲೋನಿಂಗ್ ತಂತ್ರಜ್ಞಾನಗಳನ್ನು ತಿಳಿಯುವುದು ಅವಶ್ಯ.

ಪುನಃ ಸಂಯೋಜಿತ ಡಿಎನ್‌ಎ ಅಥವಾ ಡಿಎನ್‌ಎ ಕ್ಲೋನಿಂಗ್: ಜೀವಿಯ ಜೀವಕೋಶದ ಡಿಎನ್‌ಎಯಿಂದ ಅವಶ್ಯವಿರುವ ಗುಣವನ್ನು ಪ್ರತಿನಿಧಿಸುವ ತುಂಡೊಂದನ್ನು ಗುರುತಿಸಿ, ಕತ್ತರಿಸಿ ಹೊರತೆಗೆಯುತ್ತಾರೆ. ಈ ರೀತಿ ಕತ್ತರಿಸಿದ ಡಿಎನ್‌ಎ. ತುಂಡನ್ನು, ಸ್ವತಂತ್ರವಾಗಿ ಪುರುತ್ಪಾದನೆ ಹೊಂದಬಲ್ಲ ಡಿಎನ್‌ಎಗೆ ಕೂಡಿಸುತ್ತಾರೆ. ಇದಕ್ಕಾಗಿ ಬ್ಯಾಕ್ಟೀರಿಯಾಗಳ ಪ್ಲಾಸ್ಮಿಡ್ ಎಂಬ ಡಿಎನ್‌ಎಯನ್ನು ಆರಿಸಿಕೊಳ್ಳಲಾಗುತ್ತದೆ. ಆಯ್ದ ಈ ಪ್ಲಾಸ್ಮಿಡ್‌ನೊಡನೆ ಕತ್ತರಿಸಿ ಇಟ್ಟುಕೊಂಡಿರುವ ಡಿಎನ್‌ಎ ಯ ತುಂಡನ್ನು ಬೆಸೆಯಲಾಗುವುದು. ಹೀಗೆ ದೊರೆತ ಪ್ಲಾಸ್ಮಿಡ್ ಪುನಃ ಸಂಯೋಜಿತ ಡಿಎನ್‌ಎ. ಅಥವಾ ಡಿಎನ್‌ಎಯ ಕ್ಲೋನ್. ಡಿಎನ್‌ಎ ಯನ್ನು ಕತ್ತರಿಸಲು ಮತ್ತು ಬೆಸೆಯಲು ವಿಶೇಷ ಕಿಣ್ವಗಳನ್ನು ಬಳಸಲಾಗುವುದು. 1970 ರಲ್ಲಿ ಆರಂಭವಾದ ಈ ತಂತ್ರಜ್ಞಾನ ಇಂದು ಜೈವಿಕ ತಂತ್ರಜ್ಞಾನದಲ್ಲಿ ಪ್ರಮುಖ ತಂತ್ರವಾಗಿದೆ. ಅಲ್ಪ ಪ್ರಮಾಣದಲ್ಲಿರುವ ಡಿಎನ್‌ಎ ತುಣುಕನ್ನು ಈ ವಿಧಾನದಿಂದ ಹೆಚ್ಚಿಸಬಹುದು. ಈ ರೀತಿ ಸ್ವತಂತ್ರವಾಗಿ ದ್ವಿಗುಣಗೊಳ್ಳಬಲ್ಲ ಪ್ಲಾಸ್ಮಿಡ್‌ಗಳಲ್ಲದೆಯೇ ವೈರಾಣುಗಳ (ವೈರಸ್) ಪ್ಲಾಸ್ಮಿಡ್‌ಗಳನ್ನು ಸಹ ಇದಕ್ಕಾಗಿ ಬಳಸುತ್ತಾರೆ. ಕೃತಕ ಪ್ಲಾಸ್ಮಿಡ್‌ಗಳು ಹಾಗೂ ಯೀಸ್ಟ್ ಕೋಶಗಳಲ್ಲಿರುವ ಪ್ಲಾಸ್ಮಿಡ್‌ಗಳನ್ನು ಬಳಸಲಾಗುವುದು.

ಸಂತಾನೋತ್ಪತ್ತಿ ಕ್ಲೋನಿಂಗ್ (ರಿಪ್ರೊಡಕ್ಟಿವ್ ಕ್ಲೋನಿಂಗ್) : ಈ ಬಗೆಯ ಕ್ಲೋನಿಂಗನ್ನು ಆಯ್ಕೆ ಮಾಡಿದಂತಹ ನ್ಯೂಕ್ಲಿಯರ್ ಡಿಎನ್‌ಎಯನ್ನು ಹೊಂದಿರುವ ಸಜೀವ ಅಥವಾ ಹಿಂದೊಮ್ಮೆ ಇದ್ದ ಜೀವಿಯ ತದ್ರೂಪಿಯನ್ನು ಪಡೆಯಲು ಬಳಸುತ್ತಾರೆ. 1997 ರಲ್ಲಿ ಇಡಿಯ ವಿಶ್ವದ ಗಮನವನ್ನು ಸೆಳೆದ ತದ್ರೂಪಿ ಕುರಿ ಡಾಲಿಯನ್ನು ಈ ವಿಧಾನದಿಂದ ಪಡೆಯಲಾಯಿತು. ಇದು ಮೊತ್ತ ಮೊದಲ ಸ್ತನಿ ತದ್ರೂಪಿ.

ಇಂಗ್ಲೆಂಡಿನ ಎಡಿನ್‌ಬರೋದ ರೊಸಾಲಿನ್ ಸಂಶೋಧನಾ ಸಂಸ್ಥೆಯ ಬ್ರಿಟಿಶ್ ಸಂಶೋಧಕ ಅಯಾನ್ ವಿಲ್‌ಮಟ್ ಅವರ ನೇತೃತ್ವದ ತಂಡ ಬೆಳೆದ ಹೆಣ್ಣುಕುರಿಯ ಸ್ತನಕೋಶದಿಂದ ಕೋಶಕೇಂದ್ರವನ್ನು ಬೇರ್ಪಡಿಸಿ, ಅದನ್ನು ಮತ್ತೊಂದು ಕುರಿಯ ಫಲಿತಗೊಳ್ಳದ ಅಂಡಾಣುವಿಗೆ ಸೇರಿಸಿದರು. ಈ ಅಂಡಾಣುವಿನಿಂದ ಕೋಶಕೇಂದ್ರವನ್ನು ಮೊದಲೇ ಬೇರ್ಪಡಿಸಲಾಗಿತ್ತು. ಸ್ತನಕೋಶದ ಕೋಶಕೇಂದ್ರವನ್ನು ಸೇರಿಸಿದ ಮೇಲೆ ಒಂದು ಸಣ್ಣ ವಿದ್ಯುತ್ ಆಘಾತವನ್ನು ನೀಡುವುದರ ಮೂಲಕ ಅಂಡಾಣುವಿನಲ್ಲಿ ಕೋಶವಿಭಜನೆಯನ್ನು ಪ್ರಚೋದಿಸಿ, ಕೃಷಿ ಮಾಡಲಾಯಿತು. ಕೋಶವಿಭಜನೆ ಮುಂದುವರಿದು ಭ್ರೂಣವಾಯಿತು. ಈ ಭ್ರೂಣವನ್ನು ಮತ್ತೊಂದು ಹೆಣ್ಣುಕುರಿಯ ಅಂಡಾಶಯಕ್ಕೆ ಸೇರಿಸಿದಾಗ ಅದು ಅಲ್ಲಿ ಗರ್ಭಾಂಕುರಿಸಿ, ಕುರಿಮರಿಯಾಗಿ ಜನ್ಮವೆತ್ತಿತು. ಹೀಗೆ ತಂದೆಯಿಲ್ಲದೆಯೇ ಜನಿಸಿದ ಕುರಿಯ ಮರಿ ಡಾಲಿ, ಸ್ತನಕೋಶವನ್ನು ನೀಡಿದ್ದ ಕುರಿಯ ಕ್ಲೋನ್ ಅಥವಾ ತದ್ರೂಪಿ.

ಕೋಶಕೇಂದ್ರದ ವರ್ಗಾವಣೆಯಿಂದ ಜನಿಸಿದ ಕ್ಲೋನ್ ಕೋಶಕೇಂದ್ರದ ದಾನಿಯನ್ನೇ ಸಂಪೂರ್ಣವಾಗಿ ಹೋಲುವುದಿಲ್ಲ. ಆದರೆ ಈ ತದ್ರೂಪಿಯ ಡಿಎನ್‌ಎ ಮಾತ್ರ ದಾನಿಯ ಡಿಎನ್‌ಎಯನ್ನೇ ಹೋಲುತ್ತದೆ. ಈ ರೀತಿ ಜನಿಸಿದ ಕ್ಲೋನ್‌ನ ಸ್ವಲ್ಪ ಪ್ರಮಾಣದ ತಳಿವಸ್ತು, ನ್ಯೂಕ್ಲಿಯಸ್ ತೆಗೆದ ಆತಿಥೇಯ ಜೀವಕೋಶದ ತಳಿವಸ್ತುವನ್ನು ಹೋಲುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಈ ಕೋಶದಲ್ಲಿರುವ

ಕೋಶದ್ರವ್ಯದ (ಸೈಟೊಪ್ಲಾಸ್ಮ್) ಮೈಟೋಕಾಂಡ್ರಿಯಾಗಳಲ್ಲಿ ಸಣ್ಣ ಪ್ರಮಾಣದ ಡಿಎನ್‌ಎ ಯ ತುಣುಕುಗಳು ಇರುವುದು.

ಡಾಲಿಯ ಜನನ ಜೈವಿಕ ತಂತ್ರಜ್ಞಾನದಲ್ಲಿ ಹೊಸ ಬೆಳವಣಿಗೆ. ಈ ಪ್ರಯೋಗದಿಂದ ದೇಹದ ಯಾವುದೇ ಒಂದು ಜೀವಕೋಶದಿಂದ ಸಂಪೂರ್ಣ ಜೀವಿಯನ್ನು ಪಡೆಯಬಹುದು ಎಂಬುದು ದೃಢೀಕರಿಸಲ್ಪಟ್ಟಿತು. ಈ ಪ್ರಯೋಗಕ್ಕೆ ಮುಂಚೆ ಯಾವುದೇ ಅಂಗದ ಕೋಶವಾಗಿ (ಡಿಫರೆನ್ಷಿಯೇಶನ್) ಉದಾ : ಹೃದಯ, ಮೆದುಳು, ಮೂಳೆ, ಇತ್ಯಾದಿ ವಿಭೇದನೆಗೊಂಡ ಕೋಶವು ಶಾಶ್ವತ ಗುಣಗಳನ್ನು, ವಿಶೇಷತೆಯನ್ನು ಪಡೆಯುತ್ತದೆ ಹಾಗೂ ಅದರಲ್ಲಿನ ಬಹುತೇಕ ತಳಿವಸ್ತು ನಿಷ್ಕ್ರಿಯವಾಗಿರುತ್ತದೆ ಎಂದು ಭಾವಿಸಲಾಗಿತ್ತು.

ಇಂತಹುದೇ ಪ್ರಯೋಗಗಳು ಮೇಕೆ, ಹಸು, ಇಲಿ, ಹಂದಿ, ಬೆಕ್ಕು, ಮೊಲಗಳಲ್ಲಿ ಯಶಸ್ವಿಯಾದುವು. ನೂರಾರು ಕ್ಲೋನ್ ಪ್ರಾಣಿಗಳು ಇಂದು ಜೀವಿಸುತ್ತಿವೆ. ಆದರೆ ಎಲ್ಲ ಜೀವಿಗಳಲ್ಲಿಯೂ ಕ್ಲೋನಿಂಗ್ ಪ್ರಯೋಗಗಳು ಯಶಸ್ವಿಯಾಗಿಲ್ಲ.

ಚಿಕಿತ್ಸಾ ಕ್ಲೋನ್, ಚಿಕಿತ್ಸಾ ತದ್ರೂಪಿ ಅಥವಾ ಭ್ರೂಣ ತದ್ರೂಪಿ : ಡಾಲಿ ಅಥವಾ ಇತರೇ ಪ್ರಾಣಿಗಳ ತದ್ರೂಪಿಗಳು ಪಶುಸಂಗೋಪನೆಯಲ್ಲಿ ನಿರ್ದಿಷ್ಟ ತಳಿಗುಣಗಳುಳ್ಳ ಸಂತಾನ ಸೃಷ್ಟಿಗೆ ಅನುಕೂಲವಾಗಿವೆ. ಚಿಕಿತ್ಸಾ ತದ್ರೂಪಿ ಇದಕ್ಕಿಂತ ಭಿನ್ನವಾದ್ದು. ಮಾನವ ಭ್ರೂಣವನ್ನು ಬಳಸಿ ಕ್ಲೋನ್ ಸೃಷ್ಟಿಸಲಾಗುತ್ತಿದೆ. ಇದರ ಗುರಿ ಮಾನವ ತದ್ರೂಪಿಯನ್ನು ಸೃಷ್ಟಿಸುವುದಲ್ಲ. ವಿವಿಧ ಅಂಗಗಳ ಚಿಕಿತ್ಸೆಗಾಗಿ ಅಂಗಾಂಶ ಸೃಷ್ಟಿಸಲು ಬೇಕಾಗುವ ಆದಿಕೋಶ ಅಥವಾ ಕಾಂಡಕೋಶಗಳನ್ನು ಪಡೆಯುವುದು ಇದರ ಗುರಿ.

2001 ರ ನವೆಂಬರ್‌ನಲ್ಲಿ ಮೆಸ್ಸಾಚ್ಯುಸೆಟ್‌ನ ಜೈವಿಕ ಕೇಂದ್ರ ಮಾನವ ತದ್ರೂಪಿ ಭ್ರೂಣಗಳನ್ನು ಚಿಕಿತ್ಸಾ ವಿಜ್ಞಾನದ ಪ್ರಯೋಗಗಳಿಗಾಗಿ ಸೃಷ್ಟಿಸಿರುವುದಾಗಿ ಘೋಷಿಸಿತು. ಇದಕ್ಕಾಗಿ ಅಲ್ಲಿನ ವಿಜ್ಞಾನಿಗಳು ಮಹಿಳೆಯ ಅಂಡಾಣುವಿನ ತಳಿವಸ್ತುವನ್ನು (ಕೋಶಕೇಂದ್ರ) ಅತಿ ಸಣ್ಣ ಸೂಜಿಯಿಂದ (2/10,000 ಅಂಗುಲದಷ್ಟು ಅಗಲ) ಹೀರಿ ತೆಗೆದು, ಅದರ ಸ್ಥಳದಲ್ಲಿ ಚರ್ಮದ ಕೋಶವೊಂದನ್ನು ಸೇರಿಸಿದರು. ನಂತರ ಪಿನೋಮೈಸಿನ್ ಎಂಬ ರಾಸಾಯನಿಕ ವಸ್ತುವಿನಿಂದ ಕೋಶವಿಭಜನೆಯನ್ನು ಪ್ರಚೋದಿಸಿದರು.

ಕ್ಲೋನಿಂಗ್ ತಂತ್ರಜ್ಞಾನದ ಪ್ರಯೋಜನ : ಸಂತಾನೋತ್ಪತ್ತಿ ಕ್ಲೋನಿಂಗ್ (ರಿಪ್ರೊಡಕ್ಟಿವ್ ಕ್ಲೋನಿಂಗ್) ಅನ್ನು ವಿಶೇಷ ಗುಣವುಳ್ಳ ಪ್ರಾಣಿಗಳನ್ನು ಪಡೆಯಲು ಬಳಸಬಹುದು. ಉದಾ : ಔಷಧೀಯ ಗುಣವುಳ್ಳ, ಇಲ್ಲವೇ ಚೋದನಿ (ಹಾರ್ಮೋನ್ಸ್) ಗಳನ್ನು ಒಳಗೊಂಡ ಹಾಲು, ಮಾಂಸ, ಮೊಟ್ಟೆಗಳನ್ನು ಉತ್ಪಾದಿಸುವ ಜೀವಿಗಳನ್ನು ಪಡೆಯಬಹುದು. ಇದೇ ರೀತಿ ಚಿಕಿತ್ಸಾ ವಿಜ್ಞಾನದಲ್ಲಿ ಪ್ರಯೋಗಕ್ಕೆ ಬೇಕಾಗುವ ನಿರ್ದಿಷ್ಟ ಗುಣಗಳುಳ್ಳ ಜೀವಿಗಳನ್ನು ಸೃಷ್ಟಿಸಬಹುದು. ಅಳಿವಿನ ಅಂಚಿನಲ್ಲಿರುವ ಪ್ರಾಣಿಗಳನ್ನು ಸೃಷ್ಟಿಸಲು ಬಳಸಬಹುದು. 2001 ರಲ್ಲಿ ಇಟಲಿಯ ವಿಜ್ಞಾನಿಗಳು ಅಳಿವಿನಂಚಿನಲ್ಲಿರುವ ಅಲ್ಲಿಯ ಕಾಡು ಕುರಿಯ (ಮೌಫ್ಲಾನ್) ಕ್ಲೋನ್ ಸೃಷ್ಟಿಸಿರುವುದಾಗಿ ಘೋಷಿಸಿದರು. ಇದೇ ರೀತಿ ಆಫ್ರಿಕಾದ ಬೊಂಗೋ ಜಿಂಕೆ (ಬೊಂಗೊ ಆಂಟಿಲೋಪ್), ಸುಮಾತ್ರಾದ ಹುಲಿ, ಚೈನಾದ ದೈತ್ಯ ಪಾಂಡಾ (ಜೈಂಟ್ ಪಾಂಡ) ದ ಕ್ಲೋನ್ ಗಳ ಸೃಷ್ಟಿಗೆ ಪ್ರಯತ್ನಗಳು ಸಾಗಿವೆ.

ಮಾನವ ತದ್ರೂಪಿ–ನೈತಿಕ ಪ್ರಶ್ನೆ (ಹ್ಯೂಮನ್ ಕ್ಲೋನ್) : ಭ್ರೂಣದ ಹಂತದವರೆಗಿನ ಮಾನವ ತದ್ರೂಪಿಯ (ಹ್ಯೂಮನ್ ಕ್ಲೋನ್) ಸೃಷ್ಟಿ ಸಾಧ್ಯವಾಗಿದ್ದರೂ ಸಹ ಮಾನವ ಕ್ಲೋನ್‌ನ ಸೃಷ್ಟಿಗೆ ಜಗತ್ತಿನಾದ್ಯಂತ ವಿರೋಧವಿದೆ. ಅಮೆರಿಕದ ವೈದ್ಯರು ಹಾಗೂ ವಿಜ್ಞಾನಿಗಳು ಇದನ್ನು ನೈತಿಕವಾಗಿ ತಪ್ಪೆಂದು ಸಾರಿದ್ದಾರೆ. ಇದಕ್ಕೆ ಕಾರಣ ಸಂತಾನೋತ್ಪತ್ತಿ ಕ್ಲೋನಿಂಗ್ ಇನ್ನೂ ಸಂಪೂರ್ಣವಾಗಿ ಅರ್ಥವಾಗಿಲ್ಲ. ಮಾನವ ಚಿಕಿತ್ಸಾ ಕ್ಲೋನ್ ತಯಾರಿಕೆಗಾಗಿ ನಡೆದ ಪ್ರಯೋಗದಲ್ಲಿ ಒಟ್ಟು 8 ಅಂಡಾಣುಗಳಿಗೆ ಚರ್ಮಕೋಶವನ್ನು ಸೇರಿಸಿದ್ದರೂ ಮೂರು ಮಾತ್ರ ವಿಭಜನೆಯಲ್ಲಿ ಯಶಸ್ವಿಯಾದುವು. ಹಾಗೂ ಇವುಗಳಲ್ಲಿ ಒಂದು ಮಾತ್ರ ಆರು ಕೋಶಗಳ ಹಂತವನ್ನು ತಲುಪಿ ವಿಭಜನೆಯನ್ನು ನಿಲ್ಲಿಸಿತು. ಕ್ಲೋನಿಂಗ್‌ನ ಪ್ರಯೋಗಗಳಲ್ಲಿ ಬಹಳಷ್ಟು ಜೀವಿಗಳು ಸೃಷ್ಟಿಯಾಗಿದ್ದರೂ ಹಲವಾರು ವಿಕಲಾಂಗ ಜೀವಿಗಳು ಹುಟ್ಟಿವೆ. ಇನ್ನೂ ಹಲವು ಪ್ರೌಢಾವಸ್ಥೆಗೆ ಮುಂಚೆಯೇ ಸತ್ತುಹೋಗಿವೆ. ಪರಿಪೂರ್ಣ ಕ್ಲೋನ್ ಒಂದನ್ನು ಸೃಷ್ಟಿಸಲು ಇದುವರೆಗೆ ಸಾಧ್ಯವಾಗಿಲ್ಲ. ಹೀಗಿರುವಾಗ ಮಾನವ ಕ್ಲೋನ್‌ನ ಸೃಷ್ಟಿ ಅಪಾಯಕಾರಿ. ಇದರೊಂದಿಗೆ ಮಾನವ ತದ್ರೂಪಿಯ ಸೃಷ್ಟಿ ನೈತಿಕ ಪ್ರಶ್ನೆಯೊಂದಕ್ಕೆ ಎಡೆ ಮಾಡಿಕೊಡುತ್ತದೆ. ಮಾನವ ಕ್ಲೋನ್‌ನ ಸೃಷ್ಟಿ ಆಗುವುದೇ ಆದಲ್ಲಿ ಯಾವ ಜನಾಂಗದ ಡಿಎನ್‌ಎಯ ಬಳಕೆಯಾಗಬೇಕು? ಮಾನವ ತಳಿವಸ್ತುವನ್ನೇ ಬದಲಾಯಿಸಿಬಿಡಬಲ್ಲ ಈ ಪ್ರಯೋಗಗಳು ಸಮಾಜದಲ್ಲಿ ಯಾವ ಬದಲಾವಣೆಯನ್ನು ತರಬಹುದು ಎನ್ನುವುದು ತಿಳಿದಿಲ್ಲ. ಇದರೊಂದಿಗೆ ಇಂತಹ ಪ್ರಯೋಗದಿಂದ ಜನಿಸಿದ ಮಾನವ ತದ್ರೂಪಿಯ ಮಾನಸಿಕ ಸ್ಥಿತಿ ಹೇಗಿರಬಹುದು ಎನ್ನುವುದು ವಿಜ್ಞಾನಿಗಳಿಗೆ ತಿಳಿದಿಲ್ಲ. ಆದುದರಿಂದ ಮಾನವ ತದ್ರೂಪಿಯ ಸೃಷ್ಟಿ ನೈತಿಕವಾಗಿ ಸರಿಯಲ್ಲ. ಅಷ್ಟೇ ಅಲ್ಲ ಮಾನವ ಜನಾಂಗಕ್ಕೆ ಅಪಾಯಕಾರಿಯೂ ಹೌದು.

ಡಾಲಿಯ ಕಥೆ : 1997 ರಲ್ಲಿ ಸುದ್ದಿ ಮಾಡಿ ಜೈವಿಕ ತಂತ್ರಜ್ಞಾನದಲ್ಲಿ ಕ್ರಾಂತಿಯನ್ನುಂಟುಮಾಡಿದ ಕುರಿಮರಿ ಡಾಲಿಯನ್ನು 2003 ರ ಫೆಬ್ರವರಿ 14 ರಂದು ಚುಚ್ಚುಮದ್ದನ್ನು ನೀಡಿ (ದಯಾಮರಣವನ್ನು) ಸಾಯಿಸಲಾಯಿತು. ಸಾಯುವ ಮುಂಚೆ ಆರು ವರ್ಷದ ಡಾಲಿ ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿತ್ತು. ಫಿನ್ ಡೋರ್‌ಸೆಟ್ ಗುಂಪಿಗೆ ಸೇರಿದ ಕುರಿಗಳು ಸಾಮಾನ್ಯವಾಗಿ 11 ರಿಂದ 12 ವರ್ಷಗಳವರೆಗೆ ಬದುಕಬಲ್ಲವಾದರೂ ಆರು ವರ್ಷಕ್ಕೆ ಸತ್ತ ಡಾಲಿ ಇವೆರಡು ತೊಂದರೆಗಳನ್ನು ಬಿಟ್ಟು ಉಳಿದಂತೆ ಆರೋಗ್ಯವಾಗಿತ್ತು ಎಂದು ಮರಣಾನಂತರ ಪರೀಕ್ಷೆಗಳಿಂದ ತಿಳಿದುಬಂದಿತು. ಡಾಲಿ ಸಹಜ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡಿ ಆರು ಮರಿಗಳ ತಾಯಿಯಾಗಿತ್ತು.

(ಎಸ್.ಎಂ.ಜಿ.)

**ಕ್ಲೋಮದ ಪರಿಚಲನೆ:** ಮೀನುಗಳಲ್ಲಿ, ಕೆಲವು ಉಭಯವಾಸಿಗಳಲ್ಲಿ ಭ್ರೂಣ ಮತ್ತು ಕೆಲವು ಪ್ರೌಢಾವಸ್ಥೆಯ ಉಭಯವಾಸಿಗಳಲ್ಲಿ ಹೃದಯದಿಂದ ಹೊರದೂಡಿದ ರಕ್ತವು ಘುಪ್ಪುಸಗಳ ಮೂಲಕ ಶರೀರದ ಇತರ ಭಾಗಗಳಿಗೆ ಸಂಚರಿಸುವುದು. ಪ್ರಾಥಮಿಕವಾಗಿ ಕಶೇರುಕ ಭ್ರೂಣಗಳಲ್ಲಿ ಹೃದಯದ ಬೆಳವಣಿಗೆಯು ವಿಟಲ್ಲಿವನ್ (ಜಸಿ) ಮತ್ತು ಉಪಕರುಳುನಾಳಗಳ ಮೂಲಕ ಆಹಾರದ ಮೂಲ ಸ್ಥಾನದಿಂದ ರಕ್ತವನ್ನು ಶೇಖರಿಸುತ್ತದೆ. ನಂತರ ರಕ್ತವನ್ನು ಆಮ್ಲಜನಕ ಸೇವನೆಗಾಗಿ ಒಂದು ಶ್ರೇಣಿ ಜೊತೆಗೂಡಿದ ಕೆಳ ಮಾಹಾಧಮನಿಯಿಂದ ಹೊರಡುವ ಅಪವಾಹಿ ಕಮಾನುಗಳ ಮೂಲಕ ಉಸಿರಾಟದ ಅಂಗಗಳಿಗೆ ಕಳುಹಿಸುತ್ತದೆ. ಕಶೇರುಕ ಪ್ರಾಣಿಗಳು ಅವುಗಳ ಉಸಿರಾಟದ ಅಂಗಗಳಲ್ಲಿ ಒಂದು ಅನುಕ್ರಮವನ್ನು ತೋರಿಸುತ್ತವೆ. ಮೊದಲ ದವಡೆಯ ಕಶೇರುಕ (ಗ್ನಾತೋಸ್ಟೋಮ) ಪ್ರಾಣಿಗಳಾದ ಮೀನುಗಳ ಗಳನಾಳ ಘುಪ್ಪುಸ (ಫರಿಂಜಿಯಲ್‌ಗಿಲ್)ಗಳನ್ನು ಹೊಂದಿವೆ. ಉಭಯವಾಸಿಗಳು ಭ್ರೂಣಾವಸ್ಥೆಯಲ್ಲಿ, ಕೆಲವು ವೇಳೆ ಬಲಿತ ಪ್ರಾಣಿಗಳಲ್ಲೂ ಸಹ ಘುಪ್ಪುಸಗಳನ್ನು ಹೊಂದಿವೆ. ಕೆಲವು ದ್ವಿಚರಗಳು, ಬಲಿತ ಪ್ರಾಣಿಗಳಲ್ಲಿ ಮಾತ್ರ ಶ್ವಾಸಕೋಶಗಳನ್ನು ಹೊಂದಿವೆ. ಸರಿಸೃಪ, ಪಕ್ಷಿ ಮತ್ತು ಸ್ತನಿ ಪ್ರಾಣಿಗಳ ಭ್ರೂಣಾವಸ್ಥೆ ಮತ್ತು ಬಲಿತ ಪ್ರಾಣಿಗಳರಡರಲ್ಲೂ ಶ್ವಾಸಕೋಶಗಳು ಮಾತ್ರ ಇವೆ.

ಈ ರೀತಿಯ ವೈವಿಧ್ಯತೆಗೆ ತಕ್ಕಂತೆ ಅಪವಾಹಿ ಕಮಾನುಗಳ ವ್ಯವಸ್ಥೆ ಮತ್ತು ಹೃದಯದ ರಚನೆಯು ಬೇರೆ ಬೇರೆ ಕಶೇರುಕಗಳಲ್ಲಿ ವೈವಿಧ್ಯತೆಯಿಂದಿದೆ. ಅದಕ್ಕನುಸಾರವಾಗಿ ಹೃದಯದಿಂದ ಹೊರದೂಡಿದ ರಕ್ತದ ಚಲನೆಯ ಕ್ರಮವು ಬೇರೆ ಬೇರೆ ಕಶೇರುಕ ಪ್ರಾಣಿಗಳಲ್ಲಿ ಬೇರೆಯಾಗಿದೆ.

ಮೀನುಗಳಲ್ಲಿ ಹೃದಯವು 2 ಕೋಣೆಗಳನ್ನು ಹೊಂದಿರುತ್ತದೆ. ಒಂದು ವಿಭಜನೆಗೊಳ್ಳದ ತೆಳುಗೋಡೆಯಾದ ಹೃತ್ಕರಣ (ಏಟ್ರಿಯಂ) ಮತ್ತೊಂದು ಹೃತ್ಕುಕ್ಷಿ. ಹೃತ್ಕರಣವು ಎಲ್ಲಾ ಮೇಲಿನ ರಕ್ತವನ್ನು ಸ್ವೀಕರಿಸುತ್ತದೆ. ಅದೇ ಹೃತ್ಕುಕ್ಷಿಯು ಕೋನಸ್ ಆರ್ಟೀರಿಯೋಸಸ್‌ಗೆ ತಳ್ಳುತ್ತದೆ. ನಂತರ ರಕ್ತವು ಕೆಳ ಮಹಾಧಮನಿಗೆ ಬರುತ್ತದೆ. ಈ ಪ್ರಾಣಿಗಳ ಹೃದಯವು ಮಲಿನ ರಕ್ತವನ್ನು ಮಾತ್ರ ಪಡೆದಿರುತ್ತದೆ. ಈ ಮೇಲಿನ ರಕ್ತವನ್ನು ಘುಪ್ಪುಸ ರಂಧ್ರಗಳ ಕಡೆಗೆ ಆಮ್ಲಜನಕ ಸೇವನೆಗೆ ಕಳುಹಿಸುತ್ತದೆ. ಈ ರೀತಿಯ ಬರಿ ಮಲಿನ ರಕ್ತವನ್ನೇ ಹೊಂದಿರುವ ಹೃದಯಕ್ಕೆ ಕ್ಲೋಮದ ಹೃದಯ (ಬ್ರಾಂಕಿಯಲ್ ಹೃದಯ) ಅಥವ ಮಲಿನ ರಕ್ತದ ಹೃದಯ ಎಂದು ಹೆಸರು. ಇದರಿಂದ ಮೀನುಗಳಲ್ಲಿ ಕ್ಲೋಮದ ಹೃದಯವು ಘುಪ್ಪುಸಗಳ ಅಥವಾ ಬ್ರಾಂಕಿಯಗಳ ಮೂಲಕ ರಕ್ತವನ್ನು ಇತರೆಡೆಗೆ ಕಳುಹಿಸುತ್ತವೆ. ಈ ರೀತಿ ಕಳುಹಿಸಿದ ರಕ್ತವು ಪುನಃ ಹೃದಯಕ್ಕೇ ಬರುವುದಿಲ್ಲ. ಹೃದಯವು ಶರೀರದ ಎಲ್ಲಾ ಭಾಗಗಳಿಂದ ಆಮ್ಲಜನಕರಹಿತ ರಕ್ತವನ್ನು ಸ್ವೀಕರಿಸುತ್ತದೆ. ಆ ರಕ್ತವನ್ನು ಘುಪ್ಪುಸಗಳಿಗೆ ಆಮ್ಲಜನಕ ಸೇವನೆಗೆ ಕಳುಹಿಸಿ ಶುದ್ಧ ರಕ್ತವನ್ನಾಗಿಸಿ ಅದನ್ನು ಶರೀರದ ವಿವಿಧ ಭಾಗಗಳಿಗೆ ಚಲಿಸುತ್ತದೆ. ಇದರಿಂದ ರಕ್ತವು ಅದರ ಪೂರ್ಣಪ್ರದಕ್ಷಿಣೆಯಲ್ಲಿ ಒಂದೇ ಒಂದು ಸಾರಿ ಹೃದಯವನ್ನು ತಲುಪುತ್ತದೆ. ಈ ರೀತಿಯ ರಕ್ತ ಪರಿಚಲನಾವ್ಯವಸ್ಥೆಗೆ ಏಕಬಗೆಯ ರಕ್ತಪರಿಚಲನಾವ್ಯವಸ್ಥೆ ಎಂದು ಹೆಸರು.

ಮೀನುಗಳ ಹೃದಯದಲ್ಲಿ ರಕ್ತವನ್ನು ಘುಪ್ಪುಸಗಳ ಮೂಲಕ ತಳ್ಳುವ ಮತ್ತು ನಂತರ ಶರೀರದ ವಿವಿಧ ಭಾಗಗಳಿಗೆ ಕಳುಹಿಸಲು ಸಾಕಾದಷ್ಟು ಒತ್ತಡವಿರುತ್ತದೆ. ಹೃದಯದ ವಿವಿಧ ಭಾಗಗಳ ನಿಶ್ಚಿತ ಅನುಕ್ರಮದ ಮತ್ತು ಕ್ರಮಬದ್ಧ ವಿರಾಮದಿಂದ ಕೂಡಿದ ನಿಯಮ ಬದ್ಧ ಸಂಕುಚನೆಯು ಹೃದಯಕ್ಕೆ ಸಾಕಷ್ಟು ಒತ್ತಡವನ್ನು ಒದಗಿಸುವುದಕ್ಕೆ

ಕಾರಣ. ಹೃದಯದ ಸಂಕುಚನೆಯು ಮಾಹಾಪಧಮನಿ (ಸೈನಸ್‌ವಿನೋಸಸ್)ಯಿಂದ ಪ್ರಾರಂಭವಾಗುತ್ತದೆ. ರಕ್ತವು ಶರೀರದ ಇತರ ಭಾಗಗಳಿಗೆ ಅಲ್ಲಿಂದ ಹರಿಯುತ್ತದೆ. ಅಲ್ಲಿಂದ ಮಹಾಪಧಮನಿ–ಹೃತ್ಕರಣ (ಸೈನೋಏಟ್ರಿಯಲ್)ದ ರಂಧ್ರದ ಮೂಲಕ ಹೃತ್ಕರಣಕ್ಕೆ ರಕ್ತ ಹರಿಯುತ್ತದೆ. ಆರಂಧ್ರದಲ್ಲಿರುವ ಸೂಕ್ಷ್ಮ ಪೊರೆಯ ಕವಾಟುಗಳು ಹೃತ್ಕರಣದಿಂದ ರಕ್ತವು ಮಹಾಪಧಮನಿಗೆ ಬರದಂತೆ ತಡೆಯುತ್ತವೆ. ನಂತರ ಸಂಕುಚನಾ ಅಲೆಯು ಹೃತ್ಕರಣದ ಮೇಲೆ ಹರಡುತ್ತದೆ. ರಕ್ತವನ್ನು ಹೃತ್ಕರಣ–ಹೃತ್ಕುಕ್ಷಿ (ಏಟ್ರಿಯೋವೆಂಟ್ರಿಕುಲಾರ್) ರಂಧ್ರದ ಮೂಲಕ ಹೃತ್ಕುಕ್ಷಿಗೆ ತಳ್ಳುತ್ತದೆ. ಈ ರಂಧ್ರವನ್ನು ಹತೋಟಿಯಲ್ಲಿಟ್ಟಿರುವ ಎರಡು ಟುಟಿಯಾಕಾರದ ಕವಾಟಗಳು ರಕ್ತವು ವಾಪಸ್ ಹೃತಕರಣಕ್ಕೆ ಮತ್ತು ರಕ್ತವನ್ನು ಹೃತ್ಕುಕ್ಷಿಯಿಂದ ಕೋನಸ್ ಆರ್ಟೀರಿಯೋಸಸ್‌ಗೆ ಹೋಗದಂತೆ ಮಾಡುತ್ತದೆ. ಈ



ಕ್ಲೋಮದ ಪರಿಚಲನೆ

ರೀತಿ ಕೋನಸ್ ಆರ್ಟರಿಯೋಸಸ್ ತಲುಪಿದ ರಕ್ತವು ಹೃತ್ಕುಕ್ಷಿಗೆ ಬರದಂತೆ ತಡೆಯಲು ಕೋನಸ್ ಆರ್ಟೀರಿಯೋಸಸ್‌ನ ಹತೋಟಿಯಲ್ಲಿರುವ ಎರಡು ಶ್ರೇಣಿ ಅರ್ಧ ಚಂದ್ರಾಕಾರದ ಕವಾಟುಗಳು ಸಹಾಯಕವಾಗುತ್ತವೆ. ನಂತರ ರಕ್ತವು ಕೋನಸ್ ಆರ್ಟೀರಿಯೋಸಸ್‌ನಿಂದ ಕೆಳಮಹಾಧಮನಿಗೆ ಬರುತ್ತದೆ. ಅಲ್ಲಿಂದ ಘುಪ್ಪುಸ ಮೂಳೆಯ ತೆಳುವಾದ ಪದರದಲ್ಲಿ ಸೂಕ್ಷ್ಮ ರಕ್ತವಾಹಿನಿಗಳಾಗಿ ಕವಲೊಡೆದಿರುವ ಮತ್ತು ರಕ್ತವು ಎಲ್ಲಿ ಆಮ್ಲಜನಕವನ್ನು ತೆಗೆದುಕೊಳ್ಳುತ್ತದೆಯೋ, ಆ ಅಪವಾಹಿಕ್ಲೋಮನಾಳಗಳಿಗೆ ಬರುತ್ತದೆ. ಅಲ್ಲಿಂದ ಆಮ್ಲಜನಕ ರಹಿತ ರಕ್ತ ಅಥವಾ ಶುದ್ಧರಕ್ತವು ಅಭಿವಾಹಿಕ್ಲೋಮನಾಳ (ಎಫರೆಂಟ್ ಬ್ರಾಂಕಿಯೋಲ್‌ವೆಸ್ಸಲ್)ಗಳ ಮೂಲಕ ಶರೀರದ ಇತರ ಭಾಗಗಳಿಗೆ ಚಲಿಸುತ್ತದೆ. ಪುನಃ ಹೃದಯಕ್ಕೆ ಬರುವುದಿಲ್ಲ. ರಕ್ತದ ಈ ಚಲನೆಗೆ ಕ್ಲೋಮದ ಪರಿಚಲನೆ ಎಂದು ಹೆಸರು.

(ವಿ.ಕೆ.ವಿ.)

**ಕ್ಲೋರೊಫಾರಂ:** ಮಧುರವಾಸನೆಯುಳ್ಳ ಬಣ್ಣವಿಲ್ಲದ ಒಂದು ದ್ರವ ($CHCl_3$). ಅರಿವಳಿಕವಾಗಿಯೂ ಕೊಬ್ಬು ಪದಾರ್ಥಗಳ ವಿಲೀನಕವಾಗಿಯೂ ಬಳಕೆಯಲ್ಲಿದೆ. ಜರ್ಮನಿಯಲ್ಲಿ ಜಸ್ಟಸ್ ಫಾನ್ ಲೀಬಿಗ್ (೧೮೩೧), ಅಮೆರಿಕದಲ್ಲಿ ಸ್ಯಾಮ್ಯುಯೆಲ್ ಗತ್ರಿ ಮತ್ತು ಫ್ರಾನ್ಸಿನಲ್ಲಿ ಸೂಬಿರಾ ಎಂಬ ವಿಜ್ಞಾನಿಗಳು ಇದನ್ನು ತಯಾರಿಸಿದರು. ಮೊಟ್ಟಮೊದಲ ಬಾರಿಗೆ ಇದನ್ನು ಶಸ್ತ್ರವೈದ್ಯದಲ್ಲಿ ಅರಿವಳಿಕವನ್ನಾಗಿ ಬಳಸಿದವ ಎಡಿನ್‌ಬರೋ ವಿಶ್ವವಿದ್ಯಾಲಯದ ಜೇಮ್ಸ್ ಸಿಂಪ್ಸನ್. ಇದು ಅತ್ಯಂತ ಪ್ರಬಲವಾದ ನಿಶ್ವಾಸ ಅರಿವಳಿಕಗಳಲ್ಲೊಂದು; ಗಾಳಿಯಲ್ಲಿ ಕೇವಲ ಕೆಲವೇ ಮಿಲಿಲೀಟರ್ ಪ್ರಮಾಣದಲ್ಲಿದ್ದರೂ ಜ್ಞಾನವನ್ನು ತಪ್ಪಿಸಬಹುದು. ಇದನ್ನು ಒಳಗೆಳೆದುಕೊಂಡ ಕೆಲವೇ ನಿಮಿಷಗಳಲ್ಲಿ ಜ್ಞಾನ ತಪ್ಪುತ್ತದೆ. ೧೦–೧೫ ನಿಮಿಷಗಳ ಅನಂತರ, ಓಕರಿಕೆಯಾಗಲಿ ವಾಂತಿ ಮಾಡುವುದಾಗಲೀ ಇಲ್ಲದೆ, ಅರಿವು ಮರಳಿ ಬರುತ್ತದೆ. (ಕೊಂಚ ಕಾಲ ಅಮಲೇರಿದಂತೆ ಇರಬಹುದು ಅಷ್ಟೆ). ಆದರೆ ಹೃದಯ, ರಕ್ತನಾಳ, ಯಕೃತ್, ಮೇದೋಜೀರಕ ಗ್ರಂಥಿ ಮತ್ತು ಮೂತ್ರಪಿಂಡಗಳ ಚಟುವಟಿಕೆಯನ್ನು ಕುಗ್ಗಿಸುವ ಗುಣ ಇದಕ್ಕಿರುವುದರಿಂದ ಕ್ಲೋರೊಫಾರಂನ್ನು ಬಳಸುವಾಗ ಬಲು ಎಚ್ಚರಿಕೆ ವಹಿಸಬೇಕು. ಸರಿಯಾದ ಪ್ರಮಾಣದಲ್ಲಿ ಆಮ್ಲಜನಕದೊಂದಿಗೆ ಸೇರಿಸಬೇಕಾದ ಪ್ರಮಾಣವನ್ನು ಮೀರದಂತೆ ಇದನ್ನು ಕೊಡಬೇಕು. ಇಲ್ಲದಿದ್ದರೆ ಸಾವು ಸಂಭವಿಸಬಹುದು. ಕ್ಲೋರೊಫಾರಂನ ತೀವ್ರತೆಯಿಂದಾಗಿ ಇದರ ಬದಲು ಈಥರ್ ಮತ್ತು ಇತರ ಬಗೆಯ ಅರಿವಳಿಕೆಗಳನ್ನು ಬಳಸಲಾಗುತ್ತಿದೆ.

ತಯಾರಿಕೆ : ಚಲುವೆಪುಡಿಯನ್ನು ಅಸಿಟೋನಿನೊಂದಿಗೆ ಇಲ್ಲವೆ ಆಲ್ಕೊಹಾಲಿನೊಂದಿಗೆ ಸೇರಿಸಿ ಕುದಿಸಿ ಅಥವಾ ಕಾರ್ಬನ್ ಟೆಟ್ರಕ್ಲೋರೈಡ್ ದ್ರಾವಣವನ್ನು ನೀರಿನೊಡನೆ ಬೆರೆತಿರುವ ಕಬ್ಬಿಣದ ಚೂರುಗಳ ಜೊತೆಗೆ ಸೇರಿಸಿ ಕುದಿಸಿ ಕ್ಲೋರೊಫಾರಮನ್ನು ತಯಾರಿಸುವುದುಂಟು. ಇದರ ಕುದಿಬಿಂದು ೬೧ °ಸೆ. ನೀರಿನಲ್ಲಿ ಬಲುಕಡಿಮೆ ಪ್ರಮಾಣದಲ್ಲಿ ಕರಗುತ್ತದೆ. ಆದರೆ ಆಲ್ಕೊಹಾಲ್, ಈಥರ್, ಅಸಿಟೋನ್ ಮುಂತಾದ ಸಾವಯವ ದ್ರಾವಕಗಳಲ್ಲಿ ಸುಲಭವಾಗಿ ಕರಗುವುದು. ಕ್ಲೋರೊಫಾರಂ ದಹ್ಯ ವಸ್ತುವಲ್ಲ. ಆದರೆ ಬೆಳಕು, ಉಷ್ಣ, ಆಮ್ಲಜನಕ ಅಥವಾ ಜ್ವಾಲೆಗಳಿಗೆ ಒಡ್ಡಿದಾಗ ವಿಷವಸ್ತುಗಳಾದ ಫಾಸ್ಜೀನ್, ಈಥೈಲ್ ಕ್ಲೋರೈಡ್, ಹೈಡ್ರೊಕ್ಲೋರಿಕ್ ಆಮ್ಲ ಮುಂತಾದುವುಗಳಾಗಿ ಪರಿವರ್ತಿತವಾಗುತ್ತದೆ. ಇದರಿಂದಾಗಿ ಕ್ಲೋರೊಫಾರಮನ್ನು ಸಾಮಾನ್ಯವಾಗಿ ಕಂದು ಬಣ್ಣದ ಸೀಸೆಗಳಲ್ಲಿ ಗಾಳಿ ಸೇರಲು ಅವಕಾಶವಿಲ್ಲದಿರುವ ರೀತಿಯಲ್ಲಿ ತುಂಬಿಸಿಡಬೇಕು.

ಕ್ಲೋರೊಫಾರಂ ಅನ್ನು ಕ್ಷಾರದ ಜೊತೆಯಲ್ಲಿ ಕುದಿಸಿದರೆ ಫಾರ್ಮೇಟ್ ಲವಣ ಉತ್ಪತ್ತಿಯಾಗುತ್ತದೆ. ಇದನ್ನು ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ಸೇರಿಸಿ ಕಾಯಿಸಿದರೆ ಫಾರ್ಮಿಕ್ ಆಮ್ಲವನ್ನು ಪಡೆಯಬಹುದು. ಕ್ಲೋರೋಫಾರಂನ್ನು ಅಪಕರ್ಷಿಸಿದರೆ ಮೀಥೇನ್ ಮತ್ತು ಮೀಥೈಲ್ ಕ್ಲೋರೈಡುಗಳು ಉತ್ಪತ್ತಿಯಾಗುತ್ತವೆ. ***

**ಕ್ಲೋರೊಮಾನಡೈನ:** ಪ್ರೋಟೋಜೋವ ವಂಶ, ಮ್ಯಾಸ್ಟಿಗೋಫೋರ ವರ್ಗ, ಫೈಟೊಮ್ಯಾಸ್ಟಿಜಿನ ಉಪವರ್ಗಕ್ಕೆ ಸೇರಿದ ಗಣ. ಈ ವರ್ಗದ ಮುಖ್ಯ ಲಕ್ಷಣ ಚಾಟಿಯಂತಿರುವ ಕಶಾಂಗವನ್ನು ಪಡೆದಿರುವುದು. ಇದರ ನೆರವಿನಿಂದ ಅವು ನೀರಿನಲ್ಲಿ ಈಜುತ್ತವೆ. ಫೈಟೊಮ್ಯಾಸ್ಟಿಜಿನ ಉಪ ವರ್ಗದ ಮುಖ್ಯ ಲಕ್ಷಣ ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ನೆರವಾಗುವ ಕ್ರೊಮೆಟೊಫೋರ್‌ಗಳನ್ನು ಪಡೆದಿರುವುದು. ಹೋಲೋಫೈಟಿಕ್ ರೀತಿಯ ಪೋಷಣೆಯನ್ನು ಪ್ರದರ್ಶಿಸುತ್ತವೆ. ಒಂದು ಮತ್ತು ಅಪರೂಪವಾಗಿ ಎರಡು ಕಶಾಂಗಗಳಿರುತ್ತವೆ. ಇಲ್ಲಿ ಸಂಚಿತ ಆಹಾರವು ಪಿಷ್ಟ ಅಥವಾ ಇತರ ಅಮೈಲಾಯಿಡ್ ವಸ್ತುಗಳ ರೂಪದಲ್ಲಿರುತ್ತದೆ.

ಈ ಗಣಕ್ಕೆ ಸೇರಿದ ಪ್ರಾಣಿಗಳು ಸಿಹಿನೀರಿನಲ್ಲಿ ವಾಸಿಸುತ್ತವೆ. ಅವುಗಳ ಸುತ್ತ ನವುರಾದ ಪೆಲಿಕಲ್ ಕವಚವಿದೆ. ಅನೇಕ ಹಸಿರು ವರ್ಣದ ಕ್ರೊಮೆಟೊಫೋರ್‌ಗಳು ಇರುತ್ತವೆ. ಕೆಲವೊಮ್ಮೆ ವರ್ಣರಹಿತವಾಗಿಯೂ ಇರಬಹುದು. ಇವುಗಳಲ್ಲಿ ಸಾಮಾನ್ಯವಾಗಿ ಗಂಟಲಿನ ಆಕಾರದ ರಚನೆಯೊಂದು ಇರುತ್ತದೆ. ಜಟಿಲವಾದ ಸಂಕೋಚನಾವಕಾಶ ಇದೆ. ಕೆಲವೊಮ್ಮೆ ಅಮೀಬ ರೂಪವನ್ನು ತಾಳಿ ಅಮೀಬದಂತೆ ಮಿಥ್ಯಾಪಾದಗಳನ್ನು ಉತ್ಪತ್ತಿ ಮಾಡಿ ಎಲೆ ಮುಂತಾದ ವಸ್ತುಗಳ ಮೇಲೆ ಚಲಿಸಬಹುದು. ಸಂಚಿತ ಆಹಾರವು ಎಣ್ಣೆಯ ರೂಪದಲ್ಲಿದೆ.

ವ್ಯಾಕ್ಯೊಲೇರಿಯ ಈ ಗಣಕ್ಕೆ ಒಂದು ಉದಾಹರಣೆ. ಇದು ಹೊಳವು ಹಸಿರು ಬಣ್ಣ ತೋರುತ್ತದೆ. ತನ್ನ ಜೀವನ ಚರಿತ್ರೆಯ ಬಹುಭಾಗವನ್ನು ಪಾಮೆಲ್ಲ ಅವಸ್ಥೆಯಲ್ಲಿ ಕಳೆಯುತ್ತದೆ.

(ಎಚ್.ಎಚ್.ಎಸ್.)

**ಕ್ಲೋರೋಪಿಡೆ:** ಕೀಟವರ್ಗದ ಡಿಪ್ಟರ ಗಣದಲ್ಲಿನ ಕುಟುಂಬ. ಈ ಕುಟುಂಬದ ಕೀಟಗಳನ್ನು ಗುಂಗುರುನೊಣ, ಕಾಂಡನೊಣಗಳೆಂದು ಕರೆಯಲಾಗುತ್ತದೆ. ಇವು ಸಣ್ಣ ಗಾತ್ರದ ಕೀಟಗಳು. ದೇಹದ ಮೇಲೆ ಕೂದಲಿರುವುದಿಲ್ಲ. ಬಣ್ಣ ಮಾಸಲು. ಕೆಲವು ಮಾತ್ರ ಪ್ರಕಾಶಮಾನವಾದ ಕಪ್ಪು ಅಥವ ಹಳದಿ ಬಣ್ಣವನ್ನು ಪಡೆದಿವೆ. ಹುಲ್ಲುಗಾವಲು ಪ್ರದೇಶಗಳಲ್ಲಿ ಇವು ವಾಸಿಸುತ್ತವೆ. ಈ ನೊಣಗಳ ಡಿಂಬಗಳು ಸಸ್ಯಾಹಾರಿಗಳು. ಕಾಂಡವನ್ನು ಕೊರೆದು ತಿನ್ನುತ್ತವೆ. ಕೆಲವು ಪ್ರಭೇದದ ನೊಣಗಳು ಧಾನ್ಯ ಬೆಳೆಗಳ ಪೀಡೆಗಳೆನಿಸಿವೆ. ಕೆಲವು ಕಸಕಡ್ಡಿಗಳನ್ನು ತಿಂದು ಶುಚಿಕಾರಕಗಳಾಗಿವೆ. ಕೆಲವು ಜಾತಿಯ ಪರಾವಲಂಬಿಗಳು ಪರಕೀಯಕೀಟಗಳನ್ನು ತಿನ್ನುವ ಮಾಂಸಾಹಾರಿಗಳು. ಹಿಪ್ಪಲೇಟಿಸ್ ಜಾತಿಯ ನೊಣಗಳು ಕೊಳೆಯುವ ಸಸ್ಯಪದಾರ್ಥ, ಮಲ, ಸಗಣಿ ತಿಂದು ಬದುಕುತ್ತವೆ. ಕೀವು ಮತ್ತು ರಕ್ತವನ್ನು ಸಹ ಭಕ್ಷಿಸುವುವು. ಫ್ಯೂಸಿಯೊ, ಫ್ಲಾವಿಪಸ್, ಫ್ಲೆಬೀಜಸ್ ಪ್ರಭೇದಗಳು ಪ್ರಾಣಿ ಮತ್ತು ಮನುಷ್ಯನ ಕಣ್ಣುಗಳಿಂದ ಆಕರ್ಷಿತವಾಗಿ, ಕಣ್ಣಿನ ಬಳಿಯೇ ಹಾರಾಡುತ್ತಿರುತ್ತವೆ.

ಕಾರಣ, ಕಣ್ಣು ನೊಣಗಳೆಂಬ ಹೆಸರಿದೆ. ಇವು ಹಲವಾರು ಬಗೆಯ ಕಣ್ಣುರೋಗಗಳನ್ನು ಹರಡುತ್ತವೆ.

***

**ಕ್ವ್ಯಾಗ:** ದಕ್ಷಿಣ ಆಫ್ರಿಕದ ಬೃಹದ್ ಮೈದಾನಗಳಲ್ಲಿ ವಾಸಮಾಡಿಕೊಂಡಿದ್ದ ಒಂದು ಪ್ರಾಣಿ. ಈಗ ನಿರ್ವಂಶವಾಗಿದೆ. ವೈಜ್ಞಾನಿಕ ನಾಮ ಈಕ್ವಸ್ ಕ್ವ್ಯಾಗ. ಜೀಬ್ರ, ಕುದುರೆ, ಕತ್ತೆಗಳನ್ನೊಳಗೊಂಡ ಈಕ್ವಿಡೆ ಕುಟುಂಬಕ್ಕೆ ಸೇರಿದೆ. ನೋಡಲು ಹೆಚ್ಚು ಕಡಿಮೆ ಜೀಬ್ರದಂತೆಯೆ ಇತ್ತು. ಆದರೆ ದೇಹದ ಮೇಲಿನ ಪಟ್ಟೆಗಳು, ಮುಖ, ಕತ್ತು ಮತ್ತು ಭುಜಗಳ ಬಳಿ ಮಾತ್ರ ಪ್ರಮುಖವಾಗಿದ್ದುವು. ಬೆನ್ನು ಮತ್ತು ಪೃಷ್ಠಗಳ ಮೇಲಾಗಲೀ ಕಾಲುಗಳ ಮೇಲಾಗಲೀ ಪಟ್ಟೆಗಳಿರಲಿಲ್ಲ. ಆದರೂ ಕೆಲವರ ಅಭಿಮತದ ಪ್ರಕಾರ ಆಫ್ರಿಕದ ಎಲ್ಲೆಡೆಯಲ್ಲೂ ಕಾಣಬರುವ ಬರ್ಚೆಲ್ಸ್ ಜೀಬ್ರದ (ಈಕ್ವಸ್ ಬರ್ಚೆಲೈ) ಅತಿ ದಕ್ಷಿಣ ರೂಪ ಇದು. ತಲೆ, ಕತ್ತು ಮತ್ತು ಬೆನ್ನು ಭಾಗಗಳ ಬಣ್ಣ ಕೆಂಪುಮಿಶ್ರಿತ ಕಂದು, ಬಿಳಿಯ ಬಣ್ಣದ ಪಟ್ಟೆಗಳು ತಲೆ ಮತ್ತು ಕತ್ತಿನ ಬಳಿ ಸ್ಪಷ್ಟವಾಗಿದ್ದು ದೇಹದ ಹಿಂಭಾಗದೆಡೆಗೆ ಸಾಗುತ್ತ ಮಸಕಾಗುತ್ತಿದ್ದುವು. ಉದರ ಭಾಗ, ಕಾಲು ಮತ್ತು ಬಾಲ ಹೆಚ್ಚು ಕಡಿಮೆ ಬೆಳ್ಳಗಿದ್ದುವು. ಪಟ್ಟೆಗಳಿರಲಿಲ್ಲ. ಜೀಬ್ರದಲ್ಲಿರುವಂತೆಯೆ ಇವುಗಳ ಕತ್ತಿನ ಮೇಲೂ ಆಯಾಲಿತ್ತು. ಒಂದು ಕಾಲದಲ್ಲಿ ದಕ್ಷಿಣ ಆಫ್ರಿಕದ ಹುಲ್ಲುಗಾವಲುಗಳಲ್ಲಿ ದೊಡ್ಡಗುಂಪುಗಳಲ್ಲಿ ಅಲೆದಾಡುತ್ತಿದ್ದ ಕ್ವ್ಯಾಗ ಅಲ್ಲಿನ ಸಿಂಹಗಳ ಪ್ರಮುಖ ಹಾಗೂ ಅಚ್ಚುಮೆಚ್ಚಿನ ಆಹಾರವಾಗಿತ್ತು. ಸಿಂಹಗಳ ಹಾಗೂ ದಕ್ಷಿಣ ಆಫ್ರಿಕದ ಮೂಲವಾಸಿ ಜನಾಂಗಗಳ ಬಾಯಿಗೆ ತುತ್ತಾಗಿ ೧೮೭೦ರ ವೇಳೆಗೆ ತನ್ನ ಸ್ವಾಭಾವಿಕ ನೆಲೆಗಳಲ್ಲಿ ಇದು ನಿರ್ವಂಶವಾಯಿತು. ಆಫ್ರಿಕಕ್ಕೆ ಕಾಲಿಟ್ಟ ಬಿಳಿಯರು ತಮ್ಮ ಸೇವಕರ ಮತ್ತು ದೇಶೀ ಕೂಲಿಗಳ ಆಹಾರಕ್ಕೆಂದು ಇವನ್ನು ಬೇಟೆಯಾಡಿದುದೂ ಕ್ವ್ಯಾಗ ನಶಿಸಿಹೋಗಲು ಪ್ರಮುಖ ಕಾರಣವಾಯಿತು. ಆಮ್‌ಸ್ಟರ್‌ಡ್ಯಾಮಿನ ಆರ್ಟಿಸ್ ಪ್ರಾಣಿ ಸಂಗ್ರಹಾಲಯದಲ್ಲಿ ಬದುಕುಳಿದಿದ್ದ ಏಕೈಕ ಕ್ವ್ಯಾಗವೊಂದು ೧೮೮೩ರಲ್ಲಿ ಸತ್ತುಹೋಯಿತು.

***

**ಕ್ಷಯ:** ಮೈಕೋಬ್ಯಾಕ್ಟೀರಿಯಂ ಟ್ಯೂಬರ್‌ಕುಲೋಸಿಸ್ ಎಂಬ ದಂಡಾಣುವಿನಿಂದ ಬರುವ ಸೋಂಕು ಕಾಯಿಲೆ (ಟ್ಯೂಬರ್‌ಕ್ಯುಲೋಸಿಸ್.) ಇದು ಆನುವಂಶೀಯ ರೋಗವಲ್ಲ.

ಮಾನವ ಕ್ಷಯರೋಗವನ್ನು ಸಾವಿರಾರು ವರ್ಷಗಳಿಂದ ಬಲ್ಲ. 5,000 ವರ್ಷಗಳ ಹಿಂದೆ ಈಜಿಪ್ಟಿನಲ್ಲಿನ ರಕ್ಷಿಸಲ್ಪಟ್ಟ ಮೃತದೇಹಗಳು ಕ್ಷಯರೋಗದ ಚಿಹ್ನೆಗಳನ್ನು ತೋರಿಸಿವೆ. ಚೀನ ದೇಶದ ಪ್ರಾಚೀನ ಸಾಹಿತ್ಯದಲ್ಲಿ ಕ್ಷಯರೋಗವನ್ನು ನಿಕಟವಾಗಿ ಹೋಲುವ ಲಾವೋಪಿಂಗ್ ಎಂಬ ಫುಪ್ಪುಸರೋಗವನ್ನು ವಿವರಿಸಲಾಗಿದೆ. 2,000 ವರ್ಷಗಳಿಗೂ ಹಿಂದಿನದಾದ ಋಗ್ವೇದದಲ್ಲಿ ಚಿಕಿತ್ಸೆಗೆ ಕ್ಷಯ ಸಂಬಂಧಿಸಿದಂತೆ ಒಂದು ಮಂತ್ರ ನಿವೇದಿತವಾಗಿದೆ. ನಮ್ಮ ಪ್ರಾಚೀನ ಆಯುರ್ವೇದ ಶಸ್ತ್ರಚಿಕಿತ್ಸಕ ಸುಶ್ರುತ ಈ ರೋಗವನ್ನು ವಿವರಿಸಿದ್ದನಲ್ಲದೆ ಅದರ ಚಿಕಿತ್ಸೆ ಬಹು ಕಷ್ಟವೆಂಬುದನ್ನು ಗಮನಿಸಿದ್ದ ಕೂಡ. ಗ್ರೀಕರು ಈ ರೋಗಕ್ಕೆ ಥೈಸಿಸ್ ಎಂಬ ಶಬ್ದವನ್ನು ಉಪಯೋಗಿಸಿದ್ದರು. 1650ರಲ್ಲಿ ಸಿಲ್ವಿಯಸ್ ಎಂಬಾತ ಥೈಸಿಸ್ಸಿನಿಂದ ಮೃತರಾದವರ ಫುಪ್ಫುಸಗಳಲ್ಲಿ ಗಡಸಾದ ಸಣ್ಣಗಂಟುಗಳನ್ನು ಗಮನಿಸಿ ಅವನ್ನು ಟ್ಯೂಬರ್‌ಕಲುಗಳೆಂದು ಕರೆದ. ಕ್ರಮೇಣ ಈ ರೋಗಕ್ಕೆ ಟ್ಯೂಬರ್‌ಕ್ಯುಲೋಸಿಸ್ (ಕ್ಷಯ) ಎಂದು ಹೆಸರಾಯಿತು. ಅನಂತರ ವೀರ್ಶೊ ಮತ್ತು ವಿಲ್ಲೆಮಿನ್ ಎಂಬವರು ಕ್ಷಯರೋಗ ಪ್ರಾಣಿಯಿಂದ ಪ್ರಾಣಿಗೂ, ಮನುಷ್ಯನಿಂದ ಪ್ರಾಣಿಗೂ ಒಯ್ಯಲ್ಪಡಬಹುದೆಂಬುದನ್ನು ತೋರಿಸಿ ಇದರ ಸಾಂಕ್ರಾಮಿಕ ಸ್ವಭಾವವನ್ನು ದೃಢಪಡಿಸಿದರು.

[illegible]

| [illegible] | | [illegible] | | [illegible] |
|---|---|---|---|---|
| [illegible] | [illegible] | [illegible] | | [illegible] |
| [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | |
| [illegible] | [illegible] | [illegible] | | |
| [illegible] | [illegible] | | [illegible] | |
| [illegible] | | | | |

ಪ್ರಗತಿ ಹೊಂದುತ್ತಿರುವ ಬಹುಸಂಖ್ಯೆಯ ಬಡದೇಶಗಳ ಒಂದು ಮಹತ್ತರವಾದ ಸಾರ್ವಜನಿಕ ಆರೋಗ್ಯದ ಪ್ರಶ್ನೆ ಕ್ಷಯರೋಗ. ಆರ್ಥಿಕವಾಗಿ ಹೆಚ್ಚು ಮುಂದುವರಿದಿರುವ ಪಾಶ್ಚಾತ್ಯ ದೇಶಗಳು ಹೆಚ್ಚು ಒಳ್ಳೆಯ ಪರಿಸ್ಥಿತಿಯಲ್ಲಿದ್ದರೂ ಯಾವ ದೇಶದಲ್ಲೂ ಇನ್ನೂ ಕ್ಷಯರೋಗವನ್ನು ನಿರ್ಮೂಲ ಮಾಡುವುದಿರಲಿ, ಹತೋಟಿಯಲ್ಲಿಡುವುದಕ್ಕೂ ಆಗಿಲ್ಲ. ಈಚಿನ ದಶಕಗಳಲ್ಲಿ ಗೋಚರಿಸಿರುವ ಹೆಚ್‌ಐವಿ ಸೋಂಕು, ಏಡ್ಸ್ ಕಾಯಿಲೆಯಿಂದಾಗಿ ದೇಹದ ಪ್ರತಿರೋಧಕ ಶಕ್ತಿಗೆ ಭಂಗ ಉಂಟಾಗುವುದರಿಂದಾಗಿ ಕ್ಷಯ ರೋಗದ ಬೆಳೆವಣಿಗೆ ವಿಶೇಷವಾಗಿ ಗೋಚರಿಸ ತೊಡಗಿದೆ. ಲೋಕದಲ್ಲೆಲ್ಲ 2 ಕೋಟಿ ಜನರು ತೀವ್ರವಾದ ಕ್ಷಯದಿಂದ ನರಳುತ್ತಿದ್ದಾರೆಂದೂ ಅವರಲ್ಲಿ 10–25 ಲಕ್ಷ ಜನರು ಪ್ರತಿವರ್ಷವೂ ಸಾಯುತ್ತಿದ್ದಾರೆಂದೂ ಅಂದಾಜು ಮಾಡಲಾಗಿದೆ. ಭಾರತ ಒಂದರಲ್ಲೇ ಸುಮಾರು 80 ಲಕ್ಷ ಕ್ಷಯರೋಗಿಗಳಿದ್ದು 20 ಲಕ್ಷ ಜನ ಸೋಂಕುಂಟು ಮಾಡಬಲ್ಲವರಾಗಿ ತಮ್ಮ ಸುತ್ತಮುತ್ತ ಆರೋಗ್ಯವಾಗಿರುವ ಜನಕ್ಕೆ ಸೋಂಕನ್ನು ಹರಡುತ್ತಿರುತ್ತಾರೆ. ಪ್ರತಿ ವರ್ಷ 20 ಲಕ್ಷ ಜನ ಕ್ಷಯ ರೋಗ ಹೊಂದುತ್ತಿದ್ದಾರೆ.

ಕ್ಷಯರೋಗಾಣು: ಕ್ಷಯರೋಗ ಅನೇಕ ವರ್ಷಗಳ ಪರ್ಯಂತ ದೀರ್ಘಕಾಲಿಕವಾಗಿ ವ್ಯಾಪಿಸುವ ಸಾಂಕ್ರಾಮಿಕ ರೋಗ. ರಾಬರ್ಟ್‌ಕಾಕ್ ಎಂಬಾತ ಕ್ಷಯದ ದಂಡಾಣುಜೀವಿಯನ್ನು ಮೊದಲು ಗುರುತಿಸಿದ (1882). ಇದರ ಉದ್ದ 2 ಮೈ. ಮತ್ತು ಅಗಲ 0.5 ಮೈ. ಇದನ್ನು ಸಾಧಾರಣ ಬಣ್ಣಗಳಿಂದ ಸುಲಭವಾಗಿ ಅಭಿರಂಜಿಸಲು (ಸ್ಟೇನ್) ಸಾಧ್ಯವಿಲ್ಲ. ಆದರೆ ಒಂದು ಸಾರಿ ಇದು ಅಭಿರಂಜಿತವಾದರೆ ಇದನ್ನು ಸಾರ ಆಮ್ಲ ಅಥವಾ ಮದ್ಯಸಾರದಿಂದ ಅಳಿಸುವುದು ಸಾಧ್ಯವಿಲ್ಲ. ಅಭಿರಂಜಿಸುವ ವಿಧಾನಕ್ಕೆ ಝೀಲ್ ನೀಲ್‌ಸನ್ನನ ಕ್ರಮ ಎಂದು ಹೆಸರು. ಈ ರೀತಿಯಲ್ಲಿ ಅಭಿರಂಜಿಸಿದಾಗ ಸೂಕ್ಷ್ಮದರ್ಶಕದಲ್ಲಿ ಕ್ಷಯದ ದಂಡಾಣುಗಳು ಅನೇಕ ಚುಕ್ಕೆಗಳಿರುವ ಗುಲಾಬಿ ಬಣ್ಣದ ಕಡ್ಡಿಗಳಂತೆ ಕಾಣುತ್ತವೆ. ಇದೇ ರೀತಿ ಹೊರತೋರಿಕೆಗೆ ಕಾಣಬರುವ ಹಲವಾರು ದಂಡಾಣುಜೀವಿಗಳಿವೆ. ಅವುಗಳಲ್ಲಿ ಕೆಲವು ಮನುಷ್ಯನಿಗೆ ರೋಗಕಾರಕವಾದುವು. ಮತ್ತೆ ಕೆಲವು ರೋಗಕಾರಕವಲ್ಲದುವು. ಅಭಿರಂಜನ ವಿಧಾನ, ಬೆಳೆಯುವ ವಿಧಾನ, ಹಸು, ಹಕ್ಕಿಗಳು, ಮೊಲಗಳು ಮತ್ತು ಗಿನಿ ಇಲಿಗಳಿಗೆ ಸೋಂಕು ಉಂಟುಮಾಡುವ ರೀತಿ – ಮುಂತಾದುವುಗಳಿಂದ ಈ ದಂಡಾಣುಗಳನ್ನು ಪ್ರತ್ಯೇಕಿಸಿ ತಿಳಿಯುವುದು ಸಾಧ್ಯ. ರೋಗಕಾರಕ ದಂಡಾಣುಗಳಲ್ಲೂ ಹಲವಾರು ಬಗೆಗಳಿವೆ. ಅವುಗಳಲ್ಲಿ ಕೆಲವು ಮನುಷ್ಯನಿಗೆ ಮತ್ತೆ ಹಲವು ಜಾನುವಾರು ಹಾಗೂ ಹಕ್ಕಿಗಳಿಗೆ ಸೋಂಕನ್ನು ಉಂಟುಮಾಡುತ್ತವೆ. ಮನುಷ್ಯನಿಗೆ ಸೋಂಕು ಉಂಟು ಮಾಡುವುದರಲ್ಲಿ ಮಾನವಪ್ರರೂಪ ಎಂಬ ಹೆಸರಿನ ದಂಡಾಣು ಪ್ರಧಾನವಾದುದು. ಅನಂತರದ್ದು ಜಾನುವಾರು ಪ್ರರೂಪ ಮತ್ತು ಕಡೆಯದು ಪಕ್ಷಿ ಹಾಗೂ ಜಲಚರ ಪ್ರರೂಪ.

ಕ್ಷಯರೋಗದ ಸಾಂಕ್ರಾಮಿಕ ಸ್ವಭಾವ ಬಹುಮುಂಚೆಯೇ ತಿಳಿದುಬಂದಿದ್ದರೂ ಅದರ ಕರ್ತೃವನ್ನು ಸೂಕ್ಷ್ಮದರ್ಶಕದ ಉಪಜ್ಞೆಯಾದ ಮೇಲೆಯೇ ತಿಳಿಯಬಹುದಾಯಿತು. ಕ್ಷಯದಂಡಾಣುಗಳಲ್ಲಿ ಪ್ರಧಾನವಾಗಿ ಮೂರು ಪ್ರರೂಪಗಳಿವೆ–ಮಾನವ ಸಂಬಂಧವಾದುದು. ಪಶುಸಂಬಂಧವಾದದ್ದು ಮತ್ತು ಪಕ್ಷಿಸಂಬಂಧವಾದದ್ದು. ಪಶುಸಂಬಂಧ ಪ್ರರೂಪ ಪ್ರಧಾನವಾಗಿ ಪಶುಗಳಲ್ಲೂ ಪಕ್ಷಿಸಂಬಂಧವಾದದ್ದು ಪಕ್ಷಿಗಳಲ್ಲೂ ರೋಗವನ್ನು ಉಂಟುಮಾಡುತ್ತವೆ. ಮಿಕ್ಕ ಬೇರೆ ವಿಧಗಳ ದಂಡಾಣುಗಳು ಪ್ರಮುಖವಲ್ಲದುವು. ಅವನ್ನು ಅನೇಕ ವೇಳೆ ಅಲಾಕ್ಷಣಿಕ ಮೈಕೊಬ್ಯಾಕ್ಟೀರಿಯಗಳೆಂದು ಕರೆಯುವುದುಂಟು.

ಕ್ಷಯರೋಗಾಣುಗಳು ಮಾನವನ ಅಥವಾ ಪ್ರಾಣಿಗಳ ದೇಹದಲ್ಲಿ ಮಾತ್ರ ಇಲ್ಲವೇ ಪ್ರಯೋಗಶಾಲೆಯಲ್ಲಿ ವಿಶಿಷ್ಟ ಪೌಷ್ಟಿಕಾಂಶಗಳನ್ನೊಳಗೊಂಡ ಮಾಧ್ಯಮ ವಸ್ತುಗಳಲ್ಲಿ ಮಾತ್ರ ವೃದ್ಧಿಸಿ ಏಳಿಗೆ ಹೊಂದುತ್ತವೆ. ಹೊರ ವಾತಾವರಣದಲ್ಲಿ ಏಗಲಾರವಾದರೂ ಕೊಳಚೆ ಪ್ರದೇಶದ ಕತ್ತಲು ಮತ್ತು ಶೈತ್ಯ ತುಂಬಿದ ಮನೆಗಳಲ್ಲಿ ಅವು ವಾರಗಟ್ಟಲೆ, ತಿಂಗಳುಗಟ್ಟಲೆ ಜೀವಂತವಾಗಿರುವಷ್ಟು ಕಷ್ಟಸಹಿಷ್ಣುಗಳು. ಬಿಸಿಲು, ಅತಿನೇರಿಳೆ ಕಿರಣಗಳು ಮತ್ತು ಕುದಿಸುವಿಕೆ ಅವನ್ನು ಬೇಗ ಕೊಲ್ಲುತ್ತವೆ. ಕ್ರಿಮಿನಾಶಕಗಳಾದರೋ ಅವನ್ನು ನಾಶಮಾಡಲು ಕೆಲವು ಗಂಟೆಗಳನ್ನೇ ತೆಗೆದುಕೊಳ್ಳುತ್ತವೆ.

ಸೋಂಕು: ಕ್ಷಯ ದಂಡಾಣು ದೇಹದ ಒಳಹೋಗುವುದಕ್ಕೆ ಸೋಂಕು ಎಂದು ಹೆಸರು. ಕ್ಷಯರೋಗಿ ಕೆಮ್ಮಿದಾಗ ಮತ್ತು ಸೀನಿದಾಗ ಹೊರಹೊರಡಿಸುವ ಸಣ್ಣ ಕಫದ ತುಂತುರುಗಳಿಂದ ಈ ರೋಗಾಣುಗಳು ಮತ್ತೊಬ್ಬನ ದೇಹದ ಒಳಹೋಗುತ್ತವೆ. ಇದಲ್ಲದೆ ಸೋಂಕು ಜಠರ ಮತ್ತು ಕರುಳಿನ ಮೂಲಕವೂ ಆಗಬಹುದು. ಅಂದರೆ ಆರೋಗ್ಯವಾಗಿರುವ ವ್ಯಕ್ತಿ ಕ್ಷಯರೋಗಿಯ ಸಂಪರ್ಕದಿಂದ ಕಲುಷಿತವಾದ ಆಹಾರವನ್ನು ಸೇವಿಸಿದಾಗಲೂ ಇದು ಉಂಟಾಗುವುದು. ಅಪೂರ್ವವಾಗಿ ರೋಗಾಣುಗಳು ಚರ್ಮದ ಕೊಯ್ತ ಮತ್ತು ಗಾಯಗಳು, ಟಾನ್ಸಿಲ್, ಕಣ್ಣುಗುಡ್ಡೆಯ ಮೇಲುಪೊರೆ, ಜನನೇಂದ್ರಿಯಗಳು ಮುಂತಾದುವುಗಳ ಮೂಲಕವೂ ದೇಹದ ಒಳಹೋಗಬಹುದು.

ಕಫವೇ ಅತಿ ಸಾಮಾನ್ಯವಾಗಿ ಸೋಂಕಿನ ಮೂಲವಾಗಿರುವುದರಿಂದ ಜನ ಸಿಕ್ಕಿದ ಕಡೆ ಉಗುಳುವುದನ್ನು ನಿಷೇಧಿಸುವ ಆರೋಗ್ಯಮಾರ್ಗಗಳೂ, ಕೆಮ್ಮುವಾಗ ಮತ್ತು

ಸೀನುವಾಗ ಕರವಸ್ತ್ರದಿಂದ ಬಾಯನ್ನು ಮುಚ್ಚಿಕೊಳ್ಳುವುದೂ ಬಲು ಮುಖ್ಯ. ಒಂದು ಘನ ಸೆಂಟಿಮೀಟರ್ ಕಫದಲ್ಲಿ 10 ಲಕ್ಷಕ್ಕಿಂತಲೂ ಹೆಚ್ಚು ರೋಗಾಣುಗಳು ಇರಬಹುದು ಮತ್ತು ಒಂದು ಸಣ್ಣ ತುಂತುರಿನಲ್ಲಿ ಸಹ ನೂರಾರು ಇರಬಹುದು. ರೋಗಿ ಕೆಮ್ಮುತ್ತಿರುವ ಅಥವಾ ಸೀನುತ್ತಿರುವ ನೇರ ಪಥದಲ್ಲೇ ಇರುವ ಆರೋಗ್ಯವಾದ ವ್ಯಕ್ತಿಯ ಶ್ವಾಸಮಾರ್ಗ ಮತ್ತು ಫುಪ್ಫುಸಗಳಿಗೆ ನೇರವಾಗಿ ರೋಗಾಣುಗಳಿರುವ ತುಂತುರುಗಳು ಸಾಮಾನ್ಯವಾಗಿ ಹೋಗುತ್ತವೆ. ಇದಕ್ಕಿಂತ ವಿರಳವಾಗಿ ಇನ್ನೂ ದೊಡ್ಡ ಗಾತ್ರದ ಕಫದ ತುಂತುರುಗಳು ನೆಲದ ಮೇಲೆ ಬಿದ್ದು ಒಣಗಿ, ಬೇಕಾಬಿಟ್ಟಿ ಕಸಗುಡಿಸಿ ದೂಳು ಹೊಡೆದಾಗ, ದೂಳಿನ ಕಣಗಳಾಗಿ ಮೇಲೇಳುತ್ತವೆ. ರೋಗಿಗಳಿರುವ ಮನೆಗಳಲ್ಲಿ ಇಂಥ ದೂಳು ಉಚ್ಛ್ವಸಿಸಲ್ಪಡಬಹುದು ಮತ್ತು ಬಳಸು ಮಾರ್ಗದಿಂದ ಸೋಂಕನ್ನು ಉಂಟುಮಾಡಬಹುದು. ತಾತ್ತ್ವಿಕವಾಗಿ ಮಾನವ ದೇಹದ ಯಾವ ಭಾಗವೂ ಈ ರೋಗದಿಂದ ಮುಕ್ತವಲ್ಲ. ಆದರೂ ಫುಪ್ಫುಸಕ್ಷಯ (ಸಾಧಾರಣಕ್ಷಯ) ಮಾನವರಲ್ಲಿ ಒಟ್ಟು ಕ್ಷಯರೋಗದ 90%ಕ್ಕೂ ಹೆಚ್ಚಾಗಿದೆಯೆಂದು ಗಣಿಸಬಹುದಾಗಿದೆ.

ಸ್ವಾಭಾವಿಕ ವರ್ಣನೆ : ಸೋಂಕುಂಟಾದ ಕೂಡಲೇ ಒಳಹೋಗುವ ಈ ಅಪಾಯಕರ ಅತಿಕ್ರಮಿಯ ವಿರುದ್ಧ ದೇಹವೇನೂ ಪ್ರಬಲವಾದ ಪ್ರತಿಕ್ರಿಯೆಯನ್ನು ತೋರಿಸುವುದಿಲ್ಲ. ರೋಗಾಣುಗಳು ವರ್ಧಿಸಿ ನೂರಾಗಿ ಬೆಳೆಯುತ್ತವೆ ಮತ್ತು ಅನೇಕ ವೇಳೆ ದೇಹದ ನಾನಾ ಭಾಗಗಳಿಗೆ ತಮ್ಮನ್ನು ಸಲೀಸಾಗಿ ಒಯ್ಯುವಂಥ ರಕ್ತಕಣಗಳ (ದೈತ್ಯಕಣಗಳು) ಒಳಹೋಗುತ್ತವೆ. ಆದರೆ ಸೋಂಕುಂಟಾದ 6–8 ವಾರಗಳ ಮೇಲೆ ರೋಗಾಣುಗಳು ದೇಹದ ಯಾವ ಅಂಗಗಳಲ್ಲಿದ್ದರೂ ದೇಹ ಅವನ್ನು ಅಲ್ಲಲ್ಲೆ ನಿರ್ಬಂಧಿಸುವುದರಲ್ಲಿ ಸಫಲವಾಗುತ್ತದೆ. ಅದೇ ಕಾಲದಲ್ಲಿ ರೋಗಾಣುಗಳು ದೇಹದ ಜೀವಾಣುಗಳನ್ನು ನಾಶಮಾಡಲು ಪ್ರಾರಂಭಿಸಿ ಅಲ್ಲಿ ಒಂದು ವಿಶಿಷ್ಟ ಮಾದರಿಯ ರೋಗಸೂಚಕ ಪ್ರತಿಕ್ರಿಯೆಯನ್ನು ಉಂಟುಮಾಡುತ್ತವೆ. ಈ ಪ್ರತಿಕ್ರಿಯೆಯ ಸ್ಥಳದ ಮಧ್ಯಭಾಗದಲ್ಲಿ ಕೆಲವು ಮೃತಜೀವಾಣುಗಳೂ ಬಹುಬೇಗ ವೃದ್ಧಿಯಾಗುತ್ತಿರುವ ಕ್ಷಯ ರೋಗಾಣುಗಳೂ ಪರಸ್ಪರ ಬೆರಕೆಯಾಗಿದ್ದು ಸುತ್ತಲೂ ಊತಗೊಂಡ ಒಂದು ವಲಯ ಉಂಟಾಗುತ್ತದೆ. ಈ ಭಾಗದ ಲಸಿಕೆ ಗ್ರಂಥಿ ಗಳಲೆ ಕಟ್ಟಿಕೊಂಡು ನೋವುಂಟು ಮಾಡಬಹುದು. ಊತಗೊಂಡ ಭಾಗ ಮತ್ತು ಗಳಲೆ ಇವು ಎರಡೂ ಪ್ರಾಥಮಿಕ ಲಕ್ಷಣಗಳು. ಈ ಸಮಯದಲ್ಲಿ ವ್ಯಕ್ತಿ ಇನ್ನೇನೂ ರೋಗಲಕ್ಷಣಗಳನ್ನು ತೋರಿಸದೆ ಇರಬಹುದು. ಇಲ್ಲವೇ ಕೆಲವು ದಿನ ಸ್ವಲ್ಪ ಜ್ವರ ಇತ್ಯಾದಿಗಳು ಮಾತ್ರ ಇರಬಹುದು.

ಕ್ಷಯಪೀಡಿತರಾದ ಬಹುವ್ಯಕ್ತಿಗಳಲ್ಲಿ ಈ ಪ್ರಾಥಮಿಕ ಲಕ್ಷಣ ಸ್ವಲ್ಪಕಾಲವಾದ ಮೇಲೆ ತಾನಾಗಿಯೇ ಗುಣವಾಗುತ್ತದೆ. ಕೆಲವರಲ್ಲಿ ಅದು ಹರಡುತ್ತಲೇ ಇರುತ್ತದೆ ಮತ್ತು ರೋಗಿಗೆ ಗುಣಮುಖನಾಗಲು ಚಿಕಿತ್ಸೆ ಅಗತ್ಯ. ಇಲ್ಲದಿದ್ದರೆ ಆತ ಮೃತನಾಗುತ್ತಾನೆ. ಇದು ರೋಗಾಣುಗಳು ಅಗಾಧ ಮೊತ್ತದಲ್ಲಿರುವುದರಿಂದಲೂ ವ್ಯಕ್ತಿಯ ರೋಗ ನಿರೋಧಕಶಕ್ತಿ ಕಡಿಮೆಯಾಗಿರುವುದರಿಂದಲೂ ಅಥವಾ ಎರಡರಿಂದಲೂ ಉಂಟಾಗುತ್ತದೆಂದು ಹೇಳಲಾಗಿದೆ. ಗುಣಮುಖರಾದವರಲ್ಲಿ ಕ್ಷಯರೋಗಾಣುಗಳು ಕೂಡಲೇ ಸಾಯುವುದಿಲ್ಲ. ದೇಹದ ಜೀವಾಣುಗಳ ನಡುವೆ ರೋಗಾಣುಗಳು ವೃದ್ಧಿಯಾಗದೆ, ಜೀವಂತವಾಗಿರುವ ಕಿಂಚಿತ್ಸೂಚನೆಯೂ ಇಲ್ಲದೆ ಬಹುಕಾಲ ಇರಬಹುದು. ಹಲವಾರು ವರ್ಷಗಳ ಅನಂತರ ವ್ಯಕ್ತಿ ದೈಹಿಕ ಘರ್ಷಣೆಗೆ ಒಳಪಟ್ಟಾಗಲೋ, ಆರೋಗ್ಯ ಸ್ಥಿತಿ ಕೆಳಮಟ್ಟಕ್ಕೆ ಇಳಿದಾಗಲೋ ಮೇಲಿಂದಮೇಲೆ ಅಗಾಧ ಮೊತ್ತದಲ್ಲಿ ಸೋಂಕುಗಳನ್ನು ಹೊಸತಾಗಿ ಪಡೆದಾಗಲೋ, ಈ ರೋಗಾಣುಗಳು ಪುನಃ ವೃದ್ಧಿಯಾಗುವುದಕ್ಕೆ ಪ್ರಾರಂಭಿಸಿ ಊತ ಮೊದಲಾದುವು ಪುನಃ ಕಾಣಿಸಿಕೊಳ್ಳುತ್ತವೆ. ಜೀವಾಣುಗಳ ನಾಶ ಫುಪ್ಫುಸದಲ್ಲಿ ಡೊಗರನ್ನು ಉಂಟುಮಾಡಲು ಕಾರಣವಾಗಬಹುದು. ರಕ್ತನಾಳಗಳ ಕೊರೆತದಿಂದ ಕಫದಲ್ಲಿ ರಕ್ತ ಬೀಳಬಹುದು ಇಲ್ಲವೇ ಫುಪ್ಫುಸಕ್ರಿಯೆಯ ನಾಶದಿಂದಾಗಿ ಉಸಿರು ಹತ್ತಿ ಹತ್ತಿ ಬರುವಂತೆ ತೋರಬಹುದು. ಈ ಸ್ಥಿತಿಯಲ್ಲಿ ಪರಿಣಾಮಕಾರಿಯಾದ ಚಿಕಿತ್ಸೆ ಮಾಡದೇ ಇದ್ದರೆ ರೋಗ ಹೆಚ್ಚುಹೆಚ್ಚಾಗಿ ಹಬ್ಬುವುದಕ್ಕೆ ಪ್ರಾರಂಭಿಸುತ್ತದೆ.

ಸೋಂಕು ಮತ್ತು ಪ್ರಾಥಮಿಕ ಲಕ್ಷಣ ಸಾಧಾರಣವಾಗಿ ಬಾಲ್ಯದಲ್ಲಿ ಕಂಡುಬರುತ್ತವೆ. ಈ ಪ್ರಾಯ ರೋಗ ತಾನಾಗಿಯೇ ಗುಣವಾಗುವ ರೋಗ ಘಟ್ಟವಾಗಿರುವುದರಿಂದ ಬಹುಮಕ್ಕಳು ಚಿಕಿತ್ಸೆ ಇಲ್ಲದೆಯೇ ಗುಣಮುಖರಾಗುತ್ತಾರೆ. ಆ ಮೇಲಿನ ವಯಸ್ಕರ ಕ್ಷಯ ಸಾಮಾನ್ಯವಾಗಿ ಬಾಲ್ಯ ಕಳೆದ ಮೇಲೆ ಕಾಣಬರುತ್ತದೆ. ಇದೂ ತಾನಾಗಿಯೇ ಗುಣಮುಖವಾಗಬಹುದು. ಆದರೆ ಸಾಮಾನ್ಯವಾಗಿ ಗುಣವಾಗುವುದಕ್ಕೆ ಚುರುಕಾದ ಚಿಕಿತ್ಸೆ ಬೇಕಾಗುತ್ತದೆ. ರೋಗದ ಈ ಘಟ್ಟದಲ್ಲಿ ರೋಗಿಗಳು ಬೇರೆ ಬೇರೆ ಆರೋಗ್ಯವಂತ ವ್ಯಕ್ತಿಗಳಿಗೆ ಸೋಂಕು ಅಂಟಿಸುವರು; ರೋಗಿ ಮೃತಿಹೊಂದುವುದಕ್ಕೆ (ಅಥವಾ ಗುಣವಾಗುವುದಕ್ಕೆ) ಮುಂಚೆ ಸರಾಸರಿ 5 ಆರೋಗ್ಯವಂತ ವ್ಯಕ್ತಿಗಳಿಗೆ ಸೋಂಕು ಅಂಟಿಸಬಹುದೆಂದು ಅಂದಾಜು ಮಾಡಲಾಗಿದೆ. ಚಿಕಿತ್ಸೆಗೊಂಡ ಎಲ್ಲ ರೋಗಿಗಳೂ ರೋಗ ಮರುಕಳಿಸದಂತೆ ನೋಡಿಕೊಳ್ಳಲು ಚಿಕಿತ್ಸಾ ನಂತರದ ಕ್ರಮಗಳಿಗೆ ಒಳಪಡುವುದು ಅಗತ್ಯ. ಜೀವನದ ವಿವಿಧ ಘಟ್ಟಗಳಲ್ಲಿ ಕ್ಷಯರೋಗದ ಸ್ವಾಭಾವಿಕ ವಿಕಸನವೂ ರೋಗವು ಪ್ರಬಲಿಸದಂತೆ ತೆಗೆದುಕೊಳ್ಳಬಹುದಾದ ಕ್ರಮಗಳನ್ನೂ ಇಲ್ಲಿ ಸೂಚ್ಯವಾಗಿ ಬರೆದಿದೆ.

ಸೋಂಕು ಉಂಟಾಗುವುದಕ್ಕೆ ಪೂರ್ವಭಾವಿ ಕಾಲದಲ್ಲಿ ಅದನ್ನು ಉಂಟುಮಾಡುವ ಘಟಕವಾಗಿ ಕ್ಷಯ ದಂಡಾಣು, ಆತಿಥೇಯನಾಗಿ ಮಾನವ, ಸೋಂಕು ಉಂಟಾಗುವ ಸನ್ನಿವೇಶ ಇವು ಮೂರರ ನಡುವೆ ಪರಸ್ಪರ ಪ್ರತಿಕ್ರಿಯೆ ಉಂಟಾಗುತ್ತದೆ. ಆದ್ದರಿಂದ ಉತ್ತಮವಾದ ಮನೆ, ಪರಿಶುದ್ಧವಾದ ಆವರಣ, ಉತ್ತಮ ಪೌಷ್ಟಿಕಾಂಶಗಳು, ಆರೋಗ್ಯ ಶಿಕ್ಷಣ, ವೈಯಕ್ತಿಕ ಆರೋಗ್ಯಜ್ಞಾನ, ಬಿಸಿಜಿ ಯಿಂದ ಕೃತಕ ನಿರೋಧ ಶಕ್ತಿಯ ಉತ್ಪತ್ತಿ ಇವು ಭವಿಷ್ಯದಲ್ಲಿ ರೋಗವನ್ನು ಕಡಿಮೆ ಮಾಡಬಲ್ಲುವು. ಪ್ರಾರಂಭದ ರೋಗಸೂಚಕ ಪ್ರತಿಕ್ರಿಯೆಯ ಘಟ್ಟದಲ್ಲಿ ಸಾಮೂಹಿಕ ಸಮೀಕ್ಷೆಯಿಂದ ಕ್ಷಿಪ್ರವಾಗಿ ರೋಗದ ಪತ್ತೆ ಮತ್ತು ಪ್ರಾರಂಭ ದೆಸೆಯಲ್ಲಿ ಚಿಕಿತ್ಸೆ ಇವು ಮುಖ್ಯವಾಗಿವೆ. ಪರಿಣಾಮಕಾರಿಯಾದ ಕ್ಷಯರೋಗ ನಿರೋಧಕ ಔಷಧಗಳಿಂದ ರೋಗವನ್ನು ತಡೆಗಟ್ಟುವುದು ಸಾಧ್ಯ. ಕ್ಷಯರೋಗಲಕ್ಷಣಗಳು ಕಣ್ಣಿಗೆ ಕಾಣಿಸುವ ಘಟ್ಟದಲ್ಲಿ ವ್ಯಕ್ತಿಗಳಿಗೆ ಅವರಿರುವೆಡೆಯಲ್ಲಿ ಮತ್ತು ಇತರ ರೀತಿ ಅನುಕೂಲವಾಗಿರುವಂತೆ ಒದಗಿಸಬಹುದಾದ ರೋಗನಿದಾನ ಮತ್ತು ಚಿಕಿತ್ಸಾಸೌಕರ್ಯಗಳ ಮೇಲೆ ಅವಲಂಬನೆಯೇ ಬಹುವಾಗಿದೆ.

ಸಾಂಕ್ರಾಮಿಕ ಸ್ವಭಾವ ವಿಜ್ಞಾನ: ಟ್ಯೂಬರ್‌ಕ್ಯುಲೊಸಿಸ್ ಪರೀಕ್ಷೆಯಿಂದ ಒಬ್ಬನಿಗೆ ಕ್ಷಯ ದಂಡಾಣು ಸೋಂಕು ಉಂಟಾಗಿದೆಯೇ ಇಲ್ಲವೇ ಎಂಬುದನ್ನು ಕಂಡುಕೊಳ್ಳಬಹುದು. ವ್ಯಕ್ತಿಯ ಪ್ರಕೋಷ್ಠದ ಚರ್ಮದ ಪದರಗಳೊಳಗೆ ಪಿಚಕಾರಿ ಸೂಜಿಗಳಿಂದ (ಕ್ಷಯ ರೋಗಾಣುಗಳಿಂದ ತಯಾರಿಸಿದ) ಪಿಪಿಡಿ ಎಂಬ ದ್ರಾವಣವನ್ನು ಚುಚ್ಚಿ ಸೇರಿಸಿ ಈ ಪರೀಕ್ಷೆಯನ್ನು ಮಾಡಲಾಗುತ್ತದೆ. ಈ ರೀತಿ ಪರೀಕ್ಷಿಸಿದಾಗ ಭಾರತದಲ್ಲಿ ಒಟ್ಟಾರೆ 38% ಮಂದಿಯಲ್ಲಿ ಸೋಂಕು ಕಂಡುಬಂದಿದೆ. ಪಶ್ಚಿಮದ ಬಹಳದೇಶಗಳಲ್ಲಿ ಸೋಂಕಿನ ಪ್ರಮಾಣ 15% ಅಥವಾ ಕಡಿಮೆ ಇದೆ. ಸೋಂಕಿನ ಪ್ರಮಾಣ ಲಿಂಗ, ವಯಸ್ಸುಗಳ ಪ್ರಕಾರ ಬದಲಾಗುವುದು.

ಶಿಶುಗಳಲ್ಲಿ ಕ್ಷಯದ ಸೋಂಕು ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದು ಶಾಲಾಮಕ್ಕಳು ಮತ್ತು ಯೌವನಸ್ಥರಲ್ಲಿ ಶೀಘ್ರವಾಗಿ ಹೆಚ್ಚಾಗುತ್ತ 35 ವರ್ಷ ಮತ್ತು ಮೇಲ್ಪಟ್ಟವರಲ್ಲಿ ಅತಿಹೆಚ್ಚು ಇರುತ್ತದೆ. ಪುರುಷರಿಗಿಂತ ಸ್ತ್ರೀಯರಲ್ಲಿ ಕಡಿಮೆ ಸೋಂಕು ಇರುವುದು. ಅದೃಷ್ಟವಶಾತ್ ಸೋಂಕು ಉಂಟಾದ ಪ್ರತಿವ್ಯಕ್ತಿಯಲ್ಲಿಯೂ ರೋಗ ಪ್ರಬಲಿಸುವುದಿಲ್ಲ. 38% ಸೋಂಕುಳ್ಳ ವ್ಯಕ್ತಿಗಳಲ್ಲಿ ಕೇವಲ 2% ಜನರ ಫುಪ್ಫುಸದಲ್ಲಿ ತೀವ್ರ ಕ್ಷಯರೋಗದ ಲಕ್ಷಣಗಳನ್ನು ನೋಡಬಹುದು ಮತ್ತು 0.4%ರಷ್ಟರ ಕಫದಲ್ಲಿ ಮಾತ್ರ ಕ್ಷಯದಂಡಾಣುಗಳು ಇರುತ್ತವೆ. ಭಾರತದಲ್ಲಿ (ಮತ್ತು ಇದರಂತೆಯೇ ಇರುವ ಮಿಕ್ಕ ದೇಶಗಳಲ್ಲಿ) ಕ್ಷಯರೋಗ ಚಿಕ್ಕವರಿಗಿಂತ ವಯಸ್ಕರಲ್ಲೂ, ಸ್ತ್ರೀಯರಿಗಿಂತ ಪುರುಷರಲ್ಲೂ ಹೆಚ್ಚು ವ್ಯಾಪಕವಾಗಿದೆ.

1957–58ನೆಯ ಸಾಲಿನಲ್ಲಿ ಭಾರತ ವೈದ್ಯಕೀಯ ಸಂಶೋಧನ ಮಂಡಲಿ ಈ ದೇಶದಲ್ಲಿ ಕ್ಷಯರೋಗ ಸಮಸ್ಯೆಯ ಗಾತ್ರವನ್ನು ಅರಿಯಲು ಒಂದು ರಾಷ್ಟ್ರೀಯ ಸರ್ವೇಕ್ಷಣೆ ನಡೆಸಿತು. ಮೇಲೆ ತಿಳಿಸಿರುವ ಪ್ರಮಾಣ ಅಂಶಗಳಲ್ಲದೆ ಹೊರಪಟ್ಟ ಇನ್ನೊಂದು ಸ್ವಾರಸ್ಯ ವಿಷಯವೆಂದರೆ ಕ್ಷಯರೋಗ ಅವಶ್ಯವಾಗಿ ಪಟ್ಟಣಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಲ್ಲಿ ಮಾತ್ರ ಕಂಡುಬರುವ ರೋಗವಲ್ಲವೆಂಬುದು. ಈ ರೋಗ ಹಳ್ಳಿಗಾಡಿನ ಜನರಲ್ಲಿ ಕೂಡ ಅಷ್ಟೇ ವ್ಯಾಪಕವಾಗಿದೆ. ಬಡವರಷ್ಟೇ ಪ್ರಾಯಶಃ ಐಶ್ವರ್ಯವಂತರೂ ಈ ರೋಗದಿಂದ ನರಳುತ್ತಾರೆ. ಆದರೆ ಭಾರತದಲ್ಲಿ ಹೆಚ್ಚು ಬಡವರಿರುವುದರಿಂದ ಕ್ಷಯರೋಗಿಗಳಲ್ಲೂ ಬಡವರೇ ಹೆಚ್ಚಾಗಿ ಇರುತ್ತಾರೆ. ಭಾರತದಲ್ಲಿ ದೇಶದ 80% ಜನ ಹಳ್ಳಿಗಾಡಿನಲ್ಲಿ ವಾಸಿಸುವುದರಿಂದ ಕ್ಷಯರೋಗ ಸಮಸ್ಯೆ ಇಲ್ಲಿ ಬಹುವಾಗಿ ಹಳ್ಳಿಗಾಡಿನ ಸಮಸ್ಯೆಯೇ ಎಂಬುದು ಇತ್ತೀಚೆಗೆ ಮಾತ್ರ ಸ್ಪಷ್ಟವಾಗಿದೆ.

ಪರಿಣಾಮಕಾರಿ ಚಿಕಿತ್ಸೆ ಇಲ್ಲದೆ ವಯಸ್ಕರ ಕ್ಷಯ ಮುಂದುವರಿದರೆ ರೋಗಿ ಸಾಮಾನ್ಯವಾಗಿ ಮೃತಿಹೊಂದುತ್ತಾನೆ. ಮುಖ್ಯವಾಗಿ ಈ ಕಾರಣದಿಂದಾಗಿ ಪರಿಣಾಮಕಾರಿಯಾದ ಚಿಕಿತ್ಸೆ ಇಲ್ಲದಿದ್ದ ಕಾಲದಲ್ಲಿ ಕ್ಷಯಕ್ಕೆ ಶ್ವೇತಮಾರಿ ಎಂಬ ಅಡ್ಡಹೆಸರು ಬಂದಿತು. ಆಗಿನ ಕಾಲದಲ್ಲಿ ಲೋಕದಲ್ಲಿ ಬಹುದೇಶಗಳಲ್ಲಿ ಕ್ಷಯದಿಂದಾದ ಸಾವಿನ ಮೊತ್ತ ಬಹು ಹೆಚ್ಚಾಗಿದ್ದು ಕ್ರಮೇಣ ಅದು ಕಡಿಮೆ ಆಗುತ್ತ ಬಂದದ್ದು, ಈಗ ಏಡ್ಸ್ ರೋಗದೊಟ್ಟಿಗೆ ಮತ್ತೆ ಪ್ರಜ್ವಲಿಸ ತೊಡಗಿದೆ. ಭಾರತದಲ್ಲಿ ಹಳ್ಳಿಗಾಡು ಪ್ರದೇಶಗಳಲ್ಲಿ ಒಳ್ಳೆಯ ರೋಗನಿದಾನ ಕ್ರಮಗಳಿಲ್ಲದಿರುವುದರಿಂದ ಮರಣಪ್ರಮಾಣದ ಖಚಿತ ಅಂಕೆ ಅಂಶಗಳು ದೊರಕುವುದಿಲ್ಲ. ಆದರೆ ಒಂದು ಅಂದಾಜಿನಂತೆ ಪ್ರತಿ ದಿನ 20000 ಜನ ಕ್ಷಯ ಸೋಂಕು ಪಡೆದು ಅದರಲ್ಲಿ 5000 ಜನ ಕ್ಷಯ ರೋಗ ಹೊಂದುತ್ತಾರೆ ಮತ್ತು 1000 ಸಾಯುತ್ತಾರೆ.

ಅನುಭಾವಿಕ ರೋಗಲಕ್ಷಣಗಳು : ರೋಗದ ಕಾರಣದಿಂದ ರೋಗಿ ಅನುಭವಿಸಿ ವಿವರಿಸುವ ಲಕ್ಷಣಗಳಿವು. ಕ್ಷಯರೋಗ ಬಹುವಿಧವಾದ ಅನುಭಾವಿಕ ಲಕ್ಷಣಗಳನ್ನು (ಸಿಂಪ್ಟಮ್ಸ್) ಉಂಟುಮಾಡಬಹುದು. ಮತ್ತೆ ಕೆಲವು ಕಾಲ ಯಾವ ಅನುಭಾವಿಕ ಲಕ್ಷಣಗಳೂ ಇಲ್ಲದಿರಬಹುದು. ಘುಪ್ಪುಸದ ಕ್ಷಯವೆಂದು ಸೂಚಿಸುವ ಅನುಭಾವಿಕ ಲಕ್ಷಣಗಳಲ್ಲಿ ಎರಡು ವಾರಗಳಿಗಿಂತಲೂ ಹೆಚ್ಚಾಗಿ ಕೆಮ್ಮು, ನಾಲ್ಕು ವಾರಗಳಿಗಿಂತಲೂ ಹೆಚ್ಚು ಕಾಲದ ಜ್ವರ, ಉಗುಳಿನಲ್ಲಿ ರಕ್ತ ಮತ್ತು ಎದೆನೋವುಗಳು ಮುಖ್ಯವಾದುವು. ಇತರ ರೋಗಗಳಲ್ಲಿಯಂತೆ ಕ್ಷಯರೋಗದಲ್ಲಿ ಕಾಣಬರುವ ಸಾಮಾನ್ಯ ಅನುಭಾವಿಕ ಲಕ್ಷಣಗಳೆಂದರೆ ಹಸಿವಿಲ್ಲದಿರುವಿಕೆ, ಶರೀರದ ತೂಕ ಕಡಿಮೆಯಾಗುವುದು, ಉಸಿರು ಹತ್ತಿಹತ್ತಿಬರುವುದು ಇತ್ಯಾದಿ. ಜನರು ತಾವಾಗಿಯೇ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವಂತೆ ಮಾಡುವುದೇ ಈ ಅನುಭಾವಿಕ ಲಕ್ಷಣಗಳ ಜ್ಞಾನದ ಪ್ರಾಮುಖ್ಯ.

ರೋಗನಿದಾನ : ಈಚಿನ ಬೆಳೆವಣಿಗೆಗಳು ಈ ಕಾರ್ಯವನ್ನು ಮೊದಲಿಗಿಂತ ಬಹು ಸುಲಭವಾಗಿ ಮಾಡಿರುವ ಫಲವಾಗಿ ತಜ್ಞನೇ ಮಾತ್ರವಲ್ಲದೆ ಯಾವ ವೈದ್ಯನಾದರೂ ರೋಗನಿದಾನವನ್ನು ಮಾಡಬಹುದು. ರೋಗನಿದಾನ ಸಾಮಾನ್ಯವಾಗಿ ಈ ಕೆಳಗಿನ ಅಂಶಗಳ ಮೇಲೆ ನಿಂತಿದೆ:

1. ಅನುಭಾವಿಕ ಲಕ್ಷಣಗಳ ವಿವರ; ಕೆಲವು ವೇಳೆ ಕುಟುಂಬದ ಚರಿತ್ರೆ, ಕ್ಷಯರೋಗಿಯೊಡನೆ ಕಂಡ ಹಾಗೆಯೇ ಇದ್ದ ಸಂಪರ್ಕ ಇವು ಸಹಾಯಕವಾಗಿರುತ್ತವೆ.

2. ಎದೆಯ (ಅಥವಾ ಮೂಳೆಯ) ಎಕ್ಸ್–ಕಿರಣ ಪರೀಕ್ಷೆ; ಎಕ್ಸ್‌ಕಿರಣ ಪಟಲದಲ್ಲಿ ಅದೇ ರೀತಿಯ ಛಾಯೆ ಇನ್ನೂ ಅನೇಕ ಎದೆಸಂಬಂಧವಾದ ರೋಗಗಳಲ್ಲಿ ಕಂಡು ಬರುವುದರಿಂದ ಇದು ಸೂಚಕವಾದ ರೋಗನಿದಾನವನ್ನು ಮಾತ್ರ ಒದಗಿಸುತ್ತದೆ.

3. ಸೂಕ್ಷ್ಮದರ್ಶಕದ ಸಹಾಯದಿಂದ ಕಫ ಪರೀಕ್ಷೆ, ವ್ರಣದ ಕೀವು ಪರೀಕ್ಷೆ ಇಲ್ಲವೆ ಜಠರವನ್ನು ತೊಳೆದ ನೀರಿನ ಪರೀಕ್ಷೆ; ಕ್ಷಯರೋಗಾಣುವನ್ನು ವ್ಯಕ್ತಪಡಿಸಿ ಅಂತಿಮ ರೋಗನಿದಾನವನ್ನು ಒದಗಿಸುತ್ತದೆ. ಸೂಕ್ಷ್ಮದರ್ಶಕ ಪರೀಕ್ಷೆ ನಕಾರಾತ್ಮಕವಾಗಿದ್ದರೆ ಕಫದಲ್ಲಿನ ರೋಗಾಣುಗಳನ್ನು ಪ್ರಯೋಗಶಾಲೆಯಲ್ಲಿ ಬಿತ್ತಿ ಬೆಳೆಸುವುದು ಅಗತ್ಯವಾಗಬಹುದು, ಇಲ್ಲವೇ ಪಾಲಿಮರೇಸ್ ಚೇನ್ ರಿಯಾಕ್ಷನ್ನನ್ನು ಬಳಸಿ ವೇಗ ಗತಿಯಲ್ಲಿ ಕ್ಷಯ ರೋಗಾಣುವಿನ ಇರುವಿಕೆಯನ್ನು ಪತ್ತೆ ಮಾಡಬಹುದು.

ಕಫ ನಕಾರಾತ್ಮಕ ಲಕ್ಷಣವುಳ್ಳದ್ದಾಗಿ ಎಲ್ಲ ಕ್ಷಯರೋಗಿಗಳಲ್ಲೂ ಇಲ್ಲದೆ ಇರಬಹುದು. ಆದರೆ ಅಂಥವರೇ ಸಮಾಜಕ್ಕೆ ಅತ್ಯಂತ ಅಪಾಯಕಾರಿಗಳು. ಆದ್ದರಿಂದ ವೈದ್ಯ ಅನೇಕ ಕಡೆಗಳಿಂದ ವಿಷಯಗಳನ್ನು ಸಂಗ್ರಹಿಸುವುದೇ ಅಲ್ಲದೆ ಕೆಲವು ವೇಳೆ ಸ್ವಲ್ಪ ಕಾಲ ಕಳೆದ ಅನಂತರ ನಿಶ್ಚಿತವಾದ ರೋಗನಿದಾನವನ್ನು ಮಾಡಲು ಪುನಃ ಪರೀಕ್ಷೆಗಳನ್ನು ಮಾಡಬೇಕು.

ಚಿಕಿತ್ಸೆ : ಕ್ಷಯರೋಗಿಗಳಿಗೆ ಈಚೆಗೆ ಕ್ಷಯರೋಗ ಪ್ರತಿರೋಧ ಔಷಧಿಗಳಿಂದಲೇ ಪ್ರಧಾನವಾಗಿ ಚಿಕಿತ್ಸೆ ಮಾಡಲಾಗುತ್ತಿದೆ ಮತ್ತು ಇತರ ವಿಧವಾದ ಚಿಕಿತ್ಸೆಗಳು ವಿರಳವಾಗಿವೆ. ಈ ಔಷಧಿಗಳು ಬಹು ಪರಿಣಾಮಕಾರಿಗಳು, ದುಬಾರಿಯಾಗಿಲ್ಲ ಮತ್ತು ಕ್ಷೇಮಕರವಾಗಿವೆ. ಈಚಿನ ಸಂಶೋಧನೆಯೂ ಚಿಕಿತ್ಸೆಯ ವಿಷಯವಾದ ಅನೇಕ ಹಳೆಯ ತತ್ತ್ವಗಳನ್ನು ಪೂರ್ತಿಯಾಗಿ ಬದಲಾಯಿಸಿಬಿಟ್ಟಿದೆ. ಚಿಕಿತ್ಸೆಯ ಸಾಮಾನ್ಯ ನಿಯಮಗಳನ್ನು ಮುಂದೆ ಕೊಟ್ಟಿದೆ:

1. ಆಸ್ಪತ್ರೆಯ ದಾಖಲಾತಿ ಅತ್ಯಗತ್ಯವೇನಲ್ಲ. ಬಹಳವಾಗಿ ನರಳುತ್ತಿರುವ ರೋಗಿಗಳನ್ನು ಮತ್ತು ಶಸ್ತ್ರಚಿಕಿತ್ಸೆ ಆಗಬೇಕಾದವರನ್ನು ಮಾತ್ರ ಆಸ್ಪತ್ರೆಗೆ ಸೇರಿಸಬೇಕಾಗುತ್ತದೆ. ಹಾಸುಗೆಯ ಮೇಲೆ ಯಾವಾಗಲೂ ಮಲಗಿರುವುದು ಅಥವಾ ಕೆಲಸಕ್ಕೆ ಗೈರುಹಾಜರಿಯಾಗುವುದು ಕೂಡ ಅವಶ್ಯವಿಲ್ಲ.

2. ರೋಗಿಯ ಕುಟುಂಬದ ಇತರ ವ್ಯಕ್ತಿಗಳಿಗೆ ಮತ್ತು ಸಹಚರರಿಗೆ (ಸ್ಪರ್ಶಿಗಳು) ಸೋಂಕು ಅಂಟಬಹುದಾದ ಭೀತಿ ಬಹು ಕಡಿಮೆ. ಏಕೆಂದರೆ ಸೂಕ್ತ ಚಿಕಿತ್ಸೆಯಿಂದ ರೋಗಿಯ ಕಫ ಬಹುಬೇಗ ರೋಗಾಣು ವಿಮುಕ್ತವಾಗುತ್ತದೆ.

3. ದುಬಾರಿ ಪೌಷ್ಟಿಕ ಆಹಾರ, ಒಳ್ಳೆಯ ಗಾಳಿ, ಶುಶ್ರೂಷೆ ಇತ್ಯಾದಿಗಳ ಅಗತ್ಯವೇ ಇಲ್ಲವೆನ್ನುವಷ್ಟು ಮಟ್ಟಿಗೆ ಈ ಪ್ರಬಲವಾದ ಕ್ಷಯರೋಗ ಪ್ರತಿರೋಧ ಔಷಧಿಗಳಿಂದ ಒದಗುವ ಚಿಕಿತ್ಸೆ ಪರಿಣಾಮಕಾರಿಯಾಗಿದೆ. ದುಬಾರಿಯ ಪೌಷ್ಟಿಕ ಆಹಾರಗಳನ್ನು ಕೊಳ್ಳಲು ಶಕ್ತರಾದವರು ತೆಗೆದುಕೊಳ್ಳಬಹುದು.

4. ಕ್ರಿಮಿನಾಶಕಗಳಿರುವ ಪೀಕದಾನಿಗಳಲ್ಲೆ ಕಫವನ್ನು ಉಗುಳುವುದು, ಕರವಸ್ತ್ರವನ್ನು ಬಾಯಿಗೆ ಅಡ್ಡವಾಗಿಟ್ಟುಕೊಂಡು ಕೆಮ್ಮುವುದು, ತಮಗೆಂದೇ ನಿಗದಿಯಾಗಿರುವ ಪಾತ್ರೆ ಪಡಿಗ ಉಪಯೋಗಿಸುವುದು ಇವನ್ನೆಲ್ಲ ಹೇಳಿಕೊಡಬಹುದಾದರೂ ಅವು ಕಾರ್ಯತಃ ಸಾಧ್ಯವಾಗದಿದ್ದಾಗ ಹೆಚ್ಚಿನ ಬಲವಂತದ ಅಗತ್ಯವಿಲ್ಲ. ಈಚಿನ ರಾಸಾಯನಿಕ ಚಿಕಿತ್ಸೆಯನ್ನು ಸರಿಯಾಗಿ ಉಪಯೋಗಿಸಿದರೆ, ತಾತ್ವಿಕವಾಗಿ ನೂರಕ್ಕೆ ನೂರು ಭಾಗ ಸಫಲತೆ ಖಚಿತ. ಅಲ್ಲದೆ ರೋಗಿಗಳನ್ನು ಸೋಂಕಿಲ್ಲದವರನ್ನಾಗಿ ಮಾಡಿ ರೋಗ ಹೆಚ್ಚು ಹರಡುವುದನ್ನು ನಿಲ್ಲಿಸಿ, ಇದು ರೋಗದ ಸಾಮಾಜಿಕ ಹತೋಟಿ ಕ್ರಮದಲ್ಲಿ ಮಾರ್ಮಿಕವಾದ ಪಾತ್ರವನ್ನು ವಹಿಸುತ್ತದೆ.

ಕ್ಷಯರೋಗ ಪ್ರತಿರೋಧ ಔಷಧಿಗಳಲ್ಲಿ ಪ್ರಮುಖವಾದುವು ಐಸೋನಿಯಾಸಿಡ್, ರಿಫಾಂಪಿಸಿನ್, ಪೈರಜಿನೆಮೈಡ್, ಇಥಾಂಬುಟಾಲ್ ಹಾಗೂ ಸ್ಟ್ರೆಪ್ಟೋಮೈಸಿನ್, ಪೈರಸಿನ್.

ಔಷಧಿಗೆ ಪ್ರತಿರೋಧ: ಔಷಧಿಗಳ ಬೇಕಾಬಿಟ್ಟಿ ಉಪಯೋಗದಿಂದ ರೋಗಾಣುಗಳು ಈ ಕ್ಷಯರೋಗಪ್ರತಿರೋಧ ಔಷಧಿಗಳಿಗೆ ಪ್ರತಿರೋಧ ಸಾಮರ್ಥ್ಯವನ್ನು ಪಡೆಯಬಹುದು. ಔಷಧಿಗೆ ಪ್ರತಿರೋಧ ಉದ್ಭವಿಸಿತೆಂದರೆ ರಾಸಾಯನಿಕ ಚಿಕಿತ್ಸೆ ವಿಫಲವಾದಂತೆಯೇ. ಇದು ಒಂದು ದುರ್ಘಟನೆ. ಏಕೆಂದರೆ ಶಸ್ತ್ರಚಿಕಿತ್ಸೆ ಅಥವಾ ದುಬಾರಿ ಬೆಲೆಯ ವಿಶಿಷ್ಟ ಔಷಧಿಗಳಿಂದ ಜಟಿಲವಾದ ಚಿಕಿತ್ಸೆ ಅವಶ್ಯವಾಗಬಹುದು. ಅಂತಿಮ ಫಲವೂ ಅಷ್ಟು ಒಳ್ಳೆಯದಾಗದಿರಬಹುದು. ಈ ರೀತಿಯ ಔಷಧಿ ಪ್ರತಿರೋಧ (ಅರ್ಜಿತ ಪ್ರತಿರೋಧ) ಉಂಟಾಗುವುದನ್ನು ಸಾಧ್ಯವಾದ ಮಟ್ಟಿಗೆ ತಪ್ಪಿಸಬೇಕು. ಔಷಧಪ್ರತಿರೋಧವನ್ನುಳ್ಳ ರೋಗಿಗಳು ಚಿಕಿತ್ಸೆಯಿಂದ ವಿಫಲರಾಗುವರೇ ಅಲ್ಲದೆ ಔಷಧಪ್ರತಿರೋಧ ರೋಗಾಣುಗಳ ಸೋಂಕನ್ನು ಇತರರಿಗೆ ಹರಡಬಹುದು. ಅದರ ಫಲವಾಗಿ ಇತರರಲ್ಲಿ ರೋಗ ಕಾಣಬಂದಲ್ಲಿ, ರಾಸಾಯನಿಕ ಔಷಧ ಪ್ರಯೋಗದಿಂದ ಪ್ರಯೋಜನವೇ ಇರುವುದಿಲ್ಲ.

ರೋಗವನ್ನು ತಡೆಗಟ್ಟುವಿಕೆ : ಕ್ಷಯರೋಗವನ್ನು ತಡೆಗಟ್ಟಲು ಮುಖ್ಯ ಸಾಧನ ಬಿಸಿಜಿ ಚುಚ್ಚುಮದ್ದು. ನೈಸರ್ಗಿಕವಾಗಿ ಹಾನಿಕರ (ಪ್ರಬಲ) ಕ್ಷಯ ರೋಗಾಣುಗಳಿಂದ ಯಾರಿಗೆ ಸೋಂಕು ಉಂಟಾಗಿಲ್ಲವೋ ಅಂಥವರಿಗೆಲ್ಲ ಕೃತಕವಾಗಿ ಅವರ ದೇಹದೊಳಕ್ಕೆ ನಿರ್ದಿಷ್ಟ ಪರಿಣಾಮದಲ್ಲಿ ನಿರುಪದ್ರವಿಗಳಾದ (ಬಲಹೀನ) ಪಶುಸಂಬಂಧ ರೋಗಾಣುಗಳನ್ನು ಸೇರಿಸಿ ಅವರಿಗೆ ಸೋಂಕು ಉಂಟುಮಾಡುವುದೇ ಬಿಸಿಜಿ ಚುಚ್ಚುಮದ್ದಿನ ಉದ್ದೇಶ. ಪ್ರಾಥಮಿಕ ರೋಗಲಕ್ಷಣ ಕಂಡುಬಂದು ಇವರ ದೇಹ ಆ ಮೇಲಿನ ಪ್ರಬಲ ಕ್ಷಯರೋಗಾಣುಗಳ ಸೋಂಕಿನಿಂದ ರಕ್ಷಣೆ ಹೊಂದುತ್ತದೆ. ಹೀಗೆ ಒದಗಿಸಲ್ಪಡುವ ರಕ್ಷಣೆ 80% ರಷ್ಟು. ಇದು ನೂರಕ್ಕೆ ನೂರರಷ್ಟಿರುವುದಿಲ್ಲ. ಬಿಸಿಜಿ ಲಸಿಕೆ ಬ್ಯಾಸಿಲಸ್ ಕಾಲ್‌ಮೆಟ್‌ಗ್ಯುಯೆರಿನ್ ಎಂಬ ಮಾದರಿಯ ಜೀವಂತವಾದ ಕ್ಷಯರೋಗಾಣುಗಳ ಕದಡು. ಈ ರೋಗಾಣುವನ್ನು ಫ್ರೆಂಚ್ ರೋಗಾಣುವಿಜ್ಞಾನಿ ಆಲ್ಬರ್ಟ್ ಕಾಲ್ಮೆಟ್ ಮತ್ತು ಪಶುವೈದ್ಯ ಕ್ಯಾಮಿಲ್ ಗ್ವೆರಿನ್ ಒಂದು ಪ್ರಬಲವಾದ ಪಶುಸಂಬಂಧ ಕ್ಷಯರೋಗಾಣು ಪಂಗಡದಿಂದ ಸಾರೀಕರಿಸಿದರು. ಇದನ್ನು 13 ವರ್ಷಗಳ ಕಾಲ ಪ್ರಯೋಗಶಾಲೆಯಲ್ಲಿ ಪದೇ ಪದೇ ಕೃತಕ ಮಾಧ್ಯಮದಲ್ಲಿ ಬಿತ್ತಿ ಬೆಳೆಸಿದಾಗ ಅವು ಬಲಹೀನವಾಗಿ ಪಶುಗಳಲ್ಲಿ ಆಗಲಿ ಮಾನವರಲ್ಲಿ ಆಗಲಿ ತೀವ್ರ ಕ್ಷಯರೋಗವನ್ನು ಉಂಟುಮಾಡಲು ಪೂರ್ಣವಾಗಿ ಅಶಕ್ತವಾಗಿರುವುದು ತಿಳಿಯಿತು. ಹೈಂಬೆಕ್ ಎಂಬಾತ 1926ರಲ್ಲಿ ನಾರ್ವೆಯಲ್ಲಿ ವಿದ್ಯಾರ್ಥಿ–ದಾದಿಯರಿಗೆ ವ್ಯವಸ್ಥಿತವಾಗಿ ಬಿಸಿಜಿಯನ್ನು ಕೊಡಲು ಪ್ರಾರಂಭಿಸಿದ. 1940ರಲ್ಲಿ ದ್ರವರೂಪದ ಲಸಿಕೆಯನ್ನು ಘನೀಕರಿಸುವ (ಅತಿ ಶೈತ್ಯದಿಂದ ನಿರ್ಜಲೀಕರಿಸಿ ಘನೀಕರಿಸುವಿಕೆ) ಪ್ರಯತ್ನ ಸಫಲವಾಯಿತು. ಭಾರತದಲ್ಲಿ ಬಿಸಿಜಿ ಚುಚ್ಚುಮದ್ದು ಕ್ರಮವನ್ನು ಪ್ರಾಯೋಗಿಕವಾಗಿ 1948ರಲ್ಲಿ ತೆಗೆದುಕೊಳ್ಳಲಾಯಿತು; ಮತ್ತು ಅದೇ ವರ್ಷ ಚೆನ್ನೈನ ಗಿಂಡಿಯಲ್ಲಿ ಬಿಸಿಜಿ ಲಸಿಕೆ ತಯಾರಿಕೆಯ ಪ್ರಯೋಗಶಾಲೆಯನ್ನು ಸ್ಥಾಪಿಸಲಾಯಿತು. ದೇಶದಲ್ಲೆಲ್ಲ ಬಿಸಿಜಿ ಪ್ರಚಾರ ಪ್ರಾರಂಭವಾದುದ್ದು 1951ರಲ್ಲಿ. ಕ್ರಮೇಣ ಎಲ್ಲ ರಾಜ್ಯಗಳೂ ಅದರಲ್ಲಿ ಪಾಲುಗೊಳ್ಳಲು ಆರಂಭವಾಗಿ ಆಗಿನಿಂದ ಪ್ರಚಾರ ನಡೆಯುತ್ತಲೇ ಇದೆ.

ಭಾರತದಲ್ಲಿ ಬಿಸಿಜಿ ಯನ್ನು ನವಜಾತ ಶಿಶುವಿಗೆ ಕ್ಷಯದ ವಿರುದ್ಧ ರಕ್ಷಣೆ ನೀಡುವ ಲಸಿಕೆಯನ್ನು ಕೂಡಲೇ ಕೊಡಲಾಗುತ್ತದೆ. ಬಿಸಿಜಿ ಚುಚ್ಚುಮದ್ದಿನಿಂದಾಗುವ ಜಟಿಲತೆಗಳು ಅಪರೂಪ ಮತ್ತು ಕಡಿಮೆ. ಜಟಿಲತೆಗಳೆಂದು ಕರೆಸಿಕೊಳ್ಳುವ ಬಹುಪಾಲು ವ್ರಣ, ಗಳಲೆಕಟ್ಟಿಕೊಳ್ಳುವುದು ಇತ್ಯಾದಿಗಳು ನಿರೀಕ್ಷಿಸಬಹುದಾದ ಪ್ರತಿಕ್ರಿಯೆಗಳು ಮಾತ್ರವೇ ಆಗಿವೆ. ಮಗುವಿಗೆ ಏಕಕಾಲದಲ್ಲಿ ಕ್ಷಯರೋಗದ ವಿರುದ್ಧ ಲಸಿಕೆ ಹಾಕುವುದರಿಂದ ಏನೂ ಹಾನಿ ಇಲ್ಲ. ಹಾಗಾಗಿ ಅದನ್ನು ಜನ್ಮ ತಳೆದ ಅನಂತರ ಮಗುವಿಗೆ ಕೊಡುವ ಪ್ರಥಮ ಲಸಿಕೆಯಾಗಿದೆ.

ಕ್ಷಯರೋಗದ ಹತೋಟಿ : ಕ್ಷಯರೋಗದ ಹತೋಟಿ ಜನಾಂಗಕ್ಕೆ ಒಂದು ಸಾರ್ವಜನಿಕ ಪ್ರಶ್ನೆಯಾಗಿ ನಿಲ್ಲಬೇಕು ಮತ್ತು ವರ್ಷದಿಂದ ವರ್ಷಕ್ಕೆ ರೋಗದ ಪ್ರಾಬಲ್ಯ ಇಳಿಮುಖವಾಗಬೇಕು. 1900ನೆಯ ಇಸವಿಯ ಅನಂತರ ಬಹುದೇಶಗಳಲ್ಲಿ ಜೀವನದ ಮಟ್ಟ ಮತ್ತು ಪರಿಸರಗಳು ಗಮನೀಯವಾಗಿ ಉತ್ತಮಗೊಂಡಿದ್ದು ಕ್ಷಯರೋಗ ಪ್ರಶ್ನೆಯ ಬಾಹುಳ್ಯವನ್ನು ಕಡಿಮೆ ಮಾಡಿತು. ಅದೀಗ ಮತ್ತೆ ಗೋಚರಿಸುತ್ತಿರುವುದು ಏಡ್ಸ್ ಕಾಯಿಲೆ ವ್ಯಾಪಕತೆಯಿಂದ. ಆದರೆ ಶೀಘ್ರತರವಾದ ಇಳಿಮುಖ 1945ರ ಅನಂತರ ರಾಸಾಯನಿಕ ಔಷಧ ಪ್ರಯೋಗವನ್ನು ಅನುಸರಿಸುವಾಗಿನಿಂದ ಕಂಡುಬಂದಿದೆ. ಬಹುಸಾಂಖ್ಯಿಕವಾಗಿ ರೋಗಿಗಳಿಗೆ ಔಷಧಿ ಚಿಕಿತ್ಸೆನೀಡಿದಾಗ ಆ ರೋಗಿಗಳು ಗುಣಮುಖರಾಗುವರಲ್ಲದೆ ಸೋಂಕು ಹರಡುವುದೂ ನಿಲ್ಲುತ್ತದೆ. ಹೀಗೆ ಒಂದು ಚಿಕಿತ್ಸಾಕ್ರಮ ಫಲಕಾರಿಯಾದ

ರೋಗವನ್ನು ತಡೆಗಟ್ಟುವ ವಿಧಾನವಾಗಿ ಎರಡು ರೀತಿಯ ಅನುಕೂಲ ಉಳ್ಳದ್ದಾಗಿದೆ. ಜನಾಂಗದಲ್ಲಿ ಕ್ಷಯರೋಗದ ಹತೋಟಿ ಮಾಡಲು ಒಂದು ಯೋಜನೆ ಬಹು ಅಗತ್ಯ. ಇಂಥ ಯೋಜನೆ ತಾಂತ್ರಿಕ ವಿಷಯಗಳ ಮೇಲೆಯೇ ಪೂರ್ಣವಾಗಿ ಅವಲಂಬಿಸಿಲ್ಲ. ಜನ ಹಣ ಮತ್ತು ಸಲಕರಣೆಗಳ ರೂಪದಲ್ಲಿ ಮೂಲಸಾಮಗ್ರಿಗಳ ಲಭ್ಯತೆ ಮತ್ತು ಒಪ್ಪಿಗೆ ನೀಡಿದ ರಾಷ್ಟ್ರೀಯ ಅಗತ್ಯಗಳ ಪ್ರಾಧಾನ್ಯಗಳನ್ನು ಮುಖ್ಯವಾಗಿ ಇಲ್ಲಿ ಗಣಿಸಬೇಕು. ಬೆಂಗಳೂರಿನ ರಾಷ್ಟ್ರೀಯ ಕ್ಷಯರೋಗ ಸಂಸ್ಥೆ (ಎನ್‌ಟಿಐ) ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಗಮನದಲ್ಲಿರಿಸಿಕೊಂಡು 1961ರಲ್ಲಿ ಈಗಿನ ರಾಷ್ಟ್ರೀಯ ಕ್ಷಯರೋಗ ಹತೋಟಿ (ಎನ್‌ಟಿಐ) ಕಾರ್ಯಕ್ರಮಕ್ಕೆ ತಳಹದಿಯಾಗಿರುವ ಜಿಲ್ಲಾ ಮಟ್ಟದ ಕ್ಷಯರೋಗ ಕಾರ್ಯಕ್ರಮವನ್ನು (ಡಿಟಿಪಿ) ರೂಪಿಸಿತು. ಡಿಟಿಪಿಯ ಮೂಲಭೂತ ಉದ್ದೇಶಗಳು ಹೀಗಿವೆ :

1. ಜನಾಂಗದಲ್ಲಿ ಸೋಂಕು ತಗಲಬಹುದಾದ ಬಹುಪಾಲು ವ್ಯಕ್ತಿಗಳಿಗೆ ಫಲಕಾರಿಯಾಗಿ ಬಿಸಿಜಿ ಚುಚ್ಚುಮದ್ದು ಹಾಕುವುದು.

2. ಆರೋಗ್ಯ ಸಂಸ್ಥೆಗಳಿಗೆ ಬರುವ ಜನರಲ್ಲಿ ಅನುಭಾವಿಕ ಸೂಚನೆಗಳಿರುವ ಕ್ಷಯರೋಗಿಗಳನ್ನು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಗುರುತಿಸಿ ಅವರಿಗೆ ಫಲಕಾರಿಯಾದ ಚಿಕಿತ್ಸೆ ಮಾಡುವುದು.

3. ಹಾಗೆ ಮಾಡುವಾಗ ರೋಗವನ್ನು ಪ್ರಸಾರ ಮಾಡುವ ಸಕರಾತ್ಮಕ ಕಫವಿರುವ ರೋಗಿಗಳಿಗೆ ಪ್ರಾಧಾನ್ಯ ಕೊಡುವುದು.

4. ಈ ಎಲ್ಲ ಕ್ರಮಗಳನ್ನೂ ಆ ವಲಯದ ಆರೋಗ್ಯ ಸಂಸ್ಥೆಗಳೆಲ್ಲವೂ ಸಾಮಾನ್ಯ ಆರೋಗ್ಯ ಸೇವೆಯ ಮೂಲಭೂತ ಅಂಶದಂತೆಯೇ ಭಾವಿಸಿ ನಡೆಸುವುದು.

ಈ ಉದ್ದೇಶಗಳನ್ನು ಪೂರೈಸಲು ಒಂದು ಜಿಲ್ಲಾ ಕ್ಷಯರೋಗ ಕೇಂದ್ರವನ್ನು (ಡಿಟಿಸಿ) ಎಕ್ಸ್–ಕಿರಣ ಮತ್ತು ಸೂಕ್ಷ್ಮದರ್ಶಕದ ಅನುಕೂಲದ ಲಭ್ಯತೆ ಇರುವ ಜಿಲ್ಲೆಯ ಮುಖ್ಯ ಸ್ಥಳದಲ್ಲಿ ಸ್ಥಾಪಿಸಲಾಗಿದೆ. ಒಂದು ಬಿಸಿಜಿ ತಂಡವನ್ನು ನೇಮಿಸಬೇಕು. ಇಲ್ಲಿಂದ ಎನ್‌ಟಿಐನಲ್ಲಿ ತರಬೇತಿ ಹೊಂದಿರುವ ಸೂಚಕ ಕಾರ್ಯಕ್ರಮದ ನಿರತರು ಜಿಲ್ಲೆಯಲ್ಲೆಲ್ಲ ಕಾರ್ಯಕ್ರಮವನ್ನು ರೂಪಿಸಿ, ತಾಲ್ಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ದೂರದ ಆರೋಗ್ಯ ಸಂಸ್ಥೆಗಳು ಸೂಕ್ಷ್ಮದರ್ಶಕದ ಸಹಾಯದಿಂದಾಗಲಿ, ಹತ್ತಿರವಿರುವ ಹೆಚ್ಚಿನ ಅನುಕೂಲಗಳಿದ್ದ ಸಂಸ್ಥೆಗಳಿಗೆ ಕಳುಹಿಸಿಯಾಗಲಿ ತಾವೇ ಸ್ವತಃ ರೋಗನಿದಾನವನ್ನು ಮಾಡಬಹುದು. ರೋಗ ನಿದಾನ ಸಾಧ್ಯವಿರಲಿ, ಇಲ್ಲದಿರಲಿ ಎಲ್ಲ ಆರೋಗ್ಯ ಸಂಸ್ಥೆಗಳಲ್ಲೂ ಚಿಕಿತ್ಸೆ ನೀಡಲಾಗುತ್ತದೆ.

ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮವನ್ನು 1992ರಲ್ಲಿ ಪರಿಷ್ಕರಿಸಲಾಯಿತು. ಅದರನ್ವಯ ಇಂದು ಆರು ತಿಂಗಳ ಕಾಲದ ಕ್ಷಯ ರೋಗದ ಚಿಕಿತ್ಸೆಯನ್ನು ವೈದ್ಯ ನಿರೀಕ್ಷಣೆಯಡಿ ಕೊಟ್ಟು ರೋಗವನ್ನು ಹತೋಟಿಗೆ ತಂದು ಅದರ ಹರಡುವಿಕೆಗೆ ತಡೆ ಹಾಕಲಾಗುತ್ತಿದೆ. ಚಿಕಿತ್ಸೆಯನ್ನು ನೇರವಾಗಿ ವೀಕ್ಷಿಸುವುದರಿಂದ ಅದಕ್ಕೆ ಡಾಟ್ಸ್ ಚಿಕಿತ್ಸೆಯೆಂಬ ಹೆಸರು ಬಂದಿದೆ. ಅದರನ್ವಯ ಹೊಸದಾಗಿ ಗುರುತಿಸಲ್ಪಟ್ಟ ಕ್ಷಯಾಣು ಇರುವ ರೋಗಿ ಮೊದಲೆರಡು ತಿಂಗಳು ತೀವ್ರತರ ಚಿಕಿತ್ಸಾ ವಿಧಾನವನ್ನು ಅನುಸರಿಸಿ ಐಸೋನಿಯಜಿಡ್, ರಿಫಾಮೈಸಿನ್, ಪೈರಜನಮೈಡ್ ಮತ್ತು ಇಥಾಂಬುಟಾಲ್ ಪಡೆಯುತ್ತಾನೆ. ಅನಂತರ ನಾಲ್ಕು ತಿಂಗಳು ಐಸೋನಿಯಜಿಡ್ ಮತ್ತು ರಿಫಾಮೈಸಿನ್ ಮುಂದುವರಿಸುತ್ತಾನೆ. ರೋಗ ಮರುಕಳಿಸಿದರೆ ಇಲ್ಲವೇ ಚಿಕಿತ್ಸೆ ಅಯಶಸ್ವಿಯಾಗಿದ್ದರೆ ಮೂರು ತಿಂಗಳು ತೀವ್ರತರ ಚಿಕಿತ್ಸೆಯ ಅನಂತರ ಐದು ತಿಂಗಳು ಚಿಕಿತ್ಸೆ ಮುಂದುವರಿಸಲಾಗುತ್ತದೆ. ಅದರಲ್ಲಿ ಮೊದಲ ಎರಡು ತಿಂಗಳು ಸ್ಟ್ರೆಪ್ಟೊಮೈಸಿನ್ ಜೊತೆಯಲ್ಲಿ ಕೊಡಲಾಗುತ್ತದೆ. ಮುಂದಿನ ಐದು ತಿಂಗಳು ಚಿಕಿತ್ಸೆಯಲ್ಲಿ ಐಸೋನಿಯಜಿಡ್, ರಿಫಾಮೈಸಿನ್ ಜೊತೆ ಇಥಾಂಬುಟಾಲ್ ಸೇರಿಸಿ ಕೊಡಲಾಗುವುದು. ಕಫದಲ್ಲಿ ಕ್ಷಯಾಣು ಇಲ್ಲದಿರುವ ಮತ್ತು ಶ್ವಾಸಕೋಶದ ಹೊರಗೆ ಕ್ಷಯ ರೋಗವಿದ್ದವರ ಚಿಕಿತ್ಸೆಯಲ್ಲಿ ಮೊದಲೆರಡು ತಿಂಗಳು ಐಸೋನಿಯಜಿಡ್, ರಿಫಾಮೈಸಿನ್ ಮತ್ತು ಪೈರಜಿನೇಮೈಡ್ ಕೊಟ್ಟು, ಉಳಿದ ನಾಲ್ಕು ತಿಂಗಳು ಐಸೋನಿಯಜಿಡ್ ಮತ್ತು ರಿಫಾಮೈಸಿನ್ ಮಾತ್ರ ಕೊಡಲಾಗುತ್ತದೆ.

***

**ಕ್ಷಯಾಣುಸಾರ:** ಕ್ಷಯ ದಂಡಾಣುಜೀವಿಯ ಪ್ರೊಟೀನಿನ ಅಂಶಕ್ಕೆ ಒಬ್ಬ ವ್ಯಕ್ತಿಯ ಅಂಗಾಂಶ ಸಂವೇದನೆ (ಸೆನ್ಸಿಟಿವಿಟಿ) ತೋರ್ಪಡಿಸುವುದೋ ಇಲ್ಲವೋ ಎನ್ನುವುದನ್ನು ಕಂಡುಕೊಳ್ಳಲು ರೋಗನಿದಾನದ ಚರ್ಮ ಪರೀಕ್ಷೆಗಳಲ್ಲಿ ಬಳಸುವ ಕ್ಷಯ ದಂಡಾಣುಜೀವಿಗಳ ಸಾರ (ಟ್ಯೂಬರ್‌ಕ್ಯುಲಿನ್). ರೋಗ ಹೊಮ್ಮಿರಲಿ ಇಲ್ಲದಿರಲಿ ಕ್ಷಯಾಣುಗಳಿಂದ ಮುಂಚೆಯೇ ಸೋಂಕಾಗಿದ್ದರೆ ಅಂಗಾಂಶಗಳು ಕ್ಷಯಾಣುವಿನ ಪ್ರೊಟೀನಿಗೆ ಸಂವೇದನೀಯವಾಗಿರುವುದೇ ಇದರ ಆಧಾರ. ಮುಂದೋಳಿನ ಮುಂಭಾಗದ ಚರ್ಮದೊಳಕ್ಕೆ ಕ್ಷಯಸಾರವನ್ನು ಚುಚ್ಚಿ ಹೊಗಿಸುವುದರಿಂದ ಇದನ್ನು ಕಂಡುಹಿಡಿಯಬಹುದು. ಹೀಗೆ ಚುಚ್ಚಿದಾಗ ಸ್ಥಳೀಯ ಪ್ರತಿಕ್ರಿಯೆ, ಸಾರ್ವತ್ರಿಕ (ಅಂದರೆ ಇಡೀ ದೇಹಕ್ಕೆ ಅನ್ವಯಿಸುವಂತೆ) ಪ್ರತಿಕ್ರಿಯೆಯ ಸಮೇತ ಅಥವಾ ಇಂಥ ಪ್ರತಿಕ್ರಿಯೆ ಇಲ್ಲದೇ, ಕಂಡುಬರಬಹುದು. ಇದು ಧನಾತ್ಮಕ ಪ್ರತಿಕ್ರಿಯೆ. ಇದರ ಅರ್ಥ ಅಂಗಾಂಶಗಳು ಸಂವೇದನೀಯವಾಗಿದೆ ಎಂದು. ಇಂಥ ಯಾವ ಪ್ರತಿಕ್ರಿಯೆಯೂ ಕಂಡುಬರದಿದ್ದರೆ (ಋಣಾತ್ಮಕ ಸನ್ನಿವೇಶ) ಸಂವೇದನೆ ಇಲ್ಲ ಎಂದು ಅರ್ಥವಾಗುವುದು. ಆ ವ್ಯಕ್ತಿಗೆ ಸಾಮಾನ್ಯವಾಗಿ ಹಿಂದೆಂದೂ ಕ್ಷಯ ದಂಡಾಣುಜೀವಿ ತಾಗಿರುವುದಿಲ್ಲ ಎಂದು ತರ್ಕಿಸಬಹುದು.

ಕ್ಷಯಾಣುಸಾರವನ್ನು ಮೊದಲಿಗೆ ತಯಾರಿಸಿದವ ರಾಬರ್ಟ್‌ಕಾಕ್. ಗ್ಲಿಸರಾಲ್ ರಸವನ್ನು ಇವನು ದ್ರವ ಪೋಷಕ ಮಾಧ್ಯಮವಾಗಿ ಉಪಯೋಗಿಸಿಕೊಂಡ. ಆರು ವಾರಗಳ ಕಾಲ ಕ್ಷಯದ ದಂಡಾಣುಗಳನ್ನು ಈ ಮಾಧ್ಯಮದಲ್ಲಿ ಕಾಕ್ ಬೆಳೆಸಿ (ಈಗ ಇದಕ್ಕೆ ಕಾಕ್‌ನ ಹಳೆಯ ಕ್ಷಯಸಾರ ಎಂದು ಹೆಸರಾಗಿದೆ). ಮುಂದೆ 50% ರಷ್ಟು ಗ್ಲಿಸರಾಲಿನಲ್ಲಿ ದಂಡಾಣುಗಳನ್ನು ಅರೆದು (ಆತನ ಹೆಸರಿನ) ಹೊಸ ಕ್ಷಯ ಸಾರವನ್ನು ತಯಾರಿಸಿದ. ದಂಡಾಣುಗಳನ್ನು ಬೆಳೆಸಲು ಬಳಸಿದ ಪೋಷಕ ಮಾಧ್ಯಮಗಳ ಅಂಶಗಳಿಂದ ಬಂದ ಬೇಡದ ಪ್ರೊಟೀನುಗಳೂ ಇಂಥ ಕಚ್ಚಾ ಸಾರಗಳಲ್ಲಿ ಇದ್ದೇ ಇರುತ್ತವೆ. ಚರ್ಮ ಪರೀಕ್ಷೆಗಳಲ್ಲಿ ವಿಶಿಷ್ಟವಲ್ಲದ ಪ್ರತಿಕ್ರಿಯೆಗಳನ್ನು ಉಂಟುಮಾಡಿಸುವ ಇಂಥ ಅನಾವಶ್ಯಕ ವಸ್ತುಗಳನ್ನು ಪೂರ್ತಿ ಕಳೆಯಲು ಹಲವಾರು ಬಗೆಯ ಪರಿಷ್ಕರಣ ವಿಧಾನಗಳಿವೆ. ಕ್ಷಯ ದಂಡಾಣುವಿನಿಂದ ನಿರ್ದಿಷ್ಟವಾದ ಶುದ್ಧ ಪ್ರೊಟೀನನ್ನು ಬೇರೆಯಾಗಿ ಸಾರೀಕರಿಸಲಾಗಿದೆ. ಇದಕ್ಕೆ ಶುದ್ಧೀಕೃತ ಪ್ರೊಟೀನ್ ಉತ್ಪನ್ನವೆಂದು ಹೆಸರು. ಇದು ರಚನೆಯಲ್ಲಿ ಹೆಚ್ಚು ಸ್ಥಿರವಾದದ್ದು. ಇದನ್ನು ಬಳಸಿದಾಗ ವಿಶಿಷ್ಟವಲ್ಲದ ಪ್ರತಿಕ್ರಿಯೆಗಳಾದುವು. ಹಾಗಾಗಿ ಈ ಉತ್ಪನ್ನ ಹೆಚ್ಚು ಬಳಕೆಯಲ್ಲಿದೆ.

***

**ಕ್ಷೀಣತೆ:** ಜೀವಿ ಅಥವಾ ಕೋಶಗಳು ಪರಿಸರದಿಂದ ಪೋಷಕಾಂಶಗಳನ್ನು ಪಡೆದು ಬೆಳೆದು ನಿರ್ದಿಷ್ಟ ವಯೋಮಾನದ ಅನಂತರ ಕ್ರಮೇಣ ಶಿಥಿಲವಾಗಿ ನಾಶವಾಗುವುದು (ಡಿಜನರೇಷನ್).

ಹುಟ್ಟಿದ ಜೀವಿ, ಪರಿಸರದ ಸಹಾಯದಿಂದ ಬೆಳೆಯುವುದು, ಪ್ರಬುದ್ಧಮಾನಕ್ಕೆ ಬರುವುದು, ಕಾಲಾಂತರದಲ್ಲಿ ಮುಪ್ಪನ್ನು ಅಪ್ಪಿ ಅನಂತರ ಸಾಯುವುದು ಪ್ರಕೃತಿಯ ಕ್ರಿಯೆ. ಹೀರಿನ್‌ಬರ್ಗ್ 1838 ರಲ್ಲಿಯೇ ಸೂಕ್ಷ್ಮಜೀವಿಗಳು ವಿಭಜನಾ ರೀತಿಯಲ್ಲಿ ಸಂತಾನವೆಸಗುವುದರಿಂದ ಚಿರಂಜೀವಿಗಳು ಎಂದನು. ಮೊಸಾಸ್ ಸೂಕ್ಷ್ಮಜೀವಿಗಳಲ್ಲಿ ವಿಭಜನೆಯೇ ಅಲ್ಲದೆ ಕೆಲವು ಕಾಲ ವಿಭಜನೆಯ ಶಕ್ತಿಯನ್ನು ಎದುರಿಸಲು ಸಂಯೋಗಕ್ರಿಯೆಯಲ್ಲಿ (ಕಾಂಜುಗೇಶನ್) ತೊಡಗುವುದು, ಕ್ಯಾಲ್‌ಕಿನ್ಸ್ ಗ್ಲೂಕೊಮ ಎಂಬ ಒಂದು ಜೀವಿಯಿಂದ 700 ವರ್ತಿ ವಿಭಜನಾ ಕ್ರಿಯೆಯಿಂದ $2^{700}$ ಸಂತಾನ ಪಡೆದಿರುವುದು, ಹಾರ್ಟ್‌ಮನ್ ಒಂದು ಪ್ಯಾರಮೀಸಿಯಂ ಅರೀಲಿಯಾ 2,500 ಸಲ ವಿಭಜನೆಯ ಮೂಲಕ ಸಂತಾನವೆಸಗಿರುವುದನ್ನು ದಾಖಲುಮಾಡಿರುವರು. ಇದೇ ರೀತಿ ಪಾಲ್ ಬ್ರೀನ್ ಒಂದು ಮರಿ ಹೈಡ್ರಾದಿಂದ 702 ಮೊಗ್ಗೆ (ಬಡ್) ಗಳನ್ನು ಸುಮಾರು ಎರಡೂವರೆ ವರ್ಷದಲ್ಲಿ ಅಂದರೆ 29.22.49 ರಿಂದ 6.9.52 ವರೆಗೆ ಪಡೆದಿರುವುದಾಗಿ ತಿಳಿದುಬಂದಿದೆ. ಇಲ್ಲಿ ಉದಾಹರಿಸಿದ ಅನೇಕ ಜೀವಿಗಳಲ್ಲಿ ಚಿರಂಜೀವಿತನವನ್ನು ಗುರುತಿಸಬಹುದು. ಆದರೆ ಇವುಗಳಲ್ಲಿ ಇರುವಂತೆಯೇ ಇನ್ನು ಊರ್ಜಿತವಾದ, ವಿಕಾಸವಾದ, ಕ್ಲಿಷ್ಟವಾದ, ಜೀವಿಗಳಲ್ಲಿ ಚಿರಂಜೀವಿತನ ಕಾಣಬರುವುದಿಲ್ಲ ಎಂಬುದು ಒಂದು ಸಮಸ್ಯೆಯಾಗಿ ಉಳಿದಿದೆ. ಜಗತ್ತಿನ ಜೀವರಾಶಿಗಳಲ್ಲಿ ಕೆಲವನ್ನು ಬಿಟ್ಟು ಉಳಿದವೆಲ್ಲ ಮರ್ತ್ಯಜೀವಿಗಳು (ಮಾರ್ಟಲ್ ಆರ್ಗನಿಸಮ್ಸ್).

ಕೇವಲ ಕೆಲವು ಬಗೆಯ ಅನೂರ್ಜಿತ ಜೀವಿಗಳು ಮಾತ್ರ ಅಮರಜೀವಿಗಳಾಗಿರುವುದಕ್ಕೆ ಮತ್ತು ಇನ್ನುಳಿದುವು ಮರ್ತ್ಯಜೀವಿಗಳಾಗಿರುವುದಕ್ಕೆ ಕಾರಣ ಹುಡುಕಲು ಹೊರಟ ವಿಜ್ಞಾನಿಗಳ ಸಾಲು ಒಂದಲ್ಲ, ಎರಡಲ್ಲ. ಆದರೆ ಇವರಲ್ಲಿಯಾರೂ ಗುರಿ ತಲುಪಿಲ್ಲ. ಇನ್ನೊಂದು ಸೋಜಿಗದ ಸಂಗತಿಯೆಂದರೆ ಮರ್ತ್ಯಜೀವಿಗಳಲ್ಲಿ (ಪ್ರಾಣಿಗಳಲ್ಲಿ) ವಯಸ್ಸಿನ ಅಂತರ ಅಪಾರ. ಕೆಲವು ನೂರಾರು ವರ್ಷ ಬದುಕಬಲ್ಲವಾದರೆ ಇನ್ನು ಕೆಲವು ಕೆಲವಾರು ದಿನ ಮಾತ್ರ ಬದುಕಬಲ್ಲುವು. ಕೆಳಗಣ ಪಟ್ಟಿಯ ಪರಿಶೀಲನೆಯಿಂದ ವಯಸ್ಸಿನ ಈ ಅಂತರವನ್ನು ಮನಗಾಣಬಹುದು.

| | |
|---|---|
| ಮನುಷ್ಯ = 115 ವರ್ಷಗಳು | ರಣಹದ್ದು = 115 ವರ್ಷಗಳು |
| ಆನೆ = 70 ವರ್ಷಗಳು | ಗಿಳಿ = 80 ವರ್ಷಗಳು |
| ಕುದುರೆ= 62 ವರ್ಷಗಳು | ಆಮೆ = 140 ವರ್ಷಗಳು |

| | |
|---|---|
| ಸಿಂಹ = 18 ವರ್ಷಗಳು | ಕಪ್ಪೆ = 6 ವರ್ಷಗಳು |
| ನಾಯಿ = 34 ವರ್ಷಗಳು | ಜಿಗಣೆ = 20 ವರ್ಷಗಳು |
| ಕಪಟ = 10 ವರ್ಷಗಳು | ಎರೆಹುಳು = 10 ವರ್ಷಗಳು |
| ಇಲಿ = 03 ವರ್ಷಗಳು | ಮೇಫ್ಲೈ = ಕೇವಲ ಒಂದು ದಿನ ಮಾತ್ರ |

ವಯಸ್ಸಿನ ಅಂತರಕ್ಕೆ ಪ್ರಾಣಿಗಳ ಗಾತ್ರ ಮತ್ತು ಮಂದ ಬೆಳೆವಣಿಗೆ ಕಾರಣವಿರಬಹುದು ಎಂದು ಕೆಲವು ವಿಜ್ಞಾನಿಗಳು ತಿಳಿಸಿರುವರು. ಮಾನವನು ದೀರ್ಘಕಾಲ ಬದುಕಲು ಅವನ ಗಾತ್ರ ಮತ್ತು ಮಂದಬೆಳೆವಣಿಗೆ ಮುಖ್ಯವಾಗಿರಬಹುದೇ? ಕೆಲವು ಆಧಾರಗಳಿದ ಮನುಷ್ಯನು 152 ವರ್ಷಗಳಿಗೂ ಹೆಚ್ಚಾಗಿ ಬದುಕಿರುವುದನ್ನು ಮತ್ತು ದೀರ್ಘಾಯುಷಿ ಕೆಲವು ದೇಶಕ್ಕೆ ಮತ್ತು ಪರಿಸರಕ್ಕೆ ಸೀಮಿತವಾಗಿರುವುದೂ ವೇದ್ಯವಾಗಿದೆ. ನಮ್ಮ ದೇಶದಲ್ಲಿ ಹಿಮಾಲಯ ತಪ್ಪಲಿನಲ್ಲಿ ಕಟ್ಟುನಿಟ್ಟಾಗಿ ತಪಸ್ಸುಮಾಡಿದ ಋಷಿಗಳು ಬಹು ದೀರ್ಘಕಾಲ ಬದುಕುತ್ತಿದ್ದರು ಎಂದು ಕೆಲವರ ಭಾವನೆ. ಆದರೂ ಪ್ರಾಣಿಗಳು ವಯಸ್ಸಾದಂತೆ ಕ್ಷೀಣತೆಗೆ ಗುರಿಯಾಗುತ್ತವೆ ಎನ್ನುವುದು ವೇದ್ಯ. ಮಾನವರಲ್ಲಿ ಕ್ಷೀಣತೆಗೆ ಹಲವಾರು ಕಾರಣಗಳನ್ನು ತಜ್ಞರು ವಿವರಿಸಿರುತ್ತಾರೆ. ಈ ವಿವರಗಳೇ ಎಲ್ಲಾ ಜೀವಿಗಳಿಗೂ ಅನ್ವಯವಾಗಬಹುದು ಎನ್ನುವುದರಲ್ಲಿ ಸಂಶಯವಿಲ್ಲ.

ಮುದಿತನಕ್ಕೆ ಕಾರಣವಾಗಿರಬಹುದಾದ ಚಿನ್ಹೆಗಳು ಹಲವಾರು. ಮೂಳೆಗಳಲ್ಲಿನ ಲವಣಗಳ ಕ್ಷೀಣಿಕೆ, ರಕ್ತನಾಳಗಳು ಗಡುಸಾಗುವುದು, ಮಾಂಸಖಂಡಗಳು, ದುರ್ಬಲಗೊಳ್ಳುವುದು, ಕಿವುಡುತನ, ದೃಷ್ಟಿಮಂದವಾಗುವುದು, ಚರ್ಮ ಸುಕ್ಕುಗಟ್ಟುವುದು, ರಕ್ತದಲ್ಲಿ ಕೊಲೆಸ್ಟ್ರಾಲ್ ಅಂಶ ಜಾಸ್ತಿಯಾಗುವುದು, ಬಿಳಿಯ ರಕ್ತ ಕಣಗಳು ಕ್ಷಯಗೊಳ್ಳುವುದು, ಸಸಾರಜನಕವಸ್ತು ಅಸಮಂಜಸ ಪ್ರಮಾಣದಲ್ಲಿರುವುದು, ನರಕಣಗಳಲ್ಲಿ ಹಳದಿ ದ್ರವ್ಯ (ಯೆಲ್ಲೋ ಪಿಗ್‌ಮೆಂಟ್ಸ್) ಹೆಚ್ಚುವುದು, ರಕ್ತದಲ್ಲಿ ಮತ್ತು ಜೀವಿರಸದಲ್ಲಿ ವಿಷ ನಿರೋಧಕ ವಸ್ತುಗಳು (ಆಂಟಿಬಾಡಿಸ್) ದುರ್ಬಲಗೊಳ್ಳುವುದು, ಥೈರಾಯಿಡ್, ಪಿತ್ತಕೋಶ ಮತ್ತು ಮೂತ್ರಪಿಂಡಗಳು, ಅಲ್ಲದೇ ಸಂತಾನೋತ್ಪತ್ತಿ ಲಿಂಗಗಳು ಅನುಕ್ರಮವಾಗಿ ತಮ್ಮ ಸಾಧನೆಯನ್ನು ಕಳೆದುಕೊಳ್ಳುವುದು ಮುಂತಾದುವು.

ಚೈಲ್ಡ್ ಮುಹಲ್‌ಮನ್ ಮತ್ತು ಹಾರ್ಮ್ಸ್ ರವರ ಪ್ರಕಾರ ನರದೌರ್ಬಲ್ಯದಿಂದ ಮುದಿತನ ಬರುವುದು. ಮಿನೋಟ್‌ರವರ ಪ್ರಕಾರ ಯುಗ್ಮವು ವಿಭಜಿಸುವುದರಿಂದ ವಿವಿಧ ರೂಪದ ಜೀವಕಣಗಳು ಉತ್ಪನ್ನವಾಗುವುದರಿಂದಲೇ ಅನೂರ್ಜಿತ ಶಕ್ತಿಯನ್ನು ಕಳೆದುಕೊಂಡು ಮುದಿತನಕ್ಕೆ ಬುನಾದಿಯಾಗುವುದು. ಮುಂದುವರಿದ ಭಿನ್ನ ರೂಪ ಜೀವಕೋಶಗಳು ಉದ್ಭವಿಸಿರುವುದರಿಂದ, ಕ್ಲಿಷ್ಟತರನಾದ ಕಾರ್ಯಗಳಲ್ಲಿ ಮಗ್ನವಾಗುವುದರಿಂದ, ಏಕ ಕಣ ಜೀವಿಯಲ್ಲಿರದ ಒಮ್ಮತದ ಅಖಂಡ ಶಕ್ತಿಯನ್ನು ಕಳೆದುಕೊಂಡು ಮರ್ತ್ಯ ಜೀವಿಗಳಾಗುತ್ತವೆ ಎಂದು ವಾದಿಸುತ್ತಾರೆ. ಅಲ್ಬರ್ಟ್ ಡಿಲಾನಿ ರವರ ಪ್ರಕಾರ ಪ್ರಾಣಿಗಳಲ್ಲಿ ಅನೂರ್ಜಿತ ಜೀವಕೋಶಗಳು ಹೇರಳವಾಗಿರುತ್ತವೆ. ಆದರೆ (ಕನೆಕ್ಟಿವ್ ಟಿಶ್ಯೂ) ಮರ್ತ್ಯ ಆದ್ದರಿಂದ ಅನೂರ್ಜಿತ ಜೀವಕೋಶಗಳು ಅಮರತ್ವವನ್ನು ಕಳೆದುಕೊಂಡಿರುತ್ತವೆ.

ರೈಮನ್ ಪೆರೆಲ್ ರವರ ದಿ ಬಯಾಲಜಿ ಆಫ್ ಡೆತ್ ಪುಸ್ತಕದಲ್ಲಿ ವಿವಿಧ ದಾಖಲೆಗಳ ಪ್ರಕಾರ ಆನುವಂಶೀಯವಾಗಿಯೂ ಮುಪ್ಪು ಬರಬಹುದು ಎಂದು ಬರೆದಿರುತ್ತಾರೆ. ಅಂದರೆ ಕೆಲವು ಸಂಸಾರಗಳಲ್ಲಿ ಮುಪ್ಪು ಬಹುಬೇಗ ಆವರಿಸುವುದು. ಇನ್ನು ಕೆಲವು ಸಂಸಾರಗಳಲ್ಲಿ ಮುಪ್ಪು ಬಹು ನಿಧಾನವಾಗಿ ಆವರಿಸುವುದರಿಂದ ಶತಾಯುಗಳಾಗಿ ಜೀವಿಸಿರುವುದು ತಿಳಿದು ಬಂದಿದೆ. ಇನ್ನೊಂದು ಉದಾಹರಣೆಯಿಂದ ಇದು ಸ್ಪಷ್ಟವಾಗುವುದು. ಅನುರೂಪ ಅವಳಿಗಳಲ್ಲಿ ಏಕ ಕಾಲದಲ್ಲಿ ಇವೆರಡೂ ಮುದಿತನವನ್ನು ತಲುಪಿ ಒಂದೆರಡು ದಿನದ ಅಂತರದಲ್ಲಿ ಸಾಯುವುದನ್ನು ಕಂಡಾಗ ಇದಕ್ಕೆ ಆನುವಂಶೀಯತೆ ಕಾರಣವೆನ್ನಬೇಕಾಗುತ್ತದೆ. ಇದೇ ಅಲ್ಲದೆ ಮುದಿತನಕ್ಕೆ ಲಿಂಗಭೇದ ಸಹ ಒಂದು ಕಾರಣವಾಗಿರಬಹುದು. ಮನುಷ್ಯ ಇಂದು ತನ್ನ ವಿವಿಧ ವೈಜ್ಞಾನಿಕ ಸಿದ್ಧಾಂತಗಳ ಬಳಕೆಯಿಂದ ಆಯಸ್ಸನ್ನು ಹೆಚ್ಚಿಸಿಕೊಂಡಿರುವನು, ಅಂದರೆ ರೋಗನಿರೋಧಕಗಳು, ಆರೋಗ್ಯ ವಾತಾವರಣ, ನಿಯಂತ್ರಿತ ಆಹಾರ, ವ್ಯಾಯಾಮ ಮತ್ತು ಮನರಂಜನಾ ಕ್ರಮಗಳ ಬಳಕೆಯಿಂದ.

ಪ್ರಾಯೋಗಿಕವಾಗಿ ಆಯಸ್ಸನ್ನು ಹೆಚ್ಚಿಸಿಕೊಳ್ಳಲು ಸಾಧ್ಯವೇ? ವಿಜ್ಞಾನಿಗಳು ಇಲಿ, ಮೊಲ ಮುಂತಾದ ಪ್ರಾಯೋಗಿಕ ಜೀವಿಗಳ ಆಯಸ್ಸನ್ನು ಹೆಚ್ಚಿಸಿರುವುದು ದಾಖಲೆಯಾಗಿದೆ. ಇಲ್ಲಿ ಶೀತಲಗೊಳಿಸುವುದರಿಂದ ಸಾಧ್ಯವೆಂದು ಕಂಡುಬಂದಿದೆ, ಇದರಿಂದ ಮನುಷ್ಯನ ಆಯಸ್ಸನ್ನು ಹೆಚ್ಚಿಸಬಹುದೇ ಎನ್ನುವುದಕ್ಕೆ ಉತ್ತರವಿದೆ. ಕಾರೆಲ್ ರವರು ಶೀತಲಗೊಳಿಸುವುದರಿಂದ, ಜೀವಿಯ ಮುಪ್ಪನ್ನು ಮುಂದೂಡಬಹುದು, ಖಾಯಿಲೆಗಳನ್ನು ವಾಸಿಮಾಡಬಹುದು, ಬಾಳನ್ನು ಸಾರ್ಥಕಗೊಳಿಸಬಹುದು, ಎಂದಿರುವರು. ಇನ್ನು ಕೆಲವರು, ಮುಂಬರುವ ದಿವಸಗಳಲ್ಲಿ ಭ್ರೂಣಗಳಲ್ಲಿರುವ ಚೈತನ್ಯವನ್ನು (ಎಂಬ್ರಿಯಾಲಜಿಕಲ್ ವಿಗರ್) ಆರೋಗ್ಯಕರ ಜೀನುಗಳನ್ನು (ಹೆಲ್ತಿಜೀನ್ಸ್) ಮತ್ತು ಶೀತಲಗೊಳಿಸುವ ಮದ್ದನ್ನು ಕೊಡುವುದರಿಂದ ಸಾಧ್ಯವಾಗಬಹುದು ಎಂದಿರುವರು. ನಮ್ಮ ದೇಶದಲ್ಲಿಯೇ ಸನಾತನ ಕಾಲದಿಂದಲೂ ಕಾಯಕಲ್ಪವನ್ನು ವಿಧಿವತ್ತಾಗಿ ಆಯುರ್ವೇದ ಪದ್ಧತಿಯ ಮೂಲಕ ಸಾಧಿಸಿರುವುದಾಗಿಯೂ ತಿಳಿದುಬಂದಿದೆ. ಇವೆಲ್ಲಾ ಸಾಧಿಸಿದರೂ ಸಾವನ್ನೇ ನಿರ್ಣಯಮಾಡುವ ಸಂಗತಿ ಸತ್ಯಕ್ಕೆ ದೂರವಾದುದ್ದು.

(ಜಿ.ಎಂ.ಬಿ)

# ಖ

**ಖಡ್ಗ ಜೀರುಂಡೆಗಳು:** ಸ್ಕರಾಬಿಡೆ ಕುಟುಂಬದ ಡೈನಾಸ್ಟಿನೆ ಉಪ ಕುಟುಂಬದ ಸದಸ್ಯರು. ತಲೆಯಮೇಲೆ ಕೊಂಬಿನಂಥ ಅಂಗವಿರುವುದರಿಂದ ಈ ಹೆಸರಿದೆ. ಇವುಗಳಲ್ಲಿ ಜೀರುಂಡೆ, ಒಂದು ಕೊಂಬಿನ ರೈನಾಸರಸ್ ಜೀರುಂಡೆ ಮತ್ತು ಆನೆ ಜೀರುಂಡೆ ಎಂಬ ಮೂರು ವಿಧಗಳಿವೆ.

ಇವುಗಳ ಬಣ್ಣ ಕಪ್ಪು. ಸಾಯಂಕಾಲ ಅಥವಾ ರಾತ್ರಿ ಮಾತ್ರ ಹೊರಬರುವುದರಿಂದ ಹಗಲಲ್ಲಿ ಕಾಣಿಸಿಕೊಳ್ಳುವುದು ಅಪರೂಪ. ಗಂಡು ಮತ್ತು ಹೆಣ್ಣು ಜೀರುಂಡೆಗಳಲ್ಲಿ ವ್ಯತ್ಯಾಸವಿದೆ. ಗಂಡುಗಳ ತಲೆಯಮೇಲೆ ಸ್ವಲ್ಪ ಬಾಗಿದ ಕೊಂಬಿರುತ್ತದೆ. ಕೆಲವು ಪ್ರಭೇದ ಜೀರುಂಡೆಗಳ ಕೊಂಬಿನ ಅಂಚಿನಲ್ಲಿ ಮುಳ್ಳಿನಂಥ ರಚನೆಯಿರುತ್ತದೆ. ಇನ್ನು ಕೆಲವು ಪ್ರಭೇದದ ಜೀರುಂಡೆಗಳ ಕೊಂಬು ಇಬ್ಭಾಗವಾಗಿದೆ.

ಡೈನಾಸಿನೆ ಉಪ ಕುಟುಂಬದ ಬಹುಪಾಲು ಜೀರುಂಡೆಗಳು ಉಷ್ಣವಲಯವಾಸಿಗಳು. ಉತ್ತರ ಅಮೆರಿಕದ ಪೂರ್ವ ಮತ್ತು ಪಶ್ಚಿಮಾರ್ಧ ಪ್ರಾಂತ್ಯಗಳಲ್ಲಿ ಕೆಲವು ಪ್ರಭೇದಗಳಿವೆ. ಇಲ್ಲಿ ವಾಸಿಸುವ ಡೈನಾಸ್ಟಿಸ್ ಟೈಟಸ್ ಜೀರುಂಡೆ ಒಂದು ಕೊಂಬನ್ನು ಹೊಂದಿದೆ. ಇದರ ಕೊಂಬಿನ ಉದ್ದ ೫–೭ ಸೆಂಮೀ. ಟೆಕ್ಸಸ್ ದೇಶದಲ್ಲಿ ಸ್ಟ್ರಾಟೆಗಸ್ ಜಾತಿಯ ಆನೆ ಜೀರುಂಡೆಗಳಿವೆ. ಇವುಗಳಲ್ಲಿ ಮೂರು ಕೊಂಬುಗಳು ತಲೆಯ ಮೇಲಿರದೆ ಪ್ರೋನೋಟಂ ಎಂಬ ಭಾಗದ ಮೇಲಿರುತ್ತವೆ. ಪ್ರತಿ ಕೊಂಬು ೪–೫ ಸೆಂಮೀ ಉದ್ದ ಬೆಳೆಯುತ್ತದೆ. ಸ್ಕೈಲೊರಿಕ್ಟಸ್ ಸ್ಯಾಟಿರಸ್ ಜೀರುಂಡೆ ಗಾತ್ರದಲ್ಲಿ ೨.೫ ಸೆಂಮೀ ಗಿಂತ ದೊಡ್ಡದು. ಇದು



ಕಂದು ಮೈಬಣ್ಣ ಹೊಂದಿದೆ. ಗಂಡು ಜೀರುಂಡೆಗಳಲ್ಲಿ ಗಡುಸಾದ ಹಾಗೂ ನೆಟ್ಟಗಿರುವ ಒಂದು ಕೊಂಬಿದೆ. ಆದರೆ, ಹೆಣ್ಣಿನಲ್ಲಿ ಕೊಂಬು ಗುಬಟಿನ ಹಾಗಿದೆ. ಭಾರತದಲ್ಲಿ

ವಾಸಿಸುವ ಒರಿಕ್ಟಿಸ್ ರೈನಾಸರಸ್ ಜೀರುಂಡೆಗಳಲ್ಲಿ ಗಂಡು ಮತ್ತು ಹೆಣ್ಣುಗಳೆರಡರಲ್ಲೂ ಕೊಂಬಿದೆ. ಆದರೆ ಹೆಣ್ಣಿನಲ್ಲಿನ ಕೊಂಬು ಚಿಕ್ಕದು.

ಖಡ್ಗ ಜೀರುಂಡೆಗಳು ಮರದ ಕಾಂಡಗಳಲ್ಲಿ, ಗೊಬ್ಬರ ಮತ್ತು ಕೊಳೆಯುವ ಎಲೆಗಳ ರಾಶಿಯಲ್ಲಿ ಮೊಟ್ಟೆ ಇಡುತ್ತವೆ. ಮೊಟ್ಟೆಗಳಿಂದ ಹೊರಬರುವ ಮರಿ ಡಿಂಬಗಳನ್ನು ಈ ಪದಾರ್ಥಗಳಲ್ಲಿ ಕಾಣಬಹುದು.

ಖಡ್ಗ ಜೀರುಂಡೆಗಳು ಕೆಲವು ಬೆಳೆಗಳಿಗೆ ಬಹಳ ಅಪಾಯಕಾರಿಗಳು. ಸ್ಟೈಲೊರಿಕ್ಟಸ್ ಸ್ಯಾಟಿರಸಿನ ಡಿಂಬಗಳು ಕೆಲವು ಜಾತಿಯ ಮರಗಳ ಬೇರುಗಳನ್ನು ತಿಂದು ಜೀವಿಸುತ್ತವೆ. ಇನ್ನು ಕೆಲವು ಪ್ರಭೇದದ ಜೀರುಂಡೆಗಳು ಕಬ್ಬು ಮತ್ತು ಬತ್ತದ ಬೇರುಗಳನ್ನು ತಿಂದು ಬೆಳೆಯನ್ನು ನಾಶಮಾಡುತ್ತವೆ. ಭಾರತದಲ್ಲಿ ಒರಿಕ್ಟಿಸ್ ರೈನಾಸರಸ್ ತೆಂಗಿನ ಪ್ರಮುಖ ಪೀಡೆಕಾರಕ ಜೀರುಂಡೆ. ಇದು ಅಡಿಕೆ ಮರಗಳಿಗೂ ಮಾರಕವಾಗಿದೆ. ಇದರ ದೇಹದ ಉದ್ದ ೪ ಸೆಂಮೀ. ಅಗಲ ೨ ಸೆಂಮೀ. ಆರೋಗ್ಯವಂತ ತೆಂಗಿನ ಸಸಿ ಮತ್ತು ಮರಗಳ ಸುಳಿಯನ್ನು ಕೊರೆದು, ಸೀಬು ಸುತ್ತಿಕೊಂಡಿರುವ ಗರಿಗಳ ರಸವನ್ನು ಹೀರಿ ಜೀವಿಸುತ್ತದೆ. ಇದರ ಚಟುವಟಿಕೆ ಸಾಯಂಕಾಲದ ಅನಂತರ ಪ್ರಾರಂಭವಾಗುತ್ತದೆ. ಇದು ಎಳೆಯ ಸುಳಿಗರಿಗಳನ್ನು ತಿಂದು ನಾಶಪಡಿಸುವುದಲ್ಲದೆ ಸೊಂಡಿಲು ಜೀರುಂಡೆಗಳು ವಾಸಿಸಲು ಅನುಕೂಲ ಮಾಡಿಕೊಡುತ್ತದೆ. ಇದರ ಹಾವಳಿಯಿಂದ ತೆಂಗಿನ ಸುಳಿ ಗರಿಗಳು ಸಣ್ಣವಾಗಿ ಮರದ ಬೆಳೆವಣಿಗೆ ಕುಂಠಿತವಾಗುತ್ತದೆ. ಇದರಿಂದ ತೆಂಗಿನ ಕಾಯಿಗಳ ಇಳುವರಿ ಕಡಿಮೆಯಾಗುತ್ತದೆ.

ಹೆಣ್ಣು ಜೀರುಂಡೆ ಸು. ೬೦ ಮೊಟ್ಟೆಗಳನ್ನು ಕೊಳೆಯುವ ಎಲೆಗಳ ಮಧ್ಯೆ ಅಥವಾ ಸಗಣಿ, ಮರದ ಹೊಟ್ಟಿನಲ್ಲಿ ಇಡುತ್ತದೆ. ಮೊಟ್ಟೆಯೊಡೆದು ಮರಿಯಾಗಲು ೧೦–೧೨ ದಿನಗಳು ಬೇಕು. ಡಿಂಬಾವಸ್ಥೆಯ ಅವಧಿ ೬೦–೨೦೦ ದಿನಗಳು. ದಕ್ಷಿಣ ಭಾರತದಲ್ಲಿ ಈ ಜೀರುಂಡೆಯ ಡಿಂಬಾವಸ್ಥೆ ಅವಧಿ ಬೇಸಗೆ ಕಾಲದಲ್ಲಿ ೧೦೦ ದಿನಗಳು, ಚಳಿಗಾಲದಲ್ಲಿ ೧೨೦–೧೪೦ ದಿನಗಳು. ಕೋಶಾವಸ್ಥೆ ತಲುಪುವ ೬–೧೦ ದಿನಗಳ ಮುಂಚೆ ಡಿಂಬಗಳ ಚಟುವಟಿಕೆ ಕಡಿಮೆಯಾಗುತ್ತದೆ. ಕೋಶಾವಸ್ಥೆಯ ಅವಧಿ ಸು. ೨೧ ದಿನಗಳು. ಹೀಗೆ ಮೊಟ್ಟೆಯ ಹಂತದಿಂದ ಪ್ರೌಢ ಕೀಟ ಜೀರುಂಡೆಯಾಗುವವರೆಗೆ ೪–೯ ತಿಂಗಳು ಬೇಕು. ವಯಸ್ಕ ಜೀರುಂಡೆ ೧೦ ತಿಂಗಳು ಬದುಕಿರುತ್ತದೆ. (ಎನ್.ವಿ.ಎ.)

**ಖಡ್ಗಬಾಲ ಮೀನು:** ಅಥೆರಿನೀಫಾರ್ಮಿಸ್ ಗಣದ ಸಿಪ್ರಿನೊಡಾಂಟಿಡೆ ಕುಟುಂಬಕ್ಕೆ ಸೇರಿದ ಅಸ್ಥಿಮೀನು. ಶಾಸ್ತ್ರೀಯ ನಾಮ ಕ್ಸಿಫೊಫೊರಸ್ ಹೆಲೇರಿ. ಗಪ್ಪಿ, ಪ್ಲಾಟಿ ಮೀನು ಮತ್ತು ಮೋಲಿಗಳು ಇದಕ್ಕೆ ಹತ್ತಿರ ಸಂಬಂಧಿಗಳು.

ಕತ್ತಿಯಂತಿರುವ ಬಾಲ ಈ ಮೀನಿನ ವಿಶೇಷ ಗುಣ. ಇದು ಪ್ರಾಯಕ್ಕೆ ಬಂದ ಗಂಟುಮೀನಿನಲ್ಲಿ ಕಂಡು ಬರುತ್ತದೆ. ಬಾಲದ ರೆಕ್ಕೆಯ ಕೆಳಭಾಗ ನೀಳವಾಗಿ ಬೆಳೆದು ಅದರ ತುದಿ ಮೊನಚಾಗಿ ಖಡ್ಗವನ್ನು ಹೋಲುವುದರಿಂದ ಈ ಹೆಸರು. ಮೀನು ಸುಮಾರು 15 ಸೆಂಮೀ ವರೆಗೂ ಬೆಳೆಯುತ್ತದೆ. ಬಾಲ ದೇಹದ ಅರ್ಧದಷ್ಟಿದೆ. ಈ ಬಾಲದ ಉಪಯೋಗವೇನೆಂದು ಸರಿಯಾಗಿ ತಿಳಿದಿಲ್ಲ. ಪ್ರಣಯಕೇಳಿ ಸಂದರ್ಭದಲ್ಲಿ ಗಂಡು ಇದನ್ನು ಪ್ರದರ್ಶಿಸುವುದೆಂಬ ಅಭಿಪ್ರಾಯವಿದೆ. ಈ ಪ್ರದರ್ಶನದಿಂದ ಹೆಣ್ಣು ಉದ್ರೇಕಗೊಳ್ಳುವುದೋ ಅಥವಾ ಮರುಳುಗೊಳ್ಳುವುದೋ ತಿಳಿಯದು.

ಖಡ್ಗಬಾಲ ಮೀನು ಮೆಕ್ಸಿಕೊದ ಮೂಲನಿವಾಸಿ. ಇಲ್ಲಿಂದ 1909 ರಲ್ಲಿ ಮೊದಲ ಬಾರಿಗೆ ಇದನ್ನು ಜರ್ಮನಿಗೆ ತರಲಾಯಿತು. ಇದಕ್ಕೆ ಎರಡು ವರ್ಷಗಳ ಮುನ್ನ ಪ್ಲಾಟಿ ಮೀನನ್ನು ತರಲಾಗಿತ್ತು. ಈ ಎರಡು ಪ್ರಭೇದಗಳ ಮೀನುಗಳನ್ನೂ ಅಡ್ಡಹಾಯಿಸಿ ಅನೇಕ ಅಂದವಾದ ಬಣ್ಣ ಬಣ್ಣದ ಮಿಶ್ರತಳಿಗಳನ್ನು ಪಡೆಯಲಾಯಿತು. ಈಗಿರುವ ಎಲ್ಲ ಕೆಂಪು ಪ್ಲಾಟಿ ಮೀನುಗಳು ಮತ್ತು ಖಡ್ಗಬಾಲ ಮೀನುಗಳು ಅಡ್ಡ ಹಾಯ್ಕೆಯಿಂದ ಹುಟ್ಟಿದ ಮಿಶ್ರತಳಿಗಳು. ಸೋಜಿಗದ ಸಂಗತಿಯೆಂದರೆ ಸಾಮಾನ್ಯ ಬಗೆಯ ಕೊಳ ಅಥವಾ ಹೊಳೆಯಲ್ಲಿದ್ದರೂ ಅವುಗಳಲ್ಲಿ ತಳಿ ಸಂಕರ ಇಲ್ಲ. ಆದರೆ ಜಲಚರ ಪ್ರಾಣಿಸಂಗ್ರಹಾಲಯ (ಅಕ್ವೇರಿಯಂ)ದ ನೀರಿನಲ್ಲಿ ಮಾತ್ರ ತಳಿಸಂಕರ ಕ್ರಿಯೆ ನಡೆಯುತ್ತದೆ.

ಖಡ್ಗಬಾಲ ಮೀನುಗಳು ಹಾಂಡುರಾಸ್, ಬ್ರಿಟಿಷ್ ಹಾಂಡುರಾಸ್, ಗ್ವಾಟೆಮಾಲ ಮತ್ತು ದಕ್ಷಿಣ ಮೆಕ್ಸಿಕೊದಲ್ಲಿ (ಯುಕಟಾನ್ ಬಿಟ್ಟು) ಸಾಮಾನ್ಯವಾಗಿ ಕಂಡುಬರುತ್ತವೆ. ಇವು ಸಾಮಾನ್ಯವಾಗಿ ಪ್ಲಾಟಿ ಮೀನುಗಳಿಗಿಂತ ಎತ್ತರ ಪ್ರದೇಶ ಮತ್ತು ತಂಪು ನೀರನ್ನು ಇಚ್ಛಿಸುತ್ತವೆ.

ಪ್ಲಾಟಿ ಮೀನು, ಖಡ್ಗಬಾಲ ಮೀನುಗಳ ಕೆಲವು ಅಡ್ಡ ತಳಿಗಳು ಸಾಮಾನ್ಯವಾಗಿ ಕರಿ ಏಡಿಗಂತಿ ರೋಗಕ್ಕೆ (ಬ್ಲ್ಯಾಕ್ ಕ್ಯಾನ್ಸರ್) ಸುಲಭವಾಗಿ ತುತ್ತಾಗುತ್ತವೆ. ಇದಕ್ಕೆ ಕಾರಣವನ್ನು ಕಂಡಹಿಡಿಯಲು ಕೆಲವು ವೈದ್ಯಕೀಯ ಸಂಶೋಧನಾಲಯಗಳ ತಳಿವಿಜ್ಞಾನ ಪ್ರಯೋಗಾಲಯಗಳಲ್ಲಿ ಸಂಶೋಧನೆ ನಡೆಯುತ್ತಿದೆ. (ಎನ್.ವಿ.ಎ)

**ಖಡ್ಗ ಮೃಗ:** ಆಫ್ರಿಕ ಮತ್ತು ಏಷ್ಯ ಖಂಡಗಳ ಉಷ್ಣ ಹಾಗೂ ಉಪೋಷ್ಣವಲಯಗಳ ಮೂಲವಾಸಿಯಾದ ಒಂದು ಬೃಹದ್ಗಾತ್ರದ ಸ್ತನಿ. ಘೇಂಡಾಂಮೃಗ ಪರ್ಯಾಯನಾಮ. ಮ್ಯಾಮೇಲಿಯ ವರ್ಗದ ಪೆರಿಸೊಡ್ಯಾಕ್ಟಿಲ ಗಣದಲ್ಲಿನ ರೈನೊಸೆರಾಟಿಡೆ ಕುಟುಂಬಕ್ಕೆ ಸೇರಿದೆ. ಬೆಸಸಂಖ್ಯೆಯ ಬೆರಳುಗಳುಳ್ಳ ಗೊರಸುಗಳು ಮತ್ತು ಮೂತಿಯ ಮೇಲೆ ಒಂದು ಅಥವಾ ಎರಡು ಕೊಂಬುಗಳಿರುವುದು ಈ ಪ್ರಾಣಿಯ ವಿಶಿಷ್ಟ ಲಕ್ಷಣಗಳು. ಪೆರಿಸೊಡ್ಯಾಕ್ಟಿಲ ಗಣಕ್ಕೆ ಸೇರಿದ ಕುದುರೆ, ಜ಼ೀಬ್ರ, ಟಾಪಿರ್ ಪ್ರಾಣಿಗಳಿಗೆ ಹತ್ತಿರದ ಸಂಬಂಧಿ ಇದು. ಇವಕ್ಕೂ ಖಡ್ಗಮೃಗಕ್ಕೂ ಬೆಸಸಂಖ್ಯೆಯ ಬೆರಳುಗಳ ಲಕ್ಷಣದಲ್ಲಿ ಪರಸ್ಪರ ಸಾಮ್ಯವಿದೆ.

ಖಡ್ಗಮೃಗಗಳಲ್ಲಿ ಒಟ್ಟು ೪ ಜಾತಿಗಳಿಗೆ ಸೇರಿದ ೫ ಪ್ರಭೇದಗಳಿವೆ. ಆಫ್ರಿಕದ (ಉಗಾಂಡ, ಕಾಂಗೊ, ಜ಼ೂಲೂ ಲ್ಯಾಂಡ್, ಕೀನ್ಯ) ಸವಾನ ಹುಲ್ಲುಗಾಡುಗಳಲ್ಲಿ ಮತ್ತು ದಟ್ಟ ಕಾಡುಗಳಲ್ಲಿ ಡೈಸೆರಸ್ ಬೈಕಾರ್ನಿಸ್ (ಕರಿ ಖಡ್ಗಮೃಗ) ಮತ್ತು ಸೆರಟೊತೀರಿಯಂ ಸೈಮಸ್ (ಬಿಳಿ ಖಡ್ಗಮೃಗ) ಪ್ರಭೇದಗಳೂ ಭಾರತದ ಅಸ್ಸಾಮಿನ ಕಾಡುಗಳಲ್ಲಿ ರೈನಾಸರಾಸ್ ಯೂನಿಕಾರ್ನಿಸ್ ಪ್ರಭೇದವೂ ಜಾವದಲ್ಲಿ ರೈನಾಸರಾಸ್ ಸೋಂಡೇಕಸ್ ಪ್ರಭೇದವೂ ಸುಮಾತ್ರದಲ್ಲಿ ಡೈಡರ್ಮೊಸೆರಾಸ್ (ಡೈಸೆರಾರ್ರೈನಸ್) ಸುಮಾತ್ರೆನ್ಸಿಸ್ ಪ್ರಭೇದವೂ ಕಾಣದೊರೆಯುತ್ತವೆ.

ಖಡ್ಗಮೃಗದ ದೇಹ ಬಲು ಸ್ಥೂಲ (ಪೂರ್ಣ ಬೆಳೆದ ಗಂಡು ಖಡ್ಗಮೃಗದ ಉದ್ದ ಸುಮಾರು ೨–೪.೨ ಮೀ., ಎತ್ತರ ಸುಮಾರು ೧–೨ ಮೀ. ತೂಕ ೧–೩.೫ ಮೆಟ್ರಿಕ್ ಟನ್ನುಗಳು). ಆನೆಯನ್ನು ಬಿಟ್ಟರೆ ಆಫ್ರಿಕದ ಸೆರಟೊತೀರಿಯಮ್ ಸೈಮಸ್ ಪ್ರಭೇದವೇ ಬಲು ದೊಡ್ಡ ಭೂವಾಸಿ ಪ್ರಾಣಿಯೆನ್ನಲಾಗಿದೆ. ಹೆಣ್ಣು ಗಂಡಿಗಿಂತ ಚಿಕ್ಕದು. ಚರ್ಮ ಬಹಳ ದಪ್ಪ ಹಾಗೂ ಗಡುಸು. ಆಫ್ರಿಕದ ಪ್ರಭೇದಗಳಲ್ಲಿ ಚರ್ಮ ನಯವಾಗಿದೆ. ಆದರೆ ಭಾರತ ಹಾಗೂ ಜಾವದಲ್ಲಿನ ಖಡ್ಗಮೃಗಗಳ ಚರ್ಮ ಕತ್ತು ಹಾಗೂ ಕಾಲುಗಳ ಬಳಿ ಮಡಿಚಿಕೊಂಡಿದ್ದು ಒಂದು ಬಗೆಯ ಯುದ್ಧ ಕವಚದಂತೆ ಕಾಣುತ್ತದೆ. ಕಿವಿಯ ಅಂಚು, ಬಾಲದ ತುದಿ ಇವುಗಳನ್ನು ಬಿಟ್ಟರೆ ದೇಹದ ಮೇಲೆ ಎಲ್ಲೂ ಕೂದಲುಗಳಿಲ್ಲ. ದೇಹದ

ಖಡ್ಗಬಾಲ ಮೀನು

ಬಣ್ಣ ಬೂದಿ ಇಲ್ಲವೆ ಕಂದು. ಆಫ್ರಿಕದ ಡೈಸೆರೆಸ್ ಪ್ರಭೇದವನ್ನು ಕರಿ ಖಡ್ಗಮೃಗವೆಂದೂ ಸೆರಟೊತೀರಿಯಂ ಪ್ರಭೇದವನ್ನು ಬಿಳಿ ಖಡ್ಗಮೃಗವೆಂದೂ ಕರೆಯುವುದು ವಾಡಿಕೆಯಲ್ಲಿದೆ ಯಾದರೂ ಅವು ವಾಸ್ತವವಾಗಿ ಶುದ್ಧ ಬಿಳಿ ಬಣ್ಣದವಲ್ಲ. ಬಿಳಿ ಬಗೆಯದರ ಮೈ ಬಣ್ಣ ಬೇರೆ ಬಗೆಗಳಿಗೆ ಹೋಲಿಸಿದರೆ ಕೊಂಚ ತಿಳಿಯಾಗಿದೆ ಅಷ್ಟೆ. ಖಡ್ಗಮೃಗಗಳ ದೇಹದ ಮೇಲೆ ಅಲ್ಲಲ್ಲೆ ಗುಬುಟುಗಳಿರುವುದೂ ಉಂಟು. ಮೈಗಾತ್ರಕ್ಕೆ ಹೋಲಿಸಿದರೆ ಕಾಲುಗಳು ಬಲುಚಿಕ್ಕವು; ಕಂಬದಂತಿವೆ. ಮುಂಗಾಲು ಮತ್ತು ಹಿಂಗಾಲುಗಳಲ್ಲಿ ತಲಾ ಮೂರು ಬೆರಳುಗಳಿವೆ. ಒಂದೊಂದು ಬೆರಳಲ್ಲೂ ಪರಸ್ಪರ ಬಿಡಿಬಿಡಿಯಾದ ಗೊರಸುಗಳಿವೆ. ಖಡ್ಗಮೃಗದ ಕತ್ತು ಚಿಕ್ಕದು. ತಲೆ ಭಾರಿಯಾಗಿದೆ. ಮೇಲ್ಮುಖವಾಗಿ ಕೊಂಚ ಬಾಗಿದಂತಿರುವ ಮೂತಿಯ ಮೇಲೆ ಕೊಂಬುಗಳಿವೆ. ಆಫ್ರಿಕದಲ್ಲಿ ಮತ್ತು ಸುಮಾತ್ರದಲ್ಲಿ ವಾಸಿಸುವ ಖಡ್ಗಮೃಗಗಳಲ್ಲಿ ಒಂದರ ಹಿಂದೊಂದು ಇರುವ ೨ ಕೊಂಬುಗಳೂ ಭಾರತ ಹಾಗೂ ಜಾವದಲ್ಲಿರುವ ಪ್ರಭೇದಗಳಲ್ಲಿ ಒಂದೇ ಕೊಂಬೂ ಇವೆ. ಕೊಂಬುಗಳಿಗೂ ತಲೆಬುರುಡೆಯ ಮೂಳೆಗಳಿಗೂ ಯಾವುದೇ ಸಂಬಂಧವಿಲ್ಲ. ಮೂತಿಯ ಮೇಲಿನ ಕೆಲವು ವಿಶೇಷ ಬಗೆಯ ಕೂದಲುಗಳು ಒತ್ತಾಗಿ ಹೆಣೆದುಕೊಂಡು, ಬಿರುಸುಗೊಂಡು ಉಂಟಾದ ರಚನೆಗಳಿವು. ಇದರಿಂದಾಗಿ ಖಡ್ಗಮೃಗದ ಕೊಂಬುಗಳು ಬೇರೆ ಪ್ರಾಣಿಗಳ (ದನ, ಜಿಂಕೆ, ಜಿರಾಫೆ ಇತ್ಯಾದಿ) ಕೊಂಬುಗಳಿಂದ ಭಿನ್ನರೀತಿಯಾಗಿವೆ. ಭಾರತದಲ್ಲಿ ಖಡ್ಗಮೃಗ ತನ್ನ ಕೊಂಬನ್ನು ಯಾವುದಾದರೂ ಗಟ್ಟಿಯಾದ ತಲಕ್ಕೆ ಮಸೆದು ಚಪ್ಪಟೆ ಮಾಡಿಕೊಳ್ಳುವುದುಂಟು. ಆಫ್ರಿಕದಲ್ಲಿನ ಪ್ರಭೇದಗಳು ಈ ರೀತಿ ಮಾಡುವುದಿಲ್ಲವಾಗಿ ಕೊಂಬುಗಳು ಚೂಪಾಗಿಯೇ ಇರುತ್ತವೆ. ಖಡ್ಗ ಮೃಗ ಆಕ್ರಮಣಕ್ಕೆ ಮತ್ತು ತನ್ನ ರಕ್ಷಣೆಗೆ ಕೊಂಬನ್ನು ಆಯುಧವನ್ನಾಗಿ ಬಳಸುತ್ತದೆ. ರೈನಾಸೆರಾಸ್ ಮತ್ತು ಡೈಸೆರಾಸ್ ಪ್ರಭೇದಗಳಲ್ಲಿ ಮೇಲ್ತುಟಿ ಕೊಂಚ ಮುಂದಕ್ಕೆ ಚಾಚಿದಂತಿದ್ದು ಅದಕ್ಕೆ ಆಹಾರವನ್ನು ಹಿಡಿದುಕೊಳ್ಳುವ ಸಾಮರ್ಥ್ಯವುಂಟು. ಉಳಿದ ಪ್ರಭೇದಗಳಲ್ಲಿ ಮೇಲ್ತುಟಿ ಮೊಂಡಾಗಿದೆ. ತಲೆಯ ಇಕ್ಕೆಲಗಳಲ್ಲಿ ಪುಟ್ಟ ಗಾತ್ರದ ಕಣ್ಣುಗಳಿವೆ. ಕಿವಿಗಳು ಚಿಕ್ಕವು. ಕಿವಿಗಳ ತುದಿಯಲ್ಲಿ ಕೂದಲುಗಳ ಕುಚ್ಚಿದೆ.



ಖಡ್ಗಮೃಗ ಸಾಮಾನ್ಯವಾಗಿ ಒಂಟಿಯಾಗಿಯೇ ವಾಸಿಸುತ್ತದೆ. ಸಂತಾನವೃದ್ಧಿಯ ಕಾಲದಲ್ಲಿ ಮಾತ್ರ ಹೆಣ್ಣು ಮತ್ತು ಗಂಡು ಪ್ರಾಣಿಗಳು ಜೊತೆಜೊತೆಯಾಗಿಯೇ ಓಡಾಡುತ್ತವೆ. ಖಡ್ಗಮೃಗಗಳು ನಿಶಾಚರಿಗಳು. ಸಂಜೆಯಿಂದ ಮುಂಜಾವಿನ ವರೆಗೂ ಆಹಾರಾನ್ವೇಷಣೆಯಲ್ಲಿ ತೊಡಗಿದ್ದು ಹಗಲೆಲ್ಲ ಯಾವುದಾದರೂ ವಿವಿಕ್ತ ಸ್ಥಳದಲ್ಲಿ ಅಡಗಿರುತ್ತವೆ. ಬಲು ಒತ್ತುಕಟ್ಟಾದ ಪೊದೆಗಳಲ್ಲಿ ಅವಿತಿಟ್ಟುಕೊಂಡಿದ್ದು ನಿದ್ದೆ ಮಾಡುವುದೇ ರೂಢಿ. ನಿಂತುಕೊಂಡು ಇಲ್ಲವೆ ನೆಲದ ಮೇಲೆ ಒರಗಿ ನಿದ್ದೆ ಮಾಡುತ್ತವೆ. ಬಿಸಿಲಿನ ತಾಪ ಹೆಚ್ಚಾದಾಗ ಕೆಸರು ನೀರಿನಲ್ಲಿ ಹೊರಳಾಡುತ್ತ, ನದಿಗಳಲ್ಲಿ ಈಜುತ್ತ ಕಾಲಕಳೆಯುವುದೆಂದರೆ ಇವಕ್ಕೆ ಬಲು ಅಚ್ಚುಮೆಚ್ಚು. ಎಲ್ಲ ಬಗೆಯ ಖಡ್ಗಮೃಗಗಳೂ ಸಂಪೂರ್ಣ ಸಸ್ಯಾಹಾರಿಗಳು. ಸೆರಟೋತೀರಿಯಂ ಜಾತಿಯ ಖಡ್ಗ ಮೃಗಗಳು ಹುಲ್ಲು ಮೇಯುತ್ತವೆ. ಉಳಿದುವು ಗಿಡಮರಗಳ ಎಳೆಚಿಗುರನ್ನೂ ಮೊಗ್ಗುಗಳನ್ನೂ ಮೆಲ್ಲುತ್ತವೆ. ಖಡ್ಗಮೃಗಗಳು ಬಲು ಸ್ಥೂಲ ಗಾತ್ರದವಾದರೂ ಚೆನ್ನಾಗಿ, ವೇಗವಾಗಿ (ಗಂಟೆಗೆ ಸುಮಾರು ೪೫ ಕಿಮೀ ವೇಗದಲ್ಲಿ) ಓಡಬಲ್ಲುವು. ಓಟ ಕುದುರೆಯ ನಾಗಾಲೋಟವನ್ನು ಹೋಲುತ್ತದೆ. ಖಡ್ಗಮೃಗದ ದೃಷ್ಟಿಶಕ್ತಿ ಬಲುಮಂದ. ಆದರೆ ಘ್ರಾಣಶಕ್ತಿ ಹಾಗೂ ಶ್ರವಣಶಕ್ತಿಗಳು ಬಹಳ ಚುರುಕಾಗಿವೆ. ಖಡ್ಗಮೃಗಗಳಿಗೆ ಮನುಷ್ಯನನ್ನು ಬಿಟ್ಟರೆ ಬೇರಾವ ಶತ್ರುಗಳೇ ಇಲ್ಲ ಎಂದು ಹೇಳಬಹುದು. ಆಫ್ರಿಕದ ಕಪ್ಪು ಖಡ್ಗಮೃಗವನ್ನು ಬಿಟ್ಟರೆ ಉಳಿದವೆಲ್ಲ ಸಾಧುಸ್ವಭಾವದುವು. ಅಂಜುಕುಳಿಗಳೆಂದರೂ ತಪ್ಪಿಲ್ಲ. ಆದರೆ ಶತ್ರುಗಳಿಂದಾವೃತವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಗದಾದಾಗ ಬಲು ಕ್ರೂರವಾಗಿ ಹೋರಾಡಬಲ್ಲುವು. ರಭಸದಿಂದ ಶತ್ರುಗಳ ಮೇಲೆ ನುಗ್ಗಿ ಕೊಂಬಿನಿಂದ ಇಲ್ಲವೆ ಹಲ್ಲುಗಳಿಂದ ತಿವಿಯುತ್ತವೆ.

ನೀರಿನ ಆಸರೆಗಳ ಸಮೀಪದ ಪ್ರದೇಶಗಳಲ್ಲೆ ಖಡ್ಗಮೃಗಗಳ ವಾಸ. ಸಾಮಾನ್ಯವಾಗಿ ದಟ್ಟ ಪೊದೆಗಳ ನಡುವೆ ಸುರಂಗದ ರೀತಿಯ ದಾರಿ ಮಾಡಿಕೊಂಡು ತಾವು ಆಹಾರವನ್ನು ಮೇಯುವ ಸ್ಥಳಗಳಿಂದ ನೀರಿನ ನೆಲೆಗಳಿಗೆ ಹೋಗಿಬರುತ್ತವೆ. ಸಾಧಾರಣವಾಗಿ ಒಂದೊಂದು ಖಡ್ಗಮೃಗವೂ ಒಂದು ನಿರ್ದಿಷ್ಟ ಪ್ರದೇಶವನ್ನು ಆರಿಸಿಕೊಂಡು ಅದರ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿಕೊಳ್ಳುತ್ತದೆ. ಆ ಪ್ರದೇಶದ ಎಲ್ಲೆಕಟ್ಟನ್ನು ಗುರುತಿಸುವುದಕ್ಕಾಗಿ ಎಂಬಂತೆ ಅಲ್ಲಲ್ಲಿ ಲದ್ದಿ ಇಲ್ಲವೆ ಮೂತ್ರ ವಿಸರ್ಜನೆ ಮಾಡುತ್ತದೆ.

ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಮತ್ತು ಹೆಣ್ಣು ಖಡ್ಗ ಮೃಗಗಳು ಜೊತೆಗೂಡಿ ವಾಸಿಸತೊಡಗುತ್ತವೆ. ಸುಮಾರು ೪ ತಿಂಗಳು ಕಾಲ ಹೀಗೆ ಜೊತೆಯಾಗಿರುವುದುಂಟು. ದೀರ್ಘಾವಧಿಯ ಗರ್ಭಧಾರಣೆಯ ಕಾಲದ ಅನಂತರ ಸೂಲಿಗೆ ಒಂದೇ ಒಂದು ಮರಿ ಹುಟ್ಟುತ್ತದೆ. ಗರ್ಭಧಾರಣೆಯ ಅವಧಿ ಯೂನಿಕಾರ್ನಿಸ್ ಪ್ರಭೇದದಲ್ಲಿ ೧೯ ತಿಂಗಳು, ಸೋಂಡೇಕಸ್ ಪ್ರಭೇದದಲ್ಲಿ ೧೭ ತಿಂಗಳು, ಸುಮಾತ್ರದ ಖಡ್ಗಮೃಗದಲ್ಲಿ ೭-೮ ತಿಂಗಳು, ಆಫ್ರಿಕದ ಬೈಕಾರ್ನಿಸ್ ಹಾಗೂ ಸೆರಟೊತೀರಿಯಂ ಪ್ರಭೇದದಲ್ಲಿ ೧೮ ತಿಂಗಳು-ಹೀಗೆ ಬೇರೆಬೇರೆಯಾಗಿದೆ.

ಮರಿ ಹುಟ್ಟಿದ ಕೆಲವೇ ಗಂಟೆಗಳಲ್ಲಿ ಚುರುಕಾಗಿ ಓಡಾಡತೊಡಗುತ್ತದೆ. ಮರಿಯಲ್ಲಿ ಕೊಂಬುಗಳು ಚೆನ್ನಾಗಿ ರೂಪುಗೊಂಡಿರುವುದಿಲ್ಲ. ತಾಯಿಗೆ ಮತ್ತೊಂದು ಮರಿ ಹುಟ್ಟುವವರೆಗೂ ತಾಯಿಯೊಂದಿಗೆ ಇದ್ದು ಅನಂತರ ಬೇರೆಯಾಗಿ ಒಂಟಿ ಜೀವನ ಆರಂಭಿಸುತ್ತದೆ. ಖಡ್ಗಮೃಗದ ಆಯುಸ್ಸು ಸುಮಾರು ೫೦ ವರ್ಷಗಳು.

ಖಡ್ಗಮೃಗಗಳನ್ನು ಬಹು ಹಿಂದಿನಿಂದಲೂ ಮಾನವ ಬೇಟೆಯಾಡುತ್ತ ಬಂದಿದ್ದಾನೆ. ಆಫ್ರಿಕದ ಕೆಲವು ಬುಡಕಟ್ಟುಗಳಲ್ಲಿ ಇದರ ಮಾಂಸ ಬಹಳ ರುಚಿಕಟ್ಟಾದ ಆಹಾರವೆನಿಸಿದೆ. ಇದರ ಯಕೃತ್ ಅಂತೂ ಬಹಳ ಅಚ್ಚುಮೆಚ್ಚಿನ ಖಾದ್ಯ. ಇದರ ಒರಟಾದ ಚರ್ಮದಿಂದ ಚಾವಟಿ ಮುಂತಾದುವನ್ನು ಮಾಡುವುದಿದೆ. ಅಲ್ಲದೆ ಸೋಮಾಲಿಯದ ನಿವಾಸಿಗಳು ಇದರ ಚರ್ಮದಿಂದ ಗುರಾಣಿಗಳನ್ನು ತಯಾರಿಸುತ್ತಾರೆ. ಖಡ್ಗಮೃಗಗಳ ಕೊಂಬಿಗೆ ಕಾಮೋತ್ತೇಜಕ ಗುಣ ಇದೆ ಎಂದು ಚೀನದಲ್ಲಿ ನಂಬಲಾಗಿದೆ. ಅಲ್ಲದೆ ವಿಷಾಪಹಾರಿ. ಬೇಟೆ ನಿರ್ಭಾದಿತವಾಗಿ ಸಾಗುತ್ತಿದ್ದು ಇವು ನಿರ್ವಂಶವಾಗುವ ಸ್ಥಿತಿಯಲ್ಲಿವೆ. ಆದ್ದರಿಂದ ಆಯಾ ದೇಶಗಳ ಸರ್ಕಾರಗಳು ಖಡ್ಗಮೃಗಗಳ ಬೇಟೆಯನ್ನು ಕಾನೂನಿನ ಮೂಲಕ ನಿಷೇಧಿಸಿವೆ. ***

**ಖಿಲೋನಿಯ:** ಸರೀಸೃಪಗಳ ಅನಾಪ್ಸಿಡಾ ಉಪವರ್ಗಕ್ಕೆ ಸೇರಿದ ಗಣ. ಆಮೆಗಳು ಈ ಗಣಕ್ಕೆ ಸೇರಿವೆ. ಬ್ರಿಟಿಷ್ ದ್ವೀಪಗಳಲ್ಲಿ ಸಮುದ್ರವಾಸಿ ಖಿಲೋನಿಯಾಗಳನ್ನು



ಗೊಫಿರಸ್ ಬೆರ್ಲ್ಯಾಂಡಿಯೆರಿ

ಟರ್ಟಲ್ ಎಂದೂ ಉಳಿದವನ್ನು ಟಾರ್ಟಾಯಿಸ್ ಎಂದೂ ಹೆಸರಿಸಲಾಗುತ್ತದೆ. ಅಮೇರಿಕಾದಲ್ಲಿ ಎರಡನ್ನೂ ಸೇರಿಸಿ ಟರ್ಟಲ್ ಎಂದೇ ಕರೆಯಲಾಗುತ್ತದೆ.

ಖಿಲೋನಿಯ ವಿಚಿತ್ರ ಗುಣಗಳ ನಿರ್ದಿಷ್ಟ ಆಕಾರದ ಸರೀಸೃಪಗಳನ್ನೊಳಗೊಂಡಿದೆ. ಬಹುಶಃ ಇವು ಕಾಟಲೋಸಾರಿಯ ಗುಂಪಿನ ಪುರಾತನ ಪ್ರಾಣಿಗಳಿಂದ ವಿಕಾಸಗೊಂಡಿರಬೇಕು. ಏಕೆಂದರೆ ಕಾಟಲೊಸಾರಿಯಾಗಳಲ್ಲಿ ಕೆಲವು ಮುಖ್ಯವಾದ ಅನಾಪ್ಸಿಡ್ ಗುಣಗಳಿವೆ. ವಿಶಿಷ್ಟ ಬೆಳವಣಿಗೆ ಮತ್ತು ಅಸಾಮಾನ್ಯವಾದ ಪೆಟ್ಟಿಗೆಯಾಕಾರದ ಬಾಹ್ಯಾಸ್ಥಿಪಂಜರಗಳ ಅಸ್ತಿತ್ವದ ಬಗ್ಗೆ ಹೆಚ್ಚಿನ ವಿವರಣೆ ನೀಡಲು ಸಾಧ್ಯವಾಗಿಲ್ಲ. ಈ ಬಾಹ್ಯಾಸ್ಥಿಪಂಜರ 160 ದಶಲಕ್ಷ ವರ್ಷಗಳ ಹಿಂದಿನಿಂದಲೂ, ಹೆಚ್ಚಿನ

ಬದಲಾವಣೆಯಿಲ್ಲದ ಶರೀರದಿಂದಾಗಿ ವಿಕಾಸದ ಗರ್ಭದಲ್ಲಿ ನಶಿಸಿಹೋಗದೆ ಇನ್ನೂ ಜೀವಂತವಾಗಿದ್ದು, ಜೀವಂತ ಪಳೆಯುಳಿಕೆ ಎಂದು ಹೆಸರು ಪಡೆದಿವೆ.

ಇಂದು ಬದುಕಿ ಉಳಿದಿರುವ ಎಲ್ಲ ಖಿಲೋನಿಯಾಗಳನ್ನು ಒಟ್ಟಿಗೆ ಆಮೆಗಳೆನ್ನುವರು. ಮೂಲತಃ ಭೂಚರಗಳಾಗಿದ್ದು 2 ಮೀಟರ್‌ವರೆಗೂ ಉದ್ದವಿರುತ್ತವೆ. ಡರ್ಮೊಕಿಲೀಸ್ ಅರ್ಧ ಟನ್ನು ತೂಕವಿದೆ. ಈ ಗುಂಪಿನಲ್ಲಿ 200 ಕ್ಕಿಂತ ಹೆಚ್ಚು ಪ್ರಭೇದಗಳಿದ್ದು ಅವುಗಳಲ್ಲಿ ಕೆಲವು ಪುನಃ ಜಲಚರ ಜೀವನಕ್ಕೆ ಮರಳಿವೆ. ಕೆಲವು ಮಾಂಸಾಹಾರಿಗಳು, ಕೆಲವು ಸಸ್ಯಾಹಾರಿಗಳು.

ಖಿಲೋನಿಯ ಇತಿಹಾಸದ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲ. ಬಹುಶಃ ಕ್ರಿಟೇಸಿಯಸ್ ಕಾಲದಲ್ಲಿ ಹಲವಾರು ಪ್ರಭೇದಗಳಿರಬೇಕು. ಇದಕ್ಕೂ ಹಿಂದೆ ಮಧ್ಯಪರ್ಮಿಯನ್ ಕಾಲದಲ್ಲಿ ಯೂನೋಟೋಸಾರಸ್ ಎಂಬ ಪ್ರಾಣಿಯ ಅವಶೇಷ ದೊರೆತಿದ್ದು ಅದು ಬಹುಶಃ ಆಗಿನ ಆಮೆಗಳಿಗೆ ತುಂಬಾ ಹತ್ತಿರದ ಸಂಬಂಧಿಯಾಗಿರಬೇಕು. ದುರದೃಷ್ಟವಶಾತ್ ಆ ಪಳೆಯುಳಿಕೆಯ ತಲೆಬುರುಡೆಯು ಬಹಳ ಜಜ್ಜಿ ಹೋಗಿದ್ದರಿಂದ ಅದರ ಕಪಾಲರಂಧ್ರವನ್ನು ಸರಿಯಾಗಿ ಅವಲೋಕಿಸಲು ಸಾಧ್ಯವಾಗಲಿಲ್ಲ. ಯುನೋಟೋಸಾರಸ್‌ಗೆ ಹಲ್ಲುಗಳಿದ್ದು ನಿಜವಾದ ಹೊರಕವಚವಿಲ್ಲವೆನಿಸುತ್ತದೆ. ಕಾಲುಗಳ ಅಸ್ಥಿಗಳ ಪಳೆಯುಳಿಕೆಗಳು ಸರಿಯಾಗಿ ಗುರುತಿಸುವ ಸ್ಥಿತಿಯಲ್ಲಿಲ್ಲ. ಇದರಿಂದ ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಲು ಸಾಧ್ಯವಾಗಿಲ್ಲ.

ಖಿಲೋನಿಯಗಳ ಶರೀರದ ಸುತ್ತ ಬಿಗಿಯಾದ ಕವಚವಿದೆ. ಕವಚ ಅಸ್ಥಿತಟೆಗಳಿಂದಾಗಿದ್ದು ಮೇಲ್ಭಾಗವನ್ನು ಮೇಲ್ಚಿಪ್ಪು ಎಂದೂ, ಕೆಳಭಾಗವನ್ನು ಎದೆಗಾಪು (ಪ್ಲಾಸ್ಟ್ರಾನ್) ಎಂದೂ, ಇಡೀ ಕವಚವನ್ನು ಆಮೆಕವಚ (ಟಾರ್ಟಾಯಿಸ್ ಶೆಲ್) ಎಂದೂ ಕರೆಯಲಾಗುತ್ತದೆ. ಟ್ರೈಯಾನಿಕೊಯಿಡಿಯ ಮತ್ತು ಎಥೀಕಾಗಳಲ್ಲಿ ಚರ್ಮವು ಮೃದುವಾಗಿದ್ದು ಕವಚವಿಲ್ಲ. ಖಿಲೋನಿಯಗಳು ತಲೆ, ಕಾಲು ಮತ್ತು ಬಾಲಗಳನ್ನು ಕವಚದ ಒಳಭಾಗಕ್ಕೆ ಎಳೆದುಕೊಂಡು ವೈರಿಗಳಿಂದ ಮತ್ತು ಬಾಹ್ಯ ಶಕ್ತಿಗಳಿಂದ ರಕ್ಷಿಸಿಕೊಳ್ಳುತ್ತವೆ.

ಮೇಲ್ಚಿಪ್ಪಿನ ತಟ್ಟೆಗಳು ಒಳಚರ್ಮದಿಂದ ಬೆಳೆದಿದ್ದು ಅಸ್ಥಿಪಂಜರಕ್ಕೆ ಕೂಡಿಕೊಂಡಿರುತ್ತವೆ. ಮಧ್ಯದ ಎಂಟು ನರತಟ್ಟೆಗಳು (ನ್ಯೂರಲ್ ಪ್ಲೇಟ್) ಬೆನ್ನೆಲುಬಿನ ವಕ್ಷಭಾಗದ 2 ರಿಂದ 9ನೇ ಕಶೇರುಗಳ ಮುಳ್ಳುಗಳಿಗೆ ಕೂಡಿಕೊಂಡಿವೆ. ಮುಂಭಾಗದಲ್ಲಿ ಮೊದಲನೆಯ ನರತಟ್ಟೆಯು ಅಗಲವಾದ ಹೆಡೆಗತ್ತಿನ ತಟ್ಟೆಯೊಡನೆ (ನೂಕಲ್ ಪ್ಲೇಟ್) ಕೂಡಿಕೊಂಡಿದೆ. ಅಸ್ಥಿರಜ್ಜುಗಳು ಇವನ್ನು ಜೋಡಿಸುತ್ತವೆ. ಎರಡು ನರತಟ್ಟೆಯ ಹಿಂಭಾಗದಲ್ಲಿ ಗುದತಟ್ಟೆಯಿದ್ದು, ಈ ಗುದತಟ್ಟೆಯಲ್ಲಿ ಮೊದಲನೆಯದು ಎಂಟನೆಯ ಪಕ್ಕೆಲುಬಿನ ತಟ್ಟೆಗಳೊಂದಿಗೆ ಎರಡೂ ಕಡೆ ಕೂಡಿಕೊಂಡಿರುತ್ತದೆ. ಕೊನೆಯ ಗುದತಟ್ಟೆಯು ಪರಿಧಿಯ ತಟ್ಟೆ (ಮಾರ್ಜಿನಲ್) ಯೊಂದಿಗೆ ಕೂಡಿಕೊಂಡಿದೆ. ಪ್ರಭೇದವನ್ನವಲಂಬಿಸಿ ಗುದತಟ್ಟೆಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ನರತಟ್ಟೆಗಳ ಎರಡು ಪಾರ್ಶ್ವದಲ್ಲಿ ಎಂಟು ಪಕ್ಕೆಲುಬಿನ ತಟ್ಟೆಗಳಿದ್ದು, ಅವು ಕ್ರಮವಾಗಿ ವಕ್ಷಭಾಗದ ಪಕ್ಕೆಲುಬುಗಳೊಂದಿಗೆ ಕೂಡಿಕೊಂಡಿವೆ. ಪಕ್ಕೆಲುಬಿನ ತಟ್ಟೆಗಳು ಒಂದಕ್ಕೊಂದು ಹೊಂದಿಕೊಂಡು ಅಗಲವಾದ ಮೇಲ್ಛಾವಣಿಯನ್ನುಂಟು ಮಾಡುತ್ತವೆ. ಪಕ್ಕೆಲುಬುಗಳು ಪಕ್ಕೆಲುಬಿನ ತಟ್ಟೆಗಿಂತ ಹೊರಚಾಚಿದ್ದು ಅವು ಪರಿಧಿಯ ತಟ್ಟೆಗಳ ಜೊತೆ ಕೂಡಿಕೊಂಡಿರುತ್ತವೆ. ಹನ್ನೊಂದು ಪರಿಧಿಯ ತಟ್ಟೆಗಳಿದ್ದು, ಅವು ಮೇಲ್ಚಿಪ್ಪಿನ ಹೊರ ಆವರಣವನ್ನು ನಿರ್ಮಿಸುತ್ತವೆ. ಮೊದಲನೆಯ ಪರಿಧಿತಟ್ಟೆ ಹೆಡೆಗತ್ತಿನ ತಟ್ಟೆಯ ಎರಡೂ ಪಕ್ಕದಲ್ಲಿದ್ದು ಕೊನೆಯ ಪರಿಧಿತಟ್ಟೆಗಳು ಗುದತಟ್ಟೆಯ ಸ್ವಲ್ಪ ಹಿಂಭಾಗದಲ್ಲಿ ಪರಸ್ಪರ ಸೇರಿಕೊಂಡಿವೆ. ಹೆಡೆಗತ್ತು, ಗುದ ಮತ್ತು ಪರಿಧಿ ತಟ್ಟೆಗಳು ಒಳಚರ್ಮದಿಂದ ಉದ್ಭವಿಸಿದ್ದು ನರತಟ್ಟೆ ಮತ್ತು ಪಕ್ಕೆಲುಬಿನ ತಟ್ಟೆಗಳು ಕೇವಲ ಒಳಚರ್ಮದ ವಿಸ್ತರಣೆಯಿಂದ ಉಂಟಾಗಿವೆ.

ಎದೆಗಾಪು ಅಥವಾ ಕವಚದ ಕೆಳಭಾಗ ನೇರವಾಗಿ ಅಸ್ಥಿರಜ್ಜಿನಿಂದ ಪರಿಧಿ ತಟ್ಟೆಗೆ ಕೂಡಿಕೊಂಡಿದ್ದು, ಒಳಅಸ್ಥಿಪಂಜರದಿಂದ ಬೇರೆಯಾಗಿರುತ್ತವೆ. ಅವು ಒಳಚರ್ಮದಿಂದ ಉದ್ಭವಿಸಿದ್ದು ಹೊಕ್ಕಳಿನ ಮುಂಭಾಗದಲ್ಲಿರುವುದರಿಂದ ಇದರ ಅರ್ಧ ಉದರಭಾಗ ಮತ್ತು ಅರ್ಧ ವಕ್ಷಭಾಗದಲ್ಲಿರುತ್ತದೆ. ಎದೆಗಾಪಿನಲ್ಲಿ ಮಧ್ಯದ ಒಂದು ಅಂತರ ಎದೆಗಾಪು ಮತ್ತು ಕೆಳ ಎದೆಗಾಪು, ಮೇಲ್ಎದೆಗಾಪು, ಅಧ ಎದೆಗಾಪು ಮತ್ತು ನೀಚ ಎದೆಗಾಪು ಎಂಬ 4 ಜೊತೆ, ಹೀಗೆ 9 ಬಿಡಿಭಾಗಗಳಿವೆ.

ಈ ಕವಚದ ಹೊರಭಾಗ ಹೊರಚರ್ಮದಿಂದ ಉದ್ಭವಿಸಿದ ಚಿಪ್ಪಿನಿಂದಾವೃತವಾಗಿದೆ. ಇದು ಹೊರಭಾಗದಿಂದ ಎರಡೂ ಮೇಲ್ಮೈಗಳ ಮೇಲಿದ್ದರೂ ಒಳಗಿನ ತಟ್ಟೆಗಳಿಗೆ ಸಮಾನಾಂತರದಲ್ಲಿರುವುದಿಲ್ಲ. ಮೇಲ್ಭಾಗದ ಮಧ್ಯದಲ್ಲಿ 5 ಕಶೇರು ಚಿಪ್ಪುಗಳಿದ್ದು ಅದರ ಎರಡೂ ಪಕ್ಕಗಳಲ್ಲಿ 4 ಪಕ್ಕೆಲುಬಿನ ಚಿಪ್ಪುಗಳು ಮತ್ತು ಪರಿಧಿಯಲ್ಲಿ 24 ಅಥವಾ 25 ಪರಿಧಿ ಚಿಪ್ಪುಗಳು ಇರುತ್ತವೆ. ಈ ಪರಿಧಿ ಚಿಪ್ಪುಗಳಲ್ಲಿ ಮುಂಭಾಗದ ಚಿಪ್ಪನ್ನು ಹೆಡೆಗತ್ತಿನ ಚಿಪ್ಪು ಎಂದೂ ಹಿಂಭಾಗದ್ದನ್ನು ಗುದ ಅಥವಾ ಬಾಲದ ಮೇಲಿನ ಚಿಪ್ಪು ಎಂದೂ ಕರೆಯಲಾಗುತ್ತದೆ. ಕೆಳಭಾಗದಲ್ಲಿ 6 ಜೊತೆ ಚಿಪ್ಪುಗಳಿರುತ್ತವೆ. ಪರಿಧಿಯ ಚಿಪ್ಪಿನ ಕೆಳಭಾಗದಲ್ಲಿ 5 ಅಥವಾ 6 ಕೆಳ ಪರಿಧಿ ಚಿಪ್ಪುಗಳಿರುತ್ತವೆ. ಕಾಲು ಮತ್ತು ತಲೆಯ ಭಾಗದಲ್ಲಿ ಕೊಂಬಿನಂತಹ ವಸ್ತುವಿನಿಂದಾದ ಪೊರೆಯಿರುತ್ತದೆ.

ಈ ಕವಚ ಸಂಪೂರ್ಣ ಬೆಳೆದಾಗ ಕೇವಲ ಗಟ್ಟಿಯಾಗಿರುವುದಷ್ಟೇ ಅಲ್ಲದೇ ಶರೀರಕ್ಕೆ ಸಂಪೂರ್ಣ ರಕ್ಷಣೆಯನ್ನು ನೀಡುತ್ತದೆ. ಉದಾ : ಉತ್ತರ ಅಮೆರಿಕಾದ ಪೆಟ್ಟಿಗೆ ಆಮೆ (ಬಾಕ್ಸ್ ಟರ್ಟಲ್)ಯು ತನ್ನ ತೂಕಕ್ಕಿಂತ 200 ಪಟ್ಟು ಹೆಚ್ಚಿನ ಭಾರವನ್ನು ತಡೆದುಕೊಳ್ಳಬಲ್ಲುದು. ಮೇಲ್ಚಿಪ್ಪು ಮತ್ತು ಎದೆಗಾಪುಗಳ ಸಂಧಿ ಭಾಗದ ಅಸ್ಥಿರಜ್ಜು ಕೂಡಾ ಬಿರುಸಾಗಿದ್ದು ಹರಿತವಾದ ಆಯುಧದಿಂದ ಕತ್ತರಿಸುವುದು ಸಾಧ್ಯವಿಲ್ಲ.

ಖಿಲೋನಿಯಗಳಲ್ಲಿ ಪಕ್ಕೆಲುಬುಗಳು ಮನುಷ್ಯನಲ್ಲಿರುವಂತೆ ಚಲಿಸಲಾರವು. ಆದುದರಿಂದ ಎದೆಯ ಏರಿಳಿತವು, ಉದರದ ಮಾಂಸಖಂಡಗಳ ಚಲನೆಯಿಂದ ನಡೆಯುತ್ತದೆ. ಶ್ವಾಸೋಚ್ಛ್ವಾಸವನ್ನೂ ಈ ಮಾಂಸಖಂಡಗಳೇ ನಿಯಂತ್ರಿಸುವುವು. ಕೆಲವು ಪ್ರಭೇದಗಳಲ್ಲಿ, ಗುದದ್ವಾರ ಅಥವಾ ಗಂಟಲಿನ ಹತ್ತಿರ ಇರುವ ಲೋಮನಾಳಗಳಿಂದ ಕೂಡಿರುವ ಪೊರೆಯೊಂದು ಉಸಿರಾಟದಲ್ಲಿ ಪಾಲ್ಗೊಳ್ಳುತ್ತದೆ. ಇದರಿಂದ ಆಮೆಗಳು ಗಂಟೆಗಟ್ಟಲೆ ನೀರಿನಲ್ಲಿ ಮುಳುಗಿರಬಲ್ಲುವು.

ಬೆನ್ನೆಲುಬು ಶರೀರಕ್ಕೆ ಯಾವುದೇ ಆಧಾರ ನೀಡುವುದಿಲ್ಲ. ಆದುದರಿಂದ ಕಶೇರುಕಗಳ ಸಂಖ್ಯೆ ಉಳಿದ ಸರೀಸೃಪಗಳಿಗಿಂತ ಕಡಿಮೆ ಇದ್ದು ಬೆನ್ನೆಲುಬು ಬಹಳ ಮಾರ್ಪಾಟಾಗಿದೆ. ತಲೆಯನ್ನು ಕವಚದ ಒಳಗೆ ಹುದುಗಿಸಿಕೊಳ್ಳಲು ವಿಶೇಷ ರೀತಿಯಲ್ಲಿ ಮಾರ್ಪಾಡಾದ ಎಂಟು ಕಶೇರುಗಳಿರುತ್ತವೆ. ಆದುದರಿಂದ ಶರೀರದ ಉಳಿದ ಭಾಗಗಳಲ್ಲಿರುವಷ್ಟೆ ಕಶೇರುಗಳು ಕುತ್ತಿಗೆಯಲ್ಲಿರುತ್ತವೆ. ಕುತ್ತಿಗೆಯನ್ನು ಹುದುಗಿಸಿಕೊಳ್ಳುವ ಅಥವಾ ಬಾಗುವ ವಿಧಾನವನ್ನು ಅವಲಂಬಿಸಿ ಆಮೆಗಳನ್ನು ವರ್ಗೀಕರಿಸಲಾಗುತ್ತದೆ.

ಖಿಲೋನಿಯಾಗಳು 15 ದಶಲಕ್ಷ ವರ್ಷಗಳ ಹಿಂದೆ ಅವುಗಳ ಹಲ್ಲುಗಳನ್ನು ಕಳೆದುಕೊಂಡುವು. ಕೆಲವು ನವೀನ ಪ್ರಭೇದಗಳಲ್ಲಿ ಕೊಂಬಿನಂತಹ ದವಡೆ ಹರಿತವಾಗಿದ್ದು ಹಲ್ಲುಗಳಂತೆ ಕೆಲಸಮಾಡುತ್ತದೆ. ಇವು ಆಹಾರವನ್ನು ಅಗಿದು ಚಿಕ್ಕ ಚಿಕ್ಕ ತುಣುಕುಗಳನ್ನಾಗಿ ಮಾಡಿ ನುಂಗುತ್ತವೆ. ಆಹಾರವನ್ನು ಅಗಿಯುವಾಗ ಮುಂಗಾಲುಗಳು ಸಹಾಯ ಮಾಡುತ್ತವೆ. ಆಮೆಗಳು ಎಲ್ಲಾ ಜಾತಿಯ ಆಹಾರ ಸೇವಿಸುತ್ತವಾದರೂ ನಾರಿನ ಸಸ್ಯಭಾಗಗಳನ್ನು ದವಡೆಯಲ್ಲಿ ಅಗಿಯಲಾರವಾದ್ದರಿಂದ ಅವನ್ನು ಬಿಡುತ್ತವೆ. ಚಿಕ್ಕ ಹುಳು, ಮೃದ್ವಂಗಿ, ಕೀಟ, ಕಪ್ಪೆಚಿಪ್ಪಿನ ಪ್ರಾಣಿ, ಚಿಕ್ಕ ಮೀನು, ಮುಂತಾದುವು ಆಮೆಗಳ ಆಹಾರ. ದೊಡ್ಡ ಆಮೆಗಳು ಮಾತ್ರ ದೊಡ್ಡ ಮೀನುಗಳನ್ನೂ ಕೆಲವು ಪಕ್ಷಿಗಳನ್ನೂ ಕೆಲವು ಸ್ತನಿಗಳನ್ನೂ ಹಿಡಿದು ತಿನ್ನುತ್ತವೆ. ಆಹಾರವಿಲ್ಲದೆ ಇವು ವಾರಗಳವರೆಗೆ ಕೆಲವು ಬಾರಿ ತಿಂಗಳುಗಳವರೆಗೆ ಇರಬಲ್ಲುವು. ಸಾಕಷ್ಟು ಆಹಾರವಿದ್ದಾಗ ಮಾತ್ರ ತಿನ್ನುತ್ತಲೇ ಇದ್ದು ಹೆಚ್ಚು ಹೆಚ್ಚು ಗಾತ್ರ ಬೆಳೆಯುತ್ತವೆ. ಕೆಲವೊಮ್ಮೆ ಅವು ಮಲಕೂಪಚೀಲದಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಂಡು ಅಭಾವವುಂಟಾದಾಗ ಉಪಯೋಗಿಸಿಕೊಳ್ಳುತ್ತವೆ.

ಸಂಭೋಗಕ್ಕೆ ಮುಂಚೆ ವಿಸ್ತಾರವಾದ ಪ್ರಣಯಕೇಳಿ ನಡೆಯುತ್ತದೆ. ಈ ಪ್ರಣಯಕೇಳಿ ವಿವಿಧ ಪ್ರಭೇದಗಳಲ್ಲಿ ವಿಭಿನ್ನವಾಗಿದೆ. ಪ್ರಣಯದಾಟದಲ್ಲಿ ಗಂಡು ಥಟ್ಟನೆ ಮುನ್ನುಗ್ಗುವಿಕೆ, ಗರ್ಜನೆ, ಅಥವಾ ಕೆಲವು ಜಲವಾಸಿ ಪ್ರಭೇದಗಳಲ್ಲಿರುವಂತೆ ಹೆಣ್ಣಿನ ಮುಂದೆ ಪದೇ ಪದೇ ಈಜುವುದು, ಹೆಣ್ಣಿನ ಮುಖದ ಮೇಲೆ ಉದ್ದವಾದ ಉಗುರುಗಳಿಂದ ಹೊಡೆಯುವುದು ಮುಂತಾದ ಕ್ರಿಯೆಗಳನ್ನು ಪ್ರದರ್ಶಿಸುತ್ತವೆ. ಉಳಿದ ಸರೀಸೃಪಗಳಿಗೆ ವ್ಯತಿರಿಕ್ತವಾಗಿ ಖಿಲೋನಿಯಾ ಗಂಡಿನಲ್ಲಿ ಒಂದೇ ಜನನಾಂಗವಿದೆ. ಒಮ್ಮೆ ಸಂಭೋಗಗೊಂಡ ಹೆಣ್ಣು ವರ್ಷಾನುಗಟ್ಟಲೆ ನಿಷೇಚನಗೊಂಡ ಮೊಟ್ಟೆಗಳನ್ನು ಇಡಬಲ್ಲುದು. ಇದು ಆಮೆಗಳ ವಿಶೇಷತೆ.

ಆಮೆಗಳು ನೆಲದ ಮೇಲೆ ಮೊಟ್ಟೆಗಳನ್ನಿಡುತ್ತವೆ. ಹೆಣ್ಣು ಸೂರ್ಯನ ಕಿರಣಗಳಿಗೆ ತೆರೆದಿರುವಂತಹ ಸ್ಥಳವನ್ನು ಆರಿಸಿ ತನ್ನ ಹಿಂಗಾಲುಗಳಷ್ಟು ಆಳದ ಗುಂಡಿಯನ್ನು ನಿರ್ಮಿಸುತ್ತದೆ. ಅನಂತರ ಅದರಲ್ಲಿ ಗುಂಡಾಗಿರುವ ಬಿಳಿಯ ಮೊಟ್ಟೆಗಳನ್ನಿಟ್ಟು ಕುಳಿಯನ್ನು ಮುಚ್ಚುತ್ತದೆ. ಒಂದು ಭಾರಿಗೆ ಒಂದರಿಂದ 200 ಮೊಟ್ಟೆಗಳು ಹೊರಬರುತ್ತವೆ. ಮೊಟ್ಟೆಗಳ ಸುತ್ತ ಗಟ್ಟಿ ಕವಚವಿದ್ದು ಕಾವು ಕೊಡುವ ಅವಧಿ ಉಷ್ಣಾಂಶವನ್ನು ಅವಲಂಬಿಸಿರುತ್ತದೆ. ಗೂಡು ರಚನೆಯ ಅನಂತರ ತಾಯಿ ತನ್ನ ಮರಿಗಳ ಮೇಲೆ ಆಸಕ್ತಿ ಕಳೆದುಕೊಳ್ಳುವುದರಿಂದ ಮೊಟ್ಟೆಗಳು ಅಥವಾ ಮರಿಗಳು ಬೇರೆ ಪ್ರಾಣಿಗಳಿಗೆ ಆಹಾರವಾಗುವ ಸಾಧ್ಯತೆಯಿದೆ.

ಆಮೆಗಳು ಮನುಷ್ಯನಿಗಿಂತ ಹೆಚ್ಚು ಸಮಯ ಬದುಕಬಲ್ಲುವು. ಕೆಲವು ಪ್ರಭೇದಗಳು 150 ಕ್ಕೂ ಹೆಚ್ಚು ವರ್ಷಗಳವರೆಗೆ ಜೀವಿಸುತ್ತವೆ. ಆದರೆ ಇವು ಹತ್ತು ವರ್ಷಗಳಿಗಿಂತ ಮುಂಚೆಯೇ ಪ್ರಬುದ್ಧಾವಸ್ಥೆಯನ್ನು ತಲುಪುತ್ತವೆ. ಕವಚದ ಮೇಲಿನ ಉಂಗುರಗಳ ಸಂಖ್ಯೆಯನ್ನು ಎಣಿಸಿ ಆಮೆಯ ವಯಸ್ಸನ್ನು ನಿರ್ಧರಿಸಬಹುದು.

ಖಿಲೋನಿಯಾದ ವರ್ಗೀಕರಣ :

ಖಿಲೋನಿಯಾವನ್ನು ಪ್ರೊಗ್ಯಾನೋಖಿಲಿಯೋಯಿಡಿಯ, ಆಂಫಿಖಿಲಿಡಿಯ, ಕ್ರಿಪ್ಟೋಡೈರಾ, ಪ್ಲೂರೋಡೈರಾ ಮತ್ತು ಯೂನೋಟೊಸಾರಿಯ ಎಂಬ ಐದು ಉಪಗಣಗಳನ್ನಾಗಿ ವಿಂಗಡಿಸಲಾಗಿದೆ. ಪ್ರೊಗ್ಯಾನೋಖಿಲಿಯೋಯಿಡಿಯ, ಆಂಫಿಖಿಲಿಡಿಯ ಮತ್ತು ಯೂನೋಟೊಸಾರಿಯ ಈಗಾಗಲೇ ನಶಿಸಿ ಪಳೆಯುಳಿಕೆಗಳಾಗಿ ಕ್ರಿಪ್ಟೋಡೈರಾದಲ್ಲಿ ಇಂದು ಬದುಕಿರುವ ಹಲವಾರು ಆಮೆಗಳು ಸೇರುತ್ತವೆ. ಪ್ಲೂರೋಡೈರಾ ಗುಂಪಿನಲ್ಲಿ ಪಿಲೋಮೆಡುಸಿಡೆ ಮತ್ತು ಖಿಲಿಯಿಡೆ ಎಂಬ ಎರಡು ಕುಟುಂಬಗಳು ಮಾತ್ರ ಇವೆ. (ಎಸ್.ಎನ್.ಎಚ್.)

**ಖೆಡ್ಡ:** ಕಾಡಾನೆಗಳನ್ನು ಸೆರೆಹಿಡಿದು ಪಳಗಿಸಲು ಯೋಜಿಸಿರುವ ಒಂದು ವಿಶೇಷ ಬಗೆಯ ಬೋನು. ಇಂಥ ಬೋನಿಗೆ ಆನೆಗಳನ್ನು ತುರುಬುವ, ಅನಂತರ ಪಳಗಿಸುವ ವಿಸ್ತಾರವಾದ ಕಾರ್ಯಾಚರಣೆಗೆ ಖೆಡ್ಡ ಕಾರ್ಯಕ್ರಮವೆನ್ನುತ್ತಾರೆ. ಕಾಡಿನಲ್ಲಿ ಆನೆಗಳ ಸಂಖ್ಯೆ ಹೆಚ್ಚಾಗಿ ಅವು ಜನಗಳಿಗೂ ಬೆಳೆಗಳಿಗೂ ಹಾನಿಯುಂಟುಮಾಡತೊಡಗಿದಾಗ ಅವನ್ನು ಸೆರೆಹಿಡಿಯಲಾಗುತ್ತದೆ. ಒಂದೋ ಎರಡೋ ಪುಂಡಾನೆಗಳು ತೊಂದರೆ ಕೊಟ್ಟಾಗ ಅವನ್ನು ಬೆದರಿಸಿ ಕಾಡಿನ ಒಳಭಾಗಕ್ಕೆ ಅಟ್ಟುತ್ತಾರೆ. ಬಹುಸಂಖ್ಯೆಯಲ್ಲಿ ಅವನ್ನು ಹಿಡಿಯಬೇಕಾದಾಗ ಮಾತ್ರ ಖೆಡ್ಡ ಯೋಜನೆಯನ್ನು ಹಾಕಲಾಗುತ್ತದೆ. ಖೆಡ್ಡ ಎನ್ನುವ ಪದ ಹಿಂದುಸ್ಥಾನಿಯದು. ಸಣ್ಣ ಗುಂಡಿ ಎಂದು ಇದರ ಮೂಲಾರ್ಥ. ಹಿಂದೆ ಒಂದು ಕಾಲದಲ್ಲಿ ಕಾಡಾನೆಗಳನ್ನು ಹಿಡಿಯುವಾಗ ಕಂದಕಗಳನ್ನು ತೋಡುತ್ತಿದ್ದುದರಿಂದ ಈ ಪದಕ್ಕೆ ಈ ಅರ್ಥ ಬಂದಿದೆ. ಖೆಡ್ಡಕ್ಕೆ ಹಿಂದಿಯಲ್ಲಿ ಬಂಗಡಿ ಎಂದೂ ಕನ್ನಡದಲ್ಲಿ ಆನೆಪಂಗಡಿ ಎಂದೂ ಹೆಸರಿದೆ. ಈಚೆಗೆ ಆನೆಗಳನ್ನು ಹಿಡಿಯಲು ಗುಂಡಿಗಳನ್ನು ತೋಡುತ್ತಿಲ್ಲ. ಏಕೆಂದರೆ ಗುಂಡಿಗೆ ಬೀಳುವ ಆನೆಗೆ ಊನವಾಗಬಹುದು. ಎಷ್ಟೋ ಆನೆಗಳು ಸಾಯಲೂ ಬಹುದು. ಆದ್ದರಿಂದ ಈಗ ನೆಲಮಟ್ಟದಲ್ಲೇ ದಪ್ಪ ದಿಮ್ಮಿಗಳಿಂದ ದೊಡ್ಡ ಬೋನೊಂದನ್ನು ನಿರ್ಮಿಸಿ ಅದರಲ್ಲಿ ಆನೆಗಳನ್ನು ಬಂಧಿಸುತ್ತಾರೆ. ಈ ವಿಧಾನ ಮೈಸೂರಿನ ವೈಶಿಷ್ಟ್ಯಗಳಲ್ಲಿ ಒಂದೆನಿಸಿ ಪ್ರಸಿದ್ಧವಾಗಿದೆ. ಹೈದರ್ ಅಲಿ, ಟಿಪ್ಪೂಸುಲ್ತಾನರ ಕಾಲದಿಂದಲೂ ಈ ಕಾರ್ಯವಿಧಾನವನ್ನು ಉತ್ತಮ ಪಡಿಸುತ್ತ ಬರಲಾಗಿದೆ. ಇತ್ತೀಚಿನವರೆಗೆ ಮೈಸೂರಿನ ಕಾಕನಕೋಟೆ ಕಾಡಿನ ಕಾರಾಪುರ, ಚಾಮರಾಜನಗರ ತಾಲ್ಲೂಕಿನ ಬೂದಿಪಡಗ ಮುಂತಾದ ಸ್ಥಳಗಳಲ್ಲಿ ಖೆಡ್ಡ ಕಾರ್ಯಾಚರಣೆ ನಡೆಯುತ್ತಿತ್ತು. ಇದಕ್ಕೆ ಅಪಾರವಾದ ಹಣಸಹಾಯವೂ ಜನಸಹಾಯವೂ ಬೇಕಾಗುವುದರಿಂದ ಇಂಥ ಕಾರ್ಯಕ್ರಮವನ್ನು ಅಗತ್ಯ ಬಿದ್ದಾಗ ಮಾತ್ರ ಏರ್ಪಡಿಸಲಾಗುತ್ತಿತ್ತು. ಈಚೆಗೆ ಖೆಡ್ಡಾ ನಡೆಸುತ್ತಿಲ್ಲ. ***

**ಖೊರಾನಾ, ಹರ್ ಗೋವಿಂದ್ (೧೯೨೨):** ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನೆಲೆಸಿರುವ ಭಾರತೀಯ ಅಣುಜೀವವಿಜ್ಞಾನಿ (ಮಾಲಿಕ್ಯುಲರ್ ಬಯಾಲಜಿಸ್ಟ್). ಆನುವಂಶಿಕ ಸಂಕೇತ ಭಾಷೆಯನ್ನು (ಜೆನೆಟಿಕ್ ಕೋಡ್) ಬಿಡಿಸುವುದರಲ್ಲಿ ಅವರು ವಹಿಸಿದ ಪ್ರಮುಖ ಪಾತ್ರಕ್ಕಾಗಿ ೧೯೬೮ರಲ್ಲಿ ಅಮೆರಿಕದ ನಿರೆನ್‌ಬರ್ಗ್ ಮತ್ತು ಹಾಲಿ ಅವರೊಡನೆ ವೈದ್ಯ ವಿಜ್ಞಾನ ಮತ್ತು ಶರೀರ ವಿಜ್ಞಾನದ ನೊಬೆಲ್ ಬಹುಮಾನವನ್ನು ಕೊಡಲಾಯಿತು.

ಖೊರಾನಾ ಅವರು ೧೯೨೨ ಜನವರಿ ೮ ರಂದು ಪಂಜಾಬ್ ರಾಜ್ಯದ ರಾಯಪುರದಲ್ಲಿ ಜನಿಸಿದರು. ಅವರ ವಿದ್ಯಾಭ್ಯಾಸ ನಡೆದದ್ದು ಪಂಜಾಬ್ ವಿಶ್ವವಿದ್ಯಾಲಯದಲ್ಲಿ. ೧೯೪೫ರಲ್ಲಿ ಆ ವಿಶ್ವವಿದ್ಯಾಲಯದಿಂದ ಎಂಎಸ್‌ಸಿ ಡಿಗ್ರಿಯನ್ನು ಪಡೆದ ತರುವಾಯ ಅವರು ಆರ್ದೇಶಿರ್ ದಲಾಲ್ ವಿದ್ಯಾರ್ಥಿವೇತನವನ್ನು ಪಡೆದು ಉಚ್ಚ ಶಿಕ್ಷಣಕ್ಕಾಗಿ ಬ್ರಿಟನ್ನಿಗೆ ತೆರಳಿದರು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಎ. ರಾಬರ್ಟ್‌ಸನ್‌ರವರ ನೇತೃತ್ವದಲ್ಲಿ ಸಂಶೋಧನೆ ನಡೆಸಿ ೧೯೪೮ರಲ್ಲಿ ಡಾಕ್ಟರಲ್ ಡಿಗ್ರಿಯನ್ನು ಪಡೆದರು. ಅನಂತರ ೧೯೪೮–೪೯ರಲ್ಲಿ ಜೂರಿಕ್‌ನಲ್ಲಿರುವ ಸ್ವಿಸ್ ಫೆಡರಲ್ ಟೆಕ್ನಾಲಜಿ ಇನ್‌ಸ್ಟಿಟ್ಯೂಟಿನಲ್ಲಿ ಪ್ರೆಲಾಗ್‌ರವರೊಡನೆಯೂ ೧೯೫೦–೫೨ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಫಿಲ್ಡ್ ಫೆಲೊ ಆಗಿ ಅಲೆಕ್ಸಾಂಡರ್ ಟಾಡ್ ಅವರೊಡನೆಯೂ ಸಂಶೋಧನೆ ನಡೆಸಿದರು. ಆ ಬಳಿಕ ೧೯೫೨–೬೦ರಲ್ಲಿ ಕೆನಡದ ವ್ಯಾಂಕೂವರಿನಲ್ಲಿರುವ ಬ್ರಿಟಿಷ್ ಕೊಲಂಬಿಯ ಸಂಶೋಧನ ಸಮಿತಿಯಲ್ಲಿ ಕಾರ್ಬನಿಕ ರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಹಾಗೂ ಬ್ರಿಟಿಷ್ ಕೊಲಂಬಿಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಸಂಶೋಧನ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ೧೯೬೦ರಲ್ಲಿ ಅಲ್ಲಿಂದ ಅಮೆರಿಕಕ್ಕೆ ತೆರಳಿ ವಿಸ್ಕನ್ಸಿನ್ ವಿಶ್ವವಿದ್ಯಾಲಯದಲ್ಲಿನ ಎನ್‌ಜೈಮ್ ಸಂಶೋಧನಾಲಯದ ಸಹನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು. ಅದೇ ಸಂಸ್ಥೆಯ ಜೀವವಿಜ್ಞಾನ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರೂ (ವಿಸಿಟಿಂಗ್ ಪ್ರೊಫೆಸರ್) ಆಗಿದ್ದವರು. ೧೯೭೦ರಲ್ಲಿ ವಿಸ್ಕಾನ್ಸಿನ್ ಬಿಟ್ಟು ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯನ್ನು ಸೇರಿದರು.

ಖೊರಾನಾ ಅವರ ಸಂಶೋಧನಕ್ಷೇತ್ರ ಸಂಶ್ಲೇಷಕ ಕಾರ್ಬನಿಕ ರಸಾಯನ ವಿಜ್ಞಾನ (ಸಿಂಥೆಟಿಕ್ ಆರ್ಗ್ಯಾನಿಕ್ ಕೆಮಿಸ್ಟ್ರಿ) ಎಂದು ಹೇಳಬಹುದು. ಅಂದರೆ ಕಾರ್ಬನಿಕ ಸಂಯುಕ್ತಗಳನ್ನು ಕೃತಕವಾಗಿ ತಯಾರಿಸುವುದು. ಆದರೆ ಅವರು ಸಂಶ್ಲೇಷಣೆಗಾಗಿ ಆರಿಸಿಕೊಂಡ ಸಂಯುಕ್ತಗಳು ಜೀವರಾಸಾಯನಿಕ ಮಹತ್ವ ಉಳ್ಳವು; ಮುಖ್ಯವಾಗಿ ಕೊಎನ್‌ಜೈಮುಗಳು ಡೈ, ಟ್ರೈ, ಟೆಟ್ರ ಮತ್ತು ಪಾಲಿನ್ಯೂಕ್ಲಿಯೊಟೈಡುಗಳು. ಆದ್ದರಿಂದ ಅವರ ಕಾರ್ಯಕ್ಷೇತ್ರದ ವ್ಯಾಪ್ತಿ ಅಣುಜೀವವಿಜ್ಞಾನದವರೆಗೂ ವಿಸ್ತರಿಸಿತು. ಅನೇಕ ಕೊಎನ್‌ಜೈಮುಗಳನ್ನು ಸಂಶ್ಲೇಷಿಸುವುದರಲ್ಲಿ ಪರಿಣಿತರಾಗಿರುವರಾದರೂ ಪಾಲಿನ್ಯೂಕ್ಲಿಯೊಟೈಡುಗಳ ಕ್ಷೇತ್ರದಲ್ಲಿನ ಅವರ ಕೆಲಸ ಅವರ ಇನ್ನಿತರ ಸಾಧನೆಗಳನ್ನು ಬಹುಮಟ್ಟಿಗೆ ಮರೆಮಾಚಿದೆ.

ಆನುವಂಶಿಕ ಲಕ್ಷಣಗಳನ್ನು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜೀನ್‌ಗಳು, ರಾಸಾಯನಿಕ ದೃಷ್ಟಿಯಲ್ಲಿ, ಡಿ–ಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ (ಡಿಎನ್‌ಎ) ಎಂಬುದು ಈಗ ಚೆನ್ನಾಗಿ ತಿಳಿದಿರುವ ವಿಷಯ. ಡಿಎನ್‌ಎಗೆ ಹೋಲಿಸಿದರೆ ಬಹು ಸರಳವೆನ್ನಬಹುದಾದ ನ್ಯೂಕ್ಲಿಯೊಟೈಡ್ ಅಣುಗಳು ಒಂದರೊಡನೊಂದು ಸಾಲಾಗಿ ಕೂಡಿಕೊಳ್ಳುವುದರಿಂದ ಉಂಟಾಗುವ ದೈತ್ಯಾಣುವೇ ಡಿಎನ್‌ಎ ಅಂಥ ಅಣುವಿನಲ್ಲಿ ಅನೇಕ ನ್ಯೂಕ್ಲಿಯೊಟೈಡುಗಳಿರುವುದರಿಂದ ಅದನ್ನು ಪಾಲಿನ್ಯೂಕ್ಲಿಯೊಟೈಡ್ ಎನ್ನುತ್ತಾರೆ. ಅಡೆನಿಲಿಕ್ ಆಮ್ಲ (ಎ), ಥಯಮಿಡಿಲಿಕ್ ಆಮ್ಲ (ಟಿ), ಗ್ವಾನಿಲಿಕ್ ಆಮ್ಲ (ಜಿ) ಮತ್ತು ಸೈಟಿಡಿಲಿಕ್ ಆಮ್ಲ (ಸಿ) ಎಂಬ ನಾಲ್ಕು ಬಗೆಯ ನ್ಯೂಕ್ಲಿಯೊಟೈಡುಗಳು ಡಿಎನ್‌ಎ ಉದ್ದಕ್ಕೂ ಪುನಾರಾವರ್ತಿಸುವ ಅನುಕ್ರಮವೇ ಯಾವುದೇ ನಿರ್ದಿಷ್ಟ ಜೀನ್‌ನ ವೈಶಿಷ್ಟ್ಯ. ಡಿಎನ್‌ಎ ಅಣು ನಿಜಕ್ಕೂ ಅಂಥ ಎರಡು ಎಳೆಗಳ ಜೋಡಣೆ. ಒಂದು ಎಳೆಯ ಉದ್ದಕ್ಕೂ ನಿರ್ದಿಷ್ಟ ಅನುಕ್ರಮದಲ್ಲಿ ಬರುವ ಎ,ಟಿ,ಜಿ ಮತ್ತು ಸಿ ಗಳಿಗೆ ಎದುರಾಗಿ ಇನ್ನೊಂದು ಎಳೆಯ ಮೇಲೆ ಅನುಕ್ರಮವಾಗಿ ಟಿ,ಎ,ಸಿ ಮತ್ತು ಜಿ ಗಳು ಬರುವುದರಿಂದ ಎರಡು ಎಳೆಗಳೂ ಪರಸ್ಪರ ಪೂರಕವಾದುವು. ಕೋಶವೊಂದು ವಿದಳನವಾಗುವಾಗ ಡಿಎನ್‌ಎ ಅಣುವಿನ ಎರಡು ಎಳೆಗಳು ಪ್ರತ್ಯೇಕಗೊಂಡು ಒಂದೊಂದು ಎಳೆಯೂ ತನಗೆ ಪೂರಕವಾದ ಇನ್ನೊಂದು ಎಳೆಯನ್ನು ತಯಾರಿಸಿಕೊಳ್ಳುವುದರಿಂದ ಮೂಲ ಡಿಎನ್‌ಎ ಅಣುವಿಗೆ ಸರ್ವಥಾ ಸಮವಾದ ಎರಡು ಅಣುಗಳು ಉಂಟಾಗುವುವು.

ಕೋಶದಲ್ಲಿ ನಡೆಯುವ ಪ್ರೋಟೀನ್ ಸಂಶ್ಲೇಷಣೆ ಡಿಎನ್‌ಎ ನಿರ್ದೇಶನದಲ್ಲಿ ನಡೆಯುವುದು. ಡಿಎನ್‌ಎ ಅಣುವಿನಲ್ಲಿನ ಎ,ಟಿ,ಜಿ,ಸಿ ನ್ಯೂಕ್ಲಿಯೊಟೈಡುಗಳ ಅನುಕ್ರಮ ಹೇಗೆ ಆ ನಿರ್ದಿಷ್ಟ ಡಿಎನ್‌ಎ ಅಣುವಿನ ವೈಶಿಷ್ಟ್ಯವೋ ಹಾಗೆಯೇ ನಿರ್ದಿಷ್ಟ ಪ್ರೋಟೀನಿನ ವೈಶಿಷ್ಟ್ಯವೆಂದರೆ ಅದರ ಅಣುವಿನಲ್ಲಿ ಕಂಡುಬರುವ ಇಪ್ಪತ್ತು ಬಗೆಯ ಅಮಿನೊ ಆಮ್ಲಗಳ ಅನುಕ್ರಮ. ಅನೇಕ ನ್ಯೂಕ್ಲಿಯೊಟೈಡುಗಳಿಂದಾದ ಅಣುವನ್ನು ಪಾಲಿನ್ಯೂಕ್ಲಿಯೊಟೈಡ್ ಎನ್ನುವಂತೆ ಅಮಿನೊ ಆಮ್ಲಗಳು ಒಂದರೊಡನೊಂದು ಕೂಡಿಕೊಂಡುದರಿಂದ ಉಂಟಾದ ಪ್ರೋಟೀನಿನಂಥ ಅಣುವನ್ನು ಪಾಲಿಪೆಪ್ಟೈಡ್ ಎಂದು ಕರೆಯುತ್ತಾರೆ. ಡಿಎನ್‌ಎ ಅಣುವಿನಲ್ಲಿ ನ್ಯೂಕ್ಲಿಯೊಟೈಡುಗಳ ಅನುಕ್ರಮ ಆ ಡಿಎನ್‌ಎ ಅಣುವಿನ ನಿರ್ದೇಶನದಲ್ಲಿ ತಯಾರಾಗಲಿರುವ ಪಾಲಿಪೆಪ್ಟೈಡ್ ಅಣುವಿನಲ್ಲಿನ ಅಮೈನೊ ಆಮ್ಲಗಳ ಅನುಕ್ರಮಕ್ಕೆ ಒಂದು ಸಂಕೇತವಿದ್ದಂತೆ. ಆದ್ದರಿಂದಲೇ ಯಾವುದೇ ಜೀನ್ ತನ್ನ ಅಣುವಿನಲ್ಲಿ, ನ್ಯೂಕ್ಲಿಯೊಟೈಡ್ ಅನುಕ್ರಮದ ರೂಪದಲ್ಲಿ ಸಂಕೇತ ಭಾಷೆಯಲ್ಲಿರುವ ಮಾಹಿತಿಯನ್ನು ಬಳಸಿಕೊಂಡು ಒಂದು ನಿರ್ದಿಷ್ಟ ಪ್ರೋಟೀನಿನ ಸಂಶ್ಲೇಷಣೆಗೆ ಕಾರಣವಾಗಿ, ಆ ಪ್ರೋಟೀನ್ ಎನ್‌ಜೈಮಿನ ಸಹಾಯದಿಂದ

ದೇಹದಲ್ಲಿ ನಡೆಯುವ ಜೀವರಾಸಾಯನಿಕ ಕ್ರಿಯೆಗಳನ್ನು ಹತೋಟಿಯಲ್ಲಿಟ್ಟು ಕೊಂಡು, ತನಗೆ ನಿರ್ದಿಷ್ಟವಾದ ಲಕ್ಷಣಗಳನ್ನು ಜೀವಿಯಲ್ಲಿ ಉಂಟುಮಾಡಬಲ್ಲುದು. ಡಿಎನ್‌ಎ ಅಣುವಿನಲ್ಲಿನ ನ್ಯೂಕ್ಲಿಯೊಟೈಡುಗಳ ಅನುಕ್ರಮಕ್ಕೂ ಅದರ ನಿರ್ದೇಶನದಲ್ಲಿ ಸಂಶ್ಲೇಷಣೆಯಾಗುವ ಪ್ರೊಟೀನಿನಲ್ಲಿನ ಅಮೈನೊ ಆಮ್ಲಗಳ ಅನುಕ್ರಮಕ್ಕೂ ಇರುವ ಪರಸ್ಪರ ಸಂಬಂಧವನ್ನೇ ಆನುವಂಶಿಕ ಸಂಕೇತ ಭಾಷೆ (ಜೆನೆಟಿಕ್ ಕೋಡ್) ಎಂದು ಕರೆಯುವುದು. ಈ ಭಾಷೆಯ ಗುಟ್ಟನ್ನು ಬಯಲು ಮಾಡುವುದರಲ್ಲಿಯೇ ಖೊರಾನಾ ಅವರು ಪ್ರಮುಖ ಪಾತ್ರವಹಿಸಿದ್ದು.

ಪ್ರೊಟೀನ್ ಸಂಶ್ಲೇಷಣೆಯನ್ನು ನಿರ್ದೇಶಿಸುವುದಕ್ಕೆ ಡಿಎನ್‌ಎ ರೈಬೊನ್ಯೂಕ್ಲೆಯಿಕ್ ಆಮ್ಲವೆಂಬ (ಆರ್‌ಎನ್‌ಎ) ಇನ್ನೊಂದು ಬಗೆಯ ನ್ಯೂಕ್ಲೆಯಿಕ್ ಆಮ್ಲವನ್ನು ಮಧ್ಯವರ್ತಿಯಾಗಿ ಉಪಯೋಗಿಸಿಕೊಳ್ಳುವುದು. ಡಿಎನ್‌ಎ ಮತ್ತು ಆರ್‌ಎನ್‌ಎಗಳಿಗೆ ಮುಖ್ಯವಾಗಿ ಎರಡು ವ್ಯತ್ಯಾಸಗಳಿವೆ. ಮೊದಲನೆಯದಾಗಿ, ಎರಡೂ ನ್ಯೂಕ್ಲಿಯೊಟೈಡುಗಳೆಂಬ ಸರಳತರ ಅಣುಗಳಿಂದ ರಚಿತವಾಗಿವೆಯಾದರೂ ಡಿಎನ್‌ಎಯ ನ್ಯೂಕ್ಲಿಯೊಟೈಡುಗಳಲ್ಲಿ ಡಿ ಆಕ್ಸಿರೈಬೋಸ್ ಎಂಬ ಒಂದು ಬಗೆಯ ಸಕ್ಕರೆ ಹಾಗೂ ಆರ್‌ಎನ್‌ಎಯ ನ್ಯೂಕ್ಲಿಯೊಟೈಡುಗಳಲ್ಲಿ ರೈಬೋಸ್ ಎಂಬ ಸಕ್ಕರೆ ಇರುವುದು. ಈ ವ್ಯತ್ಯಾಸದಿಂದಲೇ ಇವೆರಡರ ಹೆಸರುಗಳು ಬಂದಿವೆ ಎಂಬುದನ್ನು ಗಮನಿಸಬಹುದು. ಎರಡನೆಯ ವ್ಯತ್ಯಾಸವೆಂದರೆ ಆರ್‌ಎನ್‌ಎಯಲ್ಲಿ ಥೈಮಿಡಿಲಿಕ್ ಆಮ್ಲ (ಟಿ) ಇಲ್ಲ. ಅದಕ್ಕೆ ಬದಲು ಯುರಿಡಿಲಿಕ್ ಆಮ್ಲ (ಯು) ಎಂಬ ಇನ್ನೊಂದು ಬಗೆಯ ನ್ಯೂಕ್ಲಿಯೊಟೈಡ್ ಇದೆ. ಅಂದರೆ, ಆರ್‌ಎನ್‌ಎ ಎ, ಯು, ಜಿ ಮತ್ತು ಸಿ ಗಳೆಂಬ ನಾಲ್ಕು ಬಗೆಯ ನ್ಯೂಕ್ಲಿಯೊಟೈಡುಗಳಿಂದ ಆದದ್ದು. ಡಿಎನ್‌ಎ ತನ್ನ ನಕಲನ್ನು ತಯಾರಿಸಿಕೊಳ್ಳುವಾಗ ಅದರಲ್ಲಿ ಜೊತೆಗೂಡಿರುವ ಎರಡು ಎಳೆಗಳು ಪ್ರತ್ಯೇಕಗೊಂಡು ಒಂದೊಂದು ಎಳೆಯೂ ತನಗೆ ಪೂರಕವಾದ ಒಂದು ಡಿಎನ್‌ಎ ಎಳೆಯನ್ನು ನಿರ್ಮಿಸಿಕೊಳ್ಳುವುದಷ್ಟೆ. ಪ್ರೊಟೀನ್ ಸಂಶ್ಲೇಷಣೆ ಆಗಬೇಕಾದಾಗ ಜೊತೆಗೂಡಿರುವ ಎಳೆಗಳು ಪ್ರತ್ಯೇಕಗೊಂಡ ತರುವಾಯ ಸಂಬಂಧ ಪಟ್ಟ ಎಳೆ ತನಗೆ ಪೂರಕವಾದ ಆರ್‌ಎನ್‌ಎ ಎಳೆಯನ್ನು ನಿರ್ಮಿಸುವುದು. ಅಂದರೆ ತನ್ನ ಮೇಲಿನ ಎ, ಟಿ, ಜಿ, ಸಿ ಗಳಿಗೆ ಎದುರಾಗಿ ಯು, ಎ, ಸಿ, ಜಿ ಗಳು ಅನುಕ್ರಮವಾಗಿ ಬರುವಂಥ ಒಂದು ಆರ್‌ಎನ್‌ಎ ಮಾಡುವ ಕೆಲಸವೇನೆಂದರೆ ತಯಾರಾಗಬೇಕಾಗಿರುವ ಪ್ರೊಟೀನ್ ಅಣುವಿನಲ್ಲಿನ ಅಮಿನೊ ಆಮ್ಲಗಳ ಅನುಕ್ರಮವನ್ನು ಕುರಿತ ಮಾಹಿತಿ ಜೀನ್‌ನಲ್ಲಿ ಡಿಎನ್‌ಎ ಭಾಷೆಯಲ್ಲಿ (ಎ,ಟಿ,ಜಿ,ಸಿ ಗಳಲ್ಲಿ) ಇರುವುದನ್ನು ಆರ್‌ಎನ್‌ಎ ಭಾಷೆಯಲ್ಲಿ (ಎ,ಯು,ಜಿ,ಸಿ ಗಳಲ್ಲಿ) ಸಂಗ್ರಹಿಸಿಕೊಂಡು ಪ್ರೊಟೀನ್ ತಯಾರಿಕೆಯ ಸ್ಥಳವಾದ ರೈಬೊಸೋಮ್ ಎಂಬ ಕಣಗಳಿಗೆ ಕೊಂಡೊಯ್ಯುವುದು.

ಮಾಹಿತಿಯನ್ನು ಹೊತ್ತು ತಂದ ದೂತ ಆರ್‌ಎನ್‌ಎ ರೈಬೊಸೋಮ್ ಮೇಲೆ ಹರಡಿಕೊಳ್ಳುವುದು. ಅದರ ಮೇಲೆ ಅಮೈನೊ ಆಮ್ಲ ಅನುಕ್ರಮವನ್ನು ಕುರಿತ ಮಾಹಿತಿ ಎ,ಯು,ಜಿ ಗಳ ಅನುಕ್ರಮದ ರೂಪದಲ್ಲಿದೆ. ಈ ಅನುಕ್ರಮದಲ್ಲಿ ಯಾವುದೇ ಒಂದು ನ್ಯೂಕ್ಲಿಯೊಟೈಡ್ ತ್ರಿವಳಿಯನ್ನು ತೆಗೆದುಕೊಂಡರೆ (ಎಯುಜಿ, ಎಜಿಜಿ, ಜಿಯುಸಿ ಇತ್ಯಾದಿ) ಅದು ಇಪ್ಪತ್ತರ ಪೈಕಿ ಒಂದು ಅಮಿನೊ ಆಮ್ಲಕ್ಕೆ ಸಂಕೇತವಾಗಿರುವುದು. ಅಂಥ ತ್ರಿವಳಿಗಳಿಗೆ ಕೋಡಾನುಗಳೆಂದು ಹೆಸರು. ಈ ಕೋಡಾನುಗಳನ್ನು ಗುರುತಿಸಿ, ಪ್ರತಿಯೊಂದು ತ್ರಿವಳಿಗೂ ಜವಾಬಾದ ನಿರ್ದಿಷ್ಟ ಅಮಿನೊ ಆಮ್ಲವನ್ನು ಕೋಶದ್ರವದಿಂದ ಹೊತ್ತು ತಂದು ಒದಗಿಸುವ ಕೆಲಸವನ್ನು ಸಾಗಣೆ ಆರ್‌ಎನ್‌ಎ (ಟ್ರಾನ್ಸ್‌ಫರ್ ಆರ್‌ಎನ್‌ಎ) ಎಂಬ ಮತ್ತೊಂದು ಬಗೆಯ ನ್ಯೂಕ್ಲೆಯಿಕ್ ಆಮ್ಲ ನಿರ್ವಹಿಸುವುದು. ಇಪ್ಪತ್ತು ಬೇರೆ ಬೇರೆ ಅಮಿನೊ ಆಮ್ಲಗಳಿಗೂ ಇಪ್ಪತ್ತು ಬೇರೆ ಬೇರೆ ಸಾಗಣೆ ಆರ್‌ಎನ್‌ಎಗಳಿವೆ. ರೈಬೊಸೋಮ್ ಮೇಲೆ ಪವಡಿಸಿರುವ ದೂತ ಆರ್‌ಎನ್‌ಎ ಯಲ್ಲಿ ಸಂಕೇತ ಭಾಷೆಯಲ್ಲಿರುವ ಮಾಹಿತಿಗೆ ಅನುಸಾರವಾಗಿ ಸೂಕ್ತ ಅಮಿನೊ ಆಮ್ಲಗಳನ್ನು ಸೂಕ್ತ ಅನುಕ್ರಮದಲ್ಲಿ ಸಾಗಣೆ ಆರ್‌ಎನ್‌ಎ ತಂದೊದಗಿಸಿದಾಗ ಆ ಅಮಿನೊ ಆಮ್ಲಗಳು ಅದೇ ಅನುಕ್ರಮದಲ್ಲಿ ಕೂಡಿಕೊಂಡು ನಿರ್ದಿಷ್ಟ ಪ್ರೊಟೀನು ಉತ್ಪತ್ತಿಯಾಗುವುದು.

ಆನುವಂಶಿಕ ಸಂಕೇತ ಭಾಷೆಯಲ್ಲಿ ಯಾವ ಕೋಡಾನು, ಅಂದರೆ ಯಾವ ನ್ಯೂಕ್ಲಿಯೊಟೈಡು ತ್ರಿವಳಿ ಯಾವ ಅಮಿನೊ ಆಮ್ಲಕ್ಕೆ ಸಂಕೇತ ಎಂಬುದು ಬಹಳ ಕಾಲ ಒಂದು ರಹಸ್ಯವಾಗಿ ಉಳಿದಿತ್ತು. ಈ ರಹಸ್ಯವನ್ನು ಒಡೆಯುವುದರಲ್ಲಿ ಮೊತ್ತಮೊದಲ ದಿಟ್ಟ ಹೆಜ್ಜೆಯನ್ನಿಟ್ಟವರು ನಿರೆನ್‌ಬರ್ಗ್ ಮತ್ತು ಅವರ ಸಂಗಡಿಗರು ಯುರಿಡಿಲಿಕ್ ಆಮ್ಲದ ಅಣುಗಳನ್ನು ಮಾತ್ರ ಉಪಯೋಗಿಸಿ ಪಾಲಿನ್ಯೂಕ್ಲಿಯೊಟೈಡ್ ಎಳೆಯನ್ನು ಸಂಶ್ಲೇಷಿಸಿದರು (ಅದನ್ನು ಅವರು ಪಾಲಿ -ಯು ಎಂದು ಕರೆದರು). ಪ್ರೊಟೀನ್ ಸಂಶ್ಲೇಷಣೆಗೆ ಅಗತ್ಯವಾದ ಎಲ್ಲ ಸಾಮಗ್ರಿಗಳೂ (ಅಮಿನೋ ಆಮ್ಲಗಳು, ರೈಬೊಸೋಮ್‌ಗಳು, ಸಾಗಣೆ ಆರ್‌ಎನ್‌ಎಗಳು ಇತ್ಯಾದಿ) ಇರುವ ಒಂದು ಮಾಧ್ಯಮಕ್ಕೆ ಅದನ್ನು ಸೇರಿಸಿದಾಗ ಅದರಲ್ಲಿ ಬರೀ ಫೀನೈಲ್ ಅಲೆನೀನ್ ಎಂಬ ಅಮಿನೊ ಆಮ್ಲದಿಂದಲೇ ಆದ ಒಂದು ಪಾಲಿಪೆಪ್ಟೈಡ್ ಉತ್ಪತ್ತಿಯಾದುದನ್ನು ಕಂಡರು. ಫೀನೈಲ್ ಅಲ್‌ನೀನನ್ನು ಪಿಎಚ್‌ಇ ಎಂದು ಸೂಚಿಸಬಹುದಾದರೆ ಯು-ಯು-ಯು-ಯು ಎಂಬ ಪಾಲಿನ್ಯೂಕ್ಲಿಯೊಟೈಡೊ ಪಿಎಚ್‌ಇ-ಪಿಎಚ್‌ಇ-ಪಿಎಚ್‌ಇ-ಪಿಎಚ್‌ಇ ಎಂಬ ಪಾಲಿಪೆಪ್ಟೈಡನ್ನು ಉತ್ಪತ್ತಿ ಮಾಡಿತಷ್ಟೆ? ಒಂದು ಅಮಿನೊ ಆಮ್ಲಕ್ಕೆ ಒಂದು ನ್ಯೂಕ್ಲಿಯೊಟೈಡ್ ತ್ರಿವಳಿ ಸಂಕೇತ ಎನ್ನುವುದಾದರೆ, ಯುಯುಯು ಎಂಬುದು ಪಿಎಚ್‌ಇ ಗೆ ಸಂಕೇತ ಎಂಬುದು ಖಚಿತವಾಯಿತು. ನಿರೆನ್‌ಬರ್ಗ್‌ರವರ ವಿಧಾನವನ್ನೇ ಅನುಸರಿಸಿ ಪಾಲಿ – ಎ, ಪಾಲಿ – ಜಿ ಮತ್ತು ಪಾಲಿ – ಸಿ ಗಳನ್ನು ಉಪಯೋಗಿಸಿಕೊಂಡು ಎಎಎ, ಜಿಜಿಜಿ, ಸಿಸಿಸಿ ಎಂಬ ಕೋಡಾನುಗಳು ಯಾವ ಅಮಿನೊ ಆಮ್ಲಗಳಿಗೆ ಸಂಕೇತ ಎಂಬುದನ್ನೇನೋ ಪತ್ತೆ ಮಾಡಬಹುದು. ಆದರೆ ಜಿಎಸಿ, ಯುಸಿಯು ಮುಂತಾದ ಮಿಶ್ರಿತ ಕೋಡಾನುಗಳ ಪೈಕಿ ಯಾವ ಯಾವುವು ಯಾವ ಯಾವ ಅಮಿನೊ ಆಮ್ಲಗಳಿಗೆ ಸಂಕೇತ ಎಂಬುದನ್ನು ಪತ್ತೆ ಮಾಡುವುದು ಹೇಗೆ? ನಿರ್ದಿಷ್ಟ ನ್ಯೂಕ್ಲಿಯೊಟೈಡ್ ಅನುಕ್ರಮವಿರುವ ಬಗೆಬಗೆಯ ಪಾಲಿನ್ಯೂಕ್ಲಿಯೊಟೈಡುಗಳನ್ನು ತಯಾರಿಸಿಕೊಳ್ಳುವುದು ಅನಿವಾರ್ಯವಾಯಿತು. ಖೊರಾನಾರವರು ಪ್ರವೇಶಿಸಿದ್ದು ಇಲ್ಲಿ.

ಕೊ ಎನ್‌ಜೈಮುಗಳ ಸಂಶ್ಲೇಷಣೆಯಲ್ಲಿ ಅಪಾರ ಪರಿಶ್ರಮ ಪಡೆದಿದ್ದ ಖೊರಾನಾ ಅವರು ಅದೇ ಬಳಗದ ಸಂಯುಕ್ತಗಳಾದ ಪಾಲಿನ್ಯೂಕ್ಲಿಯೊಟೈಡುಗಳತ್ತ ಗಮನ ಹರಿಸಿದರು. ಮಾನೊನ್ಯೂಕ್ಲಿಯೊಟೈಡುಗಳನ್ನು ಸರಣಿಗೂಡಿಸಬಲ್ಲ ರಾಸಾಯನಿಕ ವಿಧಾನಗಳನ್ನು ಅವರು ೧೯೫೮ರಲ್ಲೇ ನಿಯೋಜಿಸಿದ್ದರು. ೧೯೬೫ರಲ್ಲಿ ಟ್ರೈ ಮತ್ತು ಟೆಟ್ರನ್ಯೂಕ್ಲಿಯೊಟೈಡುಗಳನ್ನು ಸಂಶ್ಲೇಷಿಸಲು ಸೂಕ್ತ ರಾಸಾಯನಿಕ ವಿಧಾನಗಳನ್ನು ಅಳವಡಿಸಿಕೊಂಡು ಅವುಗಳನ್ನು ನಿರ್ದಿಷ್ಟ ಅನುಕ್ರಮದಲ್ಲಿ ಕೂಡಿಸಿ ೧೬ ನ್ಯೂಕ್ಲಿಯೊಟೈಡುಗಳು ಗೊತ್ತಾದ ಅನುಕ್ರಮದಲ್ಲಿರುವಂಥ ಪಾಲಿನ್ಯೂಕ್ಲಿಯೊಟೈಡುಗಳನ್ನು ರಾಸಾಯನಿಕ ವಿಧಾನದಿಂದ ತಯಾರಿಸಿದರು. ೧೯೬೮ರಲ್ಲಿ ಅವರು ಎನ್‌ಜೈಮುಗಳ ಸಹಾಯದಿಂದ ಡಿಆಕ್ಸಿ ಪಾಲಿನ್ಯೂಕ್ಲಿಯೊಟೈಡ್ ಸರಣಿಗಳನ್ನು ಜೋಡಿಸುವ ವಿಧಾನಗಳನ್ನು ಕಂಡುಹಿಡಿದರು. ಯೀಸ್ಟಿನ ಫೀನೈಲ್ ಅಲೆನೀನ್ ಸಾಗಣೆ ಆರ್‌ಎನ್‌ಎ ಸಂಶ್ಲೇಷಣೆ ಅವರ ಇನ್ನೊಂದು ಮಹತ್ಸಾದನೆ.

೧೯೬೯ರ ಮಧ್ಯ ಭಾಗದಲ್ಲಿ, ಅಂದರೆ ಅವರು ನೊಬೆಲ್ ಬಹುಮಾನವನ್ನು ಪಡೆದ ಮರುವರ್ಷ, ಅವರು ಒಂದು ನೈಸರ್ಗಿಕ ಜೀನನ್ನೇ ಕೃತಕವಾಗಿ ಸಂಶ್ಲೇಷಿಸಿ ಹೊಸದೊಂದು ಮೈಲಿಗಲ್ಲನ್ನು ಸ್ಥಾಪಿಸಿದ್ದಾರೆ. ಜೀವದ ಕೃತಕ ನಿರ್ಮಾಣ ತತ್ತ್ವಶಃ ಸಾಧ್ಯ ಎಂಬ ನಂಬಿಕೆಗೆ ಅವರ ಈ ಅದ್ಭುತ ಸಾಧನೆ ಎಡೆಮಾಡಿಕೊಟ್ಟಿದೆ. ಕೋಶ ವಿದಳನವಾಗುವಾಗ ಎರಡು ಎಳೆಗಳು ಬೇರೆಬೇರೆಯಾಗಿ, ಒಂದೊಂದು ಎಳೆಯೂ ತನಗೆ ಪೂರಕವಾದ ಇನ್ನೊಂದು ಎಳೆಯನ್ನು ತಯಾರಿಸಿಕೊಳ್ಳುವುದರಿಂದ, ಎರಡು ಡಿಎನ್‌ಎ ಅಣುಗಳು ಉದ್ಭವಿಸುವವಷ್ಟೆ? ೧೯೬೮ರಲ್ಲಿ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದ ಆರ್ಥರ್ ಕಾರ್ನ್‌ಬರ್ಗ್‌ರವರು ಈ ಬಗೆಯ ದ್ವಿಗುಣಿಕೆಯನ್ನು ಕೃತಕವಾಗಿ ಪ್ರಯೋಗಶಾಲೆಯಲ್ಲಿ ಆಗಮಾಡಿದರು. ಆದರೆ ಇದನ್ನು ಸಂಶ್ಲೇಷಣೆ ಎಂದು ಕರೆಯುವುದಕ್ಕಾಗುವುದಿಲ್ಲ. ಏಕೆಂದರೆ ನೈಸರ್ಗಿಕ ಜೀನನ್ನು ಅವರು ಕೃತಕವಾಗಿ ದ್ವಿಗುಣಿಸಿದರು, ಅಷ್ಟೆ. ಆದರೆ ಖೊರಾನಾ ಅವರು ಡಿಎನ್‌ಎ ಘಟಕಗಳಾದ ನ್ಯೂಕ್ಲಿಯೊಟೈಡು ಅಣುಗಳಿಂದ ಪ್ರಾರಂಭಮಾಡಿ ಒಂದು ಜೀನನ್ನು ಸಂಶ್ಲೇಷಿಸಿದ್ದಾರೆ.

ನ್ಯೂಕ್ಲಿಯೊಟೈಡುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ, ಬೇಕೆನಿಸಿದ ಜೀನನ್ನು ತಯಾರಿಸುವುದಕ್ಕೆ ಹೊರಟರೆ, ಮೊದಲು ಆ ಜೀನಿನಲ್ಲಿರುವ ನ್ಯೂಕ್ಲಿಯೊಟೈಡುಗಳ ಅನುಕ್ರಮ ಗೊತ್ತಿರಬೇಕಾಗುತ್ತದೆ. ಯೀಸ್ಟ್‌ನಲ್ಲಿನ ಅಲೆನೀನ್ ಸಾಗಣೆ ಆರ್‌ಎನ್‌ಎಯ ಪೂರ್ಣ ರಚನೆಯನ್ನು ೧೯೬೫ರಲ್ಲಿ ಕಾರ್ನೆಲ್ ವಿಶ್ವವಿದ್ಯಾಲಯದ (ಈಗ ಸಾಕ್ ಇನ್ಸ್ಟಿಟ್ಯೂಟಿನಲ್ಲಿರುವ) ರಾಬರ್ಟ್ ಹಾಲಿಯವರು ನಿರ್ಣಯಿಸಿದರು. ಈ ಆರ್‌ಎನ್‌ಎಯಲ್ಲಿನ ನ್ಯೂಕ್ಲಿಯೊಟೈಡುಗಳ ಅನುಕ್ರಮ ತಿಳಿದಿರುವುದರಿಂದ, ಅದನ್ನು ಉತ್ಪತ್ತಿ ಮಾಡುವ ಜೀನಿನಲ್ಲಿರುವ ನ್ಯೂಕ್ಲಿಯೊಟೈಡು ಅನುಕ್ರಮವನ್ನೂ ತಿಳಿಯಬಹುದಷ್ಟೆ? ಖೊರಾನಾ ಅವರು ಅದನ್ನು ಆಧಾರವಾಗಿಟ್ಟುಕೊಂಡು, ನಿರ್ದಿಷ್ಟ ನ್ಯೂಕ್ಲಿಯೊಟೈಡುಗಳನ್ನು ಒಂದಕ್ಕೊಂದು ಸೇರಿಸಿ ಡಿಎನ್‌ಎಯ ಸಣ್ಣ ಸಣ್ಣ ಒಂಟಿ ಎಳೆಗಳನ್ನು ಮೊದಲು ತಯಾರಿಸಿದರು. ಅದಕ್ಕೆ ಪೂರಕವಾದ ಎಳೆಯನ್ನು ನಿರ್ಮಿಸಲು ಅವಶ್ಯವಾದ ನ್ಯೂಕ್ಲಿಯೊಟೈಡುಗಳನ್ನು ಒಂದೊಂದೇ ಸೇರಿಸಿ ಚಿಕ್ಕ ಚಿಕ್ಕ ಜೋಡಿ ಎಳೆ ಡಿಎನ್‌ಎಯನ್ನು ತಯಾರಿಸಿದರು.

ಹೀಗೆ ಸಂಶ್ಲೇಷಿಸಿದ ಜೀನ್ ತನ್ನ ಜೈವಿಕ ಕಾರ್ಯಗಳನ್ನು ನೆರವೇರಿಸಬಲ್ಲುದೆ ಎಂಬುದನ್ನು ಪರೀಕ್ಷಿಸಲು ಖೊರಾನಾರವರು ಮುಂದಾದರು. ಆ ಜೀನಿನ ಕೊರತೆ ಇರುವ ಯೀಸ್ಟ್ ಜೀವಕೋಶಕ್ಕೆ ಕೃತಕ ಜೀನನ್ನು ಒದಗಿಸಿದಾಗ ಜೀವಕೋಶ ಎಂದಿನಂತೆ ಕೆಲಸ ಮಾಡಲು ಪ್ರಾರಂಭಿಸಿತು. ಅದಾದ ಬಳಿಕ ಎಶ್ಚೆರಿಷಿಯ ಕೊಲೈ ಎಂಬ ಸೂಕ್ಷ್ಮಜೀವಿಯ ಒಂದು ಜೀನನ್ನು ತಯಾರಿಸುವ ಪ್ರಯತ್ನಗಳು ನಡೆದುವು. (೧೯೮೨). (ಜೆ.ಆರ್.ಎಲ್.)

# ಗ

**ಗಂಟಲು:** ಮೂಗು, ಬಾಯಿ ಮತ್ತು ಅಂಗುಳದ ಹಿಂದೆ ಇರುವ ಮತ್ತು ಆಹಾರ, ಗಾಳಿ ಎರಡೂ ಹಾದು ಹೋಗುವ ನಾಳ (ಥ್ರೋಟ್). ಗಂಟಲು ಕೆಳಗೆ ಅನ್ನನಾಳ ಮತ್ತು ಉಸಿರುನಾಳದೊಳಕ್ಕೆ ತೆರೆದಿದೆ. ನುಂಗುವಾಗ ದ್ರವ ಅಥವಾ ಘನರೂಪದ ಆಹಾರ ಬಾಯಿಂದ ಮೊದಲು ಗಂಟಲನ್ನು ಸೇರುತ್ತದೆ. ಉಸಿರಿನ ಗಾಳಿಯೂ ಗಂಟಲ ಮೂಲಕ ಉಸಿರುನಾಳದೊಳಕ್ಕೆ ಹೋಗಿಬರುತ್ತದೆ. ಕಿವಿಗಂಟಲು ಮತ್ತು ನಡುಗಿವಿಯ ನಡುವೆ ಇರುವ ಕಿವಿಗಂಟಲುನಾಳದ ಮೂಲಕ ಗಾಳಿ ಗಂಟಲಿನಿಂದ ನಡುಗಿವಿಯನ್ನು ಸೇರಿ ಹೊರಗಿವಿ (ಕುಹರ) ಮತ್ತು ನಡುಗಿವಿಯ ನಡವೆ ಇರುವ ಕಿವಿದಮಟೆಯ ಹೊರ ಒಳಪಕ್ಕಗಳಲ್ಲಿ ಗಾಳಿಯ ಒತ್ತಡ ಸಮವಾಗಿರುವಂತೆ ಮಾಡುತ್ತದೆ.

ರಚನೆ : ಗಂಟಲು ಹಿಂದುಮುಂದೆ ಚಪ್ಪಟೆಯಾಗಿದೆ. ಇದರ ಉದ್ದ 12.5 ಸೆಂಮೀ ಮೂಗಿನ ಹಿಂದೆ ತಲೆಬುರುಡೆಯ ತಳದಲ್ಲಿ ಇದರ ಅಗಲ ಸುಮಾರು 5 ಸೆಂಮೀ ಕೆಳಗೆ ಅನ್ನ ನಾಳವನ್ನು ಸೇರುವಲ್ಲಿ ಇದರ ಅಗಲ 2.5 ಸೆಂಮೀ ಗಂಟಲಿನ ಭಿತ್ತಿ ನಾರು ಹಾಗೂ ಸ್ನಾಯುಗಳಿಂದ ಸುತ್ತಲಿನ ಮಾಂಸವಿಶೇಷಗಳಿಗೆ ಅಂಟಿಕೊಂಡಿದೆ. ಬಾಯಿ, ಮೂಗು, ಕಿವಿಗಂಟಲುನಾಳ, ಉಸಿರುನಾಳ ಮತ್ತು ಅನ್ನನಾಳಗಳಿಗೆ ಗಂಟಲು ಅಂಟಿಕೊಂಡಿದ್ದರೂ ತಲೆಬುರುಡೆಯ ತಳ, ಕೆಳದವಡೆ ಮೂಳೆ, ನಾಲಗೆ, ಹೈಯಾಯಿಡ್ ಮೂಳೆ ಮತ್ತು ಗೋಮಾಳೆಯ ಮೃದ್ವಸ್ಥಿಗಳಿಗೆ ಹೆಚ್ಚು ಗಟ್ಟಿಯಾಗಿ ಇದು ಅಂಟಿಕೊಂಡಿದೆ. ನುಂಗುವಾಗ ಗಂಟಲು ಅಕ್ಕಪಕ್ಕದ ಮಾಂಸ ವಿಶೇಷಗಳ ಮೇಲೆ ನುಣ್ಣಗೆ ಆಡುವಂತೆ ಭಿತ್ತಿಯ ಹೊರ ನಾರುಮಾಂಸ ಪದರ ಸಡಿಲವಾಗಿದೆ.

ಗಂಟಲಿನ ಮುಖ್ಯ ಭಾಗಗಳು ಮೂರು: ಬಾಯ ಗಂಟಲು, ಮೂಗಿನ ಗಂಟಲು, ಮತ್ತು ಗೋಮಾಳೆಗಂಟಲು. ಮೂಗಿನ ಗಂಟಲಲ್ಲಿ ಆಹಾರ ಹೋಗುವುದಿಲ್ಲ. ಗಾಳಿ ಮಾತ್ರ ಓಡಾಡುತ್ತದೆ. ಮಿಕ್ಕೆರಡರ ಮೂಲಕ ಗಾಳಿ, ಆಹಾರ ಎರಡೂ ಹೋಗುತ್ತವೆ. ಈ ಭಾಗಗಳ ಕೆಲವು ಮಿತಿಗಳನ್ನು ಅಗಲ ತೆರೆದ ಬಾಯಿಯಲ್ಲಿ ಕಾಣಬಹುದು. ಬಾಯಿಗೂ ಬಾಯ ಗಂಟಲಿಗೂ ನಡುವೆ ಇರುವ ರಂಧ್ರದಲ್ಲಿ ಕೆಲವು ವಿಶೇಷಗಳಿವೆ. ಮಧ್ಯದಲ್ಲಿರುವ ರಂಧ್ರದ ಎರಡು ಕಡೆಗಳಲ್ಲಿ ಅಂಗುಳದ ಟಾನ್ಸಿಲ್ ಕಾಣಬರುತ್ತದೆ. ಇದು ಎರಡು ಲೋಳೆಪೊರೆ ಮಡಿಕೆಗಳ ನಡುವೆ ಉಂಟು. ಮುಂದಿರುವ ಮಡಿಕೆ ನಾಲಗೆ ಅಂಗುಳದ ಮಡಿಕೆ. ಹಿಂದಿರುವುದು ಗಂಟಲು ಅಂಗುಳದ ಮಡಿಕೆ. ನಾಲಗೆಯ ಮುಂದಿನ 2/3 ಭಾಗಗಳು ಮತ್ತು ಬಾಯಿ ಹಿಂದಿನ 1/3 ಭಾಗ ಸೇರುವ ಸಂಧಿಯೂ, ಹಾಗು ನಾಲಗೆ ಅಂಗುಳದ ಮಡಿಕೆಗಳೂ ಬಾಯಿ ಮತ್ತು ಬಾಯಿ ಗಂಟಲಿನ ನಡುವೆ ಉಂಟು. ಮೃದು ಅಂಗುಳದ ಹಿಂದಿನ ಅಂಚಿನ ಮಧ್ಯದಲ್ಲಿ ಕಿರುನಾಲಗೆ ಕಾಣಿಸುತ್ತದೆ. ನಾಲಗೆಯ ಬುಡ ಉಬ್ಬಿರುವುದರಿಂದ ಇದರ ಹಿಂದಿರುವ ಬಾಯ ಗಂಟಲಿನ ಕೆಳಭಾಗ ಮತ್ತು ಗೋಮಾಳೆಗಂಟಲು ಕಾಣುವುದಿಲ್ಲ. ಕಾಣದಿರುವ ಈ ಭಾಗದಲ್ಲೇ ಬಾಯ ಗಂಟಲಿಗೂ ಗೋಮಾಳೆಗಂಟಲಿಗೂ ನಡುವೆ ಹೆಡೆಯಂತಿರುವ ಎಪಿಗ್ಲಾಟಿಸ್ ಉಂಟು.

ಗಂಟಲುಭಿತ್ತಿಯ ಮುಖ್ಯಪದರುಗಳು ಒಳಗಿಂದ ಹೊರಕ್ಕೆ ಈ ರೀತಿ ಇವೆ : 1 ಕಣಗಳ ಪೊರೆ ಮತ್ತು ನಾರುಮಾಂಸ ಪೊರೆಯಿಂದಾದ ಲೋಳೆಪೊರೆ. ಇದರ ಹೊರಪದರ ಮೇಲೆ ಕೆಳಗೆ ಗಟ್ಟಿಯಾಗಿ ಅಂಟಿಕೊಂಡು ಗಂಟಲಿಗೆ ಆಧಾರವಾಗಿದೆ. 2 ಸ್ನಾಯುಪದರ. 3 ನಾರುಮಾಂಸ ಪದರ. ಗಂಟಲಸ್ನಾಯು ಪದರವು ಇಚ್ಛೆಯ ಹತೋಟಿಯಲ್ಲಿದ್ದು ನುಂಗುವ ಕಾರ್ಯದಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಲೋಳೆ ಪೊರೆಯಲ್ಲಿ ಹಲವು ಸಣ್ಣ ಜೊಲ್ಲು ಗ್ರಂಥಿಗಳಿವೆ.

ಟಾನ್ಸಿಲುಗಳ ಸ್ಥಾನ ಗಂಟಲು ಅಂಗುಳ. ಇವಲ್ಲದೆ ಕಿವಿಗಂಟಲುನಾಳದ ರಂಧ್ರದ ಹತ್ತಿರ ಒಂದು ಟಾನ್ಸಿಲ್ ಉಂಟು. ಮೂಗಿನ ಗಂಟಲಮಾಡಿನಲ್ಲಿ ಗಂಟಲ ಟಾನ್ಸಿಲ್ ಉಂಟು. ಹಲವು ಮಕ್ಕಳಲ್ಲಿ ಇದು ಊದಿಕೊಂಡು ಉಸಿರಾಡಲು ಕಷ್ಟ ಕೊಡುತ್ತದೆ. ನಾಲಗೆಯ ಹಿಂದಿನ 1/3 ಭಾಗದಲ್ಲಿ ಇರುವ ನಾಲಗೆ ಟಾನ್ಸಿಲ್ ಬಾಯಗಂಟಲಲ್ಲಿದೆ. ಈ ಟಾನ್ಸಿಲುಗಳು ಲೋಳೆ ಪೊರೆಯಲ್ಲಿ ದುಗ್ಧಕಣಗಳಿಂದಾಗಿದ್ದು ಸಾಧಾರಣವಾಗಿ ಪ್ರಾಯ ಮೀರುತ್ತಿರುವಂತೆ ಕ್ಷೀಣಗೊಳ್ಳುತ್ತವೆ.

ಹೋಲಿಕೆ ಅಂಗರಚನೆ : ಸರಳ ರಚನೆಯ ಪ್ರಾಣಿಗಳಲ್ಲಿ ಜಟಿಲ ರಚನೆಯ ಪ್ರಾಣಿಗಳಲ್ಲಿರುವ ಆಹಾರ ನಾಳಕ್ಕೆ ಸಮವಾದ ಆಹಾರ ನಾಳವಿಲ್ಲದಿರುವುದರಿಂದ ಅಂಗಗಳ ರಚನೆಯೂ ಸರಳವಾಗಿದ್ದು ಗಂಟಲೇ ಇರುವುದಿಲ್ಲ. ಆಹಾರನಾಳವಿರುವ ಕೆಲವು ಅಕಶೇರುಕಗಳಲ್ಲಿ ಬಾಯಿ ಮತ್ತು ಜಠರಕೋಶದ ನಡುವೆ ಗಂಟಲಿಲ್ಲ. ಗಂಟಲಿರುವ ಅಕಶೇರುಕಗಳಲ್ಲಿ ಗಂಟಲಿನ ರಚನೆ ಮತ್ತು ಕ್ರಿಯೆಗಳಲ್ಲಿ ವೈವಿಧ್ಯ ಉಂಟು. ಉದಾಹರಣೆಗಳು: (1) ಜಿಗಣೆಗಳಲ್ಲಿನ ಗಂಟಲಿನ ಭಿತ್ತಿಯಲ್ಲಿ ಬಲವಾದ ಸ್ನಾಯು ಉಂಟು. ಇದು ಜಿಗಣೆಗೆ ತಾನು ಕಡಿದ ಪ್ರಾಣಿಯ ರಕ್ತವನ್ನು ಹೀರಲು ಸಹಾಯಕಾರಿ. (2) ಕೆಲವು ಸಮುದ್ರಹುಳುಗಳಲ್ಲಿ ಬಾಯಿ ಮತ್ತು ಗಂಟಲಿನ ಭಿತ್ತಿಗಳು ಆಚೆಗೆ ಒಳಹೊರಮುಖವಾಗಿ ಮಡಿಚಿಕೊಂಡು ಆಹಾರವನ್ನು ಕಬಳಿಸಲು ಚಾಚುವಂತಿವೆ. ಕಬಳಿಸುವುದಕ್ಕೆ ಸಹಾಯ ಮಾಡಲು ಗಂಟಲಿನ ಒಳಮೈ ಮೇಲೆ ಗುಳ್ಳೆಗಳು ಅಥವಾ ಕೊಂಬಿನ ಹಲ್ಲುಗಳಿರಬಹುದು.

ಅಕಶೇರುಕಗಳ ಗಂಟಲು ಕಶೇರುಕಗಳ ಗಂಟಲಿಗೆ ನಿಜವಾಗಿ ಸರಿಸಮವಲ್ಲ. ಅವುಗಳ ಹೋಲಿಕೆ ಆಹಾರನಾಳಗಳ ಸ್ಥಾನಗಳಿಂದ ಮಾತ್ರ,. ಕಶೇರುಕಗಳಲ್ಲಿ ಮಾತ್ರ ಗಂಟಲಿನ ಉತ್ಪತ್ತಿ ಮತ್ತು ರಚನೆಗಳು ಒಂದೇ ರೀತಿಯವಾಗಿರುವುದರಿಂದ ಇವುಗಳ ಗಂಟಲುಗಳು ಸರಿಸಮ.

ಕಶೇರುಕಗಳ ವಿವಿಧ ವರ್ಗಗಳಲ್ಲಿ ಗಂಟಲಿನ ರಚನೆ ವಿವಿಧವಾಗಿದೆ. ಗಾಳಿಯಲ್ಲಿ ಉಸಿರಾಡುವ, ಅಂದರೆ ಘುಪ್ಪುಸಗಳಿರುವ ಪ್ರಾಣಿಗಳಲ್ಲಿ (ಸ್ತನಿ, ಹಕ್ಕಿ, ಸರೀಸೃಪ ಮತ್ತು ಕಪ್ಪೆ) ಗಂಟಲಿನ ರಚನೆ ಸಾಮಾನ್ಯವಾಗಿ ಮನುಷ್ಯನ ಗಂಟಲ ರಚನೆಯಂತೆಯೆ ಇದೆ. ಕಿವಿರುಗಳಿಂದ ನೀರಿನಲ್ಲಿ ಉಸಿರಾಡುವ ಪ್ರಾಣಿಗಳ (ಮೀನು) ಗಂಟಲಿನ ರಚನೆ ಆದಿ ಕಶೇರುಕಗಳ ಮೂಲರಚನೆಯಂತಿದೆ. ಗಂಟಲಿನಲ್ಲಿ ಕಿವಿರುಗಳಿರುವುದು ಆದಿಮ ಸ್ಥಿತಿ. ಮೀನಿನಲ್ಲಿ ಮತ್ತು ಕೆಲವು ಬಾಲವಿರುವ ದ್ವಿಚರಿಗಳಲ್ಲಿ ಜೀವನದುದ್ದಕ್ಕೂ ಕಿವಿರುಗಳಿರುತ್ತವೆ. ದ್ವಿಚರಿಗಳ ಮರಿಗಳು, ಪ್ರೌಢಾವಸ್ಥೆಯಲ್ಲಿರುವ ನೆಕ್ಟ್ಯೂರಸ್ ಇತ್ಯಾದಿ ಪ್ರಾಣಿಗಳಲ್ಲಿ ಕಿವಿರುಗಳು ಕುಚ್ಚುಗಳಂತಿರುವ ಹೊರ ಅವಯವಗಳು. ಮೀನುಗಳಲ್ಲಿ ಸರ್ವೆಸಾಮಾನ್ಯವಾಗಿ ಕಿವಿರುಗಳು ಗಂಟಲಭಿತ್ತಿಯಲ್ಲೇ ಇರುವ ಒಳಅಂಗಗಳು. ಉದಾಹರಣೆಗೆ ಶಾರ್ಕ್‌ಮೀನಿನ ಕತ್ತಿನ ಭಾಗದ ಇಕ್ಕೆಲಗಳಲ್ಲಿ ಸಾಧಾರಣವಾಗಿ 5 ಕಿವಿರುಬಿರುಕುಗಳಿವೆ; ಇವಲ್ಲದೆ ಮುಂದುಗಡೆ ಸ್ಪೈರಕಲ್ ಎಂಬ ರಂಧ್ರವಿದೆ. ಬಿರುಕುಗಳು ಗಂಟಲಿಗೂ ಆಚೆಯ ನೀರಿಗೂ ನಡುವೆ ಇರುವ ಮಾರ್ಗಗಳು. ಈ ಬಿರುಕುಗಳಲ್ಲಿರುವ ಕಿವಿರುಗಳಿಗೆ ನೀರಿನ ಸ್ನಾನವಾಗುತ್ತಿದ್ದಂತೆ ಅವು ನೀರಿನಲ್ಲಿ ಕರಗಿರುವ ಆಮ್ಲಜನಕ ಹೀರುತ್ತವೆ. ಮೂಳೆ ಮೀನುಗಳಲ್ಲಿ ಬಲ ಎಡ ಕಿವಿರುಗಳ ಮುಚ್ಚಳಗಳಿವೆ. ಇದರಿಂದ ಆಚೆ ಕಾಣುವಂತೆ ಒಂದೇ ಬಿರುಕಿದೆ. ಮೇಲಿನ ಎಲ್ಲ ಉದಾಹರಣೆಗಳಲ್ಲಿಯೂ ಕಿವಿರುಗಳು ಉಸಿರಾಟದ ಅಂಗಗಳು ; ಅವುಗಳಲ್ಲಿರುವ ಸೂಕ್ಷ್ಮ ರಕ್ತನಾಳಗಳ ಕುಚ್ಚುಗಳಲ್ಲಿರುವ ಇಂಗಾಲದ ಡೈ ಆಕ್ಸೈಡ್ ನೀರನ್ನು ಸೇರಿ ಆಕ್ಸಿಜನ್ ರಕ್ತವನ್ನು ಸೇರುತ್ತದೆ. ಈ ಕ್ರಿಯೆ ಘುಪ್ಪುಸಗಳಲ್ಲಿ ಗಾಳಿಗೂ ರಕ್ತಕ್ಕೂ ನಡುವೆ ನಡೆಯುವ ಅನಿಲ ವಿನಿಮಯದಂತಿದೆ. ಗಾಳಿಯಲ್ಲಿ ಉಸಿರಾಡುವ ಬೆನ್ನುಮೂಳೆ ಪ್ರಾಣಿಗಳ ಭ್ರೂಣಾವಸ್ಥೆಯಲ್ಲಿ ಮೀನಿನಲ್ಲಿರುವಂತೆ ಕಿವಿರುಗಳಿರುವ ಗಂಟಲಿನ ಆದಿರೂಪ ಕಾಣಿಸಿಕೊಳ್ಳುತ್ತದೆ. ಆದರೆ ಕಿವಿರುಗಳು ಬೆಳೆಯುವುದಿಲ್ಲ. ಬೆಳೆವಣಿಗೆಯ ಹಲವು ಘಟ್ಟಗಳು ಕಾಣಿಸಿಕೊಳ್ಳುವುದಿಲ್ಲ. ಉದಾಹರಣೆಗೆ ಕಿವಿರುಬಿರುಕುಗಳಾಗುವುದಿಲ್ಲ. ಮನುಷ್ಯನಲ್ಲಿ ಅಪರೂಪ ವಿಚಿತ್ರವಾಗಿ ಕಿವಿರು ಬಿರುಕುಗಳು ರೂಪಗೊಳ್ಳಬಹುದು. ಇವು ಗಂಟಲಿನೊಳಕ್ಕೆ ತೆರೆಯಬಹುದು ಅಥವಾ ತೆರೆಯದಿರಬಹುದು.

ಸ್ತನಿಗಳಲ್ಲಿ ಬಾಯಿಮೂಗುಗಳ ನಡುವೆ ಅಂಗುಳವಿರುವುದರಿಂದ ಅಗಿಯುವ ಕಾರ್ಯ ಸಾಧ್ಯವಿದೆ.

***

**ಗಂಟಲು ಕಟ್ಟುವಿಕೆ, ಪ್ರಾಣಿಗಳಲ್ಲಿ:** ಪ್ರಾಣಿಗಳು ಆಹಾರವನ್ನು ಸೇವಿಸುವಾಗ ಆಕಸ್ಮಿಕವಾಗಿ ಅನ್ನನಾಳದಲ್ಲಿ ಆಹಾರಪದಾರ್ಥ ಸಿಕ್ಕಿಹಾಕಿಕೊಂಡು ಅನ್ನನಾಳದ ಒಳ ಆವರಣ ಮುಚ್ಚಿಹೋಗುವ ಸ್ಥಿತಿ. ಸಾಮಾನ್ಯವಾಗಿ ಎಲ್ಲ ಪ್ರಾಣಿಗಳಲ್ಲಿ ಈ ಬವಣೆ ಕಾಣಬರುವುದು. ಕುದುರೆ, ಹಸು, ನಾಯಿ ಮುಂತಾದ ಪ್ರಾಣಿಗಳು ಬಹು ಬೇಗನೆ ಈ ಅಪಾಯಕ್ಕೆ ಒಳಗಾಗುತ್ತವೆ. ಆಹಾರ ಅನ್ನನಾಳದಲ್ಲಿ ನಿಲ್ಲಲು ಅನೇಕ ಕಾರಣಗಳುಂಟು. ಅವು ಪ್ರಾಣಿಗಳ ಆಹಾರಕ್ರಮ ಮುಂತಾದುವುಗಳ ಮೇಲೆ ಅವಲಂಬಿತವಾಗಿವೆ.

ಕುದುರೆ : ಸಾಕುಪ್ರಾಣಿಗಳಲ್ಲೆಲ್ಲ ಕುದುರೆ ಈ ಬೇನೆಗೆ ಬಹಳ ಬೇಗ ಒಳಗಾಗುವುದು. ತನಗೆ ಇಷ್ಟವಾದ ಆಹಾರ ಸಿಕ್ಕಾಗ ಕುದುರೆ ಅದನ್ನು ಗಬಗಬನೆ ಬೇಗಬೇಗ ತಿನ್ನುವಾಗ, ಆಹಾರದ ತುತ್ತು ಉಂಡೆಯಾಗಿ ಅನ್ನನಾಳದಲ್ಲಿ ಅಡಚಿಕೊಂಡು ಆಹಾರ ಮುಂದೆ ಹೋಗದಂತೆ ನಿಲ್ಲುತ್ತದೆ. ಕುದುರೆ ಮರಿಗಳಲ್ಲಿ ಔಷಧಿಯ ದೊಡ್ಡ ಗುಳಿಗೆಗಳನ್ನು ಕೊಟ್ಟಾಗಲೂ ಈ ಪರಿಸ್ಥಿತಿ ಉಂಟಾಗುವುದು. ಒಮ್ಮೊಮ್ಮೆ ಅನ್ನನಾಳದಲ್ಲಿ ಉರಿಯೂತವಿದ್ದು ಅದರಿಂದ ಅನ್ನನಾಳ ತನ್ನ ಸ್ವಾಭಾವಿಕ ಕ್ರಿಯೆಯನ್ನು ಮಾಡಲು ಅಸಮರ್ಥವಾಗುವುದು. ಅಂಥ ವೇಳೆಯಲ್ಲಿ ಈ ಗಂಟಲು ಬೇನೆ ಕಾಣಿಸಿಕೊಳ್ಳುವುದುಂಟು. ಗಂಟಲು ಕಟ್ಟಿದಾಗ ಕುದುರೆ

ಆಹಾರ ತಿನ್ನುವುದನ್ನು ನಿಲ್ಲಿಸಿ ಕುತೂಹಲ ದೃಷ್ಟಿಯಿಂದ ಕಿವಿಗಳನ್ನು ಹಿಂದಕ್ಕೆ ಮುಂದಕ್ಕೆ ಅಲ್ಲಾಡಿಸುತ್ತ ಇರುವುದು. ನುಂಗಲು ಹವಣಿಸಿ ಅದು ಸಾಧ್ಯವಾಗದೆ ನರಳುವುದು. ಜೊಲ್ಲು ವಿಪರೀತವಾಗುವುದು. ಬಾಯಿಯಲ್ಲಿ ಉಳಿದಿರುವ ಅರ್ಧಂಬರ್ಧ ಆಹಾರ ಹಾಗೂ ಜೊಲ್ಲು ಮೂಗಿನ ಮೂಲಕ ಹೊರಬರುವುದು. ಉಸಿರುಕಟ್ಟಿದಂತಾಗಿ ಕೆಮ್ಮುವುದು. ನುಲಿತದ ಇತರ ಲಕ್ಷಣಗಳನ್ನು ತೋರಿಸುವುದು. ಕುದುರೆ ಮರಿಯಲ್ಲಿ ಬಾಯಿಯ ಮೂಲಕ ಕುಡಿದ ಹಾಲು ಮೂಗಿನ ಮೂಲಕ ಹೊರಬರುವುದು. ಕಾಳುಗಳಿಂದ ಹಾಗೂ ಮೆದು ಆಹಾರ ಪದಾರ್ಥದಿಂದ ಅನ್ನನಾಳ ಬಂಧಿತವಾಗಿದ್ದರೆ ಬಾಯಿಯಲ್ಲಿ ಉತ್ಪತ್ತಿಯಾಗುವ ಲಾಲಾರಸದಿಂದ ಮುಂದೆ ಅಡಚಿದ ಆಹಾರವಸ್ತು ಕರಗಿ ಹೋಗುವುದು. ಈ ಅಡಚಣೆ ಕೆಲವು ಗಂಟೆಗಳೊಳಗಾಗಿ ಅಥವಾ ಒಂದೆರಡು ದಿವಸಗಳೊಳಗಾಗಿ ನಿವಾರಣೆಯಾಗುವುದು. ಉಸಿರಾಡುವಾಗ ಆಹಾರವಸ್ತುವಿನ ಕಣಗಳು ಫುಪ್ಫುಸಗಳನ್ನು ಸೇರುವುದರಿಂದ ನ್ಯೂಮೋನಿಯ ಬೇನೆ ಬರಬಹುದು. ಇಷ್ಟೆಲ್ಲ ಆದರೂ ಜೀವಭಯವಿರುವುದಿಲ್ಲ. ಕುದುರೆಗೆ ಹೆಚ್ಚಾಗಿ ನೀರು ಕುಡಿಯಲು ಬಿಡಬೇಕು. ಮುಂದೆ ಆಹಾರ ತಿನ್ನಲು ಬಿಡಬಾರದು. ವೇದನಾನಿವಾರಕಗಳನ್ನು ಕೊಡಬಹುದು.

ಹಸು : ಕುದುರೆಗಳಂತೆಯೇ ಹಸುಗಳು ಕೂಡ ತಮಗೆ ಬೇಕಾದ ಆಹಾರ ಸಿಕ್ಕಿದರೆ ಗಬಗಬನೆ ತಿನ್ನುವುದರಿಂದ ಗಂಟಲು ಕಟ್ಟುತ್ತದೆ. ಆಲೂಗಡ್ಡೆ, ಜೋಳದ ದಿಂಡು, ಗೆಡ್ಡೆಗಳು, ಹಲಸು ಹಣ್ಣಿನ ಸೆವಾಲೆ, ಈರುಳ್ಳಿ, ಕೋಸು, ಮಾವಿನ ಓಟೆ, ತಾಟನುಂಗಿನ ಕಾಯಿ ಹಾಗೂ ಅಡುಗೆ ಮನೆಯಿಂದ ಹೊರಗೆ ಹಾಕಿದ ತರಕಾರಿ ಚೂರುಗಳು, ಕೆಟ್ಟುಹೋದ ತರಕಾರಿಗಳು, ಬೀದಿಯ ಬದಿಯಲ್ಲಿ ಸಿಗುವ ಇತರ ವಸ್ತುಗಳು ಇತ್ಯಾದಿ ಅನೇಕ ಪದಾರ್ಥಗಳನ್ನು ಹಸುಗಳು ತಿನ್ನುವುದರಿಂದ ಈ ಬೇನೆ ಬರಲು ಪ್ರಮುಖ ಕಾರಣ. ಗಂಟಲು ಕಟ್ಟಿದ ಸ್ಥಿತಿಯಲ್ಲಿ ಕುದುರೆಯಲ್ಲಿ ಕಾಣಬರುವ ರೋಗಲಕ್ಷಣಗಳೇ ಹಸುವಿನಲ್ಲಿ ಕಾಣಬರುವುದು. ಅಲ್ಲದೇ ಹಸುಗಳಿಗೆ ಹೊಟ್ಟೆ ಊದುತ್ತದೆ. ಚಿಕಿತ್ಸೆಯ ಮೊದಲ ಹಂತವಾಗಿ ಈ ಹೊಟ್ಟೆ ಊತವನ್ನು ಇಳಿಸಬೇಕು. ಅನ್ನನಾಳದಲ್ಲಿ ಸಿಕ್ಕಿಹಾಕಿಕೊಂಡಿರುವ ಆಹಾರವನ್ನು ಹಾಗೆಯೇ ಮೇಲಕ್ಕೆ ಬರುವಂತೆ ನಿಧಾನವಾಗಿ ಮೇಲೆ ನೀವಿ ಅಡಚಿಕೊಂಡಿದ್ದ ಆಹಾರ ಬಾಯಿಗೆ ಬಂದ ಒಡನೆ ಹೊರಗೆ ತೆಗೆಯಬೇಕು. ಗಂಟಲಿನ ಮೂಲಕ ನಿಧಾನವಾಗಿ ಗಂಟಲನಳಿಕೆಯನ್ನು ಒಳಹೊಗಿಸಿ ಅಡಚಿರುವ ಆಹಾರವನ್ನು ನೂಕಬೇಕು. ಇದರಿಂದ ಕಟ್ಟಿಕೊಂಡಿದ್ದ ಅನ್ನನಾಳ ಸರಿಹೋಗುವುದು.

ಇತರ ಪ್ರಾಣಿಗಳಲ್ಲಿಯೂ ಸಹ ಇದೇ ರೀತಿಯ ಬೇನೆ ಕಂಡುಬರುವುದು. ನಾಯಿಗಳಲ್ಲಿ ಮೂಳೆ ತಿನ್ನುವುದರಿಂದ, ರಬ್ಬರ್‌ಚೆಂಡನ್ನು ನುಂಗುವುದರಿಂದ ಹಾಗೂ ಇತರ ಪದಾರ್ಥಗಳಿಂದ ಗಂಟಲು ಕಟ್ಟುವಿಕೆ ತೋರಿಬರುವುದು. ***

**ಗಂಟಲು ಬೇನೆ:** ದನ, ಎಮ್ಮೆ, ಕುರಿ ಮತ್ತು ಆಡು ಜಾತಿಗಳಿಗೆ ತಗಲುವ ಅತಿ ತೀವ್ರವಾದ ಅಂಟುರೋಗ, ಗಳಲೆರೋಗ ಪರ್ಯಾಯ ನಾಮ. ಈ ರೋಗದಲ್ಲಿ ಚರ್ಮದ ಕೆಳಗೆ ಬಾವು ಬರಬಹುದು ; ಸಣ್ಣ ಕರುಳುಗಳ ನೋವು ತಲೆದೋರಬಹುದು; ಇಲ್ಲವೇ ಫುಪ್ಫುಸಭಾಗಗಳು ಕೆಟ್ಟು ನ್ಯೂಮೋನಿಯ ಬರಬಹುದು. ಯುರೋಪ್ ಖಂಡದಲ್ಲಿ ಬೋಲಿಂಗರ್ (1838) ಎಂಬ ವಿಜ್ಞಾನಿ ಈ ರೋಗವನ್ನು ಮೊದಲು ಕಂಡುಹಿಡಿದ. ಕೆಟ್ (1885) ಎಂಬ ವಿಜ್ಞಾನಿ ಈ ರೋಗಕ್ಕೆ ಮೂಲಕಾರಣವಾದ ಕ್ರಿಮಿಯನ್ನು ಕಂಡುಹಿಡಿದ. ಅಂದಿನಿಂದ ಭಾರತದಲ್ಲಿಯೂ ಜಗತ್ತಿನ ಇತರ ಎಲ್ಲ ದೇಶಗಳಲ್ಲಿಯೂ ಈ ರೋಗವನ್ನು ಗುರುತಿಸಲಾಗಿದೆ. ಭಾರತದಲ್ಲಿ ಪ್ರತಿವರ್ಷ 33,000ಕ್ಕಿಂತಲೂ ಹೆಚ್ಚು ದನ ಮತ್ತು ಎಮ್ಮೆಗಳು ಈ ರೋಗದಿಂದ ಸಾಯುತ್ತವೆ.

ಈ ರೋಗಕ್ಕೆ ಮೂಲಕಾರಣ ಪಾಶ್ಚುರೆಲ್ಲ ಸೆಪ್ಟಿಕ ಎಂಬ ಒಂದು ಸೂಕ್ಷ್ಮಕ್ರಿಮಿ. ಇದು ದೇಹದ ಹೊರಗೆ ಮಣ್ಣಿನಲ್ಲಿ ಅಲ್ಲದೆ ಜೌಗುಪ್ರದೇಶದಲ್ಲಿ ಹೆಚ್ಚಾಗಿ ಇರುತ್ತದೆ. ಸಾಮಾನ್ಯವಾಗಿ ಇದು ಆರೋಗ್ಯವಾದ ಪ್ರಾಣಿಗಳ ಊರ್ಧ್ವಶ್ವಾಸನಾಳಗಳಲ್ಲಿಯೇ ಇದ್ದು ಪ್ರಾಣಿಗಳ. ಶರೀರದಲ್ಲಿ ಈ ಕ್ರಿಮಿ ರೋಗದಿಂದ ಬಳಲುವ ಪ್ರಾಣಿಯ ಎಲ್ಲ ಅವಯವಗಳಲ್ಲಿ ಅದರಲ್ಲಿಯೂ ರಕ್ತ ಮತ್ತು ಬಾವು ಬಂದ ಜಾಗಗಳಲ್ಲಿ ಕಂಡುಬರುತ್ತದೆ. ಇದನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಗುರುತಿಸಬಹುದು.

ರೋಗಲಕ್ಷಣಗಳು : ಗಂಟಲುಬೇನೆ ಅತಿ ತೀಕ್ಷ್ಣವಾಗಿದ್ದು ರಕ್ತದಲ್ಲಿ ಕ್ರಿಮಿ ಬೇಗನೆ ಪಸರಿಸಿ ಕೂಡಲೇ ರೋಗದ ಲಕ್ಷಣಗಳು ಕಂಡುಬರುತ್ತವೆ. ಜ್ವರ $106^0$ ಫ್ಯಾ.– $107^0$ ಫ್ಯಾ. ಇರುವುದು. ನಾಲಗೆ ಬಾಯಿಯಿಂದ ಹೊರಗೆ ಚಾಚಿರುತ್ತದೆ. ವಿಪರೀತ ಜೊಲ್ಲುಸೋರುವುದು. ಕಣ್ಣು ಕೆಂಪಾಗುವುದು. ಪ್ರಾಣಿ ಅತೀವ ಇಳಿಮುಖವಾಗಿದ್ದು 34 ಗಂಟೆಗಳಲ್ಲಿ ಮರಣ ಹೊಂದಬಹುದು. ಕೆಲವು ಸಮಯ ಗಂಟಲು, ಗಂದೆಗಳು, ಎದೆ ಈ ಜಾಗಗಳಲ್ಲಿ ಅತೀವ ನೋವಾದ ಬಾವುಗಳು ಕಂಡುಬರುತ್ತವೆ. ಉಸಿರಾಡಲು ತೊಂದರೆಯಾಗುತ್ತದೆ. ಬೇನೆಯ ಕೆಲವು ದಿವಸಗಳು ಕಳೆಯುವಾಗ ನ್ಯೂಮೋನಿಯ ತಲೆದೋರಬಹುದು. ಇಲ್ಲವೆ ಕರುಳಿನಲ್ಲಿ ಬದಲಾವಣೆಗಳು ಕಂಡುಬರಬಹುದು. ಮರಣಾನಂತರ ಪ್ರಾಣಿಗಳ ದೇಹವನ್ನು ತೆಗೆದು ಪರೀಕ್ಷೆ ಮಾಡಿದರೆ ರೋಗ ಅತಿ ತೀಕ್ಷ್ಣವಾಗಿದ್ದರೆ ದೇಹದ ಎಲ್ಲ ಭಾಗಗಳಲ್ಲಿ ರಾಗಿಯಷ್ಟು ಗಾತ್ರದ ರಕ್ತದ ಗಂಟುಗಳು ಕಂಡುಬರುತ್ತವೆ. ರಸಗ್ರಂಥಿಗಳು ಕೆಂಪಾಗಿ ಉಬ್ಬಿರುತ್ತವೆ. ಈ ಬೇನೆ ಎದೆಗೆ ಪಸರಿಸಿದಾಗ ಎದೆಗೂಡಿನಲ್ಲಿ ದೇಹದ ರಸ ಅಥವಾ ಮಂದವಾದ ರಸ ತುಂಬಿಕೊಂಡಿದ್ದು ಎದೆಗೂಡಿನ ಪದರು ಕೆಂಪಾಗಿರುತ್ತದೆ. ಫುಪ್ಫುಸಗಳು ಬಾತಿದ್ದು ಅಲ್ಲಲ್ಲಿ ಕೆಂಪು ಅಥವಾ ಕಪ್ಪುಬಣ್ಣದ ಬದಲಾವಣೆಗಳನ್ನು ತೋರಿಸುತ್ತವೆ. ಇಂಥ ಫುಪ್ಫುಸ ಒಂದನ್ನು ಕತ್ತರಿಸಿದರೆ ಅದರಲ್ಲಿ ದಪ್ಪವಾದ ಬಿಳಿಗೆರೆಗಳು ಕಂಡುಬರುತ್ತವೆ.

ಚಿಕಿತ್ಸೆ : ಗಂಟಲು ಬೇನೆ ಬಂದಿರುವ ಎಲ್ಲ ಪ್ರಾಣಿಗಳನ್ನು ಬೇರ್ಪಡಿಸಿ ಉಳಿದುವುಗಳಿಂದ ದೂರವಿಡಬೇಕು. ಅವನ್ನು ಬೆಚ್ಚಗಿರುವ ಜಾಗದಲ್ಲಿ ಕಟ್ಟಿ ಒಳ್ಳೆಯ ಆಹಾರವನ್ನು ಕೊಡಬೇಕು. ಈ ರೋಗಕ್ಕೆ ಬಗೆ ಬಗೆಯ ಸಲ್ಫನಾಮೈಡ್ ಔಷಧಿಗಳು ಗುಣ ಕೊಡುತ್ತವೆ. ಸಮರ್ಥ ವೈದ್ಯರ ನೆರವನ್ನು ಒಡನೆ ಪಡೆಯುವುದು ಕ್ಷೇಮ. ಆಗಿಂದಾಗ್ಗೆ ರೋಗ ಕಾಣಬರುವ ಪ್ರದೇಶಗಳಲ್ಲಿ ಮುಂಗಾರು ಮತ್ತು ಹಿಂಗಾರು ಮಳೆಯ ಆರಂಭದಲ್ಲಿ ವಿಶೇಷವಾಗಿ ಈ ರೋಗ ಬರುತ್ತದೆ. ಇದು ಒಮ್ಮೆಲೆ ತೀಕ್ಷ್ಣವಾಗಿ ಉಲ್ಬಣ ಸ್ಥಿತಿಯುಂಟಾಗುತ್ತದೆ. ಆದ್ದರಿಂದ ಚಿಕಿತ್ಸಾ ಕ್ರಮ ಕೈಗೊಳ್ಳುವಷ್ಟು ಅವಕಾಶ ಸಿಗುವುದು ಕೂಡ ಕಷ್ಟವಾಗುತ್ತದೆ. ರೋಗ ದೊಡ್ಡ ಗಾತ್ರದಲ್ಲಿ ಹಬ್ಬಿದರೆ ಪ್ರತಿಯೊಂದು ಪ್ರಾಣಿಯನ್ನೂ ಉಪಚರಿಸುವುದು ಕಠಿಣವಾಗುತ್ತದೆ. ಇಂಥ ಪ್ರಸಂಗದಲ್ಲಿ ಒಂದೇ ಪ್ರತಿಬಂಧಕ ಮಾರ್ಗವೆಂದರೆ ಪ್ರತಿವರ್ಷ ಈ ಪ್ರದೇಶಗಳಲ್ಲಿ ಚುಚ್ಚುಮದ್ದನ್ನು ಎಲ್ಲ ದನಗಳಿಗೆ ಹಾಕಿಸುವುದು. ಈ ಚುಚ್ಚುಮದ್ದು ರೋಗವನ್ನು ಹತೋಟಿಗೆ ತರಲು ಬಹಳ ಉಪಕಾರಿಯಾಗಿದೆ. ಚುಚ್ಚುಮದ್ದಿನಿಂದ ಉಪಚರಿಸಿದ ಪ್ರಾಣಿಗಳು ಕನಿಷ್ಠ 10 ತಿಂಗಳವರೆಗೆ ಗಂಟಲುಬೇನೆಯಿಂದ ಮುಕ್ತವಾಗಿರುತ್ತವೆ. ***

**ಗಂಟುಗಳು:** ಪರಾವಲಂಬಿಗಳಾದ ಕೆಲವು ಬ್ಯಾಕ್ಟೀರಿಯ, ಶಿಲೀಂಧ್ರ ಮತ್ತು ಕೀಟಗಳು ಸಸ್ಯಗಳ ಮೇಲೆ ವಾಸ ಮಾಡುವಾಗ ಉಂಟಾಗುವ ರಚನೆಗಳೇ ಗಂಟುಗಳು (ಗಾಲ್ಸ್). ಸಸ್ಯಗಳಿಗೆ ಹಲವು ಕಾರಣಗಳಿಂದ ಗಾಯಗಳಾದಾಗ ಗಂಟುಗಳಾಗುತ್ತವೆ. ಪರಾವಲಂಬಿಗಳು ಸಸ್ಯದ ದೇಹ ಹೊಕ್ಕಾಗ ಜೀವಿಗಳು ಸ್ರವಿಸುವ ರಾಸಾಯನಿಕ ದ್ರವಗಳು ಸುತ್ತಮುತ್ತಲಿನ ಜೀವಕೋಶಗಳು ವಿಭಜನೆ ಹೊಂದುವಂತೆ ಮತ್ತು ಹಿಗ್ಗುವಂತೆ ಮಾಡಿ ಗಂಟುಗಳ ಉದ್ಭವಕ್ಕೆ ಕಾರಣವಾಗುತ್ತವೆ.

ಗಂಟುಗಳು ಸಸ್ಯದ ಕಾಂಡ, ಬೇರು ಮತ್ತು ಎಲೆಗಳಲ್ಲಿ ಉಂಟಾಗುತ್ತವೆ. ಕೆಲವು ಸಸ್ಯಗಳಲ್ಲಿ ಹೂ ಮತ್ತು ಕಾಯಿಗಳಲ್ಲಿ ಗಂಟುಗಳಾಗುತ್ತವೆ. ಸಸ್ಯಕೋಶಗಳ ಜೋಡಣೆ ಮತ್ತು ಪರಾವಲಂಬಿಗಳಿಂದ ಸ್ರವಿಸುವ ರಸದ ಉದ್ವೇಗಕಾರಕ ಗುಣಗಳನ್ನವಲಂಬಿಸಿ, ಗಂಟುಗಳು ತಮ್ಮ ಗಾತ್ರ, ಆಕಾರ ಮತ್ತು ರಚನೆಗಳಲ್ಲಿ ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ. ಒಂದು ಜೀವಿ ಮತ್ತೊಂದು ಜೀವಿಯ ಕೋಶದ ಮೇಲೆ ಪ್ರಭಾವ ಬೀರಿದಾಗ, ಇವೆರಡು ಜೀವಕೋಶಗಳಿಗೆ ಉಂಟಾಗುವ ಘರ್ಷಣೆ ಮತ್ತು ಕೋಶಗಳಲ್ಲಿನ ವಿಭಿನ್ನ ಅಂಶಗಳಲ್ಲಿನ ಮಿಲನದಿಂದ, ಕೋಶಗಳು ಚೋದನೆಗೊಂಡು ಅತಿಯಾಗಿ ಬೆಳೆಯುತ್ತವೆ. ಇದಕ್ಕೆ ಗಂಟುಗಳಲ್ಲಿನ ಬೇರಿನ ಗ್ರಂಥಿ, ಕಾಂಡದ ಗ್ರಂಥಿ, ಎಲೆಗಳ ಗ್ರಂಥಿಗಳು ಸೇರಿರಬಹುದು. ಕೆಲವು ಕೀಟಗಳು ಮೊಟ್ಟೆಗಳನ್ನು ಎಲೆಗಳ ಮೇಲೆ ಇಡುತ್ತವೆ. ಆಗ ಇವು ಒಂದು ವಿಧವಾದ ಪ್ರಚೋದಕ ದ್ರವವನ್ನು ಸ್ರವಿಸುತ್ತವೆ. ಈ ದ್ರವದ ಪ್ರಭಾವದಿಂದ ಎಲೆಯ ಒಳಗಿನ ಜೀವಕೋಶಗಳು ಮೊಟ್ಟೆಗಳ ಸುತ್ತಲು ಬೆಳೆದು ಗಂಟುಗಳಾಗುತ್ತವೆ. ಇಂಥ ಗಂಟುಗಳಿಗೆ ಕೀಟಗಂಟುಗಳು ಎಂದು ಹೆಸರು. ಹೈಮೆನಾಪ್ಟರ, ಡಿಪ್ಟರ, ಹೆಮಿಪ್ಟರ, ಹೋಮಾಪ್ಟರ, ಕೋಲಿಯಾಪ್ಟರ ಗಣದಲ್ಲಿರುವ ಕೀಟಗಳು ಈ ರೀತಿ ಗಂಟುಗಳನ್ನು ಉಂಟು ಮಾಡುತ್ತವೆ.



ಎಲೆ ಗಂಟು

ಅಕೇಸಿಯ ಲ್ಯೂಕೋಫಿಲ (ಬಿಳಿಗೊಬ್ಬಳಿ), ಆರೆಕ ಕಟೆಚು (ಅಡಿಕೆ), ಸಿನಮೋನಮ್ ಜೀಲ್ಯಾನಿಕಮ್ (ದಾಲ್ಚಿನ್ನಿ), ಫ್ರಾಕ್ಸಿನಸ್ ಫ್ಲಾರಿಬಂಡ, ಪೊಂಗೇಮಿಯ ಗ್ಲಾಬ್ರ (ಹೊಂಗೆ),

ಪ್ರೊಸಾಪಿಸ್ ಸ್ಪೈಸಿಜರ (ದಿವಿ), ಟರ್ಮಿನೇಲಿಯ ಚೆಬುಲ (ಅಳಲೆ), ಗಾರುಗ ಪಿನೇಟ, ಪಿಸ್ಟಾಚಿಯ ವೇರ (ಪಿಸ್ತ), ಟುಮಾರಿಕ್ಸ್, ಕ್ವರ್ಕಸ್ (ಓಕ್) ಮರಗಳ ಎಲೆಯಲ್ಲಿ ಕೀಟಗಂಟುಗಳಾಗುತ್ತವೆ. ಇವುಗಳಿಂದ ಅನೇಕ ಉಪಯೋಗಗಳಿವೆ. ಚರ್ಮದ ಕೈಗಾರಿಕೆ, ಬಣ್ಣದ ಕೈಗಾರಿಕೆಗಳಲ್ಲಿ ಇವನ್ನು ಬಳಸುತ್ತಾರೆ. ಕೆಲವು ಗಂಟುಗಳನ್ನು ಔಷಧೀ ತಯಾರಿಕೆಗೂ ಉಪಯೋಗಿಸುತ್ತಾರೆ. ಪಿಸ್ತ ಗಿಡದ ಗಂಟುಗಳಿಂದ ಕೆಮ್ಮು, ಅಸ್ತಮ ರೋಗಗಳಿಗೆ ಕಷಾಯವನ್ನು ಮಾಡುತ್ತಾರೆ. ಸರ್ಪದ ಮತ್ತು ಚೇಳಿನ ವಿಷಾಪಹಾರಿಯಾಗಿಯೂ ಇದನ್ನು ಬಳಸುವ ಬಗ್ಗೆ ವರದಿಗಳಿವೆ. ಅನೇಕ ರಾಸಾಯನಿಕಗಳನ್ನು ಈ ಕೀಟಗಂಟುಗಳಿಂದ ತಯಾರಿಸಬಹುದು.

***

**ಗಂಟು ನೊಣ:** ಕೀಟವರ್ಗದ ಸಸಿಡೊಮೈಯಿಡೆ ಕುಟುಂಬದ ಸದಸ್ಯ. ವಿವಿಧ ಬಗೆಯ ಸಸ್ಯಗಳಿಗೆ ಅಂಟಿ ಗಂಟುಗಳನ್ನು ಉಂಟುಮಾಡುವುದರಿಂದ ಈ ಹೆಸರು. ದೇಹಾಕೃತಿಯಲ್ಲಿ ಸೊಳ್ಳೆಗಳನ್ನು ಹೋಲುತ್ತವೆ. ಅನೇಕ ಬಗೆಯ ಗಂಟು ನೊಣಗಳಿವೆ. ಉದ್ದವಾದ ಮಣಿಸರದಂತಿರುವ ಕುಡಿಮೀಸೆಗಳು, ಮೀಸೆಗಳ ಮೇಲಿರುವ ಬಿರುಕೂದಲು, ಸರಳರೀತಿಯ ಕಾಂಡಗಳುಳ್ಳ ಎರಡು ರೆಕ್ಕೆಗಳು ಇವುಗಳ ವಿಶೇಷ ಲಕ್ಷಣ.

ಪ್ರೌಢಕೀಟಗಳು ಸಸ್ಯಾಹಾರಿಗಳು. ಕೆಲವು ಪ್ರಭೇದಗಳು ಆರ್ಥಿಕ ಮಹತ್ತ್ವವಿರುವ ಹಲವಾರು ಸಸ್ಯಗಳ ಮೇಲೆ ಪರಾವಲಂಬಿಗಳಾಗಿದ್ದು, ಗಂಟುಗಳ ಉತ್ಪನ್ನಕ್ಕೆ ಕಾರಣವಾಗುತ್ತವೆ. ಆದರೆ, ಇವುಗಳ ಡಿಂಬಗಳು ಬೇರೆ ಬಗೆಯ ಕೀಟಗಳನ್ನು (ಉದಾ: ತಿಗಣೆ ಮತ್ತು ನುಸಿಗಳನ್ನು) ತಿನ್ನುತ್ತವೆ. ಇನ್ನು ಕೆಲವ ಬಗೆಯ ಡಿಂಬಗಳು ಕೊಳೆಯುತ್ತಿರುವ ಸಸ್ಯ ಸಂಬಂಧಿ ಪದಾರ್ಥಗಳನ್ನು ತಿಂದು ಜೀವಿಸುತ್ತವೆ.

ಗಂಟು ನೊಣಗಳಲ್ಲಿ ಕೆಲವು ಜಾತಿಯ ನೊಣಗಳು ಹಾನಿಕಾರಕಗಳಾಗಿವೆ. ಉದಾ: ಹೆಸ್ಸಿಯನ್ ನೊಣದ ಮರಿ. ಇದು ಉತ್ತರ ಅಮೆರಿಕ, ಯೂರೋಪ್ ಮತ್ತು ನ್ಯೂಜೀಲೆಂಡ್ ದೇಶಗಳಲ್ಲಿ ಗೋದಿ ಬೆಳೆಯನ್ನು ನಾಶಮಾಡುತ್ತದೆ. ಯೂರೋಪಿನಲ್ಲಿ ಪಿಯರ್ ಹಣ್ಣಿಗೆ ಬಹಳ ಹಾನಿ ಉಂಟುಮಾಡುತ್ತದೆ. ಜೋಳದ ತೆನೆಯ ನೊಣವಾದ ಕಾಂಟರಿನಿಯ ಆಂಡ್ರೋಪೂಗೋನಿಸ್ ದಕ್ಷಿಣ ಭಾರತದ ಪೈರಿಗೆ ಹಾನಿಯನ್ನುಂಟುಮಾಡುತ್ತದೆ.

***

**ಗಂಟೆಹಕ್ಕಿ:** ಹಲವಾರು ಜಾತಿಯ ಹಕ್ಕಿಗಳ ಕೂಗು ಗಂಟೆಯ ನಿನಾದವನ್ನು ಹೋಲುವುದರಿಂದ ಈ ಹೆಸರು. ಆದರೆ ಮುಖ್ಯವಾಗಿ ದಕ್ಷಿಣ ಅಮೇರಿಕದಲ್ಲಿ ವಾಸಿಸುವ ಕ್ಯಾಂಪನಿರೋ ಗುಂಪಿಗೆ ಸೇರಿದ 4 ಪ್ರಭೇದಗಳಿಗೆ, ಮುಖ್ಯವಾಗಿ ಚಾಸ್ಮೋರಿಂಕಸ್ ನಿವೀಯಸ್ ಪ್ರಭೇದಕ್ಕೆ ಈ ಹೆಸರು ಅನ್ವಯಿಸುತ್ತದೆ. ಇದೊಂದು ಸಣ್ಣಹಕ್ಕಿ. ಇದರ ನೆತ್ತಿಯ ಮೇಲೆ ಕೋಡಿನಂಥ ಶಿಖೆ ಇದೆ. ಬಹಳ ಇಂಪಾಗಿ, ನಳಿಕೆ–ಗಂಟೆಯ ನಾದವನ್ನು ಹೋಲುವ ರೀತಿಯಲ್ಲಿ ಕೂಗುತ್ತದೆ.

ಆಸ್ಟ್ರೇಲಿಯದ ಕೆಲವು ಜೇನುಹಕ್ಕಿಗಳಿಗೂ ಗಂಟೆಹಕ್ಕಿಗಳು ಎಂಬ ಹೆಸರಿದೆ. ಪೂರ್ವ ಆಸ್ಟ್ರೇಲಿಯದಲ್ಲಿ ವಾಸಿಸುವ, ಕಣ್ಣಿನ ಸುತ್ತ ಮಚ್ಚೆಗಳುಳ್ಳ ಮ್ಯಾನೊರೈನ ಮೆಲನೊಫ್ರಿಸ್, ಒಳನಾಡಿನ ಶುಷ್ಕಪ್ರದೇಶಗಳಲ್ಲಿ ವಾಸಿಸುವ ಶಿಖೆಯ ಗಂಟೆಯ ಹಕ್ಕಿಯಾದ ಓರಿಯಾಯ್ಕ ಗಟರ್‍ಯಾಲಿಸ್, ನ್ಯೂಜೀಲೆಂಡ್‍ನ ಆಂತೊರ್ನಿಸ್ ಮೆಲನ್ಯೂರ ಇವು ಮುಖ್ಯವಾದುವು. ಆಂತೊರ್ನಿಸ್ ಮೆಲನ್ಯೂರ ಹಕ್ಕಿಯ ಗಾನವನ್ನು ಕೇಳಿದ ಕ್ಯಾಪ್ಟನ್ ಕುಕ್ ಉಚ್ಚ ರೀತಿಯಲ್ಲಿ ಸ್ವರಗೂಡಿಸಿದ ಸಣ್ಣ ಗಂಟೆನಾದದಂತೆ ಈ ಹಕ್ಕಿಯ ಕೂಗು ಇತ್ತು ಎಂದು ವರ್ಣಿಸಿದ್ದಾನೆ.

ಪ್ರೋಸೆಮಡೇರ ನೋವೆ–ನ್ಯೂಜೀಲೆಂಡಿಯೆ ಎಂಬ ಟಯು ಹಕ್ಕಿಯ ಕೂಗು ಸಹ ಇದೇ ರೀತಿ ಬೆಳ್ಳಿ ಗಂಟೆಯ ನಾದವನ್ನು ಹೋಲುತ್ತದೆ. ಈ ಹಕ್ಕಿ ಸುಮಾರು ಒಂದು ಗಂಟೆ ವಿರಾಮಕ್ಕೊಂದಾವರ್ತಿ ಕೂಗುವುದರಿಂದ ವೇಳೆಯನ್ನು ತಿಳಿಸುವಂತೆ ಕೂಗುತ್ತದೆ ಎಂಬ ಭಾವನೆ ಬರುತ್ತದೆ. (ಎನ್.ವಿ.ಎ.)

**ಗಂಡಮಾಲೆ:** ಗುರಾಣಿಕಗ್ರಂಥಿಯ (ತೈರಾಯ್ಡ್ ಗ್ಲ್ಯಾಂಡ್) ಊತದಿಂದ ಗಂಟಲ ಮುಂಭಾಗದಲ್ಲಿ ಉಂಟಾಗುವ ಬಾವು (ಗಾಯ್ಟರ್). ಇದನ್ನು ಗಳಗಂಡ ಎಂದೂ ಕರೆವುದಿದೆ. ಸಾಮಾನ್ಯವಾಗಿ ಬೆಟ್ಟಪ್ರದೇಶಗಳಲ್ಲಿ ಅಂದರೆ ಆಲ್ಪ್ಸ್, ಪಿರನೀಸ್, ಕಾರ್ಪೇತಿಯನ್ಸ್, ಆಂಡೀಸ್ ಮತ್ತು ಹಿಮಾಲಯ ಪ್ರದೇಶಗಳಲ್ಲಿ ಇದು ಸಾಮಾನ್ಯ. ಕರ್ನಾಟಕದ ಚಿತ್ರದುರ್ಗದ ಜಿಲ್ಲೆಯಲ್ಲಿ ಇದು ತಲೆದೋರಿರುದುಂಟು. ಆಹಾರದಲ್ಲಿ ಸಾಕಷ್ಟು ಅಯೋಡೀನ್ ಇಲ್ಲದಲ್ಲಿ ಈ ರೋಗ ಉಂಟಾಗುತ್ತದೆಂದು ತಿಳಿದು ಬಂದಿದೆ. ಸಾಮಾನ್ಯವಾಗಿ ಇದು ವಯಸ್ಕರಲ್ಲಿ ಹೆಚ್ಚು. ಅದರಲ್ಲೂ ಗಂಡಸರಿಗಿಂತ ಹೆಂಗಸರಲ್ಲಿ ಎಂಟು ಪಟ್ಟು ಹೆಚ್ಚು. ಕೆಲವೇಳೆ ಆನುವಂಶಿಕ ಕಾರಣಗಳಿಂದಾಗಿ ಎಳೆಯರಿಗು ಬರಬಹುದು. ಈ ರೋಗ ತಗಲಿದಾಗ ಗುರಾಣಿಕಗ್ರಂಥಿಯ ಕಾರ್ಯಪಟುತ್ವ ತುಂಬ ಹೆಚ್ಚಬಹುದು, ಇಲ್ಲವೆ ತೀರ ಕುಗ್ಗಲೂಬಹುದು. ಗಡ್ಡೆ ದಪ್ಪನಾದಂತೆಲ್ಲ ಸುತ್ತಲಿನ ಭಾಗಗಳ ಮೇಲಿನ ಒತ್ತಡ ಹೆಚ್ಚುವುದು. ಉಸಿರಾಡುವುದಕ್ಕೆ ತೊಂದರೆಯಾಗಿ ಕೆಮ್ಮು, ಒಡಕು ಧ್ವನಿ ಕಾಣಿಸಬಹುದು. ಒತ್ತಡದಿಂದ ರಕ್ತನಾಳಗಳ ಬಣ್ಣ ನೀಲಿಯಾಗಬಹುದು, ಅಪರೂಪವಾಗಿ ನುಂಗುವುದಕ್ಕೆ ಕಷ್ಟವಾಗಬಹುದು. ಕಣ್ಣು ಪಾಪೆ ಅಗಲವಾಗಿ ಮುಖ ಬೆವರಬಹುದು. ಶೇಕಡ ಎರಡರಷ್ಟು ರೋಗಿಗಳಲ್ಲಿ ಪರಿಸ್ಥಿತಿ ವಿಷಮಿಸಿ ಏಡಿಗಂತಿ (ಕ್ಯಾನ್ಸರ್) ಕಾಣಿಸಬಹುದು. ಗಡ್ಡೆ ಬೇಗ ದಪ್ಪಗಾಗುವುದು, ಗಟ್ಟಿಯಾಗುವುದು ಮತ್ತು ಒತ್ತಡದ ಚಿಹ್ನೆಗಳು ಹೆಚ್ಚುವುದು– ಇವು ಏಡಿಗಂತಿಯ ಚಿಹ್ನೆಗಳು. ಕ್ರಮೇಣ ರೋಗ ಪಿತ್ತಜನಕಾಂಗ, ಶ್ವಾಸಕೋಶಗಳು ಮತ್ತು ಮೂಳೆಗಳಿಗೆ ಹರಡಬಹುದು. ಆಹಾರದಲ್ಲಿ ಉಚಿತ ಪ್ರಮಾಣದಲ್ಲಿ ಅಯೋಡಿನ್ ಸೇರಿಸಿ ಸೇವಿಸುವುದರಿಂದ ರೋಗವನ್ನು ತಹಬಂದಿಗೆ ತರಬಹುದು. ಗುರಾಣಿಕ ಗ್ರಂಥಿಯ ಸಾರಸೇವನೆಯಿಂದ ಕೆಲವರಿಗೆ ಒಳ್ಳೆಯದಾಗಿದೆ. ಕೆಲವು ವೇಳೆ ಶಸ್ತ್ರಚಿಕಿತ್ಸೆಯ ಅಗತ್ಯ ತೋರುವುದೂ ಉಂಟು. (ಬಿ.ಎಸ್.ಯು.ಬಿ.)

ಪ್ರಾಣಿಗಳಲ್ಲಿ : ದೇಹದಲ್ಲಿನ ಅಯೊಡಿನ್ ಅಂಶದಲ್ಲಿ ತುಸು ಏರುಪೇರು ಆದರೂ ಸಾಕು, ಪ್ರಾಣಿಗಳಲ್ಲಿ ಗಂಡಮಾಲೆ ಬೇನೆಯ ಅನೇಕ ರೂಪಗಳು ಕಾಣಿಸಿಕೊಳ್ಳುತ್ತವೆ. ದೇಹದಲ್ಲಿನ ಅಯೊಡಿನ್ ಪ್ರಮಾಣ 30 ಲಕ್ಷಗಳಲ್ಲಿ ಕೇವಲ 1 ಪಾಲಾದರೂ ಇಲ್ಲದೆ ಗುರಾಣಿಕ ಗ್ರಂಥಿ, ತೈರಾಕ್ಸಿನ್ ಚೋದನಿಕವನ್ನು ಉತ್ಪತ್ತಿ ಮಾಡದು. ತೈರಾಕ್ಸಿನ್ ಬೆಳೆಯುವ ಪ್ರಾಣಿಗಳ ಹಾಗು ಪಿಂಡ ಹೊತ್ತಿರುವ ತಾಯಿ ಪ್ರಾಣಿಗಳ ಆಹಾರಕ್ರಿಯೆಯಲ್ಲಿ ತನ್ನದೇ ಆದ ಪ್ರಮುಖಪಾತ್ರವನ್ನು ವಹಿಸಿದೆ. ದರ್ಮ ಹಾಗು ಕೂದಲು ನುಣುಪಾಗಲು ಖನಿಜ ಹಾಗೂ ಸಸಾರಜನಕಗಳು ಈ ದೇಹದಲ್ಲಿ ಸೇರಿಹೊಗಲು ಈ ಚೋದನಿಕದ ಅವಶ್ಯಕತೆ ಇದೆ.

ಆಹಾರ ಹಾಗೂ ನೀರಿನ ಮೂಲಕ ಅಯೊಡಿನ್ ಪೂರೈಕೆ ಸರಿಯಾಗಿ ಆಗದೆ ಹೋದರೆ ದೇಹದಲ್ಲಿ ಇದರ ಅಂಶ ಕಡಿಮೆಯಾಗುವುದು. ಆಗ ದೇಹದಲ್ಲಿ ಅವಶ್ಯವಾಗಿರುವ ಥೈರಾಕ್ಸಿನ್ ಹೆಚ್ಚಾಗಿ ಉತ್ಪಾದನೆ ಮಾಡಲು ಗುರಾಣಿಕ ಗ್ರಂಥಿ ತನ್ನಷ್ಟಕ್ಕೆ ತಾನೆ ದೊಡ್ಡದಾಗಿ ಊದಿಕೊಳ್ಳುತ್ತದೆ.

ಗಳಗಂಡ ಬೇನೆ ಸಾಮಾನ್ಯವಾಗಿ ಎಲ್ಲ ಪ್ರಾಣಿಗಳಲ್ಲಿ ಕಾಣಬರುತ್ತದೆ. ನಾಯಿಮರಿ, ಕುದುರೆಮರಿ, ಕುರಿಮರಿ ಹಾಗೂ ಕರುಗಳಲ್ಲಿ ಈ ಬೇನೆ ವಿಶಿಷ್ಟವಾಗಿ ಕಾಣಬರುತ್ತದೆ. ಸಾಮಾನ್ಯವಾಗಿ ನೆಲ, ನೀರು ಹಾಗೂ ಆಹಾರದಲ್ಲಿ ಅಯೊಡಿನ್ ಅಂಶದ ಕೊರತೆ ಕಾಣಬಂದಾಗ ಈ ಬೇನೆ ಬರುವುದು.

ಅಯೊಡಿನ್ ಅಂಶ ಪ್ರಧಾನವಾಗಿ ನೆಲದಲ್ಲಿದೆ. ಸಸ್ಯಗಳ ಹಾಗೂ ಹುಲ್ಲಿನ ಮೂಲಕ ಅದು ಪ್ರಾಣಿ ದೇಹವನ್ನು ಸೇರುತ್ತದೆ. ನೆಲದಲ್ಲಿ ಅಯೊಡಿನ್ ಅಂಶ ಕಡಿಮೆಯಾದರೆ ಸಸ್ಯ ಹಾಗು ನೀರಿನಲ್ಲೂ ಅದರ ಅಂಶ ಇಲ್ಲವಾಗುವುದು. ನೆಲದಲ್ಲಿ ಸಸ್ಯಸಂಬಂಧವಾದ ಗೊಬ್ಬರವಿದ್ದು, ಲವಣಾಂಶವೂ ಹೆಚ್ಚಾಗಿದ್ದರೆ ಅಯೊಡಿನ್ ಅಂಶ ಕಡಿಮೆಯಾಗುವುದು. ಗೊಬ್ಬರರೂಪದಲ್ಲಿ ಲವಣವನ್ನು ಹೆಚ್ಚಿಗೆ ಉಪಯೋಗಿಸಿದರೂ ಅಷ್ಟೆ. ಸಸ್ಯಗಳಲ್ಲಿನ ಅಯೊಡಿನ್ ಅಂಶ ಪ್ರಮುಖವಾಗಿ ನೆಲದ ಗುಣ, ಮಣ್ಣಿನ ಗುಣ ಹಾಗೂ ಕಾಲವನ್ನು ನಿರ್ಧರಿಸುವುದು.

ಪ್ರಾಣಿಗಳು ಬಳಸುವ ವಿವಿಧ ರೀತಿಯ ಆಹಾರಗಳಲ್ಲಿ ಸಸ್ಯಸಂಬಂಧವಾದ ಆಹಾರ ಪ್ರಧಾನವಾದುದು. ಅಯೊಡಿನ್ ಕೊರತೆ ಇರುವ ಹುಲ್ಲುಗಾವಲಿನಲ್ಲಿ ಮೇಯುವಾಗ, ಮೇಲಾಗಿ ಆಹಾರದಲ್ಲಿ ಹೆಚ್ಚಿಗೆ ಲವಣಾಂಶವನ್ನು ಸೇರಿಸಿದಾಗ ಅಯೊಡಿನ್ ಕೊರತೆ ಉಂಟಾಗುತ್ತದೆ. ಅನೇಕ ರೀತಿಯ ಹುಲ್ಲುಗಳಲ್ಲಿ ಈ ಬೇನೆ ತರುವ ವಸ್ತುವಿದೆ. ಕಾಳೆ, ಕೋಸು, ಟರ್ನಿಪ್, ಬ್ರಸಲ್ಸ್ ಚಿಗುರು, ಸೋಯ ಅವರೆಗಳಲ್ಲಿ ರೋಗಕಾರಕವಾದ ತಯೋಸಿನೇಟ್ ಎಂಬ ವಸ್ತುವಿದೆ. ನಾರಗಸೆಯಲ್ಲಿ ಸಿಗುವ ಲಿನ್‍ಮಾರಿನ್ ಎಂಬ ಗ್ಲೂಕೋಸೈಡು ಸಹ ಇದೇ ರೀತಿಯದೆಂದು ತಿಳಿದುಬಂದಿದೆ. ಆದುದರಿಂದ ಈ ಸಸ್ಯಗಳನ್ನು ಬಹಳ ದಿನಗಳ ಕಾಲ ಆಹಾರವಾಗಿ ಕೊಡಬಾರದು. ಕುರಿಗಳ ಮೇವಿಗಾಗಿ ಬೆಳೆಸುವ ರೇಪ್‍ಗಿಡದ ಬೀಜವನ್ನು ಹಾಗೂ ನೆಲಗಡಲೆಯನ್ನು ಪ್ರಾಯೋಗಿಕವಾಗಿ ಇಲಿಗಳಿಗೆ ತಿನ್ನಿಸಿದಾಗ ಈ ಬೇನೆ ಬಂದಿದೆ. ಈ ವಸ್ತುಗಳಲ್ಲೂ ರೋಗಕಾರಕ ವಸ್ತುವಿದೆ. ನಾರಗಸೆ ಹಾಗೂ ಕಾಳೆ ಸಸ್ಯಗಳನ್ನ ಬಸಿರಾದ ಕುರಿಗಳಿಗೆ ಕೊಡುವುದರಿಂದ ಹುಟ್ಟುವ ಕುರಿಮರಿಗಳು ಈ ರೋಗದಿಂದ ನರಳುತ್ತವೆ. ಬ್ಯಾಕ್ಟೀರಿಯಗಳಿಂದ ಕೆಟ್ಟುಹೋದ ನೀರು ಹಾಗೂ ಆಹಾರವಸ್ತುಗಳನ್ನು ಪ್ರಾಣಿಗಳಿಗೆ ಕೊಟ್ಟಾಗಲೂ ಈ ಬೇನೆ ಕಾಣಿಸುತ್ತದೆ. ಒಟ್ಟಾರೆ ಆಹಾರದಲ್ಲಿ ಸಯನೋಜೆನಿಟಿಕ್ ಗ್ಲೂಕೋಸೈಡ್ ಅಂಶದ ಕೊರತೆ ಕಾಣಬಂದರೆ ಗಂಡಮಾಲೆ ಬರುತ್ತದೆ.

ಅಯೊಡಿನ್ ಅಂಶ ದೇಹದಲ್ಲಿ ಕಡಿಮೆ ಆದಾಗ ತೈರಾಕ್ಸಿನ್ ಉತ್ಪಾದನೆ ಸ್ಥಗಿತಗೊಳ್ಳುತ್ತದಷ್ಟೆ. ಆಗ ಗುರಾಣಿಕ ಗ್ರಂಥಿ ಹೆಚ್ಚಿಗೆ ಕೆಲಸ ಮಾಡಲು ಸಹಾಯವಾಗುವಂತೆ ಪಿಟ್ಯುಟರಿ ಗ್ರಂಥಿ ತೈರೊಟ್ರೊಪಿಕ್ ಚೋದನಿಕವನ್ನು ಉತ್ಪಾದನೆ ಮಾಡಿ ಗುರಾಣಿಕವನ್ನು

ಎಚ್ಚರಿಸುತ್ತದೆ. ಇದರಿಂದ ಗುರಾಣಿಕ ತನ್ನ ಸ್ವಾಭಾವಿಕ ಗಾತ್ರಕ್ಕಿಂತ ದೊಡ್ಡದಾಗುವುದು. ಧ್ವನಿಪೆಟ್ಟಿಗೆ ಬಳಿ ಈ ಬಾವು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಎಳೆ ಪ್ರಾಣಿಗಳಲ್ಲಿ ಸ್ಪಷ್ಟವಾಗಿ ರೋಗಲಕ್ಷಣಗಳೇನೂ ಕಾಣಬರವು. ಬಂದ ಬೇನೆ ಕೆಲವೊಮ್ಮೆ ಹಠಾತ್ತನೆ ಮರೆಯಾಗುವುದೂ ಉಂಟು.

ಕುರಿ : ಅಯೊಡಿನ್ ಕೊರತೆಯಿರುವ ಮೇವನ್ನು ಸೇವಿಸುವ ಕುರಿಗಳ ಮತ್ತು ಮೇಕೆಗಳ ಮರಿಗಳಿಗೂ ಗಂಡಮಾಲೆ ಬರುತ್ತದೆ. ಡಾರ್ಸೆಟ್ ಹಾರ್ನ್ ಕುರಿಗಳಲ್ಲಿ ಇದು ಸಾಮಾನ್ಯ. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಯೂರೋಪುಗಳಲ್ಲಿ ಈ ರೋಗ ಅಷ್ಟು ಸ್ಪಷ್ಟವಾಗಿ ಕಾಣಬರುವುದಿಲ್ಲ. ಕುರಿಗಳಲ್ಲಿರುವ ಹುಳುಗಳನ್ನು ಹೊರಹಾಕಲು ಉಪಯೋಗಿಸುವ ಹುಳುನಿವಾರಕಗಳನ್ನು ಎಡೆಬಿಡದೆ ಕೊಟ್ಟಾಗಲೂ ಹೆಚ್ಚಿನ ಅಂಶದಲ್ಲಿ ಫ್ಲೋರಿನನ್ನು ಸೇವಿಸಿದಾಗಲು ಈ ಬೇನೆ ಬರುತ್ತದೆನ್ನಲಾಗಿದೆ. ಕುರಿಗಳಲ್ಲಿ ಗಂಟಲ ಬಾವು ಬಹಳ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು. ಆಗತಾನೆ ಹುಟ್ಟಿದ ಕುರಿಮರಿಗಳಿಗೆ ರೋಗದ ಸೋಂಕಿದ್ದಲ್ಲಿ ಅವು ಶಕ್ತಿಹೀನವಾಗುವುವು. ದೇಹಭಾಗದ ಕೆಲವೆಡೆ ಕೂದಲೆ ಇರುವುದಿಲ್ಲ. ಕೆಲವೊಮ್ಮೆ ಮೇಕೆಗಳಲ್ಲಿ ಈ ರೋಗ ವಿಪರೀತ ಮಟ್ಟಕ್ಕೇರುವುದುಂಟು.

ನಾಯಿ : ನಾಯಿಗಳಲ್ಲಿ ಗಂಡಮಾಲೆ ವಿವಿಧ ರೀತಿಯಲ್ಲಿ ಕಾಣಬರುವುದು. ಗ್ರೇವ್ಸನ ರೋಗವೆಂದು ಕರೆಯುವ ಊದುಗಣ್ಣು (ಎಕ್ಸಾಪ್ಥಾಲ್ಮಿಕ್ ಗಾಯ್ಟರ್) ಒಮ್ಮೊಮ್ಮೆ ಕಾಣಬರುವುದುಂಟು. ಈ ಪರಿಸ್ಥಿತಿಯಲ್ಲಿ ಗುರಾಣಿಕ ಗ್ರಂಥಿ ಊದಿ ಕೊಳ್ಳುವುದಲ್ಲದೆ ಕಣ್ಣುಗುಡ್ಡೆಗಳು ದೊಡ್ಡವಾಗಿ ಹೊರಗೆ ಚಾಚಿಕೊಂಡು ಕಣ್ಣು ಊದಿದಂತೆ ಕಾಣುವುದು. ಮನಸ್ಸಿನ ನೆಮ್ಮದಿ ಕೆಟ್ಟು ಪ್ರಾಣಿ ವಿಪರೀತ ಬೇಗನೆ ಕೆರಳುವುದು. ನಾಯಿಯಲ್ಲಿ ಒಮ್ಮೊಮ್ಮೆ ಪೂತಿಕೋಶದ ಗಂಡಮಾಲೆ (ಸಿಸ್ಟಿಕ್ ಗಾಯ್ಟರ್) ಕಾಣಬರುವುದೂ ಉಂಟು.

ಹಸು : ತಾಯಿಯಲ್ಲಿ ಅಯೊಡಿನ್ ಕೊರತೆ ಇದ್ದರೆ ಹುಟ್ಟಿದ ಕರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸತ್ತುಹೋಗುತ್ತವೆ. ಬದುಕಿದ ಕರುಗಳು ಹಾಲನ್ನು ಕುಡಿಯಲಾಗದಷ್ಟು ದುರ್ಬಲವಾಗಿರುತ್ತವೆ. ಅಲ್ಲಲ್ಲಿ ಕೂದಲು ಬಿದ್ದು ಬೊಕ್ಕೆಗಳು ಕಾಣಿಸಿಕೊಳ್ಳುತ್ತವೆ. ಆಗತಾನೆ ಹುಟ್ಟಿದ ಕರುಗಳಲ್ಲಿ ದಪ್ಪ ಕತ್ತಿನ (ಬಿಗ್ ನೆಕ್) ರೋಗದ ರೂಪದಲ್ಲಿ ಈ ಬೇನೆ ಕಾಣಿಸಿಕೊಳ್ಳುತ್ತದೆ. ವಯಸ್ಕ ಪ್ರಾಣಿಗಳಲ್ಲಿ ಗುರಾಣಿಕಗ್ರಂಥಿ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಇದರಿಂದ ಉಸಿರಾಟಕ್ಕೂ ತೊಂದರೆಯಾಗುವುದುಂಟು.

ಕುದುರೆ : ಕುದುರೆಗಳು ಈ ಬೇನೆಯಿಂದ ಬಳಲುತ್ತವಾದರೂ ಕೂದಲ ಬೆಳವಣಿಗೆಯಲ್ಲಿ ವ್ಯತ್ಯಾಸ ಕಾಣದು. ಗ್ರಂಥಿ ಸ್ಪಷ್ಟವಾಗಿ ಊದಿಕೊಳ್ಳುತ್ತದೆ. ರೋಗ ತಗಲಿದ ಕುದುರೆಮರಿ ತುಂಬ ನಿಶ್ಶಕ್ತವಾಗಿರುತ್ತದೆ.

ಹಂದಿ : ತಾಯಿಗೆ ರೋಗವಿದ್ದಲ್ಲಿ ಹುಟ್ಟಿದ ಮರಿಗಳಲ್ಲಿ ಕೂದಲಿನ ಅಭಾವವೂ ಶಕ್ತಿಹೀನತೆಯೂ ಕಂಡುಬರುತ್ತದೆ. ಚರ್ಮದ ಊತ ಕಾಣಬರುತ್ತದೆ. ಹುಟ್ಟಿದ ಕೆಲವೇ ಗಂಟೆಗಳಲ್ಲಿ ಮರಿಗಳು ನರಳಿ ಸತ್ತುಹೋಗುವುವು. ಹಂದಿಗಳಲ್ಲಿ ಗ್ರಂಥಿಯ ಊತವಿದ್ದರು ಅಷ್ಟು ಸ್ಪಷ್ಟವಾಗಿ ಕಾಣಬರುವುದಿಲ್ಲ. ಮರಣೋತ್ತರ ಪರೀಕ್ಷೆಯ ವೇಳೆಯಲ್ಲಿ ರೋಗಗ್ರಸ್ತ ಪ್ರಾಣಿಯ ಗ್ರಂಥಿಗಳು ಸ್ಪಷ್ಟವಾಗಿ ದೊಡ್ಡದಾಗಿರುವುದನ್ನು ಗಮನಿಸಬಹುದಲ್ಲದೆ ಅದರ ತೂಕದ ವ್ಯತ್ಯಾಸವನ್ನೂ ಕಾಣಬಹುದು.

ಚಿಕಿತ್ಸೆ : ಬೇನೆ ವಾಸಿಯಾಗಲು ದೇಹದಲ್ಲಿ ಸರಿಯಾದ ಪ್ರಮಾಣದಲ್ಲಿ ಅಯೊಡಿನ್ ಅಂಶ ಸಿಗುವಂತೆ ಮಾಡಬೇಕು. ಸಸ್ಯಗಳಿಗೆ ಗೊಬ್ಬರದ ಮೂಲಕ ಅಯೊಡಿನನ್ನು ಕೊಡುವುದರಿಂದ ಮುಂದೆ ಅದು ಪ್ರಾಣಿಯ ದೇಹವನ್ನು ಆಹಾರದ ಮೂಲಕ ಸೇರುತ್ತದೆ. ಪ್ರಾಣಿಗಳು ನೆಕ್ಕುವ ಖನಿಜಗಳಲ್ಲಿ ಅಯೊಡಿನನ್ನು ಸೇರಿಸುವುದು ಇನ್ನೊಂದು ಕ್ರಮ. ಪ್ರತಿ ಒಂದು ಟನ್ ಉಪ್ಪಿಗೆ ಐದು ಔನ್ಸ್ ಪೊಟಾಸಿಯಂ ಅಯೋಡೇಟನ್ನು 8% ಕ್ಯಾಲ್ಸಿಯಂ ಸ್ಟಿಯರೇಟಿನ ಜೊತೆ ಕೊಡಬೇಕು. ಹೀಗೆ ಬೆರಕೆ ಮಾಡದೆ ಪೊಟ್ಯಾಸಿಯಂ ಅಯೋಡೇಟನ್ನು ಹಾಗೆಯೇ ಉಪಯೋಗಿಸಬಹುದು. ರೋಗ ತಗಲಿದ ಪ್ರತಿ ಕುರಿಗೂ 280 ಮಿಗ್ರಾಂನಷ್ಟು ಪೊಟಾಷಿಯಂ ಅಯೊಡೈಡ್ ಇಲ್ಲವೆ 369 ಮಿಗ್ರಾಂ. ಪೊಟಾಷಿಯಂ. ಅಯೋಡೇಟನ್ನು ಕೊಟ್ಟರೆ ಉತ್ತಮ. ಪ್ರತಿ ಪ್ರಾಣಿಗೂ ಪ್ರತಿವಾರವೂ ಪಕ್ಕೆಯ ಒಳಗಡೆಯ ಭಾಗದಲ್ಲಿ ಹಸುವಾದರೆ 4 ಮಿಲೀ ಮತ್ತು ಹಂದಿ ಹಾಗೂ ಕುರಿಗಳಾದರೆ 2 ಮಿಲೀ ನಂತೆ ಅಯೊಡಿನ್ನನ್ನು ಬಳಿದರೆ ಒಳ್ಳೆಯದು. ಆಗಾಗ್ಗೆ ಪ್ರಾಣಿಗಳು ಈ ಭಾಗಗಳನ್ನು ನೆಕ್ಕುವದರಿಂದ ನಿಧಾನವಾಗಿ ಅಯೊಡಿನ್ ಹೊಟ್ಟೆಗೆ ಸೇರಿ ಹೋಗುತ್ತದೆ. 0.007 ಅಯೊಡಿನ್ ಅಂಶವಿರುವ ಉಪ್ಪನ್ನು ಬಸಿರಾದ ಹಸುಗಳಿಗೆ ನೆಕ್ಕಲು ಕೊಡುವುದರಿಂದ ಮುಂದೆ ಹುಟ್ಟುವ ಕರುಗಳನ್ನು ಈ ಬೇನೆಯಿಂದ ಪಾರುಮಾಡಬಹುದು. ಗ್ರಂಥಿಯನ್ನು ಮೊದಲಿನ ಸ್ಥಿತಿಗೆ ತರಲು ಕ್ಷ ಕಿರಣಗಳನ್ನು ಉಪಯೋಗಿಸಬೇಕು. ಗ್ರಂಥಿಗೆ ರಕ್ತಪೂರೈಸಲು ಧಮನಿಗಳನ್ನು ಹಿಡಿತದಲ್ಲಿಡುವುದು ಅಗತ್ಯ. ***

**ಗಣಜಿಲೆ:** ಆರೋಗ್ಯ ಏರುಪೇರಾಗದೆ, ತಂಡ ತಂಡಗಳಲ್ಲಿ ದದ್ದುಗಳೇಳುವ ಕೂರಾದ ಒಂದು ಅಂಟು ರೋಗ (ಚಿಕನ್ ಪಾಕ್ಸ್). ಇದನ್ನು ಕೊಟ್ಲೆ, ನೀರು ಕೊಟ್ಲೆ, ಚಿಕ್ಕಮ್ಮ, ಸೀತಾಳ ಸಿಡುಬು ಎಂದು ಸಹ ಕರೆಯುತ್ತಾರೆ. ಸಿಡುಬಿನ ಹಾಗೆ ದದ್ದುಗಳು ಏಳುವುದನ್ನು ಬಿಟ್ಟರೆ ಸಿಡುಬಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಒಂದು ಊರು, ಕೇರಿಯಲ್ಲಿ ಗಣಜಿಲೆ ತಲೆಹಾಕಿದರೆ ಸಣ್ಣ ಸಾಂಕ್ರಾಮಿಕದ ಹಾಗೆ ಅದು ಅಲ್ಲೆಲ್ಲ ಹರಡುತ್ತದೆ. ನಗರದಲ್ಲಿ ನೆಲೆಸಿದರೆ ಒಂದೊಂದು ಕಡೆ ಒಮ್ಮೊಮ್ಮೆ ತಲೆ ಹಾಕುತ್ತ ವರ್ಷವಿಡೀ ಉಳಿದಿರುತ್ತದೆ. 2–6 ವರ್ಷದ ಮಕ್ಕಳಿಗೆ ಅಂಟುವುದು ಸಾಮಾನ್ಯವಾದರೂ ಎಳೆಗೂಸುಗಳೂ ಇದಕ್ಕೆ ಹೊರತಲ್ಲ. ಹಸುಗೂಸಿನ ಮೊದಲ ಆರು ತಿಂಗಳ ತನಕ ಅದನ್ನು ತಾಯಿಯಲ್ಲಿರುವ ರೋಗ ತಡೆವ ಬಲವಿರುವ ಪ್ರತಿವಸ್ತು (ಆ್ಯಂಟಿಬಾಡಿ) ರಕ್ಷಿಸುತ್ತದೆ. ಎಳೆಯದರಲ್ಲಿ ಇದರ ಕಾಟ ತಪ್ಪಿಸಿಕೊಂಡು ಬೆಳೆದ ದೊಡ್ಡವರಿಗೆ ರೋಗ ತಾಕಿದರೆ ಅದರ ಪರಿಣಾಮ ಜೋರಾಗಿರುತ್ತದೆ. ಒಂದು ಬಾರಿ ಗಣಜಿಲೆ ತಾಕಿದರೆ ಸಾಮಾನ್ಯವಾಗಿ ಸಾಯುವ ತನಕ ಮತ್ತೆ ಇದರ ತೊಂದರೆ ಇರುವುದಿಲ್ಲ.

ಗಣಜಿಲೆ ರೋಗಾಣು, ಮೂಗು ಗಂಟಲು ಮೂಲಕ ಮೈಯಲ್ಲೆಲ್ಲ ಹರಡಿಕೊಳ್ಳುವುದು. ರೋಗಕ್ಕೊಡ್ಡಿದ 14–16 ದಿವಸಗಳಲ್ಲಿ ರೋಗ ತಲೆದೋರುತ್ತದೆ. ಅದರಲ್ಲೂ ಚಟುವಟಿಕೆಯಿಂದ ಆಡುತ್ತಿರುವ ಮಕ್ಕಳಲ್ಲಿ ತುಸು ಜ್ವರ ಬಂದಿದ್ದೂ ಗೊತ್ತಾಗದೆ ಮೊದಲು ದದ್ದುಗಳು ಏಳುವುದರಿಂದ ಬೇನೆ ಗೊತ್ತಾಗುತ್ತದೆ. ಜ್ವರ ೧೦೧° ಫ್ಯಾ. ಮೇಲೇರದು. ಕೆಲವು ವೇಳೆ ಮಕ್ಕಳಲ್ಲಿ ವಾಂತಿ, ಸೆಳೆವು, ಏರುಜ್ವರಗಳೊಂದಿಗೆ ಗಣಜಿಲೆ ಕಾಲಿಡಬಹುದು. ದೊಡ್ಡವರಿಗೆ ಬಂದರೆ ತಲೆನೋವು, ಚಳಿ, ಮೈಕಾಲು ನೋವು, ತುಸು ಬೆನ್ನು ನೋವು, ಪೂರಾ ಜ್ವರ ಹೆಚ್ಚಿ ಮಲಗಿಸುತ್ತದೆ. ಮುಂದೆ ನ್ಯೂಮೋನಿಯ ಆದರೆ ಅಪಾಯಕರ. ಕೆಲವರಂತೂ 2-3 ದಿವಸಗಳಲ್ಲೇ ಸಾಯುತ್ತಾರೆ. ಮುಂಡದ ಮೇಲೆದ್ದ ದದ್ದುಗಳು ಮುಖ, ನೆತ್ತಿ, ತೋಳು, ತೊಡೆಗಳಿಗೆ ಹರಡುತ್ತವೆ. ಕೈಕಾಲುಗಳಿಗಿಂತ ಮುಂಡದ ಮೇಲೂ ಅವಯವಗಳ ಕೊನೆಗಳಿಗಿಂತ ಬುಡ ಭಾಗಗಳಲ್ಲೂ ದದ್ದುಗಳು ಹೆಚ್ಚಾಗಿರುತ್ತವೆ. ಬೇರೆ ಕಡೆ ಎಷ್ಟೇ ಜೋರಾಗಿದ್ದರೂ ಅಂಗೈ, ಅಂಗಾಲುಗಳಲ್ಲಿ ದದ್ದುಗಳೇಳವು. ಗುಳ್ಳೆಗಳು ಒಂದುಗೂಡವು. ದದ್ದುಗಳು ಏಳುತ್ತಿರುವ ತನಕ ಜ್ವರ ಇದ್ದೇ ಇರುವುದು. ದುಂಡಾಗಿಯೋ ಇಲ್ಲವೇ ಚುಕ್ಕಿಯಾಗಿಯೋ ಇದ್ದ ದದ್ದುಗಳು ಕೆಲವೇ ತಾಸುಗಳಲ್ಲಿ ಗುಳ್ಳೆಗಳಾಗುತ್ತವೆ. ಗುಳ್ಳೆಗಳಲ್ಲಿ ಮೊದಲು ತಿಳಿನೀರಿದ್ದು ಆಮೇಲೆ ಸಣ್ಣಮಣಿಗಳನ್ನು ಚರ್ಮದ ಮೇಲಿಟ್ಟ ಹಾಗೆ ತೋರುವುವು. ಒಂದೆರಡು ದಿವಸಗಳಲ್ಲಿ ಗುಳ್ಳೆಗಳಲ್ಲಿನ ನೀರು ಹಿಂಡಿದಂತಾಗಿ ಒಡೆದುಕೊಂಡು ಸಣ್ಣ ತೆಳುಸಿಪ್ಪೆ ಉಳಿಯುತ್ತದೆ. ಇದೂ ಒಣಗುತ್ತ ಬಿದ್ದು ಹೋಗುವುದು. ಇದರಿಂದ ಬೇರೆಯವರಿಗೆ ಸೋಂಕು ಅಂಟವುದು. ಗಣಜಿಲೆ ದದ್ದುಗಳೂ ಗುಳ್ಳೆ ಸಿಪ್ಪೆಗಳೂ ಅಲ್ಲಲ್ಲಿರುತ್ತವೆ. ದದ್ದುಗಳಲ್ಲಿ ನವೆ, ಕೆರೆತ ಹೆಚ್ಚು. ಅವನ್ನು ಕೆರೆದುಕೊಂಡರೆ ಮಾತ್ರ ಕೀವುಗೂಡಿ ಮುಂದೆ ಕಲೆ ಉಳಿವುದು. ರೋಗಿಯಲ್ಲಿ ದದ್ದುಗಳು ಅಲ್ಲಿ ಇಲ್ಲಿ ಒಂದೊಂದಿರಬಹುದು. ಇಲ್ಲವೇ ನೂರಾರಿರಬಹುದು.

ಬಹುಮಟ್ಟಿಗೆ ಗಣಜಿಲೆ ತೊಂದರೆ ಕೊಡುವ ರೋಗವಲ್ಲ. ಆ ಮೇಲಿನ ತೊಡಕುಗಳೂ ಅಪ್ಪಕಪ್ಪ. ಗಣಜಿಲೆಗೂ ಉಡಿತದ್ದಿಗೂ (ಷಿಂಗಲ್ಸ್ ಹರ್ಪಿಸ್) ನಿಕಟ ಸಂಬಂಧ ಇರುವುದು ಬಹುಕಾಲದಿಂದ ಗೊತ್ತಿತ್ತು. ಇವೆರಡು ಬೇನೆಗಳಿಗೂ ಒಂದೇ ವೈರಸ್ ಕಾರಣ ಎನ್ನುವುದರಲ್ಲಿ ಈಗ ಅನುಮಾನವಿಲ್ಲ. ಏಕೆಂದರೆ ಉಡಿತದ್ದಿನ ವಿಷಕಣವನ್ನು ಅದಕ್ಕೀಡಾಗುವ ಮಕ್ಕಳಿಗೆ ಚುಚ್ಚಿದರೆ ಗಣಜಿಲೆ ಏಳುವುದಲ್ಲದೆ ಬೇರೆ ಮಕ್ಕಳಲ್ಲೂ ಅದೇ ರೋಗವನ್ನು ಉಂಟುಮಾಡುತ್ತದೆ. ಉಡಿತದ್ದು ಗಣಜಿಲೆಯಷ್ಟು ಅಂಟುರೋಗವಾಗಿ ಹರಡದು. ಇಷ್ಟಾದರೂ ಉಡಿತದ್ದು ದೊಡ್ಡವರ ಕಾಯಿಲೆ, ಗಣಜಿಲೆ ಕೂಸುಗಳ ಬೇನೆ. ದೊಡ್ಡವರಲ್ಲಿನ ಉಡಿತದ್ದು ಮಕ್ಕಳಿಗೆ ತಾಕಿದರೆ ಗಣಜಿಲೆಯಾಗಿ ಮೈದೋರುವುದು.

ಗಣಜಿಲೆ ಅಂಟುರೋಗವಾಗಿ ಶಾಲೆಗಳಲ್ಲಿ ಬಲು ಬೇಗ ಹರಡುವುದು. ರೋಗಿಯಿಂದ ನೇರವಾಗಿಯೂ ಸೀನು, ಕಫ, ಉಗುಳು ಮೂಲಕವೂ ಬಟ್ಟೆ ಬರೆಗಳ ಮೂಲಕವೂ ಸುಲಭವಾಗಿ ಅಂಟುತ್ತದೆ. ದದ್ದುಗಳು ಏಳುವ ೨೪ ತಾಸುಗಳ ಮೊದಲೇ ರೋಗಿ ಇತರರಿಗೆ ಸೋಂಕು ಅಂಟಿಸಬಹುದು. ಗಣಜಿಲೆಗೆ ಯಾವ ಲಸಿಕೆ ಮದ್ದೂ ಇಲ್ಲ. ಗಣಜಿಲೆ ರೋಗಿಯ ಬಳಿ ಇದ್ದವರನ್ನು ೨೦ ದಿವಸಗಳಾದರೂ ಬೇರೆ ಇರಿಸಿ ನೋಡಬೇಕು. ಹಾಗೇ ಶಾಲಾಮಕ್ಕಳೂ ೨೦ ದಿವಸಗಳ ತನಕ ಶಾಲೆಗೆ ಹೋಗಬಾರದು. ***

**ಗಪ್ಪಿ ಮೀನು:** ಸಿಪ್ರಿನೊಡಾಂಟಿಫಾರ್ಮಿಸ್ ಗಣದ ಪೊಯ್‌ಸಿಲ್ಯೆಯಿಡೆ ಕುಟುಂಬಕ್ಕೆ ಸೇರಿದ ಲೆಬಿಸ್ಟೀಸ್ ರೆಟಿಕ್ಯುಲೇಟಸ್ ಎಂಬ ವೈಜ್ಞಾನಿಕ ಹೆಸರುಳ್ಳ ಮೀನಿನ ಜನಪ್ರಿಯ ಹೆಸರು. ಟ್ರಿನಿಡಾಡಿನಲ್ಲಿದ್ದ ರಾಬರ್ಟ್ ಎಲ್. ಗಪ್ಪಿ ಎಂಬಾತ 1866ರಲ್ಲಿ ಮೊದಲ ಬಾರಿಗೆ ಇದನ್ನು ನೋಡಿ ಇದರ ಬಗ್ಗೆ ವಿಷಯ ಸಂಗ್ರಹಿಸಿ ವರದಿ ಮಾಡಿದ. ಆದ್ದರಿಂದಲೇ ಅವನ ಗೌರವಾರ್ಥವಾಗಿ ಇದಕ್ಕೆ ಗಪ್ಪಿ ಎಂದು ಹೆಸರು. ವೆನಿಜ್ವೇಲ, ಲೆಸ್ಸರ್ ಆಂಟಲ್ಲಿಸ್ ಮತ್ತು ದಕ್ಷಿಣ ಅಮೆರಿಕದ ಉತ್ತರ ಭಾಗದ ಸಿಹಿನೀರಿನ ಕೊಳ, ಕೆರೆ, ನದಿಗಳಲ್ಲಿ ಇದು ವಾಸಿಸುತ್ತದೆ. ಅಳಿವೆ ಪ್ರದೇಶಗಳಲ್ಲೂ ಕಾಣದೊರೆಯುತ್ತದೆ. ಜಲೋದ್ಯಾನಗಳ ಕೃತಕ

ಪರಿಸರಕ್ಕೂ ಹೊಂದಿಕೊಂಡು ಜೀವಿಸುವ ಸಾಮರ್ಥ್ಯ ಇದಕ್ಕೆ ಇರುವುದರಿಂದ ಇದನ್ನು ಸಾಕುವುದೂ ಉಂಟು.

ಗಾತ್ರದಲ್ಲಿ ಬಲುಪುಟ್ಟ ಮೀನಿದು. ಗಂಡು ಸುಮಾರು 2 ಸೆಂಮೀ ಉದ್ದವೂ, ಹೆಣ್ಣು 4 ಸೆಂಮೀ ಉದ್ದವೂ ಇರುತ್ತವೆ. ಗಂಡಿನ ದೇಹ ಅತ್ಯಂತ ವರ್ಣರಂಜಿತ. ಕೆಂಪು, ಕಿತ್ತಳೆ, ಹಳದಿ, ಹಸಿರು, ಊದಾ ಬಣ್ಣಗಳ ಹಿನ್ನಲೆಯಲ್ಲಿ ಅಲ್ಲಲ್ಲಿ ಕಪ್ಪು ಚುಕ್ಕೆಗಳಿದ್ದು ಮೀನು ಬಹಳ ಆಕರ್ಷಕವಾಗಿರುತ್ತದೆ. ಗಂಡಿನ ದೇಹದ ಬಣ್ಣ ಆನುವಂಶಿಕ ಮಾತ್ರವಲ್ಲದೆ



ಗಪ್ಪಿ ಮೀನು

ಹಾರ್ಮೋನುಗಳ ನಿಯಂತ್ರಣಕ್ಕೂ ಒಳಪಟ್ಟಿದೆ ಎನ್ನಲಾಗಿದೆ. ಮೀನಿನಿಂದ ಮೀನಿನ ಬಣ್ಣ ವ್ಯತ್ಯಾಸವಾಗುವುದಲ್ಲದೆ ಪ್ರತಿಸಲವೂ ಮರಿಗಳು ಹುಟ್ಟಿದಾಗ ಭಿನ್ನಬಗೆಯ ಬಣ್ಣ ಮೂಡುವುದುಂಟು. ಇದರಿಂದಾಗಿ ಗಪ್ಪಿ ಮೀನು ಬಲು ಜನಪ್ರಿಯವೆನಿಸಿದೆ. ಈ ಮೀನು ಜರಾಯುಜ. ಹೆಣ್ಣು ಮೀನು ೩ ತಿಂಗಳ ವಯಸ್ಸಾದ ಅನಂತರ ಮರಿ ಹಾಕಲು ಆರಂಭಿಸುತ್ತದೆ. ಭ್ರೂಣದ ಬೆಳವಣಿಗೆ ಹೆಣ್ಣಿನ ಅಂಡಾಶಯದ ಫಾಲಿಕಲ್‌ನಲ್ಲೇ ನಡೆಯುತ್ತದೆ. ಒಂದು ಬಗೆಯ ಮಿಥ್ಯಾಜರಾಯು ಕಾಣಿಸಿಕೊಂಡು ಭ್ರೂಣದ ಬೆಳವಣಿಗೆಗೆ ಪೋಷಕಕಾರಿಯಾಗುತ್ತದೆ. ಗಂಡು ತನ್ನ ಗುದದ ಈಜುರೆಕ್ಕೆಯ ಸಹಾಯದಿಂದ (ಗೋನೊಪೋಡಿಯಂ) ನಿಷೇಚನಕ್ರಿಯೆಯನ್ನು ನಡೆಸುತ್ತದೆ. ಗರ್ಭಾವಸ್ಥೆಯ ಕಾಲ ಸುಮಾರು 28 ದಿವಸಗಳು. ಒಂದು ಸೂಲಿಗೆ ಹುಟ್ಟುವ ಮರಿಗಳ ಸಂಖ್ಯೆ 25–50ರ ವರೆಗೆ ವ್ಯತ್ಯಾಸವಾಗುತ್ತದೆ. ಮರಿ ಹಾಕಲು ವರ್ಷದಲ್ಲಿ ನಿರ್ದಿಷ್ಟ ಸಮಯವೇನೂ ಇಲ್ಲವಾದರೂ ವರ್ಷದ ಕೆಲವು ಋತುಗಳಲ್ಲಿ ಸಂತಾನೋತ್ಪತ್ತಿಯ ಚಟುವಟಿಕೆ ಉಳಿದ ಕಾಲಕ್ಕಿಂತ ಹೆಚ್ಚು.

ಗಪ್ಪಿಮೀನು ಮುಖ್ಯವಾಗಿ ಕೀಟಾಹಾರಿ. ಇತರ ಬಗೆಯ ಆಹಾರವನ್ನೂ ತಿನ್ನುವುದುಂಟು. ಕೆಲವು ವೇಳೆ ಇದು ಸಜಾತಿ ಭಕ್ಷಕವೂ ಹೌದು. ಎಷ್ಟೋ ವೇಳೆ ತನ್ನ ಮರಿಗಳನ್ನೇ ತಿಂದುಹಾಕುತ್ತದೆ. ಸೊಳ್ಳೆ ಮತ್ತು ಸೊಳ್ಳೆ ಮರಿಗಳನ್ನು ತಿಂದುಹಾಕುವುದರಿಂದ ಸೊಳ್ಳೆಗಳ ನಿರ್ಮೂಲಕ್ಕೆ ಇದನ್ನು ಬಳಸಿಕೊಳ್ಳಲಾಗಿದೆ. (ಜಿ.ಎಚ್.ಎಸ್.ಐ)

**ಗರಗಸ ಮೀನು:** ಪ್ರಪಂಚದ ಉಷ್ಣಸಾಗರಗಳಲ್ಲೆಲ್ಲ ಕಾಣಬರುವ ಒಂದು ಬಗೆಯ ಮೃದ್ವಸ್ಥಿ ಮೀನು (ಸಾ ಫಿಶ್). ಶಾರ್ಕ್, ರೇ ಮತ್ತು ಸ್ಕೇಟ್ ಮೀನುಗಳಿಗೆ ಬಲು ಹತ್ತಿರದ ಸಂಬಂಧಿ. ಅಕ್ಕಪಕ್ಕಗಳಲ್ಲಿ ಚೂಪಾದ ಹಲ್ಲುಗಳಿರುವ ಮತ್ತು ಬಲು ಉದ್ದವಾಗಿರುವ ಗರಗಸದಂಥ ಮೂತಿಯಿರುವುದರಿಂದ ಇದಕ್ಕೆ ಈ ಹೆಸರು. ಇಲ್ಯಾಸ್ಮೊಬ್ರ್ಯಾಂಕಿಯೈ ಅಥವಾ ಕಾಂಡ್ರಿಕ್ತಿಯೀಸ್ ವರ್ಗ; ಸೆಲಾಷಿಯೈ ಉಪವರ್ಗ; ಯೂಸಿಲಾಷಿಯೈ ಗಣ; ಪ್ರಿಸ್ಟಿಡೆ ಕುಟುಂಬಕ್ಕೆ ಸೇರಿದೆ. ಈ ಜಾತಿಯ ಶಾಸ್ತ್ರೀಯ ಹೆಸರು ಪ್ರಿಸ್ಟಿಸ್. ಇದರಲ್ಲಿ ಸುಮಾರು ೬ ಪ್ರಭೇದಗಳಿವೆ. ಇವುಗಳಲ್ಲಿ ಅಮೆರಿಕದ ಆಗ್ನೇಯ ಹಾಗೂ ಗಲ್ಫ್ ತೀರಪ್ರದೇಶಗಳಲ್ಲಿ ಕಾಣಬರುವ ಪ್ರಿ.ಪೆಕ್ಟಿನೇಟಸ್ ಪ್ರಭೇದ, ಮೆಡಿಟರೇನಿಯನ್ ಮತ್ತು ಅಟ್ಲಾಂಟಿಕ್ ಸಾಗರಗಳಲ್ಲಿ ಕಾಣಬರುವ ಪ್ರಿ.ಆಂಟಿಕೋರಮ್ ಪ್ರಭೇದ ಮತ್ತು ಭಾರತದ ತೀರಪ್ರದೇಶಗಳಲ್ಲಿ ಸಿಕ್ಕುವ ಪ್ರಿ.ಕಸ್ಪಿಡೇಟಸ್ ಮತ್ತು ಪ್ರಿ.ಮೈಕ್ರೊಡಾನ್ ಪ್ರಭೇದಗಳು ಮುಖ್ಯವಾದುವು.

ಗರಗಸ ಮೀನು ಸಾಮಾನ್ಯವಾಗಿ ಅಳಿವೆಗಳಲ್ಲಿ ವಾಸಿಸುತ್ತದೆ. ಭಾರತದಲ್ಲಿ ನದೀಮುಖಜ ಪ್ರದೇಶಗಳಲ್ಲಿ ಸಾಗರದಿಂದ ನದಿಗುಂಟ ಒಳನಾಡಿಗೂ ಹಲವಾರು ಮೈಲಿಗಳಷ್ಟು ದೂರ ಬರುವುದೂ ಉಂಟು. ದೇಹದ ಉದ್ದ ೩–೬ ಮೀ. ವರೆಗೆ ವ್ಯತ್ಯಾಸವಾಗುತ್ತದೆ. ದೇಹರಚನೆಯಲ್ಲಿ ಹೆಚ್ಚುಕಡಿಮೆ ಶಾರ್ಕ್ ಮೀನನ್ನು ಹೋಲುತ್ತದೆ. ಆದರೆ ಕಿವಿರುದ್ವಾರಗಳು ಗರಗಸ ಮೀನಿನಲ್ಲಿ ದೇಹದ ತಳ ಭಾಗದಲ್ಲಿವೆ (ಶಾರ್ಕ್ ಮೀನಿನಲ್ಲಿ ಕಿವಿರುದ್ವಾರಗಳು ದೇಹದ ಪಾರ್ಶ್ವದಲ್ಲಿವೆ). ಅಗಲವಾದ ಎದೆಯ ಈಜುರೆಕ್ಕೆಗಳು, ೨ ಬೆನ್ನಿನ ಈಜುರೆಕ್ಕೆಗಳು, ಬಾಲದ ಈಜುರೆಕ್ಕೆ, ಗರಗಸದಂಥ ಮೂತಿ, ತಲೆಯ ಕೆಳಭಾಗದಲ್ಲಿನ ಅರ್ಧಚಂದ್ರಾಕರದ ಬಾಯಿ, ಬಾಲದ ಆಚೀಚೆ ದೋಣಿಯ ಆಕಾರದ ಚರ್ಮದ ಮಡಿಕೆ– ಇವು ಗರಗಸ ಮೀನಿನ ಇತರ ಮುಖ್ಯ ಲಕ್ಷಣಗಳು. ಮೂತಿ ಬಲು ಉದ್ದವಾಗಿರುತ್ತದೆ; ಕೆಲವು ಮೀನುಗಳಲ್ಲಿ ಸುಮಾರು ೧.೮ ಮೀ ಉದ್ದ ಇರುವುದುಂಟು. ಇದರ ಒಂದೊಂದು ಪಕ್ಕದಲ್ಲೂ ಸುಮಾರು ೨೨–೩೨ ಹಲ್ಲುಗಳಿರುತ್ತವೆ. ಸಾಗರತಳದೊಳಗಿರುವ ಹಲವಾರು ಬಗೆಯ ಪ್ರಾಣಿಗಳನ್ನು ಹೆಕ್ಕಿ ತಿನ್ನಲು ಮೂತಿಯನ್ನು ಬಳಸುತ್ತದೆ. ಈಜುತ್ತಿರುವಾಗ ಇತರ ಬಗೆಯ ಸಣ್ಣ ಮೀನುಗಳ ಗುಂಪು ಕಂಡರೆ ಅವುಗಳ ಮಧ್ಯೆ ನುಗ್ಗಿ ತನ್ನ ಗರಗಸವನ್ನು ಅತ್ತಿತ್ತ ಬಲವಾಗಿ ಅಲ್ಲಾಡಿಸಿ ಕೆಲವು ಮೀನುಗಳು ಇದರ ತಾಡನಕ್ಕೆ ಸಿಕ್ಕಿ ಸಾಯುವಂತೆ ಮಾಡಿ ತಿನ್ನುವುದೂ ಉಂಟು. ಗರಗಸ ಮೀನು ಜರಾಯುಜ ಪ್ರಾಣಿ. ಹುಟ್ಟುವ ಮುನ್ನವೇ ಮರಿಗಳಿಗೆ ಗರಗಸವಿರುವುದಾದರೂ ಅದು ಬಲು ಮೃದುವಾಗಿಯೂ ಒಂದು ಬಗೆಯ ಹೊದಿಕೆಯಿಂದ ಆವೃತವಾಗಿಯೂ ಇರುತ್ತದೆ. ಹೊದಿಕೆಯಿರುವುದರಿಂದ ತಾಯಹೊಟ್ಟೆಯಲ್ಲಿರುವಾಗ ಅಲ್ಲಿನ ಅಂಗಾಂಶಗಳನ್ನು ಕತ್ತರಿಸುವ ಆಕಸ್ಮಿಕ ಇರುವುದಿಲ್ಲ.



ಗರಗಸ ಮೀನು

ಮಲೇಶಿಯ, ಇಂಡೋನೇಶಿಯ ಮತ್ತು ಚೀನಗಳಲ್ಲಿ ಗರಗಸ ಮೀನನ್ನು ತಿನ್ನುತ್ತಾರೆ. ಇದರ ಮಾಂಸ ಶಾರ್ಕ್ ಮೀನಿನ ಮಾಂಸದಷ್ಟೇ ರುಚಿ ಎಂದು ಹೇಳಲಾಗಿದೆ. ಅಲ್ಲದೆ ಗರಗಸ ಮೀನಿನ ಚರ್ಮದಿಂದ ಕತ್ತಿಯ ಒರೆಯನ್ನು ಮಾಡುವುದಿದೆ. ಇದರ ಯಕೃತ್ತಿನಿಂದ ಎಣ್ಣೆಯನ್ನೂ ತೆಗೆಯುತ್ತಾರೆ. (ಎನ್.ವಿ.ಎ.)

**ಗರಿ:** ಹಕ್ಕಿಗಳಲ್ಲಿ ಮಾತ್ರ ಕಾಣಬರುವ ಒಂದು ವಿಶೇಷ ನಿರ್ಜೀವ ರಚನೆ (ಫೆದರ್). ಚರ್ಮದಿಂದ ಉದ್ಭವಿಸುವ ಈ ಕೊಂಬಿನ ರಚನೆ ಹಕ್ಕಿಗಳ ವಾಯುಜೀವನಕ್ಕೆ ಬಲು ಸಹಕಾರಿಯೆನಿಸಿದೆ. ಸರೀಸೃಪಗಳ ದೇಹದಲ್ಲಿ ಕಾಣಬರುವ ಶಲ್ಕೆಗಳಂತೆಯೆ ಗರಿಗಳೂ ಕೂಡ ಕೆರಾಟಿನ್‌ನಿಂದ ಕೂಡಿದ್ದು ಅವುಗಳಂತೆಯೇ ಹುಟ್ಟುತ್ತವೆ. ಇದರಿಂದಾಗಿ ಗರಿಗಳು ಶಲ್ಕೆಗಳಿಂದ ವಿಕಾಸವಾದ ಸಂಕೀರ್ಣ ಬಗೆಯ ರಚನೆಗಳು ಎಂದು ನಂಬಲಾಗಿದೆ. ಆದರೆ ಶಲ್ಕೆಗಳಿಗೂ ಗರಿಗಳಿಗೂ ಸಂಬಂಧ ಕಲ್ಪಿಸುವ ಮಧ್ಯಾಂತರ ಬಗೆಯ ರಚನೆಗಳು ಈವರೆಗೂ ಯಾವುದೇ ಬಗೆಯ ಪ್ರಾಣಿಯಲ್ಲಿ ಕಂಡುಬಂದಿಲ್ಲ. ಜುರಾಸಿಕ್ ಅವಧಿಯಲ್ಲಿ ಜೀವಿಸಿದ್ದು ಆದಿಪಕ್ಷಿಯೆಂದು ಪರಿಗಣಿತವಾಗಿರುವ ಆರ್ಕಿಯಾಪ್ಟೆರಿಕ್ಸ್ ಹಕ್ಕಿಯ ಗರಿಗಳು ಕೂಡ ಆಧುನಿಕ ಹಕ್ಕಿಗಳ ಗರಿಗಳನ್ನೆ ಹೋಲುತ್ತವೆ.

ಕ್ರಿಯೆ, ರಚನೆ ಮತ್ತು ಸ್ಥಾನಗಳ ಆಧಾರದಮೇಲೆ ಗರಿಗಳನ್ನು ಆರು ಬಗೆಯವಾಗಿ ವಿಂಗಡಿಸಬಹುದು.

1. ಕಾಂಟೂರ್ ಅಥವಾ ಹೊದಿಕೆ ಗರಿಗಳು: ಇವು ಪಕ್ಷಿದೇಹವನ್ನು ಮುಚ್ಚುತ್ತವಲ್ಲದೆ ಪಕ್ಷಿದೇಹಕ್ಕೆ ಹೊರರೂಪರಚನೆಯನ್ನು ಸಹ ಕೊಡುತ್ತವೆ. ಇವುಗಳ ಸಂಖ್ಯೆ ಅಪಾರ, ರಚನೆ ಸಂಕೀರ್ಣ. ಇದನ್ನೇ ಪ್ರರೂಪಿ (ಟಿಪಿಕಲ್) ಗರಿಯೆಂದು ತಿಳಿಯಲಾಗಿದೆ. ಇಂಥ ಒಂದೊಂದು ಗರಿಯೂ ಎಲೆಯಂತೆ ಚಪ್ಪಟೆಯಾಗಿದ್ದು ಹೊರ ಹಾಗೂ ಒಳ ಮೇಲಾಯಗಳಿಂದ ಕೂಡಿರುತ್ತದೆ. ಪ್ರತಿಯೊಂದು ಗರಿಯಲ್ಲಿಯೂ ಕೇಂದ್ರ ಅಕ್ಷಭಾಗ ಮತ್ತು ವೇನ್ (ವೆಕ್ಸಿಲಮ್) ಎಂಬ ಎರಡು ಭಾಗಗಳನ್ನು ಗುರುತಿಸಬಹುದು. ಅಕ್ಷಕ್ಕೆ ದಂಡ (ಶಾಫ್ಟ್) ಎಂದು ಹೆಸರು. ದಂಡವನ್ನು ದೇಹದ ಕಡೆಗಿನ ಕ್ವಿಲ್ ಅಥವಾ ಕ್ಯಾಲಮಸ್ ಮತ್ತು ವೇನ್ ಭಾಗದಲ್ಲಿನ ರೇಕಿಸ್ ಎಂಬ ಎರಡು ಭಾಗಗಳಾಗಿ ವಿಂಗಡಿಸಬಹುದು. ಕ್ವಿಲ್ ಭಾಗದಿಂದಲೇ ಗರಿ ದೇಹಕ್ಕೆ ಅಂಟಿರುವುದು. ಇದು ಟೊಳ್ಳಾಗಿದ್ದು ಚರ್ಮದಲ್ಲಿನ ತೋಡಿನಲ್ಲಿ ಹುದುಗಿರುತ್ತದೆ. ಕ್ವಿಲ್ಲಿನ ತುದಿಯಲ್ಲಿ ಸಣ್ಣ ರಂಧ್ರವೊಂದಿದೆ. ಇದಕ್ಕೆ ನಿಮ್ನಪಿಚ್ಛ ರಂಧ್ರವೆಂದು ಹೆಸರು. ಗರಿ ಕೂತುಕೊಳ್ಳುವ ಚರ್ಮದ ತೋಡಿನಲ್ಲಿ ಸಣ್ಣ ಪ್ಯಾಪಿಲವೊಂದು ಇದ್ದು ನಿಮ್ನ ಪಿಚ್ಛರಂಧ್ರದ (ಇನ್ಫೀರಿಯರ್ ಅಂಬಿಲಿಕಸ್) ಮೂಲಕ ಕ್ವಿಲ್ಲಿನ ಒಳಗೆ ಚಾಚಿರುತ್ತದೆ. ವೇನಿನಲ್ಲಿ ದಂಡ ಮುಂದುವರಿದು ರೇಕಿಸ್ ಎನಿಸಿಕೊಳ್ಳುತ್ತದೆ. ರೇಕಿಸಿನ ಒಳಭಾಗ ಕ್ವಿಲ್ಲಿನಂತೆ ಟೊಳ್ಳಾಗಿರದೆ ಗಟ್ಟಿಯಾಗಿದೆ. ಕ್ವಿಲ್ ಮತ್ತು ರೇಕಿಸ್‌ಗಳು ಸಂಧಿಸುವ ಕಡೆ ತಳಭಾಗದಲ್ಲಿ ಇನ್ನೊಂದು ಸೂಕ್ಷ್ಮ ರಂಧ್ರವಿದೆ.

ಇದಕ್ಕೆ ಊರ್ಧ್ವ ಪಿಚ್ಛರಂಧ್ರವೆಂದು (ಸುಪೀರಿಯರ್ ಅಂಬಿಲಿಕಸ್) ಹೆಸರು. ರೇಕಿಸಿನ ಎಡಬಲಗಳಲ್ಲಿ ದಟ್ಟವಾಗಿ ಹಾಗೂ ಒಂದಕ್ಕೊಂದು ಸಮಾಂತರವಾಗಿ ಜೋಡಿಸಲ್ಪಟ್ಟಿರುವ ಅಸಂಖ್ಯಾತ ಎಳೆಗಳಿವೆ. ಇವೇ ಬಾರ್ಬುಗಳು. ರೇಕಿಸಿನ ಅಕ್ಷಕ್ಕೆ ಕೊಂಚ ಓರೆಯಾಗಿ ಜೋಡಿಸಲ್ಪಟ್ಟಿರುವ ಇವನ್ನು ಪರಸ್ಪರ ಬೇರ್ಪಡಿಸುವುದು ಕಷ್ಟ. ಏಕೆಂದರೆ ಬಾರ್ಬುಗಳು ಒಂದರೊಡನೊಂದು ಹೆಣೆದುಕೊಂಡಿವೆ. ಈ ಹೆಣಿಕೆಯನ್ನು ನೋಡಲು ಸೂಕ್ಷ್ಮದರ್ಶಿಯ ಸಹಾಯ ಬೇಕು. ಪ್ರತಿ ಬಾರ್ಬಿನ ಹಿಮ್ಮುಖ ಮತ್ತು ಮುಮ್ಮುಖದ ಮೇಲೆ ಓರೆ ಓರೆಯಾಗಿ ಹಾಗೂ ಒತ್ತೊತ್ತಾಗಿ ಅಳವಡಿಸಿರುವ ಅಸಂಖ್ಯಾತ ಬಾರ್ಬ್ಯೂಲುಗಳೆಂಬ ತಂತುಗಳಿರುತ್ತವೆ. ಕ್ವಿಲ್ಲಿನ ಕಡೆ ಚಾಚಿರತಕ್ಕವು ಮತ್ತು ಗರಿಯ ತುದಿಯೆಡೆಗೆ ಚಾಚಿರುವಂಥವು ಎಂಬ ಎರಡು ಬಗೆಯ ಬಾರ್ಬ್ಯೂಲುಗಳನ್ನು ಗುರುತಿಸಬಹುದು. ಬಾರ್ಬ್ಯೂಲುಗಳು ಓರೆ ಓರೆಯಾಗಿ ದಟ್ಟವಾಗಿ ಅಳವಡಿಕೆಯಾಗಿರುವುದರಿಂದ ಒಂದು ಬಾರ್ಬಿನ ದೂರಸ್ಥ ಬಾರ್ಬ್ಯೂಲುಗಳು ಸಮೀಪಸ್ಥ ಬಾರ್ಬ್ಯೂಲುಗಳನ್ನು ಹಾಯ್ದುಹೋಗುತ್ತವೆ. ಪ್ರತಿ ದೂರಸ್ಥ ಬಾರ್ಬ್ಯೂಲಿನ ಕೊನೆಯ ಕೆಳ ಅಂಚಿನಲ್ಲಿ ಸಣ್ಣ ಸಣ್ಣ ಕೊಕ್ಕೆಗಳಿವೆ. ಇವಕ್ಕೆ ಬಾರ್ಬಿಸೆಲ್‌ಗಳೆಂದು ಹೆಸರು. ಒಂದು ಬಾರ್ಬ್ಯೂಲಿನ ಬಾರ್ಬಿಸೆಲ್ಲುಗಳು ಅದರ ಮುಂದಿರುವ ಬಾರ್ಬ್ಯೂಲಿನ ಅಡ್ಡ ಅಂಚುಗಳಿಗೆ ಕೊಂಡಿ ಕೂಡುತ್ತವೆ. ಇದರಿಂದಾಗಿ ಬಾರ್ಬ್ಯೂಲುಗಳು ಒಂದಕ್ಕೊಂದು ಹೆಣೆದು ಹಿಡಿದುಕೊಂಡಂತಿರುತ್ತವೆ. ಈ ಬಗೆಯ ಹೆಣಿಗೆಯಿಂದ ವೇನ್ ಮೃದುತ್ವವನ್ನು ಪಡೆಯುತ್ತದೆ. ಈ ಹೆಣಿಗೆಯನ್ನು ಸಡಿಲಿಸುವುದರಿಂದ ಗರಿಜಾಲವನ್ನು ಹರಿಯಬಹುದು. ಸ್ವಾಭಾವಿಕವಾಗಿಯೇ ಹೀಗಾಗಬಹುದು. ಇಂಥ ಸಂದರ್ಭಗಳಲ್ಲಿ ಹರಿದ ಭಾಗವನ್ನು ಪಕ್ಷಿ ತನ್ನ ಕೊಕ್ಕಿನಿಂದ ತೀಡಿ ತೀಡಿ ಬಾಚಿ ಮತ್ತೆ ಹೆಣೆದುಕೊಂಡು ಸರಿಪಡಿಸಿಕೊಳ್ಳಬಲ್ಲುದು. ಕೆಲವು ಗರಿಗಳಲ್ಲಿ ತಳಭಾಗದ ಬಾರ್ಬುಗಳು ನೀಳ ಹಾಗೂ ಕೋಮಲವಾಗಿರುತ್ತವೆ. ಇವಕ್ಕೆ ನೆರೆಯ ಬಾರ್ಬುಗಳೊಡನೆ ಸಂಧಿಸುವ ಸಂಯಂತ್ರವಿರುವುದಿಲ್ಲ. ತತ್ಫಲವಾಗಿ ಗರಿಯ ಈ ಭಾಗ ಮೃದುರೋಮೀಯವಾಗಿರುತ್ತದೆ.




ಪ್ರರೂಪಿ ಗರಿಯೊಂದರ ಚಿತ್ರ. ವೃತ್ತ ಎಳೆದಿರುವ ಗರಿಯ ಭಾಗವನ್ನು ಚಿತ್ರದಲ್ಲಿ ದೊಡ್ಡದು ಮಾಡಿ ತೋರಿಸಿದೆ. 1. ಬಾರ್ಬ್, 2. ಬಾರ್ಬ್ಯೂಲ್, 3. ರೇಕಿಸ್, 4. ವೇನ್, 5. ಕ್ವಿಲ್.

ಹಲವು ಹೊದಿಕೆ ಗರಿಗಳ ತಳಭಾಗದಲ್ಲಿ ಕ್ವಿಲ್ ಮತ್ತು ರೇಕಿಸುಗಳು ಕೂಡುವ ಕಡೆ ಒಂದು ಲೇಶಗರಿ (ಆಫ್ಟರ್ ಶಾಫ್ಟ್) ಅಂಟಿಕೊಂಡಿರುತ್ತದೆ. ಸಾಮಾನ್ಯವಾಗಿ ಇದರಲ್ಲಿ ಕೋಮಲವಾದ ಬಾರ್ಬುಗಳು ಬಿಡಿಬಿಡಿಯಾಗಿರುತ್ತವೆ. ಲೇಶಗರಿಗಳ ಬೆಳವಣಿಗೆ ವಿವಿಧ ಪಕ್ಷಿಗಳಲ್ಲಿ ಬೇರೆಬೇರೆಯಾಗಿರುವುದೇ ಅಲ್ಲದೆ ಒಂದೇ ಪಕ್ಷಿಯ ಬೇರೆ ಬೇರೆ ಭಾಗದ ಗರಿಗಳಲ್ಲೂ ಭಿನ್ನತೆಯನ್ನು ಪ್ರದರ್ಶಿಸುತ್ತದೆ. ಕ್ಯಾಸೋವರಿ ಮತ್ತು ಈಮ್ಯೂ ಹಕ್ಕಿಗಳಲ್ಲಿ ಲೇಶಗರಿ ಮುಖ್ಯಗರಿಯ ಉದ್ದ ಮತ್ತು ಗಾತ್ರವನ್ನು ಹೋಲುವುದಾದರೂ ಸಾಮಾನ್ಯವಾಗಿ ಪ್ರಧಾನ ಗರಿಗಿಂತ ಇದು ಹೆಚ್ಚು ಕೋಮಲ ಮತ್ತು ಚಿಕ್ಕದು. ಕೆಲವು ಹಾರುವ ಪಕ್ಷಿಗಳ ದೊಡ್ಡ ದೊಡ್ಡ ಗರಿಗಳಲ್ಲಿ ಇದು ಕೆಲವು ಬಾರ್ಬುಗಳಿಂದ ಕೂಡಿರಬಹುದು ಅಥವಾ ಲೋಪವಾಗಿರಬಹುದು.

ಹಾರುವುದರಲ್ಲಿ ನೆರವಾಗುವ ಪೇನಾಗರಿಗಳು (ಕ್ವಿಲ್ ಫೆದರ್ಸ್) ಇತರ ಹೊದಿಕೆ ಗರಿಗಳಿಗಿಂತ ಬಹು ದೊಡ್ಡವು. ಇವು ರೆಕ್ಕೆ ಮತ್ತು ಬಾಲಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಈ ಗರಿಗಳ ದಂಡ ಸಾಮಾನ್ಯವಾಗಿ ನೆಟ್ಟಗಿರುತ್ತದೆ. ಆದರೆ ಉಳಿದ ಹೊದಿಕೆ ಗರಿಗಳ ದಂಡ ಸ್ವಲ್ಪ ಬಾಗಿರುತ್ತದೆ. ರೆಕ್ಕೆಯ ಪೇನಾಗರಿಗಳಿಗೆ ರೆಮೀಜೆಸ್ ಎಂದೂ ಬಾಲದ ಪೇನಾಗರಿಗಳಿಗೆ ರೆಟ್ರಿಸಿಸ್ ಎಂದೂ ಹೆಸರು. ರೆಕ್ಕೆಯ ಪೇನಾಗರಿಗಳಲ್ಲಿ ಹಲವು ಬಗೆ. ರೆಕ್ಕೆಯ ಹಿಂಪಾರ್ಶ್ವದಲ್ಲಿ ಅಂಟಿಕೊಂಡು ಹಿಮ್ಮುಖವಾಗಿ ಚಾಚಿರುವ ಗರಿಗಳಲ್ಲಿ ಪ್ರಾಥಮಿಕ ಮತ್ತು ದ್ವಿತೀಯಕ ಗರಿಗಳು ಮುಖ್ಯವಾದುವು. ಪ್ರಾಥಮಿಕ ಗರಿಗಳು ಕೈಭಾಗದ ಎಲುಬುಗಳಿಗೂ ದ್ವಿತೀಯಕ ಗರಿಗಳು ಮುಂದೋಳಿನ ಅಲ್ನ ಎಂಬ ಎಲುಬಿಗೂ ಅಂಟಿಕೊಂಡಿರುತ್ತವೆ. ಹೆಬ್ಬೆರಳಿನ ಸ್ಥಳದಲ್ಲಿ ಅಂದರೆ ರೆಕ್ಕೆಯ ಮುಂಭಾಗದ ಕೊನೆಯಲ್ಲಿ ಆಲ ಸೂಪ್ರಿಯ ಎಂಬ ಒಂದು ವಿಶೇಷವಾದ ಚಿಕ್ಕ ಗರಿಗಳ ಗುಂಪು ಇದೆ. ಬಾಲದ ಪೇನಾಗರಿಗಳು ಅರ್ಧವೃತ್ತಾಕಾರದಲ್ಲಿ ಅಳವಡಿಸಿರುತ್ತವೆ. ಇವೇ ಅಲ್ಲದೆ ಬಾಲದ ಹಾಗೂ ರೆಕ್ಕೆಯ ಪೇನಾಗರಿಗಳ ಬುಡದ ಭಾಗವನ್ನು ಮುಚ್ಚುವ ಮೇಲಿನ ಹಾಗೂ ಕೆಳಗಿನ ಬಾಲ ಹಾಗೂ ರೆಕ್ಕೆಯ ಮುಚ್ಚಕ ಗರಿಗಳಿರುತ್ತವೆ (ವಿಂಗ್ ಕವರ್ಟ್ಸ್ ಮತ್ತು ಟೈಲ್ ಕವರ್ಟ್ಸ್). ಈ ಮುಚ್ಚಕ ಗರಿಗಳಿಗೆ ಟೆಕ್ಟ್ರಿಸೆಸ್ ಎಂದು ಹೆಸರು.

ಹೊದಿಕೆಗರಿಗಳು ಕೆಲವು ಪಕ್ಷಿಗಳಲ್ಲಿ ಬಗೆಬಗೆಯಾಗಿ ಮಾರ್ಪಟ್ಟಿವೆ. ಉದಾಹರಣೆಗೆ, ನವಿಲಿನ ತಲೆಯ ಮೇಲಿನ ಸುಂದರವಾದ ತುರಾಯಿ ಹಾಗೂ ವರ್ಣರಂಜಿತವಾದ ಬಾಲದ ನೀಳಗರಿಗಳು, ಮರಕುಟಿಕ, ಕೂಕೂಹಕ್ಕಿಗಳ ತಲೆಯ ಮೇಲಿನ ಗರಿಗಳು.

2. ಅರೆಪುಚ್ಛ ಗರಿಗಳು (ಸೆಮಿಪ್ಲೂಮ್ ಫೆದರ್ಸ್) : ಈ ಬಗೆಯ ಗರಿಗಳ ಸಂರಚನೆ ಹೊದಿಕೆ ಗರಿ ಹಾಗೂ ತುಪ್ಪುಳ ಗರಿಗಳ ನಡುವಣ ರೀತಿಯಂತಿರುತ್ತದೆ. ಈ ಗರಿಯ ವಿವಿಧ ಭಾಗಗಳು ಹೊದಿಕೆ ಗರಿಯದರಂತೆಯೇ ಇರುತ್ತವೆ. ಆದರೆ ಬಾರ್ಬ್ಯೂಲುಗಳಲ್ಲಿ ಬಾರ್ಬಿಸೆಲ್‌ಗಳಿರುವುದಿಲ್ಲ. ಅರೆಪುಚ್ಛಗರಿಗಳು ಸಾಮಾನ್ಯವಾಗಿ ದೇಹದ ಎಡಬಲಭಾಗಗಳಲ್ಲಿ ಹಾಗೂ ದೇಹದ ತಳಭಾಗದ ಮೇಲಾಯದಲ್ಲಿ ಕಂಡು ಬರುತ್ತವೆ.

3. ತುಪ್ಪುಳ ಗರಿಗಳು : ಹಲವು ಪಕ್ಷಿಗಳ ಮರಿಗಳು ಮೊಟ್ಟೆಯಿಂದ ಹೊರ ಬಂದಾಗ ಒಂದು ವಿಶಿಷ್ಟಬಗೆಯ ಗರಿಗಳಿಂದ ಹೊದೆಯಲ್ಪಟ್ಟಿರುತ್ತವೆ (ಕೆಲವು ಪಕ್ಷಿಯ ಮರಿಗಳು ಮೊಟ್ಟೆಯಿಂದ ಹೊರಬಂದಾಗ ಬೋಳಾಗಿರುತ್ತವೆ). ಈ ಬಗೆಯ ತಾತ್ಕಾಲಿಕವಾದ ಗರಿಗಳಿಗೆ ತುಪ್ಪುಳ ಗರಿಗಳು ಅಥವಾ ಗೂಡುಮರಿಯ ಗರಿಗಳು (ನೆಸ್ಲಿಂಗ್ ಫೆದರ್ಸ್) ಎಂದು ಹೆಸರು. ದೇಹದ ಶಾಖ ಹೊರಗೆ ಹೋಗದಂತೆ ತಡೆಯುವ ಪ್ರಚಂಡ ಶಕ್ತಿ ಇವಕ್ಕೆ ಇದೆ. ಮರಿಗಳಲ್ಲಿ ಮಾತ್ರವಲ್ಲದೆ ಪ್ರಾಯಸ್ಥ ಪಕ್ಷಿಯ ದೇಹದ ಮೇಲೂ ಹೊದಿಕೆ ಗರಿಗಳ ತಳಭಾಗದಲ್ಲಿ ಬಿಡಿಬಿಡಿಯಾಗಿ ಹರಡಿರುವುದು ಕಂಡುಬರುತ್ತದೆ. ಈ ಬಗೆಯ ಗರಿಯ ದಂಡ ಬಲು ಮೃದುವಾಗಿಯೂ ಕ್ಷೀಣವಾಗಿಯೂ ಇರುತ್ತದೆ. ಇದರ ಮೇಲೆ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಚಿಕ್ಕಚಿಕ್ಕ ಬಾರ್ಬ್ಯೂಲುಗಳಿಂದ ಕೂಡಿದ ನೀಳವಾದ ಬಳುಕುವಂಥ ಬಾರ್ಬುಗಳಿರುತ್ತವೆ.

4. ತಂತು ಗರಿಗಳು: ಇವು ಹೊದಿಕೆ ಗರಿಗಳ ನಡುವೆ ಚದುರಿದಂತೆ ಹರಡಿರುವ ಮತ್ತು ತೆಳುವಾದ ಕೂದಲಿನಂತಿರುವ ಗರಿಗಳು. ಹೊದಿಕೆಗಳಂತಿರುವ ಫಾಲಿಕಲ್‌ಗಳ ಬಳಿಯೇ ಗುಂಪುಗುಂಪಾಗಿ ಬೆಳೆಯುತ್ತವೆ. ಒಂದೊಂದು ತಂತುಗರಿಗೂ ಒಂದು ನೀಳವಾದ ದಾರದಂತಿರುವ ದಂಡ ಇರುತ್ತದೆ. ಇದರ ತುದಿಯಲ್ಲಿ ಚಿಕ್ಕ ಚಿಕ್ಕ ಬಾರ್ಬ್ಯೂಲುಗಳಿಂದ ಕೂಡಿದ ದುರ್ಬಲವಾದ ಹಾಗೂ ಬಿಡಿಬಿಡಿಯಾದ ಬಾರ್ಬುಗಳಿವೆ. ಇವು ಎಲ್ಲ ಪಕ್ಷಿಗಳಲ್ಲಿ ಕಾಣಬರುತ್ತವೆ. ಕಾರ್ಮೊರಾಂಟ್ ಪಕ್ಷಿಗಳಲ್ಲಿ ಹೊದಿಕೆ ಗರಿಗಳಿಂದ ಹೊರ ಚಾಚಿರುತ್ತವೆ. ಇವು ಹೊದಿಕೆ ಗರಿಗಳ ಅಪಭ್ರಷ್ಟವಾದ ರಚನೆಗಳು.

5. ಬಿರುಗೂದಲ ಗರಿಗಳು: ಇವು ಹೊದಿಕೆ ಗರಿಗಳ ಒಂದು ರೀತಿಯ ಮಾರ್ಪಾಟು. ಒಂದೊಂದಕ್ಕೂ ಒಂದು ಚಿಕ್ಕ ದಂಡವೂ ಇದರ ತಳಭಾಗದಲ್ಲಿ ಕೆಲವು ಬಿಡಿ ಬಿಡಿಯಾದ ಚಿಕ್ಕ ಚಿಕ್ಕ ಬಾರ್ಬುಗಳೂ ಇವೆ. ಇವು ಸಾಮಾನ್ಯವಾಗಿ ಕೆಲವು ಕೀಟಭಕ್ಷಿ ಪಕ್ಷಿಗಳಲ್ಲಿ ಮೂಗು ಮತ್ತು ಬಾಯಿಯ ಬಳಿ ಕಂಡುಬರುತ್ತವೆ. ಇವಕ್ಕೆ ಸಂವೇದನಾತ್ಮಕ ಕ್ರಿಯೆಯಿರುವುದೆಂದು ಹೇಳಲಾಗಿದೆ.

6. ದೂಳು ಗರಿಗಳು: ಇವು ಬಕ, ಕಬ್ಬಾರೆ, ಕೊಕ್ಕರೆ ಮೊದಲಾದ ಕೆಲವು ಜಲಚರ ಪಕ್ಷಿಗಳಲ್ಲಿ ಕಂಡುಬರುತ್ತವೆ. ದೇಹದ ಕೆಲವು ಪ್ರದೇಶಗಳಲ್ಲಿ ಮಾತ್ರ ಬೆಳೆಯುವ ಈ ಗರಿಗಳು ಬೆಳೆದಮೇಲೆ ನಯವಾದ ಪುಡಿ ಅಥವಾ ದೂಳಾಗಿ ಮಾರ್ಪಡುತ್ತವೆ. ಹಕ್ಕಿಗಳು ಈ ದೂಳನ್ನು ಇತರ ಗರಿಗಳಿಗೆ ಸವರಲು ಉಪಯೋಗಿಸುತ್ತವೆ. ಬಾಲದ ಬಳಿಯಿರುವ ತೈಲಗ್ರಂಥಿಯಿಂದ ಪಡೆದ ತೈಲ ಮತ್ತು ಈ ದೂಳು ಗರಿಗಳಿಗೆ ನೀರು ಅಂಟದಂತೆ ನೋಡಿಕೊಳ್ಳುತ್ತವೆ.

ಉಷ್ಟ್ರಪಕ್ಷಿ, ಈಮ್ಯೂ ಮೊದಲಾದ ಹಾರಲಾಗದ ಪಕ್ಷಿಗಳಲ್ಲಿ ಗರಿಗಳು ಸಾಮಾನ್ಯವಾಗಿ ದೇಹದ ಮೇಲೆಲ್ಲ ಏಕರೂಪವಾಗಿ ಬೆಳೆಯುತ್ತವೆ. ಆದರೆ ಹಾರುವ ಪಕ್ಷಿಗಳಲ್ಲಿ ಇವು

ಚರ್ಮದ ಮೇಲಿನ ನಿರ್ದಿಷ್ಟ ಪಥ ಅಥವಾ ಕ್ಷೇತ್ರಗಳಲ್ಲಿ ಮಾತ್ರ ಬೆಳೆಯುತ್ತವೆ. ಪಕ್ಷಿದೇಹದ ಮೇಲಿನ ಗರಿವಿನ್ಯಾಸಕ್ಕೆ ಟೆರಿಯೋಲಿಸಿಸ್ ಎಂದು ಹೆಸರು; ಗರಿಗಳು ಬೆಳೆಯುವ ಪಥಗಳಿಗೆ ಟೆರಿಲಗಳೆಂದೂ ಅವುಗಳ ನಡುವಣ ಪ್ರದೇಶಕ್ಕೆ ಆಪ್ಟೆರಿಲಗಳೆಂದೂ ಹೆಸರು. ಟೆರಿಲಗಳು ಒಂದೊಂದು ಪಕ್ಷಿಗಣಕ್ಕೂ ಒಂದೊಂದು ಬಗೆಯವಾಗಿರುವುದರಿಂದ ಇವನ್ನು ಹಕ್ಕಿಗಳ ವರ್ಗೀಕರಣದಲ್ಲಿ ಬಳಸುತ್ತಾರೆ. ಎದೆ, ಬೆನ್ನೆಲುಬು, ಕುತ್ತಿಗೆಯ ಇಕ್ಕೆಡೆಗಳು, ಎದೆಯ ಇಕ್ಕೆಡೆಗಳು, ಉದರದ ಇಕ್ಕೆಡೆಗಳು, ಭುಜವನ್ನು ಕೂಡಿಸುವ ಕ್ಷೇತ್ರ, ಕಾಲಿನ ಮೇಲಿನ ಎರಡು ಕ್ಷೇತ್ರಗಳು ಹಾಗೂ ರೆಕ್ಕೆ ಮತ್ತು ಜಾಲದ ಗರಿಗಳು ಬೆಳೆವ ಪ್ರದೇಶ ಇವು ಪ್ರಧಾನವಾದ ಗರಿಪಥಗಳು.

ಸಾಮಾನ್ಯವಾಗಿ ಎಲ್ಲ ಹಕ್ಕಿಗಳಲ್ಲಿ ಬೇಸಿಗೆ ಮುಕ್ತಾಯವಾದಂತೆ ಗರಿಗಳು ಉದುರುತ್ತವೆ. ಕೆಲವು ಪಕ್ಷಿಗಳಲ್ಲಿ ವಸಂತಋತುವಿನಲ್ಲಿ ಅಂದರೆ ಸಂತಾನೋತ್ಪತ್ತಿಗೆ ಮುನ್ನ ಗರಿಗಳು ಭಾಗಶಃ ಅಥವಾ ಸಂಪೂರ್ಣವಾಗಿ ಕಳಚಿಬೀಳುತ್ತವೆ. ಹಾರಾಟದಲ್ಲಿ ನೆರವಾಗುವ ಪೇನಾಗರಿಗಳು ಕೆಲವು ಪಕ್ಷಿಗಳಲ್ಲಿ ಜೋಡಿ ಜೋಡಿಯಾಗಿ ಉದುರಿದರೆ ಬಾತು ಮತ್ತು ನೀರುಕೋಳಿಗಳಲ್ಲಿ ಈ ಗರಿಗಳು ಒಟ್ಟಿಗೆ ಕಳಚಿ ಬೀಳುತ್ತವೆ. ಇದರಿಂದ ಅವು ಹಲವು ವಾರಗಳ ಕಾಲ ಹಾರಲಾರವು. ಅನಂತರ ಹೊಸ ಗರಿಗಳು ಹಳೆ ಗರಿಗಳಿದ್ದ ಸ್ಥಳದಲ್ಲಿಯೇ ಮೂಡಿಬರುತ್ತವೆ.

ಸರೀಸೃಪಗಳ ಶಲ್ಕೆಗಳಂತೆ ಗರಿಗಳು ಕೂಡ ಚರ್ಮದ ಪ್ಯಾಪಿಲಗಳಿಂದ ಮೂಡಿ ಬರುತ್ತವೆ ಹಾಗೂ ಭ್ರೂಣಾವಸ್ಥೆಯಿಂದಲೇ ವಿಭೇದನೆ ಹೊಂದಲು ಪ್ರಾರಂಭಿಸುತ್ತವೆ. ಕೋಳಿಮರಿಯ ಭ್ರೂಣದಲ್ಲಿ ಗರಿಮೂಲ (ಫೆದರ್ ಜೆರ್ಮ್) ಕಾವು ಕೂತ 6½ ದಿವಸಗಳಲ್ಲಿಯೇ ಕಾಣಿಸಿಕೊಂಡು ಬೆಳೆಯಲಾರಂಭಿಸುತ್ತದೆ. ಪ್ರತಿ ಗರಿಮೂಲವೂ ಚರ್ಮದ ಮೇಲೆ ಬೊಬ್ಬೆಯಂತೆ ಕಾಣಿಸಿಕೊಂಡು ಕ್ರಮೇಣ ಚರ್ಮದ ಹಳ್ಳದಲ್ಲಿ ಕೆಳಕ್ಕಿಳಿಯುತ್ತದೆ. ಈ ಹಳ್ಳಕ್ಕೆ ಗರಿಕೂಪ (ಫೆದರ್ ಫಾಲಿಕಲ್) ಎಂದು ಹೆಸರು. ಗರಿಕೂಪದ ತಳಭಾಗದಲ್ಲಿ ಗರಿಪ್ಯಾಪಿಲ ಮೇಲೆದ್ದು ನಿಂತಿರುತ್ತದೆ. ಪ್ರತಿ ಪ್ಯಾಪಿಲವೂ ಸೂಕ್ಷ್ಮರಕ್ತನಾಳಗಳಿಂದ ಕೂಡಿದ ಡರ್ಮಿಸ್ ಹಾಗೂ ಅದರ ಮೇಲಿನ ಎಪಿಡರ್ಮಿಸಿನ ಹೊದಿಕೆಯಿಂದ ಕೂಡಿರುತ್ತದೆ. ಡರ್ಮಿಸ್ ಭಾಗ ಬೆಳೆಯುವ ಗರಿಗೆ ಪೋಷಣಾಂಶವನ್ನು ಒದಗಿಸುತ್ತದೆ. ಎಪಿಡರ್ಮಿಸಿನಲ್ಲಿ ಸ್ಟ್ರಾಟಂ ಕಾರ್ನಿಯಂ ಮತ್ತು ಸ್ಟ್ರಾಟಂ ಮಾಲ್ಫೀಜಿ ಎಂಬ ಎರಡು ಪದರಗಳಿವೆ. ಮಾಲ್ಫೀಜಿ ಪದರದ ಚಟುವಟಿಕೆಗಳಿಂದ ಗರಿಗಳು ರೂಪುಗೊಳ್ಳುತ್ತವೆ. ಹೊರಗಿನ ಕಾರ್ನಿಯಂ ಪದರ ಬೆಳೆಯುವ ಗರಿಗೆ ಕೊಂಬಿನಿಂದಾದ ಒಂದು ತಾತ್ಕಾಲಿಕವಾದ ಹೊದಿಕೆಯನ್ನು ರಚಿಸುತ್ತದೆ. ಗರಿ ಬೆಳೆದು ಚರ್ಮದ ಮೇಲೆ ಮೂಡಿಬಂದ ಮೇಲೆ ಈ ಆವರಣ ಕಳಚಿ ಬೀಳುತ್ತದೆ. ಸಾಧಾರಣವಾಗಿ ಪೂರ್ಣವಾಗಿ ಬೆಳೆದ ಮೇಲೆ ಫಾಲಿಕಲ್ಲಿನ ಡರ್ಮಿಸ್ ಭಾಗ ಗರಿಯ ಕ್ವಿಲ್ಲಿನ ಒಳಭಾಗದಿಂದ ಕೆಳಗಿಳಿಯುತ್ತದೆ. ಆದರೆ ಜಪಾನಿನ ಫೀನಿಕ್ಸ್ ಕೋಳಿಯ ಬಾಲದ ಮಧ್ಯದ ಗರಿಗಳು ಹಲವು ವರ್ಷಗಳು ಬೆಳೆಯುತ್ತಲೇ ಇದ್ದು ಸುಮಾರು 6 ಮೀ. ಉದ್ದದಷ್ಟಾಗುತ್ತವೆ.

ಗರಿಗಳಲ್ಲಿ ವರ್ಣವಿನ್ಯಾಸ ಕೆಂಪು, ಕಪ್ಪು, ಕಂದು, ಕಿತ್ತಳೆ, ಹಳದಿ ಹೀಗೆ ವೈವಿಧ್ಯಮಯ. ಬಣ್ಣಗಳಿಗೆ ಗರಿಗಳಲ್ಲಿನ ವರ್ಣಕಗಳೇ ಕಾರಣ. ಪಕ್ಷಿಗಳ ವರ್ಣವಿನ್ಯಾಸದಲ್ಲಿ ಲೈಂಗಿಕ ದ್ವಿರೂಪತ್ವವನ್ನೂ ಕಾಣಬಹುದು. ಗಂಡಿನ ಗರಿಗಳು ಹೆಣ್ಣಿನ ಗರಿಗಳಿಗಿಂತ ಹೆಚ್ಚು ಮನಮೋಹಕ ಹಾಗೂ ಆಕರ್ಷಕ. ಬಹುಶಃ ಹೆಣ್ಣನ್ನು ಒಲಿಸಿಕೊಳ್ಳುವುದಕ್ಕಾಗಿ ಹೀಗಿರಬಹುದು.

ಗರಿಗಳಿಂದ ಪಕ್ಷಿಗಳಿಗೆ ಹಲವು ಬಗೆಯ ಉಪಯೋಗಗಳಿವೆ. ಇವು ಹಾರಾಟದ ಸಾಧನಗಳಾಗಿರುವುವಲ್ಲದೆ ದೇಹವನ್ನೆಲ್ಲ ಆವರಿಸಿರುವುದರಿಂದ ದೇಹದ ಶಾಖ ಹೊರಗೆ ಹೋಗದಂತೆ ಸಂರಕ್ಷಿಸುತ್ತವೆ. ಬಿಸಿಲು, ಮಳೆ, ಗಾಳಿಗಳಿಂದ ಒಳಚರ್ಮವನ್ನು ಕಾಪಾಡುತ್ತವೆ. ಕೆಲವು ಸಂದರ್ಭಗಳಲ್ಲಿ ಶತ್ರುಗಳ ಕಣ್ಣಿಗೆ ಬೀಳದಂತಿರಲು ನೆರವಾಗಬಹುದು. ಉದಾಹರಣೆಗೆ, ಟಾರ್ಮಿಗನ್ ಹಕ್ಕಿಯ ಗರಿಗಳ ಬಣ್ಣ ಬೇಸಿಗೆಯಲ್ಲಿ ಬೂದಿಮಿಶ್ರಿತ ಕಂದುಬಣ್ಣವಾದರೆ ಚಳಿಗಾಲದಲ್ಲಿ ಬಿಳಿ. ಮೊದಲನೆಯ ಬಣ್ಣ ಎಲೆಗಳ ಬಣ್ಣದೊಂದಿಗೆ ಐಕ್ಯವಾದರೆ ಬಿಳುಪು ಮಂಜಿನೊಡನೆ ಮಿಲನಗೊಳ್ಳುತ್ತದೆ. ಗಿಳಿಗಳನ್ನು ಹಸಿರೆಲೆಗಳ ಮಧ್ಯೆ ಗುರುತಿಸುವುದು ಕಷ್ಟ.

ಗರಿಗಳಿಂದ ಮಾನವನೂ ಹಲವು ಬಗೆಯ ಉಪಯೋಗಗಳನ್ನು ಪಡೆಯುತ್ತಿದ್ದಾನೆ. ಹಂಸ, ಬಾತು ಮುಂತಾದ ಕೆಲವು ಪಕ್ಷಿಗಳ ಗರಿಗಳಿಗೆ ಸ್ಥಿತಿಸ್ಥಾಪನಶಕ್ತಿ, ಮೃದುತ್ವ ಮೊದಲಾದ ವಿಶೇಷ ಲಕ್ಷಣಗಳಿರುವುದರಿಂದ ಇವುಗಳ ತುಪ್ಪುಳ ಗರಿಗಳು ಹಾಸಿಗೆದಿಂಬು, ಒರಗುದಿಂಬು, ಮೇಲುಹೊದಿಕೆ ಮೊದಲಾದುವುಗಳ ಉಪಯೋಗಕ್ಕೆ ಬರುತ್ತವೆ. ಲೋಹದ ನಿಬ್ಬುಗಳು ಬಳಕೆಗೆ ಬರುವ ಮುನ್ನ ಹಂಸ, ಬಾತು, ಹದ್ದು, ಕಾಗೆ, ಗೂಬೆ, ಟರ್ಕಿಕೋಳಿ ಮೊದಲಾದ ಪಕ್ಷಿಗಳ ಪೇನಾಗರಿಗಳನ್ನು ಬರವಣಿಗೆಯ ಉಪಕರಣವನ್ನಾಗಿ ಉಪಯೋಗಿಸುತ್ತಿದ್ದರು. ಪಾಶ್ಚಾತ್ಯ ದೇಶದಲ್ಲಿ ಕೆಲವು ವರ್ಣವೈವಿಧ್ಯವನ್ನುಳ್ಳ ಗರಿಗಳನ್ನು ಹೆಂಗಸರ ಟೋಪಿಗಳ ಅಲಂಕಾರಕ್ಕಾಗಿ ಉಪಯೋಗಿಸುತ್ತಾರೆ. ಅಮೆರಿಕದ ರೆಡ್ ಇಂಡಿಯನ್ನರು ತಮ್ಮ ತಲೆಗೆ ಧರಿಸುವ ಗರಿಗಳ ಕಿರೀಟಗಳಲ್ಲಿ ಗೋಲ್ಡನ್ ಈಗಲ್ ಮೊದಲಾದ ಪಕ್ಷಿಗಳ ಗರಿಗಳನ್ನು ಉಪಯೋಗಿಸುತ್ತಾರೆ. ಗೂಬೆಯ ಗರಿಗಳು ಬ್ರಷ್ಷುಗಳ ತಯಾರಿಕೆಗೆ ಬರುತ್ತವೆ. ನೀಳವಾದ ಗರಿಗಳನ್ನು ಕಂತೆಕಟ್ಟಿ ಪೊರಕೆಗಳನ್ನು ಮಾಡುವುದುಂಟು. ಷಟಲ್‌ಕಾಕ್ (ಬ್ಯಾಡ್ಮಿಂಟನ್)ಗಳ ತಯಾರಿಕೆಯಲ್ಲಿ ಕೆಲವು ಬಗೆಯ ಗರಿಗಳ ಬಳಕೆಯಿದೆ.

***

**ಗರಿನಕ್ಷತ್ರ:** ಕಂಟಕಚರ್ಮಿಗಳ ವಂಶದ ಪೆಲ್ಮಟೋಝೋವ ಉಪವಂಶದ ಕ್ರೈನಾಯ್ಡಿಯ ವರ್ಗಕ್ಕೆ ಸೇರಿದ ಸಮುದ್ರವಾಸಿಗಳಿಗಿರುವ ಸಾಮಾನ್ಯ ಹೆಸರು (ಫೆದರ್ ಸ್ಟಾರ್, ಸೀ ಲಿಲ್ಲಿ). ಸುಮಾರು 3500 ಮೀ. ಆಳದಲ್ಲಿ ಯಾವುದಾದರು ಅಧಃಸ್ತರಕ್ಕೆ (ಸಬ್‌ಸ್ಟ್ರಾಟಮ್) ಅಂಟಿಕೊಂಡಿರುತ್ತದೆ. ಇದಕ್ಕೆಂದೇ ಅಧೋಭಾಗದಲ್ಲಿ ಉದ್ದವಾದ ತೊಟ್ಟಿದೆ. ರೈಜೊಕ್ರೈನಸ್ ಮತ್ತು ಪೆಂಟಾಕ್ರೈನಸ್ ಈ ತೆರನ ಪ್ರಾಣಿಗಳು. ಆದರೆ ಆಂಟೆಡಾನ್ ಮಾತ್ರ ಕಾಂಡದಿಂದ ತುಂಡಾಗಿ ತನ್ನ ಬಾಹುಗಳ ಸಹಾಯದಿಂದ ಸಮುದ್ರದಲ್ಲಿ ಈಜಬಲ್ಲುದು. ಪೆಡಸು ನಕ್ಷತ್ರ ಮತ್ತು ಸಮುದ್ರ ನಕ್ಷತ್ರಗಳಲ್ಲಿರುವಂತೆ ಇದರಲ್ಲಿಯೂ ಮಧ್ಯತಟ್ಟೆ ಮತ್ತು ಅದರಿಂದ ಹೊರಡುವ ಐದು ಬಾಹುಗಳಿವೆ. ಮಧ್ಯತಟ್ಟೆಗೆ ಕೇಲಿಕ್ಸ್ ಎಂದು ಹೆಸರು. ಪ್ರತಿ ಬಾಹುವೂ ಬುಡದಲ್ಲಿ ಎರಡಾಗಿ ಕವಲೊಡೆದಿರುವುದರಿಂದ ಹತ್ತು ನೀಳವಾದ, ನಮ್ಯವಾದ ಮತ್ತು ಉದ್ದವಾದ




ಬಾಹುಗಳಿರುವಂತೆ ಭಾಸವಾಗುತ್ತದೆ. ಪ್ರತಿಯೊಂದು ಕವಲಿನಲ್ಲೂ ಪಿನ್ಯೂಲುಗಳೆಂಬ ಸಣ್ಣ ಸಣ್ಣ ಕವಲುಗಳಿವೆ. ಬಾಹುಗಳಿಗೂ ಹಕ್ಕಿಯ ಗರಿಗಳಿಗೂ ಹೋಲಿಕೆ ಇರುವುದರಿಂದಲೇ ಗರಿನಕ್ಷತ್ರವೆಂದು ಹೆಸರು. ಕೇಲಿಕ್ಸ್‌ನ ಊರ್ಧ್ವಭಾಗದಲ್ಲಿ ಬಾಯಿ ಮತ್ತು ಆಸನದ್ವಾರಗಳಿವೆ. ಇವಲ್ಲದೆ ಬಾಯಿಯಿಂದ ಐದು ಆಂಬುಲ್ಯಾಕ್ರಲ್ ಕೊರಕಲುಗಳು ತ್ರಿಜ್ಯಕ್ಕೆ ಹೊರಡುತ್ತವೆ. ಈ ಕೊರಕಲುಗಳು ಶಿಲಕೆಯುಕ್ತವಾಗಿವೆ ಮತ್ತು ಪರಿಧಿಯಲ್ಲಿ ಸಾಲಾಗಿ ಜೋಡಿಸಲ್ಪಟ್ಟ ಟೆಂಟಕಲ್ ಅಥವಾ ಪೋಡಿಯಗಳನ್ನು (ಮಾರ್ಪಾಟಾದ ನಳಿಕೆಪಾದ) ಹೊಂದಿವೆ. ಆಂಟೆಡಾನ್‌ನಲ್ಲಿ ಕೇಲಿಕ್ಸಿನ್ ಅಧೋಭಾಗದಲ್ಲಿ ಒಂದು ದೊಡ್ಡ ಆಸಿಕಲ್ ಇದೆ. ಇದು ಮುಂಚೆ ಇದ್ದ ತೊಟ್ಟು ಅಥವಾ ಕಾಂಡದ ಮೂಲಬಿಂದು. ಇದಲ್ಲದೆ ಸಿರ್ರೈ ಎಂಬ ಸಣ್ಣ ಸಣ್ಣ ಆಸಿಕಲ್‌ಗಳೂ ಉಂಟು. ಇವು ಅಧಃಸ್ತರಕ್ಕೆ ಅಂಟಿಕೊಳ್ಳಲು ಸಹಾಯಕ. ದೇಹದ ಅಸ್ಥಿಪಂಜರ ಆಸಿಕಲ್‌ಗಳಿಂದಾಗಿದೆ. ಜೀರ್ಣಾಂಗವ್ಯೂಹ ಬಾಯಿ, ಅಗಲವಾದ ಅನ್ನನಾಳ, ದೊಡ್ಡದಾದ ಜಠರ, ಸುರುಳಿಯಾಕಾರದ ಕರುಳು ಮತ್ತು ಆಸನದ್ವಾರಗಳನ್ನೊಳಗೊಂಡಿದೆ. ಹೀಮಲ್ ವ್ಯವಸ್ಥೆ ಮತ್ತು ನರವ್ಯೂಹ ಇತರ ಕಂಟಕಚರ್ಮಿಗಳಂತಿವೆ. ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್‌ಗಳ ವಿನಿಮಯವಾಗುವುದು ಪೋಡಿಯಗಳಲ್ಲಿ.

ಗರಿನಕ್ಷತ್ರಗಳು ಏಕಲಿಂಗಿಗಳು. ಮೊಟ್ಟೆಗಳೊಡೆದು ಡಾಲಿಯೋಲೇರಿಯ ಎಂಬ ಲಾರ್ವಗಳು ಹೊರಬರುತ್ತವೆ. ಇವು ನೀರಿನಲ್ಲಿ ಈಜಾಡುತ್ತ ಸ್ವಲ್ಪ ದಿವಸಗಳಲ್ಲೆ ಕಾಂಡಯುಕ್ತ ಪೆಂಟಾಕ್ರೈನಾಯಿಡ್ ಎಂಬ ಲಾರ್ವಗಳಾಗುತ್ತವೆ. ಇವುಗಳು ಅಧಃಸ್ತರಕ್ಕೆ ಅಂಟಿಕೊಂಡಿರುತ್ತವೆ. ರೂಪಪರಿವರ್ತನೆ ಹೊಂದಿ ಬೆಳೆದ ಗರಿನಕ್ಷತ್ರಗಳಾಗುತ್ತವೆ.

(ಎಸ್.ಕೆ.ಎಚ್.)

**ಗರುಡ:** ಫಾಲ್ಕನಿಫಾರ್ಮಿಸ್ ಗಣದ ಆಕ್ಸಿಪಿಟ್ರಿಡೆ ಕುಟುಂಬದ ಬ್ಯೂಟಿಯಾನಿನೆ ಉಪಕುಟುಂಬಕ್ಕೆ ಸೇರಿದ ಒಂದು ಹಕ್ಕಿ. ಹದ್ದು, ಗಿಡುಗ, ಡೇಗೆ, ರಣಹದ್ದು, ಗೂಬೆ

ಮುಂತಾದುವುಗಳ ಹತ್ತಿರ ಸಂಬಂಧಿ. ಹ್ಯಾಲಿಯಾಸ್ಟರ್ ಇಂಡಸ್ ಇದರ ವೈಜ್ಞಾನಿಕ ನಾಮ. ಬ್ರಾಹ್ಮಣಿ ಕೈಟ್ ಎಂಬುದು ಇಂಗ್ಲಿಷಿನಲ್ಲಿ ಸಾಮಾನ್ಯ ಬಳಕೆಯಲ್ಲಿರುವ ಹೆಸರು. ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನಗಳಲ್ಲಿ ಕಂಡುಬರುತ್ತದೆ. ಇದರ ಹಲವು ಬಗೆಗಳು ಬರ್ಮ, ಇಂಡೋಚೀನ, ಮಲಯಗಳಿಂದ ಹಿಡಿದು ಸಾಲೊಮನ್ ದ್ವೀಪಗಳವರೆಗೂ ಹರಡಿವೆ.

ಸುಮಾರು 48 ಸೆಂಮೀ ಉದ್ದದ ಸುಂದರವಾದ ಹಕ್ಕಿಯಿದು. ತಲೆ, ಕುತ್ತಿಗೆ, ಎದೆ ಮತ್ತು ಬೆನ್ನಿನ ಮುಂಭಾಗಗಳು ಬಿಳುಪು. ದೇಹದ ಉಳಿದ ಭಾಗ ಕೆಂಪು ಮಿಶ್ರಿತವಾದ ಕಂದು. ಹೊರನೋಟಕ್ಕೆ ಗಂಡು ಹೆಣ್ಣುಗಳು ಒಂದೇ ಬಗೆ. ಗರುಡ ಸಾಮಾನ್ಯವಾಗಿ ನದಿ, ಕೊಳ, ಝರಿ, ಸಮುದ್ರ ತೀರ, ನೀರು ತುಂಬಿದ ಗದ್ದೆಗಳು, ಬಂದರು, ಆಣೆಕಟ್ಟುಗಳಿರುವ ಪ್ರದೇಶಗಳಲ್ಲಿ ಒಂಟೊಂಟಿಯಾಗಿ ಕಂಡು ಬರುತ್ತದೆ.

ಹದ್ದಿನ ಕೊಕ್ಕಿನಂತೆ ಇದರ ಕೊಕ್ಕೂ ಬಲವಾಗಿದ್ದು ಬಾಗಿದೆ. ಅಂಚು ಬಲು ಹರಿತ. ಕೊಕ್ಕಿನ ಬಣ್ಣ ನಸುನೀಲಿ. ಮೇಲುಕೊಕ್ಕಿನ ಬುಡಭಾಗದಲ್ಲಿ ಸಿರೆ ಎಂಬ ಹಳದಿ ಬಣ್ಣದ ರಚನೆಯಿದೆ. ಇದರ ಬಳಿ ಅಗಲ ಹಾಗೂ ದುಂಡಗಿನ ಮೂಗಿನ ಹೊಳ್ಳೆಗಳಿವೆ. ಕಣ್ಣಿನ ವರ್ಣಪಟಲ ಕಂದು ಅಥವಾ ಹಳದಿಮಿಶ್ರಿತವಾದ ಕಂದು ಬಣ್ಣದ್ದು. ದೃಷ್ಟಿ ಬಲು ಸೂಕ್ಷ್ಮ. ರೆಕ್ಕೆಗಳು ಅತ್ಯಂತ ಬಲಯುತವಾಗಿದ್ದು ತುಂಬ ಉದ್ದವಾಗಿ ಬಾಲದ ತುದಿಯವರೆಗೂ ಚಾಚಿವೆ. ಹರಡಿದಾಗ ಒಂದೊಂದು ರೆಕ್ಕೆಯೂ 38–39 ಸೆಂಮೀ ಅಗಲವಿರುತ್ತದೆ. ಬಾಲ ಕೂಡ ಉದ್ದ ಮತ್ತು ದುಂಡು. ಕಾಲು ಮತ್ತು ಪಾದಗಳು ಬೂದು ಮಿಶ್ರಿತ ಇಲ್ಲವೆ ಹಸಿರು ಮಿಶ್ರಿತವಾದ ಹಳದಿ ಬಣ್ಣದಿಂದ ಕೂಡಿವೆ. ಕಾಲಿನ ಮೇಲ್ಭಾಗ ಗರಿಗಳಿಂದ ಮುಚ್ಚಿದ್ದು ತಳಭಾಗ ಬೋಳಾಗಿದೆ. ತಳಭಾಗದಲ್ಲೂ ಬೆರಳುಗಳ ಮೇಲೂ ಹುರಪೆಗಳಿವೆ. ಉಗುರುಗಳು ಕಪ್ಪು ; ಬೇಟೆ ಹಿಡಿಯಲು ಅನುಕೂಲವಾಗುವಂತೆ ಬಾಗಿವೆ, ಬಲಯುತವಾಗಿವೆ. ಅಂಗಾಲಿನಲ್ಲಿ ಮುಳ್ಳುಮಯವಾದ ಸಣ್ಣ ಸಣ್ಣ ಹುರುಪೆಗಳಿವೆ. ಗರುಡಪಕ್ಷಿಯ ಧ್ವನಿ ತೀಕ್ಷ್ಣವಾದ ಸಿಳ್ಳಿನಂತಿದೆ. ಮೀನು, ಕಪ್ಪೆ, ಸಣ್ಣ ಸಣ್ಣ ಹಾವುಗಳು, ಹಲ್ಲಿ, ಸಣ್ಣಗಾತ್ರದ ಸ್ತನಿಗಳು, ಕೋಳಿ, ಕೀಟ ಮತ್ತು ಅವುಗಳ ಲಾರ್ವಗಳು, ಮುಂತಾದುವು ಗರುಡಪಕ್ಷಿಯ ಮುಖ್ಯ ಆಹಾರ. ಅಪರೂಪವಾಗಿ ಇದು ಹದ್ದು, ರಣಹದ್ದುಗಳಂತೆ ಸತ್ತ ಪ್ರಾಣಿಗಳನ್ನು ತಿನ್ನುವುದುಂಟು.

ಗರುಡ ಪಕ್ಷಿಯ ಸಂತಾನೋತ್ಪತ್ತಿಯ ಕಾಲ ಡಿಸೆಂಬರ್–ಏಪ್ರಿಲ್ ತಿಂಗಳುಗಳು. ಹಳ್ಳಿಗಳ ಹೊರವಲಯದಲ್ಲಿ ನೀರಿನ ಆಸರೆಯಿರುವಂಥ ಪ್ರದೇಶಗಳಲ್ಲಿ, ಬೆಳೆಯುವ ಅರಳಿ, ಆಲ, ಹುಣಿಸೆ, ಗಾಳಿಮರ ಮತ್ತು ತೆಂಗಿನ ಗಿಡಗಳ ಮೇಲೆ ಇದು ಗೂಡು ಕಟ್ಟುತ್ತದೆ. ಗೂಡಿನ ರಚನೆಯಲ್ಲಿ ಮುಖ್ಯವಾಗಿ ಕಡ್ಡಿಪುಳ್ಳೆಗಳು ಮತ್ತು ಕೆಲವೊಮ್ಮೆ ಹತ್ತಿ, ಉಣ್ಣೆ, ಎಲೆಗಳು ಮೊದಲಾದವನ್ನು ಬಳಸುವುದುಂಟು. ಸಾಮಾನ್ಯವಾಗಿ ಒಂದು ಸೂಲಿನಲ್ಲಿ ಎರಡು ಇಲ್ಲವೆ ಮೂರು ಮೊಟ್ಟೆಗಳಿಡುತ್ತವೆ. ಮೊಟ್ಟೆಯ ಉದ್ದ 5 ಸೆಂಮೀ, ಅಗಲ 4 ಸೆಂಮೀ. ಬಣ್ಣ ಬೂದಿಮಿಶ್ರಿತ ಬಿಳಿ. ಮೇಲೆಲ್ಲ ಕಂದುಬಣ್ಣದ ಚುಕ್ಕೆಗಳಿವೆ. ಹೆಣ್ಣುಗಂಡುಗಳೆರಡೂ ಸೇರಿ ಗೂಡುಕಟ್ಟುತ್ತವೆ. ಕಾವು ಕೊಡುವುದು ಹೆಣ್ಣು. ಕಾವು ಕೊಡುವ ಹೆಣ್ಣಿಗೆ ಆಹಾರವನ್ನು ತಂದು ಕೊಡುವ ಕೆಲಸ ಗಂಡಿನ ಪಾಲಿನದು. 26–27 ದಿನಗಳ ಕಾಲ ಕಾವು ಕೊಟ್ಟ ಮೇಲೆ ಮೊಟ್ಟೆಯಿಂದ ಮರಿಗಳು ಹೊರ ಬರುತ್ತವೆ. ಪ್ರಾಯಕ್ಕೆ ಬರುವ ಮುನ್ನ ಮರಿಗಳ ಬಣ್ಣ ಕಂದು. ವರ್ಷಂಪ್ರತಿ ಮರಿಗಳ ಗರಿ ಉದುರುತ್ತವೆ. ನಾಲ್ಕು ವರ್ಷಗಳಾದ ಮೇಲೆ ಮರಿಗಳು ಪ್ರೌಢಾವಸ್ಥೆಗೆ ಬರುತ್ತವೆ.

ಭಾರತದಲ್ಲಿ ಗರುಡನಿಗೆ ಸಂಬಂಧಿಸಿದಂತೆ ಹಲವು ಪೌರಾಣಿಕ ಕಥೆಗಳಿವೆ. ಗರುಡ ಪಕ್ಷಿಗಳ ರಾಜ. ಗರುಡನ ಶಕ್ತಿ ಸಾಮರ್ಥ್ಯಗಳನ್ನು ಮೆಚ್ಚಿದ ಮಹಾವಿಷ್ಣು ಅದನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿದ್ದಾನೆ. ಶಿಲ್ಪಕಲೆಯಲ್ಲಿ ಗರುಡನ ಆಕೃತಿ ಮನುಷ್ಯನಂತಿದ್ದು ಬಾಗಿದ ಕೊಕ್ಕು ಮತ್ತು ರೆಕ್ಕೆಗಳಿಂದ ಕೂಡಿರುತ್ತದೆ. ಇಂಥ ವಿಗ್ರಹಗಳನ್ನು ಹಲವು ವೈಷ್ಣವ ದೇವಾಲಯಗಳಲ್ಲಿ ಕಾಣಬಹುದು. ಗರುಡನಿಗೂ ನಾಗರಹಾವುಗಳಿಗೂ ಇರುವ ಬದ್ಧ ದ್ವೇಷಕ್ಕೆ ಸಂಬಂಧಿಸಿದ ಕಥೆಗಳೂ ಉಂಟು. ಗರುಡ ಮತ್ತು ಸೂರ್ಯನ ಸಾರಥಿಯಾದ ಅರುಣ ಎಂಬುವರು ಕಶ್ಯಪ ಮುನಿ ಮತ್ತು ವಿನತೆಯರ ಮಕ್ಕಳು. ಇವರ ಮಲತಾಯಿ ಕದ್ರು ಸರ್ಪಗಳ ತಾಯಿ. ಕಾರಣಾಂತರದಿಂದ ವಿನತೆ ಕದ್ರುವಿನ ದಾಸಿಯಾಗಿರಬೇಕಾದ ಸಂದರ್ಭ ಒದಗಿತು. ನಾಗರಾಜನು ಗರುಡನ ಬೆನ್ನುಹತ್ತಿ ಸವಾರಿ ಮಾಡಲು ಪ್ರಾರಂಭಿಸಿದ. ಇದರಿಂದ ಗರುಡನಿಗೆ ತುಂಬಾ ಅವಮಾನವಾದಂತಾಯಿತು. ತಾಯಿಯ ದಾಸ್ಯವನ್ನು ತೊಡೆದುಹಾಕಲು ಮಾರ್ಗವೇನೆಂದು ವಿಚಾರಿಸಿದ. ಸ್ವರ್ಗಲೋಕದಿಂದ ಅಮೃತವನ್ನು ಕದ್ರುವಿಗೆ ತಂದು ಕೊಟ್ಟರೆ ತಾಯಿಯ ದಾಸ್ಯ ನಿವಾರಣೆಯಾಗುವುದು ಎಂದು ತಿಳಿದುಬಂತು. ಆಗ ಗರುಡ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಅಮೃತ ಕಲಶದ ರಕ್ಷಕರಾದ ಗಂಧರ್ವರನ್ನು ಕೊಂದು, ಘಟಸರ್ಪಗಳನ್ನು ಸಂಹರಿಸಿ, ಇಂದ್ರನೊಡನೆ ಹೋರಾಡಿ ಕೊನೆಗೆ ಅಮೃತ ಕುಂಭವನ್ನು ತಂದು ಮಲತಾಯಿಗೆ ಕೊಟ್ಟು ದಾಸ್ಯ ಸಂಕಲೆಯಿಂದ ತಾಯಿಯನ್ನು ಬಿಡಿಸಿದ. ಇವನ ಪರಾಕ್ರಮಕ್ಕೆ ಮೆಚ್ಚಿ ಇಂದ್ರ ಇವನಿಗೆ ಸರ್ಪಗಳು ಆಹಾರವಾಗಿರುವಂತೆ ವರವನ್ನಿತ್ತ. ವಿಷ್ಣು ಇವನ ಸಾಹಸ, ಸಾಮರ್ಥ್ಯಗಳಿಗೆ ಮಾರುಹೋಗಿ ಸಂಪರ್ಣನೆಂದು ಬಿರುದು ಕೊಟ್ಟು ತನ್ನ ವಾಹನವನ್ನಾಗಿ ಮಾಡಿಕೊಂಡುದಲ್ಲದೇ ತನ್ನ ಧ್ವಜದಲ್ಲಿ ಲಾಂಛನವನ್ನಾಗಿರಿಸಿಕೊಂಡ. ಭಾರತದ ಆದಿಪರ್ವದಲ್ಲಿ ಈ ಕಥೆ ಬಹು ವಿಸ್ತಾರವಾಗಿ ಬಂದಿದೆ.

ಪುರಾತನ ಕಾಲದಿಂದಲೂ ತನ್ನ ಗಾತ್ರ, ಗಾಂಭೀರ್ಯ ಮತ್ತು ವೈಭವಯುತ ಹಾಗೂ ಪ್ರಯಾಸವಿಲ್ಲದ ಹಾರಾಟದಿಂದಾಗಿ ಗರುಡ ಪಕ್ಷಿಗಳ ರಾಜನೆಂದು ಮಾನ್ಯತೆ ಪಡೆದಿದೆ. ಇದು ಶಕ್ತಿ, ಶೌರ್ಯ ಮತ್ತು ವೈಭವಗಳ ಪ್ರತೀಕ. ಈಟಿಗಳ ಮೇಲೆ ಗರುಡಪಕ್ಷಿ ಕ್ರಿ.ಪೂ. 104ರ ಹೊತ್ತಿಗೆ ರೋಮನರ ಮುಖ್ಯ ಲಾಂಛನವಾಯಿತು. ಅಲ್ಲದೆ ಅವರು ಇದನ್ನು ನಾಣ್ಯ ಮತ್ತು ಪದಕಗಳ ಮೇಲೂ ಹಾಕಿಕೊಂಡರು. ರೋಮನ್ ಪುರಾಣದಲ್ಲಿ ಬರುವ ದೇವತೆ ಹಾಗೂ ಮಾನವರ ಪ್ರಭುವಾದ ಜ್ಯೂಪಿಟರನಿಗೆ ಪ್ರಿಯವಾದದ್ದು ಈ ಗರುಡಪಕ್ಷಿ. ಕ್ರಿ.ಶ. 1200ರ ಅನಂತರ ಯೂರೋಪಿನ ಹಲವು ರಾಜರು ಮತ್ತು ರಾಜಮಾನ್ಯರು ತಮ್ಮ ಗುರಾಣಿಗಳ ಮೇಲೆ ಗರುಡಪಕ್ಷಿಯ ಲಾಂಛನವನ್ನು ಉಪಯೋಗಿಸಲಾರಂಭಿಸಿದರು. ಎರಡು ತಲೆಯ ಗರುಡ ಪಕ್ಷಿ ಜರ್ಮನಿ, ರಷ್ಯ, ಆಸ್ಟ್ರಿಯ, ಪೋಲೆಂಡ್ ಚಕ್ರವರ್ತಿಗಳ ರಾಷ್ಟ್ರಲಾಂಛನವಾಯಿತು. ಕಪ್ಪು ಗರುಡ ಪ್ರಷ್ಯ ದೇಶದ ಲಾಂಛನವಾಯಿತು. ಈ ಗರುಡಪಕ್ಷಿಯ ಮುದ್ರೆ ಅಮೆರಿಕನರ ನಾಣ್ಯಗಳಲ್ಲಿ 1776ರಲ್ಲಿಯೇ ಬಳಕೆಗೆ ಬಂದಿರುವುದನ್ನು ಗಮನಿಸಬಹುದು. (ಎನ್.ಎಸ್.ಆರ್.ಬಿ.)

**ಗರುಡ ಮೂಗಿನ ಆಮೆ:** ಎರೆಟ್ಮೊಕೀಲೈಸ್ ಇಂಬ್ರಿಕೇಟ ಎಂಬ ವೈಜ್ಞಾನಿಕ ಹೆಸರಿನ ಸಾಗರವಾಸಿ ಆಮೆ. ಉಷ್ಣ ಹಾಗೂ ಸಮಶೀತೋಷ್ಣ ವಲಯಗಳ ಸಮುದ್ರಗಳಲ್ಲಿ ವಾಸಿಸುತ್ತದೆ. ಮಾಂಸಾಹಾರಿ. ಮೂತಿ ಗರುಡ ಕೊಕ್ಕಿನ ಹಾಗೆ ಬಾಗಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ.



ಗರುಡ ಮೂಗಿನ ಆಮೆ

ದೇಹದ ಮೇಲೆ ಸುಮಾರು ೦.೬ ಮೀ. ಉದ್ದದ ಚಿಪ್ಪು ಇದೆ. ಚಿಪ್ಪಿನ ಮೇಲೆಲ್ಲ ಹೆಂಚು ಹೊದಿಸಿದಂತೆ ಕಾಣುವ ಕಂದುಬಣ್ಣದ ದಪ್ಪನೆಯ ಫಲಕಗಳಿವೆ. ಆಮೆಯ ಚಿಪ್ಪುಗಳಲ್ಲೆಲ್ಲ ಗರುಡ ಮೂಗಿನ ಆಮೆಯದು ಅತ್ಯುತ್ತಮವಾದುದೆಂದು ಹೇಳಲಾಗಿದೆ. ಇದರಿಂದ ಬಾಚಣಿಗೆ, ಕಡಗ, ಅಲಂಕಾರಿತ ಆಣಿ ಮುಂತಾದವನ್ನು ಮಾಡಲಾಗುತ್ತದೆ. ಚಿಪ್ಪಿಗೋಸ್ಕರ ಹಿಂದಿನ ಕಾಲದಲ್ಲಿ ಇದನ್ನು ಬಹಳವಾಗಿ ಹಿಡಿಯುವುದಿತ್ತು. ಮನುಷ್ಯರಿಗೆ ಆಹಾರವಾಗಿ ಇದರ ಮಾಂಸ ಅಷ್ಟು ಯೋಗ್ಯವಾದದ್ದಲ್ಲ. ಮಾಂಸ ಸ್ವಲ್ಪ ಮಟ್ಟಿಗೆ ವಿಷಾಯುಕ್ತವಾದದ್ದು. ವರ್ಷದ ಯಾವ ಸಮಯದಲ್ಲಾದರೂ ಮೊಟ್ಟೆಯನ್ನು ಇಡಬಲ್ಲುದು. ಆದರೆ ಮೇ–ಜೂನ್ ಅಥವಾ ಸೆಪ್ಟೆಂಬರ್–ನವೆಂಬರ್ ತುಂಬಾ ಪ್ರಶಸ್ತವಾದ ಕಾಲ. ೨–೩ ವರ್ಷಕ್ಕೊಮ್ಮೆ ಸು. ೧೯೦ ದುಂಡಾಗಿರುವ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯ ವ್ಯಾಸ ಸುಮಾರು ೪ ಸೆಂಮೀ. ಸಮುದ್ರದಡದ ಮರಳಿನಲ್ಲಿ ಸುಮಾರು ೨೫ ಸೆಂಮೀ ಆಳದ ಬಿಲದಲ್ಲಿ ಮೊಟ್ಟೆಗಳನ್ನಿಡುತ್ತದೆ. ೫೦ ದಿನಗಳಲ್ಲಿ ಮರಿಗಳು ಮೊಟ್ಟೆಯಿಂದ ಹೊರಬಂದು ಸಮುದ್ರದೆಡೆಗೆ ಧಾವಿಸುತ್ತವೆ.

***

**ಗರ್ಭಪಾತ:** ನಿರ್ಣಯಿತ ಕಾಲಕ್ಕೆ ಮುಂಚೆ ಪ್ರಸವವಾಗಿ ಹೀಗೆ ಪ್ರಸವಗೊಂಡ ವಸ್ತು ಜೀವಂತವಾಗಿರದ ಘಟನೆ (ಅಬಾರ್ಷನ್). ಮನುಷ್ಯರಲ್ಲಿ ಗರ್ಭಧಾರಣದ ಪೂರ್ಣಕಾಲ 40 ವಾರಗಳು. ಗರ್ಭಿಣಿಯಲ್ಲಿ ಇದಕ್ಕೆ ಮೊದಲೆ ಗರ್ಭಾವಸ್ಥೆ ಕೊನೆಗೊಂಡು ಜೀವದಿಂದಿರಲಾಗದ ಮಗು ಜನಿಸುವ ಘಟನೆಯೆ ಗರ್ಭಪಾತ. ಮೊದಲಿಗೆ ಗರ್ಭಕ್ಷಯ, ಗರ್ಭಪಾತ, ದಿನ ತುಂಬುವುದಕ್ಕೆ ಮುಂಚೆಯೆ ಅವಸರದಿಂದ ಹಡೆಯುವಿಕೆ ಎಂಬ ವಿವಿಧ ಘಟ್ಟಗಳನ್ನು ಗುರುತಿಸಲಾಗುತ್ತಿತ್ತು. ಆದರೆ ಆಧುನಿಕ ವ್ಯಾಖ್ಯೆ ಈ ಮೇಲೆ ಬರೆದಂತಿದೆ.

ಗರ್ಭ ತಾಳುವುದಕ್ಕೆ ಹಿಂದಿನ ರಜಸ್ರಾವದ ಪ್ರಾರಂಭದ ದಿವಸದಿಂದ ಲೆಕ್ಕ ತೆಗೆದುಕೊಂಡು ಸುಮಾರು 28 ವಾರಗಳಾದರೂ ಪ್ರಸವವಾದಾಗ ಅದು ಜೀವಂತವಾಗಿರಲಾರದು. ಆಮೇಲೆ ಹುಟ್ಟಿದ ಮಕ್ಕಳು ಜೀವಂತವಾಗಿದ್ದರೂ ಹುಟ್ಟಿದಾಗ ಒಂದು ಕಿಗ್ರಾಂಗಿಂತ ಹೆಚ್ಚು ತೂಕವಿರದಿದ್ದರೆ, ಅವುಗಳ ಪೋಷಣೆ ಅತಿ ಕ್ಲಿಷ್ಟ ಸಮಸ್ಯೆಯಾಗಿ ಅವು ಸತ್ತು ಹೋಗುವ ಸಂಭವವಿದೆ. 34–36 ವಾರಗಳ ಕಾಲವಾದರೂ ಅವು ಗರ್ಭಾವಸ್ಥೆಯಲ್ಲಿ ಬೆಳೆಯುತ್ತ ಇದ್ದರೆ ಹುಟ್ಟಿದ ಮೇಲೆ ಜೀವಂತವಾಗಿದ್ದು ಸಹಜವಾಗಿ ಬೆಳೆಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಸಾಮಾನ್ಯವಾಗಿ 28 ವಾರಗಳಿಗೆ ಮೊದಲೇ ಕೊನೆಗೊಂಡ ಗರ್ಭಾವಸ್ಥೆಯನ್ನು ಗರ್ಭಪಾತವೆಂದು ಗಣಿಸಬಹುದಾದರೂ ಬೇರೆ ಬೇರೆ ದೇಶಗಳಲ್ಲಿ ಗರ್ಭಪಾತಕ್ಕೆ ಬೇರೆ ಬೇರೆ ವ್ಯಾಖ್ಯಾನವಿದ್ದುದರಿಂದ ವಿಶ್ವ ಆರೋಗ್ಯಸಂಸ್ಥೆ 1950 ರಲ್ಲಿ ಗರ್ಭಪಾತವನ್ನು ಈ ಕೆಳಗೆ ಹೇಳಿರುವ ನಾಲ್ಕು ರೀತಿಯಲ್ಲಿ ವಿಂಗಡಿಸಿತು.

1. 20 ವಾರಗಳ ಗರ್ಭಾವಧಿಗೆ ಮುಂಚೆಯೇ, ಸತ್ತುಹುಟ್ಟುವ ಸಂದರ್ಭಗಳು.
2. ಭ್ರೂಣ 20 ವಾರಗಳಾದಮೇಲೂ ಬೆಳೆಯುತ್ತಿದ್ದು 28ನೆಯ ವಾರದ ಒಳಗೆ, ಸತ್ತುಹುಟ್ಟುವ ಸಂದರ್ಭಗಳು.
3. ಭ್ರೂಣ 28 ವಾರ ಗರ್ಭದಲ್ಲಿ ಬೆಳೆದು ಆಮೇಲೆ, ಸತ್ತು ಹುಟ್ಟುವ ಸಂದರ್ಭಗಳು;
4. ಇವು ಮೂರು ಗುಂಪಿಗೂ ಸೇರದ, ಸತ್ತ ವಸ್ತುವಿನ ಜನನ.

ಗರ್ಭಪಾತ ಸ್ವಾಭಾವಿಕವಾಗಿ ಆಗಬಹುದು. ಇಲ್ಲವೆ ಕೃತಕವಾಗಿ ಪ್ರಚೋದಿಸಬಹುದು. ಸ್ವಾಭಾವಿಕ ಗರ್ಭಪಾತ ಅಥವಾ ಸಾಮಾನ್ಯವಾಗಿ ಜನ ಕರೆಯುವಂತೆ ಮೈ ಇಳಿಯುವುದು 12% ಗರ್ಭಿಣಿಯರಲ್ಲಿ ಕಂಡುಬರಬಹುದೆಂದು ಅಂದಾಜು ಮಾಡಲಾಗಿದೆ. ಅನೇಕರಿಗೆ ಗರ್ಭಧಾರಣೆಯಾದ ಕೆಲವು ವಾರಗಳಲ್ಲೆ ಗರ್ಭಪಾತವಾಗುವುದರಿಂದ ಗರ್ಭಪಾತವಾದ ವಿಷಯ ಗಮನಕ್ಕೆ ಬರದಿರಬಹುದು. ಪತನವಾದ ವಸ್ತು ಕೆಲವು ವೇಳೆ ಇನ್ನೂ ಭ್ರೂಣಾವಸ್ಥೆಯನ್ನೂ ಹೊಂದದೆ ಇರಬಹುದು. ಅಂತೂ ಈ ರೀತಿಯ ಗರ್ಭಪಾತ ಸ್ವಲ್ಪ ತಡವಾದ ಮತ್ತು ಅಧಿಕವಾದ ಸ್ವಾಭಾವಿಕ ಋತುಸ್ರಾವದಂತೆಯೆ ಇದ್ದು ಗರ್ಭನಷ್ಟವಾಗುವುದರಿಂದ ಗೋಚರಕ್ಕೆ ಬರುವುದಿಲ್ಲ. ಒಟ್ಟು ಗರ್ಭಧಾರಣೆಗಳಲ್ಲಿ 20% ರಷ್ಟು ಈ ರೀತಿಯ ಅವ್ಯಕ್ತ ಗರ್ಭಪಾತ ಕಾಣಬರುತ್ತದೆ. ಸ್ವಾಭಾವಿಕ ಗರ್ಭಪಾತಗಳಲ್ಲಿ 75% ರಷ್ಟು ಸಾಮಾನ್ಯವಾಗಿ 3–4 ತಿಂಗಳ ಗರ್ಭಿಣಿಯರಲ್ಲಿ ಕಂಡುಬರುತ್ತದೆ. ಗರ್ಭಪಾತವಾಗುವುದಕ್ಕೆ ಕೆಲವು ದಿವಸಗಳಿಗೆ ಮುಂಚೆಯೆ ಭ್ರೂಣ ಗರ್ಭಕೋಶದೊಳಗೆ ಸತ್ತು ಹೋಗಿರುವುದು ಸಾಮಾನ್ಯ. ಕೆಲವು ವೇಳೆ ಹೀಗೆ ಸತ್ತುಹೋಗಿರುವ ಭ್ರೂಣ ಗರ್ಭಕೋಶದ ಒಳಗೆ ಅನೇಕ ವಾರಗಳು ಇರಬಹುದು. ಇಂಥ ಸಂದರ್ಭಗಳಲ್ಲಿ ಗರ್ಭಪಾತದ ಸೂಚನೆ ಕಂಡುಬಂದು ಬಹುಬೇಗನೆ ಸಮಾಧಾನವಾಗಿ, ಗರ್ಭ ಸ್ಥಿತಿ ಮುಂದುವರಿಯುತ್ತಿದೆಯೇನೊ ಎನ್ನುವಂತೆ ಇರುತ್ತದೆ. ಆದರೆ ಗರ್ಭದ ಬೆಳವಣಿಗೆ ಇಲ್ಲದೆ, ಒಂದೇ ಸ್ಥಿತಿಯಲ್ಲಿರುವುದು ಮತ್ತು ಇತರ ಸೂಚನೆಗಳಿಂದ ಈ ರೀತಿಯ ಗೋಪ್ಯಗರ್ಭಪಾತಗಳನ್ನು ಗುರುತಿಸಬಹುದು. ಇಂಥ ಸಂದರ್ಭಗಳಲ್ಲಿ ಗರ್ಭಕೋಶದೊಳಗೆ ಇರುವ ಸತ್ತ ಮತ್ತು ಶಿಥಿಲವಾಗುತ್ತಿರುವ ಭ್ರೂಣದ ವಿಸರ್ಜನೆಗೆ ಚಿಕಿತ್ಸೆ ಮಾಡಬೇಕಾಗುತ್ತದೆ. ಇದು ಔಷಧೋಪಚಾರಗಳಿಂದ ವಿಸರ್ಜನೆಯಾಗದಿದ್ದರೆ, ಶಸ್ತ್ರಚಿಕಿತ್ಸೆಯನ್ನು ಅವಲಂಬಿಸಬೇಕು. ಕೆಲವು ವೇಳೆ ಯೋನಿಯೊಳಗಿನಿಂದ ರಕ್ತಸ್ರಾವ, ಸೊಂಟನೋವು, ಕಿಬ್ಬೊಟ್ಟೆನೋವು ಮುಂತಾದ ಸೂಚನೆಗಳು ಕಂಡಬಂದು ಗರ್ಭಪಾತವಾಗುವ ಹೆದರಿಕೆ ಉಂಟಾಗುತ್ತದೆ. ಆದರೆ ಪೂರ್ಣ ವಿಶ್ರಾಂತಿ, ಔಷಧೋಪಚಾರಗಳಿಂದ ಗರ್ಭಪಾತವಾಗುವುದನ್ನು ತಪ್ಪಿಸಬಹುದು ಮತ್ತು ಗರ್ಭದ ಬೆಳವಣಿಗೆ ಮುಂದುವರಿಯುವಂತೆ ಮಾಡಬಹುದು. ಇಂಥ ಸಂದರ್ಭಗಳನ್ನು ಬೆದರಿಕೆ ಗರ್ಭಪಾತವೆನ್ನುತ್ತಾರೆ. ಇನ್ನು ಕೆಲವು ವೇಳೆ ಮೇಲೆ ಹೇಳಿದ ಗರ್ಭಪಾತದ ಸೂಚನೆಗಳು ಅಗಾಧವಾಗಿ ಕಂಡುಬಂದು ಏನು ಮಾಡಿದರೂ ಗರ್ಭಪಾತವಾಗುವುದನ್ನು ತಪ್ಪಿಸಲು ಸಾಧ್ಯವಾಗದೇ ಹೋಗಬಹುದು. ಇದು ಅನಿವಾರ್ಯ ಗರ್ಭಪಾತ. ಹೀಗೆ ಗರ್ಭಪಾತವಾದಾಗ ಗರ್ಭಕೋಶ ಪೂರ್ಣವಾಗಿ ಖಾಲಿಯಾದರೆ ಅದು ಸಮಗ್ರ ಅನಿವಾರ್ಯ ಗರ್ಭಪಾತ. ಅದಿಲ್ಲದೆ ಗರ್ಭಕೋಶದೊಳಗಿನ ವಸ್ತು ಪೂರ್ತಿಯಾಗಿ ವಿಸರ್ಜನೆ ಯಾಗದಿದ್ದರೆ ಅದು ಅಸಮಗ್ರ ಅನಿವಾರ್ಯ ಗರ್ಭಪಾತ ಎನ್ನಿಸಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಅತಿಯಾದ ರಕ್ತಸ್ರಾವ, ವಿಷಾಣು ಸೋಂಕು ಮುಂತಾದ ಭೀಕರ ಅವಸ್ಥೆಗಳು ಉಂಟಾಗದಂತೆ ಔಷಧೋಪಚಾರಗಳಿಂದ, ಅಗತ್ಯವಾದರೆ ಶಸ್ತ್ರ ಚಿಕಿತ್ಸೆಯಿಂದ ಗರ್ಭಪಾತ ಪೂರ್ಣವಾಗುವಂತೆ ಮಾಡಬೇಕಾಗುತ್ತದೆ.

ಗರ್ಭಪಾತಕ್ಕೆ ಕಾರಣಗಳು ತಾಯಿಯಲ್ಲಿ ಅಥವಾ ಭ್ರೂಣದಲ್ಲಿ ಇರಬಹುದು. ತಾಯಿಯಲ್ಲಿ ಸಿಡುಬು, ಪ್ಲೇಗು, ಮಲೇರಿಯ, ರೂಬೆಲ್ಲ, ಪರಂಗಿ ರೋಗ ಮುಂತಾದ ರೋಗಗಳ ನಂಜಿನಿಂದ ಗರ್ಭಪಾತವಾಗಬಹುದು. ಕ್ಷಯ, ಮಧುಮೂತ್ರ, ಅಧಿಕ ರಕ್ತದೊತ್ತಡ, ನೆಫ್ರೈಟಿಸ್ ಮುಂತಾದ ರೋಗಗಳಿಂದಲೂ ಗರ್ಭಪಾತವಾಗುವ ಸಾಧ್ಯತೆ ಇದೆ. ತೀವ್ರವಾದ ಭೀತಿ, ದುಃಖ, ಆತಂಕಗಳು, ಹಾರ್ಮೋನುಗಳ ಮತ್ತು ನರಮಂಡಲದ ಏರುಪೇರುಗಳು ಗರ್ಭಪಾತವನ್ನು ಉಂಟುಮಾಡಬಲ್ಲುವು. ಗರ್ಭಕೋಶ ವಿಕಾರವಾಗಿದ್ದರೆ, ರೋಗಪೀಡಿತವಾಗಿದ್ದರೆ, ಸ್ಥಳಾಂತರಗೊಂಡಿದ್ದರೆ, ದುರ್ಮಾಂಸದಿಂದೊಡಗೂಡಿದ್ದರೆ, ಅತಿ ಸಂಭೋಗದಿಂದ ಉದ್ರೇಕಗೊಂಡಿದ್ದರೆ ಗರ್ಭಪಾತವಾಗಬಹುದು. ಅತಿಯಾದ ದೈಹಿಕ ಶ್ರಮ, ಗರ್ಭಕೋಶದ ಹತ್ತಿರ ಘಾತ, ಕೃತಕ ಗರ್ಭಪಾತದ ಪ್ರಯತ್ನಗಳು ಇವು ಭ್ರೂಣವನ್ನು ರೂಢಮೂಲವಾಗಿ ಬೇರ್ಪಡಿಸಿ ಗರ್ಭಪಾತವನ್ನು ಉಂಟು ಮಾಡಬಹುದು. ಆಹಾರಲೋಪ ಅಥವಾ ಬೇರೆ ಕಾರಣದಿಂದಾದ ನಿಶ್ಶಕ್ತಿಯೆ ಗರ್ಭಪಾತವನ್ನು ಉಂಟು ಮಾಡಬಹುದು. ಸೀಸ, ತಾಮ್ರ, ಪಾದರಸ ಮುಂತಾದ ಲೋಹ ಸಂಯುಕ್ತ ವಸ್ತುಗಳು ಗರ್ಭಪಾತವನ್ನು ಉಂಟು ಮಾಡುತ್ತವೆ. ಹಾಗೆಯೇ ರೋಗಪೀಡಿತ ಅಂಡಾಣು ಅಥವಾ ಪುರಷಾಣುಗಳ ಮಿಲನದಿಂದ ವಿಕೃತಿಗೊಂಡ ಭ್ರೂಣ, ರೋಗಪೀಡಿತವಾದ ಮತ್ತು ಪರಸ್ಥಳದಲ್ಲಿ ಊರ್ಜಿತವಾದ ಜರಾಯು, ಗರ್ಭಕೋಶದಲ್ಲಿ ಭ್ರೂಣದ ಅತಿಯಾದ ಚಲನದಿಂದ ಹೊಕ್ಕುಳಬಳ್ಳಿ ಭ್ರೂಣದ ಕತ್ತಿಗೆ ಸುತ್ತಿಕೊಂಡು ನೇಣುಹಾಕುವುದು, ಭ್ರೂಣದ ರಕ್ತ ತಾಯಿಯ ರಕ್ತದಿಂದ ಆರ್‌ಎಚ್ ಎಂಬ ಘಟಕದಲ್ಲಿ ಭಿನ್ನವಾಗಿರುವಿಕೆ, ಹಾರ್ಮೋನು ಏರುಪೇರು ಇವು ಭ್ರೂಣಕ್ಕೆ ಸಂಬಂಧಿಸಿದಂತೆ ಗರ್ಭಪಾತ ಮಾಡಿಸುವ ಕಾರಣಗಳು.

ಕೆಲವರಲ್ಲಿ ಗರ್ಭಧಾರಣೆಯಾಗಿ ಸುಮಾರು 12 ವಾರಗಳ ಬಳಿಕ ಪ್ರತಿಸಲವೂ ಗರ್ಭಪಾತ ಸಂಭವಿಸುವುದು ರೂಢಿಯಾಗಿಬಿಟ್ಟಿರುತ್ತದೆ. ಇಂಥ ವರ್ತನೆಯ ಗರ್ಭಪಾತಕ್ಕೆ ಮೇಲೆ ಹೇಳಿದ ಕಾರಣಗಳು ಯಾವುವೂ ಅನ್ವಯಿಸುವಂತೆ ಕಾಣುವುದಿಲ್ಲ. ಸಾಮಾನ್ಯವಾಗಿ ಗರ್ಭಪಾತ ಸಹಜ ಋತು ಕ್ರಮದಂತೆ ಋತುಸ್ರಾವವಾಗಬಹುದೆಂದು ನಿರೀಕ್ಷಿಸಬಹುದಾದ ದಿವಸಗಳಲ್ಲಿ ಆಗುತ್ತದೆ. ಪದೇ ಪದೇ ಗರ್ಭಪಾತಕ್ಕೊಳಗಾಗುವವರಲ್ಲಂತೂ ಇದು ಸ್ಪಷ್ಟವಾಗಿ ಕಾಣಬರುತ್ತದೆ.

ಕೃತಕ ಗರ್ಭಪಾತ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ತೀವ್ರ ಅಪರಾಧವೆಂದು ಗಣಿಸಲ್ಪಟ್ಟಿದೆ. ಕೃತಕವಾಗಿ ಗರ್ಭಪಾತ ಮಾಡಿಸುವವರನ್ನೂ ಅವರಿಗೆ ಸಹಾಯ ಮಾಡುವವರನ್ನೂ ಶಿಕ್ಷೆಗೆ ಗುರಿ ಮಾಡಲಾಗುತ್ತಿದೆ. ಮಾನಹೋಗುವ ಸಂದರ್ಭಗಳಲ್ಲಿ, ಆರ್ಥಿಕ ಸಮಸ್ಯೆಗಳಿಗಾಗಿ, ಸಂತಾನ ನಿರೋಧ ಕ್ರಮದ ರಕ್ಷಣೆ ಅನಿರೀಕ್ಷಿತವಾಗಿ ಕುಸಿದು ಗರ್ಭಧಾರಣೆಯಾಗಿಬಿಟ್ಟಾಗ ಅಥವಾ ಬೇರೆ ಕಾರಣದಿಂದಲಾದರೂ ಬೇಡದ ಬಸಿರನ್ನು ಕಳೆದುಕೊಳ್ಳುವುದಕ್ಕಾಗಿ ಕೃತಕಗರ್ಭಪಾತವನ್ನು ಮಾಡಿಕೊಳ್ಳುತ್ತಾರೆ. ಇಲ್ಲವೇ ಮಾಡಿಸಿಕೊಳ್ಳುತ್ತಾರೆ. ಗರ್ಭಾವಸ್ಥೆಯ ಮೂರನೆಯ ತಿಂಗಳಲ್ಲಿ ಗರ್ಭಧಾರಣೆಯಾದ ವಿಷಯ ಖಚಿತವಾಗಿ ಮನದಟ್ಟಾದಾಗ, ಸಾಮಾನ್ಯವಾಗಿ, ಕೃತಕ ಗರ್ಭಪಾತದ ಪ್ರಯತ್ನ ನಡೆಯುತ್ತದೆ. ಇಲ್ಲವೇ ನಾಲ್ಕು ತಿಂಗಳುಗಳು ಕಳೆದ ಮೇಲೆ ಗರ್ಭಿಣಿಯೆಂಬ ವಿಷಯ ಬಹಿರಂಗವಾಗಿ ಗೋಚರವಾಗುವಂತಾದಾಗ ಈ ಪ್ರಯತ್ನ ನಡೆಯುತ್ತದೆ. ಕೃತಕ ಗರ್ಭಪಾತ ಅಪರಾಧವಾದುದರಿಂದ, ಸ್ವಪ್ರಯತ್ನ ಇಲ್ಲವೇ ಗುಟ್ಟಿನಲ್ಲಿ ಒದಗಿಸಬಹುದಾದ, ಕೌಶಲವಿಲ್ಲದವರ ಅಥವಾ ಕುಶಲಿಗಳ ಸಹಾಯದಿಂದ, ಸಾಮಾನ್ಯವಾಗಿ ಅಶುದ್ಧವಾದ ಸ್ಥಳದಲ್ಲಿ, ಅಶುದ್ಧ ಸಲಕರಣೆಗಳಿಂದ ಗರ್ಭಪಾತವನ್ನು ಉಂಟುಮಾಡಲಾಗುತ್ತದೆ. ಕೃತಕ ಗರ್ಭಪಾತ ಔಷಧ ಸೇವನೆ ಅಥವಾ ಪ್ರಯೋಗದಿಂದಾಗಲಿ ಅಥವಾ ಬಲಪ್ರಯೋಗದಿಂದಾಗಲಿ ಅಥವಾ ಸಲಕರಣೆಗಳ ಉಪಯೋಗದಿಂದಾಗಲಿ ಫಲಿಸುವಂತೆ ಪ್ರಯತ್ನ ನಡೆಯುತ್ತದೆ. ಖಚಿತವಾಗಿ ಗರ್ಭಪಾತ ಮಾಡಿಸಬಲ್ಲ ಸುರಕ್ಷಿತ ಔಷಧಗಳು ಅಷ್ಟಾಗಿ ಇಲ್ಲವೆಂದೆ ಹೇಳಬೇಕು. ಬಹಳ ರೀತಿಯ ಔಷಧಿಗಳನ್ನು ಗರ್ಭಪಾತವಾಗುವಷ್ಟು ಉಪಯೋಗಿಸಿದರೂ ಅವು ದೇಹಕ್ಕೆ ಅಪಾಯವಾಗುವಷ್ಟು ಗಾತ್ರದಲ್ಲಿ ಅವನ್ನು ಉಪಯೋಗಿಸಬೇಕಾಗಿದೆ. ಎರ್ಗಾಟ್, ಕ್ವಿನೀನ್, ಈಸ್ಟ್ರೋಜೆನ್ನುಗಳು, ಟರ್ಪೆಂಟೈನ್, ಕ್ಯಾಂಥರಿಡೀನುಗಳು, ಜಾಪಾಳ, ಕಿಲುಬು ಮುಂತಾದ ತೀಕ್ಷ್ಣವಾದ ವಮನ ವಿರೇಚಿಗಳು, ಸೀಸ ಸಂಯುಕ್ತ ರಾಸಾಯನಿಕಗಳು ಇವೆಲ್ಲುವನ್ನು ಗರ್ಭಪಾತವಾಗಲು ಉಪಯೋಗಿಸುತ್ತಾರೆ. ಭಾರತದಲ್ಲಿ ಎಳೆಯ ಪರಂಗಿ ಬೀಜ, ಎಕ್ಕದ ಹಾಲು, ಚಿತ್ರಮೂಲ, ಹಾಗಲ, ನುಗ್ಗೆ ಮುಂತಾದುವನ್ನು ಗರ್ಭಪಾತಕ್ಕೆ ಉಪಯೋಗಿಸುವುದುಂಟು. ಹಿಗ್ಗಿನ್ಸ್ ಪಿಚಕಾರಿಯಿಂದ ಯೋನಿಯ ಮೂಲಕ ಗರ್ಭಕೋಶಕ್ಕೆ ಒತ್ತಡದಿಂದ ಜಲಸೇಚನ ಮಾಡುವುದು, ಬಟ್ಟಿ ಜಾರಿದಾಗ ಅನುಸರಿಸುವಂಥ ಪಾತ್ರಾಪ್ರಯೋಗ, ಹೊಟ್ಟೆ ಮೇಲೆ ತುಳಿಸಿಕೊಳ್ಳುವುದು, ಹೊಟ್ಟೆ ಸುತ್ತ ಅತಿ ಬಿಗಿಯಾಗಿ ಸಿಂಬಿ ಸುತ್ತಿಕೊಳ್ಳುವುದು, ಎತ್ತರದಿಂದ ಧುಮುಕುವುದು, ಕುದುರೆ ಸವಾರಿ, ಶ್ರಮವಾಗುವ ಕುಣಿತ, ಮಹಡಿ ಹಂತವನ್ನು ಹತ್ತಿ ದುಡುದುಡನೆ ಇಳಿಯುವುದು ಮುಂತಾದ ಬಲಪ್ರಯೋಗಗಳನ್ನೂ ಗರ್ಭಪಾತವಾಗುವ ಸಲುವಾಗಿ ಅನುಸರಿಸಲಾಗುತ್ತದೆ. ಸಾಮಾನ್ಯವಾಗಿ ಪಿಚಕಾರಿ ಉಪಯೋಗದಿಂದ ಗರ್ಭಪಾತದ ಸ್ವಪ್ರಯತ್ನ ಪ್ರಾರಂಭವಾಗುತ್ತದೆ. ಅದು ಸಫಲವಾಗದಿದ್ದಾಗ ಶ್ರಮಸಾಧನೆಗಳು,

ಅವೂ ತಪ್ಪಿದರೆ ಔಷಧ ಸೇವನೆ, ಅವೂ ತಪ್ಪಿದರೆ ಸಲಕರಣೆಗಳ ಉಪಯೋಗವನ್ನು ಕೃತಕ ಗರ್ಭಪಾತದ ಪ್ರಯತ್ನಗಳಾಗಿ ಕಾಣಬಹುದು. ಹೊರಗಿನವರಿಂದ ಗರ್ಭಪಾತ ಮಾಡಿಸಿಕೊಳ್ಳುವಾಗ ಸಾಮಾನ್ಯವಾಗಿ ಸಲಕರಣೆಗಳ ಉಪಯೋಗವೇ ಅನುಸರಿಸುವ ಮಾರ್ಗ. ತಿಳಿಯದ ಜನ ಸಲಕರಣೆಗಳನ್ನು ಉಪಯೋಗಿಸಿದಾಗ ಸ್ವಪ್ರಯತ್ನದಲ್ಲಿ ಸಲಕರಣೆಯ ಉಪಯೋಗದಂತೆಯೇ ಶರೀರ ಘಾತವಾಗುವ ಸಾಧ್ಯತೆ ಬಹಳ ಉಂಟು. ಅನುಭವಸ್ಥರು ಅಥವಾ ಶಸ್ತ್ರಕ್ರಿಯಾ ಜ್ಞಾನವುಳ್ಳವರು ಸಲಕರಣೆಗಳನ್ನು ಉಪಯೋಗಿಸಿದರೆ ಅಷ್ಟಾಗಿ ಘಾತವಾಗದೆ ಹೆಚ್ಚು ಕಡಿಮೆ ಖಚಿತವಾಗಿ ಗರ್ಭಪಾತವಾಗುವ ಸಂಭವವಿರುತ್ತದೆ. ಅನುಭವಿಗಳು ಪಿಚಕಾರಿ ಉಪಯೋಗ, ಯೋನಿಯೊಳಗಿನಿಂದ ಗರ್ಭಕೋಶ ದ್ವಾರಕ್ಕೆ ಸಿಕ್ಕಿಕೊಳ್ಳುವಂತೆ ಔಷಧಗಳನ್ನು ಲೇಪಿಸಿದ ಕಡ್ಡಿಗಳನ್ನು ತೂರಿಸುವುದು, ಸೂಜಿ, ಮೊಳೆ ಮುಂತಾದ ಚೂಪಾದ ವಸ್ತುಗಳಿಂದ ಭ್ರೂಣವನ್ನು ಆವರಿಸಿರುವ ಚೀಲವನ್ನು ಛಿದ್ರಿಸುವುದು ಮುಂತಾದ ಮಾರ್ಗಗಳನ್ನು ಅನುಸರಿಸುತ್ತಾರೆ. ಅನುಭವಿಗಳೂ ಶಸ್ತ್ರಕ್ರಿಯಾ ಜ್ಞಾನವುಳ್ಳವರೂ ಸಾಮಾನ್ಯವಾಗಿ ಈ ನೀರಿನ ಚೀಲವನ್ನು ಛಿದ್ರಿಸುವ ವಿಧಾನವನ್ನೇ ಅನುಸರಿಸುತ್ತಾರೆ. ಶಸ್ತ್ರಕ್ರಿಯಾ ವಿಜ್ಞಾನಿಗಳು ಸಾಮಾನ್ಯವಾಗಿ ಶಸ್ತ್ರಕ್ರಿಯೆಗೆ ಅನುಸರಿಸುವ ಎಚ್ಚರಿಕೆಗಳನ್ನು ಆದಷ್ಟು ಮಟ್ಟಿಗೆ ಅನುಸರಿಸುವುದರಿಂದ ಇವರು ಜರುಗಿಸುವ ಕೃತಕ ಗರ್ಭಪಾತ ತಕ್ಕಮಟ್ಟಿಗೆ ಕ್ಷೇಮವಾಗಿರುತ್ತದೆ ಮತ್ತು ಬಹುವಾಗಿ ಸ್ವಾಭಾವಿಕ ಗರ್ಭಪಾತದಂತೆಯೇ ಇರುತ್ತದೆ. ಅಕುಶಲಿಗಳು ಅನುಸರಿಸುವ ಸಲಕರಣೆಗಳ ಪ್ರಯೋಗದಿಂದ ಮತ್ತು ಸ್ಥಳೀಕವಾಗಿ ತೀವ್ರ ಔಷಧ ಪ್ರಯೋಗಗಳಿಂದ ಯೋನಿ, ಗುದದ್ವಾರ, ಗರ್ಭಕೋಶದ್ವಾರ, ಗರ್ಭಕೋಶಗಳಲ್ಲಿ ಗಾಯ ವ್ರಣಗಳಾಗಿ, ರಕ್ತಸ್ರಾವ, ಡೊಗರು ಬೀಳುವಿಕೆ, ತೀವ್ರ ಆಘಾತಗಳಾಗಿ ಸಾವು ಸಂಭವಿಸಬಹುದು; ಇಲ್ಲವೇ ವಿಷಾಣು ಸೋಂಕಾಗಿ ವಿಷಮಿಸಿ ಸಾವು ಸಂಭವಿಸಬಹುದು. ಇಂಥ ಸಾವು, ಸ್ವಯಂಕೃತ ಮತ್ತು ಅಕುಶಲ ಪರಕೃತ ಕೃತಕ ಗರ್ಭಪಾತಗಳಲ್ಲಿ 16% ರಷ್ಟು ಸಂಭವಿಸಬಹುದೆಂದು ಅಂದಾಜು ಮಾಡಿದ್ದಾರೆ. ಆಘಾತಗಳಿಂದ ಚೇತರಿಸಿಕೊಂಡರೂ ಅನೇಕ ಸಲ ಸೊಂಟ ನೋವು, ಅತಿರಜಸ್ರಾವ, ಬಿಳುಪು ಹೋಗುವುದು ಮುಂತಾದ ಅನಾರೋಗ್ಯ ಸ್ಥಿತಿಗಳಿಂದ ಬಹುಕಾಲ ನರಳಬೇಕಾಗುತ್ತದೆ.

ಕೃತಕ ಗರ್ಭಪಾತ ಕೆಲವು ಸಂದರ್ಭಗಳಲ್ಲಿ ಸಮರ್ಥನೀಯವಾಗಿರುತ್ತದೆ. ಇದು ಸಾಮಾನ್ಯವಾಗಿ ಮುಚ್ಚುಮರೆ ಇಲ್ಲದೆ ಸಕಲ ಸೌಕರ್ಯವೂ ಇರುವ ಆಸ್ಪತ್ರೆಯಲ್ಲಿ ತಜ್ಞರು ಮಾಡುವ ಕಾರ್ಯ. ಸಮರ್ಥನೀಯ ಗರ್ಭಪಾತವನ್ನು ಮಾಡಿಸುವ ಮೊದಲು ಆ ಗರ್ಭ ಮುಂದುವರಿದರೆ ತಾಯಿಯ ದೇಹಸೌಖ್ಯಕ್ಕೆ, ಮನೋಸ್ಥಿತಿಗೆ ಮತ್ತು ಜೀವಕ್ಕೆ ಅಪಾಯ ಉಂಟೆಂದು ಸಾಮಾನ್ಯವಾಗಿ ಇಬ್ಬರು ತಜ್ಞರಾದರೂ ಒಮ್ಮತದಿಂದ ಸಮ್ಮತಿಸಬೇಕಾಗುತ್ತದೆ. ಅಂತೆಯೆ ವ್ಯಕ್ತಿ ಮತ್ತು ಸಂಬಂಧಿಗಳ ಲಿಖಿತ ಒಪ್ಪಿಗೆಯೂ ಅಗತ್ಯ. ತುರ್ತು ಪರಿಸ್ಥಿತಿಗಳಲ್ಲಿ ಈ ನಿರ್ಬಂಧಗಳನ್ನು ಸಾಮಾನ್ಯವಾಗಿ ಸಡಿಲಿಸುತ್ತಾರೆ. ಸಮರ್ಥನೀಯ ಗರ್ಭಪಾತ ಮಾಡಬೇಕಾದ ಸಂದರ್ಭಗಳು ನವೀನ ಔಷಧಿಗಳು ಮತ್ತು ಚಿಕಿತ್ಸಾ ಕ್ರಮಗಳಿಂದ ಈಚೆಗೆ ಕಡಿಮೆಯಾಗಿವೆ. ಕ್ಷಯ, ತಕ್ಕಮಟ್ಟಿನ ಹೃದಯ ದೌರ್ಬಲ್ಯ, ರಕ್ತದ ಒತ್ತಡ ಮುಂತಾದ ಕಾರಣಗಳಿಗಾಗಿ ಈಚೆಗೆ ಗರ್ಭಪಾತವನ್ನು ಮಾಡುವುದಿಲ್ಲ. ಅನಿವಾರ್ಯ ಗರ್ಭಪಾತ ಸಮಗ್ರಗೊಳ್ಳದೆ ದೀರ್ಘಕಾಲಿಕವಾದಾಗ, ಕೃತಕ ಗರ್ಭಪಾತದ ಅಕುಶಲಿತ ಪ್ರಯತ್ನಗಳಿಂದ ದೇಹಾಘಾತವಾಗಿ ವಿಷಾಣು ಸೋಂಕುಂಟಾದಾಗ, ಗರ್ಭಕೋಶದಲ್ಲಿ ದುರ್ಮಾಂಸ ಏಡಿಗಂತಿಗಳಿದ್ದಾಗ, ಮೂರ್ಛಾರೋಗ, ಹಿಂದಿನ ಪ್ರಸವ ಕಾಲಗಳಲ್ಲಿನ ಮನೋವಿಕಲ್ಪ ಇಂಥ ಸಂದರ್ಭಗಳಲ್ಲಿ ಕೃತಕ ಗರ್ಭಪಾತ ಸಾಮಾನ್ಯವಾಗಿ ಸಮರ್ಥನೀಯವೆಂದು ಗಣಿಸಲ್ಪಡುತ್ತದೆ.

ಆನುವಂಶಿಕವಾಗಿರಬಹುದಾದ ಮೂರ್ಛಾರೋಗ, ಮನೋವಿಕಲ್ಪ, ತೀವ್ರ ಅಂಗವಿಕಲತೆ ಇವನ್ನು ತಡೆಗಟ್ಟಲು ಗರ್ಭಪಾತ ಸಮರ್ಥನೀಯವೆಂದು ಕೆಲವು ದೇಶಗಳಲ್ಲಿ ಎಣಿಸಲಾಗಿದೆ. ಅತಿಕ್ರಮ ಸಂಭೋಗದಿಂದಾದ ಗರ್ಭವನ್ನು ಕಳೆದುಕೊಳ್ಳಲು ಗರ್ಭಪಾತವನ್ನು ಸಮರ್ಥನೀಯವೆಂದು ಕೆಲವು ದೇಶಗಳಲ್ಲಿ (ಇತ್ತೀಚೆಗೆ ಭಾರತದಲ್ಲೂ) ಭಾವಿಸಿದ್ದಾರೆ. ಈಚೆಗೆ ಜಪಾನ್ ಮುಂತಾದ ಕೆಲವು ದೇಶಗಳಲ್ಲಿ ಕುಟುಂಬಯೋಜನೆಯ ಅಂಗವಾಗಿ, ಸಾಮಾಜಿಕ, ವೈಯಕ್ತಿಕ ಕಾರಣಗಳಿಗಾಗಿ ಗರ್ಭಪಾತವನ್ನು ಐಚ್ಛಿಕ ವಿಷಯವನ್ನಾಗಿ ಮಾಡಿದ್ದಾರೆ. ಇಂಥ ಗರ್ಭಪಾತಗಳನ್ನು ಸರಕಾರದ ಅನುಮತಿ ಇರುವ ಸ್ಥಳಗಳಲ್ಲಿ ಮಾತ್ರ ತಜ್ಞರು ಯಾವ ಮುಚ್ಚುಮರೆಯೂ ಇಲ್ಲದೆ ಮಾಡಬೇಕಾಗಿರುತ್ತದೆ. ಈ ವ್ಯವಸ್ಥೆಗೆ ಈಡಾಗುವುದಕ್ಕೆ ಹೀನಾಯ ಪಟ್ಟುಕೊಂಡೊ ಆರ್ಥಿಕ ಕಾರಣಗಳಿಗಾಗಿಯೊ ಐಚ್ಛಿಕ ಗರ್ಭಪಾತವನ್ನು ಗುಟ್ಟಾಗಿ ಅಕುಶಲಿಕವಾಗಿ ಪ್ರಯತ್ನಿಸುವುದು ಅದರಿಂದಾಗಬಹುದಾದ ಗಂಡಾಂತರವನ್ನು ಅನುಭವಿಸುವುದು ಸಮಾಜದಲ್ಲಿ ಇದ್ದೇ ಇರುತ್ತದೆ. ಐಚ್ಛಿಕ ಗರ್ಭಪಾತವನ್ನು ಈಚೆಗೆ ನವ್ಯವಿಧಾನಗಳಿಂದ ಕ್ಷೇಮಕರವಾಗಿ ಮಾಡಿದ್ದಾರೆ. ಅಗತ್ಯವಾದ ಎಚ್ಚರಿಕೆಗಳನ್ನು ತೆಗೆದುಕೊಳ್ಳುವುದನ್ನು ಮರೆಯದೆ ಕಿಬ್ಬೊಟ್ಟೆಯ ಮೂಲಕ ಚುಚ್ಚುಮದ್ದಿನ ದೊಡ್ಡ ಸೂಜಿಯನ್ನು ಭ್ರೂಣವನ್ನು ಆವರಿಸಿರುವ ನೀರಿನ ಚೀಲದೊಳಗೆ ಹುಗಿಸಿ, ಆದಷ್ಟು ನೀರನ್ನು ತೆಗೆದು, ಅಷ್ಟೇ ಗಾತ್ರದಲ್ಲಿ ಶುದ್ಧೀಕರಿಸಿ ಬೆಚ್ಚಗೆ ಮಾಡಿದ 20% ಉಪ್ಪುನೀರನ್ನೊ 50% ಗ್ಲೂಕೋಸ್ ದ್ರಾವಣವನ್ನೊ ಚೀಲದೊಳಕ್ಕೆ ಸೇರಿಸುತ್ತಾರೆ. ಇದಾದ ಕೆಲವು ಗಂಟೆಗಳಲ್ಲಿ ಸಾಮಾನ್ಯವಾಗಿ ಗರ್ಭಪಾತ ಉಂಟಾಗುತ್ತದೆ. ಈ ರೀತಿ ಗರ್ಭಪಾತವನ್ನು ಉಂಟುಮಾಡಿದಾಗ ಹುಟ್ಟುವ ಮಕ್ಕಳು ಸತ್ತು ಹೋಗಿರುತ್ತವೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಅಮೆರಿಕದಲ್ಲಿ ಈಚೆಗೆ ವಿದ್ಯುತ್ ಸಹಾಯದಿಂದ ಗರ್ಭಕೋಶವನ್ನು ಸಂಕುಚಿಸಿ ಗರ್ಭಪಾತವಾಗುವಂತೆ ಮಾಡುವುದು ರೂಢಿಗೆ ಬಂದಿದೆ. ಈ ರೀತಿಯ ಕೃತಕ ಗರ್ಭಪಾತಗಳು ಸಹಜ ಗರ್ಭಪಾತಗಳಂತೆಯೆ ಇದ್ದು ಭಿನ್ನತೆ ವ್ಯಕ್ತವಾಗದೆ ಇರಬಹುದಾದ್ದರಿಂದ ಇವನ್ನು ಪತ್ತೆಮಾಡುವುದು ಕಷ್ಟ.

ಭಾರತದಲ್ಲು ಐಚ್ಛಿಕ ಗರ್ಭಪಾತವು ಕುಟುಂಬ ಯೋಜನೆ ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ನ್ಯಾಯಸಮ್ಮತವೆಂದು ಶಾಸನ ಮಾಡಲಾಗಿದೆ. (ಎಸ್.ಆರ್.ಆರ್.)

ಕಾನೂನಿನ ದೃಷ್ಟಿಯಲ್ಲಿ ಗರ್ಭಪಾತ: ಗರ್ಭ ನಿಂತ ಯಾವುದೇ ಅವಧಿಯಲ್ಲಿ ಅನೈಸರ್ಗಿಕವಾಗಿ ಅಥವಾ ಕೃತ್ರಿಮ ರೀತಿಯಿಂದ ಗರ್ಭಕೋಶದಲ್ಲಿದ್ದ ಭ್ರೂಣ ಅಥವಾ ಅದರ ಅಂಶವನ್ನು ಹೊರಗೆ ಹಾಕುವುದನ್ನು ಕಾನೂನು ಗರ್ಭಪಾತವೆಂದು ಪರಿಗಣಿಸುತ್ತದೆ. ಗರ್ಭಪಾತ ಮಾಡಿಕೊಳ್ಳುವುದು ಇಲ್ಲವೆ ಮಾಡಿಸುವುದು ಕಾನೂನಿನಂತೆ ಕೆಲವು ದಶಕಗಳ ಹಿಂದೆ ನಮ್ಮ ದೇಶದಲ್ಲಿ ಅಪರಾಧವಾಗಿತ್ತು. ಈ ಅಪರಾಧಕ್ಕೆ ಮೂರು ವರ್ಷದ ಕಾರಾಗೃಹವಾಸದ ಶಿಕ್ಷೆ ಮತ್ತು / ಅಥವಾ ದಂಡ, ತಾಯಿ ಅಸುನೀಗಿದರೆ ಏಳು ವರ್ಷಗಳವರೆಗೆ ಶಿಕ್ಷೆ ಮತ್ತು / ಅಥವಾ ದಂಡ ಹಾಗೂ ಗರ್ಭಪಾತಕ್ಕೊಳಗಾಗುವವಳ ಅನುಮತಿ ಇಲ್ಲದೆ ಮಾಡಿದ ಅಪರಾಧಕ್ಕೆ ಗರಿಷ್ಠ ಆಜೀವ ಕಾರಾಗೃಹವಾಸದ ಶಿಕ್ಷೆಯಿತ್ತು. ಒಂದು ವೇಳೆ ತಾಯಿಯ ಜೀವವನ್ನು ಉಳಿಸುವ ಪ್ರಾಮಾಣಿಕ ಉದ್ದೇಶದಿಂದ ಗರ್ಭಪಾತ ಮಾಡಿಸಿದ್ದಾದರೆ ಮಾತ್ರ ಈ ಶಿಕ್ಷೆ ಅನ್ವಯಿಸುವುದಿಲ್ಲ.

ಕುಟುಂಬಯೋಜನಾ ಕಾರ್ಯಕ್ರಮ ಹಾಗೂ ಇನ್ನಿತರ ಸಾಮಾಜಿಕ ಕಾರಣಗಳಿಂದಾಗಿ ಗರ್ಭಪಾತವನ್ನು ಕಾಯಿದೆಬದ್ಧಗೊಳಿಸುವ ಮಸೂದೆ (1971) ಭಾರತದಲ್ಲಿ ಜಾರಿಗೆ ಬಂದಿದೆ. ಅದರಂತೆ ಗರ್ಭಪಾತವನ್ನು ಕಾಯಿದೆಬದ್ಧವಾಗಿ ಈ ಕೆಳಗಿನ ಕಾರಣಗಳಿಂದ ಮಾಡಿಸಬಹುದಾಗಿದೆ:

1. ತಾಯಿಯ ಜೀವಕ್ಕೆ ಅಪಾಯ ಒದಗಬಹುದಾದ ಸಂದರ್ಭಗಳಲ್ಲಿ. ಉದಾಹರಣೆಗೆ, ತಾಯಿಯಾಗಲಿರುವವಳು ಹೃದಯ ಅಥವಾ ಪಿತ್ತಕೋಶದ ತೊಂದರೆಯಿಂದ ಬಳಲುತ್ತಿದ್ದಾಗ ಅಥವಾ ಸ್ತನ ಅಥವಾ ಗುಪ್ತಾಂಗಗಳ ಕ್ಯಾನ್ಸರ್ ಮೊದಲಾದ ರೋಗಗಳಿಗೆ ತುತ್ತಾದಾಗ.

2. ವಿಕೃತ ಮಗುವಿನ ಜನನದ ಸಂಶಯವಿದ್ದಾಗ, ಅಂದರೆ ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಕೃತಗೊಂಡ ಗರ್ಭ ಬೆಳವಣಿಗೆಯಲ್ಲಿದೆಯೆಂಬ ಸಂಶಯವಿದ್ದಲ್ಲಿ (ಗುಹ್ಯರೋಗಗಳು, ಮಾರಕ ಅಥವಾ ಮಾದಕ ಔಷಧ ಸೇವನೆ ಮುಂತಾದ ಸಂದರ್ಭಗಳಲ್ಲಿ ಇಂಥ ಸಂಶಯಕ್ಕೆ ಕಾರಣವಿದೆ) ಹಾಗೂ ವಿಕಿರಣ ಪಟುತ್ವದಿಂದ ಭ್ರೂಣ ಘಾಸಿಗೊಂಡಾಗ ಗರ್ಭಪಾತ ಮಾಡಿಸಬಹುದು.

3. ಅತ್ಯಾಚಾರಕ್ಕೆ ಬಲಿಯಾಗಿ ಗರ್ಭ ನಿಂತ ಸಂದರ್ಭಗಳಲ್ಲಿ ಗರ್ಭಪಾತ ಮಾಡಿಸಬಹುದಾಗಿದೆ.

4. ಸಾಮಾಜಿಕ ಇಲ್ಲವೇ ಇತರ ಕಾರಣಗಳು: ಅವಿವಾಹಿತ ಕನ್ಯೆ, ವಿಧವೆ ಮೊದಲಾದವರು ಗರ್ಭವತಿಯರಾದಲ್ಲಿ ಅಥವಾ ಮಕ್ಕಳ ಸಂಖ್ಯೆ ಅತಿಯಾಗಿದ್ದಲ್ಲಿ ಗರ್ಭಪಾತವನ್ನು ಕಾನೂನು ಒಪ್ಪುತ್ತದೆ. ಆದರೆ ಇಂಥ ಪ್ರಸಂಗದಲ್ಲಿ ಅವರವರ ಸಾಮಾಜಿಕ ಸ್ಥಾನಮಾನ, ತಾಯಿಯಾಗಲಿರುವವಳ ವಯಸ್ಸು, ಮಕ್ಕಳ ಸಂಖ್ಯೆ, ಕುಟುಂಬದ ವರಮಾನ ಮುಂತಾದುವುಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. ಗರ್ಭ ಧರಿಸಿದ 12 ವಾರಗಳಲ್ಲಿ (ಮೂರು ತಿಂಗಳು) ಯಾವುದೇ ಸ್ತ್ರೀ ರೋಗ ತಜ್ಞ ವೈದ್ಯರು ಗರ್ಭಪಾತವನ್ನು ಮಾಡಿಸಬಹುದಾಗಿದೆ. ಗರ್ಭಪಾತವನ್ನು ಸರ್ಕಾರ ನಿಗದಿ ಮಾಡಿದ ಆಸ್ಪತ್ರೆಗಳಲ್ಲಿಯೆ ಮಾಡಿಸಬೇಕು. ಈ ಬಗ್ಗೆ ದಾಖಲೆಯಿಡತಕ್ಕದ್ದು. ಗರ್ಭಪಾತ ಮಾಡಿಸಿಕೊಳ್ಳುವವಳು ಹುಚ್ಚಿ ಇಲ್ಲವೇ ಅಪ್ರಾಯಸ್ಥಳು ಇದ್ದ ಸಂದರ್ಭವನ್ನು ಹೊರತುಪಡಿಸಿ ಗರ್ಭಪಾತ ಮಾಡಿಕೊಳ್ಳುವ ಬಗ್ಗೆ ಅಂತಿಮ ನಿರ್ಣಯವನ್ನು ಮಾಡಿಕೊಳ್ಳುವ ಹೆಂಗಸೆ ನಿರ್ಧರಿಸತಕ್ಕದ್ದು. ಪ್ರಾಮಾಣಿಕವಾಗಿ ಸದುದ್ದೇಶದಿಂದ ಮಾಡಿದ ಗರ್ಭಪಾತ ಕ್ರಿಯೆಗೆ ವೈದ್ಯರ ವಿರುದ್ಧ ನಷ್ಟ ವಗೈರೆ ಬಗ್ಗೆ ಕಾನೂನುಕ್ರಮ ಕೈಗೊಳ್ಳದಂತೆ ಅವರಿಗೆ ಕಾಯ್ದೆಯ ರಕ್ಷಣೆಯಿದೆ. (ಬಿ.ಡಿ.ಎಚ್.)

**ಗರ್ಭಾವಧಿ:** ತನ್ನಂತಹದೇ ಮರಿಗೆ, ಅಥವಾ ಶಿಶುವಿಗೆ ಜನ್ಮ ನೀಡುವ ಪ್ರಾಣಿಗಳಲ್ಲಿ ಫಲಿತಗೊಂಡ ಅಂಡಾಣು ಗರ್ಭಾಶಯದ ಭಿತ್ತಿಯಲ್ಲಿ ಅಂತರ್ನಿವೇಶನಗೊಂಡ (ಊಲಿಕೊಂಡ) ಅವಧಿಯಿಂದ, ತಾಯಿಯ ದೇಹದಿಂದ

ಹೊರಬರುವ ಪ್ರಸವದವರೆಗಿನ ಅವಧಿ (ಜೆಸ್ಟೇಶನ್ ಅಥವಾ ಗೆಸ್ಟೇಶನ್). ಪರ್ಯಾಯವಾಗಿ ಹೇಳುವುದಾದರೆ ತಾಯಿಯ ಗರ್ಭದಲ್ಲಿ ಶಿಶು ಅಥವಾ ಮರಿ ಕಳೆಯುವ ಅವಧಿ. ಗರ್ಭಾವಧಿ ಕೇವಲ ಒಂದು ಮರಿಗೆ ಇರಬಹುದು ಅಥವಾ ಒಂದಕ್ಕಿಂತ ಹೆಚ್ಚು ಮರಿಗಳಿಗೆ ಜನ್ಮನೀಡುವ ಪ್ರಾಣಿಗಳಲ್ಲಿ ಒಂದು ಸೂಲಿಗೆ ಇರಬಹುದು. ಪ್ರಭೇದಗಳನ್ನವಲಂಬಿಸಿ ಗರ್ಭಾವಧಿಯಲ್ಲಿ ವ್ಯತ್ಯಾಸವಿದೆ. ಪ್ರೈಮೇಟ್ ಅಥವಾ ವಾನರಗಳ ಗಣದಲ್ಲಿ ಗರ್ಭಾವಧಿ ಸುದೀರ್ಘವಾದುದು.

ಜರಾಯುಗಳಲ್ಲಿ ಕಂಡುಬರುವ ಈ ಅವಧಿಯ ವಿಜ್ಞಾನ ನಿಜಕ್ಕೂ ಕುತೂಹಲಕಾರಿ. ಪ್ರಾಯಕ್ಕೆ ಬಂದ ಜೀವಿಗಳು ಪಕ್ವತೆ ತಲುಪಿ ಸಂತಾನೋತ್ಪತ್ತಿ ಕ್ರಿಯೆಯನ್ನು ನಡೆಸಿದಾಗ ಗಂಡಿನ ರೇತಸ್ಸು (ವೀರ್ಯ) ಹೆಣ್ಣಿನ ಜನನಾಂಗವನ್ನು ಸೇರಿ ಗರ್ಭನಾಳದಲ್ಲಿರುವ ಅಂಡದೊಂದಿಗೆ ಸೇರಿ ಅದನ್ನು ನಿಷೇಚನೆಗೊಳಿಸುತ್ತದೆ. ಫಲಿತಗೊಂಡ ಅಂಡವು ಹಲವು ಬಾರಿ ವಿಭಜನೆಗೊಂಡು ಚೆಂಡಿನಾಕಾರದ ಬ್ಲಾಸ್ಟುಲಾ ಆಗಿ ಗರ್ಭಾಶಯವನ್ನು ಸೇರುತ್ತವೆ. ಈ ಅವಧಿಯಲ್ಲಿ ಗರ್ಭಾಶಯದ ಭಿತ್ತಿ ಇದನ್ನು ಸ್ವೀಕರಿಸಲು ಸನ್ನದ್ಧವಾಗಿರುತ್ತದೆ. ಬ್ಲಾಸ್ಟುಲಾ ಗರ್ಭಾಶಯದ ಭಿತ್ತಿಯಲ್ಲಿ ವಿಲೀನಗೊಂಡು ಮುಂದಿನ ಬೆಳವಣಿಗೆಯನ್ನು ಆರಂಭಿಸುತ್ತದೆ. ಗರ್ಭಾವಧಿಯ ಉದ್ದಕ್ಕೂ ಹಲವಾರು ಬದಲಾವಣೆಗಳು ನಡೆಯುತ್ತವೆ. ಗರ್ಭಾಶಯವನ್ನು ಸೇರಿದ ಬ್ಲಾಸ್ಟುಲಾವನ್ನು ಭ್ರೂಣ ಎಂದು ಕರೆಯಲಾಗುತ್ತದೆ. ಇದು ಗರ್ಭಕೋಶದ ಗೋಡೆಯೊಂದಿಗೆ ಹೊಕ್ಕುಳು ಬಳ್ಳಿ (ಜರಾಯ) ಯಿಂದ ಸಂಪರ್ಕ ಪಡೆದಿರುತ್ತದೆ. ಇದರ ಮುಖಾಂತರ ತನಗೆ ಬೇಕಾದ ಪೋಷಕಾಂಶಗಳನ್ನು ತಾಯಿಯ ದೇಹದಿಂದ ಪಡೆದು ಬೆಳೆಯುತ್ತದೆ. ಗರ್ಭಕೋಶದಲ್ಲಿರುವ ಭ್ರೂಣದ ಬೆಳವಣಿಗೆಯನ್ನು ನಿಯಂತ್ರಿಸಲು ಹಾರ್ಮೋನ್‌ಗಳ ಒಂದು ಜಾಲ ಏರ್ಪಡುತ್ತದೆ.

ಈ ಹಾರ್ಮೋನ್‌ಗಳನ್ನು ದೇಹದ ನಿರ್ನಾಳಗ್ರಂಥಿಗಳು ಸ್ರವಿಸುತ್ತವೆ. ಈ ಎಲ್ಲಾ ಚೋದಕಗಳ ಬಿಡುಗಡೆಯನ್ನು ಮೆದುಳಿನಲ್ಲಿರುವ ಪಿಟ್ಯುಟರಿ ಗ್ರಂಥಿ ನಿಯಂತ್ರಿಸುತ್ತದೆ. ಗರ್ಭಾವಧಿಯಲ್ಲಿ ಪ್ರೊಜೆಸ್ಟರಾನ್ ಎಂಬ ಹಾರ್ಮೋನ್ ಬಿಡುಗಡೆಯಾಗುತ್ತದೆ. ಇದು ಅಂಡಾಶಯ ಹಾಗು ಪಿಟ್ಯುಟರಿ ಗ್ರಂಥಿಗಳಿಂದ ಬಿಡುಗಡೆಯಾಗುವ ಹಾರ್ಮೋನ್‌ಗಳನ್ನು ನಿಯಂತ್ರಿಸುತ್ತದೆ. ಮಿದುಳಿನ ಭಾಗದ ಹೈಪೋಥಲಮಸ್ ಎಲ್ಲ ಹಾರ್ಮೋನ್‌ಗಳನ್ನು ನಿಯಂತ್ರಿಸುತ್ತದೆ. ಹಾರ್ಮೋನ್ ಜಾಲದ ಅಂಗಗಳು ಒಂದಕ್ಕೊಂದು ಪೂರಕವಾಗಿ ಹತೋಟಿ ಮತ್ತು ಪ್ರಭಾವಗಳನ್ನು ಬೀರುವುದರ ಮೂಲಕ ಗರ್ಭಧಾರಣೆಯ ಕ್ರಿಯೆಗಳನ್ನು ನಿಯಂತ್ರಿಸುತ್ತವೆ. ಇದೇ ಅವಧಿಯಲ್ಲಿ ತಾಯಿಯ ದೇಹದಿಂದ ಹೊರಬಂದ ಅನಂತರ ಶಿಶುವಿಗೆ ಬೇಕಾದ ಆಹಾರವಾದ ಹಾಲಿನ ವ್ಯವಸ್ಥೆಯೂ ಸಹ ತಾಯಿಯ ದೇಹದಲ್ಲಿಯೇ ನಡೆಯುತ್ತದೆ.

ಗರ್ಭಾವಧಿಯಲ್ಲಿ ಭ್ರೂಣದ ಸುತ್ತ ಮೂರು ಪದರಗಳಿದ್ದು ಅದಕ್ಕೆ ಸಂಪೂರ್ಣ ರಕ್ಷಣೆಯಿರುತ್ತದೆ. ಈ ಅವಧಿಯಲ್ಲಿ ಗರ್ಭಾಶಯದ ಗಾತ್ರ ಭ್ರೂಣದ ಗಾತ್ರದೊಂದಿಗೆ ಹಿಗ್ಗುತ್ತದೆ. ತಾಯಿಯ ಸ್ತನಗ್ರಂಥಿಗಳಲ್ಲಿಯೂ ಕೂಡ ಬದಲಾವಣೆಯಾಗಿ ಅವುಗಳ ಗಾತ್ರವೂ ಹಿಗ್ಗುತ್ತದೆ. ಪ್ರಸವವಾಗುವ ವೇಳೆಗೆ ಸ್ತನಗಳಿಂದ ಹಾಲು ಉತ್ಪತ್ತಿಯಾಗುವಂತೆ ಹಾರ್ಮೋನ್‌ಗಳಿಂದ ಪ್ರಚೋದನೆಯಾಗುತ್ತದೆ.

ಮನುಷ್ಯನಲ್ಲಿ ಗರ್ಭಾವಧಿ 9 ತಿಂಗಳು. ಎಂಟನೆಯ ವಾರದ ಅನಂತರ ಬೆಳೆಯುತ್ತಿರುವ ಅಂಡಾಣುವನ್ನು ಭ್ರೂಣ ಎನ್ನಲಾಗುತ್ತದೆ. 12 ವಾರಗಳ ಭ್ರೂಣ 8 ಸೆಂಮೀ ಉದ್ದವಾಗಿದ್ದು ಅತಿ ಪುಟ್ಟ ಮನುಷ್ಯನನ್ನು ಹೋಲುತ್ತದೆ. ಕೈ, ಪಾದಗಳು, ಕಣ್ಣು ಮತ್ತು ಕಿವಿಗಳನ್ನು ಹೊಂದಿದ್ದು ತಾಯಿಯ ಗರ್ಭಾಶಯದಲ್ಲಿ ಚಲಿಸಬಲ್ಲುದು. 12 ವಾರಗಳ ಅನಂತರ ಸಂಪೂರ್ಣ ಬೆಳವಣಿಗೆ ಹೊಂದಿರದಿದ್ದರೂ ಜನಿಸಿದಲ್ಲಿ ಉಳಿಯಬಲ್ಲ ಸಾಮರ್ಥ್ಯ ಪಡೆದಿರುತ್ತದೆ. ಗರ್ಭಾವಧಿ ಮುಗಿಯುತ್ತಾ ಬಂದಂತೆ ಶಿಶುವಿನ ತಲೆ ಯೋನಿ ದ್ವಾರದ ಕಡೆಗೆ ತಿರುಗುತ್ತದೆ ಹಾಗೂ ಪ್ರಸವ ಕ್ರಿಯೆಗೆ ಸನ್ನದ್ಧವಾಗುತ್ತದೆ. ಈ ಕ್ರಿಯೆಯೂ ಮತ್ತೊಮ್ಮೆ ಹಾರ್ಮೋನ್‌ಗಳ ಪ್ರಭಾವಕ್ಕೆ ಒಳಗಾಗುತ್ತದೆ. ಗರ್ಭಾವಧಿಯ ಉದ್ದಕ್ಕೂ ಇರುವ ಪ್ರೊಜೆಸ್ಟರಾನ್ ಸ್ರವಿಕೆ ನಿಲ್ಲುತ್ತದೆ. ಋತುಚಕ್ರವನ್ನು ಪ್ರಚೋದಿಸುವ ಸ್ತ್ರೀ ಹಾರ್ಮೋನ್ ಅಥವಾ ಎಸ್ಟ್ರೋಜನ್‌ನ ಸ್ರವಿಸುವಿಕೆ ಒಮ್ಮಿಂದೊಮ್ಮೆಲೇ ಆರಂಭವಾಗುತ್ತದೆ. ಗರ್ಭಾಶಯದ ಕಂಠ ಹಾಗೂ ಯೋನಿದ್ವಾರ 10 ಸೆಂಮೀ ನಷ್ಟು ಹಿಗ್ಗಿ ಶಿಶುವಿನ ತಲೆಯ ಭಾಗ ಹೊರಬರಲು ಅನುವು ಮಾಡಿಕೊಡುತ್ತದೆ. ಸೊಂಟದ ಭಾಗದ ಸ್ನಾಯುಗಳೂ ಸಂಕೋಚನೆ ವ್ಯಾಕೋಚನೆಗೊಂಡು ಶಿಶುವನ್ನು ಯೋನಿದ್ವಾರದ ಸಂಕೋಚನೆ ಮುಖಾಂತರ ಹೊರದೂಡುತ್ತವೆ. ಅನಂತರ ಶಿಶುವನ್ನು ಆವರಿಸಿದ್ದ ಜರಾಯ (ಪ್ಲಾಸೆಂಟಾ) ಸಹ ಹೊರಬರುತ್ತದೆ. ಇಲ್ಲಿಯವರೆಗೆ ಮಗು ಮತ್ತು ಪ್ಲಾಸೆಂಟಾ ನಡುವಿನ ಹೊಕ್ಕಳು ಬಳ್ಳಿ ಹಾಗೆಯೇ ಇರುತ್ತದೆ. ಅನಂತರ ಅದನ್ನು ಕತ್ತರಿಸಿ ತೆಗೆಯಲಾಗುತ್ತದೆ ಹಾಗೂ ಇದು ಶಿಶುವಿನ ದೇಹದ ಮೇಲೆ ಹೊಕ್ಕಳಾಗಿ ಕುರುಹನ್ನು ಉಳಿಸುತ್ತದೆ. ಇಲ್ಲಿಗೆ ಗರ್ಭಾವಧಿ ಮುಕ್ತಾಯವಾಗುತ್ತದೆ. ಗರ್ಭಾವಧಿ ದೀರ್ಘವಾದಷ್ಟು ಬೆಳವಣಿಗೆ ಪೂರ್ತಿಯಾಗಿರುತ್ತದೆ.

ಪಟ್ಟಿಕೆ: ಕೆಲ ಪ್ರಾಣಿಗಳಲ್ಲಿ ಗರ್ಭಾವಧಿ ಕೆಳಗಿನಂತಿದೆ;

| ಕ್ರ.ಸಂ. | ಪ್ರಭೇದ | ಗರ್ಭಾವಧಿ (ದಿನಗಳಲ್ಲಿ) |
|---|---|---|
| 1. | ಓಪೊಸಂ | 12 |
| 2. | ಕಾಂಗರು | 33 |
| 3. | ಕೋಆಲಾಕರಡಿ | 35 |
| 4. | ಆಪೋಸಂ | 12 |
| 5. | ಬಾವಲಿ | 50–60 |
| 6. | ಗೊರಿಲ್ಲಾ | 251–289 |
| 6. | ಚಿಂಪಾಂಜಿ | 196–260 |
| 7. | ಒರಾಂಗು ಟಾನ್‌ಗ್ | 275 |
| 8. | ಗಿಬ್ಬನ್ | 210 |
| 9. | ಕೋತಿ | 160–179 |
| 10. | ಮಾನವ | 270–280 |
| 11. | ಆರ್ಮಡಿಲ್ಲೋ | 120–150 |
| 12. | ಮೊಲ | 30 |
| 13. | ಅಳಿಲು | 30–45 |
| 14. | ಮನೆ ಇಲಿ | 19 |
| 15. | ಗಿನಿ ಹಂದಿ | 68–71 |
| 16. | ತಿಮಿಂಗಿಲ | 480 |
| 17. | ನಾಯಿ | 53–78 |
| 18. | ಬೆಕ್ಕು | 52–69 |
| 19. | ಸಿಂಹ | 195 |
| 20. | ಚಿರತೆ | 90 |
| 21. | ಕುದುರೆ | 329–3545 |
| 22. | ಜೀಬ್ರಾ | 365 |
| 23. | ಖಡ್ಗಮೃಗ | 540 |
| 24. | ಹಂದಿ | 112–116 |
| 25. | ಒಂಟೆ | 370–440 |
| 26. | ಜಿರಾಫೆ | 450 |
| 27. | ಕತ್ತೆ | 365–380 |
| 28. | ಕಾಡೆಮ್ಮೆ | 270–285 |
| 29. | ಹಸು | 270 |
| 30. | ಆಡು | 140–160 |
| 31. | ಕುರಿ | 144–160 |
| 32. | ಆನೆ | 630 |

(ಎಸ್.ಎಂ.ಜಿ.)

**ಗರ್ಭಾವಸ್ಥೆ:** ಗರ್ಭಕೋಶದಲ್ಲಿ ಮಗು ಬೆಳೆಯುವ ಸ್ಥಿತಿ (ಪ್ರೆಗ್ನೆನ್ಸಿ). ಬಸಿರು ಪರ್ಯಾಯನಾಮ. ಈ ಸ್ಥಿತಿಯಲ್ಲಿರುವ ಸ್ತ್ರೀಗೆ ಗರ್ಭಿಣಿ ಅಥವಾ ಬಸುರಿ, ಬಿಮ್ಮನಸೆ ಎಂಬ ಹೆಸರುಗಳಿವೆ. ಅಂಡಾಣು ಮತ್ತು ವೀರ್ಯಾಣುಗಳ ಮಿಲನದಿಂದ ಗರ್ಭಾವಸ್ಥೆ ಪ್ರಾರಂಭವಾಗುತ್ತದೆ. ಭ್ರೂಣ ತಾಯಿಯ ಗರ್ಭಕೋಶದಲ್ಲಿದ್ದುಕೊಂಡು ಬೆಳೆದು ಶಿಶುವಿನ ರೂಪ ತಾಳಿ ಜನಿಸುವವರೆಗೂ ಗರ್ಭಾವಸ್ಥೆಯ ಅವಧಿ ಉಂಟು. ನಿರೀಕ್ಷಿತ ಕಾಲದಲ್ಲಿ ಮತ್ತು ಮುಂದೆಯೂ ಮುಟ್ಟಾಗದೆ ಹೋಗುವುದು, ನಾಲ್ಕಾರು ವಾರಗಳ ಬಳಿಕ ಬೆಳಿಗ್ಗೆ ಎದ್ದಾಗಲೆ ವಾಕರಿಕೆ, ಸ್ತನಗಳ ವೃದ್ಧಿ, ಮೊಲೆತೊಟ್ಟು ಕಪ್ಪು ವರ್ಣಕ್ಕೆ ತಿರುಗುವುದು, ಹೊಟ್ಟೆ ದಪ್ಪವಾಗುತ್ತ ಬರುವುದು, ಗರ್ಭಕೋಶದೊಳಗೆ ಮಗುವಿನ ಚಲನದಿಂದ ಆಗುವ ಅನುಭವ ಇವು ಕಂಡುಬಂದು ಸಾಮಾನ್ಯವಾಗಿ ಮುಟ್ಟು ನಿಂತ 40 ವಾರಗಳ ತರುವಾಯ (ಹತ್ತು ಚಾಂದ್ರಮಾನ ತಿಂಗಳು) ಶಿಶುವಿನ ಜನನವಾಗುತ್ತದೆ.

ಸಂಭೋಗ ಕ್ರಿಯೆಯಿಂದ ವೀರ್ಯ ಯೋನಿ ಸೇರಿದ ಸಮಯದಲ್ಲಿ ಅಂಡಾಣು ಗರ್ಭ ಡಿಂಬನಾಳದೊಳಗಿದ್ದರೆ (ಫೆಲೋಪಿಯನ್ ಟ್ಯೂಬ್) ಅಥವಾ 12–24 ಗಂಟೆಗಳ ಒಳಗೆ ಅದು ಬರುವ ಹಾಗಿದ್ದರೆ ಮಾತ್ರ ಅದರೊಡನೆ ಪುರುಷಾಣುವಿನ ಮಿಲನ ಸಾಧ್ಯ. ಪ್ರತಿ ಸಂಭೋಗ ಕ್ರಿಯೆಯೂ ಸ್ತ್ರೀಯಲ್ಲಿ ಗರ್ಭಾವಸ್ಥೆಯನ್ನು ಉಂಟುಮಾಡದೆ ಇರುವುದಕ್ಕೂ ಸಾಮಾನ್ಯವಾಗಿ ಮಾಸಿಕಚಕ್ರದ ಸುಮಾರು ಮಧ್ಯಕಾಲದಲ್ಲಿ ಮಾತ್ರ ಸಂಭೋಗದಿಂದ ಗರ್ಭಧಾರಣೆಯಾಗುವುದಕ್ಕೂ ಇದೇ ಕಾರಣ. ಸ್ತ್ರೀಯರಲ್ಲಿ ಪ್ರತಿ ತಿಂಗಳೂ (28 ದಿವಸಗಳ ಚಾಂದ್ರಮಾನ ತಿಂಗಳು) ಒಂದು ಅಂಡಾಣು ಅಂಡಾಶಯದಿಂದ ಹೊರಬೀಳುತ್ತದೆ. ಮೇಲೆ ಹೇಳಿದಂತೆ 12–24 ಗಂಟೆಗಳ ಒಳಗೆ ಅದು ಪುರುಷಾಣುವಿನೊಡನೆ ಮಿಲನಗೊಂಡರೆ ಆಗ ಗರ್ಭಾವಸ್ಥೆಯುಂಟಾಗುತ್ತದೆ. ಇಲ್ಲದಿದ್ದರೆ ಅಂಡಾಣು ನಿಧಾನವಾಗಿ ಮುಂದಕ್ಕೆ ನೂಕಲ್ಪಡುತ್ತ ಗರ್ಭಕೋಶವನ್ನು ತಲುಪಬಹುದು. ಆಮೇಲೆ ಅಥವಾ ಇನ್ನೂ ಮುಂಚೆ ಅದು ನಶಿಸಿಹೋಗುತ್ತದೆ. ಇಂಥ ಸನ್ನಿವೇಶದಲ್ಲಿ ಅಂಡಾಣು ಅಂಡಾಶಯದಿಂದ ಹೊರಬಿದ್ದ 14 ದಿವಸಗಳ ತರುವಾಯ ಸ್ತ್ರೀಯಲ್ಲಿ ರಜಸ್ರಾವವಾಗುತ್ತದೆ. ಗರ್ಭಾವಸ್ಥೆ ಉಂಟಾದರೆ ರಜಸ್ರಾವವಾಗುವುದಿಲ್ಲ. ಆದ್ದರಿಂದ ಹೆಂಗಸು ಮುಟ್ಟಾಗುವುದು ಆಕೆ ಬಸಿರಾಗದೆ ಹೋದುದರ ಸೂಚನೆ ಮತ್ತು ಪರಿಣಾಮವಾಗಿರುತ್ತದೆ. ಹೆಂಗಸಿನ ಜೀವಮಾನದಲ್ಲಿ ಗರ್ಭಧಾರಣಾಸಾಮರ್ಥ್ಯ ಸುಮಾರು 15ನೆಯ ವರ್ಷದಿಂದ ಸುಮಾರು 50ನೆಯ ವರ್ಷ ವಯಸ್ಸಿನ ತನಕ ಕಾಣಬರುತ್ತದೆ. ಅಂದರೆ ಹುಡುಗಿ ಮೈನೆರೆದು ಪ್ರೌಢಳಾದಾಗಿನಿಂದ ವಯಸ್ಕ ಹೆಂಗಸಿನಲ್ಲಿ ಮುಟ್ಟು ನಿಲ್ಲುವತನಕ ಸಂತಾನ ಪ್ರಾಪ್ತಿ. ರಜಸ್ರಾವಕ್ಕೂ, ಗರ್ಭಧಾರಣೆ ಗರ್ಭಾವಸ್ಥೆಗಳಿಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕಾದರೆ ಹೆಂಗಸಿನಲ್ಲಿ ಪ್ರಜನನ ಕ್ರಿಯೆಯ ಸ್ಥೂಲಪರಿಚಯವಿರಬೇಕು.

ಪ್ರಜನನ ಕ್ರಿಯೆ ಜನನಾಂಗಗಳಿಂದ ಜರುಗಿಸಲ್ಪಡುವ ದೇಹಕಾರ್ಯ. ಸ್ತ್ರೀಯಲ್ಲಿ ಪ್ರಧಾನ ಜನನಾಂಗಗಳೆಂದರೆ ಕಿಬ್ಬೊಟ್ಟೆಯಲ್ಲಿರುವ (ಪೆಲ್ವಿಕ್ ಕ್ಯಾವಿಟಿ) ಎಡ ಮತ್ತು ಬಲ ಅಂಡಾಶಯಗಳು ಮತ್ತು ಅವುಗಳ ನಡುವೆ ಇರುವ ಗರ್ಭಕೋಶ. ಅಂಡಾಶಯಗಳ ಸನಿಹದಲ್ಲಿ ಪ್ರಾರಂಭವಾಗುವ ಗರ್ಭಡಿಂಬನಾಳಗಳು ಗರ್ಭಕೋಶವನ್ನು ಸೇರುತ್ತವೆ. ಗರ್ಭಕೋಶ ಗೇರುಹಣ್ಣಿನ ಆಕಾರದಲ್ಲಿರುತ್ತದೆ. ಅದರ ಕಂಠವು ಯೋನಿಯೊಳಕ್ಕೆ ಚಾಚಿಕೊಂಡಿರುತ್ತದೆ. ಯೋನಿಗೆ ಸಂಪರ್ಕವನ್ನು ಉಂಟುಮಾಡುವ ಭಾಗವಿದು. ಅಲ್ಲದೇ ಇದು ಗರ್ಭಕೋಶದೊಳಕ್ಕೂ ಹೊರಗಡೆಗೂ ಸಂಪರ್ಕವನ್ನು ಉಂಟುಮಾಡುತ್ತದೆ.

ಪ್ರತಿ ರಜಸ್ರಾವವಾದ ಅನಂತರ ಅಂಡಾಶಯದಲ್ಲಿ ಅಂಡಾಣು ಮತ್ತು ಗರ್ಭಕೋಶದ ಬೆಳವಣಿಗೆ 14 ದಿನಗಳವರೆಗೆ ಆಗಿ, ಅಂಡಾಣುವಿನ ವಿಸರ್ಜನೆಯಾದಾಗ ಗರ್ಭಕೋಶವು ಪೂರ್ಣ ಬೆಳೆದಿರುತ್ತದೆ. ಗ್ರಂಥಿಗಳು, ರಕ್ತನಾಳಗಳು ಮುಂತಾದುವು. ಅಂಡಾಣು ನಿಷೇಚನ ಹೊಂದಿದರೆ, ಗರ್ಭಕೋಶವು ಅದನ್ನು ಸ್ವೀಕರಿಸಿದಾಗ ಗರ್ಭಾವಸ್ಥೆ ಉಂಟಾಗಿ, ಭ್ರೂಣದ ಬೆಳವಣಿಗೆಯಾಗುತ್ತದೆ. ಒಂದು ವೇಳೆ ನಿಷೇಚನವಾಗದಿದ್ದರೆ, ಗರ್ಭಕೋಶದಲ್ಲಿ ಬೆಳೆದಿರುವ ಅಂಗಾಂಶಗಳು ಹಾಗು ರಕ್ತನಾಳಗಳು ನಾಶಹೊಂದಿ, ರಕ್ತ ಮತ್ತು ತಾಜ್ಯ ಅಂಗಾಂಶಗಳು ಯೋನಿಯಿಂದ ಹೊರಬರುತ್ತವೆ. ಇದೇ ಋತುಸ್ರಾವ. ಇದಾದ ಅನಂತರ ಮತ್ತೆ ಇನ್ನೊಂದು ಋತು ಚಕ್ರ ಪ್ರಾರಂಭವಾಗಿ ಅಂಡಾಣು ಮತ್ತು ಗರ್ಭಕೋಶಗಳ ಬೆಳವಣಿಗೆ ಪ್ರಾರಂಭವಾಗುತ್ತವೆ. ಈ ಪ್ರಕಾರ, ಹೆಣ್ಣು ಋತು ಮತಿಯಾದಾಗಿನಿಂದ ಮುಟ್ಟು ನಿಲ್ಲುವ ವರೆಗೆ ಪ್ರತಿ ಚಕ್ರದಲ್ಲಿಯೂ ಗರ್ಭಕೋಶದ ಬೆಳವಣಿಗೆ, ಅಂಡಾಣು ಫಲಿತವಾಗದಿದ್ದರೆ, ಗರ್ಭಾಶಯದ ಹೆಚ್ಚಿನ ಬೆಳವಣಿಗೆ ನಾಶ ಹಾಗು ಋತುಸ್ರಾವ ಜರುಗುತ್ತಲಿರುತ್ತವೆ. ಅಂದರೆ, ಪ್ರತಿ ಋತು ಚಕ್ರದಲ್ಲಿ ಗರ್ಭಾಶಯ ಬೆಳವಣಿಗೆ ಹೊಂದಿ, ಗರ್ಭಾವಸ್ಥೆಯನ್ನು ಹೊಂದುವ ಪ್ರಯತ್ನವಿರುತ್ತದೆ.

ಒಂದು ವೇಳೆ, ಅಂಡಾಣು ವಿಸರ್ಜನೆಯಾದ ಸಮಯದಲ್ಲಿ, ಗರ್ಭಕೋಶದಲ್ಲಿ ವೀರ್ಯಾಣುಗಳು ಪ್ರವೇಶಿಸಿದರೆ (ಸಂಭೋಗದಲ್ಲಿ ಸ್ಖಲನದಿಂದ ಅಥವಾ ಕೃತ್ರಿಮವಾಗಿ) ಅಂಡಾಣು ನಿಷೇಚನ (ಫರ್ಟಿಲೈಸ್) ಹೊಂದಿ, ಭ್ರೂಣವಾಗಿ ಬೆಳೆದು ಗರ್ಭಕೋಶವನ್ನು ಸೇರಿ, ಗರ್ಭಾವಸ್ಥೆ ಉಂಟಾಗಿ, 40 ವಾರಗಳವರೆಗೆ ಮಗುವಿನ ಬೆಳವಣಿಗೆಯಾಗುವುದು.

ಗರ್ಭಾಶಯವು ಪ್ರೊಜೆಸ್ಟಿರೊನ್ ಹಾಗು ಎಸ್ಟ್ರೊಜನ್ ಹಾರ್ಮೋನ್‌ಗಳ ಪ್ರಭಾವದಲ್ಲಿ ಬೆಳೆದು, ಭ್ರೂಣವನ್ನು ಸ್ವೀಕರಿಸಿ, ಅದರ ಮುಂದಿನ ಬೆಳವಣಿಗೆಗೆ ಸಹಾಯಕವಾಗಿದೆ. ಗರ್ಭಾಶಯದ ಕೆಲವು ಅಂಡಾಣುಗಳು ಹಾಗು ಭ್ರೂಣದ ಅಂಗಾಂಶಗಳಿಂದ ಜರಾಯು (ಪ್ಲಾಸಂಟ) ಉತ್ಪತ್ತಿಯಾಗಿ ಅದು ತಾಯಿ ಮತ್ತು ಭ್ರೂಣದ ಮಧ್ಯೆ ಅನೇಕ ವಸ್ತುಗಳ (ಆಹಾರ, ಪೋಷಕಾಂಶ, ಆಮ್ಲಜನಕ) ವಿನಿಮಯಕ್ಕೆ ಸಹಾಯಕವಾಗುತ್ತದೆ. ಇವಲ್ಲದೆ ಜರಾಯು ಒಂದು ತಡೆಗೋಡೆಯಂತೆ ವರ್ತಿಸಿ ತಾಯಿಯ ರಕ್ತದಲ್ಲಿರಬಹುದಾದ ಅನೇಕ ಹಾನಿಕಾರಕ ವಸ್ತುಗಳಿಂದ ಭ್ರೂಣವನ್ನು ರಕ್ಷಿಸುತ್ತದೆ. ಗರ್ಭಾವಸ್ಥೆ ಮುಂದುವರೆಯಲು ಪೊಜೆಸ್ಟಿರಾನ್ ಅತ್ಯವಶ್ಯಕ. ಕಾರಣ ಈ ಹಾರ್ಮೋನನ್ನು ಗರ್ಭಾವಸ್ಥೆಯ ಹಾರ್ಮೋನು ಎಂದು ಕರೆಯಲಾಗಿದೆ. ಅಂಡಾಶಯ ಹಾಗು ಜರಾಯು ಎರಡೂ ಅಂಗಗಳು, ಇದನ್ನು ಸ್ರವಿಸುತ್ತವೆ. ಗರ್ಭಾವಸ್ಥೆ ಅವಧಿ ಮುಗಿದ ಮೇಲೆ (ಮನುಷ್ಯರಲ್ಲಿ 40ವಾರಗಳು) ಪ್ರೊಜೆಸ್ಟಿರಾನ್ ಪ್ರಭಾವ ಹಠಾತ್ತಾನೆ ನಿಂತು ಹೋಗಿ, ಹಿಂಬಾಗದ ಪಿಟ್ಯುಟರಿ ಗ್ರಂಥಿ ಸ್ರವಿಸುವ ಆಕ್ಸಿಟೊಸಿನ್ ಹಾರ್ಮೊನ್ ಪ್ರಭಾವದಿಂದ ಗರ್ಭಾಶಯ ಸಂಕುಚಿಸಿ ಶಿಶುವಿನ ಜನನವಾಗುತ್ತದೆ. ಪ್ರೊಜೆಸ್ಟಿರಾನ್ ಅಲ್ಲದೆ, ಇತರ ಹಾರ್ಮೊನುಗಳು ಕೂಡ ಗರ್ಭಾವಸ್ಥೆಯ ಮುಂದುವರಿಕೆಗೆ ಕಾರಣವಾಗಿವೆ (ಕೊರಿಯಾನಿಕ್ ಗೊನೆಡೊಟ್ರೊಫಿನ್, ಕಾರ್ಟಿಕೊ ಸ್ಟಿರಾಯಿಡ್, ಮುಂತಾದುವು)

ಗರ್ಭಿಣಿಯರಲ್ಲಿ ಮಾನಸಿಕ ವ್ಯಾಪಾರಗಳು ಸ್ವಲ್ಪಮಟ್ಟಿಗೆ ಏರುಪೇರಾಗುತ್ತವೆ. ಸ್ವಲ್ಪ ಕಿರಿಕಿರಿ–ಶೀಘ್ರ ಕೋಪ–ಸೂಕ್ಷ್ಮಮನಸ್ಕರಾಗಿರುತ್ತಾರೆ. ಕ್ಷಯ ರೋಗಿಗಳು ಗರ್ಭಿಣಿಯರಾದಾಗ ಅವರಲ್ಲಿ ರೋಗದ ಉಲ್ಬಣ ಕೆಳಮಟ್ಟದಲ್ಲಿದ್ದರೆ ಗರ್ಭಾವಸ್ಥೆ ಕೊನೆಗೊಂಡ ಮೇಲೆ ರೋಗ ತೀಕ್ಷ್ಣತರವಾಗುತ್ತದೆ. ಬಲಹೀನ, ರೋಗಿಷ್ಠ ಸೂಕ್ಷ್ಮವ್ಯಕ್ತಿಗಳು, ಅತಿ ಚಿಕ್ಕ ವಯಸ್ಸಿನವರು ಮತ್ತು ಅತಿ ಹೆಚ್ಚು ವಯಸ್ಕರು ಗರ್ಭಿಣಿಯರಾದರೆ ಗರ್ಭಾವಸ್ಥೆಯಲ್ಲಿ ಅವರು ಅನೇಕ ಪಿಡುಗುಗಳನ್ನು ಅನುಭವಿಸಬೇಕಾಗುತ್ತದೆ. ಹೊಟ್ಟೆ ತೊಳಸು, ವಾಂತಿ, ಕೆಲವು ಬಯಕೆ, ಹಲ್ಲುನೋವು, ಕೆಮ್ಮು, ಗರ್ಭಕಾಲದ ಪ್ರಾರಂಭಿಕ ಮೂರು ತಿಂಗಳು ಮತ್ತು ಕೊನೆಯ ತಿಂಗಳು ಮೂತ್ರವಿಸರ್ಜನೆಯಲ್ಲಿ ತೊಂದರೆ, ಕಾಲಿನ ಅಭಿಧಮನಿಗಳು ಊದಿಕೊಂಡು ಕಾಲು ತೊಡೆಗಳಲ್ಲಿ ಊತ, ನೋವು ಉಂಟಾಗುವುದು, ಇತ್ಯಾದಿ ಅವರ ಗರ್ಭಾವಸ್ಥೆಯಲ್ಲಿ ಕಂಡುಬರುತ್ತದೆ.

ಗರ್ಭಾವಸ್ಥೆಯಲ್ಲಿ ಸ್ವಾಭಾವಿಕ ಶಾರೀರಿಕ ಬದಲಾವಣೆಗಳು: ಬೆಳೆಯುವ ಭ್ರೂಣಕ್ಕೆ ಅಗತ್ಯವಾದ ಆಹಾರ ಸಾಮಗ್ರಿಗಳನ್ನು, ಉಷ್ಣತೆಯುಳ್ಳ ಸ್ಥಳವನ್ನು ಗರ್ಭಾವಸ್ಥೆ ಅನುಕೂಲವಾಗಿ ಒದಗಿಸುವುದೆ ಅಲ್ಲದೆ ಮುಂದಕ್ಕೆ ಬೇಕಾಗಬಹುದಾದ ಶಾರೀರಿಕ ಬದಲಾವಣೆಗಳನ್ನೂ ಉಂಟುಮಾಡುತ್ತದೆ. ಗರ್ಭಕೋಶ ದೊಡ್ಡದಾಗುವುದು, ಅದರೊಳಗಿರುವ ಭ್ರೂಣದ ಬೆಳವಣಿಗೆಯಿಂದ ಅದು ಹಿಗ್ಗುವುದು ಮಾತ್ರವಲ್ಲದೆ ತಾನೇ ಸ್ವತಃ ದೊಡ್ಡದಾಗಿ ದೃಢವಾಗುತ್ತದೆ. ಇದರಿಂದ ಗರ್ಭಕೋಶ ಸಕಾಲದಲ್ಲಿ ಸಂಕುಚಿಸಿ ಶಿಶುಜನನವಾಗುವುದಕ್ಕೆ ಅನುಕೂಲವಾಗುವುದು. ಉದರ ಮತ್ತು ಕಿಬ್ಬೊಟ್ಟೆಯ ಮುಂದಿನ ಭಿತ್ತಿಯ ಸ್ನಾಯುಗಳ ವೃದ್ಧಿ ಮತ್ತು ಮೂಳೆಗಳ ಕಟ್ಟು ಹಿಗ್ಗಿದಂತಾಗುವುದೂ ಹೆರಿಗೆಗೆ ಅನುಕೂಲವಾಗುವ ಬದಲಾವಣೆಗಳು. ಸ್ತನಗಳ ವೃದ್ಧಿ ಮತ್ತು ಸ್ರವಿಸುವ ಸಾಮರ್ಥ್ಯವೂ ಗರ್ಭಾವಸ್ಥೆಯಲ್ಲಿ ಕಂಡುಬರುತ್ತದೆ. ಇದು ಮುಂದೆ ಹುಟ್ಟುವ ಮಗುವಿಗೆ ಹಾಲೂಡಿಸಿ ಸಂರಕ್ಷಿಸಲು ಆಗಿರುವ ಏರ್ಪಾಡು. ಗರ್ಭಾವಸ್ಥೆಯಲ್ಲಿ ವ್ಯಕ್ತಿಯ ತೂಕದ ಹೆಚ್ಚಳ ಸುಮಾರು 11–12 ಕಿಗ್ರಾಂ ವೃದ್ಧಿಗೊಂಡ ಗರ್ಭಕೋಶ, ಅದರೊಳಗಿರುವ ಮಗು, ಸ್ತನಗಳು ಎಲ್ಲ ಸುಮಾರು 5–6 ಕಿಗ್ರಾಂ ತೂಕಕ್ಕೆ ಕಾರಣ. ಉಳಿದ 5–6 ಕಿಗ್ರಾಂ ತೂಕದ ಹೆಚ್ಚಳ ದೇಹದಲ್ಲಿ ದ್ರವಾಂಶ ಹೆಚ್ಚಿ ಶೇಖರಣೆ ಆಗುವುದರಿಂದ ಪರಿಣಮಿಸುತ್ತದೆ. ರಕ್ತ ಸಹಜ ಪ್ರಮಾಣಕ್ಕಿಂತ 1/3ರಷ್ಟು ಹೆಚ್ಚಾಗಿದ್ದು ಕಣಗಳಿಗಿಂತ ದ್ರವಾಂಶ ಜಾಸ್ತಿಯಾಗಿರುವುದರಿಂದ ಸಹಜವಾಗಿಯೆ ಗರ್ಭಾವಸ್ಥೆಯಲ್ಲಿ ರಕ್ತವರ್ಣಹೀನತೆ ಕಂಡುಬಂದು ಸ್ವಾಭಾವಿಕ ಪ್ರಮಾಣದ 87% ರಷ್ಟು ಮಾತ್ರ ಹಿಮೋಗ್ಲೊಬಿನ್ ಇರುತ್ತದೆ. ಗರ್ಭಾವಸ್ಥೆ ಕೊನೆಗೊಂಡಾಗ ಶರೀರ ತೂಕ ಸಹಜಮಟ್ಟಕ್ಕೆ ಸಾಮಾನ್ಯವಾಗಿ ಬಂದರೂ ಕೆಲವು ವೇಳೆ ತೂಕದ ಹೆಚ್ಚಳ ಪ್ರಸವಕಾಲದಿಂದ ಗಣನೆಗೆ ಬರುವಂತೆ ಸ್ಥೂಲಕಾಯವಾಗಿ ನಿಂತುಬಿಡಬಹುದು.

ಗರ್ಭಾವಸ್ಥೆಯ ಪ್ರಾರಂಭವನ್ನು ಅನೇಕ ವಿಧದಿಂದ ಗುರುತಿಸಬಹುದು. ಅಂಡಾಣು ಅಂಡಕೋಶದಿಂದ ಹೊರಬಿದ್ದ ದಿವಸ ಸ್ತ್ರೀಯರಲ್ಲಿ ಮುಂಜಾನೆ ದೇಹದ ಉಷ್ಣತೆ ಹಠಾತ್ತನೆ ಸ್ವಲ್ಪ ತಗ್ಗಿ ಆಮೇಲೆ ಮುಂಚಿಗಿಂತ ಸ್ವಲ್ಪ ಹೆಚ್ಚಿನ ಮಟ್ಟಕ್ಕೆ ಏರಿ ಮುಂದಿನ ದಿವಸಗಳಲ್ಲಿ ಆ ಹೊತ್ತಿನಲ್ಲಿ ಅದೇ ಏರಿದ ಮಟ್ಟದಲ್ಲಿ ಇರುತ್ತದೆ. ಅಂಡಾಣು ಅಂಡಕೋಶದಿಂದ ಹೊರಬಿದ್ದ 22–24 ಗಂಟೆಗಳಲ್ಲಿ ಗರ್ಭಾವಸ್ಥೆ ಪ್ರಾರಂಭವಾಗಿರಬೇಕೆನ್ನುವುದು ವ್ಯಕ್ತಪಟ್ಟಿದೆ. ಆದ್ದರಿಂದ ಮುಂಜಾವಿನ ಶರೀರೋಷ್ಣತೆಯನ್ನು ಕ್ಲುಪ್ತವಾಗಿ ನೋಡುತ್ತಿದ್ದರೆ ಅದರ ವ್ಯತ್ಯಾಸದಿಂದ ಅಂಡಾಣು ಹೊರಬಿದ್ದ ದಿನವನ್ನು, ಅರ್ಥಾತ್ ಗರ್ಭಾವಸ್ಥೆಯ ಪ್ರಾರಂಭವನ್ನು, ಪತ್ತೆಮಾಡಬಹುದು. ಶರೀರೋಷ್ಣತಾ ವ್ಯತ್ಯಾಸ ಸ್ವಲ್ಪವೇ ಆದರೂ ($0.5^0$ ಸೆ.) ಅದು ಖಚಿತವಾಗಿ ಆಗುತ್ತದಾದ್ದರಿಂದ ಈ ರೀತಿಯ ಗಣನೆ ಕಷ್ಟವಾಗುವುದಿಲ್ಲ. ಆ ದಿವಸದಿಂದ ಗರ್ಭಾವಸ್ಥೆ ಸಾಮಾನ್ಯವಾಗಿ 266 ದಿವಸಗಳು ಅಂದರೆ 9 1/2 ತಿಂಗಳು (ಚಾಂದ್ರಮಾನ) ಕಾಲ ವ್ಯಾಪ್ತಿಯುಳ್ಳದ್ದಾಗಿರುತ್ತದೆ. ಆದರೆ ಬೇರೆ ಬೇರೆ ಸ್ತ್ರೀಯರಲ್ಲಿ ಈ ಅವಧಿ 252 ರಿಂದ 285 ದಿವಸಗಳವರೆಗೆ ಬದಲಾಗಬಹುದು. ಜೊತೆಗೆ ಅಂಡಾಣು ಹೊರಬಿದ್ದ ದಿವಸವನ್ನು ಶರೀರದ ಉಷ್ಣತಾಮಾಪನದಿಂದ ಎಲ್ಲರೂ ಖಚಿತವಾಗಿ ತಿಳಿದುಕೊಳ್ಳಲಾರರು. ಆದ್ದರಿಂದ ಗರ್ಭಾವಸ್ಥೆಯ ಕಾಲವನ್ನು ಬೇರೆ ಸುಲಭ

ರೀತಿಯಲ್ಲಿ ಎಣಿಸುವುದು ರೂಢಿಗೆ ಬಂದಿದೆ. ಕೊನೆಯ ಬಾರಿ ಆದ ರಜಸ್ರಾವದ ಮೊದಲನೆಯ ದಿವಸಕ್ಕೆ ಏಳು ದಿನಗಳನ್ನು ಸೇರಿಸಿ ಅಲ್ಲಿಂದ ಮುಂದಕ್ಕೆ 9 ತಾರೀಖು ಪಟ್ಟಿ ತಿಂಗಳನ್ನು ಎಣಿಸಿದರೆ ಲಭಿಸುವ ದಿನ ಗರ್ಭಾವಸ್ಥೆಯ ಅಂತಿಮ ದಿವಸವೆಂದು ಗಣಿಸುವುದೂ ರೂಢಿಯಾಗಿದೆ. ಆದರೆ ನಿಜವಾಗಿ ಗರ್ಭಾವಸ್ಥೆಯ ಕಾಲ ಅಂಡಾಣು ಹೊರಬಿದ್ದು ನಿಷೇಚನಗೊಂಡ ದಿನದಿಂದ ಪ್ರಾರಂಭವಾಗುವುದರಿಂದ ಇದಕ್ಕಿಂತ 14 ದಿವಸಗಳು ಕಡಿಮೆ ಇರುತ್ತದೆನ್ನುವುದನ್ನು ಮರೆಯಬಾರದು. ಗರ್ಭಾವಸ್ಥೆಯ ಅವಧಿ ಅನೇಕ ವೇಳೆ ಯೋಗ್ಯ ಅಥವಾ ಅನೈತಿಕ ಜನನ ನಿಷ್ಕರ್ಷೆಯಲ್ಲಿ ನ್ಯಾಯಾಲಯದ ಅವಲೋಕನಕ್ಕೆ ಬರಬಹುದಾಗಿರುವುದರಿಂದ ಅನೇಕ ದೇಶಗಳಲ್ಲಿ ಗರ್ಭಾವಸ್ಥೆಯ ಕನಿಷ್ಠ ಮತ್ತು ಗರಿಷ್ಠ ಮಿತಿಗಳನ್ನು ಕಾನೂನಿನಂತೆ ನಿಯಮಿಸಲಾಗಿದೆ. ಬೇರೆ ಬೇರೆ ದೇಶಗಳಲ್ಲಿ ಗರಿಷ್ಠ ಮಿತಿ ಬೇರೆ ಬೇರೆ ಉಂಟು.

ಗರ್ಭಾವಸ್ಥೆಯ ಅರಿವು: ನಿರೀಕ್ಷಣೆಯಂತೆ ಮುಟ್ಟಾಗದೆ ಇದ್ದಾಗ ಸ್ತ್ರೀ ತಾನು ಗರ್ಭಿಣಿಯಾಗಿರಬಹುದೆಂಬುದನ್ನು ಊಹಿಸುತ್ತಾಳೆ. ಮುಂದಕ್ಕೆ ಬೆಳಗ್ಗೆ ಎದ್ದಾಗಲೆ ವಾಕರಿಕೆ, ಸ್ತನಗಳ ವೃದ್ಧಿ, ಹೊಟ್ಟೆ ದಪ್ಪವಾಗುವುದು ಕಂಡುಬರುತ್ತದೆ. ಗರ್ಭಾವಸ್ಥೆಯ 20ನೆಯ ವಾರ ಮೊದಲನೇ ಗರ್ಭಧರಿಸಿದವರಿಗೂ, 10ನೆಯ ವಾರಕ್ಕೆ ಎರಡನೆಯ, ಮೂರನೆಯ ಸಲ ಗರ್ಭಧರಿಸಿದವರಿಗೂ ಹೊಟ್ಟೆಯ ಮೇಲೆ ಕೈಯಿಟ್ಟು ನೋಡಿದರೆ ಶಿಶುವಿನ ಕೈಕಾಲು ಮುಂತಾದ ಭಾಗಗಳು ಸಿಕ್ಕಿ ಅವುಗಳ ಚಲನೆ ಖಾತರಿಯಾಗುತ್ತದೆ. ವ್ಯಕ್ತಿಗೆ ತಿಳಿಯುವಂತಿರುವ ಈ ಸೂಚನೆಗಳಲ್ಲದೆ ವೈದ್ಯಕೀಯಪರೀಕ್ಷೆಯಿಂದ ಗರ್ಭಾವಸ್ಥೆಯನ್ನು ಅರಿಯಬಹುದಾಗಿದೆ. 14ನೆಯ ವಾರಕ್ಕೆ ಡಾಪ್ಲರ್ ಮಗುವಿನ ಎದೆಬಡಿತ ಗುರುತಿಸುತ್ತದೆ. 16–18ವಾರಗಳ ಬಳಿಕ ಸ್ತೆತಾಸ್ಕೋಪನ್ನು ಗರ್ಭಿಣಿಯ ಹೊಟ್ಟೆಯ ಮೇಲಿಟ್ಟು ಆಲಿಸಿದರೆ ಗುಂಡಿಗೆಯ ಬಡಿತ ಗಡಿಯಾರದ ಮಸುಕಾದ ಟಿಕ್ ಟಿಕ್ ಶಬ್ದದಂತೆ ಕೇಳುತ್ತದೆ. ಯೋನಿಯೊಳಗಿನ ಪರೀಕ್ಷೆಗಳಿಂದಲು ಗರ್ಭಾವಸ್ಥೆಯನ್ನು ಅರಿಯಬಹುದು;

33–34ನೆಯ ದಿನವೆ ಮೂತ್ರ ಪರೀಕ್ಷೆಯಿಂದ ಕರಾರುವಕ್ಕಾಗಿ ಆಕೆಯ ಗರ್ಭಿಣಿಯೆ ಇಲ್ಲವೆ ಎಂದು ತಿಳಿಯಬಹುದು. ಈ ಪರೀಕ್ಷೆಗಳು ಗರ್ಭಿಣಿ ಹೆಣ್ಣಿನ ಮೂತ್ರದಲ್ಲಿರುವ ಕೊರಿಯಾನಿಕ್‍ಗೊನೆಡೊಟ್ರೊಫಿನ್ ಎಂಬ ಹಾರ್ಮೋನನ್ನು ಗುರುತಿಸುವ ಮೂಲಕ ಗರ್ಭಾವಸ್ಥೆಯನ್ನು ಕರಾರುವಕ್ಕಾಗಿ ದೃಢಪಡಿಸುತ್ತವೆ. ಇದಕ್ಕೂ ಮುಂಚೆ ಹಲವಾರು ವಿಧಾನಗಳನ್ನು ಉಪಯೋಗಿಸಲಾಗುತ್ತಿತ್ತು. ಉದಾಹರಣೆಗೆ ಶಂಕಿತ ಹೆಣ್ಣಿನ ಮೂತ್ರವನ್ನು ಮೊಲ, ಇಲಿ, ಕಪ್ಪೆ ಮುಂತಾದ ಪ್ರಾಣಿಗಳಿಗೆ ಪಿಚಕಾರಿಯ ನೆರವಿನಿಂದ ಚುಚ್ಚಿ, ಅವುಗಳ ಅಂಡಾಶಯದ ಬೆಳವಣಿಗೆಯನ್ನು ಪರೀಕ್ಷಿಸುವುದರ ಮೂಲಕ ಮಾಡಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಮೇಲೆ ತಿಳಿಸಿದ ಮೂತ್ರದಲ್ಲಿರುವ ಹಾರ್ಮೋನು ಅದರ ನಿರೋಧಕದ (ಆಂಟಿಬಾಡಿ) ಜೊತೆಗೆ ಸೇರಿಕೊಂಡು ಉಂಟು ಮಾಡುವ ವಿಶಿಷ್ಟ ಕ್ರಿಯೆ ಮೂಲಕ ಗರ್ಭಾವಸ್ಥೆಯನ್ನು ಗುರುತಿಸಲಾಗುವುದು. ಇತ್ತೀಚಿನ ಸ್ಕ್ಯಾನಿಂಗ್ ಪರೀಕ್ಷೆಯಲ್ಲಿ 5–6ನೆಯ ವಾರಕ್ಕೆ ಗರ್ಭಿಣಿಯೆ ಅಲ್ಲವೆ ತಿಳಿಯುವುದರೊಂದಿಗೆ ಮಗುವಿನ ಹೃದಯ ಮಿಡಿತ ಕೂಡ ನೋಡಬಹುದು. 6ನೆಯ ವಾರದಿಂದ ಯೋನಿಪರೀಕ್ಷೆಯಲ್ಲಿ ಗರ್ಭವನ್ನು ಖಚಿತಪಡಿಸಬಹುದು.

20ನೆಯ ವಾರಕ್ಕೆ ಮೊದಲ ಬಾರಿ ಬಸಿರಾದವರಿಗೆ ಹಾಗು, 16ನೆಯ ವಾರಕ್ಕೆ ಎರಡು ಅಥವಾ ಮೂರನೆ ಬಾರಿ ಬಸಿರಾದವರಿಗೂ ಮಗುವಿನ ಚಲನೆ ತಿಳಿಯುತ್ತದೆ.

ಗರ್ಭಾವಸ್ಥೆಯ ಪ್ರಾರಂಭಿಕ ಲಕ್ಷಣಗಳು ಬೇರೆ ಕಾರಣಗಳಿಂದಲು ಉಂಟಾಗಬಹುದಾದ್ದರಿಂದ ನಂಬುವಂಥವಲ್ಲ. ರಕ್ತಕೊರತೆಯಿಂದ ಅಥವಾ ಬಹುವಾಗಿ ಬೇಕಾದ ವ್ಯಕ್ತಿಯ ಸಾವಿನಂತಹ ತೀವ್ರಮಾನಸಿಕ ಆಘಾತದಿಂದ ವ್ಯಕ್ತಿ ನಿರೀಕ್ಷಣೆಯಂತೆ ಮುಟ್ಟಾಗದೆ ಅದು ಮುಂದೆ ಹೋಗಬಹುದು. ಅನೈತಿಕ ಅಥವಾ ಇಷ್ಟವಿಲ್ಲದ ಸಂಭೋಗವಾದ ಮೇಲೆ ಗರ್ಭಧಾರಣೆಯಾಗಿ ಬಿಟ್ಟಿದೆಯೋ ಎಂಬ ಮಾನಸಿಕ ಭೀತಿಯಿಂದ ನಿರೀಕ್ಷಿತ ಮುಟ್ಟು ನಿಂತುಹೋಗಿರಬಹುದು. ಇದಕ್ಕೆ ಬದಲಾಗಿ ಮಕ್ಕಳಿರದ ಸ್ತ್ರೀಯಲ್ಲಿ ಮಕ್ಕಳಾಗಬೇಕೆಂಬ ಅಭಿಲಾಷೆಯ ತೀವ್ರತೆಯಿಂದ ಮುಟ್ಟು ನಿಂತು ಬೆಳಗಿನ ವಾಕರಿಕೆ, ಹೊಟ್ಟೆ ದಪ್ಪವಾಗುವುದು ಮುಂತಾದ ಗರ್ಭಾವಸ್ಥೆಯ ಅನೇಕ ಸೂಚನೆಗಳು ವ್ಯಕ್ತವಾಗಿ ಕೊನೆಗೆ 10 ತಿಂಗಳ ತರುವಾಯ ನಕಲಿ ಪ್ರಸವವೂ ಆಗಬಹುದು. 3ನೆಯ ತಿಂಗಳು ತುಂಬಿದ ಮೇಲೆ ಗರ್ಭಕೋಶದ ಬೆಳವಣಿಗೆಯನ್ನು ಹೊಟ್ಟೆಯ ಮೇಲೆ ಕೈಯಿಟ್ಟು ಪರೀಕ್ಷಿಸಿ ತಿಳಿಯಬಹುದು. 3ನೆಯ ತಿಂಗಳಲ್ಲಿ ಹೊಕ್ಕುಳ ಮಟ್ಟದಲ್ಲಿ, 9ನೆಯ ತಿಂಗಳಲ್ಲಿ ಎದೆ ಮೂಳೆಯ ಕೆಳತುದಿಯ ಮಟ್ಟದಲ್ಲಿ, 10ನೆಯ ತಿಂಗಳಲ್ಲಿ ಅಂದರೆ ಪ್ರಸವದ ಸಮಯ ಹತ್ತಿರವಾದಂತೆ ಮೇಲಿನ ಮಟ್ಟಕ್ಕಿಂತ 1– 1 $^1/_2$ ಅಂಗುಲ ಕೆಳಗೆ ಗರ್ಭಕೋಶವನ್ನು ಸ್ಪರ್ಶಿಸಬಹುದು. ಚೊಚ್ಚಲು ಗರ್ಭಿಣಿಯರಲ್ಲಿ ಸ್ತನಗಳು ದಪ್ಪವಾಗಿಯೂ ದೃಢವಾಗಿಯೂ ಆಗುವುದರ ಜೊತೆಗೆ ಮುಟ್ಟಿದರೆ ನೋಯಲೂಬಹುದು. ಸಾಮಾನ್ಯವಾಗಿ ಎಲ್ಲ ಗರ್ಭಿಣಿಯರಲ್ಲೂ ಸ್ತನವನ್ನು ಅಮುಕಿದರೆ ಗಟ್ಟಿಯಾದ ಗಿಣ್ಣಿನಂಥ ದ್ರವ ಬರುತ್ತದೆ. ಚೊಚ್ಚಲು ಗರ್ಭದಲ್ಲಿ ಮೊಲೆಗಳು ಕಂದು ಮತ್ತು ಅನೇಕರಲ್ಲಿ ಕಪ್ಪು ಬಣ್ಣಕ್ಕೆ ತಿರುಗುತ್ತವೆ ಮತ್ತು ಜೀವಮಾನ ಪರ್ಯಂತ ಕಪ್ಪಾಗಿಯೇ ಇರುತ್ತವೆ. ಹಾಗೆಯೇ ಹೊಟ್ಟೆಯ ನಡುಗೆರೆ ಹೊಕ್ಕಳಿಂದ ಕೆಳಭಾಗದಲ್ಲಿ ಕಪ್ಪಾಗುತ್ತದೆ. ಹೊಟ್ಟೆ ಹಿಗ್ಗುವುದರಿಂದ ಗರ್ಭಾವಸ್ಥೆಯಲ್ಲಿ ಹೊಟ್ಟೆಯ ಮೇಲೆಲ್ಲ ಕೆಂಪು ರೇಖೆಗಳು ಕಂಡು ಬರುತ್ತದೆ. ಪ್ರಸವವಾದ ಮೇಲೆ ಇವು ಬಿಳಿಯ ಸುಕ್ಕುಗಟ್ಟಿದ ರೇಖೆಗಳಾಗುತ್ತವೆ. ಈ ರೇಖೆಗಳು ಜೀವಮಾನಪರ್ಯಂತ ಇರುತ್ತವೆ. ಮೊಲೆಗಳ, ಕಪ್ಪುವರ್ಣ ಹೊಟ್ಟೆಯ ಸುಕ್ಕುಗಟ್ಟಿದ ರೇಖೆಗಳು ಆ ಸ್ತ್ರೀ ಒಮ್ಮೆಯಾದರೂ ಗರ್ಭಿಣಿಯಾಗಿದ್ದಳೆಂಬುದನ್ನು ಸೂಚಿಸುತ್ತವೆ.

ಗರ್ಭಧರಿಸಿದ ಸಮಯದಲ್ಲಿ ಒಳ್ಳೆಯಗಾಳಿ, ಪೌಷ್ಟಿಕ ಆಹಾರ ಮತ್ತು ನಿಯಮಿತ ವ್ಯಾಯಾಮ ಅಗತ್ಯ. ಆಹಾರ ಸಮತೋಲನವಾಗಿದ್ದು, ವಿಟಮಿನ್ನುಗಳನ್ನೂ ಕಬ್ಬಿಣದ ಮತ್ತು ಸುಣ್ಣ ಅಂಶವನ್ನೂ ಪೂರೈಸುವಂತಿರಬೇಕು. ಸಾಮಾನ್ಯವಾಗಿ ಗರ್ಭಿಣಿಗೆ ಗರ್ಭಸ್ಥಿತಿ ಪೂರ್ವದ 1–1.5 ರಷ್ಟು ಶಕ್ತಿಯನ್ನು ಒದಗಿಸುವಷ್ಟು ಆಹಾರ ಬೇಕಾಗುತ್ತದೆ. ಇದು 3ನೆಯ ತಿಂಗಳಿನಿಂದಲೆ ಸಹಜವಾಗಿ ಉಂಟಾಗುವ ಹೆಚ್ಚಿನ ಹಸಿವಿನಿಂದ ಪೂರೈಕೆ ಆಗುತ್ತದೆ. ತರಕಾರಿ ಹಣ್ಣುಗಳನ್ನು ದಿನಕ್ಕೆ ಕಡೆಪಕ್ಷ ಮುಕ್ಕಾಲು ಲೀಟರ್ ಹಾಲನ್ನು ತೆಗೆದುಕೊಂಡರೆ ಸಾಕಾದಷ್ಟು ಪೋಷಣೆ ದೊರೆಯುತ್ತದೆ. ಪ್ರಗತಿಪರ ರಾಷ್ಟ್ರಗಳ ಜನತೆಯಲ್ಲಿ ತಕ್ಕಷ್ಟು ಜ್ಞಾನ, ಧನ ಇರುವುದರಿಂದ ಗರ್ಭಾವಸ್ಥೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಅಗತ್ಯವಾದ ವಿಟಮಿನ್ನುಗಳನ್ನುಳ್ಳ ಆಹಾರಗಳನ್ನು ತೆಗೆದುಕೊಂಡು ಆ ಅವಧಿಯಲ್ಲಿ ಮತ್ತು ಪ್ರಸವ ಸಮಯದಲ್ಲಿ ಕಷ್ಟವಾಗದಂತೆ ನೋಡಿಕೊಳ್ಳುತ್ತಾರೆ. ಆದರೆ ಭಾರತದಂಥ ಮುಂದುವರೆಯುತ್ತಿರುವ ದೇಶಗಳಲ್ಲಿ ಪೌಷ್ಟಿಕಾಹಾರದ ಕೊರತೆ ಕಂಡುಬರುತ್ತದೆ. ಕಬ್ಬಿಣದ ಕೊರತೆಯಿಂದ ರಕ್ತಹೀನತೆ ಕಂಡುಬರುತ್ತದೆ. ಗರ್ಭಾವಸ್ಥೆಯಲ್ಲಿ ಮದ್ಯಸಾರ, ಹೊಗೆಸೊಪ್ಪು ವರ್ಜ್ಯ, ವ್ಯಕ್ತಿಯ ಸ್ವಾಭಾವಿಕ ಬಯಕೆಗಳ ಪೂರೈಕೆ ವಿಚಾರದಲ್ಲಿ ಜಾಗರೂಕತೆಯಿಂದ ವರ್ತಿಸಬೇಕಾಗುತ್ತದೆ. ಗರ್ಭಾವಸ್ಥೆಯಲ್ಲಿ ನರಮಂಡಲ ಸೂಕ್ಷ್ಮಸ್ಥಿತಿಯಲ್ಲಿ ಇರುವುದರಿಂದ ಮನಸ್ಸು ಉದ್ರೇಕಗೊಳ್ಳದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಅವಶ್ಯಕತೆಗೆ ತಕ್ಕಂತೆ ನಿದ್ರೆ ಬೇಕಾಗುತ್ತದೆ. ಕಡಿಮೆಯೆಂದರೂ 10 ಗಂಟೆಗಳ ಕಾಲ ನಿದ್ರೆ ಮಗುವಿನ ಬೆಳವಣಿಗೆಗೆ ಅಗತ್ಯ. ಉಡಿಗೆ ತೊಡಿಗೆಗಳು ಹೊಟ್ಟೆ, ಸ್ತನಗಳನ್ನು ಬಿಗಿಯದಂತೆ ಇರಬೇಕಾಗುತ್ತದೆ. ಗರ್ಭಾವಸ್ಥೆಯಲ್ಲಿ ದೇಹದ ಸಮತೋಲನ ವ್ಯತ್ಯಾಸವಾಗಿದ್ದು ಗರ್ಭಿಣಿಯರು ನಡೆದಾಡುವಾಗ ಒಂದೆರಡು ಬಾರಿಯಾದರೂ ಮುಗ್ಗರಿಸಿ ಬೀಳುವುದು ಸಾಮಾನ್ಯ. ದೇಹಘಾತ ಮತ್ತು ಶ್ರಮವನ್ನು ಉಂಟುಮಾಡುವ ಕೆಲಸಗಳು, ಎತ್ತರದಿಂದ ಧುಮುಕುವುದು, ಭಾರ ಹೊರುವುದು ಗುದ್ದಾಡುವುದು, ದೂರ ಪ್ರಯಾಣ ಇವುಗಳೆಲ್ಲ ವರ್ಜ್ಯ, ಎತ್ತರದ ಹಿಮ್ಮಡಿ ಚಪ್ಪಲಿ ಒಳ್ಳೆಯದಲ್ಲ, ಯಾವ ಆತಂಕಗಳೂ ಇಲ್ಲದಿದ್ದರೆ ಸಂಭೋಗ ನಿಷಿದ್ಧವಲ್ಲ.

ಮೊದಲು ಗರ್ಭ ಖಚಿತಪಡಿಸಿಕೊಳ್ಳಬೇಕು ಆ ಸಮಯದಲ್ಲಿಯೇ ಗರ್ಭಿಣಿಯ ದೈಹಿಕ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ರಕ್ತ ಪರೀಕ್ಷೆಗಳ ಮೂಲಕ ತೊಂದರೆಗಳು ಇಲ್ಲದೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.

ಗರ್ಭಾವಸ್ಥೆಯ ಕಾಲದಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕ್ರಮ: ಅತಿ ವಮನವು ಮೊದಲ ತಿಂಗಳಲ್ಲಿ ಅವರಿಗೆ ಕಾಡಬಹುದಾದ ಅಂಶ. ಚಿಕಿತ್ಸೆಗೆ ಬಗ್ಗದಿದ್ದರೆ ವೈದ್ಯಕೀಯ ಮೇಲ್ವಿಚಾರಣೆಯಿಂದ ಗರ್ಭಪಾತ ಮಾಡಿಸಬಹುದು.

ಸುಖ ಪ್ರಸವವಾಗುವುದಕ್ಕೆ ಗರ್ಭಿಣಿಯ ದೇಹದಲ್ಲಿ ಏನಾದರೂ ಅಡಚಣೆ ಇದೆಯೆ ಎಂದು ಮೊದಲ ಪರೀಕ್ಷೆಯಲ್ಲಿ ನೋಡಿಕೊಳ್ಳಬೇಕು. ಸೊಂಟದಲ್ಲಿ ಮೂಳೆಗಳ ವಿಕೃತಿಯಿಂದ ಇಂತ ಸಂಭಾವ್ಯತೆ ಬರಬಹುದು. ಇಲ್ಲವೇ ರೋಗಸ್ಥಿತಿಯಿಂದ ಅಡಚಣೆ ಬರಬಹುದು. ಇವುಗಳಿಗೆ ತಕ್ಕ ಗಮನ ಕೊಟ್ಟು ಸುಖಪ್ರಸವವಾಗಿ ತಾಯಿ ಮಗು ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದು ಪ್ರಸವಪೂರ್ವ ಎಚ್ಚರಿಕೆ ಕ್ರಮ.

ಪ್ರಸವಪೂರ್ವ ಎಚ್ಚರಿಕೆ ಗರ್ಭಸ್ಥಿತಿಯ ತರುಣದಲ್ಲೆ ದೇಹಪರೀಕ್ಷೆಯಿಂದ ಪ್ರಾರಂಭವಾಗಬೇಕು. ಕೊನೆಯ ಸಲ ಆದ ರಜಸ್ರಾವದ ಮೊದಲ ದಿವಸವನ್ನು, ನಿರೀಕ್ಷಿತ ಪ್ರಸವ ದಿವಸವನ್ನು, ವ್ಯಕ್ತಿಯ ತೂಕ, ಎತ್ತರ, ರಕ್ತದ ಒತ್ತಡವನ್ನು, ಗುಂಡಿಗೆ ಪುಪ್ಪುಸನಾಳ ಸ್ಥಿತಿಯನ್ನು ಮೊದಲ ಸಾರಿಯೆ ಪರೀಕ್ಷೆ ಪ್ರಯೋಗಗಳಿಂದ ತಿಳಿದುಕೊಳ್ಳಬೇಕು. ರಕ್ತದ ಕೊರತೆ, ರಕ್ತಪಂಗಡ, ಅದರಲ್ಲೂ ಆರ್‍ಎಚ್ ಪಂಗಡ, ಹೆಚ್‍ಐವಿ, ಕಾಮಾಲೆ ಮತ್ತು ಪರಂಗಿ ರೋಗದ ಪತ್ತೆಗಾಗಿ ರಕ್ತಪರೀಕ್ಷೆಯನ್ನು ಮಾಡಬೇಕು. ಮೂತ್ರದಲ್ಲಿ ಆಲ್‍ಬ್ಯುಮಿನ್, ಸಕ್ಕರೆಗಳಿವೆಯೇ ಎಂದು ಪರೀಕ್ಷಿಸಬೇಕು. ಆಮೇಲೆ ನಾಲ್ಕು ವಾರಗಳಿಗೊಮ್ಮೆ ತೂಕ ಮತ್ತು ರಕ್ತದ ಒತ್ತಡವನ್ನು ಗರ್ಭಸ್ಥಿತಿಯ 20ನೆಯ ವಾರದ ತನಕ, 2 ವಾರಗಳಿಗೊಮ್ಮೆ 36ನೆಯ ವಾರದ ತನಕ ಆಮೇಲೆ ಪ್ರಸವವಾಗುವ ತನಕ ವಾರವಾರವೂ ನೋಡುತ್ತಿರಬೇಕು. ಹೊಟ್ಟೆಯನ್ನು ಅಮುಕಿ ಪರೀಕ್ಷಿಸಿ ಗರ್ಭಕೋಶ ಎಷ್ಟು ಎತ್ತರದಲ್ಲಿದೆ ಎಂದು

ಕಂಡುಕೊಳ್ಳಬೇಕು. ಗರ್ಭಕೋಶದೊಳಗೆ ಭ್ರೂಣ ಸರಿಯಾದ ಭಂಗಿಯಲ್ಲಿದೆಯೆ ಎಂದು ಗಮನಿಸಬೇಕು, ಮೊದಲ, ಎರಡನೆಯ ಹಾಗೂ ಕೊನೆಯ ತ್ರೈಮಾಸಿಕಗಳಲ್ಲಿ ನಡೆಸುವ ಸ್ಕ್ಯಾನಿಂಗ್ ಎಲ್ಲಾ ಪರೀಕ್ಷೆಗಳಿಗೆ ಪೂರಕವಾಗಿ ಒದಗುತ್ತವೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಗರ್ಭಸ್ಥಿತಿಯ 34ನೆಯ ವಾರದಲ್ಲಿ ಸುಖಪ್ರಸವಾಗುವಂತಿದೆಯೇ ಶಸ್ತ್ರಕ್ರಿಯಾಪ್ರಸವದ ಅಗತ್ಯ ಬೀಳುತ್ತದೆಯೆ ಎನ್ನುವುದನ್ನು ಭ್ರೂಣದ ತಲೆಯ ಗಾತ್ರದ ಪರೀಕ್ಷೆಯಿಂದ ತಿಳಿಯಬೇಕು. ಪ್ರಸವಪೂರ್ವ ಎಚ್ಚರಿಕೆಕ್ರಮ ಗರ್ಭಾವಸ್ಥೆಯ ಬಸಿರು ನಂಜನ್ನು ಪತ್ತೆಮಾಡಲು ಅಗತ್ಯವಾದ ವಿಧಾನ. ಬಸಿರು ನಂಜು ಇರುವ ವಿಚಾರವನ್ನು ಆದಷ್ಟು ಬೇಗ ಪತ್ತೆಮಾಡಿ ಚಿಕಿತ್ಸೆಗೆ ಒಳಪಡಿಸುವುದು ಒಳ್ಳೆಯದು. ಯಾರಿಗೆ ಬಸಿರು ನಂಜು ಬರುವ ಸಾಧ್ಯತೆಗಳಿವೆಯೊ ಅವರಿಗೆ ಮೂರನೆಯ ತಿಂಗಳಿನಿಂದ ಚಿಕಿತ್ಸೆ ಆರಂಭಿಸುವುದು ಉತ್ತಮ. ಪುಷ್ಟಿಭರಿತ ಆಹಾರ, ನೀರು, ವಿಶ್ರಾಂತಿ, ಮಾನಸಿಕ ನೆಮ್ಮದಿ ಮುಖ್ಯವಾಗುತ್ತವೆ.

ಗರ್ಭಾವಸ್ಥೆಯಲ್ಲಿ ಅವಳಿ, ತ್ರಿವಳಿ ಮಕ್ಕಳಿರುವ ಸಾಧ್ಯತೆ ಅಪರೂಪವೇನಲ್ಲ. ಅಂಡಾಶಯದಿಂದ ಒಂದು ಕಾಲದಲ್ಲಿ ಒಂದೇ ಅಂಡಾಣು ವೃದ್ಧಿಯಾಗಿ ಹೊರಬೀಳುವ ಬದಲು 2–3 ಅಂಡಾಣುಗಳು ಏಕಕಾಲಿಕವಾಗಿ ಹೊರಬೀಳುವುದರಿಂದ ಅವಳಿ ತ್ರಿವಳಿಗಳಾಗುವ ಸಂಭಾವ್ಯತೆ ಉಂಟಾಗುತ್ತದೆ. ಭ್ರೂಣಾಣು ಬೆಳೆದು ಒಂದು ಶಿಶುವಾಗುವ ಬದಲು, ಪ್ರಾರಂಭದಲ್ಲಿ ಭ್ರೂಣಾಣು ಇಬ್ಭಾಗವಾದಾಗ ಆ ಎರಡೂ ಕೋಶಗಳು ಬೇರೆ ಬೇರೆ ಭ್ರೂಣಗಳಾಗಿ ಬೆಳೆಯುವುದರಿಂದಲೂ ಅವಳಿ ಸ್ಥಿತಿಗೆ ಕಾರಣವಾಗಿದೆ. ಆದರೆ ಕೆಲವರಲ್ಲಿ ಕೆಲವು ಸಲ ಮಾತ್ರ ಹೀಗೆ ಏಕೆ ಆಗುತ್ತದೆ ಎನ್ನುವುದು ಗೊತ್ತಿಲ್ಲ. ಗರ್ಭಾವಸ್ಥೆಯಲ್ಲಿ ಭ್ರೂಣ ಸರಿಯಾಗಿ ಬೆಳೆಯದೆ ಕಾರಣಾಂತರದಿಂದ ಅಕ್ರಮ ಬೆಳವಣಿಗೆಯಾಗಿ ಅಂಗವಿಕಲವಾದ ಮಗು ಹುಟ್ಟಬಹುದು. ಸ್ವಲ್ಪ ಕಾಲದ ಹಿಂದೆ ತೆಲಿಡೋಮೈಡ್ ಎಂಬ ವೇದನಾಶಕ ಔಷಧಿಯನ್ನು ಗರ್ಭಿಣಿಯರು ಸೇವಿಸುವ ರೂಢಿ ಇದ್ದಾಗ ಇಂಥ ವ್ಯತ್ಯಯಗಳು ಉದ್ಭವಿಸಿ ಅನೇಕ ಊನಗಳುಳ್ಳ ಶಿಶುಗಳ ಜನನವಾಗುತ್ತಿತ್ತು. ಗರ್ಭಾವಸ್ಥೆಯ ಕಾಲದಲ್ಲಿ ತಾಯಿಗೆ ರೂಬೆಲ್ಲ ಎಂಬ ಸೋಂಕಿನ ರೋಗ ಉಂಟಾದರೂ ಹೀಗೆ ಭ್ರೂಣದಲ್ಲಿ ಅಕ್ರಮ ಬೆಳವಣಿಗೆ ಮತ್ತು ಅಂಗವಿಕಲತೆ ಕಂಡುಬರುತ್ತವೆ. ಗರ್ಭಾವಸ್ಥೆಯಲ್ಲಿ ಸ್ತ್ರೀ ಅಗಾಧ ವಿಕಿರಣಪಟುತ್ವಕ್ಕೆ ಒಳಗಾದಾಗಲು ಇಂತಹ ಅಕ್ರಮಗಳುಂಟಾಗುತ್ತವೆ. 1945ರಲ್ಲಿ ಜಪಾನಿನ ಹಿರೋಷಿಮ, ನಾಗಸಾಕಿಗಳಲ್ಲಿ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಪ್ರಥಮವಾಗಿ ಉಪಯೋಗಿಸಿದ ಪರಮಾಣು ಬಾಂಬಿನ ಸ್ಫೋಟನೆಯಿಂದಾಗಿ ಅಗಾಧ ವಿಕಿರಣಪಟುತ್ವಕ್ಕೆ ತುತ್ತಾಗಿ ಜನಿಸಿದ ಸಹಸ್ರಾರು ಅಂಗವಿಕಲ ಮಕ್ಕಳನ್ನು ಯಾರೂ ಮರೆಯಲಾರರು.

ಗರ್ಭಾವಸ್ಥೆಯ ಅವಧಿ 40 ವಾರಗಳು ಎಂದು ಮೇಲೆ ವಿವರಿಸಿದ್ದರೂ 5% – 8% ರಷ್ಟು ಪ್ರಸಂಗಗಳಲ್ಲಿ ಅವಧಿಗೆ ಮುಂಚಿತವಾಗಿಯೆ ಗರ್ಭಾವಸ್ಥೆ ಕೊನೆಗೊಂಡು ಅವಸರದ ಹೆರಿಗೆ ಆಗುತ್ತದೆ. ಹೀಗೆ ಅವಸರವಾಗಿ ಹುಟ್ಟಿದ ಅನೇಕ ಮಕ್ಕಳು ಸತ್ತೇ ಹುಟ್ಟುತ್ತವೆ. ಇಲ್ಲವೆ ಶೀಘ್ರದಲ್ಲೇ ಸತ್ತು ಹೋಗುತ್ತವೆ. ಗರ್ಭಾವಸ್ಥೆಯ ಅವಧಿ 28 ವಾರಗಳನ್ನು ಮೀರಿ 40 ವಾರಗಳನ್ನು ಸಮೀಪಿಸಿದಂತೆ ಹುಟ್ಟುವ ಮಕ್ಕಳು ಜೀವಂತವಾಗಿರುವ ಸಂಭಾವ್ಯತೆ ಹೆಚ್ಚುತ್ತದೆ. ಗರ್ಭಾವಸ್ಥೆಯ ಅವಧಿ ಈ ಮಿತಿಯಲ್ಲಿ ಎಷ್ಟೇ ಇರಲಿ, ಹುಟ್ಟಿದ ಮಗು 2 ಕಿಗ್ರಾಂ ಗಿಂತ ಕಡಿಮೆ ಇದ್ದರೆ ಅದನ್ನು ಅವಸರದಲ್ಲಿ ಹುಟ್ಟಿದ ಮಗು ಎಂದು ಪರಿಗಣಿಸಬೇಕೆಂದು ಎಲ್ಲ ದೇಶದವರೂ ಒಪ್ಪಿದ್ದಾರೆ. ಗರ್ಭಾವಸ್ಥೆಯ ಅಕಾಲಿಕ ಅಂತ್ಯ ತಾಯಿಯ ದೇಹದಾರ್ಢ್ಯ, ಪೌಷ್ಟಿಕಸ್ಥಿತಿ ಇವನ್ನು ಅವಲಂಬಿಸಿವೆ. ಕುಳ್ಳ ರೋಗಿಷ್ಟ ಹೆಂಗಸು, ಎತ್ತರವಾಗಿ ಆರೋಗ್ಯವಾಗಿರುವ ಹೆಂಗಸಿಗಿಂತ 6ರಷ್ಟು ಹೆಚ್ಚು ಸಂದರ್ಭಗಳಲ್ಲಿ ಗರ್ಭಾವಸ್ಥೆಯ ಅಕಾಲಿಕ ಅಂತ್ಯವನ್ನು ತೋರುತ್ತಾಳೆ. ***

**ಗಲ್:** ಕರಾಡ್ರಿಯಿಫಾರ್ಮಿಸ್ ಗಣದ ಲ್ಯಾರಿಡೆ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಸಾಗರವಾಸಿ ಹಕ್ಕಿಗಳ ಸಾಮಾನ್ಯ ಬಳಕೆಯ ಆಂಗ್ಲ ಹೆಸರು. ಸುಮಾರು 40 ಕ್ಕೂ ಹೆಚ್ಚು ಬಗೆಯ ಗಲ್ ಹಕ್ಕಿಗಳಿವೆ. ಟರ್ನ್ ಹಕ್ಕಿಗಳಿಗೆ ಬಹಳ ಹತ್ತಿರದ ಸಂಬಂಧಿಗಳಿವು. ಪ್ರಪಂಚದ ಮೇರು ಪ್ರದೇಶಗಳು ಮತ್ತು ಸಮಶೀತೋಷ್ಣ ವಲಯಗಳಲ್ಲೆಲ್ಲ ಇವುಗಳ ವ್ಯಾಪ್ತಿಯಿದೆ. ಕೆಲವು ಬಗೆಯವು ಉಷ್ಣಪ್ರದೇಶಗಳಲ್ಲೂ (ಚಳಿಗಾಲದಲ್ಲಿ) ಕಾಣಬರುತ್ತವೆ.

ವಿವಿಧ ಬಗೆಯ ಗಲ್ ಹಕ್ಕಿಗಳಲ್ಲಿ ಕೆಲವು ಭಿನ್ನತೆಗಳಿರುವುವಾದರೂ ಎಲ್ಲಕ್ಕೂ ಸಮಾನವೆನಿಸುವ ಹಲವಾರು ಗುಣಲಕ್ಷಣಗಳನ್ನು ನೋಡಬಹುದು : ಸುಪ್ರಮಾಣಬದ್ಧವಾದ ದೇಹ, ಉದ್ದವಾದ ಮತ್ತು ಬಲಯುತವಾದ ರೆಕ್ಕೆಗಳು, ಅತ್ಯಂತ ದೃಢವಾದ ಮತ್ತು ತುದಿಯಲ್ಲಿ ಕೊಕ್ಕೆಯಂತೆ ನಸುಬಾಗಿದ ಕೊಕ್ಕು, ಜಾಲಪಾದ, ಇತ್ಯಾದಿ. ದೇಹದ ಬಣ್ಣ ಪ್ರೌಢಹಕ್ಕಿಗಳಲ್ಲಿ ಸಾಮಾನ್ಯವಾಗಿ ಬಿಳಿ. ಆದರೆ ಕೆಲವು ಬಗೆಗಳಲ್ಲಿ ಬೆನ್ನು, ರೆಕ್ಕೆ ಮತ್ತು ತಲೆಗಳು ಬೂದಿ, ಕಪ್ಪು, ಕಂದು ಮುಂತಾದ ವರ್ಣಗಳನ್ನು ಪಡೆದಿರಬಹುದು. ಮರಿಹಕ್ಕಿಗಳು ಕಂದು ಬಣ್ಣಕ್ಕಿರುತ್ತವೆ. ವಯಸ್ಕ ಹಾಗೂ ಮರಿಹಕ್ಕಿಗಳು ಒಂದೆಡೆ ಕೂಡಿದಾಗ ಬೇರೆ ಬೇರೆ ಪ್ರಭೇದಗಳು ಸೇರಿವೆಯೆಂಬ ಭಾವನೆ ಬರುವಷ್ಟು ಬಣ್ಣ ವ್ಯತ್ಯಾಸವನ್ನು ಇವು ಪ್ರದರ್ಶಿಸುತ್ತವೆ. ಕಂದು ಬಣ್ಣಕ್ಕಿರುವ ಮರಿಹಕ್ಕಿ ವರ್ಷಕ್ಕೆರಡು ಸಲ ತನ್ನ ಗರಿಗಳನ್ನು ಬದಲಿಸುತ್ತದೆ. ಪ್ರತಿಸಲ ಗರಿಯುದುರಿದಾಗಲೂ ದೇಹದ ಬಣ್ಣ ಕಂದಿನಿಂದ ತಿಳಿಯಾಗುತ್ತ ಬಂದು ಸುಮಾರು 3 ವರ್ಷಗಳ ಅನಂತರ ವಯಸ್ಕ ಹಕ್ಕಿಯ ಬಣ್ಣವಾದ ಬಿಳಿ ಬಣ್ಣಕ್ಕೆ ತಿರುಗುತ್ತದೆ.




ಗಲ್ ಹಕ್ಕಿಗಳು ಬಲು ಸೊಗಸಾಗಿ ಶ್ರಮವಿಲ್ಲದೆ ಗಾಳಿಯಲ್ಲಿ ತೇಲುವಂತೆ ಹಾರಬಲ್ಲುವು. ಸಾಮಾನ್ಯವಾಗಿ ಸಮುದ್ರತೀರ, ರೇವುಪಟ್ಟಣಗಳ ಬಳಿಯೇ ಇವುಗಳ ವಾಸ. ಆದಷ್ಟು ನೆಲದ ಸಮೀಪವೇ ಇರುವುದು ಇವುಗಳಿಗೆ ಇಷ್ಟವಾದರೂ ಆಗಿಂದಾಗ್ಗೆ ಹಡಗು, ದೋಣಿಗಳನ್ನು ಹಿಂಬಾಲಿಸಿ ಸಾಗರಗಳ ಮೇಲೆ ಹಲವಾರು ಮೈಲಿಗಳಷ್ಟು ದೂರ ಸಾಗುವುದೂ ಉಂಟು. ಮೀನು ಮತ್ತು ಸಾಗರವಾಸಿ ಪ್ರಾಣಿಗಳೇ ಇವುಗಳ ಮುಖ್ಯ ಆಹಾರ. ಆದರೆ ಬೇರೆ ಬಗೆಯ ಆಹಾರವನ್ನೂ ತಿನ್ನದೆ ಇಲ್ಲ. ಚೆನ್ನಾಗಿ ಈಜಬಲ್ಲುವಾದರೂ ಟರ್ನ್ ಮುಂತಾದ ಇತರ ಹಕ್ಕಿಗಳಂತೆ ಸಾಗರಗಳಲ್ಲಿ ಈಜುವ ಮೀನು ಮುಂತಾದ ಪ್ರಾಣಿಗಳನ್ನು ಹಿಡಿವ ಚಾಣಾಕ್ಷತೆ ಇವಕ್ಕೆ ಇಲ್ಲ. ಅಕಸ್ಮಾತ್ತಾಗಿ ಸತ್ತು ನೀರಮೇಲೆ ತೇಲುವ ಇಲ್ಲವೆ ಗಾಯಗೊಂಡು ಚೆನ್ನಾಗಿ ಈಜಲಾರದ ಪ್ರಾಣಿಗಳನ್ನು ಮಾತ್ರ ಚುರುಕಾಗಿ ಹಿಡಿಯಬಲ್ಲುವು. ಈ ಕಾರಣದಿಂದಲೇ ಗಲ್‌ಗಳು ಸಾಮಾನ್ಯವಾಗಿ ಮನುಷ್ಯರ ವಾಸ್ತವ್ಯವಿರುವ ಸ್ಥಳಗಳಲ್ಲೆ ಇದ್ದು ಅವರು ಎಸೆಯುವ ಕೊಳೆತ ಮೀನು ಮತ್ತಿತರ ಆಹಾರವನ್ನು ತಿನ್ನುತ್ತ ವಾಸಿಸುತ್ತವೆ. ತೀರಪ್ರದೇಶಗಳ ಬಂದರುಗಳು, ಕೊಳಚೆ ಸ್ಥಳಗಳು, ಚರಂಡಿ, ಹೊಲಸು ಇರುವೆಡೆಯೆಲ್ಲೆಲ್ಲ ಇವು ಇರುತ್ತವೆ. ಈ ಗುಣದಲ್ಲಿ ಕಾಗೆಗಳನ್ನು ಹೋಲುವ ಗಲ್‌ಗಳು ಮನುಷ್ಯನಿಗೆ ಅತ್ಯಂತ ಉಪಕಾರಿಯೆನಿಸಿವೆ. ಕೆಲವೊಮ್ಮೆ ಒಳನಾಡಿನ ಕೃಷಿಭೂಮಿಯಲ್ಲೂ ಗಲ್‌ಗಳನ್ನು ಕಾಣಬಹುದು. ಅಲ್ಲಿ ಸಿಗಬಹುದಾದ ಕ್ರಿಮಿ ಕೀಟಗಳನ್ನು ಇವು ಹಿಡಿದು ತಿನ್ನುತ್ತವೆ. ಗಲ್‌ಗಳಿಗೆ ಕಪ್ಪೆಚಿಪ್ಪಿನ ಪ್ರಾಣಿಗಳೆಂದರೆ ಬಲು ಇಷ್ಟ. ಚಿಪ್ಪಿನೊಳಗಿನ ಪ್ರಾಣಿಗಳನ್ನು ಹೊರತೆಗೆಯಲು ಸುಲಭವಾಗಿ ಆಗದೆಂದು ಅರಿತಿರುವ ಇವು ಚಿಪ್ಪನ್ನು ಹಿಡಿದುಕೊಂಡು ಮೇಲಕ್ಕೆ ಹಾರಿ ಅಲ್ಲಿಂದ ನೆಲದ ಮೇಲಿನ ಕಲ್ಲು ಮುಂತಾದ ಯಾವುದಾದರೂ ಗಟ್ಟಿಯಾದ ವಸ್ತುವಿನ ಮೇಲೆ ಬೀಳಿಸಿ ಚಿಪ್ಪು ಒಡೆಯುವಂತೆ ಮಾಡುತ್ತವೆ. ತತ್‌ಕ್ಷಣವೇ ಅಲ್ಲೆ ಸುತ್ತ ಇರುವ ಬೇರೆ ಹಕ್ಕಿಯೊಂದು ಆಹಾರದ ಮೇಲೆ ಎರಗುವ ಮುನ್ನವೇ ಕೆಳಕ್ಕೆ ಧಾವಿಸಿ ಚಿಪ್ಪಿನಿಂದ ಹೊರಬಂದ ಪ್ರಾಣಿಯನ್ನು ಭಕ್ಷಿಸುತ್ತವೆ. ಚಿಪ್ಪನ್ನು ಒಡೆಯಲು ಕೆಲವೊಮ್ಮೆ ಕಾರು, ಮನೆ, ಮಾಡು, ರಸ್ತೆಗಳ ಮೇಲೂ ಹಾಕುವುದುಂಟು. ಕೆಲವು ಬಗೆಯ ಗಲ್‌ಗಳು ಬೇರೆ ಹಕ್ಕಿಗಳ ಮೊಟ್ಟೆ, ಮರಿಹಕ್ಕಿ, ಕೆಲವೊಮ್ಮೆ ವಯಸ್ಕ ಹಕ್ಕಿಗಳನ್ನು ತಿನ್ನುವುದುಂಟು.

ಬೇರೆ ಬಹುಪಾಲು ಬಗೆಯ ಹಕ್ಕಿಗಳಿಗೆ ಹೋಲಿಸಿದರೆ ಗಲ್‌ಗಳು ಬಹಳ ವರ್ಷ ಬದುಕಿರುತ್ತವೆ. ಇವುಗಳ ಆಯಸ್ಸು ಸುಮಾರು 25-30 ವರ್ಷಗಳು. ಇವು ಸಂಘಜೀವಿಗಳು. ಪ್ರದೇಶದಿಂದ ಪ್ರದೇಶಕ್ಕೆ ಸಾಗುವಾಗ, ಆಹಾರಕ್ಕಾಗಿ ಬೇಟೆಯಾಡುವಾಗ, ವಿರಮಿಸುವಾಗ ಹೀಗೆ ಎಲ್ಲ ಚಟುವಟಿಕೆಗಳಲ್ಲೂ ಗುಂಪುಗಳಲ್ಲಿಯೇ ಇರುತ್ತವೆ. ಯಾವಾಗಲೂ ಕರ್ಕಶವಾಗಿ ಕೂಗುತ್ತ ಆಹಾರಕ್ಕಾಗಿ ಪರಸ್ಪರ ಜಗಳವಾಡುತ್ತ ಹಾರಾಡುತ್ತಿರುತ್ತವೆ. ಸಂತಾನೋತ್ಪತ್ತಿಯ ಕಾಲದಲ್ಲಂತೂ ಈ ಸ್ವಭಾವ ಹೆಚ್ಚು ವ್ಯಕ್ತವಾಗುತ್ತದೆ. ಒಂದೇ ಪ್ರಭೇದದ ಹಲವಾರು ಹಕ್ಕಿಗಳು ಗುಂಪುಗೂಡುವುದು ಸಾಮಾನ್ಯವಾದರೂ ಕೆಲವೊಮ್ಮೆ ಬೇರೆ ಪ್ರಭೇದಗಳೊಂದಿಗೆ, ಟರ್ನ್, ಕಾರ್ಮೊರಾಂಟ್, ಪೆಲಿಕನ್ ಮುಂತಾದ ಬೇರೆ ಜಾತಿಯ ಹಕ್ಕಿಗಳೊಂದಿಗೆ ಇರುವುದೂ ಉಂಟು. ಮೊಟ್ಟೆಯಿಡುವ ಕಾಲದಲ್ಲಿ ಯಾವುದಾದರೂ ಸುರಕ್ಷಿತವಾದ ದ್ವೀಪವನ್ನು ಆರಿಸಿಕೊಂಡು ನೆಲದಮೇಲೆ ಇಲ್ಲವೆ ಸಣ್ಣಗಾತ್ರದ ಮರಗಳ ಮೇಲೆ ಕಡ್ಡಿ,

ಸಮುದ್ರದ ಸಸ್ಯಗಳನ್ನು ಉಪಯೋಗಿಸಿ ಗೂಡುಗಳನ್ನು ನಿರ್ಮಿಸುತ್ತವೆ. ಕೆಲವು ಪ್ರಭೇದಗಳು (ಅಮೆರಿಕದ ಕ್ಯಾಲಿಫೋರ್ನಿಯ ಗಲ್, ಫ್ರಾಂಕ್ಲಿನ್ಸ್ ಗಲ್, ಚೀನದ ಸಾಂಡರ್ಸ್ ಗಲ್, ನ್ಯೂಜಿಲೆಂಡಿನ ಬಲರ್ಸ್ ಗಲ್) ಒಳನಾಡಿನ ಸರೋವರಗಳ ಬಳಿ ಗೂಡು ಕಟ್ಟುತ್ತವೆ. ಭಾರತದಲ್ಲಿ ಕಾಣಬರುವ ಕಂದು ತಲೆಯ ಗಲ್ ಹಿಮಾಲಯದ ಲಡಕ್, ಟಿಬೆಟ್, ಮಾನಸ ಸರೋವರಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಉತ್ತರಾರ್ಧಗೋಳದ ಸಾಗರವಾಸಿಯಾದ ಕಿಟಿವೇಕ್ ಎಂಬ ಹೆಸರಿನ ಗಲ್ ಚಳಿಗಾಲದಲ್ಲಿ ಬ್ರಿಟನಿನವರೆಗೆ ವಲಸೆ ಬಂದು ಸಮುದ್ರತೀರಗಳಲ್ಲಿನ ಪ್ರಪಾತಗಳಲ್ಲಿ ಗೂಡುಕಟ್ಟಿ ಮರಿಮಾಡುತ್ತದೆ. ಬಹುಪಾಲು ಪ್ರಭೇದಗಳಲ್ಲಿ ಮೊಟ್ಟೆಗಳ ಸಂಖ್ಯೆ ಸೂಲಿಗೆ ಮೂರನ್ನು ಮೀರುವುದಿಲ್ಲ. ಮೊಟ್ಟೆಗಳ ಬಣ್ಣ ಕಂದು. ಮೇಲೆಲ್ಲ ಕಗ್ಗಂದು ಇಲ್ಲವೆ ಕಪ್ಪುಬಣ್ಣದ ಚುಕ್ಕೆಗಳಿರುತ್ತವೆ. ಗಂಡು ಹೆಣ್ಣು ಹಕ್ಕಿಗಳೆರಡೂ ಕಾವು ಕೊಟ್ಟು ಮರಿಮಾಡುವ ಮತ್ತು ಮರಿಗಳ ಪಾಲನೆಯ ಕೆಲಸವನ್ನು ಹಂಚಿಕೊಳ್ಳುತ್ತವೆ. ಅದೇ ತಾನೇ ಮೊಟ್ಟೆಯೊಡೆದು ಹೊರಬಂದ ಮರಿಹಕ್ಕಿಗಳು ಸ್ವಶಕ್ತಿಯಿಂದ ನಿಲ್ಲುವ, ನಡೆದಾಡುವ ಸಾಮರ್ಥ್ಯವನ್ನು ಪಡೆದಿವೆಯಾದರೂ ಸಾಮಾನ್ಯವಾಗಿ ಪೂರ್ಣ ದೊಡ್ಡವಾಗುವವರೆಗೂ ತಂದೆತಾಯಿಗಳನ್ನು ಬಿಟ್ಟು ಕದಲುವುದಿಲ್ಲ. ಇವು ಸುಮಾರು 4–6 ವಾರಗಳಲ್ಲಿ ಹಾರುವ ಶಕ್ತಿ ಪಡೆಯುತ್ತವೆ.

ಗಲ್‌ಗಳಲ್ಲಿ ಬಹುಮುಖ್ಯವಾದ ಕೆಲವು ಪ್ರಭೇದಗಳೆಂದರೆ

1. ಲ್ಯಾರಸ್ ಬ್ರುನಿಸಿಫ್ಯಾಲಸ್ (ಕಂದುತಲೆಯ ಗಲ್) : ಭಾರತದಲ್ಲಿ ಕಾಣಬರುವ ಬಗೆ ಇದು. ಕಾಡುಕಾಗೆ ಗಾತ್ರದ್ದು. ಬೂದಿಬಣ್ಣದ ಬೆನ್ನುಭಾಗ, ಬಿಳಿಯ ಹೊಟ್ಟೆಭಾಗ, ಕಾಫಿಬಣ್ಣದ ತಲೆ ಇದೆ. ಕರ್ಕಶವಾಗಿ ಕೀಯಾ ಎಂದು ಕೂಗುತ್ತ ಹಾರಾಡುತ್ತಿರುತ್ತದೆ.

2. ಲ್ಯಾರಸ್ ರಿಡಿಬಂಡಸ್ (ಕಪ್ಪು ತಲೆಯ ಗಲ್) : ಯೂರೇಶಿಯದ ಸಮಶೀತೋಷ್ಣವಲಯಗಳಲ್ಲೆಲ್ಲ ಸಾಮಾನ್ಯ. ಚಳಿಗಾಲದಲ್ಲಿ ಭಾರತಕ್ಕೂ ಬರುತ್ತದೆ. ಯೂರೋಪಿನ ಕೃಷಿ ಭೂಮಿಗಳಲ್ಲಿನ ಕೀಟಗಳನ್ನು ತಿನ್ನುವುದರಿಂದ ಬಲು ಉಪಕಾರಿ ಎನಿಸಿದೆ.

3. ಲ್ಯಾರಸ್ ಮ್ಯಾರಿನಸ್ (ಕಪ್ಪು ಬೆನ್ನಿನ ಗಲ್) : ಉತ್ತರ ಅಟ್ಲಾಂಟಿಕ್ ಸಾಗರದ ತೀರಪ್ರದೇಶಗಳಲ್ಲಿ ಕಾಣಬರುತ್ತದೆ. ಗಲ್ ಹಕ್ಕಿಗಳಲ್ಲೆಲ್ಲ ಅತಿ ದೊಡ್ಡದು. ಇದರ ರೆಕ್ಕೆ ಹರಡಿದಾಗ ಅಗಲ ಸುಮಾರು 1.5 ಮೀ ಗೂ ಹೆಚ್ಚು. ಬೇರೆ ಹಕ್ಕಿಗಳ ಮೊಟ್ಟೆ, ಮರಿ ಮುಂತಾದುವನ್ನು ತಿನ್ನುವುದರಿಂದ ಒಂದು ರೀತಿಯ ಹಿಂಸ್ರ ಪಕ್ಷಿಯಂತಿದೆ.

4. ಲ್ಯಾರಸ್ ಅರ್ಜೆಂಟೇಟಸ್ (ಹೆರ್ರಿಂಗ್ ಗಲ್) : ಉತ್ತರಾರ್ಧಗೋಳದಲ್ಲೆಲ್ಲ ಬಲು ಸಾಮಾನ್ಯ.

5. ಲ್ಯಾರಸ್ ಪಿಪಿಕ್ಸ್‌ಕನ್ (ಫ್ರಾಂಕ್ಲಿನ್ಸ್ ಗಲ್) : ಉತ್ತರ ಅಮೆರಿಕದ ಒಳನಾಡಿನಲ್ಲಿ ವಾಸಿಸುತ್ತದೆ. ಹಿಂದೊಮ್ಮೆ ಕೃಷಿಪಿಡುಗುಗಳಾದ ಮಿಡತೆಗಳನ್ನು ಸಂಪೂರ್ಣವಾಗಿ ನಾಶಮಾಡಿ ಬೆಳೆಯನ್ನು ಉಳಿಸಿಕೊಟ್ಟವೆಂದು ಅಮೆರಿಕದ ಸಾಲ್ಟ್‌ಲೇಕ್ ನಗರಗಳಲ್ಲಿ ಈ ಪ್ರಭೇದದ ಗಲ್‌ಗಳಿಗೆ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ.

6. ಲ್ಯಾರಸ್ ಕ್ಯಾಲಿಫೋರ್ನಿಕಸ್ (ಕ್ಯಾಲಿಫೋರ್ನಿಯ ಗಲ್) : ಉತ್ತರ ಅಮೆರಿಕದಲ್ಲಿನ ಪಶ್ಚಿಮ ಭಾಗಗಳಲ್ಲಿ ಬಲು ಸಾಮಾನ್ಯ. ಅಲ್ಲಿನ ಒಳನಾಡಿನ ಸರೋವರಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ.

7. ಪ್ಯಾಗೊಫಿಲ ಎಬರ್ನಿಯ (ಐವರಿ ಗಲ್) : ಗಲ್‌ಗಳಲ್ಲೆಲ್ಲ ಬಹುಶಃ ಅತ್ಯಂತ ಸುಂದರವಾದುದು. ಮೈಬಣ್ಣ ಅಚ್ಚ ಬಿಳಿ. ಕಾಲುಗಳು ಮಾತ್ರ ಕಪ್ಪು. ಆರ್ಕ್‌ಟಿಕ್ ಪ್ರದೇಶಗಳಲ್ಲಿ ವಾಸಿಸುತ್ತದೆ.

8. ರಿಸ ಟ್ರೈಡ್ಯಾಕ್ಟೈಲ (ಕಿಟಿವೇಕ್) : ಉತ್ತರಾರ್ಧಗೋಳದ ಸಾಗರಗಳಲ್ಲಿ ಕಾಣಬರುತ್ತದೆ. ಬ್ರಿಟನ್ನಿನ ಸಮುದ್ರತೀರದ ಪ್ರಪಾತಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಇದರ ಕಾಲುಗಳಲ್ಲಿ ಹಿಂಬೆರಳು ಇಲ್ಲ.

9. ರೋಡೋಸ್ಟಿತಿಯ ರೋಸಿಯ (ರೋಸಿಯೇಟ್ ಗಲ್) : ಆರ್ಕ್‌ಟಿಕ್ ಪ್ರದೇಶಗಳ ವಾಸಿ. ಗುಲಾಬಿ ಬಣ್ಣದ ರೆಕ್ಕೆ, ಪುಕ್ಕಗಳಿಂದಾಗಿ ಸುಂದರವಾಗಿ ಕಾಣುತ್ತದೆ.

10. ಕ್ಸೀಮ ಸ್ಯಾಬಿನೈ (ಸ್ಯಾಬೈನ್ಸ್ ಗಲ್) : ಇದು ಕೂಡ ಆರ್ಕ್‌ಟಿಕ್ ಪ್ರದೇಶಗಳಲ್ಲಿ ಕಾಣಬರುವಂಥದು. ಇದರ ಬಾಲ ಕವಲೊಡೆದಿದೆ. ನೆಲದಮೇಲೆ ಚೆನ್ನಾಗಿ ಓಡಲೂಬಲ್ಲುದು.

11. ಕ್ರಿಯಾಗ್ರಸ್ ಫರ್ಕೇಟಸ್ (ಕವಲುತೋಕೆ ಗಲ್) : ಗಲಾಪಗಸ್ ದ್ವೀಪಗಳ ಮೂಲವಾಸಿ. ಬಾಲ ಎರಡು ಭಾಗಗಳಾಗಿ ಸೀಳಿದೆ.

12. ಗೇಬಿಯಾನಸ್ ಪ್ಯಾಸಿಫಿಕಸ್ (ಪೆಸಿಫಿಕ್ ಗಲ್) : ಟಾಸ್ಮೇನಿಯ ಮತ್ತು ದಕ್ಷಿಣ ಆಸ್ಟ್ರೇಲಿಯಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ದೇಹದ ಬಣ್ಣ ಬೂದಿ.

(ಜಿ.ಎಸ್.ಆರ್.)

**ಗಾಜಿನ ಮೀನು:** ಆಸ್ಟಿಕ್ತಿಸ್ ವರ್ಗದ ಪರ್ಸಿಫಾರ್ಮಿಸ್ ಗಣದಲ್ಲಿರುವ ಅಂಬಾಸಿಡೆ ಕುಟುಂಬಕ್ಕೆ ಸೇರಿದ ಸಿಹಿನೀರು ಮೀನು. ಅಂಬಾಸಿಸ್ ಎಂಬುದು ಇದರ ವೈಜ್ಞಾನಿಕ ನಾಮ. ಇದಕ್ಕೆ ಸಿಪಾರಿ ಮೀನು ಎಂಬ ಹೆಸರಿದೆ. ಸು. 90 ಸೆಂಮೀ. ಉದ್ದ ಬೆಳೆಯುತ್ತದೆ. ವರ್ಣರಂಜಿತವಾಗಿದೆ. ಭಾರತ ಮತ್ತು ಬರ್ಮದೇಶಗಳ ಕೆರೆಕುಂಟೆಗಳಲ್ಲಿ ವಾಸಿಸುತ್ತದೆ. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಸಾಮಾನ್ಯವಾಗಿದೆ. ದೇಹದ ಬಣ್ಣ ಹಳದಿಮಿಶ್ರಿತ ಅಲಿವ್. ದೇಹದ ಮೇಲೆಲ್ಲಾ ಕಪ್ಪುಬಣ್ಣದ ಚುಕ್ಕೆಗಳಿವೆ. ಭುಜದ ಮೇಲೆ ಚುಕ್ಕೆಗಳು ದೀರ್ಘ ಚತುರಸ್ರಾಕಾರದ ಮಚ್ಚೆಯಾಗಿ ಒಟ್ಟುಗೂಡಿವೆ. ತಲೆಯ ಮೇಲ್ಭಾಗ ಹಾಗೂ ಬೆನ್ನು ಭಾಗದ ಮೊದಲನೆಯ ಈಜುರೆಕ್ಕೆಯ ಅರ್ಧ ಭಾಗ ಕಪ್ಪು ಬಣ್ಣದುವು. ಪಾರ್ಶ್ವದ ಈಜು ರೆಕ್ಕೆಗಳು ಕಿತ್ತಳೆ ಬಣ್ಣಕ್ಕಿವೆ. ತಲೆಯಿಂದ ಬೆನ್ನು ಭಾಗದ ಮೊದಲ ಈಜು ರೆಕ್ಕೆಯವರೆಗೆ ಇರುವ ಉಬ್ಬು, ಮೇಲಿನ ದವಡೆಗಿಂತ ಉದ್ದವಾಗಿರುವ ಕೆಳ ದವಡೆ, ಕೆಳದವಡೆಯ ಸಂಯೋಜನಾ ಸ್ಥಾನದ (ಸಿಂಫೈಸಿಸ್) ಎರಡು ಕಡೆಗಳಲ್ಲಿ ಮುಂದಕ್ಕೆ ಚಾಚಿರುವ ಡೊಂಕಾದ ಕೋರೆಹಲ್ಲುಗಳು, ಎರಡು ದವಡೆಗಳಲ್ಲಿ ಹಲ್ಲಿನ ಎರಡು ಪಂಕ್ತಿಗಳು, ಒಂದೇ ಸಮನಾದ ಉದ್ದದ ಎರಡು ಹಾಲೆಗಳಾಗಿ ಸೀಳುಗೊಂಡಿರುವ ಬಾಲದ ಈಜುರೆಕ್ಕೆ ಗಾಜು ಮೀನಿನ ಪ್ರಮುಖ ಲಕ್ಷಣಗಳು. ***

**ಗಾರ್‌ಪೈಕ್:** ಲೆಪಿಡಾಸ್ಟಿಯಿಡೆ ಕುಟುಂಬಕ್ಕೆ ಸೇರಿದ ಲೆಪಿಸಾಸ್ಟಿಯಸ್ ಜಾತಿಯ ಮೀನುಗಳನ್ನು ಗಾರ್‌ಪೈಕ್ ಎನ್ನುವರು. ಇವುಗಳಲ್ಲಿ 13 ಪ್ರಭೇಧಗಳಿವೆ. ಈ ಜಾತಿಯ ಮೀನುಗಳು ಮಧ್ಯ ಅಮೆರಿಕ, ಉತ್ತರ ಅಮೆರಿಕ ಹಾಗೂ ವೆಸ್ಟ್ ಇಂಡೀಸಿನ ಸಿಹಿನೀರು ಕೊಳಗಳಲ್ಲಿ, ಕೆರೆಗಳಲ್ಲಿ, ನದಿಗಳಲ್ಲಿ ವಾಸಿಸುತ್ತವೆ. ಕೆಲವು ಪ್ರಭೇದಗಳು ಉಪ್ಪು ನೀರಿನಲ್ಲಿ ವಾಸಿಸುತ್ತವೆ. ಉದ್ದ, ತೆಳು ಮತ್ತು ಕೊಳವೆಯಂಥ ದೇಹ, ಉದ್ದವಾದ ಕೊಕ್ಕಿನಂಥ ಮತ್ತು ಹಲವಾರು ಸಾಲು ಹಲ್ಲುಗಳುಳ್ಳ ಮೂತಿ, ನುಣುಪಾಗಿ ಹೊಳೆಯುವ ದೃಢವಾದ ಗ್ಯಾನಾಯ್ಡ್ ಶಲ್ಕಗಳ ಹೊದಿಕೆ, ಚಿಕ್ಕಗಾತ್ರದ ಈಜು ರೆಕ್ಕೆಗಳು ಮತು ಹೆಟರೊ ಸರ್ಕಲ್ ಮಾದರಿಯ ಬಾಲದ ಈಜುರೆಕ್ಕೆ ಇವು ಗಾರ್‌ಪೈಕ್ ಮೀನಿನ ಪ್ರಮುಖ ಲಕ್ಷಣಗಳು. ಗಾರ್ ಪೈಕ್‌ಗಳು ಪ್ರಾಚೀನ ಕಾಲದ ಮೀಸೋಜೋಯಿಕ್ ಯುಗದಿಂದಲೂ ಅಸ್ತಿತ್ವದಲ್ಲಿವೆಯೆಂದು ಹೇಳಲಾಗಿದೆ. ಮಾಂಸಾಹಾರಿಗಳಾದ ಇವು ಇನ್ನಿತರ ಜಾತಿಯ ಮೀನುಗಳನ್ನು ತಿಂದು ಬದುಕುತ್ತವೆ. ನಿಧಾನವಾಗಿ ಹರಿಯುವ ನೀರಿನ ಮೇಲೆ ತೇಲುತ್ತಿದ್ದು, ಆಹಾರ ಪ್ರಾಣಿ ಕಂಡಕೂಡಲೆ ಚುರುಕಾಗಿ ಅದರ ಮೇಲೆರಗಿ ತಮ್ಮ ಕೊಕ್ಕಿನಂತಿರುವ ಬಾಯಿಂದ ಹಿಡಿದು ಕಬಳಿಸುತ್ತವೆ. ಇವು ಬಲು ಹೊಟ್ಟೆಬಾಕಗಳೆಂದು ಹೆಸರಾಗಿವೆ.

ಗಾರ್‌ಪೈಕ್‌ಗಳಿಗೆ ಶತ್ರುಗಳು ಕಡಿಮೆ. ಇವುಗಳ ದೇಹದ ಮೇಲೆ ಗಡುಸಾದ ಗ್ಯಾನಾಯ್ಡ್ ಶಲ್ಕಗಳ ಹೊದಿಕೆ ಗಟ್ಟಿಯಾಗಿರುವುದರಿಂದ ಇವನ್ನು ಬೇರೆ ಮೀನುಗಳು ತಿನ್ನಲಾರವು. ಇವುಗಳ ಮೊಟ್ಟೆಗಳು ಬಹಳ ವಿಷಪೂರಿತವಾಗಿರುವುದರಿಂದ ಬೇರೆ ಪ್ರಾಣಿಗಳು ಇವನ್ನು ತಿನ್ನುವುದಿಲ್ಲ. ಆದಕಾರಣ, ಕೆಲವು ಸಲ ಇವು ಹೆಚ್ಚು ಸಂಖ್ಯೆಯಲ್ಲಿ ಬೆಳೆದು ಬೇರೆ ಮೀನುಗಳಿಗೆ ಹಾನಿಕಾರಕವಾಗುತ್ತವೆ. ಗಾರ್‌ಪೈಕ್‌ಗಳಲ್ಲಿ ಬಲು ಮುಖ್ಯವಾದುವು ಲೆಪಿಸಾಸ್ಟಿಯಸ್ ಟ್ರಿಸ್ಟಾಯಿಕಸ್ (ಆಲಿಗೇಟರ್ ಗಾರ್) ಮತ್ತು ಲೆ. ಆಸಿಯಸ್ (ಲಾಂಗ್‌ನೋಸ್ ಗಾರ್). ಮೊದಲನೆಯದು ದೈತ್ಯಾಕಾರವಾಗಿದ್ದು, ಸು. 3.6 ಮೀ. ಉದ್ದ ಬೆಳೆಯುತ್ತದೆ. ಎರಡನೆಯದು ಗಾತ್ರದಲ್ಲಿ ಚಿಕ್ಕದು. ಈ ಮೀನುಗಳು ಪರಿಸರದಲ್ಲಿ ಬೇರೆ ಜಾತಿಯ ಮೀನುಗಳನ್ನು ತಿಂದು ಜೀವರಾಶಿಯ ಸಮತೋಲನ ಕಾಪಾಡುವಲ್ಲಿ ಪಾತ್ರ ವಹಿಸುತ್ತವೆ. ***

**ಗಾರ್ ಮೀನು:** ಬೆಲಾನಿಡೆ ಕುಟುಂಬಕ್ಕೆ ಸೇರಿದ ಬೆಲೋನೀ ಮತ್ತು ಸ್ಟ್ರಾಂಗಿಲ್ಯೂರ ಜಾತಿಯ ಮೀನುಗಳಿಗಿರುವ ಸಾಮಾನ್ಯ ಹೆಸರು. ಬೆಲೋನೀ ಜಾತಿಯ ಕ್ಯಾನ್ಸಿಲ್, ಕೋರಮ್, ಆನ್ಯುಲೇಟ, ಲ್ಯೆಯೂರಸ್ ಪ್ರಭೇದಗಳು ಮತ್ತು ಸ್ಟ್ರಾಂಗಿಲ್ಯೂರ ಜಾತಿಯ ಮರಿನ ಪ್ರಭೇದದ ಮೀನುಗಳೇ ಗಾರ್ ಮೀನುಗಳು. ಇವುಗಳಲ್ಲಿ ಕೆಲವು ಸಾಗರದಲ್ಲಿ ಮತ್ತು ಕೆಲವು ಸಿಹಿನೀರಿನ ಕೊಳ ಮತ್ತು ನದಿಗಳಲ್ಲಿ ವಾಸಿಸುತ್ತವೆ. ಬಲು ಉದ್ದವಾದ ದೇಹ ಮತ್ತು ಕೊಕ್ಕಿನಂತೆ ಲಂಬಿತವಾದ ಮೂತಿ, ಎರಡು ದವಡೆಗಳಲ್ಲಿರುವ ಚೂಪಾದ ಹಲ್ಲುಗಳು, ಮತ್ತು ಚಿಕ್ಕದಾಗಿರುವ ಈಜುರೆಕ್ಕೆಗಳಿವೆ. ಪಾರ್ಶ್ವರೇಖೆ ಉದರಭಾಗದಲ್ಲಿದೆ. ಗುದದ ಮತ್ತು ಬೆನ್ನುಭಾಗದ ಈಜು ರೆಕ್ಕೆಗಳು ಬಾಲದ ಈಜುರೆಕ್ಕೆಗೆ ಹತ್ತಿರವಾಗಿವೆ. ಬಾಲದ ಈಜುರೆಕ್ಕೆ ಎರಡು ಹಾಲೆಗಳನ್ನೊಳಗೊಂಡಿದೆ. ಇವುಗಳ ಗಾರ್ ಮೂಳೆ ಹಸಿರು ಬಣ್ಣದಿಂದಿದೆ. ಮೂತಿ ಬಲು ಉದ್ದವಾಗಿ ಚೂಪಾಗಿ ಇರುವುದರಿಂದ ಈ ಮೀನನ್ನು ಸೂಜಿ ಮೀನು (ನೀಡಲ್ ಫಿಶ್ ), ಕೊಕ್ಕು ಮೀನು (ಬಿಲ್ ಫಿಶ್) ಎಂದು ಕರೆಯಲಾಗುತ್ತದೆ. ಇವು ನೀರಿನ ಮೇಲ್ಮಟ್ಟದ ಪದರದಲ್ಲಿ ಈಜುತ್ತಿರುತ್ತವೆ. ಆಗಿಂದಾಗ್ಗೆ ನೀರಿನಿಂದ ಮೇಲಕ್ಕೆ ನೆಗೆಯುತ್ತವೆ.

ಗಾರ್ ಮೀನುಗಳು ಮಾಂಸಾಹಾರಿಗಳು. ಹೆರ್ರಿಂಗ್, ಮ್ಯಾಕರೆಲ್, ಪಿಲ್ಚರ್ಡ್ ಜಾತಿಯ ಮೀನುಗಳ ಮರಿಗಳನ್ನು ತಿಂದು ಬದುಕುತ್ತವೆ. ಆಹಾರವನ್ನು ಹಿಡಿಯಲು ತಮ್ಮ

ಉದ್ದವಾದ ಮೂತಿಯನ್ನು ಹಕ್ಕಿಯ ಕೊಕ್ಕಿನಂತೆ ಬಳಸಿಕೊಳ್ಳುತ್ತವೆ. ಗಾರ್ ಮೀನುಗಳ ಮಾಂಸ ಸಾಕಷ್ಟು ರುಚಿಯಾಗಿದ್ದರೂ, ಆಹಾರಕ್ಕಾಗಿ ಇವುಗಳನ್ನು ಹೆಚ್ಚಾಗಿ ಬಳಸುವುದಿಲ್ಲ.

***

**ಗಾಲ್ಟನ್, ಸರ್ ಫ್ರಾನ್ಸಿಸ್:** ಗಾಲ್ಟನ್, ಸರ್ ಫ್ರಾನ್ಸಿಸ್ 1822–1911. ವಿಜ್ಞಾನಿ. ಜನನ ಬರ್ಮಿಂಗ್‌ಹ್ಯಾಮಿನಲ್ಲಿ. ಈತ ಚಾರ್ಲ್ಸ್ ಡಾರ್ವಿನ್ನನ ಸಮೀಪಬಂಧು. ಕಿಂಗ್ ಎಡ್ವರ್ಡ್ಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ವೈದ್ಯಶಾಸ್ತ್ರವನ್ನು ಓದಿದ. ಅನಂತರ ಕೇಂಬ್ರಿಜಿನಲ್ಲಿ ಗಣಿತವಿಜ್ಞಾನವನ್ನು ಅಭ್ಯಸಿಸಿದ. ಆವರೆಗೂ ಯಾರ ಕಣ್ಣಿಗೂ ಬೀಳದಿದ್ದ ಆಫ್ರಿಕದ ಡಮರಲ್ಯಾಂಡ್ ಮತ್ತು ಇತರ ಭಾಗಗಳನ್ನೂ ನೋಡಿಬಂದು ಟ್ರಾಪಿಕಲ್ ಸೌತ್ ಆಫ್ರಿಕ (1853) ಮತ್ತು ದಿ ಆರ್ಟ್ ಆಫ್ ಟ್ರ್ಯಾವಲ್ (1855) ಎಂಬ ಪುಸ್ತಕಗಳನ್ನು ಬರೆದ. 1856 ರಲ್ಲಿ ರಾಯಲ್ ಸೊಸೈಟಿಯ ಫೆಲೋ ಆಗಿ ಚುನಾಯಿತನಾದ. 1863ರಿಂದ 1867ರ ವರೆಗೆ ಬ್ರಿಟಿಷ್ ಅಸೋಸಿಯೇಷನಿನ ವಿಜ್ಞಾನಾಭಿವೃದ್ಧಿ ಶಾಖೆಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ. ಪವನಶಾಸ್ತ್ರದ ಬಗ್ಗೆ ಗಮನಾರ್ಹವಾದ ಕೆಲಸ ಮಾಡಿದ. ಈತ ಅನುವಂಶೀಯತೆಯ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಹೆರಿಡಿಟರಿ ಕಾಸಸ್ (1869), ಹ್ಯೂಮನ್ ಫ್ಯಾಕಲ್ಟಿ (1883), ನ್ಯಾಚುರಲ್ ಇನ್‌ಹೆರಿಟೆನ್ಸ್ (1869), ನೋಟ್‌ವರ್ದಿ ಫ್ಯಾಮಿಲೀಸ್ (1906) ಎಂಬ ಗ್ರಂಥಗಳನ್ನು ಬರೆದ. ಪುದುವಟ್ಟು ಕೊಟ್ಟು ಲಂಡನ್ ವಿಶ್ವವಿದ್ಯಾಲಯದಲ್ಲಿ ಉತ್ತಮ ಸಂತಾನವಿಜ್ಞಾನ ವಿಭಾಗವನ್ನು ತೆರೆಯಲು ಕಾರಣಕರ್ತನಾದ. ಕೊಲೆ ಮುಂತಾದ ಅಪರಾಧಗಳ ತನಿಖೆಯಲ್ಲಿ ಬೆರಳು ಗುರುತುಗಳನ್ನು ತಿಳಿದು ಪತ್ತೆ ಹಚ್ಚುವ ಸಂಶೋಧನಾವಿಧಾನವನ್ನು ಜಾರಿಗೆ ತಂದವರಲ್ಲಿ ಈತನೇ ಮೊದಲಿಗ. 1909 ರಲ್ಲಿ ಈತನಿಗೆ ನೈಟ್ ಹುಡ್ ದೊರಕಿತು.

ಸಂಖ್ಯಾಕಲನ ಪದ್ಧತಿಯನ್ನು ವಿಶೇಷವಾಗಿ ಈತ ಬಳಕೆಗೆ ತಂದ. ಶ್ರೀಮಂತ ಕುಟುಂಬದವನಾದುದರಿಂದ ಯಾವೊಂದು ಹುದ್ದೆಗೂ ಅಂಟದೆ ಕೊನೆಯವರೆಗೂ ಈತ ಸ್ವತಂತ್ರವಾದ ಸಂಶೋಧನೆ ಮತ್ತು ಅಧ್ಯಯನಗಳನ್ನು ನಡೆಸಿದ. ತುಂಬು ಪ್ರತಿಭಾವಂತನಾದ ಈತನಲ್ಲಿ ಅಮಿತವಾದ ಆಸಕ್ತಿ, ಅದ್ಭುತವಾದ ಕಲ್ಪನೆಯಿದ್ದುದರಿಂದ ಹೊಸ ಹೊಸ ಸಂಶೋಧನೆಗಳಿಗೆ ಬುನಾದಿ ಹಾಕಿದ. ಮಾನವ ಕಪಾಲಮಾಪನ, ಉತ್ತಮ ಸಂತಾನವಿಜ್ಞಾನ, ಸಂಖ್ಯಾಕಲನವಿಜ್ಞಾನದಲ್ಲಿ ಕ್ವೆಟ್‌ಲೆಟ್ ಪದ್ಧತಿ, ಬುದ್ಧಿಮಾಪನ ಪರೀಕ್ಷಾ ಯಂತ್ರರಚನೆ–ಈ ಕ್ಷೇತ್ರಗಳಲ್ಲಿ ಈತ ಆದ್ಯನೆನ್ನಲಾಗಿದೆ. ಆನುವಂಶೀಯ ನಿಯಮಗಳನ್ನು ಅನುಸರಿಸಿ ಮಾನವರಲ್ಲಿ ಶ್ರೇಷ್ಠ ತಳಿ(?)ಯನ್ನು ಉತ್ಪಾದಿಸಬಹುದು ಎಂಬ ವಿವಾದಾತ್ಮಕ ವಾದವನ್ನು ಮುಂದಿಟ್ಟ ಖ್ಯಾತಿ ಈತನದ್ದು. (ಎಸ್.ಕೆ.ಆರ್.)

**ಗಾಲ್ಜಿ, ಕ್ಯಾಮಿಲೊ:** (1843–1926) ಇಟಲಿಯ ಸುಪ್ರಸಿದ್ಧ ಅಂಗಾಂಶ ವಿಜ್ಞಾನಿ, ಕೋಶವಿಜ್ಞಾನಿ ಹಾಗೂ ವೈದ್ಯ. 1843ನೆಯ ಇಸವಿ ಜುಲೈ 9 ರಂದು ಲಾಂಬರ್ಡಿ ಪ್ರಾಂತ್ಯದ ಕಾರ್ಟಿನೋ ನಗರದಲ್ಲಿ ಜನಿಸಿದ. ತಂದೆ ವೈದ್ಯ. ಈತನೂ ತಂದೆಯ ವೃತ್ತಿಯನ್ನೇ ಕೈಗೊಳ್ಳುವ ಸಲುವಾಗಿ ಪಾಡುವಾ ವಿಶ್ವವಿದ್ಯಾಲಯದಲ್ಲಿ ವೈದ್ಯಶಾಸ್ತ್ರವನ್ನು ಓದಿ 1865ರಲ್ಲಿ ಪದವಿ ಪಡೆದ. ಅನಂತರ ಅಬ್ಬಿಯ ಟೆಗ್ರಾಸೊ ಎಂಬ ಹಳ್ಳಿಯಲ್ಲಿ ವೈದ್ಯವೃತ್ತಿಯನ್ನು ಆರಂಭಿಸಿದ. ಉತ್ತಮ ಸಂಶೋಧನ ಸೌಲಭ್ಯವಿರದಿದ್ದರೂ ಅಲ್ಲಿಯೇ ಈತ ಸಂಶೋಧನೆಗಳನ್ನು ನಡೆಸಿ ನರಜೀವಕೋಶಗಳನ್ನು ನರಮಂಡಲಗಳನ್ನೂ ವಿಶಿಷ್ಟವಾಗಿ ವರ್ಣೀಕರಿಸುವ ಸಿಲ್ವರ್ ನೈಟ್ರೇಟ್ ವಿಧಾನವನ್ನು ಕಂಡುಹಿಡಿದ. ಇದರಿಂದ ನರಮಂಡಲದ ಸೂಕ್ಷ್ಮ ರಚನೆಯ ಅಭ್ಯಾಸ ಸುಲಭವಾಯಿತು. ಒಂದು ರೀತಿಯಲ್ಲಿ ನರವಿಜ್ಞಾನದ ಆಧುನಿಕ ಅಭ್ಯಾಸ ಈತನಿಂದ ಆರಂಭವಾಯಿತು ಎಂದರೆ ಉತ್ಪ್ರೇಕ್ಷೆಯಿಲ್ಲ. ಇದೇ ರೀತಿ ತನ್ನ ಹೊಸ ವಿಧಾನಗಳ ಬಳಕೆಯಿಂದ ಪ್ರಾಣಿಗಳ ಜೀವಕೋಶದಲ್ಲಿ ಸೆಂಟ್ರೋಸೋಮನ್ನು ಸುತ್ತುವರಿದಿರುವ ಮತ್ತು ರಾಸಾಯನಿಕವಾಗಿ ಲೋಹೀಯ ಲವಣಗಳಿಗೆ ಒಲವನ್ನು ತೋರುವ ಕೆಲವು ವಿಶೇಷ ರಚನೆಗಳನ್ನು ಮೊತ್ತಮೊದಲ ಬಾರಿಗೆ ಈತ ಕಂಡುಹಿಡಿದ. ಈ ರಚನೆಗಳಿಗೆ ಇವನ ಗೌರವಾರ್ಥವಾಗಿ ಗಾಲ್ಜಿ ರಚನೆಗಳೆಂದು ಹೆಸರು ಕೊಡಲಾಗಿದೆ. ಜೀವಕೋಶಗಳ ಅಧ್ಯಯನಕ್ಕೆ ಲೋಹ ಲವಣಗಳನ್ನು ಬಳಸುವ ವಿಧಾನವನ್ನು ಮೊದಲು (1873) ಬಳಕೆಗೆ ತಂದವನೂ ಇವನೇ. ಈ ಲವಣಗಳ ಬಳಕೆಯಿಂದ ಜೀವಕೋಶಾಂಗಗಳು ಸೂಕ್ಷ್ಮದರ್ಶಕದಲ್ಲಿ ಚೆನ್ನಾಗಿ ಕಾಣುತ್ತವೆ. ಕೇಂದ್ರ ನರಮಂಡಲ, ಸಂವೇದನಾಂಗ, ಸ್ನಾಯು ಮತ್ತು ಗ್ರಂಥಿಗಳ ಅಭ್ಯಾಸಕ್ಕೂ ಈ ವಿಧಾನವನ್ನು ಅನ್ವಯಿಸಲಾಗಿದೆ. ಗಾಲ್ಜಿ 1879ರಲ್ಲಿ ಸಿಯೆನ ವಿಶ್ವವಿದ್ಯಾಲಯದ ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾಗಿ ನೇಮಕಗೊಂಡ. ಮರುವರ್ಷ ಪಾವೀಯ ವಿಶ್ವವಿದ್ಯಾಲಯದಲ್ಲಿ ಅಂಗಾಂಶವಿಜ್ಞಾನ ಮತ್ತು ರೋಗನಿದಾನವಿಜ್ಞಾನದ ಪ್ರಾಧ್ಯಾಪಕನಾದ. ಅನಂತರ 1880ರಲ್ಲಿ ಮಲೇರಿಯ ರೋಗದ ಕಡೆಗೆ ಗಮನ ಹರಿಸಿ ರೋಗಾಣುವಿನ ಜೀವನಚರಿತ್ರೆಯನ್ನು ಅಭ್ಯಸಿಸಿದ. ರೋಗಾಣು ಮನುಷ್ಯದೇಹದಲ್ಲಿ ನಡೆಸುವ ಜೀವನಚಕ್ರವನ್ನು ಕಂಡುಹಿಡಿದ ಕೀರ್ತಿ ಈತನದೇ. ಇದಕ್ಕಾಗಿ ಈ ಚಕ್ರಕ್ಕೆ ಗಾಲ್ಜಿಚಕ್ರ ಎಂದೇ ಹೆಸರು ಕೊಡಲಾಗಿದೆ.



ನರಮಂಡಲದ ಬಗ್ಗೆ ನಡೆಸಿದ ಸಂಶೋಧನೆಗಳಿಗಾಗಿ ಗಾಲ್ಜಿಗೆ 1906ರಲ್ಲಿ ನೊಬೆಲ್ ಪ್ರಶಸ್ತಿ ದೊರಕಿತು. 1926ನೆಯ ಇಸವಿ ಜನವರಿ 21ನೆಯ ತಾರೀಖು ಗಾಲ್ಜಿ ಪಾವೀಯದಲ್ಲಿ ನಿಧನನಾದ. (ಎಚ್.ಬಿ.ಡಿ.)

**ಗಾಲ್‌ಮಿಡ್ಜ್:** ಡಿಪ್ಟರ ಗಣದ ಸಿಸಿಡೊಮೈಯಿಡೆ ಕುಟುಂಬಕ್ಕೆ ಸೇರಿದೆ. ಹಲವು ಜಾತಿ ಮತ್ತು ಪ್ರಭೇದಗಳು ಹಲವು ತರಹದ ಸಸ್ಯಗಳಲ್ಲಿ ಬದುಕುತ್ತವೆ. ಭತ್ತದ ಮತ್ತು ಮುಸುಕಿನ ಜೋಳದ ಸಸ್ಯಗಳಲ್ಲಿ ಜೀವನ ಚರಿತ್ರೆಯನ್ನು ಸಾಗಿಸುವ ಮಿಡ್ಜ್‌ಗಳನ್ನು ಓರ್ಸಿಯೋಲಿಯ ಓರೈಝೆ, ಬಸವನ ಪಾದದ ಮರದಲ್ಲಿ ಬದುಕುವ ಮಿಡ್ಜ್‌ಗಳನ್ನು ಪ್ಯಾರಡಿಪ್ಲೋಸೀಸ್ ಟೈಮಿಫೆಕ್ಸ್, ಕಿತ್ತಳೆ ಜಾತಿಯ ಗಿಡಗಳಲ್ಲಿ ಬೆಳೆಯುವವನ್ನು ಪ್ಯಾರಡಿಪ್ಲೋಸೀಸ್ ಲಾಂಜಿಫೈಲಾ ಎಂದು ಕರೆಯಲಾಗುತ್ತದೆ. ಹೇನುಗಳು ವಾಸಿಸುವ ಸಸ್ಯಗಳಲ್ಲಿಯೂ ಸಹ ಇವು ವಾಸಿಸುತ್ತವೆ. ಸಸ್ಯಗಳಲ್ಲಿ ಪ್ರೌಢ ಮಿಡ್ಜ್‌ಗಳು ಗಂಟು ಉಂಟು ಮಾಡುತ್ತವೆ.

ಹೆಣ್ಣು ಮಿಡ್ಜ್ ಕೆಂಪು ವರ್ಣದ ಉದರವನ್ನು ಹೊಂದಿದೆ. ಗಂಡಿನ ದೇಹವು ತಿಳಿ ಹಳದಿ ಅಥವಾ ಕಂದು ಬಣ್ಣದಿಂದ ಕೂಡಿರುತ್ತದೆ. ಸಾಮಾನ್ಯವಾಗಿ ಗಂಡು ಮಿಡ್ಜ್ ಹೆಣ್ಣಿಗಿಂತ ಚಿಕ್ಕದಾಗಿರುತ್ತದೆ. ಎರಡು ಜೊತೆ ರೆಕ್ಕೆಗಳನ್ನು ಹೊಂದಿದ್ದು 3 ರಿಂದ 3.5 ಮಿಮೀ ವಿಸ್ತಾರವಾಗಿರುತ್ತವೆ. ಗಂಡು ಮತ್ತು ಹೆಣ್ಣು ಎರಡೂ ಸಹ 10 ಕ್ಕಿಂತ ಹೆಚ್ಚು ಖಂಡಗಳಿರುವ ಮಣಿಸರದಾಕಾರದ ಸ್ಪರ್ಶಾಂಗಗಳನ್ನು ಹೊಂದಿವೆ. ನಿಶಾಚಾರಿಗಳಾಗಿದ್ದು ರಾತ್ರಿ ಸಮಯದಲ್ಲಿ ಸುಲಭವಾಗಿ ದೀಪದ ಬೆಳಕಿನ ಸಹಾಯದಿಂದ ಹಿಡಿಯಬಹುದು. ಕೊನೆಯ ಕೋಶಾವಸ್ಥೆಯಿಂದ (ಪ್ಯೂಪ) ಹೊರಬಂದ ತಕ್ಷಣವೆ ಪ್ರೌಢ ಮಿಡ್ಜ್‌ಗಳು ಸಮ್ಮಿಲನ (ಸಂತಾನಕ್ರಿಯೆ) ದಲ್ಲಿ ತೊಡಗುವುದು ಒಂದು ವಿಶಿಷ್ಟ ಲಕ್ಷಣ. ಆದರೆ ಹೆಣ್ಣು ಮಿಡ್ಜ್ ತನ್ನ ಜೀವಿತಾವಧಿಯಲ್ಲಿ ಒಂದೇ ಒಂದು ಬಾರಿ ಸಂತಾನಕ್ರಿಯೆಯಲ್ಲಿ ಭಾಗಿಯಾಗಿರುತ್ತದೆ. ಒಂದು ಹೆಣ್ಣು ಮಿಡ್ಜ್ 100–200 ಮೊಟ್ಟೆಗಳನ್ನು ಅದರ 4 ದಿವಸಗಳ ಜೀವಿತಾವಧಿಯಲ್ಲಿ ಇಡುತ್ತದೆ. ಗಂಡು ಮಿಡ್ಜ್ ಮಾತ್ರ ಸಮ್ಮಿಲನ ಕ್ರಿಯೆ ಮುಗಿದ 12 ರಿಂದ 18 ಗಂಟೆಗಳ ಒಳಗೆ ಸಾಯುತ್ತದೆ. ಮೊಟ್ಟೆಗಳು ಉದ್ದವಾದ ಕೊಳವೆಯಾಕಾರದಲ್ಲಿರುತ್ತವೆ. ಆಗ ತಾನೇ ಹೊಸದಾಗಿ ಇಟ್ಟಿದ್ದ ಮೊಟ್ಟೆಗಳಲ್ಲಿ ವರ್ಣವೈವಿಧ್ಯವಿದೆ. ಶ್ವೇತ, ಗುಲಾಬಿ, ಕೆಂಪು ಮತ್ತು ಹಳದಿ ಬಣ್ಣಬರಬಹುದು. ಹುಳುಗಳು ಮೊಟ್ಟೆಯಿಂದ ಹೊರಬರುವ ಮುನ್ನ , ಆ ಮೊಟ್ಟೆಗಳು ಶಿಲಾರಾಶಿಯಂತೆ ಹೊಳೆಯುತ್ತಿರುತ್ತವೆ. ಒಂದು ಅಥವಾ 3–4 ಮೊಟ್ಟೆಗಳ ಗುಂಪುಗಳು ಭತ್ತದ ಚಿಗುರೊಡೆಯುವ ಗಿಣ್ಣುಗಳಲ್ಲಿ, ಎಲೆಯ ತಳದ ಭಾಗಗಳಲ್ಲಿ ಹಾಗೂ ಎಲೆಯ ಮೇಲ್ಭಾಗಗಳಲ್ಲಿ ಕಂಡು ಬರುತ್ತವೆ. ಮೊಟ್ಟೆಗಳ ಬೆಳವಣಿಗೆ 3–4 ದಿವಸಗಳಲ್ಲಿ ಮುಗಿಯುತ್ತದೆ.

ಮಿಡ್ಜ್‌ಗಳ ಕೋಶಾವಸ್ಥೆಯ ಮೊದಲ ಹುಳು ಕಾಲುಗಳಿಲ್ಲದ 1 ಮಿಮೀ ಉದ್ದದ ಬೂದು ಅಥವಾ ಶ್ವೇತವರ್ಣದ್ದಾಗಿರುತ್ತದೆ. ಈ ಹುಳುಗಳು ಕಾಂಡದಲ್ಲಿ ಚಿಗುರು ಬರುವ ಅಥವಾ ಗಿಣ್ಣುಗಳಿರುವ ಜಾಗದಲ್ಲಿ ಆಹಾರಕ್ಕಾಗಿ ನೆಲೆಸಿರುತ್ತವೆ. ಒಂದು ಗಿಣ್ಣಿನಲ್ಲಿ ಒಂದು ಹುಳು ಮಾತ್ರ ಇರುತ್ತದೆ. ಈ ಹುಳುಗಳು ಗಿಣ್ಣಿನ ಬುಡವನ್ನು ತಿನ್ನುತ್ತಾ ಹೋಗುತ್ತವೆ. ಕೊನೆಗೆ ಕೊಳವೆಯಾಕಾರದ ಗಂಟು ಉತ್ಪತ್ತಿಯಾಗುತ್ತದೆ. ಈ ಗಂಟುಗಳು ಸಸ್ಯಗಳು ಚಿಗುರು ಒಡೆಯುವುದನ್ನು ಹಾಗೂ ಎಲೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಎಡೆಬಿಡದೆ ಚಿಗುರು ಒಡೆಯುವ ತಳವನ್ನು ಹಾಗೂ ಕಾಂಡವನ್ನು ತಿನ್ನುವ ಹುಳುವಿನಿಂದ ಗಂಟು ದೊಡ್ಡದಾಗುತ್ತಾ ಹೋಗುತ್ತದೆ. ಕೋಶಾವಸ್ಥೆಯ ಹುಳುಗಳ ಬೆಳವಣಿಗೆಯೂ 3–4 ಹಂತದಲ್ಲಿದ್ದು 15–20 ದಿವಸಗಳಲ್ಲಿ ಕೋಶಾವಸ್ಥೆಯ ಕೊನೆಯ ಹಂತ ತಲುಪುತ್ತವೆ.

ಕೋಶಾವಸ್ಥೆಯ ಕೊನೆಯ ಹಂತದ ಹುಳುವು ತಿಳಿ ಗುಲಾಬಿ ಬಣ್ಣದ್ದಾಗಿದ್ದು ಉದರವು ಮುಳ್ಳುಗಳಿಂದ ಆವೃತಗೊಂಡಿರುತ್ತದೆ. ಪ್ರೌಢಾವಸ್ಥೆಗೆ ಬರುವುದರೊಳಗೆ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಕೊನೆಯ ಹಂತದಲ್ಲಿ ಹುಳುಗಳು 2–2.5 ಮಿಮೀ ಉದ್ದ ಹಾಗೂ ಹಾಗೂ 0.6–0.8 ಮಿಮೀ ದಪ್ಪವಿರುತ್ತವೆ. ಈ ಕೊನೆಯ ಹಂತದ ಬೆಳವಣಿಗೆಯು 2–8 ದಿವಸಗಳಲ್ಲಿ ಮುಗಿದು ಪ್ರೌಢಾವಸ್ಥೆಯ ಮಿಡ್ಜ್‌ಗಳಾಗಿ ಬೆಳೆಯುತ್ತವೆ. ಈ ಎಲ್ಲಾ ಬೆಳವಣಿಗೆಗಳೂ ಸಸ್ಯಗಳ ಗಂಟಿನಲ್ಲಿಯೇ ನಡೆಯುತ್ತವೆ. (ಎಚ್.ಪಿ.ಜಿ)

**ಗಾಳದ ಮೀನು:** ಪೆಡಿಕ್ಯುಲೇಟಿ ಅಥವಾ ಲೋಫಿಫಾರ್ಮಿಸ್ ಗಣದ ಲೋಫೈಯಿಡೆ ಕುಟುಂಬಕ್ಕೆ ಸೇರಿದ ಲೋಫಿಯಸ್ ಜಾತಿಯ ಮೀನುಗಳಿಗಿರುವ ಸಾಮಾನ್ಯ ಹೆಸರು. ಆಂಗ್ಲ ಭಾಷೆಯಲ್ಲಿ ಆಂಗ್ಲರ್ ಫಿಶ್ ಎನ್ನುವರು. ಇವು ಸಮುದ್ರವಾಸಿಗಳು. ಇವುಗಳ ತಲೆಯ ಮೇಲೆ ಉದ್ದವಾದ ಗಾಳದಂಥ ಆಕರ್ಷಣೆ ಅಂಗವಿದೆ. ಇದು ಬಲೆಯಂತಿದ್ದು, ಇದರ ಸಹಾಯದಿಂದ ಬೇರೆ ಜಾತಿಯ ಮೀನುಗಳನ್ನು ತಮ್ಮೆಡೆಗೆ ಸೆಳೆದು ತಿನ್ನುತ್ತವೆ.



ಗಾಳ ಮೀನು

ಇವು ಸ್ವತಃ ಮೀನುಗಳಾಗಿದ್ದರು, ಮೀನುಗಾರರಂತೆ ಮೀನು ಹಿಡಿದು ತಿನ್ನುವ ಚತುರ ಜೀವಿಗಳು. ಈ ಬಗೆಯ ವಿಚಿತ್ರ ಜೀವನಕ್ರಮದಿಂದಾಗಿ ಇವಕ್ಕೆ ಗಾಳದ ಮೀನುಗಳೆಂಬ ಹೆಸರು ಬಂದಿದೆ. ಸು. 12 ಪ್ರಭೇದಗಳಿವೆ. ಇವುಗಳಲ್ಲಿ ಲೋಫಿಯಸ್ ಪಿಸ್‌ಕಟೋರಿಯಸ್ ಮುಖ್ಯವಾದುದು. ಇದು ಯೂರೋಪಿನ ಪಶ್ಚಿಮ ಮತ್ತು ಅಮೆರಿಕದ ಪೂರ್ವ ಕಡಲತೀರದ ತಳದಲ್ಲಿ ವಾಸಿಸುತ್ತದೆ. ಉದ್ದ 1.2–1.5 ಮೀ ಮತ್ತು 45 ಕಿಗ್ರಾಂ ಭಾರವಿರುತ್ತದೆ. ಇವುಗಳ ರೂಪ ವಿಲಕ್ಷಣವಾಗಿದೆ. ಚಪ್ಪಟೆಯಾದ ದೇಹ, ಅಗಲವಾದ ತಲೆ, ದೇಹದ ಗಾತ್ರಕ್ಕೆ ಹೋಲಿಸಿದರೆ ಬಲು ದೊಡ್ಡ ಬಾಯಿ, ಹಿಂದಕ್ಕೆ ಬಾಗಿರುವ ಮೋಟುಹಲ್ಲುಗಳ ಪಂಕ್ತಿ ಇವೆ. ಮೈಮೇಲೆ ಶಲ್ಕಗಳಿಲ್ಲ. ಉರುಟಾದ ಮತ್ತು ಮುಳ್ಳುಗಳಿಂದ ಕೂಡಿದ ದೇಹದ ಮುಂಭಾಗ, ಉದ್ದವಾದ ಗಾಳದಂತೆ ಮಾರ್ಪಟ್ಟಿರುವ ಬೆನ್ನುಭಾಗದ ಈಜು ರೆಕ್ಕೆಯ ಮೊದಲನೆಯ ಮುಳ್ಳು ಈ ಎಲ್ಲಾ ಲಕ್ಷಣಗಳಿಂದ ಈ ಮೀನುಗಳು ವಿಶೇಷವಾಗಿವೆ. ಈ ಗಾಳ ಕಣ್ಣುಗಳ ನಡುವೆ ಮತ್ತು ನೆತ್ತಿಯ ಮೇಲೆ ಇದ್ದು, ಬಾಯಿ ಮುಂದೆ ಚಾಚಿಕೊಂಡಿದೆ. ಇದರ ತುದಿಯಲ್ಲಿ ಮಾಂಸಲವಾದ ಉಪಾಂಗಗಳಿವೆ. ಆಹಾರ ಮೀನುಗಳನ್ನು ತನ್ನೆಡೆಗೆ ಸೆಳೆಯಲು ಬಲು ಚಾಣಾಕ್ಷತನದಿಂದ ಈ ಗಾಳವನ್ನು ಬಳಸುತ್ತದೆ. ದೇಹವನ್ನೆಲ್ಲ ಸಮುದ್ರ ತಳದ ಮರಳಿನಲ್ಲಿ ಹುದುಗಿಸಿಕೊಂಡಿದ್ದು, ಗಾಳವನ್ನು ಮಾತ್ರ ಮೇಲಕ್ಕೆ ಚಾಚಿ ಅಲುಗಾಡಿಸುತ್ತಿರುತ್ತದೆ. ಈ ಗಾಳದ ಚಲನೆ ಹುಳುವಿನಂತೆ ಕಾಣುತ್ತದೆ. ಇದರಿಂದ ಆಕರ್ಷಿತಗೊಂಡ ಬೇರೆ ಪ್ರಾಣಿಗಳು ಗಾಳದ ಸಮೀಪ ಸುಳಿದ ಕೂಡಲೇ, ಮೀನು ಅದರ ಮೇಲೆ ಆಕ್ರಮಣ ನಡೆಸಿ ಅದನ್ನು ಕಬಳಿಸುತ್ತದೆ. ಇದರ ಬಾಯಿ ಬಲುದೊಡ್ಡದಿರುವುದರಿಂದ ಇದು ತನ್ನಷ್ಟೇ ದೊಡ್ಡ ಗಾತ್ರದ ಮೀನನ್ನು ನುಂಗಬಲ್ಲುದು.

ಗಾಳದ ಹೆಣ್ಣು ಮೀನು ಗಂಡು ಮೀನಿಗಿಂತ ಗಾತ್ರದಲ್ಲಿ ದೊಡ್ಡದು. ಗಂಡು ಸಂತಾನೋತ್ಪತ್ತಿಯ ಸಮಯದಲ್ಲಿ ಹೆಣ್ಣಿಗೆ ಅಂಟಿಕೊಂಡು ಪರಾವಲಂಬಿ ಜೀವನ ನಡೆಸುತ್ತದೆ. ಗಾಳದ ಮೀನನ್ನು ಹೋಲುವ ಬೇರೆ ಜಾತಿಯ ಮೀನುಗಳಿವೆ. ಇವು ಕಡಲಿನ (೪೫೦–೨೨೫೦ ಮೀ.) ಆಳದಲ್ಲಿ ವಾಸಿಸುತ್ತವೆ. ಇದರಿಂದಾಗಿ ಇವನ್ನು ಆಳ ಕಡಲಿನ ಗಾಳದ ಮೀನುಗಳೆಂದು (ಡೀಪ್ ಸೀ ಆಂಗ್ಲರ್ ಫಿಶ್) ಕರೆಯುತ್ತಾರೆ. ಉದಾ: ಸೆರೆಟಿಯಾಸ್ ಜಾತಿಯ ಮೀನುಗಳು. ಕಡಲಾಳದ ಗಾಢಾಂಧಕಾರದಲ್ಲಿ ಇವು ವಾಸಿಸುವುದರಿಂದ ಇವುಗಳ ಗಾಳದ ತುದಿ ನೀಲಿ ಬಣ್ಣದಿಂದಿದೆ. ಈ ಗಾಳವು ಬೆಳಕನ್ನು ಉತ್ಪತ್ತಿಮಾಡುವ ವಿಶೇಷ ರೀತಿಯ ಬ್ಯಾಕ್ಟೀರಿಯಾಗಳನ್ನು ಹೊಂದಿದೆ. ಈ ಮೀನು ಚೆಲ್ಲುವ ಬೆಳಕಿನಿಂದ ಇತರ ಮೀನುಗಳು ಆಕರ್ಷಿತವಾಗಿ ಇದರ ಬಳಿಗೆ ಬಂದಾಗ ಮೀನು ಇವನ್ನು ಸುಲಭವಾಗಿ ಹಿಡಿಯುತ್ತದೆ. ಹೆಣ್ಣುಮೀನುಗಳಲ್ಲಿ ಮಾತ್ರ ಈ ತರಹದ ಗಾಳವಿದೆ. ಗಂಡುಗಳಲ್ಲಿ ಗಾಳ ಇರುವುದಿಲ್ಲ. ಇವುಗಳಲ್ಲಿ ಗಂಡು ಹೆಣ್ಣಿನ ಮೇಲೆ ಅವಲಂಬನ ಜೀವನ ನಡೆಸುತ್ತದೆ.

ಬೇಸಗೆಯಲ್ಲಿ ಗಾಳದ ಮೀನುಗಳು ಸಂತಾನೋತ್ಪತ್ತಿ ಮಾಡುತ್ತವೆ. ಮೊಟ್ಟೆಯೊಡೆದು ಹೊರಬರುವ ಮರಿಗಳು ಪ್ರಬುದ್ಧಾವಸ್ಥೆಗೆ ಬರುವವರೆಗೆ ಸಮುದ್ರದ ಮೇಲ್ಪದರದಲ್ಲೇ ಈಜಾಡುತ್ತಿದ್ದು, ಸಣ್ಣಪುಟ್ಟ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಅನಂತರ ಕಡಲಾಳಕ್ಕೆ ಇಳಿದು ಪ್ರೌಢಜೀವನವನ್ನು ಆರಂಭಿಸುತ್ತವೆ. (ಜಿ.ಎಚ್.ಎಸ್.ಐ.)

**ಗಿಡತಿಗಣೆಗಳು:** ಹೆಮಿಪ್ಟರ ಗಣ ಮತ್ತು ಹೆಟಿರಾಪ್ಟರ ಉಪಗಣಗಳ ಹಲವಾರು ಕುಟುಂಬಗಳಿಗೆ ಸೇರಿದ ಕೀಟಗಳು (ಪ್ಲಾಂಟ್‌ಬಗ್ಸ್). ತಿಗಣೆ, ಹೇನು ಮುಂತಾದ ಕೀಟಗಳಿಗೆ ಹತ್ತಿರ ಸಂಬಂಧಿಗಳು. ಹಲವಾರು ಜಾತಿಯ ಸಸ್ಯಗಳ ಕಾಂಡ, ಎಲೆ, ಹೂ ಮುಂತಾದ ಅಂಗಗಳ ಮೇಲೆ ಪರಾವಲಂಬಿಗಳಾಗಿದ್ದು ಅವುಗಳ ರಸವನ್ನು ಕುಡಿದು ಬದುಕುವುದರಿಂದ ಇವಕ್ಕೆ ಈ ಹೆಸರು.



ಗೋದಿ ಕವಚ ತಿಗಣೆ(ಯುರಿಗ್ಯಾಸ್ಟರ್)



ಕಪ್ಪು ಭತ್ತ ತಿಗಣೆ (ಸ್ಕೋಟಿನೊಫಾರ್)

ಗಿಡತಿಗಣೆಗಳ ದೇಹಾಕಾರ ವಿವಿಧ ಪ್ರಭೇದಗಳಲ್ಲಿ ವ್ಯತ್ಯಾಸವಿದೆ. ಕೆಲವು ಗಿಡತಿಗಣೆಗಳಿಗೆ ಎರಡು ಜೊತೆ ರೆಕ್ಕೆಗಳು ಇವೆ. ಮುಂದಿರುವ ರೆಕ್ಕೆಗಳ ಬುಡವು ದಪ್ಪವಾಗಿದ್ದು, ಚರ್ಮದಂತಿದೆ. ಆದರೆ, ತುದಿಭಾಗ ಪೊರೆಯಂತಿದೆ. ಈ ಬಗೆಯ ರೆಕ್ಕೆಗಳಿಗೆ ಹೆಮೆಲಿಟ್ರಾನ್ ಎಂದು ಹೆಸರು. ಹಿಂದಿನ ರೆಕ್ಕೆಗಳು ಸಂಪೂರ್ಣವಾಗಿ ಎಲೆಗಳಂತಿವೆ. ರೆಕ್ಕೆಗಳನ್ನು ಮಡಚಿದಾಗ ಅವು ಉದರಭಾಗದ ಮೇಲೆ ಚಪ್ಪಟೆ ಆಕಾರದಲ್ಲಿರುತ್ತವೆ. ಆದರೆ, ಕೆಲವು ಪ್ರಭೇದದ ಕೀಟಗಳಿಗೆ ರೆಕ್ಕೆಯೇ ಇಲ್ಲ. ಕುಡಿಮೀಸೆಗಳು (ಆಂಟೆನಾ) ಉದ್ದವಾಗಿದ್ದು 4–5 ತುಂಡುಗಳಿಂದ ಕೂಡಿವೆ. ಕಣ್ಣುಗಳು ಸಂಯುಕ್ತ ಮಾದರಿಯವು. ಬಾಯಿ ಸಸ್ಯದ ಎಲೆ, ಕಾಂಡವನ್ನು ಚುಚ್ಚಿ, ರಸವನ್ನು ಹೀರಲು ಅನುಕೂಲವಾಗಿವೆ. ತಲೆಯ ಮುಂಭಾಗದಲ್ಲಿ ಒಂದು ರೀತಿಯ ತೆಳುವಾದ ಕೊಕ್ಕಿನಂಥ ರಚನೆಯಿದೆ. ಇದು ಹಿಮ್ಮುಖವಾಗಿ ಬುಡದವರೆಗೂ ಚಾಚಿದೆ. ಬಾಯಿಯೊಳಗೆ ಚುಚ್ಚು ಸಾಧನಗಳಾದ 2 ಮ್ಯಾಂಡಿಬಲ್‌ಗಳು, 2 ಮ್ಯಾಕ್ಸಿಲಗಳಿವೆ. ಮ್ಯಾಕ್ಸಿಲಗಳು ಕೂಡಿಕೊಂಡು ಆಹಾರ ಮತ್ತು ಜೊಲ್ಲು ಸಾಗಣೆಗೆ ಅನುಕೂಲವಾದ ಕಾಲುವೆಗಳಂತೆ ಪರಿವರ್ತಿತವಾಗಿವೆ. ಬಹುಪಾಲು ಗಿಡತಿಗಣೆಗಳಲ್ಲಿ ವಾಸನೆಯನ್ನು ಉಂಟುಮಾಡುವ ಗ್ರಂಥಿಗಳಿವೆ. ಇವು ವಿಶಿಷ್ಟ ರೀತಿಯ ಹಾಗೂ ಅಸಹ್ಯವಾದ ವಾಸನೆಯನ್ನು ಹೊರಸೂಸುತ್ತವೆ. ಗಿಡತಿಗಣೆಗಳು ಸರಳ ರೀತಿಯ ರೂಪಾಂತರತೆಯನ್ನು ಪ್ರದರ್ಶಿಸುತ್ತವೆ.

ಗಿಡತಿಗಣೆಗಳ ಸಂಖ್ಯೆ ಅಗಾಧವಾಗಿದೆ. ಇವುಗಳ ವ್ಯಾಪ್ತಿ ತುಂಬಾ ವಿಸ್ತಾರ. ಪ್ರಪಂಚದಾದ್ಯಂತ ಸು. 55,000 ಬಗೆಯ ಗಿಡತಿಗಣೆಗಳಿವೆ. ಭಾರತದಲ್ಲಿ ಸು. 100 ಬಗೆಯ ಗಿಡತಿಗಣೆಗಳಿವೆ. ಇವುಗಳಲ್ಲಿ ಹೆಚ್ಚಿನವು ಭೂವಾಸಿಗಳು. ಕೆಲವು ಜಲವಾಸಿಗಳಾಗಿವೆ. ಸಸ್ಯಗಳ ರಸವನ್ನು ಹೀರಿ ಬದುಕುವ ಇವು ಕೃಷಿ ಸಸ್ಯಗಳಿಗೆ ತೀವ್ರಸ್ವರೂಪದ ಹಾನಿಯುಂಟು ಮಾಡುತ್ತವೆ. ಆದರೆ, ಕೆಲವು ಉಪಕಾರಿ ಕೀಟಗಳಾಗಿವೆ. ಇತರ ಬಗೆಯ ಹಾನಿಕಾರಕ ಕೀಟಗಳನ್ನು ತಿಂದು ಮಾನವನಿಗೆ ಉಪಕಾರಿಗಳೆನಿಸಿವೆ.

ಕುಡಿಮೀಸೆಗಳ ಲಕ್ಷಣಗಳ ಆಧಾರದ ಮೇಲೆ ಈ ಕೀಟಗಳನ್ನು ಕ್ರಿಪ್ಟೊಸೆರೇಟ ಮತ್ತು ಜಿಮ್ನೊಸೆರೇಟ ಎಂದು ಎರಡು ಉಪಗಣಗಳಾಗಿ ವಿಂಗಡಿಸಿದ್ದಾರೆ. ಪ್ರತಿ ಉಪ ಗಣದಲ್ಲಿರುವ ಕೀಟಗಳ ರೆಕ್ಕೆ, ಕಾಲು ಮತ್ತು ಕೊಕ್ಕುಗಳ ಗುಣಗಳನ್ನು ಆಧರಿಸಿ ಹಲವಾರು ಕುಟುಂಬಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಮುಖ್ಯವಾದ ಕುಟುಂಬಗಳು ಅವುಗಳ ಪ್ರರೂಪೀ ಕೀಟಗಳು: 1. ಕಾರಿಕ್ಸಿಡೆ. ಉದಾ: ಕಾರಿಕ್ಸ್. 2. ನೋಟೋನೆಕ್ಟಿಡೆ ಉದಾ: ನೋಟೋನೆಕ್ಟ. 3. ನೇಪಿಡೆ–ಉದಾ: ನೇಪ, ರೆನೇಟ್ರ 4. ಬೆಲಾಸ್ಟೊಮಾಟಿಡೆ–ಉದಾ: ಬೆಲಾಸ್ಟೋಮ. 5. ಜೆರಿಡೆ ಉದಾ: ಜೆರಿಸ್. 6. ಮಿರಿಡೆ ಉದಾ: ಹಾಲ್ಟಿಕಸ್, ಲೈಗಸ್, ಲೈಗೀಡಿಯ ಇತ್ಯಾದಿ. 7. ಫೈಮ್ಯಾಟಿಡೆ ಉದಾ: ಫೈಮೇಟ, 8. ಪೆಂಟಟೋಮಿಡೆ ಉದಾ: ಬೆಗ್ರಾಡ. 9. ಲೈಗೀಯಿಡೆ ಉದಾ: ಬ್ಲಿಸಸ್, ಆಕ್ಸಿಕೆರೀನಸ್, ಫೇನಸ್ ಇತ್ಯಾದಿ. 10. ಕೋರಿಯಿಡೆ ಉದಾ: ಲೆಪ್ಟೊಕೊರಿಸ.

***

**ಗಿಡುಗ:** ಫಾಲ್ಕನಿಫಾರ್ಮಿಸ್ ಗಣದ ಫಾಲ್ಕನಿಡೆ ಕುಟುಂಬಕ್ಕೆ ಸೇರಿದ ಒಂದು ಹಿಂಸ್ರಪಕ್ಷಿ (ಫಾಲ್ಕನ್ ಹಾಕ್). ಡೇಗೆ ಇದರ ಪರ್ಯಾಯ ನಾಮ. ಹದ್ದು, ರಣಹದ್ದು, ಗರುಡ, ಆಸ್ಪ್ರೆ ಮುಂತಾದ ಹಕ್ಕಿಗಳಿಗೆ ಬಲು ಹತ್ತಿರದ ಸಂಬಂಧಿ. ಕ್ಯಾರಕ್ಯಾರ, ಫಾಲ್ಕೊ, ಮೈಕ್ರೊಹೀರ್ಯಾಕ್ಸ್ ಮುಂತಾದ ಜಾತಿಗಳಿಗೆ ಸೇರಿದ ಪ್ರಭೇದಗಳಿಗೆಲ್ಲ ಗಿಡುಗ ಎಂಬ

ಹೆಸರೇ ಅನ್ವಯವಾಗುತ್ತದೆ. ಗಿಡುಗಗಳ ಗಾತ್ರಗಳಲ್ಲಿ ಭಿನ್ನತೆ ಉಂಟು. ಕೆಲವು ಕೇವಲ ೧೭ ಸೆಂಮೀ ಉದ್ದವಿದ್ದರೆ (ಫಾಲ್ಕೊನೆಟ್ಸ್) ಇನ್ನು ಕೆಲವು ೬೦ ಸೆಂಮೀ ಉದ್ದವಿರುವುದುಂಟು (ಜರ್‌ಫಾಲ್ಕನ್). ಎಲ್ಲ ಗಿಡುಗಗಳೂ ಹಗಲಿನಲ್ಲಿ ಮಾತ್ರ ಬೇಟೆಯಾಡುತ್ತವೆ. ಇವುಗಳ ಕೊಕ್ಕು ಚೂಪಾಗಿ, ಬಲವಾಗಿ ಕೊಕ್ಕೆಯಂತೆ ಬಾಗಿದೆ. ಕೊಕ್ಕಿನ ಬುಡದಲ್ಲಿ, ಮೇಲೆ ಮಾಂಸಲವಾದ ಸಿರೆ ಎಂಬ ಸಂವೇದನೀಯ ಚರ್ಮವಿದೆ. ನಾಸಿಕ ರಂಧ್ರಗಳು ಹೊರಕ್ಕೆ ತೆರೆಯುವುದು ಇದರ ಮೇಲೆಯೇ. ರೆಕ್ಕೆಗಳು ಬಲಯುತವಾಗಿಯೂ ದೇಹದ ಗಾತ್ರಕ್ಕೆ ಹೋಲಿಸಿದರೆ ಉದ್ದವಾಗಿಯೂ ಇವೆ. ಇವುಗಳ ತುದಿ ಬಲು ಚೂಪು. ಕಾಲಿನ ಹರಡು ಭಾಗದಲ್ಲಿ ಗರಿಗಳಿಲ್ಲ. ತೊಡೆಯ ಭಾಗ ಮಾತ್ರ ಸಡಿಲವಾದ ಗರಿಗಳಿಂದ ಆವೃತವಾಗಿದ್ದು ಒಂದು ರೀತಿಯ ಬಿಗಿಚಡ್ಡಿ ಧರಿಸಿದಂತೆ ಕಾಣುತ್ತದೆ. ರೆಂಬೆಗಳನ್ನು ಹಿಡಿಯಲು ಅನುಕೂಲವಾಗುವಂತೆ ಕಾಲಿನ ಬೆರಳು ಹಿಂದಕ್ಕೆ ತಿರುಗಿದೆ. ಬೆರಳುಗಳಲ್ಲಿ ಉದ್ದವಾದ ನಖಗಳಿವೆ.

ಅತ್ಯಂತ ಬಲಯುತವಾದ ಹಾರಾಟಕ್ಕೆ ಗಿಡುಗ ಪ್ರಸಿದ್ಧವಾಗಿದೆ. ಹೀಗೆ ಹಾರಾಡುತ್ತಿರುವಾಗ ಅದರ ಚುರುಕು ದೃಷ್ಟಿಗೆ ಆಹಾರ ಪ್ರಾಣಿಯೇನಾದರೂ ಕಂಡರೆ ಶರವೇಗದಿಂದ ಅದರ ಮೇಲೆರಗಿ ತನ್ನ ಅತ್ಯಂತ ಹರಿತವಾದ ನಖಗಳಿಂದ ಒಂದೇ ಏಟಿಗೆ ಅದನ್ನು ಹೊಡೆದು ಸಾಯಿಸುತ್ತದೆ. ಸತ್ತ ಪ್ರಾಣಿ ನೆಲಕ್ಕೆ ಬಿದ್ದಮೇಲೆ ಮತ್ತೊಮ್ಮೆ ಸುತ್ತುಹಾಕಿ ಕೆಳಕ್ಕಿಳಿದು ಅದನ್ನು ವಿರಾಮವಾಗಿ ತಿನ್ನುತ್ತದೆ. ಪ್ರಾಣಿಗಳ ಮೇಲೆ ಎರಗುವಾಗ ಇದರ ಹಾರಾಟದ ವೇಗ ಗಂಟೆಗೆ ಸುಮಾರು 280 ಕಿಮೀ ಗಳಷ್ಟು ಇರುತ್ತದೆ ಎಂದು ಅಂದಾಜು ಮಾಡಲಾಗಿದೆ. ಗಿಡುಗವೊಂದು ತನ್ನ ಎರೆಯ ಮೇಲೆ ಎರಗುವ ದೃಶ್ಯ ಪ್ರಕೃತಿಯಲ್ಲಿನ ಅತ್ಯಂತ ರೋಮಾಂಚಕ ನೋಟಗಳಲ್ಲೊಂದು.

ಗಿಡುಗಗಳು ಗೂಡುಗಳನ್ನು ಕಟ್ಟುವುದಿಲ್ಲ. ಕೆಲವು ನೆಲದ ಮೇಲೆಯೆ ಮೊಟ್ಟೆಗಳನ್ನಿಡುವುವಾದರೆ ಇನ್ನು ಕೆಲವು ಬೆಟ್ಟಗಳ ಪ್ರಪಾತಗಳ ಚಾಚುಗಳಲ್ಲಿ ಮೊಟ್ಟೆಯಿಡುತ್ತವೆ. ಅನೇಕ ಸಲ ಕಾಗೆ, ಹದ್ದು ಮುಂತಾದುವು ತ್ಯಜಿಸಿದ ಹಳೆಯ ಗೂಡುಗಳನ್ನು ಇವು ಬಳಸುತ್ತವೆ. ಮೊಟ್ಟೆಗಳ ಸಂಖ್ಯೆ 2–5 ರವರೆಗೆ ವ್ಯತ್ಯಾಸವಾಗುತ್ತದೆ. ಕಾವು ಕೊಡುವ ಅವಧಿ ಸುಮಾರು 4 ವಾರಗಳು. ಕಾವು ಕೊಡುವ ಕೆಲಸ ಹೆಣ್ಣಿನದು. ಅಪರೂಪವಾಗಿ ಗಂಡು ಗಿಡುಗವೂ ಕಾವು ಕೊಡಬಹುದು. ಮರಿ ಗಿಡುಗಗಳು 4–6 ವಾರಗಳ ಅನಂತರ ಸ್ವತಂತ್ರ ಜೀವನ ನಡೆಸಲು ಸಮರ್ಥವಾಗುತ್ತವೆ.

ಗಿಡುಗಗಳಲ್ಲಿ ಈ ಕೆಳಗಿನವು ಮುಖ್ಯವಾದ ಬಗೆಗಳು.

1. ಫಾಲ್ಕೊಬಿಯಾರ್ಮಿಕಸ್ ಜಗರ್ (ಲಗರ್ ಫಾಲ್ಕನ್) : ಭಾತರದಲ್ಲಿ ಕಾಣಬರುವ ಗಿಡುಗ ಇದು. ಕಾಡುಕಾಗೆಯ ಗಾತ್ರಕ್ಕಿದೆ. ಇದರ ದೇಹದ ಬಣ್ಣ ಬೂದಿಮಿಶ್ರಿತ ಕಂದು. ಹೊಟ್ಟೆಯ ಭಾಗದಲ್ಲಿ ಕಂದು ಮಚ್ಚೆಗಳುಳ್ಳ ಬಿಳಿಯ ಬಣ್ಣ ಉಂಟು. ಬಯಲು ಭೂಮಿಯಲ್ಲಿ, ಕೃಷಿ ಭೂಮಿಯ ಬಳಿ ಇದರ ವಾಸ. ಪಾರಿವಾಳಗಳೇ ಇದರ ಪ್ರಮುಖ ಆಹಾರ. ಇಲಿ, ಓತಿಕ್ಯಾತ, ಮಿಡತೆ, ಕೊಡತಿ ಕೀಟ ಮುಂತಾದುವನ್ನೂ ತಿನ್ನುತ್ತದೆ. ಮರಗಳ ಮೇಲೆ ಇಲ್ಲವೆ ಪ್ರಪಾತಗಳ ಸಂದುಗಳಲ್ಲಿ ಗೂಡುಕಟ್ಟಿ ಮೊಟ್ಟೆಯಿಡುತ್ತದೆ. ಗೂಡು ಕಟ್ಟುವ ಕಾಲ ಜನವರಿಯಿಂದ ಏಪ್ರಿಲ್‌ವರೆಗೆ.

ಲಗರ್ ಫಾಲ್ಕನ್

2. ಫಾಲ್ಕೊ ಚಿಕ್ವೇರ (ರೆಡ್ ಹೆಡೆಡ್ ಮರ್ಲಿನ್) : ಭಾರತದಲ್ಲಿನ ಇನ್ನೊಂದು ಬಗೆಯ ಗಿಡುಗ. ಗಾತ್ರ ಪಾರಿವಾಳದಷ್ಟು. ಇದರ ದೇಹದ ಬೆನ್ನು ಭಾಗ ನೀಲಿಮಿಶ್ರಿತ ಬೂದು ಬಣ್ಣಕ್ಕೂ ಉದರದ ಭಾಗ ಬೆಳ್ಳಗೂ ಇವೆ. ಪಕ್ಕಗಳಲ್ಲಿ ಕರಿಯ ಬಣ್ಣದ ಪಟ್ಟಿಗಳಿವೆ. ತಲೆ ಮಾತ್ರ ಕಗ್ಗಂದು ಬಣ್ಣದ್ದು. ಇದು ಕೂಡ ಬಯಲು ಪ್ರದೇಶಗಳ ನಿವಾಸಿ. ಗಂಡು ಹೆಣ್ಣುಗಳೆರಡೂ ಜೊತೆಯಾಗಿ ಆಹಾರವನ್ನು ಬೇಟೆಯಾಡುತ್ತವೆ. ಸಣ್ಣ ಪುಟ್ಟ ಹಕ್ಕಿಗಳು, ಇಲಿ, ಓತಿಕ್ಯಾತ ಮುಂತಾದುವು ಇದರ ಆಹಾರ. ದೊಡ್ಡ ಮರಗಳಲ್ಲಿ ಒರಟು ರೀತಿಯ ಗೂಡು ಕಟ್ಟುತ್ತದೆ. ಬರ್ಮ, ಶ್ರೀಲಂಕಾ ಮತ್ತು ಪಾಕಿಸ್ತಾನಗಳಲ್ಲೂ ಕಂಡುಬರುತ್ತದೆ.

3. ಫಾಲ್ಕೊ ಟಿನನ್‌ಕ್ಯುಲಸ್ (ಕೆಸ್ಟ್ರೆಲ್) : ಭಾರತದಲ್ಲಿ ಕಾಣಬರುವ ಮತ್ತೊಂದು ಗಿಡುಗ. ದೇಹದ ಬಣ್ಣ ಇಟ್ಟಿಗೆಗೆಂಪು; ತಲೆ ಮಾತ್ರ ಬೂದಿ ಬಣ್ಣಕ್ಕಿದೆ. ಹೊಟ್ಟೆಯ ಮೇಲೆ ಕಂದು ಬಣ್ಣದ ಮಚ್ಚೆಗಳಿವೆ. ಹಿಮಾಲಯ ಪರ್ವತಗಳಲ್ಲಿ ವಾಸಿಸುವ ಇದು ಚಳಿಗಾಲದಲ್ಲಿ ಬಯಲು ಪ್ರದೇಶಗಳಿಗೆ ಬರುತ್ತದೆ. ಇದರ ಬೇಟೆಯ ರೀತಿ ವಿಶಿಷ್ಟವಾಗಿದೆ. ಹಾರಾಡುತ್ತಿರುವಾಗ ಆಗಿಂದಾಗ್ಗೆ ಅಂತರಿಕ್ಷದಲ್ಲಿ ಹಲವಾರು ಸೆಕೆಂಡುಗಳ ಕಾಲ ನಿಶ್ಚಲವಾಗಿ ನಿಂತಿದ್ದು ನೆಲದ ಮೇಲೆ ತನ್ನ ತೀಕ್ಷ್ಣ ದೃಷ್ಟಿಯನ್ನು ಹರಿಸುತ್ತದೆ. ಇಲಿ, ಹಲ್ಲಿ ಮುಂತಾದ ಆಹಾರ ಪ್ರಾಣಿಗಳೇನಾದರೂ ಕಣ್ಣಿಗೆ ಬಿದ್ದರೆ ಕ್ಷಣಾರ್ಧದಲ್ಲಿ ಅವುಗಳ ಮೇಲೆ ಸದ್ದುಮಾಡದೆ ಎರಗಿ ತನ್ನ ಚೂಪು ನಖಗಳಿಂದ ಹಿಡಿದು ಹಾರಿಹೋಗುತ್ತದೆ. ಪ್ರಪಾತಗಳ ಸಂದುಗಳಲ್ಲಿ ಕಡ್ಡಿ, ಹಳೆ ಬಟ್ಟೆ ಮುಂತಾದುವನ್ನು ಬಳಸಿ ಒರಟುಗೂಡು ಕಟ್ಟುತ್ತದೆ.

ಕೆಸ್ಟ್ರೆಲ್

4. ಆಕ್ಸಿಪಿಟರ್ ಬೇಡಿಯಸ್ (ಶಿಕ್ರ): ಇದು ಕೂಡ ಭಾರತದಲ್ಲಿ ವಾಸಿಸುವಂಥದು. ಗಾತ್ರದಲ್ಲಿ ಪಾರಿವಾಳದಷ್ಟಿದೆ. ದೇಹದ ಬೆನ್ನು ಭಾಗ ಬೂದುಮಿಶ್ರಿತ ನೀಲಿ. ಹೊಟ್ಟೆ ಭಾಗ ಬಿಳಿ. ಕಂದು ಬಣ್ಣದ ಪಟ್ಟೆಗಳಿವೆ. ಬಯಲು ಪ್ರದೇಶಗಳ ನಿವಾಸಿ. ಸಾಮಾನ್ಯವಾಗಿ ಅಲ್ಲಿನ ದೊಡ್ಡಮರಗಳ ರೆಂಬೆಗಳಲ್ಲಿ ಅಡಗಿದ್ದು ಎರೆಪ್ರಾಣಿಗಳು ಕಂಡರೆ ಅವುಗಳ ಮೇಲೆರಗಿ ಕೊಲ್ಲುತ್ತದೆ. ಮಾವಿನ ಮರ ಮುಂತಾದ ದೊಡ್ಡ ಗಾತ್ರದ ಮರಗಳಲ್ಲಿ ಒರಟು ರೀತಿಯ ಗೂಡು ಕಟ್ಟಿ ಮೊಟ್ಟೆಯಿಡುತ್ತದೆ.

5. ಫಾಲ್ಕೊ ಪೆರಿಗ್ರಿನಸ್ (ಪೆರಿಗ್ರಿನ್ ಫಾಲ್ಕನ್) : ನ್ಯೂಜಿಲೆಂಡ್ ಬಿಟ್ಟು ಪ್ರಪಂಚದ ಉಳಿದ ದೇಶಗಳಲ್ಲೆಲ್ಲ ಇರುವ ಗಿಡುಗ ಇದು. ತನ್ನ ಗಾಂಭೀರ್ಯಕ್ಕೂ ಬೇಟೆಯಾಡುವ ಕುಶಲತೆಗೂ ಹೆಸರಾಗಿದೆ. ಗಿಡುಗ ಸಾಕಣೆಯಲ್ಲಿ (ನೋಡಿ) ಬಳಸಲಾಗುವ ಗಿಡುಗಗಳಲ್ಲಿ ಇದು ಅತ್ಯಂತ ಮುಖ್ಯವಾದುದು.

6. ಫಾಲ್ಕೊ ರಸ್ಟಿಕಾಲಸ್ (ಜರ್‌ಫಾಲ್ಕನ್) : ಉತ್ತರ ಮೇರು ಪ್ರದೇಶಗಳ ನಿವಾಸಿ. ಗಿಡುಗಗಳಲ್ಲೆಲ್ಲ ಅತ್ಯಂತ ದೊಡ್ಡ ಗಾತ್ರದ್ದು. ರಾಜಮಹಾರಾಜರುಗಳು ಸಾಕುತ್ತಿದ್ದ ಗಿಡುಗಗಳಲ್ಲೊಂದು. (ಎಚ್.ಬಿ.ಡಿ.)

**ಗಿಡುಗ ಸಾಕಣೆ:** ಗಿಡುಗ ಇಲ್ಲವೆ ಡೇಗೆ ಜಾತಿಯ ಪಕ್ಷಿಗಳನ್ನು ಹಿಡಿದು ಪಳಗಿಸಿ, ತರಬೇತಿ ನೀಡಿ, ಅವನ್ನು ಛೂ ಬಿಟ್ಟು ಇತರ ಪಕ್ಷಿ ಪ್ರಾಣಿಗಳ ಬೇಟೆಯಾಡುವ ಪದ್ಧತಿ (ಫಾಲ್ಕನ್ರಿ). ಇದು ಅತ್ಯಂತ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಡೇಗೆಗಾರ ಛೂ ಬಿಟ್ಟಾಗ ನುಗ್ಗಿ, ಎದುರಿಗಿನ ಪಕ್ಷಿ ಇಲ್ಲವೆ ಪ್ರಾಣಿಯನ್ನು ಕೊಂದು ಇಲ್ಲವೆ ಗಾಯಗೊಳಿಸಿ ಅವನು ಕರೆಯುವವರೆಗೂ ಬೇಟೆಯ ಬಳಿಯೇ ಇದ್ದು ಅವನ್ನು ಬೇಟೆಗಾರನಿಗೆ ದೊರಕಿಸಿ ಕೊಡುವುದೇ ಈ ಗಿಡುಗಗಳ ಕೆಲಸ.

ಆರಂಭದಿಂದಲೂ ಗಿಡುಗ ಬೇಟೆ ಒಂದು ಸಾಹಸಿ ಕಾಲಕ್ಷೇಪವಾಗಿ ಬೆಳೆದು ಬಂತು. ಕ್ರಿ.ಪೂ. 722–705ರಲ್ಲಿ ಅಸ್ಸಿರಿಯದ ಎರಡನೆಯ ಸಾರ್ಗಾನನ ಕಾಲದಲ್ಲಿ ಗಿಡುಗ ಶಿಕ್ಷಣ ಜೀವಂತವಾಗಿದ್ದುದಕ್ಕೆ ದಾಖಲೆಗಳಿವೆ. ಕ್ರಿ.ಶ.875ರಲ್ಲಿದು ಯೂರೋಪ್ ಮತ್ತು ಬ್ರಿಟಿಷ್ ದ್ವೀಪಗಳಲ್ಲಿ ಉನ್ನತಿಗೆ ಬಂತು. ಪೌರಸ್ತ್ಯ ದೇಶಗಳಲ್ಲಿ ವ್ಯಾಪಾರಕ್ಕಾಗಿ ಸಂಚರಿಸುತ್ತಿದ್ದ ವರ್ತಕರು, ಸಾಹಸಿ ಸಮುದ್ರಯಾನಿಗಳು ಹಾಗೂ ಧರ್ಮಪ್ರಚಾರಕರು, ತಾವು ಸಂಚರಿಸಿದ ದೇಶಗಳಲ್ಲಿ ಈ ಕ್ರೀಡೆಯ ಅಭಿವೃದ್ಧಿಯನ್ನು ಕಂಡು ತಾವು ಹಿಂತಿರುಗುವಾಗ ತಮ್ಮೊಂದಿಗೆ ಡೇಗೆಗಳನ್ನೂ ಡೇಗೆಗಾರರನ್ನೂ ಕೊಂಡೊಯ್ದು, ಅವರಿಗೆ ಆಶ್ರಯವಿತ್ತು ಯೂರೋಪ್ ದೇಶಗಳಲ್ಲೂ ಈ ಕ್ರೀಡೆಯನ್ನು ಅಸ್ತಿತ್ವಕ್ಕೆ ತಂದರು. ಮಧ್ಯಯುಗದಲ್ಲಿದು ಪ್ರತಿಷ್ಠಿತ ವರ್ಗದವರ ಮನೋರಂಜನೆಯ ಕಾಲಕ್ಷೇಪವಾಗಿ ಪರಿಣಮಿಸಿತು.

ಗಿಡುಗ ಶಿಕ್ಷಣವೂ ಒಂದು ಸೂಕ್ಷ್ಮವಾದ ಕಲೆ. ಇದರ ಶಿಕ್ಷಕನಿಗೆ ಅಪಾರವಾದ ಬುದ್ಧಿಸೂಕ್ಷ್ಮತೆ, ತಾಳ್ಮೆ, ಶ್ರಮಸಹಿಷ್ಣುತೆ ಇರಬೇಕಾಗುತ್ತದೆ. ಎಲ್ಲ ಡೇಗೆಗಳೂ ಯಶಸ್ವೀ ಬೇಟೆಯ ಪಕ್ಷಿಗಳಾಗಲಾರವು. ಗಿಡುಗ, ಗೂಬೆ ಮತ್ತು ಹದ್ದುಗಳು ಸ್ವಭಾವತಃ ಹಿಂಸ್ರ ಪಕ್ಷಿಗಳೇನೋ ಸರಿ. ಅವೆಲ್ಲುವೂ ಬೇಟೆಯಾಡಿಯೇ ಜೀವಿಸುತ್ತವೆ. ಆದರೆ ಅವೆಲ್ಲುವೂ ಈ ಕೆಲಸವನ್ನು ನಿರ್ವಹಿಸಲಾರವು. ಡೇಗೆಗಾರ ಈ ಎಲ್ಲ ಪಕ್ಷಿಗಳ ಸ್ವಭಾವ ಲಕ್ಷಣಗಳನ್ನರಿತು, ವಿಶಿಷ್ಟ ವರ್ಗದ ಹಕ್ಕಿ ಮರಿಗಳನ್ನು ಮಾತ್ರ ಆಯ್ದು ಶಿಕ್ಷಣ ಕೊಡಬೇಕಾಗುತ್ತದೆ. ಪೆರಿಗ್ರಿನ್ ಡೇಗೆ ಪ್ರಪಂಚಾದ್ಯಂತ ವಾಸಿಸುತ್ತದೆ. ಇದು ಶ್ರೇಷ್ಠ ಬೇಟೆಯ ಪಕ್ಷಿಯೆಂದು ಹೆಸರುಗೊಂಡಿದೆ. ಡೇಗೆಗಾರ ಬಯಸುವ ಎಲ್ಲ ಲಕ್ಷಣಗಳೂ ಸ್ವಭಾವಗಳೂ ಗುಣಗಳೂ ಈ ಡೇಗೆಯಲ್ಲಿವೆ. ಇದು ಯಾವುದೇ ದೇಶದ ಹವಾ ವೈಪರೀತ್ಯಗಳನ್ನೂ ಸಹಿಸಿಕೊಂಡು

ಹೊಂದಿಕೊಳ್ಳಬಲ್ಲುದು. ಪಕ್ಷಿ ಬಲಿಷ್ಠ. ತೀವ್ರವಾಗಿ ಚಲಿಸಬಲ್ಲುದು. ಅಗತ್ಯಕ್ಕನುಗುಣವಾಗಿ ಸೌಮ್ಯವಾಗಿಯೂ ಉಗ್ರವಾಗಿಯೂ ಇರಬಲ್ಲುದು. ಡೇಗೆಗಳು ಶಿಕ್ಷಕನ ಮನಸ್ಸನ್ನು ಬಹುಬೇಗ ತಿಳಿಯಬಲ್ಲುವುಗಳಾಗಿರುವುದರಿಂದ ಅವುಗಳ ಶಿಕ್ಷಣ ಸುಲಭ. ಡೇಗೆಗಳಲ್ಲಿ ಹನ್ನೆರಡು ವರ್ಗಗಳಿವೆ. ಅವುಗಳಲ್ಲಿ ಎರಡು ವರ್ಗದ ಡೇಗೆಗಳು ಮಾತ್ರ ಈ ಕೆಲಸಕ್ಕೆ ಯೋಗ್ಯವೆನಿಸಿವೆ. ನೀಳ ರೆಕ್ಕೆಯ ಡೇಗೆ ಮತ್ತು ಗಿಡ್ಡರೆಕ್ಕೆಯ ಡೇಗೆಗಳು ವಿಶೇಷವಾಗಿ ಡೇಗೆಗಾರರ ಮನಸ್ಸನ್ನು ಸೆಳೆದಿವೆ.

ದೊಡ್ಡ ಹೆಣ್ಣು ಗಿಡುಗವನ್ನು ಮಾತ್ರ ಡೇಗೆಯೆಂದು ಕರೆಯುತ್ತಾರೆ. ಗಂಡು ಇದಕ್ಕಿಂತ ತುಂಬ ಚಿಕ್ಕದು. ಪೂರ್ಣ ಬೆಳೆದಿದ್ದು ಇನ್ನೂ ಹಾರಲು ಬಾರದಿರುವ ಡೇಗೆ ಮರಿಯನ್ನು ಐಯಸ್ (ಗೂಡಿನಲ್ಲಿನ ಮರಿ) ಎಂದೂ ಅರಣ್ಯದ ಮರದ ಪೊಟರೆಯಿಂದ ಹೊರತೆಗೆದ ಮರಿಯನ್ನು ದಾರಿ ಹೋಕ ಹಕ್ಕಿ ಎಂದೂ ಕರೆಯುತ್ತಾರೆ. ವಲಸೆ ಹೋಗುತ್ತಿದ್ದ ಗಿಡುಗನ ಮರಿಯಾಗಿದ್ದರಿಂದ ಎರಡನೆಯದಕ್ಕೆ ದಾರಿ ಹೋಕ ಹಕ್ಕಿ ಎಂಬ ಹೆಸರು ಬಂದಿದೆ. ಯೂರೋಪು ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಐಯಸ್‍ಗಳ ಬಳಕೆ ಹೆಚ್ಚು. ಆಫ್ರಿಕ ಮತ್ತು ಭಾರತಗಳಲ್ಲಿ ಅರಣ್ಯ ಡೇಗೆಗಳನ್ನೇ ಹಿಡಿದು ಪಳಗಿಸುತ್ತಾರೆ.

ಡೇಗೆಗಾರ ತನ್ನ ಪ್ರದೇಶ ಪರಿಸ್ಥಿತಿಗಳಿಗನುಸಾರವಾಗಿ ಡೇಗೆಯ ಮರಿಗಳನ್ನು ಆರಿಸಬೇಕಾಗುತ್ತದೆ. ನೀಳ ರೆಕ್ಕೆಯ ಗಿಡುಗಗಳು ಬಯಲು ಪ್ರದೇಶದಲ್ಲೂ ಗಿಡ್ಡ ರೆಕ್ಕೆಯ ಗಿಡುಗಗಳು ಅರಣ್ಯ ಹಾಗೂ ಕುರುಚಲು ಗಿಡಗಳ ಪ್ರದೇಶಗಳಲ್ಲೂ ಚೆನ್ನಾಗಿ ಕೆಲಸ ನಿರ್ವಹಿಸುತ್ತವೆ. ನೀಳ ರೆಕ್ಕೆಯ ಗಿಡುಗ ಬಯಲು ಪ್ರದೇಶದಲ್ಲಿ ಅತಿ ಎತ್ತರದಲ್ಲಿ ಹಾರಾಡುತ್ತಿದ್ದು ಶಿಕಾರಿ ಕಣ್ಣಿಗೆ ಬೀಳುತ್ತಿದ್ದಂತೆ ಶರವೇಗದಲ್ಲಿ ಆಕ್ರಮಣ ಮಾಡಿ ಕೊಲ್ಲುತ್ತದೆ. ಗಿಡ್ಡ ರೆಕ್ಕೆಯ ಡೇಗೆ ಎತ್ತರವಾದ ಮರಗಳ ಮೇಲೆ ಸುರಕ್ಷಿತ ಸ್ಥಳದಲ್ಲಿ ಕುಳಿತು ಬೇಟೆ ನಾಯಿ ಹಾಗೂ ಸೋಹುಗಾರರು ಎಬ್ಬಿಸಿದ ಪ್ರಾಣಿಯ ಮೇಲೆ ಒಂದೇ ಬಾರಿಗೆ ಎರಗಿ, ತನ್ನ ತೀವ್ರ ನಖಗಳಿಂದ ಅದನ್ನು ಹಿಡಿದು ಮೇಲಕ್ಕೆ ಹಾರಿ ನಿಧಾನವಾಗಿ ಕೆಳಕ್ಕೆ ತರುತ್ತದೆ.

ಹವ್ಯಾಸಿ ಡೇಗೆಗಾರ ಐಯಸ್‍ಗಳನ್ನೇ ಆಯ್ದುಕೊಂಡು ಶಿಕ್ಷಣ ನೀಡುತ್ತಾನೆ. ಅನುಭವಿ ಡೇಗೆಗಾರ ಕಾಡು ಗಿಡುಗವನ್ನು ಹಿಡಿದು ಪಳಗಿಸುತ್ತಾನೆ. ಕಾಡು ಗಿಡುಗವನ್ನು ಹಿಡಿಯುವುದು ಸ್ವಲ್ಪ ಕಷ್ಟದ ಕೆಲಸ. ಬಲೆಯೊಡ್ಡಿ ಅದನ್ನು ಹಿಡಿಯಬೇಕಾಗುತ್ತದೆ. ಹಿಡಿದ ಅನಂತರ ಡೇಗೆಯ ಕಾಲಿನ ಚರ್ಮದ ಪಟ್ಟಿ ಕಟ್ಟಿ, ಮೃದುಚರ್ಮದ ಮುಖ ಕವಚ ತೊಡಿಸುತ್ತಾರೆ; ಕಾಲಿಗೆ ಕಿರುಗಂಟೆಗಳನ್ನು ಕಟ್ಟುತ್ತಾರೆ. ಈ ಗಂಟೆಗಳಿಂದ ಒಂದು ಅನುಕೂಲವಿದೆ. ಕಾಡಿನಲ್ಲಿ ಗಿಡುಗ ಬೇಟೆಗಾಗಿ ನುಗ್ಗಿದಾಗ ಅದು ಯಾವ ಕಡೆ ಇದೆ ಎಂಬುದನ್ನು ಗಂಟೆಯ ದನಿಯಿಂದ ತಿಳಿಯಲು ಸಾಧ್ಯ.

ಅನಂತರ ಡೇಗೆಯ ಶಿಕ್ಷಣ ಆರಂಭವಾಗುತ್ತದೆ. ಡೇಗೆಯ ಉಗುರುಗಳು ಅತಿ ಚೂಪಾಗಿರುವುದರಿಂದ ಶಿಕ್ಷಣ ಸಮಯದಲ್ಲಿ ಶಿಕ್ಷಕ ತನ್ನ ಕೈಗಳಿಗೆ ಚರ್ಮದ ಕವಚ ಧರಿಸುತ್ತಾನೆ. ಒಂದು ಕೈಯಲ್ಲಿ ಪಕ್ಷಿಯನ್ನು ಹಿಡಿದು ಮತ್ತೊಂದು ಕೈಯಿಂದ ಬೆನ್ನಮೇಲೆ ಮೃದುವಾಗಿ ಕೈಯಾಡಿಸುತ್ತ ಅದನ್ನು ಒಗ್ಗಿಸಿಕೊಳ್ಳುತ್ತಾನೆ. ತನ್ನ ಕೈಯಿಂದಲೇ ಅದಕ್ಕೆ ಆಹಾರ ಉಣಿಸುತ್ತಾನೆ. ಒಮ್ಮೊಮ್ಮೆ ಕಣ್ಣವಚವನ್ನು ತೆಗೆದು, ಮುಚ್ಚಿ ಮಾಡುತ್ತಾನೆ. ಬಹುಕಾಲ ಹೀಗೆ ಮಾಡಿದ ಮೇಲೆ ಡೇಗೆ ಅವನ ವಿಶಿಷ್ಟ ಭಾಷೆಗೆ, ಸಹವಾಸಕ್ಕೆ ಹೊಂದಿಕೊಳ್ಳುತ್ತದೆ. ಹೀಗೆ ಹೊಂದಿಕೊಂಡ ಮೇಲೆ ಕಣ್ಣವಚ ತೆಗೆದು ಆಹಾರ ಕೊಡುತ್ತಾನೆ. ಮುಂದೆ ಬೇಟೆಯ ಶಿಕ್ಷಣ ಆರಂಭವಾಗುತ್ತದೆ. ಹಸಿ ಮಾಂಸಕ್ಕೆ ಪಕ್ಷಿಯಾಕಾರದಲ್ಲಿ ಪುಕ್ಕಗಳನ್ನು ಸಿಕ್ಕಿಸಿ, ಉದ್ದವಾದ ತೊಗಲು ಭಾರವನ್ನು ಹೊಂದಿಸಿ, ಡೇಗೆಯ ಎದುರಿಗೆ ಅದನ್ನು ಮೇಲೆ ಎಸೆದು ಡೇಗೆಯನ್ನು ಬಿಡುತ್ತಾನೆ. ಡೇಗೆ ಅದರತ್ತ ಹಾರಿ ಅದು ನೆಲಕ್ಕೆ ಬೀಳುವ ಮುಂಚೆಯೇ ಅದನ್ನು ಕಾಲುಗಳಿಂದ ಹಿಡಿದು ಶಿಕ್ಷಕನ ಬಳಿಗೆ ಬರುತ್ತದೆ. ಈ ರೀತಿ ಪೂರ್ಣ ಪಳಗಿದ ಮೇಲೆ ಅದು ಬೇಟೆಯಾಡಲು ತಯಾರಾಯಿತು ಎಂದು ಅರ್ಥ. ಸರಿಸುಮಾರಾಗಿ ಐಯಸ್ ಮರಿಗಳಿಗೂ ಇದೇ ಬಗೆಯ ಶಿಕ್ಷಣ ಕೊಡುತ್ತಾರೆ. ಇದು ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಶ್ಯೇನಶಿಕ್ಷಣ ಪದ್ಧತಿ.

ಆಧುನಿಕ ಜಗತ್ತಿನಲ್ಲಿ ಬಂದೂಕ ಬಂದು, ಜನ ಬಯಲು ಪ್ರದೇಶಗಳನ್ನು ವಸತಿಗೋ ವ್ಯವಸಾಯಕ್ಕೋ ಆಕ್ರಮಣ ಮಾಡತೊಡಗಿದಾಗ ಹಾಗೂ ಪುರಾತನ ರಾಷ್ಟ್ರಗಳಲ್ಲುಂಟಾದ ಸಾಮಾಜಿಕ ಬದಲಾವಣೆಗಳಿಂದಾಗಿ ಶ್ಯೇನಶಿಕ್ಷಣ ಕೇಳಿ ಕಣ್ಮರೆಯಾಗುತ್ತ ಬಂತು. ಇದರಲ್ಲಿ ಅಲ್ಪ ಸ್ವಲ್ಪ ಆಸಕ್ತಿ ಮತ್ತೆ ಕುದುರಿದ್ದು ಎರಡನೆಯ ಮಹಾಯುದ್ಧದ ತರುವಾಯ. ಶ್ಯೇನಶಿಕ್ಷಣ ಪದ್ಧತಿ ಹಾಗೂ ಸಾಹಿತ್ಯಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿದ ಸಾವಿರದ ಐನೂರಕ್ಕಿಂತ ಹೆಚ್ಚು ಜನ ಈಗ ಸಂಯುಕ್ತ ಸಂಸ್ಥಾನ ಒಂದರಲ್ಲೇ ಇದ್ದಾರೆ. ಈ ಹೊಸ ಆಸಕ್ತಿಯಿಂದಾಗಿ ಯೂರೋಪಿನ ವಿವಿಧ ರಾಷ್ಟ್ರಗಳಲ್ಲಿ ಹೊಸ ಹೊಸ ಡೇಗೆಗಾರ ಕ್ಲಬ್ಬುಗಳು ಹುಟ್ಟಿಕೊಂಡುವು. 1770ರಲ್ಲಿ ಬ್ರಿಟಿಷ್ ದ್ವೀಪಗಳಲ್ಲಿ ಫಾಲ್ಕನರ್ಸ್ ಸೊಸೈಟಿ ಹುಟ್ಟಿಕೊಂಡಿತು. ಆದರೆ ಇದರ ಮೇಲ್ವಿಚಾರಕ ಲಾರ್ಡ್ ಬರ್ನರ್ಸ್ ನಿಧನಾನಂತರ ಈ ಸೊಸೈಟಿಯೂ ಕಣ್ಮರೆಯಾಯಿತು. ಇಂಗ್ಲೆಂಡಿನ ಡೇಗೆಗಾರ ಕೇಂದ್ರ ಈಸ್ಟ್ ಆಂಗ್ಲಿಯ ಪ್ರದೇಶದಲ್ಲಿ ಹೆರಾನ್ ಪಕ್ಷಿಗಳ ಅಭಾವದಿಂದಾಗಿಯೂ ಬಂಜರು ಭೂಮಿಯ ಉಳುವಿಕೆಯಿಂದಾಗಿಯೂ ನೆದರ್‌ಲೆಂಡ್ಸ್‌ಗೆ ವರ್ಗಾವಣೆಗೊಂಡಿತು. 1839ರಲ್ಲಿ ನೆದರ್‌ಲೆಂಡ್ಸಿನ ದೊರೆ ಎರಡನೆಯ ವಿಲಿಯಂನ ಪೋಷಕತ್ವದಲ್ಲಿ ಲೂ ಹಾಕಿಂಗ್ ಕ್ಲಬ್ ಸ್ಥಾಪಿತವಾಯಿತು. ಈ ಕ್ಲಬ್ಬಿನ ಮೊದಲ ಎಂಟು ವರ್ಷಗಳ ಅವಧಿಯಲ್ಲಿ ಸಂಸ್ಥೆಗೆ ಸೇರಿದ ಡೇಗೆಗಳು ಸಾವಿರದ ಐನೂರು ಶಿಕಾರಿಗಳನ್ನು ಹಿಡಿದಿದ್ದವಂತೆ. 1853ರ ಹೊತ್ತಿಗೆ ರಾಜಾಶ್ರಯವನ್ನು ಕಳೆದುಕೊಂಡ ಈ ಕ್ಲಬ್ಬು ಕಣ್ಮರೆಯಾಯಿತು.

ಕೆಲವು ವಿಲಾಸಿ ಡೇಗೆಗಾರರ ಹಾಗೂ ಉದ್ಯೋಗಸ್ಥರ ಸತತ ಪ್ರಯತ್ನದ ಫಲವಾಗಿ ಇಂಗ್ಲೆಂಡಿನಲ್ಲಿ ಮತ್ತೆ ಗಿಡುಗ ರಕ್ಷಕ ಸಂಘಗಳು ಹುಟ್ಟಿಕೊಂಡುವು. 1864ರಲ್ಲಿ ವಿಲ್ಟ್‌ಶಿರ್ ನಗರ ಪ್ರದೇಶದ ರೂಕ್ ಪಕ್ಷಿಗಳನ್ನು ಬೇಟೆಯಾಡಲು ಓಲ್ಡ್ ಹಾಕಿಂಗ್ ಕ್ಲಬ್ ಸ್ಥಾಪಿತವಾಗಿ 1926ರವರೆಗೂ ನಡೆದು ಬಂತು. ಪುನಃ 1927ರಲ್ಲಿ ಬ್ರಿಟಿಷ್ ಫಾಲ್ಕನರ್ಸ್ ಕ್ಲಬ್ ಆರಂಭವಾಯಿತು. ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಕ್ಲಬ್ಬಿನ ಸದಸ್ಯ ಸಂಖ್ಯೆ ನೂರ ಐವತ್ತಕ್ಕಿಳಿಯಿತು. ಇವರಲ್ಲಿ ಅರ್ಧದಷ್ಟು ಜನ ಸಂಯುಕ್ತ ಸಂಸ್ಥಾನಗಳಿಗೆ ವಲಸೆ ಹೋದರು. ಅಲ್ಲಿಯೂ ಈ ಕೇಳಿಯನ್ನು ಸ್ವಲ್ಪ ಜನ ಉಳಿಸಿಕೊಂಡು ಬಂದರು.

ಕ್ರಮೇಣ ಬೇಟೆಯ ವಿಚಾರದಲ್ಲಿಯೇ ಜನತೆಯ ಅಭಿಪ್ರಾಯ ವ್ಯತ್ಯಾಸವಾಗುತ್ತ ಬಂತು. ವನ ಮತ್ತು ವನ್ಯಮೃಗಗಳ ಸಂರಕ್ಷಣೆಗೆ ಪ್ರಾಮುಖ್ಯ ಬಂತು. ಡೇಗೆಯ ಬೇಟೆಗೆ ಗುರಿಯಾಗಿದ್ದ ಹಲವಾರು ಪಕ್ಷಿ, ಪ್ರಾಣಿಗಳು ಸಂರಕ್ಷಕ ಪ್ರಾಣಿ, ಪಕ್ಷಿಗಳ ಪಟ್ಟಿಯನ್ನು ಸೇರಿದುವು. ಡೇಗೆಗಾರರು ಗೃಹ ಇಲಾಖೆಯ ರಹದಾರಿ ಪಡೆದೇ ಬೇಟೆಯಾಡಬೇಕೆಂಬ ನಿಯಮ ಜಾರಿಗೆ ಬಂತು. ಡೇಗೆಗಾರರ ಆಸಕ್ತಿ ಕಡಿಮೆಯಾಗಲು ಇದು ಪ್ರಮುಖ ಕಾರಣವಾಯಿತು. ಯೂರೋಪಿನ ಹಲವಾರು ರಾಷ್ಟ್ರಗಳಲ್ಲಿ ಡೇಗೆಗಾರರ ಕ್ಲಬ್ಬುಗಳು ಅಸ್ತಿತ್ವದಲ್ಲಿವೆಯಾದರೂ ಅವುಗಳ ಕಾರ್ಯಕಲಾಪಗಳಿಗೆ ಅನೇಕ ಕಾರಣಗಳಿಂದಾಗಿ ಒಂದು ಮಿತಿ ಏರ್ಪಟ್ಟಿದೆ. ಫ್ರಾನ್ಸಿನ ಛೇ ಫ್ಯಾಂಪೇನ್ 1870ರಲ್ಲಿ ಕಣ್ಮರೆಯಾಯಿತು. ಅನಂತರ ಫ್ರಾನ್ಸಿನ ಡೇಗೆಗಾರರು ಅಸೋಸಿಯೇಷನ್ ನ್ಯಾಷನಲೆ ಡೆಸ್ ಫಾಲ್ಕನಿಯರ್ಸ್ ಎಟ್ ಡೆಟೋರ್ಸಿರ್ಸ್ ಫ್ರಾಂಕಾಯ್ ಸಂಘದ ಮೂಲಕ ಒಂದುಗೂಡಿದರು. ಜರ್ಮನಿಯಲ್ಲಿ ಆಯಟ್‌ಶರ್ ಫಾಲ್ಕೆನೋರ್ಡೆನ್ 1923ರಲ್ಲಿ ಆರಂಭವಾಗಿ ಇಂದಿಗೂ ಅಸ್ತಿತ್ವದಲ್ಲಿದೆ. ಇಟಲಿ ಮತ್ತು ಆಸ್ಟ್ರಿಯಗಳಲ್ಲೂ ಇಂಥ ಕ್ಲಬ್ಬುಗಳು ಉಳಿದು ಬಂದಿವೆ.

ಸಿರೆನೇಯಿಕದ ಅರಬರು, ಪರ್ಷಿಯನ್ ಕೊಲ್ಲಿ ಹಾಗೂ ಸೌದೀ ಅರೇಬಿಯದ ತೈಲಶ್ರೀಮಂತ ಷೇಕರು ಇಂದಿಗೂ ಡೇಗೆ ಸಾಕಣೆ, ಶಿಕ್ಷಣ ಹಾಗೂ ಬೇಟೆಗಳಿಗೆ ಪ್ರೋತ್ಸಾಹಕೊಡುತ್ತಿದ್ದಾರೆ. ಭಾರತ ಮತ್ತು ಪಾಕಿಸ್ತಾನಗಳ ಪಂಜಾಬ್ ಹಾಗೂ ವಾಯುವ್ಯ ಗಡಿ ಪ್ರದೇಶಗಳಲ್ಲಿ ಇಂದಿಗೂ ಡೇಗೆಗಳನ್ನು ಪಳಗಿಸಿ ಬಾತುಕೋಳಿಗಳನ್ನು ಹಿಡಿಯುತ್ತಾರೆ. ವಿಶ್ವ ವಿಖ್ಯಾತ ಗಿಡುಗ ಗಂಟೆಗಳನ್ನು ಭಾರತ, ಪಾಕಿಸ್ತಾನಗಳ ಅಮೃತಸರ ಹಾಗೂ ಲಾಹೋರ್‌ಗಳಲ್ಲಿ ಇಂದಿಗೂ ತಯಾರಿಸುತ್ತಿದ್ದಾರೆ.

ಭರತ ಖಂಡದಲ್ಲಿ ಈ ಕ್ರೀಡೆ ಅತ್ಯಂತ ಪ್ರಾಚೀನ ಕಾಲದಿಂದಲೂ ಇದ್ದು, ಮೊಗಲರ ಮತ್ತು ರಜಪೂತ ದೊರೆಗಳ ಕಾಲದಲ್ಲಿ ರಾಜಾಶ್ರಯ ಪಡೆದಿತ್ತೆಂದು ತಿಳಿದುಬರುತ್ತದೆ. ಇಂದಿಗೂ ಬಹು ಮಂದಿ ಅರಣ್ಯವಾಸಿಗಳು, ಬೇಟೆಗಾರ ಜನಾಂಗಗಳು ಡೇಗೆ ಜಾತಿಯ ಹಲವು ಪಕ್ಷಿಗಳನ್ನು ಸಾಕಿ, ಬೇಟೆಯಾಡಿಸುವ ಕಸುಬನ್ನು ಉಳಿಸಿಕೊಂಡು ಬಂದಿದ್ದಾರೆ.

***

**ಗಿನಿ ಕೋಳಿ:** ಗ್ಯಾಲಿಫಾರ್ಮಿಸ್ ಗಣದ ನ್ಯೂಮಿಡಿಡೆ ಕುಟುಂಬಕ್ಕೆ ಸೇರಿದ ಹಕ್ಕಿ. ಇದರಲ್ಲಿ ಸುಮಾರು 5 ಜಾತಿಗಳೂ 7 ಪ್ರಭೇದಗಳೂ ಇವೆ. ಎಲ್ಲುವೂ ಕೋಳಿಗಳಿಗೆ ಹತ್ತಿರ ಸಂಬಂಧಿಗಳು. ಆಫ್ರಿಕ, ಮಡಗಾಸ್ಕರ್ ಮತ್ತು ವೆಸ್ಟ್‌ಇಂಡೀಸಿನ ಕೆಲವು ದ್ವೀಪಗಳಲ್ಲಿ ಕಾಣಬರುತ್ತವೆ. ಇವುಗಳಲ್ಲಿ ಕೆಲವು ಬಗೆಗಳನ್ನು ಕೋಳಿಗಳಂತೆ ಸಾಕಲಾಗಿದೆ. ಗಿನಿ ಕೋಳಿಗಳು ಸುಮಾರು ೪೫-೭೫ ಸೆಂಮೀ ಉದ್ದದ ಹಕ್ಕಿಗಳು. ಇವುಗಳ ತಲೆಯ ಮೇಲೆ ಪುಕ್ಕಗಳೇ ಇಲ್ಲ. ಕೆಲವು ಪ್ರಭೇದಗಳಲ್ಲಿ (ನ್ಯೂಮಿಡ) ನೆತ್ತಿಯ ಮೇಲೆ ಕೊಂಬಿನ ಮುಳ್ಳಿನಂಥ ರಚನೆಯಿದೆ. ಇನ್ನು ಕೆಲವು ಬಗೆಗಳಲ್ಲಿ (ಗಟರ) ಗರಿಗಳ ಕಿರೀಟವಿರುವುದೂ ಉಂಟು. ಬಹುಪಾಲು ಬಗೆಗಳಲ್ಲಿ ಕತ್ತು ಕೂಡ ಬರಿದಾಗಿರುವುದಾದರೂ ಕೆಲವು ಪ್ರಭೇದಗಳಲ್ಲಿ ನೀಲಿ ಇಲ್ಲವೆ ಕೆಂಪು ಬಣ್ಣದ ಜೋಲು ಮಾಂಸಲ ಭಾಗ (ವ್ಯಾಟಲ್) ಉಂಟು. ಈ ಲಕ್ಷಣದಲ್ಲಿ ಇವು ಟರ್ಕಿ ಕೋಳಿಗಳನ್ನು ಹೋಲುತ್ತವೆ. ಹಿಂದಕ್ಕೆ ಬಾಗಿ ಹೆಚ್ಚು ಕಡಿಮೆ ನೆಲವನ್ನು ಮುಟ್ಟುವಂಥ ಬಾಲ, ಬಾಲವನ್ನು ಸಂಪೂರ್ಣವಾಗಿ ಮುಚ್ಚುವಂಥ ಬಾಲದ ಗರಿಗಳು, ಅಚ್ಚ ಕಪ್ಪು ಬಣ್ಣ ಮತ್ತು ಚೆಲುವಾದ ಬಿಳಿಯ ಮಚ್ಚೆಗಳಿಂದ ಕೂಡಿದ ಗರಿಗಳು–ಇವು ಗಿನಿ ಕೋಳಿಗಳ ಇನ್ನಿತರ ಲಕ್ಷಣಗಳು.

ದಟ್ಟವಾದ ಕಾಡುಗಳಲ್ಲಿ ಇವುಗಳ ವಾಸ. ಸಂಘಜೀವಿಗಳಾದ ಇವು ದೊಡ್ಡ ಗುಂಪುಗಳಲ್ಲಿರುತ್ತವೆ. ಗುಂಪಿಗೆ ಮುದಿ ಹುಂಜವೇ ಯಜಮಾನ. ಹಿಂಡುಗಳಲ್ಲಿರುವಾಗ

ಇವು ಜೋರಾಗಿ ಕೇಕೆ ಹಾಕುತ್ತ ಓಡಾಡುತ್ತವೆ. ಇವು ಎಷ್ಟು ಗದ್ದಲ ಪ್ರೇಮಿಗಳೊ ಅಷ್ಟೇ ಪುಕ್ಕಲು ಸ್ವಭಾವದುವು ಕೂಡ. ಅಲ್ಪ ಸ್ವಲ್ಪ ಶಬ್ದಕ್ಕೂ ಗಾಬರಿಗೊಂಡು, ಗುಂಪಿನಿಂದ ಚದುರಿ ಪೊದೆಗಳಲ್ಲಿ ಅವಿತುಕೊಳ್ಳುತ್ತವೆ. ಚಿಗುರು, ಬೀಜ ಮುಂತಾದುವು ಇವುಗಳ ಮೆಚ್ಚಿನ ಆಹಾರ. ಸಂತಾನೋತ್ಪತ್ತಿಯ ಕಾಲದಲ್ಲಿ ಮಾತ್ರ ಗುಂಪಿನಲ್ಲಿನ ಗಂಡು ಹೆಣ್ಣುಗಳು ಜೊತೆಯಾಗಿ, ಗುಂಪಿನಿಂದ ಪ್ರತ್ಯೇಕವಾಗಿ ಜೀವಿಸುತ್ತವೆ. ಈ ಸಮಯದಲ್ಲಿ ಸದ್ದು ಗದ್ದಲ ಮಾಡದೆ ಶಾಂತವಾಗಿರುತ್ತವೆ. ಗೂಡು ಕಟ್ಟುವ ಕೆಲಸ ಹೆಣ್ಣಿನದು.

ಗಿನಿ ಕೋಳಿಗಳು ಸಾಮಾನ್ಯವಾಗಿ ನೆಲದ ಮೇಲೆ ನಡೆದಾಡುವುದೇ ಹೆಚ್ಚು. ಆಹಾರವನ್ನು ಅರಸಿಕೊಂಡು ದಿನಕ್ಕೆ ಸುಮಾರು ೩೨ ಕಿಮೀ ಗಳವರೆಗೂ ಓಡಾಡುವುದುಂಟು. ಇವಕ್ಕೆ ಚೆನ್ನಾಗಿ ಹಾರಲು ಬಾರದು. ಶತ್ರುಪ್ರಾಣಿಗಳು ಎರಗಿದಾಗ ಹಾರುವ ಬದಲು ವೇಗವಾಗಿ ಓಡುವುದೇ ಸಾಮಾನ್ಯ. ಅತ್ಯಾವಶ್ಯಕವೆನಿಸಿದಾಗ ಮಾತ್ರ ಹಾರುತ್ತವೆ.

ಗಿನಿ ಕೋಳಿಗಳಲ್ಲೆಲ್ಲ ಬಹಳ ಪ್ರಸಿದ್ಧವಾದುದು ಪೂರ್ವ ಆಫ್ರಿಕದ ನಿವಾಸಿಯಾದ ಆಕ್ರಿಲಿಯಮ್ ವಲ್ಚರೈನಮ್ ಎಂಬ ಪ್ರಭೇದ. ಈ ಜಾತಿಯಲ್ಲೇ ಇದು ಅತ್ಯಂತ ದೊಡ್ಡ ಗಾತ್ರದ್ದು. ಇದರ ತಲೆ ಬೋಳಾಗಿದ್ದು ಹೆಚ್ಚು ಕಡಿಮೆ ರಣಹದ್ದಿನ ತಲೆಯನ್ನೇ ಹೋಲುವುದರಿಂದ ಇದನ್ನು ಬಳಕೆಯ ಮಾತಿನಲ್ಲಿ ವಲ್ಚರೈನ್ ಗಿನಿ ಕೋಳಿ ಎಂದು ಕರೆಯಲಾಗುತ್ತದೆ. ಪಶ್ಚಿಮ ಆಫ್ರಿಕದ ದಟ್ಟವಾದ ಕಾಡುಗಳಲ್ಲಿ ಹೆಲ್ಮೆಟೆಡ್ ಗಿನಿಫೌಲ್ (ನ್ಯೂಮಿಡ ಮಿಲಿಯಾಗ್ರಿಸ್) ಎಂಬ ಇನ್ನೊಂದು ಬಗೆ ಕಾಣಬರುತ್ತದೆ. ಸಾಕಣೆಯಲ್ಲಿರುವ ಗಿನಿ ಕೋಳಿಗಳನ್ನು ಈ ಬಗೆಯಿಂದಲೇ ಪಡೆಯಲಾಗಿದೆ ಎನ್ನುತ್ತಾರೆ. ಗಿನಿ ಕೋಳಿಗಳನ್ನು ಅವುಗಳ ಬಲು ರುಚಿಯಾದ ಮಾಂಸಕ್ಕಾಗಿ ಸಾಕುವುದಿದೆ. ಇವುಗಳ ಸಾಕಣೆ ಬಹು ಪ್ರಾಚೀನವಾದ ಕಸಬು. ರೋಮನರು, ಗ್ರೀಕರು ಆಫ್ರಿಕದಿಂದ ಇವನ್ನು ಹಿಡಿದು ತಂದು ಸಾಕುತ್ತಿದ್ದರಂತೆ. ಆದರೆ ಕ್ರಿಸ್ತಯುಗ ಆರಂಭವಾಗುವ ಕಾಲಕ್ಕೆ ಇವುಗಳ ಸಾಕಣೆ ನಿಂತುಹೋಯಿತು. ಮತ್ತೆ ಹದಿನೈದನೆಯ ಶತಮಾನದಲ್ಲಿ ಪೋರ್ಚುಗೀಸ್ ನಾವಿಕರು ಗಿನಿ ತೀರಪ್ರದೇಶದಲ್ಲಿ ಇವನ್ನು ಕಂಡು ಮತ್ತೆ ಯೂರೋಪಿಗೆ ತಂದರು. ಅಲ್ಲಿಂದೀಚೆಗೆ ಯೂರೋಪಿನ ದೇಶಗಳಲ್ಲಿ ಕೆಲವೆಡೆ ಗಿನಿ ಕೋಳಿಗಳ ಸಾಕಣೆ ರೂಢಿಯಲ್ಲಿದೆ. ಹೀಗೆ ಸಾಕುವ ಗಿನಿ ಕೋಳಿಗಳಲ್ಲಿ ಪರ್ಲ್, ಹ್ವೈಟ್ ಮತ್ತು ಲ್ಯಾವೆಂಡರ್ ಎಂಬ ಮೂರು ಬಗೆಗಳಿವೆ. ಆರ್ಥಿಕ ದೃಷ್ಟಿಯಿಂದ ಗಿನಿ ಕೋಳಿಗಳ ಸಾಕಣೆ ಲಾಭದಾಯಕವಲ್ಲದ್ದರಿಂದ ಇದು ಹೆಚ್ಚು ಜನಪ್ರಿಯವಾಗಿಲ್ಲ. (ಜಿ.ಎಂ.ಬಿ.)

**ಗಿನಿ ಹಂದಿ:** ಕೇವಿ ಎಂಬ ಪ್ರಾಣಿಯಿಂದ ವಿಕಾಸ ಹೊಂದಿದ ಸಾಕುಪ್ರಾಣಿ (ಗಿನಿಪಿಗ್); ರೊಡೆನ್ಷಿಯ ಗಣದ ಕವ್ಯೆಯಿಡೆ ಕುಟುಂಬಕ್ಕೆ ಸೇರಿದ ಸ್ತನಿ. ಜನಪ್ರಿಯವಾಗಿರುವ ಈ ಪ್ರಾಣಿಯ ಹೆಸರಿಗೂ ಆಫ್ರಿಕದ ಗಿನಿ ಮತ್ತು ಆಗ್ನೇಯ ಏಷ್ಯದ ನ್ಯೂಗಿನಿಗಳಿಗೂ ಯಾವ ಬಗೆಯಾದ ಸಂಬಂಧವಿಲ್ಲ. ಗಿನಿ ಎಂಬ ಪದ ಬಹುಶಃ ಗಿಯಾನ ಎಂಬ ಪದದಿಂದ ಪಡೆದುದಾಗಿರಬಹುದು. ಡಚ್ ಮತ್ತು ಇಂಗ್ಲಿಷ್ ವ್ಯಾಪಾರಸ್ಥರು ಈ ಪ್ರಾಣಿಗಳನ್ನು ಗಿಯಾನದಿಂದ ಕೊಂಡೊಯ್ದದ್ದರಿಂದ ಈ ಹೆಸರು ಬಂದಿರಬೇಕು. ಕೇವಿಯ ಪಾರ್ಸೆಲಸ್ ಎಂಬುದು ಇದರ ವೈಜ್ಞಾನಿಕ ಹೆಸರು.

ದಕ್ಷಿಣ ಅಮೆರಿಕದ ಪೆರು, ಈಕ್ವಡಾರ್ ಮತ್ತು ಕೊಲಂಬಿಯಗಳು ಗಿನಿ ಹಂದಿಗಳ ತೌರು. ದಕ್ಷಿಣ ಅಮೆರಿಕಕ್ಕೆ ಸ್ಪ್ಯಾನಿಷರು ಕಾಲಿಡುವುದಕ್ಕೆ ಮುಂಚೆಯೇ ಅಲ್ಲಿಯ ಮೂಲವಾಸಿಗಳಾದ ಅಮೆರಿಕದ ಇಂಡಿಯನ್ನರು ಈ ದಂಶಕ ಪ್ರಾಣಿಗಳನ್ನು ಆಹಾರಕ್ಕಾಗಿ ಸಾಕುತ್ತಿದ್ದರಂತೆ. ಡಚ್ಚರು ಹದಿನಾರನೆಯ ಶತಮಾನದಲ್ಲಿ ಯೂರೋಪಿಗೆ ಇವನ್ನು ಕೊಂಡೊಯ್ದು ಇವುಗಳ ತಳಿಗಳನ್ನು ಅಭಿವೃದ್ಧಿಗೊಳಿಸಿದರು. ಅಲ್ಲಿಂದೀಚೆಗೆ ಪ್ರಪಂಚದ ವಿವಿಧ ದೇಶಗಳಿಗೆ ಹರಡಿದ ಇದನ್ನು ಆಹಾರಕ್ಕಾಗಿ ಸಾಕುತ್ತಿಲ್ಲವಾದರೂ ವೈಜ್ಞಾನಿಕ ಪ್ರಯೋಗಮಂದಿರಗಳಲ್ಲಿ ಇದರ ನೆರವು ಅಪಾರ. ವೈದ್ಯಕೀಯ, ಜೈವಿಕ, ತಳಿವಿಜ್ಞಾನ ಮತ್ತು ಪೋಷಣಸಂಬಂಧಿ ಸಂಶೋಧನೆಗಳಲ್ಲಿ ಇದನ್ನು ಪ್ರಯೋಗ ಪಶುವಾಗಿ ಬಳಸಲಾಗುತ್ತಿದೆ. ಇದು ಎಷ್ಟು ಪ್ರಚಲಿತವೆಂದರೆ ಗಿನಿ ಹಂದಿಯನ್ನಾಗಿ ಬಳಸು ಎಂಬುದು ಈಗ ಒಂದು ನುಡಿಗಟ್ಟಾಗಿಬಿಟ್ಟಿದೆ.

ಗಿನಿ ಹಂದಿಗಳ ಮೈ ಬಣ್ಣ ಸಾಮಾನ್ಯವಾಗಿ ಬಿಳಿ, ಕಪ್ಪು, ಕೆಂಪು, ಕಂದು, ಹೀಗೆ ವೈವಿಧ್ಯಮಯ. ಚೆನ್ನಾಗಿ ಬೆಳೆದ ಪ್ರೌಢಜೀವಿಯ ದೇಹದ ಉದ್ದ 25 ಸೆಂಮೀ. ತೂಕ ಸುಮಾರು 900 ಗ್ರಾಂ. ಗಿನಿ ಹಂದಿಗಳಿಗೆ ಬಾಲವಿಲ್ಲ. ಆದರೆ ಅದಕ್ಕೆ ಸಂಬಂಧಿಸಿದ ಏಳು ಕಶೇರುಕ ಮಣಿಗಳು ದೇಹದೊಳಗೇ ಹುದುಗಿರುತ್ತವೆ. ಸ್ಥೂಲ ದೇಹ, ದಪ್ಪತಲೆ, ಚಿಕ್ಕ ಕಾಲುಗಳು, ರೋಮರಹಿತವಾದ ಮತ್ತು ಗುಂಡನೆಯ ಚಿಕ್ಕ ಕಿವಿಗಳು, ಮುಂಗಾಲಿನಲ್ಲಿ ನಾಲ್ಕು, ಹಿಂಗಾಲಿನಲ್ಲಿ ಮೂರು ಬೆರಳುಗಳು, ಪ್ರತಿ ಬೆರಳಿನಲ್ಲಿ ಅಗಲವಾದ ನಖಗಳು– ಇವು ಈ ಪ್ರಾಣಿಯ ಮುಖ್ಯ ಲಕ್ಷಣಗಳು. ದೇಹದ ಮೇಲಿರುವ ಕೂದಲು ರೇಷ್ಮೆಯಂತೆ ನಯವಾಗಿರಬಹುದು ಅಥವಾ ಒರಟಾಗಿರಬಹುದು. ಹಾಗೆಯೇ ಚಿಕ್ಕದಾಗಿರಬಹುದು ಇಲ್ಲ ನೀಳವಾಗಿರಬಹುದು.

ಹುಲ್ಲು, ಸೊಪ್ಪುಗಳೇ ಇದರ ಮುಖ್ಯ ಆಹಾರ. ಆಹಾರವನ್ನು ಸಾಕಷ್ಟು ಮೊತ್ತದಲ್ಲಿ ಒದಗಿಸಿದರೆ ಇದು ನೀರಿಲ್ಲದೆಯೇ ಬಹುಕಾಲ ಬದುಕಬಲ್ಲುದು. ಆದರೆ ಮರದ ಪೆಟ್ಟಿಗೆಯಲ್ಲಿ ಗೂಡು ಮಾಡಿ, ಇಲಿ, ಮೊಲ ಮುಂತಾದುವಕ್ಕೆ ಕೊಡುವ ಆಹಾರವನ್ನು ಒದಗಿಸಿದಲ್ಲಿ ಇದಕ್ಕೆ ಪ್ರತ್ಯೇಕವಾಗಿ ನೀರನ್ನು ಒದಗಿಸುವುದು ಅನಿವಾರ್ಯ.

ಸಂತಾನಶಕ್ತಿಗೆ ಹೆಸರಾದ ಗಿನಿಹಂದಿ ವರ್ಷಕ್ಕೆ 5–6 ಸಲ ಮರಿ ಹಾಕುತ್ತದೆ. ಒಂದು ಸೂಲಿಗೆ 2–8 ಮರಿಗಳು ಇರುತ್ತವೆ. ಗರ್ಭಾವಧಿಯ ಕಾಲ 63–75 ದಿವಸಗಳು. ಬಸಿರಿನಲ್ಲಿಯೇ ಮರಿಗಳು ಚೆನ್ನಾಗಿ ಬೆಳೆಯುವುದರಿಂದ ಹುಟ್ಟಿದ ಮರಿಗಳಿಗೆ ಕಣ್ಣು ಬಂದಿರುತ್ತವಲ್ಲದೆ ಘನರೂಪದ ಆಹಾರವನ್ನು ಸೇವಿಸುವ ಸಾಮರ್ಥ್ಯವೂ ಇರುತ್ತದೆ. ಹುಟ್ಟಿದ ಒಂದೆರಡು ಗಂಟೆಗಳಲ್ಲಿಯೇ ತಾಯಿಯನ್ನು ಹಿಂಬಾಲಿಸಿ ಓಡಲು ಇವು ಸಮರ್ಥವಾಗಿರುತ್ತವೆ. ಎರಡು ವಾರಗಳ ಕಾಲ ತಾಯಿಯ ಹಾಲನ್ನು ಕುಡಿದು ಬೆಳೆದು ಅನಂತರ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. 2 ತಿಂಗಳುಗಳಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ. ಗಿನಿ ಹಂದಿಗಳ ಆಯಸ್ಸು ಸುಮಾರು 6–8 ವರ್ಷಗಳು. ***

**ಗಿಬನ್:** ಸ್ತನಿವರ್ಗದ ಪ್ರೈಮೇಟ್ ಗಣಕ್ಕೆ ಸೇರಿದ ವೃಕ್ಷವಾಸಿ ವಾನರ. ಹೈಲಾಬಟೀಸ್ ಮತ್ತು ಸಿಂಫಲ್ಯಾಂಗಸ್ ಎಂಬ ಎರಡು ಮುಖ್ಯಜಾತಿಗಳನ್ನು ಒಳಗೊಂಡಿದೆ. ಒರಾಂಗೂಟಾನ್ (ನೋಡಿ), ಗೊರಿಲ (ನೋಡಿ), ಚಿಂಪಾಂಜಿಗಳ (ನೋಡಿ) ಹತ್ತಿರ ಸಂಬಂಧಿ. ಅವುಗಳಂತೆಯೇ ಇದಕ್ಕೂ ಬಾಲವಿಲ್ಲ. ಮನುಷ್ಯನನ್ನೂ ಒಳಗೊಂಡಿರುವ ಹೋಮಿನಾಯ್ಡಿಯ ಅಧಿಕುಟುಂಬದ ಹೈಲೋಬ್ಯಾಟಿಡೆ ಕುಟುಂಬಕ್ಕೆ ಸೇರಿದೆ. ಆಗ್ನೇಯ ಏಷ್ಯದ ಮೂಲವಾಸಿಯಾದ ಇದು ಅಸ್ಸಾಂ, ಬರ್ಮ, ಮಲಯ, ಇಂಡೋನೇಷ್ಯಗಳ ದಟ್ಟವಾದ ಕಾಡುಗಳಲ್ಲಿ ಕಾಣಬರುತ್ತದೆ; ಸಮುದ್ರಮಟ್ಟದಿಂದ ಹಿಡಿದು 2100 ಮೀ ಎತ್ತರದ ಪರ್ವತ ಪ್ರದೇಶಗಳಲ್ಲೆಲ್ಲ ಬಲು ಸಾಮಾನ್ಯ.

ವಾನರಗಳಲ್ಲೆಲ್ಲ ಅತ್ಯಂತ ಚಿಕ್ಕಗಾತ್ರದ್ದು, ಇದು. ಇದರ ಎತ್ತರ ಸಾಮಾನ್ಯವಾಗಿ 90 ಸೆಂಮೀ, ತೂಕ ಸುಮಾರು 14 ಕಿಗ್ರಾಂ, ಮೈಬಣ್ಣ ಸಾಮಾನ್ಯವಾಗಿ ಕಪ್ಪು. ಕೆಲವು ಬಗೆಗಳಲ್ಲಿ ಕಂದು, ಬೂದಿ ಮುಂತಾದ ಬಣ್ಣವಿರುವುದೂ ಉಂಟು. ಗಿಬನ್ನಿನ ಕೈಗಳು ಬಲು ಉದ್ದ. 90 ಸೆಂಮೀ ಎತ್ತರದ ಗಿಬನ್ನಿನ ಕೈಹರವು ಸುಮಾರು ೧.೫ ಮೀ ಇರುವುದುಂಟು. ಈ ಉದ್ದ ಕೈಗಳ ಸಹಾಯದಿಂದ ಗಿಬನ್ ಮರದಿಂದ ಮರಕ್ಕೆ ಯಾವ ಬಗೆಯ ಶ್ರಮವೂ ಇಲ್ಲದೆ ಅತ್ಯಂತ ವೇಗವಾಗಿ ತೂಗಿ ತೊನೆಯುತ್ತ, ಜಿಗಿಯುತ್ತ ಸಾಗಬಲ್ಲುದು. ಒಂದೊಂದು ಸಲದ ಜಿಗಿತಕ್ಕೂ ಸುಮಾರು ೬–೯ ಮೀ ದೂರವನ್ನು ಕ್ರಮಿಸಬಲ್ಲುದು. ಹೀಗೆ ಗಿಬನ್ ರೆಂಬೆಯಿಂದ ರೆಂಬೆಗೆ ಹಾರಿ ಸಾಗುವ ನೈಪುಣ್ಯವನ್ನೂ, ವೇಗವನ್ನೂ ಇನ್ನಾವುದೇ ವಾನರವಾಗಲಿ, ಕಪಿಯಾಗಲಿ ತೋರಲಾರದು. ಈ ರೀತಿಯ ಚಲನೆಗೆ ಮತ್ತು ರೆಂಬೆಗಳನ್ನು ಹಿಡಿಯುವುದಕ್ಕೆ ಅನುಕೂಲವಾಗುವಂತೆ ಗಿಬನ್ನಿನ ಕೈ ಮತ್ತು ಕಾಲುಗಳ ಬೆರಳುಗಳೂ ಬಲು ಉದ್ದವಾಗಿವೆ. ಅಲ್ಲದೆ ತೋರುಬೆರಳು ಮತ್ತು ಹೆಬ್ಬೆರಳುಗಳ ಅಂತರ ಆಳವಾದ ಸೀಳಿನಂತಿದೆ. ಹೆಬ್ಬೆರಳು ಉಳಿದ ಬೆರಳುಗಳಿಗಿಂತ ಮೋಟಾಗಿದೆ. ಹೀಗೆ ಗಿಬನ್ನಿನ ಕೈಕಾಲುಗಳು ಮರಗಳ ಮೇಲಿನ ಚಲನೆಗೆ ಅತ್ಯಂತ ಉಪಯುಕ್ತವಾಗಿದ್ದರೂ ಗಿಬನ್ ನೆಲದ ಮೇಲೆ ಮನುಷ್ಯನಂತೆಯೇ ನೆಟ್ಟಗೆ, ಕೇವಲ ತನ್ನ ಎರಡು ಕಾಲುಗಳಿಂದ ಮಾತ್ರವೇ ನಡೆಯಬಲ್ಲುದು. ವಾನರಗಳಲ್ಲೆಲ್ಲ ಇದೊಂದು ಮಾತ್ರವೇ ಹೀಗೆ ನಡೆಯಲು ಸಮರ್ಥವಾಗಿರುವುದು (ಉಳಿದ ವಾನರಗಳು ಹೀಗೆ

ನಡೆಯುವಾಗ ಕೈಗಳ ನೆರವನ್ನು ಪಡೆಯುತ್ತವೆ.) ಆದರೆ ಕೈಗಳು ಬಲು ಉದ್ದವಾಗಿದ್ದು ನೆಲವನ್ನು ಮುಟ್ಟುವಂತಿರುವುದರಿಂದ ಗಿಬನ್ ನಡೆಯುವಾಗ ಸರ್ಕಸಿನಲ್ಲಿ ತಂತಿಮೇಲೆ ನಡೆಯುವವರ'ಂತೆ ಕೈಗಳನ್ನು ಮೇಲಕ್ಕೆತ್ತಿ ಅಕ್ಕಪಕ್ಕಕ್ಕೆ ಚಾಚಿಕೊಂಡು ವಕ್ರವಾಗಿ ನಡೆಯುತ್ತದೆ. ಕೈಗಳನ್ನು ಮೇಲಕ್ಕೆತ್ತುವುದರಿಂದ ದೇಹವನ್ನು ಸಮತೋಲವಾಗಿರಿಸುವುದಕ್ಕೆ ಸಾಧ್ಯವಾಗುತ್ತದೆ. ಗಿಬನ್ನಿನ ಇನ್ನಿತರ ಲಕ್ಷಣಗಳಲ್ಲಿ ಮುಖ್ಯವಾದುವು ಅದರ ತೆಳುವಾದ ದೇಹ, ಉದ್ದವಾದ ಹಾಗೂ ಕಿರಿದಾದ ವಸ್ತಿಕುಹರ, ಚೆನ್ನಾಗಿ ರೂಪುಗೊಂಡಿರುವ ರೊಂಡಿಯ ಜಡ್ಡುಭಾಗಗಳು ಮತ್ತು ಚಪ್ಪಟೆಯಾದ ಮೂತಿ. ಗಿಬನ್ನಿನ ಮಿದುಳು ಬಹಳ ಚಿಕ್ಕಗಾತ್ರದ್ದು. ಬುದ್ಧಿಶಕ್ತಿಯಲ್ಲಿ ಗಿಬನ್ ಉಳಿದ ವಾನರಗಳಿಗಿಂತ ಅತ್ಯಂತ ಕೆಳಮಟ್ಟದಲ್ಲಿದೆ. ಹೆಚ್ಚು ಕಡಿಮೆ ಕೋತಿಗಳಿಗಿರುವಷ್ಟು ಬುದ್ಧಿ ಇದಕ್ಕೆ ಇದೆ ಎನ್ನಬಹುದು. ಆದರೂ ಕೆಲವು ಬಣ್ಣಗಳನ್ನೂ ಗಾತ್ರವ್ಯತ್ಯಾಸಗಳನ್ನೂ ಗುರುತಿಸಬಲ್ಲುದು. ಗಿಬನ್ ಸ್ವಭಾವತಃ ಸಾಧುಪ್ರಾಣಿ. ಇದನ್ನು ಪಳಗಿಸಿ ಮುದ್ದಿನ ಪ್ರಾಣಿಯಾಗಿ ಸಾಕಬಹುದು. ಗಿಬನ್ ಸ್ವಇಚ್ಛೆಯಿಂದ ನೀರಿಗಿಳಿಯಲು ಹೆದರುತ್ತದಾದರೂ ತನ್ನ ದೇಹವನ್ನು ಸಾಕಷ್ಟು ಶುದ್ಧವಾಗಿ ಇಟ್ಟುಕೊಳ್ಳುತ್ತದೆ. ಎರಡು ಪ್ರಾಣಿಗಳು ಸೇರಿದುವೆಂದರೆ ಒಂದರ ದೇಹವನ್ನು ಇನ್ನೊಂದು ಹೆಕ್ಕಿ ಶುಚಿಮಾಡುತ್ತವೆ.

ಹಣ್ಣುಹಂಪಲು, ಎಲೆಗಳು, ಎಳೆಯಕುಡಿಗಳು ಗಿಬನ್ನಿನ ಪ್ರಮುಖ ಆಹಾರ. ಕೀಟಗಳನ್ನೂ ತಿನ್ನುವುದುಂಟು. ಕೀಟಗಳಲ್ಲೆಲ್ಲ ಜೇಡವನ್ನು ಬಲು ಮೆಚ್ಚಿನಿಂದ ತಿನ್ನುತ್ತದೆ. ಆಗಾಗ್ಗೆ ಹಕ್ಕಿಗಳ ಮೊಟ್ಟೆಗಳನ್ನೂ ಮರಿಹಕ್ಕಿಗಳನ್ನೂ ತಿನ್ನುವುದುಂಟು. ಗಿಬನ್ ಸಂಘಜೀವಿ; ಸಣ್ಣಗುಂಪುಗಳಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಒಂದು ಗುಂಪಿನಲ್ಲಿ ಒಂದು ಗಂಡು, ಒಂದು ಹೆಣ್ಣು ಮತ್ತು ಹಲವಾರು ಮರಿಗಿಬನ್‌ಗಳಿರುತ್ತವೆ. ಒಂದೊಂದು ಕುಟುಂಬಕ್ಕೂ ಅದರದೇ ಆದ ಅಧೀನ ಪ್ರಾಂತ್ಯವಿರುತ್ತದೆ. ಇಂಥ ಪ್ರಾಂತ್ಯದ ವಿಸ್ತಾರ ಸುಮಾರು 30-100 ಎಕರೆಯಷ್ಟಿರಬಹುದು. ಇದರಲ್ಲಿ ಗಿಬನ್‌ಗಳಿಗೆ ಆಹಾರವೊದಗಿಸುವ ಮತ್ತು ಮಲಗಲು ಪ್ರಶಸ್ತವಾದ ಮರಗಳು ವಿಪುಲವಾಗಿರುತ್ತವೆ. ಗಿಬನ್‌ಗಳು ನೆಲಮುಟ್ಟದೆ ಮರದಿಂದ ಮರಕ್ಕೆ ಸುಸೂತ್ರವಾಗಿ ಹೋಗಲು ತಮ್ಮದೇ ಆದ ದಾರಿ ಮಾಡಿಕೊಂಡಿರುತ್ತವೆ. ಒಂದು ಗಿಬನ್ ಕುಟುಂಬದ ಪ್ರಾಂತ್ಯಕ್ಕೆ ಮತ್ತೊಂದು ಗುಂಪು ಬರುವುದು ವಿರಳ. ಹಾಗೇನಾದರೂ ಬಂದರೆ ಅವುಗಳ ನಡುವೆ ಯುದ್ಧವೇ ನಡೆಯುತ್ತದೆ. ಯುದ್ಧವೆಂದರೆ ಮುಷ್ಟಾಮುಷ್ಟಿಯಲ್ಲ, ಬರಿಯ ವಾಗ್ಯುದ್ಧ. ಅದರಲ್ಲಿ ಸೋತ ಗುಂಪು ಓಡಿಹೋಗುತ್ತದೆ. ತಮ್ಮ ಧ್ವನಿಶಕ್ತಿಗೆ ಹೆಸರಾಗಿರುವ ಗಿಬನ್‌ಗಳು ಬಲು ಜೋರಾಗಿ, ಕಿವಿಗಡಚಿಕ್ಕುವಂತೆ, ಕಾಡಿಗೆ ಕಾಡೇ ಅನುರಣಿತವಾಗುವಂತೆ ಕೂಗುತ್ತವೆ. ಬೆಳಗಿನ ಜಾವ ಮತ್ತು ಸಂಜೆ ಸೂರ್ಯ ಮುಳುಗುವ ಮುನ್ನ ಇವುಗಳ ಗದ್ದಲದಿಂದ ಇಡೀ ಕಾಡೇ ಮೊಳಗುತ್ತಿರುತ್ತದೆ. ಆಹಾರವನ್ನು ಅರಸಿಕೊಂಡು ತಮ್ಮ ಎಲ್ಲೆಯನ್ನು ಬಿಟ್ಟು ಹೊರಟಾಗಲೂ ಅಸಾಧ್ಯವಾಗಿ ಬೊಬ್ಬೆಯಿಡುತ್ತವೆ. ಹೀಗೆ ಹೊರಟಾಗ ಎರಡು ಗುಂಪುಗಳು ಪರಸ್ಪರ ಸಂಧಿಸಿದಾಗ ಮತ್ತೆ ಕೂಗಿನ ಕಾಳಗ ನಡೆಯುತ್ತದೆ. ಇಲ್ಲೂ ಹೆಚ್ಚು ಗದ್ದಲ ಮಾಡುವ ಗುಂಪಿಗೇ ಜಯ. ಸಿಂಫಲ್ಯಾಂಗಸ್ ಜಾತಿಯ ಗಿಬನ್‌ಗಳಲ್ಲಿ ಧ್ವನಿವರ್ಧಕ ಚೀಲಗಳಿರುವುದರಿಂದ ಇವುಗಳ ಕೂಗು ಇನ್ನೂ ತೀವ್ರವಾಗಿರುತ್ತದೆ. ಆದರೆ ಹವೆ ಪ್ರತಿಕೂಲವಾಗಿದ್ದಾಗ ನಿಶ್ಯಬ್ಧವಾಗಿಬಿಡುವುದು ಇವುಗಳ ಮರ್ಜಿ. ಗಿಬನ್‌ಗಳು ಗೂಡುಗಳನ್ನೇನೂ ಕಟ್ಟುವುದಿಲ್ಲ. ವಿಶ್ರಮಿಸುವಾಗ ಮರಗಳ ಪೊಟರೆಗಳಲ್ಲಿ ಇಲ್ಲವೆ ರೆಂಬೆಗಳ ಸಂದಿಗಳಲ್ಲಿ ಅಡಗುತ್ತವೆ.

ಗಿಬನ್‌ಗಳ ಗರ್ಭಾವಧಿಯ ಕಾಲ ಸುಮಾರು 7 ತಿಂಗಳುಗಳು. ಒಂದು ಸಲಕ್ಕೆ ಒಂದೇ ಮರಿ; ಸಾಧಾರಣವಾಗಿ 2 ವರ್ಷಕ್ಕೊಂದು. ಮರಿಯ ಪಾಲನೆ, ಪೋಷಣೆಗಳ ಹೊಣೆಯೆಲ್ಲ ತಾಯಿಯದೆ. ಚಿಕ್ಕಮರಿಗಳು ಯಾವಾಗಲೂ ಚಟುವಟಿಕೆಯಿಂದ ಆಟವಾಡುತ್ತಿರುತ್ತವೆ. ಅನೇಕವೇಳೆ ಬೆಳೆದ ಗಿಬನ್‌ಗಳೂ ಮರಿಗಳೊಡನೆ ಸೇರುವುದುಂಟು. 7 ವರ್ಷ ವಯಸ್ಸಾದ ಅನಂತರ ಗಿಬನ್ ಲೈಂಗಿಕ ಪ್ರಬುದ್ಧಾವಸ್ಥೆಗೆ ಬರುತ್ತದೆ.

(ಬಿ.ಆರ್.ಸಿ.ಆರ್.)

**ಗಿರ್ ಅರಣ್ಯ:** ಗುಜರಾತ್ ರಾಜ್ಯದ ಜುನಾಗಢ ಜಿಲ್ಲೆಯ ದಕ್ಷಿಣಭಾಗದಲ್ಲಿರುವ ಗಿರ್ ಗಿರಿಶ್ರೇಣಿಯ ತಳಭಾಗದಲ್ಲಿರುವ ಅರಣ್ಯ. ಅತ್ಯಂತ ಆಕರ್ಷಕ ಮತ್ತು ವರ್ಣಮಯವಾಗಿದೆ. ಸೌರಾಷ್ಟ್ರದ ದಕ್ಷಿಣ ತೀರಕ್ಕೆ 75 ಕಿಮೀ ದೂರದಲ್ಲಿರುವ ಗಿರ್ ಗಿರಿಸಾಲು ಪೂರ್ವ–ಪಶ್ಚಿಮವಾಗಿ 180 ಕಿಮೀ ದೂರ ಹಬ್ಬಿದೆ. ಅಲ್ಲಲ್ಲಿ ಕತ್ತರಿಸಿದಂತಿರುವ ಗಿರ್ ಶ್ರೇಣಿಯ ಪಶ್ಚಿಮದಲ್ಲಿ ಓಜಾತ್ ನದಿಯೂ, ಪೂರ್ವದಲ್ಲಿ ಶೆತ್ರುಂಜಿ ನದಿಯೂ ಹರಿಯುತ್ತವೆ. ಓಜಾತ್ ನದಿ ಗಿರ್ ಶ್ರೇಣಿಗೂ ಗಿರ್ನಾರ್ ಶ್ರೇಣಿಗೂ ನಡುವಣ ಗಡಿ ರೇಖೇಯಂತಿದೆ. ಗಿರ್ ಶ್ರೇಣಿಯ ಅತ್ಯುನ್ನತ ಶಿಖರದ ಎತ್ತರ 643 ಮೀ. ಇದು ಅರೆ ಮರುಭೂಮಿಯಿಂದ ಕೂಡಿದ, 800 ಚಕಿಮೀ ವಿಸ್ತೀರ್ಣದ ಪ್ರದೇಶದಿಂದಿದೆ. ಅಲ್ಲಲ್ಲಿ ಮುಳ್ಳು ಪೊದೆಗಳಿವೆ. ಇಲ್ಲಿಯ ಮರಗಳು ಅಷ್ಟೇನು ಉತ್ತಮವಲ್ಲ. ಕೆಲವು ತೇಗದ ಮರಗಳು ಇವೆ. ಇಡೀ ಪ್ರದೇಶದಲ್ಲಿ ಅಲ್ಲಲ್ಲಿ ಸಾಗುವಳಿಯಾದ ನೆಲವಿದೆ. ಸಮೀಪ ಸಣ್ಣ–ಸಣ್ಣ ಹಳ್ಳಿಗಳಿವೆ.

ಭಾರತದಲ್ಲಿರುವ ಕೆಲವೇ ಸಿಂಹಗಳು ಗಿರ್ ಅರಣ್ಯದಲ್ಲಿರುವುದರಿಂದ ಇದು ಬಹಳ ಪ್ರಸಿದ್ಧವಾಗಿದೆ. ಇದೊಂದು ಅಭಯಾರಣ್ಯ. ಈ ಅರಣ್ಯದಲ್ಲಿರುವ ಸಿಂಹಗಳ ರಕ್ಷಣೆಗೆ ಸರ್ಕಾರ ವಿಶೇಷ ಕ್ರಮ ಕೈಗೊಂಡಿದೆ. 1950ರಲ್ಲಿ ನಡೆಸಿದ ಗಣತಿಯ ಪ್ರಕಾರ ಸು. 240 ಸಿಂಹಗಳಿದ್ಧವು. 1955ರಲ್ಲಿ 290 ಸಿಂಹಗಳಿದ್ದುವೆಂದು ಅಂದಾಜು ಮಾಡಲಾಗಿತ್ತು. ಅರಣ್ಯದಲ್ಲಿ ಆಹಾರ ಸಿಕ್ಕದಿದ್ದಾಗ ಹಳ್ಳಿಗಳೊಳಕ್ಕೆ ನುಗ್ಗಿ ದನಕರುಗಳನ್ನು ಕೊಂದು ತಿನ್ನುತ್ತಿದ್ದ ಸಿಂಹಗಳ ಹಾವಳಿಯನ್ನು ತಪ್ಪಿಸಿಲು ಹಳ್ಳಿಗರು ವಿಷ ಹಾಕಿ ಇವನ್ನು ಕೊಲ್ಲುತ್ತಿದ್ದರೆಂದೂ ಆದ ಕಾರಣ, ಇವುಗಳ ಸಂಖ್ಯೆ ಸು. 200ಕ್ಕೆ ಇಳಿಯಿತೆಂದೂ ನಂಬಲಾಗಿತ್ತು. 1963ರ ಜನಗಣತಿಯ ಪ್ರಕಾರ ಇಲ್ಲಿ 280ಕ್ಕಿಂತ ಹೆಚ್ಚು ಸಿಂಹಗಳಿದ್ದುವು.

***

**ಗಿಳಿ:** ಸಿಟಾಸಿಫಾರ್ಮಿಸ್ ಗಣದ ಸಿಟಾಸಿಡೆ ಕುಟುಂಬಕ್ಕೆ ಸೇರಿದ ಸಿಟಾಕ್ಯುಲ ಜಾತಿಯ ವಿವಿಧ ಪ್ರಭೇದಗಳಿಗಿರುವ ಸಾಮಾನ್ಯ ಹೆಸರು (ಪ್ಯಾರಟ್, ಪ್ಯಾರಕೀಟ್). ಭಾರತದಲ್ಲಿ ಈ ಜಾತಿಯ ಸಿ.ಯೂಪ್ಯಾಟ್ರಿಯ, ಸಿ.ಕ್ರಾಮೆರಿ ಮತ್ತು ಸಿ.ಸಯಾನೊಸಿಫ್ಯಾಲ ಎಂಬ ಮೂರು ಪ್ರಭೇದಗಳು ಕಂಡುಬರುತ್ತವೆ. ಅಲ್ಲದೆ ಗಿಳಿಗಳ ಕುಟುಂಬದಲ್ಲಿ ಗಿಳಿಗಳನ್ನೇ ಹೋಲುವ ಕಾಕಟೂ, ಕಾಕಟೀಲ್, ಲೋರಿಸ್, ಲೋರಿಕೀಟ್, ಮಕಾವ್, ಬಡ್ಜರಿಗಾರ್, ಕಿಯಾ, ಒಲವಿನ ಹಕ್ಕಿಗಳು (ಲವ್ ಬರ್ಡ್ಸ್) ಮುಂತಾದುವು ಸೇರಿವೆಯಾದ್ದರಿಂದ ಒಟ್ಟಾಗಿ ಇವನ್ನೂ ಗಿಳಿಗಳೆಂದು ನಿರ್ದೇಶಿಸುವುದುಂಟು. ಮೈಬಣ್ಣದ ಬೆಡಗಿಗೂ ಮನುಷ್ಯನ ಧ್ವನಿಯನ್ನು ಅನುಕರಿಸುವ ಅಸಾಧಾರಣ ಶಕ್ತಿಗೂ ಹೆಸರಾಗಿರುವ ಇವನ್ನು ಬಹು ಪ್ರಾಚೀನ ಕಾಲದಿಂದಲೂ ಮಾನವ ಸಾಕುತ್ತಿದ್ದಾನೆ. ಇವನ್ನು ಸಾಕುವುದು ಸುಲಭವೂ ಹೌದು. ಗಿಳಿಯನ್ನು ಗಿಣಿ, ಪಂಡಿತವಕ್ಕಿ, ಕನ್ನಡವಕ್ಕಿ ಎಂದೂ ಕೀರ ಶುಕ ಎಂದೂ ಕವಿಗಳು ಕರೆದಿದ್ದಾರೆ. ಪುರುಳಿ ಎಂಬುದು ಹೆಣ್ಣು ಗಿಳಿಯ ಹೆಸರು. ಗಿಳಿ ಬಹುಹಿಂದಿನಿಂದಲೂ ಕವಿಗಳಿಗೆ, ರಸಿಕರಿಗೆ ಬಹು ಮೆಚ್ಚಿನ ಹಕ್ಕಿಯಾಗಿದೆ.

ದೊಡ್ಡ ತಲೆ, ಮೋಟುಕತ್ತು, ವಿಶಿಷ್ಟವಾದ ಕೊಕ್ಕೆಯಂತೆ ಬಾಗಿದ, ಬಲಯುತವಾದ ಹಾಗೂ ಕೆಂಪು ಬಣ್ಣದ ಕೊಕ್ಕು, ಹಸಿರು ಮೈಬಣ್ಣ, ಚೂಪು ಬಾಲ ಇವೆಲ್ಲ ಗಿಳಿಯ ಪ್ರಮುಖ ಲಕ್ಷಣಗಳು. ಗಿಳಿಯ ಇನ್ನೊಂದು ಮುಖ್ಯ ಲಕ್ಷಣ ಅದರ ಕಾಲು. ಕಾಲಿನ 4 ಬೆರಳುಗಳಲ್ಲಿ ಎರಡು ಹಿಂದಕ್ಕೂ ಎರಡು ಮುಂದಕ್ಕೂ ಬಾಗಿವೆ. ಇದರಿಂದ ಗಿಳಿ ಮರದ ರೆಂಬೆಗಳನ್ನು ಹಿಡಿದುಕೊಂಡು ಚಲಿಸಬಲ್ಲುದು. ಅಲ್ಲದೆ ಆಹಾರವನ್ನು ಹಿಡಿದುಕೊಂಡು ಬಾಯಿಗೆ ಸಾಗಿಸುವ ಸೌಲಭ್ಯವೂ ಗಿಳಿಗೆ ಇದರಿಂದ ದೊರೆತಿದೆ. ಇದು ಬೇರಾವ ಹಕ್ಕಿಗಳಲ್ಲೂ ಇಲ್ಲ. ಕೊಕ್ಕಿನ ಬುಡದಲ್ಲಿ ಸೆರೆ ಎಂಬ ಅಗಲವಾದ ಭಾಗವಿದೆ. ಇದರ ಮೂಲಕ ನಾಸಿಕ ರಂಧ್ರಗಳು ಹೊರತೆರೆಯುತ್ತವೆ. ಕೊಕ್ಕಿನ ಮೇಲ್ಭಾಗ ತಲೆಬುರುಡೆಗೆ ಬಂಧಿತವಾಗಿರುವುದರಿಂದ ಇದು ಅತ್ಯಂತ ಬಲಯುತವಾಗಿದೆ. ಅಲ್ಲದೆ ಗಿಳಿ ತನ್ನ ಕೊಕ್ಕನ್ನು ಮೂರನೆಯ ಕಾಲಿನಂತೆ ಬಳಸಿಕೊಂಡು ಮರವನ್ನು ಹತ್ತಬಲ್ಲುದು. ಗಿಳಿಯ ನಾಲಿಗೆ ಉರುಳೆಯಾಕಾರದ್ದೂ ತುಂಬ ಮೆತುವಾದದೂ ಆಗಿದೆ.

ಬಹುಪಾಲು ಗಿಳಿಗಳು ಮರದ ಪೊಟರೆಗಳಲ್ಲಿ ಗೂಡುಗಳನ್ನು ಕಟ್ಟುತ್ತವೆ. ಕೆಲವು ಮಾತ್ರ ನೆಲದ ಬಿಲಗಳಲ್ಲಿ ಗೂಡುಮಾಡಿಕೊಳ್ಳುತ್ತವೆ. ಹೆಣ್ಣು 1 ರಿಂದ 12 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಬಣ್ಣ ಬಿಳಿ. ಕಾವು ಕೂರುವ ಕೆಲಸದಲ್ಲಿ ಸಾಮಾನ್ಯವಾಗಿ ಗಂಡು ಹೆಣ್ಣುಗಳೆರಡೂ ಪಾಲುಗೊಳ್ಳುತ್ತವೆ. ಕಾವು ಕೊಡುವ ಅವಧಿ ಚಿಕ್ಕ ಜಾತಿಗಳಲ್ಲಿ 16–19 ದಿವಸಗಳವರೆಗೂ ದೊಡ್ಡ ಜಾತಿಗಳಲ್ಲಿ ಸುಮಾರು 30 ದಿವಸಗಳವರೆಗೂ ಇರುತ್ತದೆ. ಆಗ ತಾನೆ ಹುಟ್ಟಿದ ಮರಿಗಳಿಗೆ ಪುಕ್ಕದ ಹೊದಿಕೆಯಿರುವುದಿಲ್ಲ; ಕಣ್ಣುಗಳೂ ಮುಚ್ಚಿರುತ್ತವೆ. ಸುಮಾರು 2–3 ತಿಂಗಳವರೆಗೆ ಮರಿಗಳನ್ನು ತಂದೆ ಮತ್ತು ತಾಯಿ ಗಿಳಿಗಳು ಗುಟುಕು ಕೊಟ್ಟು ಪೋಷಿಸುತ್ತವೆ. ಗಿಳಿಗಳು ಸುಮಾರು 50 ವರ್ಷ ಬದುಕಬಲ್ಲುವು (ಕೆಲವು ದೊಡ್ಡ ಜಾತಿ ಗಿಳಿಗಳು 80 ಕ್ಕೂ ಹೆಚ್ಚು ವರ್ಷ ಬದುಕಿರುವ ಅನಧಿಕೃತ ವರದಿ ಉಂಟು.) ಆದರೆ ಚಿಕ್ಕ, ಪಂಜರದ ಗಿಳಿಗಳಾದ ಪ್ಯಾರಕೀಟ್ ಮತ್ತು ಬಡ್ಜರಿಗಾರ್‌ಗಳು 5 ವರ್ಷ ಮಾತ್ರ ಬದುಕುತ್ತವೆ.

ಗಿಳಿಗಳು ಸಮಭಾಜಕ ವೃತ್ತ ಪ್ರದೇಶಕ್ಕೆ ಸೀಮಿತವಾಗಿವೆ. ಅದರಲ್ಲೂ ಆಸ್ಟ್ರೇಲಿಯ ಖಂಡದಲ್ಲಿ ವಿವಿಧ ಜಾತಿಗಳು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತವೆ. (ಕೆ.ಎಂ.ವಿ)

**ಗಿಳಿಮೀನು:** ಸ್ಕ್ಯಾರಿಡೆ ಕುಟುಂಬಕ್ಕೆ ಸೇರಿದ ಸ್ಕೇರಸ್ ಜಾತಿಯ ಮೀನುಗಳ ಸಾಮಾನ್ಯ ಹೆಸರು (ಪ್ಯಾರಟ್ ಫಿಶ್). ರ್‍ಯಾಸ್ ಮೀನುಗಳಿಗೆ ಹತ್ತಿರದ ಸಂಬಧಿಗಳಿವು. ಅಟ್ಲಾಂಟಿಕ್, ಫೆಸಿಫಿಕ್, ಮೆಡಿಟರೇನಿಯನ್ ಮತ್ತು ಹಿಂದೂ ಮಹಾಸಾಗರಗಳಲ್ಲೆಲ್ಲ ಇವೆ. ಇವುಗಳ ದೇಹ ವರ್ಣರಂಜಿತವಾಗಿರುವುದರಿಂದಲೂ ಬಾಯಿ ಗಿಳಿಯ ಕೊಕ್ಕಿನಂತಿರುವುದರಿಂದಲೂ ಇವಕ್ಕೆ ಗಿಳಿಮೀನುಗಳೆಂಬ ಹೆಸರು. ಮಧ್ಯಮ ಗಾತ್ರದವಾದ ಈ ಮೀನುಗಳ ದೇಹದ ಉದ್ದ ಸುಮಾರು 2.5–5 ಸೆಂಮೀ. ಕೆಲವು ಪ್ರಭೇದಗಳು ಮಾತ್ರ 10 ಸೆಂಮೀ ಉದ್ದಕ್ಕೆ ಬೆಳೆಯುವುದುಂಟು. ಕೆಲವು ಗಂಡು ಮೀನುಗಳಲ್ಲಿ ವಯಸ್ಸು ಮತ್ತು ಗಾತ್ರ ಹೆಚ್ಚಿದಂತೆ ಅವುಗಳ ತಲೆಯ ಮೇಲೆ ಎಲುಬಿನ ಒಂದು ಗುಬುಟು ಬೆಳೆಯುತ್ತದೆ. ಗಿಳಿಮೀನುಗಳ ಮೇಲಿನ ಹಾಗೂ ಕೆಳದವಡೆಗಳಲ್ಲಿ ಒಂದೊಂದು ಜೊತೆ ಬಹಳ ಗಡುಸಾದ ಹಲ್ಲುಗಳಿವೆ. ಬಾಯಿ ಗಿಳಿಯ ಕೊಕ್ಕಿನಂತಿರುವುದಕ್ಕೆ ಈ ಹಲ್ಲುಗಳೇ ಕಾರಣ. ಗಂಟಲಭಾಗದಲ್ಲಿನ ಹಲ್ಲುಗಳೂ ಬಹಳ ಗಟ್ಟಿಯಾಗಿವೆ. ವಿವಿಧ ಬಗೆಯ ಹವಳಗಳು, ಮೃದ್ವಂಗಿಗಳು ಮತ್ತು ಸಮುದ್ರ ಸಸ್ಯಗಳೇ ಗಿಳಿಮೀನುಗಳ ಮುಖ್ಯ ಆಹಾರ. ಹವಳಗಳ ಕವಲುಗಳನ್ನು ತಮ್ಮ ಗಟ್ಟಿ ಹಲ್ಲುಗಳಿಂದ ಮುರಿದುಕೊಂಡು ಗಂಟಲಿನ ಹಲ್ಲುಗಳ ನೆರವಿನಿಂದ ಅರೆದು ನುಂಗುತ್ತವೆ. ರ್‍ಯಾಸ್ ಮೀನುಗಳಂತೆಯೇ ಇವು ಕೂಡ ರಾತ್ರಿಯ ಹೊತ್ತು ಸಮುದ್ರತಳದ ಮೇಲೆ ನಿದ್ರಿಸುತ್ತವೆ. ಹೀಗೆ ವಿಶ್ರಮಿಸುವಾಗ ತಮ್ಮ ಸುತ್ತ ಲೋಳೆವಸ್ತುವಿನ ಹೊದಿಕೆಯನ್ನು ನಿರ್ಮಿಸಿಕೊಳ್ಳುವುದುಂಟು.

ಗಿಳಿಮೀನುಗಳಲ್ಲಿ ಮುಖ್ಯವಾದುವು ಮೆಡಿಟರೇನಿಯನ್ ಸಮುದ್ರದ ಸ್ಕೆರಸ್ ಕ್ರಟೆನ್ಸಿಸ್, ಅಟ್ಲಾಂಟಿಕ್ ಸಾಗರದಲ್ಲಿನ ಸ್ಕೇರಸ್ ಟೀನಿಯಾಪ್ಟರಸ್ ಮತ್ತು ಹಿಂದೂ ಮತ್ತು ಫೆಸಿಫಿಕ್ ಸಾಗರಗಳಲ್ಲಿನ ಕ್ಲೋರಸ್ ಪ್ರಭೇದ. ***

**ಗೀಜಗನ ಹಕ್ಕಿ:** ಪ್ಲೋಸಿಡೆ ಕುಟುಂಬದ ಪ್ಲೋಸಿನೆ ಉಪಕುಟುಂಬದ ಸದಸ್ಯ. ನೇಕಾರ ಹಕ್ಕಿ ಅಥವ ನೇಯ್ಗೆ ಹಕ್ಕಿ ಪರ್ಯಾಯನಾಮ. ಒಟ್ಟು ೬೫ ಪ್ರಭೇದಗಳಿವೆ.



ಗೀಜಗನ ಹಕ್ಕಿಯ ವಿವಿಧ ಪ್ರಭೇದಗಳು (ಗಂಡು ಮತ್ತು ಹೆಣ್ಣು)

ಪ್ಲೋಸಿಯಸ್ ಜಾತಿಯಲ್ಲಿ ನಾಲ್ಕು ಪ್ರಭೇದಗಳಿವೆ. ಪ್ಲೋಸಿಯಸ್ ಫಿಲಿಪಿನೆನ್ಸಿಸ್ (ಭಾರತದ ಗೀಜಗ), ಪ್ಲೊ. ಮನ್ಯಾರ್ (ಮುನಿಯಾರ್ ಗೀಜಗ), ಪ್ಲೊ. ಬೆಂಗಾಲೆನ್ಸಿಸ್ (ಕಪ್ಪು ಕೊರಳಿನ ಗೀಜಗ) ಮತ್ತು ಪ್ಲೊ. ಮ್ಯಾಗರಿಂಜಸ್ (ಫೀನಾ ಗೀಜಗ) ಭಾರತದಲ್ಲಿ ವಾಸಿಸುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಕಂಡು ಬರುವ ಗೀಜಗ ಪ್ಲೋಸಿಯಸ್ ಫಿಲಿಪಿನೆನ್ಸಿಸ್ ಸಾಮಾನ್ಯ ಗೀಜಗ. ಈ ಹಕ್ಕಿ ಗುಬ್ಬಚ್ಚಿಯ ಗಾತ್ರದಷ್ಟಿದೆ. ದೃಢವಾದ ಶಂಕುವಿನಾಕಾರದ ಕೊಕ್ಕು ಹೊಂದಿದೆ. ಬಾಲ ಮೋಟಾಗಿ ಚಚ್ಚೌಕವಾಗಿ ಕತ್ತರಿಸಿದ ಹಾಗಿದೆ. ಗೀಜಗ ಹಕ್ಕಿಗಳ ವಾಸ ಕೃಷಿಯ ಬಯಲು ಪ್ರದೇಶಗಳಲ್ಲಿ. ಇವು ಗುಂಪುಗಳಲ್ಲಿರುತ್ತವೆ. ಭಾರತ , ಪಾಕಿಸ್ತಾನ, ಶ್ರೀಲಂಕಾ ಮತ್ತು ಬರ್ಮಾ ದೇಶಗಳಲ್ಲಿ ಈ ಹಕ್ಕಿಗಳ ವ್ಯಾಪ್ತಿ ಇದೆ. ಇವು ವಲಸೆ ಹೋಗುತ್ತವೆ. ದೊಡ್ಡ ಗುಂಪಿನಲ್ಲಿ ಸಹಸ್ರಾರು ಗೀಜಗಗಳು ಕೊಯ್ಲಿಗೆ ಬಂದ ಬತ್ತ ಮತ್ತು ಇತರ ಧಾನ್ಯಗಳ ಕೃಷಿಭೂಮಿಗಳ ಬಳಿ ಇರುತ್ತವೆ. ಕೆಲವೊಮ್ಮೆ ಬಲಿಯುತ್ತಿರುವ ತೆನೆಗಳನ್ನು ತಿಂದು ಹಾಳು ಮಾಡುತ್ತವೆ. ಇವು ಸಸ್ಯಾಹಾರಿಗಳು. ಕೆಲವೊಮ್ಮೆ ಕೃಷಿ ಭೂಮಿಯಲ್ಲಿ ಕೀಟಗಳನ್ನು ತಿನ್ನುತ್ತವೆ. ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಗೀಜಗ ಚೀ ಚೀ ಎಂದು ಕೂಗುತ್ತ ಹೆಣ್ಣನ್ನು ಹುಡುಕಿಕೊಂಡು, ಅದನ್ನು ಅಟ್ಟಿಸಿಕೊಂಡು ಹೋಗುತ್ತದೆ. ಇವು ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳಲ್ಲಿ ಗೂಡು ಕಟ್ಟುತ್ತವೆ. ಈ ಅವಧಿ ಮುಂಗಾರು ಮಳೆಗಾಲಕ್ಕೂ, ಭತ್ತದ ಅಥವಾ ದವಸಗಳ ಕೊಯ್ಲಿಗೂ ಹೊಂದಿಕೊಳ್ಳುತ್ತದೆ. ಗೀಜಗ ಹಕ್ಕಿಗಳು ಗೂಡುಕಟ್ಟುವುದರಲ್ಲಿ ಬಹಳ ಕುಶಲತೆಯನ್ನು ಪ್ರದರ್ಶಿಸುತ್ತವೆ. ನದಿ, ಕೆರೆ ನೀರಿನ ಮೇಲೆ ಬಾಗಿರುವ ವಿವಿಧ ಮರದ ರೆಂಬೆಗಳ, ಈಚಲುಗರಿಗಳ ತುದಿಯಲ್ಲಿ ಅಥವ ನೀರಿನಲ್ಲಿ ಬೆಳೆಯುವ ಜೊಂಡುಗಳ ಮಧ್ಯೆ ಗೂಡನ್ನು ನಿರ್ಮಿಸುತ್ತವೆ. ಗೂಡುಗಳ ನಿರ್ಮಾಣಕ್ಕೆ ಬತ್ತದ ಹುಲ್ಲುಗಳನ್ನು ಬಳಸುತ್ತವೆ. ಕೊಕ್ಕು ಮತ್ತು ಕಾಲುಗಳನ್ನು ಕುಶಲತೆಯಿಂದ ಬಳಸಿ ಗೂಡು ನಿರ್ಮಿಸುತ್ತವೆ. ಗೂಡು ಹೂಜಿಯಂತೆ ಅಥವಾ ಬಟ್ಟಿ ಪಾತ್ರೆಯಂತೆ ಇರುತ್ತದೆ. ಇದರಲ್ಲಿ ಕೊಂಬೆಗೆ ತೂಗುಹಾಕುವ ಭಾಗ, ಮೊಟ್ಟೆಯಿಡುವ ವಿಶಾಲವಾದ ಭಾಗ ಮತ್ತು ಉದ್ದವಾದ ನೇರವಾದ ಪ್ರವೇಶದ್ವಾರ ಭಾಗ ಎಂದು ಮೂರು ಭಾಗಗಳಿವೆ. ಪ್ರವೇಶದ್ವಾರ ಕೆಳಮುಖವಾಗಿ ತೆರೆದಿರುತ್ತದೆ. ಮೊಟ್ಟೆಯಿಡುವ ಭಾಗದ ತಳಕ್ಕೆ ಹಸಿ ಜೇಡಿಮಣ್ಣನ್ನು ಮೆತ್ತಿ ಮೃದುವಾಗಿಡುತ್ತವೆ. ಗಂಡು ಪಕ್ಷಿ ಗೂಡು ನಿರ್ಮಾಣ ಮಾಡಿದ ಅನಂತರ ಹೆಣ್ಣಿಗೆ ಗೂಡು ಒಪ್ಪಿಗೆಯಾದ ಅನಂತರ ಗಂಡು–ಹೆಣ್ಣು ಸಂಭೋಗ ನಡೆಸುತ್ತವೆ. ಹೆಣ್ಣು ೩–೪ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗೆ ಕಾವು ಕೊಡುವ ಕೆಲಸ ಹೆಣ್ಣಿನದು. ಒಂದು ಗಂಡು ಹಕ್ಕಿ ಹಲವಾರು ಹೆಣ್ಣು ಹಕ್ಕಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಅನೇಕ ಗೂಡುಗಳನ್ನು ನಿರ್ಮಿಸುತ್ತದೆ. ಅದೇ ರೀತಿ ಹೆಣ್ಣು ೪–೫ ಗಂಡಿನ ಸಂಗ ಬೆಳಸಿ ಸಂತಾನೋತ್ಪತ್ತಿ ಮಾಡುತ್ತದೆ. (ಬಿ.ಬಿ.ಎಚ್.)


ಗೀಜಗನ ಗೂಡು

**ಗುಬ್ಬಚ್ಚಿ:** ಪ್ಯಾಸೆರಿಫಾರ್ಮಿಸ್ ಗಣದ ಪ್ಲೋಸ್ಯೆಯಿಡೆ ಕುಟುಂಬಕ್ಕೆ ಸೇರಿದ ಚಿಕ್ಕ ಗಾತ್ರದ ಒಂದು ಹಕ್ಕಿ (ಹೌಸ್ ಸ್ಪ್ಯಾರೊ). ಗುಬ್ಬಿ, ಗುಂಚಕ್ಕಿ ಇದರ ಪರ್ಯಾಯ ನಾಮಗಳು. ವೈಜ್ಞಾನಿಕ ನಾಮ ಪ್ಯಾಸರ್ ಡೊಮೆಸ್ಟಿಕಸ್. ಯೂರೋಪ್, ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾಗಳ ಮೂಲವಾಸಿಯಾದ ಇದು ಪ್ರಪಂಚದಾದ್ಯಂತ, ದಕ್ಷಿಣ ಮೇರು ಪ್ರದೇಶಗಳನ್ನು ಬಿಟ್ಟು, ವ್ಯಾಪಿಸಿದೆ. ಸುಮಾರು 1850ರ ವೇಳೆಗೆ ಉತ್ತರ ಅಮೆರಿಕವನ್ನು ಪ್ರವೇಶಿಸಿದ ಇದು ಇಂದು ಇಡೀ ಖಂಡವನ್ನೇ ಆವರಿಸಿದೆ.




ಸುಮಾರು 6 ಸೆಂಮೀ ಉದ್ದದ ಪುಟ್ಟ ಹಕ್ಕಿ ಇದು. ಮೋಟಾದ, ಗಟ್ಟಿಯಾದ ಕಾಲುಗಳೂ ದೃಢವಾದ ಮತ್ತು ಶಂಕುವಿನಾಕಾರದ ಕೊಕ್ಕು, ಗಿಡಗಳ ರೆಂಬೆಗಳನ್ನು ಬಿಗಿಯಾಗಿ ಹಿಡಿಯಲು ಅನುಕೂಲವಾಗುವಂತೆ ಮಾರ್ಪಾಡಾಗಿರುವ ಕಾಲ್ಬೆರಳುಗಳು, ವಿಶೇಷ ರೀತಿಯ ಅಂಗುಳಾಸ್ಥಿ, ಭಿನ್ನ ರೀತಿಯ ವೀರ್ಯಾಣುಗಳು, ಕೇವಲ 14 ಎಲುಬುಗಳಿಂದ

ಕೂಡಿದ ಕುತ್ತಿಗೆ–ಇವು ಗುಬ್ಬಚ್ಚಿಯ ವೈಶಿಷ್ಟ್ಯ. ಗಂಡು ಮತ್ತು ಹೆಣ್ಣು ಹಕ್ಕಿಗಳ ದೇಹವರ್ಣದಲ್ಲಿ ಸ್ವಲ್ಪ ಭಿನ್ನತೆ ಉಂಟು. ಗಂಡು ಹಕ್ಕಿಯ ದೇಹದ ಮೇಲ್ಭಾಗ ಕಂದು, ಹೊಟ್ಟೆಯ ಭಾಗ ನಸುಹಳದಿ ಬಣ್ಣದ್ದು. ಇದರ ನೆತ್ತಿ ಬೂದು ಬಣ್ಣದ್ದಾಗಿಯೂ ಕೆನ್ನೆಗಳು ಬಿಳಿಯಾಗಿಯೂ ಇವೆ. ಗಂಟಲಿನ ಬಳಿ ಕಪ್ಪು ಬಣ್ಣದ ಮಚ್ಚೆ ಇದೆ. ಹೆಣ್ಣು ಹಕ್ಕಿಗಳಲ್ಲಿ ಬೆನ್ನು ಭಾಗ ಕಂದು ಬಣ್ಣಕ್ಕೂ ಉದರಭಾಗ ನಸುಹಳದಿ ಬಣ್ಣಕ್ಕೂ ಇವೆ. ಗಂಟಲಿನ ಬಳಿ ಕಪ್ಪುಮಚ್ಚೆ ಇಲ್ಲ ಮಾನವ ನೆಲೆ ಇರುವೆಡೆಯಲ್ಲೆಲ್ಲ ಗುಬ್ಬಚ್ಚಿಗಳ ವಾಸ್ತವ್ಯ ಇದ್ದೇ ಇದೆ. ಪಟ್ಟಣಗಳ ಗದ್ದಲಕ್ಕೂ ಹಳ್ಳಿಗಳ ಶಾಂತ ವಾತಾವರಣಕ್ಕೂ ಹೊಂದಿಕೊಂಡು ಜೀವಿಸುವ ಸಾಮರ್ಥ್ಯ ಗುಬ್ಬಚ್ಚಿಗಳಿಗಿವೆ. ಮಾನವ ತನ್ನ ವಾಸಕ್ಕೆ ಹೊಸ ಹೊಸ ಸ್ಥಳಗಳನ್ನು ಹುಡುಕಿ ನೆಲೆಸುತ್ತ ಬಂದಾಗಲೆಲ್ಲ ಅಂಥ ಜಾಗಗಳಿಗೆ ಮೊಟ್ಟ ಮೊದಲು ಬರುವ ಹಕ್ಕಿಯೆಂದರೆ ಗುಬ್ಬಚ್ಚಿ. ಗುಬ್ಬಚ್ಚಿಗಳು ಸರ್ವಭಕ್ಷಿಗಳು. ಕಾಳುಕಡ್ಡಿ, ಕೀಟಗಳು, ಫಲಗಳು, ಬೀಜಗಳು– ಹೀಗೆ ಇವುಗಳ ಆಹಾರ ವೈವಿಧ್ಯಪೂರ್ಣ. ಹಗಲೆಲ್ಲ ದೊಡ್ಡ ದೊಡ್ಡ ಗುಂಪುಗಳಲ್ಲಿ ಕೂಡಿದ್ದು, ಕುಪ್ಪಳಿಸುತ್ತ, ಹಾರುತ್ತ, ಕಾಳುಕಡ್ಡಿಗಳನ್ನು ತಿನ್ನುತ್ತ ಕಾಲಕಳೆಯುತ್ತವೆ. ಕೆಲವೊಮ್ಮೆ ಹೊಲಗದ್ದೆಗಳ ಬಳಿ ಬಲು ದೊಡ್ಡ ಗುಂಪುಗಳಲ್ಲಿ ಸೇರಿಕೊಂಡು ಬೆಳೆಯನ್ನು ಹಾಳುಮಾಡುವುದುಂಟು. ಇದರಿಂದಾಗಿ ಕೆಲವೆಡೆ ಪಿಡುಗು ಎನಿಸಿವೆ. ಆದರೂ ಕೀಟಗಳನ್ನು ತಿಂದು ನಾಶಪಡಿಸುವುದರಿಂದ ಉಪಕಾರಿಗಳೂ ಹೌದು.

ಗುಬ್ಬಚ್ಚಿಯ ಪ್ರಣಯ ಕ್ರೀಡೆ ವೈಶಿಷ್ಟ್ಯಪೂರ್ಣ. ಗಂಡು ತನ್ನ ಗರಿಕೆದರಿದ ರೆಕ್ಕೆಯನ್ನು ಬಗ್ಗಿಸಿ ಕಮಾನಿನಂತೆ ಬಾಗಿದ ಪುಕ್ಕವನ್ನು ತಿರುವುತ್ತ, ನಡಿಗೆಯಲ್ಲಿ ಬಿಂಕವನ್ನು ಪ್ರದರ್ಶಿಸುತ್ತ ವಿಚಿತ್ರವಾದ ಕೀಚಲು ಧ್ವನಿಯಿಂದ ಪ್ರಣಯ ಕ್ರೀಡೆಯಲ್ಲಿ ತೊಡಗುತ್ತದೆ. ಗೂಡುಗಳನ್ನು ಗಂಡು ಮತ್ತು ಹೆಣ್ಣುಗಳೆರಡೂ ಕೂಡಿ ನಿರ್ಮಿಸುತ್ತವೆ. ಮರಗಳ ಪೊಟರೆ, ಮನೆಗಳ ಸೂರು, ಕಟ್ಟಡಗಳ ಮೂಲೆ ಮುಂತಾದ ಸ್ಥಳಗಳು ಗೂಡು ಕಟ್ಟಲು ಅಚ್ಚುಮೆಚ್ಚಿನ ಸ್ಥಳಗಳು. ಬಿಡಿಬಿಡಿಯಾದ ಗರಿಗಳು, ಒಣಹುಲ್ಲು, ಕಸಕಡ್ಡಿಗಳನ್ನು ಉಪಯೋಗಿಸಿ ಒರಟು ಗೂಡನ್ನು ಕಟ್ಟುತ್ತವೆ. ಸ್ಥಳಕ್ಕನುಗುಣವಾಗಿ ವರ್ಷದಲ್ಲಿ ಎರಡಕ್ಕೂ ಹೆಚ್ಚು ಬಾರಿ ಹೆಣ್ಣು ಗುಬ್ಬಚ್ಚಿ ಒಂದು ಸಲಕ್ಕೆ 3–5 ಮೊಟ್ಟೆ ಇಡುತ್ತದೆ. ಮೊಟ್ಟೆಗಳ ಬಣ್ಣ ಬಿಳಿ. ಮೇಲೆಲ್ಲ ಬೂದಿ ಬಣ್ಣದ ಮಚ್ಚೆಗಳಿವೆ. ಹೆಣ್ಣು ಗುಬ್ಬಚ್ಚಿ 13–14 ದಿನಗಳು ಕಾವು ಕೊಟ್ಟ ಬಳಿಕ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ.

ಗಂಡು ಗುಬ್ಬಚ್ಚಿಯನ್ನೇ ಹೋಲುವ ಪ್ಯಾಸ್ಸೆರ್ ಮೋಂಟ್ಯಾನಸ್ ಎಂಬ ಮರ ಗುಬ್ಬಚ್ಚಿ (ಟ್ರೀ ಸ್ಪ್ಯಾರೊ) ಚೀನ, ಕೊರಿಯ, ಜಪಾನ್ ಮತ್ತು ಯೂರೋಪಿನ ಕೇಂದ್ರ ಭಾಗದಲ್ಲಿ ಹೇರಳವಾಗಿ ವಾಸಿಸುತ್ತವೆ. ಇವು ಸಹ ನಗರವಾಸಿಗಳು. ಆದರೆ ಶರತ್ಕಾಲದಲ್ಲಿ ಪಕ್ವವಾದ ಭತ್ತದ ಬೆಳೆಗೆ ಇವುಗಳ ಹಿಂಡು ಊಹಿಸಲಾಗದಷ್ಟು ಹಾನಿ ಎಸಗುತ್ತದೆ. ಆದ್ದರಿಂದ ಜಪಾನೀಯರು ನಾನಾ ಬಗೆಯ ಬೆದರು ಗೊಂಬೆಗಳಿಂದ ಹಾಗೂ ಕರ್ಕಶ ಗದ್ದಲದಿಂದ ಇವುಗಳ ಹಾವಳಿಗಳನ್ನು ತಡೆಗಟ್ಟುವರಲ್ಲದೆ ವರ್ಷಂಪ್ರತಿ 5–10 ದಶಲಕ್ಷ ಪಕ್ಷಿಗಳನ್ನು ಹಿಡಿದು ಮಾರುತ್ತಾರೆ. ಇವುಗಳ ಮಾಂಸ ಪೌರಾಸ್ತ್ಯರಿಗೊಂದು ರಸದೌತಣ. ಕೆಂಡದ ಮೇಲೆ ಸುಟ್ಟ ಆಮ್ರದಿಂದ ಸ್ವಾದಗೊಳಿಸಿದ ಇವುಗಳ ಮಾಂಸಕ್ಕೆ ಟೋಕಿಯೋ ನಗರದಲ್ಲಿ ಬಹಳ ಬೇಡಿಕೆಯಿದೆ. (ಎಸ್.ಎಚ್.ಒ)

**ಗುಲ್ಮ:** ಮಾನವನ ಉದರದೊಳಗೆ ಎಡಭಾಗದಲ್ಲಿರುವ ಅಂಗ (ಸ್ಪ್ಲೀನ್). ಮುಷ್ಟಿಯ ಗಾತ್ರಕ್ಕಿಂತ ಸ್ವಲ್ಪ ದೊಡ್ಡದಾಗಿ ಮತ್ತು ಉದ್ದವಾಗಿದೆ. ಇದರ ತೂಕ ೨೦೦ ಗ್ರಾಂ. ಗುಲ್ಮದ ರಚನೆ ವಿಶಿಷ್ಟವಾಗಿದೆ. ಇದು ನಾನಾ ಕ್ರಿಯೆಗಳನ್ನು ನಿರ್ವಹಿಸುತ್ತದೆ. ದೇಹದೊಳಗಿರುವ ಬೇರೆ ಅಂಗಗಳು ಗುಲ್ಮ ಮಾಡುವ ಕ್ರಿಯೆಗಳನ್ನು ಮಾಡುವುದರಿಂದ ಮತ್ತು ಗುಲ್ಮ ಪ್ರತ್ಯೇಕವಾಗಿ ವಿಶಿಷ್ಟವಾದ ಕಾರ್ಯ ಎಸಗದೇ ಇರುವುದರಿಂದ ಇದನ್ನು ಒಂದು ಮುಖ್ಯ ಅಂಗವೆಂದು ಪರಿಗಣಿಸಿಲ್ಲ. ಶಸ್ತ್ರಕ್ರಿಯೆಯ ಮೂಲಕ ಗುಲ್ಮವನ್ನು ತೆಗೆದುಹಾಕಿದರೂ, ಜೀವಿಗೆ ಯಾವ ತೊಂದರೆಯಾಗದು.

ಗುಲ್ಮ ಬಿಗಿಯಾಗಿ ಆವರಿಸಿಕೊಂಡ, ಗಟ್ಟಿಯಾದ ತಂತು ಮತ್ತು ಸ್ನಾಯುಯುಕ್ತ ಕವಚದಲ್ಲಿದೆ. ಈ ಕವಚದ ಎಲ್ಲಾ ದಿಕ್ಕುಗಳಲ್ಲಿ ತಡಿಕೆಗಳು ಹೊರಟು ಕವಲೊಡೆದು, ಸಂಧಿಸಿ, ಗುಲ್ಮವನ್ನು ಸಣ್ಣದೊಡ್ಡ ಭಾಗಗಳಾಗಿ ವಿಭಜಿಸುತ್ತವೆ. ಇವು ತಂತು ಮತ್ತು ಸ್ನಾಯುಯುಕ್ತವಾಗಿವೆ. ಈ ಜಾಲ ತಂತುಗಳು (ರೆಟಿಕ್ಯುಲರ್ ಫೈಬರ್ಸ್) ಆಯಾ ಭಾಗದ ಒಳಗೆ ಆಕ್ರಮಿಸಿ, ಬಲೆಯನ್ನು ನಿರ್ಮಿಸುತ್ತವೆ. ಇದರ ನೆರವಿನಲ್ಲಿ ಗುಲ್ಮ ಭಾಗದ ತುಂಬ ಹೂರಣದಂತೆ ಭರ್ತಿಯಾಗಿ ನೆಲೆಗೊಂಡಿವೆ. ಹೂರಣ ಕೆಂಪಾಗಿದ್ದು, ಅಲ್ಲಲ್ಲಿ ಆಡಗಿರುವ ಸಣ್ಣ ಮತ್ತು ದೊಡ್ಡ ಬಿಳಿ ಭಾಗಗಳಿವೆ. ಕೆಂಪು ಭಾಗದಲ್ಲಿ ಕೆಂಪು ರಕ್ತಕಣಗಳಿವೆ. ಬಿಳಿ ಭಾಗದಲ್ಲಿ ಶ್ವೇತಕಣಗಳು ವಿಶೇಷವಾಗಿ ದುಗ್ಧರಸಕಣಗಳಿವೆ. ಈ ಬಿಳಿ ಹೂರಣದ ಭಾಗಗ'ಳು ಗುಲ್ಮದೊಳಗೆ ಅಪಧಮನಿಗಳನ್ನು ಅಲ್ಲಲ್ಲಿ ಸುತ್ತುವರಿದಿರುವ ದುಗ್ಧರಸನಾಳ ಗಿಣ್ಣುಗಳು. ಇವು ದುಗ್ಧರಸಾಣುಗಳನ್ನು ಉತ್ಪತ್ತಿಮಾಡುತ್ತವೆ. ಕೆಂಪು ಭಾಗದಲ್ಲಿ ಸೈನುಸಾಯ್ಡುಗಳೆಂಬ ಅತ್ಯಂತ ತೆಳುಭಿತ್ತಿಯ ಹಿಗ್ಗುವಂತಹ ಅನೇಕ ರಕ್ತನಾಳಗಳಿವೆ. ಇವುಗಳ ಭಿತ್ತಿಯಲ್ಲಿ ಸೂಕ್ಷ್ಮ ರಂಧ್ರಗಳಿವೆ. ನಾಳಗಳ ಭಿತ್ತಿಯಲ್ಲಿ ಕಣಭುಂಜಕ ಜೀವಕಣ (ಮ್ಯಾಕ್ರೋಫೇಜಸ್) ಗಳಿವೆ. ನಾಳಗಳು ಕೊನೆಯಲ್ಲಿ ತೆರೆದುಕೊಂಡು ಅವುಗಳಲ್ಲಿ ಪ್ರವಹಿಸುವ ರಕ್ತ ಕೆಂಪು ಹೂರಣದೊಡನೆ ಮಿಶ್ರವಾಗುತ್ತದೆ. ಹೂರಣದ ಜೀವಕಣಗಳೊಡನೆ ರಕ್ತ ನೇರವಾಗಿ ಮಿಶ್ರಿತವಾಗಿದ್ದರೂ, ಈ ರಕ್ತನಾಳಗಳ ಭಿತ್ತಿಯಲ್ಲಿನ ರಂಧ್ರಗಳಿಂದ ರಕ್ತ ಜಿನುಗಿ, ಹೂರಣದೊಡನೆ ಮಿಲನವಾಗುತ್ತದೆ. ಕಾರಣ, ರಕ್ತವು ಕಣಭುಂಜಕ ಜೀವಕಣಗಳ ಸನಿಹದಲ್ಲೆ ಇದೆ. ಕಣಗಳ ಜಾಲದೊಳಗೆ ರಕ್ತ ಪ್ರವಹಿಸುವುದರಿಂದ ಅಥವಾ ಕಣಭುಂಜಕ ಕಣಗಳ ಕ್ರಿಯೆಗೆ ಒಳಪಡುವುದರಿಂದ ಅದರೊಳಗಿರುವ ಜೈವಿಕ ಮತ್ತು ಅಜೈವಿಕ ಕಣಗಳು ತಡೆಹಿಡಿಯಲ್ಪಡುತ್ತವೆ. ಆಗ ಅವು ರಕ್ತಗತವಾದ ವಿಷಾಣುಗಳಾಗಿರುತ್ತವೆ. ಕೆಂಪು ರಕ್ತಕಣಗಳ ಛಿದ್ರಗಳೂ, ಕಣಭುಜಂಕ ಜೀವಕಣಗಳಿಂದ ಭುಂಜಿಸಲ್ಪಟ್ಟು ಅವುಗಳೊಳಗೆ ಛಿದ್ರಗಳ ಕೆಂಪು ವಸ್ತು ಹೀಮೋಗ್ಲಾಬಿನ್ ವಿಶೇಷ ರಾಸಾಯನಿಕ ಮಾರ್ಪಾಡಿಗೊಳಪಡುತ್ತದೆ. ಹೀಮೋಗ್ಲಾಬಿನ್ ಕಬ್ಬಿಣದ ಅಂಶ ಪ್ರತ್ಯೇಕಿಸಲ್ಪಟ್ಟು ಆ ರಾಸಾಯನಿಕ ರಕ್ತಗತವಾಗಿ ರಕ್ತಪರಿಚಲನೆಯ ಮೂಲಕ ಕಣಸಂಚಾರದಿಂದ ಎಲುಬಿನ ಕೆಂಪು ಮಜ್ಜೆಗೆ ತಲುಪಿ ಅಲ್ಲಿ ಹೊಸ ಹೀಮೋಗ್ಲಾಬಿನ್ ಸಂಯೋಜನೆಯಲ್ಲಿ ಪಾಲುಗೊಳ್ಳುತ್ತದೆ. ಕಬ್ಬಿಣ ಸಂಯುಕ್ತಗಳು ಹೆಚ್ಚು ಪ್ರಮಾಣದಲ್ಲಿದ್ದರೆ, ಕಣಭುಂಜಕ ಜೀವಕಣಗಳಲ್ಲಿ ಅವುಗಳ ಶೇಖರಣೆಯಾಗುತ್ತದೆ. ಹೀಮೋಗ್ಲಾಬಿನ್‌ನ ಬಿಲಿರುಬಿನ್ ವರ್ಣ ಮಾರ್ಪಟ್ಟು ರಕ್ತಗತವಾಗಿ ರಕ್ತಪರಿಚಲನೆಯಿಂದ ಯಕೃತ್ತನ್ನು ಸೇರಿ ಅಲ್ಲಿ ವಿಸರ್ಜಿತ ವಸ್ತುವಾಗಿ ರಕ್ತದಿಂದ ಬೇರ್ಪಟ್ಟು ಪಿತ್ತರಸವಾಗಿ ಅದರೊಡನೆ ಕರುಳನ್ನು ಸೇರಿ ದೇಹದಿಂದ ಹೊರದೂಡಲ್ಪಡುತ್ತದೆ. ಇಷ್ಟಲ್ಲದೆ, ಈ ಸ್ಥಳದಲ್ಲಿ ವಿಷಾಣುಗಳು ಮತ್ತು ಅನ್ಯವಸ್ತುಕಣಗಳ ಪ್ರತಿರೋಧಕ ವಸ್ತುಗಳ ಉತ್ಪತ್ತಿಗೆ ಕಾರಣವಾಗುತ್ತವೆ. ಗುಲ್ಮದ ಕಣಭುಂಜಕ ಜೀವಕಣಗಳು ಕೆಂಪು ಕಣಗಳ ಛಿದ್ರಗಳನ್ನು ಭುಂಜಿಸುವ ಬದಲು ಉಪಯುಕ್ತವಾದ ಕೆಂಪು ರಕ್ತಕಣಗಳನ್ನೇ ಕಬಳಿಸಬಹುದು. ಇದರಿಂದ ರಕ್ತ ಕಣಹೀನತೆಯುಂಟಾಗುತ್ತದೆ. ಹಾಗೆ, ತಟ್ಟೆಕಣಗಳ (ಪ್ಲೇಟ್‌ಲೆಟ್ಸ್) ಕಬಳಿಕೆಯಿಂದ ರಕ್ತಸ್ರಾವ ಸಂಭಾವ್ಯತೆಗಳು ಉಂಟಾಗುತ್ತದೆ. ವಿಷಾಣುಗಳು ಪ್ರಬಲವಾಗಿದ್ದರೆ ಕಣಭುಂಜಕ ಕಣಗಳೆ ನಾಶವಾಗಿ ಗುಲ್ಮದ ಗಾತ್ರ ಕಡಿಮೆಯಾಗುತ್ತದೆ. ವಿಷಾಣು ಸೋಂಕು ನಿಯಂತ್ರಣಕ್ಕೆ ಬಂದು ರೋಗ ಗುಣಮುಖವಾದಾಗ ಗುಲ್ಮ ಮೊದಲಿನ ಗಾತ್ರಕ್ಕೆ ಬೆಳೆಯುತ್ತದೆ. ಹೀಗೆ ಗುಲ್ಮದ ಅಂಶಗಳ ಪುನರುತ್ಪತ್ತಿಯಾಗುವಾಗ ಅದರಲ್ಲಿನ ಶ್ವೇತ ಕಣಗಳು– ದುಗ್ಧರಸಕಣ ಮತ್ತು ಮಾನೋಸೈಟುಗಳು ಪ್ರಧಾನ ಪಾತ್ರವಹಿಸಿ, ಅವು ಬೇರೆ ಕಣಗಳಾಗಿ ಮಾರ್ಪಡುತ್ತವೆ. ಇಂತಹ ಕಣಗಳಲ್ಲಿ ಕಣಭುಂಜಕ ಕಣಗಳು ಬಹಳ ಇರುತ್ತವೆ. ಇವುಗಳ ಆಧಿಕ ಸಂಖ್ಯೆಯಿಂದ ಗುಲ್ಮದ ಗಾತ್ರ ಹೆಚ್ಚಾಗ ಬಹುದು. ಕಬ್ಬಿಣ ಸಂಯುಕ್ತಗಳು ಕಾರಣಾಂತರದಿಂದ ಅತ್ಯಧಿಕವಾಗಿದ್ದರೆ, ಅವುಗಳ ಶೇಖರಣೆಗೆ ಕಣಭುಂಜಕ ಕಣಗಳ ಅಗತ್ಯ ಉಂಟಾಗಿ ಅವು ವಿಶೇಷವಾಗಿ ಉತ್ಪತ್ತಿಯಾಗುತ್ತವೆ. ಆಗ ಗುಲ್ಮದ ಗಾತ್ರ ವೃದ್ಧಿಯಾಗುತ್ತದೆ. ಗುಲ್ಮದ ಗಾತ್ರ ದೊಡ್ಡದಾದರೆ, ಗೆಡ್ಡೆಹೊಟ್ಟೆ (ಸ್ಪ್ಲೀನೊಮೆಗಾಲಿ) ಉಂಟಾಗುತ್ತದೆ. ಗುಲ್ಮ ವೃದ್ಧಿ ಮತ್ತು ಕಣಭುಂಜಕ ಕಣಗಳ ಹೆಚ್ಚಿನ ಉತ್ಪತ್ತಿಯು ವಿಷಾಣು ಸೋಂಕುಂಟಾದಾಗ ಕಂಡುಬಂದರೂ, ಕಣಭುಂಜಕಗಳು ಗುಲ್ಮದಲ್ಲಿ ಮಾತ್ರವಲ್ಲದೆ. ಯಕೃತ್ತು ಮತ್ತು ದುಗ್ಧರಸನಾಳ ಗಂಟುಗಳಲ್ಲಿಯೂ ಗಣನೀಯವಾಗಿರುತ್ತದೆ. ಹಾಗೆಯೇ ಪ್ರತಿರೋಧಕ ವಸ್ತುಗಳ ಉತ್ಪತ್ತಿ ಗುಲ್ಮದಲ್ಲಿ ಆಗಾಧವಾಗಿ ಕಂಡುಬಂದರೂ, ಅಲ್ಲಿ ಮಾತ್ರವಲ್ಲದೆ ಮಜ್ಜೆ ಮುಂತಾದ ಭಾಗಗಳಲ್ಲಿಯೂ ಕಂಡುಬರುತ್ತದೆ. ಗುಲ್ಮದ ಬಿಳಿ ಹೂರಣದ ಭಾಗದಲ್ಲಿ ದುಗ್ಧರಸಕಣಗಳು ಮತ್ತು ಮಾನೊಸೈಟುಗಳು ಉತ್ಪತ್ತಿಯಾಗುತ್ತಿದ್ದರೂ, ಈ ಉತ್ಪತ್ತಿ ದೇಹದ ಇತರ ಭಾಗದಲ್ಲಿ ಗಣನೀಯ ಪ್ರಮಾಣದಲ್ಲಾಗುತ್ತದೆ. ಗುಲ್ಮದ ಸೈನುಸಾಯ್ಡುಗಳು ರಕ್ತವನ್ನು ತಡೆಹಿಡಿದು ಹಿಗ್ಗಿದ ಸ್ಥಿತಿಯಲ್ಲಿರಬಹುದಾದ್ದರಿಂದ ಪರಿಚಲನೆಯಲ್ಲಿರುವ ರಕ್ತ ಕೆಲವು ವೇಳೆ ಹೆಚ್ಚಾದಾಗ ಇಲ್ಲಿ ಶೇಖರಿಸಲ್ಪಟ್ಟು, ಕಡಿಮೆಯಾದಾಗ ಇಲ್ಲಿಂದ ಭರ್ತಿಯಾಗಬಹುದು. ಆದರೆ, ಈ ಕ್ರಿಯೆ ಗುಲ್ಮವು ಸೇರಿದಂತೆ ಚರ್ಮ, ಯಕೃತ್ತು ಮತ್ತು ಘುಪ್ಪುಸಗಳಲ್ಲಿ ಕಾಣುತ್ತದೆ.

ಹೀಗೆ, ಗುಲ್ಮದ ವಿಶಿಷ್ಟ ರಚನೆಯಿಂದ ದೇಹದ ನಾನಾ ಕಾರ್ಯಗಳು ನಡೆದರೂ, ಅವು ಗುಲ್ಮದಿಂದಲೇ ನಿರ್ವಾಹಿತ' ಕಾರ್ಯಗಳಲ್ಲ. ಕಾರಣ, ಗುಲ್ಮವನ್ನು ಶಸ್ತ್ರಕ್ರಿಯೆಯಿಂದ ತೆಗೆದರೆ, ಯಾವ ತೊಂದರೆ ಉಂಟಾಗುವುದಿಲ್ಲ. ಆದರೂ, ಕಶೇರುಕ (ಉದಾ: ವಿಕಾಸದಲ್ಲಿ ಮತ್ಸ್ಯ, ದ್ವಿಚರಿಗಳು, ಸರೀಸೃಪಗಳು, ಪಕ್ಷಿಗಳು ಮತ್ತು ಸ್ತನಿ)ಗಳ ಗುಲ್ಮ ಕ್ರಮವಾಗಿ ಕ್ರಿಯಾ ವೈಶಿಷ್ಟ್ಯವನ್ನು ತೋರುವುದು. ದವಡೆ ಇಲ್ಲದ ಮತ್ಸ್ಯಾಕಾರಿಗಳಂತಹ ಕೆಳದರ್ಜೆ ಮೀನುಗಳಲ್ಲಿ ಬೇರೆ ಅಂಗಗಳ ಜೊತೆಗೆ ಕೆಂಪು ಮತ್ತು ಶ್ವೇತ ರಕ್ತಕಣಗಳ ಉತ್ಪತ್ತಿಯಲ್ಲಿ ಭಾಗವಹಿಸುವ ಒಂದು ಅಂಗವಾಗಿ ಗುಲ್ಮವನ್ನು ಗುರುತಿಸಬಹುದು. ಕೆಲವು ಸರೀಸೃಪಗಳು ಮತ್ತು ಎಲ್ಲಾ ಪಕ್ಷಿ, ಸ್ತನಿಗಳಲ್ಲಿ ಕೆಂಪು ರಕ್ತಕಣಗಳ ಉತ್ಪತ್ತಿ ಗುಲ್ಮದಲ್ಲಾಗದೆ, ಕೆಂಪು ಮಜ್ಜೆಗೆ ಸೀಮಿತವಾಗಿದೆ. ಹಾಗೆಯೇ ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ ದುಗ್ಧರಸನಾಳ

ಗಿಣ್ಣುಗಳಲ್ಲಿ ಗುಲ್ಮದಂತೆ ಕೆಂಪು ರಕ್ತಕಣಗಳು ಉತ್ಪತ್ತಿಯಾಗುತ್ತವೆ. ಭ್ರೂಣದ ಬೆಳೆವಣಿಗೆಯಲ್ಲಿ (ಉದಾ: ಮಾನವರಲ್ಲಿ) ಗುಲ್ಮ ವಿಕಾಸದ ಈ ಘಟ್ಟಗಳನ್ನು ಕಾಣಬಹುದು. ***

**ಗುಲ್ಮ ರೋಗಗಳು:** ಗುಲ್ಮ ರೋಗಗಳು ಸೋಂಕಿನಿಂದ ಅಥವಾ ಬೇರೆ ಕಾರಣಗಳಿಂದ ಉಂಟಾಗುತ್ತವೆ. ಈ ರೋಗಗಳು ತಾತ್ಕಾಲಿಕ ಅಥವಾ ಬಹುಕಾಲ ಇರುತ್ತವೆ. ರೋಗ ತಗಲಿದಾಗ ಗುಲ್ಮ ದೊಡ್ಡದಾಗುತ್ತದೆ. ಆಜನ್ಮ ಅವ್ಯವಸ್ಥೆಗಳಾಗಿ ಗುಲ್ಮ ಪೂರ್ಣ ಲೋಪವಾಗಿರುವುದು, ಬೆನ್ನು ಭಿತ್ತಿಗೆ ಅಂಟಿಕೊಳ್ಳುವುದು, ಉದ್ದವಾದ ದಂಟಿನಿಂದ ನೇತುಹಾಕಿದಂತಿದ್ದು ಚಿಕ್ಕ ಕರುಳಿನಂತೆ ಸ್ಥಳಾಂತರಗೊಳ್ಳುವುದು ಸಾಮಾನ್ಯ. ಇವುಗಳಿಂದ ಏನು ತೊಂದರೆ ಇಲ್ಲ. ಸ್ಥಳಪಲ್ಲಟವಾದ ಗುಲ್ಮ ಕೆಲವು ವೇಳೆ ದೊಡ್ಡದಾದಾಗ ದೇಹಕ್ರಿಯೆಯಲ್ಲಿ ವೈಪರೀತ್ಯವಾಗಬಹುದು. ವಿಷಾಣು (ಉದಾ: ವಿಷಮಶೀತಜ್ವರಾಣು) ಮತ್ತು ವೈರಸ್ಸುಗಳ ಸೋಂಕಿನಿಂದ ಗುಲ್ಮ ತಾತ್ಕಾಲಿಕವಾಗಿ ಊದಿಕೊಂಡು ಗೆಡ್ಡೆಯಂತಾಗುತ್ತದೆ. ದೀರ್ಘಕಾಲದ ಜೀವಾಣು ಸೋಂಕುಗಳಾದ ಕ್ಷಯ, ಫರಂಗಿರೋಗಗಳಲ್ಲಿ, ಪ್ರೋಟೋಜೋವ ರೋಗ, ಮಲೇರಿಯ, ಕಾಳಜ್ವರಗಳಲ್ಲಿ, ಶಿಸ್ಟೋಸೋಮ ಕೃತರೋಗದಲ್ಲಿ ಇಂಥ ಬದಲಾವಣೆಗಳನ್ನು ಕಾಣಬಹುದು. ಗುಲ್ಮದಲ್ಲಿ ಅಗಾಧವಾಗಿ ರಕ್ತ ಶೇಖರಣೆ ಆದಾಗ ಸಹಜವಾಗಿ ಅದು ದಪ್ಪವಾಗುತ್ತದೆ. ಪೋರ್ಟಲ್ ಅಭಿಧಮನಿಯಲ್ಲಿ ರಕ್ತಕರಣೆ ಕಟ್ಟಿಕೊಂಡು ಅಥವಾ ಬೇರೆ ರೀತಿಯಲ್ಲಿ ರಕ್ತಪ್ರವಾಹಕ್ಕೆ ಅಡಚಣೆಯುಂಟಾದಾಗ ಅಥವಾ ಯಕೃತ್ತಿನ ಸಿರ್ರೋಸಿಸ್ ಎಂಬ ವ್ಯಾಧಿಯಿಂದ ರಕ್ತಚಲನೆಗೆ ಅಡ್ಡಿಯುಂಟಾದಾಗ ರಕ್ತ ಗುಲ್ಮದಲ್ಲಿ ಶೇಖರಣೆಯಾಗುತ್ತದೆ. ಏಡಿ ಗಂತಿಗಳಂಥ ಸ್ವಭಾವವುಳ್ಳ ಲ್ಯುಕೀಮಿಯ, ಲಿಂಫೋಮ ರೋಗಗಳಲ್ಲಿ ಗುಲ್ಮದ ಗೆಡ್ಡೆ ಕಂಡುಬರುತ್ತದೆ. ಸ್ನಿಗ್ಧ ಪದಾರ್ಥಗಳು ಗುಲ್ಮದಲ್ಲಿ ಶೇಖರಣೆಯಾಗುವ ಗಾಶರನ ವ್ಯಾಧಿ, ನೀಮನ್‌ಪಿಕ್ಕನ ವ್ಯಾಧಿಯಲ್ಲಿ ಸಹ ಗುಲ್ಮ ಊದಿಕೊಂಡಿರುತ್ತದೆ. ಗುಲ್ಮದ ಗಡ್ಡೆಯಿಂದ ಕೆಲವು ವೇಳೆ ರಕ್ತಕಣಹೀನತೆ, ಕೆಲವು ವೇಳೆ ರಕ್ತಕಣತೆ (ವಾಲಿಸೈತೀಮಿಯಾ) ಉಂಟಾಗಬಹುದು. ದೇಹ ಮತ್ತು ರಕ್ತ ಪರೀಕ್ಷೆಯಿಂದ ಈ ಸ್ಥಿತಿಗಳನ್ನು ಅರಿತುಕೊಳ್ಳಬಹುದು. ರಕ್ತದ ವಿಷಾಣುಗಳನ್ನು ಪ್ರಯೋಗಶಾಲೆಯಲ್ಲಿ ಬೆಳೆಸಿ, ಪರೀಕ್ಷಿಸುವುದು, ಎದೆಮೂಳೆಯೊಳಗಿನ ಮಜ್ಜೆಯನ್ನು ಪರೀಕ್ಷಿಸುವುದು, ಎದೆಯನ್ನು ಎಕ್ಸಕಿರಣ ಪರೀಕ್ಷೆಗೆ ಒಳಪಡಿಸುವುದು, ಗುಲ್ಮದ ಚೂರೊಂದನ್ನು ವಿಶೇಷ ಶಸ್ತ್ರಕ್ರಿಯೆಯಿಂದ (ಬಯಾಪ್ಸಿ) ಪರೀಕ್ಷಿಸುವುದು, ಕ್ಷಯಾಣುಸೋಂಕಿಗೆ, ಫರಂಗಿ ರೋಗಾಣು ಸೋಂಕಿಗೆ ವಿಶಿಷ್ಟ ಪರೀಕ್ಷೆಗಳನ್ನು ಮಾಡಬೇಕು. ಇವುಗಳಿಂದ ರೋಗ ಮೂಲತಃ ಗುಲ್ಮದ್ದೋ ಅಥವಾ ಬೇರೆ ರೋಗದಿಂದ ಗುಲ್ಮ ಗೆಡ್ಡೆ ಕಟ್ಟಿ ಕೊಂಡಿದೆಯೊ ಎಂದು ತಿಳಿಯಬಹುದು. ಗುಲ್ಮವೇ ರೋಗಕಾರಣವಾಗಿದ್ದರೆ ಅಥವಾ ಇತರ ರೋಗಗಳಿಂದ ಗುಲ್ಮ ಅತಿ ದೊಡ್ಡದಾಗಿ ತನ್ನ ಗಾತ್ರದಿಂದಲೇ ದೇಹ ಕಾರ್ಯಗಳಿಗೆ ಅನಾನುಕೂಲವಾಗುವಂತಿದ್ದರೆ ಗುಲ್ಮವನ್ನು ಶಸ್ತ್ರ ಕ್ರಿಯೆಯಿಂದ ತೆಗೆದು ಹಾಕಬೇಕು. ***

**ಗುಹವಾಸಿ ಪ್ರಾಣಿಗಳು:** ಆದಿಮಾನವನ ಕಾಲದಿಂದಲೂ ಮಾನವನಿಗೆ, ಗುಹವಾಸಿ ಪ್ರಾಣಿಗಳ ಬಗ್ಗೆ ಕುತೂಹಲವಿದೆ. ಭೂಮಿಯ ಅಂತರಾಳದಲ್ಲಿರುವ ಗುಹೆಗಳಿಗೆ ಸೂರ್ಯನ ಕಿರಣಗಳು ಪ್ರವೇಶಿಸದಿರುವುದರಿಂದ ಕಗ್ಗತ್ತಲಿನಿಂದ ಕೂಡಿರುತ್ತವೆ. ಇಂತಹ ಗುಹೆಗಳಲ್ಲಿ ಮಾನವ ನಾಗರೀಕತೆ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ವಾಸಮಾಡುತ್ತಿದ್ದ ಆದಿಮಾನವನ ಜೊತೆಯಲ್ಲಿ ವಿವಿಧ ಬಗೆಯ ಪ್ರಾಣಿಗಳು ವಾಸವಾಗಿದ್ದ ಬಗ್ಗೆ ಪುರಾವೆಗಳಿವೆ. ಕೆಲವು ಪ್ರಾಣಿಗಳು ತಾತ್ಕಾಲಿಕವಾಗಿ ಗುಹೆಯಲ್ಲಿ ವಾಸವಾದರೆ, ಮತ್ತೆ ಕೆಲವು ಖಾಯಂ ಆಗಿ ಬದುಕಿವೆ. ಸಮುದ್ರ ತೀರದಲ್ಲಿ ವಾಸಿಸುವ ಪಕ್ಷಿಗಳು ಗುಹೆಯ ಪ್ರವೇಶ ದ್ವಾರದಲ್ಲಿ ಅಥವಾ ಗುಹೆಯ ಹೊರ ಅಂಚಿನಲ್ಲಿ ವಾಸಮಾಡುತ್ತವೆ. ಬ್ಯಾಡ್ಜರ್ ನರಿ, ಸಾಲಮಾಂಡರ್‌ಗಳು ಗುಹೆಯನ್ನು ತಾತ್ಕಾಲಿಕ ವಾಸಸ್ಥಾನವಾಗಿ ಪರಿವರ್ತಿಸಿಕೊಂಡಿವೆ. ಗುಹೆಯ ಒಳಾಂಗಣದಲ್ಲಿ ನೀರಿದ್ದರೆ, ನ್ಯೂಟ್, ಟೈಟಾಂಗ್, ಮಿನೋವ ಮೀನುಗಳು ನೀರಿನ ತಾಣಕ್ಕೆ ಭೇಟಿ ಕೊಡುತ್ತವೆ. ಈ ಪ್ರಾಣಿಗಳನ್ನು ಗುಹೆವಾಸಿಗಳೆಂದು ಕರೆಯುವರು. ಗುಹೆಯಲ್ಲಿ ಸಂಪೂರ್ಣ ಕತ್ತಲೆ ಇರುವುದರಿಂದ ಈ ಜೀವಿಗಳ ಕಣ್ಣುಗಳು ಉಪಯೋಗಕ್ಕೆ ಬರುವುದಿಲ್ಲ. ಆದಕಾರಣ ಕಣ್ಣುಗಳು ವಿಲುಪ್ತವಾಗಿದ್ದು ಸಂಪೂರ್ಣ ಕುರುಡು ಆಗಿರುತ್ತವೆ. ಈ ಪ್ರಾಣಿಗಳ ದೇಹದ ಬಣ್ಣ ಬೂದು. ಈ ಜಾತಿಯ ಪ್ರಾಣಿಗಳು ಸಾವಿರಾರು ವರ್ಷಗಳಿಂದಲೂ ಗುಹೆಯ ಕಗ್ಗತ್ತಲಿನಲ್ಲಿ ವಾಸಿಸುವುದರಿಂದ ಕಣ್ಣಿನ ದೃಷ್ಟಿಯಲ್ಲಿ ಮಾರ್ಪಾಟಾಗಿರಬಹುದು. ಚರ್ಮದಲ್ಲಿರುವ ವರ್ಣದ್ರವ್ಯಗಳು ಬದಲಾಗಿರಬಹುದು. ಪ್ರೋಟಿಯಸ್ ಸಾಲಮಾಂಡರಿನ ಕಿವಿರುಗಳು ಎಳೆಗೆಂಪಿನಿಂದ ಕೂಡಿರುತ್ತವೆ. ದೇಹದ ಬಣ್ಣ ಬೂದು. ರಕ್ತ ಸಂಚಾರದಿಂದಾಗಿ ಕಿವಿರುಗಳು ಎಳೆಗೆಂಪಾಗಿರುವಂತೆ ಕಾಣುತ್ತವೆ.

ಗುಹೆಯಲ್ಲಿನ ಅಕಶೇರುಕ ಪ್ರಾಣಿಗಳು: ಗುಹೆಗಳಲ್ಲಿ ಕೆಲವು ಬಗೆಯ ಅಕಶೇರುಕ ಪ್ರಾಣಿಗಳು ವಾಸಿಸುತ್ತವೆ. ಉದಾ: ಕೀಟಗಳು, ಸೀಗಡಿಮೀನುಗಳು, ಮೃದ್ವಂಗಿಗಳು ಮತ್ತು ವಿವಿಧ ಜಾತಿಯ ಹುಳುಗಳು ಗುಹೆಯೊಳಗೆ ವಾಸಿಸಲು ದೇಹದಲ್ಲಿ ಕೆಲವು ಮಾರ್ಪಾಡು ಮಾಡಿಕೊಂಡಿವೆ. ಬಾವಲಿಗಳು ವಿಸರ್ಜಿಸುವ ವಸ್ತು ಈ ಪ್ರಾಣಿಗಳಿಗೆ ಆಹಾರವಾಗಿದೆ. ವೆಸ್ಪರಟಿಲಿನಿಡೆ ಪ್ರಭೇದದ ಬಾವುಲಿಗಳು ವಾಸಿಸುವ ಗುಹೆಗಳ ನೆಲದ ಮೇಲೆ ರಾಶಿಯೋಪಾದಿಯಲ್ಲಿ ಹಿಕ್ಕೆ ಸಂಗ್ರಹವಾಗುತ್ತದೆ. ಈ ಹಿಕ್ಕೆ ಹಲವು ಬಗೆಯ ಕೀಟಗಳಿಗೆ ಆಹಾರವಾಗುತ್ತದೆ.



ಬಾವಲಿ

ಬೇರೆ ಪ್ರಾಣಿಗಳ ಹಿಕ್ಕೆಯನ್ನು ತಿನ್ನುವ ಪ್ರಾಣಿಗಳಿಗೆ ಕಾಪ್ರೊಜುಯಿಕ್ ಎಂದು ಕರೆಯಲಾಗುತ್ತದೆ. ಅಥೇಟ ಸಬ್‌ಕ್ಯಾವಿಕೋಲ ಪ್ರಭೇದದ ದುಂಬಿ, ಬಾವುಲಿಗಳ ಹಿಕ್ಕೆ ದೊರಕುವ ಗುಹೆಗಳಲ್ಲಿ ವಾಸಿಸುತ್ತವೆ. ಈ ದುಂಬಿಗಳಲ್ಲಿ ಚೆನ್ನಾಗಿ ಕಾಣುವ ಕಣ್ಣುಗಳಿವೆ. ದೇಹದ ಹೊರ ಹೊದಿಕೆ ಬಣ್ಣದಿಂದೆ ಕೂಡಿದೆ. ಗುಹೆಯೊಳಗೆ ವಾಸಿಸುವ, ಹಿಕ್ಕೆಯನ್ನು ತಿಂದು ಜೀವಿಸುವ ಕೀಟಗಳಲ್ಲಿ ದೃಷ್ಟಿಹೀನ ಕಣ್ಣುಗಳು, ಬಿಳಿಬಣ್ಣದ ದೇಹ, ಉದ್ದವಾದ ಕುಡಿ ಮೀಸೆಯನ್ನು ಹೋಲುವ ಅಂಗಾಂಗಗಳಿವೆ ಉದಾ:ಕ್ಯಾರಬೀಟ್ ದುಂಬಿಗಳು.



ಅಥೇಟ ಸಬ್‌ಕ್ಯಾವಿಕೋಲ ಪ್ರಭೇದದ ದುಂಬಿ

ಗುಹೆಯೊಳಗೆ ಹರಿವ ನೀರಿನಲ್ಲಿ ಹಲವು ಬಗೆಯ ಸಣ್ಣ ಅಕಶೇರುಕ ಪ್ರಾಣಿಗಳು ವಾಸಿಸುತ್ತವೆ ಉದಾ: ನಿಫಾರಗಸ್ ಬಾಕಲಿನಕಶ್. ಇದು ಯೂರೋಪಿನ ಗುಹೆಗಳಲ್ಲಿದೆ. ನಿಫಾರಗಸ್ ಪ್ರಾಣಿಯ ದೇಹ 5 ಸೆಂಮೀ ದೊಡ್ಡದು, ಗುಹೆಯೊಳಗಿನ ವಾತಾವರಣದಲ್ಲಿ ಜೀವಿಸಲು ಮಾರ್ಪಾಡಾಗಿದೆ. ಇದರ ದೇಹ ಬೂದುಬಣ್ಣದಿಂದಿದೆ, ಕಣ್ಣುಗಳು ಇರುವುದಿಲ್ಲ. ದೇಹಕ್ಕಿಂತ ದೊಡ್ಡದಾದ ಕಾಲುಗಳಿವೆ. ಇವುಗಳು ಗುಹೆಯೊಳಗೆ ನಿಂತ ನೀರಿನಲ್ಲಿ ವಾಸಿಸುತ್ತವೆ. ಇವು ಉದ್ದವಾದ ಮೀಸೆಯನ್ನು ಹೋಲುವ ರಚನೆಯ ಸಹಾಯದಿಂದ ನೀರಿನಲ್ಲಿ ಉಂಟಾಗುವ ಸಣ್ಣ ಪ್ರಮಾಣದ ತರಂಗಗಳನ್ನು ಗ್ರಹಿಸಬಲ್ಲುವು. ಇದರಿಂದಾಗಿ ಗುಹೆಯೊಳಗೆ ವಾಸಿಸುವ ಈ ಪ್ರಾಣಿಗಳು ಕಣ್ಣುಗಳನ್ನು ಕಳೆದು ಕೊಂಡಿದ್ದರ ಫಲವಾಗಿ ಕಣ್ಣುಗಳು ನಿರ್ವಹಿಸಬಹುದಾದ ಕೆಲಸವನ್ನು ಮೀಸೆಗಳು ನಿರ್ವಹಿಸುವುವು.

ಗುಹೆಯಲ್ಲಿನ ಕಶೇರುಕ ಪ್ರಾಣಿಗಳು: ಮೀನುಗಳಲ್ಲಿ ಅಮ್ಲೈಲೋಪ್ಸಿಸ್ ಸ್ಪಲೇಸಸ್ ಪ್ರಮುಖವಾದುದು. ಇದು ದಕ್ಷಿಣ ಅಮೆರಿಕದ ಮ್ಯಾಮೋತ್ ಗುಹೆಗಳಲ್ಲಿ ಕಂಡು ಬರುತ್ತವೆ. ಅಮ್ಲೈಲೋಪ್ಸಿಸ್ ಕುರುಡು ಮೀನು. ಇದಕ್ಕೆ ಟರ್ಮಿನಲ್ಲ ಬಡ್ ಎಂಬ ರಚನೆಗಳು ತಲೆಯ ಭಾಗದಲ್ಲಿ, ಮೂತಿ ಮತ್ತು ತುಟಿಗಳ ಮೇಲೆ ಹರಡಿವೆ. ಈ ರಚನೆಗಳು ರುಚಿಸಂವೇದಿಸುವ ಜ್ಞಾನೇಂದ್ರಿಯಗಳು. ಚೆನ್ನಾಗಿ ಬೆಳೆದಿವೆ. ಈ ಜ್ಞಾನೇಂದ್ರಿಯಗಳನ್ನು ಉಪಯೋಗಿಸಿ ಮೀನುಗಳು ಆಹಾರವನ್ನು ಸಂಪಾದಿಸುತ್ತವೆ.

ಅಮ್ಲೈಲೋಪ್ಸಿಸ್ ಮೀನಿನಲ್ಲಿ ಅಸಾಮಾನ್ಯ ಸ್ಪರ್ಶಜ್ಞಾನೇಂದ್ರಿಯಗಳಿವೆ. ನೀರಿನಲ್ಲಿ ಉಂಟಾಗುವ ತರಂಗಗಳನ್ನು ಸ್ಪರ್ಶ ಜ್ಞಾನೇಂದ್ರಿಯಗಳಿಂದ ತಾನು ವಾಸಿಸುವ ಸ್ಥಳದಿಂದ 45 ಸೆಂಮೀ ದೂರದಲ್ಲಿರುವ ಪ್ರಾಣಿಗಳು ಉಂಟುಮಾಡಿದ ತರಂಗಗಳನು ಗ್ರಹಿಸಿ, ಅವುಗಳನ್ನು ಹಿಡಿದು ತಿನ್ನಬಲ್ಲುವು.

ಯೂರೋಪ್ ದೇಶದ ಈಶಾನ್ಯ ಪ್ರಾಂತ್ಯದ ಕಾರ್ನಿಓಳ ಗುಹೆಗಳಲ್ಲಿ ಪ್ರೋಟಿಯಸ್ ಸಾಲಮಾಂಡರ್ ವಾಸಿಸುತ್ತದೆ. ಇದರ ಉದ್ದ 30 ಸೆಂಮೀ. ಮೈಮೇಲೆ ಕಂದು ಬಣ್ಣದ ಚುಕ್ಕೆಗಳಿವೆ. ನಾಲ್ಕು ಚಿಕ್ಕ ಕಾಲುಗಳಿದ್ದು, ತಲೆಯ ಹಿಂಭಾಗದಲ್ಲಿ ಮೂರು ಜೊತೆ ಪುಟ್ಟ ರೆಕ್ಕೆ ತರಹದ ರಚನೆಗಳಿವೆ. ಇವು ಬಾಹ್ಯ ಕಿವಿರುಗಳು. ಈ ಕಿವಿರುಗಳಲ್ಲಿ ಹೆಚ್ಚಿನ ಪ್ರಮಾಣದ ರಕ್ತನಾಳಗಳ ಸಂಪರ್ಕವಿರುವುದರಿಂದ ಬಾಹ್ಯ ಕಿವಿರುಗಳು ಕಡು ಕೆಂಪು ಬಣ್ಣದಿಂದ ಇರುತ್ತವೆ. ಈ ಕಿವಿರುಗಳ ನೆರವಿನಿಂದ ವಾತಾವರಣದಲ್ಲಿನ ಆಮ್ಲಜನಕವನ್ನು ಪಡೆದು ಉಸಿರಾಡುತ್ತವೆ. ಇದರ ದೇಹ ನೀಳವಾಗಿದೆ. ಬಿಳಿ ಬಣ್ಣದಿಂದ ಕೂಡಿದ ದೇಹದಲ್ಲಿ ದೊಡ್ಡ ಬಾಲವಿದೆ. ಪ್ರೋಟಿಯಸ್ ತನ್ನ ಜೀವಿತಾವಧಿಯನ್ನು ಸಂಪೂರ್ಣ ಕತ್ತಲೆಯಲ್ಲಿ ಕಳೆಯುತ್ತದೆ. ಸುಮಾರು $10^0$ ಸೆ ಉಷ್ಣತೆಯಲ್ಲಿ ವಾಸಿಸುತ್ತದೆ. ಇದು ಬೆಳಕಿನ ವಾತಾವರಣಕ್ಕೆ ಬರುವುದು ವಿರಳ. ಈ ಕಾರಣ ಕಣ್ಣುಗಳು ವಿಲುಪ್ತವಾಗಿದ್ದು, ತಲೆಯ ಭಾಗದಲ್ಲಿ ಚರ್ಮದಿಂದ ಮುಚ್ಚಿಕೊಂಡಿವೆ. ಆಗ ತಾನೆ ಜನಿಸಿದ ಎಳೆಯ ಮರಿಗಳಲ್ಲಿ ದೊಡ್ಡದಾದ ಕಪ್ಪು ಬಣ್ಣದ ಕಣ್ಣುಗಳಿರುತ್ತವೆ. ಕ್ರಮೇಣ ಈ ಕಣ್ಣುಗಳು ಮಾರ್ಪಾಟಾಗುತ್ತವೆ.



ಗುಹೆಯಲ್ಲಿ ಕಂಡುಬರುವ ಕೆಲವು ಅಕಶೇರುಕಗಳು

ಕತ್ತಲೆ ವಾತಾವರಣದಲ್ಲಿ ಜೀವಿಸುವುದರಿಂದ ಪ್ರೋಟಿಯಸ್ ದೇಹ ಬಿಳಿಬಣ್ಣದಿಂದ ಕೂಡಿದೆ. ಬಹುತೇಕ ಸಾಲಮಾಂಡರಗಳ ದೇಹ ಬಣ್ಣ ಕಂದು ಅಥವ ಕಪ್ಪು. ಪ್ರೋಟಿಯಸ್ ಎಳೆಯ ಮರಿಗಳು ಜನಿಸಿದ ಒಂದು ವರ್ಷದವರೆಗೂ ದೇಹದ ಬಣ್ಣ ಮತ್ತು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿರುತ್ತವೆ. ಪ್ರೋಟಿಯಸ್ ಎಳೆಯ ಮರಿಗಳಿಗೆ ನಾಲ್ಕು ವರ್ಷಗಳ ಅನಂತರ ಕಣ್ಣುಗಳು ಸಣ್ಣ ಚುಕ್ಕಿಯಂತೆ ಕಾಣಿಸುತ್ತವೆ.

ಇತರ ಸಾಲಮಾಂಡರ್‌ಗಳು: ವಿವಿಧ ಪ್ರಭೇದದ ಸಾಲಾಮಾಂಡರ್‌ಗಳು ಉತ್ತರ ಅಮೆರಿಕದ ಗುಹೆಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಸಾಲಮಾಂಡರ್‌ಗಳಿಗೆ ಸಾಮಾನ್ಯ ದೃಷ್ಟಿ ಇದೆ. ಉದಾ: ಸೆಪೆಲೆಪ್ಸ ಮ್ಯಾಕುಲ ಕಾಡ ಮತ್ತು ಸೆಪೆಲ್ಯಾಪ್ಸ ಸ್ಟೆಜೀವಿರಿಗೆರಿ. ಈ ಎರಡು ಪ್ರಭೇದದ ಸಾಲಮಾಂಡರ್‌ಗಳು ಉತ್ತರ ಸಂಯುಕ್ತ ಸಂಸ್ಥಾನಗಳಲ್ಲಿ ಕಂಡುಬರುತ್ತವೆ. ಮ್ಯಾಕುಲಿಕಾಡ ಸುಂದರವಾದ ಸಾಲಮಾಂಡರ್. ಇವುಗಳು ದೇಹದ ಮೇಲೆ ಕೆಂಪು ಮತ್ತು ಕಂದು ಬಣ್ಣದ ಚುಕ್ಕೆಗಳಿವೆ. ಸೆಪೆಲ್ಸ್ ಸ್ಟೆಜೀವಿಗೆರಿಗಳಲ್ಲಿ ಹಳದಿ ಮತ್ತು ಕಂದು ಬಣ್ಣದ ಚುಕ್ಕೆಗಳಿವೆ. ಈ ಎರಡು ಬಗೆಯ ಸಾಲಮಾಂಡರ್‌ಗಳು ಗುಹೆಯ ವಾತಾವರಣದಲ್ಲಿ ಬದುಕುಳಿಯುವುದಕ್ಕೆ ಮಾರ್ಪಾಡು ಹೊಂದಿಲ್ಲ. ಇದರಿಂದಾಗಿ ಗುಹೆಯ ಒಳಾಂಗಣಕ್ಕೆ ಪ್ರವೇಶಿಸುವುದಿಲ್ಲ. ಗುಹೆಯ ಪ್ರವೇಶದ್ವಾರದಲ್ಲಿ ಮಾತ್ರ ಕಂಡುಬರುತ್ತವೆ. ಟೈಪೋಲೋಟಿಯಸ್ ಸ್ಪಲಿಯಸ್ ಮಸ್ಸೂರಿ ಗುಹೆಯ ಒಳಾಂಗಣದಲ್ಲಿ ವಾಸಿಸುತ್ತವೆ. ಎಳೆ ಮರಿಗಳಿದ್ದಾಗ ಕಣ್ಣುಗಳು ಚೆನ್ನಾಗಿದ್ದು ಪ್ರೌಢಾವಸ್ಥೆಯ ಹಂತ ತಲುಪಿದಾಗ ವಿಲುಪ್ತವಾಗಿ ಕೊನೆಗೆ ಮಾಯವಾಗುತ್ತವೆ. ಟೈಪೋಲೋಟಿಯಸ್ ಸಟೇಲಿಯಸ್ ಪ್ರಭೇಧದ ಸಾಲಮಾಂಡರ್‌ಗಳು ಸಂಪೂರ್ಣವಾಗಿ ಕತ್ತಲೆಯ ಪ್ರದೇಶದಲ್ಲಿ ವಾಸಿಸುವುದಕ್ಕೆ ಮಾರ್ಪಾಡು ಹೊಂದಿಲ್ಲ. ಟೈಪೋಲೋಮಾಲ್ಗಿ ರತಬಾನಿ ಟೀಕ್ಯಾ ನದಿಗಳಲ್ಲಿ ಕಂಡು ಬರುತ್ತವೆ. ಇದೊಂದು ಅಪರೂಪದ ಉಭಯವಾಸಿ. ಉದರ ಮೈಬಣ್ಣ ಬಿಳಿ. ದೃಷ್ಟಿ ಇಲ್ಲ.

ಸರೀಸೃಪ ಅಥವಾ ಪಕ್ಷಿಗಳು ಗುಹೆಯ ಒಳಾಂಗಣದಲ್ಲಿ ವಾಸಿಸುವುದಿಲ್ಲ. ಇವು ಗುಹೆಯ ಪ್ರವೇಶ ದ್ವಾರದಲ್ಲಿ ಗೂಡನ್ನು ಕಟ್ಟಿಕೊಂಡು ವಾಸಿಸುತ್ತವೆ. ಖಾಯಂ ಗುಹೆ ವಾಸಿಗಳಂತಲ್ಲ. ನಿಶಾಚಾರಿ ಗೂಬೆ ಗುಹೆ ಒಳಗೆ ಹಗಲಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುವುತ್ತದೆ. ಬಾವಲಿಗಳನ್ನು ಹೊರತು ಪಡಿಸಿದರೆ ಗುಹೆಗಳಲ್ಲಿ ವಾಸಿಸುವ ಸ್ತನಿಗಳು ಬಹಳ ವಿರಳ. ಗುಹೆಯೊಳಗೆ ವಾಸಿಸುವುದಕ್ಕೆ ಇದರ ದೇಹ ಮಾರ್ಪಾಡು ಹೊಂದಿದೆ. ಬಿಳಿ ಕಾಲಿನ ಹೆಗ್ಗಣ, ಪೀರೋಮೈಸಾಕಲ್ ಲ್ಯಾಕೋಪಸ್ ಗುಹೆಯಂತಿರುವ ಸಣ್ಣ ಪೊಟರೆಯೊಳಗಡೆ ವಾಸಿಸುತ್ತದೆ. ಬಂಡೆಗಳಲ್ಲಿ, ವ್ಯಾನ್ ಡಾಂಟೆ ಗುಹೆಗಳಲ್ಲಿ ಬಿಳಿ ಕಾಲಿನ ಹೆಗ್ಗಣಗಳು ಗುಹೆಯ ಪ್ರವೇಶ ದ್ವಾರದಿಂದ ಸು. 180ಮೀ ದೂರದ ಸಂಪೂರ್ಣ ಕತ್ತಲೆ ಪ್ರದೇಶದಲ್ಲಿ ವಾಸಿಸುತ್ತವೆ. ಸ್ವಭಾವತಃ ಬಿಳಿ ಕಾಲಿನ ಹೆಗ್ಗಣ ಪೊಟರೆಯನ್ನು ರಚಿಸಿ ವಾಸಿಸುವ ಪ್ರಾಣಿ. ಇವುಗಳಲ್ಲಿ ಉದ್ದವಾದ ಮೀಸೆ ಇವೆ. ಕಣ್ಣುಗಳ ದೃಷ್ಟಿ ಚೆನ್ನಾಗಿದೆ. ಕಗ್ಗತ್ತಲೆಯ ವಾತಾವರಣದಲ್ಲಿ ಹೆಗ್ಗಣಗಳು ಸಾವಿರಾರು ವರ್ಷಗಳಿಂದ ವಾಸಿಸುತ್ತಿರುವುದರಿಂದ ಸಂಪೂರ್ಣ ಕುರುಡು ಉಂಟಾಗಿರಬಹುದು. ಇದು ಈ ಜಾತಿಯ ಬಿಳಿ ಕಾಲಿನ ಹೆಗ್ಗಣಗಳ ವಿಕಾಸಕ್ಕೆ ನಾಂದಿ ಹಾಡಿರಬಹುದೆಂದು ಪ್ರಾಣಿ ವಿಜ್ಞಾನಿಗಳ ಅಭಿಪ್ರಾಯ.

(ಎಸ್.ಡಿ)

**ಗುಳ್ಳೆನರಿ:** ನಾಯಿ ಜಾತಿಗೆ ಸೇರಿದ, ನರಿಯಂತೆ (ಫಾಕ್ಸ್) ಕಾಣುವ ಒಂದು ವನ್ಯವಾಸಿ ಪ್ರಾಣಿ (ಜಾಕಾಲ್). ಕಾರ್ನಿವೊರ ಗಣದ ಕೇನಿಡೆ ಕುಟುಂಬಕ್ಕೆ ಸೇರಿದೆ. ಈ ಜಾತಿಯ ವೈಜ್ಞಾನಿಕ ಹೆಸರು ಕೇನಿಸ್. ಇದರಲ್ಲಿ ಅನೇಕ ಪ್ರಭೇದಗಳಿವೆ ; ಮುಖ್ಯವಾದುವು ಕೇನಿಸ್ ಆರಿಯಸ್ (ಯೂರೋಪ್, ಭಾರತವೂ ಸೇರಿದಂತೆ ಏಷ್ಯದ ಹಲವಾರು ದೇಶಗಳು, ಉತ್ತರ ಆಫ್ರಿಕ, ಈಜಿಪ್ಟ್ ಮುಂತಾದೆಡೆಗಳಲ್ಲಿ ಕಾಣಬರುತ್ತದೆ), ಕೇನಿಸ್ ಮೆಸೋಮೆಲಾಸ್ (ಕಪ್ಪು ಬೆನ್ನಿನ ಗುಳ್ಳೆನರಿ – ದಕ್ಷಿಣ ಆಫ್ರಿಕದಲ್ಲಿರುವಂಥದು), ಕೇನಿಸ್ ಅಡಸ್ಟಸ್ (ದಕ್ಷಿಣ ಆಫ್ರಿಕದ ಮೂಲವಾಸಿ) ಮತ್ತು ಕೇನಿಸ್ ಸೈಮೆನ್ಸಿಸ್ (ಅಬಿಸೀನಿಯದ ಕೆಂಪು ಗುಳ್ಳೆನರಿ ಅಬಿಸಿನಿಯದಲ್ಲಿ ಕಂಡುಬರುವಂಥದು). ಭಾರತದ ವಿವಿಧ ಭಾಗಗಳಲ್ಲಿ ಕೇ. ಆರಿಯಸ್ ಪ್ರಭೇದದ ಬೇರೆ ಬೇರೆ ಬಗೆಗಳು ಕಂಡುಬರುತ್ತವೆ. ಪಶ್ಚಿಮ ಭಾಗದ ಮರುಭೂಮಿ ಪ್ರದೇಶಗಳಲ್ಲಿ ಆರಿಯಸ್ ಬಗೆಯೂ ಅಸ್ಸಾಮ್, ನೇಪಾಳ, ಸಿಕ್ಕಿಮ್‌ಗಳಲ್ಲಿ ಇಂಡಿಕಸ್ ಬಗೆಯೂ ದಕ್ಷಿಣ ಭಾರತದಲ್ಲಿ ನೇರಿಯ ಬಗೆಯೂ ಇವೆ.

ಗುಳ್ಳೆನರಿಗಳ ವಿವಿಧ ಪ್ರಭೇದಗಳ ಗಾತ್ರದಲ್ಲಿ, ಬಣ್ಣದಲ್ಲಿ ಹಲವಾರು ವ್ಯತ್ಯಾಸಗಳಿವೆ. ಆರಿಯಸ್ ಪ್ರಭೇದದ ಉದ್ದ ಸು. 60 ಸೆಂಮೀ. ಎತ್ತರ ಸು. 80–90 ಸೆಂಮೀ. ದೇಹದ ಬಣ್ಣ ಬೂದುಮಿಶ್ರಿತ ಹಳದಿ. ಇದು ಬೆನ್ನಿನಲ್ಲಿ ಗಾಢವಾಗಿಯೂ ಹೊಟ್ಟೆಯ ಮೇಲೆ ತಿಳಿಯಾಗಿಯೂ ಇದೆ. ಮೆಸೋಮೆಲಾಸ್ ಪ್ರಭೇದದ ದೇಹ ಕೆಂಪುಮಿಶ್ರಿತ ತುಕ್ಕು ಬಣ್ಣಕ್ಕಿದೆ. ಬೆನ್ನು ಕರಿಯ ಬಣ್ಣದ್ದು. ಅಡಸ್ಟಸ್ ಪ್ರಭೇದ ಬೂದುಬಣ್ಣದ್ದು. ಅಲ್ಲದೆ ಇದರ ಎರಡು ಪಕ್ಕಗಳಲ್ಲಿ ಉದ್ದುದ್ದನೆಯ ಪಟ್ಟಿಗಳಿವೆ. ಸೈಮೆನ್ಸಿಸ್ ಪ್ರಭೇದದ ದೇಹದ ಬಣ್ಣ ಕೆಂಪು. ಉಳಿದ ಪ್ರಭೇದಗಳಿಗೆ ಹೋಲಿಸಿದರೆ ಇದರ ಕಾಲುಗಳು ಹೆಚ್ಚು ಉದ್ದ. ಭಾರತದಲ್ಲಿನ ವಿವಿಧ ಬಗೆಗಳಲ್ಲೂ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಗಮನಿಸಬಹುದು. ಹೀಗೆ ತಮ್ಮ ಕೆಲವು ಲಕ್ಷಣಗಳಲ್ಲಿ ಪರಸ್ಪರ ಭಿನ್ನತೆಗಳನ್ನು ತೋರುವುವಾದರೂ ಎಲ್ಲ ಪ್ರಭೇದಗಳಿಗೂ ಹಲವಾರು ಸಮಾನ ಗುಣಲಕ್ಷಣಗಳಿವೆ. ಮೋಟು ಕಿವಿಗಳು, ಪೊದೆಯಂಥ ಬಾಲ, ಹೆಚ್ಚು ಕಡಿಮೆ ನಾಯಿಯ ಮೂತಿಯನ್ನು ಹೋಲುವಂಥ ಮೂತಿ–ಇವು ಗುಳ್ಳೆನರಿಗಳ ಮುಖ್ಯ ಲಕ್ಷಣಗಳಲ್ಲಿ ಕೆಲವು. ಬಾಲದ ಬುಡದಲ್ಲಿ ಒಂದು ಗ್ರಂಥಿ ಉಂಟು. ಇದರ ಸ್ರಾವದಿಂದಾಗಿ ನರಿಗಳಿಗೆ ಅಸಹ್ಯಕರವಾದ ವಾಸನೆಯಿರುತ್ತದೆ.

ಗುಳ್ಳೆನರಿಗಳು ದಟ್ಟವಾದ ಕಾಡುಗಳಿಗಿಂತ ಹೆಚ್ಚಾಗಿ ಬಯಲು ಪ್ರದೇಶಗಳಲ್ಲಿ ಇಲ್ಲವೆ ಕುರುಚಲು ಕಾಡಿನ ಪ್ರದೇಶಗಳಲ್ಲಿ ವಾಸಿಸುತ್ತವೆ. ಇವು ನಿಶಾಚರಿಗಳು. ಹಾಳು ಬಿದ್ದಿರುವ ಜಾಗಗಳಲ್ಲಿನ ನೆಲಗಳ ಬಿಲಗಳಲ್ಲಿ ಇಲ್ಲವೆ ಪೊದೆಗಳ ನಡುವೆ ಹಗಲಿನಲ್ಲಿ ಅಡಗಿಕೊಂಡಿದ್ದು ಮುಸ್ಸಂಜೆಯಲ್ಲಿ ಆಹಾರವನ್ನು ಅರಸಿಕೊಂಡು ಹೊರಬರುತ್ತವೆ. ಇವು ಬಲುಗೋಪ್ಯ ಸ್ವಭಾವದವಾದ್ದರಿಂದ ಇವುಗಳ ಚಲನ ವಲನಗಳನ್ನು ಅರಿಯುವುದು ಕಷ್ಟ.

ಗುಳ್ಳೆನರಿಗಳು ಕಾಡಿನ ಜಾಡಮಾಲಿಗಳೆಂದು ಹೆಸರಾಗಿವೆ. ಹುಲಿ, ಚಿರತೆ, ಸಿಂಹ ಮುಂತಾದುವುಗಳನ್ನು ಹಿಂಬಾಲಿಸಿ, ಅವು ಕೊಂದು, ತಿಂದು, ಮಿಗಿಸಿದ್ದನ್ನು ತಾವು ತಿಂದು ಬದುಕುತ್ತವೆ. ಎಷ್ಟೋಸಲ ಸಿಂಹವೊ ಹುಲಿಯೊ ಎರೆಯೊಂದನ್ನು ಹಿಡಿದು ತನಗೆ ತೃಪ್ತಿಯಾಗುವ ತನಕ ತಿಂದು ಮಿಗಿಸುವವರೆಗೂ ಹಲವಾರು ಗಂಟೆಗಳ ಕಾಲ

ಕಾಯುತ್ತಿದ್ದು ಅನಂತರ ಮಿಕ್ಕ ಆಹಾರವನ್ನು ತಿನ್ನುವುದುಂಟು. ಗುಳ್ಳೆನರಿಗಳು ಸತ್ತ ಪ್ರಾಣಿಗಳನ್ನು ತಿನ್ನುತ್ತವೆ. ಅಲ್ಲದೆ ರಾತ್ರಿವೇಳೆ ಹಳ್ಳಿಗಳಿಗೆ ನುಗ್ಗಿ ಅಲ್ಲಿ ಸಿಗುವ ಹೊಲಸನ್ನು ಕೆಲವೊಮ್ಮೆ ಕೋಳಿ, ಕುರಿಮರಿ ಮುಂತಾದ ಪ್ರಾಣಿಗಳನ್ನು ತಿನ್ನುವುದುಂಟು. ಹಲ್ಲಿ, ಓತಿಕೇತ, ಕೀಟಗಳು, ಸಣ್ಣ–ಪುಟ್ಟ ಸ್ತನಿಗಳು ಮೊದಲಾದುವನ್ನು ಗುಳ್ಳೆನರಿಗಳು ತಿನ್ನುತ್ತವಲ್ಲದೆ ಕಾಫಿಹಣ್ಣುಗಳು, ಎಲಚಿಹಣ್ಣು ಮುಂತಾದ ಸಸ್ಯಾಹಾರಗಳನ್ನು ಸೇವಿಸುತ್ತವೆ. ಅನೇಕ ಸಲ ದ್ರಾಕ್ಷಿ, ಕಬ್ಬು, ಇತ್ಯಾದಿ ಕೃಷಿಭೂಮಿಗಳಿಗೂ ನುಗ್ಗಿ ಹಾಳು ಮಾಡುವುದುಂಟು. ಇವು ಸಾಮಾನ್ಯವಾಗಿ ಒಂಟಿಯಾಗಿಯೇ ಆಹಾರಾನ್ವೇಷಣೆ ಮಾಡುವುದಾದರೂ ಕೆಲವು ಸಲ ಗುಂಪುಗೂಡಿಕೊಂಡು ಎರೆಪ್ರಾಣಿಗಳನ್ನು ಬೇಟೆಯಾಡುವುದುಂಟು. ಆಹಾರ ಪ್ರಾಣಿಗಳನ್ನು ಅಟ್ಟಿಸಿಕೊಂಡು ವೇಗವಾಗಿ ಓಡಬಲ್ಲುವು. ಹೀಗೆ ಓಡುವಾಗ ಓಟದ ವೇಗ ಗಂಟೆಗೆ 55 ಕಿಮೀ ಇರುವುದೆಂದು ಹೇಳಲಾಗಿದೆ.

ಸಂಜೆಯ ವೇಳೆ ವಿಶಿಷ್ಟ ರೀತಿಯಲ್ಲಿ ಊಳಿಡುವುದು ಗುಳ್ಳೆನರಿಗಳ ವಿಚಿತ್ರ ಲಕ್ಷಣ. ದೀರ್ಘವಾದ 3–4 ಕೂಗುಗಳನ್ನೂ ಕೊನೆಯಲ್ಲಿ ಕೆಲವು ಹ್ರಸ್ವ ಬಗುಳುವಿಕೆಗಳನ್ನು ಒಳಗೊಂಡಿರುವ ಈ ಗೋಳುಕರೆಯನ್ನು ಕೇಳಿದವರಾರೂ ಸುಲಭವಾಗಿ ಮರೆಯಲಾರರು. ಗುಳ್ಳೆನರಿಗಳು ತಮ್ಮ ಸಂತಾನೋತ್ಪತ್ತಿಯ ಕ್ರಮದಲ್ಲಿ ನಾಯಿ ಮತ್ತು ತೋಳಗಳನ್ನು ಹೋಲುತ್ತವೆ. ಇವುಗಳ ಗರ್ಭಾವಸ್ಥೆಯ ಅವಧಿ 57 – 70 ದಿವಸಗಳು. ಸಾಮಾನ್ಯವಾಗಿ

ಗುಳ್ಳೆನರಿ

ಸೂಲಿಗೆ 3 – 4 ಮರಿಗಳು ಹುಟ್ಟುತ್ತವೆ. ಇತರ ಪ್ರಾಣಿಗಳು ತೊರೆದುಹೋದ ಬಿಲದಲ್ಲೊ ಇಲ್ಲವೆ ತಾವೇ ಸ್ವತಃ ಕೊರೆದು ನಿರ್ಮಿಸಿದ ಬಿಲದಲ್ಲೋ ಮರಿಗಳನ್ನು ಈಯುತ್ತವೆ. ತಂದೆ ತಾಯಿಗಳೆರಡೂ ಮರಿಗಳ ಪಾಲನೆಯಲ್ಲಿ ತೊಡಗಿರುತ್ತವೆ. 7 – 8 ತಿಂಗಳು ವಯಸ್ಸಾದ ಅನಂತರ ಮರಿಗಳಿಗೆ ಸ್ವತಂತ್ರವಾಗಿ ಬೇಟೆಯಾಡುವ ಸಾಮರ್ಥ್ಯ ಬರುತ್ತದೆ. ಗುಳ್ಳೆನರಿಗಳ ಆಯಸ್ಸು ಸುಮಾರು 15 ವರ್ಷಗಳು. ***

**ಗೂಂಚ್ ಮೀನು:** ಸೈಲ್ಯೂರಾಯ್ಡಿಯ ಗಣದ ಸೈಲ್ಯೂರಿಡೆ ಕುಟುಂಬಕ್ಕೆ ಸೇರಿದ ಅಸ್ಥಿಮೀನು. ಚೇಳು ಮೀನು, ಗೊಡ್ಲೆ ಮೀನು ಮುಂತಾದುವುಗಳ ಹತ್ತಿರ ಸಂಬಂಧಿಯಿದು. ಅವುಗಳಲ್ಲಿರುವಂತೆಯೆ ಇದರ ಬಾಯ ಸುತ್ತ ಚೆನ್ನಾಗಿ ಬೆಳೆದ ಸ್ಪರ್ಶಾಂಗಗಳಿವೆ. ವೈಜ್ಞಾನಿಕ ಹೆಸರು ಬಗೇರಿಯಸ್ ಬಗೇರಿಯಸ್.

ಇದೊಂದು ನಿಮ್ನವರ್ಗದ ಮೀನು. ನೈರುತ್ಯ ಏಷ್ಯದ ಸಿಹಿನೀರಿನ ಕೆರೆ, ಕೊಳ, ನದಿಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಗಂಗಾನದಿ ಮತ್ತು ಮಣಿಪುರದ ಕಣಿವೆಗಳಲ್ಲಿನ ಝರಿಗಳಲ್ಲಿ ಇದನ್ನು ವಿಶೇಷವಾಗಿ ನೋಡಬಹುದು. ಉಗ್ರ ಸ್ವಭಾವದಿಂದಾಗಿ ಮತ್ತು ತಲೆಯ ಅಧೋಭಾಗದಲ್ಲಿ ಇರುವ ಬಾಯಿಯಿಂದಾಗಿ ಇದನ್ನು ಸಿಹಿನೀರಿನ ಶಾರ್ಕ್ ಎಂದೂ ಕರೆಯಲಾಗುತ್ತದೆ. ಇದರ ತಲೆ ತಟ್ಟೆಯಂತೆ ಅಗಲವಾಗಿದೆ. ಬಾಲ ನೀಳವಾಗಿಯೂ



ಗೂಂಚ್ ಮೀನು

ಕಿರಿದಾಗಿಯೂ ಇದೆ. ಬಾಲದ ಈಜುರೆಕ್ಕೆ ಆಳವಾಗಿ ಸೀಳಿದೆ. ಈಜುರೆಕ್ಕೆಗಳ ಬುಡ ಕಪ್ಪಾಗಿರುವುದಲ್ಲದೆ ಅವುಗಳ ಮೇಲೆ ಕಪ್ಪುಬಣ್ಣದ ಪಟ್ಟೆಯೊಂದಿದೆ. ಗೂಂಚ್ ಮೀನಿನ ಬಣ್ಣ ಕಂದು ಇಲ್ಲವೆ ನಸುಗೆಂಪು ಮಿಶ್ರಿತ ಆಲಿವ್. ಮೈಯ ಮೇಲ್ಭಾಗದಲ್ಲಿ ಚಿತ್ತಾದ ಕಂದು ಬಣ್ಣದ ಪಟ್ಟೆಗಳು ಕೂಡ ಇರಬಹುದು. ಸಾಮಾನ್ಯವಾಗಿ ಇದು ಚಿಕ್ಕ ಗಾತ್ರದ್ದು. ಆದರೆ ಕೆಲವು ವೇಳೆ 6.75 ಮೀ ಉದ್ದಕ್ಕೂ ಬೆಳೆಯುವುದುಂಟು.

ಗೂಂಚ್ ಮೀನನ್ನು ಈಟಿಯಿಂದ ತಿವಿದು ಬೇಟೆಯಾಡುತ್ತಾರೆ. ದೊಡ್ಡ ಗಾತ್ರದ ಮೀನುಗಳು ಬಲು ಜಡ ಸ್ವಭಾವದವಾದ್ದರಿಂದ ಇವನ್ನು ಬೇಟೆಯಾಡುವುದು ಬಲು ಸುಲಭ. ಬೆಸ್ತರು ನೀರಿನಲ್ಲಿ ಮುಳುಗಿ ಇವುಗಳ ಬಾಲಕ್ಕೆ ಹಗ್ಗ ಕಟ್ಟಿ ಹೊರಗೆಳೆದು ಹಿಡಿಯುತ್ತಾರೆ. (ಜಿ.ಎಸ್.ಎಚ್.ಐ.)

**ಗೂಡುಗಳು:** ತಮ್ಮ ವಾಸಕ್ಕೆ, ಮೊಟ್ಟೆಗಳನ್ನಿಡುವುದಕ್ಕೆ, ಮರಿಗಳ ಪಾಲನೆಗೆ ಹಕ್ಕಿ, ಇರುವೆ, ಕಣಜ, ಜೇನುನೊಣ ಮುಂತಾದ ಅನೇಕ ಬಗೆಯ ಪ್ರಾಣಿಗಳು ಕಟ್ಟುವ ಸುರಕ್ಷಿತ ನೆಲೆಗಳು (ನೆಸ್ಟ್ಸ್). (ಜೇನುಗೂಡು, ಇರುವೆಗೂಡು ಇವುಗಳ ವಿವರಗಳಿಗೆ ಸಂಬಂಧಿಸಿದ ಲೇಖನಗಳನ್ನು ನೋಡಿ). ಗೂಡುಗಳ ರಚನೆ, ಅವುಗಳನ್ನು ಕಟ್ಟುವ ಜಾಗವನ್ನು ಆರಿಸುವುದು, ಗೂಡನ್ನು ಕಟ್ಟುವ ವಿಧಾನ, ಇವೆಲ್ಲದರಲ್ಲೂ ಹಕ್ಕಿಗಳು ವೈಶಿಷ್ಟ್ಯವನ್ನು ತೋರಿಸುತ್ತವೆ.

ಮೊಟ್ಟೆಗಳನ್ನು ಗೂಡಿನಲ್ಲಿಟ್ಟು, ಅವುಗಳನ್ನು ಶತ್ರುಗಳಿಂದ ರಕ್ಷಿಸಿ, ಕಾವಿಗೆ ಕುಳಿತು ಮರಿ ಮಾಡಿ, ಅವುಗಳನ್ನು ಪೋಷಿಸುವುದು ಸಾಮಾನ್ಯವಾಗಿ ಹೆಣ್ಣು ಹಕ್ಕಿಯ ಕೆಲಸವಾದರೂ ಗಂಡು ಹಕ್ಕಿಯೂ ಹೆಣ್ಣಿನೊಡನೆ ಸಹಕರಿಸಿ ಸಂತಾನವನ್ನು ಕಾಪಾಡುವುದರಲ್ಲಿ ಸಮಭಾಗಿಯಾಗುತ್ತದೆ. ಮೊಟ್ಟೆಗಳನ್ನಿಡುವ ಕಾಲಕ್ಕೆ ಮುಂಚಿತವಾಗಿಯೇ ಒಂದು ಸಂಸಾರದ ಗಂಡು, ಹೆಣ್ಣು ಹಕ್ಕಿಗಳೆರಡೂ ಕೂಡಿ ಗೂಡನ್ನು ಕಟ್ಟಲು ತೊಡಗುವುದನ್ನು ಕಾಗೆ, ಗುಬ್ಬಚ್ಚಿ, ಕಾಡು ಪಾರಿವಾಳ, ಹದ್ದು ಮುಂತಾದುವುಗಳಲ್ಲಿ ಕಾಣಬಹುದು.

ಗೂಡುಗಳಲ್ಲಿ ಸಾಮಾನ್ಯವಾದ ಪೊಟರೆಗಳಂತೆ ಕಾಣುವ ಒರಟಾದ ಗೂಡುಗಳಿಂದ ಹಿಡಿದು ಕುಶಲತೆಯಿಂದ ನೇಯ್ದ ಗೀಜಗನ ಸುಂದರವಾದ ಗೂಡುಗಳವರೆಗೆ ವಿವಿಧ ಬಗೆಗಳನ್ನು ಕಾಣಬಹುದು. ಹಕ್ಕಿಗಳು ಪ್ರಕೃತಿಯಲ್ಲಿ ಸಹಜವಾಗಿ ಕಾಣಬರುವ ವಾಸಕ್ಕೆ ಯೋಗ್ಯವಾದ ಸ್ಥಳಗಳನ್ನೇ ಗೂಡುಗಳಾಗಿ ಉಪಯೋಗಿಸಬಹುದು ಅಥವಾ ತಮ್ಮ ತಮ್ಮ ಅರ್ಹತೆ ಮತ್ತು ರೀತಿ ನೀತಿಗನುಗುಣವಾದ ಗೂಡುಗಳನ್ನು ಬೇರೆ ಬೇರೆ ವಸ್ತುಗಳಿಂದ ಕಟ್ಟಬಹುದು.

ಕೆಲವು ಹಕ್ಕಿಗಳು ಪ್ರಕೃತಿಯಲ್ಲಿ ಸಹಜವಾಗಿರುವ ನೆಲದ ತೂತುಗಳನ್ನೇ ಗೂಡುಗಳನ್ನಾಗಿ ಉಪಯೋಗಿಸಿಕೊಳ್ಳುತ್ತವೆ. ಇನ್ನು ಕೆಲವು ಹಕ್ಕಿಗಳು ಎಲೆಗಳ ರಾಶಿಯಲ್ಲಿ ಮೊಟ್ಟೆಗಳನ್ನಿಡುತ್ತವೆ. ಗೂಬೆಗಳು, ಗಿಳಿಗಳು ಮರದ ಪೊಟರೆಗಳಲ್ಲಿ ಮೊಟ್ಟೆಗಳನ್ನಿಡುತ್ತವೆ. ಇವುಗಳಲ್ಲಿ ಗೂಡು ಕಟ್ಟುವ ಕುಶಲತೆಯೂ ಕಂಡುಬರುವುದಿಲ್ಲ. ಆದರೆ ಕೆಲವು ಹಕ್ಕಿಗಳು ಸಹಜವಾಗಿ ಇರುವ ಗೂಡುಗಳನ್ನೇ ಅಲ್ಪ ಸ್ವಲ್ಪವಾಗಿ ಕೊರೆದೋ ಬೇರೆ ಸಾಮಗ್ರಿಗಳನ್ನು ಸೇರಿಸಿಯೋ ರಚಿಸುತ್ತವೆ. ಇದು ಗೂಡು ನಿರ್ಮಾಣದ ವಿಕಾಸದ ಮೊದಲ ಹೆಜ್ಜೆ.

ಮರುಕುಟಿಗ ಹಕ್ಕಿಗಳು ಗೂಡು ಕಟ್ಟುವುದರಲ್ಲಿ ಈ ವಿಧಾನವನ್ನು ಅನುಸರಿಸುತ್ತವೆ. ಕೆಲವೊಮ್ಮೆ ಪೊಟರೆಗಳನ್ನು ಹುಡುಕಿಕೊಂಡು ಹೋಗುವ ಬದಲು ತಾವೇ ಸ್ವತಃ ತಮ್ಮ ಕೊಕ್ಕಿನಿಂದ ಗೂಡನ್ನು ಕೊರೆಯುತ್ತವೆ.

ಹಾರನ್‌ಬಿಲ್ ಎಂಬ ಹಕ್ಕಿ ಮರದ ಪೊಟರೆಗಳಲ್ಲಿ ಮೊಟ್ಟೆಯನ್ನು ಇಡುತ್ತದೆ. ಹೆಣ್ಣುಹಕ್ಕಿ ಕಾವಿಗೆ ಕೂಡುತ್ತಲೇ ಒಂದು ಸಣ್ಣ ರಂಧ್ರವನ್ನು ಮಾತ್ರ ಬಿಟ್ಟು ಪೊಟರೆಯ ಬಾಯನ್ನು ಮುಚ್ಚಿಬಿಡುತ್ತದೆ. ಈ ತೂತಿನಿಂದ ಗಂಡು ಹಕ್ಕಿ, ಒಳಗಿರುವ ಹೆಣ್ಣುಹಕ್ಕಿಗೆ ಆಹಾರವನ್ನು ಒದಗಿಸುತ್ತದೆ. ಮೊಟ್ಟೆಗಳು ಒಡೆದು ಮರಿಗಳಾಗಿ, ಅವು ಬಲಿತ ಮೇಲೆ ಮುಚ್ಚಳವನ್ನು ಒಡೆದುಕೊಂಡು ಹೆಣ್ಣುಹಕ್ಕಿ ಹೊರಗೆ ಬರುತ್ತದೆ. ಈ ರೀತಿ ಗೂಡಿನ ಬಾಯನ್ನು ಮುಚ್ಚುವುದು, ಹಾವು ಮುಂತಾದ ಶತ್ರುಗಳು ಗೂಡಿನ ಒಳ ಹೊಕ್ಕು, ಮೊಟ್ಟೆ, ಮರಿಗಳನ್ನು ತಿನ್ನದಂತೆ ತಡೆಯಲು ಇರುವ ಉಪಾಯ.

ಗೂಡಿಗೆ ಯೋಗ್ಯವಾದ ಸಹಜವಾದ ಪೊಟರೆಗಳೇ ಮುಂತಾದ ಸ್ಥಳಗಳು ಎಲ್ಲ ಹಕ್ಕಿಗಳಿಗೂ ಸಿಗುವುದು ಸ್ವಲ್ಪ ಕಷ್ಟ.. ಈ ರೀತಿಯ ಅಭಾವವನ್ನು ಕೆಲವು ಹಕ್ಕಿಗಳು ತಾವೇ ಗೂಡನ್ನು ಕಟ್ಟುವುದರಿಂದ ಹೋಗಲಾಡಿಸುತ್ತವೆ. ಹೀಗೆ ಸರಳ ರೀತಿಯಲ್ಲಿ ರಚಿಸಿದ ಗೂಡುಗಳಲ್ಲಿ ಸಾಮಾನ್ಯವಾದುದೆಂದರೆ ಮರಗಳ ಮೇಲೆ ಬರಿಯ ಕಡ್ಡಿಗಳಿಂದ ಕಟ್ಟಿದಂಥವು. ಇಂಥ ಗೂಡುಗಳನ್ನು ಕಾಡು ಪಾರಿವಾಳ, ಕಾಗೆ, ಹದ್ದುಗಳು ಕಟ್ಟುತ್ತವೆ. ಈ ಗೂಡುಗಳು ಎಷ್ಟು ಒರಟಾಗಿರುತ್ತವೆಂದರೆ ಕಡ್ಡಿಗಳ ಸಂದಿನಿಂದ ಮೊಟ್ಟೆಗಳು ಹೊರಕ್ಕೆ ಕಾಣುತ್ತಿರುತ್ತವೆ. ಅಲ್ಲದೆ ಮಳೆ, ಬಿಸಿಲು, ಗಾಳಿಗಳಿಂದ ಮೊಟ್ಟೆಗಳಿಗೆ ರಕ್ಷಣೆಯಿರುವುದಿಲ್ಲ.

ಗೂಡು ಕಟ್ಟುವುದರಲ್ಲಿ ಇದಕ್ಕಿಂತ ಮುಂದುವರಿದ ಹಕ್ಕಿಗಳು ಗೂಡುಗಳಿಗೆ ವಿಶಿಷ್ಟವಾದ ಆಕಾರವನ್ನು ಕೊಡುತ್ತವೆ. ಇಂಥ ಗೂಡುಗಳಲ್ಲಿ, ಕಡ್ಡಿಗಳ ನಡುವೆ ಮೊಟ್ಟೆಗಳು ಸುರಕ್ಷಿತವಾಗಿರಲು ಸಾಕಷ್ಟು ತಗ್ಗಾದ ಸ್ಥಳವಿರುತ್ತದೆ. ಕೆಲವು ಸಣ್ಣ ಪುಟ್ಟ ಹಕ್ಕಿಗಳು ಸಣ್ಣ ಕಡ್ಡಿಗಳು, ಗಿಡದ ಬೇರುಗಳು, ಹುಲ್ಲು ಮುಂತಾದ ನಯವಾದ ವಸ್ತುಗಳನ್ನು ಗೂಡು ಕಟ್ಟಲು ಉಪಯೋಗಿಸುತ್ತವೆ. ಹೀಗೆ ಹುಲ್ಲುಗಳಿಂದ ಕಟ್ಟಿದ ಗೂಡುಗಳನ್ನು ಗುಬ್ಬಚ್ಚಿ




ಗೂಡುಗಳು

1. ಸ್ವಾಲೊ, 2. ಸ್ವಿಫ್ಟ್‌ಲೆಟ್, 3. ಗೀಜಗ 4. ಸನ್‌ಬರ್ಡ್, 5. ದರ್ಜಿಹಕ್ಕಿ, 6. ಮರಕುಟಿಗ
7. ಹಾರ್ನ್‌ಬಿಲ್, 8. ಬುಲ್‌ಬುಲ್, 9. ಜಕಾನ, 10. ರಾಜಹಂಸ, 11. ಲ್ಯಾಪ್‌ವಿಂಗ್

ಮುಂತಾದ ಹಕ್ಕಿಗಳಲ್ಲಿ ಕಾಣಬಹುದು. ಕೆಲವು ಪಕ್ಷಿಗಳು ಈ ವಸ್ತುಗಳನ್ನು ಕುಶಲವಾಗಿ ನೇಯ್ದು ಬಟ್ಟಲಿನಂತಹ ಗೂಡುಗಳನ್ನು ಮರದ ಮೇಲೋ ಗಿಡಗಳ ಪೊದರಿನಲ್ಲಿಯೋ ಕಟ್ಟುತ್ತವೆ. ಅಲ್ಲದೆ ಗೂಡುಗಳ ಒಳಗೆ ಮೃದುವಾದ ನಾರು, ಕೂದಲು, ಹತ್ತಿ, ಉಣ್ಣೆ ಮುಂತಾದ ವಸ್ತುಗಳಿಂದೊಡಗೂಡಿದ ಮೆತ್ತೆಗಳನ್ನು ರಚಿಸುತ್ತವೆ.

ಹಾಡುವ ಥ್ರಶ್ (ಸಾಂಗ್ ಥ್ರಶ್) ಹಕ್ಕಿ ತನ್ನ ಗೂಡಿನ ಒಳಭಾಗವನ್ನು ಜೇಡಿಯ ಮಣ್ಣಿನಿಂದ ಮೆತ್ತಿ ಗಟ್ಟಿಯಾದ ಮಣ್ಣಿನ ಬಟ್ಟಲಿನಂತಿರುವ ಗೂಡನ್ನು ಕಟ್ಟುತ್ತದೆ. ಇದಕ್ಕಿಂತಲೂ ಹೆಚ್ಚು ಕುಶಲತೆಯನ್ನು ತೋರಿಸುವ ಹಕ್ಕಿಗಳು ಗೂಡಿಗೆ ಮೇಲ್ಛಾವಣಿಯನ್ನು ಕಟ್ಟಿ, ಒಂದು ಪಕ್ಕಕ್ಕೆ ಸಣ್ಣದೊಂದು ಬಾಗಿಲನ್ನು ರಚಿಸುತ್ತವೆ. ಈ ರೀತಿಯ ಕುಶಲತೆಯನ್ನು ಉದ್ದನೆಯ ಬಾಲದ ಟಿಟ್ ಹಕ್ಕಿಯ ಗುಂಡನೆಯ ಗೂಡಿನಲ್ಲಿ ನೋಡಬಹುದು. ಈ ಗೂಡಿನ ಒಳಭಾಗದಲ್ಲಿ ಹಕ್ಕಿ ಆಯ್ದು ತಂದ ಪುಕ್ಕಗಳ ಮೆತ್ತೆ ಇರುತ್ತದೆ.

ಇವೆಲ್ಲಕ್ಕಿಂತಲೂ ಹೆಚ್ಚು ಕುಶಲತೆಯನ್ನು ತೋರುವ ಹಾಗೂ ಸುಂದರವಾದ ಗೂಡುಗಳನ್ನು ಕಟ್ಟುವ ಹಕ್ಕಿಗಳೆಂದರೆ ಗೀಜಗನ ಜಾತಿಗೆ ಸೇರಿದ ಹಕ್ಕಿಗಳು. ಅವುಗಳ ಗೂಡಿನ ರಚನೆಯನ್ನನುಸರಿಸಿ ಅವನ್ನು ನೇಯ್ಗೆ ಹಕ್ಕಿ (ವೀವರ್ ಬರ್ಡ್) ಮತ್ತು ದರ್ಜಿ ಹಕ್ಕಿ (ಟೇಲರ್ ಬರ್ಡ್) ಎಂದು ಕರೆಯುತ್ತಾರೆ. ಗೂಡು ಕಟ್ಟುವುದರಲ್ಲಿ ಇವುಗಳ ಚಮತ್ಕಾರ ನಿಜವಾಗಿಯೂ ಪ್ರಶಂಸನೀಯವಾದುದು. ಇವು ಗೂಡು ಕಟ್ಟುವ ಸ್ಥಳವನ್ನು ಹುಡುಕುವುದರಲ್ಲೂ ನಿಜವಾದ ಜಾಣ್ಮೆಯನ್ನು ತೋರಿಸುತ್ತವೆ.

ದಟ್ಟವಾದ ಎಲೆಗಳುಳ್ಳ ಮರಗಳಲ್ಲಿ, ಗಿಡಗಳಲ್ಲಿ, ಪೊದೆಗಳಲ್ಲಿ, ಎಲೆಗಳನ್ನೇ ಹೊಲಿದು ಕಟ್ಟಿರುವ ದರ್ಜಿಹಕ್ಕಿಯ ಗೂಡನ್ನು ಸುತ್ತಲ ಸನ್ನಿವೇಶದಿಂದ ಪ್ರತ್ಯೇಕಿಸಿ ಪತ್ತೆಹಚ್ಚುವುದು ಬಹಳ ಕಷ್ಟ. ಎಲೆಗಳ ನಡುವೆ ಅದರ ಗೂಡು ಸಹ ಒಂದು ಎಲೆಯಂತೆ ಕೊಂಬೆಯಿಂದ ತೂಗಾಡುತ್ತಿರುತ್ತದೆ. ಒಂದೇ ಒಂದು ಎಲೆಯಿಂದ ಗೂಡು ಕಟ್ಟಬಹುದು. ಅಥವಾ ಎರಡು ಎಲೆಗಳನ್ನು ಸೇರಿಸಿ ಹೊಲಿದು ಕಟ್ಟಬಹುದು. ಜೇಡರ ಹುಳುಗಳ ಬಲೆಯಲ್ಲಿರುವ ದಾರಗಳನ್ನು ತಂದು ದರ್ಜಿ ಹಕ್ಕಿ ತನ್ನ ಗೂಡನ್ನು ಎಲೆಗಳನ್ನು ಸೇರಿಸಿ, ದರ್ಜಿಯಂತೆ ಹೊಲಿದು ಕಟ್ಟುತ್ತದೆ. ಗೂಡಿನ ಒಳಗೆ ಹತ್ತಿ, ಉಣ್ಣೆ ಮುಂತಾದ ಮೆತ್ತನೆಯ ವಸ್ತುಗಳಿಂದ ಮೆತ್ತೆಗಳನ್ನು ಮಾಡಿ ಮೊಟ್ಟೆಗಳನ್ನಿಡುತ್ತವೆ.

ನೇಯ್ಗೆ ಹಕ್ಕಿ ಸಣ್ಣ ಸಣ್ಣ ನಾರಿನ ತುಂಡುಗಳನ್ನು ಶೇಖರಿಸಿ ತಂದು, ಅದನ್ನು ಗೂಡಿನಂತೆ ನೇಯುತ್ತದೆ. ಕೆರೆಕುಂಟೆಗಳ ದಡದಲ್ಲಿ ಬೆಳೆದಿರುವ ಮರಗಿಡಗಳ ರೆಂಬೆಗಳಿಂದ ಇಂಥ ಗೂಡುಗಳು ತೂಗುಬಿದ್ದಿರುವುದನ್ನು ಕಾಣಬಹುದು. ಈ ಎರಡು ಜಾತಿಯ ಹಕ್ಕಿಗಳೂ ಗೂಡನ್ನು ಕಟ್ಟುವಾಗ ನೋಡಲು ಬಹಳ ಮೋಜೆನಿಸುತ್ತದೆ. ಗೂಡಿನ ಒಳಗೊಂದು, ಹೊರಗೊಂದು ಹಕ್ಕಿ ಕುಳಿತು, ಕೊಕ್ಕಿನ ಸಹಾಯದಿಂದ ದಾರ ಅಥವಾ ನಾರನ್ನು ಹೊರಗಿನ ಹಕ್ಕಿ ಹೊರಗಿನಿಂದ ಒಳಕ್ಕೂ ಒಳಗಿರುವ ಹಕ್ಕಿ ಹೊರಕ್ಕೂ ಗಂಟೆಗಟ್ಟಲೆ ಆಹಾರ ಸೇವನೆಯನ್ನು ಮರೆತು, ಹೊಲಿಯುವುದನ್ನೂ ನೇಯುವುದನ್ನೂ ನೋಡಲು ಬಲು ಸೊಗಸು. ಹೀಗೆ ನೇಯ್ದ ಗೂಡುಗಳಲ್ಲಿ ಶತ್ರುಗಳನ್ನು ಮೋಸಪಡಿಸಲು ಎಲ್ಲಿಗೋ ದಾರಿತೋರುವ ಸುಳ್ಳುಬಾಗಿಲನ್ನೂ ಮಾಡುವುದುಂಟು. ಈ ರೀತಿಯ ಗೂಡುಗಳನ್ನು ಪೆಂಡ್ಯುಲೈನ್ ಟಿಟ್ ಎಂಬ ಹಕ್ಕಿಗಳಲ್ಲಿ ಕಾಣಬಹುದು.

ಗೂಡನ್ನು ಕೇವಲ ಒಂದು ಸಂಸಾರದ ಎರಡು ಹಕ್ಕಿಗಳೇ ಅಲ್ಲದೆ ಆ ಜಾತಿಯ ಇತರ ಹಲವಾರು ಹಕ್ಕಿಗಳೂ ಸೇರಿ ಕಟ್ಟಬಹುದು. ಆದರೆ ಇದು ಬಹಳ ಅಪರೂಪ.

ಕೆಲವು ಹಕ್ಕಿಗಳಿಗೆ ಗೂಡು ಕಟ್ಟಲು ಬರುವುದಿಲ್ಲ. ಇಂಥವು ತಮ್ಮ ಮೊಟ್ಟೆಗಳನ್ನು ಬೇರೆ ಹಕ್ಕಿಗಳ ಗೂಡಿನಲ್ಲಿಟ್ಟು ಮರಿ ಮಾಡುತ್ತವೆ. ಇಲ್ಲಿ ಎರಡು ಬಗೆಯ ಹಕ್ಕಿಗಳ ಮೊಟ್ಟೆಗಳೂ ತಮ್ಮ ಗಾತ್ರ, ಆಕಾರ ಮತ್ತು ಬಣ್ಣದಲ್ಲಿ ಒಂದೇ ರೀತಿ ಇರುವುದರಿಂದ ಮೋಸಹೋಗುವ ಹಕ್ಕಿಗೆ ತನ್ನ ಮೂಢತ್ವ ತಿಳಿಯುವುದಿಲ್ಲ. ಕೋಗಿಲೆಗಳು ಹೀಗೆ ಕಾಗೆಯ ಗೂಡಿನಲ್ಲಿ ಮೊಟ್ಟೆಗಳನ್ನಿಡುತ್ತವೆ. ಕಾಗೆಯ ಮೊಟ್ಟೆಗೂ ಕೋಗಿಲೆಯ ಮೊಟ್ಟೆಗೂ ವ್ಯತ್ಯಾಸವೇ ಇರುವುದಿಲ್ಲ. ಮೊಟ್ಟೆಯೊಡೆದು ಮರಿ ಹೊರಬೀಳುವವರೆಗೂ ಕಾಗೆ ಅದನ್ನು ಪೋಷಿಸುತ್ತದೆ. ಮರಿ ಕೂಗಲು ತೊಡಗಿದಾಗಲೇ ಕಾಗೆಗೆ ತನ್ನ ತಪ್ಪು ತಿಳಿಯುವುದು. ಇಷ್ಟು ಹೊತ್ತಿಗಾಗಲೇ ಕೋಗಿಲೆಯ ಮರಿಗೆ ಹಾರುವ ಶಕ್ತಿ ಬಂದಿರುವುದರಿಂದ ಕಾಗೆಗೆ ಸಿಗದಂತೆ ಹಾರಿ ಹೋಗುತ್ತದೆ.

ಗೂಡು ಕಟ್ಟುವ ಹಕ್ಕಿಗಳು ಗೂಡು ಕಟ್ಟುವುದರಲ್ಲಿ ತೋರಿಸುವ ಕುಶಲತೆಗೆ ಮೇರೆಯೇ ಇಲ್ಲ. ಕೆಲವು ಹಕ್ಕಿಗಳು ಗೂಡಿನ ಒಳಭಾಗದಲ್ಲಿ ರಾತ್ರಿಯ ಹೊತ್ತು ಬೆಳಕಿಗಾಗಿ ಮಿಣುಕು ಹುಳುಗಳನ್ನು ಹಿಡಿದು ತಂದು ಜೇಡಿಯ ಮಣ್ಣಿನ ಮಂಟಪ ಕಟ್ಟಿ ಅದಕ್ಕೆ ಅಂಟಿಸಿಕೊಂಡು ಆ ಮಿಣುಕು ಹುಳುವನ್ನೂ ಪೋಷಿಸುತ್ತವೆ ಎಂದು ಹೇಳುವುದುಂಟು.

ಗೂಡು ಕಟ್ಟುವುದರಲ್ಲಿ ಗಂಡು ಹಕ್ಕಿ ಯಾವ ಪಾತ್ರವನ್ನೂ ವಹಿಸದಿರಬಹುದು. ಇಲ್ಲವೆ ಅದರದೇ ಮುಖ್ಯ ಪಾತ್ರವಾಗಬಹುದು. ಕೆಲವು ಹಕ್ಕಿಗಳು ಒಂದು ವರ್ಷ ಉಪಯೋಗಿಸಿದ ಅಥವಾ ವಾಸಿಸಿದ ಗೂಡುಗಳಲ್ಲಿ ಮರು ವರ್ಷ ವಾಸಿಸದಿರಬಹುದು. ಆದರೂ ಕೆಲವು ಪಕ್ಷಿಗಳು ಒಂದು ಸಾರಿ ಕಟ್ಟಿದ ಗೂಡುಗಳನ್ನು ಪ್ರತಿವರ್ಷವೂ ಸರಿಪಡಿಸಿಕೊಂಡು ಉಪಯೋಗಿಸುತ್ತವೆ. ಮೊಟ್ಟೆಯಿಂದ ಹೊರಬಿದ್ದ ಹೊಸ ಮರಿಗಳು ಕೂಡ ದೊಡ್ಡವಾಗಿ ಮೊಟ್ಟೆ ಇಡುವ ಕಾಲ ಬಂದಾಗ, ತಾಯಿ ತಂದೆಗಳ ನೆರವು ಇಲ್ಲದೆ, ಕಲಿಯದೆ ತಮ್ಮ ಜಾತಿಗನುಗುಣವಾದ ಗೂಡನ್ನು ಕಟ್ಟುತ್ತವೆ. ಇದು ಪಕ್ಷಿಗಳಲ್ಲಿ ವಂಶಪಾರಂಪರ್ಯವಾಗಿ ಬಂದಿರುವ ಹುಟ್ಟು ಗುಣ. (ಎಚ್.ಬಿ.ಡಿ.)

**ಗೂನು ತಿಮಿಂಗಲ:** ಮೆಗಾಪ್ಟ ನೊವೇಂಗ್ಲಿಯೆ ಎಂಬ ವೈಜ್ಞಾನಿಕ ಹೆಸರಿನ ಒಂದು ವಿಚಿತ್ರ ಬಗೆಯ ತಿಮಿಂಗಿಲ (ಹಂಪ್‌ಬ್ಯಾಕ್ ವ್ಹೇಲ್). ಸಿಟೇಷಿಯ ಗಣದ ಮಿಸ್ಟಿಸೆಟಿ ಉಪಗಣದ ಬೆಲನಾಪ್ಟರಿಡೆ ಕುಟುಂಬಕ್ಕೆ ಸೇರಿದೆ. ಈ ತಿಮಿಂಗಿಲದ ಬೆನ್ನಿನ ಮೇಲೆ ಸಣ್ಣದಾದ ಮತ್ತು ವಕ್ರವಾಗಿರುವ ಒಂಟಿ ಈಜುರೆಕ್ಕೆ ಇರುವುದರಿಂದಲೂ ಇದು ನೀರಿನಿಂದ ಹೊರಬರುವಾಗ ಗೂನಿನಂತೆ ಬಾಗಿರುವ ಹಾಗೆ ಕಾಣುವುದರಿಂದಲೂ ಇದಕ್ಕೆ ಗೂನು ತಿಮಿಂಗಿಲ ಎಂದು ಹೆಸರು ಬಂದಿದೆ. ಈ ತಿಮಿಂಗಿಲದಲ್ಲಿ ಭ್ರೂಣಾವಸ್ಥೆಯಲ್ಲಿ ಮಾತ್ರ ಸಣ್ಣ ಹಲ್ಲುಗಳು ಇದ್ದು ತಿಮಿಂಗಿಲ ಬೆಳೆದ ಹಾಗೆಲ್ಲ ಹಲ್ಲುಗಳು ಬಿದ್ದುಹೋಗಿ ಬಾಯಲ್ಲಿ ಬೆಲೀನ್ ಅಥವಾ ತಿಮಿಂಗಿಲ ಮೂಳೆ ಬೆಳೆಯುತ್ತದೆ. ಬಾಯಂಗುಳದಿಂದ ತೂಗಾಡುವ ಇದು ಇಬ್ಭಾಗವಾಗಿದ್ದು ಇದರ ಎರಡು ಭಾಗಗಳು ಬಾಯಿಯ ಇಕ್ಕೆಡೆಗಳಲ್ಲಿ ಹೊಂದಾಣಿಕೆಯಾಗಿವೆ. ಬೆಲೀನ್ ಜರಡಿಯಂತಿರುವುದರಿಂದ ಸಣ್ಣ ಪ್ರಾಣಿಗಳನ್ನು ಆಹಾರವಾಗಿ ಹಿಡಿಯಲು ಅನುಕೂಲವಾಗಿದೆ. ಗೂನು ತಿಮಿಂಗಿಲ ದೈತ್ಯಾಕಾರದ್ದು ; ಸುಮಾರು 15 ಮೀ ಉದ್ದಕ್ಕೆ ಬೆಳೆಯುತ್ತದೆ. ತೂಕ ಸುಮಾರು 4,000 ಕಿಗ್ರಾಂ. ಗೂನು ತಿಮಿಂಗಿಲ ತನ್ನ ಆಕಾರದಲ್ಲೂ ನಡತೆಯಲ್ಲೂ ಮಿಕ್ಕ ತಿಮಿಂಗಿಲಗಳಿಗಿಂತ ಭಿನ್ನವಾಗಿದೆ. ಇದರ ಮುಂಗಾಲುಗಳು ಹುಟ್ಟುಗಳ ಹಾಗಿವೆ. ಹುಟ್ಟುಗಳ ಅಂಚುಗಳು ಒರಟಾಗಿವೆ. ಇತರ ದಂತರಹಿತ ತಿಮಿಂಗಿಲಗಳಂತೆಯೇ ಇದರಲ್ಲೂ ಹೆಬ್ಬೆಟ್ಟಿಲ್ಲ. ಆದರೆ 2ನೆಯ ಮತ್ತು 3ನೆಯ ಬೆರಳುಗಳಲ್ಲಿ, ಕೆಲವು ವೇಳೆ 4ನೆಯ ಬೆರಳಿನಲ್ಲಿ ಹೆಚ್ಚು ಸಂಖ್ಯೆಯ ಮಣಿಕಟ್ಟುಗಳು ಇರುವುದರಿಂದ ಗೂನು ತಿಮಿಂಗಿಲದ ಮುಂಗಾಲುಗಳು ಉದ್ದವಾಗಿವೆ. ಸಾಮಾನ್ಯವಾಗಿ ತಿಮಿಂಗಿಲಗಳಲ್ಲಿ ಹಿಂಗಾಲುಗಳಿಲ್ಲ. ಆದರೆ ಗೂನು ತಿಮಿಂಗಿಲ ತನ್ನ ಭ್ರೂಣಾವಸ್ಥೆಯಲ್ಲಿ ಹಿಂಗಾಲುಗಳ ಕುರುಹುಗಳನ್ನು ಪ್ರದರ್ಶಿಸುತ್ತದೆ. ತಿಮಿಂಗಿಲ ಬೆಳೆದಂತೆಲ್ಲ ಇವು ಅದೃಶ್ಯವಾಗುತ್ತವೆ. 1919 ರಲ್ಲಿ ಅಮೆರಿಕದ ವಾಂಕುವರ್ ಬಳಿ ಸಿಕ್ಕಿದ ಒಂದು ಪ್ರೌಢ ಗೂನು ತಿಮಿಂಗಿಲದಲ್ಲಿ ಮಾತ್ರ ಗುದದ ಇಕ್ಕೆಡೆಗಳಲ್ಲಿ ಸುಮಾರು 1.2 ಮೀ ಉದ್ದದ, ಮೊನಚು ತುದಿಯ, ಕೊಳವೆಯಾಕಾರದ ಅಂಗಗಳಿದ್ದುವು. ಇವುಗಳಲ್ಲಿ ಮೃದ್ವಸ್ಥಿಯ ಒಂದು ಫೀಮರ್ ಮತ್ತು ಮೂಳೆಯಿಂದಾದ ಒಂದು ಮೆಟಟಾರ್ಸಸ್ ಇದ್ದುವು. ಇವನ್ನೇ ಹಿಂಗಾಲುಗಳೆಂದು ಭಾವಿಸಲಾಗಿದೆ.



ಗೂನು ತಿಮಿಂಗಲ

ಗೂನು ತಿಮಿಂಗಿಲ ಬಾರ್ನಕಲ್ ಮುಂತಾದ ಕೆಲವು ಪರಾವಲಂಬಿಗಳಿಗೆ ಆಶ್ರಯದಾತ ಪ್ರಾಣಿಯಾಗಿದೆ. ಇವು ಇದರ ದೇಹದ ಹೊರ ಮೈಮೇಲೆ ಅಂಟಿಕೊಂಡಿರುತ್ತವೆ.

ಗೂನು ತಿಮಿಂಗಿಲಕ್ಕೆ ನಿರ್ದಿಷ್ಟವಾದ ಸಂತಾನೋತ್ಪತ್ತಿಯ ಕಾಲ ಇಲ್ಲ. ಗರ್ಭಾವಸ್ಥೆಯ ಅವಧಿ 11–12 ತಿಂಗಳು. ಆಗತಾನೇ ಹುಟ್ಟಿದ ಮರಿಯೂ ದೈತ್ಯಾಕಾರದ್ದೇ. ಇದರ ಉದ್ದ 4.5 ಮೀ. ತೂಕ 100 ಕಿಗ್ರಾಂ. ತಾಯಿ ಮರಿಯನ್ನು ಬಹಳ ಪ್ರೀತಿಯಿಂದ ಸಾಕುತ್ತದೆ; ಅರೆಕ್ಷಣವೂ ಬಿಟ್ಟಗಲದು. ಶತ್ರುವಿನ ಕೈಗೆ ಸಿಕ್ಕಿಬಿದ್ದ ಪ್ರಸಂಗಗಳಲ್ಲೂ ಮರಿಯಿಂದ ಬೇರೆಯಾಗದೆ ಅದನ್ನು ರಕ್ಷಿಸಲು ಪ್ರಯತ್ನಿಸುತ್ತದೆ.

ಗೂನು ತಿಮಿಂಗಿಲಗಳು ಎಲ್ಲ ಸಾಗರಗಳಲ್ಲೂ ಕಂಡುಬರುತ್ತವೆ. ಒಂದು ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಇವು ತಮ್ಮ ಸ್ನೇಹ ಸ್ವಭಾವ ಮತ್ತು ವಿನೋದಪರತೆಗಳಿಂದಾಗಿ ಬೇಟೆಗಾರರಿಗೆ ಸುಲಭವಾಗಿ ಆಹುತಿಯಾಗುವುದರಿಂದ ಇವುಗಳ ಸಂಖ್ಯೆ ಇಳಿದಿದೆ. ಆದರೆ ಈಗ ಕಾನೂನು ರೀತ್ಯ ಇವುಗಳನ್ನು ಸಂರಕ್ಷಿಸಲಾಗಿದೆ. (ಎನ್.ವಿ.ಎ.)

**ಗೂಬೆ:** ಸ್ಟ್ರಿಜಿಫಾರ್ಮಿಸ್ ಗಣದ ಟೈಟಾನಿಡೆ ಮತ್ತು ಸ್ಟ್ರಿಜಿಡೆ ಕುಟುಂಬಗಳಿಗೆ ಸೇರಿದ ಸುಮಾರು 133 ಪ್ರಭೇದಗಳ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು. ಟೈಟನಿಡೆ ಕುಟುಂಬಕ್ಕೆ ಕಣಜದ ಗೂಬೆಯ ವಿವಿಧ ಪ್ರಭೇದಗಳೂ (ಬಾರ್ನ್ ಔಲ್),, ಸ್ಟ್ರಿಜಿಡೆ ಕುಟುಂಬಕ್ಕೆ ಪ್ರರೂಪೀ ಗೂಬೆಗಳ (ಟಿಪಿಕಲ್ ಔಲ್ಸ್) ಸುಮಾರು 122 ಪ್ರಭೇದಗಳೂ ಸೇರಿವೆ. ಎಲ್ಲ ಪ್ರಭೇದಗಳಿಗೂ ಸಮಾನವೆನಿಸುವ ಕೆಲವು ವಿಚಿತ್ರ ಲಕ್ಷಣಗಳಿವೆ. ಇವುಗಳಲ್ಲಿ ಮುಖ್ಯವಾದುವು ತಟ್ಟೆಯಂತೆ ಅಗಲವಾಗಿರುವ ಮುಖ, ಮುಖದ ಮುಂಭಾಗದಲ್ಲಿರುವ ದೊಡ್ಡ ಕಣ್ಣುಗಳು, ದಪ್ಪತಲೆ, ಮೋಟು ಕತ್ತು, ಮೃದುವಾದ ತುಪ್ಪುಳದಂಥ ರೆಕ್ಕೆಪುಕ್ಕಗಳು. ಗೂಬೆಗಳು ತಮ್ಮ ಕೊಕ್ಕೆಯಂಥ ಕೊಕ್ಕು ಮತ್ತು ಬಲವಾದ ಕಾಲುಗಳಿಂದ ಜೀವಂತ ಆಹಾರ ಪ್ರಾಣಿಗಳನ್ನು ಬೇಟೆಯಾಡಿ ತಿಂದು ಜೀವಿಸುತ್ತವೆ. ಇದರಿಂದಾಗಿ ಇವು ಹದ್ದು, ಗಿಡುಗಗಳಂತೆಯೇ ಹಿಂಸ್ರ ಪಕ್ಷಿಗಳು ಅನ್ನಿಸಿಕೊಂಡಿವೆ. ಈ ಕಾರಣದಿಂದಲೇ ಹಿಂದೆ ಇವನ್ನು ಹದ್ದು ಮತ್ತು ಗಿಡುಗಗಳ ಗುಂಪಿಗೆ ಸೇರಿಸಲಾಗಿತ್ತು. ಆದರೆ ಈ ಲಕ್ಷಣ ಹದ್ದು ಮತ್ತು ಗೂಬೆಗಳ ಸಮಾನಾಂತರ ವಿಕಾಸವನ್ನು ತೋರಿಸುವುದೇ ಹೊರತು ಇವುಗಳ ಸಂಬಂಧವನ್ನಲ್ಲ. ಗೂಬೆಗಳ ಅಂಗರಚನೆ ಮತ್ತು ಸ್ವಭಾವಗಳಿಗೂ ಹದ್ದುಗಳ ಗುಣ ಲಕ್ಷಣಗಳಿಗೂ ಅನೇಕ ವ್ಯತ್ಯಾಸಗಳಿವೆ. ಹದ್ದುಗಳು ಹಗಲಿನಲ್ಲಿ ಬೇಟೆಯಾಡುವುವಾದರೆ ಗೂಬೆಗಳ ಚಟುವಟಿಕೆ ರಾತ್ರಿಯಲ್ಲಿ ಮಾತ್ರ.

ಗೂಬೆ

ಅಂಟಾರ್ಕ್‌ಟಿಕ ಮತ್ತು ಪ್ರಮುಖ ಖಂಡಗಳಿಂದ ಬಲುದೂರವಿರುವ ಕೆಲವು ದ್ವೀಪಗಳನ್ನು ಬಿಟ್ಟು ಪ್ರಪಂಚದ ಎಲ್ಲ ಪ್ರದೇಶಗಳಲ್ಲೂ ಗೂಬೆಗಳು ಕಂಡುಬರುತ್ತವೆ. ಇವಕ್ಕೆ ಹೆಚ್ಚು ಕಡಿಮೆ ಎಲ್ಲ ಬಗೆಯ ಪರಿಸರಗಳಿಗೂ – ಮರುಭೂಮಿಯ ಬಂಜರು ವಾತಾವರಣದಿಂದ ಹಿಡಿದು ಉತ್ತರ ಮೇರು ಪ್ರದೇಶದ ತಂಡ್ರಾ ಪ್ರದೇಶ ಹಾಗೂ ಉಷ್ಣವಲಯದ ಮಳೆಕಾಡುಗಳ ತೇವಪೂರಿತ ವಾತಾವರಣದವರೆಗೂ ಹೊಂದಿಕೊಂಡು ಜೀವಿಸುವ ಸಾಮರ್ಥ್ಯವಿದೆ.

ಸ್ಟ್ರಿಜಿಡೆ ಕುಟುಂಬಕ್ಕೆ ಸೇರಿದ ಗೂಬೆಗಳು ಪ್ರರೂಪೀ ಬಗೆಯವು ಎನಿಸಿಕೊಂಡಿವೆ. ಇವುಗಳಲ್ಲಿ ಹೆಚ್ಚು ಕಡಿಮೆ ಎಲ್ಲ ಪ್ರಭೇದಗಳೂ ನಿಶಾಚರಿಗಳು. ಈ ಲಕ್ಷಣಕ್ಕೆ ಅಪವಾದವಾಗಿ ಉತ್ತರಮೇರು ಪ್ರದೇಶಗಳಲ್ಲಿ ಕಂಡುಬರುವ ಮಂಜಿನ ಗೂಬೆ (ನಿಕ್ಟಿಯ ಸ್ಕ್ಯಾಂಡಿಯಾಕ್) ಮಾತ್ರ ಹಗಲಿನಲ್ಲಿ ಬೇಟೆಯಾಡಬಲ್ಲುದು. ಇದು ವಾಸಿಸುವ ನೆಲೆಯಲ್ಲಿ ವರ್ಷದಲ್ಲಿ ಆರು ತಿಂಗಳು ಸೂರ್ಯ ಮುಳುಗದೇ ಇರುವುದೇ ಇದರ ಈ ಗುಣಕ್ಕೆ ಕಾರಣವಿರಬಹುದು. ಉಳಿದೆಲ್ಲ ಗೂಬೆಗಳಲ್ಲಿ ಅವುಗಳ ನಿಶಾಚರ ಜೀವನಕ್ಕೆ ಅನುಕೂಲವಾಗುವಂತೆ ಅತ್ಯಂತ ಚುರುಕಾದ ದೃಷ್ಟಿಶಕ್ತಿ ಮತ್ತು ಶಬ್ದ ಗ್ರಹಣಶಕ್ತಿಗಳಿವೆ. ಗೂಬೆಗಳ ಕಣ್ಣುಗಳಂತೂ ಬಲು ದೊಡ್ಡಗಾತ್ರದುವು. ಹೊರಗೆ ಸಾಕಷ್ಟು ದೊಡ್ಡದಾಗಿ ಕಾಣುವ ಇವು ನಿಜವಾಗಿ ಇನ್ನೂ ದೊಡ್ಡಗಾತ್ರದುವು. 60 ಸೆಂಮೀ ಉದ್ದವಿರುವ ಮಂಜಿನ ಗೂಬೆಯ ಕಣ್ಣುಗುಡ್ಡೆಯ ಗಾತ್ರ ಸರಿಸುಮಾರು ಮನುಷ್ಯನ ಕಣ್ಣುಗುಡ್ಡೆಯ ಗಾತ್ರದಷ್ಟಿರುತ್ತದೆ. ಗೂಬೆಗಳ ಕಿವಿಯೂ ಬಲು ಚುರುಕು. ಹಲವಾರು ಪ್ರಭೇದಗಳು ಎರೆಪ್ರಾಣಿಗಳ ಓಡಾಟದ ಸದ್ದಿನ ಮೇಲೆಯೆ ಅವನ್ನು ಪತ್ತೆಹಚ್ಚಿ, ಅವುಗಳ ಮೇಲೆರಗಿ ಹಿಡಿಯುತ್ತವೆ. ಹೀಗೆ ಶಬ್ದವನ್ನು ಗ್ರಹಿಸಲು ಅನುಕೂಲವಾಗಲೆಂದೇ ಗೂಬೆಗಳ ಮುಖ ಅಗಲವಾದ ತಟ್ಟೆಯಂತಿದೆಯೆಂದು ನಂಬಲಾಗಿದೆ. ಗೂಬೆಗಳ ಕಿವಿ ದೊಡ್ಡ ಗಾತ್ರದುವು; ಇವನ್ನು ಚರ್ಮದ ಮಡಿಕೆಯೊಂದು ಭಾಗಶಃ ಮುಚ್ಚಿರುತ್ತದೆ. ಗೂಬೆಗಳ ಇನ್ನೊಂದು ಮುಖ್ಯ ಲಕ್ಷಣ ನಿಶ್ಶಬ್ದ ಹಾರಾಟ. ಇವು ಹಾರುವಾಗ, ಎರೆಪ್ರಾಣಿಯ ಮೇಲೆ ಎರಗುವಾಗ ಸ್ವಲ್ಪವೂ ಸದ್ದು ಮಾಡುವುದಿಲ್ಲ. ಇವುಗಳ ರೆಕ್ಕೆಗಳಲ್ಲಿನ ಮತ್ತು ದೇಹದ ಇತರ ಭಾಗಗಳಲ್ಲಿನ ಗರಿಗಳ ಬುಡದಲ್ಲಿ ಸದ್ದನ್ನು ಅಡಗಿಸುವಂಥ ಮೃದುವಾದ ತುಪ್ಪುಳಿನ ರೀತಿಯ ತಂತುಗಳಿರುವುದೇ ಇದಕ್ಕೆ ಕಾರಣ.

ಪ್ರರೂಪೀ ಗೂಬೆಗಳ ಹಲವಾರು ಪ್ರಭೇದಗಳ ತಲೆಯ ಮೇಲೆ ಕೊಂಬುಗಳಂತೆ ಕಾಣುವ ಗರಿಗಳ ಎರಡು ಗುಚ್ಛಗಳಿವೆ. ಉದಾ : ಕೊಂಬಿನ ಗೂಬೆ (ಹಾರ್‌ನ್ಡ್ ಔಲ್). ಗೂಬೆಗಳ ಕತ್ತು ಮೋಟಾಗಿರುವಂತೆ ಕಂಡರೂ ವಾಸ್ತವವಾಗಿ ಉದ್ದವಾಗಿಯೇ ಇದೆ. ಕತ್ತಿನ ಸುತ್ತ ಉದ್ದವಾದ ಮತ್ತು ಸಡಿಲವಾಗಿ ಜೋಡಣೆಗೊಂಡ ಪುಕ್ಕಗಳಿರುವುದರಿಂದ ಕತ್ತು ಮೋಟಾಗಿರುವಂತೆ ಕಾಣುತ್ತದೆ. ಅಲ್ಲದೆ ಕತ್ತು ಯಾವ ಕಡೆಗೆ ಬೇಕಾದರೂ ಸುಲಭವಾಗಿ ಬಾಗಬಲ್ಲುದು. ಗೂಬೆಗಳ ಕಣ್ಣುಗಳು ಮನುಷ್ಯರಲ್ಲಿರುವಂತೆ ಮುಖದ ಮುಂಭಾಗದಲ್ಲಿರುವುದರಿಂದಲೂ ಕಣ್ಣುಗುಡ್ಡೆಗಳು ಅವುಗಳ ಗುಣಿಗಳಲ್ಲಿ ಆಚೀಚೆ ಹೆಚ್ಚು ಚಲಿಸಲಾರವಾದ್ದರಿಂದಲೂ ಗೂಬೆಗಳು ತಮ್ಮ ಅಕ್ಕಪಕ್ಕಗಳಲ್ಲಿ ಅಥವಾ ಹಿಂಭಾಗದೆಡೆ ನೋಡಬೇಕಾದರೆ ಈ ತೆರನ ಬಳುಕುವ ಕತ್ತು ಬಹಳ ಅನುಕೂಲ. ಗೂಬೆಗಳು ತಮ್ಮ ಕತ್ತನ್ನು $180^0$ ತಿರುಗಿಸಬಲ್ಲುವು.

ಗೂಬೆಗಳ ಆಹಾರ ಸೇವನೆಯ ಕ್ರಮವೂ ವಿಚಿತ್ರವೇ. ಇವು ತಮ್ಮ ಆಹಾರವನ್ನು ಹದ್ದು, ಗಿಡುಗಗಳಂತೆ ಕಿತ್ತು ತಿನ್ನದೆ, ಇಡಿಯಾಗಿ ನುಂಗಿಬಿಡುತ್ತವೆ. ಇಲಿ, ಹೆಗ್ಗಣ, ಹಾವು, ಹಕ್ಕಿಗಳು ಇವುಗಳ ಮುಖ್ಯ ಆಹಾರ. ಇವುಗಳ ಜಠರ ರಸ ಅತ್ಯಂತ ತೀಕ್ಷ್ಣ ರೀತಿಯದಾಗಿದ್ದು ಆಹಾರದ ಬಹು ಪಾಲನ್ನು ಜೀರ್ಣಿಸಿಬಿಡುತ್ತದೆ. ಜೀರ್ಣವಾಗದೆ ಉಳಿಯುವ ಮೂಳೆ, ತುಪ್ಪುಳ, ಗರಿ ಮುಂತಾದ ವಸ್ತುಗಳನ್ನು ಸಣ್ಣ ಗುಳಿಗೆಗಳ ರೂಪದಲ್ಲಿ ಬಾಯಿಂದ ವಾಪಸು ಉಗುಳಿಬಿಡುತ್ತವೆ. ಸಾಮಾನ್ಯವಾಗಿ ಗೂಬೆಗಳು ತಾವು ಬೇಟೆಯಾಡಿದ ಆಹಾರವನ್ನು ಹಿಡಿದ ಸ್ಥಳದಲ್ಲಿಯೇ ತಿನ್ನದೆ ತಮ್ಮ ಮೆಚ್ಚಿನ ಸ್ಥಳಗಳಿಗೆ ತಂದು ತಿನ್ನುತ್ತವೆ. ಇಂಥ ಜಾಗಗಳ ನೆಲದ ಮೇಲೆ ನೂರಾರು ವಿಸರ್ಜಿತ ಆಹಾರದ ಗುಳಿಗೆಗಳನ್ನು ಕಾಣಬಹುದು. ಇಂಥ ಗುಳಿಗೆಗಳನ್ನು ಬಿಡಿಸಿ ನೋಡಿದರೆ ಗೂಬೆಗಳ ಆಹಾರಪ್ರಾಣಿಗಳು ಯಾವುವು ಎಂಬುದನ್ನು ಪತ್ತೆಹಚ್ಚಬಹುದು. ಅನೇಕ ಸಲ ಈ ಶೋಧನೆಗಳು ಮಾನವನಿಗೆ ಗೊತ್ತಿರದಿದ್ದ ಹಲವಾರು ಜಾತಿಯ ಪ್ರಾಣಿಗಳ ಇರುವನ್ನು ಬೆಳಕಿಗೆ ತಂದಿವೆ. ಗೂಬೆಗಳ ಕೂಗು ಬಲು ಭಯಾನಕ. ಒಮ್ಮೊಮ್ಮೆ ದೀರ್ಘವಾಗಿ ಗೂಕ್ ಗೂಕ್ ಎಂದೊ ಹ್ರಸ್ವವಾಗಿ ಲೊಚಗುಟ್ಟುವಂತೆಯೊ ಗೊರಕೆ ಹೊಡೆಯುವಂತೆಯೊ ಬುಸುಗುಟ್ಟುವಂತೆಯೋ ಹಲವಾರು ಬಗೆಗಳಲ್ಲಿ ವಿಚಿತ್ರವಾಗಿ ಸದ್ದುಮಾಡುತ್ತವೆ.

ಗೂಬೆಗಳು ಮರದ ಪೊಟರೆ, ಪ್ರಪಾತಗಳಲ್ಲಿನ ಸಂದುಗಳು, ನೆಲದ ಮೇಲಿನ ಗುಳಿಗಳು ಮುಂತಾದ ಸ್ವಾಭಾವಿಕ ನೆಲೆಗಳನ್ನು ಗೂಡುಗಳನ್ನಾಗಿ ಮಾಡಿಕೊಳ್ಳುತ್ತವೆ. ಕೆಲವು ಸಲ ಗಿಡುಗ ಇಲ್ಲವೆ ಕಾಗೆಗಳಿಂದ ತೊರೆಯಲ್ಪಟ್ಟ ಗೂಡುಗಳನ್ನೂ ಬಳಸುವುದುಂಟು. ಸಾಮಾನ್ಯವಾಗಿ ಇಂಥ ನೆಲೆಗಳನ್ನು ಅವು ಹೇಗಿರುತ್ತವೋ ಹಾಗೆಯೇ ಉಪಯೋಗಿಸುತ್ತವೆ. ಎಲ್ಲ ಬಗೆಯ ಗೂಬೆಗಳೂ ಗುಂಡನೆಯ ಮತ್ತು ಅಚ್ಚ ಬಿಳಿಯ ಬಣ್ಣದ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳ ಸಂಖ್ಯೆ ಸಾಮಾನ್ಯವಾಗಿ ಒಂದು ಸಲಕ್ಕೆ 1–7 ಅಥವಾ ಹೆಚ್ಚು. ಕಾವು ಕೊಡುವುದನ್ನು, ಮರಿಗಳ ಪಾಲನೆಯನ್ನು ಗಂಡು ಮತ್ತು ಹೆಣ್ಣುಗಳೆರಡೂ ನಿರ್ವಹಿಸುತ್ತವೆ. ಉತ್ತರಮೇರು ಪ್ರದೇಶದ ಮಂಜಿನ ಗೂಬೆಗಳಲ್ಲಿ ಮಾತ್ರ ಕಾವುಕೊಡುವ ಕೆಲಸ ಹೆಣ್ಣಿನದು. ಹೀಗೆ ಕಾವುಕೂತ ಹೆಣ್ಣಿಗೆ ಗಂಡು ಗೂಬೆ ಆಹಾರವನ್ನೊದಗಿಸುತ್ತದೆ.

ಕಣಜದ ಗೂಬೆ ಬಲು ಸಾಮಾನ್ಯವಾಗಿ ಕಾಣಬರುವ ಗೂಬೆ. ಮೇರು ಪ್ರದೇಶಗಳು, ನ್ಯೂಜಿಲೆಂಡ್, ಹವಾಯ್, ಮಲಯ ಪರ್ಯಾಯ ದ್ವೀಪಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳಲ್ಲೂ ಈ ಗೂಬೆ ಇದೆ. ಇದರ ಮುಖ ಗುಂಡಿಗೆಯಾಕಾರದ ತಟ್ಟೆಯಂತಿದ್ದು ಸೆಡೆತಿರುವ ಗರಿಗಳ ಅಂಚಿನಿಂದ ಕೂಡಿದೆ. ಮುಖದ ಬಣ್ಣ ಬಿಳಿ. ಇದರಿಂದಾಗಿ ಈ ಗೂಬೆಯ ಮುಖ ಹೆಚ್ಚು ಕಡಿಮೆ ಕೋತಿಯ ಮುಖವನ್ನೇ ಹೋಲುತ್ತದೆ. ಆದ್ದರಿಂದ ಈ ಗೂಬೆಗೆ ಕೋತಿಮುಖದ ಗೂಬೆ ಎಂಬ ಹೆಸರೂ ಇದೆ. ಉದ್ದನೆಯ ಕಾಲುಗಳು, ಪಾದದವರೆಗೂ ಇರುವ ಗರಿಗಳು, ಮೋಟುಬಾಲ, ನಡುಬೆರಳಿನ ಮೇಲೆ ಏಣುಗಳುಳ್ಳ ಹಣಿಗೆಯಂಥ ರಚನೆ ಇರುವುದು, ಇವು ಕಣಜದ ಗೂಬೆಯ ಇತರ ಪ್ರಮುಖ ಲಕ್ಷಣಗಳು. ಈ ಗೂಬೆ 30–45 ಸೆಂಮೀ ಉದ್ದ ಇರುತ್ತದೆ ; ಹೆಣ್ಣು ಗೂಬೆ ಗಂಡಿಗಿಂತ ದೊಡ್ಡದು. ದೇಹದ ಬಣ್ಣ ಬಂಗಾರ ಮತ್ತು ಬೂದಿಗಳ ಮಿಶ್ರಣ. ಅಲ್ಲದೆ ಕಪ್ಪು ಮತ್ತು ಬಿಳಿಯ ಮಚ್ಚೆಗಳಿವೆ. ಸ್ವಾಭಾವಿಕವಾಗಿ ಮರದ ಪೊಟರೆಗಳನ್ನೂ ಪ್ರಪಾತದ ಸಂದಿಗಳನ್ನೂ ಗೂಡುಗಳನ್ನಾಗಿ ಮಾಡಿಕೊಳ್ಳುವುದಾದರೂ ಕೆಲವೊಮ್ಮೆ ಹದ್ದು, ಗಿಡುಗ ಮುಂತಾದುವುಗಳ ಗೂಡನ್ನು ಬಳಸುವುದುಂಟು. ಹಳೆಯ ಮನೆ, ಚರ್ಚುಗಳ ಗೋಪುರಗಳು, ಕಣಜಗಳಲ್ಲಿನ ಚಾವಣಿ ಮುಂತಾದ ಸ್ಥಳಗಳಲ್ಲೂ ಗೂಡು ಕಟ್ಟುವುದುಂಟು. ಪಾಳುಬಿದ್ದ ಕಟ್ಟಡಗಳಂತೂ ಇದಕ್ಕೆ ಬಲು ಅಚ್ಚುಮೆಚ್ಚಿನ ಸ್ಥಳ. ಇಂಥ ಸ್ಥಳಗಳಲ್ಲಿ ಗೂಡು ನಿರ್ಮಿಸಿಕೊಂಡು ಕರ್ಕಶವಾಗಿ,

ದೀರ್ಘವಾಗಿ ಕಿರಿಚುತ್ತಲೊ ಲೊಚಗುಟ್ಟುವಂತೆ ಇಲ್ಲವೆ ಗೊರಕೆಯಂತೆ ಕೇಳಿಸುವ ಸದ್ದುಮಾಡುತ್ತಲೊ ಇರುವುದರಿಂದ ತಾನಿರುವ ನೆಲೆಯ ಭೀಕರತೆಯನ್ನು ಹೆಚ್ಚಿಸುತ್ತದೆ. ವರ್ಷ ವರ್ಷವೂ ಒಂದೇ ಸ್ಥಳವನ್ನು ತನ್ನ ನೆಲೆಯಾಗಿ ಉಪಯೋಗಿಸುವುದು ಗೂಬೆಯ ಇನ್ನೊಂದು ವಿಚಿತ್ರ ಲಕ್ಷಣ.

ಕಣಜದ ಗೂಬೆ ಅಪ್ಪಟ ನಿಶಾಚಾರಿ. ಹಗಲಿನಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ. ಮುಸ್ಸಂಜೆಯ ವೇಳೆ ಬೇಟೆಗೆಂದು ಹೊರಬರುತ್ತದೆ. ಹುಲ್ಲು ಮತ್ತು ಕುಳ್ಳುಪೊದೆಗಳಿಂದ ಕೂಡಿದ ಬಯಲು ಪ್ರದೇಶ ಇದರ ಅಚ್ಚು ಮೆಚ್ಚಿನ ಬೇಟೆಯ ಪ್ರದೇಶ. ಇಲಿಗಳೇ ಇದರ ಪ್ರಮುಖ ಆಹಾರ. ಇದರಿಂದಾಗಿ ರೈತನ ಸ್ನೇಹಿತ ಎನಿಸಿಕೊಂಡಿದೆ. ಕಣಜದ ಗೂಬೆಗೆ ಇತರ ಗೂಬೆಗಳಂತೆಯೇ ಅತ್ಯಂತ ಚುರುಕಾದ ದೃಷ್ಟಿಯಿರುವುದಾದರೂ ಬೇಟೆಯಾಡಲು ಕಿವಿಗಳನ್ನೇ ಹೆಚ್ಚು ಅವಲಂಬಿಸಿದೆ.

ಕಣಜದ ಗೂಬೆಯ ಸಂತಾನೋತ್ಪತ್ತಿಯ ಕಾಲ ನಿರ್ದಿಷ್ಟವಾಗಿ ಗೊತ್ತಿಲ್ಲ. 4–7 ಗುಂಡನೆಯ ಮತ್ತು ಬಿಳಿಯ ಬಣ್ಣದ ಮೊಟ್ಟೆಗಳನ್ನಿಡುತ್ತದೆ. ಗಂಡು, ಹೆಣ್ಣುಗಳೆರಡೂ ಕಾವು ಕೊಟ್ಟು ಮರಿ ಮಾಡುತ್ತವೆ. ಕಣಜದ ಗೂಬೆಯ ಆಯಸ್ಸು 15 ವರ್ಷಗಳು.

ಗೂಬೆಗಳಲ್ಲಿ ಮುಖ್ಯವಾದ ಬಗೆಗಳೆಂದರೆ

1. ಕೊಂಬಿನ ಗೂಬೆ (ಹಾರ್ನ್ಡ್ ಔಲ್) : ಬ್ಯೂಬೊ ಎಂಬ ವೈಜ್ಞಾನಿಕ ಹೆಸರಿನ ಗೂಬೆ ಇದು ; ಸುಮಾರು 11 ಪ್ರಭೇದಗಳನ್ನೊಳಗೊಂಡಿದೆ. ಪ್ರಪಂಚಾದ್ಯಂತ ಇದರ ವ್ಯಾಪ್ತಿ ಇದೆ. ಭಾರತದಲ್ಲಿ ಬ್ಯೂಬೊ ಬ್ಯೂಬೊ ಎಂಬ ಪ್ರಭೇದವಿದೆ. ಹದ್ದಿನಷ್ಟು ದೊಡ್ಡದಿರುವ ಇದರ ಬಣ್ಣ ಕಂದು. ತಲೆಯ ಮೇಲೆ ಎರಡು ಕೊಂಬುಗಳಿವೆ. ಕಣ್ಣುಗಳು ಹಳದಿ ಬಣ್ಣದುವು. ಬೆಟ್ಟಗಳಲ್ಲಿನ ಕಲ್ಲುಬಂಡೆಗಳ ಪೊಟರೆಗಳಲ್ಲಿ ವಾಸಿಸುತ್ತದೆ. ಕೆಲವು ಸಲ ಬೃಹದ್ಗಾತ್ರದ ಮರಗಳಲ್ಲಿರುವುದುಂಟು. ಸಣ್ಣ ಸ್ತನಿಗಳು, ಹಕ್ಕಿಗಳು, ಇಲಿಗಳು, ಓತಿಕ್ಯಾತ, ಏಡಿ, ಕೆಲವು ಬಗೆಯ ಕೀಟಗಳು ಇದರ ಪ್ರಧಾನ ಆಹಾರ.

2. ಮಂಜಿನ ಗೂಬೆ (ಸ್ನೋಯಿ ಔಲ್) : ಇದು ಉತ್ತರ ಮೇರು ಪ್ರದೇಶದ ಗೂಬೆ. ನಿಕ್ಟಿಯಾ ಸ್ಕ್ಯಾಂಡಿಯಾಕ ಇದರ ವೈಜ್ಞಾನಿಕ ಹೆಸರು. ಉತ್ತರ ಸ್ಕ್ಯಾಂಡಿನೇವಿಯ, ರಷ್ಯದ ಉತ್ತರ ಭಾಗ, ಅಲಾಸ್ಕ, ಗ್ರೀನ್‌ಲೆಂಡಿನ ಉತ್ತರ ಭಾಗಗಳಲ್ಲಿ ವಾಸಿಸುತ್ತದೆ. ವಿಪರೀತ ಚಳಿಯಿದ್ದಾಗ ಆಹಾರದ ಕೊರತೆಯುಂಟಾಗುವುದರಿಂದ ದಕ್ಷಿಣಕ್ಕೆ–ಬ್ರಿಟಿಷ್ ದ್ವೀಪಗಳು, ಮಧ್ಯ ರಷ್ಯ, ಜಪಾನ್, ಅಮೆರಿಕ ಸಂಯುಕ್ತ ಸಂಸ್ಥಾನಗಳ ಮಧ್ಯಭಾಗ, ಜರ್ಮನಿಗಳಿಗೆ ವಲಸೆ ಬರುತ್ತದೆ. ಲೆಮಿಂಗ್ ಎಂಬ ಪ್ರಾಣಿ, ಆರ್ಕ್‌ಟಿಕ್ ಮೊಲ ಮತ್ತು ಬಾತುಕೋಳಿಗಳು ಇದರ ಮುಖ್ಯ ಆಹಾರ.

3. ಮೀನು ತಿನ್ನುವ ಗೂಬೆ (ಬ್ರೌನ್ ಫಿಶ್ ಔಲ್) : ಭಾರತದಲ್ಲೆಲ್ಲ ಇದು ಕಂಡುಬರುತ್ತದೆ. ಇದರ ವೈಜ್ಞಾನಿಕ ಹೆಸರು ಬ್ಯೂಬೊ ಜೀಲೊನೆನ್ಸಿಸ್. ಕೊಂಬಿನ ಗೂಬೆಯ ಗಾತ್ರದಷ್ಟಿದೆ. ಅದರಂತೆಯೇ ಇದರ ದೇಹದ ಬಣ್ಣವೂ ಕಂದು. ನೀರ ಬಳಿ ಬೆಳೆಯುವ ದೊಡ್ಡ ಗಾತ್ರದ ಮರಗಳಲ್ಲಿ ಇದರ ವಾಸ. ಮೀನು, ಕಪ್ಪೆ, ಏಡಿ, ಹಕ್ಕಿಗಳು ಮುಂತಾದುವನ್ನು ತಿನ್ನುತ್ತದೆ.

4. ಕುಬ್ಜ ಗೂಬೆ (ಪಿಗ್ಮಿ ಔಲ್) :15–20 ಸೆಂಮೀ ಉದ್ದದ ಸಣ್ಣ ಗೂಬೆ ಇದು. ಉತ್ತರ ಮತ್ತು ದಕ್ಷಿಣ ಅಮೆರಿಕ, ಆಫ್ರಿಕ ಮತ್ತು ಯೂರೇಷಿಯಗಳಲ್ಲಿ ಕಾಣ ದೊರೆಯುತ್ತದೆ. ಕೀಟಗಳು, ಸಣ್ಣಪುಟ್ಟ ಹಕ್ಕಿಗಳು, ಉರಗಗಳು ಇದರ ಮುಖ್ಯ ಆಹಾರ. ಚುರುಕಾಗಿ ಹಾರಬಲ್ಲ ಇದು ಹಾರುತ್ತಿರುವ ಹಕ್ಕಿಗಳನ್ನು ಹಿಡಿಯಬಲ್ಲುದು.

ಮೇಲೆ ಹೇಳಿದ ಗೂಬೆಗಳಲ್ಲದೆ ಭಾರತದಲ್ಲಿ ಆಥೀನೆ ಬ್ರಾಮ ಮತ್ತು ಗ್ಲಾಸಿಡಿಯಂ ರೇಡಿಯೇಟಂ ಎಂಬ ಶಾಸ್ತ್ರೀಯ ಹೆಸರಿನ ಕಿರುಗೂಬೆಗಳೂ (ಔಲೆಟ್ಸ್) ಕಂಡುಬರುತ್ತವೆ. ಇವಕ್ಕೆ ಹಾಲಹಕ್ಕಿಗಳೆಂಬ ಸಾಮಾನ್ಯ ಹೆಸರಿದೆ. (ಜಿ.ಎಂ.ಬಿ.)

**ಗೂವನ್:** ಕೋಳಿಯನ್ನು ಹೆಚ್ಚು ಕಡಿಮೆ ಹೋಲುವ ಒಂದು ಹಕ್ಕಿ. ಗ್ಯಾಲಿಫಾರ್ಮೀಸ್ ಗಣಕ್ಕೂ ಕ್ರ್ಯಾಸಿಡೆ ಕುಟುಂಬಕ್ಕೂ ಸೇರಿದೆ. ಇದು ಮಧ್ಯ ಹಾಗೂ ಉತ್ತರ ಅಮೆರಿಕದ ಕೆಲವು ಪ್ರದೇಶಗಳಲ್ಲಿ ವಿರಳವಾಗಿಯೂ ದಕ್ಷಿಣ ಅಮೆರಿಕದಲ್ಲಿ ಹೇರಳವಾಗಿಯೂ ಕಂಡು ಬರುತ್ತದೆ.

ಇದು ಸುಮಾರು ೬ ಸೆಂಮೀ ಉದ್ದಕ್ಕೆ ಬೆಳೆಯುವ ಮಧ್ಯಮಗಾತ್ರದ ಹಕ್ಕಿ. ದೇಹದ ಬಣ್ಣ ಕಂದು ಇಲ್ಲವೆ ಆಲಿವ್ ಹಸಿರು. ಕತ್ತು ಮತ್ತು ತಲೆಗಳ ಮೇಲೆ ಪುಕ್ಕಗಳೇ ಇಲ್ಲ. ಆದರೆ ನೆತ್ತಿಯ ಮೇಲೆ ಮಾತ್ರ ಬಿಳಿಯ ಬಣ್ಣದ ಪುಕ್ಕಗಳ ಕಿರೀಟವಿದೆ. ಕತ್ತಿನ ಮುಂಭಾಗದಲ್ಲಿ ಜೋಲಾಡುವ ಮಾಂಸದ ಪಟಲವೊಂದಿದೆ. ಕೊಕ್ಕು ಚಿಕ್ಕದು ; ದೃಢವಾಗಿದೆ. ಕಾಲುಗಳು ಬಲವಾಗಿದ್ದು ಭೂಮಿಯ ಮೇಲೆ ಓಡಾಡುವುದಕ್ಕೂ ಕ್ರಿಮಿ, ಕೀಟ ಮತ್ತು ಧಾನ್ಯಕ್ಕಾಗಿ ನೆಲವನ್ನು ಕೆರೆಯುವುದಕ್ಕೂ ನೆರವಾಗುತ್ತದೆ. ಕಾಲಿನಲ್ಲಿ ಐದು ಬೆರಳುಗಳಿವೆ. ಇವುಗಳಲ್ಲಿ ಒಂದು ಹಿಮ್ಮುಖವಾಗಿ ಬೆಳೆದಿರುವುದು ಈ ಕೋಳಿಗಳಲ್ಲಿನ ಮುಖ್ಯ ಲಕ್ಷಣಗಳಲ್ಲೊಂದು. ವನ್ಯವೃಕ್ಷಗಳ ತುದಿಗಳಲ್ಲೇ ಇದರ ವಾಸ. ಸದ್ದು ಗದ್ದಲ ಮಾಡದೆ ಮರದಿಂದ ಮರಕ್ಕೆ ಸಾಗುತ್ತ ಹಣ್ಣು ಹಂಪಲನ್ನು ತಿಂದು ಬದುಕುತ್ತದೆ. ಇವು ದೊಡ್ಡ ಗುಂಪುಗಳಲ್ಲಿರುವುದು ಸಾಮಾನ್ಯವಾದರೂ ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಮತ್ತು ಹೆಣ್ಣು ಹಕ್ಕಿಗಳು ಗುಂಪಿನಿಂದ ಬೇರೆಯಾಗಿ ಜೋಡಿಗಳಲ್ಲಿ ವಾಸಿಸತೊಡಗುತ್ತವೆ. ಗೂವನ್ ಹಕ್ಕಿಗಳಲ್ಲಿ ಅನೇಕ ಬಗೆಗಳಿವೆ. ಇವುಗಳಲ್ಲಿ ಪೆನೆಲೊಪೆ, ಅಬೂರಿಯ, ಕ್ಯಾಮೀಪೆಟಿಸ್ ಮತ್ತು ಓರಿಯೋಫ್ಯಾಸಿಸ್ ಎಂಬುವು ಮುಖ್ಯವಾದುವು. (ಎಸ್.ಎಚ್.ಓ.)

**ಗೂಳಿ:** ದನಗಳಲ್ಲಿ ಬೀಜದ ಹೋರಿಗೆ ಈ ಹೆಸರುಂಟು. ಬೀಜ ಒಡೆದದ್ದು ಎತ್ತು ಅನ್ನಿಸಿಕೊಳ್ಳುತ್ತದೆ. ವ್ಯವಹಾರದಲ್ಲಿ ತಳಿ ಉತ್ಪನ್ನಕ್ಕೆಂದೇ ಸಾಕಿರುವ ಹೋರಿಯನ್ನು ಅದೇ ಹೆಸರಿನಿಂದಲೂ ಗೂಳಿ ಎಂಬ ಹೆಸರಿನಿಂದಲೂ ನಿರ್ದೇಶಿಸುತ್ತಾರೆ. ಈ ಪದ ಸಾಮಾನ್ಯವಾಗಿ ಆರ್ಟಿಯೋಡ್ಯಾಕ್ಟಿಲ ಉಪಗಣದ ಬೋವಿಡೆ ಕುಟುಂಬಕ್ಕೆ ಸೇರಿದ ದನದ (ಬಾಸ್) ಜಾತಿಯ ಪ್ರಾಣಿಗಳ ಗಂಡುಗಳಿಗೆ ಅನ್ವಯಿಸುತ್ತದಾದರೂ ಆನೆ ಮತ್ತು ತಿಮಿಂಗಿಲಗಳ ಗಂಡುಗಳಿಗೂ ಇದೇ ಹೆಸರಿದೆ.

ಸಾಮಾನ್ಯವಾಗಿ ಗೂಳಿಯ ಎತ್ತರ 1.35 ಮೀ., ತೂಕ 250–450 ಕಿಗ್ರಾಂ, ಮೈ ಮೇಲೆ ಸಣ್ಣಗಿನ ಹಾಗೂ ನಯವಾದ ಕೂದಲೂ ಬಾಲದ ತುದಿಯಲ್ಲಿ ಕೂದಲಿನ ಕುಚ್ಚೂ ಇವೆ. ದನಗಳಲ್ಲಿ ಹಿಳಲು ಇರುವ ಮತ್ತು ಇಲ್ಲದಿರುವ, ಎಂಬ ಎರಡು ವಿಧಗಳನ್ನು ಗುರುತಿಸಬಹುದು. ಭಾರತ ಮತ್ತು ಇನ್ನು ಕೆಲವು ದೇಶಗಳಲ್ಲಿ ಹಿಳಲು ಜಾತಿಯ ದನಗಳು ಕಾಣಬರುತ್ತವೆ. ಇಂಥವುಗಳಲ್ಲಿ ಗೂಳಿಯ ಹಿಳಲು ಹಸುಗಳ ಹಿಳಲಿಗಿಂತ ಪುಷ್ಟವಾಗಿಯೂ ಎತ್ತರವಾಗಿಯೂ ಇದ್ದು ಶೋಭಾಯಮಾನವಾಗಿರುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಫ್ರೀಸಿಯನ್ಸ್, ಐರ್‌ಷೈರ್, ಶಾರ್ಟ್‌ಹಾರ್ನ್, ಜರ್ಸಿ, ಬ್ರೌನ್ ಸ್ವಿಸ್ ಮತ್ತು ಗಯರನ್‌ಸೆ ತಳಿಗಳಿವೆ. ಮಾಂಸಕ್ಕೋಸ್ಕರ ಬೆಳೆಸುವ ತಳಿಗಳಲ್ಲಿ ಅದರ ಒಟ್ಟು ಲಕ್ಷಣಗಳು ಮುಖ್ಯ. ಅಬರ್ಡೀನ್ ಮತ್ತು ಶಾರ್ಟ್‌ಹಾರ್ನ್ ತಳಿಗಳು ಮಾಂಸಕ್ಕಾಗಿ ಸಾಕುವ ತಳಿಗಳಲ್ಲಿ ಹೆಸರಾದುವು. ತಳಿ ಪ್ರಯೋಗಗಳಿಂದ ಒಳ್ಳೆಯ ರಾಸುಗಳನ್ನು ಬೆಳೆಸಲು ಸಾಧ್ಯವಾಗಿದೆ. ಭಾರತದಲ್ಲೂ ಕೆಲವು ಪಶು ಸಂಗೋಪನ ಕೇಂದ್ರಗಳಲ್ಲಿ ಪಾಶ್ಚಾತ್ಯ ಮತ್ತು ಸ್ಥಳೀಯ ತಳಿಗಳ ಸಂಕರಗಳಿಂದ ಹೆಚ್ಚು ಹಾಲು ಕೊಡುವ ತಳಿಗಳನ್ನು ಪಡೆದಿದ್ದಾರೆ. ಇನ್ನೂ ಉತ್ಕೃಷ್ಟವಾದ ತಳಿಗಳನ್ನು ಉತ್ಪತ್ತಿ ಮಾಡಲು ಪ್ರಯೋಗಗಳು ನಡೆಯುತ್ತಿವೆ.

ಭಾರತದಲ್ಲಿ ಸುಮಾರು 26 ತಳಿಗಳಿವೆ. ಇವನ್ನು ಹಾಲು ಉತ್ಪಾದಕ, ಬೇಸಾಯದ ಮತ್ತು ಸಾಮಾನ್ಯ ಬಳಕೆಯ ತಳಿಗಳೆಂದು ವಿಂಗಡಿಸಬಹುದು.

1. ಹಾಲು ಉತ್ಪಾದಕ ಹಸುಗಳನ್ನು ಪಡೆಯಲು ಬಳಸುವ ತಳಿಗಳು ; ಈ ಗುಂಪಿನಲ್ಲಿ ಗಿರ್, ಸಾಹಿವಾಲ್, ಕೆಂಪು ಸಿಂಧಿ ಮತ್ತು ದೇವೊನಿ ತಳಿಗಳು ಉತ್ಕೃಷ್ಟವಾದುವು. ಗಿರ್ ತಳಿ ದಕ್ಷಿಣ ಕಾಠಿಯಾವಾಡಿನ ಗಿರ್ ಪ್ರದೇಶ, ದಕ್ಷಿಣ ರಾಜಸ್ಥಾನ, ಬರೋಡ ಪ್ರದೇಶಗಳಲ್ಲಿ ಕಾಣಬರುತ್ತದೆ. ಸಾಹಿವಾಲ್ ತಳಿ ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿದೆ. ಕೆಂಪು ಸಿಂಧಿ ತಳಿ ಅಸ್ಸಾಂ, ಒರಿಸ್ಸ, ಕೇರಳ ಮತ್ತು ಮದ್ರಾಸು ಪ್ರಾಂತ್ಯದ ಕೆಲವು ಸ್ಥಳಗಳಲ್ಲಿದೆ. ದೇವೊನಿ ತಳಿ ಆಂಧ್ರ ಪ್ರದೇಶದ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಕಾಣಬರುತ್ತದೆ. ಇದು ಗಾತ್ರದಲ್ಲಿ ಗಿರ್ ರಾಸನ್ನು ಹೋಲುತ್ತದೆ.

2. ಬೇಸಾಯದ ತಳಿಗಳು : ಇವುಗಳಲ್ಲಿ ಮೋಟು ಕೊಂಬಿನವು, ಲೈರ್ ರೀತಿ ಕೊಂಬಿನವು, ಮೈಸೂರು ಮಾದರಿಯವು ಮತ್ತು ಚಿಕ್ಕ ಗಾತ್ರದ ಕೆಂಪು ಬಿಳಿ ಮಚ್ಚೆಗಳಿರುವ ಮೋಟು ಅಥವಾ ಲೈರ್ ರೀತಿ ಕೊಂಬಿನವು ಎಂಬ 4 ವಿಧಗಳುಂಟು. (a) ಮೋಟು ಕೋಡಿನ ಗುಂಪಿನ ನಾಗೋರಿ ಬಚೌರ್ ತಳಿ ದರ್ಭಾಂಗದ ಬಚೌರ್ ಪರಗಣ, ಭಾಗಲ್‌ಪುರ್ ಮತ್ತು ರಾಜಸ್ಥಾನದ ಕೆಲವು ಪ್ರದೇಶಗಳಲ್ಲೂ, ಬಿಹಾರಿನ ಚಂಪಾರಣ್ಯ ಪ್ರದೇಶಗಳಲ್ಲೂ ಇವೆ. (b) ಲೌರ್ ರೀತಿ ಕೊಂಬಿನ ತಳಿಯಲ್ಲಿ ಹೆಸರು ಪಡೆದ ಕೆಂಕಾಥ ಅಥವಾ ಕೆನ್ವಾರಿ ರಾಸುಗಳು ಉತ್ತರ ಪ್ರದೇಶದ ಬಂಡ ಜಿಲ್ಲೆಯ ಕೆನ್ ನದಿ ಪ್ರದೇಶದಲ್ಲಿ ಮತ್ತು ಮಧ್ಯ ಪ್ರದೇಶದ ಕೆಲವು ಭಾಗಗಳಲ್ಲಿ, ಮಲ್ವಿ ತಳಿ ರಾಸುಗಳು ಮಧ್ಯ ಪ್ರದೇಶದ ಮಲ್ವ ಮತ್ತು ಹೈದರಾಬಾದ್‌ನಲ್ಲಿ ಮತ್ತು ಖೇರಿಘರ್ ತಳಿ ರಾಸುಗಳು ಲಖಿಂಪೂರ್ ಮತ್ತು ಖೇರಿ ಜಿಲ್ಲೆಗಳಲ್ಲೂ (ಉತ್ತರ ಪ್ರದೇಶ) ವಿಶೇಷವಾಗಿವೆ. (c) ಮೈಸೂರು ಮಾದರಿ ತಳಿಯಲ್ಲಿ ಐದು ಮುಖ್ಯ ಬಗೆಯ ರಾಸುಗಳಿವೆ. ಅಮೃತಮಹಲ್ ತಳಿ ಭಾರತದಲ್ಲೆಲ್ಲ ಬಹಳ ಉತ್ತಮವಾದ ಬೇಸಾಯದ ರಾಸು. ಇದು ಚುರುಕಾದ ಮುಂಗೋಪಿ ರಾಸುವಾದರೂ ಕಷ್ಟಸಹಿಷ್ಣುತೆಗೆ ಹೆಸರಾಗಿದೆ. ಇದರ ತಲೆ ಮತ್ತು ಕೊಂಬುಗಳ ಆಕಾರವೇ ಒಂದು ವೈಶಿಷ್ಟ್ಯ. ಇವುಗಳ ಗೂಳಿಗಳಲ್ಲಿ ದೇಹದ ಪ್ರಮಾಣಕ್ಕೆ ಹೊಂದುವ ಪುಷ್ಟವಾದ ಗಾತ್ರದ ಹಿಳಲು ಇದೆ. ಇದು ಸ್ವಲ್ಪ ಮಟ್ಟಿಗೆ ಹಳ್ಳಿಕಾರ್, ಖಿಲಾರಿ ಮತ್ತು ಕಂಗಾಯಂ ತಳಿಗಳನ್ನು ಹೋಲುತ್ತದೆ. ಹಳ್ಳಿಕಾರ್ ತಳಿ ತುಮಕೂರು, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾಣಬರುತ್ತದೆ. ಖಿಲ್ಲರಿ ತಳಿ ಸೊಲ್ಲಾಪುರ ಮತ್ತು ಸತಾರ ಜಿಲ್ಲೆಗಳಲ್ಲಿದೆ.

ಬರಗೂರು ತಳಿ ಕೊಯಮತ್ತೂರು ಜಿಲ್ಲೆಯ ಭವಾನಿ ತಾಲ್ಲೂಕಿನಲ್ಲಿದೆ. ಇದು ಹಳ್ಳಿಕಾರ್ ರಾಸುಗಳನ್ನು ಹೋಲುತ್ತದೆ. ಕಂಗಾಯಂ ತಳಿ ಸಹ ಕೊಯಮತ್ತೂರು ಜಿಲ್ಲೆಯಲ್ಲಿ ಕಾಣಬರುತ್ತದೆ. (d) ಚಿಕ್ಕ ಗಾತ್ರದ ಕೆಂಪು ಬಿಳುಪು ಮಚ್ಚೆಗಳಿರುವ ಮೋಟು ಅಥವಾ ಲೈರ್ ರೀತಿಯ ಕೊಂಬಿರುವ ಗುಂಪಿನ ಪೊನ್ವಾರ್ ತಳಿ ಉತ್ತರ ಪ್ರದೇಶದ ಕೆಲವು ಕಡೆಗಳಲ್ಲಿದೆ. ಸಿರಿ ತಳಿ ಡಾರ್ಜಿಲಿಂಗ್ ಗುಡ್ಡ ಪ್ರದೇಶಗಳಲ್ಲಿ ಕಾಣಬರುತ್ತದೆ. ಚಳಿ ಮತ್ತು ಮಳೆಗಳಿಂದ ರಕ್ಷಣೆ ಪಡೆಯಲು ಇವುಗಳಿಗೆ ದಪ್ಪವಾದ ಕೂದಲಿನ ಹೊದಿಕೆ ಇದೆ.

3. ಸಾಮಾನ್ಯವಾಗಿ ಬಳಕೆಯ ತಳಿಗಳನ್ನು ಮೋಟು ಕೊಂಬಿನವು ಮತ್ತು ಲೈರ್ ರೀತಿಯ ಕೊಂಬಿನವು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. ಮೋಟು ಕೊಂಬಿನ ಗುಂಪಿನಲ್ಲಿ 8 ತಳಿಗಳಿವೆ. ನಿಮಾರಿ ತಳಿ ನಿಮಾರಿ ಮತ್ತು ಇಂದೂರು ಜಿಲ್ಲೆಯ ನಿವಾಸಿ. ಡಂಗಿ ತಳಿ ಅಹಮದ್‌ನಗರ, ಖಾಂದೇಶ್ ಜಿಲ್ಲೆ (ಮಹಾರಾಷ್ಟ್ರ) ಮತ್ತು ಡಂಗ್ಸ್ ಮುಂತಾದೆಡೆಗಳಲ್ಲಿದೆ. ಹರಿಯಾಣ ತಳಿ ಹರಿಯಾಣದಲ್ಲೂ ಮೇವತಿ ತಳಿ ಮಥುರಾ ಜಿಲ್ಲೆಯಲ್ಲೂ (ಉತ್ತರ ಪ್ರದೇಶ) ರಾತ್ ತಳಿ ಅಲ್‌ವಾರನಲ್ಲೂ ಓಂಗೋಲ್ ತಳಿ ನೆಲ್ಲೂರು ಮತ್ತು ಗುಂಟೂರು ಪ್ರದೇಶಗಳಲ್ಲೂ ಗೊವಲಾವೊ ತಳಿ ಮಧ್ಯ ಪ್ರದೇಶ ಮತ್ತು ನಾಗಪುರಗಳಲ್ಲೂ ಕೃಷ್ಣಾ ಕಣಿವೆ ತಳಿ ಕೃಷ್ಣಾನದಿ ಪ್ರದೇಶದಲ್ಲೂ ಕಾಣಬರುತ್ತವೆ. ಲೈರ್ ರೀತಿ ಕೋಡಿನ ರಾಸುಗಳಲ್ಲಿ ಥಾರ್‌ಪಾರ್ಕರ್ (ಥಾರಿ) ತಳಿ ಜೋಧಪುರ, ಜೈಸಲ್ಮೇರ್ ಮತ್ತು ಕರ್ನಾಲ್‌ಗಳಲ್ಲಿ ವಾಸಿಸುತ್ತದೆ. ಕಂಕರೆಜ್ ತಳಿ ಕಚ್ಛ್ ಮತ್ತು ಸರಸ್ವತಿ ನದಿ ಪ್ರದೇಶಗಳಲ್ಲಿದೆ. (ಎನ್.ವಿ.ಎ.)

**ಗೂಳಿ ನೊಣ:** ಡಿಪ್ಟರ ಗಣದ ಈಸ್ಟ್ರಿಡೆ ಕುಟುಂಬದ ಸದಸ್ಯ (ಆಕ್ಸಾ ಬಾಟ್ ಫ್ಲೈ). ಹೈಪೋಡರ್ಮ ಇದರ ವೈಜ್ಞಾನಿಕ ಹೆಸರು. ದೇಹಾಕೃತಿಯಲ್ಲಿ ಜೇನು ನೊಣವನ್ನು ಹೋಲುತ್ತದೆ. ದಪ್ಪವಾದ ಹಾಗೂ ರೋಮಮಯವಾದ ದೇಹ, ಚಿಕ್ಕ ಕುಡಿಮೀಸೆಗಳು (ಆಂಟಿನಾ), ಕ್ಷೀಣಿಸಿರುವ ವದನಾಂಗಗಳು, ನೀಳವಾದ ಓವಿಪಾಸಿಟರ್ ಮುಖ್ಯ ಲಕ್ಷಣಗಳು. ಇವು ಸ್ವತಂತ್ರ ಜೀವನ ಸಾಗಿಸುತ್ತವೆ. ಆದರೆ ಡಿಂಬಗಳು (ಗ್ರಬ್) ಪರಾವಲಂಬಿಗಳು. ದನಕರುಗಳ ಮೇಲೆ ಪರಾವಲಂಬಿಗಳಾಗಿವೆ. ಗೂಳಿನೊಣಗಳಲ್ಲಿ ಹಲವಾರು ಪ್ರಭೇದಗಳಿವೆ. ಯೂರೋಪಿನಲ್ಲಿ ವಾಸಿಸುವ ಬೋವಿಸ್ ಪ್ರಭೇದ ಮತ್ತು ಅಮೆರಿಕದಲ್ಲಿ ವಾಸಿಸುವ ಲೈನಿಯೇಟಂ ಮುಖ್ಯವಾದುವು. ಕೊನೆಯದು ಭಾರತದಲ್ಲಿಯೂ ಇದೆ.

ಪ್ರೌಢ ನೊಣಗಳ ಚಟುವಟಿಕೆ ಮೇ–ಆಗಸ್ಟ್ ತಿಂಗಳುಗಳಲ್ಲಿ ಹೆಚ್ಚು. ಹೆಣ್ಣು ನೊಣ, ದನಕರುಗಳ ಕಾಲುಗಳ ಮೇಲಿನ ಗೊರಸುಗಳ ಬಳಿಯಿರುವ ಕೂದಲಿನ ಮೇಲೆ ಸಾಲುಸಾಲಾಗಿ ಮೊಟ್ಟೆಗಳನ್ನಿಡುತ್ತದೆ. ಒಂದೊಂದು ಕೂದಲಿನ ಮೇಲೂ 1–10 ಮೊಟ್ಟೆಗಳು ಇರುತ್ತವೆ. ಮೊಟ್ಟೆಗಳ ಆಕಾರ ಚುಟ್ಟದಂತೆ ಒಂದೊಂದೂ ತನ್ನ ತುದಿಯಲ್ಲಿನ ಉಪಾಂಗಗಳ ಸಹಾಯದಿಂದ ಕೂದಲಿಗೆ ಅಂಟಿರುತ್ತದೆ. ಕೆಲ ದಿನಗಳಾದ ಮೇಲೆ ಮೊಟ್ಟೆಯಿಂದ ಹೊರಬಂದ ಡಿಂಬಗಳು ಪೋಷಕ ಜೀವಿಯ ಚರ್ಮವನ್ನು ಕೊರೆದು ದೇಹವನ್ನು ಹೊಕ್ಕು, ಹಲವು ತಿಂಗಳ ಕಾಲ ದೇಹದಾದ್ಯಂತ ಸಂಚರಿಸಿ, ಕೊನೆಗೆ ಗಂಟಲ ಒಳಚರ್ಮಕ್ಕೆ ಅಂಟಿಕೊಳ್ಳುತ್ತವೆ. ಚಳಿಗಾಲದವರೆಗೆ ಅಲ್ಲಿದ್ದು ಅನಂತರ ಬೆನ್ನಿನ ಭಾಗದಲ್ಲಿ ಬಂದು ಬೆಳೆವಣಿಗೆಯನ್ನು ಮುಂದುವರಿಸುತ್ತವೆ. (ಇವುಗಳ ಕ್ರಿಯಾಚಟುವಟಿಕೆಗಳಿಂದಾಗಿ ಇವು ವಾಸಿಸುವ ದೇಹದ ಭಾಗದುವು ಊದಿಕೊಂಡಂತೆ ಕಾಣುತ್ತದೆ.) ಪೋಷಕ ಜೀವಿಯ ವಸೆ (ಸೀರಂ) ಮತ್ತು ಕೀವನ್ನು ಸೇವಿಸಿ ಬೆಳೆಯುವ ಇವು, ಚರ್ಮವನ್ನು ಕೊರೆದು ತಮ್ಮ ಪಶ್ಚ ಭಾಗವನ್ನು ಹೊರಚಾಚಿ ಅದರ ಮೂಲಕ ಉಸಿರಾಡುತ್ತವೆ. ಬೆಳೆವಣಿಗೆ ಪೂರ್ಣಗೊಂಡಮೇಲೆ ಉರುಳೆಯಾಕಾರವನ್ನು ತಳೆಯುತ್ತವೆ. ಕೊನೆಗೆ ಪೋಷಕ ಜೀವಿಯ ದೇಹದಿಂದ ಹೊರಬಂದು, ನೆಲಕ್ಕುದುರುತ್ತವೆ. ಭೂಮಿಯ ಮೇಲೆ ಬಿದ್ದ ಅನಂತರ ಕೋಶಾವಸ್ಥೆಯನ್ನು ಸೇರುತ್ತವೆ. ಕೋಶಾವಸ್ಥೆಯ ಅವಧಿ 5-6 ವಾರಗಳು ಮಾತ್ರ. ಈ ಅವಧಿಯಲ್ಲಿ ರೂಪಾಂತರಗೊಂಡು ಎರಡು ರೆಕ್ಕೆಯುಳ್ಳ ಪ್ರೌಢ ನೊಣಗಳಾಗುತ್ತವೆ.

ಗೂಳಿ ನೊಣಗಳ ಡಿಂಬಗಳು ದನಗಳ ಚರ್ಮವನ್ನು ಕೊರೆಯುವುದರಿಂದ ರೋಗ ಪೀಡಿತ ದನಗಳ ಚರ್ಮ ಅಪ್ರಯೋಜಕವಾಗುತ್ತದೆ. ಅಲ್ಲದೆ ದನಗಳ ಮಾಂಸವೂ ಕೆಟ್ಟು ಹೋಗುತ್ತದೆ. ಹಸುಗಳಲ್ಲಿ ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಇವೆಲ್ಲ ಕಾರಣಗಳಿಂದಾಗಿ ಗೂಳಿ ನೊಣಗಳು ದನಗಳಿಗೆ ಪೀಡೆಕಾರಕಗಳಾಗಿವೆ. ಇವನ್ನು ನಾಶ ಪಡಿಸಲು ಇವುಗಳ ಕೋಶಾವಸ್ಥೆಯಲ್ಲಿನ ಡಿಂಬಗಳನ್ನು ಸಾಯಿಸಬೇಕು. ***

**ಗೆಂಡೆ ಮೀನು:** ಸೈಪ್ರಿನಿಫಾರ್ಮೀಸ್ ಗಣದ ಸೈಪ್ರಿನಿಡೆ ಕುಟುಂಬದ ಸದಸ್ಯ. ಪಂಟಿಯಸ್ (ಬಾರ್ಬಸ್) ಜಾತಿಯ ಸರಾನ, ಕ್ರೈಸೋಪೋಮ ಮತ್ತು ಕರ್ನಾಟಿಕಸ್ ಎಂಬ ಮೂರು ಪ್ರಭೇದಗಳ ಮೀನುಗಳನ್ನು ಸಾಮಾನ್ಯವಾಗಿ ಗೆಂಡೆ ಮೀನುಗಳೆನ್ನುವರು. ಇವು ಕಾರ್ಪ್ ಮೀನಿನ ಹತ್ತಿರ ಸಂಬಂಧಿಗಳು. ಸೈಪ್ರಿನಿಡೆ ಕುಟುಂಬದಲ್ಲಿ ಕಾಟ್ಲಾ, ಕಾವೇರಿ ಗೆಂಡೆ ಮತ್ತು ಕೂರಲುಮೀನುಗಳಿವೆ.

ಗೆಂಡೆಮೀನುಗಳು ಸಿಹಿನೀರವಾಸಿಗಳು. ಭಾರತದ ಬಹುಪಾಲು ನದಿಗಳಲ್ಲಿ ಇವು ವಾಸಿಸುತ್ತವೆ. 90–120 ಸೆಂಮೀ ಉದ್ದ ಬೆಳೆಯುವ ಮಧ್ಯಮ ಗಾತ್ರದ ಮೀನುಗಳು. ಇವುಗಳ ತಲೆಯನ್ನು ಹೊರತುಪಡಿಸಿ ದೇಹವೆಲ್ಲ ಗುರುತಿಸಬಹುದಾದ ವಿವಿಧ ಗಾತ್ರದ ಹುರುಪೆಗಳಿಂದ ಆವೃತವಾಗಿವೆ. ಇವುಗಳಿಗೆ ಒಂದೇ ಒಂದು ಬೆನ್ನಿನ ಈಜುರೆಕ್ಕೆ ಇದೆ. ಇದು ಚಿಕ್ಕದಾಗಿ ಅಥವ ಉದ್ದವಾಗಿರುತ್ತದೆ. ಕೆಲವು ಮೀನುಗಳಿಗೆ ಮೀಸೆ (ಬಾರ್ಬೆಲ್ಸ್)ಗಳಿವೆ. ಇವುಗಳ ಹೊಟ್ಟೆ ದುಂಡಗಿರುತ್ತದೆ. ಹೊಟ್ಟೆಯ ತಳಭಾಗ ಮೊನಚಾಗಿದ್ದರು ಚಕ್ರದ ಕವಚದಂತಾಗಿದೆ. ಕಿವಿರು ಸೀಳುಗಳು ಅಗಲವಾಗಿವೆ. ಪಾರ್ಶ್ವರೇಖೆ ಪೂರ್ತಿಯಾಗಿದೆ. ಪಾರ್ಶ್ವದ ಮತ್ತು ಕಾಲಿನ ಈಜು ರೆಕ್ಕೆಗಳು ಊರ್ಧ್ವಮುಖವಾಗಿ ಅಂಟಿಕೊಂಡಿವೆ. ಆಸನದ ಈಜುರೆಕ್ಕೆ ಮಧ್ಯಮ ಗಾತ್ರದುವು ಇದು ಬೆನ್ನಿನ ಈಜು ರೆಕ್ಕೆಯ ಹಿಂದೆ ಹುಟ್ಟುತ್ತದೆ.

ಗೆಂಡೆ ಮೀನುಗಳು ಸಸ್ಯಾಹಾರಿಗಳು. ಕೊಳೆಯುತ್ತಿರುವ ಸಸ್ಯ ಸಂಬಂಧಿ ವಸ್ತುಗಳೇ ಇವುಗಳ ಪ್ರಧಾನ ಆಹಾರ. ಇವಕ್ಕೆ ದವಡೆಗಳಲ್ಲಿ ಹಲ್ಲಿಲ್ಲ. ಆದರೆ ಗಂಟಲಿನ ಭಾಗದಲ್ಲಿ ಮಾತ್ರ ಕೆಲವು ಹಲ್ಲುಗಳಿವೆ. ಈ ಮೀನುಗಳು ಆಹಾರವನ್ನು ಅಗಿಯಲಾರವು. ಆದರೆ, ಗಂಟಲಿನ ಹಲ್ಲುಗಳ ಸಹಾಯದಿಂದ ಆಹಾರ ಅರೆದು ನುಂಗುತ್ತವೆ. ಗೆಂಡೆಮೀನುಗಳ ಸಂತಾನಾಭಿವೃದ್ಧಿಯು ಜೂನ್–ಜುಲೈ ಮತ್ತು ನವೆಂಬರ್–ಡಿಸೆಂಬರ್‌ನಲ್ಲಿ ನಡೆಯುತ್ತದೆ. ಇವು ಬೇಗ ಬೆಳೆಯುವುದರಿಂದ ಮತ್ತು ವಿವಿಧ ರೀತಿಯ ಪರಿಸರಗಳಿಗೆ ಹೊಂದಿಕೊಳ್ಳುವುದರಿಂದ ಮೀನುಗಾರಿಕೆಗೆ ಯೋಗ್ಯವೆನಿಸಿವೆ. ಇವು ಒಳ್ಳೆಯ ಆಹಾರ ಮೀನುಗಳು. (ಬಿ.ಎನ್.)

**ಗೆಕೊ:** ನೋಡಿ ಹಲ್ಲಿ

**ಗೆಝೆಲ್:** ಉತ್ತರ ಹಾಗೂ ಪೂರ್ವ ಆಫ್ರಿಕ, ಅರೇಬಿಯ, ಇಸ್ರೇಲ್, ಸಿರಿಯ ಮಧ್ಯ ಏಷ್ಯ, ಭಾರತದ ಮೈದಾನ ಪ್ರದೇಶಗಳಲ್ಲೆಲ್ಲ ಕಾಣಬರುವ ಒಂದು ಚೆಲುವಾದ ಜಿಂಕೆ. ಆರ್ಟಿಯೊಡ್ಯಾಕ್ಟಿಲ ಗಣದ ಬೋವಿಡೆ ಕುಟುಂಬಕ್ಕೆ ಸೇರಿದೆ. ಗೆಝೆಲ ಎಂಬುದು ಇದರ ವೈಜ್ಞಾನಿಕ ಹೆಸರು. ಇದರಲ್ಲಿ ಸುಮಾರು 12 ಪ್ರಭೇದಗಳಿವೆ. ಗೆಝೆಲಿನ ವಾಸ ಸಾಧಾರಣವಾಗಿ ಮರಗಳಿಲ್ಲದ ಬಯಲು ಪ್ರದೇಶಗಳಲ್ಲಿ. ಬಿರುಬಿಸಿಲಿನಲ್ಲಿ ಬೇಯುವ ಮರುಭೂಮಿಗಳು ಇದರ ಅಚ್ಚುಮೆಚ್ಚಿನ ನೆಲೆಗಳು.



ಗೆಝೆಲುಗಳು ಮಧ್ಯಮಗಾತ್ರದ ಚಿಗರಿಗಳು. ವಿವಿಧ ಪ್ರಭೇದಗಳ ಉದ್ದ 1–1.3 ಮೀ. ಭುಜದ ಬಳಿಯ ಎತ್ತರ 51–89 ಸೆಂಮೀ ತೂಕ 14–75 ಕಿಗ್ರಾಂ ವರೆಗೆ ವ್ಯತ್ಯಾಸವಾಗುತ್ತದೆ. ಇವಕ್ಕೆ 12–14 ಸೆಂಮೀ ಉದ್ದದ ಬಾಲವಿದೆ. ದೇಹದ ಬಣ್ಣ ಗಾಢ ಕಂದಿನಿಂದ ಹಿಡಿದು ಬೂದಿ, ಬಿಳಿಯವರೆಗೆ ವೈವಿಧ್ಯಪೂರ್ಣವಾಗಿದೆ. ಹೊಟ್ಟೆಯಭಾಗ ತಿಳಿಬಣ್ಣದ್ದು. ಕೆಲವು ಪ್ರಭೇದಗಳಲ್ಲಿ ಬೆನ್ನು ಮತ್ತು ಹೊಟ್ಟೆಯ ಭಾಗಗಳ ಬಣ್ಣಗಳು ಮಿಳಿತವಾಗುವಲ್ಲಿ ಗಾಢವರ್ಣದ ಒಂದು ಪಟ್ಟೆಯಿರುವುದುಂಟು. ಬಾಲದ ಬುಡ ಮತ್ತು ತೊಡೆಗಳ ಹಿಂಭಾಗಗಳು ಬೆಳ್ಳಗಿರುತ್ತವೆ. ಬಹುಪಾಲು ಪ್ರಭೇದಗಳಲ್ಲಿ ಗಂಡು ಮತ್ತು ಹೆಣ್ಣುಗಳೆರಡಲ್ಲೂ ಒಂದೊಂದು ಜೊತೆ ಕೊಂಬುಗಳಿವೆ. ಸಬ್‌ಗಟುರೋಸ ಎಂಬ ಪ್ರಭೇದದಲ್ಲಿ ಕೊಂಬುಗಳು ಗಂಡಿನಲ್ಲಿ ಮಾತ್ರ ಇವೆ. ಕೊಂಬುಗಳ ಆಕಾರ ಲೈರ್ ವಾದ್ಯದಂತೆ: ಸರಾಸರಿ ಉದ್ದ 25–35 ಸೆಂ. ಮೀ. ಕೆಲವು ಸಲ ಕೊಂಬುಗಳು ತಲೆಯ ಆಚೀಚೆ ಹರಡಿರುವುದು ಇಲ್ಲವೆ ಹಿಂದಕ್ಕೆ ಬಾಗಿರುವುದು ಉಂಟು. ಕೊಂಬುಗಳು ಹೇಗೇ ಇರಲಿ, ಇವುಗಳ ತುದಿ ಮಾತ್ರ ಮೇಲಕ್ಕೆ ಬಾಗಿರುತ್ತದೆ.

ಗೆಝೆಲುಗಳು ಸಾಮಾನ್ಯವಾಗಿ ಗುಂಪುಗಳಲ್ಲಿ ವಾಸಿಸುತ್ತವೆ. ಒಂದೊಂದು ಗುಂಪಿನಲ್ಲಿ 5–10 ಪ್ರಾಣಿಗಳಿರುತ್ತವೆ. ಕೆಲವು ಸಲ ನೂರಾರು ಪ್ರಾಣಿಗಳಿರುವುದೂ ಉಂಟು.

ಗಿಡಮರಗಳ ಎಳೆಚಿಗುರು, ಹುಲ್ಲಿನ ಎಸಳುಗಳು ಇವುಗಳ ಮುಖ್ಯ ಆಹಾರ, ಗೆಜ಼ೆಲುಗಳು ತಮ್ಮ ಓಟದ ಸಾಮರ್ಥ್ಯಕ್ಕೆ ಹೆಸರಾಗಿವೆ. ಬಹುಶ: ಬೇಟೆಯ ಚಿರತೆ, ಗ್ರೇ ಹೌಂಡ್ ನಾಯಿ ಮತ್ತು ವಿಶೇಷ ಶಿಕ್ಷಣ ಕೊಟ್ಟು ಬೆಳೆಸಿದ ಗಿಡುಗಗಳನ್ನು ಬಿಟ್ಟರೆ ಗೆಜ಼ೆಲುಗಳೇ ಅತ್ಯಂತ ವೇಗವಾಗಿ ಓಡಬಲ್ಲ ಪ್ರಾಣಿಗಳು. ಪೂರ್ವ ಆಫ್ರಿಕದ ಥಾಂಸನ್ಸ್ ಗೆಜ಼ೆಲ್ ಎಂಬುದು ಗಂಟೆಗೆ 65 ಕಿ.ಮೀ. ವೇಗದಲ್ಲಿ ಓಡಬಲ್ಲುದು.

ಇವುಗಳ ಸಂತಾನೋತ್ಪತ್ತಿಯ ಕಾಲ ಏಪ್ರಿಲ್–ಜೂನ್‌ಗಳ ಅವಧಿ. ಹುಟ್ಟಿದ ಒಂದು ವಾರದಲ್ಲೆ ಮರಿಗಳಿಗೆ ಸಾಕಷ್ಟು ಬಲ ಬಂದು ಅವು ಸ್ವತಂತ್ರ ಜೀವನವನ್ನು ನಡೆಸ ತೊಡಗುತ್ತವೆ. ಗೆಜ಼ೆಲುಗಳ ಆಯಸ್ಸು ಸುಮಾರು 10–12 ವರ್ಷಗಳು.

ಅರೇಬಿಯ ಮತ್ತು ಏಷ್ಯಾದ ಕೆಲವು ಭಾಗಗಳಲ್ಲಿ ಗೆಜ಼ೆಲುಗಳನ್ನು ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ಬೇಟೆಯಲ್ಲಿ ನಾಯಿ ಮತ್ತು ಗಿಡುಗಗಳನ್ನು ಬಳಸಲಾಗುತ್ತದೆ. ಕೆಲವು ಪ್ರಭೇದಗಳ ಮಾಂಸ ಮಾತ್ರ ಬಲುರುಚಿ. ***

**ಗೆದ್ದಲು:** ಕೀಟವರ್ಗದ ಐಸಾಪ್ಟರ ಗಣದ ಸದಸ್ಯ. ಇದು ಸಂಘಜೀವಿ. ಆಂಗ್ಲ ಭಾಷೆಯಲ್ಲಿ ಟರ್ಮೈಟ್, ಅಥವಾ ವೈಟ್ ಆಂಟ್ ಎಂದು ಹೆಸರು. ಸು. 1700ಕ್ಕೂ ಹೆಚ್ಚು ಗೆದ್ದಲು ಪ್ರಭೇದಗಳಿವೆ. ಇವುಗಳಲ್ಲಿ 55 ಪ್ರಭೇದಗಳು ಉತ್ತರ ಅಮೆರಿಕದಲ್ಲೂ, 4–5 ದಕ್ಷಿಣ ಯೂರೋಪಿನಲ್ಲಿ ಮತ್ತು ಉಳಿದೆಲ್ಲ ಪ್ರಭೇದದ ಗೆದ್ದಲುಗಳು ಆಫ್ರಿಕ–ಏಷ್ಯಾ ದೇಶದ ಉಷ್ಣವಲಯ ಪ್ರದೇಶಗಳಲ್ಲಿ ವಾಸಿಸುತ್ತವೆ.

ಗೆದ್ದಲುಗಳು ವಾಸಿಸುವ ಪ್ರದೇಶ ವೈವಿಧ್ಯಮಯವಾಗಿದೆ. ಇವು ವಿವಿಧ ರೀತಿಯ ಗೂಡು ಅಥವಾ ಹುತ್ತಗಳನ್ನು ನಿರ್ಮಿಸಿಕೊಂಡು ದೊಡ್ಡ ದೊಡ್ಡ ಗುಂಪುಗಳಲ್ಲಿ ಸಂಘ ಜೀವನ ನಡೆಸುತ್ತವೆ. ಬಿಳಿ ಬಣ್ಣದ ಮೃದು ದೇಹ, ಆಹಾರವನ್ನು ಅಗಿದು ತಿನ್ನಲು ಸಹಾಯಕವಾದ ವದನಾಂಗಗಳು, ಮಣಿಸರದಂತಿರುವ ಸ್ಪರ್ಶ ತಂತುಗಳು (ಕುಡಿಮೀಸೆಗಳು) ಗೆದ್ದಲುಗಳಲ್ಲಿವೆ. ಗೆದ್ದಲು ಕುಟುಂಬದಲ್ಲಿ ಕೆಲವು ಸದಸ್ಯ ಕೀಟಗಳಲ್ಲಿ ಮಾತ್ರ 2 ಜೊತೆ ತೆಳುವಾದ, ಪೊರೆಯಂಥ, ಪಾರದರ್ಶಕ ರೆಕ್ಕೆಗಳಿವೆ.

ಗೆದ್ದಲುಗಳಲ್ಲಿ ಉನ್ನತ ಮಟ್ಟದ ಸಾಮಾಜಿಕ ಜೀವನಕ್ರಮವಿದೆ. ಪ್ರತಿಯೊಂದು ಕುಟುಂಬದಲ್ಲಿ ಮೂರು ಬಗೆಯ ಗೆದ್ದಲುಗಳಿರುತ್ತವೆ. ರೆಕ್ಕೆಗಳಿರುವ ಗಂಡು ಮತ್ತು ಹೆಣ್ಣು, ರೆಕ್ಕೆಗಳಿಲ್ಲದ ಗಂಡು ಮತ್ತು ಹೆಣ್ಣು, ರೆಕ್ಕೆಗಳಿಲ್ಲದ ಬಂಜೆ ಗೆದ್ದಲುಗಳು. ಬಂಜೆ ಗೆದ್ದಲುಗಳಲ್ಲಿ ಕೆಲಸಗಾರ ಮತ್ತು ಸೈನಿಕ ಗೆದ್ದಲು ಎಂಬ ಎರಡು ವಿಧ. ರೆಕ್ಕೆಯುಳ್ಳ (ಫರ್ಟೈಲ್) ಗೆದ್ದಲುಗಳ ಬಣ್ಣ ಕಪ್ಪು. ಇವುಗಳಲ್ಲಿ ಎರಡು ಸಂಯುಕ್ತ ನೇತ್ರಗಳು (ಕಣ್ಣು) ಕೆಲವು ವೇಳೆ ಎರಡು ಜೊತೆ ಸರಳನೇತ್ರಗಳಿರುತ್ತವೆ. ಪ್ರೌಢಾವಸ್ಥೆಗೆ ಬಂದ ಅನಂತರ ಸ್ವಲ್ಪ ಕಾಲ ಹಾರಾಡುತ್ತವೆ. ಗಂಡು–ಹೆಣ್ಣು ಮಿಲನ ಹೊಂದುತ್ತವೆ. ಅನಂತರ ರೆಕ್ಕೆಗಳನ್ನು ಕಳೆದುಕೊಂಡು, ನೂತನವಾಗಿ ಗೂಡು ಸ್ಥಾಪಿಸುತ್ತವೆ. ರೆಕ್ಕೆಗಳಿಲ್ಲದ, ಲಿಂಗವುಳ್ಳ ಗೆದ್ದಲುಗಳು ಬಿಳಿಯ ಬಣ್ಣದಿಂದಿವೆ. ಇವುಗಳ ಪ್ರಜನನ ಸಾಮರ್ಥ್ಯ ರೆಕ್ಕೆಯಿರುವ ಗೆದ್ದಲುಗಳಷ್ಟಿಲ್ಲ. ಆದರೂ ಗೆದ್ದಲು ಸಂಖ್ಯೆ ವೃದ್ಧಿಸುವಲ್ಲಿ ಇವು ಸಹ ಪೂರಕವಾಗಿವೆ. ವಿಕಾಸದ ದೃಷ್ಟಿಯಿಂದ ಗೆದ್ದಲು ಕುಟುಂಬದ ಸದಸ್ಯರಲ್ಲಿ ಗರ್ಭಧರಿಸಿದ ಹೆಣ್ಣು ಗೆದ್ದಲು ಅಸಾಧಾರಣವಾದ ಬೆಳವಣಿಗೆ ತೋರಿಸುತ್ತದೆ. ಈ ಬೆಳವಣಿಗೆಗೆ ಇದರ ಅಂಡಾಶಯದಲ್ಲಿ ಬೆಳೆಯುತ್ತಿರುವ ಅಸಂಖ್ಯಾತ ಮೊಟ್ಟೆಗಳು ಬಹುಮಟ್ಟಿಗೆ ಕಾರಣ. ಇದರಿಂದ ಹೆಣ್ಣು ಗೆದ್ದಲು ಸು. 10 ಸೆಂಮೀ ನಷ್ಟು ಉದರ ಭಾಗವನ್ನು ಬೆಳೆಸಿಕೊಳ್ಳುತ್ತದೆ. ಅನಂತರ ಮೊಟ್ಟೆಯಿಡುವ ಯಂತ್ರದಂತೆ, ಪ್ರತಿ ದಿನ ನೂರಾರು ಮೊಟ್ಟೆಗಳನ್ನಿಡುತ್ತದೆ.

ಗೆದ್ದಲಿನ ವಿವಿಧ ಬಗೆಗಳು: 1. ರೆಕ್ಕೆಯಿಲ್ಲದ ಫಲವಂತಿ, 2. ಸೈನಿಕ ಗೆದ್ದಲು, 3. ಕೆಲಸಗಾರ ಗೆದ್ದಲು, ಮತ್ತು 4. ರೆಕ್ಕೆಯುಳ್ಳ ಫಲವಂತಿ ಗೆದ್ದಲು.

ಕೆಲಸಗಾರ ಮತ್ತು ಸೈನಿಕ ಗೆದ್ದಲುಗಳಲ್ಲಿ ಜನನೇಂದ್ರಿಯಗಳು ಪೂರ್ತಿ ಬೆಳೆದಿಲ್ಲ. ಇವು ಸಾಮಾನ್ಯವಾಗಿ ಬಿಳಿಚಿಕೊಂಡಿರುತ್ತವೆ. ಅನೇಕ ವೇಳೆ ಇವಕ್ಕೆ ಕಣ್ಣುಗಳಿರುವುದಿಲ್ಲ. ಹಗಲಿನಲ್ಲಿ ಆಹಾರ ಹುಡುಕಿ ತರುವ ಕೆಲವು ಕೆಲಸಗಾರ ಗೆದ್ದಲುಗಳಲ್ಲಿ ಕಣ್ಣುಗಳು ಚೆನ್ನಾಗಿ ಇವೆ. ಇವುಗಳ ತಲೆ ಸಣ್ಣದು. ದವಡೆಗಳು ಚೆನ್ನಾಗಿ ರೂಪುಗೊಂಡು ಒಣಗಿದ ಮರ ಮತ್ತು ಸಸ್ಯಭಾಗಗಳನ್ನು ಕೆರೆದು ತಿನ್ನಲು ಅನುಕೂಲವಾಗಿವೆ. ಇವುಗಳ ಹೆಸರೇ ಹೇಳುವಂತೆ ಗೂಡಿನ ಎಲ್ಲ ಕಾರ್ಯಗಳನ್ನು (ಪ್ರಜನನ ಕ್ರಿಯೆಯೊಂದನ್ನು ಬಿಟ್ಟು) ಕೆಲಸಗಾರ ಕೀಟಗಳು ನಡೆಸುತ್ತವೆ. ಮೊಟ್ಟೆ ಮತ್ತು ಮರಿಗಳನ್ನು ರಕ್ಷಿಸಿ ಅಪಾಯ ಕಾಲದಲ್ಲಿ ಸುರಕ್ಷಿತವಾದ ಸ್ಥಳಕ್ಕೆ ಒಯ್ಯುವುದು, ಮರಿಗಳಿಗೆ ಹಾಗೂ ರಾಣಿಗೆ ಆಹಾರವನ್ನು ಒದಗಿಸುವುದು, ನೆಲದಲ್ಲಿ ಸುರಂಗ ತೋಡುವುದು, ಹುತ್ತವನ್ನು ಕಟ್ಟುವುದು ಮತ್ತು ರಿಪೇರಿ ಮಾಡಿ ಸರಿಪಡಿಸುವ ಕಾರ್ಯಗಳು ಕೆಲಸಗಾರ ಕೀಟಗಳಿಗೆ ಮೀಸಲು. ಕೆಲವು ಜಾತಿಯ ಗೆದ್ದಲು ಕುಟುಂಬದಲ್ಲಿ ಕೆಲಸಗಾರರು ಆಹಾರಕ್ಕಾಗಿ ಬೇಕಾಗುವ ಅನೇಕ ರೀತಿಯ ಶಿಲೀಂಧ್ರಗಳನ್ನು ಬೆಳೆಸುತ್ತವೆ. ಇದರಲ್ಲಿ ಆಹಾರವನ್ನು ಶೇಖರಿಸಿಡುತ್ತವೆ.

ಸೈನಿಕ ಗೆದ್ದಲುಗಳ ತಲೆ ಸಾಮಾನ್ಯವಾಗಿ ದಪ್ಪ. ಇವುಗಳ ದವಡೆಗಳು ಬಹಳ ದೊಡ್ಡವಾಗಿವೆ. ಗೆದ್ದಲು ಸಮುದಾಯದ ರಕ್ಷಣೆಯೇ ಸೈನಿಕ ಗೆದ್ದಲುಗಳ ಮುಖ್ಯ ಕಾರ್ಯ. ಬೇರೆ ಕೀಟಗಳು ಗೂಡನ್ನು ಪ್ರವೇಶಿಸಿದರೆ, ಇವು ತಮ್ಮ ಬಲವಾದ ದವಡೆಗಳಿಂದ




ಹಿಡಿದು ಸಾಯಿಸುತ್ತವೆ. ನಾಸೂಟರ್ಮಿಸ್ ಜಾತಿಯ ಗೆದ್ದಲುಗಳಲ್ಲಿ ಸೈನಿಕ ಕೀಟಗಳು ತಮ್ಮ ಮೂತಿಯ ತುದಿಯಲ್ಲಿರುವ ರಂಧ್ರವೊಂದರ ಮೂಲಕ ಒಂದು ಬಗೆಯ ತೀಕ್ಷ್ಣವಾದ ದ್ರವವನ್ನು ಹೊರಸೂಸಿ ಆಗಂತುಕರನ್ನು ಓಡಿಸುತ್ತವೆ. ಅನೋಪ್ಲೋಟರ್ಮಿಸ್ ಮತ್ತು ಸ್ಪೆಕ್ಯೂಲಿಟರ್ಮಿಸ್ ಗೆದ್ದಲು ಜಾತಿಗಳಲ್ಲಿ ಸೈನಿಕ ಗೆದ್ದಲುಗಳಿಲ್ಲ.

ಗೆದ್ದಲುಗಳು ಗೂಡು ಅಥವಾ ಹುತ್ತವನ್ನು ನಿರ್ಮಿಸಿಕೊಂಡು ಅದರಲ್ಲಿ ವಾಸಿಸುತ್ತವೆ. ಕೆಲವು ಜಾತಿಯ ಗೆದ್ದಲುಗಳು ತೇವ ಪೂರಿತ ಮತ್ತು ಕೊಳೆಯುತ್ತಿರುವ ಮರಗಳಲ್ಲಿ ವಾಸಿಸುತ್ತವೆ. ಕ್ಯಾಲೊಟರ್ಮಿಸ್ ಮತ್ತು ಕ್ರಿಪಟೋಟರ್ಮಿಸ್ ಜಾತಿಯ ಗೆದ್ದಲುಗಳು ಒಣಗಿದ ಮರಗಳಲ್ಲಿ ಅಥವಾ ಮರಮುಟ್ಟುಗಳಲ್ಲಿ ವಾಸಿಸುತ್ತವೆ. ಕೆಲವು ಗೆದ್ದಲುಗಳು ಭೂಮಿಯೊಳಗೆ ವಾಸವಾಗಿದ್ದು, ಕಟ್ಟಡದಲ್ಲಿ ಬಳಸಿರುವ ಮರ–ಮುಟ್ಟನ್ನು ತಿಂದು ನಾಶಮಾಡುತ್ತವೆ. ಇನ್ನು ಕೆಲವು ಗೆದ್ದಲುಗಳು ಭೂಮಿಯ ಮೇಲೆ ಹುತ್ತಗಳನ್ನು ಕಟ್ಟುತ್ತವೆ.



ಹುತ್ತ

ಹುತ್ತಗಳ ಗಾತ್ರದಲ್ಲಿ ವೈವಿಧ್ಯವನ್ನು ಕಾಣಬಹುದು. ಉದಾ: ನಾಸೂಟರ್ಮಿಸ್ ಟ್ರಯೋಡಿಯಿ ಗೆದ್ದಲು ಸು. 50 ಸೆಂಮೀ ಎತ್ತರ ಮತ್ತು 30 ಸೆಂಮೀ ಸುತ್ತಳತೆಯ ದೊಡ್ಡಗಾತ್ರದ ಹುತ್ತಗಳನ್ನು ಕಟ್ಟುತ್ತವೆ. ಇನ್ನು ಕೆಲವು ಗೆದ್ದಲುಗಳು ಭೂಮಿಯೊಳಗೆ ವಾಸವಾಗಿದ್ದು ಭೂಮಟ್ಟದಲ್ಲಿಯೇ ಮಣ್ಣಿನ ಸಣ್ಣ ಗುಡ್ಡೆಗಳನ್ನು ರಚಿಸುತ್ತವೆ. ಇಂಥ ಹುತ್ತಗಳಲ್ಲಿ ಬಹಳ ಸುರಂಗಮಾರ್ಗಗಳಿರುತ್ತವೆ. ಹುತ್ತದ ಮಧ್ಯಭಾಗದ ಆಳದಲ್ಲಿ ರಾಣಿ ಗೆದ್ದಲು ವಾಸಿಸುವ ಗಟ್ಟಿ ಗೋಡೆಗಳಿಂದ ಕಟ್ಟಿದ ಕೋಣೆ ಇರುತ್ತದೆ. ಒಳ ಸುರಂಗಗಳೆಲ್ಲ ಮೃದುವಾಗಿದ್ದು ಮರಿಗಳಿಂದ ತುಂಬಿರುತ್ತವೆ.

ಗೆದ್ದಲಿನ ಜೀವನ ಚರಿತ್ರೆ ಮತ್ತು ಹೊಸ ಸಮುದಾಯ ಸ್ಥಾಪನೆ: ರೆಕ್ಕೆಯುಳ್ಳ ಫಲವಂತಿ ಗೆದ್ದಲುಗಳು ಹಳೆಯ ಗೂಡೊಂದರಿಂದ ಹಿಂಡಾಗಿ ಹೊರಬಂದು, ಹಾರಿಹೋಗಿ ಅಲ್ಲಿ ಹೊಸ ಗೂಡನ್ನು ಸ್ಥಾಪಿಸುತ್ತವೆ. ಹೊಸ ಗೂಡನ್ನು ಸ್ಥಾಪಿಸುವ ಮುನ್ನ ಇವುಗಳು ರೆಕ್ಕೆ ಕಳಚುತ್ತವೆ. ಮುಂಗಾರು ಋತುಗಳಲ್ಲಿ ಮಾತ್ರ ಈ ಗೆದ್ದಲುಗಳು

ಹಳೆಯ ಗೂಡೊಂದರಿಂದ ಹೊರಬರುತ್ತವೆ. ಇಂಥ ಒಂದೊಂದು ಗುಂಪಿನಲ್ಲಿ ಗಂಡು ಮತ್ತು ಹೆಣ್ಣು ಗೆದ್ದಲುಗಳು ಸಮ ಸಂಖ್ಯೆಯಲ್ಲಿರುತ್ತವೆ. ಗೆದ್ದಲುಗಳ ಪ್ರಭೇದಕ್ಕೆ ತಕ್ಕಂತೆ ರಾತ್ರಿಯ ಹೊತ್ತು ಅಥವಾ ಹಗಲಿನಲ್ಲಿ ರೆಕ್ಕೆಯುಳ್ಳ ಗೆದ್ದಲುಗಳ ಸಮೂಹ ಹೊರ ಬರುತ್ತದೆ. ರಾತ್ರಿಯಲ್ಲಿ ಹೊರಡುವ ಸಮೂಹ ಸಾಮಾನ್ಯವಾಗಿ ಪ್ರಕಾಶವಾದ ದೀಪಗಳಿಗೆ ಆಕರ್ಷಿತವಾಗುವುದು. ಈ ರೀತಿ ಹೊರಬಿದ್ದಾಗ ಕಪ್ಪೆ, ಓತಿಗಳ ಬಾಯಿಗೆ ತುತ್ತಾಗುತ್ತವೆ. ಉಳಿದ ಗಂಡು ಮತ್ತು ಹೆಣ್ಣು ಗೆದ್ದಲುಗಳು ಅನುಕೂಲವಾದ ಸ್ಥಳ ಸಿಗುವವರೆಗೂ ಸ್ವಲ್ಪಹೊತ್ತು ತಿರುಗಾಡಿ ಅನಂತರ ಒಂದು ಸಣ್ಣ ಗೂಡನ್ನು ತೋಡಿ ಅದರೊಳಗೆ ಸಂಭೋಗ ನಡೆಸುತ್ತವೆ. ಈ ಸಣ್ಣ ಗೂಡೇ ಮುಂದಿನ ಹೊಸ ಸ್ವಾಸ್ತ್ಯ. ಮೊದ ಮೊದಲು ಎಲ್ಲ ಹೆಣ್ಣು ಗೆದ್ದಲುಗಳು ಮೊಟ್ಟೆಯಿಡುತ್ತವೆ. ಅನಂತರ ಒಂದೇ ಒಂದು ಗೆದ್ದಲು ಬಲು ದೊಡ್ಡಗಾತ್ರಕ್ಕೆ ಬೆಳೆದು ಸಂತಾನೋತ್ಪತ್ತಿಯ ಕಾರ್ಯವನ್ನು ಸಂಪೂರ್ಣವಾಗಿ ನಿರ್ವಹಿಸ ತೊಡಗುತ್ತದೆ. ಇದೇ ರಾಣಿ ಗೆದ್ದಲು. ಇದು ಸು. 15–20 ವರ್ಷದವರೆಗೂ ಜೀವಿಸುವುದು. ರಾಣಿ ಕೀಟ ಮೊದಲು 15–20 ಮೊಟ್ಟೆಗಳನ್ನಿಡುತ್ತದೆ. ಅನಂತರ ಮೊಟ್ಟೆಗಳ ಸಂಖ್ಯೆ ಹೆಚ್ಚಾಗುತ್ತದೆ. ಟರ್ಮೈಟಿಡೆ ಕುಟುಂಬಕ್ಕೆ ಸೇರಿದ ಗೆದ್ದಲುಗಳಲ್ಲಿ ರಾಣಿ ದಿವಸಕ್ಕೆ ಸಾವಿರಾರು ಮೊಟ್ಟೆಗಳನ್ನಿಡುತ್ತದೆ. ಗೂಡುಗಳು ಹೊಸದಾಗಿ ಸ್ಥಾಪನೆಯಾದಾಗ ಮೊಟ್ಟೆಗಳಿಂದ ಬಂಜೆ, ಗೆದ್ದಲುಗಳು ಹುಟ್ಟುತ್ತವೆ. ಕುಟುಂಬದ ಅವಶ್ಯಕತೆಗನುಗುಣವಾಗಿ ಉಳಿದ ಬಗೆಯ ಗೆದ್ದಲುಗಳು ಹುಟ್ಟುತ್ತವೆ.

ವಿಕಾಸದ ದೃಷ್ಟಿಯಿಂದ ಕೆಳಮಟ್ಟದಲ್ಲಿರುವ ಗೆದ್ದಲುಗಳಲ್ಲಿ ಸಮುದಾಯ ಚಿಕ್ಕದು. ಕೇವಲ ನೂರಾರು ಹುಳುಗಳನ್ನು ಮಾತ್ರ ಒಳಗೊಂಡಿರುತ್ತದೆ. ಉನ್ನತಮಟ್ಟದ ಗೆದ್ದಲುಗಳ ಸಮುದಾಯಗಳು ದೊಡ್ಡವು. ಉದಾ: ಟರ್ಮೈಟಿಡೆ ಕುಟುಂಬದ ಗೆದ್ದಲು ಗೂಡುಗಳಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಗೆದ್ದಲುಗಳಿರುತ್ತವೆ.



ರಾಣಿ ಗೆದ್ದಲು

ಗೆದ್ದಲುಗಳ ಆಹಾರ ಸೇವನೆಯ ಕ್ರಮದಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ.

1.ಕೊಳೆಯುದ ಅಥವಾ ಕೊಳೆತ ಸಸ್ಯಪದಾರ್ಥಗಳನ್ನು ತಂದು ಜೀವಿಸುವುದು. ಕೆಲಸಗಾರ ಗೆದ್ದಲುಗಳು ಮತ್ತು ವಯಸ್ಸಾದ ಮರಿಹುಳುಗಳು ಆಹಾರವನ್ನು ತೆಗೆದುಕೊಳ್ಳುವ ಕ್ರಮ ಈ ರೀತಿಯದು.

2. ಕೆಲಸಗಾರ ಕೀಟಗಳು ತಮ್ಮ ಜೊಲ್ಲು ಮತ್ತು ಅನ್ನನಾಳದಿಂದ ಹೊರಬೀಳುವ ಆಹಾರವನ್ನು ಸೇರಿಸಿ ತಯಾರಿಸಿದ ಮಿಶ್ರಣವನ್ನು ತಿನ್ನುವುದು. ಫಲವಂತಿವರ್ಗದ ಗೆದ್ದಲುಗಳು, ಎಳೆಯಮರಿ ಹುಳುಗಳು ಮತ್ತು ಸೈನಿಕವರ್ಗದ ಗೆದ್ದಲುಗಳು ಈ ಬಗೆಯ ಆಹಾರವನ್ನು ಸೇವಿಸುತ್ತವೆ. ಟರ್ಮೈಮಿಡೆ ಗುಂಪಿಗೆ ಸೇರಿದ ಗೆದ್ದಲುಗಳನ್ನು ಬಿಟ್ಟರೆ ಸಸ್ಯಾಹಾರಿಗಳಾದ ಎಲ್ಲ ಗೆದ್ದಲುಗಳೂ ಸಸ್ಯಗಳಲ್ಲಿರುವ ಸೆಲ್ಯುಲೋಸನ್ನು ಜೀರ್ಣಿಸಿಕೊಳ್ಳುವುದಕ್ಕೆ ತಮ್ಮ ಕರುಳಿನಲ್ಲಿ ವಾಸಿಸುವ ಪಾಲಿಮ್ಯಾಸ್ಟಿಗೈನ ಮತ್ತು ಹೈಪರ್‍ಮ್ಯಾಸ್ಟಿಗೈನ ಗುಂಪಿಗೆ ಸೇರಿದ ಪ್ರೋಟೋಜೋವ ಜೀವಿಗಳನ್ನು ಅವಲಂಬಿಸಿವೆ.

ಅನೇಕ ಗೆದ್ದಲುಗಳು ತಮ್ಮ ಗೂಡುಗಳಲ್ಲಿ ಕಡ್ಡಿ ಮತ್ತು ಹುಲ್ಲಿನ ತಂಡುಗಳನ್ನು ಸಂಗ್ರಹಿಸಿಡುತ್ತವೆ. ಇಂಥ ತುಂಡುಗಳೇ ಇವಕ್ಕೆ ಮುಖ್ಯ ಆಹಾರ, ಮ್ಯಾಕ್ರೋಟರ್ಮೈಟಿನಿ ಗುಂಪಿಗೆ ಸೇರಿದ ಗೆದ್ದಲುಗಳು ಗೂಡುಗಳಲ್ಲಿ ಸ್ಪಂಜಿನಂಥ ಪದಾರ್ಥದ ಮೇಲೆ ಶಿಲೀಂಧ್ರಗಳನ್ನು ಬೆಳೆಸುತ್ತವೆ. ಇವಕ್ಕೆ ಶಿಲೀಂಧ್ರ ತೋಟಗಳೆಂದು ಹೆಸರು. ಹೀಗೆ ಕೃಷಿಮಾಡಿ ಬೆಳೆಸಿದ ಶಿಲೀಂಧ್ರಗಳೇ ಈ ಗೆದ್ದಲುಗಳ ಆಹಾರ. ಗೆದ್ದಲುಗಳು ಮನುಷ್ಯನಿಗೆ ಹಾನಿಕಾರಕ ಮತ್ತು ಉಪಕಾರ ಜೀವಿಗಳು.

***

**ಗೆಲಪಾಗಸ್ ದ್ವೀಪಗಳು:** ಈ ದ್ವೀಪ ಸಮೂಹ ದಕ್ಷಿಣ ಅಮೆರಿಕಾ ಖಂಡಕ್ಕೆ ಸೇರಿದ ಕರಾವಳಿಯಿಂದ 1000 ಕಿಮಿ ದೂರದಲ್ಲಿದೆ. ಇದರಲ್ಲಿ ಸು. 10 ದ್ವೀಪಗಳಿದ್ದು, ಅವೆಲ್ಲಾ ಕಣ್ಣಳತೆಯ ಅಂತರದಲ್ಲಿವೆ. ಈ ಸಮೂಹ ಸಮುದ್ರದ ಒಡಲಾಳದ ಜ್ವಾಲಾಮುಖಿಯ ಪ್ರಭಾವದಿಂದಾದ ದ್ವೀಪಗಳು. ಭೌಗೋಳಿಕವಾಗಿ ಕೆಳಗಿನ ಸ್ಥರಗಳು ಬಸಾಲ್ಟ ನಿಂದಾದ ಬಟ್ಟಲಿನಾಕಾರದ ಜ್ವಾಲಾಮುಖಿಯ ಬಾಯಿಗಳಿವೆ. ಇಂತಹ ಬಟ್ಟಲುಗಳು ಸು.200 ಇದ್ದು, ಇವು ಗಾತ್ರ ಹಾಗೂ ಎತ್ತರದಲ್ಲಿ ವಿಭಿನ್ನವಾಗಿವೆ. ಕೆಲವು ದ್ವೀಪಗಳು ಸಮುದ್ರ ಮಟ್ಟದಿಂದ 1300 ಮೀ ಎತ್ತರದಲ್ಲಿವೆ. ಇವುಗಳಲ್ಲಿ ಕೆಲವೇ ಜಾತಿಯ ಸಸ್ಯಗಳು ಹಾಗೂ ಪ್ರಾಣಿಗಳಿವೆ.

ವಿಜ್ಞಾನಿ ಡಾರ್ವಿನ್ ಈ ದ್ವೀಪ ಸಮೂಹಗಳಲ್ಲಿ ಒಂದು ತಿಂಗಳು ಇದ್ದು, ತೀಕ್ಷ್ಣವಾದ ವೀಕ್ಷಣೆ ಹಾಗೂ ಅಭ್ಯಾಸ ಮಾಡಿದನು. ಇದು ಜೀವವಿಜ್ಞಾನದಲ್ಲಿ ಹೊಸ ಕ್ರಾಂತಿಯನ್ನೇ ಮಾಡಿ, ವಿಕಾಸ (ಎವಲ್ಯೂಷನ್) ವಾದದ ಹುಟ್ಟಿಗೆ ಕಾರಣವಾಯಿತು. 1831 ರಲ್ಲಿ ಸಸ್ಯವಿಜ್ಞಾನಿ ಹೆನ್‍ಸ್ಲೆ ಪ್ರಭಾವದ ಮೇರೆಗೆ ಡಾರ್ವಿನ್‍ನಿಗೆ ಎಚ್‍ಎಮ್‍ಎಸ್‍ಬೀಗಲ್ ಎಂಬ ಹಡಗಿನಲ್ಲಿ ಪರಿಸರ ತಜ್ಞನಾಗಿ ಪ್ರಯಾಣ ಮಾಡಲು ಅವಕಾಶ ದೊರೆಯಿತು. ಈ ಪ್ರವಾಸವು 5 ವರ್ಷಗಳ ಕಾಲಾವಧಿಯದಾಗಿತ್ತು. ಅದು ಭೂ ಪ್ರದೇಶಗಳ ವೀಕ್ಷಣೆ (ಸರ್ವೆ) ಮಾಡಲು ನಿಯೋಜಿಸಲಾಗಿತ್ತು. ಈ ಪ್ರವಾಸದ ಅವಧಿಯಲ್ಲಿ ಡಾರ್ವಿನ್ ಸಂಗ್ರಹಿಸಿದ ಪ್ರಾಣಿ, ಸಸ್ಯಗಳು, ಬೀಜಗಳು ಹಾಗೂ ಆಯಾ ಪ್ರದೇಶಗಳ ಮಣ್ಣಿನ ಲಕ್ಷಣಗಳ ತೀಕ್ಷ್ಣ ವೀಕ್ಷಣೆಯಿಂದ, ಅವನೊಬ್ಬ ಪರಿಪೂರ್ಣ ಜೀವಜ್ಞಾನಿಯಾಗಿ ರೂಪುಗೊಳ್ಳಲು ಸಹಾಯಕವಾಯಿತು.

ಬೀಗಲ್ ಹಡಗು ಹಲವು ದೇಶಗಳನ್ನು ಸುತ್ತಿ ಅಲ್ಲಿರುವ ಪ್ರಾಣಿ, ಸಸ್ಯಗಳು, ಇವುಗಳ ಪಳಿಯುಳಿಕೆಗಳನ್ನು ಸಂಗ್ರಹಿಸಿ ತನ್ನ ದಿನಚರಿಯಲ್ಲಿ ಗುರುತಿಸಿಕೊಳ್ಳುತ್ತಿದ್ದನು. 1835ರ ಸೆಪ್ಟೆಂಬರ್ 17ರ ಬೆಳಿಗ್ಗೆ ವೀಕ್ಷಕಾ ತಂಡದವರು ಗಲಪಾಗಸ್ ದ್ವೀಪಕ್ಕೆ ಬಂದಿಳಿದರು. ಈ ದ್ವೀಪದ ಸಸ್ಯವರ್ಗ, ಪ್ರಾಣಿಗಳು, ಹಾಗೂ ಭೂ ಪ್ರದೇಶ ಬೇರೆ ಭೂ ಪ್ರದೇಶಗಳಗಿಂತ ಭಿನ್ನವಾಗಿದ್ದುದನ್ನು ಗಮನಿಸಿದರು. ಈ ದ್ವೀಪಗಳ ಹಲವು ವಿಶೇಷತೆಗಳನ್ನು ಗುರುತಿಸಿದರು. ಕುರುಚಲು ಗಿಡಗಳಂತಹ ಚಿಕ್ಕ ಗಿಡಗಳು, ಕಳ್ಳಿ ಜಾತಿಯ ಸಸ್ಯಗಳಿದ್ದು ಪ್ರಾಣಿಗಳಲ್ಲಿ ಆಮೆಗಳು, ಇಗ್ವಾನಗಳು, ಹಲ್ಲಿಗಳು, ಕೀಟಗಳು ಬೇರೆ ಭೂ ಪ್ರದೇಶಗಳಿಗಿಂತ ಗಾತ್ರದಲ್ಲಿ ದೊಡ್ಡದಾಗಿದ್ದುವು. ಒಟ್ಟು 10 ದ್ವೀಪಗಳ ಗೆಲಪಾಗಸ್ ಸಮೂಹದಲ್ಲಿ, 4 ದ್ವೀಪಗಳಲ್ಲಿ ಒಂದೊಂದು ವಾರ ಅಭ್ಯಾಸ ಮಾಡಿದಾಗ, ಒಂದು ದ್ವೀಪದಲ್ಲಿರುವ ಪ್ರಾಣಿಗಳು, ಮತ್ತೊಂದು ದ್ವೀಪದಲ್ಲಿರುವುದಕ್ಕಿಂತ ಭಿನ್ನವಾಗಿದ್ದುವು. ಇಂತಹ ವ್ಯತ್ಯಾಸಗಳು ಡಾರ್ವಿನ್‍ಗೆ ವಿಶೇಷ ಆಸಕ್ತಿ ಹುಟ್ಟಿಸಿದುವು. ಈ ದ್ವೀಪಗಳ ಭೂ ಪ್ರದೇಶಗಳಲ್ಲಿ ವಾರ್‍ಬ್ಲರ್‍ಗಳು, ಮರಕುಟುಕಗಳು, ಕೀಟತಿನ್ನುವ ಪಕ್ಷಿಗಳು ಇರಲಿಲ್ಲ. ಆದರೆ, ಫಿಂಚ್ (ಡಾರ್ವಿನಿಯನ್ ಫಿಂಚಸ್) ಬೀಜ ತಿನ್ನುವ ಪಕ್ಷಿಗಳು ಇದ್ದುವು. ಈ ಪಕ್ಷಿಗಳ ಕೊಕ್ಕುಗಳು ವಿಶೇಷವಾಗಿ ಮಾರ್ಪಾಡಾಗಿತ್ತು. ಈ ಫಿಂಚ್‍ಗಳ ಕೊಕ್ಕು ವಾರ್‍ಬ್ಲರಗಳಂತೆ, ಮರಕುಟುಕಗಳಂತೆ, ಕೀಟಗಳನ್ನು ತಿನ್ನುವಂತೆ ಮತ್ತು ಸಸ್ಯಾಹಾರಿಗಳಂತೆ ಮಾರ್ಪಾಟಾಗಿತ್ತು. ಈ ಪಕ್ಷಿಗಳಲ್ಲಿನ ಕೊಕ್ಕಿನ ವಿಭಿನ್ನತೆ, ಡಾರ್ವಿನ್‍ಗೆ ವಿವಿಧ ಪ್ರಾಣಿಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿ, ಅಭ್ಯಾಸ ಮಾಡಲು ಪ್ರೇರೇಪಿಸಿತು. ಅಲ್ಲಿಯ ಹಲ್ಲಿಗಳು ಎರಡು ಅಡಿ ಉದ್ದವಿದ್ದುವು. ಉರಗ ಸಂಕುಲದ ಇಗ್ವಾನಗಳು 2 ಮೀ ಉದ್ದವಿದ್ದುವು. ಮೃದ್ವಂಗಿಗಳು ಹಾಗೂ ಅವುಗಳ ಹೊರ ಕವಚಗಳು (ಶೆಲ್ಸ್) ಗಾತ್ರದಲ್ಲಿ ದೊಡ್ಡದಿದ್ದುವು. ಆದರೆ, ಇಲ್ಲಿಯ ಪರಿಸರದಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ. ಈ ಸಣ್ಣ ದ್ವೀಪ ಸಮೂಹದಲ್ಲಿ ಇಷ್ಟೊಂದು ವಿವಿಧತೆಯನ್ನು ವೀಕ್ಷಿಸಿದಾಗ ಡಾರ್ವಿನ್‍ಗೆ ವಿಕಾಸದ ಬಗ್ಗೆ ತಿಳಿದುಕೊಳ್ಳಲು ಸಹಾಯವಾಯಿತು. ಈ ವಿಕಾಸವಾದದ ಮೊದಲನೆ ಚಿಂತನೆ ಗಲಪಾಗಸ್ ದ್ವೀಪ ಸಮೂಹದಲ್ಲಿ ಹುಟ್ಟಿತು. ಡಾರ್ವಿನ್‍ನ ಪ್ರಕಾರ, ದಕ್ಷಿಣ ಅಮೇರಿಕಾ ಭೂ ಪ್ರದೇಶಗಳಲ್ಲಿ ಈ ಫಿಂಚ್‍ಗಳು ಬೀಜಗಳನ್ನು ತಿನ್ನಲು ಅನುಕೂಲಕರವಾದ ಕೊಕ್ಕನ್ನು ಹೊಂದಿದ್ದು, ಈ ದ್ವೀಪ ಸಮೂಹಕ್ಕೆ ಅವು ವಲಸೆ ಬಂದು ಇಲ್ಲಿನ ಪರಿಸರ ಹಾಗೂ ಆಹಾರಕ್ಕೆ ಅನುಗುಣವಾಗಿ ಅವುಗಳ ಕೊಕ್ಕುಗಳ ಮಾಪಾಟಾಗಿರಬಹುದು. ಇವುಗಳನ್ನು ಮೂರು ಜಾತಿಗಳನ್ನಾಗಿ: ಕಮರ್ರೆಂಕಸ್, ಜಿಯೊಸ್ಪಿಝಾಚಾ ಹಾಗೂ ಸಿರ್‍ತಿಡೇ ಎಂದು ವಿಂಗಡಿಸಲಾಗಿದೆ. ಈ ಸಂಶೋಧನೆಯ ಹಾಗೂ ಡಾರ್ವಿನ್ ಚಿಂತನೆಗಳನ್ನು ಬರೆದು ಪುಸ್ತಕ ರೂಪದಲ್ಲಿ ಹೊರ ತಂದಿದ್ದು 1837ರಲ್ಲಿ. ಈ ಪುಸ್ತಕದ ಹೆಸರು ಟ್ರ್ಯಾನ್ಸ್ ಮುಟೇಷನ್ ಆಫ್ ಸ್ಪಿಷೀಸ್. ಈಗಿರುವ ಪ್ರಭೇದಗಳು ಹಿಂದಿನ ಪ್ರಭೇದಗಳನ್ನು ಹೋಲುತ್ತವೆ. ಬೇರೆ ಬೇರೆ ಪ್ರಭೇದಗಳು ಒಂದೇ ರಚನಾ ಭಾಗವನ್ನು ಹೊಂದಿರುತ್ತವೆ. ಪ್ರಭೇದಗಳು ಬದಲಾವಣೆಗೊಳಪಡುತ್ತವೆ, ಹಾಗೂ ಜೀವಿಗಳ ಪರಿಸರ ಈ ಬದಲಾವಣೆಗೆ ಕಾರಣವಾಗಿರುತ್ತದೆ. ಡಾರ್ವಿನ್‍ನ ಈ ವಾದ ಅಂದಿನ ಕಾಲದ ಹಲವು ವಿಚಾರವಾದಿಗಳಲ್ಲಿ ಕ್ರಾಂತಿಯನ್ನೇ ಎಬ್ಬಿಸಿತು. ಏಕೆಂದರೆ, ಅಂದಿನ ದಿನದಲ್ಲಿ ಜೀವಿಗಳು ಪ್ರಭೇದಗಳು ಸ್ಥಿರ ಎಂದು ಬಲವಾಗಿ ನಂಬಿದ್ದರು. ಸೂಕ್ತ ಉದಾಹರಣೆಗಳೊಂದಿಗೆ ಡಾರ್ವಿನ್ ಪ್ರತಿಪಾದನೆಯನ್ನು ಬಲಗೊಳಿಸಿದನು. ಕೆಲವು ವಿಚಾರವಾದಿಗಳು ಇವರ ಪ್ರತಿಪಾದನೆಯನ್ನು ನಂಬಿದರು. ಐದು ವರ್ಷಗಳ ಅಭ್ಯಾಸದ ಫಲವಾಗಿ ಥಿಯರಿ ಆಫ್ ಡಿಸೆಂಟ್ ಹಾಗೂ ಥಿಯರಿ ಆಫ್ ಸೆಲೆಕ್ಷನ್ ಎಂಬ ಎರಡು ಪ್ರತಿಪಾದನೆಯನ್ನು ಪ್ರಕಟಿಸಿದನು. ಇದರಿಂದ

ಒರಿಜಿನ್ ಆಫ್ ಸ್ಪೀಷಿಸ್ ಎಂಬ ಗ್ರಂಥವನ್ನು ಪ್ರಕಟಿಸಲಾಯಿತು. ಈ ಗ್ರಂಥ ವಿಕಾಸವಾದವನ್ನು ಓದುವವರಿಗೆ ಒಂದು ಬೈಬಲ್ ಎಂದೇ ಪರಿಗಣಿಸಲಾಗಿದೆ.

ಗೆಲಾಪಾಗಸ್ ದ್ವೀಪಗಳ ಅಭ್ಯಾಸದಿಂದ ಬೇರೆ ಬೇರೆ ಸಸ್ಯವರ್ಗ ಹಾಗೂ ಪ್ರಾಣಿಗಳು ಸಮಾನವಾಗಿ ಭೂ ಪ್ರದೇಶಗಳಲ್ಲಿ ಹಂಚಿಕೆಯಾಗಿಲ್ಲ ಎಂಬುದನ್ನು ಸ್ಪಷ್ಟ ಪಡಿಸಲಾಯಿತು.

ಕೆಲವೇ ಪ್ರಾಣಿಗಳು ಇಲ್ಲಿಗೆ ಹೇಗೆ ವಲಸೆ ಬಂದುವು ಎಂಬುದು ಗೌಪ್ಯ. ಆದರೆ, ವಲಸೆ ಬಂದ ಪ್ರಾಣಿ, ಪಕ್ಷಿಗಳು ಹಾಗೂ ಸಸ್ಯವರ್ಗಗಳು ಈ ಬಸಾಲ್ಟ್‌ನಿಂದಾದ ಬಂಜರು ಭೂಮಿಯಲ್ಲಿ ವಿಧ ವಿಧವಾಗಿ ವಿಕಾಸವಾಗಿರಬಹುದು ಎಂದು ನಂಬಲಾಯಿತು. ಮುಂದೆ ವಿಜ್ಞಾನಿ ಮೆಯರ್ ಫೌಂಡರ್ ಪ್ರಿನ್ಸಿಪಲ್ ಸಿದ್ಧಾಂತದಿಂದ ಜೀವಿಗಳು ಹೊಸ ಭೂ ಪ್ರದೇಶಗಳಲ್ಲಿ, ಅತೀ ಶೀಘ್ರವಾಗಿ ವಿಕಾಸವಾಗುತ್ತವೆ ಎಂಬುದನ್ನು ಪ್ರತಿ ಪಾದಿಸಿದ. ಈ ವಿಕಾಸವು ವಿವಿಧ ಪ್ರಾಣಿಗಳ ಹೊಂದಾಣಿಕೆ (ಅಡಾಪ್ಟಿವ್ ರೆಡಿಯೇಷನ್) ಫಲ. ಉದಾ: ಹವಾಯ್ ದ್ವೀಪಗಳಲ್ಲಿನ ಡ್ರೋಸಾಫಿಲಾ ಮತ್ತು ಹನಿ ಕ್ರಿಪರ್‌ಗಳ ಅಭ್ಯಾಸದಿಂದ ಇದು ದೃಢಪಟ್ಟಿದೆ. ಅಂಡಮಾನ್ ದ್ವೀಪಗಳಲ್ಲಿರುವ ಪ್ರಾಣಿಗಳು ಸಹ ಬೇರೆ ಭೂ ಪ್ರದೇಶಗಳಿಗಿಂತ ಗಾತ್ರದಲ್ಲಿ ದೊಡ್ಡವು. ಈ ಸಂಶೋಧನೆಗಳಿಂದ ಹೊಸ ಭೂ ಪ್ರದೇಶಗಳಲ್ಲಿ ವಿಕಾಸ ಶೀಘ್ರಗತಿಯಲ್ಲಿ ಆಗುತ್ತದೆ ಎಂಬುದನ್ನು ತಜ್ಞರು ದೃಢಪಡಿಸಿದ್ದಾರೆ. ಈ ಗೆಲಪಾಗಸ್ ದ್ವೀಪ ಸಮೂಹದಲ್ಲೂ ಸಹ ದಕ್ಷಿಣ ಅಮೆರಿಕದಿಂದ ಯಾವ ಪ್ರಾಣಿಗಳು ಈ ದ್ವೀಪವನ್ನು ಸೇರಿದವೋ ಅವೇ ಕೆಲವು ಪ್ರಾಣಿಗಳು ಪ್ರಕೃತಿಯ ಕ್ರಿಯಾತ್ಮಕ ಬಲದಿಂದ (ನೇಚರ್ಸ್ ಕ್ರಿಯೇಟಿವ್ ಫೋರ್ಸ್) ದಕ್ಷಿಣ ಅಮೆರಿಕ ಪರಿಸರಕ್ಕಿಂತ ಭಿನ್ನವಾದ ಪರಿಸರದಲ್ಲಿ ವಿವಿಧ ಪ್ರಭೇದಗಳಾಗಿ ಪರಿಸರಕ್ಕನುಗುಣವಾಗಿ ಮಾರ್ಪಾಟಾಗಿ ಪರಿವರ್ತನೆಗೊಂಡಿವೆ.

ಹೀಗೆ ಬಸಾಲ್ಟ್‌ನಿಂದಾದ ಈ ಚಿಕ್ಕ ದ್ವೀಪ ಸಮೂಹದಲ್ಲಿ ಬೆಳೆದ ಈ ವಿಚಾರಗಳು ಪ್ರಾಣಿವಿಜ್ಞಾನದಲ್ಲಿ ಉನ್ನತ ಮಟ್ಟದ ಆನ್ವಯಿಕ ಸಂಶೋಧನೆಗಳಿಗೆ ಎಡೆಮಾಡಿಕೊಟ್ಟಿವೆ. (ವಿ.ಎಸ್)

**ಗೆವಿಯಾಲಿಸ್:** ಸರೀಸೃಪ ವರ್ಗದ ಕ್ರೊಕಡಿಲಿಯಾ ಗಣದ ಗೇವಿಯಾಲಿಡೆ ಕುಟುಂಬದ ಸದಸ್ಯ. ವೈಜ್ಞಾನಿಕವಾಗಿ ಗೇವಿಯಾಲಿಸ್ ಗ್ಯಾಂಜೆಟಿಕಸ್ ಎಂದು ಹೆಸರು. ಇವು ಉತ್ತರ ಭಾರತದಲ್ಲಿ ಹರಿಯುವ ಗಂಗಾನದಿ, ಮಹಾನದಿ, ಬ್ರಹ್ಮಪುತ್ರ ಹಾಗೂ ಸಿಂಧೂ ನದಿಗಳಲ್ಲಿ ವಾಸಿಸುತ್ತವೆ. ಇವುಗಳನ್ನು ಉದ್ದ ಮೂತಿ ಮೊಸಳೆಗಳು ಎನ್ನುವರು.



ಇವುಗಳಿಗೆ ನೀಳವಾದ ಅಥವಾ ಉದ್ದವಾದ ಕೊಳವೆಯಾಕಾರದ ಮುಖವಿದೆ. ಇದರಲ್ಲಿ ಅಗಲವಾದ ಮೂಗಿನ ಹೊಳ್ಳೆಗಳಿವೆ. ಇವುಗಳ ದೇಹ ಉದ್ದವಾಗಿದೆ. ಗಂಡು ಗೇವಿಯಾಲಿಸ್ ನ ಉದ್ದ 6 ಮೀ. ಹೆಣ್ಣು ಗೇವಿಯಾಲಿಸ್ ಉದ್ದ 4.8 – 5.4 ಮೀ. ಇವುಗಳ ಪ್ರಮುಖ ಆಹಾರ ಮೀನು ಮತ್ತು ಏಡಿಗಳು. ಇವು ಮೊಟ್ಟೆಗಳನ್ನು ಇಡುತ್ತವೆ. ಹೆಣ್ಣು ಗೇವಿಯಾಲಿಸ್ ಸು. 40 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳನ್ನು ನದಿಯ ದಡದ ಮರಳಿನಲ್ಲಿ ಗೂಡು ಮಾಡಿ, ಈ ಮರಳಿನ ಗೂಡಿನಲ್ಲಿ ಮೊಟ್ಟೆಗಳನ್ನು ಇಟ್ಟು ರಕ್ಷಿಸುತ್ತದೆ. ಮೊಟ್ಟೆಯು 8–9 ಸೆಂಮೀ ಉದ್ದವಾಗಿರುತ್ತದೆ. ಈ ಮೊಟ್ಟೆಗಳು 15–30 ದಿನಗಳಲ್ಲಿ ಮರಿಗಳಾಗಿ ಹೊರಬರುತ್ತವೆ. ಮರಿಗಳು ಮರಳಿನ ದಡವನ್ನು ದಾಟಿ ನದಿಯ ನೀರಿನಲ್ಲಿ ಸರಾಗವಾಗಿ ಚಲಿಸುತ್ತವೆ. (ಕೆ.ಎಸ್.ಪಿ)

**ಗೇಯಲ್ (ಸಸ್ತನಿ):** ಸ್ತನಿವರ್ಗ, ಆರ್ಟಿಯೋಡ್ಯಾಕ್ಟಿಲ ಗಣ, ಬೋವಿಡೆ ಕುಟುಂಬಕ್ಕೆ ಸೇರಿದ ಒಂದು ಪ್ರಾಣಿ. ಬೈಬಾಸ್ ಫ್ರಾಂಟ್ಯಾಲಿಸ್ ಇದರ ಶಾಸ್ತ್ರೀಯ ನಾಮ. ಭಾರತ ಮತ್ತು ಆಗ್ನೇಯ ಏಷ್ಯದಲ್ಲಿ ಕಾಣಬರುವ ಕಾಡುಕೋಣದ (ಗೌರ್) ಸಾಕುತಳಿ ಇದು ಎಂದು ಅನೇಕ ಪ್ರಾಣಿ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಆದರೆ ಕಾಡುಕೋಣಕ್ಕೂ ಗೇಯಲಿಗೂ ಹಲವಾರು ವ್ಯತ್ಯಾಸಗಳಿವೆ. ಕಾಡುಕೋಣಕ್ಕೆ ಹೋಲಿಸಿದರೆ ಗೇಯಲ್ ಚಿಕ್ಕಗಾತ್ರದ್ದು. ಇದರ ಎತ್ತರ ೧.೫ ಮೀ., ಉದ್ದ ೨.೭ ಮೀ., ತೂಕ ಸುಮಾರು ೫೪೦ ಕಿಗ್ರಾಂ. ದೇಹದ ಬಣ್ಣ ಕಪ್ಪು ಮಿಶ್ರಿತ ಕಂದು. ಕೆಲವು ಸಲ ನೀಲಿ ಛಾಯೆಯಿರುವುದುಂಟು. ಮಂಡಿಯ ಕೆಳಗಿನ ಭಾಗ ಮತ್ತು ಬಾಲದ ತುದಿಗಳು ಮಾತ್ರ ಬೆಳ್ಳಗಿವೆ. ಕೊಂಬುಗಳು ಮೋಟು. ತಲೆಯ ಆಚೀಚೆ ಅಗಲವಾಗಿ ಹರಡಿವೆ. ವ್ಯವಸಾಯಕ್ಕಾಗಲಿ ಗಾಡಿಗೆ ಕಟ್ಟುವುದಕ್ಕಾಗಲಿ ಹೈನಿಗಾಗಲಿ ಗೇಯಲ್ ಉಪಯುಕ್ತವಿಲ್ಲ. ಆದರೆ ಇದರ ಮಾಂಸ ಬಹಳ ರುಚಿಯಾದುದು. ಇದಕ್ಕಾಗಿಯೇ ಅಸ್ಸಾಂ, ಟೆನಸ್ಸರಿಂ ಮತ್ತು ಉತ್ತರ ಬರ್ಮದಲ್ಲಿ ಇದನ್ನು ಸಾಕುತ್ತಾರೆ. (ಎಚ್.ಬಿ.ಡಿ.)

**ಗೊಡ್ಲೆ ಮೀನು:** ಸೈಲ್ಯುರಾಯ್ಡಿಯ ಗಣದ ಸೈಲ್ಯೂರಿಡೆ ಕುಟುಂಬಕ್ಕೆ ಸೇರಿದ ಸಿಹಿನೀರು ಮೀನು. ಮೀಸೆ ಮೀನಿಗೆ (ಕ್ಯಾಟ್ ಫಿಶ್) ಹತ್ತಿರ ಸಂಬಂಧಿ. ದೊಮ್ಮೆ ಮೀನು ಪರ್ಯಾಯ ನಾಮ. ಆಂಪಾಕ್ ಬೈಮ್ಯಾಕ್ಯುಲೇಟಸ್ ಇದರ ವೈಜ್ಞಾನಿಕ ಹೆಸರು. ಭಾರತಾದ್ಯಂತ ಕಾಣಬರುತ್ತದೆ. ಕರ್ನಾಟಕದಲ್ಲಿ ಕಾವೇರಿ ನದಿಯಲ್ಲೂ ಅನೇಕ ಕೆರೆಗಳಲ್ಲೂ ಕಂಡುಬರುತ್ತದೆ. ಸುಮಾರು ೩೦ ಸೆಂಮೀ. ಉದ್ದಕ್ಕೆ ಬೆಳೆಯುವ ಮಧ್ಯಮ ಗಾತ್ರದ ಮೀನಿದು. ಪಕ್ಕದಿಂದ ಪಕ್ಕಕ್ಕೆ ಒತ್ತಲ್ಪಟ್ಟ ದೇಹ, ಎರಡು ಜೊತೆ ಮೀಸೆಗಳು, ಇವುಗಳಲ್ಲಿ ಒಂದು ಜೊತೆ ಗುದದ ಈಜು ರೆಕ್ಕೆಯವರೆಗೂ ಚಾಚುವಂತಿರುವುದು, ಎದೆಯ ಈಜುರೆಕ್ಕೆಯ ಮೇಲ್ಭಾಗದಲ್ಲಿರುವ ಕಪ್ಪು ಮಚ್ಚೆ, ಕಪ್ಪು ಬಣ್ಣದ ಪಟ್ಟೆಗಳು ಮತ್ತು ಕಪ್ಪು ಅಂಚುಳ್ಳ ಗುದದ ಈಜು ರೆಕ್ಕೆ, ಇಬ್ಭಾಗವಾಗಿ ಸೀಳಿದ ಬಾಲದ ಈಜುರೆಕ್ಕೆ–ಇವು ಬೆಳ್ಳಿಬಣ್ಣದ ಗೊಡ್ಲೆ ಮೀನಿನ ಪ್ರಮುಖ ಲಕ್ಷಣಗಳು.

ಗೊಡ್ಲೆ ಮೀನಿನ ಆಹಾರ ಪ್ರಧಾನವಾಗಿ ನೀರಿನಲ್ಲಿನ ಚಿಗಟಗಳು ಮತ್ತು ಇತರ ಸಣ್ಣ ಕ್ರಿಮಿಗಳು. ಬಹುವೇಳೆ ಇತರ ಜಾತಿಯ ಮೀನುಗಳನ್ನೂ ಇದು ಕಬಳಿಸುತ್ತದೆ. ಇದರ ಸಂತಾನಾಭಿವೃದ್ಧಿಯ ಕಾಲ ಜೂನಿನಿಂದ ಆಗಸ್ಟ್ ತಿಂಗಳವರೆಗೆ. ಇದನ್ನು ಸುಲಭವಾಗಿ ಸಾಕಬಹುದಾದರೂ ಬೇರೆ ಜಾತಿಯ ಮೀನುಗಳಿಗೆ ಇದು ಮಾರಕವಾದ್ದರಿಂದ ಸಾಕಲು ಯೋಗ್ಯವಲ್ಲ. ಆದರೂ ಇದರ ಮಾಂಸ ಬಲು ರುಚಿಯಾಗಿರುವುದರಿಂದಲೂ ಮಾಂಸದಲ್ಲಿ ಸಣ್ಣ ಮುಳ್ಳುಗಳು ಇಲ್ಲವಾದ್ದರಿಂದಲೂ ಇದಕ್ಕೆ ಬೇಡಿಕೆ ಇದ್ದೇ ಇದೆ. ದಾವಣಿ ಬಲೆಗಳ ಸಹಾಯದಿಂದ ಗೊಡ್ಲೆ ಮೀನನ್ನು ಹಿಡಿಯಬಹುದು. (ಬಿ.ಎನ್.)

**ಗೊದಮೊಟ್ಟೆ:** ಮೊಟ್ಟೆಯಿಂದ ಹೊರ ಬಂದು, ಕೆಲ ಕಾಲ ನೀರಿನಲ್ಲಿ ವಾಸಿಸುವ ಮರಿ ಕಪ್ಪೆಗಳಿಗೆ ಗೊದ ಮೊಟ್ಟೆ ಎನ್ನುವರು. ಇವು ಬಾಲ ಹೊಂದಿದ್ದು, ಕಿವಿರುಗಳಿಂದ ಉಸಿರಾಡುತ್ತವೆ. ವಾತಾವರಣದಲ್ಲಿನ ಉಷ್ಣಾಂಶ ಕಪ್ಪೆಗಳು ಮೊಟ್ಟೆಯಿಡುವ ಕಾಲವನ್ನು ನಿರ್ಧರಿಸುತ್ತದೆ. ಕಪ್ಪೆಗಳು ನೀರಿನಲ್ಲಿ ಜೊಂಡಿನ ಮಧ್ಯೆ, ಕೊಚ್ಚೆಯ ಕಾಲುವೆಗಳಲ್ಲಿ ಮೊಟ್ಟೆಯಿಡುತ್ತವೆ. ಗಂಡು ಹೆಣ್ಣುಗಳು ಸಂಭೋಗ ನಡೆಸಿ, 3–4 ದಿನಗಳ ಅನಂತರ,



ಮೊಟ್ಟೆಯಿಂದ ಹೊರಬಂದ ಗೊದಮೊಟ್ಟೆ ಕಪ್ಪೆಯಾಗಿ
ರೂಪಾಂತರ ಹೊಂದುವಾಗಿನ ವಿವಿಧ ಘಟ್ಟಗಳು

ಹೆಣ್ಣು ಕಪ್ಪೆ ಮೊಟ್ಟೆಗಳನ್ನಿಡಲು ಪ್ರಾರಂಭಿಸುತ್ತದೆ. ಗರ್ಭಧರಿಸಿದ 8–10 ದಿನಗಳ ಅನಂತರ, ಮೊಟ್ಟೆಯಿಂದ ಮರಿ ಹೊರಬರುತ್ತದೆ. ಮರಿಗಳು ಪ್ರೌಢ ಕಪ್ಪೆಯಂತೆ ಇರುವುದಿಲ್ಲ.

ಇವುಗಳಿಗೆ ಕಣ್ಣು, ಬಾಯಿ, ಕಿವಿರು, ಕಾಲುಗಳು ಇರುವುದಿಲ್ಲ. ತಲೆ ಕೆಳಗೆ ಅರ್ಧಚಂದ್ರಾಕಾರದ ಹೀರು ಬಟ್ಟಲಿರುತ್ತದೆ. ಇದರಿಂದ ಒಂದು ರೀತಿಯ ಅಂಟು ದ್ರವ ಉತ್ಪತ್ತಿಯಾಗುತ್ತದೆ. ಇದರ ನೆರವಿನಿಂದ ಕಪ್ಪೆ ಮರಿಗಳು ಜೊಂಡಿಗೆ ತಗುಲಿಕೊಂಡು ನೇತಾಡುತ್ತವೆ. ಬೆಳೆವಣಿಗೆಯಾದಂತೆ, ಬಾಯಿ, ಕಣ್ಣುಗಳು ಬೆಳೆಯುತ್ತವೆ. ತಲೆಯ ಎರಡು ಕಡೆ ಕಿವಿರುಗಳು ಬೆಳೆಯುತ್ತವೆ. ಇವೇ ಶ್ವಾಸಾಂಗಗಳು. ಬಾಯೊಳಗೆ ಕೊಂಬಿನಿಂದಾದ ಹಲವು ಸಾಲು ಹಲ್ಲುಗಳಿರುತ್ತವೆ.  ಈ ಹಲ್ಲುಗಳ ಸಹಾಯದಿಂದ ಮರಿಗಳು ಮೃದುವಾದ ಸಸ್ಯ ಪದಾರ್ಥಗಳನ್ನು ತಿನ್ನುತ್ತವೆ. ದೇಹದೊಳಗೆ ಸುರುಳಿಯಾಕಾರದ ಕರುಳು ಬೆಳೆಯುತ್ತದೆ. ಬಾಲದ ಭಾಗವು ಬೆಳೆದಂತೆಲ್ಲ, ಅರ್ಧಚಂದ್ರಾಕಾರದ ಹೀರು ಬಟ್ಟಲು ನಶಿಸಿ ಹೋಗುತ್ತದೆ. ಕ್ರಮೇಣ ಕಿವಿರುಗಳ ಮೇಲೆ ಚರ್ಮದ ಹೊದಿಕೆ ಬೆಳೆಯುತ್ತದೆ. ಬೆಳೆವಣಿಗೆಯು ಮುಂದುವರೆಯುತ್ತಾ, ಹೊರಕಿವಿರುಗಳು ನಶಿಸಿ, ಒಳ ಕಿವಿರುಗಳು ರೂಪುಗೊಳ್ಳುತ್ತವೆ. ಈ ಕಿವಿರುಗಳು ಹೊರ ಚರ್ಮದಿಂದ ರೂಪುಗೊಳ್ಳುತ್ತವೆ.

ಲಾರ್ವ ರೂಪ ಪರಿವರ್ತನೆ ಪ್ರಾರಂಭಿಸಿದಾಗ ಗೊದಮೊಟ್ಟೆ ಹಂತ ಮುಗಿಯುತ್ತದೆ. ರೂಪ ಪರಿವರ್ತನೆಯಾಗುವಾಗ, ಗೊದಮೊಟ್ಟೆ ರಚನೆಯಲ್ಲಿ ಕೆಲವು ಬದಲಾವಣೆಗಳಾಗುತ್ತವೆ.  ಈ ಎಲ್ಲ ಬದಲಾವಣೆಗಳಿಗೆ ಥೈರಾಯ್ಡ್ ಗ್ರಂಥಿ ಸ್ರವಿಸುವ ಚೋದಕದಿಂದಾಗುವ ಕ್ರಿಯೆ ಕಾರಣ. ಗೊದಮೊಟ್ಟೆ ರೂಪ ಪರಿವರ್ತನೆಯ ಕೊನೆಯಲ್ಲಿ ಬಾಲ ನಶಿಸುತ್ತದೆ.  ಇದಕ್ಕೆ ಲೈಸೊಸೋಮ್‌ನಲ್ಲಿ ಉತ್ಪತ್ತಿಯಾಗುವ ಹೈಡ್ರೋಲೈಟಿಕ್ ಕಿಣ್ವವೇ ಕಾರಣ. (ಎಸ್.ಆರ್.ಎಸ್)

**ಗೊದ್ದ:** ಇನ್ಸೆಕ್ಟ ವರ್ಗದ ಫಾರ್ಮಿಸಿಡೆ ಕುಟುಂಬದ ಸದಸ್ಯ. ಇದು ಇರುವೆಗಳಿಗೆ ಹತ್ತಿರ ಸಂಬಂಧಿ. ಮರದ ತುಂಡು ಮತ್ತು ದಿಮ್ಮಿಗಳ ಪೊಟರೆಗಳಲ್ಲಿ ಗೂಡುಮಾಡಿ ದೊಡ್ಡ ಗುಂಪುಗಳಲ್ಲಿ ವಾಸಿಸುತ್ತದೆ. ಇದು ಸಂಘ ಜೀವಿ. ಕೆಲವೊಮ್ಮೆ ಹಸಿ ಮರಗಳಲ್ಲಿ ಉಂಟಾದ ಗಾಯಗಳ ಮೂಲಕ ಮರದೊಳಕ್ಕೆ ಪ್ರವೇಶಿಸಿ ವಾಸಮಾಡುತ್ತದೆ. ಸತ್ತ ಕೀಟಗಳು ಮತ್ತು ಗಿಡಗಳ ಎಲೆಗಳ ಮೇಲೆ  ವಾಸಿಸುವ ಗಿಡಹೇನುಗಳು ಸ್ರವಿಸುವ ಸಿಹಿಯಾದ ಅಂಟು ಪದಾರ್ಥವನ್ನು ಗೊದ್ದ ಆಹಾರವನ್ನಾಗಿ ಬಳಸುತ್ತದೆ. ಅನೇಕ ವೇಳೆ ಮನೆಯೊಳಗೆ ಬಂದು ಸಕ್ಕರೆಗೂ ಮುತ್ತುತ್ತದೆ. ಗೊದ್ದಗಳ ಒಂದು ಗುಂಪಿನಲ್ಲಿ ಒಂದು ರಾಣಿ, ಹಲವಾರು ದೊಡ್ಡ ಹಾಗೂ ಚಿಕ್ಕ ಕೆಲಸಗಾರ ಗೊದ್ದಗಳು ಮತ್ತು ಅನಿಷೇಚನ ರೀತಿಯಲ್ಲಿ ಬೆಳೆದ ಗಂಡು ಗೊದ್ದಗಳು ಇರುತ್ತವೆ. ದೊಡ್ಡ ಗುಂಪುಗಳಲ್ಲಿ ನಿಯಮಿತ ಲೈಂಗಿಕ ಕಾರ್ಯ ನಿರ್ವಹಿಸುವ ಮತ್ತು ರೆಕ್ಕೆಯುಳ್ಳ ಗಂಡು ಹಾಗೂ ಹೆಣ್ಣು ಗೊದ್ದಗಳು ವಾಸಿಸುತ್ತವೆ. ಆದರೆ, ಇವು ಅನುಕೂಲ ಪರಿಸ್ಥಿತಿಯಲ್ಲಿ ಮಾತ್ರ ಕೆಲ ಕಾಲ ಹಾರಾಡಿ, ಸಂಭೋಗ ಕ್ರಿಯೆಯಲ್ಲಿ ತೊಡಗುತ್ತವೆ. ಗರ್ಭಧರಿಸಿದ ಹೆಣ್ಣು ಗೊದ್ದ ಹೊಸ ಗೂಡು ಮಾಡಲು ಸೂಕ್ತವಾದ ಮರವನ್ನೇರಿ ಅದನ್ನು ಕೊರೆದು ಒಳಗೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಡುವ ಮುನ್ನ ಹೆಣ್ಣು ಗೊದ್ದ ರೆಕ್ಕೆಗಳನ್ನು ಕಳಚುತ್ತದೆ. ಮೊಟ್ಟೆಗಳು ಒಡೆದು ಮರಿ ಹುಳುಗಳು ಹೊರಬರುತ್ತವೆ. ತಾಯಿ ಗೊದ್ದ ತನ್ನ ದೇಹದಿಂದ ಸ್ರವಿಸುವ ವಸ್ತುಗಳಿಂದ  ಮರಿಹುಳುಗಳನ್ನು ಪೋಷಿಸುತ್ತದೆ. ೨–೩ ತಿಂಗಳುಗಳಲ್ಲಿ ಇವು ಕೆಲಸಗಾರ ಇರುವೆಗಳಾಗಿ ಬೆಳೆಯುತ್ತವೆ. ಭಾರತ ಮತ್ತು ಪಾಕಿಸ್ತಾನಗಳಲ್ಲಿ ವಾಸಿಸುವ ಗೊದ್ದದ ವೈಜ್ಞಾನಿಕ ಹೆಸರು ಕ್ಯಾಂಪೊನೋಟಸ್ ಕಂಪ್ರೆಸಸ್. ಈ ಗೊದ್ದ ಅರಗು ಕೀಟದ ಶತ್ರುಗಳನ್ನು ತಿಂದು, ಅರಗಿನ ಉತ್ಪಾದನೆಗೆ ಸಹಕಾರಿಯಾಗಿದೆ. (ಕೆ.ಜಿ.ಎನ್.)

**ಗೊರಸಿಗಳು:** ಮ್ಯಾಮೇಲಿಯ ವರ್ಗದ ಅಂಗ್ಯುಲೇಟ ಗುಂಪಿಗೆ ಸೇರಿದ ಹಲವಾರು ಬಗೆಯ ಜರಾಯುಜ ಮತ್ತು ಸಸ್ಯಾಹಾರಿ ಸ್ತನಿಗಳು. ಇವೆಲ್ಲುವುಗಳಲ್ಲೂ ಕಾಲಿನಲ್ಲಿ ಗೊರಸು (ನೋಡಿ) ಇರುವುದರಿಂದ ಈ ಹೆಸರು ಬಂದಿದೆ. ತಮ್ಮ ರೂಪ ರಚನೆ ಮತ್ತು ಸ್ವಭಾವಗಳಲ್ಲಿ ವೈವಿಧ್ಯವನ್ನು ಪ್ರದರ್ಶಿಸುವ ಇವನ್ನು ಬೇರೆ ಬೇರೆ ಗಣಗಳಲ್ಲಿ ಸೇರಿಸಲಾಗಿದೆ. ಕುದುರೆ, ಕತ್ತೆ, ದನ, ಕುರಿ, ಜಿಂಕೆ, ಆನೆ, ಖಡ್ಗಮೃಗ, ಹಂದಿ, ನೀರು ಕುದುರೆ, ಕೋನಿ (ಹೈರ್‍ಯಾಕ್ಸ್ ) ಟಪಿರ್, ಮುಂತಾದುವು ಕೆಲವು ಉದಾಹರಣೆಗಳು. ಇವಲ್ಲದೆ ಇಯೋಸೀನ್. ಅಲಿಗೋಸೀನ್ ಮತ್ತು ಪ್ಲೀಸ್ಟೊಸೀನ್ ಕಾಲಗಳಲ್ಲಿ ಜೀವಂತವಾಗಿದ್ದು ಈಗ ಬರಿಯ ಫಾಸಿಲುಗಳ ರೂಪದಲ್ಲಿ ಮಾತ್ರ ಕಾಣದೊರೆಯುವ ಅನೇಕ ಪ್ರಭೇದಗಳೂ ಗೊರಸಿಗಳ ಗುಂಪಿನಲ್ಲಿವೆ. ಪ್ರಸಕ್ತ ಲೇಖನದಲ್ಲಿ ಗೊರಸಿಗಳ ಮುಖ್ಯ ಲಕ್ಷಣಗಳನ್ನೂ ಸ್ಥೂಲ ವರ್ಗೀಕರಣವನ್ನೂ ಸಂಕ್ಷೇಪವಾಗಿ ಕೊಡಲಾಗಿದೆ.

ಗೊರಸಿಗಳ ಲಕ್ಷಣಗಳು: ಗೊರಸಿಗಳು ಪೇಲಿಯೋಸೀನ್ ಯುಗದಿಂದೀಚೆಗೆ ಮಾತ್ರ ಕಾಣದೊರೆಯುತ್ತವೆ. ಈ ಕಾಲಕ್ಕಿಂತ ಮುಂಚೆ ಜೀವಿಸಿದ್ದ ಪ್ರಾಣಿಗಳೆಲ್ಲುವೂ ಕೀಟಾಹಾರಿಗಳಾಗಿದ್ದು ಸಣ್ಣ ಗಾತ್ರದವಾಗಿದ್ದುವು. ಅನಂತರ ಇವುಗಳ ಆಹಾರ ಸೇವನೆಯ ಕ್ರಮದಲ್ಲಿ ಕೆಲವು ಮೂಲಭೂತ ಬದಲಾವಣೆಗಳು ಉಂಟಾಗಿ ಇವುಗಳಲ್ಲಿ ಬಹುಪಾಲು ಪ್ರಾಣಿಗಳು ಸಸ್ಯಾಹಾರದ ಸೇವನೆಗೆ ಮೊದಲಾದುವು, ಬಹುಶಃ ಈ ಬದಲಾವಣೆಯಿಂದಾಗಿ ಪ್ರಾಣಿಗಳ ಗಾತ್ರ (ಕೆಲವು ಪ್ರಾಣಿಗಳನ್ನುಳಿದು ಉದಾ: ಕೋನಿಗಳು) ಹೆಚ್ಚುತ್ತಾ ಬಂತು. ಹೀಗಾಗಿ ಗೊರಸಿಗಳು ದೊಡ್ಡ ಗಾತ್ರದ ಪ್ರಾಣಿಗಳಾಗಿವೆ. ಇವುಗಳ ಚರ್ಮ  ದಪ್ಪ ಮತ್ತು ಹಲವಾರು ಬಗೆಯ ಮಚ್ಚೆಗಳಿಂದ ಕೂಡಿದ್ದು ವರ್ಣಮಯವಾಗಿರುತ್ತದೆ. ಕೋಡು, ಕೊಂಬು, ಕೋರೆ ಮುಂತಾದ ರಕ್ಷಣೆಯ ಸಾಧನೆಗಳಿದ್ದರೂ ಗೊರಸಿಗಳು ತಮ್ಮ ರಕ್ಷಣೆಗೆ ಈ ಸಾಧನೆಗಳಿಗಿಂತ ಹೆಚ್ಚಾಗಿ ವೇಗವಾಗಿ ನಡೆಯುವುದನ್ನು ಅವಲಂಬಿಸಿವೆ. ಚುರುಕಿನ ನಡೆಯು ಅತ್ಯಂತ ವೇಗವಾಗಿದೆ. ಕಾಲುಗಳು ತುದಿಬೆರಳಿನ ಮೇಲೆ ನಿಲ್ಲುವಂತಾಗಿ ಅವುಗಳ ಉದ್ದವೂ ಹೆಚ್ಚಿದೆ. ಇದರಿಂದಾಗಿ ಕಾಲಿನ ಐದು ಬೆರಳುಗಳಲ್ಲಿ  ಆಚೀಚಿನವು ಕ್ಷೀಣಗೊಂಡಿವೆ. ಎರಡು ಮಧ್ಯದ ಬೆರಳುಗಳು ಮಾತ್ರ ಉಳಿದಿವೆ. ಕೀಲುಗಳು ರಾಟಿಯ ಮಾದರಿಯಾಗಿದ್ದು. ಅಲ್ನ ಮತ್ತು ಫಿಬುಲ ಮೂಳೆಗಳು ಕ್ಷೀಣವಾಗಿವೆ. ರೇಡಿಯಸ್ ಹಾಗೂ ಟಿಬಿಯಗಳೊಂದಿಗೆ ಕೂಡಿಕೊಂಡು ಬಿಟ್ಟಿವೆ. ಮಧ್ಯದ ಬೆರಳಿನ ತುದಿಯಲ್ಲಿ ಎಲುಬುಗಳು ಅಗಲವಾಗಿವೆಯಲ್ಲದೆ ಇದರ ಕೊಂಡಿಯುಗುರು (ಕ್ಲಾ) ಮಾರ್ಪಾಟಾಗಿ ಎಲುಬಿನ ಸುತ್ತ ಗೊರಸಾಗಿ ಬೆಳೆದಿದೆ. ಕಾಲುಗಳು ಹೀಗೆ ಉದ್ದದಲ್ಲಿ ಹೆಚ್ಚಿದ್ದರೂ ಈ ಹೆಚ್ಚುಗಳು ಕಾಲಿನ ಕೆಳಭಾಗದಲ್ಲಿ ಮಾತ್ರ ಕಂಡು ಬರುತ್ತವೆ. ಹ್ಯೂಮರಸ್ ಮತ್ತು ಫೀಮರ್ ಮೂಳೆಗಳು ಮಾತ್ರ ಮೊಟಾಗಿಯೇ ಇವೆ. ಹಿಂಗಾಲುಗಳು ದೇಹದ ಮುನ್ನಡೆಗೆ ಸಹಾಯಕವಾಗಿವೆ. ಮುಂಗಾಲುಗಳು ದೇಹದ  ಭಾರವನ್ನು ಹೊರುವ ಸಾಧನಗಳಾಗಿಯೂ ಇರುವುದರಿಂದ ಕಶೇರು ಸ್ತಂಭ ಸೂಕ್ತವಾಗಿ ಮಾರ್ಪಟ್ಟಿದೆ. ಪಕ್ಕೆಲುಬುಗಳು ಹೇರಳವಾಗಿವೆ. ಇಲಿಯಂ ಮೂಳೆಗಳು ಅಗಲವಾಗಿವೆ, ನೇರವಾಗಿವೆ. ಮೇಲೆಕ್ಕೆದ್ದಿರುವಂತೆ ಇದ್ದು ಚಲನೆಗೆ ಅಗತ್ಯವಾದ ಸ್ನಾಯುಗಳಾದ ಗ್ಲೂಟೈಗಳು ಮತ್ತು ಹೊಟ್ಟೆಯ ಭಾರವನ್ನು ಹೊರುವ ಸ್ನಾಯುಗಳು ಇದಕ್ಕೆ ಅಂಟಿಕೊಳ್ಳಲು ಅನುಕೂಲವಾಗಿವೆ.

ಗೊರಸಿಗಳ ಕತ್ತು ಉದ್ದವಾಗಿರುತ್ತವೆ. ಪ್ರಾಣಿ ತನ್ನ ಸುತ್ತಮುತ್ತ ದೃಷ್ಟಿ ಹಾಯಿಸುವುದಕ್ಕೆ ಆಹಾರವನ್ನು ಎಟಿಕಿಸಿಕೊಳ್ಳಲು ತಲೆಯನ್ನು ಚಾಚುವುದಕ್ಕೆ ಇದರಿಂದ ಅನುಕೂಲ. ಸಾಮಾನ್ಯವಾಗಿ ಗೊರಸಿಗಳ ಶ್ರವಣಶಕ್ತಿ ಬಹು ಚುರುಕು. ಕಿವಿಗಳು ಬಲು ಉದ್ದವಾಗಿದ್ದು ಶಬ್ದ ಬರುವ ದಿಕ್ಕನ್ನು ಗ್ರಹಿಸಲು ಸಹಾಯಕವಾಗಿವೆ. ಘ್ರಾಣ ಶಕ್ತಿಯೂ ಹೆಚ್ಚಾಗಿದೆ. ಸಾಮಾನ್ಯವಾಗಿ ಗೊರಸಿಗಳು ಹುಲ್ಲು ಮೇಯುವಾಗ ಗಾಳಿಗೆ ಎದುರಾಗಿಯೇ ಸಾಗುತ್ತವೆ. ಮೂತಿ ಸದಾ ಒದ್ದೆಯಾಗಿದ್ದು ಅದರಲ್ಲಿರುವ ಗ್ರಾಹಕಗಳು ಗಾಳಿಗುಂಟ ಬರುವ ವಾಸನೆಯನ್ನು ಗ್ರಹಿಸಲು ಸಮರ್ಥವಾಗಿವೆ. ಅಂತೆಯೇ ನಾಲಿಗೆ ದೊಡ್ಡ ಗಾತ್ರದ್ದಾಗಿದ್ದು ಸೂಕ್ಷ್ಮವೇದಿಯಾಗಿದೆ. ರಸೇಂದ್ರಿಯಗಳನ್ನು ಪಡೆದಿದೆ. ಮಿದುಳು ದೊಡ್ಡ ಗಾತ್ರದ್ದು.

ಗೊರಸಿಯಲ್ಲಿ ಬಹುಪಾಲು ಬಗೆಯವು ಸಮಾಜಜೀವಿಗಳು. ಗುಂಪು ಗುಂಪಾಗಿರುವುದರಿಂದ ಒಂದು ಪ್ರಾಣಿಯ ಅನುಭವವನ್ನು ಗಮನಿಸಿ ಆ ಗುಂಪಿನ ಇತರ ಪ್ರಾಣಿಗಳು ಸುಲಭವಾಗಿ ಪಾಠ ಕಲಿಯುತ್ತವೆ. ಗೊರಸಿಗಳ ಇನ್ನೊಂದು ಮುಖ್ಯ ಲ್ಷಣ ವಾಸನಾಗ್ರಂಥಿಗಳು. ಇವುಗಳಲ್ಲಿ ಉತ್ಪತ್ತಿಯಾಗುವ ವಾಸನೆಯನ್ನು ಗೊರಸಿಗಳು ತಮ್ಮ ನಡೆಜಾಡುಗಳನ್ನು ಮತ್ತು ಆಧೀನ ಪ್ರಾಂತ್ಯಗಳನ್ನು ಗುರುತಿಸಿಕೊಂಡು ತಮ್ಮ ನಡುವಿನ ಸಂಜ್ಞೆಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕೂ ಉಪಯೋಗಿಸಿಕೊಳ್ಳುತ್ತವೆ. ಗೊರಸಿಗಳ ಲೈಂಗಿಕ ವ್ಯವಸ್ಥೆ ಸಂಕೀರ್ಣವಾಗಿದ್ದು ಇದು ದೃಷ್ಟಿ, ಶ್ರವಣ, ಘ್ರಾಣ ಸಂಬಂಧಿ ಸಂಜ್ಞೆಗಳ ವಿವರವಾದ ಬಳಕೆಯನ್ನು ಒಳಗೊಂಡಿದ್ದು ಕೆಲವು ಸಾರಿ ಗಂಡುಗಳ ನಡುವೆ ಕಾದಾಟ ನಡೆಯುವ ಪರಿಪಾಠ ಉಂಟು. ಗರ್ಭಾವಸ್ಥೆ ಅವಧಿ ದೀರ್ಘವಾಗಿದ್ದು ಸಮರ್ಥವಾದ ಮಿದುಳುಳ್ಳ ಇತರ ದೊಡ್ಡ ಗಾತ್ರದ ಪ್ರಾಣಿಗಳಲ್ಲಿರುವಂತೆ ಹುಟ್ಟುವ ಮರಿಗಳ ಸಂಖ್ಯೆ ಕಡಿಮೆ. ಹೊಸದಾಗಿ ಹುಟ್ಟಿದ ಮರಿ ಚೆನ್ನಾಗಿ ಬೆಳೆದಿರುತ್ತದಲ್ಲದೆ ಬೇಗ ಹೆಣ್ಣಿನೊಡನೆ ಸ್ವತಂತ್ರವಾಗಿ ಓಡಾಡುವ ಸಾಮರ್ಥ್ಯವನ್ನು ಪಡೆಯುತ್ತದೆ.

ಗೊರಸಿಗಳು ಆಹಾರವನ್ನು ಪಡೆಯುವ ಮತ್ತು ಅರಗಿಸಿಕೊಳ್ಳುವ ವಿಧಾನದಲ್ಲಿ ಬಹುಶಃ ಮೇಲೆ ಹೇಳಿದ ಲಕ್ಷಣಗಳಿಗಿಂತ ಹೆಚ್ಚು ಗಮನಾರ್ಹವಾದ ಮಾರ್ಪಾಡುಗಳನ್ನು ಕಾಣಬಹುದು. ಇವುಗಳ ಪೂರ್ವಜರಾದ ಕೀಟ ಭಕ್ಷಕಗಳಲ್ಲಿದ್ದ ದವಡೆ ಹಲ್ಲಿನ ತ್ರಿಕೋನಾಕಾರದ ವಿನ್ಯಾಸ ಇವುಗಳಲ್ಲಿ ಚಚ್ಚೌಕ ಮಾದರಿಯಾಗಿದೆ. ಹಲ್ಲುಗಳ ಕೋಡು ಕೆಲವು ಬದಲಾವಣೆಗಳಿಗೊಳಗಾಗಿ ಚೂಪು ಮೊನೆಯಂತಿರುವ ಹಲವಾರು ಏಣುಗಳುಳ್ಳ ಲೋಫೋಡಾಂಟ್ ಮಾದರಿಯ ಮೇಲ್ಮೈಯಾಗಿ ರೂಪುಗೊಂಡಿವೆ. ಮಿಗಿಲಾಗಿ ಇಡೀ ಹಲ್ಲೇ ಸಿಮೆಂಟಿನಿಂದ (ಮೂಳೆ) ಆವೃತವಾಗುತ್ತದೆ. ಬೇಗ ಸವೆಯಬಹುದಾದ ಮೋಟು ಬಗೆಯ ದವಡೆ ಹಲ್ಲುಗಳ (ಬ್ರಾಕಿಡಾಂಟ್) ಬದಲಾಗಿ ಉದ್ದವಾದ ಹೈಪೋಸೋಡಾಂಟ್ ಬಗೆ ಹಲ್ಲುಗಳು ಕಾಣಿಸಿಕೊಳ್ಳುತ್ತವೆ. ಈ ಪ್ರಾಣಿಗಳಲ್ಲಿ ಆಹಾರವನ್ನು ಅರೆಯುವ ಅವಶ್ಯಕತೆ ಹೆಚ್ಚಾಗಿರುವುದರಿಂದ ಸಾಮಾನ್ಯವಾಗಿ ಇಡೀ ದಂತಶ್ರೇಣಿ ಹಾಗೆಯೇ ಬಹುಕಾಲ ಉಳಿಯುವುದಲ್ಲದೆ ದವಡೆಹಲ್ಲುಗಳೂ ಮುಂದವಡೆ ಹಲ್ಲುಗಳೂ ಆಹಾರವನ್ನು ಅರೆಯಲು ಅನುಕೂಲವಾಗುವಂತೆ ಚಪ್ಪಟೆಯಾಗಿವೆ. ಈ ಲಕ್ಷಣದಲ್ಲಿ ಗೊರಸಿಗಳು ಮಾಂಸಾಹಾರಿಗಳಾದ ಕಾರ್ನಿವೋರ ಗಣದ ಪ್ರಾಣಿಗಳಿಂದ ಭಿನ್ನವೆನಿಸಿವೆ. ಗೊರಸಿಗಳ ಬಾಚಿಹಲ್ಲುಗಳು ಹುಲ್ಲು,

ಚಿಗುರು ಮುಂತಾದ ಸಸ್ಯಾಹಾರವನ್ನು ತುಂಡರಿಸಲು ಸಹಾಯಕವಾಗಿವೆ. ಕೆಲವೊಮ್ಮೆ (ಉದಾಹರಣೆಗೆ ಆರ್ಟಿಯೋಡ್ಯಾಕ್ಟಿಲ ಗಣದ ಗೊರಸಿಗಳು ) ಮೇಲ್ದವಡೆಯಲ್ಲಿನ ಬಾಚಿಹಲ್ಲುಗಳ ಸಾಲು ಅಳಿದು ಹೋಗಿರುತ್ತದೆ. ಇಂಥವುಗಳಲ್ಲಿ ಕೆಳದವಡೆಯ ಬಾಚಿಹಲ್ಲುಗಳು ಮತ್ತು ಕೊಂಬಿನಂತೆ ಇರುವ ಮೇಲ್ದುಟಿಗಳೇ ಆಹಾರವನ್ನು ಕತ್ತರಿಸಲು ಸಹಾಯಕವಾಗಿವೆ. ಅನೇಕ ಸಲ ಕೋರೆಹಲ್ಲು ಕಾಣೆಯಾಗಿರುತ್ತದೆ. ಆಹಾರವನ್ನು ತುಂಡರಿಸುವ ಮತ್ತು ಅರೆಯುವ ಕಾರ್ಯ ತುಟಿ, ನಾಲಿಗೆ ಮತ್ತು ದವಡೆಗಳು ಹಾಗೂ ಅವುಗಳ ಸ್ನಾಯುಗಳ ಹಲವಾರು ಮಾರ್ಪಾಟುಗಳಿಗೆ ಕಾರಣವಾಗಿದೆ. ದವಡೆ ತಲೆಬುರುಡೆಯೊಂದಿಗೆ ಚಪ್ಪಟೆ ಫಲಕದ ರೀತಿ ಕೀಲಿಸಿ ಕೊಂಡಿರುವುದರಿಂದ ಕೆಳದವಡೆ ಆವರ್ತಚಲನೆಯನ್ನು ತೋರುತ್ತದೆ. ಗೊರಸಿಗಳ ತಲೆಬುರುಡೆಯಲ್ಲಿ ಹಣೆಯ ಏಣು ಇಲ್ಲದಿರುವುದರಿಂದ ಅದು ಚಪ್ಪಟೆಯಾಗಿದೆ.

ಗೊರಸಿಗಳು ಸೇವಿಸುವ ಆಹಾರದಲ್ಲಿನ ಸೆಲ್ಯುಲೋಸಿನ ಪಚನಕ್ರಿಯೆಯಲ್ಲಿ ಸಹಾಯ ಮಾಡುವ ಬ್ಯಾಕ್ಟೀರಿಯಗಳಿಗಾಗಿ ಗೊರಸಿಗಳ ಜೀರ್ಣಾಂಗವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಒಂದು ಪ್ರತ್ಯೇಕ ಕೋಣೆಯಿರುತ್ತದೆ. ಈ ಕೋಣೆ ಆರ್ಟಿಯೋಡ್ಯಾಕ್ಟಿಲ ಪ್ರಾಣಿಗಳಲ್ಲಿ ಜಠರದಲ್ಲಿದ್ದರೆ ಪೆರಿಸೋಡ್ಯಾಕ್ಟಿಲ ಪ್ರಾಣಿಗಳಲ್ಲಿ ಸೀಕಂ ಭಾಗದಲ್ಲಿದೆ.

ಹೀಗೆ ಮೇಲೆ ವಿವರಿಸಿದ ಲಕ್ಷಣಗಳು ಗೊರಸಿಗಳಿಗೆ ಮಾತ್ರ ವಿಶಿಷ್ಟವಾಗಿದ್ದು ಎಲ್ಲವೂ ಆ ಪ್ರಾಣಿಗಳ ಸಸ್ಯಾಹಾರ ಜೀವನಕ್ಕೆ ಪೂರಕವಾಗಿವೆ.

ವರ್ಗೀಕರಣ: ಗೊರಸಿಗಳ ಗುಂಪನ್ನು ಪ್ರೋಟೋಅಂಗ್ಯುಲೇಟ, ಪೀನಂಗ್ಯುಲೇಟ, ಮೀಸಾಕ್ಸೋನಿಯ ಮತ್ತು ಪ್ಯಾರಾಕ್ಸೋನಿಯ ಎಂಬ 4 ಅಧಿಗಣಗಳಾಗಿ ವಿಂಗಡಿಸಲಾಗಿದೆ: ಪ್ರೋಟೋಅಂಗ್ಯುಲೇಟದಲ್ಲಿ ಕಾಂಡಿಲಾರ್ತ್ರ, ನೋಟೋಅಂಗ್ಯುಲೇಟ, ಲಿಟಾಪ್ಟರ್ನ, ಅಸ್ಟ್ರಪೊರೀರಿಯ ಮತ್ತು ಟ್ಯೂಬ್ಯುಲಿ ಡೆಂಟೇಟ ಎಂಬ ೫ ಗಣಗಳಿವೆ. ಪೀನಂಗ್ಯುಲೇಟ ಅಧಿಗಣ ಹೈರಕಾಯ್ಡಿಯ, ಪ್ರೊಬಾಸಿಡಿಯ, ಪ್ಯಾಂಟೊಡಾಂಟ, ಡೈನೋಸೆರೇಟ, ಪೈರೊರೀರಿಯ, ಎಂಬ್ರಿತಾಪೊಡ ಮತ್ತು ಸೈರೀನಿಯ ಎಂಬ 7 ಗಣಗಳನ್ನು ಒಳಗೊಂಡಿದೆ. ಪೆರಿಸೋಡ್ಯಾಕ್ಟಿಲ ಎಂಬ ಗಣ ಮೀಸಾಕ್ಸೋನಿಯ ಅಧಿಗಣಕ್ಕೂ ಆರ್ಟಿಯೊಡ್ಯಾಕ್ಟಿಲ ಎಂಬ ಗಣ ಪ್ಯಾರಾಕ್ಸೋನಿಯ ಅಧಿಗಣಕ್ಕೂ ಸೇರಿವೆ. (ಎಸ್. ಬಿ. ಎಂ.)

**ಗೊರಸು:** ಅಂಗ್ಯುಲೇಟ ಗುಂಪಿನ ಸ್ತನಿಯ ಕಾಲ್ಬೆರಳುಗಳ ತುದಿಯನ್ನು ಆವರಿಸುವ ಇಲ್ಲವೆ ರಕ್ಷಿಸುವ ಕೊಂಬಿನ ಬಾಗಿದ ರಚನೆ (ಹೂಫ್). ಬೇರೆ ಪ್ರಾಣಿಗಳಲ್ಲಿ ಕಂಡುಬರುವ ಉಗುರು ಇಲ್ಲವೆ ನಖಗಳನ್ನು ಹೋಲುವುದು.

ರಚನೆ: ಕುದುರೆಯ ಗೊರಸನ್ನು ಪ್ರರೂಪೀ ಉದಾಹರಣೆಯಾಗಿ ವಿವರಿಸಲಾಗಿದೆ. ಇದರಲ್ಲಿ ಗೊರಸಿನ ಗೋಡೆ (ಗೊರಸಿನ ಚಿಪ್ಪು-ವಾಲ್), ಅಂಗಾಲು (ಸೋಲ್), ಅಂಗಾಲಿನ ಮಧ್ಯೆ ಬೆಳೆಯುವ ಸ್ಥಿತಿಸ್ಥಾಪಕ ಗುಣವುಳ್ಳ ಕೊಂಬಿನ ಪದಾರ್ಥದಿಂದಾದ ಕಪ್ಪೆಯಂಥ ಭಾಗ-ಗೊರಸುಗಪ್ಪೆ (ಫ್ರಾಗ್) ಎಂಬ ಮೂರು ಭಾಗಗಳಿವೆ.



ವಿವಿಧ ಬಗೆ ಪ್ರಾಣಿಗಳ ಗೊರಸುಗಳು

ಗೊರಸಿನ ಗೋಡೆ: ಪ್ರಾಣಿ ತನ್ನ ಪಾದವನ್ನು ನೆಲದಮೇಲೆ ಇಟ್ಟಾಗ ಹೊರಗೆ ಕಾಣುವ ಭಾಗ. ಇದು ಗೊರಸಿನ ಮುಂಭಾಗ ಹಾಗೂ ಪಾರ್ಶ್ವಗಳನ್ನು ಆವರಿಸಿದೆ. ಗೊರಸಿನ ಹಿಂಭಾಗದಲ್ಲಿ ಭೂಮಿಗೆ ತಗಲುವ ಭಾಗಗಳಲ್ಲಿ ಸಹ ಗೋಡೆಯನ್ನು ಕಾಣಬಹುದು. ಅಧ್ಯಯನದ ದೃಷ್ಟಿಯಿಂದ ಗೋಡೆಯನ್ನು ಮೂರು ಭಾಗವಾಗಿ ವಿಂಗಡಿಸಬಹುದು. ೧. ಮುಂಗೊರಸು (ಟೋ), ೨. ಮುಂಗೊರಸಿಗೂ ಹಿಮ್ಮಡಿಗೂ ನಡುವಣ ಭಾಗ (ಕ್ವಾರ್ಟರ್ಸ್), ೩. ಹಿಮ್ಮಡಿ. ಗೊರಸಿನ ಹೊರಮೈ ಪಕ್ಕದಿಂದ ಪಕ್ಕಕ್ಕೆ ಉಬ್ಬಿದೆ. ಮೇಲ್ಮೈ ನಯವಾಗಿದೆ. ಗೊರಸಿನ ಮೇಲೆ ಕ್ರಮಬದ್ಧವಾಗಿ ಜೋಡಣೆಗೊಂಡಿರುವ ನವುರಾದ ಕೂಡುಗೆರೆಗಳು ಕಾಣಬರುತ್ತವೆ. ಇವು ಗೊರಸು ಚರ್ಮಕ್ಕೆ ಸೇರುವ ಭಾಗಕ್ಕೆ (ಗೊರಸಿನ ಸುಳಿ) ನೇರವಾಗಿರುತ್ತವೆ. ಗೊರಸಿನ ಒಳಭಾಗದಲ್ಲಿ ಒಂದು ಕುಳಿಯೂ ಅನೇಕ ಪೊರೆಗಳೂ ಇವೆ.

ಅಂಗಾಲು: ಇದು ಅರ್ಧ ಚಂದ್ರಾಕಾರವಾಗಿದೆ. ಇದರಲ್ಲಿ ಎರಡು ಮುಖಗಳೂ ಎರಡು ಅಂಚುಗಳೂ ಇವೆ. ಒಳಮುಖ ಹೊರ ಉಬ್ಬಿದೆ. ಇದರಲ್ಲಿ ಯಾಳಿಕೆಯಾಕಾರದ ತೂತುಗಳಿವೆ. ಇವುಗಳಲ್ಲಿ ಅಂಗಾಲಿನ ಸಣ್ಣ ಸಣ್ಣ ಮೆದು ಗಂಟುಗಳನ್ನು ಕಾಣಬಹುದು. ಅಂಗಾಲಿನ ಹೊರಮುಖವೂ ಸಾಮಾನ್ಯವಾಗಿ ಬಾಗಿದ್ದು ಒಳಮುಖದ ವಿರುದ್ಧ ರೀತಿ ಹೊರ ಮುಖದ ಹಿಂದಿನ ಭಾಗ ಮುಂದಿನ ಭಾಗಕ್ಕಿಂತ ಬಹಳ ಗಡುಸಾಗಿದೆ.

ಗೊರಸುಗಪ್ಪೆ: ಇದು ಬೆಣೆಯಾಕಾರದಲ್ಲಿದೆ. ತುಂಡುಗಳು ಹಾಗೂ ಅಂಗಾಲಿನ ಮಧ್ಯೆ ಇರುವ ಕೋನವಲಯವನ್ನು ಆವರಿಸಿದೆ. ಗೊರಸುಗಪ್ಪೆಯಲ್ಲಿ ನಾಲ್ಕು ಮುಖಗಳನ್ನೂ ಒಂದು ಬುಡವನ್ನೂ ಒಂದು ಶೃಂಗವನ್ನೂ ಕಾಣಬಹುದು.

ಗೊರಸಿನ ಸೂಕ್ಷ್ಮ ರಚನೆ: ಯಾವುದೇ ಚರ್ಮದಲ್ಲಿ ಕಾಣಬರುವ ಸ್ಟ್ರಾಟಮ್ ಜರ್ಮಿನೇಟಿವಮ್ ಎಂಬ ಮೃದುಪೊರೆ ಗೊರಸಿನಲ್ಲಿ ಸಹ ಇದೆ. ಪೊರೆಯ ಸುತ್ತ ಕೊಂಬಿನ ಆವರಣ ಉಂಟು. ಕೊಂಬಿನ ಕಣಗಳ ಸಂಖ್ಯೆ ವೃದ್ಧಿಯಾಗುವುದರ ಮೂಲಕ ಗೊರಸಿನ ಬೆಳವಣಿಗೆ ಮುಂದುವರಿಯುತ್ತದೆ. ಗೊರಸಿನ ಗೋಡೆಯಲ್ಲಿ ಮೂರು ಸೂಕ್ಷ್ಮ ಪದರಗಳಿವೆ: ಪೆರಿಯೋಪಲ್ ಮತ್ತು ಸ್ಟ್ರಾಟಂ ಟೆಕ್ಟೋರಿಯಂಗಳಿಂದ ಕೂಡಿದ ಹೊರಪದರ, ತುಂಬ ದಪ್ಪವಾದ ಮಧ್ಯ ಪದರ ಮತ್ತು ಸ್ಟ್ರಾಟಂ ಲ್ಯಾಮೆಲೇಟ ಎಂಬ ಒಳಪದರ. ಒಳಪದರದಲ್ಲಿ ಸ್ವಾಭಾವಿಕ ವರ್ಣದ್ರವ್ಯ ಇರುವುದಿಲ್ಲ. ಗೊರಸುಗಪ್ಪೆ ಸಾಮಾನ್ಯವಾಗಿ ನಯವಾದ ಕೊಂಬಿನಂಥ ಅಂಗಾಂಶದಿಂದ ಕೂಡಿದೆ. ಗೊರಸುಗೋಡೆ ಮತ್ತು ಅಂಗಾಲುಗಳಿಗೆ ಹೋಲಿಸಿದರೆ ಗೊರಸುಗಪ್ಪೆಗೆ ಹೆಚ್ಚಿನ ಸ್ಥಿತಿಸ್ಥಾಪಕ ಶಕ್ತಿ ಉಂಟು. ಗೊರಸಿನಲ್ಲಿ ರಕ್ತನಾಳಗಳಾಗಲಿ ನರಗಳಾಗಲಿ ಇಲ್ಲ.

ಗೊರಸಿನ ರೋಗಗಳು: ಗೊರಸಿಗೆ ಬರುವ ರೋಗಗಳಲ್ಲಿ ಮುಖ್ಯವಾದುವನ್ನು ಮುಂದೆ ವಿವರಿಸಲಾಗಿದೆ.

ಗೊರಸಿನ ಕೊಳೆತ: ಗೊರಸಿನ ಒಳಗಿನ ಅಂಗಾಂಶದ ಕೊಳೆತಕ್ಕೆ ಈ ಹೆಸರಿದೆ. ಇದು ಸ್ಫೀರೊಫೋರಸ್ ನೆಕ್ರೊಫೋರಸ್ ಎಂಬ ಬ್ಯಾಕ್ಟೀರಿಯಾದಿಂದ ಉಂಟಾಗುತ್ತದೆ. ಚರ್ಮದಲ್ಲಾಗುವ ಗಾಯಗಳ ಮೂಲಕ ಒಳಹೊಗುವ ಈ ಸೂಕ್ಷ್ಮಜೀವಿಗಳು ಕೀಲುಗಳನ್ನೂ ಸ್ನಾಯು ತಂತುಗಳ ಹೊರಪೊರೆಯನ್ನೂ ನಾಶಪಡಿಸುತ್ತವೆ. ಇದರಿಂದ ಕಾಲಿನ ಸ್ಥಿತಿ ಕೆಟ್ಟು ಗೊರಸಿಗೂ ಹರಡಿ ಅದು ಕೊಳೆಯತೊಡಗುತ್ತದೆ. ಕಾಲು ಊದಿಕೊಳ್ಳುವುದು. ಗೊರಸಿನ ಸುಳಿಯ ಸುತ್ತಲೂ ಇರುವ ಚರ್ಮ ಕೆಡುವುದು, ಗೊರಸಿನ ಅಂಗಾಂಶ ಬಾತುಕೊಳ್ಳುವುದು, ರಕ್ತದ ಒತ್ತಡ ಹೆಚ್ಚಿ ಮೈ ಬಿಸಿಯಾಗುವುದು, ಮತ್ತು ಗೊರಸಿನ ಮಧ್ಯೆ ಕೀವು ಹಾಗೂ ಅಂಗಾಂಶದ್ರವ ಸ್ರವಿಸುವುದು- ಇವು ಈ ರೋಗದ ಪ್ರಮುಖ ಲಕ್ಷಣಗಳು. ರೋಗ ಪೀಡಿತ ಪ್ರಾಣಿ ತೀವ್ರರೂಪದ ಕುಂಟಿನಿಂದ ನರಳುತ್ತಿದ್ದು ನಡೆಯಲು ಅಶಕ್ತವಾಗುತ್ತದೆ. ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಮಲಿನ ವಾತಾವರಣದಲ್ಲಿ ಸದಾಕಾಲ ಇರುವ ಪ್ರಾಣಿಗಳಲ್ಲಿ ಗೊರಸಿನ ಕೊಳೆತ ವಿಶೇಷವಾಗಿರುವುದರಿಂದ ಅಂಥ ಸ್ಥಳಗಳಿಂದ ಪ್ರಾಣಿಯನ್ನು ದೂರವಿರಿಸಿ ಗೊರಸನ್ನು ಕ್ರಿಮಿನಾಶಕಗಳಿಂದ (2.5% ಕಾಪರ್ ಸಲ್ಫೇಟ್ ) ತೊಳೆಯಬೇಕು.

ಕುರಿ ಮತ್ತು ಮೇಕೆಗಳ ಗೊರಸು ರೋಗಗಳು: ಕುರಿಗಳಲ್ಲಿ ಸಹ ಮೇಲೆ ಹೇಳಿದ ಬಗೆಯ ಗೊರಸಿನ ಕೊಳೆತವನ್ನು ಕಾಣಬಹುದು. ಇದರಿಂದ ಕೆಲವೊಮ್ಮೆ ಗೊರಸಿನ ಹೊದಿಕೆ ಕಾಲಿನಿಂದ ಬಿದ್ದು ಹೋಗುತ್ತದೆ. ಫ್ಯೂಸಿಫಾರ್ಮಿಸ್ ನೋಡೋಸಸ್, ಸ್ಪೈರೊಕೀಟ ಪೆನಾರ್ತ, ಸ್ಟ್ರಾಂಗಿಲಾಯ್ಡಿಸ್, ಬ್ಯೂನೋಸ್ಟೋಮಮ್ ಇತ್ಯಾದಿ ಕ್ರಿಮಿಗಳಿಂದ ಈ ರೋಗ ಉಂಟಾಗುತ್ತದೆ. ತೇವಪೂರಿತ ನೆಲದಲ್ಲಿ ವಾಸಿಸುವ ರೋಗಾಣುಗಳು ಗೊರಸಿನ ಮಧ್ಯೆ ಇಲ್ಲವೆ ಕಾಲಿನಲ್ಲಿ ಉಂಟಾಗುವ ಗಾಯಗಳ ಮೂಲಕ ಪ್ರಾಣಿದೇಹವನ್ನು ಪ್ರವೇಶಿಸುತ್ತವೆ. ರೊಪ್ಪಗಳನ್ನು ಶುಚಿಯಾಗಿಡುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ಕಾಲಿನ ಕುರು ಸಹ ಕುರಿಗಳಲ್ಲಿ ಕಂಡು ಬರುವ ಬಲು ಸಾಮಾನ್ಯ ಬೇನೆ. ದನಗಳಲ್ಲಿ ಗೊರಸಿನ ಕೊಳೆತವನ್ನು ಉಂಟು ಮಾಡುವ ಸ್ಫೀರೊಫೋರಸ್ ನೆಕ್ರೊಫೋರಸ್ ಸೂಕ್ಷ್ಮ ಜೀವಿಯೇ ಈ ರೋಗಕ್ಕೂ ಕಾರಣ. ರೋಗಪೀಡಿತ ಪ್ರಾಣಿಗಳ ಗೊರಸಿನ ಹೊರನೋಟದಲ್ಲಿ ಮೊದಲು ಯಾವ ಬದಲಾವಣೆಗಳೂ ಕಂಡುಬರುವುದಿಲ್ಲ. ಆದರೆ ಕಾಲು ಬಿಸಿಯಾಗಿರುತ್ತದೆ. ಕೊಂಚಕಾಲದ ಅನಂತರ ಕಾಲು ಊದಿಕೊಳ್ಳುತ್ತದೆ. ಆಗಾಗ್ಗೆ ಹಳದಿಬಣ್ಣದ ಕೀವು ಹೊರ ಸುರಿಯುತ್ತದೆ. ಕುರಿ ಕುಂಟ ತೊಡಗುತ್ತದೆ. ಸೀಳ್ಗೊರಸಿನ ಪ್ರಾಣಿಗಳಿಗೆ ಬರುವ ಇನ್ನೊಂದು ರೋಗ ಜರಸಲು ಬೇನೆ. ರೋಗಪೀಡಿತ ಪ್ರಾಣಿಗಳ ಗೊರಸಿನ ಸುತ್ತ ಉರಿಯೂತವುಂಟಾಗಿ ಆಗಾಗ್ಗೆ ಕೀವು ಸ್ರಾವವಾಗುತ್ತದೆ. ಕೀವಿನಿಂದ ಆಕರ್ಷಿತವಾಗುವ ನೊಣಗಳು ಗೊರಸನ್ನು ಮುತ್ತಿ ಅಲ್ಲಿ ಮೊಟ್ಟೆಯಿಡುತ್ತವೆ. ಮೊಟ್ಟೆಯಿಂದ ಹೊರ ಬರುವ ಮರಿಗಳು ಗೊರಸಿನ ಮಧ್ಯೆ ಸೇರಿಕೊಂಡು ಅದನ್ನು ಇನ್ನಷ್ಟು ಹಾಳು ಮಾಡುತ್ತವೆ. ಗೊರಸಿನ ಹೊರಪೊರೆ ಒಮ್ಮೊಮ್ಮೆ ಕಳಚಿ ಬೀಳುತ್ತದೆ.

ಕುದುರೆಗಳ ಗೊರಸು ರೋಗಗಳು: 1. ಗೊರಸಿನ ಪೊರೆಯುರಿಯೂತ: ಸಾಮಾನ್ಯವಾಗಿ ಕುದುರೆಯ ಮುಂಗಾಲುಗಳಿಗೆ ಮಾತ್ರ ಈ ರೋಗ ಬರುತ್ತದೆ. ಆದರೆ ಹಿಂಗಾಲುಗಳಿಗೂ ಹರಡಬಹುದು. ದೇಹದ ಉಷ್ಣತೆಯ ಹಾಗೂ ಉಸಿರಾಟದ ಹೆಚ್ಚಳ, ಬೆವರುವಿಕೆ, ಕಾಲನ್ನು ಸಾಮಾನ್ಯವಾಗಿ ಇಡುವುದಕ್ಕಿಂತ ಹೆಚ್ಚು ಹಿಗ್ಗಲಿಸಿ ಇಡುವುದು– ಇವೆಲ್ಲ ಈ ರೋಗದ ಪ್ರಥಮ ಲಕ್ಷಣಗಳು. ರೋಗ ಹೆಚ್ಚಿದಂತೆಲ್ಲ ಗೊರಸಿನ ಆಕಾರ ಬದಲಾಗುತ್ತದೆ. ಗೊರಸಿನ ಗೋಡೆಯ ಮುಂಭಾಗದಲ್ಲಿ ತಗ್ಗು ಉಂಟಾಗುತ್ತದೆ. ಹಿಮ್ಮಡಿಯ ಎತ್ತರ ಹೆಚ್ಚುತ್ತದೆ. ಗೊರಸಿನ ಹೊರ ಪೊರೆಯ ಮೇಲೆ ಸುಕ್ಕುಗಳು ಉಂಟಾಗುತ್ತವೆ. ಕಾರ್ಟಿಸೋನ್ ಮತ್ತು ಆಂಟಿ ಹಿಸ್ಟಮೈನುಗಳ ಬಳಕೆಯಿಂದ ಪೊರೆಯುರಿಯೂತವನ್ನು ತಡೆಗಟ್ಟಬಹುದು.

2. ಗೊರಸಿನ ಅಂಗಾಲಿನ ಹುಣ್ಣು: ಸ್ಫೀರೊಫೊರಸ್ ನೆಕ್ರೊಫೋರಸ್ ಜೀವಿಯಿಂದ ಉಂಟಾಗುವ ರೋಗ ಇದು. ಬರಿಯ ಅಂಗಾಲು ಮಾತ್ರವಲ್ಲದೆ ಗೊರಸುಗಪ್ಪೆಗೂ ಇದು ಹರಡಬಹುದು. ಗೊರಸಿನಿಂದ ಒಂದು ರೀತಿಯ ದುರ್ವಾಸನೆ ಹೊರಡುವುದು ಮತ್ತು ಕಪ್ಪು ಬಣ್ಣದ ಕೀವು ಸುರಿಯುವುದು ಈ ರೋಗದ ಮುಖ್ಯ ಲಕ್ಷಣಗಳು. ತೇವಪೂರಿತವಾದ ಮತ್ತು ಮಲ ಮೂತ್ರಗಳಿಂದ ಗಲೀಜಾದ ಲಾಯಗಳಲ್ಲಿ ಈ ರೋಗ ಹೆಚ್ಚಾಗಿರುವುದರಿಂದ ಅಂಥ ಪ್ರದೇಶಗಳನ್ನು ಶುಚಿಯಾಗಿಡುವುದರಿಂದಲೂ ಗೊರಸನ್ನು ಕ್ರಿಮಿನಾಶಕಗಳಿಂದ ತೊಳೆಯುವುದರಿಂದಲೂ ರೋಗವನ್ನು ತಡೆಯಬಹುದು.

3. ಗೊರಸುತ್ತು: ಅತಿ ಹೆಚ್ಚು ಕೆಲಸಮಾಡುವ ಕುದುರೆಗಳಲ್ಲಿ ಈ ರೋಗ ಬಹಳ ಸಾಮಾನ್ಯವಾಗಿ ಕಂಡುಬರುತ್ತದೆ. ಇದರಿಂದ ಅಂಗಾಲು, ಗೊರಸುಗಪ್ಪೆಯನ್ನು ಆವರಿಸುವುದಲ್ಲದೆ ಗೊರಸಿನ ಅಂಗಾಂಶ ಹೆಚ್ಚು ಹೆಚ್ಚು ಬೆಳೆಯುತ್ತ ಹೋಗುತ್ತದೆ. ರೋಗಪೀಡಿತ ಕುದುರೆಗಳ ಬಳಿ ಸಾಮಾನ್ಯವಾಗಿ ಕೆಟ್ಟ ವಾಸನೆ ಇರುತ್ತದೆ. ದಿನಗಳೆದಂತೆ ಗೊರಸಿನ ಮುಚ್ಚಳ ಸಡಿಲವಾಗಿ ಕೋರಿಯಮ್ ಭಾಗ ಎದ್ದು ಕಾಣತೊಡಗುತ್ತದೆ. ಕೋರಿಯಮಿನ ಮೇಲ್ಮೈ ಮುಳ್ಳುಗಳಿಂದ ಕೂಡಿದಂತಿರುತ್ತದೆ. ಒತ್ತಡದ ಬ್ಯಾಂಡೇಜ್ ಕಟ್ಟುವುದರಿಂದ ಈ ರೋಗವನ್ನು ಹತೋಟಿಯಲ್ಲಿಡಬಹುದು. ಇವುಗಳಲ್ಲದೆ ಕುದುರೆಗಳಲ್ಲಿ ಆಣಿ, ಗೊರಸಿನ ಪಾರ್ಶ್ವದ ಮೃದ್ವಸ್ಥಿಯ ಉರಿಯೂತ ಮತ್ತು ಗೊರಸೀಳುಗಳು ಉಂಟಾಗಬಹುದು.

ಗೊರಸಿನ ದುರಸ್ತಿ: ಅನೇಕ ಸಾಕುಪ್ರಾಣಿಗಳಲ್ಲಿ ರೋಗಗಳಿಂದ ಆಕಸ್ಮಿಕವಾಗಿ ಬೀಳುವ ಏಟುಗಳಿಂದ, ಇಲ್ಲವೇ ಗೊರಸಿನಲ್ಲಿ ಸ್ವಾಭಾವಿಕವಾಗಿಯೇ ಕಾಣಬರುವ ಊನಗಳಿಂದ ಗೊರಸಿನ ಆಕಾರ ಕೆಟ್ಟು ಹೋಗಬಹುದು. ಆಗ ಪ್ರಾಣಿಗಳು ನಿಷ್ಪ್ರಯೋಜಕವಾಗುತ್ತವೆ. ಇಂಥ ಪ್ರಾಣಿಗಳ ಗೊರಸನ್ನು ರಿಪೇರಿ ಮಾಡಿ ಮೊದಲಿನ ಸ್ಥಿತಿಗೆ ತರಬಹುದು ಮತ್ತು ವಿಕಾರಗಳನ್ನು ಸರಿಪಡಿಸಬಹುದು. ಹೀಗೆ ಗೊರಸನ್ನು ದುರಸ್ತಿ ಮಾಡಲು ಆಕ್ರಿಲಿಕ್ ಅಂಶವನ್ನುಳ್ಳ ಒಂದು ರೀತಿಯ ಪ್ಲಾಸ್ಟಿಕ್ಕನ್ನು ಬಳಸುವ ರೂಢಿಯಿದೆ. ಇದು ಬಿಳಿಯ ಬಣ್ಣದ್ದು ಗಾಳಿಗೆ ಒಡ್ಡಿದಾಗ ಬೇಗ ಗಟ್ಟಿಯಾಗುವ ಗುಣವುಳ್ಳದ್ದೂ ಆಗಿದೆ. ಗಟ್ಟಿಯಾದಾಗ ಗೊರಸಿನ ಅಂಗಾಂಶದಂತೆಯೇ ಶಕ್ತಿಯುತವಾಗುತ್ತದೆ. ಗೊರಸು ಸೀಳುಗೊಂಡಿದ್ದರೆ ಈ ವಸ್ತುವಿನ ಪುಡಿಯನ್ನು ಹಾಕುವಾಗ ಅದರ ಪರಿಮಾಣ ಆಕಸ್ಮಿಕವಾಗಿ ಕೊಂಚ ಹೆಚ್ಚಾಗಬಹುದು. ಹೀಗೆ ಹೆಚ್ಚಾದ ಪ್ಲಾಸ್ಟಿಕ್ಕನ್ನು ಅರದಿಂದ ಉಜ್ಜಿ ಇಲ್ಲವೆ ಚಾಕುವಿನಿಂದ ಕತ್ತರಿಸಿ ತೆಗೆದು ಹಾಕಬಹುದು. ***

**ಗೊರಿಲ:** ಮ್ಯಾಮೇಲಿಯ ವರ್ಗ ಹಾಗೂ ಪ್ರೈಮೇಟ್ ಗಣಗಳ ಪಾಂಗಿಡೆ ಕುಟುಂಬಕ್ಕೆ ಸೇರಿದ ಒಂದು ವನ್ಯವಾಸಿ ವಾನರ. ಇದರ ತವರು ಆಫ್ರಿಕದ ಉಷ್ಣವಲಯ. ಚಿಂಪಾಂಜಿ ಮತ್ತು ಒರಾಂಗೂಟಾನ್‌ಗಳ ಸಂಬಂಧಿ. ಇದಕ್ಕೂ ಅವುಗಳಂತೆ ಬಾಲವಿಲ್ಲ. ಒರಾಂಗೂಟಾನ್‌ಗಿಂತ ಚಿಂಪಾಂಜಿಯೊಂದಿಗೇ ಇದರ ಸಂಬಂಧ ಹೆಚ್ಚು. ಗೊರಿಲವೂ ಚಿಂಪಾಂಜಿಯೂ ಒಂದೇ ಪೂರ್ವಜ ಕಪಿಯಿಂದ ಉದ್ಭವಿಸಿದುವು ಎಂದು ಹೇಳಲಾಗಿದೆ. ಗೊರಿಲದಲ್ಲಿ ಒಂದೇ ಒಂದು ಪ್ರಭೇದ ಉಂಟು. ಈ ಪ್ರಭೇದದ ವೈಜ್ಞಾನಿಕ ನಾಮ ಗೊರಿಲ ಗೊರಿಲ. ಇದರಲ್ಲಿ ಎರಡು ಉಪಪ್ರಭೇದಗಳಿವೆ: 1. ಸಮತಟ್ಟಾದ ಕಾಡು ಪ್ರದೇಶಗಳಲ್ಲಿ ವಾಸಿಸುವ ಗೊರಿಲ ಗೊರಿಲ ಗೊರಿಲ (ಲೋಲ್ಯಾಂಡ್ ಗೊರಿಲ), 2. ಪರ್ವತ ಪ್ರದೇಶಗಳಲ್ಲಿ ವಾಸಿಸುವ ಗೊರಿಲ ಗೊರಿಲ ಬೆರಿಂಗೈ (ಮೌಂಟನ್ ಗೊರಿಲ). ಮೊದಲನೆಯ ಉಪಪ್ರಭೇದ ಆಫ್ರಿಕದ ಸಮಭಾಜಕವೃತ್ತ ಪ್ರದೇಶಗಳ ಪಶ್ಚಿಮ ಭಾಗದಲ್ಲೂ (ಗಿನಿ ಖಾರಿಯ ಪ್ರದೇಶದ ದಟ್ಟ ಕಾಡುಗಳಲ್ಲಿ) ಎರಡನೆಯ ಉಪಪ್ರಭೇದ ಮಧ್ಯ ಆಫ್ರಿಕದಲ್ಲಿರುವ ಎಡ್ವರ್ಡ್ ಮತ್ತ ಕೀವಿ ಸರೋವರಗಳ ನಡುವೆ ಇರುವ ವಿರುಂಗ ಅಗ್ನಿಪರ್ವತಗಳ 3500 ಮೀ ಎತ್ತರದವರೆಗಿನ ಪ್ರದೇಶಗಳಲ್ಲೂ ಕಾಣದೊರೆಯುತ್ತವೆ.

ಗೊರಿಲ ವಾನರಗಳಲ್ಲೆಲ್ಲ ಅತ್ಯಂತ ದೊಡ್ಡ ಪ್ರಾಣಿ. ಅಷ್ಟೇ ಅಲ್ಲ. ಇಂದು ಜೀವಿಸಿರುವ ಪ್ರೈಮೇಟುಗಳಲ್ಲೆ ಇದು ಅತ್ಯಂತ ಭಾರಿಯಾದುದು. ಪೂರ್ಣ ಬೆಳೆದ ಗಂಡು ಗೊರಿಲ್ಲಾದ ಎತ್ತರ 1.25–1.75 ಮೀ. ಮಂಡಿಯನ್ನು ನೆಟ್ಟಗೆ ಮಾಡಿದರೆ ಎತ್ತರ ಇನ್ನೂ ಹೆಚ್ಚಬಲ್ಲುದು. (ಸು. 2.30 ಮೀ ವರೆಗೆ). ಗೊರಿಲದ ಕೈ ಹರವು 2.0–2.75 ಮೀ. ಎದೆಯ ಸುತ್ತಳತೆ 1.75 ಮೀ. ದೇಹದ ತೂಕ ಗಂಡಿನಲ್ಲಿ 135–275 ಕಿಗ್ರಾಂ, ಹೆಣ್ಣಿನಲ್ಲಿ 70–140 ಕಿಗ್ರಾಂ. ಪ್ರಾಣಿಸಂಗ್ರಹಾಲಯಗಳಲ್ಲಿನ ಗೊರಿಲಗಳಲ್ಲಿ 350 ಕಿಗ್ರಾಂ ವರೆಗೂ ಇರಬಹುದು. ಗೊರಿಲದ ಮೈಮೇಲೆ ಕಪ್ಪುಬಣ್ಣದ ಇಲ್ಲವೆ ಬೂದು ಮಿಶ್ರಿತ ಕಪ್ಪು ಬಣ್ಣದ ದಟ್ಟವಾದ ಕೂದಲುಗಳಿವೆ. ನೆತ್ತಿಯ ಮೇಲೆ ಕೆಂಪು ಬಣ್ಣದ ಕೂದಲುಗಳಿರುವುದುಂಟು. ಗಂಡು ಗೊರಿಲ್ಲಗಳಿಗೆ ಸುಮಾರು 10 ವರ್ಷ ವಯಸ್ಸಾದಾಗ ಅವುಗಳ ಬೆನ್ನಮೇಲಿನ ಕೂದಲುಗಳು ಬಿಳಿಯ ಬಣ್ಣಕ್ಕೆ ತಿರುಗುತ್ತವೆ. ಮುಖ, ಮುಂಗೈ ಮತ್ತು ಪಾದಗಳ ಮೇಲೆ ಕೂದಲಿರುವುದಿಲ್ಲ. ಹೆಚ್ಚು ವಯಸ್ಸಾದ ಗಂಡುಗಳ ಎದೆಯೂ ರೋಮರಹಿತವಾಗಿರುತ್ತದೆ. ಗೊರಿಲಗಳ ಕಿವಿಗಳ ಅಲಾಗಳು ಬಲು ಚಿಕ್ಕವು. ಮೂಗಿನ ಹೊಳ್ಳೆಗಳ ಸುತ್ತ ಉಬ್ಬುಗಳಿವೆ. ಕಣ್ಣುಗಳು ಚಿಕ್ಕವು: ಚೆನ್ನಾಗಿ ಉಬ್ಬಿಕೊಂಡಿರುವ ಹಣೆಯ ಮೂಳೆಗಳ ಕೆಳಗೆ ಹುದುಗಿದಂತಿವೆ.

ಗೊರಿಲ ಸಸ್ಯಾಹಾರಿ. ಹಲವಾರು ಬಗೆಯ ಗಿಡಗಳ ಎಳೆಯ ಕಾಂಡ, ಎಲೆ, ಬಲಿತ ಕಾಂಡಗಳ ತಿರುಳು, ತೊಗಟೆ ಮುಂತಾದುವೇ ಇದರ ಪ್ರಧಾನ ಆಹಾರ. ಹಣ್ಣು, ಬೀಜ ಇತ್ಯಾದಿಗಳನ್ನು ತಿನ್ನುವುದಿದೆಯಾದರೂ ಇವು ಗೊರಿಲಕ್ಕೆ ಅಷ್ಟಾಗಿ ಅಚ್ಚು ಮೆಚ್ಚಿನ ಆಹಾರಗಳಲ್ಲ. ಪ್ರಾಣಿಸಂಗ್ರಹಾಲಯಗಳಲ್ಲಿ ಗೊರಿಲ ಮಾಂಸವನ್ನು ತಿನ್ನುತ್ತದೆ. ಗೊರಿಲದ ಇನ್ನೊಂದು ವಿಚಿತ್ರ ಲಕ್ಷಣವೆಂದರೆ ನೀರೇ ಕುಡಿಯದಿರುವುದು.

ಗೊರಿಲ ಸಮಾಜಜೀವಿ. 5–20 ಪ್ರಾಣಿಗಳನ್ನೊಳಗೊಂಡ ಸಣ್ಣ ಕುಟುಂಬ ಇಲ್ಲವೆ ಗುಂಪುಗಳಲ್ಲಿ ವಾಸಿಸುತ್ತವೆ. ಪ್ರತಿಯೊಂದು ಗುಂಪಿಗೆ ಬಿಳಿಯ ಬಣ್ಣದ ಬೆನ್ನಿನ ಗಂಡು ಗೊರಿಲವೇ ನಾಯಕ. ನಾಯಕನಿಗೆ ಗುಂಪಿನ ಎಲ್ಲ ಗೊರಿಲಗಳೂ ಅತ್ಯಂತ ವಿಧೇಯವಾಗಿ ನಡೆದುಕೊಳ್ಳುತ್ತವೆ. ತನಗೆ ಯಾವ ಬಗೆಯ ವಿರೋಧವಿಲ್ಲದಿದ್ದರೂ ನಾಯಕ ಮಾತ್ರ ಎಂದೂ ತನ್ನ ದರ್ಪವನ್ನು ಒರಟಾಗಿ ತೋರ್ಪಡಿಸುವುದಾಗಲೀ ಅಧಿಕಾರವನ್ನು ಚಲಾಯಿಸುವುದಾಗಲಿ ಇಲ್ಲ. ಯಾವಾಗಲೂ ಶಾಂತವಾಗಿ, ತಾಳ್ಮೆಯಿಂದ ಇರುತ್ತದೆ. ಹೀಗಾಗಿ ಗುಂಪಿನ ಇತರ ಪ್ರಾಣಿಗಳಿಗೆ ಅದು ಬಲು ಅಚ್ಚುಮೆಚ್ಚಾಗಿರುತ್ತದೆ. ಮರಿಗಳಂತೂ ನಾಯಕನ ಮೇಲೆ ಹತ್ತುವುದು, ಅದರ ತೊಡೆಯ ಮೇಲೆ ಕುಳಿತು ಕೊಳ್ಳುವುದು ಮುಂತಾದವನ್ನೆಲ್ಲ ಮಾಡುತ್ತವೆ. ಇವೆಲ್ಲುವನ್ನೂ ತಾಳ್ಮೆಯಿಂದ ಸಹಿಸುವ ಗಂಡು ಗಲಾಟೆ ವಿಪರೀತವಾದಾಗ ಮಾತ್ರ ಪ್ರತಿಕ್ರಿಯೆಯನ್ನು ತೋರುತ್ತದೆ. ಆಗಲೂ ಹೊಡೆಯುವುದಾಗಲಿ ಬಡಿಯುವುದಾಗಲಿ ಮಾಡದು; ಒಂದು ಸಲ ಮರಿಗಳನ್ನು ದುರುಗುಟ್ಟಿ ನೋಡುತ್ತದೆ ಅಷ್ಟೆ. ಮರಿಗಳ ಚೇಷ್ಟೆ ನಿಲ್ಲುತ್ತದೆ. ಗುಂಪಿನ ಮುಂದಾಳು ಇಷ್ಟು ಶಾಂತಸ್ವಭಾವದ್ದಾದರೂ ಗುಂಪಿಗೆ ಅಪಾಯವೊದಗಿದಾಗ, ಚಿರತೆ ಮುಂತಾದ ಶತ್ರುಗಳು ಮುತ್ತಿದಾಗ ರಕ್ಷಣೆಗೆ ಸಿದ್ಧವಾಗುತ್ತದೆ. ತನ್ನ ಎದೆಯನ್ನು ಬಲವಾಗಿ ಬಡಿದುಕೊಳ್ಳುತ್ತಾ, ಕೂಗುತ್ತ ಶತ್ರುಗಳನ್ನು ಹೆದರಿಸುತ್ತದೆ. ಒಂದೊಂದು ಗುಂಪಿನಲ್ಲಿ ಒಬ್ಬ ನಾಯಕ, ಕೆಲವು ಪ್ರೌಢ ವಯಸ್ಸಿನ ಗಂಡುಗಳು, ಹೆಣ್ಣುಗಳು, ಮತ್ತು ಮರಿಗಳು ಇರುತ್ತವೆ. ಕೆಲವೊಮ್ಮೆ ಬರಿಯ ಮುಂದಾಳು, ಹೆಣ್ಣುಗಳು ಮತ್ತು ಮರಿಗಳು ಮಾತ್ರ ಇರಬಹುದು. ಗುಂಪಿನ ಪ್ರತಿಯೊಂದು ಗೊರಿಲಕ್ಕೂ ಅದರದೇ ಆದ ಸ್ಥಾನಮಾನ ಇರುತ್ತದೆ. ಯಾವ ಪ್ರಾಣಿಯೂ ತನ್ನ ಸ್ಥಾನವನ್ನು ಮೀರಿ ವರ್ತಿಸುವುದಿಲ್ಲ. ಪ್ರತಿಯೊಂದು ಗುಂಪಿಗೂ ಅದರದೇ ಆದ ಅಧೀನ ಪ್ರಾಂತ್ಯವಿರುತ್ತದೆ. ಈ ಪ್ರಾಂತ್ಯದ ವಿಸ್ತೀರ್ಣ 25–40 ಚದರ ಕಿಮೀ. ಕೆಲವು ಸಲ ಒಂದೇ ಪ್ರದೇಶದಲ್ಲಿ ಹಲವಾರು ಗುಂಪುಗಳಿರಬಹುದು. ಹೀಗಿರುವಾಗ ಗುಂಪುಗಳು ಎದುರು ಬದುರು ಬರಬಹುದು. ಹೀಗೆ ಭೇಟಿಯಾದಾಗ ಅವುಗಳ ನಡುವೆ ಯಾವ ಬಗೆಯ ಘರ್ಷಣೆಯೂ ನಡೆಯುವುದಿಲ್ಲ. ಎರಡು ಗುಂಪುಗಳ ನಾಯಕ ಗೊರಿಲಗಳು ಮಾತ್ರ ಒಂದೇ ಸಮನೆ ಪರಸ್ಪರ ದೃಷ್ಟಿಸತೊಡಗುತ್ತವೆ. ನೆಲವನ್ನು ಕೈಗಳಿಂದ ಬಲವಾಗಿ ಹೊಡೆಯುವುದು, ಕಾಲುಗಳ ಮೇಲೆ ನಿಂತು ಮೈ, ಕೈಗಳನ್ನು ಚಾಚುವುದು, ಎದೆಯನ್ನು ಹಿಗ್ಗಿಸುವುದು – ಮೊದಲಾದುವನ್ನೆಲ್ಲ ಮಾಡುತ್ತವೆ. ಆದರೆ ಕೈಕೈ ಮಿಲಾಯಿಸುವುದು ಮಾತ್ರ ಇಲ್ಲವೇ ಇಲ್ಲ. ಹೀಗೆ ಕೊಂಚ ಹೊತ್ತು ಮಾಡಿದ ಮೇಲೆ ಎರಡು ಗುಂಪುಗಳು ಬೇರೆ ಬೇರೆ ದಾರಿಯಲ್ಲಿ ಮುಂದೆ ಸಾಗುತ್ತವೆ. ಇದರಿಂದ ಗೊರಿಲಗಳು ಹೊರನೋಟಕ್ಕೆ ಎಷ್ಟು ಕ್ರೂರಿಗಳಾಗಿ ಕಾಣುತ್ತವೋ ಅಷ್ಟೇ ಶಾಂತ ಸ್ವಭಾವದುವು ಎಂಬುದು ವ್ಯಕ್ತವಾಗುತ್ತದೆ. ಬೇರೆ ಪ್ರಾಣಿಗಳನ್ನೂ ಮನುಷ್ಯರನ್ನೂ ಕಂಡರೆ ದೂರ ಹೋಗುವುದೇ ಗೊರಿಲಗಳ ಸಾಮಾನ್ಯ ಕ್ರಮ. ಆದರೆ ಇತರ ಪ್ರಾಣಿಗಳಾಗಲಿ ಮನುಷ್ಯರಾಗಲಿ ಆಕ್ರಮಣ ಮಾಡಿದಾಗ ಮಾತ್ರ ಇವು ಉಗ್ರವಾಗಿ ಹೋರಾಡಬಲ್ಲುವು.

ಗೊರಿಲಗಳಿಗೆ ಬಿಸಿಲೆಂದರೆ ಬಹಳ ಅಚ್ಚುಮೆಚ್ಚು. ಬಿಸಿಲಿನಲ್ಲಿ ಅಂಗಾತ ಮಲಗಿ ಗಂಟೆಗಟ್ಟಲೆ ಕಾಲಕಳೆಯುತ್ತವೆ. ಮೋಡ ಕವಿದರೆ, ಕತ್ತಲಾದರೆ ಮಾತ್ರ ಎಲ್ಲವೂ ಒಂದೆಡೆ ಸೇರಿಕೊಂಡು ಮೌನವಾಗಿಬಿಡುತ್ತವೆ. ಬಹುಶಃ ಇವಕ್ಕೆ ಕತ್ತಲು ಕಂಡರೆ

ಹೆದರಿಕೆಯಿರಬೇಕು. ಗೊರಿಲಗಳು ಸಾಮಾನ್ಯವಾಗಿ ಸಂಜೆಯ ವೇಳೆ ಸೂಕ್ತವಾದ ಮರವೊಂದನ್ನು ಆರಿಸಿಕೊಂಡು ಅದರ ಮೇಲೆ ಅಥವಾ ನೆಲದ ಮೇಲೆ ಸೊಪ್ಪು ಸೆದೆ, ಹುಲ್ಲು ಮುಂತಾದುವನ್ನು ಹಾಕಿ ಗೂಡನ್ನು ನಿರ್ಮಿಸಿಕೊಂಡು ಮಲಗುತ್ತವೆ. ರಾತ್ರಿಯೆಲ್ಲ ನಿದ್ದೆಯಲ್ಲಿ ಕಳೆದು ಬೆಳಗ್ಗೆ ಸೂರ್ಯ ಹುಟ್ಟಿದ ಒಂದು ಗಂಟೆಯ ಅನಂತರ ಎದ್ದು ಆಹಾರಸೇವನೆಯಲ್ಲಿ ತೊಡಗುತ್ತವೆ. 9–10 ಗಂಟೆಯ ಸುಮಾರಿಗೆ ತಿನ್ನುವುದನ್ನು ನಿಲ್ಲಿಸಿ ವಿಶ್ರಮಿಸುತ್ತವೆ. ಈ ಕಾಲದಲ್ಲಿ ನೆಲದ ಮೇಲೆ ಉರುಳಿಕೊಂಡು ಇಲ್ಲವೆ ಮರದ ಬೊಡ್ಡೆಗೆ ಒರಗಿಕೊಂಡು ಸಮಯ ಹರಣ ಮಾಡುತ್ತವೆ. ಮರಿಗಳು ಮಾತ್ರ ಆಟದಲ್ಲಿ ನಿರತವಾಗುತ್ತವೆ. ಕೆಲವು ಸಲ ಪರಸ್ಪರ ಮೈಯನ್ನು ಹೆಕ್ಕುವುದಿದೆಯಾದರೂ ಇದು ಅವಕ್ಕೆ ಅಷ್ಟಾಗಿ ಹಿಡಿಸುವುದಿಲ್ಲ. ಮಧ್ಯಾಹ್ನದಲ್ಲೂ ಕೊಂಚ ಹೊತ್ತು ತಿನ್ನುವುದರಲ್ಲಿ ತೊಡಗಿದ್ದು ಸಂಜೆಗೆ ಮಲಗುವ ಸಿದ್ಧತೆಯಲ್ಲಿ ನಿರತವಾಗುತ್ತವೆ. ಪ್ರತಿ ರಾತ್ರಿಗೂ ಒಂದೊಂದು ಹೊಸಗೂಡನ್ನು ನಿರ್ಮಿಸಿಕೊಂಡು ಮಲಗುವ ಕ್ರಮ ಇದೆ. ಗೊರಿಲಗಳ ದೃಷ್ಟಿ, ಘ್ರಾಣ ಮತ್ತು ಶ್ರವಣಶಕ್ತಿಗಳು ಮಾನವನಲ್ಲಿರುವಷ್ಟೆ ಇವೆ. ಅವನಂತೆಯೆ ಆಕಳಿಸುವುದು, ಕೆಮ್ಮುವುದು, ಬಿಕ್ಕಳಿಸುವುದು ಮುಂತಾದುವನ್ನೆಲ್ಲ ಮಾಡುತ್ತವೆ. ಇವಕ್ಕೆ ವಿಶಿಷ್ಟವಾದ ಭಾಷೆಯಿಲ್ಲವಾದರೂ ಗೊರಿಲಗಳು ಸುಮಾರು 22 ಬಗೆಯ ಶಬ್ದಗಳನ್ನು ಮಾಡಬಲ್ಲುವು.

ಗೊರಿಲಗಳ ಆಯಸ್ಸು ಸ್ವಾಭಾವಿಕ ಸ್ಥಿತಿಯಲ್ಲಿ ಎಷ್ಟು ಎಂದು ಖಚಿತವಾಗಿ ಗೊತ್ತಿಲ್ಲವಾದರೂ ಪ್ರಾಣಿಸಂಗ್ರಹಾಲಯಗಳಲ್ಲಿ ಸುಮಾರು 36 ವರ್ಷ ಬದುಕಿರುವ ದಾಖಲೆಗಳುಂಟು. ಗೊರಿಲಗಳಿಗೆ ಖಚಿತವಾದ ಸಂತಾನೋತ್ಪತ್ತಿಯ ಕಾಲ ಇಲ್ಲ. ವರ್ಷದ ಯಾವ ಕಾಲದಲ್ಲಾದರೂ ಮರಿಗಳು ಹುಟ್ಟಬಹುದು. ಹೆಣ್ಣು ಗೊರಿಲ ಪ್ರತಿ 3 ಇಲ್ಲವೆ 4 ವರ್ಷಗಳಿಗೊಮ್ಮೆ ಮರಿಹಾಕುತ್ತದೆ. ಗರ್ಭಾವಸ್ಥೆಯ ಅವಧಿ 8 ತಿಂಗಳು. ಸಾಮಾನ್ಯವಾಗಿ ಒಂದು ಸಲಕ್ಕೆ ಒಂದೇಮರಿ ಹುಟ್ಟುತ್ತದೆ. ಮರಿಗಳು ಹುಟ್ಟಿದಾಗ ಬಹಳ ಅಸಹಾಯಕವಾಗಿರುವವುವಾದರೂ ಬಲುಬೇಗ ಬೆಳೆದು ಸುಮಾರು 4–5 ತಿಂಗಳುಗಳಲ್ಲಿ ಆಹಾರವನ್ನು ತಾವೇ ಸ್ವತಃ ತಿನ್ನಲು ಸಮರ್ಥವಾಗುತ್ತವೆ. ಮರಿ ಚಿಕ್ಕದಿರುವಾಗ ತಾಯಿಯೇ ಅದನ್ನು ಹೊತ್ತುಕೊಂಡು ತಿರುಗಾಡುತ್ತದೆ. ಈ ಲಕ್ಷಣದಲ್ಲಿ ಗೊರಿಲಗಳು ಕೋತಿಗಳಿಂದ ಭಿನ್ನವೆನಿಸಿವೆ. ಹೆಣ್ಣು ಮರಿಗಳಿಗೆ 6–7 ವರ್ಷ ವಯಸ್ಸಾದಾಗಲೂ ಗಂಡುಮರಿಗಳಿಗೆ 9–10 ವರ್ಷ ವಯಸ್ಸಾದಾಗಲೂ ಲೈಂಗಿಕ ಪ್ರಬುದ್ಧತೆ ಬರುತ್ತದೆ.
(ಬಿ.ಆರ್.ಸಿ.ಆರ್)

**ಗೋಫರ್:** ರಾಡೆನ್ಷಿಯ ಗಣದ ಜಿಯೋಮೈಯಿಡೆ ಕುಟುಂಬಕ್ಕೆ ಸೇರಿದ ಜಿಯೋಮಿಸ್, ಥೋಮೋಮಿಸ್ ಮತ್ತು ಪ್ಯಾಪೊಜಿಯೋಮಿಸ್ ಎಂಬ ಮೂರು ಬೇರೆ ಬೇರೆ ಜಾತಿಯ ಸ್ತನಿಗಳಿರುವ ಸಾಮಾನ್ಯ ಹೆಸರು. ಪಾಕೆಟ್ ಗೋಫರ್ ಪರ್ಯಾಯ ನಾಮ. ಮೇಲೆ ಹೇಳಿದ ಎಲ್ಲ ಜಾತಿಗಳೂ ಉತ್ತರ ಅಮೆರಿಕದ ಮೂಲ ನಿವಾಸಿಗಳು. ದಕ್ಷಿಣದಲ್ಲಿ ಗ್ವಾಟಿಮಾಲದಿಂದ ಹಿಡಿದು ಉತ್ತರದಲ್ಲಿ ಕೆನಡದವರೆಗೂ ಇವುಗಳ ವ್ಯಾಪ್ತಿ ಇದೆ. ಎಲ್ಲ ಬಗೆಯವೂ ನೆಲದಲ್ಲಿ ಬಿಲಗಳನ್ನು ಕೊರೆದುಕೊಂಡು ವಾಸಿಸುತ್ತವೆ. ಗೋಫರ್‌ಗಳು ಪುಟ್ಟ ಗಾತ್ರದ ಪ್ರಾಣಿಗಳು. ದೇಹದ ಉದ್ದ ೯–೩೦ ಸೆಂಮೀ. ದಷ್ಟ ಪುಷ್ಟವಾದ ದೇಹ, ಚಿಕ್ಕ ಕಾಲುಗಳು, ಮೋಟು ಬಾಲ, ಬಾಚಿಯಂತೆ ಬಾಯಿಯಿಂದ ಹೊರಚಾಚಿರುವ ಮುಂದಿನ ಹಲ್ಲುಗಳು, ಬಲು ಸಣ್ಣ ಕಣ್ಣು ಹಾಗೂ ಕಿವಿಗಳು, ಸಡಿಲವಾದ ಚರ್ಮ ಮತ್ತು ಬಲಯುತವಾದ ನಖಗಳು–ಇವು ಗೋಫರುಗಳ ಪ್ರಮುಖ ಲಕ್ಷಣಗಳು.

ಇನ್ನೊಂದು ಸೋಜಿಗದ ಸಂಗತಿ ಎಂದರೆ ಇವಕ್ಕಿರುವ ದವಡೆ ಚೀಲಗಳು. ಬಾಯ ಆಚೀಚೆಗೆ ಇರುವ ಈ ಚೀಲಗಳು ಭುಜದವರೆಗೂ ವಿಸ್ತರಿಸಿವೆ. ಒಂದೊಂದಕ್ಕೂ ಒಂದು ದ್ವಾರ ಮತ್ತು ತುಪ್ಪುಳಿನ ಒಳಪದರವಿದೆ. ಈ ಚೀಲಗಳಲ್ಲಿ ಗೋಫರ್‌ಗಳು ಆಹಾರವನ್ನು ತುಂಬಿಕೊಳ್ಳುತ್ತವೆ. ವಿಚಿತ್ರವೆಂದರೆ ಬೇಕೆಂದಾಗ ಈ ಪ್ರಾಣಿಗಳು ತಮ್ಮ ಈ ಚೀಲಗಳನ್ನು ಒಳಹೊರಗು ಮಾಡಿ ಶುಚಿ ಮಾಡಿಕೊಳ್ಳುವುದು. ಗೋಫರ್‌ಗಳ ಬಾಲ ಬಹಳ ಸುಟಿ. ಗೋಫರ್‌ಗಳು ತಮ್ಮ ಜೀವನದ ಬಹುಕಾಲವನ್ನು ನೆಲದೊಳಗಿನ ಬಿಲಗಳಲ್ಲಿ ಕಳೆಯುತ್ತವೆ. ಆಹಾರಾನ್ವೇಷಣೆಗಾಗಿ ಅಪರೂಪವಾಗಿ ಬಿಲದಿಂದ ಹೊರಬರುವುದುಂಟು. ನೆಲವನ್ನು ತೋಡುವಾಗ ಸಿಕ್ಕುವ ಗೆಡ್ಡೆಗೆಣಸುಗಳೇ ಇವುಗಳ ಪ್ರಧಾನ ಆಹಾರ. ಇವು ತೋಡುವ ಬಿಲಗಳಲ್ಲಿ ಎರಡು ಬಗೆಗಳಿವೆ. ಒಂದು–ಆಳವಿಲ್ಲದ ಆದರೆ ವಿಸ್ತಾರವಾಗಿ ಹರಡಿರುವ ಬಿಲಗಳು, ಗೆಡ್ಡೆಗೆಣಸುಗಳಿಗಾಗಿ ಓಡಾಡುವಾಗ ನಿರ್ಮಿತವಾಗುವ ಬಿಲಗಳಿವು. ಎರಡು–ಇವುಗಳಲ್ಲಿ ಆಹಾರ ಸಂಗ್ರಹಣೆಗೆ, ಮರಿಗಳನ್ನು ಸುರಕ್ಷಿತವಾಗಿ ಇಡುವುದಕ್ಕೆ, ಮಲಮೂತ್ರ ವಿಸರ್ಜನೆಗೆ ಪ್ರತ್ಯೇಕವಾದ ಕೋಣೆಗಳಿರುತ್ತವೆ. ಬಿಲ ತೋಡಲು ಗೋಫರ್‌ಗಳು ತಮ್ಮ ನಖಗಳನ್ನು ಮತ್ತು ಬಾಚಿ ಹಲ್ಲುಗಳನ್ನು ಬಳಸುತ್ತವೆ. ಕೊಂಚ ಹೊತ್ತು ನೆಲವನ್ನು ಕೊರೆದ ಮೇಲೆ ಸಂಗ್ರಹವಾಗುವ ಮಣ್ಣನ್ನು ಎದೆ ಮತ್ತು ಮುಂಗಾಲುಗಳ ನಡುವೆ ಇರಿಸಿಕೊಂಡು ಹಿಮ್ಮುಖವಾಗಿ ಚಲಿಸಿ ಬಿಲದಿಂದ ಮೇಲಕ್ಕೆ ತಂದು ಹೊರ ಸುರಿಯುತ್ತವೆ. ಇಂಥ ಹಿಮ್ಮುಖ ಚಲನೆಗೆ ಸಂವೇದನಾಶೀಲವಾದ ಬಾಲ ಸಹಾಯಕವಾಗಿದೆ. ಗೋಫರ್‌ಗಳು ಮುಖ ಮುಂದಾಗಿ ಎಷ್ಟು ಬೇಗ ಓಡಬಲ್ಲವೋ ಅಷ್ಟೇ ವೇಗವಾಗಿ ಹಿಮ್ಮುಖವಾಗಿಯೂ ಓಡಬಲ್ಲುವು. ಸಾಮಾನ್ಯವಾಗಿ ಇವು ಒಂಟೊಂಟಿಯಾಗಿ ವಾಸಿಸುತ್ತವೆ. ಇವುಗಳಲ್ಲಿ ಶಿಶಿರಸ್ವಾಪತೆ ಇಲ್ಲವಾದರೂ ಚಳಿಗಾಲದಲ್ಲಿ ಇವುಗಳ ಚಟುವಟಿಕೆ ಮಂದವಾಗುತ್ತದೆ.

ವಸಂತಋತು ಇವುಗಳಿಗೆ ಸಂತಾನ ಕಾಲ. ಗರ್ಭಾವಸ್ಥೆಯ ಅವಧಿ ೧೮–೧೯ ದಿವಸಗಳು. ಒಂದು ಸೂಲಿಗೆ ೪–೧೦ ಮರಿಗಳು. ಹೊಸದಾಗಿ ಹುಟ್ಟಿದ ಮರಿಗಳ ಕಣ್ಣು ತೆರೆದೇ ಇರುವುದಿಲ್ಲ. ಕೂದಲು ಇರುವುದಿಲ್ಲ. ಸುಮಾರು ೨ ತಿಂಗಳವರೆಗೆ ತಾಯಿಯ ಪಾಲನೆಯಲ್ಲಿದ್ದು ೪ ತಿಂಗಳ ಅನಂತರ ಲೈಂಗಿಕ ಪ್ರಬುದ್ಧತೆ ಪಡೆದು ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ.
(ಎಚ್.ಬಿ.ಡಿ.)

**ಗೋಬಿ ಮೀನು:** ಗೋಬಿಯೋಮಾರ್ಫಿ ಗಣದ ಗೋಬೈಯಿಡೆ ಕುಟುಂಬದ ಸದಸ್ಯ. ಇದರಲ್ಲಿ ನೂರಾರು ಪ್ರಭೇದಗಳಿವೆ. ಇವು ಉಷ್ಣವಲಯದ ಕಡಲುಗಳ ಅಥವಾ ಸರೋವರಗಳ ತಳದಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ಇವು ಚಿಕ್ಕ ಗಾತ್ರದುವು. ಫಿಲಿಪೀನ್ಸ್‌ನಲ್ಲಿನ ಲುಜ಼ಾನ್ ಎಂಬಲ್ಲಿರುವ ಸರೋವರದಲ್ಲಿ ಪಂಡಾಕ ಪಿಗ್ಮೀಯ ಪ್ರಭೇದ ಕೇವಲ ೧.೨೫ ಸೆಂಮೀ ಉದ್ದ ಇದೆ. ಇದು ಅತ್ಯಂತ ಚಿಕ್ಕ ಕಶೇರುಕವೆನಿಸಿಕೊಂಡಿದೆ. ಉಳಿದ ಪ್ರಭೇದಗಳ ದೇಹದ ಉದ್ದ ೨.೫–೧೦ ಸೆಂಮೀ.

ಗೋಬಿ ಮೀನುಗಳಿಗೆ ತಲೆ, ದುಂಡಗಿನ ಬಾಲದ ಈಜುರೆಕ್ಕೆ ಇವೆ. ಕಣ್ಣುಗಳು ತಲೆಯ ಮೇಲುಭಾಗದಲ್ಲಿವೆ. ಮೊದಲನೆಯ ಊರ್ಧ್ವ ಈಜು ರೆಕ್ಕೆಯಲ್ಲಿ ಬಳಕುವ ಮುಳ್ಳು ರೇಖೆಗಳಿವೆ. ಸೊಂಟದಲ್ಲಿರುವ ಈಜು ರೆಕ್ಕೆಗಳು ದೇಹದ ಅಧೋಭಾಗದಲ್ಲಿ ಒಂದುಗೂಡಿ, ಒಂದು ರೀತಿಯ ಹೀರುಬಟ್ಟಲಾಗಿ ಪರಿವರ್ತನೆಗೊಂಡಿವೆ. ಇದರ ಸಹಾಯದಿಂದ ಗೋಬಿ ಮೀನು ಮರಳಿಗೆ ಅಥವ ಬಂಡೆಗಳಿಗೆ ಅಂಟಿಕೊಂಡಿರುತ್ತದೆ.

ವಸಂತ ಋತುವಿನ ಪ್ರಾರಂಭದಲ್ಲಿ ಗೋಬಿಮೀನುಗಳು ಪ್ರಜನನ ಕ್ರಿಯೆಯಲ್ಲಿ ತೊಡಗುತ್ತವೆ. ಹೆಣ್ಣು ಮೊಟ್ಟೆಗಳನ್ನು ಇಟ್ಟಮೇಲೆ ಮೊಟ್ಟೆಗಳ ರಕ್ಷಣೆಯ ಭಾರ ಗಂಡಿನದು. ಇದು ಮೊಟ್ಟೆಗಳನ್ನು ಶತ್ರು ಪ್ರಾಣಿಗಳಿಂದ ರಕ್ಷಿಸುತ್ತದೆ. ತನ್ನ ಭುಜದ ಈಜುರೆಕ್ಕೆಗಳ ಸಹಾಯದಿಂದ ಮೊಟ್ಟೆಗಳ ಸುತ್ತಲಿನ ಸ್ಥಳವನ್ನು ಸ್ವಚ್ಛಗೊಳಿಸಿ ಬೆಳೆಯುವ ಮರಿಗಳಿಗೆ ಅನುಕೂಲ ವಾತಾವರಣವನ್ನು ಕಲ್ಪಿಸುತ್ತದೆ.

ಭಾರತದಲ್ಲಿ ಗ್ಲಾಸೊಗೋಬಿಯಸ್ ಗಿಹರಿಸ್ ಎಂಬ ಗೋಬಿಮೀನು ಮೈದಾನ ಪ್ರದೇಶಗಳ ಸಿಹಿನೀರಿನಲ್ಲಿ ವಾಸಿಸುತ್ತದೆ. ಈ ಪ್ರಭೇದದ ಗಂಡು ಕಂದುಬಣ್ಣದ್ದು, ಹೆಣ್ಣು ಹಳದಿ ಬಣ್ಣವಿದೆ. ಹೆಣ್ಣಿನಲ್ಲಿ ಬೂದು ಮತ್ತು ಕಪ್ಪು ಚುಕ್ಕೆಗಳು ಇರುತ್ತವೆ. ಈ ಮೀನು ತಿನ್ನಲು ಯೋಗ್ಯವಾಗಿದೆ.
(ಜಿ.ಎಸ್.ಎಚ್.ಐ.)

**ಗೋಲಿಹೇನು:** ಕ್ರಸ್ಟೇಸಿಯ ವರ್ಗದ ಐಸಾಪೊಡ ಗಣದ ಭೂವಾಸಿ ಪ್ರಾಣಿ. ಇದನ್ನು ಮುಟ್ಟಿದಾಗ ದುಂಡಗೆ ಗೋಲಿಯಂತೆ ಸುತ್ತಿಕೊಳ್ಳುವುದರಿಂದ ಈ ಹೆಸರು. ಆರ್ಮಡಿಲಿಯಂ ವಲ್ಗೇರ್ ಇದರ ವೈಜ್ಞಾನಿಕ ಹೆಸರು. ಇಂಗ್ಲಿಷಿನಲ್ಲಿ ಇದಕ್ಕೆ ವುಡ್ ಲೌಸ್ ಅಥವಾ ಪಿಲ್‌ಬಗ್ ಎಂಬ ಹೆಸರುಗಳಿವೆ. ಐಸಾಪೊಡ ಗಣದ ಏಸೆಲಸ್ ಕಮ್ಯೂನಿಸ್, ಪಾರ್ಸಲಿಯೊ ಸ್ಕೇಬರ್, ಲಿಮ್ನೋರಿಯ ಲಿಗ್ನೋರಂಗಳನ್ನು ಸಹ ಗೋಲಿಹೇನು ಹೆಸರಿನಿಂದ ಕರೆಯುವರು. ಕಪ್ಪು ಬಣ್ಣ ಮತ್ತು ಚಪ್ಪಟೆಯಾಗಿರುವ ದೇಹ, ಚಿಕ್ಕದಾದ ಉದರ ಭಾಗ ಮತ್ತು ಆಂಟೆನಾ (ಕುಡಿ ಮೀಸೆ)ಗಳಿರುವುದು ಗೋಲಿ ಹೇನಿನ ಮುಖ್ಯ ಲಕ್ಷಣಗಳು. ಇದು ಮನೆಯಲ್ಲಿ ತೇವ ಹೆಚ್ಚಾಗಿರುವ ಸ್ಥಳಗಳಲ್ಲಿ, ಒಟ್ಲುಪಾತಿ ಮತ್ತು ಗಾಜಿನ ಮನೆಗಳಲ್ಲಿ ಬೆಳೆಸುವ ಸಸ್ಯಗಳ ಬಳಿ ವಾಸಿಸುತ್ತದೆ. ಬೇರುಗಳನ್ನು ಮತ್ತು ಎಳೆ ಸಸಿಗಳ ಕಾಂಡಗಳನ್ನು ತಿಂದು ಬದುಕುತ್ತದೆ. ಇದರಿಂದ ಕೆಲವೊಮ್ಮೆ ಪಿಡುಗಾಗುವುದುಂಟು.

೫ ಭಾಗ ಸಕ್ಕರೆ, ೧ ಭಾಗ ಪ್ಯಾರಿಸ್ ಗ್ರೀನ್ ಇರುವ ಮಿಶ್ರಣವನ್ನು ಅಥವಾ ಶೇ. ೨ ಕ್ಲೋರ್ಡೇನ್ ಪುಡಿಯನ್ನು ದೂಳೀಕರಿಸುವುದರಿಂದ ಅಥವ ಪ್ಯಾರಥಿಯಾನನ್ನು ಒಂದು ಗ್ಯಾಲನ್ ನೀರಿಗೆ ಒಂದು ಟೀ ಚಮಚದಷ್ಟು ಸೇರಿಸಿ, ಸಿಂಪಡಿಸುವುದರಿಂದ ಗೋಲಿಹೇನನ್ನು ನಿಯಂತ್ರಿಸಬಹುದು.
***

**ಗೌಜಲು ಹಕ್ಕಿ:** ಗ್ಯಾಲಿಫಾರ್ಮೀಸ್. ಗಣದ ಟೆಟ್ರವೋನೀಡೆ ಕುಟುಂಬದ ಫ್ರಾಂಕೋಲೈನಸ್ ಜಾತಿಯ ವನ್ಯಪಕ್ಷಿ. ಆಂಗ್ಲ ಭಾಷೆಯಲ್ಲಿ ಪಾರ್ಟ್‌ರಿಜ್ ಎನ್ನುವರು. ಫ್ರಾ. ಫ್ರಾಂಕೋಲೈನಸ್ (ಬ್ಲ್ಯಾಕ್ ಪಾರ್ಟ್‌ರಿಜ್), ಫ್ರಾ. ಪಿಕ್ಟಸ್ (ಪೇಂಟೆಡ್ ಪಾರ್ಟ್‌ರಿಜ್) ಮತ್ತು ಫ್ರಾ. ಪಾಂಡಿಸೇರಿಯೇನಸ್ (ಗ್ರೇ ಪಾರ್ಟ್‌ರಿಜ್) ಎಂಬ ಮೂರು ಪ್ರಭೇದಗಳಿವೆ. ಮೊದಲನೆಯದು ಉತ್ತರ ಭಾರತ ಮತ್ತು ಅಸ್ಸಾಮ್ ರಾಜ್ಯದಲ್ಲಿ, ಎರಡನೆಯದು ದಕ್ಷಿಣ ಭಾರತದಲ್ಲಿ ಮತ್ತು ಮೂರನೆಯದು ಅಸ್ಸಾಂ ರಾಜ್ಯ ಹೊರತುಪಡಿಸಿ ಭಾರತದಾದ್ಯಂತ

ವಾಸಿಸುತ್ತವೆ. ಇವು ಹುಲ್ಲುಗಾವಲುಗಳಲ್ಲಿ, ಕುರುಚಲು ಕಾಡುಗಳಲ್ಲಿ, ಕೆಲವೊಮ್ಮೆ ಹಳ್ಳಿಗಳ ಸನಿಹದಲ್ಲಿರುವ ಕಬ್ಬು ಮತ್ತು ಕೃಷಿಭೂಮಿಗಳ ಬಳಿ ವಾಸಿಸುತ್ತವೆ.

ಗೌಜಲು ಹಕ್ಕಿಗಳು ಭೂವಾಸಿಗಳು. ಇವುಗಳ ಪ್ರಧಾನ ಆಹಾರ ಕಾಳು, ವಿವಿಧ ಬೀಜಗಳು, ಗೆದ್ದಲು, ಜೀರುಂಡೆಯ ಡಿಂಬಗಳು. ದುಂಡನೆಯ ಮತ್ತು ದಪ್ಪ ಪುಷ್ಟವಾದ ದೇಹ, ಮೋಟು ಬಾಲ, ಕಾಳುಕಡ್ಡಿ ತಿನ್ನಲು ಸಹಾಯಕವಾದ ಕೋಳಿಕೊಕ್ಕಿನಂಥ ಕೊಕ್ಕು, ಬಲವಾದ ಕಾಲುಗಳು, ಚಿಕ್ಕ ಕತ್ತು ಗೌಜಲು ಹಕ್ಕಿಗಳಿಗಿವೆ. ದೇಹದ ಬಣ್ಣ ಕಪ್ಪು ಅಥವಾ ಬೂದು ಮಿಶ್ರಿತ ಕಂದು. ದೇಹದ ಮೇಲೆ ಬಿಳಿ, ಕಂದು, ಕಗ್ಗಂದು ಬಣ್ಣದ ಮಚ್ಚೆಗಳು ಮತ್ತು ಪಟ್ಟಿಗಳು ಇವೆ. ಗಂಡು ಹಕ್ಕಿಯ ಬಣ್ಣ ಹೆಣ್ಣಿನದಕ್ಕಿಂತ ಹೆಚ್ಚು ಗಾಢವಾಗಿದೆ.

ಗೌಜಲು ಹಕ್ಕಿಗಳ ಚಟುವಟಿಕೆ ಸಂಜೆ ಹಾಗೂ ಬೆಳಗಿನ ಸಮಯದಲ್ಲಿ ಹೆಚ್ಚಾಗಿರುತ್ತದೆ. ಕತೀತರ್ – ಕತೀತರ್ ಅಥವಾ ಚೀಕ್ – ಚೀಕ್ – ಚೀಕ್ – ಕೆರೇ ಎಂದು ಸಿಳ್ಳು ಹೊಡೆದಂತೆ ಕೂಗಿಕೊಂಡು ಇವು ತಿರುಗಾಡುತ್ತಿರುತ್ತವೆ. ಇವು ಚೆನ್ನಾಗಿ ಓಡಬಲ್ಲುವು. ಹೆಚ್ಚಾಗಿ ಕಾಲುಗಳಿಂದಲೆ ಚಲಿಸುತ್ತವೆ. ಆದರೆ ಅನಿರೀಕ್ಷಿತ ಅಪಾಯ ಉಂಟಾಗಿ ಭರ್ರನೆ ಕೆಳಮಟ್ಟದಲ್ಲಿ ಹಾರುತ್ತವೆ. ಹಾರುವುದಾದರೂ ಕೇವಲ ಕೆಲವೇ ಮೀಟರುಗಳು ಮಾತ್ರ. ಮತ್ತೆ ನೆಲಕ್ಕಿಳಿದು ಓಡಿ ಪೊದೆಯೊಳಗೆ ಅವಿತುಕೊಳ್ಳುತ್ತವೆ. ಇವುಗಳ ಸಂತಾನಾಭಿವೃದ್ಧಿಯ ಕಾಲ ಜೂನ್ – ಸೆಪ್ಟೆಂಬರ್. ಹುಲ್ಲು ಅಥವ ಕಬ್ಬಿನ ಗದ್ದೆಗಳಲ್ಲಿ ಗೂಡು ಕಟ್ಟಿ ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಸಂಖ್ಯೆ ೪ – ೮.

ಗೌಜಲು ಹಕ್ಕಿಗಳು ಉತ್ತಮ ಬೇಟೆ ಹಕ್ಕಿಗಳೆನಿಸಿವೆ. ಹಳ್ಳಿಗರು ಬೂದುಗೌಜಲು ಗಂಡು ಹಕ್ಕಿಗಳನ್ನು ಹಿಡಿದು ಅವುಗಳ ಮಧ್ಯೆ ಕಾಳಗವನ್ನೇರ್ಪಡಿಸಿ ಜೂಜಾಟವಾಡುತ್ತಾರೆ. ಗೌಜಲು ಹಕ್ಕಿಗಳ ಮಾಂಸ ವಿಶಿಷ್ಟವಾದ ರುಚಿ ಹಾಗೂ ವಾಸನೆಯಿಂದ ಕೂಡಿದೆ. ಆದಕಾರಣ, ಇವನ್ನು ಆಹಾರಕ್ಕಾಗಿ ಹಳ್ಳಿಗರು ಬೇಟೆಯಾಡುತ್ತಾರೆ. (ಎನ್.ಬಿ.ಕೆ)

**ಗೌರಾಮಿ:** ಮತ್ಸ್ಯ ಕುಲದ ಅನಬ್ಯಾಂಟಿಡೆ ಕುಟುಂಬದ ಸದಸ್ಯ. ಇದು ಆಹಾರ ಮೀನು. ಆಸ್‌ಫ್ರೊನೀಮಸ್ ಗೌರಾಮಿ ಇದರ ವೈಜ್ಞಾನಿಕ ಹೆಸರು. ಇದು ಜಾವ ಮತ್ತು ಮಾರಿಷಸ್‌ಗಳ ಮೂಲವಾಸಿ. ೧೮೬೫–೬೬ ರಲ್ಲಿ ಭಾರತಕ್ಕೆ ಇದನ್ನು ತಂದು ಮದ್ರಾಸಿನಲ್ಲಿ ಸಾಕಲಾಯಿತು. ಅಲ್ಲಿಂದೀಚೆಗೆ ನೀಲಗಿರಿ ಮತ್ತು ಕಲ್ಕತ್ತಗಳ ಸುತ್ತಮುತ್ತಲಿನ ಪ್ರದೇಶಗಲ್ಲಿ ಇದನ್ನು ದೊಡ್ಡ ಪ್ರಮಾಣದಲ್ಲಿ ಸಾಕಲಾಗಿದೆ. ಉಪ್ಪು ಮತ್ತು ಸಿಹಿ ನೀರುಗಳೆರಡರಲ್ಲೂ ಇದು ಜೀವಿಸುತ್ತದೆ. ಕಿವಿರು ಗೂಡಿನಲ್ಲಿ ಸಹಾಯಕ ಶ್ವಸನೇಂದ್ರಿಯಗಳಿರುವುದರಿಂದ ಇದು ನೇರವಾಗಿ ನೀರಿನ ಹೊರಗಿನ ವಾಯುವನ್ನು ಬಳಸಿಕೊಳ್ಳಬಲ್ಲುದು. ಗೌರಾಮಿ ಪ್ರಧಾನವಾಗಿ ಸಸ್ಯಾಹಾರಿ. ನೀರಿನಲ್ಲಿ ಬೆಳೆಯುವ ಅತಿ ಸೂಕ್ಷ್ಮ ಸಸ್ಯಗಳನ್ನು ತಿಂದು ಜೀವಿಸುತ್ತದೆ. ಹುಳು, ಸೀಗಡಿ, ಕೀಟದ ಮರಿಗಳು ಮತ್ತು ಇತರ ಜಾತಿಯ ಮೀನುಗಳ ಮೊಟ್ಟೆಗಳನ್ನು ತಿನ್ನುತ್ತದೆ. ಅಡುಗೆ ಮನೆಯ ಅನುಪಯುಕ್ತ ವಸ್ತುಗಳನ್ನು ಮತ್ತು ಎಣ್ಣೆ ಬೀಜದ ಹಿಂಡಿಗಳನ್ನು ಉಪಯೋಗಿಸಿ ಇದನ್ನು ಬೆಳೆಸಬಹುದಾದ್ದರಿಂದ, ಇದು ಸಾಕಣೆಗೆ ಯೋಗ್ಯವಾದ ಮೀನು.

ಅಂಡಾಕಾರದ ಮತ್ತು ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾದ ದೇಹ, ತೋಳಿನ ಈಜುರೆಕ್ಕೆಯ ಬುಡದಲ್ಲಿರುವ ಕಪ್ಪು ಮಚ್ಚೆ, ಮರಿ ಮೀನುಗಳಲ್ಲಿರುವ ನಾಲ್ಕೈದು ಉದ್ದ ಪಟ್ಟೆಗಳು–ಈ ಮೀನಿನ ಕೆಲವು ಪ್ರಧಾನ ಲಕ್ಷಣಗಳು. ಗೌರಾಮಿ ಮೀನು ವರ್ಷದಾದ್ಯಂತ ಸಂತಾನಾಭಿವೃದ್ಧಿ ಮಾಡುತ್ತದೆ. ಕೊಳಗಳಲ್ಲಿ ಬೆಳೆಯುವ ಸಸ್ಯಗಳ ಅಥವ ಹುಲ್ಲಿನ ನಡುವೆ ಗೂಡು ಕಟ್ಟಿ ಮೊಟ್ಟೆಯಿಡುತ್ತದೆ. ಸು. ೧೦ ದಿವಸಗಳಲ್ಲಿ ಮೊಟ್ಟೆಗಳು ಒಡೆದು ಮರಿಯಾಗುತ್ತವೆ. ೫ ದಿವಸಗಳ ಅನಂತರ ಅವು ಸೂಕ್ಷ್ಮಜೀವಿಗಳನ್ನು ತಿನ್ನತೊಡಗುತ್ತವೆ. ತಂದೆತಾಯಿಗಳೆರಡೂ ಸು. ನಾಲ್ಕು ವಾರಗಳವರೆಗೂ ಮರಿಗಳನ್ನು ರಕ್ಷಿಸುತ್ತವೆ. ಬೆಳೆದ ಮೀನುಗಳನ್ನು ಆಹಾರಕ್ಕಾಗಿ ಬಳಸುತ್ತಾರೆ. (ಬಿ.ಎನ್.)

**ಗ್ಯಾಲಿಫಾರ್ಮೀಸ್:** ಪಕ್ಷಿಗಳ ವರ್ಗದಲ್ಲಿನ ಒಂದು ಗಣ. ಗೌಜಲು, ಟರ್ಕಿ ಕೋಳಿ, ಫಿಂಚ್ ಹಕ್ಕಿಗಳು, ನವಿಲು, ಕೋಳಿ, ಗಿನಿ ಕೋಳಿ ಮುಂತಾದುವು ಈ ಗುಂಪಿಗೆ ಸೇರಿವೆ. ಇವುಗಳಲ್ಲೆಲ್ಲ ಕೊಕ್ಕು ಸಣ್ಣದಾಗಿಯೂ ಉಗುರುಗಳು ಮೊಂಡಾಗಿಯೂ ಇವೆ. ಕಾಲ್ಬೆರಳುಗಳ ಸಂಖ್ಯೆ ೪. ಇವುಗಳಲ್ಲಿ ಮೂರು ಮುಂದಕ್ಕೂ ಒಂದು ಹಿಂದಕ್ಕೂ ಬಾಗಿವೆ. ಇದರಿಂದ ನೆಲವನ್ನು ಕೆರೆಯಲೂ ಓಡಲೂ ಅನುಕೂಲ. ಹಾರಟದಲ್ಲಿ ಹಿಂದೆ. ಅಷ್ಟೇನೂ ಸಂಕೀರ್ಣವಲ್ಲದ ಗೂಡನ್ನು ನೆಲದ ಮೇಲೆ ಕಟ್ಟುತ್ತವೆ. ಮರಿಗಳ ಮೈತುಂಬ ಹತ್ತಿಯಂಥ ಬಹು ಮೃದುವಾದ ಪುಕ್ಕಗಳಿದ್ದು, ಇವು ನೋಡಲು ಬಹಳ ಸುಂದರವಾಗಿ ಕಾಣುತ್ತವೆ. ಈ ಗುಂಪಿನ ಹಕ್ಕಿಗಳು ಪಾಲಿನೇಶಿಯ ಮತ್ತು ಅಂಟಾರ್ಕ್‌ಟಿಕಗಳನ್ನು ಬಿಟ್ಟು ಪ್ರಪಂಚದ ಉಳಿದ ಭಾಗಗಳಲ್ಲೆಲ್ಲ ಕಾಣದೊರೆಯುತ್ತವೆ. ಇವುಗಳಲ್ಲಿ ಬಹುಪಾಲು ಬಗೆಯವು ಒಳ್ಳೆಯ ಆಹಾರ ಹಕ್ಕಿಗಳೆಂದು ಹೆಸರಾಗಿವೆ. ಮಾನವ ಸಾಕಲು ತೊಡಗಿದ ಹಕ್ಕಿಗಳಲ್ಲಿ ಇವು ಕೂಡ ಸೇರಿವೆ. (ಜಿ.ಎಂ.ಬಿ.)

**ಗ್ಯಾಲ್ವಾನೀ, ಲ್ವಿಗಿ:** (1737–1789) ಇಟಲಿ ದೇಶದ ದೇಹ ಹಾಗೂ ಅಂಗ ರಚನಾವಿಜ್ಞಾನಿ. ಜನನ ಬೊಲೋನದಲ್ಲಿ 1737ರ ಸೆಪ್ಟೆಂಬರ್ 9ರಂದು. ಗ್ಯಾಲಿಯಾನ್ಸಿ ಎಂಬ ವೈದ್ಯನಲ್ಲಿ ವೈದ್ಯವಿಜ್ಞಾನವನ್ನು ಅಭ್ಯಸಿಸಿ ಆತನ ಮಗಳನ್ನೇ ಮದುವೆಯಾದ. ಸ್ಥಳೀಯ ವಿಶ್ವವಿದ್ಯಾಲಯದಲ್ಲಿ ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾಗಿ 1797ರ ವರೆಗೆ ಸೇವೆ ಸಲ್ಲಿಸಿದ. ಈತ ಪ್ರಸಿದ್ಧಿ ಪಡೆದದ್ದು ಶಸ್ತ್ರವೈದ್ಯದಲ್ಲಿ ಮತ್ತು ಪಕ್ಷಿಗಳನ್ನು ಕುರಿತಂತೆ ಶ್ರವಣಾಂಗ, ಜನನಾಂಗ ಹಾಗೂ ಮೂತ್ರಾಂಗಗಳ ತೌಲನಿಕ ಅಂಗರಚನಾವಿಜ್ಞಾನದಲ್ಲಿ. ದೇಹದಿಂದ ಬೇರ್ಪಡಿಸಲ್ಪಟ್ಟ ಕಪ್ಪೆಯ ಕಾಲುಗಳಿಗೆ ವಿದ್ಯುದಾವಿಷ್ಟ ಚಾಕನ್ನು ಮುಟ್ಟಿಸಿದಾಗ ಅವು ಅಲುಗಾಡುತ್ತವೆ ಎಂಬ ಅಂಶವನ್ನು ಗ್ಯಾಲ್ವಾನಿಯ ಗಮನಕ್ಕೆ ಅವನ ಪತ್ನಿ ತಂದಿದ್ದಳು (1770). ಪ್ರಯೋಗಕ್ಕಾಗಿ ಕಪ್ಪೆಗಳನ್ನು ಕಬ್ಬಿಣದ ಕಂಬಿಗಳ ಮೇಲೆ ತಾಮ್ರದ ಕೊಕ್ಕೆಗಳಿಂದ ನೇತುಹಾಕಿರುವ ರೂಢಿ

ಇತ್ತಷ್ಟೆ. ಗಾಳಿಯಿಂದ ಇವು ಅಲುಗಾಡಿ ತಾಮ್ರ ಮತ್ತು ಕಬ್ಬಿಣ ಪದಾರ್ಥಗಳು ಸ್ಪರ್ಶಗೊಂಡಾಗಲೆಲ್ಲ ಕಪ್ಪೆಯ ಕಾಲುಗಳು ಸೆಟೆದುಕೊಳ್ಳುವುದನ್ನು ಗ್ಯಾಲ್ವಾನಿ ಗಮನಿಸಿದ (1786). ಇದು ಕಪ್ಪೆಯ ದೇಹದಲ್ಲಿನ ಧನವಿದ್ಯುದಾವೇಶವನ್ನು ಲೋಹದ ತಂತಿಯಿಂದ ಋಣವಿದ್ಯುದಾವೇಶಕ್ಕೆ ಸಂಪರ್ಕಿಸಿದಾಗ ಉಂಟಾಗುವ ವಿದ್ಯುತ್ ಪ್ರವಾಹದ ಪ್ರಭಾವ ಎಂದು ಗ್ಯಾಲ್ವಾನಿ ತರ್ಕಿಸಿದ. ದೇಹಜನಿತವಾದ ಇಂಥ ವಿದ್ಯುತ್‌ಪ್ರವಾಹಗಳಿಂದ ಚಲನೆ ಉಂಟಾಗುತ್ತದೆಂಬುದನ್ನು ಪುಷ್ಟೀಕರಿಸಲು ಎರಡು ಅರ್ಧಗಳೂ ಬೇರೆ ಬೇರೆ ಲೋಹಗಳಿಂದ ಮಾಡಲ್ಪಟ್ಟ ಒಂದು ಕಮಾನನ್ನು ಗ್ಯಾಲ್ವಾನಿ ತಯಾರಿಸಿದ. ಇದರ ಒಂದು ತುದಿಯಿಂದ ಕಪ್ಪೆಯ ಕಾಲಿನ ಸ್ನಾಯುವನ್ನೂ ಇನ್ನೊಂದು ತುದಿಯಿಂದ ಆ ಸ್ನಾಯುವನ್ನು ಹೋಗುವ ನರವನ್ನೂ ಸಂಪರ್ಕಿಸಿದರೆ ಧನಾವೇಶವಿರುವ ಸ್ನಾಯುವಿನ ಹೊರಭಾಗದಿಂದ ಋಣಾವೇಶವಿರುವ ಸ್ನಾಯುವಿನ ಒಳಭಾಗಕ್ಕೆ ನರದ ಮೂಲಕ ವಿದ್ಯುತ್‌ಪ್ರವಾಹ ಹರಿದು ಅದರ ಫಲವಾಗಿಯೇ ಸ್ನಾಯು ಸೆಟೆಯುವುದೆಂದು ವಿವರಿಸಿದ. ಆದರೆ ದೇಹಜನಿತ ವಿದ್ಯುತ್ತನ್ನು ಈ ಪ್ರಯೋಗದಿಂದ ತೋರಿಸಿಕೊಟ್ಟಂತಾಯಿತೆಂಬ ಅವನ ತೀರ್ಮಾನ ಮಾತ್ರ ತಪ್ಪು. ದೇಹಜನಿತ ವಿದ್ಯುತ್ತಿನ ವಿಷಯವನ್ನು ಗ್ಯಾಲ್ವಾನಿ ತನ್ನ ಪುಸ್ತಕದಲ್ಲಿ ಪ್ರಕಟಿಸಿದಾಗ (1791) ಇಟಲಿಯ ಇನ್ನೊಬ್ಬ ಪ್ರಸಿದ್ಧ ವಿಜ್ಞಾನಿ ಅಲ್ಲೆಸ್ಸಾಂಡ್ರೋ ವೋಲ್ಟ ಎಂಬಾತ ಅದನ್ನು ಪ್ರಬಲವಾಗಿ ವಿರೋಧಿಸಿದ. ಬೇರೆ ಬೇರೆ ಲೋಹಗಳು ಸಂಪರ್ಕಿಸಲ್ಪಟ್ಟಾಗ ವಿದ್ಯುತ್ತು ಜನಿಸುವುದೆಂದೂ ಆ ವಿದ್ಯುತ್ತೇ ಕಪ್ಪೆಯ ಸ್ನಾಯುವಿನ ಸೆಟೆತಕ್ಕೆ ಕಾರಣವೆಂದೂ ಆತ ವಾದಿಸಿದ. ಆದರೆ ದೇಹಜನಿತ ವಿದ್ಯುತ್ತು ಇಲ್ಲವೆಂಬ ವೋಲ್ಟನ ಸೂಚನೆಯೂ ಸರಿಯಲ್ಲ. ಈ ವಿವಾದ ಇವರಿಬ್ಬರು ವಿಜ್ಞಾನಿಗಳಲ್ಲಿ ಬಹು ಕಟುವಾಗಿ ಉದ್ರೇಕಗೊಂಡಿತಾದರೂ ಇದರ ಪರಿಣಾಮವಾಗಿ ದೇಹಜನಿತ ವಿದ್ಯುತ್ತನ್ನು ಕುರಿತ ತೀವ್ರಾಭ್ಯಾಸಕ್ಕೆ ಇದು ನಾಂದಿಯಾಯಿತು. ವಿದ್ಯುದ್ವಿಜ್ಞಾನದಲ್ಲಿ ಅನೇಕ ಪದಗಳು ಗ್ಯಾಲ್ವಾನಿಯ ಗೌರವಾರ್ಥವಾಗಿ ಅಂಕಿತವಾಗಿವೆ. ದೇಹವಿಜ್ಞಾನದಲ್ಲೂ ಗ್ಯಾಲ್ವಾನಿಸಮ್ ಎಂಬ ಪದಪ್ರಯೋಗ ಉಂಟು.

ಗ್ಯಾಲ್ವಾನಿ ರಾಜವಾದಿಯಾಗಿದ್ದ. ಅವನಿದ್ದ ಇಟಲಿಯ ಭಾಗ 1797ರಲ್ಲಿ ಪ್ರಜಾರಾಜ್ಯವೆಂದು ಸಾರಲ್ಪಟ್ಟಾಗ ಅದಕ್ಕೆ ತನ್ನ ನಿಷ್ಠೆಯನ್ನು ತೋರಲು ಒಪ್ಪಲಿಲ್ಲವಾಗಿ ಕೆಲಸ ಕಳೆದುಕೊಂಡ. 1798ರ ಡಿಸೆಂಬರ್ 4ರಂದು ಬೊಲೋನ ನಗರದಲ್ಲಿ ಕಾಲವಾದ.

***

**ಗ್ಯಾಸ್ಟ್ರಪೋಡ:** ಮೃದ್ವಂಗಿಗಳ (ಮೊಲಸ್ಕ) ವಂಶಕ್ಕೆ ಸೇರಿದ ಒಂದು ದೊಡ್ಡ ವರ್ಗ. 3500ಕ್ಕಿಂತ ಹೆಚ್ಚು ಜೀವಂತ ಪ್ರಭೇದಗಳನ್ನೂ 1500ಕ್ಕಿಂತ ಹೆಚ್ಚು ಲುಪ್ತಪ್ರಭೇದಗಳನ್ನೂ ಒಳಗೊಂಡಿದೆ. ಪ್ರಾಚೀನ ಜೀವವಿಜ್ಞಾನದ ಪ್ರಕಾರ ಈ ವರ್ಗದ ಪ್ರಾಣಿಗಳು ಕೇಂಬ್ರಿಯನ್ ಕಾಲದಲ್ಲಿ ಉಗಮವಾಗಿ ಈವರೆಗೂ ವಿಕಾಸಗೊಂಡು ಬಂದಿವೆ. ಮೊಲಸ್ಕ ವಂಶದ ಪ್ರಾಣಿಗಳಲ್ಲಿ ಇವು ವಿಕಾಸದ ಉನ್ನತ ಮಜಲನ್ನು ಮುಟ್ಟಿದ್ದು ಆ ವಂಶದ ಉಳಿದೆಲ್ಲ ವರ್ಗಗಳ ಪ್ರಾಣಿಗಳಿಗಿಂತಲೂ ಅತಿ ಹೆಚ್ಚಿನ ಹೊಂದಾಣಿಕಾ ಪ್ರಸರಣವನ್ನು ತೋರುತ್ತವೆ. ನಾನಾ ರೀತಿಯ ಪರಿಸರಗಳಲ್ಲಿ ಬದುಕುವ ಸಾಮರ್ಥ್ಯವನ್ನು ಗಳಿಸಿಕೊಂಡಿರುವ ಇವು ಜಲ, ನೆಲಗಳೆರಡರಲ್ಲೂ ಕಾಣಬರುತ್ತವೆ. ಕೆಲವು ಸಮುದ್ರದ ತಳಭಾಗದಲ್ಲಿ ವಾಸಿಸಿದರೆ, ಇನ್ನು ಕೆಲವು ತೇಲುಜೀವಿಗಳಾಗಿ ಬದುಕುತ್ತವೆ. ಸಿಹಿನೀರಿನ ಆಗರಗಳಲ್ಲಿ ಕೂಡ ಇವು ವಾಸಿಸುತ್ತವೆ. ಪಲ್ಮನೇಟ ಗಣಕ್ಕೆ ಸೇರಿದ ಬಸವನ ಹುಳುಗಳು ನೇರವಾಗಿ ಗಾಳಿಯನ್ನೇ ಉಸಿರಾಡಬಲ್ಲ ರಚನೆಗಳನ್ನು ರೂಪಿಸಿಕೊಂಡು ನೆಲದ ಮೇಲೆ ಬದುಕುವ ಶಕ್ತಿಯನ್ನು ಪಡೆದಿವೆ. ಇಲ್ಲಿ ಮ್ಯಾಂಟಲ್ ಕುಹರ ಫುಪ್ಫುಸವಾಗಿ ಮಾರ್ಪಟ್ಟಿದೆ.

ಉಗಮ ಮತ್ತು ವಿಕಾಸ: ಗ್ಯಾಸ್ಟ್ರಪೋಡಗಳಿಗೂ ಆದಿಮೊಲಸ್ಕಗಳಿಗೂ ರಚನೆಯಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಆದರೆ ಈ ವರ್ಗದಲ್ಲಿ ಕಾಣುವ ಒಂದು ಮಹತ್ತ್ವದ ಬದಲಾವಣೆ ಎಂದರೆ ಶರೀರದ ನುಲಿಗೆ (ಟಾರ್ಷನ್). ನುಲಿಗೆಯಿಂದಾಗಿ ಶರೀರದ ಇತರ ಭಾಗಗಳೂ ತಿರುಚಿಕೊಂಡಿವೆ. ಆದಿಯಲ್ಲಿ ಇವುಗಳ ಚಿಪ್ಪು ಮಾತ್ರ ನುಲಿಗೆಗೆ ಒಳಗಾಗಿತ್ತು. ಪಳೆಯುಳಿಕೆಗಳ ಚಿಪ್ಪು ಸುರುಳಿಯಂತೆ ಸುತ್ತಿಕೊಂಡಿರುವುದು ಇದನ್ನು ವ್ಯಕ್ತಪಡಿಸುತ್ತದೆ. ನುಲಿಗೆ ಪೂರ್ವದ ಚಿಪ್ಪು (ಕಂಬು) ಸಮತಳ ಸುರುಳಿಯ ರೀತಿಯಲ್ಲಿತ್ತು. ಅಂದರೆ ಚಿಪ್ಪು ಶಂಕುವಿನಂತೆ ಇರದೆ ಪ್ರತಿಯೊಂದು ಸುರುಳಿಯೂ ಒಂದರ ಹೊರಗೆ ಒಂದರಂತೆ ಸಮತಲದಲ್ಲಿ ಜೋಡಿತವಾಗಿದ್ದುವು. ಕೇವಲ ಚಿಪ್ಪಿನ ತಿರುಚುವಿಕೆಯೇ ಅಲ್ಲದೆ ಇನ್ನೂ ಗುರುತರವಾದ ಬದಲಾವಣೆಗಳನ್ನು ನುಲಿಗೆ ಒಳಗೊಂಡಿದ್ದು ಜೀವಿಯ ಅಂಗಸಮೂಹ, ಮ್ಯಾಂಟಲ್ ಮತ್ತು ಮ್ಯಾಂಟಲ್ ಕುಹರಗಳು $180^0$ ಅಪ್ರದಕ್ಷಿಣವಾಗಿ ಸುತ್ತಿಕೊಳ್ಳುವಂತೆ ಮಾಡಿದೆ. ಇದರಿಂದಾಗಿ ಮ್ಯಾಂಟಲ್ ಕುಹರ, ಕಿವಿರುಗಳು, ಗುದದ್ವಾರ ಮತ್ತು ಶುದ್ಧೀಕರಣ ರಂಧ್ರಗಳು ತಲೆಯ ಹಿಂದೆ ದೇಹದ ಮುಂಭಾಗಕ್ಕೆ ತೆರೆದುಕೊಳ್ಳುವಂತಾಗಿದೆ. ಜೀರ್ಣಾಂಗ ಮತ್ತು ನರಮಂಡಲಗಳು U–ಆಕೃತಿಯಲ್ಲಿ ಉಳಿದುಕೊಂಡಿವೆ. ಇಷ್ಟಾದರೂ ಚಿಪ್ಪು ಮಾತ್ರ ಸಮಮಿತಿಯ ಸುರುಳಿಯಂತೆ ಉಳಿದುಕೊಂಡಿದೆ. ಇವುಗಳ ಲಾರ್ವ ಪ್ರಥಮದಲ್ಲಿ ದ್ವಿಪಾರ್ಶ್ವ ಸಮಮಿತಿಯನ್ನೊಳಗೊಂಡಿದ್ದು ಇದ್ದಕ್ಕಿದ್ದಂತೆಯೇ ನುಲಿಗೆಗೊಳಗಾಗುತ್ತದೆ. ನುಲಿಗೆ ಕೇವಲ ವಿಕಾಸದಿಂದಾದ ಕ್ರಿಯೆ ಅಲ್ಲ. ಏಕೆಂದರೆ ಈಗಿನ ಗ್ಯಾಸ್ಟ್ರಪೋಡಗಳ ಭ್ರೂಣದ ಬೆಳೆವಣಿಗೆಯ ಕಾಲದಲ್ಲಿಯೇ ಇದು ಕಂಡುಬರುತ್ತದೆ. ನುಲಿಗೆಯ ವಿಕಾಸದ ಮಹತ್ತ್ವವನ್ನು ಅರಿಯಲು ನಾನಾ ಸಿದ್ಧಾಂತಗಳನ್ನು ಪ್ರತಿಪಾದಿಸಲಾಗಿದೆ. ಇದು ಲಾರ್ವಗಳ ಬೆಳೆವಣಿಗೆಯ ಹಂತದಲ್ಲಿ ಕಂಡುಬರುವುದರಿಂದ ಈ ಕ್ರಿಯೆ ಒಂದು ರೀತಿಯ ಲಾರ್ವದ ಹೊಂದಿಕೆಯಿಂದ ಎಂದು ಗಾರ್‌ಸ್ಟ್ರಂಗ್ ಎಂಬಾತ ಪ್ರತಿಪಾದಿಸಿದ (1928). ನುಲಿಗೆಗಿಂತ ಮೊದಲು ಶಿಲಕಾವೃತವಾದ ವೇಲಂ ಎಂಬ ಚಲನಾಂಗವನ್ನು ಲಾರ್ವದ ಮ್ಯಾಂಟಲ್ ಕುಹರದೊಳಕ್ಕೆ ಎಳೆದುಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. ಏಕೆಂದರೆ ಲಾರ್ವದ ಪಾದ ಈ ಕ್ರಿಯೆಗೆ ಅಡ್ಡಿಬರುತ್ತಿತ್ತು. ಆದರೆ ತಿರುಚುವಿಕೆಯಿಂದ ಮ್ಯಾಂಟಲ್ ಕುಹರ ಶರೀರದ ಮುಂಬದಿಗೆ ಸರಿದು ಲಾರ್ವ ತನ್ನ ವೇಲಮ್ ಅನ್ನು ಒಳಕ್ಕೆಳೆದುಕೊಳ್ಳಲು ಅನುಕೂಲವಾಯಿತು. ಚಲಿಸುತ್ತಿರುವ ಲಾರ್ವ ಶತ್ರುವಿನ ಕೈಗೆ ಸಿಕ್ಕಾಗ ತನ್ನ ವೇಲಂ ಅನ್ನು ಒಳಗೆಳೆದುಕೊಂಡು ನೀರಿನ ತಳಕ್ಕೆ ಮುಳುಗಿ ಶತ್ರುದಾಳಿಯಿಂದ ತಪ್ಪಿಸಿಕೊಳ್ಳುತ್ತಿತ್ತು. ಹೀಗೆ ಈ ಕ್ರಿಯೆ ಲಾರ್ವದ ಉಳಿವಿಗೆ ಅಗತ್ಯವಾಗಿತ್ತು. ಆದರೆ ನುಲಿಗೆ ಕ್ರಿಯೆಯಿಂದ ವಯಸ್ಕ ಜೀವಿಗೆ ಯಾವ ಅನುಕೂಲವೂ ಇಲ್ಲ. ಬದಲಿಗೆ ವಯಸ್ಕ ಜೀವಿಗಳಲ್ಲಿ ಈ ಕ್ರಿಯೆ ಬಹಳ ಸಮಸ್ಯೆಗಳ ಉದ್ಭವಕ್ಕೆ ಕಾರಣವಾಗಿದೆ.

ಆಧುನಿಕ ಸಿದ್ಧಾಂತದ ಪ್ರಕಾರ ನುಲಿಗೆ ಲಾರ್ವಗಳ ಹೊಂದಿಕೆ ಅಲ್ಲ. ಬದಲಾಗಿ ಇದು ವಯಸ್ಕ ಜೀವಿಗಳ ಹೊಂದಿಕೆ ಮತ್ತು ಗ್ಯಾಸ್ಟ್ರಪೋಡ ಜೀವಿಗಳು ಇತರ ಜೀವಿಗಳಂತೆಯೇ ಪರಿಸರದೊಡನೆ ಹೊಂದಿಕೊಳ್ಳಲು ಪ್ರಯತ್ನ ನಡೆಸಿದಾಗ ಉದ್ಭವವಾದ ಕ್ರಿಯೆ. ನುಲಿಗೆಗೊಳಗಾಗದ ಅಥವಾ ನುಲಿಗೆಯ ಪೂರ್ವಸ್ಥಿತಿಯಲ್ಲಿದ್ದ ಜೀವಿಗಳಲ್ಲಿ ಮ್ಯಾಂಟಲ್ ಕುಹರದ ತೆರವು, ಗುದದ್ವಾರ, ಕಿವಿರುಗಳು ಮತ್ತು ಶುದ್ಧೀಕರಣ ರಂಧ್ರಗಳು ಪ್ರಾಣಿಯ ಹಿಂಭಾಗದಲ್ಲಿದ್ದವು. ಪ್ರಾಣಿ ಚಲಿಸುವಾಗ ಉತ್ಪತ್ತಿಯಾಗುತ್ತಿದ್ದ ನೀರಿನ ಪ್ರವಾಹ ದೇಹದ ಮುಂಬದಿಯಿಂದ ಹಿಂಬದಿಗೆ ಹರಿಯುತ್ತಿತ್ತು. ಇದರಿಂದಾಗಿ ನೀರನ್ನು ಮ್ಯಾಂಟಲ್ ಕುಹರದೊಳಕ್ಕೆ ವಿರುದ್ಧ ದಿಕ್ಕಿನಿಂದ ಎಳೆದುಕೊಳ್ಳಬೇಕಾಗಿತ್ತು. ನುಲಿಗೆಯಿಂದಾಗಿ ಮ್ಯಾಂಟಲ್ ಕುಹರ ದೇಹದ ಮುಂಭಾಗಕ್ಕೆ ಬಂದದ್ದರಿಂದ ನೀರು ಮ್ಯಾಂಟಲ್ ಕುಹರದೊಳಕ್ಕೆ ನುಗ್ಗಿ ಹೊರಬರುವಂತಾಯಿತು. ಉಸಿರಾಟಕ್ಕೆ ಹಾಗೂ ತ್ಯಾಜ್ಯ ವಸ್ತುಗಳನ್ನು ಹೊರಹಾಕುವುದಕ್ಕೆ ಇದರಿಂದ ಅನುಕೂಲವಾಯಿತು. ಈ ಸಿದ್ಧಾಂತಕ್ಕೂ ಬಹಳ ಇತಿಮಿತಿಗಳಿವೆ. ಏಕೆಂದರೆ ಬಹುಪಾಲು ಮೊಲಸ್ಕ ಜೀವಿಗಳಲ್ಲಿ ನೀರನ್ನು ಒಳಗೆಳೆದುಕೊಳ್ಳಲು ಮತ್ತು ಹೊರಹಾಕಲು ಮ್ಯಾಂಟಲ್ ಕುಹರದಲ್ಲಿ ಶಿಲಕೆಗಳಿಂದ ತುಂಬಿದ ಕೊಳವೆಗಳಂಥ ರಚನೆಗಳಿವೆ. ಇದರಿಂದ ಇವು ತಮಗೆ ಬೇಕೆಂದ ದಿಕ್ಕಿನಿಂದ ನೀರನ್ನು ತೆಗೆದುಕೊಂಡು ಹೊರಹಾಕಬಲ್ಲುವು. ಗ್ಯಾಸ್ಟ್ರಪೋಡದಲ್ಲಿಯೂ ಇಂಥ ರಚನೆಗಳು ಕಂಡುಬರುತ್ತವೆ. ನುಲಿಗೆ ಗ್ಯಾಸ್ಟ್ರಪೋಡಗಳ ಹೊಂದಾಣಿಕಾ ಸಾಮರ್ಥ್ಯವನ್ನು ಹೆಚ್ಚಿಸಿದೆಯೇ ಎನ್ನುವುದು ಖಚಿತವಾಗಿಲ್ಲ.




ಆದಿಮಬಗೆಯ ಗ್ಯಾಸ್ಟ್ರಪೋಡದ ಮೇಲ್ನೋಟ, A. ನುಲಿಗೆಗೆ ಮುನ್ನ, B. ನುಲಿಗೆಯ ಅನಂತರ, ಪ್ರೋಸೋಬ್ರ್ಯಾಂಕ್ ಗ್ಯಾಸ್ಟ್ರಪೋಡದ ಪ್ರರೂಪೀ ಬಗೆ, D-G ಅಸಮಮಿತಿ ಚಿಪ್ಪಿನ ವಿಕಾಸದ ವಿವಿಧ ಹಂತಗಳು. 1. ತಲೆ, 2. ಜಠರ, 3. ಅಯೋರ್ಟ, 4. ಹೃತ್ಕುಕ್ಷಿ, 5. ಹೃತ್ಕರ್ಣ, 6. ಕಿವಿರು, 7. ಮ್ಯಾಂಟಲ್ ಕುಹರ, 8. ಗುದದ್ವಾರ, 9. ಅನ್ನನಾಳ, 10. ಕರುಳು, 11. ಚಿಪ್ಪು, 12. ಪಾದ.

ನುಲಿಗೆಯನ್ನು ಪ್ರದರ್ಶಿಸುವ ಪ್ರಾಣಿಯಲ್ಲಿ ಇದರಿಂದ ನಾನಾರೀತಿಯ ಕ್ರಿಯಾ ಸಂಬಂಧಿ ಸಮಸ್ಯೆಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಅತಿ ಮುಖ್ಯವಾದ್ದು ಮ್ಯಾಂಟಲ್ ಕುಹರದೊಳಕ್ಕೆ ತುಂಬಿಕೊಳ್ಳುವ ಮಲಿನ ಪದಾರ್ಥಗಳನ್ನು ಆದಿಮೊಲಸ್ಕ ಜೀವಿಗಳು ಹೇಗೆ ಹೊರಹಾಕುತ್ತಿದ್ದುವು ಎಂಬುದು. ಇವುಗಳ ಮ್ಯಾಂಟಲ್ ಕುಹರದಲ್ಲಿ ನೀರು ಉಳಿಯುವಂತೆ ಗ್ಯಾಸ್ಟ್ರಪೋಡಗಳಲ್ಲೂ ನೀರು ಉಳಿದರೆ ಗುದದ್ವಾರದಿಂದ ಮತ್ತು ನೆಫ್ರೀಡಿಯಗಳಿಂದ ಬರುವ ತ್ಯಾಜ್ಯವಸ್ತುಗಳೆಲ್ಲುವನ್ನೂ ತಲೆಯ ಮೇಲೆಯೇ ಸುರಿದುಕೊಳ್ಳಬೇಕಾಗುತ್ತದೆ. ನಿಮ್ನ ರೀತಿಯ ಪ್ರಭೇದಗಳು ಮ್ಯಾಂಟಲ್ ಕುಹರದ ಮೇಲ್ಭಾಗದಲ್ಲಿ ಒಂದು ರೀತಿಯ ಸೀಳುಗಾಲುವೆಯಂಥ ರಚನೆಯನ್ನು ರೂಪಿಸಿಕೊಂಡು, ಗುದದ್ವಾರವನ್ನು ಮ್ಯಾಂಟಲ್ ಕುಹರದ ತುದಿಯಿಂದ ಒಳಗೆಳೆದುಕೊಂಡು, ಈ

ಸೀಳುಗಾಲುವೆಯ ತಳದ ಒಂದು ಭಾಗಕ್ಕೆ ತೆರೆದುಕೊಳ್ಳುವಂತೆ ಮಾಡಿಕೊಂಡು ಈ ಸಮಸ್ಯೆಯನ್ನು ಪರಿಹರಿಸಿಕೊಂಡಿವೆ. ಇದರಿಂದಾಗಿ ನೀರು ತಲೆಯ ಮೇಲಿಂದ ಒಳನುಗ್ಗಿ ಕಿವಿರುಗಳ ಮೇಲೆ ಹರಿದು ತಾನು ಪ್ರವೇಶಿಸಿದ ದಿಕ್ಕಿನಲ್ಲಿಯೇ ಸೀಳುಗಾಲುವೆಯ ಮೂಲಕ ಹೊರಬರುತ್ತದೆ. ಹೀಗೆ ಹೊರಬರುವಾಗ ಗುದದ್ವಾರದಿಂದ ಮತ್ತು ನೆಫ್ರೀಡಿಯಗಳಿಂದ ಉತ್ಪತ್ತಿಯಾಗುವ ವಸ್ತುಗಳನ್ನು ಹೊರಸಾಗಿಸುತ್ತದೆ.

ಹೆಚ್ಚು ವಿಕಾಸಗೊಂಡ ಗ್ಯಾಸ್ಟ್ರಪೋಡಗಳಲ್ಲಿ ಕೊನೆಯ ಹಂತದ ಬದಲಾವಣೆಯೆಂದರೆ ಚಿಪ್ಪಿನಲ್ಲಾದ ಬದಲಾವಣೆ. ಲುಪ್ತಪ್ರಭೇದಗಳಲ್ಲಿ ಸಮತಳ ಸುರುಳಿ ಸಮಮಿತಿಯ ಚಿಪ್ಪುಗಳಿದ್ದರೂ ಜೀವಂತವಾಗಿರುವ ಎಲ್ಲ ಪ್ರಭೇದಗಳ ಚಿಪ್ಪುಗಳೂ ಅಸಮಮಿತಿಯನ್ನೊಳಗೊಂಡಿವೆ. ಇಲ್ಲೂ ಕೆಲವು ಚಿಪ್ಪುಗಳಲ್ಲಿ ಸಮಮಿತಿಯಿದೆಯಾದರೂ ಅದನ್ನು ಅವು ದ್ವಿತೀಯಕವಾಗಿ ಗಳಿಸಿಕೊಂಡಿವೆ. ಸಮತಳ ಸುರುಳಿಯ ಚಿಪ್ಪು ಕೆಲವು ನ್ಯೂನತೆಗಳನ್ನೊಳಗೊಂಡಿತ್ತು. ಇದು ಒತ್ತಾಗಿ ಅಥವಾ ಅಚ್ಚುಕಟ್ಟಾಗಿ ಜೋಡಿಸಿಕೊಂಡಿರಲಿಲ್ಲ. ಏಕೆಂದರೆ ಪ್ರತಿಯೊಂದು ಸುರುಳಿಯೂ ತನ್ನ ಹಿಂದಿನ ಸುರುಳಿಯ ಹೊರಗೆ ಇರುತ್ತಿತ್ತು. ಇದರಿಂದಾಗಿ ಚಿಪ್ಪಿನ ಸುತ್ತಳತೆ ಬಹಳ ಹೆಚ್ಚಾಗಿರುತ್ತಿತ್ತು. ಈ ಸಮಸ್ಯೆ ಅಸಮಮಿತಿಯ ಸುರುಳಿಯುಳ್ಳ ಚಿಪ್ಪುಗಳ ಪ್ರಾಣಿಗಳಲ್ಲಿಲ್ಲ. ಇಂಥ ಚಿಪ್ಪಿನಲ್ಲಿ ಸುರುಳಿಗಳು ಕೇಂದ್ರ ಅಕ್ಷವೊಂದರ ಸುತ್ತಲೂ ಒಂದರ ಮೇಲೊಂದರಂತೆ ಜೋಡಿತವಾಗಿರುವುದರಿಂದ ಚಿಪ್ಪಿನ ಸುತ್ತಳತೆ ಹೆಚ್ಚಾಗಿ ಹಿಗ್ಗಲು ಸಾಧ್ಯವಿಲ್ಲ. ಆದರೆ ಇಂಥ ಚಿಪ್ಪಿನಲ್ಲಿ ಶರೀರದ ತೂಕ ಒಂದೇ ಕಡೆಗೆ ಬೀಳುವ ಸಂಭವ ಇದೆ. ಸಮತಳ ಸುರುಳಿ ಚಿಪ್ಪಿನಲ್ಲಿ ಇಂಥ ಸಂಭಾವ್ಯತೆ ಇರಲಿಲ್ಲ. ತೂಕವನ್ನು ಸಮವಾಗಿರಿಸಲು ಚಿಪ್ಪಿನ ಸ್ಥಾನ ಸ್ವಲ್ಪಮಟ್ಟಿಗೆ ಬದಲಾಗಿದೆ. ಇದರ ನೀಳ ಅಕ್ಷರೇಖೆ ಮೇಲೆ ಹೋದಂತೆ ಹಿಂಬದಿಗೆ ಬಾಗಿರುವುದರಿಂದ ದೇಹದ ನೀಳ ಅಕ್ಷ ವಿಷಮ ದಿಕ್ಕಿಗೆ ಬಾಗಿದೆ. ಈ ರೀತಿಯ ಚಿಪ್ಪಿನ ಬಾಗುವಿಕೆಯನ್ನು ಈಗ ಬದುಕಿರುವ ಎಲ್ಲ ಗ್ಯಾಸ್ಟ್ರಪೋಡಗಳಲ್ಲಿ ಕಾಣಬಹುದು. ಚಿಪ್ಪಿನ ಈ ಹೊಸ ಸ್ಥಾನದಿಂದ ಮ್ಯಾಂಟಲ್ ಕುಹರ ದೇಹದ ಒಂದು ಭಾಗಕ್ಕೆ ಮಾತ್ರ ಸೀಮಿತಗೊಳ್ಳುವಂತಾಯಿತು. ಇದರ ವಿರುದ್ಧ ದಿಕ್ಕಿನ ದೇಹಭಾಗ ಚಿಪ್ಪಿನ ಗೋಡೆಗೆ ಒತ್ತಿಕೊಂಡಂತೆ ಇದೆ. ಈ ಒತ್ತುವಿಕೆಯಿಂದ ದೇಹದ ಮೇಲೆ ಮಹತ್ತರ ಪರಿಣಾಮವುಂಟಾಗಿದೆ. ಯಾವ ಭಾಗ ಚಿಪ್ಪಿನ ಕಡೆಗೆ ಒತ್ತಿಕೊಂಡಂತಿದೆಯೊ ಆ ಭಾಗದ ಗಾತ್ರ ಕುಗ್ಗಿದೆ. ಆ ಭಾಗದ ಕಿವಿರು, ಹೃತ್ಕರಣ, ಮೂತ್ರಕೋಶಗಳೆಲ್ಲ ನಶಿಸಿಹೋಗಿವೆ.

ಆಧುನಿಕ ಗ್ಯಾಸ್ಟ್ರಪೋಡಗಳಲ್ಲಿ ಶಂಕುವಿನಾಕಾರದ ಚಿಪ್ಪಿನ ವಿಕಾಸವಾದ ಮೇಲೆ ಮೂರು ಬಗೆಗಳಲ್ಲಿ ದೇಹದ ನೈರ್ಮಲ್ಯ ಕ್ರಿಯೆಯ ಸಮಸ್ಯೆಯನ್ನು ಇವು ಪರಿಹರಿಸಿಕೊಂಡಿವೆ. ಮೊದಲನೆಯದು ಆದಿ ಗ್ಯಾಸ್ಟ್ರಪೋಡಗಳಲ್ಲಿದ್ದ ಮ್ಯಾಂಟಲ್ ಕುಹರದಲ್ಲಿ ಕಾಲುವೆಯನ್ನು ಉಳಿಸಿಕೊಂಡಿರುವುದು ಅಥವಾ ಚಿಪ್ಪಿನಲ್ಲಿ ರಂಧ್ರಗಳಿರುವುದು. ಎರಡನೆಯದು ನುಲಿಗೆ ಕ್ರಿಯೆಯಿಂದ ಉಳಿದ ಒಂದೇ ಕಿವಿರನ್ನು ಹೊಸ ಮ್ಯಾಂಟಲ್ ಕುಹರದೊಳಕ್ಕೆ ಬೆಳೆಸಿಕೊಂಡು ನೀರಿನ ಚಲನೆಯನ್ನು ತಲೆಯ ಪಕ್ಕಕ್ಕೆ ಸೀಮಿತಗೊಳಿಸಿರುವುದು. ಮೂರನೆಯದು ವಿನುಲಿಗೆ (ಡೀಟಾರ್ಷನ್). ಇದು ನುಲಿಗೆಗೆ ವ್ಯತಿರಿಕ್ತವಾದ್ದು. ವಿನುಲಿಗೆಯಿಂದಾಗಿ ಮ್ಯಾಂಟಲ್ ಕುಹರ ಮತ್ತು ಗುದದ್ವಾರಗಳು ಪ್ರಾಣಿಯ ಹಿಂಬದಿಗೆ ಬಂದಿವೆ. ಅಲ್ಲದೆ ದೇಹಕ್ಕೆ ದ್ವಿತೀಯಕ ಸಮಪಾರ್ಶ್ವ ಸಮಮಿತಿ ಬಂದಿದೆ.

ನುಲಿಗೆಯ ಆಧಾರದ ಮೇಲೆ ಗ್ಯಾಸ್ಟ್ರಪೋಡ ವರ್ಗವನ್ನು ಮೂರು ಉಪವರ್ಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಪ್ರೋಸೋಬ್ರ್ಯಾಂಕಿಯ. ಇವು ಮ್ಯಾಂಟಲ್ ಕುಹರದೊಳಗಿರುವ ಕಿವಿರುಗಳಿಂದ ಉಸಿರಾಡುತ್ತವೆ. ಇವುಗಳ ಕಿವಿರು ಮತ್ತು ಗುದದ್ವಾರ ದೇಹದ ಮುಂಭಾಗದಲ್ಲಿದೆ. ಅಂದರೆ ಇವುಗಳಲ್ಲಿ ನುಲಿಗೆ ಕ್ರಿಯ ಇದೆ. ಜೀವಂತ ಗ್ಯಾಸ್ಟ್ರಪೋಡಗಳ ಬಹುಪಾಲು ಪ್ರಭೇದಗಳು ಈ ಉಪವರ್ಗಕ್ಕೆ ಸೇರಿವೆ. ಎರಡನೆಯ ಉಪವರ್ಗವಾದ ಪಲ್ಮನೇಟಕ್ಕೆ ಬಸವನ ಹುಳು, ಶಂಭುಕಗಳು ಸೇರಿವೆ. ಇವು ಭೂವಾಸಿಗಳು. ಇವುಗಳ ಗುದದ್ವಾರ ಮತ್ತು ಮ್ಯಾಂಟಲ್ ಕುಹರಗಳು ದೇಹದ ಮುಂಭಾಗದಲ್ಲೇ ಕೆಲಸ ಮಾಡುತ್ತವೆ. ಮೂರನೆಯ ಉಪವರ್ಗ ಒಫಿಸ್ತೊಬ್ರ್ಯಾಂಕಿಯ. ಇದಕ್ಕೆ ಸೇರಿದ ಪ್ರಾಣಿಗಳಲ್ಲಿ ನಾನಾ ಹಂತಗಳ ವಿನುಲಿಗೆ ಕಂಡುಬರುತ್ತದೆ. ಬಹುಪಾಲು ಜೀವಿಗಳು ದ್ವಿತೀಯಕವಾಗಿ ಸಮಪಾರ್ಶ್ವ ಸಮಮಿತಿಯನ್ನು ಗಳಿಸಿಕೊಂಡಿವೆ. ಇವುಗಳ ಚಿಪ್ಪು ಚಿಕ್ಕವಾಗಿರಬಹುದು ಅಥವಾ ಸಂಪೂರ್ಣವಾಗಿ ನಶಿಸಿಹೋಗಿರಬಹುದು. ಇವು ನೀರಿನಲ್ಲಿ ಈಜಿಕೊಂಡು ಅಥವಾ ತೇಲಿಕೊಂಡು ಬದುಕುತ್ತವೆ. ಕಡಲ ಮೊಲಗಳೂ ನ್ಯೂಡಿಬ್ರ್ಯಾಂಕ್‌ಗಳೂ ಈ ಉಪವರ್ಗದ ಉದಾಹರಣೆಗಳು.

ಚಿಪ್ಪು ಮತ್ತು ಮ್ಯಾಂಟಲ್: ಗ್ಯಾಸ್ಟ್ರಪೋಡಗಳ ಪ್ರರೂಪಿ ಚಿಪ್ಪು ಸುರುಳಿ ಸುತ್ತಿದ ನಳಿಕೆಯಂತಿರುವ ಶಂಖಾಕೃತಿಯ ಕವಚ. ಇದರೊಳಗೆ ಪ್ರಾಣಿಯ ಎಲ್ಲ ಅಂಗವ್ಯೂಹಗಳೂ (ಅಂಗಸ) ಇವೆ. ಶಂಖಿನಂತಿರುವ ಚಿಪ್ಪಿನ ತುದಿಯಲ್ಲಿ ಅತಿ ಚಿಕ್ಕದಾದ ಪ್ರಥಮ ಸುರುಳಿ ಇದೆ. ಇದೇ ಅತಿ ವಯಸ್ಸಾದ ಸುರುಳಿ. ಇದಾದ ಮೇಲೆ ಇನ್ನುಳಿದ ಅನುಕ್ರಮ ಸುರುಳಿಗಳು ಚಿಪ್ಪಿನ ಲಂಬದ ಅಕ್ಷರೇಖೆಯ ಸುತ್ತಲೂ ಸುತ್ತಿಕೊಂಡಿವೆ. ಈ ಅಕ್ಷರೇಖೆಗೆ ಕಾಲ್ಯುಮೆಲ್ಲ ಎಂದು ಹೆಸರು. ಕೊನೆಯ ಸುರುಳಿ ದೊಡ್ಡದಾಗಿದ್ದು ಅದಕ್ಕೊಂದು ಅಗಲವಾದ ರಂಧ್ರವಿದೆ. ಇದರ ಮೂಲಕ ಪ್ರಾಣಿಯು ತಲೆ ಮತ್ತು ಪಾದಗಳನ್ನು ಹೊರಚಾಚುತ್ತದೆ. ಶಂಖಿನಂತಿರುವ ಚಿಪ್ಪಿನ ಸುರುಳಿ ಎಡಮುರಿ ಅಥವಾ ಬಲಮುರಿ ಸ್ಥಿತಿಯಲ್ಲಿರಬಹುದು. ಬಲಮುರಿ ಬಗೆಯಲ್ಲಿ ಶಂಖಿನ ರಂಧ್ರ ಕಾಲ್ಯುಮೆಲ್ಲದ ಬಲಭಾಗಕ್ಕೆ ತೆರೆದುಕೊಳ್ಳುತ್ತದೆ. ಎಡಮುರಿಯದರಲ್ಲಿ ಶಂಖಿನ ರಂಧ್ರ ಕಾಲ್ಯುಮೆಲ್ಲದ ಎಡಭಾಗಕ್ಕೆ ತೆರೆದುಕೊಳ್ಳುತ್ತದೆ.

ಶಂಖಿನ ಸುರುಳಿಯ ಪ್ರಥಮ ಆವರಣವನ್ನು ಈ ಪ್ರಾಣಿಗಳ ಲಾರ್ವಗಳು ಉತ್ಪಾದಿಸುತ್ತವೆ. ಈ ಭಾಗಕ್ಕೆ ಪ್ರೋಟೋಕಾಂಕ್ ಎಂದು ಹೆಸರು. ಶಂಖಿನ ಇತರ ಭಾಗಗಳಿಗಿಂತ ಇದು ವಿಭಿನ್ನವಾಗಿರುತ್ತದೆ. ಇದರಲ್ಲಿ ಯಾವ ರೀತಿಯ ಕುಸುರಿ ರಚನೆಗಳಿರುವುದಿಲ್ಲ. ಇನ್ನುಳಿದ ಭಾಗಗಳು ಒಂದೇ ರೀತಿಯ ರಚನೆಯನ್ನು ತೋರುತ್ತವೆ. ಪ್ರಾಣಿಯ ಮ್ಯಾಂಟಲಿನ ತುದಿಯಿಂದ ಶಂಖು ಅಥವಾ ಚಿಪ್ಪು ಉತ್ಪತ್ತಿಯಾಗುತ್ತದೆ.

ಶಂಖುವಿನಲ್ಲಿ ಮೂರು ಪದರಗಳನ್ನು ನೋಡಬಹುದು: ಹೊರಗಿನ ಪೆರಿಆಸ್ಟ್ರಕಮ್, ಮಧ್ಯದ ಪ್ರಿಸ್ಮ್ಯಾಟಿಕ್ ಮತ್ತು ಒಳಗಡೆಯ ನೆಕ್ರಿಯಸ್ ಪದರಗಳು. ಪೆರಿಆಸ್ಟ್ರಕಮ್ ಪದರ ತೆಳುವಾಗಿದೆ. ಇದರಲ್ಲಿ ಗಡುಸಾಗಿರುವ, ಜಡ್ಡುಗಟ್ಟಿದ ಸಾವಯವ ವಸ್ತುವಿನಿಂದಾದ ಕಾಂಕಿಯೋಲಿನ್ ಎಂಬ ವಸ್ತುವಿದೆ. ಉಳಿದೆರಡು ಪದರಗಳು ಕ್ಯಾಲ್ಸಿಯಮ್ ಕಾರ್ಬೊನೇಟಿನಿಂದ ರಚಿತವಾಗಿವೆ. ಪ್ರಿಸ್ಮ್ಯಾಟಿಕ್ ಪದರದಲ್ಲಿ ಕ್ಯಾಲ್ಸಿಯಂ ಕಾರ್ಬೊನೇಟ್ ಹರಳುಗಳು ನೀಳವಾಗಿ ಜೋಡಿತವಾಗಿವೆ. ನೆಕ್ರಿಯಸ್ ಪದರದಲ್ಲಿ ತೆಳ್ಳಗಿರುವ ಮತ್ತು ಹೊಳೆಯುತ್ತಿರುವ ಹಾಳೆಗಳಂಥ ರಚನೆಗಳಿವೆ.

ಗ್ಯಾಸ್ಟ್ರಪೋಡಗಳ ಚಿಪ್ಪುಗಳಿಗೆ ನಾನಾ ರೀತಿಯ ಬಣ್ಣಗಳಿವೆ. ಶಂಖಿನ ರಚನೆ, ಅದರಲ್ಲಿರುವ ಕುಸುರಿ ಕೆಲಸಗಳು ಮತ್ತು ಆಕಾರ ವೈವಿಧ್ಯತೆಗಳಿಂದ ಕೂಡಿವೆ. ಬಹುಪಾಲು ಪ್ರಭೇದಗಳಲ್ಲಿ ಜೀವಿ ಎಳೆಯದಾಗಿದ್ದಾಗ ಮಾತ್ರ ಸುರುಳಿಯಂತಿರುವ ಚಿಪ್ಪು ಇರುತ್ತದೆ. ವಯಸ್ಕ ಜೀವಿಗಳಲ್ಲಿ ಸುರುಳಿ ರಚನೆ ಮಾಯವಾಗುತ್ತದೆ. ಹ್ಯಾಲಿಯೋಟಿಸ್ ಮತ್ತು ಕ್ರೆಪಿಡ್ಯುಲಗಳಲ್ಲಿ ಚಿಪ್ಪು ಇನ್ನೂ ಅಸಮಮಿತಿಯಲ್ಲಿಯೇ ಉಳಿದಿದೆ. ಲಿಂಪೆಟ್‌ಗಳಲ್ಲಿ (ಪಟೆಲ) ಚಿಪ್ಪು ಚೀಣೀಯರ ಟೋಪಿಯಂತೆ ಇದ್ದು ದ್ವಿತೀಯಕ ಸಮಮಿತಿಯನ್ನು ಗಳಿಸಿಕೊಂಡಿದೆ. ವರ್ಮಿಟಿಡೆ ಕುಟುಂಬದ ಜೀವಿಗಳಲ್ಲಿ ಚಿಪ್ಪು ಎಳೆಯ ಪ್ರಾಣಿಗಳಲ್ಲಿ ಉಳಿದುವುಗಳ ಚಿಪ್ಪಿನಂತೆಯೇ ಸುತ್ತಿಕೊಂಡಿರುತ್ತದೆ. ಆದರೆ, ಪ್ರಾಣಿ ಬೆಳೆದಂತೆ ಪ್ರತಿ ಸುರುಳಿಯೂ ಬೇರೆಬೇರೆಯಾಗುತ್ತ ಬಂದು ಪ್ರಬುದ್ಧಾವಸ್ಥೆಯಲ್ಲಿ ಕಾರ್ಕ್–ಸ್ಕ್ರೂವಿನಂತೆ ಆಗುತ್ತದೆ.

ಚಿಪ್ಪಿನ ಗಾತ್ರ ಕಡಿಮೆಯಾಗುವುದನ್ನು ಇಲ್ಲವೇ ಸಂಪೂರ್ಣವಾಗಿ ನಶಿಸಿಹೋಗುವುದನ್ನು ಕೆಲವು ಪ್ರಭೇದಗಳಲ್ಲಿ ಕಾಣಬಹುದು. ಪ್ರೋಸೋಬ್ರ್ಯಾಂಕಿಯ ಉಪವರ್ಗದ ಸೈನಮ್ ಎಂಬುದರಲ್ಲಿ ಪಾದ ಮತ್ತು ಮ್ಯಾಂಟಲ್‌ಗಳು ಅಗಲವಾಗಿದ್ದು ಚಿಪ್ಪಿನ ಮೇಲೆ ಮಡಿಸಿಕೊಂಡು ಒಂದು ರೀತಿಯ ಹೊದಿಕೆಯಂತಿವೆ. ಇದರಿಂದ ಚಿಪ್ಪು ಹೊರಕ್ಕೆ ಕಾಣುವುದಿಲ್ಲ. ಭೂಚರ ಪಲ್ಮನೇಟಗಳಲ್ಲೂ ಈ ಬಗೆಯ ಮಾರ್ಪಾಟನ್ನು ಕಾಣಬಹುದು. ಲೈಮ್ಯಾಕ್ಸ್, ಫಿಲೊಮೈಕಸ್ ಮುಂತಾದುವುಗಳಲ್ಲಿ ಚಿಪ್ಪು ಬಹಳವಾಗಿ ಕುಗ್ಗಿ ಮ್ಯಾಂಟಲಿನೊಳಗೆ ಹುದುಗಿ ಹೋಗಿದೆ.

ಚಿಪ್ಪಿನ ಕ್ಷೀಣತೆ ಒಫಿಸ್ತೊಬ್ರ್ಯಾಂಕುಗಳ ಒಂದು ಮುಖ್ಯ ಗುಣ. ಇಲ್ಲಿ ಚಿಪ್ಪಿನ ಕ್ಷೀಣತೆಗೂ ವಿನುಲಿಗೆ ಕ್ರಿಯೆಗೂ ಒಂದು ರೀತಿಯ ಸಂಬಂಧವಿದೆ. ಗುಳ್ಳೆಶಂಖು, ಪಿರಾಮಿಡಿಲಿಡೆ ಮತ್ತು ಟೀರಾಪಾಡ್‌ಗಳಲ್ಲಿ (ಕಡಲ ಚಿಟ್ಟೆ) ಚಿಪ್ಪು ಚೆನ್ನಾಗಿ ರೂಪುಗೊಂಡಿದೆಯಾದರೆ ಕಡಲ ಮೊಲದಲ್ಲಿ ಬಲು ಕ್ಷೀಣವಾಗಿ ಮ್ಯಾಂಟಲ್ ಒಳಗೆ ಹುದುಗಿದೆ. ನ್ಯೂಡಿಬ್ರ್ಯಾಂಕ್‌ಗಳಲ್ಲಿ ಸಂಪೂರ್ಣ ವಿನುಲಿಗೆಯನ್ನು ಕಾಣಬಹುದು (ಉದಾ: ಆಂಕಿಡಿಯಮ್). ಇವುಗಳಲ್ಲಿ ಚಿಪ್ಪು ಇಲ್ಲ. ಚಿಪ್ಪುಗಳ ಗಾತ್ರದಲ್ಲೂ ವ್ಯತ್ಯಾಸಗಳುಂಟು. ಪ್ಯೂಪ ಜಾತಿಯ ಭೂಚರ ಪಲ್ಮನೇಟಗಳಲ್ಲಿ ಅತಿ ಚಿಕ್ಕಗಾತ್ರದ ಚಿಪ್ಪು (ಸುಮಾರು 1 ಮಿಮೀ) ಕಂಡುಬಂದರೆ ಮೆಗಲೊಟ್ರ್ಯಾಕ್ಟಸ್ ಎಂಬುದರಲ್ಲಿ ಬಲುದೊಡ್ಡ ಗಾತ್ರದ ಚಿಪ್ಪು (60 ಸೆಂಮೀ ಎತ್ತರದ) ಕಂಡುಬರುತ್ತದೆ.

ಗ್ಯಾಸ್ಟ್ರಪೋಡಗಳು ರಿಟ್ರ್ಯಾಕ್ಟರ್ ಮಾಂಸಖಂಡಗಳ ಸಹಾಯದಿಂದ ತಮ್ಮ ತಲೆ ಮತ್ತು ಪಾದಗಳನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುತ್ತವೆ. ಕೆಲವು ಬಗೆಗಳಲ್ಲಿ ಚಿಪ್ಪಿನ ರಂಧ್ರವನ್ನು ಮುಚ್ಚಿಕೊಳ್ಳಲು ದ್ವಾರದ ಮೇಲೆ ಒಪರ್‌ಕ್ಯುಲಂ ಎನ್ನಲಾಗುವ ಒಂದು ಮುಚ್ಚಳವೂ ಇರುತ್ತದೆ.

ಪಾದ: ಆದಿಮೊಲಸ್ಕಗಳಲ್ಲಿರುವಂಥ ಮತ್ತು ತೆವಳಲು ಅನುಕೂಲವಾಗಿರುವ ಚಪ್ಪಟೆಯಾದ ಪಾದ ಗ್ಯಾಸ್ಟ್ರಪೋಡಗಳಲ್ಲಿದೆ. ಇದು ವಿವಿಧ ವಸ್ತುಗಳ ಮೇಲೆ ಚಲಿಸಲು ಅನುಕೂಲಿಸುವಂತೆ ಮಾರ್ಪಾಟಾಗಿರುವುದನ್ನು ಕಾಣಬಹುದು. ಉದಾ: ಬಂಡೆಗಳ ಮೇಲೆ ಇರುವ ಲಿಂಪೆಟ್‌ಗಳಲ್ಲಿ ಕೈಟಾನಿನಲ್ಲಿರುವಂತೆ ಆಸರೆಗೆ ಅಂಟಿಕೊಳ್ಳಲು ಅನುಕೂಲವಾದ ಪಾದ ಇದೆ.




ವಿವಿಧ ಬಗೆಯ ಗ್ಯಾಸ್ಟ್ರೊಪೋಡ : A. ಚಿಪ್ಪಿನ ಉದ್ದಸೀಳಿಕೆ, B. ಹ್ಯಾಲಿಯೋಟಿಸ್, C. ಬ್ಯೂಸಿಕಾನ್, D. ಪ್ಯೂಪ,
E. ಕ್ರೆಪಿಡ್ಯುಲ, F. ಲಾಂಬಿಸ್, G. ಯೂರೊಕ್ಯಕುಲೇರಿಯ, H. ಕೋನಸ್, I. ಹೆಲಿಕೊಡಿಸ್ಕಸ್, J. ಟೆಸ್ಟಸೆಲ
K. ವರ್ಮಿಕ್ಯುಲೇರಿಯ L. ಅಟ್ಲಾಂಟ
1. ಚಿಪ್ಪಿನ ತುದಿ 2.ಕಾಲುಮೆಲ 3. ಸುರುಳಿ 4. ತೆರಪು 5. ಸೈಫನ್ 6. ಕೊಂಡಿ

ಸಾಮಾನ್ಯವಾಗಿ ಪಾದದಲ್ಲಿ ಪ್ರೋಪೋಡಿಯಂ, ಮೀಸೋಪೋಡಿಯಂ ಮತ್ತು ಮೆಟಪೋಡಿಯಂ ಎಂಬ ಮೂರು ಭಾಗಗಳನ್ನು ಗುರುತಿಸಬಹುದು. ಅಲ್ಲದೆ ಪಾದದ ಮುಂಭಾಗದಲ್ಲಿ ಅಥವಾ ತಳಭಾಗದಲ್ಲಿ ಒಂದು ಲೋಳೆ ಗ್ರಂಥಿ ಇದೆ. ಇದರಿಂದ ಉತ್ಪತ್ತಿಯಾಗುವ ಲೋಳೆ ಪ್ರಾಣಿ ಚಲಿಸಿದ ಹಾದಿಯಲ್ಲಿ ಲೋಳೆಯಂಥ ಜಾಡನ್ನು ಬಿಡುತ್ತದೆ. ಪಾದದಲ್ಲಿ ಪುಷ್ಟವಾಗಿ ಬೆಳೆದ ಸ್ನಾಯುಗಳನ್ನೂ ಕಾಣಬಹುದು. ಇವುಗಳ ಅಲೆಯ ರೀತಿಯ ಚಲನೆಯಿಂದ ಪ್ರಾಣಿ ಚಲಿಸುತ್ತದೆ.




ಲಿಂಪೆಟ್‌ಗಳು: A. ಡಯೋಡೋರ, B. ಏಕ್ಮೀಯ; 1 ತಲೆ, 2. ಚಿಪ್ಪು 3. ಚಿಪ್ಪಿನ ರಂಧ್ರ, 4. ಮ್ಯಾಂಟಲಿನ ಸೈಫನ್, 5. ಪಾದ, 6. ಬಾಯಿ, 7. ಮ್ಯಾಂಟಲಿನ ಕರಬಳ್ಳಿ, 8. ಗುದದ್ವಾರ, 9. ಬಲ ನೆಫ್ರೀಡಿಯ ರಂಧ್ರ, 10. ಚಿಪ್ಪಿನ ಸ್ನಾಯು, 11. ಕಿವಿರು 12. ಎಡ ನೆಫ್ರೀಡಿಯ ರಂಧ್ರ

ಇನ್ನು ಕೆಲವು ಗ್ಯಾಸ್ಟ್ರಪೋಡಗಳಲ್ಲಿ ಬೇರೆ ಬಗೆಯ ಚಲನೆಯನ್ನು ಕಾಣಬಹುದು. ಉದಾಹರಣೆಗೆ, ಜೌಗುಪ್ರದೇಶದಲ್ಲಿ ವಾಸಿಸುವ ಮೆಲಾಂಪಸ್ ಎಂಬುದು ಪಾದದ ಮುಂಭಾಗವನ್ನು ಮೊದಲು ಮುಂಚಾಚಿ ಅದರಿಂದ ನೆಲವನ್ನಾಗಲಿ ಇನ್ನಾವ ವಸ್ತುವನ್ನಾಗಲಿ ಹಿಡಿದುಕೊಂಡು ಆಮೇಲೆ ತನ್ನ ದೇಹವನ್ನು ಎಳೆದುಕೊಳ್ಳುತ್ತದೆ. ಲ್ಯಾಕುನ ಎಂಬ ಪ್ರಾಣಿಯ ಪಾದದ ತಳಭಾಗದ ಮಧ್ಯದಲ್ಲಿ ಉದ್ದಕ್ಕೆ ಒಂದು ಕಾಲುವೆಯಿದ್ದು ಅದು ಪಾದವನ್ನು ಎಡ ಮತ್ತು ಬಲಭಾಗಗಳಾಗಿ ವಿಭಾಗಿಸಿದೆ. ಹುಳು ಚಲಿಸುವಾಗ ಈ ಭಾಗಗಳು ಒಂದಾದ ಮೇಲೆ ಒಂದರಂತೆ ಚಲಿಸುತ್ತವೆ.

ನೀರಿನ ತಳಭಾಗದಲ್ಲಿರುವ ಮೃದುವಾದ ಮಣ್ಣಿನಲ್ಲಿನ ಬಿಲಗಳಲ್ಲಿ ವಾಸಿಸುವ ಪ್ರೋಸೋಬ್ರ್ಯಾಂಕ್‌ಗಳು ಮತ್ತೊಂದು ರೀತಿಯಲ್ಲಿ ತಮ್ಮ ಪಾದವನ್ನು ಮಾರ್ಪಾಟು ಮಾಡಿಕೊಂಡಿವೆ. ಇವುಗಳ ಪಾದದ ಪ್ರೋಪೋಡಿಯಂ ಗುದ್ದಲಿಯಾಕಾರದಲ್ಲಿದ್ದು ನೆಲವನ್ನು ಅಗೆಯಲು ಸಹಾಯಕವಾಗಿದೆ. ಪಾದದ ಮುಂತುದಿಯಲ್ಲಿರುವ ಒಂದು ಪದರ ಗುರಾಣಿಯಂತೆ ತಲೆಯನ್ನು ಮುಚ್ಚಿದ್ದು ಮಣ್ಣು ಆ ಕಡೆಗೆ ಹೋಗದಂತೆ ತಡೆಯುತ್ತದೆ. ಚಿಪ್ಪುಗಳುಳ್ಳ ಪ್ರಭೇದಗಳ ಪಾದದ ಹಿಂತುದಿಯ ಮೇಲ್ಭಾಗದಲ್ಲಿ ಪೆರಿಆಸ್ಟ್ರಕಂ ಅಥವಾ ಕ್ಯಾಲ್ಸಿಯಂ ಕಾರ್ಬೊನೇಟಿನಿಂದ ಕೂಡಿದ ಗಡುಸಾದ ತಟ್ಟೆಯಂಥ ರಚನೆ ಇದೆ. ಇದಕ್ಕೆ ಒಪರ್‌ಕ್ಯುಲಂ ಎಂದು ಹೆಸರು. ಪ್ರಾಣಿ ಪಾದವನ್ನು ಚಿಪ್ಪಿನೊಳಕ್ಕೆಳೆದುಕೊಂಡಾಗ ಇದು ಚಿಪ್ಪಿನ ರಂಧ್ರವನ್ನು ಅಚ್ಚುಕಟ್ಟಾಗಿ ಮುಚ್ಚುತ್ತದೆ. ಸ್ಟ್ರಾಂಬಸ್ ಎಂಬ ಪ್ರಾಣಿಯಲ್ಲಿ ಪಾದ ಚಿಕ್ಕದಾಗಿದ್ದು ಒಪರ್‌ಕ್ಯುಲಂ ನಖದಂತೆ ಇದೆ. ಇಂಥ ಒಪರ್‌ಕ್ಯುಲಂ ಪ್ರಾಣಿ ನೆಲದೊಳಗೆ ಹುದುಗಿಕೊಳ್ಳುವುದಕ್ಕೂ ನೆಲದಿಂದ ಹೊರಕ್ಕೆ ಬರುವುದಕ್ಕೂ ಸಹಾಯಕವಾಗಿದೆ.

ಪ್ರೋಸೋಬ್ರ್ಯಾಂಕಿಯ ಉಪವರ್ಗದ ಹೆಟರಾಪೋಡ ಮತ್ತು ಒಫಿಸ್ಟೊಬ್ರ್ಯಾಂಕಿಯ ಗುಂಪಿನ ಕಡಲ ಚಿಟ್ಟೆಗಳ ಪಾದ ಈಜುವುದಕ್ಕೆ, ನೀರಿನಲ್ಲಿ ತೇಲುವುದಕ್ಕೆ ಸಹಾಯಕವಾಗುವಂತೆ ಈಜುರೆಕ್ಕೆಯಾಗಿ ಮಾರ್ಪಟ್ಟಿದೆ. ಇನ್ನು ಕೆಲವು ಒಫಿಸ್ಟೊಬ್ರ್ಯಾಂಕ್‌ಗಳ ಪಾದ ಬೇರೆ ರೀತಿಯಲ್ಲಿ ಮಾರ್ಪಾಟಾಗಿದೆ. ಇವುಗಳಲ್ಲಿ ಪಾದದ ಎರಡು ಬದಿಯಿಂದ ಹುಟ್ಟಿ, ದೇಹದ ಎರಡು ಕಡೆಗಳಲ್ಲೂ ವಿಶಾಲವಾಗಿ ಹರಡಿರುವ ಎರಡು ರೆಕ್ಕೆಗಳಿವೆ. ಇವಕ್ಕೆ ಪ್ಯಾರಪೋಡಿಯ ಎಂದು ಹೆಸರು. ಇವು ಅಗಲವಾಗಿದ್ದು ಈಜಲು ಸಹಾಯಕವಾಗಿವೆ. ಕಡಲ ಚಿಟ್ಟೆಗಳಲ್ಲಿ ಪ್ಯಾರಪೋಡಿಯಗಳು ಉದ್ದವಾಗಿದ್ದು ಪಾದದ ಮುಂದಿನ ತುದಿಯಲ್ಲಿರುತ್ತವೆ.

ಕೆಲವು ಗ್ಯಾಸ್ಟ್ರಪೋಡಗಳಲ್ಲಿ ಚಲನೆಯೇ ಇಲ್ಲ. ಇವು ಯಾವುದಾದರೊಂದು ಪದಾರ್ಥಕ್ಕೆ ಅಂಟಿಕೊಂಡು ಬದುಕುತ್ತವೆ. ಉದಾ: ಸತ್ತ ಅಥವಾ ಬದುಕಿರುವ ಇತರ ಮಾಲಸ್ಕಗಳ ಚಿಪ್ಪಿಗೆ ಅಂಟಿಕೊಂಡಿರುವ ಕ್ರೆಪಿಡ್ಯುಲ. ಇದರಲ್ಲೂ ಪಾದ ಪೂರ್ಣವಾಗಿ ಇಲ್ಲವೆಂದು ಹೇಳಲಾಗದು. ಇದು ಇತರ ಪದಾರ್ಥಗಳಿಗೆ ಅಂಟಿಕೊಳ್ಳಲು ಸಹಾಯಕವಾದ ಅಂಟುಸಿಂಬಿಯಾಗಿ ಮಾರ್ಪಟ್ಟಿದೆ.

ಜಲಚಲನೆ ಮತ್ತು ಉಸಿರಾಟ : ಗ್ಯಾಸ್ಟ್ರಪೋಡಗಳ ದೇಹದ ಮ್ಯಾಂಟಲ್ ಕುಹರದೊಳಗೆ ಪ್ರವಹಿಸುವ ನೀರಿನ ಚಲನೆ ಉಸಿರಾಟಕ್ಕೆ ಹಾಗೂ ದೇಹದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳನ್ನು ಹೊರಹಾಕುವುದಕ್ಕೆ ಸಹಾಯ ಮಾಡುತ್ತದೆ. ಮ್ಯಾಂಟಲ್ ಕುಹರದಲ್ಲಿ ಉಸಿರಾಟಕ್ಕೆ ಸಹಾಯಕವಾದ ಟಿನೀಡಿಯ ಅಥವಾ ಕಿವಿರುಗಳು ಇವೆ.




ಲಿಮಾಸೈನ ಎಂಬ ಕಡಲ ಚಿಟ್ಟೆಯ ಈಜುವಿಕೆ.
1. ಚಿಪ್ಪು,
2. ಪ್ಯಾರಪೋಡಿಯಂ

ಅತ್ಯಂತ ಕೆಳಮಟ್ಟದ ಕಿವಿರು ರಚನೆ ಹಾಗೂ ಜಲಚಲನೆಯನ್ನು ಕೆಲವು ಬಗೆಯ ಪ್ರೋಸೋಬ್ರ್ಯಾಂಕ್‌ಗಳಲ್ಲಿ ಕಾಣಬಹುದು. ಉದಾಹರಣೆ : ಆರ್ಕಿಗ್ಯಾಸ್ಟ್ರಪೋಡ ಉಪಗಣದ ಹ್ಯಾಲಿಯೋಟಿಸ್, ಸಿಸುರೆಲ ಮತ್ತು ಕೆಲವು ಬಗೆಯ ಲಿಂಪೆಟ್‌ಗಳು. ಇವುಗಳ ಮ್ಯಾಂಟಲ್ ಕುಹರದಲ್ಲಿ ಪ್ರತ್ಯೇಕವಾದ ಸೀಳುಗಾಲುವೆ ಇರುತ್ತದೆ ಅಥವಾ ಚಿಪ್ಪಿನಲ್ಲಿ ರಂಧ್ರಗಳಿರುತ್ತವೆ. ಜೊತೆಗೆ ಇವುಗಳಲ್ಲಿ ಆದಿಮೊಲಸ್ಕ ಗುಂಪಿನ ಕಿವಿರುಗಳನ್ನು ಹೋಲುವ ನಿಮ್ನದರ್ಜೆಯ ಎರಡು ಕಿವಿರುಗಳಿವೆ. ಮಲಾಶಯ ಮತ್ತು ಗುದದ್ವಾರಗಳು ಮ್ಯಾಂಟಲ್ ಕುಹರದ ಅಂಚಿನಿಂದ ಬೇರ್ಪಟ್ಟು ಸೀಳುಗಾಲುವೆಯೊಳಗೆ ಅಥವಾ ಚಿಪ್ಪಿನ ರಂಧ್ರದ ಒಳಗೆ ತೆರೆಯುತ್ತವೆ.

ಅಸಮಸ್ಥಿತಿಯ ದೇಹವನ್ನುಳ್ಳ ಹ್ಯಾಲಿಯೋಟಿಸ್ ಟ್ಯೂಬರ್‌ಕ್ಯುಲೇಟ ಎಂಬ ಪ್ರಾಣಿಯ ಮ್ಯಾಂಟಲ್ ಕುಹರದಲ್ಲಿ ಜೋಡಿತವಾಗಿರುವ ಕಿವಿರುಗಳು ಅದನ್ನು ತಳಭಾಗ ಹಾಗೂ ಮೇಲ್ಭಾಗಗಳಾಗಿ ವಿಭಾಗಿಸುತ್ತವೆ. ನೀರು ಹೊರಗಿನಿಂದ ಕಿವಿರುಗಳ ತಳಭಾಗಕ್ಕೆ ನುಗ್ಗಿ ಕಿವಿರುಗಳ ಮೇಲೆ ಹರಿಯುತ್ತದೆ. ಆಗ ಆಮ್ಲಜನಕ ಮತ್ತು ಕಾರ್ಬನ್ ಡೈ ಆಕ್ಸೈಡ್‌ಗಳ ವಿನಿಮಯವಾಗುತ್ತದೆ. ಅನಂತರ ನೀರು ಕಿವಿರುಗಳ ಮೇಲ್ಭಾಗಕ್ಕೆ ಬಂದು ಚಿಪ್ಪಿನ ರಂಧ್ರಗಳ ಮೂಲಕ ಹೊರಬರುತ್ತದೆ. ಹಾಗೆ ಹೊರ ಬರುವಾಗ ಶುದ್ಧೀಕರಣಾಂಗಗಳು ಮತ್ತು ಜೀರ್ಣಾಂಗಗಳು ವಿಸರ್ಜಿಸುವ ತ್ಯಾಜ್ಯವಸ್ತುಗಳನ್ನು ನೀರು ತನ್ನೊಂದಿಗೆ ಹೊರಸಾಗಿಸುತ್ತದೆ.




ಮ್ಯಾಂಟಲ್ ಕುಹರದಲ್ಲಿ ನೀರಿನ ಪ್ರವಾಹವನ್ನು ತೋರಿಸುವ ಚಿತ್ರ,
1. ನೆಫ್ರೀಡಿಯಂ, 2. ಕಿವಿರುರಂಧ್ರಗಳು. 3. ಚಿಪ್ಪು, 4. ಕಿವಿರು, 5. ಮಲಾಶಯ

ಸಿಸುರೆಲದಲ್ಲಿಯೂ ಹ್ಯಾಲಿಯೋಟಿಸ್‌ನಲ್ಲಿರುವಂತೆಯೇ ಸುರುಳಿ ಸುತ್ತಿದ ಚಿಪ್ಪಿದ್ದು ಜಲಚಲನೆ ಅದರಂತೆಯೇ ನಡೆಯುತ್ತದೆ. ಆದರೆ ಸಿಸುರೆಲದ ಚಿಪ್ಪಿನಲ್ಲಿ ರಂಧ್ರಗಳಿಲ್ಲ. ಚಿಪ್ಪಿನ ಮುಂತುದಿಯ ಭಾಗದಲ್ಲಿ ಆಳವಾದ ಕಾಲುವೆಯಂಥ ರಚನೆಯಿದೆ. ದೇಹವನ್ನು ಪ್ರವೇಶಿಸುವ ನೀರು ಕಿವಿರುಗಳ ಮೇಲೆ ಹರಿದು ಮ್ಯಾಂಟಲ್ ಕುಹರದ ಮೇಲ್ಭಾಗವನ್ನು ತಲುಪಿ ಅಲ್ಲಿಂದ ಈ ಕಾಲುವೆಯ ಮೂಲಕ ಹೊರಬರುತ್ತದೆ. ಹೀಗೆ ಹೊರಬರುವಾಗ ಗುದದ್ವಾರ ಮತ್ತು ನೆಫ್ರೀಡಿಯಗಳಿಂದ ತ್ಯಾಜ್ಯವಸ್ತುಗಳನ್ನು ಹೊರತರುತ್ತದೆ.

ಕೀಹೋಲ್ ಲಿಂಪೆಟ್‌ಗಳಲ್ಲಿ ದ್ವಿತೀಯಕ ಸಮಮಿತಿಯನ್ನು ಪಡೆದಿರುವ ತ್ರಿಕೋನಾಕಾರದ ಚಿಪ್ಪಿದೆ. ಚಿಪ್ಪಿನ ಮುಂತುದಿಯಲ್ಲಿ ಕಾಲುವೆಯಂಥ ರಚನೆ ಇರಬಹುದು ಅಥವಾ ರಂಧ್ರವಿರಬಹುದು. ಚಿಪ್ಪಿನ ತುದಿಯಲ್ಲಿ ರಂಧ್ರವಿರುವ ಸ್ಥಿತಿಯನ್ನು ಡಯೊಡೋರದಲ್ಲಿ ಕಾಣಬಹುದು. ದೇಹದ ಮುಂಭಾಗದಿಂದ ಒಳಪ್ರವೇಶಿಸಿದ ನೀರು, ಕಿವಿರುಗಳ ಮೇಲೆ ಪ್ರವಹಿಸಿ ಚಿಪ್ಪಿನ ತುದಿಯ ಕಡೆಗೆ ಬಿರುಸಿನಿಂದ ಸಾಗಿ ರಂಧ್ರದ




ಕೆಲವು ಬಗೆಯ ಶಂಭುಕಗಳು:Aಇಯೋಲಿಡಿಯ,B ಹೆಲಿಕ್ಸ್,C ಗ್ಯಾಸೊಡೋರಿಸ್,
1. ಕರಬಳ್ಳಿ,2. ರೈನೊಫೋರ್, 3. ಸೆರೇಟ, 4. ಚಿಪ್ಪು, 5. ಕಾಲುಮೆಲ,
6. ಅಂಗಸರಾಶಿ, 7. ಪಾದ, 8. ಕಿವಿರು, 9. ಮ್ಯಾಂಟಲ್

ಮೂಲಕ ಚಿಲುಮೆಯಂತೆ ಹೊರಬರುತ್ತದೆ. ರಂಧ್ರದ ತಳಭಾಗದ ಅಂಚಿನಲ್ಲಿ ಶುದ್ಧೀಕರಣಾಂಗ ರಂಧ್ರ ಹಾಗೂ ಗುದದ್ವಾರಗಳು ತೆರೆದುಕೊಳ್ಳುವುದರಿಂದ ಹೊರಬರುವ ನೀರು ತ್ಯಾಜ್ಯವಸ್ತುಗಳನ್ನು ಹೊರತರುತ್ತದೆ. ನಿಜವಾದ ಕಡಲು ಲಿಂಪೆಟ್‌ಗಳಾದ ಪಟಲ್ಲೇಸಿಯಗಳು ಕೂಡ ಆರ್ಕಿಗ್ಯಾಸ್ಟ್ರಾಪೋಡಗಳ ಒಂದು ಗುಂಪು. ಕೀಹೋಲ್ ಲಿಂಪೆಟ್‌ಗಳನ್ನೇ ಹೋಲುವ ಇವುಗಳ ಚಿಪ್ಪಿನಲ್ಲೂ ದ್ವಿತೀಯಕ ಸಮಪಾರ್ಶ್ವ ಸ್ಥಿತಿ ಇದೆ. ಚಿಪ್ಪು ತ್ರಿಕೋನಾಕಾರಕ್ಕಿದೆ. ಆದರೆ ಇವುಗಳಲ್ಲಿ ಮ್ಯಾಂಟಲ್ ಕುಹರದ ಕಾಲುವೆಯಾಗಲೀ ಚಿಪ್ಪಿನಲ್ಲಿ ರಂಧ್ರವಾಗಲೀ ಇಲ್ಲ. ಕೆಲವು ಬಗೆಗಳಲ್ಲಿ ಕಿವಿರುಗಳು ಕ್ಷೀಣಿಸಿರುವುದನ್ನು ಮತ್ತೆ ಕೆಲವು ಬಗೆಗಳಲ್ಲಿ ನಶಿಸಿಹೋಗಿರುವುದನ್ನು ಕಾಣಬಹುದು. ಏಕ್ಮೀಯ ಎಂಬುದರಲ್ಲಿ ಒಂದೇ ಒಂದು ಕಿವಿರಿದೆ; ಮ್ಯಾಂಟಲ್ ಪದರ ಪುಷ್ಟವಾಗಿ ಬೆಳೆದಿದ್ದು ಶರೀರದಿಂದ ಹೊರಬರುತ್ತದೆ. ಪಾದದ ಸುತ್ತ ಇಳಿಬಿದ್ದಿರುವ ಈ ಮ್ಯಾಂಟಲ್‌ನಲ್ಲಿ ಪಾದಕ್ಕೆ ಅಭಿಮುಖವಾಗಿರುವ ಒಂದು ಕಾಲುವೆಯಿದೆ. ದೇಹದೊಳಕ್ಕೆ ಬರುವ ನೀರು ದೇಹದ ಎಡಭಾಗದ ಕಾಲುವೆಯ ಮೂಲಕ ಹರಿದು ಕಿವಿರಿನ ಮೇಲೆ ಪ್ರವಹಿಸಿ ಬಲಭಾಗದ ಕಾಲುವೆಯ ಮೂಲಕ ಪಾದದ ಹಿಂಬದಿಯಲ್ಲಿ ಹೊರಹೋಗುತ್ತದೆ.

ಪಟೆಲದಲ್ಲಿ ನಿಜ ಕಿವಿರುಗಳು ಮಾಯವಾಗಿ ಇವಕ್ಕೆ ಬದಲಾಗಿ ದ್ವಿತೀಯಕ ಕಿವಿರುಗಳು ಹುಟ್ಟಿಕೊಂಡಿವೆ. ಕಿವಿರುಗಳು ಮ್ಯಾಂಟಲಿನ ಕಾಲುವೆಯೊಳಕ್ಕೆ ದೇಹದ ಎರಡೂ ಕಡೆಗಳಿಂದಲೂ ಜೋತುಬಿದ್ದಿವೆ. ದೇಹದೊಳಕ್ಕೆ ಬರುವ ನೀರಿನ ಪ್ರವಾಹ ಈ ಕಾಲುವೆಗಳ ಮೂಲಕ ಮುಂತುದಿಯಿಂದ ಹರಿದು ಬಂದು ಹಿಂತುದಿಯಿಂದ ಹೊರಬರುತ್ತದೆ.

ಉಳಿದ ಪ್ರೋಸೋಬ್ರ್ಯಾಂಕ್‌ಗಳಲ್ಲಿ ಜಲಚಲನೆ ಮತ್ತು ಕಿವಿರುಗಳ ರಚನೆಯಲ್ಲಿ ಕೆಲವು ಮೂಲಭೂತ ಬದಲಾವಣೆಗಳನ್ನು ಕಾಣಬಹುದು. ಇವುಗಳಲ್ಲಿ ಬಲಭಾಗದ ಕಿವಿರು ಸಂಪೂರ್ಣವಾಗಿ ಮಾಯವಾಗಿದೆ. ಸಿಹಿನೀರಿನಲ್ಲಿ ವಾಸಿಸುವ ವ್ಯಾಲ್ವೇಟ ಒಂದನ್ನು ಬಿಟ್ಟರೆ ಉಳಿದುವುಗಳಲ್ಲಿ ಎಡಭಾಗದ ಕಿವಿರು ತನ್ನ ಆದಿಗುಣವಾದ ಬೈಪೆಕ್ಟಿನೇಟ್ ಸ್ಥಿತಿಯನ್ನು ಕಳೆದುಕೊಂಡಿದೆ. ಕಿವಿರಿನ ಅಕ್ಷದ ಒಂದು ಕಡೆ ಮಾತ್ರ ಫಿಲಮೆಂಟ್‌ಗಳು ಇವೆ. ಅಲ್ಲದೆ ಕಿವಿರು ದೇಹದ ಒಳಭಾಗಕ್ಕೆ ಅಂಟಿಕೊಂಡು ತೂಗಾಡುತ್ತದೆ. ನೀರು ತಲೆಯ ಎಡಬದಿಯಿಂದ ಒಳನುಗ್ಗಿ ಮ್ಯಾಂಟಲ್ ಕುಹರದಲ್ಲಿ ಪ್ರವಹಿಸಿ ಬಲತುದಿಯಿಂದ ಹೊರಬರುತ್ತದೆ. ಮಲಾಶಯ ಉದ್ದವಾಗಿದ್ದು ಗುದದ್ವಾರ ದೇಹದ ಬಲಭಾಗದ ಮ್ಯಾಂಟಲ್ ಪದರದ ತುದಿಯಲ್ಲಿ ತೆರೆದುಕೊಳ್ಳುವುದರಿಂದ ಒಳಬರುವ ನೀರು ತ್ಯಾಜ್ಯವಸ್ತುಗಳಿಂದ ಮಲಿನಗೊಳ್ಳದು. ನುಲಿಗೆ ಕ್ರಿಯೆಯಿಂದ ಉದ್ಭವಿಸಿದ ಶರೀರ ನೈರ್ಮಲ್ಯ ಸಮಸ್ಯೆಗಳನ್ನು ಈ ಜೀವಿಗಳು ಹೀಗೆ ಪರಿಹರಿಸಿಕೊಂಡಿವೆ.

ಉಸಿರಾಟಕ್ಕೆ ಬೇಕಾದ ನೀರಿನ ಪ್ರವಾಹದ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಬಹುಪಾಲು ಪ್ರಭೇದಗಳಲ್ಲಿ ನೀರು ಒಳ ಪ್ರವಹಿಸುವ ಭಾಗದ ಮ್ಯಾಂಟಲ್ ಪದರದ ಅಂಚು ಒಂದುಗೂಡಿ ಒಂದು ರೀತಿಯ ಸೈಫನ್ ಕೊಳವೆಯಂತಾಗಿದೆ. ಉದಾ : ಬಕ್‌ಸಿನಮ, ಕೋಲಸ್, ಬ್ಯುಸಿಕಾನ್ ಮತ್ತು ಪ್ಯಾಸಿಯೊಲೇರಿಯ. ಜೊತೆಗೆ ಈ ಸೈಫನ್ ಕೊಳವೆಯನ್ನಿಟ್ಟುಕೊಳ್ಳಲು ಚಿಪ್ಪಿನ ಮುಂತುದಿಯ ರಂಧ್ರದ ಭಾಗದಲ್ಲಿ ಉದ್ದವಾದ ಕಾಲುವೆಯಂಥ ರಚನೆಯೊಂದಿದೆ.

ಉಪವರ್ಗಗಳಾದ ಒಫಿಸ್ತೊಬ್ರ್ಯಾಂಕಿಯ ಮತ್ತು ಪಲ್ಮನೇಟಗಳು ಕೇವಲ ಎಡಕಿವಿರನ್ನು ಉಳಿಸಿಕೊಂಡಿದ್ದು ಪ್ರೋಸೊಬ್ರ್ಯಾಂಕ್‌ಗಳಿಂದ ಹುಟ್ಟಿಬಂದಿರಬೇಕೆಂದು ಊಹಿಸಲಾಗಿದೆ.

ಒಫಿಸ್ತೊಬ್ರ್ಯಾಂಕ್‌ಗಳಲ್ಲಿ ವಿನುಲಿಗೆಯ ಜೊತೆಗೆ ಮೂಲ ಕಿವಿರು ಮಾಯವಾಗಿ ದ್ವಿತೀಯಕ ಕಿವಿರುಗಳು ಹುಟ್ಟಿಕೊಂಡಿವೆ. ಗುಳ್ಳೆ ಚಿಪ್ಪುಗಳು ಮತ್ತು ಕಡಲ ಮೊಲಗಳು ಆದಿಯಲ್ಲಿದ್ದ ಒಂದೇ ಕಿವಿರನ್ನು ಉಳಿಸಿಕೊಂಡಿವೆ. ಅಪೂರ್ಣ ವಿನುಲಿಗೆಯಿಂದಾಗಿ ಈ ಕಿವಿರು ದೇಹದ ಬಲಭಾಗದಲ್ಲಿದೆ. ಸಂಪೂರ್ಣವಾಗಿ ವಿನುಲಿಗೆಗೆ ಒಳಗಾಗಿರುವ ನ್ಯೂಡಿಬ್ರ್ಯಾಂಕ್‌ಗಳಲ್ಲಿ (ಕಡಲಗೊಂಡೆ ಹುಳುಗಳು) ಮ್ಯಾಂಟಲ್ ಕುಹರ ಹಾಗೂ ಕಿವಿರುಗಳು ಅದೃಶ್ಯವಾಗಿವೆ. ಆದ್ದರಿಂದ ಇವುಗಳಲ್ಲಿ ದೇಹದ ಮೇಲ್ಮೈನಿಂದ ಅಥವಾ ದ್ವಿತೀಯಕ ಕಿವಿರುಗಳಿಂದ ಉಸಿರಾಟ ನಡೆಯುತ್ತದೆ. ಬಹುಪಾಲು ನ್ಯೂಡಿಬ್ರ್ಯಾಂಕ್‌ಗಳಲ್ಲಿ ದೇಹದ ಬೆನ್ನುಭಾಗ ಅತಿ ಅಗಲವಾಗಿದ್ದು ಅದರ ಮೇಲೆ ಸೆರೇಟಗಳೆಂಬ ರಚನೆಗಳು ಬೆಳೆದುಕೊಂಡಿವೆ. ಇವು ಸಾಮಾನ್ಯವಾಗಿ ಅನೇಕ ಸಾಲುಗಳಲ್ಲಿ ಜೋಡಣೆಗೊಂಡಿವೆ. ಸೆರೇಟಗಳು ಇಯೋಲಿಡಿಯದಲ್ಲಿ ಗದೆಯಾಕಾರದವಾಗಿದ್ದರೆ ಡೆಂಡ್ರೋನೋಟಸಿನಲ್ಲಿ ಕವಲೊಡೆದಿವೆ. ಡೋರಿಸ್ ಮುಂತಾದ ನ್ಯೂಡಿಬ್ರ್ಯಾಂಕ್‌ಗಳಲ್ಲಿ ಸೆರೇಟಗಳೇ ಇಲ್ಲ. ಆದರೆ ಇವುಗಳಲ್ಲಿ ಗುದದ್ವಾರದ ಸುತ್ತ ಜೋಡಣೆಗೊಂಡಿರುವ ದ್ವಿತೀಯಕ ಕಿವಿರುಗಳಿವೆ. ನ್ಯೂಡಿಬ್ರ್ಯಾಂಕ್‌ಗಳ ಸೆರೇಟ ಮತ್ತು ದೇಹದ ಇತರ ಭಾಗಗಳು ಸಾಮಾನ್ಯವಾಗಿ ಕೆಂಪು, ಹಳದಿ, ಕಿತ್ತಳೆ, ನೀಲಿ, ಹಸಿರು ಮುಂತಾದ ವಿವಿಧ ರೀತಿಯ ಉಜ್ವಲ ಬಣ್ಣಗಳಿಂದ ಕೂಡಿದ್ದು ಈ ಪ್ರಾಣಿಗಳನ್ನು ಮೊಲಸ್ಕ ಗುಂಪಿನ ಅತ್ಯಂತ ಸುಂದರ ಪ್ರಾಣಿಗಳನ್ನಾಗಿ ಮಾಡಿವೆ.

ಆರ್ತ್ರೊಪೋಡ (ಸಂಧಿಪದಿಗಳು) ಗುಂಪನ್ನು ಬಿಟ್ಟರೆ ಭೂವಾಸಕ್ಕೆ ಹೊಂದಿಕೊಂಡಿರುವ ಅಕಶೇರುಕಗಳೆಂದರೆ ಪಲ್ಮನೇಟ ಗುಂಪು. ಹೊಸ ತೆರನ ಪರಿಸರದಿಂದಾಗಿ ಇವುಗಳ ಉಸಿರಾಟದ ಸಂಯಂತ್ರದಲ್ಲಿ ಮೂಲಭೂತ ಬದಲಾವಣೆಗಳಾಗಿವೆ. ಕಿವಿರುಗಳು ಮಾಯವಾಗಿರುವುದು, ಮ್ಯಾಂಟಲ್ ಕುಹರ ಅತಿ ಹೆಚ್ಚಿನ ರಕ್ತ ಪರಿಚಲನೆ ಪಡೆದಿದ್ದು ಫುಪ್ಫುಸವಾಗಿರುವುದು, ಮ್ಯಾಂಟಲ್ ಪದರದ ಅಂಚು ಭದ್ರವಾಗಿ ಪಾದದ ಸುತ್ತಲೂ ಅಂಟಿಕೊಂಡು ಚೀಲದಂತಾಗಿರುವುದು, ಇವಕ್ಕೆ ಬಲಭಾಗದಲ್ಲಿ ಮಾತ್ರ ನ್ಯೂಮೋಸ್ಟೋಮ್ ಎಂಬ ಒಂದು ಸಣ್ಣ ರಂಧ್ರವಿರುವುದು ಮತ್ತು ಮ್ಯಾಂಟಲ್ ಕುಹರದ ತಳಭಾಗದಲ್ಲಿ ಮಾಂಸಖಂಡಗಳು ಪುಷ್ಟವಾಗಿ ಬೆಳೆದಿದ್ದು ಅದು ವಪೆಯಂತೆ ಕೆಲಸ ಮಾಡುವುದು–ಇವು ಈ ಬದಲಾವಣೆಗಳಲ್ಲಿ ಮುಖ್ಯವಾದುವು. ನ್ಯೂಮೋಸ್ಟೋಮ್ ರಂಧ್ರ ತೆರೆದುಕೊಳ್ಳಲು ಹಾಗೂ ಮುಚ್ಚಿಕೊಳ್ಳಲು ಅದರ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳೇ ಕಾರಣ. ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳಿಂದ ರಕ್ತ ಆಮ್ಲಜನಕವನ್ನು ಹೀರಿಕೊಳ್ಳಲು ಅನುಕೂಲವಾಗುತ್ತದೆ. ಜನೆಲ್ಲ ಮುಂತಾದ ಕೆಲವು ಭೂಚರ ಶಂಭುಕಗಳ ಮ್ಯಾಂಟಲ್ ಪದರದಿಂದ ಬೆರಳುಗಳಂಥ ರಚನೆಗಳು ಮ್ಯಾಂಟಲ್ ಕುಹರದೊಳಕ್ಕೆ ಚಾಚಿಕೊಂಡಿವೆ. ಇವಕ್ಕೆ ಟ್ರೇಕಿಯಗಳೆಂದು ಹೆಸರು. ಇವುಗಳಿಂದಾಗಿ ಮ್ಯಾಂಟಲ್ ಕುಹರದ ಹರವು ಹೆಚ್ಚಿದೆ.

ಗ್ಯಾಸ್ಟ್ರಾಪೋಡ ಗುಂಪಿನಲ್ಲಿ ಕೇವಲ ಪಲ್ಮನೇಟುಗಳು ಮಾತ್ರ ಭೂವಾಸಿಗಳಾಗಿಲ್ಲ. ಪ್ರೋಸೊಬ್ರ್ಯಾಂಕಿಯ ಉಪವರ್ಗದ ಹೆಲಿಸಿನಿಡೆ, ಸೈಕ್ಲೊಫೋರಿಡೆ ಮತ್ತು ಪೊಮ್ಯಾಟಿಯಾಸಿಡೆ ಕುಟುಂಬಕ್ಕೆ ಸೇರಿದ ಸುಮಾರು 4,000 ಪ್ರಭೇದಗಳೂ ಭೂವಾಸಿಗಳೇ.

ಸಿಹಿನೀರಿನಲ್ಲಿ ವಾಸಿಸುವ ಬಸವನ ಹುಳುಗಳು ಭೂವಾಸಿ ಬಸವನ ಹುಳುಗಳಿಂದ ಉದ್ಭವವಾಗಿವೆ. ಭೂಜೀವನದಿಂದ ಜಲಜೀವನಕ್ಕೆ ಮರಳಿ ಬಂದಿರುವ ಇವುಗಳಲ್ಲಿ ಉಸಿರಾಟ ವ್ಯವಸ್ಥೆಯ ಅಂಗಗಳು ವಿವಿಧ ಬಗೆಗಳಲ್ಲಿ ವಿಕಾಸವಾಗಿವೆ. ಲಿಮ್‌ನೀಯಿಡೆ ಮತ್ತು ಫೈಸಿಡೆ ಕುಟುಂಬಗಳ ಪ್ರಾಣಿಗಳು ನೀರಿನಲ್ಲಿ ಜೀವಿಸಿದರೂ ನೇರವಾಗಿ ಗಾಳಿಯನ್ನೇ ಉಸಿರಾಡುತ್ತವೆ. ಗಾಳಿ ಸೇವಿಸಲು ಇವು ಆಗಾಗ ನೀರಿನ ಮೇಲ್ಮೈಗೆ ಬರುತ್ತವೆ. ಇವುಗಳ ನ್ಯೂಮೋಸ್ಟೋಮ್ ಸುತ್ತ ಇರುವ ಮ್ಯಾಂಟಲ್ ಪದರ ಒಂದು ರೀತಿಯ ಕೊಳವೆಯಂತಾಗಿ ನೀರಿನಿಂದ ಹೊರಚಾಚಿ ಗಾಳಿಯನ್ನು ಎಳೆದುಕೊಳ್ಳುತ್ತದೆ. ಈ ಎರಡು ಕುಟುಂಬಗಳ

ಇನ್ನು ಕೆಲವು ಪ್ರಭೇದಗಳು ನೀರಿನಿಂದ ಮೇಲೆ ಬರುವುದೇ ಇಲ್ಲ. ಇವು ತಮಗೆ ಅಗತ್ಯವಾದ ಆಮ್ಲಜನಕವನ್ನು ನೀರಿನಿಂದಲೇ ಪಡೆಯುತ್ತವೆ.

ಪಲ್ಮನೇಟ ಉಪವರ್ಗದ ಪ್ಲೇನಾರ್‌ಬಿಡೆ ಮತ್ತು ಆಂಕೈಲಿಡೆ ಕುಟುಂಬಗಳ ಪ್ರಭೇದಗಳು ಪೂರ್ಣವಾಗಿ ಜಲವಾಸಕ್ಕೇ ಹೊಂದಿಕೊಂಡಿವೆ. ಇವುಗಳಲ್ಲಿ ಮ್ಯಾಂಟಲ್ ಕುಹರ ಕ್ಷೀಣಿಸಿ ಹೋಗಿದೆ. ಪಾದದ ಎಡಭಾಗದಲ್ಲಿ ಚೂಪಾದ, ತ್ರಿಕೋನಾಕಾರದ ದ್ವಿತೀಯಕ ಕಿವಿರು ರೂಪುಗೊಂಡಿದೆ. ಇದಕ್ಕೆ ಮಿಥ್ಯಾಫುಪ್ಪುಸ ಎಂದು ಹೆಸರು.

ಶುದ್ಧೀಕರಣ ಮತ್ತು ಜಲನಿಯಂತ್ರಣ : ಆರ್ಕಿಗ್ಯಾಸ್ಟ್ರಾಪೋಡದಲ್ಲಿ ಎರಡು ನೆಫ್ರೀಡಿಯಗಳು ಇವೆ. ಉಳಿದುವುಗಳಲ್ಲಿ ಜನನೇಂದ್ರಿಯ ನಾಳದ ರಚನೆಯಲ್ಲಿ ಪಾಲುಗೊಳ್ಳುವ ಕೊಂಚ ಭಾಗವನ್ನು ಬಿಟ್ಟು ಬಲಗಡೆಯ ನೆಫ್ರೀಡಿಯಮ್ ಮಾಯವಾಗಿದೆ. ಎಡಗಡೆ ಇರುವ ನೆಫ್ರೀಡಿಯಮ್ ನುಲಿಗೆ ಕ್ರಿಯೆಯಿಂದಾಗಿ ಅಂಗಸ ರಾಶಿಯ ಮುಂಭಾಗದಲ್ಲಿ ಸ್ಥಿತವಾಗಿದೆ. ನೆಫ್ರೀಡಿಯಮ್ ತನ್ನ ರಚನೆಯಲ್ಲಿ ಮೊಲಸ್ಕ ವಿಭಾಗದ ಇತರ ಪ್ರಾಣಿಗಳಲ್ಲಿದ್ದಂತೆಯೇ ಇದೆ. U–ಆಕಾರದಲ್ಲಿರುವ ಇದರ ಗೋಡೆಗಳ ಮೇಲೆ ಮಡಿಕೆಗಳಂಥ ರಚನೆಗಳಿವೆ. ಇದರಿಂದಾಗಿ ನೆಫ್ರೀಡಿಯಮಿನ ಸ್ರಾವಕ ಪ್ರದೇಶ ಹೆಚ್ಚಾಗಿದೆ. ತ್ಯಾಜ್ಯ ವಸ್ತುಗಳು ಯೂರೆಟರ್ ಎಂಬ ಮೋಟು ನಾಳದ ಮೂಲಕ ಹೊರಬೀಳುತ್ತವೆ. ಪ್ರೋಸೋಬ್ರ್ಯಾಂಕ್ ಮತ್ತು ಒಫಿಸ್ತೊಬ್ರ್ಯಾಂಕ್‌ಗಳಲ್ಲಿ ನೆಫ್ರೀಡಿಯಮ್ ರಂಧ್ರ ಮ್ಯಾಂಟಲ್ ಕುಹರದ ಹಿಂಭಾಗದಲ್ಲಿ ತೆರೆದುಕೊಳ್ಳುತ್ತದೆ. ಈ ರಂಧ್ರದಿಂದ ಹೊರಬರುವ ತ್ಯಾಜ್ಯ ವಸ್ತುಗಳು ಮೂತ್ರನಾಳ (ಯೂರೆಟರ್) ನೀರಿನ ಪರಿಚಲನೆಯ ಪ್ರವಾಹದ ಮೂಲಕ ಹೊರಹೋಗುತ್ತವೆ. ಈ ರೀತಿಯ ವ್ಯವಸ್ಥೆ ಪಲ್ಮನೇಟುಗಳಲ್ಲಿ ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಮ್ಯಾಂಟಲ್ ಕುಹರ ಫುಪ್ಪುಸವಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಇವುಗಳಲ್ಲಿ ಯೂರೆಟರ್ ಉದ್ದವಾಗಿದೆ. ಇದು ಬಲ ಮ್ಯಾಂಟಲ್ ಗೋಡೆಯ ಮೇಲೆ ಹಾದು ಗುದದ್ವಾರದ ಬಳಿ ಹೊರತೆರೆದುಕೊಳ್ಳುತ್ತದೆ.

ಜಲವಾಸಿ ಗ್ಯಾಸ್ಟ್ರಾಪೋಡಗಳಲ್ಲಿ ತ್ಯಾಜ್ಯವಸ್ತುಗಳು ಅಮೋನಿಯ ಮತ್ತು ಅಮೋನಿಯಮ್ ಸಂಯುಕ್ತಗಳ ರೂಪದಲ್ಲಿರುತ್ತವೆ. ಭೂಚರ ಪಲ್ಮನೇಟಗಳು ತ್ಯಾಜ್ಯ ವಸ್ತುಗಳನ್ನು ಅಮೋನಿಯದ ರೂಪದಲ್ಲಿ ಹೊರಹಾಕದೆ ಯೂರಿಕ್ ಆಮ್ಲದ ಹರಳುಗಳ ರೂಪದಲ್ಲಿ ತ್ಯಜಿಸುತ್ತವೆ. ಇದರಿಂದ ದೇಹದಲ್ಲಿನ ನೀರು ಹೊರಬಾರದು.

ಭೂವಾಸಿ ಪಲ್ಮನೇಟಗಳು ತಮ್ಮ ದೇಹದ ಜಲವನ್ನು ಕಾಯ್ದಿಟ್ಟುಕೊಳ್ಳುವ ಸಲುವಾಗಿ ಯಾವಾಗಲೂ ಜೌಗು ಭೂಮಿಯಲ್ಲೇ ವಾಸಿಸುತ್ತವೆ. ಹಗಲು ಸೊಪ್ಪು ಸದೆಗಳ ಕುಪ್ಪೆಗಳಡಿಯಲ್ಲಿ, ದಿಮ್ಮಿಗಳ ತಳಭಾಗದಲ್ಲಿ ಹುದುಗಿದ್ದು ರಾತ್ರಿಯಲ್ಲಿ ಮಾತ್ರ ಹೊರ ಹೊರಡುತ್ತವೆ. ಚಳಿಗಾಲದಲ್ಲಿ, ಶುಷ್ಕ ವಾತಾವರಣವಿರುವ ಕಾಲಗಳಲ್ಲಿ ಇವು ನೆಲದಲ್ಲಿ ಬಿಲಗಳನ್ನು ತೋಡಿಕೊಂಡು ಹುದುಗಿದ್ದು ಸುಪ್ತವಾಗಿರುತ್ತವೆ. ಈ ಕಾಲದಲ್ಲಿ ಇವುಗಳ ಮ್ಯಾಂಟಲಿನ ಅಂಚು ಹೊರಬಂದು ಒಟ್ಟುಗೂಡಿ ಚಿಪ್ಪಿನ ತೆರಪಿನ ಬಳಿ ಒಂದು ರಕ್ಷಾಪೊರೆಯನ್ನು ಉತ್ಪಾದಿಸಿಕೊಳ್ಳುತ್ತವೆ. ಸಿಹಿನೀರಿನ ಶಂಭುಕಗಳಲ್ಲಿ, ಅವು ವಾಸಿಸುವ ಕೆರೆಕುಂಟೆಗಳು ಒಣಗಿ ಹೋದಾಗ, ಈ ರೀತಿಯ ಸುಪ್ತಾವಸ್ಥೆ ಕಂಡುಬರುತ್ತದೆ.

ಬಹುಪಾಲು ಗ್ಯಾಸ್ಟ್ರಾಪೋಡಗಳ ಶುದ್ಧೀಕರಣ ಕ್ರಿಯೆಯಲ್ಲಿ ಅವುಗಳ ಜೀರ್ಣಗ್ರಂಥಿ ಸ್ವಲ್ಪಮಟ್ಟಿನ ಪಾತ್ರವಹಿಸುತ್ತದೆ. ಈ ಅಂಗವನ್ನು ಪರಿಶೀಲಿಸಿದಾಗ ಅದರಲ್ಲಿ ಶುದ್ಧೀಕರಣ ಕೋಶಗಳು ಇರುವುದು ಕಂಡುಬಂದಿದೆ. ಇವು ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಿ ಜಠರ ಮತ್ತು ಕರುಳಿನ ಮೂಲಕ ಹೊರಸಾಗಿಸುತ್ತವೆ.

ರಕ್ತಪರಿಚಲನೆ: ನುಲಿಗೆಯಿಂದಾಗಿ ಗ್ಯಾಸ್ಟ್ರಾಪೋಡಗಳ ಹೃದಯ ಅಂಗಸ ರಾಶಿಯ ಮುಂಭಾಗಕ್ಕೆ ಬಂದಿದೆ. ಈ ಒಂದು ಬದಲಾವಣೆಯನ್ನು ಬಿಟ್ಟರೆ ಆರ್ಕಿಗ್ಯಾಸ್ಟ್ರಾಪೋಡಗಳ ರಕ್ತಪರಿಚಲನೆ ಆದಿಮೊಲಸ್ಕಗಳಲ್ಲಿರುವಂತೆಯೇ ಇದೆ. ಇವುಗಳಲ್ಲಿ ಎರಡು ಹೃತ್ಕರ್ಣಗಳಿವೆ. ಉಳಿದ ಎಲ್ಲ ಗ್ಯಾಸ್ಟ್ರಾಪೋಡಗಳಲ್ಲೂ ಬಲ ಹೃತ್ಕರ್ಣ ಕ್ಷೀಣವಾಗಿದೆ. ಕೆಲವದರಲ್ಲಂತೂ ಈ ಹೃತ್ಕರ್ಣ ಸಂಪೂರ್ಣವಾಗಿ ಮಾಯವಾಗಿದೆ. ಬಲಹೃತ್ಕರ್ಣ ನಶಿಸಿಹೋಗಿರುವುದರಿಂದ ಬಲಭಾಗದ ಕಿವಿರು ಕೂಡ ಮಾಯವಾಗಿದೆ. ಗ್ಯಾಸ್ಟ್ರಾಪೋಡಗಳ ಹೃತ್ಕುಕ್ಷಿಯಿಂದ ಮೋಟಾಗಿರುವ ಒಂದು ಅಯೋರ್ಟ ಹೊರಡುತ್ತದೆ. ಇದು ಎರಡು ಕವಲುಗಳಾಗಿ ವಿಭಾಗಗೊಳ್ಳುತ್ತದೆ. ಮೊದಲನೆಯ ಕವಲು (ಹಿಂಭಾಗದ ಅಂಗಸದ ಅಪಧಮನಿ) ಅಂಗಸರಾಶಿಗೆ ರಕ್ತವನ್ನೊದಗಿಸುತ್ತದೆ. ಎರಡನೆಯದು (ಮುಂಭಾಗದ ಶಿಖರದ ಅಪಧಮನಿ) ತಲೆ ಮತ್ತು ಪಾದಗಳಿಗೆ ರಕ್ತವನ್ನು ಒದಗಿಸುತ್ತದೆ. ಇದರ ಒಂದು ಭಾಗ ಅಗಲವಾಗಿ ಎರಡನೆಯ ಹೃದಯವಾಗುವುದೂ ಉಂಟು. ಉದಾ: ಬ್ಯೂಸಿಕಾನ್. ಎರಡನೆಯ ಹೃದಯ ಬಹುಶಃ ರಕ್ತದ ಒತ್ತಡವನ್ನು ನಿಯಂತ್ರಿಸುತ್ತದೆ. ರಕ್ತ ಮೂತ್ರಕೋಶದಿಂದ ಕಿವಿರಿನ ಮೂಲಕ ಇಲ್ಲವೆ ನೇರವಾಗಿಯೇ ಹೃದಯವನ್ನು ತಲಪುತ್ತದೆ.

ಆಹಾರ ಸೇವನೆ ಕ್ರಮ : ಗ್ಯಾಸ್ಟ್ರಾಪೋಡಗಳಲ್ಲಿ ನಾನಾರೀತಿಯ ಆಹಾರ ಸೇವನೆ ಕ್ರಮ ಇದೆ. ಸಸ್ಯಾಹಾರಿಗಳು, ಮಾಂಸಹಾರಿಗಳು, ಕೊಳೆತಿನಿಗಳು ಹೀಗೆ ಎಲ್ಲ ಬಗೆಯ ಪ್ರಾಣಿಗಳೂ ಇವೆ. ಕೆಲವು ಬಗೆಯವು ಶಿಲಿಕೆಗಳ ಸಹಾಯದಿಂದ ಆಹಾರವನ್ನು ಹಿಡಿದರೆ ಇನ್ನು ಕೆಲವು ಪರಾವಲಂಬಿಗಳು. ಸಾಮಾನ್ಯವಾಗಿ ಗ್ಯಾಸ್ಟ್ರಾಪೋಡುಗಳಲ್ಲಿ ಆಹಾರ ಸೇವನೆಗೆ ರ್‍ಯಾಡ್ಯುಲ ಎಂಬ ರಚನೆಯ ಬಳಕೆಯಿದೆ. ಜೀರ್ಣಕ್ರಿಯೆ ಸ್ವಲ್ಪಮಟ್ಟಿಗೆ ಕೋಶಗಳ ಹೊರಗೆ ನಡೆಯುತ್ತದೆ. ಕೆಲವು ವಿಶಿಷ್ಟ ಜೀವಿಗಳನ್ನು ಬಿಟ್ಟರೆ ಜೀರ್ಣಕ್ರಿಯೆಗೆ ಬೇಕಾದ ಕಿಣ್ವಗಳನ್ನು ಜೊಲ್ಲು ಗ್ರಂಥಿಗಳು, ಅನ್ನನಾಳದ ಚೀಲಗಳು, ಜೀರ್ಣಾಂಗ ಗ್ರಂಥಿಗಳು ಉತ್ಪಾದಿಸುತ್ತವೆ. ಜೀರ್ಣಕ್ರಿಯೆ ನಡೆಯುವುದು ಜಠರದಲ್ಲಾದರೂ ಆಹಾರ ಹೀರಿಕೆ ನಡೆಯುವುದು ಪಿತ್ತಕೋಶದಲ್ಲಿ. ನುಲಿಗೆಯಿಂದಾಗಿ ಜಠರ $180^0$ ಗಳಷ್ಟು ತಿರುಚಿಕೊಂಡಿರುವುದರಿಂದ ಅನ್ನನಾಳ ಜಠರವನ್ನು ಹಿಂತುದಿಯಿಂದ ಸೇರುವಂತೆಯೂ ಕರುಳು ಜಠರದ ಮುಂತುದಿಯಿಂದ ಹೊರಡುವಂತೆಯೂ ಇವೆ. ಮುಂದುವರಿದ ಗ್ಯಾಸ್ಟ್ರಾಪೋಡಗಳಲ್ಲಿ ಮಾತ್ರ ಅನ್ನನಾಳ ಜಠರದ ಮುಂತುದಿಯ ಭಾಗಕ್ಕೆ ಬಂದು ಸೇರಿಕೊಳ್ಳುವಂತೆ ಮಾರ್ಪಾಟುಗಳು ನಡೆದಿವೆ.

ರ್‍ಯಾಡ್ಯುಲ ಬಹುಪಾಲು ಗ್ಯಾಸ್ಟ್ರಾಪೋಡಗಳಲ್ಲಿ ಬಲುಚೆನ್ನಾಗಿ ರೂಪುಗೊಂಡ ರಚನೆಯಾದರೂ ಕೆಲವು ಪ್ರಭೇದಗಳಲ್ಲಿ ಇಲ್ಲವೆ ಇಲ್ಲ. ರ್‍ಯಾಡ್ಯುಲದಲ್ಲಿ 3 ಸಾಲುಗಳಲ್ಲಿ ಜೋಡಣೆಗೊಂಡಿರುವ ಹಲ್ಲುಗಳಿವೆ. ಇವುಗಳ ಸಂಖ್ಯೆ 16–750,000. ಹಲ್ಲುಗಳ ಆಕಾರ ಮತ್ತು ರಚನೆಗಳಲ್ಲಿ ಸಾಲಿನಿಂದ ಸಾಲಿಗೆ ಅನೇಕ ವ್ಯತ್ಯಾಸಗಳಿವೆ. ಗ್ಯಾಸ್ಟ್ರಾಪೋಡ ವರ್ಗದ ವಿವಿಧ ಉಪಗುಂಪುಗಳಲ್ಲಿ ಈ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿದ್ದು ಒಂದೊಂದು ಗುಂಪೂ ತನಗೆ ವಿಶಿಷ್ಟವಾದ ರಚನಾವ್ಯತ್ಯಾಸಗಳನ್ನು ತೋರುತ್ತದೆ. ಇದರಿಂದಾಗಿ ಗ್ಯಾಸ್ಟ್ರಾಪೋಡದ ವರ್ಗೀಕರಣದಲ್ಲಿ ರ್‍ಯಾಡ್ಯುಲದ ಪಾತ್ರ ಮುಖ್ಯವಾದ್ದು.



ರ್‍ಯಾಡ್ಯುಲದ ರಚನೆ: 1. ಪಾರ್ಶ್ವದ ಹಲ್ಲುಗಳು, 2. ಅಂಚಿನ ಹಲ್ಲುಗಳು, 3. ಮಧ್ಯದ ಹಲ್ಲುಗಳು

ನಿಮ್ನರೀತಿಯ ಪಚನಕ್ರಿಯೆಯನ್ನು ಆರ್ಕಿಗ್ಯಾಸ್ಟ್ರಾಪೋಡಗಳಾದ ಡಯೋಡೋರ, ನೆರಿಟೈನ, ಮಾನೊಡಾಂಟ ಮುಂತಾದುವುಗಳಲ್ಲಿ ಕಾಣಬಹುದು. ಇವು ಸ್ಪಂಜು ಪ್ರಾಣಿಗಳನ್ನು ತಿನ್ನುತ್ತವೆ. ಆಹಾರ ಜೀವಿಗಳನ್ನು ತಮ್ಮ ರ್‍ಯಾಡ್ಯುಲದಿಂದ ಉಜ್ಜಿ ಅದರಿಂದ ಒಸರುವ ವಸ್ತುಗಳನ್ನು ಜೊಲ್ಲುಗ್ರಂಥಿಗಳು ಸ್ರವಿಸುವ ಲೋಳೆಯೊಂದಿಗೆ ಸೇರಿಸಿ ನುಂಗುತ್ತವೆ. ಇವುಗಳ ಅನ್ನನಾಳದ ಇಕ್ಕೆಲದಲ್ಲಿರುವ ಚೀಲಗಳು ಜೀರ್ಣಕ್ರಿಯೆಗೆ ಬೇಕಾದ ಕೆಲವು ಕಿಣ್ವಗಳನ್ನು ಉತ್ಪತ್ತಿ ಮಾಡುತ್ತವೆ. ಉಳಿದ ಕಿಣ್ವಗಳು ಜೀರ್ಣ ಗ್ರಂಥಿಯಲ್ಲಿ ಉತ್ಪತ್ತಿಯಾಗುತ್ತವೆ.

ಅನ್ನನಾಳಕ್ಕೆ ಹತ್ತಿರದಲ್ಲಿರುವ ಭಾಗಕ್ಕೆ ಆಹಾರವಸ್ತುಗಳನ್ನು ಬೇರ್ಪಡಿಸುವ ಭಾಗವೆಂದು ಹೆಸರು. ಕರುಳಿನ ಹತ್ತಿರದಲ್ಲಿರುವ ಜಠರದ ಭಾಗ ತ್ರಿಕೋನಾಕಾರಕ್ಕಿದ್ದು ಸ್ಟೈಲ್ ಚೀಲ ಎಂಬ ರಚನೆಯಾಗಿದೆ. ಇದರ ಉದ್ದಕ್ಕೂ ಒಂದು ಆಳವಾದ ತೋಡು ಇದೆ. ಈ ತೋಡು ಸ್ಟೈಲ್ ಚೀಲಕ್ಕೂ ಜಠರಕ್ಕೂ ಸಂಪರ್ಕ ಕಲ್ಪಿಸುತ್ತದೆ. ಆಹಾರವನ್ನು ವಿಂಗಡಿಸುವ ಭಾಗ ಜಠರ ಜೀರ್ಣಿಸಲಾಗದ ಪದಾರ್ಥಗಳನ್ನು ಬೇರ್ಪಡಿಸಿ ಸ್ಟೈಲ್ ಚೀಲದೊಳಕ್ಕೂ ಜೀರ್ಣವಾಗುವಂಥ ಆಹಾರವನ್ನು ಲೋಳೆಯೊಂದಿಗೆ ಮಿಶ್ರಿಸಿ ಚಂಡಿನಂತೆ ಮಾಡಿ ಕರುಳಿನೊಳಕ್ಕೂ ನೂಕುತ್ತದೆ. ಉಳಿದ ಉಚ್ಚಮಟ್ಟದ ಗ್ಯಾಸ್ಟ್ರಾಪೋಡುಗಳಲ್ಲಿ ಬಲು ಸರಳ ರೀತಿಯ ಜಠರ ಇದೆ. ಇದರಲ್ಲಿ ಕೈಟಿನಿನ ಲೇಪನ, ವಿಂಗಡಣಾ ವಿಭಾಗ, ಸ್ಟೈಲ್ ಚೀಲ ಮುಂತಾದುವು ಇಲ್ಲ.

ಪ್ರೋಸೋಬ್ರ್ಯಾಂಕ್, ಒಫಿಸ್ತೊಬ್ರ್ಯಾಂಕ್ ಮತ್ತು ಪಲ್ಮನೇಟಗಳ ಸಸ್ಯಾಹಾರಿ ಬಗೆಗಳಲ್ಲಿ ರ್‍ಯಾಡ್ಯುಲದಲ್ಲಿ ಹಲ್ಲುಗಳು ಅಸಂಖ್ಯಾತವಾಗಿವೆ. ಇವುಗಳ ಅಂಗುಳದ ಮೇಲಿನ ಅಂಚಿನಲ್ಲಿ ಕೈಟಿನಿಂದ ಕೂಡಿದ ದವಡೆಯಿದೆ. ಬಹುಪಾಲು ಪ್ರಭೇದಗಳಲ್ಲಿ ಅನ್ನನಾಳ ಅಗಲವಾದ ಮೇತೆಯಂತೆ ಹಿಗ್ಗಿದೆ. ಇದನ್ನು ಜಠರದ ಮುಂಭಾಗದಲ್ಲಿ ಕಾಣಬಹುದು. ಮೇತೆಯಲ್ಲಿ ಆಹಾರ ತಾತ್ಕಾಲಿಕವಾಗಿ ಸಂಗ್ರಹವಾಗುತ್ತದೆ. ಜೀರ್ಣಗ್ರಂಥಿಗಳಲ್ಲಿ ಉತ್ಪತ್ತಿಯಾದ ಕಿಣ್ವಗಳು ಇದರೊಳಕ್ಕೆ ಬರುತ್ತವೆ. ಅಪ್ಲೀಸಿಯದಲ್ಲಿ ಮೇತೆಯ ಗೋಡೆಯ ಮೇಲೆ ಕೈಟಿನ್ ತಟ್ಟೆಗಳಿವೆ. ಇದು ಗಿಜರ್ಡಿನಂತೆ ಕಾರ್ಯ ನಿರ್ವಹಿಸುತ್ತದೆ.

ಮಾಂಸಾಹಾರಿಗಳಾದ ಕೆಲವು ಪ್ರೋಸೋಬ್ರ್ಯಾಂಕ್, ಒಫಿಸ್ತೊಬ್ರ್ಯಾಂಕ್ ಮತ್ತು ಪಲ್ಮನೇಟಗಳ ರ್‍ಯಾಡ್ಯುಲದಲ್ಲಿ ಅತಿ ದೊಡ್ಡ ಹಲ್ಲುಗಳು ಇವೆ. ಹಲ್ಲುಗಳ ಸಂಖ್ಯೆ ಕಡಿಮೆ. ಪ್ರೋಸೋಬ್ರ್ಯಾಂಕ್‌ಗಳಲ್ಲಿ ದವಡೆಗಳಿಲ್ಲ. ಬಾಯಂಗುಳ ಮಡಿಸಿಕೊಂಡಂತಾಗಿ ಸೊಂಡಿಲಿನಂಥ ರಚನೆಯಾಗಿ ರೂಪುಗೊಂಡಿದೆ. ಈ ಸೊಂಡಿಲಿನ ಒಳಾವರಣದಲ್ಲಿ ಅನ್ನನಾಳದವರೆಗೂ ಹರಡಿರುವ ರ್‍ಯಾಡ್ಯುಲಗಳಿವೆ. ಆಹಾರ ಸೇವನೆಯ ಕಾಲದಲ್ಲಿ ರ್‍ಯಾಡ್ಯುಲಗಳು ಸೊಂಡಿಲಿನ ತುದಿಯಿಂದ ಹೊರಚಾಚಿಕೊಳ್ಳುತ್ತವೆ. ಆಹಾರ ಸೇವನೆ ಮುಗಿದ ಅನಂತರ ಸೊಂಡಿಲು ಒಳಗೆಳೆಯಲ್ಪಡುತ್ತದೆ. ಸೊಂಡಿಲನ್ನು ಇಟ್ಟುಕೊಳ್ಳುವುದಕ್ಕಾಗಿಯೇ ಬಾಯಲ್ಲಿ ಒಂದು ಪ್ರತ್ಯೇಕ ಅವಕಾಶವಿದೆ. ಕೆಲವು ಪ್ರೋಸೋಬ್ರ್ಯಾಂಕ್ ಕುಟುಂಬಗಳಲ್ಲಿ, ಮುಖ್ಯವಾಗಿ ಮ್ಯೂರಿಸಿಡೆ ಕುಟುಂಬದಲ್ಲಿ ಕಪ್ಪೆಚಿಪ್ಪಿನ ಹುಳುಗಳನ್ನು ತಿನ್ನಬಲ್ಲಂಥ ಜೀವಿಗಳಿವೆ. ಇವು ಆಹಾರಜೀವಿಯ ಚಿಪ್ಪನ್ನು ತಮ್ಮ ರ್‍ಯಾಡ್ಯುಲದಿಂದ ಕೊರೆದು ಚಿಪ್ಪಿನ ಒಳಗಿರುವ ಮೃದು ಶರೀರವನ್ನು ಹೀರುತ್ತವೆ. ಉದಾ: ಯೂರೊಸ್ಯಾಲ್ಪಿಂಕ್ಸ್, ಮ್ಯೂರೆಕ್ಸ್, ಯೂಪ್ಲ್ಯೂರ ಇತ್ಯಾದಿ. ಕಡಲಿನಲ್ಲಿ ವಾಸಿಸುವ ಪ್ರೋಸೋಬ್ರ್ಯಾಂಕ್‌ಗಳ ಒಂದು ಜಾತಿಯಾದ ಕೋನಸ್ ಎಂಬುದು ಜೀವಂತ ಮೀನುಗಳನ್ನೂ ಕಡಲ ಅನೆಲಿಡಗಳನ್ನೂ ತಿನ್ನುತ್ತದೆ. ಇದು ತನ್ನ ಹರಿತವಾದ ರ್‍ಯಾಡ್ಯುಲಗಳಿಂದ ಆಹಾರಜೀವಿಗಳನ್ನು ತಿವಿದು ಅದರೊಳಕ್ಕೆ ತೀಕ್ಷ್ಣ ಬಗೆಯ ವಿಷವನ್ನು ಹೊಗಿಸಿ ಕೊಲ್ಲುತ್ತದೆ.

ಶಿಲಕೆಗಳ ಸಹಾಯದಿಂದ ಆಹಾರ ಸೇವನೆ : ಕೆಲವು ಗ್ಯಾಸ್ಟ್ರಪೋಡಗಳು ತಮ್ಮ ಶಿಲಕೆಗಳ ಸಹಾಯದಿಂದ ನೀರಿನಲ್ಲಿರುವ ಪ್ಲಾಂಕ್ಟನ್ ಮುಂತಾದ ಆಹಾರವನ್ನು ಶೋಧಿಸಿ ಸೇವಿಸುತ್ತವೆ. ಉದಾ: ಕ್ರೆಪಿಡ್ಯುಲ, ಸ್ಟ್ರಾಂಬಸ್ ಮತ್ತು ವರ್ಮಿಟಸ್. ಇಂಥ ಪ್ರಾಣಿಗಳಲ್ಲಿ ಪ್ರೋಟೀನು ವಸ್ತುವಿನಿಂದ ರಚಿತವಾದ ಸಲಾಕೆಯಂಥ ಸ್ಟೈಲ್ ಇರುತ್ತದೆ. ಜಠರದ ಹಿಂತುದಿಯ ಸ್ಟೈಲ್ ಚೀಲದಿಂದ ಉತ್ಪತ್ತಿಯಾಗುವ ಇದು ಜಠರದ ಕರಳು ಭಾಗದಲ್ಲಿ ಹುದುಗಿರುತ್ತದೆ. ಆಹಾರ ಜೀರ್ಣವಾಗುವ ಕಾಲದಲ್ಲಿ ಶಿಲಕೆಗಳ ಸಹಾಯದಿಂದ ಇದು ತಿರುಗುತ್ತಿದ್ದು ಆಹಾರ ಬೆರೆಯುವುದಕ್ಕೂ ಜೀರ್ಣವಾಗುವುದಕ್ಕೂ ಸಹಾಯ ಮಾಡುತ್ತದೆ. ಅಲ್ಲದೆ ಇತರ ಪಿಷ್ಟ ಪದಾರ್ಥಗಳನ್ನು ಜೀರ್ಣಿಸಬಲ್ಲ ಕಿಣ್ವಗಳಿವೆ.




ಬ್ಯೂಸಿಕಾನಿನ ದೇಹದ ವಿವಿಧ ಭಾಗಗಳು: 1. ಕಣ್ಣು, 2. ಬಾಯಿ, 3. ಸೊಂಡಿಲು, 4. ಕರಬಳ್ಳಿ, 5. ಶಿಶ್ನ, 6. ಆಸ್ಟ್ರಾಡಿಯಂ, 7. ಗುದದ್ವಾರ, 8. ಮಲಾಶಯ, 9. ದ್ವಿತೀಯಕ ಹೃದಯ, 10. ನೆಫ್ರೀಡಿಯಂ ರಂಧ್ರ, 11. ಮೂತ್ರ ಪಿಂಡ, 12. ಹೃತ್ಕುಕ್ಷಿ, 13. ವೃಷಣ, 14. ಜಠರ, 15. ಅಯೋರ್ಟ, 16. ಒಪರ್ಕ್ಯುಲಂ, 17. ಪಾದ, 18. ಸೈಫನ್

ಕೆಲವು ಗ್ಯಾಸ್ಟ್ರಪೋಡಗಳು ಪರಾವಲಂಬಿಗಳಾಗಿವೆ. ಉದಾ : ಪಿರಾಮಿಡಿಲೇಸಿಯ ಪೈರಮ್ ಶಂಭುಕಗಳು ಪಾಲಿಕೀಟ ಮತ್ತು ಕಪ್ಪೆಚಿಪ್ಪಿನ ಹುಳುಗಳ ಮೇಲೆ ಬಾಹ್ಯ ಪರಾವಲಂಬಿಗಳಾಗಿ ಜೀವನ ಸಾಗಿಸಿದರೆ ಸ್ಟೈಲಿಫರ್ ಎಂಬುದು ನಕ್ಷತ್ರಮೀನುಗಳ ದೇಹದೊಳಗೂ ಎಂಟೋಕಾಂಕ ಎಂಬುದು ಕಡಲಸೌತೆಗಳ ಅಂಗಾಂಗಗಳ ಒಳಗೂ ಇದ್ದು ಅಂತರ್ ಪರಾವಲಂಬಿಗಳಾಗಿ ಜೀವನ ನಡೆಸುತ್ತವೆ.

ನರಮಂಡಲ : ಗ್ಯಾಸ್ಟ್ರಪೋಡಗಳ ನರಮಂಡಲ ಸಂಕೀರ್ಣ ಮಾದರಿಯದು. ಇದರಲ್ಲಿ ನಿರ್ದಿಷ್ಟವಾದ ನರಮುಡಿಗಳನ್ನು ಕಾಣಬಹುದು. ನುಲಿಗೆ ಪೂರ್ವ ಸ್ಥಿತಿಯಲ್ಲಿ ಇದು ಹೇಗಿತ್ತು ಎಂಬುದನ್ನು ತಿಳಿದುಕೊಂಡರೆ ನುಲಿಗೆಗೊಳಗಾದ ಮೇಲೆ ಇದರಲ್ಲಿ ಉಂಟಾದ ವ್ಯತ್ಯಾಸಗಳೇನು ಎಂಬುದನ್ನು ಅರಿಯುವುದು ಸುಲಭ. ಅನ್ನನಾಳದ ಹಿಂತುದಿಯಲ್ಲಿ ಒಂದು ಜೊತೆ ಸೆರಬ್ರಲ್ ನರಮುಡಿಗಳು ಇವೆ. ಇವುಗಳಿಂದ ಹೊರಡುವ ನರಗಳು ಕಣ್ಣು, ಕರಬಳ್ಳಿಗಳು ಮುಂತಾದ ಅಂಗಗಳಿಗೆ ಹೋಗುತ್ತವೆ.

ಸೆರಬ್ರಲ್ ನರಮುಡಿಗಳ ಮುಂಭಾಗದಲ್ಲಿ ಬಾಯ ಇಕ್ಕೆಲದಲ್ಲಿ ಒಂದು ಜೊತೆ ಬಕಲ್ ನರಮುಡಿಗಳು ಇವೆ. ಇವಕ್ಕೂ ಸೆರಬ್ರಲ್ ನರಮುಡಿಗಳಿಗೂ ನರತಂತುಗಳ ಸಂಪರ್ಕ ಇದೆ. ಬಕಲ್ ನರಮುಡಿಗಳಿಂದ ರ್‍ಯಾಡ್ಯುಲದ ಸ್ನಾಯುಗಳಿಗೂ ಬಾಯಂಗುಳಕ್ಕೂ ನರಗಳು ಹೋಗುತ್ತವೆ. ಪ್ರತಿಯೊಂದು ಸೆರಬ್ರಲ್ ನರಮುಡಿಯಿಂದ ಅನ್ನನಾಳದ ಇಕ್ಕೆಲದಲ್ಲಿ ತಳಭಾಗಕ್ಕೆ ಒಂದು ನರಹುರಿ ಹೊರಡುತ್ತದೆ. ಇವಕ್ಕೆ ಪಾದದ ನರಹುರಿಗಳು ಎಂದು ಹೆಸರು. ಇವು ಪಾದದ ಮಧ್ಯಭಾಗದಲ್ಲಿರುವ ಪಾದದ ನರಮುಡಿಗಳಿಗೆ ತಲಪುತ್ತವೆ. ಪಾದದ ನರಮುಡಿಗಳಿಂದ ನರತಂತುಗಳು ಹೊರಟು ಪಾದದ ಸ್ನಾಯುಗಳನ್ನು ತಲಪುತ್ತವೆ. ಸೆರಬ್ರಲ್ ನರಮುಡಿಗಳಿಂದ ಮತ್ತೊಂದು ಜೊತೆ ನರಹುರಿಗಳು ಹೊರಡುತ್ತವೆ. ಇವಕ್ಕೆ ಅಂಗಸದ ನರಹುರಿಗಳೆಂದು ಹೆಸರು. ಇವು ಶಿರದ ಭಾಗದಿಂದ ಹೊರಟು ಹಿಂದಕ್ಕೆ ಸಾಗಿ ಅಂಗಸರಾಶಿಯಲ್ಲಿ ಹುದುಗಿರುವ ಅಂಗಸದ ನರಮುಡಿಗಳಿಗೆ ಬಂದು ಕೊನೆಗೊಳ್ಳುತ್ತವೆ. ಅಂಗಸದ ನರಹುರಿಗಳು ಅಂಗಸರಾಶಿಯ ನರಮುಡಿಗಳನ್ನು ತಲಪುವುದಕ್ಕಿಂತ ಮುಂಚೆ ಎರಡು ಜೊತೆ ನರಮುಡಿಗಳು ಹೊರಡುತ್ತವೆ. ಮೊದಲನೆಯ ಜೊತೆ ನರಮುಡಿಗಳಿಗೆ ಪ್ಲ್ಯೂರಲ್ ನರಮುಡಿಗಳೆಂದು ಹೆಸರು. ಇವು ದೇಹದ ಮುಂತುದಿಯಲ್ಲಿವೆ. ಇವುಗಳ ನರಗಳು ಚಿಪ್ಪಿನ ಕಾಲ್ಯುಮೆಲ್ಲದ ಸ್ನಾಯುಗಳಿಗೆ ಹೋಗುತ್ತವೆ. ಪ್ಲ್ಯೂರಲ್ ನರಮುಡಿಗಳಿಂದ ಒಂದು ಜೊತೆ ನರಗಳು ಪೀಡಲ್ ನರಮುಡಿಗೆ ಹೋಗುತ್ತವೆ. ಇವಕ್ಕೆ ಪೀಡಲ್ ಸಂಬಂಧಿಕೆಗಳೆಂದು ಹೆಸರು. ಅಂಗಸದ ನರಹುರಿಗಳಲ್ಲಿರುವ ಎರಡನೆಯ ಜೊತೆ ನರಮುಡಿಗಳಿಗೆ ಪೆರೈಟಲ್ ನರಮುಡಿಗಳೆಂದು ಹೆಸರು. ಇವು ದೇಹದ ಹಿಂಭಾಗದಲ್ಲಿವೆ. ಇವುಗಳ ನರಗಳು ಆಸ್ಫ್ರಾಡಿಯ, ಮ್ಯಾಂಟಲ್ ಮತ್ತು ಕಿವಿರುಗಳಿಗೆ ಸಾಗುತ್ತವೆ. ಅಂಗಸದ ನರಮುಡಿಗಳಿಂದ ನರಗಳು ಅಂಗಸರಾಶಿಯ ವಿವಿಧ ಅಂಗಗಳಿಗೆ ಹೋಗುತ್ತವೆ. ಈ ರೀತಿಯ ನರಜಾಲ ನುಲಿಗೆಪೂರ್ವಸ್ಥಿತಿಯಲ್ಲಿ ಕಂಡುಬರುತ್ತದೆ.

ನುಲಿಗೆಯಿಂದಾಗಿ ಗ್ಯಾಸ್ಟ್ರಪೋಡಗಳ ನರಮಂಡಲದಲ್ಲಿ ಕೆಲವು ವ್ಯತ್ಯಾಸಗಳು ಉಂಟಾಗಿವೆ. ಪೂರ್ವಸ್ಥಿತಿಯಲ್ಲಿ ಸಮಪಾರ್ಶ್ವ ಸ್ಥಿತಿಯಲ್ಲಿರುವ ನರಮಂಡಲ ನುಲಿಗೆಯಾದ ಮೇಲೆ ಅಸಮಪಾರ್ಶ್ವ ರೀತಿಯದ್ದಾಗಿ 8 ಅಂಕಿಯಂತಾಗಿದೆ. ನುಲಿಗೆಯಿಂದ ನರಗಳ ಮೂಲಸ್ಥಾನ ಅದಲು ಬದಲಾಗಿದೆ. ನುಲಿಗೆ ಪೂರ್ವಸ್ಥಿತಿಯಲ್ಲಿದ್ದ ಬಲಗಡೆಯ ಪೈರೈಟಲ್ ನರಮುಡಿ ಈಗ ಎಡಕ್ಕೂ ಎಡಗಡೆಯ ಪೈರೈಟಲ್ ನರಮುಡಿ ಬಲಕ್ಕೂ ತಿರುಚಿಕೊಂಡಿವೆ. ಜೊತೆಗೆ ಎಡಕ್ಕೆ ಬಂದ ನರಮುಡಿ ಅಂಗಸರಾಶಿಯ ಮೇಲ್ಭಾಗಕ್ಕೆ ಹಾಗೂ ಮುಂಭಾಗಕ್ಕೆ ಸರಿಯುತ್ತದೆ. ಇದರಿಂದಾಗಿ ಇವನ್ನು ಸೂಪ್ರಪೆರೈಟಲ್ ನರಮುಡಿ ಮತ್ತು ಇನ್ಫ್ರಾಪೈರೈಟಲ್ ನರಮುಡಿ ಎಂದು ಕರೆಯಲಾಗುತ್ತದೆ. ನುಲಿಗೆಯಿಂದ ದೇಹದ ಮುಂಭಾಗದಲ್ಲಿರುವ ಪ್ಲ್ಯೂರಲ್ ನರಮುಡಿಗಳ ಸ್ಥಾನಮಾನಗಳಲ್ಲಿ ಮಾತ್ರ ಯಾವ ಬದಲಾವಣೆಯೂ ಆಗಿಲ್ಲ.

ನರಮಂಡಲದ ನುಲಿಗೆ ಗ್ಯಾಸ್ಟ್ರಪೋಡ ನರಮಂಡಲದ ಆದಿಮ ಸ್ಥಿತಿಯನ್ನು ತೋರಿಸುತ್ತದೆ. ಏಕೆಂದರೆ ನುಲಿಗೆ ಕ್ರಿಯೆ ಗ್ಯಾಸ್ಟ್ರಪೋಡಗಳ ವಿಕಾಸದ ಪ್ರಥಮದಲ್ಲೇ ನಡೆದಿರುವ ಕ್ರಿಯೆ. ಅಲ್ಲದೆ ನರಮಂಡಲದಲ್ಲಿ ಪ್ರತ್ಯೇಕವಾಗಿರುವ ನರಮುಡಿ ಮತ್ತು ನರ ಹುರಿಗಳು ಕೂಡ ಆದಿಮಾವಸ್ಥೆಯಲ್ಲಿಯೇ ಇವೆ. ಈ ರೀತಿಯ ಆದಿಮಾವಸ್ಥೆಯ ನರಮಂಡಲ ಕೆಲವು ಬದಲಾವಣೆಗಳೊಂದಿಗೆ ಹಳೆಯ ಸ್ಥಿತಿಯಲ್ಲಿಯೇ ಇರುವುದನ್ನು ಪ್ರೋಸೋಬ್ರ್ಯಾಂಕ್ ಗುಂಪಿನ ಪಟೆಲ ಮತ್ತು ಹ್ಯಾಲಿಯೋಟಿಸುಗಳಲ್ಲಿ ಕಾಣಬಹುದು. ಆದರೆ ಅನೇಕ ಗ್ಯಾಸ್ಟ್ರಪೋಡಗಳಲ್ಲಿ ವಿಕಾಸದಿಂದಾಗಿ ಈ ಮೂಲಭೂತ ವ್ಯವಸ್ಥೆ ವ್ಯತ್ಯಾಸವಾಗಿದೆ. ನರಮುಡಿಗಳು ಒಂದುಗೂಡಿರುವುದರಿಂದ ಇವುಗಳ ಸಂಬಂಧಿಕೆಗಳು ಅತಿ ಚಿಕ್ಕವಾಗಿರುವುದು ಮತ್ತು ನರಮುಡಿಗಳು ಹಾಗೂ ನರಹುರಿಗಳು ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ಗಳಿಸಿಕೊಂಡಿರುವುದು–ಇವು ಈ ವ್ಯತ್ಯಾಸಗಳಲ್ಲಿ ಮುಖ್ಯವಾದುವು.

ಸಾಮಾನ್ಯವಾಗಿ ಪ್ರತಿಯೊಂದು ಪ್ರಭೇದದಲ್ಲೂ ನರಮುಡಿಗಳು ಸ್ವಲ್ಪಮಟ್ಟಿಗೆ ಕೇಂದ್ರೀಕೃತಗೊಂಡಿರುವುದು ಕಂಡುಬರುತ್ತದೆ. ಪ್ಲ್ಯೂರಲ್ ನರಮುಡಿಗಳು ಯಾವಾಗಲೂ ಸೆರಬ್ರಲ್ ನರಮುಡಿಗಳ ಪಕ್ಕದಲ್ಲಿಯೇ ಇರುತ್ತವೆ. ಅಂಗಸದ ನರಮುಡಿಗಳು ಒಂದುಗೂಡಿ ಒಂದೇ ನರಮುಡಿಯಂತಾಗಿವೆ. ಹ್ಯಾಲಿಯೋಟಿಸಿನಲ್ಲಿ ಪೀಡಲ್ ನರಮುಡಿಗಳು ಪ್ಲ್ಯೂರಲ್ ನರಮುಡಿಗಳೊಂದಿಗೆ ಸೇರಿಬಿಟ್ಟಿವೆ. ಇವನ್ನು ಪೀಡಲ್–ಪ್ಲ್ಯೂರಲ್ ನರಮುಡಿಗಳೆಂದು ಕರೆಯಲಾಗುತ್ತದೆ. ಬ್ಯೂಸಿಕಾನಿನಲ್ಲಿ ಅಂಗಸದ ನರಮುಡಿಗಳನ್ನು ಬಿಟ್ಟು ಉಳಿದೆಲ್ಲವೂ ದೇಹದ ಮುಂಭಾಗಕ್ಕೆ ಸರಿದು ಅನ್ನನಾಳದ ಸುತ್ತ ಸೆರಬ್ರಲ್ ನರಮುಡಿಯ ಅಡಿಯಲ್ಲಿ ಕೇಂದ್ರಿಕೃತಗೊಂಡಿವೆ. ಇವುಗಳ ಅಂಗಸ ಸಂಬಂಧಿಕೆಗಳನ್ನು ಬಿಟ್ಟು ಉಳಿದ ಎಲ್ಲ ಸಂಬಂಧಿಕೆಗಳೂ ಮಾಯವಾಗಿವೆ. ಪಲ್ಮನೇಟಗಳಲ್ಲಿ ಅಂಗಸದ ನರಮುಡಿ ಸಹ ಮುಂಭಾಗಕ್ಕೆ ಸರಿದುಬಿಟ್ಟಿದೆ. ಇದರಿಂದ ಸಂಬಂಧಿಕೆಗಳ ಉದ್ದ ಕಡಿಮೆಯಾಗಿ ನರಮಂಡಲ

ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ತಲುಪಿದೆ. ಒಫಿಸ್ಟೊಬ್ರ್ಯಾಂಕುಗಳಲ್ಲಿ ವಿನುಲಿಗೆಯಿಂದಾಗಿ ಅಂಗಸದ ನರಹುರಿಗಳು ಸಮಪಾರ್ಶ್ವ ಸ್ಥಿತಿಯನ್ನು ಗಳಿಸಿಕೊಂಡಿವೆ. ಅಪ್ಲೀಸಿಯದಲ್ಲಿ ಎಡಗಡೆಯ ಪೆರೈಟಲ್ ನರಮುಡಿ ಮಾಯವಾಗಿ ಬಲಗಡೆಯ ನರಮುಡಿ ಒಂದುಗೂಡಿರುವ ಅಂಗಸದ ನರಮುಡಿಗಳ ಪಕ್ಕದಲ್ಲಿದೆ.

ಜ್ಞಾನೇಂದ್ರಿಯಗಳು : ಕಣ್ಣು, ಟೆಂಟಕಲ್, ಆಸ್ಫ್ರಾಡಿಯ ಮತ್ತು ಸ್ಟ್ಯಾಟೊಸಿಸ್ಟುಗಳೇ ಗ್ಯಾಸ್ಟ್ರಪೋಡಗಳ ಜ್ಞಾನೇಂದ್ರಿಯಗಳು.

ಕಣ್ಣುಗಳು ಶಿರದ ಟೆಂಟಕಲ್‌ಗಳ ತಳದಲ್ಲಿವೆ. ಪಟೆಲದಲ್ಲಿ ಇವು ಸರಳ ಕುಳಿಗಳಂತಿವೆ. ಇವುಗಳೊಳಗೆ ಬೆಳಕನ್ನು ಗ್ರಹಿಸಬಲ್ಲ ಅಂಗವೂ ವರ್ಣದ್ರವ್ಯಕೋಶಗಳೂ ಇವೆ. ಆದರೆ ಉಳಿದ ಎಲ್ಲ ಉನ್ನತ ಗ್ಯಾಸ್ಟ್ರಪೋಡಗಳಲ್ಲಿ ಕುಳಿ ಮುಚ್ಚಿ ಹೋಗಿ ಅದರಲ್ಲಿ ಕಾರ್ನಿಯ ಮತ್ತು ಮಸೂರಗಳು ಬೆಳೆದುಕೊಂಡಿವೆ. ಟೆಂಟಕಲ್‌ನ ಬುಡದಲ್ಲಿರುವ ಕಣ್ಣುಗಳ ದ್ಯುತಿಗ್ರಾಹಕ ಅಂಗ ಯಾವಾಗಲೂ ಬೆಳಕಿನ ಮೂಲದೆಡೆಗೆ ನಿರ್ದೇಶಿತವಾಗಿರುತ್ತದೆ. ಹೆಟರಾಪೊಡ ಗುಂಪಿನ ಶಂಭುಕಗಳ ಕಣ್ಣುಗಳು ಉನ್ನತಮಟ್ಟದವಾಗಿದ್ದು ಮೀನುಗಳ ಕಣ್ಣಿಗಿಂತಲೂ ಉಚ್ಚಮಟ್ಟದುವು ಎಂದು ಹೇಳಲಾಗಿದೆ. ಇಷ್ಟಾದರೂ ಗ್ಯಾಸ್ಟ್ರಪೋಡಗಳ ಕಣ್ಣಿನ ಕೆಲಸ ಕೇವಲ ಬೆಳಕನ್ನು ಗ್ರಹಿಸುವುದು ಮಾತ್ರ.

ಪ್ರೋಸೋಬ್ರ್ಯಾಂಕ್‌ಗಳಲ್ಲಿ ಕೇವಲ ಒಂದು ಜೊತೆ ಶಿರದ ಟೆಂಟಕಲ್‌ಗಳಿದ್ದರೆ ಒಫಿಸ್ಟೊಬ್ರ್ಯಾಂಕ್ ಹಾಗೂ ಪಲ್ಮನೇಟಗಳಲ್ಲಿ ಎರಡು ಜೊತೆ ಇವೆ. ಇವು ಕಣ್ಣುಗಳಿಗೆ ಆಶ್ರಯವಾಗಿರುವುದೊಂದೇ ಅಲ್ಲದೆ ಇವುಗಳಲ್ಲಿ ಸ್ಪರ್ಶವೇದಿ ಹಾಗೂ ರಸಗ್ರಾಹಿ ಜೀವಕೋಶಗಳಿವೆ. ನ್ಯೂಡಿಬ್ರ್ಯಾಂಕುಗಳಲ್ಲಿ ಟೆಂಟಕಲ್‌ನ ಮೇಲಿನ ಅರ್ಧ ಭಾಗ ಫಲಕದಂತೆ ಅಗಲವಾಗಿದೆ. ಇದರಲ್ಲಿ ಮಡಿಕೆಗಳು ಬೆಳೆದಿವೆ. ಇವು ರಸಗ್ರಾಹಿಗಳು. ಇವಕ್ಕೆ ರೈನೋಫೋರಗಳೆಂದು ಹೆಸರು.




ಪ್ರೋಸೋಬ್ರ್ಯಾಂಕುಗಳ ಕಣ್ಣುಗಳು, A. ಪಟೆಲ, B. ಮ್ಯೂರೆಕ್ಸ್
1. ರೆಟಿನ, 2. ಕಣ್ಣಿನ ನರ, 3. ಮಸೂರ

ಗ್ಯಾಸ್ಟ್ರಪೋಡಗಳ ಪಾದಗಳಲ್ಲಿ ಪೀಡಲ್ ನರಮುಡಿಯ ಬಳಿ ಒಂದು ಜೊತೆ ಸ್ಟ್ಯಾಟೋಸಿಸ್ಟುಗಳಿವೆ. ನ್ಯೂಡಿಬ್ರ್ಯಾಂಕ್‌ಗಳಲ್ಲಿ ಮತ್ತು ಕೆಲವು ಒಫಿಸ್ಟೊಬ್ರ್ಯಾಂಕ್‌ಗಳಲ್ಲಿ ಸ್ಟ್ಯಾಟೋಸಿಸ್ಟುಗಳು ಸೆರೆಬ್ರಲ್ ನರಮುಡಿಯ ಒಳಗೆ ಸರಿದಿರುವುದು ಕಂಡುಬರುತ್ತದೆ. ಇವು ದೇಹದ ಸಮತೋಲನ ಸ್ಥಿತಿಯನ್ನು ಕಾಯ್ದಿರಿಸಲು ಸಹಾಯಕವಾಗಿವೆ. ಗ್ಯಾಸ್ಟ್ರಪೋಡಗಳ ಆಸ್ಫ್ರಾಡಿಯಗಳಿಗೂ ಕಿವಿರುಗಳ ವಿಕಾಸಕ್ಕೂ ಸಂಬಂಧವಿದೆ. ಆರ್ಕಿಗ್ಯಾಸ್ಟ್ರಪೋಡಗಳಲ್ಲಿ ಪ್ರತಿ ಕಿವಿರಿನಲ್ಲಿಯೂ ಒಂದೊಂದು ಆಸ್ಫ್ರಾಡಿಯಮ್ ಇದೆ. ಉಳಿದ ಪ್ರೋಸೊಬ್ರ್ಯಾಂಕುಗಳಲ್ಲಿ ಒಂದೇ ಕಿವಿರು ಇರುವುದರಿಂದ ಆಸ್ಫ್ರಾಡಿಯಮ್ ಕೂಡ ಒಂದೇ ಇದೆ. ಇದು ಮ್ಯಾಂಟಲ್ ಕುಹರದ ಗೋಡೆಯ ಮೇಲೆ ಕಿವಿರಿನ ಬುಡದ ಮುಂಭಾಗದಲ್ಲಿದೆ. ಬಹುಪಾಲು ಪ್ರಭೇದಗಳಲ್ಲಿ ಆಸ್ಫ್ರಾಡಿಯಮಿನ ಹೊರಮೈಮೇಲೆ ತಂತುಗಳಂಥ ಅಥವಾ ಮಡಿಕೆಗಳಂಥ ರಚನೆಗಳಿರುವುದರಿಂದ ಅದರ ವಿಸ್ತಾರ ಹೆಚ್ಚಿದೆ. ಸಂಪೂರ್ಣವಾಗಿ ಕಿವಿರುಗಳನ್ನು ಕಳೆದುಕೊಂಡಿರುವ ಗ್ಯಾಸ್ಟ್ರಪೋಡಗಳಲ್ಲಿ ಆಸ್ಫ್ರಾಡಿಯಮ್ ಇಲ್ಲ. ಯಾಂಗ್‌ನ (1947) ಪ್ರಕಾರ ಆಸ್ಫ್ರಾಡಿಯಮ್ ಕಿವಿರಿನ ಮೇಲೆ ಹರಿಯುವ ನೀರಿನಲ್ಲಿರುವ ಗಸಿಯನ್ನು ಗೊತ್ತುಹಚ್ಚುವ ಕೆಲಸವನ್ನು ನಿರ್ವಹಿಸುತ್ತದೆ.

ಜನನೇಂದ್ರಿಯಗಳು : ಅನೇಕ ಗ್ಯಾಸ್ಟ್ರಪೋಡಗಳು ಭಿನ್ನಲಿಂಗಿಗಳು. ಇವುಗಳ ಜನನೇಂದ್ರಿಯ ಜೀರ್ಣಗ್ರಂಥಿಯ ಮುಂಭಾಗದಲ್ಲಿ ಅಂಗಸದ ನುಲಿಗೆಗಳೊಳಗೆ ಅಡಗಿರುತ್ತದೆ. ಇದರಿಂದ ಹೊರಡುವ ನಾಳ ಸರಳವಾಗಿರಬಹುದು. ಇಲ್ಲವೇ ಸಂಕೀರ್ಣವಾಗಿರಬಹುದು. ಇದು ಬಲಗಡೆಯ ನೆಫ್ರೀಡಿಯಮಿನ ಜೊತೆಯಲ್ಲಿಯೇ ಬೆಳೆದುಬರುತ್ತದೆ. ಕ್ರಿಯಾಶೀಲವಾಗಿರುವ ಎರಡು ನೆಫ್ರೀಡಿಯಗಳನ್ನುಳ್ಳ ಆರ್ಕಿಗ್ಯಾಸ್ಟ್ರಪೋಡಗಳಲ್ಲಿ ಬಲಗಡೆಯ ನೆಫ್ರೀಡಿಯಮ್ ವೀರ್ಯಾಣುಗಳನ್ನು ಅಥವಾ ಅಂಡಗಳನ್ನು ಹೊರಸಾಗಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ಲಿಂಗಾಣುಗಳು ಜನನೇಂದ್ರಿಯದಿಂದ ಹೊರಡುವ ಒಂದು ಚಿಕ್ಕನಾಳದ ಮೂಲಕ ಮೂತ್ರಕೋಶದೊಳಕ್ಕೆ ಬಂದು ಅಲ್ಲಿಂದ ನೆಫ್ರೀಡಿಯಮ್ ರಂಧ್ರದ ಮೂಲಕ ಮ್ಯಾಂಟಲ್ ಕುಹರದೊಳಕ್ಕೆ ಬರುತ್ತವೆ. ಇದರಿಂದಾಗಿ ಜನನೇಂದ್ರಿಯ ನಾಳದಲ್ಲಿ ಜನನೇಂದ್ರಿಯಕ್ಕೆ ಸಂಬಂಧಿಸಿದ ಎರಡು ಭಾಗಗಳಿವೆ. ಇಂಥ ಜನನೇಂದ್ರಿಯ ವ್ಯವಸ್ಥೆಯುಳ್ಳ ಹೆಣ್ಣುಗಳಲ್ಲಿ ಅಂಡಾಶಯದಿಂದ ಹುಟ್ಟುವ ಅಂಡಗಳ ಸುತ್ತ ಜಿಲ್ಯಾಟಿನ್ನಿನ ಒಂದು ಕವಚವಿದೆ. ಏಕೆಂದರೆ ಜನನೇಂದ್ರಿಯ ನಾಳದಲ್ಲಿ ವಿಶಿಷ್ಟತೆಯಿಲ್ಲದಿರುವುದರಿಂದ ಅಂಡಗಳಿಗೆ ಈ ರೀತಿಯ ಕವಚ ಅವಶ್ಯಕ. ಈ ಜೀವಿಗಳಲ್ಲಿ ಆಂತರಿಕ ನಿಷೇಚನ ಕ್ರಿಯೆ ನಡೆಯುವುದಿಲ್ಲ. ಆದ್ದರಿಂದ ಅಂಡಗಳು ಮ್ಯಾಂಟಲ್ ಕುಹರದಿಂದ ನೀರಿಗೆ ಬರುತ್ತವೆ. ನೀರಿಗೆ ಬಂದ ಅಂಡಗಳು ವೀರ್ಯಾಣುಗಳಿಂದ ನಿಷೇಚನಗೊಳ್ಳುತ್ತವೆ. ಉಳಿದ ಗ್ಯಾಸ್ಟ್ರಪೋಡಗಳಲ್ಲಿ ಬಲಗಡೆಯ ನೆಫ್ರೀಡಿಯಮ್ ನಶಿಸಿಹೋಗಿದ್ದು ಅದರ ಸ್ವಲ್ಪ ಭಾಗ ಮಾತ್ರ ಜನನಾಂಗದ ನಾಳದೊಳಕ್ಕೆ ಸೇರಿದೆ. ಇವುಗಳಲ್ಲಿ ಜನನಾಂಗನಾಳ ಅತಿ ಉದ್ದವಾಗಿದೆ. ಇದಕ್ಕೆ ಕಾರಣ ಮ್ಯಾಂಟಲ್. ಈ ನಾಳದ ಬೆಳವಣಿಗೆಗೆ ಮ್ಯಾಂಟಲ್ ಕೂಡ ತನ್ನ ಸ್ವಲ್ಪ ಭಾಗವನ್ನು ದಾನ ಮಾಡಿದೆ. ಮ್ಯಾಂಟಲಿನಿಂದ ಬಂದಿರುವ ಭಾಗಕ್ಕೆ ಪ್ಯಾಲಿಯಲ್ ಭಾಗ ಎಂದು ಹೆಸರು. ಇದು ಅಂಡದ ಪೊರೆಯನ್ನು ಉತ್ಪತ್ತಿಮಾಡುವ ಕೆಲಸವನ್ನು ನಿರ್ವಹಿಸುತ್ತದೆ. ಗಂಡಿನಲ್ಲಿ ಆಂತರಿಕ ನಿಷೇಚನ ಕ್ರಿಯೆಗೆ ಬೇಕಾದ ಶಿಶ್ನ ಇದೆ. ಇದು ದೇಹದ ಭಿತ್ತಿಯಿಂದ ಬಲಗಡೆಯ ಶಿರದ ಟೆಂಟಕಲ್‌ನ ಬಳಿ ಹುಟ್ಟಿಕೊಳ್ಳುತ್ತದೆ. ಪ್ಯಾಲಿಯಲ್ ನಾಳದ ಭಾಗ ಶಿಲಕೆಗಳಿಂದ ಕೂಡಿದ ತೋಡಿನಂಥ ರಚನೆಯನ್ನು ಪಡೆದಿದ್ದು ಶಿಶ್ನದ ತುದಿಯಲ್ಲಿ ಹೊರತೆರೆಯುತ್ತದೆ. ಪ್ಯಾಲಿಯಲ್ ನಾಳದ ಒಂದು ಭಾಗ ಪ್ರಾಸ್ಟೇಟ್ ಗ್ರಂಥಿಯಾಗಿ ಕೆಲಸ ಮಾಡುತ್ತದೆ.




ಮೂರು ಬಗೆಯ ಗ್ಯಾಸ್ಟ್ರಪೋಡಗಳ ಜನನಾಂಗ ವ್ಯವಸ್ಥೆ **A** ಟ್ರೋಕಿಡ್ **B** ನ್ಯೂಸೆಲ, **C** ಅಪ್ಲೀಸಿಯ 1. ಗೊನ್ಯಾಡ್, 2. ನೆಫ್ರೀಡಿಯಮ್, 3. ಆಲ್ಬುಮಿನ್ ಗ್ರಂಥಿ, 4. ಸೆಮಿನಲ್ ರಿಸೆಪ್ಟಕಲ್, 5. ಸಂಪುಟದ ಗ್ರಂಥಿ, 6. ಹೆಣ್ಣಿನ ಜನನದ್ವಾರ, 7. ಕಾಪ್ಯುಲೇಟರಿ ಬರ್ಸ, 8. ಯೋನಿ, 9. ಲೋಳೆ ಗ್ರಂಥಿ, 10. ವಾಸಡೆಫರೆನ್ಸ್.

ಹೆಣ್ಣಿನಲ್ಲಿ ಪ್ಯಾಲಿಯಲ್ ನಾಳದ ಒಂದು ಭಾಗ ಆಲ್ಬ್ಯುಮಿನ್ ಗ್ರಂಥಿಯಾಗಿ ಮಾರ್ಪಟ್ಟಿದೆ. ಅಲ್ಲದೆ ಇದರ ಜೊತೆಗೆ ಒಂದು ದೊಡ್ಡ ಲೋಳೆ ಗ್ರಂಥಿ ಅಥವಾ ಸಂಪುಟ ಗ್ರಂಥಿಯೂ ಇದೆ. ಅಂಡಗಳ ಸುತ್ತ ಲೋಳೆಯಂಥ ಸಂಪುಟವನ್ನು ಉತ್ಪತ್ತಿ ಮಾಡುವುದು ಈ ಗ್ರಂಥಿಯ ಕೆಲಸ. ಪ್ಯಾಲಿಯಲ್ ನಾಳದ ತುದಿಯಲ್ಲಿ ಸೆಮಿನಲ್ ರಿಸೆಪ್ಟಕಲ್ ಎಂಬ ಭಾಗವಿದೆ. ಗಂಡಿನಿಂದ ಬರುವ ವೀರ್ಯಾಣುಗಳನ್ನು ಇದು ಸಂಗ್ರಹಿಸುತ್ತದೆ. ಲಿಟ್ಟೊರೈನ, ಯೂರೊಸ್ಯಾಲ್ಪಿಂಕ್ಸ್, ಮ್ಯೂರೆಕ್ಸ್, ಬ್ಯುಸಿಕಾನ್ ಮುಂತಾದುವುಗಳಲ್ಲಿ ವೀರ್ಯಾಣುಗಳು ಸೆಮಿನಲ್ ರಿಸೆಪ್ಟಕಲಿಗೆ ಬರುವುದಿಲ್ಲ. ಬದಲಾಗಿ ಅಂಡಾಶಯನಾಳದ ತುದಿಯ ಭಾಗಕ್ಕೆ ಇವು ತಲುಪುತ್ತವೆ. ಈ ಭಾಗದಲ್ಲಿ ಕಾಪ್ಯುಲೇಟರಿ ಬರ್ಸ ಎಂಬ ರಚನೆ ಇದೆ. ಇಲ್ಲಿಂದ

ವೀರ್ಯಾಣು ಸೆಮಿನಲ್ ರಿಸೆಪ್ಟಕಲಿಗೆ ಬರುತ್ತವೆ. ಅಂಡಗಳು ಇಲ್ಲಿಗೆ ಬಂದಾಗ ನಿಷೇಚನ ಕ್ರಿಯೆ ನಡೆಯುತ್ತದೆ.

ಕೆಲವು ಪ್ರೋಸೋಬ್ರ್ಯಾಂಕುಗಳು, ಎಲ್ಲ ಒಫಿಸ್ತೊಬ್ರ್ಯಾಂಕ್‍ಗಳು ಹಾಗೂ ಪಲ್ಮನೇಟಗಳು ಉಭಯಲಿಂಗಿಗಳು. ಕ್ರೆಪಿಡ್ಯುಲ ಎಳೆಯ ವಯಸ್ಸಿನಲ್ಲಿ ಗಂಡಾಗಿಯೂ ವಯಸ್ಸಾದಂತೆ ಹೆಣ್ಣಾಗಿಯೂ ಇರುತ್ತದೆ. ಇದರಲ್ಲಿರುವ ಒಂದೇ ಒಂದು ಜನನೇಂದ್ರಿಯ ಅಂಡ ಮತ್ತು ವೀರ್ಯಾಣುಗಳೆರಡನ್ನೂ ಉತ್ಪಾದಿಸಬಲ್ಲುದು.

ಕಡಲ ಮೊಲ ಮತ್ತು ಅಪ್ಲೀಸಿಯದಲ್ಲಿ ಉಭಯ ಲಿಂಗನಾಳವಿದೆ. ಇದರಲ್ಲಿ ಅಂಡಗಳು ಹಾಗೂ ವೀರ್ಯಾಣುಗಳು ಬರುವುದಕ್ಕೆ ಪ್ರತ್ಯೇಕ ಭಾಗಗಳಿವೆ. ಅಂಡಗಳು ಬರುವ ಭಾಗಕ್ಕೆ ಅಂಡಾಶಯ ನಾಳವೆಂದೂ ವೀರ್ಯಾಣುಗಳು ಬರುವ ಭಾಗಕ್ಕೆ ವಾಸಡೆಫರೆನ್ಸ್ ಎಂದೂ ಹೆಸರು. ಅಂಡಾಶಯ ನಾಳದ ಕೊನೆಯ ಭಾಗದಲ್ಲಿ ಯೋನಿದ್ವಾರವಿದೆ. ಇದಕ್ಕೂ ಸೆಮಿನಲ್ ರಿಸೆಪ್ಟಕಲಿಗೂ ಸಂಪರ್ಕವುಂಟು. ಶಿಶ್ನದಿಂದ ವೀರ್ಯಾಣುಗಳನ್ನು ನೇರವಾಗಿ ರಿಸೆಪ್ಟಕಲ್ ಪಡೆಯುತ್ತದೆ. ಈ ಪ್ರಾಣಿಯಲ್ಲಿ ಕಾಪ್ಯುಲೇಟರಿ ಬರ್ಸ ಇದೆಯಾದರೂ ಇದರ ನಿರ್ದಿಷ್ಟ ಕೆಲಸ ತಿಳಿಯದು.

ಪಲ್ಮನೇಟಗಳ ಜನನೇಂದ್ರಿಯಗಳು ಅಪ್ಲೀಸಿಯದ ಜನನೇಂದ್ರಿಯಗಳನ್ನೇ ಹೋಲುತ್ತವಾದರೂ ಇವುಗಳಲ್ಲಿ ಕೆಲವು ವ್ಯತ್ಯಾಸಗಳುಂಟು. ಜನನೇಂದ್ರಿಯ ನಾಳದಲ್ಲಿ ಅಂಡಗಳನ್ನು ಸಾಗಿಸುವ ಭಾಗದಲ್ಲಿ ಡಾರ್ಟ್ ಚೀಲವೆಂಬ ರಚನೆಯಿದೆ. ಇದರಲ್ಲಿ ಸುಣ್ಣದಿಂದಾದ ಸ್ಪಿಕ್ಯೂಲುಗಳು ಉತ್ಪತ್ತಿಯಾಗುತ್ತವೆ.

ಭ್ರೂಣದ ಬೆಳವಣಿಗೆ: ಕೆಳಮಟ್ಟದ ಪ್ರೋಸೋಬ್ರ್ಯಾಂಕುಗಳಲ್ಲಿ ಬಾಹ್ಯ ನಿಷೇಚನ ನಡೆಯುತ್ತದೆ. ಅಂಡಗಳು ಒಂಟಿಯಾಗಿರಬಹುದು ಅಥವಾ ಜಿಲ್ಯಾಟಿನ್‍ನಿಂದ ಆವೃತವಾದ ಕುಪ್ಪೆಗಳಂತೆ ಅಥವಾ ಪಟ್ಟಿಗಳಂತೆ ಇರಬಹುದು. ಉಳಿದ ಪ್ರೋಸೋಬ್ರ್ಯಾಂಕುಗಳಲ್ಲಿ, ಒಫಿಸ್ತೊಬ್ರ್ಯಾಂಕುಗಳಲ್ಲಿ, ಸಿಹಿನೀರಿನಲ್ಲಿ ವಾಸಿಸುವ ಪಲ್ಮನೇಟಗಳಲ್ಲಿ ವಿಶಿಷ್ಟರೀತಿಯ ಹಾಗೂ ಉಚ್ಚಮಟ್ಟದ ಅಂಡಪೊರೆಗಳು ಕಾಣಬರುತ್ತವೆ. ಲಿಟ್ಟೊರೈನದ ಅಂಡಗಳಲ್ಲಿ ಆಲ್ಬ್ಯುಮಿನ್ ಪದರವೂ ಒಂದು ಕವಚವೂ ಇವೆ. ಈ ರೀತಿಯ ಅಂಡಗಳು ಜಿಲ್ಯಾಟಿನ್‍ನಿಂದ ಕುಪ್ಪೆಯಂತೆ ಒಂದುಗೂಡಿರುತ್ತವೆ. ಸಿಹಿನೀರಿನಲ್ಲಿ ವಾಸಿಸುವ ಪಲ್ಮನೇಟುಗಳ ಅಂಡಗಳ ಕವಚ ಜಿಲ್ಯಾಟಿನಿನಂತಿದ್ದರೆ ಭೂಚರ ಪಲ್ಮನೇಟುಗಳ ಅಂಡಗಳ ಸುತ್ತ ಸುಣ್ಣಕಲ್ಲಿನ ಕವಚ ಇದೆ. ಇದು ಮೊಟ್ಟೆಯಿಂದ ನೀರು ಹೊರಹೋಗದಂತೆ ಕಾಪಾಡುತ್ತದೆ.

ಗ್ಯಾಸ್ಟ್ರಾಪೋಡಗಳ ಬೆಳವಣಿಗೆಯಲ್ಲಿ ಲಾರ್ವಾವಸ್ಥೆಗಳಿವೆ. ಕೆಳದರ್ಜೆಯ ಆರ್ಕಿಗ್ಯಾಸ್ಟ್ರಾಪೋಡಗಳಲ್ಲಿ ಟ್ರೋಕೋಫೋರ್ ಲಾರ್ವ ಇದೆ. ಆದರೆ ಉಳಿದುವುಗಳಲ್ಲಿ ಈ ಅವಸ್ಥೆ ಮೊಟ್ಟೆಯೊಳಗೆ ಪೂರ್ಣಗೊಳ್ಳುತ್ತದೆ. ಕಡಲ ಗ್ಯಾಸ್ಟ್ರಾಪೋಡಗಳಲ್ಲಿ ಸ್ವತಂತ್ರವಾಗಿ ಈಜಬಲ್ಲ ವೆಲಿಜರ್ ಲಾರ್ವ ಉಂಟು. ಇದು ಅತಿ ಕ್ಲಿಷ್ಟರೀತಿಯ ಲಾರ್ವ. ಇದರಲ್ಲಿ ಅರ್ಧ ಚಂದ್ರಾಕೃತಿಯ ಎರಡು ಹಾಳೆಗಳುಳ್ಳ, ಶಿಲಕೆಗಳಿಂದ ಕೂಡಿದ ಮತ್ತು ಈಜಲು ಸಹಾಯಕವಾದ ವೇಲಮ್ ಎಂಬ ಅಂಗವಿದೆ. ಇದು ಟ್ರೋಕೋಫೋರ್ ಲಾರ್ವದ ಪ್ರೋಟಟ್ರೋಕಿನ ಮುಂಚಾಚಿದ ರಚನೆಯಾಗಿ ಬೆಳೆದುಕೊಂಡಿದೆ. ಉಳಿದ ರಚನೆಗಳು ವೆಲಿಜರ್ ಲಾರ್ವದ ಬೆಳವಣಿಗೆಯ ಹಂತದಲ್ಲಿ ನಾನಾ ಮಾರ್ಪಾಟುಗಳನ್ನು ತೋರುತ್ತವೆ. ಪಾದ, ಕಣ್ಣು, ಟೆಂಟಕಲ್‍ಗಳು ಹುಟ್ಟಿಕೊಳ್ಳುತ್ತವೆ. ಟ್ರೋಕೋಫೋರ್ ಸ್ಥಿತಿಯಲ್ಲಿ ಹುಟ್ಟಿನಿಂದ ಚಿಪ್ಪು ವೆಲಿಜರ್ ಹಂತದಲ್ಲಿ ಸುರುಳಿಯಂತೆ ಸುತ್ತಿಕೊಳ್ಳುತ್ತದೆ. ಇದಕ್ಕೆ ಕಾರಣ ಈ ಜೀವಿಯ ಅಸಮ ಬೆಳವಣಿಗೆ. ಬಾಯ ಒಳರಚನೆಗಳು, ಜಠರ ಹಾಗೂ ರಿಟ್ರ್ಯಾಕ್ಟರ್ ಸ್ನಾಯುಗಳು ಕ್ರಮೇಣ ಬೆಳೆದುಕೊಳ್ಳುತ್ತವೆ. ವೆಲಿಜರ್ ಹಂತದಲ್ಲಿ ನುಲಿಗೆ ಕ್ರಿಯೆ ಪ್ರಾರಂಭವಾಗುವುದರಿಂದ ಚಿಪ್ಪು ಹಾಗೂ ಅಂಗಸರಾಶಿಗಳು $180^0$ ಗಳಷ್ಟು ತಿರುಚಿಕೊಳ್ಳುತ್ತವೆ.

ನುಲಿಗೆ ಕೇವಲ ಕೆಲವೇ ನಿಮಿಷಗಳಲ್ಲಿ ಮುಗಿದುಹೋಗಬಹುದು (ಏಕ್ಮೀಯದಲ್ಲಿ ಈ ಕ್ರಿಯೆ ಕೇವಲ 3 ನಿಮಿಷಗಳಲ್ಲಿ ನಡೆಯುತ್ತದೆ). ಇಲ್ಲವೇ ಹಲವು ದಿವಸಗಳಲ್ಲಿ ಪೂರ್ಣವಾಗಬಹುದು (ಉದಾಹರಣೆಗೆ, ಪೋಮಾಟಿಯಾಸಿನಲ್ಲಿ 20 ದಿವಸಗಳು ಹಿಡಿಯುತ್ತವೆ). ಹ್ಯಾಲಿಯೋಟಿಸ್, ಪಟೆಲ ಮುಂತಾದುವುಗಳಲ್ಲಿ ಇದು ಎರಡು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯದು ಶೀಘ್ರಗತಿಯಲ್ಲೂ ಎರಡನೆಯದು ನಿಧಾನವಾಗಿಯೂ ನಡೆಯುತ್ತವೆ. ನುಲಿಗೆಯಿಂದಾಗಿ ಪಾದ ಹೊರಚಾಚಿಕೊಳ್ಳುತ್ತದೆ. ಈಗ ಲಾರ್ವ ವೇಲಮಿನಿಂದ ಈಜಲು, ಪಾದದಿಂದ ತೆವಳಲು ಉಪಕ್ರಮಿಸುತ್ತದೆ. ಲಾರ್ವ ಬೆಳೆದಂತೆ ವೇಲಮ್ ಕ್ಷೀಣವಾಗುತ್ತ ಬಂದು ಕೊನೆಗೆ ಮಾಯವಾಗುತ್ತದೆ. ಮರಿಯನ್ನೇ ಈಯುವ ಕೆಲವು ಗ್ಯಾಸ್ಟ್ರಾಪೋಡಗಳಲ್ಲಿ ಲಾರ್ವಾವಸ್ಥೆಗಳು ತಾಯಿಯ ದೇಹದೊಳಗೇ ನಡೆಯುತ್ತವೆ. ಉದಾ: ಲಿಟ್ಟೊರೈನದ ಕೆಲವು ಪ್ರಭೇದಗಳು.

ಆರ್ಥಿಕ ಪ್ರಾಮುಖ್ಯ : ಗ್ಯಾಸ್ಟ್ರಾಪೋಡಗಳು ಇತರ ಜೀವಿಗಳಿಗೆ ಆಹಾರವೆನಿಸಿವೆ. ಕ್ಯಾಲಿಫೋರ್ನಿಯದಲ್ಲಿ ಜನ ಹ್ಯಾಲಿಯೋಟಿಸ್ಸನ್ನು ತಿನ್ನುತ್ತಾರೆ. ಯೂರೋಪಿನಲ್ಲಿ ಹೆಲಿಕ್ಸ್ ಪೋಮೇಟಿಯ ಎಂಬ ಬಸವನಹುಳು ರಸಭಕ್ಷ್ಯವೆನಿಸಿದೆ. ಆದರೂ ಗ್ಯಾಸ್ಟ್ರಾಪೋಡಗಳಿಂದ ಮನುಷ್ಯನಿಗೆ ಸಾಕಷ್ಟು ಹಾನಿಯೂ ಉಂಟು. ಕೆಲವು ಬಸವನ ಹುಳುಗಳು ಅನೇಕ




ಕ್ರೆಪಿಡ್ಯುಲದ ವೆಲಿಜರ್ ಡಿಂಬ: A. ಪಾರ್ಶ್ವ ನೋಟ: B. ಎದುರು ನೋಟ, 1. ಪೀಡಲ್ ನರಮುಡಿ, 2. ಪಾದ, 3. ಒಪರ್‌ಕ್ಯುಲಮ್ 4. ಸ್ಟ್ಯಾಟೋಸಿಸ್ಟ್, 5. ಜಠರ, 6. ಸ್ಟೈಲ್ ಚೀಲ, 7. ನೆಫ್ರಿಡಿಯಮ್, 8. ಕರುಳು, 9. ವೇಲಮ್, 10. ಕಣ್ಣು 11. ನರಬಳ್ಳಿ, 12. ಚಿಪ್ಪು, 13. ಹೃದಯ

ಬಗೆಯ ರೋಗಗಳನ್ನು ಹರಡುವ ಮಧ್ಯವರ್ತಿ ಆತಿಥೇಯ ಜೀವಿಗಳಾಗಿವೆ. ಇನ್ನು ಕೆಲವು ಬಗೆಗಳು ಸಸ್ಯ ಪಿಡುಗುಗಳೆನಿಸಿಕೊಂಡಿವೆ.

ವರ್ಗೀಕರಣ : ಗ್ಯಾಸ್ಟ್ರಾಪೋಡ ವರ್ಗವನ್ನು ಕಿವಿರು ಮತ್ತು ನರಮಂಡಲದ ಲಕ್ಷಣಗಳ ಆಧಾರದ ಮೇಲೆ ಪ್ರೋಸೋಬ್ರ್ಯಾಂಕಿಯ, ಒಫಿಸ್ತೊಬ್ರ್ಯಾಂಕಿಯ ಮತ್ತು ಪಲ್ಮನೇಟ ಎಂಬ ಮೂರು ಉಪವರ್ಗಗಳನ್ನಾಗಿ ವಿಂಗಡಿಸಲಾಗಿದೆ.

ಉಪವರ್ಗ–I ಪ್ರೋಸೋಬ್ರ್ಯಾಂಕಿಯ (ಸ್ಟ್ರೆಪ್ಟನ್ಯೂರ) : ಇದಕ್ಕೆ ಸೇರಿದ ಶಂಭುಕಗಳು ಸಿಹಿನೀರು ಹಾಗೂ ಸಮುದ್ರಗಳೆರಡರಲ್ಲಿಯೂ ವಾಸಿಸುತ್ತವೆ. ಇವುಗಳಲ್ಲಿ ಉಸಿರಾಡಲು ಕಿವಿರುಗಳಿವೆ. ಇವುಗಳ ಮ್ಯಾಂಟಲ್ ಕುಹರ ಹಾಗೂ ಅದರೊಳಗಿನ ಅಂಗಗಳು ದೇಹದ ಮುಂಭಾಗಕ್ಕೆ ಸೀಮಿತಗೊಂಡಿವೆ. ಈ ಉಪವರ್ಗದ ಜೀವಿಗಳಲ್ಲಿ ಚಿಪ್ಪು ಇದೆ. ಇದರಲ್ಲಿ ಆರ್ಕಿಗ್ಯಾಸ್ಟ್ರಾಪೋಡ, ಮೀಸೊಗ್ಯಾಸ್ಟ್ರಾಪೋಡ, ನಿಯೋಗ್ಯಾಸ್ಟ್ರಾಪೋಡಗಳೆಂಬ ಮೂರು ಗಣಗಳಿವೆ.

ಗಣ 1 ಆರ್ಕಿಗ್ಯಾಸ್ಟ್ರಾಪೋಡ (ಆಸ್ಪಿಡೋಬ್ರ್ಯಾಂಕಿಯ) : ಈ ಗಣದ ಜೀವಿಗಳು ಆದಿಮಸ್ಥಿತಿಯವು. ಇವುಗಳಲ್ಲಿ ಎರಡು ಕಿವಿರುಗಳು, ಎರಡು ಹೃತ್ಕರ್ಣಗಳು ಮತ್ತು ಎರಡು ಮೂತ್ರಕೋಶಗಳು ಇವೆ. ನರಮಂಡಲ ಕೇಂದ್ರೀಕೃತಗೊಂಡಿಲ್ಲ. ಚಿಪ್ಪು ನುಲಿಗೆಗೊಳಗಾಗಿದೆ. ಕೆಲವು ಜೀವಿಗಳಲ್ಲಿ ದ್ವಿತೀಯಕ ಸಮಪಾರ್ಶ್ವಸ್ಥಿತಿಯನ್ನು ಕಾಣಬಹುದು. ಚಿಪ್ಪಿನಲ್ಲಿ ರಂಧ್ರಗಳಿವೆ. ಉದಾಹರಣೆಗೆ ಸಿಸ್ಸುರೆಲ, ಹ್ಯಾಲಿಯೋಟಿಸ್, ಪಂಕ್‍ಟ್ಯುರೆಲ, ಡಯೋಡೋರ, ಪಟೆಲ, ನೆರೀಟ ಮುಂತಾದುವು.

ಗಣ 2 ಮಿಸೊಗ್ಯಾಸ್ಟ್ರಪೋಡ (ಪೆಕ್ಟಿನಿಬ್ರ್ಯಾಂಕಿಯ) : ಈ ಗಣದ ಜೀವಿಗಳಲ್ಲಿ ಕೇವಲ ಒಂದು ಕಿವಿರು, ಒಂದು ಹೃತ್ಕರ್ಣ ಮತ್ತು ಒಂದು ಮೂತ್ರಕೋಶ ಇವೆ. ಬಲಭಾಗದ ಕಿವಿರು, ಹೃತ್ಕರ್ಣ ಮತ್ತು ಮೂತ್ರಕೋಶಗಳು ಮಾಯವಾಗಿವೆ. ಒಪರ್‌ಕ್ಯುಲಮ್ ಇರಬಹುದು. ಸೊಂಡಿಲು ಇದೆ. ಇವೆಲ್ಲ ಪ್ರಮುಖವಾಗಿ ಸಮುದ್ರ ಜೀವಿಗಳು. ಸಿಹಿನೀರಿನ ಜಾತಿಗಳು ಇಲ್ಲದಿಲ್ಲ. ಗ್ಯಾಸ್ಟ್ರಪೋಡ ವರ್ಗದಲ್ಲಿಯೇ ಈ ಗಣ ಅತಿ ದೊಡ್ಡದು. ಉದಾಹರಣೆಗೆ ಲಿಟ್ಟೊರೈನ, ಜಾಂತಿನ, ಕ್ರೆಪಿಡ್ಯುಲ, ಸ್ಟ್ರಾಂಬಸ್, ಲ್ಯಾಂಬಿಸ್, ಕೊರೆಯುವ ನಾಟಿಸಿಡುಗಳಾದ ನಾಟಿಕ, ಸೈನಮ್ ಮುಂತಾದುವು, ಈಜುವ ಹೆಟರಾಪೋಡಗಳಾದ ಅಟ್ಲಾಂಟ, ಕ್ಯಾರಿನೇರಿಯ, ಜಂತು ಕಂಬಗಳಾದ ವರ್ಮಿಟಸ್ ಹಾಗೂ ಸಿಹಿನೀರಿನಲ್ಲಿ ಕಾಣಸಿಗುವ ವೈವಿಪ್ಯಾರಸ್, ಹೈಡ್ರೋಬಿಯ, ಗೋನಿಯೋಬೇಸಿಸ್ ಮುಂತಾದುವು.

ಗಣ 3 ನಿಯೋಗ್ಯಾಸ್ಟ್ರಪೋಡ (ಸ್ಟೀನೊಗ್ಲಾಸ) : ಈ ಗಣದ ಜೀವಿಗಳಲ್ಲಿ ಮೀಸೊಗ್ಯಸ್ಟ್ರಪೋಡಗಳಲ್ಲಿಲ್ಲದ ಕೆಲವು ಗುಣಗಳನ್ನು ಕಾಣಬಹುದು. ಇವುಗಳಲ್ಲಿ ಆಸ್ಫ್ರಾಡಿಯಮ್ ಬೈಪೆಕ್ಟಿನೇಟ್ ಸ್ಥಿತಿಯಲ್ಲಿದೆ. ನರಮಂಡಲ ಕೇಂದ್ರೀಕೃತವಾಗಿದೆ. ಚಿಪ್ಪಿನಲ್ಲಿ ಸಾಮಾನ್ಯವಾಗಿ ಸೈಫನ್ ಕಾಲುವೆ ಇದೆ. ಮಾಂಸಾಹಾರಿಗಳಲ್ಲಿ ಸೊಂಡಿಲು ಇದೆ. ರ್‍ಯಾಡ್ಯುಲದಲ್ಲಿ ಎರಡು ಅಥವಾ ಮೂರು ಬಲು ಅಗಲವಾದ ಹಲ್ಲುಗಳಿರುವ ಸಾಲಿದೆ. ಕೆಲವು ಜೀವಿಗಳಲ್ಲಿ ವಿಷಗ್ರಂಥಿಗಳಿವೆ. ಸಾಮಾನ್ಯವಾಗಿ ಎಲ್ಲ ಜೀವಿಗಳಲ್ಲೂ ಒಪರ್‌ಕ್ಯುಲಮ್ ಇದೆ. ಇದಕ್ಕೆ ಸೇರಿದ ಎಲ್ಲ ಪ್ರಭೇದಗಳೂ ಕಡಲ ಜೀವಿಗಳು. ಉದಾಹರಣೆಗೆ ಕೊರೆಯುವ ಮ್ಯೂರಿಸಿಡುಗಳಾದ ಮ್ಯೂರೆಕ್ಸ್, ಯುರೊಸ್ಯಾಲ್‌ಪಿಂಕ್ಸ್ ಮತ್ತು ಪರ್‌ಪ್ಯುರ, ಬ್ಯೂಸಿಕಾನ್, ಒಳಿವ, ಮಿಟ್ರ, ಕೋನಸ್ ಮುಂತಾದುವು.

ಉಪವರ್ಗ II ಒಫಿಸ್ತೊಬ್ರ್ಯಾಂಕಿಯ (ಯೂಥಿನ್ಯೂರ) : ಇವುಗಳಲ್ಲಿ ಒಂದು ಹೃತ್ಕರ್ಣ ಹಾಗೂ ಮೂತ್ರಕೋಶ ಇವೆ. ಈ ಉಪವರ್ಗದ ಜೀವಿಗಳಲ್ಲಿ ವಿನುಲಿಗೆ ಕ್ರಿಯೆ ನಾನಾ ಹಂತದಲ್ಲಿರುವುದು ಕಂಡುಬರುತ್ತದೆ. ಜೊತೆಗೆ ಚಿಪ್ಪಿನ ಹಾಗೂ ಮ್ಯಾಂಟಲ್ ಕುಹರದ ಕ್ಷೀಣತೆಗಳೂ ಈ ಜೀವಿಗಳಲ್ಲಿ ನಾನಾ ಹಂತಗಳಲ್ಲಿ ಕಂಡುಬರುತ್ತವೆ. ಎಲ್ಲ ಪ್ರಭೇದಗಳೂ ಸಮುದ್ರಜೀವಿಗಳು. ಇದರಲ್ಲಿ ಟೆಕ್ಟಿಬ್ರ್ಯಾಂಕಿಯ, ಟೀರಾಪೊಡ, ನ್ಯೂಡಿಬ್ರ್ಯಾಂಕಿಯಗಳೆಂಬ ಮೂರು ಗಣಗಳಿವೆ.

ಗಣ 1 ಟೆಕ್ಟಿಬ್ರ್ಯಾಂಕಿಯ : ಚಿಪ್ಪು ಇದೆ. ಇದು ಕ್ಷೀಣಿಸಿರಬಹುದು ಮತ್ತು ಇದರ ಮೇಲೆ ಮ್ಯಾಂಟಲ್ ಬೆಳೆದಿದ್ದು ಮುಚ್ಚಿಕೊಂಡಿರಬಹುದು. ನಿಜವಾದ ಒಂದೇ ಕಿವಿರಿದೆ. ಕೆಲವು ಜೀವಿಗಳಲ್ಲಿ ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ಕಾಣಬಹುದು. ಉದಾಹರಣೆಗೆ ಬುಲ, ಅಪ್ಲೀಸಿಯ, ಪರತಂತ್ರ ಜೀವಿಗಳಾದ ಪಿರಮಿಡೆಲ, ಸ್ಟೈಲಿಫೆರ ಮುಂತಾದುವು.

ಗಣ 2 ಟೀರಾಪೊಡ : ಈ ಗಣದ ಜೀವಿಗಳನ್ನು ಕಡಲ ಚಿಟ್ಟೆಗಳೆಂದು ಕರೆಯುತ್ತಾರೆ. ಚಿಪ್ಪು ಇರಬಹುದು ಅಥವಾ ಇಲ್ಲದಿರಬಹುದು. ಪಾದದ ಮುಂದಿನ ಭಾಗ ಬಹಳ ಅಗಲವಾಗಿದ್ದು ಈಜುರೆಕ್ಕೆಗಳಾಗಿ ಮಾರ್ಪಟ್ಟಿದೆ. ಈ ಗಣದ ಉಪಗಣವಾದ ಥೀಕೊಸೊಮ್ಯಾಟದ ಪ್ರಭೇದಗಳಲ್ಲಿ ಚಿಪ್ಪಿಲ್ಲ. ಉದಾ : ಸ್ಪೈರಟಿಲ, ಕ್ಲಿಯೋ, ಲಿಮಾಸ್ಸೈನ ಇತ್ಯಾದಿ. ಉಪಗಣ ಜಿಮ್ನೊಸೊಮ್ಯಾಟದ ಜೀವಿಗಳಲ್ಲಿ ಚಿಪ್ಪು ಇಲ್ಲ. ಉದಾ : ನ್ಯೂಮೊಡರ್ಮ, ಕ್ಲೈಯೊಪ್ಸಿಸ್ ಮತ್ತು ನೋಟೊಬ್ರ್ಯಾಂಕಿಯ.

ಗಣ 3 ನ್ಯೂಡಿಬ್ರ್ಯಾಂಕಿಯ : ಇವನ್ನು ಕಡಲ ಗೊಂಡೇಹುಳುಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಚಿಪ್ಪು ಇಲ್ಲ. ದೇಹ ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ಗಳಿಸಿಕೊಂಡಿದೆ. ಮ್ಯಾಂಟಲ್ ಕುಹರವಾಗಲಿ ನಿಜವಾದ ಕಿವಿರುಗಳಾಗಲಿ ಇಲ್ಲ. ಉಸಿರಾಟ ದೇಹದ ಭಿತ್ತಿಯ ಸಹಾಯದಿಂದ ನಡೆಯುತ್ತದೆ. ಗುದದ್ವಾರದ ಸುತ್ತಲೂ ಸೆರೇಟಗಳು (ದ್ವಿತೀಯಕ ಕಿವಿರುಗಳು) ಬೆಳೆದಿವೆ. ಜೀರ್ಣ ಗ್ರಂಥಿ ವಿಪುಲವಾಗಿ ಕವಲೊಡೆದಿದ್ದು ದೇಹದ ಅವಕಾಶದೊಳಗೆಲ್ಲ ತುಂಬಿಕೊಂಡಿದೆ. ನರಮಂಡಲ ಕೇಂದ್ರೀಕೃತಗೊಂಡಿದೆ. ಎರಡನೆಯ ಜೊತೆ ಟೆಂಟಕಲ್‌ಗಳು ರೈನೋಫೋರುಗಳಾಗಿ ಮಾರ್ಪಾಟುಗೊಂಡಿವೆ. ಉದಾ : ಡೋರಿಸ್, ಡೆಂಡ್ರೋನೋಟಸ್, ಎಲೀಸಿಯ ಮತ್ತು ಇಯೋಲಿಡಿಯ.

ಉಪವರ್ಗ III ಪಲ್ಮನೇಟ : ಇವುಗಳಲ್ಲಿ ಒಂದು ಹೃತ್ಕರ್ಣ ಹಾಗೂ ಒಂದು ಮೂತ್ರಕೋಶ ಇವೆ. ಕಿವಿರುಗಳು ಇಲ್ಲ. ಮ್ಯಾಂಟಲ್ ಕುಹರದ ಮುಂಭಾಗ ಅನೇಕ ರಕ್ತನಾಳನ್ನೊಳಗೊಂಡಿದ್ದು ಗಾಳಿಯ ಉಸಿರಾಟಕ್ಕೂ ದ್ವಿತೀಯಕವಾಗಿ ನೀರಿನ ಉಸಿರಾಟಕ್ಕೂ ಮಾರ್ಪಾಟುಗೊಂಡಿದೆ. ನರಮಂಡಲ ಸಮಪಾರ್ಶ್ವ ಸ್ಥಿತಿಯಲ್ಲಿದ್ದು ಕೇಂದ್ರೀಕೃತಗೊಂಡಿದೆ. ಸಾಮಾನ್ಯವಾಗಿ ಚಿಪ್ಪು ಇರುತ್ತದೆ. ಒಪರ್‌ಕ್ಯುಲಮ್ ಇಲ್ಲ. ಇವು ಉಭಯಲಿಂಗಿಗಳು. ಬೆಳೆವಣಿಗೆ ನೇರ ಬಗೆಯದು. ಈ ಉಪವರ್ಗದ ಜೀವಿಗಳು ಭೂಮಿಯ ಮೇಲೂ ಸಿಹಿನೀರಿನಲ್ಲೂ ವಾಸಿಸುತ್ತವೆ. ಕೆಲವು ಮಾತ್ರ ಕಡಲಜೀವಿಗಳು. ಈ ಉಪವರ್ಗದಲ್ಲಿ ಸ್ಟೈಲೋಮ್ಯಟೊಫೋರ ಹಾಗೂ ಬೇಸೋಮ್ಯಟೋಫೋರ ಎಂಬ ಎರಡು ಗಣಗಳಿವೆ.

ಗಣ 1 ಸ್ಟೈಲೋಮ್ಯಟೊಫೋರ : ಇದಕ್ಕೆ ಸೇರಿದ ಜೀವಿಗಳಲ್ಲಿ ಎರಡು ಜೊತೆ ಟೆಂಟಕಲ್‌ಗಳಿವೆ. ಕಣ್ಣುಗಳು ಹಿಂದಿನ ಜೊತೆ ಟೆಂಟಕಲ್‌ಗಳ ತುದಿಯಲ್ಲಿವೆ. ಇವೆಲ್ಲುವೂ ಭೂವಾಸಿಗಳು. ಹೆಲಿಕ್ಸ್, ಪಾಲಿಗೈರ, ಜೆನೆಲ, ಲೈಮ್ಯಾಕ್ಸ್, ರೆಟಿನೆಲ, ಪ್ಯೂಪ ಮುಂತಾದುವು ಇದರ ಉದಾಹರಣೆಗಳು.

ಗಣ 2 ಬೇಸೋಮ್ಯಟೋಫೋರ: ಈ ಗಣದ ಜೀವಿಗಳಲ್ಲಿ ಒಂದೇ ಒಂದು ಜೊತೆ ಟೆಂಟಕಲ್‌ಗಳಿವೆ. ಕಣ್ಣುಗಳು ಟೆಂಟಕಲ್‌ಗಳ ಬುಡದಲ್ಲಿವೆ. ಈ ಗಣದ ಎಲ್ಲ ಜೀವಿಗಳೂ ಸಿಹಿನೀರಿನಲ್ಲಿ ವಾಸಿಸುವಂಥವು. ನೇರವಾಗಿ ಗಾಳಿಯನ್ನೇ ಉಸಿರಾಡುತ್ತವಾದರೂ ಕೆಲವು ಬಗೆಯವು ನೀರನ್ನು ಮ್ಯಾಂಟಲ್ ಕುಹರದೊಳಕ್ಕೇ ತೆಗೆದುಕೊಂಡು ಉಸಿರಾಡುವುದುಂಟು. ಕೆಲವು ಜೀವಿಗಳಲ್ಲಿ ದ್ವಿತೀಯಕ ಕಿವಿರುಗಳಿವೆ. ಉದಾ : ಲಿಮ್ನೀಯ, ಪ್ಲನೋರಬಿಸ್, ಫೈಸ, ಆಂಕೈಲಸ್ ಮುಂತಾದುವು. (ಎಲ್.ಎಸ್.ಜಿ.)

**ಗ್ಯಾಸ್ಟ್ರೋಟ್ರೈಕ:** ಅಕಶೇರುಕಗಳ ಒಂದು ಕಿರುವಂಶ. ಈ ಮೊದಲು ಒಂದು ವರ್ಗವಾಗಿ ಆಸ್ಕೆಲ್‌ಮಿಂಥೀಸ್ ವಂಶಕ್ಕೆ ಸೇರಿಸಲಾಗಿತ್ತು. ಇದರಲ್ಲಿ ಸುಮಾರು ೨೦೦ ಪ್ರಭೇದಗಳಿವೆ. ಇವೆಲ್ಲುವೂ ಸೂಕ್ಷ್ಮ ಗಾತ್ರದ ಅಕಶೇರುಕಗಳು. ಸಿಹಿನೀರು ಮತ್ತು ಉಪ್ಪು ನೀರಿನಲ್ಲಿ ಜೀವಿಸುತ್ತವೆ. ದೇಹ ನೀಳಾಕಾರದ್ದು. ಇದರಲ್ಲಿ ವಲಯ ವಿಭಜನೆಯಿಲ್ಲ. ದೇಹದ ಹಿಂಭಾಗದಲ್ಲಿ ಇಬ್ಭಾಗವಾದ ಬಾಲವಿದೆ. ಬಾಲದಲ್ಲಿರುವ ಗ್ರಂಥಿಗಳು ಸ್ರವಿಸುವ ದ್ರವದ ಸಹಾಯದಿಂದ ಈ ಪ್ರಾಣಿಗಳು ಆಸರೆಗಳಿಗೆ ಅಂಟುತ್ತವೆ. ದೇಹದ ಕೆಳಭಾಗದಲ್ಲಿ ನೀಳವಾದ ಶಿಲಕೆಗಳ ಪಟ್ಟೆಗಳಿವೆ. ಇವು ಪ್ರಾಣಿಗಳ ಚಲನೆಗೆ ನೆರವಾಗುತ್ತವೆ. ದೇಹದ ಮೇಲ್ಭಾಗದ ಪಾರದರ್ಶಕ ಕ್ಯುಟಿಕಲ್ ಪೊರೆಯ ಮೇಲೆ ಅನೇಕ ಬಿರುಗೂದಲುಗಳಿವೆ. ದೇಹಾಂತರಾವಕಾಶ ಮಿಥ್ಯಾಸ್ವರೂಪದ್ದು. ದೇಹದ ಮುಂದಿನ ತುದಿಯಲ್ಲಿ ಬಾಯಿದೆ. ಇದರ ಸುತ್ತ ಸೂಕ್ಷ್ಮವಾದ ಮತ್ತು ಸಂವೇದನಶಕ್ತಿಯುಳ್ಳ ಕೂದಲಿನಂಥ ರಚನೆಗಳಿವೆ. ನೀರಿನಲ್ಲಿ ಬೆಳೆಯುವ ಸೂಕ್ಷ್ಮಜೀವಿಗಳೇ ಇವುಗಳ ಆಹಾರ. ಉಪ್ಪುನೀರಿನಲ್ಲಿ ವಾಸಿಸುವ ಪ್ರಭೇದಗಳು ದ್ವಿಲಿಂಗಿಗಳು. ಆದರೆ ಸಿಹಿನೀರುವಾಸಿಗಳು ಏಕಲಿಂಗಿಗಳು ಹಾಗೂ ಇವುಗಳಲ್ಲಿ ಹೆಣ್ಣುಗಳು ಮಾತ್ರ ಕಂಡುಬರುತ್ತವೆ. ಇದರಿಂದ ಇವುಗಳಲ್ಲಿ ಅನಿಷೇಚನ ಪ್ರಜನನಕ್ರಿಯೆ ಮಾತ್ರ ನಡೆಯುತ್ತದೆ. ಈ ಗುಂಪಿನ ಪ್ರಾಣಿಗಳಲ್ಲಿನ ಮೊಟ್ಟೆಗಳ ಹೊರಕವಚ ಗಟ್ಟಿಯಾಗಿದ್ದು ಇತರ ವಸ್ತುಗಳಿಗೆ ಅಂಟಿಕೊಳ್ಳಲು ಸಹಾಯಕವಾಗುವ ರಚನೆಗಳನ್ನು ಪಡೆದಿವೆ. ಇವುಗಳ ಜೀವನಚರಿತ್ರೆಯಲ್ಲಿ ರೂಪಪರಿವರ್ತನೆಯಿಲ್ಲ.

ಗ್ಯಾಸ್ಟ್ರೋಟ್ರೈಕದಲ್ಲಿ ಮ್ಯಾಕ್ರೊಡಸಿಯಾಯ್ಡಿಯ ಮತ್ತು ಕೀಟೊನಾಯ್ಡಿಯ ಎಂಬ ಎರಡು ಉಪವರ್ಗಗಳಿವೆ. ಮ್ಯಾಕ್ರೊಡಸಿಸ್ ಮತ್ತು ಸೆಫಲೊಡಸಿಸ್ ಮೊದಲನೆಯ ಉಪವರ್ಗಕ್ಕೆ ಉದಾಹರಣೆಗಳಾದರೆ ಕೀಟೋನೋಟಸ್ ಮತ್ತು ನಿಯೋಡಸಿಸ್ ಎರಡನೆಯ ಉಪವರ್ಗಕ್ಕೆ ಉದಾಹರಣೆಗಳು. ***

**ಗ್ರಂಥಿ:** ನಿರ್ದಿಷ್ಟವಾದ ಸ್ರಾವವನ್ನು (ಸೆಕ್ರಿಷನ್) ಇಲ್ಲವೇ ರಸವನ್ನು ಉತ್ಪಾದಿಸುವ ಅಂಗಭಾಗ (ಗ್ಲ್ಯಾಂಡ್). ಜೀವಿಯ ಬಾಳ್ವೆಗೆ ಈ ಸ್ರವಿಕೆ ಅವಶ್ಯ. ದೇಹದಲ್ಲಿನ ಹಲವಾರು ನಿಶ್ಚಿತ ಕೆಲಸಗಳನ್ನು ನಡೆಸಬಲ್ಲ ವಿಶಿಷ್ಟ ರಸಗಳನ್ನು ವಿಶಿಷ್ಟ ಗ್ರಂಥಿಗಳು ಉತ್ಪಾದಿಸುತ್ತವೆ. ರಸವನ್ನು ಸ್ರವಿಸುವ ಬಗೆ, ರಸದ ಗುಣ, ಗ್ರಂಥಿಯೊಳಗಿನ ಕೋಶದ ವರ್ತನೆ ಮತ್ತು ಗ್ರಂಥಿಯ ರಚನೆ, ಇವುಗಳಿಗೆ ತಕ್ಕಂತೆ ಗ್ರಂಥಿಗಳನ್ನು ವಿಂಗಡಿಸಲಾಗಿದೆ. ಕೆಲವು ಗ್ರಂಥಿಗಳು ದೇಹಕ್ಕೆ ಬೇಡವಾದ ಮಲಿನ ಮತ್ತು ಹಾನಿಕರ ವಸ್ತುಗಳನ್ನು ರಕ್ತದಿಂದ ಬೇರ್ಪಡಿಸಿ ಹೊರದೂಡುತ್ತವೆ. ಇವು ವಿಸರ್ಜಕ (ಎಕ್ಸ್‌ಕ್ರೀಟರಿ) ಗ್ರಂಥಿಗಳು. ಮೂತ್ರ ಪಿಂಡಗಳು ಮತ್ತು ಸ್ವೇದ ಗ್ರಂಥಿಗಳು ಈ ರೀತಿಯವು. ಮತ್ತೆ ಕೆಲವು ಗ್ರಂಥಿಗಳು ದೇಹಸೌಖ್ಯದ ವಿಷಯದಲ್ಲಿ ಮುಖ್ಯಪಾತ್ರ ವಹಿಸುವುವು. ಇವುಗಳಲ್ಲಿ ಮುಖ್ಯವಾದುವು ಜೀರ್ಣಕಾರಿ ಗ್ರಂಥಿಗಳು. ಜೀರ್ಣಪಥದಲ್ಲಿರುವ (ಡೈಜೆಸ್ಟಿವ್ ಟ್ರ್ಯಾಕ್ಟ್) ಜಠರ ಹಾಗು ಕರುಳು ಗ್ರಂಥಿಗಳು, ತಮ್ಮ ಸ್ರಾವವನ್ನು ನಾಳಗಳ ಮೂಲಕ ಜೀರ್ಣಪಥಕ್ಕೆ ಸೇರಿಸುವ ಲಾಲಾಗ್ರಂಥಿಗಳು, ಯಕೃತ್ತು ಮತ್ತು ಮೇದೋಜೀರಕಾಂಗಗಳು ಈ ಗುಂಪಿಗೆ ಸೇರಿ ಆಹಾರ ವಸ್ತುಗಳು ರಕ್ತಗತವಾಗುವಂತೆ ಅವನ್ನು ಅರಗಿಸುವ ಕ್ರಿಯೆಯಲ್ಲಿ ನಿರತವಾಗಿವೆ. ಇನ್ನು ಕೆಲವು ಗ್ರಂಥಿಗಳು ದೇಹದ ನಾನಾ ಕ್ರಿಯೆಗಳು ಕ್ಲುಪ್ತವಾಗಿ ನಡೆಯುವಂತೆ ನಿಯಂತ್ರಿಸುತ್ತವೆ. ಪಿಟ್ಯುಟರಿ, ಅಡ್ರಿನಲ್ ಮುಂತಾದ ಗ್ರಂಥಿಗಳು ಈ ಗುಂಪಿಗೆ ಸೇರಿವೆ. ಹೀಗೆ ಅನೇಕ ವಿಧಗಳಲ್ಲಿ ಗ್ರಂಥಿಗಳು ದೇಹದ ಆರ್ಥಿಕತೆಗೆ (ಬಾಡಿ ಎಕಾನಮಿ) ಮುಖ್ಯವಾಗಿವೆ. ಪುರುಷರಲ್ಲಿ ಗುದನಾಳದ ಮುಂದುಗಡೆ ಮೂತ್ರಕೋಶದ ಕೆಳಗಿರುವ ಶುಕ್ಲಗ್ರಂಥಿ (ಪ್ರಾಸ್ಟೇಟ್) ಸಂಭೋಗ ಕಾಲದಲ್ಲಿ ಒಂದು ಬಗೆಯ ರಸವನ್ನು ಸ್ರವಿಸಿ ಮೂತ್ರನಾಳಕ್ಕೆ ಸೇರಿಸುತ್ತದೆ. ಈ ಸ್ರಾವ ದೇಹದ ಆರ್ಥಿಕತೆಗೆ ಮುಖ್ಯವಲ್ಲವಾದರೂ ವೀರ್ಯಾಣುಗಳ ಬಾಳ್ವೆಗೆ ಅಗತ್ಯ.

ರಸವನ್ನು ಗ್ರಂಥಿಯಿಂದ ಹೊರಕ್ಕೆ ನಾಳಗಳ ಮೂಲಕ ಸಾಗಿಸುವವು ಸನಾಳ ಗ್ರಂಥಿಗಳು. ಇವುಗಳಿಗೆ ಬಾಹ್ಯಸ್ರಾವಿಗಳು ಎಂದು ಹೆಸರು (ಎಕ್ಸೋಕ್ರೈನ್ಸ್). ನಾಳಗಳ ಮೂಲಕ ರಸ ಹೊರಬರದೆ ನೇರವಾಗಿ ರಕ್ತಕ್ಕೋ ದುಗ್ಧರಸಕ್ಕೋ ಸೇರುವಂತಿರುವ

ಗ್ರಂಥಿಗಳು ನಿರ್ನಾಳ ಗ್ರಂಥಿಗಳು. ಇವುಗಳಿಗೆ ಅಂತಃ ಸ್ರಾವಿಗಳು (ಎಂಡೋಕ್ರೈನ್ಸ್) ಎಂದು ಹೆಸರು. ಪಿಟ್ಯುಟರಿ, ಥೈರಾಯ್ಡ್ ಗ್ರಂಥಿ ಮುಂತಾದುವು ಇಂಥವು. ಇವು ಉತ್ಪಾದಿಸುವ ಅಂತಃಸ್ರಾವಗಳಿಗೆ ಹಾರ್ಮೋನುಗಳು (ನೋಡಿ) ಎಂದು ಹೆಸರು. ಕೆಲವು ಗ್ರಂಥಿಗಳು ಮಿಶ್ರ ಗ್ರಂಥಿಗಳಾಗಿ ಬಾಹ್ಯಸ್ರಾವ ಅಂತಃಸ್ರಾವಗಳೆರಡನ್ನೂ ಉತ್ಪಾದಿಸುತ್ತವೆ. ಮೇದೋಜೀರಕಾಂಗ (ಪ್ಯಾಂಕ್ರಿಯಾಸ್) ಇಂಥ ಒಂದು ಗ್ರಂಥಿ. ಇದರ ಬಾಹ್ಯಸ್ರಾವವಾದ ಮೇದೋಜೀರಕರಸ ನಾಳದ ಮೂಲಕ ಸಣ್ಣ ಕರುಳೊಳಕ್ಕೆ ಪ್ರವಹಿಸಿ ತಿಂದ ಆಹಾರದಲ್ಲಿರುವ ಹಿಟ್ಟು ಸಕ್ಕರೆಗಳು, ಪ್ರೋಟೀನು ಮತ್ತು ಕೊಬ್ಬುಗಳನ್ನು ಅರಗಿಸುವುದಕ್ಕೆ ಸಹಾಯ ಮಾಡುತ್ತದೆ. ಅಂತಃಸ್ರಾವವಾದ ಇನ್ಸುಲಿನ್ ನೇರವಾಗಿ ರಕ್ತಗತವಾಗಿ ವ್ಯಕ್ತಿ ಮಧುಮೇಹ ರೋಗದಿಂದ (ಡಯಾಬಿಟಿಸ್ ಮೆಲೈಟಸ್) ನರಳದಂತೆ ಕಾಪಾಡುವುದು. ಪುರುಷರ ವೃಷಣಗಳೂ ಸ್ತ್ರೀಯರ ಅಂಡಾಶಯಗಳೂ ಒಂದು ರೀತಿಯ ಮಿಶ್ರ ಗ್ರಂಥಿಗಳು. ಇವು ವ್ಯಕ್ತಿಯ ಪ್ರಜನನಶೀಲ ಅವಧಿಯಲ್ಲಿ ಕಾರ್ಯ ಸಾಫಲ್ಯಕ್ಕೆ ಅಗತ್ಯವಾದ ವಿಶೇಷ ಅಂತಃಸ್ರಾವಗಳನ್ನು ಉತ್ಪಾದಿಸುತ್ತವೆ ಮತ್ತು ಅದೇ ವೇಳೆ ಕೋಟಿಗಟ್ಟಲೆ ವೀರ್ಯಾಣುಗಳನ್ನೂ ಅಂಡಾಶಯ ನಿರ್ದಿಷ್ಟ ಕಾಲಕ್ಕೆ ಒಂದೊಂದು ಅಂಡಾಣುವನ್ನು ತಯಾರಿಸಿ ಅವನ್ನು ಬಾಹ್ಯಸ್ರಾವದಂತೆ ನಾಳಗಳ ಮೂಲಕ ಹೊರ ಹಾಕುತ್ತವೆ ಕೂಡ.

ಬಾಹ್ಯಸ್ರಾವಿ ಗ್ರಂಥಿಗಳು ಒಂದೇ ಕೋಶದಿಂದಾಗಿರಬಹುದು. ಜಠರ ಕರುಳಿನ ನಾಳ ಮತ್ತು ಶ್ವಾಸನಾಳಗಳಲ್ಲಿ ಇವು ಕಾಣಬರುತ್ತವೆ. ಇವುಗಳಿಗೆ ಗಾಬ್ಲೆಟ್ (ಲೋಟಾಕೃತಿ) ಕಣಗಳೆಂದು ಹೆಸರು. ಇವು ನಿರಂತರವಾಗಿ ಲೋಳೆಯನ್ನು ಸ್ರವಿಸಿ ಹೊರಹಾಕುತ್ತವೆ. ಅದು ಸುತ್ತಲು ಹರಡಿ ಆ ಭಾಗವನ್ನು ಒದ್ದೆಯಾಗಿ ಜಾರುವಂತೆ ಇಟ್ಟಿರುತ್ತದೆ. ಸಾವಿರ, ಲಕ್ಷ, ಕೋಟಿಗಟ್ಟಲೆ ಕೋಶಗಳು ನಿರ್ದಿಷ್ಟ ರಚನೆಗೆ ಒಳಪಟ್ಟು ಆಗಿರುವುದು ಗ್ರಂಥಿಗಳ ಸಾಮಾನ್ಯ ಲಕ್ಷಣ. ಗ್ರಂಥಿಗಳು ಕಣ್ಣಿಗೆ ಕಾಣದಷ್ಟು ಸಣ್ಣವಿರಬಹುದು ಇಲ್ಲವೇ ಯಕೃತ್ತು, ಮೂತ್ರಪಿಂಡಗಳಂತೆ ಬೃಹತ್‌ಗಾತ್ರದ ಗ್ರಂಥಿಗಳಾಗಿರಬಹುದು. ಮಿದುಳಿನ ಕೋರಾಯ್ಡ್ ಪ್ಲೆಕ್ಸಸಿನಲ್ಲಿ ಕೋಶಗಳು ಮಡಿಸಿದ ಹಾಳೆಯಂತೆ ಜೋಡಿಸಿಕೊಂಡಿವೆ. ಇವುಗಳಿಗೆ ಮಿಕ್ಕಗ್ರಂಥಿಗಳಂತೆಯೇ ಸಾಮರ್ಥ್ಯ ಉಂಟು. ಕರುಳಿನಲ್ಲಿರುವ ಗ್ರಂಥಿಗಳು ಪ್ರಯೋಗ ನಳಿಕೆ (ಟೆಸ್ಟ್ ಟ್ಯೂಬ್) ಆಕಾರದಲ್ಲಿವೆ. ಜಠರದ ಗ್ರಂಥಿಗಳು ಕೂಡ ನಳಿಕೆಯಾಕಾರದಲ್ಲಿವೆ. ಆದರೆ ಅವುಗಳಲ್ಲಿ ಸ್ರವಿಸುವ ಭಾಗ ಮತ್ತು ಸ್ರಾವವನ್ನು ಹೊರಕ್ಕೊಯ್ಯುವ ನಾಳಭಾಗವೆಂದು ಗುರುತಿಸಬಹುದು. ಸ್ವೇದಗ್ರಂಥಿಗಳಲ್ಲಿ ಸ್ರವಿಸುವ ಭಾಗ ಸುರುಳಿ ಸುತ್ತಿಕೊಂಡಿರುವ ನಾಳದಂತೆಯೂ ಸ್ರಾವವನ್ನು ಹೊರಕ್ಕೊಯ್ಯುವ ಮತ್ತು ಸ್ವತ: ಸ್ರಾವಸಾಮರ್ಥ್ಯ ಇಲ್ಲದ ನಾಳಭಾಗ ಸುಮಾರಾಗಿ ನೇರವಾಗಿಯೂ ಇವೆ.

ಮೈಜಿಡ್ಡಿನ ಗ್ರಂಥಿಗಳಲ್ಲಿ (ಸೆಬೇಶಿಯಸ್ ಗ್ಲ್ಯಾಂಡ್ಸ್) ಸ್ರವಿಸುವ ಭಾಗ ಕುಡಿಕೆಯಂತಿದೆ. ಇಲ್ಲಿ ಸಹ ಸ್ರಾವವನ್ನು ಹೊರಕ್ಕೆ ಒಯ್ಯುವ ಭಾಗವನ್ನು ನಾಳವಾಗಿ ಗುರುತಿಸಬಹುದು. ಇಂಥ ಗ್ರಂಥಿಗಳೆಲ್ಲ ಸರಳ ಗ್ರಂಥಿಗಳು ಮತ್ತು ಕಣ್ಣಿಗೆ ಕಾಣಿಸದುವು. ಹೀಗಲ್ಲದೆ ನಾಳ ಕವಲೊಡೆದು ಪ್ರತಿ ಕವಲೂ ನಳಿಕೆಯಾಕಾರದ ಇಲ್ಲವೇ ಕುಡಿಕೆಯಾಕಾರದ ಸ್ರವಿಸುವ ಭಾಗಗಳಲ್ಲಿ ಕೊನೆಗೊಂಡಿದ್ದರೆ ಅಂಥ ಗ್ರಂಥಿಗಳಿಗೆ ಜಟಿಲ ರಚನೆಯ ಗ್ರಂಥಿಗಳೆಂದು ಹೆಸರು. ಇವು ಸಾಮಾನ್ಯವಾಗಿ ದ್ರಾಕ್ಷಿ ಗೊಂಚಲಿನಂತಿವೆ. ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣಬಹುದು. ಅನೇಕ ಗ್ರಂಥಿಗಳಲ್ಲದೆ ದೊಡ್ಡ ಗ್ರಂಥಿಗಳಾದ ಲಾಲಾಗ್ರಂಥಿಗಳು, ಮೇದೋಜೀರಕಾಂಗಗಳು ಕೂಡ ಈ ಬಗೆಯವು. ಮುಖ್ಯ ನಾಳದ ಬೇರೆ ಬೇರೆ ಪ್ರಾಥಮಿಕ ಮತ್ತು ದ್ವಿತೀಯಕ ಕವಲುಗಳಿಗೆ ಅಂಟಿದಂತೆ ಗ್ರಂಥಿಭಾಗಗಳನ್ನು ಗುರುತಿಸಬಹುದು. ಈ ಗ್ರಂಥಿ ಭಾಗಗಳನ್ನೆಲ್ಲ ಅಥವಾ ಹಾಲೆಗಳನ್ನೆಲ್ಲ ಜೋಡಿಸಿ ಗ್ರಂಥಿಯನ್ನು ಒಂದು ಅಂಗವಾಗಿ ಪ್ರತ್ಯೇಕಿಸುವ ಹೊರಕವಚ ಉಂಟು. ಗ್ರಂಥಿಯ ಸ್ರವಣ ಭಾಗಗಳು, ಸಾಗುನಾಳಗಳು, ಗ್ರಂಥಿಗೆ ಪೂರೈಕೆಯಾಗುವ ರಕ್ತ ಮತ್ತು ದುಗ್ಧರಸನಾಳಗಳು, ನರಗಳು – ಇವನ್ನು ಯುಕ್ತಸ್ಥಾನಗಳಲ್ಲಿ ಹೊಂದಿಸಿ ಇಡಲು ಗ್ರಂಥಿಯ ಮಿಕ್ಕ ಭಾಗವನ್ನೆಲ್ಲ ತುಂಬಿಕೊಂಡಿರುವ ಸಂಯೋಜಕಾಂಗಾಂಶ (ಕನೆಕ್ಟಿವ್ ಟಿಶ್ಯೂ) ಉಂಟು. ಗ್ರಂಥಿಯ ಸ್ರವಿಸುವ ಭಾಗದ ಕೋಶಗಳು ರಕ್ತದಿಂದ ಬೇಕಾದ ವಸ್ತುಗಳನ್ನು ಹೀರಿಕೊಂಡು ನಿರ್ದಿಷ್ಟವಾದ ಸ್ರಾವವನ್ನು ಉತ್ಪಾದಿಸುತ್ತವೆ. ಇದು ಕೋಶಗಳಿಂದ ಊರಿ (ಊಜ್) ಹೊರಬಂದು ನಾಳವನ್ನು ಸೇರಬಹುದು (ಮಿರೊಕ್ರೈನ್). ಲಾಲಾಗ್ರಂಥಿಗಳು, ಯಕೃತ್ತು ಮುಂತಾದುವುಗಳಲ್ಲಿ ಈ ರೀತಿಯ ಸ್ರಾವವನ್ನು ನೋಡಬಹುದು. ಸ್ರಾವ ತುಂಬಿದ ಕೋಶವೇ ಕಳಚಿಕೊಂಡು ದ್ರವವಾಗಿ ನಾಳವನ್ನು ಸೇರಬಹುದು (ಹೊಲೊಕ್ರೈನ್). ಮೈಜಿಡ್ಡಿನ ಗ್ರಂಥಿಗಳು ಈ ಬಗೆಯವು. ಇವೆರಡಕ್ಕೂ ಮಧ್ಯಸ್ಥವಾಗಿ ಸ್ರಾವ ತುಂಬಿದ ಕೋಶದ ತುದಿ ಭಾಗ ವಿಸರ್ಜಿಸಲ್ಪಟ್ಟು ದ್ರವವಾಗಿ ನಾಳದೊಳಕ್ಕೆ ಸೇರಬಹುದು (ಅಪೊಕ್ರೈನ್). ಕರುಳಿನ ವಿಶೇಷ ಸ್ವೇದಗ್ರಂಥಿಗಳು ಮತ್ತು ಸ್ತನಗ್ರಂಥಿಗಳು ಈ ಗುಂಪಿಗೆ ಸೇರಿದುವು.

ಗ್ರಂಥಿಗಳ ನಾಳ ಭಾಗಗಳು ಸ್ರಾವವನ್ನು ಹೊರಕ್ಕೆ ಒಯ್ಯುತ್ತವೆ. ಮಾತ್ರವಲ್ಲ ಕೆಲವು ಗ್ರಂಥಿಗಳಲ್ಲಿ ಸ್ರವಿಸುವ ಮತ್ತು/ಅಥವಾ ಇಂಗಿಸುವ ಸಾಮರ್ಥ್ಯವೂ ಇವುಗಳಿಗುಂಟು. ಲಾಲಾಗ್ರಂಥಿಗಳಲ್ಲಿಯೂ ಯಕೃತ್ತಿನಲ್ಲಿಯೂ ಈ ಕ್ರಿಯೆ ಕಾಣಬರುತ್ತದೆ. ಒಂದು ಗ್ರಂಥಿಗೆ ಒಂದೇ ನಾಳವಿರುವುದು ಸಾಮಾನ್ಯ. ಆದರೆ ಕೆಲವೆಡೆ ಒಂದೇ ಗ್ರಂಥಿಗೆ ಅನೇಕ ನಾಳಗಳಿರುವುದೂ ಉಂಟು. ಅಶ್ರು ಗ್ರಂಥಿಗಳು, ಸ್ತನ, ನಾಲಿಗೆ ತಳದಲ್ಲಿರುವ ಲಾಲಾಗ್ರಂಥಿ, ಪುರುಷರಲ್ಲಿರುವ ವೃಷಣ ಗ್ರಂಥಿ ಇವು ಈ ಗುಂಪಿಗೆ ಸೇರಿದುವು.

ಅಂತಃಸ್ರಾವೀ ಗ್ರಂಥಿಗಳು ನಿರ್ನಾಳ ಗ್ರಂಥಿಗಳು. ಇವುಗಳ ಸ್ರಾವ ಬಾಹ್ಯ ಸ್ರಾವಗಳಿಗಿಂತ ಬಹು ಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಾಗಿ ನೇರವಾಗಿ ರಕ್ತಗತವಾಗಿ ದೇಹಕ್ರಿಯೆಯ ನಿಯಂತ್ರಣದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಇವುಗಳಿಗೆ ರಾಸಾಯನಿಕ ದೂತಗಳೆಂದೂ ಅಂತಃಸ್ರಾವಗಳೆಂದೂ ಹಾರ್ಮೋನುಗಳೆಂದೂ ಹೆಸರುಂಟು. ಇವು ರಕ್ತದಲ್ಲಿ ಕಲೆತು ದೇಹದ ಎಲ್ಲ ಭಾಗಗಳಿಗೆ ಒಯ್ಯಲ್ಪಟ್ಟರೂ ನಿರ್ದಿಷ್ಟ ಅಂಗಗಳ ಮೇಲೆ ಮಾತ್ರ ತಮ್ಮ ಪ್ರಭಾವ ಬೀರಿ ಅವುಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಈ ಗ್ರಂಥಿಗಳ ಪೈಕಿ ತಲೆಚಿಪ್ಪಿನೊಳಗೆ ಮಿದುಳಿನ ಕೆಳಭಾಗದಲ್ಲಿ ಸ್ಥಾಪಿತವಾಗಿರುವ ಬಟಾಣಿಕಾಳಿನ ಗಾತ್ರದ ಪಿಟ್ಯುಟರಿ ಗ್ರಂಥಿ ಬಹುಮುಖ್ಯವಾದುದ್ದು. ಇದರ ಸ್ರಾವಗಳು ಥೈರಾಯ್ಡ್ ಗ್ರಂಥಿ, ಅಡ್ರಿನಲ್ ಗ್ರಂಥಿ, ಲೈಂಗಿಕ ಗ್ರಂಥಿ ಮುಂತಾದುವುಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಅಂತಃಸ್ರಾವಗಳ ಪ್ರಭಾವ ರಾಸಾಯನಿಕ ದೂತಕ್ರಿಯೆಯಿಂದಾಗುತ್ತದೆ. ಆದ್ದರಿಂದ ಕುರಿ, ದನ, ಹಂದಿ ಮುಂತಾದುವುಗಳಿಂದ ವಿಶೇಷ ರೀತಿಯಲ್ಲಿ ಅಂತಃಸ್ರಾವಗಳು ಸಂಗ್ರಹಿಸಲ್ಪಟ್ಟು ವೈದ್ಯದಲ್ಲಿ ಬಳಕೆಯಲ್ಲಿವೆ. ಕೆಲವು ಅಂತಃಸ್ರಾವಗಳ ರಾಸಾಯನಿಕ ರಚನೆ ಗೊತ್ತಿರುವುದರಿಂದ ಅವನ್ನು ಸಂಯೋಗಿಸಿ ಕೃತಕ ಅಂತಃಸ್ರಾವವಾಗಿ ಉಪಯೋಗಿಸಲಾಗುತ್ತದೆ. ದೇಹದಲ್ಲಿ ಅಂತಃಸ್ರಾವಗಳ ಪರಿಮಾಣದ ಏರುಪೇರಿನಿಂದ ಅನೇಕ ರೋಗಸ್ಥಿತಿಗಳು ಉಂಟಾಗುವುದರಿಂದ ಮತ್ತು ಕೆಲವು ವೇಳೆ ಇವು ಮಾರಕಗಳಾಗುವುದರಿಂದ ಚಿಕಿತ್ಸೆಯಲ್ಲಿ ಅಂತಃಸ್ರಾವಗಳ ಪ್ರಾಮುಖ್ಯ ಎಷ್ಟೆಂಬುದನ್ನು ಅರಿಯಬಹುದು. ಎಲ್ಲ ರೀತಿಯ ಗ್ರಂಥಿಗಳ ಕೋಶಗಳಲ್ಲೂ ಮಿಕ್ಕ ಕೋಶಗಳಲ್ಲಿರುವಂತೆಯೇ ಕೋಶದ ಎಲ್ಲ ಭಾಗಗಳೂ ಇರುತ್ತವೆ. ವಿಶೇಷವಾಗಿ ಸ್ರಾವವೋ ಸ್ರಾವಜನಕವೋ ಆದ ಕಿರುಕಣಗಳೂ (ಗ್ರ್ಯಾನ್ಯೂಲ್ಸ್), ಮೈಟೋಕಾಂಡ್ರಿಯ ಮತ್ತು ಗಾಲ್ಜಿ ವಸ್ತುವೂ ಕಂಡುಬಂದು ಅವುಗಳ ಆಕಾರ, ಗಾತ್ರಗಳಲ್ಲಿ ಸ್ರಾವಚಟುವಟಿಕೆಗೆ ಅನುಗುಣವಾದ ಬದಲಾವಣೆಗಳಾಗುತ್ತವೆ. ***

**ಗ್ರಾಫ್, ರೆನ್ಯೇಡೆ (1641–1673):** ಡಚ್ ವೈದ್ಯ ಮತ್ತು ಜೀವವಿಜ್ಞಾನಿ. ಅಂಗರಚನಾಪರಿಣತ. ಶ್ಲೂನ್‌ಹೋವೆನಿನಲ್ಲಿ 1641ರ ಜುಲೈ 30 ರಲ್ಲಿ ಜನನ. ಲೋವೈನ್, ಉಟ್ರೆಕ್ಟ್, ಲೈಡನ್ ಮತ್ತು ಆಂಜಿಯರ್ಸುಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಸ್ವಲ್ಪಕಾಲ ಪ್ಯಾರಿಸಿನಲ್ಲಿ ವೈದ್ಯ ವೃತ್ತಿ ನಡೆಸಿ 1667ರಲ್ಲಿ ಡೆಲ್ಫ್ಟ್‌ಗೆ ಹಿಂತಿರುಗಿ ಬಂದು ಸಂಶೋಧನೆಗಳಲ್ಲಿ ನಿರತನಾದ. ಎಲ್ಲ ಪ್ರಾಣಿಗಳೂ ತತ್ತಿಗಳಿಂದ ಬೆಳೆಯುತ್ತವೆಂಬುದು ಅಂದಿನ ನಂಬಿಕೆಯಾಗಿತ್ತು. ಇದರ ನೈಜತೆಯನ್ನು ಗ್ರಾಫ್ ಶೋಧಿಸಿದ. ಸ್ತನಿಗಳ ಅಂಡಾಶಯದಲ್ಲಿ ಅಂಡಾಣುವಿನ ಸುತ್ತ ಇರುವ ಜೀವಕೋಶ ಪದರಗಳ ಸಂಪುಟವನ್ನು ಅವನು ತತ್ತಿ ಎಂದು ವಿವರಿಸಿದ (1672). ಇದು ತಪ್ಪು ಎಂದು ಆ ಮೇಲಿನ ಶೋಧನೆಗಳಿಂದ ತಿಳಿದುಬಂದರೂ ಗ್ರಾಫ್‌ನ ಈ ಶೋಧನೆಯ ಪ್ರಾಮುಖ್ಯವನ್ನು ಅಲ್ಲಗಳೆಯುವಂತಿಲ್ಲ. ಹೆಣ್ಣು ಸ್ತನಿಯ ಅಂಡಾಶಯ ಕೋಶಿಕೆಗಳಿಗೆ (ಫಾಲಿಕಲ್ಸ್) ಆತನ ಹೆಸರನ್ನೇ ಇಡಲಾಗಿದೆ (ಗ್ರಾಫಿಯನ್ ಫಾಲಿಕಲ್ಸ್). ಈ ಅಂಡಾಶಯ ಕೋಶಿಕೆಗಳಿಂದ ಅಂಡಾಣು ಬಲಿತು ಹೊರಬೀಳುವುದನ್ನೂ ಅವನು ವಿವರಿಸಿದ್ದಾನೆ. ಗಂಡು ಸ್ತನಿಗಳಲ್ಲಿರುವ ವೃಷಣಗಳ ಸೂಕ್ಷ್ಮರಚನೆಯನ್ನು ಕೂಡ ಆ ಮೊದಲೇ ಅವನು ವಿವರಿಸಿದ್ದ (1668). ಪ್ರಯೋಗದ ಸಲುವಾಗಿ ನಾಯಿಯಲ್ಲಿ ಮೇದೋಜೀರಕಾಂಗ ಮತ್ತು ಪಿತ್ಥಕೋಶಗಳಿಂದ ರಸಗಳನ್ನು ಹೊರತೆಗೆದು ಕೂಡಿಹಾಕುವ ವಿಧಾನಗಳನ್ನು 1664ರಲ್ಲಿ ಆವಿಷ್ಕರಿಸಿದ. ಅಲ್ಲದೇ ಪ್ರಾಣಿಗಳನ್ನು ಸಂಗ್ರಹಾಲಯಗಳಲ್ಲಿ ಸಂರಕ್ಷಿಸಿಡುವ ವಿಧಾನಗಳನ್ನು ಕಂಡುಹಿಡಿದು ಉತ್ತಮಗೊಳಿಸಿದ. ಗ್ರಾಫ್ ಮಡಿದದ್ದು 1673 ಆಗಸ್ಟ್ 17ರಂದು. (ಎಚ್.ಬಿ.ಡಿ.)

**ಗ್ರಾಮ್ ವರ್ಣ:** ಸೂಕ್ಷ್ಮಜೀವಿಗಳನ್ನು ವರ್ಣೀಕರಿಸಿ, ವರ್ಗೀಕರಣವನ್ನು ಮಾಡುವ ವಿಧಾನ. ಆಂಗ್ಲಭಾಷೆಯಲ್ಲಿ ಗ್ರಾಮ್ಸ್ ಸ್ಟೇನ್ ಎನ್ನುವರು. ವರ್ಣೀಕರಣಗೊಂಡ ಬ್ಯಾಕ್ಟೀರಿಯಗಳನ್ನು ಗ್ರಾಮ್‌ಧನ ಬ್ಯಾಕ್ಟೀರಿಯಗಳೆಂದು, ವರ್ಣ ಕಳೆದುಕೊಳ್ಳುವವನ್ನು ಗ್ರಾಮ್‌ಋಣ ಬ್ಯಾಕ್ಟೀರಿಯಗಳೆಂದು ವರ್ಗೀಕರಿಸುವರು. ಡೇನಿಷ್ ಬ್ಯಾಕ್ಟೀರಿಯ ವಿಜ್ಞಾನಿ ಹ್ಯಾನ್ಸ್ ಕ್ರಿಶ್ಚಿಯನ್ ಯೋಕಿಮ್ ಗ್ರಾಮ್ (1853–1938) 1888 ರಲ್ಲಿ ಆವಿಷ್ಕರಣೆ ಮಾಡಿದ.

ವರ್ಣೀಕರಿಸಿದ ಬ್ಯಾಕ್ಟೀರಿಯಗಳನ್ನು ಆಲ್ಕೊಹಾಲ್ ಅಥವಾ ಅಸಿಟೋನಿನಂಥ ತಟಸ್ಥ ದ್ರಾವಕಗಳಿಂದ (ನ್ಯೂಟ್ರಲ್ ಸಾಲ್ವೆಂಟ್ಸ್) ವಿವರ್ಣೀಕರಿಸುವಾಗ (ಡೀಕಲರೈಸ್)

ಬ್ಯಾಕ್ಟೀರಿಯಗಳು ಪ್ರದರ್ಶಿಸುವ ನಿರೋಧ ಸಾಮರ್ಥ್ಯದ ವ್ಯತ್ಯಾಸವನ್ನು ಅವಲಂಬಿಸಿ ಗ್ರಾಮ್ ವರ್ಣೀಕರಣ ವಿಧಾನ ಎನ್ನುವರು. ಬ್ಯಾಕ್ಟೀರಿಯಗಳ ಸ್ಥಿರ ಒರಸುಗಳನ್ನು (ಫಿಕ್ಸೆಡ್ ಸ್ಮಿಯರ್ಸ್) ಅಮೋನಿಯಮ್ ಆಕ್ಸಲೇಟ್ ಕ್ರಿಸ್ಟಲ್ ಬಣ್ಣಗಚ್ಚಾಗಿ (ಮಾರ್ಡೆಂಟ್) ವರ್ತಿಸುವುದು. ಬಳಿಕ ಅದನ್ನು ನೀರಿನಿಂದ ತೊಳೆದು ಗ್ರಾಮ್ ಅಯೋಡೀನಿನಿಂದ ಸಂಸ್ಕರಿಸುವುದು ಎರಡನೆಯ ಹಂತ. ಮೂರನೆಯ ಹಂತದಲ್ಲಿ ಇದನ್ನು ಪುನಃ ನೀರಿನಲ್ಲಿ ತೊಳೆದು ಶೇ. 95 ಆಲ್ಕೊಹಾಲಿನಿಂದ ವರ್ಣೀಕರಿಸಿದ ಬ್ಯಾಕ್ಟೀರಿಯಗಳನ್ನು ವಿವರ್ಣೀಕರಿಸಿ ತರುವಾಯ ಪ್ರತಿವರ್ಣದಿಂದ (ಕೌಂಟರ್‌ಸ್ಟೇನ್) ವರ್ಣೀಕರಿಸುತ್ತಾರೆ. ಅನಂತರ ನೀರಿನಿಂದ ತೊಳೆದು ಪ್ರಯೋಗಾಲಯದಲ್ಲಿ ಒಣಗಿಸಿ ಒರಸನ್ನು ಪರೀಕ್ಷಿಸುತ್ತಾರೆ. ಈ ಪ್ರಯೋಗದಲ್ಲಿ ಉಪಯೋಗಿಸುವ ಮೂಲವರ್ಣವನ್ನು ಬ್ಯಾಕ್ಟೀರಿಯಗಳು ವಿವರ್ಣೀಕರಿಸದಿದ್ದರೆ ಅವನ್ನು ಗ್ರಾಮ್‌ಧನ ಬ್ಯಾಕ್ಟೀರಿಯ ಎಂದು ಮೂಲವರ್ಣವನ್ನು ತ್ಯಜಿಸಿ ಪ್ರತಿವರ್ಣವನ್ನು ಮಾತ್ರ ಗ್ರಹಿಸಿದರೆ ಅವನ್ನು ಗ್ರಾಮ್ ಋಣ ಬ್ಯಾಕ್ಟೀರಿಯಗಳು ಎಂದು ಕರೆಯುವರು. ಗ್ರಾಮ್ ಋಣ ಬ್ಯಾಕ್ಟೀರಿಯಗಳಲ್ಲಿ ಈ ಗುಣ ಸ್ಥಿರವಾಗಿದೆ. ಗ್ರಾಮ್‌ಧನ ಬ್ಯಾಕ್ಟೀರಿಯಗಳು ಕೆಲವು ವೇಳೆ ಗ್ರಾಮ್‌ಋಣದ ಗುಣವನ್ನೂ ಪ್ರದರ್ಶಿಸುವುವು. ಬೆಳೆಯುವಾಗ ಅಥವಾ ಮುಪ್ಪಿನಿಂದ ಶಿಥಿಲವಾಗುತ್ತಿರುವಾಗ ಇಂಥ ವ್ಯತ್ಯಾಸ ಕಂಡುಬರುತ್ತದೆ. ಬಹುಶಃ ಬ್ಯಾಕ್ಟೀರಿಯ ಕೋಶಗಳ ಭಿತ್ತಿಯ ಮೇಲೆ ಆಲ್ಕೊಹಾಲ್ ಅಥವಾ ಅಸಿಟೋನ್ ಕ್ರಿಯೆ ತೋರಿಸುವುದರಿಂದ ಈ ರೀತಿ ಗ್ರಾಮ್‌ಧನ ಅಥವಾ ಋಣ ಗುಣ ಉಂಟಾಗುವುದು. ಗ್ರಾಮ್‌ಧನ ಬ್ಯಾಕ್ಟೀರಿಯಗಳಲ್ಲಿ ಆಲ್ಕೊಹಾಲ್ ಅಥವಾ ಅಸಿಟೋನ್‌ನಿಂದ ಭಿತ್ತಿಯು ಒಳಗಿನ ಪದಾರ್ಥಗಳು ಹೊರ ಹೋಗದಂತೆ ತಡೆಯುವ ಸಾಮರ್ಥ್ಯವನ್ನು ಪಡೆದು ಮೂಲವರ್ಣ ವಿವರ್ಣಗೊಳ್ಳದಂತೆ ಮಾಡುತ್ತದೆ. ಗ್ರಾಮ್ ಋಣ ಬ್ಯಾಕ್ಟೀರಿಯಗಳಲ್ಲಿ ಹೀಗಾಗದೆ ಮೂಲವರ್ಣ ಭಿತ್ತಿಯ ಮೂಲಕ ಹೊರಬಂದು ಬ್ಯಾಕ್ಟೀರಿಯ ವಿವರ್ಣಗೊಳ್ಳುತ್ತದೆ. ಬಹುಶಃ ಈ ಬ್ಯಾಕ್ಟೀರಿಯಗಳ ಭಿತ್ತಿಯಲ್ಲಿ ಮೇದಸ್ಸಿನ ಅಂಶ ಹೆಚ್ಚಾಗಿದ್ದು ಅವು ಆಲ್ಕೊಹಾಲ್ ಅಥವಾ ಅಸಿಟೋನಿನಲ್ಲಿ ಸ್ವಲ್ಪಮಟ್ಟಿಗೆ ಕರಗಿ ಹೋಗುವುದರಿಂದ ಮೂಲವರ್ಣ ಹೊರಬರುತ್ತದೆ.

ಗ್ರಾಮ್‌ಧನ ಬ್ಯಾಕ್ಟೀರಿಯಗಳಿಗೆ ಜೀವಿ ಪ್ರತಿರೋಧಕಗಳನ್ನು, ಬ್ಯಾಕ್ಟೀರಿಯೋಸ್ಟ್ಯಾಟಿಕ್ ವರ್ಣಗಳನ್ನು, ಹ್ಯಾಲೊಜೆನುಗಳನ್ನು ಪ್ರತಿರೋಧಿಸುವ ಸಾಮರ್ಥ್ಯವಿಲ್ಲ. ಗ್ರಾಮ್‌ಋಣ ಬ್ಯಾಕ್ಟೀರಿಯಗಳು ವಿಶಿಷ್ಟ ಅಮೈನೋ ಆಮ್ಲಗಳನ್ನು ತಯಾರಿಸಿಕೊಳ್ಳಬಲ್ಲುವು. ಈ ಗುಣ ಗ್ರಾಮ್‌ಧನ ಬ್ಯಾಕ್ಟೀರಿಯಗಳಿಗಿಲ್ಲ. ಟ್ರಿಪ್ಸಿನ್, ಪೆಪ್ಸಿನ್ ಮುಂತಾದ ಎಂಜೈಮುಗಳನ್ನು ಪ್ರತಿರೋಧಿಸುವ ಸಾಮರ್ಥ್ಯ ಗ್ರಾಮ್‌ಋಣ ಬ್ಯಾಕ್ಟೀರಿಯಗಳಿಗೆ ಕಡಿಮೆ. ಜೀವ ಪ್ರತಿರೋಧಕಗಳನ್ನು ಇವು ನಿರೋಧಿಸಬಲ್ಲುವು. ಈ ಬ್ಯಾಕ್ಟೀರಿಯಗಳ ಐಸೊಎಲೆಕ್ಟ್ರಿಕ್ ಸ್ಥಾನ ಗ್ರಾಮ್‌ಧನ ಬ್ಯಾಕ್ಟೀರಿಯಗಳಿಗಿಂತ ಹೆಚ್ಚು.

ಗ್ರಾಮ್‌ಧನ ಬ್ಯಾಕ್ಟೀರಿಯಗಳು ಉದಾ: ಸ್ಟಾಫಿಲೊಕಾಕೈ, ಸ್ಟ್ರೆಪ್ಟೊಕಾಕೈ, ನ್ಯೂಮೊಕಾಕೈ, ಡಿಫ್ತೀರಿಯ, ಟಿಟೇನಸ್, ಕ್ಷಯ, ದನಗಳ ಕಾಲು-ಬಾಯಿ ಜ್ವರವನ್ನು ಉಂಟುಮಾಡುವ ಜೀವಾಣುಗಳು.

ಗ್ರಾಮ್‌ಋಣ ಬ್ಯಾಕ್ಟೀರಿಯಗಳು ಉದಾ: ಗಾನೊಕಾಕಸ್, ಮೆನಿಂಗೊಕಾಕಸ್, ನೆಗಡಿ, ಇನ್‌ಫ್ಲೂಯೆಂಜ, ಕಾಲರ, ಟೈಫಾಯಿಡ್, ಆಮಶಂಕೆ, ಪ್ಲೇಗ್ ರೋಗಗಳನ್ನು ಉಂಟುಮಾಡುವ ಜೀವಾಣುಗಳು. (ಎನ್.ವಿ.ಎ.)

**ಗ್ರಾಮ್‌ಋಣ ಡಿಪ್ಲೊಕಾಕ್ಕೈ:** ಇವು ನೈಸೀರಿಯೇಸಿ ಕುಟುಂಬದ ಸೂಕ್ಷ್ಮಾಣುಗಳು. ಈ ಕುಟುಂಬದ ಜಮೆಲ್ಲ ಮತ್ತು ವೈಲೊನೆಲ್ಲ ಜಾತಿಯ ಬ್ಯಾಕ್ಟೀರಿಯಗಳು ಮನುಷ್ಯ ಮತ್ತು ಪ್ರಾಣಿಗಳಲ್ಲಿ ವಾಸಿಸುತ್ತವೆ. ಇವು ಕೊಳೆತಿನಿಗಳು (ಮೃತೋಪಜೀವಿಗಳು ಅಥವಾ ಸ್ಯಾಪ್ರೊಫೈಟ್ಸ್). ನೈಸೀರಿಯ ಜಾತಿಯಲ್ಲಿ ಎರಡು ಪ್ರಭೇದಗಳಿವೆ: ನೈ. ಗಾನೇರಿಯೆ, ನೈ. ಮೆನಿಂಜೈಟಿಡಿಸ್. ಇವುಗಳ ಸಾಮಾನ್ಯ ಹೆಸರು ಗಾನೊಕಾಕಸ್ ಮತ್ತು ಮೆನಿಂಗೊಕಾಕಸ್. ಇವು ಗೋಳಾಕಾರವಾಗಿ (ಕಾಕೈ) ಮತ್ತು ಜೊತೆಯಾಗಿ (ಡಿಪ್ಲಾ) ಇರುವುದರಿಂ 'ಡಿಪ್ಲೊಕಾಕೈ' ಎಂಬ ಹೆಸರಿದೆ.

ಜಮೆಲ್ಲ ಜಾತಿಯ ಬ್ಯಾಕ್ಟೀರಿಯವನ್ನು ಮೊದಲಿಗೆ ನೈಸೀರಿಯದೊಡನೆ ವರ್ಗೀಕರಿಸಿ, ನೈ. ಹಿಮೊಲೈಸಾನ್ಸ್ ಎಂದು ಹೆಸರಿಟ್ಟಿದ್ದರು. ಜಮೆಲ್ಲ ಉಪದ್ರವಕಾರಿಯಲ್ಲದ ಜೀವಿ. ಇದು ಮನುಷ್ಯನ ಗಂಟಲಿನಲ್ಲಿ ವಾಸಿಸುತ್ತದೆ. ಜೀವರಸಾಯನ ಕ್ರಿಯಾವಿಧಾನಗಳಲ್ಲಿ ಈ ಜೀವಿಗೂ, ನೈಸೀರಿಯಾ ಜೀವಿಗಳಿಗೂ ವ್ಯತ್ಯಾಸವಿರುವುದರಿಂದ ಇದನ್ನು ಬೇರೆ ಜಾತಿಯ ಸೂಕ್ಷ್ಮಜೀವಿ ಎಂದು ಗುರುತಿಸಲಾಗಿದೆ.

ವೈಲೊನೆಲ್ಲ ಜಾತಿಯ ಬ್ಯಾಕ್ಟೀರಿಯಗಳು ಚಿಕ್ಕ ಜೋಡಿ ಜೀವಿಗಳು. ಇವು ಇತರ ಡಿಪ್ಲೊಕಾಕೈಗಳಿಗಿಂತ ವಿಭಿನ್ನವಾಗಿವೆ. ಇವು ಆಮ್ಲಜನಕರಹಿತ (ಅನೇರೋಬಿಕ್) ವಾತಾವರಣದಲ್ಲಿ ಉಸಿರಾಟವನ್ನು ಮಾಡಬಲ್ಲುವು. ಇವು ಮನುಷ್ಯ ಹಾಗೂ ಪ್ರಾಣಿಗಳ ಬಾಯಿ, ಕರುಳು ಮತ್ತು ಶುದ್ಧೀಕರಣಾಂಗಗಳ ಮತ್ತು ಜನನೇಂದ್ರಿಯಗಳ ನಾಳಗಳಲ್ಲಿ ವಾಸಿಸುತ್ತವೆ. ಈ ಜಾತಿಯ ಸು. 30 ಪ್ರಭೇದಗಳನ್ನು ಗುರುತಿಸಿ, ವಿವರಿಸಲಾಗಿದೆ. ಇವುಗಳ ಬಾಹ್ಯ ಲಕ್ಷಣಗಳಲ್ಲಿ ಶರೀರ ಕ್ರಿಯಾವಿಧಾನ ಲಕ್ಷಣಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಉಪಯೋಗಿಸಿದ ಪ್ರತಿಯೊಂದು ಪೌಷ್ಟಿಕ ಮಾಧ್ಯಮದಲ್ಲಿ ಈ ಗುಣಲಕ್ಷಣಗಳು ವ್ಯತ್ಯಾಸಗೊಳ್ಳುವುದರಿಂದ ಈ ಜಾತಿಯಲ್ಲಿ ನಿಖರವಾಗಿ ಎಷ್ಟು ಪ್ರಭೇದಗಳಿವೆ ಎಂದು ಹೇಳುವುದು ಕಷ್ಟ.

ನೈಸೀರಿಯ ಜಾತಿಗೆ ಸೇರಿದ ಎಲ್ಲಾ ಬ್ಯಾಕ್ಟೀರಿಯಗಳು ಪೂರ್ಣ ಪರತಂತ್ರ ಜೀವಿಗಳು. ಮನುಷ್ಯ ಮತ್ತು ಪ್ರಾಣಿಗಳು ಇವುಗಳ ಆಶ್ರಯದಾತ ಜೀವಿಗಳು. ಇವು ವಾಯುಶ್ವಸನ (ಏರೋಬಿಕ್) ಉಸಿರಾಟವನ್ನು ನಡೆಸುತ್ತವೆ. ಕೆಲವು ಬಾರಿ ಸನ್ನಿವೇಶಕ್ಕೆ ಅನುಗುಣವಾಗಿ ಅವಾಯುಶ್ವಸನ ಉಸಿರಾಟವನ್ನೂ ಮಾಡುತ್ತವೆ. ಇವುಗಳ ಬೆಳವಣಿಗೆ ಸಾಮಾನ್ಯ ಆಹಾರವಸ್ತುಗಳಿರುವ ಕೃಷಿ ತಟ್ಟೆಗಳಲ್ಲಿ ಸಾಧ್ಯವಿಲ್ಲ. ಸಾಧಾರಣವಾಗಿ ಇವುಗಳ ಎಲ್ಲಾ ಪ್ರಭೇದಗಳಿಗೂ ಆಕ್ಸಿಡೇಸ್ ಧನಾತ್ಮಕ ಮತ್ತು ಇಂಡೋಲ್ ಋಣಾತ್ಮಕ ಗುಣಗಳಿವೆ. ಇವುಗಳಲ್ಲಿ ಉಪದ್ರವಕಾರಿಗಳಲ್ಲದ ಪ್ರಭೇದಗಳಿವು. ಒಂದು ರೀತಿಯ ಹಳದಿ ಬಣ್ಣದ ವರ್ಣದ್ರವ್ಯವನ್ನು (ಪಿಗ್ಮೆಂಟ್) ಉತ್ಪಾದಿಸುತ್ತವೆ. ಸ್ವಾಭಾವಿಕವಾಗಿ ಸಕ್ಕರೆಯ ಹುದುಗುಕ್ರಿಯೆಯ (ಫರ್ಮೆಂಟೇಷನ್) ಆಧಾರದ ಮೇಲೆ ಇವುಗಳ ವಿವಿಧ ಬಗೆಗಳನ್ನು ವರ್ಗೀಕರಿಸಲಾಗಿದೆ. ಮನುಷ್ಯನಿಂದ ಬೇರ್ಪಡಿಸಿದ ಕೆಲವು ಮುಖ್ಯ ಪ್ರಭೇದಗಳು ನಿರ್ದಿಷ್ಟ ರೀತಿಯ ಹುದುಗು ಕ್ರಿಯಾ ವಿಧಾನಗಳನ್ನು ತೋರಿಸುತ್ತವೆ. ಗಾನೊಕಾಕಸುಗಳು ಕೇವಲ ಗ್ಲೂಕೋಸನ್ನು ಮಾತ್ರ ಹುದುಗಿಸಿದರೆ ಮೆನಿಂಗೋಕಾಕಸುಗಳು ಗ್ಲೂಕೋಸು ಮತ್ತು ಮಾಲ್ಟೋಸುಗಳೆರಡನ್ನು ಹುದುಗಿಸುವುವು. ನೈಸೀರಿಯ ಕ್ಯಟರಾಲಿಸ್ ಗ್ಲೂಕೋಸನ್ನಾಗಲಿ ಅಥವಾ ಮಾಲ್ಟೋಸನ್ನಾಗಲಿ ಹುದುಗಿಸಲಾರದು.

ಹೊಸ ಸ್ರಾವಕಗಳಲ್ಲಿ ದೊರೆಯುವ ಈ ಬ್ಯಾಕ್ಟೀರಿಯಗಳಲ್ಲಿ ಮಾದರಿ ಡಿಪ್ಲೊಕಾಕೈನಲ್ಲಿರುವ ಜೋಡಿ ರಚನೆಯನ್ನು ಚಪ್ಪಟೆಯಾದ ಅಥವಾ ಸ್ವಲ್ಪ ಒಳಬಾಗುಳ್ಳ (ಕಾನ್‌ಕೇವ್) ಅಂಚುಗಳುಳ್ಳ ಬಾಹ್ಯಲಕ್ಷಣಗಳನ್ನು ಗ್ರಾಮ್ ವರ್ಣೀಕರಿಸಿದ ಒರಸುಗಳಲ್ಲಿ (ಸ್ಮಿಯರ್ಸ್) ಕಾಣಬಹುದು. ಆದರೆ ಈ ರೀತಿಯ ರಚನೆಗಳು ಸಾಮಾನ್ಯವಾಗಿ ಕೃಷಿಮಾಡಿದ ಬ್ಯಾಕ್ಟೀರಿಯಗಳಲ್ಲಿ ಇಲ್ಲ. ಆದರೆ, ಇಲ್ಲಿ ಇವು ಜೊತೆಯಾಗಿ ಅಥವಾ ನಾಲ್ಕರ ಗುಂಪುಗಳಂತೆ ಅಥವಾ ಅಂಡಾಕಾರದ ಅಥವಾ ದುಂಡಗಿರುವ ಗುಂಪುಗಳಂತೆ ಕಂಡುಬರುತ್ತವೆ.

ಗಾನೊಕಾಕಸ್ ಬಿಟ್ಟು ಇನ್ನುಳಿದ ನೈಸೀರಿಯಗಳು ಮೂಗು ಮತ್ತು ಗಂಟಲಿನಲ್ಲಿ ವಾಸಿಸುತ್ತವೆ. ನೈಸೀರಿಯ ಕ್ಯಾವಿಯೆ ಮತ್ತು ನೈ. ಅನಿಮ್ಯಾಲಿಸ್ ಪ್ರಭೇದಗಳನ್ನು ಗಿನಿಹಂದಿಯಿಂದ ಬೇರ್ಪಡಿಸಲಾಗಿದೆ. ನೈ. ಓವಿಸ್ ಕೆರಾಟೋಕಂಜಂಕ್ಟೈವೈಟಿಸ್ ರೋಗದಿಂದ ನರಳುವ ಕುರಿಗಳ ಕಣ್ಣಿನಿಂದ ಪ್ರತ್ಯೇಕಿಸಲಾಗಿದೆ. ನೈ. ಕ್ಯಾಟರ್‍ಯಾಲಿಸ್, ನೈ. ಫ್ಲಾವೆಸೆನ್ಸ್ ಮತ್ತು ನೈ. ಸಬ್‌ಫ್ಲಾವಗಳನ್ನು, ಮೆನಿಂಜೈಟಿಸ್ ರೋಗಿಯ ಮಿದುಳುಬಳ್ಳಿಯ ರಸದಿಂದ ಪ್ರತ್ಯೇಕಿಸಲಾಗಿದೆ. ಆದರೆ, ಇವುಗಳ ಇರುವಿಕೆ ಬಹಳ ಅಪರೂಪ.

ನೈಸೀರಿಯ ಜಾತಿಯಲ್ಲಿ ಪ್ರಥಮವಾಗಿ ಕಂಡುಹಿಡಿದ ಜೀವಿ ಗಾನೊಕಾಕಸ್. ಆಲ್ಬರ್ಟ್ ನೈಸರ್ ವಿಜ್ಞಾನಿ (1879) ಗಾನರೀಯ ರೋಗಿಗಳಿಂದ ಗಾನೊಕಾಕೈಗಳನ್ನು ಪ್ರಥಮವಾಗಿ ಪ್ರತ್ಯೇಕಿಸಿದ. ಈ ಬ್ಯಾಕ್ಟೀರಿಯ ಆಫ್ತಾಲ್ಮಿಯ ನಿಯೋನೆಟೋರಮ್ ರೋಗವನ್ನು ಉಂಟುಮಾಡುತ್ತದೆ. ಆ್ಯಂಟನ್ ವೀಶಲ್ ಬಾಮ್ ವಿಜ್ಞಾನಿ (1887) ಮೆನಿಂಜೈಟಿಸ್ ರೋಗಿಗಳ ಮಿದುಳುಬಳ್ಳಿ ರಸದಿಂದ ಮೆನಿಂಗೋಕಾಕಸ್ ಬ್ಯಾಕ್ಟೀರಿಯಗಳನ್ನು ಪ್ರತ್ಯೇಕಿಸಿದ.

ನೈಸೀರಿಯ ಮೆನಿಂಜೈಟಿಡಿಸ್ ಬ್ಯಾಕ್ಟೀರಿಯ ಕೇವಲ ಮನುಷ್ಯನಲ್ಲಿ ಮಾತ್ರ ಜೀವಿಸುತ್ತದೆ. ಶೇ. 5ರಷ್ಟು ಜನರಲ್ಲಿ ಇವು ಮೂಗು ಮತ್ತು ಗಂಟಲಿನಲ್ಲಿವೆ. ಮೆನಿಂಗೊಕಾಕಸ್ ಆಗಾಗ ಸಾಂಕ್ರಾಮಿಕ ಮೆನಿಂಜೈಟಿಸ್ ರೋಗವನ್ನು ಉಂಟುಮಾಡುತ್ತದೆ. ಇದು ಬಹುಮಟ್ಟಿಗೆ ನಿರ್ಬಂಧಿತ ಜನಸಂದಣಿಗಳಲ್ಲಿ ಕಂಡುಬರುತ್ತದೆ. ಉದಾ: ಸೈನಿಕ ಶಿಬಿರಗಳಲ್ಲಿ ಇಂಥ ತೀವ್ರತರವಾದ ರೋಗ ಶೀಘ್ರವಾಗಿ ಹರಡುತ್ತದೆ. ಮೆನಿಂಗೊಕಾಕೈನಲ್ಲಿ 4 ಬಗೆಯ ಆ್ಯಂಟಿಜೆನಿಕ್ ಗುಣಲಕ್ಷಣಗಳುಳ್ಳ ಪ್ರಭೇದಗಳನ್ನು ಗುರುತಿಸಲಾಗಿದೆ. ಇವುಗಳಿಗೆ 'ಎ', 'ಬಿ', 'ಸಿ'ಮತ್ತು 'ಡಿ' ಗಳೆಂದು ಹೆಸರು. ಸಾಂಕ್ರಾಮಿಕ ರೋಗಗಳಲ್ಲಿ ಸಾಮಾನ್ಯವಾಗಿ 'ಬಿ' ಬಗೆಯ ಮೆನಿಂಗೊಕಾಕೈಗಳಿವೆ. ಈ ಮುಂಚೆ ನಿರುಪದ್ರವಿಗಳಾಗಿಯೇ ಇದ್ದ ಜೀವಿಗಳು ಬಹುಶಃ ಉಸಿರಾಡುವ ಹಾದಿಯ ದುಗ್ಧನಾಳಗಳಿಗೆ ಪ್ರವೇಶಿಸಿ ಅಲ್ಲಿ ಬ್ಯಾಕ್ಟೀರಿಮಿಯವನ್ನು ಉಂಟುಮಾಡುತ್ತವೆ. ಅನಂತರ ಅವುಗಳಿಗೆ ಉಪದ್ರವಕಾರಕಶಕ್ತಿ ಬಂದು ಅವು ದಾಳಿಯನ್ನು ಪ್ರಾರಂಭಿಸುತ್ತವೆ. ಜೀವಿಗಳು ರೋಗಿಯ ಮೆನಿಂಜಸ್, ಚರ್ಮ, ಕೀಲುಗಳು, ಕಣ್ಣು ಮತ್ತು ಇತರ ಅಂಗಗಳಲ್ಲಿ ಆಶ್ರಯ ಪಡೆಯುತ್ತವೆ. ಈ ರೋಗಗಳಲ್ಲಿ ತೀವ್ರತರವಾದ ತಲೆನೋವು, ಜ್ವರ, ಚಳಿ, ಮೈಕೈನೋವು ಕಂಡುಬರುತ್ತವೆ. ಇದರಿಂದ ರೋಗಿಯ ಮೇಲೆ ತೀವ್ರವಾದ ಆಘಾತವಾಗುವುದು. ಚರ್ಮದ ರಕ್ತನಾಳಗಳಲ್ಲಿ ವಾಸಿಸುವ ಈ ಬ್ಯಾಕ್ಟೀರಿಯಗಳಿಂದ ರಕ್ತಕರಣೆ, ರಕ್ತೋದ್ರೇಕ, ಚರ್ಮದಲ್ಲಿ ಬೊಕ್ಕೆಗಳಂಥ ರಚನೆಗಳು ಹುಟ್ಟಿಕೊಳ್ಳುತ್ತವೆ.

ಜೀವಿಪ್ರತಿರೋಧಕಗಳ ಸಂಶೋಧನೆ ಮತ್ತು ಬಳಕೆಯಿಂದ ಇವುಗಳ ಹಾವಳಿ ಕಡಿಮೆಯಾಗಿದೆ. ಮೆನಿಂಗೊಕಾಕೈಗಳಿಂದಾದ ರೋಗಗಳಿಗೆ ಸಲ್ಫೊನಮೈಡುಗಳು ಮತ್ತು ಪೆನ್ಸಿಲಿನುಗಳಿಂದ ಚಿಕಿತ್ಸೆ ಮಾಡಲಾಗುತ್ತಿತ್ತು. ಆದರೆ ಇತ್ತೀಚೆಗೆ, ಬಹಳ ಮೆನಿಂಗೊಕಾಕೈಗಳು ಪೂರ್ಣವಾಗಿ ಸಲ್ಫೊನಮೈಡುಗಳನ್ನು ನಿರೋಧಿಸಬಲ್ಲ ಸಾಮರ್ಥ್ಯವನ್ನು ಗಳಿಸಿವೆ. ಇವನ್ನು ಕೊಲ್ಲಲು ಪೆನಿಸಿಲಿನ್ ಹೆಚ್ಚು ಬೇಕು. ಬೇರೆ ಜೀವಿಪ್ರತಿರೋಧಕಗಳನ್ನು ಚಿಕಿತ್ಸೆಗೆ ಉಪಯೋಗಿಸಬೇಕು. (ಎನ್.ವಿ.ಎ.)

**ಗ್ರೀಬ್:** ಪೋಡಿಸಿಫಾರ್ಮಿಸ್ ಗಣದ ಪೋಡಿಸಿಪೆಡಿಡೆ ಕುಟುಂಬಕ್ಕೆ ಸೇರಿದ 4 ಜಾತಿಯ ಜಲವಾಸಿ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು. ಪ್ರಪಂಚಾದ್ಯಂತ ವ್ಯಾಪಿಸಿದೆ. ಈ ಹಕ್ಕಿಗಳ ವಾಸ ಜೊಂಡು ಮುಂತಾದ ಸಸ್ಯಗಳಿರುವ ಸಿಹಿನೀರಿನ ಕೊಳ, ಕೆರೆ, ಸರೋವರಗಳಲ್ಲಿ. ಜಲಚರ ಹಕ್ಕಿಗಳಲ್ಲಿ ಇವುಗಳನ್ನು ವಿಕಾಸದ ದೃಷ್ಟಿಯಿಂದ ಬಹಳ ಹಿಂದುಳಿದುವು ಎಂದು ಪರಿಗಣಿಸಲಾಗಿದೆ. ಇವುಗಳ ಗಾತ್ರ ಹೆಚ್ಚುಕಡಿಮೆ ಪಾರಿವಾಳದಷ್ಟು. ತಮ್ಮ ನುಣ್ಣನೆ ಹೊಳೆಯುವ ದೇಹ, ಉದ್ದವಾದ ತೆಳುವಾದ ಕತ್ತು ಹಾಗೂ ಮೋಟಾದ ಮತ್ತು ಚೂಪಾದ ಕೊಕ್ಕಿನಿಂದಾಗಿ ಇವು ಇತರ ಜಲವಾಸಿ ಹಕ್ಕಿಗಳಿಂದ ಭಿನ್ನವಾಗಿವೆ. ಗ್ರೀಬ್‌ಗಳ ಮೈಮೇಲೆ ಬಲು ಮೃದುವಾದ ಮತ್ತು ಹೊಳೆಯುವ ಗರಿಗಳ ದಪ್ಪ ಹೊದಿಕೆಯಿದೆ. ಕೆಲವು ಪ್ರಭೇದಗಳಲ್ಲಿ ತಲೆಯ ಆಚೀಚೆ ಇಲ್ಲವೆ ಕತ್ತಿನ ಬಳಿ ಉದ್ದನೆಯ ಗರಿಗಳ '**ಕೊಂಬು**', '**ಕುಚ್ಚು**' ಇಲ್ಲವೆ '**ಕೊರಳಪಟ್ಟಿ**'ಗಳಿವೆ. ಇವುಗಳಲ್ಲಿ ಬಾಲವೇ ಇಲ್ಲ. ಅಪರೂಪಕ್ಕೆ ಒಂದೆರಡು ಬಾಲದ ಗರಿಗಳಿರಬಹುದು. ಇದರಿಂದಾಗಿ ಗ್ರೀಬ್‌ಗಳು ಈಜುವಾಗ ಮತ್ತು ಹಾರುವಾಗ ದಿಕ್ಕನ್ನು ಬದಲಿಸಲು ತಮ್ಮ ಪಾದಗಳನ್ನು ಬಳಸುತ್ತವೆ. ಗ್ರೀಬ್‌ಗಳ ಇನ್ನೊಂದು ಸ್ವಾರಸ್ಯಕರ ಲಕ್ಷಣ ಇವುಗಳ ಪಾದಗಳು. ಬೇರೆ ರೀತಿಯ ಜಲವಾಸಿ ಪಕ್ಷಿಗಳಲ್ಲಿ ಕಾಲ್ಬೆರಳು ಒಂದು ರೀತಿಯ ಚರ್ಮಿಲ ಪೊರೆಯಿಂದ ಕೂಡಿಕೊಂಡಿದ್ದು ಜಾಲಪಾದವಾಗಿದ್ದರೆ ಗ್ರೀಬ್‌ಗಳಲ್ಲಿ ಪ್ರತಿ ಕಾಲ್ಬೆರಳಿನ ಅಕ್ಕಪಕ್ಕಗಳಲ್ಲಿ ಕೊಂಬಿನಂಥ ವಸ್ತುವಿನಿಂದ ಕೂಡಿದ ಮಡಿಪುಗಳಿವೆ. ಈ ಲಕ್ಷಣಕ್ಕೆ ಹಾಲೆಯುಳ್ಳ ಜಾಲ ವಿನ್ಯಾಸ (ಲೋಬ್ಡ್ ವೆಬಿಂಗ್) ಎಂದು ಹೆಸರು. ಗ್ರೀಬ್‌ಗಳ ರೆಕ್ಕೆಗಳು ಬಲು ಚಿಕ್ಕವು. ಇದರಿಂದಾಗಿ ಇವು ಚೆನ್ನಾಗಿ ಹಾರಲಾರವು. ಹಾರುವಾಗ ರೆಕ್ಕೆಗಳನ್ನು ಪಟಪಟನೆ ವೇಗಗತಿಯಿಂದ ಬಡಿದು ಸದ್ದುಮಾಡುತ್ತ ಚಲಿಸುತ್ತವೆ. ನೀರನ್ನು ಬಿಟ್ಟು ಮೇಲಕ್ಕೆ ಹಾರುವುದೂ ಇವಕ್ಕೆ ಬಹಳ ಕಷ್ಟ. ಆದ್ದರಿಂದ ಇವು ಅಪಾಯದಿಂದ ತಪ್ಪಿಸಿಕೊಳ್ಳುವಾಗ ಹಾರುವುದಕ್ಕಿಂತ ನೀರಿನಲ್ಲಿ ಮುಳುಗುವುದೇ ಹೆಚ್ಚು.



ಗ್ರೀಬ್

ಸಣ್ಣಪುಟ್ಟ ಮೀನು, ಕೀಟಗಳ ಲಾರ್ವಗಳು, ಕ್ರಸ್ಟೇಷಿಯ ಪ್ರಾಣಿಗಳು – ಇವು ಪ್ರಧಾನ ಆಹಾರ. ಆಹಾರವನ್ನು ಹಿಡಿಯಲು ನೀರಿನಲ್ಲಿ 4.5 ಮೀ ಗಳಿಗೂ ಹೆಚ್ಚು ಆಳಕ್ಕೆ ಮುಳುಗಬಲ್ಲುವಲ್ಲದೆ ನೀರಿನೊಳಗೆ 30 ಸೆಕೆಂಡಿಗೂ ಹೆಚ್ಚು ಕಾಲ ಇರಬಲ್ಲುವು.

ಇವುಗಳ ಅತ್ಯಂತ ವಿಚಿತ್ರ ಗುಣವೆಂದರೆ ಸ್ವಂತ ಗರಿಗಳನ್ನೇ ತಿನ್ನುವುದು. ಪ್ರತಿಯೊಂದು ಹಕ್ಕಿಯ ಹೊಟ್ಟೆಯಲ್ಲೂ ಇಂಥ ಗರಿಗಳ ಮುದ್ದೆಯನ್ನು ಕಾಣಬಹುದು. ಕೆಲವೇ ದಿವಸ ವಯಸ್ಸಾದ ಮರಿಹಕ್ಕಿಗಳ ಹೊಟ್ಟೆಯಲ್ಲೂ ಅವುಗಳ ತಂದೆತಾಯಿಗಳ ಗರಿಗಳಿರುವುದು ಕಂಡುಬಂದಿದೆ. ಈ ಗುಣಕ್ಕೆ ಖಚಿತ ಕಾರಣ ಗೊತ್ತಿಲ್ಲ. ಗ್ರೀಬ್‌ಗಳು ನೀರಿನಲ್ಲಿ ಈಜುವಾಗ ದೇಹದ ಅರ್ಧಭಾಗವನ್ನು ಮುಳುಗಿಸಿಕೊಂಡು ಬಿರಟೆ ತೇಲುತ್ತವೆ. ಆದರೆ ಅಪಾಯದ ಸುಳಿವು ಕಂಡು ಬಂದರೆ ಕಣ್ಣು ಮತ್ತು ಕೊಕ್ಕು ಮಾತ್ರ ನೀರಿನ ಮೇಲಿರುವಂತೆ ನಿಧಾನವಾಗಿ ಮತ್ತು ನಿಶ್ಯಬ್ದವಾಗಿ ಮುಳುಗಿ ಮರೆಯಾಗುತ್ತವೆ. ಬೇಟೆಗಾರರು ಬಂದೂಕು ಹಾರಿಸಿದಾಗ ಬಂದೂಕಿನ ಬೆಳಕು ಕಂಡ ಕ್ಷಣದಲ್ಲೇ ಮಿಂಚಿನಂತೆ ನೀರಿನೊಳಕ್ಕೆ ಮುಳುಗಿ ಗುಂಡಿನಿಂದ ತಪ್ಪಿಸಿಕೊಳ್ಳುವ ಚುರುಕತನವೂ ಗ್ರೀಬ್‌ಗಳಿಗಿದೆ. ಕಹಳೆ ಊದಿದಂತೆ, ಸಿಳ್ಳು ಹಾಕಿದಂತೆ, ಕೆಲವು ಸಲ ಕೆನೆಯುವಂತೆ, ಕಪ್ಪೆಗಳ ವಟಗುಟ್ಟುವಿಕೆಯಂತೆ ಹಲವಾರು ಬಗೆಗಳಲ್ಲಿ ಇವು ಸದ್ದನ್ನು ಮಾಡಬಲ್ಲವಾದರೂ ಸಾಮಾನ್ಯವಾಗಿ ನಿಶ್ಯಬ್ದವಾಗಿರುವುದೇ ಹೆಚ್ಚು. ಗ್ರೀಬ್‌ಗಳು ತಮ್ಮ ವಿಶಿಷ್ಟರೀತಿಯ ಪ್ರಣಯಾಚರಣೆಗೆ ಹೆಸರುವಾಸಿಯಾಗಿವೆ. ಗಂಡು ಹೆಣ್ಣುಗಳೆರಡೂ ತಮ್ಮ ಕುಚ್ಚು ಇಲ್ಲವೆ ಕೊಂಬುಗಳನ್ನು ವಿಸ್ತರಿಸಿಕೊಂಡು ವಿಚಿತ್ರ ಭಂಗಿಗಳಲ್ಲಿ ಹಲವಾರು ಗಂಟೆಗಳ ಕಾಲ ನರ್ತಿಸುತ್ತ ಒಂದನ್ನೊಂದು ಸುತ್ತುವರಿದು ಆಕರ್ಷಿಸುತ್ತವೆ. ಅಲ್ಲದೆ ಜೊಂಡು ಮುಂತಾದ ಜಲಸಸ್ಯಗಳನ್ನು ಸಂಗ್ರಹಿಸಿ ಹೆಣೆದು ಒರಟೊರಟಾದ ತೇಲುಗೂಡನ್ನು ನಿರ್ಮಿಸುತ್ತವೆ. ಗೂಡು ಬಲುದೂರ ಚಲಿಸಿಹೋಗುದಂತೆ ಕೆಲವು ಸಲ ಜೊಂಡಿಗೆ ಕಟ್ಟಿಹಾಕುವುದೂ ಉಂಟು. ಗೂಡುಗಳ ನಿರ್ಮಾಣ ಮುಗಿದ ಮೇಲೆ ಹೆಣ್ಣು 3–10 ಮೊಟ್ಟೆಗಳನ್ನಿಡುತ್ತದೆ. ಗಂಡುಹೆಣ್ಣುಗಳೆರಡೂ ಗೂಡಿನ ಬಳಿಯೇ ಇದ್ದು ಮೊಟ್ಟೆಗಳನ್ನು ಕಾಯುತ್ತವೆ. ಆಹಾರಕ್ಕಾಗಿ ಬೇರೆಡೆಗೆ ಹೋಗಬೇಕಾದಾಗ ಮೊಟ್ಟೆಗಳನ್ನು ಕಡ್ಡಿ, ಜಲಸಸ್ಯ ಮುಂತಾದುವುಗಳಿಂದ ಮುಚ್ಚಿ ಮರೆಮಾಡುವುದುಂಟು. 20–30 ದಿವಸಗಳ ಅನಂತರ ಮೊಟ್ಟೆಗಳೊಡೆದು ಮರಿಗಳು ಹೊರಬರುತ್ತವೆ. ಮರಿಗಳ ಪಾಲನೆ ಗಂಡು ಮತ್ತು ಹೆಣ್ಣುಹಕ್ಕಿಗಳೆರಡಕ್ಕೂ ಸೇರಿದ್ದು. ಆಹಾರಾನ್ವೇಷಣೆಯಲ್ಲಿ ತೊಡಗಿದಾಗ ಮರಿಗಳನ್ನು ತಮ್ಮ ಬೆನ್ನ ಮೇಲೆ ಕೂರಿಸಿಕೊಂಡು ತಿರುಗಾಡುತ್ತವೆ. ಕೆಲವು ಸಲ ರೆಕ್ಕೆಗಳ ಕೆಳಗೆ ಅಡಗಿಸಿಕೊಳ್ಳುವುದೂ ಉಂಟು. ಅಪಾಯವೊದಗಿದಾಗ ಮರಿಗಳ ಸಹಿತವಾಗಿ ನೀರಿನಲ್ಲಿ ಮುಳುಗಿಬಿಡುತ್ತವೆ. ಹಲವಾರು ವಾರಗಳ ಅನಂತರ ಮರಿಗಳು ಸ್ವತಂತ್ರ ಜೀವನ ನಡೆಸಲು ಆರಂಭಿಸುತ್ತವೆ.

ಗ್ರೀಬ್‌ಗಳನ್ನು ಅವುಗಳ ಮೃದುವಾದ ಗರಿಗಳಿಗಾಗಿ, ಮಾಂಸಕ್ಕಾಗಿ ಹಿಂದೆ ಬೇಟೆಯಾಡುವುದಿತ್ತು. ಆದರೆ ಈಗ ಗರಿಗಳಿಗೆ ಬೇಡಿಕೆ ಕಡಿಮೆಯಾಗಿರುವುದರಿಂದ ಇವುಗಳ ಬೇಟೆ ನಿಂತಿದೆ.

ಗ್ರೀಬ್ ಪ್ರಭೇದಗಳಲ್ಲಿ ಮುಖ್ಯವಾದುವು ಇವು: 1. ಪಾಡಿಸೆಪ್ಸ್ ಕ್ರಿಸ್ಟೇಟಸ್ (ಗ್ರೇಟ್ ಕ್ರೆಸ್ಟೆಡ್ ಗ್ರೀಬ್)– ಆಸ್ಟ್ರೇಲಿಯ, ನ್ಯೂಜೀಲೆಂಡ್ ಮತ್ತು ಆಫ್ರಿಕಗಳಲ್ಲಿ ಕಾಣಬರುತ್ತದೆ. 2. ಪಾಡಿಸೆಪ್ಸ್ ಗ್ರಿಸೆಗೀನ (ರೆಡ್ ನೆಕ್ಡ್ ಗ್ರೀಬ್) – ಉತ್ತರ ಅಮೆರಿಕದಲ್ಲಿರುವಂಥದು. 3. ಪಾಡಿಸೆಪ್ಸ್ ಆರಿಟಸ್ (ಹಾರ್ನ್ಡ್ ಗ್ರೀಬ್) –ಯೂರೇಷಿಯ, ಉತ್ತರ ಅಮೆರಿಕದಲ್ಲಿ ವಾಸಿಸುತ್ತದೆ. 4. ಪಾಡಿಸೆಪ್ಸ್ ರೂಫಿಕಾಲಿಸ್ (ಲಿಟ್ಲ್ ಗ್ರೀಬ್, ಡಾಬ್‌ಚಿಕ್) – ಆಫ್ರಿಕ, ಯೂರೋಪ್, ಈಸ್ಟ್ ಇಂಡೀಸ್, ಭಾರತ, ಶ್ರೀಲಂಕ, ಬರ್ಮಗಳಲ್ಲಿ ಕಾಣದೊರೆಯುತ್ತದೆ. 5. ಪಾಡಿಲಿಂಬಸ್ ಪಾಡಿಸೆಪ್ಸ್ (ಪೈಡ್ – ಬಿಲ್ಡ್ ಗ್ರೀಬ್) – ಕೆನಡದಿಂದ ಹಿಡಿದು ಅರ್ಜಂಟೀನವರೆಗಿನ ಪ್ರದೇಶಗಳಲ್ಲಿ ಕಾಣಬರುತ್ತದೆ. 6. ಈಕ್ಮೋಫೋರಸ್ ಆಕ್ಸಿಡೆಂಟ್ಯಾಲಿಸ್ (ವೆಸ್ಟರ್ನ್ ಗ್ರೀಬ್) – ಅಮೆರಿಕದ ಮೂಲವಾಸಿ. (ಎನ್.ವಿ.ಎ.)

**ಗ್ರೀಷ್ಮನಿದ್ರೆ:** ಪರಿಸರದ ಅತಿ ಉಷ್ಣತೆ ಮತ್ತು ಬರ ಪರಿಸ್ಥಿತಿಗಳಲ್ಲಿ ಕೆಲವು ಅಸಮತಾಪಿಗಳು ತಮ್ಮ ದೇಹದ ತಾಪಮಾನವನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿ ನಿಯಂತ್ರಿಸಲಿಕ್ಕಾಗದೆ ಜಡತೆ ಪ್ರದರ್ಶಿಸುವ ಸ್ಥಿತಿ (ಈಸ್ಟಿವೇಶನ್). ಹೆಚ್ಚಿನ ಸಂಖ್ಯೆಯ ಸಮತಾಪಿಗಳು ಪರಿಸರದ ತಾಪಮಾನದಲ್ಲಿ ಬದಲಾವಣೆಗಳಾದರೂ ತಮ್ಮ ದೇಹದ ತಾಪಮಾನವನ್ನು ನಿರ್ದಿಷ್ಟ ಮಟ್ಟದಲ್ಲಿ ನಿಯಂತ್ರಿಸುತ್ತವೆ. ಆದರೇ ಕೆಲವು ಸಮತಾಪಿಗಳು ಅತಿಯಾದ ಬೇಸಿಗೆ, ಬರ, ಆಹಾರ ಲಭ್ಯತೆಯ ಕೊರತೆಯಂಥ ಪರಿಸ್ಥಿತಿಗಳಲ್ಲಿ, ಶಕ್ತಿಯನ್ನು ವ್ಯಯಿಸಿ ದೇಹದ ತಾಪಮಾನ ಕಾಯ್ದುಕೊಳ್ಳಲು ಪ್ರಯತ್ನಿಸದೇ, ಉತ್ತಮ ಪರಿಸ್ಥಿತಿ ಮರಳುವವರೆಗೆ ಜಡಸ್ಥಿತಿಯಲ್ಲಿದ್ದು, ಸಾಮಾನ್ಯ ಸ್ಥಿತಿಗೆ ಹೋಲಿಸಿದರೆ ಅತಿ ಕಡಿಮೆ ಚಟುವಟಿಕೆಯಿಂದಿರುತ್ತವೆ. ಆದರೆ ಕೆಲವು ಪ್ರಭೇದಗಳಲ್ಲಿ ಇದು ಶಿಶಿರ ನಿದ್ರೆಯಷ್ಟು ತೀವ್ರವಾದ ದೀರ್ಘ ನಿದ್ರೆ ಇರದೆ, ಸ್ವಲ್ಪ ಮಟ್ಟಿನ ಚಟುವಟಿಕೆಗಳನ್ನು ತೋರಿಸುತ್ತವೆ. ಕೆಲವು ಪ್ರಾಣಿಗಳು ಈ ಸ್ಥಿತಿಯಲ್ಲಿ ಆಹಾರ ಸೇವಿಸಿ, ಸ್ವಲ್ಪ ಚಲನೆಯನ್ನು ತೋರಿಸಬಹುದು. ಶಿಶಿರನಿದ್ರೆಯಂತೆ ಈ ಸ್ಥಿತಿಯು ಕೂಡ ಚಿಕ್ಕ ಗಾತ್ರದ ಸಮತಾಪಿಗಳಲ್ಲೂ ಕಂಡುಬರುತ್ತದೆ. ಕೆಲವು ಪ್ರಭೇದಗಳು ಗ್ರೀಷ್ಮ ನಿದ್ರೆ ಹಾಗು ಶಿಶಿರನಿದ್ರೆ ಎರಡನ್ನು ತೋರಿಸಿ, ವಾತಾವರಣದ ಕಠಿಣ ಪರಿಸ್ಥಿತಿಗಳಲ್ಲಿ, ಜೀವಿಸುವ ಸಾಮರ್ಥ್ಯ ಪಡೆದಿವೆ. ಈ ಸ್ಥಿತಿ ಅಪರಿಪೂರ್ಣ ಉಷ್ಣತೆ ನಿಯಂತ್ರಣವಾಗಿರದೆ, ಶಕ್ತಿಯ ಮಿತವ್ಯಯ ಸಾಧಿಸಿ, ಕಠಿಣ ಪರಿಸರ ಪರಿಸ್ಥಿತಿಗಳಲ್ಲಿ ಕೂಡ ಬದುಕಿರುವ ಸಾಮರ್ಥ್ಯವನ್ನು ಕೊಟ್ಟಿರುವ ಹೊಂದಾಣಿಕೆಗಳಾಗಿವೆ. ಉದಾಹರಣೆಗಳು: ಸ್ತನಿ– ಅಳಿಲು, ಪಾಕೆಟ್ ಮೌಸ್ ಮುಂತಾದುವು. ಪಕ್ಷಿಗಳು–ಸ್ವಿಫ್ಟ್ಸ್. ಅಸಮತಾಪಿಗಳ ಕೆಲವು ಪ್ರಭೇದಗಳೂ ಕೂಡ ಪರಿಸರದ ಅತಿ ಉಷ್ಣತೆ ಅಥವಾ ಬರಪರಿಸ್ಥಿತಿಗಳಲ್ಲಿ ಬೇಸಿಗೆ ನಿದ್ರೆ (ಗ್ರೀಷ್ಮ ನಿದ್ರೆ) ಪ್ರದರ್ಶಿಸುತ್ತವೆ. (ಎಚ್.ಎನ್.ವೈ.)

**ಗ್ರೂ, ನೆಹೆಮಿಯ:** (1641–1712) ಇಂಗ್ಲೆಂಡಿನ ಪ್ರಖ್ಯಾತ ಅಂಗರಚನಾ ಮತ್ತು ಶರೀರವಿಜ್ಞಾನಿ. ಇಂಗ್ಲೆಂಡಿನ ವಾರ್‌ವಿಕ್‌ಷೈರ್ ಎಂಬಲ್ಲಿ ಸೆಪ್ಟಂಬರ್ 26, 1641 ರಂದು ಜನನ. 1661ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಪದವೀಧರನಾಗಿ 1671ರಲ್ಲಿ ಲೀಡನ್ ವಿಶ್ವವಿದ್ಯಾಲಯದ ಎಂಡಿ ಪದವಿ ಪಡೆದು ಕೊವೆಂಟ್ರಿಯಲ್ಲಿ ವೈದ್ಯಕೀಯ ವೃತ್ತಿಯನ್ನು ಆರಂಭಿಸಿದ. ಆದರೆ ಅಲ್ಲಿ ಹೆಚ್ಚು ಕಾಲ ಇರದೆ ಲಂಡನ್ನಿಗೆ ಹೋಗಿ ನೆಲೆಸಿದ. ಅಲ್ಲಿ

ರಾಯಲ್ ಸೊಸೈಟಿಯ ಸದಸ್ಯನಾಗಿ ಆಯ್ಕೆಗೊಂಡ. 1677ರಲ್ಲಿ ಈ ಸಂಘದ ಕಾರ್ಯದರ್ಶಿಯೂ ಆದ. ಸಂಘದ ಕೋರಿಕೆಯ ಮೇರೆ 1681ರಲ್ಲಿ ನೈಸರ್ಗಿಕ ಮತ್ತು ಅಪೂರ್ವವಸ್ತುಗಳ ಪಟ್ಟಿ ಹಾಗೂ ವಿವರಣೆಯನ್ನೊಳಗೊಂಡ (ಕ್ಯಾಟಲಾಗ್ ಅಂಡ್ ಡಿಸ್ಕ್ರಿಪ್ಷನ್ ಆಫ್ ನ್ಯಾಚುರಲ್ ಅಂಡ್ ಆರ್ಟಿಫಿಷಿಯಲ್ ರೇರಿಟೀಸ್) ಎಂಬ ಗ್ರಂಥವನ್ನು ಬರೆದ.

ಸಸ್ಯ ಅಂಗರಚನಾ ವಿಜ್ಞಾನದ ಸಹಸ್ಥಾಪಕನಾದ ಮಾಲ್ಪೀಗಿಯೊಂದಿಗೆ ಅವಿರತವಾಗಿ ದುಡಿದು ಅನಾಟಮಿ ಆಫ್ ವೆಜಿಟಬಲ್ಸ್ ಬಿಗುನ್ ಎಂಬ ಪುಸ್ತಕವನ್ನು 1672ರಲ್ಲಿ ಬರೆದ (ಅನಂತರ ಇದನ್ನು ಮಾಲ್ಪೀಗಿ ಲ್ಯಾಟಿನಿಗೆ ಭಾಷಾಂತರಿಸಿದ). ತುಲನಾತ್ಮಕ ಅಂಗರಚನಾವಿಜ್ಞಾನ (ಕಂಪ್ಯಾರಟಿವ್ ಅನಾಟಮಿ) ಎಂಬ ಪದವನ್ನು ಮೊಟ್ಟಮೊದಲಿಗೆ ಬಳಕೆಗೆ ತಂದವ ಈತ. ಕಂಪ್ಯಾರಟಿವ್ ಅನಾಟಮಿ ಆಫ್ ಟ್ರಂಕ್ಸ್ ಎಂಬ ಪುಸ್ತಕವನ್ನು 1675ರಲ್ಲಿಯೂ, ಕಂಪ್ಯಾರಟಿವ್ ಅನಾಟಮಿ ಆಫ್ ಸ್ಟಮಕ್ ಅಂಡ್ ಗಟ್ಸ್ ಎಂಬ ಹೊತ್ತಿಗೆಯನ್ನು 1681ರಲ್ಲಿಯೂ ಬರೆದು ಪ್ರಕಟಿಸಿದ. ಇದರಲ್ಲಿ ಸುಮಾರು 35 ಪ್ರಭೇದಗಳ ಅಂಗರಚನಾವಿವರಗಳು ಇವೆ. ಮರು ವರ್ಷ ಅಂದರೆ 1682ರಲ್ಲಿ ಸಸ್ಯಗಳ ಅಂಗರಚನಾವಿಜ್ಞಾನ (ಅನಾಟಮಿ ಆಫ್ ಪ್ಲಾಂಟ್ಸ್) ಎಂಬ ಗ್ರಂಥ ಪ್ರಕಟವಾಯಿತು.

ಗ್ರೂ ವಿಜ್ಞಾನಕ್ಕಿತ್ತ ಕೊಡುಗೆಯಲ್ಲಿ ಅತ್ಯಂತ ಗಮನಾರ್ಹವಾದ ವಿಷಯವೆಂದರೆ ಸಸ್ಯಗಳಲ್ಲಿ ಹೂಗಳೇ ಜನನೇಂದ್ರಿಯ ಭಾಗಗಳೆಂದು ಕಂಡುಹಿಡಿದುದು. ಹೂಗಳಲ್ಲಿ ಪುಷ್ಪಪಾತ್ರೆ, ಪುಷ್ಪದಳ, ಕೇಸರ ಮತ್ತು ಅಂಡಾಶಯಗಳೆಂಬ ನಾಲ್ಕು ಭಾಗಗಳನ್ನು ಗುರುತಿಸಿ ಕೇಸರ ಮತ್ತು ಅಂಡಾಶಯಗಳನ್ನು ಅನುಕ್ರಮವಾಗಿ ಗಂಡು ಮತ್ತು ಹೆಣ್ಣು ಜನನೇಂದ್ರಿಯಗಳೆಂದು ಸ್ಪಷ್ಟಪಡಿಸಿದ. ಗ್ರೂ ಸಣ್ಣ ಗಿಡಗಳಲ್ಲಿನ ನಾಳಕೂರ್ಚಗಳ ಸೂಕ್ಷ್ಮ ಅಭ್ಯಾಸವನ್ನೂ ನಡೆಸಿದ. ಹೀಗೆ ಸಸ್ಯಗಳ ಅಂಗರಚನಾವಿಜ್ಞಾನದ ಅಧ್ಯಯನಕ್ಕೆ ಭದ್ರ ಬುನಾದಿ ಹಾಕಿದಾತ ಗ್ರೂ. ಇವನು ಮಾರ್ಚ್ 25, 1712ರಲ್ಲಿ ತನ್ನ 71ನೆಯ ವಯಸ್ಸಿನಲ್ಲಿ ಲಂಡನಿನಲ್ಲಿ ನಿಧನನಾದ. ***

**ಗ್ರೂಯಿಫಾರ್ಮಿಸ್:** ಪಕ್ಷಿ ವರ್ಗದ ಒಂದು ಪ್ರಮುಖ ಗಣ. ಸುಮಾರು 11 ಕುಟುಂಬಗಳನ್ನು ಒಳಗೊಂಡಿದೆ. ಇದಕ್ಕೆ ಸೇರಿದ ಹಕ್ಕಿಗಳೆಲ್ಲುವೂ ಹೆಚ್ಚು ಕಡಿಮೆ ಜಲವಾಸಿಗಳು; ಜೌಗು ಪ್ರದೇಶಗಳಲ್ಲಿ ವಾಸಿಸುತ್ತವೆ. ಕೆಲವೇ ಕೆಲವು ಮಾತ್ರ ಬಂಜರು ಭೂಮಿಗಳಲ್ಲಿ, ಮರುಭೂಮಿಗಳಲ್ಲಿ ಕಾಣ ದೊರೆಯುತ್ತವೆ. ಮೇರು ಪ್ರದೇಶಗಳನ್ನು ಬಿಟ್ಟು ಪ್ರಪಂಚದ ಉಳಿದೆಲ್ಲ ಸ್ಥಳಗಳಲ್ಲೂ ಇವನ್ನು ಕಾಣಬಹುದು. ಇವುಗಳ ಬಾಹ್ಯ ರೂಪರಚನೆ ಮತ್ತು ಸ್ವಭಾವಗಳಲ್ಲಿ ವ್ಯತ್ಯಾಸಗಳಿವೆಯಾದರೂ ಕಂಕಾಲ ಹಾಗೂ ಸ್ನಾಯುಗಳ ರಚನೆಗಳಲ್ಲಿ ಸಮಾನತೆಯನ್ನು ನೋಡಬಹುದು. ಗಾತ್ರದಲ್ಲಿ ಕೆಲವು ಬಗೆಯವು ದೊಡ್ಡವಾದರೆ (ಉದಾಹರಣೆಗೆ : ಕೊಕ್ಕರೆ ಇತ್ಯಾದಿ) ಇನ್ನು ಕೆಲವು ಬಹಳ ಚಿಕ್ಕವು (ಉದಾಹರಣೆಗೆ: ರೇಲ್, ಕ್ವೇಲ್ ಮುಂತಾದುವು). ಇವಕ್ಕೆ ಸಾಮಾನ್ಯವಾಗಿ ಹಾರುವ ಸಾಮರ್ಥ್ಯ ಕಡಿಮೆ. ಕೆಲವಂತೂ ಹಾರುವುದೇ ಇಲ್ಲ. ಆದರೆ ಕೊಕ್ಕರೆ, ಸಾರಸ್ ಮೊದಲಾದುವು ಬಹಳ ಚೆನ್ನಾಗಿ ಹಾರಬಲ್ಲುವು. ಹಾರುವಾಗ ಇವು ತಮ್ಮ ಕತ್ತನ್ನು ಮುಂದಕ್ಕೂ ಕಾಲುಗಳನ್ನು ಹಿಂದಕ್ಕೂ ನೇರವಾಗಿ ಚಾಚಿಕೊಂಡಿರುತ್ತವೆ. ಬಹುಪಾಲು ಬಗೆಗಳಲ್ಲಿ ಗೂಡು ನಿರ್ಮಾಣವನ್ನು ಮತ್ತು ಮರಿಗಳ ಪಾಲನೆಯನ್ನು ಗಂಡು ಹಾಗೂ ಹೆಣ್ಣು ಹಕ್ಕಿಗಳೆರಡೂ ನಿರ್ವಹಿಸುತ್ತವೆ. ಬಸ್ಟರ್ಡ್ ಹಕ್ಕಿಗಳಲ್ಲಿ ಮಾತ್ರ ಹೆಣ್ಣು ಹಕ್ಕಿಯೊಂದೇ ಈ ಕಾರ್ಯಗಳಲ್ಲಿ ನಿರತವಾಗಿರುತ್ತದೆ. ಗ್ರೂಯಿಫಾರ್ಮಿಸ್‍ಗೆ ಸೇರಿದ ಕುಟುಂಬಗಳು ಇವು: 1. ಮೆಡಿಟಾರ್ನಿತಿಡೆ – ಉದಾ: ಮೆಸಿಟಸ್. 2. ಟರ್ನಿಸಿಡೆ – ಉದಾ: ಪೆಡಿಯೋನೋಮಸ್ (ಹೆಮಿಪೋಡ್), ಟರ್ನಿಕ್ಸ್ (ಕ್ವೇಲ್), 3. ಗ್ರೂಯಿಡೆ – ಉದಾ: ಗ್ರಸ್ (ಕೊಕ್ಕರೆ, ಸಾರಸ್ ಇತ್ಯಾದಿ), 4. ಅರ್ಯಾಮಿಡೆ – ಉದಾ: ಅರ್ಯಾಮಸ್ (ಲಿಂಪ್ಕಿನ್), 5. ಸೋಫೈಯಿಡೆ – ಉದಾ: ಸೋಫಿಯ (ಟ್ರಂಪೆಟರ್), 6. ರೇಲಿಡೇ – ಉದಾ: ಅರ್ಯಾಮಿಡಿಸ್ (ವುಡ್‍ರೇಲ್), ಪೋರ್‍ಜ್ವಾನ (ಕ್ರೇಕ್), ಗ್ಯಾಲಿನ್ಯೂಲ (ಗ್ಯಾಲಿನ್ಯೂಲ್– ನೀರುಕೋಳಿ)), 7. ಹೀಲೀಯಾರ್ನಿತಿಡೆ –ಉದಾ: ಪಾಡಿಕ (ಫಿನ್‍ಫೂಟ್), 8. ರೈನಾಕೆಟಿಡೆ – ಉದಾ: ರೈನಾಕೀಟಸ್ (ಕಾಗು), 9. ಯೂರೀಪೈಜಿಡೆ – ಉದಾ: ಯೂರಿಪೈಗ (ಸನ್ ಬಿಟರ್ನ್), 10. ಕೇರಿಯಾಮಿಡೆ – ಉದಾ: ಕೇರಿಯಾಮ (ಸೆರೀಮ), 11. ಓಟಿಡೆ – ಉದಾ: ಓಟಿಸ್ (ಬಸ್ಟರ್ಡ್).

**ಗ್ರೌಪರ್:** ಸೆರಾನಿಡೆ ಕುಟುಂಬಕ್ಕೆ ಸೇರಿದ ಹಲವು ಜಾತಿಯ ಮೀನುಗಳನ್ನು ಗ್ರೌಪರ್ ಎನ್ನುವರು. ಇವು ಸಮಶೀತೋಷ್ಣವಲಯದ ಕಡಲುಗಳಲ್ಲಿ ವಾಸಿಸುತ್ತವೆ. ವೆಸ್ಟ್ ಇಂಡೀಸ್, ಅಮೆರಿಕ ಸಂಯುಕ್ತ ಸಂಸ್ಥಾನದ ದಕ್ಷಿಣ ಪ್ರದೇಶಗಳ ಕಡಲುಗಳು ಇವುಗಳ ಮುಖ್ಯ ವಾಸಸ್ಥಳ. ಭಾರತದಲ್ಲಿ ಕೆಲವು ಪ್ರಭೇದಗಳಿವೆ. ನೀರಿನಲ್ಲಿ ಬಂಡೆಗಳಿರುವ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುವುದರಿಂದ ಇವಕ್ಕೆ ರಾಕ್ ಬಾಸ್ ಎಂದು ಹೆಸರಿದೆ. ಕಡಲ ಬಾಸ್ ಇವುಗಳ ಪರ್ಯಾಯ ನಾಮ. ಮಧ್ಯಮ ಗಾತ್ರದಿಂದ ದೈತ್ಯಾಕಾರದವರೆಗೂ ಬೆಳೆಯುವ ಮೀನುಗಳಿವು. ಕೋನಿ, ಗ್ರೌಪರುಗಳಲ್ಲೆಲ್ಲ ಅತ್ಯಂತ ಚಿಕ್ಕ ಮೀನು. ಇದರ ಉದ್ದ ಕೇವಲ 22 ಸೆಂಮೀ. ಬಣ್ಣ ಕೆಂಪುಮಿಶ್ರಿತ ಬೂದು. ಮೈಮೇಲೆ ಅಲ್ಲಲ್ಲಿ ನೀಲಿವರ್ಣದ ಚುಕ್ಕೆಗಳಿವೆ. ಜ್ಯೂ ಮೀನುಗಳು ಗ್ರೌಪರುಗಳಲ್ಲೆಲ್ಲ ಅತ್ಯಂತ ದೊಡ್ಡವು. ಇವು 2ಮೀ ಉದ್ದವಿದ್ದು, ಸು. 220 ಕಿಗ್ರಾಂ ಭಾರ ಇವೆ. ಗ್ರೌಪರುಗಳಲ್ಲೆಲ್ಲ ಅತಿಮುಖ್ಯವಾದುವು ಎಪಿನೆಫೆಲಸ್ ಮತ್ತು ಮಿಕ್ಟಿರೋಪರ್ಕ ಜಾತಿಗಳಿಗೆ ಸೇರಿದ ವಿವಿಧ ಪ್ರಭೇದಗಳು. ಇವುಗಳು ಬಣ್ಣ ಮತ್ತು ಗಾತ್ರಗಳಲ್ಲಿ ಅನೇಕ ವ್ಯತ್ಯಾಸಗಳಿವೆ.

ಗ್ರೌಪರುಗಳ ವಿಶೇಷ ಲಕ್ಷಣವೆಂದರೆ, ಆಗಾಗ್ಗೆ ದೇಹದ ಬಣ್ಣವನ್ನು ಬದಲಿಸುತ್ತಿರುವುದು. ಉದಾ: ಚುಕ್ಕಿ ಜ್ಯೂ ಮೀನು. ಇದು ನಾಲ್ಕು ಬಣ್ಣಗಳನ್ನು ಬದಲಾಯಿಸುತ್ತದೆ. ದಟ್ಟ ಕಪ್ಪು, ಕಪ್ಪು ಮಚ್ಚೆಗಳಿಂದ ಕೂಡಿದ ಬೂದು, ಕಪ್ಪು ಮಚ್ಚೆಗಳಿಂದ ಕೂಡಿದ ಕೆನೆ ಬಣ್ಣ ಮತ್ತು ಸಂಪೂರ್ಣ ಕೆನೆ ಬಣ್ಣಗಳನ್ನು ಪ್ರದರ್ಶಿಸುತ್ತದೆ. ನಾಸ್ಸಾ ಗ್ರೌಪರ್ ಮೀನು ಮೈಬಣ್ಣವನ್ನು ಕೆನೆಯಿಂದ ಕಪ್ಪು ಬಣ್ಣಕ್ಕೆ ಕ್ಷಣಾರ್ಧದಲ್ಲಿ ಬದಲಿಸುತ್ತದೆ. ಈ ರೀತಿಯ ಬಣ್ಣ ಬದಲಾವಣೆಗೆ ಈ ಮೀನುಗಳ ಚರ್ಮದಲ್ಲಿರುವ ವರ್ಣ ದ್ರವ್ಯ ಜೀವಕೋಶಗಳು ಕಾರಣ. ಚರ್ಮದಲ್ಲಿ 4 ಅಥವಾ 5 ಬಗೆಯ ವಿಶೇಷ ಜೀವ ಕೋಶಗಳಿವೆ. ಇವುಗಳ ಒಂದುಗೂಡುವಿಕೆ ಹಾಗೂ ಇವುಗಳ ಸಂಕೋಚನ ಮತ್ತು ವಿಕಸನ ರೀತಿಗಳನ್ನು ಅನುಸರಿಸಿ ದೇಹದ ಬಣ್ಣ ಬದಲಾಗುತ್ತಿರುತ್ತದೆ. ವಿಶ್ರಾಂತಿ ಪಡೆಯುವಾಗ, ಜಲಸಸ್ಯಗಳ ಮಧ್ಯೆ ಅಡಗಿಕೊಂಡು ಶತ್ರುಗಳಿಂದ ತಪ್ಪಿಸಿಕೊಳ್ಳಲು ಈ ವರ್ಣ ಪರಿವರ್ತನೆ ಸಹಾಯಕ. ಗ್ರೌಪರುಗಳು ಮಾಂಸಾಹಾರಿಗಳು. ಇತರ ಬಗೆಯ ಮೀನುಗಳು ಮತ್ತು ಮುಳ್ಳು ಲಾಬ್‍ಸ್ಟರ್‌ಗಳು ಇವುಗಳ ಮೆಚ್ಚಿನ ಆಹಾರ. ಮೊಟ್ಟೆಗಳಿಂದ ಮರಿಗಳು ಬೆಳೆದು ಅನಂತರ ಸ್ವತಂತ್ರವಾಗಿ ಬದುಕುತ್ತವೆ. ವಸಂತ ಋತುವಿನಲ್ಲಿ ಮೊಟ್ಟೆಗಳನ್ನಿಡುತ್ತವೆ. (ಬಿ.ಕೆ.ಜೆ.)

**ಗ್ರೌಸ್:** ಗ್ಯಾಲಿಫಾರ್ಮಿಸ್ ಗಣದ ಟೆಟ್ರವೋನೀಡೆ ಕುಟುಂಬಕ್ಕೆ ಸೇರಿದ ಒಂದು ಬೇಟೆ ಹಕ್ಕಿ. ಸುಮಾರು 10 ಜಾತಿಗಳ 18 ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಎಲ್ಲ ಪ್ರಭೇದಗಳೂ ಪ್ರಪಂಚದ ಉತ್ತರಾರ್ಧಕ್ಕೆ ಸೀಮಿತವಾಗಿವೆ. ಕೋಳಿ, ಫೆಸೆಂಟ್, ನವಿಲು, ಟರ್ಕಿಕೋಳಿ ಮುಂತಾದ ಹಕ್ಕಿಗಳಿಗೆ ಹತ್ತಿರ ಸಂಬಂಧಿಗಳಾದ ಇವು ಹೆಚ್ಚು ಕಡಿಮೆ ಕೋಳಿಯಷ್ಟೇ ಗಾತ್ರದವಾಗಿವೆ. ಆದರೆ ಇವುಗಳ ಮೈಬಣ್ಣ ಮಾತ್ರ ಅತ್ಯಂತ ಸಾಧಾರಣ ಬಗೆಯದು. ನವಿಲು ಅಥವಾ ಫೆಸೆಂಟುಗಳ ಉಜ್ವಲ ವರ್ಣವಿನ್ಯಾಸ ಗ್ರೌಸುಗಳಲ್ಲಿ ಇಲ್ಲ. ಆದರೂ ತಾವಿರುವ ನೆಲೆಗಳಲ್ಲಿ ಶತ್ರುಗಳ ಕಣ್ಣಿಗೆ ಬೀಳದಂತೆ ಮರೆಮಾಡಿಕೊಂಡು ವಾಸಿಸಲು ಅನುಕೂಲವಾಗುವಂತೆ ಇವುಗಳ ಮೈ ಬಣ್ಣ ಇದೆ. ಕೆಲವು ಬಗೆಯ ಗ್ರೌಸುಗಳು ಋತುಮಾನಕ್ಕನುಗುಣವಾಗಿ ತಮ್ಮ ಮೈಬಣ್ಣವನ್ನು ಬದಲಿಸುತ್ತವೆ. ಉದಾಹರಣೆಗೆ, ಉತ್ತರ ಪರಿಧ್ರುವದಲ್ಲಿ ವಾಸಿಸುವ ವಿಲೊ ಗ್ರೌಸ್ (ವಿಲೊ ಟಾರ್ಮಿಗನ್) ಎಂಬ ಹಕ್ಕಿಗೆ ಬೇಸಿಗೆಯಲ್ಲಿ ಕಪ್ಪು ಮತ್ತು ಕಂದು ಬಣ್ಣವೂ ಚಳಿಗಾಲದಲ್ಲಿ ಅಚ್ಚ ಬಿಳಿ ಬಣ್ಣವೂ ಇರುತ್ತವೆ. ಇದರಿಂದ ಆಯಾಕಾಲದ ಪರಿಸರದ ಹಿನ್ನೆಲೆಗೆ ಹೊಂದಿಕೊಳ್ಳಲು ಅನುಕೂಲ. ದಷ್ಟಪುಷ್ಟವಾದ ದೇಹ, ಪುಕ್ಕಗಳಿಂದ ಸಂಪೂರ್ಣವಾಗಿ ಆವೃತವಾದ ಬಲವಾದ ಕಾಲುಗಳು (ಕೆಲವು ಸಲ ಪಾದಗಳು ಸಹ), ಮೋಟಾದ ಮತ್ತು ಕೆಳಮುಖವಾಗಿ ನಸುಬಾಗಿದ ಕೊಕ್ಕು, ಪುಕ್ಕಗಳಿಂದ ಆವೃತವಾದ ಮೂಗಿನ ಹೊಳ್ಳೆಗಳು, ಪಾದದ ಮುಂದಿನ ಬೆರಳುಗಳಿಗಿಂತ ಚಿಕ್ಕದಾದ ಹಾಗೂ ಕೊಂಚ ಮೇಲಕ್ಕೆತ್ತಿದಂತೆ ಇರುವ ಹಿಂಬೆರಳು ಮತ್ತು ನಿಮಿರಿ ನಿಲ್ಲುವಂಥ ಗರಿಗಳುಳ್ಳ ಇಲ್ಲವೆ ಗರಿಗಳೇ ಇಲ್ಲದೆ ಬೋಳು ಬೋಳಾದ ವರ್ಣರಂಜಿತ ಭಾಗವನ್ನುಳ್ಳ ಮೋಟು ಕತ್ತು – ಇವು ಗ್ರೌಸುಗಳ ಪ್ರಮುಖ ಲಕ್ಷಣಗಳು. ಕೆಲವು ಬಗೆಗಳಲ್ಲಿ ಕಾಲ್ಬೆರಳುಗಳ ಎರಡು ಪಕ್ಕಗಳಲ್ಲೂ ಚಳಿಗಾಲದಲ್ಲಿ ಬಾಚಣಿಗೆಯ ಹಲ್ಲುಗಳಂಥ ರಚನೆಗಳು ಹುಟ್ಟಿಕೊಳ್ಳುತ್ತವೆ. ಹಿಮದಲ್ಲಿ ನಡೆಯುವಾಗ ಕಾಲಿಗೆ ಹಿಡಿತವನ್ನು ಕೊಡಲು ಈ ರಚನೆಗಳು ಸಹಕಾರಿಗಳಾಗಿವೆ. ಬೇಸಿಗೆಯಲ್ಲಿ ಈ ಹಲ್ಲುಗಳು ಬಿದ್ದುಹೋಗುತ್ತವೆ. ಗ್ರೌಸುಗಳು ಭೂವಾಸಿಗಳು. ದಟ್ಟವಾದ ಕಾಡುಗಳು ಇಲ್ಲವೆ ಕುರುಚಲು ಅಥವಾ ಹುಲ್ಲು ಬೆಳೆದ ಕಾಡುಗಳು ಇವುಗಳ ನೆಲೆ. ಬೀಜ, ಸಣ್ಣ ಮಟ್ಟ ಕಾಯಿ, ಗಿಡಗಳ ಚಿಗುರು ಮುಂತಾದುವನ್ನು ತಿಂದು ಜೀವಿಸುತ್ತವೆ. ಚೆನ್ನಾಗಿ ಹಾರಲಾರವು. ಅಪಾಯವೊದಗಿದಾಗ ಮಾತ್ರ ಶೀಘ್ರಗತಿಯಲ್ಲಿ ಕೊಂಚದೂರ ಹಾರಿ ಪೊದೆಗಳಲ್ಲಿ ಅಡಗಿಕೊಂಡು ಬಿಡುತ್ತವೆ.

ಬಹುಪಾಲು ಗ್ರೌಸುಗಳು ಬಹುಪತ್ನೀಕಗಳು. ಅಲ್ಲದೆ ಇವು ತಮ್ಮ ಪ್ರಣಯಾಚರಣೆಗೆ ಹೆಸರುವಾಸಿಯಾಗಿವೆ. ವಿಚಿತ್ರ ಬಗೆಯ ನೃತ್ಯ ವಿಲಾಸಗಳನ್ನೊಳಗೊಂಡ ಈ ಕೇಳಿಯನ್ನು ರಫ್ಡ್ ಗ್ರೌಸ್, ಬ್ಲ್ಯಾಕ್‍ಗ್ರೌಸ್ (ಕರಿಹುಂಜ – ನೋಡಿ), ಕೇಪರ್‌ಕೇಲಿ ಮುಂತಾದುವುಗಳಲ್ಲಿ ಕಾಣಬಹುದು. ರಫ್ಡ್‌ಗ್ರೌಸ್ ಹಕ್ಕಿಯ ಕತ್ತಿನಲ್ಲಿ ದೊಡ್ಡ ಗರಿಗಳ ಗುಚ್ಛವೊಂದಿದೆ. ಪ್ರಣಯಾಚರಣೆಯಲ್ಲಿ ತೊಡಗಿರುವಾಗ ಯಾವುದಾದರೂ ಒಂದು ಮರದಿಮ್ಮಿಯ ಮೇಲೆ ಓಡಾಡುತ್ತ ತನ್ನ ಕತ್ತಿನ ಗುಚ್ಛವನ್ನು ನಿಮಿರಿಸಿಕೊಂಡು, ರೆಕ್ಕೆಗಳನ್ನು ಅತ್ಯಂತ

ತ್ವರಿತಗತಿಯಲ್ಲಿ ಚಲಿಸುತ್ತ ಗಾಳಿಯನ್ನು ಬಡಿಯುತ್ತದೆ. ಈ ಬಡಿತದಿಂದ ಒಂದು ತಮಟೆ ಬಡಿದಂಥ ಶಬ್ದ ಉಂಟಾಗುತ್ತದೆ. ಕೇಪರ್‌ಕೇಲಿ ಎಂಬ ಗ್ರೌಸ್ ಹಕ್ಕಿ ತನ್ನದೇ ಆದ ಒಂದು ನೆಲೆಯನ್ನು ಸ್ಥಾಪಿಸಿಕೊಂಡು, ಅಲ್ಲಿನ ಪೈನ್ ಮರವೊಂದನ್ನು ಆರಿಸಿಕೊಂಡು, ಅದರ ರೆಂಬೆಯ ಮೇಲೆ ನಡೆದಾಡುತ್ತ ವಿಚಿತ್ರ ರೀತಿಯಲ್ಲಿ ಕೂಗುತ್ತ, ಕೆನೆಯುತ್ತ, ತನ್ನ ಬಾಲದ ಗರಿಗಳನ್ನು ಜಪಾನೀ ಬೀಸಣಿಗೆಯ ಆಕಾರದಲ್ಲಿ ಹರಡಿಕೊಂಡು ಪ್ರಣಯಕೇಳಿಯಲ್ಲಿ ತೊಡಗುತ್ತದೆ. ಬಹುಪತ್ನಿತ್ವಕ್ಕೆ ಹೆಸರಾದ ಈ ಹಕ್ಕಿ ಒಂದು ಋತುವಿನಲ್ಲಿ 3–12 ಕ್ಕೂ ಹೆಚ್ಚು ಹೆಣ್ಣುಗಳೊಂದಿಗೆ ಸಂಪರ್ಕವಿರಿಸಿಕೊಳ್ಳುತ್ತದೆ. ಇದೇ ರೀತಿ ಉತ್ತರ ಅಮೆರಿಕದಲ್ಲಿನ ಸೇಜ್‌ಗ್ರೌಸ್, ಪ್ರೈರಿ ಚಿಕನ್ ಮುಂತಾದುವು ತಮ್ಮ ಕತ್ತಿನ ಆಚೀಚೆಯಿರುವ ಬೋಳಾದ ಭಾಗವನ್ನು ಗಾಳಿಯಿಂದ ಹಿಗ್ಗಿಸಿಕೊಂಡು ಆಗಿಂದಾಗ್ಗೆ ವಿಚಿತ್ರವಾಗಿ ಕೂಗುತ್ತ ಹೆಣ್ಣು ಹಕ್ಕಿಗಳನ್ನು ಆಕರ್ಷಿಸುತ್ತವೆ. ಕತ್ತಿನ ಬೋಳು ಚೀಲಗಳು ಕಿತ್ತಳೆ, ಹಳದಿ ಇತ್ಯಾದಿ ಬಣ್ಣಗಳಿಂದ ಕೂಡಿದ್ದು ಗಾಳಿ ತುಂಬಿ ಉಬ್ಬಿದಾಗ ವರ್ಣರಂಜಿತ ಫಲಗಳಂತೆ ಕಾಣುವುದರಿಂದ ಆಕರ್ಷಣೆ ಹೆಚ್ಚಾಗುತ್ತದೆ. ಪ್ರಣಯಕೇಳಿ ಸಂಭೋಗಕ್ರಿಯೆಯಲ್ಲಿ ಪರ್ಯಾವಸಾನವಾದ ಮೇಲೆ ಹೆಣ್ಣು ಹಕ್ಕಿಗಳು ಗೂಡಿನ ಅಧೀನ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಇಲ್ಲವೆ ಬೇರೆಡೆಯಲ್ಲಿ ನೆಲದಲ್ಲಿ ಗುಂಡಿಮಾಡಿ, ಕಡ್ಡಿಗಳನ್ನು ಹರಡಿ, ಗೂಡನ್ನು ನಿರ್ಮಿಸಿ ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಸಂಖ್ಯೆ ಒಂದು ಸೂಲಿಗೆ 5–16. ಸುಮಾರು 23–29 ದಿವಸಗಳ ಅನಂತರ ಮೊಟ್ಟೆಗಳೊಡೆದು ಮರಿಗಳಾಗುತ್ತವೆ. ಕಾವು ಕೊಟ್ಟು ಮರಿ ಮಾಡುವುದೂ ಮರಿಗಳ ಪಾಲನೆಯೂ ಸಂಪೂರ್ಣವಾಗಿ ಹೆಣ್ಣಿನ ಕೆಲಸ.



ಗ್ರೌಸ್

ಪ್ರಪಂಚದಲ್ಲಿ ಕಾಣಬರುವ ಗ್ರೌಸಗಳಲ್ಲಿ ಮುಖ್ಯ ಪ್ರಭೇದಗಳಿವು:

1. ಬೊನಾಸ ಅಂಬೆಲಸ್ (ರಫ್ಡ್ ಗ್ರೌಸ್): ಉತ್ತರ ಅಮೆರಿಕದ ಉತ್ತರದ ಭಾಗಗಳ ಪರ್ಣಪಾತಿ ಮತ್ತು ಕುರುಚಲು ಕಾಡುಗಳಲ್ಲಿ ವಾಸಿಸುತ್ತದೆ. ಇದರ ದೇಹದ ಬಣ್ಣ ಕಂದು: ಬಿಳಿ ಮತ್ತು ಕಪ್ಪು ಮಚ್ಚೆಗಳಿಂದ ಕೂಡಿದೆ. ಕೆಲವು ಬಗೆಗಳಲ್ಲಿ ಬಾಲ ಕಂದು ಬಣ್ಣದ್ದೂ ಇನ್ನು ಕೆಲವಲ್ಲಿ ಬೂದು ಬಣ್ಣದ್ದೂ ಆಗಿದೆ. ಉಳಿದ ಗ್ರೌಸುಗಳಂತಲ್ಲದೆ ಇದು ಏಕಪತ್ನೀಕ. 2. ಟೆಟ್ರಾವೊ ಯುರೋಗ್ಯಾಲಸ್ (ಕೇಪರ್‌ಕೇಲಿ): ಯೂರೋಪ್ ಹಾಗೂ ಮಧ್ಯ ಸೈಬೀರಿಯಗಳಲ್ಲಿ ಕಾಣಬರುತ್ತದೆ. ಗಂಡು ಹಕ್ಕಿ ಕಪ್ಪು ಬಣ್ಣದ್ದೂ ಹೆಣ್ಣು ಕಂದು ಬಣ್ಣದ್ದೂ ಆಗಿದೆ. 3. ಲೈರೂರಸ್ ಟೆಟ್ರಿಕ್ಸ್ (ಬ್ಲ್ಯಾಕ್ ಗ್ರೌಸ್) ಇದರ ವಿವರಗಳಿಗೆ ನೋಡಿ – ಕರಿಹುಂಜ. 4. ಕ್ಯಾನಕೈಟಿಸ್ ಕೆನಡೆನ್ಸಿಸ್ (ಸ್ಪ್ರೂಸ್ ಗ್ರೌಸ್): ಅಲಸ್ಕದಿಂದ ಲ್ಯಾಬ್ರಡಾರ್‌ವರೆಗಿನ ಶಂಕುಪರ್ಣಿಗಳ ಕಾಡುಗಳಲ್ಲಿ ವಾಸಿಸುತ್ತದೆ. 5. ಸೆಂಟ್ರೊಸರ್ಕಸ್ ಯುರೊಫೇಸಿಯಾನಸ್ (ಸೇಜ್ ಗ್ರೌಸ್): ಉತ್ತರ ಅಮೆರಿಕದ ಮಧ್ಯ ಹಾಗೂ ಪಶ್ಚಿಮ ಭಾಗಗಳಲ್ಲಿದೆ. 6. ಲಗೋಪಸ್ ಜಾತಿಯ ಹಲವಾರು ಪ್ರಭೇದಗಳು (ಟಾರ್ಮಿಗನ್ಸ್): ಉತ್ತರ ಪರಿಧ್ರುವದಲ್ಲಿ ವಾಸಿಸುತ್ತವೆ. ಇವುಗಳಲ್ಲಿ ವಿಲೊ ಟಾರ್ಮಿಗನ್, ರಾಕ್ ಟಾರ್ಮಿಗನ್‌ಗಳು ಮುಖ್ಯವೆನಿಸಿವೆ. ಇವುಗಳ ವಿವರಗಳಿಗೆ ನೋಡಿ – ಟಾರ್ಮಿಗನ್.

ಎಲ್ಲ ಬಗೆಯ ಗ್ರೌಸುಗಳೂ ಟಾರ್ಮಿಗನ್ನುಗಳೂ ಬಲು ರುಚಿಕರವಾದ ಆಹಾರ ಹಕ್ಕಿಗಳೆನಿಸಿವೆ. ಇದಕ್ಕಾಗಿ ಇವನ್ನು ಬೇಟೆಯಾಡುವುದಿದೆ. ಪಾಶ್ಚಾತ್ಯ ದೇಶಗಳಲ್ಲಿ ವಿಶೇಷ ಶಿಕ್ಷಣ ಕೊಟ್ಟು ಬೆಳೆಸಿದ ನಾಯಿಗಳ ಸಹಾಯದೊಂದಿಗೆ ಗ್ರೌಸುಗಳನ್ನು ಬಂದೂಕಿನಿಂದ ಬೇಟೆಯಾಡುವುದು ಒಂದು ಜನಪ್ರಿಯ ಹವ್ಯಾಸವಾಗಿದೆ. (ಕೆ.ಎಂ.ವಿ.)

**ಗ್ರ್ಯಾಕಲ್ ಹಕ್ಕಿಗಳು:** ಪ್ಯಾಸೆರಿಫಾರ್ಮಿಸ್ ಗಣದ ಇಕ್ಟೆರಿಡೆ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಹಕ್ಕಿಗಳ ಸಾಮಾನ್ಯ ಹೆಸರು. ಇವುಗಳಲ್ಲಿ ಮುಖ್ಯವಾದುವು – ಉತ್ತರ ಅಮೆರಿಕದ ಕ್ವಿಸ್‌ಕಾಲಸ್ ಕ್ವಿಸ್‌ಕ್ಯುಲ (ಕಾಮನ್ ಗ್ರ್ಯಾಕಲ್), ವೆನಜೂಲ, ಪೆರು ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳ ದಕ್ಷಿಣ ಭಾಗದ ಕ್ಯಾಸಿಡಿಕ್ಸ್ ಮೆಕ್ಸಿಕಾನಸ್ (ಬೋಟ್ ಟೇಲ್ಡ್ ಗ್ರ್ಯಾಕಲ್) ಮತ್ತು ಮಧ್ಯ ಹಾಗೂ ದಕ್ಷಿಣ ಅಮೆರಿಕಗಳ ಸ್ಕೇಫಿಡ್ಯೂರ ಒರೈಜಿವೋರ (ರೈಸ್ ಗ್ರ್ಯಾಕಲ್). ಭಾರತದ ಬೆಟ್ಟಗಾಡುಗಳಲ್ಲಿ ಕಾಣಬರುವ ಗ್ರ್ಯಾಕ್ಯುಲ ಅಥವಾ ಯೂಲೇಬಿಸ್ ರಿಲಿಜಿಯೋಸ (ಹಿಲ್ ಮೈನ)ಕ್ಕೂ ರೂಢಿಯಲ್ಲಿ ಗ್ರ್ಯಾಕಲ್ ಎಂಬ ಹೆಸರೇ ಇದೆ (ಇದರ ವಿವರಗಳಿಗೆ ನೋಡಿ – ಕಾಡು ಮೈನ).

ಅಮೆರಿಕದಲ್ಲಿ ಕಾಣಸಿಗುವ ಗ್ರ್ಯಾಕಲ್ ಹಕ್ಕಿಗಳೆಲ್ಲ ಕಪ್ಪು ಬಣ್ಣದ ಹೊಳೆಯುವ ದೇಹ, ಉದ್ದವಾದ ರೆಕ್ಕೆಗಳು, ದೃಢವಾದ ಕಾಲುಗಳು, ನಸುಬಾಗಿದ ಕೊಕ್ಕು – ಈ ಲಕ್ಷಣಗಳನ್ನು ತೋರುತ್ತವೆ. ಇವುಗಳ ವಾಸ ಸಾಮಾನ್ಯವಾಗಿ ಮರಗಳಲ್ಲಿ. ಗ್ರ್ಯಾಕಲುಗಳು ಸರ್ವಭಕ್ಷಿಗಳು. ಕೀಟ, ಕಾಳು ಮುಂತಾದುವನ್ನು ಮಾತ್ರವಲ್ಲದೆ ಬೇರೆ ಹಕ್ಕಿಗಳ ಗೂಡನ್ನು ಕೂಡ ಕೊಳ್ಳೆ ಹೊಡೆದು ಮೊಟ್ಟೆಗಳನ್ನು ಕಬಳಿಸುವುದುಂಟು. ಸಣ್ಣ ಪುಟ್ಟ ಹಲ್ಲಿ, ಓತಿಕ್ಯಾತ, ಕಪ್ಪೆ ಮುಂತಾದುವನ್ನೂ ತಿನ್ನುವುದಿದೆ. ಕೆಲವು ಬಗೆಯವು ಮೀನನ್ನೂ ತಿನ್ನುತ್ತವೆ. ಇವು ಸಾಮಾನ್ಯವಾಗಿ ಗುಂಪು ಗುಂಪಾಗಿದ್ದು ಒಂದು ನಿರ್ದಿಷ್ಟ ನೆಲೆಯಲ್ಲಿ ಒಟ್ಟಾಗಿ ಗೂಡುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತವೆ. ಗೂಡು ಕಟ್ಟುವ ಕೆಲಸ ಹೆಣ್ಣಿನದು. ಕ್ಯಾಸಿಡಿಕ್ಸ್ ಮೆಕ್ಸಿಕಾನಸ್ ಪ್ರಭೇದದ ಗ್ರ್ಯಾಕಲುಗಳಲ್ಲಿ ಒಂದು ಗಂಡು ಹಕ್ಕಿ ಹಲವಾರು ಹೆಣ್ಣುಗಳೊಂದಿಗೆ ಜೀವಿಸುತ್ತದೆ. ಬಹುಪಾಲು ಗ್ರ್ಯಾಕಲುಗಳು ತಾವು ನಿರ್ಮಿಸಿದ ಗೂಡುಗಳಲ್ಲಿ ಮೊಟ್ಟೆಯಿಡುವುವಾದರೂ ಸ್ಕೇಫಿಡ್ಯೂರ ಬಗೆಯದು ಮಾತ್ರ ಬೇರೆ ಹಕ್ಕಿಗಳ ಗೂಡಿನಲ್ಲಿ ಮೊಟ್ಟೆಯಿಡುತ್ತದೆ. (ಕೆ.ಎಂ.ವಿ.)

**ಗ್ರ್ಯಾನ್ಷಿಯ:** ಪ್ಯಾರಜೋವ (ಪೊರಿಫೆರ) ಗುಂಪಿನ ಕ್ಯಾಲ್ಕೇರಿಯ ವರ್ಗದ ಸ್ಪಂಜುಪ್ರಾಣಿ. ಇದು ಸಮುದ್ರದಲ್ಲಿನ ಗಟ್ಟಿ ಪದಾರ್ಥಕ್ಕೆ ಅಂಟಿಕೊಂಡು ಜೀವಿಸುತ್ತದೆ. ಇದರ ದೇಹದ ಆಕಾರ ಕಲಶದಂತೆ. ಗಾತ್ರ 1.25–2.5 ಸೆಂಮೀ. ದೇಹದ ಮೇಲೆ ಆಸ್ಟಿಯಗಳೆಂಬ ಅನೇಕ ರಂಧ್ರಗಳಿವೆ. ದೇಹದ ಮೇಲ್ತುದಿಯಲ್ಲಿ ಆಸ್ಕ್ಯುಲಮ್ ಎಂಬ ದೊಡ್ಡ ದ್ವಾರವಿದೆ. ಆಸ್ಕ್ಯುಲಮ್ ಸುತ್ತ ಸೂಜಿಗಳಂತಿರುವ ಅನೇಕ ಮುಳ್ಳುಗಳಿವೆ (ಸ್ಪಿಕ್ಯೂಲ್ಸ್)

ಗ್ರ್ಯಾನ್ಷಿಯದ ಆಹಾರಸೇವನೆ ಕ್ರಮ, ಉಸಿರಾಡುವಿಕೆ ಮತ್ತು ಶುದ್ಧೀಕರಣಗಳೆಲ್ಲ ದೇಹದ ಒಳ ಭಾಗದಲ್ಲಿರುವ ಕೊಯನೊಸೈಟ್‌ಗಳ ಸಹಾಯದಿಂದಾಗುತ್ತವೆ. ಇದು ನಿರ್ಲಿಂಗ ಹಾಗೂ ಲೈಂಗಿಕ ರೀತಿಯ ಸಂತಾನೋತ್ಪತ್ತಿ ಮಾಡುತ್ತದೆ. ನಿರ್ಲಿಂಗ ವೃದ್ಧಿ ಅಂಕುರಣ (ಬಡಿಂಗ್) ರೀತಿಯಲ್ಲಿ, ಲೈಂಗಿಕ ರೀತಿಯ ಸಂತಾನಾಭಿವೃದ್ಧಿಯಲ್ಲಿ ವೀರ್ಯಾಣು ಹಾಗೂ ಅಂಡಗಳು ಸಂಯೋಗವಾಗಿ ಯುಗ್ಮವಾಗಿ ರೂಪುಗೊಳ್ಳುತ್ತವೆ.




ಆಂಫಿಬ್ಲಾಸ್ಟುಲ

ಯುಗ್ಮ ಕಶಾಂಗವುಳ್ಳ ಡಿಂಬವಾಗಿ ಬೆಳೆದು ಕೊನೆಗೆ ಪ್ರೌಢಜೀವಿಯಾಗುತ್ತದೆ. ಡಿಂಬಕ್ಕೆ ಆಂಫಿಬ್ಲಾಸ್ಟುಲ ಎಂದು ಹೆಸರು.

***

**ಗ್ರ್ಯಾಪ್ಟೊಲೈಟುಗಳು:** ನಿರ್ನಾಮವಾಗಿರುವ ಪ್ರಾಣಿಗಳ ಒಂದು ವರ್ಗ. ಪ್ರಾಚೀನ ಜೀವಕಲ್ಪದ ಪೂರ್ವಾರ್ಧದಲ್ಲಿ, ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಅವಧಿಯಲ್ಲಿ ಈ ಪ್ರಾಣಿಗಳು ಜೀವಿಸಿದ್ದುವು. ಆಗ ಅವು ಅಧಿಕ ಸಂಖ್ಯೆಯಲ್ಲಿ ವೃದ್ಧಿಸಿ ಭೌಗೋಳಿಕವಾಗಿ ವಿಶೇಷ ವ್ಯಾಪ್ತಿ ಪಡೆದಿದ್ದುವು. ಆದ್ದರಿಂದ, ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಕಾಲಗಳ ಶಿಲಾಸ್ತೋಮಗಳ ವಿಸ್ತೃತ ವಿಭಜನೆ ಮತ್ತು ಪರಸ್ಪರ ಸಂಬಂಧ ನಿರ್ಣಯದಲ್ಲಿ ಗ್ರ್ಯಾಪ್ಟೊಲೈಟುಗಳೇ ಮುಖ್ಯವಾದ ಆಧಾರಗಳು. ಈ ಪ್ರಾಣಿಗಳು ಜೇಡು ನಿಕ್ಷೇಪ ಪ್ರದೇಶಗಳಲ್ಲಿ ಹೇರಳವಾಗಿ ಮರಳು ಅಥವಾ ಸುಣ್ಣ ನಿಕ್ಷೇಪ ಪ್ರದೇಶಗಳಲ್ಲಿ ವಿರಳವಾಗಿ ಇದ್ದಂತೆ ಪಳೆಯುಳಿಕೆಗಳಿಂದ ತೋರುವುದು.

ಗ್ರ್ಯಾಪ್ಟೊಲೈಟುಗಳು ಸಂಘಜೀವಿಗಳು. ಇವುಗಳಿಗೆ ಕಂಕಾಲಗಳಿದ್ದುವು. ಈ ಕಂಕಾಲಗಳಿಗೆ ಪಾಲಿಪೆರಿ ಎಂದು ಹೆಸರು. ಪಾಲಿಪೆರಿಯ ಮಧ್ಯದಲ್ಲಿ ದಾರ ಅಥವಾ ಕಡ್ಡಿ ಹಾಗಿರುವ ಎಲುಬು ಇತ್ತು. ಇದಕ್ಕೆ ವಿರ್ಗುಲ ಎಂದು ಹೆಸರು. ಇದರ ಉದ್ದಕ್ಕೂ ಹಲ್ಲುಗಳ ಅಥವಾ ಬಟ್ಟಲುಗಳ ಆಕಾರದ ಎಲುಬುಗಳ ಸಾಲುಗಳಿವೆ. ಬಟ್ಟಲುಗಳಿಗೆ ಹೈಡ್ರೊಥೀಕ ಎಂದು ಹೆಸರು. ಗ್ರ್ಯಾಪ್ಟೊಲೈಟ್ ಪ್ರಾಣಿಗಳು ಈ ಬಟ್ಟಲುಗಳಲ್ಲಿ ವಾಸಿಸುತ್ತಿದ್ದಿರಬೇಕು. ಪ್ರತಿ ಬಟ್ಟಲಿಗು ಎರಡು ದ್ವಾರಗಳಿವೆ. ಒಂದು ದ್ವಾರದಿಂದ ಪಕ್ಕದ ಬಟ್ಟಲಿನೊಡನೆ ಸಂಪರ್ಕ ಏರ್ಪಟ್ಟಿದೆ. ಮತ್ತೊಂದು ದ್ವಾರ ಹೊರ ಪ್ರಪಂಚದ ಸಂಪರ್ಕ ಇಟ್ಟುಕೊಳ್ಳಲು ಸಹಾಯಕವಾಗಿದೆ. ಮೊದಲನೆಯ ದ್ವಾರಗಳೆಲ್ಲ ಒಂದೇ ಸಾಲಿನಲ್ಲಿದ್ದು, ಅವುಗಳಿಂದ ಒಂದು ಕಾಲುವೆ ಏರ್ಪಟ್ಟಿದೆ. ಇದಕ್ಕೆ ಸಾಮಾನ್ಯ ಕಾಲುವೆ ಎಂದು ಹೆಸರು. ವಿರ್ಗುಲದ ಕೆಳತುದಿಗೆ ಕೋನಾಕಾರಾದ ಎಲುಬೊಂದು ತಾಕು ಹಾಕಿದಂತಿದೆ. ಇದಕ್ಕೆ ಸಿಕ್ಯುಲ ಎಂದು ಹೆಸರು.

ಮಾನೊಗ್ರ್ಯಾಪ್ಟಸಿನಲ್ಲಿ ಒಂದೇ ಒಂದು ಬಟ್ಟಲು ಸಾಲು ಇತ್ತು. ಅಂಥ ಪ್ರಾಣಿ ಸಂಘಕ್ಕೆ ಏಕಪಂಕ್ತಿ ಸಂಘ ಎಂದು ಹೆಸರು. ಅನೇಕ ಗ್ರ್ಯಾಪ್ಟೊಲೈಟುಗಳಲ್ಲಿ ಎರಡು ಅಥವಾ ಹೆಚ್ಚು ಬಟ್ಟಲು ಸಾಲುಗಳು ಅನುಕ್ರಮವಾಗಿ ದ್ವಿಪಂಕ್ತಿ ಅಥವಾ ಬಹುಪಂಕ್ತಿ ಸಂಘಗಳು ಎಂದು ಹೆಸರು. ದ್ವಿಪಂಕ್ತಿ ಸಂಘಗಳಲ್ಲಿ ಎರಡು ಸಾಲುಗಳ ಮಧ್ಯೆ ಇರುವ ಕೋನಕ್ಕೆ ವಿಕೇಂದ್ರಿಕರಣ ಕೋನ ಎಂದು ಹೆಸರು. ಈ ಲಕ್ಷಣ ಗ್ರ್ಯಾಪ್ಟೊಲೈಟ್ ಪ್ರಾಣಿಗಳ ವರ್ಗೀಕರಣಕ್ಕೆ ಸಹಾಯಕವಾಗಿದೆ. ವಿವಿಧ ಜಾತಿ ಮತ್ತು ಪ್ರಭೇದಕ್ಕನುಗುಣವಾಗಿ, ಬಟ್ಟಲುಗಳು ಭಿನ್ನವಾಗಿರುತ್ತವೆ. ಬಟ್ಟಲುಗಳಿಗೆ ಕೊಳವೆ, ಕೋನ, ಪ್ರಿಸಮ್ ಆಕಾರಗಳು ಇರಬಹುದು. ಅವುಗಳಲ್ಲಿ ಪರಸ್ಪರ ಸಂಪರ್ಕ ಇರಬಹುದು ಅಥವಾ ಇಲ್ಲದಿರಬಹುದು. ಸಿಕ್ಯುಲ ಒಂದು ಟೊಳ್ಳಾದ ಕೋನಾಕಾರದ ಕೊಳವೆ. ಅದರಲ್ಲಿ ಎರಡು ಭಾಗಗಳಿವೆ. ತೆಳು ಹೊದಿಕೆಯ ಮೇಲ್ಭಾಗ, ಬೆಳೆವಣಿಗೆಯ ಗೀರುಗಳಿಂದ ಕೂಡಿದ ದಪ್ಪ ಹೊದಿಕೆಯ ತಳಭಾಗ, ತಳಭಾಗದ ಕೆಳತುದಿಯಲ್ಲಿ ಒಂದು ಮುಳ್ಳು ಇತ್ತು. ಮೇಲ್ಭಾಗ ವಿರ್ಗುಲವಾಗಿ ಮುಂದುವರಿಯುತ್ತದೆ. ಸಿಕ್ಯುಲ ಊರುಗೋಲಾಗಿ ಉಪಯುಕ್ತವಾಗಿರುವುದಲ್ಲದೆ ಪ್ರಜನನ ಕಾರ್ಯವನ್ನು ನಿರ್ವಹಿಸುವುದು.

ಪ್ರಜನನ ವಿಧಾನ : ಸಿಕ್ಯುಲದ ಮಗ್ಗುಲಲ್ಲಿ ಒಂದು ಕುಡಿ ಹೊರಡುತ್ತದೆ. ಇದು ಮೊದಲನೆಯ ಬಟ್ಟಲಾಗಿ ಪರಿವರ್ತಿಸುತ್ತದೆ. ಬಳಿಕ ಈ ಬಟ್ಟಲು ಇಬ್ಭಾಗವಾಗಿ ಎರಡು ಬಟ್ಟಲುಗಳಾಗುತ್ತವೆ. ಇದೇ ರೀತಿ ಬಟ್ಟಲುಗಳು ಪುನಃ ಪುನಃ ಇಬ್ಭಾಗವಾಗಿ ಅವುಗಳ ಸಾಲು ಆಗುತ್ತದೆ. ದ್ವಿಪಂಕ್ತಿ ಸಂಘಗಳಲ್ಲಿ ಕುಡಿಯ ಜೊತೆಗೆ ಕೊಳವೆಯೊಂದು ಹೊರಡುತ್ತದೆ. ಇದು ಬೇರೊಂದು ಮಗ್ಗುಲಿಗೆ ಹಾಯ್ದು ಅಲ್ಲಿ ಒಂದು ಬಟ್ಟಲಾಗಿ ಪರಿವರ್ತನೆಗೊಳ್ಳುತ್ತದೆ. ಇದು ಇಬ್ಭಾಗವಾಗಿ ಎರಡು ಬಟ್ಟಲುಗಳಾಗುತ್ತವೆ. ಮೇಲೆ ವಿವರಿಸಿದಂತೆ ಈ ಬಟ್ಟಲುಗಳು ಎರಡನೆಯ ಬಟ್ಟಲು ಸಾಲಾಗುತ್ತವೆ. ಜಲ ಶಿಲೆಗಳಲ್ಲಿ ಮೆಡೂಸಗಳ ಅವಶೇಷಗಳು ದೊರೆತಿಲ್ಲ. ಆದರೆ ಅವುಗಳ ಜನನ ಗ್ರಂಥಿಗಳನ್ನು ಹೋಲುವ ಕೋಶಗಳು ಸಿಕ್ಕಿವೆ. ಇವುಗಳ ರಚನಾ ವಿಧಾನವನ್ನಾಗಲಿ, ಕ್ರಿಯಾತಂತ್ರವನ್ನಾಗಲಿ ನಿರ್ದಿಷ್ಟವಾಗಿ ಹೇಳುವಂತಿಲ್ಲ.

ಗ್ರ್ಯಾಪ್ಟೊಲೈಟುಗಳ ಮೃದು ಭಾಗಗಳು ರಕ್ಷಿಸಲ್ಪಟ್ಟಿಲ್ಲ. ಆದ್ದರಿಂದ ಈ ಪ್ರಾಣಿಗಳು ಯಾವ ವರ್ಗದ ಪ್ರಾಣಿಗಳಿಗೆ ಹತ್ತಿರದ ಸಂಬಂಧಿಗಳೆಂದು ಹೇಳುವುದು ಕಷ್ಟ ಅಂಗರಚನೆಯ ಸಾಮ್ಯ ಮತ್ತು ಪ್ರಜನನ ಗ್ರಂಥಿಗಳನ್ನು ಪಡೆದಿರುವುದರ ಆಧಾರದ ಮೇಲೆ ಈ ಪ್ರಾಣಿಗಳು ಹೈಡ್ರೋಜೋವ ವರ್ಗದ ಒಂದು ಶಾಖೆ ಎಂದು ಪಳಿಯುಳಿಕೆ ತಜ್ಞ ಆಲ್‌ಮನ್ ಅಭಿಪ್ರಾಯ ಪಟ್ಟಿದ್ದಾನೆ. ಆದರೆ ಹೈಡ್ರೊಜ್ಞೋವ ವರ್ಗದ ಪ್ರಾಣಿಗಳಲ್ಲಿ ವಿರ್ಗುಲ, ಸಿಕ್ಯುಲಗಳಿಲ್ಲ. ಗ್ರ್ಯಾಪ್ಟೊಲೈಟುಗಳು ಬೆನ್ನೆಲುಬಿಲ್ಲದ ಪ್ರಾಣಿಗಳ ಮೂಲಶಾಖೆಯ ಪ್ರತ್ಯೇಕ ಗುಂಪಿನಲ್ಲಿವೆ ಎಂಬುದು ವಿಜ್ಞಾನಿಗಳ ಇತ್ತೀಚಿನ ಅಭಿಪ್ರಾಯ. (ಡಿ.ಆರ್.)

**ಗ್ಲಟನ್:** ಕಾರ್ನಿವೊರ ಗಣದ ಮಸ್ಟೆಲಿಡೆ ಕುಟುಂಬಕ್ಕೆ ಸೇರಿದ ಒಂದು ಮಾಂಸಾಹಾರಿ ಸ್ತನಿ. ವಲ್ವರೈನ್ ಪರ್ಯಾಯನಾಮ. ಗ್ಯೂಲೊ ಗ್ಯೂಲೊ ಇದರ ಶಾಸ್ತ್ರೀಯ ನಾಮ. ಕೆನಡ, ಅರ್ಕ್‌ಟಿಕ್ ಪ್ರದೇಶದ ದ್ವೀಪಗಳು, ಅಮೆರಿಕ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯ, ಕೊಲರಾಡೊ ರಾಜ್ಯಗಳಲ್ಲಿ ಕಾಣಬರುತ್ತದೆ. ಗ್ಲಟನ್ ಚಿಕ್ಕ ಗಾತ್ರದ ಪ್ರಾಣಿಯಾದರೂ (ಇದರ ಉದ್ದ ೬೦–೯೦ ಸೆಂಮೀ ಎತ್ತರ ಸುಮಾರು ೪೫ ಸೆಂಮೀ.) ಬಹಳ ಬಲಿಷ್ಠವಾದ್ದು. ಇದರ ಸರಾಸರಿ ತೂಕ ಸುಮಾರು ೧೨–೨೦ ಕಿಗ್ರಾಂ ಕಾಲುಗಳು ಮೋಟು. ಪಾದಗಳು ಮಾತ್ರ ಅಗಲವಾಗಿವೆ. ಒಂದೊಂದರಲ್ಲೂ ಬಲು ಚೂಪಾದ ಮತ್ತು ಬಾಗಿದ ನಖಗಳುಳ್ಳ ೫ ಬೆರಳುಗಳಿವೆ. ದೇಹವೆಲ್ಲ ಕಪ್ಪು ಮಿಶ್ರಿತ ಕಂದು ಬಣ್ಣದ ದಟ್ಟ ತುಪ್ಪುಳಿನಿಂದ ಆವೃತವಾಗಿದೆ. ದೇಹದ ಅಕ್ಕಪಕ್ಕಗಳಲ್ಲಿ ಭುಜದಿಂದ ಪೃಷ್ಠದವರೆಗೆ ತಿಳಿ ಕಂದು ಬಣ್ಣದ ಪಟ್ಟೆಗಳಿವೆ. ಗುದದ್ವಾರದ ಬಳಿ ದುರ್ಗಂಧಪೂರಿತವಾದ ಮತ್ತು ಹಳದಿ ಬಣ್ಣದ ದ್ರವವನ್ನು ಸ್ರವಿಸುವ ಗ್ರಂಥಿಗಳಿವೆ.

ಗ್ಲಟನ್ ಏಕಾಂತಜೀವಿ. ಪ್ರತಿ ಪ್ರಾಣಿಯೂ ತನ್ನದೇ ಆದ ಅಧೀನ ಪ್ರಾಂತ್ಯವೊಂದನ್ನು ಗುರುತಿಸಿಕೊಂಡು ಅದರೊಳಗೇ ಕಾಲ ಕಳೆಯುತ್ತದೆ. ಸಾಮಾನ್ಯವಾಗಿ ಇದರ ಚಟುವಟಿಕೆಯೆಲ್ಲ ಭೂಮಿಯ ಮೇಲೆಯೇ ಇದ್ದರೂ ಕೆಲವೊಮ್ಮೆ ಮರಗಳನ್ನೇರುವುದೂ ಉಂಟು. ಇದು ತನ್ನ ಹೊಟ್ಟೆಬಾಕತನಕ್ಕೆ ಹೆಸರಾಗಿದೆ (ಇದರಿಂದಲೇ ಇದಕ್ಕೆ ಗ್ಲಟನ್ ಎಂಬ ಹೆಸರು ಬಂದಿದೆ). ಇದು ಸಣ್ಣಪುಟ್ಟ ಸ್ತನಿಗಳು, ಹಕ್ಕಿಗಳು ಮತ್ತು ಅವುಗಳ ಮೊಟ್ಟೆಗಳು, ಸತ್ತ ಪ್ರಾಣಿಗಳು ಮುಂತಾದುವನ್ನೆಲ್ಲ ತಿನ್ನುತ್ತದೆ. ಕಾಯಿ, ಬೀಜಗಳನ್ನೂ ತಿನ್ನುವುದುಂಟು. ಕೆಲವು ಸಲ ಬೇಟೆಗಾರರು ಬೇರೆ ಪ್ರಾಣಿಗಳನ್ನು ಹಿಡಿಯಲೆಂದು ಒಡ್ಡಿದ ಬಲೆಗಳನ್ನು ಕೊಳ್ಳೆ ಹೊಡೆದು ಅದರಲ್ಲಿ ಸಿಕ್ಕಿಕೊಂಡಿರಬಹುದಾದ ಪ್ರಾಣಿಗಳನ್ನು ಕಬಳಿಸುವುದರಿಂದ ಬಲು ಉಪದ್ರವಕಾರಿ ಎನಿಸಿಕೊಂಡಿದೆ. ಇದು ಬಹಳ ಸೂಕ್ಷ್ಮ, ಜಾಗರೂಕ ಹಾಗೂ ಕಪಟಿ. ವಿವಿಧ ಬಗೆಯ ವಸ್ತುಗಳನ್ನು ಕದಿಯುವುದರ ಜೊತೆಗೆ ಅವನ್ನು ಬಚ್ಚಿಡುವ ಸ್ವಭಾವವೂ ಇದಕ್ಕಿದೆ. ತನ್ನ ಗಾತ್ರಕ್ಕಿಂತ ಹೆಚ್ಚು ದೊಡ್ಡದಾದ ಹಾಗೂ ಶಕ್ತಿಯುತವಾದ ಪ್ರಾಣಿಗಳನ್ನು ಎದುರಿಸಿ ಸೆಣಸುವುದುಂಟು.

ಇದರ ಸಂತಾನಾಭಿವೃದ್ಧಿಯ ಕಾಲ ಮಾರ್ಚ್ ತಿಂಗಳು. ಗರ್ಭಧರಿಸಿದ ಹೆಣ್ಣು ಗಂಡಿನಿಂದ ಬೇರೆ ಹೋಗಿ ಮರದ ಪೊಟರೆಯಲ್ಲಿ ಇಲ್ಲವೆ ಬಂಡೆಯ ಪೊಳ್ಳಿನಲ್ಲಿ ತನ್ನದೇ ಆದ ನೆಲೆಯನ್ನು ಸ್ಥಾಪಿಸಿಕೊಳ್ಳುತ್ತದೆ. ಸುಮಾರು ೯ ವಾರಗಳ ಅನಂತರ ೪–೫ ಮರಿಗಳನ್ನು ಹಾಕುತ್ತದೆ. ಮರಿಗಳು ಸುಮಾರು ೨ ವರ್ಷಗಳ ಕಾಲ ತಾಯೊಂದಿಗೇ ಇದ್ದು ಆಮೇಲೆ ಬೇರೆ ಹೋಗುತ್ತವೆ.

ಗ್ಲಟನನ್ನು ಅದರ ತುಪ್ಪುಳಕ್ಕಾಗಿ ಬೇಟೆಯಾಡುವುದಿದೆ. ಸೀಲ್, ವೀಸಲ್, ಮಿಂಕ್ ಮುಂತಾದುವುಗಳ ತುಪ್ಪುಳಕ್ಕಿರುವಷ್ಟು ಬೇಡಿಕೆ ಇದಕ್ಕಿಲ್ಲವಾದರೂ ಗ್ಲಟನ್ನಿನ ತುಪ್ಪುಳ ಎಂಥ ಕಡುಚಳಿಯಲ್ಲೂ ಹೆಪ್ಪುಗಟ್ಟದೆ, ಕೆಡದೆ ಇರುವುದರಿಂದ ಉತ್ತರ ಮೇರು ಪ್ರದೇಶಗಳಲ್ಲಿ ಉಪಯುಕ್ತವೆನಿಸಿದೆ. (ಕೆ.ಪಿ.ಆರ್.)

**ಗ್ಲಾಬ್ಯುಲಿನ್:** ರಕ್ತದಲ್ಲಿರುವ ಒಂದು ಬಗೆಯ ಪ್ರೋಟೀನು ಸಂಯುಕ್ತ. ಹಾಲಿನಲ್ಲಿರುವ ಗ್ಲಾಬ್ಯುಲಿನ್ನಿಗೆ 'ಲ್ಯಾಕ್ಟೊಗ್ಲಾಬ್ಯುಲಿನ್' ಎಂಬ ಹೆಸರಿದೆ. ಹಾಲೊಡಕಿನಲ್ಲಿ ಇದರ ಮೊತ್ತ ಶೇ. ೦.೧ ಮೀರುವುದಿಲ್ಲ. ಆದರೆ ಆಗ ತಾನೆ ಕರುಹಾಕಿದ ಹಸುವಿನ ಹಾಲಿನಲ್ಲಿ ಇದರ ಮೊತ್ತ ಗಣನೀಯವಾಗಿದೆ. ಇದು ಇನ್ನೊಂದು ಬಗೆಯ ಪ್ರೋಟೀನ್ ಆಲ್ಬ್ಯುಮಿನ್ ಜೊತೆ ಸೇರಿ ಕೆಲವು ವೇಳೆ ಶೇ. ೧೧–೧೨ ರಷ್ಟಿರುತ್ತದೆ. ೨೪ ಗಂಟೆಗಳ ಅನಂತರ ಈ ಪ್ರಮಾಣ ಶೀಘ್ರವಾಗಿ ಕಡಿಮೆಯಾಗುತ್ತದೆ. ತಾಯಿ ಅನೇಕ ಬಗೆಯ ರೋಗಗಳ ವಿರುದ್ಧ ಪ್ರತಿವಸ್ತುಗಳ (ಆ್ಯಂಟಿಬಾಡೀಸ್) ತಯಾರಿಕೆಯಲ್ಲಿ ಗ್ಲಾಬ್ಯುಲಿನ್ ಪ್ರಮುಖ ಪಾತ್ರವಹಿಸುತ್ತದೆ. ಇಂಥ ಪ್ರತಿವಸ್ತುಗಳು ಹೆಚ್ಚು ಮೊತ್ತದಲ್ಲಿರುವ ತಾಯಿಯ ಹಾಲನ್ನು ಕರುಗಳು ಕುಡಿದಾಗ ಅವಕ್ಕೂ ತಾತ್ಕಾಲಿಕ ಬಗೆಯ ರೋಗನಿರೋಧಕ ಸಾಮರ್ಥ್ಯ ಬರುತ್ತದೆ.

ಗ್ಲಾಬ್ಯುಲಿನ್ನಿನಲ್ಲಿ ಆಲ್ಫ, ಬೀಟ, ಗ್ಯಾಮ ಬಗೆಗಳಿವೆ. ಇವನ್ನು ವಿದ್ಯುತ್‌ಕ್ಷೇತ್ರ ಚಲನದಿಂದ (ಎಲೆಕ್ಟ್ರೊಫೋರೆಸಿಸ್) ಬೇರ್ಪಡಿಸಿ ಗುರುತಿಸಲಾಗಿದೆ. ಇವುಗಳಲ್ಲಿ ಅನೇಕ ರೀತಿಯ ಪ್ರೋಟೀನುಗಳಿವೆ. ಉದಾ: ಆಲ್ಫ ($\alpha$) ಬಗೆಯಲ್ಲಿ ಹ್ಯಾಪ್ಟೊಗ್ಲಾಬಿನ್, ಸೆರುಲೋಪ್ಲಾಸ್ಮಿನ್, ೨ – ಮ್ಯಾಕ್ರೊಗ್ಲಾಬ್ಯುಲಿನುಗಳು ಇವೆ. ಬೀಟ ($\beta$) ಗ್ಲಾಬ್ಯುಲಿನುಗಳಲ್ಲಿ ಟ್ರಾನ್ಸ್‌ಫರಿನ್, ಬೀಟ ಲೈಪೋಪ್ರೊಟೀನುಗಳಿವೆ. ಗ್ಯಾಮ ($\gamma$) ಗ್ಲಾಬ್ಯುಲಿನುಗಳಿವೆ. ೫ ರೀತಿಯ ಇಮ್ಯೂನೋ ಗ್ಲಾಬ್ಯುಲಿನುಗಳೂ ಇವೆ. ***

**ಗ್ಲಾಸಿನ್ ನೊಣ:** ಡಿಪ್ಟರ ಗಣದ ಮಸಿಡೆ ಕುಟುಂಬದ ಸದಸ್ಯ. ಇದರ ಪರ್ಯಾಯ ನಾಮ ಟ್ಸೆಟ್ಸೀ ನೊಣ. ಇದರಲ್ಲಿ ಸು. ೨೧ ಪ್ರಭೇದಗಳಿವೆ. ಅರೇಬಿಯದ ನೈರುತ್ಯ ಭಾಗದಲ್ಲಿರುವ ಒಂದು ಪ್ರಭೇದವನ್ನು ಬಿಟ್ಟರೆ, ಉಳಿದೆಲ್ಲುವೂ ಆಫ್ರಿಕದಲ್ಲಿ ಮಾತ್ರ ಜೀವಿಸುತ್ತವೆ. ಗ್ಯಾಂಬಿಯ, ನೈಜೀರಿಯ, ಅಬಿಸೀನಿಯ, ಕೀನ್ಯ, ಉಗಾಂಡ, ಕಾಂಗೊ, ಅಂಗೋಲ ದೇಶಗಳ ದಟ್ಟ ಕಾಡುಗಳಲ್ಲಿ ನೀರಿನ ಆಸರೆಯಿರುವ ಪ್ರದೇಶದಲ್ಲಿ ಇವುಗಳ ವಾಸ. ಇವು ಪ್ರಾಣಿಗಳ (ಉದಾ: ದನ, ಕುದುರೆ) ಹಾಗೂ ಮಾನವನ ರಕ್ತವನ್ನು ಹೀರಿ ಬದುಕುತ್ತವೆ. ಇವುಗಳಲ್ಲಿ ಕೆಲವು ಪ್ರಭೇದದ ನೊಣಗಳು ಮನುಷ್ಯ ಮತ್ತು ಪ್ರಾಣಿಗಳಲ್ಲಿ ನಿದ್ರಾವಾತರೋಗವನ್ನು

(ಸ್ಲೀಪಿಂಗ್ ಸಿಕ್‌ನೆಸ್) ಉಂಟುಮಾಡುವ ರೋಗಾಣುಗಳ ವಾಹಕಗಳು. ಇಂಥ ರೋಗವಾಹಕ ನೊಣಗಳಲ್ಲಿ ಮುಖ್ಯವಾದುವು ಪಶ್ಚಿಮ ಮತ್ತು ಮಧ್ಯ ಆಫ್ರಿಕದಲ್ಲಿ ವಾಸಿಸುವ ಗ್ಲಾಸಿನ್ ಪಾಲ್ಪಾಲಿಸ್ ಮತ್ತು ಪೂರ್ವ ಆಫ್ರಿಕದಲ್ಲಿ ಜೀವಿಸುವ ಗ್ಲಾ. ಮಾರ್ಸಿಟಾನ್ಸ್.

ಗ್ಲಾಸಿನ ನೊಣಗಳು ದೃಢಕಾಯದ ಕೀಟಗಳು. ಇವುಗಳ ಗಾತ್ರ ಸಾಮಾನ್ಯ ನೊಣಕ್ಕಿಂತ ಹೆಚ್ಚು. ದೇಹದ ಬಣ್ಣ ಹಳದಿಯಿಂದ ಕಗ್ಗಂದಿನವರೆಗೆ ವ್ಯತ್ಯಾಸವಾಗುತ್ತದೆ. ಉದರ ಭಾಗದ ಮೇಲೆ ಪಟ್ಟಿಗಳಿವೆ. ಬಾಯಿಯ ವಿವಿಧ ಭಾಗಗಳು ಆತಿಥೇಯ ಪ್ರಾಣಿಯ ದೇಹವನ್ನು ಚುಚ್ಚಿ ರಕ್ತಹೀರಲು ಅನುಕೂಲವಾಗಿವೆ. ರಕ್ತ ಹೀರುವಾಗ ಕೆಳಕ್ಕೆ ಬಾಗುವ ಇವು ಬೇರೆ ಸಮಯಗಳಲ್ಲಿ ಸಮತಳವಾಗಿ ಇರುತ್ತವೆ. ಕುಡಿಮೇಸೆಗಳ ಮೇಲೆ ಒಂದು ಬಿರುಗೂದಲಿನಂಥ ಅಂಗವಿದೆ. ಇದರ ಮೇಲೆ ಒಂಟಿಸಾಲಿನಲ್ಲಿ ಉದ್ದನೆಯ ಮತ್ತು ಕವಲೊಡೆದ ಕೂದಲುಗಳಿವೆ.

ಗ್ಲಾಸಿನ ನೊಣಗಳ ಆಯಸ್ಸು ೧ – ೩ ತಿಂಗಳುಗಳು. ಇವು ಮೊಟ್ಟೆಗಳನ್ನಿಡದೆ, ನೇರವಾಗಿ ಮರಿಗಳಿಗೆ ಜನ್ಮನೀಡುತ್ತವೆ. ನೀರಿರುವ ಸ್ಥಳಗಳಲ್ಲಿ ಹೆಣ್ಣು ನೊಣ ೧೦ ದಿವಸಗಳಿಗೊಮ್ಮೆ ಮರಿ ಹಾಕುತ್ತದೆ. ಮರಿಗಳ ಭ್ರೂಣಾವಸ್ಥೆ ಮತ್ತು ಡಿಂಬಾವಸ್ಥೆಗಳ ಅವಧಿ ಸು. ೯ ದಿವಸಗಳು. ತಾಯಿಯ ಗರ್ಭಕೋಶದ ಭಿತ್ತಿಯ ಮೇಲಿರುವ ಒಂದು ಜೊತೆ ಕ್ಷೀರಗ್ರಂಥಿಗಳಿಂದ ಒಸರುವ ದ್ರವರೂಪದ ಆಹಾರವನ್ನು ಕುಡಿದು ಮರಿಗಳು ಬೆಳೆಯುತ್ತವೆ. ಡಿಂಬಗಳು ಅನಂತರ ಮಣ್ಣಿನೊಳಗೆ ಸೇರಿ ಕೋಶಾವಸ್ಥೆ ಹೊಂದುತ್ತವೆ. ಅನೇಕ ವಾರಗಳ ಮೇಲೆ ಪ್ರೌಢಜೀವಿಗಳಾಗಿ ಹೊರಬರುತ್ತವೆ.

ಗ್ಲಾಸಿನ ನೊಣಗಳ ಚಟುವಟಿಕೆ ವಾತಾವರಣದ ಉಷ್ಣತೆ ಮತ್ತು ಆರ್ದ್ರತೆಗಳನ್ನು ಅವಲಂಬಿಸಿದೆ. ಉಷ್ಣತೆ ಹೆಚ್ಚಾಗಿದ್ದಾಗ, ಬೆಳಗ್ಗೆ ಹಾಗೂ ಸಂಜೆ ಇವುಗಳ ಚಟುವಟಿಕೆ ಹೆಚ್ಚು. ಗ್ಲಾ. ಬ್ರೆವಿಪಾಲ್ಪಾಲಿಸ್ ಮಾತ್ರ ರಾತ್ರಿ ತುಂಬಾ ಚಟುವಟಿಕೆಯಿಂದಿರುತ್ತದೆ. ಇವು ಜೀವಿಸುವ ಪೊದೆಗಳನ್ನು ನಾಶಮಾಡುವುದರಿಂದ, ಕೀಟನಾಶಕಗಳನ್ನು ಬಳಸುವುದರಿಂದ ಗ್ಲಾಸಿನ ನೊಣಗಳಿಂದಾಗುವ ತೊಂದರೆಯನ್ನು ನಿವಾರಿಸಬಹುದು. (ಜಿ.ಆರ್.ಆರ್.ಎಸ್.)

**ಗ್ಲೂಕೋಸ್:** D-ಗ್ಲೂಕೋಸ್, D-ಗ್ಲುಕೊಪೈರನೋಸ್, ದ್ರಾಕ್ಷಿ ಸಕ್ಕರೆ, ಧಾನ್ಯ ಸಕ್ಕರೆ, ಡೆಕ್ಸ್‌ಟ್ರೋಸ್, ಸೆರೆಲೋಸ್ ಎಂಬ ವಿವಿಧ ಹೆಸರುಗಳಿಂದ ಪರಿಚಿತವಾಗಿರುವ ಒಂದು ಏಕಶರ್ಕರ. ಇದರ ರಾಸಾಯನಿಕ ಅಣು ಸೂತ್ರ $C_6H_{12}O_6$. ಪಿಷ್ಟಪದಾರ್ಥಗಳಲ್ಲಿ ಇದಕ್ಕೆ ಅತ್ಯಂತ ಪ್ರಮುಖ ಸ್ಥಾನ ಉಂಟು. ಬಹುಶಃ ಹೆಚ್ಚಿನ ಎಲ್ಲ ಹಣ್ಣು (ವಿಶೇಷತಃ ದ್ರಾಕ್ಷಿ, ಬಾಳೆಹಣ್ಣು, ಚೆರಿ) ಮತ್ತು ಜೇನಿನಲ್ಲಿ ತನ್ನದೇ ರೂಪದಲ್ಲಿಯೂ ಗ್ಲೂಕೋಸ್ ಇದೆ. ಆದ್ದರಿಂದ ಸಸ್ಯ ರಾಜ್ಯದಲ್ಲಿ ಇದು ಬಲು ವಿಪುಲ. ಹೂ, ಎಲೆಗಳಲ್ಲಿ ಕೂಡ ಇದು ಗ್ಲೂಕೊಸೈಡುಗಳ ಘಟಕವಾಗಿ ಉಂಟು. ಸರ್ವಸಾಮಾನ್ಯವಾಗಿ ಎಲ್ಲ ಪ್ರಾಣಿದೇಹಗಳಲ್ಲಿಯೂ ಇರುತ್ತದೆ. ಆದರೆ ಅತ್ಯಲ್ಪ ಗಾತ್ರದಲ್ಲಿ ಮಾತ್ರ. ಪ್ರಾಣಿ ದೇಹದ ದ್ರವಗಳಲ್ಲಿ ಕೆಲವು ಸಂದರ್ಭಗಳಲ್ಲಿ ಸ್ವಾಭಾವಿಕ ಘಟಕವಾಗಿಯೂ, ಕೆಲವೊಮ್ಮೆ ಯಾವುದಾದರೂ ರೋಗದ ಲಕ್ಷಣವಾಗಿಯೂ ಗ್ಲೂಕೋಸ್ ಕಂಡುಬರುತ್ತದೆ. ಆರೋಗ್ಯವಂತ ಮಾನವನ ರಕ್ತದಲ್ಲಿ ೦.೧೫ % ತೂಕದ ಗಾತ್ರದಲ್ಲಿಯೂ ಮಧುಮೇಹರೋಗಿಗಳ ರಕ್ತ ಮೂತ್ರಗಳಲ್ಲಿ ೨%–೩% ವರೆಗೂ ಇರುವುದು.

ಸುಕ್ರೋಸನ್ನು (ಸಕ್ಕರೆ) ಮದ್ಯಾರ್ಕದಲ್ಲಿ ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ಸೇರಿಸಿ ಕುದಿಸಿ ಆರಿಸಿದರೆ ಗ್ಲೂಕೋಸ್ ಬಿಳಿ ಪುಡಿಯಾಗಿ ಹೊರಬರುತ್ತದೆ. ಅದನ್ನು ಸೋಸಿ ಕುದಿಯುವ ಮದ್ಯಾರ್ಕದಲ್ಲಿ ಕರಗಿಸಿ ಆ ದ್ರವಣವನ್ನು ಆರಿಸಿದರೆ ಶುದ್ಧ ಗ್ಲೂಕೋಸ್ ದೊರೆಯುತ್ತದೆ. ದೊಡ್ಡ ಪ್ರಮಾಣದಲ್ಲಿ ಸ್ಟಾರ್ಚನ್ನು ಸಲ್ಫ್ಯೂರಿಕ್ ಆಮ್ಲದೊಂದಿಗೆ ಬೆರೆಸಿ ಹೆಚ್ಚು ಒತ್ತಡದಿಂದ ಕುದಿಸಿದ ಬಳಿಕ ತಯಾರಾಗುವ ದ್ರಾವಣದಲ್ಲಿಯ ಅಧಿಕಾಂಶ ನೀರನ್ನು ಆವಿಯಾಗಿ ಕಳೆಯುತ್ತಾರೆ. ಇದರಿಂದ ದೊರೆಯುವ ಸ್ನಿಗ್ಧ ದ್ರಾವಣವನ್ನು ಕಾರ್ನ್ ಸಿರಪ್ ಎಂದು ಮಾರುವುದುಂಟು. ಈ ಸಿರಪನ್ನು ಇದ್ದಲು ಪುಡಿಯಲ್ಲಿ ಹಾಯಿಸಿ, ನೀರನ್ನು ಆವಿಯಾಗಿ ಕಳೆದಾಗ ದೊರೆಯುವ ಬಿಳಿ ಪುಡಿಯೇ ಗ್ಲೂಕೋಸ್. ಆರು ಭುಜಗಳ ಬಿಳಿ ಸ್ಫಟಿಕ ರಚನೆ ಇದಕ್ಕಿದೆ.

ಇದು ನೀರಿನಲ್ಲಿ ಅಧಿಕವಾಗಿಯೂ, ಮದ್ಯಾರ್ಕದಲ್ಲಿ ಕಡಿಮೆ ಪ್ರಮಾಣದಲ್ಲಿಯೂ ಕರಗುವುದು. ರುಚಿಯಲ್ಲಿ ಸಕ್ಕರೆಗಿಂತ ಕಡಿಮೆ ಸಿಹಿ (ಸುಮಾರು ಅರ್ಧದಷ್ಟು). ಸ್ಫಟಿಕಜಲಸಹಿತವಾದ ಗ್ಲೂಕೋಸ್ ($C_2H_{12}O_6.H_2O$) $86^0$ ಸೆ. ನಲ್ಲೂ ಒಣ ಗ್ಲೂಕೋಸ್ $146^0$ ಸೆ. ನಲ್ಲೂ ದ್ರವಿಸುತ್ತದೆ. ಗ್ಲೂಕೋಸಿನ ಪುಡಿಯನ್ನು $200^0$ ಸೆ. ಉಷ್ಣತೆಯಲ್ಲಿ ಕಾಯಿಸಿದರೆ ಅನುಕ್ರಮವಾಗಿ ಹಳದಿ, ಕಂದು, ಚಾಕೊಲೇಟ್ ಬಣ್ಣಗಳನ್ನು ಪಡೆದು ಕ್ಯಾರಾಮೆಲ್ ತಯಾರಾಗುತ್ತದೆ. ಅದನ್ನು ಮಿಠಾಯಿ ತಯಾರಿಸುವುದಕ್ಕಾಗಿಯೂ ಮದ್ಯಕ್ಕೆ ಆಕರ್ಷಕ ಕಂದು ಬಣ್ಣವನ್ನು ಕೊಡುವುದಕ್ಕಾಗಿಯೂ ಉಪಯೋಗಿಸುತ್ತಾರೆ. ನಿಕೋಲ್ ಪ್ರಿಸ್ಮಿನೊಳಗಿಂದ ಹಾಯ್ದು ಬಂದ ಬೆಳಕಿನ ಕಿರಣಗಳನ್ನು (ಅಂದರೆ ಧ್ರುವೀಕೃತ ಕಿರಣಗಳನ್ನು) ಗ್ಲೂಕೋಸ್ ದ್ರಾವಣದಲ್ಲಿ ಹಾಯಿಸಿದಾಗ ಕಿರಣಗಳ ಕಂಪನಕಕ್ಷೆ ಬಲಕ್ಕೆ (ಅಂದರೆ ಪ್ರದಕ್ಷಿಣ ದಿಶೆ) ತಿರುಗಿಸಲ್ಪಡುತ್ತದೆ. ಅದೇ ತಯಾರಿಸಿದ ಗ್ಲೂಕೋಸ್ ದ್ರಾವಣದ ವಿಶಿಷ್ಟ ಕಿರಣಾವರ್ತನ ಸಾಮರ್ಥ್ಯ (ಸ್ಪೆಸಿಫಿಕ್ ರೊಟೇಶನ್) $+ 110^0$. ಇದು ಕ್ರಮೇಣ ಕಡಿಮೆಯಾಗುತ್ತ ಸುಮಾರು 24 ಗಂಟೆಗಳಲ್ಲಿ $+ 52.2^0$ ಬಂದು ನಿಲ್ಲುತ್ತದೆ. ಈ ವ್ಯತ್ಯಯಾವರ್ತನೆಯ (ಮ್ಯೂಟರೊಟೇಶನ್) ಕಾರಣದ ಸಂಶೋಧನೆಯ ಪರಿಣಾಮವಾಗಿ ಗ್ಲೂಕೋಸಿನ ಎರಡು ರೂಪಗಳೂ ($\alpha$–$\beta$–D ಗ್ಲೂಕೋಸ್) ಅವುಗಳ ರಚನೆಯ ಸೂಕ್ಷ್ಮ ವಿವರಗಳೂ ಕಂಡು ಹಿಡಿಯಲ್ಪಟ್ಟವು. ಅಮೋನಿಯದಲ್ಲಿ ಕರಗಿಸಿದ ಸಿಲ್ವರ್ ನೈಟ್ರೇಟ್ ದ್ರಾವಣದಲ್ಲಿ ಗ್ಲೂಕೋಸನ್ನು ಬೆರೆಸಿ ಒಂದು ಪರೀಕ್ಷಾ ನಳಿಕೆಯಲ್ಲಿ ಕಾಯಿಸಿದರೆ ದ್ರಾವಣದೊಳಗಿಂದ ಬೆಳ್ಳಿ ಹೊರ ಬಂದು ಗಾಜಿನ ಮೇಲೆ ತೆಳುವಾಗಿ ಹರಡಿಕೊಂಡು ಗಾಜು ಕನ್ನಡಿಯಂತಾಗುತ್ತದೆ. ಅದೇ ಪ್ರಕಾರ ಫೆಹ್ಲಿಂಗನ ದ್ರಾವಣಗಳೆರಡನ್ನೂ (A ಮತ್ತು B) ಸಮಪ್ರಮಾಣದಲ್ಲಿ ಬೆರೆಸಿ ಆ ಮಿಶ್ರಣಕ್ಕೆ ಗ್ಲೂಕೋಸ್ ದ್ರಾವಣವನ್ನು ಕುದಿಸಿದರೆ ಕೆಂಪು ಪುಡಿ ಹೊರಬರುತ್ತದೆ. ಗ್ಲೂಕೋಸನ್ನು ಕಂಡುಹಿಡಿಯಲಿಕ್ಕೂ ಯಾವುದೇ ವಸ್ತುವಿನಲ್ಲಿ ಗ್ಲೂಕೋಸಿನ ತೂಕದ ಪ್ರಮಾಣವನ್ನು ಅಳೆಯಲಿಕ್ಕೂ ಈ ಪ್ರಯೋಗವನ್ನು ಉಪಯೋಗಿಸುತ್ತಾರೆ. ಇದಲ್ಲದೆ ಗ್ಲೂಕೋಸಿನ ಕಿರಣಾವರ್ತನ ಸಾಮರ್ಥ್ಯವೂ ಇದಕ್ಕಾಗಿ ಉಪಯೋಗಿಸಲ್ಪಡುತ್ತದೆ. ಮದ್ಯವೊಂದನ್ನು ಬಿಟ್ಟರೆ ಮಾನವನ ಜಠರದಲ್ಲಿ ಬದಲಾವಣೆಯನ್ನು ಹೊಂದದೆ ನೇರವಾಗಿ ರಕ್ತಕ್ಕೆ ಕೂಡಲ್ಪಡುವ ಆಹಾರವೆಂದರೆ ಗ್ಲೂಕೋಸ್ ಒಂದೇ. ಆದ್ದರಿಂದ ಜಡ ಆಹಾರವನ್ನು ಪಚನ ಮಾಡಿಕೊಳ್ಳಲಾರದ ರೋಗಿಗಳಿಗೆ ಇದನ್ನು ಆಹಾರದಲ್ಲಾಗಲಿ ಎನಿಮಾದಿಂದಾಗಲಿ ಅಥವ ನೇರವಾಗಿ ರಕ್ತನಾಳಗಳಿಗೆ ಚುಚ್ಚುಮದ್ದಿನಿಂದಾಗಲಿ ಕೊಡುತ್ತಾರೆ. ಮಾನವನ ದೇಹದಲ್ಲಿಯ ಸವಕಳಿಯ ಪೂರೈಕೆ ಮತ್ತು ಬೆಳವಣಿಗೆಗಳಿಗಾಗಿ ಗ್ಲೂಕೋಸ್ ಉಪಯೋಗವಾಗುತ್ತದೆ. ಗ್ಲೂಕೋಸಿನ ದ್ರಾವಣದಲ್ಲಿ ಯೀಸ್ಟನ್ನು ಬೆರೆಸಿ ಹುಳಿಯಗೊಟ್ಟರೆ ಮದ್ಯ ತಯಾರಾಗುತ್ತದೆ. (ವಿ.ಆರ್.ಡಿ.)

**ಗ್ವಾನಕೋ:** ಆರ್ಟಿಯೊಡ್ಯಾಕ್ಟಿಲ ಗಣದ ಕಮೆಲಿಡೆ ಕುಟುಂಬಕ್ಕೆ ಸೇರಿದ ಒಂದು ಸ್ತನಿ. ಅಲ್ಪಾಕ, ಲಾಮಗಳ ಹತ್ತಿರ ಸಂಬಂಧಿ. ಲಾಮ ಗ್ವಾನಕೀ ಇದರ ವೈಜ್ಞಾನಿಕ ನಾಮ. ದಕ್ಷಿಣ ಅಮೆರಿಕದ ಪಶ್ಚಿಮ ಮತ್ತು ದಕ್ಷಿಣ ಭಾಗಗಳ ಬೆಟ್ಟಗಳಲ್ಲಿ ಕಾಣಬರುತ್ತದೆ. ಪೆರುವಿನಿಂದ ಹಿಡಿದು ಕೇಪ್ ಹಾರ್ನ್‌ವರೆಗೆ ಇದರ ವ್ಯಾಪ್ತಿ ಇದೆ. ಸುಮಾರು 1.2 ಮೀ ಎತ್ತರದ ಪ್ರಾಣಿಯಿದು. ದೇಹದ ಉದ್ದ 1.2–1.5 ಮೀ, ತೂಕ 48–96 ಕಿಗ್ರಾಂ. ದೇಹದ ಮೇಲೆಲ್ಲಾ ತುಪ್ಪುಳದಂಥ ಕೂದಲುಗಳ ಹೊದಿಕೆಯಿದೆ. ಇದರ ಬಣ್ಣ ತಿಳಿ ಕಂದು. ಉದರ ಭಾಗ ಬೆಳ್ಳಗಿದೆ. ಮುಖ ಮಾತ್ರ ಸ್ವಲ್ಪ ಕಪ್ಪು ಬಣ್ಣದ್ದು. ಕತ್ತು ಒಂಟೆ, ಲಾಮಗಳಲ್ಲಿರುವಂತೆ ಇದೆ. ಕಾಲುಗಳು ತೆಳುವಾಗಿಯೂ ಉದ್ದವಾಗಿಯೂ ಇವೆ. ಹುಲ್ಲು ಇದರ ಪ್ರಧಾನ ಆಹಾರ.

ಗ್ವಾನಕೋ ಸಂಘಜೀವಿ. 10–30ರ ಗುಂಪುಗಳಲ್ಲಿ ವಾಸಿಸುತ್ತದೆ. ಗುಂಪಿನಲ್ಲಿ ಒಂದೇ ಒಂದು ಗಂಡು ಇರುತ್ತದೆ. ಇವು ಬಲುವೇಗವಾಗಿ ಓಡಬಲ್ಲುವು (ಘಂಟೆಗೆ 50 ಕಿಮೀ), ಚೆನ್ನಾಗಿ ಈಜಲೂ ಬಲ್ಲುವು. ಇವು ಬಹಳ ಸೂಕ್ಷ್ಮಗ್ರಾಹಿಗಳಾದುದರಿಂದ ಇವನ್ನು ಸಮೀಪಿಸುವುದು ಕಷ್ಟ. ಇವು ಎರಡು ವರ್ಷಕ್ಕೊಮ್ಮೆ ಮರಿ ಹಾಕುತ್ತವೆ. ಗರ್ಭಾವಸ್ಥೆಯ ಅವಧಿ 10–11 ತಿಂಗಳುಗಳು. ಒಂದು ಸಲಕ್ಕೆ ಒಂದೇ ಒಂದು ಮರಿ ಹುಟ್ಟುತ್ತದೆ. ಗ್ವಾನಾಕೋಗಳ ಆಯಸ್ಸು ಸುಮಾರು 20 ವರ್ಷಗಳು. ಗ್ವಾನಕೋಗಳನ್ನು ಮಾಂಸಕ್ಕಾಗಿ, ಚರ್ಮಕ್ಕಾಗಿ ಬೇಟೆಯಾಡುವುದಿದೆ. ಇವನ್ನು ಸಾಕಲೂಬಹುದು. ಪಟಗೋನಿಯದ ಇಂಡಿಯನರು ಇವುಗಳ ಸಗಣಿಯನ್ನು ಉರುವಲಾಗಿ ಬಳಸುತ್ತಾರೆ. (ಜಿ.ಎಸ್.ಆರ್)

**ಗ್ವೆರಿಜ (ಕೋತಿ):** ಕೊಲೋಬಸ್ ಜಾತಿಗೆ ಸೇರಿದ 8 ಬಗೆಯ ಕೋತಿಗಳ ಸಾಮಾನ್ಯ ಹೆಸರು. ಕೊಲೋಬಸ್ ಪಾಲಿಕೋಮೋಸ್ (ಕಪ್ಪು ಬಿಳಿಪು ಗ್ವೆರಿಜ), ಕೊ. ಬೆಡಿಂಪಸ್ (ಕೆಂಪು ಗ್ವೆರಿಜ), ಕೊ. ವೇರಸ್ (ಆಲಿವ್ ಗ್ವೆರಿಜ) ಮೂರು ಬಗೆಗಳು. ಇವು ಪ್ರೈಮೇಟ್ ಗಣದ ಸರ್ಕೋಪಿತೆಸಿಡೆ ಕುಟುಂಬಕ್ಕೆ ಸೇರಿವೆ. ಮಧ್ಯ ಆಫ್ರಿಕದ ದಟ್ಟಕಾಡುಗಳಲ್ಲಿ ಮಾತ್ರ ಇವುಗಳ ವಾಸ. ಸೆನೆಗಲ್, ಇಥಿಯೋಪಿಯ ಮತ್ತು ಅಂಗೋಲಗಳ ವಿಸ್ತಾರವಾದ ಪ್ರದೇಶಗಳಲ್ಲಿ ಕಾಣಸಿಗುತ್ತವೆ.

ಚಿಕ್ಕಗಾತ್ರದ ಕಪಿಗಳಿವು. ದೇಹದ ಉದ್ದ 50–70 ಸೆಂಮೀ. ತೂಕ ಸುಮಾರು 12 ಕಿ.ಗ್ರಾಂ ದೇಹದಷ್ಟೇ ಉದ್ದದ ಬಾಲವಿದೆ. ತೆಳುವಾದ ದೇಹ, ಉದ್ದವಾದ ಬಾಲ,

ಚೆನ್ನಾಗಿ ಬೆಳೆದ ಜಡ್ಡುಗಟ್ಟಿದ ಪೃಷ್ಠದ ಉಬ್ಬುಭಾಗ ಇವು ಗ್ವೆರಿಜಗಳ ಕೆಲವು ಲಕ್ಷಣಗಳು. ಹೆಬ್ಬೆರಳು ಇಲ್ಲದಿರುವುದು ಇವುಗಳ ಅತ್ಯಂತ ಮುಖ್ಯ ಲಕ್ಷಣ. ಇದರಿಂದಲೇ ಈ ಜಾತಿಗೆ ಕೊಲೋಬಸ್ ಎಂಬ ಹೆಸರು ಬಂದಿದೆ (ಗ್ರೀಕ್ ಭಾಷೆಯಲ್ಲಿ ಕೊಲೋಬಸ್ ಎಂದರೆ ಊನವಾಗಿರುವುದು ಎಂದು ಅರ್ಥ). ಕಪ್ಪು ಬಿಳುಪು ಗ್ವೆರಿಜದಲ್ಲಿ ಬೆನ್ನಿನ ಎರಡು ಪಕ್ಕಗಳಲ್ಲೂ ಬಾಲದಲ್ಲೂ ಬಹಳ ಉದ್ದವಾದ ಬಿಳಿಯ ಬಣ್ಣದ ಮತ್ತು ರೇಷ್ಮೆಯಂಥ ಕೂದಲುಗಳಿವೆ. ಕೆನ್ನೆಯ ಮೇಲೂ ಉದ್ದನೆಯ ಬಿಳಿಯ ಕೂದಲುಗಳ ಕುಚ್ಚಿದೆ. ಇದರಿಂದಾಗಿ ಇದನ್ನು ಬಿಷಪ್ ಮಂಕಿ ಎಂದು ಕರೆಯುವುದುಂಟು.

ಗ್ವೆರಿಜಗಳು ಸಾಮಾನ್ಯವಾಗಿ ಉನ್ನತವಾದ ಮರಗಳಲ್ಲೇ ಇರುತ್ತವೆ. ನೆಲಕ್ಕೆ ಇಳಿಯುವುದು ಅಪರೂಪ. ವಿವಿಧ ಬಗೆಯ ಹಣ್ಣು, ಎಲೆಗಳನ್ನು ತಿಂದು ಬದುಕುತ್ತವೆ. ಇವು ಬಲುನಾಚಿಕೆಯ ಸ್ವಭಾವದುವು. ಇವುಗಳ ದೇಹದ ಬಣ್ಣ ಹಿನ್ನೆಲೆಯೊಂದಿಗೆ ಬಲು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಇವು ಸಾಮಾನ್ಯವಾಗಿ ಸ್ವಲ್ಪವೂ ಸದ್ದುಮಾಡದೆ ಅಡಗಿರುವುದರಿಂದ ಕಣ್ಣಿಗೆ ಬೀಳುವುದೇ ಅಪರೂಪ. ಗ್ವೆರಿಜಗಳನ್ನು ಅವುಗಳ ಚರ್ಮಕ್ಕಾಗಿ ಬೇಟೆಯಾಡುತ್ತಾರೆ. ಆಫ್ರಿಕದ ಮೂಲವಾಸಿಗಳು ತಮ್ಮ ತಲೆಯುಡಿಗೆ, ಮೇಲಂಗಿ, ಬಿಲ್ಲು, ಗುರಾಣಿ ಮುಂತಾದುವುಗಳ ಅಲಂಕರಣಕ್ಕೆ ಈ ಚರ್ಮವನ್ನು ಉಪಯೋಗಿಸುತ್ತಾರೆ. (ಜಿ.ಎಸ್.ಆರ್.)

# ಘ

**ಘ್ರಾಣಮಂಡಲ:** ವಾಸನೆಯನ್ನು ಗ್ರಹಿಸಿದ ಬಳಿಕ ಅದನ್ನು ನರಗಳ ಮೂಲಕ ಮಿದುಳಿಗೆ ರವಾನಿಸಿ ಅಲ್ಲಿ ಅದರ ಅನುಭವವನ್ನು ಉಂಟುಮಾಡುವ ವ್ಯವಸ್ಥೆ (ಆಲ್‌ಫ್ಯಾಕ್ಟರಿ ಸಿಸ್ಟಮ್). ಇದರಲ್ಲಿ ಮೂಗು, ಘ್ರಾಣೇಂದ್ರಿಯದ ನರಮಾರ್ಗ ಮತ್ತು ಮಿದುಳು ಸೇರಿವೆ. ಮೂಗಿನ ಹೊಳ್ಳೆಗಳ ಲೋಳೆಪೊರೆಯ ಶಿರೋಭಾಗ ಘ್ರಾಣಸಂಬಂಧಿ ಲೋಳೆಪರೆಯಿಂದ ಆವೃತವಾಗಿ ವಾಸನೆಯನ್ನು ಗ್ರಹಿಸಲು ಸಹಾಯಕವಾಗಿದೆ; ತಳಭಾಗ ಉಸಿರಾಟದ ಮಾರ್ಗ. ಮೂಗಿನ ಹೊರ ಮೇಲ್ಭಾಗದ ಆಕಾರ ಮೂಳೆಯಿಂದ ಒದಗಿದರೆ ಕೆಳಭಾಗದ ಆಕಾರ ಮೃದ್ವಸ್ಥಿಯಿಂದ ಒದಗುತ್ತದೆ. ಹೊಳ್ಳೆಗಳ ಪಕ್ಕದ ಕೆಳಭಾಗ ಕೇವಲ ದರ್ಮದಿಂದ ಆಗಿದ್ದು ಚರ್ಮದ ಮಧ್ಯದಲ್ಲಿರುವ ತಂತುಗಳೊಂದಿಗೆ ಕೊಬ್ಬಿನ ಅಂಶವೂ ಸೇರಿಕೊಂಡಿದೆ. ಎಡ ಮತ್ತು ಬಲ ಮೂಗಿನ ಹೊಳ್ಳೆಗಳು ಒಂದು ನಡುತಡಿಕೆಯಿಂದ ಬೇರ್ಪಟ್ಟಿವೆ. ಇದರ ಕೆಳಭಾಗವನ್ನು ಗೊಂಚಲಿನಂತಿರುವ ಗ್ರಂಥಿಗಳು ಮತ್ತು ಅಧಿಕ ರಕ್ತನಾಳಗಳನ್ನು ಒಳಗೊಂಡಿರುವ ಲೋಳೆಪೊರೆ ರೂಪಿಸಿವೆ. ನಡುತಡಿಕೆಯ ಮೇಲಿನ ಭಾಗ ಒಂದರಿಯಂಥ ಮೂಳೆಯಿಂದಲೂ (ಎತ್‌ಮಾಯಿಡ್) ಇದರ ಕೆಳಗೆ ವೋಮರ್ ಎಂಬ ಹೆಸರಿನ ಮೂಳೆಯಿಂದಲೂ ಮುಂದಿನ ಭಾಗ ತಡಿಕೆಯ ಮೃದ್ವಸ್ಥಿಯಿಂದಲೂ ಆಗಿವೆ. ಮೂಗಿನ ಹೊಳ್ಳೆಗಳ ಪಕ್ಕದ ಗೋಡೆಗಳ ಭಾಗವು ಅಧೋಮುಖ ಶಂಕ್ವಾಕಾರದ ಮೂಳೆಗಳಿಂದ ಮೂರು ನಾಲೆಗಳಾಗಿ ವಿಭಾಗಗೊಂಡಿದೆ. ಈ ಮೂಳೆಗಳಿಗೆ ಕಾಙ್ಕಗಳೆಂದು ಹೆಸರು. ಮೇಲು ಭಾಗದ ಕಾಙ್ಕಕ್ಕೂ ಮೂಗಿನ ಛಾವಣಿಗೂ ನಡುವೆ ಇರುವ ಜಾಗಕ್ಕೆ ಸ್ಫೀನಾಯಿಡ್ ಎಲುಬಿನ ವಾಯುಕೋಶಗಳೊಂದಿಗೆ ಸಂಪರ್ಕ ಉಂಟು. ಈ ಜಾಗವೇ ಸ್ಫೀನೋಎತ್‌ಮಾಯಿಡ್ ಆವರಣ. ಮೇಲಿನ ಮತ್ತು ಮಧ್ಯದ ಕಾಙ್ಕಗಳ ನಡುವೆ ಮೇಲಿನ ನಾಲೆ (ಸುಪೀರಿಯರ್ ಮಿಯೆಟಸ್) ಉಂಟು. ಈ ಜಾಗಕ್ಕೆ ಅದರ ಹಿಂಭಾಗದಲ್ಲಿನ ಎತ್‌ಮಾಯಿಡ್ ಮೂಳೆಯ ವಾಯುಕೋಶಗಳೊಂದಿಗೆ ಸಂಪರ್ಕ ಏರ್ಪಟ್ಟಿದೆ. ಮಧ್ಯದ ಮತ್ತು ಕೆಳಗಿನ ಕಾಙ್ಕಗಳ ನಡುವೆ ಮಧ್ಯನಾಲೆ (ಮಿಡಲ್ ಮಿಯೆಟಸ್) ಉಂಟು. ಮೂರು ನಾಲೆಗಳಲ್ಲಿ ಇದೇ ಅತ್ಯಂತ ದೊಡ್ಡದು. ಇದರಲ್ಲಿ ವೃತ್ತಾಕಾರದ ಉಬ್ಬುಭಾಗವಿದೆ. ಇದೇ ಎತ್‌ಮಾಯಿಡ್ ಕೋಶಗಳ ದಿಣ್ಣೆ. ಇದಕ್ಕೆ ಮೇಲ್ದವಡೆಯ ಡೊಗರಿನೊಂದಿಗೆ (ಮ್ಯಾಕ್ಸಿಲರಿ ಸೈನಸ್) ಮುಂದೆ ಹಾಗೂ ಕೆಳಗೆ ಸಂಪರ್ಕ ಏರ್ಪಟ್ಟಿದೆ. ಕೆಳಗಿನ ನಾಲೆ (ಇನ್‌ಫೀರಿಯರ್ ಮಿಯೆಟಸ್) ಕೆಳಕಾಙ್ಕದ ಕೆಳಗೆ ಉಂಟು. ಇದನ್ನು ಎತ್ತಿ ಹಿಡಿದರೆ ಕವಾಟದಂತಿರುವ ಮೂಗಿನ ಒಳದ್ವಾರ ಗೋಚರವಾಗುವುದು. ಮೂಗಿನ ಛಾವಣಿ ಕಿರಿದಾಗಿದೆ. ಅಲ್ಲಿ ಘ್ರಾಣಕ್ಕೆ ಸಂಬಂಧಿಸಿದ ನರಗಳು ಜರಡಿಯಂತಿರುವ ತೆಳುವಾದ ಮೂಳೆಯ ಮೂಲಕ ಹಾದುಹೋಗಿವೆ.

ಭ್ರೂಣದ ಬೆಳೆವಣಿಗೆಯ ಮೂರನೆಯ ವಾರದಲ್ಲಿ ತಲೆಭಾಗದ ಮುಂದುಗಡೆಯಲ್ಲಿ ಮೂಗಿನ ಎರಡು ತಗ್ಗುಗಳು ಉಂಟಾಗುತ್ತವೆ. ಘ್ರಾಣೇಂದ್ರಿಯಕ್ಕೆ ಸಂಬಂಧಿಸಿದಂತೆ ಮೂಗಿನ ಬೆಳೆವಣಿಗೆಯಲ್ಲಿ ಪ್ರಥಮವಾಗಿ ಕಾಣಿಸಿಕೊಳ್ಳುವುದು ಇದೇ. ಇಲ್ಲಿನ ಕೆಲವು ಕೋಶಗಳು ನರಕೋಶಗಳು. ಅವುಗಳ ತಂತುಗಳು ಮಿದುಳಿನ ಘ್ರಾಣ ಭಾಗಕ್ಕೆ ಸಂಪರ್ಕಗೊಂಡು ಘ್ರಾಣೇಂದ್ರಿಯ ನರಗಳಾಗಿ ವ್ಯೂಹಗೊಳ್ಳುತ್ತವೆ. ಮೂಗಿನ ಈ ತಗ್ಗುಗಳ ಮಧ್ಯೆ ದೊಡ್ಡದಾದ ಮಧ್ಯಕ ಲಲಾಟನಾಸಿಕ ಪ್ರಲಂಬ (ಮೀಡಿಯನ್ ಫ್ರಾಂಟೋನೇಸಲ್ ಪ್ರಾಸೆಸ್) ಮುಂದಲೆಯಿಂದ ಕೆಳಮುಖವಾಗಿ ಬೆಳೆಯುತ್ತ ಹೋಗಿ ಮೂಗಿನ ಮೇಲುಭಾಗವಾಗಿಯೂ ಮೂಗಿನ ಮುಂದಿನ ಭಾಗದ ನಡು ತಡಿಕೆಯ ಭಾಗವಾಗಿಯೂ ರೂಪಗೊಳ್ಳುತ್ತದೆ. ಹಾಗೆಯೇ ಪಕ್ಕ ನಾಸಿಕ ಪ್ರಲಂಬಗಳು (ಲ್ಯಾಟರಲ್ ನೇಸಲ್ ಪ್ರಾಸೆಸಸ್) ಕೆಳಮುಖವಾಗಿ ಬೆಳೆದು ಮೊದಲನೆಯ ಅಂತರ ಅವಯವಗಳ ವೃತ್ತಖಂಡದಿಂದ (ವಿಸರಲ್ ಆರ್ಚ್) ಹೊರಟ ಮೇಲ್ದವಡೆಯ ಆಕೃತಿಯನ್ನು ಸೇರಿಕೊಳ್ಳುತ್ತವೆ. ಹೀಗೆ ಮೂಗಿನ ಹೊಳ್ಳೆಗಳು ಉಂಟಾಗುತ್ತವೆ. ಪ್ರಾರಂಭದಲ್ಲಿ ಒಂದು ತೆಳುಪೊರೆ ಅದನ್ನು ಬಾಯಿಯಿಂದ ಬೇರ್ಪಡಿಸಿರುತ್ತದೆ. ಇದು ಬೇಗ ನಶಿಸಿ ಮೂರು ತಿಂಗಳ ಭ್ರೂಣಾವಸ್ಥೆಯವರೆಗೂ, ಅಂದರೆ ಬಾಯಿಯ ಅಟ್ಟ ಸೃಷ್ಟನೆಯಾಗುವವರೆಗೂ, ಮೂಗು ಬಾಯಿ ಒಂದೇ ಆವರಣದಿಂದ ಕೂಡಿರುತ್ತವೆ. ಮಗು ಹುಟ್ಟುವ ಹೊತ್ತಿಗೆ ಮೂಗಿನ ಹೊಳ್ಳೆಗಳು ಮೇಲಿನಿಂದ ಕೆಳಕ್ಕೆ ಅಷ್ಟು ಆಳವಿಲ್ಲದ್ದಾಗಿರುತ್ತವೆ. ಪ್ರೌಢಾವಸ್ಥೆಯ ಹೊತ್ತಿಗೆ ಅವು ಕ್ರಮೇಣ ಸಾಕಷ್ಟು ಆಳವಾಗುವುವು.

ಸ್ತನಿಗಳಲ್ಲಿ ಘ್ರಾಣಗ್ರಾಹಿ ನರಗಳು ಮೂಗಿನ ಹೊಳ್ಳೆಗಳ ಮೇಲಿನ ಭಾಗದಿಂದ ಪ್ರಾರಂಭವಾಗುತ್ತವೆ. ಮನುಷ್ಯನ ಒಂದೊಂದು ಮೂಗಿನ ಹೊಳ್ಳೆಗಳಲ್ಲೂ ಘ್ರಾಣಕ್ಕೆ ಸಂಬಂಧಪಟ್ಟಂತೆ ಹಳದಿ ವರ್ಣದ ತೆಳು ಪೊರೆ 2.5 ಚಸೆಂಮೀ ನಷ್ಟಿರುತ್ತದೆ. ಈ ಘ್ರಾಣ ಕ್ಷೇತ್ರದಲ್ಲಿ ಸಾವಿರಾರು ಕೋಶಗಳು ಉಂಟು. ಇವು ತೆಳು ಮತ್ತು ಉದ್ದವಾಗಿವೆ. ಬಹುಸಂಖ್ಯೆಯ ಮತ್ತು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾದ ಲೋಮಗಳು ಇಲ್ಲಿವೆ. ಇವು ಮೂಗಿನ ಲೋಳೆಪೊರೆಯ ಮೂಲಕ ಹೊರ ಬಂದಿರುತ್ತವೆ. ವಿಶೇಷ ಸೂಕ್ಷ್ಮ ದರ್ಶಕದಿಂದ ನೋಡಿದಾಗ ಪ್ರತಿಯೊಂದು ಕೋಶಕ್ಕೂ 6–12 ಘ್ರಾಣಲೋಮಗಳಿರುವುದು ಕಂಡುಬರುತ್ತದೆ. ಕೋಶದ ಬುಡಭಾಗ ಕ್ರಮೇಣ ಕಿರಿದಾಗಿ ಒಂದು ಸೂಕ್ಷ್ಮ ನರದ ಎಳೆಯಾಗುವುದು. ಈ ರೀತಿಯ ಅನೇಕ ಎಳೆಗಳು, ಮೂಗಿನ ಮೇಲು ಭಾಗದ ಜರಡಿಯಂತಿರುವ ಮೂಳೆಯ ಮುಖಾಂತರ ಪ್ರವೇಶಿಸಿ, ಮಿದುಳಿನಲ್ಲಿ ಸಣ್ಣ ಕವಲುಗಳಂತೆ ಹೊರಚಾಚಿಕೊಂಡಿರುವ ಘ್ರಾಣ ಮುಕುಲಗಳಿಗೆ (ಆಲ್‌ಫ್ಯಾಕ್ಟರಿ ಬಲ್ಬುಗಳು) ಸೇರಿಕೊಳ್ಳುತ್ತವೆ. ಅಲ್ಲಿ ಈ ನರಗಳು ಮೈಟ್ರಲ್ ಕೋಶದಿಂದ ಹೊರಟು ಅವೆಲ್ಲುವೂ ಒಟ್ಟಾಗಿ ಘ್ರಾಣೇಂದ್ರಿಯ ವ್ಯೂಹವಾಗುತ್ತವೆ. ಈ ವ್ಯೂಹದ ನರಗಳೂ ಮಿದುಳಿನ ಪೈರಿಫಾರಮ್ ಕಾರ್ಟೆಕ್ಸಿಗೆ ಬಂದು ಸೇರುತ್ತವೆ. ಘ್ರಾಣಾನುಭವಕ್ಕೆ ಮಿದುಳಿನ ಈ ಭಾಗವೆ ಸೀಮಿತವೆಂದು ನಂಬಲಾಗಿದೆ.

ವಾಸನೆಯನ್ನು ಉಂಟುಮಾಡುವ ಪದಾರ್ಥಗಳ ಸಣ್ಣ ಕಣಗಳೂ ಉಸಿರಾಟದ ವಾಯುವಿನೊಂದಿಗೆ ಮೂಗಿನ ಹೊಳ್ಳೆಗಳನ್ನು ಹೊಕ್ಕು ಘ್ರಾಣಕ್ಷೇತ್ರದ ಲೋಳೆಪೊರೆಗೆ ವ್ಯಾಪಿಸುತ್ತವೆ. ವಾಯುವನ್ನು ವೇಗವಾಗಿ ಎಳೆದುಕೊಂಡಾಗ ವಾಸನೆಯ ಕಣಗಳು ಘ್ರಾಣ ಕ್ಷೇತ್ರವನ್ನು ಹೆಚ್ಚಾಗಿ ತಲುಪಲು ಸಹಾಯವಾಗುತ್ತದೆ. ನೆಗಡಿ ಮುಂತಾದ ರೋಗಗಳು ಕಾಣಿಸಿಕೊಂಡಾಗ ಘ್ರಾಣಕ್ಷೇತ್ರದ ಲೋಳೆಪೊರೆಯಲ್ಲಿ ಉರಿ ಊತ ಕಾಣಿಸಿಕೊಂಡು ಘ್ರಾಣ ಸಾಮರ್ಥ್ಯ ಕಡಿಮೆ ಆಗುತ್ತದೆ. ಘ್ರಾಣ ಸಾಮರ್ಥ್ಯ ತೀಕ್ಷ್ಣವಾಗಿರುವಂಥ ನಾಯಿ, ಹುಲಿ, ಬೆಕ್ಕು, ಮೊಲ ಇತ್ಯಾದಿ ಸ್ತನಿಗಳಲ್ಲಿ ಘ್ರಾಣ ಸಂಬಂಧಿ ಮಿದುಳಿನ ಭಾಗ ವಿಶಾಲವಾಗಿದೆ. ಇದು ಮುಂಮಿದುಳಿನ ತಳಭಾಗದ ಅತ್ಯಂತ ಹೆಚ್ಚಿನ ಪ್ರದೇಶವನ್ನು ಆಕ್ರಮಿಸಿಕೊಂಡಿರುತ್ತದೆ ಕೂಡ. ಕಪಿ ಮತ್ತು ಮಾನವರಲ್ಲಿ ಈ ಪ್ರಮಾಣ ಬಲು ಕಡಿಮೆ. ಇವರಲ್ಲಿ ಜೈವಿಕ ಕಾರ್ಯಗಳಿಗೆ ಘ್ರಾಣಾನುಭವಕ್ಕಿಂತ ದೃಷ್ಟಿ ಮತ್ತು ಸ್ಪರ್ಶಾನುಭವಗಳೇ ಹೆಚ್ಚು ಉಪಯೋಗದಲ್ಲಿವೆ.

ಪ್ರಾಣಿಗಳಲ್ಲಿ ಘ್ರಾಣಮಂಡಲ ವಿವಿಧ ರೀತಿಯಲ್ಲಿ ಉಂಟು. ಮೀನುಗಳಿಗಿಂತ ಕೆಳದರ್ಜೆಯ ಲ್ಯಾನ್ಸಿಲೆಟ್ ಎಂಬ ಪ್ರಾಣಿಯಲ್ಲಿ ನರಮಂಡಲದ ಮುಂತುದಿಯಲ್ಲಿ ಲೋಮಗಳಿಂದ ಕೂಡಿದ ಒಂದೇ ಒಂದು ಹಳ್ಳವಿರುತ್ತದೆ. ಬಹುಶಃ ಇದು ಮೂಲಾಂಕುರವಾದ ಘ್ರಾಣಮಂಡಲವಾಗಿರಬಹುದು. ಮುಂದಿನ ವಿಕಾಸ ಸೈಕ್ಲೊಸ್ಟೋಮುಗಳಲ್ಲಿ ಕಂಡುಬರುತ್ತದೆ. ಹಳ್ಳ ಮೊದಲು ಮುಮ್ಮೈ ಕಡೆಗಿದ್ದು ಅನಂತರ ಬೆನ್ನಿನ ಕಡೆ ಪಿಟ್ಯುಟರಿ ಇಳಿನಾಳಕ್ಕೆ ಸಮಾನವಾದ ದ್ವಾರವುಳ್ಳ ಹಳ್ಳವಾಗಿ ಕಾಣಬರುತ್ತದೆ.

ಬಳಿಕ ಇದು ಒಳಗೆ ಎಡಬಲಭಾಗವಾಗಿ ವಿಕಾಸವಾಗುತ್ತದೆ. ಮೀನುಗಳಲ್ಲಿ ಎರಡು ಹೊರಪಕ್ಕದ ಹಳ್ಳಗಳಿದ್ದು ಅವುಗಳ ಹೊಳ್ಳೆಗಳು ತೊರ್ಕೆ (ಶಾರ್ಕ್) ಮತ್ತು ಚಪ್ಪಟೆ ಮೀನುಗಳಲ್ಲಿ ಮೂತಿಯ ಮುಮ್ಮೈ ಕಡೆಗೂ ಇನ್ನುಳಿದ ಮೀನುಗಳಲ್ಲಿ ಬೆನ್ನಿನ ಕಡೆಗೂ ಇರುತ್ತವೆ. ಮೀನಿನವರೆಗಿನ ಪ್ರಾಣಿಗಳ ವಿಕಾಸ ರೂಪದಲ್ಲಿ ಘ್ರಾಣಮಂಡಲ ಕೇವಲ ತಗ್ಗಿನ ಪ್ರದೇಶದಂತಿರುತ್ತದೆ. ಆದರೆ ಡಿಪ್ನಾಯ್ ಎಂಬ ಮಣ್ಣು ಮೀನಿನಲ್ಲಿ ಇದು ಮುಂದುವರಿದು ಈ ತಗ್ಗಿನಿಂದ ಬಾಯಿಯ ಮಾಳಿಗೆಯ ಜಾಗಕ್ಕೆ ಒಂದು ನಾಳವೇರ್ಪಟ್ಟು ಉಸಿರಾಟ ಮತ್ತು ಆಘ್ರಾಣ ಎರಡಕ್ಕೂ ಉಪಯೋಗಿಸಲ್ಪಡುವ ಸಮಾನವಾದ ಅಂಗವಾಗುತ್ತದೆ.

ದ್ವಿಚರಪ್ರಾಣಿಗಳಲ್ಲಿ ಘ್ರಾಣೇಂದ್ರಿಯ ತಲೆಬುರುಡೆಯಲ್ಲೇ ಸೇರಿಸಲ್ಪಟ್ಟು ಉಸಿರಾಟದ ಮತ್ತು ಆಘ್ರಾಣದ ವಿಭಾಗಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಪ್ರಾಣಿಗಳಲ್ಲಿ ಅಧೋಮುಖ ಶಂಕ್ವಾಕಾರಗಳ ಹಾಗೂ ಕಣ್ಣೀರು ಮೂಗಿನೊಳಕ್ಕೆ ಹರಿಯುವ ನಾಳದ ಬೆಳೆವಣಿಗೆ ಕಂಡುಬರುತ್ತದೆ. ಸರೀಸೃಪ ವರ್ಗಕ್ಕೆ ಸೇರಿದ ಹಲ್ಲಿಗಳಲ್ಲಿ ಘ್ರಾಣ ಮತ್ತು ಉಸಿರಾಟದ ವಿಭಾಗಗಳು ನಿರ್ದಿಷ್ಟವಾಗಿವೆ. ಅಧೋಮುಖ ಶಂಕ್ವಾಕಾರದ ಮೂಳೆಯೊಂದು ಹೊರಪಕ್ಕದ ಗೋಡೆಯಿಂದ ಬೆಳೆದಿರುವುದು ಕಾಣುತ್ತದೆ. ಇದರ ಹತ್ತಿರ ಮೂಗಿನ ಒಂದು ದೊಡ್ಡ ಗ್ರಂಥಿ ಉಂಟು. ಮೊಸಳೆಗಳಲ್ಲಿ ಗಡುಸಾದ ಅಂಗುಳ ಮೂತಿಯ ಉದ್ದಕ್ಕೂ ಬೆಳೆದಿರುವುದರಿಂದ ಮೂಗಿನ ಹೊರದ್ವಾರಕ್ಕೂ ಒಳದ್ವಾರಕ್ಕೂ ಸಾಕಷ್ಟು ಅಂತರವಿದ್ದು ಘ್ರಾಣ ಪ್ರದೇಶದಿಂದ ತಲೆಬುರುಡೆಯ ಮೂಳೆಗಳಿಗೆ ವಾಯುಕೋಶಗಳ ಸಂಪರ್ಕ ಏರ್ಪಟ್ಟಿರುವುದು ಕಾಣಿಸುತ್ತದೆ. ಪಕ್ಷಿಗಳಲ್ಲಿ ಘ್ರಾಣಮಂಡಲ ಸರೀಸೃಪಗಳಲ್ಲಿರುವಂತೆಯೇ ಉಂಟು. ಇದರ ಜೊತೆಗೆ ಉಸಿರಾಟದ ಅವಯವವೂ ಇದ್ದು ಅಧೋಮುಖ ಶಂಕ್ವಾಕಾರದ ಮೂಳೆ ಬೆಳೆದಿರುವುದೂ ಕಾಣಿಸುತ್ತದೆ. ಸ್ತನಿಗಳಲ್ಲಿ ಕಂಡುಬರುವ ವಾಸನೆಯ ಜೈವಿಕಕಾರ್ಯ ಪ್ರಾಮುಖ್ಯಕ್ಕೆ ಅನುಸಾರವಾಗಿ ಘ್ರಾಣಮಂಡಲದ ಮೂಗಿನ ಬೆಳೆವಣಿಗೆ ವಿವಿಧವಾಗಿದೆ. ಬಹು ಸ್ತನಿಗಳು ಬೃಹತ್ ವಾಸನಾಗ್ರಾಹಿಗಳು. ಅವುಗಳಲ್ಲಿ ಘ್ರಾಣೇಂದ್ರಿಯದ ಲೋಳೆಪೊರೆ ಹೆಚ್ಚು ಜಾಗವನ್ನು ಆಕ್ರಮಿಸಿರುತ್ತದೆ. ಕಪಿ ಮತ್ತು ಮಾನವರು ಕಿರುವಾಸನಾಗ್ರಾಹಿಗಳಾಗಿರುತ್ತಾರೆ. ಆದರೆ ಹಲ್ಲುಗಳಿರುವ ತಿಮಿಂಗಿಲಗಳಲ್ಲಿ ಘ್ರಾಣೇಂದ್ರಿಯದ ಕುರುಹೇ ಕಾಣಿಸುವುದಿಲ್ಲ. ಇವು ವಾಸನಾಗ್ರಾಹಿಗಳಲ್ಲ. ಬೃಹತ್ ವಾಸನಾಗ್ರಾಹಿ ಸ್ತನಿಗಳಲ್ಲಿ ಐದು ಕಾಜ್ಜಗಳಿವೆ. ಹೀಗೆ ಪ್ರಾಣಿಗಳಲ್ಲಿ ವಿಕಾಸ ರೂಪಾಂತರ ಹೊಂದುವಾಗ ಘ್ರಾಣಮಂಡಲದಲ್ಲಿಯೂ ಬದಲಾವಣೆ ಆಗುತ್ತದೆ; ಮನುಷ್ಯನಲ್ಲಿ ಇದರ ಉಪಯೋಗ ಗಣನೀಯವಾಗಿ ಕಡಿಮೆಯಾಗಿದೆ. ***

**ಘ್ರಾಣಮಾಪನೆ ಮತ್ತು ರುಚಿಮಾಪನೆ:** ಒಂದು ವ್ಯಕ್ತಿಯ ವಾಸನೆ ಮತ್ತು ರುಚಿ ಸಾಮರ್ಥ್ಯವನ್ನು ಸಲಕರಣೆ (ಘ್ರಾಣ) ಅಥವಾ ರಾಸಾಯನಿಕ (ರುಚಿ)ಗಳನ್ನು ಉಪಯೋಗಿಸಿ ಅಳೆಯುವ ವಿಧಾನ. ಈ ಅಳತೆಯಿಂದ ವಿವಿಧ ವ್ಯಕ್ತಿಗಳಲ್ಲಿ ಘ್ರಾಣ ಹಾಗೂ ರುಚಿಗ್ರಾಹಕ ಸಾಮರ್ಥ್ಯಗಳಲ್ಲಿ ಇರುವ ವ್ಯತ್ಯಾಸ, ರೋಗ ಇಲ್ಲವೇ ಬೇರೆ ಕಾರಣಗಳಿಂದ ಇವುಗಳಲ್ಲಿ ಉಂಟಾಗಬಹುದಾದ ವ್ಯತ್ಯಾಸ ಮುಂತಾದುವನ್ನು ತಿಳಿಯಬಹುದು.

ಘ್ರಾಣಮಾಪನಕ್ಕೆ ಬಳಸುವ ಸಲಕರಣೆಯ ಹೆಸರು ಜ್ವಾರ್ಡಿಮೇಕರನ ಘ್ರಾಣಮಾಪಕ (ಆಲ್‌ಫ್ಯಾಕ್ಟೊಮೀಟರ್). ಇಲ್ಲಿ ಅಂಶಾಂಕಿಸಿದ ಒಂದು ಗಾಜಿನ ಕೊಳವೆ ಉಂಟು. ಇದರ ವ್ಯಾಸ ಸುಮಾರು ನಾಲ್ಕು ಮಿಮೀ. ಈ ಕೊಳವೆಯ ಒಂದು ತುದಿಗೆ ಮೂಗಿನ ಹೊಳ್ಳೆಯೊಳಗೆ ಇಟ್ಟುಕೊಳ್ಳುವಂಥ ಆಕೃತಿ ಇದೆ. ಇನ್ನೊಂದು ತುದಿಯನ್ನು ಇದಕ್ಕಿಂತ ಸ್ವಲ್ಪ ದೊಡ್ಡದಾದ ಕೊಳವೆಯೊಳಗೆ ತೂರಿಸಲಾಗಿದೆ.

ದೊಡ್ಡ ಕೊಳವೆಯ ಒಳಮೈಗೆ ಸ್ಪಂಜಿನಂತಿರುವ ವಾಸನಾರಹಿತ ರಬ್ಬರ್ ಪದರವನ್ನು ಹೊಂದಿಸಲಾಗಿದೆ. ಒಳಕೊಳವೆಯನ್ನು ಹೊರಕೊಳವೆಯೊಳಗೆ ಹೆಚ್ಚಾಗಿ ಅಥವಾ ಕಡಿಮೆಯಾಗಿ ತೂರಿದರೆ ಅಂಶಾಂಕನ ತೋರಿದಷ್ಟು ಭಾಗ, ರಬ್ಬರ್ ಸ್ಪಂಜು ಅನಾವೃತವಾಗಿರುತ್ತದೆ. ಸ್ಪಂಜನ್ನು ವಾಸನಾಯುಕ್ತ ವಸ್ತುವಿನ ನಿರ್ದಿಷ್ಟ ಸಾರದ ದ್ರಾವಣದಲ್ಲಿ ತೋಯಿಸಿ, ಒಳ ಕೊಳವೆಯಿಂದ ವಾಯುವನ್ನು ಮೂಗಿನ ಹೊಳ್ಳೆಯೊಳಕ್ಕೆ ಎಳೆದುಕೊಂಡರೆ ಅನಾವೃತವಾಗಿರುವ ಭಾಗದಿಂದ ಮಾತ್ರ (ಅಂದರೆ ನಿರ್ದಿಷ್ಟ ಪ್ರಮಾಣದಲ್ಲಿ) ಕಂಪನವಸ್ತು ಬಾಷ್ಪಶೀಲವಾಗಿ ಮೂಗಿಗೆ ತಲುಪುತ್ತದೆ. ಈ ರೀತಿ ಒಂದು ಕಂಪು ಬೀರುವ ವಸ್ತುವನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ಮೂಗಿನ ಒಳಹೊಗಿಸಿ ವ್ಯಕ್ತಿಯ ಘ್ರಾಣಗ್ರಾಹಕ ಸಾಮರ್ಥ್ಯವನ್ನು ಅಳೆಯಬಹುದು. ಯಾವ ವಸ್ತುವನ್ನು ಪ್ರಯೋಗಕ್ಕೆ ಉಪಯೋಗಿಸಿದೆ ಎಂಬುದು ವ್ಯಕ್ತಿಗೆ ತಿಳಿಯದಂತೆ ಒಂದು ಅಡ್ಡತಡಿಕೆಯನ್ನು ಈ ಸಲಕರಣೆಯಲ್ಲಿ ಅಳವಡಿಸಲಾಗಿದೆ. ವ್ಯಕ್ತಿಯ ಘ್ರಾಣಗ್ರಾಹಕ ಸಾಮರ್ಥ್ಯ ಆತ ವಾಸನೆಯನ್ನು ಆಘ್ರಾಣಿಸುವ ರಭಸವನ್ನು ಅವಲಂಬಿಸಿದೆ. ಆದ್ದರಿಂದ ಮೇಲೆ ಹೇಳಿರುವ ರೀತಿಯ ಘ್ರಾಣಮಾಪನೆ ಸೂಕ್ಷ್ಮರೀತಿಯದೆಂದು ಒಪ್ಪಲಾಗಿಲ್ಲ. ಇದರ ಬದಲು ಬೇರೆ ಏರ್ಪಾಡಿನಿಂದ ಘ್ರಾಣಮಾಪನೆ ಮಾಡಲಾಗುತ್ತದೆ. ಈ ವಿಧಾನದಲ್ಲಿ ಪ್ರತಿಯೊಂದು ಕಂಪುಪರೀಕ್ಷೆಗು ಬೇರೆ ಕುಪ್ಪಿಯನ್ನು ಮೂಗಿನ ಹೊಳ್ಳೆಯೊಳಗೆ ಇಡುವ ನಾಸಿಕ ಭಾಗಗಳನ್ನು ಉಪಯೋಗಿಸಬೇಕು. ಮೊದಲು ನಾಸಿಕ ಭಾಗಗಳನ್ನು ವ್ಯಕ್ತಿಯು ಮೂಗಿನ ಹೊಳ್ಳೆಗಳೊಳಗೆ ಇರಿಸಿಕೊಳ್ಳಬೇಕು ಮತ್ತು ಬಾಯಲ್ಲಿ ಉಸಿರಾಡುತ್ತಿರಬೇಕು. ಸೂಚನೆ ಕೊಟ್ಟೊಡನೆ ಉಸಿರಾಡುವುದನ್ನು ನಿಲ್ಲಿಸಬೇಕು. ಪ್ರಯೋಗಕಾರನು ಪಿಚಕಾರಿಯಿಂದ ನಿರ್ದಿಷ್ಟ ಪ್ರಮಾಣದಲ್ಲಿ ವಾಯುವನ್ನು ಕುಪ್ಪಿಯೊಳಕ್ಕೆ ನೂಕುತ್ತ ಅದೇ ವೇಳೆಯಲ್ಲಿ ಕೊಳವೆಯನ್ನು ಅದುಮಿ ಹಿಡಿದಿರುವ ಚಿಮುಟವನ್ನು ಸಡಿಲಿಸಬೇಕು.




ಚಿತ್ರ 1 ಜ್ವಾರ್ಡಿಮೇಕರನ ಘ್ರಾಣಮಾಪಕ: 1 ನಾಸಿಕ ಭಾಗ, 2 ಅಡ್ಡತಡಿಕೆ, 3 ಅಂಶಾಂಕಿಸಿದ ಒಳಗಾಜಿನ ಕೊಳವೆಗೂ ಹೊರಗಿನ ದೊಡ್ಡ ಕೊಳವೆಗೂ ನಡುವೆ ಇರುವ ರಬ್ಬರ್ ಸ್ಪಂಜು.

ಇದರಿಂದ ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಮತ್ತು ಕ್ಲುಪ್ತರಭಸದಿಂದ ವಾಸನಾಯುಕ್ತ ವಸ್ತುವಿನ ಬಾಷ್ಪವನ್ನು ಮೂಗಿನ ಹೊಳ್ಳೆಗಳ ಒಳಹೊಗಿಸಲು ಸಾಧ್ಯ. ನಾಸಿಕಭಾಗಗಳನ್ನು ಹೊರತೆಗೆದು ಮೂಗಿನಿಂದ ಉಸಿರಾಡಲು ಪ್ರಾರಂಭಿಸಿದಾಗ ಅಷ್ಟು ಪ್ರಮಾಣದ ಕಂಪು ವಸ್ತು ಘ್ರಾಣ ಕ್ಷೇತ್ರವನ್ನು ತಲುಪತ್ತದೆ. ಹೀಗೆ ವ್ಯಕ್ತಿಯ ಘ್ರಾಣಗ್ರಾಹಕ ಸಾಮರ್ಥ್ಯವನ್ನು ಕಂಡುಹಿಡಿಯಬಹುದು.




ಚಿತ್ರ 2 ಪರಿಷ್ಕೃತ ಘ್ರಾಣಮಾಪಕ: 1 ನಾಸಿಕ ಭಾಗಗಳು, 2 ಚಿಮುಟ 3 ವಾಸನಾಯುಕ್ತ ದ್ರಾವಣ, 4 ಪಿಚಕಾರಿ.

ರುಚಿಗ್ರಾಹಕ ಸಾಮರ್ಥ್ಯವನ್ನು ಅಳೆಯಲು ವಿಶೇಷ ಸಲಕರಣೆಗಳು ಬೇಕಿಲ್ಲ. 3% ಸಕ್ಕರೆಯ ದ್ರಾವಣ, 1% ಕ್ವಿನೀನಿನ ದ್ರಾವಣ, 5% ಉಪ್ಪಿನ ದ್ರಾವಣ. 0.1% ಸಲ್ಫ್ಯೂರಿಕ್ ಆಮ್ಲ ಮತ್ತು ಇವನ್ನು ನಾಲಗೆಯ ಮೇಲೆ ನಿರ್ದಿಷ್ಟ ಸ್ಥಳದಲ್ಲಿ ಮಾತ್ರ ಸೋಕಿಸಲು ಸಹಾಯಕವಾಗಿ ಕುಂಚ ಅಥವಾ ಶಾಯಿ ತುಂಬುವ ಕೊಳವೆಯಂತೆ ಮೂತಿ ಉಳ್ಳ ಒಂದು ಗಾಜಿನ ನಾಳ ಇದ್ದರೆ ಸಾಕು. ವ್ಯಕ್ತಿ ಕಣ್ಣು ಮುಚ್ಚಿಕೊಂಡು ನಾಲಗೆಯನ್ನು ಹೊರ

ಚಾಚಿರಬೇಕು. ನಾಲಗೆಯನ್ನು ಜೊಲ್ಲಿನಿಂದ ತೋಯಿಸಿರಬಾರದು. ಅಲ್ಲದೆ ರುಚಿಯನ್ನು ಪತ್ತೆ ಮಾಡುವ ವೇಳೆಯಲ್ಲಿ ನಾಲಗೆಯನ್ನು ಹೊರಚಾಚಿಕೊಂಡೆ ಇರಬೇಕು. ನಾಲಗೆಯ ತುದಿಯ ಹಿಂಭಾಗ, ಎರಡು ಅಂಚುಗಳು ಮತ್ತು ಮೇಲ್ಮೈಗಳಲ್ಲಿ ಕೇವಲ ಸ್ಥಳೀಯವಾಗಿ ಮತ್ತು ಹರಡಿಕೊಳ್ಳದ ಪ್ರಮಾಣದಲ್ಲಿ ಈ ದ್ರಾವಣವನ್ನು ಒಂದೊಂದಾಗಿ ಸೋಕಿಸಿ ವ್ಯಕ್ತಿಯ ರುಚಿಗ್ರಾಹಕ ಸಾಮರ್ಥ್ಯವನ್ನು ಅಳೆಯಬೇಕು. ಪ್ರತಿಯೊಂದು ಪ್ರಯೋಗಾನಂತರವು ಶುಚಿಯಾದ ನೀರಿನಲ್ಲಿ ಬಾಯಿ ಮುಕ್ಕಳಿಸಿ ಮುಂದಿನ ಪ್ರಯೋಗವನ್ನು ಪ್ರಾರಂಭಿಸಬೇಕು. ವ್ಯಕ್ತಿಯ ರುಚಿಗ್ರಾಹಕ ಸಾಮರ್ಥ್ಯದ ಸೂಕ್ಷ್ಮತೆಯನ್ನು ಪರೀಕ್ಷಿಸಬೇಕಾದರೆ ವಿವಿಧ ಸಾಂದ್ರತೆಯ ಉಪ್ಪು ನೀರನ್ನೂ ಆಮ್ಲ ದ್ರಾವಣವನ್ನೂ ಉಪಯೋಗಿಸಬೇಕಾಗುತ್ತದೆ. ಸಾಮಾನ್ಯವಾಗಿ ಸಾವಿರದಲ್ಲಿ ಒಂದು ಭಾಗ, 800 ರಲ್ಲಿ ಒಂದು ಭಾಗ, ಹೀಗೇ 600, 500, 400, 300 ರಲ್ಲಿ ಒಂದು ಭಾಗ ಉಪ್ಪು ಇರುವ ದ್ರಾವಣವನ್ನೂ 7000ದಲ್ಲಿ ಒಂದು ಭಾಗ, 6000, 5000, 4000, 3000 ದಲ್ಲಿ ಒಂದು ಭಾಗ ಅಸಿಟಿಕ್ ಆಮ್ಲವಿರುವ ದ್ರಾವಣವನ್ನೂ ಇಂಥ ಮಾಪನಗಳಿಗೆ ಉಪಯೋಗಿಸುತ್ತಾರೆ.

ಈಚೆಗೆ ವಿದ್ಯುತ್ ವಿಧಾನಗಳಿಂದ ರುಚಿ ಮತ್ತು ಘ್ರಾಣಮಾಪನೆಗಳನ್ನು ಮಾಡಲಾಗುತ್ತಿದೆ. ಇವು ಬಹು ಸೂಕ್ಷ್ಮಮಾಪನ ವಿಧಾನಗಳಾಗಿದ್ದು ವ್ಯಾಸಂಗಕ್ಕೆ ಹೆಚ್ಚು ಸಹಾಯಕವಾಗಿವೆ.

***

# ಚ

**ಚಪ್ಪಟೆ ಮೀನುಗಳು:** ಪ್ಲೂರೋನೆಕ್ಟಿಫಾರ್ಮಿಸ್ (ಹೆಟಿರೋಸೊಮೇಟ) ಗಣದ ಬೋತಿಡೆ, ಪ್ಲೂರೊನೆಕ್ಟಿಡೆ, ಸೋಲೈಯಿಡೆ ಮತ್ತು ಸೈನೋಗ್ಲಾಸಿಡೆ ಕುಟುಂಬಗಳಿಗೆ ಸೇರಿದ ನಂಗು, ಟರ್ಬಟ್, ಹ್ಯಾಲಿಬಟ್ ಮುಂತಾದ ಸಾಗರವಾಸಿ ಮೀನುಗಳಿಗಿರುವ ಸಾಮಾನ್ಯ ಹೆಸರು (ಫ್ಲಾಟ್ ಫಿಷಸ್). ಹೆಸರೇ ಸೂಚಿಸುವಂತೆ ಚಪ್ಪಟೆಯಾಗಿರುವ ಇವಕ್ಕೆ ಎರಡು ಕಣ್ಣುಗಳು ತಲೆಯ ಒಂದೇ ಪಾರ್ಶ್ವದಲ್ಲಿರುವುದರಿಂದ ಇತರ ಮೀನುಗಳಿಗಿಂತ ಭಿನ್ನವಾಗಿವೆ. ಪ್ರೌಢಜೀವಿಗಳು ಕಣ್ಣಿರುವ ಪಾರ್ಶ್ವವನ್ನು ಮೇಲ್ಮುಖ ಮಾಡಿಕೊಂಡು ನೀರಿನ ತಳದಲ್ಲಿ ವಾಸಿಸುತ್ತವೆ. ದೇಹದ ಈ ಪಾರ್ಶ್ವದಲ್ಲಿ ವಿವಿಧ ಬಣ್ಣಗಳನ್ನು ಕಾಣಬಹುದು.



ಸೈನಾಪ್ಟ

ಇವು ಸಾಧಾರಣವಾಗಿ ಸಾಗರತಳದ ಬಣ್ಣವನ್ನೇ ಹೋಲುತ್ತವೆ. ನೆಲದ ಕಡೆ ತಿರುಗಿರುವ ಪಾರ್ಶ್ವ ಬಿಳುಪಾಗಿರುತ್ತದೆ. ಈ ಭಾಗವನ್ನು ಬೆಳಕಿಗೆ ಒಡ್ಡಿದಾಗ ಅಲ್ಲಿ ಸ್ವಲ್ಪಮಟ್ಟಿನ ಬಣ್ಣ ಕಾಣಿಸಿಕೊಳ್ಳುವುದುಂಟು. ಮೊಟ್ಟೆಯೊಡೆದು ಬರುವ ಮರಿಮೀನುಗಳು ಇತರ ಜಾತಿಯ ಮೀನಿನ ಮರಿಗಳಂತೆಯೇ ಒಂದೊಂದು ಪಾರ್ಶ್ವದಲ್ಲೂ ಒಂದೊಂದು ಕಣ್ಣನ್ನು ಹೊಂದಿದ್ದು ಸಮರೂಪದವಾಗಿರುತ್ತವೆ. ಇವು ಮೊದಮೊದಲು ನೀರಿನಲ್ಲಿ ಈಜಾಡುತ್ತ ಕಾಲ ಕಳೆಯುತ್ತವೆ. ಕಾಲಕ್ರಮದಲ್ಲಿ ಒಂದು ಪಾರ್ಶ್ವದ ಕಣ್ಣು, ತಲೆಯನ್ನು ಸುತ್ತುವರಿದುಕೊಂಡು ಇನ್ನೊಂದು ಪಾರ್ಶ್ವಕ್ಕೆ ಸಾಗಿ ಬರುತ್ತದೆ; ಕೆಲವು ರೆಕ್ಕೆಗಳು ಸ್ಥಾನ ಬದಲಾಯಿಸುತ್ತವೆ. ಕಡೆಗೆ, ಮೀನುಗಳು ಎರಡು ಕಣ್ಣುಗಳಿರುವ ಪಾರ್ಶ್ವವನ್ನು ಮೇಲ್ಮುಖ ಮಾಡಿಕೊಂಡು ನೀರಿನ ತಳ ಸೇರುತ್ತವೆ. ಅನೇಕ ಚಪ್ಪಟೆ ಮೀನುಗಳಲ್ಲಿ ಬೆನ್ನಿನ ರೆಕ್ಕೆ ತಲೆಯತನಕ ಮುಂದಕ್ಕೆ ಚಾಚಿ ಬೆಳೆದುಕೊಳ್ಳುತ್ತದೆ. ಕಣ್ಣುಗಳು ತಲೆಯ ಒಂದೇ ಪಾರ್ಶ್ವದಲ್ಲಿದ್ದರೂ ಬೇರೆ ಬೇರೆ ದಿಕ್ಕಿನಲ್ಲಿ ಸ್ವತಂತ್ರವಾಗಿ ತಿರುಗಬಲ್ಲುವು. (ಚಪ್ಪಟೆಮೀನುಗಳ ಹೆಚ್ಚಿನ ವಿವರಗಳಿಗೆ ನೋಡಿ – ಟರ್ಬಟ್, ನಂಗು, ಹ್ಯಾಲಿಬಟ್.)

***

**ಚಫ್:** ಕಾರ್ವಿಡೆ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಹಕ್ಕಿ. ಯೂರೋಪ್ ಮತ್ತು ನೈಋತ್ಯ ಏಷ್ಯದ ಪರ್ವತಶ್ರೇಣಿಗಳ ಶಿಖರಗಳಲ್ಲಿ ಕಂಡುಬರುತ್ತದೆ. ಕಾಗೆಯ ಹತ್ತಿರ ಸಂಬಂಧಿ. ಚಫ್ ಜಾತಿಯ ವೈಜ್ಞಾನಿಕ ಹೆಸರು ಪಿರೋಕೊರ್ಯಾಕ್ಸ್. ಇದರಲ್ಲಿ ಎರಡು ಪ್ರಭೇದಗಳಿವೆ. ಒಂದು ಯೂರೋಪಿನ ಸಮುದ್ರತೀರದ ಪ್ರಪಾತಗಳಲ್ಲಿ ಕಾಣದೊರೆಯುವ ಸಾಮಾನ್ಯ ಚಫ್ (ಪಿರೋಕೊರ್ಯಾಕ್ಸ್ ಪಿರೋಕೊರ್ಯಾಕ್ಸ್). ಇನ್ನೊಂದು ಆಲ್ಪ್ಸ್ ಪರ್ವತಗಳಲ್ಲಿ ವಾಸಿಸುವ ಆಲ್ಪೈನ್ ಚಫ್ (ಪಿರೋಕೊರ್ಯಾಕ್ಸ್ ಗ್ರ್ಯಾಕ್ಯುಲಸ್). ಎರಡೂ ಬಗೆಯವು ಕಾಗೆಯಂತೆಯೇ ಕಪ್ಪುಬಣ್ಣದವು. ಆದರೆ ಗಾತ್ರದಲ್ಲಿ ಮಾತ್ರ ಚಿಕ್ಕವು. ಚಫ್ ಕೊಕ್ಕೂ ಬೇರೆ ರೀತಿಯದು. ಇದು ತೆಳುವಾಗಿ ಚೂಪಾಗಿರುವುದಲ್ಲದೆ ಕೆಳಮುಖವಾಗಿ ಬಾಗಿದೆ. ಕೊಕ್ಕಿನ ಬಣ್ಣ ಸಾಮಾನ್ಯ ಚಫ್ ಹಕ್ಕಿಯಲ್ಲಿ ಕೆಂಪು ಮತ್ತು ಆಲ್ಪೈನ್ ಚಫ್ ಹಕ್ಕಿಯಲ್ಲಿ ಹಳದಿ. ತಮ್ಮ ಹಾರುವಿಕೆಯ ಸಾಮರ್ಥ್ಯದಿಂದ ಎರಡು ಬಗೆಗಳೂ ಆಗಸದ ದೊಂಬರು ಎನಿಸಿಕೊಂಡಿವೆ. ಒಂಟೊಂಟಿಯಾಗಿ ಇಲ್ಲವೇ ಗುಂಪುಗಳಲ್ಲಿ ತಾವು ವಾಸಿಸುವ ಪ್ರಪಾತಗಳ ಸುತ್ತ ಚಕ್ರಾಕಾರದಲ್ಲಿ ಸುತ್ತುವುದು, ಸರ್ರನೆ ಮೇಲೇರುವುದು, ರೆಕ್ಕೆಗಳನ್ನು ಮುಚ್ಚಿಕೊಂಡು ಥಟ್ಟನೆ ಧುಮುಕಿ ಕೆಳಗಿಳಿಯುವುದು, ಲಾಗಹಾಕುವುದು ಮುಂತಾದವನ್ನೆಲ್ಲ ಮಾಡುತ್ತ ಹಾರಾಡುತ್ತವೆ. ಚಫ್‌ಗಳು ಕೀಟಾಹಾರಿಗಳು.

ಇವು ಪರ್ವತಗಳ ಬಂಡೆದೊಗರುಗಳಲ್ಲಿ ಗೂಡುಕಟ್ಟಿ ಮೊಟ್ಟೆಯಿಡುತ್ತವೆ. ಮೊಟ್ಟೆಯಿಡುವ ಕಾಲ ಏಪ್ರಿಲ್ – ಮೇ ತಿಂಗಳು. ಮೊಟ್ಟೆಗಳ ಸಂಖ್ಯೆ 3–6. ಮೊಟ್ಟೆಯೊಡೆದು ಹೊರಬರುವ ಮರಿಗಳು 35–40 ದಿವಸಗಳ ಅನಂತರ ತಾಯಿಯಿಂದ ಬೇರೆಯಾಗಿ ವಾಸಿಸತೊಡಗುತ್ತವೆ. ಚಫ್‌ಗಳ ಆಯಸ್ಸು ಸುಮಾರು 15 ವರ್ಷಗಳು.

(ಎಚ್.ಎಚ್.ಎಸ್.)

**ಚಬ್ ಮೀನು:** ಆಸ್ಟೇರಿಯೊಫೈಸೀ ಅಥವಾ ಸಿಪ್ರಿನಿಫಾರ್ಮಿಸ್ ಗಣ, ಸಿಪ್ರಿನಾಯ್ಡಿಯ ಉಪಗಣ, ಸಿಪ್ರಿನಿಡೆ ಕುಟುಂಬಕ್ಕೆ ಸೇರಿದ ಅನೇಕ ಜಾತಿಯ ಮಿನುಗಳಿಗಿರುವ ಸಾಮಾನ್ಯ ಹೆಸರು. ಮಿನ್ನೊಗಳೆಂದು ಕರೆಯುವುದೂ ಉಂಟು. ಸಿಹಿನೀರು ಮೀನುಗಳು; ಸಣ್ಣಪುಟ್ಟ



ಚಬ್ ಮೀನು

ನದಿಗಳಲ್ಲಿಯೂ ಝರಿಗಳಲ್ಲಿಯೂ ವಾಸಿಸುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನದ ಮಧ್ಯಭಾಗ, ಯೂರೋಪ್ ಮುಂತಾದೆಡೆಗಳಲ್ಲಿ ಇವುಗಳ ವ್ಯಾಪ್ತಿ ಉಂಟು.

ಚಬ್ ಮೀನುಗಳು ತೆಳುಶರೀರಿಗಳು. ತಲೆ ಮೋಟು ಹಾಗೂ ಅಗಲ. ದವಡೆಗಳು ಬಲುಗಟ್ಟಿ. ದವಡೆಗಳಲ್ಲಿ ಹಲ್ಲುಗಳಿಲ್ಲ. ಗಂಟಲಿನಲ್ಲಿ ಮಾತ್ರ ಬಲವಾದ ಹಲ್ಲುಗಳಿವೆ. ಮೇಲು ದವಡೆಗೂ ಮೂತಿಗೂ ಮಧ್ಯೆ ಒಂದು ಸಣ್ಣ ತೋಡು ಇದೆ. ದವಡೆಯ ಹಿಂಭಾಗದಲ್ಲಿ ತೆಳುವಾದ ದಾಡಿಗಳಂತಿರುವ ಸ್ಪರ್ಶರೋಮಗಳಿವೆ. ಈಜುರೆಕ್ಕೆಗಳಲ್ಲಿ ಮುಳ್ಳುಗಳಿಲ್ಲ. ಎದೆಯ ಈಜುರೆಕ್ಕೆ ಉದ್ದ ಹಾಗೂ ಚೂಪು. ಬಾಲದ ಈಜುರೆಕ್ಕೆ V ಆಕಾರದ್ದು. ದೇಹದ ಸರಾಸರಿ ಉದ್ದ 10 ಸೆಂಮೀ. ಕೆಲವು 30 ಸೆಂಮೀ ಉದ್ದ ಬೆಳೆಯುವುದುಂಟು.

ಕೀಟ ಲಾರ್ವಗಳು, ಜಲವಾಸಿ ಪ್ರಾಣಿಗಳು, ಸಣ್ಣಗಾತ್ರದ ಇತರ ಮೀನುಗಳು ಮತ್ತು ಹಲವು ಬಗೆಯ ಜಲಸಸ್ಯಗಳು ಚಬ್ ಮೀನುಗಳ ಆಹಾರ. ಕೆಲವೊಮ್ಮೆ ತಮ್ಮ ಮರಿಗಳನ್ನೇ ತಿನ್ನುವುದುಂಟು. ಮೊಟ್ಟೆ ಇಡುವ ಕಾಲದಲ್ಲಿ ಹೆಣ್ಣು ಮೀನುಗಳ ಪಾರ್ಶ್ವ ಮತ್ತು ಉದರ ಕೆಂಪುಬಣ್ಣದ್ದಾಗಿರುತ್ತದೆ. ಸರೋವರ ಇಲ್ಲವೆ ಕೊಳದ ಅಂಚಿನಲ್ಲೋ ಅಥವಾ ನದಿಗಳ ನಿಂತ ನೀರಿನ ಮಡುಗಳಲ್ಲೋ ವಸಂತಮಾಸದಲ್ಲಿ ಮೊಟ್ಟೆಯಿಡುತ್ತವೆ. ನದಿಯ ತಳಭಾಗದಲ್ಲಿ ಹೊಂಡಗಳನ್ನು ತೋಡಿ, ಸಣ್ಣ ಸಣ್ಣ ಕಲ್ಲುಗಳನ್ನು ತಂದು ಇಟ್ಟು ಅದರ ಮೇಲೆ ಮೊಟ್ಟೆಯಿಡುವುದು ಇವುಗಳ ಕ್ರಮ.

ಚಬ್ ಮೀನುಗಳಲ್ಲಿನ ಅನೇಕ ಪ್ರಭೇದಗಳಲ್ಲಿ ಮುಖ್ಯವಾದುವು ಇವು:

1. ಬೆಟ್ಟದ ಝರಿಯ ಚಬ್ (ಸೆಮೊಟಿಲಸ್ ಅಟ್ರೊಮ್ಯಾಕ್ಯುಲೇಟಸ್); ಒಂದು ಒಳ್ಳೆಯ ಬೇಟೆ ಮೀನು. ಇದರ ಉದ್ದ 30 ಸೆಂಮೀ. ಬೆನ್ನಿನ ಈಜು ರೆಕ್ಕೆಯ ಮುಂಭಾಗದಲ್ಲಿ ಕಪ್ಪು ಮಚ್ಚೆ ಇರುತ್ತದೆ. ಇದರಿಂದ ಈ ಜಾತಿಯ ಮೀನುಗಳನ್ನು ಪತ್ತೆಹಚ್ಚಬಹುದು. ವಸಂತ ಋತುವಿನಲ್ಲಿ ಇವುಗಳ ತಲೆಯ ಮೇಲೆ ಗಂತಿಗಳು ಬೆಳೆಯುತ್ತವೆ. ಸಣ್ಣ ನದಿಗಳಲ್ಲಿ ಅಪಾರವಾಗಿ ಕಂಡುಬರುವ ಇವು ಕೆಲವೊಮ್ಮೆ ಸರೋವರಗಳಲ್ಲೂ ಕಾಣಸಿಗುತ್ತವೆ. ನಿಷೇಚಿತ ಅಂಡಗಳ ಸುತ್ತ ಗಂಡು ಮೀನು ಜೆಲ್ಲಿಯಿಂದ ಗೂಡನ್ನು ನಿರ್ಮಿಸುತ್ತದೆ. ಟ್ರೌಟ್ ಮೀನುಗಳ ಅಭಾವ ಕಾಲದಲ್ಲಿ ಇವನ್ನು ಬೇಟೆಯಾಡುವುದುಂಟು.

2. ಸ್ವಚ್ಛವಾದ ಝರಿಗಳಲ್ಲಿ ಸಿಗುವ ಬರ್ಮಡ ಚಬ್: ಹೆರಿಂಗ್ ಮೀನುಗಳ ಗುಂಪಿನಲ್ಲಿ ಸುತ್ತಾಡುತ್ತಿದ್ದರೂ ಅವುಗಳನ್ನು ಬೇಟೆಯಾಡುವುದಿಲ್ಲ. ಸುಮ್ಮನೆ ಕುತೂಹಲದಿಂದ ಹೆರಿಂಗ್ ಮೀನುಗಳನ್ನು ಹಿಂಬಾಲಿಸುತ್ತವೆ.

3. ದಪ್ಪಬಾಲದ ಚಬ್ (ಸ್ಯಾಕ್ರೊಮೆಂಟ ಚಬ್): ಇದು ಕ್ಯಾಲಿಫೋರ್ನಿಯ ಕಣಿವೆಯ ನದಿಗಳಲ್ಲಿ ಧಾರಾಳವಾಗಿ ಸಿಗುತ್ತದೆ. ಪೆಸಿಫಿಕ್ ಡ್ರೈನೇಜ್‌ನಲ್ಲಿ ಕಂಡುಬರುವ ಮಿನೋ ಕುಟುಂಬದ ಕೆಲವೇ ಮೀನುಗಳಲ್ಲಿ ಇದು ಒಂದು. ಇದರ ಹುರುಪೆಗಳ ಮೇಲೆ ಗಾಢಬಣ್ಣದ ಮಚ್ಚೆಗಳಿವೆ. ಇದರ ಉದ್ದ ಸುಮಾರು 30 ಸೆಂಮೀ. ಬಣ್ಣ ಮಬ್ಬು ಕಂದು.

4. ಇನ್ನೊಂದು ಸಾಮಾನ್ಯ ಚಬ್ ಮೀನು ಕೊಲಂಬಿಯಾದ ನದಿಗಳಲ್ಲಿ ಕಂಡುಬರುವ ಮೈಲೊಕಿಲಸ್ ಕಾರಿನಸ್.

5. ಗ್ರೇಟ್ ಬ್ರಿಟನ್ ಮತ್ತು ಯೂರೋಪಿನ ಚಬ್ (ಲ್ಯೂಯಿಸ್‌ಕಸ್ ಸಿಫಾಲಸ್) ಎಂಬುದು ಸುಮಾರು 5 1/2 ಕಿಗ್ರಾಂ ತೂಗುವ ಮಧ್ಯಮ ಗಾತ್ರದ ಮೀನು.

6. ಹೈಬಾಪ್‌ಸಿಸ್ ಜಾತಿಯ ಚಬ್: ಇದು ಉತ್ತರ ಅಮೆರಿಕದ ಪೂರ್ವ ಭಾಗದಲ್ಲಿ ಜೀವಿಸುತ್ತದೆ. ಗಿಲ್ ಮತ್ತು ಪಿಫ್‌ಟಲೆಸ್ ಎಂಬೆರಡು ಪ್ರಭೇದಗಳು ಉತ್ತರ ಅಮೆರಿಕದ ಪಶ್ಚಿಮದಲ್ಲಿ ಸಿಗುತ್ತವೆ.

7. ಅಮೆರಿಕ ಸಂಯುಕ್ತ ಸಂಸ್ಥಾನದ ಪೂರ್ವಭಾಗದ ನದಿಯಲ್ಲಿ ಕಂಡುಬರುವ ನಾಕೊಮಿಸ್ ಎಂಬ ಚಬ್‌ನಲ್ಲಿ ಗಂಡುಮೀನು ತನ್ನ ಬಾಯಲ್ಲಿ ಸಣ್ಣ ಸಣ್ಣ ಉರುಟು ಕಲ್ಲುಗಳನ್ನು ಆಯ್ದು ತಂದು ಗೂಡನ್ನು ಕಟ್ಟುತ್ತದೆ.

ಎಲ್ಲ ಚಬ್ ಮೀನುಗಳೂ ಒಳ್ಳೆಯ ಎರೆ ಪ್ರಾಣಿಗಳಾಗಿ ಉಪಯುಕ್ತವೆನಿಸಿವೆ. ದೊಡ್ಡಗಾತ್ರದವನ್ನು ವಿನೋದಕ್ಕಾಗಿ ಅಥವಾ ಆಹಾರಕ್ಕಾಗಿ ಬೇಟೆಯಾಡುವುದುಂಟು.

(ಎ.ಎಸ್.ಎಚ್.)

**ಚಮಚಮುಖಿ:** ಕಬ್ಬಾರೆ, ಕ್ರೌಂಚ (ಹೆರಾನ್), ಕೆಂಪು ಕೊಕ್ಕರೆ ಮತ್ತು ಐಬಿಸ್‌ಗಳಿಗೆ ಹತ್ತಿರ ಸಂಬಂಧಿಯಾದ ಮತ್ತು ನೀರಿನಲ್ಲಿ ನಡೆದಾಡುವ ಒಂದು ದೊಡ್ಡಹಕ್ಕಿ (ಸ್ಪೂನ್‌ಬಿಲ್). ಇದರಲ್ಲಿ ಸುಮಾರು 6 ಪ್ರಭೇದಗಳಿವೆ. ಸಿಕೋನೈಯಿಫಾರ್ಮಿಸ್ ಗಣದ ತ್ರೆಸ್ಕಿಯಾರ್ನಿತಿಡೆ ಕುಟುಂಬಕ್ಕೆ ಸೇರಿದೆ. ಜೌಗುಪ್ರದೇಶಗಳ ಬಳಿಯೇ ಇದರ ವಾಸ. ಕೊಕ್ಕು ಉದ್ದವಾಗಿಯೂ ತುದಿಯಲ್ಲಿ ಚಮಚದಂತೆ ಅಗಲವಾಗಿಯೂ ಇರುವುದರಿಂದ ಇದಕ್ಕೆ ಈ ಹೆಸರು. ಇಂಥ ಕೊಕ್ಕಿರುವುದರಿಂದ ತನ್ನ ಆಹಾರವಾದ ಕಪ್ಪೆ, ಮೀನು, ಏಡಿ, ಕಠಿಣ ಚರ್ಮಿಗಳು, ಕೀಟಗಳು ಮುಂತಾದ ಜಲಚರ ಪ್ರಾಣಿಗಳನ್ನು ಹಿಡಿದು ತಿನ್ನಲು ಅನುಕೂಲ. ನೀರಿನಲ್ಲಿ ನಡೆದಾಡಲು ಸಹಾಯವಾಗುವಂತೆ ಇದರ ಕಾಲಗಳು ಬಲು ಉದ್ದವಾಗಿವೆ. ತಮ್ಮ ಕೊಕ್ಕನ್ನು ಭಾಗಶಃ ತೆರೆದುಕೊಂಡು, ನೀರಿನಲ್ಲಿ ಮುಳುಗಿಸಿ, ತಲೆಯನ್ನು ಅತ್ತಿತ್ತ ಆಡಿಸುತ್ತ ಆಹಾರವನ್ನರಸಿಕೊಂಡು ಅಲೆದಾಡುತ್ತದೆ. ಆಹಾರ ಸೇವನೆಯ ಕಾಲ ಬೆಳಗ್ಗೆ ಮತ್ತು ಸಂಜೆ.

ಚಮಚಮುಖಿಗಳ ದೇಹದ ಗಾತ್ರ ಹೆಚ್ಚುಕಡಿಮೆ ಬಾತುಹಕ್ಕಿಯಷ್ಟು. ಭಾರತದಲ್ಲಿ ಕಾಣದೊರೆಯುವ ಪ್ಲಾಟೇಲಿಯ ಲ್ಯೂಕೊರಾಡಿಯ ಪ್ರಭೇದದ ಚಮಚ ಮುಖಿಯ ದೇಹದ ಬಣ್ಣ ಅಚ್ಚಬಿಳಿ. ಕಾಲುಗಳು ಕಪ್ಪು. ಅಮೆರಿಕ ಸಂಯುಕ್ತ ಸಂಸ್ಥಾನ, ವೆಸ್ಟ್‌ಇಂಡೀಸ್, ಅರ್ಜೆಂಟೀನ ಮುಂತಾದೆಡೆ ವಾಸಿಸುವ ಅಜಾಯಿಯ ಅಜಾಜ (ರೋಸಿಯೇಟ್ ಸ್ಪೂನ್ ಬಿಲ್) ಎಂಬ ಪ್ರಭೇದದ ಚಮಚಮುಖಿಯ ದೇಹದ ಬಣ್ಣ ಗುಲಾಬಿ. ಕಾಲುಗಳು ಕೆಂಪು. ಭಾರತದ ಬಗೆಯಲ್ಲಿ ಹೆಗ್ಗತ್ತಿನ ಮೇಲೆ ಪುಟ್ಟ ಮಕುಟವೊಂದಿದೆ. ಅಮೆರಿಕದ ಚಮಚಮುಖಿಯ ಎದೆಯ ಭಾಗದಲ್ಲಿ ಪುಕ್ಕಗಳ ಗುಚ್ಛವಿದೆ.

ಚಮಚಮುಖಿಗಳು ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. V– ಆಕಾರದ ಸಾಲುಗಳಲ್ಲಿ ಹಾರುವುದು ಇವುಗಳ ವಿಶೇಷ ಲಕ್ಷಣ. ನೀರಿನಲ್ಲಿ ಬೆಳೆಯುವ ಜೊಂಡು, ಸಣ್ಣಗಾತ್ರದ ಮರ ಮುಂತಾದುವುಗಳಲ್ಲಿ ಒರಟು ಕಡ್ಡಿಗಳನ್ನು, ಎಲೆಗಳನ್ನು ಬಳಸಿಕೊಂಡು ಗೂಡುಕಟ್ಟುತ್ತವೆ. ಮೆಲ್ಲನಿಯ ಗುರುಗುಟ್ಟುವಿಕೆ ಅಥವಾ ಕೊಕ್ಕುಗಳನ್ನು ಪರಸ್ಪರ ತಾಡಿಸಿದಾಗ ಉಂಟಾಗುವ ಲಟಪಟಶಬ್ದಗಳನ್ನು ಬಿಟ್ಟರೆ ಇನ್ನಾವ ರೀತಿಯ ಸದ್ದನ್ನೂ ಇವು ಮಾಡವು.

ಇವು ಮೊಟ್ಟೆಯಿಡುವ ಕಾಲ ಜುಲೈ–ನವೆಂಬರ್. ಮೊಟ್ಟೆಗಳ ಬಣ್ಣ ಮಾಸಲು ಬಿಳಿ; ಮೇಲೆಲ್ಲ ಕಂದುಮಚ್ಚೆಗಳುಂಟು; ಸಂಖ್ಯೆ 4–5.

ಇನ್ನಿತರ ಚಮಚಮುಖಿಗಳ ವ್ಯಾಪ್ತಿ ಈ ರೀತಿ ಇದೆ: ಪ್ಲಾಟಿಬಿಸ್ ಫ್ಲೇವಿಪಸ್– ಆಸ್ಟ್ರೇಲಿಯದಲ್ಲಿ ವಾಸಿಸುತ್ತದೆ; ಪ್ಲಾಟೇಲಿಯ ರೀಜಿಯ–ಆಸ್ಟ್ರೇಲಿಯ, ನ್ಯೂಜೀಲೆಂಡ್, ನ್ಯೂಗಿನಿ, ಮುಂತಾದೆಡೆ ಕಾಣದೊರೆಯುತ್ತದೆ; ಪ್ಲಾಟೇಲಿಯ ಮೈನರ್–ಕೊರಿಯ, ದಕ್ಷಿಣ ಜಪಾನ, ದಕ್ಷಿಣ ಚೀನ, ಫಿಲಿಪೀನ್ಸುಗಳಲ್ಲಿ ಜೀವಿಸುತ್ತದೆ; ಪ್ಲಾಟೇಲಿಯ ಅಲ್ಬ–ಆಫ್ರಿಕದ ಸಹರಾ ಮರುಭೂಮಿಯ ದಕ್ಷಿಣ ಭಾಗ ಮತ್ತು ಮಡಗಾಸ್ಕರ್‌ಗಳಲ್ಲಿ ವಾಸಿಸುತ್ತದೆ.

ಅಮೆರಿಕದ ಗುಲಾಬಿ ಚಮಚಮುಖಿಯನ್ನು ಚೆಲುವಾದ ರೆಕ್ಕೆಪುಕ್ಕಗಳಿಗಾಗಿ ಬೇಟೆಯಾಡುತ್ತಿದ್ದುದರಿಂದ ಅದು ನಿರ್ವಂಶವಾಗುವ ಸ್ಥಿತಿಗೆ ಬಂದಿತ್ತು. ಆದರೆ ಈಗೀಗ ಕಾನೂನಿನ ರಕ್ಷಣೆ ದೊರೆತಿರುವುದರಿಂದ ಫ್ಲಾರಿಡದ ಕೆಲವು ಪ್ರದೇಶಗಳಲ್ಲಿ ಸಣ್ಣಪುಟ್ಟ ಗುಂಪುಗಳನ್ನು ಕಾಣಬಹುದು.

(ಕೆ.ವಿ.ಆರ್.ಜಿ.)

**ಚಯಾಪಚಯ:** ಜೀವಿಗಳಲ್ಲಿ ನಿರಂತರ ಜರಗುವ ಸಮಸ್ತ ರಾಸಾಯನಿಕ ಕ್ರಿಯೆಗಳು ಮತ್ತು ಶಕ್ತಿಯ ಬಿಡುಗಡೆ, ಸಂಚಯನ ಹಾಗೂ ವಿನಿಯೋಗಕ್ಕೆ ಸಂಬಂಧಿಸಿದ ಕ್ರಿಯೆಗಳು. ಈ ಕ್ರಿಯೆಗಳಿಂದ ವಸ್ತುಗಳು ಉತ್ಪತ್ತಿಯಾಗಿ ವಿಶಿಷ್ಟ ಪರಿವರ್ತನೆಯಿಂದ ಜೀವಿಯ ಉಪಯೋಗಕ್ಕೆ ಬೇಕಾಗುವ ಶಕ್ತಿ ಒದಗುವುದಲ್ಲದೆ ಜೀವಿಯ ಆರೋಗ್ಯಕ್ಕೆ ಅತ್ಯಗತ್ಯವಾದ ಒಳಾವರಣದ ನಿರಾಂದೋಳನಸ್ಥಿತಿಯ (ಹೋಮಿಯೋಸ್ಟೇಸಿಸ್) ಧಾರಣೆ ಕೂಡ ಸಾಧ್ಯವಾಗಿದೆ. ಸಾಮಾನ್ಯವಾಗಿ ಶಕ್ತಿಯ ಜೈವಿಕ ಪರಿವರ್ತನೆಯನ್ನು ಬೇರೆಯಾಗಿಯೇ ಗಣಿಸಿ, ಚಯಾಪಚಯವೆಂದರೆ ದೇಹದಲ್ಲಾಗುವ ರಾಸಾಯನಿಕ ಬದಲಾವಣೆಗಳೆಂದು ವ್ಯವಹರಿಸುವುದೇ ರೂಢಿ. ಜೀವಕೋಶಗಳ ಹಾಗೂ ಊತಕಗಳ ಒಳಗೆ ಸದಾ ಕಾಲ ನಡೆಯುತ್ತಿರುವ ಕಟ್ಟುವಿಕೆ, ಒಡೆಯುವಿಕೆ ಮತ್ತು ಕ್ರಿಯಾಶೀಲತೆಗೆ ಅನ್ವಯಿಸುವಂಥ ಎಲ್ಲ ಜೀವರಾಸಾಯನಿಕ ಕ್ರಿಯೆಗಳೂ ಚಯಾಪಚಯದಲ್ಲಿ ಅಡಕವಾಗಿವೆ. ಕಿರಿಅಣುಗಳು ಸಂಯೋಗಗೊಂಡು ಬೃಹದಣುಗಳಾಗುವ ಕ್ರಿಯೆ ಉಪಚಯ (ಅನಬಾಲಿಸಮ್). ಇದರ ವಿಪರ್ಯಯವಾದ, ಒಡೆಯುವ ಕ್ರಿಯೆ, ಎಂದರೆ ಬೃಹದಣುಗಳು ಕಿರಿಅಣುಗಳಾಗಿ ಪರಿವರ್ತಿತವಾಗುವ ಕ್ರಿಯೆ ಅಪಚಯ (ಕೆಟಬಾಲಿಸಮ್). ಚಯಾಪಚಯಗಳೆರಡೂ ಸಮತೋಲನದಲ್ಲಿದ್ದರೆ ಊತಕ ದ್ರವ್ಯರಾಶಿ ಸ್ಥಿರವಾಗಿರುತ್ತದೆ. ಉಪಚಯ ಅಪಚಯಕ್ಕಿಂತ ಹೆಚ್ಚಾಗಿದ್ದರೆ ಊತಕ ದ್ರವ್ಯ ರಾಶಿಯೂ ಹೆಚ್ಚಿ ಬೆಳವಣಿಗೆ, ಇಲ್ಲವೆ ತೂಕವೃದ್ಧಿ ಆಗುತ್ತದೆ. ಅಪಚಯ ಉಪಚಯಕ್ಕಿಂತ ಹೆಚ್ಚಾಗಿದ್ದರೆ ಊತಕ ದ್ರವ್ಯರಾಶಿ ಕುಗ್ಗಿ ಬೆಳವಣಿಗೆ ನಿಂತು ತೂಕ ಕಡಿಮೆ ಆಗುತ್ತದೆ. ಅನೇಕ ರೋಗಸ್ಥಿತಿಗಳಲ್ಲಿ ಅಥವಾ ದೀರ್ಘಕಾಲಿಕ ಉಪವಾಸ ಮಾಡುತ್ತಿರುವಾಗ ಈ ರೀತಿ ಆಗುವುದನ್ನು ನೋಡಬಹುದು.

ಪ್ರಸ್ತುತ ಲೇಖನದಲ್ಲಿ ಚಯಾಪಚಯಕ್ರಿಯೆಯನ್ನು, ಚಯಾಪಚಯಕ್ರಿಯೆಗಳ ರೂಪ, ವಿಶೇಷ ಚಕ್ರೀಯ ಅಥವಾ ಸರಪಣಿಮಾರ್ಗಗಳು, ಈ ಕ್ರಿಯೆಗಳ ಪ್ರಾಮುಖ್ಯ ಇತ್ಯಾದಿಗಳನ್ನು ತೋರಿಸಲೂ ವ್ಯಾಸಂಗ ಮಾರ್ಗಗಳನ್ನು ವಿವರಿಸಲೂ ಕೆಲವು ಉದಾಹರಣೆಗಳನ್ನು ಕೊಟ್ಟು ಚಯಾಪಚಯ ಕ್ರಿಯೆಯ ಸ್ಥೂಲಪರಿಚಯ ಮಾತ್ರ ಮಾಡಿ ಕೊಡಲಾಗಿದೆ, ವಿಶೇಷ ವಿಷಯಗಳಾದ ಯೂರಿಯಾಚಕ್ರ, ಸಿಟ್ರಿಕ್ ಆಮ್ಲ ಚಕ್ರ, ಕೋಡಾನುಗಳು, ಕಿಣ್ವಗಳು, ಪ್ರೋಟೀನುಗಳು, ಮೇದೋಆಮ್ಲಗಳು, ಪ್ಯೂರಿನ್ ಹಾಗು ಪಿರಮಿಡಿನುಗಳು, ಲವಣಗಳು ಇವನ್ನು ಜೀವರಸಾಯನವಿಜ್ಞಾನವೆಂಬ ಶೀರ್ಷಿಕೆಯಲ್ಲಿ ಪ್ರಸ್ತಾವಿಸಿದೆ.

ಸಂಶ್ಲೇಷಣ ಕಾರ್ಯಗಳಿಗೆ ಉಪಚಯವೆಂದು ವಿಶ್ಲೇಷಣ ಕಾರ್ಯಗಳಿಗೆ ಅಪಚಯವೆಂದು ಇವೆರಡರ ಒಕ್ಕೂಟವೇ ಚಯಾಪಚಯಕ್ರಿಯೆ ಎಂದು ಮೇಲೆ ಹೇಳಿದೆ. ಉದಾಹರಣೆಗೆ ನಮ್ಮ ಆಹಾರದಲ್ಲಿನ ಹಿಟ್ಟು ಅರಗಿ ಸುಲಭ ರಾಸಾಯನಿಕ ವಸ್ತುವಾದ ಗ್ಲೂಕೋಸ್ ಆಗಿ ರಕ್ತದ ಮುಖಾಂತರ ಯಕೃತ್ತಿಗೆ ಹೋಗಿ ಅಲ್ಲಿ ಗ್ಲೈಕೊಜೆನ್ ಎಂಬ ಬೃಹದಣು ತಯಾರಾಗಿ ಶೇಖರವಾಗುತ್ತದೆ. ಇದು ಗ್ಲೂಕೋಸಿಗೆ ಸಂಬಂಧಿಸಿದ ಒಂದು ಉಪಚಯಕ್ರಿಯೆ. ದೇಹಕ್ಕೆ ಗ್ಲೂಕೋಸಿನ ಅವಶ್ಯಕತೆ ಉಂಟಾದಾಗ ಗ್ಲೈಕೊಜೆನ್ ಬೃಹದಣು ಒಡೆದು ಮತ್ತೆ ಗ್ಲೂಕೋಸಾಗಿ ಪರಿವರ್ತಿತವಾಗುತ್ತದೆ. ಅನಂತರ ವಿವಿಧ ಕೋಶಗಳನ್ನು ಪ್ರವೇಶಿಸಿ ಇಂಗಾಲದ ಡೈಆಕ್ಸೈಡ್, ನೀರು ಹಾಗೂ ಶಕ್ತಿಯನ್ನು ಬಿಡುಗಡೆ ಮಾಡುತ್ತದೆ. ಇದು ಗ್ಲೂಕೋಸಿಗೆ ಸಂಬಂಧಿಸಿದ ಒಂದು ಅಪಚಯ ಕ್ರಿಯೆ. ಇವೆರಡೂ ಹಾಗು ಇನ್ನೂ ಹಲವು ಕ್ರಿಯೆಗಳು ಸೇರಿ ಗ್ಲೂಕೋಸಿನ ಚಯಾಪಚಯ ಕ್ರಿಯೆ ಆಗುವುದು. ಇದೇ ರೀತಿ ಅಮೈನೋ ಆಮ್ಲಗಳು, ನ್ಯೂಕ್ಲಿಯಿಕ್ ಆಮ್ಲಗಳು, ಕೊಬ್ಬಿನ ಪದಾರ್ಥಗಳು ಮುಂತಾದುವುಗಳ ಚಯಾಪಚಯ ಕ್ರಿಯೆಗಳು ಜರುಗಿ. ಪ್ರತಿಯೊಂದು ಜೀವಕೋಶದಲ್ಲಿಯು ನಡೆಯುವ ಎಲ್ಲ ಜೀವಕ್ರಿಯೆಗಳ ಮೂಲವಾಗಿವೆ.

ಒಂದು ಜೀವರಾಸಾಯನಿಕದ ಸಂಶ್ಲೇಷಣೆ ಕಾರ್ಯಕ್ಕೆ, ಎಂದರೆ ಉಪಚಯಕ್ಕೆ ಬೇಕಾಗುವ ಎಲ್ಲ ರಾಸಾಯನಿಕಗಳಿದ್ದರೂ ಅವನ್ನು ಜೋಡಿಸುವ ರಾಸಾಯನಿಕ ಕ್ರಿಯೆಗಳಿಗೆ ವೇಗೋತ್ಕರ್ಷಕವಾಗಿ ಕೆಲಸ ಮಾಡುವ ಕಿಣ್ವಗಳು (ಎಂಜೈಮುಗಳು) ಸಾಕಷ್ಟು ಪ್ರಮಾಣದಲ್ಲಿ

ಇರಬೇಕು. ನಿಯಂತ್ರಣಕಾರ್ಯದಲ್ಲಿ ಹಾರ್ಮೋನುಗಳು ಭಾಗವಹಿಸುತ್ತವೆ. ಅಲ್ಲದೆ ಸಾಧಾರಣವಾಗಿ ಈ ರೀತಿಯ ಸಂಶ್ಲೇಷಣಕಾರ್ಯಗಳಿಗೆ ಶಕ್ತಿ ಬೇಕಾಗಿರುವುದರಿಂದ ಅಗಾಧ ರಾಸಾಯನಿಕ ಶಕ್ತಿಯನ್ನು ಸುಲಭವಾಗಿ ಪೂರೈಸಬಲ್ಲ ರಾಸಾಯನಿಕಗಳೂ ಸಾಕಷ್ಟು ಇರಬೇಕು. ಇಂಥ ವಸ್ತುಗಳಲ್ಲಿ ಮುಖ್ಯವಾದುದು ಅಡೆನೋಸೀನ್ ಟ್ರೈಫಾಸ್ಫೇಟ್ (ಎಟಿಪಿ). ಉಳಿದ ಶಕ್ತಿದಾನಿಗಳಾದ ಯುಟಿಪಿ, ಸಿಟಿಪಿ ಮುಂತಾದುವು ಎಟಿಪಿಯ ಗುಂಪಿಗೆ ಸೇರಿವೆ. ವಿಭಜನೆ ಇಲ್ಲವೆ ಅಪಚಯಕ್ಕೆ, ಇದೇ ರೀತಿಯ ಅನುಕೂಲತೆಗಳು ಅವಶ್ಯ. ವಿಭಜನೆ ಅಂದರೆ ಬೃಹದಣುಗಳು ಸುಲಭ ಅಣುಗಳಾಗುವುದು ಅಷ್ಟೇ ಅಲ್ಲ. ಉದಾಹರಣೆಗೆ ಗ್ಲೈಕೋಜೆನ್ನು ಗ್ಲೂಕೋಸ್ ಆಗುವದಲ್ಲದೆ, ಅನಂತರ ಅದು ಉತ್ಕರ್ಷಣೆಗೊಂಡು ಇಂಗಾಲದ ಡೈಆಕ್ಸೈಡ್ ಆಗುವುದು. ವಿಶ್ಲೇಷಣ ಕ್ರಿಯೆಯ ಫಲ ರಾಸಾಯನಿಕವಾದ ಗ್ಲೂಕೋಸ್ ಅಣುವಿನಲ್ಲಿರುವ ಭೌತಶಕ್ತಿಯ ಬಿಡುಗಡೆ ಮತ್ತು ಶಕ್ತಿಸಂಚಯನ. ಉಳಿದ ವಿಶ್ಲೇಷಣ ಕ್ರಿಯೆಗಳಲ್ಲಿ ದೇಹದಿಂದ ಸುಲಭವಾಗಿ ಹೊರದೂಡಲು ಅನುಕೂಲವಾಗಿರುವ ಯೂರಿಯ, ಯೂರಿಕ್ ಆಮ್ಲ ಮುಂತಾದ ರಾಸಾಯನಿಕಗಳ ತಯಾರಿಕೆ ಮುಖ್ಯವಾದುದು. ಒಂದು ವಸ್ತು ಇನ್ನೊಂದು ವಸ್ತುವಾಗಿ ಪರಿವರ್ತಿತವಾಗುವಾಗ ವಿಶ್ಲೇಷಣೆ ಸಂಶ್ಲೇಷಣೆಗಳೆರಡೂ ಆಗುವುದು ಸಾಮಾನ್ಯ.

ಸಂಶ್ಲೇಷಣ ಕಾರ್ಯವೇ ಆಗಲಿ ವಿಶ್ಲೇಷಣ ಕಾರ್ಯವೇ ಆಗಲಿ ಅದು ನಡೆಯುವುದು ಒಂದು ಅಥವಾ ಕೆಲವೇ ರಾಸಾಯನಿಕ ಕಾರ್ಯಗಳಿಂದಲ್ಲ. ಅದು ಸಾಧಾರಣವಾಗಿ ಹಲವಾರು ರಾಸಾಯನಿಕ ಕಾರ್ಯಗಳ ಸರಣಿ. ಇದು ಸರಪಳಿರೂಪದಲ್ಲಿ ಇರಬಹುದು ಇಲ್ಲವೆ ವರ್ತುಲರೂಪದಲ್ಲಿ ಇರಬಹುದು. ಈ ಕ್ರಿಯೆಗಳು ವರ್ತುಲ ರೂಪದಲ್ಲಿ ಇರುವುದು ಹಲವು ಚಯಾಪಚಯ ಕ್ರಿಯೆಗಳಲ್ಲಿರುವ ವಿಶೇಷ ಮಾರ್ಗ.

X ಎಂಬ ರಾಸಾಯನಿಕದ ಉತ್ಕರ್ಷಣೆಯನ್ನು ಉದಾಹರಣೆಯನ್ನಾಗಿ ತೆಗದುಕೊಳ್ಳಬಹುದು. ಇದು Aಯೊಂದಿಗೆ ರಾಸಾಯನಿಕವಾಗಿ ಕೂಡಿ ಮೊದಲು B ತರುವಾಯ C, D ಮುಂತಾದ Aಯ ಜನ್ಯವಸ್ತುಗಳಾಗಿ ಕಡೆಗೆ A ಬಿಡುಗಡೆಯಾಗುತ್ತದೆ ಮತ್ತು ಈ ಕಾರ್ಯಗಳಲ್ಲಿ X ಸಂಪೂರ್ಣವಾಗಿ ಉತ್ಕರ್ಷಣಗೊಂಡು ಉತ್ಪನ್ನ ರಾಸಾಯನಿಕಗಳು ಬಿಡುಗಡೆಯಾಗುತ್ತವೆ. ಈಗ A ಪುನಃ ಇನ್ನೊಂದು Xನ ಉತ್ಕರ್ಷಣ ಕ್ರಿಯೆಯಲ್ಲಿ ಭಾಗವಹಿಸಲು ಸಿದ್ಧವಾಗುತ್ತದೆ. ಈ ರೀತಿಯ ವರ್ತುಲಮಾರ್ಗ ಹೆಚ್ಚು ಉಪಯುಕ್ತವಾದುದು. ಹಂತಹಂತವಾಗಿ ಬದಲಾವಣೆ ಆಗುವುದರಿಂದ ಇದರ ವೇಗವೂ ಹೆಚ್ಚು. ಲಾಭವೂ ಹೆಚ್ಚು. ಈ ರೀತಿಯ ವರ್ತುಲ ಮಾರ್ಗದ ಉದಾಹರಣೆಗಳಲ್ಲಿ ಮುಖ್ಯವಾದವೆಂದರೆ ಕ್ರೆಬ್ಸ್ ಸಿಟ್ರಿಕ್ ಆಮ್ಲ ಚಕ್ರ, ಯೂರಿಯ ತಯಾರಿಕಾ ಚಕ್ರ, ಮೇದೋ ಆಮ್ಲದ ತಯಾರಿಕೆಯ ಮತ್ತು ಬೀಟ ಉತ್ಕರ್ಷಣೆಯ ಚಕ್ರ. ಜೀವಕೋಶದಲ್ಲಿರುವ ಇನ್ನೊಂದು ಮಾರ್ಗ, ಸರಪಣಿ ರಾಸಾಯನಿಕ ಮಾರ್ಗ, ಶಕ್ತಿ ಸಂಚಯನ ಕಾರ್ಯದ ಎಲೆಕ್ಟ್ರಾನ್ ಸಾಗಣೆ ಸರಣಿ ಇದಕ್ಕೆ ಉತ್ತಮ ಉದಾಹರಣೆ.

ಒಂದು ರಾಸಾಯನಿಕದ ಚಯಾಪಚಯವನ್ನು ಹಲವಾರು ನಿರ್ದಿಷ್ಟ ಭಾಗಗಳಾಗಿ ವಿಂಗಡಿಸಬಹುದು. ಇಂಥ ಭಾಗಗಳಿಗೆ ಮಧ್ಯವರ್ತಿ ಚಯಾಪಚಯ (ಇಂಟರ್ ಮೀಡಿಯರಿ ಮೆಟಬಾಲಿಸಮ್) ಎಂದು ಹೆಸರು. ಇವನ್ನೆಲ್ಲ ಬಿಡಿಬಿಡಿಯಾಗಿ ವ್ಯಾಸಂಗಿಸಿ, ಅರ್ಥವಿಸಿ, ಆ ರಾಸಾಯನಿಕದ ಸಂಪೂರ್ಣ ಚಯಾಪಚಯವನ್ನು ತಿಳಿದುಕೊಳ್ಳಬೇಕಷ್ಟೆ. ಇದನ್ನು ನಡೆಸಲು ಅನೇಕ ಮಾರ್ಗಗಳಿವೆ. ಜೀವಕೋಶವನ್ನು ಅರೆದು ಕೋಶರಹಿತಸಾರವನ್ನು (ಹೊಮೊಜಿನೇಟ್) ಅಪಕೇಂದ್ರಣ ಯಂತ್ರದಿಂದ (ಸೆಂಟ್ರಿಫ್ಯೂಜ್) ಬೇರ್ಪಡಿಸಿ ಬಂದ ಬೇರೆ ಬೇರೆ ಭಾಗಗಳನ್ನು ಪರಿಶೋಧನೆಗೆ ಒಳಪಡಿಸುತ್ತಾರೆ. ಹೀಗೆ ಮಾಡುವುದರಿಂದ ಜೀವಕೋಶದ ಯಾವ ಯಾವ ಭಾಗಗಳಲ್ಲಿ ಏನೇನು ರಾಸಾಯನಿಕ ಕಾರ್ಯಗಳು ನಡೆಯುತ್ತವೆ, ಅವು ಕ್ರಮಪ್ರಕಾರ ಸಂಭವಿಸಲು ಬೇಕಾದ ಅವಶ್ಯಕತೆಗಳೇನು ಎಂಬೆಲ್ಲ ವಿವರಗಳು ದೊರೆಯುತ್ತವೆ. ವಿಕಿರಣಪಟು ಐಸೊಟೋಪುಗಳ ಪ್ರಯೋಗದಿಂದ ಚಯಾಪಚಯವನ್ನು ನಿಖರವಾಗಿ ಅನ್ವೇಷಿಸುವುದು ಈಚೆಗೆ ಸಾಧ್ಯವಾಗಿದೆ. ಈ ಐಸೊಟೋಪುಗಳು ಎಷ್ಟೇ ಕಡಿಮೆ ಮೊತ್ತದಲ್ಲಿ ಇರಬಹುದು, ಎಲ್ಲಿಯೆ ಇರಬಹುದು, ಯಾವುದೆ ರಾಸಾಯನಿಕಗಳೊಡನೆ ಸೇರಿಕೊಂಡಿರಬಹುದು– ಅವು ಎಲ್ಲಿ ಇವೆ, ಎಷ್ಟು ಮೊತ್ತದಲ್ಲಿ ಇವೆ ಎನ್ನುವುದನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಆದ್ದರಿಂದ ಮಧ್ಯವರ್ತಿ ಚಯಾಪಚಯ ಸಂಶೋಧನೆಯಲ್ಲಿ ದೊರೆತಿರುವ ಇನ್ನೊಂದು ಸಾಧನವೆಂದರೆ ಸೋಸುಕಾಗದವನ್ನು ಬಳಸುವ ಕ್ರೊಮಟಾಗ್ರಫಿ ತಂತ್ರ (ನೋಡಿ–ಕ್ರೊಮಟಾಗ್ರಫಿ). ರಾಸಾಯನಿಕಗಳು ಅತಿ ಕಡಿಮೆ ಮೊತ್ತದಲ್ಲಿದ್ದರೂ ಈ ತಂತ್ರದಲ್ಲಿ, ಸೂಕ್ತವಾದ ವಿಷಗಳನ್ನು ಉಪಯೋಗಿಸಿ ಗೊತ್ತಾದ ಎಂಜೈಮುಗಳ ಸಾಮರ್ಥ್ಯವನ್ನು ನಾಶಮಾಡುವುದರಿಂದ ರಾಸಾಯನಿಕಕ್ರಿಯೆ ಮುಂದೆ ಸಾಗದೆ ಮಧ್ಯವರ್ತಿ ರಾಸಾಯನಿಕಗಳು ಶೇಖರವಾಗುವುವು. ಇವು ಯಾವುವು ಎಂಬುದನ್ನು ಕಂಡು ಹಿಡಿಯುವುದರ ಮೂಲಕ ಚಯಾಪಚಯದ ವಿವರಗಳನ್ನು ತಿಳಿಯಬಹುದು. ಫ್ಲೋರೋ ಅಸಿಟೇಟ್, ಮೆಲನೇಟ್, ಅರ್ಸನೇಟ್ ಮುಂತಾದ ಎಂಜೈಮ್ ವಿಷಗಳನ್ನು ಬಳಸಿ ಸಿಟ್ರಿಕ್ ಆಮ್ಲ ಚಕ್ರದ ವಿವರಗಳನ್ನು ಶೋಧಿಸಿದ್ದಾರೆ.

ಇಂಥ ಸಂಶೋಧನೆಗೆ ಮನುಷ್ಯನ ಜೀವಕೋಶಗಳೇ ಬೇಕೆಂಬುದೇನೂ ಇಲ್ಲ. ಅಲ್ಲಿ ನಡೆಯುವ ಅನೇಕ ಕ್ರಿಯೆಗಳು ಇಲಿ, ಮೊಲ ಮುಂತಾದ ಪ್ರಾಣಿಗಳಲ್ಲಿಯೂ ಕಡೆಗೆ ಬ್ಯಾಕ್ಟೀರಿಯ ಮತ್ತು ಬೂಷ್ಟುಗಳಲ್ಲಿಯೂ ನಡೆಯುತ್ತವೆ. ವಿವರಗಳಲ್ಲಿ ಭಿನ್ನತೆ ಇರಬಹುದು ಅಷ್ಟೆ. ಆದ್ದರಿಂದ ಎಲ್ಲ ಜೀವಿಗಳ ಕೋಶಗಳನ್ನೂ ಸಂಶೋಧನೆಗೆ ಉಪಯೋಗಿಸಿಕೊಳ್ಳುತ್ತಾರೆ. ಯೀಸ್ಟಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳನ್ನು ಅರ್ಥವಿಸಿ ನಿರ್ವಾಯು ಶರ್ಕರ ಪಥವನ್ನು ಕಂಡುಹಿಡಿಯಲಾಗಿದೆ. ಈ ಪಥ ಮಾನವರಲ್ಲಿಯೂ ಕಂಡುಬರುತ್ತದೆ.

ಚಯಾಪಚಯದಲ್ಲಿ ಆರ್ಗ್ಯಾನಿಕ್ ರಾಸಾಯನಿಕಗಳು ಮಾತ್ರ ಭಾಗವಹಿಸುವುದಲ್ಲ. ಖನಿಜ ರಾಸಾಯನಿಕಗಳಾದ ಕಬ್ಬಿಣ, ಕ್ಯಾಲ್ಷಿಯಮ್, ಸೋಡಿಯಮ್, ಪೊಟ್ಯಾಷಿಯಮ್, ಫಾಸ್ಫೇಟ್, ಕ್ಲೋರೈಡ್ ಮುಂತಾದುವು ಕೂಡ ಭಾಗವಹಿಸುತ್ತವೆ. ಮೂಳೆಯ ರಚನೆಯಲ್ಲಿ ಕ್ಯಾಲ್ಸಿಯಮ್ ಭಾಗವಹಿಸುತ್ತದೆ. ಆಮ್ಲಜನಕ ಸರಬರಾಜು ಮಾಡುವ ಹಿಮೋಗ್ಲೋಬಿನ್ನಿನಲ್ಲಿಯೂ ಜೀವಕೋಶದ ಎಲೆಕ್ಟ್ರಾನುಗಳ ಸಾಗಾಣಿಕೆಯಲ್ಲಿಯೂ ಕಬ್ಬಿಣದ ಪಾತ್ರ ಉಂಟು. ಕಬ್ಬಿಣವಿರುವ ಇತರ ರಾಸಾಯನಿಕಗಳೆಂದರೆ ಫೆರಿಟಿನ್ (ಕರುಳಿನಿಂದ ಹೀರಿಕೊಳ್ಳುವ ಮತ್ತು ಸಂಗ್ರಹಣೆಯ ಮಿತಿಯನ್ನು ಇದು ಹತೋಟಿಯಲ್ಲಿಡುತ್ತದೆ) ಮತ್ತು ಟ್ರಾನ್ಸ್ ಫೆರಿನ್ (ಕಬ್ಬಿಣದ ಸಾಗಣೆಗಾಗಿ). ಈ ಲೋಹಗಳಲ್ಲದೆ ಕೋಬಾಲ್ಟ್ (ರಕ್ತ ಕಣಗಳ ಬೆಳವಣಿಗೆಗೆ), ಸತು (ಕಾರ್ಬಾಕ್ಸಿಪೆಪ್ಟಿಡೇಸಿನ ಭಾಗವಾಗಿ), ಮೆಗ್ನೀಸಿಯಮ್ ಮುಂತಾದ ಲೋಹಗಳು ಚಯಾಪಚಯದಲ್ಲಿ ಅವುಗಳ ಅಯಾನುರೂಪಗಳಲ್ಲಿ ಭಾಗವಹಿಸುತ್ತವೆ. ಚಯಾಪಚಯದ ವಿವರ ಹಾಗೂ ಮಾರ್ಗಗಳಲ್ಲಿ ಮುಖ್ಯವಾದುವನ್ನು ಇಲ್ಲಿ ಬರೆದಿದೆ.

ಆಮ್ಲಜನಕರಹಿತ ಶರ್ಕರ ಪಥ–ಎಂಬ್ಡೆನ್ ಮೈಯರ್ ಹೋಪ್ ಪಥ: ವ್ಯಕ್ತಿ ಹಠಾತ್ತನೆ ವೇಗವಾಗಿ ಓಡುವುದು ನೆಗೆಯುವುದು ಮುಂತಾದ ಕೆಲಸಮಾಡಬೇಕಾದಾಗ ದೇಹದ ಸ್ನಾಯುಗಳಲ್ಲಿ ಕ್ರಿಯೆ ನಡೆಯುವುದು ಈ ಪಥದಲ್ಲಿ. ಸ್ನಾಯುಗಳಿಗೆ ರಕ್ತದ ಮೂಲಕ ಬೇಕಾಗುವಷ್ಟು ಆಮ್ಲಜನಕ ಸರಬರಾಜು ಮಾಡಲು ಸಾಕಷ್ಟು ಕಾಲ ಇರುವುದಿಲ್ಲವಾದ್ದರಿಂದ ಗ್ಲೈಕೋಜೆನಿನಿಂದ ಬಂದ ಪೈರುವೇಟ್ ಇದೇ ಸಂದರ್ಭದಲ್ಲಿ ಉತ್ಪತ್ತಿಯಾದ ಅಪಕರ್ಷಿತರೂಪದ ಕೋಎಂಜೈಮನ್ನು ಮತ್ತೆ ಸಾಮಾನ್ಯರೂಪಕ್ಕೆ ಹಿಂತಿರುಗಿಸಿ ಅದು ಲ್ಯಾಕ್ಟಿಕ್ ಆಮ್ಲ ಆಗುತ್ತದೆ. ಹೀಗಾದ ಸಾಮಾನ್ಯರೂಪದ ಕೋಎಂಜೈಮ್ ಮತ್ತೆ ಗ್ಲೈಕೋಜನ್ ಪೈರುವೇಟ್ ಬದಲಾವಣೆಯಲ್ಲಿ ಪಾತ್ರ ವಹಿಸಲು ಸಾಧ್ಯವಾಗುತ್ತದೆ. ಆಮ್ಲಜನಕದ ಸರಬರಾಜಿಗೆ ಸಾಕಾದಷ್ಟು ಕಾಲ ಇರುವಾಗ ಪೈರುವೇಟು ಸಿಟ್ರಿಕ್ ಆಮ್ಲ ಚಕ್ರವನ್ನು ಪ್ರವೇಶಿಸಿ ಸಂಪೂರ್ಣವಾಗಿ ಇಂಗಾಲಾಮ್ಲಕ್ಕೆ ಉತ್ಕರ್ಷಣಹೊಂದುವುದು. ಅಪಕರ್ಷಿತ ರೂಪದ ಕೋಎಂಜೈಮ್ ಸಮೃದ್ಧಿಯಾಗಿ ಸರಬರಾಜಾದ ಆಮ್ಲಜನಕದಿಂದ ವಿಶಿಷ್ಟ ಕ್ರಮದಲ್ಲಿ ಉತ್ಕರ್ಷಣಗೊಂಡು ಪುನಃ ಸಾಮಾನ್ಯ ರೂಪಕ್ಕೆ ಬರುತ್ತದೆ. ಆಮ್ಲಜನಕರಹಿತಪಥದಲ್ಲಿ ಗ್ಲೈಕೊಜನ್ನಿನಲ್ಲಿನ ಒಂದು ಗ್ಲೂಕೋಸ್ ಅಣುವಿನಿಂದ ಎರಡು ಎಟಿಪಿ ಅಣುಗಳು ಮಾತ್ರ ಬಿಡುಗಡೆಯಾಗುವುವು. ಒಂದು ಗ್ರಾಮ್‌ಸಮಾನ ಗ್ಲೂಕೋಸಿನಿಂದ 16 ಕಿಲೋ ಕೆಲೊರಿ ಶಕ್ತಿ ಬಿಡುಗಡೆಯಾಗುತ್ತದೆ. ಆಮ್ಲಜನಕ ಒದಗಿದರೆ ಕೋಎಂಜೈಮ್ ಉತ್ಕರ್ಷಣೆಯಿಂದ ಮತ್ತು ಪೈರುವೇಟ್ ಸಿಟ್ರಿಕ್ ಆಮ್ಲ ಚಕ್ರವನ್ನು ಸೇರುವುದರಿಂದ ಎಲೆಕ್ಟ್ರಾನ್ ಸಾಗಣೆ ಸರಣಿಯಲ್ಲಿ ಮೂವತ್ತಾರು ಎಟಿಪಿ ಅಣುಗಳು ಪ್ರತಿ ಗ್ಲುಕೊಸ್ ಅಣುವಿನಿಂದ ಬಿಡುಗಡೆಯಾಗುವುವು.

ಪೆಂಟೋಸ್‌ಫಾಸ್ಫೇಟ್ ಚಕ್ರ : ಸಿಟ್ರಿಕ್ ಆಮ್ಲ ಚಕ್ರದ ಸಹಾಯವಿಲ್ಲದೆ ಗ್ಲೂಕೋಸಿನ ಉತ್ಕರ್ಷಣಕ್ರಿಯೆ ನಡೆಯುವ ಇನ್ನೊಂದು ಮಾರ್ಗವಿದು. ಈ ಚಕ್ರಕ್ಕೆ ಆಮ್ಲಜನಕದ ಅವಶ್ಯಕತೆ ಇದೆ. ಗ್ಲೂಕೋಸ್ ಫಾಸ್ಫೇಟಿನ ಆರು ಅಣುಗಳಿಂದ ಆರಂಭವಾದ ಈ ಚಕ್ರದಲ್ಲಿ ಒಟ್ಟಾಗಿ ಮೂರು ಇಂಗಾಲದ ಪರಮಾಣು ಹೊಂದಿರುವ ಗ್ಲಿಸರಾಲ್ಡಿಹೈಡ್ ಫಾಸ್ಫೇಟಿನ ಹತ್ತು ಅಣುಗಳು ಬಂದು ಅವು ಸೇರಿ ಮತ್ತೆ ಐದು ಗ್ಲೂಕೋಸ್ ಫಾಸ್ಫೇಟಿನ ಅಣುಗಳಾಗುತ್ತವೆ. ಆದ್ದರಿಂದ ಒಂದು ಚಕ್ರದಲ್ಲಿ ಗ್ಲೂಕೋಸ್ ಫಾಸ್ಫೇಟಿನ ಒಂದು ಅಣು ಉತ್ಕರ್ಷಣಗೊಂಡು ಇಂಗಾಲಾಮ್ಲ ಅನಿಲದ ಆರು ಅಣುಗಳು ಬಿಡುಗಡೆಯಾದಂತಾಯಿತು. ಈ ಕ್ರಿಯೆಯಲ್ಲಿ ಭಾಗವಹಿಸುವ ಕೋಎಂಜೈಮುಗಳು B ಜೀವಸತ್ತ್ವದ ಗುಂಪಿನ ನಿಕೊಟಿನಿಕ್ ಆಮ್ಲದ ಜನ್ಯವಸ್ತುಗಳು. ಯಕೃತ್ ಮುಂತಾದ ಹೆಚ್ಚು ಶಕ್ತಿಬೇಕಾದ ಅಂಗಗಳಲ್ಲಿ ಈ ಮಾರ್ಗ ಇರುತ್ತದೆ.

ಶ್ವಾಸಕ್ರಿಯೆಯಲ್ಲಿನ ಎಲೆಕ್ಟ್ರಾನ್ ಸಾಗಣೆ ಸರಣಿ: ಉತ್ಕರ್ಷಣೆ ಹೊಂದಿದಾಗ ಶಕ್ತಿ ಬಿಡುಗಡೆಯಾಗುವುದು ಈ ಪಥದಲ್ಲಿಯೆ. ಅಪಕರ್ಷಿತ ರೂಪದಲ್ಲಿರುವ ಕೋಎಂಜೈಮುಗಳು

ಉತ್ಕರ್ಷಣಕಾರ್ಯದಲ್ಲಿ ಬಿಡುಗಡೆಯಾಗುವುವು. ಇವು ಮೂರು ರಾಸಾಯನಿಕಗಳು. ಮೊದಲನೆಯದರಲ್ಲಿ ರೈಬೋಫ್ಲೇವಿನ್ ಮತ್ತು ಉಳಿದೆರಡರಲ್ಲಿ ನಿಕೋಟಿನಿಕ್ ಆಮ್ಲ ಉಂಟು. ಈ ಎರಡು ವಸ್ತುಗಳೂ B ಜೀವಸತ್ತ್ವಗಳ ಗುಂಪಿಗೆ ಸೇರಿವೆ. ಸೈಟೊಕ್ರೋಮುಗಳು ಜೀವಕೋಶಗಳಲ್ಲಿರುವ ಮೈಟೊಕಾಂಡ್ರಿಯ ಘಟಕಗಳಲ್ಲಿರುವ ಎಲೆಕ್ಟ್ರಾನುಗಳನ್ನು ಪಡೆದು ಕಡೆಗೆ ಆಮ್ಲಜನಕಕ್ಕೆ ಕೊಟ್ಟು ಉತ್ಕರ್ಷಣ ಕ್ರಿಯೆಯನ್ನು ಪೂರ್ಣಗೊಳಿಸುತ್ತವೆ. ಬಿಡುಗಡೆಯಾಗುವ ಶಕ್ತಿ ಸಂಚಯನಕಾರ್ಯದಲ್ಲಿ ಕೋಎಂಜೈಮ್ ಕ್ಯೂ ಅಥವಾ ಯೂಬಿಕ್ವಿನೋನ್ ಎಂಬ ರಾಸಾಯನಿಕ ವಸ್ತು ಭಾಗವಹಿಸುತ್ತದೆ.

ಮೇದೋ ಆಮ್ಲಗಳ (ಫ್ಯಾಟಿ ಆ್ಯಸಿಡ್ಸ್) ಉತ್ಕರ್ಷಣೆ : ಇದಕ್ಕೆ ಬೀಟ ಉತ್ಕರ್ಷಣೆ ಎಂದು ಹೆಸರು. ಮೇದೋ ಆಮ್ಲವನ್ನು ಒಂದು ಸಂಪೂರ್ಣ ಉತ್ಕರ್ಷಣಚಕ್ರಕ್ಕೆ ಒಳಪಡಿಸಿದಾಗ ಇಂಗಾಲದ ಎರಡು ಪರಮಾಣುಗಳಿರುವ ಅಸಿಟೈಲ್ ಕೋಎಂಜೈಮಿನ ಒಂದು ಅಣು ಬಿಡುಗಡೆಯಾಗುತ್ತದೆ. ಅಂದರೆ ಇಂಗಾಲದ ಹದಿನೆಂಟು ಪರಮಾಣುಗಳಿರುವ ಸ್ಟಿಯರಿಕ್ ಆಮ್ಲ ಉತ್ಕರ್ಷಣಹೊಂದಲು ಎಂಟು ಚಕ್ರಬೇಕು. ಆಗ ಅಪಕರ್ಷಿತರೂಪದ ಹದಿನಾರು ಕೋಎಂಜೈಮುಗಳು ಬಿಡುಗಡೆಯಾಗುತ್ತವೆ. ಮತ್ತು ಅವುಗಳಿಂದ ನಲವತ್ತೆಂಟು ಎಟಿಪಿ ಅಣುಗಳು ಎಲೆಕ್ಟ್ರಾನ್ ಸಾಗಣೆ ಸರಣಿಯಲ್ಲಿ ಬರುತ್ತವೆ. ಈ ಚಕ್ರದಲ್ಲಿ ಬಿಡುಗಡೆಯಾದ ಅಸಿಟೈಲ್ ಕೋಎಂಜೈಮ್–ಎ, ಸಿಟ್ರಿಕ್ ಆಮ್ಲಚಕ್ರದಲ್ಲಿ ಸಂಪೂರ್ಣವಾಗಿ ಉತ್ಕರ್ಷಣ ಹೊಂದುತ್ತದೆ.

ಮೇದೋ ಆಮ್ಲಗಳ ತಯಾರಿಕೆ : ಇವುಗಳ ತಯಾರಿಕೆಗೆ ಪ್ರಾರಂಭದ ವಸ್ತುವೆಂದರೆ ಪೈರುವೇಟಿನಿಂದ ಬಂದ ಅಸಿಟೈಲ್ ಕೋಎಂಜೈಮ್–ಎ. ಇದರಲ್ಲಿ B ಜೀವಸತ್ತ್ವದ ಗುಂಪಿನ ಪ್ಯಾಂಟೊಥೆನಿಕ್ ಆಮ್ಲದ ಜನ್ಯವಸ್ತು ಉಂಟು. ಪ್ರತಿಯೊಂದು ಚಕ್ರ ಪೂರ್ತಿಯಾದಾಗಲು ಇಂಗಾಲದ ಎರಡು ಪರಮಾಣುಗಳಿರುವ ಅಸಿಟೈಲ್ ಗುಂಪು ಪ್ರಾರಂಭದ ಫ್ಯಾಟಿ ಆಮ್ಲದೊಂದಿಗೆ ಸೇರಿಕೊಂಡು ಅದರ ಉದ್ದವನ್ನು ಹೆಚ್ಚಿಸುತ್ತದೆ. ಅಸೈಲ್ ಕ್ಯಾರಿಯರ್ ಪ್ರೋಟೀನ್ ಬಿಡುಗಡೆಯಾಗಿ ಮುಂದಿನ ಚಕ್ರದಲ್ಲಿ ಭಾಗವಹಿಸಲು ಸಿದ್ಧವಾಗುತ್ತದೆ. ಕೆಲವೊಂದು ವಿವರಗಳನ್ನು ಬಿಟ್ಟರೆ ಇದು ಬೀಟ ಉತ್ಕರ್ಷಣದಂತೆಯೆ, ಆದರೆ ವಿರುದ್ಧ ದಿಶೆಯಲ್ಲಿ. ಈ ಸಂಶ್ಲೇಷಣ ಕಾರ್ಯದಲ್ಲಿ ಇನ್ಸುಲಿನ್ ಪಾತ್ರವಹಿಸುತ್ತದೆ.

ಪ್ರೋಟೀನ್ ತಯಾರಿಕೆ : ಆಹಾರದಲ್ಲಿ ಪ್ರೋಟೀನ್ ಅರಗಿ ಅಮೈನೋ ಆಮ್ಲಗಳ ಅಣುಗಳಾಗುತ್ತವೆ. ಇವು ಕರುಳಿನಲ್ಲಿ ಹೀರಲ್ಪಟ್ಟು ರಕ್ತದ ಮುಖಾಂತರ ಜೀವಕೋಶಗಳನ್ನು ಸೇರುತ್ತವೆ. ಇವು ಹಾಗೂ ಜೀವಕೋಶದಲ್ಲಿಯೇ ತಯಾರಾಗುವ ಅಮೈನೋ ಆಮ್ಲಗಳು ಪ್ರೋಟೀನಿನ ತಯಾರಿಕೆಯ ಪ್ರಾರಂಭ ವಸ್ತುಗಳು. ಪ್ರತಿಯೊಂದು ಅಮೈನೋ ಆಮ್ಲಕ್ಕೂ ಒಂದೊಂದು ಅಣುವಾಹಕ ಆರ್‌ಎನ್‌ಎ ಉಂಟು. ಸಂಕೇತವಾಹಕದಲ್ಲಿರುವ ನ್ಯೂಕ್ಲಿಯೊಟೈಡುಗಳು ಒದಗಿಸುವ ನಕ್ಷೆಯಂತೆ ಅಮೈನೋ ಅಮ್ಲಗಳು ಅನುಕ್ರಮವಾಗಿ ಸೇರಿಕೊಂಡು ಪ್ರೋಟೀನಿನ ಅಣುವಾಗುವುವು.

***

**ಚಯಾಪಚಯೀ ರೋಗಗಳು:** ದೇಹದಲ್ಲಿ ನಿರಂತರವಾಗಿಯೂ ವ್ಯವಸ್ಥಿತವಾಗಿಯೂ ನಡೆಯಬೇಕಾಗಿರುವ ರಾಸಾಯನಿಕ ಪರಿವರ್ತನೆಗಳ ಏರುಪೇರುಗಳೇ ಪ್ರಧಾನವಾಗಿ ಕಂಡುಬರುವ ರೋಗಸ್ಥಿತಿಗಳು (ಮೆಟಬಾಲಿಕ್ ಡಿಸೀಸಸ್). ಸಂತಾನ ಉತ್ಪತ್ತಿ, ಬೆಳೆವಣಿಗೆ, ಚಲನೆ ಮುಂತಾದ ಎಲ್ಲ ಜೀವಕ್ರಿಯೆಗಳ ಮೂಲ ರಸಾಯನ ಕ್ರಿಯೆ. ಜೀವಕ್ರಿಯೆ, ಲಕ್ಷಾಂತರ ರಸಾಯನ ಕಾರ್ಯಗಳ ವ್ಯವಸ್ಥೆಯ ಫಲ; ಇಂಥ ಕ್ರಿಯೆಯು ವ್ಯವಸ್ಥಿತರಸಾಯನಕಾರ್ಯಗಳ ಸರಣಿಗಳಾಗಿರುತ್ತವೆ. ಅವಶ್ಯಕವಾದ ಒಂದು ರಸಾಯನಕಾರ್ಯದ ವೇಗ ಹೆಚ್ಚುಕಡಿಮೆಯಾದಾಗ ಅದು ರೋಗದಲ್ಲಿ ಪರ್ಯಾವಸಾನವಾಗುವುದು ಸಾಧ್ಯ. ಅಲ್ಲದೆ ಅನೇಕ ರೋಗಗಳಲ್ಲೂ ರೋಗದಿಂದಾಗಿಯೇ ಈ ರೀತಿ ವೇಗ ವ್ಯತ್ಯಾಸವಾದ ರಸಾಯನ ಕ್ರಿಯೆ ಇರುತ್ತದೆ. ಅಂದರೆ ಕಾರ್ಯಕಾರಣಗಳು ಯಾವುವೇ ಇರಲಿ, ಎಲ್ಲ ಕಾಯಿಲೆಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಚಯಾಪಚಯ ವ್ಯತ್ಯಾಸವಾಗಿ ಇದ್ದೇ ಇರುತ್ತದೆ.

ರಸಾಯನಕಾರ್ಯ ಸಾಧ್ಯವಾಗಲು ಕನಿಷ್ಠ ಮೂರು ಅವಶ್ಯಕ ವಸ್ತುಗಳು ಬೇಕು: ರಸಾಯನವಸ್ತುಗಳು, ರಸಾಯನಕ್ರಿಯೆಗಳ ವೇಗೋತ್ಕರ್ಷಕಗಳು ಮತ್ತು ಈ ಕಾರ್ಯಗಳ ನಿಯಂತ್ರಣ ಕಾರ್ಯಭಾರ ಹೊಂದಿರುವ ದೂತ ವಸ್ತುಗಳು. ಇವು ಮೂರೂ ಇದ್ದಾಗ ರಸಾಯನವಸ್ತುಗಳು ಬದಲಾವಣೆ ಹೊಂದಿ ಉದ್ದೇಶಿತ ವ್ಯವಸ್ಥೆಯ ಸರಣಿಯಲ್ಲಿ ಪಾಲುಗೊಳ್ಳುವುದು ಸಾಧ್ಯ. ಈ ಅವಶ್ಯಕ ವಸ್ತುಗಳಲ್ಲಿ ಯಾವುದಾದರೊಂದು ಹೆಚ್ಚುಕಡಿಮೆಯಾದರೂ ರಸಾಯನ ಕಾರ್ಯ ವೇಗ ಕುಂಠಿತವಾಗಿ ರೋಗ ಪ್ರಾರಂಭವಾಗಬಹುದು. ಹೀಗೆ ಚಯಾಪಚಯೀ ರೋಗಗಳು ಮೂರು ರೀತಿಯವಾಗಿವೆ: ಪೌಷ್ಟಿಕಗಳ ಕೊರತೆಯಿಂದಾದುವು, ಆಜನ್ಮವಾಗಿ ಕಿಣ್ವ ಕೊರತೆಯಿಂದಾದುವು ಮತ್ತು ನಿಯಂತ್ರಿಸುವ ಹಾರ್ಮೋನ್‌ಗಳ ಕೊರತೆಯಿಂದಾದುವು.

ಇವಲ್ಲದೆ ಅವ್ಯಕ್ತ ಕಾರಣಗಳಿಂದಲು ಚಯಾಪಚಯೀ ರೋಗಗಳುಂಟಾಗಬಹುದು. ಒಗ್ಗದಿಕೆ (ಅಲರ್ಜಿ), ಸಂಧಿವಾತ ಇತ್ಯಾದಿಗಳು. ಆಹಾರದಲ್ಲಿರಬೇಕಾದ ಕಾರ್ಬೋಹೈಡ್ರೇಟುಗಳು, ಕೊಬ್ಬು, ಪ್ರೋಟೀನ್, ಜೀವಸತ್ತ್ವ, ಲವಣ ಮುಂತಾದುವು ಸಾಕಷ್ಟು ಇರದೆ ತಲೆದೋರಬಹುದು. ಆಹಾರದಲ್ಲಿ ಉತ್ತಮ ಪ್ರೋಟೀನ್ ಬೇಕಾಗಿರುವಷ್ಟು ಇಲ್ಲದೆ ಬರುವ ಕ್ವಾಷಿಯಾರ್ಕರ್ ಎಂಬ ಕೈಕಾಲು ಸಣ್ಣ, ಹೊಟ್ಟೆ ದಪ್ಪವಾದ, ಹಾಗು ಊದಿದ ಯಕೃತ್ (ಲಿವರ್) ಮುಂತಾದ ರೋಗ ಚಿಹ್ನೆಗಳಿರುವ ಚಿಕ್ಕಮಕ್ಕಳ ಕಾಯಿಲೆ, ಜೀವಸತ್ತ್ವಗಳ ಅಭಾವದಿಂದ ಆಗುವ ಹಕ್ಕಿಕಡಪು, ಮತ್ತು ಚರ್ಮ ರೋಗಗಳು ಮುಂತಾದುವು ಈ ಗುಂಪಿಗೆ ಸೇರಿದುವು.

ಜೀವರಸಾಯನ ಕಾರ್ಯಗಳ ವೇಗವನ್ನು ಹೆಚ್ಚಿಸುವ ಕಿಣ್ವಗಳು ಪ್ರೋಟೀನುಗಳು. ಆದ್ದರಿಂದ ಅವುಗಳ ತಯಾರಿಕೆ ತತ್ಸಂಬಂಧ ಆಲೇಖ್ಯವನ್ನು ಒದಗಿಸುವ ನ್ಯೂಕ್ಲೆಯಿಕ್ ಆಮ್ಲದ ಗುಂಪಿಗೆ ಸೇರಿರುವ ಜೀನುಗಳನ್ನು ಅವಲಂಬಿಸಿದೆ. ಈ ಜೀನ್ ತಂದೆತಾಯಿಯರಿಂದ ಅವರ ಸಂತಾನಕ್ಕೆ ಬರುತ್ತದೆ. ಆದ್ದರಿಂದ ಸಂತಾನದ ಕ್ರೋಮೊಸೋಮಿನಲ್ಲಿ ಯಾವುದಾದರೊಂದು ಜೀನ್ ಇಲ್ಲದಿದ್ದರೆ ಅದರಿಂದಲೇ ಉತ್ಪತ್ತಿಯಾಗಬೇಕಾಗಿದ್ದ ಕಿಣ್ವದ ಉತ್ಪತ್ತಿ ನಡೆಯದೆ ಈ ಕಿಣ್ವ ವೇಗೋತ್ಕರ್ಷಕವಾಗಿ ಮಾಡಬೇಕಾದ ರಸಾಯನಕಾರ್ಯದ ವೇಗದಲ್ಲಿ ವ್ಯತ್ಯಾಸ ಉಂಟಾಗಿ ಚಯಾಪಚಯ ಕ್ರಿಯೆಯ ವ್ಯವಸ್ಥೆ ಏರುಪೇರಾಗಿ ಕಾಯಿಲೆ ಬರಬಹುದು. ತಂದೆತಾಯಿಯರಿಂದ ದತ್ತವಾಗಿ ಬರುವ ಈ ರೀತಿಯ ಕಾಯಿಲೆ ಬಲು ಅಪರೂಪ. ಸೋದರಿಕೆಯ ಸಂಬಂಧದ ಸಂತಾನಗಳಲ್ಲಿ ಈ ಲೋಪಗಳು ಮೇಲೇಳುವುದು ಹೆಚ್ಚು ಸಾಧ್ಯ. ಆದ್ದರಿಂದ ಸೋದರಿಕೆ ಸಂಬಂಧ ಅಷ್ಟು ಯೋಗ್ಯವಲ್ಲ.

ಚಯಾಪಚಯೀ ರೋಗಗಳು

ಪಟ್ಟಿ 1. ಜೀನಿನ ಲೋಪದೋಷಗಳಿಂದ ಬರುವ ರೋಗಗಳು;

| ಹೆಸರು | ಲೋಪವಾದ ಅಥವಾ ದೋಷಪೂರಿತವಾದ ಕಿಣ್ವ, ಪ್ರೋಟೀನ್ ಅಥವಾ ವಿವರಣೆ |
|---|---|
| ಹೀಮೊಫಿಲೀಯ | ರಕ್ತ ಹೆಪ್ಪುಗಟ್ಟಲು ಬೇಕಾದ ಗ್ಲೋಬುಲಿನ್ನಿನ (8ನೆ ಅಂಶ) ಅಭಾವ |
| ಹೀಮಗ್ಲೋಬಿನೋಪತಿ | ವಿಶೇಷ ಹೀಮಗ್ಲೋಬಿನ್ನುಗಳು |
| ಪಾರ್‌ಫೀರೀಯ | ಯೂರೊಪಾರ್‌ಫೈರಿನಿನ ಹೆಚ್ಚಿದ ವಿಸರ್ಜನೆ |
| ಮೆಥಿಮೊಗ್ಲೋಬಿನೀಮಿಯ | ಮೆಥಿಮೊಗ್ಲಾಬಿನ್ ರಿಡಕ್ಟೇಸ್ |
| ಕ್ರಿಗ್‌ಲರ್–ನಜ್ಜಾರ್ ಕಾಯಿಲೆ | ಬಿಲಿರುಬಿನನ್ನು ಗ್ಲೂಕರೊನೈಡನ್ನಾಗಿಸುವ ಎಂಜೈಮ್ |
| ಸಿಸ್ಟೀನ್‌ಯೂರಿಯ | ಮೂತ್ರದಲ್ಲಿ ಸಿಸ್ಟೀನ್, ಲೈಸೀನ್, ಆರ್ನಿಥೀನ್ ಅಮೈನೋ ಆಮ್ಲಗಳ ಹೆಚ್ಚಿದ ವಿಸರ್ಜನೆ |
| ಫಾನ್ಕೋನೀ ಕಾಯಿಲೆ | ಅಮೈನೋ ಆಮ್ಲಗಳ ಹೆಚ್ಚಿನ ವಿಸರ್ಜನೆ |
| ಹೊಮೊಸಿಸ್ಟೀನ್ ಯೂರಿಯ | ಸಿಸ್ಟಥಿಯೋನ್ ತಯಾರಿಕಾ ಎಂಜೈಮ್ |
| ಮೇಪಲ್ ಪಾಕರೂಪದ ಮೂತ್ರದ ಕಾಯಿಲೆ | ಅಮೈನೋ ಆಮ್ಲ ಡಿಕಾರ್ಬಾಕ್ಸಿಲೇಸ್ |
| ಹೈಪೊಫಾಸ್ಫಟೇಸಿಯ | ಆಲ್ಕಲೈನ್ ಫಾಸ್ಫಟೇಸ್ |
| ಕ್ಸಾನ್‌ಥೀನ್ ಯೂರಿಯ | ಕ್ಸಾನ್‌ಥೀನ್ ಆಕ್ಸಿಡೇಸ್ |
| ಅನಾಲ್ಬುಮಿನಿಮಿಯ | ವಸೆಯಲ್ಲಿನ ಆಲ್ಬುಮಿನ್ |
| ಗೌಚರ್ ಕಾಯಿಲೆ | ಅಂಗಾಂಶಗಳಲ್ಲಿ (ಊತಕ) ಸೆರಿಬ್ರೊಸೈಡಿನ ಶೇಖರಣೆ |
| ನೀಮನ್–ಪಿಕ್ ಕಾಯಿಲೆ | ಅಂಗಾಂಶಗಳಲ್ಲಿ ಸ್ಪಿಂಗೊಮೈಲಿನ್ ಶೇಖರಣೆ |
| ಟೆ–ಸಾಕ್ಸ್ ಕಾಯಿಲೆ | ಗ್ಯಾಂಗ್ಲಿಯೊಸೈಡಿನ ಶೇಖರಣೆ |
| ಗಾರ್‌ಗಾಯ್‌ಲಿಸಮ್ | ಕಾನ್ಡ್ರಾಯ್ಟಿನ್ ಸಲ್ಫೇಟ್ Bಯ ವಿಸರ್ಜನೆ |
| ಫ್ರಕ್ಟೋಸ್ ಯೂರಿಯ | ಫಕ್ಟೊಕೈನೇಸ್ |
| ಗ್ಲೈಕೊಜನ್ ಶೇಖರಣೆಯ ಕಾಯಿಲೆಗಳು | |
| 1 ವಾನ್‌ಗಿರ್ಕಿ ಕಾಯಿಲೆ | ಗ್ಲೂಕೋಸ್–6–ಫಾಸ್ಫಟೇಸ್ |
| 2 ಹರ್ಸ್ ಕಾಯಿಲೆ | ಯಕೃತ್ತಿನ ಗ್ಲೂಕೋಸ್ ಫಾಸ್ಫಟೇಸ್ |
| 3 ಪಾಂಪೆ ಕಾಯಿಲೆ | ಅಮೈಲೊ ಗ್ಲೂಕೋಸಿಡೇಸ್ |
| 4 ಆಂಡರ್‌ಸನ್ ಕಾಯಿಲೆ | ಗ್ಲೈಕೊಜೆನ್ ತಯಾರಿಕೆಗೆ ಬೇಕಾದ ಟ್ರಾನ್ಸ್‌ಗ್ಲೈಕೊಸಿಲೇಸ್ |

ಜೀನ್‌ಗಳ ಲೋಪದೋಷಗಳಿಂದಾಗುವ ರೋಗಗಳು ತೀರ ಅಪರೂಪವಾದರೂ ಆ ರೀತಿಯ ನೂರಾರು ಕಾಯಿಲೆಗಳು ಆಗಲೇ ಬೆಳಕಿಗೆ ಬಂದಿವೆ. ಫೀನೈಲ್ ಅಲನೀನ್ ಎಂಬ ಅಮೈನೋ ಆಮ್ಲವನ್ನು ಟೈರೋಸೀನ್ ಆಗಿ ಪರಿವರ್ತಿಸುವ ಕಿಣ್ವದ ಅಭಾವದಿಂದ ಫೀನೈಲ್ ಪೈರುವಿಕ್ ಆಮ್ಲ ದೇಹದಲ್ಲಿ ಶೇಖರಣೆ ಆಗಿ ಮೂತ್ರದಲ್ಲಿ ಹೋಗುತ್ತಿರುವುದು; ಫೀನೈಲ್ ಪೈರುವಿಕ್ ಆಮ್ಲದ ಶೇಖರಣೆಯಿಂದಾಗಿ ಬೌದ್ಧಿಕ ಬೆಳೆವಣಿಗೆ ಕುಂಠಿತವಾಗುವುದು. ಚರ್ಮ, ಕೂದಲು, ಕಣ್ಣುಗಳಲ್ಲಿ ವರ್ಣಾಭಾವದಿಂದ ಬಿಳಿಚಿಕೊಂಡಿರುವ ಆಲ್ಬಿನೋಗಳಿಗೆ ಕಾರಣ ಈ ಜೀನ್‌ನ ಅಭಾವವೆ. ಇಂಥ ಕಾಯಿಲಸ್ಥರಲ್ಲಿ ಚರ್ಮದ ಬಣ್ಣದ ತಯಾರಿಕೆಗೆ ಬೇಕಾಗುವ ಕಿಣ್ವದ ಅಭಾವವಿರುತ್ತದೆ. ಕೆಲವರಲ್ಲಿ ಅವರ ಮೂತ್ರವನ್ನು ವಾಯುವಿಗೆ ತೆರೆದಿಟ್ಟಾಗ ಅದು ಸ್ವಲ್ಪ ಹೊತ್ತಿನಲ್ಲಿಯೇ ಕಂದು ಬಣ್ಣ ತಳೆಯುವುದು. ಇಂಥವರಲ್ಲಿ ಹೋಮೊಜೆಂಟಿಸಿಕ್ ಆಮ್ಲದ ಉತ್ಕರ್ಷಣೆಗೆ ಬೇಕಾದ ಕಿಣ್ವ ಇಲ್ಲದೆ, ದೇಹದಲ್ಲಿ ಅದು ವಿಲೇವಾರಿ ಆಗದೆ ಶೇಖರಣೆಯಾಗಿ ಈ ರಸಾಯನವಸ್ತು ಮೂತ್ರದಲ್ಲಿ ಹೋಗುವುದು. ಇದು ವಾಯು ಸಂಪರ್ಕದಲ್ಲಿ ಕಂದುಬಣ್ಣದ ವಸ್ತುವಾಗುತ್ತದೆ. ಈ ರೋಗದಿಂದ ಅಂಥ ತೊಂದರೆಯಿಲ್ಲ. ಆದರೆ ಹಾಲಿನ ಸಕ್ಕರೆಯಾದ ಲ್ಯಾಕ್ಟೋಸಿನಲ್ಲಿ ಒಂದು ಅಂಶವಾಗಿರುವ ಗೆಲಾಕ್ಟೋಸ್ ಎಂಬ ಸಕ್ಕರೆಯನ್ನು ಗ್ಲೂಕೋಸಾಗಿ ಪರಿವರ್ತನೆಮಾಡಲು ಬೇಕಾಗುವ ಕಿಣ್ವ ಅಭಾವವಿದ್ದರೆ ಬರುವ ಕಾಯಿಲೆ ಬಲು ಅಪಾಯಕಾರಿ. ಅಂಥ ಮಕ್ಕಳ ಬುದ್ಧಿಯ ಬೆಳೆವಣಿಗೆ ಕಡಿಮೆಯಾಗಿ ಕಣ್ಣಿನ ಪೊರೆ ತನ್ನ ಪಾರದರ್ಶಕತೆಯನ್ನು ಕಳೆದುಕೊಂಡು ಕುರುಡಾಗಬಹುದು. ಇವಲ್ಲದೆ ಸಿಸ್ಟೀನ್ ಅಮೈನೋ ಆಮ್ಲವನ್ನೂ, ಪೆಂಟೋಸ್ ಮುಂತಾದ ಕಾರ್ಬೊಹೈಡ್ರೇಟುಗಳನ್ನೂ ಉಪಯೋಗಿಸಿಕೊಳ್ಳಲಾಗದೆ ಮೂತ್ರದಲ್ಲಿ ಕಳೆದುಕೊಳ್ಳುವ ರೋಗಗಳು, ರಕ್ತ ಹೆಪ್ಪುಗಟ್ಟಲು ಬೇಕಾದ ರಸಾಯನ ವಸ್ತುಗಳ ಅಭಾವ, ಸ್ಟಿರಾಯ್ಡ್ ಗುಂಪಿಗೆ ಸೇರಿದ ಅತ್ಯಾವಶ್ಯಕ ಹಾರ್ಮೋನುಗಳ ಸಿದ್ಧತೆಗೆ ಬೇಕಾದ ಕಿಣ್ವಗಳ ಲೋಪದಿಂದಾಗುವ ರೋಗಗಳೂ ಮೇಲೆ ಹೇಳಿದ ಕಾಯಿಲೆಗಳ ಗುಂಪಿಗೆ ಸೇರಿದುವು.

ರಾಸಾಯನಿಕ ಕಾರ್ಯಗಳ ನಿಯಂತ್ರಣದಲ್ಲಿ ಏರುಪೇರು ಆದಾಗ ಬರುವ ರೋಗಗಳು ಮೂರನೆಯ ಗುಂಪಿಗೆ ಸೇರಿದುವು. ಈ ನಿಯಂತ್ರಣವ್ಯವಸ್ಥೆಯ ಕಾರ್ಯ ಮುಖ್ಯವಾಗಿ ಹಾರ್ಮೋನುಗಳಿಗೆ ಸೇರಿದ್ದು. ಮೇದೋಜೀರಕಾಂಗದಲ್ಲಿರುವ ಲೆಂಗರಹೆನ್ಸನ ಪುಟ್ಟದ್ವೀಪಗಳ ಅಂತಃಸ್ರಾವವಾದ ಇನ಼್ುಲಿನ್ ಕಡಿಮೆಯಾದರೆ ಬರುವ ಸಕ್ಕರೆ ಕಾಯಿಲೆ, ಥೈರಾಯಿಡ್ ಗ್ರಂಥಿಯ ಸ್ರವಿಕೆಯ ಕೊರತೆಯಿಂದ ಕುಬ್ಜತನದೊಂದಿಗಿರುವ ಹೆಡ್ಡತನ ಮತ್ತು ಮಿಕ್ಸಡೀಮ ಎಂಬ ವಯಸ್ಕರ ಕಾಯಿಲೆ, ಪಿಟ್ಯುಟರಿ ಗ್ರಂಥಿಯ ಮತ್ತು ಲೈಂಗಿಕ ಹಾರ್ಮೋನುಗಳ ತಯಾರಿಕೆ ಹೆಚ್ಚುಕಡಿಮೆಯಾದಾಗ ಬರುವ ಕಾಯಿಲೆಗಳು–ಇವೆಲ್ಲ ಈ ಚಯಾಪಚಯ ರೋಗಗಳ ಗುಂಪಿಗೆ ಸೇರಿವೆ. ವಿಷಕ್ರಿಮಿಗಳು ತರುವ ರೋಗಗಳಲ್ಲು ಹೀಗೆಯೆ. ಅವು ಬೆಳೆಯುವಾಗ ನೇರವಾಗಿ ಅಥವಾ ಪರೋಕ್ಷವಾಗಿ ಒಂದು ಅಥವಾ ಹಲವಾರು ರಾಸಾಯನಿಕ ಕ್ರಿಯೆಗಳ ವೇಗವನ್ನು ಹೆಚ್ಚುಕಡಿಮೆ ಮಾಡಿ ವಿಶಿಷ್ಟವಾದ ರೋಗಲಕ್ಷಣಗಳನ್ನು ಉಂಟುಮಾಡುತ್ತವೆ. ಇವಲ್ಲದೆ ಮೇಲೆ ಹೇಳಿದ ನಿರ್ದಿಷ್ಟ ಗುಂಪಿಗೆ ಸೇರದ, ಹೃದಯ ಮತ್ತು ರಕ್ತನಾಳಗಳ ಕಾಯಿಲೆಗಳು, ಅಲರ್ಜಿ, ಏಡಿಗಂತಿ ರೋಗಗಳು, ಆರ್ತ್ರೈಟಿಸ್ ಮುಂತಾದುವುಗಳು ಚಯಾಪಚಯೀ ರೋಗಗಳು.

ಅಂಗದೋಷರೋಗಗಳ ಮೂಲವೂ ಈ ರೀತಿ ಏರುಪೇರಾದ ಚಯಾಪಚಯ ಕ್ರಿಯೆಯೇ ಆಗಿರುತ್ತದೆ. ಜೀವಕೋಶದಲ್ಲಿನ ಘಟಕಗಳೂ ಅವುಗಳ ಹೊರಮೈ ಮತ್ತು ಜೀವಕೋಶಗಳ ಸಮುದಾಯದ ವ್ಯವಸ್ಥೆ ಹೊಂದಿರುವ ಯಕೃತ್ತು, ಮೂತ್ರಜನಕಾಂಗ, ಹೃದಯ, ರಕ್ತನಾಳಗಳು ಮುಂತಾದ ಅಂಗಾಂಗಗಳೂ ಅವುಗಳ ಬೆಳೆವಣಿಗೆ ಮತ್ತು ಆರೋಗ್ಯ ಸಹಜವಾಗಿಯೇ ರಾಸಾಯನಕ್ರಿಯೆಗಳನ್ನು ಅವಲಂಬಿಸಿವೆ. ಆದ್ದರಿಂದ ರಾಸಾಯನಿಕ ಕ್ರಿಯೆಯವೇಗ ಹೆಚ್ಚು ಅಥವಾ ಕಡಿಮೆಯಾದ ಪರಿಸ್ಥಿತಿ ಉತ್ತಮಗೊಳ್ಳದೆ, ವಾಸಿಯಾಗದೆ ಇದ್ದರೆ ಅಂಗರಚನೆಯಲ್ಲಿ ದೋಷಬಂದು ಅಂಗ ದೋಷರೋಗಗಳಿಗೆ ಬಲಿಯಾಗಬೇಕಾಗಬಹುದು.

***

**ಚರ್ಮ:** ಪ್ರಾಣಿಗಳ ದೇಹದ ಹೊರಹೊದಿಕೆಯಾಗಿರುವ ಅಂಗ (ಸ್ಕಿನ್). ಇದು ದೇಹದ ಒಳಭಾಗದ ಅಂಗಾಂಗಗಳನ್ನು, ಹೊರಭಾಗದಿಂದ ಬೇರ್ಪಡಿಸುತ್ತದೆ. ದೇಹದ ನೀರು, ಲವಣಗಳು ಮತ್ತು ಇತರ ವಸ್ತುಗಳು ಹೊರಹೋಗದಂತೆ ತಡೆಯುತ್ತದೆ. ಹೊರಗಿನಿಂದ ನೀರು, ರಾಸಾಯನಿಕಗಳು ಕೋಶಗಳಿಗೆ ನುಗ್ಗದಂತೆ ತಡೆದು, ದೇಹದ ಒಳಭಾಗಕ್ಕೆ ರಕ್ಷಣೆ ನೀಡುತ್ತದೆ. ಬೆಳಕಿನ ವಿಕಿರಣಗಳು (ಉದಾ: $\alpha$–ಕಿರಣ) ಒಳ ಹಾಯದಂತೆ ತಡೆಯುತ್ತದೆ. ರೋಗಾಣುಗಳು ದೇಹದೊಳಗೆ ಹೋಗದಂತೆ ನೋಡಿಕೊಳ್ಳುತ್ತದೆ. ಪ್ರತಿಕೂಲ ಪರಿಸರದ ವಿರುದ್ಧ ದೇಹಕ್ಕೆ ರಕ್ಷಣೆಯನ್ನು ಒದಗಿಸುವುದು ಚರ್ಮದ ಪ್ರಮುಖ ಕೆಲಸ.  ವಸ್ತುಗಳೊಡನೆ ಘರ್ಷಿಸಿ ಆಗಬಹುದಾದ ಪೆಟ್ಟಿನಿಂದ ದೇಹದೊಳಗಿನ ಅಂಗಗಳು ಜರ್ಝರಿತವಾಗದಂತೆ ಚರ್ಮ ರಕ್ಷಿಸುತ್ತದೆ. ನೋವು, ಸ್ಪರ್ಶ, ಒತ್ತಡ, ಕಡಿತ, ಬಿಸಿ, ಶೈತ್ಯಗಳ ಅರಿವನ್ನುಂಟುಮಾಡುವ ನರಗಳ ತುದಿಗಳು ಚರ್ಮದಲ್ಲಿ ಹೇರಳವಾಗಿವೆ. ಭೂವಾಸಿ ಸ್ತನಿಗಳಲ್ಲಿ ಚರ್ಮ ದೇಹೋಷ್ಣತೆಯ ನಿಯಂತ್ರಣದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಸೂರ್ಯರಶ್ಮಿಯ ಅತಿನೇರಿಳೆ ಕಿರಣಗಳ ಸಹಾಯದಿಂದ ಚರ್ಮದಲ್ಲಿ 'ಡಿ' ಜೀವಸತ್ತ್ವ ಉತ್ಪತ್ತಿಯಾಗಿ ದೇಹಕ್ಕೆ ಒದಗುತ್ತದೆ. ಜೀವಿಯ ಚರ್ಮದ ಜೀವಕೋಶ ಮತ್ತು ಊತಕಗಳು ಅದರ ಅನುಬಂಧಿತಗಳಾದ ಸ್ವೇದಗ್ರಂಥಿ, ರೋಮತುಪ್ಪುಳಗಳು ನಿರಂತರವಾಗಿ ನಾಶವಾಗುತ್ತ ಮತ್ತೆ ಪುನರುತ್ಪತ್ತಿಯಾಗುತ್ತಿರುತ್ತವೆ. ಆದ ಕಾರಣ, ಚರ್ಮ ಪರಿಪೂರ್ಣ ಅಂಗ.

1. ಮಾನವ ಚರ್ಮದ ರಚನೆ : ಮಾನವರಲ್ಲಿ ಚರ್ಮ ಸು. 2 ಮಿಮೀ ದಪ್ಪನೆಯ ಹೊದಿಕೆಯಂತಿದೆ. ಕಣ್ಣುರೆಪ್ಪೆ, ಶಿಶ್ನ ಮುಂತಾದ ಕಡೆಗಳಲ್ಲಿ ಇದು 1 ಮಿಮೀ ತೆಳುವಾಗಿದೆ. ಅಂಗೈ, ಅಂಗಾಲು, ಬೆನ್ನು ಮತ್ತು ಉದರಗಳಲ್ಲಿ ದಪ್ಪ (3 ಮಿಮೀಗಿಂತ ಹೆಚ್ಚು) ಮತ್ತು ಒರಟಾಗಿದೆ. ಕೈಕಾಲುಗಳಲ್ಲಿ ಇದಕ್ಕೆ ವಿಶೇಷ ಪುಟಿತತೆ ಇದೆ. ಕೈಕಾಲುಗಳಲ್ಲಿ ಮೃದುವಾಗಿದ್ದು, ಬೇಕಾದ ರೀತಿ ಬಳುಕುವಂತಿರುತ್ತದೆ. ಇದರ ಮೇಲೆ ವಿಶಿಷ್ಟವಾದ ಗೆರೆಗಳಿವೆ. ಬೆರಳಿನಲ್ಲಿರುವ ಗೆರೆಗಳಿಗೆ ವೈಯಕ್ತಿಕ ವೈಶಿಷ್ಟ್ಯ ಇರುವುದರಿಂದ ಬೆರಳಚ್ಚಿನಿಂದ ವ್ಯಕ್ತಿಯ ಗುರುತು ಹಚ್ಚಲು ಇವು ಸಹಾಯಕ.

ಮಾನವ ಚರ್ಮದಲ್ಲಿ ಹೊರತ್ವಚ (ಎಪಿಡರ್ಮಿಸ್), ನಿಜತ್ವಚ (ಡರ್ಮಿಸ್) ಮತ್ತು ತ್ವಚದ ಕೆಳಗೆ ಊತಕ (ಸಬ್‌ಕ್ಯುಟೇನಿಯಸ್ ಟಿಶ್ಯೂ) ಎಂಬ ಮೂರು ಭಾಗಗಳನ್ನು ಗುರುತಿಸಲಾಗಿದೆ.

ಹೊರತ್ವಚ : ಇದು ನಿಜತ್ವಚದ ( ಡರ್ಮಿಸ್) ಹೊರಕವಚ. ನಿಜತ್ವಚದ ಮೇಲಿರುವ ಉಬ್ಬು ತಗ್ಗುಗಳಿಂದ ಕೂಡಿದ ತಳಹದಿ ಪದರದ (ಬೇಸ್‌ಮೆಂಟ್ ಮೆಂಬ್ರೇನ್) ಮೇಲೆ ಅಳವಡಿಸಲ್ಪಟ್ಟ ಜೀವಕೋಶಗಳು ಏಳೆಂಟು ವರಸೆಗಳಿಂದ ಹೊರತ್ವಚ ರಚಿತವಾಗಿದೆ. ಹೀಗಾಗಿ ಹೊರತ್ವಚ ಅನೇಕ ಕಡೆ ಬೆರಳಿನಾಕಾರದ ಬೇರುಗಳಂತೆ, ನಿಜತ್ವಚದ ಒಳಹೊಕ್ಕಿರುವಂತೆ ಇನ್ನು ಕೆಲವು ಕಡೆ ನಿಜತ್ವಚ ಹೊರತ್ವಚದೊಳಕ್ಕೆ ಬೆರಳಿನ ಆಕಾರದಲ್ಲಿ ಚಾಚಿಕೊಂಡಿರುವಂತೆ ಕಾಣುವುದು. ತಳಹದಿ ಪದರ ನಿಜ ತ್ವಚಕ್ಕೆ (ಡರ್ಮಿಸ್) ಗೆ ಎಪಿಡರ್ಮಿಸ್‌ನ್ನು ನಿಕಟವಾಗಿ ಅಂಟಿಸಿಕೊಂಡಿದೆ. ಚರ್ಮದ ಸಕಲ ಕಾರ್ಯಗಳಲ್ಲಿ ಭಾಗವಹಿಸುವ ಬಿಡಿಭಾಗಗಳ ಹಾಗೂ ವಸ್ತುಗಳ ಅವಿಚ್ಛಿನ್ನ ಉತ್ಪಾದನೆ ಹೊರತ್ವಚದ ಕೆಲಸ. ಇದರ ಅತ್ಯಂತ ಕೆಳವರಸೆಯ ಜೀವಕೋಶಗಳ ನಿರಂತರ ವಿಭಜನೆಯಿಂದ ಈ ಉತ್ಪಾದನೆ ಆಗುತ್ತದೆ. ಭ್ರೂಣದ ಬೆಳೆವಣಿಗೆಯ ಕಾಲದಲ್ಲಿ ಈ ಕೋಶಗಳು ಅದರ ಹೊರಪದರದಿಂದ (ಎಕ್ಟೋಡರ್ಮ್) ಲಭಿಸುತ್ತವೆ. ವಿಭಜನೆಯಿಂದ ಉತ್ಪನ್ನವಾದ ಜೀವಕೋಶಗಳು ತಮ್ಮ ಮೇಲಿನ ಜೀವಕೋಶಗಳನ್ನು ಹೊರಕ್ಕೆ ತಳ್ಳುತ್ತವೆ. ಆದ್ದರಿಂದ ಹೊರತ್ವಚದ ಮೇಲುವರಸೆಗಳು ಹಳೆಯ ಜೀವಕೋಶಗಳಿಂದಾದ ಮತ್ತು ಮೇಲು ವರಸೆಗಳು ಅತ್ಯಂತ ಹಳೆಯ ಜೀವಕೋಶಗಳ ಪ್ರತೀಕವಾದ ನಿರ್ಜೀವ ಹಾಗೂ ಗಡಸು ಪದರವೆಂದು ಗುರುತಿಸಲಾಗಿದೆ. ಹೊರತ್ವಚದಲ್ಲಿ ನಾಲ್ಕು ವರಸೆಗಳನ್ನು ನೋಡಬಹುದು. ಅಡಿಕೋಶಗಳ ಮೇಲಿನ ನಾಲ್ಕಾರು ಕೋಶ ದಪ್ಪನೆಯ ವರಸೆ, ಮುಳ್ಳು ಜೀವಕೋಶಗಳ (ಪ್ರಿಕಲ್ ಸೆಲ್ಸ್) ವರಸೆ ಇದೆ. ಈ ಕೋಶಗಳು ಒಂದಕ್ಕೊಂದು ಮುಳ್ಳುಗಳಿಂದ ಅಂಟಿಸಲ್ಪಟ್ಟಿರುವಂತೆ ಸೂಕ್ಷ್ಮದರ್ಶಕದಲ್ಲಿ ಕಾಣುವುದರಿಂದ ಈ ರೀತಿ ಕರೆಯುವರು. ಅಕ್ಕಪಕ್ಕದ ಜೀವಕೋಶಗಳ ಭಿತ್ತಿಯ ಮೇಲೆ ಗಂಟುಗಳಿರುವುದು. ಇವು ಒಂದಕ್ಕೊಂದು ತಾಕಿ ಮುಳ್ಳಿನಂತೆ ಇರುವುದು ವ್ಯಕ್ತವಾಗುತ್ತದೆ. ಕೋಶದೊಳಗೆ ಗಂಟಿನಿಂದ ಗಂಟಿಗೆ ತಂತುಗಳು ಹರಿಯುತ್ತವೆ. ಮುಳ್ಳು ಕೋಶಗಳ ಮೇಲಿರುವುದು 2–3 ಕೋಶದಷ್ಟು ದಪ್ಪನೆಯ ಅಲ್ಪಸ್ವಲ್ಪ ಏರುತಗ್ಗುಗಳಿರುವ ಕಣಕೋಶಗಳ (ಗ್ರಾನ್ಯುಲರ್ ಸೆಲ್ಸ್) ವರಸೆ. ಕೋಶಗಳು ಸ್ವಲ್ಪ ಚಪ್ಪಟೆಯಾಗಿದ್ದು, ಇಲೇಯ್ಡಿನ್ ಎಂಬ ಸಣ್ಣಸಣ್ಣ ಕಣಗಳಿಂದ ತುಂಬಿವೆ. ಹಳೆಯದಾದಂತೆ ಇಲೇಯ್ಡಿನ್ ಕೆರಾಟೋಹೈಯಲಿನ್ ಆಗಿ ಕೊನೆಗೆ ಕೆರಾಟಿನ್ ಆಗಿ ಪರಿವರ್ತಿತವಾಗುತ್ತದೆ. ಇದು ಹೊರಗಿನ ಎರಡು ವರಸೆಗಳಿಗೆ ಕಾರಣ. ಕಣಕೋಶಗಳ ಹೊರಗೆ ತಿಳಿಪದರ (ಸ್ಟ್ರಾಟಮ್ ಲ್ಯುಸಿಡಮ್) ಇದೆ. ಜೀವ ಕೋಶಗಳು ತಮ್ಮ ಜೈವಿಕ ಕ್ರಿಯೆಗಳನ್ನು ಕಳೆದುಕೊಂಡು ಅವುಗಳ ರಚನೆ ಹಾಗೂ ಕೇಂದ್ರಬಿಂದು ಅಸ್ಪಷ್ಟವಾಗುವುದರಿಂದ ಇವು ತಿಳಿಪದರವಾಗುತ್ತವೆ. ಅನಂತರ, ಹಳೆಯದಾಗಿ ಇನ್ನಷ್ಟು ಹೊರಕ್ಕೆ ತಳ್ಳಲ್ಪಟ್ಟಾಗ ಕೋಶಗಳ ಜೀವ ಪೂರ್ಣ ನಾಶವಾಗಿ ಅವು ಕೆರಾಟಿನ್ ಅಡಕವಾಗಿರುವ ಗಡಸುತಟ್ಟೆಗಳಾಗಿ ಮ್ಯೂಕೊಪಾಲಿಸ್ಯಾಕರೈಡುಗಳಿಂದ ಒಂದಕ್ಕೊಂದು ಗಾರೆಹಾಕಿದಂತೆ ಅಂಟಿಕೊಂಡು ಒಂದರಮೇಲೊಂದು ಪೇರಿಸಲ್ಪಟ್ಟ ಪದರಗಳಾಗಿ, ನಿರಂತರವಾಗಿ ಸುಲಿದು ಹೋಗುತ್ತಿರುತ್ತವೆ. ಕೆರೆದರೆ ಬರುವ ಹುರುಪೆ ಇದೇ. ಅಡಿಕೋಶದ ವಿಭಜನೆಯಿಂದ ಬಂದ ಹೊಸ ಕೋಶ ಹೊರಕ್ಕೆ ನೂಕಲ್ಪಡುತ್ತ, ಸುಲಿದುಹೋಗುವುದಕ್ಕೆ ಸು. ಒಂದು ತಿಂಗಳಾಗುತ್ತದೆ. ಸೋರಿಯಾಸಿಸ್ ನಂತಹ ಚರ್ಮರೋಗಗಳಲ್ಲಿ ಚರ್ಮ ಸುಲಿದು ಹೋಗುವ ಕಾಲ ಕಡಿಮೆ ಆಗಿ ತೀವ್ರ ವಿಭಜನೆಯಿಂದ ಕೋಶಗಳು ಶೀಘ್ರವಾಗಿ




ಮೀನಿನ ಚರ್ಮ




ಕಪ್ಪೆಯ ಚರ್ಮ




ಉರಗ (ಹಲ್ಲಿ)ದ ಚರ್ಮ ಉದ್ದರೇಖಾ ಚಿತ್ರ




ಪಕ್ಷಿಯ ಚರ್ಮದ ಉದ್ದ ರೇಖಾಚಿತ್ರ




ಸ್ತನಿಯ ಚರ್ಮ

ಹೊರದೂಡಲ್ಪಟ್ಟು ಕೇಂದ್ರ ಬಿಂದುವಿರುವ ಕೋಶಗಳೇ ಸುಲಿದು ಹೋಗುವುವು. ಮಾರಕ ಪೆಂಫಿಗಸ್ ರೋಗದಲ್ಲಿ ಮುಳ್ಳುಕೋಶಗಳ ಕೂಡಿಕೆ ಕಡಿದುಹೋಗಿ ಕೋಶಕೋಶಗಳ ಸೇರ್ಪಡೆ ಇಲ್ಲದೆ ಬೊಬ್ಬೆಗಳೇಳುತ್ತವೆ.

ಚರ್ಮದ ನಿರಂತರ ಸುಲಿಯುವಿಕೆ ರೋಗಾಣುಗಳ ನುಸುಳುವಿಕೆಗೆ ಸುಲಭ ಮಾರ್ಗ ಮಾಡುತ್ತದೆ. ಈ ಹೊದಿಕೆಯ ನಿರ್ಜಲ ಸ್ವಭಾವ ಮತ್ತು ಇನ್ನೂ ಕೆಲವು ಅವ್ಯಕ್ತ ಕಾರಣಗಳು ಕೆಲವು ರೋಗಾಣುಗಳಿಗೆ ನಿರೋಧಕವಾಗಿವೆ. ಹೀಗೆ ಇದು ನಿರ್ಜೀವ ಪೊರೆಯಾಗಿದ್ದರೂ, ದೇಹಕ್ಕೆ ಅವಶ್ಯ ರಕ್ಷಣೆಯನ್ನು ನೀಡುವ ಹೊದಿಕೆಯಾಗಿದೆ. ಚರ್ಮ ದಪ್ಪವಾಗಿರುವ ಅಂಗೈ ಅಂಗಾಲುಗಳಲ್ಲಿ ಹೊರತ್ವಚದ ಎಲ್ಲ ಪದರಗಳು ಹೆಚ್ಚು ದಪ್ಪ. ತಿಳಿಪದರ ಮತ್ತು ನಿರ್ಜೀವ ಹೊರಪದರ ಬಹು ದಪ್ಪವಾಗಿವೆ. ತುಟಿ, ಕಣ್ಣುರೆಪ್ಪೆಯಂತಹ ಭಾಗದಲ್ಲಿ ಅತಿ ತೆಳುವಾದ ಹೊರತ್ವಚದಲ್ಲಿ (ಸು. 0.1 ಮಿಮೀ) ತಿಳಿಪದರ ಪೂರ್ಣವಾಗಿ ಲೋಪವಾಗಿರುತ್ತದೆ. ನಿರ್ಜೀವ ಪದರ ಬಹು ತೆಳುವಾಗಿರುತ್ತದೆ.

ಹೊರತ್ವಚದ ಕೋಶಗಳಲ್ಲಿರುವ ಹಳದಿಮಿಶ್ರಿತ ಕೆಂಜರುಬಣ್ಣದ ಮೆಲನಿನ್ ಚರ್ಮದ ಬಣ್ಣಕ್ಕೆ ಕಾರಣ. ಇದು ಹೆಚ್ಚಾಗಿದ್ದರೆ ನೀಗ್ರೋಗಳಂತೆ ಕಪ್ಪುಬಣ್ಣ, ಅತಿ ಕಡಿಮೆಯಾಗಿದ್ದರೆ ಪಾಶ್ಚಾತ್ಯರಂತೆ ತಿಳಿವರ್ಣ ಉಂಟಾಗುತ್ತದೆ. ಅಡಿಕೋಶಗಳ ನಡುವೆ ಇರುವ ಮೆಲನೊಸೈಟು ಜೀವಕೋಶಗಳಿಂದ ಮೆಲನಿನ್ ಉತ್ಪತ್ತಿಯಾಗುತ್ತದೆ. ಈ ಜೀವಕೋಶಗಳು ಭ್ರೂಣದಲ್ಲಿ ನರದ ಉಬ್ಬೇಣಿನಿಂದ ಬೆಳೆದು, ಭ್ರೂಣದ ಹೊರಪದರ (ಎಕ್ಟೋಡರ್ಮ್) ಕೆಳಭಾಗಕ್ಕೆ ದಾರಿಮಾಡಿಕೊಂಡು ಹೊರತ್ವಚದ ಅಡಿಕೋಶಗಳ ಮಧ್ಯೆ ಬೆಣೆಗಳಂತೆ ತೂರಿಕೊಳ್ಳುವುದಲ್ಲದೆ ಸುತ್ತ ಇರುವ ಅಡಿಕೋಶ, ಮುಳ್ಳುಕೋಶಗಳ ನಡುವೆ ಅನೇಕ ಚಾಚುಗಳನ್ನು ಕೂಡ ಹೊಂದಿರುತ್ತವೆ. ಒಂದು ಚದರ ಮಿಮೀ ವಿಸ್ತೀರ್ಣದಲ್ಲಿ 1000–3000 ಮೆಲನೊಸೈಟುಗಳಿವೆ. ಮೆಲನೊಸೈಟುಗಳಂತೆ ಕಾಣುವ ಲ್ಯಾಂಗರ್‌ಹ್ಯಾನ್ಸಿನ ಜೀವಕೋಶಗಳು ಸಹ ಅಲ್ಲಲ್ಲಿ ಇರುತ್ತವೆ. ಆದರೆ, ಇವು ಮೆಲನಿನ್ನನ್ನು ಉತ್ಪತ್ತಿಮಾಡುವುದಿಲ್ಲ. ಡೋಪ ಎಂಬ ವಸ್ತುವಿನಿಂದ ವರ್ಣೀಕರಿಸಿದರೆ ಮೆಲನೊಸೈಟುಗಳು ಮಾತ್ರ ವರ್ಣವನ್ನು ತೆಗೆದುಕೊಳ್ಳುತ್ತವೆ. ಮೆಲನೊಸೈಟುಗಳಲ್ಲಿರುವ ಟೈರೊಸಿನೇಸ್ ಕಿಣ್ವ, ಟೈರೊಸಿನ್ ಅಮೈನೋ ಆಮ್ಲದ ಮೇಲೆ ಪ್ರಭಾವಕಾರಿಯಾದ್ದರಿಂದ, ಆ ಕೋಶಗಳಲ್ಲಿ ಮೆಲನಿನ್ ಉತ್ಪತ್ತಿ ಆಗುತ್ತದೆ. ಹಾಗೂ ಅವುಗಳ ಚಾಚುಗಳ ಮೂಲಕ ಮುಳ್ಳುಕೋಶಗಳ ನಡುವೆ, ಮುಳ್ಳು ಕೋಶಗಳೊಳಗೂ ಮೆಲನಿನ್ ಕಣಗಳು ಶೇಖರವಾಗುತ್ತವೆ. ಕೋಶಗಳೊಳಗಿರುವ ಮೆಲನಿನ್ ಕಣಗಳು ಕೇಂದ್ರಬಿಂದುವಿನ ಸುತ್ತ ಕುಲಾವಿಯ ಆಕಾರದಲ್ಲಿ ನೆಲೆಸಿ ಸೂರ್ಯರಶ್ಮಿಯಲ್ಲಿನ ಅತಿನೇರಿಳೆ ಕಿರಣಗಳಿಂದ ಕೇಂದ್ರ ಬಿಂದುವನ್ನು ರಕ್ಷಿಸುತ್ತವೆ. ಬಿಳಿ ಚರ್ಮವಿರುವ ಆಲ್ಬಿನೊಮನುಷ್ಯರಲ್ಲಿ ಬಿಳಿಚುತನದ ರೋಗಿಗಳಲ್ಲಿ, ಕ್ರೊಮೋಸೋಮುಗಳ ದೋಷದಿಂದ ಟೈರೊಸಿನೇಸ್ ಕಿಣ್ವ ಲೋಪವಾಗಿರುವುದರಿಂದ ಮೆಲನೊಸೈಟುಗಳಲ್ಲಿ ಮೆಲನಿನ್ ತಯಾರಾಗುವುದಿಲ್ಲ.

ನಿಜತ್ವಚ: ಇದು ಹೊರತ್ವಚದ ಒಳಭಾಗದಲ್ಲಿದ್ದು, ಮಂದವಾಗಿದೆ. ಇದು ಒಳಗಿರುವ ತ್ವಚದ ಕೆಳಗೆ ಊತಕದೊಂದಿಗೆ ಮಿಲನವಾಗಿದೆ. ನಿಜತ್ವಚ ಬಂಧಿಸುವ ಊತಕದಿಂದಾಗಿದೆ. ಈ ಊತಕದ ನೆರವಿನಲ್ಲಿ ರಕ್ತನಾಳಗಳು, ದುಗ್ಧರಸನಾಳಗಳು ಮತ್ತು ನರಗಳು ಪಸರಿಸಿಕೊಳ್ಳಲು ಅಲ್ಪಸಂಖ್ಯಾತವಾದ ವಿಶಿಷ್ಟ ರೀತಿಯ ಜೀವಕೋಶಗಳು ಅಡಕವಾಗಿರಲು ಅನುವಾಗಿದೆ. ಮೇಲೆ ಹೇಳಿರುವಂತೆ ಹೊರತ್ವಚದೊಳಗೆ ಹೊಕ್ಕಿರುವ ಬೆರಳಿನಾಕಾರದ ನಿಜತ್ವಚದ ಚಾಚುಗಳಲ್ಲಿ ನಾಳಗಳ ಹಾಗೂ ನರಗಳ ಆದಿ ಅಂತ್ಯಗಳನ್ನು ನೋಡಬಹುದು. ಇಂಥ ಚಾಚುಗಳು 1 ಮಿಮೀ. ಚದರದಲ್ಲಿ 40–140ರಷ್ಟಿರುತ್ತವೆ.

ಬಂಧಿಸುವ ಊತಕದಲ್ಲಿ 3 ರೀತಿಯ ಎಳೆಗಳು ಘನ ಅಥವಾ ದ್ರವವಲ್ಲದ ಒಂದು ವಿಶೇಷ ಮಾಧ್ಯಮದಲ್ಲಿ ಹೆಣೆದುಕೊಂಡಿರುತ್ತವೆ. ಹೆಚ್ಚು ಸಂಖ್ಯೆಯಲ್ಲಿರುವ ಎಳೆಗಳು ನಾರಿನಂತಿರುವ ಕೊಲ್ಲಾಜೆನ್ ಪ್ರೋಟೀನ್‌ನಿಂದ ಆಗಿವೆ. ಇವು ಬಿಳಿ ಬಣ್ಣದಿಂದಿದ್ದು, ತಂತುಗಟ್ಟು, ಸ್ನಾಯುಹುರಿಗಳಲ್ಲಿ (ಲಿಗಮೆಂಟ್ ಮತ್ತು ಟೆಂಡನ್) ಅವುಗಳ ಒಣತೂಕದ 75ರಷ್ಟು ಕೊಲ್ಲಾಜೆನ್ನಿನಿಂದ ಆಗಿವೆ. ಕೊಲ್ಲಾಜೆನ್ನಿನಲ್ಲಿ ಗ್ಲೈಸಿನ್, ಪ್ರೋಲಿನ್ ಮತ್ತು ಹೈಡ್ರಾಕ್ಸಿಪ್ರೋಲಿನ್ ಅಮೈನೋ ಆಮ್ಲಗಳಿರುತ್ತವೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಇದರ ಅಣುಗಳು ಅತಿಲಂಬವಾಗಿ ಬಳ್ಳಿಯಂತೆ ಸುತ್ತಿಕೊಂಡು, ನಿರ್ದಿಷ್ಟ ಸ್ಥಳಗಳಲ್ಲಿ ಅಡ್ಡಗೆರೆಗಳಂತೆ ಕಂಡುಬರುತ್ತವೆ. ಕೊಲ್ಲಾಜೆನ್ನಿನಿಂದಾದ ಈ ಬಿಳಿಹುರಿಗಳು ಎಳೆದರೆ ಉದ್ದವಾಗಲಾರವು. ಇವು ಅಗಾಧ ಎಳೆತವನ್ನು ತಡೆಯುವಷ್ಟು ಸಾಮರ್ಥ್ಯ ಹೊಂದಿವೆ. ಇಲಾಸ್ಟಿನ್ ಇನ್ನೊಂದು ಬಗೆಯ ಪ್ರೋಟೀನ್‌ನಿಂದಾದ ಹಳದಿ ಎಳೆಗಳು. ಹುರಿಮಾಡಲ್ಪಡದೆ, ಎಳೆ ಎಳೆಯಾಗಿ ಇರುತ್ತವೆ. ಈ ಎಳೆಗಳಿಗೆ ಪುಟಿತತೆ ಇದ್ದು ಎಳೆದರೆ ಉದ್ದವಾಗಿ, ಬಿಟ್ಟರೆ ಪುನಃ ಮೊದಲಿನ ಸ್ಥಿತಿಗೆ ಬರುವುದರಿಂದ ಪುಟಿತ (ಇಲಾಸ್ಟಿಕ್) ಎಳೆಗಳೆಂದು ಕರೆಯುವರು. ಡೆಸ್ಮೋಸೀನ್ ಎಂಬ ಅಮೈನೋ ಆಮ್ಲ ಎಳೆಗಳ ಪುಟಿತತೆ ಹೊಂದಿವೆ. ಮೂರನೆಯ ರೀತಿಯ ಎಳೆ ರೆಟಿಕ್ಯುಲಿನ್ ಪ್ರೋಟೀನಿನಿಂದಾಗಿದೆ. ಈ ಎಳೆಗಳು ಅತ್ಯಂತ ಸೂಕ್ಷ್ಮವಾಗಿದ್ದು ಇವುಗಳ ನಿಕಟ ಹೆಣಿಗೆಯಿಂದ ಬಲೆಯ ಕಣ್ಣುಗಳಂತಾಗುವುದರಿಂದ ಇವುಗಳಿಗೆ ರೆಟಿಕ್ಯುಲರ್ ಎಳೆಗಳು ಅಥವಾ ಜಾಲಂಧ್ರ ಎಳೆಗಳು




**1–6: ಪಕ್ಷಿಗಳ ಗರಿಯ ಬೆಳೆವಣಿಗೆಯ ವಿವಿಧ ಹಂತಗಳು**

ಎಂದು ಹೆಸರು. ಇವಕ್ಕೆ ಬೆಳ್ಳಿಯ ಲವಣಗಳನ್ನು ಕೂಡುವ ಗುಣವಿರುವುದರಿಂದ ಆ ಲವಣಗಳನ್ನು ಉಪಯೋಗಿಸಿ ಬಣ್ಣಕೊಟ್ಟು ಇವನ್ನು ಸೂಕ್ಷ್ಮದರ್ಶಕದಲ್ಲಿ ನೋಡಬಹುದು. ಇದನ್ನು ಅಡಿಪಾಯದ ವಸ್ತು (ಗ್ರೌಂಡ್ ಸಬ್‌ಸ್ಟೆನ್ಸ್) ಎಂದು ಕರೆಯುವರು. ಇದು ಮ್ಯೂಕೋಪಾಲಿಸ್ಯಾಕರೈಡ್ ರಾಸಾಯನಿಕಗಳಿಂದಾಗಿದೆ. ಇವುಗಳಲ್ಲಿ ಹಯಲ್ಯೂರೋನಿಕ್ ಆಮ್ಲ ಮತ್ತು ಡರ್ಮಟಿನ್ ಸಲ್ಫೇಟ್ ರಾಸಾಯನಿಕಗಳು ಇವೆ. ಚರ್ಮದೊಳಗೆ ಅಕಸ್ಮಾತ್ ಸೇರಿದ ಹೊರದ್ರವವಸ್ತು ಅಥವಾ ಅಣುಗಳು ಹರಡಿಕೊಳ್ಳದಂತೆ ಸೀಮಿತಗೊಳಿಸುವುದನ್ನು ಹಯಲ್ಯೂರೋನಿಕ್ ಆಮ್ಲ ಮಾಡುತ್ತದೆ.

ರಕ್ತನಾಳಗಳು : ನಿಜತ್ವಚದಲ್ಲಿ ಬಹುರಕ್ತನಾಳಗಳಿವೆ. ಅಗತ್ಯಬಿದ್ದಾಗ ಅವುಗಳಲ್ಲಿರುವ ರಕ್ತ ದೇಹದ ಇತರ ಕಡೆಗಳಿಗೆ ಒದಗುವಂತಿದೆ. ಅಲ್ಲದೆ ಈ ರಕ್ತನಾಳಗಳು ದೇಹೋಷ್ಣತೆಯನ್ನು ನಿಯಂತ್ರಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಧಮನಿಗಳು ಮೂರು ಮಟ್ಟಗಳಲ್ಲಿವೆ. ಎಲ್ಲಕ್ಕಿಂತ ಆಳವಾದದ್ದು ತ್ವಚದ ತಳ ಊತಕದಲ್ಲಿದೆ. ಮಧ್ಯದ ಹೆಣಿಲು ತಳಊತಕ ಮತ್ತು ನಿಜತ್ವಚಗಳು ಸೇರುವೆಡೆಯಲ್ಲಿ ಮತ್ತು ಎಲ್ಲಕ್ಕಿಂತ ಮೇಲಿನದು ನಿಜತ್ವಚದ ಬೆರಳಿನಂತಿರುವ ಚಾಚುಗಳಲ್ಲಿದೆ. ಧಮನಿಗಳಿಂದ ಭಿತ್ತಿಯಲ್ಲಿ ಅಧಿಕವಾಗಿ ಸ್ನಾಯುತಂತುಗಳಿರುವ ಕಿರುಧಮನಿಗಳು ತೆಳುಭಿತ್ತಿಯ ಲೋಮನಾಳಗಳು ಕವಲುಗಳಾಗುತ್ತವೆ. ಲೋಮನಾಳಗಳ ಭಿತ್ತಿ ನೀರಿನಲ್ಲಿ ವಿಲೀನವಾಗುವ ಕಲಾಯ್ಡ್ ಅಲ್ಲದ ವಸ್ತುಗಳು ಒಳಗೂ ಹೊರಗೂ ತೂರಿಹೋಗುವಷ್ಟು ಜಾಳಾಗಿರುತ್ತದೆ. ಕಾಲು ಮತ್ತು ಕೈಗಳಲ್ಲಿ ಲೋಮನಾಳಗಳಿಗೂ ಸ್ವಾಭಾವಿಕವಾದ ಸಂಕುಂಚನ ಸಾಮರ್ಥ್ಯವಿದೆ. ಅನುವೇದನ ನರಗಳು (ಸಿಂಪಥೆಟಿಕ್ ನರಗಳು) ಕಿರು ಧಮನಿಗಳಿಗೆ ಪೂರೈಕೆ ಆಗುವುದರಿಂದ ಅವು ಅತಿಯಾಗಿ ಅಲ್ಪವಾಗಿ ಕುಗ್ಗುವಂತಿವೆ. ಚಲಿಸುತ್ತಿರುವ ರಕ್ತದಲ್ಲಿರುವ ರಾಸಾಯನಿಕ ವಸ್ತುಗಳು ರಕ್ತನಾಳಗಳನ್ನು ಹಿಗ್ಗಿಸಬಲ್ಲುವು ಅಥವಾ ಕುಗ್ಗಿಸಬಲ್ಲುವು. ಉದಾ: ಅಡ್ರಿನಲಿನ್ ಮತ್ತು ಪಿಟ್ರೆಸಿನುಗಳು ಕಿರುಧಮನಿಗಳನ್ನು ಕುಗ್ಗಿಸುತ್ತವೆ. ಹಿಸ್ಟಮಿನ್, ಕೈನಿನ್ ಮತ್ತು ಅಸಿಟೈಲ್ ಕೋಲಿನುಗಳು ಕಿರುಧಮನಿಗಳನ್ನು ಹಿಗ್ಗಿಸುತ್ತವೆ. ಶೈತ್ಯ ಕುಗ್ಗಿಸುತ್ತದೆ. ಸಾಧಾರಣ ಪೆಟ್ಟು ಚರ್ಮದಲ್ಲಿ ದ್ರವ ತುಂಬಿದ ಹೊಪ್ಪಳೆಯನ್ನು ಏಳಿಸುತ್ತದೆ. ಇದು ಮೂರು ಮಟ್ಟಗಳಲ್ಲಿ ಕಂಡುಬರುವ ಪ್ರತಿಕ್ರಿಯೆ ಎಂದು ಮೊತ್ತಮೊದಲಿಗೆ ಲೆವಿಸ್ ತೋರಿಸಿದ. ಆದ ಕಾರಣ, ಈ ಪ್ರತಿಕ್ರಿಯೆಗೆ ಲೆವಿಸನ ತ್ರಿವಳಿಪ್ರತಿಕ್ರಿಯೆ (ಟ್ರಿಪಲ್ ರೆಸ್ಪಾನ್ಸ್ ಆಫ್ ಲೆವಿಸ್) ಎನ್ನುವರು. ಮೊದಲು ಪೆಟ್ಟು ತಾಕಿದೆಡೆಯಲ್ಲಿ ಲೋಮನಾಳಗಳು ಹಿಗ್ಗಿ, ಪೆಟ್ಟಿನ ಆಕಾರದ ಕೆಂಪುಗೀರು ಕಾಣುತ್ತದೆ. ಒಂದೆರಡು ನಿಮಿಷಗಳಲ್ಲಿ ಸುತ್ತಣ ಚರ್ಮದಲ್ಲಿ ನರಗಳ ಪ್ರತಿಕ್ರಿಯೆಯ ಮೂಲಕ ಆ ಸ್ಥಳದ ಧಮನಿ ಹಿಗ್ಗುವುದರಿಂದ ಸುತ್ತಲು ಕೆಂಪಾದ ಬಾಸುಂಡೆ ಏಳುತ್ತದೆ. ಈ ಪ್ರತಿಕ್ರಿಯೆಗೆ ಸ್ಥಳೀಯ ನರಗಳ ಅಖಂಡತೆ ಕಾರಣ. ಸು. 10 ನಿಮಿಷಗಳ ಬಳಿಕ ಮೂರನೆಯ ಪ್ರತಿಕ್ರಿಯೆ-ಕೆಂಪುಗೆರೆ ಕಂಡಲ್ಲಿ ಹಿಸ್ಟಮಿನ್ ಬಿಡುಗಡೆಯಿಂದ ಹಿಗ್ಗಿದ ಲೋಮನಾಳಗಳ ಮೂಲಕ ದ್ರವಸ್ರಾವವಾಗಿ ಚರ್ಮದಲ್ಲಿ ನೀರುತುಂಬಿದ ದದ್ದು ಏಳುವುದು.

ಅಪಧಮನಿಗಳಿಂದ ಅಭಿಧಮನಿಗಳಿಗೆ ರಕ್ತ ಲೋಮನಾಳಗಳ ಮೂಲಕ ಮತ್ತು ನೇರವಾಗಿ ಅಪಧಮನಿ ಆಬಿಧಮನಿಗಳನ್ನು ಕೂಡುವ ನಾಳಗಳ ಮೂಲಕ ಹರಿಯುತ್ತದೆ. ಈ ನಾಳಗಳ ಸಾಮರ್ಥ್ಯವು ಸ್ನಾಯು ಸಡಿಲಗೊಂಡಾಗ ರಕ್ತ ಅಪಧಮನಿಯಿಂದ ನೇರವಾಗಿ ಅಭಿಧಮನಿಗೆ ಹರಿಯುವುದರಿಂದ ಉಷ್ಣತೆಯನ್ನು ಕಾಪಾಡಬಹುದು. ನಿಜತ್ವಚದ ಚಾಚುಗಳಲ್ಲಿ ಬಂಧಿಸುವ ಊತಕದಲ್ಲಿ ದುಗ್ಧರಸದ ಸೂಕ್ಷ್ಮನಾಳಗಳು ಪ್ರಾರಂಭವಾಗಿ ಅನಂತರ ರಕ್ತನಾಳಗಳ ಜೊತೆಯಲ್ಲೆ ಕ್ರಮಿಸುತ್ತವೆ.

ನರಗಳು : ಬಿಳಿ ಮತ್ತು ಬೂದುಬಣ್ಣದ ಎರಡು ಬಗೆಯ ನರಗಳು ಚರ್ಮದಲ್ಲಿವೆ. ರಕ್ತನಾಳಗಳಿಗೆ ಮತ್ತು ಬೆವರುಗ್ರಂಥಿಗಳಿಗೆ ಬೂದುಬಣ್ಣದ ಕ್ರಿಯಾವಾಹಿ ನರಗಳ ಪೂರೈಕೆ ಇದೆ. ಮಿಕ್ಕೆಲ್ಲ ಬಿಳಿ ಜ್ಞಾನವಾಹಿ ನರಗಳೇ. ಇವು ಹೊರತ್ವಚದ ಕೆಳಗಿವೆ. ಹೆಣಿಲಿನಿಂದ ಹೊರತ್ವಚಕ್ಕೂ ಮತ್ತು ನಿಜತ್ವಚಕ್ಕೂ ನರ ಪೂರೈಕೆಯಾಗಿದೆ. ಅವುಗಳ ಕೊನೆಗಳು-ವಾಸ್ತವವಾಗಿ ಜ್ಞಾನವಾಹಿ ನರಗಳಾದ್ದರಿಂದ ಇವನ್ನು ಪ್ರಾರಂಭವೆಂದು ಹೇಳಬೇಕು. ಬಿಳಿ ಹೊದಿಕೆಯನ್ನು ಕಳೆದುಕೊಂಡು ಬೂದುಬಣ್ಣದಿಂದಿರುತ್ತವೆ. ಈ ಕೊನೆಗಳಲ್ಲಿ ಕೆಲವು ತಟ್ಟೆಗಳ ಆಕಾರವಾಗಿ ಹೊರತ್ವಚದ ಜೀವಕೋಶಗಳ ನಡುವೆ ನಿಜತ್ವಚದಲ್ಲಿ ಇವೆ. ಇವಕ್ಕೆ ಮೆರ್ಕೆಲನ ತಟ್ಟೆಗಳು ಎಂದು ಹೆಸರು. ಇನ್ನು ಕೆಲವು ಮೀಸ್ನರನ ಕಣಗಳು ನಿಜತ್ವಚದ ಚಾಚುಗಳಲ್ಲಿವೆ. ಕೈಬೆರಳುಗಳಲ್ಲಿ ಇವು ವಿಶೇಷವಾಗಿವೆ. ಇವೆರಡು ಸ್ಪರ್ಶಜ್ಞಾನಕ್ಕೆ ಕಾರಣ. ಕೆಲವು ನರತಂತುಗಳ ಕೋಶಗಳ ನಡುವೆ ಹಾಗೂ ಬಂಧಿಸುವ ಊತಕದಲ್ಲಿ ನಗ್ನವಾಗಿವೆ. ಇವು ನೋವಿನ ಅರಿವನ್ನುಂಟುಮಾಡುತ್ತವೆ. ಮಿಕ್ಕ ನರತಂತುಗಳು ಪೆಸಿನಿಕಣಗಳು, ಕೌಸನ ಕೊನೆಬುಡ್ಡೆಗಳು, ರೂಫಿನಿಯ ನರಾಂತ್ಯಾಂಗಗಳು ವಿಶಿಷ್ಟ ರಚನೆಗೊಂಡ ಕೊನೆಗಳು. ಇವು ಅನುಕ್ರಮವಾಗಿ ಒತ್ತಡ, ಶೈತ್ಯ, ನೋವು ಸ್ಪರ್ಶಗಳ ಅರಿವು, ತುರಿಕೆ ಅಥವಾ ಕಡಿತದಂತಹ ಸ್ಪಷ್ಟ ಅರಿವನ್ನುಂಟು ಮಾಡುತ್ತವೆ. ಟ್ರಿಪ್ಸಿನ್, ಪ್ಯಾಂಕ್ರಿಯಾಟಿನ್ ಮುಂತಾದ ಎಂಡೋಪೆಪ್ಟಿಡೇಸ್ ಗುಂಪಿಗೆ ಸೇರಿದ ಕಿಣ್ವಗಳು ಹೊರತ್ವಚವನ್ನು ಸೇರಿದರೆ ತುರಿಕೆ ಉಂಟಾಗುವುದು. ಉದಾ: ನಸುಗುನ್ನಿಗಿಡದಲ್ಲಿರುವ ಮ್ಯುಕಾನಿನ್ ಎಂಬ ಪದಾರ್ಥವು ಕಡಿತವನ್ನು ಉಂಟುಮಾಡುತ್ತದೆ. ಶಿಲೀಂಧ್ರಗಳ, ಎಂಜೈಮುಗಳು, ಹುಳುಕಡ್ಡಿ, ಇಸಬು ಚರ್ಮರೋಗಗಳು ತುರಿಕೆಗೆ ಕಾರಣ. ಹಿಸ್ಟಮಿನ್, ಅಸಿಟೈಲ್ ಕೋಲಿನ್ ಸಹ ತುರಿಕೆಯನ್ನುಂಟುಮಾಡುತ್ತವೆ. ಇವು ದದ್ದನ್ನೂ ಉಂಟುಮಾಡುವುವು.

ಜೀವಕೋಶಗಳು : ನಿಜತ್ವಚದಲ್ಲಿ ವಿರಳವಾಗಿ ಅನೇಕ ಬಗೆಯ ಜೀವಕೋಶಗಳು ಇವೆ. ಇವುಗಳಲ್ಲಿ ಬಹುಪಾಲು ತಂತುಜನಕ ಕೋಶಗಳು. ಇವುಗಳಿಗೆ ಬಿಳಿಯ ಅಥವಾ ಕೊಲ್ಲಾಜೆನ್ ಎಳೆಗಳೊಡನೆ ನಿಕಟಸಂಬಂಧವಿದೆ. ಬಹುಶಃ ತಂತುಗಳಿಗೆ ಬೇಕಾದ ವಿಶಿಷ್ಟ ಪ್ರೋಟೀನುಗಳು ಚಟುವಟಿಕೆಯಿಂದ ಒದಗುತ್ತವೆ. ಮಾಸ್ಟ್ ಕೋಶಗಳಲ್ಲಿ ರವೆಯಂತೆ ಕಣಗಳಿವೆ. ಇವು ಹೊರಬಂದಾಗ ಹಿಸ್ಟಮಿನ್ ಮತ್ತು ಹೆಪಾರಿನ್ ಉತ್ಪತ್ತಿಯಾಗುತ್ತವೆ. ರಕ್ತಕಣಗಳಾದ ಮಾನೋಸೈಟ್, ಲಿಂಫೋಸೈಟ್ ಮತ್ತು ಪಾಲಿಮಾರ್ಫುಗಳು ನಿಜತ್ವಚದ ಮಧ್ಯವಸ್ತುವಿನಲ್ಲಿ ಅಡಗಿವೆ. ಹಿಸ್ಟಿಯೋಸೈಟ್ ಮತ್ತು ಪ್ಲಾಸ್ಮಾಕೋಶಗಳು ಇವೆ. ಈ ಕೋಶಗಳು ವಿಷಾಣುಗಳ ಸೋಂಕಿನ ವಿರುದ್ಧ ಹಾಗೂ ರೋಗನಿಗ್ರಹ ಕಾರ್ಯದಲ್ಲಿ ತೊಡಗುವುವು.

ಸ್ವೇದಗ್ರಂಥಿಗಳು (ಬೆವರುಗ್ರಂಥಿಗಳು) : ಈ ಗ್ರಂಥಿಗಳಲ್ಲಿ ಸ್ರವಿಸುವ ಭಾಗ ಮತ್ತು ವಾಹಕನಾಳ ಭಾಗ ಇವೆ. ಸ್ರವಿಸುವ ಭಾಗದಲ್ಲಿ ಲಂಬಕೋಶ (ಕಾಲಮ್ನಾರ್ ಸೆಲ್ಸ್), ಸುರುಳಿ ಸುತ್ತಿದ ಕೊಳವೆ, ಇದರ ಸುತ್ತ ಅನೈಚ್ಛಿಕಸ್ನಾಯುಗಳು ಅವುಗಳ ಸುತ್ತ ತೆಳುವಾದ ತಂತುಗಳು ಬುಟ್ಟಿಯಂತೆ ಆವರಿಸಿವೆ. ಇದಕ್ಕೆ ಧಾರಾಳ ರಕ್ತಪೋಷಣೆ ಇದೆ. ಸ್ವೇದಗ್ರಂಥಿಯ ನಾಳ ಆದರ ಎರಡು ಮೂರು ಕೋಶಗಳ ವರಸೆಯಿಂದಾದ ಭಿತ್ತಿಯುಳ್ಳದ್ದಾಗಿರುವುದರಿಂದ ಇದರ ರಂಧ್ರ ಬಹು ಕಿರಿದು. ಈ ನಾಳ ನಿಡುಸುರುಳಿಯಾಗಿ ಹೊರತ್ವಚದೆಡೆ ನೇರ ಸಾಗಿ ಅದರ ಚಾಚುವಿನ ತುದಿಯಲ್ಲಿ ಕೊನೆಗೊಳ್ಳುವುದು. ಅಲ್ಲಿಂದ ಮೇಲೆ ಹೊರತ್ವಚದ ಕೋಶಗಳ ನಡುವೆ ಹಾಯ್ದು ಸ್ಕ್ರೂ ಆಕಾರದ ಸಂದಾಗಿ ಚರ್ಮದ ಮೇಲ್ಮೈಯಲ್ಲಿ ಒಂದು ರಂಧ್ರವಾಗಿ ಕೊನೆಗೊಳ್ಳುತ್ತದೆ. ಗ್ರಂಥಿಯ ನಾಳವೂ ಹೊರತ್ವಚದಿಂದ ಇಳಿಬಿದ್ದ ಬೆಳೆತಗಳು. ಇದು ಗೋಚರ ಮತ್ತು ಅಗೋಚರವಾಗಿ ದಿನವಿಡೀ (ಉದಾ: 24 ಗಂಟೆಗಳಲ್ಲಿ) ಸು. 600 ಮಿಲೀ ನೀರು ಚರ್ಮದ ಮೂಲಕ ವಿಸರ್ಜನೆ ಮಾಡುತ್ತದೆ. ಇದರಲ್ಲಿ ಶೇ. 80 ಅಗೋಚರವಾಗಿ ಸ್ವೇದಗ್ರಂಥಿಯ ರಂಧ್ರಗಳ ಹಾಗೂ ಹೊರತ್ವಚದ ಮೂಲಕ ಆವಿಯಾಗುವ ನೀರು. ಸ್ವೇದಗ್ರಂಥಿಗಳಿಂದ ಉತ್ಪತ್ತಿಯಾಗುವ ಸ್ರಾವವಲ್ಲ. ಇದರ ಪ್ರಮಾಣ ವ್ಯಕ್ತಿಗಳಿಗನುಗುಣವಾಗಿ ಮತ್ತು ಕಾಲಕ್ಕನುಗುಣವಾಗಿ ಹೆಚ್ಚು ವ್ಯತ್ಯಾಸ ಇಲ್ಲ. ಸ್ವೇದ ಗ್ರಂಥಿಗಳ ಚಟುವಟಿಕೆಯಿಂದ ಉತ್ಪತ್ತಿಯಾಗಿ ಮೈಮೇಲೆ ಕಾಣಿಸಿಕೊಳ್ಳುವ ದ್ರವ ಬೆವರು. ಇದು ಮೇಲ್ಮೈಯಿಂದ ಬಾಷ್ಪೀಭವಿಸಿ ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಬೆವರಿನ ಪ್ರಮಾಣ ಸ್ವೇದ ಗ್ರಂಥಿಗಳಿಗೆ ಪೂರೈಕೆ ಆಗುವ ಅನುವೇದನೆ ನರಗಳ ಪ್ರೇರಣೆಯಿಂದ ನಿಯಂತ್ರಿತವಾಗುತ್ತದೆ. ದೇಹದ ಉಷ್ಣತೆ ಹೆಚ್ಚಾದ ಸಂದರ್ಭಗಳಲ್ಲಿ ಅದನ್ನು ಸಹಜಸ್ಥಿತಿಗೆ ಇಳಿಸಲು ಇಂಥ ನರಪ್ರೇರಣೆಯಿಂದ ಉಂಟಾದ ಬೆವರು ಆವಿಯಾಗಿ ಹೋಗುತ್ತದೆ.

ಬೆವರು ಬಣ್ಣವಿಲ್ಲದ ದ್ರವ. ಅದರಲ್ಲಿ ಶೇ. 99 ನೀರು, ಸ್ವಲ್ಪ ಉಪ್ಪು, ಅಮೋನಿಯ, ಯೂರಿಯ, ಯೂರಿಕ್ ಆಮ್ಲ, ಕೊಬ್ಬು ಇವೆ. ಗುದ, ಹೊರ ಪ್ರಜನನಾಂಗಗಳ ದ್ವಾರ, ಕಂಕುಳು, ಸ್ತನಾಗ್ರ ಇವುಗಳ ಸುತ್ತ ವಿಶೇಷವಾದ ಸ್ವೇದ ಗ್ರಂಥಿಗಳಿವೆ. ಇವಕ್ಕೆ ಅಪೋಕ್ರೈನ್ ಗ್ರಂಥಿಗಳೆಂದು ಹೆಸರು. ಕೋಶಗಳ ಭಾಗಗಳಿಂದ ಬೆವರು ಕಳಚಿ ದ್ರವವಾಗಿ ಸ್ರವಿಸಲ್ಪಡುವುದು. ಈ ಗ್ರಂಥಿಗಳು ಸಾಮಾನ್ಯ ಸ್ವೇದ ಗ್ರಂಥಿಗಳಿಗಿಂತ ದೊಡ್ಡವು. ಬಿಳಿಯ ಜನರಿಗಿಂತ ಕಪ್ಪು ಜನರಲ್ಲಿ ಇವುಗಳ ಸಂಖ್ಯೆ ಹೆಚ್ಚು. ಅಲ್ಲದೆ ಹೆಂಗಸರಲ್ಲಿ ಗಂಡಸರಿಗಿಂತ ಹೆಚ್ಚಾಗಿದ್ದು ಅಧಿಕವಾಗಿ ಸ್ರವಿಸುತ್ತವೆ. ಗರ್ಭಿಣಿಯರಲ್ಲಿ ಮತ್ತು ಬಹಿಷ್ಠೆಯಾಗಿರುವವರಲ್ಲಿ ಸ್ರಾವ ಇನ್ನೂ ಅಧಿಕ. ಇವುಗಳ ಸ್ರಾವ ಅತಿ ನೀರಾಗಿರುವ ಹಾಲಿನಂತೆ. ಈ ವ್ಯಕ್ತಿಯಲ್ಲಿ ಸ್ವಾಭಾವಿಕವಾಗಿರುವ ಏಕಾಣುಗಳಿಂದ ಮಾರ್ಪಟ್ಟು ವಿಶಿಷ್ಟವಾದ ಶಾರೀರಿಕಗಂಧ ಇದಾಗುತ್ತದೆ. ಮನುಷ್ಯ ಮತ್ತು ಕೆಲವು ಪ್ರಾಣಿಗಳಲ್ಲಿ, ಈ ಗಂಧದಲ್ಲಿ ಲೈಂಗಿಕ ಪ್ರಚೋದಕ ಪ್ರಭಾವವಿರುವುದು. ಲೈಂಗಿಕ ಕಾರ್ಯಾಚರಣೆ ಉನ್ನತಿಯಲ್ಲಿ ಈ ಗ್ರಂಥಿಗಳ ಸ್ರಾವವಾಗುತ್ತದೆ.

ನಿಜತ್ವಚದ ಅಡಿ ಊತಕ : ಇದು ಚರ್ಮ ಮತ್ತು ಕೊಬ್ಬಿನ ನಡುವೆ ಇರುವ ವಲಯ. ನಿಜತ್ವಚದ ಬಂಧಿಸುವ ಊತಕ ಇನ್ನೊಂದು ರೀತಿಯ ಕೊಬ್ಬು ಶೇಖರಣೆ ಆಗಬಲ್ಲ ಊತಕವಾಗಿ ಕ್ರಮೇಣ ಪರಿವರ್ತನೆಯಾಗಿ ಈ ವಲಯದಲ್ಲಿ ಕಾಣುತ್ತದೆ. ಆದ್ದರಿಂದ, ನಾರೆಳೆಕೋಶಗಳು, ಕೊಬ್ಬಿನ ಕೋಶಗಳು ಕಂಡುಬರುತ್ತವೆ. ದೊಡ್ಡವಾಗಿರುವ ಸ್ವೇದ ಗ್ರಂಥಿಗಳ ಸ್ರಾವಕಭಾಗವೂ ಕೆಲವು ರೋಮಕೂಪಗಳೂ ಅಡಿ ಊತಕದಲ್ಲಿವೆ.

ಚರ್ಮದಲ್ಲಿನ ವ್ಯತ್ಯಾಸಗಳು : ಸ್ತನಿ ಗುಂಪಿನ ಅನೇಕ ಚತುಷ್ಪಾದಿಗಳಲ್ಲಿ ಚರ್ಮದ ಕೆಳಗೆ, ಮುಖ್ಯವಾಗಿ ಮುಂಡಭಾಗದಲ್ಲಿ ಒಂದು ತೆಳುವಾದ ಅನೈಚ್ಛಿಕಸ್ನಾಯು ವ್ಯಾಪಕವಾಗಿದೆ. ಇದರಿಂದ ಚರ್ಮವನ್ನು ಸ್ಥಳೀಯವಾಗಿ ನಡುಗಿಸ ಬಹುದು. ಕೀಟಗಳ ಉಪದ್ರವವನ್ನು ನಿವಾರಿಸಲು ಅನುಕೂಲವಾಗುವ ಈ ರಚನೆ ಮಾನವನಲ್ಲಿ ಇಲ್ಲ. ವಿಕಾಸದ ಹಂತದಲ್ಲಿ

ಅಳಿದುಹೋಗಿ ಕುತ್ತಿಗೆಯಲ್ಲಿ ಮಾತ್ರ ಇರುವ ಒಂದು ಅವಶೇಷವಾಗಿದೆ. ಸ್ತನಿಗಳ ಮೈಮೇಲೆಲ್ಲ ರೋಮಗಳಿದ್ದು, ದೇಹೋಷ್ಣತೆಯನ್ನು ಕಾಪಾಡಲು, ಮಳೆಯಲ್ಲಿ ತೋಯ್ದಾಗ ಮೈಮೇಲೆ ಬಿದ್ದ ನೀರು ಸುಲಭವಾಗಿ ಹರಿದುಹೋಗುವಂತೆ ಮಾಡಲು ಇರುವ ಅನುಕೂಲತೆ. ಮಾನವನಲ್ಲಿ ಉಡುವ ಬಟ್ಟೆ ವಗೈರೆಗಳಿಂದ ಅನಾವಶ್ಯಕವಾಗಿ ಮೈ ಕೂದಲು ಮಿತವಾಗಿದೆ. ಸದಾ ನೀರಿನಲ್ಲಿರುವ ತಿಮಿಂಗಲದಂತಹ ಸ್ತನಿಗಳಲ್ಲಿ ಇದೇ ರೀತಿ ಕೂದಲು ಮಿತಿಗೊಂಡಿವೆ. ಆನೆ, ಘೇಂಡಾಮೃಗ, ಕಾಡುಹಂದಿ ಮುಂತಾದುವುಗಳಲ್ಲಿ ಚರ್ಮ ಬಹು ಮಂದವಾಗಿ ಒರಟಾಗಿದ್ದು, ಈ ಪ್ರಾಣಿಗಳು ಕಾಡಿನ ಮುಳ್ಳುಪೊದೆಗಳ ನಡುವೆ ನೋವಿನಿಂದ ಬಾಧಿತವಾಗದಂತೆ ಓಡಾಡಬಹುದು. ಆರ್ಮಡಿಲ್ಲೊದಲ್ಲಿ (ಚಿಪ್ಪು ಹಂದಿ) ಚರ್ಮದ ಹೊರಗೆ ಮೂಳೆಗಳಿಂದಾದ ಕವಚವಿದೆ.

ಪಕ್ಷಿಗಳಲ್ಲಿ ಚರ್ಮ ಶುಷ್ಕ ಮತ್ತು ತೆಳುವಾಗಿದೆ. ಪಕ್ಷಿಗಳಲ್ಲಿ ರೆಕ್ಕೆಪುಕ್ಕಗಳು ಇರುತ್ತವೆ. ಸರೀಸೃಪಗಳು ಮತ್ತು ಅವುಗಳಿಗಿಂತ ವಿಕಾಸದಲ್ಲಿ ಕೆಳಮಟ್ಟದ ಕಶೇರುಕಗಳು ದೇಹೋಷ್ಣತೆ ಉಳ್ಳವಲ್ಲ. ಅವುಗಳ ದೇಹೋಷ್ಣತೆ ಬಾಹ್ಯಾವರಣದ ಉಷ್ಣತೆಯನ್ನು ಅನುಸರಿಸುವುದರಿಂದ ದೇಹೋಷ್ಣತೆಯ ನಿಯಂತ್ರಣಕ್ಕಾಗಿ ಮಾನವರ ಚರ್ಮದಲ್ಲಿ ಇರುವಂತಹ ರಚನೆ ಇವುಗಳಲ್ಲಿ ಇಲ್ಲ. ಸರೀಸೃಪಗಳಲ್ಲಿ ಚರ್ಮ ಶುಷ್ಕವಾಗಿರುತ್ತದೆ. ಹೊರತ್ವಚ ಕೊಂಬಿನಂಥ ವಸ್ತುವಿನಿಂದ ಕೂಡಿದ್ದು, ಗಡುಸಾಗಿ ದಪ್ಪವಾಗಿದೆ. ಇದು ಪೊರೆ (ಕಳಚು) ವಿಸರ್ಜನೆ ಆಗುತ್ತದೆ. ಅಪರೂಪಕ್ಕೆ ನಿಜತ್ವಚದಲ್ಲಿ ಅಲ್ಲಲ್ಲಿ ತಟ್ಟೆಯಾದ ಮೂಳೆಯ ಚೂರುಗಳಿವೆ. ಚರ್ಮದಲ್ಲಿ ಮೆಲನಿನ್ ಮತ್ತು ಕೆಂಪು, ಹಸಿರು, ಹಳದಿ, ನೀಲಿ ವಸ್ತುಗಳು ವಿಶೇಷ ಬೀಜಕಣಗಳಲ್ಲಿ ಉತ್ಪತ್ತಿಯಾಗಿ ಚರ್ಮದಲ್ಲಿ ವಿಶಿಷ್ಟ ವರ್ಣವಿನ್ಯಾಸ ಕಂಡುಬರುತ್ತದೆ. ಗೋಸುಂಬೆಯಲ್ಲಿ (ಕ್ಯಾಮೆಲಿಯಾನ್) ರಕ್ಷಣೆಗಾಗಿ ವರ್ಣ ಬದಲಾಗುತ್ತದೆ.

ದ್ವಿಚರಿಗಳಲ್ಲಿ ಚರ್ಮ ತೆಳುವಾಗಿ ಮತ್ತು ಒದ್ದೆಯಾಗಿರುತ್ತದೆ. ಇದರಿಂದ ಚರ್ಮದ ಮೂಲಕ ಗಾಳಿ ಹೊರಗೂ, ಒಳಗೂ ಹೋಗುವಂತಿದೆ. ಈ ಅನುಕೂಲತೆ ಅವುಗಳ ಉಸಿರಾಟಕ್ಕೆ ಸಹಾಯಕ. ಎಲ್ಲ ಭೂಚರ ಕಶೇರುಕಗಳಂತೆಯೇ ಇವುಗಳಲ್ಲಿಯೂ ಹೊರತ್ವಚ ನಿರ್ಜೀವ ಗಡಸು ಪೊರೆಯಿಂದ ಕೂಡಿದೆ. ಇದರ ಪೊರೆ ವಿಸರ್ಜನೆಯಾಗುತ್ತದೆ. ಈ ವಿಸರ್ಜನೆಯನ್ನು ಪಿಟ್ಯುಯಿಟರಿ ಮತ್ತು ಥೈರಾಯ್ಡ್ ಗ್ರಂಥಿಗಳು ನಿಯಂತ್ರಿಸುತ್ತವೆ. ನೆಲಗಪ್ಪೆ (ಟೋಡ್)ಗಳ ಚರ್ಮದಲ್ಲಿ ಅಲ್ಲಲ್ಲಿ ಇರುವ ಗಂಟುಗಳು (ವಾರ್ಟ್) ಹೊರತ್ವಚದ ಗಡಸುಭಾಗಗಳು. ಹೊರತ್ವಚದ ಜೀವಕೋಶಗಳಿಂದಾದ ಗ್ರಂಥಿಗಳು ಲೋಳೆಯಂಥ ದ್ರವವನ್ನು ಸ್ರವಿಸಿ ಚರ್ಮವನ್ನು ಒದ್ದೆಯಾಗಿಟ್ಟು ಚರ್ಮದ ಮೂಲಕ ಉಸಿರಾಟ ಮಾಡುತ್ತವೆ. ಇತರ ಗ್ರಂಥಿಗಳು ಒಂದು ರೀತಿಯ ವಿಷವಸ್ತುವನ್ನು ಸ್ರವಿಸುತ್ತವೆ. ಈ ವಸ್ತು ಕಣ್ಣಿಗಾಗಲಿ, ಮೂಗಿಗಾಗಲಿ ತಾಕಿದರೆ ಉರಿಯುತ್ತದೆ. ಮಾನವನ ಕೈಚರ್ಮದ ಮೇಲೆ ಯಾವುದೆ ಪ್ರತಿಕೂಲ ಪರಿಣಾಮವನ್ನು ಮಾಡಲಾರದು. ಆದರೆ, ಈ ವಿಷವಸ್ತುವಿನ ಭಯದಿಂದ ಕಪ್ಪೆಯನ್ನು ನುಂಗುವ ಪ್ರಾಣಿಗಳು ಟೋಡುಗಳನ್ನು ನುಂಗುವುದಿಲ್ಲ. ಅನೇಕ ಕಪ್ಪೆಗಳಲ್ಲಿ ಉಷ್ಣತಾನಿಯಂತ್ರಣಕ್ಕಾಗಿ ಮೆಲನಿನ್ ಕಣಗಳು ಜೀವಕೋಶಗಳೊಳಗೆ ಗುಂಪುವಾಡಿಕೊಂಡಿರುವುದು, ಇನ್ನು ಕೆಲವು ವೇಳೆ ಕೋಶದೊಳಗೆಲ್ಲ ಹರಡಿಕೊಂಡಿರುವುದು ಕಾಣುತ್ತದೆ. ಕಣಗಳ ಈ ಚಲನ ಪಿಟ್ಯುಯಿಟರಿ ಗ್ರಂಥಿಯಿಂದ ನಿಯಂತ್ರಿತವಾಗಿದೆ.

ಮೀನುಗಳ ಗುಂಪಿನಲ್ಲಿ ಟೀಲಿಯಾಸ್ಟ್‌ಗಳ ನಿಜತ್ವಚದಲ್ಲಿ ಮೂಳೆಯ ಚೂರುಗಳಿದ್ದು ಅವು ಹೊರತ್ವಚದಿಂದ ಮುಚ್ಚಲ್ಪಟ್ಟಿವೆ. ಈ ಮೂಳೆಯ ಚೂರುಗಳು ನಿರಂತರವಾಗಿ ಬೆಳೆಯುತ್ತಿರುವುವು. ಈ ಮೂಳೆಗಳು ಉಂಗುರಗಳಂತೆ ಬೆಳೆಯುತ್ತವೆ. ಇದರಿಂದ ಮೀನಿನ ವಯಸ್ಸನ್ನು ತಿಳಿಯಬಹುದು. ಹೊರತ್ವಚ ಅಧಿಕ ಕೆರಾಟಿನ್ ಸಂಗ್ರಹಣೆಯಿಂದ ಕೊಂಬಿನಷ್ಟು ಗಡುಸಾದ ಪದರ. ಆವರಣದ ಜಲ ದೇಹದ ಒಳಹೋಗದಂತೆ ತಡೆಯಾಗಿದೆ. ಷಾರ್ಕ್‌ಚೊರೆ ಮೀನುಗಳಂಥ ಕೆಳದರ್ಜೆ ಮೃದ್ವಸ್ಥಿ ಮೀನುಗಳಲ್ಲಿ ಚರ್ಮ ಬಹುಮಂದ. ಇದಕ್ಕೆ ಕೆರಾಟಿನ್ ಸಂಗ್ರಹವಾಗಿರುವ ಹೊರತ್ವಚವೇ ಕಾರಣ. ಹೊರತ್ವಚದ ಮೇಲೆ ಪ್ಲಕಾಯ್ಡ್ ಹುರುಪೆಗಳಿವೆ. ದುಂಡುಬಾಯಿಯ ಅತ್ಯಂತ ಕೆಳದರ್ಜೆ ಮೀನುಗಳಲ್ಲಿ ಚರ್ಮ ನುಣ್ಣಗೆ ಮತ್ತು ತೆಳ್ಳಗೆ ಇದ್ದರೂ, ಅದರಲ್ಲಿ ಹೊರ ಮತ್ತು ನಿಜತ್ವಚಗಳೆರಡು ಇವೆ. ನಿಜತ್ವಚವು ತ್ವಚದ ಕೆಳಗೆ ಊತಕದಿಂದ ಹಾಗೂ ವರ್ಣಕೋಶಗಳು ಮತ್ತು ನಾರೆಳೆಗಳಿಂದ ಸ್ಪಷ್ಟವಾಗಿ ಬೇರ್ಪಟ್ಟಿದೆ.

2. ಚರ್ಮದ ಅನುಬಂಧಗಳು (ಅಪೆಂಡೇಜಸ್) : ಕೂದಲು ಮತ್ತು ಉಗುರು ಮಾನವನಲ್ಲಿ ಕಂಡುಬರುವ ಚರ್ಮದ ಅನುಬಂಧಗಳು. ಕೆಲವು ಪ್ರಾಣಿಗಳಲ್ಲಿ ದೊಡ್ಡದಾಗಿ ಬೆಳೆದು ರಕ್ಷಣೆಯಾಗುವ ಪಂಜಗಳು ಮಾನವರಲ್ಲಿ ಉಗುರುಗಳಾಗಿವೆ. ಸಣ್ಣವಸ್ತುಗಳನ್ನು ಹಿಡಿದು ಕೊಳ್ಳುವುದಕ್ಕೂ, ಸೂಕ್ಷ್ಮವಾದ ಸಾಮಾನುಗಳಿಂದ ಕೆಲಸಮಾಡುವುದಕ್ಕೂ ಇವು ಸಹಾಯಕ. ಕೆಲವು ಪ್ರಾಣಿಗಳಲ್ಲಿ ರಕ್ಷಣೆಗಾಗಿ ತಲೆಯ ಮೇಲೆ ಕೊಂಬುಗಳು ಬೆಳೆಯುತ್ತವೆ. ಘೇಂಡಾಮೃಗದಲ್ಲಿ ಕೊಂಬು ಮೂಗಿನ ಮೇಲಿದೆ. ಕೆಲವು ಪ್ರಾಣಿಗಳಲ್ಲಿ ಗಟ್ಟಿಯಾದ ನೆಲ ಮತ್ತು ಬಂಡೆಗಳ ಮೇಲೆ ಶೀಘ್ರವಾಗಿ ಓಡಾಡಲು ಅನುಕೂಲವಾಗುವಂಥ ಗೊರಸುಗಳಿವೆ. ಇವೆಲ್ಲುವೂ ಚರ್ಮದ ಅನುಬಂಧಗಳೇ. ಪಕ್ಷಿಗಳಲ್ಲಿ ಕೂದಲಿಗೆ ಬದಲಾಗಿ ರೆಕ್ಕೆಪುಕ್ಕಗಳು ಚರ್ಮದ ಅನುಬಂಧವಾಗಿವೆ. ಸ್ತನಿಗಳಲ್ಲಿ ಕೂದಲಿನೊಡನೆ ಸ್ವೇದಗ್ರಂಥಿ (ಸೆಬೇಶಿಯಸ್ ಗ್ಲಾಂಡ್) ಇದೆ. ಆದರೆ, ಪಕ್ಷಿಗಳಲ್ಲಿ ಪುಕ್ಕಗಳೊಡನೆ ಇಂಥ ಗ್ರಂಥಿಗಳಿಲ್ಲ. ಆದರೆ, ಪಕ್ಷಿಯ ತೋಕೆಯಲ್ಲಿ ಸ್ವೇದ ಗ್ರಂಥಿಯನ್ನು ಹೋಲುವ 'ಪ್ರೀನ್' ಗ್ರಂಥಿ ಇದೆ. ಜಲಚರ ಪಕ್ಷಿಗಳಲ್ಲಿ ಇದು ಸ್ರವಿಸುತ್ತದೆ. ಜಿಡ್ಡಾದ ಸ್ರಾವವನ್ನು ಕೊಕ್ಕಿನಿಂದ ತೆಗೆದು ಹಕ್ಕಿಗಳು ತಮ್ಮ ರೆಕ್ಕೆಪುಕ್ಕಗಳ ಬುಡದಲ್ಲೆಲ್ಲ ಬಳಿದುಕೊಳ್ಳುತ್ತವೆ. ಇದರಿಂದ, ಪಕ್ಕಿಗಳ ದೇಹ ಮಳೆನೀರಿನಿಂದ, ಆವರಣದ ನೀರಿನಿಂದ ತೋಯುವುದಿಲ್ಲ. ರೆಕ್ಕೆಪುಕ್ಕಗಳು ಪಕ್ಷಿಗಳ ಹಾರಾಟಕ್ಕೂ ಕೆಲವು ವೇಳೆ ರಕ್ಷಣೆಗೂ ಇನ್ನು ಕೆಲವು ವೇಳೆ ಲೈಂಗಿಕ ಆಕರ್ಷಣೆಗೂ ಉಪಯೋಗವಾಗುತ್ತವೆ. ಪಕ್ಷಿಗಳ ಕೊಕ್ಕು, ಕಾಲುಗುರುಗಳು ಕೂಡ ಚರ್ಮದ ಅನುಬಂಧಗಳೇ. ಪಕ್ಷಿಗಳ ಜೀವನಕ್ರಮಗಳಿಗೆ ಅನುಸಾರವಾಗಿ ಇವುಗಳ ವಿನ್ಯಾಸ ವೈವಿಧ್ಯಮಯವಾಗಿದೆ. ಆಹಾರವಿತರಣೆಗೆ, ರಕ್ಷಣೆಗೂ ಈ ಅನುಬಂಧಗಳು ಅನುಕೂಲಕರ.

ಕೂದಲು : ಇದು ಚರ್ಮದೊಳಗೆ ಹುದುಗಿರುವ, ರೋಮಕೂಪದಲ್ಲಿ (ಹೇರ್ ಫಾಲಿಕಲ್) ನೆಟ್ಟುಕೊಂಡಿದೆ. ಕೂಪದಲ್ಲಿ ಹುದುಗಿರುವ ಭಾಗ ಕೂದಲಿನ ಬೇರು. ರೋಮಕೂಪ ಮತ್ತು ಕೂದಲು ಎರಡು ಹೊರತ್ವಚದ ಕೋಶಗಳಿಂದಾಗಿವೆ. ಹೊರತ್ವಚದ ಒಂದು ಗುಳಿ ನಿಜತ್ವಚದೊಳಗೆ ಇಳಿಬಿದ್ದು ಆಳವಾಗಿ ಬೆಳೆದು ನಿಜತ್ವಚದಲ್ಲಿ ರೋಮಕೂಪವಾಗುವುದು. ಇದರ ಕೊನೆ ಬುಡ್ಡೆ (ಬಲ್ಬ್) ಆಕಾರದಲ್ಲಿದೆ. ನಿಜತ್ವಚದ ಊತಕ ಸ್ತನಾಗ್ರದ ಆಕಾರದಲ್ಲಿದೆ. ಇದರ ಮೇಲೆ ಒಂದೇ ವರಸೆಯಾಗಿ ಅಳವಡಿಕೆಗೊಂಡಿರುವ ಹೊರತ್ವಚದ ಗುಳಿಯ ಜೀವಕೋಶಗಳು ಮಾತೃಕೆ ಜೀವಕೋಶಗಳಂತೆ ವರ್ತಿಸುತ್ತವೆ. ಇವುಗಳ ವಿಭಜನೆಯಿಂದ ಕೂದಲು ಬೆಳೆಯುವುದು. ಗಾಯದಿಂದ ಹೊರತ್ವಚ ನಾಶವಾದಾಗ ಹೊಸ ಹೊರತ್ವಚ ನಿರ್ಮಾಣವಾಗುತ್ತದೆ.

ನಿಜತ್ವಚದೊಳಗೆ ಹುದುಗಿರುವ ರೋಮಕೂಪದ ಭಿತ್ತಿಯಲ್ಲಿ ಮೂರು ಪದರಗಳಿವೆ. ಕೂಪದ ಒಳವರಸೆ ನಿರ್ಜೀವ ಪದರದಿಂದಾಗಿದೆ. ಇದರ ಹೊರಗೆ ಜೀವಕೋಶಗಳ ಎರಡು ಪದರಗಳನ್ನು ಸುತ್ತಲಿನ ನಿಜತ್ವಚದ ಊತಕದಿಂದ ಬೇರ್ಪಡಿಸುವ ತಳಹದಿ ಪದರವನ್ನು ಗುರುತಿಸಬಹುದು. ಕೂದಲ ಬುಡ್ಡೆಯಿಂದ ಬೆಳೆಯುವ ಕೂದಲು ಟೊಳ್ಳಿಲ್ಲದ ತಂತು. ಇದರಲ್ಲಿ ಮೂರು ವರಸೆ ರಚನೆಗಳಿವೆ. ಹೊರವರಸೆ ನಿರ್ಜೀವಪದರ. ಕೂದಲಿನ ಹೊರವರಸೆ, ರೋಮಕೂಪದ ಒಳವರಸೆ ಎರಡಕ್ಕೂ ಸಣ್ಣಮುಳ್ಳುಗಳಂತಿರುವ ಚಾಚುಗಳು ಕೆಳಮುಖವಾಗಿವೆ. ಇವು ಒಂದರೊಳಗೊಂದು ಸೇರಿ ಕೂದಲು ಕೂಪದೊಳಗೆ ಭದ್ರವಾಗಿ ನೆಡಲ್ಪಟ್ಟಿರುತ್ತವೆ. ಹೀಗಾಗಿ ಕಿತ್ತಾಗ ಇದು ಛಿದ್ರಿಸಿ ಬರುವುದೇ ಹೊರತು ಸುಲಭವಾಗಿ ಬುಡಮೂಲವಾಗಿ ಬರುವುದಿಲ್ಲ. ಕೂದಲ ಹೊರವರಸೆ ಕೂಪದಿಂದ ಹೊರಗೆ ಸ್ವಲ್ಪದೂರ ಮಾತ್ರ ಕೂದಲಿನಲ್ಲಿ ಕಂಡುಬರುತ್ತದೆ ಮತ್ತು ಕ್ರಮೇಣ ಇಲ್ಲವಾಗುತ್ತದೆ. ಈ ವರಸೆಯ ಒಳಗಿರುವುದು ಸಮೃದ್ಧಿಯಾಗಿ ಮೆಲನಿನ್ ಕಣಗಳಿರುವ ಜೀವಕೋಶಗಳಿಂದಾದ ಕೂದಲು ರಗಟೆ (ಕಾರ್ಟೆಕ್ಸ್). ಕೂದಲಿನ ಬಣ್ಣ ಈ ಜೀವಕೋಶಗಳಲ್ಲಿರುವ ಮೆಲನಿನ್ ಕಣಗಳ ಪ್ರಮಾಣವನ್ನು ಅವಲಂಬಿಸಿದೆ. ಕೂದಲ ಮಧ್ಯದಲ್ಲಿರುವುದು ಕೂದಲಿನ ತಿರುಳು (ಮೆಡುಲ್ಲ). ಇದು ಸಹ ಜೀವಕೋಶಗಳಿಂದಾಗಿದೆ. ಇವುಗಳಲ್ಲಿ ಸ್ವಲ್ಪ ಕೋಶಗಳಿವೆ. ಕ್ರಮೇಣ ಇವುಗಳ ಸ್ಥಳದಲ್ಲಿ ಅನಿಲ ಕಂಡುಬರುತ್ತದೆ. ಅನಿಲ ಪ್ರಮಾಣ ಅಧಿಕವಾದಾಗ ಕೂದಲಿನ ರಗಟೆಯಲ್ಲಿ ಮೆಲನಿನ್ನಿನ ಅಭಾವ ಉಂಟಾಗಿ ಕೂದಲು ಬೆಳ್ಳಗಾಗುವುದು.

ಕೂದಲ ಬೆಳವಣಿಗೆ ಒಂದು ನಿರ್ದಿಷ್ಟ ಕಾಲದವರೆಗೆ ಮಾತ್ರ ಆಗುತ್ತದೆ. ಅನಂತರ ಬೆಳವಣಿಗೆ ಇಲ್ಲದೆ ತಟಸ್ಥವಾಗಿರುವ ಕಾಲ. ಈ ಕಾಲದಲ್ಲಿ ಕ್ರಮೇಣ ಕೂದಲು ಕೂಪದ ಅಡಿಯಲ್ಲಿರುವ ಮಾತೃಕೆ ಕೋಶಗಳಿಂದ ಬೇರ್ಪಡುತ್ತದೆ ವಾಸ್ತವವಾಗಿ, ಆಗ ಅದು ಸತ್ತ ಕೂದಲು. ಆದರೂ, ಅದು ಇನ್ನೂ ಕೂಪದಲ್ಲೆ ಇರುತ್ತದೆ. ಮುಂದೆ ಕೂಪದ ಭಿತ್ತಿಯಿಂದ ಕ್ರಮೇಣ ಸಡಿಲಗೊಂಡು, ಕೂದಲು ಬುಡ್ಡೆಯ ಚಟುವಟಿಕೆ ಪುನಃ ಪ್ರಾರಂಭವಾಗಿ ಹೊಸ ಕೂದಲು ಅದೇ ಕೂಪದಿಂದ ಹೊರಬರುತ್ತದೆ. ಈ ಸತ್ತ ಕೂದಲು ಉದುರಿಹೋಗುತ್ತದೆ. ಹೀಗೆ ಬುಡ್ಡೆಯಿಂದ ಪುನಃಪುನಃ ಕೂದಲು ಹುಟ್ಟಿ, ಬೆಳೆದು ಉದುರುತ್ತಲೇ ಇರುತ್ತವೆ. ಈ ಕ್ರಮದಲ್ಲಿ ವಿವಿಧ ಭಾಗಗಳಿಗನುಗುಣವಾಗಿ ವ್ಯತ್ಯಾಸವಿದೆ.

ತೀವ್ರವಾದ ಜ್ವರ, ಅಧಿಕ ರಕ್ತಸ್ರಾವ, ಭಾರಿ ಶಸ್ತ್ರಚಿಕಿತ್ಸೆ ಮುಂತಾದ ತೊಡಕುಗಳು ಒದಗಿದಾಗ ಕೂದಲು ಬೆಳವಣಿಗೆ ನಿಂತುಹೋಗಿ ಅದು ಮಾತೃಕೆಯಿಂದ ಬೇರ್ಪಡುವುದಕ್ಕೆ ಪ್ರಾರಂಭವಾಗುತ್ತದೆ. ತಲೆಯಲ್ಲಿರುವ ಕೂದಲು ತಟಸ್ಥ ಸ್ಥಿತಿಯಲ್ಲಿದ್ದು ಇಂಥ ತೊಡಕು ಉಂಟಾದ 2–4 ತಿಂಗಳ ಬಳಿಕ ಇನ್ನೊಂದು ಕೂದಲು ಎಲ್ಲ ರೋಮಕೂಪಗಳಿಂದಲು ಹುಟ್ಟ ತೊಡಗುತ್ತದೆ. ಆಗ ಹಳೆಯ ಕೂದಲು ಒಟ್ಟೊಟ್ಟಿಗೆ ಉದುರಿಹೋಗುವುದು. ಹೆರಿಗೆಯ ತುರುವಾಯ ಬಾಣಂತಿಯರಲ್ಲಿ ಇದೇ ರೀತಿಯ ಬದಲಾವಣೆಯಿಂದ ಕೂದಲು ಉದುರುತ್ತದೆ.

ರೋಮಕೂಪ ಚರ್ಮದ ತಲಕ್ಕೆ (ಪ್ಲೇನ್) ಲಂಬವಾಗಿರುವುದಿಲ್ಲ. ಸ್ವಲ್ಪ ಓರೆಯಾಗಿರುತ್ತದೆ. ಈ ಓರೆ ದಿಕ್ಕಿಗೆ ಎದುರಾಗಿ ಓರೆಯಾಗಿ ಒಂದು ಪಟ್ಟಿಯಾಕಾರದ

ಸ್ನಾಯು ರೋಮಕೂಪದ ಮೇಲ್ಭಾಗದ ಭಿತ್ತಿಯನ್ನು ಹೊರತ್ವಚದ ತಳಭಾಗವನ್ನು ಕೂಡಿಸುತ್ತದೆ. ಇದು ಅನೈಚ್ಛಿಕಸ್ನಾಯು. ರೋಮಾಂಚನವಾದಾಗ ಕೂದಲನ್ನು ನಿಮಿರಿಸುವ ಸ್ನಾಯು ಇದೇ. ಸಂಕುಚಿಸಿದಾಗ ಇದು ರೋಮಕೂಪದ ಓರೆಯನ್ನು ಕಡಿಮೆ ಮಾಡುವುದರಿಂದ ಕೂದಲು ನೆಟ್ಟಗೆ ನಿಂತಂತಾಗುತ್ತದೆ. ಸಂಕುಚನೆ ನರಪ್ರೇರಣೆಯಿಂದ ಮೈಮೇಲೆಲ್ಲ ಅಥವಾ ಸ್ವಲ್ಪ ಭಾಗಗಳಲ್ಲಿ ಉಂಟಾಗುತ್ತದೆ. ಈ ರೋಮಾಂಚಕ ಸ್ನಾಯುಗಳಿಗೆ (ಎರೆಕ್ಟೊರಿಸ್ ಪೈಲೋರಮ್) ನರಪೂರೈಕೆ ಅನುವೇದನ ನರಗಳಿಂದಾಗುವುದರಿಂದ ದೇಹದಲ್ಲಿ ಅಡ್ರಿನಲಿನ್ ಬಿಡುಗಡೆ ಆದಾಗಲೆಲ್ಲ ರೋಮಾಂಚನವಾಗುತ್ತದೆ.

ರೋಮಕೂಪಕ್ಕೂ ರೋಮಾಂಚಕ ಸ್ನಾಯುವಿಗೂ ನಡುವೆ ಸಾಮಾನ್ಯವಾಗಿ ಒಂದು–ಎರಡು ಸ್ವೇದಗ್ರಂಥಿ (ಸಬೇಶಿಯಸ್ ಗ್ಲಾಂಡ್) ಗಳಿವೆ. ಜಿಡ್ಡಾದ ಸ್ರಾವವನ್ನು ಇವು ತಮ್ಮ ನಾಳಗಳ ಮೂಲಕ ರೋಮಕೂಪದೊಳಕ್ಕೆ ಹಾಯಿಸುತ್ತವೆ. ಬಹುಶಃ ಕೂದಲು ನಿಮಿರಿದಾಗ, ರೋಮಾಂಚಕ ಸ್ನಾಯುಗಳ ಸಂಕುಚನದಿಂದ ಒತ್ತಲ್ಪಟ್ಟ ಸ್ವೇದಗ್ರಂಥಿಗಳಿಂದ ಹೀಗೆ ಸ್ರಾವ ರೋಮಕೂಪವನ್ನು ಸೇರುವುದಲ್ಲದೆ, ಕೂಪಚಲನದಿಂದ ಅದರ ಹೊರಗೂ ಬರುತ್ತದೆ. ಹಾಗಿಲ್ಲದಿದ್ದರೂ ರೋಮಕೂಪವನ್ನು ಸೇರಿದ ಈ ಸ್ನಿಗ್ಧಪದಾರ್ಥ ಕೂಪದಿಂದ ಹೊರಬರುತ್ತಿರುವ ಕೂದಲನ್ನೆ ಅನುಸರಿಸಿ ಹೊರಬೀಳುವುದು. ಇದು ಸುತ್ತಲು ಚರ್ಮದ ಮೇಲೆ ಹರಡಿಕೊಳ್ಳುವುದಲ್ಲದೆ ಕೂದಲ ಮೇಲೂ ಹರಡಿಕೊಂಡು ಚರ್ಮವನ್ನು ಮತ್ತು ಕೂದಲನ್ನು ಮೃದುವಾಗಿರುವಂತೆ ಮಾಡುತ್ತದೆ. ಸ್ವೇದಗ್ರಂಥಿಯ ಸ್ರಾವ ಈ ಗ್ರಂಥಿಯ ಜೀವಕೋಶ ಪೂರ್ಣವಾಗಿ ಹೊರಬಿದ್ದು ಜಿಡ್ಡುಪದಾರ್ಥವಾಗಿ ಮಾರ್ಪಡುವುದು. ಇದು ಕೊಬ್ಬು ಮತ್ತು ಮೇಣದ ಮಿಶ್ರಣ. ಕೊಬ್ಬಿನ ಆಮ್ಲಗಳು, ಕೊಲೆಸ್ಟಿರಾಲ್ ಮತ್ತು ಅನೇಕ ಹೈಡ್ರೊಕಾರ್ಬನುಗಳಿವೆ. ನೀರಿನಲ್ಲಿ ಮುಳುಗಿದಾಗ ಚರ್ಮಕೂದಲುಗಳು ಒದ್ದೆಯಾದರೂ ನೀರು ಅವುಗಳ ಒಳಸೇರದಂತೆ, ಒಣ ವಾತಾವರಣದಲ್ಲಿ ಚರ್ಮ ಒಣಗಿ ಒರಟಾಗಿ ಬಿರಿಯದಂತೆ ಕೂದಲು ಒರಟಾಗದಂತೆ ಕಾಪಾಡುವುದು ಈ ಸ್ರಾವದ ಕ್ರಿಯೆ. ಇದಕ್ಕೆ ಕೆಲವು ವಿಷಾಣುಗಳನ್ನು, ಬೂಷ್ಟುಗಳನ್ನು ನಾಶಮಾಡುವ ಸಾಮರ್ಥ್ಯ ಇದೆ. ಪ್ರಬುದ್ಧತೆಯ ಕಾಲದಲ್ಲಿ ಇವುಗಳ ಚಟುವಟಿಕೆ ಹೆಚ್ಚು. ಕೆಲವರಲ್ಲಿ ಈ ಗ್ರಂಥಿಗಳು ಯಾವಾಗಲೂ ಹೆಚ್ಚಾಗಿ ಸ್ರವಿಸುವುದರಿಂದ ಮುಖ ಎಣ್ಣೆ ಬಳಿದಂತೆ ಕನುಗಾಗಿರುತ್ತದೆ. ಸ್ವೇದಗ್ರಂಥಿಗಳ ಸ್ರಾವ ಹೊರಕ್ಕೆ ಬರಲು ಅಡಚಣೆಯಾಗಿ ಸೋಂಕಿನಿಂದ ಊತ ಉಂಟಾದರೆ ಮೊಡವೆ ಏಳುತ್ತದೆ. ಕಣ್ಣುರೆಪ್ಪೆಗಳಲ್ಲಿರುವ ಮೈಬೋಮಿನ ಗ್ರಂಥಿಗಳು ಸ್ವೇದಗ್ರಂಥಿಗಳು ಜಾತಿಗೆ ಸೇರಿದುವು. ಸ್ವೇದಗ್ರಂಥಿಗಳು ಸಾಮಾನ್ಯವಾಗಿ ರೋಮಕೂಪಗಳಿಗೆ ಸಂಬಂಧಪಟ್ಟಂತೆ ಇರುವುವಾದರೂ ತುಟಿಗಳ ಕೆಂಪಂಚು ಕೂದಲು ಬೆಳೆಯದ ಸ್ಥಳಗಳಲ್ಲಿ ಇವು ಕಂಡು ಬರುತ್ತವೆ. ಆದರೆ, ಅಂಗೈ–ಅಂಗಾಲುಗಳಲ್ಲಿ ಸ್ವೇದಗ್ರಂಥಿಗಳಿರುವುದಿಲ್ಲ. ತುಪ್ಪುಳವಿರುವ ಪ್ರಾಣಿಗಳಲ್ಲಿ ತುಪ್ಪುಳಗಳಿಗೆ ಸಂಬಂಧಿಸಿದ ಜಿಡ್ಡುಗ್ರಂಥಿಗಳು ನೇರವಾಗಿ ಹೊರಕ್ಕೆ ತಮ್ಮ ಸ್ರಾವವನ್ನು ಸಾಗಿಸಿ ತುಪ್ಪುಳದ ಅಧಿಕ ಜಿಡ್ಡಿಗೆ ಕಾರಣವಾಗಿವೆ.

ಉಗುರುಗಳು : ಕೈಕಾಲು, ಬೆರಳುಗಳ ತುದಿ, ಬೆನ್ನುಭಾಗದಲ್ಲಿರುವ ಚರ್ಮದ ಹೊರತ್ವಚದ ಗಡಸು ಹೊರಪೊರೆ ಮಾರ್ಪಾಡಾಗಿ ಉಗುರಾಗುತ್ತದೆ. ಕೆರಾಟಿನ್ ತುಂಬಿದ ಹೊರಪೊರೆಯ ತಟ್ಟೆಕಣಗಳು ಸುಲಿದುಹೋಗದೆ ಒಂದಕ್ಕೊಂದು ಒತ್ತಾಗಿ ಕೂಡಿಕೊಂಡಿರುವುದರಿಂದ ಉಗುರು ಉಂಟಾಗುತ್ತದೆ. ಉಗುರಿನ ಬುಡದಲ್ಲಿ ಚರ್ಮದ ಮಡಿಕೆಯ ಹೊದಿಕೆ ಇದೆ. ಈ ಭಾಗದಲ್ಲಿ ಉಗುರಿನ ಕೆಳಗಿರುವ ಹೊರತ್ವಚದ ಜೀವಕೋಶಗಳು ಉಗುರಿನ ಮಾತೃಕೆಯಾಗಿವೆ. ಇವುಗಳ ನಿರಂತರ ವಿಭಜನೆಯಿಂದ ಲಭಿಸುವ ಜೀವಕೋಶಗಳು ಶೀಘ್ರವಾಗಿ ಮತ್ತು ಅಧಿಕವಾಗಿ ಕೆರಾಟಿನ್ನನ್ನು ಉತ್ಪತ್ತಿಮಾಡಿ ಸಂಗ್ರಹಗೊಂಡು ನಿರ್ಜೀವ ಉಗುರಾಗುತ್ತವೆ. ಮೊದಲು ಇದೇ ರೀತಿ ಉತ್ಪತ್ತಿಯಾಗಿದ್ದ ಉಗುರನ್ನು ಅದರ ಹಾಸಿಗೆ (ನೆಯ್ಲ್‌ಬೆಡ್) ಭದ್ರವಾಗಿ ಅಂಟಿಸಿರುತ್ತದೆ. ಉಗುರು ಹಾಸಿನಲ್ಲಿರುವ ನಿಜತ್ವಚದ ಚಾಚುಗಳು ಉಗುರಿನ ಬುಡದಿಂದ ತುದಿಯವರೆಗೂ ಕಂಡುಬರುವ ಉದ್ದವಾದ ಸಾಲುಗಳು. ಹೊಸತಾಗಿ ಉತ್ಪತ್ತಿಯಾದ ಉಗುರು ಬೆಳೆದು ಉಗುರಿನ ಕೊನೆ ಮುಟ್ಟುವುದಕ್ಕೆ ಸುಮಾರು 5–6 ತಿಂಗಳುಗಳು ಬೇಕು. ಉಗುರಿನ ಬೆಳವಣಿಗೆಯ ವೇಗದಲ್ಲಿ ವ್ಯತ್ಯಾಸವಿದೆ. ಮಧ್ಯದ ಬೆರಳಿನ ಉಗುರು ಎಲ್ಲಕ್ಕಿಂತ ಹೆಚ್ಚು ವೇಗವಾಗಿ, ಕಿರುಬೆರಳಿನದು ಎಲ್ಲಕ್ಕಿಂತ ನಿಧಾನವಾಗಿ ಬೆಳೆಯುವುದು. ಕಾಲಿನ ಉಗುರು ಬೆಳವಣಿಗೆ ನಿಧಾನ. ಉಗುರುಗಳ ಮೇಲೆ ಕಾಣಿಸಿಕೊಳ್ಳುವ ಬಿಳಿ ಚುಕ್ಕೆಗಳು ಪೆಟ್ಟುಗಳಿಂದ ಉಂಟಾಗುತ್ತವೆ. ಬಹುಶಃ ಉಗುರುಹಾಸಿನಲ್ಲಿರುವ ಹೊರತ್ವಚದ ಕೋಶಗಳು ಗಾಯಗೊಂಡು ಕೆರಾಟಿನ್ನನ್ನು ಒಳಗೊಂಡಿರುವುದರಿಂದ ಹೀಗೆ ಬಿಳಿ ಚುಕ್ಕೆಯಾಗಿ ಕಾಣಿಸುತ್ತದೆ.

3. ಜ್ಞಾನೇಂದ್ರಿಯವಾಗಿ ಚರ್ಮದ ಕ್ರಿಯೆ : ಚರ್ಮದಲ್ಲಿ ನರತಂತುಗಳು ಹೇರಳವಾಗಿವೆ. ಚರ್ಮದ ನೆರವಿನಿಂದ ಲಭಿಸುವ ಜ್ಞಾನಕ್ಕೆ ಪ್ರಾಯಿಕಜ್ಞಾನ (ಜನರಲ್ ಸೆನ್ಸ್) ಎಂದು ಹೆಸರು. ಈ ಜ್ಞಾನ ದೇಹದ ಮೇಲ್ಮೈಯ ಎಲ್ಲ ನೋವಿನ ಅರಿವಿಗೆ ಸಂಬಂಧಪಟ್ಟಿದೆ. ಇದರ ಪರಿಣಾಮ ಪ್ರಾಣಿಯು ಪರಿಸರಕ್ಕೆ ಹೊಂದಿಕೊಳ್ಳಲು, ಅಪಾಯಕ ಸಮಯದಲ್ಲಿ ಅದರ ವಿರುದ್ಧ ರಕ್ಷಣೆಪಡೆಯಲು, ತಿಳಿದಂತೆ ಮತ್ತು ತಿಳಿಯದಂತೆ ಉಂಟಾಗಬೇಕಾದ ಪ್ರತಿಕ್ರಿಯೆಗಳನ್ನು ನಿಯಂತ್ರಿಸಲು ಸಾಧ್ಯವಾಗಿದೆ. ನೋವಿನ ಅರಿವು ನಗ್ನನರಾಗ್ರಗಳಿಂದ ಆಗುತ್ತದೆ. ಸ್ಪರ್ಶ, ಒತ್ತುವಿಕೆ, ತಂಡಿ ಮತ್ತು ಬಿಸಿ ಇವುಗಳ ಅರಿವು ವಿಶಿಷ್ಟ ನರಾಗ್ರಗಳಾದ ಮೆಕ್ಕೆಲನ ತಟ್ಟೆ ಹಾಗೂ ಮೀಸ್ನರನ ಕಣಗಳು, ಪೆಸಿನಿಯ ಕಣಗಳು, ಕ್ರೌಸನ ಅಂತ್ಯ ಬುಡ್ಡೆಗಳು ಮತ್ತು ರೂಫಿನಿಯ ನರಾಂತ್ಯಾಂಗಗಳಿಂದ ಆಗುತ್ತದೆ. ವಿವಿಧ ಸಂದರ್ಭಗಳಲ್ಲಿ ಒಂದೋ ಎರಡೋ ಸಂವೇದನೆಗಳು ಮಾತ್ರ ನಾಶವಾಗಿ ಇತರ ಸಂವೇದನೆಗಳು ಸಹಜವಾಗಿಯೇ ಇರಬಹುದಾದ್ದರಿಂದ, ಹೊರಪ್ರಚೋದನೆಗಳ ಸ್ವಭಾವ ವ್ಯತ್ಯಾಸಗಳಲ್ಲದೆ ನರಾಗ್ರಗಳಲ್ಲಿ ಉದ್ಭವವಾಗುವ ನರಪ್ರಚೋದನ ವ್ಯತ್ಯಾಸಗಳು ವಿವಿಧ ಸಂವೇದನೆಗಳ ವಿಶಿಷ್ಟ ಅರಿವು ಮೂಡುವುದಕ್ಕೆ ಕಾರಣ. ಉಸಿರು ಕಟ್ಟಿದಾಗ (ಆಸ್‌ಫಿಕ್ಸಿಯ) ತಾತ್ಕಾಲಿಕವಾಗಿ ಸ್ಪರ್ಶಜ್ಞಾನ ಮೊದಲು ನಾಶವಾಗುತ್ತದೆ. ಅತಿಯಾದ ಚಳಿಯಿಂದ ಮೊದಲು ತಂಡಿ, ಅನಂತರ ಕ್ರಮವಾಗಿ ಸ್ಪರ್ಶ, ನೋವು, ಬಿಸಿ ತಿಳಿಯದಂತಾಗುತ್ತವೆ. ಹೀಗೇ ಕೊಕೇನ್ ಎಂಬ ಸಂವೇದನನಾಶಕ ಚುಚ್ಚುಮದ್ದನ್ನು ಕೊಟ್ಟರೆ ಮೊದಲು ತಂಡಿಯ ಅರಿವು ನಾಶವಾಗುತ್ತದೆ. ನರದ ಸುತ್ತ ಆಲ್ಕೊಹಾಲನ್ನು ಚುಚ್ಚುಮದ್ದಿನಂತೆ ಕೊಟ್ಟರೆ ಪ್ರಧಾನವಾಗಿ ನಾಶವಾಗುವುದು ಶೀತೋಷ್ಣಗಳ ಸಂವೇದನೆ. ಸ್ಪರ್ಶ ನೋವುಗಳು ಅಷ್ಟಾಗಿ ವ್ಯತ್ಯಾಸವಾಗುವುದಿಲ್ಲ. ವಿಶಿಷ್ಟ ನರಾಗ್ರಗಳ ರಚನೆ ಒಂದೇ ರೀತಿಯದು. ನಡುಮಧ್ಯದಲ್ಲಿ ತಿರುಳಿನಂತೆ ನಗ್ನನರಾಗ್ರ ಇದೆ. ಮೃದುವಾದ ಜೀವಕೋಶಗಳು ಅವುಗಳ ಹೊರಗೆ ಪದರ ಪದರವಾಗಿರುವ ಬಂಧನಾಂಗಾಂಶದ ಕವಚವೂ ಇದನ್ನು ಆವರಿಸಿಕೊಂಡಿವೆ. ಮೆಕ್ಕೆಲನ ತಟ್ಟೆಗಳು ಬೆರಳುಗಳ ತುದಿಯಲ್ಲಿ ತುಟಿ ಬಾಯಿಯಲ್ಲಿವೆ. ನಿಜತ್ವಚದಲ್ಲಿ ಹಾಗೂ ಹೊರತ್ವಚದ ಕೆಳಭಾಗದ ಜೀವಕೋಶಗಳ ನಡುವೆ ಇವೆ. ಮೀಸ್ನರನ ಕಣಗಳು ನಿಜತ್ವಚದ ಬೆರಳಿನಿಂದ ಹೊರಚಾಚುಗಳಲ್ಲಿ ಹುದುಗಿರುವ ಅಂಡಾಕಾರದ ಮೊಗ್ಗುಗಳಂತಿವೆ. ಇವುಗಳ ತಳದಿಂದ ಜ್ಞಾನವಾಹಿ ನರತಂತು ಹೊರಟು ಇತರ ತಂತುಗಳೊಡಗೂಡಿ ಕೊನೆಗೆ ಮಿದುಳ ಬಳ್ಳಿ ಹಾಗೂ ಮಿದುಳನ್ನು ಸೇರುತ್ತದೆ. ಪೆಸಿನಿಯ ಕಣಗಳ ಆಕಾರ ಮತ್ತು ವಿನ್ಯಾಸಗಳಲ್ಲಿ ನೀರುಳ್ಳಿಯ ಲಂಬಕೊಯ್ತವನ್ನು ಹೋಲುವುವು. ಇವು ಇನ್ನಿತರ ನರಾಗ್ರಗಳಿಗಿಂತ ದೊಡ್ಡವಾಗಿ ದಪ್ಪ ಸಾಸಿವೆ ಕಾಳಿನ ಗಾತ್ರಕ್ಕೆ ನಿಜತ್ವಚದಲ್ಲಿವೆ. ಕೈಕಾಲುಗಳ ಚರ್ಮದ ಅಡಿ ಊತಕದಲ್ಲಿ ಸ್ನಾಯುಹುರಿ, ಕೀಲುಕವಚ ಮುಂತಾದ ಕಡೆ ಪೆಸಿನಿಯ ಕಣಗಳು ಬಹುಸಂಖ್ಯೆಯಲ್ಲಿವೆ. ಒತ್ತುವಿಕೆಯಿಂದಾಗುವ ರೂಪ ಪಲ್ಲಟದಿಂದ ಇವು ಉದ್ರೇಕಗೊಂಡು ಒತ್ತುವಿಕೆಯ ಅರಿವನ್ನು ಉಂಟುಮಾಡುತ್ತವೆ. ಕ್ರೌಸನ ಅಂತ್ಯಗೊಳಗಳು ತುಟಿ, ನಾಲಗೆ, ಹಾಗೂ ಬಾಹ್ಯ ಪ್ರಜನನಾಂಗಗಳ ಚರ್ಮದಲ್ಲಿ ಹೆಚ್ಚಾಗಿವೆ. ಇವು ಗೋಳಾಕಾರವಾಗಿದ್ದು, ಸ್ಪರ್ಶಕಣಗಳಂತಿವೆ. ಚರ್ಮ ತಣ್ಣಗಾದಾಗ ಇವು ಪ್ರಚೋದನೆಗೊಂಡು ತಂಡಿಯನ್ನು ಅರಿವಿಗೆ ತರುವುವು. ರೂಫಿನಿಯ ಅಂತ್ಯಾಂಗಗಳು ಚರ್ಮ ಬಿಸಿಯಾದಾಗ ಪ್ರಚೋದನೆಗೊಳ್ಳುತ್ತವೆ.

ಬರಿ ಕಣ್ಣಿಗೆ ಕಾಣಿಸದಷ್ಟು ಸಣ್ಣದಾದ ವಿಶಿಷ್ಟ ನರಾಗ್ರಗಳು ಇರುವ ಬಿಂದು ಕ್ಷೇತ್ರದಲ್ಲಿ (ಸ್ಪಾಟ್) ಆಯಾ ಪ್ರಾಯಿಕಜ್ಞಾನದ ಅರಿವು ಉಂಟಾಗುತ್ತದೆಂದು ಪ್ರಯೋಗಗಳಿಂದ ಸು. 70–80 ವರ್ಷಗಳ ಹಿಂದೆ ವಿಜ್ಞಾನಿಗಳು ಶೋಧಿಸಿದರು. ಇತ್ತೀಚಿನ ಸಂಶೋಧನೆಗಳಿಂದ ಇದು ಸರಿ ಎಂದು ಸ್ವೀಕೃತವಾಗಿದೆ. 6 ಚಸೆಂಮೀ. ಚರ್ಮಕ್ಷೇತ್ರದಲ್ಲಿ, ಚರ್ಮ ಉಷ್ಣತೆ $25^0$ ಸೆ. ಇದ್ದಾಗ 17 ತಂಡಿ ಬಿಂದುಗಳು (ಕೋಲ್ಡ್ ಸ್ಪಾಟ್ಸ್) ಇದ್ದುದನ್ನು ಅದೇ ಕ್ಷೇತ್ರದಲ್ಲಿ ಉಷ್ಣತೆ $33^0$ ಸೆ. ಆದಾಗ, 93 ತಂಡಿ ಬಿಂದುಗಳು ಇದ್ದುದನ್ನು ಬಿಂಗ್ ಮತ್ತು ಸ್ಕೌಬಿ (1949) ತೋರಿಸಿದರು. ಚರ್ಮದಲ್ಲಿ ಅಲ್ಲಲ್ಲಿ ಬಿಂದುಗಳಿಗೆ ಎಷ್ಟೇ ಅಧಿಕವಾದ ತಂಡಿ ತಟ್ಟಿದರೂ, ಅದರ ಅರಿವೇ ಉಂಟಾಗುವುದಿಲ್ಲವೆಂಬುದು ವ್ಯಕ್ತಪಟ್ಟಿದೆ. ಇದೇ ಬಿಂದುವಿನಲ್ಲಿ ಬೇರೆ ಪ್ರಾಯಿಕಜ್ಞಾನ ಇರಬಹುದಾದ್ದರಿಂದ ಅಲ್ಲಿ ನರಾಗ್ರವಿರುವುದು ಖಚಿತವಾದರೂ, ತಂಡಿಯ ಅರಿವಿಗೆ ಕಾರಣವಾದ ವಿಶಿಷ್ಟ ನರಾಗ್ರ ಇಲ್ಲವೆಂಬುದು ಖಚಿತವಾಗುತ್ತದೆ. ಹೊರಕಿವಿ, ಉದರದ ಕೂದಲಿರುವ ಚರ್ಮದ ಭಾಗ, ಕೈಬೆರಳುಗಳ ಬೆನ್ನುಭಾಗ ಇವುಗಳಲ್ಲಿ ಸ್ಪರ್ಶ ಮತ್ತು ನೋವಿನ ಅರಿವುಗಳನ್ನು ಉಂಟುಮಾಡುವ ನರಾಗ್ರಗಳು ಇದ್ದರೂ, ಈ ಸ್ಥಳಗಳಲ್ಲಿಯೂ ತಂಡಿ ಬಿಸಿಗಳ ಅರಿವು ಸಾಧ್ಯ. ಆದ್ದರಿಂದ ಇಂಥ ನರಾಗ್ರ ಇಂಥ ಅರಿವಿಗೇ ಕಾರಣ ಎಂದು ಖಚಿತವಾಗಿ ಹೇಳುವುದು ಕಷ್ಟ. ಅಲ್ಲದೆ ಇನ್ನೂ ಕೆಲವು ವಿಷಯಗಳನ್ನು ಗಮನಿಸಬೇಕು. ಚರ್ಮದ ನರತಂತುಗಳು ಪೂರೈಕೆ ಆಗುವ ಕ್ಷೇತ್ರಗಳು ಅನಿರ್ದಿಷ್ಟ. ಒಂದು ನರತಂತುವಿನ ಕವಲುಗಳು ಅನೇಕ ಬಿಂದು ಕ್ಷೇತ್ರಗಳಿಂದ ಪ್ರಾರಂಭವಾಗಿ ಬೇರೆ ಬೇರೆ ನರತಂತುಗಳನ್ನು ಸೇರುವುದು. ಅಕ್ಕಪಕ್ಕ ಕ್ಷೇತ್ರಗಳ ಈ ರೀತಿಯ ಪರಸ್ಪರ ಅಧಿವ್ಯಾಪನೆಯಿಂದ (ಓವರ್‌ಲ್ಯಾಪಿಂಗ್) ಒಂದೆರಡು ನರಗಳು ನಾಶವಾದರೆ ಯಾವ ನಿರ್ದಿಷ್ಟ ಕ್ಷೇತ್ರದ ಸಂವೇದನೆಯು ನಾಶವಾಗುವುದಿಲ್ಲ. ಚರ್ಮದಲ್ಲಿ ಸಂವೇದನಗಳ ಅರಿವಿನ ಸೂಕ್ಷ್ಮತೆ ವಿವಿಧ ಕ್ಷೇತ್ರಗಳಲ್ಲಿ ಬೇರೆಯಾಗಿದೆ. ಈ ವ್ಯತ್ಯಾಸಗಳಿಗೆ ಆಯಾ ಕ್ಷೇತ್ರಕ್ಕೆ ಪೂರೈಕೆಯಾಗುವ ನರಗಳ ಸಂಖ್ಯೆಯ ವ್ಯತ್ಯಾಸ ಕಾರಣವಲ್ಲ. ನರಗಳ ಸಂಖ್ಯೆ ಕಡಿಮೆ ಆದರೆ, ಅವುಗಳಲ್ಲಿ ಬಹಳ ಕವಲುಗಳು ಇರುವುದರಿಂದ

ಸಾಮಾನ್ಯವಾಗಿ ಎಲ್ಲ ಕ್ಷೇತ್ರಗಳಲ್ಲೂ ಹೆಚ್ಚುಕಡಿಮೆ ಸಮಾನ ಸಂಖ್ಯೆಯ ನರಾಗ್ರಗಳಿರುತ್ತವೆ. ಬಹುಶಃ ಸೂಕ್ಷ್ಮತೆ ಹೆಚ್ಚಾಗಿರುವ ಸ್ಥಳದಲ್ಲಿನ ನರಾಗ್ರಗಳಿಗೆ ವೈಯಕ್ತಿಕವಾಗಿ ಸೂಕ್ಷ್ಮ ಪ್ರಚೋದನ ಸಾಮರ್ಥ್ಯ ಇರುವುದು. ಮುಖದಲ್ಲಿ ಹೆಚ್ಚು ಗಾಯವಾದಾಗ ಅತಿ ನೋವು ಉಂಟಾಗುವುದಲ್ಲದೆ ಜ್ಞಾನವೂ ತಪ್ಪಬಹುದು. ಆದರೆ ಮುಖದಂತೆ, ಬಹುನರಗಳು ಪೂರೈಕೆ ಆಗುವ ಬೇರೆ ಭಾಗದಲ್ಲಿ ಅಷ್ಟೇ ಗಾಯವಾದಾಗ ನೋವು ಇಷ್ಟು ತೀಕ್ಷ್ಣವಾಗಿರುವುದಿಲ್ಲ. ಯಾವ ನರಾಗ್ರವಾದರೂ ಅತಿಯಾಗಿ ಪ್ರಚೋದಿಸಲ್ಪಟ್ಟಾಗ ನೋವುಂಟಾಗುವುದು. ಆದರೆ, ಸ್ಪರ್ಶ, ಶೀತೋಷ್ಣ, ಒತ್ತಡ ಇವುಗಳ ಅರಿವನ್ನು ಉಂಟುಮಾಡುವ ನರಾಗ್ರಗಳ ಮಿತಿಮೀರಿದ ಪ್ರಚೋದನೆಯಿಂದಲೇ ಅನುಭವಕ್ಕೆ ಬರುವ ಸಂವೇದನೆ ನೋವು ಎನ್ನಲಾಗದು. ಸ್ಪರ್ಶಕ್ಕೆ ಸಂಬಂಧಪಟ್ಟ ರೋಮಗಳನ್ನು ಎಷ್ಟೇ ವೇಗ ಪ್ರಮಾಣದಲ್ಲಿ ಅಲುಗಾಡಿಸಿದರೂ ಸ್ಪರ್ಶಾನುಭವವಾಗುವುದೇ ಹೊರತು ನೋವಾಗುವುದಿಲ್ಲ. ನೋವಿನ ಅರಿವಿಗೆಂದೇ ನರಾಗ್ರಗಳಿರುವುದು ನಿಸ್ಸಂದೇಹ. ವೇದನಾ ಶಾಮಕ ಔಷಧಿಗಳು(ಅನಾಲ್ಜೆಸಿಕ್ಸ್) ನೋವನ್ನು ಮಾತ್ರ ಅರಿವಿಗೆ ಬರದಂತೆ ತಡೆಯುತ್ತವೆ. ಆದರೆ, ಸ್ಪರ್ಶಶೀತೋಷ್ಣಗಳ ಅರಿವು ಇಂಥ ಔಷಧಿಗಳಿಂದ ವ್ಯತ್ಯಾಸವಾಗುವುದಿಲ್ಲ. ಯಾವ ವಿಶಿಷ್ಟ ರಚನೆಯು ಇಲ್ಲದ ನಗ್ನನರಾಗ್ರಗಳು ನೋವಿನ ಅರಿವಿಗೆ ಕಾರಣ. ಆದರೆ, ಕಾರ್ನಿಯ, ಕಣ್ಣಿನ ಗುಡ್ಡೆಯ ಪಾರಕ ಭಾಗದಲ್ಲಿ ಕೇವಲ ಇಂಥ ನರಾಗ್ರಗಳೇ ಇದ್ದರೂ, ಸ್ಪರ್ಶ, ಶೀತೋಷ್ಣಗಳ, ಅರಿವೂ ಈ ಭಾಗದಲ್ಲಿ ಅನುಭವಕ್ಕೆ ಬರುತ್ತದೆ. ಈ ಎಲ್ಲ ವಿವರಣೆಗಳಿಂದಲೂ ಗ್ರಹಿಸ ಬೇಕಾದ್ದೇನೆಂದರೆ ಚರ್ಮದಿಂದ ಸ್ಪರ್ಶ ಶೀತೋಷ್ಣಗಳು ನೋವು ಎಂಬ ನಾಲ್ಕು ಬಗೆಯ ಸಂವೇದನೆಗಳ ಅರಿವುಂಟಾಗುತ್ತದೆ. ಅರಿವು ಉಂಟಾಗುವ ಬಿಂದುಕ್ಷೇತ್ರಗಳನ್ನು ಗುರುತಿಸಬಹುದು. ಪ್ರಚೋದನೆಗೊಳ್ಳುವ ವಿವಿಧ ರೀತಿಯ ನರಾಗ್ರಗಳು ಪ್ರತಿಸಲವೂ ಬೇರೆ ಬೇರೆ ಸಂಖ್ಯೆಯಲ್ಲಿ ಇರುವುದರಿಂದ ಆ ಕಾಲಕ್ಕೆ ತಕ್ಕಂಥ ಮಿಶ್ರ ಪ್ರಚೋದನೆ ಉಂಟಾಗುತ್ತದೆ. ಈ ಮಿಶ್ರ ಪ್ರಚೋದನೆ ಮಿದುಳಿನಲ್ಲಿ ಅರ್ಥವಿಸಲ್ಪಟ್ಟಾಗ ವಿಶಿಷ್ಟ ಸಂವೇದನೆಯ ಅರಿವಾಗುತ್ತದೆ.

ಸ್ಪರ್ಶ: ಸ್ಪರ್ಶದಿಂದ ವಸ್ತುಗಳ ಅಳತೆ ಆಕಾರಗಳು, ನಯ, ಒರಟು, ದೃಢತೆ ತಿಳಿಯುತ್ತವೆ. ನಿರೀಕ್ಷಿಸಬಹುದಾದಂತೆಯೇ ಮೀಸ್ನರನ ಕಣಗಳು ಮತ್ತು ಮೆಕ್ಕೆಲನ ತಟ್ಟೆಗಳು ಹೆಚ್ಚಾಗಿರುವ ಕೈಬೆರಳ ತುದಿ, ತುಟಿ, ಸ್ತನಾಗ್ರಗಳು ಮತ್ತು ದೇಹದ ನೈಸರ್ಗಿಕ ದ್ವಾರಗಳು ಇಂಥ ಕಡೆಗಳಲ್ಲಿ ಸ್ಪರ್ಶ ಸೂಕ್ಷ್ಮತೆ ಹೆಚ್ಚಾಗಿರುತ್ತದೆ. ಅಂಗೈ, ಗಲ್ಲ, ಹಣೆ, ಕೈತೋಳಿನ ಒಳಭಾಗ ಇವುಗಳಲ್ಲಿ ಸ್ಪರ್ಶ ಸೂಕ್ಷ್ಮತೆ ಕಡಿಮೆ. ತೊಡೆಯ ಮಧ್ಯದ ಮುಂಭಾಗದಲ್ಲಿ ಸ್ಪರ್ಶಾನುಭವ ಬಹುಮಂದ. ಕೂದಲಿನ ಬುಡದಲ್ಲಿ ನರಾಗ್ರಗಳು ಬುಟ್ಟಿಯಂತೆ ಹೆಣೆದುಕೊಂಡು ಕೂದಲು ಅತ್ಯಲ್ಪವಾಗಿ ಅಲುಗಿದರೂ ಗ್ರಹಿಸಬಲ್ಲವಾಗಿರುವುದರಿಂದ ಕೂದಲು ಸನ್ನೆಗೋಲಾಗಿ (ಲೀವರ್) ವರ್ತಿಸಬಹುದಾದ್ದರಿಂದ, ಕೂದಲು ಹೆಚ್ಚಾಗಿರುವ ಸ್ಥಳಗಳಲ್ಲಿ ಸ್ಪರ್ಶಸೂಕ್ಷ್ಮತೆ ಹೆಚ್ಚಿರುತ್ತದೆ. ಕೆಳತೋಳಿನ (ಫೋರ್ ಆರಮ್) ಹೊರಭಾಗದಲ್ಲಿ ಈ ಕಾರಣದಿಂದಲೇ ಸ್ಪರ್ಶಜ್ಞಾನ ಸೂಕ್ಷ್ಮವಾಗಿದೆ. ಇಂಥ ಸ್ಥಳಗಳನ್ನು ಹತ್ತಿಯ ಎಳೆಯಲ್ಲಿ ಬಹು ಹಗುರವಾಗಿ ಸ್ಪರ್ಶಿಸಿದರೂ ವ್ಯಕ್ತಿ ಕಣ್ಣುಮುಚ್ಚಿಕೊಂಡಿದ್ದರೂ ಸ್ಪರ್ಶಿಸಿದ ಸ್ಥಳ ಇಂಥದೇ ಎಂದು ನಿರ್ದಿಷ್ಟವಾಗಿ ಹೇಳಬಹುದು. ಆದರೆ, ಸ್ಪರ್ಶಕಣಗಳು ಶೀಘ್ರವಾಗಿ ಪ್ರಚೋದನೆಗೆ ಒಗ್ಗಿಕೊಂಡು ಸೂಕ್ಷ್ಮತೆಯನ್ನು ಕಳೆದುಕೊಳ್ಳುವುವು. ಇದರಿಂದ ನಾವು ಬಟ್ಟೆ ಧರಿಸಿದ ಮೇಲೆ ಅವುಗಳ ಕಾಯಂ ಸ್ಪರ್ಶ ನಮ್ಮ ಅರಿವಿಗೆ ಬರುವುದಿಲ್ಲ. ಆದರೆ ಹೀಗೆ ಒಗ್ಗಿಕೊಂಡು ಸೂಕ್ಷ್ಮತೆಯನ್ನು ಕಳೆದುಕೊಳ್ಳುವುದನ್ನು ಪೆಸಿನಿಯ ಕಣದಲ್ಲೂ ನೋಡಬಹುದು. ಸ್ಪರ್ಶಿಸಿದ ಎರಡು ಬಿಂದುಗಳನ್ನು ಪ್ರತ್ಯೇಕವಾಗಿ ಗುರುತಿಸಬಲ್ಲ ತಾರತಮ್ಯ ಜ್ಞಾನ (ಡಿಸ್ಕ್ರಿಮಿನೇಷನ್) ನಾಲಿಗೆ ತುದಿಯಲ್ಲಿ ಬಹು ಹೆಚ್ಚಾಗಿದೆ. ಸ್ಪರ್ಶಿಸಿದ 3 ಬಿಂದುಗಳು ಇಲ್ಲಿ 1 ಮಿಮೀ ಅಂತರದಲ್ಲಿದ್ದರೂ ತಿಳಿಯುವುದು. ಬೆರಳು ತುದಿಗಳಲ್ಲಿ ಈ ಅಂತರ 2ಮಿಮೀ ಗಳಷ್ಟಿರುತ್ತದೆ. ಮೇಲ್ತೋಳು (ಆರಮ್) ತೊಡೆಗಳಲ್ಲಿ ಸ್ಪರ್ಶಿಸಿದ ಎರಡು ಬಿಂದುಗಳು 6–7ಸೆಂಮೀ ಅಂತರದೊಳಗೆ ಇದ್ದರೆ ಅವು ಬೇರೆ ಬೇರೆ ಎಂದು ಗುರುತಿಸಲಾಗದು. ಸ್ವಾಭಾವಿಕವಾಗಿ ನರಗಳು ರೋಗಪೀಡಿತವಾದಾಗ ಸ್ಪರ್ಶ ತಾರತಮ್ಯ ನಾಶವಾಗುತ್ತದೆ. ಸ್ಪರ್ಶತಾರತಮ್ಯ ವಾನ್ ಫ್ರೇ ರೋಮ ಸಂವೇದನಾ ಮಾಪಕ (ಹೇರ್ ಈಸ್ತೀಸಿಯೋಮೀಟರ್) ಎಂಬ ಸಲಕರಣೆಯಿಂದ ತಿಳಿಯಬಹುದು.

ಶೀತೋಷ್ಣಗಳ ಅರಿವು : ದೇಹೋಷ್ಣಕ್ಕಿಂತ ಕಡಿಮೆ ಅಥವಾ ಹೆಚ್ಚು ಉಷ್ಣತೆ ಇರುವ ವಸ್ತುಗಳು ತಂಡಿ ಅಥವ ಬಿಸಿಬಿಂದುಗಳಿರುವ ಚರ್ಮಭಾಗವನ್ನು ಸ್ಪರ್ಶಿಸಿದರೆ ಸ್ಪರ್ಶಜ್ಞಾನವಾಗುವುದರ ಜೊತೆಗೆ ಸ್ಪರ್ಶಿಸಿದ ವಸ್ತುವಿನ ಶೈತ್ಯ ಅಥವಾ ಉಷ್ಣಗುಣ ಗೊತ್ತಾಗುತ್ತದೆ. ಸ್ತನಾಗ್ರಗಳು, ಎದೆ, ನಾಸಿಕ, ತೋಳಿನ ಮುಂಭಾಗ ಮತ್ತು ಉದರ ಈ ಸ್ಥಳಗಳಲ್ಲಿ ಶೀತೋಷ್ಣಗಳ ಅರಿವು ತುಂಬಾ ಸೂಕ್ಷ್ಮ. ಬಿಸಿಲು ಗಾಳಿಗೆ ಹೆಚ್ಚಾಗಿ ಒಡ್ಡಲ್ಪಡುವ ಮುಖ ಕೈಕಾಲುಗಳಲ್ಲಿ ಈ ಅರಿವು ಮಂದ. ಒಂದು ವಸ್ತು ಇನ್ನೊಂದು ವಸ್ತುವಿಗಿಂತ ತಣ್ಣಗಿರುವುದು ಅಥವಾ ಬಿಸಿಯಾಗಿರುವುದು $27^0$ ನಿಂದ $32^0$ ಉಷ್ಣತಾ ಮಿತಿಯಲ್ಲಿ ಬಹು ಸೂಕ್ಷ್ಮವಾಗಿ ಅರಿವಿಗೆ ಬರುತ್ತದೆ. ಈ ಮಿತಿಯಲ್ಲಿ $0.2^0$ ವ್ಯತ್ಯಾಸ ಗೊತ್ತಾಗುವುದು. ವಸ್ತುಗಳ ಉಷ್ಣತಾ ಮಟ್ಟ ಕಡಿಮೆ ಆಗಿದ್ದರೆ ಅಥವಾ ಹೆಚ್ಚಾಗಿದ್ದರೆ ಎರಡು ಪದಾರ್ಥಗಳ ಉಷ್ಣತಾ ಸ್ಥಿತಿಯಲ್ಲಿನ ವ್ಯತ್ಯಾಸ ಇಷ್ಟು ಸೂಕ್ಷ್ಮವಾಗಿ ಗೊತ್ತಾಗುವುದಿಲ್ಲ.

ನೋವು : ಈ ಅನುಭವ ಸ್ಪರ್ಶಶೀತೋಷ್ಣಗಳಿಗಿಂತ ಅನೇಕ ವಿಧಗಳಲ್ಲಿ ಭಿನ್ನವಾಗಿದೆ. ಸ್ಪರ್ಶಶೀತೋಷ್ಣಗಳು ಚರ್ಮದಿಂದ ಮಾತ್ರ ಅನುಭವಕ್ಕೆ ಬರುವ ಸಂವೇದನೆಗಳು. ಆದರೆ, ನೋವು ಚರ್ಮದಲ್ಲಿ ಮತ್ತು ದೇಹದ ಒಳ ಅಂಗಗಳಲ್ಲೂ ಉಂಟಾಗುತ್ತದೆ. ಸ್ಪರ್ಶಶೀತೋಷ್ಣಗಳು ಸಂದರ್ಭಾನುಸಾರ ಹಿತಕರವಾಗಿರಬಹುದು ಅಥವಾ ಅಹಿತಕರವಾಗಿರಬಹುದು. ಆದರೆ, ನೋವು ಯಾವಾಗಲು ಅಹಿತಕರವೇ. ಸ್ಪರ್ಶಶೀತೋಷ್ಣಗಳಿಗೆ ವ್ಯಕ್ತಿ ಒಗ್ಗಿಕೊಂಡು, ಸ್ವಲ್ಪ ಕಾಲ ಆದ ಅನಂತರ ಇವು ಗಮನದಿಂದ ಅಳಿಸಿಹೋಗಬಹುದು. ಆದರೆ ಇದು ನೋವು ಒಗ್ಗಿಕೊಳ್ಳುವ ಸಂವೇದನೆ ಅಲ್ಲ. ಮುಳ್ಳು ಚುಚ್ಚಿ ನೋಯುತ್ತಿದ್ದರೆ ಮುಳ್ಳು ಇರುವಷ್ಟು ಕಾಲ ನೋಯುತ್ತಿರುತ್ತದೆ. ಅನುಭವವಿಲ್ಲದಿರುವವರಿಗೆ ನೋವಿನ ಸ್ವಭಾವವನ್ನು ತಿಳಿಯಪಡಿಸುವುದು ಸಾಧ್ಯವಿಲ್ಲ. ವೈಯಕ್ತಿಕವಾಗಿ ನೋವಿನ ತೀವ್ರತೆ ಬೇರೆ ಬೇರೆ ಇರುವುದರಿಂದ ನೋವಿನ ಮಾಪನ ಸಾಧ್ಯವಿಲ್ಲ. ಆದರೂ ತತ್‌ಕ್ಷಣದಲ್ಲೆ ಮುದುರಿಕೊಳ್ಳುವ, ಬೆವರುವ, ರಕ್ತದ ಒತ್ತಡ ವ್ಯತ್ಯಾಸ, ಹೃದಯದ ಮಿಡಿತ, ವೇಗ ವ್ಯತ್ಯಾಸ ಪ್ರಮಾಣಗಳಿಂದ ನೋವಿನ ತೀವ್ರತೆಯನ್ನು ತಕ್ಕಮಟ್ಟಿಗೆ ಅಳೆಯಬಹುದು. ದೇಹಕ್ಕೆ ಘಾಸಿಯಾದಾಗ ಅಗತ್ಯವಾಗಿ ಕಂಡುಬರುವ ನೈಸರ್ಗಿಕ ರಕ್ಷಣ ಕ್ರಮದೊಂದಿಗೆ ಯಾವಾಗಲು ಜೊತೆಗೂಡಿರುವ ಮನಃಸ್ಥಿತಿಯೇ ನೋವು ಎಂದು ಶೆರಿಂಗ್‌ಟನ್ ವಿಜ್ಞಾನಿ ಅದರ ಲಕ್ಷಣ ನಿರೂಪಣೆಯನ್ನು ಮಾಡಿದ್ದಾನೆ. ರಕ್ಷಣ ಕ್ರಮ ನೋವಿನಿಂದ ಖಾತರಿಯಾಗಿ ಏರ್ಪಟ್ಟು ಘಾಸಿಯಾಗಬಹುದಾದ ಸನ್ನಿವೇಶಗಳಲ್ಲಾಗುವ ಅಪಾಯ ಸಾಧ್ಯವಾದಷ್ಟು ಮಿತಿಗೊಳಿಸಲ್ಪಡುತ್ತದೆ. ಸೂಜಿ ಚುಚ್ಚಿದಾಗ, ಬಿಸಿ ತಗುಲಿದಾಗ ನೋವು ಉಂಟಾಗಿ ತತ್‌ಕ್ಷಣವೇ ಆ ಭಾಗ ಅನೈಚ್ಛಿಕವಾಗಿ ಮುದುರಿಕೊಳ್ಳುವುದರಿಂದ (ವಿತ್‌ಡ್ರಾಯಲ್ ರಿಫ್ಲೆಕ್ಸ್) ಈ ಸಂದರ್ಭಗಳಲ್ಲಿ ಆಗಬಹುದಾದ ಗಾಯ ಮಿತಿಗೊಳಿಸುತ್ತದೆ. ಹೃದಯದ ರಕ್ತಪೂರೈಕೆ ತೃಪ್ತಿಕರವಾಗಿಲ್ಲದಿದ್ದಾಗ ಶ್ರಮ ಕೆಲಸಗಳಿಂದ ತೀವ್ರ ಎದೆನೋವು ಉಂಟಾಗುವುದು. ಈ ನೋವಿನಿಂದ ಇಂಥ ಕೆಲಸವನ್ನು ಮುಂದುವರಿಸಬಾರದು ಎನ್ನುವ ಅರಿವು ಉಂಟಾಗುತ್ತದೆ. ಊತಗೊಂಡಾಗ ಉಂಟಾಗುವ ನೋವು ನಿಶ್ಚಲವಾಗಿರುವುದು, ದೇಹಸೌಖ್ಯಕ್ಕೆ ಅನುಕೂಲವೆಂದು ಮನಗಾಣಿಸುತ್ತದೆ. ಆದರೂ ನೋವು ಇಂಥ ರಕ್ಷಣೆಯ ನಿಶ್ಚಯತೆಗೆ ಏರ್ಪಟ್ಟ ಸಂವೇದನೆ ಎಂದು ಹೇಳುವಂತಿಲ್ಲ. ಕೆಲವು ಏಡಿಗಂತಿಗಳಲ್ಲಿ ಚಿಕಿತ್ಸಾತೀತ ಮಟ್ಟ ಮುಟ್ಟುವವರೆಗು ನೋವೇ ಕಾಣದೆ ಅಗಾಧ ಹಾನಿಯಾಗಬಹುದು. ಅನಂತರ ಕಾಣುವ ತೀವ್ರ ಹಾಗೂ ನಿರಂತರ ನೋವು ರೋಗಿಗೆ ಯಾವ ಅನುಕೂಲತೆಗೋಸ್ಕರ ಏರ್ಪಟ್ಟಿದೆ ಎಂದು ಅರ್ಥವಾಗುವುದಿಲ್ಲ. ನೋವಿನಿಂದ ಉಂಟಾಗುವ ಮಾನಸಿಕ ವೇದನೆ, ಹಾಗೂ ರಕ್ತ ಪರಿಚಲನೆ ಮತ್ತು ಶ್ವಾಸಕ್ರಮಗಳ ಏರುಪೇರುಗಳು ಆರೋಗ್ಯಸ್ಥಿತಿಗೆ ಪ್ರತಿಕೂಲವಾಗಿವೆ.

ಹೃದಯದ ಸ್ನಾಯುಗಳಲ್ಲಿ ಆಕ್ಸಿಜನ್ನಿನ ಕೊರತೆಯಿಂದ ಉಂಟಾಗುವ ನೋವು, ಟೊಳ್ಳು ಅಂಗಗಳಿಂದ ಉಂಟಾಗುವ ಶೂಲೆ ಮತ್ತು ಚರ್ಮದ ಅಡಿ ಊತಕಗಳಿಂದ ಉಂಟಾಗುವ ನಿರಂತರ ಯಾತನೆಗಳು ಚರ್ಮದ ಅರಿವಿಗೆ ಬರುವ ನೋವಿಗಿಂತ ತೀರ ಭಿನ್ನವಾದುವು. ಚರ್ಮದಿಂದ ಅನುಭವವಾಗುವ ನೋವನ್ನು ಚುಚ್ಚಿದಂತೆ, ಕತ್ತರಿಸಿದಂತೆ, ಜಜ್ಜಿದಂತೆ ಎಂದು ವರ್ಣಿಸಲಾಗಿದೆ. ತುಡಿತ, ಉರಿ, ಹೆಚ್ಚುಕಡಿಮೆ ಆಗುತ್ತಿರುವ ನೋವು, ಏರಿಳಿತವಿಲ್ಲದ ನಿರಂತರ ಯಾತನೆ, ಮೂಗುನೋವು, ಕಿವಿನೋವು ಇವನ್ನು ಗುರುತಿಸಬಹುದು. ನೋವನ್ನು ತಿಳಿಸುವ ನರಾಗ್ರಗಳು ಉಷ್ಣವನ್ನು ತಿಳಿಸುವ ನರಾಗ್ರಗಳು ಎರಡೂ ಏಕಕಾಲಿಕವಾಗಿ ಪ್ರಚೋದನೆಗೊಳ್ಳುವುದರಿಂದ ಉರಿನೋವು (ಬರ್ನಿಂಗ್ ಪೆಯ್ನ್) ಉಂಟಾಗುತ್ತದೆ. ಗಾಯದಿಂದ ಊತ ಉಂಟಾಗಿ ಸ್ಥಳೀಯವಾಗಿ ಧಮನಿಗಳು ಹಿಗ್ಗಿ ರಕ್ತಪರಿಚಲನೆಯು ಸ್ಥಳೀಯವಾಗಿ ಹೆಚ್ಚುವುದು. ಪ್ರತಿಯೊಂದು ನಾಡಿಮಿಡಿತದೊಡನೆ ರಕ್ತಾಧಿಕ್ಯವಾಗಿ ಗಾಯಗೊಂಡ ಭಾಗ ಹಿಗ್ಗುವುದರಿಂದ ಅಲ್ಲಿರುವ ಸ್ಪರ್ಶಕಣಗಳು ಉದ್ರೇಕಗೊಂಡು ಅಂಥ ಪ್ರತಿಯೊಂದು ಸಮಯದಲ್ಲೂ ನೋವು ಹೆಚ್ಚಾಗುವಂತೆ ತೋರುತ್ತದೆ. ಇದೇ ತುಡಿತ. ಬಹುಶಃ ನೋವಿನ ನರಾಗ್ರಗಳ ಸೂಕ್ಷ್ಮತೆಯು ಇಂಥ ಸಂದರ್ಭಗಳಲ್ಲಿ ಅಧಿಕಗೊಂಡಿರುತ್ತದೆ.

ಸೂಜಿಯಿಂದ ಚರ್ಮವನ್ನು ಚುಚ್ಚಿದರೆ ಅದರ ತುದಿ ಚರ್ಮದೊಳಕ್ಕೆ ಹೋಗುವವರೆಗು ನೋವಾಗುವುದಿಲ್ಲ. ಅನಂತರ ತತ್‌ಕ್ಷಣದ ಚುಚ್ಚುನೋವಿನ ಅನುಭವವಾಗುತ್ತದೆ. ಇದು ಅಷ್ಟಾಗಿ ನೋವು ಎಂದು ಹೇಳುವಂತಿರುವುದಿಲ್ಲ. ಆದರೆ ಚುಚ್ಚಿದ ಅರಿವು ಉಂಟಾಗುತ್ತದೆ. ಕೆಲವು ಕ್ಷಣಗಳಾದ ಬಳಿಕ ನಿಧಾನವಾಗಿ ಪ್ರತ್ಯಕ್ಷ ನೋವಿನ ಅರಿವು ಉಂಟಾಗುವುದು. ಕಾಲಮೇಲೆ ಚುಚ್ಚಿದರೆ ತತ್‌ಕ್ಷಣದ ವೇಗಯಾತನೆಗೂ (ಫಾಸ್ಟ್ ಪೆಯ್ನ್) ಅನಂತರದ ನಿಧಾನ ಯಾತನೆಗೂ (ಸ್ಲೋ ಪೆಯ್ನ್) ಇರುವಷ್ಟು ಕಾಲಾಂತರ ಕೈಮೇಲೆ ಅಥವಾ

ಮುಖದ ಮೇಲೆ ಚುಚ್ಚಿದರೆ ಇರುವುದಿಲ್ಲ. ಕೊಕೇನ್ ಚುಚ್ಚುಮದ್ದು ಕೊಟ್ಟನಂತರ ಸೂಜಿಯಿಂದ ಚುಚ್ಚಿದರೆ ವೇಗಯಾತನೆ ಕಾಣುವುದಿಲ್ಲ. ಆದರೆ, ನಿಧಾನಯಾತನೆ ತೀವ್ರವಾಗಿ ಬಹುಕಾಲಿಕವಾಗಿ ಇರುತ್ತದೆ. ವಿಕಿರಣ ಅಥವಾ ವಿಸರಿತ ಉಷ್ಣ (ರೇಡಿಯೆಂಟ್ ಹೀಟ್) ಚರ್ಮಕ್ಕೆ ತಾಗಿದರೆ ಮೊದಲು ಚುರುಕ್ ಎಂಬ ನೋವು ಆ ಕ್ಷಣದಲ್ಲಿ ಮಾತ್ರ ಅನುಭವವಾಗಿ ಅನಂತರ ನಿಧಾನವಾಗಿ ಉರಿ ಪ್ರಾರಂಭವಾಗುತ್ತದೆ. ಕೊಕೇನ್ ಉಪಯೋಗದಿಂದ ಈ ಉರಿಯ ಅನುಭವವಾಗುವುದಿಲ್ಲ. ವಿಸರಿತ ಉಷ್ಣದಿಂದ ಚರ್ಮವನ್ನು ಸುಟ್ಟು ಹಾಕಬಹುದು. ಒಂದು ಸ್ಥಳದ ನೋವು ಇನ್ನೊಂದು ಸ್ಥಳದಲ್ಲಿ ಅದಕ್ಕಿಂತ ತೀವ್ರವಾದ ನೋವು ಉಂಟಾದಾಗ ಲಕ್ಷ್ಯದಿಂದ ತಪ್ಪಿಹೋಗುತ್ತದೆ. ನೋವಾದಾಗ ಭದ್ರವಾಗಿ ತುಟಿ ಕಚ್ಚಿಕೊಳ್ಳುವುದು, ಬಿಗಿಯಾಗಿ ಕೈಕೈಹಿಸಿಕಿಕೊಂಡು ಮುಷ್ಟಿ ಬಿಗಿದುಕೊಳ್ಳುವುದು, ಈ ಕಾರಣಕ್ಕಾಗಿ. ನೋವು ಶಮನಕ್ಕೆ ಪ್ರತಿನೋವಿನ (ಕೌಂಟರ್ ಇರಿಟೇಶನ್) ಗುಟ್ಟು ಕಾರಣ.

ನರಗಳ ಭೌತ ಅಥವಾ ರಾಸಾಯನಿಕ ಪ್ರಚೋದನೆಗಳಿಂದ ನೋವು ಉಂಟಾಗುತ್ತದೆ. ಭೌತವಾಗಿ ಅಗಾಧ ಉಷ್ಣಶೀತಗಳನ್ನು ಉಂಟುಮಾಡುವಿಕೆ, ವಿದ್ಯುತ್ಪ್ರಚೋದನೆ, ವಸ್ತುಗಳ ಘರ್ಷಣೆಗಳಿಂದಾಗುವ ಗಾಯದಿಂದ ನೋವು ಉಂಟಾಗುತ್ತದೆ. ಮೊಣಕಾಲಿನ ಮೇಲೆ, ತಲೆಯ ಮೇಲೆ ಏಟು ಬಿದ್ದಾಗ, ಇಲ್ಲವೆ ಕೂದಲನ್ನು ಎಳೆದು ಚರ್ಮವನ್ನು ಹಿಗ್ಗಿಸಿದಾಗ ನೋವು ಉಂಟಾಗುತ್ತದೆ. ಸೂಜಿಯಿಂದ ಚುಚ್ಚಿದಾಗ ಉಂಟಾಗುವ ಕ್ಷಣಿಕ ನೋವಿನ ಸಂದರ್ಭದಲ್ಲಿ ನೋವಿಗೆ ರಾಸಾಯನಿಕ ಕಾರಣಗಳಿವೆ. ಆದರೆ, ಬಾಸುಂಡಿ ಬರಿಸುವ ಬಿರುಸಾದ ಏಟು, ಬೊಬ್ಬೆ ಬರಿಸುವಂಥ ಸುಡುಗಾಯದ ನೋವು ಬಹುಕಾಲಿಕವಾಗಿದ್ದು, ನೋವಿಗೆ ಈ ರಾಸಾಯನಿಕಗಳು ಕಾರಣ. ಎಕ್ಸ್‌ಕಿರಣ ಮತ್ತು ಅತಿನೇರಿಳೆ ಕಿರಣಗಳಿಂದ ಉಂಟಾದ ಸುಟ್ಟಗಾಯಗಳಲ್ಲಿ ಕಿರಣಗಳು ತಾಕಿದ ಕ್ಷಣದಲ್ಲಿ ನೋವಿನ ಅರಿವು ಉಂಟಾಗದಿದ್ದರೆ, ಸ್ವಲ್ಪ ಕಾಲವಾದ ಮೇಲೆ ದೀರ್ಘಕಾಲಿನ ನೋವು ಉಂಟಾಗುವುದು. ಆ ಕಿರಣಗಳಿಂದ ಚರ್ಮದ ಅಡಿ ಊತಕಗಳಲ್ಲಿ ಬಿಡುಗಡೆಯಾದ ರಾಸಾಯನಿಕಗಳು ಇದಕ್ಕೆ ಕಾರಣ. ಶಕ್ತಿಯುತ ಆಮ್ಲಗಳು, ಕ್ಷಾರಗಳು ಹಾಗೂ ಕ್ಲೋರೋಫಾರಮ್ ಚರ್ಮಕ್ಕೆ ಸೋಕಿದರೆ ನೋವು ಉಂಟಾಗುತ್ತದೆ. ಚರ್ಮವನ್ನು ಇವು ನಾಶಪಡಿಸುವುದು ಇದಕ್ಕೆ ಕಾರಣ. ಶರೀರ ದ್ರವದ (ಬಾಡಿ ಫ್ಲೂಯಿಡ್) ಲವಣಾಂಶಕ್ಕಿಂತ ಕಡಿಮೆ ಅಥವಾ ಹೆಚ್ಚು ಲವಣಾಂಶವಿರುವ ದ್ರವವನ್ನು ಆರ್ಸೆನಿಕ್ ಮತ್ತು ಪಾದರಸದ ಆರ್ಗ್ಯಾನಿಕ್ ಸಂಯುಕ್ತಗಳನ್ನು ಚುಚ್ಚುಮದ್ದಿನ ಮೂಲಕ ಚರ್ಮದೊಳಕ್ಕೆ ಕೊಟ್ಟಾಗ ನೋವಾಗುತ್ತದೆ. ತುರುಚೆ, ನಸುಗುನ್ನಿಯಂಥ ಸಸ್ಯಗಳ ಹಾಗೂ ಕಂಬಳಿ ಹುಳುವಿನ ಸ್ಪರ್ಶ, ಜೇನು ಕಣಜ, ಚೇಳುಗಳ ವಿಷ ನೋವನ್ನು ಉಂಟುಮಾಡುತ್ತವೆ.

ಚರ್ಮದಲ್ಲಿ ಅರಿವಾಗುವ ನೋವು ಸ್ಥಳೀಯ ಮತ್ತು ಗಮನ ಸೆಳೆಯುವ ನೋವು (ರೆಫರ್ಡ್ ಪೆಯ್ನ್) ಆಗಿರಬಹುದು. ಗಮನ ಸೆಳೆಯುವ ನೋವು ವಾಸ್ತವವಾಗಿ ದೇಹದ ಒಳ ಅಂಗದ ಘಾತದಿಂದ ಉಂಟಾಗಿ ಭ್ರೂಣಾವಸ್ಥೆಯಲ್ಲಿ ಆ ಅಂಗಕ್ಕೆ ಸಂಬಂಧಪಟ್ಟಿರುವ ಚರ್ಮ ಕ್ಷೇತ್ರದಲ್ಲಿ (ಡರ್ಮಟೋಮ್) ಕಾಣಿಸಿಕೊಳ್ಳುವುದರಿಂದ ಅದಕ್ಕೆ ಈ ಹೆಸರಿದೆ. ನೋವನ್ನು ಉಂಟುಮಾಡದ ಪ್ರಚೋದನೆಗಳು ನೋವನ್ನು ಉಂಟುಮಾಡುವ ಅಥವಾ ಸಾಮಾನ್ಯ ವೇದನಾಕಾರಿಗಳು ಅತೀವವಾಗಿ ನೋವನ್ನು ಉಂಟುಮಾಡುವ ಸಂದರ್ಭಕ್ಕೆ ಅತೀವ ಸಂವೇದನೆ (ಹೈಪರ್ ಆಲ್ಜೀಸಿಯ) ಎಂದು ಹೆಸರು. ಗಾಯದಿಂದ ಊತ ಉಂಟಾಗಿ ಊದಿಕೊಂಡಿರುವ ಸ್ಥಳದಲ್ಲಿ ಕೆಲವು ವೇಳೆ ಅದರ ಸುತ್ತಲೂ ಇಂಥ ಸಂವೇದನೆ ಇರುತ್ತದೆ.

ಕಡಿತ : ಇದು ನವೆ, ತುರಿಕೆ, ತಿಂಡಿ (ಇಚ್) ಎನ್ನುವ ಪ್ರತ್ಯೇಕವಾದ ಸಂವೇದನೆ. ಹೊರತ್ವಚವನ್ನು ತೆಗೆದು ಹಾಕಿದರೆ ಬೇರೆ ಸಂವೇದನೆಗಳು ಇದ್ದರೂ ಕಡಿತವಿರುವುದಿಲ್ಲ. ಕಡಿತ, ನೋವು ಸ್ವಲ್ಪಮಟ್ಟಿಗೆ ಪರಸ್ಪರ ಹೋಲುತ್ತವೆ. ಮಿದುಳುಬಳ್ಳಿಯಲ್ಲಿ ನೋವಿನ ನರತಂತುಗಳನ್ನು ಕತ್ತರಿಸಿದರೆ ನೋವಿನೊಡನೆ ಕಡಿತವೂ ನಾಶವಾಗುತ್ತದೆ. ಅಲ್ಪ ವಿದ್ಯುತ್ಪ್ರಚೋದನೆ, ಅಲ್ಪ ಉಷ್ಣ ಇವುಗಳಿಂದ ಕಡಿತವನ್ನೂ ಅತ್ಯಧಿಕ ಪ್ರಚೋದನೆಯಿಂದ ನೋವನ್ನೂ ಉಂಟುಮಾಡಬಹುದು. ಕಡಿತ ಏಕಕಾಲಿಕವಾಗಿ ನೋವು ಮತ್ತು ಸ್ಪರ್ಶಗಳ ಸಂವೇದನೆ ಉಂಟುಮಾಡುವುದು. ಕಡಿಯುವ ಸ್ಥಳವನ್ನು ಬಹಿರಂಗಿಸಿ ಕಡಿತವನ್ನು ಶಮನಮಾಡಿಕೊಳ್ಳಲು ಕೆರೆದುಕೊಳ್ಳಲಾಗುತ್ತದೆ. ನೋಯುವ ಸ್ಥಳವನ್ನು ಹುದುಗಿಸಿ ರಕ್ಷಿಸಬೇಕೆನ್ನಿಸುವುದು. ಕೆರೆದರೆ ನೋವು ಜಾಸ್ತಿಯಾದರೆ ಉಗುರುಬೆಚ್ಚಗಿನ ಶಾಖದಿಂದ ಅದು ಶಮನವಾಗುತ್ತದೆ. ನೋವು ಅದರಲ್ಲೂ ಉರಿನೋವು ಶಾಖದಿಂದ ಅಧಿಕವಾಗುತ್ತದೆ. ಮಾರ್ಫಿನ್ ಚುಚ್ಚುಮದ್ದಿನಿಂದ ನೋವು ಕಡಿಮೆ ಆಗುತ್ತದೆ. ಆದರೆ ಕಡಿತ ಹೆಚ್ಚುತ್ತದೆ. ಹಿಸ್ಟಮಿನ್, ನಸುಗುನ್ನಿ ಉಂಟು ಮಾಡುವ ಕಡಿತ, ಅನಂತರ ಉರಿನೋವು ಪ್ರಚೋದನೆ ಕಡಿಮೆಯಾಗಿದ್ದರೆ ಬರೀ ಕಡಿತದಲ್ಲೆ ಪರ್ಯವಸಾನವಾಗುತ್ತದೆ. ಮಿದುಳು ಬಳ್ಳಿಯಲ್ಲಿ ನೋವಿನ ನರಗಳನ್ನು ಛಿದ್ರಿಸಿದರೆ ಹಿಸ್ಟಮಿನ್ನಿನಿಂದ ನೋವಾಗುವುದು ತಪ್ಪುತ್ತದೆ. ಆದರೆ ಕಡಿತವಿದ್ದೇ ಇರುತ್ತದೆ. ಇವೆಲ್ಲುವುಗಳಿಂದ ಕಡಿತ ಪ್ರತ್ಯೇಕ ಸಂವೇದನೆಯೋ ನೋವು ಸ್ಪರ್ಶಗಳ ಮಿಶ್ರಿತ ಸಂವೇದನೆಯೋ ಎಂದು ಗೊತ್ತಾಗುವಂತಿಲ್ಲ. ಕಾಮಾಲೆ, ಮಧುಮೂತ್ರ ಮುಂತಾದ ರೋಗಗಳಲ್ಲಿ ಅವ್ಯಕ್ತ ಕಾರಣಗಳಿಂದ ಕಡಿತ ಉಂಟಾಗಬಹುದು.

ಕಚಗುಳಿ : ಬಹು ಹಗುರವಾಗಿ ಸ್ಪರ್ಶಿಸುವ ವಸ್ತು ದೇಹದ ಮೇಲೆ ಚಲಿಸಿದಾಗ ಉಂಟಾಗುವ ಸಂವೇದನೆ. ಇದರ ಅರಿವನ್ನು ಉಂಟುಮಾಡುವ ನರಗಳು ಕಡಿತದ ನರಗಳಂತೆಯೇ ನೋವು ನರಗಳ ಜೊತೆಯೇ ಕ್ರಮಿಸಿ ಮಿದುಳನ್ನು ತಲಪುತ್ತವೆ. ಕಡಿತದಂತೆಯೇ ಕಚುಗುಳಿ ಆದಾಗ ಕೆರೆದುಕೊಳ್ಳಬೇಕೆನ್ನಿಸುತ್ತದೆ. ಮಿದುಳು ಬಳ್ಳಿಯಲ್ಲಿ ನೋವಿನ ನರಗಳನ್ನು ಕಡಿದರೆ ಕಚಗುಳಿ ಉಂಟಾಗುವುದು ನಿಂತುಹೋಗುತ್ತದೆ. ಹಾಗೇ ಚರ್ಮಕ್ಕೆ ಪೂರೈಕೆಯಾಗುವ ರಕ್ತವನ್ನು ಪ್ರಾಯೋಗಿಕವಾಗಿ ಕಡಿಮೆ ಮಾಡಿದರೆ ಸ್ಪರ್ಶಜ್ಞಾನ ಮಂದವಾಗಿ ಕಚಗುಳಿ ಉಂಟಾಗುವುದು ಲೋಪವಾಗುತ್ತದೆ. ಆದರೆ, ನೋವು ಇದರಿಂದ ಮಾರ್ಪಾಡಾಗುವುದಿಲ್ಲ.

ನೋವಿನ ಸಂವೇದನಾ ಲೋಪಸ್ಥಿತಿ (ಅನಾಲ್ಜೆಸಿಯ) : ಇದು ಅಪರೂಪವಾಗಿ ಆಜನ್ಮವಾಗಿ ಕಂಡು ಬರುವ ಸ್ಥಿತಿ. ಇದರಿಂದ ವ್ಯಕ್ತಿಯ ಆರೋಗ್ಯಕ್ಕೆ ತೊಂದರೆ ಇಲ್ಲ. ಇಂಥ ವ್ಯಕ್ತಿಯಲ್ಲಿ ಚರ್ಮವನ್ನು ಚುಚ್ಚಿದರೆ, ಸುಟ್ಟರೆ, ಸ್ನಾಯುಗಳ ರಕ್ತಪೂರೈಕೆಗೆ ಅಡ್ಡಿಪಡಿಸಿದರೆ, ವೃಷಣಗಳನ್ನು ಬಲವಾಗಿ ಅಮಿಕಿದರೆ, ಹಿಸ್ಟಮಿನ್ನನ್ನು ಚುಚ್ಚುಮದ್ದಾಗಿ ಕೊಟ್ಟರೆ, ಯಾವ ಸಂದರ್ಭದಲ್ಲೂ ನೋವು ಉಂಟಾಯಿತೆಂಬುದನ್ನು ತಿಳಿಯಲು ಕಷ್ಟ. ವೃಷಣಗಳನ್ನು ಅಮಿಕಿದಾಗ ಹೊಟ್ಟೆತೊಳಸು ವಾಕರಿಕೆ ಉಂಟಾಗುತ್ತದೆ. ಮಿಕ್ಕ ಸಂದರ್ಭಗಳಲ್ಲಿ ಬೆವರುವುದಾಗಲಿ, ರಕ್ತದ ಒತ್ತಡದಲ್ಲಿ ಬದಲಾವಣೆಯಾಗಲಿ, ಹೃದಯದ ಮಿಡಿತ, ಶ್ವಾಸಕ್ರಮದ ಬದಲಾವಣೆಯಾಗಲಿ ಕಂಡುಬರುವುದಿಲ್ಲ. ಸ್ಪರ್ಶ ಶೀತೋಷ್ಣಗಳ ಸಂವೇದನೆ ಸಹಜವಾಗಿಯೇ ಇರುವುದು ತಿಳಿಯುತ್ತದೆ. ಬಹುಶಃ ನೋವಿನ ನರಾಗ್ರಗಳು ಮಿದುಳಿನಲ್ಲಿ ಸಂಪರ್ಕಗೊಳ್ಳದೆ ಸಂವೇದನೆಯ ಅರಿವು ಬರುವುದಿಲ್ಲ.

4. ಸ್ತನಿಗಳ ದೇಹೋಷ್ಣತೆಯ ನಿಯಂತ್ರಣದಲ್ಲಿ ಚರ್ಮದ ಪಾತ್ರ : ಸ್ತನಿಗಳ ದೇಹೋಷ್ಣತೆ ಹೊರಾವರಣದ ಶೀತೋಷ್ಣಗಳಿಂದ ವ್ಯತ್ಯಾಸಗೊಳ್ಳದೆ ಒಂದೇ ಮಟ್ಟದಲ್ಲಿರುವುದು. ಇದು ಸತತ ದೇಹಕಾರ್ಯಗಳಿಂದಾಗುವ ಉಷ್ಣೋತ್ಪತ್ತಿ ಮತ್ತು ಸಾಧಾರಣವಾಗಿ ದೇಹಕ್ಕಿಂತ ತಂಪಾಗಿರುವ ಬಾಹ್ಯಾವರಣದ ಸಂಪರ್ಕದಿಂದ ಸ್ವಾಭಾವಿಕ ಭೌತ ಕಾರಣಗಳಿಗೆ ಅನುಸಾರವಾಗಿ ಆಗುವ ಉಷ್ಣ ನಷ್ಟ ಇವುಗಳ ಸಮತೋಲನದಿಂದ ಲಭಿಸುವ ಸ್ಥಿತಿ. ಬಾಹ್ಯಾವರಣ ದೇಹಕ್ಕಿಂತ ತಂಪಾಗಿಲ್ಲದಿದ್ದಾಗ ಉಷ್ಣ ನಷ್ಟ ಕಡಿಮೆ ಆಗಿ ಈ ಸಮತೋಲನ ಸಾಧ್ಯವಿಲ್ಲದೆ ದೇಹೋಷ್ಣತೆ ಹೆಚ್ಚುವ, ಬಾಹ್ಯಾವರಣ ಅತಿ ಶೀತವಾಗಿದ್ದರೆ ದೇಹೋಷ್ಣತೆ ಕಡಿಮೆಯಾಗುವ ಸ್ಥಿತಿ ಉಂಟಾಗುತ್ತದೆ. ಇದನ್ನು ನಿವಾರಿಸಲು ಚರ್ಮ ಎರಡು ಬಗೆಯ ಪ್ರತಿಕ್ರಿಯೆಗಳನ್ನು ತೋರಿಸುತ್ತದೆ. ಮೊದಲನೆಯದು ಚರ್ಮದ ರಕ್ತವಾಹಿನಿಯಲ್ಲಿ ಆಗುವ ವ್ಯತ್ಯಾಸ. ಎರಡನೆಯದು ಸ್ವೇದಗ್ರಂಥಿ, ರೋಮಗಳು ವಹಿಸುವ ಪಾತ್ರ. ಪ್ರಧಾನವಾಗಿ ಈ ಪ್ರತಿಕ್ರಿಯೆಗಳು ಚರ್ಮದಿಂದಲೇ ಒದಗುವ ದೇಹೋಷ್ಣತೆಯ ಅಲ್ಪತೆ ಆಧಿಕ್ಯಗಳ ಜ್ಞಾನದಿಂದ ನರಗಳ ಮೂಲಕ ಉಂಟಾಗುತ್ತವೆ. ಹೊರಗಡೆ ಚಳಿ ಹೆಚ್ಚಾಗಿ ದೇಹದಿಂದ ಹೆಚ್ಚು ಉಷ್ಣ ನಷ್ಟವಾಗುವಂತಿದ್ದರೆ, ಚರ್ಮದಲ್ಲಿ ಚಳಿಯಿಂದ ಉಂಟಾಗುವ ನರಪ್ರಚೋದನೆಯಿಂದ ಚರ್ಮದ ಧಮನಿಗಳು ಕುಗ್ಗುತ್ತವೆ. ನೇರ ಸಂಪರ್ಕ ನಾಳಗಳ ಮೂಲಕ ರಕ್ತ ಅಭಿಧಮನಿಗಳಿಂದ ಅಪಧಮನಿಗಳಿಗೆ ಹರಿಯುತ್ತದೆ. ಇದರಿಂದ ಚರ್ಮದಲ್ಲಿ ರಕ್ತ ಪರಿಚಲನೆ ಕಡಿಮೆಯಾಗಿ ರಕ್ತ ಶೀತಕ್ಕೆ ಒಡ್ಡಲ್ಪಡುವುದರಿಂದ ಆಗುವ ಉಷ್ಣನಷ್ಟವೂ ಕಡಿಮೆ ಆಗುತ್ತದೆ. ನರಪ್ರಚೋದನೆಯಿಂದ ಚಳಿಯಾದಾಗ ರೋಮಾಂಚನವಾಗುವುದರಿಂದ ನಿಮಿರಿದ ಕೂದಲುಗಳ ನಡುವೆ ಹೆಚ್ಚು ವಾಯು ಬಂಧಿಸಲ್ಪಟ್ಟು, ಅದು ಹೊದಿಕೆಯಾಗಿ ವರ್ತಿಸಿ ದೇಹದಿಂದ ಅವರಣಕ್ಕೆ ಆಗಬಹುದಾದ ಉಷ್ಣ ವರ್ಗಾವಣೆಯನ್ನು ತಡೆಯುತ್ತದೆ. ಚಳಿಯಿಂದ ಅಡ್ರಿನಲ್ ಗ್ರಂಥಿ ನರಗಳ ಮೂಲಕ ಪ್ರಚೋದನೆಗೊಂಡು ಅಡ್ರಿನಲಿನನ್ನು ಬಿಡುಗಡೆ ಮಾಡುತ್ತದೆ. ಇದು ಚರ್ಮದಲ್ಲಿ ಪ್ರವರ್ತಿಸಿ ಉಷ್ಣನಷ್ಟವನ್ನು ಮಿತಗೊಳಿಸುತ್ತದೆ.

ಬಾಹ್ಯಾವರಣದ ಉಷ್ಣಮಟ್ಟ ದೇಹೋಷ್ಣತೆಗೆ ಸಮೀಪವಾಗಿದ್ದರೆ ಅಥವಾ ಹೆಚ್ಚಾಗಿದ್ದರೆ ದೇಹದಿಂದ ಉಷ್ಣನಷ್ಟವಾಗಲಾರದೆ, ದೇಹೋಷ್ಣತೆ ಹೆಚ್ಚುತ್ತದೆ. ಚರ್ಮದ ನರತಂತುಗಳಿಂದ ಇದರ ಅರಿವುಂಟಾಗಿ ಅದರಿಂದ ಸೂಕ್ತ ನರಪ್ರಚೋದನೆ ಏರ್ಪಟ್ಟು, ಸ್ವೇದಗ್ರಂಥಿಗಳು ಬೆವರನ್ನು ಸ್ರವಿಸಲು ಪ್ರಾರಂಭಿಸುತ್ತವೆ. ಬೆವರು ಹೊರಬಂದು ಆವಿಯಾಗಿ ಹೋಗುತ್ತದೆ. ಹೀಗೆ ಆವಿಯಾಗುವಾಗ ಇದಕ್ಕೆ ಬೇಕಾದ ಉಷ್ಣ ದೇಹದಿಂದಲೇ ಒದಗುವುದರಿಂದ ದೇಹೋಷ್ಣತೆ ಕಡಿಮೆಯಾಗುತ್ತದೆ. ದೇಹೋಷ್ಣತೆಯ ಸಹಜ ನಿಯಂತ್ರಣದ ಅವಶ್ಯಕತೆ ಮನುಷ್ಯರಲ್ಲಿ ಸಾಮಾನ್ಯವಾಗಿ ಕಾಣುವುದು ಇಂಥ ಸಂದರ್ಭಗಳಲ್ಲೆ. ಏಕೆಂದರೆ, ಚಳಿಯ ವಿರುದ್ಧ ದೇಹದ ಉಷ್ಣನಷ್ಟವನ್ನು ಕಡಿಮೆ ಮಾಡಿಕೊಳ್ಳಲು ಮನುಷ್ಯ ಬಟ್ಟೆ ಉಪಯೋಗಿಸುತ್ತಾನೆ. ಆದರೆ, ಸೆಖೆಯ ವಿರುದ್ಧ ಇಂಥ ಸುಲಭೋಪಾಯಗಳಿಲ್ಲ. ಬೀಸಣಿಗೆ ಹಾಕಿಕೊಂಡರು ಅದು ಸಹಜ ಜೈವಿಕ ಕ್ರಮವಾಗಿ ಉತ್ಪತ್ತಿಯಾದ ಬೆವರನ್ನು

ಕೃತಕವಾಗಿ, ಶೀಘ್ರವಾಗಿ ಆವಿಯಾಗುವಂತೆ ಮಾಡುವುದು. ಆವಿಯಾಗಿ ಶರೀರವನ್ನು ತಂಪಾಗಿ ಮಾಡಲು ಸ್ವೇದಗ್ರಂಥಿಗಳು ತುಂಬಾ ಚಟುವಟಿಕೆಯಿಂದಿರುತ್ತವೆ. ಕೆಲವು ಸಂದರ್ಭಗಳಲ್ಲಿ ಗಂಟೆಗೆ ಒಂದು ಲೀಟರ್‌ಗಿಂತ ಹೆಚ್ಚು ಬೆವರು ಸ್ರಾವವಾಗಿ ಆವಿ ಆಗುವುದು. ಇಷ್ಟು ಅಧಿಕವಾಗಿ ಬೆವರನ್ನು ಸ್ರವಿಸಲು ಅನುಕೂಲವಾಗುವಂತೆ ಸ್ವೇದಗ್ರಂಥಿಗಳಿಗೆ ಅಧಿಕವಾಗಿಯೇ ರಕ್ತಪೂರೈಕೆ ಬೇಕು. ಸ್ವೇದಗ್ರಂಥಿಗಳ ಚಟುವಟಿಕೆಯ ಪರಿಣಾಮವಾಗಿ ಸ್ಥಳೀಯವಾಗಿ ಬ್ರಾಡಿಕೈನಿನ್ ಎಂಬ ವಸ್ತು ಉತ್ಪತ್ತಿಯಾಗುವುದು. ಅದು ಸ್ಥಳೀಯ ಕಿರುಧಮನಿಗಳನ್ನು ಹಿಗ್ಗಿಸುವುದರಿಂದ ಹೆಚ್ಚು ರಕ್ತ ಹರಿಯಲು ಅವಕಾಶವಾಗುತ್ತದೆ.

5. ಚರ್ಮದ ಇತರ ಕ್ರಿಯೆಗಳು : ಚರ್ಮದ ಹೊರತ್ವಚ ವಿಷವಸ್ತುಗಳಿಂದ ದೇಹವನ್ನು ರಕ್ಷಿಸುತ್ತದೆ. ಚರ್ಮ ಅಖಂಡವಾಗಿದ್ದಲ್ಲಿ ವಿಷವಸ್ತುಗಳ ಮೇಲೆ ನಿರ್ಯೋಚನೆಯಿಂದ ಕೈ ಆಡಿಸಬಹುದು. ಅದೇ ವಿಷ ಚರ್ಮದಲ್ಲಿ ಅತ್ಯಲ್ಪ ಗಾಯವಿದ್ದರೂ ಅಪಾಯಕರವಾಗಿ ಪರಿಣಮಿಸುವುದು. ಚರ್ಮ ಬೆವರನ್ನು ಸ್ರವಿಸುವುದು ದೇಹೋಷ್ಣತೆಯ ನಿಯಂತ್ರಣಕ್ಕಾಗಿ. ಅದು ವಿಸರ್ಜನೆ ಮಾರ್ಗವೂ ಹೌದು. ಯೂರಿಯ, ಲ್ಯಾಕ್ಟಿಕ್ ಆಮ್ಲ, ಇನ್ನಿತರ ವಿಸರ್ಜನೆ ವಸ್ತುಗಳಾದ ಇಂಗಾಲದ ಡೈಆಕ್ಸೈಡ್ ಈ ಮಾರ್ಗವಾಗಿ ಸ್ವಲ್ಪ ವಿಸರ್ಜಿತವಾಗುತ್ತವೆ. ಮಾನವನಲ್ಲಿ ಇಂಗಾಲದ ಡೈಆಕ್ಸೈಡಿನ ವಿಸರ್ಜನೆ ಚರ್ಮದ ಮೂಲಕ ಆಗುವುದು ಸ್ವಲ್ಪ. ಆದರೆ, ಕಪ್ಪೆಯಲ್ಲಿ ಅದು ಅಧಿಕವಾಗಿದೆ. ಕಪ್ಪೆಯ ಫುಪ್ಫುಸಗಳನ್ನು ತೆಗೆದು ಹಾಕಿದರೂ ಚರ್ಮದ ಮೂಲಕ ಆಕ್ಸಿಜನ್ನಿನ ಪೂರೈಕೆ, ಇಂಗಾಲದ ಡೈಆಕ್ಸೈಡಿನ ವಿಸರ್ಜನೆ, ಆಗಿ ಕಪ್ಪೆ ಜೀವಂತವಾಗಿರುತ್ತದೆ. ಮಾನವರಲ್ಲಿ ಚರ್ಮದ ವಿಸರ್ಜನ ಸಾಮರ್ಥ್ಯ ಅ ರೋಗಸ್ಥಿತಿಗಳಿಗನುಗುಣವಾಗಿ ವ್ಯತ್ಯಾಸವಾಗಿದೆ. ಕಾಮಾಲೆಯಲ್ಲಿ (ಜಾಂಡೀಸ್) ಪಿತ್ತರಸ ವರ್ಣಗಳು (ಬೈಲ್ ಪಿಗ್‌ಮೆಂಟ್ಸ್) ಚರ್ಮದಿಂದ ವಿಸರ್ಜಿಸಿ ತೊಟ್ಟ ಬಟ್ಟೆ ಹಳದಿಯಾಗುವುದು. ಮಧುಮೂತ್ರರೋಗಿಗಳ ಬೆವರಿನಲ್ಲಿ ಗ್ಲೂಕೋಸ್ ಇರುವುದು. ಯುರೀಮಿಯ ರೋಗಸ್ಥಿತಿಯಲ್ಲಿ ಚರ್ಮದಿಂದ ಅಧಿಕವಾಗಿ ಯೂರಿಯ ವಿಸರ್ಜಿತವಾಗಿ ರೋಗಿಯ ವಿಶಿಷ್ಟ ಗಂಧಕ್ಕೆ ಕಾರಣವಾಗಿದೆ. ಚರ್ಮದಲ್ಲಿ ಕೂದಲು ನಿಮಿರುವುದು ಉಷ್ಣನಿಯಂತ್ರಣಕ್ಕಾಗಿ ಮಾತ್ರವಲ್ಲ. ಕೆಲವು ಪ್ರಾಣಿಗಳಲ್ಲಿ ಇದು ರಕ್ಷಣೆ ಮಾರ್ಗವಾಗಿ ಕೂಡ ಇರುತ್ತದೆ. ಕೂದಲು ನಿಮಿರಿದ್ದಾಗ ಈ ಪ್ರಾಣಿಗಳು ಸ್ವಾಭಾವಿಕ ಆಕಾರಕ್ಕಿಂತ ದೊಡ್ಡವಾಗಿ ಕಂಡುಬರುವುದರಿಂದ ಶತ್ರುಗಳು ಹಿಮ್ಮೆಟ್ಟಬಹುದು. ಅಲ್ಲದೆ ಕೋಪಗೊಂಡಾಗ, ರೋಮಾಂಚನವಾಗುವುದರಿಂದ ಪ್ರಾಣಿ ತನ್ನ ಕೋಪವನ್ನು ವ್ಯಕ್ತಪಡಿಸುವ ಸಾಧನವಾಗಿದೆ.

ಚರ್ಮದ ವರ್ಣವಿನ್ಯಾಸ ಅನೇಕ ವೇಳೆ ಪರಿಸರಕ್ಕೆ ಹೊಂದಿಕೊಳ್ಳುವಂತೆ ಇರುತ್ತದೆ. ಇದರಿಂದ ಪ್ರಾಣಿಗಳು ಶತ್ರುಗಳಿಂದ ಮರೆಯಾಗಲು, ಕಣ್ಣು ತಪ್ಪಿಸಿ ಬೇಟೆಯನ್ನು ಹಿಡಿಯಲು ಅನುಕೂಲವಾಗುತ್ತದೆ. ಸಿಂಹದ ಮೈಬಣ್ಣ, ಹುಲಿಯ ಪಟ್ಟೆಗಳು, ಶೀತವಲಯದ ಕರಡಿಯ ಮೈಬಿಳುಪು, ಗೋಸುಂಬೆಯ ಬಣ್ಣ ಬದಲಾಯಿಸುವ ಸಾಮರ್ಥ್ಯ, ಇವೆಲ್ಲ ಇದಕ್ಕೆ ನಿದರ್ಶನಗಳು. ಅನೇಕ ವಿಷಪೂರಿತ ಹಾವುಗಳು ಎಚ್ಚರಿಕೆ ಕೊಡುವುದಕ್ಕಾಗಿ ಚರ್ಮದಲ್ಲಿ ಗಾಢವರ್ಣ ವಿನ್ಯಾಸ ಹೊಂದಿವೆ. ಕೆಲವು ನಿರುಪದ್ರವಿ ಹಾವುಗಳು ಇವುಗಳಂತೆಯೇ ವರ್ಣವಿನ್ಯಾಸ ಹೊಂದಿ ಶತ್ರುಗಳನ್ನು ವಂಚಿಸಿ ಪಾರಾಗುತ್ತವೆ. ಕೆಲವು ಪಕ್ಷಿಗಳಲ್ಲಿ ವರ್ಣವಿನ್ಯಾಸ ಸಂತಾನಾಭಿವೃದ್ಧಿಯ ಕಾಲದಲ್ಲಿ ಸಂಗಾತಿಯನ್ನು ಕೆರಳಿಸಬಲ್ಲ ವಿಶೇಷ ಮಾರ್ಪಾಡುಗಳು.

ಹೊರಕಿವಿ ನಾಳದ ಚರ್ಮದಲ್ಲಿ ಗುಗ್ಗೆ ಗ್ರಂಥಿಗಳು ಇವೆ. ಗುಗ್ಗೆ ಕ್ರಿಮಿನಾಶಕ ಮತ್ತು ಅಣುನಾಶಕ. ಕ್ರಿಮಿಕೀಟಗಳು ಕಿವಿಯ ಒಳಗೆ ಹಾನಿ ಮಾಡುವುದರ ವಿರುದ್ಧ ಗುಗ್ಗೆ ರಕ್ಷಣೆ ಒದಗಿಸುತ್ತದೆ. ಕೆಲವು ಪ್ರಾಣಿಗಳ ಚರ್ಮದಲ್ಲಿ ಕಂಪು ಗ್ರಂಥಿಗಳಿವೆ. ಹೊರ ಪ್ರಜನನಾಳ ಮತ್ತು ಗುದದ್ವಾರಗಳಲ್ಲಿವೆ. ಇವುಗಳ ಸ್ರಾವ ವಿಶಿಷ್ಟ ಕಂಪಿನಿಂದಿರುತ್ತದೆ. ಇವಕ್ಕೆ ಲೈಂಗಿಕ ಪ್ರಾಮುಖ್ಯತೆ ಇದ್ದು, ಗಂಡುಹೆಣ್ಣುಗಳು ಲೈಂಗಿಕ ಕ್ರಿಯೆಗಾಗಿ ಸಂಗಾತಿಗಳನ್ನು ಆಕರ್ಷಿಸಲು, ತಾವು ಲೈಂಗಿಕ ಕ್ರಿಯೆಗೆ ಸಿದ್ಧವೆಂದು ತಿಳಿಸಲು ಸಹಾಯಕವಾಗಿವೆ. ಪುನುಗಿನ ಬೆಕ್ಕಿನಲ್ಲಿ ಒಸರುವ ಪುನುಗಿಗೂ, ಕಸ್ತೂರಿಮೃಗದ ಕಸ್ತೂರಿಗೂ ಇಂಥ ಪ್ರಾಮುಖ್ಯವೇ ಇರುತ್ತದೆ. ಮಾನವ ಅವುಗಳಿಂದ ಬೇರೆ ಪ್ರಯೋಜನ ಹೊಂದಿದ್ದಾನೆ.

ಚರ್ಮದ ಬಂಧನಾಂಗಾಂಶ (ಕನೆಕ್ಟಿವ್ ಟಿಶ್ಯೂ) ದ್ರವ, ಮೇದಸ್ಸುಗಳ ಜಮಾವಣೆಗೆ ಬಹು ಯೋಗ್ಯಸ್ಥಳ. ನೀರು, ಲವಣ ಮತ್ತು ಆಹಾರವನ್ನು ಬಾಯಿಂದ ಸೇವಿಸಲಾಗದಾಗ ಚರ್ಮದೊಳಗೆ ಚುಚ್ಚುಮದ್ದಿನ ಮೂಲಕ ರಕ್ತಗತವಾಗುವಂತೆ ಮಾಡಲಾಗುತ್ತದೆ. ಪ್ರತಿಯೊಂದು ಸ್ಥಳದಲ್ಲೂ ಸು. 50ಮಿಲೀ ಗಳಷ್ಟು ದ್ರವವನ್ನು 3–4 ಕಡೆ ಈ ರೀತಿ ನೀಡಬಹುದು. ಇಷ್ಟು ಅಧಿಕ ಪ್ರಮಾಣದಲ್ಲಿ ದ್ರವ ಸ್ಥಳೀಯವಾಗಿ ದಪ್ಪವಾದ ಉಬ್ಬನ್ನು ಉಂಟು ಮಾಡಿ ಸು. ಅರ್ಧ ಗಂಟೆಯೊಳಗೆ ಅದು ರಕ್ತಗತವಾಗಿ ಉಬ್ಬು ಇಳಿದು ಹೋಗುತ್ತದೆ. ಹನಿ–ಹನಿಯಾಗಿ ದ್ರವವನ್ನು ಚರ್ಮದ ಊತಕಕ್ಕೆ ಸೂಜಿ ಮುಖಾಂತರ ಸೇರಿಸಿ ಆ ಕ್ಷಣದಲ್ಲೆ ಅದು ರಕ್ತಗತವಾಗುವಂತೆ ಮಾಡಲು ದ್ರವಕ್ಕೆ ಸ್ವಲ್ಪ ಹಯಲ್ಯೂರೋನಿಡೇಸ್ ಎಂಜೈಮನ್ನು ಸೇರಿಸಬೇಕು. ಹುದುಗಿಸಿದ ದ್ರವ ಇದರ ನೆರವಿನಿಂದ ಊತಕದಲ್ಲಿ ವ್ಯಾಪಕವಾಗಿ ಹರಡಿ ಶೀಘ್ರವಾಗಿ ರಕ್ತಗತವಾಗುತ್ತದೆ. ಯಥೇಚ್ಛವಾಗಿ ಆಹಾರ ದೊರಕಿದಾಗ ಹೆಚ್ಚಿಗೆ ಆಹಾರ ಮೇದಸ್ಸಾಗಿ ಮಾರ್ಪಟ್ಟು ಚರ್ಮದಲ್ಲಿ ಸಂಗ್ರಹವಾಗುವುದು. ಅತ್ಯಧಿಕವಾಗಿ ಜಮಾವಣೆ ಆದಲ್ಲಿ ಬೊಜ್ಜು ಉಂಟಾಗುತ್ತದೆ. ಜಮಾಯಿಸಿದ ಮೇದಸ್ಸು, ಆಹಾರ ಲಭಿಸದ ಕಾಲದಲ್ಲಿ, ಉಪಯೋಗವಾಗುವುದು. ನೈಸರ್ಗಿಕವಾಗಿ ಚರ್ಮದ ಕೆಳಗೆ ಅಧಿಕ ಮೇದಸ್ಸು ಜಮಾವಣೆಯಾಗಿ ನಿರಾಹಾರ ಸಮಯದಲ್ಲಿ ಅದು ಉಪಯೋಗವಾಗುವಂತಿರುವುದು ಶಿಶಿರ ನಿದ್ರೆ (ಹೈಬರ್‌ನೇಶನ್) ಮಾಡುವ ಪ್ರಾಣಿಗಳಲ್ಲಿದೆ. ಸ್ಕಂಧಾಸ್ಥಿಗಳ (ಸ್ಕ್ಯಾಪುಲ) ಮಧ್ಯ ಬೆನ್ನುಚರ್ಮದಲ್ಲಿ ಶೈಶವದಲ್ಲಿ ಒಂದು ವಿಶಿಷ್ಟ ಮಾಸಲು ಬಣ್ಣದ ಮೇದಸ್ಸು (ಬ್ರೌನ್ ಫ್ಯಾಟ್) ಇರುತ್ತದೆ. ಇದು ಶಿಶುಗಳ ದೇಹೋಷ್ಣತೆಯ ನಿಯಂತ್ರಣದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ.

6. ಚರ್ಮದ ರಸಾಯನ ವೃತ್ತಾಂತ: ರಾಸಾಯನಿಕ ದೃಷ್ಟಿಯಿಂದ ಚರ್ಮದಲ್ಲಿ ಮುಖ್ಯವಾಗಿ ಡರ್ಮಾಟಿನ್ ಸಲ್ಫೇಟ್ ಬಹುಶರ್ಕರ, ಕೊಲ್ಲಾಜೆನ್, ಪ್ರೋಟೀನ್ ಸ್ನಿಗ್ಧ ಪದಾರ್ಥಗಳು ಇವೆ. ಇತರ ಪ್ರೋಟೀನುಗಳು ಇವೆ. ಡರ್ಮಾಟಿನ್ ಸಲ್ಫೇಟ್ ಅಥವಾ ಕಾಂಡ್ರಾಯಿಟಿನ್ ಸಲ್ಫೇಟ್ ಬಿ ಬಹು ಶರ್ಕರದಲ್ಲಿ ಎನ್–ಅಸಿಟೈಟ್ ಡಿ–ಕಾಂಡ್ರಾಸಮೀನ್ (2–ಅಸಿಟಮಿಡೋ–2 ಡೀ ಆಕ್ಸಿ ಗ್ಯಲಾಕ್ಟೋಸ್), ಹೆಕ್ಸಸ್ ಯೂರೋನಿಕ್ ಆಮ್ಲ ಮತ್ತು ಸಲ್ಫ್ಯೂರಿಕ್ ಆಮ್ಲಗಳು ಸಮ ಪ್ರಮಾಣಗಳಲ್ಲಿರುತ್ತವೆ. ಹೆಕ್ಸಸ್ ಯೂರೋನಿಕ್ ಆಮ್ಲದ ಪ್ರಕೃತಿ ಇಡ್‌ಯೂರೋನಿಕ್ ಆಮ್ಲ ಎಂದು ಗುರುತಿಸಲಾಗಿದೆ. ಸಲ್ಫ್ಯೂರಿಕ್ ಆಮ್ಲದ ಅಂಶ ಇಡ್‌ಯೂರೋನಿಕ್ ಆಮ್ಲದ ನಾಲ್ಕನೆಯ ಇಂಗಾಲದ ಪರಮಾಣುವಿಗೆ ಕೂಡಿಕೊಂಡಿದೆ.

ಕಾಂಡ್ರಾಸಮೀನ್ ಮತ್ತು ಇಡ್‌ಯೂರೋನಿಕ್ ಆಮ್ಲಗಳ ಅಂಶಗಳು ಪರ್ಯಾಯವಾಗಿ ಜೋಡಿಸಲ್ಪಟ್ಟು ಯೂರೋನಿಕ್ ಆಮ್ಲದ ನಾಲ್ಕನೆಯ ಇಂಗಾಲ, ಕಾಂಡ್ರಾಸಮೀನಿನ ಮೂರನೆಯ ಇಂಗಾಲಕ್ಕೆ ಗ್ಲೈಕಾಸಿಡಿಕ್ ಬಂಧಗಳ ಮೂಲಕ




ಕೂಡಿಕೊಂಡಿದೆ; ಕಾಂಡ್ರಾಯಿಟಿನ್‌ಸಲ್ಫೇಟಿನ ವಿಶಿಷ್ಟಗುಣವೆಂದರೆ ತನ್ನ ಕುಟುಂಬಕ್ಕೆ ಸೇರಿದ ಬಹುಶರ್ಕರಗಳಂತಲ್ಲದೆ ಯಾವುದೇ ಮೂಲದಿಂದ ಪಡೆದ ಹಯಾಲ್‌ಯೂರೋನಿಡೇಸ್ ಎಂಜೈಮಿನಿಂದ ಜೀರ್ಣವಾಗುವುದಿಲ್ಲ. ಕೊಲ್ಲಾಜೆನ್ ಪಶುವರ್ಗದ ಎಲ್ಲ ಜೀವಿಗಳ (ಮಾನವನೂ ಸೇರಿದಂತೆ) ಚರ್ಮದಲ್ಲಿರುವ ಪ್ರಮುಖವಾದ ರಚನಾತ್ಮಕ (ಸ್ಟ್ರಕ್ಚರಲ್) ಪ್ರೋಟೀನ್.

ಚರ್ಮ, ಮೃದ್ವಸ್ಥಿಗಳಿಂದ ಬೇರ್ಪಟ್ಟ ಕೊಲ್ಲಾಜೆನ್ ತಂತುಗಳು ಬೆಳ್ಳಗಿವೆ. ಇವು ಪಾರಕಗಳಲ್ಲ. ವ್ಯಾನ್ ಗೀಸನ್ನಿನ ಆಮ್ಲೀಯ ಫುಕ್ಸಿನ್ನಿನಿಂದ ವಿಶಿಷ್ಟ ರೀತಿಯಲ್ಲಿ ಕೆಂಪು ಬಣ್ಣದಿಂದ ರಂಜಿತವಾಗುತ್ತವೆ. ಎಳೆದರೆ ಉದ್ದವಾಗದೆ, ಆಮ್ಲ ಮತ್ತು ಪ್ರತ್ಯಾಮ್ಲಗಳಲ್ಲಿ ಮುಳುಗಿಸಿದಾಗ ಉಬ್ಬುವ ಸ್ವಭಾವ ಮತ್ತು ಅಧಿಕ ಉಷ್ಣತೆಯಲ್ಲಿ ಉದ್ದ ಕುಗ್ಗುವ ಗುಣ ಕೊಲ್ಲಾಜೆನ್‌ನಲ್ಲಿವೆ. ಎಕ್ಸ್–ಕಿರಣ ವಿವರ್ತನ ಮತ್ತು ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳಿಂದ ಕೊಲ್ಲಾಜನ್ ರಚನೆ ಗುರುತಿಸಲಾಗಿದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ಪರಿಶೀಲಿಸಿದಾಗ ಕೊಲ್ಲಾಜೆನ್ನಿನ ಸೂಕ್ಷ್ಮತಂತುಗಳ (ಫೈಬ್ರಿಲ್ಸ್) ನಿರ್ದಿಷ್ಟ ಸ್ಥಾನಗಳಲ್ಲಿ ಪಟ್ಟೆಗಳಿರುವಂತೆ ಕಂಡುಬರುವುದು. ನೀರು, ಪ್ರೋಟೀನುಗಳು, ಮ್ಯೂಕೋ ಬಹುಶರ್ಕರಗಳು ಮತ್ತು ಇತರ ಸಣ್ಣ ಅಣುಗಳ ಚೌಕಟ್ಟಿನೊಳಗೆ ಚರ್ಮದಲ್ಲಿರುವ ಕೊಲ್ಲಾಜೆನ್ ಸೇರಿರುತ್ತದೆ. ಚರ್ಮದಲ್ಲಿ ಈ ಬಗೆಯ ವ್ಯವಸ್ಥೆ ಇತರ ಊತಕಗಳಿಗಿಂತ ಹೆಚ್ಚು ಒತ್ತಾಗಿದೆ. ಕೊಲ್ಲಾಜೆನ್ ತಂತುಗಳು ಈ ವ್ಯವಸ್ಥೆಯ ಪರ್ಯಂತ ಹಾಸುಹೊಕ್ಕಾಗಿ ಹರಡಿಕೊಂಡಿವೆ.

ಜೈವಿಕ ವ್ಯವಸ್ಥೆಯಲ್ಲಿ ಕೊಲ್ಲಾಜೆನ್ ಲಂಬವಾದ ಮತ್ತು ಪ್ರತ್ಯೇಕಿತವಾಗಿರುವ ಸೂಕ್ಷ್ಮತಂತುಗಳ ಸಮುದಾಯ. ತಂತುಗಳ ವ್ಯವಸ್ಥೆ, ಚರ್ಮದಲ್ಲಿರುವಂತೆ, ಗೊತ್ತುಗುರಿಯಿಲ್ಲದೆ ಹೆಣೆದುಕೊಂಡಿರಬಹುದು ಅಥವಾ ಸ್ನಾಯು ರಜ್ಜುವಿನಲ್ಲಿರುವಂತೆ

ಸಮಾಂತರವಾಗಿರಬಹುದು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ವಿಶ್ಲೇಷಣೆಯಿಂದ ಸೂಕ್ಷ್ಮತಂತುಗಳಲ್ಲಿ 700 Å ಅಂತರದಲ್ಲಿ ಪಟ್ಟಿಗಳು ಕಂಡುಬರುತ್ತವೆ. ಈ ಅಂತರ ಸೂಕ್ಷ್ಮತಂತುಗಳಲ್ಲಿ ಅಣುಮಾನಗಳ ವಿಶಿಷ್ಟ ಜೋಡಣೆಯಿಂದ ಉದ್ಭವವಾಗುತ್ತದೆ. ಕೊಲ್ಲಾಜೆನ್ನನ್ನು ಆಮ್ಲೀಯ ಬಫರುಗಳಲ್ಲಿ ವಿಲೀನ ಮಾಡಿ, ವೈಯಕ್ತಿಕ ಅಣುಗಳನ್ನು ಪರಿಶೀಲಿಸಿ ಸಂಗ್ರಹಿಸಿದ ಸಂಗತಿಗಳಿಂದ ಕೊಲ್ಲಾಜೆನ್ ಅಣು ಸು. 3000 Å ಗಳಷ್ಟು ಉದ್ದವಾಗಿವೆ. ಅಣುವಿನ ಅಸಮಪಕ್ಷತೆ ಅಧಿಕ. ಎಫ್‌ಎಲ್‌ಎಸ್ ಎಂಬ ಕೊಲ್ಲಾಜೆನ್ನಿನ ಒಂದು ಮಾರ್ಪಾಡಿನಲ್ಲಿ ಸಹ ಅಣುವಿನ ಉದ್ದ ಸು. 2800 Å.

ಕೊಲ್ಲಾಜೆನ್ನಿನ ಜೀವರಾಸಾಯನಿಕ ವೃತ್ತಾಂತ, ಸಂಶ್ಲೇಷಣೆ, ಕೊಲ್ಲಾಜೆನ್ನು ಕೋಶಗಳಲ್ಲಿ ಸಂಶ್ಲೇಷಣೆಯಾಗಿ ಅದರ ಕಾರ್ಯಸ್ಥಾನಗಳಾದ ಚರ್ಮ, ಮೃದ್ವಸ್ಥಿ ಊತಕಗಳಿಗೆ ರವಾನೆಯಾಗುತ್ತದೆ. ಇದರ ಸಂಶ್ಲೇಷಣೆಯ ಕ್ರಿಯಾವಿಧಾನ ಇತರ ಪ್ರೊಟೀನುಗಳ ಸಂಶ್ಲೇಷಣೆಯಂತೆ. ರೈಬೊಸೋಮುಗಳ ಮೇಲೆ ಅಮೈನೋ ಆಮ್ಲಗಳು ಕ್ರಮಬದ್ಧವಾಗಿ ಜೋಡಣೆಯಾದ ತರುವಾಯ ಪ್ರೋಲಿನ್ ಮತ್ತು ಲೈಸಿನ್ನುಗಳ ಹೈಡ್ರಾಕ್ಸಲೀಕರಣವಾಗುತ್ತದೆ. ಇದಾದ ಬಳಿಕ ಕುಂಡಲಿನಿಯ ರೂಪ ಒದಗುವುದು. ಶರ್ಕರಾಂಶಗಳ ಸೇರ್ಪಡೆ ಮುಂದಿನ ಕ್ರಿಯೆ. ಅನಂತರ ಕೋಶದಿಂದ ಕೊಲ್ಲಾಜೆನ್ ಸ್ರವನವಾಗಿ, ಬೆಳೆಯುತ್ತಿರುವ ತಂತುವಿಗೆ ರವಾನೆಯಾಗುತ್ತದೆ. ದೇಹದ ಪರಿಸರದಲ್ಲಿರುವ ಸ್ಥಿತಿಯಲ್ಲಿ ಕೊಲ್ಲಾಜೆನ್ ವಿಲೀನವಾಗುವುದಿಲ್ಲ. ಕೊಲ್ಲಾಜೆನ್ ಬಹುಶಃ ಅದರ ಪ್ರೀಕರ್ಸರ್ ಪ್ರೋಕೊಲ್ಲಾಜೆನ್ ರೂಪದಲ್ಲಿ ರವಾನೆಯಾಗುತ್ತದೆ. ಅನಂತರ ಲೈಸಿನ್ನಿನ ಆಲ್ಡಿಹೈಡ್ ಪುಂಜಗಳು ರೂಪಿತವಾಗಿ ಕೊಲ್ಲಾಜೆನ್ ತನ್ನ ಕ್ರಿಯಾಶೀಲ ರೂಪವನ್ನು ತಳೆಯುವುದು.

ಜೈವಿಕ ಚಟುವಟಿಕೆ : ಚರ್ಮದಲ್ಲಿ ಇತರ ಕೋಶಗಳಲ್ಲಿರುವಂತೆ ನಾನಾ ಬಗೆಯ ಜೀವರಾಸಾಯನಿಕ ಕ್ರಿಯೆಗಳು ಜರುಗುತ್ತವೆ. ಚರ್ಮದಲ್ಲಿ ಪ್ರತಿ 100ಗ್ರಾಂಗೆ (ಒದ್ದೆ ತೂಕ) 47ರಿಂದ 82ಮಿಗ್ರಾಂ ಗ್ಲೂಕೋಸ್ ಶೇಖರಣೆಯಾಗುತ್ತದೆ. ಚರ್ಮದಲ್ಲಿರುವ ಗ್ಲೂಕೋಸಿನ ಪ್ರಮಾಣಕ್ಕೂ, ರಕ್ತದಲ್ಲಿನ ಅದರ ಮಟ್ಟಕ್ಕೂ ನೇರವಾಗಿ ಸಂಬಂಧವಿದೆ. ಗ್ಲೂಕೋಸಿನ ಸೇವನೆಯಿಂದ ಚರ್ಮ ಮತ್ತು ರಕ್ತದಲ್ಲಿ ಗ್ಲೂಕೋಸಿನ ಮಟ್ಟ ಏರುವುದು. ಆದರೆ ರಕ್ತದಲ್ಲಿ ಈ ಮಟ್ಟ ಶೀಘ್ರವಾಗಿ ಆದ್ದರಿಂದ ಚರ್ಮ ದೇಹದ ಗ್ಲೂಕೋಸಿನ ಮಟ್ಟವನ್ನು ನಿಯಂತ್ರಿಸುವ ಸಾಧನವಾಗಿದೆ.

ಚರ್ಮದಲ್ಲಿ ಗ್ಲೂಕೋಸ್ ನಾನಾ ವಸ್ತುಗಳಿಗೆ (ಉದಾ: ಲ್ಯಾಕ್ಟಿಕ್ ಆಮ್ಲ, ಇಂಗಾಲದ ಡೈಆಕ್ಸೈಡ್, ತೈಲಾಮ್ಲಗಳು ಮತ್ತು ಸ್ಟೆರಾಲುಗಳಿಗೆ) ಪರಿವರ್ತಿತವಾಗುತ್ತದೆ. ಗ್ಲೂಕೋಸನ್ನು ಗ್ಲೈಕೋಜಿನ್ ರೂಪದಲ್ಲಿ ಶೇಖರಿಸಿಡಲು ಸಹಾಯ ಮಾಡುವ ಎಂಜೈಮ್ ಸಮೂಹಗಳೂ ಚರ್ಮದಲ್ಲಿವೆ.

ಸಾಧಾರಣವಾಗಿ ಮಾನವನ ಚರ್ಮ ತೈಲಗಳ ತೆಳುವಾದ ಒಂದು ಪೊರೆಯಿಂದ ಆವೃತವಾಗಿದೆ. ಬೆವರು ಅಥವಾ ನೀರು ಇವನ್ನು ಚರ್ಮದ ಮೇಲೆ ಹರಡುತ್ತವೆ. ಈ ಪದಾರ್ಥಗಳ ಉತ್ಪತ್ತಿಯಾಗುವುದು ಸೆಬೇಷಿಯಸ್ ಗ್ರಂಥಿಗಳಿಂದ. ಚರ್ಮವನ್ನು ಮೃದುವಾಗಿಡುವುದು ಇವುಗಳ ಕೆಲಸ. ಈ ತೈಲಗಳಲ್ಲಿರುವ ತೈಲಾಮ್ಲಗಳಿಗೆ ಬ್ಯಾಕ್ಟೀರಿಯ ಮತ್ತು ಶಿಲೀಂಧ್ರಗಳನ್ನು ವಿರೋಧಿಸುವ ಗುಣವಿದೆ. ಉದಾಹರಣೆಗೆ ಕಾಲ್ಬೆರಳಿನ ಸಂದಿಯಲ್ಲಿ ತೋರಿಬರುವ ಸೋಂಕಿಗೆ ಕಾರಣಗಳಾದ ಟ್ರೈಕೋಫೈಟಾನ್ ಮೆಂಟಗ್ರೋಫೈಟಸ್ ಮತ್ತು ಟಿ. ರುಬ್ರಮ್ ಶಿಲೀಂಧ್ರಗಳ ಬೆಳವಣಿಗೆಯನ್ನು ಸೀಬಮ್ಮಿನಲ್ಲಿರುವ ಬಿಡಿ ತೈಲಾಮ್ಲಗಳು ತಡೆಗಟ್ಟುತ್ತವೆ. ಆದರೆ, ಚರ್ಮದಲ್ಲಿರುವ ಅಥವಾ ಸೀಬಮ್ಮಿನ ತೈಲಾಮ್ಲಗಳಿಗೆ ಎಲ್ಲಾ ಬ್ಯಾಕ್ಟೀರಿಯಗಳನ್ನು ಮತ್ತು ಎಲ್ಲಾ ಶಿಲೀಂಧ್ರಗಳನ್ನು ನಿರೋಧಿಸುವ ಸಾಮರ್ಥ್ಯವಿಲ್ಲ.

ಚರ್ಮದ ಮೇಲ್ಮೈಯಲ್ಲಿರುವ ತೈಲಗಳು (ಲಿಪಿಡ್ಸ್) ಮುಖ್ಯವಾಗಿ ಟ್ರೈಗ್ಲಿಸರೈಡುಗಳನ್ನು (ಶೇ. 20–44), ಬಿಡಿ ತೈಲಾಮ್ಲಗಳನ್ನು (ಶೇ.2–30), ಮೇಣ ಮತ್ತು ಸ್ಟೆರಾಲ್ ಎಸ್ಟರುಗಳನ್ನು (ಶೇ. 23–25) ಮತ್ತು ಸ್ಕ್ವಾಲೀನನ್ನು (ಶೇ.8–12) ಒಳಗೊಂಡಿರುತ್ತವೆ. ಡೈಗ್ಲಿಸರೈಡುಗಳು (ಶೇ. 5–14), ಮಾನೋಗ್ಲಿಸರೈಡುಗಳು (ಶೇ. 2) ಮತ್ತು ಫಾಸ್ಫೋತೈಲಗಳು (ಶೇ. 2–8) ಅಲ್ಪ ಪ್ರಮಾಣಗಳಲ್ಲಿರುತ್ತವೆ. ಇವು ನಾಲ್ಕು ಮೂಲಗಳಿಂದ ದೊರೆಯುತ್ತವೆ : 1. ಹಚ್ಚಿಕೊಳ್ಳುವ ಸುಗಂಧ ತೈಲಗಳು, 2. ಸೆಬಾಷಿಯಸ್ ಗ್ರಂಥಿಗಳು, 3. ಹೊರತ್ವಚದ ಕೊಡುಗೆ, 4. ಕೆರಾಟಿನ್ನುಗಳು. ಈ ನಾಲ್ಕು ಮೂಲಗಳಿಂದ ದೊರೆಯುವ ತೈಲಗಳ ಪ್ರಮಾಣದಲ್ಲಿ ಸಾಪೇಕ್ಷವಾಗಿ ಬದಲಾವಣೆಗಳಿವೆ. ಆ ಪದಾರ್ಥಗಳ ಸಂಘಟನೆಯಲ್ಲಿ ವ್ಯತ್ಯಾಸ ಇದೆ. ಚರ್ಮದ ತೈಲಾಮ್ಲಗಳಲ್ಲಿ ಅಪರ್ಯಾಪ್ತ ತೈಲಾಮ್ಲಗಳ ಪ್ರಮಾಣವೇ ಹೆಚ್ಚು. ದೀರ್ಘ ಸರಣಿಯ ತೈಲಾಮ್ಲಗಳ ಬಾಹುಳ್ಯವೇ ಹೆಚ್ಚು. ಚರ್ಮದಲ್ಲಿರುವ ಸ್ಟೆರಾಲುಗಳು ಜೀವರಾಸಾಯನಿಕ ಕ್ರಿಯೆಗಳಿಗೆ ಒಳಗಾಗುತ್ತವೆ. ಜೀವಸತ್ತ್ವದ ಪೂರ್ವಜಾತ ವಸ್ತುಗಳು ಸೂರ್ಯನ ಬೆಳಕಿನ ಅತಿನೇರಿಳೆ ಕಿರಣಗಳಿಂದ ಪ್ರಭಾವಿತವಾಗಿ ಜೀವಸತ್ತ್ವವಾಗಿ ಪರಿವರ್ತಿತವಾಗುತ್ತವೆ.

ಚರ್ಮದಲ್ಲಿ ತೈಲಾಮ್ಲಗಳ ಸಂಶ್ಲೇಷಣೆ ಜರುಗುವುದು. ಸಿಹಿಮೂತ್ರ ರೋಗಿಯ ಚರ್ಮದಲ್ಲಿ ಈ ಸಂಶ್ಲೇಷಣೆ ಕುಂಠಿತವಾಗಿದೆ. ಇನ್ಸುಲಿನ್ನಿನಿಂದ ಚಿಕಿತ್ಸೆ ಮಾಡಿದಾಗ ಸಂಶ್ಲೇಷಣೆ ಎಂದಿನಂತೆ ನಡೆಯುವುದು. ಆಹಾರದ ಕೊರತೆಯಲ್ಲಿ ಸಹ ಸಂಶ್ಲೇಷಣೆ ಮಂದಗತಿಯಲ್ಲಿ ನಡೆಯುತ್ತದೆ. ಪ್ರಾಣಿಗಳ ಚರ್ಮದಲ್ಲಿ ಸ್ಟೆರಾಲುಗಳ ಸಂಶ್ಲೇಷಣೆ ನಡೆಯುವುದು ಎರಡು ಮಾರ್ಗಗಳಲ್ಲಿ. ಇವೆರಡಕ್ಕೆ ಲ್ಯಾನೋಸ್ಟೆರಾಲಿನಿಂದ ಕೊಲೆಸ್ಟೆರಾಲ್ ಉತ್ಪತ್ತಿಯಾಗುವ ಮಾರ್ಗದಲ್ಲಿ ಸಂಶ್ಲೇಷಿತವಾಗುವ ಮಧ್ಯವರ್ತಿ ಸಂಯುಕ್ತಗಳಲ್ಲಿ ಭಿನ್ನತೆ ಇದೆ. ಬ್ಲಾಕ್ ಕಂಡುಹಿಡಿದ ಮಾರ್ಗದಲ್ಲಿ ಡೆಸ್ಮೋಸ್ಟೆರಾಲ್ ಸಂಯುಕ್ತ ಕೊಲೆಸ್ಟೆರಾಲಿಗೆ ಪರಿವರ್ತನೆಯಾಗುವಾಗ ಅಂತ್ಯಘಟ್ಟದಲ್ಲಿ ಪಾರ್ಶ್ವ ಸರಣಿಯ ದ್ವಿಬಂಧ ಅಪಕರ್ಷಿತವಾಗುತ್ತದೆ. ಈ ಕ್ರಿಯೆ ಸ್ಟೆರಾಲಿನ ನ್ಯೂಕ್ಲಿಯಸ್ ರೂಪಿತವಾದ ಅನಂತರ ನಡೆಯುವುದು. ರಸ್ಸೆಲ್ ಕಂಡುಹಿಡಿದ ಮಾರ್ಗದಲ್ಲಿ ಸ್ಟೆರಾಲಿನ ನ್ಯೂಕ್ಲಿಯಸ್ ರೂಪಿತವಾಗುವ ಮೊದಲೇ ದ್ವಿಬಂಧ ಅಪಕರ್ಷಿತವಾಗಿರುತ್ತದೆ. ಈ ಮಾರ್ಗದಲ್ಲಿರುವ ಒಂದು ಮಧ್ಯವರ್ತಿ 7–ಡೀಹೈಡ್ರೋ ಕೊಲೆಸ್ಟೆರಾಲ್ ಸೂರ್ಯನ ಬೆಳಕಿನಿಂದ ಎ ಜೀವಸತ್ತ್ವವಾಗಿ ಪರಿವರ್ತಿತವಾಗುತ್ತದೆ. ಚರ್ಮದಲ್ಲಿ ಈ ಕ್ರಿಯಾಪಥದ ಮಹತ್ತ್ವವನ್ನು ಕಾಣಬಹುದು. ಚರ್ಮದಲ್ಲಿ ಲಿಂಗ ಹಾರ್ಮೋನುಗಳು ಕೊಲೆಸ್ಟೆರಾಲಿನ ಸಂಶ್ಲೇಷಣೆಯನ್ನು ಹತೋಟಿಯಲ್ಲಿಡುತ್ತವೆ. ಟೆಸ್ಟೋಸ್ಟೆರೋನ್ ಮತ್ತು ಪ್ರೋಜೆಸ್ಟೆರೋನುಗಳು ಕೊಲೆಸ್ಟೆರಾಲಿನ ಸಂಶ್ಲೇಷಣೆಯನ್ನು ಹೆಚ್ಚಿಸುತ್ತವೆ.

***

**ಚಾಟಿ ಹಾವು:** ಎಲ್ಯಾಪಿಡೆ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಹಾವುಗಳಿಗಿರುವ ಸಾಮಾನ್ಯ ಹೆಸರು (ವ್ಹಿಪ್ ಸ್ನೇಕ್). ಪ್ರಮುಖವಾಗಿ ಮ್ಯಾಸ್ಟಿಕಾಫಿಸ್ ಫ್ಲಾಜೆಲಮ್ ಎಂಬ ಹಾವಿಗೆ ಈ ಹೆಸರು ಅನ್ವಯವಾಗುತ್ತದೆ. ಚರ್ಮವನ್ನು ಹೆಣೆದು ರೂಪಿಸುತ್ತಿದ್ದ ಚಾಟಿಯನ್ನು ಹೋಲುವ ರೀತಿಯಲ್ಲಿ ಈ ಹಾವಿನ ಹುರುಪೆಗಳು ಜೋಡಣೆಗೊಂಡಿರುವುದರಿಂದಲೂ ಹಾವು ತೆಳುವಾಗಿ ಉದ್ದವಾಗಿ ಇರುವುದರಿಂದಲೂ ಇದಕ್ಕೆ ಚಾಟಿ ಹಾವು ಎಂಬ ಹೆಸರು ಬಂದಿದೆ. ಇದಕ್ಕೆ ಕೋಚ್‌ವ್ಹಿಪ್, ಬ್ಲ್ಯಾಕ್‌ಸ್ನೇಕ್ ಮುಂತಾದ ಹೆಸರುಗಳೂ ಉಂಟು. ಅಮೆರಿಕ ಸಂಯುಕ್ತ ಸಂಸ್ಥಾನದ ಮೂಲವಾಸಿ ಇದು. ಪೂರ್ಣ ಬೆಳೆದ ಹಾವು ಸುಮಾರು 2.4 ಮೀ ಗೂ ಹೆಚ್ಚು ಉದ್ದವಿರುತ್ತದೆ. ದೇಹದ ಬಣ್ಣ ಕಪ್ಪು. ಮರಿಹಾವುಗಳ ಮೈಮೇಲೆ ಅಲ್ಲಲ್ಲಿ ಹಸಿರು, ಕಪ್ಪು ಇಲ್ಲವೆ ನೀಲಿ ಬಣ್ಣದ ಮಚ್ಚೆಗಳಿರುತ್ತವೆ. ಮರಿಗಳು ಬೆಳೆದಂತೆಲ್ಲ ದೇಹದ ಬಣ್ಣ ಸಾಂದ್ರವಾಗುತ್ತದೆ. ಅತ್ಯಂತ ಕ್ಷಿಪ್ರಗತಿಯಲ್ಲಿ ಚಲಿಸಬಲ್ಲ ಈ ಹಾವು, ಗಿಡಗಂಟೆ, ಕಲ್ಲು ಮುಂತಾದುವನ್ನು ಲೆಕ್ಕಿಸದೆ ಗಂಟೆಗೆ ಸರಾಸರಿ 13 ಕಿಮೀ ವೇಗದಲ್ಲಿ ಸಾಗುತ್ತದೆ. ಓತಿ ಮುಂತಾದುವು ಇದರ ಪ್ರಧಾನ ಆಹಾರ. ಕೆಲವೊಮ್ಮೆ ಸಣ್ಣಪುಟ್ಟ ಸ್ತನಿಗಳನ್ನೂ ಹಕ್ಕಿಗಳನ್ನೂ ತಿನ್ನುವುದುಂಟು.

(ಕೆ.ಎಂ.ವಿ)

**ಚಾಲಕ ತಿಮಿ:** ಸಿಟೇಷಿಯ ಗಣ, ಒಡಾಂಟೊಸೀಟೈ ಉಪಗಣಗಳ ಡೆಲ್ಫಿನಿಡೆ ಕುಟುಂಬಕ್ಕೆ ಸೇರಿದ ಒಂದು ತಿಮಿಂಗಿಲ (ಪೈಲಟ್ ವ್ಹೇಲ್). ಡಾಲ್ಫಿನುಗಳಿಗೆ ಹತ್ತಿರ ಸಂಬಂಧಿ. ಕಪ್ಪು ಮೀನು (ಬ್ಲ್ಯಾಕ್ ಫಿಷ್), ಕಾಯಿಂಗ್ ತಿಮಿ ಮುಂತಾದುವು ಇದರ ಪರ್ಯಾಯನಾಮಗಳು. ಶಾಸ್ತ್ರೀಯ ಹೆಸರು ಗ್ಲೋಬಿಸೆಫಲ. ಮೆಲೀನ, ಮ್ಯಾಕ್ರೊರಿಂಕ ಮತ್ತು ಸ್ಕ್ಯಾಮೋನ್ನೈ ಎಂಬ ಮೂರು ಪ್ರಭೇದಗಳಿವೆ. ಚಾಲಕ ತಿಮಿ ಸಂಘಜೀವಿ; ನೂರಾರು ಪ್ರಾಣಿಗಳನ್ನೊಳಗೊಂಡ ದೊಡ್ಡ ಗುಂಪುಗಳಲ್ಲಿ ಜೀವಿಸುತ್ತದೆ. ಗುಂಪಿನ ನಾಯಕನನ್ನು ಎಂಥ ಪರಿಸ್ಥಿತಿಯಲ್ಲೂ ಕುರುಡಾಗಿ ಹಿಂಬಾಲಿಸುವ ಸ್ವಾಭಾವಿಕ ಪ್ರವೃತ್ತಿ ಇವುಗಳದು. ಬಹುಶಃ ಈ ಗುಣದಿಂದಾಗಿಯೇ ಇದಕ್ಕೆ ಚಾಲಕ ತಿಮಿ ಎಂಬ ಹೆಸರು ಬಂದಿರಬೇಕು. ಇದು ಸುಮಾರು 6–9 ಮೀ ಉದ್ದಕ್ಕೆ ಬೆಳೆಯುವ ಸಾಗರವಾಸಿ ಸ್ತನಿ.



ತೂಕ ಸುಮಾರು 700 ಕಿಗ್ರಾಂ. ಇದರ ತಲೆ ದೊಡ್ಡದಾಗಿ ಉಬ್ಬಿಕೊಂಡಿರುವುದರಿಂದ ಹಣೆ ಮೇಲ್ದವಡೆಯ ಮೇಲ್ಭಾಗದಲ್ಲಿ ಮುಂದಕ್ಕೆ ಚಾಚಿದೆ. ತಲೆ ಗೋಳಾಕಾರದ್ದಾಗಿದೆ. ಇದರಿಂದಲೇ ಇದಕ್ಕೆ ಗ್ಲೋಬಿಸೆಫಲ ಎಂಬ ಶಾಸ್ತ್ರೀಯ ಹೆಸರನ್ನು ಕೊಡಲಾಗಿದೆ. ಇದರ ದೇಹದ ಬಣ್ಣ ಅಚ್ಚಕಪ್ಪು. ಗದ್ದದ ಬಳಿ ಮಾತ್ರ ಬಿಳಿಬಣ್ಣದ ಮಚ್ಚೆಯೊಂದಿದೆ. ಬೆನ್ನ ಮೇಲೆ ಒಂದು ಅಡಿ ಎತ್ತರದ ಈಜುರೆಕ್ಕೆಯೂ ತಲೆ ಮತ್ತು ದೇಹ ಸೇರುವೆಡೆಯಲ್ಲಿ

ಅಕ್ಕಪಕ್ಕಗಳಲ್ಲಿ ಒಂದೊಂದು ಈಜುಅಂಗವೂ ಇವೆ. ಪ್ರತಿಯೊಂದು ದವಡೆಯಲ್ಲೂ 14–22 ಹಲ್ಲುಗಳಿವೆ.

ಈಜುವಾಗ ಒಂದು ಗುಂಪಿನ ಎಲ್ಲ ತಿಮಿಗಳೂ ಏಕಕಾಲದಲ್ಲಿ ನೀರಿನಲ್ಲಿ ಮುಳುಗುತ್ತ ಏಳುತ್ತ ಬಹಳ ವೇಗವಾಗಿ ಚಲಿಸುತ್ತವೆ. ಚಾಲಕತಿಮಿಯಲ್ಲಿ ವಲಸೆ ಹೋಗುವ ಪ್ರವೃತ್ತಿಯೂ ಉಂಟು. ಋತುಗಳಿಗೆ ಅನುಗುಣವಾಗಿ ಶೀತ ಸಮುದ್ರ ಹಾಗೂ ಉಷ್ಣವಲಯದ ಸಾಗರಗಳ ನಡುವೆ ಚಲಿಸುತ್ತದೆ. ಹಲವಾರು ಬಗೆಯ ಮೀನುಗಳು, ಸ್ಕ್ವಿಡ್ಡುಗಳು ಮತ್ತು ಕಟಲ್‌ಮೀನುಗಳು ಚಾಲಕ ತಿಮಿಯ ಪ್ರಧಾನ ಆಹಾರ. ಇವುಗಳ ಸಂತಾನೋತ್ಪತ್ತಿಯ ಕಾಲ ಚಳಿಗಾಲ. ಒಂದು ಸಲಕ್ಕೆ ಒಂದೇ ಒಂದು ಮರಿ ಹುಟ್ಟುತ್ತದೆ. ಗರ್ಭಧಾರಣಾ ಅವಧಿ ಸುಮಾರು ಒಂದು ವರ್ಷ. ಆಗತಾನೇ ಹುಟ್ಟಿದ ಮರಿಗಳು 2–3 ಮೀ ಉದ್ದವಿರುವುದುಂಟು. ಸುಮಾರು 1½ ವರ್ಷ ಕಾಲ ತಾಯೊಡನೇ ಇದ್ದು ಅನಂತರ ಸ್ವತಂತ್ರ ಜೀವನ ಆರಂಭಿಸುತ್ತವೆ. ಹೆಣ್ಣಿಗೆ 6 ವರ್ಷ ವಯಸ್ಸಾದಾಗಲೂ ಗಂಡಿಗೆ 13 ವರ್ಷ ವಯಸ್ಸಾದಾಗಲೂ ಲೈಂಗಿಕ ಪ್ರಬುದ್ಧಾವಸ್ಥೆ ಬರುತ್ತದೆ. ಚಾಲಕ ತಿಮಿಗಳ ಆಯಸ್ಸು ಸುಮಾರು 50 ವರ್ಷಗಳು. ನ್ಯೂಫೌಂಡ್ಲೆಂಡ್, ಸ್ಕಾಟ್ಲೆಂಡ್ ಮುಂತಾದೆಡೆ ಎಣ್ಣೆಗೋಸ್ಕರ ಚಾಲಕ ತಿಮಿಗಳನ್ನು ಬೇಟೆಯಾಡುವುದಿದೆ. ನ್ಯೂಫೌಂಡ್ಲೆಂಡಿನಲ್ಲಿ ವರ್ಷಕ್ಕೆ 3000–4000 ತಿಮಿಗಳನ್ನು ಕೊಲ್ಲುವುದುಂಟು. ಒಂದು ತಿಮಿಯಿಂದ ಸುಮಾರು 200 ಲೀಟರ್ ಎಣ್ಣೆ ದೊರೆಯುತ್ತದೆ. (ಎ.ಎಸ್.ಎಚ್.)

**ಚಾಲಕ ಮೀನು:** ಪರ್ಸೊಮಾರ್ಫಿ ಅಥವಾ ಪರ್ಸಿಫಾರ್ಮಿಸ್ ಗಣ, ಪರ್ಕಾಯ್‌ಡಿಯ ಉಪಗಣ, ಕರಾಂಗಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ಮೀನು (ಪೈಲಟ್ ಫಿಷ್). ಇದರ ವೈಜ್ಞಾನಿಕ ಹೆಸರು ನಾಕ್ರೇಟಸ್ ಡಕ್ಟರ್. ಜಾಕ್ ಮತ್ತು ಕುದುರೆ ಮ್ಯಾಕರೆಲುಗಳ ಹತ್ತಿರ ಸಂಬಂಧಿ. ಚಾಲಕ ಮೀನುಗಳು ಅನೇಕ ವೇಳೆ ಹಡಗುಗಳನ್ನು, ದೊಡ್ಡ ದೊಡ್ಡ ಶಾರ್ಕ್ ಮೀನುಗಳನ್ನೂ ಹಿಂಬಾಲಿಸಿಕೊಂಡು ಹೋಗುತ್ತವೆ. ಸಮುದ್ರದಲ್ಲಿ ದಾರಿ ತಪ್ಪಿದ ನಾವಿಕರಿಗೆ ಈ ಮೀನುಗಳು ಮಾರ್ಗದರ್ಶನ ಮಾಡಿ ಅವರು ಬಂದರನ್ನು ಸೇರಲು ಸಹಾಯ ಮಾಡುವುವೆಂದು ಪ್ರಾಚೀನ ಗ್ರೀಕರು ನಂಬಿದ್ದರು. ತಿಮಿಂಗಿಲಗಳಿಗೂ ಮಾರ್ಗದರ್ಶಿಗಳಾಗಿದ್ದವೆಂಬ ನಂಬಿಕೆ ಕೂಡ ಇತ್ತು. ಈ ಕಾರಣಗಳಿಂದಾಗಿ ಇವಕ್ಕೆ ಚಾಲಕ ಮೀನುಗಳೆಂದು ಹೆಸರು ಬಂದಿರಬಹುದು. ಆದರೆ ನಿಜಕ್ಕೂ ಶಾರ್ಕ್ ಮತ್ತು ಡಾಲ್ಫಿನುಗಳು ತಮ್ಮ ಆಹಾರವನ್ನು ತಿನ್ನುವಾಗ ತುಂಡರಿಸಿದ ಅಳಿದುಳಿದ ಆಹಾರ ಪದಾರ್ಥಗಳಿಗಾಗಿ ಚಾಲಕ ಮೀನುಗಳು ಅವನ್ನು ಹಿಂಬಾಲಿಸುತ್ತವೆ. ಹಡಗಿನಿಂದ ನೀರಿನೊಳಕ್ಕೆ ಎಸೆಯಲ್ಪಡುವ ಬೇಡದ ಆಹಾರ ಪದಾರ್ಥಗಳ ನಿರೀಕ್ಷೆಯಿಂದ ಇವು ಹಡಗುಗಳನ್ನು ಹಿಂಬಾಲಿಸುತ್ತವೆ. ಆವಶ್ಯಕತೆ ಬಿದ್ದಾಗ ಇವು ತಮ್ಮ ಆಹಾರವಾದ ಸಣ್ಣಸಣ್ಣ ಮೀನುಗಳನ್ನು ಬೇಟೆಯಾಡುತ್ತವೆ.

ಚಾಲಕ ಮೀನು ಸುಮಾರು 30 ಸೆಂಮೀ ಉದ್ದ ಬೆಳೆಯುತ್ತದೆ. ದೇಹದ ಬಣ್ಣ ನೀಲಿ. ದೇಹದ ಅಕ್ಕಪಕ್ಕಗಳಲ್ಲಿ ಬೆನ್ನಿನಿಂದ ಉದರದವರೆಗೆ ವಿಸ್ತರಿಸಿದಂತೆ ಗಾಢ ನೀಲಿಬಣ್ಣದ, ಅಗಲವಾದ 5 ಅಥವಾ 7 ಉದ್ದ ಪಟ್ಟೆಗಳಿವೆ. ಬಾಲದ ಅಕ್ಕಪಕ್ಕದಲ್ಲಿ ಅಡಿಗಟ್ಟಿನಂಥ (ಕೀಲ್) ಒಂದು ಚೂಪಾದ ರಚನೆಯಿದೆ. ಬೆನ್ನಿನ ಈಜುರೆಕ್ಕೆಯ ಮುಂಭಾಗದಲ್ಲಿ ನಾಲ್ಕು ಸಣ್ಣ ಮುಳ್ಳುಗಳು ಉಂಟು. ಹಲ್ಲುಗಳು ಚಿಕ್ಕವು; ಅನೇಕ ಸಾಲುಗಳಲ್ಲಿ ಸ್ಥಿತವಾಗಿವೆ. ಚಾಲಕ ಮೀನುಗಳು ಸಮುದ್ರದಲ್ಲಿ ಮೊಟ್ಟೆಗಳನ್ನಿಡುತ್ತವೆ. ಮರಿ ಮೀನುಗಳಿಗೂ ಪ್ರೌಢ



ಚಾಲಕ ಮೀನು

ಮೀನುಗಳಿಗೂ ಆಕಾರ ಮತ್ತು ಬಣ್ಣದಲ್ಲಿ ಸ್ವಲ್ಪವೂ ಹೋಲಿಕೆಯಿರುವುದಿಲ್ಲ. ಮರಿ ಮೀನುಗಳ ದೇಹ ಬಲು ಗಿಡ್ಡ. ಕಣ್ಣುಗಳು ಬಹಳ ದೊಡ್ಡ ಗಾತ್ರದುವು; ಅಲ್ಲದೆ ಅವುಗಳ ಸುತ್ತ ಮುಳ್ಳುಗಳಿರುತ್ತವೆ. ಮರಿಮೀನುಗಳು ಸಾಮಾನ್ಯವಾಗಿ ತೇಲಾಡುತ್ತಿರುವ ಸಮುದ್ರದ ಕಳೆ, ಅಂಬಲಿ ಮೀನಿನ ದೇಹದ ತಳಭಾಗ ಅಥವಾ ಫೈಸೇಲಿಯದ ಟೆಂಟಕಲುಗಳ ನಡುವೆ ಮರೆಯಾಗಿರುತ್ತವೆ. ಈ ವಿಷಪೂರಿತ ಟೆಂಟಕಲುಗಳಿಂದ ಇವಕ್ಕೆ ಯಾವ ಹಾನಿಯೂ ಆಗುವುದಿಲ್ಲ. ಚಾಲಕ ಮೀನುಗಳು ಆಳವಾದ ನೀರಿನಲ್ಲಿ ವಾಸಿಸುತ್ತವೆ. ಇವು ಪ್ರಪಂಚದ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಸಮುದ್ರಗಳಲ್ಲಿ, ಮೆಡಿಟರೇನಿಯನಿನಲ್ಲಿ ಮತ್ತು ಅಮೆರಿಕದ ಕರಾವಳಿಯಲ್ಲಿ ಕಂಡುಬರುತ್ತವೆ. (ಎ.ಎಸ್.ಎಚ್.)

**ಚಾಳಮೀನು:** ಟೀಲಿಯಾಸ್ಟಿಯೈ ಉಪವರ್ಗದ ಕ್ಲೂಪೀಯಿಡೆ ಕುಟುಂಬಕ್ಕೆ ಸೇರಿದ ಸಾರ್ಡೀನ್ ಜಾತಿಯ ಒಂದು ಮೀನು. ಸಾರ್ಡಿನೆಲ್ಲ ಫಿಂಬ್ರಿಯೇಟ ಅಥವಾ ಕ್ಲೂಪಿಯ ಫಿಂಬ್ರಿಯೇಟ ಇದರ ಶಾಸ್ತ್ರೀಯ ಹೆಸರು. ಪೇಡಿ, ಎರೆಬೈ ಪರ್ಯಾಯ ನಾಮಗಳು. ಇದು ಪ್ರಪಂಚದ ಉಷ್ಣವಲಯದ ಸಮುದ್ರಗಳಲ್ಲಿ ವಾಸಿಸುತ್ತದೆ. ಮೀನುಗಾರಿಕೆಯಲ್ಲಿ ಅತ್ಯಂತ ಮುಖ್ಯವಾದ ಮೀನುಗಳಲ್ಲೊಂದು. ಭಾರತದಲ್ಲಿ ಪೂರ್ವ ಕರಾವಳಿಯ ಉತ್ತರ ಭಾಗದಲ್ಲೂ ಪಶ್ಚಿಮ ಕರಾವಳಿಯ ದಕ್ಷಿಣ ಭಾಗದಲ್ಲೂ ಹೇರಳವಾಗಿ ಸಿಕ್ಕುತ್ತದೆ. ಸೆಪ್ಟೆಂಬರ್‌ನಿಂದ ಜನವರಿವರೆಗಿನ ಅವಧಿಯಲ್ಲಿ ಇದರ ಹಿಡಿವಡೆಯ ಮೊತ್ತ ಅತ್ಯಂತ ಹೆಚ್ಚು. ಈ ಮೀನನ್ನು ಆಹಾರವಾಗಿ ಬಳಸುವುದಲ್ಲದೆ ಇದರಿಂದ ಎಣ್ಣೆಯನ್ನೂ ತೆಗೆಯುವುದುಂಟು. ಇದನ್ನು ಗೊಬ್ಬರವಾಗಿ ಬಳಸುವುದೂ ಇದೆ. (ಎನ್.ಎಂ.)

**ಚಿಂಚಿಲ:** ರಾಡೆನ್ಷಿಯ ಗಣದ ಚಿಂಚಿಲಿಡೆ ಕುಟುಂಬದ ಸ್ತನಿ. ಚಿಂಚಿಲ ಲ್ಯಾನಿಗರ್ ಇದರ ವೈಜ್ಞಾನಿಕ ಹೆಸರು. ಪೆರು, ಚಿಲಿ, ಬೊಲೀವಿಯಗಳ ಆಂಡಿಸ್ ಪರ್ವತಗಳ ಶಿಲಾಮಯ ಬಂಜರು ಪ್ರದೇಶಗಳಲ್ಲಿ ಇದರ ವಾಸ. ಇದು ರೇಷ್ಮೆಯಂಥ ನಯವಾದ ಹಾಗು ಬೆಲೆ ಬಾಳುವಂಥ ತುಪ್ಪಳಕ್ಕೆ ಬಹಳ ಪ್ರಸಿದ್ಧವಾಗಿದೆ. ಗಾತ್ರದಲ್ಲಿ ಸಾಮಾನ್ಯ ಆಕಾರದ ಅಳಿಲನ್ನು ಹೋಲುವ ಪ್ರಾಣಿಯಿದು. ತಲೆಯಿಂದ ಉದರ ಹಿಂತುದಿಯ ಉದ್ದ 22–28 ಸೆಂಮೀ ಇದಕ್ಕೆ ಸುಮಾರು 7–15 ಸೆಂಮೀ ಉದ್ದದ ಬಾಲವಿದೆ. ದೇಹದ ಮೇಲೆಲ್ಲಾ 2 ಸೆಂಮೀ. ದಪ್ಪದ ಅತ್ಯಂತ ಮೃದುವಾದ ತುಪ್ಪಳ ಇದೆ. ಅದರ ಬಣ್ಣ ಬೂದು ಮಿಶ್ರಿತ ಮುತ್ತಿನಂತೆ. ಹೊಟ್ಟೆ ಮಾತ್ರ ಹಳದಿಮಿಶ್ರಿತ ಬಿಳಿ. ಬಾಲದ ಮೇಲೆ ಕೊಂಚ ಒರಟಾದ ಉದ್ದ ಕೂದಲುಗಳಿವೆ. ತನ್ನ ಅಗಲವಾದ ಮೂತಿ, ದೊಡ್ಡ ದೊಡ್ಡ ಕಪ್ಪು ಬಣ್ಣದ ಹೊಳೆಯುವ ಕಣ್ಣುಗಳು, ದೊಡ್ಡ ಕಿವಿಗಳಿಂದಾಗಿ ಚಿಂಚಿಲ ಬಲು ಮುದ್ದಾಗಿ ಕಾಣುತ್ತದೆ. ಮೂತಿಯ ಮೇಲೆ ಉದ್ದವಾದ ಹಾಗೂ ಬಿರುಸಾದ ಮೀಸೆ ಕೂದಲುಗಳಿವೆ. ಕೆನ್ನೆಗಳಲ್ಲಿ ಅಪೂರ್ಣಾವಸ್ಥೆಯ ಸಂಚಿಗಳಿವೆ. ಮುಂಗಾಲಿನ ಪಾದಗಳಲ್ಲಿ ತಲಾ 4 ಮತ್ತು ಹಿಂಗಾಲಿನ ಪಾದಗಳಲ್ಲಿ ತಲಾ 3 ಬೆರಳುಗಳಿವೆ.

ಚಿಂಚಿಲ ಕಲ್ಲುಬಂಡೆಗಳ ಬಿರುಕುಗಳಲ್ಲಿ, ಡೊಗರುಗಳಲ್ಲಿ ವಾಸಿಸುತ್ತದೆ. ಇದು ಸಸ್ಯಾಹಾರಿ. ಬೀಜಗಳು, ಹಣ್ಣುಗಳು, ಕಾಳು, ಸಣ್ಣಪುಟ್ಟ ಗಿಡಗಳ ಚಿಗುರನ್ನು ತಿಂದು ಬದುಕುತ್ತದೆ. ಹೆಣ್ಣು ಚಿಂಚಿಲ ಪ್ರತಿ ಪ್ರಜನನದಲ್ಲಿ 2–6 ಮರಿಗಳಿಗೆ ಜೀವ ನೀಡುತ್ತದೆ. ವರ್ಷಕ್ಕೆ ಎರಡು ಬಾರಿ ಮರಿ ಹಾಕುತ್ತದೆ. ಗರ್ಭಾವಸ್ಥೆಯ ಅವಧಿ 110 ದಿವಸಗಳು. ಗಂಡು ತನ್ನ ಜೀವಮಾನವಿಡೀ ಒಂದೇ ಹೆಣ್ಣಿನೊಂದಿಗೆ ಮಾತ್ರ ಜೀವನ ಸಾಗಿಸುತ್ತದೆ. ಹೆಣ್ಣು ಗಾತ್ರದಲ್ಲಿ ಗಂಡಿಗಿಂತ ದೊಡ್ಡದು. ಪ್ರಣಯಾಚರಣೆಯಲ್ಲಿ ಹೆಣ್ಣಿನದೇ ಮೇಲುಗೈ. ಮರಿಗಳು ಹುಟ್ಟಿದ ಕೆಲವೇ ಗಂಟೆಗಳಲ್ಲಿ ಓಡಾಡತೊಡಗುವುವಲ್ಲದೆ ಘನರೂಪದ ಆಹಾರವನ್ನು ಸೇವಿಸಲು ಸಮರ್ಥವಾಗುವುವು. 5 ರಿಂದ 8 ತಿಂಗಳ ಅನಂತರ ಇವು ಲೈಂಗಿಕ ಪ್ರಬುದ್ಧತೆ ಹೊಂದುತ್ತವೆ. ಚಿಂಚಿಲದ ಆಯಸ್ಸು ಸು. 10 ವರ್ಷಗಳು.

ಚಿಂಚಿಲ ಸ್ತನಿಗಳಲ್ಲಿ ಮೂರು ಬಗೆಗಳಿವೆ. 1. ಪೆರುವಿನ ಅಥವಾ ರಾಜ ಚಿಂಚಿಲ – ಪೆರು ದೇಶದ ಪರ್ವತ ಸೀಮೆಗಳಲ್ಲಿ ವಾಸಿಸುತ್ತದೆ. ಇದರ ತುಪ್ಪಳ ಅತ್ಯಂತ ಉತ್ತಮವಾಗಿದ್ದು, ಭಾರಿ ಬೆಲೆಯುಳ್ಳದ್ದು.

2. ಬೊಲೀವಿಯದ ಚಿಂಚಿಲ–ಬೊಲೀವಿಯ ಮತ್ತು ಉತ್ತರ ಅರ್ಜಂಟೈನಗಳ ಆಂಡಿಸ್ ಪರ್ವತಗಳ ಪೂರ್ವದ ಇಳಿಜಾರು ಪ್ರದೇಶಗಳಲ್ಲಿ ವಾಸಿಸುತ್ತದೆ.

3. ಚಿಲಿಯ ಚಿಂಚಿಲ–ಚಿಲಿ ದೇಶದ ಪರ್ವತ ಪ್ರದೇಶಗಳಲ್ಲಿ ಜೀವಿಸುತ್ತದೆ. ಇದನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ತುಪ್ಪಳಕ್ಕೋಸ್ಕರ ಸಾಕುತ್ತಾರೆ.

ಚಿಂಚಿಲಗಳ ಬೇಟೆ ಇಂಕಾಗಳ ಕಾಲದಿಂದಲು ರೂಢಿಯಲ್ಲಿದೆ. ಚಿಂಚಿಲಗಳು ಬಲು ಚುರುಕು ಪ್ರಾಣಿಗಳಾದ್ದರಿಂದ ಇವನ್ನು ಹಿಡಿಯುವುದು ಅತಿಪ್ರಯಾಸದ ಕೆಲಸ. ಆದರೂ ತುಪ್ಪಳಕ್ಕಾಗಿ ಇವನ್ನು ನೂರಾರು ವರ್ಷಗಳಿಂದ ಬೇಟೆಯಾಡುತ್ತ ಬಂದಿರುವುದರಿಂದ ಇವು ವಿನಾಶದ ಸ್ಥಿತಿ ತಲುಪಿವೆ. ಆದರೆ, 1920 ರಲ್ಲಿ ಚಿಲಿ ದೇಶದಲ್ಲಿ ಇವುಗಳ ಬೇಟೆಯನ್ನು ನಿಷೇಧಿಸಿ, ಚಿಂಚಿಲಗಳ ವಿನಾಶದ ಹಾದಿಯನ್ನು ನಿಯಂತ್ರಿಸಿದಂತಾಗಿದೆ. (ವಿ.ಕೆ.ವಿ.)

**ಚಿಗಟ:** ಸೈಫೋನಾಪ್ಟರ ಗಣದ ಸದಸ್ಯ. ಇದರ ಸಾಮಾನ್ಯ ಹೆಸರು ಫ್ಲೀ. ಇವು ಮಾನವನಿಗೆ ಸಾಂಕ್ರಾಮಿಕ ರೋಗಗಳ ಪ್ರಸಾರಕ್ಕೆ ವಾಹಕಗಳಾಗಿವೆ. ಪ್ರಾಣಿಗಳ ಮತ್ತು ಮಾನವನ ದೇಹಕ್ಕೆ ಉಪಟಳವೆನಿಸುವ ಪಿಡುಗುಗಳಾಗಿರುವುದರಿಂದ ಇವಕ್ಕೆ ಆರ್ಥಿಕ ಪ್ರಾಮುಖ್ಯತೆ ಇದೆ. ಪ್ರೌಢ ಚಿಗಟ ಪಕ್ಷಿಗಳ ಮತ್ತು ಸ್ತನಿಗಳ ರಕ್ತವನ್ನು ಹೀರಿ ಜೀವಿಸುತ್ತದೆ. ಇವುಗಳ ಡಿಂಬಗಳು ಹಕ್ಕಿಗಳ ಗೂಡುಗಳಲ್ಲಿ, ಸ್ತನಿಗಳ ವಾಸಸ್ಥಳಗಳಲ್ಲಿ ಇರುತ್ತವೆ. ಆದರೆ, ಡಿಂಬಗಳು ಅವುಗಳ ಮೇಲೆ ಅವಲಂಬಿಗಳಲ್ಲ. ಚಿಗಟ ರೆಕ್ಕೆರಹಿತ ಸಣ್ಣ ಕೀಟ. ಇದರ ಉದ್ದ 6.ಮಿಮೀ. ಇದರ ದೇಹದ ಮುಂತುದಿಯ ಎರಡು ಕಡೆ ಒಂದು ಅಥವ

ಹೆಚ್ಚು ಮುಳ್ಳು ಹೆಣಿಗೆಗಳಿವೆ. ಚಿಗಟದ ಕಾಲುಗಳು ಚೆನ್ನಾಗಿ, ದೃಢವಾಗಿ ರೂಪುಗೊಂಡಿವೆ. ಇವು ಬಲವಾಗಿರುವುದರಿಂದ ಚಿಗಟ ಒಮ್ಮೆಲೇ 30–32 ಸೆಂಮೀ ದೂರ ಜಿಗಿಯಬಲ್ಲುದು.



ಬಾಯಿಯ ಉಪಾಂಗಗಳು ಆಶ್ರಯಜೀವಿಯ ಚರ್ಮವನ್ನು ಚುಚ್ಚಿ ರಕ್ತ ಹೀರಲು ಅನುಕೂಲವಾಗುವಂತೆ ಮಾರ್ಪಟ್ಟಿವೆ. ಮೇಲಿನ ಎರಡು ಜೋಡು ದವಡೆಗಳು ಲೇಬ್ರಮ್ ಎಂಬ ನೀಳವಾದ ತುಟಿಯೊಡನೆ ಸೇರಿಕೊಂಡು ಚುಚ್ಚುವ ಕೊಕ್ಕಿನಂತೆ ರೂಪುಗೊಂಡಿವೆ. ಜೋಡು ದವಡೆಗಳು ಉದ್ದವಾಗಿದ್ದು ಹಲ್ಲುಗಳನ್ನೊಳಗೊಂಡು ಗರಗಸದ ಅಲಗುಗಳಂತಿವೆ. ತಲೆಯಲ್ಲಿ ಇನ್ನೂ ಹಲವು ಉಪಾಂಗಗಳಿವೆ. ಸರಳ ಕಣ್ಣುಗಳು, ದಪ್ಪವಾದ ಹಾಗೂ ಮೋಟಾದ ಸ್ಪರ್ಶಾಂಗಗಳು ಇವೆ. ಕೆಲವು ಜಾತಿಯ ಚಿಗಟಗಳಲ್ಲಿ ಕಣ್ಣು ಕ್ಷೀಣಿಸಿರುತ್ತದೆ ಅಥವಾ ಇಲ್ಲದೆ ಇರಬಹುದು.

ಗರ್ಭಧರಿಸಿದ ಹೆಣ್ಣು ಚಿಗಟ ಆಶ್ರಯದಾತ ಜೀವಿಯ ಗರಿಗಳ ಅಥವಾ ರೋಮಗಳ ನಡುವೆ ಕೆನೆಬಣ್ಣದ ನೂರಾರು ಮೊಟ್ಟೆಗಳನ್ನು ಇಡುತ್ತದೆ. ಅವು ಆಶ್ರಯದಾತ ಜೀವಿಯ ಗೂಡುಗಳಲ್ಲಿ ಅಥವಾ ವಾಸಿಸುವ ಸ್ಥಳಗಳಲ್ಲಿ ಉದುರಿ ಬೀಳುತ್ತವೆ. ಮೊಟ್ಟೆಯೊಡೆದಾಗ ಹೊರಬರುವ ಮರಿಗಳು ಆಶ್ರಯದಾತ ಜೀವಿಯ ದೇಹಕ್ಕೆ ಸುಲಭವಾಗಿ ಸೇರಿಕೊಳ್ಳಲು ಇದರಿಂದ ಅನುಕೂಲ. ಮೊಟ್ಟೆಗಳು ಒಡೆದು ಹಳದಿ ಬಣ್ಣದ ಕಂಬಳಿ ಹುಳುವಿನಂಥ ಮರಿಗಳು ಹೊರಬಂದು ಅಲ್ಲಿರುವ ಸಾವಯವ ಕಸದಲ್ಲಿ ಸೇರುತ್ತವೆ. ಕೆಲವು ದಿನಗಳ ಅನಂತರ ಮರಿಗಳು ತಮ್ಮ ಸುತ್ತ ನಯವಾದ ಎಳೆಯಿಂದ ಗೂಡನ್ನು ರಚಿಸಿಕೊಂಡು ಕೋಶಾವಸ್ಥೆಯನ್ನು ಸೇರಿ, ರೂಪಪರಿವರ್ತನೆ ಹೊಂದಿ, ಪ್ರೌಢ ಚಿಗಟಗಳಾಗುತ್ತವೆ. ಜೀವನಚಕ್ರ ಪೂರ್ಣಗೊಳ್ಳಲು ವಿವಿಧ ಜಾತಿಯ ಚಿಗಟಗಳಲ್ಲಿ ಹದಿನೇಳು ದಿನಗಳಿಂದ ಒಂದು ವರ್ಷದವರೆಗೂ ತಗುಲುತ್ತದೆ.

ಚಿಗಟ ಪ್ರಭೇದಗಳು ಬಹಳ. ಉತ್ತರ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದೇಶಗಳಲ್ಲಿ 209 ಪ್ರಭೇದಗಳು ಮತ್ತು 63 ಉಪಪ್ರಭೇದಗಳಿವೆ. ಪ್ರಪಂಚದ ವಿವಿಧ ಭೌಗೋಳಿಕ ಭಾಗಗಳಲ್ಲಿ 500ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಕೆಲವು ಮಾತ್ರ ಮಾನವನಿಗೆ ಪಿಡುಗಾಗಿ ಅವನ ದೇಹವನ್ನು ಆಶ್ರಯಿಸಿವೆ. ಕೆಲವು ಜಾತಿಯ ಚಿಗಟಗಳು ಪಕ್ಷಿ ಮತ್ತು ವನ್ಯಸ್ತನಿಗಳನ್ನು ಆಶ್ರಯಿಸಿವೆ. ಕೆಲವು ಚಿಗಟ ಪ್ರಭೇದಗಳು ಮೆಚ್ಚಿನ ಆಶ್ರಯದಾತ ಜೀವಿ ದೊರೆಯದಾಗ ಮಾನವನನ್ನು ಆಶ್ರಯಿಸುವುವು. ಅಂಥ ಚಿಗಟಗಳು ಮಾನವರಲ್ಲಿ ಕೆಲವು ಭಯಂಕರ ಸಾಂಕ್ರಾಮಿಕ ರೋಗಗಳನ್ನು ಹರಡುತ್ತವೆ.

ಇಲಿಗಳಲ್ಲಿ ಕಾಣಿಸುವ ಗೆಡ್ಡೆ ಪ್ಲೇಗು ಮತ್ತು ಮ್ಯೂರೈನ್ ಟೈಫಸ್ ಅಂಟು ರೋಗಗಳನ್ನು ಚಿಗಟಗಳು ಮಾನವರಿಗೂ ಹರಡುತ್ತವೆ. ನೋಸೋಫಿಲಸ್ ಫ್ಯಾಸಿಯೇಟಸ್ ಪ್ರಭೇದದ ಚಿಗಟಗಳು ಯೂರೋಪಿನ ಇಲಿಗಳಲ್ಲಿ ಪರಾವಲಂಬಿಗಳಾಗಿ ಜೀವಿಸುತ್ತವೆ. ಕ್ಸಿನೋಫಿಲ ಕಿಯೋಪಿನ್ ಪ್ರಭೇದ ವಿಶ್ವದ ಎಲ್ಲಾ ದೇಶಗಳಲ್ಲಿ ಜೀವಿಸುವುದಾದರೂ, ಉಷ್ಣಪ್ರದೇಶಗಳಲ್ಲಿ ಇದರ ವಾಸ ಹೆಚ್ಚು. ಇದು ಮಾನವನನ್ನು ನಿರಾಯಾಸವಾಗಿ, ನಿರ್ದಾಕ್ಷಿಣ್ಯವಾಗಿ ಕಡಿಯುತ್ತಿರುವುದರಿಂದ ರೋಗವನ್ನು ವ್ಯಾಪಕವಾಗಿ ಹರಡುತ್ತದೆ. ಇಲಿಗಳಂತೆ ಅಳಿಲು, ಮೊಲ ಮುಂತಾದ ದಂಶಕಗಳಿಗೂ ಪ್ಲೇಗು ಅಂಟುತ್ತದೆ. ಅವುಗಳಲ್ಲಿರುವ ರೋಗಾಣುವನ್ನು ಒಂದು ಪ್ರಾಣಿಯಿಂದ ಇನ್ನೊಂದು ಪ್ರಾಣಿಗೆ ಹರಡುವುದರ ಮೂಲಕ ರೋಗಾಣುಗಳ ಸಂತತಿಯನ್ನು ಮುಂದುವರಿಸಲು ಚಿಗಟಗಳು ಸಹಾಯಮಾಡುತ್ತವೆ. ಆದ್ದರಿಂದ ಇವುಗಳ ಉಪಟಳವನ್ನು ತಡೆಯಲು ಆಶ್ರಯದಾತ ಪ್ರಾಣಿಗಳನ್ನು ನಿಯಂತ್ರಿಸಬೇಕು. ಆಹಾರದ ಜೊತೆ ವಿಷ ಬೆರಸಿ, ಅವು ವಾಸಿಸುವ ಬಿಲಗಳಿಗೆ ವಿಷಾನಿಲವನ್ನು ತುಂಬುವುದು, ಅವು ಬಿಲಮಾಡಿಕೊಂಡು ಜೀವಿಸಲು ವಾಸದ ಮನೆಗಳ ಬಳಿ ಅವಕಾಶವಿರದಂತೆ ಕಾಂಕ್ರೀಟ್ ನೆಲ ಏರ್ಪಡಿಸಿ ಈ ಜೀವಿಗಳನ್ನು ನಿಯಂತ್ರಿಸ ಬೇಕು.

ಚಿಗಟಗಳು ಉಗ್ರ ರೀತಿಯ ಸಾಂಕ್ರಾಮಿಕ ರೋಗಗಳನ್ನು ಹರಡುವುದರ ಜೊತೆಗೆ ಮಾನವನ ದಿನ ನಿತ್ಯದ ಪಿಡುಗಾಗಿ ತೊಂದರೆ ಕೊಡುತ್ತವೆ. ಟೀನೊಸಿಫ್ಯಾಲಿಡೀಸ್ ಕ್ಯಾನಿಸ್ (ನಾಯಿ ಚಿಗಟ), ಟೀನೊಸಿಫ್ಯಾಲಿಡೀಸ್ ಫೆಲಿಸ್ ಎಂಬ ಬೆಕ್ಕಿನ ಚಿಗಟ ಪ್ಯೂಲೆಕ್ಸ್ ಇರಿಟನ್ಸ್ (ಮಾನವನ ಚಿಗಟಗಳು) ಮಾನವನಿಗೆ ತೀವ್ರ ರೀತಿಯ ಪಿಡುಗಾಗಿ ಪರಿಣಮಿಸಿವೆ. ಚಿಗಟ ಅಂಟಿದ ಪ್ರಾಣಿಗಳನ್ನು ಸಾಯಿಸುವುದರಿಂದ, ಮೊಟ್ಟೆಯೊಡೆದು ಹೊರ ಬರುವ ಮರಿಗಳನ್ನು ಮತ್ತು ಕೋಶಾವಸ್ಥೆಗಳನ್ನು ನಾಶಮಾಡುವುದರಿಂದ ಚಿಗಟಗಳ ಹಾವಳಿಯನ್ನು ಕಡಿಮೆ ಮಾಡಬಹುದು. ಮನುಷ್ಯ ವಾಸಿಸುವ ಮನೆಯ ಸಮೀಪ ಜೀವಿಸುವ ಅಥವಾ ಓಡಾಡುವ ಪ್ರಾಣಿಗಳ ದೇಹದಲ್ಲಿ ಅವು ಕಂಡುಬಂದರೆ ಅಂಥ ಪ್ರಾಣಿಗಳ ಮೈಮೇಲೆ ವಾರಕ್ಕೊಮ್ಮೆ ಕೀಟನಾಶಕ ಪುಡಿಯನ್ನು ಹಾಕಿ ಉಜ್ಜುವುದರಿಂದ ಚಿಗಟಗಳನ್ನು ಸಾಯಿಸಬಹುದು. ಮನೆಯ ಬಳಿ ಕಸಕಡ್ಡಿಗಳ ದೂಳು ತುಂಬಿರುವ ಕೊಟ್ಟಿಗೆ ಮತ್ತು ಸಂದಿಗೊಂದಿಗಳಲ್ಲಿ ಚಿಗಟಗಳಿದ್ದರೆ, ಕೀಟ ನಾಶಕ (ಉದಾ: ಕ್ರಿಯೊಸೋಟ್) ಎಣ್ಣೆ ಚಿಮುಕಿಸಬೇಕು ಅಥವಾ ನ್ಯಾಫ್ತಲೀನ್ ಪುಡಿಯನ್ನು ನೆಲದ ಮೇಲೆ ಹರಡಬೇಕು.

ಎಕಿಡ್ನಾಫೆಗಾ ಗ್ಯಾಲಿನೇಸೀ ಚಿಗಟ ಆಶ್ರಯದಾತ ಪ್ರಾಣಿಯ ಚರ್ಮಕ್ಕೆ ಬಲವಾಗಿ ಕಚ್ಚಿಕೊಂಡಿರುತ್ತದೆ. ಈ ಕಾರಣದಿಂದ ಇದನ್ನು ಸ್ಟಿಕ್ ಟೈಟ್ ಚಿಗಟ ಎಂದು ಕರೆಯುತ್ತಾರೆ. ಇದು ಕೋಳಿಗಳ ದೇಹಕ್ಕೆ ಅಂಟಿ ಅವುಗಳ ಸಾಮೂಹಿಕ ನಾಶಕ್ಕೆ ಕಾರಣವೆನಿಸಿದೆ. ನಾಯಿ, ಬೆಕ್ಕು ಮತ್ತು ಮನುಷ್ಯರಲ್ಲಿ ಇದು ವಾಸಿಸುತ್ತದೆ. ಡೆರಿಸ್ ಪುಡಿ ಅಥವಾ ಕಾರ್ಬೊಲೇಟೆಡ್ ವ್ಯಾಸಲೀನನ್ನು ಚರ್ಮಕ್ಕೆ ಹಚ್ಚಿಕೊಳ್ಳುವುದರಿಂದ ಇವನ್ನು ನಿವಾರಿಸಬಹುದು. ಚಿಗಟಗಳ ಕಡಿತ ಮಾನವನಿಗೆ ತೀವ್ರವಾದ ನೋವನ್ನುಂಟುಮಾಡುವುದಿಲ್ಲ. ಆದರೆ, ಸಾಧಾರಣವಾದ ಉರಿ ಮತ್ತು ಕಡಿತ ಉಂಟಾಗುತ್ತದೆ. ಮೆಂಥಲೇಟೆಡ್ ಅಥವಾ ಕಾರ್ಬೊಲೇಟೆಡ್ ವ್ಯಾಸಲೀನನ್ನು ಹಚ್ಚುವುದರಿಂದ ಉರಿಯನ್ನು ನಿವಾರಿಸಬಹುದು.

***

**ಚಿಟ್ಟೆ ಮೀನು:** ಆಳವಿಲ್ಲದ ನೀರಿನಲ್ಲಿ ಜೀವಿಸುವ ವರ್ಣರಂಜಿತ ದೇಹದ ಹಲವು ಜಾತಿಯ ಮೀನುಗಳಿಗೆ ಬಳಸುವ ಒಂದು ಸಾಮಾನ್ಯ ಹೆಸರು (ಬಟರ್ ಫ್ಲೈ ಫಿಷ್). ಆಸ್ಟಿಯೋಗ್ಲಾಸಿಫಾರ್ಮಿಸ್ ಗಣದ ಆಸ್ಟಿಯೋಗ್ಲಾಸಿಡೆ ಕುಟುಂಬದ ಪ್ಯಾಂಟೊಡಾನ್ ಬುಕ್‌ಹೋಲ್ಟ್ಸೈ (ಆಫ್ರಿಕದ ಚಿಟ್ಟೆಮೀನು), ಕೀಟೋಡಾಂಟಿಡೆ ಕುಟುಂಬದ ಕೀಟೊಡಾನ್ ಆರ್ನೇಟಿಸಿಸಮ್ (ವಿದೂಷಕ ಚಿಟ್ಟೆಮೀನು), ಫಾರ್ಸಿಪೈಜರ್ ಲಾಂಜಿರಾಸ್ಟ್ರಿಸ್ (ಉದ್ದ ಮೂತಿಯ ಚಿಟ್ಟೆ ಮೀನು), ಹೆನಿಯೋಕಸ್ (ಇಂಡೊ–ಪೆಸಿಫಿಕ್ ಚಿಟ್ಟೆ ಮೀನು) ಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಆಫ್ರಿಕದ ಚಿಟ್ಟೆಮೀನು ತುಂಬ ಚಿಕ್ಕದು; ಇದರ ಉದ್ದ 12 ಸೆಂಮೀ. ಸಾಮಾನ್ಯವಾಗಿ ನೀರಿನ ಮೇಲ್ಮೈಯ ಕೆಳಗೆ ಚಲಿಸದೆ ತೂಗುತ್ತಿರುವಂತೆ ನಿಂತಿರುತ್ತದೆ. ಆದರೆ ಆಗಾಗ ನೀರಿನಿಂದ 1.5–1.8 ಮೀ ದೂರಕ್ಕೆ ನೆಗೆಯಬಲ್ಲುದು. ಇದರಿಂದಾಗಿ ಗಾಜಿನ ತೊಟ್ಟಿಯಲ್ಲಿ ಸಾಕುವಾಗ ತೊಟ್ಟಿಯ ಮೇಲ್ಭಾಗವನ್ನು ಮುಚ್ಚಬೇಕಾಗುತ್ತದೆ. ನೀರಿನ ಮೇಲೆ ವಾಸಿಸುವ ಅಥವಾ ನೀರಿಗೆ ಬಂದು ಬೀಳುವ ಚಿಟ್ಟೆಗಳನ್ನು ಹಿಡಿದು ತಿಂದು ಜೀವಿಸುತ್ತದೆ. ಕೀಟೊಡಾಂಟಿಡೆ ಕುಟುಂಬಕ್ಕೆ ಸೇರಿದ ಚಿಟ್ಟೆ ಮೀನುಗಳು ಉಷ್ಣವಲಯದ ಸಮುದ್ರಗಳ ಹವಳದ ಗೂಡುಗಳಲ್ಲಿ ವಾಸಿಸುತ್ತವೆ. ಎಲ್ಲುವೂ ಬಲು ವರ್ಣರಂಜಿತ. ಇವುಗಳ ಬೆನ್ನಿನ, ಬಾಲದ ಮತ್ತು ಗುದದ್ವಾರದ ಬಳಿಯ ರೆಕ್ಕೆಗಳ ಮುಂಭಾಗದಲ್ಲಿ ಅನೇಕ ಮುಳ್ಳುಗಳಿರುತ್ತವೆ. ಈ ಮುಳ್ಳುಗಳ ಮೃದುವಾದ ರೇಖೆಗಳು ಬಾಲದ ರೆಕ್ಕೆಯ ಬಳಿ ದೇಹದ ಸುತ್ತ ಸುತ್ತಿಕೊಳ್ಳುವಂತೆ ಚಾಚಿವೆ. ಎದ್ದು ಕಾಣುವ ಬಣ್ಣಗಳ ಜೊತೆಗೆ ಈ ಮೀನುಗಳ ಮೂತಿ ಉದ್ದವಾಗಿ ಚಾಚಿಕೊಂಡಿರುತ್ತದೆ. ವಿದೂಷಕ ಚಿಟ್ಟೆ ಮೀನು ಪೆಸಿಫಿಕ್ ಸಾಗರದ ಉಷ್ಣಪ್ರದೇಶಗಳಲ್ಲಿ ವಾಸಿಸುತ್ತದೆ. ಅದರ ಮೂತಿ



ವಿದೂಷಕ ಚಿಟ್ಟೆ ಮೀನು



**ಉದ್ದ ಮೂತಿಯ ಚಿಟ್ಟೆ ಮೀನು**

ಮೇಲಕ್ಕೆ ಎದ್ದುಕೊಂಡಂತಿದೆ. ಫಾರ್ಸಿಪೈಜರ್ ಜಾತಿಯ ಮೀನುಗಳ ಮೂತಿ ವಿಪರೀತ ಉದ್ದ. ಇದರ ತುದಿಯಲ್ಲಿ ಮೊನೆಯಾದ ಮೂಗೂ ವಿವಿಧ ರೀತಿಯಲ್ಲಿ ಮಾರ್ಪಟ್ಟಿರುವ

ಬಾಯೂ ಉಂಟು. ಕೆಲವು ಚಿಟ್ಟೆ ಮೀನುಗಳ ಹಲ್ಲುಗಳು ಉಳಿಯಂತಿವೆ. ಇವುಗಳ ಸಹಾಯದಿಂದ ಮೀನುಗಳು ಹವಳದ ಕುಡಿಗಳನ್ನು ಚಿವುಟಿಕೊಂಡು ಕಬಳಿಸುತ್ತವೆ. ಲಾಂಜಿರಾಸ್ಟ್ರಸ್ ಪ್ರಭೇದದ ಚಿಟ್ಟೆಮೀನು ತನ್ನ ನೀಳವಾದ ಮೂತಿಯ ಸಹಾಯದಿಂದ ಹವಳದ ಗೂಡಿನೊಳಕ್ಕೆ ಹೊಕ್ಕಿರುವ ಸಣ್ಣಪುಟ್ಟ ಕಠಿಣಚರ್ಮಿಗಳನ್ನು ಹುಡುಕಿ ತೆಗೆದು ತಿನ್ನುವುದುಂಟು. ಹಿಂದೂ ಮತ್ತು ಪೆಸಿಫಿಕ್ ಸಾಗರಗಳಲ್ಲಿ ವಾಸಿಸುವ ಹೆನಿಯೋಕಸ್ ಜಾತಿಯ ಚಿಟ್ಟೆ ಮೀನುಗಳಲ್ಲಿ ಬೆನ್ನಿನ ಮೇಲಿನ ಒಂದು ಮುಳ್ಳು ನೀಳವಾದ ದಾರದಂತೆ ಮಾರ್ಪಟ್ಟಿರುತ್ತದೆ. ***

**ಚಿಟ್ಟೆಗಳು ಮತ್ತು ಪತಂಗಗಳು:** ಆರ್ತ್ರಾಪೊಡ ವಂಶದ, ಇನ್ಸೆಕ್ಟ ವರ್ಗದ, ಲೆಪಿಡಾಪ್ಟರ ಗಣದ ಸದಸ್ಯರು. ಆಂಗ್ಲ ಭಾಷೆಯಲ್ಲಿ ಬಟರ್ ಫ್ಲೈಸ್ ಮತ್ತು ಮಾತ್ಸ್ ಎನ್ನುವರು. ವಿಕಾಸದ ದೃಷ್ಟಿಯಿಂದ ಇವು ಯಶಸ್ವಿ ಕೀಟಗಳು. ಇವುಗಳ ಸಂಖ್ಯೆ ಅಪಾರ. ಸು. 100,000 ಜಾತಿಯ ಚಿಟ್ಟೆ ಮತ್ತು ಪತಂಗಗಳಿವೆ. ಸಂಖ್ಯೆ ದೃಷ್ಟಿಯಿಂದ ಇವಕ್ಕೆ ಕೀಟವರ್ಗದಲ್ಲಿ ಮತ್ತು ಪ್ರಾಣಿ ಜಗತ್ತಿನಲ್ಲಿ ಎರಡನೆಯ ಸ್ಥಾನ ಇದೆ.

ಇವು ವರ್ಣಮಯ ದೇಹರಚನೆಯಿಂದಾಗಿವೆ. ಸುಂದರ ಮೈಬಣ್ಣವಿರುವುದರಿಂದ ಇವು ಜನಪ್ರಿಯ. ಚಿಟ್ಟೆ ಮತ್ತು ಪತಂಗಗಳಲ್ಲಿ ಸಾಧಾರಣವಾಗಿ ಕಾಣುವ ಸಾಮಾನ್ಯ ಲಕ್ಷಣಗಳು: 1. ರೆಕ್ಕೆ, ದೇಹ, ಹಾಗೂ ಉಪಾಂಗಗಳ ಮೇಲಿರುವ ಹುರುಪೆಗಳ ಹೊದಿಕೆ. 2. ತಲೆಯ ಮುಂಭಾಗದಲ್ಲಿ ಸುರುಳಿಸುತ್ತಿರುವ ಸೊಂಡಿಲು. 3. ರೂಪಪರಿವರ್ತನೆ ಸಂಪೂರ್ಣವಾಗಿದೆ. 4. ಡಿಂಬಗಳಿಗೆ (ಕಂಬಳಿ ಹುಳುಗಳು) ಮೂರು ಜೊತೆ ಕಾಲುಗಳು ಎದೆಭಾಗದಲ್ಲಿ ಮತ್ತು 4 ಜೊತೆ ಕಾಲುಗಳು ಉದರ ಭಾಗದಲ್ಲಿವೆ. 5. ಪ್ಯೂಪ (ಕೋಶಾವಸ್ಥೆ) ಗಳ ದೇಹರಚನೆ ಆಬ್‌ಟೆಕ್ಟೆಡ್ (ದೇಹದ ಸುತ್ತ ತೆಳುವಾದ ಕೋಶವೊಂದು ಸುತ್ತುವರಿದಿದ್ದು ಒಳಗಿನ ಅವಯವಗಳು ಹೊರಗೆ ಮಸುಕು ಮಸುಕಾಗಿ ಕಾಣುವ) ರೀತಿಯದು.

ಪ್ರೌಢಚಿಟ್ಟೆಯ ದೇಹರಚನೆ : ಚಿಟ್ಟೆಯ ದೇಹದಲ್ಲಿ ಮುಖ್ಯವಾಗಿ ತಲೆ, ತೋರ್‍ಯಾಕ್ಸ್ (ಎದೆ) ಮತ್ತು ಉದರ (ಅಬಡಮನ್) ಎಂಬ ಮೂರು ಭಾಗಗಳಿವೆ. ತಲೆಯಲ್ಲಿ ಒಂದು ಜೊತೆ ಕಣ್ಣುಗಳು, ಆಂಟೆನಾ (ಕುಡಿಮೀಸೆ) ಮತ್ತು ಸೊಂಡಿಲು ಇವೆ. ಕಣ್ಣುಗಳು ಸಂಯುಕ್ತ ಮಾದರಿಯವು. ಅಮಟಿಡಿಯಗಳೆಂಬ ಸಾವಿರಾರು ಸೂಕ್ಷ್ಮ ಘಟಕಗಳಿಂದ ರಚಿತವಾಗಿವೆ. ಪ್ರತಿಯೊಂದು ಅಮಟಿಡಿಯಮಿನಲ್ಲೂ ಪ್ರತ್ಯೇಕ ಮಸೂರ, ದ್ಯುತಿಸಂವೇದಿ ಉಪಕರಣವೂ ಮಿದುಳಿನ ದೃಷ್ಟಿಹಾಲೆಯೊಂದಿಗೆ ಸಂಪರ್ಕ ಕಲ್ಪಿಸುವ ನರವೂ ಇವೆ. ಸಂಯುಕ್ತ ಕಣ್ಣುಗಳ ಮೇಲೆ ಒಂದೊಂದು ಸರಳ ಕಣ್ಣು ಇವೆ. ಇವಕ್ಕೆ ಆಸೆಲೈ ಎಂದು ಹೆಸರು. ಆಂಟೆನಾಗಳು ವಿಭಿನ್ನವಾಗಿವೆ. ಕೆಲವು ಜಾತಿಯ ಪತಂಗಗಳಲ್ಲಿ ಇವು ಸರಳವಾಗಿವೆ. ತುದಿ ಚೂಪಾಗಿರುವ ದಾರದಂತಿದೆ. ಇನ್ನು ಕೆಲವು ಪ್ರಭೇದಗಳಲ್ಲಿ ಅಗಲವಾಗಿ ಹರಡಿರುವ ಗರಿಗಳಂತಿವೆ. ಕೆಲವು ಜಾತಿಯ ಚಿಟ್ಟೆಗಳಲ್ಲಿ ಗದೆಯಂತೆ ಇರುತ್ತದೆ. ಆಂಟೆನಾಗಳ

**ಚಿಟ್ಟೆಯ ಆಂಟೆನಾ**

**ಪತಂಗದ ಆಂಟೆನಾ**

ಮುಖ್ಯಕಾರ್ಯ ವಾಸನೆ ಗ್ರಹಿಸುವುದು. ಕೆಲವೊಮ್ಮೆ ಆಂಟೆನಾಗಳ ತುದಿಯಲ್ಲಿ ಸೂಕ್ಷ್ಮವಾದ ಕೂದಲುಗಳಿದ್ದು, ಸ್ಪರ್ಶಗ್ರಾಹಿ ಅಥವಾ ಶಬ್ದಗ್ರಾಹಿಗಳಾಗಿ ಕಾರ್ಯನಿರ್ವಹಿಸುತ್ತವೆ. ಎರಡು ಬಗೆಯ ಪ್ಯಾಲ್ಪ್‌ಗಳಿವೆ. 1. ಮ್ಯಾಕ್ಸಿಲರಿ ಪ್ಯಾಲ್ಪ್ ಮತ್ತು 2. ಲೇಬಿಯಲ್ ಪ್ಯಾಲ್ಪ್. ಮ್ಯಾಕ್ಸಿಲರಿ ಪ್ಯಾಲ್ಪ್‌ಗಳು ನಿಮ್ನರೀತಿಯ ಪತಂಗಗಳಲ್ಲಿ ಲೇಬಿಯಲ್ ಪ್ಯಾಲ್ಪ್‌ಗಳಷ್ಟೇ ದೊಡ್ಡವು. ಕೆಲವು ಪ್ರಭೇದದ ಚಿಟ್ಟೆ-ಪತಂಗಗಳಲ್ಲಿ ಇವು ಕ್ಷೀಣಸಿರುತ್ತವೆ ಅಥವಾ ಸಂಪೂರ್ಣವಾಗಿ ನಶಿಸಿಹೋಗಿವೆ. ಮೂಲತಃ ಇವು ಘ್ರಾಣೇಂದ್ರಿಯಗಳು. ರುಚಿಗ್ರಾಹಿಗಳಾಗಿ ಕೆಲಸ ನಿರ್ವಹಿಸುತ್ತವೆ.

ಚಿಟ್ಟೆಗಳಲ್ಲಿ ಮತ್ತು ಕೆಲವು ಪತಂಗಗಳಲ್ಲಿ ಮೊದಲನೆಯ ಮ್ಯಾಕ್ಸಿಲ ಜೋಡಿಯ ಗ್ಯಾಲಿಯ ಎಂಬ ಭಾಗಗಳು ತುಂಬ ಉದ್ದವಾಗಿವೆ. ಇವು ಪರಸ್ಪರ ಕೂಡಿಕೊಂಡು ಕೊಳವೆಯಾಕಾರದ ಸೊಂಡಿಲಾಗಿ ರೂಪುಗೊಳ್ಳುತ್ತವೆ. ಇದರ ಸಹಾಯದಿಂದ ಚಿಟ್ಟೆಗಳು ದ್ರವರೂಪದ ಆಹಾರವನ್ನು ಹೀರಿಕೊಳುತ್ತವೆ. ಆಹಾರ ಸೇವಿಸುವ ಕಾಲದಲ್ಲಿ ಇದನ್ನು ತಲೆಯ ಕೆಳಗೆ ಸುರುಳಿಸುತ್ತಿ ಕೊಂಡಿರುತ್ತವೆ. ಕೆಲವು ಪತಂಗಗಳಲ್ಲಿ ಸೊಂಡಿಲು ಅಂಕುರ ರೂಪದಲ್ಲಿದ್ದು, ಸಂಪೂರ್ಣವಾಗಿ ಅನುಪಯುಕ್ತವಾಗಿದೆ. ಆದರೆ, ಕೆಲವು ಪ್ರಭೇದಗಳಲ್ಲಿ ಸೊಂಡಿಲು 25 ಸೆಂಮೀ ಉದ್ದವಾಗಿದೆ. ಉದಾ: ಮಡಗಾಸ್ಕರಿನ ಮ್ಯಾಕ್ರೊಸಿಲಿಯ ಮಾರ್ಗಾನಿ ಪ್ರೆಡಿಕ್ಟ (ಡೇಗೆ ಪತಂಗ).

ತೋರ್‍ಯಾಕ್ಸ್ : ಇದರಲ್ಲಿ ಪ್ರೋತೋರ್‍ಯಾಕ್ಸ್ , ಮೀಸೊತೋರ್‍ಯಾಕ್ಸ್ ಮತ್ತು ಮೆಟತೋರ್‍ಯಾಕ್ಸ್ ಖಂಡಗಳಿವೆ. ಪ್ರತಿಖಂಡದಲ್ಲಿ ಒಂದೊಂದು ಜೊತೆ ಕಾಲುಗಳಿವೆ. ಎಲ್ಲ ಬಗೆಯ ಪತಂಗಗಳಲ್ಲಿ ಮತ್ತು ಕೆಲವು ಚಿಟ್ಟೆಗಳಲ್ಲಿ ಗಂಡು ಹೆಣ್ಣುಗಳೆರಡರಲ್ಲೂ ಒಟ್ಟು 6 ಕಾಲುಗಳಿವೆ. ಆದರೆ, ಮಿಕ್ಕ ಪ್ರಭೇದಗಳಲ್ಲಿ ಕಾಲುಗಳ ಸಂಖ್ಯೆ ಕಡಿಮೆ. ಉದಾ: ಲೈಸೀನಿಡೆ, ಎರಿಸೈನಿಡೇ, ಲೈಬಿತಿಡೆ ಕುಟುಂಬದ ಗಂಡು ಚಿಟ್ಟೆಗಳ ಮುಂದಿನ ಜೊತೆ ಕಾಲುಗಳು ಕ್ಷೀಣವಾಗಿವೆ. ಆದರೆ ಹೆಣ್ಣುಗಳಲ್ಲಿ ಸರಿಯಾಗಿವೆ. ಉಳಿದ ಕುಟುಂಬಗಳ, ಗಂಡು ಮತ್ತು ಹೆಣ್ಣು ಚಿಟ್ಟೆಗಳೆರಡರಲ್ಲೂ ಮುಂದಿನ ಕಾಲುಗಳು ಬಹಳವಾಗಿ ಕ್ಷೀಣಿಸಿವೆ. ಇದರಿಂದಾಗಿ ಹೆಚ್ಚು ಮುಂದುವರಿದ ಚಿಟ್ಟೆಗಳು ಕಾರ್ಯನಿರ್ವಹಣೆಯ ದೃಷ್ಟಿಯಿಂದ 4 ಕಾಲಿನ ಜೀವಿಗಳಾಗಿವೆ. ಒಂದೊಂದು ಕಾಲಿನಲ್ಲೂ ಕಾಕ್ಸ, ಟ್ರೋಕ್ಯಾಂಟರ್, ಫೀಮರ್, ಟಿಬಿಯ ಮತ್ತು ಟಾರ್ಸಸ್ (ಪಾದ) ಎಂಬ 5 ಭಾಗಗಳಿವೆ. ಟಾರ್ಸಸಿನ ಕೆಳಮೈಮೇಲೆ ಮೆತ್ತೆಗಳಂಥ ಕೆಲವು ರಚನೆಗಳು, ತುದಿಯಲ್ಲಿ ದೃಢವಾದ ಮತ್ತು ಬಾಗಿದ ಉಗುರುಗಳಂಥ ರಚನೆಗಳಿವೆ. ಮುಂದಿನಕಾಲುಗಳ ಟಿಬಿಯದಲ್ಲಿ ಎಪಿಫೈಸಿಸ್ ಅಥವಾ ಸ್ಟ್ರೈಜಿಲ್ ಎಂಬ ಅಂಗವಿದೆ. ಆಂಟೆನಾ ಮತ್ತು ಸೊಂಡಿಲುಗಳನ್ನು ಶುಚಿಮಾಡಲು ಇದು ಬಳಕೆಯಾಗುತ್ತದೆ. ಮೀಸೊತೋರ್‍ಯಾಕ್ಸಿನಲ್ಲಿ ಒಂದು ಜೊತೆ ಮುಂದಿನ ರೆಕ್ಕೆಗಳು, ಮೆಟತೋರಾಕ್ಸಿನಲ್ಲಿ ಒಂದು ಜೊತೆ ಹಿಂದಿನ ರೆಕ್ಕೆಗಳು ಇವೆ. ಪ್ರೋತೋರ್‍ಯಾಕ್ಸಿನಲ್ಲಿ ಒಂದು ಜೊತೆ ಸ್ವೈರಕಲ್ಲುಗಳು ಮೆಟತೋರ್‍ಯಾಕ್ಸಿನಲ್ಲಿ ಒಂದು ಜೊತೆ ಟಿಂಪ್ಯಾನಗಳಿವೆ. ಟಿಂಪ್ಯಾನಗಳು ಶ್ರವಣೇಂದ್ರಿಯಗಳಾಗಿ ವರ್ತಿಸುತ್ತವೆ.

ರೆಕ್ಕೆಗಳು ಡಿಂಬಾವಸ್ಥೆಯಲ್ಲಿಯೇ ದೇಹದೊಳಗೆ ಸಂಚಿಗಳ ರೂಪದಲ್ಲಿ ಹುಟ್ಟಿ, ಅನಂತರ ಹೊರಬಂದು, ಕೊನೆಗೆ ಪ್ರೌಢಾವಸ್ಥೆಯಲ್ಲಿ ಸಂಪೂರ್ಣವಾಗಿ ದೇಹದ ಹೊರಗೆ ಕಾಣಿಸಿಕೊಳ್ಳುತ್ತವೆ. ಬೆಳೆಯುತ್ತಿರುವ ಸಮಯದಲ್ಲಿ ಟ್ರೇಕಿಯಗಳ ಸಂಕೀರ್ಣವ್ಯವಸ್ಥೆಯ ಮೂಲಕ ಇವಕ್ಕೆ ಗಾಳಿ ಪೂರೈಕೆಯಾಗುತ್ತದೆ. ಸಂಪೂರ್ಣವಾಗಿ ರೂಪುಗೊಳ್ಳುವ ಹೊತ್ತಿಗೆ ಮುಖ್ಯ ಟ್ರೇಕಿಯಗಳು ಮತ್ತು ಅವುಗಳ ಕವಲುಗಳು ದೃಢವಾಗುತ್ತ ಕೊಳವೆರೂಪದ ನಾಳಗಳಾಗಿ ಪರಿವರ್ತಿತವಾಗುತ್ತವೆ. ಇವುಗಳಲ್ಲಿ ನರಗಳು, ರಕ್ತನಾಳಗಳು ಹಬ್ಬುತ್ತವಲ್ಲದೆ, ಈ ನಾಳಗಳು ರೆಕ್ಕೆಗಳಿಗೆ ಬಲವನ್ನು ಕೊಡುತ್ತವೆ. ನಾಳಗಳ ಸಂಖ್ಯೆ ಮತ್ತು ಜೋಡಣಾಕ್ರಮಗಳು ಚಿಟ್ಟೆ ಹಾಗೂ ಪತಂಗಗಳ ವರ್ಗೀಕರಣದಲ್ಲಿ ಬಳಸುವ ಬಹು ಉಪಯುಕ್ತ ಲಕ್ಷಣಗಳಾಗಿವೆ. ಲೆಪಿಡಾಪ್ಟರ ಗಣದ ವಿವಿಧ ಗುಂಪುಗಳಲ್ಲಿ ರೆಕ್ಕೆಗಳ ಸಂಖ್ಯೆ ಹಾಗೂ ಗಾತ್ರಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ವಿಕಾಸದ ದೃಷ್ಟಿಯಿಂದ ಹಿಂದುಳಿದವೆನ್ನಲಾದ ಪತಂಗಗಳನ್ನು ಒಳಗೊಂಡ ಉಪಗಣ ಹೋಮೋನ್ಯೂರದಲ್ಲಿ ಮುಂದಿನ ಹಾಗೂ ಹಿಂದಿನ ಜೊತೆ ರೆಕ್ಕೆಗಳೆರಡೂ ಗಾತ್ರದಲ್ಲಿ ಮತ್ತು ನಾಳವಿನ್ಯಾಸದಲ್ಲೂ ಸಮಾನವಾಗಿವೆ. ಇವೆರಡು ಜೊತೆ ರೆಕ್ಕೆಗಳ ಬಡಿತದಲ್ಲಿ ಸುಸಂಘನೆಯನ್ನು ಸಾಧಿಸಲು ಸಾಕಷ್ಟು ಅನುಕೂಲತೆ ಇಲ್ಲ. ಮುಂದಿನ ರೆಕ್ಕೆಯ ಹಿಂದಿನ ಅಂಚಿನ ಮೇಲಿರುವ ಬೆರಳಿನ ಆಕಾರದ ಜೂಗಮ್ ರಚನೆ, ಹಿಂದಿನ ರೆಕ್ಕೆಯ ಮುಂದಿನ ಅಂಚಿನೊಳಗೆ ನುಸುಳಿ ಹಿಡಿದುಕೊಳ್ಳುತ್ತದೆ. ಆದರೆ ಈ ಬಗೆಯ ಸಂಪರ್ಕ ದುರ್ಬಲವಾಗಿದೆ. ಉಪಗಣ ಹೆಟರೋನ್ಯೂರದಲ್ಲಿ ರೆಕ್ಕೆಗಳು ವಿಭಿನ್ನ ರೀತಿಯವು. ಮುಂದಿನ ರೆಕ್ಕೆಗಳು ದೊಡ್ಡಗಾತ್ರದುವು, ಹಿಂದಿನ ರೆಕ್ಕೆಗಳು ಚಿಕ್ಕಗಾತ್ರದುವು. ಕೆಲವು ಪತಂಗ ಹಾಗೂ ಚಿಟ್ಟೆಗಳಲ್ಲಿ ಹಿಂದಿನ ರೆಕ್ಕೆಯ ಬುಡಭಾಗದಲ್ಲಿ ಮುಂದಿನ ಅಂಚಿನ ಮೇಲೆ ಒಂದು ಬಿರುಗೂದಲಿದೆ. ಇದಕ್ಕೆ ಫ್ರೆನ್ಯುಲಮ್ ಎನ್ನುವರು. ಇದು ಮುಂದಿನ ರೆಕ್ಕೆಯ ಪ್ರಧಾನ ನಾಳವೊಂದರ ಮೇಲೆ ಸ್ಥಿತವಾಗಿರುವ ರೆಟಿನ್ಯಾಕ್ಯುಲಮ್ ಎಂಬ ರಚನೆಯೊಳಗೆ ತೂರಿಕೊಂಡು ರೆಕ್ಕೆಗಳ ನಡುವೆ ಸಂಪರ್ಕವನ್ನು ಕಲ್ಪಿಸುತ್ತದೆ. ಹೆಚ್ಚು ಮುಂದುವರಿದ ಚಿಟ್ಟೆಗಳಲ್ಲಿ ಫ್ರೆನ್ಯುಲಮ್ ಇಲ್ಲ. ಕೆಲವು ಪತಂಗಗಳಲ್ಲಿ (ಉದಾ: ಮೈಕ್ರೋಲೆಪಿಡಾಪ್ಟರದ ಹಲವಾರು ಕುಟುಂಬಗಳಲ್ಲಿ) ರೆಕ್ಕೆಗಳು ತುಂಬ ಕಿರಿದಾಗಿವೆ. ಇಂಥ ಜೀವಿಗಳು ಸಹಜವಾಗಿಯೇ ಚೆನ್ನಾಗಿ ಹಾರಲಾರವು. ಆದರೆ, ಚಿಟ್ಟೆಗಳಲ್ಲಿ ಬಲು ದೊಡ್ಡ ರೆಕ್ಕೆಗಳಿವೆ. ಉದಾ: ಭಾರತದಲ್ಲಿರುವ ಹಕ್ಕಿರೆಕ್ಕೆ ಚಿಟ್ಟೆಯ (ಟ್ರಾಯ್ಡಿಸ್ ಹೆಲೀನ ಮಿನೋಸ್) ರೆಕ್ಕೆಯ ಅಗಲ ಸು. 190 ಮೀಮೀ. ದಕ್ಷಿಣ ಭಾರತದ ಟ್ರೀ ನಿಂಫ್ (ಹೆಸ್ಟಿಯ), ಬ್ಲೂ ಮಾರ್ಮೋನ್, ಜಂಗಲ್ ಕ್ವೀನ್ ಚಿಟ್ಟೆಗಳ ರೆಕ್ಕೆಗಳ ಗಾತ್ರ 150-160 ಮೀಮೀ. ಕೆಲವು ಗುಂಪುಗಳ ಹೆಣ್ಣು ಚಿಟ್ಟೆಗಳಿಗೆ ರೆಕ್ಕೆಗಳೇ ಇರುವುದಿಲ್ಲ. ಉದಾ: ಬ್ಯಾಗ್‌ವರ್ಮ್ ಪತಂಗಗಳು, ನೋಟೋಲೋಫಸ್, ಇರೋಪೋಕ, ಬ್ರಾಕರೋವ ಡ್ರೇಗಿ, ಆಲ್ಲೋಫೈಲ, ಪ್ಯಾಲಿಯಾಕ್ರಿಟ, ನೈಸಿಯ, ಎರ್‍ಯಾನಿಸ್ ಮುಂತಾದುವು. ಇಂಥ ಹೆಣ್ಣು ಚಿಟ್ಟೆಗಳು ತಾವಿರುವ ಸ್ಥಳಗಳಿಂದ ಎಲ್ಲೂ ಕದಲುವುದಿಲ್ಲ. ಕೆಲವು ಸಲ ಕೋಶದೊಳಗೇ

ಇದ್ದುಕೊಂಡು ಮೊಟ್ಟೆಯಿಡುತ್ತವೆ. ಸಾಗರಗಳಲ್ಲಿನ ಸಣ್ಣಪುಟ್ಟ ದ್ವೀಪಗಳಲ್ಲಿ ವಾಸಮಾಡುವ ಪ್ರಭೇದಗಳಲ್ಲಿ ಇಂಥ ರೆಕ್ಕೆರಹಿತ ಸ್ಥಿತಿ ಹೆಚ್ಚಾಗಿದೆ. ಇಂಥ ದ್ವೀಪಗಳಲ್ಲಿ ಗಾಳಿಯ ಹೊಡೆತ ಜೋರಾಗಿರುವುದರಿಂದ ಅಲ್ಲಿನ ಚಿಟ್ಟೆಗಳು ಸಮುದ್ರದೊಳಕ್ಕೆ ಕೊಚ್ಚಿ ಹೋಗಿ ಸಾಯುವ ಸಂಭವ ಹೆಚ್ಚು. ಈ ಸಾಧ್ಯತೆಯನ್ನು ತಪ್ಪಿಸುವ ಸಲುವಾಗಿ ಇಲ್ಲಿನ ಹೆಣ್ಣು ಚಿಟ್ಟೆಗಳಿಗೆ ರೆಕ್ಕೆಯಿಲ್ಲ. ರೆಕ್ಕೆಗಳ ಬಡಿತ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹಾರು ಸ್ನಾಯು (ಫ್ಲೈಟ್ ಮಸ಼ಲ್) ಗಳಿಂದ ನಿಯಂತ್ರಿತವಾಗಿದೆ. ಸಾಮಾನ್ಯವಾಗಿ ಒಂದು ಚಿಟ್ಟೆ ಸೆಕೆಂಡಿಗೆ 8–12 ಸಲ ರೆಕ್ಕೆ ಬಡಿಯುತ್ತದೆ. ಆದರೆ ಕೆಲವು ಪತಂಗಗಳು (ಉದಾ: ಯೂರೋಪಿಯನ್ ಡೇಗೆಪತಂಗ–ಮ್ಯಾಕ್ರೊಕಾಸ) ಸೆಕೆಂಡಿಗೆ 62–85 ಸಲ ರೆಕ್ಕೆ ಬಡಿಯುತ್ತದೆ. ಹಾರುವಿಕೆಯ ವೇಗವೂ ವ್ಯತ್ಯಾಸವಾಗಿದೆ. ಉದಾ: ಕ್ಯಾಬೇಜ್ ಚಿಟ್ಟೆ ಗಂಟೆಗೆ 9 ಕಿಮೀ ವೇಗದಲ್ಲಿ ಸಾಗಿದರೆ, ಪೇಂಟೆಡ್ ಲೇಡಿ ಚಿಟ್ಟೆ ಗಂಟೆಗೆ 24 ಕಿಮೀ ವೇಗದಲ್ಲೂ ಡೇಗೆಪತಂಗಗಳು ಗಂಟೆಗೆ 50 ಕಿಮೀ ವೇಗದಲ್ಲೂ ಸಾಗುತ್ತವೆ.

ಹುರುಪೆಗಳು : ಚಿಟ್ಟೆ ಮತ್ತು ಪತಂಗಗಳ ದೇಹ. ಉಪಾಂಗಗಳು ಹಾಗೂ ರೆಕ್ಕೆಗಳನ್ನೆಲ್ಲಾ ಸೂಕ್ಷ್ಮಕೂದಲಿನಂತೆ ಆವರಿಸಿರುವ ರಚನೆಗಳೇ ಹುರುಪೆಗಳು. ಪ್ರತಿಯೊಂದು ಹುರುಪೆಯು ಒಂದು ಟೊಳ್ಳಾದ ಬೃಹತ್ ಕೋಶ. ಒಳಗೆ ಗಾಳಿ ತುಂಬಿಕೊಂಡಿರುವುದರಿಂದ ಇದು ಬಲು ಹಗುರ ಮತ್ತು ಉಷ್ಣತಾ ನಿರೋಧಿಯಾಗಿದೆ. ಮನೆಯ ಮಾಡಿನ ಹೆಂಚುಗಳಂತೆ ಹುರುಪೆಗಳು ಜೋಡಣೆಗೊಂಡಿವೆ. ಇವು ಒಂದೇ ತೆರನಾಗಿಲ್ಲ. ಕೆಲವು ಅಂಡಾಕಾರ, ಅಥವ ಗುಂಡಗಿದ್ದರೆ, ಇನ್ನು ಕೆಲವು ಉದ್ದವಾಗಿದ್ದು, ಭಲ್ಲೆಯಾಕಾರವಾಗಿವೆ ಅಥವಾ ದಂತಿತವಾಗಿವೆ. ಗಂಡು ಚಿಟ್ಟೆಗಳ ರೆಕ್ಕೆಗಳ ಮೇಲೆ ಆಂಡ್ರೊಕೋನಿಯ ಎಂಬ ಹೆಸರಿನ ವಿಶೇಷ ಹುರುಪೆಗಳಿವೆ. ಇವು ಸಂತಾನೋತ್ಪತ್ತಿ ಸಮಯದಲ್ಲಿ ಒಂದು ಬಗೆಯ ವಾಸನೆಯನ್ನು ಹೊರಸೂಸುತ್ತವೆ. ಇದರಿಂದ ಹೆಣ್ಣುಗಳು ಆಕರ್ಷಿತವಾಗಿ ಗಂಡುಗಳೆಡೆಗೆ ಬರುತ್ತವೆ.

ಉದರಭಾಗ: ಉದರ ಬಹಳ ಸರಳವಾಗಿದೆ. ಇದರ ಮೊದಲ 8 ಖಂಡಗಳಲ್ಲಿ ತಲಾ ಒಂದು ಜೊತೆ ಸ್ಪೈರಕಲ್ಲುಗಳಿವೆ. ಇದರ ಹಿಂತುದಿಯಲ್ಲಿ ಗುದದ್ವಾರ ಮತ್ತು ಜನನಾಂಗಗಳಿವೆ. ಆಂತರಿಕವಾಗಿ ಉದರಭಾಗ ಬಹುಮುಖ್ಯ ಅಂಗಗಳಿಂದ ತುಂಬಿಹೋಗಿದೆ. ವಿಸರ್ಜನಾಂಗಗಳಾದ ಮಾಲ್ಫೀಗಿಯನ್ ಕೊಳವೆಗಳು ರಕ್ತದಿಂದ ಅನುಪಯುಕ್ತ ಸಸಾರಜನಕ ವಸ್ತುಗಳನ್ನು ತೆಗೆದುಕೊಂಡು ಕರುಳಿನೊಳಗೆ ಸುರಿಯುತ್ತವೆ. ದೇಹದ ಬೆನ್ನುಭಾಗದಲ್ಲಿ ಹೃದಯ, ಇದರ ತಳಭಾಗದಲ್ಲಿ ನರಹುರಿ ಇವೆ. ಹಕ್ಕಿಗಳನ್ನು ಬಿಟ್ಟರೆ ಪ್ರಾಣಿಗಳಲ್ಲೆಲ್ಲ ಅತ್ಯಂತ ವರ್ಣಮಯ ಜೀವಿಗಳೆಂದರೆ ಚಿಟ್ಟೆಗಳೇ. ಪ್ರೌಢಚಿಟ್ಟೆಗಳ ವರ್ಣಗಳಿಗೆ ಕಾರಣ ಹುರುಪೆಗಳು ಮತ್ತು ರೋಮಗಳು. ಡಿಂಬಗಳಲ್ಲಾದರೆ ರಕ್ತ ಅಥವ ಕ್ಯೂಟಿಕಲ್ ಪದರ.

ಚಿಟ್ಟೆಗಳು ಭೂವಾಸಿಗಳು. ನೀರಿನಲ್ಲಿ ವಾಸಮಾಡುವ ಕೆಲವು ಚಿಟ್ಟೆಗಳಿವೆ. ಜಲವಾಸದ ಪ್ರಮುಖ ಸಮಸ್ಯೆಯೆಂದರೆ ಉಸಿರಾಟಕ್ಕೆ ಆವಶ್ಯಕವಾದ ಆಕ್ಸಿಜನ್ನನ್ನು ಪಡೆಯುವುದು. ಜಲಸಸ್ಯಗಳ ಊತಕಗಳಲ್ಲಿ ಸಂಗ್ರಹಿತವಾದ ಆಕ್ಸಿಜನ್ನನ್ನು ಉಪಯೋಗಿಸುವುದರಿಂದ ಜಲವಾಸಿ ಪತಂಗಗಳು ಈ ಸಮಸ್ಯೆಯನ್ನು ಪರಿಹರಿಸಿಕೊಂಡಿವೆ. ಉದಾ: ಹೈಡ್ರೊಕ್ಯಾಂಪ ಪತಂಗಗಳ ಡಿಂಬಗಳು ಜಲಸಸ್ಯಗಳ ಜೀವಂತ ಎಲೆಗಳನ್ನು ತಮ್ಮ ಕೋಶಕವಚದ ಸಹಾಯದಿಂದ ಹೊಲಿದು ಗೂಡನ್ನಾಗಿ ಪರಿವರ್ತಿಸಿ ಅದರೊಳಗೆ ವಾಸಿಸುತ್ತವೆ. ಎಲೆಗಳ ದ್ಯುತಿಸಂಶ್ಲೇಷಣ ಕ್ರಿಯೆಯು ಫಲವಾಗಿ ಉತ್ಪತ್ತಿಯಾಗುವ ಆಕ್ಸಿಜನ್ನನ್ನು ಉಪಯೋಗಿಸಿಕೊಳ್ಳುತ್ತವೆ. ಇವುಗಳ ಉಸಿರಾಟದಲ್ಲಿ ಬಿಡುಗಡೆಯಾಗುವ ಕಾರ್ಬನ್ ಡೈ ಆಕ್ಸೈಡ್ ಆ ಎಲೆಗಳ ದ್ಯುತಿಸಂಶ್ಲೇಷಣೆಗೆ ಒದಗುತ್ತದೆ. ಈ ರೀತಿ ಡಿಂಬ ಹಾಗೂ ಜಲಸಸ್ಯಗಳ ನಡುವೆ ಒಂದು ಬಗೆಯ ಪರಸ್ಪರ ಸಹಕಾರಿ ಜೀವನವೇರ್ಪಟ್ಟಿದೆ. ಕೆಲವು ಪತಂಗಗಳ ಮೈಮೇಲೆ ಜಲವಿರೋಧಿ ರೋಮಗಳಿರುವುದರಿಂದ, ಇವು ನೀರಿನಿಂದ ಕೊಂಚ ಮೇಲಕ್ಕೆ ಬಂದಾಗ ಕೂದಲುಗಳ ನಡುವೆ ಗಾಳಿ ಸೇರಿಕೊಂಡು ಗುಳ್ಳೆಗಳ ರೂಪದಲ್ಲಿ ಶೇಖರವಾಗುತ್ತದೆ. ಪತಂಗಗಳು ಮತ್ತೆ ನೀರಿನೊಳಕ್ಕೆ ಹೋದಾಗ ಈ ಗುಳ್ಳೆಗಳಲ್ಲಿನ ಗಾಳಿಯನ್ನು ಸೇವಿಸಿ ಉಸಿರಾಡುತ್ತವೆ. ಕೆಲವು ಚಿಟ್ಟೆಗಳು ನೀರಿನೊಳಗೆ ಉಸಿರಾಡಲು ಸಹಾಯಕವಾಗುವ ಟ್ರೇಕಿಯಲ್ ಕಿವಿರುಗಳಿವೆ. ಉದಾ: ನಿಂಫ್ಯೂಲ, ಇಲೊಫೈಲ, ಹೈಡ್ರೊರೆಟಿಸ್ ಇತ್ಯಾದಿ.

ಸಂತಾನೋತ್ಪತ್ತಿ : ಎಲ್ಲ ಚಿಟ್ಟೆಗಳು ಮೊಟ್ಟೆಗಳ ಮೂಲಕ ಸಂತಾನವೃದ್ಧಿ ಮಾಡುತ್ತವೆ. ಕೆಲವು ಮಾತ್ರ ಮೊಟ್ಟೆಗಳನ್ನು ಹೊರಗಡೆ ಇಡದೆ ದೇಹದೊಳಗೇ ಇರಿಸಿಕೊಂಡು ಮರಿಮಾಡುತ್ತವೆ. ಉದಾ: ಮಾನಾಪಿಸ್ ಪತಂಗ ಹಾಗೂ ಕೋಲಿಯಾಸ್ ಚಿಟ್ಟೆ. ಡಿಂಬಾವಸ್ಥೆಯಲ್ಲೇ ರೂಪುಗೊಳ್ಳುವ ಒಂದು ಜೊತೆ ಅಂಡಾಶಯಗಳ ಚಟುವಟಿಕೆಯಿಂದ ಮೊಟ್ಟೆಗಳು ಉತ್ಪತ್ತಿಯಾಗುವುವು. ಪ್ರತಿ ಮೊಟ್ಟೆಗೂ ಗಟ್ಟಿಯಾದ ಒಂದು ಕವಚ ಅಥವಾ ಚಿಪ್ಪು ಇದೆ. ಒಂದು ಪಾರ್ಶ್ವದಲ್ಲಿ ಅನೇಕ ಕಿರು ರಂಧ್ರಗಳಿವೆ. ಇವುಗಳಿಗೆ ಒಟ್ಟಾಗಿ ಮೈಕ್ರೊಪೈಲ ಎಂದು ಹೆಸರು. ಇದರ ಮೂಲಕ ವೀರ್ಯಾಣುಗಳು ಮೊಟ್ಟೆಯೊಳಗೆ ಹೋಗುತ್ತವೆ. ಪೂರ್ಣವಾಗಿ ರೂಪುಗೊಂಡಮೇಲೆ ಮೊಟ್ಟೆಗಳು ಅಂಡನಾಳದ ಮೂಲಕ ಸಾಗಿ ಸಾಮಾನ್ಯ ಅಂಡನಾಳ (ಯೋನಿ)ದೊಳಕ್ಕೆ ಬರುತ್ತವೆ. ಹೆಣ್ಣು ಹಾಗೂ ಗಂಡು ಚಿಟ್ಟೆಗಳು ಕೂಡಿದಾಗ ಗಂಡಿನ ವೀರ್ಯಾಣುಗಳು ಆಸ್ಟಿಯಮ್ ಬರ್ಸೀ ದ್ವಾರದ ಮೂಲಕ ಹೆಣ್ಣಿನ ದೇಹದೊಳಕ್ಕೆ ಬಂದು ಬರ್ಸ ಕಾಪ್ಯುಲೇಟ್ರಿಕ್ಸ್ ವೀರ್ಯಾಣು ಸಂಗ್ರಹ ಚೀಲದಲ್ಲಿ ಶೇಖರವಾಗುತ್ತವೆ. ಈ ಚೀಲದಲ್ಲಿ ಅನೇಕ ವಾರ ಅಥವಾ ತಿಂಗಳುಗಳ ಕಾಲ ವೀರ್ಯಾಣುಗಳು ಸಂಗ್ರಹವಾಗಿರುತ್ತವೆ. ಈ ಚೀಲದಿಂದ ಸಾಮಾನ್ಯ ಅಂಡನಾಳಕ್ಕೆ ಸೂಕ್ಷ್ಮನಾಳವೊಂದು ಹೋಗುತ್ತದೆ. ಮೊಟ್ಟೆಗಳನ್ನು ಇಡುವ ಕಾಲ ಬಂದಾಗ ಅವು ಒಂದೊಂದಾಗಿ ಸಾಮಾನ್ಯ ಅಂಡನಾಳದ ಮುಖಾಂತರ ಹೊರಬರತೊಡಗುತ್ತವೆ. ಹೀಗೆ ಬರುವಾಗ ಬರ್ಸ ಕಾಪ್ಯುಲೇಟ್ರಿಕ್ಸಿನಿಂದ ಸೂಕ್ಷ್ಮನಾಳದ ಮೂಲಕ ವೀರ್ಯಾಣುಗಳು ಸಾಗಿಬಂದು ಮೊಟ್ಟೆಗಳನ್ನು ನಿಷೇಚಿಸುತ್ತವೆ.

ಮೊಟ್ಟೆಗಳ ಆಕಾರ ವಿಭಿನ್ನವಾಗಿದೆ. ಲೈಸೀನಿಡೆ ಕುಟುಂಬದ ಚಿಟ್ಟೆಗಳ ಮತ್ತು ಯೂಕ್ಲೈಯಿಡೆ ಕುಟುಂಬದ ಪತಂಗಗಳ ಮೊಟ್ಟೆಗಳು ಚಪ್ಪಟೆಯಾಗಿವೆ. ಉಳಿದ ಕುಟುಂಬಗಳ ಚಿಟ್ಟೆಗಳ ಮೊಟ್ಟೆಗಳು ಉದ್ದ, ತೆಳು ಹಾಗೂ ಕದಿರಿನಾಕಾರವಾಗಿವೆ. ಬಹುಪಾಲು ಚಿಟ್ಟೆಗಳು ಮೊಟ್ಟೆಗಳನ್ನು ಯಾವುದಾದರು ಆಸರೆಗೆ ಅಂಟಿಸಿಬಿಡುತ್ತವೆ. ನಿಮ್ನರೀತಿಯ ಕೆಲವು ಪತಂಗಗಳ ಉದರದ ತುದಿಯ ಖಂಡಗಳು ಕೊಳವೆಯಾಕಾರದ ಹಾಗೂ ಚುಚ್ಚುವ ಸಾಮರ್ಥ್ಯವುಳ್ಳ ಓವಿಪಾಸಿಟರ್ ರಚನೆಯಾಗಿ ಮಾರ್ಪಟ್ಟಿವೆ. ಇದನ್ನು ಸಸ್ಯದೇಹದೊಳಕ್ಕೊ ಅಥವಾ ಆಹಾರ ಪದಾರ್ಥದೊಳಕ್ಕೆ ಚುಚ್ಚಿ ಮೊಟ್ಟೆಗಳನ್ನಿಡಲು ಬಳಸುತ್ತವೆ. ಮರಗಳ ಕಾಂಡಗಳ ತೊಗಟೆ, ಎಲೆಗಳ ತೊಟ್ಟು ಅಥವಾ ತಳಭಾಗ ಅಥವಾ ತುದಿ, ಹೂಗಳ ಒಳಭಾಗ ಮುಂತಾದುವು ಮೊಟ್ಟೆಗಳನ್ನಿಡುವ ಸ್ಥಳಗಳಾಗಿವೆ. ಮೊಟ್ಟೆಗಳ ಬಣ್ಣದಲ್ಲಿ ವ್ಯತ್ಯಾಸಗಳಿವೆ. ಕಂದು, ಹಳದಿ ಅಥವ ಹಸಿರು ಬಣ್ಣಗಳಿವೆ. ಕೆಲವು ಚಿಟ್ಟೆಗಳು ಮಾತ್ರ ವರ್ಣರಂಜಿತ ಮೊಟ್ಟೆಗಳನ್ನು ಇಡುತ್ತವೆ. ಉದಾ: ಯೂರೋಪಿನ ಗ್ಯಾಸ್ಟ್ರೊಪಾಕ ಕ್ವರ್ಸಿಫೋಲಿಯ ಪತಂಗದ ಮೊಟ್ಟೆಗಳು ಬಿಳಿ ಬಣ್ಣದವಾಗಿದ್ದು ಎದ್ದು ಕಾಣುವಂಥ ಕಪ್ಪು ಪಟ್ಟೆಗಳನ್ನು, ಮಚ್ಚೆಗಳನ್ನು ಪಡೆದಿವೆ. ಮೊಟ್ಟೆಗಳ ಮೇಲ್ಮೈ ವಿಶಿಷ್ಟ ರೀತಿಯಲ್ಲಿ ಉಬ್ಬು ತಗ್ಗುಗಳ ವಿನ್ಯಾಸವನ್ನು ತೋರುತ್ತದೆ. ಉದ್ದುದ್ದವಾದ ಏಣುಗಳ ಜೋಡಣೆ ಸಾಮಾನ್ಯ. ಕೆಲವು ಮೊಟ್ಟೆಗಳಲ್ಲಿ ಬಲೆಯ ರೀತಿಯಲ್ಲಿ ಜೋಡಣೆಗೊಂಡ ಏಣುಗಳು ಇನ್ನು ಕೆಲವು ಚಿಟ್ಟೆಗಳಲ್ಲಿ ಸಣ್ಣ ಗುಬಟುಗಳು, ಚೂಪು ಮೊನೆಗಳು ಇವೆ. ಕೆಲವು ಮೊಟ್ಟೆಗಳ ಹೊರಮೈ ನಯವಾಗಿದೆ. ಚಿಟ್ಟೆ ಹಾಗೂ ಪತಂಗಗಳು ಒಂದೊಂದೇ ಮೊಟ್ಟೆ ಇಡುತ್ತವೆ. ಹಾಗೆಯೆ, ಅನೇಕ ಮೊಟ್ಟೆಗಳನ್ನು ಒಂದು ಗುಂಪಾಗಿ ಇಡುತ್ತವೆ. ಕೆಲವು ಪತಂಗಗಳು ಮೊಟ್ಟೆಗಳನ್ನೆಲ್ಲ ಒಂದು ಗುಂಪಾಗಿ ಇಟ್ಟು ಅದರ ಮೇಲೆ ಒಂದು ರೀತಿಯ ಗಟ್ಟಿ ರಕ್ಷಣಾ ಪದರದಿಂದ ಮುಚ್ಚುತ್ತವೆ. ಇದರಿಂದ ಮೊಟ್ಟೆಗಳಿಗೆ ಸಾಕಷ್ಟು ರಕ್ಷಣೆಯೊದಗುತ್ತದೆ. ಕೆಲವು ಪತಂಗಗಳು ತಮ್ಮ ಮೊಟ್ಟೆಗಳ ಮೇಲೆ ಕೂದಲುಗಳಿಂದ ರಚಿತವಾದ ಒಂದು ರೀತಿಯ ಕವಚವನ್ನು ರಚಿಸುತ್ತವೆ. ಉದಾ: ಲೈಮ್ಯಾಂಟ್ರೈಯಿಡೇ ಹಾಗೂ ಲ್ಯಾಸಿಯೋ ಕ್ಯಾಂಪಿಡೆ ಕುಟುಂಬದ ಪತಂಗಗಳು. ಕೆಲವು ಸಲ ಇಂಥ ಕೂದಲುಗಳು ವಿಷಪೂರಿತವಾಗಿದ್ದು ಅವನ್ನು ತಿನ್ನಲು ಬಂದ ಪ್ರಾಣಿಗಳಿಗೆ ತೀವ್ರ ತುರಿಕೆಯನ್ನುಂಟುಮಾಡುತ್ತವೆ. ಇಂತಹ ರಕ್ಷಣಾ ವಿಧಾನಗಳಿಂದ ಮೊಟ್ಟೆಗಳಿಗೆ ಸಹಜ ರಕ್ಷಣೆ ಸಿಗುತ್ತದೆ.

ಡಿಂಬಗಳು: ಇವನ್ನು ಕಂಬಳಿ ಹುಳುಗಳು ಎನ್ನುವರು. ಇವುಗಳ ದೇಹದಲ್ಲಿ ಚೆನ್ನಾಗಿ ರೂಪುಗೊಂಡ ತಲೆ, ಎದೆ (ತೋರ್‍ಯಾಕ್ಸ್) ಮತ್ತು ಉದರ ಭಾಗಗಳಿವೆ. ಎದೆ ಹಾಗೂ ಉದರ ಭಾಗಗಳ ನಡುವಣ ವ್ಯತ್ಯಾಸ ಸ್ಪಷ್ಟವಾಗಿಲ್ಲ. ಎದೆ ಭಾಗದಲ್ಲಿ 3, ಉದರಭಾಗದಲ್ಲಿ 11 ಖಂಡಗಳಿವೆ. ಉದರದ ಕೊನೆಯ 9,10,11 ನೇ ಖಂಡಗಳ ನಡುವೆ ವ್ಯತ್ಯಾಸ ಅಸ್ಪಷ್ಟವಾಗಿದೆ.

ತಲೆ 5–6 ಖಂಡಗಳಿಂದ ಕೂಡಿದೆ. ಆದರೆ ಇವೆಲ್ಲ ಒಂದಕ್ಕೊಂದು ಕೂಡಿಕೊಂಡಿರುವುದರಿಂದ ತಲೆ ಒಂದೇ ರಚನೆಯಂತೆ ಕಾಣುತ್ತದೆ. ತಲೆಯ ಅಕ್ಕ–ಪಕ್ಕ 6 ಸರಳ ಕಣ್ಣುಗಳಿವೆ. ಇವಕ್ಕೆ ಆಸೆಲೈ ಎಂದು ಹೆಸರು. ಮೂತಿಯ ತುದಿಯಲ್ಲಿ ಒಂದು ಜೊತೆ ಬಲವಾದ ಮ್ಯಾಂಡಿಬಲುಗಳು, ಅವುಗಳ ಬುಡದಲ್ಲಿ ಒಂದು ಜೊತೆ ಕುಡಿ ಮೀಸೆಗಳಿವೆ. ಮ್ಯಾಂಡಿಬಲುಗಳ ಮುಂಭಾಗದಲ್ಲಿ ಮೇಲ್ತುಟಿಯಿದೆ. ಇದಕ್ಕೆ ಲೇಬ್ರಮ್ ಎಂದು ಹೆಸರು. ಮ್ಯಾಂಡಿಬಲುಗಳ ಹಿಂಭಾಗದಲ್ಲಿ ಮೊದಲ ಮ್ಯಾಕ್ಸಿಲ, ಲೇಬಿಯಮ್ (ಎರಡನೆಯ ಮ್ಯಾಕ್ಸಿಲ) ಹಾಗೂ ಹೈಪೋಫ್ಯಾರಿಂಕ್ಸಿನಿಂದ ರಚಿತವಾದ ಕೆಳದುಟಿಯಿದೆ. ಇದರ ಕೇಂದ್ರಸ್ಥಾನದಲ್ಲಿ ಪುಟ್ಟ ಸ್ಪಿನರೆಟ್ ಅಂಗವಿದೆ. ಕಂಬಳಿಹುಳು ತನ್ನ ರೂಪಪರಿವರ್ತನೆಯ ಕಾಲದಲ್ಲಿ ರಚಿಸುವ ಕೋಶಕ್ಕೆ ಬೇಕಾಗುವ ರೇಷ್ಮೆ ಇದರ ಮುಖಾಂತರ ಹೊರಬರುತ್ತದೆ. ಮ್ಯಾಂಡಿಬಲುಗಳ ಬುಡದಲ್ಲಿ ಜೊಲ್ಲನ್ನು ಹೋಲುವ ರಸ ಸ್ರವಿಸುವ

ಗ್ರಂಥಿಗಳಿವೆ. ಎದೆಯಭಾಗದ ಪ್ರತಿಯೊಂದು ಖಂಡದಲ್ಲಿ ಒಂದು ಜೊತೆ ಕಾಲುಗಳಿವೆ. ಇವುಗಳಲ್ಲಿ ಕಾಕ್ಸ, ಟ್ರೋಕ್ಯಾಂಟರ್, ಫೀಮರ್, ಟಿಬಿಯ ಮತ್ತು ಟಾರ್ಸಸ್ ಎಂಬ 5 ಭಾಗಗಳಿವೆ. ಟಾರ್ಸಸಿನ ತುದಿಯಲ್ಲಿ ದೃಢವಾದ ಒಂದು ಕೊಕ್ಕೆಯಂಥ ರಚನೆಯಿದೆ. ಉದರ ಭಾಗದ 3,4,5 ಮತ್ತ 6ನೆ ಖಂಡಗಳಲ್ಲಿ ಒಂದು ಜೊತೆ ಮಾಂಸಲವಾದ ಕಾಲಿನಂಥ ರಚನೆಗಳಿವೆ. ಇವಕ್ಕೆ ಪ್ರೋಲೆಗ್ಸ್ ಎಂದು ಹೆಸರು. ಇವು ಒಂದೊಂದರ ತುದಿಯಲ್ಲೂ ಕ್ರೋಚೆಟ್ಸ್ ಎಂಬ ಅನೇಕ ಬಿರುಸಾದ ಕಿರುಕೊಕ್ಕೆಗಳಿವೆ. ಇವುಗಳ ಸಂಖ್ಯೆ, ಜೋಡಣಾಕ್ರಮ ಹಾಗೂ ಗಾತ್ರಗಳನ್ನು ಕಂಬಳಿ ಹುಳುಗಳ ವರ್ಗೀಕರಣದಲ್ಲಿ ಮುಖ್ಯ ಲಕ್ಷಣಗಳಾಗಿ ಬಳಸಲಾಗುತ್ತದೆ. ಕೆಲವು ಬಗೆಯ ಚಿಟ್ಟೆಗಳಲ್ಲಿ ಕೆಲವು ಅಥವಾ ಎಲ್ಲ ಕಾಲುಗಳು ಪ್ರೊಲೆಗ್ಗುಗಳು ನಶಿಸಿಹೋಗಿವೆ. ಕಂಬಳಿ ಹುಳುಗಳ ಮೇಲ್ಮೈ ನಿರ್ದಿಷ್ಟ ಕ್ರಮದಲ್ಲಿ ಜೋಡಣೆಗೊಂಡ ಬಿರುಗೂದಲು (ಸೀಟೆ)ಗಳಿಂದ ಆವೃತವಾಗಿದೆ. ಇವುಗಳ ಸಂಖ್ಯೆ, ಗಾತ್ರ ಮುಂತಾದುವು ಪ್ರತಿಯೊಂದು ಡಿಂಬ ಪ್ರಭೇದಕ್ಕೂ ವಿಶಿಷ್ಟವಾಗಿರುವುದರಿಂದ ಈ ಲಕ್ಷಣಗಳನ್ನು ಕಂಬಳಿಹುಳುಗಳ ವರ್ಗೀಕರಣದಲ್ಲಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಪ್ರಾಥಮಿಕ ಬಿರುಗೂದಲುಗಳಲ್ಲದೆ, ಕೆಲವು ಕಂಬಳಿಹುಳುಗಳಲ್ಲಿ ದ್ವಿತೀಯಕ ಬಿರುಗೂದಲಗಳಿವೆ. ಇವು ತೋರುವ ಗಾತ್ರ ಹಾಗೂ ಸಂಖ್ಯಾವ್ಯತ್ಯಾಸಗಳು ಅಪಾರ. ಕೆಲವಲ್ಲಿ ದೇಹದ ಮೇಲೆ ಕೆಲವು ಗುಬಟುಗಳಿದ್ದು ಅವುಗಳ ಮೇಲೆ ಬಿರುಗೂದಲಿನ ಗುಚ್ಛವಿದ್ದರೆ, ಇನ್ನು ಕೆಲವಲ್ಲಿ ಅಸಂಖ್ಯ ಬಿರುಗೂದಲುಗಳನ್ನು ಪಡೆದಿರುವ ಅನೇಕ ಗುಬಟುಗಳಿವೆ. ಸಾಧಾರಣವಾಗಿ ವಿವಿಧ ಸ್ಥಳಗಳಲ್ಲಿ, ನೆಲದೊಳಗೆ ಕೊರೆದುಮಾಡಿದ ಸುರಂಗಗಳಲ್ಲಿ ವಾಸಿಸುವ ಕಂಬಳಿ ಹುಳುಗಳ ಮೈ ಮಾಸಲು ವರ್ಣದ್ದೂ, ವಿರಳ ರೋಮವುಳ್ಳದ್ದು ಆಗಿದೆ. ಗಾಳಿ, ಮಳೆ, ಬಿಸಿಲುಗಳಿಗೆ ಒಡ್ಡಿದ ಜಾಗಗಳಲ್ಲಿ ವಾಸಿಸುವ ಕಂಬಳಿ ಹುಳುಗಳ ಮೈ ವರ್ಣರಂಜಿತವಾಗಿರುವುದಲ್ಲದೆ ವೈವಿಧ್ಯಮಯ ರೋಮರಾಶಿಯಿಂದ ಕೂಡಿದೆ. ಕೆಲವು ಬಗೆಯ ಕಂಬಳಿಹುಳುಗಳ ಮೈಮೇಲೆ ಒಂದು ರೀತಿ ಸಿಹಿಯಾದ ಜೇನನ್ನು ಸ್ರವಿಸುವ ಗ್ರಂಥಿಗಳಿವೆ. ಇದರಿಂದ ಆಕರ್ಷಿತವಾಗುವ ಕೆಲವು ಜಾತಿಯ ಇರುವೆಗಳು ಇಂಥ ಕಂಬಳಿಹುಳುಗಳನ್ನು ತಮ್ಮ ಗೂಡಿಗೆ ಕೊಂಡೊಯ್ದು ಸಾಕಿಕೊಳ್ಳುತ್ತವೆ. ಇದರಿಂದ ಕಂಬಳಿಹುಳುಗಳಿಗೆ ರಕ್ಷಣೆ ದೊರೆಯುತ್ತದೆ. ಉದಾ: ಪೈಯರಿಡೆ ಕುಟುಂಬಕ್ಕೆ ಸೇರಿದ ಹಳದಿ ಹಾಗೂ ಬಿಳಿಯ ಚಿಟ್ಟೆಗಳು. ಕೆಲವು ಬಗೆಯ ಕಂಬಳಿ ಹುಳುಗಳ (ಯೂಕ್ಲೈಯಿಡೆ, ಲ್ಯಾಸಿಯೊಕ್ಯಾಂಪಿಡೆ, ಸೇಟರ್ನೈಯಿಡೆ) ಮೈಮೇಲೆ ವಿಷಪೂರಿತ ರೋಮಗಳಿವೆ. ಇವುಗಳಿಂದ ಉತ್ಪತ್ತಿಯಾಗುವ ವಿಷವಸ್ತು ಬೇರೆ ಪ್ರಾಣಿಗಳ ಅಥವ




**ಕಂಬಳಿ ಹುಳು: ವಿಷಗ್ರಂಥಿಯುಕ್ತ ಮುಳ್ಳು ಉಳ್ಳ ಚರ್ಮ**

ಮನುಷ್ಯನ ಚರ್ಮದ ಸಂಪರ್ಕಕ್ಕೆ ಬಂದಾಗ ತುರಿಕೆ, ಉರಿಯುವ ಗುಳ್ಳೆಗಳಾಗುತ್ತವೆ. ಕೆಲವು ಕಂಬಳಿ ಹುಳುಗಳು ಮಾನವನಿಗೆ, ಹಕ್ಕಿಗಳಿಗೆ ಅಸಹ್ಯಕರವಾದ ಘಾಟು ವಾಸನೆಯನ್ನು ಬೀರುತ್ತವೆ.

ಕಂಬಳಿಹುಳುಗಳು ಒಂದು ತರಹದ ರೇಷ್ಮೆಯನ್ನು ತಯಾರಿಸುತ್ತವೆ. ರೂಪಪರಿವರ್ತನೆಯ ಕಾಲದಲ್ಲಿ ಇವು ರಚಿಸುವ ಕೋಶಗಳಿಗೆ ಈ ರೇಷ್ಮೆ ಅತ್ಯಗತ್ಯ. ಹುಳುಗಳು ಎಲೆ, ಕಾಂಡ ಮುಂತಾದುವುಗಳ ಮೇಲೆ ಚಲಿಸುವಾಗ ಈ ದಾರದಂತಹ ಎಳೆ ಬೇಕಾಗುವ ಕಾಲೂರೆಗೂ ಆವಶ್ಯಕ. ಕೆಲವು ಹುಳುಗಳಲ್ಲಿ ರೇಷ್ಮೆ ಕಡಿಮೆ ಮೊತ್ತದಲ್ಲಿ ತಯಾರಾದರೆ ಇನ್ನು ಕೆಲವು ಚಿಟ್ಟೆಗಳ ಡಿಂಬಗಳು (ಉದಾ: ರೇಷ್ಮೆಹುಳು) ಅತ್ಯಧಿಕ ಪ್ರಮಾಣದ ರೇಷ್ಮೆ ದಾರ ಉತ್ಪತ್ತಿ ಮಾಡುತ್ತವೆ. ರೇಷ್ಮೆ ವರ್ಣರಹಿತವಾಗಿದೆ ಅಥವಾ ಹಳದಿ, ಹಸಿರು, ಕಂದು ಬಣ್ಣಗಳಿಂದಿದೆ. ಈ ಬಣ್ಣಗಳಿಗೆ ಕಾರಣ ಹುಳುಗಳು ತಿನ್ನುವ ಆಹಾರದಲ್ಲಿನ ಫ್ಲೇವೋನ್, ಕ್ಯಾರೊಟೀನ್ ಮತ್ತು ಕ್ಸಾಂತೊಫಿಲ್‌ಗಳು. ಹುಳುಗಳ ದೇಹದೊಳಗಿರುವ ಒಂದು ಜೊತೆ ಸಂಕೀರ್ಣ ಬಗೆಯ ಗ್ರಂಥಿಗಳ ಚಟುವಟಿಕೆಯಿಂದ ರೇಷ್ಮೆ ತಯಾರಾಗುತ್ತದೆ. ಸಂಪೂರ್ಣ ಬಲಿತ ರೇಷ್ಮೆ ಹುಳುವಿನಲ್ಲಿ ದೇಹದ ಒಟ್ಟು ತೂಕದ ಶೇ. 25 ರಷ್ಟು ಈ ಗ್ರಂಥಿಗಳು ಭಾರವಿರುತ್ತವೆ. ಒಂದು ಕಂಬಳಿ ಹುಳು ಆಹಾರಾನ್ವೇಷಣೆಯಲ್ಲಿ ಸಾಗುತ್ತಿರುವಾಗ ತನ್ನನ್ನು ಹಿಂಬಾಲಿಸಿ ಬರುವ ತನ್ನ ಜಾತಿಯ ಇತರ ಹುಳುಗಳ ಜಾಡನ್ನು ಸುಲಭವಾಗಿ ಗುರುತಿಸುವುದಕ್ಕೂ, ನೆಲದೊಳಗೆ ಸುರಂಗ ಕೊರೆದು ವಾಸಿಸುವ ಹುಳುಗಳು ತಮ್ಮ ಸುರಂಗವನ್ನು ಜಲವಿಕರ್ಷಿತವನ್ನಾಗಿ ಮಾಡುವುದಕ್ಕೂ, ಕುಸಿದುಬೀಳದಂತೆ ತಡೆಯುವುದಕ್ಕೂ, ಈ ರೇಷ್ಮೆ ಬಳಕೆಯಾಗುತ್ತದೆ.

ಕೋಶಾವಸ್ಥೆ : ಸಂಪೂರ್ಣ ಬೆಳೆದ ಡಿಂಬ, ಕೊನೆಗೆ ಪೊರೆಹುಳು (ಪ್ಯೂಪ) ಆಗಿ ಬದಲಾಗಲು ಪೂರ್ವಸಿದ್ಧತೆಯಾಗಿ ಚರ್ಮವನ್ನು ಕಳಚತೊಡಗುತ್ತದೆ. ಆಹಾರಸೇವನೆಯನ್ನು ನಿಲ್ಲಿಸಿ, ಸೂಕ್ತವಾದ ವಿವಿಕ್ತ ಸ್ಥಳವನ್ನಾಯ್ದುಕೊಂಡು ತನ್ನೆಲ್ಲ ಚಟುವಟಿಕೆಗಳನ್ನು ಮಂದಗೊಳಿಸುತ್ತದೆ. ಭೂಮಿಯೊಳಗೆ ಸುರಂಗವನ್ನು ಕೊರೆದುಕೊಂಡು ಜೀವಿಸುವ ಹುಳುಗಳಲ್ಲಿ ಸ್ಥಳದ ಆಯ್ಕೆ ಬೇಕಾಗಿಲ್ಲ. ತಮ್ಮ ಸುರಂಗಮಾರ್ಗದ ಬಾಯಿಗೆ ಒಂದು ಮುಚ್ಚಳ ನಿರ್ಮಿಸಿ ಕೋಶಾವಸ್ಥೆ ತಲುಪುತ್ತವೆ. ಕೆಲವು ಕಂಬಳಿ ಹುಳುಗಳು ಕೋಶವನ್ನು ರಚಿಸದೆ ನೆಲದೊಳಕ್ಕೆ ಹೋಗಿ ಕೋಶಾವಸ್ಥೆಯನ್ನು ತಲಪುತ್ತವೆ. ಇನ್ನು ಕೆಲವು ನೆಲದೊಳಗೆ ಪ್ರತ್ಯೇಕ ಗೂಡೊಂದನ್ನು ರಚಿಸುತ್ತವೆ. ಕೆಲವು ಕೊಳೆತ ಮರದ ದಿಮ್ಮಿಗಳ ಮೇಲಿನ ಕಚರಾದಲ್ಲಿ ಗೂಡು ನಿರ್ಮಿಸುತ್ತವೆ. ಉದಾ: ಡೇಗೆಪತಂಗ, ರಾಜಪತಂಗ, ನಾಕ್ಟುಯಿಡೆ ಕುಟುಂಬದ ಹಾಲಕ್ಕಿ ಪತಂಗಗಳು. ಹೆಸ್ಪರೈಯಿಡೆ ಕುಟುಂಬದ ಕುಪ್ಪಳು ಪತಂಗಗಳು ಎಲೆಗಳನ್ನು ಸೇರಿಸಿ ಒಂದು ರೀತಿಯ ರಕ್ಷಣಾನೆಲೆಯನ್ನು ರಚಿಸಿಕೊಂಡು ಅದರೊಳಗೆ ಕೋಶಾವಸ್ಥೆ ಸೇರುತ್ತವೆ.

ಕೋಶಾವಸ್ಥೆಗೆ ಹೋಗುವ ಸ್ಥಳದಲ್ಲಿ ರೇಷ್ಮೆಯ ಒಂದು ಮೆತ್ತೆಯನ್ನು ಮೊದಲು ಅಂಟಿಸಿ ಅದರಿಂದ ತೂಗುಬೀಳುವಂತೆ ಕೋಶವನ್ನು ರಚಿಸುವುದು ಬಹುಪಾಲು ಚಿಟ್ಟೆ ಮತ್ತು ಪತಂಗಗಳ ಕ್ರಮ. ಹೀಗೆ ತೂಗುಬಿದ್ದಿರುವ ಚಿಟ್ಟೆಗಳ ಕೋಶಕ್ಕೆ ಕ್ರೈಸಲಿಸ್ ಎಂದು ಹೆಸರು. ಹಸಿರು, ನೀಲಿ, ಬಂಗಾರ ಮುಂತಾದ ಬಣ್ಣಗಳಿಂದ ಕೂಡಿ ಫಳಫಳನೆ ಹೊಳೆಯುವ ಇಂಥ ಕ್ರೈಸಲಿಸ್‌ಗಳು ಗಿಡಗಳ ಎಲೆಗಳಿಂದ ತೂಗುಬಿದ್ದಿರುವುದು ಸಾಮಾನ್ಯವಾಗಿದೆ. ಅತ್ಯಂತ ಸರಳ ರೀತಿಯ ಕೋಶವೆಂದರೆ ರೇಷ್ಮೆಯಿಂದ ರಚಿತವಾದ ಒಂದು ಸಂಚಿ. ಕೆಲವು ಸಲ ಇದನ್ನು ಹೆಚ್ಚು ದೃಢಗೊಳಿಸಲು ಪ್ರೋತೊರ್‍ಯಾಸಿಕ್ ಗ್ರಂಥಿಯಿಂದ ಉತ್ಪತ್ತಿಯಾಗುವ ಆಮ್ಲವನ್ನು ಅಥವಾ ಮಾಲ್ಫಿಗಿಯನ್ ನಾಳಗಳ ವಿಸರ್ಜಕ ಸ್ರಾವಗಳನ್ನು ಬಳಸುವುವು. ಉದಾ: ಡೈಕ್ರನ್ಯೂರ, ಸೆರೂರ, ಮ್ಯಾಲಕಸೊಮ ಪತಂಗಗಳು. ಕೆಲವು ಕೋಶಗಳಲ್ಲಿ 2 ಅಥವಾ 3 ಪದರಗಳಿರುತ್ತವೆ. ಈ ಪದರಗಳ ಮಧ್ಯೆ ಅವಕಾಶವಿದ್ದು, ರೇಷ್ಮೆಯ ಸಡಿಲ ಬಲೆ ಇರುತ್ತದೆ. ರೂಪ ಪರಿವರ್ತನೆ ಸಂಪೂರ್ಣವಾದ ಮೇಲೆ ಚಿಟ್ಟೆ ಅಥವಾ ಪತಂಗ ಹೊರಬರಲು ಅನುಕೂಲವಾಗುವಂತೆ ಕೋಶಗಳ ಬಾಯಿಯಬಳಿ ವಿಮೋಚನ ಕವಾಟವಿರುತ್ತದೆ. ಉದಾ: ಸುಂಬಲ ಕಂಬಳಿಹುಳು ಮತ್ತು ಫ್ಲ್ಯಾನೆಲ್ ಪತಂಗದ ಕೋಶಗಳ ಬಾಯಿಯಬಳಿ ಮುಚ್ಚಳವಿರುತ್ತದೆ. ಈ ಮುಚ್ಚಳ ತೆಗೆದುಕೊಂಡು ಪ್ರೌಢಕೀಟ ಹೊರಬರುತ್ತದೆ.

ಪ್ಯೂಪ : ಇದು ಚಿಟ್ಟೆ ಮತ್ತು ಪತಂಗಗಳ ಜೀವನ ಚಕ್ರದಲ್ಲಿನ ವೈಶಿಷ್ಟ್ಯಪೂರ್ಣ ಹಂತ. ಪ್ರೌಢಚಿಟ್ಟೆಯ ಎಲ್ಲಾ ರಚನೆಗಳು ಇದರಲ್ಲಿ ಕಂಡುಬರುತ್ತವೆ. ಆದರೆ, ಇದರಲ್ಲಿ ಅನೇಕ ರಚನೆಗಳು ಸಂಪೂರ್ಣವಾಗಿ ರೂಪುಗೊಂಡಿರದೆ, ಪ್ರಾರಂಭಾವಸ್ಥೆಯಲ್ಲಿವೆ. ಲೆಪಿಡಾಪ್ಟರದ ಪ್ಯೂಪಗಳು ಆಬ್‌ಟೆಕ್‌ಟೆಡ್ ರೀತಿಯವು. ದೇಹದ ವಿವಿಧ ಉಪಾಂಗಗಳು ಮತ್ತು ಇತರ ಹೊರಚಾಚಿದ ಅಂಗಗಳು ಹೊರಮೈಗೆ ಅಂಟಿಕೊಂಡಂತಿದ್ದು, ಕೋಶದ ಹೊರಗೆ ಮಸುಕುಮಸಕಾಗಿ ಕಾಣುತ್ತವೆ. ಪ್ಯೂಪದ ಹೊರಮೈಮೇಲೆ ತಲೆಯ ಆಚೀಚೆ ಸಂಯುಕ್ತಾಕ್ಷಿಗಳು ಗೋಚರಿಸುತ್ತವೆ. ಆಂಟೆನಾ, ಸೊಂಡಿಲು, ರೆಕ್ಕೆಗಳು ಮತ್ತು ಕಾಲುಗಳು ದೇಹದ ತಳಭಾಗದಲ್ಲಿ ಹಿಮ್ಮುಖವಾಗಿ ಚಾಚಿಕೊಂಡಿವೆ. ಬಾಯಿಯ ವಿವಿಧ ಭಾಗಗಳು ಸಣ್ಣರಚನೆಗಳಂತೆ ತಲೆಯಲ್ಲಿ ಕಾಣಿಸುತ್ತವೆ. ಉದರದ ಕೊನೆಯ ಖಂಡದ ತುದಿಯಲ್ಲಿ ಜನನೇಂದ್ರಿಯಗಳ ಉಪಾಂಗಗಳಿವೆ. ಉದರದ ಕೊನೆಯ ಖಂಡದ ತುದಿಯಲ್ಲಿ ಕ್ರಿಮಾಸ್ಟರ್

ರಚನೆ ಇದೆ. ರೆಕ್ಕೆಗಳ ಬುಡದಲ್ಲೂ ಉದರದ ಮೊದಲ 8 ಖಂಡಗಳೊಂದರಲ್ಲಿ ಒಂದೊಂದು ಜೊತೆ ಸ್ಪೈರಕಲ್ಲುಗಳಿವೆ. ಚಿಟ್ಟೆಯ ಪ್ಯೂಪಗಳ ಹೊರಮೈಮೇಲೆ ವಿವಿಧವರ್ಣಗಳಿವೆ. ವಿವಿಧ ಆಕಾರದ ಕೊಂಬು, ಮುಳ್ಳು ಮುಂತಾದುವು ಇವೆ. ಕೋಶದೊಳಗೆ ಹುದುಗಿದ್ದರು ಪ್ಯೂಪಗಳು ರೋಮಗಳಿಂದ ಅಥವ ಮುಳ್ಳುಗಳಿಂದ ಆವೃತವಾಗಿವೆ. ನೆಲದೊಳಗೆ ಸುರಂಗ ಕೊರೆದು ಗೂಡುಕಟ್ಟುವ ಕೆಲವು ಜಾತಿ ಚಿಟ್ಟೆ ಹಾಗೂ ಪತಂಗಗಳ ಪ್ಯೂಪಗಳಲ್ಲಿ ಉದರದ ಖಂಡಗಳ ಮೇಲೆ ಹಿಮ್ಮುಖವಾಗಿ ಚಾಚಿರುವ ಪುಟ್ಟ ಮುಳ್ಳುಗಳಿವೆ. ಚಿಟ್ಟೆ ಅಥವಾ ಪತಂಗ ಸುರಂಗದಿಂದ ಹೊರಬರಲು ಇವು ಸಹಾಯಕ.

ಕೋಶದ ರಚನೆಯಾದೊಡನೆ ಡಿಂಬ ಪ್ಯೂಪವಾಗಿ ಪರಿವರ್ತಿತವಾಗುತ್ತದೆ. ಆದರೆ, ಹಲವಾರು ಪ್ರಭೇದಗಳಲ್ಲಿ ಡಿಂಬ ಕೋಶದೊಳಗೆ ಚಳಿಗಾಲಪೂರ್ತಿ ಕೋಶಾವಸ್ಥೆಯಲ್ಲಿ ಇದ್ದು, ವಸಂತದಲ್ಲಿ ವಾತಾವರಣದ ಉಷ್ಣತೆ ತೀವ್ರವಾದಂತೆ ಪ್ಯೂಪ ಬದಲಾಗುತ್ತ ರೂಪ ಪರಿವರ್ತನೆಯಾಗುತ್ತದೆ. ಬೇಸಗೆಯಲ್ಲಿ ನಿಶ್ಚೇಷ್ಟ ಸ್ಥಿತಿಯಲ್ಲಿ ಕಳೆಯುವ ಪ್ರಭೇದಗಳಲ್ಲಿ ಇದೇ ರೀತಿಯ ತಾತ್ಕಲಿಕ ಸುಪ್ತತೆ (ಡಯಾಪಾಸ್) ಕಂಡುಬರುತ್ತದೆ. ಅನುಕೂಲ ಪರಿಸ್ಥಿತಿ ಉಂಟಾಗುವವರೆಗೂ ಈ ಸುಪ್ತತೆ ಕೊನೆಗಾಣದು. ಡಯಾಪಾಸಿನ ಕ್ರಿಯಾತಂತ್ರ ಬಲು ಸಂಕೀರ್ಣವಾದುದು. ಚಿಟ್ಟೆಯ ತಲೆ ಮತ್ತು ಪ್ರೋತೋರ್‍ಯಾಕ್ಸಿನಲ್ಲಿನ ಕೆಲವು ರಸಗ್ರಂಥಿ ಊತಕಗಳು ಉತ್ಪಾದಿಸುವ ಹಾರ್ಮೋನುಗಳ ಚಟುವಟಿಕೆಗಳಿಂದ ಇದು ನಿಯಂತ್ರಿತವಾಗಿದೆ. ಪರಿಸರದ ನಿರ್ದಿಷ್ಟ ಪ್ರಚೋದನೆಗಳಿಂದ ಮಿದುಳಿನ ಕೆಲವು ನರಸ್ರಾವಕ (ನ್ಯೂರೊಸೆಕ್ರೀಟರಿ) ಕೋಶಗಳು ಉತ್ತೇಜಿತವಾಗಿ ವಿಶಿಷ್ಟ ರೀತಿಯ ಸ್ರಾವಗಳನ್ನು ಬಿಡುಗಡೆ ಮಾಡುತ್ತವೆ. ಇವು ರಕ್ತದ ಮೂಲಕ ಸಾಗಿಬಂದು ಪ್ರೋತೋರ್‍ಯಾಸಿಕ್ ರಸಗ್ರಂಥಿಗಳನ್ನು ತಲುಪಿ, ಪ್ರಚೋದಿಸಿ, ಕೆಲವು ವಿಶೇಷ ಹಾರ್ಮೋನುಗಳನ್ನು ಉತ್ಪಾದಿಸುವಂತೆ ಮಾಡುತ್ತವೆ. ಈ ಹಾರ್ಮೋನುಗಳ ಪ್ರಭಾವದಿಂದ ಡಯಾಪಾಸ್ ಕೊನೆಗೊಳ್ಳುತ್ತದೆ. ಪರಿಸರದ ಪ್ರಚೋದನೆ ಉಷ್ಣತೆ ಅಥವಾ ತೇವಾಂಶದಿಂದಿರಬಹುದು. ಪರಿಸರದ ಯಾವುದೇ ಉದ್ದೀಪನದಿಂದ ಡಯಾಪಾಸ್ ಆರಂಭ ಅಥವಾ ಅಂತಿಮ ಅವಧಿ ಮತ್ತು ಅದರ ಕ್ರಿಯಾತಂತ್ರ ಎಷ್ಟೇ ಜಟಿಲವಾಗಿರಲಿ, ಚಿಟ್ಟೆಯ ಜೀವನಚಕ್ರದ ವಿವಿಧ ಹಂತಗಳ ಕಾಲ ಬಾಹ್ಯಪರಿಸರದ ವ್ಯತ್ಯಾಸಗಳ ನಡುವೆ ಸುಸಂಘಟನೆಯನ್ನೂ ಡಯಾಪಾಸ್ ನಿರ್ದೇಶಿಸುತ್ತದೆ.

ಚಿಟ್ಟೆ

ಪತಂಗ

ಪ್ಯೂಪ ತನ್ನ ಚಟುವಟಿಕೆಯಲ್ಲಿ ಸಂಪೂರ್ಣ ಅಂತರ್ಮುಖಿ. ಇದು ಆಹಾರವನ್ನು ಸೇವಿಸುವುದಿಲ್ಲ ಮತ್ತು ತ್ಯಾಜ್ಯವಸ್ತುಗಳನ್ನು ಹೊರಹಾಕುವುದಿಲ್ಲ. ತೋರ್‍ಯಾಕ್ಸ್ ಭಾಗದಲ್ಲಿರುವ ಸ್ಪೈರಕಲ್ಲುಗಳಿಂದ ಉಸಿರಾಟ ನಡೆಸುತ್ತದೆ. ಈ ಹಂತದಲ್ಲಿ ಪ್ಯೂಪದೊಳಗಿರುವ ಡಿಂಬದ ರಚನೆ ಸಂಪೂರ್ಣ ಭಿನ್ನವಾಗಿ ಅದರಿಂದ ಪ್ರೌಢ ಜೀವಿಯ ಅಂಗಗಳು ಹೊಸದಾಗಿ ರೂಪುಗೊಳ್ಳುತ್ತವೆ. ಪ್ಯೂಪದ ಹಂತದಲ್ಲಿ ವಿಸರ್ಜನ ಕ್ರಿಯೆ ನಡೆಯುವುದಿಲ್ಲ. ಸಾರಜನಕಯುಕ್ತ ನಿರುಪಯೋಗಿ ವಸ್ತುಗಳು ದ್ರವರೂಪದಲ್ಲಿ ಕರುಳಿನ ಹಿಂತುದಿಯಲ್ಲಿ ಸಂಗ್ರಹವಾಗುತ್ತವೆ. ಈ ದ್ರವಕ್ಕೆ ಮೀಕೋನಿಯಮ್ ಎಂದು ಹೆಸರು. ಪ್ರೌಢಚಿಟ್ಟೆ ಪ್ಯೂಪದ ಚಿಪ್ಪಿನಿಂದ ಹೊರಬಂದ ಸ್ವಲ್ಪ ಸಮಯದಲ್ಲೆ ಮೀಕೋನಿಯಮ್ ವಿಸರ್ಜಿತವಾಗುತ್ತದೆ.

ಪ್ಯೂಪದೊಳಗೆ ಬೆಳವಣಿಗೆ ಸಂಪೂರ್ಣವಾದ ಮೇಲೆ ಪ್ರೌಢಚಿಟ್ಟೆ ಪ್ಯೂಪದ ಕವಚವನ್ನು ಒಡೆದು, ಕೋಶದಿಂದ ಹೊರಬರುವುದು. ಈ ಹಂತದಲ್ಲಿ ಚಿಟ್ಟೆ ರೆಕ್ಕೆಗಳು ಮೃದುವಾದ ಚೀಲದಂತಿರುತ್ತವೆ (ಉದಾ: ಕಾಸಿಡೆ, ಗ್ರೇಸಿಲೇರೈಯಿಡೆ ಕುಟುಂಬದ ಪತಂಗಗಳು). ರೆಕ್ಕೆಗಳ ಬುಡದಲ್ಲಿ ಚೂಪಾದ ರಚನೆಗಳಿವೆ. ಇವುಗಳಿಂದ ಕೋಶಕವಚವನ್ನು ಕೊರೆದು ಚಿಟ್ಟೆ ಹೊರಬರುತ್ತದೆ. ಕೆಲವು ಪತಂಗಗಳು ಕಾಸ್ಟಿಕ್ ಪೊಟ್ಯಾಷ್ ದ್ರಾವಣವನ್ನು ಸ್ರವಿಸಿ, ಕೋಶಭಿತ್ತಿಯನ್ನು ಕರಗಿಸಿ ಹೊರಬರುತ್ತವೆ. ಚಿಟ್ಟೆ ಹೊರಬರುವಾಗ ದೇಹದ ದ್ರವವನ್ನು ತಲೆ ಮತ್ತು ತೋರ್‍ಯಾಕ್ಸ್ ಭಾಗಗಳೊಳಕ್ಕೆ ಹೊಗಿಸಿ ಅವು ಹಿಗ್ಗುವಂತೆ ಮಾಡಿ ಪ್ಯೂಪದ ಕವಚವನ್ನು ಸೀಳುತ್ತದೆ, ತಲೆ ಮತ್ತು ಎದೆಭಾಗವನ್ನು ಹೊರಹಾಕುತ್ತವೆ, ಕಾಲುಗಳನ್ನು ಅವುಗಳ ಕವಚದಿಂದ ಹೊರಕ್ಕೆಳೆದು ಚಾಚುತ್ತವೆ. ಅನಂತರ ಉದರಭಾಗ ಹೊರಬರುತ್ತದೆ. ಆ ಬಳಿಕ ರೆಕ್ಕೆಗಳು ಕೆಳಮುಖವಾಗಿರುವ ಭಂಗಿಯಲ್ಲಿ ತೂಗಿಬಿದ್ದು ಹಿಗ್ಗತೊಡಗುತ್ತವೆ. ಹೀಗೆ ಹಿಗ್ಗಲು ಅನುಕೂಲವಾಗುವಂತೆ ಸಾಕಷ್ಟು ಗಾಳಿಯನ್ನು ಚಿಟ್ಟೆ ದೇಹದೊಳಕ್ಕೆ ಎಳೆದುಕೊಳ್ಳುತ್ತದೆ. ಇದರೊಂದಿಗೆ ಸ್ನಾಯುಗಳು ಸಂಕುಚಿಸುವುದರ ಮೂಲಕ ರೆಕ್ಕೆಗಳೊಳಗೆ ರಕ್ತ ನುಗ್ಗುವಂತೆ ಮಾಡಿ, ದೇಹದ ಒತ್ತಡವನ್ನು ಹೆಚ್ಚಿಸುತ್ತದೆ. ಇದರಿಂದಾಗಿ ರೆಕ್ಕೆಗಳು ವಿಸ್ತರಿಸುತ್ತವೆ. ಅನಂತರ ರೆಕ್ಕೆಗಳ ನಾಳಗಳ ಹೊರಮೈ ಒಣಗುತ್ತದೆ. ಆ ಅನಂತರ ರೆಕ್ಕೆಗಳು ಗಟ್ಟಿಯಾಗುತ್ತವೆ. ಪ್ರೌಢಚಿಟ್ಟೆ ಹೊರಬಂದಾಗ ಅದರ ಸೊಂಡಿಲಿನ ಎರಡು ಪಾರ್ಶ್ವಗಳೂ ಪರಸ್ಪರ ಬೇರೆಯಾಗಿರುತ್ತವೆ. ಕೆಲವೇ ಕ್ಷಣಗಳಲ್ಲಿ ಇವೆರಡೂ ಒಂದರೊಡನೊಂದು ಸೇರಿಕೊಂಡು ಕೊಳವೆಯಂಥ ಸೊಂಡಿಲು ರೂಪುಗೊಳ್ಳುತ್ತದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು 30 ನಿಮಿಷಗಳಿಂದ ಒಂದು ಗಂಟೆ ಸಮಯ ಬೇಕು. ಕೆಲವೊಮ್ಮೆ 15 ನಿಮಿಷಗಳಲ್ಲಿ ಮುಗಿಯುವುದು.

ಚಿಟ್ಟೆಗಳಲ್ಲಿ ವರ್ಣವೈವಿಧ್ಯ: ಹಕ್ಕಿಗಳನ್ನು ಬಿಟ್ಟರೆ, ಪ್ರಾಣಿರಾಜ್ಯದಲ್ಲೇ ಚಿಟ್ಟೆ ಮತ್ತು ಪತಂಗಗಳು ಅತ್ಯಂತ ವರ್ಣರಂಜಿತ ಜೀವಿಗಳು. ಇವುಗಳ ಮೈಬಣ್ಣ ಇತರ ಪ್ರಾಣಿಗಳನ್ನು ಆಕರ್ಷಿಸಲು (ಉದಾ: ಚಿಟ್ಟೆ ಭಕ್ಷಕ ಜೀವಿಗಳು) ಮತ್ತು ತಪ್ಪಿಸಿಕೊಳ್ಳಲು ಸಹಾಯಕ. ಪ್ರೌಢಚಿಟ್ಟೆಗಳ ಬಣ್ಣ ಹುರುಪೆ ಮತ್ತು ಕೂದಲುಗಳಲ್ಲಿರುತ್ತದೆ. ಇವುಗಳ ಬಣ್ಣ ಎರಡು ರೀತಿಯದು; ರಾಚನಿಕ ಮತ್ತು ವರ್ಣಕೀಯ. ರಾಚನಿಕ ಬಣ್ಣದಲ್ಲಿ ಚಿಟ್ಟೆಯ ಮೈ ರಿಫ್ರೇಕ್ಷಣಾಂಕಕ್ಕೂ ಗಾಳಿಯ ರಿಫ್ರೇಕ್ಷಣಾಂಕಕ್ಕೂ ವ್ಯತ್ಯಾಸವಿರುವುದರಿಂದ ಬೆಳಕು ಚಿಟ್ಟೆಯ ಮೈಯಿಂದ ಗಾಳಿಯೊಳಕ್ಕೆ ಹಾಯುವಾಗ ಅಲೆಯುದ್ದಗಳಾಗಿ ಒಡೆಯುವುದರಿಂದ, ಚಿಟ್ಟೆಯ ಮೈ ವರ್ಣರಂಜಿತವಾಗಿ ಕಾಣುತ್ತದೆ. ಇದನ್ನು ವರ್ಣದೀಪ್ತಿ (ಇರಿಡಿಸೆನ್ಸ್) ಎನ್ನುವರು. ಅನೇಕ ಚಿಟ್ಟೆಗಳಲ್ಲಿ ವ್ಯಕ್ತವಾಗುವ ನೀಲಿ, ಬಿಳಿ, ಚಿನ್ನ ಬಣ್ಣಗಳೆಲ್ಲ ವರ್ಣದೀಪ್ತಿಯಿಂದ ಉಂಟಾಗುತ್ತವೆ. ಹುರುಪೆಗಳನ್ನು ಆವರಿಸಿರುವ ಯುರೇನಿಯ ಮತ್ತು ಮಾರ್ಫೊ ಎಂಬ ತೆಳುಪದರಗಳಿಂದ ಅಥವಾ ಹುರುಪೆಗಳ ಮೇಲಿರುವ ಸೂಕ್ಷ್ಮ ಏಣುಗಳಿಂದ ಈ ರೀತಿಯ ಬಣ್ಣಗಳುಂಟಾಗುತ್ತವೆ. ವರ್ಣಕೀಯ ಬಣ್ಣ ವೈವಿಧ್ಯಕ್ಕೆ ಚಿಟ್ಟೆಯ ಹುರುಪೆ ಹಾಗೂ ಕೂದಲುಗಳ ಒಳಗಿರುವ ವರ್ಣಕಗಳು ಕಾರಣ. ಇವು ಚಿಟ್ಟೆಯ ಚಯಾಪಚಯ ಕ್ರಿಯೆಯಿಂದ ಉತ್ಪತ್ತಿಯಾಗುತ್ತವೆ. ಆಹಾರವಸ್ತುಗಳ ಮೂಲಕ ದೇಹದಲ್ಲಿ ಉಂಟಾಗುವ ಪದಾರ್ಥಗಳು ಸಹ ವಿವಿಧ ವರ್ಣ ವೈವಿಧ್ಯಕ್ಕೆ ಕಾರಣ. ಪೈಯರಿಡೆ ಕುಟುಂಬದ ಚಿಟ್ಟೆಗಳಲ್ಲಿ ಕಾಣುವ ಬಿಳಿ, ಹಳದಿ ಹಾಗೂ ಕಿತ್ತಳೆ ಬಣ್ಣಗಳಿಗೆ ಟೇರೈನ್ ವರ್ಣಕಗಳು, ಕಪ್ಪು ಹಾಗೂ ಕಂದು ಬಣ್ಣಗಳಿಗೆ ಕಾರಣವಾದ ಮೆಲನಿನ್ ವರ್ಣಕಗಳು ಚಿಟ್ಟೆಗಳ ದೇಹದಲ್ಲಿ ಉತ್ಪತ್ತಿಯಾಗುತ್ತವೆ. ಉಳಿದ ಬಗೆಯ ಚಿಟ್ಟೆಗಳಲ್ಲಿ ಕಾಣುವ ಬಿಳಿ, ಅಚ್ಚಹಳದಿ, ದಂತ, ಹಸಿರು, ಕೆಂಪು ವರ್ಣವು ಚಿಟ್ಟೆಗಳು ಸೇವಿಸುವ ಆಹಾರದ ಮೂಲಕ ಬರುವಂಥವು. ಕೆಲವು ಬಗೆಯ ಚಿಟ್ಟೆಗಳಲ್ಲಿ (ಉದಾ: ಟ್ರಾಯ್ಡೀಸ್ ಚಿಟ್ಟೆ) ವರ್ಣದೀಪ್ತಿ ಮತ್ತು ವರ್ಣಕಗಳಿಂದ ಉಂಟಾಗುವ ಬಣ್ಣಗಳೆರಡೂ ಸೇರಿ ವರ್ಣವೈವಿಧ್ಯ ಉಜ್ವಲವಾಗುವುದು.

ಚಿಟ್ಟೆಗಳ ಆಹಾರ ಹಾಗೂ ಸಸ್ಯಗಳೊಂದಿಗೆ ಇವುಗಳ ಸಂಬಂಧ : ಕೆಲವು ಪ್ರಭೇದದ ಚಿಟ್ಟೆಗಳನ್ನು ಬಿಟ್ಟರೆ, ಉಳಿದವೆಲ್ಲ ಸಸ್ಯಾಹಾರಿಗಳು. ಇದರಿಂದಾಗಿ ಚಿಟ್ಟೆಗಳು ಮತ್ತು ಅವುಗಳ ಡಿಂಬಗಳು ಆರ್ಥಿಕ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದಿವೆ. ಇವುಗಳಲ್ಲಿ ಬಹುಪಾಲು ಉನ್ನತ ವರ್ಗದ ಸಸ್ಯಗಳಾದ ಬೀಜಸಸ್ಯಗಳ ಮೇಲೆ ಅವಲಂಬಿತವಾಗಿವೆ. ಕೆಲವು ಚಿಟ್ಟೆ ಮತ್ತು ಪತಂಗಗಳು ಬ್ರಯೋಫೈಟ್ಸ್, ಜರೀ ಸಸ್ಯಗಳ ಮೇಲೆ ಜೀವಿಸುತ್ತವೆ. ಸಸ್ಯಾಹಾರಿಗಳಲ್ಲಿ, ಕೆಲವು ಎಲೆ, ಕಾಂಡ ಭಾಗವನ್ನು ತಿಂದರೆ, ಕೆಲವು ಪರಾಗ, ಹೂವಿನ ವಿವಿಧ ಅಂಗಗಳು, ಬೀಜಗಳನ್ನು ತಿಂದು ಬದುಕುತ್ತವೆ. ಕೆಲವು ಕೊಳೆಯುತ್ತಿರುವ ಸಸ್ಯ ಪದಾರ್ಥಗಳನ್ನು ತಿನ್ನುತ್ತವೆ. ಪ್ರಾಣಿಜನ್ಯ ವಸ್ತುಗಳನ್ನು ಭಕ್ಷಿಸುವ ಚಿಟ್ಟೆಗಳಿವೆ. ಉದಾ: ತುಪ್ಪಳ, ಉಣ್ಣೆಯನ್ನು ತಿನ್ನುವ ಟಿನ್ನೆಯಿಡೆ ಗುಂಪಿನ ಪತಂಗಗಳು. ಕೆಲವು ಪತಂಗಗಳು ಲಭ್ಯವಿರುವ ಯಾವ ತೆರಹದ ಸಸ್ಯವನ್ನಾದರೂ ಸರಿ ತಿಂದು ಜೀವಿಸುತ್ತವೆ. ಉದಾ: ನಾಕ್ಟುಯಿಡೆ ಮತ್ತು ಜಿಯೋಮಿಟ್ರಿಡೆ ಕುಟುಂಬದ ಕತ್ತರಿಹುಳುಗಳು, ಟಸಾಕ್ ಪತಂಗಗಳು, ಜಿಯೋಮಿಟ್ರಿಡೆ ಕುಟುಂಬದ ಕುಣಿಕೆ ಹುಳುಗಳು, ಜಿಪ್ಸಿ ಪತಂಗ. ಕೆಲವು ಜಾತಿಯ ಚಿಟ್ಟೆಗಳ ಆಹಾರ ನಿರ್ದಿಷ್ಟ ಸಸ್ಯಗಳನ್ನು ಅವಲಂಬಿಸಿದೆ. ಉದಾ: ಕೋಸು ಚಿಟ್ಟೆಗಳು ಕ್ರೂಸಿಫೆರೀ ಕುಟುಂಬದ ಗಿಡಗಳನ್ನು, ಅಮೆರಿಕದ ಮಾನರ್ಕ್ ಚಿಟ್ಟೆ ಆಸ್ಕ್ಲಿಪಿಯಡೇಸೀ ಕುಟುಂಬದ ಗಿಡಗಳನ್ನು, ಕವಲುತೋಕೆ ಚಿಟ್ಟೆಗಳು ಅಂಬೆಲಿಫೆರೇ ಕುಟುಂಬದ ಗಿಡಗಳನ್ನು ಮಾತ್ರ ತಿನ್ನುತ್ತವೆ.

ಎಲೆಗಳೊಳಗೆ ಕೊರೆದು ನಾಳಗಳಲ್ಲಿ ಜೀವಿಸುವ ಕೆಲವು ಪತಂಗಗಳಿವೆ. ಇವುಗಳ ಡಿಂಬಗಳು ರಚಿಸುವ ಗಣಿಗಳಿಗೆ ನಿರ್ದಿಷ್ಟ ಆಕಾರವಿರುವುದರಿಂದ, ಗಣಿಯ ಆಕಾರದ ಮೇಲೆ ಚಿಟ್ಟೆ ಅಥವ ಪತಂಗಗಳನ್ನು ಗುರುತಿಸುವರು. ಕೆಲವು ಚಿಟ್ಟೆ, ಪತಂಗ ಹಾಗೂ ಅವುಗಳ ಡಿಂಬಗಳು ಕಾಂಡಗಳನ್ನು ಕೊರೆದು ತಿನ್ನುತ್ತವೆ. ಉದಾ: ಹೀಪಿಯಾಲಿಡೆ, ಈಜಿರೈಯಿಡೆ, ಮೆಗತೈಮಿಡೆ ಕುಟುಂಬದ ಸದಸ್ಯರು. ಹಲವು ಜಾತಿಯ ಚಿಟ್ಟೆ, ಪತಂಗಗಳು ಕಾಯಿ ಬೀಜಗಳಲ್ಲಿ ಸುರಂಗ ಕೊರೆದು ಬದುಕುತ್ತವೆ. ಉದಾ: ಸೇಬು ಗಿಡಕ್ಕೆ ಕಾಡುವ

ಕಾಡ್ಲಿಂಗ್ ಪತಂಗ, ಹತ್ತಿಗಿಡದ ಕಾಯಿಗಳಿಗೆ ಅಂಟುವ ಬೋಲ್‌ವರ್ಮ್, ಮೆಕ್ಸಿಕೊದಲ್ಲಿನ ಕ್ರೋಟನ್ ಗಿಡಗಳಿಗೆ ಬರುವ ಜಂಪಿಂಗ್ ಬೀನ್ ಪತಂಗ, ಯಕ ಗಿಡಕ್ಕೆ ಅಂಟುವ ಯಕ ಪತಂಗ ಇತ್ಯಾದಿ. ಸಸ್ಯಾಹಾರಿ ಚಿಟ್ಟೆಗಳೂ, ಅವುಗಳ ಡಿಂಬಗಳು ಸಸ್ಯ ಅಂಗವೊಂದನ್ನು ಕೊರೆಯತೊಡಗಿದಾಗ ಆ ಸಸ್ಯ ಭಾಗದಲ್ಲಿ ಕೆಲವು ಸಲ ಒಂದು ಬಗೆಯ ಗಂಟು (ಗಾಲ್) ಉಂಟಾಗುತ್ತದೆ. ಈ ಗಂಟಿಗೆ ಮಾಚಿಕಾಯಿ, ಹುಳುಹಿಕ್ಕೆಗಳೆಂದು ಹೆಸರು.

ಪ್ರೌಢಚಿಟ್ಟೆಗಳ ಆಹಾರ ಸೇವನಾಕ್ರಮ ಡಿಂಬಗಳಿಗಿಂತ ಸರಳವಾಗಿದೆ. ಇವುಗಳಲ್ಲಿ ಬಹುಪಾಲು ತಮ್ಮ ಸೊಂಡಿಲಿನ ಸಹಾಯದಿಂದ ಹೂಗಳಲ್ಲಿನ ಮಕರಂದವನ್ನು ಹೀರಿ ಬದುಕುತ್ತವೆ. ಇದಕ್ಕಾಗಿ ವಿವಿಧ ಪ್ರಭೇದಗಳ ಚಿಟ್ಟೆಗಳು ಮತ್ತು ಪತಂಗಗಳು ನಿರ್ದಿಷ್ಟವಾದ ಹೂಗಳನ್ನು ಸಂದರ್ಶಿಸಿ ಆಹಾರವನ್ನು ಪಡೆಯುತ್ತವೆ. ಪತಂಗಗಳು ಬಿಳಿಯ ಬಣ್ಣದ ಹಾಗೂ ಹೆಚ್ಚು ಆಳವಿಲ್ಲದ ದಳಗಳುಳ್ಳ ಹೂಗಳಿಗೆ ಭೇಟಿ ನೀಡುತ್ತವೆ. ಚಿಟ್ಟೆಗಳು ನೀಲಿ, ಕಿತ್ತಳೆ, ಉದಾ, ಕೆಂಪು ವರ್ಣದ ಮತ್ತು ಹೆಚ್ಚು ಆಳವಿರುವ ಹೂಗಳನ್ನು ಸಂದರ್ಶಿಸುತ್ತವೆ. ಕೆಲವು ಚಿಟ್ಟೆಗಳು ಹೂದಳಗಳ ಮೇಲೆ ಕುಳಿತು ತಮ್ಮ ಸೊಂಡಿಲನ್ನು ಚಾಚಿ ಮಕರಂದವನ್ನು ಹೀರಿದರೆ, ಕೆಲವು (ಉದಾ : ಡೇಗೆಪತಂಗ) ಝೇಂಕಾರ ಪಕ್ಷಿಗಳಂತೆ ಹೂವಿನ ಮುಂದೆ ಹಾರುತ್ತ ತಮ್ಮ ಸೊಂಡಿಲನ್ನು ಮುಂಚಾಚಿ ಮಕರಂದ ಹೀರುತ್ತವೆ. ಚಿಟ್ಟೆಗಳು ಕೆಸರು, ಇಬ್ಬನಿ ನೀರನ್ನು ಕುಡಿಯುತ್ತವೆ. ಕೆಲವು ಸಲ ಗಿಡಮರಗಳಿಂದ ಸ್ರವಿಸುವ ಸಿಹಿಯಾದ ದ್ರವವನ್ನು, ಕೊಳೆಯುತ್ತಿರುವ ಹಣ್ಣುಗಳ ಮೇಲೆ ಸಂಗ್ರಹವಾಗಿರುವ ರಸವನ್ನು ಕುಡಿಯುತ್ತವೆ. ಏಪಟ್ಯೂರ ಜಾತಿಯ ಚಿಟ್ಟೆಗಳು ಕೊಳೆಯುತ್ತಿರುವ ಪ್ರಾಣಿ ಶವಗಳಿಂದ ಆಹಾರ ಪಡೆಯುತ್ತವೆ.

ಹೂಗಳಿಂದ ಮಕರಂದ ಹೀರಿ ಜೀವಿಸುವ ಚಿಟ್ಟೆಗಳು ಮತ್ತು ಪತಂಗಗಳು ಪರಾಗಸ್ಪರ್ಶಕ್ರಿಯೆಗೆ ಕೊಡುಗೆ ನೀಡಿವೆ.

ಕೆಲವು ಚಿಟ್ಟೆಗಳು ಮಂಸಾಹಾರಿಗಳು. ಇವು ಇತರ ಕೀಟಗಳನ್ನು, ಸಣ್ಣ ಜೀವಿಗಳನ್ನು ತಿಂದು ಬದುಕುತ್ತವೆ. ಉದಾ: ಮೈಕ್ರೊಲೆಪಿಡಾಪ್ಟರ ಗುಂಪಿನ ಕೆಲವು ಪತಂಗಗಳು, ನಾಕ್ಟುಯಿಡೆ ಮತ್ತು ಲೈಸೀನಿಡೆ ಕುಟುಂಬದ ಚಿಟ್ಟೆಗಳು. ಇವು ಶಲ್ಕಕೀಟಗಳನ್ನು, ಏಫಿಡ್ಡುಗಳನ್ನು, ಮೀಲೀ ಬಗ್ಸ್ ಗಳನ್ನು ತಿನ್ನುತ್ತವೆ. ಚಿಟ್ಟೆಗಳನ್ನೇ ತಿನ್ನುವ ಚಿಟ್ಟೆಗಳು ಇವೆ. ಈ ಕ್ರಿಯೆಗೆ ಕನ್ನಿಬಾಲಿಸಂ ಎನ್ನುವರು. ಉದಾ: ಆರ್ಕ್‌ಟೈಯಿಡೆ, ಲೈಸೀನಿಡೆ ಕುಟುಂಬಗಳಿಗೆ ಸೇರಿದ ಚಿಟ್ಟೆಗಳು, ಎನಾರ್ಜಿಯ, ಕಾಸ್ಮಿಯ ಪ್ರಭೇದಗಳು.

ಚಿಟ್ಟೆಗಳ ಶತ್ರುಗಳು : ಪ್ರಾಣಿಗಳ ಆಹಾರ ಸರಪಳಿಯಲ್ಲಿ ಲೆಪಿಡಾಪ್ಟರ ಗುಂಪಿನ ಕೀಟಗಳ ಪಾತ್ರ ಮಹತ್ವದ್ದು. ಸಸ್ಯಾಹಾರವನ್ನು ಅವಲಂಬಿಸಿ ಬದುಕುವ ಇವು, ಇತರ ಭಕ್ಷಕಪ್ರಾಣಿಗಳಿಗೆ, ಪರೋಪಜೀವಿಗಳಿಗೆ ಆಹಾರವಾಗಿವೆ. ಇವು ಬಹಳ ವರ್ಣರಂಜಿತವಾಗಿರುವುದರಿಂದ ಭಕ್ಷಕ ಪ್ರಾಣಿಗಳ ಗಮನಕ್ಕೆ ಬೇಗ ಬೀಳುತ್ತವೆ. ಇದರಿಂದ ಇವಕ್ಕೆ ಸಹಜವಾಗಿಯೇ ಶತ್ರುಗಳು ಹೆಚ್ಚು. ಅಂತೆಯೇ ಇಂಥ ಶತ್ರುಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಇವು ಅನೇಕ ಬಗೆಯ ರಕ್ಷಣಾ ಸಾಧನಗಳನ್ನು ರೂಪಿಸಿಕೊಂಡಿವೆ. ಚಿಟ್ಟೆಗಳ ಶತ್ರುಗಳಲ್ಲಿ ಮುಖ್ಯವಾದುವು: ಓತಿ, ಹಕ್ಕಿ, ಬಾವಲಿ ಹಾಗೂ ಕೋತಿಗಳು. ಮೀನು, ಕಪ್ಪೆ, ಹಾವು ಮತ್ತು ಸಣ್ಣ ಸ್ತನಿಗಳು ಇವನ್ನು ಹಿಡಿದು ತಿನ್ನುತ್ತವೆ. ಅಕಶೇರುಕಗಳಾದ ಜೇಡ, ಜರಿ, ಚೇಳು, ಕೊಡತಿಕೀಟ, ಒಂಟೆಹುಳು, ಘಾತಕತಿಗಣೆ ಹಾಗೂ ಆಂಬುಷ್ ತಿಗಣೆಗಳು ಚಿಟ್ಟೆ, ಪತಂಗಗಳನ್ನು ತಿನ್ನುತ್ತವೆ. ಆಸೈಲಿಡೆ ಕುಟುಂಬದ ದರೋಡೆಗಾರ ನೊಣಗಳು, ಕೋಲಿಯಾಪ್ಟರ ಗಣದ ಮುಳುಗು ಜೀರುಂಡೆ (ಡಿಟಿಸ್ಕಿಡೆ), ಹುಲಿಜೀರುಂಡೆ (ಸಿಸಿಂಡೆಲಿಡೆ), ನೆಲಜೀರುಂಡೆಗಳು (ಕ್ಯಾರಬಿಡೆ), ಕೆಲವು ಜಾತಿಯ ಕಣಜಗಳು (ಉದಾ: ವೆಸ್ಪವಲ್ಗ್ಯಾರಿಸ್, ವೆಸ್ಪ ಮ್ಯಾಕ್ಯುಲೇಟ, ಯೂಮೆನೀಸ್, ಆಮೊಫೈಲ) ಚಿಟ್ಟೆಗಳನ್ನು ತಿನ್ನುವ ಮೂಲಕ ಈ ಸಂಕುಲಕ್ಕೆ ಶತ್ರುಗಳಾಗಿವೆ.

ಚಿಟ್ಟೆಗಳ ಮೇಲೆ ಪರೋಪಜೀವಿಗಳಾಗಿ ಜೀವಿಸುವ ಕೀಟಗಳಲ್ಲಿ ಮುಖ್ಯವಾದುವು: ಹೈಮನಾಪ್ಟರ ಗಣದ ಇಕ್ನೂಮಾನಾಯ್ಡಿಯ, ಚಾಲ್ಸಿಡಾಯ್ಡಿಯ ಮತ್ತು ಪ್ರಾಕ್ಟೊಟ್ರೂಪಾಯ್ಡಿಯ ಅಧಿಕುಟುಂಬಗಳ ಕಣಜಗಳು ಮತ್ತು ಡಿಪ್ಟರ ಗಣದ ಬಾಂಬಿಲೈಯಿಡೆ, ಟ್ಯಾಕಿನಿಡೆ ಮತ್ತು ಡೆಕ್ಸೈಯಿಡೆ ಕುಟುಂಬದ ನೊಣಗಳು. ಇವುಗಳಲ್ಲಿ ಬಹುಪಾಲು ಕೀಟಗಳು ಚಿಟ್ಟೆ ಮತ್ತು ಪತಂಗಗಳ ಮೊಟ್ಟೆ, ಡಿಂಬ, ಪ್ಯೂಪಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಪತಂಗಗಳ ಮೊಟ್ಟೆಯೊಡೆದು ಮರಿ ಹೊರಬರುವ ಸಮಯಕ್ಕೆ ಪರೋಪ ಜೀವಿಯ ಮೊಟ್ಟೆಯು ಒಡೆದು ಅದರ ಮರಿಯು ಹೊರಬಂದು ಪತಂಗಗಳ ಮರಿಯನ್ನು ತಿಂದು ಬೆಳೆಯತೊಡಗುತ್ತದೆ. ಇದರಿಂದಾಗಿ ಅಪಾರ ಸಂಖ್ಯೆಯಲ್ಲಿ ಚಿಟ್ಟೆಗಳು ನಾಶವಾಗುತ್ತವೆ. ಉದಾ: ಏಪ್ಯಾಂಟೆಲೀಸ್ ಜಾತಿಯ ಕಣಜದ ಹಾವಳಿಯಿಂದ ಪೈಯರಿಸ್ ಚಿಟ್ಟೆಗಳ ಡಿಂಬಗಳಲ್ಲಿ ಶೇ. 84ರಷ್ಟು ಸತ್ತುಹೋಗುವ ಬಗ್ಗೆ ಅಂದಾಜು ಮಾಡಲಾಗಿದೆ.

ಇಂಥ ಶತ್ರುಗಳಿಂದ, ಪರೋಪಜೀವಿಗಳಿಂದ ತಪ್ಪಿಸಿಕೊಳ್ಳಲು ಚಿಟ್ಟೆಗಳು ಹಲವಾರು ರಕ್ಷಣಾ ಸಾಧನಗಳನ್ನು ರೂಪಿಸಿಕೊಂಡಿವೆ. ಅಗಾಧ ಸಂಖ್ಯೆಯಲ್ಲಿ ಮೊಟ್ಟೆಗಳನ್ನಿಟ್ಟು, ಮರಿ ಮಾಡಿ ತಮ್ಮ ಸಂಖ್ಯೆಯನ್ನು ಕಾಪಾಡಿಕೊಳ್ಳುವುವು. ಉದಾ: ಪೈಯರಿಸ್ ಜಾತಿಯ ಚಿಟ್ಟೆ ಒಂದು ಸಲಕ್ಕೆ 300ರಂತೆ ವರ್ಷಕ್ಕೆ 3 ಸಲ ಮೊಟ್ಟೆಯಿಡುತ್ತದೆ. ಕೆಲವು ಚಿಟ್ಟೆಗಳು ಹಾಗೂ ಅವುಗಳ ಡಿಂಬಗಳು ಮೈ ಮೇಲೆ ಕೂದಲು, ಮುಳ್ಳುಗಳನ್ನು ಬೆಳೆಸಿಕೊಂಡು ತಮ್ಮ ದೇಹದಿಂದ ವಿಷಪೂರಿತ ರಾಸಾಯನಿಕಗಳನ್ನು ಹೊರಸೂಸುತ್ತವೆ. ಕೆಲವು ಅಸಹ್ಯಕರವಾದ ವಾಸನೆಯನ್ನು ಬೀರುತ್ತವೆ. ಕೆಲವು ಜಾತಿಯ ಚಿಟ್ಟೆ – ಪತಂಗಗಳ ಮೈಬಣ್ಣ ಶತ್ರುಗಳಿಗೆ ಭೀತಿಯನ್ನುಂಟುಮಾಡುವಂತೆ ಇರುತ್ತದೆ. ಇನ್ನೂ ಕೆಲವು ಚಿಟ್ಟೆಗಳು ಸತ್ತುಬಿದ್ದಂತೆ ನಟಿಸುತ್ತವೆ. ಮತ್ತೆ ಕೆಲವು ರಕ್ಷಣೆಗೆಂದು ಹಗಲಿನಲ್ಲಿ ಗುಪ್ತಸ್ಥಳಗಳಲ್ಲಿ ಅಡಗಿ ವಾಸಿಸುವುವು. ತಾವು ಜೀವಿಸುವ ಗಿಡಮರಗಳ ಎಲೆ, ಕೊಂಬೆ, ಕಲ್ಲುಹೂಗಳನ್ನು ಹೋಲುವಂಥ ಬಣ್ಣಗಳನ್ನು, ಭಂಗಿಗಳನ್ನು ಇವು ಅನುಕರಿಸಿ ಶತ್ರುಗಳಿಂದ ತಪ್ಪಿಸಿಕೊಳ್ಳುತ್ತವೆ. ಕೆಲವು ಚಿಟ್ಟೆಗಳು ತಾವು ಓಡಾಡುವ ಪ್ರದೇಶದ ಹಿನ್ನೆಲೆಯ ಬಣ್ಣವನ್ನೆ ಹೋಲುವ ಮೈ ಬಣ್ಣವನ್ನು ಪಡೆದಿದ್ದು ಶತ್ರುಗಳ ಕಣ್ಣಿಗೆ ಗೋಚರಿಸದಂತೆ ಅಡಗಿರುತ್ತವೆ.

ಚಿಟ್ಟೆ ಮತ್ತು ಪತಂಗಗಳ ವರ್ಗೀಕರಣ : ಇವುಗಳ ವರ್ಗೀಕರಣ ಬಹು ಚರ್ಚಾಸ್ಪದ ವಿಷಯವಾಗಿದೆ. ರೆಕ್ಕೆಗಳ ಮೇಲಿನ ನಾಳವಿನ್ಯಾಸ, ಡಿಂಬಗಳ ರೂಪ ರಚನೆ, ಹುರುಪೆಗಳ ಆಕಾರ, ಗಾತ್ರ, ಆಹಾರಸೇವನಾಕ್ರಮದ ಗುಣಲಕ್ಷಣಗಳನ್ನು ವರ್ಗೀಕರಣದಲ್ಲಿ ಕೀಟವಿಜ್ಞಾನಿಗಳು ಬಳಸುವರು. ಎಲ್ಲಾ ಚಿಟ್ಟೆ ಮತ್ತು ಪತಂಗಗಳನ್ನು ಲೆಪಿಡಾಪ್ಟರ ಗಣಕ್ಕೆ ಸೇರಿಸಲಾಗಿದ್ದು ಗಣವನ್ನು ಹೋಮೋನ್ಯೂರ (ಜ್ಯೂಗೇಟೀ) ಮತ್ತು ಹೆಟರೋನ್ಯೂರ (ಫ್ರೆನೇಟೀ) ಎಂಬ ಎರಡು ಉಪಗಣಗಳನ್ನಾಗಿ ವಿಂಗಡಿಸಲಾಗಿದೆ. (ವಿವರಗಳಿಗೆ ನೋಡಿ– ಲೆಪಿಡಾಪ್ಟರ.)

ಚಿಟ್ಟೆ ಪತಂಗಗಳ ನಡುವಿನ ವ್ಯತ್ಯಾಸಗಳು.

| ಚಿಟ್ಟೆಗಳು | ಪತಂಗಗಳು |
|---|---|
| 1. ಚಿಟ್ಟೆಗಳು ಕುಳಿತುಕೊಂಡಾಗ ಅದರ ಎರಡು ಜೊತೆ ರೆಕ್ಕೆಗಳು 'ನಮಸ್ತೆ' ಚಿನ್ಹೆಯಂತೆ ದೇಹದ ಮೇಲೆ ಲಂಬಾಕಾರದಲ್ಲಿ ಹೊಂದಿಕೊಳ್ಳುತ್ತವೆ. | ಪತಂಗ ಕುಳಿತುಕೊಂಡಾಗ ಅದರ ರೆಕ್ಕೆಗಳು ಭೂಮಿಗೆ ಸಮಾನಂತರವಾಗಿ ಚಾಚಿರುತ್ತವೆ. |
| 2. ಇವು ಹಗಲು ಸಂಚಾರಿ. | ಇವು ರಾತ್ರಿ ಸಂಚಾರಿ. |
| 3. ಪ್ರತಿಯೊಂದು ಕುಡಿಮೀಸೆ ತುದಿಯಲ್ಲಿ ಗಬುಟು ಹಕ್ಕಿಯ ಪುಕ್ಕವನ್ನು ಹೊಲುವುದು. | ಕುಡಿಮೀಸೆ ತುದಿಯಲ್ಲಿ ಗಬುಟು ಇಲ್ಲ. (ನಾಬ್) ಇರುವುದು. |
| 4. ಚಿಟ್ಟೆಗಳಿಗೆ ಆಕರ್ಷಕ ಬಣ್ಣಗಳಿವೆ. ಚಿಟ್ಟೆಗಳಷ್ಟು ಆಕರ್ಷಕವಾಗಿಲ್ಲ. | ಪತಂಗಗಳ ಬಣ್ಣ ಸಾಮಾನ್ಯವಾಗಿ |

(ಕೆ.ಎಸ್.ಪಿ.: ಎಸ್.ಕೆ.ಎಚ್)



ಪತಂಗ



ಚಿಟ್ಟೆ

**ಚಿತಾಲ್:** ನೋಟಾಪ್ಟರಿಡೆ ಕುಟುಂಬಕ್ಕೆ ಸೇರಿದ ಒಂದು ಸಿಹಿನೀರು ಮೀನು. ನೋಟಾಪ್ಟರಿಸ್ ಚಿತಾಲ ಇದರ ಶಾಸ್ತ್ರೀಯ ಹೆಸರು. ದೇಹದ ಉದ್ದ ಸು. 30 ಸೆಂಮೀ. ಕೆಲವು ಸಲ 9 ಸೆಂಮೀ ಯನ್ನೂ ಮೀರುವುದುಂಟು. ಇದು ಭಾರತದ ಅತಿ ಪ್ರಮುಖ ನದಿಗಳಾದ ಗಂಗಾ, ಬ್ರಹ್ಮಪುತ್ರ ಮತ್ತು ಮಹಾನದಿಗಳಲ್ಲಿ ಮಾತ್ರ ಕಂಡುಬರುತ್ತದೆ. ಚಿತಾಲ್ ಒಂದು ಚಪ್ಪಟೆ ಮೀನು. ಬೆನ್ನು ಗೋಪುರದಾಕಾರದಲ್ಲಿ ಬಾಗಿದೆ. ಬಹಳ ಸಣ್ಣ ತಲೆ, ಗುದದ ಉದ್ದನೆಯ ಈಜುರೆಕ್ಕೆ, ಈ ರೆಕ್ಕೆ ಬಾಲದ ಈಜುರೆಕ್ಕೆಯೊಂದಿಗೆ ಸೇರಿಕೊಂಡಿರುವುದು, ದೇಹದ ಹಿಂಭಾಗದಲ್ಲಿ ಅಚೀಚೆ ಪಟ್ಟಿಯಾಕಾರದ ಗುರುತುಗಳು ಇರುವುದು, ತಾಮ್ರಮಿಶ್ರಿತ ಕಂದುಬಣ್ಣ, ಬಾಲದ ಈಜುರೆಕ್ಕೆಯ ಬಳಿ ಕಪ್ಪು ಬಣ್ಣದ ಚುಕ್ಕೆಗಳಿರುವುದು ಈ ಮೀನಿನ ಪ್ರಮುಖ ಲಕ್ಷಣಗಳು. ಪ್ರೌಢ ಚಿತಾಲ್ ಮೀನಿಗೆ ಇತರ ಬಗೆಯ ಸಣ್ಣ ಮೀನುಗಳೇ ಆಹಾರ. ಸಣ್ಣ ಮರಿಯ ಸ್ಥಿತಿಯಲ್ಲಿದ್ದಾಗ ಕಾರ್ಪ್ ಮರಿಗಳನ್ನು ಮತ್ತು ಕೀಟಗಳ ಡಿಂಬಗಳನ್ನು ತಿನ್ನುತ್ತದೆ. ಚಿತಾಲ್ ಮೀನು ನಿಂತ ನೀರಿನಲ್ಲಿ ಮೊಟ್ಟೆಯಿಡುತ್ತದೆ. ಸಾಮಾನ್ಯವಾಗಿ ಜಲಸಸ್ಯಗಳ ಮೇಲೆಯೇ ಮೊಟ್ಟೆಯಿಡುವುದಾದರೂ ಕೆಲವು ಸಲ ಗೂಡನ್ನು ರಚಿಸುವುದುಂಟು. ಚಿತಾಲ್ ಬಲು ರುಚಿಯಾದ ಮೀನೆಂದು ಹೆಸರಾಗಿದೆ. ಆದರೆ ಇದನ್ನು ಸದ್ಯಕ್ಕೆ ಎಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಸಾಕುತ್ತಿಲ್ಲ. ***

**ಚಿಪ್ಪುಗಳು ಮತ್ತು ಚಿಪ್ಪು ಸಂಗ್ರಹಣೆ (ಮೃದ್ವಂಗಿಗಳ):** ಕೆಲವು ಜೀವಿಗಳ ಮೈಯನ್ನು ಆವರಿಸಿರುವ ಕಠಿಣವಾದ ರಕ್ಷಾಕವಚವೇ ಚಿಪ್ಪು. ಚಿಪ್ಪುಗಳು ಸಸ್ಯಗಳ ಕಾಯಿ ಮತ್ತು ಬೀಜಗಳನ್ನೂ ಪ್ರಾಣಿಗಳಲ್ಲಿ ಸರೀಸೃಪ ಮತ್ತು ಪಕ್ಷಿಗಳ ಮೊಟ್ಟೆಗಳನ್ನೂ ಆಮೆ, ಚಿಪ್ಪು ಹಂದಿ ಮುಂತಾದ ಕಶೇರುಕಗಳ ಹೊರಮೈಯನ್ನೂ ಆವರಿಸಿವೆ. ಪೊರಾಮಿನಿಫೆರ, ಕಠಿಣಚರ್ಮಿ, ಕಂಟಕಚರ್ಮಿ, ಬ್ರ್ಯಾಕಿಯೋಪೊಡ, ಮೃದ್ವಂಗಿ (ಮಾಲಸ್ಕ) ಮುಂತಾದ ಅಕಶೇರುಕಗಳಲ್ಲಿಯೂ ಚಿಪ್ಪುಗಳಿವೆ.

ಮ್ಯೂರೆಕ್ಸ್

ಮೃದ್ವಂಗಿ ಚಿಪ್ಪುಗಳು ಮನಮೋಹಕವಾದುದರಿಂದ ಲೋಕಪ್ರಸಿದ್ಧವಾಗಿವೆ. ವೈವಿಧ್ಯಮಯ ವರ್ಣವಿನ್ಯಾಸ, ಆಕಾರ, ಪ್ರರೂಪ, ಮಿರುಗುವ ಮೈರಚನೆಗಳನ್ನು ಪಡೆದಿರುವುದಿರಿಂದಲೂ ಕಡಲಿನ ತೀರದಲ್ಲಿ ಹೇರಳವಾಗಿ ಸಿಗುವುದರಿಂದಲೂ ಇವು ಮಾನವನನ್ನು ಹಿಂದಿನಿಂದಲೂ ಆಕರ್ಷಿಸಿವೆ. ಆದ್ದರಿಂದಲೇ ಹಿಂದೆ ಜನ ಇವನ್ನು ಆಭರಣ, ಸಲಕರಣೆ ಮತ್ತು ನಾಣ್ಯಗಳನ್ನಾಗಿ ಉಪಯೋಗಿಸುತ್ತಿದ್ದರು. ಇವುಗಳ ವಿಚಾರವಾಗಿ ಅರಿಸ್ಟಾಟಲ್ ಮತ್ತು ಪ್ಲಿನಿ ದೀರ್ಘವಾಗಿ ಬರೆದಿದ್ದಾರೆ. ಪುರಾತನ ಪಾಂಪೆ ಕಟ್ಟಡದ ಅವಶೇಷಗಳಲ್ಲಿ ಮತ್ತು ಯೂಕಟಾನ್‌ನ ಮಯೂನ್ ಪಿರಮಿಡ್ಡಿನ ಒಂದು ಗೂಡಿನಲ್ಲಿ ಚಿಪ್ಪುಗಳು ಕಂಡುಬಂದಿವೆ. ಬಹುಶಃ ಪುರಾತನ ಕಾಲದಲ್ಲಿ ಮಾಡಿದ ಚಿಪ್ಪುಗಳ ಸಂಗ್ರಹಣೆಯ ಉಳಿಕೆಗಳು ಇವು ಎಂದು ತಿಳಿಯಲಾಗಿದೆ. ಮೃದ್ವಂಗಿ ವಂಶದಲ್ಲಿ ಐದು ವರ್ಗಗಳಿವೆ. ಇವು ತಮ್ಮವೇ ಆದ ಚಿಪ್ಪುಗಳನ್ನು ಪಡೆದಿವೆ. ಕೆಲವು ಪ್ರಭೇದಗಳನ್ನುಳಿದು ಮಿಕ್ಕೆಲ್ಲ ಮೃದ್ವಂಗಿಗಳಲ್ಲಿ ಚಿಪ್ಪುಗಳು ದೇಹವನ್ನು ಆವರಿಸಿವೆ. ಆಂಫಿನ್ಯೂರ ವರ್ಗದ ಕೈಟಾನಿಡೆ ಕುಟುಂಬದ ಪ್ರಾಣಿಗಳ ಮೈಮೇಲೆ ಫಲಕಗಳಿವೆ. ಸ್ಕ್ಯಾಫೊಪೋಡ ವರ್ಗದಲ್ಲಿ ಆನೆಕೊಂಬಿನಂಥ ಕೊಳವೆ ರೀತಿಯ ಒಂದೇ ಒಂದು ಚಿಪ್ಪು ಇದೆ. ಕಪ್ಪೆಚಿಪ್ಪು ಪ್ರಾಣಿಗಳಲ್ಲಿ ಜೋಡಿ ಚಿಪ್ಪುಗಳೂ ಗ್ಯಾಸ್ಟ್ರಾಪೋಡ ವರ್ಗದಲ್ಲಿ ಶಂಖಾಕಾರದ ಒಂದು ಚಿಪ್ಪೂ ಹೊರಕವಚವಿರುವ ಶಿರೋಪಾದಿಗಳಲ್ಲಿ (ಸೆಫಲಾಪೊಡ) ಕೋಣೆಗಳಿರುವ ಚಿಪ್ಪುಗಳೂ ಇವೆ. ಚಿಪ್ಪುಗಳು ಮೃದ್ವಂಗಿಗಳ ಮೆತು ದೇಹವನ್ನು ಆವರಿಸಿ ರಕ್ಷಣೆಯನ್ನು ಕೊಡುತ್ತವೆ. ಮೃದ್ವಂಗಿಗಳ ದೇಹದ ಸುತ್ತ ಇರುವ ಮ್ಯಾಂಟಲಿನ ಹೊರಪದರದ ಜೀವಕೋಶಗಳು ಚಿಪ್ಪನ್ನು ನಿರ್ಮಿಸುವುವು. ಚಿಪ್ಪಿನ ಉತ್ಪಾದನೆ ಸಾಧಾರಣವಾಗಿ ಎಲ್ಲ ಮೃದ್ವಂಗಿಗಳಲ್ಲಿ ಒಂದೇ ರೀತಿಯದು. ಚಿಪ್ಪಿನಲ್ಲಿ ಹೊರಗಿನ ಪೆರಿಆಸ್ಟ್ರಕಮ್, ಮಧ್ಯದ ಪ್ರಿಸ್ಮ್ಯಾಟಿಕ್ ಮತ್ತು ಒಳಗಿನ ನೆಕ್ರಿಯಸ್ ಪದರಗಳಿವೆ. ವಿವಿಧ ಪ್ರಭೇದಗಳಲ್ಲಿ ಈ ಪದರಗಳ ದಪ್ಪ ಹಾಗೂ ಒಳರಚನೆ ಬೇರೆ ಬೇರೆ ರೀತಿ ಇರುವುದುಂಟು.

ಚಿಪ್ಪುಗಳು ಪ್ರಾಣಿಯ ದೇಹವನ್ನು ರಕ್ಷಿಸುವುವಲ್ಲದೆ ವಿವಿಧ ಅಂಗಗಳಿಗೆ ಆಧಾರವಾಗಿವೆ. ಪ್ರಾಣಿಗೂ ಅದರ ಚಿಪ್ಪಿಗೂ ನಿಕಟ ಸಂಬಂಧ ಉಂಟು. ಚಿಪ್ಪಿಲ್ಲದೆ ಪ್ರಾಣಿ ಜೀವಿಸಲಾರದು. ಪ್ರಾಣಿ ಸತ್ತ ಮೇಲೆ ಅದರ ಖಾಲಿ ಚಿಪ್ಪನ್ನು ಕೆಲವು ಸಣ್ಣಪ್ರಾಣಿಗಳು ತಮ್ಮ ಗೂಡನ್ನಾಗಿ ಉಪಯೋಗಿಸುವುದುಂಟು. ಉದಾಹರಣೆಗೆ, ಸನ್ಯಾಸಿ ಏಡಿ ಶಂಖವನ್ನು ತಾತ್ಕಾಲಿಕ ಗೂಡನ್ನಾಗಿ ಮಾಡಿಕೊಳ್ಳುತ್ತದೆ. ಮೃದ್ವಂಗಿಗಳು ಅನೇಕ ಪ್ರಾಣಿಗಳ ಜೊತೆ ಸಹಚರ ಜೀವನವನ್ನು ನಡೆಸುತ್ತವೆ. ಉದಾಹರಣೆಗೆ, ಚಿಪ್ಪಿನ ಮೇಲೆ ವಾಸಿಸುವ ಕುಟುಕುಕಣವಂತ ಜೀವಿಗಳು ಮತ್ತು ಮೃದ್ವಂಗಿಗಳು ಒಂದಕ್ಕೊಂದು ಸಹಾಯಕವಾಗುವುವು.

ಚಿಪ್ಪುಗಳ ಸಂಗ್ರಹಣೆ ನಾಣ್ಯ ಮತ್ತು ಅಂಚೆಚೀಟಿಗಳ ಸಂಗ್ರಹಣೆಯ ಹವ್ಯಾಸದಂತೆ ಬಹಳ ಇತ್ತೀಚಿನದು. ಇವುಗಳ ಶೇಖರಣೆಯ ಕಾರ್ಯ 18ನೆಯ ಶತಮಾನದ ಪೂರ್ವಾರ್ಧದ ಅಂತರದಲ್ಲಿ ಇಂಗ್ಲೆಂಡಿನಲ್ಲಿ ಬಹು ಹೆಚ್ಚಾಗಿತ್ತು. ಈ ಕಾಲದಲ್ಲಿ ಕಂಡುಹಿಡಿದ ಹೊಸ ದ್ವೀಪಗಳಿಂದ ಅಪೂರ್ವವಾದ ಹಾಗೂ ಆಕರ್ಷಣೀಯವಾದ ಹೊಸ ಚಿಪ್ಪುಗಳ ಸಂಗ್ರಹಣೆಯಾಯಿತು. ಅವನ್ನು ಸಿರಿವಂತ ವರ್ತಕರು ತಮ್ಮ ಸಂಗ್ರಹಣೆಯ ಮಾದರಿಗಳಿಗಾಗಿ ಕೊಂಡರು. 1850–60ರಲ್ಲಿ ಚಿಪ್ಪು ಸಂಗ್ರಹಣೆಯ ಹವ್ಯಾಸ ವಿಪುಲವಾಗಿತ್ತಲ್ಲದೆ ಅವುಗಳ ಹರಾಜೂ ಸರ್ವೇಸಾಧಾರಣವಾಗಿತ್ತು. ಆಗ ಅಪರೂಪದ ಹಾಗೂ ಆಕರ್ಷಣೀಯ ಚಿಪ್ಪುಗಳಿಗೆ ಒಳ್ಳೆಯ ಬೆಲೆ ಸಿಗುತ್ತಿತ್ತು. ಆದರೆ ಚಿಪ್ಪು ಸಂಗ್ರಹಕಾರರು ಹೆಚ್ಚಾದಂತೆ ಅಪರೂಪದ ಚಿಪ್ಪುಗಳು ಮಾರುಕಟ್ಟೆಗೆ ಹೆಚ್ಚು ಬರತೊಡಗಿ ಅವುಗಳ ಬೆಲೆ ಇಳಿಮುಖವಾಯಿತು. ಉದಾಹರಣೆಗೆ, ಮೊದಮೊದಲು ಒಂದು ಚಿಪ್ಪಿಗೆ 50–60 ಪೌಂಡು ಮೌಲ್ಯವಿದ್ದ ಜನಪ್ರಿಯವಾದ ವೊಲುಟಜುನೋನಿಯ ಎಂಬ ಚಿಪ್ಪಿನ ಬೆಲೆ ಅದರ ಸಂಗ್ರಹಣೆ ಹೆಚ್ಚಾದ ಮೇಲೆ 5 ಪೌಂಡಿಗೆ ಇಳಿಯಿತು. ಇದರಂತೆಯೇ ಇನ್ನೂ ಅನೇಕ ಚಿಪ್ಪುಗಳ ಬೆಲೆಯೂ ತಗ್ಗಿತು. ಆದರೂ ಅವುಗಳ ವರ್ಣವಿನ್ಯಾಸ, ವೈವಿಧ್ಯಮಯ ಆಕಾರ, ಮೈರಚನೆ ಬಹು ಮೋಹಕವಾದುದರಿಂದಲೂ ಬಹುಮುಖ ಉಪಯೋಗಗಳಿಂದಲೂ ಚಿಪ್ಪುಗಳ ಸಂಗ್ರಹಣೆ ಕಾರ್ಯ ಜನಪ್ರಿಯವಾಗಿ ಮುಂದುವರಿಯಿತು.

ಮೃದ್ವಂಗಿಗಳು ಜಲ ಮತ್ತು ನೆಲವಾಸಿಗಳೆರಡೂ ಹೌದು. ಆದರೆ ಜಲವಾಸಿಗಳೇ ಹೆಚ್ಚು, ಅದರಲ್ಲೂ ಬಹುಪಾಲು ಮೃದ್ವಂಗಿಗಳು ಕಡಲಲ್ಲಿ ಜೀವಿಸುತ್ತವೆ. ಬಹು ಅಪರೂಪದ, ಅಂದದ, ಅಮೂಲ್ಯವಾದ ಚಿಪ್ಪು ಪ್ರಾಣಿಗಳು ಕಡಲಲ್ಲಿ ಸಿಗುವುವು. ಚಿಪ್ಪುಗಳ ಜಗತ್ತಿನಲ್ಲಿ ಅತಿ ಹೆಚ್ಚಿನ ಸ್ಥಾನವನ್ನು ಪಡೆದಿರುವ ಪ್ರಭೇದಗಳ ಕುಟುಂಬಗಳೆಂದರೆ ಸೈಪ್ರಿಡೆ (ಕವಡೆಗಳು), ಕೋನಿಡೆ (ಶಂಖಗಳು), ವಲ್ಯೂಟಿಡೆ (ವಲ್ಯೂಟ್‌ಗಳು) ಮತ್ತು ಮ್ಯೂರಿಸಿಡೆ (ಬಂಡೆಚಿಪ್ಪುಗಳು). ಇವೆಲ್ಲವೂ ಗ್ಯಾಸ್ಟ್ರಾಪೋಡ ವರ್ಗಕ್ಕೆ ಸೇರಿದುವು. ಅತಿ ಅಪೂರ್ವವಾದ ಹಾಗೂ ಪ್ರಿಯವಾದ ಒಂದು ಪ್ರಭೇದವೆಂದರೆ ಕಡಲ ಶೋಭೆ (ಗ್ಲೋರಿ ಆಫ್ ದಿ ಸೀ) ಎಂದು ಹೆಸರಾಗಿರುವ ಕೋನಸ್ ಗ್ಲೋರಿಯ ಮಾರಿಸ್ ಎಂಬ ಚಿಪ್ಪು. ಇಲ್ಲಿಯವರೆಗೆ ಬಹು ಮೋಹಕವಾದ ಈ ತೆರನ ಸುಮಾರು 30 ಚಿಪ್ಪುಗಳು ಮಾತ್ರ ಸಿಕ್ಕಿವೆ. 1957ರಲ್ಲಿ ಒಂದು ಚಿಪ್ಪಿನ ಬೆಲೆ 1250 ಡಾಲರ್ ಇತ್ತು.

ಮೃದ್ವಂಗಿಗಳು ವಿವಿಧ ಪರಿಸರಗಳಲ್ಲಿ ವಾಸಿಸುತ್ತವೆ. ಕೆಲವು ಉಬ್ಬರವಿಳಿತ ಪ್ರದೇಶಗಳಲ್ಲಿ ವಾಸಿಸಿದರೆ ಮತ್ತೆ ಕೆಲವು ಆಳ ನೀರಿನಲ್ಲಿ ವಾಸಿಸುವುವು. ಇದರಿಂದಾಗಿ ಕೆಲವು ಚಿಪ್ಪುಗಳು ಅಪರೂಪ, ಕೆಲವು ಬಹಳ ಸಾಮಾನ್ಯ, ಮತ್ತೆ ಕೆಲವು ಬಲು ಹೇರಳ. ಮರಳಿರುವ ಅಥವಾ ಬಂಡೆಗಳಿರುವ ಉಬ್ಬರವಿಳಿತ ತೀರಪ್ರದೇಶಗಳಿಗೆ ಅನೇಕ ಪ್ರಭೇದಗಳು ಹೊಂದಿಕೊಂಡಿವೆ. ಇಂಥಲ್ಲಿ ಉಬ್ಬರ ಪೂರ್ತಿ ಇಳಿದ ಮೇಲೆ ಚಿಪ್ಪುಗಳನ್ನು ಆಯ್ದುಕೊಳ್ಳುವುದು ಸುಲಭ. ಉಬ್ಬರವಿಳಿತ ಪ್ರದೇಶದಲ್ಲಿ ಬಹು ಅಂದದ ಕೆಲವು ಚಿಪ್ಪುಗಳು ಸಿಗುವುದುಂಟು. ಉದಾಹರಣೆಗೆ, ನಯವಾದ ಹೊಳಪು ರಂಗಿನ ಆಲಿವಿಡೆ (ಆಲಿವ್ ಚಿಪ್ಪುಗಳು), ನಾಟಿಸಿಡೆ (ಚಂದ್ರ ಚಿಪ್ಪುಗಳು), ಸ್ಟ್ರಾಂಬಿಡೆ (ಸ್ಟ್ರಾಂಬ್‌ಗಳು), ಟೆರೆಬ್ರಿಡೆ (ಶಕುನ ಚಿಪ್ಪುಗಳು) ಮತ್ತು ಅನೇಕ ಜೋಡಿಚಿಪ್ಪು ಪ್ರಾಣಿಗಳ ಚಿಪ್ಪುಗಳು, ಬಂಡೆಗಳ ಮೇಲೆ ಹಾಗೂ ಕೆಳಗೆ ಲಿಟೊರಿನಿಡೆ (ಪೆರಿವಿಂಕಲ್), ಟರ್‍ಬೊ (ರುಮಾಲು ಚಿಪ್ಪು) ಮತ್ತು ಲಿಂಪೆಟ್‌ಗಳು ಹಾಗೂ ಸುರುಳಿ ಸುತ್ತುವ ಕೈಟಾನಿಡೆ ಪ್ರಾಣಿಗಳು ಕಂಡುಬರುತ್ತವೆ. ಮಿಕ್ಕ ಮೃದ್ವಂಗಿಗಳು ಸಮುದ್ರದ ಉಬ್ಬರವಿಳಿತ ಕನಿಷ್ಠ ರೇಖೆಯಾಚೆಯ ನೆರಿಟಿಕ್ ವಲಯದ ನೀರಿನಲ್ಲಿ ವಾಸಿಸುತ್ತವೆ. ಇವುಗಳ ಚಿಪ್ಪುಗಳು ಬಿರುಗಾಳಿ ಎದ್ದಾಗ ತೀರಕ್ಕೆ ಒಗೆಯಲ್ಪಡುವುವು. ಈ ಪ್ರದೇಶದ ಚಿಪ್ಪುಗಳು ಉಬ್ಬರವಿಳಿತ ಪ್ರದೇಶದ ಚಿಪ್ಪುಗಳಿಗಿಂತ ಅಪೂರ್ವ ಮತ್ತು ಅಮೂಲ್ಯ. ಆಳಸಮುದ್ರದಲ್ಲಿ ಬಹು ಅಪೂರ್ವವಾದ ಬೆಲೆಯ ವಲ್ಯೂಟ್‌ಗಳು, ಶಂಖಗಳು, ಕವಡೆಗಳು ಮತ್ತು ಬಂಡೆಚಿಪ್ಪುಗಳು ಇವೆ. ಇವನ್ನು ಮೇಲಕ್ಕೆ ತರಲು ವಿಶೇಷ ಹಡಗುಗಳು ಮತ್ತು ಆಳಸಮುದ್ರದಲ್ಲಿ ಉಪಯೋಗಿಸುವ ಸಲಕರಣೆಗಳು ಅಗತ್ಯ. ಆದ್ದರಿಂದ ಈ ಚಿಪ್ಪುಗಳ ಸಂಗ್ರಹಣೆ ಕಷ್ಟಕರವಾದುದು ಮತ್ತು ದುಬಾರಿ ಕೂಡ. ಇದರಿಂದಾಗಿ ಸಾಮಾನ್ಯ ಸಂಗ್ರಹಕಾರನಿಗೆ ಇವು ಸಿಗುವುದು ಅಸಾಧ್ಯವಾಗಬಹುದು. ಆದರೆ ಈ ಚಿಪ್ಪುಗಳು ಸೀಗಡಿ ಅಥವಾ ಮೀನುಬಲೆಗಳಲ್ಲಿ ಬರುವುದುಂಟು. ಉದಾಹರಣೆಗೆ, ಮೂಲಂಗಿ ಆಕಾರದ ಚಿಪ್ಪಿರುವ ಬ್ಯೂಸಿಕಾನ್ ಕೊಯಾರ್ಕ್‌ಟೇಟಮ್.

ಆಳ ನೀರಿನ ಚಿಪ್ಪುಗಳನ್ನು ಮೃದ್ವಂಗಿ ಭಕ್ಷಕ ಮೀನುಗಳ ಹೊಟ್ಟೆಯನ್ನು ಸೀಳಿ ಶೇಖರಿಸಬಹುದು. ಸಮುದ್ರ ತಳದಲ್ಲಿ ವಾಸಿಸುವ ಮೀನುಗಳಾದ ಹ್ಯಾಡಕ್ ಮತ್ತು




ವಿವಿಧ ಬಗೆಯ ಚಿಪ್ಪುಗಳು: 1. ಏಕ್ಮೀಯ, 2. ಹ್ಯಾಲಿಯೋಟಸ್, 3. ಟ್ರೋಕಸ್, 4. ಕ್ರೆಪಿಡ್ಯುಲ, 5. ಲಿಟೊರೈನ, 6. ಸ್ಟ್ರಾಂಬಸ್, 7. ಕ್ರ್ಯಾಸಾಸ್ಟ್ರಿಯ, 8. ಕ್ಯಾರೋನಿಯ, 9. ಪ್ಲೂರೋಸೀರ, 10. ಬ್ಯೂಸಿಕಾನ್, 11. ಆಕಟೈನ, 12. ಸೆರೈಟೈಲಿಸ್ ನೋಡೋಸಸ್ (ಟ್ರಯಾಸಿಕ್ ಯುಗದ ಶಿರಪಾದಿಯ ಚಿಪ್ಪು), 13. ಟ್ರಯೋಡಾಪ್ಸಿಸ್, 14. ಆರ್ಕ, 15. ಮಾಕ್ಟ್ರ, 16. ಪೆಕ್ಟನ್, 17. ಕ್ಯಾಂಪಿಲೋಮ, 18. ಕೋನಸ್, 19. ಟರಿಲೈಟಿಸ್ ಕಾಸ್ಟೇಟಿಸ್, 20. ಟೆರಡೊ.

ಕಾಡ್ ಮೀನುಗಳ ಹೊಟ್ಟೆಗಳಲ್ಲಿ ಒಡೆಯದ ಹಾಗೂ ಶುಭ್ರವಾದ ಚಿಪ್ಪುಗಳು ಸಿಕ್ಕಿವೆ. ಘುಲ್ಗನ್ ಕವಡೆ (ಸೈಪ್ರಿಯ ಘುಲ್ಗೋನಿ) ಮುಂತಾದ ಅಪರೂಪದ ಮತ್ತು ಹೆಚ್ಚು ಬೆಲೆಯ ಚಿಪ್ಪುಗಳನ್ನು ಈ ವಿಧದಿಂದಲೇ ಸಂಗ್ರಹಿಸುವರು. ಹವಳದಲ್ಲಿ ಅಡಗಿರುವ ಅನೇಕ ಅಮೂಲ್ಯ ಚಿಪ್ಪುಗಳನ್ನು ನೀರಿನಲ್ಲಿ ಮುಳುಗಿ ತರುತ್ತಾರೆ. ಶಿರೋಪಾದಿಗಳಲ್ಲಿ ನಾಟಿಲಸ್ ಜಾತಿಯ ಪ್ರಾಣಿಗಳು ವೈಜ್ಞಾನಿಕ ಹಾಗೂ ವಾಣಿಜ್ಯ ದೃಷ್ಟಿಯಿಂದ ಮುಖ್ಯವಾದುವು. ಸಾಧಾರಣವಾಗಿ ಆಳಸಮುದ್ರದಲ್ಲಿ ಜೀವಿಸುವ ಈ ಪ್ರಾಣಿಯ ಚಿಪ್ಪು ಬಲು ಆಕರ್ಷಕವಾಗಿದೆ. ಅನೇಕ ಮೃದ್ವಂಗಿಗಳು ಭೂ ವಾಸಿಗಳೂ ಹೌದು. ಇಂಥವುಗಳಲ್ಲಿ ವರ್ಣರಂಜಿತ ಚಿಪ್ಪುಗಳಿವೆ. ಜೀವನಕ್ಕೆ ಅವಶ್ಯಕವಾದ ನೆರಳು, ತೇವ ಮತ್ತು ಆಹಾರ ದೊರೆಯುವ ಸ್ಥಳಗಳಲ್ಲೆಲ್ಲ ಇವು ಸಾಮಾನ್ಯವಾಗಿ ಕಂಡುಬರುತ್ತವೆ. ಬಹುತೇಕ ಭೂ ಮೃದ್ವಂಗಿಗಳು ಸಣ್ಣವು ಮತ್ತು ಸರಳ. ಇವು ಎಲ್ಲರಿಗೂ ಪ್ರಿಯವಾದುವಲ್ಲ. ಪ್ರಾದೇಶಿಕ ಅಭ್ಯಾಸ ನಡೆಸುವ ವಿಜ್ಞಾನಿಗೆ ಹಾಗೂ ಹವ್ಯಾಸಿ ಸಂಗ್ರಹಕಾರರಿಗೆ ಮಾತ್ರ ಇವುಗಳಲ್ಲಿ ಆಸಕ್ತಿ. ಕೆಲವು ಹೊಳೆಯುವ ಬಣ್ಣದ ಚಿಪ್ಪುಗಳೂ ದೊಡ್ಡಗಾತ್ರದ ಚಿಪ್ಪುಗಳೂ ಇರುವುದುಂಟು. ಇವುಗಳಲ್ಲಿ ದಕ್ಷಿಣ ಫ್ಲಾರಿಡ ಮತ್ತು ಕ್ಯೂಬದಲ್ಲಿರುವ ಲಿಗ್ವಸ್ ಎಂಬ ಮರಶಂಖ, ಪಾಮುವದ ಪಾಪೈನ, ಫಿಲಿಪೀನ್ಸಿನ ಹೆಲಿಕೊಸ್ಟೈಲ ಮತ್ತು ಆಫ್ರಿಕದ ಅಖಾಟಿನ ಜಾತಿಯ ಪ್ರಾಣಿಗಳು ಎಲ್ಲರಿಗೂ ಪರಿಚಿತವಾಗಿರುವ ಮೃದ್ವಂಗಿಗಳು. ಇವುಗಳ ಸಂಗ್ರಹ ಸುಲಭವಲ್ಲ. ಸಂಗ್ರಹಕಾರರು ಅನೇಕ ಅನಾನುಕೂಲತೆಗಳನ್ನೂ ಅಪಾಯ ಪರಿಸ್ಥಿತಿಗಳನ್ನೂ ಎದುರಿಸಬೇಕಾಗುವುದು. ಉದಾಹರಣೆಗೆ, ಫ್ಲಾರಿಡದ ಮರಶಂಖ ಪ್ರಾಣಿಗಳು ವಾಸಿಸುವ ಪ್ರದೇಶದಲ್ಲಿ ಅಪಾಯಕಾರಿಗಳಾದ ಕಾಟನ್ ಮೌತ್ ಹಾವು, ಬುಡುಬುಡಿಕೆ ಹಾವು ಮುಂತಾದ ವಿಷಸರ್ಪಗಳೂ ಸೊಳ್ಳೆಗಳೂ ಇರುವುದರಿಂದ ಈ ಚಿಪ್ಪಿನ ಸಂಗ್ರಹ ಬಲುಕಷ್ಟ. ಸಿಹಿ ನೀರಿನ ಮೃದ್ವಂಗಿಗಳಲ್ಲಿ ಅಂದವಾಗಿರುವ ಚಿಪ್ಪುಗಳಿರುವುದು ಕೆಲವು ಪ್ರಾಣಿಗಳಲ್ಲಿ ಮಾತ್ರ. ಆದ್ದರಿಂದ ಸಂಗ್ರಹಕಾರರ ದೃಷ್ಟಿಯಲ್ಲಿ ಸಿಹಿನೀರಿನ ಮೃದ್ವಂಗಿಗಳು ಅಷ್ಟು ಮುಖ್ಯವಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನದ ಮಧ್ಯ ಪಶ್ಚಿಮಭಾಗದಲ್ಲಿ ಹರಿಯುವ ಕೆಲವು ನದಿಗಳಲ್ಲಿ ಕೆಲವು ಜೋಡಿ ಚಿಪ್ಪು ಪ್ರಾಣಿಗಳ ಪ್ರಭೇದಗಳಿವೆ. ಅವುಗಳ ಚಿಪ್ಪುಗಳ ಒಳಮೈ ಮುತ್ತಿನ ಬಣ್ಣಕ್ಕಿರುತ್ತದೆ. ಇವುಗಳಲ್ಲಿ ಸಣ್ಣಗಂತಿ ಮತ್ತು ಅಲೆಯಂತಿರುವ ಏಣುಗಳನ್ನುಳ್ಳ ಕೆಲವು ಚಿಪ್ಪುಗಳು ಹೆಚ್ಚು ಸುಂದರವಾಗಿರುವುದರಿಂದ ಗುಂಡಿಗಳನ್ನು ತಯಾರಿಸಲು ಇವನ್ನು ಬಳಸುವರು. ಸಿಹಿನೀರಿನ ಶಂಖ ಪ್ರಾಣಿಗಳು ಉಷ್ಣವಲಯದ ರೋಗ ತಜ್ಞರಿಗೆ ಬಹು ಮುಖ್ಯವಾದುವು. ಏಕೆಂದರೆ ಇವುಗಳಲ್ಲಿ ಕೆಲವು ಮನುಷ್ಯನ ಹಾಗೂ ಪ್ರಾಣಿಗಳ ರೋಗಗಳನ್ನು ಹರಡುವ ಪರಾವಲಂಬಿಗಳಿಗೆ ಆಶ್ರಯದಾತವಾಗಿವೆ.

ಬಹುತೇಕ ಸಂಗ್ರಹಕಾರರ ಅಭಿರುಚಿ ಹೆಚ್ಚು ಮೌಲ್ಯದ ಚಿಪ್ಪುಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಕೆಲವರಿಗೆ ಪ್ರಾದೇಶಿಕ ಚಿಪ್ಪುಗಳ ಸಂಗ್ರಹಣೆಯಲ್ಲಿ ಮಾತ್ರ ಆಸಕ್ತಿ. ಇವರು ಆಯಾ ಪ್ರದೇಶದ ಮೃದ್ವಂಗಿಗಳು ವಾಸಿಸುವ ಪರಿಸರ, ಅವುಗಳ ಸ್ವಭಾವಗಳ ವಿಚಾರವಾಗಿ ಅಮೂಲ್ಯವಾದ ವೈಜ್ಞಾನಿಕ ಅಂಶಗಳನ್ನು ಒದಗಿಸುವರು. ಇನ್ನೂ ಕೆಲವು ಸಂಗ್ರಹಕಾರರು ಒಂದು ಗೊತ್ತಾದ ಜಾತಿಗೆ ಸೇರಿದ ಪ್ರಭೇದಗಳ ಚಿಪ್ಪುಗಳನ್ನು ಮಾತ್ರ ಶೇಖರಿಸುವರು. ವರ್ಗೀಕರಣ ಮತ್ತು ವಿಕಾಸದ ಅಧ್ಯಯನದಲ್ಲಿ ನಿರತರಾಗಿರುವ ವಿಜ್ಞಾನಿಗಳಿಗೆ ಈ ರೀತಿಯ ಸಂಗ್ರಹಣೆ ಬಹು ಉಪಯುಕ್ತವಾಗಿದೆಯಲ್ಲದೆ ಚಿಪ್ಪುಗಳ ಜಗತ್ತಿನ ಯಥಾರ್ಥ ದರ್ಶನವನ್ನೂ ನೀಡುವುದು. ಭೂ ಮೃದ್ವಂಗಿ ತಜ್ಞರ ಹಾಗೆ ಭೂಚರ ಮೃದ್ವಂಗಿ ತಜ್ಞರೂ ಇದ್ದಾರೆ. ಭೂ ಮೃದ್ವಂಗಿಗಳು ಕಡಲ ಮೃದ್ವಂಗಿಗಳಿಗಿಂತ ಗಾತ್ರದಲ್ಲಿ ಸಣ್ಣವಾದ್ದರಿಂದ ಅವುಗಳ ಸಂಗ್ರಹ ಸುಲಭ. ಕಡಿಮೆ ಖರ್ಚಿನಲ್ಲಿ ಒಂದು ಕುಟುಂಬದ ಅಥವಾ ಜಾತಿಯ ಎಲ್ಲ ಚಿಪ್ಪುಗಳನ್ನೂ ಸಂಗ್ರಹಿಸಲು ಸಾಧ್ಯವಾಗುತ್ತದೆ.

ಚಿಪ್ಪುಗಳ ಸಂಗ್ರಹ ಅನೇಕ ಅಭಿರುಚಿಯ ಅಧ್ಯಯನಗಳಿಗೆ ತಳಹದಿ ಆಗಬಹುದು. ಅಂಚೆಚೀಟಿ ಮತ್ತು ನಾಣ್ಯಗಳು ಯಂತ್ರದಿಂದ ತಯಾರಾಗುವುದರಿಂದ ಒಂದೇ ರೀತಿ ಇರುವುವು. ಆದರೆ ಯಾವ ಎರಡು ಚಿಪ್ಪುಗಳೂ ಒಂದೇ ತರಹ ಇರುವುದಿಲ್ಲ. ಒಂದು ಪ್ರಭೇದದ ಪ್ರಾಣಿಗಳಲ್ಲಿನ ವ್ಯತ್ಯಾಸಗಳಿಂದಾಗಿ ಅವು ಬೇರೆ ಬೇರೆ ಪ್ರಭೇದಗಳೆಂದು ಖಚಿತವಾಗಿ ಪರಿಗಣಿಸಿದ್ದ ಪ್ರಾಣಿಗಳು ನಿಜವಾಗಿಯೂ ವಿಪರೀತ ವ್ಯತ್ಯಾಸಗಳನ್ನು ತೋರಿಸುವ ಒಂದೇ ಪ್ರಾಣಿ ಪ್ರಭೇದದ ಬಹುರೂಪಗಳೆಂದು ಅವುಗಳ ವಿಚಾರವಾಗಿ ಹೆಚ್ಚು ಅಂಶಗಳನ್ನು ಸಂಗ್ರಹಿಸಿ ತೋರಿಸಬಹುದು. ಇಂಥ ಕಾರಣಗಳಿಂದಾಗಿ ಚಿಪ್ಪು ಸಂಗ್ರಹಣೆ ಹವ್ಯಾಸ ಮಿಕ್ಕ ಹವ್ಯಾಸಗಳಿಗಿಂತ ಹೆಚ್ಚು ಚೋದಕವೆನಿಸಿದೆ. ವಾಸ್ತವವಾಗಿ, ಮೊದಲು ಮೋಜಿಗಾಗಿ ಸಂಗ್ರಹವನ್ನು ಪ್ರಾರಂಭಿಸಿದ ಅನೇಕರು ಈಗ ಚಿಪ್ಪು ಅಧ್ಯಯನದ ಪ್ರಮುಖ ವಿಜ್ಞಾನಿಗಳಾಗಿದ್ದಾರೆ. ಚಿಪ್ಪು ಸಂಗ್ರಹಣೆಯಲ್ಲಿ ವಿಶೇಷ ವಿಷಯವೆಂದರೆ ಚಿಪ್ಪುಗಳನ್ನು ಶೇಖರಿಸಲು ಅಷ್ಟಾಗಿ ಮುನ್ನೆಚ್ಚರಿಕೆ ವಹಿಸಬೇಕಾಗಿಲ್ಲ. ಅಲ್ಲದೆ ತೊಂದರೆ ಕಡಿಮೆ. ಕೀಟಗಳಾದ ಚಿಟ್ಟೆ ಜೀರುಂಡೆ ಅಥವಾ ಸಸ್ಯಭಾಗಗಳನ್ನು ಶೇಖರಿಸಲು ಬೇಕಾದ ಜಾಗರೂಕತೆ ಚಿಪ್ಪುಗಳ ಬಗ್ಗೆ ಬೇಕಾಗಿಲ್ಲ. ಚಿಪ್ಪುಗಳು ಖನಿಜಗಳಷ್ಟು ಭಾರವಿಲ್ಲ. ಇವಕ್ಕೆ ಕೀಟಗಳ ಅಥವಾ ಶಿಲೀಂಧ್ರಗಳ ಕಾಟವಿಲ್ಲ. ಚಿಪ್ಪುಗಳನ್ನು ಒಮ್ಮೆ ಚೆನ್ನಾಗಿ ಶುಚಿಮಾಡಿ ಅವುಗಳ ಗುರುತಿನ ಚೀಟಿಯನ್ನು ಲಗತ್ತಿಸಿ ಮೇಜಿನಲ್ಲಾಗಲಿ ಅಥವಾ ಬೀರುವಿನಲ್ಲಾಗಲಿ ಇಟ್ಟರೆ ವರ್ಷಾನುಕಾಲ ಯಾವ ಬದಲಾವಣೆಯೂ ಇಲ್ಲದೆ ಕೆಡದೆ ಇಡಬಹುದು. (ನೋಡಿ: ಕಪ್ಪೆ ಚಿಪ್ಪು ಪ್ರಾಣಿಗಳು) (ಎನ್.ವಿ.ಎ.)

**ಚಿಪ್ಪುಹಂದಿ:** ಫಾಲಿಡೋಟ ಗಣದ ಮ್ಯಾನಿಡೆ ಕುಟುಂಬಕ್ಕೆ ಸೇರಿದ ಒಂದು ವಿಚಿತ್ರ ಬಗೆಯ ಸ್ತನಿ (ಸ್ಕೇಲಿ ಆಂಟ್ ಈಟರ್, ಪ್ಯಾಂಗೊಲಿನ್). ಮೈಮೇಲಿನ ಚಿಪ್ಪಿನ ರೀತಿಯ ದೊಡ್ಡ ದೊಡ್ಡ ಶಲ್ಕ ಅಥವಾ ಹುರುಪೆಗಳಿರುವುರಿಂದಲೂ ಇದು ಇರುವೆ, ಗೆದ್ದಲು ಮುಂತಾದ ಕೀಟಗಳನ್ನು ತಿನ್ನುವುದರಿಂದಲೂ ಇದಕ್ಕೆ ಸ್ಕೇಲಿ ಆಂಟ್ ಈಟರ್ ಎಂಬ ಹೆಸರು ಬಂದಿದೆ. ಮ್ಯಾನಿಸ್ ಇದರ ಶಾಸ್ತ್ರೀಯ ಹೆಸರು. ಸುಮಾರು 45–60 ಸೆಂ.ಮೀ. ಉದ್ದದ ಪ್ರಾಣಿಯಿದು. ತಲೆ ಚಿಕ್ಕದು ; ಅದರ ಆಕಾರ ಶಂಕುವಿನಂತೆ. ಕಣ್ಣು ಹಾಗೂ ಕಿವಿಗಳು ಸಣ್ಣವು. ಹೊಟ್ಟೆಯನ್ನು ಬಿಟ್ಟು ದೇಹದ ಉಳಿದ ಭಾಗದಲ್ಲೆಲ್ಲ ಮನೆಗೆ ಹೊದಿಸುವ ಹೆಂಚುಗಳಂತೆ ಜೋಡಣೆಗೊಂಡಿರುವ ಹುರುಪೆಗಳ ಹೊದಿಕೆಯಿದೆ. ಕೊಂಬಿನಂಥ ವಸ್ತುವಿನಿಂದ ಕೂಡಿದ ಈ ಹುರುಪೆಗಳು ಬಹುಶಃ ಕೂದಲುಗಳೆಲ್ಲ ಕೂಡಿಕೊಂಡು ಜಡ್ಡುಗಟ್ಟಿ ಉಂಟಾಗಿರಬಹುದೆಂದು ಊಹಿಸಲಾಗಿದೆ. ಹುರುಪೆಗಳ ಮಧ್ಯೆ ಹಾಗೂ ದೇಹದ ಕೆಳಭಾಗದಲ್ಲಿ ನಿಬಿಡವಾದ ಕೂದಲುಗಳಿವೆ. ಚಿಪ್ಪು ಹಂದಿಯ ಮುಂಗಾಲುಗಳು ಹಿಂಗಾಲುಗಳಿಗಿಂತ ಸ್ವಲ್ಪ ಉದ್ದ. ಪ್ರತಿಯೊಂದು ಪಾದದಲ್ಲೂ ಉದ್ದವಾದ ಹಾಗೂ ಬಾಗಿರುವ ಮತ್ತು ಮೊನಚಾದ ಉಗುರುಗಳುಳ್ಳ 5 ಬೆರಳುಗಳಿವೆ. ಮುಂಗಾಲಿನ ಉಗುರುಗಳು ಹೆಚ್ಚು ಉದ್ದ ಉಂಟು. ಹಲ್ಲುಗಳಿಲ್ಲದಿರುವುದು ಚಿಪ್ಪು ಹಂದಿಯ ಸೋಜಿಗದ ಲಕ್ಷಣಗಳಲ್ಲೊಂದು. ತನ್ನ ನಾಲಗೆಯನ್ನು ಬಲು ಉದ್ದವಾಗಿ ಚಾಚಬಲ್ಲದು. ಅಲ್ಲದೆ ನಾಲಗೆ ಬಹಳ ಅಂಟು ಅಂಟಾಗಿದೆ. ತನ್ನ ತೀಕ್ಷ್ಣವಾದ ಘ್ರಾಣಶಕ್ತಿಯಿಂದ ಹುತ್ತ ಮತ್ತು ಇರುವೆಗೂಡುಗಳನ್ನು ಮೂಸುತ್ತ ಕೀಟಗಳ ಇರವನ್ನು ಪತ್ತೆಹಚ್ಚಿ, ಮುಂಗಾಲುಗಳ ಉಗುರುಗಳಿಂದ ಗೂಡುಗಳನ್ನು ಕೆದಕಿ ತನ್ನ ಉದ್ದನಾಲಗೆಯನ್ನು ಒಳಚಾಚಿ ಅಲುಗಾಡಿಸಿ, ನಾಲಗೆಗೆ ಅಂಟಿಕೊಳ್ಳುವ ಇರುವೆಗಳನ್ನು ಬಾಯೊಳಕ್ಕೆ ಸಾಗಿಸುತ್ತದೆ. ಇದರ ವಾಸವೆಲ್ಲ ನೆಲದಲ್ಲಿ ಕೊರೆದು ರಚಿಸಿದ ಬಿಲಗಳಲ್ಲಿ. ಕೆಲವೊಮ್ಮೆ ಮರಗಳಲ್ಲಿನ ಪೊಟರೆಗಳಲ್ಲೂ ವಾಸಿಸುವುದುಂಟು. ಹಗಲೆಲ್ಲ ಬಿಲದಲ್ಲಿ ತನ್ನ ದೇಹವನ್ನು ಚಂಡಿನಂತೆ ಸುತ್ತಿಕೊಂಡು ನಿದ್ರಿಸುತ್ತಿದ್ದು ರಾತ್ರಿಯವೇಳೆ ಇರುವೆಗಳ ಬೇಟೆಗೆ ಹೊರಡುತ್ತದೆ. ಶತ್ರುಗಳಿಂದ ಸುತ್ತುವರೆದಾಗ ಹೀಗೆ ದೇಹವನ್ನು ಚಂಡಿನಂತೆ ಸುತ್ತಿಕೊಂಡು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತದೆ.



ಚಿಪ್ಪು ಹಂದಿ ಏಷ್ಯ ಮತ್ತು ಆಫ್ರಿಕದಲ್ಲಿ ಮಾತ್ರ ಕಾಣಸಿಗುತ್ತದೆ. ಗಾತ್ರ ಹಾಗೂ ಹುರುಪೆಗಳ ಜೋಡಣೆಯ ರೀತಿಯನ್ನು ಆಧರಿಸಿ ಚಿಪ್ಪು ಹಂದಿಯಲ್ಲಿ 7 ಪ್ರಭೇದಗಳನ್ನು ಗುರುತಿಸಲಾಗಿದೆ. ಏಷ್ಯದಲ್ಲಿ ಮೂರು ಮತ್ತು ಆಫ್ರಿಕದಲ್ಲಿ ನಾಲ್ಕು ಪ್ರಭೇದಗಳು ಇವೆ. ಏಷ್ಯದಲ್ಲಿ ಕಾಣಬರುವ ಬಲುಸಾಮಾನ್ಯ ಪ್ರಭೇದ ಮ್ಯಾನಿಸ್ ಪೆಂಟದ್ಯಾಕ್ಟಿಲ. ***

**ಚಿರತೆ:** ಕಾರ್ನಿವೊರ ಗಣ, ಅಲ್ಯುರಾಯ್ಡಿಯ ಉಪಗಣ, ಫೆಲಿಡೆ ಕುಟುಂಬ–ಇವುಗಳಿಗೆ ಸೇರಿದ ಮಾಂಸಾಹಾರಿ ಸ್ತನಿ (ಲೆಪರ್ಡ್). ಇದನ್ನು ಕಿರುಬ, ಹೊನಿಗ, ಮೊಟಗ ಎಂದೂ ಕರೆಯುವುದುಂಟು. ಇದು ಏಷ್ಯ ಮತ್ತು ಆಫ್ರಿಕ ಖಂಡಗಳ ಬಹು ಭಾಗಗಳಲ್ಲಿ ಕಾಣದೊರೆಯುತ್ತದೆ. ದಟ್ಟವಾದ ಭಾರಿ ಕಾಡುಗಳಿಗಿಂತ ಹೆಚ್ಚಾಗಿ ಕುರುಚಲು ಗಿಡಗಳ ಸಾಧಾರಣ ಕಾಡುಗಳಲ್ಲೂ ಬಂಡೆ ಅಥವಾ ಬಯಲುಗಳಿರುವ ಪ್ರದೇಶಗಳಲ್ಲೂ ವಾಸಿಸುತ್ತದೆ. ಇದು ನಿರಾಯಾಸವಾಗಿ ಮರವನ್ನು ಹತ್ತಬಲ್ಲುದು. ಚಂಗನೆ ಹಾರಿ ಗುರಿ ತಪ್ಪದಂತೆ ತನ್ನ ಬೇಟೆಯನ್ನು ಹಿಡಿದು ಕೊಂದು ತಿನ್ನುವುದರಲ್ಲಿ ಅಸಾಮಾನ್ಯ ಕೌಶಲವನ್ನು ಪ್ರದರ್ಶಿಸುತ್ತದೆ. ಹಗಲು ವೇಳೆಗಳಲ್ಲಿ ಮೆಳೆಗಳ ಅಥವಾ ಬಂಡೆಗಳ ಸಂದುಗಳಲ್ಲೂ ಮರದ ಕೊಂಬೆಗಳ ಮೇಲೂ ಅಡಗಿದ್ದು ರಾತ್ರಿಯಾದ ಮೇಲೆ ಬೇಟೆಗೆ ಹೊರಡುತ್ತದೆ. ಇದರ ಹಳದಿ ಚರ್ಮದ ಮೇಲೆ ಕಪ್ಪು ಚುಕ್ಕೆಗಳಿರುವುದರಿಂದ ಮರ ಹತ್ತಿದಾಗ ಎಲೆಗಳ ನಡುವೆ ತೂರುವ ಬಿಸಿಲು–ನೆರಳುಗಳ ವಿನ್ಯಾಸಕ್ಕೆ ತನ್ನ ಮೈ ಬಣ್ಣವನ್ನು ಹೊಂದಿಸಿಕೊಳ್ಳುವುದರ ಮೂಲಕ ಸನ್ನಿವೇಶದಲ್ಲಿ ಬೆರೆತು ಹೋಗಿ ಆತ್ಮರಕ್ಷಣೆ ಮಾಡಿಕೊಳ್ಳುತ್ತದೆ. ಮೈ ಚುಕ್ಕೆಗಳೇ ಇಲ್ಲದೆ ಪೂರ್ಣವಾಗಿ ಕಪ್ಪಾಗಿರುವ ಚಿರತೆಯೂ ಉಂಟು.

ಚಿರತೆ ಹುಲಿಗಿಂತಲೂ ಧೈರ್ಯಶಾಲಿ. ಕೆಲವು ವೇಳೆ ಸ್ವಲ್ಪವೂ ಹೆದರಿಕೆಯಿಲ್ಲದೆ ಜನ ವಾಸಿಸುವ ಕಡೆಗಳಲ್ಲೇ ವಾಸಿಸುತ್ತಿದ್ದು ರಾತ್ರಿವೇಳೆ ಅವರ ಕಾಲ್ನಡೆಗಳ ಮೇಲೆ ಬಿದ್ದು ಕೊಂದು ತಿನ್ನುವುದು. ಇದು ಚಿಕ್ಕಪ್ರಾಣಿಯಾದರೂ ಬಲು ಚುರುಕು. ಇದರ ಇಂದ್ರಿಯಗಳು ಅತಿ ಪಟುವಾಗಿರುವುದರಿಂದ ಸಣ್ಣಪುಟ್ಟಪ್ರಾಣಿಗಳನ್ನು ಹಿಡಿದು ತಿನ್ನುವಾಗ ತೀಕ್ಷ್ಣಬುದ್ಧಿಯಿಂದ ವರ್ತಿಸುತ್ತದೆ. ಹಕ್ಕಿಗಳು, ಉರಗಗಳು, ಮೊಲ, ಜಿಂಕೆಮರಿ, ನಳ್ಳಿ ಮುಂತಾದುವು ಇದರ ಮುಖ್ಯ ಆಹಾರ. ಕೆಲವು ವೇಳೆ ದನ, ಕುರಿ, ಜಿಂಕೆ, ಕುದುರೆ, ಕತ್ತೆ ಮುಂತಾದ ದೊಡ್ಡ ಪ್ರಾಣಿಗಳನ್ನೂ ಕೊಂದು ತಿನ್ನುವುದುಂಟು.

ಚಿರತೆ ವರ್ಷದ ಎಲ್ಲ ಕಾಲಗಳಲ್ಲೂ ಮರಿಹಾಕಬಹುದು. ಗರ್ಭಾವಸ್ಥೆಯ ಅವಧಿ ಸುಮಾರು ಹದಿಮೂರು ವಾರಗಳು. ಮರಿಗಳಿಗೆ ಎರಡೂವರೆ ವರ್ಷಗಳ ಸುಮಾರಿಗೆ ಪ್ರಬುದ್ಧತೆ ಬರುತ್ತದೆ.

ಚಿರತೆಗಳಲ್ಲಿ ಹಲವು ಬಗೆಗಳುಂಟು. ಪ್ಯಾಂತರ್ ಎಂಬುದು ಸಾಮಾನ್ಯ ಚಿರತೆ, ಹಿಮಕಿರುಬ ಎಂಬುದು ಮೈಮೇಲೆ ಚಿಕ್ಕ ಚಿಕ್ಕ ಚುಕ್ಕೆಗಳನ್ನುಳ್ಳ ಚಿಕ್ಕ ಚಿರತೆ. ಇವೆರಡೂ ಪ್ಯಾಂತರ ಜಾತಿಗೆ ಸೇರಿದುವು. ಕ್ಲೌಡೆಡ್ ಲೆಪರ್ಡ್ ಎಂಬುದರ ಮೈ ಮೇಲೆ ಚುಕ್ಕೆಗಳು ಅಷ್ಟು ಚೆನ್ನಾಗಿ ಎದ್ದುಕಾಣುವುದಿಲ್ಲ ; ಇದು ನಿಯೋಫಿಲಿಸ್ ಜಾತಿಗೆ ಸೇರಿದ್ದು. ಬೇಟೆ ಚಿರತೆ (ಹಂಟಿಂಗ್ ಲೆಪರ್ಡ್) ಎಂಬುದು ಆಸಿನೋನಿಕ್ಸ್ ಜಾತಿಗೆ ಸೇರಿದ್ದು. ಇದನ್ನು ಸಾಕಿ ಪಳಗಿಸುವುದುಂಟು. ಪ್ಯಾಂತೆರ ಪಾರ್ಡಸ್ ಎಂಬ ಭಾರತೀಯ ಚಿರತೆಯ ಪ್ರಭೇದದಲ್ಲಿ ಮೂರು ಬಗೆಗಳಿವೆ. ಪ್ಯಾಂತೆರ ಪಾರ್ಡಸ್ ಫುಸ್ಕ, ಪ್ಯಾಂತರ ಪಾರ್ಡಸ್ ಪೆರ್ನಿಗ್ರ, ಪ್ಯಾಂತೆರ ಪಾರ್ಡಸ್ ಮಿಲರ್ಡ್ ಇವೇ ಆ ಮೂರು ಬಗೆಗಳು. ಪ್ಯಾಂತೆರ ಪಾರ್ಡಸ್ ಫುಸ್ಕ ಭಾರತದ ಅನೇಕ ಕಡೆಗಳಲ್ಲಿ ಕಾಡುಗಳಲ್ಲಿ ವಾಸಿಸುತ್ತದೆ ; ಇದರ ಹೊಳಪಾದ ಮೈ ಮೇಲೆ ಎದ್ದುಕಾಣುವ ಚಿಕ್ಕ ಚಿಕ್ಕ ಚುಕ್ಕೆಗಳಿವೆ. ಸಿಕ್ಕಿಂ, ನೇಪಾಳ, ಕುಮಾಂವ್, ಗರ್ವಾಲ್ ಮುಂತಾದೆಡೆಗಳಲ್ಲಿ ವಾಸಿಸುವ ಪ್ಯಾಂತೆರ ಪಾರ್ಡಸ್ ಪೆರ್ನಿಗ್ರ ಎಂಬ ಬಗೆಯ ಮೈ ಮೇಲೆ ಚಳಿಗಾಲದಲ್ಲಿ ದಟ್ಟವಾಗಿ ಕೂದಲು ಬೆಳೆದಿರುತ್ತದೆ. ಇದರ ಮೈ ಬಣ್ಣ ಅಷ್ಟು ಹೊಳಪಾಗಿಲ್ಲ; ಆದರೆ ಮಚ್ಚೆಗಳು ಅಗಲವಾಗಿವೆ. ಪ್ಯಾಂತರ ಪಾರ್ಡಸ್ ಮಿಲರ್ಡ್ ಎಂಬುದು ಕಾಶ್ಮೀರದಲ್ಲಿ ವಾಸಿಸುತ್ತದೆ; ಇದರ ಕೂದಲು ಅಷ್ಟು ಹೊಳಪಾಗಿಲ್ಲ; ಒತ್ತಾಗಿರುವ ಚಿಕ್ಕ ಚಿಕ್ಕ ಚುಕ್ಕೆಗಳಿರುತ್ತವೆ.

ಪ್ಯಾಂತೆರ ಊನ್ಸಿಯ ಎಂಬ ಪ್ರಭೇದ (ಹಿಮಗಿರುಬ) ಕಾಶ್ಮೀರದಿಂದ ಸಿಕ್ಕಿಂವರೆಗಿನ ಹಿಮಾಲಯ ಕಾಡುಗಳಲ್ಲಿ ವಾಸಿಸುತ್ತದೆ. ಇದು ಚಳಿಗಾಲದಲ್ಲಿ ಹಿಮಾಲಯದ ಕಡಿಮೆ ಎತ್ತರದ ಬೆಟ್ಟಗಳ ತಪ್ಪಲುಗಳಲ್ಲಿ ವಲಸೆ ಬರುತ್ತದೆ. ಮೈ ನಯವಾಗಿ ನರೀ ಬಣ್ಣವಾಗಿದ್ದು ಚುಕ್ಕೆಗಳು ಉದ್ದುದ್ದವಾದ ಮಚ್ಚೆಗಳಂತಿವೆ. ಇದರ ಚರ್ಮ ಮತ್ತು ತುಪ್ಪುಳಿಗೆ ತುಂಬ ಬೆಲೆಯಿರುವುದರಿಂದ ಈ ಚಿರತೆಯನ್ನು ಬೇಟೆಯಾಡುವುದು ಹೆಚ್ಚು.

ನಿಯೋಫಿಲಿಸ್ ನೆಬ್ಯುಲೋಸ (ಕ್ಲೌಡೆಡ್ ಲೆಪರ್ಡ್) ಎಂಬ ಚಿರತೆ ನೇಪಾಳ, ಭೂತಾನ, ಸಿಕ್ಕಿಂ, ಅಸ್ಸಾಂ ಮುಂತಾದ ಪ್ರದೇಶಗಳ ದಟ್ಟ ಕಾಡುಗಳಲ್ಲಿ ವಾಸಿಸುತ್ತದೆ. ಇದಕ್ಕೆ ಬಹು ನಿಡಿದಾದ ಕೋರೆಹಲ್ಲುಗಳಿವೆ. ಇದರ ಮೈ ಬಣ್ಣ ನರೆ, ಕಂದು ಇಲ್ಲವೆ ಮಾಸಲು ಬಿಳಿ, ಉದರಭಾಗ ಮಾತ್ರ ಬಿಳಿಬಣ್ಣದ್ದು. ಕಣ್ಣಿನಿಂದ ಬಾಯಿಯವರೆಗೂ ಎರಡು ಕಡೆಯಲ್ಲೂ ಇರುವ ಉದ್ದವಾದ ಕಪ್ಪು ಮಚ್ಚೆಗಳು ಇದರ ವಿಶಿಷ್ಟ ಲಕ್ಷಣಗಳು. ದೇಹದ ಇನ್ನುಳಿದ ಭಾಗಗಳಲ್ಲಿ ಒತ್ತಾದ ಕಪ್ಪು ಚುಕ್ಕೆಗಳಿರುತ್ತವೆ. ಇದು ಬಯಲಿಗೆ ಬಂದಾಗ ಬೇಟೆಗಾರರು ಹೊಂಚುಹಾಕಿ ಕೊಂದು ಹಾಕುವರು. ಇದನ್ನು ಸಾಕಿ ಪಳಗಿಸುವುದೂ ಉಂಟು. ಈಚೆಗೆ ಇದು ನಿರ್ವಂಶವಾಗುವ ಸ್ಥಿತಿಯಲ್ಲಿದೆ.

ಬೇಟೆಚಿರತೆ (ಹಂಟಿಂಗ್ ಲೆಪರ್ಡ್) ಎಂಬುದರ ಕಾಲುಗಳ ಉಗುರ ಮೇಲೆ ಇತರ ಚಿರತೆಗಳಿಗಿರುವಂತೆ ಮಾಂಸದ ಪೊರೆಯಿಲ್ಲ. ಇದರಲ್ಲಿ ಭಾರತದ ಮತ್ತು ಆಫ್ರಿಕದ ಬೇಟೆ ಚಿರತೆಗಳೆಂದು ಎರಡು ಬಗೆಗಳುಂಟು. ಭಾರತದ ಬೇಟೆ ಚಿರತೆಗೆ ಆಫ್ರಿಕದ ಚಿರತೆಗಿರುವುದಕ್ಕಿಂತ ತೆಳುವಾದ ತುಪ್ಪುಳದ ಚರ್ಮವಿದೆ. ಕತ್ತಿನ ಬಳಿ ಗಂಡು ಚಿರತೆಗೆ ಕೇಸರವಿಲ್ಲ. ಇದರ ಮೈ ಬಣ್ಣ ಮಾಸಲು ಬಿಳಿ. ಉದರಭಾಗ ಬಿಳಿ, ಕಣ್ಣಿನಿಂದ ಬಾಯಿಯವರಗೆ ಮಚ್ಚೆಯಿದೆ. ಇದನ್ನು ಪಳಗಿಸಿ ಬೇಟೆಯಾಡಲು ಬಳಸುವರು. ನೋಡಿ – ಮಾರ್ಜಾಲಗಳು. (ಜೆ.ಆರ್.ವಿ.)

**ಚುಕ್ಕೆ ಬೇನೆ:** ಟ್ರೆಪೋನಿಮ ಕೆರೇಟಿಯಮ್ ಹೆಸರಿನ ಬ್ಯಾಕ್ಟೀರಿಯದಿಂದ ಹರಡುವ ರೋಗ. ರಕ್ತಹೀರುವ ನೊಣ ಇಲ್ಲವೇ ಕೀಟಗಳು ರೋಗವನ್ನು ಹರಡುತ್ತವೆ. ರೋಗ ತೀರ ಬಲಿತಾಗ ಗುಂಡಿಗೆ ರಕ್ತನಾಳಗಳಿಗೂ ಹತ್ತಬಹುದು. 60% ರೋಗಿಗಳಲ್ಲಿ ಉಪದಂಶ (ಸಿಫಿಲಿಸ್) ರೋಗಿಗಳಲ್ಲಿದ್ದಂತೆ ವಾಸರ್ಮನ್ ಪ್ರತಿಕ್ರಿಯೆ ಧನಾತ್ಮಕ ಆಗಿರುವುದು. ಇದು ಯಾಸ್ ಬೇನೆಯನ್ನು ಹೋಲುತ್ತದೆ. ಹಸುಗೂಸುಗಳಲ್ಲಿ ಅಪರೂಪ. ವಯಸ್ಕ ಕರಿಯ ಜನರಲ್ಲಿ ಹೆಚ್ಚು. ಮೈಯಲ್ಲಿ ಅಲ್ಲಲ್ಲಿ ಬಣ್ಣ ಕಳೆದು ಚರ್ಮ ಗಂಟು ಕಟ್ಟುತ್ತದೆ. 6–12 ತಿಂಗಳಲ್ಲಿ ಕಾಣಿಸಿಕೊಳ್ಳುವ ಚಪ್ಪಟೆಯಾದ ಕೆಂಪು ಚುಕ್ಕೆಗಳಂಥ ದದ್ದುಗಳು ಏಳುತ್ತವೆ. ಇವು ಒಟ್ಟುಗೂಡಿ ಬಗೆ ಬಗೆ ಆಕಾರ ಹೊಂದಿ ಬೇರೆ ಚರ್ಮರೋಗಗಳನ್ನು ಹೋಲುತ್ತವೆ. ಈ ರೋಗ ಪೆನಿಸಿಲಿನ್ ಮದ್ದಿನಿಂದ ಪೂರ್ತಿ ಗುಣವಾಗುತ್ತದೆ. (ನೋಡಿ – ಯಾಸ್).

***

**ಚುಕ್ಕೆಜಿಂಕೆ:** ಭಾರತ ಮತ್ತು ಶ್ರೀಲಂಕಾಗಳಲ್ಲಿ ಕಾಣಬರುವ ಒಂದು ಸುಂದರವಾದ ಜಿಂಕೆ (ಸ್ಪಾಟೆಡ್ ಡಿಯರ್, ಚಿತಾಲ್, ಆಕ್ಸಿಸ್ ಡಿಯರ್). ಆಕ್ಸಿಸ್ ಎಂಬುದು ಇದರ ಶಾಸ್ತ್ರೀಯ ಹೆಸರು. ಮೈದಾನಸೀಮೆಯ ಕುರುಚಲು ಇಲ್ಲವೆ ಪರ್ಣಪಾತಿಗಿಡಗಳ ಕಾಡುಗಳಲ್ಲಿ, ಹುಲ್ಲುಗಾವಲುಗಳಲ್ಲಿ ವಾಸಿಸುತ್ತದೆ. ಸಮುದ್ರಮಟ್ಟದಿಂದ ಸು. 1200 ಮೀ ಎತ್ತರದ ಪ್ರದೇಶಗಳಲ್ಲೂ ಕಾಣದೊರೆಯುತ್ತದೆ. ಭಾರತದ ಅಸ್ಸಮ್, ಪಂಜಾಬ್ ಮತ್ತು ರಾಜಾಸ್ಥಾನಗಳನ್ನುಳಿದು ಇನ್ನೆಲ್ಲ ರಾಜ್ಯಗಳಲ್ಲೂ ಇದರ ವ್ಯಾಪ್ತಿ ಉಂಟು. ಮಧ್ಯಪ್ರದೇಶ, ಕರ್ನಾಟಕ, ತಮಿಳುನಾಡು ಇಲ್ಲೆಲ್ಲ ಇದು ಹೇರಳವಾಗಿದೆ. ಮಾಟವಾದ ಹೊನ್ನಿನ ಬಣ್ಣದ ದೇಹ, ಮೈಯ ಚೆಲುವನ್ನು ಹೆಚ್ಚಿಸುವಂತೆ ಇರುವ ಬಿಳಿಬಣ್ಣದ ಚುಕ್ಕೆಗಳು, ಕಾತರವನ್ನು ಹೊರಸೂಸುವಂತಿರುವ ವಿಶಾಲವಾದ ಕಣ್ಣುಗಳು, ಸದ್ದುಬಂದ ಕಡೆ ನಿಮಿರಿ ತಿರುಗಿನಿಲ್ಲುವ ಕಿವಿಗಳು–ಈ ಲಕ್ಷಣಗಳು ಚುಕ್ಕೆ ಜಿಂಕೆಯನ್ನು ಜಿಂಕೆಗಳಲ್ಲೆಲ್ಲ ಅತ್ಯಂತ ಸುಂದರವಾದ ಹಾಗೂ ಆಕರ್ಷಣೀಯವಾದ ಪ್ರಾಣಿಯನ್ನಾಗಿ ಮಾಡಿವೆ.



ಇದು ಮಧ್ಯಗಾತ್ರದ ಜಿಂಕೆ. ಗಂಡು ಜಿಂಕೆಯ ಉದ್ದ 1–1.75 ಮೀ. ಭುಜದ ಬಳಿಯ ಎತ್ತರ 0.6–1 ಮೀ. ತೂಕ 50 ಕಿಗ್ರಾಂ. ಗಂಡುಜಿಂಕೆಯಲ್ಲಿ ಮಾತ್ರ ಒಂದು ಜೊತೆ ಕೊಂಬುಗಳಿವೆ. ಒಂದೊಂದು ಕೊಂಬಿನಲ್ಲೂ 3 ಕವಲುಗಳುಂಟು. ಕೊಂಬುಗಳ ಉದ್ದ ಸು.75–100 ಸೆಂಮೀ. ವರ್ಷಕ್ಕೊಮ್ಮೆ ಕೊಂಬುಗಳು ಉದುರಿ ಹೋಗುತ್ತವೆ. ಚುಕ್ಕೆ ಜಿಂಕೆಯ ಬಾಲ ತೆಳುವಾಗಿಯೂ ಉಳಿದ ಜಿಂಕೆಗಳ ಬಾಲಕ್ಕಿಂತ ಉದ್ದವಾಗಿಯೂ ಇದೆ. ಇದು ಯಾವಾಗಲೂ 20–100 ಪ್ರಾಣಿಗಳ ಹಿಂಡುಗಳಲ್ಲೇ ಓಡಾಡುತ್ತದೆ. ಹುಲ್ಲು, ಎಳೆ ಚಿಗುರು ಇದರ ಪ್ರಧಾನ ಆಹಾರ. ನೆಲಕ್ಕುದುರಿದ ಹೂಗಳೂ ಹಣ್ಣುಗಳೂ ಇದಕ್ಕೆ ಅಚ್ಚುಮೆಚ್ಚು. ಸಾಮಾನ್ಯವಾಗಿ ಬೆಳಗಿನ ಜಾವದಲ್ಲೊಮ್ಮೆ ಮತ್ತು ಸಂಜೆ ಕತ್ತಲಾಗುವ ಮುನ್ನ ಒಮ್ಮೆ ಹುಲ್ಲು ಮೇಯುತ್ತ ಅಲೆದಾಡುತ್ತಿದ್ದು ಮಧ್ಯಾಹ್ನ ಮರಗಳ ನೆರಳಿನಲ್ಲಿ ವಿಶ್ರಮಿಸುತ್ತದೆ. ತುಂಬ ಚೆನ್ನಾಗಿ ಈಜಬಲ್ಲ ಇದು ಆಗಿಂದಾಗ್ಗೆ ನೀರಿಗಿಳಿಯುವುದೂ ಉಂಟು. ಗಂಡು ಹೆಣ್ಣುಗಳು ಕೂಡುವ ಕಾಲ ಸಾಧಾರಣವಾಗಿ ಏಪ್ರಿಲ್–ಮೇ. 7–8 ತಿಂಗಳ ಗರ್ಭಾವಸ್ಥೆಯ ಅನಂತರ 2 ಮರಿಗಳು ಹುಟ್ಟುತ್ತವೆ. ಚುಕ್ಕೆ ಜಿಂಕೆಯ ಆಯಸ್ಸು 10–15 ವರ್ಷಗಳು. ಬಲು ಸುಂದರವಾಗಿರುವುದರಿಂದ ಇದನ್ನು ಸಾಕುವುದುಂಟು. ಇದರ ಚರ್ಮ ಹಾಗೂ ಕೊಂಬು ಗೃಹಾಲಂಕರಣದ ವಸ್ತುಗಳಾಗಿವೆ. ಕೊಂಬಿಗೆ ಔಷಧೀಯ ಗುನಗಳೂ ಉಂಟು. ಇದರ ಮಾಂಸ ಬಲುರುಚಿಯೆಂದು ಹೇಳಲಾಗಿದೆ. ***

**ಚೂಡೆ ಮೀನು:** ಕ್ಲೂಪಿಯಿಫಾರ್ಮಿಸ್ ಗಣದ ಕ್ಲೂಪಿಯಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ಆಹಾರ ಮೀನು. ಸಾರ್ಡಿನ್ ಮತ್ತು ಹೆರಿಂಗ್ ಮೀನುಗಳ ಹತ್ತಿರ ಸಂಬಂಧಿ. ಶಾಸ್ತ್ರೀಯ ಹೆಸರು ಸ್ಪ್ರಾಟೆಲಾಯ್ಡಿಸ್ ಅಥವಾ ಕ್ಲೂಪಿಯ. ಭಾರತದ ಪಶ್ಚಿಮ ತೀರ ಸಮುದ್ರದಲ್ಲಿ ಹೇರಳವಾಗಿ ಸಿಗುತ್ತದೆ. ತಮಿಳುನಾಡಿನ ಮಂಡಪಮ್ ಬಳಿಯ ಸಮುದ್ರದಲ್ಲೂ ವಿಪುಲವಾಗಿದೆ. ಚಿಕ್ಕಗಾತ್ರದ ಮೀನಿದು; ಪೂರ್ತಿ ಬೆಳೆದಾಗ ಇದರ ಉದ್ದ ಸುಮಾರು 13 ಸೆಂಮೀ. ದೇಹದ ಬಣ್ಣ ಹಳದಿಮಿಶ್ರಿತ ಬಿಳಿ. ದೇಹದ ಎರಡು ಪಕ್ಕಗಳಲ್ಲಿಯೂ ಬೆಳ್ಳಿಗೆರೆಯಂತೆ ಹೊಳೆಯುವ ಪಾರ್ಶ್ವರೇಖೆಗಳಿವೆ. ಮೂತಿ, ನೆತ್ತಿ, ಬೆನ್ನು, ಬಾಲ ಹಾಗೂ ಗುದದ ಬಳಿಯ ಪ್ರದೇಶಗಳು ಕೊಂಚ ಕಪ್ಪಗಿವೆ. ನೀರಿನಲ್ಲಿ ವಾಸಿಸುವ ಸಣ್ಣಪುಟ್ಟ ತೇಲುಸಸ್ಯಗಳು, ಸಂಧಿಪದಿಗಳು ಈ ಮೀನಿನ ಆಹಾರ. ಇದರ ಸಂತಾನೋತ್ಪತ್ತಿಯ ಕಾಲ ಏಪ್ರಿಲ್–ಮೇ. ಒಂದು ಹೆಣ್ಣು ಒಂದು ಶ್ರಾಯದಲ್ಲಿ ಸುಮಾರು 3 ಲಕ್ಷ

ಮೊಟ್ಟೆಗಳನ್ನಿಡುತ್ತದೆಯೆಂದು ಅಂದಾಜು ಮಾಡಲಾಗಿದೆ. ಮೊಟ್ಟೆಗಳು 3 ದಿವಸಗಳಲ್ಲಿ ಒಡೆಯುತ್ತವೆ. ಆಗಸ್ಟಿನಿಂದ ನವೆಂಬರ್ ತಿಂಗಳ ನಡುವಣ ಕಾಲದಲ್ಲಿ ಇವು ಅಪಾರ ಸಂಖ್ಯೆಯಲ್ಲಿ ಕರಾವಳಿಯಿಂದ 8–10 ಕಿಮೀ ದೂರದವರೆಗಿನ ಸಮುದ್ರದಲ್ಲಿ ಕಂಡುಬರುತ್ತವೆ. ಇವನ್ನು ಹಿಡಿಯಲು ಈ ಕಾಲವೇ ಅತ್ಯಂತ ಉತ್ತಮ. ಹಲವಾರು ದೋಣಿಗಳಿಗೆ ಒಟ್ಟಿಗೆ ಕಟ್ಟಿ ಒಡ್ಡುವ ಕಿವಿರುಬಲೆಗಳನ್ನೊ (ಗಿಲ್ ನೆಟ್ಸ್) ಇಲ್ಲವೆ ಎರಡು ದೋಣಿಗಳ ಹಿಂಬದಿಗೆ ಕಟ್ಟಿ ಒಡ್ಡುವ ಸಂಚಿ ಬಲೆಗಳನ್ನೊ (ಬೋಟ್ ಸೇನ್) ಉಪಯೋಗಿಸಿ ಇವನ್ನು ಹಿಡಿಯಲಾಗುತ್ತದೆ. ಒಳ್ಳೆಯ ಆಹಾರಮೀನುಗಳೆಂದು ಹೆಸರಾಗಿರುವ ಇವನ್ನು ಒಣಗಿಸಿ ಉಪ್ಪಿನೊಂದಿಗೆ ಸೇರಿಸಿ ಪರದೇಶಗಳಿಗೆ ರಫ್ತು ಮಾಡಲಾಗುತ್ತದೆ. ಇದರಿಂದಾಗಿ ಇವು ಭಾರತದ ಮೀನುಗಾರಿಕೆ ಉದ್ಯಮದಲ್ಲಿ ಸಾಕಷ್ಟು ಪ್ರಸಿದ್ಧವಾಗಿವೆ.

(ಎಂ.ಎಸ್.ಎಚ್.ಇ.)

**ಚೇಕಡಿ ಹಕ್ಕಿ:** ಪ್ಯಾಸೆರಿಫಾರ್ಮಿಸ್ ಗಣದ ಪ್ಯಾರಿಡೆ ಕುಟುಂಬಕ್ಕೆ ಸೇರಿದ ಪುಟ್ಟಹಕ್ಕಿ (ಟಿಟ್, ಟಿಟ್‌ಮೌಸ್). ಇದರಲ್ಲಿ ಅನೇಕ ಪ್ರಭೇದಗಳಿವೆ. ಬಹಳ ಮುಖ್ಯವಾದುವು ಪ್ಯಾರಸ್ ಜಾತಿಗೆ ಸೇರಿದ 45 ಪ್ರಭೇದಗಳು. ದಕ್ಷಿಣ ಅಮೆರಿಕ ಮತ್ತು ಆಸ್ಟ್ರೇಲಿಯಗಳನ್ನುಳಿದು ಪ್ರಪಂಚಾದ್ಯಂತ ಇವು ಕಾಣಸಿಗುತ್ತವೆ. ಭಾರತದಲ್ಲಿ ಪ್ಯಾರಸ್ ಮೇಜರ್ ಎಂಬ ಪ್ರಭೇದ ಇದೆ. ಬಯಲು ಪ್ರದೇಶಗಳಿಂದ ಹಿಡಿದು 1800 ಮೀ ಎತ್ತರದವರೆಗಿನ ಬೆಟ್ಟ ಸೀಮೆಗಳಲ್ಲಿ ಇದರ ವಾಸ. ಒಂಟೊಂಟಿಯಾಗಿ ಇಲ್ಲವೆ ಗುಂಪುಗಳಲ್ಲಿ ಬಲು ಚಟುವಟಿಕೆಯಿಂದ ಹಾರಾಡುತ್ತಾ ತಿರುಗುವುದುಂಟು. ಸಣ್ಣಪುಟ್ಟ ಕೀಟಗಳು, ಲಾರ್ವಗಳು, ಮೊಗ್ಗುಗಳು, ಬೀಜಗಳು, ಕಿರುಗಾತ್ರದ ಹಣ್ಣುಗಳು ಇದರ ಮೆಚ್ಚಿನ ಆಹಾರ. ಆಹಾರವನ್ನು ಅರಸುವಾಗ ಮರಗಿಡಗಳ ರೆಂಬೆಗಳಿಂದ ತಲೆಕೆಳಕಾಗಿ ತೂಗು ಬೀಳುವುದು, ಒಂದೇ ಕಾಲಿನಲ್ಲಿ ರೆಂಬೆಯಿಂದ ರೆಂಬೆಗೆ ಜಿಗಿಯುವುದು ಮುಂತಾಗಿ ದೊಂಬರಾಟವಾಡುತ್ತದೆ. ಜೊತೆಗೆ ಜೋರಾಗಿ ಸಿಳ್ಳು ಹಾಕಿದಂತೆ ವೀ–ಚೆಚಿ, ವೀ–ಚೆಚಿ ಎಂದು ಸಂತಸದಿಂದ ಹಾಡುವುದು. ಚೇಕಡಿ ಹಕ್ಕಿ ಬಹಳ ಸಣ್ಣ ಗಾತ್ರದ ಹಕ್ಕಿ ; ಗುಬ್ಬಚ್ಚಿಯಷ್ಟಿದೆ. ಇದರ ತಲೆ ಕಪ್ಪು. ಕೆನ್ನೆಗಳ ಬಳಿ ಬಿಳಿ ಮಚ್ಚೆಗಳಿವೆ. ಬೆನ್ನು ಬೂದುಬಣ್ಣದ್ದು. ಹೊಟ್ಟೆ ಬಿಳಿ. ಕತ್ತಿನಿಂದ ಬಾಲದ ಬುಡದವರೆಗೆ ಉದರಭಾಗದಲ್ಲಿ ಕರಿಯ ಪಟ್ಟಿಯೊಂದಿದೆ. ಗಂಡುಹೆಣ್ಣುಗಳೆರಡೂ ನೋಡಲು ಒಂದೇ ತರಹ ಇವೆ. ಫೆಬ್ರವರಿ–ನವೆಂಬರ್ ತಿಂಗಳುಗಳು ಚೇಕಡಿ ಹಕ್ಕಿ ಮೊಟ್ಟೆಯಿಡುವ ಕಾಲ. ಮರದ ಪೊಟರೆ, ಗೋಡೆಗಳ ಬಿರುಕು ಮುಂತಾದೆಡೆ ಹಾವಸೆ, ಗರಿ ಮೊದಲಾದವನ್ನು ಬಳಸಿ ಗೂಡುಕಟ್ಟುತ್ತದೆ. ಮೊಟ್ಟೆಗಳ ಸಂಖ್ಯೆ ಒಂದು ಸೂಲಿಗೆ 4–6. ಗಂಡು, ಹೆಣ್ಣು ಹಕ್ಕಿಗಳೆರಡೂ ಕಾವು ಕೊಡುವ, ಮರಿಗಳನ್ನು ಪೋಷಿಸುವ ಕಾರ್ಯದಲ್ಲಿ ಪಾಲುಗೊಳ್ಳುತ್ತವೆ. (ಎನ್.ಎಂ.)

**ಚೇನ್, ಅರ್ನ್ಸ್ಟ್ ಬೋರಿಸ್:** (1906–1979) ಜರ್ಮನ್–ಇಂಗ್ಲಿಷ್ ರಸಾಯನ ವಿಜ್ಞಾನಿ. ಮನುಷ್ಯರಿಗೆ ತಗಲುವ ಬ್ಯಾಕ್ಟೀರಿಯ ಸೋಂಕುಗಳ ನಿವಾರಣೆಗೆ ಪೆನಿಸಿಲಿನ್ನನ್ನು ಉಪಯೋಗಿಸುವ ಸಾಧ್ಯತೆಯನ್ನು ತೋರಿಸಿ ಕೊಟ್ಟುದಕ್ಕಾಗಿ ಮತ್ತು ಆ ಮೂಲಕ ಪ್ರತಿಜೀವಕ (ಆಂಟಿಬಯೋಟಿಕ್) ಯುಗಕ್ಕೆ ನಾಂದಿ ಹಾಕಿದುದಕ್ಕಾಗಿ ಅಲೆಕ್ಸಾಂಡರ್ ಫ್ಲೆಮಿಂಗ್ ಹಾಗೂ ಹೊವಾರ್ಡ್ ಫ್ಲೋರಿ *(ನೋಡಿ–ಫ್ಲೆಮಿಂಗ್, ಅಲೆಕ್ಸಾಂಡರ್: ಫ್ಲೋರಿ ಹೊವಾರ್ಡ್)* ಅವರೊಡನೆ ಈತನಿಗೂ ನೊಬೆಲ್ ಬಹುಮಾನ ದೊರೆಯಿತು (1945). ಚೇನನ ಪೂರ್ವಜರು ಜರ್ಮನಿಯಲ್ಲಿ ಬಂದು ನೆಲೆಸಿದ್ದ ರಷ್ಯನ್ ಯೆಹೂದ್ಯರು. ಇವನು ಜನಿಸಿದ್ದು 1906ರ ಜೂನ್ 19 ರಂದು, ಬರ್ಲಿನ್ ನಗರದಲ್ಲಿ. ತಂದೆ ವೃತ್ತಿಯಲ್ಲಿ ರಸಾಯನಿ. ಆತನ ಕಾರ್ಖಾನೆ ಮತ್ತು ಪ್ರಯೋಗಾಲಯಕ್ಕೆ ಭೇಟಿ ಕೊಡುತ್ತಿದ್ದ ಚೇನನಿಗೆ ಚಿಕ್ಕಂದಿನಲ್ಲಿಯೆ ರಸಾಯನ ವಿಜ್ಞಾನದಲ್ಲಿ ಆಸಕ್ತಿ ಹುಟ್ಟಿತು.



ಬರ್ಲಿನ್ನಿನ ಫ್ರೇಡರಿಕ್ ವಿಲ್ಹೆಲ್ಮ್ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನ ಮತ್ತು ಶರೀರ ವಿಜ್ಞಾನಗಳಲ್ಲಿ ಶಿಕ್ಷಣ ಪಡೆದು ಪದವೀಧರನಾಗಿ (1930) ಮುಂದೆ ಬರ್ಲಿನ್ನಿನ ಚಾರಿಟಿ ಆಸ್ಪತ್ರೆಯ ಇನ್ಸ್ ಟಿಟ್ಯೂಟ್ ಆಫ್ ಪೆಥಾಲಜಿಯ ರಸಾಯನ ವಿಜ್ಞಾನ ಇಲಾಖೆಯಲ್ಲಿ ಸಂಶೋಧನೆ ನಡೆಸಿದ. 1933ರಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದಕೂಡಲೆ ಜರ್ಮನಿಯನ್ನು ಬಿಟ್ಟುಹೋಗುವುದು ಅನಿವಾರ್ಯವೆಂಬುದನ್ನು ಅರಿತುಕೊಂಡು ಇಂಗ್ಲೆಂಡಿಗೆ ನಿಷ್ಕ್ರಮಿಸಿದ. ಕೇಂಬ್ರಿಜಿನಲ್ಲಿ ಫ್ರೆಡರಿಕ್ ಗೌಲ್ಯಾಂಡ್ ಹಾಪ್‌ಕಿನ್ಸನ (ನೋಡಿ–ಹಾಪ್‌ಕಿನ್ಸ್, ಫ್ರೆಡರಿಕ್ ಗೌಲ್ಯಾಂಡ್) ನೇತೃತ್ವದಲ್ಲಿ ಸಂಶೋಧನೆ ನಡೆಸಿದ. 1935ರಲ್ಲಿ ಹೊವಾರ್ಡ್ ಫ್ಲೋರಿ ಎಂಬಾತನ ಆಹ್ವಾನದ ಮೇರೆಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ತೆರಳಿ ಅಲ್ಲಿ ರಾಸಾಯನಿಕ ರೋಗವಿಜ್ಞಾನದ ಅಧ್ಯಾಪಕನಾಗಿ ಹದಿಮೂರು ವರ್ಷಕಾಲ ದುಡಿದ. ಈ ಅವಧಿಯಲ್ಲಿಯೇ ಅವನು ಪೆನಿಸಿಲಿನ್ ಕುರಿತ ಸಂಶೋಧನೆಯನ್ನು ನಡೆಸಿದ್ದು. ಎರಡನೆಯ ಮಹಾಯುದ್ಧ ಮುಗಿದ ಬಳಿಕ 1948ರಲ್ಲಿ ಅವನು ರೋಮಿನ ಇನ್‌ಸ್ಟಿಟ್ಯೂಟೊ ಸುಪೀರಿಯೊರ್ ಡಿ ಸ್ಯಾನಿಟ ಸಂಸ್ಥೆಯಲ್ಲಿರುವ ರಾಸಾಯನಿಕ ಸೂಕ್ಷ್ಮಜೀವವಿಜ್ಞಾನದ ಅಂತಾರಾಷ್ಟ್ರೀಯ ಸಂಶೋಧನಾ ಕೇಂದ್ರದ ವೈಜ್ಞಾನಿಕ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡ. 1961ರಲ್ಲಿ ಇಂಗ್ಲೆಂಡಿಗೆ ಹಿಂತಿರುಗಿ ಲಂಡನ್ ವಿಶ್ವವಿದ್ಯಾಲಯದ ಇಂಪೀರಿಯಲ್ ಕಾಲೇಜಿನಲ್ಲಿ ಜೀವ ರಸಾಯನ ವಿಜ್ಞಾನದ ಪ್ರಾಧ್ಯಾಪಕನಾದ. ಅಲ್ಲಿ ಅವನಿಗಾಗಿ ಒಂದು ಹೊಸ ಸಂಶೋಧನಾಲಯವನ್ನೇ ನಿರ್ಮಿಸಿಕೊಟ್ಟರು.

ಅಲೆಕ್ಸಾಂಡರ್ ಫ್ಲೆಮಿಂಗ್ ಪೆನಿಸಿಲಿನ್ನನ್ನು ಆವಿಷ್ಕರಿಸಿದ್ದು ಒಂದು ಆಕಸ್ಮಿಕದ ಫಲವಾಗಿ. ವಿವಿಧ ರೋಗಕಾರಕ ಸೂಕ್ಷ್ಮಜೀವಿಗಳನ್ನು ಕೃಷಿ ಮಾಡುವುದರಲ್ಲಿ ತೊಡಗಿದ್ದ ಫ್ಲೆಮಿಂಗ್ ಒಂದು ಬಾರಿ (1928) ಸ್ಟಾಫಿಲೊಕಾಕಸ್ ಬ್ಯಾಕ್ಟೀರಿಯಗಳನ್ನು ಬೆಳೆಸಿದ್ದ ಒಂದು ತಟ್ಟೆಯನ್ನು ಪ್ರಯೋಗಶಾಲೆಯ ಕಿಟಕಿಯೊಂದರಲ್ಲಿಟ್ಟು ಒಂದೆರಡು ದಿನ ಅದನ್ನು ಮರೆತುಬಿಟ್ಟ. ಆಮೇಲೆ ಒಂದು ದಿನ ಅದರ ಕಡೆ ಗಮನಹರಿಸಿದಾಗ ತಟ್ಟೆಯಲ್ಲಿದ್ದ ಕೃಷಿಕೆಗೆ ಬೂಷ್ಟು ಹಿಡಿದಿದ್ದುದು ಕಂಡುಬಂದಿತು. ತಟ್ಟೆಯ ತುಂಬ ಹರಡಿಕೊಂಡಿದ್ದ ಬ್ಯಾಕ್ಟೀರಿಯಕೃಷಿಕೆಯ ಮೇಲೆ ಎಲ್ಲೆಲ್ಲಿ ಬೂಷ್ಟು ಬೆಳೆಯಲು ಪ್ರಾರಂಭಿಸಿತ್ತೋ ಅದರ ಸುತ್ತಲೂ ಸ್ವಲ್ಪ ಪ್ರದೇಶದಲ್ಲಿ ಬ್ಯಾಕ್ಟೀರಿಯ ನಾಶವಾಗಿಹೋಗಿತ್ತು. ಕೃಷಿಕೆ ಕೆಟ್ಟು ಹೋಯಿತೆಂದು ಕೊಂಡು ತಟ್ಟೆಯನ್ನು ತೊಳೆದುಬಿಡುವುದರಲ್ಲಿದ್ದ ಫ್ಲೆಮಿಂಗನಿಗೆ ಥಟ್ಟನೆ ಒಂದು ವಿಷಯ ಹೊಳೆಯಿತು. ಬೂಷ್ಟಿನ ಸುತ್ತಲೂ ಸ್ಟಾಫಿಲೋಕಾಕಸ್ ನಾಶವಾಗಿದ್ದನ್ನು ನೋಡಿದರೆ ಆ ಬೂಷ್ಟ ಉತ್ಪತ್ತಿಮಾಡುತ್ತಿದ್ದ ಯಾವುದೋ ಒಂದು ಪದಾರ್ಥ ಸ್ಟಾಫಿಲೊಕಾಕಸ್ ಬ್ಯಾಕ್ಟೀರಿಯಕ್ಕೆ ಮಾರಕವಾಗಿರಬೇಕು ಎನ್ನಿಸಿತು. ಆ ಬೂಷ್ಟನ್ನು ಅದರಿಂದ ಪ್ರತ್ಯೇಕಿಸಿ ಶುದ್ಧವಾಗಿ ಕೃಷಿ ಮಾಡಿ ಅದನ್ನು ಪೆನಿಸಿಲಿಯಮ್ ನೋಟ್ಯಾಟಮ್ ಎಂದು ಗುರುತಿಸಿದ. ಆನಂತರ ಇತರ ಬ್ಯಾಕ್ಟೀರಿಯಗಳು ಆ ಬೂಷ್ಟಿಗೆ ಯಾವ ಪ್ರತಿಕ್ರಿಯೆಯನ್ನು ತೋರಿಸುವುವೆಂದು ಪರೀಕ್ಷಿಸಿ ನೋಡಲಾಗಿ, ಕೆಲವು ಬ್ಯಾಕ್ಟೀರಿಯಾಗಳು ಅದರ ಸನಿಹದಲ್ಲಿ ವೃದ್ಧಿಯಾಗುತ್ತಿದ್ದುದೂ ಇನ್ನು ಕೆಲವು ಬಗೆಯ ಬ್ಯಾಕ್ಟೀರಿಯಗಳು ಆ ಬೂಷ್ಟಿನ ಸುತ್ತ ಹಲವಾರು ಸೆಂಟಿಮೀಟರಿನಷ್ಟು ದೂರದಲ್ಲಿ ನಾಶವಾಗಿಬಿಡುತ್ತಿದ್ದುದೂ ಕಂಡುಬಂದಿತು. ಪೆನಿಸಿಲಿಯಮ್ ನೋಟ್ಯಾಟಮನ್ನು ದ್ರವಮಾಧ್ಯಮದಲ್ಲಿ ಬೆಳೆಸಿ ಅನಂತರ ಆ ದ್ರವವನ್ನು ಪರೀಕ್ಷಿಸಲಾಗಿ ಅದಕ್ಕೂ ಬ್ಯಾಕ್ಟೀರಿಯ ನಿರೋಧಕ ಗುಣವಿದ್ದುದು ಕಂಡುಬಂದಿತು. ಬೂಷ್ಟು ಉತ್ಪತ್ತಿಮಾಡುವುದೆಂದು ನಂಬಲಾದ ಆ ಪದಾರ್ಥಕ್ಕೆ ಪೆನಿಸಿಲಿನ್ ಎಂದು ಅವನು ನಾಮಕರಿಸಿದ ಮತ್ತು ಪ್ರಾಣಿಗಳಿಗೆ ಅದು ವಿಷಕರವಲ್ಲವೆಂದು ಖಚಿತಮಾಡಿಕೊಂಡ. ಮನುಷ್ಯರಿಗೆ ತಗಲುವ ಸೋಂಕುರೋಗಗಳ ಚಿಕಿತ್ಸೆಗೆ ಪೆನಿಸಿಲಿನ್ನನ್ನು ಬಳಸಬಹುದೆಂಬ ಆಶೆಗೆ ಅದು ದಾರಿ ಮಾಡಿಕೊಟ್ಟಿತಾದರೂ ಫ್ಲೆಮಿಂಗ್ ಆ ಕೆಲಸವನ್ನು ಮುಂದುವರಿಸಲಿಲ್ಲ. ಏಕೆಂದರೆ ಅವನಿಗೆ ರಸಾಯನ ವಿಜ್ಞಾನದಲ್ಲಿ ಹೆಚ್ಚಿನ ಪರಿಶ್ರಮವಿರಲಿಲ್ಲವಾದುದರಿಂದ ಪೆನಿಸಿಲಿನ್ನನ್ನು ದ್ರವಮಾಧ್ಯಮದಲ್ಲಿ ಸಾರೀಕರಿಸುವುದಾಗಲೀ ಅದನ್ನು ಶುದ್ಧರೂಪದಲ್ಲಿ ಪ್ರತ್ಯೇಕಿಸುವುದಾಗಲೀ ಅವನಿಗೆ ಸಾಧ್ಯವಾಗಲಿಲ್ಲ.

ಈ ಕೆಲಸವನ್ನು ಕೈಗೊಂಡವರು ಹೊವಾರ್ಡ್ ಫ್ಲೋರಿ ಮತ್ತು ಚೇನ್‌ರವರು. ಸೂಕ್ಷ್ಮಜೀವಿಗಳು ಉತ್ಪತ್ತಿಮಾಡುವ ಬ್ಯಾಕ್ಟೀರಿಯ ನಿರೋಧಕ ಪದಾರ್ಥಗಳ ಕ್ರಮಬದ್ಧ ಅನ್ವೇಷಣೆ ನಡೆಸಬೇಕೆಂದು 1938ರಲ್ಲಿ ನಿರ್ಧರಿಸಿದ ಫ್ಲೋರಿ ಮತ್ತು ಚೇನ್ ಹತ್ತು ವರ್ಷ ಮುಂಚೆ ಫ್ಲೆಮಿಂಗ್ ಆವಿಷ್ಕರಿಸಿದ ಪೆನಿಸಿಲಿನ್ ಕಡೆ ತಮ್ಮ ಗಮನ ಹರಿಸಿದರು. ಮೊಟ್ಟಮೊದಲನೆಯದಾಗಿ ಬ್ಯಾಕ್ಟೀರಿಯ ಕೃಷಿಕೆಗಳ ಮೇಲೆ ಪೆನಿಸಿಲಿನ್‌ಯುತ ದ್ರಾವಣಗಳ ವರ್ತನೆಯನ್ನು ಆಧಾರವಾಗಿಟ್ಟುಕೊಂಡು ಆ ದ್ರಾವಣಗಳ ಸಾರತೆಯನ್ನು ನಿರ್ಣಯಿಸಲು ಒಂದು ವಿಧಾನವನ್ನು ರೂಪಿಸಿಕೊಂಡರು. ಅನಂತರ ಪೆನಿಸಲಿನ್ನನ್ನು ಶುದ್ಧೀಕರಿಸುವ ಕಾರ್ಯಕ್ಕೆ ಕೈಹಾಕಿದರು. ಮೂರು ವರ್ಷಗಳ ಕಾಲ ನಡೆಸಿದ ಕ್ರಮಬದ್ಧ ಸಂಶೋಧನೆಗಳ ಪರಿಣಾಮವಾಗಿ ಪೆನಿಸಿಲಿನ್ ಮನುಷ್ಯದೇಹಕ್ಕೆ ಗಣನೀಯವಾದ ಯಾವ ಕೆಡಕನ್ನೂ ಮಾಡದೆ, ದೇಹದಲ್ಲಿನ ರೋಗಕಾರಕ ಬ್ಯಾಕ್ಟೀರಿಯಗಳನ್ನು ನಾಶಮಾಡಿ ರೋಗವನ್ನು ನಿರ್ಮೂಲ ಮಾಡಬಲ್ಲದೆಂಬುದು ಸ್ಥಿರಪಟ್ಟಿತು. ಈ ಸಾಧನೆಗಾಗಿ 1945 ರಲ್ಲಿ ಫ್ಲೆಮಿಂಗ್,

ಫ್ಲೋರಿ ಮತ್ತು ಚೇನ್‌ರವರಿಗೆ ವೈದ್ಯವಿಜ್ಞಾನ ಮತ್ತು ಶರೀರ ವಿಜ್ಞಾನದ ನೊಬೆಲ್ ಪಾರಿತೋಷಕ ಲಭಿಸಿತು.

ಇದು ಮಾತ್ರವಲ್ಲದೆ ಇನ್ನೂ ಅನೇಕ ಮೌಲಿಕ ಸಂಶೋಧನೆಗಳನ್ನು ಚೇನ್ ನಡೆಸಿದ್ದಾನೆ. ಇ.ಪಿ. ಅಬ್ರಹಾಮ್ ಎಂಬವನೊಂದಿಗೆ ಜೊತೆಗೂಡಿ ಸ್ಫಟಿಕೀಯ ಪೆನಿಸಿಲಿನ್ನಿನ ರಾಸಾಯನಿಕ ರಚನೆಯನ್ನು ನಿರ್ಣಯಿಸಿ ರಚನೆಯಲ್ಲಿ ಸೂಕ್ಷ್ಮ ವ್ಯತ್ಯಾಸವಿರುವ ನಾಲ್ಕು ಬೇರೆ ಬೇರೆ ಪೆನಿಸಲಿನ್ನುಗಳಿವೆ ಎಂಬುದನ್ನು ತೋರಿಸಿಕೊಟ್ಟ. ಪೆನಿಸಿಲಿನ್ನನ್ನು ನಾಶಮಾಡಬಲ್ಲ ಪೆನಿಸಿಲಿನೇಸ್ ಎಂಬ ಕಿಣ್ವವನ್ನು ಶೋಧಿಸಿದ. ಕೆಲವು ಬ್ಯಾಕ್ಟೀರಿಯಗಳು ಪೆನಿಸಿಲಿನ್ನಿಗೆ ಮಣಿಯದಿರುವುದಕ್ಕೆ ಅವು ಉತ್ಪತ್ತಿ ಮಾಡುವ ಈ ರಕ್ಷಣಾಸಾಧನವೇ ಕಾರಣ ಎಂದು ತೋರಿಸಿದ. ಹಾವಿನ ವಿಷಗಳ ಕ್ರಿಯಾವಿನ್ಯಾಸವನ್ನು ಕುರಿತು ಉಪಯುಕ್ತ ಮಾಹಿತಿಯನ್ನು ಪಡೆದಿದ್ದಾನೆ. ಕೆಲವು ಬಗೆಯ ಬೂಷ್ಟುಗಳ ಕಿಣ್ವನಗಳನ್ನೂ (ಫರ್ಮಂಟೇಷನ್ಸ್) ಪ್ರತಿ ಜೀವಕಗಳನ್ನೂ ಕುರಿತು ಉಪಯುಕ್ತ ಸಂಶೋಧನೆ ನಡೆಸಿದ್ದಾನೆ.

ತನ್ನ ವೈಜ್ಞಾನಿಕ ಸಾಧನೆಗಳಿಂದಾಗಿ ಚೇನ್ ಅನೇಕ ಗೌರವಗಳನ್ನೂ ಪ್ರಶಸ್ತಿಗಳನ್ನೂ ಪಡೆದಿದ್ದಾನೆ. ಕಮ್ಯಾಂಡರ್ ಆಫ್ ದಿ ಲೀಜನ್ ಆಫ್ ಆನರ್ ಆಗಿ ಚುನಾಯಿತನಾದದ್ದು, 1949ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತವಾದದ್ದು, 1954ರಲ್ಲಿ ಪಾಲ್ ಎರ್ಲಿಕ್ ಶತಮಾನೋತ್ಸವ ಬಹುಮಾನವನ್ನು ಪಡೆದಿದ್ದು ಇವು ಮುಖ್ಯವಾದುವು. ಆಗಸ್ಟ್ 12, 1979ರಂದು ಐರ್ಲ್ಯಾಂಡಿನಲ್ಲಿ ಮರಣ ಹೊಂದಿದ.

(ಜೆ.ಆರ್.ಎಲ್.)

**ಚೇಳು:** ಆರ್ಥ್ರೊಪೊಡ ವಂಶದ ಅರ್ಯಾಕ್ನಿಡ ವರ್ಗದ ಸ್ಕಾರ್ಪಿಯಾನೀಸ್ ಗಣದ ಸ್ಕಾರ್ಪಿಯಾನಿಡೆ ಕುಟುಂಬದ ಸದಸ್ಯ (ಸ್ಕಾರ್ಪಿಯನ್). 400 ಕ್ಕೂ ಹೆಚ್ಚು ಪ್ರಭೇದಗಳಿವೆ. ಇವು ಪ್ರಪಂಚದ ಉಷ್ಣ ಹಾಗೂ ಉಪೋಷ್ಣ ಪ್ರದೇಶಗಳಲ್ಲಿ ಮಾತ್ರ ವಾಸಿಸುತ್ತವೆ. ವಿವಿಧ ಜಾತಿಯ ಚೇಳುಗಳ ಗಾತ್ರದಲ್ಲಿ ಬಹಳ ವ್ಯತ್ಯಾಸವಿದೆ. ಆದರೆ, ವಿಶಿಷ್ಟವಾದ ಕೆಲವು ಲಕ್ಷಣಗಳಿರುವುದರಿಂದ ಚೇಳುಗಳನ್ನು ಸುಲಭವಾಗಿ ಗುರುತಿಸಬಹುದು. ದೇಹದಲ್ಲಿ ಆರು ಖಂಡಗಳಿಂದ ಕೂಡಿದ ಶಿರೋರ (ಪ್ರೋಸೋಮ) ಮತ್ತು ಹನ್ನೆರಡು ಖಂಡಗಳಿಂದ ಕೂಡಿದ ಉದರ (ಒಫಿಸ್ತೋಸೊಮ) ಭಾಗಗಳಿವೆ. ಉದರದಲ್ಲಿ ಏಳು ಖಂಡಗಳಿರುವ ಮೀಸೋಸೋಮ ಮತ್ತು ಐದು ಖಂಡುಗಳುಳ್ಳ ಮೆಟಸೋಮ ಭಾಗಗಳಿವೆ. ಮೆಟಸೋಮದ ತುದಿಯಲ್ಲಿ ವಿಷಗ್ರಂಥಿಯುಳ್ಳ ಕೊಂಡಿಯಿದೆ. ಶಿರೋರವೆಂಬುದು ತಲೆ ಮತ್ತು ಎದೆಯ ಭಾಗದ ಒಕ್ಕೂಟ. ಶಿರೋರದ ಮೇಲು ಹೊದಿಕೆಯಾದ ಕೈಟಿನ್ ಫಲಕದ (ಕ್ಯಾರಪೇಸ್) ಮಧ್ಯಭಾಗದಲ್ಲಿ ಒಂದು ಜೊತೆ, ಮತ್ತು ಎಡ ಮತ್ತು ಬಲ ಪಕ್ಕದ ಅಂಚಿನಲ್ಲಿ ಮೂರು ಜೊತೆ ಸರಳ ರಚನೆಯ ಕಣ್ಣುಗಳಿವೆ. ಶಿರೋರದಲ್ಲಿ ಆರು ಜೊತೆ ಉಪಾಂಗಗಳು, ಬಾಯಿಯ ಇಕ್ಕೆಡೆಗಳಲ್ಲಿ ಒಂದು ಜೊತೆ ಕೆಲಿಸೆರಿ ಉಪಾಂಗಗಳಿವೆ. ಇವುಗಳು 3 ಖಂಡಗಳಿಂದಾಗಿವೆ. ಚಿಕ್ಕದಾದ ಬುಡದ ಖಂಡವನ್ನು ಶಿರೋರದ ಫಲಕದ ಮುಂಭಾಗ ಮುಚ್ಚಿದೆ. ಮುಂದಿರುವ ಎರಡು ಖಂಡಗಳು ಆಹಾರವನ್ನು ಬಿಗಿಯಾಗಿ ಹಿಡಿಯಲು ಸಹಕರಿಸುತ್ತವೆ. ಶಿರೋರದ ಎರಡನೆಯ ಜೊತೆ ಉಪಾಂಗಗಳಾದ ಪೆಡಿಪಾಲ್ಪ್‌ಗಳು ದೊಡ್ಡವು. ಇವು 6 ಖಂಡಗಳಿಂದಾಗಿವೆ. ತುದಿಯಲ್ಲಿರುವ 2 ಖಂಡಗಳು ಚಿಮ್ಮುಟದ ಅಲಗುಗಳಂತಿದ್ದು ಇತರ ಪ್ರಾಣಿಗಳನ್ನು ಹಿಡಿಯುವುದಕ್ಕೆ ಸಹಾಯಕ. ಶಿರೋರದ 3, 4, 5 ಮತ್ತು 6ನೆ ಜೊತೆಯ ಉಪಾಂಗಗಳು ನಡೆಯಲು ನೆರವಾಗುವ ಕಾಲುಗಳು, ಒಂದೊಂದರಲ್ಲೂ 7 ಖಂಡಗಳೂ ತುದಿಯ ಖಂಡದಲ್ಲಿ ಎರಡೆರೆಡು ನಖಗಳಿವೆ.

ಮೀಸೋಸೊಮದ ಪ್ರತಿ ಖಂಡದ ಮೇಲಿರುವ ಟರ್ಗಮ್ ಮತ್ತು ತಳಭಾಗದಲ್ಲಿರುವ ಸ್ಟರ್ನಮ್ ಫಲಕಗಳ ನಡುವೆ ತೆಳುವಾದ ಕೈಟಿನ್ ಪೊರೆ ಇದೆ. ಮೊದಲನೆಯ ಖಂಡದ ಸ್ಟರ್ನಮ್ ಫಲಕದ ಮಧ್ಯೆ 5 ಮೂಲೆಗಳುಳ್ಳ ಜೆನೈಟಲ್ ಫಲಕ ಉಂಟು. ಹೆಣ್ಣಿನಲ್ಲಿ ಅಖಂಡವಾಗಿದೆ. ಗಂಡಿನಲ್ಲಿ ಉದ್ದುದ್ದಕ್ಕೆ ಎರಡಾಗಿ ಸೀಳಿದೆ. ಜನನೇಂದ್ರಿಯ ದ್ವಾರ ಈ ಫಲಕದಲ್ಲಿದೆ. ಎರಡನೆಯ ಖಂಡದ ಸ್ಟರ್ನಮ್ ಫಲಕದ ಮೇಲೆ ಬಾಚಣಿಗೆಯ ಹಲ್ಲುಗಳಂತಿರುವ ಎರಡು ಪೆಕ್ಟಿನ್‌ಗಳಿವೆ. ಉಳಿದ 5 ಖಂಡಗಳಲ್ಲಿ ಉಪಾಂಗಗಳಿಲ್ಲ. 3, 4, 5 ಮತ್ತು 6ನೆ ಖಂಡಗಳ ಸ್ಟರ್ನಮ್ ಫಲಕಗಳಲ್ಲಿ ಕಿಂಡಿಗಳಂತಿರುವ ದ್ವಾರಗಳಿವೆ. ಇವು ಶ್ವಾಸಾಂಗಗಳ ಹೊರ ದ್ವಾರಗಳು. ಮೆಟಸೋಮದಲ್ಲಿ 6 ಖಂಡಗಳಿವೆ. ಪ್ರತಿ ಖಂಡದಲ್ಲಿ ಉದ್ದವಾದ ಕೈಟಿನ್ ಉಂಗುರುಗಳಿವೆ. ಆದರೆ ಈ ಭಾಗದಲ್ಲಿ ಉಪಾಂಗಗಳಿಲ್ಲ. ಈ ಭಾಗದ ಹಿಂತುದಿಯಲ್ಲಿ ಕೊಂಡಿಯಿದೆ.

ಒಳರಚನೆ : ದೇಹದ ಒಳಗೆ ಬಣ್ಣರಹಿತ ರಕ್ತ ತುಂಬಿದ ದೇಹಾಂತರಾವಕಾಶವಿದೆ. ಅದರಲ್ಲಿ ಜೀರ್ಣಾಂಗಗಳು, ಹೃದಯ, ಜನನೇಂದ್ರಿಯಗಳು ಮತ್ತು ಇತರ ಅಂಗಗಳಿವೆ. ಅನ್ನನಾಳ ಮತ್ತು ಕರುಳಿನ ಕಿರಿದಾದ ನಾಳಗಳು, ಕರುಳಿಗೆ ಸೇರಿದಂತೆ ದೊಡ್ಡ ಕುಡಿಗಳಿವೆ. ಇವು ಉದರದಲ್ಲಿ ತುಂಬಿರುವ ಜೀರ್ಣಗ್ರಂಥಿಯೊಳಗೆ ಹುದುಗಿವೆ. ಚೇಳು ಇತರ ಜೀವಿಗಳ ದೇಹದಿಂದ ತನಗೆ ಬೇಕಾಗುವ ಆಹಾರವನ್ನು ಹೀರುವುದು. ಹೃದಯ ಉದ್ದಕೊಳವೆಯಂತಿದೆ. ಅಕ್ಕಪಕ್ಕದಲ್ಲಿ 7 ಜೊತೆ ಆಸ್ಟಿಯೋಲ್ ದ್ವಾರಗಳಿವೆ. ದೊಡ್ಡ ಶುದ್ಧ ರಕ್ತನಾಳಗಳು ಮತ್ತು ಮಲಿನ ರಕ್ತನಾಳಗಳಿವೆ. ಮಿಸೋಸೊಮದ, 3, 4, 5 ಮತ್ತು 6ನೆಯ ಖಂಡಗಳಲ್ಲಿ 4 ಜೊತೆ ಶ್ವಾಸಕೋಶಗಳಿವೆ. ಕೊಂಡಿಯಲ್ಲಿ ಒಂದು ಜೊತೆ ದೊಡ್ಡ ವಿಷಗ್ರಂಥಿಗಳಿವೆ. ಇವುಗಳಿಂದ ಹೊರಡುವ ಸೂಕ್ಷ್ಮವಾದ ನಾಳಗಳು ಕೊಂಡಿಯ ಮುಳ್ಳಿನ ತುದಿಯಲ್ಲಿ ಹೊರತೆರೆಯುತ್ತವೆ.



ಚೇಳು

ಚೇಳು ನಿಶಾಚರಿ. ಹಗಲೆಲ್ಲ ಕಲ್ಲುಗಳ ಪೊಟರೆಗಳಲ್ಲಿ, ತೊಗಟೆ, ಎಲೆ, ಕಸಕಡ್ಡಿ, ಮನೆಗಳ ಹೆಂಚುಗಳ ಬುಡದಲ್ಲಿ ಅಡಗಿದ್ದು, ಕತ್ತಲಾದ ಅನಂತರ ಆಹಾರವನ್ನು ಹುಡುಕಿಕೊಂಡು ಹೊರಬರುತ್ತದೆ. ಸಣ್ಣ ಕೀಟಗಳು ಇದರ ಪ್ರಮುಖ ಆಹಾರ. ಇದು ಆಹಾರವನ್ನು ಸೇವಿಸುವ ಕ್ರಮ ವಿಚಿತ್ರ.ವಾಗಿದೆ. ಆಹಾರ ಕೀಟಗಳು ಸಿಕ್ಕರೆ, ಅದನ್ನು ತನ್ನ ಪೆಡಿಪಾಲ್ಪ್‌ಗಳಿಂದ ಬಿಗಿಯಾಗಿ ಹಿಡಿದು, ಕೊಂಡಿಯಿಂದ ಕುಟುಕಿ, ಕೆಲಿಸರಿಗಳ ಸಹಾಯದಿಂದ ಅರೆದು, ಆ ಪ್ರಾಣಿಯೊಳಕ್ಕೆ ತನ್ನ ಕಿಣ್ವಗಳನ್ನು ಸೇರಿಸುತ್ತದೆ. ಕಿಣ್ವಗಳ ಚಟುವಟಿಕೆಯಿಂದ ಆಹಾರ ಪ್ರಾಣಿಯ ಒಳ ಅಂಗಾಂಶಗಳೆಲ್ಲ ದ್ರವರೂಪಕ್ಕೆ ತಿರುಗುತ್ತದೆ ಆಗ ಅದಕ್ಕೆ ತನ್ನ ಬಾಯಿ ಹಚ್ಚಿ ಆಹಾರ ದ್ರವವನ್ನು ಹೀರಿಕೊಳ್ಳುತ್ತದೆ. ಚೇಳು ಆಹಾರವಿಲ್ಲದೆ ಬಹಳ ದಿನ, ಕೆಲವೊಮ್ಮೆ ವರ್ಷಕ್ಕೂ ಹೆಚ್ಚು ಕಾಲ ಬದುಕಿರಬಲ್ಲುದು. ಹಾಗೆಯೇ ಅದಕ್ಕೆ ನೀರಿನ ಆವಶ್ಯಕತೆಯೂ  ಬಹಳ ಕಡಿಮೆ.

ಚೇಳು ಒಂಟಿ ಜೀವಿ. ಆದರೆ, ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಹೆಣ್ಣುಗಳು ಜೊತೆಗೂಡಿ ಕೊಂಚಕಾಲ ಪ್ರಣಯವಾಡಿ, ಅನಂತರ ಸಂಭೋಗ ನಡೆಸುತ್ತವೆ. ಸಂಭೋಗ ಕ್ರಿಯೆ ಮುಗಿದ ಅನಂತರ ಹೆಣ್ಣು, ಗಂಡು ಚೇಳನ್ನು ತಿನ್ನುತ್ತದೆ. ಗರ್ಭಾಂಕುರಗೊಂಡ ಅಂಡಗಳು ತಾಯಿ ದೇಹದಲ್ಲಿ ಬೆಳೆದು ಮರಿಗಳಾಗಿ ತಾಯಿ ಗರ್ಭದಿಂದ ಹೊರಬರುತ್ತವೆ. ಹೊರಬಂದಾಗ ಬಹಳ ಅಸಹಾಯಕ ಸ್ಥಿತಿಯಲ್ಲಿರುವ ಇವು ಕೆಲವು ಕಾಲ ತಾಯಿಯ ಬೆನ್ನ ಮೇಲೆ ಇರುತ್ತವೆ. ಸ್ವಲ್ಪ ದೊಡ್ಡವಾದ ಮೇಲೆ ಕೆಳಗಿಳಿದು ಸ್ವತಂತ್ರ ಜೀವನ ನಡೆಸುತ್ತವೆ. ತಾಯಿಯ ಬೆನ್ನನ್ನು ಭೇದಿಸಿಕೊಂಡು ಮರಿಗಳು ಹೊರಬರುತ್ತವೆ ಎಂಬ ಭಾವನೆ ಜನಜನಿತವಾಗಿದ್ದರು ಇದು ಅವೈಜ್ಞಾನಿಕ. ***

**ಚೇಳು ಮೀನು:** ಸಾಗರದ ಅಳಿವೆಗಳಲ್ಲೂ ನದಿಗಳಲ್ಲೂ ಕಾಣಬರುವ ಒಂದು ಒಳ್ಳೆಯ ಆಹಾರ ಮೀನು. ಗೊಡ್ಲೆ, ಬಾಳೆ ಮುಂತಾದ ಮೀನುಗಳಿಗೆ ಹತ್ತಿರ ಸಂಬಂಧಿ. ಹೆಟರೊನ್ಯೂಸ್ಟಿಡೆ ಕುಟುಂಬಕ್ಕೆ ಸೇರಿದೆ. ಶಾಸ್ತ್ರೀಯ ಹೆಸರು ಹೆಟರೋನ್ಯೂಸ್ಟಸ್ ಫಾಸಿಲಿಸ್. 25–35 ಸೆಂಮೀ ಉದ್ದಕ್ಕೆ ಬೆಳೆಯುವ ಮೀನಿದು. ತಲೆ ಮೇಲಿನಿಂದ ಕೆಳಕ್ಕೆ ಒತ್ತಲ್ಪಟ್ಟು ಚಪ್ಪಟೆಯಾಗಿದೆ. ಕಣ್ಣು ಚಿಕ್ಕವು. ಕಿವಿರುಗೂಡಿನಲ್ಲಿ ಸಹಾಯಕ ಶ್ವಸನೇಂದ್ರಿಯ ಇದೆ. ಮೂತಿಯ ಮೇಲೆ ಬಲು ಉದ್ದವಾದ ಮೀಸೆಗಳುಂಟು. ಬೆನ್ನಿನ ಮತ್ತು ತೋಳಿನ ಈಜುರೆಕ್ಕೆಗಳು ಬಲು ಚಿಕ್ಕವು. ಆಸನದ ಈಜುರೆಕ್ಕೆ ಅತಿ ಉದ್ದ. ಬಾಲದ ಈಜುರೆಕ್ಕೆ ವರ್ತುಲಾಕಾರದ್ದು. ಈ ಮೀನು ನೀರಿನ ತಳದಲ್ಲಿ ವಾಸಿಸುತ್ತದೆ. ಕೀಟಗಳು, ಹುಳುಗಳು, ಪಾಚಿ, ಇತರ ಬಗೆಯ ಮೀನು ಮರಿಗಳು ಇದರ ಮುಖ್ಯ ಆಹಾರ. ಮರಿ ಹಾಕುವ ಪ್ರಾಯ ಏಪ್ರಿಲ್–ಜೂನ್ ಅವಧಿ. ಚೇಳು ಮೀನು ಬಲು ರುಚಿಯಾದದ್ದೆಂದು ಪ್ರಸಿದ್ಧವಾಗಿದೆ. ಬೀಸುಬಲೆ, ದಾವಣಿಬಲೆಗಳಿಂದ ಇದನ್ನು ಹಿಡಿಯುವುದುಂಟು. ಕೈಯಲ್ಲಿ ಹಿಡಿಯುವಾಗ ಬಹಳ ಎಚ್ಚರದಿಂದಿರಬೇಕು. ಏಕೆಂದರೆ ತನ್ನ ತೋಳಿನ ಈಜು ರೆಕ್ಕೆಯ ತುದಿಯಲ್ಲಿರುವ ಮುಳ್ಳಿನಿಂದ ಇದು ಬಲವಾದ ಗಾಯ ಮಾಡುತ್ತದೆ. ಕೆಲವು ಸಲ ಈ ಗಾಯ ನಂಜಿಗೆ ತಿರುಗಿ ಮೀನುಗಾರರು ಸಾವಿಗೀಡಾಗಿರುವುದೂ ಉಂಟು. ***

# ಜ

**ಜಂತು ಹುಳು:** ಮಾನವರ ಕರುಳಿನಲ್ಲಿ ವಾಸಮಾಡುವ ಒಂದು ಪರೋಪಜೀವಿ. ಇತರ ಸ್ತನಿಗಳಲ್ಲೂ ಕಂಡು ಬರುತ್ತದೆ. ನೆಮಟೋಡ ವಂಶದ ಆಸ್ಕಾರಿಸ್ ಜಾತಿಯ ಈ ದುಂಡು ಹುಳು (ರೌಂಡ್ ವರ್ಮ್) ಮಾನವರಿಗೆ ಮತ್ತು ಇತರ ಪ್ರಾಣಿಗಳಿಗೆ ಹಲವುರೀತಿಯ ತೊಂದರೆಗಳನ್ನು ಉಂಟುಮಾಡುತ್ತದೆ. ಆಸ್ಕಾರಿಸ್ ಜಾತಿಯ ವಿವಿಧ ಪ್ರಭೇದಗಳು ಬೇರೆ ಬೇರೆ ಪ್ರಾಣಿಗಳಲ್ಲಿ ಕಂಡು ಬರುತ್ತವೆ. ಮಾನವರಲ್ಲಿ ಆ. ಲುಂಬ್ರಿಕಾಯಿಡಿಸ್, ಕುದುರೆಯಲ್ಲಿ ಆ. ಮೆಗಾಲೋಸೆಫಾಲ, ಹಂದಿಯಲ್ಲಿ ಆ.ಸುಯಿಲ ಇರುತ್ತವೆ. ಆ.ಲುಂಬ್ರಿಕಾಯಿಡಿಸ್ ಪ್ರಭೇದದಲ್ಲೇ 2 ಕ್ರೊಮೋಸೋಮ್‌ಗಳಿರುವ ಆ.ಲುಂ.ಯೂನಿವೇಲೆನ್ಸ್ ಮತ್ತು 4 ಕ್ರೊಮೋಸೋಮ್‌ಗಳಿರುವ ಆ.ಲುಂ.ಬೈವೇಲೆನ್ಸ್ ಎಂಬ ಎರಡು ಬಗೆಗಳಿವೆ.




ಜಂತು ಹುಳು:

1. ಬಾಯಿ, 2. ವಿಸರ್ಜನಾ ರಂಧ್ರ 3. ಜನನೇಂದ್ರಿಯ ರಂಧ್ರ 4. ಪೈನಿಯಲ್ ಸೀಟೆ 5. ಕ್ಲೊಯೆಕ್ 6. ಗುದದ್ವಾರ 7. ಬಾಲ

ಜಂತು ಹುಳು ಸು. 10 ಸೆಂಮೀ ಉದ್ದ ಮತ್ತು 3–4 ಮಿಮೀ ದಪ್ಪ ಇರುತ್ತದೆ. ಗಂಡು ಹುಳು ಹೆಣ್ಣು ಹುಳುವಿಗಿಂತ ಚಿಕ್ಕದಾಗಿರುತ್ತದೆ. ಇದರ ಎರಡು ತುದಿಗಳು ಚೂಪಾಗಿರುತ್ತವೆ. ಗಂಡಿನ ಹಿಂಭಾಗ ಕೊಂಡಿಯಾಕಾರದಲ್ಲಿರುತ್ತದೆ. ಶರೀರದ ಸುತ್ತ ನುಣುಪಾದ ಮತ್ತು ಗಟ್ಟಿಯಾದ ಪೊರೆಯಿರುವುದಲ್ಲದೆ ಅಡ್ಡಲಾಗಿರುವ ಪಟ್ಟಿಗಳಿರುತ್ತವೆ. ಈ ಹುಳು ಹಳದಿಮಿಶ್ರಿತ ಬಿಳಿ ಬಣ್ಣದಿಂದ ಕೂಡಿರುತ್ತದೆ. ಹುಳುವಿನ ಒಂದು ತುದಿಯಲ್ಲಿ ಮೂರು ಅಂಡಾಕಾರದ ಉಬ್ಬುಗಳಿಂದ ಕೂಡಿದ ಬಾಯಿ ಇರುತ್ತದೆ. ಬಾಯಿಯ ಒಳಗೆ ಇರುವ ಅನ್ನನಾಳದಲ್ಲಿ ಪ್ರಬಲ ಸ್ನಾಯುಗಳಿರುತ್ತವೆ. ಇವುಗಳ ಸಹಾಯದಿಂದ ಜಂತು ಹುಳು ತನ್ನ ಆಹಾರವನ್ನು ಹೀರಿಕೊಳ್ಳುತ್ತದೆ. ಅನ್ನನಾಳ ಆದ ಮೇಲೆ ಉದ್ದಕರುಳಿದೆ. ದೇಹದ ಎರಡು ಪಾರ್ಶ್ವಗಳಲ್ಲಿ ವಿಸರ್ಜನ ನಾಳಗಳಿರುತ್ತವೆ. ಇದರ ದೇಹದ ಒಳ ಭಾಗವನ್ನು ಮಿಥ್ಯದೇಹಾಂತರಾವಕಾಶ ಎನ್ನುತ್ತಾರೆ. ದೇಹಾಂತರಾವಕಾಶದ ಎರಡು ಪಾರ್ಶ್ವಗಳಲ್ಲಿರುವ ಸ್ನಾಯುಹುರಿ ನರದ ಕಾರ್ಯವನ್ನು ನಿರ್ವಹಿಸುತ್ತದೆ. ಜಂತು ಹುಳುವಿನ ದೇಹಭಿತ್ತಿಯ ಒಳಗೆ ಕರುಳು ಮತ್ತು ಪ್ರಜನನೇಂದ್ರಿಯಗಳಿರುತ್ತವೆ. ದೇಹದಲ್ಲಿ ಪ್ರಜನನೇಂದ್ರಿಯಗಳು ಆಕ್ರಮಿಸಿಕೊಂಡಿರುವ ಭಾಗ ಹೆಚ್ಚಾಗಿರುತ್ತದೆ. ಜಂತುಹುಳುವಿನ ಗಂಡು–ಹೆಣ್ಣುಗಳಲ್ಲಿ ವ್ಯತ್ಯಾಸವನ್ನು ಸುಲಭವಾಗಿ ಗುರುತಿಸಬಹುದು. ಗಂಡಿನಲ್ಲಿ ವೃಷಣ ಸಣ್ಣ ಗಂಟಿನಂತಿದ್ದು ಅದು ನಾಳಾಕಾರವಾಗಿ ಮುಂದುವರಿದು ವೀರ್ಯಾಣುಗಳು ಶೇಖರವಾಗುವ ವೀರ್ಯಾಣುಕೋಶವಾಗಿ ಕೊನೆಗೊಳ್ಳುತ್ತದೆ. ಕರುಳಿನ ತುದಿಯಲ್ಲಿರುವ ಗುದದ್ವಾರದ ಹತ್ತಿರ ಜನನ ರಂಧ್ರ ತೆರೆದುಕೊಳ್ಳುತ್ತದೆ. ಹೆಣ್ಣು ಹುಳುವಿನಲ್ಲಿ ಎಡಬಲಗಳಿಂದ ಎರಡು ಗರ್ಭಕೋಶಗಳು ಯೋನಿಯೊಳಕ್ಕೆ ತೆರೆದುಕೊಳ್ಳುತ್ತವೆ. ಅಂಡಾಶಯಗಳಲ್ಲಿ ಉತ್ಪತ್ತಿಯಾದ ಅಂಡಾಣುಗಳು ಅಂಡನಾಳಗಳ ಮೂಲಕ ಗರ್ಭಕೋಶಕ್ಕೆ ಸೇರುತ್ತವೆ. ಹೆಣ್ಣು ಹುಳುವಿನೊಂದಿಗೆ ಸಂಗಮದ ಸಮಯದಲ್ಲಿ ಎರಡು ಉಪಗುಚ್ಛಗಳು ಚಾಚಿಕೊಳ್ಳುತ್ತವೆ. ಗರ್ಭಧಾರಣೆ ಆದ ಮೇಲೆ ಹೆಣ್ಣು ತಿಂಗಳಿಗೆ ಸುಮಾರು 80ಲಕ್ಷ ತತ್ತಿಗಳನ್ನಿಡುವ ಸಾಮರ್ಥ್ಯವನ್ನು ಹೊಂದಿದೆ. ಇವು ಮಲದ ಮೂಲಕ ದೇಹದಿಂದ ಹೊರಕ್ಕೆ ಬರುತ್ತವೆ. ತತ್ತಿಗಳಿಗಿರುವ ದೃಢವಾದ ಪಾರದರ್ಶಕ ಕವಚದಿಂದಾಗಿ ಅವು ಬಹುಕಾಲ ಜೀವದಿಂದಿರಲು ಸಾಧ್ಯವಾಗುತ್ತದೆ. ಅನುಕೂಲ ಉಷ್ಣಾಂಶ, ತೇವ ಮತ್ತು ಗಾಳಿಯ ನೆರವಿನಿಂದ ಮೊಟ್ಟೆಗಳು 10–14 ದಿನಗಳಲ್ಲಿ ಭ್ರೂಣವಾಗುತ್ತವೆ. ಮೊಟ್ಟೆಗಳು ಬಾಯಿಯ ಮೂಲಕ ಮನುಷ್ಯರ ಅಥವಾ ಇತರ ಪ್ರಾಣಿಗಳ ದೇಹವನ್ನು ಪ್ರವೇಶಿಸಿ ಸಣ್ಣ ಕರುಳನ್ನು ಸೇರುತ್ತವೆ. ಅನಂತರ ಮ್ಯೂಕಸ್ ಪೊರೆಯನ್ನು ಸೀಳಿಕೊಂಡು ದೇಹದ ಇತರ ಭಾಗಗಳಿಗೂ ಸಂಚಾರ ಮಾಡುತ್ತವೆ. ರಕ್ತದ ಮೂಲಕ ಮೇದೋಜೀರಕಾಂಗ, ಹೃದಯ ಮತ್ತು ಶ್ವಾಸಕೋಶಗಳಿಗೆ ಪ್ರಯಾಣ ಮಾಡುತ್ತವೆ. ಶ್ವಾಸಕೋಶವನ್ನು ಕೊರೆಯುತ್ತವೆ. ಪ್ರಯಾಣವನ್ನು ಮುಗಿಸಿ ಸಣ್ಣ ಕರುಳಿಗೆ ಸೇರುವ ಹೊತ್ತಿಗೆ ಮರಿ ಜಂತುಹುಳು 2 ಮಿಮೀ ರಿಂದ 3 ಮಿಮೀ ಉದ್ದ ಬೆಳೆದಿರುತ್ತದೆ. ಆಮ್ಲಜನಕವಿಲ್ಲದೆ ಬದುಕುವ ಈ ಜಂತುಹುಳು ಆತಿಥೇಯ ಪ್ರಾಣಿಗಳಲ್ಲಿ ಒಂಬತ್ತು ತಿಂಗಳ ಕಾಲ ವಾಸ ಮಾಡಬಲ್ಲುದು.

ಜಂತುಹುಳು ನೇರವಾಗಿ ಮಾನವರಿಂದ ಮಾನವರಿಗೆ, ಪ್ರಾಣಿಯಿಂದ ಪ್ರಾಣಿಗೆ ಹರಡುವುದರಿಂದ ಮಧ್ಯವರ್ತಿ ಆತಿಥೇಯ ಜೀವಿಯ ಅಗತ್ಯವಿಲ್ಲ. ಆಹಾರ, ಪಾನೀಯಗಳ ಮೂಲಕ ಮತ್ತು ದೂಳಿನ ಮೂಲಕ ಕೂಡ ತತ್ತಿಗಳು ಆತಿಥೇಯ ದೇಹವನ್ನು ತಲಪುತ್ತವೆ. ಸುಮಾರು ಹತ್ತು ದಿವಸಗಳಲ್ಲಿ ಹುಳುವಿನ ರೂಪ ಪಡೆಯುತ್ತವೆ. ಇವುಗಳ ಸಂಖ್ಯೆ ಜಾಸ್ತಿಯದಾಗ ಹೊಟ್ಟೆನೋವು, ಉಬ್ಬರ, ವಾಂತಿ ಉಂಟುಮಾಡುತ್ತವೆ. ಕ್ರಮೇಣ ಜ್ವರ, ಕೆಮ್ಮು, ಉಬ್ಬಸ, ಮೈ ಕಡಿತ, ಆಲಸ್ಯ, ತಲೆ ಸುತ್ತು ಕೂಡ ಉಂಟಾಗುತ್ತವೆ. ದೇಹದಲ್ಲಿ ಇದರ ಸಂಚಾರದಿಂದಾಗಿ ಕಾಮಾಲೆ, ನ್ಯುಮೋನಿಯಾ. ನರಸಂಬಂಧದ ಅವ್ಯವಸ್ಥೆಗಳು ಕೂಡ ಉಂಟಾಗುವ ಸಾಧ್ಯತೆ ಇದೆ.

ಜಂತು ಹುಳುಗಳಿಂದ ತೊಂದರೆ ಉಂಟಾದವರಿಗೆ ನಿಶ್ಚಿತ ಪ್ರಮಾಣದಲ್ಲಿ ಪೈಪರಿಸಿನ್ ಸಂಯುಕ್ತಗಳನ್ನು ಕೊಡುವುದರಿಂದ ದುಷ್ಪರಿಣಾಮಗಳಿಲ್ಲದೆ ಚಿಕಿತ್ಸೆ ಮಾಡಿದಂತಾಗುತ್ತದೆ. ಡೈಈಥೈಲ್ ಕಾರ್ಬಮಸೀನ್, ಥೈಯಬೆಂಡಸೋಲ್‌ನಂಥವನ್ನು ಕೂಡ ನೀಡಲಾಗುತ್ತಿದೆ. ಇವುಗಳ ಜೊತೆಗೆ ನೈಸರ್ಗಿಕ ನೈರ್ಮಲ್ಯವನ್ನು ಉತ್ತಮಗೊಳಿಸುವುದರಿಂದ ಹೆಚ್ಚಿನ ಉಪಯೋಗವಿದೆ. (ಆರ್.ವಿ.ಎಸ್.ಎಸ್.)

**ಜಠರ – ಮಾನವ:** ಉದರದ ಮೇಲುಭಾಗದಲ್ಲಿ ದೇಹಮಧ್ಯಗೆರೆಯ ಎಡ ಬಲಗಳಲ್ಲಿ ಪ್ರಸರಿಸಿರುವ ಚೀಲರೂಪದ ಒಂದು ಅಂಗ (ಸ್ಟೊಮಕ್). ಅನ್ನಾಶಯ ಪರ್ಯಾಯ ನಾಮ. ಇದು ಜೀರ್ಣನಾಳದ (ನೋಡಿ) ಅತ್ಯಂತ ಹಿಗ್ಗಿದ ಭಾಗ. ಮುಂದುವರಿದ ಅನ್ನನಾಳವು (ಈಸೋಫೇಗಸ್) ಜಠರವೂ ಮುಂದುವರಿದ ಜಠರವು ಸಣ್ಣ ಕರುಳೂ ಆಗುತ್ತವೆ. ಜಠರವೂ ಉದರದ (ನೋಡಿ) ಹೊಟ್ಟೆ ಕುಳಿ, ಹೊಕ್ಕಳು ಮತ್ತು ಎಡಮೆಲ್ಲೆಲುವಡಿ ಪ್ರದೇಶಗಳಲ್ಲಿ ಪಸರಿಸಿದೆ. ಇದು ಯಕೃತ್ತಿನ ಎಡ ಹಿಂಭಾಗದಲ್ಲಿ ಉಂಟು. ಜಠರದ ಲಂಬಾಕ್ಷ ಕೋಚಾಗಿ ಎಡಭಾಗದಲ್ಲಿ ಬೆನ್ನುಕಡೆ ಪ್ರಾರಂಭವಾಗಿ ಕೆಳಮುಖವಾಗಿ ಬಲಕ್ಕೂ ಮುಂದಕ್ಕೂ ಮುಂದುವರಿದು ಅನಂತರ ತಟ್ಟನೆ ಹಿಂದಕ್ಕೆ ತಿರುಗಿ ಅಂತ್ಯಗೊಳ್ಳುವುದು. ಈ ಅಕ್ಷದ ಪ್ರಾರಂಭದ ಭಾಗ ಎಡಮೆಲ್ಲೆಲುವಡಿ ಪ್ರದೇಶದಲ್ಲಿರುವ ಜಠರದ ಗೋಳಾಕೃತಿಯ, ಎಡ ಹಾಗೂ ಊರ್ಧ್ವತುದಿಯಾದ ಫಂಡಸ್. ಅಂತ್ಯಭಾಗ ಪೈಲೋರಿಕ್‌ನಾಲೆ. ಇದು ಡುಯೋಡೀನಮ್ (ಮುಂಗರುಳು) ಎಂಬ ಚಿಕ್ಕಕರುಳಿನ ಪ್ರಥಮ ಭಾಗವಾಗಿ ಮುಂದುವರಿಯುತ್ತದೆ. ಜಠರದ ಮೇಲ್ಮೈನಲ್ಲಿ ಈ ಸಂಧಿಸ್ಥಳ ಒಂದು ಸಣ್ಣ ಆದರೆ ನಿಖರವಾಗಿ ಗುರುತಿಸಬಹುದಾದ ಇಳಿಗೆರೆಯಾಗಿ ಕಂಡುಬರುತ್ತದೆ. ಜಠರ ಕೊಂಕಾಗಿ ತನ್ನ ಮೇಲೇ ಮಡಚಿಕೊಂಡಿರುವುದರಿಂದ ಅಕ್ಷದ ಪ್ರಾರಂಭ ಅಂತ್ಯಗಳೆರಡೂ ಹಿಮ್ಮುಖವಾಗಿವೆ. ಮೇಲಂಚಿನ ಬಲತುದಿಯ ಹತ್ತಿರ ಈ ಮಡಿಕೆ ಒಂದು ಕಚ್ಚನ್ನು ಉಂಟು ಮಾಡುತ್ತದೆ. ಇದಕ್ಕೆ ಕೋನಕಚ್ಚು ಎಂದು ಹೆಸರು. ಇದರಿಂದ ಒಂದು ಲಂಬವನ್ನು ಎಳೆದು ಈ ಗೆರೆಗೆ ಎಡಬಲಭಾಗಗಳಲ್ಲಿರುವ ಜಠರದ ಭಾಗಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗಿದೆ. ಎಡಭಾಗಕ್ಕೆ ಕಾರ್ಡಿಯಕ್ ಭಾಗವೆಂದೂ ಬಲಭಾಗಕ್ಕೆ ಪೈಲೋರಸ್ ಭಾಗವೆಂದೂ ಹೆಸರು. ಅಪರೂಪವಾಗಿ ಇವೆರಡೂ ಭಾಗಗಳನ್ನೂ ಜಠರದಲ್ಲಿ ಒಂದು ಕಂಠದಿಂದ ಬೇರೆ ಮಾಡಲ್ಪಟ್ಟ ಎರಡು ಚೀಲಗಳಂತೆ ಗುರುತಿಸಬಹುದು. ಕಾರ್ಡಿಯಕ್ ಭಾಗಕ್ಕೆ ಮೇಲೆ ಹೇಳಿದ ಫಂಡಸ್ ಸೇರಿದೆ. ಅನ್ನನಾಳ ಜಠರಕ್ಕೆ ತೆರೆದುಕೊಳ್ಳುವ ದ್ವಾರದ ಎಡಕ್ಕೂ ಆ ನೇರದಿಂದ ಸುಮಾರು 2 ಅಂಗುಲ ಮೇಲಕ್ಕೂ ಉಬ್ಬಿದಂತೆ ಇರುವುದೇ ಫಂಡಸ್. ಕಾರ್ಡಿಯಕ್ ಭಾಗದ ಉಳಿದ ಭಾಗವೇ ಜಠರದ ಕಾಯ(ಬಾಡಿ). ಜಠರದ ಕೆಳ ಅಂಚಿನಲ್ಲಿ ಅದರ ಬಲತುದಿಯ ಹತ್ತಿರ ಒಂದು ಗೆರೆ ಇದೆ. ಅದರ ಎಡಕ್ಕೆ

ಇರುವುದು ತೆಳುಭಿತ್ತಿಯ ಪೈಲೋರಿಕ್, ನಡುವೆ ಆಂಟ್ರಮ್, ಬಲಕ್ಕೆ ಇರುವುದು ಸು. 2.5–3 ಸೆಂಮೀ ಉದ್ದದ ದಪ್ಪಭಿತ್ತಿಯ ಪೈಲೋರಿಕ್ ನಾಲೆ. ಇವು ಪೈಲೋರಿಕ್ ಭಾಗದ ಎರಡು ವಿಭಾಗಗಳು. ಜೀರ್ಣವಾಗುವ ಕಾಲದಲ್ಲಿ ಜಠರದ ನೀಚಭಾಗ ಸಂಕುಚಿಸಿ ನಾಳದ ಆಕಾರವನ್ನು ತಳೆದು ಸರ್ಪಗತಿ ಚಲನವನ್ನು ಪ್ರದರ್ಶಿಸುತ್ತದೆ. ಆಗ ಒಳಗಿರುವ ಆಹಾರ ಚೆನ್ನಾಗಿ ಮರ್ದನಗೊಂಡು ಜಠರರಸದೊಡನೆ ಮಿಶ್ರವಾಗಿ ದ್ರವೀಕರಿಸಲ್ಪಡುತ್ತದೆ.

ಅನ್ನನಾಳವು ಜಠರಕ್ಕೆ ತೆರೆದುಕೊಳ್ಳುವ ದ್ವಾರಕ್ಕೆ ಕಾರ್ಡಿಯಕ್ ದ್ವಾರವೆಂದು ಹೆಸರು. ಇದು ದೇಹಮಧ್ಯಗೆರೆಗೆ ಸು. 2.5 ಸೆಂಮೀ ಎಡಕ್ಕೆ, ಎದೆಮೂಳೆಯ ಕೆಳತುದಿಯ ಕೆಳಗೆ ಉದರದ ಮುಂದಿನ ಭಿತ್ತಿಗೆ ಸು. 10 ಸೆಂಮೀ ಹಿಂಭಾಗದಲ್ಲಿ ಬಾಚಿಹಲ್ಲುಗಳಿಂದ ಸು. 40 ಸೆಂಮೀ ಅಂತರದಲ್ಲಿ ಯಕೃತ್ತಿನ ಹಿಂದೆ ಇದೆ. ಈ ಸಂಧಿಸ್ಥಳದ ಎಡಬಲ ಭಾಗಗಳಿಂದ ಮುಂದಕ್ಕೆ ಪೈಲೋರಿಕ್ ತುದಿಯ ಪರ್ಯಂತ ಗಮನಿಸುವ ಜಠರದ ಎರಡು ಅಂಚುಗಳನ್ನು ಗುರುತಿಸಬಹುದು. ಕಾರ್ಡಿಯಕ್ ದ್ವಾರದ ಬಲಗಡೆಯಿಂದ ಮುಂದುವರಿಯುವ ಜಠರದ ಮೇಲಂಚು ಅದರ ಸಣ್ಣ ಅಂಚೂ ಬಲ ಅಂಚೂ ಆಗಿದೆ. ಕೆಲವು ಸಮಯ ಇದು ಜಠರದ ಹಿಂದಿನ ಅಂಚಿನಂತೆ ಕಾಣಿಸುತ್ತದೆ. ಇದು ಬಲಕ್ಕೆ ನಿಮ್ನ ಮೃದುವಾಗಿ ನೆರೆಯ ಯಕೃತ್ತು ಮೇದೋಜೀರಕಾಂಗಗಳ ಭಾಗಗಳನ್ನು ಬಳಸಿ ಸಾಫಾಗಿ ಸಾಗುವ ಡೊಂಕುರೇಖೆಯಂತೆ ಇರುವುದರಿಂದ ಇದಕ್ಕೆ ಜಠರದ ಕಿರಿಡೊಂಕು (ಲೆಸ್ಸರ್ ಕರ್ವೇಚರ್) ಎಂಬ ಹೆಸರುಂಟು. ಇದರ ಅತ್ಯಂತ ಕೆಳಭಾಗದಲ್ಲಿ ಕೋನಕಚ್ಚು ಇದೆ. ಜಠರದ ಕಿರಿಡೊಂಕು ಯಕೃತ್ತಿಗೆ ಕಿರಿ ಒಮೆನ್‌ಟಮ್ ಎಂಬ ಎರಡು ಪದರಗಳ ಒಂದು ಹಾಳೆಯಿಂದ ಸೇರಿಸಲ್ಪಟ್ಟಿದೆ. ಈ ಹಾಳೆಯ ಪದರಗಳ ನಡುವೆ ಕಿರಿಡೊಂಕಿನ ಎಡಬಲತುದಿಗಳಿಂದ ರಕ್ತನಾಳಗಳು ಹಾಯ್ದು ಜಠರವನ್ನು ತಲುಪುತ್ತವೆ. ಜಠರದ ಎಡ ಅಂಚು ದೊಡ್ಡ ಅಂಚು, ಸಣ್ಣ ಅಂಚಿಗಿಂತ 4–5 ಪಟ್ಟು ದೊಡ್ಡದು. ಇದು ಕಾರ್ಡಿಯಕ್ ದ್ವಾರದ ಎಡಗಡೆಗಳಿಂದ ಮುಂದುವರಿದು ಪ್ರಾರಂಭದಲ್ಲಿ ಎಡಕ್ಕೂ ಊರ್ಧ್ವಮುಖವಾಗಿಯೂ ಕಮಾನಿನಂತೆ ಬಾಗಿ ಫಂಡಸ್ಸಿನ ಅಂಚಾಗುತ್ತದೆ. ಅಲ್ಲಿಂದ ಮುಂದೆ ಕೆಳಮುಖವಾಗಿಯೂ ಮುಮ್ಮುಖವಾಗಿಯೂ ಗಮನಿಸುವ ಹಾಗೂ ಎಡಕ್ಕೆ ಉಬ್ಬಿಕೊಂಡು ಇರುವ ಬಾಗಿದ ರೇಖೆಯಾಗುವುದು. ಇನ್ನೂ ಮುಂದಕ್ಕೆ ಅದು ಬಲಕ್ಕೂ ಹಿಂಬಾಗಕ್ಕೂ ತಿರುಗುವ ಕೆಳುಬ್ಬಿನ ರೇಖೆಯಾಗುತ್ತದೆ. ಈ ಸ್ಥಳದಲ್ಲಿ ಕಿರಿಡೊಂಕಿನಲ್ಲಿರುವ ಕೋನಕಚ್ಚಿನ ನೇರದಲ್ಲಿ ಒಂದು ಸಣ್ಣ ಉಬ್ಬು ಸಾಮಾನ್ಯವಾಗಿ ಇದ್ದು ಅದರ ಸಹಾಯದಿಂದ ಜಠರದ ಎಡಬಲ ಭಾಗಗಳನ್ನು ವಿಂಗಡಿಸಬಹುದು. ಜಠರದ ದೊಡ್ಡ ಅಂಚು ಅದರ ಎಡ ಅಂಚು ಮಾತ್ರವೇ ಅಲ್ಲದೆ ಕೆಳಅಂಚೂ ಹೌದು. ಕೆಲವು ಸಮಯ ಅದು ಜಠರದ ಮುಂದಿನ ಅಂಚಿನಂತೆ ಕಾಣಿಸುತ್ತದೆ. ಉದ್ದಕ್ಕೂ ಈ ಅಂಚು ಕೂಡ ಡೊಂಕಾಗಿರುವುದರಿಂದ ಇದಕ್ಕೆ ಜಠರದ ಹಿರಿಡೊಂಕು (ಗ್ರೇಟರ್ ಕರ್ವೇಚರ್) ಎಂಬ ಹೆಸರುಂಟು. ಪ್ರಾರಂಭದಲ್ಲಿ ಈ ಅಂಚು ಫಂಡಸ್ಸಿಗೂ ಅನ್ನನಾಳಕ್ಕೂ ನಡುವೆ ಇರುವ ಕಾರ್ಡಿಯಕ್ ಕಚ್ಚನ್ನು ಉಂಟುಮಾಡಿದೆ. ಫಂಡಸ್ಸಿನಲ್ಲಿ ಅತ್ಯಂತ ಉನ್ನತಭಾಗದಲ್ಲಿ ಈ ಅಂಚು ಎಡಸ್ತನಾಗ್ರದ ಕೆಳಗಿನ ನೇರದಲ್ಲಿದೆ. ಜಠರದ ಅತ್ಯಂತ ಕೆಳಭಾಗದಲ್ಲಿ ಈ ಅಂಚು ವ್ಯಕ್ತಿ ಶಯನಭಂಗಿಯಲ್ಲಿದ್ದಾಗ 10ನೆಯ ಪಕ್ಕೆಲುಬಿನ ಮೃದ್ವಸ್ಥಿಗಳ ನೇರದಲ್ಲಿ ಉಂಟು. ಆದರೆ ವ್ಯಕ್ತಿಯ ಊರ್ಧ್ವಭಂಗಿಯಲ್ಲಿ ಇದು ಜಠರದ ಅತ್ಯಂತ ಕೆಳಭಾಗವಾಗಿರುವುದು. ಆಹಾರದಿಂದ ತುಂಬಿದ್ದಾಗಲಂತೂ ಅದು ಹೊಕ್ಕಳಿನ ನೇರದಲ್ಲಿ ಅಥವಾ ಇನ್ನೂ ಕೆಳಗೆ ಇರಬಹುದು. ಜಠರದ ಹಿರಿಡೊಂಕು ವಪೆಗೆ ಜಠರ ವಪೆಬಂಧನದಿಂದಲೂ, ಗುಲ್ಮಕ್ಕೆ ಜಠರಗುಲ್ಮಬಂಧನದಿಂದಲೂ, ಅಡ್ಡದೊಡ್ಡಕರುಳಿಗೆ ಹಿರಿ ಒಮೆನ್‌ಟಮ್ಮಿನಿಂದಲೂ ಸೇರಿಸಲ್ಪಟ್ಟಿದೆ. ಹಿರಿ ಒಮೆನ್‌ಟಮ್ಮಿನ ಎರಡು ಪದರಗಳ ನಡುವೆ ಹಿರಿಡೊಂಕಿನ ಎಡ ಬಲ ಭಾಗಗಳಿಂದ ರಕ್ತನಾಳಗಳು ಹಾಯ್ದು ಜಠರವನ್ನು ತಲುಪುತ್ತವೆ.

ಜಠರದ ಇನ್ನೊಂದು ದ್ವಾರ ಪೈಲೋರಿಕ್ ದ್ವಾರ. ಜಠರದ ಮೇಲ್ಮೈಯಲ್ಲಿ ಸುತ್ತಲೂ ಇರುವ ಒಂದು ಸಂದುಗೆರೆಯೂ ಪ್ರಿಪೈಲೋರಿಕ್ ಅಭಿಧಮನಿಯೂ ಇದರ ಸ್ಥಾನವನ್ನು ತೋರಿಸುತ್ತವೆ. ಪೈಲೋರಿಕ್ ದ್ವಾರ ದೇಹಮಧ್ಯಗೆರೆಯಿಂದ ಸು. 12 ಮಿಮೀ ಬಲಕ್ಕೂ ಸೊಂಟದ ಮೊದಲ ಕಶೇರುಮಣಿಯ ತಳಭಾಗದ ನೇರದಲ್ಲೂ ಇದೆ. ಈ ನೇರ ಎದೆಮೂಳೆಯ ಮೇಲಂಚಿಗೂ ಕಿಬ್ಬೊಟ್ಟೆಮೂಳೆಯ ಮೇಲಂಚಿಗೂ ಸಮಾಂತರದಲ್ಲಿದೆ. ಜಠರ ಖಾಲಿಯಾಗಿದ್ದಾಗ ಅಲ್ಲದೆ ವ್ಯಕ್ತಿ ಶಯನಭಂಗಿಯಲ್ಲಿದ್ದಾಗ ಪೈಲೋರಿಕ್‌ದ್ವಾರ ಈ ನೇರದಲ್ಲಿ ಇರುವುದೆಂದು ವಿವರಿಸಿದರೂ ಜಠರದ ತುಂಬಿದ ಸ್ಥಿತಿ, ವ್ಯಕ್ತಿಯ ಭಂಗಿ–ಇವು ಅಷ್ಟಾಗಿ ಪೈಲೋರಿಕ್ ದ್ವಾರದ ಸ್ಥಳಪಲ್ಲಟಮಾಡುವುದಿಲ್ಲವೆಂಬುದು ತಿಳಿದಿದೆ.

ಜಠರದ ಎರಡು ಅಂಚುಗಳೂ ಜಠರದ ಊರ್ಧ್ವತಲ ನೀಚತಲಗಳು ಸಂಧಿಸುವ ಸ್ಥಳಗಳು. ಊರ್ಧ್ವತಲ ಊರ್ಧ್ವಮುಖವಾಗಿಯೂ ಮುಮ್ಮುಖವಾಗಿಯೂ ಉಂಟು. ಜಠರ ತುಂಬಿದ್ದಾಗ ಹೆಚ್ಚು ಮುಮ್ಮುಖವಾಗಿಯೂ ಖಾಲಿ ಇದ್ದಾಗ ಹೆಚ್ಚು ಊರ್ಧ್ವಮುಖವಾಗಿಯೂ ಇರುವುದು ಸಾಮಾನ್ಯ. ಜಠರದ ಈ ಮೈ ಇನ್ನೊಂದು ಮೈಗಿಂತ ಹೆಚ್ಚು ಉಬ್ಬಿದ್ದು ಪೂರ್ಣವಾಗಿ ಕಿರಿಹಿರಿ ಒಮೆನ್‌ಟಮ್‌ಗಳನ್ನು ಸೇರಿಸುವ ಪೆರಿಟೋನಿಯಮ್ ಪದರದಿಂದ ಹೊದಿಸಲ್ಪಟ್ಟಿದೆ. ಇದರ ಎಡ ಮತ್ತು ಮೇಲುಭಾಗ ವಪೆಗೂ ಬಲ ಮತ್ತು ಮೇಲುಭಾಗ ಯಕೃತ್ತಿಗೂ ಕೆಳಭಾಗ ಉದರಭಿತ್ತಿಗೂ ತಾಕಿದೆ. ಜಠರದ ನೀಚತಲ ಜಠರತಲ್ಪದ ಮೇಲಿರುವ ಮೈ. ಇದು ಊರ್ಧ್ವತಲಕ್ಕಿಂತ ಚಪ್ಪಟೆಯಾಗಿದೆ. ಜಠರತಲ್ಪ ಬೆನ್ನಿನಿಂದ ಉದರದ ಮುಂಭಾಗದ ತನಕ ಕೆಳಮುಖವಾಗಿ ಇಳಿಜಾರಾಗಿ ಹರಡಿರುವ ಅನೇಕ ಅಂಗಗಳ ಸಂಪರ್ಕದಿಂದಾದ ಫಲಕ ಅಥವಾ ನಾಗೊಂದಿಗೆ. ವಪೆ, ಗುಲ್ಮ, ಎಡ ಅಡ್ರೀನಲ್ ಗ್ರಂಥಿ, ಎಡಮೂತ್ರಪಿಂಡದ ಊರ್ಧ್ವಭಾಗ, ಮೇದೋಜೀರಕಾಂಗ, ಅಡ್ಡ ದೊಡ್ಡ ಕರುಳಿನ ಹಾಳೆ ಮತ್ತು ಸ್ವಯಂ ಅಡ್ಡಕರುಳು–ಇವೆಲ್ಲವೂ ಜಠರತಲವೇರ್ಪಡಲು ಪಾಲ್ಗೊಳ್ಳುತ್ತವೆ.

ಜಠರದ ಈ ಮೇಲಿನ ವಿವರಣೆ ಕರಾರುವಾಕ್ಕೆಂದು ತಿಳಿಯಲಾಗದು. ಬೇರೆ ಬೇರೆವ್ಯಕ್ತಿಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಜಠರದ ಆಕಾರ, ವಿಸ್ತಾರ, ಸ್ಥಾನಗಳು ಬೇರೆ ಬೇರೆಯಾಗಿರುತ್ತವೆ. ಗಮನಿಸಬೇಕಾದ ವಿಷಯವೆಂದರೆ ಕಾರ್ಡಿಯಕ್ ದ್ವಾರವೂ ಫಂಡಸ್ಸಿನ ಸ್ಥಾನವೂ ಪಲ್ಲಟವಾಗುದಿರುವಿಕೆ ಮತ್ತು ಪೈಲೋರಿಕ್ ತುದಿಯ ಸ್ಥಾನ ಹೆಚ್ಚುಪಲ್ಲಟವಾಗದೇ ಇರುವುದು. ಜಠರದ ಲಂಬಾಕ್ಷದ ಎರಡು ತುದಿಗಳೂ ಹೀಗೆ ನಿರ್ದಿಷ್ಟ ಸ್ಥಾನದಲ್ಲಿದ್ದರೂ ಅವುಗಳ ನಡುವಿರುವ ಜಠರದ ಕಾಯ ಬಿಗಿತುಕೊಂಡು ಇಲ್ಲವೆ ಸಡಿಲವಾಗಿ ಇರಬಹುದು. ಕಾಯದ ಎರಡು ತಲಗಳು ಹಿಮ್ಮುಖಮುಮ್ಮುಖವಾಗಿ ಇಲ್ಲವೆ ಊರ್ಧ್ವನೀಚಮುಖವಾಗಿ ಇರಬಹುದು. ಅಂಚುಗಳು ಮೇಲಿನ ಕೆಳಗಿನ ಅಂಚುಗಳಾಗಿರದೆ ಮುಂದಿನ ಹಿಂದಿನ ಅಂಚುಗಳಾಗಿ ಕಾಣಬಹುದು. ಒಟ್ಟು ಜಠರದ ಆಕಾರ ಕುಡುಗೋಲಿನಂತಿರುವುದು ಸಾಮಾನ್ಯ. ಶವದ ಅಂಗಛೇದನಾ ವ್ಯಾಸಂಗದಲ್ಲಿ ಕಾಣಬರುವ ಜಠರದ ಆಕಾರ ವಿಸ್ತಾರ ಸ್ಥಾನಗಳೇ ಜೀವಂತಸ್ಥಿತಿಯಲ್ಲೂ ಇರುತ್ತವೆಯೆಂದು ತಿಳಿಯುವುದು ತಪ್ಪು. ಜೀವಂತಸ್ಥಿತಿಯಲ್ಲಿ ಖಾಲಿಜಠರ ಹೇಗಿರುತ್ತದೆಂದು ಹೇಳುವುದು ಕಷ್ಟ. ಬೇರಿಯಮ್ ದ್ರಾವಣವನ್ನು ಕುದಿಸಿ ಅದನ್ನು ತುಂಬಿಸಿ ಎಕ್ಸ್‌ಕಿರಣ ಪರೀಕ್ಷೆಗೆ ಈಡುಮಾಡಿ ಬೇರೆ ಬೇರೆಯವರಲ್ಲಿ ಊರ್ಧ್ವಭಂಗಿಯಲ್ಲಿ ತುಂಬಿದ ಜಠರ ಹೇಗಿರುತ್ತದೆಂಬುದನ್ನೂ ರೋಗಸ್ಥಿತಿಯಲ್ಲಿ ಹೇಗಿರುತ್ತದೆ ಎಂಬುದನ್ನೂ ನೋಡಲಾಗಿದೆ. ಇಂಥ ಎಕ್ಸ್‌ಕಿರಣ ಪರೀಕ್ಷೆಯಿಂದ ತುಂಬಿದ ಜಠರ ವಿಲಾಯತಿ ಗೂಳಿಯ ಕೊಂಬಿನಂತೆ ಇಲ್ಲವೇ 'L' ಅಕ್ಷರದ ಕನ್ನಡಿ ಬಿಂಬದಂತೆ ಇಲ್ಲವೆ 'J' ಅಕ್ಷರದಂತೆ ಸಾಮಾನ್ಯವಾಗಿ ಇರುವುದು. J ಮಾದರಿ ಜಠರದಲ್ಲಿ ಜಠರದ ಅತ್ಯಂತ ತಳಭಾಗ ಕೆಲವರಲ್ಲಿ ಹೊಕ್ಕಳಿನ ಇಲ್ಲವೆ ಅದಕ್ಕಿಂತ ಕೆಳಗಿನ ನೇರದಲ್ಲಿ ಇರುತ್ತದೆ. ಇನ್ನೂ ಬೇರೆ ರೂಪಗಳೂ ಇರಬಹುದು. ಅಲ್ಲದೆ ಪ್ರತಿ ಜಠರದಲ್ಲೂ ದೊಡ್ಡ ಹಿಗ್ಗಲ್ಪಟ್ಟ ಎಡಭಾಗವೂ ಕಿರಿದಾಗಿ ಸಂಕುಚಿತವಾದ ನಾಳಾಕಾರದ ಬಲಭಾಗವೂ ಇದ್ದು ಕ್ರಮೇಣ ಎಡಭಾಗದ ಸ್ಥಿತಿ ಬಲಭಾಗಕ್ಕೂ ಹಬ್ಬುವುದು ಕಾಣಬರುತ್ತದೆ; ಮತ್ತು ಫಂಡಸ್ ಭಾಗ ಯಾವಾಗಲೂ ಅನಿಲದಿಂದ ತುಂಬಿ ಉಬ್ಬಿರುವುದು ಕಾಣಿಸುತ್ತದೆ. ಖಾಲಿಜಠರ ತುದಿಯಿಂದ ತುದಿಯವರೆಗೆ ಆಯಾ ರೂಪದಲ್ಲೆ ಬಿಗಿತಗೊಂಡು ಕಿರಿದಾಗಿ ಕೊಳವೆ ಆಕಾರದಲ್ಲಿ ಇರುತ್ತದೆ ಎಂದುಕೊಳ್ಳಬಹುದು. ತುಂಬಿದ ಜಠರದ ಶಯನ ಭಂಗಿಯಲ್ಲಿ ಎಡದಿಂದ ಬಲಕ್ಕೆ ಒಂದೇ ಸಮವಾಗಿ ಇಳಿಜಾರಾಗಿ ಅಡ್ಡಡ್ಡವಾಗಿ ಪಸರಿಸಿರುತ್ತದೆ. ಊರ್ಧ್ವಭಂಗಿಯಲ್ಲಿ ಜಠರ ಹೆಚ್ಚು ಹೆಚ್ಚು ತುಂಬಿದಂತೆ ಕೆಳಮುಖವಾಗಿ ಹಾಗೂ ಮುಮ್ಮುಖವಾಗಿ ಹಿಗ್ಗುತ್ತದೆ. ಹೀಗೆ ಹಿಗ್ಗುವುದು ನೆರೆ ಅಂಗಗಳ ಪರಿಸ್ಥಿತಿಯಿಂದ ಸಾಧ್ಯವಾಗದೇ ಹೋದರೆ ಜಠರ ಮೇಲ್ಮುಖವಾಗಿಯೇ ಹಿಗ್ಗುವಂತಾಗಿ ವಪೆ ಮತ್ತು ಯಕೃತ್ತುಗಳ ಮೇಲೆ ಒತ್ತಡ ಉಂಟಾಗಿ ಉಬ್ಬರದಿಂದ ಹಿಂಸೆಯಾಗಿ ಕೆಲವು ಯಕೃತ್ತುಗಳ ಮೇಲೆ ಒತ್ತಡ ಉಂಟಾಗಿ ಕೆಲವು ಸಂದರ್ಭಗಳಲ್ಲಿ ಗುಂಡಿಗೆ ಡವಡವ ಎಂದು ಹೊಡೆದುಕೊಳ್ಳುವುದೂ ಉಂಟು. ಹಿಗ್ಗಿದಾಗ ಜಠರದ ಒಳಗಿನ ಸ್ಥಳದ ಘನಗಾತ್ರ ಸ್ವಾಭಾವಿಕವಾಗಿಯೇ ಅನಿರ್ದಿಷ್ಟವಾದರೂ ಸರಾಸರಿ ಪ್ರಮಾಣ ಜನನಕಾಲದಿಂದ ವಯಸ್ಕರಾಗುವವರೆಗೂ ಹೆಚ್ಚುತ್ತ ಹೋಗುತ್ತದೆ. ಹುಟ್ಟಿದ ಮಕ್ಕಳಲ್ಲಿ ಸು. 30–35 ಮಿಲಿಲೀಟರುಗಳಷ್ಟು ಎರಡು ವಾರಗಳ ಕೂಸಿನಲ್ಲಿ 75 ಮಿಲಿಲೀಟರಿರುಗಳಷ್ಟು 3 ತಿಂಗಳ ಶಿಶುವಿನಲ್ಲಿ 200 ಮಿಲಿಲೀಟರುಗಳಷ್ಟು, 2 ವರ್ಷಗಳ ಮಗುವಿನಲ್ಲಿ ½ ಮಿಲೀ ಲೀಟರಿನಷ್ಟು, ಬಾಲ್ಯಾಂತ್ಯದಲ್ಲಿ ಒಂದು ಲೀಟರಿನಷ್ಟು ಮತ್ತು ವಯಸ್ಕರಲ್ಲಿ ಸು. 1 ½ ಲೀಟರುಗಳಷ್ಟು ಇರುತ್ತದೆಂದು ಪ್ರಯೋಗಗಳಿಂದ ಗೊತ್ತಾಗಿದೆ.

ಜಠರದ ಒಳನೋಟ : ಜಠರವನ್ನು ಅದರ ಲಂಬಾಕ್ಷದಲ್ಲಿ ಅಂಚುಗಳ ನೇರದಲ್ಲಿ ಕೊಯ್ದು ನೋಡಿದರೆ ಜಠರದ ಒಳಗೂ ಎರಡು ಭಾಗಗಳನ್ನು ಬೇರೆಯಾಗಿ ಗುರುತಿಸಬಹುದಾಗಿದೆ. ಕಿರಿಡೊಂಕಿನಲ್ಲಿರುವ ಕೋನಕಚ್ಚಿಗೆ ಅನುರೂಪವಾಗಿ ಒಳಗೆ ಒಂದು ಉಬ್ಬು ಇದ್ದು ಅದರ ಎಡಬಲಭಾಗಗಳು ಕ್ರಮವಾಗಿ ಹಿರಿದಾದ ಗೋಳಾಕಾರದ ಕಾರ್ಡಿಯಕ್ ಮತ್ತು ಕಿರಿದಾದ ನಾಳಾಕಾರದ ಪೈಲೋರಿಕ್ ಭಾಗಗಳೆಂದು

ವ್ಯವಹರಿತವಾಗಿವೆ. ಅನ್ನನಾಳಕ್ಕೂ ಜಠರದ ಫಂಡಸ್ಸಿಗೂ ನಡುವೆ ಇರುವ ಕಾರ್ಡಿಯಕ್ ಕಚ್ಚಿಗೆ ಅನುರೂಪವಾಗಿ ಒಳಗಿರುವ ಚಾಚು ಕವಾಟದಂತೆ ವರ್ತಿಸುತ್ತ ಜಠರ ಸಂಕುಂಚನವಾದಾಗ ವಸ್ತು ಅನ್ನನಾಳಕ್ಕೆ ವಾಪಸಾಗುವುದನ್ನು ತಪ್ಪಿಸುತ್ತದೆ ಎಂದು ನಂಬಲಾಗಿದೆ. ಭ್ರೂಣಾವಸ್ಥೆಯಲ್ಲಿ ಜಠರದ ಒಳಗಡೆ ಕಿರಿಡೊಂಕಿನುದ್ದಕ್ಕೂ ಒಂದು ತೋಡು ಇರುತ್ತದೆ. ಇದಕ್ಕೆ ಜಠರಾಂತರಪಥ (ಗ್ಯಾಸ್ಟ್ರಿಕ್ ಪಾತ್‌ವೇ) ಎಂದು ಹೆಸರು. ಬೇರಿಯಮ್ ದ್ರಾವಣ ಕುಡಿಸಿ ಎಕ್ಸ್‌ಕಿರಣ ಪರೀಕ್ಷೆ ಮಾಡಿದಾಗ ಹುಟ್ಟಿದಮೇಲೂ




ವಯಸ್ಕರಲ್ಲೂ ಈ ತೋಡು ಇರಬಹುದೆಂದೂ, ನುಂಗಿದಾಗ ಜಠರದಲ್ಲಿ ಅನ್ನಸಾಗುವುದು ಈ ಮಾರ್ಗವಾಗಿಯೇ ಎಂದು ವ್ಯಕ್ತವಾಗಿದೆ. ಜಠರದ ಒಳಮೈ ಶೈಶವದಲ್ಲಿ ಕೆಂಪುಗುಲಾಬಿ ಬಣ್ಣದ್ದಾಗಿಯೂ, ವಯಸ್ಸಾದಂತೆ ಬಣ್ಣಗುಂದಿ, ವಾರ್ಧಿಕ್ಯದಲ್ಲಿ ಕಪಿಲವರ್ಣದ್ದಾಗಿಯೂ ಇರುವುದು. ಜಠರ ಖಾಲಿ ಆಗಿದ್ದಾಗ ಅದರ ಒಳಮೈ ಅಲ್ಲಲ್ಲಿ ಮಡಚಿಕೊಂಡಿರುವುದು. ಈ ಮಡಿಕೆಗಳು ಸಾಮಾನ್ಯವಾಗಿ ಜಠರದ ಲಂಬಾಕ್ಷದಲ್ಲೇ ಇರುವುವು. ಜಠರದ ಒಳಮೈಯನ್ನು ವೀಕ್ಷಿಸುವಾಗ ಪೈಲೋರಿಕ್ ನಾಲೆ ಮುಂಗರುಳಿನೊಳಕ್ಕೆ (ಡುಯೋಡೀನಮ್) ಟೆಲಿಸ್ಕೋಪಿನಂತೆ ಚಾಚಿಕೊಂಡಿರುವ ಬುಗುಟೂ ಅದರ ತುದಿಯಲ್ಲಿ ಇರುವ ಪೈಲೋರಿಕ್ ದ್ವಾರವೂ ಚೆನ್ನಾಗಿ ವ್ಯಕ್ತವಾಗುತ್ತವೆ. ಅಲ್ಲದೆ ಪೈಲೋರಿಕ್ ನಾಲಾಪ್ರದೇಶದಲ್ಲಿ ಜಠರಭಿತ್ತಿಯ ಸ್ನಾಯುಗಳು ದಪ್ಪವಾಗಿರುವುದೂ ಪೈಲೋರಿಕ್ ದ್ವಾರಪ್ರದೇಶದಲ್ಲಿ ಸುತ್ತುವರಿದ ಸ್ನಾಯು ಇನ್ನೂ ದಪ್ಪವಾಗಿ ಪೈಲೋರಿಕ್ ಸ್ಫಿಂಕ್ಟರ್ (ಗತಿನಿರೋಧಕ) ಆಗುವುದೂ ವ್ಯಕ್ತವಾಗುವುದು. ಈ ಪ್ರದೇಶದಲ್ಲಿರುವ ಲಂಬಗತಿಸ್ನಾಯು ಪೈಲೋರಿಕ್‌ದ್ವಾರವನ್ನು ಹಿಗ್ಗಿಸುವುದಕ್ಕೆ ಸಹಾಯಕವಾಗಿದೆ. ಜಠರದ ಒಳಮೈ ಮೇಲೆಲ್ಲ ಸಣ್ಣ ಕುಳಿಗಳಿರುವುದೂ ಅವುಗಳ ನಡುವಿನ ಉಬ್ಬಿನಿಂದ ಒಳಮೈ ಜೇನುಗೂಡಿನಂತೆ ಇರುವುದೂ ಜಠರದ ಒಳಮೈಯನ್ನು ಭೂತಗನ್ನಡಿಯಿಂದ ನೋಡಿದರೆ ತಿಳಿಯುವುದು. ಈ ನೋಟ ಜಠರದ ಪೈಲೋರಿಕ್ ಭಾಗದಲ್ಲಿ ಹೆಚ್ಚು ಸ್ಫುಟವಾಗಿದೆ. ವ್ಯಕ್ತಿ ಜೀವಂತವಾಗಿರುವಾಗ ಜಠರದ ಒಳಮೈ ಪರೀಕ್ಷೆ ಜಠರದರ್ಶಿ (ಗ್ಯಾಸ್ಟ್ರಾಸ್ಕೋಪ್) ಎಂಬ ಉಪಕರಣದಿಂದ ಸಾಧ್ಯ.

ಜಠರಭಿತ್ತಿಯ ಸೂಕ್ಷ್ಮರಚನೆ : ಜೀರ್ಣನಾಳದ ಎಲ್ಲ ಕಡೆಯಲ್ಲಿಯಂತೆಯೇ ಜಠರ ಭಿತ್ತಿಯೂ ನಾಲ್ಕು ವರಸೆಗಳಾಗಿ ಏರ್ಪಟ್ಟಿರುವ ಅಂಗಾಂಶಗಳಿಂದಾಗಿದೆ. ಅತ್ಯಂತ ಹೊರವರಸೆ ಪೆರಿಟೋನಿಯಮ್ಮಿನಿಂದಾದುದು. ಇದು ಬಹುತೆಳುವಾದ ಪೊರೆ. ಅಲ್ಲದೆ ಅಳ್ಳಕವಾಗಿ ಹೊದಿಸಲ್ಪಟ್ಟೂ ಇದೆ. ಹೀಗಾಗಿ ಇದನ್ನು ಮೇಲ್ಮೈಯಿಂದ ಬೆರಳುಗಳಿಂದಲೇ ಸುಲಿದು ಬಿಡಬಹುದು. ಇದರ ಅಡಿ ಅನೈಚ್ಛಿಕ ಸ್ನಾಯುಗಳಿಂದಾದ ಒಂದು ವರಸೆ ಉಂಟು. ಇಲ್ಲಿ ಸ್ನಾಯುಗಳು ಮೂರು ಪದರಗಳಾಗಿ ಏರ್ಪಟ್ಟಿವೆ. ಹೊರಪದರ ಲಂಬಗತಿ ಸ್ನಾಯುತಂತುಗಳಿಂದಾದುದು. ಜಠರದ ತುದಿಯಲ್ಲಿ ಇದು ಅನ್ನನಾಳದ ಮತ್ತು ಮುಂಗರುಳಿನ ಸಮಾನಸ್ನಾಯುವಿನೊಡನೆ ಮಿಳಿತವಾಗುತ್ತದೆ. ಕಿರಿಡೊಂಕಿನಲ್ಲಿ ಮತ್ತು ಪೈಲೋರಸ್ ವಿಭಾಗದಲ್ಲಿ ದಪ್ಪವಾಗಿಯೂ ಬೇರೆಕಡೆ ತೆಳ್ಳಗೂ ಉಂಟು. ತೆಳ್ಳಗಿದ್ದರೂ ಜಠರಭಿತ್ತಿಯಲ್ಲಿ ಪೂರ್ಣ ವ್ಯಾಪಕವಾಗಿರುವುದು ಲಂಬಗತಿಸ್ನಾಯುವೇ. ಚಕ್ರಗತಿಯ ಸ್ನಾಯುತಂತುಗಳು ಇದರ ಒಳಗಿನದು. ಇವು ಅಪೂರ್ಣ ಚಕ್ರಗಳಂತೆ U ಆಕಾರವಾಗಿ ಕಿರಿಡೊಂಕಿನ ಇಕ್ಕೆಲಗಳಲ್ಲೂ ವ್ಯಾಪಿಸಿರುತ್ತವೆ. ಫಂಡಸ್ ಭಾಗದಲ್ಲಿ ಈ ಸ್ನಾಯುವಿಲ್ಲ. ಪೈಲೋರಿಕ್ ಭಾಗದಲ್ಲಿ ದಪ್ಪವಾಗಿಯೂ ಪೂರ್ಣ ಚಕ್ರಾಕಾರವಾಗಿಯೂ ಪೈಲೋರಿಕ್ ದ್ವಾರಪ್ರಾಂತ್ಯದಲ್ಲಿ ಪೈಲೋರಿಕ್ ಗತಿನಿರೋಧಕವಾಗಿಯೂ ಏರ್ಪಟ್ಟಿದೆ. ಮುಂಗರುಳಿನ ಸಮಾನ ಚಕ್ರಗತಿಸ್ನಾಯುವಿನಿಂದ ಇದು ಒಂದು ಬಂಧನಾಂಗಾಂಶಪಟ್ಟಿಯಿಂದ ಬೇರ್ಪಟ್ಟಿದೆ. ಕಾರ್ಡಿಯಕ್ ದ್ವಾರದಲ್ಲಿ ಈ ಸ್ನಾಯು ಅನ್ನನಾಳದ ಚಕ್ರಗತಿಸ್ನಾಯುವಿನೊಡನೆ ಮಿಲನವಾಗುತ್ತದೆ. ಅತ್ಯಂತ ಒಳಗಿನ ಸ್ನಾಯುಪದರ ಓರೆಗತಿಯ ತಂತುಗಳಿಂದಾದುದು. ಇದೂ ಅನ್ನನಾಳದ ಚಕ್ರಗತಿ ಸ್ನಾಯುವಿನೊಡನೆ ಮಿಲನವಾಗುತ್ತದೆ. ಕಿರಿಡೊಂಕುಪ್ರದೇಶದಲ್ಲೂ ಪೈಲೋರಿಕ್ ವಿಭಾಗದಲ್ಲೂ ಈ ಸ್ನಾಯುಪದರ ಇಲ್ಲ. ಆದರೆ ಫಂಡಸ್ ಭಾಗ ಇದರಿಂದ ಪೂರ್ಣವಾಗಿ ಆವರಿಸಲ್ಪಟ್ಟು ಇಲ್ಲಿ ಅದರ ತಂತುಗಳು ಚಕ್ರಗತಿಯಾಗಿರುತ್ತವೆ. ಜಠರದ ಕಾಯದಲ್ಲಿ ಈ ಸ್ನಾಯು ಅಲ್ಲಲ್ಲಿ ಪಟ್ಟಿಗಳಂತೆ ಇರುವುದು ಕಾಣಬರುವುದು. ಸ್ನಾಯುವರಸೆಯ ಒಳಗಿರುವುದು ಲೋಳೆಪೊರೆ ಅಡಿಯ ಊತಕ. ಇದು ಬಂಧನಾಂಗಾಂಶದಿಂದಲೇ ಆದುದು. ಇಲ್ಲಿ ರಕ್ತನಾಳಗಳೂ ನರಗಳೂ ಕವಲೊಡೆದು ಸೇರಿ ಬಲೆಯಂತಾಗಿ ಆ ಬಲೆಗಳಿಂದ ಲೋಳೆಪೊರೆಗೆ ರಕ್ತಪೂರೈಕೆಯೂ ನರಪೂರೈಕೆಯೂ ಆಗುತ್ತವೆ. ಸ್ನಾಯುಗಳಿಗೂ ಲೋಳೆಪೊರೆಗೂ ನಡುವೆ ಈ ಊತಕ ಇರುವುದರಿಂದ ಸ್ನಾಯುಗಳ ಸಂಕುಚನ ಆಕುಂಚನಗಳು ಲೋಳೆಪೊರೆಯನ್ನು ಕಿತ್ತಾಡಲಾರವು.

ಜಠರಭಿತ್ತಿಯ ಅತ್ಯಂತ ಒಳಗಿನ ವರಸೆ ಲೋಳೆಪೊರೆಯಿಂದಾದುದು. ಇದು ಮೃದುವಾಗಿಯೂ ದಪ್ಪವಾಗಿಯೂ ಸ್ಪಂಜಿನಂತಿರುವ ಪದರ. ಹಿಗ್ಗಿಕುಗ್ಗಬಲ್ಲ ಪುಟಿತ ಬಂಧನಾಂಗಾಂಶತಂತುಗಳು ಇದರಲ್ಲಿ ಲೋಪವಾಗಿರುವುದರಿಂದ ಖಾಲಿ ಜಠರದಲ್ಲಿ ಈ ಪದರ ಮಡಿಕೆ ಮಡಿಕೆಯಾಗಿರುತ್ತದೆ. ಮಡಿಕೆಗಳು ಹಿರಿಡೊಂಕಿನಲ್ಲಿ ಮತ್ತು ಪೈಲೋರಸ್ ಭಾಗದಲ್ಲಿ ಹೆಚ್ಚಾಗಿವೆ. ಕಿರಿಡೊಂಕಿನಲ್ಲಿ ಕೇವಲ 3–4 ಮಡಿಕೆಗಳು ಇರಬಹುದು. ಮಡಿಕೆಗಳು ಪೂರ್ಣವಾಗಿ ಲೋಳೆಪೊರೆಯವೇ. ಜಠರಭಿತ್ತಿಯ ಬೇರೆ ವರಸೆಗಳು ಮಡಿಕೆಗಳಲ್ಲಿ ಭಾಗವಹಿಸುವುದಿಲ್ಲ. ವಸ್ತುಶೇಖರಣೆಯಿಂದ ಜಠರ ಹಿಗ್ಗಿಸಲ್ಪಟ್ಟಾಗ ಲೋಳೆಪೊರೆಯ ಮಡಿಕೆಗಳು ಬಿಚ್ಚಿಕೊಂಡು ಜಠರ ವಿಸ್ತಾರಗೊಳ್ಳುವ ಸೌಲಭ್ಯ ಉಂಟು. ಕಾರ್ಡಿಯಕ್ ದ್ವಾರದ ನೆರೆಯಲ್ಲಿ ಲೋಳೆಪೊರೆ ಅತ್ಯಂತ ತೆಳುವಾಗಿಯೂ ಪೈಲೋರಿಸ್ಸಿನಲ್ಲಿ ಅತ್ಯಂತ ದಪ್ಪವಾಗಿಯೂ ಇದೆ. ಜಠರದ ಒಳಮೈಯಲ್ಲಿ ಎಲ್ಲೆಲ್ಲೂ ಕಾಣಬರುವ ಜಠರ ಕುಳಿಗಳೂ ಲೋಳೆಪೊರೆಗೆ ಸೀಮಿತವಾದವೇ. ಸುಮಾರು 1/8 ರಿಂದ ¼ ಮಿಮೀ ವ್ಯಾಸವುಳ್ಳ ಈ ಕುಳಿಗಳು ವಾಸ್ತವವಾಗಿ ಜಠರಗ್ರಂಥಿಗಳ ನಾಳಭಾಗಗಳೇ ಆಗಿವೆ. ಒಂದೊಂದು ಕುಳಿಗೂ 2–4 ಸ್ರವಿಸುವ ಭಾಗಗಳು ಸೇರಿಕೊಂಡು ಜಠರಕುಳಿಯ ಮೂಲಕ ತಮ್ಮ ಸ್ರಾವವನ್ನು ಜಠರ ಕುಹರಕ್ಕೆ ಸುರಿಯುತ್ತವೆ.

ಜಠರ ಗ್ರಂಥಿಗಳು ಸೂಕ್ಷ್ಮದರ್ಶಕದಲ್ಲಿ ಮಾತ್ರ ಗೋಚರವಾಗುವ ಪ್ರಯೋಗ ನಳಿಕೆಯಂತಿರುತ್ತವೆ. ಇವು ಲೋಳೆಪೊರೆಯ ದಪ್ಪದಲ್ಲಿ ಅಡಕವಾಗಿವೆ. ಇವುಗಳಲ್ಲಿ ಮೂರು ವಿಧ. ಕಾರ್ಡಿಯಕ್ ದ್ವಾರದ ನೆರೆಗೆ ಸೀಮಿತವಾದುವು ಕಾರ್ಡಿಯಕ್ ಗ್ರಂಥಿಗಳು. ಇವು ಲೋಳೆಯನ್ನು ಸ್ರವಿಸುತ್ತವೆ. ಪೈಲೋರಿಕ್ ವಿಭಾಗದಲ್ಲಿರುವವು ಪೈಲೋರಿಕ್ ಗ್ರಂಥಿಗಳು. ಇವುಗಳ ಸ್ರವಿಸುವ ಭಾಗ ಸುರುಳಿ ಸುತ್ತಿಕೊಂಡು ಲೋಳೆಪೊರೆಯ ಆಳಕ್ಕೆ ಸೀಮಿತವಾಗಿ ಬಹು ಆಳವಾಗಿರುವ ಜಠರ ಕುಳಿಗಳನ್ನು ಸೇರುತ್ತವೆ. ಸ್ರಾವಭಾಗದಿಂದ, ಬಹುಶಃ ನಾಳಭಾಗದಿಂದಲೂ ಲೋಳೆ ಸ್ರವಿಸಲ್ಪಡುತ್ತದೆ. ಜಠರದ ಫಂಡಸ್ಸಿನಲ್ಲಿ ಹಾಗೂ ಕಾಯದಲ್ಲಿ ಇರುವ ಗ್ರಂಥಿಗಳು ಫಂಡಲ್ ಗ್ರಂಥಿಗಳು. ಸಹಜವಾಗಿ ಬಹುಸಂಖ್ಯೆಯಲ್ಲಿರುವ ಇವೇ ಜಠರದ ಪ್ರಧಾನ ಗ್ರಂಥಿಗಳು. ಇವುಗಳ ಸ್ರಾವಭಾಗ ಉದ್ದವಾದ ಪ್ರಯೋಗ ನಳಿಕೆಯಂತಿದೆ. ಇದು ಆಳವಿಲ್ಲದ ಜಠರಕುಳಿ ಅರ್ಥಾತ್ ನಾಳಭಾಗಕ್ಕೆ ತೆರೆದುಕೊಳ್ಳುತ್ತದೆ. ಸ್ರಾವಭಾಗದಲ್ಲಿ ಮೂರುಬಗೆಯ ಜೀವಕೋಶಗಳನ್ನು ಗುರುತಿಸಬಹುದು. ಅವು ಹೈಡ್ರೊಕ್ಲೋರಿಕ್ ಆಮ್ಲ, ಪೆಪ್ಸಿನ್ ಎಂಬ ಕಿಣ್ವ ಮತ್ತು ಲೋಳೆಯನ್ನು ಸ್ರವಿಸುತ್ತವೆ. ಜಠರರಸ ಈ ಎಲ್ಲ ಗ್ರಂಥಿ ಜೀವಕೋಶಗಳ ಸ್ರಾವದ ಮಿಶ್ರಣವಾದ್ದರಿಂದ ಜಠರರಸದಲ್ಲಿ ಪೆಪ್ಸಿನ್, ಹೈಡ್ರೊಕ್ಲೋರಿಕ್ ಆಮ್ಲ, ಲೋಳೆ–ಇವು ಪ್ರಧಾನವಾಗಿ ಇರುವ ವಸ್ತುಗಳು. ಇವಲ್ಲದೆ ಜಠರರಸದಲ್ಲಿ ಇತರ ವಸ್ತುಗಳು ಅಲ್ಪ ಪ್ರಮಾಣದಲ್ಲಿರುತ್ತವೆ. ಅವು ಜಠರದ ಲೋಳೆಪೊರೆಯಲ್ಲಿರುವ ಅನಿರ್ದಿಷ್ಟ ಜೀವಕೋಶಗಳ ಸ್ರಾವಗಳು.

ಜಠರಕ್ಕೆ ರಕ್ತಪೂರೈಕೆ ಪ್ರಧಾನವಾಗಿ ನಾಲ್ಕು ಅಪಧಮನಿಗಳಿಂದ ಆಗುತ್ತದೆ. ಕಿರಿ ಮತ್ತು ಹಿರಿಡೊಂಕಿನ ಎಡಬಲ ಭಾಗಗಳಿಂದ ಬರುವ ಇವಕ್ಕೆ ಗ್ಯಾಸ್ಟ್ರಿಕ್ ಮತ್ತು ಗ್ಯಾಸ್ಟ್ರೊ ಎಪಿಪ್ಲೋಯಿಕ್ ಧಮನಿಗಳೆಂದು ಹೆಸರು. ಮೇಲೆ ಹೇಳಿರುವಂತೆ ಇವು ಅನುಕ್ರಮವಾಗಿ ಕಿರಿ ಮತ್ತು ಹಿರಿ ಒಮೆನ್‌ಟಮುಗಳ ಎರಡು ಪದರಗಳ ನಡುವೆ ಹಾಯುತ್ತವೆ. ಇವುಗಳಿಂದಲ್ಲದೆ ಜಠರಕ್ಕೆ ರಕ್ತ ಚಿಕ್ಕ ಗ್ಯಾಸ್ಟ್ರಿಕ್ ಅಪಧಮನಿಗಳಿಂದಲೂ ಪೂರೈಕೆ ಆಗುತ್ತದೆ. ಅನುರೂಪವಾದ ಅಭಿಧಮನಿಗಳ ಮೂಲಕ ಜಠರದಿಂದ ವಾಪಸಾದ ರಕ್ತ ಅಂತಿಮವಾಗಿ ಪೋರ್ಟಲ್ ಅಭಿಧಮನಿಯನ್ನು ಸೇರಿ ಯಕೃತ್ತಿಗೆ ಪೂರೈಕೆಯಾಗುತ್ತದೆ.

ಜಠರಕ್ಕೆ ನರಪೂರೈಕೆ ಅನುವೇದಕ (ಸಿಂಪಥೆಟಿಕ್) ಮತ್ತು ಪ್ಯಾರಾನುವೇದಕ (ಪ್ಯಾರಾ ಸಿಂಪಥೆಟಿಕ್) ಎಂಬ ಎರಡು ರೀತಿಯ ನಿರಂಕುಳ ಕಾರ್ಯನಿಯಂತ್ರಣ ನರಗಳಿಂದಲೂ ಆಗುತ್ತದೆ. ಅನುವೇದಕ ನರಗಳು ಅಪಧಮನಿಗಳ ಜೊತೆಯೇ ಗಮಿಸುತ್ತವೆ. ಪ್ಯಾರಾನುವೇದಕ ನರಗಳು ಎಡಬಲ ವೇಗಸ್ ನರಗಳೇ ಆಗಿವೆ. ಎರಡು ಬಗೆಯ ನರಗಳೂ ಜಠರಭಿತ್ತಿಯನ್ನು ಹೊಕ್ಕು ಅದರ ಸ್ನಾಯು ವರಸೆಯ ಪದರಗಳ ನಡುವೆ ಕವಲೊಡೆದು ಸೇರಿ ಬಲೆಯಂತೆ ಆಗಿ ಲೋಳೆಪೊರೆಯ ಅಡಿಯಲ್ಲಿ ಊತಕವನ್ನು ಹೊಕ್ಕು ಅಲ್ಲೂ ಒಂದು ಬಲೆಯಾಗಿ ಅನಂತರ ಲೋಳೆಪೊರೆಗೆ ಪೂರೈಕೆಯಾಗುತ್ತವೆ. ಈ ನರಗಳು ಜೀರ್ಣಕಾಲದಲ್ಲಿ ಜಠರದ ಚಲನವನ್ನೂ ಜಠರಗ್ರಂಥಿಗಳ ಸ್ರಾವವನ್ನೂ ನಿಯಂತ್ರಿಸುತ್ತವೆ.

ಭ್ರೂಣದಲ್ಲಿ ಜಠರದ ಬೆಳವಣಿಗೆ : ಭ್ರೂಣದ ಪ್ರಾರಂಭಿಕ ಜೀರ್ಣನಾಳದ ಒಂದು ಭಾಗವಾಗಿ ಜಠರವು ಬೆಳೆದು ಬರುತ್ತದೆ. ಭ್ರೂಣಕ್ಕೆ ನಾಲ್ಕರಿಂದ ಐದು ವಾರವಾಗುವ ವೇಳೆಗೆ ಪ್ರಾರಂಭಿಕ ಜೀರ್ಣನಾಳದಲ್ಲಿ ಅದು ಭ್ರೂಣದ ಲೋಳೆಕೋಶದೊಡನೆ ಸಂಪರ್ಕಗೊಳ್ಳುವ ಸ್ಥಳಕ್ಕೆ ಸ್ವಲ್ಪ ಮೇಲಿನ ಭಾಗ ಹಿಗ್ಗಿ ಉಬ್ಬಿದಂತಾಗುತ್ತದೆ. ಇದೇ ಜಠರದ ಅಂಕುರ. ಇದು ಭ್ರೂಣದ ಬೆನ್ನುಭಾಗಕ್ಕೆ ಒಂದು ಪೊರೆಯಿಂದ ನೇತುಹಾಕಲ್ಪಟ್ಟು ಈ ಕಾಲದಲ್ಲಿ ಭ್ರೂಣ ದೇಹದ ಮಧ್ಯ ಗೆರೆಯಲ್ಲಿಯೇ ಇರುತ್ತದೆ. ಭ್ರೂಣ ಬೆಳೆದು 10 ಮಿಮೀ ಉದ್ದವಾದಾಗ ಜಠರದ ಎರಡು ಅಂಚುಗಳನ್ನೂ ಗುರುತಿಸಬಹುದು. ಬೆನ್ನುದಿಕ್ಕಿನ ಅಂಚು ಹೊರ ಉಬ್ಬಾಗಿ ತೀವ್ರವಾಗಿ ಬೆಳೆಯುತ್ತದೆ. ಇದರ ಪ್ರಾರಂಭ ಸ್ಥಳದಲ್ಲಿ ಫಂಡಸ್ಸಿನ ಉಬ್ಬು ಉಂಟಾಗುವುದಲ್ಲದೆ ಜಠರದ ಅಂತ್ಯ ಸ್ಥಳವಾದ ಪೈಲೋರಿಕ್ ಭಾಗ ಮುಮ್ಮುಖವಾಗುತ್ತದೆ. ಈ ಕಾರಣದಿಂದ ಚಿಕ್ಕ ಅಂಚು ನಿಮ್ನ ಮಧ್ಯಮ ಅಂಚಾಗಿ ಮಾರ್ಪಡುವುದು ಅನಿವಾರ್ಯವಾಗುವುದು. ಜಠರವನ್ನು ಬೆನ್ನಿಗೆ ನೇತಾಡಿಸುವಂತೆ ಸೇರಿಸುವ ಪೊರೆ (ಡಾರ್ಸಲ್ ಮೀಸೋಗ್ಯಾಸ್ಟ್ರಿಯಮ್) ಬೆಳೆಯುವುದರಿಂದಲೂ ಯಕೃತ್ತು ಬೆಳೆದು ಜಠರವನ್ನು ಎಡಕ್ಕೆ ತಳ್ಳುವುದರಿಂದಲೂ ಜಠರ ತಿರುಚಿಕೊಳ್ಳುತ್ತದೆ. ಈ ತಿರುಚಿನಿಂದ ಬಲಮುಖವಾಗಿದ್ದ ಜಠರದ ಮೈ ಬೆನ್ನುಕಡೆಗೂ, ಎಡಮುಖವಾಗಿದ್ದ ಮೈ ಮುಮ್ಮುಖವಾಗಿಯೂ ಬದಲುಗೊಳ್ಳುತ್ತವೆ. ಅಂತೆಯೇ ಬಲ ವೇಗಸ್ ನರ, ಎಡ ವೇಗಸ್ ನರಗಳೂ ಆಯಾ ಜಠರಮೈಗಳಿಗೆ ಪೂರೈಕೆಯಾಗುತ್ತವೆ. ಜಠರದ ತಿರುಚುವಿಕೆಯಿಂದ ಮುಂಗರುಳು ಬಲಕ್ಕೂ, ಬೆನ್ನುಕಡೆಗೂ ಸ್ಥಳಾಂತರಗೊಳ್ಳುತ್ತದೆ.

ಜಠರದ ಕ್ರಿಯೆ : ಆಹಾರ ಸೇವನೆಯ ಕಾಲದಲ್ಲಿ ನುಂಗಿದ ಆಹಾರದ ಜಮಾವಣೆ ಅನಂತರ ಅದರ ದ್ರವೀಕರಣ ಇವು ಜಠರದ ಪ್ರಧಾನ ಕ್ರಿಯೆಗಳು. ಸ್ನಾಯುಗಳ ಅನುರೂಪವಾದ ಹಿಗ್ಗುವಿಕೆಯಿಂದ ಮತ್ತು ಲೋಳೆಪೊರೆಯ ಮಡಿಕೆಗಳು ಬಿಚ್ಚಿಕೊಳ್ಳುವುದರಿಂದ ಜಠರದ ಒಳಾವಕಾಶ ಎಷ್ಟು ಬೇಕೋ ಅಷ್ಟು ದೊಡ್ಡದಾಗಿ ನುಂಗಿದ ಆಹಾರದ ಶೇಖರಣೆ ಆಗುತ್ತದೆ. ಆಹಾರಸೇವನೆ ಮುಗಿದ ಸ್ವಲ್ಪ ಹೊತ್ತಿನಲ್ಲೆ ದ್ರವೀಕರಣ ಪ್ರಾರಂಭವಾಗುತ್ತದೆ. ಈ ದ್ರವೀಕರಣ ಯಾಂತ್ರಿಕವಾದ ಮಂಥನ ಕ್ರಿಯೆಯಿಂದಲೂ ಜಠರರಸದ ರಾಸಾಯನಿಕ ಕ್ರಿಯೆಯಿಂದಲೂ ಆಗುವುದು. ಘನಪದಾರ್ಥಗಳ ಪ್ರಮಾಣಕ್ಕೆ ಅನುಗುಣವಾಗಿ ಸೇವಿಸಿದ ಆಹಾರ ಸುಮಾರು 5–6 ಗಂಟೆಗಳ ಕಾಲ ಜಠರದಲ್ಲಿ ತಂಗುತ್ತದೆ. ಈ ಕಾಲದಲ್ಲಿ ಜಠರರಸದ ರಾಸಾಯನಿಕ ಕ್ರಿಯೆಯಿಂದಲೂ, ಜಠರದ ಚಲನದಿಂದಲೂ ಆಹಾರ ಭಾಗಶಃ ಪಚನಗೊಂಡು ದ್ರವವಾಗಿ ಆದಂತೆಲ್ಲ ಸ್ವಲ್ಪಸ್ವಲ್ಪವಾಗಿ ಕರುಳಿಗೆ ದೂಡಲ್ಪಡುತ್ತದೆ. ಜಠರದಂಥ ಸಂಗ್ರಹಣಸಾಧ್ಯ ಅವಯವವಿರುವುದರಿಂದ ಆಹಾರಸೇವನೆ ಅವಿರತವಾಗಿರಬೇಕಾಗಿಲ್ಲ; ಕೆಲವು ಗಂಟೆಗಳಿಗೊಮ್ಮೆ ಆದರೂ ತಡೆಯುತ್ತದೆ; ಮತ್ತು ಈ ಬಿಡುವಿನ ಅಂತರದಲ್ಲಿ ಬೇರೆ ಜೀವನ ಕಾರ್ಯಗಳಿಗೆ ವ್ಯಕ್ತಿ ಗಮನ ಕೊಡಲು ಸಾಧ್ಯವಾಗುವ ಸೌಲಭ್ಯ ಒದಗಿದೆ.

ಜಠರದ ಸಕಾಲಿಕ ಸ್ರಾವಚಲಗಳು ಸಾಧ್ಯವಾಗುವುದು ನರಗಳ ಮತ್ತು ಹಾರ್ಮೋನುಗಳ ಪ್ರಭಾವದಿಂದ ಎಂಬುದು ಸ್ಥಿರಪಟ್ಟಿದೆ. ಆಹಾರಸೇವನೆ ತೀರಿದ ಕೆಲವು ನಿಮಿಷಗಳ ಬಳಿಕ ಜಠರದ ಚಲನೆ ಪ್ರಾರಂಭವಾಗುತ್ತದೆ. ಬಹುಶಃ ಜಠರ ಇನ್ನೂ ಹೆಚ್ಚು ಹಿಗ್ಗಿಸಲ್ಪಡದೆ ಒಂದೇ ಸಮನಾದ ಹಿಗ್ಗಿರುವ ಸ್ಥಿತಿ ಜಠರದ ಚಲನವನ್ನು ಪ್ರಚೋದಿಸುತ್ತದೆ. ಈ ಸಕಾಲಿಕ ಚಲನೆ ನರಗಳ ಚಟುವಟಿಕೆಯಿಂದ ಏರ್ಪಡುವುದು. ತುಂಬಿದ ಜಠರದ ಚಲನೆ ವಿಶೇಷವಾಗಿ ಸರ್ಪಗತಿ ಚಲನೆ (ಪೆರಿಸ್ಟಾಲ್‍ಸಿಸ್). ಇಂಥ ಚಲನೆಯಲ್ಲಿ ಅಂಗದ ಒಂದು ಭಾಗ ಹಿಗ್ಗಿಸಲ್ಪಟ್ಟರೆ ಅದರ ಹಿಂದಿನ ಭಾಗ ಸಂಕುಚಿಸಿ, ಅದರ ಮುಂದಿನಭಾಗ ಸಡಿಲವಾಗುವುದು. ಇದರಿಂದ ಹಿಗ್ಗಿಸಲ್ಪಟ್ಟು ಸ್ಥಳದಲ್ಲಿದ್ದ ವಸ್ತು ಸಡಿಲವಾದ ಸ್ಥಳಕ್ಕೆ ಮುನ್ನೂಕಲ್ಪಡುತ್ತದೆ. ಆ ಸ್ಥಳ ಈಗ ಹಿಗ್ಗಿ ಅದರ ಹಿಂದಿನ ಸ್ಥಳ ಸಂಕುಂಚಿಸಿ ಮುಂದಿನ ಸ್ಥಳ ಸಡಿಲಾಗಿ ವಸ್ತು ಇನ್ನೂ ಮುಂದಕ್ಕೆ ನೂಕಲ್ಪಡುತ್ತದೆ. ಇದೇ ಸರ್ಪಗತಿ ಚಲನೆ. ಇದರಲ್ಲಿ ಸಂಕುಚನವು ಅಂಗದ ಮೇಲಿನಿಂದ ಕೆಳದಿಕ್ಕಿನಲ್ಲಿ ಸ್ಥಳದಿಂದ ಸ್ಥಳಕ್ಕೆ ಚಲಿಸುವ ರೀತಿಯದಾಗಿದ್ದು ಅನುರೂಪವಾದ ಚಲಿಸುವ ಸ್ಥಳೀಯ ಸಡಿಲತೆಯನ್ನು ಹಿಂಬಾಲಿಸುವುದು. ಇಂಥ ಸರ್ಪಗತಿ ಚಲನೆಯಿಂದ ಆಹಾರ ಜಠರದಲ್ಲಿ ಪೈಲೋರಿಕ್ ದ್ವಾರದೆಡೆಗೆ ನೂಕಲ್ಪಡುತ್ತದೆ. ಸಾಮಾನ್ಯವಾಗಿ ಈ ಸಮಯದಲ್ಲಿ ಪೈಲೋರಿಕ್ ದ್ವಾರ ಅಲ್ಲಿಯ ಗತಿನಿರೋಧಕ ಸಂಕುಚನೆಯಿಂದ ಮುಚ್ಚಲ್ಪಟ್ಟಿರುವುದರಿಂದ ನೂಕಲ್ಪಟ್ಟ ಆಹಾರ ಮುಂದುವರಿಯಲಾಗದೆ ಮಂತಿನಿಂದ ಕಡೆದಂತೆ ಚಿಮ್ಮೆಂದು ವಾಪಸ್ಸು ಜಠರದ ಕಾಯಕ್ಕೆ ಬರುತ್ತದೆ. ಪದೇಪದೇ ಹೀಗಾಗುವುದರಿಂದ ಆಹಾರ ಅರೆದಂತಾಗಿ ಜಠರರಸದೊಡನೆ ಮಿಶ್ರಿತವಾಗಿ ಕೊನೆಗೆ ಹಾಲಿನಂಥ ದ್ರವವಾಗುತ್ತದೆ. ಪೈಲೋರಿಕ್ ಗತಿನಿರೋಧಕ ಆಗಾಗ್ಗೆ ಸ್ವಲ್ಪ ಸಡಿಲವಾಗುವುದರಿಂದ ಹೀಗೆ ಪೂರ್ಣವಾಗಿ ದ್ರವವಾದ ಆಹಾರಭಾಗ ಪೈಲೋರಿಕ್ ದ್ವಾರದ ಮೂಲಕ ಮುಂಗರುಳಿಗೆ ತಲುಪುತ್ತದೆ. ಸ್ವಲ್ಪಸ್ವಲ್ಪವಾಗಿ ಜಠರ ಹೀಗೆ ಖಾಲಿ ಮಾಡಲ್ಪಟ್ಟು ಸೇವಿಸಿದ ಆಹಾರವೆಲ್ಲ ಮುಂಗರುಳನ್ನು ತಲುಪಲು ವಯಸ್ಕರಲ್ಲಿ ಸುಮಾರು 5–5 ½ ಗಂಟೆ ಕಾಲ ಬೇಕಾಗುತ್ತದೆ. ಆಹಾರ ಪ್ರಧಾನವಾಗಿ ದ್ರವವಾಗಿದ್ದರೆ ಸ್ವಲ್ಪಹೊತ್ತಿನಲ್ಲಿ ಜಠರ ಖಾಲಿ ಆಗುತ್ತದೆ. ಆದರೆ ಹಾಲು ಜಠರದಲ್ಲಿರುವ ಆಮ್ಲ ಕಿಣ್ವಗಳಿಂದಾಗಿ ಗರಣೆಗೊಳ್ಳುವುದರಿಂದ ಸಾವಕಾಶವಾಗಿಯೇ ಜಠರದಿಂದ ಮುಂದಕ್ಕೆ ಸಾಗುತ್ತದೆ. ಖಾಲಿಯಾದ ಮೇಲೆ ಸ್ವಲ್ಪಕಾಲ ಅದು ಯಾವ ವಿಶೇಷ ಚಲನೆಯನ್ನೂ ತೋರುವುದಿಲ್ಲ. ಅಂಗ ಸಂಕುಚಿತವಾಗಿ ಅದರ ಎದುರುಬದರು ಭಿತ್ತಿಗಳು ಒಂದಕ್ಕೊಂದು ತಾಕಿಕೊಂಡು ಒಳಗೆ ಅವಕಾಶ ಗಮನೀಯವಾಗಿ ಇರುವುದಿಲ್ಲ. ಖಾಲಿ ಜಠರದಲ್ಲಿ ಜಠರ ಸ್ರಾವವಾಗುವುದೂ, ಈ ಸ್ರಾವ ಗಣನೀಯ ಪ್ರಮಾಣದಲ್ಲಿ ಸಂಗ್ರಹವಾಗುವುದೂ ಅಪರೂಪ. ಕೆಲಗಂಟೆಗಳಾದ ಬಳಿಕ ಖಾಲಿ ಜಠರ ಆಗಾಗ್ಗೆ ಸರ್ಪಗತಿ ಚಲನೆಯನ್ನು ತೋರಿಸಬಹುದು. ಇದು ತಕ್ಕಷ್ಟು ಶಕ್ತಿಯುತವಾಗಿದ್ದರೆ ಹೊಟ್ಟೆ ಹಸಿವಿನ ಅನುಭವ ಉಂಟಾಗುತ್ತದೆ.

ಜಠರದಲ್ಲಿ ಆಹಾರ ಭಾಗಶಃ ಅರೆಯಲ್ಪಟ್ಟು ಜಠರರಸದೊಡನೆ ಮಿಶ್ರವಾದಾಗ ರಸದಲ್ಲಿರುವ ಪೆಪ್ಸಿನ್ ಹೈಡ್ರೊಕ್ಲೋರಿಕ್ ಆಮ್ಲದ ಸನ್ನಿಧಿಯಲ್ಲಿ, ಆಹಾರದ ಪ್ರೊಟೀನ್ ಅಂಶವನ್ನು ಭಾಗಶಃ ಪಚನಗೊಳಿಸಿ, ಅದು ನೀರಿನಲ್ಲಿ ಕರಗುವಂತೆ ಮಾಡುತ್ತದೆ. ಜಠರವನ್ನು ಆಹಾರ ಸೇರುವ ಮೊದಲೇ ಆಹಾರಸೇವನೆಯ ಸುಖದ ಕಲ್ಪನೆಯಿಂದ ಜಠರರಸ ಉತ್ಪತ್ತಿಯಾಗುವುದಕ್ಕೆ ಪ್ರಾರಂಭಿಸುತ್ತದೆ. ಆಹಾರ ಚರ್ವಣವಾಗುವಾಗ ಅದರ ರುಚಿವಾಸನೆಗಳು ಈ ಉತ್ಪತ್ತಿಯನ್ನು ಮುಂದುವರಿಸುತ್ತದೆ. ಜಠರವನ್ನು ಆಹಾರ ಸೇರಿ ಅದನ್ನು ಹಿಗ್ಗಿಸುವುದರಿಂದಲೂ ಜಠರರಸ ಉತ್ಪತ್ತಿಯಾಗುತ್ತದೆ. ಇವು ಮೂರೂ ನರಪ್ರೇರಣೆಯಿಂದ ಪ್ರಚೋದಿತವಾದುವು. ಆಹಾರ (ಹಾಲು ಮಾಂಸಾದಿಗಳು) ಮತ್ತು ಜಠರದಲ್ಲಿ ಭಾಗಶಃ ಪಚನವಾದ ಇತರ ಆಹಾರ ಸಾಮಗ್ರಿಗಳು ಜಠರದ ಲೋಳೆಪೊರೆಯ ಸಂಪರ್ಕಮಾತ್ರದಿಂದಲೇ ಅದರಿಂದ ಗ್ಯಾಸ್ಟ್ರಿನ್ ಎಂಬ ಹಾರ್ಮೋನು ಉತ್ಪತ್ತಿಯಾಗುವಂತೆ ಮಾಡುತ್ತವೆ. ಇದು ಬಹು ಅಲ್ಪ ಪ್ರಮಾಣದಲ್ಲಿ ಉತ್ಪತ್ತಿಯಾಗಿ ಜಠರರಸಕ್ಕೆ ಸೇರಿಸಲ್ಪಡದೆ ನೇರವಾಗಿ ಜಠರದಲ್ಲೇ ರಕ್ತಗತವಾಗುತ್ತದೆ. ರಕ್ತಪರಿಚಲನೆಯಿಂದ ಇದು ದೇಹದ ಎಲ್ಲೆಡೆಗೂ ಒಯ್ಯಲ್ಪಡುವಂತೆ ಜಠರದ ಧಮನಿಗಳ ಮೂಲಕ ಪುನಃ ಜಠರಕ್ಕೂ ತಲುಪುತ್ತದೆ. ಹೀಗೆ ತಲುಪಿದಾಗ ಜಠರ ಗ್ರಂಥಿಗಳು ಉದ್ರೇಕಗೊಂಡು ಬಹಳವಾಗಿ ಜಠರರಸವನ್ನು ಸ್ರವಿಸುತ್ತವೆ. ಜಠರದಲ್ಲಿ ಆಹಾರ ಇದ್ದು ಪಚನವಾಗುತ್ತಿರುವ ಪರ್ಯಂತ ಈ ಕ್ರಮದಿಂದ ಜಠರರಸ ಉತ್ಪತ್ತಿ ಆಗುತ್ತಲೇ ಇರುತ್ತದೆ.

ಪೆಪ್ಸಿನ್ನಿನ ಕಾರ್ಯಾನಂತರ ಪ್ರೊಟೀನುಗಳಿಂದ ಲಭಿಸುವ ವಸ್ತುಗಳ ಮಿಶ್ರಣಕ್ಕೆ ಪೆಪ್ಟೋನ್ ಎಂದು ಹೆಸರು. ಜಠರರಸ ಪ್ರೊಟೀನನ್ನು ಪೆಪ್ಟೋನಾಗಿ ಪರಿವರ್ತಿಸಿ ಅದು ದ್ರವೀಕರಣವಾಗಲು ಸಹಾಯಮಾಡುವುದು ಹೀಗೆ. ಜಠರದಲ್ಲಿ ಇಷ್ಟು ಮಾತ್ರ ಪಚನಕ್ರಿಯೆ ಆಗುತ್ತದೆ. ಆಹಾರದ ಇತರ ಅಂಶಗಳು ಜಠರರಸದಿಂದ ಜೀರ್ಣವಾಗುವುದಿಲ್ಲ. ಪೆಪ್ಸಿನ್ ಪ್ರೊಟೀನ್ ಪಚನಕಾರ್ಯ ಮಾತ್ರವಲ್ಲದೆ ಹಾಲನ್ನು ಗರಣೀಕರಿಸುವ ಸಾಮರ್ಥ್ಯವುಳ್ಳದ್ದಾಗಿಯೂ ಇದೆ. ಶೈಶವದಲ್ಲಿ, ಬಹುಶಃ ಹಾಲೇ ಪ್ರಧಾನ ಆಹಾರವಾಗಿರುವ ವಯಸ್ಕರಲ್ಲಿ ಹಾಲನ್ನು ಗರಣೀಕರಿಸುವ ಸಲುವಾಗಿಯೇ ಜಠರರಸದಲ್ಲಿ ರೆನ್ನಿನ್ ಎಂಬ ಇನ್ನೊಂದು ಕಿಣ್ವ ಇರುವುದೆಂದು ಹೇಳಲಾಗಿದೆ. ಹೈಡ್ರೊಕ್ಲೋರಿಕ್ ಆಮ್ಲ ಪೆಪ್ಸಿನ್ನಿನ ಕಾರ್ಯಕ್ಕೆ ಅಗತ್ಯವಾದುದೇ ಅಲ್ಲದೆ ಆಹಾರದಲ್ಲಿರುವ ಕಬ್ಬಿನ ಸಕ್ಕರೆಯನ್ನು (ಸುಕ್ರೋಸ್) ಭಾಗಶಃ ಸರಳಸಕ್ಕರೆಗಳಾದ ಗ್ಲೂಕೋಸ್ ಮತ್ತು ಫ್ರಕ್ಟೋಸ್ ಆಗಿ ಪರಿವರ್ತಿಸುವುದು; ಮತ್ತು ವ್ಯಕ್ತಿ ಸೇವಿಸಿದ ಪದಾರ್ಥಗಳಲ್ಲಿರುವ ವಿಷಾಣುಗಳನ್ನು ನಾಶಮಾಡುತ್ತದೆ. ಜಠರರಸದಲ್ಲಿ ನೈಜಘಟಕ (ಇನ್‍ಟ್ರಿನ್‍ಸಿಕ್ ಫ್ಯಾಕ್ಟರ್) ಎಂಬ ರಕ್ತಕಣಗಳ ಉತ್ಪತ್ತಿಗೆ ಅಗತ್ಯವಾದ ವಸ್ತು ಉಂಟು. ಇದು ಆಹಾರದಲ್ಲಿರುವ ಜೀವಸತ್ತ್ವ $B_{12}$ ಕರುಳಿನಲ್ಲಿ ರಕ್ತಗತವಾಗಲು ಆವಶ್ಯಕ. ನೈಜಘಟಕ ಲೋಪವಾದಾಗ ಜೀವಸತ್ತ್ವ $B_{12}$ ರಕ್ತಗತವಾಗಲಾರದೆ ದೇಹದಲ್ಲಿ ಅದರ ಕೊರತೆಯುಂಟಾಗಿ ಸತ್ಫಲವಾಗಿ ರಕ್ತಕಣಗಳ ಉತ್ಪತ್ತಿಗೆ ತಡೆಯಾಗಿ ರಕ್ತಹೀನತೆ ರೋಗ ಉಂಟಾಗುತ್ತದೆ. ಜಠರದಲ್ಲಿ ನೈಜ ಘಟಕವನ್ನು ಉತ್ಪಾದಿಸುವ ಕ್ರಿಯೆ ಜಠರದ ಆಹಾರ

ಸಂಗ್ರಹಣೆ ಪಚನ ಕಾರ್ಯಗಳಿಗಿಂತ ಮುಖ್ಯವಾದ್ದರಿಂದ ಕಾರಣಾಂತರದಿಂದ ಜಠರವನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಬೇಕಾದಾಗ ಅದನ್ನು ಪೂರ್ಣವಾಗಿ ತೆಗೆದುಹಾಕದೆ ಸ್ವಲ್ಪಭಾಗವನ್ನು ದೇಹದಲ್ಲಿ ಬಿಟ್ಟಿದ್ದು ಅದರ ಸ್ರಾವ ಕರುಳಿಗೆ ಸೇರುವಂತೆ ಏರ್ಪಡಿಸಿರುತ್ತದೆ.

ಜಠರ ಪರೀಕ್ಷೆಗಳು : ಜಠರ ಕ್ರಿಯೆ ಜಠರ ರೋಗಗಳಲ್ಲಿ ಸ್ವಾಭಾವಿಕವಾಗಿಯೇ ವ್ಯತ್ಯಾಸಗೊಂಡಿರುತ್ತದೆ. ಅದರ ಆಕಾರ ಚಲನಗಳು, ಅದರ ಕೆಲವು ಬದಲಾವಣೆಗಳು ಕೆಲವು ಜಠರ ರೋಗಗಳ ವೈಶಿಷ್ಟ್ಯವಾದ್ದರಿಂದ ಜಠರ ರೋಗದಲ್ಲಿ ಜಠರದ ಪರೀಕ್ಷೆ ಅಗತ್ಯ. ಬೇರಿಯಮ್ ಕದಡನ್ನು ಕುಡಿಸಿ ಜಠರವನ್ನು ತುಂಬಿ ತತ್‌ಕ್ಷಣ ಎಕ್ಸ್‌ಕಿರಣ ಪರೀಕ್ಷೆ ಮಾಡುವುದಲ್ಲದೆ 5 ½ ಗಂಟೆಗಳು ಕಳೆದ ಬಳಿಕ ಪುನಃ ಪರೀಕ್ಷೆ ಮಾಡಲಾಗುತ್ತದೆ. ಇದರಿಂದ ಜಠರ ವ್ರಣ, ಏಡಿಗಂತಿ ರೋಗ, ಜಠರದ ಅಳತೆ, ಆಕಾರ ಮುಂತಾದುವುಗಳ ಪತ್ತೆ ಆಗುವುದು. ಜಠರವನ್ನು ಜಠರದರ್ಶಕದಲ್ಲಿ ಪರೀಕ್ಷಿಸಿಯೂ ಈ ವಿಷಯಗಳ ಮಾಹಿತಿ ಪಡೆಯಬಹುದು. ಜಠರದ ಸ್ರಾವಸಾಮರ್ಥ್ಯವನ್ನು ಅದರಲ್ಲಿರುವ ರಾಸಾಯನಿಕಗಳ ಪ್ರಮಾಣವನ್ನೂ ಅಂದಾಜು ಮಾಡಲು ಜಠರದೊಳಕ್ಕೆ ರ‍್ಹೀಫಸ್ಸನ ನಳಿಕೆ ಎಂಬ ಸುಮಾರು 1 ಮೀ ಉದ್ದ, 3 ಮಿಮೀ ದಪ್ಪವಾದ ರಬ್ಬರ್ ನಳಿಕೆಯನ್ನು ಗಂಟಲಿನ ಮೂಲಕ ಹುಗಿಸಿ ಪಿಚಕಾರಿಯಿಂದ ಸ್ವಲ್ಪ ಜಠರರಸವನ್ನು ಹೀರಿ ಎಳೆದು ಅದನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಜಠರ ಸ್ರವಿಸುವಂತೆ ಅದನ್ನು ಪ್ರಚೋದಿಸಲು ನಿರ್ದಿಷ್ಟವಸ್ತುಗಳನ್ನು ಬಳಸಲಾಗುತ್ತದೆ. ಇವನ್ನು ನಳಿಕೆಯ ಮೂಲಕ ಜಠರಕ್ಕೆ ಹೊಗಿಸಬೇಕಾಗುತ್ತದೆ. ಇಲ್ಲವೆ ಸೂಜಿಮದ್ದಿನ ರೀತಿ ಕೊಡಬೇಕಾಗುತ್ತದೆ. ನಳಿಕೆಯ ಮೂಲಕ ಓಟ್ ಹಿಟ್ಟಿನ ಗಂಜಿ, ಮದ್ಯಸಾರ ಅಥವಾ ಸಕ್ಕರೆಯಲ್ಲಿ ಟೀಯನ್ನೂ ಸೂಜಿಮದ್ದಿನ ಮೂಲಕ ಇನ್ಸುಲಿನ್, ಹಿಸ್ಟಮಿನ್ ಇವನ್ನೂ ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ. ***

**ಜರಾಯು:** ಬೆಳೆಯುತ್ತಿರುವ ಭ್ರೂಣ ಮತ್ತು ಅದರ ಮಾತೃಗರ್ಭಕೋಶದ ಮಧ್ಯೆ ಆಹಾರ, ಪೋಷಕಾಂಶಗಳು ಮತ್ತು ಆಮ್ಲಜನಕದ ವಿನಿಮಯ ಕಲ್ಪಿಸುವ ಗರ್ಭಾವಧಿಗೆ ಸೀಮಿತವಾಗಿರುವ ಅಂಗ. ಪ್ರಾಣಿಜಗತ್ತಿನಲ್ಲಿಯೆ ಎರಡು ಜೀವಿಗಳ ಅಂಗಾಂಶಗಳ ಕೊಡುಗೆಯಿಂದ ಉಂಟಾಗುವ ಏಕಮಾತ್ರ ಅಂಗ ಎಂಬ ಹೆಗ್ಗಳಿಕೆಯನ್ನು ಪಡೆದಿದೆ. ಮಾಸು ಪರ್ಯಾಯ ಪದ.

ಪ್ಲಾಸೆಂಟ ಪದವನ್ನು ಲ್ಯಾಟಿನ್ ಭಾಷೆಯಿಂದ ಪಡೆಯಲಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಪ್ಲಾಸೆಂಟಾ ಎಂದರೆ ಚಪ್ಪಟೆ ತಟ್ಟೆ, ಚಪ್ಪಟೆ ಕೇಕು ಎಂದು ಅರ್ಥ. ರಿಯಲ್‌ಡಸ್ ಕೊಲಂಬಸ್ (1559) ಎಂಬ ವಿಜ್ಞಾನಿಯು, ಮಗುವಿನ ಜನನದ ನಂತರ ಸ್ವಲ್ಪ ಕಾಲದಲ್ಲೇ ಯೋನಿಯ ಮೂಲಕ ಹೊರಬರುವ ತಟ್ಟೆಯಾಕಾರದ ಅಂಗ ವಿಶೇಷವನ್ನು ಪ್ಲಾಸೆಂಟ ಎಂದು ಕರೆದನು. ಜರಾಯು, ಕಸ, ಮಾಸು, ಸೆತ್ತೆ ಇವು ಪರ್ಯಾಯ ಪದಗಳು. ಮಗುವಿನ ಜನನದ ಅನಂತರ ತಾಯಿಯ ದೇಹದಿಂದ ಹೊರಬರುವ ಪ್ಲಾಸೆಂಟವನ್ನು ಆಫ್ಟರ್ ಬರ್ತ್ ಎಂದು ಕೂಡ ಕರೆಯಲಾಗಿದೆ. ಪ್ರಾರಂಭದಲ್ಲಿ ಪ್ಲಾಸೆಂಟ ಪದುವು ಮಾನವನ ಮಾಸುವನ್ನು ಗುರುತಿಸಲು ಸೀಮಿತವಾಗಿತ್ತಾದರೂ, ಅನಂತರ ಹೆಚ್ಚು ವಿಶಾಲಾರ್ಥದಲ್ಲಿ ಬಳಸಲಾಯಿತು. ಅಂದರೆ, ಭ್ರೂಣ ಮತ್ತು ಅದು ಅಭಿವೃದ್ಧಿ ಹೊಂದುತ್ತಿರುವ ತಾಯಿಯ ದೇಹದ ಭಾಗದೊಡನೆ ಸಂಪರ್ಕ ಕಲ್ಪಿಸಲು ಉತ್ಪತ್ತಿಯಾಗಿರುವ ಯಾವುದೇ ಆಕಾರ, ಗಾತ್ರ ಹೊಂದಿದ ಅಥವಾ ಸ್ತನಿಗಳಲ್ಲದ ಕಶೇರುಕಗಳಲ್ಲಿ ಅಥವಾ ಅಕಶೇರುಕಗಳಲ್ಲಿ ಕಂಡುಬರುವ ಅಂಗಕ್ಕೆ ಪ್ಲಾಸೆಂಟ ಎಂದು ಬಳಸಲಾಗಿದೆ.

ವಿಧಗಳು : ಗರ್ಭಾವಧಿಯಲ್ಲಿ ಪ್ಲಾಸೆಂಟವನ್ನು ಹೊಂದಿರುವುದು ಸ್ತನಿಗಳ ಪ್ರಮುಖ ಗುಣ ವಿಶೇಷಣ ಎಂದು ಭಾವಿಸಿದ್ದರೂ, ಅದಕ್ಕೆ ಅಪವಾದವೆಂಬಂತೆ ಪ್ರೋಟೋಥೀರಿಯಗಳು (ಪ್ಲಾಟಿಪಸ್, ಎಕಿಡ್ನ) ಮರಿಹಾಕುವ ಬದಲು ಪಕ್ಷಿಗಳಂತೆ ಮೊಟ್ಟೆಯಿಡುತ್ತವೆ ಮತ್ತು ಭ್ರೂಣದ ಬೆಳವಣಿಗೆ ತಾಯಿಯ ಗರ್ಭಾಶಯದ ಬದಲಿಗೆ ಯೋಕ್ ತುಂಬಿದ ಮೊಟ್ಟೆಯೊಳಗೆ ನಡೆಯುತ್ತದೆ. ಹಾಗಾಗಿ ಪ್ಲಾಸೆಂಟದ ಅವಶ್ಯಕತೆ ಅವಕ್ಕೆ ಕಂಡುಬರುವುದಿಲ್ಲ.

ಇನ್ನುಳಿದ ಸ್ತನಿಗಳು (ಮೆಟಾಥೀರಿಯ ಮತ್ತು ಯೂಥೀರಿಯಗಳು) ಮರಿಹಾಕುವ ವಿಧಾನ ಅನುಸರಿಸುವುವು. ಭ್ರೂಣದ ಅಭಿವೃದ್ಧಿ ತಾಯಿಯ ಗರ್ಭಕೋಶದಲ್ಲಿ ನಡೆಯುತ್ತಿರುವುದರಿಂದ ಭ್ರೂಣದ ಪೋಷಣೆಗೆ, ಉಸಿರಾಟಕ್ಕೆ, ವಿಸರ್ಜನಕ್ರಿಯೆಗೆ, ಇತ್ಯಾದಿ ಕಾರಣಗಳಿಗಾಗಿ ವಿಶೇಷ ಸಹಾಯಕ ಅಂಗದ ಅವಶ್ಯಕತೆ ತಾತ್ಕಾಲಿಕವಾಗಿ ಉಂಟಾಗುತ್ತದೆ. ಈ ಎಲ್ಲ ಅಗತ್ಯಗಳ ಪೂರೈಕೆ ಪ್ಲಾಸೆಂಟದಿಂದ ಆಗುತ್ತದೆ.

ಪ್ಲಾಸೆಂಟದ ರಚನೆ, ಆಕಾರ ಇತ್ಯಾದಿ ವಿವಿಧ ಗುಂಪಿನ ಪ್ರಾಣಿಗಳಲ್ಲಿ ಬೇರೆ ಬೇರೆಯೇ ಆಗಿರುತ್ತದೆ. ಈ ವ್ಯತ್ಯಾಸಗಳಿಗೆ ಮೂರು ಮುಖ್ಯ ಅಂಶಗಳು ಕಾರಣವಾಗಿವೆ. ಅವುಗಳೆಂದರೆ ಪ್ಲಾಸೆಂಟ ಅಭಿವೃದ್ಧಿಯಲ್ಲಿ ತೊಡಗಿದ ಭ್ರೂಣಾಶಯದ ಪದರ, ತಾಯಿ ಮತ್ತು ಭ್ರೂಣ ಅಂಗಾಂಶಗಳ ನಡುವಿನ ಸಾಮೀಪ್ಯತೆ ಮತ್ತು ಬ್ಲಾಸ್ಟೋಸಿಸ್ಟ್‌ನ ಮೇಲೆ ವಿಲ್ಲೈ (ಬೆರಳಿನಾಕಾರದ ಚಾಚುಗಳು) ಗಳ ವಿನ್ಯಾಸ. ಈ ಅಂಶಗಳನ್ನು ಆಧರಿಸಿ ಸ್ತನಿಗಳಲ್ಲಿ ಪ್ಲಾಸೆಂಟವನ್ನು ಹಲವು ಬಗೆಯಾಗಿ ವಿಂಗಡಿಸಲಾಗಿದೆ.

ಅ) ಪ್ಲಾಸೆಂಟದ ಬೆಳವಣಿಗೆಯಲ್ಲಿ ಬಳಸಲ್ಪಟ್ಟಿರುವ ಭ್ರೂಣಾಶಯದ ಪದರಗಳನ್ನು ಆಧರಿಸಿ, ಮೂರು ಬಗೆಯಾಗಿ ವಿಂಗಡಿಸಲಾಗಿದೆ. 1) ಯೋಕ್‌ಸ್ಯಾಕ್ ಪ್ಲಾಸೆಂಟ : ಯೋಕ್‌ಸ್ಯಾಕ್ ಮತ್ತು ಕೋರಿಯನ್ ಪದರಗಳು ಸೇರಿ ಪ್ಲಾಸೆಂಟ ಬೆಳೆದಿದೆ. ಇಲ್ಲಿ ಯೋಕ್‌ಸ್ಯಾಕ್ ಭ್ರೂಣಾಶಯ ಪದರವು ಭ್ರೂಣದ ಸುತ್ತ ಆವರಿಸಿ ತನ್ನೊಳಗೆ ರಕ್ತನಾಳಗಳನ್ನು ಅಭಿವೃದ್ಧಿಪಡಿಸಿಕೊಂಡು ತಾಯಿಯ ಗರ್ಭಾಶಯ ಭಿತ್ತಿಯಿಂದ ಹೀರಿದ ಪದಾರ್ಥಗಳನ್ನು ಭ್ರೂಣಕ್ಕೆ ಸಾಗಿಸಲು ಸಹಾಯ ಮಾಡುತ್ತದೆ. ಉದಾ : ಅಮೆರಿಕನ್ ಒಪೊಸ್ಸಮ್, ಡೆಸಿಯೂರಸ್ 2) ಅಲಂಟಾಯಿಕ್ ಪ್ಲಾಸೆಂಟ : ಅಲಂಟಾಯಿಸ್ ಮತ್ತು ಕೋರಿಯನ್ ಭ್ರೂಣಾಶಯ ಪದರಗಳು ಸೇರಿ ಅಲಂಟೊಕೋರಿಯನ್ ಎಂಬ ಸಂಯುಕ್ತಪದರ ಆಗುವುದರ ಮೂಲಕ ಪ್ಲಾಸೆಂಟ ಬೆಳೆದಿದೆ. ಗರ್ಭಾಶಯ ಭಿತ್ತಿಯಿಂದ ಪಡೆದುಕೊಂಡ ಪದಾರ್ಥಗಳು ಅಲಂಟಾಯಿಸ್‌ನಲ್ಲಿ ಅಭಿವೃದ್ಧಿ ಹೊಂದಿರುವ ರಕ್ತನಾಳಗಳ ಮೂಲಕ ಭ್ರೂಣವನ್ನು ಸೇರುತ್ತವೆ. ಉದಾ: ಮಾರ್ಸುಪಿಯಲ್ ಬ್ಯಾಂಡಿಕೂಟ್, ಪ್ಯಾರಮಿಲಿನ್ ಇತ್ಯಾದಿ 3) ಕೋರಿಯಾನಿಕ್ ಪ್ಲಾಸೆಂಟ : ಕೋರಿಯಾನ್ ಎಂಬ ಭ್ರೂಣಾಶಯ ಪದರ ಪ್ಲಾಸೆಂಟ ಅಭಿವೃದ್ಧಿಯಲ್ಲಿ ಪ್ರಮುಖವಾಗಿ ತೊಡಗಿರುತ್ತದೆ. ಅಲಂಟಾಯಿಸ್ ಪದರವು ಕ್ಷೀಣಿಸಿರುತ್ತದೆ. ಕೋರಿಯನ್ ಪದರವು ಚಾಚುಗಳನ್ನು (ವಿಲ್ಲೈ) ಉಂಟುಮಾಡಿ ಗರ್ಭಾಶಯ ಭಿತ್ತಿಯೊಡನೆ ಸಂಪರ್ಕ ಹೊಂದಿ ಅದರಲ್ಲಿಯೇ ಹುದುಗಿಕೊಳ್ಳುತ್ತದೆ. ಕೋರಿಯನ್‌ನ ಕೆಲಚಾಚುಗಳಂತು, ಗರ್ಭಕೋಶ ಪದರದಲ್ಲಿ ರಕ್ತನಾಳಗಳನ್ನು ಹರಿದು ರಕ್ತ ತುಂಬಿದ ಕುಳಿ ಅಥವಾ ಕೊಳ್ಳಗಳನ್ನುಂಟುಮಾಡಿ ಅದರಲ್ಲಿಯೆ ಮುಳುಗಿರುತ್ತವೆ. ಉದಾ : ಮಾನವ.

ಆ) ಪ್ಲಾಸೆಂಟದಲ್ಲಿನ ಭ್ರೂಣಭಾಗ ಮತ್ತು ಗರ್ಭಾಶಯದ ಭಾಗಗಳ ನಡುವಿನ ಸಂಪರ್ಕದ ನಿಕಟತೆಯನ್ನು ಆಧರಿಸಿ ನಾಲ್ಕು ವಿಧಗಳಾಗಿ ವಿಂಗಡಿಸಬಹುದು. 1) ಎಪಿಥೀಲಿಯೋ ಕೋರಿಯಲ್ ಪ್ಲಾಸೆಂಟ 2) ಸಿಂಡೆಸ್ಮೋ ಕೋರಿಯಲ್ ಪ್ಲಾಸೆಂಟ 3) ಎಂಡೋಥೀಲಿಯೋ ಕೋರಿಯಲ್ ಪ್ಲಾಸೆಂಟ 4) ಹೀಮೋಕೋರಿಯಲ್ ಪ್ಲಾಸೆಂಟ. ಭ್ರೂಣಭಾಗದ ಪ್ಲಾಸೆಂಟವು ಗರ್ಭಾಶಯದ ಯಾವ ಅಂಗಾಂಶದೊಡನೆ ಭೌತಿಕ ಸಂಪರ್ಕ ಪಡೆದಿದೆ ಎಂಬ ಅಂಶವನ್ನು ಸೂಚಿಸುವ ರೀತಿಯಲ್ಲಿ ಇವುಗಳನ್ನು ಹೆಸರಿಸಲಾಗಿದೆ. 1) ಎಪಿಥೀಲಿಯೊ–ಕೋರಿಯಲ್ ಪ್ಲಾಸೆಂಟ : ಈ ವಿಧದ ಪ್ಲಾಸೆಂಟವು ಭ್ರೂಣ ಮತ್ತು ಗರ್ಭಕೋಶ ಭಾಗದ ಎಲ್ಲ ಅಂಗಾಂಶಗಳನ್ನು (ಅಂದರೆ ಭ್ರೂಣ ರಕ್ತನಾಳ ಭಿತ್ತಿ, ಭ್ರೂಣ ಸಂಪರ್ಕ ಅಂಗಾಂಶ, ಭ್ರೂಣಾಶಯ ಭಿತ್ತಿ ಅಂಗಾಂಶ ಮತ್ತು ಗರ್ಭಕೋಶ ರಕ್ತನಾಳಭಿತ್ತಿ, ಗರ್ಭಕೋಶ ಸಂಪರ್ಕ ಅಂಗಾಂಶ, ಗರ್ಭಕೋಶ ಭಿತ್ತಿ ಅಂಗಾಂಶ) ಒಳಗೊಂಡು ಉಂಟಾಗಿದ್ದು ತಾಯಿ ಮತ್ತು ಭ್ರೂಣ ರಕ್ತಗಳ ನಡುವೆ ಪದಾರ್ಥಗಳ ವಿನಿಮಯ ಈ ಎಲ್ಲಾ ಅಂಗಾಂಶಗಳ (ಒಟ್ಟು ಆರು) ತಡೆಯ ಮೂಲಕವೇ ನಡೆಯುತ್ತದೆ. ಉದಾ : ಕುದುರೆ, ಹಂದಿ, ಕತ್ತೆ, ಇತ್ಯಾದಿ 2) ಸಿಂಡೆಸ್ಮೋ ಕೋರಿಯಲ್ ಪ್ಲಾಸೆಂಟ : ಈ ಬಗೆಯ ಪ್ಲಾಸೆಂಟದಲ್ಲಿ, ತಾಯಿ ಮತ್ತು ಭ್ರೂಣ ರಕ್ತಗಳ ನಡುವಿನ ಅಂತರ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ ಏಕೆಂದರೆ ಭ್ರೂಣಾಶಯ ಭಿತ್ತಿ (ಕೋರಿಯಾನಿಕ್ ವಿಲ್ಲೈ) ಗರ್ಭಕೋಶಭಿತ್ತಿಯನ್ನು ಭೇದಿಸಿ ಗರ್ಭಾಶಯ ಸಂಪರ್ಕ ಅಂಗಾಂಶದಲ್ಲಿ ಹುದುಗಿಕೊಂಡಿವೆ. ಹಾಗಾಗಿ ಪದಾರ್ಥಗಳ ವಿನಿಮಯ ಐದು ಅಂಗಾಂಶಗಳಿಂದಾಗಿರುವ ತಡೆ (ಪ್ಲಾಸೆಂಟ) ಮೂಲಕ ನಡೆಯುತ್ತಿದೆ. ಉದಾ: ಹಸು, ಕುರಿ, ಮೇಕೆ, ಎಮ್ಮೆ, ಇತ್ಯಾದಿ ಪ್ರಾಣಿಗಳು 3) ಎಂಡೋಥೀಲಿಯೊ ಕೋರಿಯಲ್ ಪ್ಲಾಸೆಂಟ: ಈ ಬಗೆಯ ಪ್ಲಾಸೆಂಟದಲ್ಲಿ ಗರ್ಭಕೋಶ ಭಿತ್ತಿ (ಯುಟೆರೈನ್ ಎಪಿಥೀಲಿಯಂ) ಮತ್ತು ಗರ್ಭಕೋಶ (ಗೋಡೆ) ದಲ್ಲಿನ ಸಂಪರ್ಕ ಅಂಗಾಂಶ ಎರಡೂ ನಷ್ಟಹೊಂದಿ ಭ್ರೂಣ ಮತ್ತು ತಾಯಿ ರಕ್ತಗಳ ನಡುವಿನ ಪದಾರ್ಥಗಳ ವಿನಿಮಯ ನಾಲ್ಕು ಅಂಗಾಂಶಗಳ ತಡೆಯ ಮೂಲಕವೇ ನಡೆಯುತ್ತದೆ. ಸಾಮಾನ್ಯವಾಗಿ ಮಾಂಸಾಹಾರಿ ಪ್ರಾಣಿಗಳಲ್ಲಿ ಈ ವಿಧದ ಪ್ಲಾಸೆಂಟ ಕಂಡುಬರುತ್ತದೆ. ಉದಾ: ಬೆಕ್ಕು, ನಾಯಿ, ಹುಲಿ, ಸಿಂಹ, ಇತ್ಯಾದಿ 4) ಹಿಮೋಕೋರಿಯಲ್ ಪ್ಲಾಸೆಂಟ: ಈ ಬಗೆಯ ಪ್ಲಾಸೆಂಟದಲ್ಲಿ ಗರ್ಭಕೋಶ ಭಾಗಗಳಾದ ಎಲ್ಲ ಮೂರು ಅಂಗಾಂಶಗಳು ಅಂದರೆ ಗರ್ಭಕೋಶಭಿತ್ತಿ, ಗರ್ಭಕೋಶ ಸಂಪರ್ಕ ಅಂಗಾಂಶ ಮತ್ತು ಗರ್ಭಕೋಶ ರಕ್ತನಾಳ ಭಿತ್ತಿ ನಷ್ಟ ಹೊಂದಿ ಅಲ್ಲಿ ಉಂಟಾದ ಕುಳಿಗಳಲ್ಲಿ ತಾಯಿ ರಕ್ತವು ತುಂಬಿ ರಕ್ತಕೊಳ್ಳಗಳು ಏರ್ಪಡುತ್ತವೆ. ಆದರೆ

ಭ್ರೂಣಭಾಗದ ಪ್ಲಾಸೆಂಟ ಎಲ್ಲ ಮೂರು ಅಂಗಾಂಶಗಳು ಸರಿಕ್ರಮದಲ್ಲಿದ್ದು ಭ್ರೂಣ ಭಾಗದ ಚಾಚುಗಳೂ (ವಿಲ್ಲೈ) ತಾಯಿ ರಕ್ತದಿಂದ ತುಂಬಿರುವ ಕುಳಿಗಳಲ್ಲಿ ಮುಳುಗಿ ಪದಾರ್ಥಗಳ ವಿನಿಮಯ ಮಾಡಿಕೊಳ್ಳುತ್ತವೆ. ಇಲ್ಲಿ ತಾಯಿ ರಕ್ತ ಮತ್ತು ಭ್ರೂಣ ರಕ್ತಗಳ ನಡುವಿನ ಅಂತರ ಮತ್ತಷ್ಟು ಕಡಿಮೆಯಾಗಿದೆ. ಉದಾ: ರೊಡೆಂಟುಗಳು ಇತ್ಯಾದಿ

ಎಪಿಥೀಲಿಯೋ ಕೊರಿಯಲ್ ಪ್ಲಾಸೆಂಟದಲ್ಲಿ ತಾಯಿ ಭಾಗ ಮತ್ತು ಭ್ರೂಣ ಭಾಗಗಳ ನಡುವಿನ ನಿಕಟತೆ ಇತರೆ ವಿಧದ ಪ್ಲಾಸೆಂಟಗಳಿಗೆ ಹೋಲಿಸಿದರೆ ಕಡಿಮೆಯೆ ಆಗಿರುತ್ತದೆ. ಆದುದರಿಂದ ಜನನದ ವೇಳೆ ಭ್ರೂಣ ಭಾಗದ ಕೊರಿಯಾನಿಕ್ ವಿಲ್ಲೈಗಳು (ಚಾಚುಗಳು) ಗರ್ಭಕೋಶ ಭಾಗದ ಕುಳಿಗಳಿಂದ ಸುಲಭವಾಗಿ ಬೇರ್ಪಟ್ಟು, ಕೈ ಬೆರಳು ಚೀಲದಿಂದ ಬೆರಳುಗಳು ಬೇರ್ಪಟ್ಟು ಹೊರಬರುವಂತೆ, ಗರ್ಭ ಕೋಶಭಾಗದ ಪ್ಲಾಸೆಂಟವನ್ನು ಗಾಯಗೊಳಿಸದೆ ಹೊರಬರುತ್ತದೆ. ಹೊರಹಾಕಲ್ಪಟ್ಟ ಪ್ಲಾಸೆಂಟವು ಭ್ರೂಣ ಭಾಗದ್ದು ಮಾತ್ರವಾಗಿರುತ್ತದೆ. ಆದುದರಿಂದ ಈ ಪ್ಲಾಸೆಂಟವನ್ನು ನಾನ್ ಡೆಸಿಡ್ಯುಯೇಟ್ ಪ್ಲಾಸೆಂಟ ಎಂದು ಕೂಡ ಕರೆಯುತ್ತಾರೆ. ಉಳಿದ ಬಗೆಯ ಪ್ಲಾಸೆಂಟ ರಚನೆಗಳಲ್ಲಿ ತಾಯಿಭಾಗ ಮತ್ತು ಭ್ರೂಣ ಭಾಗಗಳ ನಡುವಿನ ನಿಕಟತೆ ಹೆಚ್ಚಿದ್ದು ಜನನದ ಅನಂತರ ಭ್ರೂಣದ ಕೊರಿಯಾನಿಕ್ ವಿಲ್ಲೈ (ಚಾಚುಗಳು) ಗರ್ಭಾಶಯ ಭಾಗದಿಂದ ಬೇರ್ಪಡುವಾಗ ಗರ್ಭಾಶಯ ಅಂಗಾಂಶ ಹರಿದು ಮಾಸುವಿನೊಡನೆ ಹೊರಹಾಕಲ್ಪಡುತ್ತದೆ. ಆಗ ರಕ್ತಸ್ರಾವವೂ ಆಗುತ್ತದೆ. ಈ ರೀತಿ ಹರಿದು ಹೊರಹಾಕಲ್ಪಟ್ಟ ಗರ್ಭಕೋಶದ ಭಾಗ ಡೆಸಿಡ್ಯುವ ಮತ್ತು ಆ ಬಗೆಯ ಪ್ಲಾಸೆಂಟ ಡೆಸಿಡ್ಯುಯೇಟ್ ಪ್ಲಾಸೆಂಟ. ಕೆಲ ಪ್ರಾಣಿಗಳಲ್ಲಿ ಉದಾಹರಣೆಗೆ ಮೋಲ್, ಪ್ಲಾಸೆಂಟಾದ ಯಾವ ಭಾಗವೂ ಪ್ರಸವನಂತರ ಹೊರಹಾಕಲ್ಪಡುವುದಿಲ್ಲ. ಆದರೆ ಪ್ಲಾಸೆಂಟವನ್ನು ತಾಯಿ ದೇಹವೇ ಅರಗಿಸಿಕೊಳ್ಳುತ್ತದೆ. ಈ ಬಗೆಯದನ್ನು ಕಾಂಟ್ರ ಡೆಸಿಡ್ಯುಯೇಟ್ ಪ್ಲಾಸೆಂಟ ಎನ್ನಲಾಗಿದೆ.

ಇ) ಪ್ಲಾಸೆಂಟದ ಮೇಲ್ಮೈ ಚಾಚುವಿಕೆ (ವಿಲ್ಲೈ) ಗಳ ವಿನ್ಯಾಸವನ್ನು ಆಧರಿಸಿ ವಿವಿಧ ಪ್ರಾಣಿಗಳಲ್ಲಿ ಕಂಡುಬರುವ ಪ್ಲಾಸೆಂಟಗಳನ್ನು 6 ಬಗೆಗಳಾಗಿ ವಿಂಗಡಿಸುತ್ತಾರೆ. 1) ಡಿಫ್ಯೂಸ್ ಪ್ಲಾಸೆಂಟ (ವಿಸ್ತೃತ ಪ್ಲಾಸೆಂಟ): ಪ್ಲಾಸೆಂಟದ ಹೊರ ಮೇಲ್ಮೈ ವಿಲ್ಲೈ (ಚಾಚುವಿಕೆ) ಗಳು ಸಮಾನವಾಗಿ ಏರ್ಪಟ್ಟಿರುವುದು. ಉದಾ: ಹಂದಿ, ತಿಮಿಂಗಿಲ ಇತ್ಯಾದಿ. 2) ಕಾಟಿಲಿಡನರಿ ಪ್ಲಾಸೆಂಟ: ವಿಲ್ಲೈಗಳು ವಿಸ್ತೃತವಾಗಿ ಏರ್ಪಡದೆ, ಹಲವಾರು ವಿಲ್ಲೈ (ಚಾಚುವಿಕೆಗಳು) ಗುಂಪು ಗುಂಪಾಗಿ ಅಲ್ಲಲ್ಲಿ ಗುಚ್ಛದಂತೆ ಏರ್ಪಟ್ಟು ನೋಡಲು ಪ್ಲಾಸೆಂಟ ಮೇಲ್ಮೈನಲ್ಲಿ ಅಂಗಿ ಗುಂಡಿಗಳನ್ನು ಅಲ್ಲಲ್ಲಿ ಜೋಡಿಸಿರುವಂತೆ ಕಾಣುವುದು. ಉದಾ: ಹಸು, ಕುರಿ, ಜಿಂಕೆ ಇತ್ಯಾದಿ. 3) ಇಂಟರ್‌ಮೀಡಿಯೇಟ್ ಪ್ಲಾಸೆಂಟ: ಗುಚ್ಛ ರೂಪದ ವಿಲ್ಲೈ ವಿನ್ಯಾಸದ ಜೊತೆ ಅಲ್ಲಲ್ಲಿ ಚದುರಿದಂತೆ ಪ್ರತ್ಯೇಕ ವಿಲ್ಲೈಗಳು ಏರ್ಪಟ್ಟಿರುವುದು ಉದಾ : ಒಂಟೆ, ಜಿರಾಫೆ. 4) ಝೋನರಿ ಪ್ಲಾಸೆಂಟ: ಉದ್ದವಾದ ಬ್ಲಾಸ್ಟೊಸಿಸ್ಟ್ ಮೇಲೆ ಅಡ್ಡ ಪಟ್ಟಿಯಾಕಾರದಲ್ಲಿ ವಿಲ್ಲೈಗಳು ಉಂಟಾಗಿರುವುದು ಉದಾ: ಆನೆ, ಕೆಲ ಮಾಂಸಾಹಾರಿ ಪ್ರಾಣಿಗಳು. 5) ಡಿಸ್ಕಾಯಿಡಲ್ ಪ್ಲಾಸೆಂಟ: ಬ್ಲಾಸ್ಟೊಸಿಸ್ಟ್‌ನ ಮೇಲೆ, ವಿಲ್ಲೈ ನಿರ್ದಿಷ್ಟ ಭಾಗದಲ್ಲಿ ಏರ್ಪಟ್ಟು, ಆ ಭಾಗ ತಟ್ಟೆಯಾಕಾರದಲ್ಲಿ ಕಾಣುತ್ತದೆ. ಉದಾ : ಮೊಲ, ಬಾವಲಿ ಇತ್ಯಾದಿ. 6) ಮೆಟಡಿಸ್ಕಾಯಿಡಲ್ ಪ್ಲಾಸೆಂಟ: ಪ್ರಾರಂಭದಲ್ಲಿ ಬ್ಲಾಸ್ಟೊಸಿಸ್ಟ್ ಗರ್ಭಕೋಶದ ಅಂಗಾಂಶದಲ್ಲಿ ಸಂಪೂರ್ಣ ಹುದುಗಿದ್ದು, ತನ್ನ ಸುತ್ತೆಲ್ಲ ಚಾಚುವಿಕೆಗಳನ್ನು ಹೊಂದಿದ್ದು, ಕ್ರಮೇಣ ಬ್ಲಾಸ್ಟೊಸಿಸ್ಟ್ ಗರ್ಭಕೋಶದ ಕುಹರದದಲ್ಲಿ ಚಾಚಿಕೊಳ್ಳುತ್ತದೆ. ಬ್ಲಾಸ್ಟೊಸಿಸ್ಟ್ ಗರ್ಭಕೋಶ ಸಂಪರ್ಕಿಸಿದ ಭಾಗದಲ್ಲಿ ಮಾತ್ರ ವಿಲ್ಲೈ ಚಾಚುವಿಕೆಗಳು ಉಳಿದುಕೊಂಡು ಉಳಿದ ಭಾಗದಲ್ಲಿನ ವಿಲ್ಲೈಗಳು ಕಾಣೆಯಾಗುತ್ತವೆ. ಉದಾ: ಪ್ರೈಮೇಟುಗಳು.

ಪ್ಲಾಸೆಂಟ ರಚನೆಯ ವಿಕಾಸ : ಭ್ರೂಣಾಶಯದ ಪದರಗಳನ್ನು (ಆಮ್ನಿಯಾನ್, ಕೊರಿಯಾನ್, ಯೋಕ್‌ಸ್ಯಾಕ್ ಮತ್ತು ಅಲಂಟಾಯಿಸ್)ಹೊಂದಿರುವುದು ಆಮ್ನಿಯೋಟಗಳ (ಪಕ್ಷಿ, ಸರೀಸೃಪ ಮತ್ತು ಸ್ತನಿ) ಒಂದು ಸಾಮಾನ್ಯ ಗುಣ. ಆಮ್ನಿಯೋಟಗಳಲ್ಲದ ಕಶೇರುಕಗಳಲ್ಲಿ (ಸೈಕ್ಲೊಸ್ಟೊಮ್ಯಾಟ್ ಅಥವಾ ಚಕ್ರಾಸ್ಯಗಳು, ಮೀನುಗಳು ಮತ್ತು ದ್ವಿಚರಿಗಳು) ಸರಳ ಆದಿ ರೂಪದ ಯೋಕ್‌ಸ್ಯಾಕ್ ಇರುತ್ತದೆ. ಆದರೆ ಮಾನೊಟ್ರೆಮೇಟ ಮತ್ತು ಕೆಲ ಮಾರ್ಸುಪಿಯಲ್‌ಗಳನ್ನು ಹೊರತುಪಡಿಸಿ ಎಲ್ಲ ಸ್ತನಿಗಳಲ್ಲಿ ಭ್ರೂಣದ ಅಲಂಟಾಯಿಸ್ ಒದಗಿಸಿದ ರಕ್ತನಾಳಗಳನ್ನು ಹೊಂದಿದ ಕೊರಿಯೊ ಅಲಂಟಾಯಿಕ್ ಪ್ಲಾಸೆಂಟವು ಕಂಡುಬರುತ್ತದೆ. ಕೋರಿಯೊ–ಅಲಂಟಾಯಿಕ್ ಪ್ಲಾಸೆಂಟವು ಕೆಲ ಮರಿ ಹಾಕುವ ಸರೀಸೃಪ ಪ್ರಭೇದಗಳಲ್ಲಿಯೂ ವಿಶೇಷವಾಗಿ ಕಂಡುಬರುತ್ತದೆ.

ಯೋಕ್‌ಸ್ಯಾಕ್ ಒದಗಿಸಿದ ರಕ್ತನಾಳಗಳನ್ನು ಹೊಂದಿ ಉತ್ಪತ್ತಿಯಾದ ವೈಟಲೈನ್ ಪ್ಲಾಸೆಂಟವು ಒಂದಲ್ಲ ಒಂದು ರೂಪದಲ್ಲಿ, ತಾತ್ಕಾಲಿಕವಾಗಿಯಾದರೂ, ಎಲ್ಲಾ ಮಾರ್ಸುಪಿಯಲ್‌ಗಳು ಮತ್ತು ಬಹುತೇಕ ಪ್ಲಾಸೆಂಟಲ್ ಸ್ತನಿಗಳಲ್ಲೂ ಕಂಡುಬರುತ್ತದೆ. ಮೊಟ್ಟೆ ಇಡುವ ಬದಲು ಮರಿ ಹಾಕುವ ಕ್ರಮ ಅನುಸರಿಸುವ ಕೆಲ ಮೀನುಗಳಲ್ಲಿ ಕೂಡ ಪ್ಲಾಸೆಂಟಾದ ಪಾತ್ರ ನಿರ್ವಹಿಸಲು ವೈಟಲೈನ್ ಅಭಿಧಮನಿಗಳ ಗುಚ್ಛವು ಅಂಡಾಶಯದ ಗೋಡೆಗೆ (ಈ ಪ್ರಾಣಿಗಳಲ್ಲಿ ಗರ್ಭಕೋಶ ಇರುವುದಿಲ್ಲ) ನಿಕಟವಾಗಿ ಹೊಂದಿಕೊಂಡಿರುತ್ತದೆ. ಇಲ್ಲಿ ಭ್ರೂಣಾಭಿವೃದ್ಧಿಯು ಅಂಡಾಶಯದಲ್ಲಿಯೇ ನಡೆಯುತ್ತದೆ.

ಭ್ರೂಣಾಶಯ ಅದರಲ್ಲೂ ಪ್ಲಾಸೆಂಟ ರಚನೆಯು ಜೀವಿಗಳಲ್ಲಿ ಅಭಿವೃದ್ಧಿ ಹೊಂದಿ ವಿಕಾಸ ಹೊಂದಿರುವ ಬಗೆಯು ಜೀವ ವಿಕಾಸ ವಿಜ್ಞಾನಿಗಳಿಗೆ ಸಾಕಷ್ಟು ಗೊಂದಲ ಮತ್ತು ಕುತೂಹಲ ಕೆರಳಿಸಿದ ವಿಷಯವಾಗಿತ್ತು. ಶಾಸ್ತ್ರೀಯ ವರ್ಗೀಕರಣ ಕ್ರಮದಂತೆ, ಒಂದೇ ವರ್ಗಕ್ಕೆ (ಆರ್ಡರ್) ಸೇರಿದ ಪ್ರಾಣಿಗಳು ಭಿನ್ನ ಮಾದರಿಯ ಪ್ಲಾಸೆಂಟಗಳನ್ನು ಹೊಂದಿರುವುದು ಅಂತೆಯೆ ವಿಭಿನ್ನ ವರ್ಗಗಳಿಗೆ ಸೇರಿದ ಪ್ರಾಣಿಗಳಲ್ಲಿ ತದ್ರೂಪು ಮಾದರಿಯ ಪ್ಲಾಸೆಂಟಗಳು ಕಂಡು ಬರುವುದು ಇದಕ್ಕೆ ಕಾರಣ.

ಈ ಕುತೂಹಲಕರ ಅಂಶಗಳಿಂದ ತಿಳಿದುಬರುವುದೇನೆಂದರೆ, ಮೊಟ್ಟೆ ಇಡುವ ಪ್ರಾಣಿಗಳಿಂದ ವಿಕಾಸಹೊಂದಿ ಮರಿಹಾಕುವ ವಿಧಾನ ರೂಢಿಸಿಕೊಂಡ ಎಲ್ಲ ಪ್ರಾಣಿಗಳು ಬೇರೆ ಬೇರೆ ಪರಿಸರದಲ್ಲಿ ಬೇರೆಬೇರೆ ರೀತಿಯ ಜೀವನಕ್ರಮಕ್ಕೆ ಹೊಂದಿಕೊಂಡು ಜೀವಿಸಲು ಪ್ರಾರಂಭಿಸಿದ್ದರೂ, ತಮ್ಮ ದೇಹದ ಒಳಗಡೆ ಭ್ರೂಣದ ಉತ್ತಮ ಅಭಿವೃದ್ಧಿಗೆ ಅವಶ್ಯಕವಾದ ಮಾರ್ಪಾಡುಗಳನ್ನು ಹೊಂದಲು ಪ್ರತಿ ಪ್ರಭೇದವೂ ಸ್ವತಂತ್ರವಾಗಿ ಬೇರೆ ಬೇರೆ ಕಾಲಗಳಲ್ಲಿ ಪ್ರಯತ್ನಿಸಿವೆ. ಅದೇ ರೀತಿ ಉತ್ತಮ ಮಟ್ಟದ ಪ್ಲಾಸೆಂಟ ಹೊಂದುವ ಪ್ರಯತ್ನವೂ ಬೇರೆ ಬೇರೆ ಪ್ರಾಣಿ ಪ್ರಭೇದಗಳಲ್ಲಿ ಬೇರೆ ಬೇರೆ ಮಟ್ಟದಲ್ಲಿ ಯಶಸ್ವಿಯಾಗಿದೆ. ಹಾಗಾಗಿ ಬೇರೆ ಬೇರೆ ಗುಂಪಿನ ಪ್ರಾಣಿಗಳಲ್ಲಿನ ಪ್ಲಾಸೆಂಟದ ವಿನ್ಯಾಸ ಮತ್ತು ಆಕಾರಗಳ ನಡುವಿನ ಹೋಲಿಕೆ ಅಥವಾ ವ್ಯತ್ಯಾಸಗಳು, ಶಾಸ್ತ್ರೀಯ ವರ್ಗೀಕರಣ ನಿಯಮದಿಂದ ಹೊರತಾದದ್ದು.

ಮಾನವನಲ್ಲಿ ಪ್ಲಾಸೆಂಟಾದ ರಚನೆ : ಮಾನವನ ಸಂತಾನೋತ್ಪತ್ತಿ ಕ್ರಿಯೆಯಲ್ಲಿ, ಅಂಡಾಶಯ ನಳಿಕೆ (ಫೆಲೋಪಿಯನ್ ಟ್ಯೂಬ್) ಯಲ್ಲಿ ಫಲಿತಗೊಂಡ ಅಂಡಾಣು (ಜೈಗೋಟ್) ನಿಧಾನವಾಗಿ ಗರ್ಭಾಶಯದ ಕಡೆಗೆ ಸಾಗುತ್ತ ಬಂದು ಸಾಮಾನ್ಯವಾಗಿ ಗರ್ಭಾಶಯದ ಮಧ್ಯವಲಯದಲ್ಲಿ ನೆಲೆಯೂರುತ್ತದೆ. ಈ ಮಧ್ಯೆ ಸತತ ವಿಭಜನೆಗೊಳಪಟ್ಟು ಜೈಗೋಟ್, ಏಕಕೋಶಾವಸ್ಥೆಯಿಂದ ಬಹುಕೋಶಾಕೃತಿಯ ರಚನೆಗಳಾದ, ಕ್ರಮವಾಗಿ ಮೂರು ನಂತರ ಎರಡು ಕುಹರಗಳನ್ನು ಹೊಂದಿದ ಬ್ಲಾಸ್ಟೊಸಿಸ್ಟ್ ಆಗುತ್ತದೆ. ಬ್ಲಾಸ್ಟೊಸಿಸ್ಟ್ ಹಂತ ತಲುಪಲು ಜೈಗೋಟ್‌ಗೆ ಎರಡು ವಾರಗಳ ಕಾಲಾವಕಾಶ ಬೇಕಾಗುತ್ತದೆ. ಬ್ಲಾಸ್ಟೊಸಿಸ್ಟ್‌ನ ಹೊರಮೇಲ್ಮೈ ಮೇಲೆ ಬೆರಳಿನಾಕಾರದ ಚಾಚುಕೆಗಳು (ಕೊರಿಯಾನಿಕ್ ವಿಲ್ಲೈ) ಬೆಳೆದುಕೊಳ್ಳುತ್ತವೆ. ಪ್ಲಾಸೆಂಟ ರಚನೆಗೆ ಭ್ರೂಣದ ಕೊಡುಗೆ ಪ್ರಾರಂಭವಾಗುವುದು ಈ ಮೂಲಕವೆ. ಇಲ್ಲಿ ಪ್ರಮುಖ ಭ್ರೂಣಾಶಯಗಳಲ್ಲಿ ಒಂದಾದ ಕೋರಿಯನ್ ಭ್ರೂಣಾಶಯದ ಪಾತ್ರ ಮಹತ್ವದ್ದು. ಈ ಬೆರಳಿನಾಕಾರದ ಚಾಚುಗಳು ಕೋರಿಯನ್‌ನ ವಿಸ್ತೀರ್ಣ ಹೆಚ್ಚುವಂತೆ ಮಾಡುತ್ತವೆ ತನ್ಮೂಲಕ ಜೈವಿಕ ಪದಾರ್ಥಗಳ ವಿನಿಮಯ ಕ್ರಿಯಯಲ್ಲಿ ಹೆಚ್ಚು ಜೀವಕೋಶಗಳು ತೊಡಗಬಹುದು. ಚಾಚುಗಳ (ವಿಲ್ಲೈ) ಒಳಕ್ಕೆ ಕೊರಿಯನ್ ಅಂಗಾಂಶವೂ, ಭ್ರೂಣದ ರಕ್ತನಾಳಗಳೂ ಬೆಳೆಯುತ್ತವೆ. ಚಾಚುಗಳು ಕವಲುಗೊಂಡು ಬೆಳೆಯುತ್ತ ತನ್ನ ಸಂಪರ್ಕಕ್ಕೆ ಬಂದ ಗರ್ಭಾಶಯದ ಭಿತ್ತಿ ಭಾಗದ ಕೋಶಗಳನ್ನು ನಾಶಮಾಡಿ ಅರಗಿಸಿಕೊಳ್ಳುತ್ತ ಗರ್ಭಾಶಯ ಭಿತ್ತಿಯ ಆಳಕ್ಕೆ ತಲುಪುತ್ತವೆ. ಕೆಲ ವಿಲ್ಲೈ (ಚಾಚುಗಳು) ಅಲ್ಲಿನ ರಕ್ತನಾಳಗಳನ್ನು ಹರಿದ, ಪರಿಣಾಮವಾಗಿ ಅಲ್ಲಿ ರಕ್ತ ಕೊಳ್ಳಗಳು (ಸೈನುಸಸ್) ಉಂಟಾಗುತ್ತವೆ. ಈ ರಕ್ತಕೊಳ್ಳಗಳಲ್ಲೇ ಕೆಲ ವಿಲ್ಲೈ (ಚಾಚುಗಳು) ಮುಳುಗಿಕೊಂಡು ಭ್ರೂಣ ರಕ್ತ ಮತ್ತು ತಾಯಿ ರಕ್ತಗಳ ನಡುವಿನ ಅಂಗಾಂಶಗೋಡೆಯ ಅಂತರವನ್ನು ತಗ್ಗಿಸುತ್ತವೆ. ಕ್ರಮೇಣ ಚಾಚುಗಳ ಆಕ್ರಮಣಾ ಸಾಮರ್ಥ್ಯ ಕುಗ್ಗುತ್ತದೆ, ಕಾರಣವಾಗಿ ಕೆಲ ಚಾಚುಗಳು ಗರ್ಭಾಶಯದಲ್ಲಿ ಹುದುಗಿ ಬೇರುಗಳಂತೆ ನೆಲೆ ನಿಲ್ಲುತ್ತವೆ. ಇನ್ನು ಕೆಲವು ಚಾಚು ಬಲೆಗಳು ತಾಯಿಯ ರಕ್ತದಿಂದ ಆವರಿಸಲ್ಪಟ್ಟಿರುತ್ತವೆ.

ಪ್ಲಾಸೆಂಟಾ ರಚನೆಗೆ ತನ್ನ ಗರ್ಭಾಶಯ ಭಿತ್ತಿಯ ಅಂಗಾಂಶಗಳ (ಎಂಡೊ ಮೆಟ್ರಿಯಂ) ರೂಪದಲ್ಲಿ, ಕೋರಿಯಾನಿಕ್ ವಿಲ್ಲೈ (ಚಾಚುಗಳ) ಆಕಾರಗಳಿಗೆ ಪ್ರತಿಯಾಗಿ ಸರಿಹೊಂದಿ ಅವುಗಳನ್ನು ಬಿಗಿಯಾಗಿ ಹಿಡಿದಿಡುವಂತೆ ಮಾಡಿ ಪ್ಲಾಸೆಂಟದ ಉತ್ಪತ್ತಿಗೆ ತಾಯಿಯು ತನ್ನ ಭಾಗದ ಕೊಡುಗೆ ನೀಡಿರುತ್ತಾಳೆ. ಅಂದಮೇಲೆ, ಮಾಸು ಅಥವಾ ಪ್ಲಾಸೆಂಟ ಭಾಗಶಃ ತಾಯಿಯ ಗರ್ಭಾಶಯ ಭಿತ್ತಿಯ ಅಂಗಾಂಶಗಳಿಂದ ಮತ್ತು ಭಾಗಶಃ ಭ್ರೂಣದ ಅಂಗಾಂಶಗಳಿಂದ ರಚಿತವಾಗಿರುವುದು ಖಚಿತವಾಗುತ್ತದೆ.

ಪ್ಲಾಸೆಂಟ ಬೆಳೆವಣಿಗೆ ಸಮಯಕ್ಕೆ ಸರಿಯಾಗಿ ಭ್ರೂಣದ ಹೊಕ್ಕುಳಬಳ್ಳಿಯ ವಿಕಸನವಾಗಿ ಅದರ ಮೂಲಕವೆ ಭ್ರೂಣ ಪ್ಲಾಸೆಂಟದೊಡನೆ ಸಂಪರ್ಕ ಹೊಂದಿರುತ್ತದೆ. ಹೊಕ್ಕುಳಬಳ್ಳಿಯ ಎರಡು ಅಪಧಮನಿಗಳು ಭ್ರೂಣದ ಹೃದಯದಿಂದ ರಕ್ತವನ್ನು ಚಾಚುಗಳಿಗೆ (ವಿಲ್ಲೈ) ಪೂರೈಕೆ ಮಾಡುತ್ತವೆ. ಪ್ರತಿಯಾಗಿ ಚಾಚುವಿನಿಂದ ರಕ್ತವು ಒಂದೇ ಅಭಿಧಮನಿಯ ಮೂಲಕ ಹೊಕ್ಕುಳ ಬಳ್ಳಿಯ ಮಾರ್ಗವಾಗಿ ಭ್ರೂಣದ ಹೃದಯ ಸೇರುತ್ತದೆ. ಇದರಿಂದ ತಿಳಿಯುವುದೇನೆಂದರೆ ಚಾಚುಗಳಲ್ಲಿ ಪರಿಚಲಿಸುತ್ತಿರುವುದು ಭ್ರೂಣದ ರಕ್ತ ಮಾತ್ರ. ಭ್ರೂಣ ರಕ್ತನಾಳ ಭಿತ್ತಿಯೂ ಮತ್ತು ಚಾಚುವಿನ ಅಂಗಾಂಶವೂ ಭ್ರೂಣದಲ್ಲಿ ಹರಿಯುತ್ತಿರುವ ರಕ್ತವನ್ನು, ಚಾಚುವನ್ನು ಆವರಿಸಿರುವ ತಾಯಿಯ ರಕ್ತದಿಂದ ಬೇರ್ಪಡಿಸಿರುತ್ತವೆ.



ಮಾನವನಲ್ಲಿ ಪ್ಲಾಸೆಂಟವು ದುಂಡಾಕಾರ ಹೊಂದಿದ್ದು ಪೂರ್ತಿ ಅಭಿವೃದ್ಧಿ ಹೊಂದಿದ ಅನಂತರ ಸರಾಸರಿ 600 ಗ್ರಾಂ ತೂಕವಿರುವ, ದೊಡ್ಡ ಅಂಗವಾಗಿದೆ. 15–20 ಸೆಂಮೀ ನಷ್ಟು ವ್ಯಾಸ ಮತ್ತು ಮಧ್ಯಭಾಗದಲ್ಲಿ ಗರಿಷ್ಠ 3 ಸೆಂಮೀ ನಷ್ಟು ದಪ್ಪನಾಗಿರುತ್ತದೆ. ತಟ್ಟೆಯಾಕಾರದಲ್ಲಿರುವ ಈ ರಚನೆ ಸ್ಪಂಜಿನಂತೆ ಅಗಾಧ ಪ್ರಮಾಣದಲ್ಲಿ ರಕ್ತವನ್ನು ತನ್ನ ರಕ್ತನಾಳಗಳಲ್ಲಿ ಅಡಗಿಸಿಕೊಂಡಿರುತ್ತದೆ. ಪ್ರತಿಬಾರಿ ತಾಯಿಯ ದೇಹದ ಒಟ್ಟು ರಕ್ತ ಪರಿಚಲನೆಯ ಶೇಕಡ ಹತ್ತರಷ್ಟು ಪ್ಲಾಸೆಂಟ ಮೂಲಕ ಹರಿಯುತ್ತದೆ.

ಪ್ಲಾಸೆಂಟದ ಕಾರ್ಯಗಳು: ಚಾಚುಗಳ (ವಿಲ್ಲೈ) ಹೊರ ಭಿತ್ತಿ ಮೇಲ್ಮೈನ ಪ್ರತಿಜೀವಕೋಶಗಳು ಕೂಡ ಸೂಕ್ಷ್ಮ ಚಾಚು (ಮೈಕ್ರೊವಿಲ್ಲೈ) ಗಳನ್ನು ಹೊಂದುವುದರ ಮೂಲಕ ಪದಾರ್ಥಗಳ ವಿಸ್ತರಣೆ ಕ್ರಿಯೆಗೆ ಹೆಚ್ಚು ಸ್ಥಳಾವಕಾಶವಾಗಿದೆ. ಚಾಚುಗಳಲ್ಲಿನ ಕೋಶಗಳು ಹೆಚ್ಚಿನ ಸಂಖ್ಯೆಯಲ್ಲಿ ಮೈಟೊಕಾಂಡ್ರಿಯಗಳನ್ನು ಹೊಂದಿದ್ದು ಅವು ಶಕ್ತಿಯನ್ನು ವ್ಯಯಿಸಿ ಸಾಗಿಸಬೇಕಾದ ಕೆಲ ಪದಾರ್ಥಗಳ ಸಾಗಾಣಿಕೆಗೆ ಬೇಕಾದ ಶಕ್ತಿಯನ್ನು ಒದಗಿಸುತ್ತವೆ. ಪೀನೊಸೈಟೊಸಿಸ್ ವಿಧಾನದಿಂದಲೂ ಪದಾರ್ಥಗಳ ಪಡೆಯುವಿಕೆ ನಡೆಯುತ್ತದೆ.

1.ತಾಯಿ ಮತ್ತು ಭ್ರೂಣದ ನಡುವೆ ಉಪಯುಕ್ತ ಪದಾರ್ಥಗಳ ವಿನಿಮಯ: ನೀರು ತಾಯಿಯ ರಕ್ತದಿಂದ ಪ್ಲಾಸೆಂಟ ಮೂಲಕ ಭ್ರೂಣದ ರಕ್ತವನ್ನು ಆಸ್ಮೊಸಿಸ್ ವಿಧಾನದಿಂದ ಸೇರುತ್ತದೆ. ಪೋಷಕ ವಸ್ತುಗಳಾದ ಗ್ಲೂಕೋಸ್, ಅಮೈನೊ ಆಮ್ಲ, ಲಿಪಿಡ್ಸ್, ಖನಿಜ ಲವಣಗಳು ಪುರಸ್ಕೃತ ವಿಸರಣೆ (ಫೆಸಿಲಿಟೇಟೆಡ್ ಡಿಫ್ಯೂಷನ್) ವಿಧಾನದಿಂದ ಪ್ಲಾಸೆಂಟವನ್ನು ಹಾಗು ಭ್ರೂಣಶಿಶುವನ್ನು ತಲುಪುತ್ತವೆ. ಸೋಡಿಯಂ, ಪೊಟಾಸಿಯಂ ಮತ್ತು ಕ್ಯಾಲ್ಸಿಯಂ ಅಯಾನುಗಳು ಹಾಗೂ ಕೆಲ ಪ್ರೊಟೀನ್ ಅಣುಗಳು ಶಕ್ತಿ ವ್ಯಯಿಸಿ ಸಾಗಿಸುವ ವಿಧಾನ (ಆಕ್ಟಿವ್ ಟ್ರಾನ್ಸ್ಪೋರ್ಟ್) ದಿಂದ ಪ್ಲಾಸೆಂಟ ಮೂಲಕ ಭ್ರೂಣವನ್ನು ಸೇರುತ್ತವೆ.

ಶ್ವಾಸಾನಿಲಗಳಾದ ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್‌ಗಳು ಸರಳ ವಿಸರಣ ಕ್ರಿಯೆಯ ಮೂಲಕ ವಿನಿಮಯಗೊಳ್ಳುತ್ತವೆ. ಆಮ್ಲಜನಕವು ತಾಯಿ ರಕ್ತದಿಂದ ಭ್ರೂಣದ ರಕ್ತಕ್ಕೂ ಮತ್ತು ಇಂಗಾಲದ ಡೈಆಕ್ಸೈಡ್ ಭ್ರೂಣ ರಕ್ತದಿಂದ ತಾಯಿ ರಕ್ತಕ್ಕೂ ವಿನಿಮಯಗೊಳ್ಳುತ್ತವೆ. ಎರಡೂ ಪರಿಚಲನಾ ವ್ಯೂಹದಲ್ಲಿನ ರಕ್ತಗಳಲ್ಲಿ ಪ್ರತಿ ಅನಿಲವು ಹೊಂದಿರುವ ಸಾಪೇಕ್ಷ ಒತ್ತಡದಲ್ಲಿನ ವ್ಯತ್ಯಾಸವು ವಿಸರಣಾಕ್ರಿಯೆಯಲ್ಲಿ ಸಹಕಾರಿಯಾಗಿರುತ್ತದೆ. ಇಂಗಾಲದ ಡೈಆಕ್ಸೈಡ್ ಅಲ್ಲದೆ ಭ್ರೂಣ ಉತ್ಪತ್ತಿಮಾಡುವ ಪ್ರಮುಖ ತ್ಯಾಜ್ಯ ವಸ್ತುಗಳಾದ ಸಾರಜನಕಯುಕ್ತ ಯೂರಿಯಾ ಕೂಡ ವಿಸರಣೆ ವಿಧಾನದಿಂದ ಪ್ಲಾಸೆಂಟ ಮೂಲಕ ಭ್ರೂಣದಿಂದ ತಾಯಿಯ ದೇಹವನ್ನು ಸೇರಿ ತಾಯಿಯ ಮೂತ್ರಜನಕಾಂಗಗಳ ಸಹಾಯದಿಂದ ಹೊರಹಾಕಲ್ಪಡುತ್ತದೆ. ಪ್ರತಿರೋಧಕ ವಸ್ತುಗಳು (ಆಂಟಿಬಾಡಿಸ್) ತಾಯಿಯ ರಕ್ತದಿಂದ ಭ್ರೂಣದ ರಕ್ತಕ್ಕೆ ಪ್ಲಾಸೆಂಟ ಮೂಲಕ ಸುಲಭವಾಗಿ ಸೇರಿ ಭ್ರೂಣ ಶಿಶುವನ್ನು ಹಲವಾರು ರೋಗಗಳಿಂದ ರಕ್ಷಿಸುತ್ತದೆ. ಇದು ನಿಷ್ಕ್ರಿಯ ರೋಗನಿರೋಧಕತೆ (ಪ್ಯಾಸಿವ್ ಇಮ್ಯುನಿಟಿ). ಕೆಲ ಸಂದರ್ಭಗಳಲ್ಲಿ ತಾಯಿರಕ್ತದಿಂದ ಬಂದ ಪ್ರತಿರೋಧಕ ವಸ್ತುವು ಭ್ರೂಣಕ್ಕೆ ಹಾನಿಕಾರಕವೂ ಆಗಬಹುದು. ಉದಾ: ರಿಸೆಸ್ ಪ್ರತಿರೋಧಕ (ಆರ್‌ಎಚ್ ಫ್ಯಾಕ್ಟರ್) ವಸ್ತು.

2. ಅಂತಃಸ್ರಾವಗಳು: ಪ್ಲಾಸೆಂಟ ಕೇವಲ ವಿನಿಮಯ ಮಾಧ್ಯಮವಾಗಿರದೆ ಒಂದು ಅಂತಃಸ್ರಾವಕ ಗಂಥಿಯೂ ಹೌದು. ಅದು ಸ್ರವಿಸುವ ಹಾರ್ಮೋನುಗಳು ನೇರವಾಗಿ ತಾಯಿಯ ರಕ್ತಕ್ಕೆ ಸೇರಿ ತಾಯಿಯ ಶಾರೀರಿಕ ಕ್ರಿಯೆಗಳ ಮೇಲೆ ಪರಿಣಾಮ ಬೀರುತ್ತವೆ. ಯಶಸ್ವಿ ಗರ್ಭಧಾರಣೆ, ಗರ್ಭಾವಸ್ಥೆ ಮತ್ತು ಪ್ರಸವ ಕ್ರಿಯೆಗಳು ಕೆಲ ಪ್ರಮುಖ ಹಾರ್ಮೋನುಗಳ ಪ್ರಭಾವಕ್ಕೆ ಒಳಪಟ್ಟಿರುತ್ತವೆ. ಅವುಗಳಲ್ಲಿ ಪ್ರೊಜೆಸ್ಟಿರಾನ್ ಎಂಬ ಹಾರ್ಮೋನಿನ ಪಾತ್ರ ವಿಶೇಷವಾದದ್ದು. ಗರ್ಭಧಾರಣೆಯಿಂದ ಗರ್ಭಾವಧಿಯ ಅಂತ್ಯದವರೆಗೆ ಪ್ರೊಜೆಸ್ಟಿರಾನ್ ಸ್ರವಿಕೆ ಸಾಕಷ್ಟು ಪ್ರಮಾಣದಲ್ಲಿ ತಾಯಿಯ ರಕ್ತ ಸೇರುತ್ತಿರಬೇಕು. ಗರ್ಭಾವಸ್ಥೆಯ ಪ್ರಾರಂಭದಲ್ಲಿ ಸುಮಾರು 12 ವಾರಗಳವರೆಗೆ ತಾಯಿಯ ಅಂಡಾಶಯದಲ್ಲಿ ಕಾರ್ಪಸ್ ಲೂಟಿಯಮ್ (ನೋಡಿ ಕಾರ್ಪಸ್ ಲುಟಿಯಮ್) ಎಂಬ ರಚನೆಯು ಪ್ರೊಜೆಸ್ಟಿರಾನ್ ಹಾರ್ಮೋನನ್ನು ಸ್ರವಿಸಿ ಗರ್ಭಾವಸ್ಥೆಯನ್ನು ಕಾಪಾಡುತ್ತದೆ. ಗರ್ಭಧಾರಣೆಯಾದ 3 ತಿಂಗಳ (ಮಾನವರಲ್ಲಿ) ಅನಂತರ ಕಾರ್ಪಸ್ ಲೂಟಿಯಂ ನಶಿಸಿಹೋಗುತ್ತದೆ. ಆಗ ಪ್ರೊಜೆಸ್ಟಿರಾನ್ ಹಾರ್ಮೋನ್‌ನ ಮಟ್ಟ ಕಡಿಮೆಯಾಗದಂತೆ ಮಾಡಿ ಗರ್ಭಾವಸ್ಥೆಯನ್ನು ಸಂಪೂರ್ಣ ಅವಧಿಯವರೆಗೆ ಮುಂದುವರೆಸುವ ಜವಾಬ್ದಾರಿಯನ್ನು ಆ ವೇಳೆಗಾಗಲೇ ಸಂಪೂರ್ಣವಾಗಿ ಅಭಿವೃದ್ಧಿಯಾದ ಪ್ಲಾಸೆಂಟ ಹೊರುತ್ತದೆ. ಗರ್ಭಾವಧಿ ಸಂಪೂರ್ಣಗೊಂಡ ಅನಂತರ ಪ್ಲಾಸೆಂಟವು ತನ್ನ ನೆಲೆಯಿಂದ ಬೇರ್ಪಡಲು ಪ್ರಾರಂಭಿಸುತ್ತದೆ. ಆ ಮೂಲಕ ಪ್ರೊಜೆಸ್ಟಿರಾನ್ ಸ್ರವಿಕೆ ಕೂಡ ಕಡಿಮೆಯಾಗುತ್ತ ಬಂದು ಕೊನೆಗೆ ನಿಂತೇಹೋಗುತ್ತದೆ. ಈ ರೀತಿ ಗರ್ಭಾವಸ್ಥೆಯ ರಕ್ಷಣೆ ಅಂತ್ಯವಾಗಿ ಮಗು ಜನಿಸುತ್ತದೆ. ಈ ರೀತಿ ಪ್ರೊಜೆಸ್ಟಿರಾನ್ ಹಾರ್ಮೋನು ಗರ್ಭಧಾರಣೆ, ಗರ್ಭಾವಸ್ಥೆ, ಮತ್ತು ಜನನ ಎಲ್ಲಾ ಕ್ರಿಯೆಗಳಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಅದನ್ನು ಗರ್ಭಾವಧಿಯ ಹಾರ್ಮೋನು ಎಂದು ಕೂಡ ಕರೆಯುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಗರ್ಭಾವಸ್ಥೆಯ ಸಮಯದಲ್ಲಿ ಪ್ಲಾಸೆಂಟ ಭ್ರೂಣದ ತಾತ್ಕಾಲಿಕ ಫುಪ್ಫುಸ, ಕರುಳು, ಮೂತ್ರಪಿಂಡ, ನಿರ್ನಾಳಗ್ರಂಥಿಗಳ ಕಾರ್ಯನಿರ್ವಹಿಸುತ್ತದೆ.

3. ತಡೆಗೋಡೆ: ದೇಹದಲ್ಲಿ ಯಾವುದೇ ಅಂಗವನ್ನು ಬೇರೆಯವರಿಂದ ಪಡೆದ ಅಂಗದಿಂದ ಕಸಿ ಮಾಡಬೇಕಾದರೆ, ಆ ಅಂಗವು ಆತಿಥೇಯ ದೇಹದೊಂದಿಗೆ ಹೊಂದಾಣಿಕೆ (ಹಿಸ್ಟೊ ಕಂಪ್ಯಾಟಿಬಿಲಿಟಿ) ಯಾಗುವುದು ಅತ್ಯವಶ್ಯಕ. ಇಲ್ಲದಿದ್ದರೆ ಆತಿಥೇಯ ದೇಹವು ಅಂಗವನ್ನು ತಿರಸ್ಕರಿಸುತ್ತದೆ. ಇದಕ್ಕೆ ಕಾರಣ, ಆತಿಥೇಯ ದೇಹದ ಹಾಗು ಕಸಿ ಮಾಡಬೇಕಾಗಿರುವ ಅಂಗದ ಜೀನುಗಳಲ್ಲಿರುವ ವ್ಯತ್ಯಾಸ. ಹಾಗಾದರೆ, ತಾಯಿಯ ದೇಹ, ಬೆಳೆಯುತ್ತಿರುವ ಭ್ರೂಣ ತಂದೆಯಿಂದ ಪಡೆದುಕೊಂಡ ಜೀನುಗಳನ್ನೊಳಗೊಂಡಿದ್ದರೂ ಕೂಡ ಅದನ್ನು ಏಕೆ ತಿರಸ್ಕರಿಸುವುದಿಲ್ಲ ? ತಾಯಿ ಮತ್ತು ಬೆಳೆಯುತ್ತಿರುವ ಭ್ರೂಣದ ಮಧ್ಯವಿರುವ ಪ್ಲಾಸೆಂಟ ಒಂದು ತಡೆಗೋಡೆಯಂತೆ ವರ್ತಿಸಿ, ಭ್ರೂಣದಿಂದುಂಟಾಗುವ ಯಾವುದೇ ಪ್ರತಿರೋಧಕ ಕ್ರಿಯೆಯನ್ನು ಹಲವು ವಿಧಾನಗಳಿಂದ ನಿಯಂತ್ರಿಸಿ, ತಾಯಿಯ ದೇಹವು ಭ್ರೂಣವನ್ನು ತಿರಸ್ಕರಿಸದಂತೆ ಕಾಪಾಡುತ್ತದೆ.

4. ಪ್ಲಾಸೆಂಟ ಶೋಧಕದಿಂದ ತಪ್ಪಿಸಿಕೊಂಡು ಒಳನುಸುಳುವ ಕೆಲ ಹಾನಿಕಾರಕ ಪದಾರ್ಥಗಳು : 1) ಧೂಮಪಾನ ಪರಿಣಾಮ: ಗರ್ಭಧರಿಸಿದ ತಾಯಿ ಧೂಮಪಾನ ಮಾಡಿದರೆ ಆ ಹೊಗೆಯಲ್ಲಿನ ಇಂಗಾಲದ ಮಾನಾಕ್ಸೈಡ್ ಮತ್ತು ನಿಕೋಟಿನ್ ಕಣಗಳು ತಾಯಿಯ ರಕ್ತ ಸೇರುವುದಲ್ಲದೆ ಪ್ಲಾಸೆಂಟ ಶೋಧನೆಯನ್ನೂ ತಪ್ಪಿಸಿ ಭ್ರೂಣದ ರಕ್ತಕ್ಕೆ ಸೇರುತ್ತವೆ. ಧೂಮಪಾನದ ತೀವ್ರತೆಯನ್ನು ಆಧರಿಸಿ ಭ್ರೂಣದ ಮೇಲೆ ದುಷ್ಪರಿಣಾಮಗಳಾಗುತ್ತವೆ. ಅವು ಅ) ಅವಧಿ ತುಂಬುವ ಮೊದಲೇ ಜನನ, ಆ) ಅಂತಿಮ ಹಂತದಲ್ಲಿ ಗರ್ಭಪಾತವಾಗುವುದು, ಇ) ಜನನಕ್ಕೆ ಮುಂಚೆ ಮಗು

ಸಾಯುವುದು, ಈ) ಧೂಮಪಾನಿಯಲ್ಲದ ತಾಯಿಗೆ ಜನಿಸಿದ ಮಗುವಿಗಿಂತ ಶೇ. 50% ರಷ್ಟು ಹೃದಯ ನ್ಯೂನತೆಗಳು ಇತ್ಯಾದಿ. 2) ಮದ್ಯಪಾನದ ಪರಿಣಾಮ: ಮದ್ಯದಲ್ಲಿನ ಆಲ್ಕೋಹಾಲ್ ಬಹಳ ಸುಲಭವಾಗಿ ಪ್ಲಾಸೆಂಟದ ಮೂಲಕ ಭ್ರೂಣದ ರಕ್ತ ಸೇರಿ ಹಾನಿ ಉಂಟಾಗುತ್ತದೆ (ಒಟ್ಟಾಗಿ ಫೀಟಲ್ ಆಲ್ಕೋಹಾಲ್ ಸಿಂಡ್ರೋಮ್). ಈ ದುಷ್ಪರಿಣಾಮಕ್ಕೆ ಒಳಗಾದ ಮಗುವು ಈ ಕೆಳಗಿನ ಯಾವುದಾದರೂ ಒಂದು ಅಥವಾ ಹೆಚ್ಚು ರೋಗಲಕ್ಷಣಗಳನ್ನು ಹೊಂದಿರುತ್ತದೆ: ಅ) ಬುದ್ಧಿಮಾಂದ್ಯತೆ, ಆ) ತಲೆ ಸಣ್ಣದಾಗಿರುವುದು, ಇ) ನಡವಳಿಕೆ ನ್ಯೂನತೆಗಳು – ಅಂದರೆ ಅತಿ ಚಟುವಟಿಕೆ ಹೊಂದಿದ್ದರೂ ಏಕಾಗ್ರಹೀನತೆಯಿಂದ ಬಳಲುವುದು, ಈ) ಕುಂಠಿತ ಬೆಳವಣಿಗೆ, ಎ) ಚಪ್ಪಟೆಮುಖ ಇತ್ಯಾದಿ. ಮಾದಕವಸ್ತುಗಳ ದುಷ್ಪರಿಣಾಮ: ಕೆಲ ಮಾದಕ ವಸ್ತುಗಳಾದ ಹೆರಾಯಿನ್, ಕೊಕೈನ್, ಮರಿಜುವಾನ ಸೇವನೆಯ ಚಟಕ್ಕೆ ಬಿದ್ದ ಗರ್ಭಿಣಿಯರಿಗೆ ಜನಿಸಿದ ಮಗುವು, ಮುಂದೆ ಮಾದಕ ಸೇವನೆಯ ಚಟಕ್ಕೆ ಬೀಳುವ ಸಾಧ್ಯತೆ ಹೆಚ್ಚು ಮತ್ತು ಹುಟ್ಟಿನ ಅನಂತರ ಮಗುವು ಮಾದಕಗಳ ಚಟದ ನಿರ್ಗಮನ ಪರಿಣಾಮಗಳಿಂದ ನರಳುತ್ತದೆ. ಭ್ರೂಣಾವಸ್ಥೆಯಲ್ಲಿ ಮಾದಕವಸ್ತುವಿನ ಪರಿಣಾಮವಾಗಿ ಬುದ್ಧಿಮಾಂದ್ಯತೆ, ಪಿತ್ತಜನಕಾಂಗದ ತೊಂದರೆ, ಕಾಮಾಲೆ, ನರಮಂಡಲ ರೋಗ ಇತರೆ ದುಷ್ಪರಿಣಾಮಗಳು ಉಂಟಾಗುತ್ತವೆ.

ಮಾದಕ ವಸ್ತು ವ್ಯಸನಿಗಳು ಸಾಮಾನ್ಯವಾಗಿ ಚುಚ್ಚುಮದ್ದು ಮೂಲಕ ಮಾದಕ ವಸ್ತು ಸೇವಿಸುವುದರಿಂದ ಅವರಿಗೆ ಮತ್ತು ಅವರಿಂದ ಭ್ರೂಣಕ್ಕೆ ಎಚ್‌ಐವಿ ಹಾಗೂ ಹೆಪಟೈಟಿಸ್ ಬಿ ರೋಗದ ಸೋಂಕು ತಗುಲುವ ಸಾಧ್ಯತೆ ಹೆಚ್ಚು.

ರೋಗಕಾರಕ ವೈರಸ್‌ಗಳು (ಎಚ್‌ಐವಿ ಇತರೆ) ಕೂಡ ಪ್ಲಾಸೆಂಟ ಮೂಲಕ ಹಾದು ಭ್ರೂಣಕ್ಕೆ ಸೇರಿ ಸೋಂಕು ಉಂಟುಮಾಡುತ್ತವೆ. ಅಂತೆಯೇ ಕೆಲವೊಂದು ಔಷಧಿಗಳು (ಉದಾ : ತೆಲಿಡೊಮೈಡ್ ನೋವು ನಿವಾರಕ) ತಾಯಿಯ ದೇಹದಿಂದ ಭ್ರೂಣಕ್ಕೆ ಸೇರಿ ಅನೇಕ ಹಾನಿಕಾರಕ ಪರಿಣಾಮ ಎರಗುತ್ತವೆ.

ಜರಾಯು ಭಕ್ಷಣೆ (ಪ್ಲಾಸೆಂಟ ಫೇಜಿ) : ಪ್ರಸವದ ಸ್ವಲ್ಪ ಸಮಯದ ಅನಂತರ ಪ್ಲಾಸೆಂಟವು ಯೋನಿದ್ವಾರದ ಮೂಲಕ ಹೊರಬರುತ್ತದೆ. ಹೀಗೆ ಹೊರಹಾಕಲ್ಪಟ್ಟ ಜರಾಯು ಅಥವಾ ಪ್ಲಾಸೆಂಟವನ್ನು ಪ್ರಸವಿಸಿದ ಜೀವಿ (ತಾಯಿ) ಭಕ್ಷಿಸುತ್ತದೆ. ಈ ಪ್ರವೃತ್ತಿ ಬಹುತೇಕ ಎಲ್ಲ ಸ್ತನಿಗಳಲ್ಲು ಕಂಡುಬರುತ್ತದೆ. ಇದನ್ನೇ ಜರಾಯುಭಕ್ಷಣೆ ಅಥವಾ ಪ್ಲಾಸೆಂಟಾಫೇಜಿ ಎನ್ನುತ್ತಾರೆ. ಪ್ಲಾಸೆಂಟ ಹೊರಹಾಕುವ ಎಲ್ಲಾ ಸ್ತನಿಗಳಲ್ಲೂ ಈ ಪ್ರವೃತ್ತಿ ಕಂಡುಬಂದಿದೆ. ಇನ್ನೂ ವಿಶೇಷವೆಂದರೆ ಸಸ್ಯಾಹಾರಿ ಪ್ರಾಣಿಗಳು (ಒಂಟೆಯನ್ನು ಹೊರತುಪಡಿಸಿ) ಕೂಡ ಈ ನಡವಳಿಕೆ ಪ್ರದರ್ಶಿಸುವುದು.

ಮಾನವನಲ್ಲಿಯೂ ಈ ಪ್ರವೃತ್ತಿಯನ್ನು ಸಾಕ್ಷೀಕರಿಸಿದ್ದೇವೆಂದು ಇಂಗ್ಲೆಂಡ್ ದೇಶದ ಕೆಲ ಪ್ರಸೂತಿ ತಜ್ಞರು ವರದಿಮಾಡಿರುತ್ತಾರೆ. ಕೆಲವೊಂದು ಮಾನವ ಸಂಸ್ಕೃತಿಗಳಲ್ಲಿ ತಾಯಿಯು ತನ್ನ ಮಗುವಿನ ಜನನದ ಅನಂತರ ಪ್ಲಾಸೆಂಟವನ್ನು ಭಕ್ಷಿಸುವುದು ವಾಡಿಕೆ. ಪ್ಲಾಸೆಂಟ ಭಕ್ಷಣೆಯು ಪ್ರಸವದನಂತರದ ಖಿನ್ನತೆಯಿಂದ ಮುಕ್ತಿ ಪಡೆಯಲು ಸಹಾಯವಾಗುತ್ತದೆ ಎಂಬುದು ಈ ಕ್ರಮವನ್ನು ಪ್ರತಿಪಾದಿಸುವವರ ವಾದ. ಅದಕ್ಕೆ ಸಾಕ್ಷಿಯಾಗಿ ಪ್ಲಾಸೆಂಟದಲ್ಲಿ ಹೆಚ್ಚಾಗಿ ಇರುವ ಪ್ರಾಸ್ಟೊಗ್ಲಾಂಡಿನ್ ಮತ್ತು ಸ್ವಲ್ಪ ಪ್ರಮಾಣದಲ್ಲಿರುವ ಆಕ್ಸಿಟೋಸಿನ್ ಹಾರ್ಮೋನುಗಳು. ಈ ಹಾರ್ಮೋನುಗಳು ಕ್ರಮವಾಗಿ ತಾಯಿಯ ಮಾನಸಿಕ ಒತ್ತಡ ಹೋಗಲಾಡಿಸುವ ಮತ್ತು ಹಾಲು ಉತ್ಪಾದನೆ ಪ್ರಚೋದಿಸುವ ಗುಣಗಳನ್ನು ಹೊಂದಿರುತ್ತವೆ. (ಎಸ್.ಡಿ.ಎಂ.)

**ಜರಿ:** ಸಂಧಿಪದಿ ವಂಶದ ಕೈಲೋಪೋಡ ಉಪವರ್ಗದ ಸದಸ್ಯ (ಸೆಂಟಿಪಿಡ್). ಇವು ಬಹುಪಾದಿ ಸಂಧಿಪದಿಗಳು ಸಮಶೀತೋಷ್ಣ ಹಾಗೂ ಉಷ್ಣವಲಯ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿವೆ. ನೆಲದಲ್ಲಿ, ನೆಲದ ಮೇಲೆ, ದಿಮ್ಮಿ ಹಾಗು ಬಂಡೆಗಳ ಅಡಿಗಳಲ್ಲಿ ಜೀವಿಸುತ್ತವೆ. ಇವುಗಳಲ್ಲಿ ಅತಿ ದೊಡ್ಡ ಪ್ರಭೇದ ಸ್ಕಾಲೋಪೆಂಡ್ರಾ ಜೈಗಾಂಟಿಯಾ. ಇದರ ಉದ್ದ 30 ಸೆಂಮೀ. ಉಷ್ಣವಲಯದಲ್ಲಿರುವ ಪ್ರಭೇದಗಳ ಉದ್ದ 15 ಸೆಂಮೀ. ಸಮಶೀತೋಷ್ಣವಲಯದ ಪ್ರಭೇದಗಳ ಉದ್ದ ಸು. 2.5 ಸೆಂಮೀ. ದೇಹ ಚಪ್ಪಟೆಯಾಗಿದೆ. ಶರೀರವು ತಲೆ ಮತ್ತು ಮುಂಡಗಳಿಂದಾಗಿದೆ. ಮುಂಡದಲ್ಲಿ ಹಲವು ಖಂಡಗಳಿವೆ. ತಲೆಯಲ್ಲಿ ಚಿಕ್ಕ ಕುಡಿಮೀಸೆ (ಆಂಟೆನಾ), ಕೆಳದವಡೆ ಮತ್ತು ಎರಡು ಜೊತೆ ಮೇಲುದವಡೆಗಳಿವೆ. ಇವು ಆಹಾರ ಸೇವನೆಗೆ ಉಪಯುಕ್ತ. ಜರಿಗಳಿಗೆ ಸಾವಿರಕಾಲು ಎಂಬ ಹೆಸರಿದ್ದರೂ, ವಾಸ್ತವದಲ್ಲಿ ಸು. 35 ಜೊತೆ ಕಾಲುಗಳಿವೆ. ಶರೀರದ ಪ್ರತಿ ಖಂಡದಲ್ಲಿ ಒಂದು ಜೊತೆ ಕಾಲುಗಳಿವೆ. ಆದರೆ ದೇಹದ ಹಿಂಬದಿಯ ಪ್ರಿಜೆನಿಟಲ್ ಹಾಗೂ ಜನಿಟಲ್‌ಗಳೆಂಬ ಕೊನೆಯ ಎರಡು ಖಂಡಗಳಲ್ಲಿ ಕಾಲುಗಳಿಲ್ಲ. ಜರಿಯ ಮುಂಡದಲ್ಲಿರುವ ಮೊದಲನೇ ಖಂಡದ ಕಾಲುಗಳು ಉಗುರುಗಳಿಂದ ಕೂಡಿವೆ. ಇವುಗಳಲ್ಲಿ ವಿಷಗ್ರಂಥಿಗಳಿವೆ. ಇವು ಆಹಾರ (ಬೇಟೆ) ಪ್ರಾಣಿಯನ್ನು ಕೊಲ್ಲಲು ಅಥವಾ ದಂಗಾಗಿಸಲು ಉಪಯುಕ್ತ. ದೊಡ್ಡ ಜರಿಯು ಕಡಿದರೆ ನೋವಾಗುತ್ತದೆ. ಆದರೆ, ಇವುಗಳ ವಿಷವು ಮನುಷ್ಯನನ್ನು ಕೊಲ್ಲುವಷ್ಟು ಶಕ್ತಿಯುತವಾಗಿಲ್ಲ. ಜರಿಗಳು ಮುಖ್ಯವಾಗಿ ನಿಶಾಚರಿಗಳು. ಇವು ಮಾಂಸಾಹಾರಿಗಳು. ಇವುಗಳ ಆಹಾರ ಸಣ್ಣ ಕೀಟಗಳು ಮತ್ತು ಇತರ ಸಣ್ಣ ಸಂಧಿಪದಿಗಳು. ಜರಿಗಳು ಸಣ್ಣ ಕಶೇರುಕಗಳನ್ನು ಕೊಲ್ಲಬಲ್ಲವು. ಸಂತಾನ ಕಾಲದಲ್ಲಿ ಪ್ರಣಯವಾಡುತ್ತವೆ. ಕೆಲವು ಪ್ರಭೇದಗಳು ವ್ಯಾಪಕವಾಗಿ ಪ್ರಣಯದಾಟದಲ್ಲಿ ಕಾಲ ಕಳೆಯುತ್ತವೆ. ಲಿಥೋಬಯೋಮೋರ್ಫಾ ಮತ್ತು ಸ್ಕ್ಯುಟಿಜೆರೋ ಮೋರ್ಫಾಗಳಲ್ಲಿ 15 ಜೊತೆ ಕಾಲುಗಳಿವೆ. ಇವು ಮಣ್ಣಿನಲ್ಲಿ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಯಿಂದ ಮರಿಯಾಗುವಾಗ, ಶರೀರ ಖಂಡಗಳು ಬೆಳವಣಿಗೆಯಾಗಿರುವುದಿಲ್ಲ. ಅನಂತರ, ಬೆಳೆದಂತೆ, ಸಂಧ್ಯಂತರ (ಸೊಮೈಟ್ಸ್) ಖಂಡಗಳನ್ನು ಹಾಗೂ ಕಾಲುಗಳ ಜೋಡಿಗಳನ್ನು ಸೇರಿಸುವುವು. ಲಿಥೋಬಯೋಮೋರ್ಫಾಗಳು ಸಮಶೀತೋಷ್ಣ ಹಾಗು ಉಪ ಉಷ್ಣವಲಯ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿವೆ. ತ್ವರಿತ ಚಲನೆಯ ಸ್ಕ್ಯುಟಿಜೆರೋಮೋರ್ಫಾಗಳಿಗೆ ಬಹಳ ಉದ್ದವಾದ ಕಾಲುಗಳಿವೆ. ಕೊನೆಯ ಜೋಡಿ ಕಾಲುಗಳು ಕೆಲವೊಮ್ಮೆ ಹಿಂಭಾಗದವರೆಗು ಚಾಚಿಕೊಂಡಿವೆ. ಈ ಕಾಲುಗಳು ಹಿಂಭಾಗದ ಸ್ಪರ್ಶೇಂದ್ರಿಯದಂತೆ ಕೆಲಸ ಮಾಡುತ್ತವೆ. ಉಷ್ಣವಲಯ ಪ್ರದೇಶಗಳಲ್ಲಿ ಹೇರಳವಾಗಿರುವ ಇವುಗಳೊಡನೆ ಸ್ಕ್ಯುಟಿಜೆರಾ ಫೋರ್ಸ್‌ಪ್ಸ್ ಎಂಬ ಪ್ರಭೇದವಿದೆ.

ಇವು ಸಮಶೀತೋಷ್ಣವಲಯ ಪ್ರದೇಶಗಳಲ್ಲಿ, ಸಾಮಾನ್ಯವಾಗಿ ಮನೆಗಳಲ್ಲಿ ಕಂಡುಬರುವ ಜರಿಗಳು. ಮನೆಗಳಲ್ಲಿ ಕಾಣುವ ಈ ಜರಿಗಳಿಗೆ ಸೂಕ್ಷ್ಮವಾದ ಉದ್ದ ಕಾಲುಗಳು ಮತ್ತು ಸಂಯುಕ್ತ ಕಣ್ಣುಗಳಿವೆ. ಇವು ಜಿರಲೆ, ಬಟ್ಟೆ ನುಸಿ ಹಾಗೂ ಇತರ ಕೀಟಗಳನ್ನು ತಿಂದು ಜೀವಿಸುತ್ತವೆ. ಜಿಯೋಫಿಲೋಮೋರ್ಫಾ ಮತ್ತು ಸ್ಕಾಲೋಪೆಂಡ್ರೋಮೋರ್ಫಾಗಳು ಗೊಂಚಲುಗಳಾಗಿ ಮೊಟ್ಟೆಗಳನ್ನಿಡುತ್ತವೆ. ಬೆಳೆವಣಿಗೆಯ ಸಮಯದಲ್ಲಿ ಜರಿಗಳು ಅವುಗಳನ್ನು ರಕ್ಷಿಸುತ್ತವೆ. ಇಡೀ ಶರೀರದ ಖಂಡಗಳು ಹಾಗೂ ಕಾಲುಗಳು ಮರಿ ಹಂತದಲ್ಲಿರುತ್ತವೆ. ಜಿಯೋಫೀಲೋಮೋರ್ಫಾಗಳಿಗೆ ಬಹಳ ಉದ್ದವಾದ ಕೃಶ ಶರೀರ, 31 ರಿಂದ 180 ಜೊತೆ ಚಿಕ್ಕ ಕಾಲುಗಳಿವೆ. ಇವು ಮಣ್ಣಿನಲ್ಲಿ ಬಿಲ ತೋಡಿ ಅದರೊಳಗೆ ಜೀವಿಸುತ್ತವೆ. ಸಮಶೀತೋಷ್ಣವಲಯ ಹಾಗೂ ಉಷ್ಣವಲಯಗಳಲ್ಲಿ ಕಂಡುಬರುತ್ತವೆ. ಸ್ಕಾಲೋಪೆಂಡ್ರೋಮೋರ್ಫಾಗಳು ಕೂಡ ವ್ಯಾಪಕವಾಗಿವೆ. ಆದರೆ, ಉಷ್ಣವಲಯ ಪ್ರದೇಶಗಳಲ್ಲಿ ಇವುಗಳ ಸಂಖ್ಯೆ ಹೇರಳ. ಇವುಗಳಿಗೆ 21 ರಿಂದ 23 ಜೊತೆ ಕಾಲುಗಳಿವೆ. ಇವು ದೊಡ್ಡ ಆಕಾರದ ಹೆಚ್ಚು ವರ್ಣರಂಜಿತವಾದ ಪ್ರಭೇದಗಳು.
(ಬಿ.ವೈ.ಎಸ್.)

**ಜಲತಲ ಪ್ರಾಣಿವರ್ಗ:** ಸಾಗರವನ್ನು ಆಳದ ಆಧಾರದ ಮೇಲೆ ಮೂರು ಮುಖ್ಯ ಭಾಗಗಳನ್ನಾಗಿ ವಿಂಗಡಿಸಲಾಗಿದೆ : ಬ್ಯಾತೀಯಲ್ (2000 ಮೀ ಗಿಂತ ಕಡಿಮೆ ಆಳದ ಪ್ರದೇಶ), ಜಲತಲ (ಅಬಿಸಲ್, 2000–6000 ಮೀ ಆಳದ ಪ್ರದೇಶ) ಮತ್ತು ಹೇಡಲ್ (6000 ಮೀ ಗಿಂತ ಹೆಚ್ಚು ಆಳದ ಪ್ರದೇಶ). ಬ್ಯಾತೀಯಲ್ ಭಾಗ ಸಾಗರಗಳ ಒಟ್ಟು ವಿಸ್ತೀರ್ಣದ 14.8%ರಷ್ಟೂ ಜಲತಲ ಭಾಗ 84%ರಷ್ಟೂ ಹೇಡಲ್ ಭಾಗ 1.2%ರಷ್ಟೂ ಇವೆ. ಜಲತಲ ಪ್ರದೇಶದ ವಿಸ್ತೀರ್ಣ ಭೂಮಿಯ ಸುಮಾರು ಎರಡರಷ್ಟು ಇದೆ. ಈ ಪ್ರದೇಶದಲ್ಲಿ ವಾಸಿಸುವ ಪ್ರಾಣಿ ಸಮೂಹಕ್ಕೆ ಜಲತಲ ಪ್ರಾಣಿವರ್ಗ (ಅಬಿಸಲ್ ಫಾನ) ಎಂದು ಹೆಸರು.

ಜಲತಲ ಪ್ರದೇಶ ತನ್ನ ಭೌತಲಕ್ಷಣಗಳ ವೈಪರೀತ್ಯಗಳಿಗೆ ಹೆಸರಾಗಿದೆ. ಇದು ಸಾಗರದ ಉಳಿದ ಭಾಗಗಳಿಂತ ವಿಭಿನ್ನವಾಗಿದೆ. ಇಲ್ಲಿನ ಪರಿಸ್ಥಿತಿಗಳಲ್ಲಿ ಬದಲಾವಣೆಗಳೇ ಆಗುವುದಿಲ್ಲ. ಸೂರ್ಯನ ಬೆಳಕು ಜಲತಲ ಪ್ರದೇಶದ ಆಳಕ್ಕೆ ಇಳಿಯುವುದಿಲ್ಲವಾದ್ದರಿಂದ ಸದಾ ಕಾರ್ಗತ್ತಲು ತುಂಬಿರುತ್ತದೆ; ಅಂತೆಯೇ ಉಷ್ಣತೆ ಕೂಡ $0^0$ ಸೆ ಆಸುಪಾಸಿನಲ್ಲಿ ಇದೆ. ನೀರಿನ ಒತ್ತಡವೂ ಇಲ್ಲಿ ಅತ್ಯಧಿಕ (ಪ್ರತಿ 10 ಮೀ ಆಳಕ್ಕೆ ಒಂದು ವಾಯುಮಾನ ಚದರ ಅಂಗುಲಕ್ಕೆ 6.56 ಕಿಗ್ರಾಂ ದರದಲ್ಲಿ ಒತ್ತಡ ಹೆಚ್ಚುತ್ತ ಹೋಗುತ್ತದೆ.). ನೀರು ಸಹ ಹೆಚ್ಚು ಕಡಿಮೆ ಚಲಿಸದೆ ಸ್ತಬ್ಧವಾಗಿರುತ್ತದೆಯಾದರೂ ಅಲ್ಲಲ್ಲಿ ಅತ್ಯಂತ ಮಂದಗತಿಯಲ್ಲಿ ಚಲಿಸುವ ಪ್ರವಾಹಗಳಿರುವುದರಿಂದ ಈ ಪ್ರದೇಶದಲ್ಲಿ ಜೀವಿಸುವ ಪ್ರಾಣಿಗಳಿಗೆ ಅಗತ್ಯವಾದ ಆಮ್ಲಜನಕ ಪೂರೈಕೆಯಾಗುತ್ತದೆ. ಈ ಪ್ರದೇಶದ ನೆಲ ಬಹುವಾಗಿ ಮೈದಾನ ರೀತಿಯಿದ್ದು ಅಲ್ಲಲ್ಲಿ ಸಣ್ಣಪುಟ್ಟ ದಿಣ್ಣೆಗಳಿವೆ ಅಷ್ಟೆ. ಕೆಲವೆಡೆ ಆಳ ಕಣಿವೆಗಳೂ ಬೆಟ್ಟದಂಥ ದಿಬ್ಬಗಳೂ

ಇರುವುದುಂಟು. ತಳದ ಮೇಲೆಲ್ಲ ಮೆತುವಾದ ಮಣ್ಣು (ಉಸುಬು) ಹರಡಿದೆ. ಇದರಲ್ಲಿ ಅಗ್ನಿಪರ್ವತಗಳಿಂದ ಉಂಟಾಗುವ ಕೆಂಪು ಜೇಡಿಮಣ್ಣು, ಸಾಗರ ತಳದಲ್ಲಿನ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗುವ ಖನಿಜಯುಕ್ತ ಮಣ್ಣು ಹಾಗೂ ಸತ್ತುಹೋದ ಪ್ಲಾವಕಗಳ, ಪ್ರೋಟೋಜ಼ೋವಗಳ ಮೃದ್ವಂಗಿಗಳ ದೇಹಾವಶೇಷಗಳು ಅರ್ಧಂಬರ್ಧ ಕೊಳೆತಿರುವ ಚಿಪ್ಪು ಮತ್ತು ಹಂದರಗಳು ಇವೆ. ರೇಡಿಯಮ್, ಯುರೇನಿಯಮ್ ಮುಂತಾದ ವಿಕಿರಣಪಟು ವಸ್ತುಗಳೂ ಇದರಲ್ಲಿ ಉಂಟು. ಈ ಉಸುಬಿನಲ್ಲಿ ಇರುವ ದೇಹಾವಶೇಷಗಳ ಮೊತ್ತದ ಆಧಾರದ ಮೇಲೆ ಇದನ್ನು ಫೊರ್ಯಾಮಿನಿಫೆರನ್, ರೇಡಿಯೊಲೇರಿಯನ್, ಟೀರೋಪಾಡ್ ಹಾಗೂ ಡೈಯಾಟಮ್ ಉಸುಬುಗಳೆಂದು ವಿಭಾಗಿಸಲಾಗಿದೆ.

ಜಲತಲ ಪ್ರದೇಶದ ವಿಚಾರ ಅನೇಕ ಅನ್ವೇಷಣೆಗಳಿಂದ ತಿಳಿದುಬಂದಿದೆ. ಪ್ರಪ್ರಥಮವಾಗಿ ಬ್ರಿಟಿಷ್ ಚಾಲೆಂಜರ್ ಹಡಗು 1873–76ರ ಅವಧಿಯಲ್ಲಿ ಯಾನ ಕೈಗೊಂಡು ಸಮುದ್ರ ಜೀವಿಗಳ ಮತ್ತು ಅವುಗಳ ಪರಿಸರದ ವಿಚಾರವನ್ನು ವೈಜ್ಞಾನಿಕವಾಗಿ ತಿಳಿಸಿ ಕಡಲ ಪರಿಸರದ ಅಧ್ಯಯನಕ್ಕೆ ತಳಹದಿಯನ್ನು ಹಾಕಿತು. ಆಮೇಲೆ ಮಾಡಿದ ಸಮುದ್ರಯಾನಗಳು ಮುಖ್ಯವಾಗಿ ನೀರಿನ ಪರಿಸರದ ಸಂಶೋಧನೆಯನ್ನು ಕೈಗೊಂಡವು. ಇವುಗಳಲ್ಲಿ ಸ್ವೀಡನ್ನಿನ ಆಲ್ಬಟ್ರಾಸ್ (1947–48), ರಷ್ಯದ ವಿಟಿಯಾಜ್ (1949), ಡೆನ್ಮಾರ್ಕಿನ ಗಲಾತಿಯ (1951), ಅಮೆರಿಕದ ವೆಮ (1958) ಮತ್ತು ಎಲ್ಟಾ ಸಮುದ್ರಯಾನಗಳು ಕೆಲವು. ಇವು ಅನೇಕ ನವೀನ ಯಂತ್ರೋಪಕರಣಗಳ ಸಹಾಯದಿಂದ ಕಡಲಿನ ಬಗ್ಗೆ ಮಾಹಿತಿಗಳನ್ನೂ ಸಂಪಾದಿಸಿವೆ. ಉದಾಹರಣೆಗೆ ಗಲಾತಿಯ ಸಮುದ್ರಯಾನದಲ್ಲಿ ಫಿಲಿಪೀನ್ಸ್ ಬಳಿ ಸಮುದ್ರದಲ್ಲಿನ 1019 ಮೀ ಆಳದ ಕಣಿವೆಯಿಂದ ಅನೇಕ ಪ್ರಾಣಿಗಳನ್ನೂ ಕಲ್ಲು ಮಣ್ಣನ್ನೂ ಮೇಲಕ್ಕೆ ತರಲಾಯಿತು.

ಪ್ರಾಣಿವರ್ಗ : ಜಲತಲ ಪ್ರದೇಶದ ವೈಪರೀತ್ಯ ಲಕ್ಷಣಗಳಿಗೆ ಹೊಂದಿಕೊಂಡಿರುವ ಜೀವಿಗಳೇ ಇಲ್ಲಿನ ಪ್ರಮುಖ ಪ್ರಾಣಿವರ್ಗ. ಆಹಾರದ ಅಭಾವ ಮತ್ತು ಪರಿಸರದ ಪ್ರತಿಕೂಲ ಪರಿಸ್ಥಿತಿಗಳು ಇಲ್ಲಿಯ ಪ್ರಾಣಿಗಳ ಸಂಖ್ಯಾಕ್ಷೀಣತೆಗೆ ಕಾರಣವಾಗಿದ್ದರೂ ಕೆಲವು ಅಪೂರ್ವ ಬಗೆಯ ಪ್ರಾಣಿಗಳು ಇಲ್ಲಿ ಉಂಟು.

ನೀರಿನಲ್ಲಿ ಉಸಿರಾಡುವ ಎಲ್ಲ ಗುಂಪಿನ ಪ್ರಾಣಿಗಳ ಪ್ರತಿನಿಧಿಗಳೂ, ಅಂದರೆ ಪ್ರೋಟೋಜ಼ೋವ ಗುಂಪಿನಿಂದ ಕಶೇರುಕಗಳವರೆಗೆ, ಇಲ್ಲಿವೆ. ಆದರೆ ಮೀನಿಗಿಂತ ಹೆಚ್ಚು ಮುಂದುವರಿದ ಕಶೇರುಕಗಳಾವುವೂ ಇಲ್ಲಿಲ್ಲ.

ಜಲತಲ ಪ್ರದೇಶ ಪ್ರಾಣಿಗಳನ್ನು ಮುಂದೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

I) ಅಕಶೇರುಕಗಳು : 1. ಪ್ರೋಟೋಜ಼ೋವ : ಬಹು ಹೆಚ್ಚಾಗಿ ಕಾಣಬರುವ ಗುಂಪು. ಇದರಲ್ಲಿ ಪೆಲಾಜಿಕ್ ರೇಡಿಯೊಲೇರಿಯನ್‌ಗಳು ಹೆಚ್ಚಾಗಿವೆ.

2. ಸ್ಪಂಜುಗಳು : ಮುಖ್ಯವಾಗಿ ಹೆಕ್ಸಾಕ್ಟಿನೆಲ್ಲಿಡ ಗುಂಪಿನ ಪ್ರಭೇದಗಳಿಂದ ಕೂಡಿವೆ.

3. ಕುಟುಕು ಕಣವಂತಗಳು : ಇವುಗಳಲ್ಲಿ ಸಾಮಾನ್ಯ ಬಗೆಯ ಬಟ್ಟಲು ಹವಳಗಳೂ (ಉದಾಹರಣೆಗೆ ಫ್ಲ್ಯಾಬೆಲಮ್) ಕಡಲ ಲೇಖಣಿಗಳೂ (ಉದಾಹರಣೆಗೆ ಅಂಬೆಲುಲ) ಕಡಲ ಹೂಗಳು ಇವೆ. 12000 ಮೀ ಆಳದಲ್ಲಿ ಕಡಲ ಬೀಸಣಿಗೆಗಳೂ ಅಪರೂಪದ ಹೂಗಳೂ ಸಿಕ್ಕಿವೆ.

4. ನೆಮರ್ಟೀನಿಯ : ಈ ಪ್ರಾಣಿಗಳು ಬಲು ಕಡಿಮೆ.

5. ವಲಯವಂತಗಳು : ವಿವಿಧ ರೀತಿಯ ಪಾಲಿಕೀಟ್ ಹುಳುಗಳು ಹೆಚ್ಚು ಸಂಖ್ಯೆಯಲ್ಲಿವೆ. ಇವುಗಳಲ್ಲಿ ಕೊಳವೆ ಹುಳೂಗಳೇ ಹೆಚ್ಚು. 12000 ಮೀ ಆಳದಲ್ಲಿ ಸಾಮಾನ್ಯರೀತಿಯ ಪಾಲಿಕೀಟ್ ಹುಳುಗಳು ಸಿಕ್ಕಿವೆ.

6. ಸಂಧಿಪದಿಗಳು : ಕಠಿಣಚರ್ಮಿ ವರ್ಗದ ಅನೇಕ ಪ್ರಭೇದಗಳು 4000–12000 ಮೀ ಆಳದಲ್ಲಿರುವುದು ಕಂಡುಬಂದಿದೆ. ಆಸ್ಟ್ರಕೋಡ (4000 ಮೀ) ದಶಪಾದಿ ಮತ್ತು ಸೀಗಡಿಗಳು (5000 ಮೀ), ಬಾರ್ನಕಲ್ (6000 ಮೀ), ಐಸೊಪಾಡ್ ಮತ್ತು ಆಂಫಿಪಾಡ್ ಪ್ರಾಣಿಗಳು ವಿವಿಧ ಆಳಗಳಲ್ಲಿ ವಾಸಿಸುವುದು ಗೋಚರವಾಗಿದೆ. ದಶಪಾದಿಗಳಲ್ಲಿ ಎರಿಯೊನಿಡೆ ಜಾತಿಯ ಪ್ರಭೇದಗಳಿವೆ. ನಿಜವಾದ ಏಡಿಗಳು ಇಲ್ಲ. ಆಂಫಿಪಾಡ್ ಪ್ರಾಣಿಗಳು 12000 ಮೀ. ಆಳದಲ್ಲಿಯೂ ಜೀವಿಸುವುವು. ಐಸೊಪಾಡ್ ಜೀವಿಗಳು 4500–12000 ಮೀ ಆಳದಲ್ಲಿಯೂ ಇವೆ. ಈ ಗುಂಪಿನ ಬೇತಿನೋಮಸ್ ಜೈಗ್ಯಾಂಟಿಯಸ್ ಎಂಬ ಪ್ರಭೇದ 27.5 ಸೆಂಮೀ x 12 ಸೆಂಮೀ ನಷ್ಟು ದೊಡ್ಡದಾಗಿದೆ. ಆಳನೀರಿನ ಐಸೊಪಾಡುಗಳಲ್ಲಿ ಸು. 58 ಪ್ರಭೇದಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 8 ಪ್ರಭೇದಗಳು ಸಾಮಾನ್ಯವಾಗಿ ಎಲ್ಲ ಜಲತಲ ಪ್ರದೇಶಗಳಲ್ಲಿ ಕಂಡು ಬಂದಿವೆ. ಹ್ಯಾಪ್ಲೊಸಿಸ್ಕಸ್ ಜಾತಿಯ ಪ್ರಾಣಿಗಳು ಅನೇಕ ಕಡೆ ಸಿಕ್ಕಿವೆ. ಮಿಕ್ಕವು ಕೆಲವು ಪ್ರದೇಶಗಳಲ್ಲಿ ಮಾತ್ರ ಸೀಮಿತವಾಗಿವೆ. (ಉದಾಹರಣೆಗೆ ಮೆಸಿಡೊತಿ ಜಾತಿ ಆರ್ಕ್‌ಟಿಕ್ ಸಮುದ್ರದಲ್ಲೂ, ಸೆರೊಲಿಸ್ ಜಾತಿ ಅಂಟಾರ್ಕ್‌ಟಿಕ್ ಸಮುದ್ರದಲ್ಲೂ ವಾಸಿಸುವುವು) ಆಳನೀರಿನ ಕಡಲ ಜೇಡಗಳು ಬಹು ದೊಡ್ಡ ಗಾತ್ರದುವು.

7. ಮೃದ್ವಂಗಿಗಳು: ಮೊನೊಪ್ಲಕಾಪೊರ ಗುಂಪಿನ ನಿಯೊಪಿಲಿನ ಗಲಾತಿಯ ಮುಖ್ಯವಾದುವು. 350 ಮಿಲಿಯನ್ ವರ್ಷಗಳ ಹಿಂದೆ ಜೀವಿಸಿದ್ದ ಪಿಲಿನ ಜಾತಿಯ ಪ್ರಾಣಿಗಳ ಗುಣಗಳಿರುವ ಇದನ್ನು ಜೀವಂತ ಫಾಸಿಲ್ ಎಂದು ಕರೆಯುವರು. ಸ್ಕಾಫೊಪೊಡ ಮೃದ್ವಂಗಿಗಳು ಅಪರೂಪವಾಗಿ ಹೆಚ್ಚಾಗಿ ಪ್ರತಿನಿಧಿಸಿವೆ. ಜೋಡಿಚಿಪ್ಪಿನ ಮೃದ್ವಂಗಿಗಳು 6000–12000 ಮೀ ಆಳದಲ್ಲಿ ಸಿಕ್ಕಿವೆ. ಆಳ ಸಮುದ್ರದಲ್ಲಿ ಇವುಗಳ ಪ್ರಭೇದಗಳು ಮತ್ತು ಸಂಖ್ಯೆ ಬಲುಕಡಿಮೆ. 6000 ಮೀ ಆಳದಲ್ಲಿ ಮೈಟಲಿಸ್ ಪ್ಯಾಸ್ಕೊಲೈನಸ್ ಪ್ರಭೇದ ಸಿಕ್ಕಿದೆ. ಗ್ಯಾಸ್ಟ್ರಾಪೊಡ ಪ್ರಾಣಿಗಳೂ ಕಡಿಮೆ ಸಂಖ್ಯೆಯಲ್ಲಿವೆ. ಇವು 2000–4000 ಮೀ ಆಳದಲ್ಲಿ ಸಿಕ್ಕಿವೆ. ಸ್ಕ್ವಿಡ್ಡುಗಳು ಮತ್ತು ಅಷ್ಟಪಾದಿಗಳು (ಶಿರೋಪಾದಿಗಳೂ) ಹೆಚ್ಚಾಗಿ ಆಳ ಸಮುದ್ರದಲ್ಲಿ ವಾಸಿಸುತ್ತವೆ.

8. ಕಂಟಕ ಚರ್ಮಿಗಳು: ಈ ಗುಂಪಿನ ಎಲ್ಲ ವರ್ಗಗಳ ಪ್ರಾಣಿಗಳೂ ಬಹು ಹೆಚ್ಚಾಗಿ ಸಿಕ್ಕಿವೆ. ನಕ್ಷತ್ರ ಮೀನಿನ ವರ್ಗದಲ್ಲಿ ಪೊರ್ಸೆಲ್ಲನ್ ಆಸ್ಟರಿಡೆ ಗುಂಪಿನವು 6035 ಮೀ ಆಳದವರೆಗೂ ವ್ಯಾಪಿಸಿವೆ. ಈ ಆಳದಲ್ಲಿ ಆಲ್ಬಟ್ರೊಸ್ಸಾಸ್ಟರ್ ರಿಚಾರ್ಡಿ ಪ್ರಭೇದ ಸಿಕ್ಕಿತು. ಬೆಂತೊಪೆಕ್ಟಿನಿಡೆ, ಆಸ್ಟ್ರೊಪೆಕ್ಟಿನಡೆ ಮತ್ತು ಗೊನಿಯಾಸ್ಟರಿಡೆ ಗುಂಪಿನ ಪ್ರಾಣಿಗಳೂ ಅಬಿಸಲ್ ಪ್ರದೇಶದಲ್ಲಿವೆ. ಬ್ರಿಟಲ್ ಸ್ಟಾರ್ ವರ್ಗದ ಓಫಿಯೊಮೂಸಿಯಮ್, ಓಫಿಯೂರ ಜಾತಿಯವು 5000 ಮೀ ಆಳದವರೆಗೂ ಪ್ರಸರಿಸಿವೆ. ಕಡಲಪೋರ ಗುಂಪಿನ ಅನೇಕ ಜಾತಿಯ ಪ್ರಾಣಿಗಳು 1000–4950 ಮೀ ಆಳದಲ್ಲಿ ವಾಸಿಸುವುವು. ಎಕೈನೊತ್ಯೂರಿಡೆ, ಸಲೆನಡೆ, ಆಸ್ಪಿಡೊಡಯಾಡೆಮಾಟಿಡೆ, ಯೂರೆನಿಡೆ ಕುಟುಂಬದ ಪ್ರಾಣಿಗಳು ಮುಖ್ಯವಾಗಿ ಸೇರಿವೆ. ಕ್ರೈನಾಯ್ಡಿಯ ವರ್ಗದಲ್ಲಿ ತೊಟ್ಟಿರುವ ಮತ್ತು ಇಲ್ಲದಿರುವ ಪ್ರಾಣಿಗಳು 5000 ಮೀ ಆಳದವರೆಗೂ ಪ್ರಸರಿಸಿವೆ. ಸಾಧಾರಣವಾಗಿ ಹಯೊಕ್ರೈನಿಡೆ ಮತ್ತು ಮಿಲ್ಲೇರಿಕ್ರೈನಿಡೆ ಗುಂಪಿನ ಪ್ರಾಣಿಗಳು ಆಳ ಸಮುದ್ರದ ವಾಸಿಗಳು. ಕಡಲ ಸೌತೆ ಗುಂಪಿನಲ್ಲಿ ಅನೇಕ ಜಾತಿಯವು ಆಳ ಸಮುದ್ರವಾಸಿಗಳು. ಎಲ್ಯಾಸಿಪೊಡ ಜಾತಿಯವು 2000 ಮೀ ಕೆಳಗಿನ ನೀರಿನಲ್ಲೂ ಸಿವಲಾಕ್ಟಿಡ ಜಾತಿಯವು 1000–5000 ಮೀ. ಆಳದಲ್ಲೂ ಜೀವಿಸಿವೆ. ಕೆಲವು 12000 ಮೀ ಆಳದಲ್ಲೂ ಸಿಕ್ಕಿವೆ. ಇವಲ್ಲದೆ ಕೆಲವು ಸಣ್ಣ ಗುಂಪುಗಳೂ ಆಳ ಸಮುದ್ರದಲ್ಲಿ ವಾಸಿಸುವುವು.

9. ಬ್ರಯೋಜ಼ೋವ ಜೀವಿಗಳು: 3000–5720 ಮೀ ಆಳ ನೀರಿನಲ್ಲಿ ವಾಸಿಸುವುವು.

10. ಬ್ರ್ಯಾಕಿಯೊಪೊಡ ಪ್ರಾಣಿಗಳು: 1800–5500 ಮೀ ಆಳದವರೆಗೂ ವ್ಯಾಪಿಸಿವೆ.

11. ಕೀಟೊನ್ಯಾತ: ಈ ಪ್ರಾಣಿಗಳು ಸಾಮಾನ್ಯವಾಗಿ 2000–3600 ಮೀ ಆಳದಲ್ಲಿ ಸಿಕ್ಕಿವೆ. ಹೆಟರೊಕ್ರೋನಿಯ ಮಿರ‍್ಯಾಬಿಲಿಸ್ ಪ್ರಭೇದ 5000 ಮೀ ಆಳದಲ್ಲಿ ಕಂಡು ಬಂದಿತು. ಸೈಪಂಕ್ಯುಲಾಯ್ಡಿಯ ಜೀವಿಗಳ ವ್ಯಾಪ್ತಿ 1900–8210 ಮೀ ಆಳದವರೆಗೂ ಹೋಗುತ್ತದೆ. ಅನೇಕ ಪ್ರಭೇದಗಳು ನ್ಯೂಜ಼ೀಲೆಂಡ್ ಹತ್ತಿರದ ಕಾರ್ಮಡೆಕ್ ದ್ವೀಪ ಸಮುದ್ರ ಕಣಿವೆಯಲ್ಲಿ ಕಂಡುಬಂದಿವೆ.

II) ಪ್ರೋಟೊಕಾರ್ಡೇಟ : ಈ ಗುಂಪಿನ ಟ್ಯೂನಿಕೇಟುಗಳಲ್ಲಿ ಅನೇಕ ಅಸಿಡಿಯನ್ ಪ್ರಾಣಿಗಳು ಜಲತಲ ಪ್ರದೇಶದಲ್ಲಿ ಸಿಕ್ಕಿವೆ.

III) ಕಶೇರುಕಗಳು : ವಿವಿಧ ರೀತಿಯ ಮೀನುಗಳು ಈ ಪ್ರದೇಶದಲ್ಲಿವೆ. ಕೆಲವು ಪ್ರಭೇದಗಳಲ್ಲಿ ಬಹು ವಿಶಿಷ್ಟ ಲಕ್ಷಣಗಳಿವೆ.

ಮೃದ್ವಸ್ಥಿ ಮೀನುಗಳು ಕೆಲವು ಮಾತ್ರ. ಕೆಲವು ಶಾರ್ಕ್ ಮೀನುಗಳು 1500–3000 ಮೀ ಆಳದಲ್ಲಿ ವಾಸಿಸುವುವು. ಕೈಮೀರ ಮೀನುಗಳು 2000 ಮೀ ಆಳದಲ್ಲಿ ಕಂಡುಬಂದಿವೆ.

ಎಲುಬುಮೀನುಗಳ ಗುಂಪಿನಲ್ಲಿ ಅನೇಕ ಜಾತಿಯ ಟೀಲಿಯಾಸ್ಟಿಯೈ ಮೀನುಗಳು ಜಲತಲ ಪ್ರದೇಶದಲ್ಲಿ ವಾಸಿಸುವುವು. ಕೆಲವು ಪ್ರಭೇದಗಳು 8200 ಮೀ ಆಳದವರೆಗೂ ಪ್ರಸರಿಸಿವೆ.

ಗಲಾತಿಯ ಸಮುದ್ರಯಾನ ತಂಡದವರು ನ್ಯೂಜ಼ೀಲ್ಯಾಂಡ್ ಬಳಿಯ ಕಾರ್ಮಡೆಕ್ ದ್ವೀಪ ಸಮುದ್ರದ 8200 ಮೀ ಆಳದ ಕಣಿವೆಯೊಂದರಿಂದ 18 ಮೀನು ಪ್ರಭೇದಗಳನ್ನು ಗುರುತಿಸಿದರು. ಅದೇ ಸಮುದ್ರಯಾನದಲ್ಲಿ 3590 ಮೀ ಆಳದಲ್ಲಿ ಗಲಾತಿಯ ತಾಮ ಆಕ್ಸೆಲಿ ಎಂಬ ವಿಚಿತ್ರವಾದ ದೀಪ್ತಿ ಸೂಸುವ ಗಾಳದ ಮೀನು, 1090 ಮೀ ಆಳದಲ್ಲಿ ತನ್ನ ಬಾಯನ್ನು ಸಲಿಕೆ ರೀತಿ ಮುಂಚಾಚುವ ಟಿಪ್ಲೊನಸ್ ಎಂಬ ಕುರುಡು ಮೀನೂ 7130 ಮೀ ಆಳದಲ್ಲಿ ಬಾಸೊಜೈಗ್ಯಾಸ್ ಮೀನುಗಳೂ ಸಿಕ್ಕಿದುವು.

ಸಾಮಾನ್ಯವಾಗಿ 6000 ಮೀ ಆಳಕ್ಕಿಂತ ಕೆಳಗೆ ಮೀನುಗಳು ವಾಸಿಸುವುದಿಲ್ಲ ಎಂದು ತಿಳಿದುಬಂದಿದೆ. 1951ರವರೆಗೆ ಸುಮಾರು 8 ಪ್ರಭೇದಗಳು ಮಾತ್ರ ಈ ಆಳದಲ್ಲಿ

ಸಿಕ್ಕಿವೆ. ಆದ್ದರಿಂದ ಆಳ ಸಮುದ್ರದಲ್ಲಿ ಹಿಂಸ್ರ ಮೀನುಗಳ ಹಾವಳಿ ಕಡಿಮೆಯಾಗಿ ಸಮುದ್ರ ತಳದಲ್ಲಿ ವಾಸಿಸುವ ಮಿಕ್ಕ ಜೀವಿಗಳಿಗೆ ಹೆಚ್ಚು ನೆಮ್ಮದಿಯುಂಟು.

ಜಲತಲ ಪ್ರದೇಶದ ಪ್ರಾಣಿಗಳ ಹೊಂದಾಣಿಕೆಗಳು : ಜಲತಲ ಪ್ರದೇಶದ ಪ್ರತಿಕೂಲ ಪರಿಸರದಲ್ಲಿ ಜೀವಿಸಲು ಅನುಕೂಲಿಸುವಂತೆ ಇಲ್ಲಿ ಪ್ರಾಣಿಗಳಲ್ಲಿ ಅನೇಕ ಹೊಂದಾಣಿಕೆಗಳನ್ನು ಕಾಣಬಹುದು.

ಆಸರೆಯನ್ನು ಹಿಡಿದುಕೊಳ್ಳಲು ಅನುಕೂಲವಾದ ನೀಳವಾದ ಸ್ಪಿಕ್ಯೂಲುಗಳು ಅಥವಾ ತೊಟ್ಟುಗಳು ಹೆಕ್ಸಾಕ್ಟಿನೆಲ್ಲಿಡ ಸ್ಪಂಜುಗಳಲ್ಲಿಯೂ ಕಡಲ ಲೇಖಣಿ (ಗಾರ್ಗೊನಿಯ), ಕಡಲ ಬೀಸಣಿಗೆ ಮತ್ತು ಕ್ರೈನಾಯ್ಡ್‌ಗಳಲ್ಲಿಯೂ ಇವೆ. ತೆಳ್ಳಗೆ ನೀಳವಾಗಿರುವ ಅಂಗಾಂಗಗಳು ಕಠಿಣ ಚರ್ಮಿಗಳಲ್ಲಿಯೂ (ಉದಾಹರಣೆಗೆ ಕೊಲೊಸೆಂಡೀಸ್ ಆರ್ಕ್‌ಟಿಟಸ್) ಇವೆ. ಈ ರೀತಿಯ ಅಂಗಗಳು ಮೃದುವಾದ ಉಸುಬಿನ ಮೇಲೆ ನಡೆಯಲು ಅನುಕೂಲವಾಗಿವೆ.

ಆಳ ನೀರಿನ ಮೀನುಗಳ ದೇಹ ಸಾಮಾನ್ಯವಾಗಿ ನೀಳವಾಗಿಯೂ ಚಪ್ಪಟೆಯಾಗಿಯೂ ಇರುತ್ತದೆ. ಬಾಲ ಚಾಟಿಯಂತಿರುವುದು. ಈ ಪ್ರದೇಶದಲ್ಲಿ ಉಷ್ಣತೆ ಕಡಿಮೆಯಾಗಿರುವುದರಿಂದ ಕ್ಯಾಲ್ಸಿಯಮ್ ಚಯಾಪಚಯ ಕ್ರಿಯೆ ಬಲು ಮಂದಗತಿಯದಾಗಿದೆ. ಇದರಿಂದ ಬಾರ್ನ್‌ಕಲ್ ಪ್ರಾಣಿಗಳಲ್ಲಿ, ಕಠಿಣಚರ್ಮಿ ಮತ್ತು ಮೃದ್ವಂಗಿಗಳಲ್ಲಿ ಕ್ಯಾಲ್ಸಿಯಮ್ ಅತ್ಯಲ್ಪ ಮೊತ್ತದಲ್ಲಿದೆ. ಅನೇಕ ಮೀನುಗಳ ಕಂಕಾಲದಲ್ಲೂ ಕ್ಯಾಲ್ಸಿಯಮ್ ಅಂಶ ಬಹು ಕಡಿಮೆ. ಆದ್ದರಿಂದ ಇಲ್ಲಿನ ಪ್ರಾಣಿಗಳ ದೇಹದ ಹೊದಿಕೆ, ಚಿಪ್ಪುಗಳು ಮತ್ತು ಕಂಕಾಲ ಬಹು ದುರ್ಬಲವಾಗಿವೆ. ಎಲುಬುಗಳು ಸಣ್ಣವಾಗಿಯೂ ಹಗುರವಾಗಿಯೂ ಇವೆಯಲ್ಲದೆ ಸ್ನಾಯುಗಳು ಕೃಶವಾಗಿವೆ. ದೇಹದ ಬೆಳವಣಿಗೆ ಕುಂಠಿತವಾಗಿರುವುದು. ಈ ರೀತಿಯ ದೇಹದ ರಚನೆ ಈ ಪ್ರಾಣಿಗಳಿಗೆ ಈಜಲು ಅನುಕೂಲವಾಗಿದೆ. ಅಂದರೆ ಪ್ಲವನತೆ, ಈ ಪರಿಸರದ ಪ್ರಾಣಿಗಳ ಒಂದು ಮುಖ್ಯ ಗುಣ. ಇಲ್ಲಿನ ಪ್ರಾಣಿಗಳು ಸಾಮಾನ್ಯ ಗಾತ್ರದುವು. ಗಾತ್ರ ಆನುವಂಶೀಯವಾಗಿರಬಹುದಾದರೂ ಇಲ್ಲಿ ದೊರೆಯುವ ಕನಿಷ್ಠ ಆಹಾರದ ಅಂಶದ ಮೇಲೂ ಇದು ಅವಲಂಬಿತವಾಗಿದೆ.

ಈ ಪ್ರದೇಶದ ಪ್ರಾಣಿಗಳು ಸಾಮಾನ್ಯವಾಗಿ ಪೇಲವ ಬಣ್ಣದುವು. ಅಕಶೇರುಕಗಳಲ್ಲಿ ಕೆಂಪು ಬಣ್ಣವೂ ಮೀನುಗಳಲ್ಲಿ ಕಪ್ಪು ಅಥವಾ ನೇರಳೆ ಬಣ್ಣಗಳೂ ಪ್ರಧಾನವಾಗಿವೆ. ಮೀನುಗಳ ಮೈಮೇಲೆ ಕೆಲವು ವೇಳೆ ಬೆಳ್ಳಿ ಬಣ್ಣದ ಗುರುತುಗಳಿರುವುವು.

ಜಲತಲ ಪ್ರದೇಶದ ಕಾರ್ಗತ್ತಲೆ ಇಲ್ಲಿನ ಪ್ರಾಣಿಗಳ ಕಣ್ಣುಗಳ ಮೇಲೆ ಪ್ರಭಾವ ಬೀರಿದೆ. ಅನೇಕ ಅಕಶೇರುಕಗಳಲ್ಲಿ ಕಣ್ಣುಗಳು ಕ್ಷೀಣಿಸಿವೆ. ಕೆಲವಲ್ಲಿ ಕಣ್ಣುಗಳೇ ಇಲ್ಲ. ಶಿರೋಪಾದಿಗಳಲ್ಲಿ ಕೆಲವು ಕುರುಡಾಗಿದ್ದರೆ (ಉದಾಹರಣೆಗೆ ಸಿರೋತೌಮ ಮುರ್ರೆಯಿ), ಕೆಲವಲ್ಲಿ ಬಹು ದೊಡ್ಡ ಕಣ್ಣುಗಳಿವೆ. ಮತ್ತೆ ಕೆಲವಲ್ಲಿ ದೂರದರ್ಶಕ ರೀತಿಯ ಕಣ್ಣುಗಳಿವೆ. ಈ ರೀತಿಯ ಮಾರ್ಪಾಡುಗಳನ್ನು ಮೀನುಗಳಲ್ಲೂ ಕಾಣಬಹುದು. ಕೆಲವು ಮೀನುಗಳಲ್ಲಿ ಕಣ್ಣುಗಳಿದ್ದರೂ ಅವಕ್ಕೆ ದೃಷ್ಟಿಮಾಂದ್ಯವಿರಬಹುದೆಂದು ಕೆಲವರ ಅಭಿಪ್ರಾಯ. ಜಲತಲ ಪ್ರದೇಶದ ಎಲ್ಲ ಮೀನುಗಳಲ್ಲಿ ರೆಟಿನ ರಾಡ್‌ಗಳಿಂದ ಮಾತ್ರ ರೂಪುಗೊಂಡಿದೆ. ಕುರುಡು ಅಥವಾ ಕ್ಷೀಣಗೊಂಡ ಕಣ್ಣುಳ್ಳ ಮೀನುಗಳಲ್ಲಿ ಬೆನ್ನಿನ ರೆಕ್ಕೆ, ಹೊಟ್ಟೆ ಅಥವಾ ಬಾಲಗಳಲ್ಲಿರುವ ಉದ್ದವಾದ ತಂತುಗಳು ಸ್ಪರ್ಶೇಂದ್ರಿಯಗಳಾಗಿ ಮಾರ್ಪಾಡಾಗಿವೆ. ಬೇತಿಟೀರಾಯಿಸ್ ಮೀನಿನ ಎದೆಯ ಜೋಡಿರೆಕ್ಕೆಗಳಲ್ಲಿ ಅದರ ದೇಹದಷ್ಟೇ ಉದ್ದವಾದ ತಂತುಗಳುಂಟು. ಆಲ್ಟಿಮೊಸ್ಟೋಮಿಯಾಸ್ ಮೀನಿನ ಮೂತಿಯ ಮೇಲಿನ ಮೀಸೆಗಳು ದೇಹದ ಹತ್ತು ಪಟ್ಟು ಉದ್ದವಾಗಿದೆ. ಸೀಗಡಿ ಮುಂತಾದ ಅಕಶೇರುಕಗಳಲ್ಲಿ ಉದ್ದವಾದ ಮೀಸೆಗಳೇ ಅವುಗಳ ಸ್ಪರ್ಶೇಂದ್ರಿಯಗಳು (ಉದಾಹರಣೆಗೆ ನೆಮಟೋಕಾರ್ಸಿನಸ್ ಸೀಗಡಿ).

ಬಹುತೇಕ ಅಕಶೇರುಕಗಳು ಉಸುಬನ್ನು ತಿಂದು ಅದರ ಜೈವಿಕ ಭಾಗಗಳನ್ನು ಜೀರ್ಣಿಸಿಕೊಳ್ಳುವುವು. ಶಿರೋಪಾದಿಗಳು ಹಾಗೂ ಅನೇಕ ಮೀನುಗಳು ಮಾಂಸಾಹಾರಿಗಳು. ಕೊಳೆತ ಉಸುಬನ್ನು ತಿನ್ನುವ ಪ್ರಾಣಿಗಳಲ್ಲಿ ವದನಾಂಗಗಳು ಬಲು ಕ್ಷೀಣವಾಗಿವೆ. ಆದರೆ ಮಾಂಸಾಹಾರಿ ಮೀನುಗಳಲ್ಲಿ ಬಲಯುತ ಹಲ್ಲುಗಳುಂಟು. ಕೆಲವು ಮೀನುಗಳು ತಮ್ಮಷ್ಟೇ ದೊಡ್ಡ ಪ್ರಾಣಿಗಳನ್ನೂ ನುಂಗಬಲ್ಲವು (ಉದಾಹರಣೆಗೆ ಬಿಯಾಸ್ಮೊಡಾನ್, ಯೂರಿಫ್ಯಾರಿಂಕ್ಸ್). ಇವುಗಳಲ್ಲಿ ಚೀಲದಂಥ ದೊಡ್ಡ ಹೊಟ್ಟೆಯಿದೆ.

ಇಲ್ಲಿನ ಮೀನುಗಳಲ್ಲಿ ಪಾರ್ಶ್ವಪಂಕ್ತಿ ಅಂಗಗಳು ಚೆನ್ನಾಗಿ ರೂಪುಗೊಂಡಿದ್ದು ಶಬ್ದದ ಅಲೆಗಳನ್ನು ಸ್ವಲ್ಪ ದೂರದಿಂದಲೇ ಕಂಡುಹಿಡಿಯಬಲ್ಲವಾಗಿವೆ. ಇದರಿಂದ ಶತ್ರು ಅಥವಾ ಆಹಾರ ಪ್ರಾಣಿಗಳ ಇರುವಿಕೆಯನ್ನು ಇವು ತಿಳಿಯುವುವು. ಘ್ರಾಣೇಂದ್ರಿಯಗಳು ಈ ಪರಿಸರದಲ್ಲಿ ಬಹುಮುಖ್ಯ. ಗಂಡು ಮತ್ತು ಹೆಣ್ಣು ಪ್ರಾಣಿಗಳೂ ಸಂತಾನೋತ್ಪತ್ತಿಯ ಸಮಯದಲ್ಲಿ ಹತ್ತಿರ ಬರಲು ಇವು ಸಹಾಯಕವಾಗಿವೆ. ಅನೇಕ ಗಾಳದ ಮೀನುಗಳಲ್ಲಿ ಗಂಡಿನಲ್ಲಿರುವ ಘ್ರಾಣೇಂದ್ರಿಯಗಳು ಮಿಕ್ಕ ಕಶೇರುಕಗಳ ಇಂದ್ರಿಯಗಳಿಗಿಂತ ದೊಡ್ಡವು. ಬರ್ಟೆಲ್‌ಸನ್ ಎಂಬಾತನ ಊಹೆಯ ಪ್ರಕಾರ ನಿಧಾನವಾಗಿ ಚಲಿಸುವ ಹೆಣ್ಣು ತನ್ನ ಹಿಂದೆ ಒಂದು ರೀತಿಯ ವಾಸನೆಯ ಜಾಡನ್ನು ಬಿಡುತ್ತದೆ. ಈ ವಾಸನೆ ಹರಡುತ್ತಿರುವಾಗ ಗಂಡುಗಳು ಇದನ್ನು ಪತ್ತೆ ಹಚ್ಚಿ ಜಾಡನ್ನು ಹಿಂಬಾಲಿಸುತ್ತವೆ.

ಸಂದೀಪ್ತಿ (ಲೂಮಿನಿಸೆನ್ಸ್) ಜಲತಲ ಪ್ರದೇಶದ ಪ್ರಾಣಿಗಳ ಒಂದು ವಿಶೇಷ ಲಕ್ಷಣ. ಆಳ ಸಮುದ್ರದಲ್ಲಿ ಸಂದೀಪ್ತಶೀಲ ಜೀವಿಗಳು ಹೆಚ್ಚಾಗಿವೆ. ಕೆಲವು ಸ್ವತಃ ಪ್ರಕಾಶವನ್ನು ಹೊರಗೆಡಹಿದರೆ ಮಿಕ್ಕವು ಸಂದೀಪ್ತಶೀಲ ಬ್ಯಾಕ್ಟೀರಿಯಗಳ ಸಹಾಯದಿಂದ ಬೆಳಕನ್ನು ಚೆಲ್ಲುತ್ತವೆ. ಸುಮಾರು 50 ಬಗೆಯ ಮೀನುಗಳು ಸಂದೀಪ್ತಶೀಲ ಅಂಟನ್ನು ಸ್ರವಿಸುತ್ತವೆ ಅಥವಾ ಸಂದೀಪ್ತಶೀಲ ವಿಶೇಷಾಂಗವನ್ನು ಪಡೆದಿವೆ. ಸಂದೀಪ್ತಶೀಲ ಅಂಗಗಳು ದೇಹದ ವಿವಿಧ ಭಾಗಗಳಲ್ಲಿರಬಹುದು. ಫೋಟೋಸ್ಟೋಮಿಯಾಸ್ ಮತ್ತು ಗ್ಯಾಸ್ಟ್ರೊಸ್ಟೋಮಸ್ ಪ್ರಭೇದಗಳಲ್ಲಿ ಈ ಅಂಗಗಳು ಕ್ರಮವಾಗಿ ಪಾರ್ಶ್ವ ಪಂಕ್ತಿಗಳ ಕೆಳಗೂ ಮತ್ತು ಮೇಲೂ ಪ್ರಸರಿಸಿವೆ. ಅನೇಕ ಗಾಳದ ಮೀನುಗಳಲ್ಲಿಯೂ ಈ ಅಂಗಗಳು ಕಂಡುಬರುವುವು. ಕೆಲವಲ್ಲಿ ಬೆನ್ನುರೆಕ್ಕೆಯಲ್ಲಿರುವುದು. ಗಲಾತಿಯತೌಮ ಆಕ್ಸೆಲಿ ಮೀನಿನಲ್ಲಿ ಇದು ಬಾಯಲ್ಲಿದೆ. ಕುರುಡು ಮೀನುಗಳಲ್ಲಿಯೂ ಸಂದೀಪ್ತಶೀಲ ಅಂಗಗಳು ಉಂಟು (ಉದಾಹರಣೆಗೆ ಇಪ್ನಾಪ್ಸ್). ಬೆಳಕು ಉತ್ಪತ್ತಿ ಮಾಡುವ ವಿಶೇಷಾಂಗಗಳಿಗೆ ಫೋಟೊಫೋರುಗಳೆಂದು ಹೆಸರು. ಇವುಗಳ ಗ್ರಂಥಿ ಕೋಶಗಳಲ್ಲಿ ಸಂದಿಪ್ತಶೀಲ ಬ್ಯಾಕ್ಟೀರಿಯಗಳಿವೆ. ಫೋಟೊಫೋರುಗಳಲ್ಲಿ ಎರಡು ವಿಧ. ಸರಳ ರೀತಿಯವು ಮತ್ತು ಸಂಕೀರ್ಣ ರೀತಿಯವು. ಸಂಕೀರ್ಣ ರೀತಿಯವುಗಳಲ್ಲಿ ಮಸೂರ ಇದೆ. ಕೆಲವು ಮೀನುಗಳಲ್ಲಿ ಫೋಟೊಫೋರುಗಳು ಕಣ್ಣಿನ ಮುಂಭಾಗದಲ್ಲಿಯೂ ಕೆಲವಲ್ಲಿ ಕಣ್ಣಿನ ಕೆಳಭಾಗದಲ್ಲಿಯೂ ಇರುವುದುಂಟು. ಡಯಫ್ಲುಸ್ ಮೀನಿನಲ್ಲಿ ಸಂದೀಪ್ತಶೀಲ ಅಂಗ ತಲೆಯ ಮುಂಬಾಗದಲ್ಲಿ ಗಣಿಕೆಲಸಗಾರರ ತಲೆಯ ದೀಪದ ಹಾಗಿರುವುದು. ಅಕಶೇರುಕಗಳಲ್ಲಿಯೂ ಸಂದೀಪ್ತಶೀಲ ಅಂಗಗಳಿವೆ. ಸೀಗಡಿಯಲ್ಲೂ (ನೆಮಟೋಕಾರ್ಸಿನಸ್) ಶಿರೋಪಾದಿಗಳಲ್ಲೂ (ಹೆಟರೊಟ್ಯೂರಿಸ್ ಡಿಸ್‌ಪರ್) ಬಾಯಿಯ ಹತ್ತಿರ ಇರುವ ಕೆಲವು ವಿಶೇಷ ಗ್ರಂಥಿಗಳು ಒಂದು ರೀತಿಯ ಜಿಗುಟು ದ್ರವವನ್ನು ಸ್ರವಿಸುತ್ತವೆ. ಈ ದ್ರವ ಗ್ರಂಥಿಯಿಂದ ಹೊರಬಂದು ನೀರನ್ನು ತಾಗಿದೊಡನೆ ಬೆಳಕಿನ ಕಿಡಿಗಳು ಉತ್ಪತ್ತಿಯಾಗುವುವು. ಶತ್ರುಗಳಿಂದ ತಪ್ಪಿಸಿಕೊಳ್ಳಲು ಇದು ಒಳ್ಳೆಯ ಸಾಧನ. ಲ್ಯೂಸಿಫರಿನ್ ಎಂಬ ರಾಸಾಯನಿಕ ಹಾಗೂ ಲ್ಯೂಸಿಫರೇಸ್ ಕಿಣ್ವಗಳು ಆಕ್ಸಿಜನ್ ಸಮ್ಮುಖದಲ್ಲಿ ಪರಸ್ಪರ ಕಲೆತಾಗ ನಡೆಯುವ ಪ್ರಕ್ರಿಯೆಯಿಂದ ಸಂದೀಪ್ತಿ ಉಂಟಾಗುತ್ತದೆ. ಸಂದೀಪ್ತ ಶೀಲ ಅಂಗಗಳು ಆಹಾರ ಪ್ರಾಣಿಗಳನ್ನು ಆಕರ್ಷಿಸುವುದಕ್ಕೂ ರಕ್ಷಣೆಗೂ ಒಂದು ಪ್ರಭೇದದ ಗಂಡು ಹೆಣ್ಣು ಪ್ರಾಣಿಗಳ ಪರಸ್ಪರ ಆಕರ್ಷಣೆಗೂ ಸಹಾಯಕ ಎಂದೂ ತಿಳಿಯಲಾಗಿದೆ.

ಸಂತಾನೋತ್ಪತ್ತಿ : ಈ ಪ್ರಭೇದಗಳಲ್ಲಿ ಬೆಳವಣಿಗೆ ಸಾಮಾನ್ಯವಾಗಿ ಡಿಂಬಗಳಿಲ್ಲದೆ ಆಗುವುದು. ಈ ಪ್ರಾಣಿಗಳ ಮೊಟ್ಟೆಗಳು ಬಹು ದೊಡ್ಡ ಗಾತ್ರವಾದ್ದರಿಂದ ಭ್ರೂಣ ಪ್ರೌಢಾವಸ್ಥೆಯ ರೂಪ ತಳೆಯುವವರೆಗೂ ಮೊಟ್ಟೆಯಲ್ಲಿಯೇ ಬೆಳವಣಿಗೆ ಮುಂದುವರಿಯುವುದು. ಈ ಪ್ರದೇಶಗಳಲ್ಲಿ ಪ್ರಾಣಿಗಳು ಬಲು ಕಡಿಮೆ ಸಂಖ್ಯೆಯಲ್ಲಿರುವುದರಿಂದ ಗಂಡು ಹೆಣ್ಣುಗಳ ಭೇಟಿ, ಮಿಲನಗಳ ಅವಕಾಶ ಮತ್ತು ಗರ್ಭಾಂಕುರತೆ–ಇವು ಬಲು ಕಷ್ಟಸಾಧ್ಯ. ಈ ಸಮಸ್ಯೆಗಳನ್ನು ಕೆಲವು ಮೀನುಗಳು ಸುಲಭವಾಗಿ ಪರಿಹರಿಸಿಕೊಂಡಿವೆ. ಉದಾಹರಣೆಗೆ ಗಾಳದ ಮೀನುಗಳಲ್ಲಿ ದೊಡ್ಡ ಘ್ರಾಣೇಂದ್ರಿಯಗಳಿರುವ ಕುಬ್ಜ ಗಂಡು ಮೀನುಗಳು ಹೆಣ್ಣು ಮೀನುಗಳ ದೇಹವನ್ನು ತಮ್ಮ ಬಲವಾದ ಹಲ್ಲುಗಳಿಂದ ಹಿಡಿದುಕೊಂಡು ಪರಾವಲಂಬಿಗಳಾಗಿ ಬಿಡುತ್ತವೆ. ಈ ರೀತಿ ಹೆಣ್ಣಿನ ಜೊತೆಯಲ್ಲಿ ಜೀವನದ ಅಂತ್ಯದವರೆಗೂ ಇರುವುದರಿಂದ ಹೆಣ್ಣುಗಳು ಗಂಡುಗಳ ಅನ್ವೇಷಣೆಗೆ ಹೋಗಬೇಕಾಗಿಯೇ ಇಲ್ಲ.

ಈವರೆಗೆ ಅನೇಕ ವೈಜ್ಞಾನಿಕ ಸಮುದ್ರಯಾನಗಳಾಗಿದ್ದರೂ ಸಮುದ್ರದ ಪ್ರಾಣಿ ಪ್ರಭೇದಗಳ ಮಾಹಿತಿ ಇನ್ನೂ ಬಹಳವಾಗಿ ಆಗಬೇಕಾಗಿದೆ. ಹೀಗಿರುವಲ್ಲಿ ಜಲತಲ ಪ್ರದೇಶದ ಪ್ರಭೇದಗಳ ವಿಕಾಸದ ವಿಚಾರವಾಗಿ ಖಚಿತವಾಗಿ ಏನೂ ಹೇಳುವಂತಿಲ್ಲ. ರೇಡಿಯೋಲೇರಿಯನ್ ಉಸುಬುಗಳು ಮತ್ತು ಕೆಂಪು ಜೇಡಿ ಮಣ್ಣಿನಲ್ಲಿ ರೇಡಿಯಮ್ ಹೆಚ್ಚು ಮೊತ್ತದಲ್ಲಿ ಇರುವುದರಿಂದ ಇದರ ಪ್ರಭಾವ ಇಲ್ಲಿನ ಪ್ರಾಣಿಗಳ ಮೇಲೆ ಇರಲೇಬೇಕು. ಆದ್ದರಿಂದ ಇಲ್ಲಿನ ಪ್ರಭೇದೀಕರಣ ಮಿಕ್ಕಸಾಗರ ಪ್ರದೇಶಗಳಿಗಿಂತ ತೀವ್ರಗತಿಯಲ್ಲಿ ಆಗಿರಬಹುದು. ಅದರಲ್ಲೂ ತಳಭಾಗದಲ್ಲಿ ವಿಕೃತಿಗಳ (ಮ್ಯುಟೇಷನ್ಸ್) ಪ್ರಮಾಣ, ವಿಕಿರಣ ಪ್ರಭಾವದಿಂದ ಹೆಚ್ಚಾಗಿರಬೇಕು. ಈ ವಿಚಾರಗಳನ್ನು ತಿಳಿಯಲು ಮೂಲಭೂತ ಅಂಶಗಳು ಬಹು ಅವಶ್ಯಕ. ಈ ದಿಸೆಯಲ್ಲಿ ಸಂಶೋಧನೆ ಮುಂದುವರಿದಿದೆ. ***

**ಜಾಗ್ವಾರ್:** ದಕ್ಷಿಣ ಮತ್ತು ಉತ್ತರ ಅಮೆರಿಕಗಳ ಉಷ್ಣವಲಯಗಳಲ್ಲಿ ಮಾತ್ರ ಕಾಣಸಿಗುವ ಒಂದು ಹಿಂಸ್ರಪ್ರಾಣಿ. ಹುಲಿ, ಚಿರತೆಗಳಿಗೆ ಬಲು ಹತ್ತಿರ ಸಂಬಂಧಿ.

ಕಾರ್ನಿವೊರ ಗಣದ ಫೆಲಿಡೆ ಕುಟುಂಬಕ್ಕೆ ಸೇರಿದೆ. ಪ್ಯಾಂತರ ಅಂಕ ಇದರ ಶಾಸ್ತ್ರೀಯ ಹೆಸರು. ದಕ್ಷಿಣ ಅಮೆರಿಕದ ಪಟಗೋನಿಯದಿಂದ ಹಿಡಿದು ಮಧ್ಯ ಅಮೆರಿಕವೂ ಸೇರಿಕೊಂಡು ಅಮೆರಿಕ ಸಂಯುಕ್ತ ಸಂಸ್ಥಾನದ ಟೆಕ್ಸಸ್, ನ್ಯೂ ಮೆಕ್ಸಿಕೊ ಹಾಗೂ ಆರಿಜೋನ ರಾಜ್ಯಗಳವರೆಗಿನ ಕ್ಷೇತ್ರದಲ್ಲಿ ಇದರ ವಾಸ. ಅಲ್ಲಿನ ತಗ್ಗುಪ್ರದೇಶಗಳ ದಟ್ಟಕಾಡುಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸುವ ಇದು ಪರ್ವತ ಸೀಮೆಗಳಲ್ಲೂ ಬಂಜರು ಪ್ರದೇಶಗಳ ಕುರುಚಲು ಪೊದೆಗಳಲ್ಲೂ ಕಾಣದೊರೆಯುವುದುಂಟು.



ಅಮೆರಿಕ ಖಂಡದಲ್ಲಿ ವಾಸಿಸುವ ಬೆಕ್ಕಿನ ಜಾತಿಯ ಪ್ರಾಣಿಗಳಲ್ಲೆಲ್ಲಾ ಇದೇ ಅತ್ಯಂತ ದೊಡ್ಡ ಗಾತ್ರದ್ದು. ಪೂರ್ಣ ಬೆಳೆದ ಗಂಡು ಜಾಗ್ವಾರಿನ ಉದ್ದ 1.5–1.8ಮೀ. ತೂಕ 70–140 ಕಿಗ್ರಾಂ ಜೊತೆಗೆ 70–90 ಸೆಮೀ ಉದ್ದದ ಬಾಲವೊಂದುಂಟು. ಜಾಗ್ವಾರಿನ ಮೈಬಣ್ಣ ಕಿತ್ತಳೆ ಮಿಶ್ರಿತ ಹಳದಿ. ಜೊತೆಗೆ ಚಿರತೆಯಲ್ಲಿರುವಂತೆಯೆ ಗುಲಾಬಿದಳದ ರೀತಿ ಜೋಡಣೆಗೊಂಡಿರುವ ಕಪ್ಪು ಬಣ್ಣದ ಮಚ್ಚೆಗಳಿವೆ. ಆದರೆ ಜಾಗ್ವಾರಿನಲ್ಲಿ ಮಚ್ಚೆಗಳ ಮಧ್ಯೆಯೂ ಒಂದು ಕಪ್ಪು ಚುಕ್ಕಿಯುಂಟು. ಬಾಲದ ಮೇಲಿನ ಮಚ್ಚೆಗಳು ಉಂಗುರದ ರೀತಿ ಇವೆ. ಸಂಪೂರ್ಣ ಕಪ್ಪು ಬಣ್ಣದ ಜಾಗ್ವಾರ್ ಬಗೆಯೂ ಇದೆ. ಜಾಗ್ವಾರ್ ಚಿರತೆಗಿಂತ ಸ್ಥೂಲಕಾಯದ ಹಾಗೂ ಗಿಡ್ಡಾದ ಪ್ರಾಣಿ. ಇದರ ಬಾಲವೂ ಚಿರತೆಯದರಷ್ಟು ಉದ್ದವಲ್ಲ. ಆದರೆ ಚಿರತೆಯಷ್ಟೆ ಚುರುಕಾದ ಪ್ರಾಣಿ ಇದು. ಅಲ್ಲದೆ ಮರ ಹತ್ತುವುದರಲ್ಲಿ, ಈಜುವುದರಲ್ಲಿ ಬಲು ಕುಶಲಿ. ಜಾಗ್ವಾರ್, ಸಾಮಾನ್ಯವಾಗಿ ಒಂಟೊಂಟಿಯಾಗಿಯೇ ಅಲೆಯುತ್ತದೆ. ಚಿರತೆಯಂತೆಯೇ ಇದೂ ನಿಶಾಚರಿ. ಹಗಲೆಲ್ಲ ಯಾವುದಾದರೂ ದಟ್ಟಪೊದೆಯಲ್ಲಿ ಮಲಗಿದ್ದು ಸಂಜೆಯಾದ ಮೇಲೆ ತನ್ನ ಮೆಚ್ಚಿನ ಎರೆಗಳಾದ ಕ್ಯಾಪಿಬಾರ, ಪೆಕರಿ, ಟಪಿರ್ ಮುಂತಾದ ಪ್ರಾಣಿಗಳನ್ನು ಬೇಟೆಯಾಡಲು ಹೊರಡುತ್ತದೆ. ಮೊಸಳೆ, ನೀರಾಮೆ, ಮೀನು ಇತ್ಯಾದಿಗಳನ್ನೂ ಇದು ಬೇಟೆಯಾಡುತ್ತದೆ. ಕೆಲವು ಸಲ ಹಳ್ಳಿಗಳಿಗೆ ನುಗ್ಗಿ ನಾಯಿ, ಕೋಳಿ, ದನಗಳನ್ನೂ ಕೊಂಡೊಯ್ಯುವುದುಂಟು. ನರಭಕ್ಷಕ ಜಾಗ್ವಾರುಗಳೂ ಇಲ್ಲದಿಲ್ಲ.

ಇವುಗಳಲ್ಲಿ ಗಂಡುಹೆಣ್ಣುಗಳ ಕೂಡುವಿಕೆಗೆ ನಿರ್ದಿಷ್ಟ ಶ್ರಾಯವಿಲ್ಲ. ಸಂಭೋಗಾನಂತರ 100–110 ದಿನಗಳ ಅನಂತರ ಹೆಣ್ಣು 2–4 ಮರಿಗಳನ್ನು ಈಯುತ್ತದೆ. ಹುಟ್ಟಿದಾಗ ಬಹಳ ಅಸಹಾಯಕ ಸ್ಥಿತಿಯಲ್ಲಿರುವ ಮರಿಗಳಿಗೆ 35 ದಿನಗಳ ಅನಂತರ ತಾಯನ್ನು ಹಿಂಬಾಲಿಸಿ ಓಡಾಡುವ ಶಕ್ತಿ ಬರುತ್ತದೆ. ಸುಮಾರು 1 ವರ್ಷ ಕಾಲ ತಾಯಿಯೊಂದಿಗೆ ಇದ್ದು ಆಮೇಲೆ ಸ್ವತಂತ್ರ ಜೀವನ ನಡೆಸತೊಡಗುತ್ತವೆ. 3 ವರ್ಷ ವಯಸ್ಸಾದ ಮೇಲೆ ಇವಕ್ಕೆ ಲೈಂಗಿಕ ಪ್ರಬುದ್ಧತೆ ಬರುತ್ತದೆ. ಜಾಗ್ವಾರಿನ ಆಯಸ್ಸು ಸುಮಾರು 20 ವರ್ಷಗಳು.

ನ್ಯೂ ಮೆಕ್ಸಿಕೊ ಮುಂತಾದೆಡೆ ಜಾಗ್ವಾರನ್ನು ನಾಯಿಗಳ ಸಹಾಯದಿಂದ ಬೇಟೆಯಾಡುವುದಿದೆ. ತುಂಬ ವೇಗವಾಗಿ ಓಡಬಹುದಾದರೂ ಬಹುಬೇಗ ಸುಸ್ತಾಗಿ ನಾಯಿಗಳ ಕೈಗೆ ಸಿಕ್ಕಿಬೀಳುತ್ತದೆ. ಜೊತೆಗೆ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಮರವನ್ನು ಹತ್ತಿ ತುದಿರೆಂಬೆಗಳಿಗೇರಿಬಿಡುವುದರಿಂದ ಬಂದೂಕಿಗೆ ಸುಲಭವಾಗಿ ಬಲಿಯಾಗುತ್ತದೆ. ಆದರೂ ಪಾರಾಗುವ ದಾರಿ ಕಾಣದಾದಾಗ ತನ್ನನ್ನು ಬೆನ್ನಟ್ಟಿಬರುವ ನಾಯಿಗಳನ್ನೂ ಮನುಷ್ಯರನ್ನೂ ಎದುರಿಸಿ ಉಗ್ರವಾಗಿ ಹೋರಾಡಬಲ್ಲುದು. ***

**ಜಿಗಣೆ:** ಅನೆಲಿಡ ವಂಶದ ಹಿರುಡೀನಿಯ ವರ್ಗಕ್ಕೆ ಸೇರಿದ ಅಕಶೇರುಕ (ಲೀಚ್). ಭಾರತ, ಬರ್ಮ ಮತ್ತು ಶ್ರೀಲಂಕಾಗಳನ್ನೊಳಗೊಂಡು ಉಷ್ಣಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಸಿಹಿನೀರಿನ ಕೊಳ, ಕೆರೆ, ಜೌಗು ಪ್ರದೇಶ ಮತ್ತು ನಿಧಾನವಾಗಿ ಹರಿಯುವ ಹಳ್ಳಗಳಲ್ಲಿ ಇದರ ವಾಸ. ನೀರಿನಲ್ಲಿ ತನ್ನ ಮಾಂಸಲವಾದ ದೇಹವನ್ನು ಅಲೆಗಳಂತೆ ಬಳುಕಿಸಿ ಈಜುತ್ತದೆ. ಆಹಾರಾರ್ಜನೆಗಾಗಿ ನೆಲದ ಮೇಲೂ ಬರುವುದುಂಟು. ನೆಲದ ಮೇಲೆ ದೇಹದ ಎರಡೂ ತುದಿಗಳಲ್ಲಿರುವ ಹೀರುಬಟ್ಟಲುಗಳ ನೆರವಿನಿಂದ ದೇಹವನ್ನು ಕುಣಿಕೆಯಂತೆ ಬಾಗಿಸಿ ಚಲಿಸುತ್ತದೆ. ಜಿಗಣೆ ಒಂದು ರೀತಿಯಲ್ಲಿ ಬಹಿರ್ ಪರತಂತ್ರ ಜೀವಿ. ಇದು ವಾಸಿಸುವ ನೆಲೆಯ ಬಳಿಗೆ ನೀರು ಕುಡಿಯಲು ಬರುವ ಕಶೇರುಕಗಳ ರಕ್ತವನ್ನು ಹೀರಿ ಬದುಕುತ್ತದೆ. ನೀರಿನಲ್ಲಿಯೇ ವಾಸಿಸುವ ಮೀನು, ಆಮೆಗಳ ಪರಾವಲಂಬಿಯಾಗಿ ಬದುಕುವುದೂ ಉಂಟು. ಎಲ್ಲ ಜಿಗಣೆಗಳೂ ರಕ್ತ ಹೀರಿ ಜೀವಿಸುವ ಪರಾವಲಂಬಿಗಳಲ್ಲ. ಕೆಲವು ಬಸವನ ಹುಳು, ಕೀಟಗಳ ಲಾರ್ವ ಮತ್ತು ಇತರ ಸೂಕ್ಷ್ಮಜೀವಿಗಳನ್ನು ತಿಂದು ಜೀವಿಸುತ್ತವೆ.

**ಹಿರುಡೊ ಮೆಡಿಸಿನ್ಯಾಲಿಸ್ ಪ್ರಭೇದ ವೈದ್ಯರು ಬಳಸುತ್ತಿದ್ದರೆನ್ನಲಾದ ಬಗೆ**

ಸಾಮಾನ್ಯವಾಗಿ ಮನುಷ್ಯನಿಗೆ ಕೇಡುಕು ಮಾಡುವ ಜಿಗಣೆ ಹಿರುಡಿನೇರಿಯ ಜಾತಿಯದು. ಭಾರತದಲ್ಲಿ ನಾಲ್ಕು ಪ್ರಭೇದಗಳಿವೆ: ಹಿ. ವಿರಿಡಿಸ್, ಹಿ. ಜಾವನ್ಸಿಯ, ಹಿ. ಮ್ಯಾನಿಲೆನ್ಸಿಸ್ ಮತ್ತು ಹಿ. ಗ್ರ್ಯಾನುಲೋಸ. ಕರ್ನಾಟಕದ ಮಲೆನಾಡು ಪ್ರದೇಶದಲ್ಲಿ ಸಾಮಾನ್ಯವಾಗಿ ದೊರಕುವ ಪ್ರಭೇದ ಗ್ರ್ಯಾನುಲೋಸ.

ಅನೆಲಿಡ ವಿಭಾಗದ ಇತರ ಜೀವಿಗಳಲ್ಲಿರುವಂತೆಯೆ ಜಿಗಣೆಯ ಮಾಂಸಲ ದೇಹವೂ ಅನೇಕ ಖಂಡಗಳಾಗಿ ವಿಭಾಗವಾಗಿದೆ. ಗ್ರ್ಯಾನುಲೋಸ ಪ್ರಭೇದ ವಿಸ್ತೃತಾವಸ್ಥೆಯಲ್ಲಿ 27 ಸೆಂಮೀ ಉದ್ದ ಇದೆ. ದೇಹ ಚಪ್ಪಟೆಯಾಗಿ ಕಂಡರೂ ಬೆನ್ನುಭಾಗ ಕಮಾನಿನಂತೆ ಉಬ್ಬಿದೆ. ಮೇಲ್ಭಾಗ ಗಾಢಹಸಿರು ಮತ್ತು ತಳಭಾಗ ಹಳದಿ ಮಿಶ್ರಿತ ಕಿತ್ತಲೆ ಬಣ್ಣದ್ದು. ಬೆನ್ನುಭಾಗದ ಮೇಲೆ ಹಳದಿ ಮಿಶ್ರಿತ ಕಿತ್ತಲೆ ಬಣ್ಣದ ಮತ್ತು ಕಪ್ಪು ಬಣ್ಣದ ಪಟ್ಟೆಗಳು ಹಾಗೂ ಕಪ್ಪು ಚುಕ್ಕೆಗಳು ಇವೆ. ದೇಹದ ಎರಡು ತುದಿಗಳಲ್ಲೂ ಹೀರು ಬಟ್ಟಲುಗಳಿವೆ. ಮುಂತುದಿಯಲ್ಲಿನ ಹೀರು ಬಟ್ಟಲಿನ ತಗ್ಗಿನ ನಡುವೆ ಬಾಯಿರಂಧ್ರವಿದೆ. ಹಿಂತುದಿಯ ಹೀರುಬಟ್ಟಲು ತಟ್ಟೆಯಾಕಾರದಲ್ಲಿದೆ. ಇದು ಮುಂತುದಿಯ ಹೀರುಬಟ್ಟಲಿಗಿಂತಲೂ ಹೆಚ್ಚು ಅಗಲ. ದೇಹದಲ್ಲಿ ಒಟ್ಟು 33 ಖಂಡಗಳುಂಟು. ಒಂದೊಂದು ಖಂಡವೂ ಆನ್ಯುಲೈ ಎಂಬ ಉಪಖಂಡಗಳಾಗಿ ವಿಭಾಗವಾಗಿದೆ. ಆನ್ಯುಲೈಗಳು ದೇಹದ ಹೊರಭಾಗದಲ್ಲಿ ಅಡ್ಡಜಾಡುಗಳಂತೆ ಕಂಡುಬಂದರೂ ದೇಹದ ಒಳ ಭಾಗದಲ್ಲಿ ಗೋಚರವಾಗುವುದಿಲ್ಲ. ಒಂದೊಂದು ಖಂಡದಲ್ಲೂ ಸಾಮಾನ್ಯವಾಗಿ 5 ಆನ್ಯುಲೈಗಳಿವೆ. ಆದರೆ ಮೊದಲಿನ 5 ಮತ್ತು ಕಡೆಯ 9 ಖಂಡಗಳಲ್ಲಿ ಭಿನ್ನ ಸಂಖ್ಯೆಯ ಆನ್ಯುಲೈಗಳುಂಟು. ಮೊದಲ 5 ಖಂಡಗಳಲ್ಲಿ ಪ್ರತಿಖಂಡದ ಮೊದಲನೆಯ ಆನ್ಯುಲಸಿನ ಊರ್ಧ್ವಭಾಗದಲ್ಲಿ ಒಂದೊಂದು ಜೊತೆ ಅರೆಚಂದ್ರಾಕಾರದ ಹಾಗೂ ಪೂರ್ಣ ರೂಪಗೊಂಡ ಕಣ್ಣುಗಳಿವೆ. ಎಲ್ಲ ಆನ್ಯುಲಸುಗಳ ಊರ್ಧ್ವ ಮತ್ತು ಅಧೋಭಾಗಗಳೆರಡರಲ್ಲಿಯೂ ಆನ್ಯುಲಾರ್ ಗ್ರಾಹಕಾಂಗಗಳಿವೆ. 6 ರಿಂದ 22 ನೆಯ ಖಂಡದವರೆಗೆ ಪ್ರತಿಯೊಂದು ಖಂಡದ ಕೊನೆಯ ಆನ್ಯುಲಸಿನ (ಅಂದರೆ 5ನೆಯ ಆನ್ಯುಲಸಿನ) ಅಧೋಭಾಗದಲ್ಲಿ ಒಂದೊಂದು ಜೊತೆ ನೆಫ್ರೀಡಿಯ ತೆರಪುಗಳಿವೆ. ಇದರ ಮೂಲಕ ಪ್ರಾಣಿಯ ಶುದ್ಧೀಕರಣಾಂಗಗಳಾದ ನೆಫ್ರೀಡಿಯಗಳು ಹೊರತೆರೆಯುತ್ತವೆ. ಖಂಡಗ್ರಾಹಕಾಂಗ ಮತ್ತು ಆನ್ಯುಲಾರ್ ಗ್ರಾಹಕಾಂಗಗಳು ಜಿಗಣೆಯ ಸಂವೇದನಾಂಗಗಳು. ಮೊದಲನೆಯ ಖಂಡದ ಮುಂಭಾಗದಲ್ಲಿ ಪ್ರೋಸ್ಟೋಮಿಯಮ್ ಎಂಬ ಒಂದು ರಚನೆ ಇದೆ. ದೇಹದ ಮುಂತುದಿಯಲ್ಲಿನ ಹೀರುಬಟ್ಟಲು ಮೊದಲನೆಯ 3 ಖಂಡಗಳವರೆಗೆ ವ್ಯಾಪಿಸುತ್ತದೆ. ಜಿಗಣೆ ಉಭಯ ಲಿಂಗಿ. ಆದರೆ ಗಂಡು ಮತ್ತು ಹೆಣ್ಣು ಜನನೇಂದ್ರಿಯ ತೆರಪುಗಳು 10 ಮತ್ತು 11ನೆಯ ಖಂಡಗಳಲ್ಲಿ 5 ಆನ್ಯುಲಸುಗಳ

ಅಂತರದಲ್ಲಿ ಆಯಾ ಖಂಡಗಳ 2 ಮತ್ತು 3ನೆಯ ಆನ್ಯುಲಸಿನ ನಡುವಿನ ಜಾಡಿನಲ್ಲಿ ಹೊರಕ್ಕೆ ತೆರೆಯುತ್ತವೆ. ಜಿಗಣೆ ಬಾಹ್ಯ ಪರಾವಲಂಬಿಯಾಗಿರುವುದರಿಂದ ಕೆಲವೊಂದು ಹೊಂದಾಣಿಕೆಗಳನ್ನು ಪ್ರದರ್ಶಿಸುತ್ತದೆ. ರಕ್ತವನ್ನು ಹೀರುವಾಗ ಆತಿಥೇಯ ಪ್ರಾಣಿಯ ದೇಹಕ್ಕೆ ಬಿಗಿಯಾಗಿ ಅಂಟಿಕೊಳ್ಳಲು ಹೀರುಬಟ್ಟಲುಗಳು ಸಹಾಯಕ. ಬಾಯ ರಂಧ್ರದ ಬಳಿ ಮಾಂಸಲವಾದ ಮೂರು ದವಡೆಗಳಿವೆ. ಇವುಗಳ ಸಹಾಯದಿಂದ ಆತಿಥೇಯ ಜೀವಿಯ ದೇಹದಲ್ಲಿ ಗಾಯಮಾಡಿ ರಕ್ತವನ್ನು ಹೀರುತ್ತದೆ. ಇದಕ್ಕೆ ಆತಿಥೇಯ ಸಿಕ್ಕುವುದು ಅಪರೂಪವಾದ್ದರಿಂದ ಸಿಕ್ಕಿದಾಗ ಆದಷ್ಟು ಹೆಚ್ಚು ರಕ್ತವನ್ನು ಹೀರಿಕೊಂಡು ಕೂಡಿಟ್ಟುಕೊಳ್ಳುತ್ತದೆ. ಹೀಗೆ ಹೆಚ್ಚು ಆಹಾರವನ್ನು ಕೂಡಿಟ್ಟುಕೊಳ್ಳುವ ಸಲುವಾಗಿ ಅನ್ನನಾಳದಲ್ಲಿ ಎಲೆಸಂಚಿ ಎಂಬ ರಚನೆಗಳು ಇವೆ. ಇದರಿಂದಾಗಿ ಒಮ್ಮೆ ರಕ್ತವನ್ನು ಹೀರಿತೆಂದರೆ 6 ತಿಂಗಳವರೆಗೆ ಪುನಃ ಆಹಾರವನ್ನು ಸೇವಿಸದೆ ಬದುಕಿರಬಲ್ಲುದು. ಹೆಚ್ಚು ರಕ್ತವನ್ನು ಹೀರಿದಾಗ ದೇಹವು ಹಿಗ್ಗಬೇಕಾದುದರಿಂದ



**ಪ್ರಕಾಬ್ಡೆಲ ಕ್ಯಾಟೆನೈಜರ ಪ್ರಭೇದ**
**ಆಮೆಗಳ ರಕ್ತ ಹೀರಿ ಬದುಕುವಂಥದು**

ದೇಹಭಿತ್ತಿಯಲ್ಲಿ ಅಡ್ಡ ಮತ್ತು ಲಂಬ ಸ್ನಾಯುಗಳ ಜೊತೆಗೆ ಉದಗ್ರ ಮತ್ತು ಓರೆ ಸ್ನಾಯುಗಳೂ ಇವೆ. ರಕ್ತ ತುಂಬಿದ ಅನ್ನನಾಳ ಭಾಗವನ್ನು ರಕ್ಷಿಸುವುದಕ್ಕಾಗಿ ಇದರ ಸುತ್ತಲೂ ಬಾಟ್ರಾಯಿಡಲ್ ಎಂಬ ವಿಶಿಷ್ಟ ಅಂಗಾಂಶವಿದೆ. ಆತಿಥೇಯ ಪ್ರಾಣಿಯಿಂದ ರಕ್ತವನ್ನು ಹೀರುವಾಗ ಹೆಪ್ಪುಗಟ್ಟುವುದನ್ನು ತಡೆಯಲು ಜಿಗಣೆಯ ಜೊಲ್ಲು ಗ್ರಂಥಿಗಳು ಹಿರುಡಿನ್ ಎಂಬ ಪದಾರ್ಥವನ್ನು ಸ್ರವಿಸುತ್ತವೆ. ರಕ್ತವನ್ನು ಹೀರಲು ನೆರವಾಗುವಂತೆ ಫ್ಯಾರಿಂಕ್ಸ್ ಭಾಗ ಮಾಂಸಲವಾಗಿದೆ. ಜಿಗಣೆಯ ವಾಸಸ್ಥಳ ಕೂಡ ಆಹಾರಾರ್ಜನೆಗೆ ಅನುಕೂಲವಾಗಿದೆ. ಸಿಹಿನೀರಿನ ಹಳ್ಳಕೊಳ್ಳಗಳಲ್ಲಿ ಇದು ವಾಸಿಸುವುದರಿಂದ ನೀರು ಕುಡಿಯಲು ಬಂದ ಕಶೇರುಕಗಳು ಸುಲಭವಾಗಿ ಇದಕ್ಕೆ ಆಹಾರವನ್ನು ಒದಗಿಸುತ್ತವೆ.

ಜಿಗಣೆಯ ದೇಹದಲ್ಲಿ ಎರೆಹುಳುವಿನ ದೇಹದಂತೆ ಸ್ಪಷ್ಟವಾದ ಕ್ಲೈಟೆಲಮ್ ಭಾಗ ಇಲ್ಲ. ಆದರೆ ಪ್ರಜನನ ಕಾಲದಲ್ಲಿ 10, 11, 12ನೆಯ ಖಂಡಗಳು ತಾತ್ಕಾಲಿಕವಾಗಿ ಕ್ಲೈಟೆಲಮ್ ಭಾಗದಂತೆ ವರ್ತಿಸಿ ಪ್ರಜನನದಲ್ಲಿ ನೆರವಾಗುತ್ತವೆ.

ಜಿಗಣೆಯ ಕೆಲವು ಪ್ರಭೇದಗಳು ಮನುಷ್ಯ ಮತ್ತು ಸಾಕುಪ್ರಾಣಿಗಳ ರಕ್ತವನ್ನು ಹೀರಿ ತೊಂದರೆ ಮಾಡಿದರೂ ಕೆಲವು ಮನುಷ್ಯನಿಗೆ ಉಪಕಾರಿಗಳೂ ಆಗಿವೆ. ಹಿರುಡೊ ಮೆಡಿಸಿನ್ಯಾಲಿಸ್ ಎಂಬ ಪ್ರಭೇದದ ಜಿಗಣೆಗಳನ್ನು ಹುಣ್ಣು, ಕುರು ಇತ್ಯಾದಿಗಳಿಂದ ಕೆಟ್ಟ ರಕ್ತವನ್ನು ತೆಗೆಯಲು ವೈದ್ಯರು ಉಪಯೋಗಿಸುತ್ತಾರೆ. ಇವು ರಕ್ತವನ್ನು ಹೀರುವಾಗ ಮನುಷ್ಯನಿಗೆ ನೋವಾಗುವುದಿಲ್ಲವಾದುದರಿಂದ ಈ ವಿಧಾನವನ್ನು ಅನುಸರಿಸುತ್ತಾರೆ. ಅಲ್ಲದೆ ಜಿಗಣೆಗಳಿಂದ ಪ್ರತ್ಯೇಕಿಸಿದ ಕೆಲವು ರಾಸಾಯನಿಕಗಳನ್ನು ರಕ್ತ ಹೆಪ್ಪುಗಟ್ಟುವುದನ್ನು ತಡೆಯಲು ಬಳಸುತ್ತಾರೆ. ಪಿಡುಗುಗಳಾಗಿ ಮನುಷ್ಯನಿಗೆ ಹಾನಿಕಾರಕವಾದ ಕೀಟ ಲಾರ್ವಗಳು, ಹುಳುಗಳು, ಮೃದ್ವಂಗಿಗಳು ಮುಂತಾದ ಪ್ರಾಣಿಗಳನ್ನು ಜಿಗಣೆಗಳು ಆಹಾರವಾಗಿ ಬಳಸುವುದರಿಂದ ಅವುಗಳನ್ನು ನಾಶಪಡಿಸಿ ಮನುಷ್ಯನಿಗೆ ಉಪಕಾರವೆಸಗುತ್ತವೆ.

(ಎಚ್.ಎಚ್.ಎಸ್.)

**ಜಿಗಿಕೀಟಗಳು:** ಹೋಮಾಪ್ಟಿರ ಗಣದ ಸಿಕಾಡಾಯ್ಡಿಯ ಮತ್ತು ಫಲ್ಗೋರಾಯ್ಡಿಯ ಅಧಿ ಕುಟುಂಬಗಳಿಗೆ ಸೇರಿದ ಹಲವಾರು ಬಗೆಯ ಕೀಟ (ಹಾಪರ್ಸ್). ಇವುಗಳಲ್ಲಿ ಮುಖ್ಯವಾದುವು ಜಾಸಿಡೆ ಅಥವಾ ಸಿಕಾಡೆಲ್ಲಿಡೆ ಕುಟುಂಬದ ಎಲೆಜಿಗಿಕೀಟಗಳು, ಮೆಂಬ್ರೇಸಿಡೆ ಕುಟುಂಬದ ಮರಜಿಗಿಕೀಟಗಳು, ಸರ್ಕಾಪಿಡೆ ಕುಟುಂಬದ ಕಪ್ಪೆಜಿಗಿಕೀಟಗಳು ಮತ್ತು ಫಲ್ಗಾರಿಡೆ ಕುಟುಂಬದ ಸಸ್ಯಜಿಗಿಕೀಟಗಳು. ಇವೆಲ್ಲವೂ ಗಾತ್ರದಲ್ಲಿ ಬಹುತೇಕ ಒಂದೇ ತರಹವಿದ್ದರೂ, ರೂಪ, ಆಕಾರ, ಬಣ್ಣಗಳಲ್ಲಿ ವ್ಯತ್ಯಾಸವಿದೆ. ಸಾಮಾನ್ಯವಾಗಿ ಹಸಿರು ಎಲೆ, ಹುಲ್ಲು, ಪೊದೆ ಮುಂತಾದುವುಗಳ ಮೇಲೆ ಹೆಚ್ಚಾಗಿ ವಾಸಿಸುತ್ತವೆ. ಬೆಳಕಿನಿಂದ ಆಕರ್ಷಿತವಾಗುವುದು ಇವುಗಳ ಪ್ರಧಾನ ಸ್ವಭಾವ. ಇವುಗಳ ದೇಹ ದುಂಡಾಗಿದ್ದು, ತಲೆ ಅಗಲವಾಗಿದೆ. ಬಾಯಿಯ ವದನಾಂಗಗಳು ಸಸ್ಯಗಳು ಅಂಗಾಂಗಳನ್ನು ಚುಚ್ಚಿ ಆಹರ ಹೀರಿಕೊಳ್ಳಲು ಅನುಕೂಲವಾಗಿವೆ. ಯಾವಾಗಲೂ ಕುಪ್ಪಳಿಸುವುದಕ್ಕೆ ತಯಾರಾಗಿರುವಂತೆ ತಲೆಯನ್ನು ಎತ್ತಿ ಕುಳಿತಿರುವುದು ಇವುಗಳ ವಿಶೇಷ ಲಕ್ಷಣ. ಇವುಗಳ ದೇಹ ಹಸಿರು, ಹಳದಿ, ನೀಲಿ, ಕೆಂಪು, ಬೂದು, ಕಪ್ಪು, ಬಿಳಿ–ಬಣ್ಣಗಳಿಂದ ವರ್ಣರಂಜಿತವಾಗಿದೆ. ಎಲೆಜಿಗಿಗಳಿಗೆ ಹಿಂಗಾಲುಗಳ ಮೊಣಕಾಲುಗಳ ಮೇಲೆ ಉದ್ದಕ್ಕೂ ಎರಡು ಸಮಾನಾಂತರ ಸಾಲಿನಲ್ಲಿ ಮುಳ್ಳುಗಳಿವೆ. ಇವುಗಳಲ್ಲಿ ನೆಪೊಟೇಟಿಕ್ಸ್ ಮತ್ತು ಡೆಲ್ಫೊಸಿಫ್ಯಾಲಸ್‌ಗಳು ಬತ್ತದ ಬೆಳೆಗೆ ಹೆಚ್ಚಿನ ಹಾನಿಯನ್ನುಂಟುಮಾಡುತ್ತವೆ. ಎಂಪೋವಾಸ್ಕಡಿವಾಸ್ಟೆನ್ಸ್ ಜಿಗಿಕೀಟ ಹತ್ತಿ, ಹರಳು ಮತ್ತು ತರಕಾರಿ ಬೆಳೆಗಳನ್ನು ಪಿಡುಗಾಗಿ ಭಾದಿಸುತ್ತದೆ. ಇಡಿಯೊಸಿರಸ್ ಜಾತಿಯ ಜಿಗಿಕೀಟಗಳು ಮಾವಿನ ಫಸಲಿಗೆ ಧಕ್ಕೆ ತರುತ್ತವೆ. ಟಿಪ್ಲೊಸೈಬ ಮತ್ತು ಸಿಕಾಡುಲ ಪೌರ್ವಾತ್ಯ ದೇಶಗಳ ಬತ್ತಕ್ಕೆ ಅಂಟುವ ಎಲೆಜಿಗಿಗಳು. ಎರಿಥ್ರೊನ್ಯೂರ ಕಾಮಿಸ್ ದ್ರಾಕ್ಷಿ, ಕೊಬ್ಬು, ಬೀಟ್ ಎಲೆ, ಆಲೂಗಡ್ಡೆ, ಸೇಬು ಮುಂತಾದ ಎಲೆಗಳ ತುದಿ ಸುಡುವ ರೋಗವನ್ನು ಉಂಟು ಮಾಡುತ್ತದೆ.

ಮರ ಜಿಗಿಕೀಟಗಳ ತಲೆಯ ಮೇಲೆ ದೇಹದ ಹಿಂತುದಿಯೆಡೆಗೆ ಬಾಗಿರುವ ಒಂದು ಕೊಂಬು ಇದೆ. ಇವುಗಳ ರೆಕ್ಕೆ ಪೊರೆಯಂತಿದೆ. ಇವು ಮರಗಿಡಗಳ ರೆಂಬೆಗಳನ್ನು ಸುತ್ತುವರೆದು ಕುಳಿತಿರುತ್ತವೆ. ಅಲುಗಾಡಿಸಿದಾಗ ಎಲೆ ಹಾಗೂ ರೆಂಬೆಗಳ ಹಿಂದೆ ಅಡಗುತ್ತವೆ. ಕೆಲವು ಜಾತಿಯ ಜಿಗಿಕೀಟಗಳು ಸಿಹಿ ಅಂಟುದ್ರವವನ್ನು ಸ್ರವಿಸುತ್ತವೆ. ಅನೇಕ ಗಿಡಮರಗಳ ಮೇಲೆ ಇವು ಕಂಡುಬಂದಿದ್ದರೂ ಇವುಗಳಿಂದ ಯಾವ ರೀತಿಯ ಹಾನಿಯಾಗುವುದಿಲ್ಲ.

ಕಪ್ಪೆ ಜಿಗಿಕೀಟಗಳು ಒಂದು ಬಗೆಯ ನೊರೆಯಂತಿರುವ ವಿಸರ್ಜನೆಯ ಒಳಗೆ ಹುದುಗಿರುತ್ತವೆ. ಇದನ್ನು ಕಕೂಸ್ಪಿಟ್ ಎನ್ನುತ್ತಾರೆ. ಕಬ್ಬಿನ ಕಪ್ಪೆ ಜಿಗಿಕೀಟ (ಟೊಮಾಸ್‌ಪನ್ ಸ್ಯಾಕರೈನ) ಟ್ರಿನಿಡಾಡಿನಲ್ಲಿ ಹಾನಿಕರ. ಟಯಿಲಸ್, ಕ್ಲೋವಿಯ ಮತ್ತು ಕಾಸ್‌ಮೊಕಾರ್ಟ ರಿಲೀಟ ಜಿಗಿಕೀಟಗಳು ಹಲಸು, ಅಂಜೂರ ಹಣ್ಣಿನ ಮರಗಳಿಗೆ ಹಾನಿಕರ. ಸಸ್ಯ ಜಿಗಿಗಳಲ್ಲಿ ಪೆರಿಗ್ರೈನಸ್ ಮೈಡಿಸ್ ಜೋಳದ ಬೆಳೆಗೆ ಹಾನಿಯುಂಟುಮಾಡುತ್ತದೆ. ಹವಾಯಿ ದ್ವೀಪದಲ್ಲಿ ವಾಸಿಸುವ ಪರ್ಕಿನ್ಸಿಯಲ ಸಕಾರಿಸಿಡ ಕಬ್ಬಿನ ಬೆಳೆಯ ಪಿಡುಗು ಕೀಟ. (ಜಿ.ಕೆ.ವಿ.)

**ಜಿಗಿಜಿಂಕೆ:** ದಕ್ಷಿಣ ಆಫ್ರಿಕ, ಕಲಹರಿ ಮರುಭೂಮಿ, ಅಂಗೋಲಗಳಲ್ಲಿನ ಮರಗಳಿಲ್ಲದ ವೆಲ್ಟ್ ಪ್ರದೇಶಗಳಲ್ಲಿ ಮಾತ್ರ ಕಾಣದೊರೆಯುವ ಒಂದು ಸ್ತನಿ (ಸ್ಪ್ರಿಂಗ್ ಬಾಕ್). ಆರ್ಟಿಯೊಡ್ಯಾಕ್ಟಿಲ ಗಣದ ಬೋವಿಡೆ ಕುಟುಂಬಕ್ಕೆ ಸೇರಿದೆ. ಆಂಟಿಡಾರ್ಕಾಸ್ ಮಾರ್ಸ್ಯುಪಿಯೇಲಿಸ್ ಇದರ ಶಾಸ್ತ್ರೀಯ ನಾಮ. ಗೆಜ಼ೆಲ್ ಜಿಂಕೆಯಂತೆಯೇ ಇರುವ ಇದು ಅದಕ್ಕೆ ಹತ್ತಿರ ಸಂಬಂಧಿಯೂ ಹೌದು. ಜಿಗಿ ಜಿಂಕೆಯ ಕೆಳದವಡೆಯಲ್ಲಿ 5 ಜೊತೆ ಅರೆಯುವ ಹಲ್ಲುಗಳಿದ್ದರೆ ಗೆಜ಼ೆಲ್ಲಿನಲ್ಲಿ 6 ಜೊತೆಗಳಿವೆ. ಜೊತೆಗೆ ಜಿಗಿಜಿಂಕೆಯ ಬೆನ್ನ ಮೇಲೆ ಬಾಲದವರೆಗೆ ಬಿಳಿಯ ಕೂದಲಿನ ಸಾಲು ಇದೆ. ಪ್ರಾಣಿ ಗಾಬರಿಗೊಂಡಾಗ ಈ ಸಾಲಿನಲ್ಲಿರುವ ಕೂದಲುಗಳು ನಿಮಿರಿ ನಿಲ್ಲುತ್ತವೆ. ಇದು ಗುಂಪಿನ ಇತರ ಪ್ರಾಣಿಗಳಿಗೆ ಎಚ್ಚರಿಕೆಯ ಸೂಚನೆಯಾಗುತ್ತದೆ. ಈ ರೀತಿಯ ಕೂದಲ ಸಾಲು ಗೆಜ಼ೆಲುಗಳಲ್ಲಿಲ್ಲ. ಜಿಗಿಜಿಂಕೆ ಆಡಿನ ಗಾತ್ರದ ಪ್ರಾಣಿ; ದೇಹದ ಉದ್ದ 1.2–1.4 ಮೀ. ಎತ್ತರ 73–83 ಸೆಂಮೀ.; ತೂಕ 32–36 ಕಿಗ್ರಾಂ. ಬಣ್ಣ ಹಳದಿಮಿಶ್ರಿತ ಕಂದು. ಉದರ ಭಾಗ ಮತ್ತು ಕಾಲುಗಳ ಒಳಭಾಗ ಬೆಳ್ಳಗಿವೆ. ದೇಹದ ಎರಡೂ ಪಕ್ಕಗಳಲ್ಲಿ ಬೆನ್ನು ಉದರ ಸೇರುವೆಡೆ ಕಗ್ಗಂದು ಬಣ್ಣದ ಅಡ್ಡಪಟ್ಟೆಯುಂಟು. ಅಂಚು ಬೆಳ್ಳಗಿದೆ. ಗಂಡು, ಹೆಣ್ಣುಗಳೆರಡರಲ್ಲೂ ಕರಿಯ ಬಣ್ಣದ ಕೋಡುಗಳುಂಟು. ಒಂದೊಂದು ಕೋಡಿನಲ್ಲೂ 20 ಉಂಗುರ ಗುರುತುಗಳಿವೆ. ಜಿಗಿಜಿಂಕೆ ಎಂದು ಹೆಸರು. ಸಣ್ಣಪುಟ್ಟ ಗಿಡಗಂಟೆಗಳ ಚಿಗುರು, ಹುಲ್ಲು ಇದರ ಪ್ರಧಾನ ಆಹಾರ. ನೀರಿಲ್ಲದೆ ಬಹುಕಾಲ ಇರಬಲ್ಲದು.

ಜಿಗಿಜಿಂಕೆ ಸಂಘಜೀವಿ. ಸಾವಿರಾರು ಪ್ರಾಣಿಗಳ ಗುಂಪುಗಳಲ್ಲಿ ಜೀವಿಸುತ್ತದೆ. ಒಂದು ಕಾಲದಲ್ಲಿ ದಶಲಕ್ಷಕ್ಕೂ ಮೀರಿದ ಭಾರಿ ಗುಂಪುಗಳಲ್ಲಿ ಆಫ್ರಿಕಾದ ಮೈದಾನಗಳಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸುತ್ತಿದ್ದವಂತೆ. ಹೀಗೆ ಸಾಗುವಾಗ ದಾರಿಯಲ್ಲಿ ಸಿಕ್ಕ ಹೊಲಗದ್ದೆಗಳೆಲ್ಲ ನಿರ್ನಾಮವಾಗುತ್ತಿದ್ದವಂತೆ. ಇದನ್ನು ತಡೆಯಲು ಆಗಿನ ಸರ್ಕಾರವೇ ಬಂದೂಕುಗಳನ್ನು ಹಂಚಿ ಜಿಗಿಜಿಂಕೆಗಳ ಸಾಮೂಹಿಕ ನಾಶವನ್ನು ಕೈಗೊಂಡಿತು. ಇಂಥ ಬೃಹತ್ ಪ್ರಮಾಣದ ಕೊಲ್ಲುವಿಕೆಯಿಂದಾಗಿ ಇವುಗಳ ಸಂಖ್ಯೆ ಬಹಳ ಇಳಿದುಹೋಗಿದ್ದು ಮತ್ತೆ ಸರ್ಕಾರವೇ ಕಾನೂನಿನ ಮೂಲಕ ಇವುಗಳ ರಕ್ಷಣೆಯನ್ನು ಮಾಡುತ್ತಿದೆ.

ಜಿಗಿಜಿಂಕೆಯನ್ನು ಸಾಕುವುದು ಸುಲಭ. ಇದು ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ಲಾಂಛನವೂ ಆಗಿದೆ.

***

**ಜಿರಲೆ:** ಜಿರಲೆಗಳು ಡಿಕ್ಟಿಯಾಪ್ಟರ ಗಣದ ಬ್ಲಾಟಿಡೆ ಕುಟುಂಬದ ಸದಸ್ಯರು (ಕಾಕ್‌ರೋಚ್). ಜೊಂಡಿಗ, ತೊಂಡಿಂಗಿ, ಹಾತೆಹುಳು ಇವುಗಳ ಪರ್ಯಾಯ ನಾಮಗಳು. ದೀರ್ಘವೃತ್ತಾಕಾರದ ಹಾಗೂ ಕುಗ್ಗಿದ ದೇಹ ಮತ್ತು ಕಂದು ಮಿಶ್ರಿತ ಬಣ್ಣವಿದೆ. ಹಸಿರು ಬಣ್ಣದ ಜಿರಲೆಗಳು ಇವೆ. ಕೆಲವು ಪ್ರಭೇದದ ಜಿರಲೆಯಲ್ಲಿ ಕಪ್ಪು ರೆಕ್ಕೆಯ ಮೇಲೆ ಸಮಾನಾಂತರವಾಗಿ ಹರಡಿದ ಬಿಳಿಮಿಶ್ರಿತ ಹಳದಿ ಚುಕ್ಕೆಗಳಿವೆ. ಮೇಲಿಂದ ನೋಡಿದಾಗ ಶಿರ (ತಲೆ) ಕೆಳಮುಖವಾಗಿ ಬಾಗಿದ್ದು, ಸಂಪೂರ್ಣವಾಗಿ ಪ್ರೋನೋಟಮಿನಿಂದ ಆವೃತವಾಗಿದೆ. ಬಾಯಿಯ ವದನಾಂಗಗಳು ಹಿಮ್ಮುಖವಾಗಿ ಮುಂದಿನ ಕಾಲುಗಳ ನಡುವೆ ಚಾಚಿವೆ. ಆಂಟೆನಗಳು ನೀಳವಾಗಿದ್ದು ಸಮರ್ಥ ಸ್ಪರ್ಶೇಂದ್ರಿಯಗಳಾಗಿ ಕಾರ್ಯ ನಿರ್ವಹಿಸುತ್ತವೆ. ಚೆನ್ನಾಗಿ ಬೆಳೆದ ಎರಡು ಜೊತೆ ರೆಕ್ಕೆಗಳಿವೆ. ಕೆಲವು ಜಾತಿಯ ಜಿರಲೆಗಳ ರೆಕ್ಕೆಗಳು ಚಿಕ್ಕದಾಗಿವೆ. ಕೆಲವು ಜಿರಲೆಗಳಲ್ಲಿ ರೆಕ್ಕೆಗಳೇ ಇರುವದಿಲ್ಲ. ಕೆಲವು ಪ್ರಭೇದಗಳಲ್ಲಿ ಗಂಡು ಜಿರಲೆಗಳಿಗೆ ಮಾತ್ರ ರೆಕ್ಕೆ ಇರುತ್ತದೆ ಅಥವಾ ಇದ್ದರೂ ರೆಕ್ಕೆಗಳು ಬಲು ಕ್ಷೀಣವಾಗಿರುತ್ತವೆ. ಜಿರಲೆಗಳು ಉಷ್ಣ ಹಾಗೂ ಉಪೋಷ್ಣ ಪ್ರದೇಶಗಳಲ್ಲಿ ಹೇರಳವಾಗಿವೆ. ಸು. 2,000 ಪ್ರಭೇದಗಳಲ್ಲಿ ಹೆಚ್ಚಿನವು ಉಷ್ಣವಲಯದುವು.




ಕೀಟಗಳಲ್ಲಿ ಜಿರಲೆಗಳ ಗುಂಪು ಅತ್ಯಂತ ಪುರಾತನವಾದದ್ದು. ಕಾರ್ಬಾನಿಫೆರಸ್ ಯುಗದಲ್ಲಿ ಜಿರಲೆಗಳು ಅಧಿಕ ಪ್ರಮಾಣದಲ್ಲಿ ಇದ್ದ ಬಗ್ಗೆ ಫಾಸಿಲುಗಳು (ಪಳೆಯುಳಿಕೆಗಳು) ಸೂಚಿಸುತ್ತವೆ. ನಶಿಸಿ ಹೋಗಿರುವ ಪೇಲಿಯೊಡಿಕ್ಟಿಯಾಪ್ಟರ ಗಣದಿಂದ 250,000,000 ವರ್ಷಗಳಿಗೂ ಹಿಂದೆ ಇವು ಉಗಮಿಸಿದ್ದ ಬಗ್ಗೆ ಪುರಾವೆಗಳಿವೆ. ಕಾರ್ಬಾನಿಫೆರಸ್ ಜಿರಲೆಗಳ ಸರಾಸರಿ ಗಾತ್ರ ಇಂದು ಅಸ್ತಿತ್ವದಲ್ಲಿರುವ ಪ್ರಭೇದಗಳ ಗಾತ್ರಕ್ಕಿಂತ ಸಾಕಷ್ಟು ಹೆಚ್ಚಾಗಿತ್ತೆಂದು ಪಳೆಯುಳಿಕೆಗಳು ತಿಳಿಸಿವೆ. ಪುರಾತನ ಜಿರಲೆಗಳ ಹಾಗೂ ಇಂದಿನ ಜಿರಲೆಗಳ ನಡುವೆ ವ್ಯತ್ಯಾಸ ಅತ್ಯಂತ ಸ್ವಲ್ಪವಾಗಿದ್ದು ಮುಖ್ಯವಾಗಿ ರೆಕ್ಕೆಯ ರಕ್ತನಾಳಗಳಿಗೆ ಮಾತ್ರ ಸೀಮಿತವಾಗಿದೆ. ಜಿರಲೆಗಳು ಯಾವ ರೀತಿಯ ರೂಪ ಬದಲಾವಣೆಯನ್ನು ತೋರಿಸದೆ ಕಾಲಾನುಕಾಲದಿಂದ ಹಾಗೆಯೇ ಉಳಿದುಬಂದಿವೆ. ಕಾರಣ, ಇವುಗಳನ್ನು ಜೀವಂತ ಪಳಿಯುಳಿಕೆಗಳು ಎನ್ನುವರು.

ಕಾರ್ಬಾನಿಫೆರಸ್ ಯುಗದ ಜಿರಲೆಗಳು ಜೌಗು ಪ್ರದೇಶಗಳ ಬಳಿ ಇದ್ದುವು. ಆಧುನಿಕ ಜಿರಲೆಗಳು ಕತ್ತಲೆ ಹೆಚ್ಚಾಗಿರುವ, ತೇವಪೂರಿತ ಹಾಗೂ ಬೆಚ್ಚನೆಯ ನೆಲೆಗಳನ್ನು ಬಯಸುತ್ತವೆ. ಇವು ಗೌಪ್ಯ ಪ್ರವೃತ್ತಿಯ ಜೀವಿಗಳು ಮತ್ತು ರಾತ್ರಿ ವೇಳೆಯಲ್ಲಿ ಮಾತ್ರ ಆಹಾರ ಸೇವನೆ ಮಾಡುತ್ತವೆ. ಕೆಲವೇ ಕೆಲವು ಪ್ರಭೇದದ ಜಿರಲೆಗಳು ಮಾನವನ ನೆಲೆಗಳಲ್ಲಿ ವಾಸಿಸುತ್ತಿದ್ದು ಕೀಟ ಪಿಡುಗುಗಳಾಗಿ ಪರಿಣಮಿಸಿವೆ. ಜಿರಲೆಗಳು ಎಲ್ಲ ರೀತಿಯ ಆಹಾರವನ್ನು ಸೇವಿಸುತ್ತವೆ. ತಮ್ಮ ಕೊಳಕು ಸ್ವಭಾವ, ವಿಕರ್ಷಕ ರೂಪ, ಅಸಹ್ಯಕರವಾದ ವಾಸನೆಯಿಂದ ಕ್ಷಯ, ಕಾಲರ, ಕುಷ್ಠ , ಆಮಶಂಕೆ ಮತ್ತು ವಿಷಮಶೀತ ಜ್ವರ ರೋಗಗಳನ್ನು ತರುವ ಮಾಧ್ಯಮಗಳಾಗಿ ವರ್ತಿಸುವ ಸಾಧ್ಯತೆ ಇದೆ. ಪುಸ್ತಕ, ಪತ್ರಿಕೆ, ಕಾಗದ ನಿರ್ಮಿತ ಪದಾರ್ಥಗಳು, ಬೇಕರಿ, ಅಡುಗೆ ಮನೆ, ಉಪಾಹಾರ ಮಂದಿರ ಮತ್ತಿತರ ಸ್ಥಳಗಳಲ್ಲಿ ಇವು ವಾಸವಾಗಿದ್ದು, ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ತಿಂದು ಹಾಳು ಮಾಡಿ, ತಾವು ಹಾದುಹೋದ ವಸ್ತುಗಳ ಮೇಲೆ ಮಲ ವಿಸರ್ಜನೆ ಮಾಡಿ ಅಸಹ್ಯ ವಾಸನೆ ಮೂಡಿಸುತ್ತವೆ.



ಪೆರಿಪ್ಲಾನೆಟ ಅಮೆರಿಕಾನ



ಸುರಿನಾಮ್ ಜಿರಲೆ (ಪಿಕ್ನಾಸೆಲಸ್ ಸುರಿನಾಮೆನ್ಸಿಸ್)



ಬ್ಲಾಟ್ಟ ಓರಿಯೆಂಟಾಲಿಸ್

ಜರ್ಮನಿ ದೇಶದ ಕಂದುಬಣ್ಣದ ಜಿರಲೆ ಬ್ಲಾಟೆಲ ಜರ್ಮ್ಯಾನಿಕ ಉದ್ದ 12 ಮಿಮೀ. ಇದರ ಪ್ರೊತೊರ್‍ಯಾಕ್ಸಿನ ಮೇಲೆ ಎರಡು ಕಪ್ಪು ಗೆರೆಗಳಿವೆ. ಇದು ಮನೆಗಳಲ್ಲಿ ವಾಸಿಸುತ್ತದೆ. ಹೆಣ್ಣು ಜಿರಲೆಗಳು ತತ್ತಿಕೋಶವನ್ನು ಉದರದಿಂದ ಮುಂದೆ ಚಾಚಿರುವಂತೆ ಹಿಡಿದುಕೊಂಡು ಸು. 2 ವಾರಗಳ ತನಕ ಹೊತ್ತು ತಿರುಗುತ್ತವೆ. ತತ್ತಿಕೋಶದಲ್ಲಿ 25 ರಿಂದ 30 ಮೊಟ್ಟೆಗಳಿರುತ್ತವೆ. ಹೆಣ್ಣು ಜಿರಲೆ ತನ್ನ ಜೀವಿತ ಕಾಲದಲ್ಲಿ ಏಳು ಬಾರಿ ಇಂಥ ತತ್ತಿಕೋಶವನ್ನು ಇಡುತ್ತದೆ. ಮರಿ ಜಿರಲೆ 7 ಸಲ ಪೊರೆ ಕಳಚಿ, ಪ್ರೌಢಾವಸ್ಥೆ ಸೇರುತ್ತದೆ. ಈ ಜಿರಲೆಯ ಆಯಸ್ಸು 2–5 ತಿಂಗಳು. ವರ್ಷಕ್ಕೆ 3 ಪೀಳಿಗೆಗಳು ಉತ್ಪತ್ತಿಯಾಗುತ್ತವೆ. ಅಡುಗೆಮನೆ ಮತ್ತು ಬಚ್ಚಲುಗಳಲ್ಲಿ ಇದು ಸಾಮಾನ್ಯ. ಬಹಳ ಚಟುವಟಿಕೆಯಿಂದ ಓಡಾಡುತ್ತದೆ. ಇದು ಹಾರುವುದು ವಿರಳ.

ಪೆರಿಪ್ಲಾನೆಟ ಅಮೆರಿಕಾನ : ಇದು ದೊಡ್ಡ ಗಾತ್ರದ ಮತ್ತು ಕಂದುಬಣ್ಣದ ಜಿರಲೆ. ಇದರ ಉದ್ದ 2.5–3 ಸೆಂಮೀ. ಪ್ರೊನೋಟಮಿನ ಹಿಂಭಾಗದ ಅಂಚು ಹಳದಿ ಬಣ್ಣದ್ದು. ಹೆಣ್ಣು ತತ್ತಿಕೋಶವನ್ನು ಗೌಪ್ಯ ಸ್ಥಳದಲ್ಲಿ ಇಟ್ಟು ತನ್ನ ಬಾಯಿಯ ದ್ರವದಿಂದ ಕೋಶ ಅಂಟಿಕೊಳ್ಳುವಂತೆ ಮಾಡುತ್ತದೆ. ವಾರಕ್ಕೆ ಒಂದರಂತೆ 15–90 ತತ್ತಿ ಕೋಶಗಳನ್ನು ಇಡುತ್ತದೆ. ಪ್ರತಿಯೊಂದು ತತ್ತಿಕೋಶದಲ್ಲಿ 14–16 ಮೊಟ್ಟೆಗಳಿವೆ. ಮರಿಗಳು 25 ರಿಂದ 100 ದಿವಸಗಳ ಅನಂತರ ತತ್ತಿಕೋಶದಿಂದ ಹೊರಬರುತ್ತವೆ. ಇವು 13 ಸಲ ಪೊರೆ ಕಳಚಿ, 10 ತಿಂಗಳಿನಲ್ಲಿ ಪ್ರೌಢ ಜಿರಲೆಗಳಾಗಿ ರೂಪುಗೊಳ್ಳುತ್ತವೆ. ಇದು ಉಪಾಹಾರ ಮಂದಿರಗಳು, ಬೇಕರಿಗಳು, ದಿನಸಿ ಅಂಗಡಿಗಳಲ್ಲಿ ವಾಸಿಸುತ್ತದೆ.

ಬ್ಲಾಟ ಓರಿಯಂಟಾಲಿಸ್ : ಪೌರ್ವಾತ್ಯ ದೇಶಗಳಲ್ಲಿ ವಾಸಿಸುವ ಇದು ದೊಡ್ಡ ಗಾತ್ರದ ಜಿರಲೆ. ದೇಹದ ಬಣ್ಣ ಕಪ್ಪು. ಉದ್ದ ಸು. 2.5 ಸೆಂಮೀ. ಹೆಣ್ಣು ಜಿರಲೆಗಳಿಗೆ ರೆಕ್ಕೆಗಳಿಲ್ಲ. ಗಂಡು ಜಿರಲೆಗಳ ರೆಕ್ಕೆ ಉದರಕ್ಕಿಂತ ಹ್ರಸ್ವ. ಇದರ ಜೀವನ ಚಕ್ರ ಸು. ಒಂದು ವರ್ಷ ಅವಧಿಯದು. ಹೆಣ್ಣು ಜಿರಲೆ 14 ರಿಂದ 15 ತತ್ತಿಕೋಶಗಳನ್ನು ಉತ್ಪಾದಿಸುತ್ತದೆ. ಪ್ರತಿಯೊಂದರಲ್ಲೂ 16 ಮೊಟ್ಟೆಗಳಿರುತ್ತವೆ. ಸುಮಾರು 44 ದಿವಸಗಳಲ್ಲಿ ಮರಿಜಿರಲೆ ಹೊರಬರುತ್ತದೆ. ಇವು ಚರಂಡಿಗಳಲ್ಲಿ ವಾಸ ಮಾಡುತ್ತವೆ. ಇದು ಎಲ್ಲ ಜಿರಲೆಗಳಿಗಿಂತ ಅತ್ಯಂತ ಹೊಲಸಾದುದು.

ಪೆರಿಪ್ಲಾನೆಟ ಆಸ್ಟ್ರಲೇಸಿಯೀ : ಆಸ್ಟ್ರೇಲಿಯದ ಅತಿ ದೊಡ್ಡ ಜಿರಲೆ. ಅಮೆರಿಕದ ಜಿರಲೆಗಳನ್ನು ಹೋಲುತ್ತದೆ. ಇದರ ಉದ್ದ ಸು. 3 ಸೆಂಮೀ. ಮುಂದು ರೆಕ್ಕೆಯ ಅಂಚಿನ ಭಾಗದಲ್ಲಿ ಸ್ಪಷ್ಟವಾದ ಹಳದಿಬಣ್ಣದ ರೇಖೆಯುಂಟು. ಪ್ರೋನೋಟಮಿನ ಮಧ್ಯದಲ್ಲಿ ಸ್ಪಷ್ಟವಾದ ಕಪ್ಪುಚುಕ್ಕೆಯಿದೆ. ತತ್ತಿಕೋಶದಲ್ಲಿ ಸರಾಸರಿ 24 ಮೊಟ್ಟೆಗಳಿವೆ. ಸು. 40 ದಿವಸಗಳ ಅನಂತರ ಮರಿಜಿರಲೆ ಹೊರಬರುತ್ತದೆ. ಇದರ ಆಯಸ್ಸು ಸು. 9 ತಿಂಗಳು.

ಸುರಿನಾಮ್ ಜಿರಲೆ (ಪಿಕ್ನಾಸೆಲಸ್ ಸುರಿನಾಮೆನ್ಸಿಸ್) : ಇದು ದೊಡ್ಡ ಗಾತ್ರದ, ಹೊಳೆಯುವ ಕಗ್ಗಂದು ಬಣ್ಣದ ಕೀಟ. ಗ್ರಾತದಲ್ಲಿ ಅಮೆರಿಕದ ಜಿರಲೆಯಷ್ಟಿದೆ. ಆದರೆ ರೆಕ್ಕೆಗಳು ದೇಹದ 0.33 ಭಾಗದಷ್ಟು ಮಾತ್ರ ಇವೆ. ದೇಹದ ಆಕಾರ ಅಂಡದಂತೆ. ಈ ಜಿರಲೆ ಬೆಳೆಯುತ್ತಿರುವ ಸಸ್ಯಗಳನ್ನು ತಿಂದು ಬದುಕುತ್ತದೆ.

ಕ್ರಿಪ್ಟೊಸರ್ಕಸ್ ಪಂಕ್ಚುಲೇಟಸ್ : ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ವಾಸಿಸುತ್ತದೆ. ಇದು ಸಾಮಾಜಿಕ ಜೀವನವನ್ನು ನಡೆಸುತ್ತದೆ. ಇದರ ಜೀರ್ಣಾಂಗದಲ್ಲಿ ಸಹಜೀವನ ನಡೆಸುವ ಪ್ರೋಟೊಝೋವ ಗುಂಪಿನ ಜೀವಿಗಳಿರುವುದರಿಂದ ಈ ಜಿರಲೆಗೆ ಸೆಲ್ಯುಲೋಸನ್ನು ಅರಗಿಸಿಕೊಳ್ಳುವ ಸಾಮರ್ಥ್ಯವಿದೆ. ಇದು ಕೊಳೆಯುತ್ತಿರುವ ದಿಮ್ಮಿಗಳಲ್ಲಿ ವಾಸ ಮಾಡುತ್ತದೆ. ಒಂದೊಂದು ಗುಂಪಿನಲ್ಲೂ ಅನೇಕ ಪೀಳಿಗೆಯ ಜಿರಲೆಗಳಿರುತ್ತವೆ.

ಕೊರೀಡಿಯ ಪೆಟಿವೆರಿಯಾನ : ಇದರ ಮುಂದಿನ ರೆಕ್ಕೆಯ ಮೇಲೆ ಬಿಳಿಮಿಶ್ರಿತ ಹಳದಿ ಬಣ್ಣದ 7 ದೊಡ್ಡ ಮಚ್ಚೆಗಳಿವೆ. ಇದು ಸುಂದರವಾದ ಕಪ್ಪು ಜಿರಲೆ. ಇದು ಕೊಳೆಯುತ್ತಿರುವ ಎಲೆಗಳ ಮಧ್ಯೆ ವಾಸಿಸುತ್ತದೆ.

ಬ್ಲಾಬೆರಸ್ ಕ್ರ್ಯಾನಿಫರ್ ಜಿರಲೆ ಸು. 6. ಸೆಂಮೀ ವರೆಗೆ ಬೆಳೆಯುವ ಅತಿ ದೊಡ್ಡ ಗಾತ್ರದ ಜಿರಲೆ.

ಜಿರಲೆಗಳು ಕರುಳಿನ ಬೇನೆ ಮತ್ತು ಕ್ಷಯ ರೋಗವನ್ನು ಹರಡುತ್ತವೆ. ಈ ರೋಗಕ್ಕೆ ಕಾರಣವಾದ ಸಾಲ್ಮನೆಲ ಸೂಕ್ಷ್ಮಾಣುಗಳನ್ನು ಜಿರಲೆಯ ಮಲದಲ್ಲಿ ಕಂಡುಹಿಡಿಯಲಾಗಿದೆ. ಇದು ಮಲವಿಸರ್ಜನೆಯಾದ 199 ದಿವಸಗಳ ಅನಂತರ ರೋಗ ಹರಡಲು ಸಾಮರ್ಥ್ಯವುಳ್ಳದ್ದಾಗಿದೆ. ಸುರಿನಾಮ್ ಜಿರಲೆ ಕೋಳಿಗಳ ಕಣ್ಣಿನ ಬೇನೆ ಮತ್ತು ಕುರುಡುಗಳಿಗೆ ಕಾರಣವಾದ ಆಕ್ಸಿಸ್ಪೈರೂರ ಎಂಬ ನೆಮಟೋಡ್ ಜೀವಿಗಳ ವಾಹಕ (ಮಧ್ಯವರ್ತಿ).

ಶೇ. 3 ಕ್ಲೋರ್‌ಡೇನ್ ದ್ರಾವಣವನ್ನು ಸಿಂಪಡಿಸುವುದರಿಂದ ಜಿರಲೆಗಳನ್ನು ಯಶಸ್ವಿಯಾಗಿ ನಾಶ ಮಾಡಬಹುದು. ವಿಷಮಿಶ್ರಿತ ಆಹಾರಗಳ ಆಮಿಷವನ್ನು ಒಡ್ಡಿ ನಿಯಂತ್ರಿಸುವರು. ಆದರೆ, ಜಿರಲೆಗಳ ಸಂತಾನವೃದ್ಧಿ ಶೀಘ್ರಗತಿಯಲ್ಲಿ ನಡೆಯುವುದರಿಂದ ಅವುಗಳ ಮರುಪೀಡೆ ಇದ್ದೇ ಇದೆ. ಮನೆಯ ಸುತ್ತಣ ನೆಲೆಗಳಲ್ಲಿ ಜಿರಲೆ ಇರದಂತೆ ನೋಡಿಕೊಳ್ಳುವುದೇ ಇವುಗಳ ಹತೋಟಿಯ ಅತ್ಯುತ್ತಮ ಮಾರ್ಗ. ಕೆಲವು ಪರಾವಲಂಬಿ ಕಣಜಗಳು ಜಿರಲೆಗಳನ್ನು ತಿನ್ನುವುದರಿಂದ ಇಂಥ ಕಣಜಗಳನ್ನು ಜಿರಲೆಗಳ ನಾಶಕ್ಕೆ ಬಳಸ ಬಹುದು. ಇದನ್ನು ಜೈವಿಕ ನಿಯಂತ್ರಣವೆನ್ನುವರು. (ಕೆ.ಜಿ.ಎನ್.)

**ಜಿರಾಫೆ:** ಆರ್ಟಿಯೊಡ್ಯಾಕ್ಟಿಲ ಗಣದ ಜಿರ್ಯಾಫಿಡೆ ಕುಟುಂಬಕ್ಕೆ ಸೇರಿದ ಸ್ತನಿ. ಆಫ್ರಿಕದ ಸಹಾರ ಮರುಭೂಮಿಯ ದಕ್ಷಿಣಕ್ಕಿರುವ ಕುರುಚಲು ಕಾಡು ಮತ್ತು ಸವಾನ ಹುಲ್ಲುಗಾವಲುಗಳಲ್ಲಿ ಮಾತ್ರ ವಾಸಿಸುತ್ತದೆ. ಈಜಾರಿಯ ವೈಜ್ಞಾನಿಕ ಹೆಸರು. ಜಿರಾಫೆ ಪದ ಬಹುಶಃ ಅರಬ್ ಪದವಾದ ಜರಾಫದಿಂದ ಬಂದಿರಬೇಕು. ರಮ್ಯ ಜೀವಿ ಅಥವಾ ಚುರುಕು ನಡುಗೆಯ ಪ್ರಾಣಿ ಎಂದು ಈ ಪದದ ಅರ್ಥ. ಪ್ರಾಚೀನ ರೋಮನರು ಇದನ್ನು ಕಮೆಲೊಪಾರ್ಡಾಲಿಸ್ (ಗಂಡು ಚಿರತೆ ಮತ್ತು ಹೆಣ್ಣು ಒಂಟೆಗೆ ಹುಟ್ಟಿದ ಪ್ರಾಣಿ) ಎಂದು ಕರೆಯುತ್ತಿದ್ದರು. ಈಗಲೂ ಇದಕ್ಕೆ ಕಮೆಲೊಪಾರ್ಡ್ ಎಂಬ ಹೆಸರಿದೆ. ಜೂಲಿಯಸ್ ಸೀಸರ್ ಇದನ್ನು ಮೊಟ್ಟಮೊದಲ ಬಾರಿಗೆ ಕ್ರಿ.ಪೂ. 46ರಲ್ಲಿ ಯೂರೋಪಿಗೆ ತೆಗೆದುಕೊಂಡು ಹೋದನಂತೆ. ಪ್ರಾಣಿಗಳಲ್ಲೆಲ್ಲ ಅತ್ಯಂತ ಎತ್ತರವಾದ ಪ್ರಾಣಿ ಇದು. ಸುಮಾರು 5.4 ಮೀ ಎತ್ತರ ಬೆಳೆಯುತ್ತದೆ. ಭುಜದ ಬಳಿಯ ಎತ್ತರವೇ 3.6 – 4.2 ಮೀ ಇರುವುದುಂಟು. ಇದರ ಮುಂಗಾಲುಗಳ ನಡುವೆ ಒಬ್ಬ ಮನುಷ್ಯ ಸುಲಭವಾಗಿ ನಿಲ್ಲಬಹುದು. ತೂಕದಲ್ಲೂ ಇದು ಭಾರಿಯಾದುದೇ. ಪೂರ್ಣ ಬೆಳೆದ ಗಂಡು ಜಿರಾಫೆ ಸು. 2 ಟನ್ ತೂಗುವುದುಂಟು. ಗಂಡಿಗಿಂತ ಹೆಣ್ಣು 60–90 ಸೆಂಮೀ ಕಡಿಮೆ ಎತ್ತರ;



ತೂಕ ಸು. 550 ಕಿಗ್ರಾಂ ಕಡಿಮೆ. ಜಿರಾಫೆಗೆ ಬಲು ಉದ್ದವಾದ ಕತ್ತು ಇದೆ. ಗಂಡುಗಳಲ್ಲಿ ಕತ್ತಿನ ಏಣಿನ ಮೇಲೆ ಬಿರುಗೂದಲುಗಳ ಕೇಸರ ಉಂಟು. ಕತ್ತು ಇಷ್ಟು ಉದ್ದವಿದ್ದರೂ ಅದರೊಳಗಿನ ಕಶೇರುಗಳ ಸಂಖ್ಯೆ ಮಾತ್ರ ಹಸು, ಕುದುರೆಗಳಲ್ಲಿ ಇರುವಷ್ಟೆ ಇವೆ, ಅಂದರೆ 7. ಕತ್ತು ಉದ್ದವಾಗಿರುವುದು ಕಶೇರುಗಳ ಲಂಬನೆಯಿಂದ ಮಾತ್ರವೆ ಹೊರತು ಅವುಗಳ ಸಂಖ್ಯೆಯ ಹೆಚ್ಚಳದಿಂದಲ್ಲ. ಗಂಡು ಮತ್ತು ಹೆಣ್ಣು ಜಿರಾಫೆಗಳೆರಡರಲ್ಲೂ ನೆತ್ತಿಯ ಮೇಲೆ ಒಂದು ಜೊತೆ ಮೋಟು ಕೊಂಬುಗಳಿವೆ. ಕೆಲವು ಬಗೆಗಳಲ್ಲಿ ಹಣೆಯ ಮೇಲೆ ಒಂದು ಕೊಂಬಿರುವುದೂ ಉಂಟು. ಅಪರೂಪಕ್ಕೆ ವಯಸ್ಸಾದ ಕೆಲವು ಗಂಡುಗಳಲ್ಲಿ ನೆತ್ತಿಯ ಮೇಲಿನ ಕೊಂಬುಗಳ ಹಿಂಭಾಗದಲ್ಲಿ ಇನ್ನೊಂದು ಜೊತೆ ಪುಟ್ಟ ಕೊಂಬುಗಳಿರುವುದು ಕಂಡುಬಂದಿದೆ. ಎಲ್ಲ ಕೊಂಬುಗಳ ಮೇಲೂ ಚರ್ಮ ಮತ್ತು ಕೂದಲುಗಳ ಸಂಪೂರ್ಣ ಹೊದಿಕೆ ಇರುವುದು ಇವುಗಳ ಸೋಜಿಗದ ಲಕ್ಷಣ. ಜಿರಾಫೆಗೆ ದೊಡ್ಡಗಾತ್ರದ ಕಗ್ಗಂದು ಬಣ್ಣದ ಹಾಗೂ ಉದ್ದರೆಪ್ಪೆಯ ಕಣ್ಣುಗಳುಂಟು. ಇದರ ದೃಷ್ಟಿ ಆಫ್ರಿಕದ ವನ್ಯ ಪ್ರಾಣಿಗಳಲ್ಲೆಲ್ಲ ಅತ್ಯಂತ ತೀಕ್ಷ್ಣವಾದ್ದು. ಇಂಥ ದೃಷ್ಟಿಯೊಂದಿಗೆ ಜಿರಾಫೆಯ

ಎತ್ತರವೂ ಸೇರಿರುವುದರಿಂದ ಇದು ಬಹುದೂರದ ನೋಟವನ್ನು ಸುಲಭವಾಗಿ ಗ್ರಹಿಸಬಲ್ಲುದು. ಇದರ ತುಟಿಗಳು ಉದ್ದವಾದವೂ ಗ್ರಾಹಕ ಶಕ್ತಿಯುಳ್ಳವೂ ಆಗಿವೆ. ಸು. 45 ಸೆಂಮೀ ಉದ್ದಕ್ಕೆ ಚಾಚಬಲ್ಲ ನಾಲಿಗೆ ಮತ್ತು ಮೂಗಿನ ಹೊಳ್ಳೆಗಳನ್ನು ಬೇಕೆಂದಾಗ ಮುಚ್ಚಿಕೊಳ್ಳುವ ಸಾಮರ್ಥ್ಯಗಳು ಜಿರಾಫೆಯ ಮತ್ತೆರಡು ವಿಚಿತ್ರ ಲಕ್ಷಣಗಳು. ಕಾಲುಗಳಲ್ಲಿ 3 ಮತ್ತು 4ನೆಯ ಬೆರಳುಗಳು ಮಾತ್ರ ಇದ್ದು ಗೊರಸುಗಳಾಗಿ ಮಾರ್ಪಟ್ಟಿವೆ. ಇವು ಅಗಲವಾಗಿಯೂ ಭಾರವಾಗಿಯೂ ಇವೆಯಾದರೂ ಗಟ್ಟಿ ನೆಲದ ಮೇಲೆ ಮಾತ್ರ ನಡೆಯಲು ಅನುಕೂಲವಾಗಿವೆ. ಕೆಸರುಮಣ್ಣಿನಲ್ಲಿ, ಜೌಗಿನಲ್ಲಿ ಜಿರಾಫೆ ಸರಾಗವಾಗಿ ನಡೆಯಲಾರದು. ಜಿರಾಫೆ ತುಂಬ ವೇಗವಾಗಿ ನಡೆಯಬಲ್ಲುದು. ಓಡುವಾಗಲಂತೂ ಗಂಟೆಗೆ 48 ಕಿಮೀ ಕ್ರಮಿಸಬಲ್ಲುದು. ಓಡುವಾಗ ಹಿಂಗಾಲುಗಳೆರಡನ್ನೂ ಮುಂಗಾಲುಗಳ ಮುಂದೆ ಹಾಯುವಂತೆ ಚಾಚುತ್ತದೆ. ಜೊತೆಗೆ ತಲೆ ಮತ್ತು ಕತ್ತುಗಳು 8 ಆಕಾರದಲ್ಲಿ ತೊನೆಯುತ್ತವೆ. ಸಾಧಾರಣ ನಡಿಗೆಯಲ್ಲಿ ದೇಹದ ಒಂದು ಪಾರ್ಶ್ವದ ಕಾಲು ಒಂದು ಸಲ, ಇನ್ನೊಂದು ಪಾರ್ಶ್ವದ ಕಾಲುಗಳನ್ನು ಇನ್ನೊಂದು ಸಲ, ಪರ್ಯಾಯವಾಗಿ, ಚಾಚುತ್ತ ಸಾಗುತ್ತದೆ. ಜಿರಾಫೆಯ ದೇಹದ ಬಣ್ಣ ಮಾಸಲು ಕಂದು. ಅದರ ಮೇಲೆಲ್ಲ ಗಾಢವರ್ಣದ ಮಚ್ಚೆಗಳಿವೆ. ಮಚ್ಚೆಗಳ ಮಧ್ಯೆ ಇರುವ ಸ್ಥಳ ಒಂದು ರೀತಿಯ ಬಲೆಯಂತೆ ಕಾಣುತ್ತದೆ. ಉದರ ಭಾಗ ತಿಳಿಬಣ್ಣದ್ದು; ಇದರ ಮೇಲೆ ಮಚ್ಚೆಗಳಿಲ್ಲ. ಜಿರಾಫೆಯ ಬಾಲ ಉದ್ದವಾಗಿದೆ; ಇದರ ತುದಿಯಲ್ಲಿ ಕೂದಲಿನ ಗೊಂಡೆಯುಂಟು. ಇದು ಯಾವ ತೆರನ ಸದ್ದನ್ನೂ ಮಾಡದು ಎಂದು ಹೇಳಲಾಗಿದ್ದರೂ ಅಸ್ಪಷ್ಟವಾಗಿ ಗುರುಗುಟ್ಟುವುದನ್ನು, ಮುಲುಕು ಹಾಕುವುದನ್ನು ಕೇಳಿದವರಿದ್ದಾರೆ.

ಜಿರಾಫೆ ಸಂಘಜೀವಿ; 15–20 ಪ್ರಾಣಿಗಳನ್ನೊಳಗೊಂಡ ಗುಂಪುಗಳಲ್ಲಿ ಜೀವಿಸುತ್ತದೆ. ಗುಂಪಿಗೆ ಬಲಿಷ್ಠ ಗಂಡೊಂದು ನಾಯಕ. ಅಪರೂಪವಾಗಿ ಗಂಡುಗಳು ಒಂಟಿಯಾಗಿಯೇ ಜೀವನ ಸಾಗಿಸುವುದುಂಟು. ಇದು ಸಾಮಾನ್ಯವಾಗಿ ಸಾಧುಪ್ರಾಣಿ. ಆದರೆ ಶತ್ರುಗಳಿಂದ ಆವೃತವಾದಾಗ ಉಗ್ರವಾಗಿ ಹೋರಾಡಬಲ್ಲುದು. ಮನುಷ್ಯನನ್ನು ಬಿಟ್ಟರೆ ಸಿಂಹವೊಂದೇ ಇದಕ್ಕೆ ಮುಖ್ಯ ವೈರಿ. ಸಿಂಹಗಳಾದರೂ ಒಂಟೊಂಟಿಯಾಗಿ ಜಿರಾಫೆಯನ್ನು ಕೆಣಕವು. ಏಕೆಂದರೆ ಜಿರಾಫೆ ತನ್ನ ಕಾಲುಗಳಿಂದ ಮರಣಾಂತಿಕ ಹೊಡೆತನ್ನು ಕೊಡಬಲ್ಲದು. ಕೆಲವೊಮ್ಮೆ ಹೆಣ್ಣಿಗಾಗಿ ಗಂಡು ಜಿರಾಫೆಗಳ ನಡುವೆ ಹೋರಾಟ ನಡೆಯುತ್ತದೆ. ಹೀಗೆ ಹೋರಾಡುವಾಗಲೂ ಕಾಲುಗಳ ಬಳಕೆಯೇ ಹೆಚ್ಚು. ಕೊಂಬುಗಳನ್ನು ಉಪಯೋಗಿಸುವುದೇ ಇಲ್ಲ. ಗೊಬ್ಬಳಿ ಮರದ ಎಳೆಚಿಗುರು ಇದರ ಮೆಚ್ಚಿನ ಆಹಾರ. ಹುಲ್ಲನ್ನು ತಿನ್ನುವುದು ಬಹಳ ಕಡಿಮೆ. ದೇಹ ಎತ್ತರವಿದ್ದು ಕತ್ತೂ ಬಹಳ ಉದ್ದವಾಗಿರುವುದರಿಂದ ಬಗ್ಗಿ ಹುಲ್ಲನ್ನು ತಿನ್ನುವುದು ಇದಕ್ಕೆ ಬಹಳ ಕಷ್ಟ. ಹೀಗೆ ನೆಲದಿಂದ ಆಹಾರವನ್ನು ಎತ್ತಿಕೊಳ್ಳುವಾಗ, ನೀರನ್ನು ಕುಡಿಯುವಾಗ ಮುಂಗಾಲುಗಳೆರಡನ್ನೂ ವಿಸ್ತಾರವಾಗಿ ಹರಡಿ ಕತ್ತನ್ನು, ಬಗ್ಗಿಸುತ್ತದೆ. ದನಗಳಂತೆಯೇ ಜಿರಾಫೆಯೂ ಆಹಾರವನ್ನು ಮೇಲುಕು ಹಾಕುತ್ತದೆ. ನೀರನ್ನು ಕುಡಿಯುವುದು ಬಲು ಕಡಿಮೆ. ವಾರಕ್ಕೊಮ್ಮೆ 2 ಗ್ಯಾಲನ್ ನೀರನ್ನು ಕುಡಿದರೆ ಹೆಚ್ಚು. ಹಲವಾರು ವಾರಗಳ ಕಾಲ ನೀರಿಲ್ಲದೆ ಇರಬಲ್ಲುದು. ದಿನವೂ ಬೆಳಗಿನ ಜಾವ ಮತ್ತು ಸಂಜೆ ಆಹಾರವನ್ನರಸುತ್ತ ಸಾಗುತ್ತಿದ್ದು ಮಧ್ಯಾಹ್ನ ಮರಗಳಡಿಯಲ್ಲಿ ನಿಂತು ವಿಶ್ರಮಿಸುತ್ತದೆ. ಸಾಮಾನ್ಯವಾಗಿ ಜಿರಾಫೆ ನಿಂತು ಕೊಂಡೇ ನಿದ್ರಿಸುತ್ತದೆ. ಅಪರೂಪಕ್ಕೆ ಮಲಗುವುದುಂಟು. ಜಿರಾಫೆಗೆ ಈಜಲು ಬಾರದು. ಇದರಿಂದಾಗಿ ನೀರು ಕಂಡರೆ ಇದಕ್ಕೆ ಹೆದರಿಕೆ.

ಗಂಡು ಹೆಣ್ಣುಗಳು ಕೂಡುವ ಶ್ರಾಯ ಜುಲೈ–ಸೆಪ್ಟೆಂಬರ್. ಗರ್ಭಧಾರಣೆಯ ಅವಧಿ 420–450 ದಿವಸಗಳು. ಒಂದು ಸಲಕ್ಕೆ ಒಂದೇ ಒಂದು ಮರಿ ಹುಟ್ಟುತ್ತದೆ. ಹುಟ್ಟುವಾಗಲೇ ಸುಮಾರು 1.65 ಮೀ ಎತ್ತರವಿರುವ ಮರಿ ಹುಟ್ಟಿದ 20 ಮಿನಿಟುಗಳ ತರುವಾಯ ತನ್ನ ಕಾಲುಗಳ ಮೇಲೆಯೇ ಓಡಾಡುವಂತಾಗುತ್ತದೆ. ಸುಮಾರು 9 ತಿಂಗಳ ಕಾಲ ತಾಯಿ ಹಾಲು ಕುಡಿದೇ ಬದುಕುತ್ತಿದ್ದು ಅನಂತರ ಸ್ವತಂತ್ರ ಜೀವನ ನಡೆಸತೊಡಗುತ್ತದೆ. ಹಲವಾರು ಪ್ರೌಢ ಜಿರಾಫೆಗಳು ಮರಿಗಳನ್ನು (ತಮ್ಮವೇ ಅಲ್ಲವಾದರೂ) ರಕ್ಷಣೆ ಮಾಡುವ ವಿಚಿತ್ರ ಕ್ರಮ ಇವುಗಳಲ್ಲಿ ಕಂಡುಬರುತ್ತದೆ. ಮರಿಗಳಿಗೆ 3–4 ವರ್ಷ ವಯಸ್ಸಾದ ಅನಂತರ ಲೈಂಗಿಕ ಸಾಮರ್ಥ್ಯ ಬರುತ್ತದೆ. ಜಿರಾಫೆಯ ಆಯಸ್ಸು ಸುಮಾರು 20 ವರ್ಷಗಳು. ಜಿರಾಫೆಯನ್ನು ಅದರ ಚರ್ಮ, ಮಾಂಸಗಳಿಗಾಗಿ ಬೇಟೆಯಾಡುತ್ತಾರೆ. ಇದರ ಮಾಂಸ ಬಹಳ ಗಡುಸಾಗಿದ್ದರೂ ರುಚಿಯೆಂದು ಹೇಳಲಾಗಿದೆ. ***

**ಜೀನೋಮ್:** ಜೀವಿಯ ಒಟ್ಟು ಆನುವಂಶೀಯ ಗುಣಗಳ ಸಮೂಹ. ಆನುವಂಶೀಯ ಗುಣಗಳು ಡಿಎನ್‌ಎಯಲ್ಲಿ ಅಡಕವಾಗಿವೆ. ಡಿಎನ್ಎ ಸುರುಳಿಯು ಹಲವು ಮೀಟರ್ ಉದ್ದವಾಗಿದೆ. ಕೋಶದಲ್ಲಿರುವ ಡಿಎನ್ಎ ಚಿಕ್ಕ ಚಿಕ್ಕ ಭಾಗಗಳಾಗಿ, ವರ್ಣತಂತುಗಳ ರೂಪದಲ್ಲಿ ಕೋಶ ಕೇಂದ್ರದಲ್ಲಿ ಇರುತ್ತದೆ. ಪ್ರತಿಯೊಂದು ಜೀವಿಯಲ್ಲಿ ಒಂದು ನಿಖರವಾದ ಸಂಖ್ಯೆ ಮತ್ತು ಪ್ರಮಾಣದಲ್ಲಿ ವರ್ಣತಂತುಗಳು ಇರುತ್ತವೆ. ಉದಾ : ಮಾನವನಲ್ಲಿ ಒಟ್ಟು 23 ಜೊತೆ ವರ್ಣ ತಂತುಗಳಿವೆ. 23 ತಾಯಿಯ ಅಂಡಾಣುಗಳ ಮೂಲಕ ಹಾಗೂ ಇನ್ನರ್ಧ 23 ವರ್ಣ ತಂತುಗಳು ತಂದೆಯ ವೀರ್ಯಾಣುಗಳ ಮೂಲಕ ಸೇರಿ 23 ಜೋಡಿ ವರ್ಣತಂತುಗಳಾಗಿರುತ್ತವೆ. 23 ವರ್ಣತಂತುಗಳಲ್ಲಿ ಆನುವಂಶೀಯವಾಗಿ ಬರುವ ಎಲ್ಲಾ ಗುಣಗಳು (ಜೀನ್) ಇರುತ್ತವೆ. ಈ ವರ್ಣತಂತುಗಳನ್ನು ಮತ್ತು ಎಲ್ಲಾ ಜೀನ್‌ಗಳನ್ನು ಒಟ್ಟಾಗಿ ಜೀನೋಮ್ ಎಂದು ಕರೆಯುತ್ತಾರೆ.

ಬ್ಯಾಕ್ಟೀರಿಯಾದಲ್ಲಿ 4.1 x $10^6$ ನ್ಯೂಕ್ಲಿಯೋಟೈಡ್‌ಗಳು ಇದ್ದು, ಅದು ಒಂದೇ ಸರಪಳಿಯಾಗಿರುತ್ತದೆ. ಇದನ್ನು ಮೋನೋಪ್ಲಾಯ್ಡ್ ಎಂದು ಕರೆಯುತ್ತಾರೆ. ಒಂದೇ ರೀತಿಯ ವರ್ನತಂತುಗಳು ಜತೆಯಾಗಿದ್ದರೆ ಡಿಪ್ಲಾಯ್ಡ್, ಮೂರು ಇದ್ದಾಗ ಟ್ರಿಪ್ಲಾಯ್ಡ್ ಹಾಗೂ ಹೆಚ್ಚು ಇದ್ದಾಗ ಪಾಲಿಪ್ಲಾಯ್ಡ್ ಎಂದೂ ಕರೆಯುತ್ತಾರೆ.

ಜೀವಿಯ ವಿಕಾಸಕ್ಕೆ ವರ್ಣತಂತುಗಳಲ್ಲಿ ಆಗುವ ಮರು ಸಂಯೋಗ (ರೀಕಾಂಬಿನೇಶನ್), ದ್ವಿಪ್ರತೀಕರಣೆ (ಡ್ಯೂಪ್ಲಿಕೇಷನ್) ಹಾಗೂ ಜೀನ್ ಸ್ಥಳಾಂತರ (ಟ್ರಾನ್ಸ್‌ಲೊಕೇಷನ್) ಕಾರಣ. ಟ್ರಾನ್ಸ್‌ಪೋಸಾನ್ಸ್ ಕೂಡಾ ಜೀವ ವಿಕಾಸದಲ್ಲಿ ಪ್ರಮುಖ ಪಾತ್ರವಹಿಸಿವೆ. ವಿಕಾಸಾತ್ಮಕ ಬೆಳವಣಿಗೆ ಹಾಗೂ ವ್ಯತ್ಯಾಸಗಳಿಗೆ ಇದು ಕಾರಣ. ವಿಕಾಸವಾದಂತೆ ಜೀನೋಮಿನ ಪ್ರಮಾಣ ಹೆಚ್ಚುತ್ತದೆ. ಉಪಯುಕ್ತವಾದ ವ್ಯತ್ಯಾಸ ಹಾಗೂ ವಿಕಾಸಾತ್ಮಕ ಬೆಳವಣಿಗೆಗಳು ನೈಸರ್ಗಿಕವಾಗಿವೆ. (ನ್ಯಾಚುರಲ್ ಸೆಲೆಕ್ಷನ್). ವಿಕೃತ ಜೀನ್‌ಗಳು, ಜೀನೋಮ್‌ಗಳನ್ನು ಇನ್ನೂ ಶುದ್ಧೀಕರಿಸಿದೆ (ಫೈನ್ ಟ್ಯೂನಿಂಗ್).

ಬ್ಯಾಕ್ಟೀರಿಯಾದಲ್ಲಿ ಸ್ವಯಂ ಅಧಿಕಾರದ ಅಂಗಕಗಳಿದ್ದು (ಪ್ಲಾಸ್ಮಿಡ್ಸ್), ಅವುಗಳಲ್ಲಿ ವರ್ಣತಂತುಗಳು ಇರುತ್ತವೆ. ಅಂತಹ ವರ್ಣತಂತುಗಳನ್ನು ಬಾಹ್ಯ ವರ್ಣತಂತುಗಳೆಂದು (ಎಕ್ಸಟ್ರಾ ಕ್ರೋಮೋಸೋಮ) ಕರೆಯುತ್ತಾರೆ. ಈ ವರ್ಣತಂತುಗಳು ಒಂದು ನಿರ್ದಿಷ್ಟ ಪ್ರಮಾಣ ಹಾಗೂ ಸಂಖ್ಯೆಯಲ್ಲಿ ಇರುತ್ತವೆ. ಒಂದು ಸಂತತಿಯಿಂದ ಇನ್ನೊಂದು ಸಂತತಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಆನುವಂಶೀಯವಾಗಿ ಬರುತ್ತವೆ.

ಕ್ಲೋರೊಪ್ಲಾಸ್ಟ್ ಹಾಗೂ ಮೈಟೊಖಾಂಡ್ರಿಯಗಳಲ್ಲಿ ಅಂಗಕ ಜೀನೋಮ್‌ಗಳಿವೆ. ಇದರಲ್ಲಿ ಇರುವ ಜೀನೋಮ್ ಪ್ರೊಕ್ಯಾರಿಯೋಟ ಹಾಗೂ ಯೂಕ್ಯಾರಿಯೋಟ ನಡುವಣ ಸಂಬಂಧವನ್ನು ತೋರಿಸುತ್ತದೆ. ಯೀಸ್ಟ್‌ನಲ್ಲಿರುವ ಜೀನ್ ಹಾಗು ಮೈಟೊಖಾಂಡ್ರಿಯದಲ್ಲಿರುವ ಜೀನ್ ಒಂದೇ ರೀತಿಯ ಪ್ರೊಟೀನ್‌ಗಳನ್ನು ತಯಾರಿಸುತ್ತವೆ. ಯೀಸ್ಟ್‌ನಲ್ಲಿರುವ ಜೀನೋಮ್ ದೊಡ್ಡ ಗಾತ್ರದ್ದಾಗಿದ್ದು, ಮೈಟೊಖಾಂಡ್ರಿಯಾದಲ್ಲಿರುವ ಜೀನೋಮ್ ಚಿಕ್ಕದಾಗಿದೆ. ಈಗ ಡಿಎನ್ಎ ಸೀಕ್ವೆನ್ಸಿಂಗ್ ತಂತ್ರದಿಂದ ಸಂಬಂಧವಿಲ್ಲದಿರುವ ಜೀನ್‌ಗಳಲ್ಲಿರುವ ಸಮಾನತೆಯನ್ನು ಕಾಣಬಹುದು.

ಸೀವಾಲ್ಯೂ: ಒಂದು ಜೀನೋಮ್‌ನಲ್ಲಿರುವ ಒಟ್ಟು ಡಿಎನ್ಎಗೆ ಸೀವಾಲ್ಯೂ ಎಂದು ಹೇಳುತ್ತಾರೆ. ಒಂದೊಂದು ಜಾತಿಯ ಜೀವಿಗೆ ಒಂದು ನಿರ್ದಿಷ್ಟವಾದ ಸೀವ್ಯಾಲ್ಯು ಇರುತ್ತದೆ. ಈ ಕೆಳಗೆ ಕೊಟ್ಟಿರುವ ಚಿತ್ರದಿಂದ ಬೇರೆ ಬೇರೆ ಜೀವಿಗಳಲ್ಲಿ ಡಿಎನ್ಎ ಪ್ರಮಾಣವನ್ನು ತಿಳಿಯಬಹುದು. (ಜೆ.ಎಸ್.ವಿ)

**ಜೀವ ಬಲವಿಜ್ಞಾನ:** ಜೀವಂತ ವಸ್ತುಗಳ ಬಲವಿಜ್ಞಾನದ ಅಧ್ಯಯನ (ಬಯೋಮೆಕ್ಯಾನಿಕ್ಸ್). ಜೀವವಿಜ್ಞಾನ ಹಾಗೂ ಬಲವಿಜ್ಞಾನದ ಘಟಕಗಳಾಗಿರುವ ಭೌತವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನದ ವಿವಿಧ ಶಾಖೆಗಳ ಖಚಿತ ಜ್ಞಾನ ಇಲ್ಲಿ ಅಗತ್ಯ. ಈ ವಿಜ್ಞಾನಕ್ಕೆ ಆಲ್ಫೋನ್ಸೊ ಬೊರೆಲಿ (1608–1679) ಕೊಡುಗೆ ಅಪಾರ. (ನೋಡಿ– ಬೊರೆಲಿ, ಜೋವಾನೀ ಅಲ್ಫೋನ್ಸೊ). ಆದರೂ ಅರಿಸ್ಟಾಟಲನನ್ನೇ ಮೊದಲ ಜೀವಬಲವಿಜ್ಞಾನಿ ಎನ್ನಬಹುದು. ಏಕೆಂದರೆ ಈತ ಪ್ರಾಣಿಯನ್ನು ಒಂದು ಬಲವೈಜ್ಞಾನಿಕ ಪ್ರತಿರೂಪವಾಗಿ ಪರಿಗಣಿಸಿ ದೇಹಚಲನೆಯನ್ನು ಬಲ ವೈಜ್ಞಾನಿಕ ನಿಯಮಗಳ ಅನುಸಾರ ಅಭ್ಯಾಸಿಸಿ, ಪಡೆದ ಫಲಿತಾಂಶಗಳನ್ನು ದ ಮೋಟು ಆನಿಮ್ಯಾಲಿಯಮ್ (ಪ್ರಾಣಿಗಳ ಚಲನೆಯ ವಿಚಾರ) ಪುಸ್ತಕದಲ್ಲಿ ಪ್ರಕಟಿಸಿದ್ದಾನೆ.

ಜೀವ ಬಲವಿಜ್ಞಾನದ ಒಂದು ಮುಖ್ಯ ಶಾಖೆ ವೈದ್ಯವಿಭಾಗದಲ್ಲಿ ಪ್ರಬಲವಾಗಿ ವಿಕಸಿಸಿದೆ. ಮನುಷ್ಯನ ಮೂಳೆಗಳ ತ್ರಾಣ, ಸಾಧಾರಣ ಚಟುವಟಿಕೆಗಳಲ್ಲಿ ಇವುಗಳ ಮೇಲೆ ಬೀಳುವ ಒತ್ತಡಗಳು, ಸಂಧಿಗಳ ಕ್ರಿಯೆ ಮುಂತಾದುವನ್ನು ವ್ಯಾಪಕವಾಗಿ ಅಭ್ಯಾಸಿಸಲಾಗಿದೆ. ಈ ಜ್ಞಾನ, ಉದಾ: ಅಸ್ಥಿಶಸ್ತ್ರಚಿಕಿತ್ಸಾವಿಜ್ಞಾನದಲ್ಲಿ (ಆರ್ಥೋಪೆಡಿಕ್ ಸರ್ಜರಿ) ಕೃತಕ ಸಂಧಿಗಳ ಅಲೇಖ್ಯ ಹಾಗೂ ರಚನೆಗೆ ಉಪಯುಕ್ತವಾಗುತ್ತವೆ. ಜೀವಬಲವಿಜ್ಞಾನದ ಇನ್ನೊಂದು ಪ್ರಧಾನ ಶಾಖೆ ಪ್ರಾಣಿಗಳ ಚಾಲನೆಯನ್ನು ಕುರಿತಾಗಿದೆ. 1933 ರಿಂದ ಇತ್ತೀಚೆಗೆ, ಸರ್ ಜೇಮ್ಸ್ ಗ್ರೇ ಆವಿಷ್ಕಾರಗಳಿಂದ ತೊಡಗಿ, ಈ ಶಾಖೆಯ ಮೇಲೆ ಸಾಕಷ್ಟು ವ್ಯಾಪಕ ಕಾರ್ಯ ನಡೆದಿದೆ.

ಫಾಸಿಲ್ ಸರೀಸೃಪಗಳ (ಫಾಸಿಲ್ ರೆಪ್ಟೈಲ್ಸ್) ವಿಕಾಸವನ್ನು ಕುರಿತು ಒಂದು ವಿರೋಧಾಭಾಸವನ್ನು ಜೀವಬಲವಿಜ್ಞಾನದ ವಿಭಾಗವಾಗಿರುವ ಜೀವಸ್ಥಿತಿವಿಜ್ಞಾನ (ಬಯೋ ಸ್ಟ್ಯಾಟಿಕ್ಸ್) ಪರಿಹರಿಸಿದೆ. ಸೈನ್ಯಾಪಿಡ ಗುಂಪಿನ ಸರೀಸೃಪಗಳು ವಿಕಾಸಗೊಂಡು ಸ್ತನಿಗಳು ಮೈದಳೆದುವು. ಈ ವಿಕಾಸ ಮುಂದುವರಿದಂತೆ ದವಡೆ ಮಾಂಸಖಂಡಗಳು ಹಲವಾರು ಭಾಗಗಳಾಗಿ ವಿಭಾಗಗೊಂಡು ದೊಡ್ಡವಾದುವು. ಆದರೆ, ದವಡೆ ಸಂಧಿ ದುರ್ಬಲವಾಗುತ್ತ ಹೋಯಿತು. ಫಾಸಿಲುಗಳಲ್ಲಿ ಮಾಂಸಖಂಡಗಳು ಉಳಿದಿಲ್ಲ, ಆದರೆ, ಇವುಗಳ ರೂಪ ಮತ್ತು ಗಾತ್ರವನ್ನು ತಲೆಬುರುಡೆಯ ಆಕಾರದಿಂದ ನಿರ್ಧರಿಸಬಹುದು. ಕಚ್ಚುವಾಗ ಉಪಯುಕ್ತವಾಗುವ ಬಲಗಳ ಸಮತೋಲನವನ್ನು ಪರಿಗಣಿಸಲಾಯಿತು. ಮಾಂಸಖಂಡಗಳ ಅಳವಡಿಕೆಯಲ್ಲಾದ ಬದಲಾವಣೆ ಸಂಧಿಯಲ್ಲಿ ವರ್ತಿಸುತ್ತಿದ್ದ ಬಲಗಳು, ಮಾಂಸಖಂಡಗಳು ಹೆಚ್ಚು ಬಲಯುತವಾಗಿ ಇನ್ನಷ್ಟು ಗಟ್ಟಿಯಾಗಿ ಕಚ್ಚಬಲ್ಲವಾಗಿದ್ದರೂ ಪ್ರಾಯಶಃ ಕಡಿಮೆ ಆದವು ಎಂದು ಈ ಪರಿಗಣನೆಯಿಂದ ತಿಳಿದಿದೆ. ಆದ್ದರಿಂದ ದುರ್ಬಲ ದವಡೆ ಸಾಕಾಯಿತು.

ಚಿಗಟಗಳ ನೆಗೆತವನ್ನು ಅಭ್ಯಾಸಿಸುವಲ್ಲಿ ಜೀವಗತಿವಿಜ್ಞಾನವನ್ನು (ಬಯೋಡೈನಮಿಕ್ಸ್) ಪದಾರ್ಥಗಳ ವಿಜ್ಞಾನವನ್ನು ಅನ್ವಯಿಸಲಾಗಿದೆ. 1.5 ಮಿಮೀ ಉದ್ದ ಕುಂದಿಲಿ ಚಿಗಟ 3.5 ಸೆಂಮೀ ಎತ್ತರ ನೆಗೆಯಬಲ್ಲುದು. ಈ ನೆಗೆತದ ಪಥವನ್ನು ಚಲನ ಚಿತ್ರೀಕರಿಸಿ ಬಿಡಿಚಿತ್ರಗಳನ್ನು ಕೂಲಂಕಷವಾಗಿ ಅಭ್ಯಾಸಿಸಿ ನೆಗೆತದ ಮುನ್ನ ಚಿಗಟದ ಕಾಲುಗಳು ನೆಲಕ್ಕೆ ಪ್ರಯುಕ್ತಿಸಬೇಕಾದ ಬಲ ಎಷ್ಟು ಮತ್ತು ನೆಗೆತಕ್ಕೆ ಅವಶ್ಯವಾದ ಶಕ್ತಿ ಎಷ್ಟು ಎಂಬುದನ್ನು ಪತ್ತೆಹಚ್ಚಲಾಗಿದೆ. ಚಿಗಟಗಳು ನೆಗೆಯುವುದು ಒಂದು ವಿಧದ ಕವಣೆ ವಿನ್ಯಾಸದಿಂದ (ಕ್ಯಟಪಲ್ಟ್ ಮೆಕ್ಯಾನಿಸಮ್), ರೆಸಿಲಿನ್ ಎಂಬ ಪುಟಿತ ಪ್ರೋಟೀನಿನ ಚಪ್ಪಡಿಗಳನ್ನು ಕಾಲಿನ ಮಾಂಸಖಂಡಗಳು ಅದುಮಿ ಮತ್ತೆ ಅವು ಹಿಂದೊದೆತವನ್ನು ಝಾಡಿಸುವಂತೆ ಪಕ್ಕನೆ ಬಿಡಲಾಗುತ್ತದೆ. ಹೀಗೆ ಕಾಲಿನ ಅತಿಶೀಘ್ರ ಚಲನೆಗಳು ಉಂಟಾಗುತ್ತವೆ. ರೆಸಿಲಿನ್ನಿನ ತ್ರಾಣ ಹಾಗೂ ಪುಟಿತತೆಗಳನ್ನು ಆಧರಿಸಿ ಗಣನೆಗಳನ್ನು ಮಾಡಲಾಯಿತು. ಚಿಗಟಗಳಲ್ಲಿ ಇರುವ ರೆಸಿಲಿನ್ನಿನ ಚಪ್ಪಡಿಗಳು ನೆಗೆತಕ್ಕೆ ಅವಶ್ಯವಾಗುವ ಪುಟಿತ ಶಕ್ತಿಯನ್ನು ಸಂಚಯಿಸುವಷ್ಟು ದೊಡ್ಡವಾಗಿವೆ ಎಂದು ಈ ಗಣನೆಗಳು ದೃಢಪಡಿಸಿವೆ.

ಜೀವಬಲವಿಜ್ಞಾನದ ಅನ್ವಯಗಳು ವಾಯುಗತಿ ವಿಜ್ಞಾನದಲ್ಲಿ (ಏರೋಡೈನಮಿಕ್ಸ್) ಇವೆ. ಮೇಪಲ್ ಮತ್ತು ಇತರ ಕೆಲವು ಮರಗಳ ಬೀಜಗಳಿಗೆ ರೆಕ್ಕೆಗಳಿವೆ. ಈ ಬೀಜಗಳು ಮರದಿಂದ ಬೀಳುತ್ತಿದ್ದಂತೆ ರೆಕ್ಕೆಗಳ ಕಾರಣವಾಗಿ ಬೀಜಗಳು ಹೆಲಿಕಾಪ್ಟರಿನ ರಾಟರುಗಳಂತೆ ಆವರ್ತಿಸಲು ತೊಡಗುವುವು. ಹೀಗಾಗಿ ಇವು ಆವರ್ತನೆ ಇಲ್ಲದಿದ್ದರೆ ಬೀಳಬಹುದಾಗಿದ್ದ ಜಾಗಗಳಿಗಿಂತ ಬಲು ದೂರ ಸಾಗಿ ಹೋಗುತ್ತವೆ. ಅಂದರೆ, ತಾಯಿ ಮರಕ್ಕಿಂತ ಆದಷ್ಟು ಹೆಚ್ಚು ದೂರ ಬೀಜ ಪ್ರಸಾರವಾಗುತ್ತದೆ. ಈ ತೆರನಾದ ಬೀಜಗಳು ಬೀಳುವ ಜವಗಳನ್ನು ನಿರ್ಧರಿಸಿ ಇವನ್ನು ಇದೇ ತೂಕದ ಹಾಗೂ ಉದ್ದದ ಬೀಜಗಳಿಗೆ ನೋದಕಗಳ ಸಿದ್ಧಾಂತದ (ಥಿಯರಿ ಆಫ್ ಪ್ರೊಪೆಲರ್ಸ್) ರೀತ್ಯ ಒದಗಬಹುದಾದ ಕನಿಷ್ಠ ಸಾಧ್ಯ ಬೆಲೆಗಳೊಡನೆ ಹೋಲಿಸಲಾಗಿದೆ. ವಾಸ್ತವ ಜವಗಳು ಸೈದ್ಧಾಂತಿಕ ಕನಿಷ್ಠ ಜವಗಳಿಗಿಂತ ಕೇವಲ 1.2 ಪಟ್ಟು ಜಾಸ್ತಿ ಇದ್ದುದು ತಿಳಿಯಿತು. ಅಂದರೆ, ರೆಕ್ಕೆಗಳು ಬಲು ಪರಿಣಾಮಕಾರಿ ಎಂಬುದು ಸಿದ್ಧವಾಯಿತು. ಹೋಲಿಕೆಯಿಂದ ಹೇಳುವುದಾದರೆ ಜವವನ್ನು ಮಂದಗೊಳಿಸುವುದರಲ್ಲಿ ಈ ರೆಕ್ಕೆಗಳು ಸಮಸಲೆಯ ಪ್ಯಾರಾಶೂಟುಗಳಿಗಿಂತ ಎಷ್ಟೋ ಪಟ್ಟು ಅಧಿಕ ಪರಿಣಾಮಕಾರಿಗಳು. ವಾಯುಗತಿವಿಜ್ಞಾನದ ಮತ್ತೊಂದು ಉದಾಹರಣೆ ಪಕ್ಷಿಗಳ ಹಾರಾಟ. ಈಜುವ ಮೀನಿನ ಚಲನೆಯನ್ನು ಗುರುತಿಸುವ ದ್ರವಗತಿವಿಜ್ಞಾನ ಹಾಗೂ ಚಲಿಸುವ ಎಲ್ಲ ಜೀವಿಗಳ ಚಲನೆಯನ್ನು ಜೀವಬಲವಿಜ್ಞಾನದ ತತ್ವಗಳು ವಿವರಿಸುತ್ತವೆ. ಮಾನವನ ಬಲವಿಜ್ಞಾನವನ್ನು ಕೈನೆಸಾಲೊಜಿ ಅಂದರೆ ಮಾನವನ ಗತಿ ಕ್ರಮ ಅಧ್ಯಯನ ವಿಜ್ಞಾನ ಎಂದು ಕರೆಯಲಾಗುವುದು. ಯಾಂತ್ರಿಕ ಎಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ ಎಂದು ಕರೆಯಲಾಗುವುದು. ಯಾಂತ್ರಿಕ ಎಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ ಎಂಜಿನಿಯರಿಂಗನ ಅನ್ವಯಿಕ ವಿಜ್ಞಾನಗಳಾದ. ಅನಿಲ ಅಥವಾ ದ್ರವಗಳ ಚಲನಾವಿಜ್ಞಾನ, ಉಷ್ಣಗತಿವಿಜ್ಞಾನದ ತತ್ವಗಳನ್ನು ವಿಧಾನಗಳನ್ನು ಬಳಸಿ ಜೀವಿಯ ದೇಹದ ವಿವಿಧ ಪ್ರಕ್ರಿಯೆಗಳ ಹಿಂದಿರುವ ಸಿದ್ಧಾಂತಗಳನ್ನು ಅರಿಯಲಾಗುವುದು. ಇದನ್ನು ಅರಿಯಲು ಬೀಜಗಣಿತ, ಸದಿಶ, ಹಾಗು ಸಂವರ್ಧನಾ ತತ್ವಗಳನ್ನು ಬಳಸಲಾಗುವುದು. ಉದಾಹರಣೆಗೆ ಇವುಗಳಲ್ಲಿ ಚಲನೆ, ದ್ರುವಗಳ ಹರಿಯುವಿಕೆ, ಶಕ್ತಿ ಸಂಚಯನಗಳನ್ನು ಇದರಿಂದ ತಿಳಿಯಬಹುದು. ದೇಹದ ಹಲವಾರು ನ್ಯೂನ್ಯತೆಗಳಿಗೆ, ತೊಂದರೆಗಳಿಗೆ ಕಾರಣಗಳನ್ನು ತಿಳಿಯಬಹುದು.

ದೇಹದ ಅಂಗಾಂಶಗಳನ್ನು, ಕೋಶಗಳನ್ನು ಅಖಂಡ ಅಥವಾ ಸಾತತ್ಯ ರಚನೆ ಎಂದು ಪರಿಗಣಿಸಿ ಈ ವ್ಯೂಹದ ಕಾರ್ಯ ವಿಧಾನವನ್ನು ಅರಿಯಲಾಗುವುದು. ಸೂಕ್ಷ್ಮರಚನೆಗಳಾದ ಜೀವಕೋಶಗಳನ್ನು ಅಖಂಡವೆಂದು ಭಾವಿಸಿದಾಗ ಅಲ್ಲಿ ನಡೆಯುವ ಸರಳರಿಖೀಯ ಹಾಗೂ ಕೋನೀಯ ಸಂವೇಗವನ್ನು ಅಳೆಯಬಹುದು. ಇದರಿಂದಾಗಿ ಕೋಶವೊಂದರಲ್ಲಿ ಕೋಶದ್ರವ್ಯದ ಚಲನೆ, ರಕ್ತನಾಳಗಳಲ್ಲಿ ರಕ್ತದ ಹರಿಯುವಿಕೆ, ಜೀರ್ಣಾಂಗವ್ಯೂಹದಲ್ಲಿ, ವಿಸರ್ಜನಾಂಗದಲ್ಲಿ, ನರಮಂಡಲದಲ್ಲಿ ವಿವಿಧ ದ್ರವಗಳ, ಸಂದೇಶಗಳ ಸಾಗಣೆಯ ಹಿಂದಿರುವ ಅಣುವಿಜ್ಞಾನವನ್ನು ತಿಳಿಯಬಹುದು. ಈ ತಿಳಿವಳಿಕೆಯಿಂದ ಅಂಗಾಂಗಗಳಿಗೆ ಸೋಂಕು ಇಲ್ಲವೇ ಕ್ಯಾನ್ಸರ್‌ನಂತಹ ಖಾಯಿಲೆಗಳು ಬಂದಾಗ ಜೈವಿಕ ಕ್ರಿಯೆಗಳಲ್ಲಿ ಉಂಟಾಗುವ ಬದಲಾವಣೆಯನ್ನು, ಅದಕ್ಕೆ ಸೂಕ್ತವಾದ ಚಿಕಿತ್ಸೆಯನ್ನು ನೀಡಬಹುದು. ರಕ್ತದ ಹರಿಯುವಿಕೆಗೆ ನ್ಯೂಟನ್ನನ ಚರಲ ನಿಯಮಗಳನ್ನು ಮೂಳೆಗಳ ಚಲನೆಗೆ ಅನಿಯಂತ್ರಿತ ಚಲನಾ ವಿಧಾನದ ಸಿದ್ಧಾಂತಗಳನ್ನು ಬಳಸಿ ಯಾಂತ್ರಿಕ ಮಟ್ಟದ ಈ ಅಂಗಾಂಶ ರಚನೆಯನ್ನು ಅರ್ಥಮಾಡಿಕೊಳ್ಳಬಹುದು. ಮೃದು ಅಂಗಾಂಶಗಳಾದ ಮಜ್ಜೆ, ಲಿಗಾಮೆಂಟ್‌ಗಳ ಚಲನಾ ವಿಧಾನ, ಅವು ಮೂಳೆಗಳ ಚಲನೆಗೆ ಬೇಕಾಗುವ ಬಲ ದ ಪ್ರಮಾಣವನ್ನು ಅರಿಯಲಾಗುವುದು.

ಜೀವಿಯ ದೇಹದಲ್ಲಿ ನಡೆಯುವ ಶಕ್ತಿಯ ವರ್ಗಾವಣೆ, ಅಂಗಾಂಗಳ ಮೇಲೆ ಬೀಳುವ ಶಕ್ತಿಯ ಪರಿಮಾಣ, ಜೀವಿಗಳಲ್ಲಿ ನಡೆಯುವ ಚಕ್ರೀಯ ಪ್ರಕ್ರಿಯೆಗಳನ್ನು ಈ ವಿಜ್ಞಾನದ ಶಾಖೆಯಿಂದ ಅರಿಯಲು ಸಾಧ್ಯವಾಗುವುದು. ಜೀವಬಲ ವಿಜ್ಞಾನದಲ್ಲಿ ಇತ್ತೀಚಿನ ಅಧ್ಯಯನಗಳು ವೈದ್ಯಕೀಯ ವಿಜ್ಞಾನಕ್ಕೆ ಆಧಾರವಾಗಿ ನಿಂತು, ವಿವಿಧ ಜೀವ ವೈಜ್ಞಾನಿಕ ಪ್ರಕ್ರಿಯೆಗಳನ್ನು ತಿಳಿಯಲು ಮಾದರಿಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿವೆ. ಇದರಿಂದಾಗಿ ಇದುವರೆಗೆ ಕೇವಲ ಸೈದ್ಧಾಂತಿಕವಾಗಿ ವಿವರಿಸಲಾಗುತ್ತಿದ್ದ ಜೀವಿಯ ಹಲವಾರು ಕ್ರಿಯೆಗಳು, ಶರೀರಕ್ರಿಯಾ ವಿಜ್ಞಾನದ ವಿಷಯಗಳು ಪ್ರಾಯೋಗಿಕ ಅಧ್ಯಯನಕ್ಕೆ ನಿಲುಕಲು ಸಾಧ್ಯವಾಗಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಹೃದಯದ ಸ್ನಾಯುಗಳ ಮೇಲಿನ ಜೀವಬಲವಿಜ್ಞಾನದ ಅಧ್ಯಯನಗಳು ಹೃದಯ ರೋಗಗಳ ಚಿಕಿತ್ಸೆಯಲ್ಲಿ ಹೊಸ ಆಶಯವನ್ನು ಹುಟ್ಟುಹಾಕಿದೆ. (ಎಸ್.ಎಂ.ಜಿ)

**ಜೀವ ಭಾಷಾವಿಜ್ಞಾನ:** ಜೀವ ಭಾಷಾವಿಜ್ಞಾನವೆಂಬುದು ಮಾನವ ಭಾಷೆಯ ಬಗೆಗಿನ ಜೈವಿಕ ಆಧಾರಗಳನ್ನು ಕುರಿತ ಅಧ್ಯಯನ. ಅಂದರೆ ಜೀವ ವೈಜ್ಞಾನಿಕ ದೃಷ್ಟಿಯಿಂದ ನಡೆಸಲಾಗುವ ಭಾಷೆಯ ಅಧ್ಯಯನ; ಮಾನವ ಭಾಷೆ ಹೇಗೆ ರೂಪುದಳೆಯಿತು? ಸಂವಹನದ ಒಂದು ಆದಿಮ ರೂಪದಿಂದ ಅದು ರೂಪುದಳೆಯಿತೆ? ಮಕ್ಕಳಿಗೆ ಭಾಷೆ ಹೇಗೆ ಬರುತ್ತದೆ? ಪರಿಪಕ್ವೋನ್ಮುಖೀ ಪ್ರಕ್ರಿಯೆ ಹಾಗೂ ಭಾಷೆಯ ಉಪಾರ್ಜನೆ–ಇವುಗಳ ನಡುವೆ ಯಾವುದಾದರೂ ಕಾರಣಿಕ ಸಂಬಂಧಗಳಿವೆಯೇ? ಮಾನವ ಮಿದುಳಿನಲ್ಲಿ ಭಾಷೆ ಹೇಗೆ ಸಂಘಟಿತಗೊಳ್ಳುತ್ತದೆ? ಇಂಥ ಪ್ರಶ್ನೆಗಳಿಗೆ ಇದು ಸಂಬಂಧಪಟ್ಟಿದೆ.

ಮಾನವ ಜೀವಿಗಳಲ್ಲಿನ ಭಾಷಿಕವರ್ತನೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟಿರುವ ಜೀವವಿಜ್ಞಾನದ ಎಲ್ಲ ಅಂಶಗಳನ್ನೂ ಈ ಶಿಕ್ಷಣ ಒಳಗೊಂಡಿರುತ್ತದೆ (ಮೀಡರ್ ಮತ್ತು ಮುಯ್‌ಸ್ಕಾನ್ಸ್). ಜೀವ ಭಾಷಾವಿಜ್ಞಾನ ಅನೇಕ ಶಿಕ್ಷಣಗಳ ಕೂಡುಭೂಮಿ. ಜೀವವಿಜ್ಞಾನ, ತಂತ್ರಿಕಾವಿಜ್ಞಾನ, ಜೈವವಾಸಿಕ ವಿಜ್ಞಾನ, ತಂತ್ರಿಕಾ ಮನೋವಿಜ್ಞಾನ ಮತ್ತು ಭಾಷಾವಿಜ್ಞಾನಗಳಂಥ ಅನೇಕ ಶಿಕ್ಷಣವಲಯಗಳಿಗೆ ಸೇರಿದ ಕೂಡುನೆಲೆ ಇದಾಗುವುದರಿಂದ ಇದನ್ನು ಅಂತರ ಶಿಕ್ಷಣ ವಿಜ್ಞಾನವೆಂದು ಕರೆಯುವುದು ಉಚಿತ.

ಭಾಷೆಯ ಹುಟ್ಟು ಅಥವಾ ಉತ್ಪತ್ತಿ ಹಾಗೂ ವ್ಯಕ್ತಿಯಲ್ಲಿನ ಭಾಷಾ ವ್ಯವಸ್ಥೆಯ ಕಾರ್ಯಶೀಲತೆ–ಈ ಎರಡು ಪ್ರಮುಖ ಅಂಶಗಳ ದೃಷ್ಟಿಯಿಂದ ಭಾಷಾವಿಜ್ಞಾನದಲ್ಲಿ ಮುಖ್ಯವಾಗಿ ಜೀವವಿಜ್ಞಾನದ ಅಗತ್ಯ ಏರ್ಪಡುತ್ತದೆ ; ಇವು ಮೂಲತಃ ಜೀವವಿಜ್ಞಾನದ ಪ್ರಕ್ರಿಯೆಗಳು; ಇವುಗಳಲ್ಲಿ ಮೊದಲನೆಯದು ಆಂಗಿಕ ವಿಕಾಸದ ಪರಿಣಾಮ ; ಎರಡನೆಯದು ತಂತ್ರಿಕಾಪೇಶೀಕ್ರಿಯಾ ವಿಜ್ಞಾನದ ಸಮಸ್ಯೆ.

ಇದರ ಸ್ವರೂಪವನ್ನು ವಿವರಿಸುವ ದೃಷ್ಟಿಯಿಂದ ಈ ಕ್ಷೇತ್ರದ' ಕೆಲವು ಸಮಸ್ಯೆಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಸಮಸ್ಯೆಗಳು: I. ಭಾಷೆಯ ಹುಟ್ಟು : ಜೀವಭಾಷಾವಿಜ್ಞಾನದ ದೃಷ್ಟಿಯಿಂದ ಭಾಷೆಯನ್ನು ಹೋಮೋ ಸೇಪಿಯನ್ನುಗಳ ಎರಡನೆಯ ಸಂಕೇತನ ವ್ಯವಸ್ಥೆ ಎಂಬುದಾಗಿ ಪರಿಗಣಿಸಬಹುದು. ಮಾತು ಮತ್ತು ಕೆಲಸದ ಸಂಯುಕ್ತ ಕ್ರಿಯೆಯ ಅಂಗವಾಗಿ ಮಿದುಳು ಮತ್ತು ಅಂಗಗಳು ಪರಿವರ್ತನೆ ಹೊಂದಿದುವು ಎಂಬುದು ಪ್ಯಾವಲೋಫನ ಅಭಿಪ್ರಾಯ. ಹೀಗೆ, ಮಾನವನ ವಿಕಾಸದಲ್ಲಿ ಮಾತು ಬಹುಮಟ್ಟಿಗೆ ನೆರವಾಗಿದೆ. ಭಾಷೆಯ ಹುಟ್ಟಿನ ಬಗೆಗಿನ ಸಿದ್ಧಾಂತವೊಂದರ ಮೌಲ್ಯವನ್ನು ವಿಕಾಸದ ಬಗೆಗಿನ ಸಾಮಾನ್ಯ ಜೀವವೈಜ್ಞಾನಿಕ ಸಿದ್ಧಾಂತದ ದೃಷ್ಟಿಯಿಂದ ಒತ್ತಿಹೇಳಬೇಕಾದ ಅಗತ್ಯವಿಲ್ಲ.

ಪ್ರಾಣಿಗಳಲ್ಲಿನ ಸಂವಹನ ವ್ಯವಸ್ಥೆಯನ್ನು ಹೋಲುವಂಥ ಅತ್ಯಂತ ಆದಿಮ ಸ್ವರೂಪದ ಸಂವಹನ ವ್ಯವಸ್ಥೆಯಿಂದ ಎಂದೋ ಒಮ್ಮೆ ಮಾನವ ಭಾಷೆಯೂ

ರೂಪುದಳೆದಿರಬೇಕೆಂಬುದೇ ಭಾಷೆಯ ಹುಟ್ಟಿನ ಸಂಬಂಧದಲ್ಲಿ ವ್ಯಾಪಕವಾಗಿರುವ ವೈಜ್ಞಾನಿಕ ನಂಬಿಕೆ. ಈ ಸಮಸ್ಯೆಯ ಬಗೆಗೆ ಅಧ್ಯಯನ ನಡೆಸಿರುವ ಜೇನ್ ಗುಡಾಲ್ ಎಂಬ ಬ್ರಿಟಿಷ್ ಜೈವವಾಸಿಕ ವಿಜ್ಞಾನಿ ಚಿಂಪಾಂಜಿಗಳೂ ಅಂಗಚೇಷ್ಟೆ, ಭಂಗಿ, ಮುಖಭಾವ ಹಾಗೂ ಸದ್ದುಗಳಿಂದ ಕೂಡಿರುವ ಜಟಿಲವಾದ ಸಂವಹನ ವ್ಯವಸ್ಥೆಯೊಂದನ್ನು ಹೊಂದಿವೆ ಎಂಬುದಾಗಿ ಘೋಷಿಸಿದ್ದಾಳೆ. ತನ್ನ ದೈನಂದಿನ ಅಂತರಕ್ರಿಯೆಯಲ್ಲಿ ಚಿಂಪಾಂಜಿಗಳಿಗೆ ಸುದ್ದಿಯನ್ನು ತಲುಪಿಸಲು ಸಾಧ್ಯವಾಗಿದ್ದುದಾಗಿ ಆಕೆ ತಿಳಿಸಿದ್ದಾಳೆ. ಗುಡಾಲಳ ಅಭಿಪ್ರಾಯದಲ್ಲಿ ಇದು ಮಾನವನಿಗೂ ಚಿಂಪಾಂಜಿಗಳಿಗೂ ಉಭಯ ಸಾಮಾನ್ಯ ಪೂರ್ವಜನೊಬ್ಬನಿದ್ದನೆಂಬುದನ್ನು ಸೂಚಿಸುತ್ತದೆ. ಚಿಂಪಾಂಜಿಗಳ ವರ್ತನೆಯನ್ನು ಅರ್ಥಮಾಡಿಕೊಂಡಲ್ಲಿ, ಅದು ಶಿಲಾಯುಗದ ನಮ್ಮ ಪೂರ್ವಜರ ವರ್ತನೆಯ ಬಗೆಗೂ ಬೆಳಕು ಚೆಲ್ಲಬಹುದೆಂದು ಹೇಳಿದ್ದಾಳೆ. ಆದರೆ, ಆದಿಮ ಸಂವಹನ ವ್ಯವಸ್ಥೆ ಹಾಗೂ ಮಾನವ ಭಾಷೆ–ಇವುಗಳ ನಡುವೆ ಅಗಾಧ ಕಮರಿಯೊಂದಿದೆ ಎಂಬುದು ಹಲವರ ಅಭಿಪ್ರಾಯ. ಜ್ಞಾನಸಂಚಯ ಅಗಾಧವಾಗಿದ್ದರೂ ಭಾಷೆಯ ಹುಟ್ಟಿನ ಬಗೆಗಿನ ಜೀವವೈಜ್ಞಾನಿಕ ಸಿದ್ಧಾಂತವೊಂದನ್ನು ಮುಂದುವರಿಸುವುದು ವಿದ್ವಾಂಸರಿಗೆ ಇನ್ನೂ ಸಾಧ್ಯವಾಗಿಲ್ಲ.

II. ಭಾಷೆಯ ಉಪಾರ್ಜನೆ : ಮಕ್ಕಳು ಭಾಷೆಯನ್ನು ಹೇಗೆ ಕಲಿಯುತ್ತಾರೆಂಬ ಪರಂಪರಾಗತ ಪ್ರಶ್ನೆಯತ್ತ ತಿರುಗೋಣ. ಮಕ್ಕಳು ಭಾಷೆಯನ್ನು ಕಲಿಯುವ ಬಗೆಗೆ ಜೀವ ಭಾಷಾವಿಜ್ಞಾನಿಗಳ, ಭಾಷಾವಿಜ್ಞಾನಿ ಮತ್ತು ಮನೋವಿಜ್ಞಾನಿಗಳ ಸಿದ್ಧಾಂತಗಳು ಬೇರೆ ಬೇರೆಯಾಗಿವೆ. ದೈಹಿಕ ಪರಿಪಕ್ವತೆ ಬಂದಂತೆ ಮಕ್ಕಳು ಭಾಷೆಯನ್ನು ಕಲಿಯತೊಡಗುತ್ತಾರೆಂಬುದು ಜೀವ ಭಾಷಾವಿಜ್ಞಾನಿಗಳ ದೃಷ್ಟಿಕೋನ. ಮಕ್ಕಳಲ್ಲಿ ದೈಹಿಕ ಪರಿಪಕ್ವತೆ ಮತ್ತು ಭಾಷಾವಿಕಾಸ ಇವುಗಳ ನಡುವೆ ನಿರ್ದಿಷ್ಟವಾದ ಸಂಬಂಧವೊಂದು ಇರಲೇಬೇಕೆಂದು ಅವರ ನಂಬಿಕೆ.

ಭಾಷೆಯನ್ನು ಕಲಿಯುವ ಬಗೆಗಿನ ಮಗುವಿನ ಸಾಮರ್ಥ್ಯ ದೈಹಿಕ ಪರಿಪಕ್ವತೆಯ ಪರಿಣಾಮವೆಂದು ಲೆನ್‌ಬರ್ಗ್ ಅಭಿಪ್ರಾಯಪಡುತ್ತಾರೆ. ಇದಕ್ಕೆ ಅವರು ಕೊಡುವ ಕಾರಣಗಳು ಹೀಗಿವೆ: ೧. ಭಾಷೆಯ ಉಪಾರ್ಜನೆಯ ಮೈಲಿಗಲ್ಲುಗಳು ಸಾಮಾನ್ಯವಾಗಿ ಇತರ ಆರ್ಜನೆಯ ಮೈಲಿಗಲ್ಲುಗಳೊಡನೆ (ಭಂಗಿ, ನಿಲುವು, ಚಲನೆ ಹಾಗೂ ಗತಿ ಸಾಮರಸ್ಯ) ಸಂಬದ್ಧವಾಗಿರುತ್ತವೆ; ೨. ಮಾನಸಿಕ ಹಿನ್ನಡೆಯ ಹಲವು ಬಗೆಗಳಲ್ಲಾಗುವಂತೆ ಪರಿಪಕ್ವನದ ಸಂಪೂರ್ಣ ಗತಿಯೇ ವಿಲಂಬಿತವಾದರೂ ಈ ಏಕಕಾಲೀನತೆ ಬಹುತೇಕ ಉಳಿದುಕೊಂಡು ಬರುತ್ತದೆ; ೩. ದೈಹಿಕ ಪರಿಪಕ್ವತೆಯಲ್ಲಿ ಹಿನ್ನಡೆದಿರುವ ಮಗುವಿಗೆ ತೀವ್ರ ತರಬೇತಿ ನೀಡಿದರೆ ಭಾಷಾವಿಕಾಸದ ಉನ್ನತ ಸ್ತರಗಳನ್ನು ಸಾಧಿಸಬಹುದೆಂಬುದಕ್ಕೆ ಯಾವ ಆಧಾರವೂ ಇಲ್ಲ.

ಒಟ್ಟಿನಲ್ಲಿ, ಭಾಷಾ ಉಪಾರ್ಜನೆಯ ಸಂಧಿಸ್ಥ ಅವಧಿಯೊಂದು ಇರುತ್ತದೆಂಬುದನ್ನು ಜೀವ ಭಾಷಾವಿಜ್ಞಾನಿಗಳು ಒಪ್ಪುತ್ತಾರೆ. ಈ ಸಂಧಿಸ್ಥ ಅವಧಿಯ ಆರಂಭ ಕಾಲದಲ್ಲಿ ಪರಿಪಕ್ವನದ ಕೊರತೆಯಿಂದಾಗಿ ಭಾಷಾ ಉಪಾರ್ಜನೆ ಪರಿಮಿತಿಗೊಳ್ಳುತ್ತದೆ. ಹೊಂದಾಣಿಕೆ ಅಥವಾ ಸಮಾಯೋಜನೆ ನಷ್ಟಗೊಳ್ಳುವುದಕ್ಕೂ ಮಿದುಳಿನ ಪುನಸ್ಸಂಘಟನಾ ಅಸಾಮರ್ಥ್ಯಕ್ಕೂ ಈ ಸಂಧಿಸ್ಥ ಅವಧಿಯ ಕೊನೆಗಾಣುವಿಕೆಗೂ ಸಂಬಂಧವಿರುವಂತೆ ತೋರುತ್ತದೆ. ತಾರುಣ್ಯಾವಸ್ಥೆಯ ಹಂತವನ್ನು ತಲಪುವ ಹೊತ್ತಿಗೆ ಪ್ರಮಸ್ತಿಷ್ಕೀಯ ಸ್ಥಾನೀಕರಣ ದೃಢವಾಗಿ ಏರ್ಪಟ್ಟಿರುತ್ತದೆ.

ಪ್ರತಿಯೊಂದು ನವಜಾತ ಸಾಮಾನ್ಯ ಶಿಶುವಿಗೂ ಭಾಷೆಯ ಅಮೂರ್ತ ರಚನೆಗೆ ಸಂವಾದಿಯಾಗಿರುವಂಥ ಅಂತಸ್ಥ ಮನೋವೃತ್ತಿ ಲಭ್ಯವಾಗಿರುತ್ತದೆಂದು ಜೀವಭಾಷಾವಿಜ್ಞಾನಿಗಳು ನಂಬಿದ್ದಾರೆ. ಮಗು ಆಂತರಿಕವಾಗಿ ಸನ್ನದ್ಧವಾಗಿರುವ ಸಂಗತಿಗಳಿಗೆ ಸೂಕ್ತವಾದಂಥ ಪರಿಸ್ಥಿತಿಗಳನ್ನು ಒದಗಿಸಿದಾಗ, ಆ ಸಂಗತಿಗಳು ಸಿದ್ಧರೂಪದಲ್ಲಿ ಹಾಗೂ ಸಹಜವಾಗಿ ಹೊರಹೊಮ್ಮುತ್ತವೆ. ರೋಮನ್ ಯಾಕಬ್‌ಸನ್ನನ ಅಭಿಪ್ರಾಯದಲ್ಲಿ, ಭಾಷಿಕ ರಚನೆಗಳ ಉತ್ಸರ್ಪಿಣೀ ಕ್ರಮಕ್ಕೆ ಸಂವಾದಿಯಾದ ರೀತಿಯಲ್ಲಿಯೇ ಮಗುವಿನ ಭಾಷಿಕ ಉಪಾರ್ಜನೆಯೂ ಮುನ್ನಡೆಯುತ್ತದೆ. ವಾಕ್–ಭ್ರಂಶೀ ಶಿಶುಗಳ ಭಾಷಾ ವಿಸಂಘಟನೆಯಲ್ಲಿ ಇದರ ವಿಲೋಮ ಕ್ರಮ ಕಾಣುತ್ತದೆ. ಹುಟ್ಟಿನಿಂದ ದತ್ತವಾಗಿರುವ ಭಾಷಾಉಪಾರ್ಜನೆಯ ತಂತ್ರವನ್ನು ಕಂಡುಕೊಳ್ಳುವುದು ಹಾಗೂ ವಿವರಿಸುವುದು ಜೀವ ಭಾಷಾವಿಜ್ಞಾನಿಗಳ ಮುಂದಿರುವ ಕೆಲಸ. ಈ ಅರ್ಥದಲ್ಲಿ ವ್ಯಷ್ಟಿವಿಕಾಸದ ಭಾಷಿಕ ಇತಿಹಾಸದ ಕ್ಷೇತ್ರ ಅಥವಾ ಭಾಷಿಕ ವ್ಯಕ್ತಿ ಇತಿಹಾಸ (ಜೀವ) ಭಾಷಾವಿಜ್ಞಾನದ ಪ್ರಾಕ್–ಕಲ್ಪನೆಗಳಿಗೆ ಒರೆಗಲ್ಲಾಗುತ್ತದೆಂದು ಭಾವಿಸಲಾಗಿದೆ.

III. ಮಾತಿನ ಹಾಗೂ ಮಿದುಳಿನ ರಚನಾ ವಿನ್ಯಾಸ: ಮಾತಿನ ಮಸ್ತಿಷ್ಕೀಯ ಸಂಘಟನೆ ಜೀವ ಭಾಷಾವಿಜ್ಞಾನ ಸಂಶೋಧನೆಯ ಮತ್ತೊಂದು ಪ್ರಮುಖ ಕ್ಷೇತ್ರ. ಮಾತಿನ ಉತ್ಪಾದನೆ ಹಾಗೂ ಗ್ರಹಣ ಕಾರ್ಯಗಳನ್ನು ನಿಯಂತ್ರಿಸುವ ಪ್ರಮಸ್ತಿಷ್ಕ ಕ್ಷೇತ್ರಗಳನ್ನು ಕಂಡುಹಿಡಿಯುವುದೇ ಜೀವಭಾಷಾವಿಜ್ಞಾನಿಯ ಮುಖ್ಯ ಕಾರ್ಯ. ಮಿದುಳಿನ ಕಾರ್ಯವ್ಯಾಪಾರಗಳ ಬಗೆಗಿನ ನಮ್ಮ ಜ್ಞಾನಕ್ಕೆ ಆಧಾರವಾಗಿರುವ ಮೂರು ಆಕರಗಳೆಂದರೆ: ೧. ಪ್ರಾಣಿಗಳ (ಮುಖ್ಯವಾಗಿ ಇಲಿಗಳ) ಪ್ರಾಯೋಗಿಕ ಅಧ್ಯಯನಗಳು; ೨. ಗಾಯಗೊಂಡ ಅಥವಾ ಗೆಡ್ಡೆಗಳನ್ನುಳ್ಳ ರೋಗಿಗಳ ಬಗೆಗಿನ ಆಸ್ಪತ್ರೆ ಅಧ್ಯಯನಗಳು ಅಥವಾ ಚಿಕಿತ್ಸಾಲಯ ಅಧ್ಯಯನಗಳು ೩. ಮಿದುಳಿನಲ್ಲಿನ ಗೆಡ್ಡೆಗಳ ನಿರ್ಮೂಲನಕ್ಕಾಗಿ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಗಿರುವ ರೋಗಿಗಳ ಮಿದುಳನ್ನು ವಿದ್ಯುತ್ತಿನಿಂದ ಚೋದಿಸುವಾಗ ಉಂಟಾಗುವ ಪರಿಣಾಮಗಳ ಬಗೆಗಿನ ಅಧ್ಯಯನಗಳು. ಹಾಗೂ ೪. ಎಂಆರ್‌ಐ ನಂತಹ ತಂತ್ರಗಳನ್ನು ಬಳಸಿ ಕಲಿಕೆಯ ಸಂದರ್ಭದಲ್ಲಿ ಮಿದುಳಿನಲ್ಲಾಗುವ ಪ್ರಕ್ರಿಯೆಗಳ–ಚಟುವಟಿಕೆಗಳನ್ನು ಕಾಣುವ ಅಧ್ಯಯನಗಳು.

ಒಂದು ಶತಮಾನಕ್ಕೂ ಕೊಂಚ ಹಿಂದೆ, ಬ್ರೋಕನೆಂಬ ವೈದ್ಯ ಮಿದುಳಿನ ಎಡ ಅರ್ಧಗೋಳದಲ್ಲಿ ಭಾಷೆಯ ಪಾರ್ಶ್ವೀಕರಣವನ್ನು ಗುರುತಿಸಬಹುದೆಂದು ವರದಿಮಾಡಿದ. ಎಡ ಅರ್ಧಗೋಳದ ಮುಂಭಾಗದ ಮೂರನೆಯ ಪದರದಲ್ಲಿ ಸೀಳಿಕೆಗಳಾಗಿದ್ದಿದ್ದರಿಂದ, ಪ್ರಮಸ್ತಿಷ್ಕದ ಈ ಭಾಗ ಉಚ್ಚರಿತ ವಾಣಿಯನ್ನು ಅಥವಾ ಮಾತಿನ ಕ್ರಿಯಾತ್ಮಕ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆಂಬ ತೀರ್ಮಾನದತ್ತ ಧಾವಿಸಿದ. ಆದರೆ ಅನಂತರದ ಸಂಶೋಧನೆಗಳು ಈತನ ಈ ನಿಲುವನ್ನು ಸಮರ್ಥಿಸಲಿಲ್ಲ. ಎಡ ಪ್ರಮಸ್ತಿಷ್ಕದಲ್ಲೆ ಭಾಷಿಕ ಕಾರ್ಯ ಆಂಶಿಕವಾಗಿಯಾದರೂ ಕೇಂದ್ರಿತವಾಗಿರುತ್ತದೆಂಬುದು ತಂತ್ರಿಕಾ ವಿಜ್ಞಾನಿಗಳಲ್ಲಿ ಮತ್ತು ತಂತ್ರಿಕಾ ಮನೋವಿಜ್ಞಾನಿಗಳಲ್ಲಿ ಪ್ರಚಲಿತವಾಗಿರುವ ನಂಬಿಕೆ. ವ್ಯಕ್ತಿ ಎಡಚ ಅಥವಾ ಬಲಚ ಹೇಗಾದರೂ ಇರಲಿ, ಸಾಮಾನ್ಯವಾಗಿ ಎಡ ಅರ್ಧ ಗೋಳವೇ ಮಾತಿಗೆ ಮೂಲಭೂತವಾಗಿ ಕಾರಣವಾಗಿರುವಂಥ ಅಂಗಗಳಲ್ಲಿ ಒಂದಾಗಿರುತ್ತದೆ. ಪ್ರಾಸ್ತಾವಿಕ ಮಾತು ಅಥವಾ ಅಭಿಧಾನಾತ್ಮಕವಾದ ಅಥವಾ ಪ್ರಸ್ತಾಪರೂಪವಾದ ಮಾತು ಎಡ ಅರ್ಧಗೋಳದಲ್ಲಿ ಪಾರ್ಶ್ವೀಕೃತವಾಗಿರುವಲ್ಲಿ ಭಾಷೆಯ ಸ್ವಯಂಚಾಲಿತ ಉಪಯೋಗಕ್ಕೆ ಹಾಗೂ ಮಾತಿನ ಮಾಧುರ್ಯಕ್ಕೆ ಕಾರಣವಾಗುವ ಅಂಶಗಳು ಮಿದುಳಿನಲ್ಲಿ ದ್ವಿಪಾರ್ಶ್ವಿಕವಾಗಿ ಕೇಂದ್ರೀಕೃತವಾಗಿರುತ್ತದೆಂದು ವಾನ್ ಲ್ಯಾಂಕರ್ ದಯಾನಾ ವರದಿ ಮಾಡಿದ್ದಾರೆ. ಮಾತಿನ ಮಸ್ತಿಷ್ಕೀಯ ಸಂಘಟನೆಯ ಬಗೆಗೆ ಹೆಚ್ಚಿನ ವಿವರಗಳು ಎ.ಆರ್.ಲೂರಿಯಾ, ಪೆನ್‌ಫೀಲ್ಡ್ ಮತ್ತು ರಾಬರ್ಟ್ಸ್, ಹಾಗೂ ಗೆಸ್ಚ್‌ವಿಂಡ್ ಅವರ ಗ್ರಂಥಗಳಲ್ಲಿವೆ. ಪ್ರಮಸ್ತಿಷ್ಕವೂ ಪ್ರಮಸ್ತಿಷ್ಕದ ಭಾಗಗಳೂ ಮಾತಿನ ಉತ್ಪಾದನೆಯ ನೈಪುಣ್ಯವನ್ನುಳ್ಳ ರಚನೆಗಳನ್ನು ಒಳಗೊಂಡಿವೆ. ಇಷ್ಟಾಗಿಯೂ ಈ ರಚನೆಗಳ ಸ್ವರೂಪವಾಗಲೀ ಭಾಷಿಕ ಕಾರ್ಯಗಳ ವಿವಿಧ ಮುಖಗಳಿಗೂ ಅವಕ್ಕೂ ಇರುವ ಸಂಬಂಧವೇನು ಎಂಬುದಾಗಲೀ ಇನ್ನೂ ನಿಚ್ಚಳವಾಗಿ ತಿಳಿದು ಬಂದಿಲ್ಲ.

ಜೀವ ಭಾಷಾವಿಜ್ಞಾನದ ವಿಭಾಗಗಳು: ಜೀವ ಭಾಷಾವಿಜ್ಞಾನದ ಸಮಸ್ಯೆಗಳನ್ನು ಎದುರಿಸುವುದಕ್ಕೆ ಅಗತ್ಯವಾದ ಅನೇಕ ವಿಧಾನಗಳು ಜೀವ ಭಾಷಾವಿಜ್ಞಾನಿಗಳಿಗೆ ಲಭ್ಯವಾಗಿವೆ. ಈ ಕ್ಷೇತ್ರಗಳಲ್ಲಿ ವ್ಯವಹರಿಸುವಾಗ ಬಳಸುವ ಕೆಲವು ವಿಧಾನಗಳನ್ನು ವಿವರಿಸಲು ಪ್ರಯತ್ನಿಸಬಹುದು.

i. ಭಾಷೆಯ ಹುಟ್ಟಿನ ಬಗೆಗಿನ ಸಮಸ್ಯೆಗಳೊಡನೆ ವ್ಯವಹರಿಸುವಾಗ ಜೀವಭಾಷಾವಿಜ್ಞಾನಿ ಜೈವವಾಸಿಕ ವಿಜ್ಞಾನಿಗಳು, ಅಂಗರಚನಾವಿಜ್ಞಾನಿಗಳು ಹಾಗೂ ಭಾಷಾವಿಜ್ಞಾನಿಗಳ ನೆರವನ್ನು ಪಡೆದುಕೊಳ್ಳುತ್ತಾನೆ.

ಜೈವವಾಸಿಕ ವಿಜ್ಞಾನಿಗಳು ವರ್ತನ ವಿಧಾನವನ್ನು ಅಭ್ಯಾಸ ಮಾಡುತ್ತಾರೆ. ಅವರ ವಿವರಣೆಗಳು ಪ್ರಾಣಿಗಳ ಸಂವಹನ ವ್ಯವಸ್ಥೆಯ ಬಗೆಗಿನ ವಿವರಗಳನ್ನೂ ಒಳಗೊಂಡಿರುತ್ತವೆ. ಮಾನವಭಾಷೆ ಸಂವಹನ ವ್ಯವಸ್ಥೆಯ ಆದಿಮ ರೂಪವೊಂದರಿಂದ ಉದ್ಭವವಾದದ್ದು ಎಂದು ವಿಕಾಸವಾದಿಗಳು ನಂಬಿರುವುದರಿಂದ ಜೈವವಾಸಿಕ ವಿಜ್ಞಾನಿಗಳು ಕೊಡುವ ಪ್ರಾಣಿ ಸಂವಹನ ವ್ಯವಸ್ಥೆಯ ಬಗೆಗಿನ ವಿವರಗಳು ಅವರಿಗೆ ತುಂಬ ಬೆಲೆಯುಳ್ಳವಾಗಿವೆ. ಇಷ್ಟಾಗಿಯೂ ಅದು ಸುಲಭದ ಕೆಲಸವೇನಲ್ಲ. ಅದು ಅತಿದೀರ್ಘವೂ ಕಾಲಾಪಹಾರಕವೂ ಆದ ಕ್ರಮ. ಉದಾಹರಣೆಗೆ, ಬ್ರಿಟಿಷ್ ಜೈವವಾಸಿಕ ವಿಜ್ಞಾನಿ ಗೂಡಾಲಳಿಗೆ ಕೀನ್ಯದಲ್ಲಿನ ಸ್ವಾಭಾವಿಕ ನೆಲೆಯಲ್ಲಿ ಚಿಂಪಾಂಜಿಗಳ ವರ್ತನ ಸ್ವರೂಪಗಳ ಅಧ್ಯಯನ ಮಾಡಲು ಹದಿನೈದು ವರ್ಷಗಳೇ ಬೇಕಾದುವು. ಮಾನವರ ಮತ್ತು ವಾನರ ಗಣದ (ಪ್ರೈಮೇಟುಗಳು) ಪ್ರಾಣಿಗಳ ತೌಲನಿಕ ಅಧ್ಯಯನದ ಮೂಲಕ, ಅಂಗರಚನಾವಿಜ್ಞಾನಿ ಅಮೂಲ್ಯವಾದ ಮಾಹಿತಿಯನ್ನು ಒದಗಿಸಬಲ್ಲ. ವಾನರ ಗಣದ ಪ್ರಾಣಿಗಳ ಮತ್ತು ಮಾನವರ ಸಂವಹನ ವ್ಯವಸ್ಥೆಗಳಲ್ಲಿನ ವ್ಯತ್ಯಾಸಗಳನ್ನು ವಿವರಿಸುವಲ್ಲಿ ಮಾನವರ ಮತ್ತು ವಾನರ ಗಣದ ಪ್ರಾಣಿಗಳ ರಚನೆಯಲ್ಲಿನ ವೈಷಮ್ಯಗಳ ಬಗೆಗಿನ ವಿವರಣೆಗಳು ಜೀವಭಾಷಾವಿಜ್ಞಾನಿಗಳಿಗೆ ನೆರವಾಗುತ್ತವೆ.

ಮಾನವರ ಮತ್ತು ಪ್ರಾಣಿಗಳ ಸಂವಹನ ವ್ಯವಸ್ಥೆಗಳ ಬಗೆಗಿನ ತೌಲನಿಕ ಅಧ್ಯಯನಕ್ಕೆ ಭಾಷೆಯ ಬಗೆಗಿನ ಭಾಷಾವಿಜ್ಞಾನಿಗಳ ವಿಶ್ಲೇಷಣೆ–ವಿವರಣೆಗಳೂ ಬಹುವಾಗಿ ಉಪಯೋಗಕ್ಕೆ ಬರುತ್ತವೆ. ಹೀಗೆ ಭಾಷೆಯ ವಿಕಾಸಾತ್ಮಕ ಇತಿಹಾಸವನ್ನು ಅರಸುವಲ್ಲಿ ಜೀವಭಾಷಾವಿಜ್ಞಾನಿಗಳು ಜೈವವಾಸಿಕ ವಿಜ್ಞಾನಿ, ಅಂಗರಚನಾ ವಿಜ್ಞಾನಿ ಹಾಗೂ

ಭಾಷಾವಿಜ್ಞಾನಿಗಳತ್ತ ನೆರವಿಗಾಗಿ ಕೈಚಾಚುತ್ತಾರೆ. ಜೀವ ಭಾಷಾವಿಜ್ಞಾನದ ವಿಧಾನಗಳೂ ಏಕೆ ವಿಜಾತೀಯ ಸ್ವರೂಪದವಾಗಿವೆ ಎಂಬುದನ್ನು ಇದು ವಿವರಿಸುತ್ತದೆ.

ii. ವ್ಯಷ್ಟಿ ವಿಕಾಸದ ಭಾಷಿಕ ಇತಿಹಾಸದ ಸಮಸ್ಯಾಕ್ಷೇತ್ರದಲ್ಲಿ ಬಹುವಾಗಿ ಬಳಸುವ ವಿಧಾನವೆಂದರೆ ಉದ್ಭವ ಜ್ಞಾನಸಿದ್ಧಾಂತ. ತಾತ್ವಿಕ ದೃಷ್ಟಿಯಿಂದ ಜ್ಞಾನವನ್ನು ಅಧ್ಯಯನ ಮಾಡುವುದೇ ಜ್ಞಾನಸಿದ್ಧಾಂತದ ಉದ್ದೇಶ. ಜೋನ್ ಪಿಯಾಗೆಯ ಹೆಸರಿನೊಡನೆ ಲಗತ್ತಾಗಿರುವ ಉದ್ಭವ ಜ್ಞಾನಸಿದ್ಧಾಂತ ಬುದ್ಧಿಮತ್ತೆಯ ವಿಕಾಸದ ಅಧ್ಯಯನಕ್ಕೆ ಸಂಬಂಧಪಟ್ಟಿದೆ. ಇಲ್ಲಿ ಬಳಸಲಾಗಿರುವ ಉದ್ಭವ ಶಬ್ದ, ಆರಂಭದಿಂದ ಹಿಡಿದು ಪರಪಕ್ವಾವಸ್ಥೆಯವರೆಗಿನ ಬೌದ್ಧಿಕ ರಚನೆಗಳ ವಿಕಾಸವನ್ನು ಸೂಚಿಸುತ್ತದೆ. ಇಲ್ಲಿಯೂ ಏನನ್ನು ಉಪಾರ್ಜಿಸಲಾಗುತ್ತದೆಂಬುದರ ಬಗೆಗಿನ ಭಾಷಾವಿಜ್ಞಾನಿಯ ವಿವರಣೆ ಹಾಗೂ ಭಾಷೆಯನ್ನು ಹೇಗೆ ಉಪಾರ್ಜಿಸಲಾಗುತ್ತದೆಂಬುದರ ಬಗೆಗಿನ ಮನೋವಿಜ್ಞಾನಿಯ ವಿವರಣೆ ದೈಹಿಕ ಪರಿಪಕ್ವತೆಯ ಮತ್ತು ಭಾಷಾ-ಉಪಾರ್ಜನೆಯ ವಿವಿಧ ಹಂತಗಳ ನಡುವಣ ಪರಸ್ಪರ ಸಂಬಂಧವನ್ನು ವಿವರಿಸುವಲ್ಲಿ ಭಾಷಾವಿಜ್ಞಾನಿಗೆ ನೆರವಾಗುತ್ತವೆ.

iii. ಭಾಷೆಯ ಮಸ್ತಿಷ್ಕೀಯ ಸಂಘಟನೆಯ ಬಗೆಗೆ ಮಾಹಿತಿಯನ್ನೊದಗಿಸುವ ಮುಖ್ಯ ಆಕಾರವೆಂದರೆ ವಾಕ್‌ಭ್ರಂಶದ ಹಾಗೂ ವಿಲಂಬಿತ ಭಾಷಾ ವಿಕಾಸದಂಥ ಭಾಷಾ ಕೊರತೆಗಳ ಬಗೆಗಿನ ಪರಿಶೋಧನೆಗಳು. ವಾಕ್-ವಿಧಾನಶಾಸ್ತ್ರಜ್ಞರ ಪ್ರಕಾರ ವಾಕ್-ಭ್ರಂಶ ಮಿದುಳಿನ ವಾಕ್-ಕ್ಷೇತ್ರಗಳಿಗೆ ಉಂಟಾದ ಅಪಾಯ ಅಥವಾ ಪೆಟ್ಟಿನಿಂದ ಉಂಟಾಗುವ ಒಂದು ಬಗೆಯ ಭಾಷಾವೈಕಲ್ಯ.

ಭಾಷಾವೈಕಲ್ಯಗಳ ಬಗೆಗಿನ ಪರಿಶೋಧಗಳನ್ನು ಈ ಕೆಳಗೆ ಕಾಣಿಸಿರುವಂತೆ ವರ್ಗೀಕರಿಸಬಹುದು : (ಅ) ಚಿಕಿತ್ಸಾಲಯ ನೈದಾನಿಕ ಕ್ರಮದಲ್ಲಿ ವಯಸ್ಸಾದ ವ್ಯಕ್ತಿಗಳ ಮಸ್ತಿಷ್ಕ-ವಾಹಿಕೆಗಳ ಅಪಘಾತದ ಪರಿಣಾಮವನ್ನು ಹಾಗೂ ಮಧ್ಯವಯಸ್ಸಿನ ವ್ಯಕ್ತಿಗಳಲ್ಲಿನ ಮಸ್ತಿಷ್ಕ ರೋಗದ ಮತ್ತು ಅಭಿಘಾತದ ಪರಿಣಾಮಗಳನ್ನು ಅಭ್ಯಾಸ ಮಾಡಲಾಗುತ್ತದೆ. ಇಲ್ಲಿ ಬಳಸಲಾಗುವ ತಂತ್ರಗಳೆಂದರೆ ಅನುಸಾಧನ ಪರೀಕ್ಷೆಗಳು ಹಾಗೂ ಮರಣೋತ್ತರ ನೈದಾನಿಕ ಪರಿಶೋಧನೆಗಳು. (ಆ) ಚಿಕಿತ್ಸಾಲಯ-ಪ್ರಾಯೋಗಿಕ ಕ್ರಮದಲ್ಲಿ ಶಸ್ತ್ರಚಿಕಿತ್ಸಾರೋಗಿಗಳನ್ನು ಬಳಸಿಕೊಳ್ಳಲಾಗುತ್ತದೆ. ಶಸ್ತ್ರಕ್ರಿಯಾಪೂರ್ವದಲ್ಲಿ ಶಸ್ತ್ರಕ್ರಿಯೆಯ ಹಾಗೂ ಶಸ್ತ್ರಕ್ರಿಯೆಯ ಅನಂತರ ರೋಗಿಗಳನ್ನು ಅಭ್ಯಸಿಸಲಾಗುತ್ತದೆ. ಔಷಧಶಾಸ್ತ್ರೀಯ ವಾಕ್-ರೋಧ ಪ್ರಮಸ್ತಿಷ್ಕ ಚೋದನೆ ಹಾಗೂ ಪ್ರಮಸ್ತಿಷ್ಕ ಉಚ್ಛೇದನದ ತರುವಾಯ ವಾಕ್-ವರ್ತನೆಯ ಅವಲೋಕನ-ಇವು ಇಲ್ಲಿ ಬಳಸಲಾಗುವ ತಂತ್ರಗಳು. (ಇ) ಚಿಂತನಾತ್ಮಕ ಅಥವಾ ಸೈದ್ಧಾಂತಿಕ ಕ್ರಮ. ಉದಾಹರಣೆಗೆ ಉಪಲಬ್ಧ ಸಾಹಿತ್ಯದಲ್ಲಿನ ಪ್ರಸಂಗ-ವರದಿಗಳನ್ನು ಶೋಧಿಸಲಾಗುತ್ತದೆ. ಇತರ ಪರಿಶೋಧಕರು ಒದಗಿಸಿದ ದತ್ತಾಂಶಗಳ ಸಾಂಖ್ಯಿಕ ವಿಶ್ಲೇಷಣೆಯೇ ಇಲ್ಲಿ ಬಳಸಲಾಗುವ ತಂತ್ರ. (ಈ) ಪ್ರಯೋಗ ವಿಷಯ ಕ್ರಮದಲ್ಲಿ ಸಾಮಾನ್ಯ ಭಾಷಾವಿಕಾಸವನ್ನು ಸಾಧಿಸಲಾರದೆ ಹೋದ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಪೂರ್ವನಿರ್ಧಾರಿತ ವಿಧಾನಗಳನ್ನು ಬಳಸಿ ತೀವ್ರ ತರಬೇತಿಯನ್ನು ಕೊಡುವುದು ಹಾಗೂ ಸಾಧಿಸಲಾದ ಸುಧಾರಣೆಗಳನ್ನು ಗಮನಿಸುವುದು-ಇವು ಇಲ್ಲಿಯ ತಂತ್ರಗಳು.

ಭಾಷಾವಿಜ್ಞಾನದ ಬಗೆಗಿನ ಈ ಕಿರುಚಿತ್ರ ಭಾಷಾವಿಜ್ಞಾನದ ಸಮಸ್ಯೆಗಳ ಸಮಗ್ರ ಕ್ಷೇತ್ರವನ್ನು ತನ್ನ ಪರಿಧಿಯಲ್ಲಿ ಒಳಗೂಡಿಸಿಕೊಂಡಿಲ್ಲ. ಆದರೆ, ಇಲ್ಲಿ ಚರ್ಚಿಸಲಾಗಿರುವ ಸಮಸ್ಯೆಗಳು ಈ ಶಿಕ್ಷಣ ಕೇಂದ್ರಭೂತ ಸಮಸ್ಯೆಗಳೆಂಬುದರಲ್ಲಿ ಅನುಮಾನವಿಲ್ಲ. ಜೀವವಿಜ್ಞಾನಿಗಳ, ಭಾಷಾವಿಜ್ಞಾನಿಗಳ, ತಾಂತ್ರಿಕಾ ಮನೋವಿಜ್ಞಾನಿಗಳ, ಜೈವವಾಸಿಕವಿಜ್ಞಾನಿಗಳ ಮತ್ತು ವಿಕಾಸ ಮನೋವಿಜ್ಞಾನಿಗಳ ಸಹ ಪ್ರಯತ್ನದಿಂದ ಈ ಕಿರಿಯ ಅಂತರ ಶಿಕ್ಷಣ ವಿಜ್ಞಾನ ಭಾಷೆಯ ಬಗೆಗಿನ ಜೀವವೈಜ್ಞಾನಿಕ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಒದಗಿಸುತ್ತದೆಂದು ನಂಬಲಾಗಿದೆ.

(ವಿ.ಬಿ.ಎಸ್;ಹೆಚ್.ಎಸ್.ಎ)

**ಜೀವ ಹವಾವಿಜ್ಞಾನ:** ನೈಸರ್ಗಿಕ ವಾತಾವರಣದ ಹವಾ ಪರಿಸ್ಥಿತಿಗಳಿಂದ ಜೀವಿಗಳಲ್ಲಿ ಉಂಟಾಗುವ ಪರಿಣಾಮದ ವ್ಯಾಸಂಗ (ಬಯೋಕ್ಲೈಮೆಟಾಲಜಿ). ಈ ಪರಿಣಾಮ ವಾತಾವರಣದ ಶೈತ್ಯೋಷ್ಣಗಳಿಂದ ಆಗುವ ಪರಿಣಾಮಗಳಂತೆ ಪ್ರತ್ಯಕ್ಷವಾಗಿರಬಹುದು.; ಇಲ್ಲವೇ ಪರೋಕ್ಷವಾಗಿರಬಹುದು. ವಾತಾವರಣ ಪರಿಸ್ಥಿತಿಯಿಂದ ಆಹಾರೋತ್ಪನ್ನಗಳು ವ್ಯತ್ಯಾಸ ಹೊಂದಿ ಅವುಗಳಿಂದ ಆಗುವ ಪರಿಣಾಮಗಳಂತೆ ಪರೋಕ್ಷ ಪರಿಣಾಮಗಳ ವ್ಯಾಪ್ತಿ ಬಹುವಿಸ್ತಾರ ಹಾಗೂ ಅನಿರ್ದಿಷ್ಟ. ಪ್ರತ್ಯಕ್ಷ ಪರಿಣಾಮಗಳಿಗೆ ಕಾರಣವಾದುವು ಬೆಳಕು, ವಾಯು, ಉಷ್ಣತೆ ಎಂದು ವಿಂಗಡಿಸಿಕೊಂಡು ಜೀವಹವಾವಿಜ್ಞಾನವನ್ನು ವ್ಯಾಸಂಗಿಸಲಾಗಿದೆ.

ಬೆಳಕು : ಬಿಸಿಲಿಗೆ ಮೈ ಒಡ್ಡುವುದರಿಂದ ಚರ್ಮ ಕಪ್ಪಾಗುತ್ತದೆ. ಉಷ್ಣವಲಯದ ಜನ ಕಪ್ಪಾಗಿರುವುದಕ್ಕೂ ಬೇರೆ ವಲಯದ ಜನ ಅಷ್ಟು ಕಪ್ಪಾಗಿಲ್ಲದಿರುವುದಕ್ಕೂ ಇದು ಮುಖ್ಯಕಾರಣ. ಚರ್ಮದ ಬಣ್ಣವನ್ನು ಕಂದಿಸಲು ಅನೇಕರು ಬಿಸಿಲಿನ ಸ್ನಾನದ ಏರ್ಪಾಡನ್ನು ಇಟ್ಟುಕೊಂಡಿರುತ್ತಾರೆ. ಬಿಸಿಲು ಕಡಿಮೆ ಇರುವ ಸ್ಥಳಗಳಿಂದ ಇದೇ ಕಾರಣಕ್ಕಾಗಿ ಉಷ್ಣವಲಯ ಪ್ರದೇಶಗಳಿಗೆ ಜನ ವಲಸೆ ಹೋಗುವುದೂ ಉಂಟು. ಬಿಸಿಲಿಗೆ ಗುರಿಯಾದ ತರುಣದಲ್ಲೇ ಕಪ್ಪು ಹುಟ್ಟಬಹುದು. ಇಲ್ಲವೆ ತಡವಾಗಿ ಕಪ್ಪಾಗಬಹುದು. ಬಿಸಿಲಿನಲ್ಲಿನ ಕೆಲವು ಅತಿನೇರಳೆ ಕಿರಣಗಳು ವಿಷಾಣುಗಳಿಗೆ ಮಾರಕ. ಇಂಥ ಕಿರಣಗಳು ದೂಳಿಲ್ಲದ ಎತ್ತರ ಪ್ರದೇಶಗಳಲ್ಲಿನ ಎಳೆಯ ಬಿಸಿಲಿನಲ್ಲಿ ಹೆಚ್ಚು. ಬಿಸಿಲಿನ ಅತಿನೇರಿಳೆ ಕಿರಣಗಳು ಪ್ರಾಣಿಜನ್ಯ ಮತ್ತು ಸಸ್ಯಜನ್ಯ ಆಹಾರಗಳಲ್ಲಿನ ಎರ್ಗೊಸ್ಟಿರಾಲ್ ಎಂಬ ವಸ್ತುವಿನ ಮೇಲೆ ಪ್ರಭಾವಿಸಿ ಅದನ್ನು ಜೀವಸತ್ತ್ವ D ಯನ್ನಾಗಿ ಪರಿವರ್ತಿಸಬಲ್ಲವು. ಮಾನವ ಚರ್ಮದಲ್ಲಿನ ಎರ್ಗೊಸ್ಟಿರಾಲಿನ ಮೇಲೂ ಹೀಗೆಯೇ ಬಿಸಿಲಿಗೆ ಸಾಕಷ್ಟು ಗುರಿಯಾಗುವವರಲ್ಲಿ ಜೀವಸತ್ತ್ವ D ಯ ಅಭಾವ ಅಪರೂಪ. ದೂಳು, ಹೊಗೆ, ಮಂಜು ಕವಿದಿರುವ ಕಡೆ ಮತ್ತು ಬಿಸಿಲು ಅಪರೂಪವಾಗಿರುವ ಕಡೆ ಮಾನವ ಚರ್ಮದಲ್ಲಿ ಜೀವಸತ್ತ್ವ D ಉತ್ಪತ್ತಿಯಾಗುವುದಿರಲಿ, ಆಹಾರದಲ್ಲೂ ಅದು ಕಡಿಮೆ ಪ್ರಮಾಣದಲ್ಲಿರುತ್ತದೆ. ಇದರಿಂದ ಹಕ್ಕಿ ಕಡಮ (ರಿಕೆಟ್ಸ್) ಮುಂತಾದ ರೋಗಗಳು ಇಲ್ಲಿಯ ವಾಸಿಗಳಲ್ಲಿ ಕಾಣಬರುತ್ತವೆ. ಗಾಜಿನೊಳಗೆ ತೂರಿ ಬರುವ ಬಿಸಿಲಿನಲ್ಲಿ ಅತಿನೇರಳೆ ಕಿರಣ'ಗಳಿರುವುದಿಲ್ಲ ಎನ್ನುವುದನ್ನು ಗ್ರಹಿಸಬೇಕಾಗಿದೆ. ಬಿಸಿಲಿನಿಂದ ಈ ವಿಧವಾದ ಅನುಕೂಲತೆಗಳಿವೆ ಎಂದು ಅನೇಕರು ಬಿಸಿಲಿನ ಸ್ನಾನದ ಗೀಳನ್ನು ಹಚ್ಚಿಕೊಳ್ಳುವುದೂ ಉಂಟು. ಅದರೆ ಬಿಸಿಲಿಗೆ ಮೈ ಒಡ್ಡಿದಾಗ ಮೈಮೇಲೆ ಬೊಕ್ಕೆಗಳೇಳುವುದು, ಚರ್ಮ ಸೀದು ಸುಲಿದು ಹೋಗಿ ವ್ರಣವಾಗುವುದೂ ಬಹುಜನಕ್ಕೆ ತಿಳಿಯದು. ಬಿಸಿಲಿನಿಂದ ಚರ್ಮದಲ್ಲಿ ಹಿಸ್ಟಮಿನ್ ಬಿಡುಗಡೆಯಾಗುವುದು ಈ ಪರಿಣಾಮಗಳಿಗೆ ಕಾರಣವೆನ್ನಲಾಗಿದೆ. ಚರ್ಮದಲ್ಲಿ ಕಪ್ಪು ಹುಟ್ಟಿಸಲು ಬಿಸಿಲಿನ ಸ್ನಾನ ಮಾಡುವವರಲ್ಲಿ ಅನೇಕರು ಅಜ್ಞಾನದಿಂದ, ಎಚ್ಚರಿಕೆ ಸಾಲದುದರಿಂದ, ಇಂಥ ಪರಿಣಾಮಗಳಿಗೆ ಈಡಾಗುತ್ತಾರೆ. ಬಿಸಿಲಿನಿಂದ ಚರ್ಮದಲ್ಲಿ ಏಡಿಗಂತಿ ಉಂಟಾಗುವ ಸಾಧ್ಯತೆ ಇದೆ. ಅನೇಕರ ಮುಖದ ಚರ್ಮದ ಏಡಿಗಂತಿಗಳು ಅವರು ಅತಿ ಬಿಸಿಲಿಗೆ ಗುರಿಯಾಗಿದ್ದುದರ ಪರಿಣಾಮ.

ಬಿಸಿಲು ನೇರವಾಗಿ ಕಣ್ಣಿನೊಳಗೆ ಹಾಯುವುದು ಅಪರೂಪ. ಕಣ್ಣನ್ನು ಹೊಗುವುದು ಸಾಮಾನ್ಯವಾಗಿ ವಸ್ತುಗಳಿಂದ ಪ್ರತಿಫಲಿಸದ ಬೆಳಕಿನ ಕಿರಣಗಳೇ, ಈ ಕಾರಣದಿಂದ ಕಣ್ಣು ಕ್ಷೇಮವಾಗಿದೆ. ಇಲ್ಲದಿದ್ದರೆ ದೃಷ್ಟಿನಾಶವಾಗುವ ಸಂಭವ ಉಂಟು. ಪ್ರತಿಫಲಿಸಿದ ಕಿರಣಗಳಾದರೂ ನೀರು, ಅರಳೆ, ಮಂಜು (ಸ್ನೊ), ಬರ್ಫ, ಬಿಳಿಮೋಡ, ಬಿಳಿ ಮರಳು, ಲೋಹವಸ್ತುಗಳ ಮೇಲ್ಮೈ ಇವುಗಳಿಂದ ಬಂದಂಥವು ದೃಷ್ಟಿಗೆ ಆಪಾಯಕರವೇ. ಕಪ್ಪು ಕನ್ನಡಕವನ್ನು ಧರಿಸುವುದರಿಂದ ಈ ಆಪಾಯಗಳಿಂದ ರಕ್ಷಿಸಿಕೊಳ್ಳಬಹುದು.

ಅತ್ಯುನ್ನತ ವಲಯದ ಕಾಸ್ಮಿಕ್ ವಿಕಿರಣತೆ, ವಾತಾವರಣದಲ್ಲಿ ಮಾನವೀಕೃತ ಪರಮಾಣು ವಿಕಿರಣತೆ ಇವುಗಳಿಂದ ದೇಹದಲ್ಲಿ ಅಯಾನೀಕರಣ (ಅಯೊನೈಸೇಷನ್) ಉಂಟಾಗಿ ನಾನಾ ತೊಂದರೆಗಳಾಗುವುದನ್ನು ಗಮನದಲ್ಲಿಟ್ಟುಕೊಳ್ಳಬಹುದು. ದಿನದಲ್ಲಿ ಹಗಲು ಪ್ರಮಾಣ ಅನೇಕ ಜೀವಿಗಳ ಸಂತಾನೋತ್ಪಾದನ ಕಾಲನಿರ್ಣಯ ಮಾಡುತ್ತದೆಂದು ಪ್ರಯೋಗಗಳಿಂದ ನಿರ್ಧರಿಸಲಾಗಿದೆ.

ವಾಯು : ವಾಯುವಿನಲ್ಲಿ ಆಮ್ಲಜನಕದ ಅಂಶಿಕ ಒತ್ತಡ (ಪಾರ್ಷಿಯಲ್ ಪ್ರೆಷರ್) ಜಲಾಂಶಗಳು ಗಮನಿಸತಕ್ಕವು. ಉನ್ನತ ಪ್ರದೇಶಗಳಲ್ಲಿ ವಾಯುವಿನ ಒತ್ತಡ ಕಡಿಮೆ. ಅದರಿಂದಾಗಿ ಆಮ್ಲಜನಕ ಒತ್ತಡವೂ ಕಡಿಮೆಯಾಗಿರುತ್ತದೆ. ಸಮುದ್ರಮಟ್ಟಕ್ಕಿಂತ ೩೦೦೦ ಮೀಟರುಗಳ ಮೇಲಿನ ಸ್ಥಳಗಳಲ್ಲಿ ಇಂಥ ಕಡಿಮೆ ಒತ್ತಡದಿಂದ ದೇಹಕ್ಕೆ ಸಾಕಷ್ಟು ಆಮ್ಲಜನಕ ದೊರೆಯದೆ ಅದರ ಕೊರತೆ ಉಂಟಾಗಿ ಮಲೆಬೇನೆ (ಮೌಂಟನ್ ಸಿಕ್‌ನೆಸ್) ಕಾಣಿಸಿಕೊಳ್ಳುತ್ತದೆ. ಗುಂಡಿಗೆ ಶ್ವಾಸಕ್ರಮಗಳ ದರ ಹೆಚ್ಚುವುದು, ಜೀರ್ಣಶಕ್ತಿ ಕುಂದಿ ವಾಕರಿಕೆ ವಮನಗಳಾಗುವುದು, ಶ್ರಮಸಹಿಷ್ಣತೆ ಬಹುವಾಗಿ ತಗ್ಗುವುದು, ಚಿತ್ತಚಾಂಚಲ್ಯ, ಮತಿಭ್ರಮಣೆ-ಇವೆಲ್ಲ ಮಲೆಬೇನೆಯ ಲಕ್ಷಣಗಳು. ಆದರೆ ಬಹುಕಾಲ ಕಡಿಮೆ ಒತ್ತಡ ಉಳ್ಳ ಪ್ರದೇಶದಲ್ಲಿ ಇದ್ದರೆ ಜೀವಿಗಳು ಆ ಪರಿಸ್ಥಿತಿಗೆ ಒಗ್ಗಿಕೊಂಡು ಆರೋಗ್ಯ ಸ್ಥಿತಿಯಲ್ಲಿರಬಲ್ಲವು. ವಾಸ್ತವವಾಗಿ ೧೦೦೦೦ ರಿಂದ ೧೫೦೦೦ ಮೀಟರುಗಳಷ್ಟು ಉನ್ನತ ಪ್ರದೇಶದಲ್ಲಿ ಸ್ವಲ್ಪ ಕಾಲವಿದ್ದು ಹವಾ ಬದಲಾವಣೆ ಮಾಡಿಕೊಳ್ಳುವುದರಿಂದ ಗುಂಡಿಗೆ ಪುಪ್ಪುಸಗಳ ಕಾರ್ಯಾಚರಣೆಗೆ ಅನುಕೂಲ. ಉನ್ನತ ಪರ್ವತ ಪ್ರದೇಶಗಳ ಮೂಲನಿವಾಸಿಗಳು ಸ್ವಾಭಾವಿಕವಾಗಿಯೇ ಆ ವಾತಾವರಣದ ಪರಿಸ್ಥಿತಿಗೆ ಒಗ್ಗಿಕೊಂಡಿರುತ್ತಾರೆ.

ವಾಯುವಿನ ಉಷ್ಣತೆಯನ್ನು ಅವಲಂಬಿಸಿ ಅದರ ಜಲಾಂಶ ಉಂಟು. ಉಷ್ಣತೆ ಕಡಿಮೆ ಆದರೆ ಚಳಿ ಆಗುವುದೊಂದೇ ಅಲ್ಲ. ಆ ಸ್ಥಿತಿಯಲ್ಲಿ ಜಲಾಂಶವೂ

ಕಡಿಮೆಯಾಗುವುದರಿಂದ ಚರ್ಮ, ಮೂಗು ಬಾಯಿಗಳು ಒಣಗಿದಂತಾಗುವುದೂ ಸಾಮಾನ್ಯ. ಚಳಿಯಿಂದ ಉಂಟಾಗುತ್ತದೆಂದು ನಂಬಿರುವ ಅನೇಕ ಚರ್ಮ ರೋಗಗಳೂ ಶ್ವಾಸಾಂಗಗಳ ರೋಗಗಳೂ ವಾಸ್ತವವಾಗಿ ಶುಷ್ಕವಾಯುವಿನಿಂದಾದುವು. ವಾಯು ಆಡದೆ ಇದ್ದರೆ ಸೆಖೆಯಾಗುವುದೂ ಉಸಿರು ಕಟ್ಟಿದಂತಾಗುವುದೂ ಉಂಟು. ಇದು ವಾಯುವಿನಲ್ಲಿ ಇಂಗಾಲದ ಡೈಆಕ್ಸೈಡ್ ಜಲಾಂಶಗಳು ಸಂಚಯಗೊಳ್ಳುವುದರಿಂದ ಇದರ ಜೊತೆಗೆ ದೈಹಿಕ ದುರ್ಗಂಧ ಸೇರಿ ಪರಿಸ್ಥಿತಿಯನ್ನು ಉಲ್ಬಣಿಸುವುದುಂಟು.

ವಾತಾವರಣದ ಅತಿಮೇಲ್ಮಟ್ಟದಲ್ಲಿ ಓಜೋನ್ ಇದೆ. ಮಿಂಚು ಮತ್ತು ಸೂರ್ಯರಶ್ಮಿಯ ಅತಿನೇರಳೆ ಕಿರಣಗಳು ವಾಯುವಿನಿಂದ ಆಮ್ಲಜನಕ, ಹೊಗೆ ಮತ್ತು ದೂಳಿನಿಂದ ಕೂಡಿದ ಮಂಜಿನ ಕಣಗಳ ಮೇಲೆ ಪ್ರಭಾವಿಸಿ ಓಜೋನ್ ಉತ್ಪತ್ತಿ ಆಗುತ್ತದೆ. ಈ ಅನಿಲ ನಮ್ಮನ್ನು ಸೂರ್ಯರಶ್ಮಿಯ ಅಪಾಯಕರ ಅತಿನೇರಿಳೆ ಕಿರಣಗಳಿಂದಲೂ ವಿಶ್ವಕಿರಣಗಳಿಂದಲೂ ರಕ್ಷಿಸುವುದು ನಿಜ. ಆದರೆ ಇದು ಉಸಿರಿನೊಡನೆ ದೇಹಗತವೇನಾದರೂ ಆದರೆ ತುಂಬ ಅಪಾಯಕಾರ. ೧೫ ಕಿಲೋಮೀಟರುಗಳಿಗಿಂತ ಹೆಚ್ಚು ಎತ್ತರದಲ್ಲಿ ಆಕಾಶಯಾನ ಮಾಡುವಾಗ ಇಂಥ ಸಂದರ್ಭ ಒದಗುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನದ ಲಾಸ್ ಏಂಜಲೀಸ್ ಪಟ್ಟಣದ ವಾಯುಮಂಡಲದಲ್ಲಿ ಸ್ಮಾಗ್ (ಹೊಗೆ ಮತ್ತು ದೂಳು ಕೂಡಿದ ಮಂಜು) ಇರುವುದು ಸಾಮಾನ್ಯ ಪರಿಸ್ಥಿತಿ. ಸೂರ್ಯಕಿರಣ ಇದರ ಮೇಲೆ ವರ್ತಿಸಿದಾಗ ಅಪಾಯಕರ ಮಟ್ಟವನ್ನು ಮುಟ್ಟುವಷ್ಟು ಓಜೋನ್ ಅಪರೂಪವಾಗಿ ಉತ್ಪತ್ತಿ ಆಗುವುದುಂಟು. ಇಲ್ಲಿನ ವಾಯುಮುಂಡಲದಲ್ಲಿ ಜಲಾಂಶ ಕಡಿಮೆ ಆಗಿರುವುದೇ ಇದರ ಕಾರಣ ಎಂದು ತೋರುತ್ತದೆ. ಏಕೆಂದರೆ ಅಧಿಕ ಜಲಾಂಶಯುತವಾಗಿರುವ ಲಂಡನ್ನಿನ ಸ್ಮಾಗಿನಲ್ಲಿ ಇಂಥ ಪರಿಸ್ಥಿತಿ ತಲೆದೋರಿಲ್ಲ. ವಾಯುವಿನಲ್ಲಿ ಋಣ ಅಯಾನುಗಳು ಇದ್ದರೆ ಜೀವಾಣುಗಳ ಬೆಳೆವಣಿಗೆಗೂ ದೂಳಿನ ಜ್ವರದ (ಹೇಫೀವರ್) ಪ್ರತಿರೋಧನಕ್ಕೂ ಅನುಕೂಲವೆಂದು ನಂಬಿಕೆ ಇದೆ.

ಉಷ್ಣತೆ : ಸ್ತನಿ ಪಕ್ಷಿಕುಲಗಳನ್ನುಳಿದು ಮಿಕ್ಕ ಎಲ್ಲ ಪ್ರಾಣಿವರ್ಗಗಳಲ್ಲೂ ದೇಹೋಷ್ಣತೆ ಪರಿಸರದ ಉಷ್ಣತೆಯಷ್ಟೆ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು ಇರುವುದು. ಇಂತಹ ಪ್ರಾಣಿಗಳಿಗೆ ಅನಿಯತತಾಪೀ ಪ್ರಾಣಿಗಳೆಂದು (ಕೋಲ್ಡ್ ಬ್ಲಡೆಡ್ ಆ್ಯನಿಮಲ್ಸ್) ಹೆಸರು. ಜೈವಿಕ್ರಿಯೆಗಳೆಲ್ಲ ಸಾಮಾನ್ಯವಾಗಿ ೪೫°–೫೦° ಸೆ ಗೆ ಮೀರಿದ ಉಷ್ಣತೆಯಲ್ಲಿ ಸ್ಥಗಿತಗೊಳ್ಳುವುದರಿಂದ ಪರಿಸರದ ಉಷ್ಣತೆ ೫೦° ಸೆ ಗೆ ಮೀರಿದಲ್ಲಿ ಈ ಪ್ರಾಣಿಗಳು ಬದುಕಿರಲಾರವು. ಹಾಗೆಯೇ ಪರಿಸರದ ಶೀತಲತೆಯೂ. ಶೀತಲತೆ ಹೆಚ್ಚುತ್ತ ಹೆಚ್ಚುತ್ತ ದೇಹಕ್ರಿಯೆಗಳ ವೇಗವೂ ಕಡಿಮೆ ಆಗಿ ೦° ಸೆ. ಯಲ್ಲಿ ಎಲ್ಲ ಕ್ರಿಯೆಗಳೂ ಹೆಚ್ಚುಕಡಿಮೆ ಸ್ಥಗಿತವಾಗುತ್ತವೆ. ಇದು ಕೂಡ ಅನಿಯತತಾಪೀ ಪ್ರಾಣಿಗಳಿಗೆ ಸಾಮಾನ್ಯವಾಗಿ ಮಾರಕ ಪರಿಸ್ಥಿತಿ. ಆದರೆ ಸ್ವಲ್ಪ ಮಟ್ಟಿಗೆ ಪರಿಸರದ ಉಷ್ಣತೆಗೆ ಇಂಥ ಪ್ರಾಣಿಗಳು ಒಗ್ಗಿಕೊಳ್ಳಬಹುದುದಾಗಿರುವುದರಿಂದ ಬೇರೆಬೇರೆ ಪರಿಸರಗಳಲ್ಲಿರುವ ಒಂದೇ ವರ್ಗದ ಪ್ರಾಣಿಗಳ ಉಷ್ಣ ಹಾಗೂ ಶೈತ್ಯ ಸಹಿಷ್ಣುತೆಯಲ್ಲೂ ವ್ಯತ್ಯಾಸ ಉಂಟು. ಸರಾಸರಿ ಉಷ್ಣತೆ ೩೬° ಸೆ. ಇರುವ ಪರಿಸರದಲ್ಲಿ ವಾಸಿಸುವ ಜಿರಲೆ ೯.೫° ಸೆ. ಯಷ್ಟು ಶೈತ್ಯವನ್ನು ತಡೆದುಕೊಳ್ಳಬಲ್ಲದು. ಇದು ಇಂಥ ಜಿರಲೆಯ ಮಿತಿ. ಶೈತ್ಯ ಇನ್ನೂ ತೀವ್ರವಾದರೆ ಕ್ರಮೇಣ ಅದರ ಜೀವಕಾರ್ಯಗಳ ವೇಗವೂ ಕಡಿಮೆ ಆಗುತ್ತದೆ. ಆದರೆ ೧೬° ಸೆ. ಪರಿಸರದಲ್ಲಿ ವಾಸವಾಗಿರುವ ಜಿರಲೆ ೯.೫° ಸೆ ಯಲ್ಲಿಯೂ ಚಟುವಟಿಕೆಯಾಗಿರುವುದಷ್ಟೆ ಅಲ್ಲ; ಅದಕ್ಕಿಂತ ತೀವ್ರ ಶೈತ್ಯದಲ್ಲೂ ಚಟುವಟಿಕೆಯಾಗಿರಬಲ್ಲದು. ೨° ಸೆ ಯಷ್ಟು ಶೈತ್ಯ ಈ ಜಿರಲೆಯ ಮಿತಿ.

ಸ್ತನಿ ಮತ್ತು ಪಕ್ಷಿಗಳಲ್ಲಿ ದೇಹೋಷ್ಣತೆ ಪರಿಸರದ ಉಷ್ಣತೆಯನ್ನೇ ಅನುಸರಿಸದೆ ಒಂದು ಸಮಸ್ಥಿತಿಯಲ್ಲಿರುತ್ತದೆ. ಇವುಗಳಿಗೆ ನಿಯತತಾಪೀ ಪ್ರಾಣಿಗಳೆಂದು (ವಾರ್ಮ್ ಬ್ಲಡೆಡ್ ಆ್ಯನಿಮಲ್ಸ್) ಹೆಸರು. ಇವುಗಳ ದೇಹೋಷ್ಣತೆಯ ಸಮಸ್ಥಿತಿಯ ಮೇಲೆ ಕೂಡ ಪರಿಸರದ ಉಷ್ಣತೆಯ ಪರಿಣಾಮ ಅಪಾರವಾಗಿಯೇ ಇದೆ. ಚರ್ಮ ಹಾಗೂ ಶ್ವಾಸಾಂಗ ಮತ್ತು ಪರಿಸರ ಇವುಗಳ ನಡುವೆ ಉಷ್ಣವರ್ಗಾವಣೆ ಅವುಗಳಲ್ಲಿನ ಉಷ್ಣತೆಯ ವ್ಯತ್ಯಾಸವನ್ನೇ ಅಲ್ಲದೆ ಚರ್ಮದ ರಕ್ತನಾಳಗಳ ಸ್ಥಿತಿ, ಪರಿಸರದ ಜಲಾಂಶ, ಗಾಳಿ, ಬೀಸುವಿಕೆ, ಬಿಸಿಲಿನ ಉಷ್ಣತೆಗಳನ್ನೂ ಅವಲಂಬಿಸಿದೆ. ಉನ್ನತ ಪ್ರದೇಶದಲ್ಲಿ ಶ್ವಾಸಕ್ರಮದ ದರ ಹೆಚ್ಚುವುದರಿಂದ ಆ ಮೂಲಕ ದೇಹೋಷ್ಣ ನಷ್ಟಗೊಳ್ಳುವುದೂ ಹೆಚ್ಚುತ್ತದೆನ್ನುವುದನ್ನು ಗಮನಿಸಬೇಕು. ಪರಿಸರದ ಉಷ್ಣತೆ ಹೆಚ್ಚಾಗಿದ್ದಾಗ ಬೆವರಿ ದೇಹೋಷ್ಣ ನಷ್ಟವಾಗುವುದೂ ಪರಿಸರದ ಉಷ್ಣ ಕಡಿಮೆ ಆಗಿದ್ದಾಗ ನಡುಕ ಉಂಟಾಗಿ ದೇಹದಲ್ಲಿ ಉಷ್ಣೋತ್ಪತ್ತಿ ಹೆಚ್ಚುವುದೂ ತಾತ್ಕಾಲಿಕ ಪರಿಣಾಮಗಳು. ಅದೂ ಚರ್ಮ ವಾತಾವರಣದ ಬೇಗೆಯಿಂದ ಸೀದುಹೋಗದೆ ತಂಪಿನಿಂದ ಘನೀಭವಿಸದೆ ಇದ್ದರೆ, ಸ್ಥಳೀಯವಾಗಿ ವಾತಾವರಣದ ಉಷ್ಣತೆ ಮುಖ್ಯ. ಥಂಡಿ ಹವದಲ್ಲಿ ಗಾಳಿ ಬೀಸಿದರೆ ದೇಹೋಷ್ಣ ನಷ್ಟವಾಗುವುದು ಅಗಾಧ. ಸ್ಥಳೀಯ ಉಷ್ಣತೆ ೨೫° ಸೆ ಗಿಂತ ಹೆಚ್ಚಾಗಿದ್ದರೆ ಬೆವರುತ್ತದೆ. ಹೀಗೆ ಉತ್ಪತ್ತಿಯಾದ ಬೆವರು ಆವಿಯಾಗಿ ಆರಿಹೋಗಲು ಅನುಕೂಲವಾಗುವಷ್ಟು ಕಡಿಮೆ ಜಲಾಂಶ ಸ್ಥಳೀಯ ವಾತಾವರಣದಲ್ಲಿದ್ದರೆ ಪರಿಸ್ಥಿತಿಯನ್ನು ಸಹಿಸುವುದು ಸಾಧ್ಯ. ಇಬ್ಬನಿ ಬಿಂದು ಮತ್ತು ಸ್ಥಳೀಯ ವಾತಾವರಣದ ಉಷ್ಣತೆಗಳ ಸರಾಸರಿಯಿಂದ ಸಹ್ಯ ಉಷ್ಣತೆಯನ್ನು ಅರಿಯಬಹುದು. ಜಲಾಂಶ ಹೆಚ್ಚಾಗಿರುವ ಮೆಕ್ಸಿಕೋ ಕೊಲ್ಲಿಯಂಥ ಪ್ರದೇಶದಲ್ಲಿ ಸ್ಥಳೀಯ ಉಷ್ಣ ೨೬° ಸೆ -೨೭° ಸೆ ಗಿಂತ ಹೆಚ್ಚಾಗಿದ್ದರೆ, ಜಲಾಂಶ ಅಷ್ಟು ಹೆಚ್ಚಾಗಿರುವ ಸೋಮಾಲಿ ತೀರಪ್ರದೇಶದಲ್ಲಿ ೨೯° ಸೆ – ೩೦° ಸೆ ಗಿಂತ ಹೆಚ್ಚಾಗಿದ್ದರೆ ಪರಿಸರದ ಉಷ್ಣವನ್ನು ಸಹಿಸಲು ಬಹು ಕಷ್ಟವಾಗುತ್ತದೆ. ಬಟ್ಟೆ ಬರೆಗಳ ಉಡುಗೆಯ ಅಭ್ಯಾಸ ವೈಶಿಷ್ಟ್ಯಗಳಿಂದ ಪರಿಸ್ಥಿತಿ ಎಷ್ಟೋ ಸುಧಾರಿಸಿದೆ.

ಹವೆಯ ಉಷ್ಣತೆಯ ವ್ಯತ್ಯಾಸದಿಂದ ರಕ್ತಪರಿಚಲನಾಂಗಗಳ ರೋಗಿಗಳಲ್ಲಿ ಎದೆ ನೋವು ಪಾರ್ಶ್ವವಾಯುಗಳು ಹಠಾತ್ ಸಂಭವಿಸುವುದೂ ಇನ್ನಿತರರಲ್ಲಿ ಮನೋರೋಗ ಅಪಘಾತ, ಮೂತ್ರಪಿಂಡಗಳ ಕಾರ್ಯದ ಅಕ್ರಮ ಉಂಟಾಗುವುದೂ ಸಂಧಿವಾತದ ಉಲ್ಬಣ ಶಮನಗಳು ಉಂಟಾಗುವುದೂ ಉಲ್ಲೇಖಿತವಾಗಿದ್ದರೂ ಈ ಕಾರ್ಯ ಕಾರಣಗಳ ಸಂಬಂಧ ವೈಜ್ಞಾನಿಕವಾಗಿ ದೃಢಪಟ್ಟಿಲ್ಲ. ಬೆಳಕಿನಂತೆಯೇ ದಿನದ ಸರಾಸರಿ ಉಷ್ಣತೆ ಜೀವಿಯ ಸಂತಾನೋತ್ಪಾದನಾ ಕಾಲವನ್ನು ನಿರ್ಣಯಿಸುವಂಥದ್ದಾಗಿದೆ.

ಹುಟ್ಟಿಬೆಳೆದ ಸ್ಥಳಗಳ ವಿವಿಧ ವಾತಾವರಣ ಪರಿಸ್ಥಿತಿಗಳಿಗೆ ಒಗ್ಗಿಕೊಂಡು ಹೆಚ್ಚು ವ್ಯತ್ಯಾಸಗಳಿಲ್ಲದೆ ಜೀವಕಾರ್ಯಗಳನ್ನು ಜರಗಿಸಬಲ್ಲ ಸಾಮರ್ಥ್ಯ ಅನೇಕ ಜೀವಿಗಳಿಗೆ ಉಂಟು. ಎಲ್ಲ ರೀತಿಯ ವಾತಾವರಣ ಪರಿಸ್ಥಿತಿಗಳಲ್ಲಿಯೂ ಬಾಳಬಲ್ಲ ಜೀವಿಗಳು ಬಹಳಿಲ್ಲ. ಕೆಲವು ಪ್ರದೇಶಗಳಲ್ಲಿ ಕೆಲವು ಜೀವಿಗಳು ಇರಲೇ ಆರವು. ಆದರೆ ಮಾನವ ಎಲ್ಲ ವಾತಾವರಣ ಪರಿಸ್ಥಿತಿಗಳಲ್ಲೂ ಬದುಕಿರಬಲ್ಲನೆಂಬುದು ಪ್ರಪಂಚದ ಎಲ್ಲ ಕಡೆಗಳಲ್ಲೂ ಮಾನವರಿರುವುದರಿಂದ ವ್ಯಕ್ತವಾಗುತ್ತದೆ. ಟಿಯರಡ್ಎಲ್ ಫ್ಯೂಗೋ ಎಂಬ ಸ್ಥಳದಲ್ಲಿ ಸುರಿಯುತ್ತಿರುವ ಮಳೆಯಲ್ಲಿ ತೋಯುತ್ತ ನಗ್ನಸ್ಥಿತಿಯಲ್ಲಿ ದೊಡ್ಡವರೂ ಮಕ್ಕಳೂ ಇದ್ದರೆಂದು ಡಾರ್ವಿನ್ನನ ಲೇಖನದಿಂದ ತಿಳಿದುಬರುತ್ತದೆ. ಆಂಡೀಸ್ ಪರ್ವತ ಪ್ರದೇಶಗಳಾದ ಬೊಲಿವಿಯ. ಪೆರುಗಳಲ್ಲಿ ಗಣಿ ಕೆಲಸಗಾರರು ಭಾರತದ ಗಣಿ ಕೆಲಸಗಾರಂತೆಯೇ ಶ್ರಮಸಹಿಷ್ಣುಗಳಾಗಿರುತ್ತಾರೆ. ಶೀತವಲಯದ ವಾಸಿಗಳು ಬಹು ಚಳಿಯನ್ನು ತಡೆಯಬಲ್ಲರು. ಉಷ್ಣವಲಯ ವಾಸಿಗಳಲ್ಲಿ ದೇಹೋಷ್ಣತೆ ತಾತ್ಕಲಿಕವಾಗಿ ಸ್ವಲ್ಪ ಏರಿದ ಮಟ್ಟದಲ್ಲಿದ್ದರು ಬೆವರುವುದಾಗಲಿ, ಕಷ್ಟಸಹಿಷ್ಣತೆಯ ಕೊರತೆಯಾಗಲಿ ಕಂಡುಬರುವುದಿಲ್ಲ. ಕೆಲವು ಸ್ತನಿಗಳು ಚಳಿಗಾಲದಲ್ಲಿ ಶಿಶಿರ ನಿದ್ರಾಸ್ಥಿತಿಯಲ್ಲಿದ್ದು (ಹೈಬರ್ನೇಷನ್) ಪ್ರತಿಕೂಲ ಪರಿಸರದಿಂದ ಬಚಾಯಿಸಿಕೊಳ್ಳುತ್ತವೆ. ಪಕ್ಷಿಗಳು ಅನುಕೂಲ ಹವೆ ಇರುವ ಕಡೆ ಕ್ಲುಪ್ತವಾಗಿ ವಲಸೆ ಹೋಗುತ್ತವೆ.

***

**ಜೀವಕೋಶ:** ಸಸ್ಯ ಮತ್ತು ಪ್ರಾಣಿಗಳ ಮೂಲಭೂತ ರಚನಾತ್ಮಕ ಹಾಗೂ ಕ್ರಿಯಾತ್ಮಕ ಘಟಕ (ಸೆಲ್). ಸಾಮಾನ್ಯವಾಗಿ ಸೂಕ್ಷ್ಮದರ್ಶೀಯ. ಪ್ರಧಾನವಾಗಿ ಗತೀಯ (ಡೈನಾಮಿಕ್) ಸ್ವರೂಪ ಮತ್ತು ಸ್ವನಿರ್ದೇಶವಿರುವ ಹಾಗೂ ಅತ್ಯಂತ ಸುವ್ಯವಸ್ಥೆಯಿಂದ ಕೂಡಿರುವ ಸಂಕೀರ್ಣ ಮಂಡಲ. ಆದರೆ ತನ್ನ ಜೈವಿಕ ರೂಪವನ್ನು ಉಳಿಸಿಕೊಳ್ಳುವ ಸಾರ್ಮಥ್ಯ ಇದಕ್ಕಿದೆ. ಅಲ್ಲದೆ ತನ್ನ ಪರಿಸರದಿಂದ ಶಕ್ತಿಯನ್ನು (ಎನರ್ಜಿ) ಪಡೆದು ಅದನ್ನು ತನ್ನ ವೃದ್ಧಿ ಮತ್ತು ಸಂತಾನೋತ್ಪತ್ತಿಗೆ ಉಪಯೋಗಿಸಿಕೊಳ್ಳಲೂ ಬಲ್ಲುದು. ಈ ವೈಶಿಷ್ಟ್ಯದ ಕಾರಣ ಜೀವಕೋಶದಲ್ಲಿ ಅಡಕವಾಗಿರುವ ಪ್ರೋಟೋಪ್ಲಾಸಮ್ (ಜೀವದ್ರವ್ಯ) ಎಂಬ ಜೀವಂತ ವಸ್ತು. ಇದರ ಸ್ವರೂಪ, ಸಂಕೀರ್ಣತೆ ಮತ್ತು ಪ್ರಾಧಾನ್ಯಗಳನ್ನರಿತ ಇಂಗ್ಲೆಂಡಿನ ಥಾಮಸ್ ಹೆನ್ರಿ ಹಕ್ಸ್‌ಲೀ ಇದನ್ನು ಜೀವದ ಭೌತ ಆಧಾರ (ಫಿಸಿಕಲ್ ಬೇಸಿಸ್ ಆಫ್ ಲೈಫ್) ಎಂದು ಕಳೆದ ಶತಮಾನದಲ್ಲಿಯೇ ಕರೆದಿದ್ದಾನೆ.

ಏಕಕೋಶ ಜೀವಿಗಳಾದ ಬ್ಯಾಕ್ಟೀರಿಯ, ಪ್ರೋಟೋಫೈಟ, ಪ್ರೋಟೋಜೋವಗಳ ದೇಹ ಒಂದೇ ಒಂದು ಕೋಶದಿಂದ ರೂಪುಗೊಂಡಿದೆ. ಆದರೆ ಬಹುಕೋಶ ಜೀವಿಗಳಲ್ಲಿ ಅನೇಕ ಕೋಶಗಳಿದ್ದು ಅವು ಕಟ್ಟಡದ ಇಟ್ಟಿಗೆಗಳಂತೆ ಜೋಡಣೆಗೊಂಡಿವೆ. ಆದರೂ ಪ್ರತಿಯೊಂದು ಬಹುಕೋಶ ಜೀವಿಯೂ ಒಂದು ನಿಷೇಚಿತ ಅಂಡಾಣುವಿನಿಂದ (ಯುಗ್ಮಜ) ತನ್ನ ಬಾಳನ್ನು ಪ್ರಾರಂಭಿಸುತ್ತದೆ. ಇದು ಎರಡು, ನಾಲ್ಕು, ಎಂಟು, ಹದಿನಾರು–ಹೀಗೆ ವಿಭಜನೆಯಾಗಿ ಕೊನೆಗೆ ಬಹುಕೋಶ ಜೀವಿಯಾಗಿ ವೃದ್ಧಿಯಾಗುತ್ತದೆ. ಹೀಗೆ ಉಂಟಾಗುವ ಮರಿ ಕೋಶಗಳು ಪ್ರಾರಂಭ ಘಟ್ಟಗಳಲ್ಲಿ ಸಾಮಾನ್ಯವಾಗಿ ಒಂದೇ ತೆರನಾಗಿದ್ದರೂ ಕಾಲಕ್ರಮೇಣ ಕ್ರಿಯಾ ವಿಶೇಷಕ್ಕೆ ತಕ್ಕಂತೆ ಶ್ರಮವಿಭಜನೆಯ ಫಲವಾಗಿ ವಿಭೇದನ ಹೊಂದಿ ರೂಪ ರಚನೆ, ಆಕಾರ, ಗಾತ್ರಗಳಲ್ಲಿ ಹಲವು ವ್ಯತ್ಯಾಸಗಳನ್ನು ಪಡೆಯುತ್ತವೆ. ಕೋಶೀಯ ವಿಭೇದನೆಯ (ಸೆಲ್ಯುಲಾರ್ ಡಿಫರೆನ್ಸಿಯೇಷನ್) ಬಗ್ಗೆ ಹೆಚ್ಚಿನ ಮಾಹಿತಿ ದೊರೆಯಬೇಕಾಗಿದೆ. ಒಂದೇ ಬಗೆಯ ಕೋಶಗಳು ಒಟ್ಟಾರೆ ಕೂಡಿ ಊತಕಗಳು (ಟಿಷ್ಯೂಸ್ : ಅಂಗಾಂಶಗಳು) ಆಗುತ್ತವೆ. ಉದಾಹರಣೆಗೆ ಸ್ನಾಯು, ನರ, ಮೇದಸ್ಸು,

ಚರ್ಮ, ಗ್ರಂಥಿ ಇತ್ಯಾದಿ. ಇವುಗಳ ಬೆಳವಣಿಗೆಯ ಮತ್ತು ವಿಭೇದನೆಗಳ ಅಧ್ಯಯನ ಜೀವ ಕೋಶವಿಜ್ಞಾನ ಮತ್ತು ಭ್ರೂಣವಿಜ್ಞಾನಗಳಿಗಿರುವ ಸಂಬಂಧವನ್ನು ಸೂಚಿಸುತ್ತದೆ.

ಕೋಶಗಳ ರೂಪರಚನೆಗಳು ಬಗೆಬಗೆಯಾಗಿರುವುದುಂಟು. ಅಂಡಕೋಶಿಕ, ಅನುಲೇಪಕೋಶಿಕ ಮತ್ತು ಗ್ರಂಥಿಕೋಶಿಕಗಳಲ್ಲಿ ಅತ್ಯಂತ ಸರಳ ರಚನೆಯ ಕೋಶಗಳನ್ನು ಕಾಣಬಹುದು. ಇವು ಸಾಮಾನ್ಯವಾಗಿ ದುಂಡಗಿರುತ್ತವೆ. ಆದರೆ ಇವು ಸ್ತಂಭಾಕಾರವಾಗಿರಬಹುದು, ಕೊಳವೆಯಂತಿರಬಹುದು, ತಟ್ಟೆಯಂತೆ ಚಪ್ಪಟೆಯಾಗಿರಬಹುದು, ನೀಳವಾಗಿರಬಹುದು ಇಲ್ಲವೆ ಕವಲೊಡೆದಿರಬಹುದು. ಕೋಶಗಳ ಆಕಾರ ವೈವಿಧ್ಯಕ್ಕೆ ಯಾಂತ್ರಿಕ ಒತ್ತಡ, ಪರಿಸರದ ಕ್ರಿಯಾವಿಶೇಷಗಳು ಮತ್ತು ಮೇಲ್ಮೈಯ ಕರ್ಷಣಗಳು (ಸರ್ಫೇಸ್ ಟೆನ್ಷನ್ಸ್) ಕಾರಣಗಳಾಗಿವೆ. ಏಕಕೋಶಿಕ ಜೀವಜಗತ್ತನ್ನು ಹೊಕ್ಕರಂತೂ ಒಂದೊಂದು ಜೀವಿಯ ದೇಹವೂ ರೂಪ, ಆಕಾರ, ರಚನೆಗಳಲ್ಲಿ ಒಂದೊಂದು ಬಗೆಯದು. ಈ ಒಂದು ಕೋಶದಲ್ಲಿಯೇ ಜೀವಿಯ ಪಚನ ಕ್ರಿಯೆ, ಚಲನೆ, ಉಸಿರಾಟ, ಸಂತಾನೋತ್ಪತ್ತಿ ಮೊದಲಾದ ಸಮಸ್ತ ಜೀವನ ವ್ಯಾಪಾರಗಳು ಜರಗುವ ವ್ಯವಸ್ಥೆಗಳು ಅಡಕವಾಗಿವೆ. ಇಂಥ ಕೋಶಗಳು ವಿವಿಧ ಆಕಾರದುವು. ನಿರ್ದಿಷ್ಟ ಆಕಾರವಲ್ಲದೆ ನಿರಂತರವಾಗಿ ರೂಪುರಚನೆಗಳನ್ನು ಬದಲಾಯಿಸಿಕೊಳ್ಳುವ ಕೋಶಗಳನ್ನು ಅಮೀಬ ಎಂಬ ಜಲಚರ ಪ್ರಾಣಿಯಲ್ಲಿ ನೋಡಬಹುದು. ನಮ್ಮ ದೇಹದ ರಕ್ತದಲ್ಲಿರುವ ಬಿಳಿರಕ್ತಕಣಗಳೂ ಇಂಥ ಕೋಶಗಳೇ. ಕ್ಲಾಮಿಡಾಮೊನಾಸ್ ಎಂಬ ಜಲಚರ ಸಸ್ಯದ ದೇಹ ಅಂಡಾಕಾರ. ಪ್ಯಾರಾಮೀಸಿಯಮ್ ಪ್ರಾಣಿಯ ದೇಹ ಪಾದರಕ್ಷೆಯ ಆಕಾರದ್ದು ಅಥವಾ ಚುಟ್ಟದ ಆಕಾರದ್ದು. ಸ್ಟೆಂಟರ್ ಪ್ರಾಣಿಯ ದೇಹ ತುತ್ತೂರಿಯಂತಿದ್ದರೆ ಯೂಗ್ಲೀನ, ಡೈಯಾಟಮುಗಳ ದೇಹ ಕದಿರಿನಂತಿದೆ. ಕೋಶದ ನಿರ್ದಿಷ್ಟ ಆಕಾರಕ್ಕೆ ಕೋಶಪೊರೆಯಲ್ಲಿರುವ ಸ್ವಲ್ಪ ಮಟ್ಟಿನ ಗಡಸುತನವೇ ಕಾರಣ.

ಕೋಶದ ಗಾತ್ರದಲ್ಲಿ ಕೂಡ ವ್ಯತ್ಯಾಸಗಳುಂಟು. ಹಕ್ಕಿ, ಉರಗ ಮುಂತಾದುವುಗಳ ಅಂಡಗಳು ಗಾತ್ರದಲ್ಲಿ ಬರಿಗಣ್ಣಿಗೆ ಕಾಣುವಷ್ಟು ದೊಡ್ಡವು. ಕೋಳಿಯ ಮೊಟ್ಟೆಯ ವ್ಯಾಸ 3 ಸೆಂಮೀ ಇದ್ದರೆ ಉಷ್ಟ್ರಪಕ್ಷಿಯ ಅಂಡದ ವ್ಯಾಸ 18 ಸೆಂಮೀ. ಇವುಗಳ ಗಾತ್ರದ ಹೆಚ್ಚಳಕ್ಕೆ ಇವುಗಳಲ್ಲಿ ಶೇಖರವಾಗಿರುವ ಅತ್ಯಧಿಕ ಪರಿಮಾಣದ ಬಂಡಾರವೇ ಕಾರಣ. ಅಸಿಟ್ಯಾಬ್ಯುಲೆರಿಯ ಎಂಬ ಸಮುದ್ರವಾಸಿ ಪಾಚಿಯ ಕೋಶಿಕ ದೇಹ ಕೂಡ ಬಲು ದೊಡ್ಡದು. ಆದರೆ ಸಾಮಾನ್ಯವಾಗಿ ಜೀವಕೋಶಗಳು ಗಾತ್ರದಲ್ಲಿ ಅತ್ಯಂತ (ಬರಿಗಣ್ಣಿನಲ್ಲಿ ಕಾಣದಷ್ಟು) ಚಿಕ್ಕವು; ಸೂಕ್ಷ್ಮದರ್ಶಕದ ಸಹಾಯದಿಂದ ಮಾತ್ರ ಇವನ್ನು ನೋಡಬಹುದು. ಇವು ಒಂದು ಮಿಮೀ ಗಿಂತಲೂ ಚಿಕ್ಕವಾಗಿರುವುದರಿಂದ ಇವನ್ನು ಮತ್ತು ಇವುಗಳಲ್ಲಿರುವ ಅಂಗಕಗಳನ್ನು (ಆರ್ಗನೆಲ್ಸ್) ಅಳೆಯಬೇಕಾದರೆ ಮಿಮೀ ಗಿಂತಲೂ ಚಿಕ್ಕದಾದ ಮಾನಕವನ್ನು ಉಪಯೋಗಿಸುವರು. ಹೀಗೆ ಬಳಸುವ ಮಾನಕಗಳಲ್ಲಿ ಮೈಕ್ರಾನ್ (1/1000 ಮಿಮೀ.) ಮತ್ತು ಮಿಲಿಮೈಕ್ರಾನ್ (1/1000ಮೈ.) ಹಾಗೂ ಆಂಗ್‌ಸ್ಟ್ರಾಮ್‌ಗಳು (Å=1/10000ಮೈ.) ಮುಖ್ಯವಾಗಿವೆ. ಕೋಶಗಳು ಸಾಮಾನ್ಯವಾಗಿ ಹತ್ತರಿಂದ ನೂರು ಮೈ ಗಳಷ್ಟು ದೊಡ್ಡವು. ಮಾನವ ಕೆಂಪುರಕ್ತಕಣದ ವ್ಯಾಸ 7.5ಮೈ. ಆದರೆ ಕೋಶದಲ್ಲಿ ಹುದುಗಿರುವ ಅತಿಸೂಕ್ಷ್ಮವಾದ ಮತ್ತು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ಮಾತ್ರ ನೋಡಬಹುದಾದಂಥ ಅಂಗಕಗಳು ಹಲವು ಮಿಮೈ. ಇಲ್ಲವೆ ಹಲವು ಆಂಗ್‌ಸ್ಟ್ರಾಮ್ ಗಾತ್ರದುವು. ಕೆಲವು ಸೂಕ್ಷ್ಮತಮ ಬಾಕ್ಟೀರಿಯಗಳು ಸಂಯುಕ್ತ ಸೂಕ್ಷ್ಮದರ್ಶಕ ಅಥವಾ ಪ್ರಕಾಶ ಸೂಕ್ಷ್ಮದರ್ಶಕಗಳಲ್ಲಿ ಕೂಡ ಕಾಣಿಸದಷ್ಟು ಚಿಕ್ಕವು. ಉದಾಹರಣೆಗೆ, ಕೋಳಿ ಮೊದಲಾದ ಪಕ್ಷಿಗಳ ಶ್ವಸನ ಸಂಬಂಧವಾದ ಕಾಯಿಲೆಗಳಿಗೆ ಕಾರಣವಾದ ಮೈಕೋಪ್ಲಾಸ್ಮ ಗ್ಯಾಲಿಸೆಪ್ಟಿಕಮ್ ಎಂಬ ಪ್ಲೂರೋನ್ಯುಮೋನಿಯ ಜೀವಿಯ ದೇಹದ ವ್ಯಾಸ 0.1ಮೈ. ಇಂಥ ಬ್ಯಾಕ್ಟೀರಿಯಗಳ ದೇಹದ ಒಳಗೆ ಪರತಂತ್ರ ಜೀವನ ಸಾಗಿಸುವ ವೈರಸುಗಳನ್ನು ನೋಡಬೇಕಾದರೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಹಾಯ ಬೇಕಾಗುತ್ತದೆ. ಕೆಲವು ನರಕೋಶಗಳು ಸೂಕ್ಷ್ಮದರ್ಶಕೀಯವಾಗಿದ್ದರೂ ಇವುಗಳಿಂದ ಹೊರಡುವ ಪ್ರವರ್ಧಗಳು 90 ಸೆಂಮೀ ನಷ್ಟು ಉದ್ದವಿರುತ್ತವೆ. ಕೆಲವು ಸಸ್ಯಗಳ ತಂತು ಜೀವಕೋಶಗಳು (ಫೈಬರ್ಸ್) 22 ಮಿಮೀ ಉದ್ದ ಇವೆ.

ಒಂದು ಗೊತ್ತಾದ ಕೋಶದ ಘನಗಾತ್ರ (ವಾಲ್ಯೂಮ್) ಹೆಚ್ಚುಕಡಿಮೆ ಸ್ಥಿರವಾಗಿರುತ್ತದೆ. ಅದು ಪ್ರಾಣಿಯ ಗಾತ್ರಕ್ಕೆ ಅನುಗುಣವಾಗಿ ಇರುವುದಿಲ್ಲ. ಉದಾಹರಣೆಗೆ, ಇಲಿ, ಆನೆ, ಎತ್ತು, ಕುದುರೆ ಮೊದಲಾದ ಪ್ರಾಣಿಗಳ ಯಕೃತ್ತಿನ ಅಥವ ಜಠರದ ಕೋಶಗಳ ಗಾತ್ರ ಒಂದೇ ಆಗಿದೆ. ಆದರೆ ಕೋಶಗಳ ಸಂಖ್ಯೆಯಲ್ಲಿ ಮಾತ್ರ ಪ್ರಾಣಿಗಳ ದೇಹಕ್ಕೆ ಅನುಗುಣವಾಗಿ ವ್ಯತ್ಯಾಸವುಂಟು.

ವಿವಿಧ ಜೀವಿಗಳ ಕೋಶಗಳು ವಿವಿಧರೂಪದವಾಗಿದ್ದರೂ ಅವುಗಳಲ್ಲಿ ಕೆಲವು ಮೂಲಭೂತವಾದ ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದು:

1. ಎಲ್ಲ ಕೋಶಗಳಲ್ಲೂ ತಮ್ಮ ಪೂರ್ವಜ ಕೋಶದಿಂದ ತಮ್ಮ ಗುಣಲಕ್ಷಣಗಳನ್ನು ಆನುವಂಶಿಕವಾಗಿ ಪಡೆಯುವ ಕ್ರಿಯಾವಿನ್ಯಾಸ (ಮೆಕ್ಯಾನಿಸಮ್) ಉಂಟು. ವಿಶಿಷ್ಟವಾದ ಜೀನ್ಯಾತ್ಮಕ ವಸ್ತುವಿನಿಂದ ತದ್ರೂಪದ ಜೀನ್ಯಾತ್ಮಕ ವಸ್ತುವನ್ನು ಸಂಶ್ಲೇಷಿಸಿಕೊಳ್ಳುವ ಸಾಮರ್ಥ್ಯ ಕೋಶಗಳಲ್ಲಿ ಇರುವುದೇ ಇದಕ್ಕೆ ಕಾರಣ.

2. ಪ್ರತಿಯೊಂದು ಕೋಶವೂ ಬಾಹ್ಯ ಪರಿಸರದಿಂದ ಅಣು, ಪರಮಾಣುಗಳನ್ನು ಪಡೆದುಕೊಂಡು ಹೊರಗಿನ ಶಕ್ತಿಯ ಬಳಕೆಯಿಂದ ತನಗೆ ವಿಶಿಷ್ಟವಾದ ಪ್ರೋಟೀನು, ನ್ಯೂಕ್ಲಿಯಿಕ್ ಆಮ್ಲ ಮೊದಲಾದ ದೈತ್ಯಾಣುಗಳನ್ನು ಸಂಶ್ಲೇಷಿಸಿಕೊಳ್ಳಬಲ್ಲುದು.



3. ಸಾಮಾನ್ಯವಾಗಿ ಎಲ್ಲ ಕೋಶಗಳಿಗೂ ಅವಾಯುಶ್ವಸನ (ಅನೇರೋಬಿಕ್) ಗ್ಲೈಕಾಲಿಸಿಸನ್ನು ನಡೆಸುವ ಸಾಮರ್ಥ್ಯ ಉಂಟು.

4. ಎಲ್ಲ ಕೋಶಗಳೂ ತಮ್ಮ ಚಯಾಪಚಯ ಕ್ರಿಯೆಗಳಿಗೆ ತಕ್ಕಂತೆ ತಮ್ಮ ಆಂತರಿಕ ಪರಿಸರವನ್ನು ನಿಯಂತ್ರಿಸಿಕೊಳ್ಳುವ ಸಾಮರ್ಥ್ಯ ಪಡೆದಿವೆ.

5. ಸಮಸ್ತ ಕೋಶಗಳೂ ಅಡಿನೋಸೀನ್ ಟ್ರೈಫಾಸ್ಫೇಟು (ಎಟಿಪಿ), ಸಹಕಿಣ್ವ (ಕೋಎನ್‌ಜೈಮ್) ಮತ್ತು ನಿಕೋಟಿನಮೈಡ್ ನ್ಯೂಕ್ಲಿಯೋಟೈಡುಗಳನ್ನು ತಮ್ಮ ಚಯಾಪಚಯ ಕ್ರಿಯೆಯಲ್ಲಿ ಉಪಯೋಗಿಸಿಕೊಳ್ಳುತ್ತವೆ.

6. ಹಲವು ಕೋಶಗಳು ತಮ್ಮ ಕೋಶದ್ರವ್ಯದಲ್ಲಿ (ಸೈಟೋಪ್ಲಾಸಮ್) ಚಯಾಪಚಯೋತ್ಪನ್ನಗಳನ್ನು ಸಂಗ್ರಹಿಸಿಕೊಳ್ಳಬಲ್ಲುವು.

ಸಸ್ಯದ ಹಾಗೂ ಪ್ರಾಣಿಗಳ ಕೋಶಗಳನ್ನು ಅವುಗಳ ವಿಶಿಷ್ಟ ಗುಣಗಳ ಆಧಾರದ ಮೇಲೆ ಗುರುತಿಸಬಹುದು. ಸಸ್ಯಕೋಶಗಳು ಪ್ರಾಣಿಕೋಶಗಳಿಗಿಂತ ದೊಡ್ಡವು. ಪ್ರಾಣಿಕೋಶದಲ್ಲಿ ಕಾಣಬರದ ಕೋಶಭಿತ್ತಿ, ಪ್ಲಾಸಿಡ್ಡುಗಳು ಸಸ್ಯಕೋಶಗಳ ವಿಶಿಷ್ಟ ರಚನೆಗಳಾಗಿವೆ. ದ್ರವ ತುಂಬಿದ ರಸದಾನಿಗಳು ಅಥವಾ ಕೋಶಾವಕಾಶಗಳು (ವ್ಯಾಕ್ಯೂಯೋಲ್ಸ್) ಸಸ್ಯಕೋಶಗಳಲ್ಲಿ ಕಾಣಬರುವ ಪ್ರಮುಖ ರಚನೆಗಳು. ಇವು ಸಾಮಾನ್ಯವಾಗಿ ಕೋಶದ ಕೇಂದ್ರಭಾಗದಲ್ಲಿ ಸ್ಥಿರವಾಗಿರುವುದರಿಂದ ಕೋಶದ್ರವ್ಯ ಕೋಶದ ಭಿತ್ತಿಯ ಕಡೆಗೆ ನೂಕಲ್ಪಟ್ಟಿದೆ. ಪ್ರಾಣಿಗಳ ಕೋಶಗಳಲ್ಲಿ ಸಾಮಾನ್ಯವಾಗಿ ರಸದಾನಿ(ವ್ಯಾಕ್ಯುಯೊಲ್)ಗಳಿಲ್ಲ. ಒಂದು ವೇಳೆ ಇದ್ದರೂ ಅವುಗಳ ಗಾತ್ರ ಚಿಕ್ಕದು. ಸೆಂಟ್ರಿಯೋಲು, ಸೆಂಟ್ರೋಸೋಮುಗಳು ಪ್ರಾಣಿಗಳ ಎಲ್ಲ ಕೋಶಗಳಲ್ಲಿ ಇವೆ. ಆದರೆ ಇವು ಸಸ್ಯಗಳ ಎಲ್ಲ ಕೋಶಗಳಲ್ಲೂ ಇಲ್ಲ. ಉನ್ನತ ವರ್ಗದ ಸಸ್ಯಗಳ ಕೋಶಗಳಲ್ಲಿ ಇವು ಲೋಪವಾಗಿವೆ. ಸಸ್ಯ ಹಾಗೂ ಪ್ರಾಣಿಗಳ ಕೋಶವಿಭಜನೆಯ ರೀತಿಯಲ್ಲೂ ವ್ಯತ್ಯಾಸ ಉಂಟು. ಸಸ್ಯದ ಕೋಶ ವಿಭಜನೆಯಾಗುವಾಗ ಮರಿಕೋಶಗಳನ್ನು ಪ್ರತ್ಯೇಕಿಸುವ ಒಂದು ಕೋಶತಟ್ಟೆ (ಸೆಲ್ ಪ್ಲೇಟ್) ರೂಪುಗೊಳ್ಳುತ್ತದೆ. ಇಂಥ ವಿಶೇಷ ರಚನೆ ಪ್ರಾಣಿಗಳ ಕೋಶಗಳಲ್ಲಿ ಇಲ್ಲ. ಕೋಶ ವಿಭಜನೆಯಾಗುವ ನಡುಭಾಗದಲ್ಲಿ ಕ್ರಮಕ್ರಮವಾಗಿ ಸಂಕುಚನಗೊಳ್ಳುವುದರಿಂದ ಮರಿಕೋಶಗಳು ಬೇರ್ಪಡುತ್ತವೆ. ಕೋಶದಲ್ಲಿ ಕೋಶಪೊರೆ (ಪ್ಲಾಸ್ಮ ಪೊರೆ), ಕೋಶದ್ರವ್ಯ, ಮೈಟೊಕಾಂಡ್ರಿಯ, ಗಾಲ್ಗಿ ವಸ್ತುಗಳು, ಲೈಸೊಸೋಮು, ಎಂಡೊಪ್ಲಾಸ್ಮಿಕ್ ಜಾಲ, ರೈಬೊಸೋಮ್, ಸೆಂಟ್ರಿಯೋಲ್, ಕೋಶಕೇಂದ್ರ ಮೊದಲಾದ ಸ್ವವಿಭಜನಾ ಸಾಮರ್ಥ್ಯವುಳ್ಳ ಅಂಗಕಗಳಿವೆ. ಇವುಗಳಲ್ಲದೆ ಚಯಾಪಚಯೋತ್ಪನ್ನಗಳಾದ ಲಿಪಿಡ್, ಮೇದಸ್ಸಿನ ಸ್ರಾವದ ಮತ್ತು ಪೀತಕದ ವಸ್ತುಗಳು ಕೂಡ ಹುದುಗಿರುತ್ತವೆ. ಹಲವು ಜೀವರಾಶಿಗಳಲ್ಲಿ ಇವೆಲ್ಲ ಅಂಗಕಗಳೂ ಇಲ್ಲದಿರಬಹುದು. ಆದ್ದರಿಂದ ಸಸ್ಯ ಹಾಗೂ ಪ್ರಾಣಿಗಳಲ್ಲಿ ಕಾಣಬಹುದಾದ ಎಲ್ಲ ಅಂಗಕಗಳನ್ನೂ ಒಳಗೊಂಡ ಸಾರ್ವತ್ರೀಕೃತ ಕೋಶಗಳನ್ನು ಚಿತ್ರಿಸಿಕೊಳ್ಳಬಹುದು.

ಸಾರ್ವತ್ರೀಕೃತ ಜೀವಕೋಶದ ವಿವಿಧ ಭಾಗಗಳು:

ಕೋಶಪೊರೆ (ಸೆಲ್ ಮೆಂಬ್ರೇನ್): ಕೋಶವನ್ನು ಸುತ್ತುವರಿದಿರುವ ಪೊರೆ. ಇದಕ್ಕೆ ದ್ರವ್ಯಪೊರೆ ಅಥವಾ ಪ್ಲಾಸ್ಮಪೊರೆ ಎಂದೂ ಹೆಸರು. ಇದು ರಕ್ಷಣಾತ್ಮಕವಾದ ಹಾಗೂ ಸ್ಥಿತಿಸ್ಥಾಪಕಶಕ್ತಿಯುಳ್ಳ ಸೀಮಾ ಪೊರೆ; ಕೋಶದ ಪಾರಗಮ್ಯತೆಯನ್ನು ನಿಯಂತ್ರಿಸುವ ವಿನ್ಯಾಸ. ಸಾಮಾನ್ಯವಾಗಿ ಪ್ರಕಾಶ ಸೂಕ್ಷ್ಮದರ್ಶಕದಲ್ಲಿ ಇದನ್ನು ಗುರುತಿಸುವುದು ಕಷ್ಟ; ಇದು ಅತ್ಯಂತ ತೆಳುವಾಗಿದ್ದು ಯಾಂತ್ರಿಕ ಒತ್ತಡಗಳನ್ನು ತಡೆಯಲು ಅಸಮರ್ಥವಾಗಿರುವುದರಿಂದ ಇದರ ಹೊರಭಾಗದಲ್ಲಿ ಹೆಚ್ಚು ಗಡುಸಾದ, ಒರಟಾದ ಒಂದು ಪೊರೆಯಿರುವುದುಂಟು. ಈ ಸಂಯುಕ್ತ ಪೊರೆಯೇ ಪ್ರಕಾಶ ಸೂಕ್ಷ್ಮದರ್ಶಕದಲ್ಲಿ ಕಾಣುವ ಕೋಶಪೊರೆ. ಪ್ರಾಣಿಗಳ ಕೋಶಗಳಲ್ಲಿ ಇಂಥ ಜಡಸ್ವಭಾವದ ಹೊರಪೊರೆ ಪ್ರೋಟೀನು ಮತ್ತು ಕಾರ್ಬೊಹೈಡ್ರೇಟುಗಳ ಸಂಯುಕ್ತ ವಸ್ತುಗಳಿಂದ ರಚಿತವಾಗಿದೆ. ಸಾಗರವಾಸಿ ಮುಳ್ಳುಗೊಂಡೆಯ (ಸೀ ಅರ್ಚಿನ್) ಅಂಡಾಣುಗಳು ಮ್ಯೂಸಿನ್ ಎಂಬ ಒಂದು ಬಗೆಯ ಗ್ಲೈಕೊಪ್ರೋಟೀನ್ ಸಂಯುಕ್ತದಿಂದ ಕೂಡಿವೆ. ಕೆಲವು ಏಕಕೋಶಿ ಪ್ರಾಣಿಗಳ ದೇಹದ ಆಕಾರವನ್ನು ನಿರ್ಧರಿಸುವ ಈ ಪೊರೆಗೆ ಪೆಲಿಕಲ್ ಎಂಬ ಹೆಸರೂ ಇದೆ. ಕಠಿಣಚರ್ಮಿಗಳ ಹೊರಜೀವಕೋಶಗಳ ಮೇಲ್ಮೈ ಕೈಟಿನ್ ಎಂಬ ವಸ್ತುವಿನಿಂದ ಕೂಡಿದೆ. ಆದರೆ ಸಸ್ಯಕೋಶಗಳಲ್ಲಾದರೋ ಪ್ಲಾಸ್ಮಪೊರೆಯ ಹೊರಭಾಗದಲ್ಲಿ ಪೆಕ್ಟಿನ್ ಮತ್ತು ಸೆಲ್ಯುಲೋಸುಗಳಿಂದ ರಚಿತವಾದ ಒಂದು ನಿರ್ದಿಷ್ಟ ಹಾಗೂ ಪ್ರಮುಖ ಗೋಡೆ ರೂಪುಗೊಂಡಿದೆ. ಇದಕ್ಕೆ ಕೋಶಭಿತ್ತಿ ಎಂದು ಹೆಸರು. ಕೆಲವು ಅಭಿರಂಜಕಗಳನ್ನು ಉಪಯೋಗಿಸಿ, ರಂಗುಗಟ್ಟಿಸಿ ಸಾಮಾನ್ಯ ಪ್ರಕಾಶ ಸೂಕ್ಷ್ಮದರ್ಶಿಯಲ್ಲಿ ಪ್ಲಾಸ್ಮಪೊರೆಯನ್ನು ಗುರುತಿಸಬಹುದು. ಅಲ್ಲದೆ ಸೂಕ್ಷ್ಮವಿಚ್ಛೇದನ ಸೃಜಿಯ ಸಹಾಯದಿಂದ ಕೂಡ ಇದರ ಇರುವಿಕೆ ಮತ್ತು ಭೌತಸ್ಥಿತಿಯನ್ನು ತೋರಿಸಬಹುದು. ಪ್ಲಾಸ್ಮಾಲಿಸಿಸಿನಿಂದ ಸಹ ಇದರ ಅಧ್ಯಯನ ಮಾಡಬಹುದು. ಸಸ್ಯವಿಜ್ಞಾನಿಗಳ ಪ್ರಕಾರ ಈ ಪೊರೆಗೆ ಪ್ಲಾಸ್ಮಲೆಮ ಎಂದು ಹೆಸರು. ಪ್ಲಾಸಪೊರೆಯನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ನೋಡಿದರೆ ಇದು ಎರಡು ಸಾಂದ್ರ ಪದರಗಳಿಂದ ಕೂಡಿದಂತೆ ಕಾಣುತ್ತದೆ. ಈ ಪದರಗಳು ಹೆಚ್ಚು ಕಡಿಮೆ ಸಮಾಂತರವಾಗಿರುವುದರಿಂದ ಇವುಗಳ ನಡುವೆ ಸ್ವಚ್ಛವಾದ ಇನ್ನೊಂದು ಪದರ ಉಂಟೆಂದು ಹೇಳಲಾಗಿದೆ. ಈ ಮೂರು ಪದರಗಳ ಸಂರಚನೆಗೆ ಜೆ. ಡಿ. ರಾಬರ್ಟ್‌ಸನ್ ಘಟಕ ಪೊರೆ (ಯೂನಿಟ್ ಮೆಂಬ್ರೇನ್) ಎಂದು ಹೆಸರಿಸಿದ್ದಾನೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ದೃಷ್ಟಿಯಲ್ಲಿ ಇದೊಂದು ತ್ರಿಪೊರೆ. ಪ್ರತಿಯೊಂದು ಸಾಂದ್ರಪೊರೆಯ ದಪ್ಪ ಸುಮಾರು 20Å ಮತ್ತು ಸ್ವಚ್ಛಪದರದ ದಪ್ಪ ಸುಮಾರು 35Å. ಅಂದರೆ ಇಡೀ ಪ್ಲಾಸ್ಮಪೊರೆಯ ದಪ್ಪ 75Å ಆದರೆ ಕೆಲವು ಕೋಶಗಳಲ್ಲಿ ಇದರ ದಪ್ಪ ಇನ್ನೂ ಅಧಿಕವಾಗಿರುವುದುಂಟು. ಉದಾಹರಣೆಗೆ, ಮಾನವರ ಕೆಂಪುರಕ್ತಕಣದ ಪ್ಲಾಸ್ಮ ಪೊರೆಯ ದಪ್ಪ ಸುಮಾರು 215Å ಕರುಳಿನ ಎಪಿತೀಲಿಯಮ್ ಕೋಶದ ಪ್ಲಾಸ್ಮಪೊರೆಯ ದಪ್ಪ 105Å.

1972 ರಲ್ಲಿ ಸಿಂಗರ್ ಮತ್ತು ನಿಕಲ್ಸನ್ 'ತರಲ ಶಬಲಚಿತ್ರ ಮಾದರಿ' (ಫ್ಲೂಯಿಡ್ ಮೊಸಾಯಿಕ್ ಮಾದರಿ) ಯನ್ನು ಪ್ರತಿಪಾದಿಸಿದರು. ಇದರಂತೆ ಕೋಶಪೊರೆಯಲ್ಲಿ ಫಾಸ್ಫೋಲಿಪಿಡ್ಡುಗಳು ಎರಡು ಪದರಗಳಲ್ಲಿವೆ. ಇವೆರಡು ಪದರಗಳಲ್ಲಿ ಪ್ರೋಟೀನುಗಳು ಶಬಲ ಚಿತ್ರಗಳಂತೆ (ಮೊಸಾಯಿಕ್) ಅಡಕವಾಗಿವೆ. ಪದರಗಳೊಳಗೇ ಇರುವ ಪ್ರೋಟೀನುಗಳನ್ನು ಅಂತಸ್ಥ (ಇಂಟ್ರಿನ್ಸಿಕ್) ಪ್ರೋಟಿನುಗಳೆಂದೂ ಕೋಶಪೊರೆಯ ಹೊರಭಾಗ ಅಥವಾ ಕೋಶದ್ರವ್ಯದ ಕಡೆಗಿರುವ ಪ್ರೋಟೀನುಗಳನ್ನು ಬಾಹ್ಯ (ಎಕ್ಸ್‌ಟ್ರಿನ್ಸಿಕ್) ಪ್ರೋಟೀನುಗಳೆಂದೂ ಕರೆಯುವರು. ಪ್ರೋಟೀನುಗಳು ಮತ್ತು ಫಾಸ್ಫೋಲಿಪಿಡ್ಡುಗಳು ದೃಢವಾಗಿ ಒಂದೇ ಜಾಗಕ್ಕೆ ಸೀಮಿತವಾಗಿಲ್ಲದೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಬಲ್ಲವಾಗಿವೆ. ಅಲ್ಲದೆ ಕೋಶಪೊರೆಯಲ್ಲಿ ಇವೆರಡರ ರಚನಾವ್ಯೂಹ ಮೊಸಾಯಿಕ್ ನೆಲದಲ್ಲಿರುವಂತಿದೆ.




ಪ್ಲಾಸ್ಮಾ ಪೊರೆ (ಸಿಂಗರ್ – ನಿಕಲ್ಸನ್ ಮಾದರಿ)

ಪ್ಲಾಸ್ಮಪೊರೆ ಲೈಪೊಪ್ರೋಟಿನಿನಿಂದ ನಿರ್ಮಿತವಾದ ಒಂದು ರಚನೆ. ಇದರಲ್ಲಿ ಪ್ರೋಟೀನು ಮತ್ತು ಲಿಪಿಡುಗಳು 2: 1ರ ಅನುಪಾತದಲ್ಲಿವೆ. ಈ ಅಣುಗಳು ಒಂದು ಸುವ್ಯವಸ್ಥಿತ ಯೋಜನೆಯ ಚೌಕಟ್ಟಿನಲ್ಲಿ ಜೋಡಣೆಗೊಂಡಿವೆ ಎಂದು ಭಾವಿಸಲಾಗಿದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಹಾಗೂ ಎಕ್ಸ್‌ಕಿರಣ ನಮನ ಅಧ್ಯಯನಗಳು ಈ ಪರಿಕಲ್ಪನೆಗಳನ್ನು ದೃಢಪಡಿಸಿವೆ. ಇವುಗಳ ಪ್ರಕಾರ ಲಿಪಿಡ್ ಅಣುಗಳು ಎರಡು ಸಮಾಂತರ ಸರಪಣಿಗಳಂತೆ ಇದ್ದು, ಅವುಗಳ ಇಕ್ಕಡೆಯ ಹೊರವಲಯದಲ್ಲಿ ಅವುಗಳಿಗೆ ಸಂಬಂಧಿಸಿದಂತೆ ಒಂದೊಂದು ಪ್ರೋಟೀನು ಅಣುಗಳ ಸಾಲು ಇದೆ. ಪ್ಲಾಸ್ಮ ಪೊರೆಯಲ್ಲಿ ಕೆಲವು ಬಗೆಯ ವಿಶೇಷತೆಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಇದರ ಮೇಲಾಯ ಸಂಪೂರ್ಣವಾಗಿ ನಯವಾಗಿಲ್ಲ. ಇದರ ಮೇಲೆ ಅಡ್ಡಾದಿಡ್ಡಿಯಾಗಿ ದಿಬ್ಬಗಳ ರಚನೆಯಿರಬಹುದು ಅಥವಾ ಇದು ಮಡಿಕೆಗಳಂತೆ ಕಂಡುಬರಬಹುದು ಇಲ್ಲವೇ ಹಳ್ಳಕೊಳ್ಳ ಅಥವಾ ಅಂತರ್ವಲನಗಳಿಂದ (ಇನ್‌ವ್ಯಾಜಿನೇಷನ್ಸ್) ಕೂಡಿರಬಹುದು. ಹಲವು ಸಂದರ್ಭಗಳಲ್ಲಿ ಈ ರಚನೆಗಳು ಅಕ್ಕಪಕ್ಕದ ಕೋಶಗಳನ್ನು ಪರಸ್ಪರ ಕೂಡಿಸುವ ಬೆಸುಗೆಯಂತಿರುವುದುಂಟು. ಅಲ್ಲದೆ, ಮೇಲಾಯದಲ್ಲಿ ಕೆಲವು ವಿಶೇಷ ರಚನೆಗಳು ರೂಪುಗೊಂಡಿರುವುದೂ ಇದೆ. ಹಲವು ಬಗೆಯ ಕೋಶಗಳಲ್ಲಿ ಪ್ಲಾಸ್ಮ ಪೊರೆಯ ಮಡಿಕೆಗಳು ಬೆರಳಿನಾಕಾರದಲ್ಲಿದ್ದು ಹೊರಚಾಚಿರುತ್ತವೆ. ಇವಕ್ಕೆ ಸೂಕ್ಷ್ಮವಿಲ್ಲಸುಗಳೆಂದು ಹೆಸರು. ಇವುಗಳ ಸಂಖ್ಯೆ ಕೂಡ ಅಪಾರ. ಇವೇ ಕುಂಚ ಅಂಚಿನ (ಬ್ರಷ್ ಬಾರ್ಡರ್) ರಚನಾತ್ಮಕ ಘಟಕಗಳು. ಕರುಳು, ಗರ್ಭಾಶಯ ಹಾಗೂ ಪಿತ್ತಕೋಶದ ಎಪಿತೀಲಿಯಮಿನ ಕೋಶಗಳಲ್ಲೂ ಯಕೃತ್ತಿನ ಕೋಶಗಳಲ್ಲೂ ಕಂಡುಬರುತ್ತವೆ. ಒಂದೊಂದು ಸೂಕ್ಷ್ಮವಿಲ್ಲಸ್ಸಿನ ಉದ್ದ 0.6–0.8ಮೈ. ಮತ್ತು ವ್ಯಾಸ

100ಮಿಮೈ. ವಿಲ್ಲಸ್ಸುಗಳು ಕೋಶದ ಮೇಲಾಯವನ್ನು ವಿಸ್ತಾರಗೊಳಿಸಿ ಕೋಶ ಪರಿಸರದ ವಸ್ತುವನ್ನು ಅಧಿಕ ಪ್ರಮಾಣದಲ್ಲಿ ಹೀರಲು ನೆರವಾಗುತ್ತವೆ. ಅಕ್ಕಪಕ್ಕದ ಕೋಶಗಳು ಸಂಧಿಸುವ ಕೆಲವು ಭಾಗಗಳಲ್ಲಿ ಸಾಂದ್ರ ವಸ್ತುವಿರುವಂತೆ ಕಂಡುಬರುತ್ತದೆ. ಈ ಪ್ರದೇಶವನ್ನು ವಿಶಾಲಿಸಿ ಅಧ್ಯಯನ ಮಾಡಿದರೆ ಇಲ್ಲಿನ ಪ್ಲಾಸ್ಮಪೊರೆಗಳ ಒಳಭಾಗದಲ್ಲಿ ಟೋನೊಫೈಬ್ರಿಲ್‌ಗಳೆಂಬ ಸೂಕ್ಷ್ಮ ಗಾತ್ರದ ತಂತುಗಳು ಕೋಶದ್ರವ್ಯದ ಒಳಭಾಗಕ್ಕೆ ಚಾಚಿರುವುದು ಕಾಣುತ್ತದೆ. ಇವುಗಳಿಂದ ಕೂಡಿದ ಪೊರೆಯ ಮಂದಭಾಗಕ್ಕೆ ಡೆಸ್ಮೊಸೋಮ್ ಎಂದು ಹೆಸರು. ಎಡಬಲದ ಕೋಶಗಳೆರಡರಲ್ಲೂ ಜೋಡಿಯಾಗಿ ಕಂಡುಬರುವುದು ಇವುಗಳ ವೈಶಿಷ್ಟ್ಯ. ಇಂಥ ರಚನೆಗಳನ್ನು ನರಮಂಡಲದ ಎಪಿತೀಲಿಯಮಿನ ಕೋಶಗಳಲ್ಲಿ ಕಾಣಬಹುದು. ಸಸ್ಯಗಳ ಕೋಶಗಳಲ್ಲಿ ಅಕ್ಕಪಕ್ಕದುವುಗಳನ್ನು ಕೂಡಿಸುವ ಕೋಶದ್ರವ್ಯಸೇತುಗಳನ್ನು ಕಾಣಬಹುದು. ಇವಕ್ಕೆ ಪ್ಲಾಸ್ಮೊಡೆಸ್ಮಗಳೆಂದು ಹೆಸರು. ಇವುಗಳಿರುವ ಸ್ಥಳಗಳಲ್ಲಿ ಪ್ಲಾಸ್ಮಪೊರೆಗಳಲ್ಲಿ ರಂಧ್ರಗಳಿರುವುದರಿಂದ ಒಂದು ಕೋಶದ ಕೋಶದ್ರವ್ಯ ಪಕ್ಕದ ಕೋಶದ ದ್ರವ್ಯದೊಡನೆ ಸಂಪರ್ಕ ಪಡೆದಿದೆ.

ಪ್ಲಾಸ್ಮಪೊರೆಯ ಕ್ರಿಯಾವಿಶೇಷಗಳು: 1. ಇದು ರಕ್ಷಣಾತ್ಮಕವಾಗಿರುವುದೇ ಅಲ್ಲದೆ ಪರಿಸರದಲ್ಲಿ ಹಾಗೂ ಕೋಶದ್ರವ್ಯದಲ್ಲಿ ಇರುವ ವಸ್ತುಗಳ ಪರಸ್ಪರ ಸಾಗಣೆಯನ್ನು ನಿಯಂತ್ರಿಸುವ ಕ್ರಿಯಾವಿನ್ಯಾಸವನ್ನೂ ಒಳಗೊಂಡಿದೆ. ಪರಿಸರದ ವಸ್ತುಗಳು ಮುಖ್ಯವಾಗಿ ವಿಸರಣೆ, ಫ್ಯಾಗೋಸೈಟೋಸಿಸ್, ಪೈನೋಸೈಟೋಸಿಸ್ ಮತ್ತು ಸಕ್ರಿಯ ಸಾಗಣೆ ಎಂಬ ಪ್ರಕ್ರಿಯೆಗಳ ಮೂಲಕ ಕೋಶದ್ರವ್ಯವನ್ನು ಸೇರುತ್ತವೆ. ಇದು ಕೋಶದ ಅಖಂಡತ್ವವನ್ನು ಉಳಿಸಿ ಸುತ್ತಲ ಪರಿಸರದಿಂದ ಬೇರ್ಪಡಿಸುವ ಪೊರೆಯೇ ಆದರೂ ಇದು ವಿಭೇದನಾತ್ಮಕ ಪಾರಗಮ್ಯ ಪೊರೆಯಂತೆ ಕಾರ್ಯ ನಿರ್ವಹಿಸುತ್ತದೆ. ಅಂದರೆ ಇದು ಕೋಶದೊಳಗಿನ ಸಕ್ಕರೆ ಮತ್ತು ವಿಲೀನವಾದ ಪ್ರೋಟೀನುಗಳು ಹೊರಗೆ ಹೋಗದಂತೆ ತಡೆಯುವುದೇ ಅಲ್ಲದೆ ಪರಿಸರದ ನೀರು ಮತ್ತು ವಿಲೀನವಾದ ಲವಣಗಳು ಜೀವಕೋಶದ ಒಳಕ್ಕೆ ಹೋಗಲು ಎಡೆ ಕೊಡುತ್ತದೆ. ಈ ಕ್ರಿಯಾವಿಶೇಷ ಅಭಿಸರಣೆಯ (ಆಸ್ಮಾಸಿಸ್) ನಿಯಮಕ್ಕೆ ಅನುಗುಣವಾಗಿದೆ. ಇದರಿಂದಲೇ ಚಯಾಪಚಯ ಕ್ರಿಯೆಗಳು ಸಮವಾಗಿ ಸಾಗಲು ಸಾಧ್ಯ.

2. ಹಲವು ಕೋಶಗಳು ಪರಿಸರದಿಂದ ಆಹಾರವನ್ನು ದ್ರಾವಣ ರೂಪದಲ್ಲಿ ಪಡೆದರೆ ಇನ್ನು ಕೆಲವು ಘನರೂಪದ ಆಹಾರ ವಸ್ತುವನ್ನು ಇಡಿಯಾಗಿಯೇ ನುಂಗಲು ಸಮರ್ಥವಾಗಿವೆ. ಇಂಥಾ ಕ್ರಿಯಾಚಟುವಟಿಕೆಗೆ ಫ್ಯಾಗೋಸೈಟೋಸಿಸ್ ಎಂದು ಹೆಸರು. ಇದನ್ನು ಅಮೀಬ, ಹೈಡ್ರ ಮೊದಲಾದ ಪ್ರಾಣಿಗಳಲ್ಲಿ, ಎಂಡೋಡರ್ಮಿನ ಕೆಲವು ಕೋಶಗಳಲ್ಲಿ, ಸ್ತನಿಗಳ ಬಿಳಿರಕ್ತ ಕಣಗಳಲ್ಲಿ ಕಾಣಬಹುದು.

3. ದ್ರವ ತುಂಬಿದ ಕೆಲವು ಚೀಲಗಳು ಪ್ಲಾಸ್ಮಪೊರೆಯಲ್ಲಿ ರೂಪುಗೊಂಡು ಕ್ರಮೇಣ ಮುಚ್ಚಿದ ಕೋಶ ಅಥವಾ ವೆಸಿಕಲ್‌ಗಳಾಗಿ ಬದಲಾಗಿ ಬೇರ್ಪಟ್ಟು ಕೋಶದ್ರವ್ಯದ ಒಳಭಾಗಕ್ಕೆ ಮುಳುಗಿ, ಕಡೆಗೆ ಒಡೆದು ಕಣ್ಮರೆಯಾಗುತ್ತವೆ. ಈ ರೀತಿ ದ್ರವವನ್ನು ಕುಡಿಯುವ ಅಥವಾ ಹೀರುವ ಪ್ರಕ್ರಿಯೆಗೆ ಪೈನೋಸೈಟೋಸಿಸ್ ಎಂದು ಹೆಸರು. ಈ ಪ್ರಕ್ರಿಯೆ ಪ್ರಾರಂಭವಾಗುವಾಗ ಕೋಶದ ಮೇಲಾಯದಲ್ಲಿ ಒಂದು ಭಾಗ ಅಂತರ್ವಲಿತವಾಗಿ ಒಂದು ಬಟ್ಟಲಿನಂತೆ ಮಾರ್ಪಡುತ್ತದೆ. ಅನಂತರ ಬಟ್ಟಲಿನಲ್ಲಿ ಬಾಹ್ಯಪರಿಸರದ ದ್ರವವಸ್ತು ತುಂಬುತ್ತದೆ. ಇದು ಕ್ರಮೇಣ ಮುಚ್ಚಿದ ಬಟ್ಟಲಾಗಿ ಮಾರ್ಪಟ್ಟು ಕೊನೆಗೆ ಕೋಶದ್ರವ್ಯದ ಒಳಗೆ ಮುಳುಗಿ ಈಜಾಡುತ್ತದೆ. ಈ ವೆಸಿಕಲ್ ಪ್ಲಾಸ್ಮಪೊರೆಯಿಂದ ಬೇರ್ಪಡುವಾಗ ಅದು ಮೂಡುವ ಸ್ಥಳದಲ್ಲಿ ಯಾವ ಬಗೆಯ ಹಾನಿಯೂ ಆಗದು. ಈ ಪ್ರಕ್ರಿಯೆಯಿಂದ ಕೋಶಕ್ಕೆ ನೀರು ಮತ್ತು ವಿಲೀನವಾದ ವಸ್ತು ಹೆಚ್ಚು ಪರಿಮಾಣದಲ್ಲಿ ದೊರಕುವ ಸಾಧ್ಯತೆಯಿದೆ. ಪ್ಲಾಸ್ಮಪೊರೆ ಕೇವಲ ಭೌತಿಕ ಸೀಮಾಪೊರೆಯಾಗಿ ಇರದೆ, ಜೀವಂತ ಸೀಮಾಪೊರೆಯೆಂದು ಈ ಪ್ರಕ್ರಿಯೆ ಸ್ಪಷ್ಟಪಡಿಸುತ್ತದೆ.

ಕೋಶಭಿತ್ತಿ (ಸೆಲ್‌ವಾಲ್): ಸಸ್ಯ ಕೋಶಗಳ ವಿಶಿಷ್ಟ ರಚನೆ. ಇದು ಪ್ಲಾಸ್ಮಪೊರೆಯಂತಿರದೆ ಕೋಶವನ್ನು ಸುತ್ತುವರಿದ ಜಡಸ್ವರೂಪದ ಗೋಡೆಯಂತಿದೆ. ಕೋಶಭಿತ್ತಿಗಳ ರೂಪ, ರಚನೆ ಮತ್ತು ರಾಸಾಯನಿಕ ವಸ್ತುಗಳಲ್ಲಿ ಭಿನ್ನತೆಯುಂಟು. ಪ್ಯಾರಂಕೈಮಾ ಕೋಶಗಳ ಕೋಶಭಿತ್ತಿ ತೆಳುವಾಗಿದ್ದರೆ ಕ್ಸೈಲಮ್ ಅಂಗಾಂಶದ ಕೋಶಗಳ ಕೋಶಭಿತ್ತಿ ಬಲು ದಪ್ಪ. ಕೋಶಗಳ ವಯಸ್ಸು ಹಾಗೂ ಚಟುವಟಿಕೆಗಳಿಗೆ ತಕ್ಕಂತೆ ಕೋಶಭಿತ್ತಿ ರಚನೆಯಲ್ಲಿ ವ್ಯತ್ಯಾಸಗಳಾಗುತ್ತವೆ. ಎಳೆವಯಸ್ಸಿನ ಕೋಶದ ಸುತ್ತ ಒಂದು ತೆಳುಭಿತ್ತಿಯುಂಟು. ಇದಕ್ಕೆ ಪ್ರಾಥಮಿಕ ಕೋಶಭಿತ್ತಿ (ಪ್ರೈಮರಿ ಸೆಲ್‌ವಾಲ್) ಎಂದು ಹೆಸರು. ಇದಕ್ಕೆ ಸ್ಥಿತಿಸ್ಥಾಪಕ ಗುಣವುಂಟು. ಕೋಶ ಬೆಳೆದಂತೆಲ್ಲ ಇದರ ಮೇಲಾಯ ಕೂಡ ವಿಸ್ತಾರವಾಗುತ್ತದೆ. ಇದರ ದಪ್ಪ 1–3ಮೈ. ಕೋಶದ ಬೆಳವಣಿಗೆ ನಿಂತರೆ ಇದರ ಬೆಳವಣಿಗೆಯೂ ನಿಲ್ಲುತ್ತದೆ. ಅಕ್ಕಪಕ್ಕದ ಕೋಶಗಳ ಪ್ರಾಥಮಿಕ ಭಿತ್ತಿಗಳು ಪರಸ್ಪರ ಪ್ರತ್ಯಕ್ಷವಾಗಿ ಸಂಧಿಸುವುದಿಲ್ಲ; ಅವುಗಳ ನಡುವೆ ಮಿಡಲ್ ಲ್ಯಾಮೆಲ ಎಂಬ ಮಧ್ಯಪದರವೊಂದುಂಟು. ವರ್ಧನ ಅಂಗಾಂಶಗಳಲ್ಲಿ ಇದು ಕೋಶಗಳ ಸೀಮಾಪೊರೆಯಾಗಿರುತ್ತದೆ. ಸಸ್ಯಗಳಲ್ಲಿ ಕಾಣಬರುವ ವಿಶೇಷ ರೀತಿಯ ಕೆಲವು ಕೋಶಗಳಲ್ಲಿ ಪ್ರಾಥಮಿಕ ಭಿತ್ತಿಯ ಒಳಭಾಗದಲ್ಲಿ ಮತ್ತೊಂದು ಗೋಡೆ ರೂಪುಗೊಂಡಿದೆ. ಇದಕ್ಕೆ ದ್ವಿತೀಯಕ ಭಿತ್ತಿ (ಸೆಕೆಂಡರಿ ವಾಲ್) ಎಂದು ಹೆಸರು. ಇದು ಪ್ರಾಥಮಿಕ ಭಿತ್ತಿಗೂ ಪ್ಲಾಸ್ಮಪೊರೆಗೂ ನಡುವಣ ಪ್ರದೇಶದಲ್ಲಿ ರೂಪುಗೊಂಡಿದೆ. ಇದರ ದಪ್ಪ 5–10ಮೈ. ಇದು ಬಲು ಗಡುಸಾದ ಭಿತ್ತಿ. ಕೋಶವಿಭಜನೆಯ ಕಾಲದಲ್ಲಿ ಹೊಸಕೋಶಭಿತ್ತಿ (ಮಿಡಲ್ ಲ್ಯಾಮೆಲ ಮತ್ತು ಪ್ರಾಥಮಿಕ ಭಿತ್ತಿ) ರೂಪುಗೊಳ್ಳುವಾಗ ಇದರಲ್ಲಿ ಕೆಲವು ರಂಧ್ರಗಳು ಅಥವಾ ದ್ವಾರಗಳು ರೂಪುಗೊಳ್ಳುತ್ತವೆ. ಹೊರನೋಟಕ್ಕೆ ಇವು ಕುಳಿಗಳಂತೆ ಕಾಣುತ್ತವೆ. ಇವುಗಳ ಮೂಲಕ ಅಕ್ಕಪಕ್ಕದ ಕೋಶದ ವಸ್ತುಗಳು ಒಂದರಿಂದ ಮತ್ತೊಂದಕ್ಕೆ ಹಾಯ್ದು ಹೋಗಬಹುದು. ಇವೇ ಪ್ಲಾಸ್ಮಡೆಸ್ಮಗಳು. ಕೆಲವು ಸಂದರ್ಭಗಳಲ್ಲಿ ಈ ಕುಳಿಗಳು ಸಂಕೀರ್ಣವಾಗಿದ್ದು ಅಂಚುಳ್ಳ ಕುಳಿಗಳೆನಿಸಿಕೊಳ್ಳುತ್ತವೆ. ಪ್ರಕಾಶ ಸೂಕ್ಷ್ಮದರ್ಶಕದಲ್ಲಿ ಈ ಗೋಡೆಯನ್ನು ನೋಡಿದರೆ ಇದು ಹಲವು ಪದರಗಳಿಂದ ಕೂಡಿರುವಂತೆ ಗೋಚರವಾಗುತ್ತದೆ. ಆದರೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಈ ಭಿತ್ತಿ ಸೂಕ್ಷ್ಮತಂತು ಅಥವಾ ಮೈಕ್ರೋಫೈಬ್ರಿಲ್ಲುಗಳಿಂದ ನಿರ್ಮಿತವಾಗಿರುವಂತೆ ಕಂಡುಬರುತ್ತದೆ. ಈ ಮೈಕ್ರೋಫೈಬ್ರಿಲ್ಲುಗಳು ವಾಸ್ತವವಾಗಿ ಮಾತೃಕೆಯಲ್ಲಿ (ಮ್ಯಾಟ್ರಿಕ್ಸ್) ಹುದುಗಿದೆ.

ಭೌತರೂಪದ ಈ ಸೂಕ್ಷ್ಮತಂತುಗಳು ರಾಸಾಯನಿಕವಾಗಿ ಸೆಲ್ಯುಲೋಸ್ ಅಣುಗಳ ನೀಳ ಸರಪಳಿಗಳು. ಸೆಲ್ಯುಲೋಸ್ ಅಣುಗಳು ಅಸಂಖ್ಯಾತ ಗ್ಲೂಕೋಸ್ ಅಣುಗಳಿಂದ ನಿರ್ಮಿತವಾದ ದೈತ್ಯಾಣುಗಳು; ಒಂದು ನೀಳವಾದ ಸೆಲ್ಯುಲೋಸ್ ಸರಪಳಿಯಲ್ಲಿ ಮೂರು ಸಾವಿರ ಗ್ಲೂಕೋಸು ಅಣುಗಳಿರುವುದುಂಟು. ಸೆಲ್ಯುಲೋಸಿನ ಸರಪಳಿಗಳು ಬಿಡಿಬಿಡಿಯಾಗಿರದೆ ಕಂತೆಕಂತೆಗಳಲ್ಲಿ ಗುಂಪುಕೂಡಿಕೊಂಡಿವೆ. ಇವೇ ಮೈಕ್ರೋಫೈಬ್ರಿಲುಗಳು. ಪ್ರಾಥಮಿಕ ಭಿತ್ತಿಯಲ್ಲಿ ಮೈಕ್ರೋಫೈಬ್ರಿಲುಗಳು ಬಿಡಿಬಿಡಿಯಾಗಿ ಹರಡಿವೆ. ಅವುಗಳ ನಡುವೆ ಕಾರ್ಬೊಹೈಡ್ರೇಟ್ ಮತ್ತು ಅದಕ್ಕೆ ಸಂಬಂಧಿಸಿದ ಹೆಮಿಸೆಲ್ಯುಲೋಸುಗಳು, ಪೆಕ್ಟಿನುಗಳು ಮತ್ತು ಲಿಗ್ನಿನುಗಳಿರುತ್ತವೆ. ಹೆಮಿಸೆಲ್ಯುಲೋಸಿನ ಸಂಯುಕ್ತಗಳಲ್ಲಿ ಪೆಂಟೋಸ್ ಪಾಲಿಸ್ಯಾಕರೈಡುಗಳುಂಟು. ಮಿಡಲ್ ಲ್ಯಾಮೆಲದಲ್ಲಿ ಪೆಕ್ಟಿನುಗಳು ಅಧಿಕ ಪ್ರಮಾಣದಲ್ಲಿವೆ. ಹೆಕ್ಸುರೋನಿಕ್ ಆಮ್ಲಗಳ ಅಣುಗಳಿಂದ ರೂಪುಗೊಂಡ ನೀಳ ಸರಪಳಿಗಳೇ ಪೆಕ್ಟಿನ್ನುಗಳು. ಇವುಗಳೊಂದಿಗೆ ಕ್ಯಾಲ್ಸಿಯಮ್ ಮತ್ತು ಮೆಗ್ನೀಸಿಯಮ್‌ಗಳು ಕೂಡಿ ಕ್ಯಾಲ್ಸಿಯಮ್ ಪೆಕ್ಟೇಟ್, ಮೆಗ್ನೀಸಿಯಮ್ ಪೆಕ್ಟೇಟ್ ಲವಣಗಳಾಗಿರುವುದೂ ಉಂಟು. ಇದು ಅಕ್ಕಪಕ್ಕದ ಕೋಶಗಳನ್ನು ಬಂಧಿಸುವ ಒಂದು ಬಗೆಯ ಸಿಮೆಂಟಿನಂತಿದೆ. ರಾಸಾಯನಿಕ ವಸ್ತುಗಳಿಂದ ಪೆಕ್ಟಿನನ್ನು ವಿಚ್ಛಿದ್ರಗೊಳಿಸಿದರೆ ಅಥವಾ ತೆಗೆದರೆ ಕೋಶಗಳು ಬೇರ್ಪಡುತ್ತವೆ. ಕೋಶ ಪ್ರೌಢಾವಸ್ಥೆಗೆ ಬಂದಾಗ ದ್ವಿತೀಯಕ ಭಿತ್ತಿ ರೂಪುಗೊಳ್ಳುವಾಗ ಲಿಗ್ನಿನ್ ಅದರಲ್ಲಿ ಹೇರಳವಾಗಿ ಸಂಗ್ರಹಗೊಂಡು ಜೀವಕೋಶದ ಗೋಡೆಗೆ ಗಡುಸುತನವನ್ನು ಕೊಡುತ್ತದೆ. ಇದು ಸೆಲ್ಯುಲೋಸಿನಂತೆ ಮೈಕ್ರೋಫೈಬ್ರಿಲುಗಳ ರೂಪದಲ್ಲಿಲ್ಲ. ಆದರೆ ಅದು ಸೆಲ್ಯುಲೋಸನ್ನು ಸುತ್ತುವರಿದ ಮಾತೃಕೆಯ ಪ್ರಮುಖ ಭಾಗವಾಗಿದೆ. ಅಲ್ಲದೆ ಇದು ಸೆಲ್ಯುಲೋಸು ಇದ್ದೆಡೆಯಲ್ಲಿ ಮಾತ್ರ ಕಂಡುಬರುತ್ತದೆ. ಇದು ಪ್ರಾಥಮಿಕ ಭಿತ್ತಿ ಮತ್ತು ಮಿಡಲ್ ಲ್ಯಾಮೆಲಗಳಲ್ಲಿಯೂ ಅಲ್ಪ ಪ್ರಮಾಣದಲ್ಲಿ ಕಂಡುಬರುವುದುಂಟು. ಸಸ್ಯಗಳ ಮೇಲಾಯದಲ್ಲಿರುವ ಕೆಲವು ಕೋಶಗಳಲ್ಲಿ ಮೇಣಗಳ ಹೊಂದಿಕೆ ಕೂಡ ಕಂಡುಬರುವುದುಂಟು. ಕೆಲವು ಶಿಲೀಂಧ್ರಗಳ ಕೋಶಗಳ ಗೋಡೆಯಲ್ಲಿ ಕೈಟಿನ್ ಎಂಬ ವಸ್ತುವೂ ಇದೆ. ಕೆಲವು ಬಗೆಯ ಹುಲ್ಲಿನ ಕೋಶಗಳ ಗೋಡೆಯಲ್ಲಿ ಸಿಲಿಕ ಎಂಬ ರಾಸಾಯನಿಕ ವಸ್ತು ಇದೆ. ಬ್ಯಾಕ್ಟೀರಿಯ ಮತ್ತು ನೀಲಿಹಸಿರು ಪಾಚಿಯ ಕೋಶಗಳಲ್ಲಿ ಅಮೈನೋ ಆಮ್ಲ ಮತ್ತು ಪ್ರೋಟೀನುಗಳು ಹೇರಳವಾಗಿ ಉಂಟು.

ಭಿತ್ತಿ ಬೆಳವಣಿಗೆಯ ಬಗ್ಗೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಅಧ್ಯಯನಗಳು ಹೆಚ್ಚು ಬೆಳಕು ಚೆಲ್ಲಿವೆ. ಎಳೆಯ ಕೋಶಗಳ ಭಿತ್ತಿಗಳಲ್ಲಿ ಮೈಕ್ರೋಫೈಬ್ರಿಲ್ಲುಗಳ ಅಭಿವಿನ್ಯಾಸ ನಿಯಮಬದ್ಧವಾಗಿಲ್ಲ. ಆದರೆ ಕೋಶಗಳು ಬೆಳೆದಂತೆಲ್ಲ ಈ ತಂತುಗಳು ಪದರಪದರವಾಗಿ ಸಂಗ್ರಹವಾಗುತ್ತವೆ. ತತ್ಫಲವಾಗಿ ಇಡೀ ಗೋಡೆ ದಪ್ಪವಾಗುತ್ತ ಬರುತ್ತದೆ. ಗೋಡೆಯ ಇಂಥ ಬೆಳವಣಿಗೆಗೆ ಅಪೊಸಿಷನ್ ಅಥವಾ ಸ್ತರಾಧಾನ ಎಂದು ಹೆಸರು. ಆದರೆ ಕೆಲವು ಕೋಶಗಳಲ್ಲಿ ಹೊಸ ಹೊಸ ಮೈಕ್ರೋಫೈಬ್ರಿಲ್ಲುಗಳು ಕೇವಲ ಮೇಲಾಯದಲ್ಲಲ್ಲದೆ ನಡುನಡುವೆ ಸೇರಿಕೊಳ್ಳುವುದೂ ಉಂಟು. ಹೀಗೆ ಬೆಳೆವ ರೀತಿಗೆ ಇಂಟರ್‌ಕ್ಯಾಲರಿ ಅಥವಾ ಅಂತರ್ವಿಷ್ಟ ಬೆಳವಣಿಗೆ ಎಂದು ಹೆಸರು. ರೋಮ ಬೇರುಗಳಲ್ಲಿ ಹಾಗೂ ಪರಾಗನಾಳಗಳಲ್ಲಿ ಬೆಳವಣಿಗೆ ಈ ರಚನೆಗಳ ತುದಿಭಾಗಕ್ಕೆ ಮಾತ್ರ ಸೀಮಿತವಾಗಿದೆ. ಇಂಥದಕ್ಕೆ ಅಗ್ರಸ್ಥ (ಟರ್ಮಿನಲ್) ಬೆಳವಣಿಗೆ ಎಂದು ಹೆಸರು.

ಎಂಡೋಪ್ಲಾಸಮ್ ಜಾಲ (ಎಂಡೋಪ್ಲಾಸ್ಮಿಕ್ ರೆಟಿಕ್ಯುಲಮ್): ಎಲೆಕ್ಟ್ರಾನ್ ಸೂಕ್ಷ್ಮದರ್ಶಿ ಬಳಕೆಗೆ ಬರುವುದಕ್ಕೆ ಮುಂಚೆ ಕೋಶದ ದ್ರವ್ಯ ಒಂದು ಏಕರೀತಿಯಾದ ಜೆಲ್ಲಿ ಸದೃಶ ವಸ್ತುವೆಂದೂ ಇದರಲ್ಲಿ ಕೋಶಕೇಂದ್ರ, ಮೈಟೊಕಾಂಡ್ರಿಯ, ಗಾಲ್ಗಿ ಸಂಕೀರ್ಣ, ಪ್ಲಾಸ್ಟಿಡುಗಳು ಮೊದಲಾದುವು ಹುದುಗಿರುವುವೆಂದೂ ಭಾವಿಸಲಾಗಿತ್ತು. ಅಲ್ಲದೆ ಕ್ಷಾರೀಯ ಅಭಿರಂಜಕಗಳನ್ನು ಬಳಸಿ ರಂಗುಗಟ್ಟಿಸಿದಾಗ ಕೋಶದ್ರವ್ಯದಲ್ಲಿ ಕಂಡುಬಂದ ಒಂದು ರಚನೆ (ಇದಕ್ಕೆ ಗಾರ್ನಿಯರ್ ಎಂಬಾತ 1887ರಲ್ಲಿ ಎರ್ಗಾಸ್ಟೋಪ್ಲಾಸಮ್ ಎಂದು ಹೆಸರಿಸಿದ್ದ) ಸ್ಥಿರೀಕರಣದಿಂದ ಉಂಟಾದ ಕೃತಕ ವಸ್ತುವೆಂದು ಪರಿಗಣಿಸಲ್ಪಟ್ಟಿತು. ಆದರೆ 1950ರ ಅನಂತರ ಪೋರ್ಟರ್, ಕ್ಲಾಡ್ ಮತ್ತು ಫುಲ್ಹಾಮ್‌ರವರು ಕೋಶದ್ರವ್ಯದಲ್ಲಿ ಸಂಕೀರ್ಣವಾದ ಒಂದು ಜಾಲರಚನೆ ಇದೆ ಎಂಬುದನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಹಾಯದಿಂದ ಗುರುತಿಸಿದರು. ಇದು ಪ್ರಧಾನವಾಗಿ ಕೋಶದ ಎಂಡೋಪ್ಲಾಸಮಿಗೆ ಸೀಮಿತವಾದ್ದರಿಂದ ಇದಕ್ಕೆ ಎಂಡೋಪ್ಲಾಸಮಿನ ಜಾಲ ಎಂಬ ಹೆಸರು ಕೊಡಲಾಯಿತು. ಕೆಲವರ ದೃಷ್ಟಿಯಲ್ಲಿ ಇದು ಕೋಶದ್ರವ್ಯದಲ್ಲಿನ ಒಂದು ತೆರನ ರಸದಾನಿ ಮಂಡಲ (ವ್ಯಾಕ್ಯುಯೋಲಾರ್ ಸಿಸ್ಟಮ್). ಕೆಲವು ಕೋಶಗಳಲ್ಲಿ ಇದರ ಇರುವಿಕೆಯನ್ನು ಪ್ರಾವಸ್ಥಾ ವೈದೃಶ್ಯ (ಫೇಸ್ ಕಾಂಟ್ರಾಸ್ಟ್) ಸೂಕ್ಷ್ಮದರ್ಶಕದ ನೆರವಿನಿಂದಲೂ ಗುರುತಿಸಬಹುದಾಗಿದೆ. ಪ್ಲಾಸ್ಮಪೊರೆಯಂತೆಯೇ ಇದು ಕೂಡ ಲಿಪಿಡ್ ಮತ್ತು ಪ್ರೋಟೀನುಗಳಿಂದ ನಿರ್ಮಿತವಾದದ್ದು. ಕೋಶದ್ರವ್ಯದಲ್ಲಿ ವ್ಯಾಪಕವಾಗಿ ಹರಡಿರುವ ಪೊರೆಗಳ ಮಂಡಲವೇ ಎಂಡೋಪ್ಲಾಸಮಿನ ಜಾಲ. ಇದರ ರೂಪ, ರಚನೆ ಮತ್ತು ಬೆಳವಣಿಗೆಗಳು ಬಾಹ್ಯ ಪರಿಸರ, ಕೋಶದ ವಯಸ್ಸು ಮತ್ತು ಕ್ರಿಯೆಗಳಿಗನುಗುಣವಾಗಿ ವ್ಯತ್ಯಾಸವಾಗುತ್ತವೆ. ಅಲ್ಲದೆ ಕೋಶದಲ್ಲಿ ಇದರ ವ್ಯಾಪ್ತಿ ಏಕರೂಪದ್ದಾಗಿಲ್ಲ. ಚುರುಕಾಗಿ ವಿಭಜನೆಯಾಗುತ್ತಿರುವ ಕೋಶಗಳಲ್ಲಿ ಇದರ ಬೆಳವಣಿಗೆ ಸುಪ್ತಾವಸ್ಥೆಯಲ್ಲಿರುವ ಕೋಶಗಳಲ್ಲಿ ಕಂಡುಬರುವುದಕ್ಕಿಂತ ಅಧಿಕ. ಇದು ಎಲ್ಲ ಕೋಶಗಳಲ್ಲಿ ಕಂಡುಬಂದರೂ ಸ್ತನಿಗಳ ಪ್ರಾಯಸ್ಥ ಕೆಂಪು ರಕ್ತಕಣಗಳಲ್ಲಿ ಮಾತ್ರ ಅಗೋಚರ. ಆದರೆ ಸ್ರಾವಕಾರ್ಯದಲ್ಲಿ ನಿರತವಾಗಿರುವ ಮೇದೋಜೀರಕ ಗ್ರಂಥಿಯ ಮತ್ತು ಯಕೃತ್ತಿನ ಕೋಶಗಳಲ್ಲಿ ಇದು ಚೆನ್ನಾಗಿ ರೂಪುಗೊಂಡಿದೆ.

ಕೋಶಗಳ ಕೊಯ್ತಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದಾಗ ಅವುಗಳಲ್ಲಿ ಪೊರೆ ಘಟಕಗಳ ಸರಣಿ ಸಮಾಂತರವಾಗಿ ಹರಡಿರುವಂತೆ ಕಾಣುತ್ತದೆ. ನವುರಾದ ಎಂಡೋಪ್ಲಾಸಮ್ ಜಾಲ ಮತ್ತು ಒರಟಾದ ಎಂಡೋಪ್ಲಾಸಮ್ ಜಾಲ ಎಂಬ ಎರಡು ಬಗೆಯ ಎಂಡೋಪ್ಲಾಸಮ್ ಜಾಲಗಳಿವೆ. ಒರಟಾದ ಎಂಡೋಪ್ಲಾಸಮ್ ಜಾಲದ ಹೊರಮೈ ಮೇಲೆ ರೈಬೋಸೋಮುಗಳು ಅಂಟಿಕೊಂಡಿರುತ್ತವೆ. ನವುರಾದ ಎಂಡೋಪ್ಲಾಸಮ್ ಜಾಲದಲ್ಲಿ ಇವುಗಳಿರುವುದಿಲ್ಲ. ಇವೆರಡರಲ್ಲೂ ಪ್ರಧಾನವಾಗಿ 3 ಬಗೆಯ ರೂಪುರಚನೆಗಳನ್ನು ಗುರುತಿಸಬಹುದು:

1. ಸಿಸ್ಟರ್ನಗಳು: ಇವು ನೀಳವಾದ ಹಾಗೂ ಚಪ್ಪಟೆಯಾದ ಘಟಕಗಳು. ಇವುಗಳ ದಪ್ಪ 40–50ಮಿಮ್ಯೆ. ಇವು ಸಮಾಂತರವಾಗಿ ಜೋಡಣೆಗೊಂಡಿವೆ. ಪಚನಕಾರಿ ಕಿಣ್ವಗಳನ್ನು ಉತ್ಪಾದಿಸುವ ಮೇದೋಜೀರಕ ಗ್ರಂಥಿಯ ಜೀವಕೋಶಗಳಲ್ಲಿ ಇವುಗಳ ರಚನೆಯನ್ನು ಸ್ಪಷ್ಟವಾಗಿ ಕಾಣಬಹುದು.
2. ವೆಸಿಕಲ್ಲುಗಳು: ಇವುಗಳ ಆಕಾರ ದುಂಡು ಮತ್ತು ವ್ಯಾಸ 25–500ಮಿಮ್ಯೆ.
3. ಕಿರುನಳಿಕೆಗಳು: ಸ್ರಾವ ಕಾರ್ಯವಿಲ್ಲದ ಕೋಶಗಳಲ್ಲಿ ಇವು ಸಾಮಾನ್ಯ ನಾಳಗಳಂತಿವೆ. ಇವುಗಳ ವ್ಯಾಸ 50–100Å.

ಎಂಡೋಪ್ಲಾಸಮ್ ಜಾಲ ಕೋಶದ್ರವ್ಯದಲ್ಲಿ ವ್ಯಾಪಕವಾಗಿ ಹಾಗೂ ಅಡ್ಡಾದಿಡ್ಡಿಯಾಗಿ ಹರಡಿದ್ದರೂ ಇದು ಒಂದು ಕಡೆ ಪ್ಲಾಸ್ಮಪೊರೆಯೊಡನೆಯೂ ಮತ್ತೊಂದು ಕಡೆ ಕೋಶಕೇಂದ್ರದ ಪೊರೆಯೊಡನೆಯೂ ಕೂಡಿರುವಂತೆ ತೋರುತ್ತದೆ. ಇಂಥ ಕೂಡಿಕೆಯ ಸ್ಥಳಗಳಲ್ಲಿ ಇದು ಪ್ಲಾಸ್ಮಪೊರೆಯ ಒಳಮಡಿಕೆಯಾಗಿಯೂ ಕೋಶಕೇಂದ್ರದ ಪೊರೆಯ ಹೊರಮಡಿಕೆಯಾಗಿಯೂ ಮುಂದುವರಿದಿರುವಂತೆ ಕಾಣುತ್ತದೆ. ಅಲ್ಲದೆ ಗಾಲ್ಗಿ ಸಂಕೀರ್ಣದೊಂದಿಗೂ ಇದು ಸಂಬಂಧ ಬೆಳೆಸಿರುವಂತೆ ತೋರುತ್ತದೆ. ಎಂಡೋಪ್ಲಾಸಮ್ ಜಾಲದ ಉಗಮ ಮತ್ತು ರೂಪುಗೊಳ್ಳುವಿಕೆಯ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ದೊರೆಯಬೇಕಾಗಿದೆ. ಕೋಶಪೊರೆ ಒಳಮಡಿಕೆಯಾಗಿ ಮೂಡಿ ಕೊನೆಗೆ ವ್ಯಾಪಕವಾಗಿ ಜಾಲದಂತೆ ರೂಪುಗೊಳ್ಳುತ್ತದೆ ಎಂದು ಕೆಲವರು ಭಾವಿಸಿದರೆ ಇನ್ನು ಕೆಲವರು ಕೋಶಕೇಂದ್ರದ ಬಳಿಯಿರುವ ಸಕೇಂದ್ರ ವರ್ತುಲಗಳಿಂದ ಕೂಡಿದ ನೆಬೆನ್‌ಕೆರ್ನ್ ಎಂಬ ವಸ್ತುವಿನಿಂದ ಇದು ಹುಟ್ಟುತ್ತದೆ ಎಂದು ನಂಬುತ್ತಾರೆ. ಅದರ ಹುಟ್ಟಿಗೆ ನ್ಯೂಕ್ಲಿಯಾರ್ ಪೊರೆಯಿರಲೇಬೇಕೆಂದು ವಾದಿಸುವವರೂ ಉಂಟು. ಮೈಟೋಕಾಂಡ್ರಿಯದ ಪೊರೆಯಿಂದ ಇದು ರೂಪುಗೊಳ್ಳಬಹುದೆಂದು ಉಳಿದವರು ಬಗೆಯುತ್ತಾರೆ.

ಈ ಜಾಲ ಹಲವು ಬಗೆಯ ಕಾರ್ಯವಿಶೇಷಗಳನ್ನು ನಿರ್ವಹಿಸುತ್ತದೆ: ಕೋಶದ ಒಳಗೆ ರೈಬೊಸೋಮುಗಳು ಸಂಶ್ಲೇಷಿಸುವ ಪ್ರೋಟೀನು ಮೊದಲಾದ ಸಿದ್ಧವಸ್ತುಗಳನ್ನು ದಾಸ್ತಾನು ಮಾಡುವ ಹಾಗೂ ಸಾಗಣೆ ಮಾಡುವ ಮಂಡಲ ಇದು ಎಂಬುದಕ್ಕೆ ಕೆಲವು ಕುರುಹುಗಳಿವೆ. ಇದು ಕೋಶದೊಳಗಿನ ಒಂದು ಬಗೆಯ ಪರಿಚಲನ ಮಂಡಲ ; ವಿವಿಧ ವಸ್ತುಗಳನ್ನು ಕೋಶದ ವಿವಿಧ ಭಾಗಗಳಿಗೂ ಕೋಶದಿಂದ ಹೊರಕ್ಕೂ ಸಾಗಿಸುವ ಕ್ರಿಯಾವಿನ್ಯಾಸ. ಜಾಲದ ಪೊರೆಗಳು ಕೋಶದ್ರವ್ಯದಲ್ಲಿ ವಿಶಾಲವಾದ ಮೇಲಾಯವನ್ನು ಒದಗಿಸುವುದರಿಂದ ಚಯಾಪಚಯ ಕ್ರಿಯೆಗಳು ಅಧಿಕ ಮೊತ್ತದಲ್ಲಿ ನಡೆಯಲು ಸಾಧ್ಯವಾಗುತ್ತದೆ. ಇದರ ಮೇಲಾಯದಲ್ಲಿ ರೈಬೊಸೋಮುಗಳು ಅಂಟಿಕೊಂಡಿರುವುದರಿಂದ ಪರೋಕ್ಷವಾಗಿ ಪ್ರೋಟೀನು ಸಂಶ್ಲೇಷಣೆಯಲ್ಲಿ ಇದು ನೆರವಾಗುತ್ತದೆ. ಇದು ಪ್ಲಾಸ್ಮಪೊರೆಯೊಡನೆ ನಿಕಟಸಂಬಂಧ ಪಡೆದಿರುವುದರಿಂದ ಕೋಶಭಿತ್ತಿಯ ನಿರ್ಮಾಣದಲ್ಲಿ ಭಾಗಿಯಾಗಬಹುದು. ಕೋಶವಿಭಜನೆಯ ಕಾಲದಲ್ಲಿ ಹೊಸ ಕೋಶಕೇಂದ್ರದ ಪೊರೆಯನ್ನು ರೂಪಿಸುವುದರಲ್ಲಿ ಇದು ಪಾತ್ರವಹಿಸಬಹುದು. ಸಸ್ಯಗಳ ಅಂಗಾಂಶಗಳಲ್ಲಿ ಅಕ್ಕಪಕ್ಕದ ಕೋಶಗಳಿಗೆ ಸಂಪರ್ಕ ಬೆಳೆಸುವ ಪ್ಲಾಸ್ಮಡೆಸ್ಮಗಳು ಈ ಜಾಲದ ಭಾಗಗಳಾಗಿರಬಹುದು. ನರಕೋಶ ಮತ್ತು ಸ್ನಾಯುಕೋಶಗಳಲ್ಲಿ ಉದ್ದೀಪನಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯುವ ಸಾಧನವಾಗಿರಬಹುದು. ಸಸ್ಯಗಳ ಬಹುತೇಕ ಕೋಶಗಳಲ್ಲಿ ಅದರಲ್ಲೂ ರಸದಾನಿಗಳಿಂದ ಕೂಡಿದುವುಗಳಲ್ಲಿ, ಕೋಶದ್ರವ್ಯ ಚಟುವಟಿಕೆಯಿಂದ ಪ್ರವಹಿಸುವುದನ್ನು ಕಾಣಬಹುದು. ರಸದಾನಿಯನ್ನು ಪ್ರದಕ್ಷಿಣೆ ಮಾಡುವ ಈ ಚಲನೆಗೆ ಸೈಕ್ಲೋಸಿಸ್ ಎಂದು ಹೆಸರು. ಈ ಚಲನೆಯ ಗತಿ ಎಂಡೊಪ್ಲಾಸಮಿನ ಜಾಲದ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಹಾಗೂ ಈ ಪ್ರವಾಹಗತಿಯನ್ನು ನಿಯಂತ್ರಿಸುವ ಕ್ರಿಯಾವಿನ್ಯಾಸಗಳಾವುವು ಎಂಬುವು ಪ್ರಶ್ನೆಗಳಾಗಿಯೇ ಉಳಿದಿವೆ.

ರೈಬೊಸೋಮುಗಳು : ಕೋಶಗಳನ್ನು ಆಸ್ಮಿಯಮ್ ಟೆಟ್ರಾಕ್ಸೈಡಿನಲ್ಲಿ ಸ್ಥಿರೀಕರಿಸಿ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಸುಮಾರು 250Å ವ್ಯಾಸದ ಗೋಲಾಕಾರದ ವಸ್ತುಗಳು ಅಪರಿಮಿತ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಇವೇ ರೈಬೊಸೋಮುಗಳು. ಪಲಾಡೆ ಎಂಬಾತ 1955ರಲ್ಲಿ ಇವನ್ನು ಗುರುತಿಸಿದ. ಇವು ಬ್ಯಾಕ್ಟೀರಿಯ, ಯೀಸ್ಟ್, ಸಸ್ಯ ಹಾಗೂ ಪ್ರಾಣಿಗಳ ಕೋಶಗಳಲ್ಲೆಲ್ಲ ಕಂಡುಬಂದಿವೆ. ಇವು ಕೋಶದ್ರವ್ಯದಲ್ಲಿ ಹರಡಿರಬಹುದು ಅಥವಾ ಎಂಡೊಪ್ಲಾಸಮಿನ ಜಾಲಕ್ಕೆ ಅಂಟಿಕೊಂಡಿರಬಹುದು, ಬಿಡಿಬಿಡಿಯಾಗಿರಬಹುದು, ಇಲ್ಲವೆ ಗುಂಪುಗೂಡಿರಬಹುದು. ಗುಂಪುಗೂಡಿದ ರೈಬೊಸೋಮುಗಳಿಗೆ ಪಾಲಿಸೋಮುಗಳೆಂದು ಹೆಸರು. ಹೆಚ್ಚಾಗಿ ಪ್ರೋಟೀನು ಸಂಶ್ಲೇಷಣೆ ಮಾಡುವ ಕೋಶಗಳಲ್ಲಿ ಇವುಗಳ ಸಂಖ್ಯೆ ಅಪಾರ. ರೈಬೊಸೋಮುಗಳು ರಾಸಾಯನಿಕವಾಗಿ ರೈಬೊನ್ಯೂಕ್ಲಿಯೋಪ್ರೋಟೀನುಗಳು. ಆದ್ದರಿಂದಲೇ ಇವಕ್ಕೆ ಈ ಹೆಸರು ಬಂದಿದೆ. ಇವುಗಳಲ್ಲಿ ಆರ್‌ಎನ್‌ಎ 40%–60% ಇದ್ದರೆ ಪ್ರೋಟೀನು ಭಾಗ 60%–40% ಇದೆ. ಪ್ರೋಟೀನು ಭಾಗ ಆರ್‌ಎನ್‌ಎ ಯನ್ನು ಸುತ್ತುವರಿದಿರಬೇಕೆಂಬ ಊಹೆಯೂ ಇದೆ. ಪ್ರತಿ ರೈಬೊಸೋಮಿನಲ್ಲೂ ಎರಡು ಘಟಕಗಳಿರುತ್ತವೆ–ಒಂದು ಸಣ್ಣದು, ಮತ್ತೊಂದು ದೊಡ್ಡದು. ಪ್ರೋಕ್ಯಾರಿಯೋಟ ಗುಂಪಿನ ಜೀವಿಗಳ ರೈಬೊಸೋಮುಗಳಲ್ಲಿ 30S ಮತ್ತು 50S ಘಟಕಗಳಿದ್ದರೆ, ಯೂಕ್ಯಾರಿಯೋಟ ಗುಂಪಿನ ಜೀವಿಗಳ ರೈಬೊಸೋಮುಗಳಲ್ಲಿ 40S ಮತ್ತು 60S ಘಟಕಗಳಿರುತ್ತವೆ. ಪ್ರೋಕ್ಯಾರಿಯೋಟ ಗುಂಪಿನ ಜೀವಿಗಳ ಪೂರ್ಣರೈಬೊಸೋಮ್ 70S ತೆರನಾಗಿದ್ದರೆ ಯೂಕ್ಯಾರಿಯೋಟ ಗುಂಪಿನ ಜೀವಿಗಳಲ್ಲಿ 80S ತರದ್ದು. ರೈಬೊಸೋಮುಗಳ ಸಂಖ್ಯೆಗೂ ಪ್ರೋಟೀನು ಸಂಶ್ಲೇಷಣೆಯ ಗತಿಗೂ ನಿಕಟ ಸಂಬಂಧ ಉಂಟು. ಮೈಕ್ರೋಸೋಮುಗಳೆಂಬ ಹೆಸರಿನ ವಸ್ತುಗಳು ಕೋಶದ ಅಂಗಕ ಅಥವಾ ರಚನಾತ್ಮಕ ಘಟಕಗಳಲ್ಲ. ಕೋಶಗಳನ್ನು ಸಮಸಾಂದ್ರೀಕರಿಸಿದಾಗ (ಹೋಮೋಜಿನೇಟ್) ಇಡೀ ಕೋಶಗಳು ಒಡೆದು ಚೂರುಚೂರಾಗುತ್ತವೆ. ಇಂಥ ಚೂರುಗಳನ್ನು ತೀವ್ರತಮ ವೇಗದ ಅಪಕೇಂದ್ರಕದಲ್ಲಿಟ್ಟು ತಿರುಗಿಸಿ ಭಿನ್ನ ಅಂಶಗಳಾಗಿ ಬೇರ್ಪಡಿಸಬಹುದು. ಇಂಥ ಚೂರುಗಳಲ್ಲಿ ಕೆಲವು ರೈಬೊಸೋಮುಗಳಿಂದ ಕೂಡಿದ ಎಂಡೊಪ್ಲಾಸಮ್ ಜಾಲದ ತುಣುಕುಗಳಾಗಿರಬಹುದು. ಆರ್‌ಎನ್‌ಎ ಕಣಗಳಿಂದ ಕೂಡಿದ ಗಾಲ್ಗಿ ವಸ್ತುವಿನ ಚೂರುಗಳಾಗಿರಬಹುದು, ಇಲ್ಲವೆ ಕೋಶದ ಶೇಷಾಂಶಗಳಾಗಿರಬಹುದು. ಇವೇ ಮೈಕ್ರೋಸೋಮುಗಳು.

ರೈಬೊಸೋಮುಗಳ ಪ್ರಮುಖ ಕಾರ್ಯ ಪ್ರೋಟೀನುಗಳ ಸಂಶ್ಲೇಷಣೆ.

ಮೈಟೊಕಾಂಡ್ರಿಯ : ಇವು ಕೋಶದ್ರವ್ಯದಲ್ಲಿ ಕಂಡುಬರುವ ಅತ್ಯಂತ ದೊಡ್ಡ ಗಾತ್ರದ ಅಂಗಕಗಳು; ಕೋಶದ ಕ್ರಿಯೆಗಳಿಗೆ ಬೇಕಾದ ಶಕ್ತಿಯನ್ನು ಉತ್ಪಾದಿಸುವ ಜೀವರಾಸಾಯನಿಕ ಯಂತ್ರಗಳು. ಇವುಗಳ ರಿಫ್ರೇಕ್ಷಣಾಂಕ ಬಹಳ ಕಡಿಮೆ ಇರುವುದರಿಂದ ಇವನ್ನು ಜೀವಂತ ಕೋಶಗಳಲ್ಲಿ ಗುರುತಿಸುವುದು ಕಷ್ಟ. ಆದರೆ ಪ್ರಾವಸ್ಥಾವೈದೃಶ್ಯ ಸೂಕ್ಷ್ಮದರ್ಶಕದಲ್ಲಿ ಇವನ್ನು ಸುಲಭವಾಗಿ ನೋಡಬಹುದು. ಅಲ್ಲದೆ ಜೀವಂತ ಕೋಶಗಳಲ್ಲಿ ಜೇನಸ್ ಹಸಿರು ಅಭಿರಂಜಕ ಸಹಾಯದಿಂದ ಈ ವಸ್ತುಗಳನ್ನು ರಂಗುಗಟ್ಟಿಸಿಯೂ

ಗುರುತಿಸಬಹುದು. ಸ್ಥಿರೀಕರಣ ವಿಧಾನಗಳಲ್ಲಿ ಲೈಪೊಪ್ರೋಟೀನು ನಾಶಗೊಳಿಸಿದ ರಾಸಾಯನಿಕ ವಸ್ತುಗಳನ್ನು ಉಪಯೋಗಿಸಿ ಐರನ್ ಹಿಮಟಾಕ್ಸಿಲಿನ್ (ಆಸಿಡ್ ಫುಕ್ಸಿನ್) ಅಭಿರಂಜಕಗಳನ್ನು ಬಳಸಿ ಅವುಗಳಿಗೆ ರಂಗುಗಟ್ಟಿಸಿ ಅಧ್ಯಯನ ಮಾಡುವುದು ಸಂಪ್ರದಾಯ. ಅಲ್ಲದೆ ಮೈಟೊಕಾಂಡ್ರಿಯಗಳ ಒಳಗೆ ಅಡಕವಾಗಿರುವ ಕಿಣ್ವಗಳನ್ನು ಗುರುತಿಸುವ ರಾಸಾಯನಿಕ ವಸ್ತುಗಳೂ ಬಳಕೆಗೆ ಬಂದಿವೆ. ಮೈಟೊಕಾಂಡ್ರಿಯಗಳ ಗಾತ್ರದಲ್ಲಿ ವೈಪರೀತ್ಯಗಳು ಸರ್ವೇ ಸಾಮಾನ್ಯ. ಪೌಷ್ಟಿಕ ಮಾಧ್ಯಮದಲ್ಲಿ ಬೆಳೆಸಿದ ಜೀವಂತ ಫೈಬ್ರೋಬ್ಲಾಸ್ಟ್ ಕೋಶಗಳನ್ನು ಪ್ರಾವಸ್ಥಾವೈದೃಶ್ಯ ಸೂಕ್ಷ್ಮದರ್ಶಕದಲ್ಲಿಟ್ಟು ನೋಡಿದರೆ ಹಾಗೂ ಅವುಗಳ ಚಲನಚಿತ್ರವನ್ನು ತೆಗೆದು ಪರೀಕ್ಷಿಸಿದರೆ, ಅವುಗಳ ರೂಪ, ಆಕಾರ, ಗಾತ್ರ ಮತ್ತು ಕೋಶದೊಳಗಿನ ಸ್ಥಾನಮಾನಗಳಲ್ಲಿ ಬದಲಾವಣೆಗಳಾಗುತ್ತಿರುವುದು ಕಾಣುತ್ತದೆ. ಕೇವಲ ವಿವಿಧ ಕೋಶಗಳಲ್ಲಿ ಮಾತ್ರವಲ್ಲದೆ ವಿವಿಧ ಅಂಗಾಶಗಳ ಕೋಶಗಳಲ್ಲೂ ಇವುಗಳ ಗಾತ್ರದಲ್ಲಿ ವ್ಯತ್ಯಾಸವಿರುವುದನ್ನು ನೋಡಬಹುದು. ಈ ವ್ಯತ್ಯಾಸಕ್ಕೆ ಕೋಶದೊಳಗಿನ ಪರಿಸರ ಕಾರಣ. ಒಂದು ಪ್ರರೂಪೀ ಮೈಟೊಕಾಂಡ್ರಿಯ ನೇರಳೆ ಹಣ್ಣಿನ ಆಕಾರದ್ದು. ಆದರೆ ಇದು ದುಂಡನೆಯ ಅಥವಾ ನೀಳವಾದ ತಂತು ರೂಪದ ಆಕಾರದ್ದೂ ಆಗಿರಬಹುದು. ಅಲ್ಲದೆ ಇದರ ಯಾವುದಾದರೊಂದು ಪ್ರದೇಶ ಉಬ್ಬಿ ಗದೆ, ಟೆನಿಸ್ ರ್ಯಾಕೆಟ್ ಇತ್ಯಾದಿ ಆಕಾರವನ್ನೂ ಪಡೆಯಬಹುದು. ಮೈಟೊಕಾಂಡ್ರಿಯಗಳು ಸಾಮಾನ್ಯವಾಗಿ ಕೋಶದಲ್ಲಿ ವಿರಳವಾಗಿ ಹರಡಿರುತ್ತವೆ. ಆದರೆ ಕೆಲವು ಕೋಶಗಳಲ್ಲಿ ಒಂದು ನಿರ್ದಿಷ್ಟ ಭಾಗದಲ್ಲಿ ಗುಂಪುಗೂಂಡಿರುವುದೂ ಉಂಟು. ಅಲ್ಲದೆ ಕೋಶವಿಭಜನೆಯಲ್ಲಿ ಇವು ಮರಿಕೋಶಗಳಿಗೆ ಸಮಸಂಖ್ಯೆಯಲ್ಲಿ ಹಂಚಿಹೋಗುತ್ತವೆ. ಇವುಗಳ ಸಂಖ್ಯೆ 500ರಿಂದ 5,00,000ದ ವರೆಗೆ ವ್ಯತ್ಯಾಸವಾಗುತ್ತದೆ. ಇಲಿಯ ಯಕೃತ್ತಿನ ಕೋಶದಲ್ಲಿ ಇವುಗಳ ಸಂಖ್ಯೆ 500–2,500 ; ಸರಾಸರಿ 1000. ಇದರ ಗಾತ್ರ ಕೂಡ ಏಕರೂಪದ್ದಲ್ಲ. 0.5–1 ಮೈ ವ್ಯಾಸದ ಮತ್ತು 1–2 ಮೈ ಉದ್ದದ ಮೈಟೊಕಾಂಡ್ರಿಯಗಳೇ ಸಾಮಾನ್ಯವಾಗಿ ಕಂಡು ಬರುವಂಥವು.




ರ್ಯಾಕರ್‌ನ ($F_0 F_1$) ಕಣಗಳು.

ಆದರೆ ಕೆಲವು ಸಂದರ್ಭಗಳಲ್ಲಿ ಇವುಗಳ ಉದ್ದ 7 ಮೈ ಇರುವುದೂ ಉಂಟು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಅಧ್ಯಯನಗಳಿಂದ ಮೈಟೊಕಾಂಡ್ರಿಯದ ಹೊರ ಮತ್ತು ಒಳಗಿನ ರಚನೆಯ ಜಟಿಲತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ನೇರಳೆ ಹಣ್ಣಿನ ಆಕಾರದ ಒಂದು ಮೈಟೊಕಾಂಡ್ರಿಯದ ಉದ್ದ ಸುಮಾರು 15,000Å , ವ್ಯಾಸ 5,000Å. ಎರಡು ಪೊರೆಗಳಿಂದ ಆವೃತವಾಗಿದೆ. ಪ್ರತಿ ಪೊರೆಯ ದಪ್ಪ 60Å. ಪೊರೆಗಳ ನಡುವಣ ಪ್ರದೇಶದ ಅಗಲ 60–80Å. ಹೊರಪೊರೆ ಒಳಪೊರೆಯನ್ನು ಸುತ್ತುವರಿದು ಕೋಶದ್ರವ್ಯವನ್ನು ಬೇರ್ಪಡಿಸುತ್ತದೆ. ಒಳಪೊರೆ ಸಾಮಾನ್ಯವಾಗಿ ಸರಳವಲ್ಲ. ಅಂದರೆ ಇದು ಹೊರಪೊರೆಗೆ ಎಲ್ಲ ಪ್ರದೇಶದಲ್ಲೂ ಸಮಾಂತರವಾಗಿರದೆ ಹಲವು ಅಂತಸ್ತುಗಳ ಮಡಿಕೆಗಳಾಗಿ ಅಥವಾ ನಳಿಕೆಗಳಾಗಿ ಒಳಾಂಗಣ ಪ್ರದೇಶಕ್ಕೆ ಚಾಚಿದೆ. ಬಡುಗಳಂತೆ ಅಳವಡಿಸಿರುವ ಈ ಚಾಚುಗಳಿಗೆ ಕ್ರಿಸ್ಟ ಎಂದು ಹೆಸರು. ಸಸ್ಯಕೋಶಗಳಲ್ಲಿ ಕ್ರಿಸ್ಟಗಳು ತಡಿಕೆಗಳಂತಿರದೆ ನಳಿಕೆಗಳಂತಿವೆ. ಕೆಲವು ಕೋಶದಲ್ಲಿ ಇವು ಕವಲೊಡೆದಿರುವುದೂ ಉಂಟು. ಹೀಗಾಗುವುದರಿಂದ ಒಳಪೊರೆಯ ಮೇಲಾಯ ಅಧಿಕವಾಗುತ್ತದೆ. ಕೋಶದಲ್ಲಿ ಕ್ರಿಯಾಚಟುವಟಿಕೆಗಳು ಹೆಚ್ಚಾದರೆ ಕ್ರಿಸ್ಟಗಳ ಸಂಖ್ಯೆಯೂ ಅಪಾರವಾಗಿರುತ್ತದೆ. ವಾಸ್ತವವಾಗಿ ಮೈಟೊಕಾಂಡ್ರಿಯದಲ್ಲಿ ಎರಡು ಬಗೆಯ ಪ್ರದೇಶಗಳನ್ನು ಗುರುತಿಸಬಹುದು : 1 ಹೊರ ಮತ್ತು ಒಳಪೊರೆಗಳ ನಡುವಣ ಪ್ರದೇಶ; 2. ಒಳಪೊರೆ ಸುತ್ತುಗಟ್ಟಿದ ಒಳಾಂಗಣ ಪ್ರದೇಶ–ಇದಕ್ಕೆ ಮೈಟೊಕಾಂಡ್ರಿಯದ ಮಾತೃಕೆ ಎಂದು ಹೆಸರು. ಮಾತೃಕೆಯಲ್ಲಿರುವ ವಸ್ತು ಸಾಮಾನ್ಯವಾಗಿ ಏಕರೀತಿಯದು. ಆದರೆ ಕೆಲವಲ್ಲಿ ಇದು ತರತರಿಯಂತೆಯೊ ತಂತುರೂಪದ ವಸ್ತುಗಳನ್ನೊಳಗೊಂಡಂತೆಯೊ ಇರಬಹುದು. ಪ್ರೋಕ್ಯಾರಿಯೋಟ ಜೀವಿಗಳಲ್ಲಿರುವಂತೆ ವೃತ್ತಾಕಾರದ ಡಿಎನ್‌ಎ ಇದರಲ್ಲಿದೆ. ಕ್ರಿಸ್ಟದ ರೂಪ ಯಾವ ರೀತಿಯದ್ದೇ ಆಗಲಿ ಒಳಗಿನ ಮಾತೃಕೆಯನ್ನು ಸಣ್ಣ ಸಣ್ಣ ಕೋಣೆಗಳಾಗಿ ವಿಂಗಡಿಸುವುದಿಲ್ಲ. ಕೆಲವು ಪ್ರಾಣಿಗಳ ಕೋಶಗಳಲ್ಲಿ ಹೊರ ಪೊರೆಯ ಹೊರಗೂ ಒಳಪೊರೆ ಮತ್ತು ಕ್ರಿಸ್ಟಗಳ ಮೇಲೂ ಕಣಗಳಂತಿರುವ ಅಸಂಖ್ಯಾತ ರಚನೆಗಳು ಇರುವುದು ಕಂಡುಬಂದಿದೆ. ಹೊರಪೊರೆಗೆ ಸಂಬಂಧಿಸಿದ ಕಣಗಳು ಸರಳ ರೂಪದ ಗೋಲಗಳಂತಿದ್ದರೆ ಒಳಪೊರೆಗೆ ಸಂಬಂಧಿಸಿದ ರಚನೆಗಳು ಸಂಕೀರ್ಣವಾಗಿವೆ. ಒಂದೊಂದು ರಚನೆಯೂ ಅಗಲ ಬುಡವುಳ್ಳ ಬೆಂಕಿಕಡ್ಡಿಯಂತಿದೆ. ಬುಡದ ಅಗಲ 80Å. ಟೊಳ್ಳು ಕಾಂಡದ ಉದ್ದ 50Å ಮತ್ತು ವ್ಯಾಸ 35Å ಹಾಗೂ ದುಂಡುತಲೆಯ ವ್ಯಾಸ 80Å. ಇಂಥ ಎರಡು ರಚನೆಗಳ ನಡುವಣ ದೂರ ಸುಮಾರು 100Å. ಇವೇ ರ್ಯಾಕರ್‌ನ ಕಣಗಳು. ರಾಸಾಯನಿಕ ಕ್ರಿಯಾವಿನ್ಯಾಸದಲ್ಲಿ ಮೈಟೊಕಾಂಡ್ರಿಯದ ಪೊರೆ ಪ್ಲಾಸ್ಮಪೊರೆ ಅಥವಾ ದ್ರವ್ಯ ಪೊರೆಯನ್ನು ಹೋಲುತ್ತದೆ. ಪ್ರತಿಯೊಂದು ಪೊರೆಯೂ ಪ್ರೊಟೀನು ಮತ್ತು ಲಿಪಿಡ್ಡುಗಳಿಂದ ಕೂಡಿದೆ. ಪ್ರೊಟೀನು ಸುಮಾರು 65% ಇದ್ದರೆ ಲಿಪಿಡ್ಡು ಸುಮಾರು 35% ಇದೆ. ಲಿಪಿಡ್ಡು ಲೆಸಿತಿನ್, ಸೆಫಾಲಿನ್ ಮುಂತಾದ ಫಾಸ್ಫೊಲಿಪಿಡ್‌ಗಳ ರೂಪದಲ್ಲುಂಟು. ಅಲ್ಲದೆ ಇದರಲ್ಲಿ ಗಂಧಕ, ತಾಮ್ರ, ಕಬ್ಬಿಣ, A, $B_6$, $B_{12}$ ಮೊದಲಾದ ಜೀವಸತ್ವಗಳೂ ಅಲ್ಪ ಪರಿಮಾಣದಲ್ಲಿ ಆರ್‌ಎನ್‌ಎ ಯೂ ಕಂಡುಬಂದಿವೆ. ರೈಬೊಫ್ಲೇವಿನ್, ಫೋಲಿಕ್ ಆಮ್ಲ, ಪ್ಯಾಂಟೊತೆನಿಕ್ ಆಮ್ಲ ಮತ್ತು ಸಹಕಿಣ್ವಗಳೂ ಅಡಕವಾಗಿವೆ. ವಿಶಿಷ್ಟವಾದ ಈ ರಾಸಾಯನಿಕ ವಸ್ತುಗಳು ಮೈಟೊಕಾಂಡ್ರಿಯದಲ್ಲಿ ಜರಗುವ ಕ್ರಿಯಾವೈಶಿಷ್ಟ್ಯವನ್ನು ಸೂಚಿಸುತ್ತವೆ. ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಡೇವಿಡ್ ಗ್ರೀನ್ ಮೈಟೊಕಾಂಡ್ರಿಯವನ್ನು ಹಲವು ಭಾಗಗಳಾಗಿ ತುಂಡರಿಸಿ, ಈ ಒಂದೊಂದು ಭಾಗದಲ್ಲೂ ಇರುವ ಕಿಣ್ವಗಳನ್ನು ಮತ್ತು ಕ್ರಿಯಾಚಟುವಟಿಕೆಗಳ ಸ್ಥಾನಗಳನ್ನು ಗುರುತಿಸಲು ಹಾಗೂ ವಿಶ್ಲೇಷಿಸಲು ಪ್ರಯತ್ನಿಸಿದ್ದಾನೆ. ಇಂಥ ಪ್ರಯೋಗ ಪರೀಕ್ಷೆಗಳಿಂದ ಪೊರೆಗಳ ನಡುವಣ ಪ್ರದೇಶದಲ್ಲಿ ಕ್ರೆಬ್ಸ್ ಚಕ್ರಕ್ಕೆ ಸಂಬಂಧಿಸಿದ ಕಿಣ್ವಗಳು ಕೇಂದ್ರೀಕೃತವಾಗಿರುವುದು ಹಾಗೂ ಪೊರೆಗಳಲ್ಲಿಯೇ ಎಲೆಕ್ಟ್ರಾನ್ ಸಾಗಣೆಯ ಮಂಡಲ ಅಥವಾ ಉಸಿರಾಟ ಸರಪಳಿ ಸೀಮಿತವಾಗಿರುವುದು ತಿಳಿದು ಬಂದಿದೆ. ಮೈಟೊಕಾಂಡ್ರಿಯಗಳು ಕೋಶಗಳ ಶಕ್ತಿಪರಿವರ್ತನ ಕೇಂದ್ರಗಳು. ಇಲ್ಲಿಯೇ ಕೋಶೀಯ ಉಸಿರಾಟ ಜರಗುತ್ತದೆ. ಇಲ್ಲಿ ನಡೆಯುವ ಪ್ರಕ್ರಿಯೆಗಳನ್ನು ಮೂರು ಹಂತಗಳಾಗಿ ವಿಂಗಡಿಸಬಹುದು: 1 ಅವಾಯುಶ್ವಸನ ಗ್ಲೈಕಾಲಿಸಿಸ್, 2 ಸಿಟ್ರಿಕ್ ಆಮ್ಲದ ಅಥವಾ ಕ್ರೆಬ್ಸ್ ಚಕ್ರ, 3 ಎಲೆಕ್ಟ್ರಾನ್ ಸಾಗಣೆ. ಈ ಪ್ರಕ್ರಿಯೆಗಳ ಪ್ರತಿಯೊಂದು ಹಂತದಲ್ಲಿಯೂ ಹಲವು ಬಗೆಯ ಕಿಣ್ವಗಳು ಭಾಗವಹಿಸುತ್ತವೆ.

ಗಾಲ್ಗಿ ವಸ್ತುಗಳು: ಇವಕ್ಕೆ ಗಾಲ್ಗಿ ಸಂಕೀರ್ಣ, ಡಿಕ್ಟಿಯೊಸೋಮ್, ಐಯೊಡೊಸೋಮ್, ಲೈಪೊಕಾಂಡ್ರಿಯ ಇತ್ಯಾದಿ ಹೆಸರುಗಳೂ ಉಂಟು. ಈ ಅಂಗಕಗಳನ್ನು ಇಟಲಿಯ ವೈದ್ಯಶಾಸ್ತ್ರಜ್ಞ ಗಾಲ್ಗಿ 1898ರಲ್ಲಿ ಗೂಬೆಯ ಮಿದುಳಿನ ಕೋಶಗಳಲ್ಲಿ



**ಗಾಲ್ಗಿ ಕಾಂಪ್ಲೆಕ್ಸ್**

ಪ್ರಪ್ರಥಮವಾಗಿ ಪತ್ತೆ ಹಚ್ಚಿ ವಿವರಿಸಿದ. ಇವನ ನೆನಪಿಗಾಗಿ ಇವಕ್ಕೆ ಇವನ ಹೆಸರನ್ನೇ ಕೊಡಲಾಗಿದೆ. ಇದರ ನಿಜದ ಸ್ವರೂಪ ಮತ್ತು ಇರುವಿಕೆಯ ಬಗ್ಗೆ ಕಳೆದ 60 ವರ್ಷಗಳಿಂದಲೂ ವಾದವಿವಾದಗಳು ನಡೆದಿವೆ. ಕೆಲವರು ಇವು ನಿಜವಾದ ಅಂಗಕಗಳಲ್ಲವೆಂದೂ ಇವು ಕೇವಲ ಸ್ಥಿರೀಕರಣದ ದೋಷದಿಂದ ಉತ್ಪತ್ತಿಯಾಗುವ ರಚನೆಗಳೆಂದೂ ವಾದಿಸಿರುವುದುಂಟು. ಆದರೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಹಾಯದಿಂದ ನಡೆಸಿದ ಸಂಶೋಧನೆಗಳು ಈ ವಾದವಿವಾದಗಳನ್ನು ನಿಲ್ಲಿಸಿವೆ. ಅಲ್ಲದೆ ಮೆತಿಲೀನ್ ಬ್ಲೂ ಎಂಬ ಅಭಿರಂಜಕವನ್ನು ಉಪಯೋಗಿಸಿ, ಗಾಲ್ಗಿ ವಸ್ತುಗಳಿಗೆ ರಂಗುಗಟ್ಟಿಸಿ

ತೋರಿಸಲೂಬಹುದು. ಆದರೆ ಇವು ಬ್ಯಾಕ್ಟೀರಿಯ ಮತ್ತು ನೀಲಿ ಹಸಿರು ಪಾಚಿಗಳಲ್ಲಿ ಕಂಡುಬಂದಿಲ್ಲ. ಕೋಶದ್ರವ್ಯದಲ್ಲಿ ಕೋಶಕೇಂದ್ರದ ಹೊರಗೆ ಒಂದು ಧ್ರುವದ ಕಡೆ ಪೊರೆಗಳ ಮಂಡಲದಂತೆ ಇವು ಸಮಾವೇಶಗೊಂಡಿವೆ. ಈ ಮಂಡಲದ ಆಕಾರದಲ್ಲಿ ಸಾಮಾನ್ಯವಾಗಿ ಏಕರೂಪತೆ ಇರುವುದಿಲ್ಲ; ಹಲವು ವೃತ್ತಗಳಲ್ಲಿ ಅಳವಡಿಸಿರುವ ಅರ್ಧಚಂದ್ರಾಕಾರದ ರಚನೆಗಳಂತೆ, ಜರಡಿಯ ತಟ್ಟೆಯಂತೆ, ಟೊಳ್ಳುಗೋಳದಂತೆ, ಇತ್ಯಾದಿಯಾಗಿ ಇವು ಇರುವುದುಂಟು. ಪ್ರಾಣಿಯ ಕೋಶಗಳಲ್ಲಿ ಈ ವಸ್ತು ನಿರ್ದಿಷ್ಟ ಹಾಗೂ ಸುವ್ಯವಸ್ಥಿತವಾದ ಮಂಡಲದಂತಿರುವುದು ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಅಧ್ಯಯನಗಳಿಂದ ತಿಳಿದು ಬಂದಿದೆ. ಈ ಸಂಕೀರ್ಣ ಮಂಡಲದಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು:

1. ಚಪ್ಪಟೆಯಾದ ಕೋಶಗಳು ಅಥವಾ ಸಿಸ್ಟರ್ನಗಳು: ಇವು ಎಂಡೋಪ್ಲಾಸಮ್ ಜಾಲದ ನಯವಾದ ಪೊರೆಯಂತಿವೆ. ಕೊಯ್ತಗಳಲ್ಲಿ ಇವು ದಟ್ಟವಾಗಿ ಜೋಡಣೆಗೊಂಡಂತೆ ಕಾಣುವ ಸಮಾಂತರ ಪೊರೆಗಳಂತಿವೆ. ಕೆಲವು ಕೋಶಗಳಲ್ಲಿ ಈ ಪೊರೆಗಳು ಗುಂಪುಗಳಾಗಿರುವುದೂ ಉಂಟು. ಒಂದೊಂದು ಪೊರೆಯ ದಪ್ಪ 60–70Å. ಪೊರೆಗಳ ನಡುವಣ ಪ್ರದೇಶದ ಅಂತರ 60–90Å. ಆದರೆ ಪಕ್ಕಪಕ್ಕದ ಎರಡು ಸಿಸ್ಟರ್ನಗಳ ಅಂತರ 50–200Å ಇದೆ.

2. ದೊಡ್ಡ ಕುಹರಗಳು: ಇವು ಸಾಮಾನ್ಯವಾಗಿ ಗಾಲ್ಗಿ ಸಂಕೀರ್ಣದ ಅಂಚಿನಲ್ಲಿ ಕಂಡುಬರುವ ರಚನೆಗಳು. ಚಪ್ಪಟೆಯಾದ ಕೋಶಗಳ ಪರಿವರ್ತನ ರೂಪವಿರಬೇಕು.

3. ಸಣ್ಣ ಸಣ್ಣ ವೆಸಿಕಲುಗಳು: ಇವು ಗಾಲ್ಗಿ ಸಂಕೀರ್ಣದ ಅಂಚಿನಲ್ಲಿ ಕಂಡು ಬರುವಂಥವು; ಚಪ್ಪಟೆ ಕೋಶಗಳ ಅಂಚಿನಲ್ಲಿ ಅಂಕುರಗಳಂತೆ ಮೂಡಿ ಕೊನೆಗೆ ಪ್ರತ್ಯೇಕವಾಗುವ ಸೂಕ್ಷ್ಮರೂಪದ ಕೋಶಗಳಿವು. ಇವು ಗಾಲ್ಗಿ ವಸ್ತುವಿನ ಸುತ್ತಮುತ್ತಲಿನ ಕೋಶದ್ರವ್ಯದಲ್ಲಿ ಹರಡಿರುವಂತೆ ಕಾಣುತ್ತವೆ.

ಪೊರೆಗಳು ಲೈಪೊಪ್ರೋಟೀನಿನಿಂದ ರಚಿತವಾಗಿವೆ. ಇತರ ಕಿಣ್ವಗಳೇ ಅಲ್ಲದೆ ನ್ಯೂಕ್ಲಿಯೊಸೈಡ್ ಡೈಫಾಸ್ಫಟೇಸ್ ಎಂಬ ಕಿಣ್ವ ಇಲ್ಲಿ ವಿಶೇಷವಾಗಿದೆ. ನ್ಯೂಕ್ಲಿಯಿಕ್ ಆಮ್ಲಗಳು ಇದರಲ್ಲಿ ಇಲ್ಲ. ಗಾಲ್ಗಿ ಸಂಕೀರ್ಣದ ಕೆಲಸ ಏನೆಂಬುದು ಬರಿಯ ಊಹೆಯಾಗಿಯೇ ಉಳಿದಿದೆ. ಆದರೂ ಈ ಅಂಗಕ ಕೆಲವೊಂದು ಚಟುವಟಿಕೆಗೆ ಅಗತ್ಯ:

1 ಸ್ರಾವ್ಯ ಚಟುವಟಿಕೆಗಳಿಂದ ಕೂಡಿದ ಲಾಲಾಗ್ರಂಥಿ, ಯಕೃತ್ತು, ಮೇದೋಜೀರಕ ಗ್ರಂಥಿಗಳು ಮೊದಲಾದ ಅಂಗಾಂಶಗಳ ಕೋಶಗಳಲ್ಲಿ ಗಾಲ್ಗಿ ವಸ್ತು ದಷ್ಟಪುಷ್ಟವಾಗಿ ರೂಪುಗೊಂಡಿರುವುದರಿಂದ ಈ ಅಂಗಕಕ್ಕೂ ಸ್ರಾವ್ಯ ಚಟುವಟಿಕೆಗಳಿಗೂ ನಿಕಟ ಸಂಬಂಧವಿದೆಯೆಂದು ಭಾವಿಸಬಹುದಾಗಿದೆ. ಅಲ್ಲದೆ ಪ್ರಾಣಿಗಳ ಕೆಲವು ಕೋಶಗಳಲ್ಲಿ ನಡೆಸಿದ ಅಧ್ಯಯನದ ಪ್ರಕಾರ ಈ ವಸ್ತುವಿನ ಬಳಿ ರೂಪಗೊಂಡ ಸಣ್ಣ ವೆಸಿಕಲುಗಳು ಕೋಶಪೊರೆಗೆ ಸಾಗಿ ಹೋಗಿ ಅಲ್ಲಿ ತಮ್ಮ ಒಳಗಣ ವಸ್ತುವನ್ನು ಹೊರಗೆಡಹುತ್ತವೆ. ಈ ವಸ್ತು ಅಲ್ಲಿ ಕೋಶದ್ರವ್ಯದೊಡನೆ ಮಿಲನಗೊಳ್ಳುತ್ತದೆ. ಇದರಿಂದ ಗಾಲ್ಗಿ ವಸ್ತು ಕೋಶಭಿತ್ತಿಯ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸುವುದೆಂದು ಊಹಿಸಲಾಗಿದೆ. ಅಲ್ಲದೆ ಸಸ್ಯಕೋಶಗಳ ವಿಭಜನೆಯ ಅಂತ್ಯದಲ್ಲಿ ಮರಿ ಕೋಶಗಳನ್ನು ಬೇರ್ಪಡಿಸುವ ಕೋಶಭಿತ್ತಿಯ ರಚನೆಯಲ್ಲಿಯೂ ಇದು ಇದೇ ಪಾತ್ರವನ್ನು ವಹಿಸುತ್ತದೆ ಎಂದು ಹೇಳಲಾಗಿದೆ.

2. ವೀರ್ಯಾಣು ರೂಪುಗೊಳ್ಳುವಾಗ ಅದರ ಮುಂತುದಿಯಲ್ಲಿ ಕಾಣುವ ಆಕ್ರೊಸೋಮು ಗಾಲ್ಗಿ ವಸ್ತುವಿನ ಕ್ರಿಯಾ ಚಟುವಟಿಕೆಯ ಫಲ.

4. ನ್ಯೂಕ್ಲಿಯಿಕ್ ಆಮ್ಲ ಹಾಗೂ ಪ್ರೋಟೀನುಗಳ ಸಂಶ್ಲೇಷಣೆಗೆ, ಉಸಿರಾಟದ ಚಕ್ರಕ್ಕೆ ಅಗತ್ಯವಾದ ಎಟಿಪಿ ಯ ಉತ್ಪಾದನೆಯನ್ನು ಮೈಟೊಕಾಂಡ್ರಿಯದಲ್ಲಿ ಉದ್ದೀಪನೆಗೊಳಿಸುವುದು ಗಾಲ್ಗಿ ಸಂಕೀರ್ಣವೇ ಎಂದು ತಿಳಿಯಲಾಗಿದೆ. ಕೋಶದೊಳಗಣ ದ್ರವಗಳ ಚಲನೆಯನ್ನು ನಿಯಂತ್ರಿಸುವುದರಲ್ಲಿ ಹಾಗೂ ಸ್ರಾವೋತ್ಪನ್ನಗಳನ್ನು ಕೋಶದಿಂದ ಹೊರಗಟ್ಟುವುದರಲ್ಲಿ ಇದು ಒಂದು ರೀತಿಯ ಪಂಪಿನಂತೆ ಕೆಲಸ ಮಾಡುತ್ತದೆ ಎಂದು ಕೆಲವರು ನಂಬುತ್ತಾರೆ.

ಪ್ಲಾಸ್ಟಿಡ್ಡುಗಳು : ಇವು ಕೋಶಭಿತ್ತಿ ಮತ್ತು ರಸದಾನಿಗಳಂತೆ ಸಸ್ಯ ಕೋಶಗಳ ವಿಶೇಷ ಅಂಗಕಗಳು; ಹಸಿರು ಸಸ್ಯಗಳ ಕೋಶಗಳಲ್ಲಿ ಇವು ಅಧಿಕ ಸಂಖ್ಯೆಯಲ್ಲಿವೆ. ಅಲ್ಲದೆ ಇವು ಯೂಗ್ಲೀನ ಮೊದಲಾದ ಕಶಾಂಗಿ ಪ್ರೋಟೋಜೋವಗಳಲ್ಲೂ ಹೈಡ್ರದ ಕೆಲವು ಬಗೆಗಳಲ್ಲೂ ಕಂಡುಬರುವುದುಂಟು. ಎ.ಎಫ್.ಡಬ್ಲ್ಯು. ಶಿಂಪರ್ ಇವುಗಳನ್ನು ಮೊದಲು ಪತ್ತೆ ಹಚ್ಚಿದ್ದು, ವರ್ಣವೈವಿಧ್ಯದ ಆಧಾರದ ಮೇಲೆ ಇವನ್ನು ವರ್ಗೀಕರಿಸುತ್ತಾರೆ:

1. ಹಸಿರು ವರ್ಣವಾದ ಕ್ಲೋರೋಫಿಲ್ಲಿನಿಂದ (ಪತ್ರಹರಿತ್ತು) ಕೂಡಿದ ಕ್ಲೋರೊಪ್ಲಾಸ್ಟುಗಳು
2. ಇತರ ವರ್ಣಕಗಳಿಂದ ಕೂಡಿ ಉಜ್ವಲವಾದ ಬಣ್ಣವಿರುವ ಕ್ರೋಮೊಪ್ಲಾಸ್ಟುಗಳು
3. ವರ್ಣಹೀನವಾದ ಲ್ಯೂಕೊಪ್ಲಾಸ್ಟುಗಳು
4. ಮತ್ತಿತರ ಬಗೆಯ ಪ್ಲಾಸ್ಟಿಡ್ಡುಗಳು




ಕ್ಲೋರೊಪ್ಲಾಸ್ಟ್

ಇವುಗಳಲ್ಲಿ ಹಲವು ಆಹಾರದ ಸಂಗ್ರಹಣದಲ್ಲಿ ನೆರವಾಗುತ್ತವೆ. ಕೋಶದಲ್ಲಿ ಮೇಲೆ ಹೇಳಿದ ಪ್ಲಾಸ್ಟಿಡ್ಡುಗಳೇ ಅಲ್ಲದೆ ಬಹಳ ಎಳೆಯ ಅಥವಾ ಅಪಕ್ವವೆನ್ನಲಾಗುವ ಪ್ರೋಟೋಪ್ಲಾಸ್ಟಿಡ್ಡುಗಳೂ ಕಂಡುಬರುತ್ತವೆ. ಪ್ಲಾಸ್ಟಿಡ್ಡುಗಳು ಕೋಶದ ಅಂಗಕಗಳಲ್ಲಿ ಅತ್ಯಂತ ದೊಡ್ಡವು; ಇವನ್ನು ದೃಕ್‌ಸೂಕ್ಷ್ಮದರ್ಶಕದಲ್ಲಿ ಸುಲಭವಾಗಿ ನೋಡಬಹುದು. ಇವುಗಳ ಗಾತ್ರ, ಆಕಾರ ಮತ್ತು ವಿತರಣೆಗಳಲ್ಲಿ ವ್ಯತ್ಯಾಸವಿದ್ದರೂ ಒಂದು ಗೊತ್ತಾದ ಅಂಗಾಂಶದ ಕೋಶಗಳಲ್ಲಿನ ಪ್ಲಾಸ್ಟಿಡ್ಡುಗಳಲ್ಲಿ ಏಕರೂಪತೆಯನ್ನು ಕಾಣಬಹುದು. ಇವು ಗುಂಡಗಿರಬಹುದು, ಅಂಡಾಕಾರವಾಗಿರಬಹುದು ಇಲ್ಲವೆ ತಟ್ಟೆಯಂತಿರಬಹುದು. ಕೆಲವು ಸಂದರ್ಭಗಳಲ್ಲಿ ಗದೆಯಂತಿರುವುದುಂಟು. ಪಾಚಿಗಳ ಕೋಶಗಳಲ್ಲಿ ಸುರುಳಿ ಸುತ್ತಿದ ಪಟ್ಟಿಯಂತೆ, ರಂಧ್ರಮಯವಾದ ಇಲ್ಲವೆ ನಕ್ಷತ್ರಾಕಾರದ ತಟ್ಟೆಯಂತೆ, ಬಟ್ಟಲಿನಂತೆ ಅಥವಾ ಒಂದು ಜಾಲ ಅಥವಾ ಬಲೆಯಂತೆ ಇರುವುದು ಉಂಟು. ಒಂದು ಪ್ಲಾಸ್ಟಿಡ್ಡಿನ ಸರಾಸರಿ ಉದ್ದ 4 –6ಮೈ. ಮತ್ತು ದಪ್ಪ 1 –3ಮೈ. ಹಾವಸೆ, ಜರ್ಮ ಮತ್ತು ಜೀವಸಸ್ಯಗಳ ಕೋಶಗಳನ್ನು ಅತ್ಯಂತ ಉತ್ತಮವಾದ ದೃಕ್‌ಸೂಕ್ಷ್ಮದರ್ಶಕದಲ್ಲಿಟ್ಟು ಪರೀಕ್ಷಿಸಿದರೆ ಕ್ಲೋರೊಪ್ಲಾಸ್ಟುಗಳು ನುಚ್ಚುನುಚ್ಚಿನಂತೆ ಗೋಚರಿಸುತ್ತವೆ. ಅದರಲ್ಲಿ ಗ್ರಾನ ಎಂಬ ಸಾಂದ್ರ ಪ್ರದೇಶಗಳನ್ನು ಮತ್ತು ಸ್ಟ್ರೋಮ ಎಂಬ ವರ್ಣಹೀನ ಪ್ರದೇಶವನ್ನು ಗುರುತಿಸಬಹುದು. ಕ್ಲೋರೊಪ್ಲಾಸ್ಟಿನ ಕೊಯ್ತಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಹಾಯದಿಂದ ಪರೀಕ್ಷಿಸಿದರೆ ಅದರಲ್ಲಿ ರಚನೆಯ ಹೆಚ್ಚು ವಿವರಗಳು ಗೋಚರವಾಗುತ್ತವೆ. ಒಳಗಣ ಪೊರೆಮಂಡಲವನ್ನು ಸುತ್ತುವರಿದಂತೆ ಎರಡು ಹೊರಪೊರೆಗಳಿವೆ. ಒಂದೊಂದೂ ಪೊರೆಯೂ 40–60Å ದಪ್ಪದ್ದು. ಇವುಗಳ ನಡುವಣ ಅಂತರ 25–75Å. ಪೊರೆಗಳು ಆವರಿಸಿರುವ ಭಾಗವೇ ಪ್ರೋಟೀನು ವಸ್ತುವಿನಿಂದ ಕೂಡಿದ ಸ್ಟ್ರೋಮ. ಇದರಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವ್ಯಾಪಕವಾಗಿ ಹಾಗೂ ಸಮಾಂತರವಾಗಿ ಅಳವಡಿಸಿರುವ ಪೊರೆ ಮಂಡಲವಿದೆ. ಇದರಲ್ಲಿನ ಪೊರೆಗಳಿಗೆ ಲ್ಯಾಮೆಲಗಳೆಂದು ಹೆಸರು. ಲ್ಯಾಮೆಲಗಳ ಮೇಲೆ ಅಲ್ಲಲ್ಲಿ ದಟ್ಟವಾಗಿ ಜೋಡಣೆಗೊಂಡಿರುವ ಚಿಕ್ಕ ಚಿಕ್ಕ ಉಪಪೊರೆಮಂಡಲಗಳುಂಟು. ಈ ತಟ್ಟೆಗಳ ಜೋಡಣೆಯೇ ದೃಕ್ ಸೂಕ್ಷ್ಮದರ್ಶಕದಲ್ಲಿ ಕಾಣುವ ಗ್ರಾನಗಳು. ಎಲ್ಲ ಕ್ಲೋರೊಪ್ಲಾಸ್ಟುಗಳಲ್ಲೂ ಇದೇ ಬಗೆಯ ಒಳರಚನೆಯಿಲ್ಲ. ಹಸಿರು ಕಂದು ಬಣ್ಣದ ಪಾಚಿಗಳಲ್ಲಿ ಕಂಡುಬರುವ ಪ್ಲಾಸ್ಟಿಡ್ಡುಗಳಲ್ಲಿ ಪೊರೆ ಮತ್ತು ಒಳಗಿನ ಲ್ಯಾಮೆಲಗಳಿರುತ್ತವೆಯೇ ಹೊರತು ಗ್ರಾನಗಳಿರುವುದಿಲ್ಲ. ನೀಲಿಹಸಿರು ಪಾಚಿಗಳಲ್ಲಾದರೋ ಪ್ಲಾಸ್ಟಿಡ್ಡಿನ ಸೀಮಿತ ಪೊರೆಯೇ ಲೋಪವಾಗಿರುವುದರಿಂದ ದ್ಯುತಿಸಂಶ್ಲೇಷಣಾತ್ಮಕ ವರ್ಣಕಗಳಿಂದ ಕೂಡಿದ ಸಮಾಂತರವಾಗಿ ಜೋಡಣೆಗೊಂಡಿರುವ ಪೊರೆಗಳು ಕೋಶದ್ರವ್ಯದಲ್ಲೇ ಹುದುಗಿವೆ.

ಎಲೆಗಳನ್ನು ಸಕ್ಕರೆಯ ನೀರು ಮತ್ತು ಮರಳಿನ ಮಿಶ್ರಣದಲ್ಲಿ ಅರೆದು ಕ್ಲೋರೊಪ್ಲಾಸ್ಟುಗಳನ್ನು ಕೋಶಭಿತ್ತಿಗಳ ಬಂಧನದಿಂದ ಬಿಡಿಸಿ, ಅಪಕೇಂದ್ರಕ ಯಂತ್ರದ ಸಹಾಯದಿಂದ ಪ್ರತ್ಯೇಕಿಸಿ ಅವುಗಳಲ್ಲಿರುವ ರಾಸಾಯನಿಕ ಸ್ವರೂಪವನ್ನು ವಿಶ್ಲೇಷಿಸಬಹುದು. ರಾಸಾಯನಿಕವಾಗಿ ಕ್ಲೋರೊಪ್ಲಾಸ್ಟ್ ಕೂಡ ಲೈಪೊಪ್ರೋಟೀನು. ಅಲ್ಲದೆ ಇದರಲ್ಲಿ ವರ್ಣಕಗಳೂ ಅಲ್ಪ ಪ್ರಮಾಣದಲ್ಲಿ ಡಿಎನ್‌ಎ ಮತ್ತು ಆರ್‌ಎನ್‌ಎ ಗಳೂ ಕಿಣ್ವಗಳೂ ಉಂಟು. ವರ್ಣಕಗಳಲ್ಲಿ ಎರಡು ಬಗೆ : ಪತ್ರಹರಿತ್ತು ಅಥವಾ ಕ್ಲೋರೊಫಿಲ್ ಮತ್ತು ಕೆರಾಟಿನಾಯಿಡುಗಳು (ಕೆರಾಟೀನ್ ಮತ್ತು ಕ್ಸ್ಯಾಂತೊಫಿಲುಗಳು). ಕ್ಲೋರೊಫಿಲ್ಲಿನಿಂದ ಕೂಡಿದ ಕ್ಲೋರೊಪ್ಲಾಸ್ಟಿನ ಪೊರೆಗಳಲ್ಲಿ ಸೂರ್ಯನ ಬೆಳಕಿನಲ್ಲಿ ಅಡಕವಾಗಿರುವ ಶಕ್ತಿಯನ್ನು ರಾಸಾಯನಿಕ ಶಕ್ತಿಯನ್ನಾಗಿ ಪರಿವರ್ತನಗೊಳಿಸುವ ಕ್ಷೇತ್ರಗಳಿವೆ. ಕ್ಲೋರೊಪ್ಲಾಸ್ಟುಗಳು

ಮತ್ತು ಮೈಟೊಕಾಂಡ್ರಿಯಗಳು ತಮ್ಮ ರಚನೆ ಮತ್ತು ಕ್ರಿಯಾವಿಶೇಷಗಳಲ್ಲಿ ಏಕರೂಪಿಗಳಾಗಿರುವುದರಿಂದ ಇವೆರಡು ಅಂಗಕಗಳಿಗೂ ಪರಸ್ಪರ ಸಂಬಂಧವಿದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಕೆಲವು ಪಾಚಿ ಮತ್ತು ಹಾವಸೆಗಳಲ್ಲಿ ಪ್ಲಾಸ್ಟಿಡ್ಡುಗಳು ವಿಭಜನೆ ಹೊಂದುವುದನ್ನು ಕಾಣಬಹುದು. ಆದರೆ ತೆರ್ಮೆಗಳಲ್ಲಿ ಮತ್ತು ಬೀಜ ಸಸ್ಯಗಳಲ್ಲಿ ಇವುಗಳ ಉಗಮ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಇಲ್ಲಿ ಕೂಡ ಇವು ಚಿಕ್ಕ ಚಿಕ್ಕ ಪ್ರೋಟೊಪ್ಲಾಸ್ಟಿಡ್ಡುಗಳಿಂದ ವಿಭೇದನೆ ಹೊಂದಿ ರೂಪುಗೊಳ್ಳುವಂತೆ ಕಾಣುತ್ತದೆ. ಪ್ಲಾಸ್ಟಿಡ್ಡುಗಳಲ್ಲಿ ಕೆಲವು ಜೀನ್‌ಗಳಿವೆಯೆಂದೂ ಅವು ಕೂಡ ಕ್ರೋಮೊಸೋಮಿನ ಜೀನ್‌ಗಳೊಡನೆ ಕೂಡಿ ಪ್ಲಾಸ್ಟಿಡ್ಡುಗಳ ಬೆಳವಣಿಗೆ ಮತ್ತು ವಿಭೇದನೆಯಲ್ಲಿ ಪಾಲುಗೊಳ್ಳುತ್ತವೆಂದೂ ಕೆಲವರು ಭಾವಿಸುತ್ತಾರೆ.



ಸಸ್ಯ ಜೀವಕೋಶ

ಸೆಂಟ್ರಿಯೋಲುಗಳು : ಇವು ಪ್ರಾಣಿಗಳ ಹಾಗೂ ಕೆಳಮಟ್ಟದ ಸಸ್ಯಗಳ ಕೋಶಗಳಲ್ಲಿ ಕಂಡುಬರುವ ಮತ್ತೊಂದು ತೆರನ ಅಂಗಕಗಳು. ಸಾಮಾನ್ಯವಾಗಿ ಕೋಶಕೇಂದ್ರದ ಒಂದು ಧ್ರುವದ ಕಡೆ, ಒಂದು ಚಿಕ್ಕದಾದ, ಸ್ವಚ್ಛವಾದ ಜೆಲ್ಲಿ ರೂಪದ ಕೋಶದ್ರವ್ಯದ ಮಧ್ಯದಲ್ಲಿ ಸ್ಥಿತವಾಗಿವೆ. ಇವನ್ನು ಸುತ್ತುವರಿದ ವಿಶಿಷ್ಟವಾದ ಕೋಶದ್ರವ್ಯ ಸೆಂಟ್ರೋಸ್ಫಿಯರ್. ಸೆಂಟ್ರಿಯೋಲುಗಳನ್ನೊಳಗೊಂಡ ಸೆಂಟ್ರೋಸ್ಫಿಯರಿಗೆ ಸೆಂಟ್ರೋಸೋಮ್ ಎಂದೂ ಹೆಸರು. ಕೆಲವು ಸಂದರ್ಭಗಳಲ್ಲಿ ಸೆಂಟ್ರೋಸ್ಫಿಯರಿನ ಸುತ್ತಲೂ ಕಿರಣಗಳಂತಿರುವ ತಂತುರೂಪದ ರಚನೆಗಳು ಕಂಡುಬರುವುದೂ ಉಂಟು. ಕೆಲವೊಮ್ಮೆ ಈ ಸಂಕೀರ್ಣ ರಚನೆಯನ್ನು ಆಸ್ಟ್ರೋಸ್ಫಿಯರ್ ಎಂದು ಕರೆಯಲಾಗುತ್ತದೆ. ಹಲವು ಬಗೆಯ ಕೋಶಗಳಲ್ಲಿ ಸಾಮಾನ್ಯವಾಗಿ ಸೆಂಟ್ರೋಸೋಮು ಗಾಲ್ಗಿ ಸಂಕೀರ್ಣದಿಂದ ಆವೃತವಾಗಿದೆ. ಅವುಗಳಿಗಿರುವ ನಿಕಟ ಸಂಬಂಧವನ್ನು ಈ ಬಗೆಯ ಸಾಮೀಪ್ಯ ಸ್ವಚಿಸುತ್ತದೆ. ಮೇಲ್ಮಟ್ಟದ ಸಸ್ಯಗಳ ಕೋಶಗಳಲ್ಲಿ ಸೆಂಟ್ರಿಯೋಲುಗಳಾಗಲೀ ಸೆಂಟ್ರೋಸ್ಫಿಯರಾಗಲೀ ಇಲ್ಲ. ಆದರೆ ಕೋಶ ವಿಭಜನೆಯ ಕಾಲದಲ್ಲಿ ಸೆಂಟ್ರೋಸೋಮು ಮಾಡುವ ಕೆಲಸವನ್ನೇ ನಿರ್ದಿಷ್ಟವಾದ ಎರಡು ಧ್ರುವ ಕುಲಾವಿಗಳೂ (ಪೋಲಾರ್ ಕ್ಯಾಪ್ಸ್) ನೆರವೇರಿಸುತ್ತವೆ. ಸೆಂಟ್ರಿಯೋಲುಗಳು ಕೋಶದ ವಿಭಜನೆಗೆ ಅಗತ್ಯವಾದ ಕದಿರು ರೂಪದ ಕ್ರಿಯಾವಿನ್ಯಾಸವನ್ನು ರಚಿಸುವುದರಿಂದ ಇವಕ್ಕೆ ವಿಭಜನಾ ಕೇಂದ್ರಗಳು ಎಂಬ ಹೆಸರೂ ಉಂಟು. ಅಲ್ಲದೆ ಇವು ಲೋಮ ಮತ್ತು ಕಶಗಳ ಉತ್ಪತ್ತಿಯನ್ನೂ ಅವುಗಳ ಕ್ರಿಯಾಚಟುವಟಿಕೆಗಳನ್ನೂ ನಿಯಂತ್ರಿಸುತ್ತವೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಇವುಗಳ ಸೂಕ್ಷ್ಮ ರಚನೆಯನ್ನು ವಿಶದಪಡಿಸಿದೆ. ಪ್ರತಿಯೊಂದು ಸೆಂಟ್ರಿಯೋಲೂ ಕೊಳವೆ ಆಕಾರದ ಒಂದು ಜೋಡಿ ನಳಿಕೆಯಂತಿದೆ. ಒಂದು ಸೆಂಟ್ರಿಯೋಲಿನ ನಳಿಕೆಗಳು ಮತ್ತೊಂದರ ನಳಿಕೆಗಳಿಗೆ ಸಮಕೋನದಲ್ಲಿ ಸ್ಥಿತವಾಗಿದೆ. ಪ್ರತಿ ನಳಿಕೆಯಲ್ಲಿ ಸಮಾಂತರವಾಗಿ ಜೋಡಣೆಗೊಂಡಿರುವ 9 ನೀಳತಂತುಗಳಿವೆ. ಇವು ಮೂರರ ಗುಂಪುಗಳಲ್ಲಿ ಸಮಾವೇಶಗೊಂಡಿವೆ. ಇವುಗಳ ಸುತ್ತ ಒಂದು ಭಿತ್ತಿಯುಂಟು.

ಲೈಸೊಸೋಮುಗಳು : ಇವು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಮಾತ್ರ ಗೋಚರವಾಗುವ ವಸ್ತುಗಳು. ಮೈಟೊಕಾಂಡ್ರಿಯಗಳನ್ನು ಕೋಶದ್ರವ್ಯದಿಂದ ಪ್ರತ್ಯೇಕಿಸಿ ಅಧ್ಯಯನ ನಡೆಸುವ ತಂತ್ರಕೌಶಲಗಳ ಫಲವಾಗಿ ಕೋಶಗಳಲ್ಲಿ ಇವುಗಳ ಇರವು ಸ್ಪಷ್ಟವಾಯಿತು. ಕ್ಯಾತೊಲಿಕ್ ವಿಶ್ವವಿದ್ಯಾಲಯದ ಕ್ರಿಶ್ಚಿಯನ್ ಡಿ ಡೂವೆ ಎಂಬಾತ 1949ರಲ್ಲಿ ಕೋಶದ್ರವ್ಯವನ್ನು ಅಪಕೇಂದ್ರಕ ಯಂತ್ರದಲ್ಲಿಟ್ಟು ತಿರುಗಿಸಿ ಅಪಕೇಂದ್ರೀಯ ಗುಣವಿಶೇಷವುಳ್ಳ ಈ ವಸ್ತುಗಳನ್ನು ಪ್ರಥಮ ಬಾರಿಗೆ ಪ್ರತ್ಯೇಕಿಸಿ, ಗುರುತಿಸಿ, ಇವುಗಳಲ್ಲಿ ಅಡಕವಾಗಿರುವ ರಾಸಾಯನಿಕ ವಸ್ತುಗಳ ಸ್ವರೂಪದ ಆಧಾರದ ಮೇಲೆ 1955ರಲ್ಲಿ ಇವಕ್ಕೆ ಲೈಸೊಸೋಮುಗಳು ಎಂದು ಹೆಸರಿಟ್ಟ. ಅಪಕೇಂದ್ರೀಕರಣದ ದೃಷ್ಟಿಯಲ್ಲಿ ಇವು ಮೈಟೊಕಾಂಡ್ರಿಯ ಮತ್ತು ಮೈಕ್ರೋಸೋಮುಗಳ ನಡುವಣ ಗುಣವಿಶೇಷವನ್ನು ಪಡೆದಿವೆ. ಇವುಗಳ ಸಾಂದ್ರತೆ 1.15. ಲೈಸೊಸೋಮುಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿಟ್ಟು ನೋಡಿದರೆ ಒಂದೊಂದೂ ಸಾಮಾನ್ಯವಾಗಿ ಒಂದು ಪೊರೆಯಿಂದ ಆವೃತವಾದ ಸಾಂದ್ರತೆಯುಳ್ಳ ವಸ್ತುವಿನಂತೆ ಕಾಣುತ್ತದೆ. ಇವುಗಳ ಆಕಾರ ಸಾಮಾನ್ಯವಾಗಿ ಗೋಲದಂತೆ, ಕೋಲಿನಂತೆಯೊ ಇಲ್ಲವೆ ನಿರ್ದಿಷ್ಟ ಆಕಾರವಿಲ್ಲದೆಯೋ ಇರಬಹುದು. ಇವುಗಳ ವ್ಯಾಸ ಸಾಮಾನ್ಯವಾಗಿ 0.2–0.8ಮೈ. ಒಂದೊಂದು ಲೈಸೊಸೋಮೂ ಲೈಪೊಪ್ರೋಟೀನಿನ ಪೊರೆಯಿಂದ ಆವೃತವಾದ ಒಂದು ಚೀಲ. ಇವಕ್ಕೂ ಇತರ ಕೋಶದ ಅಂಗಕಗಳಿಗೂ ಇರುವ ಒಂದು ಮುಖ್ಯವಾದ ವ್ಯತ್ಯಾಸವೆಂದರೆ, ಲೈಸೊಸೋಮುಗಳ ಒಳಭಾಗದಲ್ಲಿ ಯಾವ ಬಗೆಯ ರಚನೆಗಳೂ ಇಲ್ಲದಿರುವುದು. ಲೈಸೊಸೋಮುಗಳು ಪ್ರಾಣಿಗಳ ವೃಕ್ಕ, ಪ್ಲೀಹ, ಕರುಳು, ಬಿಳಿರಕ್ತಕಣಗಳು, ಮಿದುಳು ಮತ್ತು ಥೈರಾಯಿಡ್ ಗ್ರಂಥಿಗಳ ಕೋಶಗಳಲ್ಲೂ, ಸಸ್ಯಗಳ ವರ್ಧನ ಅಂಗಾಶಗಳ ಕೋಶಗಳಲ್ಲೂ, ತಂಬಾಕಿನ ಎಲೆಯ ಜೀವಕೋಶದಲ್ಲಿರುವ ಪೆರಾಕ್ಸಿಸೋಮ್‌ಗಳಲ್ಲೂ, ಕೆಲವು ಪ್ರೋಟೋಜೋವ ಪ್ರಾಣಿಗಳಲ್ಲೂ ಅಪಾರ ಸಂಖ್ಯೆಯಲ್ಲಿ ಇವೆ. ಪ್ರಾಯಶಃ ಎಲ್ಲ ಕೋಶಗಳಲ್ಲೂ ಇವು ಇರಬಹುದು. ಸ್ತನಿಗಳ ಬಿಳಿಯ ರಕ್ತಕಣಗಳಲ್ಲಿ ಹಾಗೂ ವೃಕ್ಕದ ಕೋಶಗಳಲ್ಲಿರುವ ಲೈಸೊಸೋಮುಗಳ ಗಾತ್ರ ಬಹಳ ದೊಡ್ಡದು ಮತ್ತು ಸಂಖ್ಯೆಯೂ ಹಿರಿದು. ಲೈಸೊಸೋಮಿನ ಒಳಭಾಗದಲ್ಲಿ ಅಡಗಿರುವ ರಾಸಾಯನಿಕ ವಸ್ತುಗಳಲ್ಲಿರುವ ಹಲವು ಬಗೆಯ ಕಿಣ್ವಗಳ ಪರಿಚಯವಾಗಿದೆ. ಇದನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು :

1. ಗ್ಲೂಕೊರೋನಿಡೇಸ್, ಗ್ಲೂಕೋಸಿಡೇಸ್, ಮಾನೋಸಿಡೇಸ್, ಹೈಯಾಲುರೋನಿಡೇಸ್, ಆರೈಲ್ ಸಲ್ಫಟೇಸುಗಳು ಮತ್ತು ಅಸಿಟೈಲ್ ಗ್ಲೂಕೋಸಮೈಡೇಸ್‌ಗಳೂ ಮುಂತಾದ ಗ್ಲೂಕೋಸಿಡೇಸುಗಳು

2. ವಿವಿಧ ಬಗೆಯ ಕ್ಯಾತೆಪ್ಸಿನ್ ಕೊಲ್ಯಾಜಿನೇಸುಗಳಾದ ಪ್ರೊಟಿಯೇಸುಗಳು

3. ನ್ಯೂಕ್ಲಿಯೇಸುಗಳಾದ ಆಮ್ಲೀಯ ರೈಬೊನ್ಯೂಕ್ಲಿಯೇಸು, ಆಮ್ಲೀಯ ಡಿಆಕ್ಸಿರೈಬೊನ್ಯೂಕ್ಲಿಯೇಸುಗಳು

4. ಆಮ್ಲೀಯ ಫಾಸ್ಫಟೇಸ್ ಮತ್ತು ಫಾಸ್ಫೋಪ್ರೋಟೀನು ಫಾಸ್ಫಟೇಸುಗಳು

ಈ ಕಿಣ್ವಗಳಲ್ಲಿ ಅನೇಕವು ಆಮ್ಲೀಯ ಪರಿಸರದಲ್ಲಿ ಕ್ರಿಯಾವೈಶಿಷ್ಟ್ಯವನ್ನು ತೋರಿಸುವುದರಿಂದ ಇವನ್ನು ಸಾಮಾನ್ಯವಾಗಿ ಆಮ್ಲೀಯ ಹೈಡ್ರೇಸುಗಳೆಂದು ಒಟ್ಟಾರೆ ಕರೆಯಬಹುದು. ಇವು ಲೈಸೊಸೋಮಿನ ಸೀಮಿತ ಪೊರೆಯೊಳಗೆ ಅಡಕವಾಗಿದ್ದಾಗ ನಿಷ್ಕ್ರಿಯವಾಗಿರುತ್ತವೆ ; ಆದರೆ ಪೊರೆಯಿಂದ ಹೊರಗೆ ಬಂದರೆ ಕೋಶದ ಜೀವಂತ ವಸ್ತುವನ್ನೆಲ್ಲ ವಿಚ್ಛಿದ್ರಗೊಳಿಸುತ್ತವೆ. ಮೈಟೋಕಾಂಡ್ರಿಯಗಳ ವಿಶಿಷ್ಟವಾದ ಕಿಣ್ವಗಳು ಇಲ್ಲಿ ಕಂಡುಬರುವುದಿಲ್ಲ. ರಚನೆ ಮತ್ತು ಚಟುವಟಿಕೆಯ ಆಧಾರದ ಮೇಲೆ ಲೈಸೊಸೋಮುಗಳನ್ನು ಪ್ರಾಥಮಿಕ ಲೈಸೊಸೋಮು ಅಥವಾ ದಾಸ್ತಾನು ಗ್ರಾನ್ಯೂಲು ಮತ್ತು ದ್ವಿತೀಯಕ ಲೈಸೊಸೋಮುಗಳೆಂಬ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಬಗೆಯಲ್ಲಿ ಜೀರ್ಣಕಾರಿ ಕಿಣ್ವಗಳು ಮಾತ್ರ ಅಡಕವಾಗಿದ್ದರೆ, ಎರಡನೆಯ ಗುಂಪಿನ ಲೈಸೊಸೋಮುಗಳು ಫ್ಯಾಗೊಸೋಮಿನೊಡನೆ ಬೆರೆತು ರೂಪುಗೊಂಡ ಸಂಕೀರ್ಣಗಳು. ಅವುಗಳಲ್ಲಿ ಅವುಗಳ ಒಳಗಣ ವಸ್ತು ಕರಗಿರುವುದರಿಂದ ಅವನ್ನು ಶೇಷ ವಸ್ತುಗಳೆಂದೂ (ರೆಸಿಡ್ಯುವಲ್ ಬಾಡಿ) ಕರೆಯಲಾಗುತ್ತದೆ. ಅಮೀಬ ಮೊದಲಾದ ಏಕ ಕೋಶ ಜೀವಿಗಳಲ್ಲಿ ಇಂಥ ವಸ್ತುಗಳು ಕಾಲಕ್ರಮೇಣ ಮಲವಿಸರ್ಜನೆಯ ಮೂಲಕ ದೇಹದಿಂದ ಹೊರಬರುತ್ತವೆ. ಆದರೆ ಇತರ ಕೋಶಗಳಲ್ಲಿ ಹಾಗೆಯೇ ಉಳಿದು ಜರಾ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುತ್ತವೆ. ಲೈಸೊಸೋಮುಗಳು ರೂಪುಗೊಳ್ಳುವ ಬಗ್ಗೆ ಹಲವು ಊಹಾಪೋಹಗಳಿವೆ. ವಿವಿಧ ರೀತಿಯ ಉಗಮಗಳಿಗೆ ಪ್ರಾಯಶಃ ಅಂಗಾಂಶದ ಸ್ಥಾನ ಮತ್ತು ಕ್ರಿಯೆಗಳು ಕಾರಣವಿರಬಹುದು. ಕೋಶಪೊರೆ ಪೈನೊಸೈಟಿಕ್ ಚೀಲದಂತೆ ರೂಪುಗೊಂಡು ಕ್ರಮೇಣ ಕೋಶದ್ರವದಲ್ಲಿ ಮುಳುಗಿ ಒಂದು ಕೋಶ ಅಥವಾ ರಸದಾನಿಯಾಗಿ ಮಾರ್ಪಟ್ಟು, ಕಡೆಗೆ ಅದರಲ್ಲಿ ಕಿಣ್ವಗಳು ರೂಪುಗೊಳ್ಳುತ್ತವೆಂದು ತೋರುತ್ತದೆ. ಇವು ಗಾಲ್ಗಿ ವಸ್ತುಗಳ ಬಳಿ ರೂಪುಗೊಳ್ಳುವುದರಿಂದ ಇವುಗಳ ಉತ್ಪತ್ತಿಗೆ ಗಾಲ್ಗಿ ಸಂಕೀರ್ಣ ಕಾರಣವಿರಬೇಕೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ಲೈಸೊಸೋಮಿನ ಕಿಣ್ವಗಳು ವಿಶಿಷ್ಟವಾದ ಕೆಲವು

ರೈಬೊಸೋಮುಗಳಲ್ಲಿ ಸಂಶ್ಲೇಷಣೆಗೊಂಡು ಅಲ್ಲಿಂದ ಎಂಡೊಪ್ಲಾಸಮ್ ಜಾಲದ ಮೂಲಕ ಹಾಯ್ದು ಗಾಲ್ಗಿ ವಸ್ತುಗಳ ಬಳಿಗೆ ಬರುತ್ತವೆಂದೂ ಅನಂತರ ಈ ಸಂಕೀರ್ಣದಿಂದ ಪ್ರತ್ಯೇಕಗೊಂಡು ಕಿಣ್ವಗಳ ಸುತ್ತ ಲೈಪೊಪ್ರೋಟೀನು ಪೊರೆ ರಚಿತವಾಗುತ್ತದೆ ಎಂದೂ ವಿವರಣೆ ಕೊಡಲಾಗಿದೆ. ನಿಷ್ಕ್ರಿಯ ರೂಪದಲ್ಲಿ ಸಂಗ್ರಹಗೊಳ್ಳುವ ಈ ಕೋಶ ಅಥವಾ ವಸ್ತುಗಳಿಗೆ ಪ್ರಾಥಮಿಕ ಲೈಸೊಸೋಮುಗಳೆಂದು ಹೆಸರು.

ಲೈಸೊಸೋಮುಗಳ ಕಾರ್ಯರಂಗ : 1. ಕೋಶವನ್ನು ಹೊಕ್ಕ ಪರಕೀಯ ಪ್ರೋಟೀನು ಮತ್ತು ಇತರ ವಸ್ತುಗಳನ್ನು ಲೈಸೊಸೋಮಿನ ಕಿಣ್ವಗಳು ವಿಚ್ಛಿದ್ರಗೊಳಿಸಿ ಜೀರ್ಣಿಸುತ್ತವೆ.

2. ಹಸಿವೆಗೊಳಗಾದ ಪ್ರೋಟೊಜೋ಼ವ ಪ್ರಾಣಿಗಳ ಹಾಗೂ ಸ್ತನಿಗಳ ಕೋಶಗಳಲ್ಲಿ ಒಂದು ವಿಶೇಷ ರೀತಿಯ ಸ್ವವಿಲಯನ (ಆಟೋಲಿಸಿಸ್) ಕಂಡು ಬರುತ್ತದೆ. ಇಲ್ಲಿ ರೈಬೊಸೋಮು, ಮೈಟೊಕಾಂಡ್ರಿಯ ಮೊದಲಾದ ಅಂಗಕಗಳು ಪೊರೆಯಿಂದ ಆವೃತವಾದ ರಸದಾನಿಗಳಲ್ಲಿ ಸೇರುತ್ತವೆ. ಇಂಥ ರಸದಾನಿಗಳು ಲೈಸೊಸೋಮುಗಳೊಡನೆ ಬೆರೆತು ಸ್ವಭೋಜಿ ರಸದಾನಿಗಳಾಗಿ (ಆಟೋಫ್ಯಾಗಸ್ ವ್ಯಾಕ್ಯೂಯೋಲ್ಸ್) ರೂಪುಗೊಳ್ಳುತ್ತವೆ. ಇಲ್ಲಿ ಸೆರೆಹಿಡಿಯಲ್ಪಟ್ಟ ಅಂಗಕಗಳನ್ನು ಲೈಸೊಸೋಮಿನ ಕಿಣ್ವಗಳು ಜೀರ್ಣಿಸುತ್ತವೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಇಡೀ ಕೋಶಗಳ ವಿಚ್ಛಿದ್ರಕ್ಕೆ ಲೈಸೊಸೋಮುಗಳು ಅಗತ್ಯವಾಗಿರುತ್ತವೆ. ಉದಾಹರಣೆಗೆ, ಕಪ್ಪೆಯ ಗೊದಮೊಟ್ಟೆ ರೂಪ ಪರಿವರ್ತನೆಯಾಗುವಾಗ ಡಿಂಬದ ಅಂಗಾಂಶ ವಿಚ್ಛಿದ್ರಗೊಳ್ಳುತ್ತದೆ; ಶ್ಲೇಷ್ಮ ಪೊರೆಯ ಹಾಗೂ ಹೊರ ಚರ್ಮದ ಕೋಶಗಳು ಅಲ್ಪಾಯುಗಳಾಗಿರುವುದರಿಂದ ಇವು ಅನತಕಾಲದಲ್ಲಿಯೇ ಸತ್ತುಹೋಗುತ್ತವೆ. ಇಂಥ ಅಸಂಖ್ಯಾತ ಕೋಶಗಳನ್ನು ಪಚನ ಮಾಡಿ ಅವಶೇಷ ಭಾಗಗಳನ್ನು ಹೊರಗೆಡಹುವ ಕಾರ್ಯ ಲೈಸೊಸೋಮುಗಳದ್ದು.

3. ಲೈಸೊಸೋಮುಗಳು ಕೋಶದ ಪೊರೆಗೆ ವಲಸೆ ಹೋಗಿ ತಮ್ಮ ಕಿಣ್ವಗಳನ್ನು ಕೋಶದ ಹೊರಭಾಗಕ್ಕೆ ಚೆಲ್ಲಿ ಕೋಶದ ಹೊರಪರಿಸರದಲ್ಲಿರುವ ಪ್ರೋಟೀನು, ಕಾರ್ಬೋಹೈಡ್ರೇಟು ಮೊದಲಾದ ವಸ್ತುಗಳನ್ನು ಜೀರ್ಣಿಸುತ್ತವೆ.

4. ಕೆಲವು ಸಂದರ್ಭಗಳಲ್ಲಿ ಲೈಸೊಸೋಮುಗಳು ಅಕಾಲದಲ್ಲಿ ವಿಚ್ಛಿದ್ರಗೊಳ್ಳುವುದರಿಂದ ಅವುಗಳ ಕಿಣ್ವಗಳು ಕೋಶದ್ರವ್ಯದ ಕೆಲವು ಅಂಗಕಗಳನ್ನು ವಿಚ್ಛಿದ್ರಗೊಳಿಸುವುದೇ ಅಲ್ಲದೆ ಕೋಶಕೇಂದ್ರವನ್ನು ಪ್ರವೇಶಿಸಿ ಕ್ರೋಮೊಸೋಮುಗಳಲ್ಲಿ ಬದಲಾವಣೆಗಳನ್ನು ಉಂಟುಮಾಡಿ ಕ್ಯಾನ್ಸರ್ ಮೊದಲಾದ ಕಾಯಿಲೆಗಳನ್ನುಂಟು ಮಾಡುಬಹುದೆಂದೂ ಹೇಳಲಾಗಿದೆ.

ಕೋಶಕೇಂದ್ರ: ಇದು ಕೋಶದ ಪ್ರಮುಖ ಹಾಗೂ ಪ್ರಧಾನವಾದ ಅಂಗಕ. ಇದರ ಗಾತ್ರವೂ ಹಿರಿದು, ಪಾತ್ರವೂ ದೊಡ್ಡದು. ಆದ್ದರಿಂದಲೇ ಕೋಶ ವಿಜ್ಞಾನಿಗಳು ಇದರ ಬಗ್ಗೆ ಕಳೆದ ಒಂದು ಶತಮಾನದಿಂದಲೂ ಅಧ್ಯಯನ ನಡೆಸಿದ್ದಾರೆ. ಇದರ ರಚನೆ ಮತ್ತು ವಿಭಜನೆಯ ರೀತಿನೀತಿಗಳು 1880ರ ಹೊತ್ತಿಗೇ ಸ್ಪಷ್ಟವಾಗಿದ್ದುವು. ಇದರಲ್ಲಿ ಆನುವಂಶಿಕ ವಸ್ತುಗಳು ಹುದುಗಿರುವುವೆಂದು ಈ ಶತಮಾನದ ಮೊದಲ ದಶಕದಲ್ಲೇ ಖಚಿತವಾಯಿತು. 1940ರಿಂದ ಈಚೆಗೆ ನಡೆದ ಸಂಶೋಧನೆಗಳಿಂದ ಕೋಶದಲ್ಲಿ ನಡೆಯುವ ಪ್ರೋಟೀನು ಸಂಶ್ಲೇಷಣೆಯಲ್ಲಿ ಇದರ ನಿರ್ದೇಶನ ಹಾಗೂ ನಿಯಂತ್ರಿಸುವ ಕಾರ್ಯವಿಧಾನಗಳು ಬೆಳಕಿಗೆ ಬಂದಿವೆ. 1950ರಿಂದ ಈಚೆಗೆ ಕೈಕೊಂಡ ಅಧ್ಯಯನಗಳು ಇದರ ಸೂಕ್ಷ್ಮ ರಚನೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿವೆ. ಕೋಶದ ಅಳಿವು ಉಳಿವುಗಳಗೆ ಕೋಶಕೇಂದ್ರ ಅತ್ಯಗತ್ಯ. ಕೆಲವು ಪ್ರಾಯಸ್ಥ ಕೋಶಗಳಲ್ಲಿ, ಉದಾಹರಣೆಗೆ, ಸ್ತನಿಗಳ ಕೆಂಪು ರಕ್ತಕಣಗಳು, ಹಾಗೂ ಜರಡಿನಾಳಗಳ (ಸೀವ್ ಟ್ಯೂಬ್) ಕೋಶಗಳಲ್ಲಿ ಇದು ಇರುವುದಿಲ್ಲ. ಆದರೂ ಒಂದು ಕೋಶದಲ್ಲಿ ಒಂದು ಕೋಶಕೇಂದ್ರ ಇರುವುದು ನಿಯಮ. ಕೆಲವು ಕೋಶಗಳಲ್ಲಿ ಒಂದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಕೋಶಕೇಂದ್ರಗಳು ಇರುವುದುಂಟು. ಬಹುಪಾಲು ಕೋಶಗಳಲ್ಲಿ ಇದರ ಆಕಾರ ಗೋಳದಂತೆ. ಆದರೆ ಭಿನ್ನ ಆಕಾರದ ಕೋಶಕೇಂದ್ರಗಳೂ ಉಂಟು ; ಅಂಡದಂತೆ, ರಿಬ್ಬನ್ ಪಟ್ಟಿಯಂತೆ, ಕುದುರೆಲಾಳದ ಆಕಾರದಂತೆ, ಮಣಿಸರದಂತೆ ಇತ್ಯಾದಿಯಾಗಿ ಕಂಡುಬರುತ್ತದೆ. ಮಾನವ ಬಿಳಿರಕ್ತ ಕಣದಲ್ಲಿ ಇದು ಬಹುರೂಪಿಯಾಗಿದೆ. ಅಂತೂ ಇದನ್ನು ಜೀವಂತ ಕೋಶಗಳಲ್ಲಿ ಗುರುತಿಸುವುದು ಕಷ್ಟ. ಆದರೆ ಕೋಶಗಳನ್ನು ಸೂಕ್ತವಾದ ರಾಸಾಯನಿಕಗಳ ಬಳಕೆಯಿಂದ ಸ್ಥಿರೀಕರಿಸಿ, ಕೆಲವು ವಿಶೇಷವಾದ ಅಭಿರಂಜಕಗಳನ್ನು ಬಳಸಿ ಇದರ ಇರುವಿಕೆಯನ್ನು ತೋರಿಸಬಹುದು. ಇದರೊಳಗಿನ ಹಾಗೂ ಕೋಶದ್ರವ್ಯದೊಳಗಿನ ವಸ್ತುಗಳು ಬೇರೆ ಬೇರೆಯಾಗಿರುತ್ತವೆಂಬುದು ಇಂಥ ತಂತ್ರ ಕೌಶಲಗಳಿಂದ ಖಚಿತಪಟ್ಟಿದೆ. ಕೋಶಕೇಂದ್ರದ ಗಾತ್ರದಲ್ಲಿ ಕೂಡ ವ್ಯತ್ಯಾಸ ಉಂಟು. ಕೋಶಕೇಂದ್ರದ ಹಾಗೂ ಕೋಶದ್ರವ್ಯದ ಘನಗಾತ್ರಗಳಿಗೆ ಒಂದು ಸಾಮಾನ್ಯ ಅನುಪಾತದ ನಿಯಮ ಉಂಟು. ಈ ಅನುಪಾತವನ್ನೇ ಹರ್ಟ್ವಿಗ್ ಎಂಬಾತ ನ್ಯೂಕ್ಲಿಯೋಪ್ಲಾಸಮಿನ ಸೂಚ್ಯಾಂಕ ಎಂದು ಕರೆದಿದ್ದಾನೆ.

$$\text{ನ್ಯೂ.ಸೂ.}\ (NP) = \frac{Vn}{Vc - Vn}$$

ಇಲ್ಲಿ, $Vn$ = ಕೋಶಕೇಂದ್ರದ ಘನಗಾತ್ರ, $Vc$ = ಕೋಶದ್ರವ್ಯದ ಘನಗಾತ್ರ.

ಕೋಶದ್ರವ್ಯದ ಘನಗಾತ್ರ ಕೋಶಕೇಂದ್ರಕ್ಕಿಂತ ಹೆಚ್ಚಾದರೆ ಕೋಶವಿಭಜನೆಗೆ ನಾಂದಿಯಾಗುತ್ತದೆ. ವಿಭಜನೆಯಾಗದ ಘಟ್ಟದಲ್ಲಿರುವ, ಅಂದರೆ ಅಂತರಪ್ರಾವಸ್ಥೆಯಲ್ಲಿರುವ ಕೋಶಕೇಂದ್ರದಲ್ಲಿ ಐದು ಬಗೆಯ ರಚನೆಗಳನ್ನು ಗುರುತಿಸಬಹುದು: 1. ನ್ಯೂಕ್ಲಿಯಸಿನ ಪೊರೆ; 2. ನ್ಯೂಕ್ಲಿಯೋಪ್ಲಾಸಮ್ ಅಥವಾ ಕೋಶಕೇಂದ್ರದ ರಸ–ಇದಕ್ಕೆ ಕ್ಯಾರಿಯೋಪ್ಲಾಸಮ್ ಎಂಬ ಹೆಸರೂ ಉಂಟು. 3. ನ್ಯೂಕ್ಲಿಯೋಲಸುಗಳು; 4. ವರ್ಣಗ್ರಾಹಿ ಕೇಂದ್ರಗಳು ಅಥವಾ ಕ್ರೊಮೊಸೆಂಟರು; 5. ಕ್ರೊಮೋಸೋಮುಗಳು.

ಕೋಶಕೇಂದ್ರದ ಪೊರೆ ಅಥವಾ ಕ್ಯಾರಿಯೋತೀಕ ಎಂಬುದು ಕೋಶಕೇಂದ್ರದ ಹೊರವಲಯದ ರಚನೆ. ಇದು ಕೋಶಕೇಂದ್ರದ ಒಳಗಣ ವಸ್ತುಗಳನ್ನು ಮತ್ತು ಕೋಶದ್ರವವನ್ನು ಪರಸ್ಪರ ಪ್ರತ್ಯೇಕಿಸುತ್ತದೆ. ಅಲ್ಲದೆ ಕೋಶಕೇಂದ್ರಕ್ಕೆ ಒಂದು ನಿರ್ದಿಷ್ಟ ರೂಪವನ್ನು ಕೊಡುತ್ತದೆ. ಇದು ಕೂಡ ಪ್ಲಾಸ್ಮ ಪೊರೆಯಂತೆಯೇ ಎರಡು ಪದರಗಳಿಂದ ಅಥವಾ ಮುಪ್ಪದರದ ರಚನೆಯಿಂದ ಕೂಡಿರುವುದೆಂದು ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಅಧ್ಯಯನಗಳು ತೋರಿಸಿವೆ. ಅಲ್ಲದೆ ಪೊರೆಯ ಮೇಲಾಯದಲ್ಲಿ ಸುಮಾರು 400Å ವ್ಯಾಸದ ಅಸಂಖ್ಯಾತ ರಂಧ್ರಗಳಿರುವಂತೆ ಕಂಡುಬಂದಿದೆ. ಈ ರಂಧ್ರಗಳ ಮೂಲಕ ಕೋಶಕೇಂದ್ರ ಮತ್ತು ಕೋಶದ್ರವ್ಯದ ವಸ್ತುಗಳು ಒಂದರಿಂದ ಮತ್ತೊಂದಕ್ಕೆ ಸಾಗುತ್ತವೆ ಎಂದು ನಂಬಲಾಗಿದೆ. ಕೆಲವು ಕೋಶಗಳಲ್ಲಿ ಈ ರಂಧ್ರಗಳನ್ನು ಒಂದು ತೆಳುವಾದ ಪೊರೆ ಮುಚ್ಚಿರುವಂತೆ ಕಂಡುಬಂದಿದೆ. ಅಲ್ಲದೆ ಕೆಲವಲ್ಲಿ ಈ ರಂಧ್ರಗಳು ಉಂಗುರುಗಳಿಂದ ಕೂಡಿರುವಂತೆಯೂ ಇವೆ. ಈ ಪೊರೆಗೂ ಕೋಶದ್ರವ್ಯದೊಳಗಿನ ಎಂಡೋಪ್ಲಾಸಮಿನ ಜಾಲಕ್ಕೂ ನಿಕಟಸಂಬಂಧದ ಕುರುಹುಗಳಿವೆ. ಹಾಗೂ ಇವುಗಳಲ್ಲಿ ರೂಪರಚನಾಸಾಮ್ಯವಿದೆ. ಕೋಶಕೇಂದ್ರದ ಪೊರೆ ಕೋಶದ್ರವ್ಯದಲ್ಲಿರುವ ಪೊರೆಮಂಡಲದ ಅಂಶವಾಗಿರಬಹುದು ಎಂಬ ಊಹೆಗೆ ಈ ಸಂಬಂಧ ಎಡೆಕೊಟ್ಟಿದೆ. ಕೋಶ ವಿಭಜನೆಯ ಪ್ರೋಫೇಸ್ ಘಟ್ಟದ ಕೊನೆಯಲ್ಲಿ ಇದು ವಿಚ್ಛಿದ್ರಗೊಂಡು ಕಣ್ಮರೆಯಾಗುತ್ತದೆ. ಮರಿಕೋಶಕೇಂದ್ರಗಳು ಟೀಲೊಫೇಸ್ ಘಟ್ಟದಲ್ಲಿ ರೂಪುಗೊಳ್ಳುವಾಗ ಹೊಸ ನ್ಯೂಕ್ಲಿಯಾರ್ ಪೊರೆ ನಿರ್ಮಾಣವಾಗುತ್ತದೆ. ಕೋಶಕೇಂದ್ರದ ಒಳಗಣ ದ್ರವರೂಪದ ವಸ್ತುವೇ ಕೋಶಕೇಂದ್ರದ ರಸ ಅಥವಾ ಕ್ಯಾರಿಯೋಲಿಂಫ್. ಇದರಲ್ಲಿ ಕೋಶಕೇಂದ್ರದ ಇತರ ವಸ್ತುಗಳು ಹುದುಗಿರುತ್ತವೆ. ಕೋಶಕೇಂದ್ರದ ಪೊರೆ ತೂತಾದರೆ ಒಳಗಿನ ದ್ರವವಸ್ತು ಹೊರಗೆ ಹರಿದು ಬರುತ್ತದೆ. ಈ ರಸದ ರಾಸಾಯನಿಕ ಸ್ವಭಾವದ ಬಗ್ಗೆ ಹೆಚ್ಚಿನ ಮಾಹಿತಿ ಇನ್ನೂ ದೊರೆಯಬೇಕಾಗಿದೆ. ಇದರಲ್ಲಿ ಅಧಿಕ ಪ್ರಮಾಣದ ಪ್ರೋಟೀನು ಇರುವಂತಿದೆ. ಅಲ್ಲದೆ ಆರ್‌ಎನ್‌ಎ ಹಾಗೂ ರೈಬೊನ್ಯೂಕ್ಲಿಯೇಸ್, ಆಲ್ಕಲೈನ್ ಫಾಸ್ಫಟೇಸ್, ಡೈಪೆಪ್ಟಿಡೇಸುಗಳೆಂಬ ಜಲವಿಶ್ಲೇಷಣಾತ್ಮಕ ಕಿಣ್ವಗಳೂ ಇವೆ. ಕೋಶಕೇಂದ್ರದ ದ್ರವದಲ್ಲಿ ಕ್ರೊಮ್ಯಾಟಿನ್ ಮತ್ತು ನ್ಯೂಕ್ಲಿಯೋಲಸುಗಳೆಂಬ ಎರಡು ಬಗೆಯ ವಸ್ತುಗಳಿವೆ. ಇವುಗಳ ರಂಗುಗಟ್ಟುವ ಸಾಮರ್ಥ್ಯಗಳು ಭಿನ್ನವಾದುವು. ಫಲ್ಗನ್ ಅಭಿರಂಜಕವನ್ನು ಬಳಸಿದಾಗ ಕ್ರೊಮ್ಯಾಟಿನ್ ಅಚ್ಚ ಕೆನ್ನೀಲಿ ಬಣ್ಣ ತಾಳಿದರೆ ನ್ಯೂಕ್ಲಿಯೋಲಸು ಯಾವ ಬಣ್ಣವನ್ನೂ ತಾಳದು. ಆದರೆ ಪೈರೋನಿನ್, ಹಿಮಟಾಕ್ಸಿಲಿನ್ ಮೊದಲಾದ ಅಭಿರಂಜಕಗಳಿಂದ ಇದನ್ನು ಗಾಢವಾಗಿ ರಂಗು ಗಟ್ಟಿಸಬಹುದು. ನ್ಯೂಕ್ಲಿಯೋಲಸ್ ಹೆಚ್ಚು ಸಾಂದ್ರತೆಯುಳ್ಳ ಗೋಲಾಕಾರದ ವಸ್ತು. ಒಂದು ಕೋಶದಲ್ಲಿ ಒಂದೇ ನ್ಯೂಕ್ಲಿಯೋಲಸಿರಬಹುದು ಇಲ್ಲವೆ ಹಲವಾರು ಇರಬಹುದು. ಇವುಗಳ ಸಂಖ್ಯೆ ನಿರ್ದಿಷ್ಟವಾಗಿರಬಹುದು ಅಥವಾ ವ್ಯತ್ಯಾಸ ತೋರಬಹುದು. ಈ ವ್ಯತ್ಯಾಸಕ್ಕೆ ಹಲವು ನ್ಯೂಕ್ಲಿಯೋಲಸುಗಳು ಪರಸ್ಪರ ಕೂಡಿ ಐಕ್ಯವಾಗುವುದೇ ಕಾರಣ. ಪ್ರಾವಸ್ಥಾ ವೈದೃಶ್ಯ ಸೂಕ್ಷ್ಮದರ್ಶಕದಲ್ಲಿ ಜೀವಂತ ಕೋಶಗಳನ್ನು ಪರೀಕ್ಷಿಸಿದಾಗ ನ್ಯೂಕ್ಲಿಯೋಲಸ್ ರಿಫ್ರೇಕ್ಷಣೀಯ (ರಿಫ್ರೆಂಜೆಂಟ್) ವಸ್ತುವಿನಂತೆ ತೋರುತ್ತದೆ. ಇದು ದೃಕ್ ಸೂಕ್ಷ್ಮದರ್ಶಕದಲ್ಲಿ ಏಕರೀತಿಯಾಗಿ ಕಾಣುತ್ತದೆ. ಆದರೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಸಣ್ಣ ಸಣ್ಣ ಕಣಗಳಿಂದ ಕೂಡಿರುವಂತೆ ಅಥವಾ ಒಂದು ಜಾಲದ ರಚನೆಯಂತೆ ಗೋಚರಿಸುತ್ತದೆ.

ಅಂತರಪ್ರಾವಸ್ಥೆಯ ನ್ಯೂಕ್ಲಿಯೋಲಸಿನಲ್ಲಿ ಎರಡು ಬಗೆಯ ವಸ್ತುಗಳಿವೆ: 1. ಪಾರ್ಸ್ ಅಮಾರ್ಫ 2. ತಂತುರೂಪದ ನ್ಯೂಕ್ಲಿಯೋನೀಮ. ಕೋಶವಿಭಜನೆಯ ಕಾಲದಲ್ಲಿ ನ್ಯೂಕ್ಲಿಯೋಲಸ್ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದಿಲ್ಲ. ಪ್ರೋಫೇಸ್ ಘಟ್ಟದ ಕೊನೆಯಲ್ಲಿ ಪಾರ್ಸ್ ಅಮಾರ್ಫ ಕಣ್ಮರೆಯಾಗುವುದರಿಂದ ನ್ಯೂಕ್ಲಿಯೋಲಸು ಮಾಯವಾದಂತೆ

ಕಂಡುಬರುತ್ತದೆ. ಆದರೆ ತಂತುರೂಪದ ಭಾಗ ಮಾತ್ರ ಬದಲಾಗದೆ ಕ್ರೊಮೋಸೋಮಿನ ಭಾಗವಾಗಿ ಉಳಿಯುತ್ತದೆ. ಇದು ಮತ್ತೆ ಹೊಸದಾಗಿ ರೂಪಗೊಳ್ಳುವುದು ಕೋಶವಿಭಜನೆಯ ಕಡೆಯ ಘಟ್ಟದಲ್ಲಿ. ಅಂದರೆ ಟೀಲೋಫೇಸಿನಲ್ಲಿ. ನ್ಯೂಕ್ಲಿಯೋಲಸ್ ಕೆಲವು ನಿರ್ದಿಷ್ಟ ಕ್ರೊಮೋಸೋಮುಗಳೊಡನೆ ನಿಕಟ ಸಂಬಂಧ ಪಡೆದಿದೆ. ಇಂಥ ಕ್ರೊಮೋಸೋಮುಗಳಿಗೆ ಕೋಶಕೇಂದ್ರದ ಕ್ರೊಮೋಸೋಮುಗಳೆಂದು ಹೆಸರು. ಹಲವು ಸಸ್ಯಜೀವಕೋಶಗಳಲ್ಲಿ ಇಂಥ ಒಂದು ಜೊತೆ ಸಮಜಾತ ಕ್ರೊಮೋಸೋಮುಗಳನ್ನು ಗುರುತಿಸಬಹುದು. ಈ ಬಗೆಯ ಕ್ರೊಮೋಸೋಮಿನ ಒಂದು ಕ್ಷೇತ್ರಕ್ಕೆ ನ್ಯೂಕ್ಲಿಯೋಲಸ್ಸನ್ನು ರೂಪಿಸುವ ಸಾಮರ್ಥ್ಯ ಉಂಟು. ಇದಕ್ಕೆ ನ್ಯೂಕ್ಲಿಯೋಲಸಿನ ಸಂಘಟಕ ಎಂದು ಹೆಸರು. ಈ ಕ್ಷೇತ್ರದಲ್ಲಿ ಕ್ರೊಮೋಸೋಮಿನ ವ್ಯಾಸ ಕ್ಷೀಣವಾಗಿರುವುದರಿಂದ ಇದು ದ್ವಿತೀಯಕ ಸಂಕುಚನದಂತೆ (ಸೆಕೆಂಡರಿ ಕನ್‌ಸ್ಟ್ರಿಕ್ಷನ್) ಕಾಣುತ್ತದೆ. ನ್ಯೂಕ್ಲಿಯೋಲಸ್ಸು ಆರ್‌ಎನ್ಎ ಪ್ರೋಟೀನು ಮತ್ತು ಲಿಪಿಡ್ಡುಗಳಿಂದ ಕೂಡಿದೆ. ಇವು ನ್ಯೂಕ್ಲಿಯೋಲಸಿನಲ್ಲಿ ಎಷ್ಟೆಷ್ಟು ಪರಿಮಾಣದಲ್ಲಿರುತ್ತವೆ ಎಂಬುದು ಭಿನ್ನಾಭಿಪ್ರಾಯವಾಗಿಯೇ ಉಳಿದಿದೆ. ಇವುಗಳ ಅನುಪಾತ ಕೋಶದ ಚಯಾಪಚಯ ಕ್ರಿಯೆಗಳಿಗೆ ಅನುಸಾರವಾಗಿ ವ್ಯತ್ಯಾಸವಾಗಬಹುದು. ಹಲವು ನ್ಯೂಕ್ಲಿಯೋಲಸುಗಳ ಸುತ್ತ ಡಿಎನ್‌ಎ ವಸ್ತುವಿನ ಒಂದು ತೆಳುವಾದ ಹೊದಿಕೆಯು ಇದ್ದಂತಿದೆ. ಇದಕ್ಕೆ ನ್ಯೂಕ್ಲಿಯೋಲಸ್ ಸಂಬಂಧದ ಕ್ರೊಮ್ಯಾಟಿನ್ ಎಂದು ಹೆಸರು. ನ್ಯೂಕ್ಲಿಯೋಲಸಿನಲ್ಲಿ ಆರ್‌ಎನ್‌ಎ ಸಂಶ್ಲೇಷಣೆ ನಡೆಯುತ್ತದೆ ಎಂಬುದಕ್ಕೆ ಸಾಕ್ಷ್ಯಾಧಾರಗಳಿವೆ. ಅಲ್ಲದೆ ಪ್ರೋಟೀನಿನ ಸಂಶ್ಲೇಷಣೆಯೂ ಅಲ್ಪ ಪ್ರಮಾಣದಲ್ಲಿ ನಡೆಯುತ್ತದೆ. ಕೆಲವು ಕೋಶಗಳ ನ್ಯೂಕ್ಲಿಯೋಲಸ್ಸು ನ್ಯೂಕ್ಲಿಯೋಟೈಡಿನ ಸಹಕಿಣ್ವಗಳ ಸಂಶ್ಲೇಷಣೆಯಲ್ಲೂ ಪಾತ್ರವಹಿಸುತ್ತದೆ. ಅಂತರ ಪ್ರಾವಸ್ಥಾ ಘಟ್ಟದ ಕೋಶಕೇಂದ್ರದಲ್ಲಿ ವರ್ಣಗ್ರಾಹಿವಸ್ತು ವ್ಯಾಪಕವಾದ ಬಲೆಯಂತೆ ಹರಡಿದೆ. ಗಾಢವಾಗಿ ಬಣ್ಣ ಹೀರುವ ಈ ವಸ್ತುಗಳಿಗೆ ಫ್ಲೆಮಿಂಗ್ ಎಂಬಾತ 1880ರಲ್ಲಿ ಕ್ರೊಮ್ಯಾಟಿನ್ ಎಂಬ ಹೆಸರು ಕೊಟ್ಟಿದ್ದಾನೆ. ಕೆಲವರು ಇದನ್ನು ತೀವ್ರತಮವಾಗಿ ಸುರುಳಿ ಸುತ್ತಿದ ಕ್ರೊಮೋಸೋಮಿನ ವಿಶೇಷ ಕ್ಷೇತ್ರಗಳೆಂದು ಭಾವಿಸುತ್ತಾರೆ. ನಿರ್ದಿಷ್ಟ ಆಕಾರವಿಲ್ಲದ ಈ ವಸ್ತುಗಳಿಗೆ ಟೀಷರ್ 1920ರಲ್ಲಿ ಕ್ರೊಮೋಸೆಂಟರ್ ಎಂದು ನಾಮಕರಣ ಮಾಡಿದ. ಇಂಥ ವಸ್ತುಗಳು ಸಣ್ಣವಾಗಿದ್ದರೆ ಅವಕ್ಕೆ ಕ್ಯಾರಿಯೋಸೋಮ್ ಅಥವಾ ಮಿಥ್ಯಾನ್ಯೂಕ್ಲಿಯೋಲಸು ಎಂಬ ಹೆಸರುಂಟು. ಕ್ರೊಮ್ಯಾಟಿನ್ ತುಣುಕುಗಳು ಕ್ರೊಮೋಸೋಮಿನ ನಿರ್ಮಾಣದ ಮೊದಲ ಹೆಜ್ಜೆಯಿರಬೇಕೆಂದು ಭಾವಿಸಿ ಇವಕ್ಕೆ ಪ್ರೋಕ್ರೊಮೋಸೋಮುಗಳೆಂಬ ಹೆಸರನ್ನು ರೋಸೆನ್‌ಬರ್ಗ್ 1904ರಲ್ಲಿ ಕೊಟ್ಟ. ಆದರೆ ಈ ಕ್ರೊಮ್ಯಾಟಿನ್ ವಸ್ತುಗಳು ಮೂಲಕ್ರೊಮೋಸೋಮಿನ ನಿರ್ದಿಷ್ಟ ಭಾಗಗಳೇ ಅಥವಾ ಬೇರೆಯವೇ ಎಂಬುದು ಅಸ್ಪಷ್ಟವಾಗಿ ಉಳಿದಿದೆ. ಅಂತೂ ಹಲವು ಪ್ರಭೇದಗಳಲ್ಲಿ ಇವುಗಳ ಗಾತ್ರ ಮತ್ತು ಸಂಖ್ಯೆ ಸ್ಥಿರವಾಗಿರುತ್ತವೆ. ಅಕ್ಕಪಕ್ಕದ ಪ್ರೋಕ್ರೊಮೋಸೋಮುಗಳು ಒಂದಕ್ಕೊಂದು ಕೂಡಿ ಐಕ್ಯವಾಗುವುದರಿಂದ ಅವುಗಳ ಸಂಖ್ಯೆ ಕಡಿಮೆಯಾದರೂ ಅವುಗಳ ಒಟ್ಟಾರೆ ಪರಿಮಾಣದಲ್ಲಿ ವ್ಯತ್ಯಾಸವಾಗುವುದಿಲ್ಲ. ಕ್ರೊಮೋಸೋಮಿನಲ್ಲಿ ಜೀನ್ಯಾತ್ಮಕವಾಗಿ ಎರಡು ಬಗೆಯ ಕ್ರೊಮ್ಯಾಟಿನ್ ವಸ್ತುಗಳಿರುವುದೆಂದೂ (ಯೂಕ್ರೊಮ್ಯಾಟಿನ್ ಮತ್ತು ಹೆಟಿರೊಕ್ರೊಮ್ಯಾಟಿನ್) ಕ್ರೊಮ್ಯಾಟಿನ್ ತುಣುಕು ಮತ್ತು ಕ್ರೊಮೋಸೆಂಟರುಗಳು ಕ್ರಿಯಾತ್ಮಕ ಜೀನುಗಳಿಂದ ಕೂಡಿರದ ಕ್ರೊಮೋಸೋಮುಗಳ ಭಾಗಗಳನ್ನು ಪ್ರತಿನಿಧಿಸುತ್ತವೆ ಎಂದೂ ಹೈಟ್ಸ್ ಎಂಬ ವಿಜ್ಞಾನಿ ಭಾವಿಸುತ್ತಾನೆ (1928). ಕೋಶಕೇಂದ್ರ ದ್ರವದಲ್ಲಿ ಹುದುಗಿರುವ ಮತ್ತೊಂದು ಬಗೆಯ ಸಂರಚನೆಗಳೇ ಕ್ರೊಮೋಸೋಮುಗಳು. ಇವನ್ನು ಕೋಶವಿಭಜನೆಯ ಘಟ್ಟಗಳಲ್ಲಿ ಸುಸ್ಪಷ್ಟವಾಗಿ ಅಧ್ಯಯನ ಮಾಡಬಹುದೇ ವಿನಾ ಅಂತರಪ್ರಾವಸ್ಥಾ ಘಟ್ಟದಲ್ಲಿ ಗುರುತಿಸುವುದು ಅಸಾಧ್ಯ. ಇವುಗಳಲ್ಲಿ ಆನುವಂಶಿಕ ವಸ್ತುಗಳಾದ ಜೀನ್‌ಗಳು ಸಾಲುಜೋಡಣೆಯಲ್ಲಿ ವ್ಯವಸ್ಥಿತವಾಗಿರುವುದರಿಂದ ಆನುವಂಶೀಯತೆಯಲ್ಲಿ ಕ್ರೊಮೋಸೋಮುಗಳ ಪಾತ್ರ ಬಲು ಹಿರಿದು. ಈ ಕಾರಣದಿಂದಲೇ ಜೀವರಾಶಿಗಳಲ್ಲಿ ಕಂಡುಬರುವ ವಿವಿಧತೆ, ಉತ್ಪರಿವರ್ತನೆ, ವಿಕಾಸ, ಬೆಳೆವಣಿಗೆಯ ನಿಯಂತ್ರಣಗಳೇ ಮೊದಲಾದುವುಗಳಲ್ಲಿ ಇವುಗಳ ಕೈವಾಡ ಅಧಿಕ. ಇವು ಅಭಿರಂಜಕಗಳನ್ನು ಮೀರಿ, ಗಾಢವಾಗಿ ಬಣ್ಣ ತಳೆಯುವುದರಿಂದ ವಾಲ್ಡೆಯರ್ ಎಂಬಾತ 1880ರಲ್ಲಿ ಇವಕ್ಕೆ ಕ್ರೊಮೋಸೋಮುಗಳೆಂಬ ಹೆಸರು ನೀಡಿದ. ಇವು ಕೋಶವಿಭಜನೆಯ ಮೆಟಫೇಸ್ ಮತ್ತು ಅನಫೇಸ್ ಘಟ್ಟಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಸಂಕೋಚಗೊಳ್ಳುವುದರಿಂದ ಆಗ ಇವುಗಳ ರೂಪರಚನೆಗಳ ಅಧ್ಯಯನ ಸುಲಭವಾಗುತ್ತದೆ. (ವಿವರಗಳಿಗೆ ನೋಡಿ–ಕ್ರೊಮೋಸೋಮುಗಳು.)

ಕೋಶದಲ್ಲಿ ಮೇಲಿನ ವಿಶೇಷಾಂಗಕಗಳಲ್ಲದೆ, ಕೋಶದಲ್ಲಿ ಉತ್ಪತ್ತಿಯಾದ ಹಾಗೂ ಕೋಶದ್ರವ್ಯದಲ್ಲಿ ಸಂಗ್ರಹವಾಗಿರುವ ವಸ್ತು ಕಂಡುಬರುತ್ತವೆ. ಇವುಗಳಲ್ಲಿ ಲಿಪಿಡ್ ಹನಿಗಳು, ಪೀತಕ ವಸ್ತುಗಳು, ವರ್ಣಕಗಳು ಹಾಗೂ ಸ್ರಾವ್ಯ ವಸ್ತುಗಳು ಮುಖ್ಯವಾದುವು. ಇವನ್ನು ಒಟ್ಟಾರೆ ಡ್ಯೂಟರೋಪ್ಲಾಸಮ್ ಅಥವಾ ಪ್ಯಾರಪ್ಲಾಸಮ್ ಎಂದು ಕರೆಯುವುದುಂಟು. ಪ್ರತಿಯೊಂದು ಕೋಶದಲ್ಲಿಯೂ ಕೋಶ ಚಕ್ರವನ್ನು ನಾಲ್ಕು ಹಂತಗಳಾಗಿ ವಿಭಜಿಸಲಾಗಿದೆ. ಮೊದಲನೆಯದು ಮೈಟೋಸಿಸಿನ ಹಂತ ಅಥವಾ ಎಮ್–ಹಂತ. ಈ ಹಂತದಲ್ಲಿ ಪ್ರೊಫೇಸ್, ಮೆಟಫೇಸ್, ಅನಫೇಸ್, ಟೀಲೊಫೇಸ್ ಘಟ್ಟಗಳಿವೆ. ಉಳಿದ ಮೂರು ಹಂತಗಳು ಇಂಟರ್ ಫೇಸ್ ಘಟ್ಟಕ್ಕೆ ಸೀಮಿತವಾಗಿವೆ. ಇಲ್ಲಿ ಜಿ–1 ಹಂತ, ಎಸ್ ಹಂತ ಮತ್ತು ಜಿ–2 ಹಂತ ಎಂಬುವನ್ನು ಗುರುತಿಸಬಹುದು. ಜಿ–1 ಹಂತದಲ್ಲಿ ಕ್ರೊಮೋಸೋಮುಗಳು ದ್ವಿಪ್ರತಿಹೊಂದದ ಅವಸ್ಥೆಯಲ್ಲಿರುತ್ತವೆ. ಇದು ಡಿಎನ್‌ಎ ಯ ಸಂಶ್ಲೇಷಣಾ ಪೂರ್ವದ ಹಂತ. ಎಸ್–ಹಂತದಲ್ಲಿ ಡಿಎನ್‌ಎ ಸಂಶ್ಲೇಷಣೆ ನಡೆಯುತ್ತದೆ. ಜಿ–2 ಹಂತ ಡಿಎನ್‌ಎಯ ಸಂಶ್ಲೇಷಣೋತ್ತರದ ಹಂತ. ಈ ಹಂತದಲ್ಲಿ ಕ್ರೊಮೋಸೋಮು ಪೂರ್ಣವಾಗಿ ದ್ವಿಪ್ರತಿಗೊಂಡು ಮುಂದಿನ ಕೋಶವಿಭಜನೆಗೆ ಸಿದ್ಧವಾಗುತ್ತದೆ. ನೋಡಿ–ಮೈಟೋಸಿಸ್; ಮಿಯೋಸಿಸ್, ಜೀವಕೋಶ ವಿಜ್ಞಾನ (ಎಸ್.ಡಿ.)

**ಜೀವಂತ ಪಳೆಯುಳಿಕೆಗಳು:** ಭೂಮಿಯ ಮೇಲೆ ಉದಯವಾದಂದಿನಿಂದ ಇಂದಿನವರೆಗೂ ಹೆಚ್ಚು ಬದಲಾವಣೆಯಾಗದೆ ಬದುಕುಳಿದಿರುವ ಜೀವ ಪ್ರಭೇದಗಳು. ಮಿಲಿಯಗಟ್ಟಲೆ ವರ್ಷಗಳ ಹಿಂದೆಯೇ ಭೂಮಿಯ ಮೇಲೆ ಯಶಸ್ವಿಯಾಗಿ ಬಾಳಿದ ಜೀವಪ್ರಭೇದಗಳಲ್ಲಿ, ಕೆಲವು ತಮ್ಮ ಹತ್ತಿರ ಸಂಬಂಧಿಗಳೆಲ್ಲ ವಿನಾಶವಾಗಿ, ಕೇವಲ ಪಳೆಯುಳಿಕೆಗಳಾಗಿರುವಾಗ, ತಾವು ಮಾತ್ರ ಹಿಂದೆ ಇದ್ದಂತೆಯೇ ಹೆಚ್ಚು ಬದಲಾವಣೆಯಾಗದೆ ಇರುವುವು. ಬಹುಕಾಲದ ಹಿಂದೆ ಭೂಮಿಯಿಂದ ಕಣ್ಮರೆಯಾಗಿ ಹೋಗಿದೆ ಎಂದು ತಿಳಿದಿದ್ದಾಗ ಅಚಾನಕ್ಕಾಗಿ ಕಾಣಿಸಿಕೊಳ್ಳುವ ಜೀವಂತ ಪಳೆಯುಳಿಕೆಗಳಂತೂ ಜನಸಾಮಾನ್ಯರ ಹಾಗೂ ವಿಜ್ಞಾನಿಗಳ ಕುತೂಹಲವನ್ನು ಕೆರಳಿಸುತ್ತವೆ.

ಟೊಳ್ಳಾದ ಬೆನ್ನೆಲುಬುಳ್ಳ ಲ್ಯಾಟಿಮೇರಿಯಾ ಪ್ರಾಚೀನ ಕಾಲದ ಮೀನನ್ನು ಹೋಲುವ ಜಲಚರಿ. ಇದು ಒಂದು ವಿಶಿಷ್ಟ ಜೀವಂತ ಪಳೆಯುಳಿಕೆ. ಸು. 63 ದಶಲಕ್ಷ ವರ್ಷಗಳಿಂದೀಚೆಗೆ ಈ ಪ್ರಾಣಿಯ ಒಂದು ಪಳೆಯುಳಿಕೆ ಭೂಗರ್ಭದಲ್ಲಿ ಕಂಡುಬಂದ ಕಾರಣ ಈ ಮೀನಿನ ವಂಶ ಸಂಪೂರ್ಣ ಪತನವಾಗಿದೆ ಎಂದು ವಿಜ್ಞಾನಿಗಳು ಬಲವಾಗಿ ನಂಬಿದ್ದರು. ಆದರೆ 1938ರಲ್ಲಿ ದಕ್ಷಿಣ ಆಫ್ರಿಕಾದ ಕರಾವಳಿಯಲ್ಲಿ ಮೀನುಗಾರನೊಬ್ಬ ಬಲೆಹಾಕಿ ಹಿಡಿದ 1.5 ಮೀ ಉದ್ದದ ಸು. 75 ಕಿಗ್ರಾಂ ತೂಗುವ ಈ ವಿಚಿತ್ರ ಮೀನು ಅವರ ನಂಬಿಕೆಯನ್ನು ಹುಸಿಗೊಳಿಸಿತು. ಪ್ರಾಣಿಸಂಗ್ರಹಾಲಯದಲ್ಲಿ ಇದನ್ನು ಸಂರಕ್ಷಿಸಿ ಇಟ್ಟ ಶ್ರೀಮತಿ ಲ್ಯಾಟಿಮರ್ ಎಂಬ ಪರಿಪಾಲಿಕೆಯ ನೆನಪಿಗಾಗಿ ಇದನ್ನು ಲ್ಯಾಟಿಮೇರಿಯಾ ಎಂದು ಕರೆಯಲಾಯಿತು.



ಲ್ಯಾಟಿಮೇರಿಯಾ

ಮುಂದಿನ 14 ವರ್ಷಗಳ ಅನಂತರ 1952ರಲ್ಲಿ ಲ್ಯಾಟಿಮೇರಿಯಾವನ್ನು ಹೋಲುವ ಮತ್ತೊಂದು ಮೀನು ಅದೇ ಜಾಗದಲ್ಲಿ ಬಲೆಗೆ ಬಿತ್ತು. ಇತ್ತೀಚೆಗೆ 2004ರ ಆಗಸ್ಟ್‌ನಲ್ಲಿ ಟಾನ್ಜಾನಿಯಾದ ಕಿಗೊಂಬೆ ಎಂಬಲ್ಲಿ ಮೀನುಗಾರರಿಗೆ ಐದು ತಿಂಗಳುಗಳ ಅಂತರದಲ್ಲಿ ಸು. 20 ಇಂತಹ ಮೀನುಗಳು ಸಿಕ್ಕಿವೆ. ದೇಹರಚನೆಯಲ್ಲಿ ಲ್ಯಾಟಿಮೇರಿಯಾ ಇಂದು ಪ್ರಪಂಚದ ಕೆಲವೆಡೆ ಮಾತ್ರ ಇರುವ ಘುಪ್ಪುಸಮೀನುಗಳ ಪೂರ್ವಜ ಪ್ರಭೇದವಾದ ಕ್ರಾಸೋಪ್ಟೇರೀಜಿಯಾವನ್ನು ಹೋಲುತ್ತದೆ. ಇದರ ಈಜುರೆಕ್ಕೆಗಳು ಹೆಚ್ಚು ಆಧಾರ ನೀಡಬಲ್ಲವು. ಮಾಂಸಾಹಾರಿ ಲ್ಯಾಟಿಮೇರಿಯಾ ತನ್ನ ಬಾಯಲ್ಲಿ ಚೂಪಾದ ಹಲ್ಲುಗಳನ್ನು ಹೊಂದಿದೆ. ಇದರ 3 ಹೋಳುಗಳಿಂದಾದ ಬಾಲದ ರೆಕ್ಕೆ ಕುತೂಹಲಕಾರಿಯಾಗಿದೆ. ಇದೊಂದು ಕಶೇರುಕವೆಂದು ತಿಳಿದಿದ್ದರೂ, ಲ್ಯಾಟಿಮೇರಿಯಾ ಬೆನ್ನೆಲುಬಿನ ಜಾಗದಲ್ಲಿ ಟೊಳ್ಳಾದ ದ್ರವದಿಂದ ತುಂಬಿದ ನೀಳ ಸರಳಿನಾಕಾರದ ನೋಟೋಕಾರ್ಡ್ ಇದೆ. ಸು. 80 ವರ್ಷ ಬದುಕಬಲ್ಲ ಈ ಮೀನು 145 ತಿಂಗಳ ಗರ್ಭಾವಸ್ಥೆಯ ಅನಂತರ 20 ರಿಂದ 26 ಮರಿಗಳನ್ನು ಹಾಕುತ್ತದೆ. ಈ ಮೀನು ಇನ್ನೂ ಬದುಕಿದೆ ಎಂದು

ತಿಳಿದುಬಂದಿದ್ದೇ ಇದರ ಪಾಲಿಗೆ ದುರಂತವಾಗಿದೆ. ಯುಗಯುಗಾಂತರಗಳನ್ನು (ಸು. 400 ಮಿಲಿಯ ವರ್ಷಗಳು) ದಾಟಿಬಂದ ಲ್ಯಾಟಿಮೇರಿಯಾಗೆ ಇಂದು ಬೇಟೆಯಾಡುವ ಮೂಲಕ ಇದರ ಸಂತತಿ ವಿನಾಶದ ಹಾದಿ ತಲುಪಿದೆ.

ಹಲ್ಲಿಗಳ ಗುಂಪಿಗೆ ಸೇರಿದ ಸ್ಫಿನೋಡಾನ್ ಮತ್ತೊಂದು ಜೀವಂತ ಪಳೆಯುಳಿಕೆ. ನ್ಯೂಜಿಲೆಂಡ್ ಸುತ್ತಲಿನ ಸಣ್ಣ ದ್ವೀಪಗಳಲ್ಲಿ ಮಾತ್ರ ಕಂಡುಬರುವ ಈ ಹಲ್ಲಿ 240 ಮಿಲಿಯ ವರ್ಷಗಳ ಹಿಂದೆ ಈ ಭೂಮಿಯ ಮೇಲೆ ವಾಸಿಸುತ್ತಿತ್ತು. 65 ಮಿಲಿಯನ್ ವರ್ಷಗಳ ಹಿಂದೆಯೇ ಅಳಿದುಹೋದ ಜಗತ್ತಿನ ಅದ್ಭುತವೆನಿಸಿದ ದೈತ್ಯ ಡೈನೋಸಾರ್‌ಗಳ ಸಹಜೀವಿ. ತಲೆ ಹಾಗೂ ಬೆನ್ನಿನ ಮೇಲೆ ಸಾಲಾಗಿ ತ್ರಿಕೋಣಾಕಾರದ ಮುಳ್ಳುಗಳಿರುವ ಇದರ ಚರ್ಮ ಬೂದು ಹಸಿರು ಬಣ್ಣದ್ದಾಗಿದ್ದು, ಚಿಪ್ಪುಗಳಿಂದಾವೃತವಾಗಿದೆ. ಸು. 60 ಸೆಂಮೀ ಉದ್ದವಿರುವ ಸ್ಫಿನೋಡಾನ್ ಹಗಲೆಲ್ಲ ಬಿಲಗಳಲ್ಲಿ ವಿರಮಿಸಿ ರಾತ್ರಿ ಬೇಟೆಗಾಗಿ – ಕೀಟಗಳು, ಉಭಯಜೀವಿಗಳು, ಸಣ್ಣ ಹಕ್ಕಿಗಳನ್ನು ತಿನ್ನಲು, ಹೊರಗೆ ಬರುತ್ತದೆ. ಗೋಡೆಯ ಹಲ್ಲಿಯಂತೆ ಇದೂ ಸಹ ರಕ್ಷಣಾತ್ಮಕವಾಗಿ ತನ್ನ ಬಾಲವನ್ನು ತ್ಯಜಿಸುತ್ತದೆ. ಫಲಿತಗೊಂಡ ಮೊಟ್ಟೆಗಳನ್ನು ಒಂದು ವರ್ಷ ತನ್ನ ಒಡಲಲ್ಲಿ ಹೊತ್ತೊಯ್ಯುವ ಹೆಣ್ಣು ಸ್ಫಿನೋಡಾನ್, ಅನಂತರ ಸೂಕ್ತ ಸ್ಥಳದಲ್ಲಿ ಅವುಗಳನ್ನಿಟ್ಟು ರಕ್ಷಿಸುತ್ತದೆ. ಮತ್ತೊಂದು ವರ್ಷ ಪೂರ್ಣ ಬೆಳವಣಿಗೆಯಾದ ಅನಂತರ ಮರಿಗಳು ಹೊರಬರುತ್ತವೆ. ಇಷ್ಟು ದೀರ್ಘವಾದ ಭ್ರೂಣಾವಸ್ಥೆ ಬೇರಾವ ಸರೀಸೃಪಗಳಲ್ಲಿ ಇಲ್ಲ. ಟುವಟಾರ ಎಂಬ ಹಲ್ಲಿ 77 ವರ್ಷಗಳು ಬದುಕಿದ ದಾಖಲೆಯಿದೆ. 20 ವರ್ಷ ವಯಸ್ಸಿನ ಅನಂತರ ಇದು ಹೆಣ್ಣಿನೊಡನೆ ಸಂಭೋಗಮಾಡುತ್ತದೆ. ರಿಂಕೋಸೆಫಾಲಿಯಾ ಗುಂಪಿನ ಈ ಹಲ್ಲಿ ಪ್ರೌಢಾವಸ್ಥೆ ತಲುಪುವ ಮೊದಲು ಅದರ ನೆತ್ತಿಯ ಮೇಲಿನ ಮೂರನೇ ಕಣ್ಣು ಕತ್ತಲು ಬೆಳಕುಗಳನ್ನು ಗುರುತಿಸಬಲ್ಲದು. ಪ್ರಬುದ್ಧಾವಸ್ಥೆಯಲ್ಲಿ ಈ ಕಣ್ಣಿನ ಮೇಲೆ ಚರ್ಮದ ಪೊರೆ ಬೆಳೆಯುತ್ತದೆ. ಇದರ ಜೊತೆಯಲ್ಲಿ ವಿಕಸನಗೊಂಡ ಸರೀಸೃಪಗಳೆಲ್ಲ ಅವನತಿಯ ಹಾದಿ ಹಿಡಿದರೂ ಸ್ಫಿನೋಡಾನ್ ಮಾತ್ರ ಇಂದಿಗೂ ಬದುಕುಳಿದಿದೆ.

ಸ್ಫಿನೋಡಾನ್

ಜೀವಂತ ಪಳೆಯುಳಿಕೆಗಳ ಸಾಲಿಗೆ ಹೀಗೆ ಮತ್ತೆಷ್ಟೋ ಪ್ರಾಣಿ, ಸಸ್ಯಗಳು ಸೇರಿವೆ. ಮಾನೋಪ್ಲಕೋಪೋರಾ ಎಂಬ ಮೃದ್ವಂಗಿಗಳ ಒಂದು ವರ್ಗದ ನಿಯೋಪಿಲೈನಾ ಗ್ಯಾಲಥಿಯೇ ಮತ್ತೊಂದು ಜೀವಂತ ಪಳೆಯುಳಿಕೆ. ಇದರ ದೇಹವನ್ನು ಒಂದೇ ತುಂಡಿನ ಚಪ್ಪಟೆಯಾಕಾರದ ಚಿಪ್ಪು ಆವರಿಸಿದೆ. ಇದು 6–7 ಜೊತೆ ಕಿವಿರುಗಳಿಂದ ಉಸಿರಾಡುತ್ತದೆ. ತನ್ನ ಚಪ್ಪಟೆಯಾದ ಮಾಂಸಲ ಪಾದದಿಂದ ನೀರಿನ ಅಲೆಯೊಂದಿಗೆ ಕಲ್ಲುಬಂಡೆಗಳ ಮೇಲೆ ತೆವಳುತ್ತಾ ಆಹಾರವನ್ನರಸಿ ತೀರಕ್ಕೆ ಬರುತ್ತದೆ. ಇದರೊಂದಿಗೆ ಭೂಮಿಯ ಮೇಲೆ ವಿಕಸಿತಗೊಂಡು ಹೆಚ್ಚಿನ ಮೃದ್ವಂಗಿಗಳು ಇಂದು ವಂಶಸ್ಥಗೊಂಡಿವೆ.

ಸಂದಿಪದಿಗಳ ವಂಶದ ಅನಿಕೊಫೊರಾ ವರ್ಗದ ಪೆರಿಪೆಟಸ್ ಮತ್ತೊಂದು ಜೀವಂತ ಪಳೆಯುಳಿಕೆ. ವಲಯವಂತ (ಅನೆಲಿಡಾ) ಹಾಗೂ ಸಂದಿಪದಿ (ಆರ್ತೊಪೋಡಾ)ಗಳ ಗುಣಗಳನ್ನೆರಡನ್ನೂ ಅಳವಡಿಸಿಕೊಂಡ ಪೆರಿಪೆಟಸ್ ಇವೆರಡೂ ವಂಶಗಳನ್ನು ಕೂಡಿಸುವ ಸೇತುವೆಯಂತಿದೆ.

ಜೀವಂತ ಪಳೆಯುಳಿಕೆಗಳ ವಿಸ್ತೃತ ಅಧ್ಯಯನ ಅವು ಭೂಮಿಯ ಮೇಲೆ ರಾರಾಜಿಸಿದ ಸಮಯದ ಭೂವೈಜ್ಞಾನಿಕ ಸ್ಥಿತಿಗತಿಗಳ, ಪರಿಸರದ ಬಗ್ಗೆ ಹೆಚ್ಚು ಬೆಳಕು ಬೀರಬಲ್ಲುದು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಜೀವಂತ ಪಳೆಯುಳಿಕೆಗಳು ಕಂಡುಬಂದರೂ ಆಶ್ಚರ್ಯವಿಲ್ಲ. ಜೀವವಿಕಾಸದ ಪ್ರಕ್ರಿಯೆಯಲ್ಲಿ ಅರ್ಥವಾಗದೇ ಉಳಿದುಹೋದ ಅದ್ಭುತ ವಿಷಯಗಳನ್ನು ಸಂಗ್ರಹಿಸುವಲ್ಲಿ ಈ ಜೀವಂತ ಪಳೆಯುಳಿಕೆಗಳು ಸಹಕಾರಿಯಾಗಿವೆ. (ಟಿ.ಆರ್.ಎಸ್)

**ಜೀವಕೋಶ ವಿಜ್ಞಾನ:** ಜೀವಕೋಶಗಳ ರೂಪುರಚನೆ, ಕ್ರಿಯಾ ಚಟುವಟಿಕೆ ಮತ್ತು ಅವುಗಳ ಪುನರುತ್ಪತ್ತಿಯನ್ನು ಅಭ್ಯಸಿಸುವ ಜೀವವಿಜ್ಞಾನದ ಶಾಖೆ. ಹದಿನೇಳನೆಯ ಶತಮಾನದಲ್ಲಿ ರಾಬರ್ಟ್ ಹುಕ್ ಎಂಬಾತ ಜೀವಕೋಶವಿಜ್ಞಾನ ಶಾಸ್ತ್ರೋಕ್ತವಾಗಿ ಶಂಕುಸ್ಥಾಪನೆ ಮಾಡಿದನೆನ್ನಬಹುದು. ಇವನು ಇಂಗ್ಲೆಂಡಿನ ರಾಯಲ್ ಸೊಸೈಟಿಯಲ್ಲಿ ಉಪಕರಣಗಳನ್ನು ನೋಡಿಕೊಳ್ಳುವ ಕ್ಯೂರೇಟರ್ ಮತ್ತು ಯಂತ್ರತಂತ್ರಜ್ಞನಾಗಿದ್ದ. ಇವನೊಮ್ಮೆ ಕಾರ್ಕನ್ನು ಅತ್ಯಂತ ತೆಳುವಾದ ಬಿಲ್ಲೆಗಳನ್ನಾಗಿ ಕೊಯ್ದು ಅವನ್ನು ಸೂಕ್ಷ್ಮದರ್ಶಕದಲ್ಲಿಟ್ಟು ಪರಿಶೀಲಿಸಿದಾಗ ಅವು ಜೇನಿನ ಎರಿಯಲ್ಲಿರುವಂಥ ಸಣ್ಣಗೂಡು ಅಥವಾ ಕೋಣೆಗಳಿಂದ ರಚಿತವಾಗಿರುವುದನ್ನು ಕಂಡ (1665). ಈ ವಿಷಯವನ್ನು 'ಎಪಿಗ್ರಾಫಿಯ' ಎಂಬ ಪತ್ರಿಕೆಯೊಂದರಲ್ಲಿ ಪ್ರಕಟಿಸಿದ. ಈ ಕೋಣೆಗಳಿಗೆ ಸೆಲ್ (ಕೋಶ) ಎಂಬ ಹೆಸರಿತ್ತವನೇ ಹುಕ್. ಈತ ವಾಸ್ತವವಾಗಿ ನೋಡಿದ್ದು ಕೋಶದ ಒಂದು ಭಾಗವನ್ನು ಮಾತ್ರ; ಅಂದರೆ ಸತ್ತ ಕೋಶದ ಗೋಡೆಯನ್ನು ಮಾತ್ರ. ಈತನ ಪ್ರಕಾರ ಕೋಶ ಒಂದು ಟೊಳ್ಳು ಡೊಗರು. ಅದೇ ಸಮಯಕ್ಕೆ ಸರಿಯಾಗಿ ಇಂಗ್ಲೆಡಿನ ನೀಹಿಮಿಯ ಗ್ರ್ಯೂ ಮತ್ತು ಇಟಲಿಯ ಮಾರ್ಸೆಲೊ ಮಾಲ್ಪೀಜಿ ಎಂಬಿಬ್ಬರು ಸಸ್ಯಗಳಲ್ಲಿ ಒಂದು ರೀತಿಯ ರಸ ತುಂಬಿದ ಕೋಣೆಗಳಿವೆ ಎಂಬ ಸಂಗತಿಯನ್ನು ಪ್ರಕಟಿಸಿದರು. 1674ರಲ್ಲಿ ಹಾಲೆಂಡಿನ ಆಂಟನ್ ಫಾನ್ ಲ್ಯೂವೆನ್‌ಹೂಕ್ ಎಂಬಾತ ಬ್ಯಾಕ್ಟೀರಿಯ, ನೀರಿನಲ್ಲಿ ವಾಸಿಸುವ ಏಕಕೋಶ ಜೀವಿಗಳು, ರಕ್ತಕಣಗಳು ಮತ್ತು ವೀರ್ಯಾಣುಗಳನ್ನು ಸೂಕ್ಷ್ಮದರ್ಶಕದಲ್ಲಿಟ್ಟು ನೋಡಿ ಅವುಗಳ ಚಿತ್ರಗಳನ್ನು ಪ್ರಕಟಿಸಿದ. 18ನೆಯ ಶತಮಾನದಲ್ಲಿ ಯಾರೂ ಜೀವಕೋಶದ ಅಧ್ಯಯನದಲ್ಲಿ ಆಸಕ್ತಿವಹಿಸಿದ್ದಂತೆ ಕಂಡುಬರುವುದಿಲ್ಲ. ಆದರೆ 19ನೆಯ ಶತಮಾನದಲ್ಲಿ ಮೀರ್ಬೆಲ್, ಓಕೆನ್, ತುರ್ಪಿನ್ ಮೊದಲಾದವರು ಕೋಶದೊಳಗಿನ ದ್ರವದ ಬಗ್ಗೆ ಸ್ವಲ್ಪಮಟ್ಟಿನ ಲಕ್ಷ್ಯ ಹರಿಸಿದರು. ಇವರ ಅಧ್ಯಯನದಿಂದ ಕೋಶದಲ್ಲಿ ಹುದುಗಿರುವ ರಸ ಅಥವಾ ಜೀವಂತವಸ್ತುವಿನ ಪರಿಚಯವಾಗುತ್ತ ಬಂತು. 1824 ರಲ್ಲಿ ಫ್ರಾನ್ಸಿನ ರೇನೆ ಡೂಟ್ರಾಷೆ ಎಂಬ ವಿಜ್ಞಾನಿ ಸಸ್ಯ ಮತ್ತು ಪ್ರಾಣಿಗಳ ದೇಹ ಕೋಶಗಳಿಂದ ನಿರ್ಮಿತವಾಗಿರುವುದೆಂಬ ಅಭಿಪ್ರಾಯವನ್ನು ಪ್ರಕಟಿಸಿದ. 1823ರಲ್ಲಿ ಹಂಟರ್ ತಾನು ಪ್ರಕಟಿಸಿದ ಪ್ರಬಂಧದಲ್ಲಿ ರಕ್ತಕಣಗಳ ಚಿತ್ರಗಳಲ್ಲಿ ಕೋಶಕೇಂದ್ರವನ್ನು ತೋರಿಸಿದ್ದನಾದರೂ ಇದರ ಬಗ್ಗೆ ಹೆಚ್ಚಿನ ವಿವರ ಒದಗಿಸಿದ ಕೀರ್ತಿ ಇಂಗ್ಲೆಂಡಿನ ರಾಬರ್ಟ್ ಬ್ರೌನ್ ಎಂಬವನಿಗೆ ಸಲ್ಲುತ್ತದೆ (1831). ಕೋಶಕೇಂದ್ರದಲ್ಲಿ ನ್ಯೂಕ್ಲಿಯೋಲಸ್ ಎಂಬ ಮತ್ತೊಂದು ಅಂಗಕವಿರುವುದನ್ನು ವಾಗ್ನರ್ ಎಂಬಾತ 1832ರಲ್ಲಿ ಗುರುತಿಸಿದ. ಇದೇ ವರ್ಷ ಡಿವಾರ್ಟಿಯರ್ ಎಂಬ ಇನ್ನೊಬ್ಬ ವಿಜ್ಞಾನಿ ಪಾಚಿಯಲ್ಲಿ ಕಂಡುಬರುವ ಕೋಶವಿಭಜನೆಯನ್ನು ಅಸ್ಪಷ್ಟವಾಗಿ ವಿವರಿಸಿದ. 19ನೆಯ ಶತಮಾನದ ಮೊದಲ ಮೂರು ದಶಕಗಳ ಸಂಶೋಧನೆಗಳಿಂದಾಗಿ ಜರ್ಮನಿಯ ಸಸ್ಯವಿಜ್ಞಾನಿ ಮತ್ತೈಯಸ್ ಷ್ಲೀಡೆನ್ ಮತ್ತು ಪ್ರಾಣಿವಿಜ್ಞಾನಿ ತಿಯೊಡೋರ್ ಷ್ವಾನ್ ಎಂಬಿಬ್ಬರು ಪ್ರತ್ಯೇಕವಾಗಿ 1838ರಲ್ಲಿ ಕೋಶಸಿದ್ಧಾಂತವನ್ನು (ಸೆಲ್ ತಿಯರಿ) ಮುಂದಿಡಲು ಸಾಧ್ಯವಾಯಿತು. ಈ ಸಿದ್ಧಾಂತ ಕೋಶದ ಅಧ್ಯಯನದ ಪ್ರಮುಖ ಮೈಲಿಗಲ್ಲುಗಳಲ್ಲಿ ಒಂದು. ಕೋಶಗಳು ಎಲ್ಲ ಜೀವಿಗಳ ಮೂಲಭೂತ ಘಟಕಗಳು; ಇವು ಜೀವಿಯ ದೇಹನಿರ್ಮಾಣದಲ್ಲಿ ನಿಯಮಬದ್ಧವಾದ ಚೌಕಟ್ಟಿನಲ್ಲಿ ಅಳವಡಿಸಿರುತ್ತವೆ–ಇದೇ ಈ ಸಿದ್ಧಾಂತದ ತಿರುಳು. ಆದರೆ ವಾಸ್ತವವಾಗಿ ನೋಡುವುದಾದರೆ ಎಲ್ಲ ಜೀವಿಗಳ ದೇಹದಲ್ಲಿ ಕೇವಲ ಕೋಶಗಳೇ ಇರುವುದಿಲ್ಲ. ಉದಾಹರಣೆಗೆ, ಮಾನವ ದೇಹದ ಮೇಲಿರುವ ಉಗುರು, ಕೂದಲು, ಇತ್ಯಾದಿ. ಆದ್ದರಿಂದ ಈಗಿನ ಕೋಶವಿಜ್ಞಾನಿಗಳು ಕೋಶ ಸಿದ್ಧಾಂತವನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿ ಬಹುಕೋಶಜೀವಿಗಳೆಲ್ಲವೂ ಕೋಶ ಮತ್ತು ಕೋಶಜನ್ಯ ವಸ್ತುಗಳಿಂದ ರೂಪುಗೊಂಡಿವೆಯೆಂದು ವಿವರಿಸಿದ್ದಾರೆ. ಅಂದರೆ ಈ ಸಿದ್ಧಾಂತ ಕೇವಲ ಸಿದ್ಧಾಂತವಾಗಿರದೆ ಈಗ ಕೋಶತತ್ತ್ವವಾಗಿ ಪರಿಣಮಿಸಿದೆ.

ಕೋಶದೊಳಗಿನ ಜೀವದ್ರವ್ಯದ ಪ್ರಾಮುಖ್ಯ ಕ್ರಮೇಣ ಹೆಚ್ಚಾಗುತ್ತ ಬಂತು. ಡುಹಾರ್ಡ್ಯಾನ್ ಎಂಬಾತ ರೈಜ಼ೋಪೊಡ, ಫೊರ್ಯಾಮಿನಿಫೆರ ಪ್ರಾಣಿಗಳ ಕೋಶಿಕ ದೇಹದಲ್ಲಿರುವ ಜೆಲ್ಲಿ ರೂಪದ ವಸ್ತುವಿಗೆ ಸಾರ್ಕೋಡ್ ಎಂದು ಹೆಸರಿಟ್ಟ. ಪುರ್ಕಿನ್ಜೆ ಎಂಬುವನು ಸಸ್ಯದ ಕೋಶದಲ್ಲಿರುವ ಜೀವಂತ ವಸ್ತುವಿಗೆ 1840ರಲ್ಲಿ ಪ್ರೋಟೋಪ್ಲಾಸಮ್ (ಜೀವದ್ರವ್ಯ) ಎಂದು ಹೆಸರಿಸಿದ. ಪ್ರಾಣಿಯ ಕೋಶದಲ್ಲಿರುವ ಸಾರ್ಕೋಡು ಮತ್ತು ಸಸ್ಯದ ಜೀವಕೋಶದಲ್ಲಿರುವ ಪ್ರೋಟೋಪ್ಲಾಸಮ್‌ಗಳು ಒಂದೇ ಎಂಬ ಅಭಿಪ್ರಾಯವನ್ನು 1861ರಲ್ಲಿ ಮ್ಯಾಕ್ಸ್ ಷ್ಲೂಟ್ಸ್ ಮುಂದಿಟ್ಟ. ಹುಕ್ ಕೊಟ್ಟ 'ಸೆಲ್' ಎಂಬ ಪದ ಕೋಶದ ಕೇವಲ ಒಂದು ಭಾಗಕ್ಕೆ (ಕೋಶಭಿತ್ತಿಗೆ) ಅನ್ವಯವಾಗುವುದರಿಂದ ಕೋಶದ ಸಮಗ್ರಚಿತ್ರ ಅರ್ಥವಾಗುವುದಿಲ್ಲವೆಂದು ಜರ್ಮನಿಯ ಹ್ಯಾನ್‌ಸ್ಟೈನ್ ಎಂಬಾತ 1880ರಲ್ಲಿ ವಾದಿಸಿ, ಜೀವದ್ರವ್ಯದಿಂದ ಕೂಡಿದ ಕೋಶಕ್ಕೆ ಪ್ರೋಟೋಪ್ಲಾಸ್ಟ್ ಎಂಬ ಪದ ಸೂಕ್ತವೆಂದು ಸೂಚಿಸಿದ. ಆದರೆ ಕೋಶದ ವೈಜ್ಞಾನಿಕ ಸಾಹಿತ್ಯದಲ್ಲಿ ಸೆಲ್ ಎಂಬ ಪದ ಹೆಚ್ಚು ಬೇರುಬಿಟ್ಟಿದ್ದುದರಿಂದ ಅದೇ ಪದವನ್ನು ಹೊಸ ಅಭಿಪ್ರಾಯಗಳಿಗೆ ಅನುಸಾರವಾಗಿ ಹೊಂದಿಸಿಕೊಳ್ಳಬಹುದೆಂದು ಇತರ ವಿಜ್ಞಾನಿಗಳು ಒಪ್ಪಿಕೊಂಡರು.

ಒಂದು ಕೋಶಕೇಂದ್ರವನ್ನೊಳಗೊಂಡ ಜೀವಂತ ಜೀವದ್ರವ್ಯದಿಂದ ಕೂಡಿದ್ದು ಕೋಶಪೊರೆಯಿಂದ ಆವೃತವಾದ ಒಂದು ರಚನೆಯೇ ಕೋಶ. ಇದು ಆ ಕಾಲಕ್ಕೆ ರೂಪುಗೊಂಡ ಕೋಶದ ಚಿತ್ರ. ಕೋಶಕೇಂದ್ರವನ್ನು ಬಿಟ್ಟು ಉಳಿದ ಜೀವದ್ರವ್ಯದ ಭಾಗಕ್ಕೆ ಕೋಶದ್ರವ್ಯ (ಸೈಟೊಪ್ಲಾಸಮ್) ಎಂದು ಹೆಸರಾಯಿತು. ಹಾಗೆಯೇ ಕೋಶಕೇಂದ್ರದಲ್ಲಿರುವ ದ್ರವಕ್ಕೆ ನ್ಯೂಕ್ಲಿಯೊಪ್ಲಾಸಮ್ ಅಥವಾ ಕ್ಯಾರಿಯೋಪ್ಲಾಸಮ್ ಎಂಬ ಹೆಸರು ಬಂತು.

ಕೋಶದ ಬಗ್ಗೆ ರೂಡಾಲ್ಫ್ ಫಾನ್ ಕಿರ್ಚಾಫ್ 1858ರಲ್ಲಿ ಒಂದು ವಿಚಾರಸಮ್ಮತವಾದ ವಾದವನ್ನು ಮುಂದಿಟ್ಟ. ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿ ಹೇಗೆ ಜನ್ಮತಾಳುತ್ತದೆಯೋ ಒಂದು ಸಸ್ಯದಿಂದ ಮತೊಂದು ಸಸ್ಯ ಹೇಗೆ ಹುಟ್ಟುತ್ತದೆಯೋ ಹಾಗೆಯೇ ಒಂದು ಕೋಶ ತತ್ಪೂರ್ವ ಕೋಶವೊಂದರಿಂದ ರೂಪುಗೊಳ್ಳುತ್ತದೆ ಎಂಬ ಸಿದ್ಧಾಂತವನ್ನು ಈತ ಪ್ರತಿಪಾದಿಸಿದ. 'ಕೋಶದಿಂದ ಕೋಶದ ಹುಟ್ಟು' ಎಂಬ ಈ ವಾದ ಕೋಶವಿಭಜನೆಯ ಕ್ರಿಯಾವಿನ್ಯಾಸಕ್ಕೆ ತಳಹದಿಯಾಯಿತು. ಫ್ರಾನ್ಸಿನ ಖ್ಯಾತ ಸೂಕ್ಷ್ಮಜೀವವಿಜ್ಞಾನಿ ಲೂಯಿ ಪಾಶ್ಚರ್ 1859–1861ರ ಅವಧಿಯಲ್ಲಿ ಈ ವಾದವನ್ನು ದೃಢೀಕರಿಸುವ ಸಂಶೋಧನೆಗಳನ್ನು ಪ್ರಕಟಿಸಿದ. ಜರ್ಮನಿಯ ಅರ್ನ್ಸ್ಟ್ ಅಬೆ 1886ರಲ್ಲಿ ಅಪೊಕ್ರೊಮ್ಯಾಟಿಕ್ ಅಥವ ಅತಿಅವರ್ಣಿ ಮಸೂರಗಳನ್ನು ಸೂಕ್ಷ್ಮದರ್ಶಕಗಳಲ್ಲಿ ಅಳವಡಿಸಿ ಉತ್ತಮಗೊಳಿಸಿದ. ಇದೇ ವೇಳೆಗೆ ಅಂಗಾಂಶ ಮತ್ತು ಕೋಶಗಳಿಗೆ ವಿವಿಧ ಅಭಿರಂಜಕಗಳನ್ನು ಉಪಯೋಗಿಸಿ ಬಣ್ಣ ಕಟ್ಟುವ ತಂತ್ರ ಕೌಶಲಗಳು ಹಾಗೂ ಸ್ಥಿರೀಕರಣ ವಿಧಾನಗಳು ಬೆಳೆದು ಬಂದುವು. ಇವುಗಳ ಫಲವಾಗಿ ಕೋಶದಲ್ಲಿ ಹುದುಗಿರುವ ಅಂಗಕಗಳ ಪರಿಚಯ ಕ್ರಮಕ್ರಮವಾಗಿ ಸಷ್ಪವಾಗುತ್ತ ಬಂದಿತು. ಅಲ್ಲದೆ ಕೋಶವಿಭಜನೆಯ ಕಡೆಗೆ ವಿಜ್ಞಾನಿಗಳ ಗಮನ ಹರಿಯಿತು. 19ನೆಯ ಶತಮಾನದ ಕಡೆಯ 25 ವರ್ಷಗಳಲ್ಲಿ ಕೋಶಕೇಂದ್ರ ಮತ್ತು ಕೋಶವಿಭಜನೆಗಳ ಹೆಚ್ಚಿನ ಪರಿಚಯವುಂಟಾಗಿದೆ. ಜರ್ಮನಿಯ ಫ್ಲೆಮಿಂಗ್ 1880–87ರ ವರ್ಷಗಳಲ್ಲಿ ಕೋಶಗಳಲ್ಲಿ ಜರಗುವ ಮೈಟೋಸಿಸ್ ಮತ್ತು ಮಿಯೋಸಿಸ್ ರೀತಿಯ ಕೋಶ ವಿಭಜನೆಗಳನ್ನು ವಿವರಿಸಿದ. ಅದೇ ಕಾಲದಲ್ಲಿ ಜರ್ಮನಿಯ ಸ್ಟ್ರಾಸ್‌ಬರ್ಗರ್ ಇದೇ ಬಗೆಯ ಜೀವಕೋಶ ವಿಭಜನೆಗಳನ್ನು ಸಸ್ಯಗಳಲ್ಲೂ ಕಂಡುಹಿಡಿದ. ಫ್ಲೆಮಿಂಗ್ ವಿವರಿಸಿದ ವಿಭಜನೆಯ ಹಂತಗಳಲ್ಲಿ ಕಂಡುಬಂದ ಹಾಗೂ ಕೋಶಕೇಂದ್ರದಲ್ಲಿ ರೂಪಗೊಂಡ ಕ್ರೊಮ್ಯಾಟಿನ್ ಕುಣಿಕೆಗಳಿಗೆ ವಾಲ್‌ಡೆಯರ್ ಕ್ರೋಮೋಸೋಮುಗಳೆಂದು ಹೆಸರಿಟ್ಟ (1888). ಮೈಟೋಸಿಸ್ ರೀತಿಯ ಕೋಶವಿಭಜನೆಯ ಕ್ರೊಮೋಸೋಮುಗಳು ನೀಳವಾಗಿ ಸೀಳಿ ಹಂಚಿಹೋಗುವುದರಿಂದ ಮರಿ ಕೋಶಗಳು ತದ್ರೂಪಿಗಳಾಗಿರುತ್ತವೆಂದು ತಿಳಿದುಬಂತು. ಅಲ್ಲದೆ ಕ್ರೋಮೊಸೋಮುಗಳ ಸಂಖ್ಯೆ, ಆಕಾರ ಮತ್ತು ಗಾತ್ರಗಳು ಪ್ರತಿಯೊಂದು ಜೀವಿಯ ವೈಶಿಷ್ಟ್ಯವಾಗಿರುತ್ತದೆ ಎಂಬುದು ಮನವರಿಕೆಯಾಯಿತು. ಮಿಯೋಸಿಸ್ ರೀತಿಯ ಕೋಶವಿಭಜನೆಯಲ್ಲಿ ಜೀವಿಯ ಕ್ರೊಮೋಸೋಮುಗಳ ಸಂಖ್ಯೆ ಅರ್ಧದಷ್ಟು ಕ್ಷೀಣಿಸುವುದು ಧೃಡಪಟ್ಟಿತು. ಅಂಡಾಣುಗಳು ಮತ್ತು ವೀರ್ಯಾಣುಗಳು ರೂಪಗೊಳ್ಳುವ ಕಾಲದಲ್ಲಿ ಜರಗುವ ಮಿಯೋಸಿಸಿನ ವಿಚಿತ್ರವರ್ತನೆಗೆ ಆಸ್ಕರ್ ಹರ್ಟ್‌ವಿಗ್ ಎಂಬಾತ 1890ರಲ್ಲಿ ಒಂದು ವಿವರಣೆಯನ್ನು ನೀಡಿದ; ನಿಷೇಚನ ಕಾಲದಲ್ಲಿ ಗಂಡು ಮತ್ತು ಹೆಣ್ಣು ಲಿಂಗಾಣು ಸಮ್ಮಿಲನಗೊಂಡಾಗ ರೂಪುಗೊಳ್ಳುವ ಯುಗ್ಮಜದಲ್ಲಿ ಜೀವಿಯ ಕ್ರೋಮೊಸೋಮಿನ ಮೂಲಸಂಖ್ಯೆ ಪ್ರಾಪ್ತವಾಗುವುದೆಂದು ಈತ ಹೇಳಿದ. ಯುಗ್ಮಜ ರೂಪುಗೊಳ್ಳುವಾಗ ಕೋಶಕೇಂದ್ರದ ವಸ್ತು (ಕ್ರೊಮೋಸೋಮು) ಸಂಖ್ಯೆ ದ್ವಿಗುಣಗೊಳ್ಳುವುದೆಂದೂ ಅದರಿಂದ ಮೂಲ ಕ್ರೊಮೋಸೋಮು ಸಂಖ್ಯೆ ಪ್ರಾಪ್ತವಾಗುವುದೆಂದೂ ಎಡ್ವರ್ಡ್ ಫಾನ್ ಬೆನೆಡೆನ್ ಎಂಬಾತ ದೃಢಪಡಿಸಿದ. ಆಗಸ್ಟ್ ವೈಸ್‌ಮ್ಯಾನ್ ಎಂಬ ಇನ್ನೊಬ್ಬ ವಿಜ್ಞಾನಿ ಈ ಶೋಧನೆಗಳ ಪ್ರಾಮುಖ್ಯವನ್ನರಿತು ಆನುವಂಶೀಯತೆಯಲ್ಲಿ ಕ್ರೊಮೋಸೋಮುಗಳ ಪ್ರಮುಖ ಪಾತ್ರವನ್ನು ವಿವರಿಸಿದ. ಕಾಲಕ್ರಮೇಣ ಜರ್ಮನಿಯ ಬೊವೇರಿ ಮತ್ತು ಅಮೆರಿಕದ ವಾಲ್ಟರ್ ಸಟನ್ ಅವರು ಪ್ರತ್ಯೇಕವಾಗಿ ವೈಸ್‌ಮ್ಯಾನ್ನನ ಸಿದ್ಧಾಂತವನ್ನು ದೃಢಪಡಿಸಿದರು.

ಕೋಶದ್ರವದಲ್ಲಿ ಹುದುಗಿರುವ ಕೆಲವು ಅಂಗಕಗಳು ಈ ಕಾಲದಲ್ಲಿಯೇ ಗೋಚರವಾಗುವುವು. ಮೈಟೊಕಾಂಡ್ರಿಯವನ್ನು ಆಲ್ಟ್‌ಮನ್ 1880ರಲ್ಲಿ ಶೋಧಿಸಿದ. ವಾಸ್ತವವಾಗಿ ವ್ಯಾಲೆಟ್ ಸೇಯಿಂಟ್ ಜಾರ್ಜ್ ಎಂಬಾತ 1865ರಲ್ಲೆ ಇದನ್ನು ಗುರುತಿಸಿ ಅದಕ್ಕೆ ಸೈಟೋಮೈಕ್ರೋಸೋಮ್ ಎಂದು ಹೆಸರಿಟ್ಟ. ಕೊನೆಗೆ 1898ರಲ್ಲಿ ಜರ್ಮನಿಯ ಬೆಂಡ ಎಂಬವ ಅಲ್ಲಿಯವರೆಗೂ ಆಲ್ಟಮನ್ ಗ್ರ್ಯಾನ್ಯೂಲ್ ಎಂದು ಕರೆಸಿಕೊಂಡಿದ್ದ ಈ ವಸ್ತುಗಳಿಗೆ ಮೈಟೋಕಾಂಡ್ರಿಯ ಎಂದು ನಾಮಕರಣ ಮಾಡಿದ. ಇಟಲಿಯ ಕ್ಯಾಮಿಲೊ ಗಾಲ್ಗಿ ನರಕೋಶಗಳಲ್ಲಿ ಅರ್ಧಚಂದ್ರಾಕಾರದ ಗಾಲ್ಗಿ ವಸ್ತುಗಳನ್ನು 1895ರಲ್ಲಿ ಗುರುತಿಸಿದ್ದ. ಇದಕ್ಕೂ ಮುಂಚೆ ಪ್ಲಾಟ್ನೆರ್ ಮತ್ತು ಹರ್ಮನ್ ಎಂಬಿಬ್ಬರು ಪ್ರತ್ಯೇಕವಾಗಿ 1885 ಮತ್ತು 1891ರಲ್ಲಿ ಕೋಶ ಅಧ್ಯಯನದಲ್ಲಿ ಗಾಲ್ಗಿ ವಸ್ತುಗಳನ್ನು ನೋಡಿದ್ದರು. ಇದೇ ಸಮಯದಲ್ಲಿ ಸಸ್ಯದ ಕೋಶಗಳಲ್ಲಿರುವ ಪ್ಲಾಸ್ಟಿಡ್‌ಗಳ ಬಗ್ಗೆ ಹೆಚ್ಚು ಪರಿಚಯವಾಯಿತು. 20ನೆಯ ಶತಕದ ಆದಿಯಲ್ಲಿ ತಳಿ ಬೆಳೆಯಲಾರಂಭಿಸಿದ ಮೇಲೆ ಆನುವಂಶಿಕ ಘಟಕಗಳಾದ ಜೀನ್‌ಗಳು ಕ್ರೊಮೋಸೋಮುಗಳಲ್ಲಿ ಮಣಿಸರದಂತೆ ಜೋಡಣೆಗೊಂಡಿವೆ ಎಂಬ ಅಂಶ ಗೋಚರವಾಗತೊಡಗಿತು. ಸಟನ್ ತನ್ನ ತಳಿಮಿಶ್ರಣ ಪ್ರಯೋಗಗಳಲ್ಲಿ ಕಂಡುಬರುವ ಜೀನ್‌ಗಳ ವರ್ತನೆಗೂ ಕೋಶೀಯ ಅಧ್ಯಯನದಲ್ಲಿ ಕಾಣುವ ಕ್ರೊಮೋಸೋಮು ವರ್ತನೆಗೂ ಸಾಮ್ಯವನ್ನು ತೋರಿಸಿಕೊಟ್ಟ. ಈ ಅಧ್ಯಯನಗಳ ಫಲವಾಗಿ ಜೀವಿಗಳ ಕ್ರೊಮೋಸೋಮುಗಳ ಬಗ್ಗೆ ಹೆಚ್ಚಿನ ಪರಿಚಯವಾದುದೇ ಅಲ್ಲದೆ ಲಿಂಗ ನಿರ್ಧಾರದಲ್ಲಿ ಭಾಗವಹಿಸುವ ವಿಶೇಷವಾದ ಕ್ರೊಮೋಸೋಮುಗಳ ವರ್ತನೆಯೂ ವಿಶದಪಟ್ಟಿತು. ಕೋಶದ ವಿವಿಧ ಅಂಗಕಗಳನ್ನು ಮತ್ತು ಕೋಶವಿಭಜನೆಗಳನ್ನು ಆವಿಷ್ಕರಿಸಿದ ಕಾಲದಲ್ಲಿಯೇ ಕೋಶದ ರಾಸಾಯನಿಕ ಸ್ವರೂಪದ ಬಗ್ಗೆ ಸಂಶೋಧನೆಗಳು ಪ್ರಾರಂಭವಾದುವು. ಮಿಷರ್ ಎಂಬಾತ 1871ರಲ್ಲಿಯೇ ಕೋಶಕೇಂದ್ರದಲ್ಲಿ ನ್ಯೂಕ್ಲಿಯಿನ್ ಎಂಬ ವಿಶಿಷ್ಟವಾದ ರಾಸಾಯನಿಕ ವಸ್ತುವಿರುವುದನ್ನು ಪತ್ತೆ ಹಚ್ಚಿದ. ಆಲ್ಟ್‌ಮನ್ ನ್ಯೂಕ್ಲಿಯಸಿನಲ್ಲಿರುವ ರಾಸಾಯನಿಕ ವಸ್ತುವಿಗೆ ನ್ಯೂಕ್ಲಿಯಿಕ್ ಆಮ್ಲ ಎಂದು ಹೆಸರಿಟ್ಟ (1889). ಹಲವಾರು ನ್ಯೂಕ್ಲಿಯೋಟೈಡುಗಳಿಂದ ಕೂಡಿದ ಸಂಕೀರ್ಣ ಇದು. (ವಿವರಗಳಿಗೆ ನೋಡಿ–ನ್ಯೂಕ್ಲಿಯಿಕ್ ಆಮ್ಲಗಳು.)

ಕೋಶದಲ್ಲಿರುವ ಜೀನ್ಯಾತ್ಮಕ ವಸ್ತುವಿನ ಬಗ್ಗೆ ಸುಸ್ಪಷ್ಟವಾಗಿ ಪರಿಚಯವಾಗಲಾರಂಭಿಸಿದ್ದು 1944 ರಿಂದೀಚೆಗೆ. ಅಮೆರಿಕದ ಅವೆರಿ, ಮ್ಯಾಕ್‌ಲಿಯಾಡ್ ಮತ್ತು ಮ್ಯಾಕಾರ್ಟಿ ಅವರು ಬ್ಯಾಕ್ಟೀರಿಯ ದೇಹಗಳಿಂದ ಈ ವಸ್ತುವನ್ನು ಪ್ರತ್ಯೇಕಿಸಿ, ಶುದ್ಧೀಕರಿಸಿ ಅದರ ರಾಸಾಯನಿಕ ಸ್ವರೂಪವನ್ನು ವಿವರಿಸಿ ಇದು ಡಿಆಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲವೆಂಬುದನ್ನು ಸ್ಪಷ್ಟಪಡಿಸಿದರು. ವ್ಯಾಟ್ಸನ್ ಮತ್ತು ಕ್ರಿಕ್ ಅವರು ಈ ಜೀನ್ಯಾತ್ಮಕ ವಸ್ತುವಿನ ರಚನೆಗೆ ಒಂದು ಪ್ರತಿರೂಪವನ್ನು ಸೂಚಿಸಿದ್ದಾರೆ. ಇದು ತಳಿ ಸಂಕೇತಗಳಿಂದ ಕೂಡಿದ ದ್ವಿಕುಂಡಲಿನೀ ಆಕಾರದ ದೈತ್ಯಾಣು. 1941ರಿಂದಲೂ ಈ ನಿಟ್ಟಿನಲ್ಲಿ ನಡೆದ ಸಂಶೋಧನೆಗಳು ಜೀವರಸಾಯನವಿಜ್ಞಾನ ಮತ್ತು ಜೀವಕೋಶವಿಜ್ಞಾನಗಳನ್ನು ಒಟ್ಟುಗೂಡಿಸಿದ್ದುದಲ್ಲದೆ ಕೋಶ ಕೇವಲ ಭೌತಘಟಕವಾಗಿರದೆ ಕ್ರಿಯಾತ್ಮಕ ಘಟಕವಾಗಿರುವುದೆಂದು ಮನದಟ್ಟು ಮಾಡಿವೆ. ನ್ಯೂಕ್ಲಿಯಿಕ್ ಆಮ್ಲಗಳಲ್ಲದೆ ವಿವಿಧ ಬಗೆಯ ಪ್ರೋಟೀನುಗಳ, ಲಿಪಿಡುಗಳ ಮತ್ತು ಇನಾರ್ಗ್ಯಾನಿಕ್ ವಸ್ತುಗಳ ಬಗ್ಗೆ ಮತ್ತು ಕೋಶಗಳಲ್ಲಿ ಅವುಗಳ ಸ್ಥಾನಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿದೆ. ಪ್ರೋಟೀನುಗಳು ಸಂಕೀರ್ಣ ರಚನೆಯ ರಾಸಾಯನಿಕ ವಸ್ತುಗಳು. ಇವು ಜೀವದ್ರವ್ಯಕ್ಕೆ ಒಂದು ಬಗೆಯ ಚೌಕಟ್ಟನ್ನು ಒದಗಿಸುತ್ತವೆ. ಇವು ಅಮೈನೊ ಆಮ್ಲಗಳೆಂಬ ವಿವಿಧ ರೀತಿಯ ಘಟಕಗಳಿಂದ ರಚಿತವಾದುವು; ಸರಳ ಹಾಗೂ ಸಂಯುಕ್ತ ರೀತಿಗಳಲ್ಲಿ ದೊರಕುತ್ತವೆ. ಪ್ರೊಟಮೈನ್ ಮತ್ತು ಹಿಸ್ಟೋನುಗಳು ಮೊದಲನೆಯ ಗುಂಪಿಗೆ ಸೇರಿದುವು. ನ್ಯೂಕ್ಲಿಯೋ ಪ್ರೋಟೀನು, ಗ್ಲೈಕೋಪ್ರೊಟೀನು, ಲೈಪೋಪ್ರೊಟಿನು, ಕ್ರೊಮೋಪ್ರೊಟೀನು, ಮೊದಲಾದುವು ಎರಡನೆಯ ಗುಂಪಿಗೆ ಸೇರಿದುವು.

ಕೋಶದ ಅಧ್ಯಯನದ ಇಂದಿನ ಅದ್ಭುತ ಪ್ರಚಂಡ ಪ್ರಗತಿಗೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಮತ್ತು ವಿಭೇದಕ ಅಪಕೇಂದ್ರೀಕರಣದ (ಡಿಫರೆನ್ಷಿಯಲ್ ಸೆಂಟ್ರಿಫ್ಯುಗೇಷನ್) ತಂತ್ರ ಕೌಶಲಗಳು ಹೆಚ್ಚು ಸಹಾಯಕಾರಿಯಾಗಿವೆ. ಇವುಗಳ ಬಳಕೆಯಿಂದಾಗಿ ದೃಕ್ ಸೂಕ್ಷ್ಮದರ್ಶಕದಲ್ಲಿ ಕಾಣಲಾರದಂತ ಅಂಗಕಗಳು ಮತ್ತು ಅವುಗಳ ರಚನಾವಿಶೇಷಗಳು ಬೆಳಕಿಗೆ ಬಂದಿವೆ. ಕೋಶದ್ರವ್ಯದಲ್ಲಿ ಹರಡಿರುವ ರೈಬೊಸೋಮುಗಳ ಮತ್ತು ಲೈಸೊಸೋಮುಗಳ ಪರಿಚಯವಾಗಿರುವುದೇ ಅಲ್ಲದೆ ಮೈಟೋಕಾಂಡ್ರಿಯ, ಗಾಲ್ಗಿ ವಸ್ತು, ಪ್ಲಾಸ್ಟಿಡ್ ಮೊದಲಾದ ಕೋಶದ ಅಂಗಕಗಳ ಸೂಕ್ಷ್ಮ ರಚನೆ ಸ್ಪಷ್ಟವಾಗಿವೆ. ಅಲ್ಲದೆ ವಿವಿಧ ಅಂಗಕಗಳ ಕ್ರಿಯಾವಿಶೇಷದ ಬಗ್ಗೆಯೂ ಹೆಚ್ಚಿನ ಮಾಹಿತಿ ಲಭಿಸಿದೆ. ಜೀವರಾಸಾಯನಿಕ ಮತ್ತು ಜೀವಭೌತ ತತ್ವಗಳ ಆಧಾರದ ಮೇಲೆ ನಡೆಸಿರುವ ಅಧ್ಯಯನಗಳ ಫಲವಾಗಿ ಕೋಶದ ಅಂಗಕಗಳ ಕ್ರಿಯಾ ವೈಶಿಷ್ಟ್ಯಗಳ ವಿಚಾರವಾಗಿ ಅಣುಗಳ ಮಟ್ಟದವರೆಗೂ ಹೋಗಲು ಸಾಧ್ಯವಾಗಿದೆ.

ಕೋಶದ ಬಗ್ಗೆ ಹಲವು ವಿಧಗಳಲ್ಲಿ ವ್ಯಾಖ್ಯೆ ಅಥವಾ ಸೂತ್ರಗಳನ್ನು ನೇಯಲಾಗಿದೆ: ಪ್ರಾಣಿ ಮತ್ತು ಸಸ್ಯಗಳಲ್ಲಿ ಕಂಡುಬರುವ ರಚನಾತ್ಮಕ ಹಾಗೂ ಕ್ರಿಯಾತ್ಮಕ ಘಟಕ; ಸ್ವತಂತ್ರವಾಗಿ ಬಾಳಿಬದುಕುವ ಸಾಮರ್ಥ್ಯವುಳ್ಳ ಅತ್ಯಂತ ಚಿಕ್ಕದಾದ ಜೀವಂತ ಘಟಕ; ಕೋಶ ಪೊರೆಯಿಂದ ಆವೃತವಾದ, ಒಂದು ಕೋಶಕೇಂದ್ರ ಅಥವಾ ನ್ಯೂಕ್ಲಿಯಾರ್ ವಸ್ತುವಿನಿಂದ ಕೂಡಿದ ಪ್ರೋಟೊಪ್ಲಾಸಮಿನ ಒಂದು ತುಣುಕು; ಇತ್ಯಾದಿ. ಜೀವಿಗಳಲ್ಲಿ ಕಂಡುಬರುವ ಕೋಶಜನ್ಯ ವಸ್ತುಗಳನ್ನು ಮೊದಲನೆಯ ಸೂತ್ರ ಒಳಗೊಂಡಿಲ್ಲ. ಎರಡನೆಯ ಸೂತ್ರದ ಅಡಿಯಲ್ಲಿ ಪರಾವಲಂಬಿ ಜೀವನ ಸಾಗಿಸುವ ವೈರಸುಗಳು ಬರಲು ಸಾಧ್ಯವೇ ಇಲ್ಲ. ಮೂರನೆಯ ವ್ಯಾಖ್ಯೆಯಲ್ಲಿ ಕೂಡ ವೈರಸುಗಳಿಗೆ ಎಡೆಯಿಲ್ಲ. ಆದ್ದರಿಂದ ಲಾಯವಿ ಮತ್ತು ಸೀಕೆವಿಟ್ಸ್ ಅವರು ಸಾಕಷ್ಟು ತೃಪ್ತಿಕರವಾದ ಒಂದು ಸೂತ್ರವನ್ನು ರೂಪಿಸಿದ್ದಾರೆ.

ವರಣಾತ್ಮಕ ಪಾರಗಮ್ಯ (ಸೆಮಿಪರ್ಮಿಯಬಲ್ ಮೆಂಬ್ರೇನ್) ಪೊರೆಯಿಂದ ಆವೃತವಾದ ಹಾಗೂ ಜೀವಮಂಡಲಗಳಿಲ್ಲದ ಮಾಧ್ಯಮದಲ್ಲಿ ಸಂತಾನೋತ್ಪತ್ತಿ ಮಾಡುವ ಸಾಮರ್ಥ್ಯವುಳ್ಳ ಒಂದು ಜೈವಿಕ ಘಟಕವೇ ಕೋಶ. ಜಾನ್‌ಪಾಲ್ ಪ್ರಕಾರ ದೀರ್ಘಕಾಲ ಸ್ವತಂತ್ರವಾಗಿ ಬದುಕುವ ಮತ್ತು ತನ್ನದೇ ಆದ ವಸ್ತು ನಶಿಸಿಹೋದರೆ ಅದನ್ನು ಒಂದು ಸೂಕ್ತ ಮಾಧ್ಯಮದಲ್ಲಿ ಪುನಾರೂಪಿಸಿಕೊಳ್ಳುವಂಥ ಜೀವಂತ ವಸ್ತುವನ್ನುಳ್ಳ ಒಂದು ಸುವ್ಯವಸ್ಥಿತವಾದ ಘಟಕವೇ ಕೋಶ. ಈ ವ್ಯಾಖ್ಯೆಗಳು ಬ್ಯಾಕ್ಟೀರಿಯ ಮತ್ತು ಪ್ರೋಟಿಸ್ಟಗಳನ್ನೂ ವೈರಸ್‌ಗಳನ್ನೂ (ಅಪಭ್ರಷ್ಟವಾದ ಕೋಶ ಅಥವಾ ಕೋಶದ ಆದ್ಯರೂಪಿಗಳೆಂದು ಇವನ್ನು ಭಾವಿಸುವುದರಿಂದ) ಒಳಗೊಳ್ಳುತ್ತವೆ.

ಕೋಶದ ಕೋಶಕೇಂದ್ರ ಮತ್ತು ಅದಕ್ಕೆ ಸಂಬಂಧಿಸಿದ ರಚನೆಗಳ ಆಧಾರದ ಮೇಲೆ ಚಾಟನ್ ಎಂಬಾತ ಜೀವಿಗಳನ್ನು 1923ರಲ್ಲಿ ಪ್ರೋಕ್ಯಾರಿಯೋಟ ಮತ್ತು ಯೂಕ್ಯಾರಿಯೋಟ ಎಂಬ ಎರಡು ಗುಂಪುಗಳಾಗಿ ವಿಂಗಡಿಸಿದ್ದಾನೆ : ಮೊದಲನೆಯ ಗುಂಪಿನಲ್ಲಿ ನಿಮ್ನ ಜೀವಿಗಳಾದ ವೈರಸುಗಳು, ಬ್ಯಾಕ್ಟೀರಿಯ ಮತ್ತು ನೀಲಿ ಹಸಿರು ಪಾಚಿಗಳು ಸೇರಿವೆ. ಉಳಿದೆಲ್ಲ ಮೇಲ್ಮಟ್ಟದ ಜೀವಿಗಳು ಎರಡನೆಯ ಗುಂಪಿನಲ್ಲಿ ಅಡಕವಾಗಿವೆ. ಪ್ರೋಕ್ಯಾರಿಯೋಟದ ಕೋಶಗಳಲ್ಲಿ ಕೋಶಕೇಂದ್ರದ ಪೊರೆಯಿಲ್ಲದ ಕಾರಣ ನ್ಯೂಕ್ಲಿಯಾರ್ ವಸ್ತು ಕೋಶದ್ರವ್ಯದಲ್ಲಿ ಹುದುಗಿರುತ್ತದೆ. ಇದರಲ್ಲಿ ಬರಿಯ ನ್ಯೂಕ್ಲಿಯಿಕ್ ಆಮ್ಲವಿರುವುದರಿಂದ ಕ್ರೋಮೋಸೋಮುಗಳು ರೂಪುಗೊಂಡಿಲ್ಲ. ವಸ್ತು ಮುದ್ದೆಗಟ್ಟಿ ಕೋಶದ ಒಂದು ಸ್ಥಾನದಲ್ಲಿ ಸೀಮಿತವಾಗಿದೆ. ಹೀಗಾಗಿ ಇದಕ್ಕೆ ನ್ಯೂಕ್ಲಿಯಾಯಿಡ್ ಅಥವಾ ನ್ಯೂಕ್ಲಿಯಸಿನಂಥ ವಸ್ತು ಎಂಬ ಹೆಸರು ಬಂದಿದೆ. ಕ್ರೋಮೋಸೋಮುಗಳಲ್ಲಿ ಕಂಡುಬರುವ ಸಂಘನನ ಚಕ್ರಗಳಿಗೆ ಇಲ್ಲಿ ಆಸ್ಪದವಿಲ್ಲ. ಕೋಶದಲ್ಲಿ ರೂಪುಗೊಳ್ಳುವ ಕದಿರಿನ ಕ್ರಿಯಾವಿನ್ಯಾಸಗಳಿಗೆ ಸಾಧನೋಪಕರಣಗಳಿಲ್ಲ. ಕೋಶಕೇಂದ್ರ ಮೈಟೋಸಿಸ್ ಮತ್ತು ಮಿಯೋಸಿಸುಗಳ ರೀತಿಗಳಲ್ಲಿ ವಿಭಜನೆ ಹೊಂದುವ ರೀತಿನೀತಿಗಳೂ ಇಲ್ಲ. ಆದರೆ ಯೂಕ್ಯಾರಿಯೋಟದ ಕೋಶದಲ್ಲಿ ಕೋಶಕೇಂದ್ರದಲ್ಲಿನ ದ್ರವ ಮತ್ತು ಕೋಶದ್ರವ್ಯಗಳನ್ನು ಪರಸ್ಪರ ಪ್ರತ್ಯೇಕಿಸುವ ನ್ಯೂಕ್ಲಿಯಾರ್ ಪೊರೆಯಿದೆ. ನ್ಯೂಕ್ಲಿಯಿಕ್ ಆಮ್ಲ ಮತ್ತು ಪ್ರೋಟೀನುಗಳ ಕೂಟದಿಂದ ರೂಪುಗೊಂಡ ನಿರ್ದಿಷ್ಟವಾದ ಕ್ರೋಮೋಸೋಮುಗಳುಂಟು. ಕದಿರಿನ ರೂಪಿಕೆಯ ಕ್ರಿಯಾವಿನ್ಯಾಸ ರೂಪುಗೊಂಡಿದೆ. ಇಲ್ಲಿ ಮೈಟೋಸಿಸ್ ಮತ್ತು ಮಿಯೋಸಿಸ್ ರೀತಿಯ ಕೋಶವಿಭಜನೆಗಳನ್ನು ಗುರುತಿಸಬಹುದು. ಅಂತೂ ಈ ಎರಡು ಬಗೆಯ ಕೋಶಕೇಂದ್ರಗಳು ಕ್ರಿಯಾತ್ಮಕವಾಗಿ ಸಮಜಾತವಾಗಿವೆ. ಎರಡರಲ್ಲೂ ಜೀನ್ಯಾತ್ಮಕ ವಸ್ತು ಅಡಕವಾಗಿರುವುದರಿಂದ ಪ್ರೋಕ್ಯಾರಿಯೋಟ ಮತ್ತು ಯೂಕ್ಯಾರಿಯೋಟ ಗುಂಪಿನ ಜೀವಿಗಳು ವಿಕಾಸದ ವಿವಿಧ ಮಜಲುಗಳೆಂದು ಪರಿಗಣಿಸಬಹುದು.

ಈಗ ಕೋಶ ಮತ್ತು ಅದರ ಅಂಗಕಗಳಿಗೆ ರಂಗು ಕಟ್ಟುವ ತಂತ್ರಕೌಶಲ ಇರುವುದರಿಂದ ಜೀವಕೋಶ ವಿಜ್ಞಾನದಲ್ಲಿ ಇನ್ನೂ ಪ್ರಗತಿಯಾಗುತ್ತಿದೆ. ಅಂಗಾಂಶವಿಜ್ಞಾನ, ಜೀವರಸಾಯನ ವಿಜ್ಞಾನ, ರೋಗ ನಿದಾನ ವಿಜ್ಞಾನ, ಮುಂತಾದುವು ಜೀವವಿಜ್ಞಾನದಿಂದ ಕವಲೊಡೆದು ಬೇರೆ ಬೇರೆ ಶಾಖೆಗಳಾಗಿರುವುದಕ್ಕೆ ಇದೇ ಕಾರಣವಾಗಿದೆ. (ನೋಡಿ: ಜೀವಕೋಶ) (ಎಸ್.ಡಿ.)

**ಜೀವಕೋಷ್ಟಕ:** ಒಂದು ಕಾಲದ ಮರಣ ಪರಿಸ್ಥಿತಿಯ ಸಾರಾಂಶ ಚಿತ್ರ (ಲೈಫ್ ಟೇಬಲ್). ವಾಸ್ತವವಾಗಿ ಆರಂಭದಲ್ಲಿ ಮರಣಕೋಷ್ಟಕವೇ (ಡೆತ್ ಟೇಬಲ್) ಬಳಕೆಗೆ ಬಂದದ್ದು; ಮುಂದೆ ಇದಕ್ಕೆ ಜೀವಕೋಷ್ಟಕ ಎಂದು ಹೆಸರು ರೂಢಿಗೆ ಬಂತು. ಇಂಥ ಒಂದು ಮರಣಕೋಷ್ಟಕದ ಕಲ್ಪನೆಯನ್ನು ರೂಪಿಸಿದ ಕೀರ್ತಿ ಇಂಗ್ಲೆಂಡಿನ ಜಾನ್ ಗ್ರಾಂಟನದು. ಆತ ಲಂಡನ್ನಿನ ಮರಣ ಬಿಲ್ಲುಗಳ (ಬಿಲ್ಸ್ ಆಫ್ ಮಾರ್ಟಾಲಿಟಿ) ಆಧಾರದ ಮೇಲೆ ೧೬೬೨ರಲ್ಲಿ ಮರಣಕೋಷ್ಟಕಗಳನ್ನು ನಿರ್ಮಿಸಿದ.

ವಿವಿಧ ಕೋಷ್ಟಕಗಳು: ಜೀವಕೋಷ್ಟಕಗಳಲ್ಲಿ ಮುಖ್ಯವಾಗಿ ಎರಡು ಪ್ರರೂಪಗಳುಂಟು. ಇವು ಜೀವಿತೋತ್ತರ ಸಂಭಾವ್ಯತೆಗಳನ್ನು (ಸರ್ವೈವಲ್ ಪ್ರಾಬೆಬಿಲಿಟೀಸ್) ಗಣಿಸುವ ರೀತಿಯನ್ನು ಅವಲಂಬಿಸಿವೆ.

೧. ಒಂದು ನಿರ್ದಿಷ್ಟ ಜೀವಿಸಮುದಾಯವನ್ನು ಅದು ಜನಿಸಿದಂದಿನಿಂದ ಅದರ ಎಲ್ಲ ವ್ಯಕ್ತಿಗಳೂ ಸಾಯುವವರೆಗೆ ಹಿಂಬಾಲಿಸಿಕೊಂಡು, ಆ ಸಮುದಾಯದಲ್ಲಿ ಪ್ರತಿ ವಯಸ್ಸಿನಲ್ಲಿ ಮರಣಹೊಂದಿದ ವ್ಯಕ್ತಿಗಳ ಸಂಖ್ಯೆಯ ಆಧಾರದ ಮೇಲೆ ಪ್ರತಿ ವಯೋಮಿತಿಯಲ್ಲಿ ಮರಣಹೊಂದುವ ಸಂಭಾವ್ಯತೆಯ ಗಣನೆ; ಹೀಗೆ ದೊರೆತ ಸಂಭಾವ್ಯತೆಗಳನ್ನು ಬಳಸಿಕೊಂಡು ಜೀವಕೋಷ್ಟಕಗಳ ನಿರ್ಮಾಣ. ಇಂಥ ಕೋಷ್ಟಕಗಳಿಗೆ ಸಮುದಾಯ ಅಥವಾ ಜನಾಂಗ ಜೀವಕೋಷ್ಟಕಗಳೆಂದು ಹೆಸರು.

೨. ಈ ಮೇಲಿನ ಕ್ರಮದ ಬದಲಾಗಿ ಒಂದು ವರ್ಷದಲ್ಲಿಯ ಮರಣಗಳನ್ನು ವಯೋಮಾನಕ್ಕೆ ಅನುಗುಣವಾಗಿ ವರ್ಗೀಕರಿಸಿ ಆ ವಿತರಣೆಯ ಆಧಾರದ ಮೇಲೆ ಜೀವಿತೋತ್ತರ ಸಂಭಾವ್ಯತೆಗಳ ಗಣನೆ ಮಾಡಿ ರಚಿಸಿದ ಜೀವಕೋಷ್ಟ ರಚನೆ ಎರಡನೆಯ ಪ್ರರೂಪವಾಗುತ್ತದೆ. ಇದಕ್ಕೆ ಚಾಲ್ತಿ ಜೀವಕೋಷ್ಟಕ (ಕರೆಂಟ್ ಲೈಫ್ ಟೇಬಲ್) ಎಂದು ಹೆಸರು.

ಸಮುದಾಯ ಜೀವಕೋಷ್ಟಕಕ್ಕೆ ನೂರಾರು ವರ್ಷಗಳ ದಾಖಲೆಗಳು ಅವಶ್ಯ. ಆದ್ದರಿಂದ ಸಾಮಾನ್ಯವಾಗಿ ಪ್ರಚಾರದಲ್ಲಿರುವುದು ಚಾಲ್ತಿ ಜೀವಕೋಷ್ಟಕಗಳೇ. ಇವುಗಳಲ್ಲಿ ಬೇರೆ ಬೇರೆ ಸಮುದಾಯಗಳ ಅನುಭವವಿರುವುದರಿಂದ ಇವನ್ನು ಯಾವ ಸಮುದಾಯದ ಅನುಭವವೆಂದು ಹೇಳಲಾಗುವುದಿಲ್ಲ. ಆದರೆ ಈ ಕೋಷ್ಟಕಗಳು ಒಂದು ಕಾಲದ ಸರಾಸರಿ ಮರಣ ಪರಿಸ್ಥಿತಿಯನ್ನು ಸಾರಾಂಶ ರೂಪದಲ್ಲಿ ಸೂಚಿಸುತ್ತವೆ. ಆದುದರಿಂದಲೇ ಇವುಗಳ ಬಳಕೆ ಹೆಚ್ಚು.

ಜೀವಕೋಷ್ಟಕಗಳು ಕೊಡುವ ವಿವರಣೆಗಳ ಮೇಲೆಯೂ ಅವನ್ನು ವಿಭಾಗಿಸುವುದುಂಟು. ಜೀವನದ ಒಂದೊಂದು ವರ್ಷಕ್ಕೂ ವಿವರಗಳನ್ನು ಒದಗಿಸುವ ಕೋಷ್ಟಕಗಳಿಗೆ ಪೂರ್ಣ ಜೀವಕೋಷ್ಟಕಗಳೆಂದೂ, ವಯೋಮಾನ ಸಮೂಹಗಳಿಗೆ ಮಾತ್ರ ವಿವರಗಳನ್ನು ಒದಗಿಸುವ ವ್ಯವಸ್ಥೆಗೆ ಸಂಕ್ಷಿಪ್ತ ಜೀವಕೋಷ್ಟಕಗಳೆಂದೂ ಹೆಸರು. ಈ ಎರಡು ರೀತಿಯ ಕೋಷ್ಟಕನಿರ್ಮಾಣ ಪದ್ಧತಿಯಲ್ಲಿ ವ್ಯತ್ಯಾಸವಿರುವುದಿಲ್ಲ.

ಕೋಷ್ಟಕ ನಿರ್ಮಾಣದಲ್ಲಿಯ ಮೂಲಕಲ್ಪನೆಗಳು: ಜೀವಕೋಷ್ಟಕವೆಂದರೆ ಅದೊಂದು ಏಕಕಾಲಕ್ಕೆ ಜನಿಸಿದ ಕಾಲ್ಪನಿಕ ಸಮುದಾಯವೊಂದರ ಜೀವನ ಚರಿತ್ರೆ. ಈ ಚರಿತ್ರೆ ಸಮುದಾಯದ ಪ್ರತಿಯೊಂದು ವ್ಯಕ್ತಿಯನ್ನೂ ಅದರ ಜನನದಿಂದ ಮರಣದ ವರೆಗೆ ಸಮೀಕ್ಷಿಸುತ್ತದೆ. ಅದಕ್ಕೆ ಬೇಕಾದ ಮೂಲಕಲ್ಪನೆಗಳನ್ನು ಕೆಳಗಿನಂತೆ ಸಂಗ್ರಹಿಸಬಹುದು:

೧. ವೀಕ್ಷಿಸುವ ಸಮುದಾಯ ಮರಣದಿಂದ ಮಾತ್ರ ಕಿರಿದಾಗುತ್ತ ಹೋಗುತ್ತದೆ. ಅಂದರೆ ಜನವಲಸೆಯಿಂದಾಗಿ ಅದು ವ್ಯತ್ಯಾಸವಾಗುವುದಿಲ್ಲ.

೨. ಸಮುದಾಯದಲ್ಲಿನ ವ್ಯಕ್ತಿಗಳು ಮೊದಲೇ ಗಣಿಸಿದ ಜೀವಿತೋತ್ತರ ಸಂಭಾವ್ಯತೆಗಳ ರೀತಿಯಲ್ಲಿ ಮರಣಹೊಂದುತ್ತಾರೆ. ಅಲ್ಲದೆ ಆ ಸಂಭಾವ್ಯತೆಗಳು ವ್ಯತ್ಯಾಸವಾಗುವುದಿಲ್ಲ.

೩. ಸಮುದಾಯ ಒಂದು ನಿರ್ದಿಷ್ಟವಾದ ಶಿಷ್ಟ ಜನನಸಂಖ್ಯೆಯಿಂದ (ಸ್ಟ್ಯಾಂಡರ್ಡ್ ನಂಬರ್ ಆಫ್ ಬರ್ತ್ಸ್) ತನ್ನ ಜೀವನಚರಿತ್ರೆಯನ್ನು ಪ್ರಾರಂಭಿಸುತ್ತದೆ. ಈ ಶಿಷ್ಟ ಜನನ ಸಂಖ್ಯೆಯನ್ನು 1000, 10,000, 100,000 ಎಂದು ಇಟ್ಟು ಕೊಳ್ಳುವುದು ರೂಢಿ. ಇದಕ್ಕೆ ರಾಡಿಕ್ಸ್ ಎಂದು ಹೆಸರು. ಹೀಗೆ ಶಿಷ್ಟ ಜನನಸಂಖ್ಯೆಯಿಂದ ಪ್ರಾರಂಭಿಸುವುದು ತುಲನಾತ್ಮಕ ವಿವೇಚನೆಗೆ ಹೆಚ್ಚು ಸಹಾಯಕವಾಗುತ್ತದೆ.

೪. ಮೊದಲ ಕೆಲವು ವಯೋಮಿತಿಯ ವರ್ಷಗಳನ್ನುಳಿದು ಉಳಿದೆಲ್ಲ ವರ್ಷಗಳಲ್ಲಿ ಒಂದು ಜನ್ಮದಿವಸದಿಂದ ಮುಂದಿನ ಜನ್ಮದಿವಸದ ವರೆಗೆ ಮರಣಗಳು ಸರಿಸಮವಾಗಿ ಹರಡಿವೆ.

೫. ಸಮುದಾಯ ಸಾಮಾನ್ಯವಾಗಿ ಸ್ತ್ರೀಯರನ್ನೇ ಅಥವಾ ಪುರುಷರನ್ನೇ ಒಳಗೊಂಡಿರುತ್ತದೆ.

ಕಲ್ಪನೆ (1) ರಿಂದಾಗಿ ಈ ಕಾಲ್ಪನಿಕ ಜನಸಂಖ್ಯೆಯಲ್ಲಿ ಒಟ್ಟು ಮರಣಗಳ ಸಂಖ್ಯೆ ಒಟ್ಟು ಜನನಗಳ ಸಂಖ್ಯೆಗೆ ಸಮವಾಗಿರುತ್ತದೆ. ಜನನದರ ಮತ್ತು ಮರಣದರಗಳೆರಡೂ ಒಂದೇ ಆಗಿರುವುದು ಇದರ ಕಾರಣ. ಆದ್ದರಿಂದ ಜನಸಂಖ್ಯಾ ಬೆಳವಣಿಗೆಯ ದರ ಸೊನ್ನೆ. ಇಂಥ ಜನಸಂಖ್ಯೆಗೆ ಸ್ತಬ್ಧ ಜನಸಂಖ್ಯೆ ಎಂದೂ, ಜೀವಕೋಷ್ಟಕ ಜನಸಂಖ್ಯೆ ಎಂದೂ ಹೇಳುತ್ತಾರೆ.

ಜೀವಕೋಷ್ಟಕವನ್ನು ನಿರ್ಮಿಸುವ ವಿಧಾನಗಳು: ಜೀವಕೋಷ್ಟಕ ನಿರ್ಮಾಣದಲ್ಲಿ ಜೀವಿತೋತ್ತರ ಸಂಭಾವ್ಯತೆಗಳ ಗಣನೆ ಬಲು ಮುಖ್ಯ. ಅದಕ್ಕಾಗಿ ಉಪಯೋಗಿಸುವ ಅಂಕಿ ಅಂಶಗಳನ್ನು ಆಧರಿಸಿ ಗಣನೆಯ ವಿಧಾನಗಳು ಬದಲಾಗುತ್ತವೆ. ಜೀವಿತೋತ್ತರ ಸಂಭಾವ್ಯತೆಗಳು ದೊರೆತ ಬಳಿಕ ಉಳಿದ ವಿವರಗಳನ್ನು ಸುಲಭವಾಗಿ ಗಣಿಸಬಹುದು. ಜೀವಕೋಷ್ಟಕ ನಿರ್ಮಾಣ ವಿಧಾನಗಳನ್ನು ಮುಂದೆ ವಿವರಿಸಿದೆ.

1. ಜನನ ಮರಣ ದಾಖಲೆಗಳ ಮೇಲೆ ಆಧಾರಿತ ವಿಧಾನ: ಈ ಪದ್ಧತಿಯಲ್ಲಿ ವಯೋಮಿತಿಯನ್ನು ಅನುಸರಿಸಿ ಮರಣಗಳನ್ನು ವರ್ಗೀಕರಿಸಿದ್ದರೆ ಅವುಗಳ ಸಹಾಯದಿಂದ ಇಡೀ ಜೀವನದ ಪ್ರತಿ ವರ್ಷದಲ್ಲಿ ಅಥವಾ ವರ್ಷಸಮೂಹದಲ್ಲಿ ಮರಣಹೊಂದುವ ಸಂಭಾವ್ಯತೆಯನ್ನು ಕಂಡುಹಿಡಿದುಕೊಂಡು ಆ ಸಂಭಾವ್ಯತೆಗಳನ್ನು ಉಪಯೋಗಿಸಿಕೊಂಡು ಜೀವಕೋಷ್ಟಕವನ್ನು ನಿರ್ಮಿಸುತ್ತಾರೆ. ಇದು ಪ್ರಾಚೀನ ಪದ್ಧತಿ. ಇದರಲ್ಲಿ ವಲಸೆಯಿಂದಾಗಿ ಜನಸಂಖ್ಯೆ ವ್ಯತ್ಯಾಸಗೊಳ್ಳುತ್ತಿಲ್ಲವೆಂದು ಅಂಗೀಕರಿಸಿಕೊಂಡಂತಾಗುತ್ತದೆ. ಈ ವಿಧಾನವನ್ನು ಗ್ರಾಂಟ್ ಹಾಗೂ ಹ್ಯಾಲಿ ಬಳಸಿದ್ದಾರೆ. ಜನನ ಮರಣ ದಾಖಲೆಗಳು ಅನೇಕ ಸಲ ದೋಷಯುಕ್ತವಾಗಿರುತ್ತವಾದ್ದರಿಂದ ಈ ವಿಧಾನ ಅಷ್ಟು ರೂಢಿಯಲ್ಲಿಲ್ಲ.

2. ಜನಗಣತಿಯ ಮೇಲೆ ಆಧಾರಿತವಿಧಾನ: ಎರಡು ಜನಗಣತಿಯ ಅಂಕೆ ಅಂಶಗಳು ತಿಳಿದಿದ್ದರೆ ಮೊದಲನೆಯ ಜನಗಣತಿಯಲ್ಲಿ ಒಂದು ವಯೋಮಿತಿಯಲ್ಲಿ ಗಣಿಸಲ್ಪಟ್ಟ

ಎರಡನೆಯ ಜನಗಣತಿಯವರೆಗೆ ಬದುಕಿ ಉಳಿದವರು ಆ ವೇಳೆಗೆ ಜನಗಣತಿಗಳ ನಡುವಿನ ವರ್ಷಗಳಷ್ಟು ದೊಡ್ಡವರಾಗಿರುತ್ತಾರೆ. ಆದ್ದರಿಂದ ಎರಡು ಜನಗಣತಿಗಳಲ್ಲಿನ ವಯೋಮಿತಿ ವಿತರಣೆಯ ಆಧಾರದ ಮೇಲೆ ಬೇರೆಬೇರೆ ವಯಸ್ಸಿನ ಜನಗಣತಿಯ ಮಧ್ಯಾಂತರ ವರ್ಷಕಾಲ ಬದುಕಿರಬಹುದಾದ ಸಂಭಾವ್ಯತೆಗಳನ್ನು ಕಂಡುಹಿಡಿಯಬಹುದು. ಅನಂತರ ಜೀವಕೋಷ್ಟಕವನ್ನು ನಿರ್ಮಿಸುವುದು ಸುಲಭದ ಕೆಲಸ. ಜನನ ಮರಣ ದಾಖಲೆಗಳು ದೊರೆಯದಿದ್ದಾಗ ಈ ಪದ್ಧತಿಯನ್ನೇ ಉಪಯೋಗಿಸಬೇಕಾಗುತ್ತದೆ. ಇದನ್ನು ಬಳಸುವಾಗ ಬಾಲ ಹಾಗೂ ವೃದ್ಧ ವಯಸ್ಸುಗಳಲ್ಲಿ ಜೀವಿತೋತ್ತರ ಸಂಭಾವ್ಯತೆಗಳನ್ನು ಕಂಡುಹಿಡಿಯಲು ಗಣಿತೋಕ್ತಿಗಳ ನೆರವನ್ನು ತೆಗೆದುಕೊಳ್ಳುವುದು ಸಾಮಾನ್ಯ ರೂಢಿ. ಆ ವಯಸ್ಸುಗಳಲ್ಲಿ ಜೀವಿತೋತ್ತರ ಸಂಭಾವ್ಯತೆ ವರ್ಷದಿಂದ ವರ್ಷಕ್ಕೆ ಬಹಳ ಬದಲಾಗುವುದರಿಂದ ಮೇಲೆ ತಿಳಿಸಿದ ರೀತಿಯಲ್ಲೆ ಸಂಭಾವ್ಯತೆಗಳನ್ನು ಕಂಡುಹಿಡಿಯುವುದು ಸೂಕ್ತವೆನಿಸಲಾರದು. ಈ ವಿಧಾನದ ಬಳಕೆಯನ್ನು ಭಾರತದ ಜೀವವಿಮಾಶಾಸ್ತ್ರ ವರದಿಯಲ್ಲಿ ನಿರ್ಮಿಸಲಾಗಿರುವ ಜೀವಕೋಷ್ಟಕಗಳಲ್ಲಿ ಕಾಣಬಹುದು.

3. ಜನನ ಮರಣ ದಾಖಲೆಗಳ ಮೇಲೂ ಜನಗಣತಿಯ ಮೇಲೂ ಆಧಾರಿತವಾದುದು: ಈ ವಿಧಾನದಲ್ಲಿ ಪ್ರಸ್ತುತ ವರ್ಷದಲ್ಲಿಯ ಮರಣಗಳನ್ನು ವಯೋಮಿತಿಗೆ ಅನುಸಾರವಾಗಿ ವರ್ಗೀಕರಿಸಿ ಅದೇ ವರ್ಷದಲ್ಲಿ ಸರಾಸರಿಯಾಗಿ ಆ ವಯೋಮಿತಿಯಲ್ಲಿರುವ ಜನಸಂಖ್ಯೆಯನ್ನು ಜನಗಣತಿಗಳ ಆಧಾರದ ಮೇಲೆ ಕಂಡುಹಿಡಿದು ವಯೋಮಿತಿ ವಿಶಿಷ್ಟ ಮರಣದರಗಳನ್ನು ಗಣಿಸುತ್ತಾರೆ. ಈ ಮರಣದರಗಳಿಂದ ಮರಣ ಸಂಭಾವ್ಯತೆಗಳನ್ನು ಕಂಡುಹಿಡಿದು ಜೀವಕೋಷ್ಟಕವನ್ನು ನಿರ್ಮಿಸುತ್ತಾರೆ.

ಸಂಕ್ಷಿಪ್ತ ಜೀವಕೋಷ್ಟಕಗಳು: ಜೀವಕೋಷ್ಟಕವನ್ನು ನಿರ್ಮಿಸಲು ಬೇಕಾದ ವಿವರಗಳು ವಯಸ್ಸಿನ ಪ್ರತಿಯೊಂದು ವರ್ಷಕ್ಕೆ ದೊರೆಯದ್ದರಿಂದ ಮತ್ತು ಪ್ರಜಾಶಾಸ್ತ್ರಾಧ್ಯಯನದಲ್ಲಿ ಬಹಳ ಸಲ ವಯೋಮಿತಿ ಸಮುದಾಯಗಳನ್ನೇ ಬಳಸುವುದು ಅನುಕೂಲವಾದ್ದರಿಂದ ಪೂರ್ಣ ಜೀವಕೋಷ್ಟಕವನ್ನು ನಿರ್ಮಿಸುವ ಬದಲು ಅನೇಕ ಸಲ ಸಂಕ್ಷಿಪ್ತ ಜೀವಕೋಷ್ಟಕವನ್ನಷ್ಟೆ ಸಿದ್ಧಪಡಿಸುವುದು ರೂಢಿ. ಇದಕ್ಕಾಗಿ ಸುಲಭ ಮಾರ್ಗಗಳನ್ನು ಕಂಡುಹಿಡಿಯಲಾಗಿದೆ. ಇವುಗಳ ಪೈಕಿ ರೀಡ್–ಮೆರೆಲ್ ವಿಧಾನ ಮತ್ತು ಗ್ರೆವಿಲ್ಲನ ವಿಧಾನ–ಇವೆರಡು ಹೆಚ್ಚು ಬಳಕೆಯಲ್ಲಿವೆ. ವಯೋಮಿತಿ ಸಮುದಾಯಗಳಿಗೆ ಮರಣದರಗಳು ತಿಳಿದಿದ್ದಾಗ ಅವನ್ನು ಉಪಯೋಗಿಸಿ ಜೀವಿತೋತ್ತರ ಸಂಭಾವ್ಯತೆಗಳನ್ನು ಕಂಡುಹಿಡಿಯುವ ಸೂತ್ರಗಳನ್ನು ಅವರು ಕೊಟ್ಟಿದ್ದಾರೆ. ರೀಡ್–ಮೆರೆಲ್‌ರು ಮರಣದರಗಳಿಗೆ ಮರಣ ಸಂಭಾವ್ಯತೆಗಳನ್ನು ಒದಗಿಸುವ ಕೋಷ್ಟಕಗಳನ್ನು ತಯಾರಿಸಿದ್ದಾರೆ. ಜೀವಕೋಷ್ಟಕದ ಇತರ ಕಲಮುಗಳನ್ನು ಗಣನೆ ಮಾಡಲು ಸೂತ್ರಗಳು ವಿವರಿಸಲ್ಪಟ್ಟಿವೆ. ಆದರೆ ತತ್ತ್ವತಃ ಸಂಕ್ಷಿಪ್ತ ಜೀವಕೋಷ್ಟಕ ನಿರ್ಮಾಣ ಪೂರ್ಣ ಜೀವಕೋಷ್ಟಕ ನಿರ್ಮಾಣದಲ್ಲಿಯ ತತ್ತ್ವಗಳನ್ನೆ ಒಳಗೊಂಡಿದೆ. ಸಂಕ್ಷಿಪ್ತ ಜೀವಕೋಷ್ಟಕಗಳನ್ನು ನಿರ್ಮಿಸಲು ಜಾರ್ಜ್‌ಕಿಂಗನ ಪದ್ಧತಿ, ಆದರ್ಶಕೋಷ್ಟಕದ ದರಗಳನ್ನು ವೀಕ್ಷಿತ ದರಗಳೊಡನೆ ತುಲನೆ ಮಾಡುವ ಪದ್ಧತಿ, ಮುಂತಾದುವು ಬಳಕೆಯಲ್ಲಿವೆ.

ಜೀವಕೋಷ್ಟಕಗಳ ಉಪಯೋಗ: ಜೀವಕೋಷ್ಟಕ ಒಂದು ಜನಾಂಗದಲ್ಲಿಯ ಮರಣ ಪರಿಸ್ಥಿತಿಯನ್ನು ಸೂಚಿಸುತ್ತದೆ. ಆದ್ದರಿಂದ ಮಾನವ ಜೀವಿತದ ಮೇಲೆ ಅವಲಂಬಿತವಾದ ಎಲ್ಲ ಯೋಜನೆಗಳಲ್ಲೂ ಅವನ್ನು ಬಳಸಬೇಕಾಗುತ್ತದೆ. ಉದಾಹರಣೆಗೆ ವಿಮಾ ಸಂಸ್ಥೆಯವರಿಗೆ ಈ ಕೋಷ್ಟಕ ಅತ್ಯಗತ್ಯ. ಹಾಗೆಯೇ ರಾಷ್ಟ್ರೀಯ ಜನಸಂಖ್ಯಾ ಮುನ್ನೋಟವನ್ನು ಗಣಿಸಲು ಜೀವಕೋಷ್ಟಕದ ನೆರವು ಬೇಕೇಬೇಕು. ಇದಲ್ಲದೆ ಪ್ರಜಾಶಾಸ್ತ್ರಾಧ್ಯಯನಕ್ಕೆ ಜೀವಕೋಷ್ಟಕ ಅನೇಕ ರೀತಿಗಳಲ್ಲಿ ಉಪಯೋಗವಾಗುತ್ತದೆ. ಸಂತಾನೋತ್ಪತ್ತಿ ಮಾಪನೆಯಲ್ಲಿ, ಅನಾಥಾಶ್ರಮಗಳ ಯೋಜನೆಯಲ್ಲಿ, ವಲಸೆಗಾರರ ಸಂಖ್ಯೆಯನ್ನು ಕಂಡುಹಿಡಿಯುವಲ್ಲಿ, ಅಂಕಿ–ಅಂಶಗಳ ಗುಣದೋಷಗಳನ್ನು ಅರಿಯುವಲ್ಲಿ ಸಹ ಈ ಕೋಷ್ಟಕದ ನೆರವು ಉಂಟು.

ಜೀವಕೋಷ್ಟಕದ ಒಂದು ನಮೂನೆ: ಜೀವಕೋಷ್ಟಕದ ಒಂದು ನಮೂನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಜೀವಕೋಷ್ಟಕಗಳಿಂದ ಆಯ್ದು ಇಲ್ಲಿ ತೋರಿಸಿದೆ. ಇದು $e_o^o=45$ ವರ್ಷ. ಜನನ ಜೀವನ ನಿರೀಕ್ಷೆಗೆ ಸಂಬಂಧಿಸಿದ ಪುರುಷ ಜೀವನವನ್ನು ತೋರಿಸುವ ಸಂಕ್ಷಿಪ್ತ ಜೀವಕೋಷ್ಟಕ. ಇದರಲ್ಲಿ ${}_nq_x$ ಎಂಬುದು $x$ ವರ್ಷ ವಯಸ್ಸಿನವನು $x+n$ ವರ್ಷ ವಯಸ್ಸಾಗುವುದರೊಳಗೆ ಸಾಯುವ ಸಂಭಾವ್ಯತೆಯನ್ನು ತೋರಿಸುತ್ತದೆ. $l_X$ ಎಂಬುದು ನಿರ್ದಿಷ್ಟವಾಗಿ $x$ ವರ್ಷ ವಯಸ್ಸಿನ ವರೆಗೆ ಜೀವಿಸಿ ಉಳಿದಿರುವವರ ಸಂಖ್ಯೆಯನ್ನೂ ${}_nL_x$ ಎಂಬುದು $x$ ಮತ್ತು $x+n$ ವರ್ಷ ವಯೋಮಿತಿಯಲ್ಲಿ ಕಾಲ್ಪನಿಕ ಸಮುದಾಯ ಜೀವಿಸುವ ಒಟ್ಟು ವರ್ಷಗಳನ್ನೂ $e_X$ ಎಂಬುದು $x$ ವರ್ಷ ವಯಸ್ಸಿನ ವ್ಯಕ್ತಿಯ ಜೀವನ ನಿರೀಕ್ಷೆಯನ್ನೂ ಸೂಚಿಸುತ್ತವೆ. ${}_nq_x$ ಬೆಲೆಗಳು ತಿಳಿದಿವೆಯೆಂದಿಟ್ಟುಕೊಂಡರೆ ಉಳಿದ ವಿವರಗಳನ್ನು ಗಣಿಸುವುದು ಸುಲಭ.

ಆಯುರ್ನಿರೀಕ್ಷಾಸೂಚಿ: ಒಂದು ರಾಷ್ಟ್ರದ ಜೀವಕೋಷ್ಟಕವನ್ನು ಆಧರಿಸಿ ಅದರ ಪ್ರಜೆಗಳ ಸರಾಸರಿ ಆಯುಷ್ಯವನ್ನೂ ಪ್ರತಿಯೊಂದು ವಯಸ್ಸಿನಲ್ಲಿನ ಮರಣ ಸಂಭಾವ್ಯತೆಯನ್ನೂ ತಿಳಿಸುವ ಯಾದಿ. ಒಂದು ವರ್ಷ ಗತಿಸಿದ ಮತ್ತು ಅದೇ ವರ್ಷ ಜನಿಸಿದ ಶಿಶುಗಳ ಸಂಖ್ಯೆಗಳ ನಡುವಿನ ನಿಷ್ಪತ್ತಿ ಮೊದಲ ವರ್ಷದ ಶಿಶು ಮರಣದ

| ವಯಸ್ಸು $x$ | $1000\,{}_nq_x$ | $l_X$ | ${}_nL_x$ | $L_X$ | $e_X$ |
|---|---|---|---|---|---|
| 0 | 169.09 | 100,000 | 87,318 | 4,404,679 | 44.05 |
| 1–4 | 82.07 | 83,091 | 318,044 | 4,317,361 | 51.96 |
| 5–9 | 25.65 | 76,272 | 376,470 | 3,999,317 | 52.44 |
| 10–14 | 17.22 | 74,316 | 368,380 | 3,622,847 | 48.75 |
| 15–19 | 26.28 | 73,036 | 360,382 | 3,254,467 | 44.56 |
| 20–24 | 37.63 | 71,117 | 348,895 | 2,894,085 | 40.70 |
| 25–29 | 39.40 | 68,441 | 335,462 | 2,545,190 | 37.19 |
| 30–34 | 42.27 | 65,744 | 321,772 | 2,209,728 | 33.61 |
| 35–39 | 47.67 | 62,965 | 307,320 | 1,887,956 | 29.98 |
| 40–44 | 58.06 | 59,963 | 291,112 | 1,580,636 | 26.36 |
| 45–49 | 74.04 | 56,482 | 271,955 | 1,289,524 | 22.83 |
| 50–54 | 96.89 | 52,300 | 248,832 | 1,017,569 | 19.46 |
| 55–59 | 129.43 | 47,233 | 220,882 | 768,737 | 16.28 |
| 60–64 | 176.23 | 41,120 | 187,482 | 547,855 | 13.32 |
| 65–69 | 245.62 | 33,873 | 148,565 | 360,373 | 10.56 |
| 70–74 | 345.17 | 25,553 | 105,715 | 211,808 | 8.29 |
| 75–79 | 740.10 | 16,733 | 64,000 | 106,093 | 6.34 |
| 80–84 | 626.70 | 8,867 | 30,442 | 42,093 | 4.75 |
| 85+ | – | 3,310 | 11,651 | 11,651 | 3.52 |

ಸಂಭಾವ್ಯತೆಯನ್ನು ನೀಡುತ್ತದೆ. ಇದರಿಂದ ಮೊದಲ ವರ್ಷದ ಶಿಶುಗಳ ಆಯುರ್ನಿರೀಕ್ಷಾಸೂಚಿಯನ್ನೂ ನಿರ್ಗಮಿಸಬಹುದು. ಇದೇ ಪ್ರಕಾರ ಒಂದು ವರ್ಷ ಯಾವುದೇ ನಿರ್ದಿಷ್ಟ ವಯೋಮಿತಿಯಲ್ಲಿ ಅಳಿದವರ ಹಾಗೂ ಇದ್ದವರ ಸಂಖ್ಯೆಗಳ ನಡುವಿನ ನಿವೃತ್ತಿಯಿಂದ ಆ ವಯಸ್ಸಿನ ವ್ಯಕ್ತಿಗಳ ಆಯುರ್ನಿರೀಕ್ಷಾಸೂಚಿಯನ್ನು ನಿರ್ಗಮಿಸಬಹುದು.

ಪ್ರಜೆಗಳಲ್ಲಿ ಆಗತಾನೇ ಹುಟ್ಟಿದ ಶಿಶುವಿನಿಂದ ಹಿಡಿದು ನೂರು ವರ್ಷಕ್ಕೂ ಮೇಲ್ಪಟ್ಟು ಬದುಕಿ ಬಾಳುವವರು ಇದ್ದೇ ಇರುತ್ತಾರೆ. ಪ್ರತಿ ವಯಸ್ಸಿನವರಿಗೂ ಒಂದು ನಿರ್ದಿಷ್ಟವಾದ ಮರಣ ಪ್ರಮಾಣವಿರುತ್ತದೆ. ಉದಾಹರಣೆಗೆ, ಭಾರತದಲ್ಲಿ ಒಂದು ವರ್ಷದಲ್ಲಿ ಒಂದು ಸಾವಿರ ಜನನಗಳಾದರೆ ಆ ವರ್ಷದ ಕೊನೆಯಲ್ಲಿ ಸುಮಾರು ನೂರು ಶಿಶುಗಳು ಅಸುನೀಗಿರುತ್ತವೆ. ಇದು ಶಿಶು ಮರಣ ಪ್ರಮಾಣ. ಇದೇ ರೀತಿ ಪ್ರತಿ ವಯಸ್ಸಿನವರಿಗೂ ಒಂದು ನಿರ್ದಿಷ್ಟವಾದ ಮರಣಪ್ರಮಾಣ ಉಂಟು. ನಿಗದಿಯಾದ ಒಂದು ಅವಧಿಯಲ್ಲಿ ಆಯಾ ವಯಸ್ಸಿಗೆ ತಕ್ಕಂತೆ ಮರಣಪ್ರಮಾಣದ ಪ್ರಕಾರ ಎಷ್ಟು ಮಂದಿ ಅಸು ನೀಗುತ್ತಾರೆ ಎಂಬುದನ್ನು ಗಣನೆಗೆ ತಂದುಕೊಂಡು ಕೊನೆಯ ವ್ಯಕ್ತಿ ಸಾಯುವತನಕ ಈ ಕ್ರಮವನ್ನು ಅನುಸರಿಸಿ ಪ್ರಜೆಗಳೆಲ್ಲರೂ ಯಾವ ರೀತಿಯ ವಿಪತ್ತಿಗೊಳಗಾಗುತ್ತಾರೆ ಎಂಬುದನ್ನು ತಿಳಿಸುವ ಯಾದಿಯೇ ಆಯುರ್ನಿರೀಕ್ಷಾಸೂಚಿ.

ಪ್ರತಿಬಾರಿ ಜನಗಣತಿಯಾದ ಬಳಿಕ (ಹತ್ತು ವರ್ಷಕ್ಕೊಮ್ಮೆ) ಈ ಆಯುರ್ನಿರೀಕ್ಷಾ ಸೂಚಿಗಳನ್ನು ತಜ್ಞರು ಸಿದ್ಧಗೊಳಿಸುವುದು ವಾಡಿಕೆ. ಇದನ್ನು ಸಿದ್ಧಗೊಳಿಸಲು ಹಿಂದಿನ ಹತ್ತು ವರ್ಷಗಳಿಗೆ ಅನ್ವಯಿಸುವ ಮರಣ ಪ್ರಮಾಣಗಳೇ ಆಧಾರ. ***

**ಜೀವಭೌತವಿಜ್ಞಾನ:** ಭೌತವಿಜ್ಞಾನದ ಪರಿಕಲ್ಪನೆ ಮತ್ತು ತಂತ್ರಗಳನ್ನು ಅಳವಡಿಸಿಕೊಂಡು ಜೀವಿಗಳಲ್ಲಿನ ಜೈವಿಕ ಲಕ್ಷಣಗಳನ್ನು ಅಧ್ಯಯನ ಮಾಡುವ ವಿಜ್ಞಾನದ ಅಂಗ (ಬಯೋಫಿಸಿಕ್ಸ್). ಭೌತ ವಿಜ್ಞಾನದ ಹಿನ್ನೆಲೆಯಲಿ ಜೀವಿಗಳ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಲಾಗುವುದು. ಇದು ಅಂತರಶಾಸ್ತ್ರೀಯ ಅಧ್ಯಯನಕ್ಕೆ ಉತ್ತಮ ನಿದರ್ಶನ.

ಜೀವಿಗಳ ರಕ್ತ ಮತ್ತು ಇತರ ದ್ರಾವಣಗಳ ಪ್ರಸರಣ (ಡಿಫ್ಯೂಷನ್) ಹಾಗೂ ಚಲನೆಗಳ ಪರಿಮಾಣಾತ್ಮಕ ಅಧ್ಯಯನ ಜೀವಭೌತವಿಜ್ಞಾನದ ಮುಖ್ಯ ಉದ್ದೇಶಗಳಲ್ಲೊಂದು. ಪ್ರಸರಣೆ ಮತ್ತು ಸಾಗಣೆ (ಟ್ರಾನ್ಸ್‌ಪೋರ್ಟ್) ಪ್ರಕ್ರಿಯೆಗಳ ಪರಿಶೀಲನೆಯನ್ನು ಮೊದಲಿಗೆ ಜರ್ಮನ್ ವಿಜ್ಞಾನಿ ಅಡಾಲ್ಫ್ ಫಿಕ್ ಪರಿಮಾಣಾತ್ಮಕವಾಗಿ ಮಾಡಿದ. ಜರ್ಮನಿಯ ಫಾನ್ ಹೆಲ್ಮ್‌ಹೋಲ್ಟ್ಸ್ (1821–1894) ನೇತ್ರ ವೈದ್ಯರಿಗೆ ಅಗತ್ಯವಾದ ನೇತ್ರಾಂತರ್ದರ್ಶಿಯನ್ನು (ಆಫ್ತಲ್ಮಾಸ್ಕೋಪ್) ತಯಾರಿಸಿ ಕಣ್ಣಿನ ಒಳಭಾಗಗಳ ಪರೀಕ್ಷೆಗೆ ಸಾಧನ ಒದಗಿಸಿದ. ಕನೀನಿಕೆಯ ಒಳಹೊಕ್ಕು ದ್ಯುತಿನರದ ಪ್ರವೇಶಸ್ಥಾನ. ಅದನ್ನು ಆವರಿಸಿಕೊಂಡಿರುವ ರಕ್ತನಾಳಗಳ ಸೂಕ್ಷ್ಮ ಜಾಲವನ್ನು ವೀಕ್ಷಿಸಲು ಈ ಶೋಧ (ಇನ್‌ವೆನ್ಷನ್) ದಾರಿಮಾಡಿತು. ಸ್ನಾಯು ಸಂಕೋಚನೆ, ನರಗಳ ವೇಗ ನಿಷ್ಕರ್ಷೆ ಸಂಗತಿಗಳನ್ನು ಕುರಿತು ಹೆಲ್ಮ್‌ಹೋಲ್ಟ್ಸ್ ವ್ಯಾಪಕವಾಗಿ ಅಧ್ಯಯನ ಮಾಡಿದ.

ವಾಯು ಉಸಿರಾಟ ಹಾಗು ರಕ್ತಪರಿಚಲನೆಗೆ ನಾಳಗಳ ಮೂಲಕ ಮತ್ತು ಸಂಗ್ರಹಕೋಶಗಳ ಒಳಗಿನಿಂದ ಹೊರಕ್ಕೆ ಹಾಗೂ ಒಳಕ್ಕೆ ಹೋಗುವ ದ್ರವ ಮತ್ತು ಅನಿಲಗಳ ಸಾಗಣೆಗೂ ಸಂಬಂಧವಿದೆ. ತರಲಗಳು ತಕ್ಕಮಟ್ಟಿಗೆ ಯಾಂತ್ರಿಕ ಬಲದೊಂದಿಗೆ ಹರಿಯುವುವು. ಹರಿವಿನ ವೇಗ (ಚಾಲನಬಲ) – ಡ್ರೈವಿಂಗ್ ಫೋರ್ಸ್) ಏರಿದಂತೆ ನೇರವಾಗಿ ವರ್ಧಿಸುವುದು. ತರಲಗಳ ಸಾಗಣೆಯ ಕ್ರಮ ಸಂಕೀರ್ಣವಾದರೂ, ಸೂಕ್ತವಾದವನ್ನು ಮಂಡಿಸುವ ಸಲುವಾಗಿ, ಆದರ್ಶ ಹಾಗೂ ಸರಳ ಹರಿವಿನ ಭಾವನೆಯನ್ನು ಅಂಗೀಕರಿಸಬೇಕು. ಆದರ್ಶ ಹರಿವಿನಲ್ಲಿ ಒಂದು ಕಾಲ್ಪನಿಕ ಸ್ತರ (ಲೇಯರ್) ಇನ್ನೊಂದರ ಮೇಲೆ ಜಾರುವುದೇ ದ್ರವಚಲನೆಗೆ ಕಾರಣವೆಂದು ಮೊದಲಿಗೆ ಫ್ರೆಂಚ್ ವಿಜ್ಞಾನಿ ಜೀನ್ ಲೂಯಿ ಪ್ವಾಸಾಯ್ 1884ರಲ್ಲಿ ತೋರಿಸಿದ. ನಾಳಗಳ ಮೈಯಿಗೆ ಅಂಟಿಕೊಂಡಂತಿರುವ ಸ್ತರಗಳ ಚಲನೆ, ಮೈಯಿಗೆ ದೂರವಿರುವ ಸ್ತರಗಳ ಚಲನೆಗೆ ಹೋಲಿಸಿದರೆ ಅತ್ಯಂತ ನಿಧಾನವಾಗಿದೆ. ರಕ್ತನಾಳಗಳಲ್ಲಿ ಸಾಮಾನ್ಯವಾಗಿ ಕೊಳವೆಗಳಲ್ಲಿ ತರಲ ಹರಿಯುವುದರ ಮೂಲತತ್ವಗಳನ್ನು ಪ್ವಾಸಾಯ್ ನಿರೂಪಿಸಿದ.

1896ರಲ್ಲಿ ಹೆನ್ರಿ ಬೆಕೆರಲ್ ವಿಕಿರಣಪಟುತ್ವವನ್ನು ಆವಿಷ್ಕರಿಸಿದ ನಂತರ ಜೈವಿಕ ಪ್ರಕ್ರಿಯೆಗಳ ವಿನ್ಯಾಸವನ್ನು ಅರ್ಥ ಮಾಡಿಕೊಳ್ಳಲು ಒಂದು ಹೊಸ ಸಲಕರಣೆ ಒದಗಿಸಿದ. ವಿಕಿರಣಪಟುತ್ವವುಳ್ಳ ಸಮಸ್ಥಾನಿಗಳು (ಐಸೊಟೋಪ್ಸ್) ಮತ್ತು ಸ್ಥಿರ ಸಮಸ್ಥಾನಿಗಳನ್ನು ಅಲ್ಲಿಂದೀಚೆಗೆ ಅಣುಕ್ರಿಯೆಗಳ ಅಧ್ಯಯನಕ್ಕೆ ಹೆಚ್ಚಾಗಿ ಬಳಸಲಾಗುತ್ತದೆ. ಮೂರು ವರ್ಷಗಳ ಬಳಿಕ ಎಕ್ಸ್‌ರೇ ಕಿರಣಗಳನ್ನು ರಂಟ್ಜನ್ ಆವಿಷ್ಕರಿಸಿದ. ಇವು ವೈದ್ಯರಂಗದಲ್ಲಿ, ವಿಕಿರಣ ಜೀವವಿಜ್ಞಾನದಲ್ಲಿ ಮತ್ತು ಅಣುರಚನೆಗಳನ್ನು ಬಿಡಿಸುವಲ್ಲಿ ಮಹತರ ಪಾತ್ರವಹಿಸಿದೆ.

ಸ್ನಾಯುಗಳಲ್ಲಿ ಔಷ್ಣಿಕ ಕ್ರಿಯೆಗಳ ಅಧ್ಯಯನವನ್ನು ಬ್ರಿಟಿಷ್ ವಿಜ್ಞಾನಿ ಎ.ವಿ.ಹಿಲ್ ನಡೆಸಿದ್ದಾನೆ. ಇದರ ಪ್ರಕಟಣೆ 1910ರಲ್ಲಿ ವರದಿಯಾಯಿತು. ನಂತರ, ಸು. 50 ವರ್ಷ ಅವನ ಸಂಶೋಧನೆ ಅವಿಚ್ಛಿನ್ನವಾಗಿ ನಡೆಯಿತು. ಸ್ನಾಯುಗಳ ಪ್ರಕ್ರಿಯೆಯ ಮುಖ್ಯ ಲಕ್ಷಣ ಉಷ್ಣೋತ್ಪನ್ನವನ್ನು ಅನ್ವೇಷಿಸಿದ. ಉಷ್ಣೋತ್ಪನ್ನವನ್ನು ಕರಾರುವಾಕ್ಕಾಗಿ ಅಳೆಯುವುದು ಕಷ್ಟ. ಏಕೆಂದರೆ, ಈ ಪ್ರಕ್ರಿಯೆಗಳಲ್ಲಿ ಉಷ್ಣತೆಯ ಹೆಚ್ಚಳ ಅತ್ಯಂತ ಸೂಕ್ಷ್ಮವಾಗಿರುತ್ತದೆ. ಎ.ವಿ.ಹಿಲ್ಲನ ಪ್ರಕಾರ ಉಷ್ಣೋತ್ಪಾದನೆಯನ್ನು 3 ಭಾಗಗಳಾಗಿ ವಿಂಗಡಿಸಬಹುದು :

1. ಜೀವಂತ ಸ್ನಾಯುವಿನ ಚಯಾಪಚಯ (ಮೆಟಬಾಲಿಕ್) ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ವಿಶ್ರಾಂತ ಉಷ್ಣ (ರೆಸ್ಟಿಂಗ್ ಹೀಟ್).

2. ಉದ್ದೀಪನದ (ಸ್ಟಿಮ್ಯುಲಸ್) ಪ್ರಭಾವದಿಂದ ಉಂಟಾಗುವ ಕರ್ಷಣದ (ಟೆನ್ಷನ್) ಅಥವಾ ಸಂಕೋಚನದ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಪ್ರಾರಂಭಿಕ ಉಷ್ಣ, ಮತ್ತು

3. ಸ್ನಾಯು ತನ್ನ ಮೊದಲಿನ ವಿಶ್ರಾಂತಸ್ಥಿತಿಗೆ ಮರಳುವಾಗ ಉತ್ಪನ್ನವಾದ ಪೂರ್ವಸ್ಥಿತಿ ಉಷ್ಣ (ರಿಕವರಿ ಹೀಟ್).

ಪೊರೆಗಳ ಮತ್ತು ನರತಂತುಗಳ ವಿದ್ಯುತ್ ಗುಣಗಳ ಅಧ್ಯಯನವೇ ವಿದ್ಯುತ್‌ಶರೀರವಿಜ್ಞಾನ (ಎಲೆಕ್ಟ್ರೋಫಿಸಿಯಾಲಜಿ). ಇದರ ಬೆಳವಣಿಗೆಗೆ ಪ್ರಮುಖ ಕಾರಣರಾದ ಜೀವಭೌತವಿಜ್ಞಾನಿಗಳು ಹಾಡ್ಕಿನ್, ಕೋಲ್, ಅಡ್ರಿಯನ್ ಮತ್ತು ಬ್ರೂಕ್‌ಹರ್ಟ್‌ಲೈನ್. ಸ್ನಾಯುತಂತುಗಳ ರಚನೆಯನ್ನು ಎಚ್.ಇ.ಹಕ್ಸ್ಲಿ, ಜೆ.ಹಾನ್‌ಸನ್ ಮತ್ತು ಹಾಡ್ಜ್ ಅವರು ಸೂಚಿಸಿದರು. ಇದು ಸ್ನಾಯು ಸಂಕೋಚವನ್ನು ಅರ್ಥ ಮಾಡಿಕೊಳ್ಳಲು ಸಹಾಯಕ.

ಎಕ್ಸ್ ಕಿರಣ ನಮನ ವಿಧಾನಗಳಿಂದ ಪ್ರೋಟೀನುಗಳ ರಚನೆಯನ್ನು ಜೆ.ಡಿ.ಬರ್ನಾಲ್, ಡೊರೊತಿ ಹಾಡ್ಜ್‌ಕಿನ್ ಮತ್ತು ಆಸ್ಟ್‌ಬರಿ 1930ರಲ್ಲಿ ಕಂಡುಹಿಡಿದರು. ಪ್ರೋಟೀನುಗಳಲ್ಲದ ಇತರ ಬೃಹದಣುಗಳ ರಚನೆಯನ್ನು ಅರ್ಥಮಾಡಿಕೊಳ್ಳುವುದಕ್ಕೂ ಎಕ್ಸ್ ಕಿರಣ ನಮನ ಪ್ರಯೋಗಗಳು ಉಪಯೋಗವಾಗಿವೆ. ಕೂದಲು, ಉಗುರು, ಚರ್ಮ ಮತ್ತು ಸ್ನಾಯುಪ್ರೋಟೀನುಗಳ ಎಕ್ಸ್ ಕಿರಣ ನಮನ ಫೋಟೋಗಳ ನಡುವೆ ಪರಸ್ಪರ ಹೋಲಿಕೆ ಇರುವುದನ್ನು ಆಸ್ಟ್‌ಬರಿ ಗಮನಿಸಿ, ಈ ಪ್ರೋಟೀನುಗಳ ರಚನೆಯಲ್ಲಿ ಮೂಲಭೂತ ಸಾದೃಶ್ಯವಿರುವುದನ್ನು ತೋರಿಸಿದ. ಪ್ರಸಕ್ತ ಶತಮಾನದ ಅಭೂತಪೂರ್ವ ಸಂಶೋಧನೆಯಾದ ಡಿಎನ್‌ಎ (ಡೀಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ) ದ್ವಿಕುಂಡಲಿನಿ (ಡಬಲ್ ಹೆಲಿಕ್ಸ್) ರಚನೆಯನ್ನು ವಾಟ್ಸನ್ ಮತ್ತು ಕ್ರಿಕ್ ನಿರ್ಧರಿಸುವುದಕ್ಕೆ ಎಕ್ಸ್ ಕಿರಣ ನಮನ ತಂತ್ರ ಸಾಧನವಾಯಿತು.

ಜೀವವಿಜ್ಞಾನ ಸಮಸ್ಯೆಗಳ ಪರಿಹಾರಕ್ಕೆ ಭೌತ ಭಾವನೆಗಳನ್ನು ಉಪಯೋಗಿಸಿ ಜೀವಭೌತವಿಜ್ಞಾನದಲ್ಲಿ ಕಳೆದ 2 ದಶಕಗಳಿಂದ ಅದ್ಭುತ ಪ್ರಗತಿಯಾಗಿದೆ. ವಿವಿಧ ಉಪಕರಣಗಳ ಹಾಗೂ ಭೌತತಂತ್ರಗಳ ಬಳಕೆಯಿಂದ ಜೈವಿಕ ಸಂಶೋಧನೆಯ ವಿಧಾನದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ.

ಜೀವ ಭೌತವಿಜ್ಞಾನ 5 ವಿಭಾಗಗಳನ್ನೊಳಗೊಂಡಿದೆ.

1. ಶರೀರವೈಜ್ಞಾನಿಕ ಭೌತವಿಜ್ಞಾನ (ಫಿಸಿಯಲಾಜಿಕಲ್ ಫಿಸಿಕ್ಸ್),

2. ಅಣುಜೀವವಿಜ್ಞಾನ (ಮಾಲಿಕ್ಯುಲರ್ ಬಯಾಲಜಿ),

3. ವಿಕಿರಣ ಜೀವವಿಜ್ಞಾನ (ರೇಡಿಯೇಷನ್ ಬಯಾಲಜಿ),

4. ಸೈದ್ಧಾಂತಿಕ ಜೀವಭೌತವಿಜ್ಞಾನ (ಥಿಯೊರೆಟಿಕಲ್ ಬಯೋಫಿಸಿಕ್ಸ್), ಮತ್ತು

5. ಉಪಕರಣ ನಿರ್ಮಾಣ ಮತ್ತು ಮಾಪನಗಳು (ಇನ್ಸ್‌ಟ್ರುಮೆಂಟೇಷನ್ ಮತ್ತು ಮೆಷರ್‌ಮೆಂಟ್ಸ್).

ಸೈದ್ಧಾಂತಿಕ ಜೀವಭೌತವಿಜ್ಞಾನವನ್ನು ಅಭಿಜಾತ ಬಲವಿಜ್ಞಾನ (ಕ್ಲಾಸಿಕಲ್ ಮೆಕ್ಯಾನಿಕ್ಸ್), ದ್ರವಸ್ಥಿತಿ ವಿಜ್ಞಾನ (ಹೈಡ್ರೊಸ್ಟ್ಯಾಟಿಕ್ಸ್), ದ್ರವಗತಿ ವಿಜ್ಞಾನ (ಹೈಡ್ರೊಡೈನಮಿಕ್ಸ್) ಮತ್ತು ಶಬ್ದವಿಜ್ಞಾನ ವಿಧಾನಗಳಿಂದ ಅನೇಕ ಜೈವಿಕ ಕ್ರಿಯೆಗಳ ಅಧ್ಯಯನಕ್ಕೆ ಉಪಯೋಗಿಸಿಕೊಳ್ಳಲಾಗಿದೆ. ಆಸ್ಮಾಟಿಕ್ ಹರಿವು, ಜಲಸಮತೋಲನ, ಜೈವಿಕ ಕ್ರಿಯೆಗಳ ವಿನ್ಯಾಸ ಮತ್ತು ಗತಿವಿಜ್ಞಾನ, ಪರಿಚಲನ ವ್ಯವಸ್ಥೆಗಳಲ್ಲಿ ತರಲಾದ ಹರಿವು ಮತ್ತು ಜೀವಂತ ಪೊರೆಗಳ ಮೂಲಕ ಅಯಾನುಗಳ ಸಾಗಣೆ, ಜೀವಂತ ಊತಕಗಳ ವಿದ್ಯುತ್ ಗುಣಗಳು, ಶಕ್ತಿ ವಿಸರಣೆ ಮತ್ತು ಜೀವಶಕ್ತಿ (ಬಯೊಎನರ್ಜಿಟಿಕ್ಸ್) ಅಧ್ಯಯನವನ್ನು ಶರೀರವೈಜ್ಞಾನಿಕ ಜೀವಭೌತವಿಜ್ಞಾನದಡಿಯಲ್ಲಿ ಮಾಡಲಾಗುತ್ತದೆ. ಗಣಿತ ಜೀವಭೌತವಿಜ್ಞಾನವು ಜೀವಸ್ಥಿತಿವಿಜ್ಞಾನದ ಸಮಸ್ಯೆಗಳು, ಅವುಗಳ ಪರಿಹಾರಕ್ಕೆ, ಗಣಕಗಳ ಉಪಯೋಗ, ಸೈಬರ್ನೆಟಿಕ್ಸ್ ಮತ್ತು ಬೆಳವಣಿಗೆಯ ವೇಗಗಳಿಗೆ ನೇರ ಸಂಬಂಧವನ್ನು ಪಡೆದಿದೆ.

ಶರೀರವೈಜ್ಞಾನಿಕ ಭೌತವಿಜ್ಞಾನ (ಫಿಸಿಯಲಾಜಿಕಲ್ ಫಿಸಿಕ್ಸ್) : ಜೀವಂತ ವಸ್ತುವಿನೊಡನೆ ಭೌತಬಲಗಳ ಅಂತರಕ್ರಿಯೆಗಳ ವಿನ್ಯಾಸದ ಅಧ್ಯಯನವು ಶರೀರವೈಜ್ಞಾನಿಕ ಭೌತವಿಜ್ಞಾನದ ವ್ಯಾಪ್ತಿಗೆ ಸೇರಿದೆ. ಸ್ನಾಯು ಸಂಕೋಚನ, ನರವಾಹಕತೆ, ಜೀವ ವೈಜ್ಞಾನಿಕ ವಿದ್ಯುತ್ತು, ರಕ್ತಗತಿ ವಿಭಾಗ, ಕಣ್ಣಿನ ದೃಷ್ಟಿ, ದ್ಯುತಿಸಂಶ್ಲೇಷಣೆ, ಸಂವೇದೀ ಶರೀರವಿಜ್ಞಾನ, ಎಲೆಕ್ಟ್ರೋಕಾರ್ಡಿಯೋಗ್ರಫಿ ಮತ್ತು ಎಲೆಕ್ಟ್ರೋಎನ್ಸೆಫಲೋಗ್ರಫಿಗಳು. ಈ ವಿಭಾಗದ ಪರಿಧಿಯೊಳಗೆ ಸೇರಿವೆ. ಭೌತ ಪರಿಸರದ ಬದಲಾವಣೆಗಳನ್ನು ಅನುಸರಿಸಿ ಮನುಷ್ಯ ದೇಹವನ್ನು ಒಳಗೊಂಡು ಜೀವಿಗಳ ನಡವಳಿಕೆಯಲ್ಲಿ ಬದಲಾವಣೆ, ಜೈವಿಕ ಪೊರೆಗಳ ರಚನೆ ಮತ್ತು ಪಾರಗಮ್ಯತೆಗಳಿಗೆ ಸಂಬಂಧಿಸಿದಂತೆ ಇಡೀ ಜೈವಿಕ ಪೊರೆಗಳ ವಿದ್ಯಮಾನಗಳು ಶರೀರಭೌತವಿಜ್ಞಾನಕ್ಕೆ ಸಂಬಂಧಪಟ್ಟ ಸಂಗತಿಗಳಾಗಿವೆ.

ಜೀವಂತ ಊತಕಗಳ ವಿದ್ಯುದುತ್ತೇಜನಶೀಲತೆಯನ್ನು (ಎಕ್ಸೈಟೆಬಿಲಿಟಿ) ಕಪ್ಪೆ ಸ್ನಾಯುಗಳ ಮೇಲೆ ಗ್ಯಾಲ್ವನಿ ನಡೆಸಿದ ಪ್ರಯೋಗಗಳು ಖಚಿತಪಡಿಸಿದುವು. ಈ ರೀತಿ ಉಂಟಾದ ವಿದ್ಯುದಾವೇಗಗಳು ನರಕೋಶಗಳ ಮೂಲಕ ಪ್ರವಹಿಸಿತ್ತವೆ.

ವಿಶ್ರಾಂತ ನರತಂತುವಿನ ಪೊರೆಯ ಒಳಮೈಗೂ ಹೊರಮೈಗೂ ನಡುವೆ ಇರುವ ವಿಭವ ವ್ಯತ್ಯಾಸ (ಪೊಟೆನ್ಷಿಯಲ್ ಡಿಫರೆನ್ಸ್) (ಎಲೆಕ್ಟ್ರಿಕಲ್ ಇಂಪಲ್ಸಸ್) ವಿದ್ಯುದಾವೇಗದ ವಾಹಕತೆಗೆ ಮುಖ್ಯ ಕಾರಣವಾಗಿದೆ. ಪೊರೆಯ ಒಳಭಾಗ ಹೊರಭಾಗಕ್ಕೆ ಋಣಾತ್ಮಕವಾಗಿರುವುದು.

ಈ ವಿಭವ ಓಟಗಳನ್ನು (ಪೊಟೆನ್ಷಿಯಲ್ ಗ್ರೇಡಿಯೆಂಟ್ಸ್) ನರಕೋಶ ಉಪಯೋಗಿಸಿಕೊಂಡು ಮಾಹಿತಿಯನ್ನು ರವಾನಿಸುವುದು. ರವಾನೆಯ ಕ್ರಮವನ್ನು ಪ್ರತಿರೂಪೀ ನರಕೋಶದಲ್ಲಿ ವಿವರಿಸಬಹುದು. ನರಕೋಶದಲ್ಲಿ ಅನೇಕ ನರತಂತುಗಳಿವೆ. ಒಂದೊಂದು ನರತಂತುವು ಒಂಟಿ ನರಕೋಶದ ಅಥವಾ ನ್ಯೂರಾನಿನ ವಿಸ್ತರಣೆ. ನರತಂತುವಿನ ಒಳಕ್ಕೆ ಒಂದು ಎಲೆಕ್ಟ್ರೋಡನ್ನು ತೂರಿಸಿ, ಅದರೊಳಗಿನ ವಿಭವವನ್ನು ಅಳೆಯಬಹುದು. ವಿಶ್ರಾಂತ ಸ್ಥಿತಿಯಲ್ಲಿ ನರತಂತುವಿನ ಒಳಭಾಗದ ವಿಭವ ೬೦ ಮಿವಿ (ಮಿಲಿವೊಲ್ಟ್ಸ್) ಋಣಾತ್ಮಕವಾಗಿರುತ್ತದೆ. ತಂತುವಿನ ಪೊರೆಯ ಒಳಗೂ, ಹೊರಗೂ ಇರುವ ಅಯಾನುಗಳ ಸಾರತೆಯಲ್ಲಿ (ಕಾನ್ಸೆಂಟ್ರೇಷನ್) ವ್ಯತ್ಯಾಸವಿದ್ದು, ಒಳಭಾಗದಲ್ಲಿ ಪೊಟ್ಯಾಸಿಯಮ್ ಅಯಾನುಗಳು ಹೊರಭಾಗದಲ್ಲಿ ಸೋಡಿಯಮ್ ಅಯಾನುಗಳು ಸಮೃದ್ಧವಾಗಿ ಇರುತ್ತವೆ. ನರ ಉದ್ದೀಪಿತವಾದಾಗ ಏಕ್ಸಾನ್ ತಂತುವಿನ ಪಾರಗಮ್ಯತೆ ಬದಲಾಯಿಸಿ, ಸೋಡಿಯಮ್ ಅಯಾನುಗಳು ಒಳಪ್ರದೇಶಕ್ಕೆ ಪ್ರವೇಶಿಸಿ ಧನವಿಭವವನ್ನು ಉಂಟುಮಾಡುವುವು. ಇದೇ ಕ್ರಿಯಾವಿಭವದ (ಆಕ್ಷ್ಯನ್ ಪೊಟೆನ್ಷಿಯಲ್) ಉಗಮಕ್ಕೆ ಕಾರಣ. ತಂತು ಉತ್ತೇಜಿತವಾಗಿ ಆವೇಗವನ್ನು ರವಾನಿಸುವಾಗ ಒಳವಿಭವ ಮೊದಲು ಶೂನ್ಯವಾಗಿ ನಂತರ ಧನಾತ್ಮಕವಾಗಿ ಬದಲಾಯಿಸಿ ೫೦ ಮಿವಿಗೆ ಇಳಿಯುತ್ತದೆ. ನರವೇಗದ ರವಾನೆಯಲ್ಲಿ ಆಕ್ಸಾನ್ ತಂತುವಿನ ಪ್ರಮುಖ ಪಾತ್ರ ಈಗ ಸ್ಪಷ್ಟ. ವಿಭವದ ಇಳಿತದ ವೇಳೆಯಲ್ಲಿ ಪೊಟ್ಯಾಸಿಯಮ್ ಅಯಾನುಗಳು ತಂತುನ್ನು ತ್ಯಜಿಸಿ ಹೊರಹೊರಟು ಮೊದಲಿನ ವಿಶ್ರಾಂತ ವಿಭವವನ್ನು ಪುನಃ ಸ್ಥಾಪಿಸುವುವು.

ಉತ್ತೇಜಿತ ವಲಯದಿಂದ ಹೊರಗೆ ಹರಿಯುವ ವಿದ್ಯುತ್ ಪ್ರವಾಹ ತಂತುವಿನ ಆಸುಪಾಸಿನ ವಲಯಗಳನ್ನು ಉದ್ದೀಪಿಸುವುದು. ಹೀಗೆ ವಿದ್ಯುತ್ ಪ್ರವಾಹ ತಂತುವಿನ ತುದಿಯವರೆಗೆ ಸರಣಿಯಂತೆ ಮುಂದುವರಿಯುತ್ತದೆ. ಇದು ತಂತುವಿನಲ್ಲಿ ಉಂಟಾದ ಸ್ವಯಂ ಪ್ರಸಾರಕ ಕ್ಷೋಭೆಯ ಫಲ. ಈ ವಿದ್ಯುತ್‌ಕ್ರಿಯೆಯಲ್ಲಿ ಲಭಿಸುವ ಶಕ್ತಿಯನ್ನು ಉಪಯೋಗಿಸಿಕೊಂಡು ತಂತು ತನ್ನಲ್ಲಿರುವ ಸೋಡಿಯಮ್ ಅಯಾನುಗಳನ್ನು ಹೊರತಳ್ಳಿ ಪೊಟ್ಯಾಸಿಯಮ್ ಅಯಾನುಗಳನ್ನು ಸ್ವೀಕರಿಸಿಕೊಂಡು ಯಥಾಸ್ಥಿತಿಗೆ ಮರಳುತ್ತದೆ. ನರದ ವೇಗವು ಉಷ್ಣತೆ, ಸಂತತೆ ಹಾಗೂ ತಂತುವಿನ ವ್ಯಾಸವನ್ನು ಅವಲಂಬಿಸಿದೆ. ದೊಡ್ಡ ತಂತುಗಳು, ಸಣ್ಣ ತಂತುಗಳಿಗಿಂತ ಅಧಿಕ ವೇಗದಲ್ಲಿ ನರವೇಗವನ್ನು ಸಾಗಿಸಬಲ್ಲುವು. ವೇಗವು ತಂತುವಿನ ವ್ಯಾಸದ ವರ್ಗಮೂಲಕ್ಕೆ ಅನುಪಾತೀಯವಾಗಿದೆ. ಒಂದು ನರಕೋಶದಿಂದ ಪಕ್ಕದಲ್ಲಿರುವ ಮತ್ತೊಂದು ಕೋಶಕ್ಕೆ ಹರಿಯುವ ನರಾವೇಗದ ಸಾಗಣೆ (ಟ್ರಾನ್ಸ್‌ಮಿಷನ್) ವಿನ್ಯಾಸ ಇನ್ನೂ ಪೂರ್ಣವಾಗಿ ಅರ್ಥವಾಗಿಲ್ಲ. ನರವೇಗದ ವರ್ಗಾವಣೆ ರಾಸಾಯನಿಕ ಪ್ರೇಷಕಗಳಿಂದ (ಟ್ರಾನ್ಸ್‌ಮಿಟರ್ಸ್) ನಡೆಯುವುದು. ನರಕೋಶಗಳ ನಡುವಿನ ತೆರಪಿನಲ್ಲಿ (ಗ್ಯಾಪ್) ಅಸಿಟೈಲ್ ಕೊಲಿನ್ ಸಂಚಯಿಸುವುದು. ನರಕೋಶಗಳ ನಡುವಿನ ಸಂಧಿವಲಯದ (ಸೈನ್ಯಾಪ್ಟಿಕಲ್ ಗ್ಯಾಪ್) ಹೊಪ್ಪಳಗಳಲ್ಲಿ (ವೆಸಿಕಲ್ಸ್) ಅಸಿಟೈಲ್ ಕೊಲಿನ್ ಸಂಚಯನಗೊಂಡು ಉತ್ತೇಜನ ಕ್ರಿಯೆಯಲ್ಲಿ ಪೊರೆಯ ಮೂಲಕ ಬಿಡುಗಡೆಯಾಗುತ್ತದೆ. ಇದು ಸ್ಥಳೀಯ ವಿಧ್ರುವೀಕರಣಕ್ಕೆ (ಡೀಪೋಲರೈಸೇಷನ್) ಕಾರಣವಾಗುವುದು. ಈ ರೀತಿ ನರದ ಒಂದು ತುದಿಯಲ್ಲಿ ಉಂಟಾದ ವಿಧ್ರುವೀಕರಣವು ವಿದ್ಯುತ್ ಪ್ರವಾಹದ ಶ್ರೇಣಿಯನ್ನೇ ಸ್ಥಾಪಿಸಿ ಏಕ್ಸಾನಿನ ಉದ್ದಕ್ಕೂ ವಿದ್ಯುತ್ ಕ್ಷೋಭೆ ಮುಂದುವರಿಯಲು ನೆರವು ನೀಡುವುದು. ಮೊದಲಿನ ಉದ್ದೀಪನೆ ಸಾಕಷ್ಟು ಪ್ರಬಲವಾಗಿದ್ದರೆ ವಿದ್ಯುತ್ ಪ್ರವಾಹಗಳು ನರತಂತುವಿನ ಉದ್ದಕ್ಕೂ ಪ್ರವಹಿಸಬಲ್ಲವು. ನರವೇಗಗಳ ಪ್ರಸರಣೆಯ ವಿಧಾನವನ್ನು ಹಾಡ್ಜ್‌ಕಿನ್ ಮತ್ತು ಕೀನ್ಸ್ ಅವರು ಪ್ರಾಯೋಗಿಕವಾಗಿ ನಿರ್ಧರಿಸಿದರು.

ಸ್ನಾಯು ರಚನೆಗೂ ಸಂಕೋಚನದ ಕ್ರಿಯಾವಿನ್ಯಾಸಕ್ಕೂ (ಮೆಕ್ಯಾನಿಸಮ್) ಸಂಬಂಧ ಕಲ್ಪಿಸಿ ಅಧ್ಯಯನ ನಡೆಸುವುದು ಶರೀರವೈಜ್ಞಾನಿಕ ಭೌತವಿಜ್ಞಾನದಿಂದ ಸಾಧ್ಯ. ಸ್ನಾಯುವನ್ನು ಮುಕ್ತ ಶಕ್ತಿಯ ವ್ಯಯದಿಂದ ಯಾಂತ್ರಿಕ ಬಲವನ್ನು ಉತ್ಪಾದಿಸುವ ಜೈವಿಕ ವ್ಯವಸ್ಥೆಯೆಂದು ಪರಿಗಣಿಸಬಹುದು. ಆಕೃತಿ ರಚನಾಶಾಸ್ತ್ರದ (ಮಾರ್ಫಾಲಜಿ) ದೃಷ್ಟಿಯಿಂದ ನೋಡುವುದಾದರೆ ಮೂರು ಬಗೆಯ ಸ್ನಾಯುಗಳಿವೆ. ರೇಖಿತ (ಸ್ಟ್ರಯೇಡೆಟ್), ನಯ (ಸ್ಮೂತ್) ಮತ್ತು ಹೃದಯೀ (ಕಾರ್ಡಿಯಕ್) ಸ್ನಾಯು ತಂತುಗಳ ಉರುಳೆಯಾಕಾರದ ಕಂತೆ. ಒಂದೊಂದು ತಂತುವೂ ತಂತುಕಗಳ (ಫೈಬ್ರಿಲ್ಸ್) ಕಂತೆ.

ತಂತುವಿನ ಕೋಶಪೊರೆ ನಳಿಕೆ ಆಕಾರದ ಅಂತರ್ವಲನಗಳಿಂದ (ಟ್ಯೂಬ್ಯುಲರ್ ಇನ್‌ವಾಜಿನೇಷನ್ಸ್) ಛಿದ್ರಿತವಾಗಿದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಸ್ನಾಯು ತಂತುವನ್ನು ವೀಕ್ಷಿಸಿದಾಗ ಉಜ್ವಲ ಮತ್ತು ಮಸಕು ಪಟ್ಟಿಗಳನ್ನು ನೋಡಬಹುದು. ಇದರಿಂದ ಸ್ನಾಯು ತಂತುಕಗಳು ಖಂಡಖಂಡವಾಗಿ ವಿಭಾಗಗೊಂಡಿರುವುದು ತಿಳಿಯುತ್ತದೆ. ಸೂಕ್ಷ್ಮದರ್ಶಕ ವಿಜ್ಞಾನಿಗಳು ಈ ಪುನರಾವರ್ತಿತ ಪಟ್ಟಿಗಳಿಗೆ ಸೂಕ್ತ ಹೆಸರನ್ನು ಕೊಟ್ಟಿದ್ದಾರೆ. ಉಜ್ವಲ I ಪಟ್ಟಿ, ಮಸುಕಾದ A ಪಟ್ಟಿ, A ಪಟ್ಟಿಯ ನಡುವಿನಲ್ಲಿರುವುದು ಅಲ್ಪಪ್ರಕಾಶದ H ವಲಯ ಮತ್ತು Z ರೇಖೆ. ಸ್ನಾಯುಗಳ ಸಂಕೋಚನ ಮತ್ತು ಇತರ ಗತಿಶೀಲ ಗುಣಗಳಿಗೆ ಆಕ್ಟೊಮಯೊಸಿನ್ ಸಂಕೀರ್ಣ ಕಾರಣ.

ಇದು ಆ್ಯಕ್ಟಿನ್ ಮತ್ತು ಮಯೊಸಿನ್ ಪ್ರೋಟೀನುಗಳಿಂದ ಕೂಡಿದೆ. ರಾಚನಿಕ ಆಧಾರಕ್ಕೆ (ಸ್ಟ್ರಕ್ಚರಲ್ ಸಪೋರ್ಟ್) ಆ್ಯಕ್ಟಿನ್ ಹೊಣೆಯಾದರೆ, ಮಯೊಸಿನ್ ಎಟಿಪಿ ಯ ಜಲವಿಚ್ಛೇದನೆಯ ಕ್ರಿಯಾವೇಗವನ್ನು ವರ್ಧಿಸುತ್ತದೆ. ಮಯೊಸಿನನ್ನು ವಿದ್ಯುತ್‌ಗತಿ ಕ್ರಿಯೆಯಿಂದ (ಎಲೆಕ್ಟ್ರೋಫಾರೆಸಿಸ್) ಮೂರು ಭಾಗಗಳಾಗಿ ಬೇರ್ಪಡಿಸಬಹುದು. ಒಂದು ಭಾಗ (H) ಮೆರೊಮಯೊಸಿನ್, ಇನ್ನೆರಡು ಹಗುರ (L) ಮರೊಮಯೊಸಿನುಗಳು. ಇವುಗಳಲ್ಲಿ H ಮೆರೊಮಯೊಸಿನ್ ಮಾತ್ರ ಎಟಿಪಿಯನ್ನು ಜಲವಿಚ್ಛೇದಿಸಬಲ್ಲುದು. ಸ್ನಾಯುಸಂಕೋಚನದಲ್ಲಿ ಕ್ಯಾಲ್ಸಿಯಮ್ ಅಯಾನುಗಳು ಕೂಡ ಮುಖ್ಯ ಪಾತ್ರವಹಿಸುತ್ತವೆ. ಉತ್ತೇಜಕದ (ಸ್ಟಿಮ್ಯುಲಸ್) ಫಲವಾಗಿ ಸಾರ್ಕೊಪ್ಲಾಸ್ಮಿಕ್ ರೆಟಿಕ್ಯುಲಮ್ ತಂತುಕಗಳ ಒಳಗೆ ಕ್ಯಾಲ್ಸಿಯಮ್ ಅಯಾನುಗಳನ್ನು ಕಳುಹಿಸಿ ಟ್ರೊಫೊಮಯೊಸಿನ್ ತಡೆಯನ್ನು ತೆಗೆದುಹಾಕುತ್ತವೆ. ಇದರ ಪರಿಣಾಮವಾಗಿ ಮಯೊಸಿನ್ನು ಆಕ್ಟಿನ್ ಜೊತೆ ವರ್ತಿಸಿ ಸಂಕೋಚನವನ್ನು ಪ್ರಾರಂಭಿಸುತ್ತದೆ. ಉತ್ತೇಜಕವನ್ನು ತೆಗೆದು ಹಾಕಿದ ಕೂಡಲೇ, ತಂತುಕಗಳಿಂದ ಕ್ಯಾಲ್ಸಿಯಮ್ ಅಯಾನುಗಳ ವಿಸರ್ಜನೆಯಾಗಿ, ಟ್ರೊಫೊನಿನ್–ಟ್ರೊಫೊಮಯೊಸಿನ್ ತಡೆ ಮತ್ತೆ ನಿರ್ಮಾಣವಾಗಿ ಸ್ನಾಯು ಯಥಾಸ್ಥಿತಿಗೆ ಮರಳುವುದು. ಸ್ನಾಯುಸಂಕೋಚನಕ್ಕೆ ಅಗತ್ಯವಾದ ಶಕ್ತಿ ಎಟಿಪಿ ಜಲವಿಚ್ಛೇದನೆಯಿಂದ ಲಭಿಸುವುದು.

ಸಂಕೋಚನದ ವೇಳೆ ಸ್ನಾಯುತಂತುಗಳಲ್ಲಿ ಹಲವು ಬದಲಾವಣೆಗಳಾಗುವುವು. A ಪಟ್ಟಿಯ ಮಂದ ಎಳೆಗಳು (ಫಿಲಮೆಂಟ್ಸ್) ಮಯೊಸಿನ್ನಿನಿಂದ ತಳ್ಳಗಿರುವ I ಪಟ್ಟಿಗಳ ಎಳೆಗಳು ಆಕ್ಟಿನ್ನಿನಿಂದ ರಚಿತವಾಗಿವೆ. ಸ್ನಾಯುವು ಸಂಕೋಚನ ಸ್ಥಿತಿಯಲ್ಲಿ ಇರುವಾಗ ಅಡ್ಡಕೊಂಡಿಗಳ (ಕ್ರಾಸ್‌ಲಿಂಕ್ಸ್) ಸರಣಿಗಳು ಮಯೊಸಿನ್ ಮತ್ತು ಆಕ್ಟಿನ್ ಪ್ರೋಟೀನುಗಳನ್ನು ಸೇರಿಸಿ ಆಕ್ಟೊಮಯೊಸಿನ್ ಸಂಕೀರ್ಣವನ್ನು ಉಂಟುಮಾಡುತ್ತವೆ. ಸಂಕೋಚನದಲ್ಲಿ A ಮತ್ತು I ಪಟ್ಟಿಗಳ ಎಳೆಗಳು ಒಂದರ ಮೇಲೊಂದು ಜಾರುವುವು. ಈ ಜಾರುವ ಪ್ರಕ್ರಿಯೆಯಲ್ಲಿ ಅಡ್ಡಕೊಂಡಿಗಳು ಮುರಿಯುತ್ತಿರುತ್ತವೆ ಮತ್ತು ಪುನಃ ನಿರ್ಮಿತವಾಗುತ್ತಿರುತ್ತವೆ. ಪ್ರಕ್ರಿಯೆಯಲ್ಲಿ ಬಿಡಿಸಿಕೊಂಡ ಅಡ್ಡಕೊಂಡಿಗಳು ಸ್ವೇಚ್ಛೆಯಾಗಿ ತೂಗಾಡುತ್ತ ಮುಂದಿನ ಎಳೆಯಲ್ಲಿ ಹೊಸ ಸ್ಥಾನಕ್ಕೆ ತಗುಲಿಕೊಳ್ಳುತ್ತವೆ. ಕ್ರಮೇಣ ಅವು ನೇರವಾಗಿ ಎರಡು ಎಳೆಗಳನ್ನು ತಮ್ಮೆಡೆಗೆ ಎಳೆದುಕೊಂಡು ಮೊದಲಿನಂತೆ ಲಂಬಸ್ಥಿತಿಗೆ ಮರಳುವುವು. ಸ್ನಾಯುಸಂಕೋಚನ ವೇಳೆಯಲ್ಲಾಗುವ ಬದಲಾವಣೆಗಳನ್ನು ಜೀವಭೌತವಿಜ್ಞಾನಿಗಳು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಹಾಯದಿಂದ ಅರ್ಥಮಾಡಿಕೊಂಡಿದ್ದಾರೆ.

ಕೇಳುವಿಕೆಯ ಅಥವಾ ಧ್ವನಿಕ ಸಂಜ್ಞೆಗಳ(ಆಕೌಸ್ಟಿಕಲ್ ಸಿಗ್ನಲ್ಸ್) ಗ್ರಹಣಕ್ಕೆ ಸಂಬಂಧಪಟ್ಟ ಅಧ್ಯಯನವು ಧ್ವನಿವಿಜ್ಞಾನದ ಹಾಗೂ ಸಂವೇದಿ ಶರೀರವಿಜ್ಞಾನದ (ಸೆನ್ಸರಿ ಫಿಸಿಯಾಲಜಿ) ಒಂದು ಗಮನಾರ್ಹ ಶಾಖೆ. ಶ್ರವಣಾತೀತ ಅಲೆಗಳನ್ನು (ಅಲ್ಟ್ರಾಸಾನಿಕ್ ವೇವ್ಸ್) ಒಳತೂರುವ (ಪ್ರೋಬ್) ಮತ್ತು ವಿಕ್ಷೋಭೆ (ಪರ್ಟರ್ಬೇಷನ್) ಉಂಟುಮಾಡುವ ಕಾರಕವಾಗಿ ಅನೇಕ

ಪ್ರಯೋಗಗಳಲ್ಲಿ ಬಳಸಿಕೊಂಡು ಅಭಿಜಾತ (ಕ್ಲಾಸಿಕಲ್) ಅಧ್ಯಯನ ಕ್ಷೇತ್ರಗಳನ್ನು ವಿಸ್ತರಿಸಲಾಗಿದೆ. ಬಾವಲಿಗಳು ತಮ್ಮ ಎರೆಗಳ ಇರವನ್ನು ಗುರುತಿಸಲು ಉಪಯೋಗಿಸುವ ಶ್ರವಣಾತೀತ ಕೀಚಲುಗಳನ್ನು ಕೆಲವು ಬಗೆಯ ಪತಂಗಗಳು ಕೇಳಬಲ್ಲವು. ವಾರ್ತೆಯನ್ನು ಕಿವಿಯ ಎರಡು ತಂತುಗಳು ಕೇಂದ್ರ ನರವ್ಯವಸ್ಥೆಗೆ ರವಾನಿಸುತ್ತವೆ. ತಂತುಗಳನ್ನು ಆಯ್ದು (ಟ್ಯಾಪ್ಪಿಂಗ್) ಸಂದೇಶವನ್ನು ತಿಳಿಯಬಹುದು.

ಮಿದುಳಿನ ಚಟುವಟಿಕೆಯ ವಿದ್ಯುತ್ ಅಲೆ ಪ್ರರೂಪದ (ವೇವ್ ಪ್ಯಾಟರ್ನ್) ಅಧ್ಯಯನಕ್ಕೆ ಎಲೆಕ್ಟ್ರೋಎನ್ಸೆಫಲೋಗ್ರಫಿಯಿಂದ ಸಹಾಯವಾಗಿದೆ. ಈ ತಂತ್ರವನ್ನು ಮೊದಲು ಉಪಯೋಗಿಸಿದಾತ ಜರ್ಮನಿಯ ಮನೋರೋಗ ವಿಜ್ಞಾನಿ ಹ್ಯಾನ್ಸ್ ಬರ್ಗರ್. ವ್ಯಕ್ತಿಯ ನೆತ್ತಿಗೆ ಎಲಿಕ್ಟ್ರೋಡುಗಳನ್ನು ಲಗತ್ತಿಸಿ ಮಿದುಳಿನ ಚಟುವಟಿಕೆಯ ಪ್ರರೂಪವನ್ನು ಕಾಗದದ ಮೇಲೆ ಲೇಖಿಸಲಾಗುವುದು. ಸಂಜ್ಞೆಗಳನ್ನು ಸಾಮಾನ್ಯವಾಗಿ ಅವುಗಳಲ್ಲಿರುವ ವಿದ್ಯುತ್ ಸ್ಪಂದನದ ಆವರ್ತಾಂಕದ (ಫ್ರಿಕ್ವೆನ್ಸಿ) ಆಧಾರದ ಮೇಲೆ ವರ್ಗೀಕರಿಸಲಾಗುತ್ತದೆ. ಈ ವಿದ್ಯುದಾಂದೋಳನಗಳು (ಆಸಿಲೇಷನ್ಸ್) ಸೆಕೆಂಡಿಗೆ ೮–೧೩ ಚಕ್ರಗಳ ಪಟ್ಟಿಯಲ್ಲಿವೆ. ಇವುಗಳ ಗಾತ್ರ ಅಥವಾ ಪಾರ (ಆ್ಯಂಪ್ಲಿಟ್ಯೂಡ್) ೩೦ ವೋಲ್ಟಿನ ಮಿಲಿಯನ್ ಅಂಶದಷ್ಟು ಆವರ್ತಾಂಕ ಅಥವಾ ಪಾರ ನಿಯತವಾಗಿರುವುದಿಲ್ಲ. ಪ್ರತಿಯೊಂದು ವ್ಯಕ್ತಿಗೂ ಸಹ ಆವರ್ತಾಂಕದಲ್ಲಿ, ಪಾರದಲ್ಲಿ ವಿಶಿಷ್ಟವಾದ ಏರಿಳಿತಗಳ ಪ್ರರೂಪವಿದೆ. ಹೀಗೆ ಪ್ರತಿಯೊಬ್ಬರ ಮಿದುಳಿನ ವಿದ್ಯುತ್ ಪ್ರರೂಪ ಅವರ ರುಜುವಿನಷ್ಟೇ ವಿಶಿಷ್ಟವಾದದ್ದು. ಇದೇ ರೀತಿ ಎಲೆಕ್ಟ್ರೋಕಾರ್ಡಿಯೊಗ್ರಾಫಿಯಿಂದ ಹೃದಯದ ಚಟುವಟಿಕೆಯ ವಿದ್ಯುತ್ ಪ್ರರೂಪವನ್ನು ಲೇಖಿಸಿಕೊಳ್ಳಬಹುದು. ಎಲೆಕ್ಟ್ರೋಕಾರ್ಡಿಯೊಗ್ರಾಮುಗಳು ಹೃದಯಸಂಬಂಧ ರೋಗಗಳನ್ನು ಗುರುತಿಸುವಲ್ಲಿ ಹೆಚ್ಚು ಉಪಯುಕ್ತವಾಗಿವೆ.

ಜೀವವಿಜ್ಞಾನದಲ್ಲಿ ಪೊರೆಗಳನ್ನು ಭೌತರಾಸಾಯನಿಕ ದೃಷ್ಟಿಯಿಂದ ಅಧ್ಯಯನ ಮಾಡಲಾಗಿದೆ. ಕೋಶ ಪೊರೆಗಳ ಕೋಶದ ಹೊರಗೋಡೆಗಳು ಮಾತ್ರವಲ್ಲ ಅನೇಕ ಸಂದರ್ಭಗಳಲ್ಲಿ ಇವು ಕೋಶದ ಒಳಗಿನ ಸಂಕೀರ್ಣ ಪದರಗಳು ಹೌದು. ಕೆಲವು ಸಂದರ್ಭಗಳಲ್ಲಿ ಇವು ಸಂವೃತ ಚೀಲಗಳಂತಿರುವುವು. ಕೋಶದ ಒಳಕ್ಕೂ ಹೊರಕ್ಕೂ ವಸ್ತುಗಳನ್ನು ಸಾಗಿಸುವ ಆಯ್ದ ದ್ವಾರಗಳಾಗಿ ಕೋಶದ ಗೋಡೆಗಳು ವರ್ತಿಸುವುದರಿಂದ, ಅವು ಕೋಶದ ಚಟುವಟಿಕೆಗಳನ್ನು ನಿಯಂತ್ರಿಸುವುವು. (ನೋಡಿ:ಜೀವಕೋಶ)

ಆಯ್ದ ಈ ವಿಭಾಗಗಳ ಜೊತೆಗೆ ಶರೀರ ವೈಜ್ಞಾನಿಕ ಭೌತವಿಜ್ಞಾನವು ದೃಷ್ಟಿ ಮತ್ತು ದ್ಯುತಿಸಂಶ್ಲೇಷಣೆ, ವಿಕಿರಣ ಚಿಕಿತ್ಸೆ, ಆಧುನಿಕ ವೈದ್ಯಶಾಸ್ತ್ರ ಮತ್ತಿತರ ಪ್ರಮುಖ ಭಾಗಗಳ ಅಧ್ಯಯನವನ್ನೊಳಗೊಂಡಿದೆ.

ಅಣುಜೀವವಿಜ್ಞಾನ : ಕೋಶದಲ್ಲಿರುವ ಅಣುಗಳನ್ನು ಪರಿಶೀಲಿಸುವುದರ ಮೂಲಕ ಜೈವಿಕ ಕ್ರಿಯೆಗಳನ್ನು ಅರಿಯಲು ಅಣುಜೀವವಿಜ್ಞಾನ ಪ್ರಯತ್ನಿಸುವುದು. ಇದರ ತಳಪಾಯ ಜೀವರಸಾಯನವಿಜ್ಞಾನ ಮತ್ತು ತಳಿವಿಜ್ಞಾನ. ಇದರ ಹಲವಾರು ಬೆಳೆವಣಿಗೆಗಳಲ್ಲಿ ಭೌತವಿಜ್ಞಾನದ ಕೊಡುಗೆ ಅಪಾರ. ಕೋಶೀಯ ವ್ಯವಸ್ಥೆಗಳ ಅಣುಜೀವವಿಜ್ಞಾನದ ಅಧ್ಯಯನಕ್ಕೆ : ಪ್ರೋಟೀನ್, ನ್ಯೂಕ್ಲಿಯಿಕ್ ಆಮ್ಲ, ಕಾರ್ಬೋಹೈಡ್ರೇಟ್ ಮತ್ತು ಲಿಪಿಡುಗಳಿಂದ ಕೋಶಗಳ ಸಂಯೋಜನೆ, ಎಟಿಪಿ ಹಾಗೂ ಈ ಬೃಹದಣುಗಳ ಮತ್ತು ಅವುಗಳ ಘಟಕ ಮಾನೊಮರುಗಳ ಸವಿವರ ರಚನೆ ಆಧಾರ. ಕೋಶದಲ್ಲಿರುವ ಅಣುಗಳ ಜೈವಿಕ ಸಂಶ್ಲೇಷಣೆಯಲ್ಲಿ ಎಟಿಪಿಯ ಪಾತ್ರ ದೊಡ್ಡದು. ದೇಹದಲ್ಲಿ ಆಹಾರ ಪಚನವಾದಾಗ ಬಿಡುಗಡೆಯಾದ ಶಕ್ತಿ ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಗೊಂಡು ಎಟಿಪಿ ಅಣುವಿನಲ್ಲಿ ದಾಸ್ತಾನುಗೊಳ್ಳುತ್ತದೆ.

1953 ರಲ್ಲಿ ಜೆ.ಡಿ.ವಾಟ್ಸನ್ ಮತ್ತು ಎಫ್.ಎಚ್.ಸಿ.ಕ್ರಿಕ್ ಎಂಬವರು ಡಿಎನ್ಎ ಅಣುರಚನೆಯನ್ನು ಸೂಚಿಸಿ, ಅಣು ಜೀವವಿಜ್ಞಾನದ ಮತ್ತೊಂದು ಕ್ರಾಂತಿಕಾರಕ ಅಧ್ಯಾಯವನ್ನು ಆರಂಭಿಸಿದರು. ಡಿಎನ್ಎ ಯನ್ನು ಒಂದು ಒಂಟಿ ಎಳೆಯ ಬಹ್ವಂಗಿ (ಪಾಲಿಮರ್) ಅಲ್ಲ. ಅದಕ್ಕೆ ಎರಡೆಳೆಯ ಬಹ್ವಂಗಿಯ ರೂಪವಿದೆ. ಪ್ರತ್ಯಾಮ್ಲಗಳು ಆಯ್ದ ಒಂದು ವಿಶಿಷ್ಟ ರೀತಿಯಲ್ಲಿ ಜೋಡಿಸಿಕೊಂಡಿವೆ. ಅಂದರೆ, ತೈಮೀನಿನೊಂದಿಗೆ ಅಡೆನೀನ್ ಮತ್ತು ಸೈಟೊಸೀನಿನೊಂದಿಗೆ ಗ್ವಾನೀನ್ ಜೋಡಿಯಾಗಿರುತ್ತವೆ ಎಂದು ಸೂಚಿಸಿದರು. ಸ್ಫಟಿಕವಿಜ್ಞಾನದಿಂದ ದೊರೆತ ಮಾಹಿತಿಯಂತೆ ಡಿಎನ್ಎ ದ್ವಿಕುಂಡಲಿನಿಯಲ್ಲಿ (ಡಬಲ್ ಹೆಲಿಕ್ಸ್) ಅಂತರ ಎಳೆದೂರ ಒಂದು ಪ್ಯೂರೀನ್ ಮತ್ತು ಪಿರಮಿಡೀನ್ ಜೋಡಣೆಗೆ ಮಾತ್ರ ಸಾಕಾಗುವಷ್ಟಿರುತ್ತದೆ. ಇದರ ಆಧಾರದ ಮೇಲೆ ವಾಟ್ಸನ್ ಮತ್ತು ಕ್ರಿಕ್ ಡಿಎನ್ಎಯ ಭೌತಿಕ ರಚನೆ ಕಂಡು ಹಿಡಿದರು.

ಪ್ರತಿ ಜೀವಿಯ ಡಿಎನ್ಎಯ ಪ್ರತ್ಯಾಮ್ಲಗಳ ಶ್ರೇಣಿಯಲ್ಲಿ (ಸೀಕ್ವೆನ್ಸ್) ತಳಿಮಾಹಿತಿ (ಜೆನೆಟಿಕ್ ಇನ್‌ಫರ್ಮೇಶನ್) ಅಡಗಿರುವುದನ್ನು ಕಂಡು ಹಿಡಿದರು. ಆದರೆ, ಅನೇಕ ವೈರಸ್ಸುಗಳು ತಳಿಮಾಹಿತಿಯನ್ನು ಸಂಕೇತಿಸಲು ಡಿಎನ್ಎಯನ್ನು ಬಳಸುತ್ತವೆ. ವಿಭಾಗವಾಗುತ್ತಿರುವ ಕೋಶ ತನ್ನೆರಡೂ ಮರಿಕೋಶಗಳಿಗೆ ತನ್ನಲ್ಲಿರುವ ತಳಿವಸ್ತುವಿನ (ಜೆನೆಟಿಕ್ ಮೆಟೀರಿಯಲ್) ಪ್ರತಿಕೃತಿಗಳನ್ನು ರವಾನಿಸುತ್ತವೆ. ಡಿಎನ್ಎ ಅಣುರಚನೆ ಈ ಪ್ರಕ್ರಿಯೆಯನ್ನು ಅರ್ಥಪೂರ್ಣವಾಗಿ ವಿವರಿಸುವುದು ಎಂದೂ ವಾಟ್ಸನ್ ಮತ್ತು ಕ್ರಿಕ್ ಸ್ಪಷ್ಟಪಡಿಸಿದರು.

ಡಿಎನ್ಎಯ ದ್ವಿಪ್ರತೀಕರಣಗೊಂಡಾಗ ಅದರ ಎರಡು ಎಳೆಗಳು ಪ್ರತ್ಯೇಕಗೊಳ್ಳುತ್ತವೆ. ಡಿಎನ್ಎಯು ಪಾಲಿಮರೇಸ್ ಕಿಣ್ವದ ನೆರವು ಪಡೆದು ಪ್ರತಿಯೊಂದು ಎಳೆಯೂ ಕೋಶದಲ್ಲಿರುವ ಡೀಆಕ್ಸಿರೈಬೊನ್ಯೂಕ್ಲಿಯೊಟೈಡ್ ಟ್ರೈಫಾಸ್ಫೇಟುಗಳ ಸಂಚಯನದಿಂದ ತನ್ನ ಪ್ರತ್ಯಾಮ್ಲದ ಪೂರಕ ಪ್ರತ್ಯಾಮ್ಲವನ್ನು ಆಯ್ದುಕೊಳ್ಳುತ್ತದೆ. ಅಂದರೆ ಎಳೆಗೆ ಬಂಧಿಸಲ್ಪಟ್ಟ ತೈಮೀನಿನೊಂದಿಗೆ ಮಾತ್ರ ಮುಕ್ತ ಅಡಿನೈನ್, ಸೈಟೋಸೀನಿನೊಂದಿಗೆ ಮಾತ್ರ ಮುಕ್ತ ಗ್ವಾನೀನ್ ಜೊತೆಗೂಡಬಲ್ಲುದು. ನಂತರ ಫಾಸ್ಫೇಟ್ ಎಸ್ಟರ್ ಬಂಧಗಳು ರೂಪಗೊಂಡು ಡಿಎನ್ಎ ಬಹ್ವಂಗೀಕೃತವಾಗುವುದು. ಫಲಿತಾಂಶವಾಗಿ ಪ್ರತಿಯೊಂದು ಮೂಲ ಕುಂಡಲಿನಿಗೆ ಸರ್ವಸಮವಾಗಿರುವಂಥ ಮತ್ತು ಪ್ರತಿಯೊಂದೂ ಹಳೆಯ ಹಾಗೂ ಹೊಸ ಎಳೆಯನ್ನೂ ಪಡೆದಿರುವಂಥ ಎರಡು ದ್ವಿಕುಂಡಲಿನಿಗಳು ಲಭಿಸುತ್ತವೆ. ಕೋಶ ವಿಭಜನೆಯಲ್ಲಿ ತಳಿಮಾಹಿತಿ ನಿರಂತರವಾಗಿರುವುದನ್ನು ರಾಸಾಯನಿಕ ಆಧಾರದ ಮೇಲೆ ವಿವರಿಸಲಾಗಿದೆ. ವಾಟ್ಸನ್–ಕ್ರಿಕ್ ಸಿದ್ಧಾಂತ ಆಧುನಿಕ ಜೀವವಿಜ್ಞಾನದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿದೆ. (ನೋಡಿ: ಡಿಎನ್ಎ)

3. ವಿಕಿರಣ ಜೀವವಿಜ್ಞಾನ : ಜೀವಿಗಳ ಮೇಲೆ ಕ್ಷ–ಕಿರಣಗಳಂಥ ಅಯಾನೀಕರಿಸುವ ವಿಕಿರಣಗಳಿಂದ ಆಗುವ ಪರಿಣಾಮಗಳ ಅಧ್ಯಯನವೇ ವಿಕಿರಣ ಜೀವವಿಜ್ಞಾನ. ಕೋಶೀಯ ಚಯಾಪಚಯದ ಮೇಲೆ ದೃಗ್ಗೋಚರ ಬೆಳಕಿನ ಪ್ರಭಾವದಿಂದ ತೊಡಗಿ ಇಡೀ ಜೀವಿಗಳ ಮೇಲೆ ವಿಶ್ವಕಿರಣಗಳ ಪರಿಣಾಮದವರೆಗೆ ವಿಕಿರಣಜೀವವಿಜ್ಞಾನದ ವ್ಯಾಪ್ತಿ ಇದೆ.

ಸಮಕಾಲೀನ ವಿಕಿರಣ ಜೀವವಿಜ್ಞಾನ ಮುಖ್ಯವಾಗಿ ಮೂರು ಅಧ್ಯಯನ ಕ್ಷೇತ್ರಗಳಿಗೆ ಸಂಬಂಧಿಸಿದೆ : 1. ಜೀವಂತ ವ್ಯವಸ್ಥೆಗಳ ಮೇಲೆ ವಿವಿಧ ಬಗೆಯವ ವಿಕಿರಣಗಳ ಪರಿಣಾಮ. 2. ಅಯಾನೀಕರಿಸುವ ವಿಕಿರಣಗಳಿಂದ ಜೈವಿಕ ವಸ್ತುಗಳಲ್ಲಿ ಉಂಟಾಗುವ ಭೌತ ಬದಲಾವಣೆಗಳು, 3. ಜೀವಂತ ವ್ಯವಸ್ಥೆಗಳ ರಚನೆ ಮತ್ತು ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು ಅಯಾನೀಕರಿಸುವ ವಿಕಿರಣಗಳನ್ನು ಅನ್ವೇಷಕವಾಗಿ, ಕ್ಷೋಭೆಕಾರಕವಾಗಿ ಉಪಯೋಗಿಸುವುದು.

ಜೀವಿಯ ಮೇಲೆ ವಿಕಿರಣದ ಪ್ರಭಾವ : ಒಂದು ಪ್ರಾಣಿಯನ್ನು ವಿಕಿರಣಕ್ಕೆ (ಇರ್ರೇಡಿಯೇಷನ್) ಒಡ್ಡಿದಾಗ ತತ್‌ಕ್ಷಣ ಗಮನಾರ್ಹ ಪರಿಣಾಮ ಕಾಣುವುದಿಲ್ಲ. ಆದರೆ 400 R (= ರಾಂಟಜನ್) ಕ್ಕಿಂತ ಹೆಚ್ಚಿನ ವಿಕಿರಣಕ್ಕೆ ಈಡುಮಾಡಿದಾಗ, ಕೆಲವು ದಿವಸಗಳ ಬಳಿಕ ಸಾವಿನ ಸಂಖ್ಯೆಯಲ್ಲಿ ಹೆಚ್ಚಳ ಕಾಣಿಸಿಕೊಳ್ಳುತ್ತದೆ. ಸರಾಸರಿ 500 R ವಿಕಿರಣದ ಪರಿಮಿತಿಯನ್ನು ದಾಟಿದಾಗ, ಜೀವಿಯ ಸಾವು ಖಂಡಿತ. ಬ್ಯಾಕ್ಟೀರಿಯ, ಯೀಸ್ಟ್ ಮುಂತಾದವುಗಳಲ್ಲಿರುವ ಚಿಕ್ಕ ಕೋಶಗಳನ್ನು ವಿವಿಧ ಮೊತ್ತದ ವಿಕಿರಣಕ್ಕೆ ಒಡ್ಡಿದಾಗ ಜೀವದಿಂದ ಉಳಿಯುವುಗಳ ಸಂಖ್ಯೆ ಘಾತೀಯವಾಗಿ (ಎಕ್ಸ್‌ಪೊನೆನ್ಶಿಯಲಿ) ಬದಲಾಗುವುದು. ಉನ್ನತ ದರ್ಜೆಯ ಜೀವಿಗಳಲ್ಲಿ ಈ ಸಂಖ್ಯೆ ನಿರ್ಮಿಸುವ ವಕ್ರರೇಖೆಗಳು ಅವಗ್ರಹರೂಪಿ (ಸಿಗ್ಮಾಯ್ಡ್) ಆಗಿರುತ್ತವೆ. ಪ್ರತಿಯೊಂದು ಕೋಶದ ಮೇಲೆ ಉಂಟಾಗುವ ಪ್ರತಿಕ್ರಿಯೆ ಒಂದು ಪ್ರಾಥಮಿಕ ಘಟನೆಯಿಂದ (ಪ್ರೈಮರಿ ಇವೆಂಟ್) ಆಗಿದ್ದರೆ, ಆಗ ಘಾತೀಯ ರೇಖೆಗಳು ನಿರ್ಮಿತವಾಗುವುವು. ಪ್ರತಿಕ್ರಿಯೆ ಬಹುಘಟನೆಗಳಿಂದಾಗಿದ್ದರೆ ಅವಗ್ರಹರೂಪ ರೇಖೆ ಉಂಟಾಗುತ್ತದೆ.

ವಿಕೃತ್ಯುತ್ಪತ್ತಿ (ಮ್ಯುಟಜೆನಿಸಸ್) : ವೈರಸ್ಸುಗಳನ್ನು ಬಿಟ್ಟ ಮಿಕ್ಕ ಜೀವಿಗಳ ಪೈಕಿ ಹೆಚ್ಚಿನವುಗಳಲ್ಲಿ ಅಯಾನೀಕರಿಸುವ ವಿಕಿರಣಗಳಿಂದ ವಿಕೃತಿಗಳನ್ನು (ಮ್ಯುಟೇಷನ್ಸ್) ಉಂಟುಮಾಡುತ್ತವೆ. ಇಂಥ ವಿಕೃತಿಗಳಲ್ಲಿ ಹೆಚ್ಚಿನವು ಮಾರಕ.

ಕೋಶ ವಿಭಾಗೀಕರಣದಲ್ಲಿ ವಿಳಂಬ ಮತ್ತು ಕ್ರೊಮೋಸೋಮ್ ಒಡೆತ : ಅಯಾನೀಕರಿಸುವ ವಿಕಿರಣಗಳಿಂದ ಕ್ರೊಮೋಸೋಮ್ ಒಡೆತಗಳನ್ನೊಳಗೊಂಡಂತೆ ಅನೇಕ ಕ್ರೊಮೋಸೋಮ್ ಅಪಸರಣೆಗಳು ಉಂಟಾಗುತ್ತವೆ. ಒಡೆದ ವಿಭಾಗಗಳು ಮತ್ತೆ ಕೊಡುತ್ತವೆ. ಇವು ಕೂಡದಿದ್ದಾಗ, ಜೀನ್ ಸಹಿತ ಕ್ರೊಮ್ಯಾಟಿನ್ ನಾಶವಾಗಿ, ಕೊರತೆ ಉಂಟಾಗುತ್ತದೆ. ಆಕ್ಸಿಜನ್ನಿನ ಹಾಜರಿಯಲ್ಲಿ ಕ್ರೊಮೋಸೋಮ್ ಒಡೆತ ಇಮ್ಮಡಿಯಾಗುತ್ತದೆ. ಅಯಾನೀಕರಿಸುವ ವಿಕಿರಣಗಳಿಂದ ಮೈಟೋಟಿಕ್ ಚಟುವಟಿಕೆ ತೀವ್ರವಾಗಿ ಕಡಿಮೆಯಾಗುತ್ತದೆ. ವಿಭಾಗೀಕರಣ ತಡವಾದ ಕೋಶಗಳು ಸಾಮಾನ್ಯ ಗಾತ್ರಕ್ಕಿಂತ ಹಲವಾರು ಪಟ್ಟು ದೊಡ್ಡದಾದ ದೈತ್ಯಕೋಶಗಳಾಗಿ ಬೆಳೆಯುತ್ತವೆ.

ಬೃಹದಣುಗಳ ಮೇಲೆ ಕ್ರಿಯೆ : ಪ್ರಮುಖ ಜೈವಿಕ ಬೃಹದಣುಗಳೆಲ್ಲವು ಅಯಾನೀಕರಿಸುವ ವಿಕಿರಣಗಳಿಂದ ಪ್ರಭಾವಿತವಾಗಿವೆ. ವಿಕಿರಣದಿಂದ ಉತ್ಪನ್ನವಾದ ಹಲವೇ ರ್‍ಯಾಡಿಕಲುಗಳು ಡಿಎನ್‌ಎ, ಆರ್‌ಎನ್‌ಎ ಅಥವಾ ಪ್ರೋಟೀನುಗಳನ್ನು ನಿಷ್ಪಟುಗೊಳಿಸಬಲ್ಲವು. ಕಿಣ್ವಗಳಲ್ಲಿ (ಪ್ರೋಟೀನುಗಳಲ್ಲಿ) ಡೈಸಲ್ಫೈಡ್ ಬಂಧ ಬಿಚ್ಚಿಕೊಳ್ಳುವುದು. ನ್ಯೂಕ್ಲಿಯಿಕ್ ಆಮ್ಲದಲ್ಲಿ ಅಣುಗಳ ಒಡೆತ ಮತ್ತು ಅಡ್ಡಬಂಧಗಳು ಏರ್ಪಡುವುದನ್ನು ಗಮನಿಸಲಾಗಿದೆ. ವಿಕಿರಣದ ಬಳಿಕ ಸ್ವಲ್ಪಮಟ್ಟಿಗೆ ಕೋಶೀಯ ಚಯಾಪಚಯ ಕಡಿಮೆ ಆಗುತ್ತದೆ. ಪ್ರೋಟೀನ್ ಸಂಶ್ಲೇಷಣೆ ಮತ್ತು ರೈಬೊಸೋಮ್ ಜೋಡಣೆಯನ್ನು ಅಯಾನೀಕರಿಸುವ ವಿಕಿರಣಗಳು ಕುಂಠಿತಗೊಳಿಸುತ್ತವೆ. ವಿಕಿರಣದಿಂದ ಕೋಶದ ಗೋಡೆಗಳಿಗೂ ರಾಚನಿಕ ಊತಕಗಳಿಗೂ (ಸ್ಟ್ರಕ್ಚರಲ್ ಟಿಷ್ಯೂ) ಘಾಸಿಯಾಗುವುದು.

ವಿಕಿರಣಗಳ ಏಡಿಗಂತಿಜನಕ (ಕಾರ್ಸಿನೋಜೆನಿಕ್) ಪರಿಣಾಮ : ದೇಹದ ಮೇಲೆ ವಿಕಿರಣದಿಂದಾಗುವ ಅಪಾಯಗಳಲ್ಲಿ ಏಡಿಗಂತಿಯೂ ಒಂದು. ಬಹುತೇಕ ಪ್ರಾಣಿಗಳಲ್ಲಿ ವಿಕಿರಣಕ್ಕೆ ನೇರವಾಗಿ ಒಡ್ಡಿದ ಊತಕಗಳಲ್ಲಿ ಏಡಿಗಂತಿಯಾಗುತ್ತದೆ. ವಿಕಿರಣದ ಪರಿಣಾಮವಾಗಿ ವಿವಿಧ ಬಗೆಯ ಏಡಿಗಂತಿಗಳು ತಲೆದೋರುತ್ತವೆ. ಇವು ದೇಹದ ಯಾವ ಭಾಗ ವಿಕಿರಣಕ್ಕೆ ಒಡ್ಡಿದೆ ಎನ್ನುವುದನ್ನು ಅವಲಂಬಿಸಿದೆ. ಇಡೀ ದೇಹವನ್ನು ವಿಕಿರಣಕ್ಕೆ ಒಳಪಡಿಸಿದಾಗ ಫುಪ್ಫುಸ ಗ್ರಂಥಿಗಂತಿ (ಲಂಗ್ ಅಡಿನೋಮ), ದುಗ್ಧಗಂತಿ (ಲಿಂಫೋಮ) ಮತ್ತು ಅಂಡಾಶಯ ಗಂತಿಗಳು (ಟ್ಯೂಮರ್ಸ್) ತಲೆದೋರುವುವು.

ವಿಕಿರಣ ಜೀವರಸಾಯನ ವಿಜ್ಞಾನ, ವಿಕಿರಣ ಕೋಶಿಕಾ ವಿಜ್ಞಾನ (ರೇಡಿಯೇಷನ್ ಸೈಟಾಲಜಿ), ವಿಕಿರಣ ಘಾಸಿ, ವಿಕಿರಣ ಸೂಕ್ಷ್ಮ ಜೀವವಿಜ್ಞಾನ, ವಿಕಿರಣದ ರಕ್ಷಣೆ, ವಿಕಿರಣ ಆಹಾರರಕ್ಷಣೆ ಇವೇ ಮುಂತಾದವು ಕೂಡ ವಿಕಿರಣ ಜೀವವಿಜ್ಞಾನಕ್ಕೆ ಸಂಬಂದಿಸಿಧ ವಿಷಯಗಳು.

ದ್ಯುತಿಸಂಶ್ಲೇಷಣೆ ದೃಗ್ವಿಕಿರಣಗಳು (ವಿಸಿಬಲ್ ರೇಡಿಯೇಷನ್ಸ್ ಅಲೆಯುದ್ದ 400–800 ಮೀ) ಹಾಗೂ ಜೀವಂತ ದ್ರವ್ಯಗಳ ನಡುವೆ ಆಗುವ ವರ್ತನೆಯ ಪ್ರಾಮುಖ್ಯವನ್ನು ತೋರಿಸುತ್ತದೆ. ದೃಗ್ಗೋಚರ ಬೆಳಕಿನ ಸಹಾಯದಿಂದ ಇಂಗಾಲದ ಡೈಆಕ್ಸೈಡ್ ಮತ್ತು ನೀರನ್ನು ಉಪಯೋಗಿಸಿಕೊಂಡು ಸಸ್ಯಗಳು ಇಂಗಾಲ ಸಂಯುಕ್ತಗಳನ್ನು ಉತ್ಪಾದಿಸುವ ವಿದ್ಯಮಾನವೇ ದ್ಯುತಿಸಂಶ್ಲೇಷಣೆ. ನೀರಿನ ವಿಭಜನೆಯಿಂದ ದೊರಕಿದ ಎಲೆಕ್ಟ್ರಾನುಗಳನ್ನು ಉಪಯೋಗಿಸಿಕೊಂಡು ಇಂಗಾಲದ ಡೈ ಆಕ್ಸೈಡ್ ಅಪಕರ್ಷಣೆ ಹೊಂದಿ ಪಿಷ್ಟಗಳ ಉತ್ಪಾದನೆಯಾಗುತ್ತದೆ. ಬೆಳಕಿನ ಶಕ್ತಿಯನ್ನು ಸಂಗ್ರಹಿಸಿ ಬಳಸಿಕೊಳ್ಳುವ ಕೋಶೀಯ ಅಂಕಣವೇ ಕ್ಲೋರೋಪ್ಲಾಸ್ಟುಗಳು. ದ್ಯುತಿಸಂಶ್ಲೇಷಣ ವ್ಯವಸ್ಥೆಯಲ್ಲಿ ಕ್ಲೋರೋಫಿಲ್ ಬೆಳಕನ್ನು ಸಂಗ್ರಹಿಸುವ ವರ್ಣಕ. ದ್ಯುತಿಸಂಶ್ಲೇಷಣೆಯ ಪ್ರಕ್ರಿಯೆಯಲ್ಲಿ ಬೆಳಕು ಮತ್ತು ಕತ್ತಲೆ ಕ್ರಿಯೆಗಳಿರುವುವು. ಬೆಳಕಿನ ಶಕ್ತಿಯನ್ನು ಹೀರಿ ಅದನ್ನು ರಾಸಾಯನಿಕ ರೂಪಕ್ಕೆ ಪರಿವರ್ತಿಸುವುದು ಬೆಳಕು ಕ್ರಿಯೆಯ ಪಾತ್ರ. ಬೆಳಕಿನ ಕ್ರಿಯೆಯ ಫಲಿತಗಳನ್ನು ಉಪಯೋಗಿಸಿಕೊಂಡು ಎಲೆಕ್ಟ್ರಾನ್ ಸಾಗಣೆ ಪ್ರಕ್ರಿಯೆಗಳನ್ನು ಒಳಗೊಂಡಿರುವುದು ಕತ್ತಲೆ ಕ್ರಿಯೆಗಳು. ಹೆಚ್ಚು ಶಕ್ತಿಯುತವಾದ ಎಟಿಪಿ ಅಣುವಿನ ಉತ್ಪಾದನೆಗೆ ಎಲೆಕ್ಟ್ರಾನ್ ಸಾಗಣೆ ಹೊಂದಿಕೊಂಡಿದೆ. ಇಂತಹ ಪ್ರಕ್ರಿಯೆಗಳನ್ನು ಜೀವಭೌತವಿಜ್ಞಾನದ ಸಹಾಯದಿಂದ ಅಭ್ಯಾಸಿಸಬಹುದು.

4. ಸೈದ್ಧಾಂತಿಕ ಜೀವಭೌತವಿಜ್ಞಾನ : ಇದನ್ನು ಗಣಿತೀಯ ಜೀವವಿಜ್ಞಾನ ಎನ್ನುವರು. ಅಭಿಜಾತ (ಕ್ಲ್ಯಾಸಿಕಲ್) ಭೌತ ಹಾಗೂ ರಸಾಯನ ವಿಜ್ಞಾನಗಳ ವಿಧಾನದಿಂದ ಜೈವಿಕ ಪ್ರಕ್ರಿಯೆಗಳಿಗೆ ಗಣಿತೀಯ ಸಮೀಕರಣಗಳ ಅನ್ವಯದಿಂದ ಸೈದ್ಧಾಂತಿಕ ಜೀವಭೌತವಿಜ್ಞಾನ ಹುಟ್ಟಿತು. ಒಂದು ನಿರ್ದಿಷ್ಟ ಜೈವಿಕ ಸನ್ನಿವೇಶಕ್ಕೆ ಹೊಂದುವಂತೆ ಗಣಿತಪದಗಳಲ್ಲಿ ಕೆಲವೊಂದು ಆಧಾರ ಭಾವನೆಗಳನ್ನು ರಚಿಸಿಕೊಳ್ಳುವುದು, ತರುವಾಯ ಗಣಿತ ತಂತ್ರಗಳನ್ನು ಬಳಸಿಕೊಂಡು ಈ ಆಧಾರ ಭಾವನೆಗಳಿಂದ ಅನುಗತವಾಗುವ ಫಲಿತಾಂಶಗಳನ್ನು ಪಡೆಯುವುದು ಮತ್ತು ಅವನ್ನು ಪ್ರಾಯೋಗಿಕವಾಗಿ ಪಡೆದ ಫಲಿತಾಂಶಗಳೊಡನೆ ಹೋಲಿಸುವುದು. ಇದು ಸೈದ್ಧಾಂತಿಕ ಜೀವ ಭೌತವಿಜ್ಞಾನದ ತಿರುಳು. ಪರಿಸರವಿಜ್ಞಾನ (ಇಕಾಲಜಿ), ಬೆಳವಣಿಗೆ, ನೆನಪು ಮತ್ತ ಕೋಶೀಯ ಚಯಾಪಚಯಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಬಿಡಿಸಲು ಈ ವಿಧಾನ ಅತ್ಯಂತ ಉಪಯುಕ್ತ. ಸಮೀಕರಣಗಳು, ನಾಮೋಗ್ರಾಮುಗಳು ಮತ್ತು ಆಲೇಖ ನಿರೂಪಣೆಗಳು (ಗ್ರಾಫಿಕಲ್ ರೆಪ್ರೆಸೆಂಟೇಷನ್) ಜೀವವಿಜ್ಞಾನವನ್ನು ಇನ್ನಷ್ಟು ನಿರ್ದಿಷ್ಟ ಹಾಗೂ ಸುವ್ಯಾಖ್ಯಿತ ರೂಪದಲ್ಲಿ ವಿವರಿಸಲು ನೆರವು ನೀಡಿವೆ. ಕ್ಷೇತ್ರಸ್ವರೂಪೀ ಪಟಗಳು (ಟೋಪೊಗ್ರಾಫಿಕ್ ಚಾರ್ಟ್ಸ್) ಮತ್ತು ಪ್ರತಿರೂಪಗಳು ಈ ದಿಶೆಯಲ್ಲಿ ಹೆಚ್ಚು ಉಪಯುಕ್ತವಾಗಿವೆ.

ಸೈದ್ಧಾಂತಿಕ ಜೀವಭೌತವಿಜ್ಞಾನವನ್ನು ನಾಲ್ಕು ಕ್ಷೇತ್ರಗಳಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು; 1. ಅಭಿಜಾತ ಗಣಿತೀಯ ಜೀವವಿಜ್ಞಾನ, 2. ಗಣಕಗಳ ಅನ್ವಯ ವಿಜ್ಞಾನ. 3. ವ್ಯವಸ್ಥಾ ಸಿದ್ಧಾಂತ. 4. ಜೀವ ವಿಜ್ಞಾನಕ್ಕೆ ಸೈದ್ಧಾಂತಿಕ ಭೌತವಿಜ್ಞಾನದ ಅನ್ವಯ. ಎ.ಜೆ. ಲೋಟ್ಕ ಮತ್ತು ಎನ್. ರಾಷಾವ್ಸ್ಕಿ ಎಂಬುವರು ಅಭಿಜಾತ ಜೀವವಿಜ್ಞಾನಕ್ಕೆ ಗಮನಾರ್ಹ ಕೊಡುಗೆ ಸಲ್ಲಿಸಿದ್ದಾರೆ. ಲೋಟ್ಕ ಮತ್ತು ವೋಲ್ಟೆರ್ರ ಎಂಬುವರು ಪ್ರಭೇದಗಳ (ಸ್ಪೀಷೀಸ್) ಅಂತರಕ್ರಿಯೆಯ ಒಂದು ಸಿದ್ಧಾಂತವನ್ನು ಬೆಳೆಸಿದ್ದಾರೆ. ಇದು ಜೀವಿಗಳಲ್ಲಿ ಆಹಾರಕ್ಕಾಗಿ ನಡೆಯುವ ಸ್ಪರ್ಧೆಯ ಅಥವಾ ಭಕ್ಷಕ ಮತ್ತು ಭಕ್ಷ್ಯಗಳ ನಡುವಿನ ಅಂತರಕ್ರಿಯೆಗಳ ಅತ್ಯಂತ ಸರಳೀಕೃತ ಪ್ರತಿರೂಪವನ್ನು ಅವಲಂಬಿಸಿದೆ. ಕೋಶೀಯ ವಿಭಜನೆಯನ್ನು ವಿವರಿಸಲು ಎನ್. ರಾಷಾವ್ಸ್ಕಿ ತನ್ನ ಸಂಶೋಧನೆಗಳಲ್ಲಿ ಕೋಶಕ್ಕೆ ಒಂದು ಪ್ರತಿರೂಪವನ್ನು ಸೂಚಿಸಿದ್ದಾನೆ. ಇದರಂತೆ ಕೋಶ ಒಂದು ಚಯಾಪಚಯಕಾರಿ ವ್ಯವಸ್ಥೆ. ಇದರಲ್ಲಿ ಚಯಾಪಚಯಕ ವಸ್ತುಗಳು ಒಳಕ್ಕೂ ಹೊರಕ್ಕೂ ಹರಿಯುತ್ತಿರುತ್ತವೆ. ಆ ವೇಳೆ ಅವು ವಿಸರಣೆಯ ಬಲಗಳನ್ನು (ಡಿಫ್ಯೂಶನ್ ಫೋರ್ಸಸ್) ಉಂಟು ಮಾಡುತ್ತವೆ. ವಿಶಿಷ್ಟ ಸಂದರ್ಭಗಳಲ್ಲಿ ಈ ಬಲಗಳು ಕೋಶವನ್ನು ಇಬ್ಭಾಗವಾಗಿ ಮಾಡುವುದನ್ನು ಗಣಿತೀಯವಾಗಿ ತೋರಿಸಲಾಗಿದೆ. ಪರಿಧೀಯ ಮತ್ತು ಕೇಂದ್ರೀಯ (ಪೆರಿಫಿರಲ್ ಅಂಡ್ ಸೆಂಟ್ರಲ್) ನರವ್ಯವಸ್ಥೆಗಳಿಗೆ ಸೂಕ್ತವಾದ ಗಣಿತೀಯ ಪ್ರತಿರೂಪಗಳನ್ನು ತಯಾರಿಸಲಾಗಿದೆ. ಭೌತಗಣಿತೀಯ ಪ್ರತಿರೂಪಗಳನ್ನು ರಚಿಸಿಕೊಂಡು, ಗಣಿತೀಯ ಜೀವವಿಜ್ಞಾನದ ಶಾಖೆಗಳಾದ ಕಲಿಕೆಯ ಸಿದ್ಧಾಂತ, ದೃಷ್ಟಿಯ ಸಿದ್ಧಾಂತ, ಉತ್ತೇಜನದ ಸಿದ್ಧಾಂತ, ನಾಡಿ ಅಲೆಗಳು, ರಕ್ತ ಪರಿಚಲನೆ, ಪ್ರಸರಣೆ ಮತ್ತು ಸಾಗಣೆ ಇವುಗಳ ಅಧ್ಯಯನದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ.

ಜೀವವೈದ್ಯಕೀಯ ವಿಜ್ಞಾನದಲ್ಲಿ ಗಣಕಗಳ ಬಳಕೆ ವ್ಯಾಪಕವಾಗಿ ಆರಂಭವಾಗಿದೆ. ಜೀವ ವಿಜ್ಞಾನದ ಅಧ್ಯಯನದಲ್ಲಿ ಸಿಗುವ ಅಪಾರ ದತ್ತಾಂಶ ಮತ್ತು ಸಂಕೀರ್ಣ್ತ ಅಂತರ ಸಂಬಂಧಗಳನ್ನು ವಿವೇಚಿಸುವುದರಲ್ಲಿ ಗಣಕಗಳ ಪಾತ್ರ ಹಿರಿದು. ಜೀವವಿಜ್ಞಾನದ ಸಮಸ್ಯೆಗಳನ್ನು ಗಣಕಗಳು ಪರಿಹರಿಸುವ ಬಗೆಯನ್ನು ಕೆಳಗೆ ವಿವರಿಸಿರಿವ ಉದಾಹರಣೆಯಿಂದ ತಿಳಿಯಬಹುದು. ರಕ್ತದ ವಿಸರಣೆಯನ್ನು ಎಂಬ ಅವಕಲ

$$^2C \qquad K \frac{\omega c}{\omega t}$$

ಸಮೀಕರಣದಿಂದ ನಿರೂಪಿಸಿ, ಇದರ ಆಧಾರದ ಮೇಲೆ ವಿದ್ಯುನ್ಮಂಡಲಗಳನ್ನು ರಚಿಸಬಹುದು. ವಿವಿಧ ಸಂದರ್ಭಗಳಲ್ಲಿ ತತ್ಸಮಾನ ವಿದ್ಯುನ್ಮಂಡಲದ ವೋಲ್ಟೇಜನ್ನು ಅಳೆದು, ಅನುಗುಣವಾದ ರಕ್ತನಾಳಗಳಲ್ಲಿ ರಕ್ತದ ನಡವಳಿಕೆಯನ್ನು ತಿಳಿಯಬಹುದು. ಅಂದರೆ ವೋಲ್ಟೇಜಿಗೂ ರಕ್ತದ ನಡವಳಿಕೆಗೂ ಗಣಿತೀಯ ಸಂಬಂಧವಿರುವುದನ್ನು ತಿಳಿಯಬಹುದು.

ವಿಸರಣೆಯ ಸಮೀಕರಣವನ್ನು ರಕ್ತನಾಳದ ಯಾವುದೇ ಪ್ರಾತಿನಿಧಿಕ ಉದ್ದಕ್ಕೆ ಅನ್ವಯಿಸಬಹುದು. ಅನೇಕ ಸರಳ ಧಾತುಗಳನ್ನು ಒಂದು ವ್ಯವಸ್ಥೆಯಲ್ಲಿ ಅಳವಡಿಸುವ ಮತ್ತು ಇದಕ್ಕೆ ಅಗತ್ಯವಾದ ಅನೇಕ ಘಟಕ ಸಮೀಕರಣಗಳನ್ನು ಬಳಸುವ ಗಣಕಗಳು ದೊಡ್ಡ ದೊಡ್ಡ ಜೈವಿಕ ವ್ಯವಸ್ಥೆಯ ನಡವಳಿಕೆಯನ್ನು ತಿಳಿಯಲು ಸಹ ನೆರವು ನೀಡಿವೆ. ಇದರಿಂದ ಒಂದು ಪೂರ್ಣ ರಕ್ತನಾಳ ವ್ಯವಸ್ಥೆಯ ಪ್ರತಿರೂಪವನ್ನು ಗಣಕಗಳ ನೆರವಿನಿಂದ ಸಂಯೋಜಿಸಬಹುದು.

ಜೈವಿಕ ಸಮಸ್ಯೆಗಳನ್ನು ರೂಪ್ಯಕ ಪರಿದೃಷ್ಟಿಯಿಂದ (ಫಾರ್ಮಲ್ ಅಪ್ರೋಚ್) ಅರ್ಥಮಾಡಿಕೊಳ್ಳಬಹುದು. ಇದರ ಒಂದು ವಿಶಿಷ್ಟ ಉದಾಹರಣೆ ವ್ಯವಸ್ಥಾ ಸಿದ್ಧಾಂತ (ಸಿಸ್ಟಮ್ಸ್ ಥಿಯರಿ) ದಲ್ಲಿದೆ. ಒಂದು ಇಡೀ ವ್ಯವಸ್ಥೆಯ ಗುಣಗಳು ಘಟಕಗಳ ಗುಣಗಳಿಗೆ ಹೋಲಿಸಿದರೆ ಭಿನ್ನವಾಗಿರುವುದು ಸಾಧ್ಯ. ಇಂಥ ಪರಸ್ಪರ ಸಂಬಂಧವುಳ್ಳ ಘಟಕಗಳು ಜೀವವಿಜ್ಞಾನದಲ್ಲಿ ಯಥೇಚ್ಛವಾಗಿವೆ. ಉದಾಹರಣೆಗೆ ನ್ಯೂರಾನುಗಳ ಜಾಲ, ಜೀನ್‌ಗಳು ಸಂಗ್ರಹಗಳು, ಗುಂಪಿನಲ್ಲಿರುವ ವ್ಯಕ್ತಿಗಳು, ಸಮಷ್ಟಿಯಲ್ಲಿನ ಪ್ರಭೇದ ಇತ್ಯಾದಿ ಘಟಕಗಳನ್ನು (ಅಥವಾ ಬಿಡಿಭಾಗಗಳನ್ನು) ಸೈದ್ಧಾಂತಿಕವಾಗಿ ಅಧ್ಯಯನ ಮಾಡಿ, ಇಡೀ ವ್ಯವಸ್ಥೆಯ ಲಕ್ಷಣಗಳನ್ನು ಗುರ್ತಿಸಬಹುದು. ಸಾಮಾನ್ಯ ಗಣಿತಶಾಸ್ತ್ರದಿಂದ ಇಂಥ ವಿಶ್ಲೇಷಣೆ ಸಾಧ್ಯವಿಲ್ಲ. ವ್ಯವಸ್ಥಾ ಸಿದ್ಧಾಂತದಿಂದ ಮಾತ್ರ ಈ ಸಮಸ್ಯೆಗಳ ಪರಿಹಾರ ಸಾಧ್ಯ. ಮಾಹಿತಿ ಸಿದ್ಧಾಂತವನ್ನು (ಇನ್‌ಫರ್ಮೇಷನ್ ಥಿಯರಿ) ನರವ್ಯವಸ್ಥೆಯ ಅಧ್ಯಯನಕ್ಕೆ ಅಳವಡಿಸಲಾಗಿದೆ. ನರವ್ಯವಸ್ಥೆಯಲ್ಲಿ ಮುಖ್ಯವಾದ ಮಾಹಿತಿ ನರವೇಗಕ್ಕೆ ಸಂಬಂಧಿಸಿದ್ದು. ನರಾವೇಗದ ಹಾಜರಿ ಅಥವಾ ಗೈರುಹಾಜರಿ, ಮಾಹಿತಿಯ ಮುಖ್ಯ ಸಂದೇಶ. ಮಾಹಿತಿ ಸಿದ್ಧಾಂತವನ್ನು ನರವ್ಯವಸ್ಥೆಯ, ಯಾಂತ್ರಿಕ ವ್ಯವಸ್ಥೆಗಳ ಮತ್ತು ಪ್ರಸಾರದ ಸಮಸ್ಯೆಗಳಿಗೆ ಅನ್ವಯಿಸಬಹುದು.

1948ರಲ್ಲಿ ವೀನರ್ ಎಂಬಾತ ಸೈಬರ್ನೆಟಿಕ್ಸ್ ಎಂಬ ಆಧುನಿಕ ಗಣಿತವಿಜ್ಞಾನದ ವಿಭಾಗವನ್ನು ಸಾದರಪಡಿಸಿದ. ಇದರಿಂದ ಪ್ರಸಾರ ಸಿದ್ಧಾಂತವನ್ನು (ಕಮ್ಯುನಿಕೇಷನ್ ಥಿಯರಿ) ಯಂತ್ರಗಳಿಗೆ ಹಾಗೂ ಮಾನವನಿಗೆ ಅನ್ವಯಿಸುವುದು ಸಾಧ್ಯವಾಯಿತು. ವ್ಯವಸ್ಥಾ ನಿಯಂತ್ರಣದ ವಿಶ್ಲೇಷಣೆಯಲ್ಲಿ ಉಪಯೋಗಿಸುವ ಪುನರ್ನಿವಿಷ್ಟ (ಫೀಡ್ ಬ್ಯಾಕ್) ಭಾವನೆಗಳನ್ನು ಪ್ರಸಾರ ಸಿದ್ಧಾಂತ ಆಧರಿಸಿದೆ.

ಜೀವವಿಜ್ಞಾನಕ್ಕೆ ಸೈದ್ಧಾಂತಿಕ ಭೌತವಿಜ್ಞಾನದ ಅನ್ವಯ ಎರ್ವಿನ್ ಶ್ರೋಡಿಂಗರನ (1887–1961) ಅಧ್ಯಯನಗಳೊಡನೆ ಆರಂಭವಾಯಿತು. ಆತ ಕ್ವಾಂಟಮ್ ಬಲವಿಜ್ಞಾನವನ್ನೂ ಸಂಖ್ಯಾಕಲನೀಯ ಬಲವಿಜ್ಞಾನವನ್ನೂ (ಕ್ವಾಂಟಮ್ ಮೆಕ್ಯಾನಿಕ್ಸ್ ಅಂಡ್ ಸ್ಟ್ಯಾಟಿಸ್ಟಿಕಲ್ ಮೆಕ್ಯಾನಿಕ್ಸ್) ಕೋಶಗಳ ಕ್ರಿಯೆಗೆ ಹಾಗೂ ತಳಿಮಾಹಿತಿ ರವಾನೆಯ ಸಮಸ್ಯೆಗೆ ಅನ್ವಯಿಸಿದ್ದಾನೆ. ಜೀವಿಯ ಅವಕಾಶೀಯ ಗಡಿಯೊಳಗೆ ಸಂಭವಿಸುವ ಘಟನೆಗಳನ್ನು ಭೌತ ಹಾಗೂ ರಸಾಯನವಿಜ್ಞಾನಗಳ ಮೂಲಕ ವಿವರಿಸಬಹುದು. ಜೈವಿಕ ವಿದ್ಯಮಾನಗಳನ್ನು ವಿವರಿಸಲು ನೂತನ ಭೌತ ಪರಿಕಲ್ಪನೆಗಳ ನಿರೂಪಣೆ ಅಗತ್ಯವಾದೀತೆಂದು ಶ್ರೋಡಿಂಗರನ ಅಭಿಪ್ರಾಯ. ಏಕೆಂದರೆ ಜಡವಸ್ತು ಮತ್ತು ಜಡವ್ಯವಸ್ಥೆಯ ಭೌತವಿಜ್ಞಾನ ಜೀವಂತವ್ಯವಸ್ಥೆಗಳ ನಡವಳಿಕೆಯ ಎಲ್ಲ ಮುಖಗಳನ್ನೂ ವಿವರಿಸಲು ಸಾಕಾಗದಿರಬಹುದು.

ಉಪಕರಣ ನಿರ್ಮಾಣ ಮತ್ತು ಮಾಪನಗಳು : ಎಲೆಕ್ಟ್ರಾನ್ ಸೂಕ್ಷ್ಮದರ್ಶಕ, ಅಪಕೇಂದ್ರಕ ವಿಕಿರಣಪಟು ಗುಣಕ, ವಿವಿಧ ರೋಹಿತ ದ್ಯುತಿ ಮಾಪಕಗಳು (ಸ್ಪೆಕ್ಟ್ರೋಫೋಟೋಮೀಟರ್), ಆಂದೋಲನ ದರ್ಶಕ ಉಪಕರಣಗಳು ಜೈವಿಕ ವ್ಯವಸ್ಥೆಯನ್ನು ಅಧ್ಯಯನ ಮಾಡುವುದಕ್ಕೆ ಸಹಾಯಕವಾಗಿವೆ. ಕ್ರೊಮಟೋಗ್ರಫಿ, ಅಯಾನ್ ವಿನಿಮಯ, ವಿದ್ಯುತ್ ಕ್ಷೇತ್ರ ಚಲನೆ (ಎಲೆಕ್ಟ್ರೋಫೋರೆಸಿಸ್), ಸಮವಿದ್ಯುತ್ ನಾಭೀಕರಣ ತಂತ್ರಗಳ ನೆರವಿನಿಂದ ಜೈವಿಕ ಅಣುಗಳನ್ನು ಅಣುಮಟ್ಟಗಳಲ್ಲಿ ಅಭ್ಯಸಿಸುವುದು ಸಾಧ್ಯವಾಗಿದೆ. ಅದರಲ್ಲಿ, ಕ್ಷ–ಕಿರಣತಂತ್ರದ ಪಾತ್ರ ಹಿರಿದು. ಬೃಹದಣುಗಳಿಗೆ, ವಿಶೇಷತಃ ಪ್ರೋಟೀನುಗಳ ಮೇಲೆ ಇದರ ಅನ್ವಯ ತುಂಬ ಯಶಸ್ವಿಯಾಗಿದೆ. ಹೀಮೊಗ್ಲೋಬಿನ್, ಮಯೊಗ್ಲೋಬಿನ್ ಮತ್ತು ಲೈಸೊಝೋಮುಗಳೆಂಬ ಪ್ರೋಟೀನುಗಳ ರಚನೆಗಳನ್ನು ಬಿಡಿಸಲು ಕ್ಷ–ಕಿರಣ ತಂತ್ರವನ್ನು ಉಪಯೋಗಿಸಲಾಗಿದೆ. ಇದರಿಂದ ಈ ಪ್ರೋಟೀನುಗಳ ಮೂರು ಆಯಾಮಗಳ ರಚನೆಯ ಮಾಹಿತಿ ದೊರಕಿದೆ. ಬೇರೆ ಬೇರೆ ಆಕರಗಳಿಂದ ಪಡೆದ ತಂತುರೂಪದ ಡಿಎನ್‌ಎ ಮೇಲೆ ಕ್ಷ–ಕಿರಣಗಳನ್ನು ಹಾಯಿಸಿ ಅಧ್ಯಯನ ಮಾಡಲಾಗಿದೆ. ಕ್ಷ–ಕಿರಣ ತಂತ್ರ ಪ್ರಕಟಪಡಿಸುವ ಡಿಎನ್‌ಎ ಯ ದ್ವಿಕುಂಡಲಿನೀ ಪ್ರರೂಪ ಬಲು ನಿಧಾನವಾಗಿ ತಿರುಚಿಕೊಳ್ಳುವ ಕುಂಡಲಿನೀ ರಚನೆಯನ್ನು ಸೂಚಿಸುತ್ತದೆ. ಇದರ ಸೂತ್ರಾಂತರ (ಪಿಚ್) 34 Å ಮತ್ತು ಬಿಡಿ ನ್ಯೂಕ್ಲಿಯೊಟೈಡುಗಳ ಅಂತರ 3.4 Å. ಒಟ್ಟಾರೆ ವ್ಯಾಸ ಸು. 20 Å.

ಕ್ಷ–ಕಿರಣ ತಂತ್ರ ಸಕಲ ಸಮಸ್ಯೆಗಳನ್ನು ಬಗೆಹರಿಸಲಿಲ್ಲವಾದರೂ, ಕೆಲವು ಜೈವಿಕ ಅಣುಗಳ ರಚನೆಯ ಬಗ್ಗೆ ಅಭ್ಯಾಸಿಸಲು ಸಹಾಯಕ. ಏಕೆಂದರೆ ಎಲ್ಲ ಜೈವಿಕ ಅಣುಗಳು ಕ್ಷ–ಕಿರಣ ತಂತ್ರಕ್ಕೆ ಅಗತ್ಯವಾದ ಒಂಟಿ ಸ್ಫಟಿಕಗಳನ್ನು ಕೊಡುವುದಿಲ್ಲ. ಜೈವಿಕ ವ್ಯವಸ್ಥೆಗಳಲ್ಲಿ ಕಂಡುಬಂದ ಸ್ಫಟಿಕೀಯ ರಚನೆ ಮತ್ತು ವಾಸ್ತವಿಕ ಆಕಾರ ವಿವಾದಾಸ್ಪದ. ಜೈವಿಕ ವ್ಯವಸ್ಥೆಗಳಲ್ಲಿ ಅವಕಾಶೀಯ (ಸ್ಪೇಶಿಯಲ್) ಅಳವಡಿಕೆಯ ವಿಚಾರ ತಿಳಿಸುವ ಇತರ ತಂತ್ರಗಳಲ್ಲಿ ಸೂಕ್ಷ್ಮದರ್ಶಕೀಯ ವಿಧಾನಗಳು, ಅದರಲ್ಲೂ ಎಲೆಕ್ಟ್ರಾನ್ ಸೂಕ್ಷ್ಮದರ್ಶಕೀಯ ವಿಧಾನಗಳು ಸೇರಿವೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಪರಿಣಾಮಕಾರಿ ವಿಘಟನ ಸಾಮರ್ಥ್ಯ (ಎಫೆಕ್ಟಿವ್ ರಿಸಾಲ್ವಿಂಗ್ ಪವರ್) ದೃಕ್ ಸೂಕ್ಷ್ಮದರ್ಶಕದ್ದಕ್ಕಿಂತ ಹೆಚ್ಚು. ಇದು 5–10 Å ದರ್ಜೆಯಲ್ಲಿದೆ.

ಅಣ್ವಂತರ ಕ್ರಿಯೆಗಳನ್ನು ಅಧ್ಯಯನ ಮಾಡಲು ಬಳಸುತ್ತಿರುವ ಇತರ ಮುಖ್ಯ ತಂತ್ರಗಳೆಂದರೆ ಎನ್‌ಎಂಆರ್ (ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೊನೆನ್ಸ್, ನ್ಯೂಕ್ಲಿಯರ್ ಕಾಂತಾನುರಣನ) ಮತ್ತು ಎಲೆಕ್ಟ್ರಾನ್ ಸ್ಪಿನ್ ರೆಸೊನೆನ್ಸ್ (ಎಲೆಕ್ಟ್ರಾನ್ ಗಿರಕಿ ಅನುರಣನ), ರೇಡಿಯೋ ಆಟೋಗ್ರಫಿ, ವರ್ತುಳೀಯ ಡೈಕ್ರೊಯಿಸಮ್, ದೃಗಾವರ್ತಕ ಪ್ರಸರಣ (ಆಪ್ಟಿಕಲ್ ರೊಟೇಟರಿ ಡಿಸ್ಪರ್ಶನ್) ಮುಂತಾದವು. ಜೀವ ಪ್ರಕ್ರಿಯೆಗಳ ವಿವರವಾದ ಸ್ವರೂಪ ತಿಳಿಯಲು ಜೀವರಾಸಾಯನಿಕ, ರಾಸಾಯನಿಕ ಹಾಗೂ ಭೌತತಂತ್ರಗಳ ಸಮನ್ವಯ ಬೇಕಾಗಿರುವುದು ಸ್ಪಷ್ಟ.

ಈಚಿನ ಬೆಳವಣಿಗೆಗಳು ಮತ್ತು ಪ್ರಗತಿ : ಆಧುನಿಕ ಜೀವವಿಜ್ಞಾನದ ಎಲ್ಲ ವಿಭಾಗಗಳಲ್ಲಿ ಜೀವಭೌತವಿಜ್ಞಾನದ ವ್ಯಾಪಿಸಿದೆ. ಜೀವವೈದ್ಯಕೀಯ ಎಂಜಿನಿಯರಿಂಗ್, ಜೀವವಿಜ್ಞಾನದಲ್ಲಿ ಗಣಕಗಳ ಉಪಯೋಗ, ಪಥಲೇಖಕ (ಟ್ರೇಸರ್) ಹಾಗೂ ಸ್ವಯಂ ರೇಡಿಯೋ ಚಿತ್ರಣ (ಆಟೋ ರೇಡಿಯೋಗ್ರಾಫಿಕ್) ತಂತ್ರಗಳು, ವಿಕಿರಣ ಚಿಕಿತ್ಸೆ, ಸೈದ್ಧಾಂತಿಕ ಜೀವವಿಜ್ಞಾನ, ಪ್ರತಿದೀಪ್ತಿ (ಫ್ಲೂರೆಸೆಂಟ್) ಮತ್ತು ಗಿರಕಿ ತೂರಿಕೆಗಳನ್ನು ಉಪಯೋಗಿಸಿಕೊಂಡು ನಡೆಸಿದ ಪೂರೆ ಅಧ್ಯಯನಗಳು ಇತ್ತೀಚಿನ ಬಹುಶಾಸ್ತ್ರೀಯ ಬೆಳವಣಿಗೆಗಳು. ಜೀವವಿಕಾಸದಿಂದ ಹಿಡಿದು ತಳಿ ಎಂಜಿನಿಯರಿಂಗ್‌ವರೆಗಿನ ಜೈವಿಕ ವಿದ್ಯಮಾನಗಳನ್ನು ಅರ್ಥೈಸುವಲ್ಲಿ ಜೀವಭೌತವಿಜ್ಞಾನದ ಕೊಡುಗೆ ಗಮನಾರ್ಹ. ಸೈದ್ಧಾಂತಿಕ ಜೀವಭೌತವಿಜ್ಞಾನವು ಜೀವವಿಜ್ಞಾನದ ಒಂದು ಪ್ರಮುಖ ಅಂಗವಾಗಿದೆ. ಜೈವಿಕ ವಿದ್ಯಮಾನಗಳನ್ನು ಸಂಪೂರ್ಣವಾಗಿ ವಿವರಿಸುವಾಗ ನವ್ಯ ಭೌತ ಪರಿಕಲ್ಪನೆಗಳು ಆವಶ್ಯಕ. ಏಕೆಂದರೆ, ಶ್ರೋಡಿಂಗರ್ ಹೇಳಿದಂತೆ ಜಡ ವ್ಯವಸ್ಥೆಯ ಭೌತವಿಜ್ಞಾನ ಜೀವಂತ ವ್ಯವಸ್ಥೆಯ ವರ್ತನೆಯನ್ನು ವಿವರಿಸಲು ಸಮರ್ಥವಾಗಲಾರದು.

ಭಾರತದಲ್ಲಿ ಜೀವಭೌತವಿಜ್ಞಾನ : ಭಾರತದ ವಿದ್ಯಾಭ್ಯಾಸ ಕ್ರಮದಲ್ಲಿ, ಜೀವಭೌತವಿಜ್ಞಾನದ ಅಧ್ಯಯನ 1970 ರಿಂದೀಚೆಗೆ ಆರಂಭವಾಗಿದೆ. ಜೀವಭೌತವಿಜ್ಞಾನ ಅಂತರಶಾಸ್ತ್ರೀಯವಾಗಿರುವುದರಿಂದ ಈ ವಿಜ್ಞಾನದ ವ್ಯಾಪ್ತಿಯಲ್ಲಿ ಬರಬಹುದಾದ ಸಂಶೋಧನೆ ಮತ್ತು ಅಧ್ಯಯನಗಳು ರಸಾಯನವಿಜ್ಞಾನ, ಜೀವವಿಜ್ಞಾನ ಮತ್ತು ಭೌತವಿಜ್ಞಾನದ ಆಶ್ರಯದಲ್ಲಿ ಉಲ್ಲೇಖಿಸಲಾಗಿದೆ. ಸ್ನಾತಕೋತ್ತರ ಮಟ್ಟದಲ್ಲಿ ಸಂಶೋಧನೆ ಹಾಗೂ ಶಿಕ್ಷಣಕ್ಕೆ ಬೇಕಾಗುವ ಸೌಲಭ್ಯಗಳು ನವದೆಹಲಿಯ ಆಲ್ ಇಂಡಿಯ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಚಂಡೀಗಢದ ಪೋಸ್ಟ್ ಗ್ರ್ಯಾಜುಯೆಟ್ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಎಜುಕೇಶನ್ ಅಂಡ್ ರಿಸರ್ಚ್, ವಾರಾಣಸಿಯ ಕಾಲೇಜ್ ಆಫ್ ಮೆಡಿಕಲ್ ಸೈನ್ಸಸ್ ಅಂಡ್ ಪೋಸ್ಟ್ ಗ್ರ್ಯಾಜುಯೆಟ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಮೆಡಿಸಿನ್, ಮುಂಬಯಿಯ ಕ್ಯಾನ್ಸರ್ ರಿಸರ್ಚ್ ಇನ್ಸ್‌ಟಿಟ್ಯೂಟ್ ಸಂಸ್ಥೆಗಳಲ್ಲಿವೆ. ಮದ್ರಾಸ್ ವಿಶ್ವವಿದ್ಯಾಲಯದ ಸೆಂಟರ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಇನ್ ಫಿಸಿಕ್ಸ್ ಬಯೋಪಾಲಿಮರುಗಳ ಜೀವಭೌತವಿಜ್ಞಾನದ ಅಧ್ಯಯನ ನಡೆಸುತ್ತಿದೆ. ಈ ಸಂಸ್ಥೆಯ ಪ್ರಥಮ ನಿರ್ದೇಶಕರಾಗಿದ್ದ ಜಿ. ಎನ್. ರಾಮಚಂದ್ರನ್ ಅವರು ಪ್ರೋಟೀನುಗಳ ಮೂರು ಆಯಾಮದ ವಿನ್ಯಾಸವನ್ನು ಕುರಿತು ಫಲಪ್ರದವಾದ ಸಂಶೋಧನೆಗಳನ್ನು ನಡೆಸಿದ್ದಾರೆ. ಇವರ ಸಹೋದ್ಯೋಗಿಗಳು ಪಾಲಿಪೆಪ್ಟೈಡುಗಳ ಮಡಿಕೆಯ (ಫೋಲ್ಡಿಂಗ್) ವಿಚಾರವಾಗಿ ಗಮನಾರ್ಹ ಕೊಡುಗೆ ನೀಡಿದ್ದಾರೆ. ಬೆಂಗಳೂರಿನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಜೀವಭೌತವಿಜ್ಞಾನದ ಬಗ್ಗೆ ಸಂಶೋಧನೆ ನಡೆಯುತ್ತಿದೆ.

ನೊಬೆಲ್ ಪ್ರಶಸ್ತಿ ವಿಜೇತರುಗಳಾದ ಸಿ. ವಿ. ರಾಮನ್ ಮತ್ತು ಎಚ್. ಜಿ. ಕೋರಾನ ಅವರು ಜೀವಭೌತವಿಜ್ಞಾನಕ್ಕೆ ಕೊಡುಗೆ ಸಲ್ಲಿಸಿದ್ದಾರೆ. ರಾಮನ್ ಅವರು ವರ್ಣದೃಷ್ಟಿ ವಿದ್ಯಮಾನಗಳನ್ನು ಕುರಿತು ಸಂಶೋಧನೆ ನಡೆಸಿದರು. ಖೊರಾನ ಅವರು ಮೊತ್ತಮೊದಲಿಗೆ ಜೀನ್‌ನ್ನು ಸಂಶ್ಲೇಷಿಸಿ, 1968ರಲ್ಲಿ ಆನುವಂಶಿಕತೆಯ ಸಂಕೇತವನ್ನು ಬಿಡಿಸಿದ್ದಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಪಡೆದರು. (ಎಸ್.ಎಸ್.ಎಸ್.)

**ಜೀವಮಾಪನ:** ಜೈವಿಕ ಪ್ರಕ್ರಿಯೆಗಳನ್ನು ಉಪಯೋಗಿಸಿಕೊಂಡು ಜೈವಿಕ ವಸ್ತುಗಳ ಪ್ರಮಾಣಗಳನ್ನು ಮಾಪಿಸುವ ತಂತ್ರ (ಬಯೋ ಅಸೇ). ವಿವಿಧ ಜೈವಿಕ ವಸ್ತುಗಳು ಉದಾ: ಅಮೈನೊ ಆಮ್ಲಗಳು, ಪ್ರೋಟೀನ್‌ಗಳು, ಹಾರ್ಮೋನ್, ಪೋಷಕಾಂಶಗಳು, ಮುಂತಾದುವುಗಳನ್ನು ಈ ತಂತ್ರದಿಂದ ಮಾಪಿಸಬಹುದು. ಉದಾ: ಜೀವಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಅನೇಕ ರೀತಿಯ ರಾಸಾಯನಿಕ ಕ್ರಿಯೆಗಳು ಅದರ ಶರೀರದಲ್ಲಿ ಸತತವಾಗಿ ನಡೆಯುತ್ತಿರಲೇಬೇಕು. ಈ ಕ್ರಿಯೆಗಳಿಗೆ ಅದರ ಶರೀರದಲ್ಲೆ ರಚನೆಯಾದ ಕಿಣ್ವಗಳು ಆಧಾರ. ಅವುಗಳ ರಚನೆಗೆ ಹಲವಾರು ವಸ್ತುಗಳು ದೇಹಕ್ಕೆ ಸೇರಬೇಕು. ಇವುಗಳಲ್ಲಿ ಅತಿ ಮುಖ್ಯವಾದುವು ಜೀವಸತ್ತ್ವಗಳು ಮತ್ತು ಅಮೈನೋ ಆಮ್ಲಗಳು. ಪ್ರತಿಯೊಂದು ಜೀವಿಯ ದೇಹಕ್ಕು ಇವು ಸೇರಲೇಬೇಕಾದ ಪ್ರಮಾಣಕ್ಕಿಂತ ಕಡಿಮೆ ಸೇರ್ಪಡೆಯಾದರೆ ಆ ಜೀವಿಯ ಬೆಳವಣಿಗೆ ಕುಂಠಿತವಾಗುತ್ತದೆ. ಅಂಥ ಸ್ಥಿತಿಯಲ್ಲಿ ಸ್ವಲ್ಪ ಸ್ವಲ್ಪವಾಗಿ ಏರುತ್ತಿರುವ ಕ್ರಮದಲ್ಲಿ ಕೊರತೆ ಬಿದ್ದ ವಸ್ತುವನ್ನು ಕೊಟ್ಟರೆ ಅದರ ಬೆಳವಣಿಗೆ ಸರಿಯಾದ ಪರಿಮಿತಿಯನ್ನು ಮುಟ್ಟುವ ತನಕ ಹೆಚ್ಚುವುದು. ಆ ಪರಿಮಿತಿಯನ್ನು ಮುಟ್ಟಿದ ಬಳಿಕ ಅಗತ್ಯ ಅಂಶಗಳನ್ನು ಎಷ್ಟು ಹೆಚ್ಚಿಸಿದರೂ ಜೀವಿಯ ಬೆಳವಣಿಗೆ ವೃದ್ಧಿಯಾಗಲಾರದು.

ಜೀವಮಾಪನಕ್ಕೆ ಪ್ರಾಣಿಗಳನ್ನಾಗಲೀ ಅಣುಜೀವಿಗಳನ್ನಾಗಲೀ ಉಪಯೋಗಿಸುತ್ತಾರೆ. ಈ ಕ್ರಮಕ್ಕೆ ಹೆಚ್ಚು ರೂಢಿಯಲ್ಲಿರುವ ಪ್ರಾಣಿಗಳೆಂದರೆ ಬಿಳಿ ಇಲಿಗಳು, ಗಿನಿಪಿಗ್ ಮತ್ತು ಕೋಳಿ ಮರಿಗಳು. ವಿಶೇಷ ರೀತಿಯ ಮಾಪನಕ್ಕೆ ಕೀಟಗಳನ್ನು, ಮೀನುಗಳನ್ನು, ಕುರಿ, ಹಂದಿ ಮತ್ತು ಕೋತಿಗಳನ್ನು ಬಳಸುವುದುಂಟು. ಈ ಪ್ರಯೋಗಗಳ ಮೂಲಕ್ರಮವೆಂದರೆ, ಮೊದಲು ಅಳೆಯಬೇಕಾದ ಜೀವಸತ್ತ್ವದ ಅಥವಾ ಅಮೈನೋ ಆಮ್ಲದ ಕೊರತೆ ಮಾತ್ರ ಇದ್ದು ಮಿಕ್ಕೆಲ್ಲ ರೀತಿಯಲ್ಲು ಪರಿಪೂರ್ಣವಾದ ಮೂಲ ಆಹಾರವನ್ನು ತಯಾರಿಸುವುದು. ಮಾಪನಕ್ಕೆ ಸೂಕ್ತವಾದ ಪ್ರಾಣಿಗಳನ್ನು ಎರಡು ಭಾಗಗಳಾಗಿ ವಿಂಗಡಿಸಿ ಮೊದಲನೆಯ ಭಾಗದ ಪ್ರಾಣಿಗಳಿಗೆ ಏರು ಕ್ರಮದಲ್ಲಿ ಹೆಚ್ಚಿಸಿ ಶುದ್ಧವಾದ ಮಾಪಕಾಂಶವನ್ನು ಕೊಡುವುದು.

ಎರಡನೆಯ ಭಾಗದ ಪ್ರಾಣಿಗಳಿಗೆ ಅದೇ ಏರು ಕ್ರಮದಲ್ಲಿ ಮಾಪಕವಸ್ತುವನ್ನು ಒಳಗೊಂಡಿರುವ ಪದಾರ್ಥವನ್ನು ಮೂಲ ಆಹಾರದ ಜೊತೆ ಸೇರಿಸಿ ಕೊಡುವುದು. 20 ರಿಂದ 60ರಷ್ಟು ದಿವಸಗಳು ಕಳೆದ ಬಳಿಕ ಎರಡೂ ಭಾಗದ ಪ್ರಾಣಿಗಳ ತೂಕವನ್ನು ಗುರುತಿಸುವುದು. ಮೊದಲನೆಯ ಭಾಗದ ಪ್ರಾಣಿಗಳಿಂದ ದೊರೆತ ವೃತ್ತಾಂತಗಳ ಆಧಾರದ ಮೇಲೆ ಮಾಪಕಾಂಶದ ಪ್ರಮಾಣ ಮತ್ತು ಪ್ರಾಣಿಗಳ ತೂಕದ ಸಂಬಂಧವನ್ನು ಸೂಚಿಸುವ ಒಂದು ಗ್ರಾಫ್ ಎಳೆಯುವುದು. ಈ ಗ್ರಾಫಿನಿಂದ ಎರಡನೆಯ ವಿಭಾಗದ ಪ್ರಾಣಿಗಳ ತೂಕಗಳನ್ನು ಅರಿತು ಅವುಗಳ ದೇಹಕ್ಕೆ ಸೇರಿದ ಮಾಪಕಾಂಶದ ಪ್ರಮಾಣವನ್ನು ಕಂಡುಹಿಡಿಯಬಹುದು. ಜೀವಿಗೆ ಉಪಯುಕ್ತವಾದ ಜೀವಸತ್ತ್ವಗಳ ಮಾಪನವನ್ನು ಮಾಡಲು 1940ರ ವರೆವಿಗೂ ಇದ್ದ ಸೂಕ್ತಕ್ರಮ ಇದೊಂದೆ ಆಗಿತ್ತು.

ಅಣುಜೀವಿಗಳಿಗು ಪ್ರಾಣಿಗಳಂತೆಯೇ ಜೀವಸತ್ತ್ವಗಳು ಆಮೈನೋ ಆಮ್ಲಗಳು ಅತ್ಯಗತ್ಯ ಎಂಬ ಅಂಶ ಹೊರಬಿದ್ದ ಬಳಿಕ ಅಣುಜೀವಿಗಳನ್ನು ಉಪಯೋಗಿಸಿ ಜೀವಮಾಪನ ಮಾಡುವ ಪದ್ಧತಿ ಆರಂಭವಾಯಿತು. ಹಲವಾರು ಅಣುಜೀವಿಗಳು ತಮಗೆ ಅಗತ್ಯವಾದ ಜೀವಸತ್ತ್ವಗಳನ್ನೂ ಅಮೈನೋ ಆಮ್ಲಗಳನ್ನು ಸ್ವತಃ ರಚಿಸಬಲ್ಲವಾದ್ದರಿಂದ ಅವುಗಳಿಗೆ ಕೊಡುವ ಆಹಾರದಲ್ಲಿ ಈ ಅಂಶಗಳು ಇರಬೇಕಾದ ಆವಶ್ಯಕತೆ ಇಲ್ಲ. ಆದರೆ ಕೆಲವು ಅಣುಜೀವಿಗಳಿಗೆ ಈ ಸಾಮರ್ಥ್ಯ ಇಲ್ಲದಿರುವುದರಿಂದ, ರಚನೆಯಾಗದ ಅಗತ್ಯ ಅಂಶಗಳನ್ನು ಆಹಾರದಲ್ಲಿ ಸೇರಿಸಬೇಕು. ಇಂಥ ಅಣುಜೀವಿಗಳೆ ಮಾಪನಕ್ಕೆ ಸೂಕ್ತವಾದುವು. ಇಲ್ಲಿ ಅನುಸರಿಸಬೇಕಾದ ಕ್ರಮ ಪ್ರಾಣಿಗಳಿಗೆ ವಿವರಿಸಿದ ಕ್ರಮದಂತೆಯೆ ಇದೆ. ಆದರೆ ಅಣುಜೀವಿಗಳ ಕ್ರಮಕ್ಕೆ ತಗಲುವ ವೆಚ್ಚ ಬಲು ಕಡಿಮೆ. ಇದೇ ಹೆಚ್ಚು ರೂಢಿಯಲ್ಲಿರುವುದಕ್ಕೆ ಇದೊಂದು ಮುಖ್ಯವಾದ ಕಾರಣ. ಈ ಕ್ರಮದಲ್ಲಿ ಬೆಳೆವಣಿಗೆಯನ್ನು ತೂಕದಿಂದ ತಿಳಿಯುವ ಬದಲು ಅವುಗಳ ಸಂಖ್ಯೆ ಅಥವಾ ಅವುಗಳಿಂದ ಉತ್ಪತ್ತಿಯಾಗುವ ಆಮ್ಲಗಳು, ಅನಿಲಗಳು ಮತ್ತು ಇತರ ರಾಸಾಯನಿಕ ವಸ್ತುಗಳ ಪ್ರಮಾಣವನ್ನು ಕಂಡುಹಿಡಿಯುವುದರಿಂದ ಅಳೆಯಬಹುದು. ಈ ಕ್ರಮದಲ್ಲಿ ಸಹ ಗ್ರಾಫ್ ಮೂಲಕ ಜೀವಸತ್ತ್ವದ ಪ್ರಮಾಣ ಮತ್ತು ವೃದ್ಧಿಯ ಸಂಬಂಧವನ್ನು ರಚಿಸಿ ವೃದ್ಧಿಯನ್ನು ಮೇಲೆ ಹೇಳಿದ ರೀತಿಯಲ್ಲಿ ಅಳೆದು ಮಾಪಕಾಂಶದ ಪ್ರಮಾಣವನ್ನು ಶೋಧಿಸಬಹುದು.

ಅತಿ ಹೆಚ್ಚಿನ ರೂಢಿಯಲ್ಲಿರುವ ಮತ್ತೊಂದು ಜೀವಮಾಪನ ಪದ್ಧತಿಯೆಂದರೆ ಪ್ರತಿಜೈವಿಕಗಳನ್ನು (ಆ್ಯಂಟಿ ಬಯೊಟಿಕ್ಸ್) ಅಳೆಯುವ ಕ್ರಮ. ಅಣುಜೀವಿಯ ವೃದ್ಧಿ ಎಷ್ಟರ ಮಟ್ಟಿಗೆ ತಡೆಯಾಗಿದೆ ಎಂದು ತಿಳಿಯುವುದೆ ಇದಕ್ಕೆ ಅಳತೆಗೋಲು. ಇದರ ಕ್ರಮ, ಪ್ರಾಣಿ ಅಥವಾ ಅಣುಜೀವಿಗಳಿಂದ ರೂಪಿತವಾಗಿರುವ ಕ್ರಮಕ್ಕಿಂತ ಭಿನ್ನವಾಗಿದೆ. ಈ ಕ್ರಮದಲ್ಲಿ ಎಲ್ಲ ರಿತಿಯಲ್ಲಿಯು ಪರಿಪೂರ್ಣವಾದ ಆಹಾರವನ್ನು ಒಳಗೊಂಡ, ಕಾಸಿದರೆ ದ್ರವವಾಗುವ ತಣ್ಣಗಾದರೆ ಗಟ್ಟಿಯಾಗುವ ಅಗಾರ್ ಅಗಾರ್ ಎಂಬ ರಾಸಾಯನಿಕ ವಸ್ತುವನ್ನು ಉಪಯೋಗಿಸಲಾಗುವುದು. ಮೊದಲು ಅಗಾರ್ ಅಗಾರನ್ನು ಕಾಯಿಸಿ ಗಾಜಿನ ತಟ್ಟೆಗೆ ಹಾಕಿ ಅದಕ್ಕಿಂತ ಸ್ವಲ್ಪ ದೊಡ್ಡ ವ್ಯಾಸವುಳ್ಳ ಮತ್ತೊಂದು ಗಾಜಿನ ತಟ್ಟೆಯನ್ನು ಹೊದಿಕೆಯಾಗಿ ಮುಚ್ಚಲಾಗುವುದು. ತರುವಾಯ ಅಣುಜೀವಿಯನ್ನು ಸ್ವಲ್ಪ ನೀರಿನಲ್ಲಿ ಕದಡಿ ಅಗಾರ್ ಅಗಾರ್ ಮೇಲೆ ಸುರಿದು ಹರಡುವುದು. ಮಾಪನ ಮಾಡಬೇಕಾದ ವಸ್ತುವನ್ನು ವರ್ತುಳಾಕಾರದ ಕಾಗದದ ಚೂರುಗಳಲ್ಲಿ ಹೀರಿ ಅಗಾರ್ ಅಗಾರ್ ಮೇಲೆ ಇಡುವುದು. ಇದನ್ನು $37^0$ ಸೆ. ಉಷ್ಣತೆಯಲ್ಲಿ 48 ಗಂಟೆಗಳ ಕಾಲ ಇಟ್ಟ ಬಳಿಕ ಅಣುಜೀವಿಯ ಬೆಳೆವಣಿಗೆಯನ್ನು ಗಮನಿಸಿದರೆ ಕಾಗದದ ಸುತ್ತಲು ವರ್ತುಳಾಕಾರದಲ್ಲಿ ಸ್ವಲ್ಪದೂರ ಸ್ವಚ್ಛವಾಗಿದ್ದು ಅನಂತರ ಅಣುಜೀವಿಯ ದಟ್ಟವಾದ ಬೆಳೆವಣಿಗೆ ಕಾಣುವುದು. ವರ್ತುಳಾಕಾರದ ಸ್ವಚ್ಛವಾದ ಪ್ರದೇಶದ ವ್ಯಾಸ ಆರೋಹಣಕ್ರಮದಲ್ಲಿ ಪ್ರತಿಜೀವಕದ ಪ್ರಮಾಣವನ್ನು ಅನುಸರಿಸುತ್ತದೆ. ಮೇಲೆ ಹೇಳಿದ ರೀತಿಯಲ್ಲಿ ವ್ಯಾಸ ಮತ್ತು ಪ್ರಮಾಣದ ಸಂಬಂಧವನ್ನು ಗ್ರಾಫ್ ಮೂಲಕ ರಚಿಸಬಹುದು.

ಇಲ್ಲಿ ತಿಳಿಸಿರುವ ಪದ್ಧತಿಗಳು ಅತಿ ರೂಢಿಯಲ್ಲಿರುವ ಕ್ರಮಗಳು. ಇವುಗಳಲ್ಲಿ ನಾನಾ ರೀತಿಯ ವೈವಿಧ್ಯಗಳು ಆಚರಣೆಯಲ್ಲಿರುವುದುಂಟು. ಆದರೂ ಇಲ್ಲಿ ವಿವರಿಸಿರುವ ಕ್ರಮಗಳೆ ಎಲ್ಲ ಪದ್ಧತಿಗಳಿಗೂ ಮೂಲ. ಇದಲ್ಲದೆ ವಿವಿಧ ಹಾರ್ಮೋನುಗಳಿಗೆ, ಕಿಣ್ವಗಳಿಗೆ ಮತ್ತು ಇತರೆ ಜೀವರಸಾಯನಿಕಗಳಿಗೆ ಜೀವಮಾಪನ ವಿಧಾನಗಳುಂಟು. ***

**ಜೀವಮಾಪನ ವಿಜ್ಞಾನ:** ಜೀವವೈಜ್ಞಾನಿಕ ಲಕ್ಷಣಗಳ ಏರಿಳಿತವನ್ನು ಕುರಿತು ಅವಲೋಕನ ಅಥವಾ ಪ್ರಯೋಗ ಮೂಲಕ ಪಡೆದ ದತ್ತಾಂಶಗಳನ್ನು ವಿಶ್ಲೇಷಿಸಿ ವಿವರಿಸಲು ಗಣಿತೀಯ ಹಾಗೂ ಸಂಖ್ಯಾಕಲನೀಯ ವಿಧಾನಗಳ ಅನ್ವಯ (ಬಯೋಮೆಟ್ರಿ). ಗ್ರೀಕ್ ಪದಗಳಾದ ಬಯೋಸ್ (ಜೀವ) ಮತ್ತು ಮೆಟ್ರೋನ್ (ಮಾಪನ) ಇವುಗಳಿಂದ ಈ ಪದದ ವ್ಯುತ್ಪತ್ತಿ. ಜೈವಿಕ ವಿದ್ಯಮಾನಗಳ ಮಾಪನವೆಂದು ಈ ಪದದ ಅರ್ಥ. ಕಾರ್ಲ್ ಪಿಯರ್ಸನ್ ಈ ಪದವನ್ನು ರಚಿಸಿದನು. ಜೊತೆಗೆ, ಆತ ಜೀವಮಾಪನ ವಿಜ್ಞಾನವನ್ನು ಕುರಿತ ಒಂದು ನಿಯತಕಾಲಿಕಕ್ಕೆ ಬಯೋಮೆಟ್ರಿಕ್ಸ್ ಎಂದು ಹೆಸರಿಸಿದ. 1901ರಲ್ಲಿ ಪ್ರಕಟವಾದ ಈ ನಿಯತಕಾಲಿಕದ ಪ್ರಥಮ ಸಂಚಿಕೆಯಲ್ಲಿ ಈ ಪದ ಮೊದಲಿಗೆ ಅಚ್ಚಿನಲ್ಲಿ ಕಾಣಿಸಿಕೊಂಡಿತು.

ಬಯೋಮೆಟ್ರಿ ಪದದ ನಿರೂಪಣೆ ಬಹಳ ಅಸ್ಪಷ್ಟ. ಈ ವಿಜ್ಞಾನದ ಕೆಲವು ಸ್ಥಾಪನಾಚಾರ್ಯರು ಈಗ ಕೇವಲ ಚಾರಿತ್ರಿಕ ಆಸಕ್ತಿಯ, ಇನ್ನೊಂದು ತೀರ ಸಂಕುಚಿತ ಅರ್ಥವನ್ನು ಕೊಟ್ಟಿರುವವರು. ಫ್ರಾನ್ಸಿಸ್ ಗಾಲ್ಟನ್, ಜೀವವಿಜ್ಞಾನಕ್ಕೆ ಸಂಖ್ಯಾಕಲನವಿಜ್ಞಾನದ ಆಧುನಿಕ ವಿಧಾನಗಳ ಅನ್ವಯವೆ ಜೀವಮಾಪನವಿಜ್ಞಾನ–ಎಂಬುದಾಗಿ ಬರೆದಿದ್ದಾನೆ. ಅಂದಿನ ದಿನಗಳಲ್ಲಿ ಈ ಆಧುನಿಕ ವಿಧಾನಗಳೆಂದರೆ ಸಹಸಂಬಂಧದ ಗುಣಾಂಕಗಳ ಬಳಕೆ ಎಂದಿತ್ತು. ಹೆಚ್ಚು ನಿಖರವಾಗಿ, ಜೈವಿಕ ವಿದ್ಯಮಾನಗಳನ್ನು ಒಳಗೊಂಡಿರುವ ಮತ್ತು ಸಂಖ್ಯಾಕಲನೀಯ ವಿಧಾನಗಳು ಅವಶ್ಯವಿರುವ ಪ್ರಾಯೋಗಿಕ ತಂತ್ರ ಮತ್ತು ತೀರ್ಮಾನಗಳ ಕೂಡಿಕೆಯೆ ಜೀವಮಾಪನ ವಿಜ್ಞಾನ. ವ್ಯಕ್ತಿಗಳಿಗೆ ಸಂಬಂಧಸಿರದೆ ಜೀವರಾಶಿಗಳ ಸಮಷ್ಟಿಗೆ ಅದು ಸಂಬಂಧಿಸಿದೆ. ಇಲ್ಲಿ ಬಳಸಲಾಗುವ ಪ್ರಾಯೋಗಿಕ ವಿಧಾನಗಳು ಜೀವಭೌತ, ಜೀವರಸಾಯನ ಮತ್ತು ಜೀವವಿಜ್ಞಾನಗಳ ಪೂರ್ಣಕ್ಷೇತ್ರವನ್ನು ವ್ಯಾಪಿಸಿವೆ ಮತ್ತು ಸಂಖ್ಯಾಕಲನೀಯ ವಿಧಾನಗಳು ಸಂಖ್ಯಾಕಲನ ವಿಜ್ಞಾನದ ಪೂರ್ಣಕ್ಷೇತ್ರವನ್ನು ವ್ಯಾಪಿಸಿವೆ. ನಿಜವಾಗಿ, ಆಧುನಿಕ ಸಂಖ್ಯಾಕಲನ ವಿಜ್ಞಾನದ ಹೆಚ್ಚಿನ ಮೂಲಭೂತ ಪರಿಕಲ್ಪನೆ, ಮತ್ತು ವಿಧಾನಗಳು ಜೀವವೈಜ್ಞಾನಿಕ ತನಿಖೆಗಳಿಂದ ಉದ್ಭವಿಸಿವೆ. ಗಾಲ್ಟನ್, ವಿಲಿಯಮ್ ಸೀಲಿ, ಗಾಸೆತ್, ಪಿಯರ್ಸನ್ ಮತ್ತು ಆರ್.ಎ. ಫಿಶರ್ ಈ ಹೆಸರುಗಳು ಸಂಖ್ಯಾಕಲನವಿಜ್ಞಾನ ಮತ್ತು ಜೀವಮಾಪನವಿಜ್ಞಾನಗಳೊಂದಿಗೆ ಅಖಂಡವಾಗಿ ಬೆರೆತಿರುವುದೆ ಇದಕ್ಕೆ ಸಾಕ್ಷಿ

ಜೀವಮಾಪನವಿಜ್ಞಾನಕ್ಕೆ ಹಲವು ಶಾಖೆಗಳಿವೆ. ಜೀವಸಮಷ್ಟಿಗಳ ವರ್ಣನೆ, ವರ್ಗೀಕರಣ, ನಿಯಂತ್ರಣ ಮತ್ತು ಬದಲಾವಣೆಗಳು, ಅಂತರಕ್ರಿಯೆಗಳು, ಪ್ರತಿವರ್ತನೆಗಳು–ಇವು ಪ್ರಧಾನ. ಈ ಸಮಷ್ಟಿಗಳು ಪ್ರಾಣಿ (ಮಾನವರನ್ನೂ ಒಳಗೊಂಡಂತೆ), ಸಸ್ಯ ಅಥವಾ ಬ್ಯಾಕ್ಟೀರಿಯಾ ಇತ್ಯಾದಿಗಳದ್ದು ಆಗಿರಬಹುದು. ಅವುಗಳ ವರ್ಣನೆ ಸಂಖ್ಯಾಕಲನೀಯ ಅಂದಾಜನ್ನು ಒಳಗೊಂಡಿದೆ. ಉದಾಹರಣೆಗೆ, ಮೀನು, ಕ್ರಿಮಿಕೀಟ ಇತ್ಯಾದಿ ಜಂಗಮ ಸಮಷ್ಟಿಗಳನ್ನು ಅಂದಾಜು ಮಾಡುವುದು ಹಾಗೂ ಕಾಡುಗಳ ಖಾನೇಷುಮಾರಿ.

ಜೈವಿಕ ಅನುಕ್ರಿಯೆಯನ್ನು (ಬಯೊಲಾಜಿಕಲ್ ರೆಸ್ಪಾನ್ಸ್) ನಿರ್ಧರಿಸುವುದು ಜೀವಮಾಪನ ವಿಜ್ಞಾನದ ಒಂದು ಹೊಸ ಶಾಖೆ. ಉದಾಹರಣೆಗಾಗಿ, ದಶಕ 1960–69ರ ತರುಣದಲ್ಲಿ ಜೀವಸತ್ತ್ವ ಪರೀಕ್ಷೆ, ಜೀವಿವಿಷತೆಗಳ (ಟಾಕ್ಸಿಸಿಟಿ) ಹೋಲಿಕೆ ಮತ್ತು ಪಶು ಆಹಾರ ಪರೀಕ್ಷೆಗಳಿಗೆ ಸಂಬಂಧಿಸಿದ ತಂತ್ರ ವಿನ್ಯಾಸ ಮತ್ತು ತೀರ್ಮಾನಗಳು ಚೆನ್ನಾಗಿ ಬೆಳೆವಣಿಗೆಗೊಂಡು ನಿತ್ಯಬಳಕೆಯಲ್ಲಿದ್ದುವು. ಆದರೂ ದೇಹ ವಿಜ್ಞಾನ ಸಂಬಂಧಿ ಜೀವಮಾಪನವಿಜ್ಞಾನ ಹಾಗೂ ಜೀವರಾಸಾಯನಿಕ ಜೀವಮಾಪನವಿಜ್ಞಾನ ಸಾಮಾನ್ಯವಾಗಿದ್ದರೂ ತಮ್ಮ ವೈಜ್ಞಾನಿಕ ಶೈಶವಾವಸ್ಥೆಯಲ್ಲಿದ್ದವು. ಉದಾಹರಣೆಗೆ ಪ್ರಸಾಮಾನ್ಯ ವ್ಯಾಪ್ತಿಗಳೆಂದು (ನಾರ್ಮಲ್ ರೇಂಜಸ್) ಕರೆಯಲಾಗುವ ವಿಚಾರಗಳು ಆಗಾಗ್ಗೆ ತಪ್ಪಾಗಿ ವ್ಯಾಖ್ಯಾನಿತವಾಗುತ್ತಿದ್ದುವು ಮತ್ತು ಅಸಮರ್ಪಕ ಪ್ರಾಯೋಗಿಕ ಹಾಗೂ ಸಂಖ್ಯಾಕಲನೀಯ ತಂತ್ರಗಳೆಂದು ಬಳಸಲ್ಪಟ್ಟು ಪರಿಗಣಿತವಾಗುತ್ತಿದ್ದುವು.

ಜೀವವರ್ಗೀಕರಣ ವಿಜ್ಞಾನದಲ್ಲಿ (ಟ್ಯಾಕ್ಸಾನಮಿ) ಜೀವಮಾಪನ ವಿಜ್ಞಾನ ಈಗ ಹೆಚ್ಚು ಹೆಚ್ಚಿನ ಪಾತ್ರ ವಹಿಸುತ್ತಿದೆ. ಒಂದೆ ತಳಿಯ ಸಮಷ್ಟಿಗಳು ವಸತಿ ಜಾಗವನ್ನು ಕುರಿತು ಭಿನ್ನವಾಗಿರಬಹುದು. ಎರಡು ಸಮಷ್ಟಿಗಳು ಕೆಲವು ಸಾಮಾನ್ಯ ಲಕ್ಷಣಗಳನ್ನು ಪಡೆದಿರಬಹುದು ಅಥವಾ ಒಂದು ಸಮಷ್ಟಿ ಹಲವು ತಳಿಗಳ ಮಿಶ್ರಣವಾಗಿರಬಹುದು. ಮೇಲಿನ ಪ್ರತಿಯೊಂದು ಸಂದರ್ಭದಲ್ಲೂ ತನಿಖೆ ಮತ್ತು ತೀರ್ಮಾನಗಳು ಸಂಖ್ಯಾಕಲನೀಯ ಸ್ವಭಾವದ್ದಾಗಿರಬೇಕು.

ಸ್ಪರ್ಧೆಯ ಅಧ್ಯಯನ ಅಥವಾ ಹೆಚ್ಚು ಸಾರ್ವತ್ರಿಕವಾಗಿ ತಳಿಗಳ ನಡುವೆ ಅಂತರಕ್ರಿಯೆಗಳು ಮೊದಮೊದಲು ನಿಶ್ಚಿತ ಲಕ್ಷಣಗಳುಳ್ಳ ಸೈದ್ಧಾಂತಿಕ ಪ್ರತಿರೂಪಗಳ ಮೇಲೆ ಆಧಾರಿತವಾಗಿದ್ದವು. 20ನೆಯ ಶತಮಾನದ ಮಧ್ಯಭಾಗದಿಂದ ಸಂಭಾವ್ಯತಾ ಪ್ರತಿರೂಪಗಳ ಚಲಾವಣೆ ಆರಂಭವಾಯಿತು. ವಿದ್ಯಮಾನಗಳ ಸಹಜಸ್ವಭಾವದಿಂದಾಗಿ ಹಾಗೂ ವೀಕ್ಷಣೆಗಳ ಅನಿವಾರ್ಯ ಸಂಖ್ಯಾಕಲನೀಯ ಸ್ವಭಾವದಿಂದಾಗಿ ಈ ಅಧ್ಯಯನಗಳು ಸಂಖ್ಯಾಕಲನೀಯವಾದುವು.

ಆನುವಂಶಿಕತೆಯ ಅಧ್ಯಯನವನ್ನು ಗಾಲ್ಟನ್ ಮತ್ತು ಅವರ ಅನುಯಾಯಿಗಳು ಸಹಸಂಬಂಧ ವಿಶ್ಲೇಷಣೆಯ ಮೇಲೆ ಸ್ಥಾಪಿಸಿದರು. ಆದರೆ ಈ ತಳಹದಿಯನ್ನು ಶೀಘ್ರವೇ ಮೆಂಡೆಲ್ ಸಿದ್ಧಾಂತಕ್ಕೆ ತೆರವು ಮಾಡಿಕೊಂಡು ಕೈಬಿಡಲಾಯಿತು. ಆದ್ದರಿಂದ ತಳಿವಿಜ್ಞಾನ

ಸಂಭಾವ್ಯತಾ ಪ್ರತಿರೂಪ ಮತ್ತು ಜೀವಮಾಪನವಿಧಾನಗಳ ಒಂದರಲ್ಲೊಂದು ಸೇರಿರುವ ಅವಿಚ್ಛಿನ್ನ ಮೇಳವಾಯಿತು. ಪ್ರಾಯೋಗಿಕ ತಂತ್ರ ಮತ್ತು ಫಲಿತಗಳು ಜೀವಮಾಪನವಿಜ್ಞಾನದ ಅಂಗಗಳು. ಉದಾಹರಣೆಗೆ–1 ಜೀನ್ ಆವರ್ತಾಂಕಗಳ (ಫ್ರೀಕ್ವೆನ್ಸೀಸ್) ಅಂದಾಜು ಮಾಡುವಿಕೆ, 2. ಸಮಷ್ಟಿಗಳ ಸಂಖ್ಯಾಭಿವೃದ್ಧಿ ಸ್ವರೂಪದ ಶೋಧನೆ ಮತ್ತು ಬದಲಾವಣೆಗಳು, 3. ಜೀವಕೋಶಗಳ ಮೇಲೆ ವಿಕಿರಣದ ಪರಿಣಾಮ.

ಜೀವಮಾಪನವಿಜ್ಞಾನ ಜೀವವಿಜ್ಞಾನಗಳಲ್ಲಿ ಮತ್ತು ಅವುಗಳ ಅನ್ವಯಗಳಲ್ಲಿ ಮಹತ್ವದ ಪಾತ್ರವಹಿಸಿದೆ. ಜೀವವಿಜ್ಞಾನದ ವಿವಿಧ ಶಾಖೆಗಳಲ್ಲಿ ಸಂಶೋಧನಾ ಪ್ರಯೋಗಗಳನ್ನು ಸಿದ್ಧಪಡಿಸಲು ಹಾಗು ಸಿದ್ಧಾಂತಗಳನ್ನು ಪರೀಕ್ಷಿಸಲು ಜೀವಮಾಪನ ವಿಜ್ಞಾನ ಅನ್ವಯಿಸುವುದು, ಆಧುನಿಕ ಜೀವವೈಜ್ಞಾನಿಕ ಅಭ್ಯಾಸದಲ್ಲಿ ಅನಿವಾರ್ಯವಾಗಿದೆ. (ಎಸ್.ಟಿ.)

**ಜೀವರಸಾಯನವಿಜ್ಞಾನ:** ಜೀವಿಗಳಲ್ಲಿರುವ ಪದಾರ್ಥಗಳು, ಅವುಗಳ ರೂಪ ಮತ್ತು ಪರಸ್ಪರ ಪ್ರತಿಕ್ರಿಯಿಸುವ ಪ್ರಕ್ರಿಯೆ ಮತ್ತು ಕಾರ್ಯಗಳನ್ನು ಅಭ್ಯಾಸಿಸುವ ವಿಜ್ಞಾನ. ಆಂಗ್ಲಭಾಷೆಯಲ್ಲಿ ಬಯೋಕೆಮಿಸ್ಟ್ರಿ ಎನ್ನುವರು. ವಿಕಾಸದ ದೃಷ್ಟಿಯಿಂದ ಹೇಳುವುದಾದರೆ ಇದು ಜೀವ ಹಾಗೂ ರಸಾಯನ ವಿಜ್ಞಾನಗಳ ಸಂಗಮದಿಂದಾದ ಮತ್ತು ವೈದ್ಯ ಹಾಗೂ ಶರೀರಕ್ರಿಯಾವಿಜ್ಞಾನಗಳ ನೆರವಿನಿಂದ ವಿಶೇಷವಾಗಿ ವರ್ಧಿಸಿ ಇಂದು ಸ್ವತಂತ್ರ ಅಸ್ತಿತ್ವವನ್ನೇ ಪಡೆದಿರುವ ಶಾಖೆ. ಜೀವ ಕಾರ್ಯಗಳನ್ನು ರಸಾಯನವಿಜ್ಞಾನದ ಮೂಲಕ ಅರ್ಥೈಸುವುದೇ ಇದರ ಉದ್ದೇಶ.

ಜೀವಿಯ ಜೀವಕೋಶ, ಅನೇಕ ರಾಸಾಯನಿಕಗಳನ್ನೊಳಗೊಂಡ ಚೀಲ. ಕೋಶ ಮತ್ತು ಅದರ ಘಟಕಗಳಲ್ಲಿ ರಾಸಾಯನಿಕ ದ್ರಾವಣವಿದೆ. ಇಂಥ ರಾಸಾಯನಿಕಗಳಲ್ಲಿ ಪ್ರೋಟೀನುಗಳು, ಕಾರ್ಬೋಹೈಡ್ರೇಟುಗಳು, ಕೊಬ್ಬು, ನ್ಯೂಕ್ಲಿಯಿಕ್ ಆಮ್ಲಗಳು, ಜೀವಸತ್ತ್ವಗಳು, ಲವಣಗಳು ಕೋಶದಲ್ಲಿನ ದ್ರಾವಣದಲ್ಲಿ ಇವೆ. ಜೀವಿಯ ದೇಹವು ಇಂತಹ ಕೋಟ್ಯಂತರ ಕೋಶಗಳಿಂದಾಗಿದೆ. ಜೀವಿಯ ಬೆಳವಣಿಗೆ, ಸಂತಾನೋತ್ಪತ್ತಿ, ಚಲನೆ ಮುಂತಾದ ಕಾರ್ಯಗಳು ಕೋಶಗಳಲ್ಲಿ ನಡೆಯುವ ರಸಾಯನಿಕ ಕ್ರಿಯೆಗಳ ಸಮುದಾಯ ಎಂದು ಭಾವಿಸಲಾಗಿದೆ. ಅಂದಮಾತ್ರಕ್ಕೆ ಜೀವಿಯೊಂದು ರಸಾಯನಕಾರ್ಯಗಳ ಸಂಕಲನ ಎನ್ನುವುದು ಸರಿಯಲ್ಲ. ಏಕೆಂದರೆ, ಜೀವಿಯೊಳಗೆ ನಡೆಯುವ ರಸಾಯನ ಕಾರ್ಯಗಳು ಒಂದು ನಿರ್ದಿಷ್ಟ ಗುರಿ ಸಾಧನೆಯಲ್ಲಿ ಪರ್ಯವಸಾನವಾಗಿವೆ. ರಸಾಯನ ಕಾರ್ಯಗಳು ಸರಿಯಾಗಿ, ಕ್ಲುಪ್ತ ಕಾಲದಲ್ಲಿ ಮತ್ತು ವೇಗದಲ್ಲಿ ನಡೆಯುತ್ತವೆ. ಈ ರೀತಿ ನಡೆಸುವ ವ್ಯವಸ್ಥೆ ದೇಹದೊಳಗಿದೆ. ಇಂಥ ವ್ಯವಸ್ಥೆಗೆ ಬೇಕಾದ ಹತೋಟಿಯ ಏರ್ಪಾಡು ಮಿದುಳು ಮತ್ತು ನರಮಂಡಲಗಳ ಅಧೀನದಲ್ಲಿದೆ. ಈ ವ್ಯವಸ್ಥೆಯ ಮೂಲವೂ ರಸಾಯನವಸ್ತುಗಳಿಂದಾಗಿವೆ. ಇದರಲ್ಲಿ ಪಾಲುಗೊಂಡಿರುವ ಹಾರ್ಮೋನುಗಳು ರಸಾಯನವಸ್ತುಗಳೇ. ಕೋಶದಲ್ಲಿ, ಕೋಶಗಳಿಂದ ನಡೆಯುವ ರಸಾಯನಿಕ ಕ್ರಿಯೆಗಳ ಅಧ್ಯಯನವೇ ಜೀವರಸಾಯನ ವಿಜ್ಞಾನ. ಇದರ ವ್ಯಾಪ್ತಿಯಲ್ಲಿ ದೇಹಕ್ರಿಯಾರಸಾಯನವಿಜ್ಞಾನ, ಅಣ್ವಿಕಜೀವವಿಜ್ಞಾನ ಶಾಖೆಗಳಿವೆ.

ಜೀವ ಕಾರ್ಯಗಳ, ರೋಗಗಳ ಮತ್ತು ಮದ್ಯದ ತಯಾರಿಕೆ ಪ್ರಾರಂಭದೊಡನೆ ಜೀವರಸಾಯನ ವಿಜ್ಞಾನದ ಪರಿಚಯವಾಯಿತು. ಇದಕ್ಕೆ ಒಂದು ಸ್ಪಷ್ಟ ರೂಪ ದೊರೆತದ್ದು 18ನೇ ಶತಮಾನದ ಕೊನೆಯಲ್ಲಿ, ಈ ವಿಜ್ಞಾನದ ಬೆಳವಣಿಗೆಗೆ ಸಿ.ಡಬ್ಲ್ಯು. ಷೀಲೇ (1742–86), ಬರ್ಜೀಲಿಯಸ್ (1779–1848), ಜಿ.ಫಾನ್ ಲೀಬಿಗ್ (1803–73) ಪ್ರಮುಖರು. ಲೀಬಿಗ್ಗನು ಜೀವರಸಾಯನವಿಜ್ಞಾನದ ಪ್ರಯೋಗಶಾಲೆಯನ್ನು ಗ್ರೀಸನ್ನಿನಲ್ಲಿ ಪ್ರಾರಂಭಿಸಿದ. ಪ್ರಕೃತಿಯಲ್ಲಿನ ರಸಾಯನ ವರ್ತುಲಗಳನ್ನು ಆವಿಷ್ಕರಿಸಿದ. ದ್ಯುತಿಸಂಶ್ಲೇಷಣೆ ಕ್ರಿಯೆ ನಡೆಯದಿದ್ದರೆ ಪ್ರಾಣಿಗಳು ಭೂಮಿಯ ಮೇಲೆ ಬದುಕಿರಲು ಸಾಧ್ಯವಿಲ್ಲ ಎಂಬುದನ್ನು ತೋರಿಸಿದ. ಆಹಾರಕ್ಕಾಗಿ ಅವು ನೇರವಾಗಿ ಅಥವಾ ಪರೋಕ್ಷವಾಗಿ ಸಸ್ಯಗಳನ್ನು ಅವಲಂಬಿಸಿವೆ. ಪ್ರಾಣಿಗಳು ವಿಸರ್ಜಿಸಿದ ರಸಾಯನ ವಸ್ತುಗಳು, ಅನಂತರ ಅವುಗಳ ಸತ್ತದೇಹ ಪೂರ್ಣವಾಗಿ ಭೂಮಿ ಸೇರಿ, ಗೊಬ್ಬರವಾಗುತ್ತವೆ. ಸಸ್ಯ ಇದನ್ನು ಬಳಸಿಕೊಂಡು ಬೆಳೆಯುವುದು. ಹೀಗೆ ಸಸ್ಯದಿಂದ ಪ್ರಾಣಿ, ಪ್ರಾಣಿಯಿಂದ ಸಸ್ಯ ಎಂಬ ಪ್ರಕೃತ್ತಿಯಲ್ಲಿನ ವರ್ತುಲತೆಯನ್ನು ಲೀಬಿಗ್ ಪ್ರತಿಪಾದಿಸಿದ. ಮದ್ಯ ತಯಾರಿಕೆ, ಕೊಳೆತ ಮತ್ತು ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಜೀವಾಣುಗಳು ಕಾರಣವೆಂದು ಲೀಬಿಗ್ ನಂಬಿರಲಿಲ್ಲ. ಲೂಯಿ ಪಾಸ್ತರ್ (1822–95) ಈ ಬದಲಾವಣೆಗಳು ಅಣುಜೀವಿಗಳಿಂದಾಗುತ್ತವೆ ಎಂದು ತೋರಿಸಿದ.

ಜೀವರಸಾಯನಕ್ರಿಯಾವಿನ್ಯಾಸಗಳ ಅಧ್ಯಯನಕ್ಕೆ ಲವಾಸ್ಯೆ (1743–94) ಬುನಾದಿ ಹಾಕಿದ. ಜಾನ್ ಮೆಯೋ ಪ್ರಾಣಿಗಳ ಉಸಿರಾಟದಲ್ಲಿ ನಡೆಯುವ ರಸಾಯನ ಕಾರ್ಯಕ್ಕೂ, ರಸಾಯನ ವಸ್ತುಗಳ ಉತ್ಕರ್ಷಣ ಕಾರ್ಯಕ್ಕೂ ಇರುವ ಸಾದೃಶ್ಯವನ್ನು ತೋರಿಸಿದ್ದ. ಲವಾಸ್ಯೆ ಉಸಿರಾಟದಲ್ಲಿ ನಡೆಯುವ ರಸಾಯನ ಕಾರ್ಯ ಉತ್ಕರ್ಷಣ ಕಾರ್ಯ ಎಂಬುದನ್ನು ಪ್ರಯೋಗಗಳಿಂದ ಸ್ಪಷ್ಟಪಡಿಸಿದ. ಶಕ್ತಿ ಬಿಡುಗಡೆಯಾಗುವ ಬಗ್ಗೆ ಶೋಧಿಸಿದ. 18ನೆ ಶತಮಾನದ ಅಂತಿಮದಲ್ಲಿ, ವಿಜ್ಞಾನಿಗಳಿಗೆ ಸಸ್ಯಗಳಲ್ಲಾಗುವ ದ್ಯುತಿಸಂಶ್ಲೇಷಣೆ ಮತ್ತು ಪಿಷ್ಟಗಳು ಹೇಗೆ ತಯಾರಾಗುತ್ತವೆ ಎಂಬುದು ಸಮಸ್ಯೆಯಾಗಿತ್ತು. ಜೀವರಸಾಯನವಿಜ್ಞಾನದಲ್ಲಿ ಜೋಸೆಫ್ ಪ್ರಿಸ್ಲಿ, ಜಾನ್ ಇಂಗನ್‌ಹೌಸ್‌ರ ಪರಿಶೋಧನೆಯ ಅನಂತರ ಈ ಸಮಸ್ಯೆ ನಿವಾರಣೆಯಾಯಿತು. ವ್ಹೋಲರ್ (1828) ಜೀವರಸಾಯನಿಕ ವಸ್ತು ಯೂರಿಯವನ್ನು ಪ್ರಯೋಗ ಶಾಲೆಯಲ್ಲಿ ತಯಾರಿಸಿ, 70 ವರ್ಷಗಳ ಬಳಿಕ, ಬುಕ್‌ನರ್ ನಡೆಸಿದ ಪ್ರಯೋಗ ಜೀವರಸಾಯನ ವಿಜ್ಞಾನದ ಚರಿತ್ರೆಯಲ್ಲಿ ಮೈಲುಗಲ್ಲಾಯಿತು. ಅವನು ಯೀಸ್ಟ್ ಜೀವಾಣುಗಳನ್ನು ಮರಳಿನೊಂದಿಗೆ ಚೆನ್ನಾಗಿ ಅರೆದು, ಜೀವಕೋಶಗಳನ್ನು ಒಡೆದು, ರಚನೆಯನ್ನು ನಾಶಮಾಡಿ, ಅನಂತರ ಒತ್ತಡದ ಸಹಾಯದಿಂದ ಶೋಧಿಸಿ ದೊರೆತ ದ್ರವವನ್ನು ಪ್ರಯೋಗಕ್ಕೆ ಒಳಪಡಿಸಿದ. ಈ ಶೋಧಿತ ದ್ರಾವಣಕ್ಕೆ, ಜೀವಾಣುವಿಗೆ ಇರುವಂತೆ, ಸಕ್ಕರೆಯನ್ನು, ಆಲ್ಕೊಹಾಲ್ ಆಗಿ ಪರಿವರ್ತಿಸಬಲ್ಲ ಸಾಮರ್ಥ್ಯವಿರುವುದನ್ನು ತೋರಿಸಿಕೊಟ್ಟ. ಈ ಸಾಮರ್ಥ್ಯ ಇರುವುದು ಜೀವಾಣುಗಳಲ್ಲಿನ ರಾಸಾಯನಿಕಗಳಲ್ಲಿ ಎಂಬುದು ಖಾತ್ರಿಯಾಯಿತು. ಆದ್ದರಿಂದ, ಪರಿವರ್ತನ ಕ್ರಿಯೆಗೆ ಜೀವ ಬೇಕಾಗಿಲ್ಲ. ಪ್ರಾಣಬಲ ಸಿದ್ಧಾಂತದಲ್ಲಿ ಹುರುಳಿಲ್ಲ ಎಂಬುದು ಸ್ಪಷ್ಟವಾಯಿತು. ಬುಕ್‌ನರನ ಪ್ರಯೋಗ ಜೀವರಸಾಯನ ವಿಜ್ಞಾನವು ಜೀವರಸಾಯನಿಕಗಳನ್ನು ಕುರಿತ ವಿಜ್ಞಾನ ಎಂಬುದನ್ನು ತೋರಿಸಿತು. ಹಾರ್ಡನ್ ಮತ್ತು ಯಂಗ್ ವಿಜ್ಞಾನಿಗಳು ಬುಕ್‌ನರ್‌ನ ಪ್ರಯೋಗವನ್ನು ಮತ್ತಷ್ಟು ಆಳವಾಗಿ ಅಭ್ಯಾಸಿಸಿ, ಈ ವಿಜ್ಞಾನದ ಮುಖ್ಯ ಭಾಗವಾದ ಚಯಾಪಚಯ ಕ್ರಿಯೆಯ ಸಂಶೋಧನೆಯನ್ನು ಆರಂಭಿಸಿದರು. ಎಮಿಲ್ ಫಿಷರ್ (1852–1919) ನಡೆಸಿದ ಸಂಶೋಧನೆಗಳು ಈ ವಿಜ್ಞಾನದ ಇನ್ನೊಂದು ಭಾಗವಾದ ಪದಾರ್ಥವಿಜ್ಞಾನಕ್ಕೆ ಅನುಕೂಲವಾಯಿತು. ಆತ ಜೀವಕೋಶಗಳಲ್ಲಿನ ರಾಸಾಯನಿಕಗಳನ್ನು ವಿಶೇಷವಾಗಿ ಅಭ್ಯಸಿಸಿ ಅವುಗಳಲ್ಲಿ ಸಕ್ಕರೆಗಳು, ಅಮೈನೋ ಆಮ್ಲಗಳನ್ನು ಪ್ರಾಣಿ, ಸಸ್ಯಗಳ ಕೋಶಗಳಿಂದ ಬೇರ್ಪಡಿಸಿ ಶುದ್ಧಮಾಡಿದ. ಆನೇಕ ಜೀವರಾಸಾಯನಿಕಗಳನ್ನು ಪ್ರಯೋಗ ಮಾರ್ಗದಿಂದ ತಯಾರಿಸಿ ಅವುಗಳ ಅಣುರಚನೆಯನ್ನು ನಿಖರವಾಗಿ ಅನ್ವೇಷಿಸಿ ಜೀವರಸಾಯನವಿಜ್ಞಾನ ಬೆಳೆಯಲು ಮಹತ್ವದ ಕೊಡುಗೆ ನೀಡಿದ.

ಜೀವರಸಾಯನಕ್ರಿಯೆಗಳ ವೇಗೋತ್ಕರ್ಷಗಳಿಗೆ ಎನ್‌ಜೈಮ್ ಅಥವಾ ಕಿಣ್ವಗಳೆಂದು ಹೆಸರು. ಈ ಹೆಸರನ್ನು ಬಳಕೆಗೆ ತಂದವನು ಡಬ್ಲ್ಯು ಕೂಹ್ನ್ (1837–1900). ಈ ರೀತಿಯ ವೇಗೋತ್ಕರ್ಷಕಗಳು ಸಕ್ಕರೆಯನ್ನು ಮದ್ಯವನ್ನಾಗಿಸುವ ಯೀಸ್ಟಿನಲ್ಲಿ ಇವೆ ಎಂದು ಆತ ಪ್ರತಿಪಾದಿಸಿ, ಅವನ್ನು ಎನ್‌ಜೈಮ್ ಎಂದು ಕರೆದ. ಕಿಣ್ವಗಳು ಹೆಚ್ಚಿನ ಉಷ್ಣತೆಯಲ್ಲಿ ನಾಶವಾಗುತ್ತವೆ. ಇವು ಕಾರ್ಯ ಎಸಗುವುದು ಒಂದು ಗೊತ್ತಾದ ರಸಸಾರ ಪಿಎಚ್ ಅಥವಾ ಆಮ್ಲತೆಯಲ್ಲಿ ಮಾತ್ರ ಎಂಬ ವಿವರಗಳು ತಿಳಿದುಬಂದುವು. ಅನಂತರ, ಅವು ಪ್ರೋಟೀನುಗಳು ಎಂದು ಗೊತ್ತಾಯಿತು. ಸಮ್ನರ್ ಯೂರಿಯವನ್ನು ಒಡೆಯುವ ಯೂರಿಯೇಸ್ ಎಂಬ ಕಿಣ್ವವನ್ನು ಹರಳಿನ ರೂಪದಲ್ಲಿ ತಯಾರಿಸಿ, ಅದು ಪ್ರೋಟೀನು ಎಂದು 1926ರಲ್ಲಿ ಸ್ಪಷ್ಟಪಡಿಸಿದ. ಅಂದಿನಿಂದ ಎನ್‌ಜೈಮಾಲಜಿ ಅಥವಾ ಕಿಣ್ವವಿಜ್ಞಾನ, ಜೀವರಸಾಯನ ವಿಜ್ಞಾನದ ವಿಶೇಷ ಅಂಗವಾಗಿದೆ.

ವಿಜ್ಞಾನದಲ್ಲಿ ಪ್ರಾಯೋಗಿಕ ವಿಧಾನವನ್ನು ಬಳಕೆಗೆ ತಂದ ಕ್ಲಾಡೆ ಬರ್ನಾರ್ಡ್ (1813–78) ಸಸ್ಯಗಳಲ್ಲಿ ಪಿಷ್ಟ ಇರುವಂತೆ ಮಾಂಸಖಂಡಗಳಲ್ಲಿ ಗ್ಲೈಕೊಜನ್ ಇರುವುದು. ಇದು ದೇಹದ ಯಕೃತ್‌ನಲ್ಲಿ ಕಾರ್ಬೋಹೈಡ್ರೇಟಿನ ಉಗ್ರಾಣವೆಂದು ತೋರಿಸಿಕೊಟ್ಟ. ಷ್ವಾನ್ (1810–82) ಮತ್ತು ಕೂಹ್ನ್ ಅವರು ಪಚನಕ್ರಿಯೆಯಲ್ಲಿ ರಸಾಯನಿಕ ಕ್ರಿಯೆಗಳು ಜರುಗುತ್ತವೆ ಎಂಬುದನ್ನು ತಿಳಿಸಿದ. ಈ ವಿಜ್ಞಾನಕ್ಕೆ ಶರೀರ ಕ್ರಿಯಾರಸಾಯನವಿಜ್ಞಾನ ಎಂದು ಕರೆದ. ವೈದ್ಯವಿಜ್ಞಾನದ ದೃಷ್ಟಿಯಿಂದ ಈ ವಿಜ್ಞಾನ ಮೊದಮೊದಲು ಬೆಳೆಯಿತು. ಅನಂತರ ವಿಶ್ವವಿದ್ಯಾಲಯಗಳಲ್ಲಿ ಇದರ ಶಾಖೆಗಳು ತೆರೆದವು. ಸ್ಟ್ರಾಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ 1872ರಲ್ಲಿ, ಅಮೆರಿಕದ ಯೇಲ್ ವಿಶ್ವವಿದ್ಯಾಲಯದಲ್ಲಿ 1870ರಲ್ಲಿ ಪ್ರಾರಂಭವಾದವು. ಆಹಾರದಲ್ಲಿ ಹಿಟ್ಟು, ಕೊಬ್ಬು, ಪ್ರೋಟೀನ್ ಮತ್ತು ಜೀವಸತ್ತ್ವಗಳಿರುವ ಬಗ್ಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿದ ಪ್ರೊಫೆಸರ್ ಗೌಲಾನ್ಡ್ ಹಾಪ್‌ಕಿನ್ಸ್ (1914) ಪ್ರತಿಪಾದಿಸಿದ. ಇದು ಆಹಾರವಿಜ್ಞಾನಕ್ಕೆ ತಳಹದಿ ಹಾಕಿತು. ಗೌಲಾನ್ಡ್ ಜೀವರಸಾಯನ ಶಾಖೆಯ ಮುಖ್ಯಸ್ಥನಾಗಿ, ಈ ವಿಜ್ಞಾನಕ್ಕೆ ನಿಖರವಾದ ರೂಪಕೊಟ್ಟು, ವಿಶ್ವವಿದ್ಯಾಲಯದಲ್ಲಿ ಜೀವವಿಜ್ಞಾನದ ಬೋಧನೆಗೆ ಅನುವುಮಾಡಿಕೊಟ್ಟ. ಇದೇ ರೀತಿ ವಿಶ್ವದ ಬಹುತೇಖ ವಿಶ್ವವಿದ್ಯಾನಿಲಯಗಳಲ್ಲಿ ಜೀವರಸಾಯನವಿಜ್ಞಾನ ಕಾರ್ಯ ನಿರ್ವಹಿಸುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜೀವರಸಾಯನ ವಿಜ್ಞಾನ ವಿಭಾಗ ಆರಂಭವಾದದ್ದು 1953ರಲ್ಲಿ,

ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 1970ರಲ್ಲಿ ಈ ವಿಭಾಗ ಕಾರ್ಯ ಆರಂಭಿಸಿತು. ಜೀವರಸಾಯನ ವಿಜ್ಞಾನದ ಸಂಶೋಧನಾ ಪ್ರಬಂಧ ಮತ್ತು ಲೇಖನಗಳಿಗಾಗಿ ಮೀಸಲಾದ ಮೊದಲನೆಯ ಪತ್ರಿಕೆಯ ಹೆಸರು ಜೆಟ್ ಷ್ರಿಫ್ಟ್‌ಫ಼ೂರ್ ಫಿಸಿಯಾಲಾಜಿಷೆ ಕೆಮಿ. ಇದು 1877ರಲ್ಲಿ ಪ್ರಾರಂಭವಾಯಿತು. ಅನಂತರ ಇಂಗ್ಲಿಷ್ ಭಾಷೆಯಲ್ಲಿ ಜರ್ನಲ್ ಆಫ್ ಬಯಲಾಜಿಕಲ್ ಕೆಮಿಸ್ಟ್ರಿ (1905) ಮತ್ತು ಬಯೊಕೆಮಿಕಲ್ ಜರ್ನಲ್ (1906) ಆರಂಭವಾದವು. ಅಂದಿನಿಂದ ಈ ವಿಜ್ಞಾನದ ಲೇಖನಗಳಿಗಾಗಿಯೇ ಮೀಸಲಾಗಿರುವ ಸಂಶೋಧನಾ ಪತ್ರಿಕೆಗಳ ಸಂಖ್ಯೆ ಸಾಕಷ್ಟು ಹೆಚ್ಚಾಗಿವೆ. ಅಲ್ಲದೆ ಈ ವಿಜ್ಞಾನದಲ್ಲಿ ಸಂಶೋಧನಾ ಪತ್ರಿಕೆಗಳು ವಿಜ್ಞಾನಗಳು ಪ್ರಕಟಗೊಳ್ಳುತ್ತಿವೆ.

ಪರಮಾಣು ವಿದಳನ ಕಾರ್ಯಗಳ ಸಂಶೋಧನೆ ಮತ್ತು ಪರಮಾಣು ಬಾಂಬಿನ ತಯಾರಿಕೆಯ ಪ್ರಯೋಗಗಳಲ್ಲಿ ಬಿಡುಗಡೆಯಾದ ಇಂಗಾಲ, ರಂಜಕ, ಗಂಧಕ, ಕಬ್ಬಿಣದಂತಹ ಪರಮಾಣುಗಳ ಸಮಸ್ಥಾನಿಗಳ (ಐಸೊಟೋಪ್ಸ್). ಅಧ್ಯಯನ ಆರಂಭಗೊಂಡ ಅನಂತರ ಜೀವರಸಾಯನ ವಿಜ್ಞಾನದ ಬೆಳವಣಿಗೆ ಹೆಚ್ಚಾಯಿತು. ಪರಮಾಣುವಿನ ಗುಣಗಳೇ ಇದ್ದು, ಜೊತೆಗೆ ಇವು ವಿಕಿರಣಪಟು ಕೂಡ ಆಗಿವೆ. ಇದರಿಂದಾಗಿ ಇವು ಅತ್ಯಲ್ಪ ಪ್ರಮಾಣದಲ್ಲಿ ಇದ್ದಾಗಲೂ, ದ್ರಾವಣದಲ್ಲಿ ಉಳಿದ ವಸ್ತುಗಳು ಎಷ್ಟೇ ಇದ್ದರೂ, ಅವನ್ನು ಒಳಗೊಂಡಿರುವ ರಾಸಾಯನಿಕಗಳ ಪ್ರಮಾಣವನ್ನು ಶೋಧಿಸಬಹುದು. ಅತ್ಯಪಕೇಂದ್ರಕ (ಅಲ್ಟ್ರಾಸೆಂಟ್ರಿಫ್ಯೂಜ್). ದಿಂದ ಕೋಶದಲ್ಲಿರುವ ದ್ರಾವಣದಲ್ಲಿನ ಘಟಕಗಳನ್ನು ಬೇರೆ ಮಾಡಬಹುದು. ವಿದ್ಯುತ್ ಕ್ಷೇತ್ರದಲ್ಲಿ ರಾಸಾಯನಿಕಗಳು ಚಲಿಸುವ ವೇಗ ಭೇದವನ್ನು ಉಪಯೋಗಿಸಿಕೊಂಡು ರಸಾಯನಿಕಗಳನ್ನು ಬೇರ್ಪಡಿಸುವ ಮಾರ್ಗ ಇನ್ನೊಂದು. ಇದಕ್ಕೆ ವಿದ್ಯುತ್ ಕ್ಷೇತ್ರಚಲನೆ (ಎಲೆಕ್ಟ್ರೊಫೊರೆಸಿಸ್) ಎಂದು ಹೆಸರು. ಸೋಸು ಕಾಗದದ ಜೀವರಸಾಯನ ವಿಜ್ಞಾನದಲ್ಲಿ ವಿಪುಲವಾಗಿ ಬಳಸುತ್ತಿರುವ ಒಂದು ಸರಳ ತಂತ್ರ. ಇದನ್ನು ಅನುಸರಿಸಿ ಸಾಂಗರ್ ವಿಜ್ಞಾನಿ ಇನ್ಸುಲಿನ್ ಪ್ರೋಟೀನಿನಲ್ಲಿರುವ ಅಮೈನೋ ಆಮ್ಲಗಳ ಅನುಕ್ರಮತೆಯನ್ನು ಶೋಧಿಸಿದ. ಈತನ ಮಾರ್ಗವನ್ನು ಬಳಸಿಕೊಂಡು 12,100 ಅಣುತೂಕದ ರೈಬೋನ್ಯೂಕ್ಲಿಯೇಸ್ ಎಂಬ ಕಿಣ್ವದ ಅಣು ರಚನೆ ಸೇರಿದಂತೆ ಹಲವಾರು ಬೃಹತ್ ಅಣುತೂಕದ ಪ್ರೋಟೀನುಗಳ ಅಣುರಚನೆಯನ್ನು ಶೋಧಿಸುವುದು ಸಾಧ್ಯವಾಯಿತು. ಈ ಹೊಸ ತಂತ್ರಗಳು ವೈದ್ಯವಿಜ್ಞಾನ, ಔಷಧವಿಜ್ಞಾನ ಮತ್ತು ಜೀವಸಂಬಂಧ ವಿಜ್ಞಾನಗಳ ಪ್ರೋತ್ಸಾಹ ಜೀವರಸಾಯನವಿಜ್ಞಾನದ ಬೆಳವಣಿಗೆಗೆ ಕಾರಣವಾಗಿವೆ. ಈ ವಿಜ್ಞಾನದಲ್ಲಾಗಿರುವ ಸಂಶೋಧನೆ ಎಷ್ಟು ಮಹತ್ವದ್ದು ಎಂಬುದಕ್ಕೆ ಕಳೆದ 30 ವರ್ಷಗಳಲ್ಲಿ ರಸಾಯನ ಮತ್ತು ವೈದ್ಯವಿಜ್ಞಾನಿಗಳಿಗೆ ಬಂದಿರುವ ನೊಬೆಲ್ ಪಾರಿತೋಷಿಕಗಳೇ ಸಾಕ್ಷಿ. ಒಟ್ಟು ನೊಬೆಲ್ ಪಾರಿತೋಷಕಗಳಲ್ಲಿ ಮುಕ್ಕಾಲು ಪಾಲು ಜೀವರಸಾಯನವಿಜ್ಞಾನದ ಸಂಶೋಧನೆಗಳಿಗೇ ದೊರೆತಿರುವುದು ಗಮನಾರ್ಹ.

ಜೀವರಾಸಾಯನಿಕಗಳು : ಕೋಶದಲ್ಲಿನ ರಾಸಾಯನಿಕಗಳು. ಇವುಗಳ ತಯಾರಿಕೆಗೆ ಬೇಕಾದ ಆಹಾರಪದಾರ್ಥಗಳು, ರಸಾಯನಕ್ರಿಯೆಗಳು ಉಂಟಾಗಲು ಬೇಕಾದ ಕ್ರಿಯಾವರ್ಧಕಗಳು, ಹಾರ್ಮೋನುಗಳು, ಸಿದ್ಧವಾದ ಮಹಾಣುಗಳು ಮತ್ತು ರಸಾಯನಿಕ ಬದಲಾವಣೆ ಹೊಂದಿ ವಿಸರ್ಜಿಸಲ್ಪಡಲು ಸಿದ್ಧವಾಗಿರುವ ಯೂರಿಯ ಮುಂತಾದುವು. ಇವುಗಳಲ್ಲಿ ಅನೇಕ ವಸ್ತುಗಳ ಅಣುರಚನೆ ಬಲು ಜಟಿಲ, ಅವುಗಳ ತೂಕ ತುಂಬಾ ಜಾಸ್ತಿ. ಕಡಿಮೆ ಅಣುತೂಕದ, ಜಟಿಲ ಅಣುರಚನೆಯುಳ್ಳ ರಾಸಾಯನಿಕಗಳಿವೆ. ಇವುಗಳಲ್ಲಿ ಮುಖ್ಯವಾದವು ಕಾರ್ಬೊಹೈಡ್ರೇಟುಗಳು, ಪ್ರೋಟೀನು ಮತ್ತು ಅಮೈನೋ ಆಮ್ಲಗಳು, ಕೊಬ್ಬು, ಎಣ್ಣೆಗಳ ಗುಂಪಿಗೆ ಸೇರಿದ ಲಿಪಿಡ್ಡುಗಳು ಹಾಗೂ ಜೀವಸತ್ತ್ವಗಳು. ಅಜೈವಿಕ ವಸ್ತುಗಳಾದ ಲವಣಗಳು ಜೀವಕೋಶದಲ್ಲಿದ್ದು ಅನೇಕ ಜೀವಕಾರ್ಯಗಳಲ್ಲಿ ಆವಶ್ಯಕ ಪಾತ್ರವನ್ನು ವಹಿಸುತ್ತವೆ.

ಕಾರ್ಬೊಹೈಡ್ರೇಟುಗಳು : ಗ್ಲುಕೋಸ್‌ನಂಥಹ ಶರ್ಕರಗಳು ಮತ್ತು ಇವುಗಳಿಂದ ಮಾಡಲ್ಪಟ್ಟ ಇತರೇ ಬೃಹದಣುಗಳು. ಸಸ್ಯಪಿಷ್ಟ ಅಥವಾ ಸ್ಟಾರ್ಚ್, ಮಾಂಸಖಂಡ ಮತ್ತು ಯಕೃತ್ತಿನಲ್ಲಿರುವ ಗ್ಲೈಕೊಜನ್ ಮಹಾಣುಗಳಲ್ಲಿ ಗ್ಲೂಕೋಸಿನ ಹಲವಾರು ಅಣುಗಳು ಒಂದು ನಿರ್ದಿಷ್ಟ ಕ್ರಮದಲ್ಲಿ ಸೇರಿವೆ. ಗ್ಲೂಕೋಸ್, ಫ್ರಕ್ಟೋಸ್, ಸುಕ್ರೋಸ್, ಗೆಲಾಕ್ಟೋಸ್ ಲ್ಯಾಕ್ಟೋಸ್, ಮಾಲ್ಟೋಸ್, ಮ್ಯಾನೋಸ್, ರೈಬೋಸ್ ಮತ್ತು ಡೀಆಕ್ಸಿರೈಬೋಸ್‌ಗಳೆಲ್ಲವೂ ಕಾರ್ಬೊಹೈಡ್ರೇಟುಗಳು. ಈ ಸರಳ ಶರ್ಕರ ರಾಸಾಯನಿಕಗಳು, ಕೋಶದ ಕ್ರಿಯೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಗ್ಲೂಕೋಸಮೈನ್, N–ಅಸಿಟೈಲ್ ಗ್ಲೂಕೋಸಮೈನ್, ಅಸಿಟೈಲ್ ಗೆಲಾಕ್ಟೋಸಮೈನುಗಳು ಮತ್ತು ಅವುಗಳ ಸಲ್ಫೇಟುಗಳು, ಗ್ಲೂಕುರೋನಿಕ್ ಆಮ್ಲ ಮತ್ತು ಗ್ಲೂಕೋನಿಕ್ ಆಮ್ಲಗಳು ಶರ್ಕರಜನ್ಯವಸ್ತುಗಳು. ಇವು ಸ್ವತಂತ್ರವಾಗಿ ಅಥವಾ ಗ್ಲೂಕೋಸ್‌ನೊಂದಿಗೆ ಸೇರಿ ಮಹಾಣುಗಳಾಗಿರುತ್ತವೆ. ಇವುಗಳನ್ನು ಮ್ಯೂಕೊಪಾಲಿಸ್ಯಾಕರೈಡ್ ಗುಂಪಿಗೆ ಸೇರಿಸಲಾಗಿದೆ. ಇವು ಏಡಿಗಳ ಮೇಲಿರುವ ಚಿಪ್ಪುಗಳಲ್ಲಿ, ಕಾರ್ಟಿಲೇಜ್‌ನಲ್ಲಿ ಇರುತ್ತವೆ. ಕಾಂಡ್ರಾಯ್ಟಿನ್ ಸಲ್ಫೇಟುಗಳು, ರಕ್ತದ ಗುಂಪು ನಿರ್ಣಾಯಕ ವಸ್ತುಗಳು, ಈ ಗುಂಪಿಗೆ ಸೇರಿವೆ.

ಮ್ಯೂಕೊಪಾಲಿಸ್ಯಾಕರೈಡುಗಳು ಮತ್ತು ಅವುಗಳಲ್ಲಿನ ಅಣುಘಟಕಗಳು

| ಪಾಲಿಸ್ಯಾಕರೈಡ್ | ಪುನರಾವರ್ತಿಸುವ ಘಟಕಗಳಲ್ಲಿ ಕಾರ್ಬೊಹೈಡ್ರೇಟುಗಳು | ವಿವರ |
|---|---|---|
| ಹಯಾಲ್ಯುರೋನಿಕ್ ಆಮ್ಲ | ಡಿ ಗ್ಲೂಕರೋನಿಕ್ ಆಮ್ಲ N–ಅಸಿಟೈಲ್ ಗ್ಲೂಕೋ–ಸಮೀನ್ | ಕಾಚದ್ರವ, ಹೊಕ್ಕಳುಬಳ್ಳಿ ಕೋಶಗಳನ್ನು ಅಂಟಿಸುವ ಸಿಮೆಂಟ್ ಮತ್ತು ಚರ್ಮಗಳಲ್ಲಿ |
| ಕಾನ್ಡ್ರಾಯ್ಟಿನ್ ಸಲ್ಫೇಟ್ ಎ | ಡಿ ಗ್ಲೂಕರೋನಿಕ್ ಆಮ್ಲ N–ಅಸಿಟೈಲ್ ಗೆಲಾಕ್ಟೊಸಮೈನ್ ಸಲ್ಫೇಟ್ | ಮೃದ್ವಸ್ಥಿ ; ಮೂಳೆಗಳಲ್ಲಿ |
| ಹೆಪರಿನ್ | ಡಿ–ಗ್ಲೂಕರೋನಿಕ್ ಸಲ್ಫೇಟ್ ಡಿ–ಗ್ಲೂಕೋಸಮೈನ್ ಸಲ್ಫೇಟ್ | ಜಿಗಣೆಯಲ್ಲಿ, ಮನುಷ್ಯನಲ್ಲಿ ಫುಪ್ಪುಸ, ಶುದ್ಧರಕ್ತ ನಾಳದ ಗೋಡೆಗಳಲ್ಲಿ ರಕ್ತ ಹೆಪ್ಪುಗಟ್ಟದಂತೆ ನಿರೋಧಿಸುತ್ತದೆ |
| ನ್ಯೂಮೋನಿಯಾ ರೋಗಾಣುಗಳಲ್ಲಿ ಪಾಲಿ ಸ್ಯಾಕರೈಡ್ | ಡಿ ಗ್ಲೂಕೋಸ್, ಆಮ್ಲ | ನ್ಯೂಮೋನಿಯಾ ರೋಗಾಣುಗಳಲ್ಲಿ |
| ಕೆರಟೊ ಸಲ್ಫೇಟ್ | ಡಿ ಗೆಲಾಕ್ಟೋಸ್, N–ಅಸಿಟೈಲ್ ಗ್ಲೂಕೋಸಮೈನ್ ಸಲ್ಫೇಟ್ | ಕಾರ್ಟಿಲೇಜ್ ಅಥವಾ ಮೃದ್ವಸ್ಥಿಯಲ್ಲಿ ಕಣ್ಣು ಗುಡ್ಡೆಗಳಲ್ಲಿನ ಪಾರದರ್ಶಕ ಪಟಗಳಲ್ಲಿ |
| ಕೈಟಿನ್ | N–ಅಸಿಟೈಲ್ ಗ್ಲೂಕೋಸಮೈನ್ | ಕಶೇರುಕಗಳ ಹೊರಮೈ |

ಅಕ್ಕಿ, ಗೋದಿ, ರಾಗಿ ಮತ್ತು ಬೇಳೆ ಕಾಳುಗಳಲ್ಲಿರುವ ಪಿಷ್ಟ ಆಹಾರದಲ್ಲಿರುವ ಪ್ರಮುಖ ಕಾರ್ಬೊಹೈಡ್ರೇಟ್. ಆಹಾರವನ್ನು ಬಾಯಿಯೊಳಗೆ ಇಟ್ಟಾಗ ಅದು ಜೊಲ್ಲುರಸದಲ್ಲಿನ ಅಮೈಲೇಸ್ ಜೊತೆ ಬೆರೆಯುತ್ತದೆ. ಅನಂತರ ಮೇದೋಜೀರಕ ರಸದಲ್ಲಿನ ಅಮೈಲೇಸುಗಳಿಂದ ರಸಾಯನಿಕ ಕ್ರಿಯೆಗೆ ಒಳಪಡುತ್ತದೆ. ಅಮೈಲೇಸ್ ಕಿಣ್ವ ಇದರ ಅಣುಗಳನ್ನು ಒಡೆದು ಮಾಲ್ಟೋಸ್ ಅಣುಗಳನ್ನಾಗಿ ಮಾಡುವದು. ಕರುಳು ರಸದಲ್ಲಿನ ಮಾಲ್ಟೇಸ್ ಕಿಣ್ವ ಮಾಲ್ಟೋಸ್ ಅಣುವನ್ನು ಒಡೆದು ಗ್ಲೂಕೋಸ್ ಅಣುಗಳಾಗಿಸುವುದು. ಹಾಲಿನಲ್ಲಿರುವ ಲ್ಯಾಕ್ಟೋಸ್ ಮತ್ತು ಸುಕ್ರೋಸನ್ನು ಒಡೆಯಲು ಲ್ಯಾಕ್ಟೇಸ್ ಮತ್ತು ಸುಕ್ರೇಸ್ ಎಂಬ ಕಿಣ್ವಗಳು ಬೇಕು. ಇವೆರಡು ಕರುಳು ರಸದಲ್ಲಿ ಇವೆ. ನೀರಿನಲ್ಲಿ ಕರಗುವ ಸರಳ ಪದಾರ್ಥಗಳಾದ ಗ್ಲೂಕೋಸ್, ಫ್ರಕ್ಟೋಸ್ ಮತ್ತು ಗೆಲಾಕ್ಟೋಸುಗಳು ಕೋಶದೊಳಗಿರುವ ಎಟಿಪಿ ಬಳಸಿಕೊಂಡು ಕರುಳಿನ ಗೋಡೆ ದಾಟಿ ರಕ್ತವನ್ನು ಸೇರುತ್ತವೆ. ಅನಂತರ ಮಾಂಸಖಂಡಗಳ ಮತ್ತು ಯಕೃತ್ತಿನ ಕೋಶಗಳಿಗೆ ಹೋಗಿ ಅಲ್ಲಿ ಗ್ಲೂಕೋಸ್ ಗ್ಲೈಕೊಜನ್ ಆಗಿ ಸಂಗ್ರಹವಾಗುತ್ತವೆ.

ವ್ಯಕ್ತಿ ಹಸಿದಿರುವಾಗ ಆತನ ಪ್ರತಿ 100 ಮಿಮೀ ರಕ್ತದಲ್ಲಿ ಸು. 80 ರಿಂದ 100 ಮಿಗ್ರಾಂ ಗ್ಲೂಕೋಸ್ ಇರುತ್ತದೆ. ಆಹಾರ ತೆಗೆದುಕೊಂಡ ತರುವಾಯ ಅದು

ಜೀರ್ಣಗೊಂಡು ಗ್ಲೂಕೋಸ್ ಉತ್ಪತ್ತಿಯಾಗುತ್ತದೆ. ಇದು ಕರುಳಿನ ಮೂಲಕ ರಕ್ತಕ್ಕೆ ಬರಲಾರಂಭಿಸಿದಾಗ ಗ್ಲುಕೋಸ್ ಮಟ್ಟ ರಕ್ತದಲ್ಲಿ ಸ್ವಲ್ಪ ಹೆಚ್ಚುತ್ತದೆ. ಗ್ಲುಕೋಸ್ ಪ್ರಮಾಣ 80 ಮಿಗ್ರಾಂ ಗಿಂತ ಹೆಚ್ಚಾದರೆ ಅದು ಮೂತ್ರದಲ್ಲಿ ಹೋಗುತ್ತದೆ. ಈ ರೀತಿ ಹೆಚ್ಚಾಗದಂತೆ ನೋಡಿಕೊಳ್ಳಲು ಮೇದೋಜೀರಕ ಗ್ರಂಥಿಯಿಂದ ಬಿಡುಗಡೆಯಾಗುವ ಇನ್ಸುಲಿನ್ ಹಾರ್ಮೋನ್ ನಿಯಂತ್ರಿಸುವುದು. ಇದು ಕೋಶಗಳ ಪೊರೆಯನ್ನು ಗ್ಲೂಕೋಸ್ ಹಾಯ್ದು ಹೋಗುವುದನ್ನು ಉತ್ತೇಜಿಸುತ್ತದೆ. ಮಿದುಳು ಮತ್ತು ದೇಹಕ್ಕೆ ಹೆಚ್ಚು ಶಕ್ತಿ ಬರಬೇಕಾದರೆ, ರಕ್ತದಲ್ಲಿ ಗ್ಲೂಕೋಸ್ ಹೆಚ್ಚಬೇಕು. ಆಗ ಎಪಿನೆಫ್ರೀನ್ (ಮೂತ್ರ ಜನಕಾಂಗದ ಮೇಲಿರುವ ಅಡ್ರೀನಲ್ ಗ್ರಂಥಿಯ ಹಾರ್ಮೋನ್) ಬಿಡುಗಡೆಯಾಗಿ ಯಕೃತ್ತಿನ ಗ್ಲೈಕೋಜನನ್ನು ಒಡೆದು ರಕ್ತದಲ್ಲಿ ಗ್ಲೂಕೋಸಿನ ಮಟ್ಟವನ್ನು ಹೆಚ್ಚಿಸುತ್ತದೆ. ಈ ಹಾರ್ಮೋನ್, ಗ್ಲೂಕಗಾನ್ ಮತ್ತು ಕಾರ್ಟಿಕಲ್ ಹಾರ್ಮೋನುಗಳು, ಗುರಾಣಿಕ (ಥೈರಾಯಿಡ್) ಗ್ರಂಥಿಯಿಂದ ಉತ್ಪತ್ತಿಯಾಗುವ ಥೈರಾಕ್ಸೀನ್, ಪಿಟ್ಯುಟರಿಯಿಂದ ಸ್ರವಿಸುವ ಬೆಳವಣಿಗೆಯ ಹಾರ್ಮೋನುಗಳು ರಕ್ತದಲ್ಲಿ ಗ್ಲೂಕೋಸಿನ ಮಟ್ಟವನ್ನು ಹೆಚ್ಚು ಮಾಡುವ ಕಾರ್ಯದಲ್ಲಿ ಸಹಕಾರಿ.

ಹಾಲಿನಲ್ಲಿರುವ ಗೆಲಾಕ್ಟೋಸ್ ಮತ್ತು ಕಬ್ಬಿನಲ್ಲಿರುವ ಫ್ರಕ್ಟೋಸುಗಳನ್ನು ದೇಹ ಉಪಯೋಗಿಸಿಕೊಳ್ಳುವುದು. ಆಹಾರದಿಂದ ಬರುವ ಗೆಲಾಕ್ಟೋಸ್ ತುಂಬಾ ಕಡಿಮೆ. ಅದನ್ನು ಗ್ಲೂಕೋಸ್ ಆಗಿ ಪರಿವರ್ತಿಸಿದ ಅನಂತರ ಕೋಶಗಳು ಶಕ್ತಿ ಉತ್ಪತ್ತಿ ಮಾಡಲು ಬಳಸುತ್ತವೆ. ಏಕೆಂದರೆ, ಗೆಲಾಕ್ಟೋಸಿನ ಜನಕ ವಸ್ತುವಾದ ಗೆಲಾಕ್ಟೋಸ್ ಫಾಸ್ಫೇಟು ವಿಷವಾಗಿ ಪರಿಣಮಿಸುವುದು. ಇದು ದೇಹದಲ್ಲಿ ಹೆಚ್ಚಾದರೆ ಬುದ್ಧಿಯ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಕಣ್ಣಿನ ಪಾಪೆಯ ಪಾರದರ್ಶಕತೆಗೆ ತೊಂದರೆ ಮಾಡಿ, ಕಣ್ಣು ಕುರುಡಾಗುವಂತೆ ಮಾಡುವುದು. ಗೆಲಾಕ್ಟೋಸಿನ ಚಯಾಪಚಯದ ಮೊದಲನೆಯ ಹೆಜ್ಜೆಯಲ್ಲಿ ಲ್ಯಾಕ್ಟೋಸ್ ಫಾಸ್ಫೇಟ್ ಆಗುವುದು. ಅನಂತರ ಇದು ಯುಡಿಪಿ ಗ್ಲೂಕೋಸಿನೊಂದಿಗೆ (ಇದು ಯುಟಿಪಿ ಮತ್ತು ಗ್ಲೂಕೋಸ್ ಫಾಸ್ಫೇಟುಗಳಿಂದಾಗುತ್ತದೆ) ಫಾಸ್ಫೊಗೆಲಾಕ್ಟೋಸ್ ಯುರಿಡೈಲ್ ಟ್ರಾನ್ಸ್‌ಫರೇಸ್ ಕಿಣ್ವದ ಸಹಾಯದಿಂದ ಗ್ಲೂಕೋಸ್ ಫಾಸ್ಫೇಟ್ ಮತ್ತು ಯುಡಿಪಿ ಗೆಲಾಕ್ಟೋಸ್ ಆಗುತ್ತದೆ. ಯುಡಿಪಿ ಗೆಲಾಕ್ಟೋಸ್, ಯುಡಿಪಿ ಗ್ಲೂಕೋಸನ್ನಾಗಿ ಮಾಡಲು ಮಾರ್ಗವಿದೆ. ಆದರೆ, ಆವಶ್ಯಕ ಜೀನ್ ಅಭಾವದಿಂದ ಟ್ರಾನ್ಸ್‌ಫರೇಸ್ ಕಿಣ್ವದ ತಯಾರಿಕೆಯಾಗುವುದಿಲ್ಲ. ಹೀಗಾಗಿ ಗೆಲಾಕ್ಟೋಸ್ ಮೂತ್ರದಲ್ಲಿ ಹೋಗುವುದು. ಇದರಿಂದ ಬೆಳೆಯುವ ಮಕ್ಕಳಲ್ಲಿ ಬುದ್ಧಿಮಾಂದ್ಯ ಮತ್ತು ಕುರುಡು ಬರುತ್ತದೆ. ಹುಟ್ಟಿದ ಶಿಶುವಿನ ಮೂತ್ರವನ್ನು ಪರೀಕ್ಷಿಸಿ ಅದರಲ್ಲಿ ಗೆಲಾಕ್ಟೋಸ್ ಇದ್ದರೆ, ಅದಕ್ಕೆ ಹಾಲು ನಿಲ್ಲಿಸಿ, ಬೇರೆ ಆಹಾರ ಕೊಟ್ಟು, ಅನಂತರ ತಜ್ಞ ವೈದ್ಯರಿಂದ ಚಿಕಿತ್ಸೆ ನೀಡಬೇಕು.

ಪ್ರೋಟೀನುಗಳು ; ಜೀವಿಯ ಪ್ರತಿ ಕೋಶವು ಪ್ರೋಟೀನ್‌ನಿಂದಾಗಿದೆ. ಪ್ರತಿ ಕೋಶಗಳಲ್ಲಿ ಪ್ರೋಟೀನಿನ ದ್ರಾವಣ ಇದೆ. ಇದು ಕಲಿಲ ದ್ರಾವಣ. ಆದ್ದರಿಂದ ಇದಕ್ಕೆ ಅಭಿಸರಣ ಸಂಮರ್ದದ (ಆಸ್ಮಾಟಿಕ್ ಪ್ರೆಶ್ಯರ್) ಗುಣ ಇದೆ. ಕೋಶದಲ್ಲಿರುವ ದ್ರಾವಣದಲ್ಲಿ ಪ್ರೋಟೀನ್ ಹೆಚ್ಚಿಗೆ ಇರುವುದರಿಂದ ಕೋಶಾವೃತ್ತ ದ್ರವದಲ್ಲಿನ (ಇಂಟರ್‌ಸ್ಟೀಷಿಯಲ್ ಫ್ಲೂಯಿಡ್, ಅಂತರಾಕಾಶಿ ತರಲ) ನೀರು ಮತ್ತು ನೀರಿನಲ್ಲಿ ಕರಗಿರುವ ಆಹಾರಾಂಶಗಳು ಕೋಶದೊಳಗೆ ಹೋಗಲು ಸಾಧ್ಯ. ಹಾಗೆಯೇ ಈ ಸಂಮರ್ದದ ಕಾರಣ ಹೆಚ್ಚು ನೀರು ಈ ದ್ರವದಿಂದ ರಕ್ತಕ್ಕೆ ಬರುತ್ತದೆ. ಒಟ್ಟಿನಲ್ಲಿ ಜೀವಿಯಲ್ಲಿನ ಕೋಶ ಸಮುದಾಯ, ಅಂತರಾಕಾಶಿ ತರಲ ಮತ್ತು ನೀರಿನ ಹಂಚಿಕೆಗಳಲ್ಲಿ ಮತ್ತು ಆಹಾರಾಂಶಗಳ ಸಾಗಣೆಯಲ್ಲಿ ಪ್ರೋಟೀನು ತನ್ನ ಅಭಿಸರಣ ಸಂಮರ್ದದಿಂದ ಮುಖ್ಯ ಪಾತ್ರ ವಹಿಸುತ್ತದೆ. ಆದರೆ, ಇದರ ತಯಾರಿಕೆ ಕಡಿಮೆಯಾದಾಗ ಅಂತರಾಕಾಶಿ ತರಲದಲ್ಲಿ ಹೆಚ್ಚು ನೀರು ನಿಂತು ಬಾವು ಕಾಣಿಸಿಕೊಳ್ಳುವುದು. ಇದು ಧನ ಮತ್ತು ಋಣ ಧ್ರುವಗಳನ್ನು ತನ್ನ ಅಣುವಿನಲ್ಲಿ ಪಡೆದಿದೆ. ಇದರಿಂದಾಗಿ ಪ್ರೋಟೀನ್ ರಕ್ತ ಮತ್ತು ಕೋಶದಲ್ಲಿನ ದ್ರಾವಣ ಕಾಪು ತಡೆಯಂತೆ (ಬಫರ್) ವರ್ತಿಸುತ್ತದೆ. ಆಮ್ಲತೆ ವ್ಯತ್ಯಾಸವಾಗದಂತೆ ನೋಡಿಕೊಳ್ಳುವ ಸಾಮರ್ಥ್ಯ ಪ್ರೋಟೀನ್‌ಗಿದೆ.

ಜೀವರಸಾಯನ ಕ್ರಿಯೆಗಳ ಕ್ರಿಯಾವರ್ಧಕಗಳಾದ ಕಿಣ್ವಗಳೂ ಪ್ರೋಟೀನುಗಳೇ. ನ್ಯೂಕ್ಲಿಯೋ ಪ್ರೋಟೀನುಗಳು, ಜೀನ್‌ಗಳು, ಆಕ್ಸಿಜನ್ ಮತ್ತು ಇಂಗಾಲದ ಡೈಆಕ್ಸೈಡುಗಳನ್ನು ಸಾಗಿಸುವ ಹೀಮೊಗ್ಲಾಬಿನ್, ಎಲೆಕ್ಟ್ರಾನ್ ಸಾಗಣೆಯಲ್ಲಿನ ಸೈಟೋಕ್ರೋಮುಗಳು, ಕೊಲೆಸ್ಟರಾಲನ್ನು ರಕ್ತದಲ್ಲಿ ಸಾಗಿಸುವ ಲೈಪೋಪ್ರೋಟೀನುಗಳು, ಜೊಲ್ಲುರಸದ ಮ್ಯೂಕೊಪ್ರೋಟೀನು, ಕೂದಲು, ಉಗುರುಗಳಲ್ಲಿನ ಸ್ಕ್ಲೀರೊ ಪ್ರೋಟೀನುಗಳು, ಕಾಳುಗಳಲ್ಲಿನ ಪ್ರೋಟೀನುಗಳೆಲ್ಲವಕ್ಕೂ ಜೀವಕಾರ್ಯಗಳಲ್ಲಿ ಆವಶ್ಯಕ ಪಾತ್ರವಿದೆ.

ದೇಹದ ಬೆಳವಣಿಗೆಗೆ ಅಗತ್ಯವಾಗಿ ಬೇಕಾದ ಆಹಾರ ಪದಾರ್ಥಗಳಲ್ಲಿ ಪ್ರೋಟೀನುಗಳಿಗೆ ವಿಶೇಷ ಸ್ಥಾನವಿದೆ. ಅವುಗಳ ಪ್ರಮಾಣ ಹೆಚ್ಚಾಗಿದ್ದರೆ ಸಾಲದು. ಒಂದೊಂದು ಪ್ರೋಟೀನಿಗೂ ಉತ್ತಮ ಗುಣ ಇರಬೇಕು. ಪ್ರೋಟೀನಿನ ಅಣುವಿನಲ್ಲಿರುವ ಆವಶ್ಯಕ ಅಮೈನೋ ಆಮ್ಲಗಳ ಪ್ರಮಾಣದಲ್ಲಿ ಈ ಗುಣ ಇದೆ. ಅಲನೀನ್, ಸೀರೀನ್, ಗ್ಲೂಟಾಮಿನ್, ಅಸ್ಪಾರ್ಟಿಕ್ ಅಮೈನೋ ಆಮ್ಲಗಳನ್ನು ದೇಹದಲ್ಲಿನ ಕೋಶಗಳು ತಯಾರಿಸಬಲ್ಲುವು. ಆದರೆ, ಫಿನೈಲ್ ಅಲನೀನ್, ಟ್ರಿಪ್ಟೊಫೇನ್, ಮೆಥಿಯೋನಿನ್, ಐಸೊಲ್ಯೂಸೀನ್, ಲ್ಯೂಸೀನ್, ಥ್ರಿಯೋನಿನ್ ಮತ್ತು ವ್ಯಾಲಿನ್ ಅಮೈನೋ ಆಮ್ಲಗಳನ್ನು ತಯಾರಿಸಲು ಮನುಷ್ಯನ ಕೋಶದಲ್ಲಿ ಆಗುವುದಿಲ್ಲ. ಆದ್ದರಿಂದ, ಇವು ಸಾಕಷ್ಟು ಪ್ರಮಾಣದಲ್ಲಿ ಆಹಾರದಿಂದಲೇ ಒದಗಬೇಕು. ಈ ಆವಶ್ಯಕ ಅಮೈನೋ ಆಮ್ಲಗಳು ಟೈರೋಸೀನ್, ಸಿಸ್ಟೀನ್ ಮುಂತಾದ ಅಮೈನೋ ಆಮ್ಲಗಳ ತಯಾರಿಕೆಗೂ ಬೇಕು. ಪ್ರಾಣಿಜನ್ಯ ಪ್ರೋಟೀನುಗಳಾದ ಹಾಲಿನ ಕೇಸೀನ್, ಮೊಟ್ಟೆಯ ಅಲ್ಬುಮೆನ್ ಮತ್ತು ಗ್ಲಾಬ್ಯುಲಿನ್, ಸ್ನಾಯುವಿನ ಪ್ರೋಟೀನುಗಳಲ್ಲಿ ಈ ಅವಶ್ಯಕ ಅಮೈನೋ ಆಮ್ಲಗಳು ಹೆಚ್ಚು ಪ್ರಮಾಣದಲ್ಲಿ ಇರುವುದರಿಂದ ಇವನ್ನು ಉತ್ತಮ ಪ್ರೋಟೀನುಗಳೆಂದು ಪರಿಗಣಿಸಲಾಗಿದೆ.

ಪ್ರೋಟೀನಿನ ಅಣು ಅನೇಕ ರೀತಿಯ ಅಮೈನೋ ಆಮ್ಲಗಳಿಂದಾದ ಸರಪಳಿ. ಒಂದನ್ನೊಂದು ಸೇರಿಸುವ ರಸಾಯನ ಕೊಂಡಿಗೆ ಪೆಪ್ಟೈಡ್ ಬಂಧವೆಂದು ಹೆಸರು. ಪ್ರೋಟೀನು ಜೀರ್ಣವಾಗಲು ಈ ಬಂಧಗಳನ್ನು ಮುರಿದು, ಅಮೈನೋ ಆಮ್ಲಗಳ ತುಂಡುಗಳನ್ನಾಗಿ ಮಾಡಬೇಕು. ಪೆಪ್ಟೈಡು ಬಂಧಗಳನ್ನು ಮುರಿಯಲು ಕಿಣ್ವಗಳು ಬೇಕು. ಒಂದೇ ಕಿಣ್ವ ಎಲ್ಲ ಬಂಧಗಳನ್ನು ಮುರಿಯಲಾರದು. ಏಕೆಂದರೆ, ವಿವಿಧ ಅಮೈನೋ ಆಮ್ಲಗಳನ್ನು ಸೇರಿಸಿದ ಕೊಂಡಿಗಳು ಒಂದೇ ರೀತಿಯವಲ್ಲ. ಜಠರ ರಸದಲ್ಲಿರುವ ಕಿಣ್ವ ಪೆಪ್ಸಿನ್, ಮೇದೋಜೀರಕ ರಸದಲ್ಲಿರುವ ಟ್ರಿಪ್ಸಿನ್, ಕಾರ್ಬಾಕ್ಸಿ ಪೆಪ್ಟಿಡೇಸ್ ಮತ್ತು ಕೈಮೋಟ್ರಿಪ್ಸಿನ್, ಕರುಳುರಸದಲ್ಲಿರುವ ಅಮೈನೋ ಪೆಪ್ಟಿಡೇಸ್ ಮತ್ತು ಡೈ ಅಮೈನೋ ಪೆಪ್ಟಿಡೇಸ್‌ಗಳು ಆಹಾರದಿಂದ ಪ್ರೋಟೀನಿನ ಅಣುಗಳನ್ನು ಕ್ರಮವಾಗಿ ವಿಭಜಿಸಿ, ಜೀರ್ಣಿಸಿ ವಿವಿಧ ಅಮೈನೋ ಆಮ್ಲಗಳನ್ನಾಗಿ ಮಾಡುತ್ತವೆ. ಪೆಪ್ಸಿನ್ ಕೆಲಸ ಮಾಡಲು ಬೇಕಾದ ಆಮ್ಲೀಯ ಪರಿಸರವನ್ನು ಜಠರದಲ್ಲಿನ ಹೈಡ್ರೋಕ್ಲೋರಿಕ್ ಆಮ್ಲ ಒದಗಿಸುತ್ತದೆ. ಅರ್ಧ ಜೀರ್ಣವಾದ ಪ್ರೋಟೀನು ಕರುಳನ್ನು ಹೊಕ್ಕಾಗ ಪ್ಯಾಂಕ್ರಿಯಾಸ್ ರಸದಲ್ಲಿ ಬೈಕಾರ್ಬೋನೇಟ್ ಆಮ್ಲತೆಯನ್ನು ಹೋಗಲಾಡಿಸಿ, ಉಳಿದ ಕಿಣ್ವಗಳು ಕೆಲಸಮಾಡಲು ತಕ್ಕ ಸ್ಥಿತಿಯನ್ನು ಒದಗಿಸುತ್ತದೆ. ಇವೆಲ್ಲ ಕಿಣ್ವಗಳ ಕಾರ್ಯಫಲ ಅಮೈನೋ ಆಮ್ಲಗಳು. ಈ ರೂಪದಲ್ಲಿ ಕರುಳಿನ ಕೋಶಗಳು ಅವನ್ನು ಹೀರಿಕೊಂಡು ರಕ್ತಕ್ಕೆ ರವಾನಿಸುತ್ತದೆ. ಇಂಥ ಕಾರ್ಯಕ್ಕೆ ಶಕ್ತಿ ಬೇಕು. ಈ ಸಾಗಾಣಿಕೆಯಲ್ಲಿ ಪಿರಿಡಾಕ್ಸಿನ್ ಎಂಬ ಜೀವಸತ್ತ್ವ ಭಾಗವಹಿಸುತ್ತದೆ. ಇದರಲ್ಲಿ ಅಂತರಾಕಾಶಿ ತರಲದಿಂದ ಕೋಶಗಳಿಗೆ ಅಮೈನೋ ಆಮ್ಲಗಳನ್ನು ಸಾಗಿಸುವ ಕಾರ್ಯದಲ್ಲಿ ಕೆಲವು ಹಾರ್ಮೋನುಗಳು ಪಾತ್ರವಹಿಸುತ್ತವೆ. ಇದು ಪ್ರೋಟೀನಿನ ಚಯಾಪಚಯದಲ್ಲಿ ಹಾರ್ಮೋನುಗಳ ಕೆಲಸ ಮುಖ್ಯವಾಗಿದೆ. ಮಾಂಸಖಂಡ ಮತ್ತು ವಪೆಯಲ್ಲಿ ಇನ್ಸುಲಿನ್, ಮಾಂಸಖಂಡ ಮತ್ತು ಮೂತ್ರಜನಕಾಂಗಗಳಲ್ಲಿ ಟೆಸ್ಟೊಸ್ಟಿರೋನ್, ಯಕೃತ್ತಿನಲ್ಲಿ ಎಪಿನೆಫ್ರಿನ್, ಮಾಂಸಖಂಡ ಮುಂತಾದವುಗಳಲ್ಲಿ ಎಸ್‌ಟಿಹೆಚ್ ಎಂಬ ಪಿಟ್ಯುಟರಿಯ ಹಾರ್ಮೋನುಗಳು ಈ ರೀತಿ ಸಾಗಾಣಿಕೆಯಲ್ಲಿ ಪಾತ್ರವಹಿಸುತ್ತವೆ.

ಪ್ರೋಟೀನ್ ದೇಹದಲ್ಲಿ ಗತೀಯ ಸಮತೋಲ (ಡೈನಮಿಕ್ ಈಕ್ವಿಲಿಬ್ರಿಯಮ್) ಕಾಪಾಡುತ್ತದೆ. ಈ ಸ್ಥಿತಿ ಏಕಕಾಲದಲ್ಲಿ ನಡೆಯುತ್ತಿರುವ ಪ್ರೋಟೀನಿನ ಸಂಶ್ಲೇಷಣೆ ಮತ್ತು ವಿಶ್ಲೇಷಣೆಗಳ ಫಲ. ಅಂದರೆ, ಅಮೈನೋ ಅಮ್ಲಗಳ ಸಂಗ್ರಹದಿಂದ ಪ್ರೋಟೀನಿನ ಸಂಶ್ಲೇಷಣೆಗೆ ಅಮೈನೋ ಆಮ್ಲಗಳನ್ನು ಬಳಸಿಕೊಳ್ಳಲಾಗುತ್ತದೆ. ಅದೇ ರೀತಿ ಪ್ರೋಟೀನುಗಳಿಂದ ಅಮೈನೋ ಆಮ್ಲಗಳು ಬಿಡುಗಡೆಯಾಗಿ ಅಮೈನೋ ಆಮ್ಲ ಸಂಗ್ರಹಕ್ಕೆ ಸೇರುತ್ತಿರುತ್ತವೆ. ಎಪಿನೆಫ್ರಿನ್, ಥೈರಾಕ್ಸಿನ್ ಮುಂತಾದವುಗಳ ತಯಾರಿಕೆಗೆ ಬೇಕಾದ ಅಮೈನೋ ಆಮ್ಲಗಳ ಪೂರೈಕೆ ಈ ಸಂಗ್ರಹದಿಂದ ಆಗುತ್ತದೆ. ಇದಕ್ಕೆ ಆಹಾರದಿಂದ ಒದಗಿದ ಅಮೈನೋ ಆಮ್ಲಗಳಲ್ಲದೆ ಕೋಶಗಳಲ್ಲಿ ತಯಾರಾದ ಅಮೈನೋ ಆಮ್ಲಗಳು ಸಹ ಸೇರುತ್ತವೆ. ಕೋಶದಲ್ಲಿ ಅಮೈನೋ ಆಮ್ಲಗಳ ತಯಾರಿಕೆಗೆ ಬೇಕಾಗಿರುವುದು ಅಮೈನೋ ಗುಂಪನ್ನು ಕೊಡಲು ಸಿದ್ಧವಿರುವ ರಸಾಯನ ವಸ್ತು ಮತ್ತು ಈ ಆಮ್ಲದ ಕೀಟೋ ಆಮ್ಲ. ಇದು ಕೋಶದಲ್ಲಿ ತಯಾರಾಗುವುದು.

ಅಮೈನೋ ಗುಂಪಿನ ಸಾಗಣೆಯಲ್ಲಿ ಜೀವಸತ್ತ್ವ ಪೆರಿಡಾಕ್ಸಾಲ್ ಫಾಸ್ಫೇಟ್ ಮತ್ತು ಪಿರಿಡಾಕ್ಸಮೀನುಗಳು ಅವಶ್ಯಕ ಪಾತ್ರ ವಹಿಸುವುವು.

ಮೆಥಿಯೋನೀನ್ ಅಮೈನೋ ಆಮ್ಲಕ್ಕೆ ವಿಶೇಷ ಜವಾಬ್ದಾರಿ ಇದೆ. ಇದು ಕೋಶದಲ್ಲಿ ತಯಾರಾಗುವುದಿಲ್ಲ. ಕಾರಣ, ಆಹಾರದಲ್ಲಿರುವ ಪ್ರೋಟೀನಿನಲ್ಲಿ ಇರಲೇಬೇಕು. ಅದ್ದರಿಂದ ಇದನ್ನು ಆವಶ್ಯಕ ಅಮೈನೋ ಆಮ್ಲವೆನ್ನುವರು. ಇದು ತನ್ನ ಮೀಥೈಲ್ ಗುಂಪನ್ನು ($-CH_3$) ಮತ್ತು ತನ್ನಲ್ಲಿನ ಗಂಧಕದ ಪರಮಾಣುವನ್ನು ಉಳಿದ ಆವಶ್ಯಕ ವಸ್ತುಗಳ ತಯಾರಿಕೆಗಾಗಿ ದಾನ ಮಾಡುತ್ತದೆ. ಗಂಧಕಯುತ ಸಿಸ್ಟೀನ್ ತಯಾರಿಕೆ ಈ ರೀತಿ

ಸಾಧ್ಯ. ಆಹಾರದಲ್ಲಿ ಅಮ್ಯೆನೋ ಆಮ್ಲದ ಪೂರೈಕೆ ಕಡಿಮೆಯಾದರೆ ಆಗ ಮೀಥೈಲ್ ಗುಂಪಿನ ವಿತರಣೆಗೆ ಸಾಕಾದಷ್ಟು ಮೀಥೈಲ್ ಗುಂಪು ದೊರೆಯದೆ ಲಿಪಿಡ್ಡುಗಳಲ್ಲಿನ ಕೋಲೀನ್ ತಯಾರಾಗದೆ ಯಕೃತ್ತಿನ ಖಾಯಿಲೆಗಳು ಬರುತ್ತವೆ.

ಕೆಲವು ಅಮ್ಯೆನೋ ಆಮ್ಲಗಳು ಬೇಕಾದ ವಸ್ತುಗಳ ತಯಾರಿಕೆಗೆ ನೆರವಾಗಿ ಉಪಯೋಗವಾಗುತ್ತವೆ. ಎಪಿನೆಫ್ರಿನ್, ನಾರ್‌ಎಪಿನೆಫ್ರಿನ್ ಮತ್ತು ಥೈರಾಕ್ಸಿನುಗಳಿಗೆ ಟೈರೊಸಿನ್ ಅಮ್ಯೆನೋ ಆಮ್ಲ ಪ್ರಾರಂಭದ ವಸ್ತು. ಕೆಲವು ಅಮ್ಯೆನೋ ಆಮ್ಲಗಳು ಆಮ್ಲದ ಗುಂಪನ್ನು ಕಳೆದುಕೊಂಡು ದೇಹದ ಉಪಯುಕ್ತ ವಸ್ತುಗಳಾಗುವುವು. ಈ ರೀತಿ ಆಗುವ ದೇಹಕ್ರಿಯಾ ಸಂಬಂಧವಾದ ವಸ್ತುಗಳ ಪಟ್ಟಿಯನ್ನು ಮತ್ತು ಅವುಗಳ ಪ್ರಾಮುಖ್ಯವನ್ನು ಮುಂದಿನ ಯಾದಿಯಲ್ಲಿ ತೋರಿಸಿದೆ. ಈ ಕಾರ್ಯದಲ್ಲಿಯೂ ಬಿ ಜೀವಸತ್ತ್ವದ ಪಿರಿಡಾಕ್ಸಾಲ್ ಫಾಸ್ಫೇಟ್ ಭಾಗವಹಿಸುತ್ತದೆ.

ಆಮ್ಲ ಗುಂಪನ್ನು ಕಳೆದುಕೊಂಡ ಅಮ್ಯೆನೋ ಆಮ್ಲದ ಜನ್ಯವಸ್ತುಗಳು

| ಅಮ್ಯೆನೋ ಆಮ್ಲ | ಜನ್ಯವಸ್ತು | ಪ್ರಾಮುಖ್ಯ |
|---|---|---|
| ಹಿಸ್ಟಿಡೀನ್ | ಹಿಸ್ಟಮೀನ್ | ರಕ್ತನಾಳಗಳನ್ನು ವಿಕಾಸಗೊಳಿಸುವ ಸಾಮರ್ಥ್ಯವಿದೆ. |
| ಟ್ರಿಪ್ಟೊಫೇನ್ | ಟ್ರಿಪ್ಟಮೀನ್ | ಮಿದುಳಿನಲ್ಲಿರುವ ಸಿರೊಟೊನ್ನಿನ ತಯಾರಿಕೆಗೆ ಬೇಕು. |
| ಡೋಪಾ | ಡೋಪಾ ಅಮೀನ್ | ಎಪಿನೆಫ್ರೀನ್ ಹಾರ್ಮೋನ್ ತಯಾರಿಕೆಗೆ ಬೇಕು. |
| ಗ್ಲುಟಾಮಿಕ್ ಆಮ್ಲ | $\gamma$ ಅಮ್ಯೆನೋ ಬ್ಯುಟರಿಕ್ ಆಮ್ಲ | ಮಿದುಳಿನಲ್ಲಿರುವ ರಸಾಯನ ವಸ್ತು |
| ಅಸ್ಪಾರ್ಟಿಕ್ ಆಮ್ಲ | $\beta$ ಆಲನೀನ್ | ಜೀವಸತ್ತ್ವದ ಪ್ಯಾಂಟೋಥೆನಿಕ್ ಆಮ್ಲದ ಅಣುಭಾಗ |
| ಲೈಸೀನ್ | ಕೆಡವರೀನ್ | ಕೊಳೆತ ಪ್ರಾಣಿಗಳಲ್ಲಿನ ವಿಷ |

ಅಮ್ಯೆನೋ ಗುಂಪನ್ನು ಗ್ಲೂಟಮೀನ್ ಎಂಬ ಗ್ಲುಟಾಮಿಕ್ ಆಮ್ಲದ ಜನ್ಯ ವಸ್ತುವಿನಲ್ಲಿ ಸಂಗ್ರಹಿಸಿಡಬಹುದು. ಇದು ಮೂತ್ರಜನಕಾಂಗದಲ್ಲಿ ಹೆಚ್ಚಾಗಿದ್ದು ಅಮೋನಿಯಮ್ ಅಯಾನುಗಳನ್ನು ಬೇಕಾದಾಗ ಬಿಡುಗಡೆ ಮಾಡುತ್ತದೆ. ಹೀಗೆ ಬಿಡುಗಡೆಯಾದ ಅಮೋನಿಯಮ್ ಅಯಾನು ಸೋಡಿಯಮ್ ಮತ್ತು ಪೊಟ್ಯಾಸಿಯಮ್ ದೇಹದಲ್ಲಿ ಉಳಿಯುವಂತೆ ಮಾಡುತ್ತದೆ. ಗ್ಲೂಟಮಿನ್‌ಗೆ ಈ ಕಾರ್ಯ ಭಾರವಲ್ಲದೆ ಗ್ಲೂಕೊಸ್, ಗೆಲಾಕ್ಟೋಸ್ ಮತ್ತು ಮ್ಯಾನೋಸುಗಳ ಅಮ್ಯೆನೋಜನ್ಯ ವಸ್ತುಗಳನ್ನು ತಯಾರಿಸಲು ಅಮ್ಯೆನೋ ಗುಂಪನ್ನು ಒದಗಿಸುವ ಜವಾಬ್ದಾರಿ ಇದೆ. ಇಷ್ಟೆಲ್ಲ ಕಾರ್ಯಗಳಿಗೆ ಬಳಕೆಯಾಗಿ, ಉಳಿದ ಅಮ್ಯೆನೋ ಗುಂಪು ಮನುಷ್ಯ ಮುಂತಾದ ಭೂಜೀವಿಗಳಲ್ಲಿ ಯೂರಿಯ ರೂಪದಲ್ಲಿ, ಹಕ್ಕಿಗಳಲ್ಲಿ ಯೂರಿಕ್ ಆಮ್ಲದ ರೂಪದಲ್ಲಿ, ಮೀನುಗಳಲ್ಲಿ ಅಮೋನಿಯ ರೂಪದಲ್ಲಿ ವಿಸರ್ಜನೆಯಾಗುತ್ತದೆ. ಅಮ್ಯೆನೋ ಗುಂಪು ತೆಗೆದ ಬಳಿಕ ಉಳಿದ ಕೀಟೋ ಆಮ್ಲ ಸಂಪೂರ್ಣವಾಗಿ ಉತ್ಕರ್ಷನ ಹೊಂದಿ, ಇಂಗಾಲದ ಡೈಆಕ್ಸೈಡ್ ಆಗಿ ಶಕ್ತಿಯನ್ನು ಬಿಡುಗಡೆ ಮಾಡುವುದು. ಅಮ್ಯೆನೋ ಆಮ್ಲಗಳ ಮುಖ್ಯ ಕೆಲಸ ಪ್ರೊಟೀನಿನ ಸಂಶ್ಲೇಷಣೆ. ಇವು ಮೊದಲು ಶಕ್ತಿಯುತವಾಗಿ ಅನಂತರ ತಮ್ಮ ಅಣುವಾಹಕ ಆರ್‌ಎನ್‌ಎ ಗಳೊಂದಿಗೆ ರೈಬೋಸೋಮಿಗೆ ಹೋಗಿ ಅಲ್ಲಿ ಸಂಕೇತವಾಹಕ ಆರ್‌ಎನ್‌ಎ ಗಳ ನೇತೃತ್ವದಲ್ಲಿ ಅನುಕ್ರಮವಾಗಿ ಸೇರಿ ಗೊತ್ತಾದ ಪ್ರೊಟೀನಿನ ಅಣುಗಳಾಗುವುವು.

ಲಿಪಿಡ್ಡುಗಳು : ಕೊಬ್ಬು, ಎಣ್ಣೆಗಳ ರಸಾಯನ ಗುಂಪಿಗೆ ಸೇರಿದ ವಸ್ತುಗಳು. ಇವು ನೀರಿನಲ್ಲಿ ಕರಗುವುದಿಲ್ಲ. ಕ್ಲೋರೊಫಾರಮ್, ಕಾರ್ಬನ್ ಟೆಟ್ರಾಕ್ಲೋರೈಡ್, ಈಥರ್ ದ್ರಾವಕಗಳಲ್ಲಿ ಕರಗುತ್ತವೆ. ಇವುಗಳ ಅಣುಗಳು ಗ್ಲಿಸರಾಲ್ ಅಥವಾ ಸ್ಫಿಂಗೊಸೀನ್ ಎಂಬ ಆಲ್ಕೊಹಾಲ್ ಮತ್ತು ಫ್ಯಾಟಿ ಆಮ್ಲಗಳಿಂದಾದ ಎಸ್ಟರುಗಳ ಗುಂಪಿಗೆ ಸೇರಿದ ವಸ್ತುಗಳು. ಲಿಪಿಡ್ಡುಗಳಲ್ಲಿ ಫಾಸ್ಫಾರಿಕ್ ಆಮ್ಲ, ಕೋಲೀನ್, ಎಥನೈಲಮೀನ್ ಮತ್ತು ಸೀರೀನ್ ರಸಾಯನಿಕಗಳು ಇರುತ್ತವೆ. ಮೊಟ್ಟೆ ಕೋಶದ ಕಣಗೋಡೆ ಮತ್ತು ರಕ್ತದಲ್ಲಿನ ಲೈಪೊಪ್ರೊಟೀನುಗಳಲ್ಲಿ ಈ ಗುಂಪಿಗೆ ಸೇರಿದ ಲೆಸಿತಿನ್, ಸೆಫಾಲಿನ್ ಮತ್ತು ಫಾಸ್ಪಟಿಡಯಲ್ ಸೀರೀನ್ ಫಾಸ್ಫೊ ಲಿಪಿಡ್ಡುಗಳಿವೆ. ಮಿದುಳು ಮತ್ತು ನರಗಳಲ್ಲಿ ಸ್ಫಿಂಗೋಮೈಲೀನ್, ಸೆರಿಬ್ರೊಸೈಡುಗಳಿವೆ. ದೇಹದ ಅಂಟುಸ್ರಾವಗಳಲ್ಲಿ ಮ್ಯಾಕೊಪ್ರೊಟೀನಿನ ಭಾಗವಾಗಿರುವ ಎನ್ – ಅಸಿಟೈಲ್ ನ್ಯೂರಮೆನಿಕ್ ಆಮ್ಲ ಅಥವಾ ಸಿಯಾಲಿಕ್ ಆಮ್ಲವಿರುವ ಗ್ಲೈಕೊಲಿಪಿಡ್ಡುಗಳಿವೆ.

ವಿಶೇಷ ಲಿಪಿಡ್ಡುಗಳು ಮತ್ತು ಅವುಗಳಲ್ಲಿನ ಸುಲಭ ವಸ್ತುಗಳು

ಗ್ಲೆಕೊಲಿಪಿಡ್ಡುಗಳು ಮತ್ತು ಅವುಗಳಲ್ಲಿನ ಅಣುಘಟಕಗಳು

| ಹೆಸರು | ಅಣುಘಟಕಗಳು | ವಿವರ |
|---|---|---|
| 1. ಸೆರಮೈಡ್ | ಸ್ಫಿಂಗೊಸೀನ್ ಮತ್ತು ವಿಶೇಷ ಫ್ಯಾಟಿ ಆಮ್ಲ | – |
| 2. ಸೆರಿಬ್ರೊಸೈಡ್ | ಸೆರಮೈಡ್ ಮತ್ತು ಡಿ–ಗೆಲಾಕ್ಟೋಸ | ನರಗಳ ಹೊರಚೀಲ ದಲ್ಲಿನ ವಸ್ತುಗಳು |
| 3. ಗ್ಯಾಂಗ್ಲಿಯೊಸೈಡ್ | ಸೆರಮೈಡ್ ಡಿ–ಗೆಲಾಕ್ಟೋಸ್ ಮತ್ತು ಎನ್– ಅಸಿಟೈಲ್ ಗೆಲಾಕ್ಟೋಸಮೀನ್ ಅಥವಾ ಅದೇ ರೀತಿಯ ವಸ್ತುಗಳು | ಗುಲ್ಮ ಮತ್ತು ನರಗಳಲ್ಲಿ |
| 4. ಸೆರಮೈಡ್ ಅಲಿಗೊ ಸ್ಯಾಕರೈಡ್ | ಸೆರಮೈಡ್, ಡಿ–ಗೆಲಾಕ್ಟೋಸ್ ಮತ್ತು ಗ್ಲೂಕೋಸ್ | ಸೋಂಕು ರಕ್ಷಾ ಸಾಮರ್ಥ್ಯವಿರುವ ವಸ್ತುಗಳು |
| 5. ಗ್ಲೊಬೊಸೈಡ್ | ಸೆರಮೈಡ್ ಗೆಲಾಕ್ಟೋಸ್ ಗ್ಲೂಕೋಸ್ ಮತ್ತು ಎನ್ ಅಸಿಟೈಲ್ ಹೆಕ್ಸೊಸಮೀನ್ | ಗುಲ್ಮ, ಕಲಿಜ, ಕೆಂಪು ರಕ್ತಕಣ ಮತ್ತು ಮಾನವ ರೇತಸ್ಸಿನಲ್ಲಿವೆ. |
| 6. ಹೆಮಟೊಸೈಡ್ | ಸರಮೈಡ್ ಗ್ಲೂಕೋಸ್, ಗೆಲಾಕ್ಟೋಸ್ ಮತ್ತು ಸಿಯಾಲಿಕ್ ಆಮ್ಲ | ಕೆಂಪು ರಕ್ತಕಣದ ಗೋಡೆ, ಮಿದುಳು ಮತ್ತು ಗುಲ್ಮಗಳಲ್ಲಿವೆ. |

ಇವುಗಳಲ್ಲದೆ ಸ್ಟಿರಾಯ್ಡ್ ಗುಂಪಿಗೆ ಸೇರಿದ ಕೊಲೆಸ್ಟಿರಾಲ್, ಡಿ ಜೀವ ಸತ್ತ್ವಗಳು, ಕಾರ್ಟಿಕಲ್ ಹಾರ್ಮೋನುಗಳು, ಟಾರೋಕೋಲಿಕ್ ಆಮ್ಲ ಮತ್ತು ಗ್ಲೈಕೊಕೋಲಿಕ್ ಆಮ್ಲದ ಉಪ್ಪುಗಳನ್ನು ಎ ಮತ್ತು ಇ ಜೀವಸತ್ತ್ವಗಳು ಲಿಪಿಡ್ಡುಗಳ ಗುಂಪಿಗೆ ಸೇರಿಸಲಾಗಿದೆ.

ನಮ್ಮ ಆಹಾರದಲ್ಲಿ ಎಣ್ಣೆ ಮತ್ತು ಕೊಬ್ಬು, ಉಳಿದ ಲಿಪಿಡ್ಡುಗಳಿಗೆ ಹೋಲಿಸಿದರೆ, ಇವುಗಳ ಅಣುರಚನೆ ಸರಳ. ಇವುಗಳಲ್ಲಿ ಗ್ಲಿಸರಾಲ್ ಮತ್ತು ಸ್ಟಿಯರಿಕ್, ಪಾಮೆಟಿಕ್, ಬ್ಯುಟರಿಕ್ ಆಮ್ಲಗಳು ಓಲಿಯಕ್ ಎಂಬ ಅತೃಪ್ತ ಇಂಗಾಲದ ಅಣುಯುಕ್ತ ಫ್ಯಾಟಿ ಆಮ್ಲ ಇವೆ. ಮನುಷ್ಯನಲ್ಲಿ ಎಣ್ಣೆ ಅಥವಾ ಕೊಬ್ಬುಗಳು ಪೂರ್ಣವಾಗಿ ಜೀರ್ಣವಾಗುವುದಿಲ್ಲ. ಅವು ಜಠರದಿಂದ ಕರುಳನ್ನು ಹೊಕ್ಕ ಅನಂತರ ಪಚನಕಾರ್ಯ ಆರಂಭವಾಗುತ್ತದೆ. ಇದಕ್ಕೆ ಬೇಕಾಗುವ ಕಿಣ್ವ ಲೈಪೇಸ್ ಪ್ಯಾಂಕ್ರಿಯಾಸ್ ರಸದಲ್ಲಿದೆ. ಎಣ್ಣೆ, ನೀರಿನಲ್ಲಿ ಕರಗದಿರುವುದರಿಂದ, ಈ ಕಿಣ್ವ ಎಣ್ಣೆಯ ಅಣುಗಳನ್ನು ತಲುಪಬೇಕಾದರೆ, ಅದು ಎಣ್ಣೆನೀರುಗಳು ಸೇರಿ ನೊರೆನೊರೆಯಾದರೆ ಮಾತ್ರ ಸಾಧ್ಯ. ಈ ರೀತಿ ನೊರೆಯಾಗುವಂತೆ ಮಾಡಲು ಪಿತ್ತರಸದ ಉಪ್ಪುಗಳಿಗೆ ಸಾಮರ್ಥ್ಯವಿದೆ. ಇಂಥ ಸ್ಥಿತಿಯಲ್ಲಿ ಲೈಪೇಸ್ ಕಿಣ್ವ ಎಣ್ಣೆ ಅಥವಾ ಕೊಬ್ಬನ್ನು ಅಪೂರ್ಣವಾಗಿ ಜೀರ್ಣಿಸುತ್ತದೆ. ಈ ರೂಪದಲ್ಲಿಯೇ ಕರುಳಿನ ಗೋಡೆಯ ಮೂಲಕ ಹಾದು ಹೋಗಿ ದುಗ್ಧರಸವಾಗಿ, ಕಡೆಗೆ ತೊರಾಸಿಕ್ ನಾಳದ ಮೂಲಕ ರಕ್ತವನ್ನು ಸೇರುತ್ತದೆ. ಅನಂತರ ಯಕೃತ್ತಿಗೆ ಹೋಗಿ, ಆ ಜೀವಿಯ ನಿರ್ದಿಷ್ಟ ಕೊಬ್ಬಾಗಿ, ಮತ್ತೆ ರಕ್ತದ ಮುಖಾಂತರ ದೇಹದಲ್ಲಿ ಶೇಖರವಾಗುತ್ತದೆ. ಶಕ್ತಿಯ ಆವಶ್ಯಕತೆ ಇರುವಾಗ ಇವುಗಳ ಅಣುಗಳು ಒಡೆದು ಫ್ಯಾಟಿ ಆಮ್ಲವಾಗಿ ಅನಂತರ ಅದು ಬೀಟಾ

ಉತ್ಕರ್ಷಣೆಗೆ ಒಳಪಡುತ್ತದೆ. ದೇಹದಲ್ಲಿ ಅವಶ್ಯಕತೆಗಿಂತ ಹೆಚ್ಚು ಗ್ಲೂಕೋಸ್ ಇದ್ದರೆ, ಅದೂ ಅಸಿಟೈಲ್ ಕೊಎನ್‌ಜೈಮ್ ಎ ಮೂಲಕ ಫ್ಯಾಟಿ ಆಮ್ಲವಾಗಿ ಅನಂತರ ಕೊಬ್ಬಾಗಿ ಪರಿವರ್ತಿತವಾಗುತ್ತದೆ.

ಒಂದು ಗ್ರಾಮ್ ಎಣ್ಣೆ ಅಥವಾ ಕೊಬ್ಬು 9 ಕಿಲೋಕ್ಯಾಲರಿ ಶಕ್ತಿಯನ್ನೂ, ಕಾರ್ಬೊಹೈಡ್ರೇಟು 4 ಕಿಲೋ ಕ್ಯಾಲರಿ ಶಕ್ತಿ ಕೊಡುತ್ತವೆ. ಈ ದೃಷ್ಟಿಯಿಂದ ಎಣ್ಣೆಯಲ್ಲಿ ಕರಗಿರುವ ಜೀವಸತ್ತ್ವಗಳಿಗಾಗಿ ಆಹಾರದಲ್ಲಿ ಎಣ್ಣೆ ಅಥವಾ ಕೊಬ್ಬು ಇರಬೇಕು. ಆದರೆ, ದೇಹ ತನ್ನ ಶಕ್ತಿಗಾಗಿ ತನ್ನಲ್ಲಿರುವ ಕೊಬ್ಬನ್ನೇ ಸಂಪೂರ್ಣವಾಗಿ ಅವಲಂಬಿಸಿಲ್ಲ. ಕೆಲವು ಸಂದರ್ಭಗಳಲ್ಲಿ (ಉದಾ: ಉಪವಾಸ ಮಾಡುವಾಗ, ಗ್ಲೂಕೋಸಿನ ಉತ್ಕರ್ಷಣ ಏರುಪೇರಾದಾಗ ಮತ್ತು ಚಿಕಿತ್ಸೆಗೆ ಒಳಗಾದಾಗ ಸಿಹಿಮೂತ್ರ ರೋಗಿಗಳಲ್ಲಿ) ಫ್ಯಾಟಿ ಆಮ್ಲಗಳು ಸಂಪೂರ್ಣ ಉತ್ಕರ್ಷಣ ಹೊಂದದೆ, ಅಸಿಟೊ ಅಸೆಟಿಕ್ ಆಮ್ಲ, ಬೀಟ ಹೈಡ್ರಾಕ್ಸಿಬ್ಯುಟಿರಿಕ್ ಆಮ್ಲ ಮತ್ತು ಅಸಿಟೋನ್ ಎಂಬ ವಸ್ತುಗಳು ರಕ್ತದಲ್ಲಿ ಹೆಚ್ಚಿ, ಅದರ ಆಮ್ಲತೆಯನ್ನು ಹೆಚ್ಚಿಸಿ ದೇಹವನ್ನು ತೊಂದರೆಗೆ ಈಡುಮಾಡುತ್ತವೆ. ಆಮ್ಲತೆ ತೀರ ಹೆಚ್ಚಾದರೆ ಜ್ಞಾನ ತಪ್ಪಿಹೋಗಿ ಸಾಕಷ್ಟು ಬೇಗ ಚಿಕಿತ್ಸೆ ದೊರೆಯದೆ ಹೋದರೆ ಪ್ರಾಣ ಹಾನಿಯಾಗುತ್ತದೆ.

ಕೊಲೆಸ್ಟಿರಾಲಿನ ತಯಾರಿಕೆಗೆ ಆರಂಭದ ವಸ್ತು ಪೈರುವೇಟಿನಿಂದ ಬರುವ ಅಸಿಟೈಲ್ ಕೊಎನ್‌ಜೈಮ್ ಎ. ಇದು ಫ್ಯಾಟಿ ಆಮ್ಲ ಬೀಟ ಉತ್ಕರ್ಷಣೆ ಹೊಂದಿದಾಗ ಬರುತ್ತದೆ.

ಕೊಲೆಸ್ಟಿರಾಲ್ ನೀರಿನಲ್ಲಿ ಕರುಗುವುದಿಲ್ಲ. ಆದ್ದರಿಂದ ರಕ್ತದಲ್ಲಿ ಇದರ ಮಟ್ಟ ಹೆಚ್ಚಾದರೆ ಇದು ರಕ್ತನಾಳಗಳ ಒಳಗೋಡೆಯ ಮೇಲೆ ನಿಕ್ಷೇಪಗೊಂಡು ನಾಳಗಳ ಒಳವಿನ್ಯಾಸ ಕಡಿಮೆಯಾಗಿ, ರಕ್ತ ಹರಿಯಲು ಹೆಚ್ಚು ಒತ್ತಡ ಉಂಟುಮಾಡುತ್ತದೆ. ಹೃದಯದ ಸ್ನಾಯುಗಳಿಗೆ ರಕ್ತವನ್ನು ಒದಗಿಸುವ ನಾಳವಾಗಿದ್ದರೆ ಹೃದಯಾಘಾತ ಕೂಡಾ ಆಗಬಹುದು. ಪಿತ್ತ ಗ್ರಂಥಿಯಲ್ಲಿ ಅಥವಾ ನಾಳದಲ್ಲಿ ಕಲ್ಲಿನ ರೀತಿ ಗಟ್ಟಿಯಾದ ಕೊಲೆಸ್ಟಿರಾಲ್ ಇರುವ ಶಿಲೆಗೆ ಪಿತ್ತಾಶ್ಮರಿ (ಕ್ಯಾಲ್ಕುಲಸ್) ಎಂದು ಹೆಸರು. ಈ ಪಿತ್ತಗ್ರಂಥಿಯಲ್ಲಿ ಪಿತ್ತ ನೀರನ್ನು ಕಳೆದುಕೊಂಡು ಗಟ್ಟಿ ದ್ರವವಾಗುವಾಗ ನೀರಿನಲ್ಲಿ ಕರಗದ ಕೊಲೆಸ್ಟಿರಾಲ್ ನಿಕ್ಷೇಪಗೊಂಡು ಈ ಪಿತ್ತಾಶ್ಮರಿ ಬೆಳೆಯುವುದು.

ಅಜೈವಿಕ ವಸ್ತುಗಳು : ಕಬ್ಬಿಣ, ಕ್ಯಾಲ್ಸಿಯಮ್, ಅಯೊಡಿನ್, ಫಾಸ್ಫೇಟ್, ಕ್ಲೋರೈಡ್, ಸತು ಅಜೈವಿಕ ವಸ್ತುಗಳು. ಇವು ಜೀವರಸಾಯನ ವಸ್ತುಗಳಲ್ಲಿ, ಕೋಶದಲ್ಲಿನ ರಕ್ತ ಮತ್ತು ದೇಹದ್ರವಗಳಲ್ಲಿರುತ್ತವೆ. ಉದಾ: ಸೋಡಿಯಮ್, ಪೊಟ್ಯಾಸಿಯಮ್ ಮತ್ತು ಕ್ಲೋರೈಡುಗಳು. ಸೋಡಿಯಮ್, ಪೊಟ್ಯಾಸಿಯಮ್ ವಸ್ತುಗಳ ಪ್ರಾಮುಖ್ಯವನ್ನು ಮೊದಲು ವ್ಯಾಸಂಗ ಮಾಡಿದಾತ ಸಿಡ್ನಿ ರಿಂಗರ್. 1880 ರಲ್ಲಿ ಈತ ಕಪ್ಪೆಯ ಹೃದಯವನ್ನು ಬಳಸಿ ಪ್ರಯೋಗಗಳನ್ನು ಮಾಡಿ, ಸೋಡಿಯಮ್, ಪೊಟ್ಯಾಸಿಯಮ್ ಮತ್ತು ಕ್ಯಾಲ್ಸಿಯಮ್ ದ್ರಾವಣದಲ್ಲಿ ಹೃದಯದ ಬಡಿತವಿರುವುದನ್ನು ತೋರಿಸಿದ. ನಿಯತತಾಪೀ ರಕ್ತದ ಪ್ರಾಣಿಗಳಿಗೆ ಮೆಗ್ನೀಸಿಯಮ್ ಲವಣ ಬೇಕು. ಈ ಲವಣಗಳ ಮುಖ್ಯ ಕೆಲಸಗಳಲ್ಲಿ ಮೊದಲನೆಯದು, ದೇಹದ ವಿವಿಧ ಭಾಗಗಳಲ್ಲಿ ನೀರಿನ ಹಂಚಿಕೆಯನ್ನು ಹತೋಟಿಯಲ್ಲಿಡುವ ಅಭಿಸರಣ ಸಂಮರ್ದವನ್ನು (ಅಸ್ಮಾಟಿಕ್ ಪ್ರೆಷರ್) ಸರಿಯಾಗಿ ಇಡುವುದು. ಹೀಗೆ ಮಾಡುವುದರಿಂದ ನೀರು, ಅದರಲ್ಲಿ ಕರಗಿದ ಆಹಾರಾಂಶಗಳೊಂದಿಗೆ ರಕ್ತದಿಂದ ಕೋಶಗಳಿಗೆ ಮತ್ತು ವಿಸರ್ಜಿತ ವಸ್ತುಗಳು ಕೋಶದಿಂದ ರಕ್ತಕ್ಕೆ ಬರುಲು ಸಾಧ್ಯವಾಗುತ್ತದೆ. ಸಾಧಾರಣವಾಗಿ ಕೋಶದಲ್ಲಿ ಪೊಟ್ಯಾಸಿಯಮ್ ಹೆಚ್ಚಾಗಿರುತ್ತದೆ. ರಕ್ತದಲ್ಲಿನ ದುಗ್ಧರಸದಲ್ಲಿ ಕಡಿಮೆ. ಸಂದೇಶವಾಹಕ ನರಗಳಿಗೆ ಉತ್ತೇಜಕವಾಗಿ ಕೆಲಸ ಮಾಡುತ್ತವೆ. ರಕ್ತದಲ್ಲಿ ಪೊಟ್ಯಾಸಿಯಮ್ ಮತ್ತು ಸೋಡಿಯಮ್ ಅಯಾನುಗಳ ಪ್ರಮಾಣ ಸರಿಯಾಗಿಡುವ ಕಾರ್ಯದ ನಿರ್ವಹಣೆ ಮೂತ್ರಜನಕಾಂಗದ ಮೇಲಿನ ಗ್ರಂಥಿ ಕಾರ್ಟಿಕಲ್ ಹಾರ್ಮೋನುಗಳಿಂದ ಆಗುತ್ತದೆ.

ಕ್ಯಾಲ್ಸಿಯಮ್ ಮತ್ತು ಫಾಸ್ಫೇಟುಗಳೆರಡೂ ಮೂಳೆಯಲ್ಲಿ ವಿಶೇಷವಾಗಿರಬೇಕು. ಮೂಳೆ ಬೆಳೆಯಲು ಮತ್ತು ಆರೋಗ್ಯವಾಗಿರಲು ಇವು ಅವಶ್ಯಕ. ಕ್ಯಾಲ್ಸಿಯಮ್ ಲವಣಗಳು ತರಕಾರಿಗಳಲ್ಲಿನ ಫೈಟಿಕ್ ಆಮ್ಲಗಳೊಂದಿಗೆ ಸೇರುವುದರಿಂದ ಕರುಳು ಹೀರಿಕೊಳ್ಳದೆ ಹೋಗಬಹುದು. ಆದರೂ ರಾಗಿಯಲ್ಲಿನ ಕ್ಯಾಲ್ಸಿಯಮ್ಮನ್ನು ಕರುಳು ಹೀರಿಕೊಳ್ಳುತ್ತದೆ. ಹಾಲಿನ ಕ್ಯಾಲ್ಸಿಯಮ್ಮನ್ನು ಕೂಡ ಕರುಳು ಚೆನ್ನಾಗಿ ಹೀರಿಕೊಳ್ಳುತ್ತದೆ. ಈ ಕಾರ್ಯದಲ್ಲಿ ರಕ್ತದಲ್ಲಿ ಕ್ಯಾಲ್ಸಿಯಮ್ಮನ್ನು ಸರಿಯಾದ ಮಟ್ಟದಲ್ಲಿ ಇಡುವ ಕಾರ್ಯದಲ್ಲಿ, ಮೂಳೆಯನ್ನೂ ಸರಿಯಾಗಿ ಬೆಳೆಸುವುದರಲ್ಲಿ, ಡಿ ಜೀವಸತ್ತ್ವ ಮುಖ್ಯ ಪಾತ್ರವನ್ನು ವಹಿಸುವುದು. ಪ್ಯಾರಾಥೈರಾಯ್ಡ್ ಹಾರ್ಮೋನು ಮತ್ತು ಕ್ಯಾಲ್ಸಿಟೋನಿನುಗಳು, ಕ್ಯಾಲ್ಸಿಯಮ್ ಚಯಾಪಚಯ ಕ್ರಿಯೆಯಲ್ಲಿ ಭಾಗವಹಿಸುವ ಹಾರ್ಮೋನುಗಳು, ಕ್ಯಾಲ್ಸಿಯಮ್ ಅಯಾನು ರಕ್ತ ಹೆಪ್ಪುಗಟ್ಟಲು, ಕೋಶದ ಹೊರಪೊರೆಯ ಆರೋಗ್ಯಕ್ಕು ಮತ್ತು ನರಗಳ ದೂತಕ್ರಿಯೆಗು ಬೇಕು.

ಕಬ್ಬಿಣ ರಕ್ತಗತವಾಗಲು ಫೆರಸ್ ರೂಪದಲ್ಲಿ ಮತ್ತು ಹೆಚ್ಚು ಆಮ್ಲತೆಯ ಸ್ಥಿತಿಯಲ್ಲಿರಬೇಕು. ಹೀರಿಕೊಳ್ಳುವ ಪ್ರಮಾಣ ಕರುಳಿನ ಗೋಡೆಯಲ್ಲಿನ ಫೆರ್ರಿಟಿನ್ನಿನ ಮಟ್ಟವನ್ನು ಅವಲಂಬಿಸಿದೆ. ಈ ಫೆರ್‍ರಿಟಿನ್ ದ್ವಾರಪಾಲಕನಾಗಿ ಕೆಲಸ ಮಾಡುತ್ತದೆ. ದೇಹಕ್ಕೆ ಅವಶ್ಯವಿರುವಷ್ಟು ಮಾತ್ರ ಕಬ್ಬಿಣವನ್ನು ಹೀರಿಕೊಳ್ಳುವಂತೆ ಮಾಡುತ್ತದೆ. ಏಕೆಂದರೆ, ಒಂದು ಸಲ ದೇಹಕ್ಕೆ ಸೇರಿದ ಕಬ್ಬಿಣ, ದೇಹದಿಂದ ಆಚೆಗೆ ಹೋಗುವುದು ರಕ್ತದ ರೂಪದಲ್ಲಿ ಮಾತ್ರ. ಹೆಚ್ಚಾದ ಕಬ್ಬಿಣ ದೇಹದಲ್ಲಿ ಉಳಿದು ಯಕೃತ್ತಿನ ಜೀವಕೋಶಗಳಿಗೆ ಘಾಸಿ ಮಾಡುತ್ತದೆ. ಫೆರ್‍ರಿಟಿನ್ ಕೂಡ ಫೆರಿಕ್ ರೂಪದ ಕಬ್ಬಿಣವನ್ನು ಹೊಂದಿದ ಪ್ರೊಟೀನು. ಇದರ ರೂಪದಲ್ಲಿ ಕಬ್ಬಿಣ ಗುಲ್ಮದಲ್ಲಿ ಮತ್ತು ಮೂಳೆಯ ಮಜ್ಜೆಯಲ್ಲಿ ಸಂಗ್ರಹವಾಗುತ್ತದೆ. ರಕ್ತದಲ್ಲಿ ಕಬ್ಬಿಣವನ್ನು ಸಾಗಿಸಲು ಟ್ರಾನ್ಸ್‌ಫೆರಿನ್ ಎಂಬ ಇನ್ನೊಂದು ಪ್ರೊಟೀನ್ ಇದೆ. ದೇಹದ ಉತ್ಕರ್ಷಣ ಕ್ರಿಯೆಯಲ್ಲಿ ಕಬ್ಬಿಣ ಮುಖ್ಯ ಪಾತ್ರವನ್ನು ವಹಿಸುತ್ತದೆ. ಉತ್ಕರ್ಷಣ ಕ್ರಿಯೆಗೆ ಬೇಕಾದ ಆಮ್ಲಜನಕ ಸಾಗಣೆಗಾಗಿ ಇರುವ ಹೀಮೊಗ್ಲೋಬಿನ್ನಿನಲ್ಲಿ ಮತ್ತು ಸ್ನಾಯುಗಳಲ್ಲಿರುವ ಮಯೋಗ್ಲೋಬಿನ್ನುಗಳಲ್ಲಿ ಕಬ್ಬಿಣ ಫೆರಸ್ ರೂಪದಲ್ಲಿದೆ. ಹೀಮೊಗ್ಲೋಬಿನ್ ಆಕ್ಸಿಜನ್ನನ್ನು ತೆಗೆದುಕೊಂಡಾಗ ಈ ಫೆರಸ್ ರೂಪದಲ್ಲಿ ಬದಲಾವಣೆ ಆಗುವುದಿಲ್ಲ. ಕೋಶಗಳಲ್ಲಿರುವ ಸೈಟೊಕ್ರೋಮುಗಳಲ್ಲಿ ಫೆರಸ್ ಮತ್ತು ಫೆರಿಕ್ ರೂಪಗಳೆರಡರಲ್ಲಿ ಕಬ್ಬಿಣ ಇರುತ್ತದೆ. ಸೈಟೋಕ್ರೋಮಿನಲ್ಲಿನ ಫೆರಸ್ ರೂಪ ಒಂದು ಎಲೆಕ್ಟ್ರಾನನ್ನು ಕೊಟ್ಟು ಉತ್ಕರ್ಷಣ ಹೊಂದಿ ಫರಿಕ್ ರೂಪ ತಾಳುತ್ತದೆ. ಈ ಫೆರಿಕ್ ರೂಪ ಎಲೆಕ್ಟ್ರಾನನ್ನು ತೆಗೆದುಕೊಂಡು ಆಕರ್ಷಣಗೊಂಡು ಫೆರಸ್ ರೂಪ ಪಡೆಯುತ್ತದೆ. ಈ ಗುಣದಿಂದ ಸೈಟೊಕ್ರೋಮುಗಳು ಎಲೆಕ್ಟ್ರಾನು ಸಾಗಣೆ ಕಾರ್ಯದಲ್ಲಿ ಕೆಲಸ ಮಾಡಲು ಸಾಧ್ಯ.

ಪಾರ್‌ಫೈರಿನುಗಳು : ಹಿಮೊಗ್ಲೋಬಿನ್, ಸೈಟೊಕ್ರೋಮ್ ಮುಂತಾದ ಕಬ್ಬಿಣಯುಕ್ತ ರಸಾಯನ ವಸ್ತುಗಳ ಅಣುಗಳಲ್ಲಿ ಪಾರ್‌ಫೈರಿನುಗಳಿವೆ. ಇವು ಜಟಿಲ ಅಣುರಚನೆಯಿಂದಾದ ವಸ್ತುಗಳು. ಗ್ಲೈಸೀನ್ ಅಮೈನೋ ಆಮ್ಲ ಮತ್ತು ಸಕ್ಸಿನಿಕ್ ಆಮ್ಲಗಳು ಇವುಗಳ ತಯಾರಿಕೆಗೆ ಪ್ರಾರಂಭದ ವಸ್ತುಗಳು. ಇವು ಪಿರಿಡಾಕ್ಸಾಲ್ ಫಾಸ್ಫೇಟಿನ ಸಹಾಯದಿಂದ ಪರ್ಫೊಬಿಲಿನೋಜನ್ ಎಂಬ ಪಿರೋರ್ ರಸಾಯನ ಗುಂಪಿಗೆ ಸೇರಿದ ವಸ್ತುವಾಗುವುವು. ಈ ಪಾರ್ಫೊಬಿಲಿನೊಜನ್ನಿನ ನಾಲ್ಕು ಅಣುಗಳು ಸೇರಿಕೊಂಡು ಕೆಲವಾರು ಬದಲಾವಣೆ ಹೊಂದಿ ಪಾರ್‌ಫೈರಿನ್ ಆಗುವುದು.

ಪಾರ್‌ಫೈರಿನುಗಳ ಚಯಪಚಯ ಕ್ರಿಯೆಯಲ್ಲಿ ಬಿಲಿವರ್ಡಿನ್ ಮತ್ತು ಬಿಲಿರುಬಿನ್ ಎಂಬ ಹಸಿರು ಮಿಶ್ರಿತ ಹಳದಿ ಬಣ್ಣದ ವಸ್ತುಗಳಾಗುವುವು. ಬಳಿಕ ಯಕೃತ್ತಿನಲ್ಲಿ ಗ್ಲೂಕುರೋನಿಕ್ ಆಮ್ಲದೊಂದಿಗೆ ರಾಸಾಯನಿಕ ಪರಿವರ್ತನೆಗೊಂಡು ಗ್ಲೂಕುರೊನೈಡುಗಳಾಗುತ್ತವೆ. ಮುಂದೆ ಪಿತ್ತರಸವಾಗಿ ಕರುಳಿಗೆ ಹೋಗುವುವು. ಕರುಳಿನಲ್ಲಿ ರಸ ಬದಲಾವಣೆಗೊಂಡು ಸ್ವಲ್ಪ ಮಲದಲ್ಲಿ ವಿಸರ್ಜಿತವಾಗುತ್ತವೆ. ಸ್ವಲ್ಪಭಾಗ ಮತ್ತೆ ರಕ್ತಕ್ಕೆ ಬಂದು, ಯಕೃತ್ತಿಗೆ ಹೋಗುವುದು. ಕೆಲವೊಮ್ಮೆ ಪಿತ್ತರಸ ನಾಳದಲ್ಲಿ ತೊಂದರೆ ಉಂಟಾದಾಗ ಅಥವಾ ಯಕೃತ್ ಚಟುವಟಿಕೆ ರಹಿತವಾದಾಗ ಅಥವಾ ರಕ್ತಕಣನಾಶ ಹೆಚ್ಚಾದಾಗ ಈ ಬಣ್ಣದ ವಸ್ತುಗಳು ರಕ್ತದಲ್ಲಿ ಹೆಚ್ಚಾಗಿ ಕಾಮಲೆ ರೋಗ ಬರುತ್ತದೆ.

ಕಿಣ್ವವಿಜ್ಞಾನ : ಕಿಣ್ವಗಳು ರಸಾಯನ ಕಾರ್ಯಗಳ ವೇಗವನ್ನು ಹೆಚ್ಚಿಸುವ ಪ್ರೊಟೀನುಗಳು. ರಸಾಯನ ಕಾರ್ಯಗಳು ನಡೆಯಬೇಕಾದರೆ ಇವು ಬೇಕು. ಇವುಗಳ ಸಾಮರ್ಥ್ಯ ಅಣುವಿನ್ಯಾಸವನ್ನು ಅವಲಂಬಿಸಿದೆ. ಅಧಿಕ ಉಷ್ಣತೆ ಕಿಣ್ವದ ಅಣುವಿನ್ಯಾಸವನ್ನು ಬದಲಾಯಿಸುತ್ತದೆ. ಆದ್ದರಿಂದ, ಇವುಗಳ ಕಾರ್ಯಕ್ಕೆ ಸಾಮಾನ್ಯ ಉಷ್ಣತೆ ಬೇಕು. ಆಮ್ಲತೆ ಅಣುವಿನ್ಯಾಸವನ್ನು ವ್ಯತ್ಯಾಸ ಮಾಡುವುದರಿಂದ, ನಿರ್ದಿಷ್ಟ ಆಮ್ಲತೆ ಕಿಣ್ವಗಳ ಚಟುವಟಿಕೆಗೆ ಅತ್ಯಾವಶ್ಯಕ. ಇವೆರಡು ಸರಿಪ್ರಮಾಣದಲ್ಲಿದ್ದರೆ, ಕಿಣ್ವಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತವೆ. ಕಿಣ್ವಗಳು ನಿರ್ದಿಷ್ಟ ಗುಣಹೊಂದಿವೆ. ಕಿಣ್ವ ಕೆಲಸ ಮಾಡಲು ರಾಸಾಯನಿಕವಾಗಿ ಪರಿವರ್ತನೆಗೊಳ್ಳುವ ವಸ್ತು ನಿರ್ದಿಷ್ಟವಾಗಿರಬೇಕು. ಅದರ ಅಣುವಿನಲ್ಲಿ ಸ್ವಲ್ಪ ಬದಲಾವಣೆಯಾದರೂ ಈ ಕಿಣ್ವ ಕೆಲಸ ಮಾಡಲಾರದು. ಅಷ್ಟೇ ಅಲ್ಲದೆ ಅಣುರಚನೆಯಲ್ಲಿ ಸ್ವಲ್ಪ ಬದಲಾವಣೆ ಹೊಂದಿರುವ ವಸ್ತುಗಳು, ಕಿಣ್ವಕ್ಕೆ ವಿಷವಾಗಿ ಪರಿಣಮಿಸಬಹುದು. ವಿಷಕ್ರಿಮಿಗಳನ್ನು ಕೊಲ್ಲಲು ಈ ಗುಣ ಉಪಯೋಗಿಸಿಕೊಳ್ಳಬಹುದು. ಔಷಧಗಳ ತಯಾರಿಕೆಯಲ್ಲಿ ವಿಷಕ್ರಿಮಿಗಳು, ಏಡಿಗಂತಿ ಕೋಶಗಳಲ್ಲಿ ಅತ್ಯವಶ್ಯವಾದ ರಸಾಯನ ಮತ್ತು ಬದಲಾವಣೆಯ ಕಾರ್ಯವನ್ನು ಕಂಡುಹಿಡಿದು, ರಸಾಯನವಸ್ತುವಿನ ಅಣುಸಾದೃಶ್ಯವಿರುವ ಔಷದ ತಯಾರಿಸುವ ಮಾರ್ಗ ಸಫಲವಾಗಿದೆ. ಅದರೆ, ಈ ಔಷಧಿ ದೇಹದ ಉಳಿದ ಕೋಶಗಳಿಗೆ ಮಾರಕವಾಗದಂತಿರಬೇಕು.

ಎಲ್ಲ ಜೀವಕಾರ್ಯಗಳು ರಸಾಯನಕಾರ್ಯಗಳ ಒಕ್ಕೂಟವಾಗಿರುವುದರಿಂದ, ಎಲ್ಲ ರಸಾಯನಕಾರ್ಯಗಳು ಕಿಣ್ವವನ್ನೇ ಅವಲಂಬಿಸಿರುವುದರಿಂದ, ಕೋಶದಲ್ಲಿ ಸಂದರ್ಭೋಚಿತವಾಗಿ ಅವುಗಳ ಮಟ್ಟವನ್ನು ಕಾಪಾಡಬೇಕು. ಇದಕ್ಕೆ ಹಲವು ಮಾರ್ಗಗಳಿವೆ. ಕಿಣ್ವಗಳ ತಯಾರಿಕೆಯನ್ನು ಪ್ರಚೋದಿಸುವುದೊಂದು ಮಾರ್ಗ. ಗ್ಲೂಕೋಸನ್ನು ಆಹಾರವಾಗಿ ಕೊಟ್ಟು ಬೆಳೆಸಿದ ಯೀಸ್ಟ್ ಕೋಶಗಳು ಗೆಲಾಕ್ಟೋಸನ್ನು ಒಡೆದು ಆಲ್ಕೊಹಾಲ್ ತಯಾರಿಸುವ

ಸಾಮಾರ್ಥ್ಯವನ್ನು ಪಡೆದಿರುವುದಿಲ್ಲ. ಅದರಲ್ಲಿ ಈ ಗೆಲಾಕ್ಟೋಸನ್ನು ಉಪಯೋಗಿಸಿಕೊಳ್ಳಲು ಬೇಕಾದ ಕಿಣ್ವವಿರುವುದಿಲ್ಲ. ಆದರೆ, ಅದನ್ನೆ ಗೆಲಾಕ್ಟೋಸ್ ದ್ರಾವಣದಲ್ಲಿ ಸ್ವಲ್ಪಕಾಲ ಇಟ್ಟರೆ ನಿಧಾನವಾಗಿ ಅದನ್ನು ಬಳಸಿಕೊಳ್ಳುವ ಸಾಮರ್ಥ್ಯ ಬರುತ್ತದೆ. ಇದೇ ರೀತಿ ಪಿಷ್ಟದಿಂದ ಅಮೈಲೇಸ್ ಕಿಣ್ವ ಟ್ರಿಪ್ಟೋಫೇನ್ ಅಮೈನೋ ಆಮ್ಲದಿಂದ ಟ್ರಿಪ್ಟೋಫಿನೇಸ್ ಕಿಣ್ವಗಳನ್ನು ಕೆಲವು ಏಕಾಣುಜೀವಿಗಳಲ್ಲಿ ತಯಾರಾಗುವಂತೆ ಪ್ರಚೋದಿಸಬಹುದು. ಕಿಣ್ವಗಳ ತಯಾರಿಕೆಯನ್ನು ತಗ್ಗಿಸುವುದು ಇನ್ನೊಂದು ಮಾರ್ಗ. ಉದಾ: ಅರ್ಜಿನೀನ್ ತಯಾರಿಕೆಯಲ್ಲಿ ಪಾಲುಗೊಳ್ಳುವ ಅರ್ನಿಥೀನ್ ಟ್ರಾನ್ಸ್‌ಕಾರ್ಬಮೈಲೇಸ್ ಎಂಬ ಕಿಣ್ವ. ಈ. ಕೋಲೈ ಕೋಶಗಳನ್ನು ಸಹಜ ಸ್ಥಿತಿಯಲ್ಲಿ ಬಳಸಿದರೆ ಇದರ ಮಟ್ಟ ಸಾಕಷ್ಟು ಇರುತ್ತದೆ. ಆರ್ಜಿನೀನ್ ಹೆಚ್ಚಿರುವ ಆಹಾರ ದ್ರಾವಣದಲ್ಲಿ ಬೆಳೆಸಿದರೆ ಈ ಕಿಣ್ವದ ಮಟ್ಟ ಕಡಿಮೆ ಆಗುತ್ತದೆ.

ಈ ರೀತಿಯ ಪ್ರಯೋಗಗಳಲ್ಲಿ ಆಯಾ ಕಿಣ್ವಗಳ ತಯಾರಿಕೆಗೆ, ಆ ಜೀವಿಗಳಲ್ಲಿ ಬೇಕಾದ ಜೀನ್‌ಗಳು ಇದ್ದೇ ಇರಬೇಕು. ಹೀಗಿದ್ದರೂ ಅವುಗಳ ತಯಾರಿಕೆ ಹೇಗೆ ವ್ಯತ್ಯಾಸವಾಗುತ್ತದೆ ಎಂಬುದನ್ನು ಜಾಕೊಬ್ ಮತ್ತು ಮೊನೊಡ್ ಎಂಬ ಜೀವರಸಾಯನ ವಿಜ್ಞಾನಿಗಳು ವಿವರಿಸಿದ್ದಾರೆ. (ನೋಡಿ – ಅಪೆರಾನ್ ಸಿದ್ಧಾಂತ).

ಅಲ್ಲೊಸ್ಟಿರಿಕ್ ನಿಯಂತ್ರಣ ಅಥವಾ ಕಿಣ್ವ ಅಣು ವಿನ್ಯಾಸ ಬದಲಾವಣೆ ಇನ್ನೊಂದು ಮಾರ್ಗ. ಈ ಮಾರ್ಗದಲ್ಲಿ ಕ್ರಿಯಾಸರಣಿಯ ಅಂತಿಮ ಉತ್ಪನ್ನ ಮೊದಲ ರಸಾಯನ ಕ್ರಿಯೆಯ ಕಿಣ್ವದ ಅಣುವಿನೊಂದಿಗೆ ಸೇರಿ ಅದರ ಅಣು ವಿನ್ಯಾಸವನ್ನು ಬದಲಾಯಿಸುವುದು. ಆದ್ದರಿಂದ, ಕ್ರಿಯೆ ಮುಂದುವರಿಯುವುದಿಲ್ಲ. ಉದಾ: ಅಸ್ಪರ್ಟೇಟ್ ಟ್ರಾನ್ಸ್ ಕಾರ್ಬಮೈಲೇಸ್ ಎಂಬ ಕಿಣ್ವ. ಇದು ಸಿಟಿಪಿ ತಯಾರಿಕೆಯಲ್ಲಿ ಮೊದಲ ಹಂತವಾದ ಅಸ್ಪಾರ್ಟಿಕ್ ಆಮ್ಲ ಮತ್ತು ಕಾರ್ಬಮೈಲ್ ಫಾಸ್ಫೇಟನ್ನು ಒಂದುಗೂಡಿಸುತ್ತದೆ. ಈ ಕಿಣ್ವದ ಕ್ರಿಯಾಶಕ್ತಿಯನ್ನು ಸಿಟಿಪಿ ರಸಾಯನವಸ್ತು ಕಡಿಮೆ ಮಾಡುವುದು ಈ ಅಲ್ಲೊಸ್ಟಿರಿಕ್ ಮಾರ್ಗದಿಂದ.

ಜೀನ್‌ಗಳ ವಿಕೃತಿ (ಮ್ಯುಟೇಷನ್) ಪ್ರಕೃತಿಯಲ್ಲಿ ತಂತಾನೆ ಆಗುತ್ತಿರುತ್ತದೆ. ಆದರೆ ಅತಿನೇರಿಳೆ ಕಿರಣಗಳು, ಎಕ್ಸ್–ಕಿರಣಗಳು ಪರಮಾಣು ಬಾಂಬಿನ ಸ್ಫೋಟನೆಯಾದ ಬಳಿಕ ಉಂಟಾಗುವ ಗ್ಯಾಮ ಕಿರಣಗಳು ಈ ವಿಕೃತಿಯನ್ನು ಹೆಚ್ಚಿಸುತ್ತವೆ. ಸಾಧಾರಣವಾಗಿ ಜೀನಿನ ಡಿಎನ್‌ಎ ಬಹಳ ಸ್ಥಿರವಾದುದು. ಬ್ಯಾಕ್ಟೀರಿಯಗಳಲ್ಲಿ ಒಂದು ಡಿಎನ್‌ಎ ಹತ್ತು ಕೋಟಿ ದ್ವಿಗುಣವಾದಾಗಲೂ ಅದು ಬದಲಾಗುವ ಸಂಭಾವ್ಯತೆ ನೂರಕ್ಕೆ 50 ರಷ್ಟು ಎಂದು ಲೆಕ್ಕ ಹಾಕಿದ್ದಾರೆ. ಸ್ವಲ್ಪ ಬದಲಾವಣೆಗೊಂಡ, ಆದರೆ ಪೂರ್ಣನಾಶವಾಗದ, ಜೀನ್ ಮತ್ತೆ ದುರಸ್ತಿಯಾಗಲು ಮಾರ್ಗವಿರುವುದೇ ಇದಕ್ಕೆ ಕಾರಣ. ಕೆಲವು ಬ್ಯಾಕ್ಟೀರಿಯಗಳನ್ನು ಅತಿನೇರಿಳೆ ಕಿರಣಗಳಿಗೆ ಒಡ್ಡಿದಾಗ ಅವುಗಳ ಜೀನಿನ ಡಿಎನ್‌ಎ ಯಲ್ಲಿರುವ ಥೈಮೀನ್ ಜೋಡಿಯಾಗುವುದು ಮತ್ತು ಅದರ ಡಿಎನ್‌ಎ ಅಣು ವಿನ್ಯಾಸ ಬದಲಾವಣೆಯಾಗಿ, ಆ ಬ್ಯಾಕ್ಟೀರಿಯಗಳ ಬೆಳೆವಣಿಗೆ ನಿಂತುಹೋಗುವುದು. ಈ ಬ್ಯಾಕ್ಟೀರಿಯಗಳನ್ನು ಪುನಃ ನೀಲಿ ಕಿರಣಗಳಿಗೆ ಒಡ್ಡಿದರೆ, ಡಿಎನ್‌ಎ ರಿಪೇರಿಯಾಗಿ ಬ್ಯಾಕ್ಟೀರಿಯಗಳು ಎಂದಿನಂತೆಯೇ ಬೆಳೆಯ ತೊಡಗುವುವು. ಇದೇ ರೀತಿ ಇನ್ನೂ ಕೆಲವು ರಿಪೇರಿ ಮಾರ್ಗಗಳಿವೆ. ಆದ್ದರಿಂದಲೇ ಪ್ರಕೃತಿಯಲ್ಲಿ ವಿಕೃತಿ ಅಪರೂಪ.

ಶಕ್ತಿ ವ್ಯವಹಾರ : ಎಲ್ಲ ರಸಾಯನವಸ್ತುಗಳಲ್ಲಿಯು ರಸಾಯನ ಶಕ್ತಿ ಇದೆ. ಅಧಿಕ ಶಕ್ತಿಯುತ ವಸ್ತು ಕಡಿಮೆ ಶಕ್ತಿಯ ಇನ್ನೊಂದು ವಸ್ತುವಾಗಿ ಬದಲಾವಣೆಗೊಂಡಾಗ ಶಕ್ತಿ ಬಿಡುಗಡೆಯಾಗುತ್ತದೆ. ಪಿಷ್ಟ, ಗ್ಲೂಕೋಸ್, ಎಣ್ಣೆಯಲ್ಲಿನ ಗ್ಲಿಸರಾಲ್ ಮತ್ತು ಫ್ಯಾಟೀ ಆಮ್ಲ, ಪ್ರೊಟೀನುಗಳು ಉತ್ಕರ್ಷಣಗೊಂಡು ಇಂಗಾಲದ ಡೈಆಕ್ಸೈಡ್ ಆಗುವುದು. ಆಹಾರ ವಸ್ತುಗಳಿಗೆ ಹೋಲಿಸಿದರೆ ಇಂಗಾಲದ ಡೈಆಕ್ಸೈಡಿನಲ್ಲಿ ಕಡಿಮೆ ಶಕ್ತಿ ಇರುವುದರಿಂದ ಆಹಾರ ವಸ್ತುಗಳ ಮತ್ತು ಇಂಗಾಲದ ಡೈಆಕ್ಸೈಡಿನ ಶಕ್ತಿ ವ್ಯತ್ಯಾಸ ಈ ಉತ್ಕರ್ಷಣ ಕ್ರಿಯೆಯಿಂದ ಬಿಡುಗಡೆ ಆಗುತ್ತದೆ. ಈ ಶಕ್ತಿಯನ್ನು ಕೋಶ ತನಗೆ ಬೇಕಾದ ರೂಪದಲ್ಲಿ ಹಿಡಿದಿಟ್ಟುಕೊಂಡು, ಬೇಕಾದ ಕಾರ್ಯಗಳಿಗಾಗಿ ಉಪಯೋಗಿಸಿಕೊಳ್ಳುತ್ತದೆ. ವಿಶೇಷ ಫಾಸ್ಫೇಟುಗಳು ಈ ರೀತಿ ಶಕ್ತಿ ಹಿಡಿದಿಟ್ಟುಕೊಳ್ಳುವ ಶಕ್ತಿ ನಾಣ್ಯಗಳು. ಅವುಗಳಲ್ಲಿ ಅಡೆನೋಸೀನ್ ಟ್ರೈಫಾಸ್ಫೇಟ್ ಮುಖ್ಯವಾದುದು. ಇದರ ಅಣುವಿನಲ್ಲಿ ಮೂರು ಫಾಸ್ಫೇಟುಗಳು ಒಂದು ರೈಬೋಸ್ ಅಣು ಮತ್ತು ಅಡೆನೀನ್ ಎಂಬ ಪ್ಯೂರೀನೂ ಇವೆ. ಜಿಟಿಪಿ ಎಂಬ ಶಕ್ತಿನಾಣ್ಯದಲ್ಲಿ ಗ್ವಾನೀನ್ ಎಂಬ ಪ್ಯೂರೀನ್ ಮತ್ತು ಉಳಿದ ಸಿಟಿಪಿ, ಯುಟಿಪಿ, ಟಿಟಿಪಿ ಮುಂತಾದುವುಗಳಲ್ಲಿ ಅನುಕ್ರಮವಾಗಿ ಸೈಟೋಸೀನ್, ಯುರಾಸಿಲ್ ಮತ್ತು ಉಳಿದ ಥೈಮಿನ್ ಎಂಬ ಪಿರಿಮಿಡೀನ್ ಗುಂಪಿಗೆ ಸೇರಿದ ವಸ್ತುಗಳಿವೆ.

ಇವಲ್ಲದೆ ಕ್ರಿಯಾಟಿನ್ ಫಾಸ್ಫೇಟ್, ಆರ್ಜಿನೀನ್ ಫಾಸ್ಫೇಟ್ ಮತ್ತು ಅಸಿಟೈಲ್ ಫಾಸ್ಫೇಟುಗಳಲ್ಲಿಯು ಹೆಚ್ಚು ಶಕ್ತಿ ಇದೆ. ಅಂದರೆ, ಒಂದು ಗ್ರಾಮ್ ಅಣು ತೂಕದಷ್ಟು ವಸ್ತುವನ್ನು ವಿಭಜಿಸಿ ಒಂದು ಫಾಸ್ಫೇಟನ್ನು ಬಿಡುಗಡೆ ಮಾಡಿದಾಗ ಬರುವ ಶಕ್ತಿ ಸು. ೮ ರಿಂದ ೯ ಕಿಲೋಕ್ಯಾಲರಿಗಳು.

ಕಡಿಮೆ ಶಕ್ತಿ ಪಡೆದಿರುವ ಫಾಸ್ಫೇಟುಗಳ ಗುಂಪಿಗೆ ನಿರ್ವಾಯು, ಗ್ಲೂಕೋಸ್ ಮತ್ತು ಫ್ರಕ್ಟೋಸ್ ಫಾಸ್ಫೇಟುಗಳು ಸೇರಿವೆ. ಇವುಗಳ ತಯಾರಿಕೆಗೆ ಸಹಜವಾಗಿಯೇ ಶಕ್ತಿ ಬೇಕು. ಈ ರೀತಿಯ ರಾಸಾಯನಿಕ ಕಾರ್ಯಗಳಿಗೆ ಎಂಡಾರ್ಗ್ಯಾನಿಕ್ ಕಾರ್ಯಗಳು ಎಂದು ಹೆಸರು. ಸಾಧಾರಣವಾಗಿ ಎಟಿಪಿ ಈ ಕಾರ್ಯಗಳಲ್ಲಿ ಶಕ್ತಿದಾತನಾಗಿ ಕೆಲಸ ಮಾಡಿ, ಎಡಿಪಿ ಅಣು ಆಗುತ್ತದೆ. ಅದರ ತಯಾರಿಕೆಗೆ ಕ್ರಿಯಾಟಿನ್ ಫಾಸ್ಫೇಟ್ ತನ್ನ ಶಕ್ತಿಯುತ ಫಾಸ್ಫೇಟನ್ನು ಕೊಡುತ್ತದೆ. ಎಟಿಪಿ ಹೆಚ್ಚು ಇದ್ದಾಗ ಅದರಿಂದ ಕ್ರಿಯಾಟಿನ್ ಫಾಸ್ಫೇಟಿನ ಮಟ್ಟ ಮೊದಲಿನಂತೆಯೇ ಆಗುತ್ತದೆ. ಅದ್ದರಿಂದ, ಇದನ್ನು ಫಾಸ್ಫಜನ್ ಎಂದು ಕರೆಯುತ್ತಾರೆ. ಸಸ್ಯಗಳಲ್ಲಿ ಆರ್ಜಿನೀನ್ ಫಾಸ್ಫೇಟ್ ಈ ರೀತಿಯ ಕೆಲಸವನ್ನು ನಿರ್ವಹಿಸುತ್ತದೆ.

ಎಕ್ಸಾರ್ಗ್ಯಾನಿಕ್ ಕಾರ್ಯಗಳಲ್ಲಿ ಶಕ್ತಿ ಬಿಡುಗಡೆಯಾಗುತ್ತದೆ. ಆಹಾರ ವಸ್ತುಗಳ ಉತ್ಕರ್ಷಣೆಯು ಒಂದು ಎಕ್ಸಾರ್ಗ್ಯಾನಿಕ್ ಕಾರ್ಯ. ಗ್ಲೂಕೋಸ್ ಹಂತಹಂತವಾಗಿ ಕಡೆಗೆ ಅಕ್ಸಿಜನ್ನಿನಿಂದ ಸಂಪೂರ್ಣವಾಗಿ ಉತ್ಕರ್ಷಣ ಹೊಂದಿ, ಅಂತಿಮ ಹಂತದ ಎಲೆಕ್ಟ್ರಾನ್ ಸಾಗಣೆಯಲ್ಲಿ ಬಿಡುಗಡೆಯಾದ ಶಕ್ತಿಯಿಂದ ಎಟಿಪಿ ಅಣುಗಳು ತಯಾರಾಗುತ್ತವೆ. ಈ ಎಟಿಪಿ ಸ್ನಾಯುವಿನಲ್ಲಿನ ಮೈಯೊಸಿನ್ನಿನೊಂದಿಗೆ ಸೇರಿ ಅದನ್ನು ಸಂಕುಚಿತಗೊಳಿಸಿ ಸ್ನಾಯುವಿನಿಂದ ಕಾರ್ಯ ಮಾಡಿಸುತ್ತದೆ. ದೇಹದ ಉಷ್ಣತೆಗೆ ಉಷ್ಣವನ್ನು ಕೊಡುವುದು, ಎಂಡಾರ್ಗ್ಯಾನಿಕ್ ಕ್ರಿಯೆಗಳು ಸಾಧ್ಯವಾಗುವಂತೆ ಮಾಡುವುದು, ಒತ್ತಡಕ್ಕೆ ವಿರುದ್ಧವಾಗಿ ವಸ್ತುಗಳನ್ನು ಸಾಗಿಸಲು ಬೇಕಾದ ಶಕ್ತಿಯನ್ನು ಒದಗಿಸುವುದು ಎಟಿಪಿ ಯ ಕೆಲಸ. ಮಿಂಚಿನ ಹುಳಗಳಲ್ಲಿ ಬೆಳಕು, ಶಕ್ತಿಯನ್ನು, ವಿದ್ಯುತ್ ಈಲಿ (ಮೀನು)ನಲ್ಲಿ ವಿದ್ಯುತ್ ಶಕ್ತಿಯನ್ನು ಉಂಟು ಮಾಡುವುದು, ಈ ಎಟಿಪಿ ಯೇ. ಇದರಿಂದಲೇ ಪ್ರಾಣಿಗಳಲ್ಲಿ ಶಕ್ತಿಯ ವಹಿವಾಟು ನಡೆಯುತ್ತದೆ.

ಜೀವಿಯ ಸಮಸ್ತ ಶಕ್ತಿಗಳ ಮೂಲ ಸೂರ್ಯನ ಶಕ್ತಿ. ಪ್ರಾಣಿಗಳಿಗೆ ಇದು ದೊರೆಯುವುದು ಸಸ್ಯಗಳ ಮುಖಾಂತರ. ಅವು ತಮ್ಮ ದ್ಯುತಿಸಂಶ್ಲೇಷಣ ಕಾರ್ಯದ ಮೂಲಕ, ಕಡಿಮೆ ಶಕ್ತಿ ಇರುವ ಇಂಗಾಲದ ಡೈಆಕ್ಸೈಡಿನಿಂದ ಹೆಚ್ಚು ಶಕ್ತಿಯಿರುವ ಪಿಷ್ಟವನ್ನು ತಯಾರಿಸುತ್ತವೆ. ಈ ಕಾರ್ಯಕ್ಕೆ ಸೂರ್ಯನ ಕಿರಣಗಳಿಂದ ಶಕ್ತಿ ದೊರೆಯುವುದು. ಕಾರ್ಬೊಹೈಡ್ರೇಟಿನಲ್ಲಿನ ಈ ಶಕ್ತಿ ಸೂರ್ಯನ ಕಿರಣಗಳಿಂದ ದೊರೆಯುವುದು. ಈ ಶಕ್ತಿ ಜೀವಿಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ದೊರೆಯುತ್ತದೆ. ಒಂದು ಗ್ರಾಮ್ ಅಣು ತೂಕದ ಗ್ಲೂಕೋಸಿನಲ್ಲಿ ಸು. 688 ಕಿಲೊಕ್ಯಾಲರಿ ಶಕ್ತಿ ಇದೆ. ಜೀವಿಗಳಲ್ಲಿನ ಶಕ್ತಿ ಸಂಚಯನಯಂತ್ರ ಒಂದು ಗ್ಲೂಕೋಸಿನ ಅಣುವಿನಿಂದ 6 ಎಟಿಪಿ ಅಣುಗಳನ್ನು ಅಂದರೆ ಸು. 310 ಕಿಲೋ ಕ್ಯಾಲರಿ ಶಕ್ತಿಯನ್ನು ಕೋಶಕ್ಕೆ ಎಟಿಪಿ ರೂಪದಲ್ಲಿ ಕೊಡುತ್ತದೆ. ಅಂದರೆ, ಈ ಯಂತ್ರದ ಕ್ರಿಯಾಶಕ್ತಿ ಸು. ನೂರಕ್ಕೆ 45ರಷ್ಟು.

ಅಣ್ವಕ ದೃಷ್ಟಿಯಿಂದ ವಿಕಾಸಪಥ : ವಿಕಾಸಪಥದ ಆರಂಭದಲ್ಲಿರುವ ಏಕಾಣುಜೀವಿಗಳು, ಬೂಷ್ಟುಗಳಲ್ಲಿ ಅನೇಕ ಚಯಾಪಚಯ ಮಾರ್ಗಗಳು ವಿಕಾಸಪಥದ ತುದಿಯಲ್ಲಿರುವ ಮಾನವನಲ್ಲಿ ಇವೆ. ಉದಾ: ಗ್ಲೂಕೋಸು ಪೈರುವೇಟ್ ಆಗುವಾಗಿನ ಅಪಚಯ ಕ್ರಿಯೆ. ಈ ಬದಲಾವಣೆಯಲ್ಲಿ ಯೀಸ್ಟಿನಲ್ಲಿರುವ ರಸಾಯನ ಹಂತಗಳ ಮಾರ್ಗವೇ ಸ್ನಾಯುವಿನಲ್ಲಿದೆ. ಅಂದರೆ, ಜೀವಿ ವಿಕಾಸಪಥದಲ್ಲಿ ಮುಂದುವರೆದಿದ್ದರೂ ಸಾಕಷ್ಟು ಕಾರ್ಯದಕ್ಷತೆಯಿರುವ ಮೂಲಮಾರ್ಗವನ್ನು ಬದಲಾಯಿಸದೆ ಉಳಿಸಿಕೊಂಡಿರುತ್ತದೆ. ಆದ್ದರಿಂದಲೇ ಗ್ಲೂಕೋಸಿನ ಅಪಚಯಕ್ರಿಯೆಯ ಈ ಭಾಗವನ್ನು ವಿವರವಾಗಿ ಅಭ್ಯಸಿಸಲು ಯೀಸ್ಟ್ ಕೋಶಗಳನ್ನು ಬಳಸಿಕೊಳ್ಳುವುದು ಸಾಧ್ಯವಾಯಿತು. ಈ ರೀತಿಯ ಪರಿಸ್ಥಿತಿ ಜೀವರಸಾಯನವಿಜ್ಞಾನದ ಸಂಶೋಧನೆಗೆ ಬಲು ಅನುಕೂಲವಾಗಿದೆ. ಇದಕ್ಕೆ ಬ್ಯಾಕ್ಟೀರಿಯ, ಸಸ್ಯಗಳು ಮತ್ತು ಅನೇಕ ಪ್ರಾಣಿಗಳನ್ನು ಬಳಸಿಕೊಳ್ಳಲು ಶಕ್ಯವಾಗಿದೆ. ಮಾನವನನ್ನೇ ಪ್ರಯೋಗ ಪಶುವನ್ನಾಗಿ ಉಪಯೋಗಿಸಬೇಕಾಗಿದ್ದರೆ ಈ ವಿಜ್ಞಾನ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಮಾನವನಿಗೆ ಮಾತ್ರ ಸಂಬಂಧಪಟ್ಟ ಜೀವರಸಾಯನ ವಿಜ್ಞಾನದ ಬೆಳೆವಣಿಗೆ ಬಹಳ ನಿಧಾನವಾಗಿರುವುದು ಈ ಕಾರಣದಿಂದಲೇ.

ಜೀವಿ ವಂಶಗಳು ಬೇರೆ ಬೇರೆಯಾಗಿ ಸೃಷ್ಟಿಯಾಗಲಿಲ್ಲ. ಅವು ಹಿಂದಿನ ರೂಪಗಳಿಂದ ಇಂದಿನ ರೂಪಗಳಿಗೆ ವಿಕಾಸವಾಗುತ್ತ ಹೊಸ ಪರಿಸ್ಥಿತಿಗೆ ಹೊಂದಿಕೊಂಡಿವೆ. ಹೀಗಾಗಿ ಹೊಸ ಹೊಸ ಜೀವಿಗಳು ಹುಟ್ಟಿವೆ. ಇದು ಹೀಗೆ ನಡೆದಿದೆ ಎಂಬ ವಿವರಗಳು ಜೀವಿಗಳ ಜೀವರಸಾಯನ ವೃತ್ತಾಂತವನ್ನು ವ್ಯಾಸಂಗ ಮಾಡುವುದರಿಂದ ದೊರೆಯುತ್ತದೆ. ಯೀಸ್ಟ್ ಕೋಶಗಳು ಬೆಳೆಯಲು ಅವಶ್ಯಕವಾದ ಶಕ್ತಿಗಾಗಿ ಎಟಿಪಿಗಳನ್ನು ಅವು

ತಯಾರಿಸಬೇಕು. ಈ ಉದ್ದೇಶಕ್ಕಾಗಿ ಅವು ಗ್ಲೂಕೋಸನ್ನು ಪೈರುವೇಟ್, ಅನಂತರ ಆಸಿಟಾಲ್ಡಿಹೈಡ್ ಕಡೆಗೆ ಈಥೈಲ್ ಆಲ್ಕೊಹಾಲ್ ಆಗಿ ಬದಲಾಯಿಸುತ್ತದೆ. ಸ್ನಾಯುವಿನಲ್ಲಿಯು ಗ್ಲೂಕೋಸಿನ ಬದಲಾವಣೆಯ ಉದ್ದೇಶವೂ ಎಟಿಪಿ ತಯಾರಿಕೆ. ಆದರೆ ವಿಕಾಸದ ಏಣಿಯನ್ನು ಹತ್ತಿದ ಪ್ರಾಣಿಗಳಲ್ಲಿ ಮತ್ತು ಮಾನವನಲ್ಲಿ ಪ್ರಕೃತಿ ಈ ಪೈರುವೇಟ್ ಲ್ಯಾಕ್ಟಿಕ್ ಆಮ್ಲವಾಗಲು ಅನುಕೂಲ ಮಾಡಿಕೊಟ್ಟು ಈಥೈಲ್ ಆಲ್ಕೊಹಾಲ್ ತಯಾರಿಕೆಯ ಶಕ್ತಿಯನ್ನು ಕಸಿದುಕೊಂಡಿದೆ. ಈ ನಿರ್ವಾಯು ಶರ್ಕರ ಪಥ ಎಲ್ಲ ಜೀವಿಗಳಲ್ಲಿಯು ಒಂದೆ ಎಂಬುದು ಸ್ಪಷ್ಟ. ಮಾನವನಿಗೂ, ಬ್ಯಾಕ್ಟೀರಿಯ, ಬೂಷ್ಟುಗಳಿಗೂ ಬಾಹ್ಯದಲ್ಲಿ ಅಂತರ ಕಂಡರೂ ಜೀವರಸಾಯನ ದೃಷ್ಟಿಯಿಂದ ನಿಕಟ ಸಾಮಿಪ್ಯ ಇದೆ.

ವಿಕಾಸಪಥದ ವಿವಿಧ ಹಂತಗಳಲ್ಲಿರುವ ಜೀವಿಗಳಲ್ಲಿ ಕ್ರಿಯಾ ದೃಷ್ಟಿಯಿಂದ ಈ ಸಾಮಾನ್ಯತೆ ಕಂಡರೂ, ಕಾರ್ಯ ಜರಗಿಸುವ ವಸ್ತುಗಳಲ್ಲಿನ ಅಣುಗಳಲ್ಲಿ ಭೇದಗಳು ಕಂಡುಬಂದಿವೆ. ವಿವಿಧ ಪ್ರಾಣಿ, ಸಸ್ಯ ಮತ್ತು ಏಕಾಣುಜೀವಿಗಳಿಂದ, ಎಲೆಕ್ಟ್ರಾನ್ ಸಾಗಣೆಯಲ್ಲಿ ಪಾತ್ರವಹಿಸುವ ಸೈಟೋಕ್ರೋಮ್ ಸಿ ಯನ್ನು ಶುದ್ಧ ರೂಪದಲ್ಲಿ ಪಡೆದು ಈ ವಿಷಯವನ್ನು ಸಂಶೋಧನೆ ಮಾಡಿದ್ದಾರೆ. ಮನುಷ್ಯನ ಸೈಟೊಕ್ರೋಮ್ ಸಿ ಗೆ ಹೋಲಿಸಿದಾಗ ಅವುಗಳ ಅಮೈನೋ ಆಮ್ಲಗಳಲ್ಲಿ ವ್ಯತ್ಯಾಸವಿರುವುದು ತಿಳಿದುಬಂತು. ನಾಯಿಯಲ್ಲಿ 11, ಕುದುರೆಯಲ್ಲಿ 12, ಕೋಳಿಯಲ್ಲಿ 13, ಟ್ಯೂನಾ ಮೀನಿನಲ್ಲಿ 21, ಗೋದಿಯಲ್ಲಿ 35, ಯೀಸ್ಟಿನಲ್ಲಿ 44. ವಿಕಾಸಪಥದಲ್ಲಿ ಹತ್ತಿರ ಇರುವ ಯೀಸ್ಟ್ ಮತ್ತು ನ್ಯೂರೊಸ್ಪಾರಾಗಳಲ್ಲಿ ಸೈಟೊಕ್ರೋಮ್ ಸಿ ಗಳಲ್ಲಿಯೆ 39 ಅಮೈನೋ ಆಮ್ಲಗಳ ಬದಲಾವಣೆಯಿದೆ. ಕಿಣ್ವದ ಪ್ರೋಟೀನಿನ ಅಣುಗಳಲ್ಲಿಯು ಈ ರೀತಿಯ ವ್ಯತ್ಯಾಸಗಳು ಕಂಡು ಬಂದಿವೆ. ಈ ಕೊಲ್ಯೆ, ಯೀಸ್ಟ್, ಮೊಲದ ಸ್ನಾಯುಗಳಲ್ಲಿರುವ ಫಾಸ್ಫೊಗ್ಲೂಕೊಮ್ಯಾಟೇಸ್ ಮತ್ತು ಟ್ರಯೋಸ್ ಫಾಸ್ಫೇಟ್ ಡೀಹೈಡ್ರೊಜಿನೇಸುಗಳನ್ನು ಪರೀಕ್ಷಿಸಿದಾಗ ಅವುಗಳಲ್ಲಿನ ವಿವಿಧ ಅಮೈನೋ ಆಮ್ಲಗಳ ಪ್ರಮಾಣದಲ್ಲಿ ಬದಲಾವಣೆ ಕಂಡುಬಂದಿದೆ. ಆದರೆ, ಈ ಕಿಣ್ವಗಳ ಅಣುಗಳಲ್ಲಿನ ಕ್ರಿಯಾಕ್ಷೇತ್ರ ಮಾತ್ರ ಎಲ್ಲದರಲ್ಲಿಯೂ ಒಂದೇ ಎಂಬುದು ಗೊತ್ತಾಗಿದೆ. ಪ್ರೋಟೀನುಗಳಲ್ಲಿನ ಅಮೈನೋ ಆಮ್ಲದ ಅನುಕ್ರಮತೆ ಅದರ ಜೀನ್‍ನ್ನು ಅವಲಂಬಿಸಿರುವುದರಿಂದ ವಿಕಾಸ ಪಥದಲ್ಲಿ ಮೇಲೇರಿದಾಗ ಪ್ರಾಣಿಗಳ ಜೀನಿನಲ್ಲಿ ಬದಲಾವಣೆ ಸಾಧ್ಯ ಎಂದಾಯಿತು. ಕಿಣ್ವದ ಅಣುವಿನ ಕ್ರಿಯಾಕ್ಷೇತ್ರದಲ್ಲಿನ ಅಮೈನೋ ಆಮ್ಲಗಳ ಅನುಕ್ರಮತೆಯನ್ನು ನಿರ್ದರಿಸುವ ಜೀನಿಯ ಭಾಗದಲ್ಲಿ ಈ ಬದಲಾವಣೆ ಆದರೆ, ವಿಕಾಸಪಥದಲ್ಲಿ ಮುಂದುವರಿದ ಜೀವಿ, ತನ್ನ ಹಳೆಯ ಶಕ್ತಿಯನ್ನು ಕಳೆದುಕೊಂಡು ಆ ಕಾರ್ಯಗಳಿಗಾಗಿ, ಅಥವಾ ಅವುಗಳಿಂದ ಒದಗುವ ರಸಾಯನವಸ್ತುಗಳಿಗಾಗಿ, ವಿಕಾಸಪಥದಲ್ಲಿ ಹಿಂದಿರುವ ಜೀವಿಗಳನ್ನು ನಂಬಬೇಕಾಗುತ್ತದೆ. ಜೀವಸತ್ತ್ವಗಳ ಮತ್ತು ಆವಶ್ಯಕ ಆಮೈನೋ ಆಮ್ಲಗಳ ತಯಾರಿಕೆಯ ಶಕ್ತಿಯನ್ನು, ವಿಕಾಸಪಥದಲ್ಲಿ ಮುಂದುವರಿದ ಜೀವಿಗಳು ಈ ರೀತಿ ಕಳೆದುಕೊಂಡಿವೆ.

ವಿಕಾಸಪಥದಲ್ಲಿ ಜೀವಿ ಮುಂದುವರಿಯುವಾಗ ತಾನು ಜೀವಿಸಬೇಕಾದ ಬಾಹ್ಯ ಪರಿಸ್ಥಿತಿ ಬದಲಾಗಬಹುದು. ನೀರಿನಲ್ಲಿ ಇರುವುದು ಬಿಟ್ಟು ಭೂಮಿಯ ಮೇಲೆ ಜೀವಿಸಬೇಕಾಗಬಹುದು. ಇಂತಹ ಸಂದರ್ಭದಲ್ಲಿ ವಿಕಾಸದ ಏಣಿಯನ್ನು ಏರಿದಾಗ ಹೊಸ ಹೊಸ ಚಯಾಪಚಯ ಮಾರ್ಗಗಳು ಹುಟ್ಟಿಕೊಳ್ಳಬಹುದು. ಇದಕ್ಕೆ ಉತ್ತಮವಾದ ಉದಾಹರಣೆ ಅಮೈನೋ ಆಮ್ಲಗಳ ಅಪಚಯ ಕ್ರಿಯೆ. ನೀರಿನಲ್ಲಿ ಜೀವಿಸುವ ಮೀನುಗಳು ಈ ಅಮೈನೋ ಆಮ್ಲಗಳಲ್ಲಿನ ಅಮೈನೋ ಗುಂಪನ್ನು ವಿಸರ್ಜಿಸುವುದು ಅಮೋನಿಯ ರೂಪದಲ್ಲಿ. ಮೀನು ನೀರಿನಲ್ಲಿಯೇ ಇರುವುದರಿಂದ ಮತ್ತು ನೀರಿನಲ್ಲಿ ಅಮೋನಿಯ ವಿಶೇಷವಾಗಿ ಕರಗುವುದರಿಂದ ಅದನ್ನು ಮೀನು ವಿಸರ್ಜಿಸುವುದು ಸುಲಭ. ಆದರೆ, ಮನುಷ್ಯನಿಗೆ ಅದು ಸಾಧ್ಯವಿಲ್ಲ. ಅಮೋನಿಯವನ್ನು ರಕ್ತದ ಮೂಲಕ ಮೂತ್ರ ಜನಕಾಂಗಕ್ಕೆ ವರ್ಗಾಯಿಸುವ ಹಾಗಿಲ್ಲ. ಏಕೆಂದರೆ, ಇದು ಮಹಾವಿಷ. 100 ಮಿಲೀ ರಕ್ತದಲ್ಲಿ ಒಂದೆರಡು ಮೀಗ್ರಾಂ ಇದ್ದರೂ ಪ್ರಾಣಾಪಾಯಕಾರಿ. ಆದ್ದರಿಂದ ಅಮೋನಿಯವನ್ನು ನಿರಪಾಯಕಾರಿಯಾದ ಯೂರಿಯವನ್ನಾಗಿ ಪರಿವರ್ತಿಸಲು ಮನುಷ್ಯನಲ್ಲಿ ನಿರ್ದಿಷ್ಟ ರಸಾಯನಿಕ ಕಾರ್ಯಗಳಾಗುತ್ತವೆ. ಈ ಯೂರಿಯ ನೀರಿನಲ್ಲಿ ಕರಗುವುದರಿಂದ ಮೂತ್ರ ಜನಕಾಂಗದ ಮೂಲಕ ಮೂತ್ರದಲ್ಲಿ ಹೋಗಲು ಸುಲಭ. ಹಕ್ಕಿಗಳಲ್ಲಿ ಈ ಮಾರ್ಗ ಸಾಧ್ಯವಿಲ್ಲ. ಏಕೆಂದರೆ, ಅವು ಹೆಚ್ಚು ನೀರನ್ನು ದೇಹದಲ್ಲಿ ಇಟ್ಟುಕೊಂಡಲ್ಲಿ ಅವುಗಳ ಮೈ ಭಾರವಾಗಿ ಹಾರಲಾರವು. ಆದ್ದರಿಂದ, ಹಕ್ಕಿಗಳಲ್ಲಿ ಅಮೋನಿಯವನ್ನು ಕಳೆದುಕೊಳ್ಳುವುದು. ನೀರಿನಲ್ಲಿ ಕರಗದ ಯೂರಿಕ್ ಆಮ್ಲ ರೂಪದಲ್ಲಿ ವಿಸರ್ಜನೆಯಾಗುವುದು. ವಿಕಾಸ ಪಥದಲ್ಲಿ ಮುಂದುವರಿದಂತೆ ಅವುಗಳ ಕಣಕೇಂದ್ರಗಳಲ್ಲಿನ ಜೀನ್‍ಗಳ ಸಂಖ್ಯೆ ಹೆಚ್ಚಾಗುತ್ತದೆ. ಇದು ಹೇಗೆ ಆಯಿತು ಎಂಬುದು ನಿಗೂಢ. ಮೊದಲು ಇದ್ದ ಜೀನ್‍ಗಳಿಂದ, ಯಾವುದೊ ಒಂದು ಸಂದರ್ಭದಲ್ಲಿ ಎರಡರಷ್ಟಾಗಿ, ಹೆಚ್ಚಾಗಿ ತಯಾರಾದ ಜೀನ್‍ಗಳು ಬದಲಾವಣೆ ಹೊಂದಿ, ಜೀವಿಯಲ್ಲಿ ಹೊಸ ಜೀವಕ್ರಿಯೆಗಳಿಗೆ ಸಾಧ್ಯತೆಯಾಗಿರಬಹುದು. ಇದರಿಂದ ಜೀವಿ ತನ್ನ ಹೊಸ ಬಾಹ್ಯ ಪರಿಸ್ಥಿತಿಗೆ ಹೊಂದುಕೊಳ್ಳುವ ಶಕ್ತಿಯನ್ನು ಪಡೆಯುತ್ತವೆ.

ಜೀವರಸಾಯನವಿಜ್ಞಾನದ ವ್ಯಾಪ್ತಿ ಆಗಾಧವಾಗಿದೆ. ಇತ್ತೀಚೆಗೆ ಇದೊಂದು ಮೂಲ ವಿಜ್ಞಾನವಾಗಿದೆ. ಆದ್ದರಿಂದ, ಜೀವವಿಜ್ಞಾನ, ಸಸ್ಯವಿಜ್ಞಾನ, ವೈದ್ಯವಿಜ್ಞಾನ, ಔಷಧವಿಜ್ಞಾನ, ಕೃಷಿವಿಜ್ಞಾನ, ಆಹಾರವಿಜ್ಞಾನ, ಆನುವಂಶೀಯವಿಜ್ಞಾನ, ಏಕಾಣುಜೀವಿವಿಜ್ಞಾನ, ಬಟ್ಟೆವಿಜ್ಞಾನ ಮುಂತಾದ ಜೀವ ಸಂಬಂಧದ ಎಲ್ಲ ಭಾಗಗಳಲ್ಲಿಯೂ ಇದರ ವ್ಯಾಪ್ತಿ ಹರಡಿಕೊಂಡಿದೆ.

(ಜೆ.ಎಸ್.ಎ.)

**ಜೀವವಿಜ್ಞಾನ:** ಜೀವಿಗಳ ವೈಜ್ಞಾನಿಕ ಅಧ್ಯಯನ (ಬಯಾಲಜಿ). ಮಾನವನೂ ಸೇರಿದಂತೆ ಜೀವಿಗಳು ತಮ್ಮ ಜೀವಮಾನದಲ್ಲಿ ನಡೆಸುವ ಸಮಸ್ತ ಕಾರ್ಯಚಟುವಟಿಕೆಗಳ, ಅವುಗಳ ವಿಕಾಸದ ಇತಿಹಾಸ ಮತ್ತು ರೋಗರುಜಿನಗಳ ಅಧ್ಯಯನವನ್ನು ಇದು ಒಳಗೊಂಡಿದೆ. ಆದಿಮಾನವನಿಗೆ ಜೀವವಿಜ್ಞಾನದ ಬಗ್ಗೆ ಅಷ್ಟಾಗಿ ಗೊತ್ತಿರದಿದ್ದರೂ ಆತನ ಬುದ್ಧಿಶಕ್ತಿ ವಿಕಸಿಸಿದಂತೆಲ್ಲ–ಜೀವವೆಂಬುದೇನು? ಜೀವನದ ಕ್ರಮ ಹೇಗೆ? ಜೀವಿಗಳಿಗಿರುವ ಪರಸ್ಪರ ಬಾಂಧವ್ಯ ಎಂತಹುದು?–ಎಂದು ಮುಂತಾಗಿ ತಿಳಿಯತೊಡಗಿದ. ಅರಿಸ್ಟಾಟಲ್ ಕಾಲದಲ್ಲಿ ಅಂಕುರಿಸಿ, ಮಧ್ಯಯುಗದಲ್ಲಿ ಅಭಿವೃದ್ಧಿಗೊಂಡ ಜೀವವಿಜ್ಞಾನ 19ನೆಯ ಶತಮಾನದ ಅಂತ್ಯದವರೆಗೂ ಕೇವಲ ವಿವರಣಾತ್ಮಕವಾಗಿತ್ತು. ಆದರೆ 20ನೆಯ ಶತಮಾನದ ಆದಿಯಿಂದ ತಳಿವಿಜ್ಞಾನಿಗಳ, ವಿಕಾಸವಾದಿಗಳ ಹಾಗೂ ಪರಿಸರತಜ್ಞರ ಪರಿಶ್ರಮದಿಂದ ಜೀವವಿಜ್ಞಾನ ವಿವಿಧ ಶಾಖೆಗಳಾಗಿ ಒಡೆದದ್ದಲ್ಲದೆ, ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರಗಳ ನೆರವಿನಿಂದ ಸರ್ವತೋಮುಖವಾಗಿ ಬೆಳೆದು ಈಗ ಬಾಹ್ಯಾಕಾಶ ಜೀವಿಗಳ ಪರಿಚಯಕ್ಕೂ ಹೆಜ್ಜೆಯಿಟ್ಟಿದೆ. ಪ್ರಸಕ್ತ ಲೇಖನದಲ್ಲಿ ಜೀವವಿಜ್ಞಾನವನ್ನು ಈ ಮುಂದಿನ ಪ್ರಧಾನ ಶೀರ್ಷಿಕೆಗಳ ಅಡಿಯಲ್ಲಿ ಬಿತ್ತರಿಸಲಾಗಿದೆ.

1. ಚಾರಿತ್ರಿಕ ಹಿನ್ನೆಲೆ (a) ಆದಿಯಲ್ಲಿ ಜೀವವಿಜ್ಞಾನದ ಬೆಳೆವಣಿಗೆ, (b) ಮಧ್ಯಕಾಲದಲ್ಲಿ ಜೀವವಿಜ್ಞಾನದ ಸ್ಥಿತಿಗತಿ, (c) ಜೀವಾಧ್ಯಯನದ ಪುನರುಜ್ಜೀವನ, (d) ತುಲನಾತ್ಮಕ ಅಂಗರಚನಾವಿಜ್ಞಾನ ಮತ್ತು ಶರೀರವಿಜ್ಞಾನ, (e) ಆಧುನಿಕ ಜೀವವಿಜ್ಞಾನ,
2. ವಿಕಾಸವಾದ
3. ಜೀವ ಸ್ವರೂಪ, (a) ಜೀವಿಯ ಪ್ರಕೃತಿ, (b) ಜೀವದ್ರವ್ಯದ ಗುಣಲಕ್ಷಣಗಳು, (i) ಸಂಯುಕ್ತಕಗಳು, (ii) ಕಿಣ್ವಗಳು, (iii) ವಿದ್ಯುತ್ ಸ್ವಭಾವ, (iv) ದ್ಯುತಿಪಟುತ್ವ, (v) ಇತರ ಗುಣಗಳು, (vi) ಕೋಶ ರಚನೆ, (vii) ಪ್ರತಿಸ್ಪಂದನ ಮತ್ತು ಹೊಂದಾಣಿಕೆ,
4. ಜೀವಜಗತ್ತು, (a) ಜೀವಿಯ ವ್ಯಾಪ್ತಿ, (b) ದ್ಯುತಿಸಂಶ್ಲೇಷಣೆ ಮತ್ತು ಶಕ್ತಿ ಚಕ್ರ, (z) ಜೀವೋತ್ಪತ್ತಿಯ ಸಿದ್ಧಾಂತಗಳು, (d) ಸಸ್ಯ, ಪ್ರಾಣಿ ಹಾಗೂ ಸೂಕ್ಷ್ಮಜೀವಿಗಳು.
5. ಜೀವಾಧ್ಯಯನ ಕ್ರಮ, (a) ಜೀವಿಗಳ ರೂಪ, ರಚನೆ ಮತ್ತು ಕ್ರಿಯಾವಿನ್ಯಾಸ, (b) ಭ್ರೂಣಶಾಸ್ತ್ರಾಧ್ಯಯನ, (c) ತಳಿವಿಜ್ಞಾನ, (d) ಜೀವಿಗಳಿಗಿರುವ ಅಂತರ ಸಂಬಂಧ, (e) ಜೀವಿಗಳ ವರ್ಗೀಕರಣ, (f) ವಿಕಾಸದ ದಿಗ್ದರ್ಶನ.

1. ಚಾರಿತ್ರಿಕ ಹಿನ್ನೆಲೆ : ಬಯಾಲಜಿ (ಜೀವವಿಜ್ಞಾನ) ಎಂಬ ಪದವನ್ನು ಮೊಟ್ಟಮೊದಲಿಗೆ ಬಳಸಿದಾತ ಗಾಟ್‍ಫ್ರೀಡ್ ಟ್ರೆವಿರಾನಸ್ (1776–1837). ಆತ 1802ರಲ್ಲಿ ಬರೆದ ಬಯಾಲಜೀ ಓಡೆರ್ ಡೀ ಫಿಲಾಸೊಫಿ ಡೆರ್ ಲೀಬೆಂಡೆನ್ ನಾಟುರಾ ಎಂಬ ಪುಸ್ತಕದಲ್ಲಿ ಈ ಪದವನ್ನು ಬಳಸಿದ. ಆದರೆ ಈ ಪದವನ್ನು ಜನಪ್ರಿಯಗೊಳಿಸಿದವ ಪ್ರಸಿದ್ಧ ವಿಕಾಸವಾದಿ ಜೀನ್ ಬ್ಯಾಪ್ಟಿಸ್ಟ್ ಲಾಮಾರ್ಕ್ (1774–1829). ಆಧುನಿಕ ಅರ್ಥದಲ್ಲಿ ಈ ಪದವನ್ನು ಇಂಗ್ಲಿಷಿನಲ್ಲಿ ಬಳಕೆಗೆ ತಂದಾತ ಸರ್ ವಿಲಿಯಮ್ ಲಾರೆನ್ಸ್ (1783–1867).

(a) ಆದಿಯಲ್ಲಿ ಜೀವವಿಜ್ಞಾನದ ಬೆಳವಣಿಗೆ : ಗ್ರೀಕರಿಂದ ಉದಯವಾದ ಈ ವಿಜ್ಞಾನ ಕ್ರಿಪೂ. 500ರಲ್ಲಿ ಆಲ್ಕ್‌ಮೀಯಾನನಿಂದ ಆರಂಭವಾಯಿತೆಂದು ಊಹಿಸಲಾಗಿದೆ. ಈತ ಅಕ್ಷಿನರ, ಕರ್ಣನಾಳ ಮತ್ತು ಭ್ರೂಣದ ಬೆಳವಣಿಗೆಗಳನ್ನು ಪ್ರಥಮ ಬಾರಿಗೆ ವಿವರಿಸಿದ. ರಕ್ತವೇ ಜೀವವೆಂದು ಪರಿಗಣಿಸಿದ್ದ ಎಂಪೆಡಾಕ್ಲಿಸ್‍ನ (ಕ್ರಿಪೂ. 490–430) ಕಾಲದಲ್ಲಿ ವಾಯು ವಿತರಣೆಗೂ ರಕ್ತ ಪರಿಚಲನೆಗೂ ಹೃದಯವೇ ಮೂಲವೆಂದು ನಂಬಿದ್ದರು. ಅಂತೆಯೇ ಕ್ರಿಪೂ. 5ನೆಯ ಶತಮಾನದಲ್ಲಿ, ಹಿಪ್ಪೋಕ್ರೇಟಿಕ್ ಸಂಗ್ರಹವೆಂದು ಪ್ರಸಿದ್ಧವಾಗಿರುವ ಪುಸ್ತಕದಲ್ಲಿ ಪ್ರಾಣಿಗಳ ವರ್ಗೀಕರಣದ ಪ್ರಥಮ ಯತ್ನ ನಡೆಯಿತು. ಜೊತೆಗೆ ಕ್ರಿಪೂ. ಸು. 380 ರಲ್ಲಿ ಹಿಪ್ಪೊಕ್ರೇಟಿಸನ ಅಳಿಯನಾದ ಪಾಲಿಬಸ್‍ನು ಜೀವಿಗಳೆಲ್ಲವೂ ರಕ್ತ, ಪಿತ್ತ, ಶ್ಲೇಷ್ಮ ಮತ್ತು ದೋಷ ದ್ರವಗಳೆಂಬ ನಾಲ್ಕು ಬಗೆಯ ಧಾತುಗಳಿಂದ ಕೂಡಿವೆಯೆಂದು ನಿರೂಪಿಸಿದ. ಹೃದಯವನ್ನು ಕುರಿತು ಹಿಪ್ಪೊಕ್ರೇಟಿಸ್ ಕ್ರಿಪೂ. 340ರಲ್ಲಿ ಬರೆದ ಲೇಖನ ಮಾನವನಿಗೂ ಇತರ ಪ್ರಾಣಿಗಳಿಗೂ ಇರುವ

ಸಾಮ್ಯವನ್ನು ವಿವರಿಸುತ್ತದೆ. ಅಂತೆಯೇ ವಾಯು ಎಡಹೃತ್ಕರ್ಣಕ್ಕೆ ನೇರವಾಗಿ ಹೊಕ್ಕು, ಸೂಕ್ಷ್ಮ ರೀತಿಯಲ್ಲಿ ರಕ್ತವನ್ನು ಆತ್ಮವನ್ನಾಗಿ ಬದಲಾಯಿಸುತ್ತದೆಂದು, ಹೃತ್ಕರ್ಣವೇ ಪ್ರಜ್ಞೆಯ ನೆಲೆಯೆಂದೂ ಉಲ್ಲೇಖಿಸುತ್ತದೆ. ಆದರೆ ಕ್ರಿ.ಪೂ. 4ನೆಯ ಶತಮಾನಕ್ಕಿಂತ ಹಿಂದಲ ಅಪೂರ್ಣ ದಾಖಲೆಗಳಿಂದಾಗಿ ಜೀವದ ಬಗ್ಗೆ ಅರಿಸ್ಟಾಟಲಿನ ಪೂರ್ವಿಕರಿಗಿದ್ದ ಜ್ಞಾನ ಅಪೂರ್ಣವೆಂದೇ ಹೇಳಬಹುದು.

ಅರಿಸ್ಟಾಟಲ್ (ಕ್ರಿ.ಪೂ. 384–322) ಹಾಗೂ ಆತನ ಅಚ್ಚುಮೆಚ್ಚಿನ ಶಿಷ್ಯನಾದ ತೀಯೋಫ್ರಾಸ್ಟಸನ ಬರವಣಿಗೆಗಳಿಂದ ಪ್ರಾಚೀನಕಾಲದ ಗ್ರೀಕರಿಗಿದ್ದ ಜೀವವಿಜ್ಞಾನದ ಪರಿಜ್ಞಾನದ ಪೂರ್ಣಚಿತ್ರದ ಅರಿವಾಗುತ್ತದೆ. ಅರಿಸ್ಟಾಟಲನಿಗೆ ಬಾಲ್ಯದಿಂದಲೂ ಪ್ರಾಣಿವಿಜ್ಞಾನದ ಮೇಲೆ ಅತಿಶಯವಾದ ಆಸಕ್ತಿ ಇತ್ತು. ಆತನ ತಂದೆ ವೈದ್ಯನಾಗಿದ್ದುದರ ಜೊತೆಗೆ ಪ್ರಾಣಿಶಾಸ್ತ್ರಜ್ಞನಾದ ಅಸ್‍ಕ್ಲಿಪಿಯಸನೊಡನೆ ಇದ್ದ ಬಾಲ್ಯ ಸ್ನೇಹ ಈ ಒಲವು ಬೆಳೆಯಲು ಕಾರಣವಿರಬಹುದೆಂದು ಪ್ರತೀತಿ. ಅರಿಸ್ಟಾಟಲ್ ತನ್ನ ಹೆಂಡತಿಯೊಡನೆ ಮಧುಚಂದ್ರಕ್ಕಾಗಿ ಲೆಸ್‍ಬಾಸ್ ದ್ವೀಪಕ್ಕೆ ಹೋದಾಗ ಸಹ ಅನೇಕ ಸಸ್ಯಗಳನ್ನೂ ಕಡಲುವಾಸಿಗಳ ಚಿಪ್ಪು ಮತ್ತು ಎಲುಬುಗಳನ್ನೂ ಶೇಖರಿಸುವುದರಲ್ಲೇ ನಿರತನಾಗಿದ್ದ. ಅಲ್ಲದೆ ಈತ ಅಲೆಕ್ಸಾಂಡರನ ಗುರುವಾಗಿದ್ದುದರಿಂದ ಇವನಿಗೆ ಚಿತ್ರವಿಚಿತ್ರ ಪ್ರಾಣಿಗಳನ್ನೂ ಸಸ್ಯಗಳನ್ನೂ ಅವುಗಳ ಅವಶೇಷಗಳನ್ನೂ ರಾಜಭಟರು ಒದಗಿಸುತ್ತಿದ್ದರಂತೆ. ಪ್ರಾಣಿಗಳ ಗಡಸು ಅಂಗಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಕ್ರಮವರಿತು ವಿಂಗಡಿಸಿ, ವರ್ಗೀಕರಿಸುತ್ತಿದ್ದ. ತನ್ನ ಪಾರ್ಟಿಬಸ್ ಅನಿಮೇಲಿಯಮ್‍ನಲ್ಲಿ ಪ್ರಕೃತಿಯ ಮರ್ಮವನ್ನು ಅರಿಯುವ ಮಹತ್ತ್ವ, ಅದನ್ನು ತಿಳಿಯಲು ಅನುಸರಿಸಬೇಕಾದ ವಿಶೇಷ ವಿಧಾನಗಳ ವಿವರಣೆಯನ್ನು ಅರಿಸ್ಟಾಟಲ್ ಕೊಟ್ಟಿದ್ದಾನೆ. ವೈಜ್ಞಾನಿಕ ವರ್ಗೀಕರಣ ವಿಧಾನಕ್ಕೆ ಭದ್ರ ಬುನಾದಿಯನ್ನು ಹಾಕಿದ ಕೀರ್ತಿ ಅರಿಸ್ಟಾಟಲನಿಗೇ ಸಲ್ಲಬೇಕು.

*ಡಿ ಅನಿಮಾ*, *ಹಿಸ್ಟೋರಿಯ ಅನಿಮೇಲಿಯಮ್*, *ಡಿ ಪಾರ್ಟಿಬಸ್ ಅನಿಮೇಲಿಯಮ್* ಮತ್ತು *ಡಿ ಜನರೇಷನೇ ಅನಿಮೇಲಿಯಮ್* ಎಂಬ ನಾಲ್ಕು ಗ್ರಂಥಗಳಿಂದ ಅರಿಸ್ಟಾಟಲನಿಗಿದ್ದ ಪ್ರಕೃತಿ ಪ್ರೇಮ, ಜೀವಿಗಳಲ್ಲಿ ಕಾಣುವ ನಾನಾ ವ್ಯಾಪಾರಗಳನ್ನು ತಿಳಿಯುವ ಪ್ರತಿಭೆ ಮತ್ತು ವೈಜ್ಞಾನಿಕ ವಿಚಾರ ಸಾಮರ್ಥ್ಯಗಳನ್ನು ಅಳೆಯಬಹುದು. ಆತನ ಕಾಲದಲ್ಲಿ ವೈಜ್ಞಾನಿಕ ಸತ್ಯ ಹಾಗೂ ತಾತ್ತ್ವಿಕ ವಿಚಾರಗಳು ಮೇಳವಿಸಿರುವುದನ್ನು ನೋಡಬಹುದು. ಅರಿಸ್ಟಾಟಲನ ಪ್ರಕಾರ ಆತ್ಮ ನಿರ್ಜೀವಿಗಳನ್ನು ಸಜೀವಿಗಳಿಂದ ಬೇರ್ಪಡಿಸುತ್ತದೆ. ಶರೀರ ಆತ್ಮದ ವಿಕಾಸವೇ ಹೊರತು, ಆತ್ಮ ಶರೀರದ ವಿಕಾಸವಲ್ಲ; ಹಾಗೂ ಶರೀರ ಸಂರಕ್ಷಣೆ, ಸಂತಾನೋತ್ಪತ್ತಿ, ಇಚ್ಛೆ, ಪ್ರತಿಭೆ ಮತ್ತು ತರ್ಕ ಆತ್ಮದ ವ್ಯಾಪಾರಗಳು. ಸಸ್ಯಗಳ ಆತ್ಮವ್ಯಾಪಾರ ಆಹಾರಾರ್ಜನೆ ಮತ್ತು ಬೀಜೋತ್ಪತ್ತಿ ಮಾತ್ರ. ಆದರೆ ಪ್ರಾಣಿಗಳ ಆತ್ಮಗಳು ಇವೆರಡರ ಜೊತೆಗೆ ವಾಸನಾತ್ಮಕ ಸಂಸ್ಕಾರಗಳನ್ನೂ (ಪ್ರತಿಭೆ, ಇಚ್ಛೆ ಮತ್ತು ತರ್ಕ), ಇಂದ್ರಿಯಾನುಭವಗಳನ್ನು ಪಡೆದಿರುತ್ತವೆ. ಮಾನವನ ಆತ್ಮಕ್ಕಾದರೋ ಇವೆಲ್ಲಕ್ಕಿಂತ ಬುದ್ಧಿಶಕ್ತಿ ಹಿರಿದಾದ್ದು. ಪಂಚೇಂದ್ರಿಯಗಳಿಂದ ಹುಟ್ಟಿದ ಆಕೃತಿಗಳನ್ನು ಸಂವಿಧಾನಗೊಳಿಸುವುದು ಬುದ್ಧಿಯ ಕೆಲಸ. ಪ್ರಕೃತಿಯಲ್ಲಿ ಬೇರೆ ಬೇರೆ ಅಂತಸ್ತಿನ ವಸ್ತುಗಳಿವೆ. ಆಯಾ ರೂಪಕ್ಕೆ ಅನುಗುಣವಾಗಿ ಪ್ರತಿಯೊಂದು ವಸ್ತುವೂ ಆಯಾ ಅಂತಸ್ತನ್ನು ಪಡೆಯುತ್ತದೆ. ಈ ಏಣಿಯ ತಳದಲ್ಲಿರುವುದು ಭೌತವಸ್ತುವೆಂದೂ ತುದಿಯಲ್ಲಿರುವುದು ಚೈತನ್ಯವೆಂದೂ ಅರಿಸ್ಟಾಟಲನ ಅಭಿಪ್ರಾಯ. ಪೃಥ್ವಿ, ಅಪ್, ವಾಯು, ತೇಜಸ್ಸು, ಸಸ್ಯಗಳು, ಪ್ರಾಣಿಗಳು ಮತ್ತು ಮಾನವರು ಹೀಗೆ ಕ್ರಮವಾಗಿ ಒಂದಕ್ಕಿಂತ ಒಂದು ಮೇಲಿನ ಅಂತಸ್ತಿನವು; ಕೆಳಗಿನ ಅಂತಸ್ತಿನ ವಸ್ತುಗಳು ಮೇಲಿನ ಅಂತಸ್ತಿನ ವಸ್ತುಗಳಿಗೆ ಆಧಾರಗಳು. ಹೀಗೆ ಪ್ರಕೃತಿಯಲ್ಲಿ ಕ್ರಮವಾದ ಏರಿಕೆ, ಹೊಂದಿಕೆ ಇದೆ. ಇನ್ನೂ ಮುಂದುವರಿದು, ಭೂಮಿ, ಬೆಂಕಿ, ವಾಯು, ಬೆಳಕು ತಮ್ಮ ಸ್ವಭಾವವನ್ನು ಸಾಧಿಸಿಕೊಳ್ಳುವುದರ ಜೊತೆಗೆ ಜೀವಿಗಳಾದ ಸಸ್ಯ, ಪ್ರಾಣಿ ಮತ್ತು ಮನುಷ್ಯರ ಪ್ರಾಣಾಧಾರಗಳಾಗುತ್ತವೆಂದು ಕೂಡ ಅರಿಸ್ಟಾಟಲ್ ತರ್ಕಿಸಿದ್ದಾನೆ. ಅಂದಮಾತ್ರಕ್ಕೆ, ಮಾನವನೇ ಎಲ್ಲಕ್ಕೂ ಮೇಲಿನವನೆಂದಲ್ಲ. ಆಕಾಶದ ಮಿತಿಯನ್ನು ಮೀರಿದ, ಶುದ್ಧ ಸತ್ತ್ವದಿಂದ ಕೂಡಿದ, ಎಲ್ಲಕ್ಕಿಂತಲೂ ಪರಿಪೂರ್ಣವಾದಂಥ ಪರಮ (ಈಶ್ವರ) ಎಂಬ ಅತ್ಯುತ್ತಮವಾದಂಥ ವಸ್ತು ಭೂಮಿಯಿಂದ ಆಚೆ ಇರುವುದೆಂದು ಅರಿಸ್ಟಾಟಲನ ಭಾವನೆ. ಹೀಗೆ ಪ್ರಕೃತಿಯಲ್ಲಿ ಮೆಟ್ಟಲು ಮೆಟ್ಟಲಾಗಿ ವಸ್ತುಗಳು ವಿಕಾಸಗೊಳ್ಳುತ್ತವೆಂದು ತಿಳಿಯಬಯಸಿದ್ದಾಯಿತು. ಈ ವಿಕಾಸ ಉಂಟಾಗುವ ಬಗೆಯನ್ನು ಒಂದು ಸಸ್ಯದ ಉದಾಹರಣೆಯಿಂದ ತಿಳಿಯಬಹುದು. ಒಂದು ಗಿಡಕ್ಕೆ ಬೀಜ ಉಪಾದಾನ ಕಾರಣ; ವೃಕ್ಷತ್ವ ಅದರ ಭಾವ ಅಥವಾ ರೂಪ ಕಾರಣ, ಬೀಜ ಮೊಳೆತು ಬೆಳೆಯುವುದಕ್ಕೆ ಮಣ್ಣು, ನೀರು, ವಾಯು, ಬೆಳಕು–ಇವೆಲ್ಲ ಸೇರಿ ನಿಮಿತ್ತ ಕಾರಣ. ಫಲಭರಿತವಾಗುವುದು ಅದರ ಗುರಿ ; ಅದು ಅದರ ಅಂತಿಮ ಕಾರಣ. ಈ ನಾಲ್ಕು ಕಾರಣಗಳಲ್ಲಿ ಯಾವುದೊಂದಿಲ್ಲದಿದ್ದರೂ ಯಾವುದೊಂದು ಸಸ್ಯವೂ ಸಂಪೂರ್ಣವಾಗಿ ವಿಕಾಸವಾಗಲಾರದು. ಹೀಗೆ ಆಧುನಿಕ ಜೀವಿಗಳ ವಿಕಾಸ ತತ್ತ್ವದ ನಿರೂಪಣೆಯ ದಿಕ್ಕಿಗೂ ಅರಿಸ್ಟಾಟಲ್ ಹೆಜ್ಜೆಯಿಟ್ಟಿದ್ದಂತೆ ಭಾಸವಾಗುತ್ತದೆ.

ಅರಿಸ್ಟಾಟಲನ ಅನಂತರ ಆತನ ಶಿಷ್ಯನಾದ ತೀಯೋಫ್ರಾಸ್ಟಸ್‍ನಿಂದ (ಕ್ರಿ.ಪೂ. 371–288) ಆ ಕಾಲದ ಸಸ್ಯ ಸಂಶೋಧನೆಯ ಸುಳಿವು ಗೊತ್ತಾಗುತ್ತದೆ. ಉಳಿದ ವಿಜ್ಞಾನಿಗಳಂತೆ ಈತ ಸಹ ಶಾಸ್ತ್ರೀಯ ನಾಮಗಳ ಸೃಷ್ಟಿಗಾಗಿ ಶ್ರಮಿಸಿದ. ಇವನು ಬಳಸಿದ ಶಾಸ್ತ್ರೀಯ ನಾಮಗಳ ಪೈಕಿ ಒಂದಾದ ಫಲಕವಚ (ಪೆರಿಕಾರ್ಪ್) ಎಂಬ ಪದ ಇವತ್ತಿಗೂ ಬಳಕೆಯಲ್ಲಿದೆ. ಈತ ಭ್ರೂಣವಿಜ್ಞಾನಕ್ಕೆ ಮಹತ್ತ್ವವನ್ನು ನೀಡಿದಂತೆ ತೋರುತ್ತದೆ. ಸಸ್ಯಗಳ ಸರ್ವಾಂಗಗಳಲ್ಲೂ ಜೀವ ತುಂಬಿರುವುದರಿಂದ ಅವು ಮೊಳೆಯಬಲ್ಲವು. ಆದ್ದರಿಂದಲೇ ಅಂಗಗಳು ಹೇಗಿವೆ ಎನ್ನುವುದಕ್ಕೆ ಬದಲಾಗಿ ಅವು ಏನಾಗಿ ಬೆಳೆಯುತ್ತವೆ ಎಂಬುದು ಹೆಚ್ಚು ಮಹತ್ತ್ವದ್ದು ಎಂಬುದು ಆತನ ನಿಲುವು. ಸಸ್ಯಗಳ ಸಂತಾನಕ್ರಿಯೆಯ ವಿವಿಧ ಬಗೆಗಳಿಗೆ ಅವನು ಆದ್ಯತೆ ನೀಡಿದ್ದನಲ್ಲದೆ, ಏಕದಳ ಮತ್ತು ದ್ವಿದಳ ಸಸ್ಯಗಳಿಗಿರುವ ವ್ಯತ್ಯಾಸವನ್ನು, ಸಸ್ಯಗಳಲ್ಲಿ (ಮುಖ್ಯವಾಗಿ ತೆಂಗಿನ ಜಾತಿಯವುಗಳಲ್ಲಿ) ಲಿಂಗಭೇದವನ್ನೂ ಗುರುತಿಸಿದ್ದ. ಒಟ್ಟಿನಲ್ಲಿ ಸಸ್ಯ ಸಂಶೋಧನೆಗೆ ದಿಟ್ಟ ಹೆಜ್ಜೆಯಿಟ್ಟವರಲ್ಲಿ ತೀಯೋಫ್ರಾಸ್ಟಸನೇ ಮೊಟ್ಟಮೊದಲಿಗ ಎಂದು ಹೇಳಬಹುದು. ಈತ ನೀರೆರೆದು ಪೋಷಿಸಿದ ಈ ವಿಜ್ಞಾನ ಈತನ ಮರಣಾನಂತರ ಬಹುಕಾಲದವರೆಗೆ ಮುಂದೆ ಬೆಳೆಯದೆ ನಿಂತುಹೋಗಿತ್ತು.

ಪ್ರಾಯೋಗಿಕ ಜೀವವಿಜ್ಞಾನಕ್ಕೆ ವಿಶೇಷ ಮಹತ್ತ್ವ ನೀಡಿ, ಜೀವವಿಜ್ಞಾನದ ಇತಿಹಾಸಕ್ಕೆ ಉತ್ಸಾಹ ತುಂಬಿದವರಲ್ಲಿ ಗೇಲೆನ್ (ಕ್ರಿ.ಶ. 130–200) ಎಂಬುವನಿಗೆ ಅಗ್ರಸ್ಥಾನ ಸಲ್ಲಬೇಕು. ಈತ ಬರೆದ ಕೆಲವು ಗ್ರಂಥಗಳು ಹಾಳಾಗಿವೆ. ಉಳಿದಿರುವ ಕೃತಿಗಳಲ್ಲಿ ಈತ ಉಲ್ಲೇಖಿಸಿರುವ ಅನೇಕ ವಿಷಯಗಳು ಏಕರೀತಿಯಲ್ಲಿಲ್ಲ; ಖಚಿತವಾಗಿಲ್ಲ. ತರ್ಕವಿಲ್ಲದೆ ವಿಚಿತ್ರವಾಗಿ ಇವನು ಪಟ್ಟುಹಿಡಿದಿದ್ದ ಎರಡು ವಾದಗಳು ಇವನ ಗ್ರಂಥಗಳಲ್ಲಿವೆ. ವಾಯು, ಚೈತನ್ಯಗಳ ಹಳೆಯ ಕಲ್ಪನೆಯೇ ಮೊದಲಿನದು. ಉಸಿರೊಡನೆ ಒಳಸೇರುವ ವಿಶ್ವಜೀವವೇ ವಾಯು. ಚೈತನ್ಯಗಳು ಮೂರು; ಯಕೃತ್ತಿನಲ್ಲಿ ಸಹಜವಾಗಿರುವುದು ಮೊದಲಿನದು, ಹೃದಯದಲ್ಲಿ ಜೀವಾಳ ಸ್ವರೂಪದಲ್ಲಿ ಇರುವುದು ಎರಡನೆಯದು ಮತ್ತು ಪ್ರಾಣಿ ಸಂಬಂಧವಾದ (ಬುದ್ಧಿ) ಮಿದುಳಲ್ಲಿರುವುದು ಮೂರನೆಯದು. ಜೀರ್ಣಗೊಂಡ ವಸ್ತು ಯಕೃತ್ತನ್ನು ಪ್ರವೇಶಿಸಿ ಅಲ್ಲಿರುವ ವಾಯು ಸಂಪರ್ಕದಿಂದ ಸ್ವಾಭಾವಿಕ ಚೈತನ್ಯವಾಗಿ ಮಾರ್ಪಾಟಾಗುತ್ತದೆಂದು ಈತ ಭಾವಿಸಿದ್ದ. ಈ ಸಹಜ ಚೈತನ್ಯ ಉಬ್ಬರವಿಳಿತವಿರುವ ಅಲೆಗಳ ರೂಪದಲ್ಲಿ ಹೃದಯದ ಬಲಹೃತ್ಕರ್ಣವನ್ನು ಮರು ಪ್ರವೇಶಿಸಿದಾಗ ಪುನಃ ಯಕೃತ್ತಿಗಾಗಲೀ ಮಿದುಳಿಗಾಗಲೀ ಸಾಗುತ್ತದೆಂದು ತಿಳಿದಿದ್ದ. ಯಕೃತ್ತಿಗೆ ಸಾಗುವಾಗ ಉದ್ಭವಿಸಿದ ಕಲುಷಿತ ಧೂಮ ಶ್ವಾಸಾಂಗಗಳ ಮೂಲಕ ಹೊರಬರುತ್ತದೆ. ಆದ್ದರಿಂದಲೇ ನಿಶ್ವಾಸವಾಯು ನಂಜುಕಾರಕವಾದದ್ದೆಂದು ಈತ ನಂಬಿದ್ದ. ಹೃದಯವನ್ನು ತಲುಪಿದ ಉಳಿದ ಸಹಜ ಚೈತನ್ಯ ಎಡಹೃತ್ಕರ್ಣಕ್ಕೆ ಸೇರುತ್ತದೆಂದೂ ಅಲ್ಲಿ ವಾಯುವಿನೊಡನೆ ಮಿಳಿತವಾಗಿ ಪ್ರಾಣಿಚೈತನ್ಯ ಉತ್ಪತ್ತಿಯಾಗುವುದೆಂದೂ ಈತ ವಿವರಿಸಿದ. ಇದು ದೇಹದ ನಾನಾ ಭಾಗಗಳಿಗೆ ವಿತರಣೆಯಾಗುವುದಲ್ಲದೆ, ಮಿದುಳಿನ ನರಜಾಲದಲ್ಲಿ ಪ್ರಾಣಿಚೈತನ್ಯವಾಗಿ ರೂಪುಗೊಂಡು ನರಗಳ ಮೂಲಕ ವಿತರಣೆಯಾಗುವುದೆಂದು ಗೇಲೆನ್ ಕಲ್ಪಿಸಿದ್ದಾನೆ.

ನಾಮಾನುಕ್ರಮದಲ್ಲೂ ಗೇಲೆನ್ ಸಾಕಷ್ಟು ಶ್ರದ್ಧೆ ವಹಿಸಿದ್ದ. ಆದರೆ ಒಂದೇ ಭಾಗಕ್ಕೆ ಬೇರೆ ಬೇರೆ ಹೆಸರನ್ನು ಸೂಚಿಸಿ ಗಲಿಬಿಲಿಯಾಗುವಂತೆ ಮಾಡಿದ್ದಾನೆ. ಆತನಿಟ್ಟ ಹೆಸರುಗಳು ಅಚ್ಚುಕಟ್ಟಾಗಿಲ್ಲ. ಆದರೂ ಅವನಿಟ್ಟ ಹೆಸರುಗಳಲ್ಲಿ ಹಲವಾರು ಈಗಲೂ ರೂಢಿಯಲ್ಲಿವೆ. ಅಪೊಫೈಸಿಸ್, ಎಪಿಫೈಸಿಸ್, ಟ್ರೋಕ್ಯಾಂಟರ್, ಡೈಆರ್ಥ್ರೋಸಿಸ್, ಅನಾಸ್ಟಮೋಸಿಸ್ ಎಂಬ ಪದಗಳು ಅಂಗ ರಚನಾವಿಜ್ಞಾನದಲ್ಲಿ ಇನ್ನೂ ಬಳಕೆಯಲ್ಲಿವೆ. ಆತನ ಸಂಶೋಧನೆಗಳಲ್ಲೆಲ್ಲ ಬೆನ್ನುಹುರಿಯ ಕ್ರಿಯಾ ವಿಧಾನವನ್ನು ಕುರಿತದ್ದು ಪ್ರಖ್ಯಾತವಾದದ್ದು. ಬೆನ್ನುಹುರಿ ವಿವಿಧ ಖಂಡಗಳಲ್ಲಿ ಬಗೆಬಗೆಯ ಕ್ರಿಯಾವಿಧಾನವನ್ನು ನಿಯಂತ್ರಿಸುತ್ತದೆ. ಮೊದಲ ಮತ್ತು ಎರಡನೆಯ ಕಶೇರುಗಳ ನಡುವೆ ಅಪಾಯವಾದರೆ ತತ್‍ಕ್ಷಣ ಮರಣವೂ, ಮೂರು ಮತ್ತು ನಾಲ್ಕನೆಯ ಕಶೇರುಗಳ ಮಧ್ಯೆ ಆಘಾತವಾದರೆ ಶ್ವಾಸೋಚ್ಛ್ವಾಸಕ್ಕೆ ಧಕ್ಕೆಯುಂಟಾಗುತ್ತದೆಂದೂ ಈತ ವರ್ಣಿಸಿದ್ದಾನೆ. ಆರನೆಯ ಕಶೇರುವಿಗಿಂತ ಕೆಳಗಿನವೇನಾದರೂ ಅಪಾಯಕ್ಕೀಡಾದರೆ ಅನುಕ್ರಮವಾಗಿ ಎದೆಗೂಡಿಗೆ, ಮೂತ್ರಕೋಶಕ್ಕೆ, ಕರುಳಿಗೆ ಹಾಗೂ ಕಾಲುಗಳಿಗೆ ಪಾರ್ಶ್ವವಾಯು ಸಂಭವಿಸುವುದೆಂದು ಈತ ಭಾವಿಸಿದ್ದ.

ಆದರೆ ಗೇಲೆನ್ನನ ಈ ವಿಚಾರ 19ನೆಯ ಶತಮಾನದವರೆಗೂ ಬೇರೆ ವಿಜ್ಞಾನಿಗಳ ಲಕ್ಷ್ಯವನ್ನು ಸೆಳೆಯಲಿಲ್ಲ. ಅದುವರೆಗಿನ ಗ್ರೀಕ್ ದೇಹರಚನಾ ಗ್ರಂಥಗಳಲ್ಲಿದ್ದ ವಿಷಯಗಳೆಲ್ಲವನ್ನೂ ಒಂದು ಗೂಡಿಸಿ ಅಂಗರಚನಾವಿಧಾನ ಮತ್ತು ಮಾನವ ದೇಹದ ವಿವಿಧಾಂಗಗಳ ಉಪಯೋಗಗಳ ಬಗ್ಗೆ ಎಂಬ ಎರಡು ಗ್ರಂಥಗಳನ್ನು ನೀಡಿದ್ದೇ ಗೇಲೆನ್ನಿನಿಂದಾದ ಸೇವೆ. ಈತನ ಅನಂತರ ಹೆಚ್ಚು ಕಡಿಮೆ ಜೀವವಿಜ್ಞಾನದ ಅಂಧಯುಗ

ಪ್ರಾರಂಭವಾಯಿತೆನ್ನಬೇಕು. ಮುಂದೆ 12 ಶತಮಾನಗಳ ಕಾಲ ಅರಬ್ಬರು ಜ್ಞಾನದ ಬೆಳವಣಿಗೆಯನ್ನು ಮುಂದುವರಿಸಿದರಾದರೂ ಅವೆಲ್ಲವೂ ಅರಬ್ಬೀ ಬಣ್ಣ ಪಡೆದ ಅರಿಸ್ಟಾಟಲ್, ಗೇಲೆನ್ನರ ತತ್ತ್ವಗಳೇ. ಅಂದರೆ, ಜೀವವಿಜ್ಞಾನವನ್ನು ಅಸ್ತಿತ್ವಕ್ಕೆ ತರಲು ಇವರು ಆಧಾರಪುರುಷರಾದರು ; ಇವರ ಗ್ರಂಥಗಳೇ ಜನರಿಗೆ ವೇದಸಮಾನವಾಗಿದ್ದುದರಿಂದ ನಿಸರ್ಗವನ್ನು ನಿಜವಾದ ದೃಷ್ಟಿಯಿಂದ ನೋಡದೆ ಈ ಗ್ರಂಥಗಳ ಮೇಲೂ ಒಣ ಊಹೆ, ಟೀಕೆ, ಟಿಪ್ಪಣಿಗಳನ್ನು ಕೇವಲ ತಾತ್ತ್ವಿಕ ಜಿಜ್ಞಾಸೆಯ ರೂಪದಲ್ಲಿ ಸ್ಪಷ್ಟಿಸಿದರು. ಕೆಲವು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯೇ ಬೇಡವೆಂದರು. ಗೇಲೆನ್ನನ ಅಭಿಪ್ರಾಯಗಳಿಗೆ ಎದುರಾಡಿದ ವೈದ್ಯರನ್ನು ಶಿಕ್ಷೆಗೆ ಗುರಿಮಾಡುತ್ತಿದ್ದರು. ಸರ್ವಜ್ಞಾನದಿಂದ ಕೂಡಿದ ಅರಿಸ್ಟಾಟಲನ ಕಾಲದಲ್ಲಿ ಜೀವವಿಜ್ಞಾನ ವಿಶಾಲವಾಗಿಯೂ ಆಳವಾಗಿಯೂ ಹಬ್ಬಿ ವಿಶ್ವಕೋಶದಂತೆ ಮನ್ನಣೆ ಪಡೆದು, ಗೇಲೆನ್ನನ ಕಾಲದಲ್ಲಿ ಅತ್ಯುನ್ನತಿಗೇರಿತೇ ಹೊರತು ಈತನಿಗೆ ಸರಿಸಮನಾದ, ಪ್ರತಿಭಾಶಾಲಿಯಾದ ಶಿಷ್ಯವೃಂದ ಸೃಷ್ಟಿಯಾಗದ ಕಾರಣ, ಗೇಲೆನ್ನನ ಮರಣಾನಂತರ (ಕ್ರಿ.ಶ. 200) ಪ್ರಕೃತಿವಿಜ್ಞಾನ ಕೊಂಚ ಕಾಲ ಮೂಲೆಗುಂಪಾಗಬೇಕಾಯಿತು.

(b) ಮಧ್ಯಕಾಲದಲ್ಲಿ ಜೀವವಿಜ್ಞಾನದ ಸ್ಥಿತಿಗತಿ ; ಗೇಲೆನ್ನನ ಕಾಲದಲ್ಲಿ ಉನ್ನತಿಗೇರಿದ್ದ ಜೀವವಿಜ್ಞಾನ ಅವನ ಬಳಿಕ ಮೂಲೆಗೆ ಬಿತ್ತಾದರು ಗ್ರೀಕರ ಗ್ರಂಥಗಳನ್ನು ಲ್ಯಾಟಿನ್ನಿಗೆ ಭಾಷಾಂತರಿಸುವ ಕಾರ್ಯ ಕ್ರಿ.ಶ. 11–13ನೆಯ ಶತಮಾನಗಳಲ್ಲಿ ಭರದಿಂದ ಸಾಗಿತು. ಆಗ ಪ್ರಕಟಗೊಂಡ ಆಲ್ಬರ್ಟಸ್ ಮ್ಯಾಗ್ನಸ್‌ನಿಂದ (ಸು. 1200–1280) ರಚಿತವಾದ ಗ್ರಂಥಗಳಿಂದ ಆ ಕಾಲದಲ್ಲಿ ಜನರಿಗಿದ್ದ ಸತ್ಯಾನ್ವೇಷಣೆಯ ಒಲವು ಅರಿವಾಗುವುದು. ಭಾಷಾಂತರಕಾರರಿಗಿಂತಲೂ ಕಲಾವಿದರು ಜೀವಾಧ್ಯಯನಕ್ಕೆ ಹೆಚ್ಚು ಒತ್ತಾಸೆ ಕೊಟ್ಟರು. ಲಿಯೊನಾರ್ಡೊ ಡ ವಿಂಚೀ (1452–1519), ಆಲ್ ಬ್ರೇಕ್ಟ್ ಡ್ಯೂಪರ್ (1471–1528), ಮೈಕೆಲ್ಯಾಂಜಲೊ (1475–1564) ಮೊದಲಾದ ಕಲಾವಿದರು ಜೀವಿಗಳ ರಚನಾಚಿತ್ರಗಳನ್ನು ವೀಕ್ಷಿಸಿದ್ದು ಕಲೆಗಾರರಾಗಿ ಮಾತ್ರವಲ್ಲ. ಇವರು ಮಾನವ ದೇಹದ ರಚನೆಯೆಡೆಗೂ ಗಮನ ಹರಿಸಿದರು. ಡ ವಿಂಚೀ ತನ್ನ ಜೀವಿತಕಾಲದಲ್ಲಿ ಬರೆದಿದ್ದ ಸುಮಾರು 750ಕ್ಕೂ ಮಿಗಿಲಾದ ಅಂಗರಚನೆಯ ಚಿತ್ರಗಳೂ, 120 ಟಿಪ್ಪಣಿ ಪುಸ್ತಕಗಳೂ ದೊರೆತಿವೆ. ಆತ ಸತ್ತಮೇಲೆ ಅನೇಕ ಶತಮಾನಗಳ ಕಾಲ ರಚಿತವಾದ ಗ್ರಂಥಗಳಿಗಿಂತ ಡ ವಿಂಚೀಯ ಗ್ರಂಥಗಳೇ ಹರವು, ಖಚಿತತೆ, ಚೆಲುವುಗಳಲ್ಲಿ ಮಿಗಿಲಾಗಿವೆ. ಅವನು ಹೊಸದಾಗಿ ಶೋಧಿಸಿದ ಅಂಶಗಳದ್ದೇ ಒಂದು ದೊಡ್ಡ ಪಟ್ಟಿ ಆಗುತ್ತದೆ. ಅವನ ಆನಂತರದ ವಿಜ್ಞಾನಿಗಳು ಅವನ್ನೆಲ್ಲ ಮತ್ತೆ ಕಂಡುಹಿಡಿದರು. ಆತ ತನ್ನ ಶೋಧನೆಗೆ ಹೆಚ್ಚಾಗಿ ನೆಚ್ಚಿದ್ದು ಪುಸ್ತಕಗಳಿಗಿಂತಲೂ ನಿಸರ್ಗವನ್ನೇ. ಮುದ್ರಣ ಸೌಲಭ್ಯವೂ ಇದ್ದುದರಿಂದ ಡ ವಿಂಚೀಯ ಅದ್ಭುತ ಸಾಧನೆ ಮತ್ತು ಚೇತನಗಳು ಆತನ ಅನಂತರ ಬಂದ ವೆಸೇಲಿಯಸ್ ಮುಂತಾದ ವಿಜ್ಞಾನಿಗಳಿಗೂ ದೊರೆಯುವಂತಾಗಿ ಅವರ ಮೇಲೆ ಪ್ರಭಾವ ಬೀರಿದುವು.

(c) ಜೀವಾಧ್ಯಯನದ ಪುನರುಜ್ಜೀವನ: ಕಾಲಕ್ರಮೇಣ ಜೀವವಿಜ್ಞಾನವನ್ನು ಕುರಿತ ಪಠ್ಯಪುಸ್ತಕಗಳು ಪ್ರಕಟವಾದುವು. ಈ ದಿಸೆಯಲ್ಲಿ ಜರ್ಮನಿಯ ಸಸ್ಯವಿಜ್ಞಾನಿಗಳ ಮುನ್ನಡೆ ಗಮನಾರ್ಹವಾದ್ದು. ಆಟೊ ಬ್ರುನ್ಫೆಲ್ಸ್ (1488–1534) ಸಸ್ಯವಿಜ್ಞಾನದ ಪುಸ್ತಕವನ್ನು ಹೊರತಂದವರಲ್ಲಿ ಮೊಟ್ಟಮೊದಲಿಗ. ಆಧುನಿಕ ಗ್ರಂಥಗಳಿಗೆ ಸರಿಸಮನಾದ ಈತನ ಪುಸ್ತಕದಲ್ಲಿ ಗಿಡಮರಗಳ ಸ್ಥೂಲರಚನೆಯ ಸಚಿತ್ರ ವರ್ಣನೆಯನ್ನು ಕಾಣಬಹುದು. 1542ರಲ್ಲಿ ಹೊರತಂದ ಲಿಯೋನಾರ್ಡ್ ಪೂಕ್ಸ್‌ನ ಪುಸ್ತಕ ಪ್ರಕೃತಿ ವಿಜ್ಞಾನದ ಬಗ್ಗೆ ಇರುವ ಶ್ರೇಷ್ಠ ಕೃತಿಯೆಂದು ಪರಿಗಣಿತವಾಗಿದೆ.

ಅಂಗರಚನಾವಿಜ್ಞಾನದಲ್ಲಿ ಆಗ ಅಗ್ರಗಣ್ಯರೆನಿಸಿದ್ದ ಆಂಡ್ರಿಯಾಸ್ ವೆಸೇಲಿಯಸ್ ಮತ್ತು ಬಾರ್ತಲೋಮಿಯೋ ಯೂಸ್ಟೇಕಿಯೋ ಎಂಬಿಬ್ಬರು ತಂತಮ್ಮ ಪರಿಜ್ಞಾನ ಮತ್ತು ಸತ್ಯಾನ್ವೇಷಣೆಯ ಅಸಕ್ತಿಗಳಿಂದ ಜೀವವಿಜ್ಞಾನಕ್ಕೆ ಹೊಸ ಕಳೆಯನ್ನು ತುಂಬಿದರು. ವೆಸೇಲಿಯಸ್ಸನ ಹ್ಯೂಮಾನಿ ಕಾರ್ಪೋರಿಸ್ ಫ್ಯಾಬ್ರಿಕ (ಮಾನವನ ಮೈಯ ರಚನೆ) ಎಂಬ ಜಗತ್ಪ್ರಸಿದ್ಧ ಪುಸ್ತಕದಿಂದಾಗಿ ಮಾನವ ದೇಹದ ರಚನೆಯನ್ನು ಅಂದವಾದ ಮತ್ತು ಖಚಿತವಾದ ಚಿತ್ರಗಳ ಮೂಲಕ ಮೊದಲಬಾರಿಗೆ ಕಾಣುವಂತಾಯಿತು. ದೇಹದ ಹಲವಾರು ಭಂಗಿಗಳು ದೈನಂದಿನ ಜೀವನದ ಸಹಜ ಪರಿಸರಗಳಲ್ಲಿ ಎದ್ದುಕಾಣುವಂತೆ ಅನೇಕ ಚಿತ್ರಗಳನ್ನು ಈತ ಬರೆದಿದ್ದಾನೆ. ವಿವರಗಳ ಖಚಿತತೆಯಲ್ಲಿ ವೆಸೇಲಿಯಸ್ಸನನ್ನು ಮೀರಿಸಿದವ ಯೂಸ್ಟೇಕಿಯೋ. ದೇಹಗಳಲ್ಲಿ ಕಾಣಬರುವ ರಚನಾವೈವಿಧ್ಯವನ್ನು ತೋರಿಸಿ ಕೊಟ್ಟವರಲ್ಲಿ ಇವನೇ ಮೊಟ್ಟಮೊದಲಿಗ. ಅಂಗರಚನೆಯ ಪುಸ್ತಕದ ಕೃತಿಕಾರ ಈತ. ಇವನು ಸತ್ತ 140 ವರ್ಷಗಳ ತನಕ ಈತ ಬರೆದನೆನ್ನಲಾದ ಅನೇಕ ಚಿತ್ರಗಳು ಬೆಳಕು ಕಾಣಲಿಲ್ಲ. ಗಂಟಲು ಕಿವಿಗಳ ನಡುವೆ ಇರುವ ಆಲಿಕೆಯ ಕೊಳವೆಗೆ ಇವನ ಹೆಸರನ್ನೇ ಕೊಡಲಾಗಿದೆ. ಅನುವೇದನ ನರಮಂಡಲದ ಚಿತ್ರಗಳನ್ನು ಈತ ಅಮೋಘವಾಗಿ ಬಿಡಿಸಿದ್ದಾನೆ.

ಶುದ್ಧ ನಿಸರ್ಗತಜ್ಞರೆಂದು ಹೆಸರುವಾಸಿಯಾದ ಪಿಯರ್ ಬೆಲಾನ್ ಮತ್ತು ಗಿಲಾಮೆ ರೊಂಡಲೆಯವರಿಂದಾಗಿ ಅಸ್ಥಿಯ ತುಲನಾಧ್ಯಯನ, ಮೀನು ಮತ್ತು ಪಕ್ಷಿಗಳ ವೀಕ್ಷಣಾ ವರದಿಗಳು ಪುಸ್ತಕ ರೂಪದಲ್ಲಿ ಕಾಣಬಂದುವು. ಪ್ರಾಣಿಗಳ ಅಧ್ಯಯನಕ್ಕೆ ಅಸ್ತಿಭಾರವನ್ನಿಟ್ಟ ಕಾನ್ರಾಡ್ ಫಾನ್ ಜೆಸ್ನರನು ಚತುಷ್ಪಾದಿಗಳು, ಪಕ್ಷಿಗಳು, ಮೀನು ಮತ್ತು ಉರಗಗಳನ್ನು ಕುರಿತು ಬೃಹದ್ಗ್ರಂಥಗಳನ್ನು ರಚಿಸಿದ್ದಾನೆ. ಸಸ್ಯಸಂಬಂಧವಾದ ಕೃತಿಗಳನ್ನು ಬರೆದಿದ್ದರೂ ಈತ ಸತ್ತು 200 ವರ್ಷಗಳಾಗುವವರೆಗೆ ಅವಾವುವೂ ಪ್ರಕಟವಾಗಲಿಲ್ಲ. 16ನೆಯ ಶತಮಾನದ ಅಂತ್ಯದ ವೇಳೆಗೆ ಜೀವವಿಜ್ಞಾನದ ವಿವಿಧಾಂಗಗಳಿಂದ ಅಂಗರಚನಾವಿಜ್ಞಾನ, ಶರೀರವಿಜ್ಞಾನ, ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನಗಳು ಕ್ರಮವಾಗಿ ರೂಪುಗೊಂಡುವು.

ವೆಸೇಲಿಯಸ್ಸನ ಮರಣಾನಂತರ ಆತನ ಶಿಷ್ಯನಾದ ರಿಯೊಲ್ಡೊ ಕೊಲಂಬೊ (1516–59) ಎಂಬುವನು ರಸಿಕೆಯ ಪೊರೆ, ಕಣ್ಣು ಮತ್ತು ಘುಪ್ಫುಸಗಳ ತಿಳಿವಳಿಕೆಯನ್ನು ಹೆಚ್ಚಿಸಿದ. ಆನಂತರ ಮೊಡೀನಾದ ಕ್ರೈಸ್ತ ಧರ್ಮಾಧಿಕಾರಿ ಗೇಬ್ರಿಯೆಲೊ ಫೆಲೋಪಿಯಸ್ (1523–62) ಎಂಬಾತ ದೇಹರಚನಾವಿಜ್ಞಾನದ ಖಚಿತತೆಯನ್ನು ಹೆಚ್ಚಿಸಿದ. ಹೆಣ್ಣಿನ ಅಂಡನಾಳದ ಮುಂತುದಿಗೆ ಈತನ ಹೆಸರನ್ನೇ ಇನ್ನೂ ಬಳಸುತ್ತಿದ್ದಾರೆ. ತನ್ನ ಕಾಲದಲ್ಲಿ ಅತಿ ಹೆಚ್ಚಿನ ಪಸಿದ್ಧಿ ಪಡೆದ ಹೀರಾನಿಮಸ್ ಫೆಬ್ರಿಸಿಯಸ್ (ಸು. 1553–1619) ಭ್ರೂಣವಿಜ್ಞಾನ, ಶರೀರವಿಜ್ಞಾನ ಮತ್ತು ರಚನಾವಿಜ್ಞಾನಗಳ ಬಗ್ಗೆ ಪುಸ್ತಕ ಬರೆದ. ಆಪೆರ ಆಮ್ನಿಯದ ಕೃತಿಕಾರನಾದ ಈತ ತಾಮ್ರದ ತಗಡುಗಳ ಮೇಲೆ ಚಿತ್ರಗಳನ್ನು ಕೆತ್ತುವುದರಲ್ಲೂ ಅಗ್ರಗಣ್ಯನೆನಿಸಿದ. ರಕ್ತಾಭಿಸರಣೆಯನ್ನು ಪರಿಶೋಧಿಸಿದ ವಿಲಿಯಮ್ ಹಾರ್ವೆ ಫೆಬ್ರಿಸಿಯಸ್ಸನ ಮನೆಯಲ್ಲೇ 4 ವರ್ಷ ಕಾಲ ಇದ್ದುಕೊಂಡು ರಕ್ತಪರಿಚಲನೆ ಮತ್ತು ಭ್ರೂಣವಿಜ್ಞಾನಗಳನ್ನು ಅಭ್ಯಸಿಸಿದ. ಹೃದಯದ ಬಡಿತ, ನಾಡಿ, ರಕ್ತಸುರಿಕೆ ಇತ್ಯಾದಿ ಬಿಡಿ ವಿಷಯಗಳ ಹಿಂದೆ ಇರುವ ಸಾಮಾನ್ಯ ಸೂತ್ರಗಳನ್ನು ಹಾರ್ವೆ ಕಂಡುಕೊಂಡ. ಮೈಯಲ್ಲಿ ಅಪಧಮನಿಗಳ ಮತ್ತು ಅಭಿಧಮನಿಗಳ (ಸಿರಗಳ) ಕೊನೆಕುಡಿಗಳನ್ನು ಕೂಡಿಸುವ ಅಪಾರ ಜಾಲರಚನೆಯನ್ನು ಹಾರ್ವೆ ಕಾಣದಿದ್ದರೂ ಅದು ಇದ್ದಿರಬೇಕೆಂದು ಊಹಿಸಿದ್ದ. ನಿಜವಾಗಿಯೂ ಆ ಜಾಲರಚನೆಯನ್ನು ಮುಂದೆ ಕಂಡ ವ್ಯಕ್ತಿಯೊಬ್ಬ ಇಟಲಿಯಲ್ಲಿ ಹುಟ್ಟಿದ. 32 ವರ್ಷ ವಯಸ್ಸಿನ ಮಾರ್ಸೆಲೊ ಮಾಲ್ಪೀಗಿ ಎಂಬಾತ ಕಪ್ಪೆಯ ಘುಪ್ಫುಸದ ಒಂದು ಚೂರನ್ನು ಹಿಡಿದು ಪರೀಕ್ಷಿಸಿ ಧಮನಿಗಳ ಮತ್ತು ಸಿರಗಳ ಕೊನೆಕುಡಿಗಳನ್ನು ಕಣ್ಣಾರೆ ಕಂಡ. ರಕ್ತ ತುಂಬಿರುವ ಪುಟಾಣಿ ಲೋಮನಾಳಗಳು ಈ ಕುಡಿಗಳನ್ನು ಒಂದುಗೂಡಿಸುವುದನ್ನೂ ಮೊಟ್ಟಮೊದಲಿಗೆ ಭೂತಗನ್ನಡಿಯ ಸಹಾಯದಿಂದ ಈತ ಕಂಡ.

ಜೀವಿಗಳ ಅಂಗಗಳ ಮತ್ತು ವಿವಿಧ ಭಾಗಗಳ ನವುರಾದ ರಚನಾವಿನ್ಯಾಸಗಳು ಮುಂತಾದ ಇತರ ಸೋಜಿಗಗಳ ತಿಳಿವಳಿಕೆ ಹೆಚ್ಚಾದದ್ದು ಸೂಕ್ಷ್ಮದರ್ಶಕದ ಉಪಜ್ಞೆಯಿಂದ. ಈ ರಚನೆಗೆ ಮಾರುಹೋದ ವಿಜ್ಞಾನಿಗಳಲ್ಲಿ ಮಾಲ್ಪೀಗಿಯೂ ಒಬ್ಬ. ಸೂಕ್ಷ್ಮದರ್ಶಕದ ನೆರವಿನಿಂದ ಶರೀರವಿಜ್ಞಾನ, ಅಂಗರಚನಾವಿಜ್ಞಾನ ಹಾಗೂ ಭ್ರೂಣವಿಜ್ಞಾನಗಳಿಗೆ ಹಲವಾರು ಗುರುತರ ಕೊಡುಗೆಗಳನ್ನು ಈತ ಕೊಟ್ಟ. ವಾಯುಗೂಡುಗಳು, ರಕ್ತದಿಂದ ಬೇರ್ಪಟ್ಟಿರುವ ಪುಪ್ಫುಸಗಳ ರಚನೆ, ಲೋಮನಾಳಗಳಲ್ಲಿ ರಕ್ತದ ಚಲನೆ; ಮೇಲ್ಚರ್ಮದ ಮೊಳೆಯುವ ಪದರ; ಮೂತ್ರ ಪಿಂಡದ ಗೋಳಕಗಳು; ಗುಲ್ಮದ ಕಿಗ್ಗಂಟುಗಳು; ನಾಲಗೆಯ ಲಕ್ಷಣಗಳು; ಕೋಳಿಯ ಬೆಳವಣಿಗೆಯ ಪ್ರಥಮ ಹಂತಗಳು; ಸಸ್ಯಗಳ ಕೋಶಭಿತ್ತಿಯ ಸ್ಥೂಲ ಪರಿಚಯ ಮತ್ತು ಬೇರು ಹಾಗೂ ಕಾಂಡಗಳ ಸೂಕ್ಷ್ಮ ರಚನೆಗಳ ಅರಿವಾದದ್ದು ಮಾಲ್ಪೀಗಿಯ ಸಂಶೋಧನೆಯಿಂದಾಗಿ. ಇಂಗ್ಲೆಂಡಿನ ನಿಹೀಮಿಯ ಗ್ರ್ಯೂ (1641–1712) ಎಂಬಾತ ಸಸ್ಯಗಳಲ್ಲಿ ಲಿಂಗಭೇದವನ್ನು ಗುರುತಿಸಿದ. ಕೀಟಗಳ ರೂಪಪರಿವರ್ತನೆ ಮತ್ತು ಬೆಳವಣಿಗೆಯನ್ನು ಅರಿಯಲು ಶ್ರಮವಹಿಸಿದವನೆಂದರೆ ಜಾನ್ ಸ್ವಾಮರ್ಡಾಮ್ (1637–80). ಇವನ ಕೆಲಸವೆಲ್ಲ ಬಹುವಾಗಿ ಕೀಟಗಳ ಜೀವನದ ಸೂಕ್ಷ್ಮ ರಚನೆಗಳನ್ನು ಬಿಡಿಸುವುದಾಗಿದ್ದರು ಈತ ರಕ್ತಕೋಶಗಳನ್ನೂ ಮೊಟ್ಟಮೊದಲ ಬಾರಿಗೆ ವಿವರಿಸಿದ.

ಸೂಕ್ಷ್ಮದರ್ಶಕದ ಮಹದುಪಯೋಗ ಪಡೆದವನೆಂದರೆ ಆಂಟನ್ ಫಾನ್ ಲ್ಯೂವೆನ್ ಹೂಕ್ (1635–1703). ಕಿರಿ ಅಭಿ ಮತ್ತು ಅಪಧಮನಿಗಳ ನಡುವೆ ಇರುವ ಲೋಮನಾಳಗಳ ಜೋಡಣೆಯ ಕ್ರಮವನ್ನು ಮೊಟ್ಟಮೊದಲಿಗೆ ತೋರಿಸಿದಾತ ಈತ. ಕೆಂಪು ರಕ್ತಕಣಗಳ ಬಗ್ಗೆ ಸ್ವಾಮರ್‌ಡಾಮ್ ನಡೆಸಿದ ವಿಮರ್ಶಾತ್ಮಕ ವಿಚಾರವನ್ನು ಮುಂದುವರಿಸಿ, ಉರಗಗಳ ಹೊರತಾಗಿ ಎಲ್ಲ ಕಶೇರುಕಗಳಿಗೂ ಅನ್ವಯಿಸಿದ. ಮಾಂಸಖಂಡಗಳಲ್ಲಿ ಅಡ್ಡಪಟ್ಟೆಯಿರುವುದು; ಹೃದಯದ ಮಾಂಸಖಂಡಗಳು ಕವಲೊಡೆದಿರುವ ಲಕ್ಷಣ; ಹರಳಾಕೃತಿಯಲ್ಲಿರುವ ಕಣ್ಣಿನ ಮಸೂರದ ರಚನೆ; ಶಿಲಕೆಗಳ ಕಾರ್ಯ ಮತ್ತು ಅವುಗಳ ಸ್ಥಾನ; ಸ್ತನಿಗಳ ರೇತ್ರ ರೂಪ; ದಂಡಾಣುಗಳ ವಿಮರ್ಶೆ–ಇವೆಲ್ಲ ಲ್ಯೂವೆನ್ ಹೂಕನ ಕೊಡುಗೆಗಳು. ಅನಂತರ ಬಂದ ವಿಜ್ಞಾನಿಗಳಲ್ಲಿ ಪ್ರಮುಖನಾದವ ರಾಬರ್ಟ್ ಹೂಕ್ (1635–1708). ಇವನು ಬಿರಡೆಯ

ಅಡ್ಡಕೊಯ್ತಗಳನ್ನು ಸೂಕ್ಷ್ಮದರ್ಶಕದ ಮೂಲಕ ವೀಕ್ಷಿಸಿ, ಅವುಗಳಲ್ಲಿ ಜೇನುಗೂಡಿನಂತಿರುವ ಸಣ್ಣಕೋಣೆಗಳಿರುವುದನ್ನು ಚಿತ್ರರೂಪದಲ್ಲಿ ವಿವರಿಸಿ, ಅವನ್ನು ಜೀವಕೋಶಗಳೆಂದು ಕರೆದ. ಹೀಗೆ ಜೀವಕೋಶಗಳನ್ನು ಪ್ರಥಮ ಬಾರಿಗೆ ಆವಿಷ್ಕರಿಸಿದ ಕೀರ್ತಿ ಈತನಿಗೆ ಸಲ್ಲಬೇಕು. ಚುರುಚುರಕೆ ಗಿಡದ ಚುಚ್ಚುಕೋಶಗಳ ವಿವರಣೆ, ಒದ್ದೆಯಾದ ಎಲೆಯ ಮೇಲೆ ಶಿಲೀಂಧ್ರದ ಬೆಳವಣಿಗೆ; ಹಾವಸೆಯ ರಚನಾ ವಿನ್ಯಾಸ; ಮುಟ್ಟಿದರೆ ಮುನಿ ಗಿಡದ ಮೇಲಿನ ಪ್ರಯೋಗಗಳು; ಹೇನು ಮತ್ತು ಚಿಗಟಗಳ ಚಿತ್ರಗಳು; ನೊಣದ ಸಂಯುಕ್ತಾಕ್ಷಿ ಮತ್ತು ನುಸಿಯ (ನ್ಯಾಟ್) ಜೀವನಚರಿತ್ರೆ–ಇವು ಹೂಕನ ವಿಶಿಷ್ಟ ಕೊಡುಗೆಗಳು.

ಜೀವವಿಜ್ಞಾನಿಗಳು ಮೊದಮೊದಲು ಜೀವಿಗಳ ವರ್ಗೀಕರಣಕ್ಕೆ ಅಷ್ಟಾಗಿ ಲಕ್ಷ್ಯವೀಯಲಿಲ್ಲ. ಪ್ರಾಣಿಗಳನ್ನು ಮೀನು, ಪಕ್ಷಿ, ಉರಗ ಮುಂತಾದ ಗುಂಪುಗಳಾಗಿ ಜೆಸ್ನರ್ ವಿಂಗಡಿಸಿದ್ದ. ಎಲೆಗಳ ಆಕಾರದ ಆಧಾರದ ಮೇಲೆ ಸಸ್ಯಗಳನ್ನು ವರ್ಗೀಕರಿಸಲು ತೊಡಗಿದವನೆಂದರೆ ಮ್ಯಾಥಿಯಾಸ್ ಡ ಲೋಬೆಲ್ (1538–1616) ಎಂಬ ಡಚ್ ವಿಜ್ಞಾನಿ. ಹುಲ್ಲುಗಳನ್ನು ಈತ ಸಾಕಷ್ಟು ಚೆನ್ನಾಗಿ ವಿಂಗಡಿಸಿದರೂ ಏಕ ಮತ್ತು ದ್ವಿದಳ ಸಸ್ಯಗಳ ವಿಂಗಡಣೆಯಲ್ಲಿ ಮಾತ್ರ ವಿಫಲನಾದ. ಫಲಪುಷ್ಪಗಳನ್ನೇ ಆಧರಿಸಿ ಶ್ರೇಷ್ಠ ವರ್ಗೀಕರಣಕ್ಕೆ ಅಡಿಗಲ್ಲಿಟ್ಟವ ಆ್ಯಂಡ್ರಿಯಾಸ್ ಸೀಸಾಲ್ಪಿನಸ್ (1519–1603). ಆನಂತರ ಗ್ಯಾಸ್ಪರ್ಡ್ ಬಾಹಿನ್ (1550–1624) ಎಂಬಾತ ಹೆಚ್ಚುಕಡಿಮೆ ಸೀಸಾಲ್ಪಿನಸ್‌ನ ಕ್ರಮವನ್ನೇ ಅನುಸರಿಸಿ ಸುಮಾರು 6000 ಸಸ್ಯಗಳನ್ನು ವರ್ಗೀಕರಿಸಿದ. ಸಸ್ಯಗಳ ವಿವಿಧ ಪ್ರಭೇದಗಳನ್ನು ಜಾತಿಗಳಾಗಿ ಮೊಟ್ಟ ಮೊದಲಿಗೆ ವಿಂಗಡಿಸಿದವನು ಇವನೇ. ಆದರೆ ಇಡೀ ಜೀವರಾಶಿಯನ್ನು ವೈಜ್ಞಾನಿಕ ರೀತ್ಯ ವರ್ಗೀಕರಿಸಲು ದಿಟ್ಟ ಹೆಜ್ಜೆಯಿಟ್ಟವರು ಜಾನ್ ರೇ (1627–1705) ಮತ್ತು ಫ್ರಾನ್ಸಿಸ್ ವಿಲುಗ್ಬಿ (1635–72) ಎಂಬ ಇಬ್ಬರು ಸ್ನೇಹಿತರು. ಪ್ರಾಣಿಗಳ ವಿಂಗಡಣೆಯಲ್ಲಿ ನಿರತನಾಗಿದ್ದ ವಿಲುಗ್ಬಿ ಅಕಾಲಮೃತ್ಯುವಿಗೆ ಬಲಿಯಾದ್ದರಿಂದ, ರೇ ಒಬ್ಬನೇ ವರ್ಗೀಕರಣವಿಜ್ಞಾನದ ಅಧ್ಯಯನವನ್ನು ಮುಂದುವರಿಸಿದ. ಮೊಗ್ಗುಗಳ ನೈಜಸ್ವರೂಪವನ್ನು ವಿವರಿಸಿರುವುದಲ್ಲದೆ, ಫಲಪುಷ್ಪಗಳ ಜೊತೆಗೆ ಪತ್ರಗಳನ್ನು ಪರಿಶೀಲಿಸಿ ಏಕ ಮತ್ತು ದ್ವಿದಳ ಸಸ್ಯಗಳ ನಿರೂಪಣೆಯನ್ನು ಸಸ್ಯಗಳ ನವ್ಯ ವ್ಯವಸ್ಥೆ ಎಂಬ ಪುಸ್ತಕದಲ್ಲಿ ಈತ ಪ್ರಕಟಿಸಿದ್ದಾನೆ (1682). ಅಂತೆಯೇ, ಬೆರಳು ಮತ್ತು ಹಲ್ಲುಗಳನ್ನು ಆಧರಿಸಿ ಪ್ರಾಣಿಗಳ ವರ್ಗೀಕರಣ ಕ್ರಮವನ್ನು ಚತುಷ್ಪಾದಿ ಮತ್ತು ಸರ್ಪಗಳ ಸಾರಸಂಗ್ರಹದಲ್ಲಿ (ಸೈನಾಪ್ಸಿಸ್ ಆಫ್ ಕ್ವಾಡ್ರಪೆಡ್ಸ್ ಅಂಡ್ ಸರ್ಪೆಂಟ್ಸ್ 1693) ವಿವರಿಸಿದ್ದಾನೆ.

ಸುವ್ಯವಸ್ಥಿತ ರೀತಿಯಲ್ಲಿ ಜೀವಿಗಳನ್ನು ವರ್ಗೀಕರಿಸಿದ ಕೀರ್ತಿ ಲಿನಿಯಸ್‌ನಿಗೆ (1707–78) ಸಲ್ಲುತ್ತದೆ. ಆ ಕಾಲದ ಸರ್ವೋತ್ತಮ ಹಾಗೂ ನಿಷ್ಠಾವಂತ ಗುರುಗಳನ್ನು ಪಡೆದಿದ್ದ ಲಿನಿಯಸ್ಸನು ಸ್ವತಃ ಉತ್ತಮ ಬೋಧಕನಾಗಿದ್ದನಲ್ಲದೆ ಅತ್ಯಾಸಕ್ತ ಶಿಷ್ಯಕೋಟಿಯುಳ್ಳ ಅದೃಷ್ಟಶಾಲಿಯೂ ಆಗಿದ್ದ. ಬಾಹಿನ್ ಮತ್ತು ರೇ ಮುಂತಾದವರ ವರ್ಗೀಕರಣ ಪದ್ಧತಿಯಿಂದ ಪ್ರಭಾವಿತನಾಗಿ, ಲಿನಿಯಸ್ಸನು ಪ್ರತಿಯೊಂದು ಜೀವಿಗೂ ಎರಡೂ ಹೆಸರನ್ನಿತ್ತು–ಮೊದಲನೆಯದು ಜಾತಿಯನ್ನೂ ಎರಡನೆಯದು ಪ್ರಭೇದವನ್ನೂ ಸೂಚಿಸುವಂತೆ–ದ್ವಿನಾಮ ನಾಮಕರಣ ವಿಧಾನವನ್ನು ಜಾರಿಗೆ ತಂದದ್ದರಿಂದ, ಅದುವರೆಗೂ ಕೇವಲ ಕಲ್ಪನೆ ಮತ್ತು ಗೊಂದಲಕ್ಕೆ ಸಿಕ್ಕಿಬಿದ್ದಿದ್ದ ವರ್ಗೀಕರಣಶಾಸ್ತ್ರ ವೈಜ್ಞಾನಿಕ ಮಿರುಗನ್ನು ತಳೆಯಿತು. ಅನೇಕಾವರ್ತಿ ಮುದ್ರಿಸಲ್ಪಟ್ಟ ಈತನ ಸಿಸ್ಟಮಾ ನೇಚುರೇ ಎಂಬ ಪುಸ್ತಕದ 10ನೆಯ ಆವೃತ್ತಿ ಪ್ರಾಣಿಗಳ ಮತ್ತು 12ನೆಯ ಆವೃತ್ತಿ ಸಸ್ಯಗಳ ಜಾತಿಭೇದಗಳನ್ನರಿಯಲು ಪ್ರಮುಖವಾದದ್ದೆಂದು ಇಂದಿಗೂ ಪರಿಗಣಿತವಾಗಿವೆ. ಪ್ರಭೇದಗಳು ಅಚಲ ಹಾಗೂ ಅಭಿನ್ನವಾದವೆಂದು ಈತ ನಂಬಿದ್ದ. ಒಂದು ಜೊತೆ ಜೀವಿಗಳ ಸಂತತಿಗಳೆಲ್ಲವೂ ಒಂದು ಪ್ರಭೇದವಾಗಿ ಬೆಳೆಯುವುವೆಂದು ಈತನ ಭಾವನೆ. ಕಾಲಗತಿಸಿದಂತೆ ಈ ನಿರೂಪಣೆಯನ್ನು ಬದಲಾಯಿಸಿ, ಜಾತಿಗಳು ಭಗವಂತನ ಸೃಷ್ಟಿಯೆಂದು ಈತ ಹೇಳಿದ.

(4) ತುಲನಾತ್ಮಕ ಅಂಗರಚನಾವಿಜ್ಞಾನ ಮತ್ತು ಶರೀರವಿಜ್ಞಾನ : ವಿವಿಧ ಜೀವಿಗಳ ಅಂಗರಚನೆ, ಕ್ರಿಯಾಶೀಲತೆ ಮುಂತಾದುವುಗಳ ಸಾಮ್ಯಾಸಾಮ್ಯತೆಗಳ ಅಭ್ಯಾಸ 16ನೆಯ ಶತಮಾನದಿಂದೀಚೆಗೆ ಆರಂಭವಾಯಿತು. 1543ರಲ್ಲಿ ವೆಸೇಲಿಯಸ್ ಮಾನವನ ದೇಹವನ್ನು ವಿಚ್ಛೇದಿಸಿ, ಅಂಗರಚನೆಯ ಬಗ್ಗೆ ವಿವರಣೆಗಳನ್ನು ಕೊಟ್ಟ. ಹನ್ನೆರಡು ವರ್ಷಗಳ ಆನಂತರ, ಪಿಯರ್ ಬೆಲಾನನು ಪಕ್ಷಿ ಮತ್ತು ಮಾನವನ ಕಂಕಾಲದ ಎಲುಬುಗಳನ್ನು ಅಧ್ಯಯನ ಮಾಡಿ, ವಿವಿಧ ಎಲುಬುಗಳು ಒಂದೇ ಬಗೆಯಲ್ಲಿ ಅಳವಟ್ಟಿರುವುದನ್ನು ಮೊದಲ ಬಾರಿಗೆ ತೋರಿಸಿದ. ಈ ಬಗೆಯ ತುಲನಾಧ್ಯಯವನ್ನು ಗಯಟೆ, ಓಕೆನ್ ಮೊದಲಾದವರು ತಾತ್ತ್ವಿಕವಾಗಿ ಹಾಗೂ ವಿವರಣಾತ್ಮಕವಾಗಿ 19ನೆಯ ಶತಮಾನದವರೆಗು ಬೆಳೆಸಿಕೊಂಡು ಬಂದರು. ಈ ಅಭ್ಯುದಯದ ಕಾಲದಲ್ಲಿ ಅನೇಕ ಪ್ರಾಣಿಗಳ ವೃತ್ತಾಂತಗಳು ಹೊರಬಿದ್ದವು. ಹದಿನಾರನೆಯ ಶತಮಾನದ ಅಂತ್ಯದಲ್ಲಿ ರೂಯಿನಿಯಿಂದ ಕುದುರೆ ವೃತ್ತಾಂತವೂ, 17ನೆಯ ಶತಮಾನದಲ್ಲಿ ಇಟಲಿಯ ಫ್ರಾನ್ಸೆಸ್ಕೋ ರೆಡಿಯಿಂದ ಗೋಸುಂಬೆ ವೃತ್ತಾಂತವೂ, ಇಂಗ್ಲೆಂಡಿನ ಟೈಸನ್ನನಿಂದ ಚಿಂಪಾಂಜಿ ವೃತ್ತಾಂತವೂ, ಮಾಲ್ಫೀಗಿಯಿಂದ ರೇಷ್ಮೆಹುಳು, ಸ್ವಾಮರ್‌ಡಾಮನಿಂದ ಜೇನ್ನೊಣ ಮತ್ತು ಲ್ಯೂವೆನ್ ಹೂಕನಿಂದ ಚಿಗಟದ ವೃತ್ತಾಂತಗಳೂ ಪ್ರಕಟವಾದುವು.

ವಿಲಿಯಮ್ ಹಾರ್ವೆಯ ಅನ್ವೇಷಣೆಯಿಂದಾಗಿ ಶರೀರವಿಜ್ಞಾನದ ತುಲನಾತ್ಮಕ ವಿವರಣೆಗಳು ಪ್ರಕಟವಾಗತೊಡಗಿದುವು. ಸ್ಟೀಫೆನ್ ಹೇಲ್ಸ್ ಬರೆದ ಸಸ್ಯಗಳಲ್ಲಿ ಜಲಾಭಿಸರಣೆ ಎಂಬುದು 19ನೆಯ ಶತಮಾನದ ಪ್ರಸಿದ್ಧ ಕೃತಿ. ಬೇರಿನ ಮೂಲಕ ಹೊಕ್ಕು ಎಲೆಯಿಂದ ವಿಸರ್ಜನೆಯಾಗುವ ನೀರನ್ನು ಖಚಿತವಾಗಿ ಅಳೆದು, ಮಣ್ಣಿನ ತೇವಕ್ಕೂ ಸಸ್ಯಗಳ ನೀರ್ಸೆಳೆತಕ್ಕೂ ಇರುವ ನಿಕಟ ಸಂಬಂಧವನ್ನು ಈತ ದೃಢಪಡಿಸಿದ. ಬೇರಿನ ಒತ್ತಡಕ್ಕೆ ಸಸ್ಯಗಳ ವಿಶಿಷ್ಟ ರೂಪ ರಚನೆಯೇ ಮೂಲವೆಂದು ಈತ ತೋರಿಸಿದ. ಎಲ್ಲಕ್ಕೂ ಮಿಗಿಲಾಗಿ ವಾಯುವಿನ ಕೆಲವಂಶ (ಈಗ ತಿಳಿದಿರುವಂತೆ, ಕಾರ್ಬನ್ ಡೈಆಕ್ಸೈಡ್) ಸಸ್ಯಗಳಲ್ಲಿ ಆಹಾರೋತ್ಪತ್ತಿಗೆ ಅತ್ಯವಶ್ಯವೆಂದು ನಿರೂಪಿಸಿದವರಲ್ಲಿ ಹೇಲ್ಸನೇ ಮೊದಲಿಗ. ವಾಯು ಎಲೆಗಳ ಮೂಲಕ ಮಾತ್ರವಲ್ಲದೆ ತೊಗಟೆಯ ಮಾರ್ಗವಾಗಿಯೂ ಗಿಡಗಳನ್ನು ಪ್ರವೇಶಿಸುವುದೆಂದು ಈತ ನಂಬಿದ್ದ. ಸಸ್ಯಗಳಲ್ಲಿದ್ದಂತೆ ಪ್ರಾಣಿಗಳಲ್ಲೂ, ಅಳೆಯಬಹುದಾದ ರಕ್ತದ ಒತ್ತಡ ನಾಳಗಳಲ್ಲಿರುವುದೆಂದೂ ವಿವಿಧ ಸನ್ನಿವೇಶಗಳಲ್ಲಿ ಹಾಗೂ ವಿವಿಧ ಅಭಿ ಮತ್ತು ಅಪಧಮನಿಗಳಲ್ಲಿ ಈ ಒತ್ತಡ ವ್ಯತ್ಯಾಸವಾಗುವುದೆಂದೂ ಶ್ರುತಪಡಿಸಿದ. ಹೀಗೆ, ಜೀವವಿಜ್ಞಾನದಲ್ಲಿ ಅಮೂಲ್ಯವಾದ ಖಚಿತ ವಿಧಾನವನ್ನು ಅಳವಡಿಸಿಕೊಂಡು, ಜೀವಿಗಳ ಶರೀರಕ್ರಿಯೆಯನ್ನು ಅಧ್ಯಯನ ಮಾಡುವಂಥ ಹೇಲ್ಸನ ಪ್ರಯೋಗಗಳು ತುಲನಾಭ್ಯಾಸಕ್ಕೆ ಕಳಶಪ್ರಾಯವಾಗಿವೆ.

18ನೆಯ ಶತಮಾನದಲ್ಲಿ ಡಿ ರೌಮರ್ (1683–1757) ಎಂಬಾತ ಕಠಿಣ ಚರ್ಮಿಗಳಲ್ಲಿನ ಪುನರುತ್ಪತ್ತಿ, ನಕ್ಷತ್ರಮೀನಿನ ಚಲನಾಕ್ರ, ಟಾರ್ಪೀಡೋವಿನ ವಿದ್ಯುತ್ಪರಿಕರ, ಕಡಲವಾಸಿಗಳ ಸಂದೀಪ್ತಿ, ಪಾಚಿಗಳ ಬೆಳವಣಿಗೆ, ಪಕ್ಷಿಗಳ ಪ್ರಚನಕ್ರಿಯೆ, ಜೇಡನ ಬಲೆ ಮುಂತಾದವನ್ನು ಪರಿಶೋಧಿಸಿದ್ದಾನೆ. ಕೀಟಗಳ ರೂಪ ಪರಿವರ್ತನೆ ಮತ್ತು ಬೆಳವಣಿಗೆಯ ಮೇಲೆ ಉಷ್ಣತೆಯ ಪ್ರಭಾವವನ್ನು ವಿವರಿಸುವ ಉತ್ತಮ ಕೃತಿಯನ್ನೂ ಬರೆದಿದ್ದಾನೆ. ಈತನ ಸಮಕಾಲೀನರಾದ ಲೈಯೊನೆಟ್ ಮತ್ತು ಟ್ರೆಂಬ್ಲಿ ಎಂಬಿಬ್ಬರು ಸೂಕ್ಷ್ಮತರ ಅಂಗಚ್ಛೇದಕ್ಕೆ ಪ್ರಸಿದ್ಧರಾದವರು. 500 ಕ್ಕೂ ಹೆಚ್ಚು ಸಸ್ಯ ಮತ್ತು ಪ್ರಾಣಿಗಳ ಅಂಗಚ್ಛೇದ ಮಾಡಿ ಜೀವಿಯ ವಿವಿಧ ಹಂತಗಳಲ್ಲಾಗುವ ರಚನಾ ಮಾರ್ಪಾಟುಗಳನ್ನು ವೈಜ್ಞಾನಿಕ ರೀತ್ಯ ಅಭ್ಯಸಿಸಲು ತೊಡಗಿದವ ಜಾನ್ ಹಂಟರ್. ನೈಸರ್ಗಿಕ ವಸ್ತು ಸಂಗ್ರಹಾಲಯಗಳ ಅಸ್ತಿತ್ವಕ್ಕೆ ಈತನೇ ಕಾರಣಪುರುಷನೆಂದು ಹೇಳಲಾಗಿದೆ. ಅದುವರೆಗೂ ತುಲನಾಧ್ಯಯನ ವೈಯಕ್ತಿಕ ಆಸಕ್ತಿಯಿಂದ ಮುನ್ನಡೆಯುತ್ತಿತ್ತು. ಪ್ರಸಿದ್ಧ ಫ್ರೆಂಚ್ ವಿಜ್ಞಾನಿ ಜಾರ್ಜ್ ಕ್ಯೂವೀಯೇ (1769–1832) ಪ್ರಖ್ಯಾತ ಪರಿಣತರ ತಂಡವನ್ನೇ ನಿರ್ಮಿಸಿ, ಈ ದಿಸೆಯಲ್ಲಿ ಉತ್ತಮೋತ್ತಮ ಸಂಶೋಧನೆಗಳು ನಡೆಯಲು ನೆರವಾದ. ವೈವಿಧ್ಯಪೂರ್ಣ ವಸ್ತುಗಳನ್ನು ಕ್ರೋಡೀಕರಿಸಿ ಈತ ಸ್ಥಾಪಿಸಿದ ಲುಪ್ತ ಜೀವಿವಿಜ್ಞಾನವೇ ಈಗೀನ ಪ್ರಭೇದಗಳು ಶಾಶ್ವತವಲ್ಲವೆಂಬ ತತ್ತ್ವಕ್ಕೆ ಬುನಾದಿಯಾಗಿದೆ. ಕ್ಯೂವೀಯೇನ ರನೆ ಅನಿಮಾಲಿ ಎಂಬ ಪುಸ್ತಕ ಪ್ರಾಣಿಗಳ ತುಲನಾಭ್ಯಾಸಕ್ಕೆ ಈಗಲೂ ಆಕರಗ್ರಂಥವಾಗಿದೆ. ಲುಪ್ತಜೀವಿವಿಜ್ಞಾನದ ಸ್ಥಾಪನೆ, ಮೃದ್ವಂಗಿಗಳ ದೇಹರಚನಾಧ್ಯಯನ ಮತ್ತು ಮತ್ಸ್ಯವರ್ಗವನ್ನು ಕುರಿತ ವೈಜ್ಞಾನಿಕ ಶೋಧನೆಗಳು–ಇವು ಕ್ಯೂವೀಯೇನ ಕೊಡುಗೆಗಳು. ಬಹುವಾಗಿ ಈತನ ಮಾರ್ಗವನ್ನೇ ಅನುಸರಿಸಿ ಇಂಗ್ಲೆಂಡಿನಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ರಿಚರ್ಡ್ ಓವೆನ್ನನನ್ನು (1804–92) ಮರೆಯುವಂತಿಲ್ಲ.

ಕ್ಯೂವೀಯೇ ಮತ್ತು ಆತನ ಅನುಯಾಯಿಗಳು ದೇಹ ರಚನೆಯ ಸಾಮ್ಯಾಸಾಮ್ಯತೆಗಳ ಸಂಶೋಧನೆಯಲ್ಲಿ ತಲ್ಲೀನರಾಗಿದ್ದಾಗ, ಜರ್ಮನಿಯ ಯೋಹಾನೆಸ್ ಮ್ಯುಲರ್ ಎಂಬಾತ (1801–58) ಜೀವಿಗಳ ಶರೀರಕ್ರಿಯೆಯ ತುಲನಾಧ್ಯಯನ ಕ್ರಮಕ್ಕೆ ಹೊಸ ತಿರುವನ್ನಿತ್ತ. ತನ್ನ ಅಂತ್ಯ ಕಾಲದಲ್ಲಿ ಮ್ಯುಲರ್ ಪ್ರಾಣಿಗಳ ಸಂಶೋಧನೆಗೆ ಆದ್ಯತೆಯನ್ನಿತ್ತು, ಗ್ರಂಥಿ ಮತ್ತು ಮೃದ್ವಸ್ಥಿಗಳ ರಚನೆಯನ್ನು ಕ್ರಮವಾಗಿ ಅಭ್ಯಸಿಸಿ ತನ್ನ ಶಿಷ್ಯನಾದ ಷ್ವಾನನಿಗೆ ಮಾರ್ಗದರ್ಶಕನಾದ. ಈತನು ಆಜನ್ಮ ಚೈತನ್ಯವಾದಿ. ಮ್ಯುಲರನ ನರಚೈತನ್ಯ ನಿಯಮ ಇಂದಿಗೂ ಚೈತನ್ಯವಾದಿಗಳ ಆದರ್ಶ ತತ್ತ್ವವಾಗಿದೆ. ಗಿಡಮರಗಳನ್ನು ಕುರಿತ ಲುಪ್ತಜೀವಿವಿಜ್ಞಾನ 1831ರಲ್ಲೆ ಬೆಳಕು ಕಂಡರೂ ಇದರ ವೈಜ್ಞಾನಿಕ ಅಧ್ಯಯನ ಆರಂಭವಾದದ್ದು 1858ರಿಂದೀಚೆಗೆ ಮಾತ್ರ. ಇದರ ಏಳಿಗೆಗೆ ಕಾರಣನಾದ ವಿಲಿಯಮ್ಸನ್ (1816–95) ಪುಷ್ಪರಹಿತ ಸಸ್ಯಗಳಾದ ಆಧುನಿಕ ಜರೀಗಿಡ, ಹಾಗೂ ಕ್ಲಬ್ ಮಾಸ್ ಗಿಡಗಳನ್ನು ಹೋಲುವ ದೈತ್ಯಾಕಾರದ ಸಸ್ಯಾವಶೇಷಗಳನ್ನು ಪತ್ತೆ ಹಚ್ಚಿದ್ದ. ಇದರಿಂದಾಗಿ ಭೂಗರ್ಭದ ನಿಕ್ಷೇಪಗಳಿಗೆ ಸಂಬಂಧಿಸಿದಂತೆ ಅವುಗಳ ವಿವಿಧ ಪದರಗಳಲ್ಲಿ ಹುದುಗಿರುವ

ಫಾಸಿಲುಗಳು ಭೂಮಿಯ ಗತಕಾಲದ ವೈಭವವನ್ನೂ ಹಲವಾರು ಮಿಲಿಯನ್ ವರ್ಷಗಳ ಹಿಂದೆಯೇ ಅಸಂಖ್ಯಾತ ಜೀವಿಗಳು ಇದ್ದುವೆಂಬುದನ್ನೂ ಸೂಚಿಸುವಂತಾಯಿತು.

(5) ಆಧುನಿಕ ಜೀವವಿಜ್ಞಾನ: ಹೀಗೆ, ಲುಪ್ತಜೀವವಿಜ್ಞಾನ, ತುಲನಾತ್ಮಕ ಅಂಗರಚನಾವಿಜ್ಞಾನ, ಶರೀರವಿಜ್ಞಾನ, ಭ್ರೂಣವಿಜ್ಞಾನ ಇತ್ಯಾದಿಗಳ ಸ್ಥೂಲ ಅಧ್ಯಯನದಿಂದಾಗಿ ಆಧುನಿಕ ವಿಕಾಸವಾದಕ್ಕೆ ಸಾಕಷ್ಟು ಸಾಕ್ಷಿಪುರಾವೆಗಳು ದೊರೆಯಿತು. ಫಾನ್ ಬೇಯರ್‌ನು ಯಾವಾಗಲೂ ಅಂಗರಚನೆಗಳ ಹೋಲಿಕೆಗಳಿಂದ ವ್ಯತ್ಯಾಸಗಳ ಕಡೆಗೆ ಬೆಳವಣಿಗೆ ಸಾಗುತ್ತಿರುತ್ತದೆ ಎಂಬ ತತ್ತ್ವವನ್ನು ಪ್ರತಿಪಾದಿಸಿದ್ದಲ್ಲದೆ. ಪ್ರಾಯೋಗಿಕವಾಗಿಯೂ ತೋರಿಸಿದ. ಉದಾಹರಣೆಗೆ ಕಪ್ಪೆಯ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಕಾಣಬರುವ ಹಲವಾರು ಸ್ಥಿತ್ಯಂತರಗಳನ್ನು ಪರಿಶೀಲಿಸಿದಾಗ, ಅದು (ಅಥವಾ ಕಪ್ಪೆ ಸೇರಿದ ಆಂಫಿಬಿಯ ವರ್ಗದ ಯಾವುದೇ ಪ್ರಾಣಿಯಾದರೂ ಸರಿಯೆ) ಬೆಳವಣಿಗೆಯ ಕಾಲದಲ್ಲಿ ಸಾಮಾನ್ಯವಾಗಿ ತನ್ನ ಹಿಂದಿನ ಜೀವಿಗಳು ವಿಕಾಸದ ಹಾದಿಯಲ್ಲಿ ಅನುಭವಿಸಿದ ಬದಲಾವಣೆಯ ಸಂಪೂರ್ಣ ಇತಿಹಾಸವನ್ನು ನಿರೂಪಿಸುವುದು ಮನದಟ್ಟಾಗುವುದು ; ಅಂದರೆ ವಿಕಾಸದ ಹಾದಿಯಲ್ಲಿ ಹಂತಹಂತವಾಗಿ ಉಂಟಾದ ರೂಪಾಂತರಗಳನ್ನು ಭ್ರೂಣದ ಬೆಳವಣಿಗೆ ಪ್ರತಿಬಿಂಬಿಸುವುದು ವ್ಯಕ್ತವಾಗುತ್ತದೆ. ಇದನ್ನೇ ಪುನರಾವರ್ತನವಾದವೆಂದು ಕರೆಯುತ್ತಾರೆ. ಮನುಷ್ಯನೂ ಸೇರಿದಂತೆ ಅನೇಕ ಜೀವಿಗಳ ಮೇಲೆ ನಡೆಸಿದ ಇನ್ನೂ ಎಷ್ಟೋ ಬಗೆಯ ಪರಿಶೋಧನೆಗಳಿಂದ ಈ ನಿಯಮಕ್ಕೆ ಸಮರ್ಥನೆ ಹಾಗೂ ಪುಷ್ಟಿ ದೊರೆತಿವೆ.

18ನೆಯ ಶತಮಾನದ ಅಂತ್ಯದಲ್ಲಿ ಆನುವಂಶಿಕ ಸೂತ್ರಗಳ ಹಿನ್ನೆಲೆಯಿಲ್ಲದೆಯೇ ಲಾಮಾರ್ಕ್ (1744–1829) ವಿಕಾಸ ತತ್ತ್ವಗಳ ಬಗ್ಗೆ ಚಿಂತಿಸತೊಡಗಿದ. ಲಾಮಾರ್ಕನ ತತ್ತ್ವ ಹೇಳುವುದಿಷ್ಟೆ ; ಪರಿಸರದಲ್ಲಿ ಉಂಟಾಗುವ ಬದಲಾವಣೆಗಳು ಜೀವಿಗಳ ದೇಹರಚನೆಯಲ್ಲಿಯೂ ಸೂಕ್ತ ಬದಲಾವಣೆಗಳುಂಟಾಗುವಂತೆ ಮಾಡುತ್ತವೆ. ಅವುಗಳಲ್ಲಿ ಕೆಲವು ಹೊಸ ಅಂಗಗಳ ರೂಪದಲ್ಲಾಗಲಿ ಇಲ್ಲವೆ ಕೆಲವು ಅಂಗಗಳ ಅಥವಾ ಭಾಗಗಳ ವಿಪರೀತ ಬಳಕೆಯಿಂದಾಗಲಿ ವಿಕಾಸ ಕಾಣಬಹುದು. ಅಂದರೆ ಪರಿಸ್ಥಿತಿಗೆ ಪ್ರೇರಕಶಕ್ತಿಯಿದೆ ಎಂದು ಲಾಮಾರ್ಕ್ ನಂಬಿದ್ದ. ಆದ್ದರಿಂದಲೇ ಅತಿಯಾಗಿ ಬಳಕೆಯಾಗುವ ಅಂಗಗಳು ಚೆನ್ನಾಗಿ ಬೆಳೆಯುವುವೆಂದು, ಉಪಯೋಗಿಸದ ಅವಯವಗಳು ಕ್ಷೀಣಿಸುವುದೆಂದೂ ಈತ ತೀರ್ಮಾನಿಸಿದ. ಈ ಬಗೆಯ ಬದಲಾವಣೆಗಳು ಜೀವಿಯಲ್ಲಿ ಮೇಲಿಂದಮೇಲೆ ಸಂಭವಿಸಿದರೆ ಅದರ ಮೂಲಜಾತಿಯಿಂದ ಭಿನ್ನವಾಗಿರುವ ಬೇರೆ ಜಾತಿಯ ಜೀವಿ ಹುಟ್ಟುವುದೆಂದು ಪ್ರತಿಪಾದಿಸಿದ. ಈ ರೀತಿಯ ಅರ್ಜಿತ ಗುಣಧರ್ಮಗಳು ವಂಶಗತವಾಗುವುದರಿಂದಲೇ ವಿಕಾಸವಾಗುವುದೆಂಬುದು ಲಾಮಾರ್ಕನ ಸಿದ್ಧಾಂತದ ತಿರುಳು. ಆದರೆ ಈ ತತ್ತ್ವಕ್ಕೆ ಪ್ರಯೋಗಿಕ ಸತ್ತ್ವವಿದ್ದಿಲ್ಲದ ಕಾರಣ ಇದು ವಿಜ್ಞಾನಿಗಳ ಮೆಚ್ಚುಗೆಯನ್ನು ಗಳಿಸಲಿಲ್ಲ.

ಪ್ರಖ್ಯಾತ ಅರ್ಥಶಾಸ್ತ್ರಜ್ಞನಾದ ಮ್ಯಾಲ್ತಸ್‌ನ (1766–1834) ಪ್ರಬಂಧದಿಂದಲೂ ತನ್ನ ಗುರುವಾದ ಲೈಯಲ್ಲನ ಭೂಗರ್ಭವಿಜ್ಞಾನದ ವ್ಯಾಖ್ಯಾನದಿಂದಲೂ ಪ್ರಭಾವಿತನಾದ ಪ್ರಸಿದ್ಧ ನಿಸರ್ಗವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ತನ್ನ ಬೀಗಲ್ ಸಮುದ್ರಯಾನದ ಕಾಲದಲ್ಲಿ ಸಂಗ್ರಹಿಸಿದ ಮೃಗಪಕ್ಷಿಗಳನ್ನು, ಕ್ರಿಮಿಕೀಟಗಳನ್ನು, ಗಿಡಮರಗಳನ್ನು ಸಾವಕಾಶವಾಗಿ ಅಭ್ಯಸಿಸಿ, ಆಲೋಚಿಸಿ, ಜೀವಜಾತಿಗಳಲ್ಲಿ ಪರಿವರ್ತನೆಯಾಗುವುದೆಂಬ ತೀರ್ಮಾನಕ್ಕೆ ಬಂದ. ಲುಪ್ತಜೀವಿವಿಜ್ಞಾನ, ಭೂಗರ್ಭವಿಜ್ಞಾನ ಮುಂತಾದ ಹಲವು ವಿಜ್ಞಾನಗಳಲ್ಲಿ ಚದರಿಬಿದ್ದಿದ್ದ ವಿಷಯಗಳನ್ನೆಲ್ಲ ಕ್ರೋಡೀಕರಿಸಿ, ಅವುಗಳಲ್ಲಿ ಅಡಗಿರುವ ತಿರುಳನ್ನು ಸಿದ್ಧಾಂತ ರೂಪಕ್ಕೆ ತಂದು ಕ್ರಾಂತಿಕಾರಕ ವಿಕಾಸವಾದವನ್ನು ಡಾರ್ವಿನ್ ಮಂಡಿಸಿದ. ಆದ್ದರಿಂದಲೇ ಈ ಸಿದ್ಧಾಂತಕ್ಕೆ ಡಾರ್ವಿನನ ತತ್ತ್ವವೆಂದು ಹೆಸರು. ಬೇರೆ ಬೇರೆ ಶಾಸ್ತ್ರಗಳಿಂದ ಬಂದ ಸೂಚನೆಯನ್ನು ಈತ ಬಡಪಟ್ಟಿಗೆ ಒಪ್ಪಲಿಲ್ಲ. ಪ್ರತಿಯೊಂದರ ವಿಚಾರವಾಗಿಯೂ ಸತತವಾಗಿ ಚಿಂತಿಸಿ, ಸಾಕಷ್ಟು ಸಾಕ್ಷ್ಯಗಳು ದೊರೆತ ಅನಂತರವೇ ತನ್ನ ವಾದವನ್ನು ಬಹಿರಂಗಪಡಿಸಿದ. ವಿಷಯವನ್ನು ಸಾವಧಾನವಾಗಿ ಸಂಗ್ರಹಿಸಿ, ಸಂಗ್ರಹಿಸಿದ ವಿಷಯದಲ್ಲಿ ಜಳ್ಳಾದುದನ್ನು ಆಯ್ದು, ಅಳೆದು, ಸುರಿದು, ಅನೇಕ ವರ್ಷಕಾಲ ಮನನ ಮಾಡಿ ಕೊನೆಗೆ ಸಿದ್ಧಾಂತಕ್ಕೆ ಬರುತ್ತಿದ್ದುದು ಡಾರ್ವಿನ್ನನ ಅಮೋಘ ಗುಣ. ದೇಶಪರ್ಯಟನಗಳ ವಾಸ್ತವಿಕ ಅನುಭವದ ಜೊತೆಗೆ ತನ್ನ ಇಪ್ಪತ್ತು ವರ್ಷಗಳ ತಪಸ್ಸಿನ ಫಲವನ್ನು 1859ರಲ್ಲಿ ಆರಿಜಿನ್ ಆಫ್ ಸ್ಪಿಷೀಸ್ ಬೈ ನ್ಯಾಚುರಲ್ ಸೆಲೆಕ್ಷನ್ (ಪ್ರಕೃತಿಯ ಆಯ್ಕೆಯಿಂದ ಪ್ರಭೇದಗಳ ಉಗಮ) ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾನೆ. ಅದೇ ವೇಳೆಗೆ ವ್ಯಾಲೆಸ್ ಎಂಬುವವನೂ ಇದೇ ವಾದವನ್ನು ಪ್ರತಿಪಾದಿಸಿದ್ದ.

ಪರಿಸರಕ್ಕೂ ಪ್ರತಿಯೊಂದು ಜೀವಿಗೂ ಇರುವ ಪರಸ್ಪರ ಸಂಬಂಧದ ಪ್ರಮುಖಾಂಶಗಳನ್ನು ಡಾರ್ವಿನ್ನನ ವಾದಸರಣಿಯಲ್ಲಿ ಈ ರೀತಿ ಕಾಣಬಹುದು :

(1) ಪ್ರತಿ ಕ್ಷಣದಲ್ಲೂ ಬದಲಾವಣೆಯಾಗುವುದು ಜೀವಿಗಳ ಲಕ್ಷಣ.

(2) ಅವು ಬದಲಾಯಿಸುವುದು ಅವ್ಯಕ್ತ ರೂಪದಿಂದ ವ್ಯಕ್ತರೂಪದ ಕಡೆಗೆ, ಸಾಮಾನ್ಯಾವಸ್ಥೆಯಿಂದ ವಿಶಿಷ್ಟಾವಸ್ಥೆಯ ಕಡೆಗೆ.

(3) ಜೀವಿಗಳು ಹುಟ್ಟಿ ಬೆಳೆಯುವ ಪರಿಸರ ಈ ಬದಲಾವಣೆಗಳಿಗೆ ಕಾರಣ; ತಾವು ಇರುವ ಆವರಣಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುವುದು ಜೀವಿಗಳ ಲಕ್ಷಣ; ಪ್ರತಿಕೂಲ ಪರಿಸರದಿಂದಾಗಿ ಬಾಳಿಗೆ ಭಂಗ ಬಂದಂತೆಲ್ಲ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರತಿಯೊಂದು ಜೀವಿಯೂ ಬಗೆಬಗೆಯ ವೈಶಿಷ್ಟ್ಯವನ್ನು ತೋರುವುದು.

(4) ಆದರೆ ಎಲ್ಲ ಜೀವಿಗಳ ಸಾಮರ್ಥ್ಯ ಸಮಾನವಾಗಿರುವುದಿಲ್ಲ; ದುರ್ಬಲ ಜೀವಿಗಳು ಬದುಕಿನ ಹೋರಾಟದಲ್ಲಿ ಕ್ರಮೇಣ ಅಳಿದುಹೋಗುವುವು.

(5) ಯಾವ ಜೀವಿ ಈ ಹೋರಾಟದಲ್ಲಿ, ಜೀವನ ಕ್ರಮ ಮತ್ತು ರಚನಾಕೌಶಲಗಳಿಂದ ಪರಿಸರಕ್ಕೆ ಹೊಂದಿಕೊಂಡು ಗೆಲ್ಲುವುದೋ ಅದೇ ಉಳಿಯಬಲ್ಲುದು. ಇದರಿಂದಲೇ ಜಯಿಸಬಲ್ಲ ಜೀವಿಯೇ ಜೀವಿಸಲು ಯೋಗ್ಯವಾದ ಜೀವಿ ಎಂಬುದಾಗಿ ಡಾರ್ವಿನ್ ಹೇಳಿದ್ದಾನೆ.

(6) ಸೂಕ್ಷ್ಮವಾದ ವೈಯಕ್ತಿಕ ವ್ಯತ್ಯಾಸಗಳೇ ಜೀವಿಯ ಬದುಕಿನ ಹೋರಾಟದ ಸೋಲು–ಗೆಲುವುಗಳ ನಿಯಂತ್ರಕಗಳು ; ಇಂಥ ಜೀವದಾಯಕ, ವೈಯಕ್ತಿಕ ವ್ಯತ್ಯಾಸಗಳುಳ್ಳ ಜೀವಿಗಳನ್ನು ತೂರಿ, ಜಳ್ಳಾದವನ್ನು ತುಳಿದು, ಕಾಳಾದವನ್ನು ಆರಿಸಿ, ಪೋಷಿಸಿ, ಆರೈಕೆ ಮಾಡುವ ನಿಸರ್ಗದ ಕೈವಾಡಕ್ಕೆ ಪ್ರಕೃತಿಯ ಆಯ್ಕೆ ಎಂಬ ಹೆಸರು ಕೊಟ್ಟ.

(7) ಇಂಥ ಗುಣವಿಶೇಷಗಳು ಕಾಲಕ್ರಮೇಣ ವಂಶಗತವಾಗುವುದರಿಂದ ಹೊಸ ಹೊಸ ಜೀವಿಗಳು ಉದಯಿಸುವುವು.

ಡಾರ್ವಿನ್ನನ ವಾದವನ್ನು ಎತ್ತಿ ಹಿಡಿದವರಲ್ಲಿ ತಾಮಸ್ ಹೆನ್ರಿ ಹಕ್ಸ್ಲೀ (1825–95), ಅರ್ನ್ಸ್ಟ್ ಹೆಕೆಲ್ (1834–1919) ಮತ್ತು ತಿಯೋಡೋಸಿಯಸ್ ಡಾಬ್ಜಾನ್‌ಸ್ಕಿ ಅಗ್ರಗಣ್ಯರು. ಈಗಲೂ ಪ್ರಪಂಚದ ನಾನಾ ಮೂಲೆಗಳಲ್ಲಿ ಅವಿರತವಾಗಿ ನಡೆಯುತ್ತಿರುವ ಸಂಶೋಧನೆಗಳು ಡಾರ್ವಿನ್ನನ ತತ್ತ್ವಕ್ಕೆ ಪುರಾವೆಗಳನ್ನು ಒದಗಿಸುತ್ತಿವೆ. ವಿಕಾಸವೆಂಬ ಪದವನ್ನು, ಜಯಿಸಬಲ್ಲ ಜೀವಿಯೇ ಜೀವಿಸಲು ಯೋಗ್ಯವೆಂಬ ಪದಪುಂಜಗಳನ್ನು ಹರ್ಬರ್ಟ್ ಸ್ಪೆನ್ಸರ್ ಮತ್ತು ಲೈಯಲ್ ಬಳಸಿದ್ದರೆಂದು ಕೆಲವರ ಅಭಿಮತ. ಆದರೆ ಈ ಪದಗಳಿಗೆ ವೈಜ್ಞಾನಿಕ ಮೆರುಗನ್ನಿತ್ತು ಅವುಗಳ ಅರ್ಥವಿವರಣೆಯನ್ನು ಹೆಚ್ಚಿಸಿದ ಕೀರ್ತಿ ಡಾರ್ವಿನ್ನನಿಗೆ ಸಲ್ಲಬೇಕೆಂಬುದನ್ನು ಯಾರೂ ಅಲ್ಲಗೆಳೆಯುವಂತಿಲ್ಲ. ವೈಯಕ್ತಿಕ ವೈಷಮ್ಯದಿಂದ, ಪ್ರಾಂತೀಯ ದ್ವೇಷದಿಂದ, ಮತೀಯ ಮತ್ಸರದಿಂದ ಡಾರ್ವಿನ್ನನ ವಿಕಾಸ ತತ್ತ್ವವನ್ನು ಅಲ್ಲಗೆಳೆಯುವವರೂ ಉಂಟು. ಆದರೆ ಆಧುನಿಕ ತಳಿವಿಜ್ಞಾನದ ಆನುವಂಶಿಕ ಸೂತ್ರಗಳ ಅರಿವಿನಿಂದಾಗಿ ಡಾರ್ವಿನ್ನನ ತತ್ತ್ವ ಕೀರ್ತಿಶಿಖರವನ್ನೇರಿದೆ. 1866ರಲ್ಲಿ ಮಂಡಿಸಿದ್ದ ಮೆಂಡಲನ ಆನುವಂಶಿಕ ನಿಯಮಗಳ ಮರುಸಂಶೋಧನೆ ಆಧುನಿಕ ಜೀವವಿಜ್ಞಾನದ ಅಡಿಗಲ್ಲಾಗಿದೆ. ಪೀಳಿಗೆಯಿಂದ ಪೀಳಿಗೆಗೆ ಸಾಗುವ ಜೀವಿಗಳ ಗುಣಲಕ್ಷಣಗಳ ಅಧ್ಯಯನ 20ನೆಯ ಶತಮಾನದ ಆದಿಯಿಂದಲೂ ಅಗ್ರಸ್ಥಾನವನ್ನು ಆಕ್ರಮಿಸಿದೆ. ಅಂತೆಯೇ ಪ್ರಭೇದಗಳ ವಿವರ, ವಿಷಾಣುಗಳ ವಿಷಯ. ಪರಿಸರ ವಿಜ್ಞಾನ ಹಾಗೂ ಜೀವಿಯ ವಿವಿಧಾಂಗಗಳ ಅಂತರಸಂಬಂಧಗಳ ಸೂಕ್ಷ್ಮಾಭ್ಯಾಸವೇ ಆಧುನಿಕ ಜೀವವಿಜ್ಞಾನದ ಪರಮೋದ್ದೇಶವಾಗಿದೆ.

2 ವಿಕಾಸವಾದ : ಕಾಲ ಗತಿಸಿದಂತೆಲ್ಲ, ಸಜೀವಿಗಳು ಮತ್ತು ನಿರ್ಜೀವಿಗಳು ತಮ್ಮ ಕ್ರಿಯಾಚಟುವಟಿಕೆಯಲ್ಲೂ ರೂಪದಲ್ಲೂ ಬದಲಾಗುವುದು ಪ್ರಕೃತಿದತ್ತ ನಿಯಮ. ಆದರೆ ಅವು ವಿಕಸಿಸುವ ಬಗೆ, ಅನುಸರಿಸುವ ಮಾರ್ಗ, ಉಗಮದ ಹಿನ್ನೆಲೆ ವಿಜ್ಞಾನಿಗಳಿಗೊಂದು ಕಗ್ಗಂಟಾಗಿದೆ. ಉತ್ಕ್ರಾಂತಿಯ ಆದಿಯಲ್ಲಿ ನಡೆದಿರಬಹುದಾದ ರಾಸಾಯನಿಕ ವಿಕಾಸ ಬಹು ದೀರ್ಘವಾದುದು. ಎಲ್ಲ ಜೀವಿಗಳೂ ನಿರ್ಜೀವ ವಸ್ತುಗಳಿಂದಲೇ ಉಗಮವಾದುವು. ಹೀಗೆ ರೂಪುಗೊಂಡ ಸ್ವಯಂ ಉತ್ಪಾದಕ ಘಟಕಗಳು ಪರಿಸರದ ವೈಪರೀತ್ಯಗಳಿಂದ ಪಾರಾಗಲು ರಕ್ಷಾಕವಚದಿಂದ ಆವೃತವಾದ ಬಳಿಕವೇ ಜೀವೋದ್ಭವವಾಯಿತೆನ್ನಬಹುದು. ಈ ಆದಿಜೀವಿ ಹತ್ತಾರು ಕಾರಣಗಳಿಂದಾಗಿ ಕ್ರಮಬದ್ಧವಾಗಿ, ಹಂತಹಂತವಾಗಿ, ಯುಗ ಯುಗಾಂತರಗಳ ಅವಧಿಯಲ್ಲಿ ಈಗಿನ ವೈವಿಧ್ಯಮಯ ಬಹುರೂಪಿಗಳಾಗಿ ಮಾರ್ಪಾಡಾದುದರ ಫಲವೇ ಇಂದಿನ ಪ್ರಾಣಿ, ಸಸ್ಯಸಂಪತ್ತಿಗೆ ಕಾರಣ. ಪ್ರಕೃತಿಯಲ್ಲಿ ನಡೆಯುತ್ತಿರುವ ಈ ಅದ್ಭುತವನ್ನೇ ವಿಕಾಸವೆನ್ನುವರು. ಹಿಂದೆ ನಡೆದಂತೆ ವಿಕಾಸ ಈಗಲೂ ನಡೆಯುತ್ತಿದೆ. ಮುಂದೆಯೂ ನಡೆಯುತ್ತದೆ. ಇದೊಂದು ನಿಸರ್ಗ ನಿಯಮ. ಈ ವೈಜ್ಞಾನಿಕ ಸತ್ಯ ಅನಾದಿಕಾಲದಿಂದಲೂ ಬೇರೂರಿದ್ದ ದೈವಸೃಷ್ಟಿಯ ಮಿಥ್ಯಾಭಾವನೆಯನ್ನು ಕಿತ್ತೊಗೆಯಿತು. ಸಾಕ್ಷಿ ಪುರಾವೆಗಳಿಂದ ವಿಕಾಸತತ್ತ್ವವನ್ನು ಮೆರೆಯಿಸಿದ ಕೀರ್ತಿ ಚಾರ್ಲ್ಸ್ ಡಾರ್ವಿನ್ನನಿಗೆ ಸಲ್ಲುತ್ತದೆ. 1859ನೆಯ ನವೆಂಬರ್ 24ರಲ್ಲಿ ಪ್ರಕಟಿಸಿದ ಪ್ರಭೇದಗಳ ಉಗಮವನ್ನು ಕುರಿತ ವಿಚಾರಶೀಲ ಉದ್ಗ್ರಂಥದಲ್ಲಿ ವಿಕಾಸಕ್ಕೆ ಕಾರಣವಾದ ಐದು ಪ್ರಮುಖ ಪ್ರಭಾವಗಳನ್ನು ಈತ ಉಲ್ಲೇಖಿಸಿದ್ದಾನೆ.

ಸನ್ನಿವೇಶಕ್ಕೆ ಅನುಗುಣವಾಗಿ ಕೆಲವು ಜೀವಿಗಳು ಹೊಂದಿಕೊಂಡು ಪರಿಸರದೊಡನೆ ಸಮತೋಲನವನ್ನು ರೂಪಿಸುತ್ತವೆ. ಇವನ್ನೇ ಆದರ್ಶಜೀವಿಗಳೆಂದು ಕರೆಯುತ್ತಾರೆ. ಆದರೆ ಈ ಅಭಿಪ್ರಾಯ ಅಷ್ಟೊಂದು ಸೂಕ್ತವಲ್ಲ. ಏಕೆಂದರೆ, ನಿಸರ್ಗದ ನೆರಳಿನಲ್ಲಿ ನ್ಯೂನಜೀವಿಗಳ ವರ್ಜನೆಗಾಗಿ ಗೃಹಸ್ತಂಭನ ನಿರಂತರ ಶ್ರಮವಹಿಸುತ್ತದೆ. ಆದ್ದರಿಂದ ಕಳೆದುಳಿದ ಜೀವಿಗಳು ಆದರ್ಶಜೀವಿಗಳಾಗುವುವಲ್ಲದೆ ಬದಲಾವಣೆಗಳೂ ಯೋಗ್ಯವಾಗಿರುತ್ತವೆ. ಅಂದರೆ ಎಲ್ಲ ಜೀವಿಗಳೂ ಪರಿಸರಕ್ಕೆ ಅನುಗುಣವಾಗಿ ಬದಲಾಗಬಲ್ಲವು. ಈ ಬಗೆಯ ಗೃಹಸ್ತಂಭನ ಹಾಗೂ ವಿಕಸನಗಳೇ ಜೀವವಿಜ್ಞಾನದ ವಿವಿಧ ಸಿದ್ಧಾಂತಗಳ ತಿರುಳು.

3. ಜೀವಸ್ವರೂಪ : (a) ಜೀವಿಯ ಪ್ರಕೃತಿ : ಒಂದು ನಿರ್ದಿಷ್ಟ ಕವಚದಿಂದಾವೃತವಾದ ಧಾತು, ಪರಿಸರದೊಡನೆ ನಿಕಟ ಸಂಪರ್ಕವಿಟ್ಟು ಕೊಂಡಿದ್ದರೂ ಅಲ್ಪಕಾಲದಲ್ಲಿ ಅಗಾಧ ಮಾರ್ಪಾಡಿಗೆ ಒಳಗಾಗದಂಥ ಜೀವಿಯಿಂದಲೇ ಜೀವೋತ್ಪತ್ತಿಯಾಗುವುದು ಪ್ರಕೃತಿ ನಿಯಮ. ಅಂದರೆ ಸಂವರ್ಧನ ಹಾಗೂ ಸಂತಾನಕ್ರಿಯೆಗಳು ಜೀವಿಗಳಿಗಿರುವ ಅದ್ವಿತೀಯ ಗುಣ. ಜ್ವಾಲೆ, ಬುಗ್ಗೆ, ಸುಳಿ, ಜಲಪಾತಗಳೇ ಮುಂತಾದ ನಿರ್ಜೀವಿಗಳಲ್ಲೂ ಜೀವಿಗಳ ಸಂವರ್ಧನ ಕ್ರಿಯೆಯನ್ನೇ ಹೋಲುವ ವಿಶೇಷ ಗುಣವನ್ನು ಕಾಣುತ್ತೇವೆ. ಆದರೆ ಇವುಗಳಲ್ಲಿ ಸಂತಾನಶಕ್ತಿಯಿಲ್ಲ. ಅಂತೆಯೇ ಈ ಗಮನಾರ್ಹ ಗುಣವನ್ನು ಅವಲೋಕಿಸುವಾಗ ವಿವಿಧ ಜೀವಿಗಳ ರೂಪ, ರಚನೆ ಹಾಗೂ ನಡೆವಳಿಕೆಗಳ ವೈವಿಧ್ಯವನ್ನು ಪರಿಶೀಲಿಸುವುದು ಉತ್ತಮ. ಏಕೆಂದರೆ ಉದಾಹರಣೆಗೆ, ಬೆಕ್ಕನ್ನೇ ಹೋಲುವ ಪೂರ್ವಜಗಳಿಂದ ಬೆಕ್ಕೂ, ಆಲದ ಮರವನ್ನೇ ಹೋಲುವ ಗಿಡದಿಂದ ಆಲದ ಮರವು ಜನ್ಮತಾಳುತ್ತವೆಯೋ ವಿನಾ ಬೆಕ್ಕಿನಿಂದ ಆಲದ ಮರವಾಗಲೀ ಅಥವಾ ಗಿಡದಿಂದ ಪ್ರಾಣಿಯಾಗಲೀ ಜನಿಸವು.

ಜೀವಿಗಳನ್ನು ಗುರುತಿಸುವಾಗ ಅಲ್ಪಾವಧಿಯಲ್ಲಾಗುವ ಬೆಳವಣಿಗೆಯನ್ನು ಪರಿಗಣಿಸುವುದು ಸೂಕ್ತ ; ಏಕೆಂದರೆ ಈ ಅವಧಿಯಲ್ಲಿ ಬೆಳವಣಿಗೆ ಹೆಚ್ಚಬಹುದು ಅಥವಾ ಕುಂಠಿತವಾಗಬಹುದು. ಆದರೆ ರಾಸಾಯನಿಕ ಕ್ರಿಯೆಯಲ್ಲಿ ಗರಿಷ್ಠ ಬದಲಾವಣೆಯಾದರೆ ಜೀವಿಗಳು ಕ್ರಮೇಣ ಕೃಶವಾಗುವುವಲ್ಲದೆ ಸಾವನ್ನಪ್ಪುತ್ತವೆ. ಸ್ವಯಂಪ್ರೇರಿತ ಚಲನೆಯುಳ್ಳ ಜೀವಿಗಳನ್ನು ಪ್ರಾಣಿಗಳೆಂದೂ ಈ ರೀತಿಯ ಚಲನೆಯಿಲ್ಲದ ಜೀವಿಗಳನ್ನು ಸಸ್ಯಗಳೆಂದೂ ವರ್ಗೀಕರಿಸುವುದು ಸರ್ವೇಸಾಮಾನ್ಯ. ಆದರೆ ಈ ಬಗೆಯ ನಿರೂಪಣೆ ಅಷ್ಟು ಸೂಕ್ತವಲ್ಲ. ಏಕೆಂದರೆ ಚಲನಶಕ್ತಿಯುಳ್ಳ ಅನೇಕ ಸಸ್ಯಗಳೂ ಸ್ಥಾವರ ಪ್ರಾಣಿಗಳೂ ಇಲ್ಲದಿಲ್ಲ. ಆದ್ದರಿಂದ ಸಂತಾನ ಹಾಗೂ ಬೆಳವಣಿಗೆಯುಳ್ಳ ಯಾವುದೇ ವಸ್ತುವನ್ನು ಜೀವಿಯೆಂದು ಪರಿಗಣಿಸುವುದು ಸೂಕ್ತ. ಆದರೆ ಈ ನಿರೂಪಣೆ ಎಲ್ಲ ಜೀವಿಗಳಿಗೂ ಅನ್ವಯಿಸುವುದಿಲ್ಲ. ನಿಷ್ಕ್ರಿಯವಾಗಿರುವಂತೆ ಕಾಣುವ ಶುಷ್ಕ ಬೀಜಗಳಿಗೆ ಹಾಗೂ ಒಣಗಿದ ಕೆಲವು ಎಲುಬುರಹಿತ ಪ್ರಾಣಿಗಳಿಗೆ ಸೂಕ್ತ ಪರಿಸರವನ್ನು ಒದಗಿಸಿದರೆ ಇವು ಕ್ರಿಯಾಶೀಲವಾಗಬಲ್ಲುವು. ಆದ್ದರಿಂದ ಜೀವಿಯ ಪ್ರಕೃತಿಯನ್ನು ನಿರೂಪಿಸುವಾಗ ಪ್ರಾಯೋಗಿಕ ಪರಿಸರದ ಸ್ಥಿತಿಗತಿಯನ್ನು ಪರಿಗಣಿಸುವುದು ಉತ್ತಮ. (b) ಜೀವದ್ರವ್ಯದ ಗುಣಲಕ್ಷಣಗಳು: ವರ್ಧನ ಕ್ರಿಯಾಶೀಲತೆಯುಳ್ಳ ಜಿಗುಟಾದ ಸಾವಯವ ಪದಾರ್ಥಕ್ಕೆ ಜೀವದ್ರವ್ಯ (ಪ್ರೋಟೊಪ್ಲಾಸಮ್) ಎಂದು ಹೆಸರು. ಎಲ್ಲ ಜೀವಿಗಳಿಗೂ ಇದು ಮೂಲಾಧಾರ. ಇದನ್ನು ರಾಸಾಯನಿಕ ವಿಶ್ಲೇಷಣೆಗೆ ಗುರಿಪಡಿಸಿದಾಗ ಸಾವು ಸಂಭವಿಸುವುದು ಸಹಜ; ಆದರೆ ಅದರ ದ್ರವ್ಯರಾಶಿಯಲ್ಲಿ ಬದಲಾವಣೆಯಾಗುವುದಿಲ್ಲ. ಜೀವದ್ರವ್ಯದಲ್ಲಿ ಮುಖ್ಯವಾಗಿ ನಾಲ್ಕು ಧಾತುಗಳು ಉಂಟು–62% ಆಕ್ಸಿಜನ್, 20% ಕಾರ್ಬನ್, 10% ಹೈಡ್ರೋಜನ್ ಮತ್ತು 3% ನೈಟ್ರೋಜನ್. ಇವುಗಳಲ್ಲಿ ಆಕ್ಸಿಜನ್ ಮತ್ತು ಹೈಡ್ರೋಜನುಗಳು ಜೀವಿಯ ತೂಕದ 50–90% ಪ್ರಮಾಣದಲ್ಲಿರುವ ನೀರಿನ ರೂಪದಲ್ಲಿರುತ್ತವೆ. ಜೀವದ್ರವ್ಯದ ಇನ್ನುಳಿದ 5% ರಲ್ಲಿ ಇತರ ಬಗೆಯ 30 ಧಾತುಗಳುಂಟು. ಜೀವದ್ರವ್ಯದ ಧಾತುಗಳನ್ನೂ ಅವುಗಳ ಮೊತ್ತಗಳನ್ನೂ ಮುಂದಿನ ಪಟ್ಟಿಯಿಂದ ತಿಳಿಯಬಹುದು.

ಭೂಸಸ್ಯಗಳಲ್ಲಿನ ಧಾತುಗಳು ಮತ್ತು ಅವುಗಳ ಸೇಕಡಾವಾರು ಪ್ರಮಾಣ :

| | | | | | |
|---|---|---|---|---|---|
| ಆಕ್ಸಿಜನ್ | ... | 70 | ಬೋರಾನ್ | ... | 0.001 |
| ಕಾರ್ಬನ್ | ... | 18 | ಝಿಂಕ್ | ... | 0.003 |
| ಹೈಡ್ರೋಜನ್ | ... | 10.5 | ರುಬಿಡಿಯಂ | ... | 0.002 |
| ಕ್ಯಾಲ್ಸಿಯಂ | ... | 0.5 | ಟೈಟಾನಿಯಂ | ... | 0.001 |
| ನೈಟ್ರೋಜನ್ | ... | 0.3 | ಕಾಪರ್ | ... | 0.001 |
| ಪೊಟ್ಯಾಸಿಯಂ | ... | 0.3 | ಬ್ರೋಮಿನ್ | ... | 0.001 |
| ಸಿಲಿಕಾನ್ | ... | 0.15 | ಮಾಲಿಬ್ಡಿನಂ | ... | 0.00005 |
| ಮೆಗ್ನೀಸಿಯಂ | ... | 0.07 | ಇಟ್ರಿಯಮ್ ಮತ್ತಿತರ ವಿರಳ ವಸ್ತುಗಳು | .. | 0.00004 |

| | | | | | |
|---|---|---|---|---|---|
| ಫಾಸ್ಫರಸ್ | ... | 0.0 | | | |
| ಸಲ್ಫರ್ | ... | 0.05 | ನಿಕ್ಕಲ್ | ... | 0.00002 |
| ಕ್ಲೋರಿನ್ | ... | 0.04 | ವ್ಯಾನೇಡಿಯಂ | ... | ~0.00002 |
| ಸೋಡಿಯಂ | ... | 0.02 | ಲೆಡ್ | ... | ~0.00002 |
| ಐರನ್ | ... | 0.02 | ಲಿತಿಯಂ | ... | ~0.00001 |
| ಮ್ಯಾಂಗನೀಸ್ | ... | 0.007 | ಯುರೇನಿಯಂ | ... | ~0.00001 |
| ಫ್ಲೋರಿನ್ | ... | 0.003 | ಗ್ಯಾಲಿಯಂ | ... | ~0.00003 |
| ಬೇರಿಯಮ್ | ... | 0.003 | ಕೋಬಾಲ್ಟ್ | ... | ~0.00002 |
| ಅಲ್ಯೂಮಿನಿಯಂ | ... | 0.002 | ಅಯೋಡಿನ್ | ... | ~0.00001 |
| ಸ್ಟ್ರಾನ್ಷಿಯಂ | ... | 0.002 | ರೇಡಿಯಂ | | 0.0000000000001 |

ನೆಲವಾಸಿಗಳಲ್ಲಿ ನೈಟ್ರೋಜನ್ ಮತ್ತು ಸೋಡಿಯಮ್ ಹೆಚ್ಚಾಗಿಯೂ ಪೊಟ್ಯಾಷಿಯಂ, ಸಿಲಿಕಾನ್ ಮತ್ತು ಅಲ್ಯೂಮಿನಿಯಂಗಳು ವಿರಳವಾಗಿಯೂ ಇವೆ. ಕಶೇರುಕಗಳಲ್ಲಿ ಕ್ಯಾಲ್ಸಿಯಂ, ಕಡಲವಾಸಿಗಳಲ್ಲಿ ಕ್ಲೋರೈಡ್ ಅಧಿಕವಾಗಿವೆ. ಜೊತೆಗೆ ನೆಲವಾಸಿಗಳಲ್ಲಿ ನೀರು ಹೆಚ್ಚು ಮೊತ್ತದಲ್ಲಿದೆ. ಕೆಲವು ಜೀವಿಗಳಲ್ಲಿ ಅನೇಕ ವಸ್ತುಗಳು ಅಧಿಕ ಪ್ರಮಾಣದಲ್ಲಿ ಸಂಗ್ರಹವಾಗುವುದುಂಟು. ಉದಾಹರಣೆಗೆ, ಆಸ್ಟ್ರ್ಯಾಲಸ್ ಸಸ್ಯದಲ್ಲಿ ಸೆಲೇನಿಯಂ, ಲೈಕೋಪೋಡಿಯಂನಲ್ಲಿ ಅಲ್ಯೂಮಿನಿಯಂ, ಸ್ತನಿಗಳ ಕಣ್ಣುಗಳಲ್ಲಿ ಬೇರಿಯಂ, ಕಡಲ ಕಠಿಣ ಚರ್ಮಿಗಳಲ್ಲಿ ಆರ್ಸೆನಿಕ್ ಮತ್ತು ಕಡಲ ಪಿಚಕಾರಿ ಹಾಗೂ ಕೆಲವು ಶಿಲೀಂಧ್ರಗಳಲ್ಲಿ ವ್ಯಾನೇಡಿಯಮ್ ಸಂಗ್ರಹವಾಗುವುದು ತಿಳಿದಿದೆ. ಸ್ತನಿಗಳ ಯಕೃತ್ತಿನಲ್ಲಿ ರುಬಿಡಿಯಮ್ ಹೇರಳವಾಗಿಯೂ ಕೋಬಾಲ್ಟ್ ವಿರಳವಾಗಿಯೂ ಇವೆ. ಆದರೆ ಇವುಗಳ ಸಂಗ್ರಹಕ್ಕೂ ಈ ಅಂಗದ ಚಟುವಟಿಕೆಗಳಿಗೂ ಯಾವ ಸಂಬಂಧವೂ ಇಲ್ಲ. ಅಂತೆಯೇ ಕೆಲವು ಅಂಗಗಳ ಕೋಶಗಳಲ್ಲಿ ಸರಾಸರಿ 23 ಅಣುಗಳಷ್ಟು ಕಂಡು ಬರುವ ರೇಡಿಯಮ್ಮಿನ ಪಾತ್ರವೂ ಅಸ್ಪಷ್ಟ.

(i) ಸಂಯುಕ್ತಕಗಳು : ಮೇಲಿನ ಧಾತುಗಳಿಂದಾದ ರಚನಾತ್ಮಕ ಹಾಗೂ ಕ್ರಿಯಾತ್ಮಕ ಸಂಯುಕ್ತ ವಸ್ತುಗಳು ಎಲ್ಲ ಬಗೆಯ ಜೀವದ್ರವ್ಯಗಳಲ್ಲೂ ಉಂಟು. ವಿಶೇಷವಾಗಿ ಕಾರ್ಬನ್, ಆಕ್ಸಿಜನ್, ಹೈಡ್ರೋಜನ್ ಮತ್ತು ನೈಟ್ರೋಜನುಗಳಿಂದೊಡಗೂಡಿದ ಶರ್ಕರ ಪಿಷ್ಟ, ಕೊಬ್ಬು ಮತ್ತು ಪ್ರೋಟೀನುಗಳು ಜೀವದ್ರವ್ಯದ ಮೂಲಾಧಾರಗಳಾಗಿವೆ. ಇವು ಬಿಡಿಬಿಡಿಯಾಗಿಯೂ ಇರಬಹುದು. ಇಲ್ಲವೆ ಎರಡು ಮೂರು ಒಂದುಗೂಡಿ ಉಂಟಾದ ಸಂಯುಕ್ತ ರೂಪದಲ್ಲಿರಬಹುದು. ಅಕಾರ್ಬನಿಕ ಸಂಯುಕ್ತಗಳು ದ್ರವ ರೂಪದಲ್ಲಿದ್ದಾಗ ಅನಂತಸೂಕ್ಷ್ಮ ಅಯಾನುಗಳಾಗಿ ಛಿದ್ರಛಿದ್ರವಾಗುವುದರಿಂದ ಜೀವದ್ರವ್ಯದ pH ವ್ಯತ್ಯಾಸವಾಗುವುದುಂಟು. ಆದ್ದರಿಂದ ಜೀವದ್ರವ್ಯಕ್ಕೆ ಆಮ್ಲೀಯವೂ ಅಲ್ಲದ, ಕ್ಷಾರೀಯವೂ ಅಲ್ಲದ, ಅಂತೆಯೇ ವಿದ್ಯುತ್ ಧನವಾಗಲೀ ಋಣವಾಗಲೀ ಅಲ್ಲದ ತಟಸ್ಥಗುಣ ಇದೆ. ಪ್ರತಿಯೊಂದು ಜೀವವ್ಯವಸ್ಥೆಗು ಒಂದು ನಿರ್ದಿಷ್ಟ ಬಗೆಯ pH ಮಟ್ಟ ಉಂಟು. ಇದರಲ್ಲಿ ಮಹತ್ತ್ವದ ಏರುಪೇರುಗಳುಂಟಾದರೆ ಸಾವು ಸನ್ನಿಹಿತವಾದಂತೆಯೇ.

(ii) ಕಿಣ್ವಗಳು: ಪ್ರೋಟೀನುಯುಕ್ತ ಬೃಹದಣುಗಳಾದ ಇವು ಸಾವಯವ ವೇಗವರ್ಧಕಗಳು; ದೇಹದ ಸೌಮ್ಯ ಪರಿಸರದಲ್ಲಿ ನಾನಾ ಕ್ರಿಯೆಗಳಲ್ಲಾಗುವ ವಿವಿಧ ರಾಸಾಯನಿಕ ಬದಲಾವಣೆಗಳಿಗೆ ಇವು ಸೂತ್ರಧಾರಿಗಳು. ಇವು ಅಮಿನೋ ಆಮ್ಲಗಳಿಂದ ರಚಿತವಾಗಿರುವುದರಿಂದ ವಿದ್ಯುತ್ಪ್ರವೃತ್ತಿಯನ್ನು ತೋರುವುವು. ತಮ್ಮ ಕ್ರಿಯಾಶೀಲತೆಗಾಗಿ ಕೆಲವು ಕಿಣ್ವಗಳು ಸಹಕಿಣ್ವಗಳ (ಕೊ ಎಂಜೈಮು) ಪ್ರಯೋಜನ ಪಡೆಯುವುವಲ್ಲದೆ ಕಬ್ಬಿಣ, ಮ್ಯಾಂಗನೀಸ್, ತಾಮ್ರ ಮತ್ತು ಸತುಗಳ ಸಂಪರ್ಕದಿಂದ ಕಾರ್ಯದಕ್ಷತೆ ತೋರುವುವು. ಜೀವಸತ್ವಗಳಾದ ತಯಮಿನ್ ($B_1$), ನಯಾಸೀನ್, ರೈಬೋಫ್ಲೇವಿನ್ ($B_2$) ಮತ್ತು ಪಿರಿಡಾಕ್ಸಿನ್ ($B_6$) ಗಳು ಕಿಣ್ವಗಳೊಡನೆ ಕೂಡಿದಾಗಲೇ ಕ್ರಿಯಾಶೀಲವಾಗುತ್ತವೆ. ವಾಸ್ತವವಾಗಿ, ಇವು ಜೀವಿಗೆ ಅತ್ಯವಶ್ಯವಾದ ಉಪರಾಸಾಯನಿಕಗಳು. ಅಡೆನೋಸೀನ್ ಫಾಸ್ಫಟೇಸ್ ಕಿಣ್ವ ಅಕ್ಟೋಮಯೋಸಿನ್‌ನೊಡನೆ ಕಲೆತಾಗಲೇ ಮಾಂಸಖಂಡಗಳಿಗೆ ಸಂಕೋಚನಶಕ್ತಿ ಬರುವುದು.

(iii) ವಿದ್ಯುತ್ ಸ್ವಭಾವ : ಎಲ್ಲ ತೆರನ ದೇಹಕ್ರಿಯೆಗಳೂ ವಿದ್ಯುತ್ತಿನ ಬದಲಾವಣೆಯ ಸೂಚಕಗಳು ಎಂದು ತಿಳಿಯಲಾಗಿದೆ. ಆದ್ದರಿಂದಲೇ ರೋಗಿಯ ಹೃದಯದ ಕ್ರಿಯಾಗತಿಯನ್ನು ಅಳೆಯಲು ಹಿಂದಿನಿಂದಲೂ ವಿದ್ಯುತ್ ಹೃದಯಲೇಖಕವನ್ನು (ಎಲೆಕ್ಟ್ರೋಕಾರ್ಡಿಯೋಗ್ರಾಮ್) ಬಳಸುತ್ತಿದ್ದಾರೆ. ಶರೀರಕ್ಕೂ ವಿಭವಮಾಪನಕ್ಕೂ (ಪೊಟೆನ್ಶಿಯೊಮೀಟರ್) ಸಂಪರ್ಕ ಕಲ್ಪಿಸಿದಾಗ ದೇಹದ ವಿದ್ಯುತ್ಪ್ರಮಾನುಗತಿ ವ್ಯಕ್ತವಾಗುವುದು. ಅಂತೆಯೇ ಅನೇಕ ರಾಸಾಯನಿಕ ಕ್ರಿಯೆಗಳಿಗೂ ವಿದ್ಯುತ್ತಿನ ಏರಿಳಿತಗಳೇ

ಕಾರಣ. ಕೋಶದ್ರವ್ಯದಲ್ಲಿ (ಸೈಟೋಪ್ಲಾಸಮ್) ಆಗುವ ಅಯಾನೀಕರಣ, ವಸ್ತುಗಳ ವಿಸರಣೆ (ಡಿಫ್ಯೂಷನ್) ಮತ್ತು ಪೊರೆಯಲ್ಲಿ ಉದ್ಭವಿಸುವ ವಿಭವಶಕ್ತಿ ಜೀವ ದ್ರವ್ಯದ ವಿದ್ಯುತ್ ಸ್ವಭಾವಕ್ಕೆ ಒಂದು ನಿದರ್ಶನ. ಅದರೆ ಎಲ್ಲ ಜೀವಕ್ರಿಯೆಗಳಲ್ಲು ವಿದ್ಯುತ್ತು ಸಮಾನಪಾತ್ರ ವಹಿಸುವುದೆಂದು ಹೇಳಲಾಗದು. ಇದರಲ್ಲಿ ಅನೇಕ ಅನ್ಯ ಘಟಕಗಳೂ ನೆರವಾಗಬಹುದು.

(iv) ದ್ಯುತಿ ಪಟುತ್ವ (ಆಪ್ಟಿಕಲ್ ಆಕ್ಟಿವಿಟಿ) : ಲೂಯಿ ಪ್ಯಾಸ್ತರನ ಪ್ರಕಾರ, ಜೀವಿಗಳನ್ನು ಗುರುತಿಸಲು ಈ ಗುಣ ಅತ್ಯುತ್ತಮ ಸಾಧನ. ಎಲ್ಲ ಜೀವಿಗಳ ಕಾರ್ಬನಿಕ ವಸ್ತುಗಳಲ್ಲಿ ಅಸಮಾಂಗೀಯ ಕಾರ್ಬನ್ ಅಣುವಿರುತ್ತದೆ. ಚತುರ್ಮುಖಿ ಕಾರ್ಬನ್ನಿನ ನಾಲ್ಕು ನಿಟ್ಟಿನಲ್ಲೂ ವಿವಿಧ ಪರಮಾಣು ಪಂಜಗಳು ಬಂಧಿತವಾಗಿರುವುದರಿಂದ ಭಿನ್ನರೂಪದ ಬಿಂಬೋದ್ಭವವಾಗುವುದು. ಆದ್ದರಿಂದಲೇ ವಿವಿಧ ಕಿಣ್ವಗಳ ವಿದೃಶ ಕಾರ್ಯಾಚರಣೆ ಸಾಧ್ಯವೆಂದು ನಂಬಲಾಗಿದೆ.

(v) ಇತರ ಗುಣಗಳು : ಜೀವಿಗಳಲ್ಲಿ ಸರ್ವ ಕಾರ್ಯಗಳೂ ಯಾವಾಗಲೂ ಒಂದೇ ಸಮನಾಗಿ ಜರುಗುವುದಿಲ್ಲ ; ಇದಕ್ಕೆ ಆಂತರಿಕ ಹಾಗೂ ಬಾಹ್ಯ ಬದಲಾವಣೆಗಳೇ ಬಹುವಾಗಿ ಕಾರಣ. ಅಂತೆಯೇ ಪ್ರತಿಜೀವಿಯೂ ತನ್ನ ರೂಪುರೇಖೆಗಳನ್ನು ರಕ್ಷಿಸಿಕೊಂಡು ಸುಗಮವಾಗಿ ಬಾಳಬೇಕಾದರೆ ಸೂಕ್ತ ಶಕ್ತಿಸಂಪನ್ನ ವಸ್ತುಗಳ ಪೂರೈಕೆ ಸತತವಾಗಿರಬೇಕು. ಹಾಗಿಲ್ಲದಿದ್ದರೆ ಸಾವು ಸಂಭವಿಸುತ್ತದೆ. ಜೀವನಾಧಾರ ಸತ್ತ್ವವು ಜೀವಿಗೆ ಎರಡು ನಿಟ್ಟಿನಿಂದ ಒದಗುವುದು; ಸಮೀಪವರ್ತಿ ಸತ್ತ್ವಪೂರ್ಣ ರಾಸಾಯನಿಕ ಸಂಯುಕ್ತಗಳಿಂದ ಶಕ್ತಿ ಪಡೆಯುವುವಲ್ಲದೆ, ಜೀವಿಗಳು ಪರಿಸರದ ವಿಸರಿತ ಶಕ್ತಿಯನ್ನೂ (ರೇಡಿಯಂಟ್ ಎನರ್ಜಿ) ಉಪಯೋಗಿಸಿಕೊಳ್ಳುತ್ತವೆ. ಕೆಲವು ಬ್ಯಾಕ್ಟೀರಿಯಗಳು ಹೆಚ್ಚಾಗಿ ವಿಸರಿತ ಶಕ್ತಿಯಿಂದಲೇ ಜೀವಿಸುತ್ತವೆ. ಆದರೆ ಇನ್ನುಳಿದ ಜೀವಿಗಳು ಸಸ್ಯಾಹಾರದಲ್ಲಿ ಸಂಗ್ರಹವಾಗಿರುವ ರಾಸಾಯನಿಕ ಶಕ್ತಿಯನ್ನು ಅವಲಂಬಿಸಿರುತ್ತವೆ.

ಕೃತಕ ಹಾಗೂ ಸ್ವಾಭಾವಿಕ ಐಸೊಟೋಪುಗಳ ಬಳಕೆಯಿಂದಾಗಿ ಜೀವಿಗಳಲ್ಲಾಗುವ ನಾನಾ ರಾಸಾಯನಿಕ ಕ್ರಿಯಾವಿಧಾನಗಳನ್ನು ಖಚಿತವಾಗಿ ತಿಳಿಯಲು ಸಾಧ್ಯವಾಗಿದೆ. 1923ರಲ್ಲಿ ಡ ಹೆವೆಸಿ ಎಂಬುವವ ಮೊಟ್ಟಮೊದಲಿಗೆ ಸಸ್ಯಗಳಲ್ಲಿ ಐಸೊಟೋಪುಗಳನ್ನು ಉಪಯೋಗಿಸಿ ಸೀಸದ ಸಾಗಾಣಿಕೆಯನ್ನು ಅಭ್ಯಸಿಸಿದ. ಆನಂತರ ಎ. ಕ್ರೋಗ್ ಎಂಬಾತ ಫಾಸ್ಫರಸ್ ಐಸೋಟೋಪನ್ನೂ, ಆರ್ ಷೀನ್‌ಹೈಮರ್ ಎಂಬಾತ ಹೈಡ್ರೊಜನ್ ಮತ್ತು ನೈಟ್ರೊಜನುಗಳ ಐಸೋಟೋಪುಗಳನ್ನೂ ಉಪಯೋಗಿಸಿ ಈ ತಂತ್ರವೃದ್ಧಿಗೆ ನೆರವಾದರಲ್ಲದೆ ಅದುವರೆಗೆ ಭದ್ರವಾಗಿ ಬೇರೂರಿದ್ದ ಅನೇಕ ಸಿದ್ಧಾಂತಗಳನ್ನು ಬುಡಮೇಲು ಮಾಡಿ, ಜೀವವಿಜ್ಞಾನ ಅಧ್ಯಯನದಲ್ಲಿ ಕ್ರಾಂತಿಯೆಬ್ಬಿಸಿದರು. ನಾವು ಸೇವಿಸಿದ ಆಹಾರವು ಶಕ್ತಿಪೂರೈಕೆಗೆ ಮಾತ್ರ ಅವಶ್ಯವೆಂದು ಇತ್ತೀಚಿನವರೆಗೂ ತಿಳಿಯಲಾಗಿತ್ತು. ಆದರೆ ಹೈಡ್ರೊಜನ್ನಿಗೆ ಬದಲಾಗಿ ಡ್ಯೂಟೀರಿಯಮ್ ಇರುವ ಆಹಾರವನ್ನು ಸೇವಿಸಿದಾಗ ಅದು ನೇರವಾಗಿ ಮಲಮೂತ್ರಗಳಲ್ಲಿ ವಿಸರ್ಜನೆಯಾಗುವ ಬದಲು ವಿವಿಧಾಂಗಗಳಿಗೆ ರವಾನೆಯಾಗುವುದು ತಿಳಿದದ್ದರಿಂದ ಸಂವರ್ಧನ ಕ್ರಿಯೆಯ ಮೇಲೆ ಹೊಸಬೆಳಕು ಚೆಲ್ಲಿದೆ. $^{15}N$ ಬಳಕೆಯಿಂದ ಕ್ರಿಯಾಟಿನ್ ಪರಿವರ್ತನೆಯ ಅರಿವಾದದ್ದಲ್ಲದೆ, ಕೊಬ್ಬಿನ ಪಚನ ಹಾಗೂ ಸ್ವಾಂಗೀಕರಣದ ವಿಧಾನ ತಿಳಿದುಬಂತು. ಐಸೊಟೋಪುಗಳ ಉಪಯೋಗ ತಿಳಿಯುವುದಕ್ಕೆ ಮೊದಲು, ಕೋಳಿಯ ತತ್ತಿಗಳ ಮೇಲಿನ ಕವಚ ಎಲುಬುಗಳಿಂದಾಗುತ್ತದೆಂಬ ಭಾವನೆ ಬೇರೂರಿತ್ತು. ಆದರೆ ಇದು ತಪ್ಪು ಎಂಬುದು ಈಗ ಗೊತ್ತಾಗಿದೆ. ಒಟ್ಟಿನಲ್ಲಿ ಎಲ್ಲ ಜೀವಿಗಳಲ್ಲು ಚಯಾಪಚಯ ಕ್ರಿಯೆಗಳು ಸತತವಾಗಿ ನಡೆಯುತ್ತಿರುತ್ತವೆಂದು ಈ ಎರಡೂ ಕ್ರಿಯೆಗಳ ಏರುಪೇರು ಜೀವಿಯ ಬೆಳವಣಿಗೆ ಅಥವಾ ಸಾವಿಗೆ ಮೂಲವೆಂದೂ ಐಸೊಟೋಪುಗಳ ನೆರವಿನಿಂದ ಖಚಿತವಾಗಿದೆ.

(vi) ಕೋಶ ರಚನೆ: ಜೀವದ್ರವ್ಯವನ್ನು ಒಳಗೊಂಡ ಜೀವಕೋಶಗಳು ಜೀವಿಯ ದೇಹರಚನೆಯ ತಳಹದಿ. ಸುಮಾರು 2,000 ವರ್ಷಗಳ ಹಿಂದೆಯೇ ಅರಿಸ್ಟಾಟಲನು ಕೇವಲ ತರ್ಕದಿಂದಲೇ ಜೀವಕೋಶದ ಕಾಲ್ಪನಿಕ ಸಿದ್ಧಾಂತವನ್ನು ನಿರೂಪಿಸಿದ್ದರೂ 1665ರಲ್ಲಿ ರಾಬರ್ಟ್ ಮಾಡಿದ ಹೂಕ್ ಬಿರಡೆಯ ಪರೀಕ್ಷೆಯಿಂದಾಗಿ ಜೀವಕೋಶದ ಇರವು ಖಚಿತವಾಯಿತು. ಸಮಸ್ತ ಚಟುವಟಿಕೆಗಳೂ ಒಂದೇ ಕೋಶದಲ್ಲಿ ಜರುಗುವಂಥ ಏಕಕೋಶ ಜೀವಿಗಳನ್ನೂ, ಕಾರ್ಯವಿಂಗಡಣೆಯನ್ನು ತೋರುವ ಅನೇಕ ಕೋಶಗಳುಳ್ಳ ಬಹುಕೋಶಜೀವಿಗಳನ್ನೂ ಗುರುತಿಸಬಹುದು. ಬಹುಕೋಶಜೀವಿಗಳ ಜೀವನವು ಪ್ರಥಮವಾಗಿ ಏಕಕೋಶದಿಂದಲೇ ಪ್ರಾರಂಭವಾಗುವುದು. ಜೀವಕೋಶದ ರಚನೆ ಹಾಗೂ ಕ್ರಿಯಾವಿನ್ಯಾಸಗಳನ್ನು ಗುರುತಿಸಿದ ಎಂ.ಜೆ.ಷ್ಲೀಡನ್ ಮತ್ತು ತೀಯೊಡೋರ್ ಷ್ವಾನ್ ಎಂಬಿಬ್ಬರು 1838ರ ವೇಳೆಗೆ ಕೋಶತತ್ತ್ವವನ್ನು (ಸೆಲ್ ತಿಯರಿ) ನಿರೂಪಿಸಿದರು. ಈ ತತ್ತ್ವದ ಪ್ರಕಾರ, ಕೋಶಗಳು ಎಲ್ಲ ಉನ್ನತ ಜೀವಿಗಳ ದೇಹರಚನೆಯ ಮೂಲಘಟಕಗಳೆಂದು ಪರಿಗಣಿಸಲಾಗಿದೆ.

ಜೀವಿಗಳ ರೂಪು, ರಚನೆಗಳು ಒಂದೇ ತೆರನಾಗಿರುವುದಿಲ್ಲ. ಸ್ಥಾನ, ಕರ್ತವ್ಯಗಳಿಗೆ ಅನುಸಾರವಾಗಿ ಇವು ಬದಲಾಗುತ್ತವೆ. ಆದರೆ, ಎಷ್ಟೇ ವೈವಿಧ್ಯವನ್ನು ತೋರಿದರು ಜೀವಕೋಶಗಳ ಸ್ಥೂಲ ರಚನೆಯಲ್ಲಿ ಏಕರೂಪತೆಯನ್ನು ಕಾಣಬಹುದು. ಜೀವದ್ರವ್ಯವನ್ನು ಆವರಿಸಿರುವ ಕೋಶಪಟಲವೂ ಮಧ್ಯದಲ್ಲಿ ಅಡಗಿರುವ ನೂಕ್ಲಿಯಸ್ಸೂ ಎಲ್ಲ ಕೋಶಗಳಲ್ಲು ಕಂಡುಬರುತ್ತವೆ. ನ್ಯೂಕ್ಲಿಯಸಿನ ಹೊರಗೆ ಇರುವ ದ್ರವಕ್ಕೆ ಕೋಶದ್ರವ್ಯ (ಸೈಟೊಪ್ಲಾಸಂ) ಎಂದು ಹೆಸರು. ನ್ಯೂಕ್ಲಿಯಸಿನಲ್ಲಿ ನ್ಯೂಕ್ಲಿಯರ್ ದ್ರವ, ವರ್ಣತಂತುಗಳು, ಗೋಲಾಕಾರದ ನ್ಯೂಕ್ಲಿಯೋಲೈಟುಗಳುಂಟು. ಕೋಶದ್ರವ್ಯದಲ್ಲಿ ಎಳೆಯಾಕಾರದ ಮೈಟೊಕಾಂಡ್ರಿಯ, ಅತ್ಯಂತ ಸೂಕ್ಷ್ಮಗಾತ್ರದ ಮೈಕ್ರೊಸೋಮು, ಕೊಬ್ಬು, ಶರ್ಕರಪಿಷ್ಟ ಮತ್ತು ಪ್ರೋಟೀನ್ ವಸ್ತುಗಳೂ ಇವೆ. ಪ್ರಾಣಿಕೋಶಗಳಲ್ಲಿ ಗಾಲ್ಜಿ ವ್ಯವಸ್ಥೆ ಹಾಗೂ ಸೆಂಟ್ರೋಸೋಮುಗಳು ಉಂಟು. ಆದರೆ ಸಸ್ಯಗಳಲ್ಲಿ ಪ್ಲಾಸ್ಟಿಡುಗಳೂ ರಸದಾನಿಗಳೂ ಇವೆಯಲ್ಲದೆ ಕೋಶಪಟಲದ ಹೊರಭಾಗದಲ್ಲಿ ಕೋಶಭಿತ್ತಿಯೊಂದುಂಟು. ಎಲ್ಲ ಜೀವಿಗಳ ವರ್ಣತಂತುಗಳಲ್ಲೂ ಡಿಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ ಇದೆ. ವರ್ಣತಂತುಗಳು ತಾಯಿತಂದೆಯರ ಗುಣಲಕ್ಷಣಗಳನ್ನು ಮಕ್ಕಳಿಗೆ ಒಯ್ಯುತ್ತವೆ.

ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದಾಗಿ ಕೋಶದ್ರವ್ಯದಲ್ಲಿರುವ ಬಲೆಯಾಕಾರದ ಪಟಲವ್ಯವಸ್ಥೆಯ (ಎಂಡೋಪ್ಲಾಸ್ಮಿಕ್ ರೆಟಿಕ್ಯುಲಮ್) ಮತ್ತು ಮೈಟೊಕಾಂಡ್ರಿಯಗಳ ಸೂಕ್ಷ್ಮ ರಚನೆಗಳು ವ್ಯಕ್ತವಾಗಿವೆ.

(vii) ಪ್ರತಿಸ್ಪಂದನ ಮತ್ತು ಹೊಂದಾಣಿಕೆ (ಇರಿಟಬಿಲಿಟಿ ಅಂಡ್ ಅಡ್ಯಾಪ್ಟಬಿಲಿಟಿ): ಪ್ರತಿಯೊಂದು ಜೀವಿಯೂ ತಾನು ಬಾಳಿ ಬದುಕುವ ಪರಿಸರದ ಪ್ರೇರಣೆಗಳಿಗೆ ತಾನಾಗಿಯೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಪರಿಸ್ಥಿತಿಯಲ್ಲಾಗುವ ವೈಪರೀತ್ಯಗಳನ್ನು ಪ್ರಚೋದನೆ ಎನ್ನಬಹುದು. ಇದರ ವಿರುದ್ಧವಾಗಿ ಜೀವಿ ಸ್ವಂತ ಅರಿವಿನಿಂದ ತೋರುವ ಪ್ರತಿಕ್ರಿಯೆಗೆ ಸಂವೇದನೆ (ಸೆನ್ಸಿಟಿವಿಟಿ) ಎಂಬ ಹೆಸರು. ಪ್ರಚೋದನೆಗಳು ಜೀವಿಯ ಬಾಹ್ಯ ಪ್ರಪಂಚದಲ್ಲಿ ಆಗುವ ಶೀತ–ಉಷ್ಣತೆಗಳ ಬದಲಾವಣೆ, ಒತ್ತಡ ಮುಂತಾದವಾಗಿರಬಹುದು. ಇಲ್ಲವೆ ಆಂತರಿಕ ರಾಸಾಯನಿಕ ಕ್ರಿಯೆಗಳಿಂದ ಉದ್ಭವಿಸುವ ವೈಪರೀತ್ಯಗಳಾಗಿರಬಹುದು. ಈ ಬಗೆಯ ಬದಲಾವಣೆಗೆ ತಕ್ಕಂತೆ ತಮ್ಮ ಜೀವನದ ಧಾಟಿಯನ್ನು ಹೊಂದಿಸಿಕೊಂಡು ಬದುಕುವುದು ಜೀವಿಗಳ ಲಕ್ಷಣ. ಮದ್ದಿಗೆ ಬೆಂಕಿಯ ಕಿಡಿ ಬಿದ್ದರೆ ಮದ್ದು ಸಿಡಿದು ಪ್ರತಿಕ್ರಿಯೆ ಗೋಚರವಾಗುವುದು. ಆದರೆ ಈ ತೆರನ ಪ್ರತಿಕ್ರಿಯೆಗೂ ಜೀವಿ ತೋರುವ ಪ್ರತಿಕ್ರಿಯೆಗೂ ವ್ಯತ್ಯಾಸ ಉಂಟು. ಸಿಡಿದ ಮದ್ದು ನಾಶವಾಗುತ್ತದೆ. ಆದರೆ ಜೀವಿಯಾದರೋ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡೇ ಇರುತ್ತದೆ. ಅಂದರೆ, ಮದ್ದಿನ ಪ್ರತಿಸ್ಪಂದನ ವಿನಾಶಾತ್ಮಕ, ಜೀವಿಯದು ರಚನಾತ್ಮಕ, ಜೀವಿಗಳ ಪ್ರತಿಯೊಂದು ಪ್ರತಿಕ್ರಿಯೆಯೂ ಅವುಗಳ ಹೊಂದಾಣಿಕೆಗೆ ಹಾಗೂ ಪ್ರಗತಿಗೆ ನೆರವಾಗುತ್ತದೆ.

ಒಟ್ಟಾರೆ ಜೀವಿಯ ಲಕ್ಷಣಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು : (i) ಜೀವಿಯಾಗಲು ಜೀವದ್ರವ್ಯಗಳು ಬೇಕು. (ii) ಅದು ಪರಿಸರಕ್ಕೆ ತಕ್ಕಂತೆ ಪ್ರತಿಕ್ರಿಯೆ ತೋರುವುದಲ್ಲದೆ ಹೊಂದಿಕೊಂಡು ಬಾಳುವ ಸಾಮರ್ಥ್ಯ ಪಡೆದಿರಬೇಕು. (iii) ಸೇವಿಸಿದ ಆಹಾರವನ್ನು ಸಂವರ್ಧನ ಕ್ರಿಯೆಯಿಂದ ಮೈಗೂಡಿಸಿಕೊಂಡು ಬೆಳೆಯಬೇಕು. (iv) ಪೀಳಿಗೆಯ ವೃದ್ಧಿಗಾಗಿ ಪ್ರಜನನ ಸಾಮರ್ಥ್ಯ ಪಡೆದಿರಬೇಕು. ಹಾಗಿದ್ದರೆ ಮಾತ್ರ ಅದು ಜೀವ, ಇಲ್ಲವಾದರೆ ಅಜೀವ.

4 ಜೀವ ಜಗತ್ತು : (a) ಜೀವಿಯ ವ್ಯಾಪ್ತಿ ; ನೆಲ, ನೀರು ಹಾಗೂ ಅಂತರಿಕ್ಷಗಳಲ್ಲದೆ ಮಂಜುಕವಿದ ಪರ್ವತಪ್ರದೇಶ ಮತ್ತು ಮೇರುಪ್ರದೇಶಗಳಲ್ಲೂ ಜೀವಿಗಳುಂಟು. ಬ್ಯಾಕ್ಟೀರಿಯಗಳೂ ಮತ್ತು ಶಿಲೀಂಧ್ರಗಳ ಬೀಜಕಗಳೂ ಅಂತರಿಕ್ಷದಲ್ಲಿ 1000 ಮೀ ಎತ್ತರದವರೆಗೂ ಪಸರಿಸಿವೆ. 8235 ಮೀ ಎತ್ತರದಲ್ಲಿ ಹಿಮವತ್ಪರ್ವತದ ಪಕ್ಷಿಗಳು ಹಾರಾಡುವುದನ್ನು ಗುರುತಿಸಿದ್ದಾರೆ. ಆರ್.ಡಬ್ಲ್ಯೂ. ಜಿ. ಹಿಂಗ್‌ಸ್ಟನ್ ಎಂಬುವ ಎವರೆಸ್ಟ್ ಪ್ರದೇಶದಲ್ಲಿ 6710 ಮೀ ಗಳ ಎತ್ತರದಲ್ಲಿ ಜಿಗಿಜೇಡಗಳನ್ನು ಕಂಡ. ಋತುಗಳಿಗೆ ಅನುಗುಣವಾಗಿ ಆಗುವ ಹವಾಗುಣದ ವ್ಯತ್ಯಾಸಗಳಿಂದಲೂ ಭೂಮಧ್ಯರೇಖೆಯ ಇಕ್ಕೆಡಗಳಲ್ಲಿ ಶೀತೋಷ್ಣ ಹಾಗು ಬೆಳಕಿನ ಏರಿಳಿತಗಳಿಂದಾಗಿಯೂ ಭೂವಾಸಿಗಳ ವ್ಯಾಪ್ತಿಯಲ್ಲಿ ವೈವಿಧ್ಯ ಎದ್ದು ಕಾಣುತ್ತದೆ. ಮರುಭೂಮಿ, ಗುಹೆ ಮತ್ತು ದಟ್ಟಕಾಡುಗಳೂ ಅನೇಕ ಜೀವಿಗಳ ಬೀಡು. ಸೂರ್ಯನ ಬೆಳಕು ಇಲ್ಲದಿರುವಂಥ ಸಮುದ್ರಾಂತರಾಳದಲ್ಲಿ ಸಸ್ಯಗಳು ವಿರಳವಾದರು ಬಹುತೇಕ ಪ್ರಾಣಿಗಳು ಇಡೀ ಜೀವಮಾನವನ್ನು ಆಳ ಸಮುದ್ರಗಳಲ್ಲಿಯೇ ಕಳೆಯುವುವು. ಕಡಲವಾಸಿಗಳಿಗಿಂತ ಸಿಹಿನೀರಿನ ಜಲಾಶಯಗಳಲ್ಲಿ ಜೀವಿಗಳ ವ್ಯಾಪ್ತಿ ಬಹಳ ಕಮ್ಮಿ.

ಜೀವಿಗಳ ಅಳಿವೂ ಉಳಿವೂ ಪರಿಸರಕ್ಕೆ ಅನುಗುಣವಾಗಿರುವುದರಿಂದ ಸೂಕ್ತ ರಚನಾವೈವಿಧ್ಯ ಜೀವಿಗಳಲ್ಲಿ ಹೇರಳ. ವರ್ಣವಿನ್ಯಾಸ, ರಚನಾವೈಖರಿ, ಅಂಗಾಂಗಗಳ ಮಾರ್ಪಾಟುಗಳೇ ಮುಂತಾದ ವಿಶಿಷ್ಟ ಸಿದ್ಧತೆಗಳು ವಿವಿಧ ಪರಿಸರಕ್ಕೆ ಹೊಂದಿಕೊಳ್ಳಲು ಜೀವಿಗಳು ಗಳಿಸಿರುವ ಸೂಕ್ತ ಸಾಧನಗಳು.

(b) ದ್ಯುತಿಸಂಶ್ಲೇಷಣೆ ಮತ್ತು ಶಕ್ತಿಚಕ್ರ : ಜೀವಿಯ ನಾನಾ ಕಾರ್ಯ ಚಟುವಟಿಕೆಗಳಿಗೆ ಅತ್ಯವಶ್ಯವಾದ ಶಕ್ತಿಯ ಗಳಿಕೆ, ಬಳಕೆ ಮತ್ತು ವ್ಯಯಗಳು ಪ್ರಕೃತಿಯಲ್ಲಿ ವಿವಿಧ ರೂಪಗಳಲ್ಲಿ ಕಾಣುತ್ತವೆ. ಹರಿತ್ತು ಇರುವ ಸಸ್ಯಗಳು, ಭೂಮಿಯಿಂದ ಖನಿಜ ಲವಣಗಳನ್ನೂ ನೀರನ್ನೂ ವಾಯುವಿನಿಂದ ಕಾರ್ಬನ್ ಡೈಆಕ್ಸೈಡನ್ನೂ ಹೀರಿಕೊಂಡು ಸೂರ್ಯರಶ್ಮಿಯ ಶಕ್ತಿಯ ನೆರವಿನಿಂದ. ಸರ್ವಜೀವಿಗಳಿಗೂ ಶಕ್ತಿಯ ಮೂಲಾಧಾರವಾದ ಸರಳ ಸಕ್ಕರೆಯ ಸಂಶ್ಲೇಷಣೆಯ ಜೊತೆಗೆ ಆಕ್ಸಿಜನ್ನನ್ನು ಉತ್ಪಾದಿಸುತ್ತವೆ. ಇದೇ ದ್ಯುತಿಸಂಶ್ಲೇಷಣೆ. ಈ ಕ್ರಿಯೆಯನ್ನು ಮುಂದಿನ ಸರಳ ಸಮೀಕರಣದಿಂದ ನಿರೂಪಿಸಬಹುದು.

$$6CO_2 + 6H_2O \xrightarrow{\text{ಬೆಳಕು}} C_6H_{12}O_6 + 6O_2$$

ಉತ್ಪತ್ತಿಯಾದ ಆಕ್ಸಿಜನ್ ವಾಯುಮಂಡಲವನ್ನು ಸೇರುತ್ತದೆ. ಸಕ್ಕರೆ ಎಲ್ಲ ಜೀವಿಗಳ ಕಾರ್ಯಚಟುವಟಿಕೆ ಮತ್ತು ಬೆಳವಣಿಗೆಗಳಿಗೆ ಅತ್ಯುಪಯುಕ್ತ ವಸ್ತು. ಅಂದರೆ, ಜೀವಜಗತ್ತಿನಲ್ಲಿ ಉತ್ಕರ್ಷಣವಾದ ಮತ್ತು ಅಪಕರ್ಷಣವಾದ ವಸ್ತುಗಳ ಎರಡು ವಲಯಗಳು ಸೃಷ್ಟಿಯಾಗುತ್ತವೆ. ಈ ವಸ್ತುಗಳು ಕಾಲ ಕ್ರಮೇಣ ಭೂಗತವಾದರೂ ಜ್ವಾಲಾಮುಖಿಗಳಂಥ ನಿಸರ್ಗನಿಯಮಕ್ಕೊಳಗಾದಂಥ ವಿದ್ಯಮಾನಗಳಿಂದ ಸಸ್ಯಗಳ ದ್ಯುತಿಸಂಶ್ಲೇಷಣೆಗೆ ಆವಶ್ಯಕವಾದ ಕಾರ್ಬನ್ ಡೈಆಕ್ಸೈಡ್ ನಿರಂತರವೂ ಒದಗುತ್ತದೆ. ಸೌರಶಕ್ತಿಯ ಕೇವಲ 0.068% ರಷ್ಟು ಮಾತ್ರ ಈ ಬಗೆಯ ಸಂಶ್ಲೇಷಣೆಗೆ ಉಪಯೋಗವಾಗುತ್ತದೆ. ಸಂಗ್ರಹವಾದ ಶಕ್ತಿಯಲ್ಲಿ 30% ರಷ್ಟನ್ನು ಸಸ್ಯಗಳೇ ಉಪಯೋಗಿಸಿಕೊಳ್ಳೂತ್ತವೆ ; 10% ಸಸ್ಯಾಹಾರಿ ಪ್ರಾಣಿಗಳು ಪಡೆಯುತ್ತವೆ. ಉಳಿದ ಸುಮಾರು 40% ಭಾಗವನ್ನು ಸಸ್ಯಗಳು ಸತ್ತ ತರುವಾಯ ಬ್ಯಾಕ್ಟೀರಿಯಗಳು ಕೊಳೆಯಿಸಿ ಶಾಖದ ರೂಪದಲ್ಲಿ ಬಿಡುಗಡೆ ಮಾಡುತ್ತವೆ.

(c) ಜೀವೋತ್ಪತ್ತಿಯ ಸಿದ್ಧಾಂತಗಳು : ನೋಡಿ–ಜೀವದ ಉಗಮ.

(d) ಸಸ್ಯ, ಪ್ರಾಣಿ ಹಾಗೂ ಸೂಕ್ಷ್ಮಜೀವಿಗಳು: ಮೂಲತಃ ಸಸ್ಯ ಮತ್ತು ಪ್ರಾಣಿಗಳು ಅನೇಕ ರೀತಿಯಲ್ಲಿ ಒಂದೇ ಆಗಿವೆ. ಆದ್ದರಿಂದಲೇ ಇವೆರಡು ಗುಂಪನ್ನೂ ಜೀವಿಗಳೆಂದು ಪರಿಗಣಿಸಲಾಗಿದೆ. ಸಸ್ಯ ಮತ್ತು ಪ್ರಾಣಿಗಳೆರಡರ ದೇಹವೂ ಅನೇಕ ಕೋಶಗಳಿಂದ ಕೂಡಿದೆ. ಕೋಶಗಳು ರಚನೆ ಹಾಗೂ ಕ್ರಿಯಾವಿಧಾನದಲ್ಲಿ ಸ್ವಯಂಪೂರ್ಣ ಘಟಕಗಳಂತಿವೆ. ಇವೆರಡರಲ್ಲೂ ನಡೆಯುವ ಅನೇಕ ಸಂವರ್ಧನ ಕ್ರಿಯೆಗಳು ಒಂದೇ ತೆರ. ಇಷ್ಟೆಲ್ಲ ಸಾಮ್ಯಗಳಿದ್ದರೂ ಸಸ್ಯ ಮತ್ತು ಪ್ರಾಣಿಗಳಲ್ಲಿ ಹಲವಾರು ಗಣನೀಯ ವ್ಯತ್ಯಾಸಗಳು ಇಲ್ಲದಿಲ್ಲ.

ಬಹುತೇಕ ಪ್ರಾಣಿಗಳು ಸಂಚರಿಸಿ, ಇತರ ಸಸ್ಯಗಳು ಉತ್ಪಾದಿಸಿದ ಅಥವಾ ಇತರ ಜೀವಿಗಳು ಬಿಟ್ಟ ಆಹಾರವನ್ನು ಸೇವಿಸುತ್ತವೆ. ಸಸ್ಯಗಳು ಹೆಚ್ಚಾಗಿ ಸ್ಥಾವರ ಜೀವಿಗಳು, ಮೇಲಾಗಿ ತಮ್ಮಲ್ಲಿರುವ ಹರಿತ್ತು (ಕ್ಲೋರೊಫಿಲ್) ಎಂಬ ವಿಶೇಷ ಘಟಕದಿಂದ ತಮ್ಮ ಆಹಾರವನ್ನು ತಾವೆ ತಯಾರಿಸಿಕೊಳ್ಳುವ ಅಪೂರ್ವ ಸಾಮರ್ಥ್ಯವನ್ನು ಇವು ಪಡೆದಿವೆ. ಪ್ರಾಣಿಗಳಲ್ಲಿ ನಶಿಸಿಹೋದ ಕೋಶಗಳು ಕಾಲಕಾಲಕ್ಕೆ ನವೀಕರಣಗೊಂಡರೂ ಪ್ರಾಣಿಗಳು ಒಂದು ನಿರ್ದಿಷ್ಟ ಗಾತ್ರದವರೆಗೆ ಮಾತ್ರ ಬೆಳೆಯುತ್ತವೆ. ಆದರೆ ಸಸ್ಯಗಳು ಅವ್ಯಾಹತವಾಗಿ ಬೆಳೆಯುತ್ತಲೇ ಇರುತ್ತವೆ. ಇದಕ್ಕೆ ಕಾರಣ, ಇವುಗಳಲ್ಲಿ ಕೆಲವು ಕೋಶಗಳು ಅಜೀವಾಂತವು ಚಟುವಟಿಕೆಯಿಂದಿದ್ದು ಬೆಳೆಯುತ್ತಲೇ ಇರುವುದು. ಅಂತೆಯೇ ಸಸ್ಯಗಳಲ್ಲಿ ಸೆಲ್ಯುಲೋಸಿನಿಂದಾದ ದೃಢವಾದ ಕೋಶಭಿತ್ತಿ ಇರುವುದರಿಂದ ಕೋಶಕ್ಕೆ ರಕ್ಷಣೆಯಲ್ಲದೆ ಖಚಿತ ರೂಪವೂ ಒದಗುತ್ತದೆ. ಆದರೆ ಪ್ರಾಣಿಗಳಲ್ಲಿ ಈ ಬಗೆಯ ಕೋಶಭಿತ್ತಿಯಿಲ್ಲದ ಕಾರಣ, ಸ್ಥಿತಿಸ್ಥಾಪಕಶಕ್ತಿಯುಳ್ಳ ಕೋಶ ಪಟಲವೇ ಕೋಶದ ಆಕಾರ ಮತ್ತು ಗಾತ್ರ ಬದಲಾವಣೆಗೆ ಅನುವುಮಾಡಿಕೊಟ್ಟಿದೆ. ಸಸ್ಯಕೋಶಗಳಲ್ಲಿ ರಸದಿಂದ ತುಂಬಿರುವ ರಸದಾನಿಗಳಿವೆ. ಆದರೆ ಇವು ಪ್ರಾಣಿಗಳಲ್ಲಿ ಕಾಣುವುದಿಲ್ಲ. ಸಸ್ಯದಲ್ಲಿಲ್ಲದ ಸೆಂಟ್ರೋಸೋಮುಗಳು ಪ್ರಾಣಿಕೋಶದಲ್ಲಿ ನ್ಯೂಕ್ಲಿಯಸಿನ ಬಳಿ ಇವೆ. ಹೀಗೆ, ಸಸ್ಯ ಮತ್ತು ಪ್ರಾಣಿಗಳಲ್ಲಿ ಕೆಲವು ಸೂಕ್ಷ್ಮ ವ್ಯತ್ಯಾಸಗಳು ಕಂಡಾಗ್ಯೂ, ಎರಡರ ಕೋಶಗಳಲ್ಲೂ ಜೀವದ್ರವ್ಯದ ಭೌತ ಹಾಗೂ ರಾಸಾಯನಿಕ ಲಕ್ಷಣಗಳಿಗಿರುವ ಸಾಮ್ಯವನ್ನು ಮರೆಯಲಾಗುವುದಿಲ್ಲ.

ಇಡೀ ಜೀವರಾಶಿಯನ್ನು ಸಸ್ಯ ಮತ್ತು ಪ್ರಾಣಿಗಳೆಂದು ಎರಡು ದೊಡ್ಡ ಗುಂಪುಗಳಾಗಿ ವಿಂಗಡಿಸುವುದು ಸುಲಭ ಸಾಧ್ಯವಿದ್ದರೂ ಏಕಕೋಶಿಗಳಾಗಿರುವ ಅನೇಕ ಜೀವಿಗಳನ್ನು ನಿರ್ದಿಷ್ಟ ರೀತಿಯಲ್ಲಿ ಈ ಗುಂಪುಗಳಿಗೆ ಸೇರಿಸಲು ಸಾಧ್ಯವಿಲ್ಲ. ಏಕೆಂದರೆ ಇವು ಸೂಕ್ಷ್ಮವಾಗಿರುವುವಲ್ಲದೆ, ಸಸ್ಯ ಮತ್ತು ಪ್ರಾಣಿಗಳೆರಡರ ಗುಣಲಕ್ಷಣಗಳನ್ನು ಪಡೆದಿವೆ. ಉದಾಹರಣೆ: ವೈರಸುಗಳು.

5. ಜೀವಾಧ್ಯಯನ ಕ್ರಮ : ಈಗ ಬದುಕಿರುವ ಜೀವಿಗಳು ಹಾಗೂ ಯುಗಯುಗಾಂತರಗಳ ಹಿಂದೆ ಬಾಳಿ, ಅಳಿದುಹೋದ ಜೀವಿಗಳು ತಮ್ಮ ಸಮಸ್ಯೆಗಳನ್ನು ಬಗೆಹರಿಸಿದ ರೀತಿ, ಅವುಗಳ ನಿತ್ಯಜೀವನದ ಕ್ರಮ, ರಚನಾಯೋಜನೆ, ಹುಟ್ಟು ಮತ್ತು ಬೆಳವಣಿಗೆಗಳ ಕ್ರಮ, ಚಲನವಲನಗಳು, ಪರಸ್ಪರ ಬಾಂಧವ್ಯ ಹಾಗೂ ಜೀವಿಗಳಿಗೂ ಪರಿಸರಕ್ಕೂ ಇರುವ ನಿಕಟ ಸಂಬಂಧ–ಮೊದಲಾದ ದೃಷ್ಟಿಗಳಿಂದ ಜೀವಿಗಳನ್ನು ಪರಿಶೀಲಿಸುವುದು ಸೂಕ್ತ ಮಾರ್ಗ. ಒಂದು ಜೀವಿಯನ್ನು ಮತ್ತೊಂದರಿಂದ ಬೇರೆಯಾಗಿ ಗುರುತಿಸಲು ಅವುಗಳ ಹೊರ ರೂಪರಚನೆಗಳೇ ಅಡಿಗಲ್ಲು. ರೂಪರಚನೆಗಳ ಅಧ್ಯಯನಕ್ಕೆ ದೇಹರಚನಾವಿಜ್ಞಾನ (ಮಾರ್ಫಾಲಜಿ) ಎಂದು ಹೆಸರು. ಅಂಗಗಳ ಒಳರಚನೆಯ ಅಧ್ಯಯನಕ್ಕೆ ಅಂಗರಚನಾವಿಜ್ಞಾನ (ಅನಾಟಮಿ) ಎಂದು ಹೆಸರು. ನಿಷೇಚನವಾದ ಕ್ಷಣದಿಂದ ಅಂಡದಲ್ಲಿ ಕಾಲಕಾಲಕ್ಕೆ ಕಂಡಬರುವ ಅವಸ್ಥೆಗಳ ಅಭ್ಯಾಸವೇ ಭ್ರೂಣವಿಜ್ಞಾನ (ಎಂಬ್ರಿಯಾಲಜಿ). ಅನೇಕ ಶತಮಾನಗಳ ಹಿಂದೆ ಬದುಕಿದ್ದು ಅನಂತರ ಅಳಿದುಹೋದ ಜೀವಿಗಳ ಅಧ್ಯಯನಕ್ಕೆ ಪ್ರಾಗ್ಜೀವವಿಜ್ಞಾನ ಅಥವಾ ಲುಪ್ತಜೀವವಿಜ್ಞಾನ (ಪೇಲಿಯಂಟಾಲಜಿ) ಎಂದು ಹೆಸರು. ಜೀವಿಗೂ ಪರಿಸರಕ್ಕೂ ಇರುವ ನಿಕಟಬಾಂಧವ್ಯದ ಅಭ್ಯಾಸವನ್ನು ಪರಿಸರವಿಜ್ಞಾನ (ಈಕಾಲಜಿ) ಎಂದೂ, ಜೀವಿಗಳ ಗುಣಲಕ್ಷಣಗಳು ಪೀಳಿಗೆಗಳಿಂದ ಸಾಗಿಬರುವ ವಿಧಾನದ ಅಧ್ಯಯನವನ್ನು ತಳಿವಿಜ್ಞಾನ (ಜೆನೆಟಿಕ್ಸ್) ಎಂದೂ ಕರೆಯುತ್ತಾರೆ. ಹೀಗೆ ವಿವಿಧ ಜೀವಿಗಳಿಗಿರುವ ಹೋಲಿಕೆ, ವ್ಯತ್ಯಾಸ ಮತ್ತು ವೈಶಿಷ್ಟ್ಯಗಳನ್ನು ಅರಿಯಲು ಅವನ್ನು ಬೇರೆ ಬೇರೆ ದೃಷ್ಟಿಗಳಿಂದ ಅಭ್ಯಸಿಸುವ ಕ್ರಮ ಕ್ಯೂವಿಯೇನ ಕಾಲದಿಂದಲೂ ರೂಢಿಯಲ್ಲಿದೆ.

(a) ಜೀವಿಗಳ ರೂಪ, ರಚನೆ ಮತ್ತು ಕ್ರಿಯಾ ವಿನ್ಯಾಸ : ಜೀವಿಗಳ ಬಾಹ್ಯ ಹಾಗೂ ಒಳರಚನೆಗಳ ಸ್ಥೂಲ ಲಕ್ಷಣಗಳು ಅನೇಕ ಶತಮಾನಗಳಿಂದ ಜೀವ ವಿಜ್ಞಾನಿಗಳಿಗೆ ಪರಿಚಿತವಾಗಿವೆ. ಆದರೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳೇ ಮುಂತಾದ ಸುಧಾರಿತ ಉಪಕರಣಗಳು ಆಗಮಿಸಿದ ಬಳಿಕವೇ ಜೀವಿಗಳ ಸೂಕ್ಷ್ಮರಚನೆಯ ವಿವರಗಳು ಲಭಿಸಲು ಆರಂಭವಾದುವು. ವಿಜ್ಞಾನ ಮುಂದುವರಿದಂತೆಲ್ಲ ಎಲ್ಲ ಜೀವಿಗಳ ಉತ್ಪತ್ತಿಗೂ ರಚನೆಗೂ ಕೋಶಗಳೇ ಮೂಲಾಧಾರವೆನ್ನುವುದಲ್ಲದೆ ಜೀವವಿಜ್ಞಾನದ ಪ್ರತಿ ಸಮಸ್ಯೆಗೂ ಪರಿಹಾರವನ್ನು ಕೋಶದಲ್ಲೇ ಕಾಣಬಹುದೆಂದು ಮನವರಿಕೆಯಾಗುತ್ತ ಬಂತು. ಕೋಶದಿಂದ ಕೋಶೋತ್ಪತ್ತಿಯಾಗಬೇಕೇ ವಿನಾ ಅನ್ಯಥಾ ಸಾಧ್ಯವಿಲ್ಲ. ಸರಳಜೀವಿಗಳಾದ ಪ್ರೋಟೊಜೊವಗಳೇ ಮುಂತಾದ ಸೂಕ್ಷ್ಮಜೀವಿಗಳು ಏಕಕೋಶಿಗಳು. ಬಹುಕೋಶಜೀವಿಗಳೂ ತಮ್ಮ ಜೀವನವನ್ನು ಏಕಕೋಶರೂಪದಲ್ಲೇ ಆರಂಭಿಸುತ್ತವೆ. ಕೋಶಗಳ ವಿಭಜನೆಯ ಫಲವಾಗಿ ಬಹುಕೋಶಿಗಳಲ್ಲಿ ಕೋಟ್ಯನುಕೋಟಿ ಕೋಶಗಳು ರೂಪುಗೊಳ್ಳುವುವಲ್ಲದೆ, ಒಂದೇ ತೆರನ ಕೋಶಗಳ ಒಕ್ಕೂಟದಿಂದ ಊತಕಗಳೂ ಇವುಗಳ ಒಕ್ಕೂಟದಿಂದಾಗಿ ಅಂಗಗಳೂ ಮತ್ತು ಅಂಗವ್ಯವಸ್ಥೆಗಳೂ ರೂಪುಗೊಳ್ಳುತ್ತವೆ. ದೇಹದಲ್ಲಿರುವ ಕೋಶಗಳು, ರಚನೆ, ಗಾತ್ರ ಮತ್ತು ಕಾರ್ಯಗಳಲ್ಲಿ ಹೆಚ್ಚು ವೈವಿಧ್ಯ ತೋರುವುದರಿಂದ ಬಹುಕೋಶಿಗಳಲ್ಲಿ ವಿವಿಧ ಬಗೆಯ ಊತಕಗಳನ್ನು ಗುರುತಿಸಬಹುದು.

ಗುಂಡಿಗೆ, ರಕ್ತನಾಳ, ಫುಪ್ಫುಸ ಹಾಗೂ ದೇಹದ ಹೊರಮೈಯನ್ನು ಆವರಿಸಿ, ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ಚಪ್ಪಟೆ ಕೋಶಗಳು ಅನುಲೇಪಕ ಊತಕವಾಗಿ ರೂಪಗೊಂಡಿವೆ. ಅಂಗಾಂಗಗಳನ್ನು ಸುತ್ತುಕಟ್ಟುವುದು, ಅವುಗಳಿಗೆ ಆಸರೆ ಕೊಡುವುದು, ವಿವಿಧಾಂಗಗಳನ್ನು ಬಂಧಿಸುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುವ ಸಂಯೋಜಕ ಊತಕ ರಕ್ತ, ಅಸ್ಥಿ ಮತ್ತು ಮೃದ್ವಸ್ಥಿಗಳ ರೂಪದಲ್ಲಿರುತ್ತದೆ. ಕುಗ್ಗುವಿಕೆ ಮತ್ತು ಹಿಗ್ಗುವಿಕೆಗಳಂಥ ಕಾರ್ಯಗಳಿಗಾಗಿ ಮಾಂಸಖಂಡ ಊತಕವೂ ಪ್ರಚೋದಿತ ಸಂದೇಶಗಳನ್ನು ಸಾಗಿಸುವ ಕ್ರಿಯಾವಾಹಿನೀ ಮತ್ತು ಜ್ಞಾನವಾಹಿನೀ ತಂತುಗಳಿಂದಾದ ವಿಶಿಷ್ಟಬಗೆಯ ನರ ಊತಕವೂ ಪ್ರಾಣಿಗಳಲ್ಲಿರುವುದು ಸರ್ವೇಸಾಮಾನ್ಯ.

ಅಂತೆಯೇ ಸಸ್ಯಗಳಲ್ಲಿ ವರ್ಧನಸಾಮರ್ಥ್ಯವುಳ್ಳ ಊತಕ ಮತ್ತು ಶಾಶ್ವತ ಊತಕಗಳೆಂಬ ಎರಡು ಬಗೆಯ ಕೋಶಸಮೂಹಗಳನ್ನು ಗುರುತಿಸಬಹುದು. ವರ್ಧನಕೋಶಗಳು ತಮ್ಮ ವಿಭಜನಾಶಕ್ತಿಯಿಂದ ಹೊಸ ಕೋಶಗಳನ್ನು ಸತತವಾಗಿ ನಿರ್ಮಿಸುತ್ತಲೇ ಇರುತ್ತವೆ. ಇಂಥ ಊತಕಗಳು ಸಾಮಾನ್ಯವಾಗಿ ಕಾಂಡ ಹಾಗೂ ಬೇರಿನ ತುದಿಗಳಲ್ಲೂ ಮೊಗ್ಗುಗಳಲ್ಲೂ ಸ್ಥಿತವಾಗಿವೆ. ಶಾಶ್ವತ ಊತಕಗಳಲ್ಲಿ ವಿಭಜನೆಯಾಗದೆ ಇರುವ ಕೋಶಗಳೇ ಹೆಚ್ಚು. ಎಲೆ, ಹೂ ಮುಂತಾದ ಅಂಗಾಂಗಗಳ ಹೊರಮೈಯ ರಕ್ಷಣಾಕಾರ್ಯದಲ್ಲಿ ಪಾಲ್ಗೊಳ್ಳುವ ಎಪಿಡರ್ಮಿಸ್ ಕೋಶಗಳು ಕ್ಯೂಟಿನ್‌ನಿಂದ ಆವೃತವಾಗಿವೆ. ನೀರು ಮತ್ತು ಆಹಾರವನ್ನು

ಸಂಗ್ರಹಿಸುವುದರಲ್ಲಿ ನೆರವಾಗುವ ಪ್ಯಾರೆಂಕಿಮ ಊತಕ ಸಸ್ಯದ ಎಲ್ಲ ಅಂಗಗಳಲ್ಲಿಯೂ ಉಂಟು. ವಿವಿಧ ಭಾಗಗಳಿಗೆ ಆಧಾರಸ್ತಂಭದಂತಿರುವ ಸ್ಕ್ಲೀರೆಂಕಿಮದಲ್ಲಿರುವ ಕೋಶಗಳಲ್ಲಿ ಸೆಲ್ಯುಲೋಸ್ ಮತ್ತು ಲಿಗ್ನಿನ್ ಎಂಬ ವಿಶಿಷ್ಟ ವಸ್ತುಗಳಿವೆ. ಖನಿಜ ಮತ್ತು ಲವಣಗಳಿಂದ ಕೂಡಿದ ನೀರನ್ನು ಒಯ್ಯುವ ಕ್ಸೈಲಮ್ ಮತ್ತು ಆಹಾರ ಸಾಗಣೆಯಲ್ಲಿ ನೆರವಾಗುವ ಫ್ಲೋಯಮ್‌ಗಳು ಸಸ್ಯಗಳಲ್ಲಿ ಕಂಡುಬರುವ ಮತ್ತೊಂದು ಬಗೆಯ ಊತಕದ ಅಂದರೆ ವಾಹಕ ಊತಕದ–ಉದಾಹರಣೆಗಳು.

(b) ಭ್ರೂಣಶಾಸ್ತ್ರಾಧ್ಯಯನ : ಅಂಡದೊಳಗಿರುವ ಜೀವಿ ಬೆಳೆದು ಮರಿಯಾಗಿ ಹೊರಬರುವ ವಿವಿಧ ಹಂತಗಳ ವಿವರವೇ ಭ್ರೂಣವಿಜ್ಞಾನ. ಜೀವಿಯ ಬೆಳವಣಿಗೆಯನ್ನು ಕೆಲವು ತತ್ತ್ವಾಧಾರಗಳ ಮೇಲೆ ಅರಿಯಲು ಪ್ರಾರಂಭಿಸಿದ ಪೂರ್ವೋದ್ಭವ ಸಿದ್ಧಾಂತ (ಪ್ರೀಫಾರ್ಮೇಷನ್ ಥಿಯರಿ) ಮತ್ತು ಜೀವಾಂಕುರ ಸಿದ್ಧಾಂತಗಳು (ಎಪಿಜೆನೆಟಿಕ್ ಥಿಯರಿ) ಅತಿ ಮುಖ್ಯವಾದುವು. ಪಿತೃವನ್ನು ಹೋಲುವ ಸೂಕ್ಷ್ಮಾಕೃತಿ ಅಂಡದಲ್ಲಿರುತ್ತದೆಂದೂ, ಶುಕ್ರಾಣು ಬೆಳೆಯುವ ಜೀವಿಗೆ ಕೇವಲ ಆಹಾರ ಒದಗಿಸಲು ನೆರವು ನೀಡುವುದೆಂದೂ ಸ್ವಾಮರ್‌ಡಾಮ್ ಮತ್ತು ಮಾಲ್ಪೀಗಿಯವರು ವಾದಿಸಿದ್ದರು. ಶುಕ್ರಾಣುವೇ ಭವಿಷ್ಯಜೀವಿಯ ಸರ್ವಾಂಗ ಸ್ವರೂಪವಿರುವ ಸೂಕ್ಷ್ಮಾಕೃತಿಯ ಗೂಡೆಂದು ಇನ್ನು ಕೆಲವರು ವಾದಿಸಿದ್ದರು. ಆದರೆ, ಈ ಎರಡು ಬಗೆಯ ಪೂರ್ವೋದ್ಭವ ಸಿದ್ಧಾಂತಗಳೂ ಆಧಾರರಹಿತವಾಗಿವೆ. ಅಂಡ ಶುಕ್ರಾಣುಗಳೆರಡೂ ಭ್ರೂಣೋತ್ಪತ್ತಿಗೆ ಮುಖ್ಯವೆಂಬುದು ಕಾಲಾನುಕ್ರಮದಲ್ಲಿ ಮನವರಿಕೆಯಾಗಿದೆ. ವುಲ್ಫ್‌ನ ಜೀವಾಂಕುರ ಸಿದ್ಧಾಂತ ಪ್ರಕಾರ ಭ್ರೂಣ (ಜೀವ) ಒಂದು ಗೊತ್ತಾದ ಪರಿಸರದಲ್ಲಿ ಹಂತಹಂತವಾಗಿ ಬದಲಾಗುತ್ತ ಹೋಗಿ ತನ್ನ ಅಂತಿಮಸ್ವರೂಪವನ್ನು ಮುಟ್ಟುತ್ತದೆ. ಆದ್ದರಿಂದ ಅಂಡದಲ್ಲಾಗಲೀ ಶುಕ್ರದಲ್ಲಾಗಲೀ ಜೀವಿಯ ಪೂರ್ಣಚಿತ್ರವಿರುವುದಿಲ್ಲವೆಂದು ಈತ ದೃಢಪಡಿಸಿದ. ಜೀವಿಗಳು ಅಮರವಲ್ಲದಿದ್ದರು ಪ್ರಜನನಾಂಗ ಅಮರವೆಂದು ಸಾರಿದ ವೈಸ್‌ಮ್ಯಾನನ ಸಿದ್ಧಾಂತದಿಂದಾಗಿ ಸಂತಾನಾಭಿವೃದ್ಧಿಯಲ್ಲಿ ಗಂಡುಹೆಣ್ಣುಗಳ ಪಾತ್ರದ ಪ್ರಮುಖತೆಯ ಅರಿವಾಯಿತು.

ಮೇಲ್ದರ್ಜೆಯ ಜೀವಿಗಳಲ್ಲಿ ಲಿಂಗಭೇದವಿರುವುದರಿಂದ ಗಂಡು ಹೆಣ್ಣುಗಳೆರಡೂ ಅನುಕ್ರಮವಾಗಿ ಶುಕ್ರಾಣು ಮತ್ತು ಅಂಡಗಳನ್ನು ಉತ್ಪತ್ತಿಮಾಡುತ್ತವೆ. ಭಿನ್ನ ರೀತಿಯ ಈ ಕೋಶಗಳ ಮಿಲನದಿಂದಾಗಿ ಯುಗ್ಮ ಉತ್ಪತ್ತಿಯಾಗುವುದು. ಹೀಗೆ ಗರ್ಭಧರಿಸಿದ ಅಂಡ ಖಂಡೀಭವಗೊಂಡು (ಸೆಗ್ಮೆಂಟೇಷನ್) ಅನೇಕ ಕೋಶಗಳಿಂದ ಕೂಡಿದ ಚೆಂಡಿನಂತಾಗುತ್ತದೆ. ಕ್ರಮೇಣ ಇದರ ಕೇಂದ್ರಭಾಗದಲ್ಲಿ ಉದ್ಭವಿಸುವ ಅವಕಾಶದಿಂದಾಗಿ ಬೆಳವಣಿಗೆ ಬ್ಲಾಸ್ಟುಲ ಘಟ್ಟವನ್ನು ಮುಟ್ಟುತ್ತದೆ. ಈ ಹಂತದಲ್ಲಿ ಕಾಣುವ ವಿವಿಧ ಕೋಶಗಳು ಪ್ರಬುದ್ಧಜೀವಿಯಲ್ಲಿ ಬೇರೆ ಬೇರೆ ಅಂಗಗಳಾಗಿ ರೂಪುಗೊಳ್ಳುತ್ತವೆ. ಈ ಬಗೆಯ ಕೋಶವಂಶಾವಳಿಯನ್ನು ಸಂಪೂರ್ಣವಾಗಿ ಅರಿಯಲು, ಅಂಡದಲ್ಲಿನ ವಿವಿಧ ವಲಯಗಳನ್ನು ಗುರುತಿಸಿ ಕೊಳ್ಳಬೇಕು. ವಿವಿಧ ವಲಯಗಳಲ್ಲಿರುವ ರಾಸಾಯನಿಕ ವಸ್ತುಗಳನ್ನು ಅರ್ಥ ಮಾಡಿಕೊಳ್ಳಬೇಕು ; ಬ್ಲಾಸ್ಟುಲ ಮತ್ತು ಗ್ಯಾಸ್ಟ್ರುಲ ಹಂತಗಳಲ್ಲಿ ವಿವಿಧ ವಲಯಗಳಿಂದ ಮೂಡಿ ಬಂದಿರುವ ಕೋಶಗಳ ಸ್ಥಳಗಳನ್ನು ಗುರುತಿಸಿಕೊಳ್ಳಬೇಕು. ಈ ರೀತಿ ನಿರ್ದಿಷ್ಟ ಸ್ಥಳಗಳ ಗುರುತಿನಿಂದಾಗಿ ಆ ಸ್ಥಳಗಳಲ್ಲಿರುವ ಕೋಶಗಳು ಮುಂದೆ ಯಾವ ಊತಕವನ್ನು ಅಥವಾ ಅಂಗವನ್ನು ಕೊಡುತ್ತವೆ ಎಂಬುದನ್ನು ಪ್ರಯೋಗಗಳ ಮೂಲಕ ಅರಿಯುತ್ತ ಈ ಕೋಶಸಂತತಿಯನ್ನೇ ಹಿಂಬಾಲಿಸಿದರೆ ಅಂತಿಮವಾಗಿ ಅದು ಯಾವ ಅಂಗವಾಗಿ ರೂಪುಗೊಳ್ಳುತ್ತದೆ ಎಂಬುದನ್ನು ಗುರುತಿಸಬಹುದು.

ಕೋಳಿಮೊಟ್ಟೆಯಲ್ಲಿರುವ ಪ್ರಾಣಿಧ್ರುವ ಹಾಗೂ ಕಾಯಧ್ರುವಗಳಲ್ಲಿ ನಡೆಯುವ ಜೈವಿಕ ಕ್ರಿಯೆಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಇದನ್ನು ಚೈಲ್ಡ್ ಎಂಬಾತ ಅಕ್ಷೀಯ ಓಟ (ಆಕ್ಸಿಯಲ್ ಗ್ರೇಡಿಯಂಟ್) ಎಂಬ ತತ್ತ್ವದ ಮೂಲಕ ಪ್ರತಿಪಾದಿಸಿದ. ಪ್ರಾಣಿಧ್ರುವದಲ್ಲಿ ಜೈವಿಕ ಕ್ರಿಯೆಗಳ ಪ್ರಮಾಣ ಹೆಚ್ಚು. ಇದರಿಂದಾಗಿ ಅಲ್ಲಿ ಕೋಶವಿಭಜನೆ ತೀವ್ರಗತಿಯಲ್ಲಿ ನಡೆಯುತ್ತದೆ. ಈ ವಲಯದಿಂದ ಕೆಳಗೆ ಬಂದಂತೆ ವಿಭಜನೆಯ ಗತಿ ಕಡಿಮೆಯಾಗುತ್ತ ಬರುತ್ತದೆ. ಇದರಿಂದಾಗಿ ಮೊಟ್ಟೆಯಲ್ಲಿ ಒಂದು ಕೊನೆಯಿಂದ ಮತ್ತೊಂದು ಕೊನೆಗೆ ಚಯಾಪಚಯೀ ಅಕ್ಷೀಯ ಓಟ ಇರುತ್ತದೆಂಬ ತೀರ್ಮಾನಕ್ಕೆ ಚೈಲ್ಡ್ ಬಂದ. ಅಕ್ಷೀಯ ಓಟದ ಸ್ಥಿತಿಗತಿಗಳು ಅಂಡದೊಳಗಿರುವ ಕೋಶರಸದ ವಿವಿಧ ರಾಸಾಯನಿಕ ವಸ್ತುಗಳಿಗೆ ಸಂಬಂಧಿಸಿವೆಯೆಂದು ಈತ ಸೂಚಿಸಿದ.

ಸಂತಾನಕ್ರಿಯೆ ಪ್ರೌಢಜೀವಿಗಳಿಗೆ ಮಾತ್ರ ಸೀಮಿತವಾಗಿಲ್ಲ ; ಕೆಲವು ಪ್ರಾಣಿಗಳಲ್ಲಿ (ಕೆಲವು ಮೀನು, ಕಪ್ಪೆಗಳು) ಶೈಶವಾವಸ್ಥೆಯಲ್ಲೂ ಸಂತಾನಾಭಿವೃದ್ಧಿ ಪ್ರವೃತ್ತಿಯನ್ನು ಕಾಣಬಹುದು. ಇದನ್ನೆ ನಿಯೋಟಿನಿ ಎನ್ನುತ್ತಾರೆ. ಮತ್ತೆ ಕೆಲವು ಜೀವಿಗಳು ತಮ್ಮ ಜೀವನದ ಪ್ರಥಮ ಹಂತಗಳಲ್ಲಿ ಅಂಡಗಳನ್ನು ಉತ್ಪತ್ತಿಮಾಡಿ, ಕ್ರಮೇಣ ಶುಕ್ರೋತ್ಪತ್ತಿಯಲ್ಲಿ ತೊಡಗುತ್ತವೆ. ಜೀವಿ ಹುಟ್ಟ ಬೇಕಾದರೆ ಅಂಡ ಶುಕ್ರಾಣುವಿನಿಂದ ನಿಷೇಚಿತವಾಗಲೇಬೇಕೆಂಬ ನಿಯಮವೂ ಇಲ್ಲ. ಪಿತೃರಹಿತ ಸಂತಾನಕ್ರಿಯೆ (ಪಾರ್ತೆನೋಜೆನೆಸಿಸ್) ಇರುವ ಕೆಲವು ಕೀಟಗಳಲ್ಲಿ ಶುಕ್ರಾಣುವಿನ ಸಂಪರ್ಕವಿಲ್ಲದೆಯೇ ಅಂಡ ಪ್ರೌಢಕೀಟವಾಗಿ ಬೆಳೆಯುವ ನಿದರ್ಶನವುಂಟು. ಇಂಥ ಸಂತಾನವನ್ನು ಕೃತಕ ವಿಧಾನದಿಂದಲೂ ಪಡೆಯಬಹುದು. ಅಂಡವನ್ನು ಸೂಜಿಯಿಂದ ಚುಚ್ಚಿಯೋ ಶೀತ, ಶಾಖಗಳಿಗೆ ಒಡ್ಡಿಯೊ ಹೊಸ ಜೀವಿಯನ್ನು ಪಡೆಯಬಹುದು. ಕೆಲವು ಜೀವಿಗಳಲ್ಲಿ ನಿರ್ಲಿಂಗ ರೀತಿಯ ಸಂತಾನಕ್ರಿಯೆಯೇ ಪ್ರಧಾನವಾಗಿರುತ್ತದೆ. ಎರೆಹುಳು, ನಕ್ಷತ್ರಮೀನು ಮುಂತಾದುವುಗಳಲ್ಲಿ ಕಾರಣಾಂತರದಿಂದ ದೇಹ ತುಂಡಾದರೆ, ಇವು ಕಳೆದುಹೋದ ಭಾಗವನ್ನು ಪುನರುತ್ಪಾದಿಸುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ, ಭ್ರೂಣವಿಜ್ಞಾನ ಗರ್ಭಧರಿಸಿ(ಸ)ದ ಅಂಡದೊಳಗೆ ನಡೆಯುವ ನಾನಾ ಭೌತಿಕ ಹಾಗೂ ರಾಸಾಯನಿಕ ಕ್ರಿಯೆಗಳನ್ನು ಚಾಚೂ ತಪ್ಪದೆ ಪ್ರತಿ ಹಂತದಲ್ಲೂ ಅಭ್ಯಾಸಮಾಡಲು ಸಹಾಯಕವಾಗಿದೆ.

(c) ತಳಿವಿಜ್ಞಾನ : ಜೀವಿಗಳಲ್ಲಿರುವ ಸಾದೃಶ್ಯ ಮತ್ತು ವೈದೃಶ್ಯಗಳನ್ನು ವಿವರಿಸುವುದಲ್ಲದೆ ಸರ್ವಗುಣಲಕ್ಷಣಗಳಿಗೂ ಮೂಲಾಧಾರಗಳಾದ ಜೀನ್‌ಗಳ ಕ್ರಿಯಾಶೀಲತೆ, ಸಂಪ್ರೇಷಣಾ ವಿಧಾನವನ್ನು ವೈಜ್ಞಾನಿಕ ರೀತಿ ನಿರೂಪಿಸುವ ವಿಜ್ಞಾನ. ಇದಕ್ಕೆ ಆನುವಂಶೀಯತೆ ಎಂಬ ಹೆಸರೂ ಇದೆ. ಬಟಾಣಿ ಗಿಡಗಳ ಮೇಲೆ ತಳೀಕರಣ ಪ್ರಯೋಗಗಳನ್ನು ನಡೆಸಿ, ಕೂಡಿಟ್ಟ ಅಂಕಿ ಅಂಶಗಳ ಮಥನದಿಂದಾಗಿ ಆಸ್ಟ್ರಿಯದ ಗ್ರೆಗೊರ್ ಯೋಹನ್ ಮೆಂಡಲ್ (1822–1884) ಈ ವಿಜ್ಞಾನಕ್ಕೆ ಅಸ್ತಿಭಾರ ಹಾಕಿದ. ವಿವಿಕ್ತ ಕಣಸ್ವರೂಪದ ಆನುವಂಶೀಯತೆಯನ್ನು ಸರ್ ಫ್ರಾನ್ಸಿಸ್ ಗಾಲ್ಟನನು ಸೂಚಿಸಿದ್ದರು ಆನುವಂಶೀಯತೆಯ ಸತ್ಯಾಂಶವನ್ನು ಪ್ರಯೋಗಾಧಾರಿತವಾಗಿ ದೃಢೀಕರಿಸಿದವರಲ್ಲಿ ಮೆಂಡಲ್ ಮೊಟ್ಟ ಮೊದಲಿಗನಾಗಿ ತಳಿವಿಜ್ಞಾನದ ಪಿತಾಮಹನೆಂಬ ಹೆಸರು ಪಡೆದಿದ್ದಾನೆ. ತಳೀಕರಣ ಪ್ರಯೋಗಕ್ಕಾಗಿ ಬಟಾಣಿ ಗಿಡ ಸೂಕ್ತವಾಗಿದೆಯಾದ್ದರಿಂದ ಆತನ ಸಂಶೋಧನೆಯ ಯಶಸ್ಸಿಗೆ ಅನುವು ನೀಡಿತು. ಸ್ವಯಂ ಹಾಗೂ ಅನ್ಯಪರಾಗಾರ್ಪಣೆಗೆ ಹೇಳಿ ಮಾಡಿದಂತಿರುವ ಪುಷ್ಪರಚನೆ, ಮಿಶ್ರ ಹಾಗೂ ಶುದ್ಧ ಸಂತಾನಗಳೆರಡೂ ನೀಡುವ ಫಲ ಮತ್ತು ಎರಡು, ಮೂರು ತಿಂಗಳುಗಳಲ್ಲೇ ನಿರೀಕ್ಷಿಸಿದ ಫಲಿತಾಂಶವನ್ನು ನೋಡುವ ಅನುಕೂಲ, ಕಡಿಮೆ ವೆಚ್ಚ–ಇವು ಬಟಾಣಿಗಿಡವನ್ನು ತಳಿವಿಜ್ಞಾನದ ದೃಷ್ಟಿಯಿಂದ ಆದರ್ಶಜೀವಿಯನ್ನಾಗಿ ಮಾಡಿವೆ. ಮೆಂಡಲನ ತಾಂತ್ರಿಕ ಕುಶಲತೆ ಹಿರಿದು. ಎರಡು ಶುದ್ಧ ಸಂತಾನಗಳನ್ನು ಅಡ್ಡಹಾಯಿಸಿದ್ದರಿಂದ ಮೊದಲ ಪೀಳಿಗೆಯಲ್ಲಿ ಅದೃಶ್ಯವಾಗಿದ್ದ ಗುಣ ಎರಡನೆಯ ಪೀಳಿಗೆಯಲ್ಲಿ ಮರು ಕಾಣಿಸಿಕೊಳ್ಳುವ್ರುದನ್ನು ಗಮನಿಸಿದ ಮೆಂಡಲ್ 1866ರಲ್ಲಿ ಬ್ರುನ್ ಪ್ರಕೃತಿವಿಜ್ಞಾನ ಸಂಘದ ವಾರ್ಷಿಕ ವರದಿಯಲ್ಲಿ ಪ್ರತ್ಯೇಕತೆಯ ನಿಯಮ ಮತ್ತು ಸ್ವತಂತ್ರ್ಯ ವಿಂಗಡಣೆಯ ನಿಯಮ ಎಂಬ ಎರಡು ನಿಯಮಗಳನ್ನು ನಿರೂಪಿಸಿದ. ಆದರೆ ಇವು ಆಗಿನ ವಿಜ್ಞಾನಿಗಳ ಗಮನಕ್ಕೆ 1900ರ ತನಕ ಬರಲಿಲ್ಲ. ಜೀವಕೋಶಗಳ ವಿಭಜನೆ, ವರ್ಣತಂತುಗಳ ವರ್ತನೆ, ಲಿಂಗಕೋಶಗಳ ಉತ್ಪತ್ತಿ, ಗರ್ಭಾಂಕುರತೆ ಮುಂತಾದ ವಿಷಯಗಳನ್ನರಿತ್ತಿದ್ದ ಹ್ಯೂಗೊ ಡೆವ್ರೀಸ್, ಕಾರ್ಲ್ ಕೊರೆನ್ಸ್ ಮತ್ತು ಷೆರ್ಮಾಕ್ ಎಂಬುವರು ಮೆಂಡಲ್ ನಿರೂಪಿಸಿದ್ದಂತೆ, ಏಕ, ದ್ವಿ ಮತ್ತು ತ್ರಿಗುಣ ಅಡ್ಡತಳಿಗಳ ಮೊದಲ ಪೀಳಿಗೆಯ ಸಂತಾನಗಳಲ್ಲಿ ವಿವಿಧ ಗುಣಗಳು ಅನುಕ್ರಮವಾಗಿ 3:1, 9:3:3:1 ಮತ್ತು 27:9: 9: 9:3 : 3:3:1 ರ ಅನುಪಾತದಲ್ಲಿ ಬೇರ್ಪಡುವುದನ್ನು ಪ್ರತ್ಯೇಕವಾಗಿ ಮನಗಂಡರು. ಆನಂತರ ಈ ಮೂರು ಜನರೂ ಮೆಂಡಲನ ನಿಯಮಗಳನ್ನು ಪತ್ತೆಹಚ್ಚಿ ಅದಕ್ಕೆ ಮಾನ್ಯತೆ ಸಿಕ್ಕುವಂತೆ ಮಾಡಿದರು.

ಹೀಗೆ 1900ರಲ್ಲಿ ಮೆಂಡಲನ ತಳಿವಿಜ್ಞಾನದ ಮೂಲತತ್ತ್ವಗಳು ಮರುಪ್ರಕಟವಾದ ಮೇಲೆ ದೇಶವಿದೇಶಗಳಲ್ಲಿ ತಳೀಕರಣ ಪ್ರಯೋಗ ಚುರುಕುಗೊಂಡಿತು. 1902ರಲ್ಲಿ ಸಟನ್ನನು ಆನುವಂಶೀಯತೆಗು ಕ್ರೋಮೋಸೋಮುಗಳು ಕೋಶವಿಭಜನೆಯಲ್ಲಿ ವಿತರಣೆಯಾಗುವ ವಿಧಾನಕ್ಕೂ ಸಂಬಂಧವಿದೆಯೆಂದು ಕಂಡುಹಿಡಿದ. ಆಗಸ್ಟ್ ವೈಸ್‌ಮ್ಯಾನ್, ತೀಯೊಡೋರ್ ಬೋವರಿ ಮತ್ತು ಎಡ್ಮಂಡ್ ಟಿ. ವಿಲ್ಸನರು ಆನುವಂಶೀಯತೆಯ ಕ್ರೋಮೋಸೋಮ್ ಸಿದ್ಧಾಂತವನ್ನು ಮುಂದಿಟ್ಟರು. 1905ರಲ್ಲಿ ಮೆಂಡಲೀಯ ಘಟಕಗಳಿಗೆ "ಜೀನ್" ಅಥವಾ "ವಂಶವಾಹಿ" ಎಂದು ವಿಲ್‌ಹೆಲ್ಮ್ ಯೊಹಾನ್‌ಸನ್ ಪುನರ್ನಾಮಕರಣ ಮಾಡಿದ. ಮೆಂಡಲನ ಸಿದ್ಧಾಂತಗಳು ಜನಪ್ರಿಯವಾದಂತೆ, ಥಾಮಸ್ ಹಂಟ್ ಮಾರ್ಗನ್ ಮತ್ತು ಅವನ ಅನುಯಾಯಿಗಳಾದ ಸ್ಟರ್ಟವಾಂಟ್, ಮುಲ್ಲರ್, ಬ್ರಿಡ್ಜ್ಸ್ ಮುಂತಾದವರು ಡ್ರೋಸಾಫಿಲ ಎಂಬ ಕೀಟದಲ್ಲಿ ತಳಿಮಿಶ್ರಣ ಪ್ರಯೋಗ ನಡೆಸಿ ನೂರಾರು ವ್ಯತ್ಯಯ ಲಕ್ಷಣಗಳನ್ನು ಗುರುತಿಸಿದ್ದಲ್ಲದೆ, ಜೀನ್‌ಗಳು ಸಂಲಗ್ನ (ಲಿಂಕೇಜ್) ಗುಂಪುಗಳಲ್ಲಿರುವುವೆಂದೂ ಈ ಕೀಟದಲ್ಲಿ ನಾಲ್ಕು ಸಂಲಗ್ನ ಗುಂಪುಗಳಿವೆಯೆಂದೂ ತೋರಿಸಿಕೊಟ್ಟರು. 1910ರಲ್ಲಿ ಲಿಂಗಸಂಲಗ್ನತೆಯನ್ನೂ (ಸೆಕ್ಸ್ ಲಿಂಕೇಜ್) ಅಭ್ಯಸಿಸಿದರು. ಜೀನ್‌ಗಳು ಸರದಲ್ಲಿನ ಮಣಿಗಳಂತೆ ಜೋಡಣೆಗೊಂಡಿದ್ದರೂ ವರ್ಣತಂತುಗಳಲ್ಲಿ ಆಗಾಗ್ಗೆ ಆಗುವ ಅಡ್ಡಹಾಯ್ಕೆ ಮತ್ತು

ಪರಸ್ಪರ ವಿನಿಮಯಗಳಿಂದಾಗಿ ಜೀನ್‌ಗಳ ಮರುಜೋಡಣೆ, ಲೋಪ, ದ್ವಿಪ್ರತೀಕರಣ, ಉತ್ಕ್ರಮಣ ಮತ್ತು ಸ್ಥಾನಾಂತರಣವಾಗುವುವು.

ಡೆ ವ್ರೀಸನ ಒಂದು ಜೀನ್ ಒಂದು ಗುಣ–ಎಂಬ ಸಿದ್ಧಾಂತವೂ ಬೇಟ್ಸನ್ ಮತ್ತು ಪನೆಟ್ಟರ ಜೀನ್ ಉಪಾನುಪಸ್ಥಿತಿ ವಾದವೂ ಆನುವಂಶೀಯತೆಯ ಅರಿವಿಗಾಗಿ ಪ್ರತಿಪಾದಿತವಾದರು ಕಾಲಕ್ರಮೇಣ ತ್ಯಜಿಸಲ್ಪಟ್ಟವು. 1933 ರಲ್ಲಿ ಗೋವೆನ್ ಮತ್ತ ಗೇ ಎಂಬಿಬ್ಬರು ಡ್ರೋಸಾಫಿಲ ನೊಣದ ನಾಲ್ಕು ಜೊತೆ ವರ್ಣತಂತುಗಳಲ್ಲಿ ಸುಮಾರು 1500 ಜೀನ್‌ಗಳಿರಬಹುದೆಂದು ಪ್ರತಿಯೊಂದು ಜೀನ್‌ನ ಸರಾಸರಿ ಗಾತ್ರ $1 \times 10^{-18}$ ಸೆಂಮೀ ಎಂದೂ ಊಹಿಸಿದರು.

ಒಂದು ಜೀನ್–ಒಂದು ಕಿಣ್ವ, ಆನಂತರ ಒಂದು ಜೀನ್–ಒಂದು ಕಾರ್ಯ ಎಂಬ ವಾದಗಳನ್ನು ನಿರೂಪಿಸಿದ ಬೀಡ್ಲ್ ಮತ್ತು ಟ್ಯಾಟಮ್ ಎಂಬುವರು ನ್ಯೂರಾಸ್ಪೋರವೆಂಬ ಬೂಷ್ಟಿನಲ್ಲಿ ಜೀನ್‌ಗೂ ಕಿಣ್ವಕ್ಕೂ, ಸಂಕೀರ್ಣ ರಾಸಾಯನಿಕ ಕ್ರಿಯೆಗೂ ಇರುವ ಪರಸ್ಪರ ಸಂಬಂಧವನ್ನು ವಿಶ್ಲೇಷಿಸಿದರು. ಜೀನ್‌ನ ಜಟಿಲ ಸಮಸ್ಯೆಯನ್ನು ಬಿಡಿಸಲೆತ್ನಿಸಿದ ಡಾಬ್ಜಾನ್‌ಸ್ಕಿ, ಸ್ಥಾನ ಪ್ರಭಾವದ ದತ್ತಾಂಶ ಮತ್ತು ಕಣಾತ್ಮಕ ವಾದಗಳೆರಡೂ ಜೀನ್‌ನ ಕ್ರಿಯಾಶೀಲತೆಯ ಮೇಲ್ಮಟ್ಟದಲ್ಲಿ ಸಮನ್ವಯವಾಗುವುವೆಂದು ಅಭಿಪ್ರಾಯಪಟ್ಟರೆ, ಮುಲ್ಲರನು ನಿಖರವಾದ ಎಲ್ಲೆಯಿಲ್ಲದ ವಿಶಾಲ ಕ್ರಿಯಾರಂಗವುಳ್ಳ ಕಣವೇ ಜೀನ್ ಎಂದು ಸೂಚಿಸಿದ್ದಾನೆ. ಆದರೆ ರಿಚರ್ಡ್ ಗೋಲ್ಡ್‌ಷ್ಮಿಟ್ಟನ ಪ್ರಕಾರ ಜೀನ್ ಪ್ರತ್ಯೇಕ ಕಣವಾಗಿದೆ. ದೇಹದ ಎಲ್ಲ ಕೋಶಗಳಲ್ಲಿರುವ ಒಂದೇ ಬಗೆಯ ಜೀನ್ ಒಂದು ಗೊತ್ತಾದ ಕಾಲ ಮತ್ತು ಪ್ರದೇಶದಲ್ಲಿ ಒಂದು ನಿರ್ದಿಷ್ಟ ಕ್ರಿಯೆಯನ್ನು ಹೇಗೆ ನಿಯಂತ್ರಿಸುತ್ತದೆ ಎನ್ನುವುದನ್ನು ಜೇಕಬ್ ಮತ್ತು ಮೊನಡ್ ವಿಶ್ಲೇಷಿಸಿದ ಮೇಲೆ (1961) ಒಂದು ಜೀನ್–ಒಂದು ಕಿಣ್ವವೆಂಬ ವಾದ ಆಧುನಿಕ ದೃಷ್ಟಿಯಲ್ಲಿ ಒಂದು ರಾಚನಿಕ ಜೀನ್‌ನಿಂದ ಒಂದು ದೂತ ಆರ್ ಎನ್ ಎ ತನ್ಮೂಲಕ ಒಂದು ಪಾಲಿಪೆಪ್ಟೈಡ್ ಎಂದಾಗಿದೆ.

ನ್ಯೂಮೋಕಾಕಸ್ ಬ್ಯಾಕ್ಟೀರಿಯಗಳಲ್ಲಿ ಗ್ರಿಫಿತ್ ನಡೆಸಿದ ಪ್ರಯೋಗಗಳಿಂದ (1928) ಪ್ರಭಾವಿತರಾದ ಆವೇರಿ, ಮೆಕ್ಲಿಯಾಡ್ ಮತ್ತು ಮೆಕಾರ್ಟಿಯವರು ಜೀನ್‌ಗಿರುವ ಸ್ವಯಂ ದ್ವಿಪ್ರತೀಕರಣ ಸಾಮರ್ಥ್ಯ ಮತ್ತು ವಿಶಿಷ್ಟಕಾರ್ಯ ನಿರ್ದೇಶನ ಸಾಮರ್ಥ್ಯವನ್ನು ಗುರುತಿಸಿದ್ದಲ್ಲದೆ ಜೀನ್ ಡೀ ಆಕ್ಸಿರೈಬೋನ್ಯೂಕ್ಲಿಯಿಕ್ ಆಮ್ಲ (ಡಿಎನ್‌ಎ) ದಿಂದ ರಚಿತವಾಗಿದೆಯೆಂದು ನಿಷ್ಕರ್ಷಿಸಿದರು. ಹರ್ಷೆ ಮತ್ತು ಚೇಸ್ ಎಂಬಿಬ್ಬರು ವೈರಸ್ ಮತ್ತು ಬ್ಯಾಕ್ಟೀರಿಯಗಳ ಮೇಲೆ ನಡೆಸಿದ (1952) ಸಂಶೋಧನೆಯಿಂದಾಗಿ ಜೀನ್ ಡಿಎನ್‌ಎಯಿಂದ ರಚಿತವಾಗಿದೆಯೆಂಬ ಭಾವನೆ ಸರಿಯೆಂದು ಕಂಡುಬಂತು.

(d) ಜೀವಿಗಳಿಗಿರುವ ಅಂತರಸಂಬಂಧ : ಪ್ರತಿಯೊಂದು ಜೀವಿಯೂ ನಿರ್ದಿಷ್ಟವಾದ ಒಂದು ಪರಿಸರದಲ್ಲಿ ಜೀವಿಸುತ್ತದೆ. ಒಂದು ಪರಿಸರದಿಂದ ಮತ್ತೊಂದು ಪರಿಸರಕ್ಕೆ ಹೋದರೆ ಜೀವಿಯ ಬದುಕು ಕಷ್ಟವಾಗುತ್ತದೆ. ಅಂದರೆ ಜೀವಿಯ ಅಳಿವು–ಉಳಿವುಗಳು ಪರಿಸರವನ್ನು ಅವಲಂಬಿಸಿವೆ. ಪರಿಸರಕ್ಕೂ ಜೀವಿಗೂ ಇರುವ ಪರಸ್ಪರ ಸಂಬಂಧವನ್ನು ಅಭ್ಯಸಿಸುವ ಪರಿಸರವಿಜ್ಞಾನದಿಂದ ಜೀವಿಗಳ ಅಂತರಸಂಬಂಧವನ್ನು ತಿಳಿಯಬಹುದು. 19ನೆಯ ಶತಮಾನದ ಆದಿಯಲ್ಲಿ ಹಂಬೋಲ್ಟ್ ಎಂಬಾತ ಸಸ್ಯ ಪರಿಸರವಿಜ್ಞಾನಕ್ಕೂ ಮೋಬಿಯಸ್ ಎಂಬಾತ ಪ್ರಾಣಿ ಪರಿಸರವಿಜ್ಞಾನಕ್ಕೂ ಅಸ್ತಿಭಾರ ಹಾಕಿದರು. ಮೂಲ ಚೈತನ್ಯ ಎಲ್ಲ ಬಗೆಯ ಜೀವಿಗಳಿಗೂ ಒಂದೇ. ಆದರೆ ಅದು ಅಭಿವ್ಯಕ್ತವಾಗುವ ಬಗೆ ಬೇರೆ ಬೇರೆ. ಇದರಲ್ಲಿ ಪರಿಸರದ ಪ್ರಭಾವ ಸಾಕಷ್ಟಿದೆ. ಆಹಾರಕ್ಕಾಗಿ, ವಸತಿಗಾಗಿ, ಸಂತಾನಕ್ಕಾಗಿ, ರಕ್ಷಣೆಗಾಗಿ ಜೀವಿಗಳ ನಡುವ ಸತತ ಸ್ಪರ್ಧೆಯಿರುತ್ತದೆ. ಒಂದು ಜೀವಿ ಒಂದು ನಿರ್ದಿಷ್ಟ ಸ್ಥಳದ ನಿವಾಸಿ. (ಇಲ್ಲಿ ನಿವಾಸಿ ಎಂಬ ಪದ ಆ ಜೀವಿ ಬದುಕಿರುವ ಪರಿಸರದ ಬಲಗಳಿಗೆ, ನಿಯಮಗಳಿಗೆ ಅನ್ವಯಿಸುತ್ತದೆ.). ಆದ್ದರಿಂದ ಪರಿಸರದಲ್ಲಾಗುವ ಉಷ್ಣತೆಯ ವ್ಯತ್ಯಾಸ, ನೀರಿನ ಲವಣಾಂಶದ ಏರಿಳಿತ, ಹವಾಗುಣದ ವೈಪರೀತ್ಯ, ಸಿಡಿಲು, ಮಳೆ, ಬೆಳಕು, ಭೂಕಂಪಗಳೇ ಮೊದಲಾದ ಭೌತ ಬದಲಾವಣೆಗಳು ಪರಿಸರದ ಸ್ವರೂಪವನ್ನೇ ಕೆಡಿಸುತ್ತವೆ. ಈ ಬದಲಾವಣೆಗನುಗುಣವಾಗಿ, ತಮ್ಮ ಜೀವನದ ಧಾಟಿಯನ್ನೇ ಬದಲಿಸಿ, ಹೊಂದಿಕೊಂಡರೆ ಮಾತ್ರ ಜೀವಿಗಳು ಉಳಿಯಬಲ್ಲವು.

ಒಂದು ಬಗೆಯ ಜೀವಿಯ ಬೆಳವಣಿಗೆ ಬಹುಮಟ್ಟಿಗೆ ಅದಕ್ಕೆ ದೊರೆಯುವ ಆಹಾರವನ್ನು ಅವಲಂಬಿಸಿದೆ. ಪ್ರತಿಯೊಂದು ಸಮಾಜದಲ್ಲೂ ಮಿಶ್ರ ಆಹಾರದ ಒಂದು ಜಾಲವುಂಟು. ಈ ಜಾಲ ಎಲ್ಲ ಜೀವರಾಶಿಗಳನ್ನೂ ಆವರಿಸಿದೆ. ಹರಿತ್ತು ಇಲ್ಲದ ಗಿಡಗಳು ಮತ್ತು ಪ್ರಾಣಿಗಳು ತಮ್ಮ ಆಹಾರವನ್ನು ತಯಾರಿಸಿಕೊಳ್ಳಲಾರವು. ಇದರಿಂದ ಹಸಿರು ಸಸ್ಯಗಳನ್ನು ಉತ್ಪಾದಕಗಳೆಂದೂ ಮತ್ತು ಪ್ರಾಣಿಗಳನ್ನು ಬಳಕೆದಾರಗಳೆಂದೂ ಗಣಿಸಬಹುದು. ಬಳಕೆದಾರಗಳಲ್ಲಿ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಬಳಕೆದಾರಗಳೆಂಬ ಮೂರು ಬಗೆಗಳುಂಟು. ಪ್ರಾಥಮಿಕ ಬಳಕೆದಾರರುಗಳಾದ ಇಲಿ, ಮೊಲ, ಜಿಂಕೆ ಮುಂತಾದುವು ನೇರವಾಗಿ ಸಸ್ಯಗಳನ್ನು ತಿಂದು ಜೀವಿಸುತ್ತವೆ. ದ್ವಿತೀಯ ಬಳಕೆದಾರಗಳಾದ ಹಾವು, ಬೆಕ್ಕು, ಹುಲಿ ಮುಂತಾದುವುಗಳು ಪ್ರಥಮ ಬಳಕೆದಾರರುಗಳನ್ನು ಅವಲಂಬಿಸಿವೆ. ತೃತೀಯ ಬಳಕೆದಾರಗಳು, ದ್ವಿತೀಯ ಬಳಕೆದಾರಗಳನ್ನು ತಿಂದು ಬದುಕುತ್ತವೆ. ಉದಾಹರಣೆಗೆ ರಣಹದ್ದು ಇತ್ಯಾದಿ. ಉತ್ಪಾದಕಗಳಾದ ಸಸ್ಯಗಳಿಲ್ಲದಿದ್ದರೆ ಪ್ರಾಥಮಿಕ ಬಳಕೆದಾರಗಳು ಬದುಕುವುದು ಸಾಧ್ಯವಿಲ್ಲ. ಇವೆರಡು ಬಗೆಗಳು ಇಲ್ಲದಿದ್ದಲ್ಲಿ ದ್ವಿತೀಯ ಬಳಕೆದಾರಗಳು ನಾಶವಾಗುತ್ತವೆ. ಇವು ಇಲ್ಲದಿದ್ದರೆ ತೃತೀಯ ಬಳಕೆದಾರಗಳು ನಿರ್ನಾಮವಾಗುತ್ತವೆ. ಆಹಾರ ಜಾಲದತ್ತ ನಮ್ಮ ಗಮನವನ್ನು ಮೊದಲು ಸೆಳೆದವ ಚಾರ್ಲ್ಸ್ ಡಾರ್ವಿನ್.

ಪ್ರತಿಯೊಂದು ಜೀವಸಮುದಾಯಕ್ಕೂ ಆಂತರಿಕ ಸಂಬಂಧಗಳ ಸಮಸ್ಯೆ ಇದೆ. ಯಾವುದೇ ನೈಸರ್ಗಿಕ ಜೀವಸಮುದಾಯದಲ್ಲಿ ಪ್ರಾಣಿಗಳೂ ಸಸ್ಯಗಳೂ ಸಮತೋಲನೆಯಲ್ಲಿರುತ್ತವೆ. ಯಾವುದೇ ಒಂದು ಗುಂಪಿನ ಹೆಚ್ಚಳವನ್ನು ನಿಸರ್ಗ ವಿರೋಧಿಸುತ್ತದೆ. ಈ ವಿರೋಧ ದಾಳಿಕೋರರ ಸಂಖ್ಯೆಯ ಬೆಳವಣಿಗೆಯಿಂದ, ಆಹಾರದ ಅಭಾವದಿಂದ ಅಥವಾ ರೋಗಗಳಿಂದ ಉಂಟಾಗಬಹುದು. ವಿವಿಧ ಜೀವಿಗಳ ಸಂಖ್ಯೆ ಪರಿಸರದ ಧಾರಣಶಕ್ತಿಯ ಅಂತರದಲ್ಲಿಯೇ ಇರುತ್ತದೆ. ಆದರೆ ಮಾನವನ ಕೈವಾಡದಿಂದ ಈ ನೈಸರ್ಗಿಕ ಸಮತೋಲ ಅನೇಕ ವೇಳೆ ತಲೆಕೆಳಗಾಗಿ, ಹೊಸ ಸಮತೋಲ ಉಂಟಾಗಬಹುದು. ಆಗ ಒಟ್ಟು ಜೀವಿ ಸಮುದಾಯ ವ್ಯವಸ್ಥೆಯೇ ಬುಡಮೇಲಾಗುವ ಸಂದರ್ಭವುಂಟು. ಒಂದೇ ಬಗೆಯ ಜೀವಿಗಳಿಂದ ಹುಟ್ಟುವ ಎಲ್ಲ ಸಂತಾನಕ್ಕೂ ನಿಸರ್ಗದಲ್ಲಿ ಸ್ಥಳವಿಲ್ಲ. ಇದರಿಂದಾಗಿ ಒಂದೇ ಬಗೆಯ ಸೌಲಭ್ಯಕ್ಕಾಗಿ ಅವುಗಳಲ್ಲೇ ಸ್ಪರ್ಧೆ ಉಂಟಾಗುತ್ತದೆ. ಈ ಹೋರಾಟದಲ್ಲಿ ಯಶಸ್ವಿಗಳಾಗುವ ಜೀವಿಗಳು ಬೆಳೆದು ನಿಸರ್ಗ ನಿಯಮಿತ ಸಮತೋಲನದ ಸೀಮಾರೇಖೆಯನ್ನು ಮುಟ್ಟುತ್ತವೆ. ಒಮ್ಮೆ ತುಟ್ಟತುದಿಯನ್ನು ಮುಟ್ಟಿದ ಜೀವಿಸಂಖ್ಯೆ ಅಲ್ಲಿಯೇ ಸ್ಥಿರವಾಗಿರಬೇಕೆಂಬ ನಿಯಮವಿಲ್ಲ. ವರ್ಷದಿಂದ ವರ್ಷಕ್ಕೆ ಋತುವಿನಿಂದ ಋತುವಿಗೆ ವ್ಯತ್ಯಾಸವಾಗಬಹುದು; ಕೆಲವೊಮ್ಮೆ ಸಂಪೂರ್ಣವಾಗಿ ನಾಶವಾಗುವುದೂ ಉಂಟು. ಸಾಮಾನ್ಯವಾಗಿ, ಜೀವಿಸಂಖ್ಯೆ ಒಂದು ನಿರ್ದಿಷ್ಟ ಚಕ್ರಗತಿಯಲ್ಲಿ ಏರಿಳಿಯುತ್ತದೆ. ಉದಾಹರಣೆಗೆ ಕೆನಡದ ಹಡ್ಸನ್ ಕೊಲ್ಲಿಯಲ್ಲಿ ಮೊಲಗಳ ಸಂಖ್ಯೆ 9 ಅಥವಾ 10 ವರ್ಷಗಳ ಅಂತರದಲ್ಲಿ ಸಮತೋಲದ ಪರಮಾವಧಿಯನ್ನು ಮುಟ್ಟುತ್ತದೆ. ಅಂತೆಯೇ ಮೊಲವನ್ನೇ ಅವಲಂಬಿಸಿರುವ ಕೆನಡದ ಕಿರುಬಗಳು 9.7 ವರ್ಷದಲ್ಲಿ ಈ ಸಮತೋಲ ಚಕ್ರವನ್ನು ಪೂರೈಸುವುದೂ ಗಮನಕ್ಕೆ ಬಂದಿವೆ. ಇದೇ ರೀತಿಯ ಚಕ್ರಗಳು ಇಲಿ, ಲೆಮಿಂಗ್, ತೋಳ ಮತ್ತು ಕೆಲವು ಪಕ್ಷಿಗಳಲ್ಲೂ ಕಂಡುಬಂದಿವೆ. ಈ ನೈಸರ್ಗಿಕ ಚಕ್ರವನ್ನು ಭಂಗಗೊಳಿಸುವುದರಿಂದ ಆಗುವ ದುಷ್ಪರಿಣಾಮವನ್ನು ಆರಿಜೋನದ ಕೈಬಾಬ್ ಹುಲ್ಲುಗಾವಲಿನಲ್ಲಿ ಈ ಶತಮಾನದ ಆದಿಯಲ್ಲಿ ವಾಸಿಸುತ್ತಿದ್ದ ಜಿಂಕೆಗಳ ವಿಧಿಯಿಂದ ತಿಳಿಯಬಹುದು. ಜಿಂಕೆಯ ಸಂಖ್ಯೆ ಹೆಚ್ಚಿಸಲು 1905ರಲ್ಲಿ ಮಾಂಸಾಹಾರಿಗಳಾದ ತೋಳ, ಪ್ಯೂಮ ಮತ್ತು ಕಯೋಟ್‌ಗಳನ್ನು ಕೊಲ್ಲುವ ಯತ್ನ ತೀವ್ರಗತಿಯಲ್ಲಿ ನಡೆದದ್ದರಿಂದ ನೈಸರ್ಗಿಕ ಸಮತೋಲ ರೇಖೆಯನ್ನು ಮುಟ್ಟಿದ್ದ ಜಿಂಕೆಗಳ ಸಂಖ್ಯೆ 4,000 ರಿಂದ 40,000 ಕ್ಕೆ ಏರಿತು. 1920ರಲ್ಲಿ ಈ ಸಂಖ್ಯೆ 60,000 ಕ್ಕೆ ಏರಿದಾಗ ಹಸಿವಿನಿಂದ 6% ರಷ್ಟು ಜಿಂಕೆಗಳು ಸತ್ತುಹೋದುವು. 1925ರಲ್ಲಿ 40,000 ಕ್ಕೆ ಇಳಿದ ಈ ಸಂಖ್ಯೆ 1939ರಲ್ಲಿ 10,000 ಕ್ಕೆ ಬಂದು ನಿಂತಿತು. ಆದರೆ ಅಷ್ಟರಲ್ಲಿ ಇಡೀ ಕಾಡೇ ಜಿಂಕೆಗಳ ಹಸಿವಿಗೆ ಈಡಾಗಿ ನಿರ್ನಾಮವಾಗಿತ್ತು.

ಒಂದು ಪ್ರದೇಶಕ್ಕೆ ಹೊಸ ಜೀವಜಾತಿಯನ್ನು ಸೇರಿಸುವುದು, ಕೆಲವು ಜೀವಿಗಳನ್ನು ಅಲ್ಲಿಂದ ತೆಗೆಯುವಷ್ಟೇ ಕೆಟ್ಟ ಪರಿಣಾಮ ಬೀರುತ್ತದೆ. 1800ರ ಸುಮಾರಿನಲ್ಲಿ ಬೇಟೆಯ ಷೋಕಿಗಾಗಿ ಕೇವಲ ಐದು ಮೊಲಗಳನ್ನು ಆಸ್ಟ್ರೇಲಿಯಕ್ಕೆ ಕೊಂಡೊಯ್ಯಲಾಯಿತು. ಅದರೆ ಅಲ್ಲಿ ಇವಕ್ಕೆ ಯಾವ ಶತ್ರುಭಯವೂ ಇಲ್ಲದಿದ್ದುದರಿಂದ ಇವು ಅಡೆತಡೆಯಿಲ್ಲದೆ ಅತಿವೇಗವಾಗಿ ವೃದ್ಧಿಗೊಂಡು ದೇಶವನ್ನೆಲ್ಲ ಆಕ್ರಮಿಸಿದುವು. 1820ರ ವೇಳೆಗೆ ದೇಶದ ಸಸ್ಯಸಂಪತ್ತನ್ನೆಲ್ಲ ಇವು ನಾಶಮಾಡಿದ್ದಲ್ಲದೆ, ಅಲ್ಲಿದ್ದ ಕುರಿಗಳಿಗೆ ಕಂಟಕಪ್ರಾಯವಾದುವು. ಇದೇ ರೀತಿ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಕೊಂಡೊಯ್ಯಲಾದ ಗುಬ್ಬಚ್ಚಿ, ಯೂರೋಪಿಗೆ ತರಲಾದ ಜಿಪ್ಸಿ ಪತಂಗ ಮುಂತಾದ ಜೀವಿಗಳು ಆದಿಯಲ್ಲಿ ಪಿಡುಗಾಗಿ ಪರಿಣಮಿಸಿ, ಈಗ ಸಮತೋಲನವನ್ನು ಪಡೆದಿವೆ. ಆದ್ದರಿಂದ, ಪರಿಸರದ ನೈಸರ್ಗಿಕ ಸೂತ್ರಗಳ ಬೆಳಕಿನಲ್ಲಿ ನೆಲ, ಜಲ ಮತ್ತು ಕಡಲನ್ನು ಬುದ್ಧಿವಂತಿಕೆಯಿಂದ ಉಪಯೋಗಿಸುವುದನ್ನು ಕಲಿತರೆ, ನೈಸರ್ಗಿಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಬಹುದಲ್ಲದೆ ಮುಂಬರುವ ಪೀಳಿಗೆಯ ಸುಖಮಯ ಜೀವನಕ್ಕೆ ಅವಕಾಶಮಾಡಿಕೊಡಬಹುದು.

(e) ಜೀವಿಗಳ ವರ್ಗೀಕರಣ : ಜೀವಿಗಳನ್ನು ಪ್ರಥಮ ಬಾರಿಗೆ ಮೂರು ಗುಂಪುಗಳಾಗಿ ವರ್ಗೀಕರಿಸಿದ ಕೀರ್ತಿ ಅರಿಸ್ಟಾಟಲನದು. ಸ್ಥಾವರವಾದವನ್ನು ಸಸ್ಯಗಳೆಂದೂ, ಚಲಿಸುವುವನ್ನು ಪ್ರಾಣಿಗಳೆಂದೂ, ಮಾತಾಡುವ ಜೀವಿಗಳನ್ನು ಮನುಷ್ಯರೆಂದೂ ವಿಭಾಗಿಸಿದ್ದಲ್ಲದೆ,

ಪ್ರಾಣಿಗಳನ್ನು ರಕ್ತರಹಿತವಾದುವು ಮತ್ತು ರಕ್ತವುಳ್ಳವು ಎಂಬ ಎರಡು ಉಪವರ್ಗಗಳಾಗಿ ವಿಂಗಡಿಸಿದ. ಆದರೆ ಈ ಬಗೆಯ ವರ್ಗೀಕರಣದಿಂದ ಉದಿಸುವ ತಪ್ಪುಕಲ್ಪನೆಯನ್ನರಿತ ಲಿನಿಯಸ್ ದ್ವಿನಾಮ ನಾಮಕರಣ ಪದ್ಧತಿಯನ್ನು ಜಾರಿಗೆ ತಂದ. ಇದರ ಪ್ರಕಾರ ವೈಜ್ಞಾನಿಕ ರೀತ್ಯ ಪ್ರತಿಯೊಂದು ಜೀವಿಗೆ ಅದರ ಜಾತಿ ಮತ್ತು ಪ್ರಭೇದಗಳೆರಡನ್ನೂ ನಿರ್ದೇಶಿಸುವ ಹೆಸರು ಸೂಚಿಸುವುದು ರೂಢಿಯಾಯಿತು. 1898ರಲ್ಲಿ ಸಮಾವೇಶಗೊಂಡ ಜೀವವಿಜ್ಞಾನಿಗಳ ಸಭೆಯಲ್ಲಿ ಲಿನಿಯಸ್‌ನ ಪದ್ಧತಿಯನ್ನು ತಳಹದಿಯಾಗಿಟ್ಟುಕೊಂಡು ಇನ್ನಷ್ಟು ವಿಶದವಾದ ಒಂದು ಕ್ರಮವನ್ನು ಅನುಸರಿಸಲಾಯಿತು. ಜೀವಿಗಳಲ್ಲಿ ಹೊರರೂಪ, ಅಂಗರಚನಾವಿನ್ಯಾಸ ಇತ್ಯಾದಿಗಳಲ್ಲಿ ಒಂದಕ್ಕೊಂದು ಹೋಲುವ ಮತ್ತು ಗುಣವಿಶೇಷಗಳು ಆನುವಂಶೀಯವಾಗಿ ಪೀಳಿಗೆಗಳಲ್ಲಿ ಹರಿದು ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬಲ್ಲ ಜೀವಿಗಳೆಲ್ಲವನ್ನೂ ಪ್ರಭೇದಗಳೆಂದೂ, ಒಂದಕ್ಕೊಂದು ಹೆಚ್ಚು ಹೋಲುವ ಪ್ರಭೇದಗಳನ್ನು ಒಟ್ಟುಗೂಡಿಸಿ ಜಾತಿಗಳೆಂದೂ ಸಾಮಾನ್ಯ ಲಕ್ಷಣಗಳಲ್ಲಿ ಹೆಚ್ಚು ಸಾಮ್ಯವಿರುವ ಹಲವು ಜಾತಿಗಳ ಗುಂಪಿಗೆ ಕುಟುಂಬಗಳೆಂದೂ ಹೆಸರು ಕೊಡಲಾಗಿದೆ. ಅನೇಕ ಕುಟುಂಬಗಳ ಗುಂಪಿಗೆ ಉಪವರ್ಗವೆಂದು, ಉಪವರ್ಗಗಳ ಒಕ್ಕೂಟಕ್ಕೆ ವರ್ಗವೆಂದೂ, ವರ್ಗಗಳ ಸಮೂಹಕ್ಕೆ ವಂಶವೆಂದೂ ಸೂಚಿಸಲಾಗಿದೆ. ಇಷ್ಟೇ ಅಲ್ಲದೆ, ಪ್ರತಿಯೊಂದು ವರ್ಗ, ಉಪವರ್ಗವನ್ನೂ ಅನೇಕ ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಈ ವಿಧಾನದಿಂದ ಸುಮಾರು 10 ಲಕ್ಷಕ್ಕೂ ಮಿಗಿಲಾದ ಪ್ರಾಣಿಗಳನ್ನೂ 3 ಲಕ್ಷಕ್ಕೂ ಹೆಚ್ಚಾದ ಸಸ್ಯಗಳನ್ನೂ ಗುರುತಿಸಲಾಗಿದೆ. ಆದರೂ ವಿಶ್ವದಾದ್ಯಂತ ನಡೆಯುತ್ತಿರುವ ಸಂಶೋಧನೆಯಿಂದಾಗಿ ಜೀವಿಗಳ ಬಗೆಗೆ ಜ್ಞಾನ ದಿನೇ ದಿನೇ ಬೆಳೆಯುತ್ತಿದೆ. ಮಾನವನ ಅನ್ವೇಷಣೆಗೆ ನಿಲುಕದಂಥ ಪರಿಸರದಲ್ಲಿ ಇನ್ನೂ ಅನೇಕ ಜೀವಿಗಳು ಇರಬಹುದು. ಪಕ್ಷಿಗಳ ವರ್ಗೀಕರಣ ಪೂರ್ತಿಯಾಗಿದ್ದರು 1936ರವರೆಗೆ ಆಫ್ರಿಕದ ಆಫ್ರೊಪ್ಯಾವೊ ಕೋಂಜನ್ಸಿಸ್ ಎಂಬ ಹಕ್ಕಿಯ ಪತ್ತೆಯಾಗಿರಲಿಲ್ಲ. ಅಂತೆಯೇ ಇತ್ತೀಚೆಗೆ 1953ರಲ್ಲಿ ಸ್ಯಾಂಡರ್ ಎಂಬಾತ ಕಡಲವಾಸಿ ಕಠಿಣಚರ್ಮಿಗಳ ಒಂದು ಗುಂಪನ್ನೇ ಗುರುತಿಸಿದ. ದಕ್ಷಿಣ ಆಫ್ರಿಕದಲ್ಲಿ ದೊರಕಿದ ಲ್ಯಾಟಿಮೇರಿಯ ಚಾಲುಮ್ನಯೀ ಎಂಬ ಜೀವಿ 20ನೆಯ ಶತಮಾನದಲ್ಲಿ ಪತ್ತೆಯಾದ ಜೀವಿಗಳಲ್ಲೆಲ್ಲ ಪ್ರಮುಖವಾದದ್ದು. ಕೊಡ್ಲೊವಸ್ಕಿ ಗುರುತಿಸಿದ ಗ್ರಾಪ್ಟೊಲೈಟ್ ಫಾಸಿಲ್ ಕೂಡ ಇತ್ತೀಚಿನ ಕೊಡುಗೆ. 2001 ರಲ್ಲಿ ಪಶ್ಚಿಮ ಘಟ್ಟ ಕಾಡುಗಳಲ್ಲಿ ಹೊಸದೊಂದು ಮರಗಪ್ಪೆಯ ಜಾತಿಯನ್ನು ಪತ್ತೆ ಹಚ್ಚಲಾಯಿತು. 2006 ಜನವರಿಯಲ್ಲಿ ಇಂಡೋನೇಶಿಯದಲ್ಲಿ ಇದುವರೆಗೂ ದಾಖಲಾಗದ ಸಕಲ ಜಾತಿಯ ಪ್ರಾಣಿಗಳಿರುವ ಹೊಸ ಕಾಡೊಂದರ ಪತ್ತೆಯಾಗಿದೆ.

(f) ವಿಕಾಸದ ದಿಗ್ದರ್ಶನ : ಮೊಗ್ಗು ಅರಳಿ, ಕ್ರಮೇಣ ಎಲೆ, ಕಾಂಡ, ಹೂ, ಕಾಯಿ, ಹಣ್ಣು ಮೊದಲಾದುವು ರೂಪುಗೊಳ್ಳುವಂತೆ ಜೀವಿಗಳು ಅತ್ಯಂತ ಸಾವಕಾಶವಾಗಿ ರಚನೆಯಲ್ಲಿ ಕಾಲಕ್ರಮೇಣ ಬದಲಾವಣೆಗೊಳಗಾಗಿ ಇಂದಿನ ಜೀವರೂಪಗಳು ಕಾಣಿಸಿಕೊಂಡಿವೆಯೆಂಬ ಅಭಿಪ್ರಾಯವನ್ನು ವಿಜ್ಞಾನಿಗಳು ತಳೆದಿದ್ದಾರೆ. ಈಗಿರುವ ಜೀವಿಗಳೆಲ್ಲವೂ ಒಂದೇ ಬುಡಕಟ್ಟಿನಿಂದ ಉದ್ಭವಿಸಿ. ಪರಿಸರದ ಸ್ಥಿತಿಗತಿಗೆ ಅನುಗುಣವಾಗಿ ಪರಿವರ್ತನೆಯಾದ ರೂಪಗಳು ; ಎಲ್ಲ ಸಸ್ಯಗಳೂ ಪ್ರಾಣಿಗಳೂ ಆದಿಯಲ್ಲಿ ಒಂದೇ ಜೀವದಿಂದ ಕ್ರಮೇಣ ಹುಟ್ಟಿ, ಬೆಳೆದ ಎರಡು ಕವಲುಗಳು–ಇದು ವಿಕಾಸವಾದದ ತಿರುಳು. ಯುಗ ಯುಗಾಂತರಗಳ ಹಿಂದೆ, ಭೂಮಿಯ ಇತಿಹಾಸದ ಒಂದಾನೊಂದು ಕಾಲದಲ್ಲಿ, ಯಾವುದೋ ಒಂದು ಪ್ರಮಾಣದ ಉಷ್ಣತೆ, ಅನಿಲಗಳ ಒತ್ತಡ, ಲವಣಗಳ ಸಾಂದ್ರತೆಗಳಿಂದಾಗಿ ಮೊಟ್ಟಮೊದಲಿಗೆ ಅನುಗಾತ್ರದಲ್ಲಿ ಜೀವರಸ ಉತ್ಪತ್ತಿಯಾಯಿತೆಂಬ ನಂಬಿಕೆ ಇದೆ. ಇದು ಸಸ್ಯವೇ ಅಥವಾ ಪ್ರಾಣಿಯೇ ಎಂದು ಹೇಳಲು ಸಾಧ್ಯವಿಲ್ಲದ ಅವ್ಯಕ್ತರೂಪದಲ್ಲಿತ್ತು. ಜೀವರಸ ಜೀವದ ಎಲ್ಲ ಪ್ರಮುಖ ಗುಣಗಳನ್ನು ತೋರಿದಾಗ ಪ್ರಪ್ರಥಮ ಜೀವಿ ರೂಪುಗೊಂಡಿತು. ಕಾಲಗತಿಸಿದಂತೆ, ಈ ಆದಿಜೀವಿ ಸಸ್ಯವಾಗಿ, ಅನಂತರ ಪ್ರಾಣಿಯಾಗಿ ವಿಕಾಸವಾಯಿತೆಂಬ ಊಹೆಯಿದೆ. ಕೋಶಗಳು ರೂಪುಗೊಂಡ ಬಳಿಕ ಏಕಕೋಶ ಜೀವಿಗಳೂ ಇವುಗಳಿಂದ ಬಹುಕೋಶ ಜೀವಿಗಳು ಹುಟ್ಟಿ, ಕೋಟ್ಯಂತರ ವರ್ಷಗಳ ಕಾಲ ಬಾಳಿ, ಬದುಕಿ ಪರಿವರ್ತನೆಯಾದುದರ ಫಲವಾಗಿ ಇಂದಿನ ಜೀವಿರೂಪಗಳು ಅಸ್ತಿತ್ವಕ್ಕೆ ಬಂದಿವೆ. ಅಂದರೆ, ಏಕಕೋಶಿಯಾದ ಅಮೀಬದ ಅಂತಸ್ತಿನಿಂದ ಆರಂಭವಾಗಿ, ಅನೇಕ ಘಟ್ಟಗಳನ್ನು ಹತ್ತಿ, ಬಹುಕೋಶಿಗಳಾಗಿ, ಎಲುಬುರಹಿತ ಹಂತದಿಂದ ಎಲುಬಿರುವ ಸ್ಥಿತಿಗೆ ಬಂದು ಜಲಚರಗಳ ಅಂತಸ್ತಿನಿಂದ ಭೂಚರಗಳಾಗುವ ಪ್ರಯತ್ನದಲ್ಲಿ ಜಯಗಳಿಸಿ ಮತ್ಸ್ಯಗಳಿಂದ ದ್ವಿಚರಿಗಳೂ ದ್ವಿಚರಿಗಳಿಂದ ಸರೀಸೃಪಗಳೂ ಅನಂತರ ಇವುಗಳಿಂದ ಪಕ್ಷಿಗಳೂ ಸ್ತನಿಗಳೂ ಉದ್ಭವಿಸಿ ಅನೇಕ ಹಂತಗಳ ಅನಂತರ ಮನುಷ್ಯನ ಅಂತಸ್ತನ್ನು ಮುಟ್ಟಿದೆ. ಈ ಪರಿವರ್ತನೆ ಅತ್ಯಂತ ಸಾವಕಾಶವಾಗಿ ಆಗುವುದರಿಂದ ಕಣ್ಣಿಗೆ ಗೋಚರಿಸುವಷ್ಟು ಬದಲಾವಣೆಯಾಗಬೇಕಾದರೆ ಲಕ್ಷಾಂತರ ವರ್ಷಗಳು ಹಿಡಿದಿರಬಹುದು. ಜೀವಿಗಳ ರೂಪರಚನೆ, ಭ್ರೂಣದ ಬೆಳವಣಿಗೆಯ ಇತಿಹಾಸ, ಲುಪ್ತ ಜೀವಿವಿಜ್ಞಾನ, ಜೀವರಸಾಯನ ಕ್ರಿಯೆಗಳ ತುಲನಾಧ್ಯಯನ ಮತ್ತು ಜೀವಿಗಳಿಗೂ ಆನುವಂಶೀಯತೆಗೂ ಇರುವ ನಿಕಟಬಾಂಧವ್ಯಗಳ ಅಭ್ಯಾಸದಿಂದ ಜೀವವಿಕಾಸದ ವಿಧಾನ ಸ್ಪಷ್ಟವಾಗುವುದು.

ಮೇಲ್ನೋಟಕ್ಕೆ ಹೋಲಿಕೆ ಕಾಣದಿದ್ದರು ವಿವಿಧ ಕಶೇರುಕಗಳ ಚಲನಾಂಗಗಳು ವಿವಿಧ ಕೀಟಗಳ ವದನಾಂಗಗಳ ರಚನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇವುಗಳ ನಡುವಣ ಯೋಜನಾ ಸಾದೃಶ್ಯ ವ್ಯಕ್ತವಾಗುವುದು. ಅವಶಿಷ್ಟ ಅವಯವಗಳ (ವೆಸ್ಟಿಜಿಯಲ್ ಆರ್ಗನ್ಸ್) ಅಧ್ಯಯನದಿಂದಲೂ ಜೀವವಿಕಾಸದ ಅರಿವು ಮೂಡುತ್ತದೆ. ಮೊದಮೊದಲು ಕ್ರಿಯಾತ್ಮಕವಾಗಿದ್ದು ಕಾಲಾನಂತರ ನಶಿಸಿ, ಇನ್ನೂ ಉಳಿದಿರುವ ಕರುಳುಬಾಲ (ಅಪೆಂಡಿಕ್ಸ್), ನಾಲ್ಕು ಮೂಳೆಗಳಿಂದ ಕೂಡಿದ ಬೆನ್ನು ಹುರಿಯ ಮೊಟಕು ತುದಿಗಳು, ಬಾಲವಿದ್ದ ಸಸ್ಯಾಹಾರಿ ಪೂರ್ವಜರಿಂದ ಮಾನವ ಉದಯಿಸಿದನೆಂದು ಸಾರುತ್ತವೆ. ಅಂತೆಯೇ ಈಗಿರುವ ಯಾವುದೇ ಜೀವಿ ಪ್ರಸ್ತುತ ಘಟ್ಟವನ್ನು ಮುಟ್ಟುವ ಮೊದಲು, ಯಾವ ಯಾವ ಅಂತಸ್ತುಗಳನ್ನು ದಾಟಬೇಕಾಯಿತೋ ಆ ಮಜಲುಗಳೆಲ್ಲವೂ ಹಂತ ಹಂತವಾಗಿ ಅದೇ ಕ್ರಮದಲ್ಲಿ ಅದರ ಭ್ರೂಣದ ಬೆಳವಣಿಗೆಯಾಗುವಾಗ ಪ್ರತಿಬಿಂಬಿತವಾಗುತ್ತವೆ. ಅಂದರೆ ಜೀವಿಯ ಬೆಳವಣಿಗೆ ತನ್ನ ಪೂರ್ವಜರ ಸಂಪೂರ್ಣ ಇತಿಹಾಸವನ್ನು ನಿರೂಪಿಸಿವುದು. ಇದನ್ನೇ ಫಾನ್ ಬೇಯರ್ ಪುನರಾವರ್ತನೆ (ರಿಕ್ಯಾಪಿಚುಲೇಷನ್) ಎಂದು ಕರೆದ. ಭೂಮಿಯ ವಿವಿಧ ಪದರುಗಳಲ್ಲಿ ಸುರಕ್ಷಿತವಾಗಿರುವ ಜೀವಿಗಳ ಕಳೆದುಳಿದ ಕಳೇಬರಗಳು, ಪರಂಪರಾನುಗತವಾಗಿ ಕಾಣಿಸಿಕೊಂಡ ಜೀವಿಗಳ ಚರಿತ್ರೆಯನ್ನು ಚಿತ್ರಿಸುವುವು. ಪಂಚಾಂಗುಲಿಯ ಚಲನಾಂಗಗಳಿದ್ದ ಪ್ರಾಚೀನ ಕುದುರೆಯಿಂದ, ಈಗಿನ ಏಕಾಂಗುಲಿ ಕುದುರೆಗಳ ರೂಪಾಂತರ ಪಳೆಯುಳಿಕೆಗಳ ಅಭ್ಯಾಸದಿಂದ ತಿಳಿಯುತ್ತದೆ. ಅಂತೆಯೇ ಮೀಸೋಜ಼ೋಯಿಕ್ ಯುಗದ ಅಂತ್ಯದಲ್ಲಿ ಜೀವಿಸಿದ್ದ ಆರ್ಕಿಯಾರ್ನಿಸ್ ಮತ್ತು ಆರ್ಕಿಯಾಪ್ಟರಿಕ್ಸ್ ಎಂಬ ಪಕ್ಷಿಗಳ ಫಾಸಿಲುಗಳು ಈಗಿನ ಉರಗಗಳಿಗೂ ಪಕ್ಷಿಗಳಿಗೂ ಇರುವ ಸಂಬಂಧವನ್ನು ಸಾರುತ್ತವೆ. ವಿವಿಧ ಜೀವಿಗಳ ರಸವಿಶೇಷದ ರಾಸಾಯನಿಕ ಪರೀಕ್ಷೆಯಿಂದಾಗಿ, ದೇಹಕ್ರಿಯೆಯ ಸಾಮ್ಯದ ಜೊತೆಗೆ ಜೀವಿಗಳಿಗಿರುವ ಬಾಂಧವ್ಯವು ವ್ಯಕ್ತವಾಗುತ್ತದೆ. ವಿಶ್ವದಾದ್ಯಂತ ಹೇರಳವಾಗಿರುವ ಶ್ರೇಷ್ಠ ಜಾನುವಾರು ತಳಿಗಳು, ಮರಗಿಡಗಳು, ಸಾಕುಪ್ರಾಣಿಗಳು, ಜೀವಿಗಳಲ್ಲಾಗುವ ಅವಿರತ ವಿಕಾಸದಲ್ಲಿ ಮಾನವನ ಕೈವಾಡಕ್ಕೆ ಸಜೀವ ಸಾಕ್ಷಿಗಳು. ಇದರಿಂದ ಜೀವಿಗಳಲ್ಲಿ ವಿಕಾಸವಾಗಿದ್ದರು ವಿಕಾಸದ ವಿಧಾನದ ವಿಷಯದಲ್ಲಿ ಹಲವಾರು ಸಿದ್ಧಾಂತಗಳಿವೆ. (ಎಸ್.ಎಚ್.ಬಿ.)

**ಜೀವವಿದ್ಯುತ್ ಪ್ರತಿರೂಪ:** ಜೀವಂತ ಅಂಗಗಳಲ್ಲಿ ವಿದ್ಯುತ್ ಪ್ರವಾಹ ಹೇಗೆ ಉತ್ಪತ್ತಿಯಾಗುತ್ತದೆ ಎನ್ನುವುದನ್ನು ವಿಶದೀಕರಿಸುವ ಸಲಕರಣೆ (ಬಯೊ ಎಲೆಕ್ಟ್ರಿಕ್ ಮಾಡೆಲ್). ಜೀವಂತ ಅಂಗಗಳಲ್ಲಿರುವ ವಿದ್ಯುದಾವಿಷ್ಟ ಕಣಗಳ ಹಾಗೂ ಧನ ಮತ್ತು ಋಣ ಅಯಾನುಗಳ ಚಲನೆಯಿಂದ ವಿದ್ಯುತ್ ಪ್ರವಾಹ ಉಂಟಾಗುತ್ತದೆ. ಎಲ್ಲ ಅಂಗಗಳ ಒಳಗು ಹೊರಗು ಅನೇಕ ಆವಿಷ್ಟ ಕಣಗಳು ಕರಗಿರುವ ದ್ರಾವಣವಿರುವುದು ಅವುಗಳ ಜೀವಂತ ಸ್ಥಿತಿಯ ಸಾಮಾನ್ಯ ಲಕ್ಷಣ. ಆದರೆ, ಎಲ್ಲ ಅಂಗಗಳಲ್ಲೂ ಆವಿಷ್ಟ ಕಣಗಳು ಅಗತ್ಯ ಸಂಖ್ಯೆಯಲ್ಲಿ, ಅಗತ್ಯ ರೀತಿಯಲ್ಲಿ ಒಳಗಿನಿಂದ ಹೊರಬರುವುದು ಹೊರಗಿನಿಂದ ಒಳಹೋಗುವುದು ಆಗುವುದಿಲ್ಲ. ಅದ್ದರಿಂದ, ಇವುಗಳಲ್ಲಿ ವಿದ್ಯುತ್ ಪ್ರವಾಹ ಉಂಟಾಗುವುದಿಲ್ಲ. ಉಂಟಾದರೂ ಅದು ಗಣನೀಯವಾಗಿರುವುದಿಲ್ಲ. ಪ್ರಚೋದನೆಗೆ ಶೀಘ್ರವಾಗಿ ಹಾಗೂ ಸ್ಫುಟವಾಗಿ ಅನುಕ್ರಿಯೆ ತೋರಬಲ್ಲ ನರ, ಸ್ನಾಯು, ಗ್ರಂಥಿಯಂತಹ ಅಂಗ–ಅಂಗಾಂಶಗಳಲ್ಲಿ ಧನ ಅಯಾನುಗಳ ಅಗತ್ಯ ರೀತಿಯ ಚಲನವನ್ನು ನೋಡಬಹುದು. ಇದು ಈ ಅಂಗಾಂಶಗಳು ಪ್ರಚೋದನೆಗೆ ಒಳಗಾಗಿ ತಮ್ಮ ವಿಶಿಷ್ಟ ಅನುಕ್ರಿಯೆಯನ್ನು ತೋರುವಾಗ ಮಾತ್ರ ಕಾಣುತ್ತದೆ. ಈ ಸಮಯದಲ್ಲಿ ವಿದ್ಯುತ್ ಪ್ರವಾಹ ಅವುಗಳಲ್ಲಿ ಉಂಟಾಗುತ್ತದೆ. ನರ, ಸ್ನಾಯು ಮತ್ತು ಗ್ರಂಥಿಗಳು ಏನೂ ಚಟುವಟಿಕೆ ತೋರದೆ ಸ್ವಸ್ಥವಾಗಿರುವಾಗ ಅವುಗಳಲ್ಲಿ ವಿದ್ಯುತ್ಪ್ರವಾಹವಿರುವುದಿಲ್ಲ. ಕಾರಣ ಸ್ವಸ್ಥ ಸ್ಥಿತಿಯಲ್ಲಿ ಆವಿಷ್ಟ ಕಣಗಳ ಚಲನೆ ಸ್ಥಗಿತವಾಗಿರುತ್ತದೆ.

ಜೀವಾಣುಗಳ ಒಳ ಮತ್ತು ಹೊರ ದ್ರಾವಣಗಳಲ್ಲಿ ಬೇರೆ ಬೇರೆ ಆವಿಷ್ಟ ಕಣಗಳಿವೆ. ದ್ರಾವಣಗಳಲ್ಲಿ ಕರಗಿರುವ ವಸ್ತುಗಳು ಇವೆರಡು ದ್ರಾವಣಗಳನ್ನು ವಿಭಾಗಿಸುವ ಜೀವಾಣುವಿನ ಭಿತ್ತಿಯಲ್ಲಿ ಅಡೆತಡೆ ಇಲ್ಲದೆ ತೂರಲಾರವು. ಆದರೆ, ಹಾಗೆ ತೂರಿ ಒಳಗೂ, ಹೊರಗೂ ಸಮ ಪ್ರಮಾಣದಲ್ಲಿ ವ್ಯಾಪಿಸುವ ನೈಸರ್ಗಿಕ ಪ್ರವೃತ್ತಿ ಇದ್ದೇ ಇರುತ್ತದೆ. ಜೀವಾಣುವಿನ ಒಳದ್ರಾವಣದಲ್ಲಿ ಕರಗಿರುವ ವಸ್ತು ಮುಖ್ಯವಾಗಿ ಪೊಟ್ಯಾಸಿಯಮ್ ಪ್ರೋಟೀನೇಟ್. ಇದು ವಿಭಜಿಸಿ ಪೊಟ್ಯಾಸಿಯಮ್ ಧನ ಅಯಾನುಗಳಾಗಿಯೂ, ಪ್ರೋಟೀನ್ ಋಣ ಅಯಾನುಗಳಾಗಿ ಇರುತ್ತವೆ. ಜೀವಾಣುವಿನ ಹೊರದ್ರಾವಣದಲ್ಲಿ ಕರಗಿರುವ ಮುಖ್ಯ ವಸ್ತು ಸೋಡಿಯಮ್ ಕ್ಲೋರೈಡ್. ಇದು ಸಹ ಧನ ಅಯಾನ್ ಸೋಡಿಯಮ್ ಮತ್ತು

ಋಣ ಅಯಾನ್ ಕ್ಲೋರೈಡ್ ಆಗಿ ವಿಭಜನೆಗೊಳ್ಳುತ್ತವೆ. ಜೀವಾಣುವಿನೊಳಗಿರುವ ಪ್ರೊಟೀನ್ ಕಣಗಳು ತಮ್ಮ ಬಹುಗಾತ್ರದಿಂದ ಜೀವಾಣು ಭಿತ್ತಿಯನ್ನು ತೂರುವುದಿಲ್ಲ. ಸೋಡಿಯಮ್ ಅಯಾನುಗಳು ಜೀವಾಣುವಿನೊಳಗೆ ಹೋಗಲು ಅವ್ಯಕ್ತ ಪ್ರತಿಬಂಧಕ ಇದೆ. ಆದ್ದರಿಂದ, ಕ್ಲೋರೈಡ್ ಒಳಹೋಗುವಂತೆ ಹಾಗೆಯೇ ಪೊಟ್ಯಾಸಿಯಮ್ ಹೊರಬರುವಂತೆ ಇಲ್ಲ. ಒಟ್ಟಿನಲ್ಲಿ ಜೀವಾಣುವಿನ ಭಿತ್ತಿಯನ್ನು ತೂರಿ ಸೋಡಿಯಮ್ ಮತ್ತು ಕ್ಲೋರೈಡುಗಳು ಒಳಹೊಕ್ಕು ಪೊಟ್ಯಾಸಿಯಮ್ ಹಾಗೂ ಪ್ರೊಟೀನ್ ಅಯಾನುಗಳು ಹೊರಬಂದು ಒಳಹೊರಗೆ ಸಮಪ್ರಮಾಣದಲ್ಲಿ ವ್ಯಾಪಿಸುವ ನೈಸರ್ಗಿಕ ಪ್ರಯತ್ನ ವಿಫಲವಾಗುತ್ತದೆ.

ಆದರೆ ಈ ಪ್ರವೃತ್ತಿಯ ಒತ್ತಾಯದಂತೆ ಒಳಹೋಗಲು ಸೋಡಿಯಮ್ ಅಯಾನುಗಳು ಸಾಲುಸಾಲಾಗಿ, ಸಜ್ಜಾಗಿ ಜೀವಾಣುವಿನ ಭಿತ್ತಿಯ ಹೊರಗೆ ಶೇಖರಗೊಳ್ಳುವುದರಿಂದ ಅಲ್ಲಿ ಧನವಿದ್ಯುತ್ ವಿಭವ (ಪೊಟೆನ್ಶಿಯಲ್) ಉಂಟಾಗುತ್ತದೆ. ಈ ಸೋಡಿಯಮ್ ಅಯಾನುಗಳು ಜೀವಾಣುವಿನೊಳಗಿರುವ ಪ್ರೊಟೀನ್ ಅಯಾನುಗಳನ್ನು ಆಕರ್ಷಿಸಿ, ಅವು ಸಹ ಒಳಗೆ ಸಾಲುಸಾಲಾಗಿ, ವ್ಯೂಹಗೊಳ್ಳುವುದರಿಂದ ಅಲ್ಲಿ ಕಾಣುವುದು ಋಣವಿದ್ಯುತ್ ವಿಭವ. ಇವೆರಡರ ನಡುವೆ ಸ್ವಾಭಾವಿಕವಾಗಿ ಏರ್ಪಡಬೇಕಾದ ವಿದ್ಯುತ್ ಪ್ರವಾಹ ಮಾತ್ರ ಉಂಟಾಗುವುದಿಲ್ಲ. ಜೀವಾಣುಭಿತ್ತಿ ಅಯಾನುಗಳ ಚಲನೆಗೆ ತಡೆಯಾಗಿ ಅದು ವಿದ್ಯುದ್ವಾಹಕ ಪ್ರತಿಬಂಧಕವಾಗಿ ವರ್ತಿಸುವುದು ಇದಕ್ಕೆ ಕಾರಣ. ಪ್ರಚೋದನೆಗೊಂಡಾಗ ಈ ಕ್ಷಣದಲ್ಲಿ ಮಾತ್ರ ಸೋಡಿಯಮ್ ಅಯಾನುಗಳಿಗೆ ಪ್ರತಿಬಂಧಕ ಸಡಿಲವಾಗಿ ಅವು ಅತಿ ಶೀಘ್ರವಾಗಿ ಮತ್ತು ಅಧಿಕ ಸಂಖ್ಯೆಯಲ್ಲಿ ಒಳಹೋಗುತ್ತವೆ. ಇದು ವಿದ್ಯುತ್ ಪ್ರವಾಹದ ಪ್ರಾರಂಭ. ಮರುಕ್ಷಣವೇ ಪೊಟ್ಯಾಸಿಯಮ್ ಆಯಾನುಗಳು ಅನುಗುಣಸಂಖ್ಯೆಯಲ್ಲಿ ಹೊರಬರುತ್ತವೆ. ಇದರಿಂದ ಹಿಮ್ಮೊಗವಾದ ವಿದ್ಯುತ್ ಪ್ರವಾಹ ಉಂಟಾಗಿ ಕ್ರಿಯಾಜನಿತ ವಿದ್ಯುತ್ ಪ್ರವಾಹದ (ಆ್ಯಕ್ಷನ್ ಕರೆಂಟ್) ಅಂತ್ಯವಾಗುತ್ತದೆ. ಮುಂದಿನದು ಪ್ರಚೋದನ ಪೂರ್ವಸ್ಥಿತಿ. ಅನುಕ್ರಿಯೆಯ ಸಮಯದಲ್ಲಿ ಕಾಣಬರುವ ವಿದ್ಯುತ್ ಪ್ರವಾಹಕ್ಕೆ ಮುಖ್ಯವಾದ ಕಾರಣಗಳಿವೆ.

ಈ ವಿವರಗಳನ್ನು ವ್ಯಕ್ತಪಡಿಸಲು ಪಾರಗಮ್ಯತೆಯ (ಪರ್ಮಿಯೆಬಿಲಿಟಿ) ಮಿತಿಯಲ್ಲಿ ಜೀವಾಣುಭಿತ್ತಿಯನ್ನು ಹೋಲುವ ಒಂದು ತೆಳುಪೊರೆಯ ಚೀಲವನ್ನು ಮಾಡಿ ಅದರೊಳಗೆ ಪೊಟ್ಯಾಸಿಯಮ್ ಪ್ರೊಟೀನೇಟ್ ದ್ರಾವಣವನ್ನು ತುಂಬಿ ಆ ಚೀಲವನ್ನು ಸೋಡಿಯಮ್ ಕ್ಲೋರೈಡ್ ದ್ರಾವಣದಲ್ಲಿಟ್ಟು ಒಂದು ಪ್ರಾಯೋಗಿಕ ಪ್ರತಿರೂಪವನ್ನು ಸೃಷ್ಟಿಸಲಾಗಿದೆ. ಕಲೊಡಿಯನ್ ರಾಸಾಯನಿಕವನ್ನು ಅಸಿಟೋನಿನಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಕರಗಿಸಿ ಆ ದ್ರಾವಣವನ್ನು ತೆಳುವಾಗಿ ಹರಡಿದರೆ ಅಸಿಟೋನ್ ಆವಿಯಾಗಿ ಇಚ್ಛಿಸಿದಷ್ಟು ಪಾರಗಮ್ಯತೆಯುಳ್ಳ ಪೊರೆ ಉಳಿದುಕೊಳ್ಳುತ್ತದೆ. ಇಂಥ ಪೊರೆಯನ್ನು ಬಳಸಿಕೊಂಡು ಜೀವಾಣುವಿನ ಸ್ವಸ್ಥಸ್ಥಿತಿಯಲ್ಲಿ ಒಳಗೆ ಋಣವಿದ್ಯುತ್ ವಿಭವ ಇರುವುದನ್ನು ಹೊರಗೆ ಧನವಿದ್ಯುತ್ ವಿಭವ ಇರುವುದನ್ನು ಹೋಲುವಂಥ ಸ್ಥಿತಿಯನ್ನುಳ್ಳ ಪ್ರತಿರೂಪವನ್ನು ಪಡೆಯಬಹುದು. ಪ್ರಾಯೋಗಿಕವಾಗಿ ಹೊರಗಿನ ಸೋಡಿಯಮ್ ಕಣ ಒಳಹೋಗುವಂತೆ ಮಾಡಿದರೆ, ವಿದ್ಯುತ್ ಪ್ರವಾಹ ಉಂಟಾಗುವುದನ್ನು ಈ ಪ್ರತಿರೂಪದಲ್ಲಿ ತೋರಿಸಲಾಗಿದೆ.

ಪ್ರತಿಕ್ರಿಯೆಯ ವೇಳೆಯಲ್ಲಿ ವಿದ್ಯುತ್ ಪ್ರವಾಹ ಬೇರೆ ಕಾರಣದಿಂದ ಉಂಟಾಗುವ ಪ್ರತಿರೂಪವನ್ನು ಕೆಲವು ವಿಜ್ಞಾನಿಗಳು ತೋರಿಸಿದ್ದಾರೆ. ಇವರ ಪ್ರಕಾರ ಜೀವಾಣುಭಿತ್ತಿ ಭಾಗಶಃ ಲಿಪಿಡಿನ ಅಂಶದಿಂದ ಆಗಿರುವುದು ಜೀವವಿದ್ಯುತ್ತಿನ (ಬಯೋ ಎಲೆಕ್ಟ್ರಿಸಿಟಿ) ಉತ್ಪತ್ತಿಗೂ, ಪ್ರವಾಹಕ್ಕೂ ಕಾರಣ. ಭಿತ್ತಿಯ ಲಿಪಿಡಿನ ಅಣುಗಳು ಭಿತ್ತಿಯ ಒಳಮೈಮೇಲೆ ಕ್ಷಣಿಕವಾಗಿ ಉತ್ಕರ್ಷಗೊಂಡು ಹೊರಮೈ ಅಪಕರ್ಷಣೆ ಸ್ಥಿತಿಯಲ್ಲಿ ಇರುವುದರಿಂದ ಇವೆರಡು ಮೈಗಳ ನಡುವೆ ವಿದ್ಯುತ್ ಪ್ರವಾಹ ಏರ್ಪಡುತ್ತದೆ. ಪ್ರಚೋದನೆಯ ವೇಳೆಯಲ್ಲಿ ಈ ರೀತಿ ಆಗುವುದರಿಂದ ಆಗ ಮಾತ್ರ ವಿದ್ಯುತ್ ಪ್ರವಾಹ ಉಂಟಾಗುತ್ತದೆ, ಸ್ವಸ್ಥ ಸ್ಥಿತಿಯಲ್ಲಲ್ಲ ಎಂಬುದಾಗಿ ಇವರು ವಿವರಿಸಿದ್ದಾರೆ. ಉತ್ಕರ್ಷನೆ ಅಪಕರ್ಷಣೆಗಳು ನರ ಪ್ರಚೋದನೆ ಮುಂದುವರಿಯುವ ರೀತಿಯಲ್ಲಿಯೇ ಮುಂದಕ್ಕೆ ಒಯ್ಯುತ್ತವೆ. ನರಪ್ರಚೋದನೆಯಲ್ಲಿ ಜೀವವಿದ್ಯುತ್ ಪ್ರವಾಹ ಉಂಟಾಗುತ್ತದೆ. ಉತ್ಕರ್ಷಣ ಅಪಕರ್ಷಣೆ ಸ್ಥಳಗಳ ನಡುವೆ ವಿದ್ಯುತ್ ಪ್ರವಾಹ ಉಂಟಾಗುತ್ತದೆ. ಆದ್ದರಿಂದ ನರಪ್ರಚೋದನೆ ಉತ್ಕರ್ಷಣೆ ಅಪಕರ್ಷಣೆಗಳಿಂದಾದ ಪರಿಣಾಮ. ಅದೇ ಕಾರಣದಿಂದ ಕ್ರಿಯಾಜನಿತ ವಿದ್ಯುತ್ ಪ್ರವಾಹವೂ ಆಗುತ್ತದೆ.

ಸು. 1.2 ಕ್ಕಿಂತ ಹೆಚ್ಚು ಸಾಂದ್ರತೆಯ ನೈಟ್ರಿಕ್ ಆಮ್ಲದಲ್ಲಿ ಒಂದು ಕಬ್ಬಿಣದ ತಂತಿಯನ್ನು ಇಟ್ಟಾಗ ಉಂಟಾಗುವ ರಾಸಾಯನಿಕ ಪ್ರತಿಕ್ರಿಯೆ ಕೇವಲ ಕ್ಷಣಿಕ. ನಂತರ ಸ್ವಸ್ಥಸ್ಥಿತಿ (ಪ್ಯಾಸಿವ್ ಕಂಡಿಷನ್) ಏರ್ಪಡುತ್ತದೆ. ಈ ಸ್ವಸ್ಥಸ್ಥಿತಿಗೆ ಕಾರಣ ಕಬ್ಬಿಣದ ತಂತಿಯ ಮೇಲ್ಮೈ ಉತ್ಕರ್ಷಿಸಲ್ಪಟ್ಟು ಕಬ್ಬಿಣ ಆಕ್ಸೈಡ್ ಪದರವಾಗಿ ಅದು ಒಳಗಿನ ಕಬ್ಬಿಣವನ್ನು ಆಮ್ಲ ಕರಗಿಸದಂತೆ ರಕ್ಷಿಸುವುದು. ಸ್ವಸ್ಥಸ್ಥಿತಿಯಲ್ಲಿ ತಂತಿಯ ಮೇಲ್ಮೈಯನ್ನು ಒಂದು ಸ್ಥಳದಲ್ಲಿ ಕರೆದು ಅಥವ ರಾಸಾಯನಿಕಗಳಿಂದ, ವಿದ್ಯುತ್ತಿನಿಂದ ಉದ್ರೇಕಿಸಿದರೆ ಒಳಗಿನ ಕಬ್ಬಿಣ ಆ ಸ್ಥಳದಲ್ಲಿ ಬಹಿರಂಗಿಸಲ್ಪಡುತ್ತದೆ. ಕಬ್ಬಿಣ ಆಮ್ಲಗಳ ಸಂಪರ್ಕದಿಂದ ಪುನಃ ಕ್ಷಣಿಕವಾಗಿ ರಾಸಾಯನ ಪ್ರತಿಕ್ರಿಯೆ ಉಂಟಾಗಿ ಆ ಸ್ಥಳ ಮೊದಲಿನಂತಾಗುತ್ತದೆ. ಅದರ, ಮುಂದಿನ ಸ್ಥಳದಲ್ಲಿ ಕಬ್ಬಿಣ ಆಕ್ಸೈಡ್ ಪದರ ಕರಗಿ ಅಲ್ಲಿ ಕಬ್ಬಿಣ ಆಮ್ಲಕ್ಕೆ ಒಡ್ಡಲ್ಪಟ್ಟು ಕ್ಷಣ ಮಾತ್ರದ ರಾಸಾಯನಿಕ ಕ್ರಿಯೆ ಜರುಗಿ ಮುಂದಿನ ಸ್ಥಳದಲ್ಲಿ ಇಂಥದೇ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆ. ನರವನ್ನು ಒಂದು ಸ್ಥಳದಲ್ಲಿ ಪ್ರಚೋದಿಸಿದರೆ ಆ ನರದಲ್ಲಿ ಪ್ರತಿಕ್ರಿಯೆ ಮುಂದುವರಿಯುವ ರೀತಿಯಲ್ಲಿ ಇದು ಇದೆಯೆಂಬುದು ಸ್ಪಷ್ಟ. ಪ್ರಚೋದಿಸಿದಾಗ ಜನಿಸುವ ವಿದ್ಯುತ್ ಪ್ರವಾಹವೇ ಆ ಜೀವಾಣುವಿನ ವಿಶಿಷ್ಟ ಪ್ರತಿಕ್ರಿಯೆಯನ್ನು ಮಾಡುತ್ತದೆ ಹೃದಯದ ನಿರಂತರ ಮಿಡಿತಕ್ಕೆ ನಿರಂತರವಾಗಿ ಇಂಥ ವಿದ್ಯುತ್ ಪ್ರವಾಹ ಒದಗಬೇಕು. ಆದ್ದರಿಂದ, ಹೃದಯದಲ್ಲಿ ಶೀಘ್ರ ಉತ್ಕರ್ಷಣ ಅಪಕರ್ಷಣಗಳಿಗೆ ಯೋಗ್ಯ ಲಿಪಿಡ್ ನಿರಂತರವಾಗಿ ಒದಗಬೇಕು. ಕಾರಣ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕಂಡುಬರುವ ನವೀನ ರೀತಿಯ ಆಹಾರಗಳ ಸೇವನೆಯಿಂದ ದೊರಕದೆಂದು ಅದಕ್ಕೇ ಅಲ್ಲಿ ಹೃದಯ ರೋಗಗಳಿಗೆ ತುತ್ತಾಗುವವರು ಬಹಳವೆಂದು ವಿಜ್ಞಾನಿಗಳು ತಮ್ಮ ವಾದವನ್ನು ಸಮರ್ಥಿಸಿಕೊಂಡಿದ್ದಾರೆ. ಜೀವವಿದ್ಯುತ್ ಪ್ರತಿರೂಪಗಳಿಂದ ವಿಶಿಷ್ಟ ಪ್ರತಿಕ್ರಿಯೆಗೆ ಕಾರಣ. ಪ್ರಚೋದನೆಯ ಫಲಿತಾಂಶ ಪ್ರತಿಕ್ರಿಯೆ ಹಾಗೂ ಕ್ರಿಯಾಜನಿತ ವಿದ್ಯುತ್ ಪ್ರವಾಹದಿಂದಾಗಿದೆ.

***

**ಜೀವಸಂದೀಪ್ತಿ:** ಜೀವಿಗಳು ಹೊರಸೂಸುವ ದೃಗ್ಗೋಚರ ಬೆಳಕು (ಬಯೋಲ್ಯೂಮಿನಿಸೆನ್ಸ್). ಮಿಣುಕು ಹುಳುಗಳ ಮಿನುಗುವಿಕೆ, ಸಾಗರದ ಮೇಲೆ ಕಾಣಬರುವ ಕಾಂತಿ ಹಾಗೂ ನಾಯಿಕೊಡೆಗಳ ಹೊಳಪು ಜೀವ ಸಂದೀಪ್ತಿಯ ನಿದರ್ಶನಗಳು. ವೈಜ್ಞಾನಿಕ ದೃಷ್ಟಿಯಲ್ಲಿ ತಾಪದೀಪ್ತಿಗು ಮತ್ತು ಸಂದೀಪ್ತಿಗು ವ್ಯತ್ಯಾಸವಿದೆ. ಯಾವುದಾದರೊಂದು ಪದಾರ್ಥ ಕೆಂಗಾವಿಗೆ ಅಥವಾ ಬಿಳಿಗಾವಿಗೆ ಕಾದು ಅದರ ಪರಿಣಾಮವಾಗಿ ಬೆಳಕು ಹೊರಬಿದ್ದರೆ ಅದಕ್ಕೆ ತಾಪದೀಪ್ತಿ (ಇನ್‌ಕ್ಯಾಂಡೆಸೆನ್ಸ್) ಎಂದು ಹೆಸರು. ತಾಪದೀಪ್ತಿಸುವ ಪದಾರ್ಥದಿಂದ ಹೆಚ್ಚಿನ ಮೊತ್ತದ ಉಷ್ಣ ಹೊರಬರುವುದು, ಪದಾರ್ಥದ ಉನ್ನತ ಉಷ್ಣತೆ ಅದರಿಂದ ಬರುವ ಬೆಳಕಿಗೆ ಕಾರಣ. ಸಂದೀಪ್ತಿಯಲ್ಲಾದರೋ ಉಷ್ಣವಿಸರ್ಜನೆ ಆಗುವುದು ಅಲ್ಪ. ಆದ್ದರಿಂದ ಸಂದೀಪ್ತಿಯನ್ನು ತಣ್ಣನೆ ಬೆಳಕು ಎಂದು ವರ್ಣಿಸಬಹುದು. ಸಂದೀಪ್ತಿಗೆ ವಿವಿಧ ಕಾರಣಗಳಿವೆ. ವಿದ್ಯುತ್ತಿನಿಂದ ಉದ್ರೇಕಗೊಂಡು ಪದಾರ್ಥ ಬೆಳಕನ್ನು ಹೊರಸೂಸಿದರೆ ಅದಕ್ಕೆ ವಿದ್ಯುತ್ಸಂದೀಪ್ತಿ (ಎಲೆಕ್ಟ್ರೋಲ್ಯೂಮಿಸೆನ್ಸ್) ಎನ್ನುವರು. ರಾಸಾಯನಿಕ ಕ್ರಿಯೆಯ ಪರಿಣಾಮವಾಗಿ ಉದ್ರೇಕಗೊಂಡು ಬೆಳಕನ್ನು ಹೊರಸೂಸಿದರೆ ಅದಕ್ಕೆ ರಸಸಂದೀಪ್ತಿ (ಕೆಮಿಲ್ಯೂಮಿಸೆನ್ಸ್) ಎನ್ನುವರು. ಬೆಳಕಿನ ರಶ್ಮಿಗಳಿಂದಲೇ ಉದ್ರೇಕಗೊಂಡು ಬೆಳಕನ್ನು ಸೂಸಿದರೆ ಅದಕ್ಕೆ ಪ್ರತಿದೀಪ್ತಿ (ಫ್ಲೂರೆಸೆನ್ಸ್) ಎಂದು ಹೆಸರು. ಬೆಳಕಿನಿಂದ ಉದ್ರೇಕಗೊಂಡ ಪದಾರ್ಥ ಆ ಬೆಳಕನ್ನು ನಂದಿಸಿದ ಮೇಲೂ ಕೆಲಕಾಲ ಬೆಳಕನ್ನು ಸೂಸುತ್ತಿದ್ದರೆ ಅದಕ್ಕೆ ಸ್ಫುರದೀಪ್ತಿ (ಫಾಸ್ಫರೆಸೆನ್ಸ್) ಎನ್ನುತ್ತಾರೆ. ಜೀವಿಗಳು ಸೂಸುವ ಬೆಳಕಿಗೆ ರಾಸಾಯನಿಕ ಕ್ರಿಯೆಯೇ ಆಧಾರವೆಂಬುದು ಖಚಿತವಾಗಿರುವುದರಿಂದ ಜೀವಸಂದೀಪ್ತಿಯನ್ನು ರಸಸಂದೀಪ್ತಿಯ ಒಂದು ವಿಶೇಷ ಬಗೆ ಎಂದು ಪರಿಗಣಿಸಲಾಗಿದೆ.

ಸಸ್ಯಗಳಲ್ಲಿ, ಬ್ಯಾಕ್ಟೀರಿಯ ಮತ್ತು ಶಿಲೀಂಧ್ರ (ಫಂಗೈ) ಗಳಲ್ಲಿ ಜೀವಸಂದೀಪ್ತಿ ಕಂಡುಬರುತ್ತದೆ. ಬೆಳಕು ಸೂಸುವ ಬ್ಯಾಕ್ಟೀರಿಯಗಳು ಮನುಷ್ಯನಿಗೆ ರೋಗಕಾರಕಗಳಲ್ಲ. ಆದರೆ ವಿವಿಧ ಕ್ರಿಮಿಕೀಟಗಳಿಗೆ ಅವುಗಳ ಸೋಂಕು ತಗಲುವುದು. ಶಿಲೀಂಧ್ರಗಳಲ್ಲಿ ಜೀವಸಂದೀಪ್ತಿ ಕಾಣುವುದು ನಾಯಿಕೊಡೆಗಳಲ್ಲಿ. ಸಸ್ಯಗಳಲ್ಲಿ ಕಾಣುವ ಜೀವಸಂದೀಪ್ತಿಗೂ ಮತ್ತು ಪ್ರಾಣಿಗಳಲ್ಲಿ ಕಾಣುವ ಜೀವಸಂದೀಪ್ತಿಗು ವ್ಯತ್ಯಾಸವಿದೆ. ಪ್ರಾಣಿಗಳಲ್ಲಿ ಸಂದೀಪ್ತಿ ಕಂಡುಬರುವುದು ಯಾವುದಾದರೊಂದು ರೀತಿಯ ಪ್ರಚೋದನೆಯ ಪರಿಣಾಮವಾಗಿ ಮಾತ್ರ. ಬ್ಯಾಕ್ಟೀರಿಯ ಮತ್ತು ಶಿಲೀಂಧ್ರಗಳು ಯಾವ ಪ್ರಚೋದನೆಯು ಇಲ್ಲದೆ ನಿರಂತರವಾಗಿ ಬೆಳಕನ್ನು ಸೂಸುತ್ತಲೇ ಇರುತ್ತವೆ. ಪ್ರಾಣಿ ಪ್ರಪಂಚದಲ್ಲಿ ಸು. ೪೦ ಗಣಗಳಿಗೆ ಸೇರಿದ ಸಹಸ್ರಾರು ಜೀವಿಗಳಲ್ಲಿ ಇಂಥ ಸಂದೀಪ್ತಿ ಕಂಡುಬಂದಿದೆ. ಸಮುದ್ರದ ಕಾಂತಿಗೆ ಬಹುಮಟ್ಟಿಗೆ ಪ್ರೊಟೊಜೋವಗಳು ಕಾರಣ. ಇನ್ನೂ ಹೆಚ್ಚು ಬೆಳಕು ಸೂಸುವ ಸಮುದ್ರ ಜೀವಿಗಳೆಂದರೆ: ಸೀಲೆಂಟರೇಟುಗಳು, (ಕುಟುರುಕಣವಂತಗಳು), ಲೋಳೆಮೀನುಗಳು ಮತ್ತು ಟೀನಾಫೊರಗಳು. ಮೃದ್ವಂಗಿಗಳಲ್ಲಿ (ಮಾಲಸ್ಕ್). ಉದರಪಾದಿಗಳಲ್ಲಿ (ಗ್ಯಾಸ್ಟ್ರಾಪೊಡ) ಮತ್ತು ಶೀರಪಾದಿಗಳಲ್ಲಿ (ಸೆಫಲಾಪೊಡ) ಜೀವಸಂದೀಪ್ತಿಯುಳ್ಳ ಜಾತಿಗಳಿವೆ. ನೂರಾರು ಬಗೆಯ ಮೀನುಗಳು ಸಹ ಬೆಳಕು ಸೂಸುತ್ತವೆ. ಕೆಲವು ಜಾತಿಯ ಮೀನುಗಳಲ್ಲಿ ಅವು ಸೂಸುವ ಬೆಳಕು ನಿಜವಾಗಿಯು ಆ ಮೀನುಗಳದಲ್ಲ, ಆದರೆ ಅದು ಅವುಗಳ ಸಹಜೀವಿಗಳಾದ

ಬ್ಯಾಕ್ಟೀರಿಯಗಳದು. ಭೂಮಿಯ ಮೇಲೆ ಜೀವಿಸುವ ಪ್ರಾಣಿಗಳಲ್ಲಿ ಮಿಣುಕು ಹುಳು, ಕೆಲವು ಬಗೆಯ ಜೀರುಂಡೆಗಳು ಮತ್ತು ಮಣ್ಣು ಹುಳುಗಳು ಬೆಳಕು ಸೂಸುವುವು. ಸಿಹಿನೀರಿನಲ್ಲಿ ವಾಸಿಸುವ ಜೀವಿಗಳಲ್ಲಿ ಜೀವ ಸಂದೀಪ್ತಿ ಗೋಚರಿಸಿಲ್ಲ. ಮೀನುಗಳಿಗಿಂತ ಉನ್ನತಮಟ್ಟದ ಯಾವ ಪ್ರಾಣಿಯಲ್ಲೂ ಜೀವಸಂದೀಪ್ತಿ ಇಲ್ಲದಿರುವುದು ಗಮನಾರ್ಹ.

ಜೀವಸಂದೀಪ್ತಿಯಿಂದ ಜೀವಿಗಳಿಗೆ ಅನೇಕ ಪ್ರಯೋಜನಗಳಿವೆ. ಸಮುದ್ರದ ಆಳವಾದ ಪ್ರದೇಶಗಳಲ್ಲಿ ನಿರಂತರವಾದ ಕತ್ತಲು ಆವರಿಸಿರುವುದರಿಂದ ಅಲ್ಲಿ ಜೀವಿಸುವ ಪ್ರಾಣಿಗಳ ಚಲನವಲನಕ್ಕೆ ಮತ್ತು ಒಂದನ್ನೊಂದು ಗುರುತಿಸುವುದಕ್ಕೆ ಅಗತ್ಯವಾದ ಬೆಳಕು ಜೀವಸಂದೀಪ್ತಿಯಿಂದ ಒದಗುತ್ತದೆ. ಸೂರ್ಯರಶ್ಮಿ ಪ್ರವೇಶ ಮಾಡುವ ಪ್ರದೇಶಗಳಲ್ಲಿ ಬೆಳಕು ಸೂಸುವ ಜೀವಿಗಳು ಇರುವುದರಿಂದ ರಾತ್ರಿಯ ವೇಳೆ ಶತ್ರುಗಳನ್ನು ಹೆದರಿಸುವುದಕ್ಕೂ, ಆಹಾರ ಯೋಗ್ಯ ಜೀವಿಗಳನ್ನು ಆಕರ್ಷಿಸುವುದಕ್ಕೂ, ಇದು ನೆರವಾಗುತ್ತದೆ. ಮಿಣುಕು ಹುಳುಗಳು ಲೈಂಗಿಕ ಆಕರ್ಷಣೆಗೆ ಇದನ್ನು ಬಳಸಿಕೊಳ್ಳುವುವು. ಮಿನುಗುವ ಅವಧಿಯಿಂದ ಮತ್ತು ಎರಡು ಮಿನುಗುಗಳ ನಡುವಣ ಅಂತರದಿಂದ ಮಿಣುಕು ಹುಳುಗಳು ಸ್ವಜಾತಿಯನ್ನು ಗುರುತಿಸಬಲ್ಲವು. ಆದರೆ, ಬ್ಯಾಕ್ಟೀರಿಯಗಳಿಗಾಗಲಿ, ಸಮುದ್ರದಲ್ಲಿ ತೇಲುವ ಪ್ರೋಟೋಜ಼ೋವಗಳಿಗಾಗಲಿ ಜೀವಸಂದೀಪ್ತಿಯಿಂದ ಯಾವ ಪ್ರಯೋಜನವಿದ್ದಂತೆ ಕಾಣುವುದಿಲ್ಲ. ಆದ್ದರಿಂದ ಅದು ವಿಕಸದಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಂಡಿರುವ ಒಂದು ಲಕ್ಷಣವಿರಬೇಕೆಂದು ನಂಬಲಾಗಿದೆ.

ಜೀವಸಂದೀಪ್ತಿ ಒಂದು ಬಗೆಯ ರಾಸಾಯನಿಕ ವಿದ್ಯಮಾನವೆಂಬ ಬಗ್ಗೆ ಮೊತ್ತ ಮೊದಲ ಸುಳಿವು ದೊರೆತದ್ದು ೧೬೬೭ ರಲ್ಲಿ. ಬ್ಯಾಕ್ಟೀರಿಯಗಳ ಮತ್ತು ಶಿಲೀಂಧ್ರಗಳ ಜೀವಸಂದೀಪ್ತಿ ಆಕ್ಸಿಜನ್ ಅಭಾವದಿಂದ ಕುಂಠಿತವಾಗುವುದೆಂಬುದನ್ನು ರಾಬರ್ಟ್ ಬಾಯ್ಲ್ ೧೬೬೭ರಲ್ಲಿ ತೋರಿಸಿದ. ಅಲ್ಲದೆ, ಜೀವಸಂದೀಪ್ತಿಗೆ ನೀರು ಆಗತ್ಯವೆಂಬುದನ್ನು ಡಿ ರ‍್ಯೂಮರ್ ೧೭೩೩ರಲ್ಲಿ ತೋರಿಸಿದ. ಮಿಣುಕು ಹುಳುಗಳ ಪುಚ್ಛಗಳನ್ನು ಆಯ್ದು ಒಣಗಿಸಿಟ್ಟು, ಎಷ್ಟು ದಿವಸಗಳ ಮೇಲೆ, ಅವನ್ನು ನೀರಿನೊಂದಿಗೆ ಅರೆದಾಗ ಬೆಳಕು ಹೊರಸೂಸುತ್ತದೆ. ಮಿಣುಕು ಹುಳು ಉತ್ಪತ್ತಿಮಾಡುವ ಯಾವುದೇ ರಾಸಾಯನಿಕ ಪದಾರ್ಥಗಳು ಜೀವ ಸಂದೀಪ್ತಿಗೆ ಕಾರಣವೆಂಬುದು ಜೀವಂತ ಮಿಣು ಕುಹುಳು ಅದಕ್ಕೆ ಅಗತ್ಯವಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಜೀವಸಂದೀಪ್ತಿಯನ್ನು ಉಂಟು ಮಾಡುವ ಪದಾರ್ಥಗಳಲ್ಲಿ ಲೂಸಿಫೆರಿನ್ ಮತ್ತು ಲೂಸಿಫೆರೇಸ್ ಎಂಬ ಎರಡು ಅಂಶಗಳಿರುವುವೆಂದು ಬಗ್ಗೆ ಆರ್. ಡೂಬ್ವ ೧೮೮೭ರಲ್ಲಿ ತೋರಿಸಿದ. ಈ ಎರಡರಲ್ಲಿ ಲೂಸಿಫೆರೇಸ್ ಎಂಬುದು ನೀರಿನಲ್ಲಿ ಕುದಿಸಿದಾಗ ನಾಶವಾಗಿ ಬಿಡುತ್ತದೆ. ಅದು ಸ್ವಭಾವತಃ ಒಂದು ಎನ್‌ಜೈಮ್. ಅದರ ಕ್ರಿಯಾವರ್ಧಕ ನೆರವಿನಿಂದ ಲೂಸಿಫೆರಿನ್ ವಾಯುಮಂಡಲದ ಆಕ್ಸಿಜನ್ನನ್ನು ಉಪಯೋಗಿಸಿಕೊಂಡು ಉತ್ಕರ್ಷಣ ಹೊಂದುವುದು. ಇದರ ಪರಿಣಾಮವೇ ಜೀವ ಸಂದಿಪ್ತಿ. ಚಿಪ್ಪು ಜೀವಿಯೊಂದರಿಂದ ಪ್ರತ್ಯೇಕಿಸಿದ ಲೂಸಿಫೆರಿನ್ನನ್ನು ಈ ರೀತಿ ಉತ್ಕರ್ಷಣಕ್ಕೆ ಗುರಿಮಾಡಿ, ಸಂದೀಪ್ತಿ ನಂದಿಹೋದ ಬಳಿಕ ಹೈಡ್ರೋಜನ್ ಒದಗಿಸಬಲ್ಲ ಕೆಲವು ಅಪಕರ್ಷಣಕಾರಿಗಳಿಂದ ಅದನ್ನು ಸಂಸ್ಕರಿಸಿದರೆ ಲೂಸಿಫೆರಿನ್ ಪುನಃ ಉತ್ಪತ್ತಿಯಾಗುವುದು. ಇದು ಲೂಸಿಫೆರೇಸ್ ಮತ್ತು ಆಕ್ಸಿಜನ್ನುಗಳ ನೆರವಿನಿಂದ ಪುನಃ ಸಂದೀಪ್ತಿಯನ್ನು ಉಂಟುಮಾಡುವ ಬಗ್ಗೆ ಇ.ನ್ಯೂಟನ್ ಹಾರ್ವೆ ೧೯೧೮ರಲ್ಲಿ ತೋರಿಸಿದ. ಆದರೆ ಈ ರೀತಿ ಲೂಸಿಫೆರಿನ್ನಿನ ಪುನರುತ್ಪಾದನೆ ಪದೇ ಪದೇ ನಡೆದರೆ ಪುನಃ ಅಪಕರ್ಷಿಸಲಾಗದ ಒಂದು ಉತ್ಕರ್ಷಣೋತ್ಪನ್ನ ಉಂಟಾಗುವಂತೆ ಕಂಡುಬರುತ್ತದೆ. ಒಂದೊಂದು ಜಾತಿಯ ಜೀವಿಗೂ ವಿಶಿಷ್ಟವಾದ ಲೂಸಿಫೆರಿನ್ ಮತ್ತು ಲೂಸಿಫೆರೇಸುಗಳಿರುತ್ತವೆ. ಯಾವುದೇ ಜೀವಿ ಉತ್ಪತ್ತಿ ಮಾಡುವ ಲೂಸಿಫೆರಿನ್ನನ್ನು ಆ ಜೀವಿಗೆ ಸಂಬಂಧವಿಲ್ಲದ ಅಥವಾ ದೂರಸಂಬಂಧದ ಜೀವಿಯೊಂದರಿಂದ ಪಡೆದ ಲೂಸಿಫೆರೇಸಿನ ಸಹಾಯದಿಂದ ಉತ್ಕರ್ಷಿಸುವುದು ಸಾಧ್ಯವಾಗುವುದಿಲ್ಲ. ವಿವಿಧ ಜೀವಿಗಳಿಂದ ಪಡೆದ ಲೂಸಿಫೆರಿನ್ನುಗಳನ್ನು ರಸಾಯನ ವಿಜ್ಞಾನಿಗಳು ಪರೀಕ್ಷಿಸಿ. ಅವುಗಳಲ್ಲಿ ಅನೇಕ ಲೂಸಿಫೆರಿನ್ನುಗಳ ರಾಸಾಯನಿಕ ರಚನೆಯನ್ನು ನಿಷ್ಕರ್ಷ ಮಾಡಿದ್ದಾರೆ. ಉದಾ: ಸಿಪ್ರಿಡೀನ ಎಂಬ ಚಿಪ್ಪುಜೀವಿಯಿಂದ ಪಡೆದ ಲೂಸಿಫೆರಿನ್ನಿನ ರಚನೆ.

ಜೀವಸಂದೀಪ್ತಿಯನ್ನು ತಣ್ಣನೆಯ ಬೆಳಕು ಎಂದು ವರ್ಣಿಸಿದರೂ, ಅದರಲ್ಲಿ ಉಷ್ಣ ಉತ್ಪತ್ತಿಯಾಗುವುದನ್ನು ಗಮನಿಸಬೇಕು. ಆದರೆ, ಉತ್ಪತ್ತಿಯಾಗುವ ಉಷ್ಣದ ಪ್ರಮಾಣ ಅತ್ಯಲ್ಪ. ಜೀವಸಂದೀಪ್ತಿಯ ಪರಿಣಾಮವಾಗಿ ಜೀವಿಯ ಉಷ್ಣತೆ ಸು. ೦.೦೦೧° ಸೆ. ಹೆಚ್ಚಾಗುತ್ತದೆ. ಜೀವ ಸಂದೀಪ್ತಿಯ ರೋಹಿತಗಳನ್ನು ಪರೀಕ್ಷಿಸಿದರೆ, ಪಟ್ಟೆಗಳು ವಿವಿಧ ಜೀವಿಗಳಲ್ಲಿ ವಿವಿಧ ಸ್ಥಾನಗಳಲ್ಲಿರುತ್ತವೆ. ಆದ್ದರಿಂದಲೇ ಕೆಲವು ಜೀವಿಗಳು ನೀಲಿಬೆಳಕನ್ನು ಚೆಲ್ಲಿದರೆ ಇನ್ನೂ ಕೆಲವು ಹಸಿರು ಬೆಳಕನ್ನು ಬೀರುತ್ತವೆ. ಮತ್ತೆ ಕೆಲವು ಕೆಂಪು ಬೆಳಕನ್ನು ಸೂಸುತ್ತವೆ. ಅಷ್ಟನ್ನು ಬಿಟ್ಟರೆ ಸಾಮಾನ್ಯ ಬೆಳಕಿಗೂ ಜೀವ ಸಂದೀಪ್ತಿಯ ಬೆಳಕಿಗೂ ಬೇರೆ ಯಾವ ವ್ಯತ್ಯಾಸ ಇಲ್ಲ.

ಎರಡನೆಯ ಮಹಾಯುದ್ಧದಲ್ಲಿ ಒಣಗಿದ ಸಿಪ್ರಿಡಿನ ಎಂಬ ಚಿಪ್ಪು ಜೀವಿಗಳನ್ನು ಜಪಾನೀಯರು, ಯುದ್ಧಭೂಮಿಯಲ್ಲಿ ಬೆಳಕಿನ ಆಕರವಾಗಿ ಬಳಸುತ್ತಿದ್ದರು. ಅಂಗೈಯಲ್ಲಿ ಒಂದೆರಡು ಸಿಪ್ರಿಡೀನಗಳನ್ನು ತೀಡಿ ಪುಡಿಮಾಡಿ ಉಗುಳಿನೊಂದಿಗೆ ಅದನ್ನು ರಂಗೊಳಿಸಿದರೆ ಭೂಪಟಗಳನ್ನು ಪರೀಕ್ಷಿಸುವುದಕ್ಕೆ ಮತ್ತು ಸಂದೇಶಗಳನ್ನು ಓದುವುದಕ್ಕೆ ಸಾಕಾಗುವಷ್ಟು ಬೆಳಕು ದೊರೆಯುತ್ತಿತ್ತು. ಆದರೆ, ಆ ಬೆಳಕು ಶತ್ರುಗಳ ಲಕ್ಷ್ಯ ಸೆಳೆಯುತ್ತಿರಲಿಲ್ಲ. ಲಘುವಾದ ಬೆಳಕು ಬೇಕಾದಲ್ಲಿ ಕೊಠಡಿಗಳನ್ನು ಬೆಳಗಲು ಜೀವಸಂದೀಪ್ತಿಯನ್ನು ಉಪಯೋಗಿಸಿಕೊಳ್ಳಬಹುದು ಬಗ್ಗೆ ವರದಿಗೀವೆ. ಆಕ್ಸಿಜನ್, ಕ್ಯಾಲ್ಸಿಯಮ್, ಎಟಿಪಿ ಮುಂತಾದ ರಾಸಾಯನಿಕಗಳನ್ನು ಗುರುತಿಸಲು ಜೀವಸಂದೀಪ್ತಿಯನ್ನು ಉಪಯೋಗಿಸುತ್ತಿದ್ದರೆ, ಬ್ಯಾಕ್ಟೀರಿಯಗಳನ್ನು ಎಣಿಸುವುದಕ್ಕೂ ಅದನ್ನು ಬಳಸಿದ್ದಾರೆ. ಪರಿಸರದ ಮಲಿನಕಾರಿಗಳನ್ನು ಗುರುತಿಸಲು ಕೂಡ ಇದನ್ನು ಬಳಸಿಕೊಳ್ಳಬಹುದು.

(ಜೆ.ಆರ್.ಎಲ್.)

**ಜೀವಸತ್ವಗಳು:** ಪ್ರಾಣಿಗಳ ಬೆಳವಣಿಗೆ, ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಅವಶ್ಯವಾಗಿ ಆಹಾರ ರೂಪದಲ್ಲಿ ಪೂರೈಕೆಯಾಗುವ ಜೈವಿಕ ವಸ್ತುಗಳು (ವೈಟಮಿನ್ಸ್) ಜೀವಾತು, ಅನ್ನಾಂಗ ಇದರ ಪರ್ಯಾಯ ನಾಮಗಳು.

ಆಹಾರದಲ್ಲಿ ಜೀವಸತ್ವಗಳ ಪ್ರಮಾಣ 0.005 ರಿಂದ 0.0002 ಸಹಜ ಬೆಳವಣಿಗೆ, ಆರೋಗ್ಯ ಕಾಪಾಡುವುದಕ್ಕೆ ಬೇಕಾಗುವ ಪ್ರಮಾಣ ಅತ್ಯಂತ ಕಡಿಮೆ ಆದರೆ, ಇದು ಅವಶ್ಯವಾಗಿ ಬೇಕಾಗುವ ಪದಾರ್ಥಗಳಲ್ಲಿ ಪ್ರಮುಖವಾದದು. ದೀರ್ಘಕಾಲ ಇವುಗಳ ಕೊರತೆ ಉಂಟಾದರೆ, ದೇಹದಲ್ಲಿ ವಿಶಿಷ್ಟ ರೋಗಗಳು ಉದ್ಭವಿಸುತ್ತವೆ. ರೋಗ ಮಾರಕವಾಗಬಹುದು. ಜೀವಸತ್ವಗಳ ಕೊರತೆಯಿಂದ ಉಂಟಾದ ರೋಗಗಳಿಗೆ ಅಭಾವಜನ್ಯ ರೋಗಗಳೆಂದು (ಡೆಫಿಷಿಎನ್ಸಿ ಡಿಸೀಜಸ್) ಹೆಸರು. ಉದಾ: ಮನುಷ್ಯರಿಗೆ ಬರುವ ಬೆರಿಬೆರಿ, ಸ್ಕರ್ವಿ, ರಿಕೆಟ್ಸ್, ಪೆಲ್ಲಾಗ್ರ ರೋಗಗಳು. ಪ್ರಾಣಿ ಮತ್ತು ಮನುಷ್ಯರ ಉಗಮ ಕಾಲದಿಂದಲೂ ಇಂಥ ರೋಗಗಳು ಇವೆ. ಆದರೆ, ಪುರಾತನ ಕಾಲದಲ್ಲಿ ಆದಿಮಾನವರಿಗೆ ಈ ರೋಗಗಳ ಬಗ್ಗೆ ಕಾರಣ ತಿಳಿದಿರಲಿಲ್ಲ.

ಆಹಾರಾಂಶಗಳ ಅಭಾವದಿಂದ ರೋಗ ಉಂಟಾಗುವುದೆಂಬುದು ಸು. 100 ವರ್ಷಗಳಿಂದೀಚೆಗೆ ತಿಳಿಯಿತು. 19ನೆಯ ಶತಮಾನದ ಅಂತ್ಯಭಾಗದಲ್ಲಿ ವಿಜ್ಞಾನಿಗಳು ಮಾಡಿದ ಅನೇಕ ಪ್ರಯೋಗಗಳ ಫಲದಿಂದ ಆಹಾರದಲ್ಲಿರಬೇಕಾದ ಪದಾರ್ಥಗಳ ಬಗ್ಗೆ ಪ್ರಾಮುಖ್ಯತೆ ನೀಡಲಾಯಿತು.

1. ಪ್ರೋಟೀನ್, ಶರ್ಕರ, ಪಿಷ್ಟಾದಿಗಳು, ಕೊಬ್ಬು ಆಹಾರದಲ್ಲಿ ಇರಬೇಕಾದ ಅವಶ್ಯ ವಸ್ತುಗಳು.

2. ಇವು ನಿರ್ದಿಷ್ಟ ಪ್ರಮಾಣದಲ್ಲಿ ಇರಬೇಕು. ಇವುಗಳಲ್ಲಿ ಕೊರತೆ ಉಂಟಾದರೆ, ಬೆಳವಣಿಗೆ ನಿಂತು, ರೋಗ ಉಂಟಾಗಿ, ಮರಣ ಸಂಭವಿಸುವುದು.

3. ಶಕ್ತಿಪೂರೈಕೆಗೆ ಸಾಕಾಗುವಷ್ಟು ಆಹಾರವನ್ನು ಸೇವಿಸಿದರೆ, ಯಾವ ವಿಶಿಷ್ಟ ಆಹಾರ ಕೊರತೆ ಉಂಟಾಗುವುದಿಲ್ಲ.

ಈ ಮೂರು ರಾಸಾಯನಿಕಾಂಶಗಳು ಮಾತ್ರ ಅವಶ್ಯಕ ಎಂಬ ಬಗ್ಗೆ ಸಂದೇಹ ಮೂಡಿತು. ಇದರ ನಿವಾರಣೆಗಾಗಿ ರಷ್ಯನ್ ವಿಜ್ಞಾನಿ ಲೂನಿನ್ ಒಂದು ಪ್ರಯೋಗವನ್ನು ರೂಪಿಸಿದ. ಮನುಷ್ಯ ಸೇವಿಸುವ ಆಹಾರದ ಬದಲು, ಶುದ್ಧೀಕರಿಸಿದ ಪ್ರೋಟೀನ್, ಸಕ್ಕರೆ, ಹಿಟ್ಟು, ಕೊಬ್ಬುಗಳ ಮಿಶ್ರಣವನ್ನು ನೀರು ಮತ್ತು ಲವಣಗಳನ್ನು ಮಿಶ್ರಣ ಮಾಡಿದೆ. ಬೇಸಲ್ ವಿಶ್ವವಿದ್ಯಾಲಯದ ಪ್ರೊಫೆಸರ್ ಬಂಗನ ಪ್ರಯೋಗಾಲಯದಲ್ಲಿ (1888)ರಲ್ಲಿ ಈ ಪ್ರಯೋಗವನ್ನು ಪ್ರಾರಂಭಿಸಿದ. ಈ ಕೃತಕ ಮಿಶ್ರಣವನ್ನು ನೀರಿನಲ್ಲಿ ಕದಡಿ ಹಾಲಿನಂತೆ ಮಾಡಿ ಇಲಿ ಮರಿಗಳಿಗೆ ಕೊಟ್ಟನು. ಇದನ್ನು ಸೇವಿಸಿದ ಮರಿಗಳು ಪೂರ್ಣ ಬೆಳೆಯಲಿಲ್ಲ. ಅವುಗಳ ಜೊತೆಯಲ್ಲೇ ಜನಿಸಿದ ಇತರ ಇಲಿ ಮರಿಗಳಿಗೆ ಹಾಲನ್ನು ನೀಡಿದಾಗ ಅವು ಸ್ವಾಭಾವಿಕವಾಗಿ ಬೆಳೆದವು. ಬಹುಶಃ ಹಾಲಿನಲ್ಲಿ ಪ್ರೋಟೀನ್, ಶರ್ಕರ, ಕೊಬ್ಬುಗಳ ಜೊತೆಗೆ ಅವ್ಯಕ್ತ ಕಾರ್ಬನಿಕ ವಸ್ತುಗಳು ಇರುವ ಬಗ್ಗೆ ಊಹಿಸಿದ. ಪ್ರಾಣಿಗಳು ಜೀವದಿಂದಿದ್ದು, ಬೆಳೆಯುವುದಕ್ಕೆ ಅವು ಅಗತ್ಯವಾಗಿರಬಹುದೆಂದು ಅಭಿಪ್ರಾಯಪಟ್ಟ. ಆದರೆ, ಇದು ಇತರ ವಿಜ್ಞಾನಿಗಳ ಲಕ್ಷ್ಯವನ್ನು ಸೆಳೆಯಲಿಲ್ಲ.

17ನೆಯ ಶತಮಾನದ ಮಧ್ಯಭಾಗದಲ್ಲೇ ವಿಜ್ಞಾನಿಗಳ ಲಕ್ಷ್ಯವನ್ನು ಸೆಳೆದಿದ್ದ ಬೆರಿಬೆರಿ ರೋಗ. ಇದು ಜಪಾನ್, ಭಾರತ, ಮಲಯ, ದೇಶಗಳಲ್ಲಿ ಅಕ್ಕಿಯನ್ನು ಪ್ರಧಾನ ಆಹಾರವಾಗಿ ಸೇವಿಸುತ್ತಿದ್ದ ಜನರಿಗೆ ಬರುತ್ತಿದ್ದ ಮಹಾಮಾರಕ ರೋಗವೆಂದು ವ್ಯಾಸಂಗಗಳಿಂದ ವ್ಯಕ್ತವಾಗಿತ್ತು. ಮೂಲತಃ ಅಕ್ಕಿಯಲ್ಲಿ ಉದ್ಭವವಾಗುವ ಯಾವುದೋ ಬೂಷ್ಟು ಅಥವಾ ವಿಷಾಣು ಈ ರೋಗಕ್ಕೆ ಕಾರಣವೆಂದು ನಂಬಿದ್ದರು. ಜಪಾನಿನ ನೌಕಾ ಸೈನಿಕರು ಬಹುವಾಗಿ ಈ ರೋಗದಿಂದ ನರಳುತ್ತಿದ್ದರು. ಟಕಾಕಿ ಜಪಾನ್ ನೌಕಾಧಿಕಾರಿ 1992

ರಲ್ಲಿ ನಾವಿಕರಿಗೆ ಅಕ್ಕಿ ಪ್ರಧಾನವಾದ ಆಹಾರದ ಜೊತೆಗೆ ಮೀನು, ತರಕಾರಿ, ಬಾರ್ಲಿ ಮತ್ತು ಮಾಲ್ಟುಗಳನ್ನು ಕೊಡಲು ಪ್ರಾರಂಭಿಸಿದ. ಅತೀ ಶೀಘ್ರದಲ್ಲಿಯೇ ಅವರಲ್ಲಿ ಬೆರಿಬೆರಿ ರೋಗ ಕಡಿಮೆ ಆಯಿತು. ಆದ್ದರಿಂದ, ಇದೊಂದು ಗುಣಪಡಿಸಬಹುದಾದ ರೋಗ, ಇದು ಬೂಷ್ಟು ವಿಷಾಣುಗಳಿಂದ ಬರುವ ರೋಗವಲ್ಲ ಎಂಬ ವಿಷಯ ವ್ಯಕ್ತವಾಯಿತು. ಆದರೆ, ಮೂಲಪ್ರಶ್ನೆಯನ್ನು ಇದು ಬಗೆಹರಿಸಲಿಲ್ಲ.

ಡಚ್ಚರ ಈಸ್ಟ್ ಇಂಡಿಯಾ ವಸಾಹತುಗಳಲ್ಲಿ ಸೆರೆಮನೆ ವೈದ್ಯನಾಗಿ ಕೆಲ ಮಾಡುತ್ತಿದ್ದ ಐಕಮನ್ (1897) ಮಾನವರಿಗೆ ಬರುವ ಬೆರಿಬೆರಿಯನ್ನು ಹೋಲುವ ಪಾಲಿನ್ಯೂರೈಟಿಸ್ ರೋಗ ಸೆರೆಮನೆ ಅಂಗಳದಲ್ಲಿ ವಾಸವಾಗಿದ್ದ ಕೋಳಿಗಳಲ್ಲಿ ಗಮನಿಸಿದ್ದ. ಇವು ಹೊರಗೆ ಹೋಗಲಾರದೆ ಸೆರೆಯಾಳುಗಳು ಬಿಸಾಡಿದ ಅನ್ನವನ್ನೇ ತಿಂದು ಜೀವಿಸುತ್ತಿದ್ದುವು. ಸೆರೆಮನೆಯಲ್ಲಿ ಮೆರುಗು (ಪಾಲಿಷ್) ಮಾಡಿದ ಅಕ್ಕಿಯನ್ನು ಉಪಯೋಗಿಸುತ್ತಿದ್ದುದನ್ನು ಗಣನೆಗೆ ತೆಗೆದುಕೊಂಡು, ಐಕ್‌ಮನ್ ಬೇರೆ ಕೋಳಿಗಳಿಗೆ ಮೆರುಗು ಮಾಡಿದ ಅಕ್ಕಿ ಅನ್ನವನ್ನು ಕೊಟ್ಟನು. ನಂತರದ ದಿನಗಳಲ್ಲಿ ಬೆರಿಬೆರಿಯನ್ನು ಹೋಲುವ ಪಾಲಿನ್ಯೂರೈಟಿಸ್ ರೋಗ ವಾಸಿಯಾಗುವುದನ್ನು ತೋರಿಸಿದ. ಅಕ್ಕಿಯನ್ನು ಮೆರುಗುಮಾಡಿದಾಗ ವಿಸರ್ಜಿತವಾಗುವ ತೌಡನ್ನು ಕೊಟ್ಟರೆ, ಅಥವ ತೌಡನ್ನು ನೀರಿನಲ್ಲಿ ನೆನೆಹಾಕಿ ಅದರ ಸಾರ ತೆಗೆದು ಅದನ್ನೇ ಕೊಟ್ಟರೆ ಪಾಲಿನ್ಯೂರೈಟಿಸ್ ಗುಣವಾಗುವುದನ್ನು ತೋರಿಸಿದ ಇದರಿಂದ ಬೆರಿಬೆರಿಯನ್ನು ಗುಣಪಡಿಸುವ ವಸ್ತು ಅಕ್ಕಿತೌಡಿನಲ್ಲಿದ್ದು. ನೀರಿನಲ್ಲಿ ಕರಗುವ ರಾಸಾಯನಿಕವೆಂಬುದು ಸ್ಪಷ್ಟವಾಯಿತು.

15ನೆಯ ಶತಮಾನದಲ್ಲಿ ಅಂತರಖಂಡ ಪ್ರಯಾಣಕ್ಕಾಗಿ ದೀರ್ಘಕಾಲಿಕ ಸಾಗರಯಾನಗಳು ಪ್ರಾರಂಭವಾದವು. ನಾವಿಕರು ಶೇಖರಿಸಿಟ್ಟಿದ್ದ ಆಹಾರ ಪದಾರ್ಥಗಳನ್ನು ತಿಂಗಳುಗಟ್ಟಲೆ ಸೇವಿಸಬೇಕಾಗಿತ್ತು. ಇಂಥ ನಿರ್ಬಂಧಿತ ಪರಿಸ್ಥಿತಿಯಲ್ಲಿ ಒಂದು ವಿಚಿತ್ರ ರೋಗಕ್ಕೆ ತುತ್ತಾಗುತ್ತಿದ್ದರು. ಇದಕ್ಕೆ 'ಸ್ಕರ್ವಿ' ರೋಗವೆಂದು ಹೆಸರಿಡಲಾಯಿತು. ವ್ಯಾಸ್ಕೊಡಗಾಮ ಪೋರ್ಚುಗಲ್ಲಿನಿಂದ ಭಾರತಕ್ಕೆ ಯಾನ ಮಾಡಿದಾಗ ಅವನ ನಾವಿಕರಲ್ಲಿ ಅನೇಕ ಸ್ಕರ್ವಿಯಿಂದ ಮರಣ ಹೊಂದಿದರು. ನಿಂಬೆಹಣ್ಣು ಸ್ಕರ್ವಿಯನ್ನು ತಡೆಗಟ್ಟುವ ಗುಟ್ಟು ಇಂಗ್ಲೆಂಡಿನ ಸರ್ ಜೇಮ್ಸ್ ಲ್ಯಾನ್‌ಕ್ಯಾಸ್ಟರ್‌ನಿಗೆ ತಿಳಿದಿದ್ದರಿಂದ, ಈಸ್ಟ ಇಂಡಿಯಾ ಕಂಪನಿಯ ಹಡಗುಗಳ ನಾವಿಕರು ರೋಗನಿವಾರಣೆಗಾಗಿ ನಿಂಬೆಹಣ್ಣು ತೆಗೆದುಕೊಳ್ಳಬೇಕೆಂದು 1601 ರಲ್ಲಿ ಆತ ನಿರ್ದೇಶನ ನೀಡಿದ. 150 ವರ್ಷಗಳಾದ ಬಳಿಕ, ಜೇಮ್ಸ್ ಲಿಂಡ್ ಸ್ಕರ್ವಿರೋಗದ ಅಧಿಕೃತ ವಿವರಣೆಯನ್ನು, ಅದರ ನಿವಾರಣೆಗೆ ಕಡ್ಡಾಯವಾಗಿ ನಿಂಬೆ ಹಣ್ಣಿನ ರಸ ಸೇವನೆಯ ಶಿಫಾರಸನ್ನು ಮಾಡಿದ. ಆ ಕಾಲದಿಂದ ಸ್ಕರ್ವಿ ರೋಗ ಚಿಕಿತ್ಸೆಗೆ ನಿಂಬೆ, ಕಿತ್ತಲೆ ಹಣ್ಣಿನ ರಸಗಳನ್ನು ಉಪಯೋಗಿಸುವುದು ರೂಢಿಗೆ ಬಂತು. ಕ್ಯಾಪ್ಟನ್ ಕುಕ್ ತನ್ನ ಮೂರು ವರ್ಷಗಳ ದಕ್ಷಿಣ ಅಟ್ಲಾಂಟಿಕ್ ಪೆಸಿಫಿಕ್ ಸಾಗರಗಳ ಯಾನವನ್ನು 1772 ರಲ್ಲಿ ಪ್ರಾರಂಭಿಸಿದ ಯಾನಕಾಲದಲ್ಲಿ ಹಡಗು ಲಂಗರು ಹಾಕಿದಲ್ಲೆಲ್ಲ ಈತ ತನ್ನ ನಾವಿಕರಿಗೆ ಅಲ್ಲಲ್ಲಿ ದೊರೆತ ಹಸಿ ತರಕಾರಿಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ಆಜ್ಞೆ ಮಾಡಿದ. ಇದರಿಂದ, ಆ ನಾವಿಕರಿಗೆ ಸ್ಕರ್ವಿ ರೋಗ ಬರಲಿಲ್ಲ.

1920 ರಿಂದ ಈಚೆಗೆ ತಾಜಾ ತರಕಾರಿಗಳಲ್ಲಿ ಸ್ಕರ್ವಿ ನಿರೋಧಕ ವಸ್ತು ಇರುವ ಬಗ್ಗೆ ತಿಳಿಯಿತು. ಶಿಶುಗಳಲ್ಲಿ ಕಂಡು ಬರುವ ಈ ರೋಗವನ್ನು ಇಂಗ್ಲೆಂಡಿನ ವೈದ್ಯ ಗ್ಲಿಸನ್ (1650) ವಿವರಿಸಿ ಇದನ್ನು ಹಠಾತನ್ನೆ ತಲೆದೋರುವ ಹಕ್ಕಿ ಕಡಪು (ರಿಕೆಟ್ಸ್) ಎಂದು ಗುರುತಿಸಿದ. ಆದರೆ, ಇದು ಹಕ್ಕಿಕಡಪು ಅಲ್ಲ, ಸ್ಕರ್ವಿ ರೋಗವೆಂದು 1883 ರಲ್ಲಿ ಸರ್ ತಾಮಸ್ ಬಾರ್ಲೊ ಧೃಡಪಡಿಸಿದ. ಮಕ್ಕಳಿಗೆ ಕಿತ್ತಳೆಹಣ್ಣು ಟೊಮೊಟೊ ಹಣ್ಣುಗಳ ರಸ ನೀಡುವುದು ರೂಢಿಗೆ ಬಂದ ಬಳಿಕ ಸ್ಕರ್ವಿರೋಗ ಕಡಿಮೆ ಆಯಿತು. ಆದರೆ, ಸ್ಕರ್ವಿ ನಿರೋಧಕ ಸತ್ವ ಪತ್ತೆ ಮಾಡಿದ್ದು 1932 ರಲ್ಲಿ ಕಿಂಗ್ ಮತ್ತು ವಾಫ್. ಇವರು ನಿಂಬೆರಸದಿಂದ ಜೀವಸತ್ವ 'ಸಿ' ಯನ್ನು ಬೇರ್ಪಡಿಸಿ, ಇದು ಸ್ಕರ್ವಿ ನಿರೋಧಕ ಸತ್ವವೆಂದು ತೋರಿಸಿದರು.

ಪೆಲ್ಲಾಗ್ರ ರೋಗ ಇಟಲಿಯ ಲಂಬಾರ್ಡಿ ಪ್ರದೇಶದಲ್ಲಿ ಬಹುಕಾಲದಿಂದ ಹರಡಿತ್ತು . ಈ ರೋಗಪೀಡಿತ ಜನರ ಚರ್ಮ ಒರಟು ಇತ್ತು. ಇಟಾಲಿಯನ್ ಭಾಷೆಯಲ್ಲಿ 'ಪೆಲ್ಲಿ' 'ಆಗ್ರೆ' ಎಂದರೆ 'ಒರಟು ಚರ್ಮ' ಎಂದು ಅರ್ಥ. ಇಟಲಿ ದೇಶದ ಫ್ರಾನ್ಸಿಸ್ಕೊಫ್ರಾಪೊಲ್ಲಿ ಎಂಬ ವೈದ್ಯ ಈ ರೋಗವನ್ನು ವಿವರವಾಗಿ 1771 ವಿವರಿಸಿದ. ಅಮೆರಿಕ ಸಂಯುಕ್ತ ಸಂಸ್ಥಾನ ದಕ್ಷಿಣ ಭಾಗದ ನೀಗ್ರೊ ಜನರಲ್ಲಿ ಈ ರೋಗ ವ್ಯಾಪಕವಾಗಿ ಬಲು ಹಿಂದಿನಿಂದಲು ಕಂಡು ಬಂದಿತ್ತು. ಇಟಲಿಯಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಪೆಲ್ಲಾಗ್ರದ ತೀಕ್ಷ್ಣತೆ ಹೆಚ್ಚಿ, ಜನತೆ ರೋಗಕ್ಕೆ ತುತ್ತಾದ್ದರಿಂದ ಈ ರೋಗದ ಬಗ್ಗೆ ಗಮನ ಹರಿಸಲಾಯಿತು. ಇದು ಅಭಾವ ಜನ್ಯ ರೋಗವೆನ್ನುವುದು ತಿಳಿಯಿತು. ನಿಕೋಟಿನಿಕ್ ಆಮ್ಲದ ಕೊರತೆ ಪೆಲ್ಲಾಗ್ರ ರೋಗಕ್ಕೆ ಕಾರಣ, ಈ ಆಮ್ಲವನ್ನು ನೀಡಿದರೆ ರೋಗವನ್ನು ನಿವಾರಿಸಬಹುದೆಂದು ತಿಳಿಯಿತು. ನಂತರ ನಿಕೋಟಿನಿಕ್ ಆಮ್ಲ ಮತ್ತು ನಿಕೋಟಿನ ಮೈಡುಗಳು ಆಹಾರದಲ್ಲಿ ಇರುವುದು ಅವಶ್ಯವೆಂದು 1926 ರ ವೇಳೆಗೆ ಧೃಢಪಡಿಸಲಾಯಿತು.

ಐಕ್‌ಮನ್ನನ ಸಹಾಯಕನಾದ ಗ್ರಿನ್ಸ್ (1901) ಎಂಬಾತ ಬೆರಿಬೆರಿ ಮತ್ತು ಅದನ್ನು ಹೋಲುವ ಕೋಳಿರೋಗ ಪಾಲಿನ್ಯೂರೈಟಿಸ್ ಇವು ಆಹಾರದಲ್ಲಿರುವ ವಿಶಿಷ್ಟ ವಸ್ತುವಿನ ಕೊರತೆಯಿಂದ ತಲೆದೋರುವುದೆಂದು ಅಭಿಪ್ರಾಯ ಪಟ್ಟ. ಆದರೆ, ಯಾವುದೇ ರೋಗ ಒಂದು ಆಹಾರಾಂಶದ ಕೊರತೆಯಿಂದ ಉಂಟಾದೀತೆಂಬುದು ಆಗಿನ ಕಾಲದ ಕಲ್ಪನೆಗೆ ಮೀರಿದ ವಿಷಯವಾಗಿತ್ತು. ಪ್ರೋಟೀನ್, ಸಕ್ಕರೆ ಪಿಷ್ಟಾದಿಗಳು ಕೊಬ್ಬು ಸಾಕಷ್ಟು ಮೆರುಗು (ಫಾಲಿಶ್) ಮಾಡಿದ ಅಕ್ಕಿಯನ್ನು ಹೊಟ್ಟೆ ತುಂಬಾ ತಿಂದ ಮೇಲೂ, ದೇಹದಲ್ಲಿ ಆಹಾರಾಂಶದ ಅಭಾವ ಉಂಟಾಗುತ್ತದೆ ಎಂಬುದನ್ನು ಯಾರೂ ನಂಬಲಾರದಾಗಿದ್ದರು. ಹೋಲ್ಸ್ಟ್ ಮತ್ತು ಪ್ರೋಲಿಕ್ (1907) ಗಿನಿಹಂದಿಗಳಿಗೆ ಒಣಹುಲ್ಲು ಮತ್ತು ಓಟ್ಸ್ ಕಾಳುಗಳನ್ನು ತಿನ್ನಿಸಿ ಅವುಗಳಲ್ಲಿ ಕೃತಕವಾದ ಸ್ಕರ್ವಿಯನುಂಟುಮಾಡಿದರು. ಹಾಪ್‌ಕಿನ್ಸ್ ಎಂಬಾತ 1906 ರಿಂದ 1912 ರ ವರೆಗೆ ಪ್ರಯೋಗಗಳನ್ನು ಮಾಡಿ ಪ್ರೊಟೀನ್, ಕೊಬ್ಬು, ಶರ್ಕರ ಪಿಷ್ಟಾದಿಗಳು, ನೀರು ಲವಣಗಳ ಮಿಶ್ರಣದಿಂದಾದ ಕೃತಕ ಆಹಾರದ ಜೊತೆಗೆ ಅತ್ಯಲ್ಪ ಪ್ರಮಾಣದಲ್ಲಿ (ದಿನಂಪ್ರತಿ ಕೇವಲ 3 ಸೆಂಮೀ$^3$ ರಷ್ಟು) ಹಾಲು ಮತ್ತು ಯೀಸ್ಟಿನ ಸಾರವನ್ನು ಕೊಡುತ್ತಿದ್ದರೆ, ಎಳೆ ಇಲಿ ಮರಿಗಳನ್ನು ಆರೋಗ್ಯವಾಗಿ ಬೆಳೆಸಬಹುದು ಎಂದು ತೋರಿಸಿದ. ಈ 6 ವರ್ಷಗಳಲ್ಲಿ ಈತ ಸಂಗ್ರಹಿಸಿದ್ದ ಮಾಹಿತಿಗಳು ಆಹಾರದಲ್ಲಿ ಪ್ರಧಾನಾಂಶಗಳ ಜೊತೆಗೆ ಅನುಷಂಗಿಕಾಂಶಗಳು (ಆಕ್ಸೆಸರಿ ಫುಡ್ ಫ್ಯಾಕ್ಟರ್ಸ್) ಇರಬೇಕು. ಬೆಳೆವಣಿಗೆ, ಆರೋಗ್ಯಕ್ಕೆ ಮತ್ತು ಜೀವಂತವಾಗಿರಲು ಇವು ಅವಶ್ಯ ಎಂದು ಖಚಿತಪಡಿಸಿದುವು. ಪುನ್ಕ (1912) ಎಂಬಾತ ಬೆರಿ ಬೆರಿ, ಸ್ಕರ್ವಿ, ಪೆಲ್ಲಾರ್ಗ, ರಿಕೆಟ್ಸ್ ಇವೆಲ್ಲ ಅಭಾವಜನ್ಯ ರೋಗಗಳು, ಆಹಾರದಲ್ಲಿ ಕೆಲವು ವಿಶೇಷ ವಸ್ತುಗಳು ಇರದಿದ್ದರೆ ಇಂಥ ರೋಗಗಳು ಉಂಟಾಗುತ್ತವೆ ಎಂದು ಪ್ರತಿಪಾದಿಸಿದ.

ಐಕ್‌ಮನ್ನನ ಪ್ರಯೋಗಗಳಿಂದ ಕೋಳಿಗಳ ಪಾಲಿನ್ಯೂರೈಟಿಸ್ಸನ್ನು ಗುಣಮಾಡಬಲ್ಲ ಅಂಶ ಅಕ್ಕಿ ತೌಡಿನಲ್ಲಿರುವುದನ್ನು ತಿಳಿದ ಮೇಲೆ, ಈ ಅಂಶವನ್ನು ಫುನ್ಕ (1911) ಆಲ್ಕೊಹಾಲ್‌ನಿಂದ ಸಂಸ್ಕರಿಸಿ ಹರಳುಗಳ ರೂಪದಲ್ಲಿ ಬೇರ್ಪಡಿಸಿದ್ದ. ಅದು ಒಂದು ಅಮೀನ್, ನೈಟ್ರೊಜನ್‌ಯುಕ್ತ ಕಾರ್ಬನಿಕ ವಸ್ತುಗಳ ಗುಂಪಿಗೆ ಸೇರಿದ ರಾಸಾಯನಿಕವೆಂದು ತೋರಿಸಿದ್ದ. ಆಹಾರದಲ್ಲಿ ಅನುಷಂಗಿಕಾಂಶಗಳು ಇರಬೇಕಾದದ್ದು ಅವಶ್ಯ ಎಂದು 1912 ರಲ್ಲಿ ಹಾಪ್ಕಿನ್ಸ ಪ್ರಕಟಿಸಿದ್ದು ಫುನ್ಕನ ಗಮನಕ್ಕೆ ಬಂತು. ಇದರಿಂದ ಪಾಲಿನ್ಯೂರೈಟಿಸ್ ನಿರೋಧಕ ವಸ್ತು ಇಂಥ ಆಹಾರಾಂಶ ಆಗಿರಬೇಕೆನ್ನುವುದು ವ್ಯಕ್ತವಾಯಿತು. ಜೀವಂತವಾಗಿರಲು ಬಲು ಅವಶ್ಯವಾದ ಇಂಥ ಅನುಷಂಗಿಕಾಂಶಗಳೆಲ್ಲವೂ ಪಾಲಿನ್ಯೂರೈಟಿಸ್ ನಿರೋಧಕ ವಸ್ತುವಿನಂತೆಯೇ ಅಮೀನುಗಳಾಗಿರಬೇಕು ಎಂದು "ಫುನ್ಕನು" ತರ್ಕಿಸಿದ. ಈ ಅಂಶವನ್ನು ವೈಟಲ್ +ಅಮೀನ್=ವೈಟಮೀನ್ ಎಂದು ಹೆಸರಿಸಿದ. ಇದು ಜೀವನಾವಶ್ಯಕ ಅಮೀನ್ ಎಂಬ ಪದವನ್ನು ಸೃಷ್ಟಿಸಿ, ಈ ಆಹಾರಾಂಶಗಳಿಗೆಲ್ಲ 'ವೈಟಮೀನು' ಎಂದು ಕರೆಯಲು ಸಲಹೆ ಮಾಡಿದ. ಆ ವೇಳೆಗೆ ಜಾನ್ ಹಾಪ್ಕಿನ್ಸ ವಿಶ್ವವಿದ್ಯಾಲಯದ ಮೆಕಾಲಮ್ ಮತ್ತು ಡೇವಿಸ್ ಎಂಬುವರು ಹೊಸದಾದ ಸಂಶೋಧನೆಯನ್ನು ಪ್ರಕಟಿಸಿದರು. ಬೆಣ್ಣೆಯಲ್ಲಿ ಮತ್ತು ತತ್ತಿಯ ಹಳದಿ ಭಾಗದ ಕೊಬ್ಬಿನಲ್ಲಿ ಇಲಿಮರಿಗಳ ಬೆಳವಣಿಗೆಗೆ ಮತ್ತು ಜೀವಂತವಾಗಿಡಲು ಇದು ಅವಶ್ಯ. ಅದು ಶುಷ್ಕನೇತ್ರವಸ್ಥಿತಿಯ ಕ್ಸಿರಾಫ್ಥಾಲ್ಮಿಯ ವಿರುದ್ಧ ರಕ್ಷಣೆ ಒದಗಿಸುತ್ತದೆ. ಇದರಲ್ಲಿ ನೈಟ್ರೋಜನ್ ಇಲ್ಲವಾದ್ದರಿಂದ ಇದು ಅಮೀನ್ ಅಲ್ಲ ಎಂಬುದಾಗಿ (1913–1914)ಪ್ರಕಟಣೆ ಮಾಡಿದರು. ಈ ವಸ್ತುವಿಗೆ ಮೇಕಾಲಮ್ ಎಂಬಾತ ಕೊಬ್ಬಿನಲ್ಲಿ ಕರಗುವ ಅಪರಿಚಿತ ವಸ್ತು ಎ ಎಂಬುದಾಗಿ ಕರೆದ. ಆಸ್‌ಬೋರ್ನ್ ಮತ್ತು ಮೆನ್ಡೆಲ್ ಎಂಬುವರು ಮೆಕಾಲಮನ ಪ್ರಯೋಗವನ್ನು ಪುನರಾವರ್ತಿಸಿ ಆ ಫಲಿತಾಂಶಗಳನ್ನು ಸ್ಥಿರೀಕರಿಸಿದರು. ಹಾಲಿನಲ್ಲಿ ಇಲಿಮರಿಗಳ ಬೆಳವಣಿಗೆಗೆ ಬೇಕಾಗುವ ಒಂದು ವಸ್ತು ಇದೆ. ಅದು ನೀರಿನಲ್ಲಿ ಕರಗುವುದು ಎಂದು 1908ರಿಂದ 1911ರವರೆಗಿನ ಪ್ರಯೋಗಗಳಿಂದ ತೋರಿಸಿದರು. ಈ ವಸ್ತುವಿಗೆ ಮೆಕಾಲಮ್ ನೀರಿನಲ್ಲಿ ಕರಗುವ ಅಪರಿಚಿತ ವಸ್ತು ಬಿ ಎಂದು ಸೂಚಿಸಿದ. ಮುಂದೆ ವ್ಯಕ್ತವಾಗಬಹುದಾದ ವಸ್ತುಗಳಿಗೆ ಅನುಕ್ರಮವಾಗಿ ಸಿ, ಡಿ, ಎಂದು ಕರೆಯಲು ನೀರಿನಲ್ಲಿ ಅಥವಾ ಕೊಬ್ಬಿನಲ್ಲಿ ಕರಗುವ ಅಪರಿಚಿತ ವಸ್ತುಗಳಾದ ಎ, ಬಿ, ಸಿ ಇತ್ಯಾದಿ ನಾಮಕರಣಮಾಡುವುದು ಉಚಿತವಲ್ಲ. ಆದರೆ, ಫುನ್ಕ್ ಹೇಳಿದಂತ ಈ ಎಲ್ಲಾ ವಸ್ತುಗಳು ಅಮೀನುಗಳಾಗಿಯೇ ಇರಬೇಕಾಗಿಲ್ಲವಾದ್ದರಿಂದ ಸಂಕ್ಷಿಪ್ತವಾಗಿ ವೈಟಮೀನ್ ಎಂಬ ಹೆಸರು ಅನುಚಿತ. ಆದ್ದರಿಂದ, ವೈಟಮೀನ್ ಎಂಬ ಪದದ ಕೊನೆಯ ಇ ಯನ್ನು ತೆಗೆದು, ವೈಟಮಿನ್ ಎಂದು ಹೆಸರಿಸಿ, ಆ ಪದದ ಅಂತಿಮದಲ್ಲಿ ಎ, ಬಿ ಇತ್ಯಾದಿ

ಅಕ್ಷರಗಳನ್ನು ಲಗತ್ತಿಸಿ ವ್ಯವಹರಿಸುವುದು ಸರಿ ಎಂದು 1920 ರಲ್ಲಿ ಡ್ರಮ್ಮಂಡ್ ಎಂಬಾತ ಸೂಚಿಸಿದ. ಇದರಂತೆ ಮೆಕಾಲಮ್ ಆವಿಷ್ಕರಿಸಿದ್ದ ಶುಷ್ಕ ನೇತ್ರ ನಿವಾರಕ ವಸ್ತುವಿಗೆ ವೈಟಮಿನ್ ಎ ಎಂದು, ಬೆರಿಬೆರಿ ರೋಗ ನಿವಾರಕ ವಸ್ತುವಿಗೆ ವೈಟಮಿನ್ ಬಿ ಎಂದು, ಸ್ಕರ್ವಿನಿವಾರಕ ವಸ್ತುವಿಗೆ ವೈಟಮಿನ್ ಸಿ ಎಂದು ರಿಕೆಟ್ಸ್ ನಿವಾರಕ ವಸ್ತುವಿಗೆ ವೈಟಮಿನ್ ಡಿ ಎಂದು ಕರೆಯಲು ನಿರ್ಧಾರವಾಯಿತು. ಅನೇಕ ವಸ್ತುಗಳು ವೈಟಮಿನ್ ಬಿ ತರಹ ನೀರಿನಲ್ಲಿ ಕರಗುವುದರಿಂದ, ಅಂತಹ ಮಿಶ್ರಣವಾಗಿರುವ ಪದಾರ್ಥಗಳನ್ನು ವೈಟಮಿನ್ ಬಿ ಕಾಂಪ್ಲೆಕ್ಸ್ ಎಂದು ಕರೆದು, ಅದರಲ್ಲಿರುವ ಬೇರೆ ಬೇರೆ ವೈಟಮಿನ್ನುಗಳಿಗೆ ಬಿ1, ವೈಟಮಿನ್ ಬಿ2 ಇತ್ಯಾದಿಯಾಗಿ ಹೆಸರನ್ನಿಡುವುದು ಬಳಕೆಗೆ ಬಂತು. 1920 ರಿಂದ ಮುಂದೆ 30–40 ವರ್ಷಗಳಲ್ಲಿ ಅನೇಕ ವೈಟಮಿನ್ನುಗಳನ್ನು ಆವಿಷ್ಕರಿಸಲಾಗಿದೆ. ಇವನ್ನು ಹೆಸರಿಸುವಾಗ ಡ್ರಮ್ಮಂಡನ ಸೂಚನೆಯನ್ನೇ ಅನುಸರಿಸಲಾಗಿದೆ.

ಜೀವಸತ್ವಗಳ ರಚನೆ, ಆಹಾರದಲ್ಲಿ ಇವುಗಳ ಪತ್ತೆ ಹಚ್ಚುವುದು, ರಾಸಾಯನಿಕ ರಚನೆ ಮುಂತಾದ ವಿಷಯಗಳ ಬಗ್ಗೆ ಸುದೀರ್ಘ ಸಂಶೋಧನೆ ಮಾಡಲಾಗಿದೆ. ವಿವಿಧ ಜೀವಸತ್ವಗಳ ಅಭಾವದಿಂದ ಬರುವ ರೋಗದ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿದೆ. ಮಾನವರಿಗೆ ಕೃತಕ ಅಹಾರವನ್ನು ತಿಂಗಳುಗಳವರೆಗೆ ಕೊಡುತ್ತಿದ್ದರೆ, ಉಂಟಾಗುವ ತೊಂದರೆ, ಅಭಾವಜನ್ಯ ರೋಗಗಳುಂಟಾಗುವಿಕೆ, ಯಾವ ನೈಸರ್ಗಿಕ ಆಹಾರ ಕೊಟ್ಟು ಇವನ್ನು ಗುಣಪಡಿಸಬಹುದಾದ ಕ್ರಮಗಳನ್ನು ಪ್ರಯೋಗಗಳಿಂದ ತಿಳಿದುಕೊಳ್ಳಲಾಗಿದೆ.

ಸಾಮಾನ್ಯ ಲಕ್ಷಣಗಳು: ಎಲ್ಲಾ ಜೀವಸತ್ವಗಳು ಜೈವಿಕ ವಸ್ತುಗಳು. ಇವು ಜೀವಿಗಳ ಸ್ವಾಭಾವಿಕ ಬೆಳವಣಿಗೆ ಮತ್ತು ಆರೋಗ್ಯಯುತವಾಗಿ ಜೀವಿಸಲು ಅವಶ್ಯ. ಇವು ಅತ್ಯಲ್ಪ ಪ್ರಮಾಣದಲ್ಲಿದ್ದುಕೊಂಡೇ ತಮ್ಮ ಕ್ರಿಯೆಯನ್ನು ನಿರ್ವಹಿಸುತ್ತವೆ. ಆದರೆ, ಜೀವಿಗಳ ಅಂಗಾಂಶಗಳ ರಾಸಾಯನಿಕ ರಚನೆಯಲ್ಲಿ ಇವು ಪಾಲುಗೊಳ್ಳುವುದಿಲ್ಲ. ಜೈವಿಕ ಕ್ರಿಯೆಗೆ ನೇರವಾಗಿ ಶಕ್ತಿಯನ್ನು ಒದಗಿಸುವುದಿಲ್ಲ. ಆದರೂ, ಶಕ್ತಿಯ ಉತ್ಪಾದನೆಗೆ ಮತ್ತು ಸದುಪಯೋಗಕ್ಕೆ ಇವು ಅತ್ಯಾವಶ್ಯಕ. ಈ ಕ್ರಿಯೆಯನ್ನು ಇವು ಸಾಮಾನ್ಯವಾಗಿ ಜೀವಕೋಶಗಳೊಳಗಿನ ಕಿಣ್ವದ ಘಟಕಗಳಾಗಿದ್ದುಕೊಂಡು ನಿರ್ವಹಿಸುವುವು. ದೇಹದಲ್ಲಿ ಉಷ್ಣತೆ ಆಮ್ಲತೆಗಳು ನಿರ್ದಿಷ್ಟ ಪ್ರಮಾಣದಲ್ಲಿದ್ದಾಗ ಮಾತ್ರ ಜೀವಸತ್ವಗಳು ಉಪಯುಕ್ತವಾಗಿರುತ್ತವೆ.

ಜೀವಸತ್ವಗಳು ಸಸ್ಯಗಳಲ್ಲಿ ತಯಾರಾಗಿ, ಪ್ರಾಣಿಗಳಿಗೆ ಆಹಾರ ರೂಪದಲ್ಲಿ ಒದಗುತ್ತವೆ. ಅನೇಕ ಪ್ರಾಣಿಗಳ ದೇಹಗಳಲ್ಲಿಯೇ ಸ್ಕರ್ವಿನಿರೋಧಕ ವಸ್ತು (ಎಸ್ಕಾರ್ಬಿಕ್ ಆಮ್ಲ) ಸಂಶ್ಲೇಷಣೆಗೊಳ್ಳುತ್ತದೆ. ಆದ್ದರಿಂದ ಇಂಥ ವಸ್ತುಗಳಿಗೆ ಈ ವಸ್ತು ಆಹಾರದಲ್ಲಿ ಇರಬೇಕಾದ ಅವಶ್ಯಕತೆ ಇಲ್ಲ. ಆದರೆ, ಮಾನವನ ದೇಹದಲ್ಲಿ ಈ ವಸ್ತುವಿನ ಸಂಶ್ಲೇಷಣೆ ಆಗುವುದಿಲ್ಲ, ಆದ್ದರಿಂದ, ಇದು ಮಾನವನಿಗೆ ಜೀವಸತ್ವ ಸಿ ಅವಶ್ಯ ಆಹಾರಾಂಶವಾಗಿದೆ. ಕೆಲವು ವೇಳೆ ಜೀವಸತ್ವದ ಸಮೀಪ ಸಂಬಂಧಿ ರಾಸಾಯನಿಕ, ಪ್ರಾಣಿ ದೇಹದಲ್ಲಿ ಜೀವಸತ್ವ ಪರಿವರ್ತಿತವಾಗುವುದು. ಇದಕ್ಕೆ ವೈಟಮಿನ್ ಎ, ಡಿ ಗಳನ್ನು ಉದಾಹರಿಸಬಹುದು. ಕೆಲವು ಸಂದರ್ಭಗಳಲ್ಲಿ ಕರುಳಿನಲ್ಲಿ ನಿರುಪದ್ರವಿಗಳಾಗಿರುವ ಬ್ಯಾಕ್ಟೀರಿಯಗಳು, ತಮ್ಮ ಜೈವಿಕ ಕ್ರಿಯೆಗಳಿಗೋಸ್ಕರ ತಯಾರು ಮಾಡಿಕೊಳ್ಳುವ ರಾಸಾಯನಿಕಗಳು ಅತಿಥೇಯ ವ್ಯಕ್ತಿಗೆ ವೈಟಮಿನ್ನಾಗಿ ಉಪಯೋಗಕ್ಕೆ ಬರುತ್ತವೆ. ಇಂಥ ವಸ್ತುಗಳು ಹೀಗೆ ಪೂರೈಕೆ ಆಗುವುದರಿಂದ ಆಹಾರದಲ್ಲಿ ಅವು ಇರಬೇಕೆನ್ನುವ ಅವಶ್ಯಕತೆ ಕಡಿಮೆ. ವೈಟಮಿನ್ ಬಿ12 ಮತ್ತು ವೈಟಮಿನ್ ಕೆ ಕೆಲವು ಪ್ರಮಾಣದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ಅವು ವಿಷವಾಗಿ ಪರಿಣಮಿಸುತ್ತವೆ. ವೈಟಮಿನ್ ಎ ಮತ್ತು ಡಿ ಗಳಲ್ಲಿ ಈ ಗುಣ ವ್ಯಕ್ತವಾಗಿದೆ. ಕೆಲವು ವೈಟಮಿನ್ನುಗಳಿಗೆ ದೇಹದಲ್ಲಿ ಪ್ರತಿವಸ್ತು ಇರಬಹುದು ಅಥವಾ ಉತ್ಪನ್ನವಾಗಬಹುದು.

ನಿರ್ದಿಷ್ಟವಾಗಿ ಕೆಲವು ಸಂದರ್ಭಗಳಲ್ಲಿ ವೈಟಮಿನ್ನಿನ ಕೊರತೆಯಿಂದ ಉಂಟಾಗುವ ರೋಗ ಸ್ಥಿತಿಗಳನ್ನು ಅರ್ಥಮಾಡಿಕೊಂಡು ಅವಶ್ಯ ವೈಟಮಿನ್ ನೀಡುವುದರಿಂದ ರೋಗವನ್ನು ಶಮನಗೊಳಿಸಬಹುದು. ವೈಟಮಿನ್ ಎ ಮಬ್ಬು ದೃಷ್ಟಿಗೆ (ಟ್ವೈಲೈಟ್ ವಿಷನ್) ಅಂದರೆ ಮಬ್ಬು ಬೆಳಕಿನಲ್ಲಿ ವಸ್ತುಗಳನ್ನು ನೋಡುವ ಸಾಮರ್ಥ್ಯಕ್ಕೆ ಅತ್ಯವಶ್ಯ. ಇದರ ಕೊರತೆ ಉಂಟಾದಾಗ ಮಬ್ಬು ದೃಷ್ಟಿ ಕಷ್ಟ ಅಥವಾ ಅಸಾಧ್ಯ. ವೈಟಮಿನ್ ಎ ಉಪಯೋಗಿಸಿದರೆ ಈ ಲೋಪ ಪರಿಹಾರವಾಗುತ್ತದೆ. ಇದೇ ರೀತಿ ವೈಟಮಿನ್ ಬಿ ಕೊರತೆಯಿಂದ ಉಂಟಾಗುವ ಬೆರಿಬೆರಿ ರೋಗಲಕ್ಷಣಗಳನ್ನು ಪರಿಶೀಲಿಸಿ, ಅವಶ್ಯ ವೈಟಮಿನ್ ಬಿ ನೀಡಿದಾಗ ಇದರ ತೊಂದರೆ ನಿವಾರಣೆಯಾಗುವುದು. ಕೊಬ್ಬು ಹೆಚ್ಚಾಗಿರುವ ಪದಾರ್ಥಗಳಲ್ಲಿ ಸ್ವಾಭಾವಿಕವಾಗಿಯೇ ವೈಟಮಿನ್ ಬಿ, ಸಿ ಗಳು ಮತ್ತು ಎ, ಡಿ ಗಳು ಹೆಚ್ಚಾಗಿರುತ್ತವೆ.

ಕೊರತೆ ಪ್ರಸಂಗಗಳು: ಎಲ್ಲಾ ಜೀವಸತ್ವಗಳು ವ್ಯಾಪಕವಾಗಿ ಎಲ್ಲ ಆಹಾರಗಳಲ್ಲಿರುವುದಿಲ್ಲ. ಕೆಲವು ವೈಟಮಿನ್ನುಗಳು ಆಹಾರ ಶೇಖರಣೆ ಮಾಡುವಾಗ ಮತ್ತು ಅಡುಗೆ ಮಾಡುವಾಗ ನಾಶವಾಗಿ ದೇಹಕ್ಕೆ ಸಿಗದೆ ಕೊರತೆ ಉಂಟಾಗುವುದು. ಇಂತಹ ಕೊರತೆಯಿಂದ ಪ್ರಾಣಿಗಳಲ್ಲಿ ವಿವಿಧ ರೋಗಗಳು ಉಂಟಾಗುವುವು. ಉದಾ: ನಿಕೊಟಿನಿಕ್ ಆಮ್ಲದ ಕೊರತೆಯಿಂದ ಮಾನವರಲ್ಲಿ ಪೆಲ್ಲಾಗ್ರ, ನಾಯಿಗಳಲ್ಲಿ ಬ್ಲ್ಯಾಕ್ ಟಂಗ್ ರೋಗಗಳು ಉಂಟಾಗುತ್ತವೆ. ಪ್ರೌಢ ಪ್ರಾಣಿಗಳಲ್ಲಿ ವೈಟಮಿನ್ನುಗಳ ಕೊರತೆಯಿಂದ ರೋಗ ಬರುವುದು ನಿಧಾನ. ಇದು ಕೆಲವು ತಿಂಗಳುಗಳು ಅಥವಾ ವರ್ಷಗಳಾಗಬಹುದು. ಆದರೆ, ಎಳೆ ವಯಸ್ಸಿನ ಪ್ರಾಣಿಗಳಲ್ಲಿ ವೈಟಮಿನ್ನಿನ ಅಭಾವ ಕೊರತೆ ಶೀಘ್ರವೇ ರೋಗ ಬರುತ್ತದೆ. ವೈಟಮಿನ್ನುಗಳ ಅಭಾವ ಪರಿಸ್ಥಿತಿ ಮತ್ತು ಸಂದರ್ಭಗಳಿಗನುಗುಣವಾಗಿ ವಿಭಿನ್ನವಾಗಿದೆ. ಉದಾ: 1) ಅಜೀರ್ಣ, ಹಸಿವಿನಿಂದಿರುವುದು, ಗರ್ಭಾವಸ್ಥೆಯ ವಾಕರಿಕೆ. 2) ಸುರಪಾನ, ಮನೋದೌರ್ಬಲ್ಯ. 3) ಅತಿದೀರ್ಘಕಾಲ ಆಹಾರ ಶೇಖರಣೆ, ಅಸಮರ್ಪಕ ಪಾಕ ವಿಧಾನ. 4) ರಕ್ತಗತವಾಗುವುದರಲ್ಲಿ ತೊಂದರೆ, ಕರುಳಿನ ರೋಗಗಳ ಭೇದಿ, 5) ವೈಟಮಿನ್ನುಗಳ ಅಭಾವದಿಂದಲೆ ಉಂಟಾದ ಸ್ಪ್ರೂ ರೋಗದಂಥ ಸ್ಥಿತಿ. 6) ಯಕೃತ್ತಿನ ವ್ಯಾಧಿಗಳು 7) ಎಡಿಗಂತಿ 8) ಹಾಲೂಡಿಸುವಿಕೆ 9) ಕರುಳಿನಲ್ಲಿ ನಾಶ: ಪ್ರತ್ಯಾಮ್ಲೀಯಗಳು, ಸಲ್ಫೋನೆಮೈಡುಗಳು, ಪೆನಿಸಿಲ್ಲಿನ್ ಮುಂತಾದ ಜೈವಿಕ ಪ್ರತಿರೋಧಕಗಳಿಂದ ಕರುಳಿನ ಬ್ಯಾಕ್ಟೀರಿಯಗಳ ನಾಶ. 10) ಜ್ವರ, ಸೋಂಕು, ಗರ್ಭಾವಸ್ಥೆ, 11) ಮಧುಮೇಹ, ಹೈಪರ್ ಥೈರಾಯ್ಡಿಸಮ್ಮಿನಂತ ಚಯಾಪಚಯಕ ರೋಗಗಳು. 12) ಆಹಾರದಲ್ಲಿ ಅಧಿಕ ಶರ್ಕರ ಪಿಷ್ಟಾದಿಗಳು ಇತ್ಯಾದಿ.

ಜೀವಸತ್ವಗಳ ಕೊರತೆಯಿಂದ ಉಂಟಾಗುವ ಸ್ಕರ್ವಿ, ರಿಕೆಟ್ಸ್, ಬೆರಿಬೆರಿ, ಪೆಲ್ಲಾಗ್ರ ಮುಂತಾದ ರೋಗಗಳನ್ನು ಗುರುತಿಸುವುದು ಸುಲಭ. ಆದರೆ, ಬಹು ದೀರ್ಘಕಾಲದ ವೈಟಮಿನ್ನುಗಳ ಅಲ್ಪಕೊರತೆಯಿಂದಾಗುವ ಅವ್ಯವಸ್ಥೆಗಳಲ್ಲಿ ನಿರ್ದಿಷ್ಟ ಕಾರಣಗಳನ್ನು ಗುರುತಿಸುವುದು ಕಷ್ಟ. ಏಕೆಂದರೆ, ವ್ಯಕ್ತಿ ನಿರ್ದಿಷ್ಟ ರೋಗದಿಂದ ನರಳುವ ಲಕ್ಷಣಗಳಿರುವುದಿಲ್ಲ. ಆದರೆ, ಸುಸ್ತು, ನಿದ್ರೆ ಬಾರದಿರುವಿಕೆ, ತಲೆನೋವು, ಮನಸ್ಸಿನ ಕಿರಿಕಿರಿ, ಆಲಸ್ಯ, ಅನ್ನ ಸೇರದಿರುವಿಕೆ, ಅಜೀರ್ಣ, ಮಾನಸಿಕ ದೌರ್ಬಲ್ಯ, ಭೀತಿ ವ್ಯಕ್ತಿಯನ್ನು ಬಾಧಿಸುತ್ತಿರುತ್ತವೆ. ಹೀಗಾಗಿ, ಅನೇಕ ವೈಟಮಿನ್ನುಗಳನ್ನು ಒಟ್ಟಿಗೆ ಉಪಯೋಗಿಸಿ, ವ್ಯಕ್ತಿಯ ಅಭಾವಜನ್ಯ ಸ್ಥಿತಿಯಿಂದ ನರಳುವ ಕಾರಣ ಪತ್ತೆ ಮಾಡಿ, ಸೂಕ್ತ ಚಿಕಿತ್ಸೆ ನೀಡಬೇಕು.

ಪ್ರಮಾಣಮಾಪನ: ವಿವಿಧ ಆಹಾರ ವಸ್ತುಗಳಲ್ಲಿ ಜೀವಸತ್ವಗಳ ಪ್ರಮಾಣ ಶೋಧಿಸಲು ರಾಸಾಯನಿಕ, ಜೈವಿಕ ಮತ್ತು ಜೀವರಾಸಾಯನಿಕ ಮಾರ್ಗಗಳನ್ನುಸರಿಸುವುದು. ಜೈವಿಕಮತ್ತು ಜೀವರಾಸಾಯನಿಕ ವಿಧಾನಗಳಲ್ಲಿ ಯೀಸ್ಟ್ ಅಥವಾ ಬ್ಯಾಕ್ಟೀರಿಯಾಗಳನ್ನು ವೃದ್ಧಿಗೊಳಿಸುವ ಸಾಮರ್ಥ್ಯ ಮತ್ತು ಪ್ರಾಣಿಗಳಲ್ಲಿ ಕೃತಕವಾಗಿ ಉಂಟುಮಾಡಬಹುದಾದ ಅಭಾವ ಜನ್ಯ ರೋಗಗಳನ್ನು ತಡೆಹಿಡಿಯುವ ಸಾಮರ್ಥ್ಯವನ್ನು ಪರೀಕ್ಷಿಸಿ, ಒಂದು ಆಹಾರ ವಸ್ತುವಿನಲ್ಲಿರುವ ವೈಟಮಿನ್ನಿನ ಪ್ರಮಾಣವನ್ನು ಅರಿಯಬಹುದು. ಈ ರೀತಿ ಪ್ರಾಣಿಗಳ ಮೇಲೆ ಹಾಗೂ ಸೂಕ್ಷ್ಮಾಣುಗಳ ಪ್ರಯೋಗದಿಂದ ಮಾಪನ ಮಾಡಬಹುದು. ಇದರಿಂದ ಪ್ರತಿ ವೈಟಮಿನ್ನಿಗೂ ಒಂದು ನಿರ್ದಿಷ್ಟ ರೀತಿಯ ಮಾನವನ್ನು ನಿಷ್ಕರ್ಷಿಸಿ ಅದನ್ನು ಅಂತರರಾಷ್ಟ್ರೀಯ ಮಾನವನ್ನಾಗಿ ಪರಿಗಣಿಸಿದೆ. ರಾಸಾಯನಿಕವಾಗಿ ಶುದ್ಧವಸ್ತು ಲಭಿಸಿದ್ದರೆ ಅದರ ತೂಕಕ್ಕೂ ಅಂತಾರಾಷ್ಟ್ರೀಯ ಮಾನಕ್ಕೂ ತಾಳೆ ಮಾಡಲಾಗಿದೆ. ಸಾಮಾನ್ಯವಾಗಿ ಪ್ರಾಣಿಗಳಲ್ಲಿ ಪ್ರಾಯೋಗಿಕವಾಗಿ ನಿರ್ಧರಿಸಿರುವ ಪ್ರಮಾಣವನ್ನು ಅನುಸರಿಸಿ ವೈಟಮಿನ್ನುಗಳ ಅವಶ್ಯಕತೆಯನ್ನು ನಿರ್ಧರಿಸಲಾಗಿದೆ. ಈ ಲೆಕ್ಕದ ಪ್ರಕಾರ ಮಾನವರಿಗೆ ವಾಸ್ತವವಾಗಿ ಬೇಕಾಗುವುದಕ್ಕಿಂತ ಹೆಚ್ಚಾಗಿಯೆ ವೈಟಮಿನ್ನುಗಳು ಒದಗುವುವು. ಮಾನವನ ದೇಹದಲ್ಲಿ ಕೆಲವು ವೈಟಮಿನ್ನುಗಳು ಅಗತ್ಯಕ್ಕಿಂತ ಹೆಚ್ಚಾಗಿ ಪೂರೈಕೆಯಾದ ಅನ್ಯವಸ್ತುಗಳಿಂದ ಭಾಗಶ: ಸಂಶ್ಲೇಷಿತವಾಗುತ್ತವೆ. ಕ್ರೇಹ್ಲ್ ಮತ್ತು ಎಲ್ವಿಯೆಮ್ (1945) ಟ್ರಿಪ್ಟೋಫೇನಿನಿಂದ ನಿಕೋಟಿನ್ ಆಮ್ಲ ದೇಹಕ್ಕೆ ಭಾಗಶಃ ಒದಗುವುದನ್ನು ಇಲ್ಲಿ ಉದಾಹರಿಸಬಹುದು. ಆಹಾರದಲ್ಲಿ ಹೆಚ್ಚು ಪ್ರೋಟೀನ್ (ಉದಾ:ಮೀಥೈಯೋನೀನ್ ಆಮೈನೋ ಆಮ್ಲ) ಇದ್ದರೆ, ವೈಟಮಿನ್ ಬಿ6 ಜಾಸ್ತಿ ಬೇಕಾಗುತ್ತದೆ. ಇದು ವೈಟಮಿನ್ ಪ್ರತಿರೋಧಕ ವಸ್ತುಗಳು ವೈಟಮಿನ್ನಿನ ಅಗತ್ಯವನ್ನು ಹೆಚ್ಚುವ ಬಗ್ಗೆ ತಿಳಿಸುತ್ತದೆ. ಮಾನವರ ಚಟುವಟಿಕೆ, ವಯಸ್ಸು, ತೂಕ, ಆರೋಗ್ಯ ಮತ್ತು ಅನಾರೋಗ್ಯ ಸ್ಥಿತಿಗಳು ಮತ್ತು ಆಹಾರ ಸೇವನೆಯ ವೈಶಿಷ್ಟ್ಯಗಳನ್ನು ಅನುಸರಿಸಿ, ಪ್ರತಿಯೊಂದು ಎಷ್ಟಿರಬೇಕೆಂದು ನಿರ್ಧರಿಸಿ ಪಟ್ಟಿ ಮಾಡಿರುವಂತೆ ಪ್ರತಿಯೊಂದು ವೈಟಮಿನ್ನಿನ ಪ್ರಮಾಣ ಎಷ್ಟಿರಬೇಕೆಂದು ಪಟ್ಟಿ ಮಾಡಲಾಗಿದೆ. ವಿವಿಧ ಆಹಾರ ಪದಾರ್ಥಗಳಲ್ಲಿರುವ ವೈಟಮಿನ್‌ಗಳ ಪ್ರಮಾಣದ ಪಟ್ಟಿ ಇದೆ. ಲೀಗ್ ಆಫ್ ನೇಷನ್ಸ್ ಕಾಲದಲ್ಲೇ ಇದು ತಯಾರಾಯಿತು. ಅಮೆರಿಕ ಸಂಯುಕ್ತಸಂಸ್ಥಾನದ ನ್ಯೂಟ್ರಿಷನ್ ರಿಸರ್ಚ ಕೌನ್ಸಿಲ್ 1943, 1945, 1948 ರಲ್ಲಿ ಈ ಅಳತೆ ಪ್ರಮಾಣದ ಪಟ್ಟಿಗಳನ್ನು ತಯಾರಿಸಿದೆ. ಈ ಪಟ್ಟಿಗಳಲ್ಲಿ ಎಲ್ಲ ವೈಟಮಿನ್ನುಗಳು ಕಾಣುವುದಿಲ್ಲ. ಏಕೆಂದರೆ,

ದೇಹದಲ್ಲಿ ಅವು ಭಾಗಶಃ ಸಂಶ್ಲೇಷಿಸಲ್ಪಡಬಹುದು. ಕೆಲವು ವೈಟಮಿನ್ನುಗಳು ಕಡಿಮೆ ಪ್ರಮಾಣದಲ್ಲಿ ಬೇಕಾಗಿದ್ದರು, ಅಭಾವ ಪರಿಸ್ಥಿತಿ ಸಾಮಾನ್ಯವಾಗಿ ಉಂಟಾಗುವುದಿಲ್ಲ. ಅಲ್ಲದೆ ಅಭಾವದಿಂದ ಉಂಟಾದ ಅನಾನುಕೂಲತೆ ತೀವ್ರವಾಗಿರುವುದಿಲ್ಲ. ಆದ್ದರಿಂದ, ಅವು ಇತರ ವೈಟಮಿನ್ನುಗಳಂತೆ ಮುಖ್ಯ ವಸ್ತುಗಳೆಂದು ಪರಿಗಣಿಸಲಾಗಿಲ್ಲ.

ಜೀವಸತ್ವಗಳನ್ನು ಅವುಗಳ ವಿಲೀನ ಕ್ರಿಯೆಗಳಿಗನುಗುಣವಾಗಿ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ.

1. ಕೊಬ್ಬಿನಲ್ಲಿ ವಿಲೀನವಾಗುವ ಜೀವಸತ್ವಗಳು.

2. ನೀರಿನಲ್ಲಿ ವಿಲೀನವಾಗುವ ಜೀವಸತ್ವಗಳು.

ಜೀವಸತ್ವ ಎ.ಡಿ,ಇ, ಮತ್ತು ಕೆ ಮೊದಲನೇ ಗುಂಪಿಗೆ ಸೇರಿವೆ. ಜೀವಸತ್ವ ಬಿ ಸಂಕೀರ್ಣ ಮತ್ತು ಜೀವಸತ್ವ ಸಿ ಎರಡನೇ ಗುಂಪಿಗೆ ಸೇರಿವೆ.

ಜೀವಸತ್ವಗಳ ವಿವರಣೆಗಳು: ವೈಟಮಿನ್ 'ಎ' ಜಟಿಲ ಅಣುರಚನೆಯುಳ್ಳ ಆಲ್ಕೋಹಾಲ್ ಇದನ್ನು ವೈಟಮಿನ್ ಎ (ರೆಟಿನಾಲ್) ಮತ್ತು ವೈಟಮಿನ್ ಎ2 (ಡೈಹೈಡ್ರೋರೆಟಿನಾಲ್) ಎಂಬ ಎರಡು ರಾಸಾಯನಿಕಗಳ ರೂಪದಲ್ಲಿದೆ.

ರೆಟಿನಾಲ್ (ಜೀವಸತ್ವ ಎ1) ನ ಸಂರಚನೆ

ಡೈಹೈಡ್ರೊಫರೆಟಿನಾಲ್ (ಜೀವಸತ್ವ ಎ2) ಸಂರಚನ : 1928–29 ರಲ್ಲಿ ವಾನ್ ಯೂಲರ್ ಸಸ್ಯಗಳಿಂದ ಅವುಗಳ ಹಳದಿ, ಕೆಂಪು ವರ್ಣ ವಸ್ತುಗಳಾದ ಕ್ಯಾರೋಟೀನುಗಳನ್ನು ಬೇರ್ಪಡಿಸಿದ. 1930–33 ರಲ್ಲಿ ರಿಚರ್ಡ ಕೂಹ್ನ್ ಕ್ಯಾರೊಟೀನ್ ಗಳಿಂದ ವೈಟಮಿನ್ ಎ ಯನ್ನು ಪ್ರಯೋಗ ಶಾಲೆಯಲ್ಲಿ ತಯಾರಿಸಿ, ಕ್ಯಾರೋಟೀನುಗಳು ವೈಟಮಿನ್ ಎ ಗೂ ಇರುವ ಸಂಬಂಧವನ್ನು ದೃಢಪಡಿಸಿದ ಎ ವೈಟಮಿನ್ನಿನ ರಾಸಾಯನಿಕ ರಚನೆಯನ್ನು ಪಾಲ್‌ಕಾರರ್ (1928–1933) ಶೋಧಿಸಿದ. 1946–47 ರಲ್ಲಿ ಇದರ ಕೃತಕ ಸಂಶ್ಲೇಷಣೆಯನ್ನು ಐಸ್ಲರ್, ಅರೆನ್ಸ ಮೈಲಸ್ ಮುಂತಾದವರು ಮಾಡಿದರು. ಇದರ ಶುದ್ಧವಸ್ತುವನ್ನು ಹಳದಿ ಹರಳುಗಳಾಗಿ ಪಡೆಯಬಹುದು. ಇದು $62^0$ ಮತ್ತು $64^0$ ಸೆ ಉಷ್ಣತೆಯಲ್ಲಿ ಕರಗಿ ದ್ರವವಾಗಿ ಹಳದಿ ಎಣ್ಣೆಯಿಂದ ಆಗುತ್ತದೆ. ಕೊಬ್ಬಿನಲ್ಲೂ, ಕೊಬ್ಬನ್ನು ವಿಲೀನವಾಗಿಸಿಕೊಳ್ಳಬಲ್ಲ ದ್ರಾವಣಗಳಲ್ಲಿ ಕರಗುತ್ತವೆ. ಶೀಘ್ರವಾಗಿ ಉತ್ಕರ್ಷಣೆಗೊಳ್ಳಬಲ್ಲದು. ಆದರೆ, ಸಾಧಾರಣ ಪಾಕ ವಿಧಾನಗಳಲ್ಲಿ ಇದರ ಹೆಚ್ಚು ಭಾಗ ನಷ್ಟವಾಗುವುದಿಲ್ಲ. ಮೀನುಗಳ ಕಾಡ್ ಹ್ಯಾಲಿಬಟ್ ಮತ್ತು ಶಾರ್ಕಗಳ ಯಕೃತ್ತಿನಿಂದ ಪಡೆಯಲಾಗುವ ಎಣ್ಣೆ, ಹಾಲು, ಹಾಲಿನ ಉತ್ಪನ್ನಗಳು, ತತ್ತಿಯ ಹಳದಿ ದ್ರವದಲ್ಲಿ ವೈಟಮಿನ್ ಎ ಹೆಚ್ಚಾಗಿರುತ್ತದೆ. ಸಸ್ಯಜನ್ಯ ಎಣ್ಣೆಗಳಲ್ಲಿ ಇರುವುದಿಲ್ಲ. ಕೆಂಪು ತರಕಾರಿಗಳು ಮತ್ತು ಸೊಪ್ಪುಗಳಲ್ಲಿ ಕ್ಯಾರೋಟೀನ್ ವರ್ಣ ವಸ್ತು ಇರುತ್ತದೆ. ಇದು ಅಣುರಚನೆಯಲ್ಲಿ ಸ್ವಲ್ಪ ವ್ಯತ್ಯಾಸವಿರುವ ಅನೇಕ ರಾಸಾಯನಿಕಗಳ ಮಿಶ್ರಣ. ಇದಕ್ಕೆ ಕ್ಯಾರೋಟೀನುಗಳೆನ್ನುವರು. ಪ್ರಾಣಿದೇಹದಲ್ಲಿ ಇ–ಕ್ಯಾರೋಟೀನ್ ವೈಟಮಿನ್ ಎ ಆಗಿ ಪರಿವರ್ತಿತವಾಗುತ್ತದೆ. ಇ–ಕ್ಯಾರೋಟೀನ್ ಅರ್ಧತೂಕದಷ್ಟು ವೈಟಮಿನ್ ಎ ಆಗುತ್ತದೆ ಕಾರಣ, ಕ್ಯಾರೋಟೀನುಗಳಿಗೆ ವೈಟಮಿನ್ ಎ ಆಗಿ ಪರಿವರ್ತಿತವಾಗುತ್ತದೆ. ಸಸ್ಯಗಳಲ್ಲಿ ಈ ಪರಿವರ್ತನೆ ಸಾಧ್ಯವಿಲ್ಲ. ಆದ್ದರಿಂದ ಸಸ್ಯಗಳಲ್ಲಿ ಎ ವೈಟಮಿನ್ನಿನ ಅಂತಾರಾಷ್ಟ್ರೀಯ ಘಟಕ 0.344 ಮೈ.ಗ್ರಾಂ. ಎ ವೈಟಮಿನ್ ಅಸಿಟೇಟಿಗೆ, 0.3 ಮೈಗ್ರಾ ವೈಟಮಿನ್ ಎ ಗೆ 0.6 ಮೈ.ಗ್ರಾ. ಇ–ಕ್ಯಾರೋಟಿನಿಗೆ ಸಮ. (ಮೈಗ್ರಾಂ=0.001 ಮಿ.ಗ್ರಾಂ).

ವಯಸ್ಕರಿಗೆ ಪ್ರತಿದಿನ 5,000 ಅಂತಾರಾಷ್ಟ್ರೀಯ ಘಟಕಗಳು ಅವಶ್ಯಕ. ನವಜಾತ ಶಿಶುವಿಗೆ, 1500, ಬೆಳೆಯುವ ಮಕ್ಕಳಿಗೆ 2,000–5,000, ಗರ್ಭಿಣಿಯರಿಗೆ 6,000–8,000 ಘಟಕಗಳು ಬೇಕಾಗುತ್ತವೆ. ವಿವರಣೆಗೆ ನೋಡಿ ಕೋಷ್ಟಕ 1

ಕೋಷ್ಟಕ 1 ವೈಟಮಿನ್ನುಗಳ ದೈನಂದಿನ ಸೇವನೆಯ ಪ್ರಮಾಣಗಳು

(ಅಮೇರಿಕ ಸಂಯುಕ್ತ ಸಂಸ್ಥಾನದ ಫೂಡ್ ಅಂಡ್ ರಿಸರ್ಚ ಬೋರ್ಡ, ನ್ಯಾಷನಲ್ ರಿಸರ್ಚ ಕೌನ್ಸಿಲ್ ಮಾಡಿರುವ ಶಿಫಾರಸು)

(ಕೆ.ಎಸ್.ಯು; ಎಸ್‌ಬಿಎಚ್; ಎಸ್ ಆರ್ ಆರ್)

ಎ ವೈಟಮಿನ್ ಚರ್ಮ ಮತ್ತು ಲೋಳೆಪೊರೆಗಳ ಸಹಜಾವಸ್ಥೆಗೆ ಅವಶ್ಯ. ಕಣ್ಣಿನಲ್ಲಿ ರ್ಹೊಡಾಪ್ಸಿನ್ ರಾಸಾಯನಿಕದ ಪುನರ್‌ಸ್ಸಂಯೋಜನೆಗೆ ಈ ವೈಟಮಿನ್ ಅವಶ್ಯಕ. ಇದು ದೃಷ್ಟಿಕ್ರಿಯೆಯಲ್ಲಿ ಭಾಗವಹಿಸುತ್ತದೆ. ಮಗು ಬೆಳೆಯುವಾಗ ಮೂಳೆಗಳು ಉದ್ದ, ದಪ್ಪ ಹಾಗೂ ಬಲಿಷ್ಠವಾಗಿ ಬೆಳೆಯಲು ವೈಟಮಿನ್ ಎ ಅವಶ್ಯ. ಆಹಾರದ ವೈಟಮಿನ್ ಹಾಗೂ ಇ–ಕ್ಯಾರೋಟೀನುಗಳು ಕರುಳಿನಲ್ಲಿ ರಕ್ತಗತವಾಗಿ ವೈಟಮಿನ್ ಎ ಯಕೃತ್ತಿಯಲ್ಲಿ ಶೇಖರಣೆ ಆಗುತ್ತದೆ. ದೇಹದಲ್ಲಿ ಇದರ ಕೊರತೆ ಕಂಡುಬಂದಾಗ ಈ ಶೇಖರಣೆಯಿಂದ ಪೂರೈಕೆ ಸುಲಭ. ವೈಟಮಿನ್ ಎ ಕೊರತೆಯಿಂದ ಎರಡು ರೀತಿಯ ತೊಂದರೆಗಳು ಉಂಟಾಗುತ್ತವೆ. 1. ಮೆಲುಪೊರೆ ಕೋಶಗಳು ಅಸ್ತಿತ್ವ ಕ್ರಿಯೆಗಳಿಗೆ ಧಕ್ಕೆ. 2. ದೃಷ್ಟಿಯ ನಾಶ, ಮೇಲುಪೊರೆಕೋಶಗಳು ವೃದ್ಧಿಗೊಳ್ಳುವುದಲ್ಲದೆ ಗಡಸಾಗುತ್ತದೆ. ಲಾಲಾಗ್ರಂಥಿಗಳು, ನಾಲಿಗೆ, ಗಂಟಲು, ಶ್ವಾಸನಾಳ, ಕಣ್ಣು, ಮೂತ್ರಮಾರ್ಗ ಇತ್ಯಾದಿ ಸ್ಥಳಗಳಲ್ಲಿ ಕೋಶಗಳು ಈ ಬದಲಾವಣೆಯನ್ನು ತೋರಿಸುತ್ತವೆ. ಕಣ್ಣಿನಲ್ಲಿ ಇದರ ಪರಿಣಾಮವಾಗಿ ಶುಷ್ಕನೇತ್ರಸ್ಥಿತಿ (ಕ್ಸೀರಾಪ್ತಾಲ್ಮಿಯ) ಉಂಟಾಗುತ್ತದೆ. ಕಣ್ಣು ಗುಡ್ಡೆ ಶಿಥಿಲಗೊಂಡು ಹುಣ್ಣಾಗಿ ದೃಷ್ಟಿ ನಾಶವಾಗುತ್ತದೆ. ಕಣ್ಣು ಇಂಗಿ ಹೋಗಬಹುದು. ಹುಣ್ಣಾಗುವುದಕ್ಕೆ ಮೊದಲೇ ಎ ವೈಟಮಿನ್ನನ್ನು ಕೊಟ್ಟು ಕೊರತೆಯನ್ನು ನಿವಾರಿಸಿದರೆ ಪುನಃ ದೃಷ್ಟಿ ಲಭಿಸುವುದು. ಚರ್ಮ ಒಣಗಿ ಗಡುಸಾಗಿ ನೆಲಗಪ್ಪೆಯ (ಟೋಡ್)ಚರ್ಮದಂತೆ ಗಂಟು ಗಂಟಾಗುತ್ತದೆ. ಗಂಟುಗಳು ಬಿದ್ದುಹೋಗಿ ಗುಳಿಗಳು ಉಂಟಾಗುತ್ತದೆ. ಕಡಿತ ಕೆರತಗಳಿಂದ ವ್ರಣಗಳು ಸಾಮಾನ್ಯ.

ಎ ವೈಟಮಿನ್ನಿನ ಕೊರತೆಯಿಂದ ದೃಷ್ಟಿಕ್ರಿಯೆಗೆ ಇನ್ನೊಂದು ದೋಷ ಉಂಟಾಗುತ್ತದೆ. ಮಬ್ಬು ಬೆಳಕಿನಲ್ಲಿ (ಟ್ವೈಲೈಟ್) ವೀಕ್ಷಿಸಲು ದೃಷ್ಟಿ ಪಟಲದಲ್ಲಿ (ರೆಟಿನ) ರ್ಹೊಡಪ್ಸಿನ್ ಎಂಬ ವಸ್ತು ಅಗತ್ಯ. ಕಣ್ಣಿನೊಳಗೇ ಹೋಗುವ ಬೆಳಕಿನಿಂದ ಇದು ಟ್ರಾನ್ಸರೆಟಿನೀನ್ ಆಗಿ ಪರಿವರ್ತಿತವಾಗುತ್ತದೆ. ಆ ವೇಳೆಯಲ್ಲಿ ನರ ಪ್ರಚೋದನೆ ಆಗುವುದರಿಂದ ದೃಷ್ಟಿ ಕ್ರಿಯೆ ಮರು ಕ್ಷಣದಲ್ಲೇ ರೆಟನೀನ್ ಪುನಃ ರ್ಹೊಡಾಪ್ಸಿನ್ ಆಗಿ ಸಂಶ್ಲೇಷಿಸಲ್ಪಡಬೇಕು. ಇದು ಸತತ ದೃಷ್ಟಿ ಕ್ರಿಯೆಗೆ ಅವಶ್ಯಕ. ಬಿಡುಗಡೆಯಾದ ಟ್ರಾನ್ಸರೆಟಿನಿನಿಂದಲೇ ರ್ಹೊಡಾಪ್ಸಿನ್ನಿನ ಸಂಶ್ಲೇಷಣೆ ಆಗುವುದು ಕಷ್ಟ. ಸುಲಭ ಹಾಗೂ ಶೀಘ್ರ ಸಂಶ್ಲೇಷಣೆಗೆ ಸಿಸ್‌ರೆಟಿನೀನ್ ಅಗತ್ಯ. ದೇಹದಲ್ಲಿರುವ ವೈಟಮಿನ್ ಎ ತತ್‌ಕ್ಷಣ ಅದರ ಆಲ್ಡಿಹೈಡ್ ಆದ ಟ್ರಾನ್ಸ್‌ರೆಟಿನೀನಾಗಿ ಪರಿವರ್ತನೆಗೊಳ್ಳುತ್ತದೆ. ಇದು ರ್ಹೊಡಾಪ್ಸಿನ್ನಿನ ಪುನರ್‌ಸಂಶ್ಲೇಷಣೆಗೆ ಅನುಕೂಲವಾಗಿದೆ. ಆಲ್ಡಿಹೈಡ್ ಆದ ರೆಟೀನೀನಿಗೆ ಸಂಬಂಧಪಟ್ಟ ಆಲ್ಕೋಹಾಲೇ ವೈಟಮಿನ್ ಎ ಆಗಿರುವುದರಿಂದ ಅದಕ್ಕೆ ರೆಟಿನಾಲ್ ಎಂದು ಕರೆಯಲಾಗಿದೆ. ವೈಟಮಿನ್ ಎ ಕೊರತೆಯಾದಾಗ ರ್ಹೊಡಾಪ್ಸಿನ್ನಿನ ಪುನರ್‌ಸಂಶ್ಲೇಷಣೆ ಕಷ್ಟ.

ವ್ಯಕ್ತಿಯ ಸಹಜ ಬೆಳವಣಿಗೆಗೆ ವೈಟಮಿನ್ ಎ ಅತ್ಯವಶ್ಯಕ. ಇದರ ಕೊರತೆಯಿಂದ ಪೂರ್ಣ ಬೆಳವಣಿಗೆ ಕುಂಠಿತವಾಗುತ್ತದೆ. ವೈಟಮಿನ್ ಎ ಕೊರತೆಯಿಂದ ಮೂತ್ರ ಮಾರ್ಗದಲ್ಲಿ ಹರಳುಗಳು (ಯೂರಿನರಿ ಕ್ಯಾಲ್‌ಕ್ಯುಲೈ) ಉಂಟಾಗುತ್ತವೆ. ಜೀರ್ಣ ಶಕ್ತಿನಾಶ. ಹಲ್ಲುಗಳಲ್ಲಿ ಹಲ್ಲುಗಾಜು (ಎನೇಮಲ್) ಮತ್ತು ಡೆನ್‌ಟೀನ್ ಭಾಗಗಳ ಬೆಳವಣಿಗೆಗೆ ಧಕ್ಕೆ ಯಾಗುವುದು.

ರೆಟಿನೀನಿನಲ್ಲಿ ರೆಟಿನೀನ್ l ಮತ್ತು ರೆಟಿನೀನ್ ll ಎರಡು ಬಗೆ. ಇವುಗಳ ರಾಸಾಯನಿಕ ರಚನೆಯಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಇವನ್ನು ಅನುಕ್ರಮವಾಗಿ ವೈಟಮಿನ್ ಎ1ಮತ್ತು ವೈಟಮಿನ್ ಎ2 ಎಂದು ಕರೆದಿದ್ದಾರೆ. ಒಂದರ ಕ್ರಿಯೆಯನ್ನು ಇನ್ನೊಂದು ವೈಟಮಿನ್ ನಡೆಸಬಲ್ಲದು. ಸಿಹಿನೀರಿನಲ್ಲಿ ವಾಸಿಸುವ ಜಲಚರಗಳಲ್ಲಿ ವೈಟಮಿನ್ ಎ2 ಇರುತ್ತದೆ.

ವೈಟಮಿನ್ ಡಿ ಸ್ಟಿರಾಲುಗಳೆಂಬ ವಿಶಿಷ್ಟ ರಚನೆಯುಳ್ಳ ಆಲ್ಕೋಹಾಲುಗಳ ಗುಂಪಿಗೆ ಸೇರಿದೆ. ಇದು ಹಕ್ಕಿ ಕಡಪು ರೋಗನಿವಾರಕ ವೈಟಮಿನ್. ಜೀವಸತ್ವ ಡಿ ಯನ್ನು ಆ್ಯಂಟಿರಾಪಿಟಿಕ್ ಅಥವಾ ಕ್ಯಾಲ್ಸಿ ಫೆರಾಲ್ ಜೀವಸತ್ವವೆನ್ನುವರು ಇದನ್ನು 1,2 ಡೈ ಹೈಡ್ರಾಕ್ಸಿಕ್ಯಾಲ್ಸಿಫೆರಾಲ್ ಎನ್ನುವರು . ಇದು ಎರಡು ರೂಪದಲ್ಲಿದೆ. ಜೀವಸತ್ವ ಡಿ2 (ಎರ್ಗೊಸ್ಟಿರಾಲ್) ಮತ್ತು ಜೀವಸತ್ವ ಡಿ3 (ಕೊಕಾಲ್ಯಫೆರಾವ್). ಇದರಲ್ಲಿ ಎರಡು ಬಗೆ ಡಿ2 ಮತ್ತು ಡಿ3 ವೈಟಮಿನ್‌ಗಳೆಂದು. ಇವು ಬಣ್ಣವಿಲ್ಲದ ಹರಳುಗಳು. ನೀರಿನಲ್ಲಿ ಕರಗುವುದಿಲ್ಲ. ಆಲ್ಕೋಹಾಲ್ ಹಾಗೂ ಇತರ ಕಾರ್ಬನಿಕ ದ್ರಾವಣಗಳಲ್ಲಿ ಸುಲಭವಾಗಿ ಕರಗುತ್ತವೆ. ಪ್ರಾಣಿಗಳ ತತ್ರಾಪಿ ಮೀನುಗಳ ,ಯಕೃತ್ತಿನ ಎಣ್ಣೆ, ಬೆಣ್ಣೆ, ಹಾಲು, ಕೋಳಿಮೊಟ್ಟೆಯಲ್ಲಿ ಹೇರಳವಾಗಿ ಇದು ದೊರೆಯುತ್ತದೆ. 1932 ರಲ್ಲಿ ಬೋರ್ಡಿಲಾನ್ ಮತ್ತು ವಿನ್ ಡೌಸ್ ಎರ್ಗೊಸ್ಟಿರಾಲ್ ಎಂಬ ಸಸ್ಯಜನ್ಯ ವಸ್ತುವನ್ನು ಅತಿ ನೇರಳೆ ಕಿರಣಗಳ ಪ್ರಭಾವಕ್ಕೆ ಒಡ್ಡಿ ಕ್ಯಾಲಿಫೆರಾಲ್ ಎಂಬ ರಸಾಯನಿಕವನ್ನು ಪ್ರತ್ಯೇಕಿಸಿ ಇದೇ ನೈಸರ್ಗಿಕ ವೈಟಮಿನ್ ಡಿ ಎಂದು ತಿಳಿಸಿದರು. 1935 ರಲ್ಲಿ ವಿನ್ ಡೌಸ್ 7–ಡಿಹೈಡ್ರೊಕಾಲೆಸ್ಟಿರಾಲ್ ಎಂಬ ರಾಸಾಯನಿಕವನ್ನು ಅತಿನೇರಳೆ ಕಿರಣಗಳಿಂದ ಪ್ರಭಾವಿಸಿ ವೈಟಮಿನ್ ಡಿ3 ನ್ನು ಶುದ್ಧವಸ್ತುವಾಗಿ ಪ್ರತ್ಯೇಕಿಸಿದ.

ಎರ್ಗೊಸ್ಟಿರಾಲ್, 7 ಡೀಹೈಡ್ರೋಕಾಲೆಸ್ಟೀರಾಲುಗಳಿಂದ ವಸ್ತುಗಳನ್ನು ನೇರವಾಗಿ ಎಳೆಬಿಸಿಲಿಗೆ ಒಡ್ಡಿದರೆ ಬಿಸಿಲಿನ ಅತಿ ನೇರಳೆ ಕಿರಣಗಳ ಕ್ರಿಯೆಯಿಂದ ಆ ವಸ್ತುಗಳಲ್ಲಿ ಡಿ ವೈಟಮಿನ್ ಉತ್ಪತ್ತಿಯಾಗುತ್ತದೆ. ಮಾನವರ ಚರ್ಮದಲ್ಲಿ 7– ಡೀ ಹೈಡ್ರೊಕೊಲೆಸ್ಟಿರಲ್ ಇರುವುದರಿಂದ ಎಳೆಬಿಸಿಲಿಗೆ ನೇರವಾಗಿ ಮೈ ಒಡ್ಡಿ ಡಿ ವೈಟಮಿನ್ನನ್ನು ಪಡೆಯಬಹುದು. ವೈಟಮಿನ್ನಿನ ಅಗತ್ಯ ಪೂರೈಕೆಯ ಪ್ರಮಾಣ ಹೇಳುವುದು ಕಷ್ಟ. ಕಾರಣ, ಸೂರ್ಯ ರಶ್ಮಿಯಿಂದ ನೇರವಾಗಿ ಪಡೆಯಬಹುದು ಮತ್ತು ಆಹಾರದಲ್ಲಿ ಡಿ ವೈಟಮಿನ್ ಪೂರೈಕೆ

ಯಾಗುತ್ತಿರುತ್ತದೆ. ಪ್ರತಿ ದಿನ 400–800 ಅಂತಾರಾಷ್ಟ್ರೀಯ ಮಾನಗಳಷ್ಟೆಂದು ಅಂದಾಜು ಮಾಡಲಾಗಿದೆ. ಶುದ್ಧವಸ್ತು ದೊರಕಿರುವುದರಿಂದ ಅಂತಾರಾಷ್ಟ್ರೀಯ ಮಾನಕ್ಕೂ ತೂಕಕ್ಕೂ ತಾಳೆ ಮಾಡಿದ್ದಾರೆ. ಅತಿ ನೇರಿಳೆ ಕಿರಣಕ್ಕೆ ಒಡ್ಡಿದ 1 ಗ್ರಾಂ ಎರ್ಗೊಸ್ಟಿರಾಲ್ ಅಥವಾ 0.025 ಮೈಗ್ರಾಂ ಕಾಲ್ಸಿಫೆರಾಲ್ ಒಂದು ಅಂತಾರಾಷ್ಟ್ರೀಯ ಏಕಮಾನಕ್ಕೆ ಸಮ. ಡಿ ವೈಟಮಿನ್ನಿನ ಪೂರೈಕೆಗೆ ಅದು ಇರುವ ಆಹಾರವನ್ನೇ ಸೇವಿಸಬೇಕೆಂದಿಲ್ಲ. ಎರ್ಗೊಸ್ಟಿರಾಲ್ ಮತ್ತು 7–ಡೀಹೈಡ್ರೊಕಾಲೆಸ್ಟಿರಾಲ್ ಇರುವ ಪದಾರ್ಥಗಳನ್ನು ಸೇವಿಸಿದರೆ ಸಾಕು. ಏಕೆಂದರೆ, ಇವು ಡಿ ಪ್ರೊವೈಟಮಿನ್ನುಗಳು. ಪ್ರಾಣಿ ದೇಹದಲ್ಲಿ ಡಿ ವೈಟಮಿನ್ ದಿವಸವೊಂದಕ್ಕೆ 10 ಮೈಗ್ರಾಂ ಸಾಕು.

ವೈಟಮಿನ್ ಡಿ ದೇಹದಲ್ಲಿ ಕ್ಯಾಲ್ಸಿಯಮ್ ಮತ್ತು ಫಾಸ್ಫರಸ್‌ಗಳ ಚಯಾಪಚಯ ಕ್ರಿಯೆಗಳಲ್ಲಿ ನಿಕಟ ಪಾತ್ರವಹಿಸುತ್ತದೆ. ಆಹಾರದ ಕ್ಯಾಲ್ಸಿಯಮ್ ಹಾಗೂ ಫಾಸ್ಫರಸ್ ಸಂಯುಕ್ತಗಳು ಕರುಳಿನಲ್ಲಿ ಹೀರಿ, ರಕ್ತವಾಗುವುದಕ್ಕೆ ಮತ್ತು ಮೂಳೆಗಳಲ್ಲಿ ಹಾಗು ಹಲ್ಲುಗಳಲ್ಲಿ ಕಾರ್ಬನಿಕ ಫಾಸ್ಫರಸ್ ಸಂಯುಕ್ತ ರಾಸಾಯನಿಕಗಳು ವಿಶ್ಲೇಷಣೆಗೊಂಡು, ಕ್ಯಾಲ್ಸಿಯಮ್ ಫಾಸ್ಫೇಟ್ ಲವಣ ಸಂಚಯನವಾಗುವುದಕ್ಕೆ ವೈಟಮಿನ್ ಡಿ ಅಗತ್ಯ. ಕ್ರಮವಾದ ರೀತಿಯಲ್ಲಿ ಹೀಗೆ ಕ್ಯಾಲ್ಸಿಯಮ್ ಫಾಸ್ಫೇಟಿನ ಸಂಚಯನವಾಗುವುದರಿಂದ ಮೂಳೆ ಹಲ್ಲುಗಳು ದೃಢವಾಗುತ್ತವೆ. ವೈಟಮಿನ್ ಡಿ ಕೊಬ್ಬಿನಲ್ಲಿ ಕರಗುವುದರಿಂದ ಕೊಬ್ಬಿನ ಪೂರೈಕೆ, ಜೀರ್ಣ ಹಾಗೂ ರಕ್ತಗತವಾಗುವಿಕೆಗಳ ಮೇಲೆ ಡಿ ವೈಟಮಿನ್ನಿನ ಪೂರೈಕೆ ಅವಲಂಬಿಸಿದೆ. ಬೆಳೆದವರಲ್ಲಿ, ತತ್ರಾಪಿ ಮಕ್ಕಳ ತಾಯಂದಿರಲ್ಲಿ, ಆಸ್ಟಿಯೋ ಮಲೇಶಿಯಾ ಎಂಬ ರೋಗ ಉಂಟಾಗುತ್ತದೆ. ಮಕ್ಕಳಲ್ಲಿ ಮೂಳೆ ಬೆಳೆಯುತ್ತಿರುವುದರಿಂದ ಬೆಳೆಯುವ ತುದಿಗಳಲ್ಲಿ ಮೂಳೆ ಗಂಟಾಗಿ ವಿಕಾರವಾಗುವುದು ಹಕ್ಕಿ ಕಡಮು ರೋಗದ ವೈಶಿಷ್ಟ್ಯ. ಪ್ರಾರಂಭದಲ್ಲಿ ಈ ರೋಗ ಮೂಳೆಗೆ ಸಂಬಂಧಪಟ್ಟಿಲ್ಲವೇನೋ ಎನ್ನಿಸುವಂತೆ ಅತಿಯಾಗಿ ಬೆವರುವುದು, ಹೊಟ್ಟೆ ತೊಳಸು, ವಾಂತಿ, ಭೇದಿ, ಹೊಟ್ಟೆ ನೋವುಗಳು ಕಾಣಿಸಿಕೊಳ್ಳುತ್ತವೆ. ಆದರೆ, ವಾಸ್ತವವಾಗಿ ಇದಕ್ಕೆ ಮೊದಲೇ ಮೂಳೆಯಲ್ಲಿ ಬದಲಾವಣೆ ಆಗಿರುತ್ತದೆ. ಎಳೆ ಮಗುವಿನಲ್ಲಿ ರೋಗ ಕಂಡು ಬಂದರೆ ಮಗುವಿಗೆ 2 ತಿಂಗಳಾಗಿದ್ದಾಗಲೇ ಹಿಂಭಾಗ ತಲೆಬುರುಡೆ ತೆಳುವಾಗಿ ನಂತರ ನೆತ್ತಿ ಬಾಯಿಸುತ್ತ 4 ಮೂಳೆಗಳು ದಪ್ಪವಾಗಿ ಬೆಳೆಯುತ್ತವೆ (ಕೇನಿಯೋ ಟೇಬೀಸ್ ಮತ್ತು ಬಾಸ್ಸಿಂಗ್).

ಹಲ್ಲುಗಳು ಹುಟ್ಟುವುದು ತಡವಾಗುತ್ತದೆ. ಎದೆಮೂಳೆಗೆ ಪಕ್ಕೆಲುಬುಗಳು ಸೇರುವ ಸ್ಥಳಗಳಲ್ಲಿ ಗಂಟಾಗಿ ಎದೆಮೂಳೆಯ ಎರಡು ಪಾರ್ಶ್ವಗಳಲ್ಲಿ ಜಪಮಾಲೆಯಂತೆ ಗಂಟುಗಳ ಸಾಲುಗಳು ಉಂಟಾಗುತ್ತವೆ. ಇದಕ್ಕೆ ಹಕ್ಕಿ ಕಡಮು ರೊಗದ ಜಪಮಾಲೆ (ರಿಕೆಟಿರೋಸರಿ) ಎಂದು ಹೆಸರು. ಕೈಕಾಲುಗಳ ಮೂಳೆಗಳು ಬಗ್ಗಿ ಹೋಗುವುದು. ಅವುಗಳ ತುದಿಗಳು ದಪ್ಪವಾಗಿ ಗಂಟಾಗಿ ವಕ್ರವಾಗಿರುತ್ತವೆ. ಚಪ್ಪಟೆ ಪಾದ ದೊಡ್ಡ ಹೊಟ್ಟೆ , ಗಿಡ್ಡ ದೇಹ ಇವು ಸಾಮಾನ್ಯ ರಕ್ತದಲ್ಲಿ ಆಲ್ಕಲೈನ್ ಫಾಸ್ಫಟೇಸ್ ಎಂಬ ಕಿಣ್ವದ ಪರಿಮಾಣವಿರುವುದು ಹಕ್ಕಿ ಕಡಮು ರೋಗದ ಚಿಹ್ನೆ. ಹಕ್ಕಿ ಕಡಮು ಹಾಗೂ ಆಸ್ಟಿಯೋ ಮಲೇಶಿಯ ಬರದಂತೆ ಕಾಯ್ದುಕೊಳ್ಳಲು ವೈಟಮಿನ್ ಡಿ ಅವಶ್ಯ. ಜೊತೆಗೆ ತಕ್ಕಷ್ಟು ಕ್ಯಾಲ್ಸಿಯಮ್ ಹಾಗೂ ಫಾಸ್ಫರಸ್ ಸಂಯುಕ್ತಗಳು ಆಹಾರದಲ್ಲಿ ಇರಲೇಬೇಕು. ಗರ್ಭಾವಸ್ಥೆ ಮತ್ತು ಹಾಲುಣಿಸುತ್ತಿರುವ ಮಹಿಳೆಯರಿಗೆ ವೈಟಮಿನ್ ಡಿ ಅವಶ್ಯಕತೆ ಹೆಚ್ಚು. ದೇಹವನ್ನು ನೇರವಾಗಿ ಬಿಸಿಲಿಗೆ ಒಡ್ಡಿ ವೈಟಮಿನ್ ಡಿ ಪಡೆಯಬೇಕು. ಅತಿ ಹೆಚ್ಚಾಗಿ ವೈಟಮಿನ್ ಡಿ ಯನ್ನು ಬಳಸಿದರೆ ಅದು ನಾನಾ ತೊಂದರೆಗಳನ್ನು ಉಂಟುಮಾಡುತ್ತದೆ. ಅನ್ನಸೇರದಿರುವಿಕೆ, ಹೊಟ್ಟೆ ತೊಳಸು, ವಾಂತಿ, ತಲೆನೋವು, ಜೊಗರಿಕೆ, ಅತಿಮೂತ್ರ, ಬಾಯಾರಿಕೆ, ಹೃದಯದ ರಕ್ತನಾಳ ಫುಪ್ಫುಸಗಳಲ್ಲಿ ಕ್ಯಾಲ್ಸಿಯಮ್ ಫಾಸ್ಫೇಟ್ ಸಂಯುಕ್ತಗಳ ಸಂಚಯನ, ಮೂತ್ರಪಿಂಡಗಳ ಕಿಯಾಶಕ್ತಿನಾಶ ಉಂಟಾಗಬಹುದು.

ಟೊಕೊಫೆರಾಲ್: ಇದನ್ನು ಆಂಟಿಸ್ಟರಿಲಿಟಿ ಜೀವಸತ್ವವೆನ್ನುವರು. ಇದರಲ್ಲಿ – ಇ–ಮತ್ತು ಒ ಟೊಕೋಫೆರಾಲುಗಳೆಂಬ ಮೂರು ಬಗೆಗಳಿವೆ. ಟೊಕೊಫೆರಾಲ್ ಹಳದಿ ಎಣ್ಣೆಯಂತಿರುವ ವಸ್ತು. ನೀರಿನಲ್ಲಿ ವಿಲೀನವಾಗದು, ಆದರೆ, ಕಾರ್ಬನಿಕ ದ್ರಾವಣಗಳೊಡನೆ ವಿಲೀನವಾಗುತ್ತದೆ. ಇದು ಬಹು ಸುಲಭವಾಗಿ ಉತ್ಕರ್ಷಣಗೊಳ್ಳಬಲ್ಲ ವಸ್ತು. ಆದ್ದರಿಂದ, ಸುಲಭವಾಗಿ ಉತ್ಕರ್ಷಣಗೊಳ್ಳುವ ಇತರ ವಸ್ತುಗಳನ್ನು ರಕ್ಷಿಸಲು ಇ ವೈಟಮಿನ್ನನ್ನು ಸೇರಿಸಲಾಗುತ್ತದೆ.

ಖಾದ್ಯ ಎಣ್ಣೆಗಳು ಕೆಟ್ಟು ಕಮಟು ವಾಸನೆ ಬಾರದಂತೆ ಮಾಡಲು ಈ ಕ್ರಮವನ್ನು ಅನುಸರಿಸಲಾಗುವುದು. ಬಟಾಣಿ, ಗೋದಿಕಾಳುಗಳು, ಮೊಳಕೆಗಳು, ಲೆಟ್ಯೂಸ್, ತತ್ತಿಯ ಹಳದಿ, ಹಾಲು ಬೆಣ್ಣೆಯಲ್ಲಿ ಟೋಕೊಫೆರಾಲ್ ಹೆಚ್ಚಾಗಿರುವುದು. ರಾಸಾಯನಿಕ ಸಂಯೋಜನೆಯಿಂದ ಶುದ್ಧವಸ್ತುವನ್ನು ತಯಾರಿಸಲಾಗಿದೆ. ಮಾಪನಕ್ಕೆ ಶುದ್ಧವಸ್ತುವಿನ ತೂಕವನ್ನೇ ಅಳವಡಿಸಿಕೊಂಡಿದ್ದಾರೆ.

ವೈಟಮಿನ್ ಇ ಪ್ರಜನನ ಕಾರ್ಯಕ್ಕೆ ಅಗತ್ಯವಾಗಿರಬೇಕು. ಆದ್ದರಿಂದಲೇ ಇದಕ್ಕೆ ಟೋಕೊಫೆರಾಲ್ ಎಂದು ಕರೆಯಲಾಯಿತು. ಈ ಶಬ್ದಕ್ಕೆ ಗರ್ಭತಾಳುವಿಕೆ ಎಂದು ಅರ್ಥ. ವೈಟಮಿನ್ ಇ ಇಲ್ಲದ ಆಹಾರವನ್ನು ಗಂಡು ಇಲಿಗಳಿಗೆ ನೀಡಿದಾಗ ಅವು ನಿರ್ವೀರ್ಯವಾಗಿ ಹೆಣ್ಣು ಇಲಿಗಳ ಜೊತೆ ಮಿಲನವಾದಾಗ ಹೆಣ್ಣುಗಳು ಗರ್ಭತಾಳಲಿಲ್ಲ. ಗಿನಿಹಂದಿಗಳಲ್ಲಿ ಸ್ನಾಯುಗಳ ಹಾಗೂ ಬಂಧನಾಂಗಾಂಶಗಳ ಶೈಥಿಲ್ಯ ಕಂಡು ಬಂದು ಕ್ರಮೇಣ ಸ್ವಾಧೀನ ತಪ್ಪಿದ ಸ್ಥಿತಿ ಉಂಟಾಯಿತು. ಕಾರಣ ಪ್ರತಿ ದಿನ 25 ಮಿ.ಗ್ರಾಂ ವೈಟಮಿನ್ ಅಗತ್ಯವೆಂದು ಸೂಚಿಸಲಾಗಿದೆ. ಮಾನವರಲ್ಲಿ ಪ್ರಾಣಿಗಳಂತೆಯೇ ರೋಗಲಕ್ಷಣಗಳು ಉಂಟಾಗುತ್ತವೆ. ಗಂಡಸರು, ಹೆಂಗಸರಲ್ಲಿ ನಿಸ್ಸಂತಾನ ಸ್ಥಿತಿ, ಮುಟ್ಟುನಿಂತಾಗ ಆಗುವ ಬಾಧಕಗಳಿಗೆ, ಸ್ನಾಯು ಬಂಧನಾಂಶಗಳ ಶೈಥಿಲ್ಯದಿಂದ ಸ್ವಾಧೀನ ನಾಶವಾಗಿರುವ ಸ್ಥಿತಿಗಳಿಗೆ ವೈಟಮಿನ್ ಇ ಕಾರಣ. ವೈಟಮಿನ್ ಇ ಜೊತೆ ಇರುವ ವಸ್ತುಗಳು ಉತ್ಕರ್ಷಣಗೊಳ್ಳದಂತೆ ರಕ್ಷಿಸುವುದು ದೇಹದಲ್ಲಿ ಕಂಡು ಬರುತ್ತದೆ. ಆದ್ದರಿಂದ, ವೈಟಮಿನ್ ಎ ದೀರ್ಘಕಾಲಿಕವಾಗಿ ಉಳಿದಿದ್ದು ಕ್ರಿಯೆಗೊಳ್ಳುವುದಕ್ಕೆ ವೈಟಮಿನ್ ಇ ಸಹಾಯಕ. ರಕ್ತ ಗರಣೆ ಕಟ್ಟುವುದನ್ನು ವೈಟಮಿನ್ ಇ ತಪ್ಪಿಸುತ್ತದೆ.

ಆದ್ದರಿಂದ, ದೇಹದಲ್ಲಿ ಅನಾವಶ್ಯಕವಾಗಿ ರಕ್ತಗರಣೆ ಕಟ್ಟುವುದನ್ನು ತಪ್ಪಿಸಲು ವೈಟಮಿನ್ ಇ ಉಪಯೋಗಿಸಬೇಕು. ಪ್ರೊಟೀನ್ ಕೊರತೆ ಪ್ರಸಂಗಗಳಲ್ಲಿ ಉಂಟಾಗುವ ಅನಾರೋಗ್ಯ ಸ್ಥಿತಿಗಳನ್ನು ವೈಟಮಿನ್ ಇ ತಡೆಯುವುದು.

ವೈಟಮಿನ್ ಕೆ:1:4 ನ್ಯಾಫ್ತೊಕ್ವಿನೋನ್ ಘಟಕ ಉಳ್ಳವಸ್ತು. ನೀರಿನಲ್ಲಿ ಕರಗಲಾರದು, ಆದರೆ, ಕಾರ್ಬನಿಕ ದ್ರಾವಣಗಳಲ್ಲಿ ವಿಲೀನವಾಗುತ್ತದೆ. ಸರ್ವ ವ್ಯಾಪ್ತಿಯಾಗಿ ಹಸಿರು ಸಸ್ಯಗಳು, ಸೂಕ್ಷ್ಮಾಣುಗಳು ಹಾಗೂ ಪ್ರಾಣಿಗಳ ಕೋಶದಲ್ಲಿವೆ. ಕುದುರೆ ಮಸಾಲೆ ಸೊಪ್ಪು, ಬಸಳೆ ಸೊಪ್ಪುಗಳಲ್ಲಿ ಅಧಿಕ ಪ್ರಮಾಣ ದೊರೆಯುವುದು. 1955 ರಲ್ಲಿ ಡ್ಯಾಮ್ ವಿಜ್ಞಾನಿ ಪ್ರಯೋಗಗಳಿಂದ ಈ ವೈಟಮಿನ್ ಬಗ್ಗೆ ಸಂಶೋಧಿಸಿದ. ಮುಂದೆ 3–4 ವರ್ಷಗಳ ವ್ಯಾಸಂಗದಿಂದ ರಕ್ತಗರಣೆ ಕಟ್ಟುವುದಕ್ಕೆ ಇದು ಅಗತ್ಯವಾದ ವೈಟಮಿನ್ ಎಂದು ನಾಮಕರಣ ಮಾಡಿದ. ಈ ವೈಟಮಿನ್ನನ್ನು ಮೀನುಗಳ ಮೂಳೆಗಳಿಂದ ಪಡೆಯಬಹುದು. ಇದು ಕುದುರೆ ಮಸಾಲೆ ಸೊಪ್ಪಿನಿಂದ ಪಡೆದ ವಸ್ತುವಿನಂತೆ ದೇಹದಲ್ಲಿ ವೈಟಮಿನ್ ಕೆ ಆಗಿ ವರ್ತಿಸಿದರೂ, ರಾಸಾಯನಿಕವಾಗಿ ಬೇರೆ ಬೇರೆ ವಸ್ತುಗಳ ಸಂಕಲನ, ಕುದುರೆ ಮಸಾಲೆ ಸೊಪ್ಪಿನ ವೈಟಮಿನ್ನನ್ನು 'ಕೆ1' ಎಂದು ಕರೆಯಲಾಗುತ್ತದೆ.

ಇದರ ರಾಸಾಯನಿಕ ರಚನೆ ಹೆಸರು 2 ಮೀಥೈಲ್ 3 ಫೈಟೈಲ್ 1–4 ನ್ಯಾಫೋಕ್ವಿನೋನ್. ಮೀನಿನ ಮೂಳೆಯ ವೈಟಮಿನ್ನಿಗೆ ಕೆ2 ಎಂದು ಹೆಸರು. ಇದರ ಹೆಸರು 2 ಮೀಥೈಲ್ 2 ಡೈಫಾರ್ಸಿನೈಲ್ 1–4 ನ್ಯಾಫ್ತೋಕ್ವಿನೋನ್. ವೈಟಮಿನ್ ಕೆ ಪ್ರಾಣಿಗಳ ಕರುಳಿನಲ್ಲಿ ಸಹಜೀವಿಗಳಾಗಿ ವಾಸಿಸುವ ಅನೇಕ ನಿರುಪದ್ರವಿ ಸೂಕ್ಷ್ಮಾಣುಗಳಿಂದ ಅವುಗಳ ಸ್ವಂತ ಉಪಯೋಗಕ್ಕಾಗಿ ತಯಾರಾಗುತ್ತದೆ. ಸೂಕ್ಷ್ಮಾಣುಗಳು ನಾಶವಾದ ಬಳಿಕ ಅವುಗಳಲ್ಲಿದ್ದ ವೈಟಮಿನ್ ಕೆ ಅತಿಥೇಯ ವ್ಯಕ್ತಿಗೆ ಒದಗುತ್ತದೆ. ಆದ್ದರಿಂದ, ವ್ಯಕ್ತಿಗೆ ಆಹಾರದಲ್ಲಿ ಅವಶ್ಯವಾದ ಕೆ ವಿಟಮಿನ್ನಿನ ಪ್ರಮಾಣ ನಿರ್ದಿಷ್ಟವಾಗಿಲ್ಲ. ಶುದ್ಧವಸ್ತು ತಯಾರಾಗಿರುವುದರಿಂದ ಕೆ ವೈಟಮಿನ್ನಿನ ಅಸ್ತಿತ್ವ ಮತ್ತು ಅವಶ್ಯಕತೆಗಳನ್ನು ವಿವರಿಸುವುದಕ್ಕೆ ಅಂತಾರಾಷ್ಟ್ರೀಯ ಏಕಮಾನವಾಗಿ ಮಿ.ಗ್ರಾಂ ತೂಕವನ್ನೇ ಪರಿಗಣಿಸಲಾಗಿದೆ. ನೈಸರ್ಗಿಕ ಕೆ ವೈಟಮಿನ್ನುಗಳಂತೆ ಕ್ರಿಯೆ ಇರುವ ಆದರೆ, ನೀರಿನಲ್ಲಿ ಕರಗುವ ಸರಳ ರಾಸಾಯನಿಕಗಳನ್ನು ಕೃತಕವಾಗಿ ಸಂಶ್ಲೇಷಿಸಲಾಗಿದೆ. ಇವನ್ನು ಚುಚ್ಚು ಮದ್ದಾಗಿ ಅಭಿಧಮನಿಗೆ ನೇರವಾಗಿ ಕೊಡಬಹುದು. ನೈಸರ್ಗಿಕ ವೈಟಮಿನ್ ಕೆ ಯನ್ನು ಸೇವಿಸಿದರೆ ಕರುಳಿನಲ್ಲಿ ತಕ್ಕಷ್ಟು ಪಿತ್ತರಸ, ಪಿತ್ತರಸ ಲವಣಗಳು ಇದ್ದಾಗ ಮಾತ್ರ ಅದು ರಕ್ತಗತವಾಗುವುದು. ಒಂದು ವಿಧವಾದ ಕಾಮಾಲೆ ರೋಗದಲ್ಲಿ (ಅಬ್‌ಸ್ಟ್ರಕ್ಟಿವ್ ಜಾಂಡಿಸ್) ಕರುಳಿಗೆ ಪಿತ್ತರಸ ಬಂದು ಸೇರುವುದಿಲ್ಲ ಆದ್ದರಿಂದ ಆಹಾರವಾಗಿರುವ ವೈಟಮಿನ್ ಕೆ ಅಥವಾ ಚಿಕಿತ್ಸೆ ರೂಪದಲ್ಲಿ ಸೇವಿಸಿದ ವೈಟಮಿನ್ 'ಕೆ' ಪ್ರಯೋಜನವಾಗುವುದಿಲ್ಲ.

ಕರುಳಿನಲ್ಲಿ ಸಹಜೀವಿ ಬ್ಯಾಕ್ಟೀರಿಯಗಳ ಅಭಾವ ಜೈವಿಕ ನಿರೋಧಕಗಳ ಬಳಕೆಯಿಂದ ಉಂಟಾಗುವುದು. ಈ ಪರಿಸ್ಥಿತಿ ಹಾಗೂ ಭೇದಿ ಪ್ರಸಂಗಗಳಲ್ಲಿ ವೈಟಮಿನ್ 'ಕೆ' ಕರುಳಿನಲ್ಲಿ ರಕ್ತಗತವಾಗುವುದಿಲ್ಲ. ಹುಟ್ಟಿದ ಮಕ್ಕಳಲ್ಲಿ ವೈಟಮಿನ್ ಕೆ ಕೊರತೆ ಇರಬಹುದು. ಇಂಥ ಸಂದರ್ಭಗಳಲ್ಲಿ ಅದನ್ನು ಚುಚ್ಚುಮದ್ದಾಗಿ ಕೊಟ್ಟು ಚಿಕಿತ್ಸಿಸಬೇಕು. ವಯಸ್ಸಿಗನುಗುಣವಾಗಿ ಮತ್ತು ಅವಶ್ಯಕತೆಗೆ ತಕ್ಕಂತೆ ದಿನಕ್ಕೆ 5–50 ಮಿ.ಗ್ರಾಂ ವೈಟಮಿನ್ ಕೆ ಚಿಕಿತ್ಸೆಗೆ ಬೇಕು. ರಕ್ತಗರಣೆ ಕಟ್ಟಲು ಅವಶ್ಯವಾದ ಪ್ರೋಥ್ರಾಂಬಿನ್ನಿನ ಸಂಯೋಜನೆ ಯಕೃತ್ತಿನಲ್ಲಿ ಯಥಾವತ್ತಾಗಿ ನಡೆಯಲು ವೈಟಮಿನ್ ಕೆ ಅವಶ್ಯಕ. ಇದರ ಕೊರತೆ ಆದಾಗ ರಕ್ತದಲ್ಲಿ ಪ್ರೋಥ್ರಾಂಬಿನ್ ಕೊರತೆ ತಲೆದೋರುತ್ತದೆ. ಇದರಿಂದ ರಕ್ತಸ್ರವವಾದಾಗ

ರಕ್ತಗರಣೆಕಟ್ಟಲಾಗದೆ ಅಧಿಕಸ್ರಾವವಾಗುತ್ತದೆ. ಡೈಕೊಮೆರಾಲ್ ಎಂಬ ಔಷಧವನ್ನು ಉಪಯೋಗಿಸಿದ ಸಂದರ್ಭಗಳಲ್ಲಿ ಅದು ಯಕೃತ್ತಿನ ಮೇಲೆ ಪ್ರಭಾವಿಸಿ ಪ್ರೋಥ್ರಾಂಬಿನ್ ತಯಾರಿಕೆಯನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ಡೈಕೊಮೆರಾಲ್ ಮತ್ತು ವೈಟಮಿನ್ ಕೆ ಇವು ಪರಸ್ಪರ ವಿರುದ್ಧ ವಸ್ತುಗಳೆಂದು ಪರಿಗಣಿಸಬಹುದು.

ವೈಟಮಿನ್ ಬಿ ಸಂಕೀರ್ಣ (ಕಾಂಪ್ಲೆಕ್ಸ್): ನೀರಿನಲ್ಲಿ ಕರಗುವ ಅನೇಕ ವೈಟಮಿನ್ನುಗಳ ಗುಂಪು. ಈ ಗುಂಪಿನಲ್ಲಿ ವೈಟಮಿನ್ ಬಿ1, ಬಿ2, ಬಿ3 ಇತ್ಯಾದಿ ಇವೆ. ಇವುಗಳನ್ನು ರೈಬೋಫ್ಲೇವಿನ್, ಪಿರಿಡಾಕ್ಸಿನ್ ಎಂಬ ರಾಸಾಯನಿಕ ಹೆಸರಿನಿಂದ ಕರೆಯುವರು. ಈ ಗುಂಪಿನ ಸಮಸ್ತ ರಾಸಾಯನಿಕಗಳು ಸಸ್ಯ, ಪ್ರಾಣಿ, ಸೂಕ್ಷ್ಮಾಣು ಕೋಶಗಳಲ್ಲಿ ಸಾಮಾನ್ಯವಾಗಿ ಇರುತ್ತವೆ. ಜೈವಿಕ ಕ್ರಿಯೆಯಲ್ಲಿ ವೈಟಮಿನ್ ಬಿ ಗುಂಪಿನ ರಾಸಾಯನಿಕಗಳ ನಿಕಟ ಪಾತ್ರವನ್ನು ಸೂಚಿಸುತ್ತದೆ. ವೈಟಮಿನ್ ಬಿ ಗುಂಪಿನ ಎಲ್ಲ ವೈಟಮಿನ್ನುಗಳು ಸಾರಜನಕಯುಕ್ತ ಸಂಯುಕ್ತಗಳು. ಥಯಮೀನ್, ರೈಬೋಫ್ಲೇವಿನ್, ಪಿರಿಡಾಕ್ಸಿನ್, ಸೈಯನೋ ಕೋಬಾಲಮೀನ್, ನಿಕೋಟನಿಕ್ ಆಮ್ಲ, ಬೈಯೋಟಿನ್, ಐನೊಸಿಟಾಲ್, ಕೋಲೀನ್, ಪ್ಯಾರ ಅಮೈನೋ ಬೆನ್ ಜೋಯಿಕ್ ಆಮ್ಲಗಳಿವೆ.

ಥಯಮೀನ್: ಇದಕ್ಕೆ ವೈಟಮಿನ್ ಬಿ1 ಎನ್ನುವರು. ಎನ್ಯೂರಿನ್, ಬೆರಿಬೆರಿ ನಿರೋಧಕ ವಿಟಮಿನ್ ಎಂದು ವ್ಯವಹರಿಸುವರು. ಇದನ್ನು ರಾಸಾಯನಿಕವಾಗಿ ಶುದ್ಧಮಾಡಿರುವ ಬೃಹದಣು ರಚನೆಯನ್ನು ಆವಿಷ್ಕರಿಸಲಾಗಿದೆ. ಇದು ನೀರಿನಲ್ಲಿ ಕರಗುವ ಸಾರಜನಕ ಹಾಗೂ ಫಾಸ್ಫರಸ್‌ಯುಕ್ತ ಬಿಳಿ ಹರಳುಗಳ ರೂಪದಲ್ಲಿದೆ. ಇದು ಉಷ್ಣವನ್ನು ತಡೆಯಲಾರದು. ಸಾಮಾನ್ಯ ಅಡುಗೆ ಉಷ್ಣತೆಯಲ್ಲಿ ಗಣನೀಯವಾಗಿ ನಾಶವಾಗುತ್ತದೆ. ವಿಟಮಿನ್ 'ಬಿ1' ಹೇರಳವಾಗಿ

1) ತೆನೆಧಾನ್ಯಗಳು (ಸೀರಿಯಲ್ಸ್)–ಗೋದಿ,ಬಾರ್ಲಿ, ಮುಸುಕಿನ ಜೋಳ, ಅಕ್ಕಿಯ ಮೇಲುಪೊರೆ (ಪೆರಿಕಾರ್ಪ), ಹಾಗೂ ಬೀಜಾಂಕುರ (ಜರ್ಮ) ದಲ್ಲಿದೆ.

2) ದ್ವಿದಳಧಾನ್ಯಗಳು (ನಟ್ಸ್) – ಬಟಾಣಿ, ಬೀನ್ಸ್, ಬೇಳೆಗಳು, ನೆಲಗಡಲೆಕಾಯಿ;

3) ಕಾಷ್ಠಫಲಗಳು (ನಟ್ಸ್) ಬಾದಾಮಿ, ಗೋಡಂಬಿ

4) ಹಸಿರು ಸೊಪ್ಪುಗಳು – ಬಸಳೆ, ದಂಟು, ಮೆಂತೆ

5) ಪ್ರಾಣಿಜನ್ಯವಸ್ತುಗಳು – ಹಾಲು, ಮೊಟ್ಟೆ,, ಯಕೃತ್, ಮಾಂಸ ಮತ್ತು

6) ಯೀಸ್ಟ್, ಹೆಂಡದ ಹೆಪ್ಪು ಇದರಲ್ಲಿ ವೈಟಮಿನ್ ಬಿ1 ಹೇರಳವಾಗಿದೆ.

ಒಂದು ಗ್ರಾಂ ಅಕ್ಕಿತೌಡಿನಲ್ಲಿ 15 ಗ್ರಾಂ ಇರುತ್ತದೆ. ಶುದ್ಧವಸ್ತು ದೊರೆತಿರುವುದರಿಂದ ಅಂತಾರರಾಷ್ಟ್ರೀಯ ಏಕಮಾನಕ್ಕೆ ತೂಕವನ್ನು ಅಳವಡಿಸಿಕೊಂಡು ತಾಳೆಮಾಡಲಾಗಿದೆ. ಒಂದು ಗ್ರಾಂ ಥಯಮೀನ್ 320 ಅಂತಾರಾಷ್ಟ್ರೀಯ ಏಕಮಾನಗಳಿಗೆ ಸಮಾನ. ಮಾನವರಿಗೆ ಪ್ರತಿದಿವಸ ಒಂದು ಗ್ರಾಂ. ಗಿಂತ ಹೆಚ್ಚಾಗಿ ಬೇಕು. ಚಯಾಪಚಯಕ ರೋಗಗಳು (ಡೈಯಾಬಿಟೀಸ್, ಹೈಪರ್ ಥೈರಾಯ್ಡಿಸಮ್), ಜ್ವರ, ಭೇದಿ ಸಂದರ್ಭಗಳಲ್ಲಿ ಈ ಪ್ರಮಾಣ ಹೆಚ್ಚು. ಬಸಿರು, ಬಾಣಂತಿಯಲ್ಲಿ ಮಾಮೂಲಿಗಿಂತ ಎರಡರಷ್ಟು ಬೇಕು. ಕರುಳಿನಲ್ಲಿ ವಾಸಿಸುವ ನಿರುಪದ್ರವಿ ಸಹಜೀವಿ ಸೂಕ್ಷ್ಮಾಣುಗಳಿಂದ ಥಯಮೀನ್ ದೇಹಕ್ಕೆ ಒದಗುತ್ತದೆ.

ಥಯಮೀನ್ ದೇಹದಲ್ಲಿ ಕ್ರಿಯಾಶೀಲವಾಗಲು ಅದರೊಡನೆ ಫಾಸ್ಫಾರಿಕ್ ಆಮ್ಲ ಸಂಯೋಗವಾಗಬೇಕು. ತತ್ಫಲವಾದ ಥಯಮೀನ್ ಪೈರೋಫಾಸ್ಫೇಟ್ ಕಾರ್ಬಾಕ್ಸಿಲೇಸ್ ಎಂಬ ಎನ್‌ಜೈಮಿಗೆ ಅಗತ್ಯ ಸಹಾಯಕ ವಸ್ತುವಾಗಿ ವರ್ತಿಸುತ್ತದೆ. ಆದ್ದರಿಂದ, ಇದಕ್ಕೆ ಕೊಕಾರ್ಬಾಕ್ಸಿ ಲೇಸ್' ಎಂಬ ಹೆಸರು ಬಂದಿದೆ. ಮುಖ್ಯವಾಗಿ ಪೈರೂವಿಕ್ ಆಮ್ಲ, ಆಲ್ಫ–ಕೀಟೋಗ್ಲೂಟಾರಿಕ್ ಆಮ್ಲಗಳ ಉತ್ಕರ್ಷದ ವಿಶ್ಲೇಷಣದಲ್ಲಿ ಕೋಕಾರ್ಬಾಕ್ಸಿಲೇಸ್ ಭಾಗವಹಿಸುತ್ತದೆ. ಈ ಕೀಟೋ ಆಮ್ಲಗಳು ಆಹಾರ ವಸ್ತುಗಳ ಅಪಚಯಕ್ರಿಯೆಯ ಕೊನೆ ಘಟ್ಟಗಳಲ್ಲಿ ಕಂಡುಬರುವ ವಸ್ತುಗಳು, ಥಯಮೀನ್ ಕೊರತೆಯಿಂದ ಅಪಚಯಕ್ರಿಯೆಯ ಈ ಅಂತ್ಯ ಘಟ್ಟಗಳಿಗೆ ಧಕ್ಕೆ ಉಂಟಾಗಿ ಪೈರೂವಿಕ್ ಆಮ್ಲ, ಆಸಿಟೋ ಅಸಿಟಿಕ್ ಆಮ್ಲ ಉತ್ಕರ್ಷಣೆಗೊಳ್ಳದೆ ದೇಹದಲ್ಲಿ ಶೇಖರಣೆ ಆಗಿ ರೋಗ ಉಂಟಾಗುತ್ತದೆ. ಥಯಮೀನ್ ಯಕೃತ್ತಿನಲ್ಲಿ ಶೇಖರಣೆ ಆಗುವುದು. ಅಗತ್ಯವಾದಾಗ ಕೋಕಾರ್ಬಾಕ್ಸಿಲೇಸ್ ಆಗಿ ಪರಿವರ್ತಿತವಾಗಿ ಕ್ರಿಯೆಯನ್ನು ತೋರಿಸುವುದು. ಥಯಮೀನಿನ ಕ್ರಿಯೆ ದೇಹದ ಎಲ್ಲ ಕೋಶಗಳಿಗೂ ಅವಶ್ಯವಾದರೂ, ಅದರ ಕೊರತೆಯ ಪ್ರಮಾಣ ವ್ಯಕ್ತವಾಗುವುದು ಪ್ರಧಾನವಾಗಿ ನರಮಂಡಲದ ಕೋಶಗಳಲ್ಲಿ. ಈ ಕೋಶಗಳಲ್ಲಿ ಹಾಗೂ ನರಗಳಲ್ಲಿ ಊತ ಶೈಥಿಲ್ಯಗಳು ಉಂಟಾಗುತ್ತವೆ. ಅನೇಕ ಬೆರಿ ಬೆರಿ ಪ್ರಸಂಗಗಳಲ್ಲಿ ದೇಹದ ಜಲಾಂಶ ಅಧಿಕವಾಗಿ ದೇಹದಲ್ಲಿ ನೀರಿನ ಚಲನೆಯನ್ನು ಥಯಮೀನ್ ನಿಯಂತ್ರಿಸುತ್ತದೆ.

ಥಯಮೀನ್ ಕೊರತೆಯಿಂದ ಉಂಟಾಗುವ ರೋಗ ಬೆರಿಬೆರಿ. ರೋಗ ಲಕ್ಷಣಗಳು ರೋಗದ ತೀವ್ರತೆ ಹಾಗೂ ಕಾಲಾವಧಿಗಳ ಮೇಲೆ ಅವಲಂಬಿಸಿವೆ. ಬೇರೆಬೇರೆ ವ್ಯಕ್ತಿಗಳಲ್ಲಿ ವಿವಿಧ ಲಕ್ಷಣಗಳು ಕಂಡುಬರುತ್ತವೆ. ಬೆರಿಬೆರಿಯಲ್ಲಿ ಮೂರು ಬಗೆ. 1. ಒಣ ತೇವಯುಕ್ತ ಬೆರಿಬೆರಿ ಮಿದುಳಿಗೆ ಸಂಬಂಧಿಸಿದ ಬೆರಿಬೆರಿ (ವರ್ನಿಕ್ಸ್ ಸಿಂಡ್ರೋಮ್). ಹಠಾತ್ತಾಗಿ ಥಯಮೀನಿನ ತೀವ್ರ ಕೊರತೆ ಉಂಟಾದರೆ ಮಿದುಳಿಗೆ ಘಾತವಾಗಿ ವರ್ನಿಕ್ಸ್ ಸಿಂಡ್ರೋಮ್ ಆಗುತ್ತದೆ. ಕೊರತೆ ಅಲ್ಪವಾಗಿ, ದೀರ್ಘಕಾಲಿಕವಾಗಿದ್ದರೆ ಒಣ ಮತ್ತು ತೇವಯುಕ್ತ ಬೆರಿಬೆರಿ ಬರುವುದು. ರೋಗ ಪ್ರಾರಂಭದಲ್ಲಿ ಹಸಿವಾಗದಿರುವುದು ಮತ್ತು ವಾಂತಿ ಉಂಟಾಗುತ್ತದೆ. ಹೀಗಾಗಿ, ಆಹಾರದ ಮೂಲಕ ಪೂರೈಕೆಯಾಗಬೇಕಾದ ಥಯಮೀನ್ ದೇಹಕ್ಕೆ ಒದಗದೆ ಕೊರತೆ ಅಧಿಕವಾಗುತ್ತದೆ. ದೇಹದಲ್ಲಿ ಸುಸ್ತು ಹೆಚ್ಚಾಗುತ್ತದೆ. ದೃಷ್ಟಿಮಾಂದ್ಯ, ಕಣ್ಣಾಲಿ ಅದಿರುವಿಕೆ (ನಿಟ್ಸ್ಯಾಗ್ ಮಸ್), ಕೈಕಾಲುಗಳ ಸ್ನಾಯು ನೋವು, ಹೃದಯ ವೇಗವಾಗಿ ಹೊಡೆದುಕೊಳ್ಳುವುದು (ಪ್ಯಾಲ್ಪಿಟೇಷನ್), ಬೇಗ ಏದುಸಿರು ಉಂಟಾಗುವುದು ಇವು ಇತರ ಲಕ್ಷಣಗಳು. ಸಂವೇದನಾ ಕ್ರಿಯೆಯ ಏರುಪೇರು ಸಾಮಾನ್ಯ. ನಂತರ ಕಾಲಿನ ಸ್ನಾಯುಗಳು ಕ್ಷೀಣಿಸಿ ಕಾಲು ಬತ್ತಿಹೋಗಿ ಹಸ್ತ ಪಾದಗಳು ಜೋತು ಬೀಳುವುವು. ಸ್ವಾಧೀನನಾಶ (ಪೆರಾಲಿಸಿಸ್) ಹೃದಯ ಸಾಮರ್ಥ್ಯ ಕುಂದಿ ವಿಶಾಲವಾಗುವುದು, ಕೊನೆಗೆ ರಕ್ತಪರಿಚಲನೆಗೆ ಧಕ್ಕೆಯಾಗುವುದು. ಎಳೆ ಮಕ್ಕಳಲ್ಲಿ ಬೆರಿಬೆರಿ ಉಂಟಾದರೆ ರೋಗಲಕ್ಷಣಗಳು ಕ್ಷಿಪ್ರವಾಗಿ ಕಂಡು ಬರುತ್ತದೆ. ಹಾಲುಕುಡಿಯದಿರುವಿಕೆ, ಹೊಟ್ಟೆ, ಉಬ್ಬರ, ಹೊಟ್ಟೆಯನ್ನು ಮುಟ್ಟಿದರೆ ನೋವಿನಿಂದ ಕಿರುಚಿಕೊಳ್ಳುವುದು, ವಾಂತಿ ಆಗುವುದು ಇವು ಪ್ರಾರಂಭ ಲಕ್ಷಣಗಳು. ನಂತರ ಹೃದಯ ಮಿಡಿತದ ಶ್ವಾಸಕ್ರಮದ ವೇಗ ಹೆಚ್ಚಿ ಶ್ವಾಸಕ್ರಿಯೆ ಕಷ್ಟವಾಗಿ, ಹೃದಯದ ಕೆಲಸಕ್ಕೆ ಅಡ್ಡಿ ಉಂಟಾಗುತ್ತದೆ.

ಬೆರಿಬೆರಿ ಕಂಡು ಬರುವುದು ಆಹಾರದಲ್ಲಿ ವೈಟಮಿನ್ನಿನ ಕೊರತೆಯಿಂದ. ಆಹಾರದಲ್ಲಿ ಶರ್ಕರ (ಕಾರ್ಬಹೈಡ್ರೈಟ್) ಹೆಚ್ಚಾಗಿದ್ದಾಗ ಈ ವೈಟಮಿನ್ ಹೆಚ್ಚು ಪ್ರಮಾಣದಲ್ಲಿ ಬೇಕು. ಭೇದಿ, ಆಮಶಂಕೆ, ಸ್ಪ್ರೂ ಇತ್ಯಾದಿ ಕರುಳಿನ ರೋಗಗಳಲ್ಲಿ ಆಹಾರದ ವೈಟಮಿನ್ ರಕ್ತಗತವಾದರೆ ಕೊರತೆ ಉಂಟಾಗುವುದು. ಕೊರತೆ ಅಲ್ಪವಾಗಿದ್ದರೆ, ನಿರಾಸಕ್ತಿ, ಭಯ, ಹಸಿವಾಗದಿರುವಿಕೆ, ಸುಸ್ತು, ಪಿರುಚು, ಕೈಕುಶಲತೆಯ ನಾಶ, ಕೆಲಸದಲ್ಲಿ ಸಾಕಷ್ಟು ಲಕ್ಷ್ಯ ಕೊಡಲು ಸಾಧ್ಯವಾಗದಿರುವಿಕೆಯಿಂದ ಈ ವೈಟಮಿನ್ನಿನ ಕೊರತೆಯನ್ನು ಮನಗಾಣಬಹುದು. ಇಂಥ ಸ್ಥಿತಿಗಳಲ್ಲಿ ಥಯಮೀನನ್ನು ಚಿಕಿತ್ಸೆ ಮೂಲಕ ನೀಡಬೇಕು. ಆದರೆ, ಪೆಲ್ಲಾಗ್ರ, ಡಿಫ್ತೀರಿಯ, ಪೋಲಿಯೋ, ಹರ್ಪಿಸ್ ರೋಗಗಳಲ್ಲಿ ನರಮಂಡಲದ ಕ್ರಿಯೆಗೆ ಧಕ್ಕೆ ಆದಾಗ ಥಯಮೀನನ್ನು ಕೊಡುವರು. ಗರ್ಭಿಣಿಯರ ಮನರೋಗ (ಹೈಪರ್‌ಮಿಸಿಸ್ ಗ್ರಾವಿಡೇರಮ್), ಮತ್ತು ಅಧಿಕ ಮದ್ಯಮಾನ ಸಂದರ್ಭಗಳಲ್ಲಿ ಸರಿಯಾಗಿ ಆಹಾರ ತೆಗೆದುಕೊಳ್ಳಲಾಗದೆ ಅಥವಾ ತೆಗೆದುಕೊಂಡ ಆಹಾರ ಸರಿಯಾಗಿ ಜೀರ್ಣವಾಗಿ ರಕ್ತಗತವಾಗದೆ ಥಯಮೀನಿನ ಕೊರತೆ ಉಂಟಾಗುತ್ತದೆ. ಆದ್ದರಿಂದ, ಈ ಸಂದರ್ಭಗಳಲ್ಲಿ ಥಯಮೀನನ್ನು ಉಪಯೋಗಿಸಲಾಗುತ್ತದೆ. ಬೆನ್ನು ನೋವು, ಸೊಂಟ ನೋವು, ತೊಡೆ ಕಾಲುಗಳ ಹಿಂಭಾಗದಲ್ಲಿ ಸೆಳತ (ಸೈಯಾಟಿಕ) ಇವುಗಳ ಚಿಕಿತ್ಸೆಗೆ ಥಯಮೀನನ್ನು ಅಧಿಕಪ್ರಮಾಣಗಳಲ್ಲಿ (200 ಮಿ.ಗ್ರಾಂ) ಕೊಡಬೇಕು. ನಿರಾಸಕ್ತಿ, ಪಿರುಚು, ಸುಸ್ತು, ಮುಂತಾದ ನರಸಂಬಂಧ ಪರಿಸ್ಥಿತಿಗಳಲ್ಲಿ ಅತಿಮದ್ಯಸೇವನೆ, ಪೆಲ್ಲಾಗ್ರ ಇವುಗಳಲ್ಲಿ ಕಂಡುಬರುವ ಚಿತ್ತಗಡಿಕೆಗಳಲ್ಲೆ ವೈಟಮಿನ್ 'ಬಿ1' ನ್ನು ಕೊಡುತ್ತಾರೆ.

ರೈಬೋಫ್ಲೇವಿನ್: ರೈಬೋಸ್ ಎಂಬ 5 ಕಾರ್ಬನ್ ಅಣುಗಳ ಸಕ್ಕರೆ ಮತ್ತು ಸಾರಜನಕಯುಕ್ತವಾದ ಫ್ಲೇವಿನ್ ವಸ್ತುಗಳ ಸಂಯುಕ್ತ: ವೈಟಮಿನ್ ಬಿ2 ಲ್ಯಾಕ್ಟೊಫ್ಲೇವಿನ್, ಓಮೋಫ್ಲೇವಿನ್ ಎಂದು ಕರೆಯುವರು. ಇದನ್ನು ರಾಸಾಯನಿಕವಾಗಿ ಶುದ್ಧಗೊಳಿಸಿ ಪ್ರತ್ಯೇಕಿಸಿದಾಗ ಕಿತ್ತಳೆ ಬಣ್ಣದ ಹರಳುಗಳಂತೆ ಕಾಣುವುದು. ಇದರ ರಾಸಾಯನಿಕ ರಚನೆಯನ್ನು ತಿಳಿದು, ಕೃತಕ ಸಂಶ್ಲೇಷಣೆ ಮಾಡಬಹುದು. ಅಡುಗೆಯ ಉಷ್ಣತೆ ಇದನ್ನು ನಾಶಮಾಡದು. $280^0$ಸೆಂ ಉಷ್ಣತೆಯಲ್ಲಿ ಇದು ದ್ರವವಾಗಿ ನಂತರ ಬೃಹದಣು ಛಿದ್ರತೆಯಿಂದ ನಾಶವಾಗುತ್ತದೆ. ನೀರಲ್ಲಿ ಸ್ವಲ್ಪ ಪ್ರಮಾಣ ಮಾತ್ರ ಕರಗುತ್ತದೆ. ಪಾರದರ್ಶಕ ನೋಟಕ್ಕೆ ಹಳದಿಯಾಗಿ ಪ್ರತಿಬಿಂಬಿತ ನೋಟಕ್ಕೆ ಹಸಿರಾಗಿ ಕಾಣುವುದು ಈ ದ್ರಾವಣದ ವೈಶಿಷ್ಟ್ಯ (ಪ್ರತಿದೀಪ್ತಿ, ಫ್ಲೂರೆನ್ಸ್) ಬೇಗ ಉತ್ಕರ್ಷಣೆ ಹೊಂದುವುದಿಲ್ಲ. ಪ್ರತ್ಯಾಮ್ಲ ಮಾಧ್ಯಮದಲ್ಲಿ ಬೆಳಕಿನಿಂದ ಶೀಘ್ರವಾಗಿ ವಿಭಜನೆಗೊಂಡು ನಾಶವಾಗುತ್ತದೆ. ಯೀಸ್ಟ್, ಎಳೆಯ ತರಕಾರಿ, ಹಾಲು ಮೊಟ್ಟೆ ಯಕೃತ್ತು, ಮೂತ್ರಪಿಂಡ ಮುಂತಾದುವುಗಳಲ್ಲಿ ರೈಬೋಫ್ಲೇವಿನ್ ಹೇರಳವಾಗಿದೆ.

ರೈಬೋಫ್ಲೇವಿನ್ ಸಂರಚನೆ: ಮಾನವರಿಗೆ ಪ್ರತಿ ದಿವಸ ಸು. 1 ಮಿ.ಗ್ರಾಂ ರೈಬೋಫ್ಲೇವಿನ್ ಅಗತ್ಯವಿದೆ. ಜೀವಕೋಶಗಳಲ್ಲಿ ರೈಬೋಫ್ಲೇವಿನ್ ಫಾಸ್ಫಾರಿಕ್ ಆಮ್ಲದೊಡನೆ ಸೇರಿ, ಮಾನೋನ್ಯೂಕ್ಲಿಯೊಟೈಡಾಗಿ ಅದು ಅಡಿನೈನ ಸಂಗಡ ಸೇರಿ ಡೈನ್ಯೂಕ್ಲಿಯೊಟೈಡಾಗಿ ಪರಿವರ್ತಿತವಾಗುತ್ತದೆ. ಜೀವರಾಸಾಯನಿಕಗಳಿಂದ ಹೈಡ್ರೋಜನ್ನನ್ನು ಬೇರ್ಪಡಿಸಿ ಅವನ್ನು

ಉತ್ಕರ್ಷಿಸಬಲ್ಲ ಡಿ ಹೈಡ್ರೊಜಿನೇಸ್ ಎನ್‌ಜೈಮಿನ ಕ್ರಿಯೆಯನ್ನು ಸಾಧ್ಯಗೊಳಿಸಲು ಈ ಎರಡು ನ್ಯೂಕ್ಲಿಯೊಟೈಡುಗಳು ಪಾಲುಗೊಳ್ಳುವ ಸಹಾಯಕ ಎನ್‌ಜೈಮುಗಳಾಗಿವೆ.

ಕಣ್ಣಿನ ಕರಿಗುಡ್ಡೆಯಲ್ಲಿ ರಕ್ತನಾಳಗಳಿರುವುದಿಲ್ಲ. ಆದ್ದರಿಂದ, ಅಲ್ಲಿಗೆ ಸ್ವತಃ ರಕ್ತ ಪೂರೈಕೆ ಆಗುವುದಿಲ್ಲ. ಅಲ್ಲಿಯ ಚಯಾಪಚಯ ಕ್ರಿಯೆಗಳ ಉತ್ಕರ್ಷಣ ಘಟಕಗಳಿಗೆ ರೈಬೋಫ್ಲೇವಿನ್ ಅವಶ್ಯಕ. ಇದರ ಕೊರತೆ ಉಂಟಾದಲ್ಲಿ ಕಣ್ಣಿನ ಕರಿಗುಡ್ಡೆಯಲ್ಲಿ ಉತ್ಕರ್ಷಣ ಕ್ರಿಯೆ ಮುಂದುವರಿಯುವುದು. ಸುತ್ತಲಿಂದ ರಕ್ತನಾಳಗಳು ಬೆಳೆದು ಈ ಸ್ಥಳವನ್ನು ಆಕ್ರಮಿಸಿ ರಕ್ತಪೂರೈಕೆ ಮಾಡುವುದರಿಂದ ಮಾತ್ರ ಸಾಧ್ಯ. ರೈಬೊಫ್ಲೇವಿನ್ ಕೊರತೆ ಕಾಲದಲ್ಲಿ ಕಣ್ಣುರಿ, ಕಣ್ಣುಕಡಿತ, ಕಣ್ಣುನೋಯುವಿಕೆ, ಕಣ್ಣೀರು ಸುರಿಸುವುದು, ಕಣ್ಣು ತಾನಾಗಿಯೇ ಮುಚ್ಚಿ ಕೊಳ್ಳುವುದು ಇತ್ಯಾದಿ ಅಕ್ರಮಗಳಿಂದ ದೃಷ್ಟಿ ಕ್ರಿಯೆಗೆ ಧಕ್ಕೆ ಉಂಟಾಗುತ್ತದೆ. ತುಟಿಬಿರಿತ ಹಾಗೂ ಉರಿ (ಕೈಲೋಸಿಸ್) ನಾಲಿಗೆ ಕೆಂಪೇರಿ ಉರಿಯುವುದು (ಗ್ಲಾಸೈಟಿಸ್) ಇವು ಕೊರತೆಯ ಇತರ ಲಕ್ಷಣಗಳು. ಬಾಯಿಯ ಎರಡು ಕೋನಗಳು ಬಿಳಿಚಿಕೊಂಡು, ಕೆಂಪಾಗಿ ಲೋಳೆಪೊರೆ ಸುಲಿದು ಹೋಗುತ್ತದೆ. (ಅಂಗ್ಯುಲರ್ ಸ್ಟೊಮೆಟೈಟಿಸ್) ತುಟಿಯ ಸುತ್ತ ಮತ್ತು ಮೂಗಿನ ಹೊಳ್ಳೆಗಳ ಸುತ್ತ ಚರ್ಮದಲ್ಲಿ ಊತ ಉಂಟಾಗಿ ಒರಟಾಗುತ್ತದೆ. ನಾಲಗೆಯ ಕೆಂಪಾಗಿರುವುದು, ನಾಲಗೆಯ ಮೇಲೆ ನೊರಜುಗಲ್ಲು ಮೆಟ್ಟಿದಂತೆ ಕಾಣಿಸುತ್ತದೆ. ರೈಬೋಫ್ಲೇವಿನ್ ಕರುಳಿನ ಸಹಜೀವಿ ಸೂಕ್ಷ್ಮಾಣುಗಳಿಂದ ದೇಹಕ್ಕೆ ಒದಗುತ್ತದೆ. ಜೀವ ನಿರೋಧಕಗಳ ಉಪಯೋಗದಿಂದ ಕರುಳಿನ ಸೂಕ್ಷ್ಮಾಣುಗಳು ನಾಶವಾದಾಗ ರೈಬೋಫ್ಲೆವಿನ್ನಿನ ಕೊರತೆ ತಲೆದೋರಬಹುದು. ಆದ್ದರಿಂದ, ಜೀವ ನಿರೋಧಕಗಳನ್ನು ಚಿಕಿತ್ಸೆಗಾಗಿ ಉಪಯೋಗಿಸುವಾಗ ರೈಬೋಫ್ಲೆವಿನನ್ನು ಜೊತೆಗೆ ನೀಡುವರು.

ನಿಕೋಟನಿಕ್ ಆಮ್ಲ : ಪಿರಿಡೀನ್ ರಚನೆಯುಳ್ಳ ಕಾರ್ಬಾಕ್ಸಿಲಿಕ್ ಆಮ್ಲ. ಇದರ ಅಮೈಡ್ ಕೂಟ ವೈಟಮಿನ್ನಾಗಿ ವರ್ತಿಸುತ್ತದೆ. ಇವೆರಡೂ ನೀರಲ್ಲಿ ಕರಗಬಲ್ಲ ಬಿಳಿಯ ಹರಳುಗಳು ಸು.130$^0$ ಸೆಂ ಉಷ್ಣತೆಯಲ್ಲಿ ಅಮೈಡ್ 256$^0$ಸೆಂ. ಕರಗಿ ದ್ರವವಾಗುತ್ತದೆ. ಶೇಖರಣೆ ಹಾಗೂ ಅಡುಗೆ ವಿಧಾನಗಳಿಂದ ಸತ್ವ ನಾಶವಾಗದ ದೃಢ ರಚನೆಯ ವಸ್ತುಗಳಿವು. ಇದು ಸುಲಭವಾಗಿ ನಾಶವಾಗುವುದಿಲ್ಲ. ಹಾಲು ಮೊಟ್ಟೆ ಯಕೃತ್ತು, ಧಾನ್ಯ, ಯೀಸ್ಟುಗಳಲ್ಲಿ ಮಿಕ್ಕ ಬಿ ಸಂಕೀರ್ಣ ಘಟಕಗಳೊಡನೆ ದೊರೆಯುವುದು. ಈ ವಸ್ತು ಒಂದು ಕೆ.ಜಿ ಮುಸುಕಿನ ಜೋಳದಲ್ಲಿ 14.8 ಮಿ.ಗ್ರಾಂ ಇರುತ್ತದೆ. ಇದು 1857 ರಲ್ಲಿ ಶುದ್ಧ ರಾಸಾಯನಿಕವಾಗಿ ಸಂಶ್ಲೇಷಿಸಲ್ಪಟ್ಟಿತ್ತು.. ಆದ್ದರಿಂದ ಅಂತಾರಾಷ್ಟ್ರೀಯ ಏಕಮಾನಕ್ಕೆ ಇದರ ತೂಕವನ್ನೇ ಅಳವಡಿಸಿಕೊಂಡಿದೆ.

ನಿಕೋಟೆನಿಕ್ ಆಮ್ಲದ ಸಂರಚನೆ: ಮನುಷ್ಯರಿಗೆ ಪ್ರತಿ ದಿನ ಸು. 15 ಮಿ.ಗ್ರಾಂ ಅಗತ್ಯ. ಗರ್ಭಿಣಿಯರಿಗೆ, ಹಾಲುಣಿಸುವ ತಾಯಿಯರಿಗೆ ಇನ್ನೂ ಹೆಚ್ಚು ಪ್ರಮಾಣ ಬೇಕು. ಚಯಾಪಚಯ ಕ್ರಿಯೆಗಳಲ್ಲಿ ಉತ್ಕರ್ಷಣ ಮತ್ತು ಅಪಕರ್ಷಣಗಳಾಗುವಾಗ ನಿರ್ದಿಷ್ಟ ಎನ್‌ಜೈಮುಗಳ ಜೊತೆಗೆ ಭಾಗವಹಿಸುವ ಸಹಾಯಕ ಎನ್‌ಜೈಮುಗಳಾದ ಕೊಎನ್‌ಜೈಮ್ ಮತ್ತು ಕೊಎನ್‌ಜೈಮ್‌ಗಳು ಈ ವೈಟಮಿನ್ನಿನಿಂದಾಗಿವೆ. ಆದ್ದರಿಂದ, ಇದರ ಕಾರ್ಯ ಅಗಾಧ ಮತ್ತು ಕ್ಷೇತ್ರ ವ್ಯಾಪಕವೆನ್ನುವುದು ತಿಳಿಯುತ್ತದೆ. ತತ್ರಾಪಿ ರಕ್ತ ಕಣವೃದ್ಧಿಗೆ, ಜೀರ್ಣನಾಳದ ಸಹಜ ಕ್ರಿಯೆಗೆ, ಚರ್ಮ ಮತ್ತು ನರಮಂಡಲಗಳಿಗೆ ಬೇಕು. ಟ್ರಿಪ್ಟೊಫೇನ ಅಮೈನೋ ಆಮ್ಲದಿಂದ ಸಂಯೋಗಗೊಳ್ಳಲು ಅಗತ್ಯ. ಪೈಲಾಗ್ರವನ್ನು ತಡೆಗಟ್ಟುವ ವೈಟಮಿನ್ (ಪೆಲ್ಲಾಗ್ರ ಪ್ರಿವೆನ್‌ಟಿಂಗ್) ಇದಾದ್ದರಿಂದ, ಪಿ.ಪಿ ಫ್ಯಾಕ್ಟರ್ ಎಂದೂ ಹೆಸರಿದೆ. ಭೇದಿ, ಹಾವಿನ ಪೊರೆಯಂತಿರುವ ಕಂದಾದ ಚರ್ಮ ಹಾಗೂ ಚಿತ್ತ ವಿಕಲ್ಪಗಳು, ಪೆಲ್ಲಾಗ್ರದ ಪ್ರಧಾನ ಲಕ್ಷಣಗಳು, ಬಿಸಿಲಿಗೆ ಒಡ್ಡಿದ ಚರ್ಮ ಎಡ ಬಲ ಎರಡು ಕಡೆಯೂ ತೋರಿಬರದೇ ಇರಬಹುದು. ಪೆಲ್ಲಗ್ರ ನಿಕೋಟಿನಿಕ್ ಆಮ್ಲದ ಕೊರತೆಯಿಂದ ಮಾತ್ರ ಬರುವುದಿಲ್ಲ. ವೈಟಮಿನ್ ಬಿ ಗುಂಪಿನ ಮಿಕ್ಕ ವಸ್ತುಗಳ ಕೊರತೆ ಇದ್ದರೆ ಬರುತ್ತದೆ. ಆದ್ದರಿಂದ, ರೋಗಚಿಕಿತ್ಸೆಗೆ ನಿಕೋಟನಿಕ್ ಆಮ್ಲವನ್ನು ಮಾತ್ರ ಉಪಯೋಗಿಸುವ ಬದಲು ಬಿ ಸಂಕೀರ್ಣ ಕಾಂಪ್ಲೆಕ್ಸ ಉಪಯೋಗಿಸುವರು.

ಪೆಲ್ಲಗ್ರ ನಿಕೋಟಿನಿಕ್ ಆಮ್ಲದ ಕೊರತೆಯಿಂದ ಮಾತ್ರ ಬರುವುದಲ್ಲ. ವೈಟಮಿನ್ ಬಿ ಗುಂಪಿನ ಮಿಕ್ಕ ವಸ್ತುಗಳ ಕೊರತೆ ಇದ್ದರೂ ಬರುತ್ತದೆ. ಆದ್ದರಿಂದ, ರೋಗ ಚಿಕಿತ್ಸೆಗೆ ನಿಕೋಟನಿಕ್ ಆಮ್ಲವನ್ನು ಮಾತ್ರ ಉಪಯೋಗಿಸುವ ಬದಲು ಬಿ ಸಂಕೀರ್ಣ ಕಾಂಪ್ಲೆಕ್ಸ್ ಉಪಯೋಗಿಸುವರು. ನಿಕೋಟಿನಿಕ್ ಆಮ್ಲದ ಕೃತಕ ಸಂಶ್ಲೇಷಣೆ 1877 ರಲ್ಲಿ ನಿಕೋಟಿನ್‌ಮೈಡಿನದು 1894 ಲ್ಲಿ ಇದರ ರಾಸಾಯನಿಕ ರಚನೆ ಕಂಡುಹಿಡಿಯಲಾಯಿತು.

ಪಿರಿಡಾಕ್ಸಿನ್: ಇದನ್ನು ವೈಟಮಿನ್ ಬಿ6 ಎನ್ನುವರು. ಪಿರಿಡಿನ್ ಎಂಬುದು ನೈಟ್ರೋಜನ್‌ಯುಕ್ತ ಸಕ್ರಿಯ ಘಟಕ. ರಾಸಾಯನಿಕ ರಚನೆಯನ್ನು ಕೂಹ್ನ್ (1939) ಆವಿಷ್ಕರಿಸಿದ. ಬಳಿಕ ಕೃತಕ ಸಂಶ್ಲೇಷಣೆ ಆಗಿದೆ. ಇದು ಬಣ್ಣವಿಲ್ಲದ ಹರಳಿನಂತಿದೆ. ನೀರಿನಲ್ಲಿ ಹಾಗೂ ಆಲ್ಕೊಹಾಲಿನಲ್ಲಿ ಕರಗಬಲ್ಲದು. ಅಡುಗೆ ಉಷ್ಣತೆಯಿಂದ ನಾಶವಾಗುವುದಿಲ್ಲ. 205–212$^0$ ಸೆ ನಲ್ಲಿ ಕರಗಿ ದ್ರವವಾಗುತ್ತದೆ. ಪ್ರತ್ಯಾಮ್ಲತೆ, ಅತಿನೇರಿಳೆ ಕಿರಣಗಳಿಂದ ವಿಭಜನೆಗೊಂಡು ನಾಶವಾಗುತ್ತದೆ. ಮೊಟ್ಟೆ ಹಳದಿ, ಮಾಂಸ, ಯಕೃತ್ತು ಬಟಾಣಿ, ಸೋಯಬಿನ್ಸ್ ಯೀಸ್ಟ್ ಗಳಲ್ಲಿ ಹೇರಳವಾಗಿ ದೊರೆಯುತ್ತದೆ. ಹಾಲಿನಲ್ಲಿ ಮತ್ತು ತರಕಾರಿಗಳಲ್ಲಿ ಕಡಿಮೆ.

ಪಿರಿಡಾಕ್ಸಿನ್ ಗೆ ಸಂಬಂಧಿಸಿದ ಪರಿಡಾಕ್ಸ್ಯಾಲ್ ಮತ್ತು ಪಿರಿಡಾಕ್ಸಿಮೈನುಗಳು ಪ್ರೊಟೀನುಗಳ ಚಯಾಪಚಯ ಕ್ರಿಯೆಗಳಲ್ಲಿ ಭಾಗವಹಿಸುವ ಟ್ರಾನ್ಸ್‌ಅಮೈನೇಸುಗಳೆಂಬ ಎನ್‌ಜೈಮುಗಳ ಘಟಕಗಳು. ಅಲ್ಲದೆ ಟೈರೋಸಿನ್, ಅರ್ಜನಿನ್ ಹಾಗೂ ಗ್ಲೂಟಾಮಿಕ್ ಆಮ್ಲಗಳು ಅಮೈನೊ (–ಎನ್ ಹೆಚ್2) ಘಟಕಗಳನ್ನು ವರ್ಜಿಸಲು ಸಹಾಯ ಮಾಡುವ ಡಿ ಅಮೈನೇಸುಗಳೆಂಬ ಎನ್‌ಜೈಮುಗಳ ಘಟಕಗಳಾಗಿ ಇವೆ.

ಟ್ರಿಪ್ಟೊಫೇನ್ ನಿಕೋಟಿನಿಕ್ ಆಮ್ಲವಾಗಿ ಪರಿವರ್ತಿತವಾಗಲು ಪಿರಿಡಾಕ್ಸಿನ್ ಅಗತ್ಯ. ಪಿರಿಡಾಕ್ಸಿನ್ ಎಳೆಪ್ರಾಣಿಗಳ ಬೆಳೆವಣಿಗೆಗೆ ಅಗತ್ಯ. ಇದರ ಕೊರತೆಯಿಂದ ಮಾನವರಲ್ಲಿ ಯಾವ ವಿಶಿಷ್ಟ ರೋಗಲಕ್ಷಣಗಳು ವ್ಯಕ್ತವಾಗುವುದಿಲ್ಲ. ಇದು ಮಾನವ ದೇಹದಲ್ಲಿ ತಯಾರಾಗಿ ಅಥವಾ ಸಹಜೀವಿ ಸೂಕ್ಷ್ಮಾಣುಗಳಿಂದ ಒದಗುವುದರಿಂದ ಇದರ ಕೊರತೆ ಉಂಟಾಗುವುದಿಲ್ಲ. ಸ್ನಾಯುಗಳ ನಿರ್ಬಲತೆ, ಪೆಲ್ಲಾಗ್ರ, ಬೆರಿಬೆರಿ, ರೋಗದ ಸಂದರ್ಭಗಳಲ್ಲಿ ಪಿರಿಡಾಕ್ಸಿನನ್ನೂ ಚಿಕಿತ್ಸೆಗಾಗಿ ಉಪಯೋಗಿಸುತ್ತಾರೆ. ಇದನ್ನು ಗರ್ಭಿಣಿಯರ ವಮನ ರೋಗ, ಶ್ವೇತರಕ್ತಣ ಹೀನತೆ ಇವುಗಳಿಗೆ ಕೊಡುವರು. ದೀರ್ಘಕಾಲಿಕ ಎಕ್ಸ್ ಕಿರಣಗಳಿಗೆ ದೇಹವನ್ನು ಒಡ್ಡಲ್ಪಡಬೇಕಾದ ಸಂದರ್ಭಗಳಲ್ಲಿ, ಅನಪೇಕ್ಷಿತ ಹಾಗೂ ಹಾನಿಕರ ಪರಿಣಾಮಗಳಿಂದ ಪಿರಿಡಾಕ್ಸಿನ್ ರಕ್ಷಿಸುವುದು.

ಪ್ಯಾನ್ಟೋಥಿನಿಕ್ ಆಮ್ಲ: ಮಂದವಾದ ಎಣ್ಣೆಯಂತಿರುವ ಹಳದಿ ದ್ರವ. ನೀರಿನಲ್ಲಿ ಕರಗಬಲ್ಲುದು. ಪ್ರಾಣಿದೇಹದಲ್ಲಿ ಎಲ್ಲ ಕೋಶಗಳಲ್ಲಿದೆ. ಇದನ್ನು ವೈಟಮಿನ್ ಬಿ1 ಎನ್ನುವರು. ಗಂಧಕಯುಕ್ತ ವಸ್ತು. ಯೀಸ್ಟ್, ಗೋದಿ, ಯಕೃತ್, ಮೂತ್ರಪಿಂಡಗಳಲ್ಲಿ ಹೇರಳವಾಗಿದೆ. ಬೂಷ್ಟುಗಳು, ಸೂಕ್ಷ್ಮಾಣುಗಳು, ಸಸ್ಯಗಳು, ಇದನ್ನು ತಯಾರಿಸುತ್ತವೆ. ರಾಸಾಯನಿಕ ರಚನೆ ಮತ್ತು ಕೃತಕ ಸಂಶ್ಲೇಷಣೆ ಮಾಡಲಾಗಿದೆ.

ಪ್ಯಾನ್‌ಟೋಥಿನಿಕ್ ಆಮ್ಲ ಕೊಎನ್‌ಜೈಮ್ ಎ ಯ ಸಕ್ರಿಯ ಘಟಕ. ಈ ಎನ್‌ಜೈಮು ಆಹಾರ ವಸ್ತುಗಳ ಅಂತ್ಯ ಉತ್ಕರ್ಷಕ ಘಟ್ಟದಲ್ಲಿ ಭಾಗವಹಿಸುವುದರಿಂದ ಪ್ಯಾನ್‌ಟೋಥಿನಿಕ್ ಆಮ್ಲದ ಕ್ರಿಯೆ ಎಷ್ಟು ಅಗತ್ಯ ಮತ್ತು ವ್ಯಾಪಕ ಎಂದು ತಿಳಿಯಬಹುದು. ಇಷ್ಟಾದರೂ ಇದರ ಕೊರತೆಯಿಂದ ಲಕ್ಷಣಗಳು ಸ್ಪಷ್ಟವಾಗಿರುವುದಿಲ್ಲ. ವಿನಾಕಾರಣ ಅಂಗಾಲು ಉರಿತದ ಪ್ರಸಂಗಕ್ಕೆ ಇದರ ಕೊರತೆ ಕಾರಣ. ಕೂನೂರಿನ ನ್ಯೂಟ್ರಿಷನ್ ರಿಸರ್ಚ ಲ್ಯಾಬೋರೇಟರಿಯಲ್ಲಿ ವ್ಯಾಸಂಗಗಳಿಂದ ಅಂಗಾಲು ಉರಿತವಾದಾಗ ಪ್ಯಾನ್ ಟೋಥಿನಿಕ್ ಆಮ್ಲ ಉಪಯುಕ್ತವಾಗಿರುವುದನ್ನು ಕಂಡುಹಿಡಿಯಲಾಗಿದೆ. ಸಣ್ಣ ಕರುಳಿನ ಚಲನೆ ಸ್ಥಗಿತವಾದಾಗ (ಪೆರಾಲಿಟಿಕ್ ಐಲಿಯಸ್) ಪ್ಯಾನ್‌ಟೋಥಿನಿಕ್ ಆಮ್ಲವನ್ನು ಚುಚ್ಚು ಮದ್ದಾಗಿ ಕೊಡುವರು.

ಸೈಯನೊ ಕೋಬಾಲಮಿನ್ : ವೈಟಮಿನ್ ಬಿ12 ಎಂದು ವ್ಯವಹರಿಸಲಾಗುತ್ತದೆ. ಕೋಬಾಲ್ಟ ಎಂಬ ಲೋಹದಿಂದಾದ ಬಲು ಜಟಿಲ ರಚನೆಯ ವಸ್ತು. ಇದು ಲೋಹಯುಕ್ತವಾದ ವೈಟಮಿನ್. 1979 ರಲ್ಲಿ ಮೈನಟ್ ಮತ್ತು ಮರ್ಫಿ ಎಂಬುವರು ಪರ್ನೀಷಿಯಸ್ ಅನೀಮಿಯ ಎಂಬ ಮಾರಕ (ಆಗಿನ ಕಾಲಕ್ಕೆ) ರಕ್ತ ಹೀನತೆ ರೋಗವನ್ನು ಪ್ರಾಣಿಗಳ ಯಕೃತ್ತಿನ ನಿರಂತರ ಸೇವನೆಯಿಂದ ಗುಣಪಡಿಸಬಹುದು ಎಂದು ತೋರಿಸಿದರು. ಅಧಿಕ ಪ್ರಮಾಣದಲ್ಲಿ ಯಕೃತ್ತನ್ನು ಪ್ರತಿ ದಿನ ಸೇವಿಸಬೇಕಾದ್ದರಿಂದ ಅದರ ಸಾರವನ್ನು ತೆಗೆದು ತಕ್ಕ ಮಟ್ಟಿಗೆ ಶುದ್ಧಿಮಾಡಿ ಪ್ರಬಲಗೊಳಿಸಿ ಚುಚ್ಚುಮದ್ದಿನಂತೆ ಕೊಡುವುದು ರೂಢಿಗೆ ಬಂತು. ಇಂಥ ಪ್ರಬಲ ಯಕೃತ್ತು ಸಾರಗಳಿಂದ ಒಂದು ಹರಳಾಗಬಲ್ಲ ವಸ್ತುವನ್ನು 1948 ರಲ್ಲಿ ಪ್ರತ್ಯೇಕಿಸಲಾಯಿತು. ಇದನ್ನು ಚುಚ್ಚುಮದ್ದಾಗಿ ಅತ್ಯಂತ ಕಡಿಮೆ ಪ್ರಮಾಣಗಳಲ್ಲಿ (ಕೆಲವು ಮೈ. ಗ್ರಾಂ) ಕೊಟ್ಟರೆ, ಮಾರಕ ರಕ್ತಹೀನತೆ ಆಶ್ಚರ್ಯಕರವಾಗಿ ಗುಣವಾಗುವುದು ತಿಳಿಯಿತು. ಇದಕ್ಕೆ ವೈಟಮಿನ್ ಬಿ12 ಎಂದು ಹೆಸರಿಟ್ಟರು.

ಪ್ರಯೋಗ ಪ್ರಾಣಿಗಳು ಕೇವಲ ಸಸ್ಯಜನ್ಯ ಆಹಾರಗಳನ್ನೇ ಸೇವಿಸಿ ಬದುಕಿರಲಾರವು. ಕಾರಣ, ಪ್ರಾಣಿಜನ್ಯ ಆಹಾರ ಬೇಕು. ವೈಟಮಿನ್ ಬಿ12 ಸಸ್ಯಜನ್ಯವಲ್ಲ ಪ್ರಾಣಿಜನ್ಯ ಆಹಾರಗಳಿಂದಲೇ ಒದಗಬೇಕು. ಕಾರಣ, ಮಾನವದೇಹದಲ್ಲಿ ಇದು ಉತ್ಪನ್ನವಾಗುವುದಿಲ್ಲ. ಇದರಲ್ಲಿ ಕೋಬಾಲ್ಟ್ ಇರುವುದು. ಸಂಬಂಧಿ ರಾಸಾಯನಿಕಗಳಿಗೆಲ್ಲ ಕೋಬಾಲಾಮೈನುಗಳೆಂದು ಹೆಸರಿಟ್ಟರು. ಅವುಗಳಲ್ಲಿ ಮುಖ್ಯವಾದುದು ಸೈಯನೋ ಕೋಬಾಲಮೈನ್, ಉಳಿದವು ನೈಟ್ರೋ, ಹೈಡ್ರೋ ಇತ್ಯಾದಿ. ಸೈಯನೋ ಕೋಬಾಲಮಿನ್ನಿನ

ಅಣುರಚನೆಯನ್ನು 1956 ರಲ್ಲಿ ಕಂಡುಹಿಡಿಯಲಾಯಿತು. ಶುದ್ಧವಸ್ತು ದೊರೆತಿರುವುದರಿಂದ ಅಂತಾರಾಷ್ಟ್ರೀಯ ಏಕಮಾನಕ್ಕೆ ಇದರ ತೂಕವನ್ನೇ ಅಳವಡಿಸಿಕೊಂಡಿದೆ. ಮನುಷ್ಯನಿಗೆ ಪ್ರತಿ ದಿನ 3–4 ಮೈ. ಗ್ರಾಂ ಸಾಕು. ಏಕೆಂದರೆ, ವೈಟಮಿನ್ ಬಿ ಗುಂಪಿನ ಅನೇಕ ಇತರ ವೈಟಮಿನ್ನುಗಳಂತೆ ಸಹಜೀವಿ ಸೂಕ್ಷ್ಮಾಣುಗಳಿಂದ ಇದು ದೇಹಕ್ಕೆ ಪೂರೈಕೆ ಆಗುತ್ತದೆ. ಜೀವನಿರೋಧಕಗಳ ಅವಿವೇಕ ಉಪಯೋಗದಿಂದ ಈ ಸೂಕ್ಷ್ಮಾಣುಗಳು ನಾಶವಾಗಿ ಇಂಥ ಪೂರೈಕೆಗೆ ದಕ್ಕೆಯಾಗುತ್ತದೆ. ಆದ್ದರಿಂದ, ಜೀವನಿರೋಧಕ ಚಿಕಿತ್ಸೆಯ ಕಾಲದಲ್ಲಿ ವೈಟಮಿನ್ ಬಿ12 ನ್ನು ಕೊಡಬೇಕು.

ಪ್ರಾಯೋಗಿಕವಾಗಿ ಪರೀಕ್ಷಿಸಿದ ಸಮಸ್ತ ಪ್ರಾಣಿಗಳಿಗೂ ಇದು ಅಗತ್ಯ. ಸೂಕ್ಷ್ಮಾಣುಗಳಿಂದ ಮಾತ್ರ ತಯಾರಾಗುವ ಈ ವಸ್ತು, ಯಕೃತ್ತು ಮತ್ತು ಇತರ ಸ್ಥಳಗಳಲ್ಲಿ ಶೇಖರಣೆ ಆಗುತ್ತದೆ. ಆದ್ದರಿಂದಲೆ, ಯಕೃತ್ತಿನ ಸಾರ ಮಾರಕ ರಕ್ತಹೀನತೆಯ ಚಿಕಿತ್ಸೆಯಲ್ಲಿ ಉಪಯುಕ್ತ. ಮಾನವ ನೇರವಾಗಿ ಬೂಷ್ಟಿನಿಂದ ಮತ್ತು ಸೂಕ್ಷ್ಮಾಣುಗಳಿಂದ ಈ ವೈಟಮಿನ್‌ನ್ನು ಪಡೆಯಲಾರದೆ, ಪ್ರಾಣಿಜನ್ಯ ಆಹಾರವನ್ನು ಸೇವಿಸಬೇಕಾಗುವ ಅಗತ್ಯ ಇದೆ. ಕೆಲವು ಸೂಕ್ಷ್ಮಾಣುಗಳಲ್ಲಿ ಇದನ್ನು ತಯಾರಿಸುವ ಸಾಮರ್ಥ್ಯವಿಲ್ಲ. ಕೋಲೀನ್ ಮತ್ತು ಮಿಥಯೋನಿನುಗಳ ಸಂಶ್ಲೇಷಣೆಗೆ ಅಗತ್ಯವಾದ ಮೀಥೈಲ್ ಘಟಕಗಳ ಸರಬರಾಜಿಗೆ ಬೇಕಾಗುತ್ತದೆ. ನಂತರ ಇವುಗಳ ಉಪಯೋಗದಿಂದ ನ್ಯೂಕ್ಲಿಯಕ್ ಆಮ್ಲಗಳ ಸಂಶ್ಲೇಷಣೆಗೆ ಅಗತ್ಯವೆಂಬುದು ವ್ಯಕ್ತವಾಗಿದೆ. ಮಾನವರಲ್ಲಿ ಈ ಜೀವಸತ್ವದ ಕೊರತೆಯಿಂದ ಮಾರಕ ರಕ್ತಹೀನತೆ ಉಂಟಾಗುವುದು. ಆದ್ದರಿಂದ, ಚಿಕಿತ್ಸೆಗೆ ವೈಟಮಿನ್ ಬಿ12 ಕೊಡಬೇಕು.

ವೈಟಮಿನ್ ಬಿ12 ಅತ್ಯಂತ ಪ್ರಭಾವೀ ಜೈವಿಕ ವಸ್ತುಗಳಲ್ಲಿ ಒಂದು. ಮಿಲಿಯದಲ್ಲಿ ಎರಡು ಭಾಗವನ್ನು ಪ್ರತಿ ದಿನ ಕೊಡುತ್ತಿದ್ದರೆ ಮಾರಕ ರಕ್ತ ಹೀನತೆಯಿಂದ ಪಾರಾಗಬಹುದು. ಇದನ್ನು ಚುಚ್ಚುಮದ್ದಾಗಿಯೇ ಕೊಡಲಾಗುತ್ತದೆ. ನೇರವಾಗಿ ಸೇವಿಸಿದರೆ ರಕ್ತಗತವಾಗುವುದಕ್ಕೆ ಜಠರರಸದಲ್ಲಿ ಆಂತರಿಕಾಂಶ (ಇನ್‌ಟ್ರಿನ್‌ಸಿ ಫ್ಯಾಕ್ಟರ್) ಅಗತ್ಯ. ವಾಸ್ತವವಾಗಿ ಆಹಾರದಲ್ಲಿ ಸೇವಿಸಿದ ಬಿ12 ಜೀವಸತ್ವ (ಇದನ್ನು ವೈಟಮಿನ್ ಬಿ 12 ಅವಿಷ್ಕಾರಕ್ಕೆ ಮೊದಲು ಎಕ್ಸ್‌ಟ್ರಿನ್ಸಿಕ್ಸ್ ಫ್ಯಾಕ್ಟರ್ ಎಂದು ಕರೆಯುತ್ತಿದ್ದರು). ರಕ್ತಗತವಾಗಿ ಉಪಯೋಗಕ್ಕೆ ಬರುವುದು ಆರೋಗ್ಯವಂತರ ಜಠರ ರಸದಲ್ಲಿ ಆಂತರಿಕಾಂಶ ಇರುವುದರಿಂದಲೇ. ಇದರ ಕೊರತೆಯಾದರೆ ಆಹಾರದಲ್ಲಿನ ಜೀವಸತ್ವ ಬಿ12 ರಕ್ತಗತವಾಗುವುದಿಲ್ಲ. ಪರಿಣಾಮ ಮಾರಕ ರಕ್ತಹೀನತೆ. ಅಂದರೆ, ಮಾರಕ ರಕ್ತಹೀನತೆಗೆ ನಿಜವಾದ ಕಾರಣ ಆಂತರಿಕಾಂಶದ ಕೊರತೆ. ಹೀಗಾಗಿ ಸೇವಿಸಿದ ಆಹಾರದಲ್ಲಿ ಜೀವಸತ್ವ ಬಿ12 ಎಷ್ಟೇ ಅಧಿಕ ಪ್ರಮಾಣದಲ್ಲಿ ಇದ್ದರೂ ಅದು ರಕ್ತಗತವಾಗದೆ ದೇಹದಲ್ಲಿ ವೈಟಮಿನ್‌ನ ಕೊರತೆ ತಲೆದೋರುತ್ತದೆ. ಮಾರಕ ರಕ್ತ ಹೀನತೆಗೆ ಆಹಾರದೊಡನೆ ಆರೋಗ್ಯವಂತರ ಜಠರ ರಸವನ್ನು ಕೊಟ್ಟರೆ ರಕ್ತಹೀನತೆ ಗುಣವಾಗುತ್ತದೆ. ಆದರೆ, ಈ ಆಹಾರದಲ್ಲಿ ಪ್ರಾಣಿಜನ್ಯವಸ್ತುಗಳು ಇರಬೇಕು. ಹಾಗಲ್ಲದೆ ನಿರಂತರವಾಗಿ ಶುದ್ಧ ಹಾಗೂ ಪೂರ್ಣವಾಗಿ ಸಸ್ಯಜನ್ಯ ಆಹಾರವನ್ನೇ ಸೇವಿಸುತ್ತಿದ್ದರೆ ಪ್ರತ್ಯಕ್ಷವಾಗಿಯೇ ಕೊರತೆ ಉಂಟಾಗುತ್ತದೆ. ಆಗ ಪರಿಣಮಿಸುವ ರಕ್ತಹೀನತೆ ನಿಜವಾಗಿಯೂ ಅಭಾವ ಜನ್ಯರೋಗ. ಅಂತರಿಕಾಂಶದ ಕೊರತೆ ನಿರಂತರವಾದುದು. ಆದ್ದರಿಂದ, ವೈಟಮಿನ್ ಬಿ12 ಕೊರತೆ ನಿರಂತರವಾಗಿ ವ್ಯಕ್ತವಾಗುತ್ತದೆ. ಚಿಕಿತ್ಸೆ ಕೂಡ ನಿರಂತರವಾಗಿರಬೇಕು. ಚಿಕಿತ್ಸೆಯನ್ನು ನಿಲ್ಲಿಸಿದ ಕೂಡಲೆ ಕೊರತೆ ಪುನಃ ತಲೆದೋರುತ್ತದೆ. ಮಿಕ್ಕ ಅಭಾವಜನ್ಯ ರೋಗಗಳಲ್ಲಿ ಹೀಗಲ್ಲ. ಯಾವುದೋ ಕಾರಣದಿಂದ ಯಾವಾಗಲೋ ಕೊರತೆ ವ್ಯಕ್ತವಾಗುತ್ತದೆ. ಆಗ ನಿರ್ದಿಷ್ಟ ಜೀವಸತ್ವವನ್ನೇ ಚಿಕಿತ್ಸಕವಾಗಿ ನೀಡಬೇಕು. ಟ್ರೈಜಿಮಿನಲ್ ನ್ಯೂರಾಲ್ಜಿಯ, ಹರ್ಪಿಸ್ ಮುಂತಾದ ನರಸಂಬಂಧ ರೋಗಗಳಲ್ಲಿ ನೋವು ಶಮನಕ್ಕೂ, ಪಾಲಿನ್ಯೂರೈಟಿಸ್ಸಿಗೂ, ವೈಟಮಿನ್ ಬಿ12 ನ್ನು ಚಿಕಿತ್ಸಕ ವಸ್ತುವಾಗಿ ಉಪಯೋಗಿಸುತ್ತಾರೆ.

ಫೋಲಿಕ್ ಆಮ್ಲ: ಇದನ್ನು ಫೋಲಾಸಿನ್, ಟೀರೈಲ್‌ಗ್ಲೂಟಾಮಿಕ್ ಆಮ್ಲ (ಪಿಜಿಎ) ಎಂದು ಕರೆಯಲಾಗುತ್ತದೆ. ಡೆ ಎಂಬ ವಿಜ್ಞಾನಿ 1958 ರಲ್ಲಿ ವಿವಿಧ ಸೂಕ್ಷ್ಮಾಣುಗಳ ಬೆಳೆವಣಿಗೆಗೆ, ಮಂಗ ಮತ್ತು ಕೋಳಿಮರಿಗಳ ಬೆಳವಣಿಗೆಗೆ ಹಾಗೂ ಇವುಗಳಲ್ಲಿ ರಕ್ತಹೀನತೆ ಉಂಟಾಗುವುದನ್ನು ತಡೆಗಟ್ಟುವುದಕ್ಕೆ ಈ ಆಮ್ಲದ ಅಗತ್ಯತೆ ತೋರಿಸಿದ. 1946ರಲ್ಲಿ ಅಮೆರಿಕದ ಲೆಡರ್ಲಿ ಕಂಪೆನಿಯ ಪ್ರಯೋಗಾಲಯದಲ್ಲಿ ಆಂಧ್ರ ಪ್ರದೇಶದ ಯಲ್ಲಪ್ರಗಡ ಸುಬ್ಬರಾವ್ ನೇತೃತ್ವದಲ್ಲಿ ಈ ವಸ್ತುವನ್ನು ಪ್ರತ್ಯೇಕಿಸಲಾಯಿತು. ಇದು ಹಳದಿ ಕಿತ್ತಳೆ ಬಣ್ಣದ ಹರಳುಗಳಂತಿದೆ. ಆಲ್ಕೋಹಾಲ್ ಮತ್ತಿತರ ಕಾರ್ಬನಿಕ ದ್ರಾವಣಗಳಲ್ಲಿ ಕರಗುವುದಿಲ್ಲ. ಬಿಸಿ ನೀರಿನಲ್ಲಿ ಕರಗುತ್ತದೆ. ಎಲ್ಲ ಹಸಿರೆಲೆಗಳಲ್ಲಿ, ಹುಲ್ಲಿನಲ್ಲಿ ಇರುವುದರಿಂದ ಇದನ್ನು ಫೋಲಿಕ್ ಆಮ್ಲವೆಂದು ಹೆಸರಿಸಲಾಗಿದೆ. ಯೀಸ್ಟ್, ಹಾಲು, ಯಕೃತ್, ಮೂತ್ರಪಿಂಡಗಳಲ್ಲಿದೆ. ಈ ವಸ್ತು ಸಾರಜನಕ ಸಂಯುಕ್ತ ಆಮ್ಲ ಇದರ ರಾಸಾಯನಿಕಗಳ ರಚನೆಗಳನ್ನು ಪತ್ತಮಾಡಲಾಗಿದೆ. ಫೋಲಿಕ್ ಆಮ್ಲದಿಂದ ಅಪಕರ್ಷಣಗೊಂಡು ಪೋಲಿನಿಕ್ ಆಮ್ಲ ಮತ್ತು ಅದರಂತಿರುವ ವಸ್ತುಗಳು ನೈಸರ್ಗಿಕವಾಗಿ ಇರುತ್ತವೆ. ಇವು ಪ್ರಾಣಿ ದೇಹದಲ್ಲಿ ಪುನಃ ಉತ್ಕರ್ಷಣಗೊಂಡು ಫೋಲಿಕ್ ಆಮ್ಲಗಳಾಗಿ ಪರಿವರ್ತಿತವಾಗುತ್ತವೆ. ಈ ಪರಿವರ್ತನೆ ಅನೇಕ ಜಾತಿಯ ಸೂಕ್ಷ್ಮಾಣುಗಳಲ್ಲಿ ಆಗುವುದಿಲ್ಲ. ಪೋಲಿಕ್ ಆಮ್ಲದ ಶುದ್ಧ ವಸ್ತು ದೊರೆತಿರುವುದರಿಂದ ಇದರ ಅಗತ್ಯ ಇತ್ಯಾದಿಗಳನ್ನು ವಸ್ತುವಿನ ತೂಕದಿಂದಲೇ ಸೂಚಿಸಿದ್ದಾರೆ. ಪ್ರಾಣಿಗಳ ಕರುಳಿನ ಸಹಜೀವ ಸೂಕ್ಷ್ಮಾಣುಗಳಿಂದ ಭಾಗಶಃ ಪೂರೈಕೆ ಆಗುವುದರಿಂದ ಪ್ರತಿ ದಿನ ಅಗತ್ಯ ಪ್ರಮಾಣ ಅನಿರ್ದಿಷ್ಟ ಫೋಲಿಕ್ ಆಮ್ಲ ಆಹಾರದಲ್ಲಿ ಇರುವುದು ಎಲ್ಲ ಪ್ರಾಣಿಗಳಿಗೂ ಅಗತ್ಯ.

ಕರುಳಿನ ಸೂಕ್ಷ್ಮಾಣುಗಳನ್ನು ಪ್ರಾಯೋಗಿಕವಾಗಿ ನಾಶಪಡಿಸಿದರೆ ಸಾಮಾನ್ಯ ಆಹಾರದಿಂದ ಒದಗುವ ಫೋಲಿಕ್ ಆಮ್ಲ ಸಾಲುವುದಿಲ್ಲ. ಪರಿಣಾಮ, ಫೋಲಿಕ್ ಆಮ್ಲದ ಕೊರತೆ. ಇದರಿಂದ ರಕ್ತಕಣಹೀನತೆ ಜೊತೆಗೆ ಕೆಂಪು ರಕ್ತಕಣಗಳು ಸಹಜ ಗಾತ್ರಕ್ಕಿಂತ ದೊಡ್ಡದಾಗಿರುತ್ತದೆ (ಮ್ಯಾಕ್ರೊಸೈಟ್ಸ್). ಈ ಪರಿಸ್ಥಿತಿಗೆ ಫೋಲಿಕ್ ಆಮ್ಲದ ಚಿಕಿತ್ಸೆ ಬೇಕು. ಮಾರಕ ರಕ್ತಕಣ ಹೀನತೆಯ ಚಿಕಿತ್ಸೆಗೂ ಫೋಲಿಕ್ ಆಮ್ಲವನ್ನು ಉಪಯೋಗಿಸುವರು. ಇದರಿಂದ ಫೋಲಿಕ್ ಆಮ್ಲ ವೈಟಮಿನ್ ಬಿ12 ತರಹ ವರ್ತಿಸುತ್ತದೆ. ಆದರೆ, ಅನೇಕ ವೇಳೆ ಮಾರಕ ರಕ್ತ ಹೀನತೆ ಫೋಲಿಕ್ ಆಮ್ಲದಿಂದ ಗುಣವಾಗದೆ, ಸಬ್ ಅಕ್ಯೂಟ್ ಕಂಬೈನ್ಡ್ ಡೀಜನರೇಷನ್ ಎಂಬ ಮಿದುಳುಬಳ್ಳಿಯ ರೋಗ ಹಠಾತ್ತಾಗಿ ತಲೆದೋರಿ ನೋವು, ಸಂವೇದನೆಗಳ ಏರುಪೇರು. ಸ್ನಾಯುಗಳ ಸ್ವಾಧೀನ ತಪ್ಪುವಿಕೆ, ಅವುಗಳ ಶೈಥಿಲ್ಯ ಮುಂತಾದ ಲಕ್ಷಣಗಳು ಕಾಣುವುವು. ಮಾರಕ ರಕ್ತಹೀನತೆಯಲ್ಲಿ ತೋರುವ ಈ ಲಕ್ಷಣಗಳು ಫೋಲಿಕ್ ಆಮ್ಲ ಚಿಕಿತ್ಸೆಯಿಂದ ಮೊದಲೇ ಪ್ರಕಟಿತವಾಗಿರುವ ಈ ಸನ್ನಿವೇಶ ವೈಟಮಿನ್ ಬಿ12 ನ್ನೇ ಚಿಕಿತ್ಸೆಗೆ ಉಪಯೋಗಿಸಿದರೆ ಕಂಡು ಬರುವುದಿಲ್ಲ. ಆದ್ದರಿಂದ ಪೋಲಿಕ್ ಆಮ್ಲ, ವೈಟಮಿನ್ ಬಿ12 ಎರಡೂ ಅಗತ್ಯವಾಗಿದ್ದು, ರಕ್ತಹೀನತೆಗೆ ಚಿಕಿತ್ಸಕಗಳಾಗಿರುವ ಪರಸ್ಪರ ಸಂಬಂಧವಿರುವ ಜೀವಸತ್ವಗಳಾಗಿವೆ. ಬಹುಶಃ ಫೋಲಿಕ್ ಆಮ್ಲ ನ್ಯೂಕ್ಲೆಯಿಕ್ ಆಮ್ಲದ ಸಂಯೋಜನೆಗೆ ಪ್ರಾರಂಭ ಘಟ್ಟಗಳಲ್ಲೇ ಬೇಕಾದ ಥೈಮೀನ್ ಎಂಬ ವಸ್ತುವಿನ ಉತ್ಪಾದನೆಗೆ ಅಗತ್ಯ. ಇಂಥದೇ ವಸ್ತುಗಳಾದ ಅಡಿನೀನ್, ಗ್ವಾನೀನುಗಳ ಉತ್ಪಾದನೆಗೆ ಸಹ ಫೋಲಿಕ್ ಆಮ್ಲ ಅಗತ್ಯವೆನ್ನಿಸಿದೆ.

ಅಮೀನಾಪ್ಟೆರಿನ್ ಎಂಬ ರಾಸಾಯನಿಕ ಫೋಲಿಕ್ ಆಮ್ಲದ ವಿರೋಧ ವಸ್ತು. ಇದನ್ನು ಉಪಯೋಗಿಸಿ ಫೋಲಿಕ್ ಆಮ್ಲದ ಕೊರತೆಯನ್ನು ಕೃತಕವಾಗಿ ಉಂಟುಮಾಡಬಹುದು. ಲೂಕೀಮಿಯ ಎಂಬ ರಕ್ತದ ಏಡಿಗಂತಿರೋಗದಲ್ಲಿ ಅನಾವಶ್ಯಕ ಶ್ವೇತರಕ್ತಕಣ ವೃದ್ಧಿಯನ್ನು ಹೀಗೆ ಕೃತಕ ಕೊರತೆಯನ್ನು ಉಂಟು ಮಾಡಿ ಚಿಕಿತ್ಸೆ ಮಾಡಬಹುದು.

ಬಯೋಟಿನ್: ಫಾಸ್ಫರಸ್ ಹಾಗೂ ಸಾರಜನಕಯುಕ್ತ ಆಮ್ಲ. ಬಣ್ಣ ರಹಿತ ಸೂಜಿ ಆಕಾರದ ಹರಳುಗಳಂತಿದೆ. ನೀರು ಆಲ್ಕೋಹಾಲುಗಳಲ್ಲಿ ಸುಲಭವಾಗಿ ಕರಗಿದರೂ ಇತರ ಕಾರ್ಬನಿಕ ದ್ರಾವಣಗಳಲ್ಲಿ ಕರಗುವುದಿಲ್ಲ. ಅಡುಗೆಯ ಉಷ್ಣತೆಯಿಂದ ನಾಶವಾಗುವುದಿಲ್ಲ. ಆಮ್ಲ, ಪ್ರತ್ಯಾಮ್ಲಗಳಿಂದ ಸುಲಭವಾಗಿ ನಾಶವಾಗದ ವಸ್ತು. ಸಾಮಾನ್ಯವಾಗಿ ಎಲ್ಲ ಕೋಶಗಳಲ್ಲಿದೆ. ಯೀಸ್ಟ್, ಯಕೃತ್ತು ಮೂತ್ರಪಿಂಡಗಳಿಂದ ದೊರಕುತ್ತದೆ. ರಾಸಾಯನಿಕ ರಚನೆಯನ್ನು ಆವಿಷ್ಕರಿಸಿ, ಬಯೋಟಿನ್ನನ್ನು ಶುದ್ಧವಸ್ತುವಾಗಿ ಸಂಶ್ಲೇಷಿಸಲಾಗಿದೆ. ಇತರ ವೈಟಮಿನ್‌ಗಳಂತೆ, ಇದರ ಅವಶ್ಯ ಪ್ರಮಾಣವು ಅನಿರ್ದಿಷ್ಟ . ಪೈರೊವಿಕ್ ಆಮ್ಲದಿಂದ ಅಕ್ಸಾಲೊ ಅಸೆಟಿಕ್ ಆಮ್ಲ ಉತ್ಪತ್ತಿಯಾಗುವುದಕ್ಕೆ ಅಗತ್ಯವಾದ ಎನ್‌ಜೈಮಿನ ಕ್ರಿಯಾಘಟಕವಾಗಿ ಬಯೋಟಿನ್ ಉಪಯೋಗವಾಗಿದೆ. ಪಿರಿಡಾಕ್ಸಿನ್, ಪ್ಯಾನ್ ಟೋಥಿನಿಕ್ ಆಮ್ಲ, ಫೋಲಿಕ್ ಆಮ್ಲಗಳಂತೆ ಬಯೋಟಿನ್ನಿನ ಪ್ರತಿ ವಸ್ತುವನ್ನು ಉಪಯೋಗಿಸಿ ಕೊರತೆಯನ್ನು ಕೃತಕವಾಗಿ ಉಂಟುಮಾಡಬಹುದು. ಬೇಯಿಸದ ತತ್ತಿಯ ಬಿಳಿಭಾಗದಲ್ಲಿರುವ ಏವಿಡಿನ್ ಎಂಬ ರಾಸಾಯನಿಕ ಬಯೋಟಿನ್ನಿನ ಪ್ರತಿ ವಸ್ತುವಾಗಿ ವರ್ತಿಸುತ್ತದೆ. ತತ್ತಿಯನ್ನು ಬೇಯಿಸಿದರೆ ಇದು ನಾಶವಾಗಿ ಹೋಗುತ್ತದೆ. ಏವಿಡಿನ್ನಿನ ಉಪಯೋಗದಿಂದ ಕೃತಕವಾಗಿ ಬಯೋಟಿನ್ ಕೊರತೆಯನ್ನು ಉಂಟುಮಾಡಿ ಏಡಿಗಂತಿಗಳ ವೃದ್ಧಿಯನ್ನು ತಡೆಗಟ್ಟಲು ಪ್ರಯತ್ನಿಸಲಾಗಿದೆ. ಕೃತಕ ಕೊರತೆಯಿಂದ ಚರ್ಮದಲ್ಲಿ ಬದಲಾವಣೆ, ರಕ್ತಹೀನತೆ, ಚಿತ್ತಗೆಡಿಕೆ ಉಂಟಾಗಬಹುದು. ಈ ವೈಟಮಿನ್ನಿನ ಅಗತ್ಯ ಪೂರೈಸಿದರೆ ಈ ಕೊರತೆ ನಿವಾರಿಸಬಹುದು.

ವೈಟಮಿನ್ ಸಿ. ಆರು ಇಂಗಾಲ ಅಣುಗಳುಳ್ಳ, ಸರಳ ರಚನೆಯ ವಸ್ತು.:3 ಕೀಟೋ 1 ಗುಲೋಪೂರನೋ ಲ್ಯಾಕ್ಟೋನಿನ ಆಮ್ಲ ರೂಪ. ಸಿಟ್ರಿಮಿಕ್ ಆಮ್ಲ ರಾಸಾಯನಿಕ ಅಥವಾ ಎಸ್ಕಾರ್ಬಿಕ್ ಆಮ್ಲ ಇತರ ವ್ಯಾವಹಾರಿಕ ಹೆಸರುಗಳಿವೆ. ಇದು ನೀರಿನಲ್ಲಿ ಕರಗುವ, ಬಣ್ಣವಿಲ್ಲದ ಹರಳಿನಂತಿದೆ. ಕಾರ್ಬನಿಕ ದ್ರಾವಣಗಳಲ್ಲಿ ಕರಗುತ್ತದೆ. ಪ್ರತ್ಯಾಮ್ಲೀಯ ಮಾಧ್ಯಮದಲ್ಲಿ ದ್ರಾವಣಗಳಿಗೆ ಒಡ್ಡಲ್ಪಟ್ಟರೆ ವೈಟಮಿನ್ ಶೀಘ್ರವಾಗಿ ಉತ್ಕರ್ಷಣಗೊಂಡು

ನಾಶವಾಗುತ್ತದೆ. ಆದ್ದರಿಂದ ದೀರ್ಘಕಾಲಿಕವಾಗಿ ಶೇಖರಿಸಲ್ಪಟ್ಟ ಪದಾರ್ಥಗಳಲ್ಲಿ ವೈಟಮಿನ್ ಪ್ರಮಾಣ ಕಡಿಮೆ. ತಾಜಾ ಹಣ್ಣುಗಳು, ಕಿತ್ತಳೆ, ಹೆರಳೆ, ಟೊಮ್ಯಾಟೊ, ದ್ರಾಕ್ಷಿ, ನೆಲ್ಲಿಕಾಯಿ, ತರಕಾರಿಗಳು, ಹಸಿಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಆಲೂಗಡ್ಡೆ ಗಳಲ್ಲಿ ಹೆಚ್ಚಾಗಿ ಇದೆ. ಇದನ್ನು ಶುದ್ಧವಸ್ತುವಾಗಿ ಸಂಶ್ಲೇಷಿಸಲಾಗಿದೆ. ಅಂತಾರಾಷ್ಟ್ರೀಯ ಏಕಮಾನಕ್ಕೆ ಈ ತೂಕವನ್ನೇ ಅಳವಡಿಸಿಕೊಳ್ಳಲಾಗಿದೆ. 1 ಮಿ. ಗ್ರಾಂ. ವೈಟಮಿನ್ ಸಿ 20 ಅಂತಾರಾಷ್ಟ್ರೀಯ ಏಕಮಾನಗಳಿಗೆ ಸಮ. ಮನುಷ್ಯನಿಗೆ ಪ್ರತಿ ದಿವಸ 25–30 ಮಿಗ್ರಾಂ ಜೀವಸತ್ವ ಸಿ ಅವಶ್ಯ. ಇತರ ವೈಟಮಿನ್‌ಗಳಿಗೆ ಹೋಲಿಸಿದರೆ ಇದು ಅಧಿಕ. ಬಸಿರು, ಬಾಣಂತನಗಳಲ್ಲಿ ಇನ್ನೂ ಹೆಚ್ಚು ಪ್ರಮಾಣದಲ್ಲಿ ಬೇಕು.

ಎದೆಹಾಲಿನಲ್ಲಿ ಸಾಕಷ್ಟು ವೈಟಮಿನ್ ಸಿ ಶಿಶುವಿಗೆ ದೊರೆಯುವುದು. ಡಬ್ಬಿ ಹಾಲಿನಲ್ಲಿ ಈ ಜೀವಸತ್ವ ಸಾಮಾನ್ಯವಾಗಿ ನಾಶವಾಗಿ ಹೋಗಿರುವುದರಿಂದ ಮಕ್ಕಳಿಗೆ ಡಬ್ಬಿಹಾಲನ್ನೇ ಕೊಡುತ್ತಿದ್ದರೆ ವೈಟಮಿನ್ ಸಿ ಕೊರತೆಯಿಂದ ಸ್ಕರ್ವಿರೋಗ ಬರುತ್ತದೆ. ಆದ್ದರಿಂದ ಇಂಥ ಹಾಲು ನೀಡುವಾಗ ತಾಜಾ ಹಣ್ಣಿನ ರಸ ಇಲ್ಲವೇ ಸ್ವತಃ ವೈಟಮಿನ್ ಸಿ ಯನ್ನು ಉಪಯೋಗಿಸಬೇಕು. ಇದೇ ಮಾತು ಪಾಶ್ಚರೀಕರಿಸಿದ ಹಾಲಿಗೂ ಅನ್ವಯಿಸುತ್ತದೆ. ಶೀಘ್ರವಾಗಿ ಉತ್ಕರ್ಷಣ ಅಪಕರ್ಷಣಗಳಿಗೆ ಒಳಗಾಗಬಲ್ಲ ರಾಸಾಯನಿಕವಾಗಿದೆ. ಬಂಧನಾಂಗಾಂಶದ ಮಾಧ್ಯಮ ವಸ್ತುವಿನ ಮತ್ತು ಲೋಮನಾಳಗಳು, ಹಲ್ಲು, ಮೃದ್ವಸ್ಥಿ, ಮೂಳೆ ಇವುಗಳಲ್ಲಿ ನಾರೆಳೆಗಳ ಅಸ್ತಿತ್ವಕ್ಕೆ ವೈಟಮಿನ್ ಸಿ ಚಿಕಿತ್ಸೆಯಿಂದ ಮಾತ್ರ ಅದು ಗುಣವಾಗುವುದು. ಫೋಲಿನಿಕ್ ಆಮ್ಲ ರಕ್ತಕಣವೃದ್ಧಿಗೆ ಬೇಕಾದ ಹಾಗೂ ವೈಟಮಿನ್ ಬಿ ಗುಂಪಿಗೆ ಸೇರಿದ ಫೋಲಿಕ್ ಆಮ್ಲವಾಗಿ ಪರಿವರ್ತಿತವಾಗುವುದಕ್ಕೂ ವೈಟಮಿನ್ ಸಿ ಅವಶ್ಯ. ಈ ಜೀವಸತ್ವದ ಕೊರತೆಯಿಂದ ದೇಹದ ನೈಸರ್ಗಿಕ ಸೋಂಕು ನಿರೋಧಕ ಸಾಮರ್ಥ್ಯ ಕುಗ್ಗಿ ಹೋಗುತ್ತದೆ. ಪೀತಗ್ರಂಥಿ (ಕಾರ್ಪಸ್ ಲೂಟಿಯಮ್). ಅಡ್ರೀನಲ್ ಗ್ರಂಥಿಯ ಹೊರಭಾಗ (ಅಡ್ರೀನಲ್ ಕಾರ್ಟೆಕ್ಸ್) ಇವುಗಳಲ್ಲಿ ವೈಟಮಿನ್ ಸಿ ಹೇರಳವಾಗಿದೆ. ಇಲ್ಲಿ ಸ್ಟಿರಾಯ್ಡ ಗುಂಪಿಗೆ ಸೇರದ ಹಾರ್ಮೋನುಗಳು ಸವಿಸಲ್ಪಡುವುದರಿಂದ ವೈಟಮಿನ್ ಸಿ ಅವುಗಳ ತಯಾರಿಕೆಗೆ ಅವಶ್ಯ. ಮನುಷ್ಯ, ಕಪಿಗಳಿಗೆ ಮತ್ತು ಗಿನಿಹಂದಿಗಳಿಗೆ ಮಾತ್ರ ಈ ವಸ್ತು ಜೀವಸತ್ವವಾಗಿದೆ. ಮಿಕ್ಕ ಪ್ರಾಣಿಗಳಲ್ಲಿ ಇದು ದೇಹದಲ್ಲೇ ಸಂಯೋಜನೆ ಆಗುತ್ತದೆ. ಕಾರಣ, ಆಹಾರದಿಂದ ಒದಗಬೇಕಾಗಿಲ್ಲ.

ವೈಟಮಿನ್ ಸಿ ಕೊರತೆಯಿಂದ ಬರುವ ರೋಗ ಸ್ಕರ್ವಿ. ದೇಹದ ಬಹುಭಾಗಗಳಲ್ಲಿ ರಕ್ತಸ್ರಾವವಾಗುವುದು ಈ ರೋಗದ ವೈಶಿಷ್ಟ್ಯ. ಆಲಸ್ಯ, ನಿಶ್ಯಕ್ತಿ, ಪಿರುಚು, ಮೈ ಕೈ ಕೀಲುಗಳ ನೋವು. ಮೈ ತೂಕ ಕಡಿಮೆ ಆಗುವುದು ಪ್ರಾರಂಭಿಕ ಲಕ್ಷಣಗಳು. ಒಸಡುಗಳ ಊತ, ಒಸಡಿನಿಂದ ರಕ್ತಸ್ರಾವ ಹಲ್ಲು ಅಳ್ಳಕಗೊಳ್ಳುವುದು ಇವು ಮುಂದಿನ ಲಕ್ಷಣಗಳು. ಚರ್ಮದಲ್ಲಿ ಅಲ್ಲಲ್ಲಿ ರಕ್ತಸ್ರಾವ, ಸ್ನಾಯುಗಳಿಗೆ ಅಧಿಕ ರಕ್ತಸ್ರಾವ, ಕಣ್ಣಿನಲ್ಲಿ, ಮಿದುಳಿನಲ್ಲಿ ರಕ್ತ ಸ್ರಾವ ಆಗಬಹುದು. ಜಠರ, ಕರುಳು, ಮೂತ್ರಮಾರ್ಗ, ಮೂಗಿನ ಹೊಳ್ಳೆ– ಈ ಸ್ಥಳಗಳಲ್ಲಿ ರಕ್ತಸ್ರಾವ ಸಾಮಾನ್ಯ. ಎಳೆ ಮಕ್ಕಳಲ್ಲಿ ಈ ಜೀವಸತ್ವದ ಕೊರತೆ ಇರುತ್ತದೆ. ಇದಕ್ಕೆ ಶೈಶವದ ಸ್ಕರ್ವಿ (ಇನ್‌ಫೆನ್‌ಟೈಲ್ ಸ್ಕರ್ವಿ) ಎಂದು ಹೆಸರು. ಮಗು ಮುಟ್ಟಿದರೆ ಅಳುವುದು. ಸದಾ ಕಿರಿಕಿರಿಗುಟ್ಟುತ್ತಿರುವುದು, ಹಾಲು ಕುಡಿಯದೆ ಇರುವುದು, ಕೈಕಾಲುಗಳನ್ನು ಆಡಿಸಿದರೆ ನೋವಿನಿಂದ ಕಿರುಚುವುದು, ಕೈಕಾಲು ಮೂಳೆಗಳ ಮೇಲು ಹೊದಿಕೆಯ (ಪೆರಿ ಆಸ್ಟ್ರಿಯಮ್) ಒಳಗೆ ಅಲ್ಲಲ್ಲಿ ರಕ್ತಸ್ರಾವ, ಒಸಡಿನಿಂದ ರಕ್ತಸ್ರಾವ, ಹಕ್ಕಿ ಕಡಪು ರೋಗಗಳಲ್ಲಿ ಕಾಣಿಸಿಕೊಳ್ಳುವಂತೆ ಪಕ್ಕೆಲುಬುಗಳ ಮುಂದಿನ ತುದಿಯಲ್ಲಿ ಗಂಟುಗಳೆಲ್ಲ ಶೈಶವ ಸ್ಕರ್ವಿಯ ಲಕ್ಷಣಗಳು. ಸ್ಕರ್ವಿಯಲ್ಲಿ ವೈಟಮಿನ್ ಸಿ ಯನ್ನು ಚಿಕಿತ್ಸಕ ಮದ್ದನ್ನಾಗಿ ಉಪಯೋಗಿಸುವರು. ವ್ಯಾವಹಾರಿಕವಾಗಿ ವೈಟಮಿನ್ ಸಿ ಯನ್ನು ಅನೇಕ ರೋಗಗಳ ಚಿಕಿತ್ಸೆಯಲ್ಲಿ ಕೊಡುವರು. ದೇಹ ನೀಲಿಗಟ್ಟಿರುವ ಮೇಥ್ಹೀಮೋಗ್ಲಾಬಿನೀಮಿಯ ಎಂಬ ಸ್ಥಿತಿಯಲ್ಲಿ ವೈಟಮಿನ್ ಸಿ ಬಹು ಪ್ರಯೋಜನಕಾರಿ. ಅನೇಕ ಸೋಂಕುರೋಗಗಳಲ್ಲಿ ವೈಟಮಿನ್ ಸಿ ಯನ್ನು ಕೊಟ್ಟರೆ ರೋಗದ ತೀವ್ರತೆ ತಗ್ಗುವುದು. ಕ್ಷಯ, ನಾಯಿ ಕೆಮ್ಮು ಚಿಕಿತ್ಸೆಯ ಸಂದರ್ಭದಲ್ಲಿ ದಿನಕ್ಕೆ ಅರ್ಧದಿಂದ ಒಂದು ಗ್ರಾಂ ವೈಟಮಿನ್ ಸಿ ಯನ್ನು ಉಪಯೋಗಿಸಲಾಗುತ್ತದೆ. ಹಲ್ಲು ಕಿತ್ತಾಗ, ಶಸ್ತ್ರ ಚಿಕಿತ್ಸೆಯ ಬಳಿಕ, ಪ್ರಸವವಾದ ಮೇಲೆ ಈ ಸಂದರ್ಭಗಳಲ್ಲಿ ಗಾಯ ಬೇಗ ವಾಸಿಯಾಗುವುದಕ್ಕೆ ವೈಟಮಿನ್ ಸಿ ಯನ್ನು ಕೊಡುವರು. (ಜೆ.ಎಸ್.ಎ)

**ಜೀವಿಪಂಕ:** ಆಳವಾದ ಸಾಗರತಳದಲ್ಲಿ ದೊರೆಯುವ, ಅಸಂಖ್ಯ ಅತಿಸೂಕ್ಷ್ಮ ಜೀವಿಗಳ ಚಿಪ್ಪು ಹಾಗೂ ಇತರ ಭಾಗಗಳಿಂದ ರಚಿತವಾದ ಮಿದು ಮತ್ತು ಲೋಳೆಯುಕ್ತವಾದ ಕೆಸರುಮಣ್ಣು (ಊಝ್). ಕೆಂಪುಮಣ್ಣು ಕೂಡ ಆಳವಾದ ಸಾಗರ ನಿಕ್ಷೇಪವೇ. ಆದರೆ ಇದರಲ್ಲಿ ಕೇವಲ ನಿರ್ಜೀವ (ಖನಿಜ) ವಸ್ತುಗಳು ಮಾತ್ರ ಇದ್ದರೆ ಆಗ ಇದು ಜೀವಿಪಂಕ ಎನ್ನಿಸುವುದಿಲ್ಲ. ಜೀವಿಪಂಕ ನಿಕ್ಷೇಪವನ್ನು ಅದರಲ್ಲಿ ಇರುವ ಜೀವ್ಯವಶೇಷದ ಆಧಿಕ್ಯವನ್ನು ಅನುಸರಿಸಿ ಹೆಸರಿಸಲಾಗುವುದು. ಉದಾಹರಣೆಗೆ ಗ್ಲೋಬಿಜರೈನ ಜೀವಿಪಂಕ, ಟೀರೋಪಾಡ್ ಜೀವಿಪಂಕ, ರೇಡಿಯೋಲೇರಿಯನ್ ಜೀವಿಪಂಕ ಮತ್ತು ಡೈಆ್ಯಟಮ್ ಜೀವಿಪಂಕ–ಇವು ಜೀವಿಪಂಕಗಳಲ್ಲಿ ಕಂಡುಬರುವ ಮುಖ್ಯ ಜಾತಿಗಳು.

ಸೂಕ್ಷ್ಮದರ್ಶಕಕ್ಕೆ ಮಾತ್ರ ಗೋಚರವಾಗುವ ಬಹು ಸೂಕ್ಷ್ಮಜೀವಿಗಳು (ಸಸ್ಯಗಳೂ ಜಂತುಗಳೂ) ಸಾಗರದ ತಳದಲ್ಲೂ ಮೇಲೂ ವಾಸಿಸುತ್ತಿರುವುವು. ಇವು ಕಡಲ ನೀರಿನಲ್ಲಿರುವ ಸುಣ್ಣ (ಸುಧಾ) ಮತ್ತು ಸಿಲಿಕವನ್ನು (ಬೆಣಚು, $SiO_2$) ಹೀರಿ ಕಠಿಣವಾದ ಅಂಗಗಳನ್ನು ನಿರ್ಮಿಸಿಕೊಳ್ಳುತ್ತವೆ. ಇವು ಸತ್ತುಹೋದ ಬಳಿಕ ಇವುಗಳ ಕಳೇಬರಗಳು ಕೆಳಕ್ಕೆ ಇಳಿಯುತ್ತ ಹೋಗುತ್ತವೆ. ಮೃದು ಭಾಗಗಳು ಕೊಳೆತು ಹೋಗುತ್ತವೆ, ಗಟ್ಟಿ ಭಾಗಗಳು ಸಾಗರತಳದ ಮೇಲೆ ನಿಧಾನವಾಗಿ ಶೇಖರವಾಗುತ್ತವೆ. ಇವುಗಳೊಡನೆ ಗಾಳಿಯಲ್ಲಿ ತೂರಿ ಬಂದ ಜ್ವಾಲಾಮುಖಿಯ ದೂಳು ಸೇರಿರುತ್ತವೆ. ಒಂದು ಸೆಂಮೀ ಎತ್ತರವಿರುವ ಗ್ಲೋಬಿಜರೈನ ಪಂಕದ ಪದರವಾಗಲು ೧,೩೦೦ ವರ್ಷಗಳು ಬೇಕು. (ಆದರೆ ಖಂಡಗಳ ತೀರದಲ್ಲಿ ಬಹುಬೇಗ ಪೆಂಟೆಕಲ್ಲು, ಮರಳುಕಲ್ಲು ಮೊದಲಾದುವು ಶೇಖರವಾಗುತ್ತವೆ.).

ಸುಧಾಮಯ ಜೀವಿಪಂಕಗಳು ಸಾಮಾನ್ಯವಾಗಿ ೪,೫೦೦–೫,೦೦೦ ಮೀಟರ್ ಆಳದ ಒಳಗೆ ಹರಡಿವೆ. ಗ್ಲೋಬಿಜರೈನ ಜೀವಿಪಂಕ ಅಟ್ಲಾಂಟಿಕ್, ಪೆಸಿಫಿಕ್ ಮತ್ತು ಹಿಂದೂಸಾಗರದ ವಿಶಾಲ ಭಾಗಗಳಲ್ಲಿ ಹರಡಿದೆ. ಆಫ್ರಿಕ ಖಂಡದ ಸಮಭಾಜಕವೃತ್ತದ ಬಳಿ ಇದರ ಉತ್ಪತ್ತಿಯ ವೇಗ ೧,೦೦೦ ವರ್ಷಕ್ಕೆ ೧.೬ ಸೆಂಮೀ ಎಂದು ಈಚೆಗೆ ವರದಿ ಮಾಡಿದ್ದಾರೆ. ಟೀರೋಪಾಡ್ ಎಂಬ ಮೃದ್ವಂಗಿ (ಇದು ತಿಮಿಗೆ ಆಹಾರ) ದಕ್ಷಿಣ ಆಫ್ರಿಕ ಮತ್ತು ದಕ್ಷಿಣ ಅಮೆರಿಕ ಖಂಡದ ನಡುವೆ ಇರುವ ಅಟ್ಲಾಂಟಿಕ್ ಸಾಗರದಲ್ಲಿ ಕೇಂದ್ರಿಕೃತವಾಗಿದೆ. ಅದರ ತಳದಲ್ಲಿ ಇದರ ಪಂಕ ವಿಶೇಷವಾಗಿದೆ.

ಸಿಲಿಕಮಯ ಜೀವಿಪಂಕಗಳಲ್ಲಿ ರೇಡಿಯೋಲೇರಿಯನ್ ಜೀವಿಪಂಕ ಭೂಮಧ್ಯವಲಯಕ್ಕೆ ಉತ್ತರದಲ್ಲಿ ಪೆಸಿಫಿಕ್ ಸಾಗರದಲ್ಲಿ ಹೇರಳವಾಗಿದೆ. ರೇಡಿಯೋಲೇರಿಯ ಎಂಬ ಅತಿಸೂಕ್ಷ್ಮವಾದ ಕೀಳುದರ್ಜೆಯ ಜಂತುವಿನ ಅವಶೇಷಗಳೊಡನೆ ಸ್ಪಂಜಿನ ಅವಶೇಷಗಳೂ ಇದರಲ್ಲಿವೆ.

ಸಾಗರದ ಮೇಲು ಭಾಗದಲ್ಲಿ ಹುಲುಸಾಗಿ ಬೆಳೆಯುವ ಕೀಳು ದರ್ಜೆಯ ಸಸ್ಯವರ್ಗಕ್ಕೆ ಸೇರಿದ, ಡೈಯಾಟಮ್ ಎಂಬ ಕಡಲ ಹುಲ್ಲಿನ ಅವಶೇಷಗಳಿಂದ ಕೂಡಿದ ಡೈಯಾಟಮ್ ಜೀವಿಪಂಕ ಉತ್ತರ ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರದ ಶೀತಲಪ್ರದೇಶಗಳಲ್ಲಿ ವಿಶೇಷವಾಗಿ ಸಿಕ್ಕುತ್ತದೆ. ನೋಡಿ: ಸಮುದ್ರದ ಹೂಳು) (ಎ.ಎನ್.ಎಸ್.ಐ.)

**ಜೀವಿವಿಷ:** ಜೀವಿಗಳಿಂದ ಉತ್ಪಾದಿತವಾಗಿ ಮಾನವರಿಗೆ ಮತ್ತು ಸಾಮಾನ್ಯವಾಗಿ ಇತರ ನಿಯತತಾಪೀ ಪ್ರಾಣಿಗಳಿಗೆ ವಿಷವಾಗಿರುವ ಸಂಕೀರ್ಣ ಪ್ರೋಟೀನ್ (ಟಾಕ್ಸಿನ್). ಜೀವಿವಿಷಗಳನ್ನು ಇತರ ಜೈವಿಕ ವಿಷವಸ್ತುಗಳಿಂದ ಭಿನ್ನವಾಗಿ ಗಣಿಸಬೇಕಾದುದು ಅಗತ್ಯ. ಸಸ್ಯಜನ್ಯ ನಿಕೋಟೀನ್, ಸ್ಟ್ರಿಕ್ನೀನ್ ಮುಂತಾದ ಆಲ್ಕಲಾಯ್ಡುಗಳೆಂಬ ಕ್ಷಾರಸ್ವಭಾವದ ವಸ್ತುಗಳನ್ನು ಜೀವಿವಿಷಗಳೆಂದು ಭಾವಿಸುವುದಿಲ್ಲ. ಸೂಕ್ಷ್ಮಾಣುಗಳಿಂದ ತಯಾರಾಗಿ ಇತರ ಸೂಕ್ಷ್ಮಾಣುಗಳಿಗೆ ವಿಷವಾಗಿ ಪರಿಣಮಿಸುವ ಪ್ರತಿಜೀವಕಗಳನ್ನು (ಆ್ಯಂಟಿ ಬಯೊಟಿಕ್ಸ್) ಕೂಡ ಜೀವಿವಿಷಗಳೆಂದು ಪರಿಗಣಿಸುವುದಿಲ್ಲ. ಕಾರಣ, ಅವು ಮಾನವರಿಗೆ ವಿಷವಾಗಿರುವುದಿಲ್ಲ. ವಿಷವಾಗಿರುವ ಪ್ರತಿಜೀವಕಗಳನ್ನೂ ಜೀವಿವಿಷಗಳ ಗುಂಪಿಗೆ ಸೇರಿಸಿಲ್ಲ. ಆರ್ಸೆನಿಕ್ ಸಂಯುಕ್ತಗಳು, ಸಯನೈಡುಗಳು ಮುಂತಾದ ಸಾಮಾನ್ಯ ರಾಸಾಯನಿಕ ಪಾಷಾಣಗಳು ಬೇರೆಯೇ ಗುಂಪಿನವು ಎನ್ನುವುದು ಸ್ಪಷ್ಟ.

ಜೀವಿವಿಷಗಳನ್ನು ಸಸ್ಯಜನಿತ, ಪ್ರಾಣಿಜನಿತ, ಸೂಕ್ಷ್ಮಾಣುಜನಿತವೆಂದು ಮೂರು ಬಗೆಗಳಾಗಿ ವಿಂಗಡಿಸುವುದು ಉಂಟು. ಸಸ್ಯಜನಿತ ಜೀವಿವಿಷಗಳು ಗುಲಗಂಜಿಯಿಂದ ಒದಗುವ ಏಬ್ರಿಸಿನ್, ಹರಳುಬೀಜದಿಂದ ಒದಗುವ ರಿಸಿನ್, ಜಾಪಾಳದಿಂದ ಒದಗುವ ಕ್ರೋಟಿನ್ಸ್ (ವಾಸ್ತವವಾಗಿ ಇದು ಕ್ರೋಟಾನಲ್ಲಿನ್ ಮತ್ತು ಕ್ರೋಟಿನ್ ಗ್ಲಾಬ್ಯುಲಿನ್ನುಗಳ ಮಿಶ್ರಣ) ಮತ್ತು ಉತ್ತರ ಅಮೆರಿಕದ ರೋಬಿನಿಯ ಸೂಡೋಅಕೇಶಿಯ ಎಂಬ ಸಸ್ಯದಿಂದ ಒದಗುವ ರೋಬಿನ್ ಇತ್ಯಾದಿಗಳು. ವಿಷಾಹಾರದಲ್ಲಿನ ಸೂಕ್ಷ್ಮಾಣುಜನಿತ ಜೀವಿವಿಷ ಒಂದನ್ನುಳಿದು ಮಿಕ್ಕ ಜೀವಿವಿಷಗಳು ಜೀರ್ಣವಾಗಿ ಹೋಗುತ್ತವೆ. ಆದರೆ ಸಸ್ಯಜನಿತ ಜೀವಿವಿಷಗಳು ಜೀರ್ಣರಸಗಳಿಂದ ಈ ತೆರನಾಗಿ ಜೀರ್ಣಿಸಲ್ಪಡುವುದಿಲ್ಲ. ಆದ್ದರಿಂದ ಅವನ್ನು ಸೇವಿಸಿದಾಗ ಅವು ಜೀರ್ಣನಾಳದ ಮೂಲಕ ರಕ್ತವನ್ನು ಸೇರಿ ವಿಷವಾಗಿ ಪರಿಣಮಿಸುತ್ತವೆ.

ಪ್ರಾಣಿಜನಿತ ಜೀವಿವಿಷಗಳು ಹಾವು, ಚೇಳು, ಜೇಡರಹುಳುಗಳಿಂದ ಉತ್ಪಾದಿತವಾದುವು. ಜೇನು, ಕಣಜ, ಕಟ್ಟುಗೊದ್ದ ಇತ್ಯಾದಿಗಳು ಕುಟುಕಿದಾಗ ಅಥವಾ

ಕಚ್ಚಿದಾಗ ದೇಹದ ಒಳಹುಗುವ ವಸ್ತುಗಳನ್ನೂ ಈ ಗುಂಪಿಗೆ ಸೇರಿಸಬೇಕು. ಆದರೆ ಇವುಗಳಿಂದ ಸಾಮಾನ್ಯವಾಗಿ ಅಲ್ಪತೊಂದರೆ ಮಾತ್ರ ಉಂಟಾಗಿ ಜೀವಕ್ಕೆ ಅಪಾಯವಿಲ್ಲದಿರುವುದರಿಂದ ಇವನ್ನು ಇಲ್ಲಿ ವಿವರಿಸಿಲ್ಲ. ಹಾವುಗಳ ವಿಷದಲ್ಲಿ ಹೀಮೋಟಾಕ್ಸಿನ್ ಮತ್ತು ನ್ಯೂರೋಟಾಕ್ಸಿನ್ ಎಂಬ ಎರಡು ವಿಷವಸ್ತುಗಳು ಉಂಟು. ಮಂಡಲದಹಾವು, ಕಟ್ಟುಹಾವು, ಮೊಕಾಸಿನ್, ಬುಷ್‌ಮಾಸ್ಟರ್, ಕಾಪರ್‌ಹೆಡ್, ಬುಡುಬಡಿಕೆ ಹಾವು (ರ‍್ಯಾಟಲ್ ಸ್ನೇಕ್) ಇತ್ಯಾದಿಗಳ ವಿಷದಲ್ಲಿ ಹೀಮೋಟಾಕ್ಸಿನ್ ಪ್ರಧಾನ ಅಂಶ. ವಿಷದಿಂದ ಶೀಘ್ರವಾಗಿ ಮರಣ ಸಂಭವಿಸದಿದ್ದರೆ ಸ್ಥಳೀಯವಾಗಿ ರಕ್ತಸ್ರಾವ, ಊತ, ಕೀತುಕೊಳೆಯುವುದು–ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಇವೇ ಉಲ್ಬಣಿಸಿ ಕೊನೆಗೆ ಸಾವನ್ನು ಉಂಟುಮಾಡಬಹುದು. ನಾಗರಹಾವು, ಕಾಳಿಂಗ, ಹವಳದಹಾವು, ಆ್ಯಡರ್ ಮತ್ತು ಮಾಂಬ ಇವುಗಳ ವಿಷದಲ್ಲಿ ನ್ಯೂರೋಟಾಕ್ಸಿನ್ ಪ್ರಧಾನ ಅಂಶ. ಆದ್ದರಿಂದ ಈ ಹಾವುಗಳು ಕಡಿದಾಗ ಸ್ಥಳೀಯ ಪ್ರತಿಕ್ರಿಯೆ ಕಡಿಮೆ. ಆದರೆ ವ್ಯಾಪಕವಾಗಿ ನರಗಳು ನಿಶ್ಚೇತನಗೊಳ್ಳುವುದರಿಂದ ಉಸಿರಾಟ, ಗುಂಡಿಗೆ ಮಿಡಿತ ಇವು ಸ್ಥಗಿತವಾಗಿ ಶೀಘ್ರ ಮರಣದ ಸಂಭಾವ್ಯತೆ ಹೆಚ್ಚು. ಚೇಳುಗಳು ಹಾಗೂ ಅವುಗಳ ವಿಷಗಳಲ್ಲಿ ಕೂಡ ಎರಡು ಬಗೆ. ಒಂದರಲ್ಲಿ ಕುಟುಕಿದ ಸ್ಥಳದಲ್ಲಿ ತೀವ್ರ ಉರಿ, ನೋವು, ಛಳಕು, ಊತಗಳು ಉಂಟಾಗಿ ಕೆಲವು ಗಂಟೆಗಳಲ್ಲೆ ಶಮನವಾಗುತ್ತವೆ. ಕಣಜ ಕುಟುಕಿದ್ದಕ್ಕಿಂತ ಸ್ವಲ್ಪ ಹೆಚ್ಚು ಬಾಧೆ ಇರಬಹುದು, ಅಷ್ಟೇ. ಭಾರತದಲ್ಲಿ ಸಾಮಾನ್ಯವಾಗಿ ಇರುವ ಚೇಳುಗಳ ವಿಷ ಇಂಥದು. ಇನ್ನೊಂದು ಬಗೆಯ ಚೇಳಿನ ವಿಷದಲ್ಲಿ ನರಜೀವಿವಿಷ (ನ್ಯೂರೋಟಾಕ್ಸಿನ್) ಉಂಟು. ಇದು ನರಗಳ ಮೇಲೆ ಸ್ಟ್ರಿಕ್ನಿನ್ನಿನಂತೆ ಪ್ರಭಾವಿಸಿ ಕೆಲವು ವೇಳೆ ಮಾರಕವಾಗಬಹುದು. ಇಂಥ ವಿಷ ಉತ್ತರ ಅಮೆರಿಕದ ಅನೇಕ ಜಾತಿಯ ಚೇಳುಗಳಲ್ಲಿ ಇದೆ. ಜೇಡರಹುಳುಗಳು ಬಲೆಗೆ ಸಿಕ್ಕಿಕೊಂಡ ಹುಳು ಹುಪ್ಪಟೆಗಳನ್ನು ಕಚ್ಚಿ ವಿಷದಿಂದ ಸಾಯಿಸುವುದು ಸಾಮಾನ್ಯ. ಆದರೆ ಅವು ಮಾನವರನ್ನು ಮತ್ತು ಪ್ರಾಣಿಗಳನ್ನು ಕಚ್ಚುವುದಾಗಲಿ, ಕಚ್ಚಿದರೆ ಅದರಿಂದ ಹೆಚ್ಚು ತೊಂದರೆ ಆಗುವುದಾಗಲಿ ಭಾರತದಲ್ಲಿ ವರದಿ ಆಗಿಲ್ಲ. ದಕ್ಷಿಣ ಅಮೆರಿಕದ ಬ್ಲ್ಯಾಕ್‌ವಿಡೋ ಜೇಡ ಯೂರೋಪಿನ ಟಾರಾನ್‌ಟ್ಯುಲ ಮುಂತಾದುವು ಕಚ್ಚಿದಾಗ ದೇಹದ ಒಳಹುಗುವ ನರಜೀವಿವಿಷದ ಗುಂಪಿಗೆ ಸೇರಿದ ವಿಷವಸ್ತು ಗಣನೀಯ ದುಷ್ಪರಿಣಾಮವನ್ನು ಉಂಟು ಮಾಡಬಹುದು. ಬಹು ಅಪರೂಪವಾಗಿ ಇದು ಮಾರಕವೂ ಆಗಬಹುದು.

ಸೂಕ್ಷ್ಮಾಣುಜನಿತ ಜೀವಿವಿಷಗಳನ್ನು ವ್ಯಾಪಕವಾಗಿ ವ್ಯಾಸಂಗಿಸಲಾಗಿರುವುದರಿಂದ ಅವುಗಳ ಲಕ್ಷಣಗಳು, ಕ್ರಿಯಾವಿಧಾನ ಮುಂತಾದವೆಲ್ಲ ವಿಶದವಾಗಿ ತಿಳಿದಿವೆ. ವಿಷಾಣುಗಳ ವಿಷ ಎರಡು ಬಗೆ. ಬಾಹ್ಯ ಜೀವಿವಿಷ (ಎಕ್ಸೊಟಾಕ್ಸಿನ್) ಮತ್ತು ಆಂತರಿಕ ಜೀವಿವಿಷ (ಎನ್ಡೋಟಾಕ್ಸಿನ್). ಹಾವಿನ ವಿಷ ಇತ್ಯಾದಿ ಜೀವಿವಿಷಗಳಂತೆ ಬಾಹ್ಯಜೀವಿವಿಷಗಳಲ್ಲಿ ಕೆಲವು ಪ್ರಧಾನವಾಗಿ ಹೀಮೋಟಾಕ್ಸಿನ್ನುಗಳಂತೆ, ಕೆಲವು ಪ್ರಧಾನವಾಗಿ ನ್ಯೂರೋಟಾಕ್ಸಿನ್ನುಗಳಂತೆ ವರ್ತಿಸುತ್ತವೆ. ಬಾಹ್ಯಜೀವಿವಿಷಗಳ ಪರಿಣಾಮಗಳನ್ನು ಡಿಫ್ತೀರಿಯ, ಧನುರ್ವಾಯ, ಅನಿಲಯುಕ್ತ ಕೊಳೆತ (ಗ್ಯಾಸ್ ಗ್ಯಾಂಗ್ರೀನ್) ಮುಂತಾದ ಸೋಂಕು ರೋಗಗಳಲ್ಲಿ ಕಾಣಬಹುದು. ಅಲ್ಲದೆ ಅಂತರಕೋಶೀಯ ವಸ್ತು (ಇಂಟರ್ ಸೆಲ್ಯುಲರ್ ಸಬ್‌ಸ್ಟೆನ್ಸ್) ದ್ರವೀಕರಿಸಲ್ಪಡುವುದರಿಂದ ವಿಷಾಣುಗಳು ದೇಹದಲ್ಲಿ ತಡೆಯಿಲ್ಲದೆ, ವ್ಯಾಪಕವಾಗಿ ಹರಡಲು ಅಥವಾ ವಿಷ ಹರಡಲು ಸಹಕಾರಿಯಾಗಿದೆ. ಸ್ಟ್ರೆಪ್ಟೋಕಾಕಸ್, ಸ್ಟ್ಯಾಫಿಲೋಕಾಕಸ್ ಹಾಗೂ ಗ್ಯಾಸ್‌ಗ್ಯಾಂಗ್ರೀನ್ ಕಾರಕ ವಿಷಾಣುಗಳ ಸೋಂಕಿನಲ್ಲಿ ಇದು ವ್ಯಕ್ತ. ವಿಷಯುಕ್ತ ಆಹಾರ ಸೇವನೆಯ ಪ್ರಸಂಗಗಳಲ್ಲಿ ಆಹಾರದಲ್ಲಿರುವ ಸ್ಟ್ಯಾಫಿಲೋಕಾಕಸ್ ಮುಂತಾದ ವಿಷಾಣುಗಳ ಬಾಹ್ಯಜೀವಿವಿಷಗಳು ಜಠರ, ಕರುಳುಗಳ ಮೇಲೆ ವರ್ತಿಸಿ ಹೊಟ್ಟೆತೊಳಸು, ವಾಂತಿ, ಭೇದಿಗಳನ್ನು ಉಂಟುಮಾಡುತ್ತವೆ. ವಿಶಿಷ್ಟ ಹಾಗೂ ಅಪಾಯಕಾರಿಗಳಾದ ಇಂಥ ಬಾಹ್ಯಜೀವಿವಿಷಗಳು ಸಾಮಾನ್ಯವಾಗಿ ಗ್ರಾಮ್‌ಧನ (ಗ್ರಾಮ್ ಪಾಸಿಟಿವ್) ವಿಷಾಣುಗಳಿಂದ ಸ್ರವಿಸಲ್ಪಡುತ್ತವೆ. ಇವುಗಳೆಲ್ಲ 70,000–9,00,000 ಗಳಷ್ಟು ಪರಮಾಣುತೂಕವುಳ್ಳ ಪ್ರೊಟೀನುಗಳು. ಕೆಲವನ್ನು ಶುದ್ಧೀಕರಿಸಿ ಹರಳುಗಳನ್ನಾಗಿ ಬೇರ್ಪಡಿಸಿದೆ (ಧನುರ್ವಾಯು, ಬಾಟ್ಯುಲಿಸಮ್‌ಗಳಲ್ಲಿನ ವಿಷ). ಕೆಲವನ್ನು ನುಣುಪಾದ ಹುಡಿಯಂತೆ ಬೇರ್ಪಡಿಸಿದೆ (ಡಿಫ್ತೀರಿಯ ವಿಷ). ಇವು ತೀವ್ರ ವಿಷವಸ್ತುಗಳು. ಒಂದು ಗ್ರಾಮ್ ತೂಕದ ಡಿಫ್ತೀರಿಯ ವಿಷ 150 ಟನ್ನುಗಳಷ್ಟು ತೂಕದ ಗಿನಿಹಂದಿಗಳನ್ನು ಕೊಲ್ಲಬಹುದು. ಒಂದು ಗ್ರಾಮ್ ತೂಕದ ಬಾಟ್ಯುಲಿಸಮ್ ವಿಷ 50 ಲಕ್ಷ ಇಲಿಗಳನ್ನು ಕೊಲ್ಲಬಲ್ಲದು ಎಂದು ಅಂದಾಜುಮಾಡಿದ್ದಾರೆ. ಆಮ್ಲ, ಕ್ಷಾರ, ಕಿಣ್ವವಸ್ತುಗಳು ಇವುಗಳ ವಿಷಸ್ವಭಾವವನ್ನು ಪೂರ್ಣವಾಗಿ ನಾಶಮಾಡುತ್ತವೆ. ಈ ಸಂದರ್ಭಗಳಲ್ಲಿ ಪ್ರೊಟೀನ್ ಬೃಹದಣುವಿನ ರಚನೆ ನಾಶವಾಗುವುದೆಂದು ತಿಳಿದಿದೆ. ಆದ್ದರಿಂದ ಜೀವಿವಿಷ ಪ್ರೊಟೀನ್ ರಚನೆಯನ್ನು ಪಡೆದಿರುವಾಗ ಮಾತ್ರ ವಿಷವಾಗಿ ವರ್ತಿಸಬಲ್ಲದೆಂದು ಗೊತ್ತಾಗುತ್ತದೆ. $60^{0}$ ಸೆ ಉಷ್ಣತೆ, ಫಾರ್ಮಲಿನ್ನಿನೊಂದಿಗೆ ಮಿಶ್ರಣ, ದೀರ್ಘಕಾಲಿಕ ಶೇಖರಣೆ ಇವುಗಳಿಂದಲೂ ವಿಷಗುಣ ನಾಶವಾಗುತ್ತದೆ. ಈ ವಿಧಾನಗಳಲ್ಲಿ ತಕ್ಕ ಹತೋಟಿ ಏರ್ಪಡಿಸಿ ವಿಷಗುಣ ಪೂರ್ಣವಾಗಿ ನಾಶಹೊಂದದಂತೆ ಮಾಡಿ ವಿಷವನ್ನು ದುರ್ಬಲೀಕರಿಸಬಹುದು. ಕಚ್ಚಾ ಜೀವಿವಿಷಕ್ಕೆ ಪಟಿಕವನ್ನು ಸೇರಿಸಿದರೆ ವಿಷ ದುರ್ಬಲಗೊಳ್ಳುವುದೇ ಅಲ್ಲದೆ ದ್ರಾವಣದಿಂದ ಗರಣೆಯಾಗಿ ಬೇರ್ಪಟ್ಟು ಶುದ್ಧವಸ್ತುವಾಗಿ ತಳಸೇರುತ್ತದೆ. ಜೀವಿವಿಷಗಳು ವಿಷಹಾರಿಗಳೂ ಆಗಿರುವುದರಿಂದ ಉಷ್ಣತೆ, ಫಾರ್ಮಲಿನ್ ಶೇಖರಣೆಗಳಿಂದ ದುರ್ಬಲೀಕರಿಸಿದ ವಿಷಗಳನ್ನು (ಟಾಕ್ಸಾಯ್ಡುಗಳು) ಉಪಯೋಗಿಸಿ ದೇಹದಲ್ಲಿ ವಿಷಹಾರಿಯ ಉತ್ಪನ್ನವನ್ನು ಪ್ರಚೋದಿಸಬಹುದು. ಡಿಫ್ತೀರಿಯ, ಧನುರ್ವಾಯು ಮುಂತಾದ ಸೋಂಕು ರೋಗಗಳಿಂದ ರಕ್ಷಣೆ ಪಡೆಯಲು ಈ ವಿಧಾನವನ್ನು ಅನುಸರಿಸಲಾಗುತ್ತದೆ. ಪಟಿಕದ ಮಿಶ್ರಣದಿಂದ ಗರಣೆ ಕಟ್ಟಿಸಿ ತಯಾರಿಸಿದ ಶುದ್ಧ ದುರ್ಬಲೀಕೃತ ಜೀವಿವಿಷ ರಕ್ಷಣೆ ಒದಗಿಸುವ ವಿಷಯದಲ್ಲಿ ಬಹು ಪರಿಣಾಮಕಾರಿ.

ಬಾಹ್ಯ ಜೀವಿವಿಷಗಳ ಕ್ರಿಯಾವಿಧಾನ : ಡಿಫ್ತೀರಿಯ ವಿಷದ ವ್ಯಾಸಂಗಗಳಿಂದ ಸಾಮಾನ್ಯವಾಗಿ ಎಲ್ಲ ಜೀವಾಣುಗಳಿಗೂ ಅಗತ್ಯವಾಗಿರುವ ಸೈಟೊಕ್ರೋಮ್ ಎಂಬ ಕಿಣ್ವದ ಪ್ರೋಟೀನ್ ಭಾಗವನ್ನು ಅದು ಹೋಲುವುದು ತಿಳಿದುಬಂದಿದೆ. ಕಬ್ಬಿಣದ ಅಯಾನು ಮತ್ತು ಪಾರ್ಫಿರಿನ್ ಘಟಕ ವಿಶಿಷ್ಟ ಪ್ರೋಟೀನಿನ ಜೊತೆ ಸಂಯೋಜನೆಗೊಂಡು ಸೈಟೋಕ್ರೋಮ್ ಉತ್ಪತ್ತಿಯಾಗುತ್ತದೆ. ಆದರೆ ನೆರೆಯಲ್ಲಿ ಡಿಫ್ತೀರಿಯ ವಿಷ ಇದ್ದರೆ ಕಬ್ಬಿಣ ಹಾಗೂ ಪಾರ್ಫಿರಿನ್ ಘಟಕಗಳು ಸೈಟೊಕ್ರೋಮ್ ಪ್ರೋಟೀನಿನ ಬದಲು ಇದರೊಡನೆಯೇ ಸಂಯೋಗವಾಗುತ್ತದೆ. ಇಂಥ ವರಣರೀತಿಯ ಸಂಯೋಗದಿಂದ (ಪ್ರಿಫರೆನ್‌ಷಿಯಲ್ ಕಾಂಬಿನೇಷನ್) ಸೈಟೊಕ್ರೋಮು ಅಗತ್ಯವಾದಷ್ಟು ಒದಗದೆ ನರಸ್ನಾಯುಗಳ (ಮುಖ್ಯವಾಗಿ ಗುಂಡಿಗೆ, ಶ್ವಾಸಾಂಗಗಳ) ಕ್ರಿಯೆ ಸ್ಥಗಿತಗೊಳ್ಳುತ್ತದೆ. ಪರಿಣಾಮ ಮರಣ. ಬಹುಶಃ ನರಜೀವಿವಿಷಗಳು ಸಾಮಾನ್ಯವಾಗಿ ಹೀಗೆಯೇ ವರ್ತಿಸುತ್ತವೆ. ಹೀಮೋಟಾಕ್ಸಿನ್ನುಗಳು ಕೊಬ್ಬಿನ ಮೇಲೆ ವರ್ತಿಸುವ ಕಿಣ್ವಗಳಂಥ ಕ್ರಿಯೆ ಉಳ್ಳವು. ಕೋಶಗಳ ಭಿತ್ತಿಯ ಲೈಪೋಪ್ರೋಟೀನ್ ಎಂಬ ಕೊಬ್ಬಿನ ಅಂಶದ ಮೇಲೆ ವರ್ತಿಸಿ ಜಲವಿಶ್ಲೇಷಣದಿಂದ ಅದನ್ನು ನಾಶಮಾಡುತ್ತವೆ. ತತ್ಫಲವಾಗಿ ಭಿತ್ತಿಯ ರಂಧ್ರಗಳು ಹಿಗ್ಗಿ ಕೋಶದ ಒಳವಸ್ತುಗಳು ಹೊರಬಂದು ಕೋಶ ನಾಶವಾಗುತ್ತದೆ. ಕೆಂಪು ರಕ್ತಕಣಗಳಲ್ಲಿ ಹೀಗಾಗುವುದರಿಂದ ಹೀಮೋಗ್ಲಾಬಿನ್ ಹೊರಬಂದು ರಕ್ತದ್ರವದಲ್ಲಿ ಸೇರಿ ಇನ್ನು ಬೇರೆ ಜಟಿಲತೆಗಳನ್ನು ಉಂಟುಮಾಡುವುದು. ಶ್ವೇತರಕ್ತಕಣಗಳು ಹಾಗೂ ಕಬಳಿಸುವ ಜೀವಾಣುಗಳೂ (ಫೇಗೋಸೈಟ್ಸ್) ಇದೇ ರೀತಿ ನಾಶವಾಗುತ್ತವೆ. ಲೋಮ ನಾಳಗಳ ಭಿತ್ತಿಯ ಪಾರಗಮ್ಯತೆ (ಪರ್ಮಿಯೆಬಿಲಿಟಿ) ಹೆಚ್ಚಿ ರಕ್ತಸ್ರಾವ ಅಲ್ಲಲ್ಲೆ ಆಗುವುದು. ಹೀಮೊಟಾಕ್ಸಿನ್ ರಕ್ತಗತವಾದ ಬಹು ಸ್ವಲ್ಪ ಕಾಲದಲ್ಲೆ ಅನೇಕ ವೇಳೆ ಮರಣ ಸಂಭವಿಸುವುದರಿಂದ ಅದರ ವಿಷಗುಣದಿಂದ ವೇಗತರವಾದ ಇನ್ನೂ ಬೇರೆ ಪರಿಣಾಮ ಉಂಟಾಗುವದು ಎನ್ನಿಸಿದೆ. ಆದರೆ ಸ್ಪಷ್ಟವಾಗಿಲ್ಲ. ಹಾವಿನ ವಿಷದ ಹೀಮೋಟಾಕ್ಸಿನ್ನಿನ ವರ್ತನೆ ಸ್ವಲ್ಪ ಭಿನ್ನ. ಇದಕ್ಕೂ ಲೈಪೋಪ್ರೊಟೀನನ್ನು ಜಲವಿಶ್ಲೇಷಣಗೊಳಿಸುವ ಗುಣ ಉಂಟು. ಆದರೆ ವಿಶ್ಲೇಷಣೆ ಪೂರ್ಣವಾಗದೆ ಲೈಸೋಲೆಸಿಥಿನ್ ಎಂಬ ವಸ್ತು ಉತ್ಪನ್ನವಾಗುವುದು. ಹಾವು ಕಡಿದಾಗ ಉಂಟಾಗುವ ನೋವು, ಊತ, ರಕ್ತಸ್ರಾವ ಇವುಗಳಿಗೆ ಸ್ವತಃ ಹಾವಿನ ವಿಷದ ಹೀಮೋಟಾಕ್ಸಿನ್ನಿಗಿಂತ ಹೆಚ್ಚಾಗಿ ಲೈಸೋಲೆಸಿಥಿನೇ ಕಾರಣ. ಅನಿಲಯುಕ್ತ ಕೊಳೆತ ಕಾರಕ ವಿಷಾಣು ಉತ್ಪಾದಿಸುವ ಹೀಮೋಟಾಕ್ಸಿನ್ ಜೀವಕೋಶಗಳ ಮೇಲೆ ನೇರವಾಗಿ ವರ್ತಿಸಿ ಅವನ್ನು ನಾಶಮಾಡುತ್ತದೆ; ಲೈಸೋಲೆಸಿಥಿನ್ನನ್ನು ಬಿಡುಗಡೆ ಮಾಡಿ ಅಲ್ಲ. ಅಲ್ಲದೆ ಇದರ ಕ್ರಿಯೆಗೆ ಕ್ಯಾಲ್ಸಿಯಮ್ ಅಯಾನುಗಳು ಅಗತ್ಯ ಎಂದು ತಿಳಿದಿದೆ. ಕೋಶಗಳ ನಡುವೆ ಘನವೂ ಅಲ್ಲದ ದ್ರವವೂ ಅಲ್ಲದ ಹಯಲ್ಯೂರೋನಿಕ್ ಆಮ್ಲವೆಂಬ ಮಾಧ್ಯಮ ವಸ್ತು ಉಂಟು. ಇದರ ಮೂಲಕ ವಿಷಾಣುಗಳು ವ್ಯಾಪಿಸುತ್ತ ಸೋಂಕನ್ನು ನೆರೆಗೆಲ್ಲ ಹರಡುವುದು ಕಷ್ಟ. ಅನೇಕ ವಿಷಾಣುಗಳು (ಸ್ಟ್ರೆಪ್ಟೋಕಾಕಸ್, ಕೊಳೆತಕಾರಕ ವಿಷಾಣು) ಸ್ರವಿಸುವ ಬಾಹ್ಯಜೀವಿವಿಷದಲ್ಲಿ ಹಯಲ್ಯೂರೇನಿಡೇಸ್ ಅಥವಾ ಇನ್‌ವೇಸಿನ್ ಇದೆ. ಇದು ಹಯಲ್ಯೂರೋನಿಕ್ ಆಮ್ಲವನ್ನು ವಿಶ್ಲೇಷಿಸಿ ದ್ರವೀಕರಿಸುವುದರಿಂದ ವಿಷಾಣುಗಳು ನೆರೆಯಲ್ಲೆಲ್ಲ ವ್ಯಾಪಿಸುವುದು ಸಾಧ್ಯ. ಆದರೆ ಹಯಲ್ಯೂರೋನಿಕ್ ಆಮ್ಲ–ಇನ್‌ವೇಸಿನ್ನುಗಳಂತೆ ಪರಸ್ಪರ ಸಂಬಂಧವುಳ್ಳ ಇನ್ನೂ ಕೆಲವು ವಸ್ತುಗಳು ಪಾಲುಗೊಂಡು ಸಮಕಾಲಿಕವಾಗಿ ನಾನಾ ಕ್ರಿಯೆ ಪ್ರತಿಕ್ರಿಯೆಗಳು ಉಂಟಾಗುವುವೆಂಬುದಕ್ಕೆ ಆಧಾರ ಉಂಟು. ಜೀವಿವಿಷದಲ್ಲಿರುವ ಇನ್‌ವೇಸಿನ್ನನ್ನು ನಿಷ್ಕ್ರಿಯೆಗೊಳಿಸಬಲ್ಲ ಆ್ಯಂಟಿಇನ್‌ವೇಸಿನ್–I ಎಂಬ ವಸ್ತು ಸಾಮಾನ್ಯವಾಗಿ ರಕ್ತದಲ್ಲಿ ಇದೆ. ವಿಷಾಣುಗಳು ನೆರೆಪ್ರಾಂತ್ಯಕ್ಕೆ ವ್ಯಾಪಿಸುವುದನ್ನು ಇದು ತಡೆಯುವುದೆನ್ನುವುದು ವ್ಯಕ್ತ. ಆದರೆ ಜೀವಿವಿಷದಲ್ಲಿ ಇರುವ ಪ್ರೋಇನ್‌ವೇಸಿನ್–I ಎಂಬುದು ಆ್ಯಂಟಿಇನ್‌ವೇಸಿನ್–I ರ ಕ್ರಿಯೆಗೆ ಅಡ್ಡಿಯನ್ನು ಉಂಟುಮಾಡುವುದರಿಂದ ಸೋಂಕು ವ್ಯಾಪಿಸಬಹುದು. ಹೀಗಾಗುವುದನ್ನು ತಪ್ಪಿಸಲು ರಕ್ತದಲ್ಲಿ ಆ್ಯಂಟಿಇನ್‌ವೇಸಿನ್–

II ಎಂಬ ವಸ್ತು ಇದೆ. ಇದು ಪ್ರೋಇನ್‌ವೇಸಿನ್ನನ್ನು ನಿಷ್ಕ್ರಿಯಗೊಳಿಸುವಂಥದು. ಇವೆಲ್ಲ ವಸ್ತುಗಳೂ ಒಂದರೊಡನೆ ಒಂದು ಸಮಕಾಲೀನವಾಗಿ ಪ್ರವರ್ತಿಸುವುದರಿಂದ ವಿಷಾಣುಸೋಂಕಿನ ವ್ಯಾಪನೆ ಇಲ್ಲವೇ ಸ್ಥಳೀಯವಾಗಿ ನೆಲೆಗೊಳ್ಳುವಿಕೆ ಒಟ್ಟಿನ ಕ್ರಿಯೆ ಪ್ರತಿಕ್ರಿಯೆಗಳ ಅಂತ್ಯ ಪರಿಣಾಮವನ್ನು ಅವಲಂಬಿಸಿದೆ. ದೇಹದಲ್ಲಿ ವಿಷಾಣು ಪ್ರಸಾರ ಇನ್ನೊಂದು ರೀತಿಯಲ್ಲಿ ಉಂಟಾಗಬಹುದು. ಉದಾಹರಣೆಗೆ, ಸ್ಟ್ರೆಪ್ಟೋಕಾಕಸುಗಳ ಬಾಹ್ಯಜೀವಿವಿಷದಲ್ಲಿರುವ ಸ್ಟ್ರೆಪ್ಟೋಕೈನೇಸ್ ಎಂಬ ವಸ್ತು ಈ ರೀತಿ ವ್ಯಾಪಿಸುತ್ತದೆ. ಸ್ಟ್ರೆಪ್ಟೋಕಾಕಸ್ಸಿನ ಸೋಂಕು ಉಂಟಾದಾಗ ಅದು ಸ್ಥಳೀಯವಾಗಿ ನೆಲೆಗೊಳ್ಳುವಂತೆ ದೇಹದಲ್ಲಿ ಸಹಜ ಪ್ರತಿಕ್ರಿಯೆ ಸಾಮಾನ್ಯವಾಗಿ ಉಂಟಾಗುವುದು. ತತ್ಫಲವಾಗಿ ಫೈಬ್ರಿನ್ ಎಂಬ ವಸ್ತು ಆ ಸ್ಥಳದಲ್ಲಿ ಉತ್ಪಾದಿತವಾಗಿ ಸೋಂಕಿನ ಸ್ಥಳದ ಸುತ್ತ ಗೋಡೆಯಂತೆ ರಚನೆಗೊಳ್ಳುತ್ತದೆ. ಈ ಫೈಬ್ರಿನ್ ಗೋಡೆ ರಾಸಾಯನಿಕ ಕ್ರಿಯೆಯಿಂದ ಶಿಥಿಲಗೊಂಡು ಸೋಂಕು ವ್ಯಾಪಿಸುವಂತೆ ಸ್ಟ್ರೆಪ್ಟೋಕೈನೇಸ್ ಅವಕಾಶ ಮಾಡಿಕೊಡುವುದು. ಆದರೆ ಇದು ನೇರಕ್ರಿಯೆ ಅಲ್ಲ. ಫೈಬ್ರಿನ್ನನ್ನು ಶಿಥಿಲಗೊಳಿಸುವ ವಸ್ತು ಫೈಬ್ರಿನೋಲೈಸಿನ್. ಇದರ ಜನಕವಸ್ತು ಪ್ರೊಫೈಬ್ರಿನೋಲೈಸಿನ್ ರಕ್ತದಲ್ಲಿ ನೈಸರ್ಗಿಕವಾಗಿ ಇರುವುದು. ಪ್ರೋಫೈಬ್ರಿನೋಲೈಸಿನ್ನಿನ ಮೇಲೆ ಸ್ಟ್ರೆಪ್ಟೋಕೈನೇಸ್ ವರ್ತಿಸಿ ಅದನ್ನು ಫೈಬ್ರಿನೋಲೈಸಿನ್ನಾಗಿ ಮಾರ್ಪಡಿಸುತ್ತದೆ. ಇದು ಫೈಬ್ರಿನ್ನನ್ನು ಜೀರ್ಣಿಸುವುದು ಅನಂತರದ ಕ್ರಿಯೆ. ಆದರೆ ರಕ್ತದಲ್ಲಿ ಆ್ಯಂಟಿಫೈಬ್ರೋಕೈನೇಸ್ ಎಂಬ ವಸ್ತು ಇದ್ದು ಇದು ಫೈಬ್ರೋಕೈನೇಸಿನ ಕ್ರಿಯೆಗೆ ಅಡ್ಡಿ ಮಾಡುತ್ತದೆ. ಆದ್ದರಿಂದ ಕೊನೆಯ ಪರಿಣಾಮ ಈ ಎಲ್ಲ ರಾಸಾಯನಿಕಗಳ ಪರಸ್ಪರ ಕ್ರಿಯೆಗಳ ಅಂತಿಮ ಫಲಿತಾಂಶವನ್ನು ಅವಲಂಬಿಸಿದೆ; ಇನ್‌ವೇಸಿನ್ ವಿಷಯದಲ್ಲಿ ಇದ್ದಹಾಗೆಯೇ.

ಒಟ್ಟಿನಲ್ಲಿ ವಿಷಾಣುಗಳ ಸೋಂಕು ಉಂಟಾದಾಗ ವಿಷಾಣುಗಳೇ ಕೋಶಗಳ ಒಳಹೊಕ್ಕು ಅವನ್ನು ನಾಶಮಾಡಬಹುದು (ಕೆಲವು ಕಾಕೈಗಳು). ಬಾಹ್ಯಜೀವಿ ವಿಷವನ್ನು ಸ್ರವಿಸಿ ವಿಷಮಾವಸ್ಥೆ (ಟಾಕ್ಸೀಮಿಯ) ಉಂಟುಮಾಡಿ ಕೋಶಗಳನ್ನು ನಾಶ ಮಾಡಬಹುದು (ಡಿಫ್ತೀರಿಯ ಅಣು, ಗ್ಯಾಸ್‌ಗ್ಯಾಂಗ್ರೀನ್‌ಕಾರಕ). ವಿಷಮಾವಸ್ಥೆ ತೀವ್ರವಾಗಿದ್ದರೂ ವಿಷವಸ್ತು ಅನಿರ್ದಿಷ್ಟವಾಗಿರಬಹುದು (ನ್ಯೂಮೋಕಾಕಸ್). ಕೆಲವು ಸಂದರ್ಭಗಳನ್ನು ಕೆಳಗೆ ವಿವರಿಸಿದೆ.

ಡಿಫ್ತೀರಿಯ : ವಿಷಾಣುವಿನ ಹೆಸರು ಕೊರೈನಿಬ್ಯಾಕ್ಟೀರಿಯಮ್ ಡಿಫ್ತೀರಿಯ. ಸೋಂಕು ಸಾಮಾನ್ಯವಾಗಿ ಮೂಗುಗಂಟಲುಗಳ ಲೋಳೆಪೊರೆಗೆ ಸೀಮಿತವಾಗಿರುವುದು. ಅಪರೂಪವಾಗಿ ಚರ್ಮಕ್ಕೆ ಸೋಂಕು ತಗುಲಬಹುದು. ಹುಟ್ಟಿದ ಮಕ್ಕಳ ಹೊಕ್ಕಳ ಸುತ್ತ ಈ ರೀತಿ ಸೋಂಕು ವ್ಯಕ್ತವಾಗುತ್ತದೆ. ಅಂತೂ ಸೋಂಕು ಕೇವಲ ಸ್ವಲ್ಪ ಸ್ಥಳದಲ್ಲಿ ನೆಲೆಗೊಳ್ಳುವಂಥದು, ವ್ಯಾಪಕವಾಗಿ ಹರಡುವುದಿಲ್ಲ. ಆದರೆ ಅಷ್ಟು ಸ್ವಲ್ಪ ಸ್ಥಳದಲ್ಲೆ ವಿಷಾಣುಗಳು ಬಹುವಾಗಿ ವೃದ್ಧಿಸಿ ಅಗಾಧ ಪ್ರಮಾಣದಲ್ಲಿ ವಿಷವನ್ನು ಉತ್ಪಾದಿಸುತ್ತವೆ. ವಿಷವು ರಕ್ತಗತವಾಗಿ ದೇಹದಲ್ಲೆಲ್ಲ ವ್ಯಾಪಿಸುತ್ತದೆ. ವಿಷದ ಪರಿಣಾಮವಾಗಿ ವಿಸರ್ಜಿತವಾಗಬೇಕಾದ ವಸ್ತುಗಳು ಮೂತ್ರಪಿಂಡ, ಗುಂಡಿಗೆ, ಮಿದುಳುಗಳಲ್ಲಿ ಶೇಖರಗೊಂಡು, ಗುಂಡಿಗೆ ಮಿಡಿತ ನಿಂತು ಇಲ್ಲವೇ ಸ್ನಾಯುಗಳ ಸ್ವಾಧೀನತಪ್ಪಿ ಉಸಿರುಕಟ್ಟಿಕೊಂಡು ಸಾವು ಉಂಟಾಗಬಹುದು. ಎಲ್ಲವೂ ಬಾಹ್ಯ ಜೀವಿವಿಷದ ಪರಿಣಾಮಗಳೇ ಆದ್ದರಿಂದ ಈ ವಿಷಕ್ಕೆ ತಕ್ಕ ವಿಷಹಾರಿಯನ್ನು ಕೊಟ್ಟು ಚಿಕಿತ್ಸಿಸಬೇಕು. ವಿಷಾಣುಗಳ ಹತೋಟಿ ಅಷ್ಟು ಮುಖ್ಯವಲ್ಲ. ವಿಷಮ ಪರಿಸ್ಥಿತಿ ಮುಂದುವರಿಯದಂತೆ ಮಾಡುವುದಕ್ಕೆ ಮಾತ್ರ ಅವುಗಳ ಹತೋಟಿ ಅಗತ್ಯ. ಇದಕ್ಕೆ ಪೆನಿಸಿಲಿನ್ನನ್ನು ಕೊಡುವುದುಂಟು. ಆದರೆ ವಿಷದ ಪರಿಣಾಮವನ್ನು ತಪ್ಪಿಸುವುದಕ್ಕೆ ತತ್‌ಕ್ಷಣದ ಚಿಕಿತ್ಸೆ ಅಗತ್ಯ. ಇದಕ್ಕಾಗಿ ಡಿಫ್ತೀರಿಯ ವಿಷಹಾರಿಯನ್ನು ಚುಚ್ಚುಮದ್ದಾಗಿ ಅಗತ್ಯಪ್ರಮಾಣದಲ್ಲಿ ಅವಶ್ಯವಾಗುವಷ್ಟು ಕಾಲ ಕೊಡಬೇಕು. ಈ ಜೀವಿ ವಿಷಹಾರಿಯನ್ನು (ಆ್ಯಂಟಿಟಾಕ್ಸಿನ್) ಕುದುರೆ ಮುಂತಾದ ಪ್ರಾಯೋಗಿಕಪ್ರಾಣಿಗಳಲ್ಲಿ ಕೃತಕ ಪ್ರಚೋದನೆಯಿಂದ ಅಧಿಕವಾಗಿ ಉತ್ಪಾದನೆ ಆಗುವಂತೆ ಮಾಡಿ ಬೇರ್ಪಡಿಸಲಾಗುತ್ತದೆ. ವಿಷಾಣುವನ್ನೋ ಪ್ರತ್ಯೇಕ ವಿಷವನ್ನೋ ದುರ್ಬಲೀಕರಿಸಿದ ವಿಷವನ್ನೋ ಚುಚ್ಚುಮದ್ದಿನಿಂದ ಅಲ್ಪ ಪ್ರಮಾಣದಲ್ಲಿ ಪ್ರಾಣಿ ದೇಹದೊಳಗೆ ಹೊಗಿಸಿ ಕೃತಕ ಪ್ರಚೋದನೆಯನ್ನು ಉಂಟುಮಾಡುತ್ತಾರೆ. ಅನಂತರ ಅನೇಕ ಬಾರಿ ಕ್ರಮೇಣ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಪ್ರಚೋದನೆ ಮುಂದುವರಿಯುತ್ತದೆ. ವಿಷಹಾರಿ ಗಣನೀಯವಾಗಿ ಉತ್ಪಾದಿತವಾದ ಬಳಿಕ ಪ್ರಾಯೋಗಿಕ ಪ್ರಾಣಿಯ ರಕ್ತದಿಂದ ಅದನ್ನು ಬೇರ್ಪಡಿಸಿ ನಿರ್ದಿಷ್ಟ ಅಂತಾರಾಷ್ಟ್ರೀಯ ಏಕ ಮಾನಗಳಿರುವಷ್ಟು ವಸ್ತುವನ್ನು ಗಾಜಿನ ಬುರುಡೆಗಳಲ್ಲಿಟ್ಟು ಮೊಹರು ಮಾಡಲಾಗುತ್ತದೆ. ದುರ್ಬಲೀಕೃತ ಬಾಹ್ಯ ಜೀವಿವಿಷವನ್ನು ಪ್ರಾಯೋಗಿಕ ಪ್ರಾಣಿಗಳಲ್ಲಿ ಉಪಯೋಗಿಸುವಂತೆ ಅಲ್ಪ ಪ್ರಮಾಣದಲ್ಲಿ ಮಾನವರಿಗೇ ಕೊಡುವುದರಿಂದ ಮುಂದೆಂದೋ ಅವನು ಡಿಫ್ತೀರಿಯ ರೋಗಲಕ್ಷಣಗಳಿಂದ ನರಳಬೇಕಾಗುವ ಪ್ರಮೇಯವನ್ನು ನಿವಾರಿಸಬಹುದು.

ಧನುರ್ವಾಯು (ಟೆಟನಸ್) : ಕ್ಲಾಸ್ಟ್ರಿಡಿಯಮ್ ಟೆಟನಿ ಎಂಬ ವಿಷಾಣುವಿನ ಸೋಂಕಿನಿಂದ ಉಂಟಾದುದು. ಆಳವಾದ ಹಾಗೂ ಮಲಿನಗೊಂಡ ಗಾಯಕ್ಕೆ ಈ ಸೋಂಕು ತಗುಲಬಹುದೇ ವಿನಾ ಗಾಯವಿಲ್ಲದ ಸ್ಥಳಗಳಲ್ಲಿ ಸೋಂಕು ಪ್ರಾರಂಭವಾಗಲಾರದು. ಮೇಲೆ ಹೇಳಿದಂಥ ಗಾಯಗಳ ನಿರ್ವಾತ ಆವರಣದಲ್ಲಿ ಸ್ಥಳೀಯವಾಗಿ ನೆಲೆನಿಂತು ವಿಷಾಣುಗಳು ವೃದ್ಧಿಯಾಗಿ ಬಾಹ್ಯಜೀವಿವಿಷವನ್ನು ಸಮೃದ್ಧಿಯಾಗಿ ಸ್ರವಿಸುತ್ತವೆ. ಸೋಂಕು ಹರಡುವುದಿಲ್ಲ. ವಿಷವೂ ಸ್ಥಳೀಯ ಪ್ರತಿಕ್ರಿಯೆಯನ್ನು ತೋರಿಸುವುದಿಲ್ಲ. ಆದ್ದರಿಂದ ಪ್ರಾರಂಭದಲ್ಲಿ ಸೋಂಕು ಲಕ್ಷ್ಯಕ್ಕೆ ಬಾರದೆ ಹೋಗುತ್ತದೆ. ವಿಷದಲ್ಲಿ ಹೀಮೋಟಾಕ್ಸಿನ್, ನ್ಯೂರೋಟಾಕ್ಸಿನ್ನುಗಳು ಎರಡೂ ಇದ್ದರೂ ನ್ಯೂರೋಟಾಕ್ಸಿನ್ ಪ್ರಬಲ ಹಾಗೂ ಅದರ ಅಂಶ ಹೆಚ್ಚು. ಅಲ್ಲದೆ ನ್ಯೂರೋಟಾಕ್ಸಿನ್ನಿಗೆ ನರ, ಮಿದುಳು, ಮಿದುಳು ಬಳ್ಳಿ ಇವುಗಳೊಡನೆ ನಿಕಟವಾಗಿ ಸೇರ್ಪಡೆ ಆಗುವ ಪ್ರವೃತ್ತಿ ಒಂದು ವೈಶಿಷ್ಟ್ಯ. ಇದು ಎಷ್ಟು ಪ್ರಬಲವಾದದ್ದೆಂದರೆ ಪ್ರಯೋಗಾಲಯದಲ್ಲಿ ಮಿದುಳಿನ ಕದಡನ್ನು ವಿಷಕ್ಕೆ ಸೇರಿಸಿ ಅದನ್ನು ನಿರುಪದ್ರವ ವಸ್ತುವನ್ನಾಗಿ ಮಾಡಬಹುದು. ನರಕ್ಕೆ ವಿಷ ಅಂಟಿಕೊಳ್ಳುವ ಪ್ರವೃತ್ತಿ ಅಷ್ಟು ತೀವ್ರವಾಗಿರುವುದರಿಂದ ಸೋಂಕಿನಲ್ಲಿ ಉತ್ಪಾದಿತವಾದ ವಿಷ ಸ್ಥಳೀಯ ನರಗಳಿಂದ ಪೂರ್ಣವಾಗಿ ಹೀರಲ್ಪಡುತ್ತದೆ. ಅದು ರಕ್ತಗತವಾಗುವುದೇ ಇಲ್ಲ. ನರದ ಉದ್ದಕ್ಕೂ ವ್ಯಾಪಿಸುತ್ತ ಕೊನೆಗೆ ಮಿಕ್ಕ ನರಗಳು, ಮಿದುಳುಬಳ್ಳಿ, ಮಿದುಳನ್ನು ಸೇರುತ್ತದೆ. ಈ ಕಾರಣದಿಂದಾಗಿ ವಿಷವ್ಯಾಪನೆ ಬಲು ನಿಧಾನ. ದಿವಸಗಳು ವಾರಗಳೇ ಆಗಬಹುದು. ವ್ಯಾಪಿಸಿದ ಸ್ಥಳದಲ್ಲಿ ವಿಷ ಹೇಗೆ ಕಾರ್ಯಗತವಾಗುತ್ತದೆ ಎನ್ನುವುದು ತಿಳಿಯದು. ಅಂತೂ ಐಚ್ಛಿಕ ಸ್ನಾಯುಗಳು ಸೆಟೆದುಕೊಂಡು ಸ್ವಾಧೀನ ತಪ್ಪುವುದು ಮತ್ತು ಅದಿರುವಾಯು ಉಂಟಾಗುತ್ತದೆ. ವಿಷ ರಕ್ತದಲ್ಲಿರುವುದಿಲ್ಲವಾದ್ದರಿಂದ ಮತ್ತು ನರಗಳಲ್ಲಿ ಶಾಶ್ವತವಾಗಿ ಸೇರಿಬಿಟ್ಟಿರುವುದರಿಂದ ವಿಷಹಾರಿಯನ್ನು ಕೊಟ್ಟರೂ ಅಷ್ಟು ಉಪಯೋಗವಾಗುವುದಿಲ್ಲ. ವಿಷಮಸ್ಥಿತಿ ತೀವ್ರವಾಗಿಲ್ಲದಿದ್ದರೆ ಸೋಂಕು ಗುಣವಾದ ಬಳಿಕ ಸಾವಕಾಶವಾಗಿ ಸ್ನಾಯುನರಗಳ ಸಹಜಕ್ರಿಯೆ ಪುನಃ ಪ್ರಾಪ್ತಿಯಾಗುತ್ತದೆ. ತೀವ್ರವಾಗಿದ್ದರೆ ಸ್ನಾಯುಸೆಟೆತ, ತತ್ಪರಿಣಾಮವಾಗಿ ಅಗಾಧ ಶ್ರಮ, ಉಸಿರು ಕಟ್ಟುವುದು, ನಿರಾಹಾರ ಸ್ಥಿತಿ ಇಂಥ ಕಾರಣಗಳಿಂದ ಮರಣ ಸಂಭವಿಸುತ್ತದೆ.

ಬಾಟ್ಯುಲಿಸಮ್ : ಇದೊಂದು ವಿಷಯುಕ್ತ ಆಹಾರ ಸೇವನೆಯ ಪರಿಣಾಮ. ಅತಿ ಶೀಘ್ರವಾಗಿ ಮಾರಕವಾಗಬಹುದಾದ ಪರಿಸ್ಥಿತಿ. ಕ್ಲಾಸ್ಟ್ರಿಡಿಯಮ್ ಬ್ಯಾಟ್ಯುಲೈನಮ್ ಎಂಬ ವಿಷಾಣುವಿನ ಬಾಹ್ಯಜೀವಿವಿಷವೇ ಕಾರಣ. ವಿಷಾಣುವಿನ ಸೋಂಕಿನಿಂದ ಪ್ರಾಣಿದೇಹದಲ್ಲಿ ವಿಷ ಉತ್ಪನ್ನವಾಗುವ ಪ್ರಮೇಯ ಇಲ್ಲಿ ಕಂಡುಬರುವುದಿಲ್ಲ. ಆದರೆ ದೇಹಕ್ಕೆ ವಿಷ ಸೇರುವುದು ಹೀಗೆ. ಡಬ್ಬಿಗಳಲ್ಲಿ ಮೊಹರುಮಾಡಿ ಶೇಖರಿಸಲ್ಪಟ್ಟಿರುವ ಆಹಾರದಲ್ಲಿ ಆಚಾತುರ್ಯದಿಂದ ಮೊದಲೇ ವಿಷಾಣುಬೀಜ ಸೇರಿರಬಹುದು. ಡಬ್ಬಿಯ ನಿರ್ವಾತ ಆವರಣದಲ್ಲಿ ವಿಷಾಣು ವೃದ್ಧಿಗೊಳ್ಳುತ್ತ ಆಹಾರವನ್ನು ಕೆಡಿಸಿ ವಿಷವನ್ನು ಸ್ರವಿಸುತ್ತದೆ. ಹೀಗೆ ಆಗಿರಬಹುದು ಎನ್ನುವುದನ್ನು ಮೊಹರುಮಾಡಿದ ಡಬ್ಬಿಯ ಪರೀಕ್ಷೆಯಿಂದ ಊಹಿಸಬಹುದು. ಆಹಾರ ಕೆಟ್ಟುಹೋಗಿದ್ದರೆ ಡಬ್ಬಿಯ ತಳ ಹಾಗೂ ಮುಚ್ಚಳ ಭಾಗಗಳು ಉಬ್ಬಿಕೊಂಡಿರುತ್ತವೆ. ಡಬ್ಬಿಯ ಆಹಾರದಲ್ಲಲ್ಲದೆ ಕೆಲಕಾಲ ಬೆಚ್ಚಗೆ ಮುಚ್ಚಿಟ್ಟಿದ್ದಾಗ ದಿನನಿತ್ಯದ ಆಹಾರದಲ್ಲೂ ವಿಷಾಣು ವೃದ್ಧಿಯಾಗಿ ಅದು ಕೆಟ್ಟು ಹೋಗಿರಬಹುದು. ಇಂಥ ಆಹಾರಗಳ ಸೇವನೆಯಿಂದ ವಿಷಾಣು ದೇಹದೊಳಕ್ಕೆ ಹೊಗುತ್ತದೆ. ಇದು ಮುಖ್ಯವಲ್ಲ. ಜೊತೆಗೇ ವಿಷಾಣುಸ್ರವಿತ ವಿಷವೂ ದೇಹಗತವಾಗುತ್ತದೆ. ವಿಷವು ಜೀರ್ಣನಾಳದಲ್ಲಿ ನರಗತವಾಗುತ್ತದೆ. ಧನುರ್ವಾಯುವಿನ ವಿಷದಂತೆಯೇ. ಅದು ರಕ್ತಗತವಾಗುವುದಿಲ್ಲ. ವಿಷ ಒಂದೇ ವಸ್ತುವಿನಿಂದಾಗಿರಬೇಕು ಎಂದೇನಿಲ್ಲ. ವಿಷಾಣುಗಳ ವಿವಿಧ ಪ್ರಭೇದಗಳು A, B, C, D, E. ಗಳೆಂಬ ಬೇರೆ ಬೇರೆ ಬಾಟ್ಯುಲೈನಮ್ ವಿಷವನ್ನು ಉತ್ಪಾದಿಸುತ್ತವೆ. ಎಲ್ಲವೂ ಅಥವಾ ಕೆಲವು ಮಾತ್ರ ದೇಹಗತವಾಗಿರಬಹುದು. ಎಲ್ಲವೂ ನ್ಯೂರೋಟಾಕ್ಸಿನ್ನುಗಳೇ, 8–9 ಮಿನಿಟುಗಳು ಕುದಿಸಿದರೂ ವಿಷಗುಣ ನಾಶವಾಗದ ವಸ್ತುಗಳು. ಜೀರ್ಣರಸಗಳಿಂದಲೂ ಬಾಟ್ಯುಲೈನಮ್ ವಿಷ ನಾಶವಾಗುವುದಿಲ್ಲ. ಆದ್ದರಿಂದಲೇ ವಿಷಯುಕ್ತ ಆಹಾರ ಸೇವನೆಯ ಪ್ರಸಂಗಗಳಲ್ಲಿ ಇದು ಜೀರ್ಣನಾಳದ ಮೂಲಕ ದೇಹಗತವಾಗಿ ರೋಗವನ್ನು ಉಂಟುಮಾಡಬಲ್ಲದು. ಡಿಫ್ತೀರಿಯ, ಧನುರ್ವಾಯುಗಳ ಅಣುಗಳ ವಿಷ ಜೀರ್ಣಿಸಲ್ಪಡುವುದರಿಂದ ಅದನ್ನು ಸೇವಿಸಿದರೆ ಏನೂ ಅಪಾಯವಿಲ್ಲ. ಬಾಟ್ಯುಲಿನಮ್ ವಿಷದಿಂದ ಉಂಟಾಗುವ ಪರಿಸ್ಥಿತಿಗೆ ಬಾಟ್ಯುಲಿಸಮ್ ಎಂದು ಹೆಸರು. ನರಸ್ನಾಯುಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವುದು ಇವುಗಳ ಕ್ರಿಯೆ. ಮಾನವರಲ್ಲಿ ವಪೆ ಮತ್ತು ಇತರ ಐಚ್ಛಿಕ ಸ್ನಾಯುಗಳ ಮೇಲಿನ ಹತೋಟಿ ತಪ್ಪಿಹೋಗುತ್ತದೆ. ವಾಂತಿ, ಮಲಬದ್ಧತೆ, ಕಣ್ಣುಗಳನ್ನು ಅರ್ಥವಾತ್ತಾಗಿ ಹೊರಳಿಸುವುದಕ್ಕಾಗದೆ ದ್ವಿದೃಷ್ಟಿ (ಡಿಪ್ಲೋಪಿಯ),

ನುಂಗುವುದಕ್ಕಾಗದಿರುವುದು (ಡಿಸ್‌ಫೇಜಿಯ) ಇವೆಲ್ಲ ಕಂಡುಬಂದು, ಉಸಿರಾಟ ಸಾಧ್ಯವಾಗದೆ, ಗರಿಷ್ಠ ಎಂದರೆ 7 ದಿವಸಗಳೊಳಗೆ ಮರಣ ಸಂಭವಿಸುತ್ತದೆ. ಧನುರ್ವಾಯುವಿನಲ್ಲಿಯಂತೆಯೇ ಬಾಟ್ಯುಲಿಸಮ್ಮಿನಲ್ಲೂ ವಿಷಹಾರಿಯ ಪ್ರಯೋಗ ಹೆಚ್ಚು ಕಡಿಮೆ ನಿಷ್ಪ್ರಯೋಜಕ, ಅವೇ ಕಾರಣಗಳಿಂದಾಗಿ.

ಅನಿಲಯುಕ್ತ ಕೊಳೆತ (ಗ್ಯಾಸ್‌ಗ್ಯಾಂಗ್ರೀನ್) : ಬೇರೆ ಬೇರೆ ವಿಷಾಣುಗಳ ಬಾಹ್ಯ ಜೀವಿವಿಷಗಳಿಂದ ಉಂಟಾಗುವ ಒಂದು ಪರಿಸ್ಥಿತಿ. ಒಂದೊಂದು ವಿಧದ ವಿಷಾಣುವೂ ಒಂದಕ್ಕಿಂತ ಹೆಚ್ಚು ವಿಷವಸ್ತುವನ್ನು ಸ್ರವಿಸಬಹುದು. ಈ ವಿಷಗಳು ದುರ್ಬಲ ನ್ಯೂರೋಟಾಕ್ಸಿನ್ ಮತ್ತು ಪ್ರಬಲ ಹೀಮೋಟಾಕ್ಸಿನ್ನಿನ ಮಿಶ್ರಣಗಳು. ವ್ಯಾಪಕವಿಷಮಾವಸ್ಥೆ ಅಪರೂಪ, ಸ್ಥಳೀಯವಾಗಿ ತೀವ್ರ ಪ್ರತಿಕ್ರಿಯೆ ಸಾಮಾನ್ಯ. ಸಾಧಾರಣವಾಗಿ ಕ್ಲಾಸ್ಟ್ರಿಡಿಯಮ್ ವೆಲ್ಷಿಯೈ ಎಂಬ ವಿಷಾಣುವಿನ ಸೋಂಕು ಇದಕ್ಕೆ ಕಾರಣ. ವಿಷ ಲೆಸಿಥಿನ್ನನ್ನು ವಿಶ್ಲೇಷಿಸುವ ಕಿಣ್ವ, ಕೋಶನಾಶಕವಸ್ತು, ಇನ್‌ವೇಸಿನ್ ಮುಂತಾದುವುಗಳ ಮಿಶ್ರಣ. ಇವುಗಳ ಕ್ರಿಯೆಯಿಂದ ಸ್ಥಳೀಯವಾಗಿ ಸ್ನಾಯು ಮತ್ತು ಇತರ ಊತಕಗಳು ಅಕ್ಷರಶಃ ಕೊಳೆತುಹೋಗುತ್ತವೆ. ಸಾವಧಾನವಾಗಿ ಸೋಂಕೂ ವಿಷವೂ ನೆರೆಪ್ರಾಂತ್ಯಗಳಿಗೆ ವ್ಯಾಪಿಸುತ್ತವೆ. ಕೊಳೆತ ಹಾಗೂ ಆಕ್ಸಿಜನ್ ಅಭಾವವಾಗಿರುವ ಸ್ಥಳದಲ್ಲಿ ಮಾತ್ರ ವಿಷಾಣು ವೃದ್ಧಿ ಕಂಡುಬರುತ್ತದೆ. ವೃದ್ಧಿಯ ಕಾಲದಲ್ಲಿ ಅನೇಕ ಅನಿಲಗಳ ಬಿಡುಗಡೆ ಆಗುವುದರಿಂದ ಅನಿಲಗಳು ಊತಕಗಳ ನಡುವೆ ಸೇರಿಕೊಂಡು ಆ ಸ್ಥಳವನ್ನು ಮುಟ್ಟಿದರೆ ಜಿಲ್ ಜಿಲ್ ಎಂದು ಶಬ್ದವಾಗುವುದು ಒಂದು ವೈಶಿಷ್ಟ್ಯ.

ಸೆಪ್ಟಿಸೀಮಿಯ: ಕೀವನ್ನು ಉಂಟುಮಾಡುವ ದಂಡಾಣುಗಳು (ಸಪ್ಪುರೇಟಿಂಗ್ ಕಾಕೈ); ಸ್ಟ್ರೆಪ್ಟೊಕಾಕಸ್ ಹೀಮಾಲಿಟಿಕಸ್, ಸ್ಟ್ರೆ. ಪೈಯೋಜೆನೀಸ್, ಸ್ಟಾಫಿಲೋಕಾಕಸ್ ಆರಿಯಸ್ ಮುಂತಾದುವುಗಳ ಸೋಂಕಿನಿಂದ ಉಂಟಾಗುವ ಪರಿಸ್ಥಿತಿ. ಈ ವಿಷಾಣುಗಳು ದೇಹಕ್ಕೆ ತಾಕುವುದೇ ಅಲ್ಲದೆ ವ್ಯಾಪಕವಾಗಿಯೂ ಹರಡುತ್ತವೆ. ರಕ್ತದ ವಿಷಮಸ್ಥಿತಿ (ಸೆಪ್ಟಿಸೀಮಿಯ) ಸಾಮಾನ್ಯ. ಇದು ಡಿಫ್ತೀರಿಯ, ಧನುರ್ವಾಯು ಮುಂತಾಗಿ ಮೇಲೆ ಹೇಳಿದ ಸೋಂಕುಗಳಲ್ಲಿ ಕಾಣಲಾಗದ ಸ್ಥಿತಿ. ಸೋಂಕಿನ ವ್ಯಾಪನೆ ಮತ್ತು ರೋಗಪರಿಸ್ಥಿತಿ ಎರಡೂ ವಿಷಾಣುಗಳ ಬಾಹ್ಯಜೀವಿವಿಷಗಳಿಂದಲೇ ಉಂಟಾಗುತ್ತವೆ. ಸ್ಟ್ರೆಪ್ಟೋಕಾಕಕಸ್ಸಿನ ವಿಷ ಇನ್‌ವೇಸಿನ್, ಸ್ಟ್ರೆಪ್ಟೊಕೈನೇಸ್, ಸ್ಟ್ರೆಪ್ಟೊಲೈಸಿನ್ ಎಂಬ ಹೀಮೋಟಾಕ್ಸಿನ್, ಕೆಂಪುಮಚ್ಚೆಗಳನ್ನು ಉಂಟು ಮಾಡುವ ವಿಷವಸ್ತು ಮುಂತಾದ ಅನೇಕ ವಸ್ತುಗಳ ಮಿಶ್ರಣ. ಚರ್ಮದ ಗಾಯಕ್ಕೆ ಸೋಂಕು ತಗಲಿದರೆ ಕೀವು ತುಂಬಿದ ಬಾವು ಉಂಟಾಗುತ್ತದೆ. ಇನ್‌ವೇಸಿನ್ ಸ್ಟ್ರೆಪ್ಟೊಕೈನೇಸುಗಳ ಕ್ರಿಯೆಯಿಂದ ಸೋಂಕು ವ್ಯಾಪಿಸಿದಾಗ ರಕ್ತ ವಿಷಮತೆ, ದೇಹದ ಅನೇಕ ಕಡೆ ಕೀವು ತುಂಬಿದ ಬಾವುಗಳು ಕಾಣಿಸಿಕೊಳ್ಳುವುದು, ಸ್ನಾಯುಗಳ ನಾಶ ಮುಂತಾದ ಪರಿಣಾಮಗಳು ಉಂಟಾಗುತ್ತವೆ. ಹೆರಿಗೆ ಕಾಲದಲ್ಲಿ ಸೋಂಕು ಯೋನಿಗೆ ತಾಕಿದ್ದರೆ ಬಾಣಂತಿ ಜ್ವರ (ಪ್ಯೂರ್ಪೂರಿಯಲ್ ಸೆಪ್ಸಿಸ್) ಉಂಟಾಗುತ್ತದೆ. ಗಂಟಲಿಗೆ ಸೋಂಕು ತಾಕಿದರೆ ಗಂಟಲುನೋವು, ಕಿವಿನೋವು, ನ್ಯೂಮೋನಿಯಗಳು ಉಂಟಾಗುತ್ತವೆ. ಸ್ಟಾಫಿಲೋಕಾಕಸ್ಸಿನ ವಿಷದಲ್ಲಿ ಸ್ಟಾಫಿಲೋಕೈನೇಸ್, ಸ್ಟಾಫಿಲೋಕೊಯಾಗ್ಯುಲೇಸ್, ಮೂರು ನಾಲ್ಕು ಬೇರೆ ಬೇರೆ ಹೀಮೋಲೈಸಿನ್ನುಗಳು, ಜೀವಕೋಶನಾಶಕಗಳು, ಎನ್‌ಟೆರೋಟಾಕ್ಸಿನ್ ಎಂಬ ವಸ್ತುಗಳಿರುತ್ತವೆ. ಸ್ಟಾಫಿಲೊಕೈನೇಸ್ ಪ್ರಬಲವಸ್ತುವಾಗಿಲ್ಲದಿರುವುದರಿಂದ ಮತ್ತು ಸ್ಟಾಫಿಲೋಕೊಯಾಗ್ಯುಲೇಸಿನ ಪ್ರಭಾವದಿಂದ ಸೋಂಕು ಸಾಮಾನ್ಯವಾಗಿ ಸ್ಥಳೀಯವಾಗಿ ನೆಲೆಗೊಂಡು ಕೀವುಬಾವು (ಆಬ್ಸೆಸ್), ಎಲುಬಿನ ಊತ (ಆಸ್ಟಿಯೋಮೈಯಲೈಟಿಸ್) ಇವು ಉಂಟಾಗುವುದೇ ಸಾಮಾನ್ಯ. ಎನ್‌ಟೆರೋಟಾಕ್ಸಿನ್ ಎಂಬುದು ವಿಷಯುಕ್ತ ಆಹಾರ ಸೇವನೆಯ ತರುವಾಯದ ವಾಂತಿ ಭೇದಿಗಳಿಗೆ ಕಾರಣ. ಈ ವಿಷವಸ್ತುವೂ ಬಾಟ್ಯುಲಿನ್ ವಿಷವಸ್ತುವಿನಂತೆಯೇ ದೇಹದಲ್ಲಿ ಉತ್ಪನ್ನವಾಗುತ್ತವೆ. ಆದರೆ ರೋಗವನ್ನು ಉಂಟುಮಾಡುವುದಿಲ್ಲ. ವಿಷ ಹೊರಗೇ ಉತ್ಪಾದಿತವಾಗಿ ಆಹಾರದೊಡನೆ ಸೇವಿಸಲ್ಪಟ್ಟು ವಾಂತಿಭೇದಿಗಳನ್ನು ಉಂಟುಮಾಡುತ್ತದೆ. ಪಿಷ್ಟಾಂಶ ಹೆಚ್ಚಾಗಿರುವ ಪದಾರ್ಥಗಳಿಂದ ಕೊಳಕು ಅಡುಗೆಯವರು ತಯಾರಿಸಿ ಬೆಚ್ಚನೆ ಸ್ಥಿತಿಯಲ್ಲಿ ಕೆಲಕಾಲ ಇಟ್ಟಿದ್ದ ಆಹಾರವಸ್ತುಗಳಲ್ಲಿ ವಿಷಾಣುಗಳು ವೃದ್ಧಿಸಿ ವಿಷವನ್ನು ಸ್ರವಿಸಿರುತ್ತವೆ. ಇಂಥ ವಿಷಯುಕ್ತ ಆಹಾರ ಸೇವನೆಯಿಂದಾಗುವ ವಾಂತಿ ಭೇದಿಗಳು ಸ್ವಯಂ ಶಾಮಕ. ಸಾಮಾನ್ಯವಾಗಿ 24–36 ಗಂಟೆಗಳಲ್ಲಿ ತಾನಾಗಿಯೇ ಶಮನಗೊಳ್ಳುತ್ತವೆ, ಎಂದೂ ಮಾರಕವಲ್ಲ. ವಿಷಯುಕ್ತ ಆಹಾರ ಸೇವನೆಯಿಂದ ಪ್ರತಿಯೊಬ್ಬರೂ ಯಾವಾಗಲಾದರೂ ವಾಂತಿ ಮತ್ತು ಅಥವಾ ಭೇದಿಯಿಂದ ನರಳಿಯೇ ಇರುತ್ತಾರೆ.

ಆಂತರಿಕ ಜೀವಿವಿಷಗಳು : ಸಾಮಾನ್ಯವಾಗಿ ಗ್ರಾಮ್ ಋಣ ವಿಷಾಣುಗಳ ಕವಚ ಇಲ್ಲವೇ ಶರೀರದ ಒಂದು ರಾಸಾಯನಿಕ ಘಟಕ. ವಿಷಾಣುಗಳು ಸ್ವಯಂ ಜೀರ್ಣಕ್ರಿಯೆಯಿಂದ (ಆಟಾಲಿಸಿಸ್) ಮತ್ತು ಔಷಧ ಮುಂತಾದ ಅನ್ಯಕಾರಣಗಳಿಂದ ಛಿದ್ರಗೊಂಡಾಗ ಆಂತರಿಕ ಜೀವಿವಿಷ ಬಿಡುಗಡೆ ಆಗುತ್ತದೆ. ಇದು ಸಸ್ಯ ಹಾಗೂ ಪ್ರಾಣಿಗಳ ಕೋಶಗಳಲ್ಲಿ ಇರುವುದಿಲ್ಲ. ವಿಷಾಣುಗಳನ್ನು ಅರೆದು ಸಾರವನ್ನು ಪ್ರತ್ಯೇಕಿಸಿ ಆಂತರಿಕ ವಿಷವನ್ನು ಪಡೆಯಬಹುದು ; ಇಲ್ಲವೇ ಟ್ರೈಕ್ಲೋರ್ ಅಸೆಟಿಕ್ ಆಮ್ಲ, ಗ್ಲೈಕಾಲ್ ಇವುಗಳ ಸಹಾಯದಿಂದ ಈ ವಿಷಗಳನ್ನು ವಿಷಾಣುದೇಹದಿಂದ ಹೊರತೆಗೆಯಬಹುದು. ಇವು ಪ್ರೊಟೀನ್ ಕೊಬ್ಬು ಮತ್ತು ಪಿಷ್ಟಗಳ ಸಂಯುಕ್ತವಸ್ತುಗಳು (ಲೈಪೋ ಪ್ರೊಟೀನ್ ಪಾಲಿಸ್ಯಾಕರೈಡ್ಸ್). ಕೊಬ್ಬಿನ ಅಂಶವನ್ನು ಪ್ರಾಯೋಗಿಕವಾಗಿ ನಾಶಪಡಿಸಿದರೂ ಅನೇಕ ವೇಳೆ ಇವುಗಳ ವಿಷಗುಣ ನಾಶವಾಗುವುದಿಲ್ಲ. ಆದರೆ ಪ್ರೊಟೀನ್ ಘಟಕವನ್ನೋ ಪಿಷ್ಟಾಂಶವನ್ನೋ ನಾಶಪಡಿಸಿದರೆ ವಿಷಗುಣವೂ ನಾಶವಾಗುತ್ತದೆ. ಉಷ್ಣತೆಯಿಂದ ಬಾಹ್ಯಜೀವಿಗಳು ನಾಶವಾಗುವುವು; ಇವು ನಾಶವಾಗುವುದಿಲ್ಲ. ಆದರೆ ಆಮ್ಲ ಮಾಧ್ಯಮದಲ್ಲಿ $100^0$ ಸೆ ಉಷ್ಣತೆಯಲ್ಲಿ ಪೂರ್ತಿಯಾಗಿ ನಾಶವಾಗುತ್ತವೆ. ದೇಹದಲ್ಲಿ ಇವೂ ವಿಷಹಾರಿಗಳನ್ನು ಉತ್ಪಾದಿಸಬಲ್ಲವು. ಆಂತರಿಕ ವಿಷ ಬಾಹ್ಯ ವಿಷಕ್ಕಿಂತ ಸಾವಿರಪಾಲು ದುರ್ಬಲ. ಅವು ಉತ್ಪಾದಿಸುವ ವಿಷಹಾರಿಗಳೂ ಹಾಗೆಯೇ; ಬಾಹ್ಯವಿಷಹಾರಿಗಳಿಗಿಂತ 200–300 ಪಾಲು ದುರ್ಬಲ. ಬಾಹ್ಯ ವಿಷಗಳು ವಿವಿಧ ಹಾಗೂ ವಿಶಿಷ್ಟ ರೋಗ ಸ್ಥಿತಿಗಳನ್ನು ಉಂಟುಮಾಡುವುವು. ಆದರೆ ಆಂತರಿಕ ವಿಷಗಳೆಲ್ಲ ಹೆಚ್ಚು ಕಡಿಮೆ ಒಂದೇ ರೀತಿಯ ಪರಿಣಾಮವನ್ನು ಉಂಟುಮಾಡುತ್ತವೆಂದು ತೋರುತ್ತದೆ. ಟೈಫಾಯಿಡ್‌ಕಾರಕದ ಆಂತರಿಕ ವಿಷ, ಗಾನರಿಯಕಾರಕದ ಆಂತರಿಕ ವಿಷದ ಪರಿಣಾಮ ಒಂದೇ ರೀತಿಯದಾಗಿದೆ. ಅಗಾಧವಾಗಿದ್ದರೂ ಅವ್ಯಕ್ತ. ಮರಣೋತ್ತರ ಪರೀಕ್ಷೆಯಲ್ಲಿ ಆಂತರಿಕವಿಷದಿಂದ ಉಂಟಾದ ಸ್ಥಿತಿ ಎಂದು ನಿರ್ದಿಷ್ಟವಾಗಿ ಏನನ್ನೂ ಗುರುತಿಸುವ ಹಾಗಿಲ್ಲ. ಜ್ವರಬರುವುದು ಸಾಮಾನ್ಯ. ರಕ್ತನಾಳಗಳ ಭಿತ್ತಿಯಲ್ಲಿನ ರಂಧ್ರಗಳನ್ನು ಹಿಗ್ಗಿಸಿಯೋ, ಜೀವಕೋಶಗಳ ಆಂತರಿಕ ಶ್ವಸನ ಕ್ರಿಯೆಯನ್ನು ಅಡ್ಡಿಪಡಿಸಿಯೋ ಇವು ತೊಂದರೆಯನ್ನು ಉಂಟುಮಾಡುತ್ತವೆಂದು ಕಾಣಿಸುತ್ತದೆ. ಅಂತೂ ಪರಿಣಾಮಗಳು ಉಂಟಾದರೆ ಚೇತರಿಸಿಕೊಳ್ಳುವುದೂ ಕಷ್ಟ. ಟೈಫಾಯಿಡ್, ಪ್ಯಾರಾಟೈಫಾಯಿಡ್, ಆಮಶಂಕೆ, ಕಾಲರಾ, ಪ್ಲೇಗ್, ಬ್ರುಸೆಲ್ಲೋಸಿಸ್, ನಾಯಿಕೆಮ್ಮು ಮುಂತಾದ ರೋಗಸ್ಥಿತಿಗಳಿಗೂ ಇನ್‌ಫ್ಲೂಎನ್‌ಜಾ, ಟೈಫಸ್, ಶುಕಜ್ವರ (ಸಿಟ್ಟಕೋಸಿಸ್), ಗದ್ದಕಟ್ಟು ಮುಂತಾದ ರೋಗಗಳಿಗೂ ಆಯಾ ರೋಗಾಣು ಜನ್ಯ ಆಂತರಿಕ ಜೀವಿವಿಷಗಳೇ ಕಾರಣ.

ಬಾಹ್ಯ ಜೀವಿವಿಷಗಳ ಪರಿಣಾಮಗಳನ್ನು ತಿಳಿದುಕೊಂಡು ಅವುಗಳನ್ನು ಕೆಲವು ಸಂದರ್ಭದಲ್ಲಿ ಇತರೇ ಪರಿಣಾಮಗಳಿಗೆ ಬಳಸುವ ಯತ್ನ ನಡೆದಿದೆ. ಉದಾ: ಬಾಟ್ಯುಲಿಸಮ್ ಜೀವಿವಿಷವನ್ನು ಸೌಂದರ್ಯವರ್ಧಕ ಚಿಕಿತ್ಸೆಯಲ್ಲಿ ಚರ್ಮದ ಸುಕ್ಕು ನಿವಾರಿಸಲು ಬಳಸುತ್ತಾರೆ. ಟೆಟ್ರಾಡನ್ ಮೀನು, ಹಾವಿನ ವಿಷಗಳಲ್ಲಿನ ಕೆಲವು ರಾಸಾಯನಿಕಗಳನ್ನು ನರಮಂಡಲದ ಕಾಯಿಲೆಗಳ ಚಿಕಿತ್ಸೆಯಲ್ಲಿ ಬಳಸುವ ಪ್ರಯೋಗಗಳು ಸಾಗಿವೆ. (ಜೆ.ಇ.ಸಿ.ಎಚ್.)

**ಜೀವಿ ವಿಷಹಾರಿಗಳು:** ಜೀವಿವಿಷಗಳಿಂದ ದೇಹಕ್ಕೆ ತೊಂದರೆ ಆಗದಂತೆ ರಕ್ಷಿಸುವ ಹಾಗೂ ಪ್ರಾಣಿದೇಹದಲ್ಲಿ ಉತ್ಪನ್ನವಾಗುವ ಪ್ರೊಟೀನ್ ಸಂಯುಕ್ತಗಳು (ಆಂಟಿಟಾಕ್ಸಿನ್ಸ್). ಸಾಮಾನ್ಯವಾಗಿ ಎಲ್ಲವೂ ಗ್ಯಾಮಗ್ಲಾಬ್ಯುಲಿನ್ ಎಂಬ ಪ್ರೊಟೀನುಗಳ ಗುಂಪಿಗೆ ಸೇರಿದುವು. ಒಂದೊಂದು ಜೀವಿವಿಷಕ್ಕೂ ಪ್ರತಿರೋಧಿಯಾದ ಜೀವಿ ವಿಷಹಾರಿ ಇರುತ್ತದೆ. ಇದು ಅನುಗುಣವಾದ ಜೀವಿವಿಷದೊಡನೆ ಸೇರಿ ಅದರ ವಿಷಗುಣವನ್ನು ನಾಶಪಡಿಸುತ್ತದೆ. ಆದ್ದರಿಂದ ಜೀವಿ ವಿಷಹಾರಿ–ಜೀವಿವಿಷಗಳ ಮಿಶ್ರಣವನ್ನು ಪ್ರಾಯೋಗಿಕವಾಗಿ ದೇಹದೊಳಗೆ ಸೇರಿಸಿದರೆ ಅದರಿಂದ ಏನೂ ತೊಂದರೆ ಆಗುವುದಿಲ್ಲ. ಸಾಮಾನ್ಯವಾಗಿ ಒಂದು ಜೀವಿ ವಿಷಹಾರಿ ಅದಕ್ಕೆ ಸಂಬಂಧಿಸಿದ ಜೀವಿವಿಷದ ಮೇಲೆ ಮಾತ್ರ ಪ್ರಭಾವ ಹೊಂದಿರುತ್ತದೆ. ಬೇರೆ ಜೀವಿವಿಷಗಳ ಮೇಲೆ ಅದರ ಪ್ರಭಾವ ಏನೂ ಇರುವುದಿಲ್ಲ. ಹೀಗಾಗಿ ಜೀವಿವಿಷಹಾರಿ–ಜೀವಿವಿಷಗಳ ಸಂಬಂಧವನ್ನು ಬೀಗದಕೈ–ಬೀಗಗಳ ಸಂಬಂಧಕ್ಕೆ ಹೋಲಿಸಿದ್ದಾರೆ. ಜೀವಿ ವಿಷಹಾರಿಗಳು ಪ್ರಾಣಿದೇಹದಲ್ಲಿ ಉತ್ಪನ್ನವಾಗುವುದು ತಕ್ಕ ಜೀವಿವಿಷಗಳ ಪ್ರಚೋದನೆಯಿಂದಲೇ. ಈ ಉತ್ಪತ್ತಿ ದೇಹದ ಕೆಲವು ಪ್ರತಿವಸ್ತುಜನಕ ಕೋಶಗಳಿಂದ ಆಗುವುದು. ಇವು ರಕ್ತದ ಶ್ವೇತಕಣಗಳ ಸಂಬಂಧಿಗಳು. ಜೀವಿವಿಷಗಳು ಸಾಮಾನ್ಯವಾಗಿ ಪ್ರೊಟೀನುಗಳು. ಇವುಗಳ ರಚನೆ ವಿಶಿಷ್ಟ ಘಟಕಗಳಿಂದಾದ ಸರಪಳಿಗಳಂತೆ ಇದೆ. ಸರಪಳಿಯ ಘಟಕಗಳೇ ಅಲ್ಲದೆ ಅಂಕುಡೊಂಕುಗಳೂ ವಿವಿಧವಾಗಿರುವುದು ತಿಳಿದಿದೆ. ಈ ವೈವಿಧ್ಯಗಳಿಂದಲೇ ಜೀವಿವಿಷಗಳೂ ವಿವಿಧವಾಗಿರುತ್ತದೆಂಬುದು ವ್ಯಕ್ತ. ಪ್ರತಿವಸ್ತುಜನಕ ಕೋಶಗಳಿಂದ ಜೀವಿವಿಷಹಾರಿಗಳು ಉತ್ಪನ್ನವಾಗುವಾಗ ವಿಷವಸ್ತುವಿನ ಸರಪಳಿಯ ಘಟಕಗಳು ಹಾಗೂ ಅಂಕುಡೊಂಕುಗಳಿಗೆ ಹೊಂದಿಕೊಳ್ಳುವಂತೆ ಇನ್ನೊಂದು ಪ್ರೊಟೀನಿನ ಸೃಷ್ಟಿ ಆಗುತ್ತದೆ. ಈ ಪ್ರೊಟೀನೇ ವಿಷಹಾರಿ. ಆದ್ದರಿಂದ ಹೀಗೆ ಉತ್ಪನ್ನವಾದ

ಜೀವಿವಿಷಹಾರಿಯ ಭಿನ್ನಘಟಕಗಳು ಮತ್ತು ಅಂಕು ಡೊಂಕುಗಳಿರುವ ವಿಷ ಪ್ರೊಟೀನಿನೊಂದಿಗೆ ಸೇರಲಾರದು.

ಜೀವಿವಿಷಹಾರಿಯ ತಯಾರಿಕೆ ಈ ರೀತಿ ಎಂದು ಭಾವಿಸಿದರೆ ಅದರ ಒಂದೊಂದು ಬೃಹದಣುವಿನ ಸೃಷ್ಟಿಗೂ ಒಂದೊಂದು ಜೀವಿವಿಷದ ಬೃಹದಣು ಇರಬೇಕಾದುದು ಅಗತ್ಯ. ಜೀವಿವಿಷದ ಪರಿಮಾಣದಷ್ಟಕ್ಕೆ ಜೀವಿವಿಷಹಾರಿಯ ಸೃಷ್ಟಿ ಸೀಮಿತವಾಗಿರುತ್ತದೆ. ಜೀವಿವಿಷ ದೇಹದಲ್ಲಿದ್ದಾಗ ಮಾತ್ರ ಜೀವಿವಿಷಹಾರಿಯ ಅಸ್ತಿತ್ವ ಸಾಧ್ಯ ಎಂದು ತರ್ಕಿಸಬೇಕಾಗುತ್ತದೆ. ಆದರೆ ದೇಹದಲ್ಲಿ ಜೀವಿವಿಷ ಇಲ್ಲದಾಗಲೂ ವಿಷಹಾರಿ ಇರುವುದು ವ್ಯಕ್ತವಾಗಿದೆ. ಜೀವಿವಿಷ ದೇಹಕ್ಕೆ ಸೇರಿದಾಗ ವಿಷಹಾರಿ ವಸ್ತುವಿನ ತಯಾರಿಕೆ ಆಗುವುದು ಸರಿ. ತಕ್ಕಷ್ಟು ವಿಷಹಾರಿ ವಸ್ತುವಿನ ತಯಾರಿಕೆ ಆಗಿ ಅದು ವಿಷವಸ್ತುವಿನೊಡನೆ ಸೇರಿ ಜಡವಸ್ತುವಾಗಿ ಪರಿಣಮಿಸಿ ಬಿಟ್ಟಮೇಲೆ ಇನ್ನೆಲ್ಲಿಯ ವಿಷಹಾರಿ ವಸ್ತು ? ಅದು ಹೇಗೆ ಉತ್ಪನ್ನವಾಯಿತು ? ಹೇಗೆ ದೇಹದಲ್ಲಿ ಅಸ್ತಿತ್ವಗೊಳ್ಳುವುದಕ್ಕೆ ಸಾಧ್ಯ ಎನ್ನುವುದು ಪ್ರಶ್ನೆ. ಇದು ಬಗೆಹರಿದಲ್ಲಿ ತಯಾರಿಕಾಕ್ರಮ ದೇಹದಲ್ಲಿ ಪ್ರಾರಂಭವಾದ ಬಳಿಕ ಆ ಕಾಲಕ್ಕೆ ಮಾತ್ರ ಅದು ಸೀಮಿತವಾಗಿರುವುದಿಲ್ಲ; ಹೆಚ್ಚು ವಿಷಹಾರಿ ವಸ್ತು ತಯಾರಾಗುವುದೇ ಅಲ್ಲದೆ ಮುಂದೆ ಆವಶ್ಯಕತೆ ಬಿದ್ದರೆ ಹೊಸ ಪ್ರಚೋದನೆ ಇಲ್ಲದೆ ಮತ್ತೆ ತಯಾರಾಗುತ್ತದೆ ಎಂದುಕೊಂಡರೂ ಇನ್ನೊಂದು ಪ್ರಶ್ನೆ ಉಳಿದೇ ಉಳಿಯುತ್ತದೆ. ನೈಸರ್ಗಿಕವಾಗಿಯೇ (ದೇಹದಲ್ಲಿ) ವಿಷಹಾರಿಗಳು ಇರುವುದು ತಿಳಿದಿದೆ. ಪ್ರಚೋದನೆಯಿಂದ ಅನುಗುಣವಾದ ನಿರೋಧಕವಸ್ತು ತಯಾರಾಗುತ್ತದೆ ಎಂದು ಹೇಳಿದ ಬಳಿಕ ಒಂದು ಸಲವಾದರೂ ವಿಷವಸ್ತು ದೇಹದೊಳಗೆ ಸೇರಿ ಪ್ರಚೋದಿಸದೆ ನೈಸರ್ಗಿಕವಾಗಿಯೇ ವಿಷಹಾರಿ ವಸ್ತು ಉತ್ಪನ್ನವಾಗಿರುವ ಸಂದರ್ಭಕ್ಕೆ ಸಮಾಧಾನ ಕೊಡುವುದಕ್ಕೆ ಆಗುವುದಿಲ್ಲ. ವಿಷಹಾರಿಯ ವಿಷದೊಡನೆ ಸೇರಿ ಆಗುವ ಜಡವಸ್ತುವಿನಿಂದ ಪ್ರಾಯೋಗಿಕವಾಗಿ ವಿಷವನ್ನು ಮರಳಿ ಪಡೆಯಬಹುದಾದ್ದರಿಂದ ವಿಷ ನಾಶವಾಗಿರುವುದಿಲ್ಲ. ಜಡ ಸಂಯುಕ್ತ ಜೀವಕೋಶಗಳಿಗೆ ಅಂಟಿಕೊಂಡು ವಿಷಪರಿಣಾಮವನ್ನು ಉಂಟುಮಾಡಲು ಸಾಧ್ಯವಾಗುವುದಿಲ್ಲ. ವಿಷವಸ್ತು ಜೀವಕೋಶಕ್ಕೆ ಅಂಟಿಕೊಳ್ಳಬಹುದಾದ ಸ್ಥಳವನ್ನು ವಿಷಹಾರಿ ಆಕ್ರಮಿಸಿಬಿಟ್ಟಿರುವುದರಿಂದ ಹೀಗೆ ಎಂದು ತೋರುತ್ತದೆ. ಆದರೆ ಇದೂ ನಿಶ್ಚಿತವಲ್ಲ.

ಪ್ರಾಣಿಗಳಲ್ಲಿ ವಿಷಹಾರಿಗಳು ಅಧಿಕವಾಗಿ ತಯಾರಾಗುವಂತೆ ಪ್ರಾಯೋಗಿಕವಾಗಿ ಪ್ರಚೋದಿಸಿ ಅನಂತರ ಈ ವಸ್ತುವನ್ನು ಪ್ರತ್ಯೇಕವಾಗಿ ಸಂಗ್ರಹಿಸಬಹುದು. ಅನೇಕ ವಿಷಹಾರಿಗಳ ತಯಾರಿಕೆ ಹೀಗೆಯೇ ಆಗಿದೆ. ವಿಷಮಿಸಿದ ಪ್ರಸಂಗಗಳಲ್ಲಿ (ಟಾಕ್ಸಿಕ್ ಕಂಡಿಷನ್) ಕೃತಕವಾಗಿ ತಯಾರಿಸಿದ ಇಂಥ ವಿಷಹಾರಿಗಳನ್ನು ಚುಚ್ಚು ಮದ್ದಾಗಿ ಕೊಟ್ಟು ಚಿಕಿತ್ಸೆ ಮಾಡಬಹುದು. ಸಿದ್ಧ ವಿಷಹಾರಿಯನ್ನು ಉಪಯೋಗಿಸಿ ರಕ್ಷಣೆ ಒದಗಿಸುವ ಇಂಥ ವಿಧಾನಕ್ಕೆ ಹಂಗಾಮಿ ರಕ್ಷಣೆ (ಪ್ಯಾಸ್ಸಿವ್ಇಮ್ಯೂನಿಟಿ) ಎಂದು ಹೆಸರು. ಸಾರರಿಕ್ತ ವಿಷವನ್ನು ಸ್ವಲ್ಪ ಪ್ರಮಾಣದಲ್ಲಿ ಚುಚ್ಚುಮದ್ದಾಗಿ ಆರೋಗ್ಯಸ್ಥಿತಿಯಲ್ಲಿ ಇರುವಾತನಿಗೆ ಕೊಟ್ಟಾಗ ವಿಷಹಾರಿಯು ದೇಹದಲ್ಲೆ ಉತ್ಪನ್ನವಾಗಿ ಮುಂದೆ ಎಂದೋ ವ್ಯಕ್ತಿ ಅದೇ ವಿಷಕ್ಕೆ ತುತ್ತಾಗುವ ಸಂದರ್ಭವನ್ನು ನಿವಾರಿಸಬಹುದು. ಇದಕ್ಕೆ ಸಕ್ರಿಯ ರಕ್ಷಣೆ (ಆ್ಯಕ್ಟಿವ್ ಇಮ್ಯೂನಿಟಿ) ಎಂದು ಹೆಸರು. ಜೀವಿವಿಷಹಾರಿಗಳು ಸ್ವತಃ ದೇಹದಲ್ಲಿ ದುಷ್ಪರಿಣಾಮಗಳನ್ನು ಉಂಟುಮಾಡಬಹುದು. ಅವು ಪ್ರೊಟೀನುಗಳು ಆಗಿರುವುದರಿಂದ ಅನುಕೂಲವಾಗಲೆಂದು ಅವನ್ನು ಉಪಯೋಗಿಸಿದ ಸಂದರ್ಭಗಳಲ್ಲಿ ಅವು ನಿರೀಕ್ಷಿಸಿದಂತೆ ಅನುಕೂಲಮಾಡದೆ ಸೀರಮ್ ಸಿಕ್‌ನೆಸ್, ಅನಾಫೈಲಾಕ್ಸಿಸ್ ಮುಂತಾದ ಅಲ್ಪ ಅಥವಾ ಘೋರ ಒಗ್ಗದಿಕೆ ಪರಿಣಾಮಗಳನ್ನು ಉಂಟುಮಾಡಬಹುದು. ವಾಸ್ತವವಾಗಿ ದೇಹದಲ್ಲಿ ನೈಸರ್ಗಿಕವಾಗಿಯೋ ಅನಿಶ್ಚಿತಪೂರ್ವ ಪ್ರಚೋದನೆಯಿಂದಲೋ ಜೀವಿವಿಷಗಳ ಇರುವಿಕೆಯನ್ನು ಇಂಥ ಒಗ್ಗದಿಕೆಯ ಅಲ್ಪ ಪರಿಣಾಮಗಳಿಂದ ಪತ್ತೆಮಾಡಲಾಗುತ್ತದೆ. ಡಿಫ್ತೀರಿಯ ರೋಗಕ್ಕೆ ವ್ಯಕ್ತಿ ಸುಲಭವಾಗಿ ತುತ್ತಾಗುವಂತಿದೆಯೇ ಇಲ್ಲವೇ ವ್ಯಕ್ತಿಯಲ್ಲಿ ವಿಷಹಾರಿ ಇರುವುದರಿಂದ ಸ್ವಾಭಾವಿಕ ರಕ್ಷಣೆ ಉಂಟೋ ಇಲ್ಲವೋ ಎಂಬುದನ್ನು ವ್ಯಕ್ತಿಯ ಚರ್ಮದ ಅಡಿಯಲ್ಲಿ ಸಾರರಿಕ್ತಗೊಳಿಸಿದ ಡಿಫ್ತೀರಿಯ ವಿಷವನ್ನು ಅಲ್ಪಪ್ರಮಾಣದಲ್ಲಿ ಚುಚ್ಚಿ ಸ್ಥಳೀಯವಾಗಿ ಏಳುವ ಗಂಧೆ ಊತಗಳಿಂದ ಪತ್ತೆಮಾಡಬಹುದು. ಇದಕ್ಕೆ ಶಿಕ್ಕನ ಪರೀಕ್ಷೆ (ಶಿಕ್ಸ್ ಟೆಸ್ಟ್) ಎಂದು ಹೆಸರು.

***

**ಜೀವಿಸಂದಣಿ ಪರಿಸರ ವಿಜ್ಞಾನ:** ಗೊತ್ತಾದ ಪರಿಸರದಲ್ಲಿರುವ ಮತ್ತು ಒಂದು ಪ್ರಭೇದಕ್ಕೆ ಸೇರಿರುವ ಜೀವಿಗಳ ಗುಂಪಿಗೆ ಅಥವಾ ಸ್ವೇಚ್ಛಾ ಸಂಗಮ ಪ್ರವೃತ್ತಿಯುಳ್ಳ ಜೀವಿಗಳ ಸಮುದಾಯಕ್ಕೆ ಜೀವಿಸಂದಣಿ ಎಂದು ಹೆಸರು. ಇದನ್ನು ಮೆಂಡೀಲಿಯನ್ ಸಮುದಾಯವೆಂದೂ ಕರೆಯುವರು. ಒಂದೊಂದು ಜೀವಿಸಂದಣಿಗೂ ಅದರದೇ ಆದ ವಿಶಿಷ್ಟ ಗುಣಗಳುಂಟು. ಇಂಥ ಜೀವಿಸಂದಣಿಯ ಮತ್ತು ಅದರ ಪರಿಸರದ ಅಭ್ಯಾಸವೇ ಜೀವಿಸಂದಣಿ ಪರಿಸರ ವಿಜ್ಞಾನ (ಪಾಪ್ಯುಲೇಷನ್ ಈಕಾಲಜಿ). ಜೀವಿಗಳ ಬೆಳವಣಿಗೆಗೆ ಬೇಕಾದ ಆಂತರಿಕ ಸಂಬಂಧಗಳ ಹಾಗೂ ಇತಿಮಿತಿಗಳ ಅಭ್ಯಾಸಗಳನ್ನು ಕೂಡ ಈ ವಿಭಾಗ ಒಳಗೊಂಡಿದೆ.

ಪರಿಸರಕ್ಕೆ ಹೊಂದಿಕೊಳ್ಳುವ ಗುಣಗಳು ಜೀವಿಸಂದಣಿಗಳಿಗೆ ಆನುವಂಶೀಯವಾಗಿ ಬರುತ್ತವೆ. ಇಂಥ ಗುಣಗಳಲ್ಲಿ ಮುಖ್ಯವಾದುವು; ಪರಿಸರಕ್ಕೆ ಹೊಂದಿಕೊಳ್ಳುವಿಕೆ, ಪ್ರಜನನ ಅರ್ಹತೆ ಮತ್ತು ಸಂತತಿಯ ದೃಢತೆ (ಪರ್ಸಿಸ್ಟೆನ್ಸ್ ಆಫ್ ರಿಪ್ರೊಡಕ್ಷನ್). ಜೀವಿಗಳು ನಿರ್ದಿಷ್ಟ ಪರಿಸರದಲ್ಲಿ ಜೀವಿಸುತ್ತವೆ. ನಿರ್ಜೀವ ಭೌತ ರಾಸಾಯನಿಕ ಪರಿಸರದ ಮತ್ತು ಜೀವಿಸಮುದಾಯಗಳ ನಡುವೆ ನಿಕಟ ಸಂಬಂಧವಿದೆ. ಈ ಸಂಬಂಧಕ್ಕೆ ಪರಿಸರವ್ಯೂಹ (ಈಕೊಸಿಸ್ಟಮ್) ಎಂದು ಹೆಸರು. ಇದರಲ್ಲಿ ಶಕ್ತಿಯು ಉತ್ಪಾದಕಗಳಿಂದ ಬಳಕೆದಾರರಿಗೆ ಒಂದು ಗೊತ್ತಾದ ಹಾದಿಯಲ್ಲಿ ಹರಿದು ಹೋಗುತ್ತದೆ. ಇದರಿಂದ ಪೌಷ್ಟಿಕ ರಚನೆ ರೂಪಿತವಾಗುವುದು. ಈ ವ್ಯೂಹದಲ್ಲಿ ಪರಿಸರದಿಂದ ಜೀವಿಗಳಿಗೆ ಮತ್ತು ಜೀವಿಗಳಿಂದ ಪುನಃ ಪರಿಸರಕ್ಕೆ ರಾಸಾಯನಿಕ ಪದಾರ್ಥಗಳು ಚಕ್ರೀಯ ರೀತಿಯಲ್ಲಿ ಸಾಗುವುವು. ಆದ್ದರಿಂದ ಪರಿಸರವ್ಯೂಹದಲ್ಲಿ ಜೀವಿಗಳು ಮತ್ತು ನಿರ್ಜೀವ ವಸ್ತುಗಳು ತಮ್ಮ ಪ್ರಭಾವವನ್ನು ಪರಸ್ಪರ ಬೀರುವುವು. ಇವೆರಡೂ ಪರಿಸರದ ಎರಡು ಮುಖಗಳು. ಪರಿಸರವ್ಯೂಹದ ವಿಸ್ತಾರಕ್ಕೆ ಒಂದು ನಿಗದಿಯಿಲ್ಲ. ಅದು ಬಹು ಸಣ್ಣದಾಗಿರಬಹುದು ಅಥವಾ ದೊಡ್ಡದಾಗಿರಬಹುದು. ಯಾವುದೇ ಪರಿಸರದಲ್ಲಿ ಜೀವಿಸುವ ಒಂದು ಜೀವಿ ಅಥವಾ ಒಂದು ಜೊತೆ ಜೀವಿಗಳಿಂದ ಹುಟ್ಟಿದ ಸಂತತಿಯಲ್ಲಿ ಎಲ್ಲ ಜೀವಿಗಳೂ ಬದುಕಿ ಉಳಿದು ಇವು ಪುನಃ ತಮ್ಮ ಸಂತತಿಯನ್ನು ಬೆಳೆಸುತ್ತಾ ಹೋದರೆ ಜೀವಿಗಳು ಜ್ಯಾಮಿತೀಯವಾಗಿ ಹೆಚ್ಚಾಗುತ್ತಾ ಹೋಗುತ್ತವೆ. ನಿಸರ್ಗದಲ್ಲಿ ಈ ರೀತಿ ಆಗುತ್ತಿದೆಯೇ ? ಇಲ್ಲದಿದ್ದರೆ ಕಾರಣಗಳಾವುವು ? ಇವನ್ನು ಉದಾಹರಣೆಗಳಿಂದ ತಿಳಿಯೋಣ. ಆನೆಗಳ ಗರ್ಭಾವಸ್ಥೆಯ ಕಾಲ ಬಲು ಹೆಚ್ಚು. ಅವು ತಮ್ಮ ಜೀವಮಾನದಲ್ಲಿ ಕೇವಲ ಕೆಲವೇ ಮರಿಗಳನ್ನು ಹಾಕುವುವು. ಡಾರ್ವಿನ್ನನ ಲೆಕ್ಕಾಚಾರದ ಪ್ರಕಾರ, ಒಂದು ಜೊತೆ ಆನೆಗಳ ಸಂತತಿಯಲ್ಲಿ ಒಂದು ಪ್ರಾಣಿಯೂ ಅಳಿಯದೆ ಸಂತತಿ ಮುಂದುವರಿದರೆ ಅವುಗಳ ಸಂತತಿಯ ಸಂಖ್ಯೆ 750 ವರ್ಷಗಳಲ್ಲಿ ಸುಮಾರು 19 ದಶಲಕ್ಷವನ್ನು ಮೀರುತ್ತದೆ.

ಇದೇ ಲೆಕ್ಕಾಚಾರದ ಪ್ರಕಾರ, ಇಂಗ್ಲಿಷ್ ಗುಬ್ಬಚ್ಚಿಯನ್ನು ಅಮೆರಿಕಕ್ಕೆ ತಂದಾಗ ಒಂದು ಜೊತೆ ಗುಬ್ಬಚ್ಚಿಗಳ ವಂಶ ಒಂದು ದಶಕದಲ್ಲಿ 275,983,698ರಷ್ಟಾಗಬಹುದು ಎಂದು ಅಂದಾಜು ಮಾಡಲಾಗಿತ್ತು. ಹಾಗೂ 1916–20ರಲ್ಲಿ 100 ಎಕರೆಗೆ ಸುಮಾರು 575 ಪಕ್ಷಿಗಳಿವೆ ಎಂದು ಊಹಿಸಲಾಗಿತ್ತು. ಆದರೆ 1916–20ರ ಅವಧಿಯಲ್ಲಿ 100 ಎಕರೆಗೆ ಕೇವಲ 18ರಿಂದ 26 ಪಕ್ಷಿಗಳು ಮಾತ್ರ ಇದ್ದುದು ಕಂಡುಬಂದಿತು. ಅಂದರೆ ಈ ಸಂಖ್ಯೆ ಅಂದಾಜಿನ ಶೇಕಡ 5ಕ್ಕಿಂತಲೂ ಕಡಿಮೆ ಇತ್ತು. ಜ್ಯಾಮಿತೀಯವಾಗಿ ಹೆಚ್ಚಾಗಬೇಕಾಗಿದ್ದ ಗುಬ್ಬಚ್ಚಿಯ ಸಂಖ್ಯೆಯನ್ನು ಕುಗ್ಗಿಸಲು ಅನೇಕ ಪ್ರಬಲ ಕಾರಣಗಳಿದ್ದಿರಬೇಕು. ಉದಾಹರಣೆಗೆ : 1 ವ್ಯವಸಾಯ ಪದ್ಧತಿಯ ಬದಲಾವಣೆಯಿಂದ ಅಥವಾ ಬೇರೆ ಕಾರಣದಿಂದ ಗುಬ್ಬಚ್ಚಿಗಳಿಗೆ ಬೇಕಾಗುವ ಆಹಾರದ ಕೊರತೆ ; 2 ಗುಬ್ಬಚ್ಚಿಗಳನ್ನು ತಿನ್ನುವ ಗೂಬೆ ಮತ್ತು ಗಿಡುಗಗಳ ಸಂಖ್ಯೆಯ ಏರಿಕೆ : 3 ಗುಬ್ಬಚ್ಚಿಗಳಲ್ಲೇ ಆಹಾರಕ್ಕಾಗಿ ಮತ್ತು ಗೂಡು ಕಟ್ಟುವ ನಿವೇಶನಗಳಿಗಾಗಿ ಸ್ಪರ್ಧೆ ಇತ್ಯಾದಿ. ಆದ್ದರಿಂದ ಒಂದು ಜೀವಿಸಂದಣಿಯ ಬೆಳವಣಿಗೆಗೆ ಎರಡು ವಿರುದ್ಧ ಬಲಗಳಿರಬೇಕೆಂದು ವ್ಯಕ್ತವಾಗುತ್ತದೆ. 1 ಒಂದು ಗೊತ್ತಾದ ದರದಲ್ಲಿ ಸಂತಾನೋತ್ಪತ್ತಿಯನ್ನು ಮಾಡುವ ಚೈತನ್ಯ. ಈ ಕ್ರಿಯೆ ಪ್ರತಿಯೊಂದು ಪ್ರಭೇದ ಸಂದಣಿಯ ಹುಟ್ಟುಗುಣ ಹಾಗೂ ವಿಶೇಷ ಗುಣ. 2 ಇದಕ್ಕೆ ವಿರೋಧವಾದುದು ಹುಟ್ಟಿದ ಜೀವಿ ಸಾಯಲೇಬೇಕಾದ ಗುಣ ಮತ್ತು ವಯೋಮಿತಿ.

ಬೆಳವಣಿಗೆಗೆ ವಿರೋಧವಾದ ಬಲಗಳು ಜೀವಿ ವಾಸಿಸುವ ಭೌತ ಮತ್ತು ಜೈವಿಕಪರಿಸರಗಳೆರಡರಲ್ಲೂ ಇವೆ. ಇತಿ–ಮಿತಿಗೊಳಿಸುವ ಈ ಬಲಗಳನ್ನು ಆರ್. ಚಾಪ್‌ಮನ್ (1) ಜೈವಿಕ ವಿಭವ ಅಥವಾ ಪ್ರಜನನ ವಿಭವ ಮತ್ತು (2) ಪರಿಸರದ ಪ್ರತಿರೋಧ ಎಂದು ಕರೆದಿದ್ದಾನೆ. ಈ ಎರಡು ಬಲಗಳ ಚಟುವಟಿಕೆಗಳು ಜೀವಿಸಂದಣಿಯ ಎಲ್ಲ ಗುಣವಿಶೇಷಗಳನ್ನೂ ಒಳಗೊಂಡಿವೆ. ಆದ್ದರಿಂದ ಜೀವಿಸಂದಣಿಯ ಅಧ್ಯಯನದಲ್ಲಿ ಮುಂದೆ ಪಟ್ಟಿಮಾಡಿರುವ ಲಕ್ಷಣಗಳನ್ನು ತಿಳಿಯುವುದು ಅವಶ್ಯಕ.

1 ಜೀವಿಸಂದಣಿಯ ಸಾಂದ್ರತೆ

2 ಬೆಳವಣಿಗೆಯ ದರ

3 ಬೆಳವಣಿಗೆಯ ರೂಪ

4 ಸಂದಣಿಯ ಏರಿಳಿತಗಳು ಮತ್ತು ಚಕ್ರೀಯ ಆಂದೋಲನಗಳು

5 ಪ್ರಜನನ ವಿಭವ ಅಥವಾ ಜೈವಿಕ ವಿಭವ

6 ಜನನ

7 ಮರಣ

8 ಸಂದಣಿಯಲ್ಲಿ ವಯೋವಿತರಣೆ

9 ಸಂದಣಿಯ ರಚನೆ

10 ಎರಡು ಸಂದಣಿಗಳ ನಡುವಣ ಅಂತರಕ್ರಿಯೆಯ ಬಗೆಗಳು

1 ಜೀವಿಸಂದಣಿಯ ಸಾಂದ್ರತೆ : ಯಾವುದೋ ಒಂದು ನಿರ್ದಿಷ್ಟ ಸ್ಥಳವನ್ನು ಆಕ್ರಮಿಸಿರುವ ಜೀವಿಸಂದಣಿಯ ಗಾತ್ರಕ್ಕೆ ಜೀವಿಸಂದಣಿಯ ಸಾಂದ್ರತೆ ಎಂದು ಹೆಸರು. ಇದನ್ನು ಒಂದು ಸ್ಥಳದಲ್ಲಿರುವ ಜೀವಿಗಳ ಸಂಖ್ಯೆಗಳಲ್ಲಾಗಲಿ ಅವುಗಳ ಒಟ್ಟು ಜೀವರಾಶಿಗಳ ರೂಪದಲ್ಲಾಗಲಿ ವಿವರಿಸಬಹುದು. ಅನೇಕ ಸಂದರ್ಭಗಳಲ್ಲಿ ಸಂದಣಿ ಬದಲಾಯಿಸುತ್ತಿದೆಯೇ ಎಂದು ತಿಳಿಯುವುದು ಆವಶ್ಯಕ. ಆಗ ಸಾಪೇಕ್ಷ ವಿಪುಲತೆ (ರಿಲೆಟಿವ್ ಅಬಂಡೆನ್ಸ್) ಬಹಳ ಉಪಯೋಗವಾಗುವುದು. ಸಂದಣಿಯ ಸಾಂದ್ರತೆ ಬದಲಾಗುವುದಾದರೂ ಈ ಬದಲಾವಣೆ ಏಕ ಪ್ರಕಾರವಲ್ಲ. ಜೀವಿಸಂದಣಿಯ ಸಾಂದ್ರತೆಯನ್ನು ತಿಳಿಯಲು ಅನೇಕ ಮಾರ್ಗಗಳಿವೆ. ಅದನ್ನು ವಿವರಿಸಲು ವಿಶೇಷ ರೀತಿಯ ಅಳತೆಗೋಲುಗಳೂ ಮತ್ತು ಪದಗಳೂ ಉಂಟು. ಇಷ್ಟಾದರೂ ಇವೆಲ್ಲಕ್ಕೂ ಮಿತಿಗಳಿದ್ದೇ ಇವೆ. ಸಾಂದ್ರತೆಯನ್ನು ಗೊತ್ತುಮಾಡುವಾಗ ಇರುವ ಸಮಸ್ಯೆಗಳು ಅನೇಕ. ಇವುಗಳಲ್ಲಿ ಮುಖ್ಯವಾದುದು ಜೀವಿಸಂದಣಿಯ ಪ್ರಸಾರ. ಅನೇಕ ಸಂದಣಿಗಳಲ್ಲಿ ಜೀವಿಗಳು ಗುಂಪಾಗಿರದೆ ವಿಯುಕ್ತವಾಗಿರುತ್ತವೆ. ಇಂಥ ಸಂದರ್ಭಗಳಲ್ಲಿ ಸಾಂದ್ರತೆಯನ್ನು ತಿಳಿಯುವುದು ಕಷ್ಟ. ಸಾಂದ್ರತೆಯನ್ನು ಅಭ್ಯಸಿಸುವಾಗ ಯಾವ ಜೀವಿಗಳು ಹೇರಳ, ಸಾಮಾನ್ಯ ಮತ್ತು ಅಪರೂಪ ಎಂದು ತಿಳಿಯುವುದು ಆವಶ್ಯಕ. ಜೀವಿ ಸಂದಣಿಯ ಸಾಂದ್ರತೆಯನ್ನು ಅಭ್ಯಸಿಸಲು ಇರುವ ವಿಧಾನಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಿದೆ.

(i) ಒಂದು ಪ್ರದೇಶದ ಜೀವಿಗಳನ್ನೆಲ್ಲ ಎಣಿಕೆ ಮಾಡಿ ಒಟ್ಟು ಸಂಖ್ಯೆಯನ್ನು ತಿಳಿಯುವುದು. ದೊಡ್ಡಗಾತ್ರದ ಜೀವಿಗಳಲ್ಲಿ ಅಥವಾ ಮಂದೆಗಳಲ್ಲಿ ವಾಸಿಸುವ ಜೀವಿಗಳಲ್ಲಿ ಈ ವಿಧಾನ ಸುಲಭಸಾಧ್ಯವಾದುದು.

(ii) ಒಂದು ಪ್ರದೇಶದ ಒಂದು ಭಾಗವನ್ನು ಮಾದರಿಯಾಗಿ ತೆಗೆದುಕೊಂಡು ಅಲ್ಲಿರುವ ಜೀವಿಗಳನ್ನು ಎಣಿಕೆ ಮಾಡುವುದು ಮತ್ತು ತೂಕ ಮಾಡಿ ಒಟ್ಟು ಪ್ರದೇಶದಲ್ಲಿರುವ ಜೀವಿಗಳನ್ನು ಗೊತ್ತುಮಾಡುವುದು.

(iii) ಒಂದು ಜೀವಿಸಂದಣಿಯ ಕೆಲವು ಜೀವಿಗಳಿಗೆ ಯಾವುದಾದರೊಂದು ರೀತಿಯಿಂದ ಗುರುತುಮಾಡಿ ಅವನ್ನು ಬಿಟ್ಟು ಗುರುತು ಮಾಡಿರುವ ಪ್ರಾಣಿಗಳ ಪ್ರಮಾಣವನ್ನು ಬೇರೆಯ ಮಾದರಿ ಸಂದಣಿಯಲ್ಲಿ ಉಪಯೋಗಿಸಿ ಒಟ್ಟು ಜೀವಿಸಂದಣಿಯನ್ನು ಗೊತ್ತುಮಾಡುವುದು.

2 ಬೆಳವಣಿಗೆಯ ದರ : ಜೀವಿಸಂದಣಿ ಬದಲಾವಣೆ ಹೊಂದುವುದು ಸ್ವಾಭಾವಿಕ. ಆದ್ದರಿಂದ ಯಾವುದೇ ಒಂದು ಕಾಲದಲ್ಲಿ ಇರುವ ಅದರ ಗಾತ್ರ. ರಚನೆ ಮತ್ತು ಅದು ಬದಲಾಯಿಸುವ ರೀತಿಗಳನ್ನು ತಿಳಿಯುವುದು ಆವಶ್ಯಕ. ಜೀವಿ ಸಂದಣಿಯ ಅನೇಕ ಗುಣಗಳು ಅದರ ಬೆಳವಣಿಗೆಯ ದರಕ್ಕೆ ಸಂಬಂಧಿಸಿದುವು. ಗೊತ್ತಾದ ಕಾಲದಲ್ಲಿ ಒಂದು ಸಂದಣಿಗೆ ಸೇರಿದ ಜೀವಿಗಳ ಸಂಖ್ಯೆಯೇ ಬೆಳವಣಿಗೆಯ ದರ. ನಿರ್ದಿಷ್ಟ ಕಾಲದಲ್ಲಿ ಹೆಚ್ಚಿದ ಜೀವಿಗಳ ಸಂಖ್ಯೆಯನ್ನು ಸಂದಣಿ ಹೆಚ್ಚಿದ ಕಾಲದ ಅವಧಿಯಿಂದ ಭಾಗಿಸಿದಾಗ ಬರುವ ಫಲಿತಾಂಶವೇ ಬೆಳವಣಿಗೆಯ ದರ. ಬೆಳವಣಿಗೆಯ ದರವನ್ನು ತಿಳಿಯಲು $\Delta N/\Delta t$ ಸೂತ್ರವನ್ನು ಉಪಯೋಗಿಸುವರು. ($N$ – ಜೀವಿಗಳ ಮೊದಲಿನ ಸಂಖ್ಯೆ, $t$–ಕಾಲ, $\Delta N$–ಬದಲಾವಣೆಯಾದ ಜೀವಿಗಳ ಸಂಖ್ಯೆ. ಉದಾ : ಒಂದು ಕೊಳದಲ್ಲಿ 100 ಪ್ರೋಟೋಜೋವ ಜೀವಿಗಳು ವಿಭಜನೆಯ ಮೂಲಕ ಒಂದು ಗಂಟೆಯ ಅನಂತರ 300 ಜೀವಿಗಳಾಗುವುವು ಎಂದು ಊಹಿಸಿದರೆ. ಆಗ

$N$ (ಮೊದಲಿನ ಸಂಖ್ಯೆ ) 100

$\Delta N$ (ಬದಲಾಣೆಯಾದ ಸಂಖ್ಯೆ ) 200

$\Delta N/\Delta t$ (ಒಂದು ಗೊತ್ತಾದ ಕಾಲದಲ್ಲಿ ಬದಲಾವಣೆಯಾದ ಸರಾಸರಿ ದರ) = 200 (ಒಂದು ಗಂಟೆಯಲ್ಲಿ)

ಒಂದು ಗೊತ್ತಾದ ಕಾಲದಲ್ಲಿ ಒಂದು ಜೀವಿ ಬದಲಾವಣೆಯಾದ ಸಾಪೇಕ್ಷ ದರವನ್ನು $\Delta N/(N\Delta t)$ ಎಂಬ ಸೂತ್ರದಿಂದ ತಿಳಿಯಬಹುದು.

$\Delta N/(N\Delta t) = 2$ (ಒಂದು ಗಂಟೆಗೆ ಒಂದು ಜೀವಿಗೆ ಅಂದರೆ 200 ರಷ್ಟು ಹೆಚ್ಚು) ಕೆಲವು ಸಂದರ್ಭಗಳಲ್ಲಿ ತತ್‌ಕ್ಷಣಿಕ ದರಗಳು ಬೇಕಾಗುವುವು. ಇದನ್ನು ತಿಳಿಯಲು $dN/dt$ ಅವಕಲನಾಂಕವನ್ನು ಉಪಯೋಗಿಸಬಹುದು.

3 ಬೆಳವಣಿಗೆಯ ರೂಪ : ಯೀಸ್ಟ್ ಜೀವಿಗಳ ಮೇಲೆ ಕಾರ್ಲ್‌ಸನ್ ನಡೆಸಿದ ಪ್ರಯೋಗಗಳ ಫಲಿತಾಂಶಗಳನ್ನು ಉಪಯೋಗಿಸಿ ಆರ್. ಪೆರ್ಲ್ ಎಂಬಾತ ಒಂದು ಸಂದಣಿ ಬೆಳೆಯುವ ರೀತಿಯನ್ನು ವಿವರಿಸುತ್ತಾನೆ. ಯೀಸ್ಟ್ ಸಸ್ಯದ ಬೆಳವಣಿಗೆಯ ದರ ಮೊದಲ ಹಂತದಲ್ಲಿ ಬಲು ನಿಧಾನ. ಪ್ರಜನನದ ಫಲವಾಗಿ ಜೀವಿಗಳ ಸಂಖ್ಯೆ ಹೆಚ್ಚುತ್ತ ಹೋಗಿ ಒಂದು ಮೇಲಿನ ಮಿತಿಯನ್ನು ಮುಟ್ಟುತ್ತದೆ. ಈ ಹಂತದಲ್ಲಿ ಕೆಲವು ಕಾಲ ಇದ್ದು ಸಮತೋಲವನ್ನು ಪಡೆಯುವುದು. ಈ ರೀತಿಯ ಬೆಳವಣಿಗೆಯಲ್ಲಿ ಎರಡು ಅಂಶಗಳು ಕಂಡುಬರುತ್ತವೆ. (i) ಮೊದಲ ಹಾಗೂ ಅನಂತರದ ಹಂತಗಳಲ್ಲಿ ಯೀಸ್ಟ್‌ಗಳ ಸಂಖ್ಯೆ : (ii) ಬೆಳವಣಿಗೆಗೆ ತೆಗೆದುಕೊಂಡ ಕಾಲ. ಯೀಸ್ಟ್‌ಗಳ ಬೆಳವಣಿಗೆಯನ್ನು ಗ್ರಾಫ್ ರೀತಿಯಲ್ಲಿ ಬರೆದರೆ S–ಆಕಾರದ ರೇಖೆ ರೂಪಿತವಾಗುತ್ತದೆ. ಇದಕ್ಕೆ "ಸಿಗ್ಮಾಯಿಡ್ ರೇಖೆ" ಎಂದು ಹೆಸರು. ಇದನ್ನು ಸಂದಣಿಯ ಬೆಳವಣಿಗೆಯ ರೇಖೆ ಎಂದೂ ಕರೆಯುವರು. ಬೆಳವಣಿಗೆ ಯಾವಾಗ ಮೇಲ್ಮಟ್ಟವನ್ನು ಮುಟ್ಟಿತು? ಹಾಗೂ ಯಾವ ದರದಲ್ಲಿ ಹೆಚ್ಚು ಕಡಿಮೆಯಾಯಿತು? ಎಂಬುದನ್ನು ತಿಳಿಯಲು ಬೆಳವಣಿಗೆಯ ದರದ ರೇಖೆಯನ್ನು ರಚಿಸಿ ತಿಳಿಯಬಹುದು. ಒಂದು ಪರಿಸರ ಯಾವಾಗಲೂ ಒಂದೇ ಗಾತ್ರದ ಸಂದಣಿಯನ್ನು ಪೋಷಿಸುವುದಿಲ್ಲ. ಅಲ್ಲದೆ ಪರಿಸರದಲ್ಲಿನ ಸಂದಣಿ ತನ್ನ ಬೆಳವಣಿಗೆಯಲ್ಲಿ ಒಂದು ಗರಿಷ್ಠ ಮಿತಿಯನ್ನು ತಲುಪುತ್ತದೆ. ಬೆಳವಣಿಗೆಯ ಕಾಲದಲ್ಲಿ ಒಂದು ಸಂದಣಿ ಆಯಾ ಪರಿಸರಕ್ಕೆ ಇರುವ ವಿಭವದ ಗರಿಷ್ಠ ಮಟ್ಟವನ್ನು ಮುಟ್ಟಿ ಪರಿಸರದ ಪ್ರತಿರೋಧದಿಂದ ಸಮತೋಲವನ್ನು ಪಡೆಯುವುದು. ಈ ಗರಿಷ್ಠ ಮಟ್ಟವನ್ನು ಮೀರಿ ಸಂದಣಿ ಬೆಳೆಯಲಾರದು. S ಆಕಾರದ ವಕ್ರರೇಖೆಯ ಮೇಲ್ಮಟ್ಟಕ್ಕೆ ಅನಂತಸ್ಪರ್ಶಕ ಮಟ್ಟವೆಂದೂ (ಆಸಿಮ್‌ಟೋಟ್ ಲೆವೆಲ್) ಗರಿಷ್ಠ ಮಟ್ಟದ ಸಂದಣಿಯನ್ನು ತನ್ನ ಹಿಡಿತದಲ್ಲಿಟ್ಟು ಪೋಷಿಸುವ ಪರಿಸರದ ವಿಭವಕ್ಕೆ ಧಾರಣಸಾಮರ್ಥ್ಯ (ಕ್ಯಾರಿಯಿಂಗ್ ಕೆಪ್ಯಾಸಿಟಿ) ಎಂದೂ ಹೆಸರುಂಟು. ಸಂದಣಿಯ ಸಮತೋಲದ ಹಂತದಲ್ಲಿ ಸಂದಣಿಯಲ್ಲಿ ವ್ಯಕ್ತ ಬದಲಾವಣೆಗಳೇನೂ ಆಗುವುದಿಲ್ಲ. ಏಕೆಂದರೆ ಹೊಸ ಪೀಳಿಗೆಯ ಜೀವಿಗಳು ಸಂದಣಿಯನ್ನು ಸೇರುತ್ತಿದ್ದಂತೆ ಕೆಲವು ಜೀವಿಗಳು ಸಾವಿನಿಂದ ಅಳಿಯುತ್ತವೆ. ಆದ್ದರಿಂದ ಜನನ ಮತ್ತು ಮರಣ ದರಗಳು ಸಂದಣಿಯನ್ನು ಸಮತೋಲದಲ್ಲಿರಿಸುತ್ತವೆ.

ಜನನ ಹಾಗೂ ಮರಣ ದರಗಳ ಸಮತೋಲ ತಪ್ಪಿದಾಗ ಸಂದಣಿಯಲ್ಲಿ ಬದಲಾವಣೆಗಳಾಗುವುವು. ಜನನ ದರ ಮರಣ ದರವನ್ನು ಮೀರಿದಾಗ ಸಂದಣಿ ಬೆಳೆಯುತ್ತದೆ. ಅಥವಾ ಮರಣ ದರ ಹೆಚ್ಚಿದಾಗ ಸಂದಣಿ ಕುಗ್ಗುತ್ತದೆ.

ಆದ್ದರಿಂದ ಜನನ ದರ ಬೆಳವಣಿಗೆಯ ರೇಖೆಯನ್ನು ಮೇಲಕ್ಕೂ ಮರಣ ದರ ಕೆಳಕ್ಕೂ ತಳ್ಳುತ್ತವೆ. ಈ ಎರಡು ಪ್ರಾಥಮಿಕ ಹಾಗೂ ವ್ಯತಿರಿಕ್ತ ಬಲಗಳ ವಿಶೇಷತೆಯನ್ನು ತಿಳಿಯಲು ಅನೇಕ ಅಂಶಗಳು ಅಗತ್ಯ. ಸಿಗ್ಮಾಯಿಡ್ ರೇಖೆ ಸಾಮಾನ್ಯವಾಗಿ ಎಲ್ಲ ಜೀವಿ ಸಂದಣಿಗಳ ಬೆಳವಣಿಗೆಯಲ್ಲೂ ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಒಂದು ಸಂದಣಿ ಅತಿವೇಗ ದರದಲ್ಲಿ ಬೆಳೆದು ಸಮತೋಲನೆಯ ಹಂತವನ್ನು ಮುಟ್ಟದೆ ಅನೇಕ ಜೀವಿಗಳು ಸಾಯುವುದರಿಂದ ಬೆಳವಣಿಗೆ ತನ್ನ ದರದಲ್ಲಿ ತತ್‌ಕ್ಷಣ ಕುಗ್ಗುವುದು. ಈ ತೆರನ ಬೆಳವಣಿಗೆಯನ್ನು ಗ್ರಾಫ್ ರೀತಿ ಚಿತ್ರಿಸಿದಾಗ J – ಆಕಾರದ ರೇಖೆ ರೂಪಿತವಾಗುತ್ತದೆ. ಇದಕ್ಕೆ "J–ಆಕಾರದ ಬೆಳವಣಿಗೆಯ ರೇಖೆ" ಎಂದು ಹೆಸರು. ಇಂಥ ಬೆಳವಣಿಗೆಯನ್ನು ಏಕವಾರ್ಷಿಕ ಸಸ್ಯಗಳಲ್ಲಿ ಮತ್ತು ಕೀಟಗಳಲ್ಲಿ ಕಾಣಬಹುದು.

4 ಸಂದಣಿಯ ಏರಿಳಿತಗಳು ಮತು ಚಕ್ರೀಯ ಆಂದೋಲನಗಳು : ಸಂದಣಿಗಳು ಪೂರ್ಣ ಬೆಳೆದು ಪರಿಸರದ ಧಾರಣಸಾಮರ್ಥ್ಯದ ಗರಿಷ್ಠ ಮಟ್ಟವನ್ನು ಮುಟ್ಟಿದ ಮೇಲೂ ಆ ಮಟ್ಟಕ್ಕಿಂತ ಹೆಚ್ಚು ಅಥವಾ ಕಡಿಮೆಯಾಗಬಹುದು. ಈ ವ್ಯತ್ಯಾಸಗಳು ಭೌತಪರಿಸರದ ಬದಲಾವಣೆಗಳಿಂದ ಅಥವಾ ಅಂತರ–ಸಂದಣಿ ಕ್ರಿಯೆಗಳಿಂದ ಅಥವಾ ಈ ಎರಡೂ ಅಂಶಗಳ ಕ್ರಿಯೆಗಳಿಂದ ಉಂಟಾಗಬಹುದು. ಸಂದಣಿಯ ಸಂಖ್ಯೆ ಏರಿಳಿತಗಳು ಋತುಕವಾಗಿರಬಹುದು ಇಲ್ಲವೆ ವಾರ್ಷಿಕವಾಗಿರಬಹುದು. ಋತುಕ ಬದಲಾವಣೆಗಳು ಮುಖ್ಯವಾಗಿ ಪರಿಸರದ ವ್ಯತ್ಯಾಸಗಳಿಂದ ಹಾಗೂ ಜೀವನ ಚರಿತ್ರೆಯ ಹೊಂದಾಣಿಕೆಗಳಿಂದ ಉಂಟಾಗುತ್ತವೆ. ವಾರ್ಷಿಕ ಬದಲಾವಣೆಗಳು ಭೌತಪರಿಸರದಲ್ಲಿ ಆಗುವ ವ್ಯತ್ಯಾಸಗಳಿಂದ ಅಥವಾ ಸಂದಣಿಯ ಹೊರಗೆ ನಡೆಯುವ ಅಂತರಕ್ರಿಯೆಗಳಿಂದ ಮತ್ತು ಅಂತರಸಂದಣಿಯ ಕ್ರಿಯೆಗಳಿಂದ ಆಗುವುವು. ಸಾಮಾನ್ಯವಾಗಿ ಭೌತ ಪರಿಸರದ ವ್ಯತ್ಯಾಸಗಳು ಅನಿರೀಕ್ಷಿತ. ಇವು ಒಂದು ಅಥವಾ ಅನೇಕ ಪರಿಸ್ಥಿತಿಗಳಿಗೆ ಸಂಬಂಧಿಸಿವೆ. ಆದರೆ ಅಂತರಸಂದಣಿಯ ಕ್ರಿಯೆಗಳಿಂದ ಉಂಟಾಗುವ ವ್ಯತ್ಯಾಸಗಳು ಕ್ರಮವಾಗಿ ಆಗುವುವು. ಆದ್ದರಿಂದ ಅವನ್ನು ಚಕ್ರೀಯ ಆಂದೋಲನಗಳೆಂದು ಕರೆಯುವರು. ಕ್ರಮವಾದ ಏರಿಳಿತಗಳನ್ನು ತೋರುವ ಪ್ರಭೇದ ಸಂದಣಿಗಳಿಗೆ ಚಕ್ರೀಯ ಪ್ರಭೇದಗಳೆಂದು ಹೆಸರು. ಸ್ತನಿ, ಪಕ್ಷಿ, ಮೀನು ಮತ್ತು ಕೀಟಗಳಲ್ಲಿ ಸಂದಣಿಯ ಸಂಖ್ಯೆಯಲ್ಲಿ ಚಕ್ರೀಯ ಆಂದೋಲನಗಳನ್ನು ಪತ್ತೆ ಹಚ್ಚಲಾಗಿದೆ. ಕೆನಡದ ಹಡ್ಸನ್ ಕೊಲ್ಲಿ ಪ್ರದೇಶದಲ್ಲಿ ಬದಲಾಯಿಸುತ್ತಿರುವ ಮೊಲದ ಸಂಖ್ಯೆ ಒಂದು

ಒಳ್ಳೆಯ ನಿದರ್ಶನ. ಇಲ್ಲಿನ ಮೊಲಗಳ ಸಂದಣಿ 9–10 ವರ್ಷಗಳಿಗೊಂದಾವರ್ತಿ ಬೆಳೆವಣಿಗೆಯ ಗರಿಷ್ಠ ಮಟ್ಟವನ್ನು ಮುಟ್ಟುವುದೆಂದು ತಿಳಿದುಬಂದಿದೆ. ಈ ರೀತಿಯ ಚಕ್ರೀಯ ಏರಿಳಿತಗಳನ್ನು ಮಿಕ್ಕ ಪ್ರಾಣಿಗಳಲ್ಲಿಯೂ ಕಾಣಬಹುದು.

ಸಂದಣಿ ನಿಯಂತ್ರಣ ಮತು ಸಾಂದ್ರತಾವಲಂಬಿ ಮತ್ತು ಸಾಂದ್ರತಾ ನಿರವಲಂಬಿಕ್ರಿಯೆ: ಕಡಿಮೆ ವೈವಿಧ್ಯದ ಒತ್ತಡವನ್ನೋ ಅನಿರ್ದಿಷ್ಟ ಬಾಹ್ಯ ಬದಲಾವಣೆಗಳನ್ನೋ ತೋರುವ ಪರಿಸರ ವ್ಯೂಹಗಳಲ್ಲಿ ಸಂದಣಿಗಳು ಭೌತ ಅಂಶಗಳಾದ ಹವೆ, ನೀರಿನ ಪ್ರವಾಹ, ರಾಸಾಯನಿಕಗಳು, ಮಲಿನತೆ ಮುಂತಾದುವುಗಳಿಂದ ನಿಯಂತ್ರಿತವಾಗುವುವು. ಸಂದಣಿಗೆ ಅನಾನುಕೂಲವಾಗುವ ಇಲ್ಲವೆ ಅನುಕೂಲವಾಗುವ ಯಾವುದೇ ಅಂಶವಾಗಲಿ ಅದರ ಪ್ರಭಾವ ಅಥವಾ ಕ್ರಿಯೆ ಸಂದಣಿಯ ಗಾತ್ರದ ಮೇಲೆ ಅವಲಂಬಿತವಾಗಿಲ್ಲದಿದ್ದರೆ ಅದನ್ನು ಸಾಂದ್ರತಾ ನಿರವಲಂಬಿ ಅಂಶ ಎಂದೂ ಅದರ ಪ್ರಭಾವ ಸಾಂದ್ರತೆಯನ್ನು ಅವಲಂಬಿಸಿದ್ದರೆ ಅದನ್ನು ಸಾಂದ್ರತಾವಲಂಬಿ ಅಂಶವೆಂದೂ ಕರೆಯುವರು. ಸಾಂದ್ರತಾವಲಂಬಿಕ್ರಿಯೆ ಸಾಮಾನ್ಯವಾಗಿ ನೇರವಾಗಿ ಸಾಗುತ್ತಿದ್ದು ಸಾಂದ್ರತೆ ಮೇಲ್ಮಟ್ಟವನ್ನು ಮುಟ್ಟುವಾಗ ಹೆಚ್ಚಾಗುತ್ತದೆ. ಆದರೆ ಸಾಂದ್ರತೆ ತಲೆಕೆಳಗಾಗಬಹುದು. ನೇರವಾದ ಸಾಂದ್ರತಾವಲಂಬಿ ಅಂಶಗಳು ವ್ಯವಸ್ಥಾಬದ್ಧವಾಗಿ ಕೆಲಸ ಮಾಡುತ್ತವೆ. ಸಂದಣಿ ಹೆಚ್ಚಾಗಿ ಬೆಳೆಯುವುದನ್ನು ಇವು ತಡೆಯುವುವು. ಇದರಿಂದಾಗಿ ಸಂದಣಿ ಸಮತೋಲ ಹಂತದಲ್ಲಿರುವಂತಾಗುತ್ತದೆ. ಕೆಲವು ಕಾಲ ವಾಯುಮಂಡಲದ ಅಂಶಗಳು ಸಾಂದ್ರತಾ ನಿರವಲಂಬಿ ರೀತಿಯಲ್ಲಿ ಕೆಲಸ ಮಾಡುವುವು ಆದರೆ ಜೈವಿಕ ಅಂಶಗಳಾದ ಸ್ಪರ್ಧೆ, ಪರಾವಲಂಬನೆ ಮುಂತಾದುವು ಕೆಲವು ವೇಳೆ ಸಾಂದ್ರತಾವಲಂಬಿ ಅಂಶಗಳಾಗಿ ವರ್ತಿಸುವುವು.

5 ಪ್ರಜನನ ವಿಭಜನ ಅಥವಾ ಜೈವಿಕ ವಿಭವ : ಸಂದಣಿಯ ಬೆಳೆವಣಿಗೆಗೆ ಮುಖ್ಯವಾದ ಗುಣ ಇದು. ಯಾವುದೇ ಒಂದು ನಿರ್ದಿಷ್ಟ ಕಾಲದಲ್ಲಿ ವಾಸಿಸುವ ಸಂದಣಿಯ ಬೆಳೆವಣಿಗೆ ವಿಭವ ಆ ಸಂದಣಿಯ ಪ್ರತಿಯೊಂದು ಜೀವಿಯ ಪ್ರಜನನ ವಿಭವ ($\gamma$) ಹಾಗೂ ಆ ಕಾಲದಲ್ಲಿರುವ ಜೀವಿಗಳ ಸಂಖ್ಯೆಯ (N) ಮೇಲೆ ಆಧಾರಿತವಾಗಿದೆ. ಪ್ರತಿಯೊಂದು ಪ್ರಜನನದಲ್ಲೂ ಹುಟ್ಟಿದ ಜೀವಿಗಳ ಸಂಖ್ಯೆ, ಒಂದು ನಿರ್ದಿಷ್ಟ ಕಾಲದಲ್ಲಿ ಆದ ಪ್ರಜನನಗಳ ಸಂಖ್ಯೆ, ಗಂಡು ಹೆಣ್ಣುಗಳ ಪರಿಮಾಣ ಮತ್ತು ಪರಿಸರದ ಭೌತಪರಿಸ್ಥಿತಿಗಳಲ್ಲಿ ಅವು ಉಳಿಯುವ ಸಾಮರ್ಥ್ಯ ಈ ಅಂಶಗಳೆಲ್ಲವೂ ಪ್ರಜನನ ವಿಭವದಲ್ಲಿ ಅಡಗಿವೆ. ಪ್ರಜನನ ವಿಭವವನ್ನು $dN/dt = \gamma N$ ಎಂಬ ಸೂತ್ರದಿಂದ ವ್ಯಕ್ತಪಡಿಸಬಹುದು. ಅಂದರೆ ಸಂದಣಿಯ ಬದಲಾವಣೆಯ ದರ ಅಲ್ಲಿರುವ ಪ್ರಜನನ ಜೀವಿಗಳ ಸಂಖ್ಯೆಯನ್ನು (ಲಿಂಗರೀತಿಯ ಪ್ರಜನನದಲ್ಲಿ ಹೆಣ್ಣುಗಳ ಸಂಖ್ಯೆ) ಅನುಸರಿಸುವುದು. ಸಾಮಾನ್ಯವಾಗಿ ಅನುಕೂಲತಮ ಪರಿಸ್ಥಿತಿಗಳಲ್ಲಿ ಪ್ರಜನನ ವಿಭವ ಬದಲಾಯಿಸುವುದಿಲ್ಲ. ಆದರೆ ಪರಿಸರದ ಲಕ್ಷಣಗಳು ವ್ಯತ್ಯಾಸವಾದಾಗ ಪ್ರಜನನವಿಭವದಲ್ಲೂ ವ್ಯತ್ಯಾಸಗಳಾಗುತ್ತವೆ. ಅಕ್ಕಿಯ ಸೊಂಡಿಲುಜೀರುಂಡೆ ಮತ್ತು ನೀರಿನಚಿಗಟಗಳ ಮೇಲೆ ನಡೆಸಿದ ಪ್ರಯೋಗಗಳು ಈ ವಾದವನ್ನು ಪುಷ್ಟೀಕರಿಸುತ್ತವೆ.

ಉದಾಹರಣೆಗಳು : (i) ಒಂದು ಹೆಣ್ಣು ಆನೆಯ ಸೊಂಡಿಲು ಜೀರುಂಡೆ $23^0$ ಸೆ ಉಷ್ಣತೆಯಲ್ಲಿ ವರ್ಷಕ್ಕೆ 22.4 ಮರಿಗಳನ್ನು $29^0$ C ಉಷ್ಣತೆಯಲ್ಲಿ 30.6 ಮರಿಗಳನ್ನು ಮತ್ತು $33.5^0$ C ಉಷ್ಣತೆಯಲ್ಲಿ 6.2 ಮರಿಗಳನ್ನು ಉತ್ಪತ್ತಿ ಮಾಡುತ್ತವೆ.

(ii) ನೀರಿನ ಚಿಗಟದಲ್ಲೂ ಪ್ರಜನನವಿಭವ ಉಷ್ಣತೆಗೆ ಅನುಗುಣವಾಗಿ ವ್ಯತ್ಯಾಸವಾಗುವುದೆಂದು ತೋರಿಸಲಾಗಿದೆ. ಈ ಜೀವಿಯಲ್ಲಿ ಗರಿಷ್ಠ ಪ್ರಜನನ ವಿಭವ $20^0$ C ಮತ್ತು $34^0$ C ಮಧ್ಯದ ಉಷ್ಣತೆಯಲ್ಲಿ ಆಗುತ್ತದೆ. ಪರಿಸರದ ಅಂಶಗಳು (ಭೌತ, ರಾಸಾಯನಿಕ) ಯಾವಾಗಲೂ ಒಂದೇ ರೀತಿ ಇಲ್ಲದಿರುವುದರಿಂದಲೂ ಹೀಗೆ ಬದಲಾಗುವ ಅಂಶಗಳನ್ನು ಸಹಿಸುವ ಶಕ್ತಿ ಜೀವಿಗಳಲ್ಲಿ ಬೇರೆ ಬೇರೆಯಾಗಿರುವುದರಿಂದಲೂ ವಿವಿಧ ಪ್ರಜನನ ವಿಭವಗಳು ಕಂಡುಬರುವುದು ಸಕಾರಣವಾಗಿದೆ.

ಒಂದು ಪ್ರಭೇದಕ್ಕೆ ಪ್ರತಿಯೊಂದು ಕಾಲದ ಭೌತ ಅಂಶಗಳಿಗನುಗುಣವಾಗಿ ವಿವಿಧ ಹಾಗೂ ವಿಶೇಷ $\gamma$ ಮೌಲ್ಯಗಳಿರುತ್ತವೆ. ಅಲ್ಲದೆ $\gamma$ ನ ಮೌಲ್ಯ ಜೀವಿಯ ವಯಸ್ಸು, ಪ್ರಜನನ ವಯಸ್ಸು ಮತ್ತು ಆಯಾ ಪರಿಮಿತಿಗೆ ಅನುಗುಣವಾಗಿ ಬದಲಾಗುತ್ತದೆ. ಸಂದಣಿಯ ಪ್ರಜನನ ವಿಭವವನ್ನು ಬೆಳೆವಣಿಗೆಯ ಅನುಕೂಲತಮ ಪರಿಸ್ಥಿತಿಗಳಲ್ಲಿ ಅಳೆದಾಗ ಲಭಿಸುವ ವಿಶಿಷ್ಟ ಬೆಳೆವಣಿಗೆಯ ದರವನ್ನು ನೈಸರ್ಗಿಕ ಏರಿಕೆಯ ನೈಜದರ ಎಂದು ಕರೆಯಲಾಗುತ್ತದೆ.

6 ಜನನ (ನಟ್ಯಾಲಿಟಿ) : ಜನನ ಸಂದಣಿಯ ಒಂದು ಸ್ವಾಭಾವಿಕ ಹಾಗೂ ವಿಶಿಷ್ಟ ಗುಣ; ಸಂದಣಿಯ ಬೆಳೆವಣಿಗೆಗೆ ಅಗತ್ಯವಾದ ಗುಣಗಳಲ್ಲೊಂದು. ಜನನಗಳು, ಜನನದರಗಳು ಯಾವಾಗಲೂ ಒಂದೇ ರೀತಿ ಇರುವುದಿಲ್ಲ. ಇವು ಸಂದಣಿಯ ಗಾತ್ರ, ರಚನೆ ಹಾಗೂ ಭೌತಪರಿಸರಕ್ಕೆ ಅನುಗುಣವಾಗಿ ವ್ಯತ್ಯಾಸವಾಗಬಹುದು. ಹೊಸದಾಗಿ ಹುಟ್ಟಿದ ಜೀವಿಗಳ ಸಂಖ್ಯೆಯನ್ನು ಅವು ಹುಟ್ಟಿದ ಕಾಲದ ಅವಧಿಯಿಂದ ಭಾಗಿಸಿದರೆ ಜನನದರ ಲಭಿಸುತ್ತದೆ. ಅಥವಾ ಹೊಸದಾಗಿ ಹುಟ್ಟಿದ ಜೀವಿಗಳ ಸಂಖ್ಯೆಯನ್ನು ಅವು ಹುಟ್ಟಿದ ಕಾಲ ಮತ್ತು ಮೊದಲಿನ ಸಂದಣಿಯ ಸಂಖ್ಯೆಯಿಂದ ಭಾಗಿಸಿದರೆ ವಿಶಿಷ್ಟ ಜನನದರ ತಿಳಿಯುತ್ತದೆ.

$\Delta Nn/\Delta t$=ನಿರಪೇಕ್ಷ ಜನನದರ (ಆಬ್ಸೊಲ್ಯೂಟ್ ನಟ್ಯಾಲಿಟಿ)

$\Delta Nn/(N\Delta t)$=ವಿಶಿಷ್ಟ ಜನನದರ (ಸ್ಪೆಸಿಫಿಕ್ ನಟ್ಯಾಲಿಟಿ)

$\Delta Nn$= ಸಂದಣಿಯಲ್ಲಿ ಹುಟ್ಟಿದ ಹೊಸ ಜೀವಿಗಳು

$\frac{\Delta Nn}{\Delta t} = \mathrm{B}$ ಅಥವಾ ಜನನದರ (ನಟ್ಯಾಲಿಟಿ ರೇಟ್)

$\frac{\Delta Nn}{N\Delta t} = \mathrm{b}$ ಅಥವಾ ಒಂದು ಘಟಕ ಸಂದಣಿಯ ಜನನದರ (ಯೂನಿಟ್ ಪಾಪ್ಯುಲೇಷನ್ ನಟ್ಯಾಲಿಟಿ)

7 ಮರಣ (ಮಾರ್ಟ್ಯಾಲಿಟಿ) : ಜೀವಿಯ ಒಂದು ಮುಖ ಜನನವಾದರೆ ಅದರ ಮತ್ತೊಂದು ಮುಖ ಮರಣ. ಜನನದಷ್ಟೇ ವಿಶಿಷ್ಟವಾದ ಗುಣ ಮರಣ ಕೂಡ. ಯಾವುದೊಂದು ಗೊತ್ತಾದ ಕಾಲದಲ್ಲಿ ಸಾಯುವ ಜೀವಿಗಳ ಸಂಖ್ಯೆಗೆ ಮರಣದರ (ಮಾರ್ಟ್ಯಾಲಿಟಿ ರೇಟ್) ಎಂದು ಹೆಸರು. ಎಂಥ ಒಳ್ಳೆಯ ಪರಿಸ್ಥಿತಿಯಲ್ಲೂ ಜೀವಿಗಳು ವಯಸ್ಸಾದ ಮೇಲೆ ಸಾಯುವುವು. ಸಾವು ಒಂದು ಜೀವಿಯ ಜೀವನದ ಅಂತಿಮ ಘಟ್ಟ. ಜೀವಿಸಂದಣಿಯ ಅಭ್ಯಾಸದಲ್ಲಿ ಮರಣ ದರಕ್ಕಿಂತ ಉಳಿಕೆಯದರ (ಸರ್ವೈವಲ್ ರೇಟ್) ಮುಖ್ಯ. ಮರಣದರವನ್ನು M ಎಂದು ಸೂಚಿಸಿದರೆ ಉಳಿಕೆಯದರ I-M. ಮರಣದರ ಸಾಮಾನ್ಯವಾಗಿ ಜೀವಿಯ ವಯಸ್ಸನ್ನಾಧರಿಸಿ (ವಯೋಮಿತಿ) ವ್ಯತ್ಯಾಸವಾಗುತ್ತದೆ. ಉನ್ನತ ಜೀವಿಗಳಲ್ಲಿ ಇದು ಹೆಚ್ಚು ನಿಜ. ವಿಶಿಷ್ಟ ಮರಣಗಳು ಬೇರೆ ಬೇರೆ ವಯಸ್ಸಿನ ಗುಂಪು ಹಾಗೂ ಜೀವನಚರಿತ್ರೆಯ ಹಂತಗಳನ್ನು ಅನುಸರಿಸುತ್ತವೆ. ಇವುಗಳಿಂದ ಸಂದಣಿಯಲ್ಲಾಗುವ ಮರಣಗಳಿಗೆ ಕಾರಣವಾದ ಬಲಗಳನ್ನು ತಿಳಿಯಲು ಸಾಧ್ಯವಾಗುವುದು. ಸಂದಣಿಯ ನಿರಪೇಕ್ಷ ಮರಣದರ ಚಿತ್ರವನ್ನು ಕ್ರಮವಾಗಿ ಅಂಕಿಅಂಶಗಳ ಪದ್ಧತಿಯನ್ನನುಸರಿಸಿ ಆಯಸ್ಸು ಕೋಷ್ಟಕದ ಮೂಲಕ ನಿರೂಪಿಸಬಹುದು. ಆರ್. ಪೆರ್ಲ್ ಎಂಬಾತ ಮೊದಲ ಬಾರಿಗೆ ಡ್ರೋಸಾಫಿಲ ನೊಣದ ಮೇಲೆ ಮಾಡಿದ ಪ್ರಯೋಗಗಳ ಫಲಿತಾಂಶಗಳನ್ನು ಉಪಯೋಗಿಸಿ ಈ ಪದ್ಧತಿಯನ್ನು ಆರಂಭಿಸಿದ. ಡೀವಿ ಎಂಬ ಇನ್ನೊಬ್ಬ ವಿಜ್ಞಾನಿ ನಿಸರ್ಗದ ಅನೇಕ ಪ್ರಾಣಿಸಂದಣಿಗಳ ವಿಚಾರದಲ್ಲಿ ಅಂಕಿಅಂಶಗಳನ್ನು ಸಂಗ್ರಹಿಸಿ ಅವುಗಳ ಆಯಸ್ಸು ಕೋಷ್ಟಕಗಳನ್ನು ತಯಾರು ಮಾಡಿದ. ಪ್ರಯೋಗಗಳಿಂದಲೂ ಒಂದು ಜೀವಿಯ ಆಯಸ್ಸು ಕೋಷ್ಟಕವನ್ನು ತಯಾರಿಸಬಹುದು. ಸಣ್ಣ ವಯಸ್ಸಿನ 1000 ಜೀವಿಗಳನ್ನು ಉಪಯೋಗಿಸಿ ಒಂದು ಪೀಳಿಗೆಯ ಅಂತ್ಯದಲ್ಲಿ ಒಂದು ನಿಖರವಾದ ಕಾಲದ ಅಂತರಗಳಲ್ಲಿ ಬದುಕಿ ಉಳಿದ ಜೀವಿಗಳ ಸಂಖ್ಯೆಯನ್ನು ಗೊತ್ತುಪಡಿಸಿ ಆ ಜೀವಿಯ ಆಯಸ್ಸು ಕೋಷ್ಟಕವನ್ನು ತಯಾರು ಮಾಡಬಹುದು.

ಇದೇ ರೀತಿ ನಿಸರ್ಗದ ಜೀವಿಗಳ ಆಯಸ್ಸುಕೋಷ್ಟಕಗಳನ್ನು ತಿಳಿಯಬಹುದು. ಉದಾಹರಣೆಗೆ: ಡಾಲ್ ಬೆಟ್ಟದ ಕುರಿಗಳ ವಯಸ್ಸನ್ನು ಅವುಗಳ ಕೋಡುಗಳಿಂದ ತಿಳಿಯಬಹುದು. ಅವು ಯಾವ ರೀತಿ ಸತ್ತರೂ ಕೋಡುಗಳ ಪರೀಕ್ಷೆಯಿಂದ ಅವು ಎಷ್ಟು ವರ್ಷ ಬದುಕಿದ್ದವು ಎಂದು ಗೊತ್ತಾಗುತ್ತದೆ. 608 ಕುರಿಗಳನ್ನು ಪರೀಕ್ಷಿಸಿ ಅವು ಸತ್ತಾಗ ಅವುಗಳ ವಯಸ್ಸೇನೆಂದು ತಿಳಿದು ಡಾಲ್ ಬೆಟ್ಟದ ಕುರಿಯ ಆಯಸ್ಸು ಕೋಷ್ಟಕವನ್ನು ತಯಾರಿಸಿದ್ದಾರೆ. ಈ ಪ್ರಾಣಿಯ ಸರಾಸರಿ ಆಯಸ್ಸು 7.09 ವರ್ಷಗಳು. ಜೀವಿಯ ಆಯಸ್ಸಿನಲ್ಲಿ ಪ್ರಜನನ ಮುಖ್ಯ. ಪ್ರಜನನ ಕ್ರಮ ಸಂದಣಿಯ ಬೆಳೆವಣಿಗೆ ಹಾಗೂ ಮಿಕ್ಕ ಗುಣಗಳ ಮೇಲೆ ಪ್ರಭಾವ ಬೀರುವುದು. ನಿಸರ್ಗದ ಆಯ್ಕೆಯ ಪ್ರಭಾವದಿಂದಾಗಿ ಜೀವಿಯ ಜೀವನಚರಿತ್ರೆಯಲ್ಲಿ ವಿವಿಧ ಬದಲಾವಣೆಗಳಾಗಬಹುದು. ಈ ಬದಲಾವಣೆಗಳಿಂದ ಹೊಂದಾಣಿಕೆಯ ಕ್ರಮಗಳು ನಿರ್ಣಯವಾಗುತ್ತವೆ. ಆಯ್ಕೆಯ ಒತ್ತಡ ಪ್ರಜನನ ಕಾಲ ಮತು ಉತ್ಪತ್ತಿಯನ್ನು ಬದಲಾಯಿಸುವ ರೀತಿಯನ್ನೂ ಸಂದಣಿಗೆ ಸಂಬಂಧಪಟ್ಟ ಮಿಕ್ಕ ಅಂಶಗಳನ್ನೂ ಆಯಸ್ಸು ಕೋಷ್ಟಕಗಳ ಪರಿಶೀಲನೆಯಿಂದ ತಿಳಿಯಬಹುದು.

8 ಸಂದಣಿಯಲ್ಲಿ ವಯೋವಿತರಣೆ : (ಪಾಪ್ಯುಲೇಷನ್ ಏಜ್ ಡಿಸ್ಟ್ರಿಬ್ಯೂಷನ್) : ಜನನ ಮತ್ತು ಮರಣ ದರಗಳ ಮೇಲೆ ಇದು ತನ್ನ ಪ್ರಭಾವವನ್ನು ಬೀರುತ್ತದೆ. ಸಂದಣಿಯಲ್ಲಿ ವಿವಿಧ ವಯಸ್ಸಿನ ಜೀವಿಗಳಿವೆ. ಇಂಥ ಜೀವಿಗಳ ಪ್ರಮಾಣ ಸಂದಣಿಯ ಪ್ರಕೃತ ಪ್ರಜನನ ಸ್ಥಿತಿಯನ್ನು ತಿಳಿಸುವುದಲ್ಲದೆ ಮುಂದೆ ಏನಾಗಬಹುದು ಎಂಬುದನ್ನೂ ಸೂಚಿಸುತ್ತದೆ.

ಸಾಮಾನ್ಯವಾಗಿ, ಅತಿ ತೀವ್ರಗತಿಯಲ್ಲಿ ಬೆಳೆಯುವ ಸಂದಣಿಯಲ್ಲಿ ಹೆಚ್ಚು ಪ್ರಜನನ ಜೀವಿಗಳೂ ಸ್ಥಿರವಾದ ಸಂದಣಿಯಲ್ಲಿ ಸಾಮಾನ್ಯವಾಗಿ ಸಮ ಪ್ರಮಾಣದ ಪ್ರಜನನ ಮತ್ತು ವಯಸ್ಸಾದ ಜೀವಿಗಳೂ ಕುಗ್ಗುತ್ತಿರುವ ಸಂದಣಿಯಲ್ಲಿ ಹೆಚ್ಚು ವಯಸ್ಸಾದ ಜೀವಿಗಳೂ ಇರುತ್ತವೆ. ಸಂದಣಿಯಲ್ಲಿ ಸಾಮಾನ್ಯ ರೀತಿಯ ವಯೋರಚನೆ ಇರಬಹುದು. ಸಂದಣಿಯಲ್ಲಿನ ಬದಲಾವಣೆಗಳು ವಯೋರಚನೆಯನ್ನು ಆಧರಿಸಿ ಉಂಟಾಗುತ್ತವೆ. ಬದಲಾವಣೆಗಳು ಕಡಿಮೆಯಾಗಿ ಒಂದು ಸ್ಥಿರ ವಯೋವಿತರಣೆ ರೂಪುಗೊಂಡ ಮೇಲೆ ತಾತ್ಕಾಲಿಕವಾಗಿ ಹೆಚ್ಚು ಜನನ ಮರಣಗಳಾದರೂ ಸಂದಣಿ ಪುನಃ ಸಮತೋಲದ ಹಂತವನ್ನು ಮುಟ್ಟುವುದು. ಸಂದಣಿಯ ಜೀವಿಗಳನ್ನು ಮೂರು ವಯಸ್ಸಿನ ಗುಂಪುಗಳನ್ನಾಗಿ ಬೋಡೆನ್ ಹೀಮರ್ ವಿಂಗಡಿಸಿ, ಇವನ್ನು ಪರಿಸರಾತ್ಮಕ ವಯೋಸ್ಥಾನಗಳೆಂದು (ಈಕಲಾಜಿಕಲ್ ಏಜಸ್) ಕರೆದ. ಇವೇ (i) ಪ್ರಜನನ ಪೂರ್ವ, (ii) ಪ್ರಜನನ ಮತ್ತು (iii) ಪ್ರಜನನದ ಅನಂತರದ ವಯಸ್ಸಿನ ಜೀವಿಗಳು. ಈ ವಯಸ್ಸುಗಳ ಸುಮಾರು ಅವಧಿ ವಿವಿಧ ಜೀವಿಗಳಲ್ಲಿ ಅವುಗಳ ಆಯುವ್ಯಾಪ್ತಿಯನ್ನು (ಲೈಫ್ ಸ್ಪ್ಯಾನ್) ಅನುಸರಿಸುತ್ತವೆ. ಅನೇಕ ಸಸ್ಯ ಮತ್ತು ಪ್ರಾಣಿಗಳಲ್ಲಿ ಪ್ರಜನನಪೂರ್ವದ ಅವಧಿ ದೀರ್ಘ. ಮನುಷ್ಯನಲ್ಲಿ ಈ ಮೂರು ವಯೋ ಅವಧಿಗಳೂ ಹೆಚ್ಚು ಕಡಿಮೆ ಒಂದೇ ಸಮವಾಗಿರುತ್ತವೆ. ಕೆಲವು ಕೀಟಗಳಲ್ಲಿ ಪ್ರಜನನಪೂರ್ವಕಾಲ ಅತಿಹೆಚ್ಚು. ಉದಾಹರಣೆಗೆ, ಮೇ ನೊಣದಲ್ಲಿ (ಎಫಿಮಿರಾಪ್ಟರ) ಈ ಕಾಲ 1–7 ವರ್ಷಗಳಾಗಬಹುದು. ಈ ಅವಧಿಯನ್ನೆಲ್ಲ ನೀರಿನೊಳಗೆ ಡಿಂಬಾವಸ್ಥೆಯಲ್ಲಿ ಕಾಲಕಳೆಯುವ ಇವು ಪ್ರೌಢಪ್ರಾಣಿಗಳಾಗಿ ಕೇವಲ ಕೆಲವೇ ದಿವಸಗಳು ಜೀವಿಸುತ್ತವೆ. ಇದೇ ರೀತಿ ಹದಿನೇಳು ವರ್ಷದ ಮಿಡತೆಯಲ್ಲಿ ಬೆಳವಣಿಗೆಯ ಕಾಲ ಬಲು ದೀರ್ಘವಾದ್ದು. ಇದರ ಪ್ರೌಢ ಪ್ರಾಣಿ ಒಂದು ಶ್ರಾಯ ಮಾತ್ರ ಬದುಕುತ್ತದೆ. ಪ್ರಜನನ ಕಾಲ ವಿವಿಧ ಜೀವಿಗಳಲ್ಲಿ ಬೇರೆ ಬೇರೆಯಾಗಿರುವುದರಿಂದ ಸಂದಣಿಯಲ್ಲಿರುವ ಪ್ರಜನನ ಮತ್ತು ಎಳೆಯ ಹಾಗೂ ವಯಸ್ಸಾದ ಜೀವಿಗಳ ಹಂಚಿಕೆಯ ವಿವರಗಳಿಂದ ಸಂದಣಿಯ ಗುಣಗಳನ್ನು ತಿಳಿಯಬಹುದು. ಸಂದಣಿಯಲ್ಲಿರುವ ವಿವಿಧ ಜೀವಿಗಳ ವಯೋ ವಿತರಣೆಯನ್ನು ಅರಿಯಲು ಪ್ರತಿ ಪ್ರಭೇದದ ಜೀವಿಗಳ ಸಂಖ್ಯೆ ಮತ್ತು ವಯಸ್ಸನ್ನು ಅನುಸರಿಸಿ ಒಂದು ಬಹುಭುಜವನ್ನು (ಪಾಲಿಗನ್) ರಚಿಸಲಾಗುತ್ತದೆ. ಈ ಬಹುಭುಜಕ್ಕೆ ವಯೋಪಿರಮಿಡ್ (ಏಜ್ ಪಿರಮಿಡ್) ಎಂದು ಹೆಸರು. ವಯೋಪಿರಮಿಡ್ಡಿನಲ್ಲಿ ಜೀವಿಗಳ ಸಂಖ್ಯೆ ಅಥವಾ ವಿವಿಧ ವಯೋ ಗುಂಪುಗಳ ದರಗಳನ್ನು ಅನುಸರಿಸಿ ಅದಕ್ಕೆ ಸಂಬಂಧಿಸಿದಂತೆ ಅನುಕ್ರಮವಾಗಿ ಅಡ್ಡರೇಖೆಗಳನ್ನೆಳೆದು ವಯೋ ಪಿರಮಿಡ್ಡನ್ನು ರಚಿಸಲಾಗುತ್ತದೆ. ಮೇಲೆ ವಿವರಿಸಿದ ಮೂರು ವಯೋ ಗುಂಪುಗಳನ್ನು ಅನುಸರಿಸಿ ಮೂರು ವಿಧದ ವಯೋ ಪಿರಮಿಡ್ಡುಗಳನ್ನು ರಚಿಸಬಹುದು : (i) ಅಗಲ ತಳದ ಪಿರಮಿಡ್: ಇದು ಹೆಚ್ಚು ಸಂಖ್ಯೆಯ ಪ್ರಜನನ ಜೀವಿಗಳಿರುವುದನ್ನು ತಿಳಿಸುತ್ತದೆ. (ii) ಗಂಟೆಯಾಕಾರದ ಅಥವಾ ಬಹುಭುಜದ ಪಿರಮಿಡ್: ಇದು ಸಮಪ್ರಮಾಣದ ಪ್ರಜನನ ಹಾಗೂ ವಯಸ್ಸಾದ ಜೀವಿಗಳಿರುವುದನ್ನು ತೋರಿಸುತ್ತದೆ. (iii) ಮಡಕೆ ಆಕಾರದ ಪಿರಮಿಡ್ : ಬಹು ಕಡಿಮೆ ಸಂಖ್ಯೆಯ ಪ್ರಜನನ ಜೀವಿಗಳು ಇರುವುದನ್ನು ತೋರುತ್ತದೆ. ಇದು ಕುಗ್ಗುತ್ತಿರುವ ಸಂದಣಿಯ ರೂಪ.

ಸಂದಣಿಯ ಬದಲಾವಣೆಗೆ ಜನನ ಮರಣಗಳ ಜೊತೆಗೆ ಜೀವಿಗಳ ಪ್ರಸಾರವೂ ಒಂದು ಕಾರಣ. ಜೀವಿಗಳ ಅಥವಾ ಅವುಗಳ ಮರಿಗಳ ಬೀಜಗಳು, ಸ್ಪೋರುಗಳು ಸಂದಣಿಗೆ ಬಂದು ಸೇರುವ ಅಥವಾ ಹೊರಗೆ ಹೋಗುವ ಚಲನೆಗೆ ಸಂದಣಿಯ ಪ್ರಸಾರವೆಂದು ಹೆಸರು. ಈ ಚಲನೆ ಮೂರು ರೂಪದಲ್ಲಿರುತ್ತದೆ: (i) ಹೊರವಲಸೆ (ಎಮಿಗ್ರೇಷನ್)–ಜೀವಿಗಳು ಒಂದು ಸಂದಣಿಯಿಂದ ಹೊರಗೆ ಹೋಗುವುದು. ಇದು ಒಂದೇ ಹಾದಿಯ ಹೊರಚಲನೆ : (ii) ಒಳವಲಸೆ (ಇಮಿಗ್ರೇಷನ್)– ಜೀವಿಗಳು ಸಂದಣಿಗೆ ಹೊರಗಿನಿಂದ ಬಂದು ಸೇರುವುದು. ಇದು ಒಂದೇ ಹಾದಿಯ ಒಳಚಲನೆ ; (iii) ವಲಸೆ (ಮೈಗ್ರೇಷನ್)–ಜೀವಿಗಳು ತಾತ್ಕಾಲಿಕವಾಗಿ ಸಂದಣಿಯಿಂದ ಹೊರಗೆ ಹೋಗಿ ಪುನಃ ಸಂದಣಿಗೆ ವಾಪಸು ಬರುವುದು.

ಜನನ ಮತ್ತು ಮರಣಗಳಿಂದಾದ ಏರುಪೇರುಗಳನ್ನು ಸರಿತೂಗಿಸಿ ಸಂದಣಿಯ ಬೆಳವಣಿಗೆಯ ರೂಪಕ್ಕೆ ಮತ್ತು ಸಾಂದ್ರತೆಗೆ ಒಂದು ರೂಪವನ್ನು ಪ್ರಸಾರ ಕೊಡುತ್ತದೆ. ಅನೇಕ ಸಂದರ್ಭಗಳಲ್ಲಿ ಜೀವಿಗಳ ಬೀಜಗಳೂ ಬೀಜಾಣುಗಳೂ ಸಾಮಾನ್ಯವಾಗಿ ಸಂದಣಿಯ ಒಳ ಬರುವುವು ಅಥವಾ ಹೊರ ಹೋಗುವುವು. ಈ ರೀತಿಯ ಪ್ರಸಾರದಿಂದ ಸಂದಣಿಯ ಒಟ್ಟು ಸಾಂದ್ರತೆ ಒಂದೇ ರೀತಿ ಇರುತ್ತದೆ. ಏಕೆಂದರೆ ಹೊರ ಹೋಗುವ ಜೀವಿಗಳಿಗೆ ಬದಲಾಗಿ ಒಳಬರುವ ಜೀವಿಗಳಿರುತ್ತವೆ. ಅಥವಾ ಸಂದಣಿಗೆ ಬಂದು ಸೇರುವ ಅಥವಾ ಅದರಿಂದ ಹೊರಹೋಗುವ ಜೀವಿಗಳ ಜಾಗವನ್ನು ತುಂಬಲು ಜನನಗಳು ಮತ್ತು ಮರಣಗಳಾಗುತ್ತವೆ. ಪ್ರಸಾರದಲ್ಲಿ ಕೇವಲ ಕೆಲವು ಅಥವಾ ಅನೇಕ ಜೀವಿಗಳು ಭಾಗವಹಿಸಬಹುದು. ಸಾಮೂಹಿಕ ಪ್ರಸಾರದ ಕ್ರಿಯೆಗಳು ಬಹುಜಾಗ್ರತೆಯಾಗಿ ಸಂದಣಿಯಲ್ಲಿ ಬದಲಾವಣೆಗಳನ್ನು ಉಂಟುಮಾಡುತ್ತವೆ. ಪ್ರಸಾರ ಅಡೆತಡೆಗಳನ್ನೂ ಜೀವಿಯ ಚಲನ ಸ್ವಾತಂತ್ರ್ಯವನ್ನೂ (ವ್ಯಾಜಲಿಟಿ) ಆಧರಿಸಿದೆ. ಪ್ರಸಾರದಿಂದ ಹೊಸ ನೆಲೆಗಳಲ್ಲಿ ಅಥವಾ ಕ್ಷೀಣಸಂದಣಿಯ ಪ್ರದೇಶಗಳಲ್ಲಿ ವಿವಿಧ ಸಂದಣಿಗಳ ಸಮಾಂತರವಾಗುವುದು. ಇದರಿಂದ ಆನುವಂಶೀಯ ಗುಣಗಳಿಗೆ ಕಾರಣವಾದ ಜೀನ್‌ಗಳ ವಿನಿಮಯ ಮತ್ತು ಪ್ರಭೇದೀಕರಣ ಕ್ರಿಯೆ ನಡೆಯಲು ಅನುಕೂಲವಾಗುತ್ತದೆ. ಒಳವಲಸೆ ಸಂದಣಿಯ ಬೆಳವಣಿಗೆಯನ್ನು ಹೆಚ್ಚು ಮಾಡುತ್ತದೆ. ಅಥವಾ ಸಣ್ಣ ಸಂದಣಿ ಗತಿಸುವುದನ್ನು ತಡೆಯುತ್ತದೆ. ಗುಂಪುಗಳ ಪ್ರಸಾರ ಸಮತೋಲ ಸಂದಣಿಯ ರಚನೆಯನ್ನು ಅನೇಕ ವಿಧಗಳಲ್ಲಿ ಬದಲಾಯಿಸುತ್ತದೆ. ಉದಾಹರಣೆಗೆ ಒಂದು ಕೊಳದಲ್ಲಿ ಒಂದು ಜಾತಿಯ ಮೀನುಗಳ ಸಂದಣಿ ಸಮತೋಲದ ಹಂತವನ್ನು ಮುಟ್ಟಿರುವಾಗ (ಧಾರಣಸಾಮರ್ಥ್ಯ) ಆ ಕೊಳದಲ್ಲಿ ಅದೇ ಜಾತಿಯ ಮರಿಗಳನ್ನು ಬಿಟ್ಟರೆ ಅಲ್ಲಿನ ಜೀವಿಗಳ ಬೆಳವಣಿಗೆ ಕುಗ್ಗಿ ಮೀನುಗಳ ಗಾತ್ರ ಕಡಿಮೆಯಾಗುತ್ತದೆ. ಪ್ರಸಾರದಲ್ಲಿ ಜೀವಿಗಳ ಚಲನ ಸ್ವಾತಂತ್ರ್ಯ ಮುಖ್ಯವಾದ್ದು. ಈ ಗುಣ ವಿವಿಧ ಪ್ರಾಣಿಗಳಲ್ಲಿ ಬೇರೆಯಾಗಿರುವುದು. ಪಕ್ಷಿ ಮತ್ತು ಕೀಟಗಳಿಗೆ ಹೆಚ್ಚಿನ ಚಲನ ಸ್ವಾತಂತ್ರ್ಯವಿದೆ. ಆದ್ದರಿಂದ ಅವುಗಳ ಪ್ರಸಾರ ಹೆಚ್ಚು. ಕೆಲವು ಸಸ್ಯಗಳಲ್ಲಿಯೂ ಸಣ್ಣ ಪ್ರಾಣಿಗಳಲ್ಲಿಯೂ ಹೆಚ್ಚಿನ ಚಲನಸ್ವಾತಂತ್ರ್ಯವನ್ನು ನೋಡಬಹುದು. ಕೆಲವು ಪ್ರಾಣಿಗಳು ವಿಶಿಷ್ಟ ರೀತಿಯ ವಲಸೆಯ ಚಟುವಟಿಕೆಗಳನ್ನು ಪ್ರದರ್ಶಿಸುತ್ತವೆ. ಸಂಧಿಪದಿಗಳೂ ಮೀನುಗಳೂ ಪಕ್ಷಿಗಳೂ ಗುಂಪು ಗುಂಪಾಗಿ ಬಹುದೂರ ವಲಸೆ ಹೋಗುತ್ತವೆ. ಅವು ಪ್ರಯಾಣ ಮಾಡುವ ದಿಕ್ಕು ಮತ್ತು ರೀತಿ ಕುತೂಹಲ ಕೆರಳಿಸುವ ವಿಷಯ. ವಲಸೆ ದೈನಂದಿನವಾಗಿರಬಹುದು. ಇಲ್ಲವೆ ಶ್ರಾಯಿಕವಾಗಿರಬಹುದು.

9 ಸಂದಣಿಯ ರಚನೆ : ಇದು ಸಂದಣಿಯಲ್ಲಿನ ಜೀವಿಗಳ ಯಾದೃಚ್ಛಿಕ ರೀತಿ, ಏಕರೀತಿ (ಯೂನಿಫಾರಮ್) ಮತ್ತು ಗುಂಪು ರೀತಿ (ಕ್ಲಂಪ್ಡ್) ಎಂಬ ಮೂರು ರೂಪಗಳಲ್ಲಿ ಹರಡಿರುತ್ತವೆ. ಯಾದೃಚ್ಛಿಕ ರೀತಿ ನಿಸರ್ಗದಲ್ಲಿ ಅಪರೂಪ. ಇದು ಒಂದೇ ರೀತಿಯ ಪರಿಸರಗಳಲ್ಲಿ ಮತ್ತು ಒಟ್ಟಾಗಿ ಸೇರಲು ಆಗದಿರುವ ಸ್ಥಳಗಳಲ್ಲಿ ಕಂಡುಬರುತ್ತದೆ. ಸ್ಪರ್ಧೆ ಇರುವ ಅಥವಾ ಪ್ರಬಲವಾದ ವಿರೋಧಿಗಳಿರುವ ಪರಿಸರಗಳಲ್ಲಿ ಏಕರೀತಿಯ ಹರಡುವಿಕೆ ಕಂಡುಬರುವುದು. ಈ ಬಗೆಯಲ್ಲಿ ಜೀವಿಗಳು ಆದಷ್ಟು ದೂರವಿರುವುದರಿಂದ ಜೀವಿಗಳ ನಡುವಣ ಅಂತರ ಒಂದೇ ಸಮವಾಗಿರುತ್ತದೆ. ಪರಿಸರದಲ್ಲಿ ಕಂಡುಬರುವ ಸಾಮಾನ್ಯ ರೀತಿಯ ಹಂಚಿಕೆ ಎಂದರೆ ಗುಂಪುರೀತಿಯದು. ಗುಂಪುಗಳಲ್ಲಿ ವಿವಿಧ ಶ್ರೇಣಿಗಳುಂಟು. ಸಂದಣಿಯ ಸ್ವಭಾವಗಳನ್ನು ಅರಿಯಲು ಮತ್ತು ಸಾಂದ್ರತೆಯನ್ನು ಅಳೆಯಲು ಹಂಚಿಕೆಯ ಬಗೆ, ಗುಂಪುಗಳ ದರ್ಜೆ, ಗಾತ್ರ ಮತು ಗುಂಪುಗಳ ನಿರಂತರತೆ ಮುಂತಾದ ಅಂಶಗಳ ವಿಚಾರ ಅಗತ್ಯ.

ಗುಂಪು ರೀತಿಯಲ್ಲಿ ಯಾದೃಚ್ಛಿಕ ಗುಂಪು, ಏಕರೀತಿಯ ಗುಂಪು ಮತ್ತು ಒಟ್ಟುಗೂಡಿಸಿದ ಗುಂಪು ಎಂಬ ಮೂರು ವಿಧಗಳಿವೆ. ಜೀವಿಗಳು ಒಟ್ಟುಗೂಡಲು (i) ಸ್ಥಳೀಯ ಪರಿಸರಾತ್ಮಕ ವ್ಯತ್ಯಾಸಗಳು, (ii) ವಾಯು ಗುಣದಲ್ಲಿ ದೈನಂದಿನ ಮತ್ತು ಶ್ರಾಯಿಕ ಬದಲಾವಣೆ, (iii) ಪ್ರಜನನ ಕ್ರಿಯೆಗಳು, (iv) ಸಾಮಾಜಿಕ ಆಕರ್ಷಣೆ (ಪರಸ್ಪರ ಆಕರ್ಷಣೆ) ಮುಂತಾದುವು ಕಾರಣ.

ಒಟ್ಟುಗೂಡಿದ ಗುಂಪುಗಳಲ್ಲಿ ವ್ಯಕ್ತಿಗಳ ನಡುವೆ ಆಹಾರ ಅಥವಾ ಸ್ಥಳಗಳಿಗೆ ಸ್ಪರ್ಧೆಗಳು ಹೆಚ್ಚಾಗಬಹುದು. ವಿಯುಕ್ತತೆ ಮತ್ತು ಪ್ರಾದೇಶಿಕತೆ (ಐಸೊಲೇಷನ್ ಮತ್ತು ಟೆರಿಟೋರಿಯಾಲಿಟಿ) ಇವು ಪ್ರಧಾನವಾಗಿ ಪ್ರಾಣಿಗಳಲ್ಲಿ ಕಂಡುಬರುವ ಗುಣಗಳು. ಒಂದು ಸಂದಣಿಯಲ್ಲಿನ ಜೀವಿಗಳ, ಜೋಡಿಗಳ ಹಾಗೂ ಸಣ್ಣಗುಂಪುಗಳ ನಡುವೆ ಅಂತರವನ್ನು ಉಂಟುಮಾಡುವ ಇಲ್ಲವೆ ಅವನ್ನು ಪರಸ್ಪರ ಬೇರ್ಪಡಿಸುವುದಕ್ಕೆ ಕಾರಣ ಅನೇಕ ಬಲಗಳು. ಇವು ಜೀವಿಗಳ ಒಟ್ಟುಗೂಡಿ ಕಾರಣವಾದ ಬಲಗಳಷ್ಟು ವಿಸ್ತಾರವಲ್ಲದಿದ್ದರೂ ಸಂದಣಿಯ ನಿಯಂತ್ರಣದಲ್ಲಿ (ಅಂತರಪ್ರಭೇದಾತ್ಮಕ ಹಾಗೂ ಅಂತಃ ಪ್ರಭೇದಾತ್ಮಕ) ಬಹಳ ಮುಖ್ಯವೆನಿಸಿವೆ. ವಿಯುಕ್ತತೆ ಸಾಧಾರಣವಾಗಿ ಆಹಾರ ಸರಬರಾಜು ಕಡಿಮೆಯಿರುವ ಕಡೆಗಳಲ್ಲಿ ಆಹಾರಕ್ಕಾಗಿ ವ್ಯಕ್ತಿಗಳ ನಡುವಣ ಸ್ಪರ್ಧೆ ಮತ್ತು ನೇರ ವಿರೋಧಗಳಿಂದ ಉಂಟಾಗುತ್ತದೆ. ಈ ಎರಡು ಕಾರಣಗಳಿಂದ ಯಾದೃಚ್ಛಿಕ ಅಥವಾ ಏಕರೀತಿಯ ಹಂಚಿಕೆಯಾಗಬಹುದು. ಕಶೇರುಕಗಳಲ್ಲಿ ಒಂಟಿ ಜೀವಿಗಳು, ಜೊತೆಗಳು, ಹಾಗೂ ಕೌಟುಂಬಿಕ ಗುಂಪುಗಳು ಮತ್ತು ಉನ್ನತ ಅಕಶೇರುಕಗಳು ಸಾಮಾನ್ಯವಾಗಿ ತಮ್ಮ ಚಟುವಟಿಕೆಗಳನ್ನು ಒಂದು ಗೊತ್ತಾದ ಪ್ರದೇಶಕ್ಕೆ ಸೀಮಿತಗೊಳಿಸಿಕೊಂಡಿರುತ್ತವೆ. ಈ ಪ್ರದೇಶಕ್ಕೆ ಸ್ವಗೃಹವ್ಯಾಪ್ತಿ (ಹೋಮ್ ರೇಂಜ್) ಎಂದೂ ಇಂಥ ನಿವೇಶನ ಅಥವಾ ಪ್ರದೇಶವನ್ನು ಬಲಪ್ರದರ್ಶನದ ಮೂಲಕ ರಕ್ಷಿಸಿಕೊಂಡರೆ ಅದನ್ನು ಪ್ರಾದೇಶಿಕತೆ ಎಂದೂ ಕರೆಯುವರು. ಈ ಗುಣ ಕಶೇರಕಗಳಲ್ಲೂ ಅಕಶೇರುಕಗಳಾದ

ಸಂಧಿಪದಿಗಳಲ್ಲೂ ಸಾಮಾನ್ಯವಾಗಿ ಹೆಚ್ಚು. ಸಂಧಿಪದಿಗಳಲ್ಲಿ ಸಂಕೀರ್ಣ ರೀತಿಯ ಪ್ರಜನನಾವರ್ತಗಳ ವಿವಿಧ ರೂಪಗಳಾದ ಗೂಡುಕಟ್ಟುವಿಕೆ, ಮೊಟ್ಟೆಯಿಡುವಿಕೆ ಮತ್ತು ಮರಿಗಳ ಪಾಲನೆ ಮುಂತಾದ ಕ್ರಿಯೆಗಳು ನಡೆಯಬೇಕಾದುದರಿಂದ ಪ್ರಾದೇಶಿಕತೆಯ ಅಗತ್ಯವುಂಟು. ವಿಯುಕ್ತತೆಯ ಗುಣ ಉನ್ನತ ದರ್ಜೆಯ ಪ್ರಾಣಿಗಳಲ್ಲಿ ಅವುಗಳ ವರ್ತನೆಗೂ ನಿಮ್ನಪ್ರಾಣಿಗಳಲ್ಲಿ ಮತ್ತು ಸಸ್ಯಗಳಲ್ಲಿ ಅದು ರಾಸಾಯನಿಕ ಪದಾರ್ಥಗಳಿಗೂ ಸಂಬಂಧಿಸಿದೆ. ವಿಯುಕ್ತ ಜೀವಿಗಳ ನಡುವೆ ಸ್ಪರ್ಧೆಯನ್ನು ಕಡಿಮೆಮಾಡುತ್ತದಲ್ಲದೆ ಸಮಯೋಚಿತ ಕಾಲದಲ್ಲಿ ಶಕ್ತಿಯನ್ನು ಸಂಗ್ರಹಿಸಲು ಸಹಾಯಕವಾಗುತ್ತದೆ. ಸಂದಣಿ ಒತ್ತಾಗುವುದನ್ನೂ ಇದು ತಡೆಯುತ್ತದೆ. ಅಲ್ಲದೆ ಪ್ರಾಣಿಗಳಲ್ಲಿ ಆಹಾರ ಸರಬರಾಜು ಮುಗಿಯುವುದನ್ನೂ ಸಸ್ಯಗಳಲ್ಲಿ ಆಹಾರ ನೀರು ಅಥವಾ ಬೆಳಕುಗಳ ಉಪಯೋಗವನ್ನೂ ಕಡಿಮೆ ಮಾಡುತ್ತದೆ. ಜೀವಿಗಳು ಒಟ್ಟುಗೂಡುವುದರಿಂದ ಸ್ಪರ್ಧೆ ಹೆಚ್ಚಾಗುವ ಸಂಭವ ಇದೆಯಾದರೂ ಅನುಕೂಲಗಳಿಲ್ಲದಿಲ್ಲ. ಹಾಗೆಯೇ ಸಂದಣಿಯ ಜೀವಿಗಳ ನಡುವೆ ಅಂತರ ಇದ್ದರೆ ಸ್ಪರ್ಧೆ ಕಡಿಮೆಯಾಗಬಹುದು. ಆದರೆ ಜೀವಿಗಳು ಗುಂಪಿನಲ್ಲಿ ಕಂಡುಬರುವ ಸಹಕಾರದ ಅನುಕೂಲತೆಗಳನ್ನು ಕಳೆದುಕೊಳ್ಳುವುವು. ಆದ್ದರಿಂದ ವಿಕಾಸದ ದೃಷ್ಟಿಯಿಂದ ಯಾವ ರೂಪ ದೀರ್ಘಾವಧಿಯ ಅನುಕೂಲತೆಯನ್ನು ಉಂಟುಮಾಡುತ್ತದೆ ಎಂಬುದರ ಮೇಲೆ ಅವಲಂಬಿತವಾಗಿದೆ. ಎರಡು ಪ್ರರೂಪಗಳೂ ನಿಸರ್ಗದಲ್ಲಿ ಬಹು ಸಾಮಾನ್ಯ. ಕೆಲವು ಪ್ರಭೇದ ಸಂದಣಿಗಳು ಒಂದು ಪ್ರರೂಪದಿಂದ ಮತ್ತೊಂದು ಪ್ರರೂಪಕ್ಕೆ ಬದಲಾಯಿಸುತ್ತವೆ. ಉದಾಹರಣೆಗೆ ರಾಬಿನ್ ಹಕ್ಕಿಗಳು ಪ್ರಜನನ ಕಾಲದಲ್ಲಿ ಬೇರೆ ಬೇರೆಯಾಗಿ ತಮ್ಮ ತಮ್ಮ ಪ್ರಾಂತ್ಯಗಳಿಗೆ ಹೋಗುತ್ತವೆ. ಚಳಿಗಾಲದಲ್ಲಿ ಒಟ್ಟುಗೂಡಿ ಗುಂಪುಗಳಲ್ಲಿದ್ದು ಎರಡು ಪ್ರರೂಪಗಳ ಪ್ರಯೋಜನಗಳನ್ನೂ ಪಡೆಯುತ್ತವೆ. ಆದರೆ ಇನ್ನು ಕೆಲವು ಪ್ರಾಣಿಗಳು ವ್ಯತಿರಿಕ್ತವಾದ ಪ್ರರೂಪಗಳನ್ನು ಒಂದೇ ಕಾಲದಲ್ಲಿ ತೋರಿಸುತ್ತವೆ. ಉದಾಹರಣೆಗೆ ಪ್ರೌಢಪ್ರಾಣಿಗಳು ವಿಯುಕ್ತವಾಗುವುವು, ಸಣ್ಣವಯಸ್ಸಿನವು ಗುಂಪುಗೂಡುವುವು. ಮೀನು, ಪಕ್ಷಿ ಮತ್ತು ಕೋತಿಗಳಲ್ಲಿ ಪ್ರಾದೇಶಿಕತೆಯನ್ನು ಹೆಚ್ಚಾಗಿ ಅಭ್ಯಸಿಸಲಾಗಿದೆ. ಅನೇಕ ಪ್ರಾಣಿಗಳು ಪ್ರಾದೇಶಿಕತೆಯ ಚಟುವಟಿಕೆಯನ್ನು ಋತುಕಾಲಗಳಲ್ಲಿ ಪ್ರದರ್ಶಿಸುತ್ತವೆ. ಉದಾಹರಣೆಗೆ ಬಾಸ್ ಮತ್ತು ಸೂರ್ಯಮೀನುಗಳ ಗಂಡುಗಳು ತಮ್ಮ ಗೂಡುಗಳನ್ನು ರಕ್ಷಿಸಿಕೊಳ್ಳುವುವು. ಬೇರೆ ಮೀನು ತಮ್ಮ ಗೂಡುಗಳ ಕಡೆ ಬಂದಾಗ ತಮ್ಮ ಬಣ್ಣದ ರೆಕ್ಕೆಗಳನ್ನು ಪ್ರದರ್ಶಿಸುತ್ತ ಅತಿಕ್ರಮ ಪ್ರವೇಶಿಯ ಕಡೆ ನುಗ್ಗುತ್ತವೆ. ಈ ಸಂದರ್ಭಗಳಲ್ಲಿ ಹೆಣ್ಣುಮೀನು ಮೊಟ್ಟೆಯಿಡುವುದಕ್ಕೆ ಮುಂಚೆ ಮತ್ತು ಆಮೇಲೆ ಗಂಡುಮೀನು ತನ್ನ ಸ್ಥಳ ಕಾಪಾಡುವುದರಿಂದ, ರಕ್ಷಣೆ ಸ್ಥಳಕ್ಕಾಗಿಯೇ ಎಂದು ತಿಳಿಯಲಾಗಿದೆ.

10 ಎರಡು ಸಂದಣಿಗಳ ನಡುವಣ ಅಂತರಕ್ರಿಯೆಗಳ ಬಗೆಗಳು : ಎರಡು ಸಂದಣಿಗಳ ನಡುವೆ ಒಂಬತ್ತು ರೀತಿಯ ಅಂತರಕ್ರಿಯೆಗಳನ್ನು ಗಮನಿಸಬಹುದಾಗಿದೆ:

(i) ತಟಸ್ಥತೆ (ನ್ಯೂಟ್ರಾಲಿಸಮ್): ಯಾವ ಸಂದಣಿಯೂ ಇನ್ನೊಂದು ಸಂದಣಿಯ ಮೇಲೆ ಯಾವ ರೀತಿಯ ಪ್ರತಿಕೂಲ ಪರಿಣಾಮವನ್ನುಂಟು ಮಾಡದು.

(ii) ಸ್ಪರ್ಧೆ–ನೇರವಾಗಿ ಅಡ್ಡಬರುವ ಬಗೆ (ಕಾಂಪಿಟಿಷನ್–ಡೈರೆಕ್ಟ್ ಇಂಟರ್‌ಫೆರೆನ್ಸ್ ಟೈಪ್): ಪ್ರತಿಯೊಂದು ಪ್ರಭೇದವೂ ಮತ್ತೊಂದು ಪ್ರಭೇದವನ್ನು ಪ್ರತಿಕ್ಷೇಪಿಸುತ್ತದೆ (ಇನ್‌ಹಿಬಿಟ್).

(iii) ಸ್ಪರ್ಧೆ–ಮೂಲ ಪದಾರ್ಥಗಳನ್ನು ಉಪಯೋಗಿಸುವ ಬಗೆ: (ರಿಸೋರ್ಸ್ ಯೂಸ್ ಟೈಪ್) : ಮೂಲ ಪದಾರ್ಥಗಳ ಕುಂಠಿತ ಸರಬರಾಜು ಸ್ಥಿತಿಗಳಲ್ಲಿ ಅಪ್ರತ್ಯಕ್ಷ ರೀತಿಯಿಂದ ಪ್ರತಿಕ್ಷೇಪಿಸುವುದು.

(iv) ಅಮೆನ್ಸಾಲಿಸಮ್ : ಒಂದು ಸಂದಣಿ ಪ್ರಭಾವಿತವಾದರೂ ಮತ್ತೊಂದು ಅಪ್ರಭಾವಿತವಾಗಿರುತ್ತದೆ.

(v) ಪರಾವಲಂಬನೆ (ಪ್ಯಾರಸಿಟಿಸಮ್) : ಒಂದು ಜೀವಿ ಪರಾವಲಂಬಿ ಮತ್ತೊಂದು ಆತಿಥೇಯ ಜೀವಿ. ಪರಾವಲಂಬಿ ಆತಿಥೇಯ ಜೀವಿಗಿಂತ ಸಣ್ಣದು.

(vi) ಪರಭಕ್ಷಣೆ (ಪ್ರಿಡೇಷನ್) : ಒಂದು ಜೀವಿ ಪರಭಕ್ಷಿ. ಇದು ಎರೆಗಿಂತ ದೊಡ್ಡದು. ಪರಭಕ್ಷಿ ನೇರವಾಗಿ ಎರೆಯ ಮೇಲೆ ಆಕ್ರಮಣ ನಡೆಸುವುದು. ಆದರೆ ಆ ಜೀವಿಯನ್ನೇ ಆಶ್ರಯಿಸುವುದಿಲ್ಲ.

(vii) ಸಹಭೋಜನ (ಕಮೆನ್ಸಾಲಿಸಮ್) : ಸಹಭೋಜಿತ ಸಂದಣಿ ಉಪಕಾರ ಪಡೆಯುತ್ತದೆ. ಆದರೆ ಇನ್ನೊಂದು ಅಪ್ರಭಾವಿತವಾಗುವುದು.

(viii) ಆದ್ಯ ಸಹಕಾರ (ಪ್ರೋಟೊ ಕೊ ಆಪರೇಷನ್) : ಎರಡು ಸಂದಣಿಗಳಿಗೂ ಇದು ಅನುಕೂಲಕರ. ಆದರೆ ಒಂದರ ಸಹವಾಸ ಇನ್ನೊಂದಕ್ಕೆ ಅವಶ್ಯಕವಲ್ಲ.

(ix) ಪರಸ್ಪರತೆ (ಮ್ಯೂಚುವಾಲಿಸಮ್); ಎರಡು ಸಂದಣಿಗಳಿಗೂ ಅನುಕೂಲಕರ. ಒಂದರ ಸಹವಾಸ ಇನ್ನೊಂದಕ್ಕೆ ಅವಶ್ಯಕ.

ಈ ಎಲ್ಲ ರೀತಿಯ ಸಂದಣಿ ಅಂತರಕ್ರಿಯೆಗಳು ಸಮುದಾಯಗಳಲ್ಲಿ ಕಂಡುಬರಬಹುದು. ಒಂದು ನಿರ್ದಿಷ್ಟ ಪ್ರಭೇದದ ಜೀವಿಗಳ ಜೊತೆಯ ಅಂತರಕ್ರಿಯೆ ಬೇರೆ ಬೇರೆ ಪರಿಸರ ಸ್ಥಿತಿಗಳಲ್ಲಿ ಅಥವಾ ಅವುಗಳ ಜೀವನ ಚರಿತ್ರೆಯ ಕ್ರಮಾನುಗತ ಹಂತಗಳಲ್ಲಿ ಬದಲಾಗಬಹುದು. ಆದ್ದರಿಂದ ಎರಡು ಪ್ರಭೇದಗಳು ಒಂದು ಕಾಲದಲ್ಲಿ ಪರಾವಲಂಬನೆಯನ್ನು ಅಥವಾ ಸಹಭೋಜನದ ಅಂತರ ಕ್ರಿಯೆಯನ್ನು ತೋರುತ್ತಿದ್ದು ಮತ್ತೊಂದು ಸಂದರ್ಭದಲ್ಲಿ ಪೂರ್ಣ ತಟಸ್ಥವಾಗಿ ಇರಬಹುದು. ಅಂತರಕ್ರಿಯೆಗಳ ಪ್ರಭಾವವನ್ನು ತಿಳಿಯಲು ಪ್ರಯೋಗ ಶಾಲೆಗಳಲ್ಲಿ ಪ್ರಯೋಗಗಳನ್ನು ನಡೆಸಿದ್ದಾರೆ.

ಒಂದು ಪರಿಸರ ವ್ಯವಸ್ಥೆಯ ಅಂತರಕ್ರಿಯೆಗಳ ಪೂರ್ಣವಿಚಾರವನ್ನು ತಿಳಿಸುವಾಗ ಮೇಲೆ ಹೇಳಿದ ಒಂಬತ್ತು ಅಂತರಕ್ರಿಯೆಗಳನ್ನು (i) ಋಣಾತ್ಮಕ ಅಂತರಕ್ರಿಯೆಗಳು (ನೆಗೆಟಿವ್ ಇಂಟರ್‌ಆ್ಯಕ್ಷನ್ಸ್) ಮತ್ತು (ii) ಧನಾತ್ಮಕ ಅಂತರಕ್ರಿಯೆಗಳು (ಪಾಸಿಟಿವ್ ಇಂಟರ್‌ಆ್ಯಕ್ಷನ್ಸ್) ಎಂಬ ಎರಡು ಪಂಗಡಗಳಾಗಿ ವಿಂಗಡಿಸಬಹುದು. ಈ ಎರಡು ಪಂಗಡಗಳ ಮುಖ್ಯವಾದ ಮೂಲ ತತ್ತ್ವಗಳು ಈ ರೀತಿ ಇವೆ:

(i) ಪರಿಸರವ್ಯೂಹಕ ವಿಕಾಸ ಮತ್ತು ಬೆಳವಣಿಗೆಯಲ್ಲಿ ಋಣಾತ್ಮಕ ಅಂತರ ಕ್ರಿಯೆಗಳು ಧನಾತ್ಮಕ ಸಹಜೀವನತೆಯ ಪರ ಕಡಿಮೆಯಾಗಿ ಅಂತರ ಕ್ರಿಯೆಯನ್ನೊಳಗೊಂಡ ಪ್ರಭೇದಗಳ ಉಳಿಕೆಯನ್ನು ಹೆಚ್ಚುಮಾಡುತ್ತವೆ.

(ii) ಹೊಸ ಸಹವಾಸಗಳು ಸಾಮಾನ್ಯವಾಗಿ ಹಳೆಯ ಸಹವಾಸಗಳಿಗಿಂತ, ತೀವ್ರ ಋಣಾತ್ಮಕ ಸಹಕ್ರಿಯೆಗಳನ್ನು (ಕೋ ಆ್ಯಕ್ಷನ್ಸ್) ಬೆಳೆಸುತ್ತವೆ.

ಅಂತರಕ್ರಿಯಾ ಚಟುವಟಿಕೆಗಳಾಗುತ್ತಿರುವ ಎರಡು ಪ್ರಭೇದಗಳಲ್ಲಿ ಹಾನಿಕರ ಪರಿಣಾಮಗಳಿಲ್ಲದೆ ಉಪಯುಕ್ತ ಪರಿಣಾಮಗಳಾದಾಗ ಎರಡು ಸಂದಣಿಗಳೂ ಬೆಳೆದು ವೃದ್ಧಿಯಾಗಿ ಪರಸ್ಪರ ಅನುಕೂಲವಾಗುವ ಸಮತೋಲನೆಯ ಮಟ್ಟವನ್ನು ಮುಟ್ಟುತ್ತವೆ. ಸಂದಣಿಗಳ ಅಂತರಕ್ರಿಯೆಗಳನ್ನು ವಿವರಿಸುವಾಗ ಸಹಜೀವನ (ಸಿಂಬಯೋಸಿಸ್) ಎಂಬ ಪದವನ್ನು ಉಪಯೋಗಿಸುವುದುಂಟು. ಈ ಪದಕ್ಕೆ ವಿವಿಧ ಸಂದರ್ಭಗಳಲ್ಲಿ ವಿವಿಧ ಅರ್ಥಗಳಿವೆ. ಉದಾಹರಣೆಗೆ ಈ ಪದವನ್ನು ಪರಸ್ಪರತೆ ಎಂಬ ಅರ್ಥದಲ್ಲೂ ಕೆಲವು ಸಂದರ್ಭಗಳಲ್ಲಿ ಸಹಭೋಜನ ಹಾಗೂ ಪರಾವಲಂಬನ ಎಂಬ ಅರ್ಥದಲ್ಲೂ ಉಪಯೋಗಿಸುವರು. ಋಣಾತ್ಮಕ ಅಂತರಕ್ರಿಯೆಗಳಲ್ಲಿ ಅಂತರ ಪ್ರಭೇದಾತ್ಮಕ ಸ್ಪರ್ಧೆ ಒಂದು ವಿಧ. ಎರಡು ಜೀವಿಗಳು ಒಂದೇ ಪದಾರ್ಥಕ್ಕೆ ಹೊಡೆದಾಡುವುದು ಸ್ಪರ್ಧೆ. ಎರಡು ಅಥವಾ ಅನೇಕ ಪ್ರಭೇದ ಸಂದಣಿಗಳ ನಡುವಣ ಅಂತರ ಕ್ರಿಯೆಯನ್ನು ಸಂದಣಿ ಅಂತರಸ್ಪರ್ಧೆ ಎನ್ನಲಾಗುತ್ತದೆ. ಇದರಿಂದ ಸಂದಣಿಯ ಬೆಳವಣಿಗೆಯೂ ಸ್ಪರ್ಧೆಯಲ್ಲಿ ಬದುಕಿ ಉಳಿದ ಜೀವಿಗಳೂ ಪ್ರಭಾವಿತವಾಗುತ್ತವೆ. ಸ್ಪರ್ಧೆಯ ಅಂತರಕ್ರಿಯೆ ಸಾಮಾನ್ಯವಾಗಿ ನೆಲೆ, ಬೆಳಕು, ತ್ಯಾಜ್ಯ ಪದಾರ್ಥಗಳು ಹಿಂಸ್ರಪ್ರಾಣಿಗಳಿಗೆ ಈಡಾಗುವುದು. ರೋಗ ಮತ್ತು ಇತರ ರೀತಿಯ ಪರಸ್ಪರತೆಯ ಅಂತರಕ್ರಿಯೆಗಳನ್ನು ಒಳಗೊಳ್ಳುತ್ತದೆ. ಅಂತರ ಸಂದಣಿಯ ಸ್ಪರ್ಧೆ ಎರಡು ಸಂದಣಿಗಳಲ್ಲಿ ಸಮತೋಲನೆಯ ಹೊಂದಾಣಿಕೆಗಳನ್ನು ಉಂಟು ಮಾಡಬಹುದು ಅಥವಾ ಒಂದು ಸಂದಣಿಯ ಬದಲು ಮತ್ತೊಂದು ಸಂದಣಿಯನ್ನು ತರಬಹುದು ಅಥವಾ ಆ ಸಂದಣಿ ಬೇರೆ ಪ್ರದೇಶವನ್ನು ಆಕ್ರಮಿಸುವಂತೆ ಅಥವಾ ಬೇರೆ ಆಹಾರವನ್ನು ಉಪಯೋಗಿಸುವಂತೆ ಮಾಡಬಹುದು. ಒಂದೇ ರೀತಿಯ ಸ್ವಭಾವವುಳ್ಳ ಬಹು ಹತ್ತಿರ ಸಂಬಂಧಿಜೀವಿಗಳು ಸಾಮಾನ್ಯವಾಗಿ ಒಂದೇ ಪ್ರದೇಶದಲ್ಲಿ ವಾಸಿಸುವುದಿಲ್ಲ ಎಂಬ ಅಂಶವನ್ನು ಗಮನಿಸಲಾಗಿದೆ. ಅವು ಒಂದೇ ಸ್ಥಳದಲ್ಲಿದ್ದರೆ ಭಿನ್ನ ತೆರನ ಆಹಾರವನ್ನು ಉಪಯೋಗಿಸುತ್ತವೆ; ಅಥವಾ ಪರಿಸರದಲ್ಲಿ ಬೇರೆ ಬೇರೆಯ ಆಯ್ಕೆಯ ಕ್ಷೇತ್ರಗಳಲ್ಲಿ (ನಿಶ್) ವಾಸಿಸುತ್ತವೆ. ಯಾವುದೇ ಎರಡು ಪ್ರಭೇದಗಳು ಒಂದೇ ರೀತಿಯ ಆಯ್ಕೆಯ ಕ್ಷೇತ್ರವನ್ನು ಆಕ್ರಮಿಸಲಾರವು. ಆದರೆ ಒಂದು ಪ್ರಭೇದದ ಗುಣಗಳು ಮತ್ತೊಂದರ ಗುಣಗಳನ್ನು ಹೆಚ್ಚಾಗಿ ಹೋಲುವ ಸಂದರ್ಭಗಳಲ್ಲಿ ಅವುಗಳ ಕ್ಷೇತ್ರಾವಶ್ಯಕತೆಗಳು ಒಂದೇ ರೀತಿಯಾಗಿರುವುವು. ಇಂಥ ಸಂದರ್ಭಗಳಲ್ಲಿ ಸ್ಪರ್ಧೆ ಇದ್ದೇ ಇರುವುದು. ಪ್ರಾಯೋಗಿಕ ಅಧ್ಯಯನಗಳ ಪ್ರಕಾರ ಅನೇಕ ಸಂದರ್ಭಗಳಲ್ಲಿ ಒಂದು ಕ್ಷೇತ್ರವನ್ನು ಒಂದೇ ಪ್ರಭೇದ ಸಂದಣಿ ಅಲಂಕರಿಸುತ್ತದೆ. ಹತ್ತಿರ ಸಂಬಂಧಿ ಪ್ರಭೇದಗಳಲ್ಲಿ ಒಂದು ಪ್ರಭೇದ ಇನ್ನೊಂದನ್ನು ಒಂದು ಪರಿಸರ ವ್ಯೂಹದಿಂದ ಬೇರ್ಪಡಿಸುವ ಸ್ಪರ್ಧಾಪ್ರವೃತ್ತಿಯನ್ನು ಸ್ಪರ್ಧಾತ್ಮಕ ಬಹಿಷ್ಕರಣ ತತ್ತ್ವ (ಕಾಂಪಿಟಿಷನ್ ಎಕ್ಸ್‌ಕ್ಲೂಷನ್ ಪ್ರಿನ್ಸಿಪಲ್) ಎಂದು ಕರೆಯುವರು. ಈ ತತ್ತ್ವವನ್ನು ಉದಾಹರಣೆಯಿಂದ ವಿವರಿಸಬಹುದು. ಪ್ಯಾರಮೀಸಿಯಮ್ ಕಾಡೇಟಮ್ ಮತ್ತು ಪ್ಯಾರಮೀಸಿಯಮ್ ಅರೀಲಿಯ ಪ್ರಭೇದಗಳನ್ನು ಬೇರೆ ಬೇರೆಯಾಗಿ ಅನುಕೂಲತಮ ಪರಿಸ್ಥಿತಿಗಳಲ್ಲಿ ಬೆಳೆಸಿದಾಗ ಅವು ಸಾಮಾನ್ಯ ರೀತಿಯ ಸಿಗ್ಮಾಯಿಡ್

ಬೆಳೆವಣಿಗೆ ವಕ್ರರೇಖೆಯನ್ನನುಸರಿಸಿ ಬೆಳೆಯುವುವು. ಆದರೆ ಎರಡು ಪ್ರಭೇದಗಳನ್ನು ಕೂಡಿಸಿ ಕೃಷಿ ಮಾಡಿದಾಗ ಪ್ಯಾ. ಕಾಡೇಟಮ್‌ನ ಬೆಳೆವಣಿಗೆ ಆಗುವುದಿಲ್ಲ.

ಪರಭಕ್ಷಣೆ ಮತ್ತು ಪರಾವಲಂಬನೆ: ಇವೆರಡೂ ಋಣಾತ್ಮಕ ರೀತಿಯ ಅಂತರಕ್ರಿಯೆಗಳು. ಪರಭಕ್ಷಿಗಳು ಮತ್ತು ಪರಾವಲಂಬಿಗಳು ಜೀವಿಗಳನ್ನು ಸಾಯಿಸುವುವು ಮತ್ತು ಗಾಯಗೊಳಿಸುವುವು. ಒಂದು ರೀತಿಯಲ್ಲಿ ಇವು ಸಂದಣಿಗಳ ಬೆಳೆವಣಿಗೆಯ ದರವನ್ನು ಕಡಿಮೆ ಮಾಡುತ್ತವೆ. ಇವು ಹೆಚ್ಚಾಗಿ ಹಾನಿಕರವಾದರೂ ಕೆಲವು ಸಂದರ್ಭಗಳಲ್ಲಿ ಮನುಷ್ಯನಿಗೆ ಅನುಕೂಲವಾಗುವ ಕಾರ್ಯಗಳನ್ನು ಮಾಡುವುದೂ ಉಂಟು. ಉದಾಹರಣೆಗೆ ಇವು ತಮ್ಮ ಚಟುವಟಿಕೆಗಳಿಂದ ಸಸ್ಯಾಹಾರಿ ಕೀಟಗಳ ಸಂದಣಿಯ ಸಾಂದ್ರತೆಯನ್ನು ಕಡಿಮೆ ಮಾಡುತ್ತವೆ. ಆತಿಥೇಯ ಸಂದಣಿ ಒಂದು ಮಿತಿಯಲ್ಲಿದ್ದಾಗ ಈ ಕಾರ್ಯ ಸಾಧ್ಯ. ಆದರೆ ಆತಿಥೇಯ ಸಂದಣಿ ಸಾಂದ್ರತಾವಲಂಬಿ ನಿಯಂತ್ರಣದಿಂದ ತಪ್ಪಿಸಿಕೊಂಡು ಪರಿಸರದ ಧಾರಣಸಾಮರ್ಥ್ಯವನ್ನು ಮೀರಿ ಬೆಳೆದಾಗ ಅವುಗಳ ಮೇಲೆ ಪರಭಕ್ಷಿಗಳು ಹಾಗೂ ಪರಾವಲಂಬಿಗಳು ಯಾವ ತೆರನ ಪ್ರಭಾವವನ್ನೂ ಬೀರಲಾರವು. ಪರಭಕ್ಷಿಗಳ ಒತ್ತಡ ಕಡಿಮೆಯಾದಾಗ ಆತಿಥೇಯ ಸಂದಣಿ ಹೆಚ್ಚಾಗಿ ಸ್ಫೋಟಗೊಳ್ಳಬಹುದು. ಇದನ್ನು ಆರಿಜೋನದ ಕೈಬಾಟ್ ಹುಲ್ಲುಗಾವಲಿನ ಜಿಂಕೆಗಳ ಬೆಳೆವಣಿಗೆಯ ಮೂಲಕ ಉದಾಹರಿಸಬಹುದು. 1907ರಲ್ಲಿ ಕೈಬಾಟ್ ಪ್ರಸ್ಥಭೂಮಿಯ ಸುಮಾರು 7,00,000 ಎಕರೆ ಜಮೀನಿನಲ್ಲಿ ಸುಮಾರು 4,000 ಜಿಂಕೆಗಳಿದ್ದುವು. ಸುಮಾರು 17 ವರ್ಷಗಳಲ್ಲಿ ಅವುಗಳ ಸಂಖ್ಯೆ 100,000ಕ್ಕೆ ಏರಿತು. 1907ರಲ್ಲಿ ಜಿಂಕೆಗಳ ಶತ್ರುಗಳಾದ ತೋಳ, ಕಯೋಟ್ ಮತ್ತು ಪ್ಯೂಮಗಳನ್ನು ಕೊಲ್ಲುವ ಪ್ರಯತ್ನಗಳು ಪ್ರಾರಂಭವಾಗಿ ಸುಮಾರು 15–20 ವರ್ಷಗಳಲ್ಲಿ ಹೆಚ್ಚು ಸಂಖ್ಯೆಯ ಪರಭಕ್ಷಿಗಳು ನಾಶವಾದುವು. ಇದರಿಂದಾಗಿ ಜಿಂಕೆಗಳ ಸಂಖ್ಯೆ ಬರು ಬರುತ್ತಾ ಹೆಚ್ಚಾಗಿ 1924ರಲ್ಲಿ ಅವುಗಳ ಸಂಖ್ಯೆ 100,000ಕ್ಕೆ ಏರಿತು. ಒಂದು ಪರಿಮಿತಿಯಲ್ಲಿದ್ದ ಜಿಂಕೆಗಳ ಸಂಖ್ಯೆ ಹೆಚ್ಚಾಗಿ ಆ ಪ್ರದೇಶದಲ್ಲಿದ್ದ ಆಹಾರವನ್ನೆಲ್ಲ ಅವು ಉಪಯೋಗಿಸುತ್ತ ಬಂದುವು. ತತ್ಫಲವಾಗಿ ಆಹಾರ ಸಾಲದೆ ಅನೇಕ ಜಿಂಕೆಗಳು ಸತ್ತವು. 1939ರ ಹೊತ್ತಿಗೆ ಕೇವಲ 10,000 ಜಿಂಕೆಗಳು ಮಾತ್ರ ಉಳಿದಿದ್ದುವು. ನಿಸರ್ಗದಲ್ಲಿ ಪರಭಕ್ಷಿ ಮತ್ತು ಆತಿಥೇಯ ಜೀವಿಗಳ ಪ್ರಮಾಣವು ಅವುಗಳ ಸಂದಣಿಯನ್ನು ಒಂದು ಸಮತೋಲನ ಹಂತದಲ್ಲಿಡುವುದನ್ನೂ ಒಂದು ಪರಿಸರ ವ್ಯೂಹದ ಧಾರಣ ಸಾಮರ್ಥ್ಯವನ್ನು ಮೀರಿ ಒಂದು ಸಂದಣಿ ಬೆಳೆದರೆ ಆಗುವ ಹಾನಿಯನ್ನೂ ಈ ಉದಾಹರಣೆ ತಿಳಿಸುತ್ತದೆ. ಬೇರೆ ಸಂದರ್ಭಗಳಲ್ಲಿಯೂ ಸಂದಣಿಯ ಸ್ಫೋಟವಾಗಬಹುದು. ಉದಾಹರಣೆಗೆ ಒಂದು ಹೊಸ ಪ್ರದೇಶಕ್ಕೆ ಒಂದು ಪ್ರಭೇದವನ್ನು ಸೇರಿಸಿದಾಗ ಸಂದಣಿಯ ಸ್ಫೋಟವಾಗಬಹುದು. ಇದಕ್ಕೆ ಎರಡು ಕಾರಣಗಳಿವೆ; (i) ಹೊಸ ಪ್ರದೇಶದಲ್ಲಿ ಉಪಯೋಗಿಸದೆ ಇರುವ ಆಹಾರ ಪದಾರ್ಥ ಇರುವುದು, (ii) ಋಣಾತ್ಮಕ ಅಂತರಕ್ರಿಯೆಗಳಿಲ್ಲದಿರುವುದು. ಈ ಎರಡು ಅಂಶಗಳು ಜೀವಿಯ ಬೆಳೆವಣಿಗೆಗೆ ಅನುಕೂಲವಾಗಿ ಜೀವಿಸಂದಣಿ ಅತಿ ಜಾಗ್ರತೆಯಾಗಿ ಬೆಳೆದು ಸಂದಣಿಯ ಸ್ಫೋಟನೆ ಉಂಟಾಗುತ್ತದೆ. ಉದಾಹರಣೆಗೆ ಆಸ್ಟ್ರೇಲಿಯ ಖಂಡಕ್ಕೆ ಸೇರಿದ ಮೊಲಗಳು ಯಾವ ಪರಭಕ್ಷಿಗಳ ಆತಂಕವಿಲ್ಲದೆ ಅಲ್ಲಿನ ಆಹಾರವನ್ನು ಉಪಯೋಗಿಸಿ ಅತಿವೇಗದಲ್ಲಿ ವೃದ್ಧಿಯಾಗಿ ಆ ಖಂಡವನ್ನೆಲ್ಲ ಆಕ್ರಮಿಸಿದುವು.

ಧನಾತ್ಮಕ ಅಂತರಕ್ರಿಯೆಗಳು : ಸಹಭೋಜನ, ಸಹಕಾರ ಮತ್ತು ಪರಸ್ಪರತೆ ಇವು ಧನಾತ್ಮಕ ಅಂತರಕ್ರಿಯೆಗಳು. ಎರಡು ಪ್ರಭೇದ ಸಂದಣಿಗಳ ಸಹವಾಸ (ಅಸೋಸಿಯೇಷನ್) ಧನಾತ್ಮಕ ಕ್ರಿಯೆಗಳಲ್ಲಿ ಅಂತ್ಯಗೊಳ್ಳಬಹುದು. ಈ ಬಗೆಯ ಕ್ರಿಯೆಯ ವ್ಯಾಪ್ತಿ ಸಂದಣಿಗಳಲ್ಲಿ ಹೆಚ್ಚಾಗಿದೆ. ಸ್ಪರ್ಧೆ ಪರಾವಲಂಬನೆ ಮುಂತಾದ ಕ್ರಿಯೆಗಳಷ್ಟೆ ಈ ಅಂತರಕ್ರಿಯೆಯೂ ಮುಖ್ಯ. ಇವುಗಳ ಕ್ರಿಯೆಗಳು ಸಂದಣಿಯ ಮತ್ತು ಸಮುದಾಯಗಳ ರೀತಿ ನೀತಿಗಳನ್ನು ತಿಳಿಯಲು ಸಹಾಯಕವಾಗುತ್ತವೆ. ಧನಾತ್ಮಕ ಅಂತರಕ್ರಿಯೆಗಳನ್ನು ವಿಕಾಸ ಕ್ರಮದಲ್ಲಿ ಈ ರೀತಿಯಲ್ಲಿ ಪರಿಗಣಿಸಬಹುದು.

(i) ಸಹಭೋಜನ (ಒಂದು ಸಂದಣಿ ಅನುಕೂಲ ಪಡೆಯುವುದು)

(ii) ಆದ್ಯಸಹಕಾರ (ಎರಡು ಸಂದಣಿಗಳೂ ಅನುಕೂಲ ಪಡೆಯುವುದು)

(iii) ಪರಸ್ಪರತೆ (ಎರಡು ಸಂದಣಿಗಳೂ ಅನುಕೂಲಗಳನ್ನು ಪಡೆಯುವುವಲ್ಲದೆ ಒಂದು ಸಂದಣಿ ಮತ್ತೊಂದರ ಮೇಲೆ ಪೂರ್ಣವಾಗಿ ಅವಲಂಬಿತವಾಗಿರುತ್ತದೆ). ನಿಸರ್ಗದಲ್ಲಿ ಸ್ಪರ್ಧೆಯ ಅಂತರಕ್ರಿಯೆ ಬಹುಮುಖ್ಯವಾದುದು. ಈ ಕ್ರಿಯೆಯಿಂದ ಮತ್ತು ಸಹಕಾರ ಕ್ರಿಯೆಯಿಂದ ನಿಸರ್ಗದ ಆಯ್ಕೆ ಆಗುತ್ತದೆ.

ಪರಿಸರ ವ್ಯವಸ್ಥೆಯ ಸಮತೋಲನೆ ಎರಡು ಸಂದಣಿಗಳ ಋಣಾತ್ಮಕ ಮತ್ತು ಧನಾತ್ಮಕ ಅಂತರಕ್ರಿಯೆಗಳ ಸಮತೋಲನೆಯನ್ನು ಅವಲಂಬಿಸಿದೆ. ಸಹಭೋಜನಕ್ರಿಯೆ ಒಂದು ಸರಳರೀತಿಯ ಧನಾತ್ಮಕ ಅಂತರಕ್ರಿಯೆ. ಇದು ಬಹುಶಃ ಉಪಕಾರದ ಸಂಬಂಧಗಳ ಬೆಳೆವಣಿಗೆಯ ಮೊದಲ ಹೆಜ್ಜೆಯಾಗಬಹುದು. ಈ ಕ್ರಿಯೆ ಕಡಲಿನ ಅಚಲ ಸಸ್ಯಗಳ ಮತ್ತು ಪ್ರಾಣಿಗಳ ನಡುವೆ ಹಾಗೂ ಚಲನಾಜೀವಿಗಳಲ್ಲಿ ಬಹು ಸಾಮಾನ್ಯ. ಹುಳುವಿನ ಬಿಲ, ಮೃದ್ವಂಗಿ ಅಥವಾ ಸ್ಪಂಜುಗಳಲ್ಲಿ ಅನೇಕ ಅತಿಥಿಗಳು ಇದ್ದೇ ಇರುವುವು. ಇವುಗಳಿಗೆ ಸಾಮಾನ್ಯವಾಗಿ ಬೇಕಾದುದು ಆತಿಥೇಯದ ಸ್ಥಳದ ಆಶ್ರಯ. ಆದರೆ ಈ ಅತಿಥಿಗಳಿಂದ ಆತಿಥೇಯಕ್ಕೆ ತೊಂದರೆಯಾಗಲಿ ಅನುಕೂಲವಾಗಲಿ ಇಲ್ಲ. ವಿವಿಧ ಜಾತಿಯ ಸಹಭೋಜಿ ಮೀನುಗಳು, ಕಪ್ಪೆಚಿಪ್ಪು ಪ್ರಾಣಿಗಳು, ಪಾಲಿಕೀಟ, ಹುಳುಗಳು, ಏಡಿಗಳು ಆತಿಥೇಯ ಪ್ರಾಣಿಗಳ ಆಹಾರ ಅಥವಾ ತ್ಯಾಜ್ಯಪದಾರ್ಥಗಳನ್ನು ಕಸಿದುಕೊಂಡು ಜೀವಿಸುತ್ತವೆ. ಸಹಭೋಜನವನ್ನು ಏಡಿ ಮತ್ತು ಕುಟುಕುಕಣವಂತಗಳಲ್ಲಿ (ಸೀಲೆಂಟರೇಟ) ಕಾಣಬಹುದು. ಕುಟುಕುಕಣವಂತಗಳು ಏಡಿಯ ಬೆನ್ನಿನ ಮೇಲೆ ಬೆಳೆಯುವುವು. ಇದರಿಂದ ಏಡಿಯ ಸುಳಿವು ಬೇರೆ ಪ್ರಾಣಿಗಳಿಗೆ ತಿಳಿಯದ ಹಾಗೆ ಮಾಡಿ ಏಡಿಯನ್ನು ಪರೋಕ್ಷವಾಗಿ ರಕ್ಷಿಸುತ್ತವೆ. ಇದಕ್ಕೆ ಪ್ರತಿಯಾಗಿ ಏಡಿ ಕುಟುಕುಕಣವಂತಗಳನ್ನು ತಾನು ಹೋಗುವ ಕಡೆಯಲ್ಲೆಲ್ಲ ಕರೆದುಕೊಂಡು ಹೋಗುತ್ತದೆ. ಅಲ್ಲದೆ ಅದಕ್ಕೆ ತಾನು ಬೇರೆ ಪ್ರಾಣಿಯನ್ನು ಹಿಡಿದು ತಿನ್ನುವಾಗ ಆಹಾರಕಣಗಳನ್ನು ಒದಗಿಸುತ್ತದೆ. ಈ ರೀತಿಯ ಸಹವಾಸ ಇಲ್ಲದಿದ್ದರೂ ಅವು ಜೀವಿಸಬಲ್ಲವು. ಆದರೆ ಈ ರೀತಿಯ ಸಹಕಾರ ಮುಂದುವರಿದಾಗ ಪ್ರತಿಯೊಂದು ಪ್ರಭೇದವೂ ಮತ್ತೊಂದರ ಪೂರ್ಣ ಆಶ್ರಯದಾತವಾಗಿರುತ್ತವೆ. ಇಂಥ ಅಂತರಕ್ರಿಯೆಯನ್ನು ಪರಸ್ಪರತೆ ಅಥವಾ ಅವಶ್ಯಕ ಸಹಜೀವನ (ಆಬ್ಲಿಗೇಟ್ ಸಿಂಬೈಯೋಸಿಸ್) ಎಂದು ಹೆಸರಿಸಲಾಗುತ್ತದೆ. ಉದಾಹರಣೆಗೆ:

(i) ಗೆದ್ದಲು ಹುಳು ಮತ್ತು ಕರುಳಿನ ಕಶಾಂಗಿ ಪ್ರೋಟೊಜೋವಗಳ ಸಹ ಜೀವನ : ಅನೇಕ ಗೆದ್ದಲು ಹುಳುಗಳು ತಾವು ತಿನ್ನುವ ಮರವನ್ನು ಜೀರ್ಣಮಾಡಿಕೊಳ್ಳಲಾರವು. ಆದರೆ ಅವುಗಳ ಕರುಳಿನಲ್ಲಿರುವ ಕಶಾಂಗಿಗಳು (ಫ್ಲಾಜೆಲೇಟ್ಸ್) ಮರದಲ್ಲಿರುವ ಸೆಲ್ಯುಲೋಸ್ ಮತ್ತು ಇತರ ಸಸ್ಯಗಳ ಉಳಿಕೆಗಳನ್ನು ತಾವು ಸ್ರವಿಸುವ ಕಿಣ್ವಗಳ ಸಹಾಯದಿಂದ ಜೀರ್ಣಿಸುತ್ತವೆ. ಗೆದ್ದಲು ಹುಳು ಕಶಾಂಗಿಗಳಿಗೆ ಆಶ್ರಯ ಕೊಡುವುದಲ್ಲದೆ ಅವುಗಳ ಪ್ರಸಾರ ಮತ್ತು ಪುನರ್ ಸಂಪರ್ಕಗಳಿಗೆ (ರೀ ಇನ್‌ಫೆಕ್ಷನ್) ಸಹಾಯ ಮಾಡುತ್ತದೆ.

(ii) ಹುತ್ತವನ್ನು ನಿರ್ಮಿಸುವ ಉಷ್ಣವಲಯದ ಇರುವೆ ಮತ್ತು ಶಿಲೀಂಧ್ರಗಳ ಅಂತರಕ್ರಿಯೆ: ಇರುವೆಗಳು ಅವುಗಳ ಗೂಡುಗಳಲ್ಲಿರುವ ಎಲೆಗಳನ್ನು ಅವುಗಳ ಮಲದಿಂದ ಗೊಬ್ಬರವಾಗಿ ಪರಿವರ್ತಿಸಿ ಶಿಲೀಂಧ್ರ ಹೊಸ ಎಲೆಗಳ ಮೇಲೆ ಬೆಳೆಯಲು ಅನುಕೂಲ ಮಾಡಿಕೊಡುವುವು. ಅಂದರೆ ಇರುವೆಗಳು ತಮ್ಮ ಗೂಡುಗಳಲ್ಲಿ ಶಿಲೀಂಧ್ರ ತೋಟವನ್ನು ಕೃಷಿ ಮಾಡುತ್ತವೆ. ಶಿಲೀಂಧ್ರ ಪ್ರತಿಯಾಗಿ ಅವುಗಳ ಕಿಣ್ವಗಳಿಂದ ಸೆಲ್ಯುಲೋಸನ್ನು ಜೀರ್ಣಿಸಿ ಇರುವೆಗಳಿಗೆ ವಿಪುಲ ಮೊತ್ತದ ಸೆಲ್ಯುಲೋಸ್ ಸಿಗುವ ಹಾಗೆ ಮಾಡುವುದು. ಇರುವೆಗಳ ಮಲದಲ್ಲಿ ಪ್ರೋಟೀನನ್ನು ಜೀರ್ಣಿಸುವ ಕಿಣ್ವಗಳಿವೆ. ಆದರೆ ಇದು ಶಿಲೀಂಧ್ರದಲ್ಲಿಲ್ಲ. ಈ ರೀತಿಯ ಸಹಜೀವನದಿಂದ ಒಂದು ಜೀವಿ ಮತ್ತೊಂದು ಜೀವಿಗೆ ಸಹಾಯಕವಾಗುತ್ತದೆ.

(ಎನ್.ವಿ.ಎ.)

**ಜೀವುಂಡಿಗೆ:** ದೇಹದ ಯಾವುದೇ ತುಣುಕೊಂದನ್ನು ಹೊರತೆಗೆದು ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಿ ನೋಡುವ ಬಗೆ (ಬಯಾಪ್ಸಿ). ವಿಪತ್ಕಾರಕ ಹಾಗೂ ಅಪಾಯಕರವಲ್ಲದ ಗಡ್ಡೆಗಳನ್ನು ಪತ್ತೆಹಚ್ಚಲು ಈ ವಿಧಾನ ಅಗತ್ಯ. ಈ ಪರೀಕ್ಷೆಯಿಂದ ಏಡಿಗಂತಿಗಳ ಸ್ಥಳೀಯ ವ್ಯಾಪನೆಯ ಕ್ಷೇತ್ರವನ್ನು ತಿಳಿದುಕೊಳ್ಳಬಹುದು. ಸ್ಥಳೀಯ ದುಗ್ಧರಸ ಗ್ರಂಥಿಗಳಿಗೆ ಏಡಿಗಂತಿಯ ಕೋಶಗಳು ಆಗಲೇ ಒಯ್ಯಲ್ಪಟ್ಟಿವೆಯೆ ಎನ್ನುವುದನ್ನೂ ತಿಳಿದುಕೊಳ್ಳಬಹುದು. ಗಡ್ಡೆಯನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಬೇಕೆ, ತೆಗೆದರೆ ಎಷ್ಟರಮಟ್ಟಿಗೆ ತೆಗೆಯಬೇಕು ಮತ್ತು ತೆಗೆದಿರುವುದು ಸಾಕಾಗಿದೆಯೆ ಎನ್ನುವ ಮಾಹಿತಿಗಳನ್ನು ಈ ಪರೀಕ್ಷಾವಿಧಾನ ಒದಗಿಸುತ್ತದೆ. ವೃಷಣ, ಗರ್ಭಕೋಶ, ಯೋನಿ ಇವುಗಳ ಜೀವುಂಡಿಗೆಗಳು ಈ ಅಂಗಗಳಲ್ಲಿ ಸ್ವಾಭಾವಿಕ ದೈಹಿಕಕ್ರಿಯೆಗಳು ಜರಗುತ್ತಿವೆಯೊ ಇಲ್ಲವೋ ಎನ್ನುವುದನ್ನು ತಿಳಿಸುತ್ತವೆ. ಎಡೆಬಿಡದ ಜ್ವರದಲ್ಲಿ ಸೋಂಕಿನ ಮೂಲ ತಿಳಿಯದಾದಾಗ ಕೆಲವುಬಾರಿ ಜೀವುಂಡಿಗೆಯ ವಿಧಾನದಿಂದ ಅದರ ಕಾರಣವನ್ನು ಪತ್ತೆಹಚ್ಚಬಹುದು. ಈ ಪರೀಕ್ಷಾವಿಧಾನದಿಂದ ಅನುಕೂಲವಾಗಲು ಅಂಗದ ತುಣುಕೊಂದನ್ನು ಅಥವಾ ಒಳಗಿರುವ ದ್ರವವನ್ನು ತಕ್ಕ ಶಸ್ತ್ರಕ್ರಿಯೆಯಿಂದ ತೆಗೆದುಕೊಳ್ಳುವುದು ಎಷ್ಟು ಮುಖ್ಯವೊ ಆ ವಸ್ತು ಕೆಡದಂತೆ ಅದನ್ನು ಜೋಪಾನಮಾಡಿ ತಕ್ಕ ರಾಸಾಯನಿಕಗಳಿಂದ ಸಿದ್ಧಗೊಳಿಸಿ ಸೂಕ್ಷ್ಮದರ್ಶಕದ ಪರೀಕ್ಷೆಗೆ ಅಣಿಮಾಡುವುದು ಕೂಡ ಅಷ್ಟೇ ಮುಖ್ಯ. ಈ ಎರಡು ಕಾರ್ಯಗಳಲ್ಲಿ ಯಾವುದು ಕೆಟ್ಟರೂ ಪರೀಕ್ಷೆಯಿಂದ ಒದಗುವ ಮಾಹಿತಿ ತಪ್ಪಾಗಿ ರೋಗದ ವಿಷಯದಲ್ಲಿ ಮುಂದೆ ಅನುಸರಿಸಬೇಕಾದ ಕ್ರಮದಲ್ಲಿ ಏರುಪೇರಾಗಿ ಅಪಾಯ ಸಂಭವಿಸಬಹುದು. ವಾಯುಚೂಷಣ ಸೂಜಿ, ಹೀರೊತ್ತುವ ಸ್ಪಂಜು, ಕೆರೆಯುವ ಚಮಚ, ಹೆರೆಯುವ

ಕಿರುಗತ್ತಿ, ಮೂಳೆ ಕೊರೆಯುವ ಉರುಳು ಗರಗಸ, ಕತ್ತರಿಸುವ ಇಕ್ಕಳ–ಇವೇ ಮುಂತಾದುವು ಜೀವುಂಡಿಗೆಯನ್ನು ಪಡೆಯಲು ಉಪಯೋಗಿಸುವ ಶಸ್ತ್ರವಿಧಾನಗಳು. ಸಾಮಾನ್ಯವಾಗಿ ಇವು ಸಣ್ಣ ಶಸ್ತ್ರಕ್ರಿಯೆಗಳೆಂದು ಪರಿಗಣಿಸಲ್ಪಟ್ಟರೂ ಸಾಕಷ್ಟು ಎಚ್ಚರದಿಂದಿರದಿದ್ದರೆ ಜಟಿಲತೆಗಳು ಉಂಟಾಗಬಹುದು. ಹತ್ತಿರದ ರಕ್ತನಾಳಗಳೂ ನರಗಳೂ ಕತ್ತರಿಸಿಹೋಗುವುದು. ಜೀವುಂಡಿಗೆ ಹಾಕಿದ ಸ್ಥಳದಲ್ಲಿ ಸೋಂಕು ಉಂಟಾಗಿ ಕೀತು ವ್ರಣವಾಗುವುದು. ಒರಟು ವಿಧಾನಗಳಿಂದ ಏಡಿಗಂತಿಯ ಕೋಶಗಳು ದೇಹದ ಇತರ ಭಾಗಗಳಿಗೆ ರಕ್ತನಾಳ ಅಥವಾ ದುಗ್ಧರಸನಾಳಗಳ ಮೂಲಕ ಪಸರಿಸುವುದು, ಉಂಡಿಗೆ ಹಾಕುವಾಗ ಉಪಯೋಗಿಸುವ ಸ್ಥಳೀಕಸಂವೇದನಾ ನಾಶಕವಸ್ತುವಿನಿಂದ ಅನನುಕೂಲ ಪರಿಣಾಮಗಳು ತಲೆದೋರುವುದು–ಇವೆಲ್ಲ ಇಂಥ ಜಟಿಲತೆಗಳು. (ಜಿ.ಇ.ಸಿಎಚ್.)

**ಜೆನೆಟ್:** ಮ್ಯಾಮೇಲಿಯ ವರ್ಗ, ಕಾರ್ನಿವೊರ ಮತ್ತು ವೈವರಿಡೆ ಕುಟುಂಬಕ್ಕೆ ಸೇರಿದ ಚತುಷ್ಪಾದಿ. ಪುನುಗಿನ ಬೆಕ್ಕಿನ ಹತ್ತಿರ ಸಂಬಂಧಿ. ದಕ್ಷಿಣ ಯೂರೋಪ್, ಉತ್ತರ ಆಫ್ರಿಕ, ಹಾಗೂ ನೈಋತ್ಯ ಏಷ್ಯದಲ್ಲಿ ವಾಸಿಸುವ ಭೂವಾಸಿ ಇದು. ಸಾಧಾರಣವಾಗಿ ನದಿಯ ದಡಗಳಲ್ಲಿ ಓಡಾಡುತ್ತಿರುತ್ತದೆ. ಗಾತ್ರ ಹಾಗೂ ಬಾಹ್ಯ ರೂಪದಲ್ಲಿ ಬೆಕ್ಕನ್ನು ಹೋಲುತ್ತದೆ. ಆದರೆ ಇದರ ಕಾಲುಗಳು ತೆಳು ಮತ್ತು ಉದ್ದವಾಗಿ ಇವೆ. ಕಾಲುಗಳಲ್ಲಿ ಬಲವಾದ ಚೂಪಾದ ಉಗುರುಗಳುಂಟು. ಮೂತಿ ಉದ್ದವಾಗಿದೆ. ದೇಹದ ಮೇಲೆ ಮೃದುವಾದ ಕೂದಲಿಂದ ಕೂಡಿದ ತುಪ್ಪುಳ ಉಂಟು. ದೇಹದ ಬಣ್ಣ ಗಾಢ ಕಂದು. ಜೊತೆಗೆ ಕಪ್ಪು ಮಚ್ಚೆಗಳ ಸಾಲುಗಳೂ ಬೆನ್ನ ಮೇಲೆ ಕಪ್ಪು ಗೆರೆಯೂ ಇವೆ. ಬಾಲ ದೇಹಕ್ಕಿಂತ ಉದ್ದ. ಬಾಲದ ಮೇಲೆ ಬಿಳಿ ಮತ್ತು ಕಪ್ಪು ಬಣ್ಣಗಳ ಪಟ್ಟೆಗಳಿವೆ. ಪುನುಗಿನ ಬೆಕ್ಕಿನಲ್ಲಿರುವಂತೆಯೇ ಇದರಲ್ಲೂ ಗುದದ್ವಾರದ ಬಳಿ ಸುಗಂಧದ್ರವವನ್ನು ಸ್ರವಿಸುವ ಗ್ರಂಥಿಗಳುಂಟು. ಆದರೆ ಸುಗಂಧದ ಮೊತ್ತ ಬಲು ಕಡಿಮೆ. ಜೆನೆಟ್ ಸಣ್ಣ ಸಣ್ಣ ಸ್ತನಿಗಳನ್ನು ಹಿಡಿದು ಭಕ್ಷಿಸುತ್ತದೆ. ಇದರ ಚಟುವಟಿಕೆಯೆಲ್ಲ ರಾತ್ರಿಯಲ್ಲಿ ಮಾತ್ರ. ಹಗಲಿನಲ್ಲಿ ಬಂಡೆಗಳ ಸಂದುಗಳಲ್ಲಿ, ಮರಗಳ ಡೊಗರುಗಳಲ್ಲಿ ಇಲ್ಲವೆ ದೊಡ್ಡ ರೆಂಬೆಗಳಲ್ಲಿ ಅಡಗಿದ್ದು ವಿಶ್ರಮಿಸುತ್ತದೆ.

ಜೆನೆಟ್ ವರ್ಷಕ್ಕೆರಡು ಬಾರಿ ಮರಿ ಹಾಕುತ್ತದೆ. ಮರಿಗಳ ಸಂಖ್ಯೆ ಒಂದು ಸೂಲಿಗೆ 2 ಇಲ್ಲವೆ 3. (ಕೆ.ಪಿ.ಆರ್.)

**ಜೆನೆಟಿಕ್ ತಂತ್ರಜ್ಞಾನ:** ಜೈವಿಕ ತಂತ್ರಜ್ಞಾನದ ಬಳಕೆಯಿಂದ ಪ್ರಾಣಿಯ ಜೀನ್‌ಗಳನ್ನು ನೇರವಾಗಿ ಮಾರ್ಪಡಿಸುವುದು. ಇದಕ್ಕೆ ಜೀನ್ ಮ್ಯಾನಿಪುಲೇಷನ್ ಅಥವಾ ಜೆನಿಟಿಕ್ ಮಾಡಿಫಿಕೇಶನ್ (ತಳಿಗುಣ ಮಾರ್ಪಡಿಕೆ ಅಥವಾ ತಳಿಗುಣ ಪರಿಷ್ಕರಣೆ), ಜೆನಿಟಿಕ್ ಇಂಜಿನೆಯರಿಂಗ್, ರಿಕಾಂಬಿನೆಂಟ್ ಡಿಎನ್‌ಎ ಟೆಕ್ನಾಲಜಿ (ಡಿಎನ್‌ಎ ಮಿಶ್ರಣ ಟೆಕ್ನಾಲಜಿ) ಎಂಬ ಪರ್ಯಾಯ ಹೆಸರುಗಳಿವೆ. ಜೀನ್‌ಗಳನ್ನು ಬದಲಾಯಿಸುವ ಮುಖಾಂತರ ಅದರ ದೈಹಿಕ ಗುಣ ಲಕ್ಷಣಗಳನ್ನು ಬದಲಾಯಿಸಿ, ನಮಗೆ ಅಗತ್ಯ ಗುಣಗಳಿರುವ ಪ್ರಾಣಿಗಳನ್ನು ಸೃಷ್ಟಿಸುವುದು ಸಾಧ್ಯ. ಇದರಿಂದ ಸಮಾಜಕ್ಕೆ ಲಾಭವಿದೆ ಎಂಬ ನಂಬಿಕೆಯ ಆಧಾರದ ಮೇಲೆ ತಳಿ ತಂತ್ರಜ್ಞಾನ ಬೆಳೆದಿದೆ. ಹೆಚ್ಚು ಇಳುವರಿ ಕೊಡುವ, ರೋಗನಿರೋಧಕ ಶಕ್ತಿಯಿರುವ ಆರ್ಥಿಕವಾಗಿ ಲಾಭದಾಯಕವಾದ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ, ಹೆಚ್ಚು ಹಾಲನ್ನು ಉತ್ಪಾದಿಸಬಲ್ಲ ಜಾನುವಾರು ತಳಿಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಮತ್ತು ಹಲವು ಬಗೆಯ ಮಾರಣಾಂತಿಕ ರೋಗಗಳಿಂದ ಮನುಷ್ಯರನ್ನು ಕಾಪಾಡುವುದಕ್ಕೆ ತಳಿ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.

ಸರಳ ರೂಪದ ತಳಿ ತಂತ್ರಜ್ಞಾನ ಅತ್ಯಂತ ಪ್ರಾಚೀನ ಕಾಲದಿಂದಲೂ ಬಳಕೆಯಲಿದೆ. ಆಯ್ದ ತಳಿಗಳ ಬೆಳೆವಣಿಗೆ ಎಂಬುದು ಮನುಷ್ಯ ಕಂಡುಕೊಂಡ ಮೊಟ್ಟ ಮೊದಲ ತಳಿ ತಂತ್ರಜ್ಞಾನದ ಪ್ರಯತ್ನ. ಬೈಬಲ್ಲಿನ ಮೊದಲ ಅಧ್ಯಾಯದಲ್ಲಿ ಬರುವ ಜಾಕಬ್‌ನ ಕಥೆ, ಇದರ ಒಂದು ಉದಾಹರಣೆ ಎಂದು ಕೆಲವರು ಭಾವಿಸುತ್ತಾರೆ. ಇತಿಹಾಸ ಪೂರ್ವ ಕಾಲದ ಮನುಷ್ಯರು ಆಹಾರ ಸಂಗ್ರಹಣೆಯ ಕಾಲದಲ್ಲಿ ಉಪಯುಕ್ತವಾದ ಗಿಡಮರಗಳ ಬೀಜಗಳನ್ನು ಸಂಗ್ರಹಿಸಿ ಕಾಪಾಡುತ್ತಿದ್ದು, ಆಹಾರ ಪದಾರ್ಥಗಳಿಗೆ ಹುದುಗು ಬರಿಸುವಂಥ ಯೀಸ್ಟ್ ಬಳಕೆಯನ್ನು ಕಂಡುಕೊಂಡದ್ದು, ಮಿಶ್ರತಳಿಗಳ ಅಭಿವೃದ್ಧಿ ಇವೆಲ್ಲ ಇತಿಹಾಸ ಪೂರ್ವ ಯುಗದಲ್ಲೆ ನಡೆದ ತಳಿ ತಂತ್ರಜ್ಞಾನ ಪ್ರಯೋಗಗಳು. 20ನೆಯ ಶತಮಾನದಲ್ಲಿ ಗ್ರೆಗರ್ ಮೆಂಡಲ್ ನಡೆಸಿದ ಕ್ಲಾಸಿಕಲ್ ಪ್ಲಾಂಟ್ ಹೈಬ್ರಿಡೈಜೆಶನ್ ಪ್ರಯೋಗಗಳಿಂದಾಗಿ ಆತ ತಳಿಶಾಸ್ತ್ರದ ಪಿತಾಮಹ ಎಂದು ಪ್ರಸಿದ್ಧ. ಹರ್ಬರ್ಟ್ ಬೋಯರ್ ಮತ್ತು ಸ್ಟಾನ್ಲಿ ಕೋಹೆನ್ ಅವರು 1973 ಅನ್ವೇಷಿಸಿದ ರಿಕಾಂಬಿನೆಂಟ್ ಡಿಎನ್‌ಎ ತಂತ್ರಜ್ಞಾನ ತಳಿ ತಂತ್ರಜ್ಞಾನದ ಬೆಳೆವಣಿಗೆಯಲ್ಲಿ ಮಹತ್ವದ ಮೈಲುಗಲ್ಲು.

ತಳಿತಂತ್ರಜ್ಞಾನದ ಕಾರ್ಯವಿಧಾನ: ಜೀವಿಗಳ ಜೀವಕೋಶದಿಂದ ನಮಗೆ ಅವಶ್ಯಕವಾದ ಡಿಎನ್‌ಎಯನ್ನು ಪ್ರತ್ಯೇಕಿಸಿ ತೆಗೆದಿಟ್ಟುಕೊಳ್ಳುವುದು ಮೊದಲ ಹೆಜ್ಜೆ. ಈ ಜೀವಿಗಳು ಒಂದೇ ಪ್ರಭೇದಕ್ಕೆ ಸೇರಿದವಾಗಿರಬೇಕು ಎಂದೇನೂ ಇಲ್ಲ. ಹೀಗೆ ತಳಿಗುಣಗಳನ್ನು ಪ್ರತ್ಯೇಕಿಸುವುದಕ್ಕೆ ಭೌತಿಕ ಅಥವಾ ರಾಸಾಯನಿಕ ವಿಧಾನಗಳನ್ನು ಬಳಸಬಹುದು. ಅನಂತರ ಅದನ್ನು ಇನ್ನೊಂದು ಜೀವಿಯ ಡಿಎನ್‌ಎ ಯೊಂದಿಗೆ ಸೇರಿಸಬೇಕು. ಹಾಗೆ ದೊರೆತ ಡಿಎನ್‌ಎ ಪ್ರಮಾಣವು ಕಡಿಮೆಯಾಗಿದ್ದರೆ ಪಾಲಿಮೆರೇಸ್ ಚೈನ್ ರಿಯಾಕ್ಷನ್ ವಿಧಾನದಿಂದ ಅದರ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬಹುದು. ಈ ಕಾರ್ಯಕ್ಕೆ ವಿಜ್ಞಾನಿಗಳು ಜೀನ್ ಲೈಬ್ರರಿಯನ್ನು ಬಳಸಿಕೊಳ್ಳುತ್ತಾರೆ. ಆಯ್ದ ಡಿಎನ್‌ಎ ಗಳನ್ನು ಸೂಕ್ಷ್ಮಾಣುಗಳಿಗೆ ಸೇರಿಸಿ, ಅವುಗಳಲ್ಲಿ ಬೆಳೆದ ಡಿಎನ್‌ಎ ಗಳನ್ನು ಸೂಕ್ಷ್ಮವಾಗಿ ವರ್ಗೀಕರಿಸಿ ಶೇಖರಿಸಿಟ್ಟುಕೊಳ್ಳುತ್ತಾರೆ. ಸೂಕ್ಷ್ಮಾಣುಗಳಲ್ಲಿ ಸಂತಾನೋತ್ಪತ್ತಿ ಅತಿ ವೇಗವಾಗಿ ನಡೆಯುವುದರಿಂದ ಅವುಗಳಿಗೆ ಸೇರಿಸಿದ ಡಿಎನ್‌ಎಗಳು ಕೂಡ ಶೀಘ್ರವಾಗಿ ವೃದ್ಧಿಸುತ್ತವೆ. ತಳಿತಂತ್ರಜ್ಞಾನದಿಂದ ವೃದ್ಧಿಗೊಂಡ ಜೀವಿಗಳನ್ನು ಜಿಎಂಒ (ಜೆನಿಟಿಕಲಿ ಮಾಡಿಫೈಡ್ ಆರ್ಗಾನಿಸಂ – ಜೈವಿಕವಾಗಿ ಪರಿಷ್ಕೃತಗೊಂಡ ಜೀವಿಗಳು ಅಥವಾ ಕುಲಾಂತರಿಗಳು) ಎಂದು ಕರೆಯುತ್ತಾರೆ. ಜೀವಿಯಿಂದ ಅಥವಾ ಜೆನಿಟಿಕ್ ಲೈಬ್ರರಿಯಿಂದ ಆಯ್ದುಕೊಂಡ ಡಿಎನ್‌ಎಯನ್ನು ಮತ್ತೊಂದು ಜೀವಿಗೆ ಸೇರ್ಪಡೆ ಮಾಡಲು ಸೂಕ್ಷ್ಮ ಜೀವಿಗಳನ್ನು ವಾಹಕಗಳಂತೆ ಬಳಸಲಾಗುತ್ತದೆ. ಈ ವಾಹಕಗಳನ್ನು ಪ್ಲಾಸ್ಮಿಡ್ ಎಂದು ಕರೆಯುತ್ತಾರೆ. ಅನೇಕ ಬಗೆಯ ಪ್ಲಾಸ್ಮಿಡ್‌ಗಳು ಇವೆ. ಉದಾ : ಪಿಬಿಆರ್ 12, ಪಿಯುಸಿ 18, ಇತ್ಯಾದಿ. ಇತ್ತೀಚಿನ ದಿನಗಳಲ್ಲಿ ಜೀನ್ ಗನ್ ವಿಧಾನದಿಂದಲೂ ಡಿಎನ್‌ಎ ಸೇರ್ಪಡೆ ನಡೆಯುತ್ತಿದೆ. ಅತಿ ಸೂಕ್ಷ್ಮ ಪ್ರಮಾಣದ ಚಿನ್ನ ಅಥವಾ ಟಂಗ್‌ಸ್ಟನ್ ಕಣಗಳ ಮೇಲೆ ಜೀನ್‌ಗಳನ್ನು ಹೊಂದಿರುವ ಡಿಎನ್‌ಎ ಲೇಪಿಸಿ ಅದನ್ನು ಉದ್ದೇಶಿಸಿದ ಜೀವಿಗಳೊಳಗೆ ಸ್ಫೋಟಿಸುವುದು ಜೀನ್ ಗನ್ ವಿಧಾನ. ಹೀಗೆ ಸ್ಫೋಟಿಸಿದ ಡಿಎನ್‌ಎ ಗುರಿ ಜೀವಿಯ ಜೀವಕೋಶದ ನ್ಯೂಕ್ಲಿಯಸ್‌ಗೆ ಸೇರಿ ಅಲ್ಲಿ ಸಹಜವಾಗಿ ವೃದ್ಧಿಹೊಂದುತ್ತದೆ.

ವಿಧಾನ : ತಂತ್ರಜ್ಞಾನದಲ್ಲಿ ಒಂದು ಜೀವಿಯ ತಳಿಗುಣವನ್ನು ತುಂಡರಿಸಿ ಹೊರತೆಗೆದು, ಇನ್ನೊಂದು ಜೀವಿಯೊಳಗೆ ಸೇರಿಸಿ ಕಸಿ ಮಾಡಲು ಸಾಧ್ಯ. ತಳಿಗುಣಗಳನ್ನು ನಿರ್ದಿಷ್ಟ ಸ್ಥಾನದಲ್ಲಿ ತುಂಡರಿಸಲು, ರೆಸ್ಟ್ರಿಕ್ಷನ್ ಎಂಡೋನ್ಯೂಕ್ಲೀಸ್ ಗುಂಪಿನ ಕಿಣ್ವಗಳನ್ನು ಉಪಯೋಗಿಸುತ್ತಾರೆ. ಈ ಕಿಣ್ವ ಡಿಎನ್‌ಎಯನ್ನು ನಿಶ್ಚಿತ ಸ್ಥಾನಗಳಲ್ಲಿ ತುಂಡರಿಸುತ್ತದೆ. ಇವನ್ನು ಅಣುವಿನ ಕತ್ತರಿ (ಮಾಲಿಕ್ಯುಲರ್ ಸಿಜ಼ರ್ಸ್) ಎಂದು ಕರೆಯುತ್ತಾರೆ. ಅನೇಕ ವಿಧದ ರೆಸ್ಟ್ರಿಕ್ಶನ್ ಎಂಡೊನ್ಯೂಕ್ಲೀಸ್‌ಗಳಿವೆ. ತಳಿತಂತ್ರಜ್ಞಾನದಲ್ಲಿ ಲಿಗೇಸ್ ಕಿಣ್ವ ಪ್ರಧಾನ ಪಾತ್ರವಹಿಸುತ್ತದೆ. ಇದಕ್ಕೇ ಡಿಎನ್‌ಎ ತುಂಡುಗಳನ್ನು ಕೂಡಿಸುವ ಶಕ್ತಿ ಇದೆ. ತಳಿ ತಂತ್ರಜ್ಞಾನದಲ್ಲಿ ರಿಸ್ಟ್ರಿಕ್ಷನ್ ಎಂಡೊನ್ಯೂಕ್ಲೀಸ್ ಮತ್ತು ಲಿಗೇಸ್ ಕಿಣ್ವಗಳು ಬೇಕು.

ಬ್ಯಾಕ್ಟೀರಿಯಗಳ ಜೀವಕೋಶಗಳಲ್ಲಿ ಅದರ ವರ್ಣತಂತು ವೃತ್ತಾಕಾರದಲ್ಲಿದ್ದು, ಕೋಶದ ಒಂದು ಭಾಗದಲ್ಲಿರುತ್ತದೆ. ಇದರ ಜೊತೆಗೆ ಅದರ ಕೋಶದ್ರವ್ಯದಲ್ಲಿ ಕೆಲವು ಚಿಕ್ಕ ಡಿಎನ್‌ಎ ಸುರಳಿಗಳು ಇವೆ. ಈ ಡಿಎನ್‌ಎ ಅನ್ನು ಪ್ಲಾಸ್ಮಿಡ್ ಎನ್ನುತ್ತಾರೆ. ಬ್ಯಾಕ್ಟೀರಿಯ ಕೋಶವು ವಿಭಜನೆಯಾಗುವಾಗ ಪ್ಲಾಸ್ಮಿಡ್ ಕೂಡಾ ವಿಭಜನೆಯಾಗಿ ಮರಿಕೋಶಗಳಿಗೆ ಸಮನಾಗಿ ಹಂಚಿಕೆಯಾಗುತ್ತದೆ. ಪ್ಲಾಸ್ಮಿಡ್ ಡಿಎನ್‌ಎ ಯನ್ನು ಸೂಕ್ತ ರೆಸ್ಟ್ರಿಕ್ಶನ್ ಎಂಡೊನ್ಯೂಕ್ಲಿಯೇಸ್ ಕಿಣ್ವದಿಂದ ಕತ್ತರಿಸಿ ಹೊರತೆಗೆದು ಬೇರೊಂದು ಜೀವಿಯ ಕೋಶದೊಳಗೆ ಸೇರಿಸಿದರೆ ಅದು ಆತಿಥೇಯ ಕೋಶದ ಭಾಗ ಎನ್ನುವಂತೆ ವರ್ತಿಸುತ್ತದೆ. ಕೆಲವೊಮ್ಮೆ ಆತಿಥೇಯ ಕೋಶದ ವರ್ಣತಂತುವಿನೊಡನೆ ಸಂಯೋಗ ಹೊಂದಿ ಕೂಡಿಕೊಳ್ಳುತ್ತದೆ. ಕೆಲವೊಮ್ಮೆ ಆತಿಥೇಯ ಕೋಶದಿಂದ ಬೇರ್ಪಟ್ಟು ಹೊರಬರುತ್ತದೆ. ಹೀಗೆ ಹೊರ ಬೀಳುವಾಗ ಆತಿಥೇಯ ವರ್ಣತಂತುವಿನ ಕೆಲವು ಭಾಗಗಳನ್ನು ಕಿತ್ತು ತನ್ನೊಂದಿಗೆ ಹೊತ್ತೊಯ್ಯಬಲ್ಲದು ಅಥವಾ ಆತಿಥೇಯ ಜೀವಿಯ ಕೆಲವು ಜೀನ್‌ಗಳನ್ನು ಕಿತ್ತು ಪ್ಲಾಸ್ಮಿಡ್‌ನಲ್ಲಿ ಸೇರಿಸಿ ಪುನಃ ಬ್ಯಾಕ್ಟೀರಿಯ ಕೋಶದೊಳಗೆ ಸೇರಿಕೊಳ್ಳುವುದು ಸಾಧ್ಯವಿದೆ.

ಜೀವಿಯೊಂದರ ಉಪಯುಕ್ತ ಜೀನ್‌ನ್ನು ರೆಸ್ಟ್ರಿಕ್ಷನ್ ಕಿಣ್ವದಿಂದ ಕತ್ತರಿಸಿ ಹೊರತೆಗೆದು ಎ. ಕೋಲಿ ಅಥವಾ ಇನ್ನಿತರ ಬ್ಯಾಕ್ಟೀರಿಯದ ಪ್ಲಾಸ್ಮಿಡ್‌ನೊಂದಿಗೆ ಬೆರೆಸಿ ಈ ಬ್ಯಾಕ್ಟೀರಿಯಾಗಳನ್ನು ಪ್ರಯೋಗ ಶಾಲೆಯಲ್ಲಿ ಬೆಳೆಸಿದರೆ, ಬ್ಯಾಕ್ಟೀರಿಯಾದೊಂದಿಗೆ

ಜೀನ್ ಕೂಡ ವೃದ್ಧಿಸುತ್ತದೆ. ಅತೀ ಕಡಿಮೆ ಸಮಯದಲ್ಲಿಯೇ ಉಪಯುಕ್ತ ಜೀನ್‌ಗಳಿರುವ ಬ್ಯಾಕ್ಟೀರಿಯಾದ ಸಹಸ್ರಾರು ಸಂತತಿಗಳು ತಯಾರಾಗುತ್ತವೆ. ಇಂಥ ಸಂತತಿಗಳನ್ನು ಜೀನ್‌ಗಳ ಕ್ಲೋನ್ ಎಂದು ಕರೆಯುತ್ತಾರೆ. ವಿವಿಧ ಜೀನ್‌ಗಳನ್ನು ಹೊತ್ತ ಕ್ಲೋನುಗಳ ಸಂಗ್ರಹಕ್ಕೆ ಜೀನ್ ಗ್ರಂಥ ಭಂಡಾರ ಎನ್ನುತ್ತಾರೆ. ಈ ಜೀನ್‌ಗಳ ಭಂಡಾರದ ಕ್ಲೋನ್‌ಗಳು ಆತಿಥೇಯ ಜೀವಿಯ ಪ್ರೋಟೀನುಗಳನ್ನು ಸಂಶ್ಲೇಷಿಸಬಲ್ಲವು. ಇಂಥ ಕ್ಲೋನ್‌ಗಳನ್ನು ನೇರವಾಗಿ ಉಪಯುಕ್ತ ಪ್ರೋಟೀನುಗಳ ಹಾಗೂ ಔಷಧಗಳನ್ನು ತಯಾರಿಸುವುದೂ ಸಾಧ್ಯ. ಜೀನ್‌ಗಳ ಭಂಡಾರದಿಂದ ಉತ್ತಮ ಜೀನ್‌ಗಳನ್ನು ಆಯ್ಕೆ ಮಾಡಿ ವಿಕೃತ ಜೀನ್‌ಗಳಿರುವ ಜೀವಿಯೊಳಗೆ ಅಳವಡಿಸಿದರೆ ಪರಂಪರಾಗತವಾಗಿ ಅವ್ಯಾಹತವಾಗಿ ಬಂದ ಆನುವಂಶೀಯ ರೋಗಗಳನ್ನು ಹೋಗಲಾಡಿಸಬಹುದು.

ಈ ವಿಧಾನದಿಂದ ಒಂದು ಜೀವಿಯಲ್ಲಿನ ಉಪಯುಕ್ತ ಜೀನನ್ನು ತೆಗೆದು ಇನ್ನೊಂದು ಜೀವಿಯಲ್ಲಿ ಅಳವಡಿಸಿ ಅದರ ತಳಿಯನ್ನು ಉತ್ತಮಪಡಿಸುವ ಸಾಧ್ಯತೆಗಳಿವೆ. ಹೀಗೆ ಇನ್ನೊಂದು ಜೀವಿಯ ಉಪಯುಕ್ತ ಜೀನ್‌ಗಳನ್ನು ಹೊತ್ತ ಜೀವಿಗಳನ್ನು ಅಂತರ್‌ಜೀನ್ ಕುಲಾಂತರಿಗಳು ಎನ್ನುತ್ತಾರೆ.

ಪ್ರಾಣಿಗಳಲ್ಲಿ ತಳಿತಂತ್ರಜ್ಞಾನ: ಪ್ರಾಣಿಗಳ ಜೀವಕೋಶಕ್ಕೆ ಜೀನ್‌ಗಳನ್ನು ನೇರವಾಗಿ ಸೇರಿಸಬಹುದು. ಹೀಗೆ ಸೇರ್ಪಡೆಯಾದ ಜೀನ್‌ಗಳು ಪ್ರಾಣಿಯ ಜೀವ ನಿಯಂತ್ರಕ ವ್ಯವಸ್ಥೆಯನ್ನು ತನ್ನ ಹತೋಟಿಗೆ ತೆಗೆದುಕೊಳ್ಳುತ್ತದೆ. ಇಂಥ ಹತೋಟಿಯಿಂದ, ಅಥವಾ ಪ್ರೋಟೀನ್ ಉತ್ಪಾದನೆ ನಡೆಯುವುದರಿಂದ ಆ ಪ್ರಾಣಿಗಳಲ್ಲಿ ಹೊಸ ಜೀನ್ ಸೇರ್ಪಡೆ ಯಶಸ್ವಿಯಾಗಿರುವುದು ತಿಳಿಯುತ್ತದೆ. ಪ್ರಾಣಿಯು ಭ್ರೂಣಾವಸ್ಥೆಯಲ್ಲಿರುವಾಗ ಅಥವಾ ಪ್ರಾಣಿಗೆ ಕೃತಕ ಗರ್ಭಧಾರಣೆ ನಡೆಸುವ ಸಮಯದಲ್ಲಿ ಹೊಸ ಜೀನ್ ಸೇರ್ಪಡೆಯನ್ನು ಮಾಡುವುದು ಸಾಧ್ಯವಿದೆ. ಈ ತಂತ್ರವನ್ನು ಉಪಯೋಗಿಸಿ ಹೊಸ ಕುರಿ ತಳಿಯನ್ನು ನಿರ್ಮಿಸುವ ಪ್ರಯೋಗ ಯಶಸ್ವಿಯಾಗಿದೆ. ಕುಲಾಂತರಿ ಪ್ರಾಣಿಗಳಲ್ಲಿ ಹೆಚ್ಚಿನ ರೋಗನಿರೋಧ ಶಕ್ತಿ, ಹೆಚ್ಚಿನ ಬೆಳೆವಣಿಗೆ, ಹೆಚ್ಚಿನ ಸಂತಾನೋತ್ಪತ್ತಿ ಇರುತ್ತದೆ. ಉದಾ: ಕುಲಾಂತರಿ ಸಾಲೊಮನ್ ಮೀನು ಸಹಜ ತಳಿಗಿಂತ ವೇಗವಾಗಿ ಬೆಳೆಯುತ್ತದೆ ಮತ್ತು ಕಡಿಮೆ ಸಮಯದಲ್ಲಿ ದೊಡ್ಡ ಗಾತ್ರದ ಮರಿಗಳನ್ನು ನೀಡುತ್ತದೆ. ಕುಲಾಂತರಿ ಹಸುಗಳು ಹೆಚ್ಚಿನ ಪ್ರಮಾಣದ ಹಾಲನ್ನು ನೀಡುತ್ತವೆ ಮತ್ತು ಉತ್ತಮ ಗುಣಮಟ್ಟದ ಮಾಂಸವನ್ನು ಒದಗಿಸುತ್ತವೆ. ಕುಲಾಂತರಿ ಕುರಿಗಳು ಹೆಚ್ಚಿನ ಪ್ರಮಾಣದ ಉಣ್ಣೆಯನ್ನು ನೀಡುತ್ತವೆ (ನೋಡಿ: ಕುಲಾಂತರಿ ಪ್ರಾಣಿಗಳು). ಮನುಷ್ಯರಲ್ಲಿ ಜೀನ್ ಸೇರ್ಪಡೆಗೆ ಇನ್ನೂ ಅನುಮತಿ ದೊರೆತಿಲ್ಲ. ಏಕೆಂದರೆ ಹೊಸ ಜೀನ್ ಸೇರ್ಪಡೆಯಿಂದ ಜನಿಸುವ ಶಿಶುವಿನಲ್ಲಿ ತನ್ನ ಸಹಜ ಜೀನ್ ಮತ್ತು ಸೇರ್ಪಡೆಯಾದ ಹೊಸ ಜೀನ್‌ಗಳ ಸಂಯೋಜನೆಯಿಂದ ಅನೇಕ ಬಗೆಯ ಸಮಸ್ಯೆಗಳು ತಲೆದೋರಬಹುದು. ಆದರೂ ಸಿಸ್ಟಿಕ್ ಫೈಬ್ರೋಸಿಸ್, ಎಫಿಸ್ಮಾ ಮತ್ತು ಕ್ಯಾನ್ಸರಿನಂಥ ಕೆಲವು ಮಾರಣಾಂತಿಕ ರೋಗಗಳ ಚಿಕಿತ್ಸೆಯಲ್ಲಿ ಜೆನಿಟಿಕ್ ಎಂಜಿನೀರಿಂಗ್‌ನ ಪ್ರಯೋಗಗಳು ನಡೆಯುತ್ತಿವೆ. ಉದಾ: ಮೂಗಿನ ಮೂಲಕ ಸಿಂಪಡಿಸುವ ಅಡಿನೋ ವೈರಸ್ ಸೂಕ್ಷ್ಮಾಣುವನ್ನು ರೋಗಿಯ ದೇಹದೊಳಕ್ಕೆ ಸೇರಿಸಿ, ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಮೂಲಕ ಶ್ವಾಸಕೋಶದ ಕಾಯಿಲೆಗಳನ್ನು ಗುಣಪಡಿಸುವ ಪ್ರಯೋಗಗಳು ನಡೆದಿವೆ. ರಕ್ತದ ಏರೊತ್ತಡದಿಂದ ಹಿಡಿದು ಏಡ್ಸ್‌ವರೆಗೆ, ಡೌನ್ ಸಿಂಡ್ರೋಮ್, ಅಲ್ಝೈಮರ್ ಕಾಯಿಲೆ, ಅಧಿಕ ಕೊಲೆಸ್ಟರಾಲ್, ರಕ್ತಕೊರತೆ, ಹೆಪಟೈಟಿಸ್ ಬಿ ಮೊದಲಾದ ಕಾಯಿಲೆಗಳನ್ನು ಜೆನಿಟಿಕ್ ಇಂಜಿನೀರಿಂಗ್ ಮೂಲಕ ಗುಣಪಡಿಸುವ ಪ್ರಯೋಗಗಳು ನಡೆದಿವೆ. ಕುಲಾಂತರಿ ಪ್ರಾಣಿಗಳನ್ನು ಬಳಸಿಕೊಂಡು ಕಡಿಮೆ ವೆಚ್ಚದಲ್ಲಿ ಶೀಘ್ರವಾಗಿ ಮತ್ತು ಖಚಿತವಾಗಿ ರೋಗನಿಧಾನದ ತಂತ್ರಗಳನ್ನು ಕಂಡುಕೊಳ್ಳಲು ಯತ್ನಿಸಲಾಗುತ್ತಿದೆ. ಇಂತಹ ಪ್ರಯೋಗಗಳನ್ನು ಸಾಮಾನ್ಯ ಪ್ರಾಣಿಗಳ ಮೇಲೆ ನಡೆಸುವುದಾದಲ್ಲಿ ಎಷ್ಟು ಜೀವಿಗಳು ಬೇಕಾಗುತ್ತಿದ್ದವೋ ಅದಕ್ಕಿಂತ ಕಡಿಮೆ ಸಂಖ್ಯೆಯ ಪ್ರಯೋಗ ಪಶುಗಳನ್ನು ಈಗ ಬಳಸಲಾಗುತ್ತಿದೆ. ಮನುಷ್ಯರಲ್ಲಿ ಕಾಣಿಸಿಕೊಳ್ಳುವ ಆನುವಂಶಿಕ ರೋಗಗಳ ನಿವಾರಣೆಗೆ ಮಾನವ ಜೀನ್ ಥೆರಪಿ ಪ್ರಯತ್ನಿಸುತ್ತದೆ. ಈ ಥೆರಪಿಯಲ್ಲಿ ಎರಡು ವಿಧಾನಗಳಿವೆ. ಮೊದಲನೆಯದು ಸೊಮಾಟಿಕ್ ಜೀನ್ ಥೆರಪಿ. ರೋಗಿಯ ಲಿಂಗ ನಿರ್ಧಾರಕ ಜೀವಕೋಶಗಳನ್ನು ಹೊರತುಪಡಿಸಿ ಉಳಿದ ಜೀವಕೋಶಗಳಿಗೆ ಅವಶ್ಯಕವಾದ ಜೀನ್‌ಗಳನ್ನು ಸೇರ್ಪಡೆ ಮಾಡಲಾಗುತ್ತದೆ. ಇದರಿಂದ ರೋಗಿಯ ಕಾಯಿಲೆ ವಾಸಿಯಾಗುವುದು ಸಾಧ್ಯವಿದ್ದರೂ, ಸೇರ್ಪಡೆಯಾದ ಜೀನ್‌ಗಳ ಗುಣ ಲಕ್ಷಣಗಳು ರೋಗಿಯ ವಂಶಜರಲ್ಲಿ ಮುಂದುವರೆಯುವುದಿಲ್ಲ. ಎರಡನೆಯದು ಜೆರ್ಮ್ ಲೈನ್ ಜೀನ್ ಥೆರಪಿ. ರೋಗಿಯ ಲಿಂಗನಿರ್ಧಾರಕ ಜೀವಕೋಶಕ್ಕೇ ನೇರವಾಗಿ ಅವಶ್ಯಕವಾದ ಜೀನ್‌ಗಳನ್ನು ಸೇರ್ಪಡೆ ಮಾಡಲಾಗುತ್ತದೆ. ಇದರಿಂದ ರೋಗಿಯ ದೇಹದಲ್ಲಿ ಕಾಣಿಸಿಕೊಳ್ಳುವ ರೋಗ ನಿರೋಧಕ ಶಕ್ತಿಯು ಆತನ ವಂಶಜರಲ್ಲೂ ಮುಂದುವರೆಯುತ್ತದೆ.

ತಳಿತಂತ್ರಜ್ಞಾನದ ಭವಿಷ್ಯ: ಔಷಧ ವಿಜ್ಞಾನ, ಆಹಾರ ಉತ್ಪಾದನೆ, ವೈದ್ಯಕೀಯ, ವ್ಯವಸಾಯ ಮತ್ತು ಉತ್ಪಾದನಾ ಕ್ಷೇತ್ರಗಳಲ್ಲಿ ತಳಿತಂತ್ರಜ್ಞಾನ ಮಹತ್ವದ ಪಾತ್ರ ವಹಿಸಲಿದೆ. ಜೈವಿಕ ತಂತ್ರಜ್ಞಾನವು 2025ನೆ ಇಸವಿಯ ವೇಳೆಗೆ ಅಮೆರಿಕೆದ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ. 20 ಭಾಗದಷ್ಟಿರುತ್ತದೆ ಅಥವಾ 2 ಟ್ರಿಲಿಯನ್ ಡಾಲರ್‌ಗಳ ಪಾಲು ಹೊಂದಿರುತ್ತದೆ ಎಂದು ಅಂದಾಜು ಮಾಡಲಾಗಿದೆ. ತಳಿ ತಂತ್ರಜ್ಞಾನ ಬೆಳೆಯುತ್ತಿರುವ ಕ್ಷೇತ್ರ. ಅದು ಆರಂಭಗೊಂಡು ಸು. 30 ವರ್ಷಗಳಾಗಿದೆ. ಆದರೆ, ಈ 30 ವರ್ಷಗಳಲ್ಲಿ ಅದರ ಪರ ವಿರುದ್ಧವಾಗಿ ತೀವ್ರವಾದ ವಾಗ್ವಾದಗಳು ನಡೆದಿವೆ. ನೈತಿಕ, ಧಾರ್ಮಿಕ ಮತ್ತು ಕಾನೂನಿನ ಕಾರಣಗಳಿಂದ ಜೈವಿಕ ಮತ್ತು ತಳಿತಂತ್ರಜ್ಞಾನಕ್ಕೆ ವಿರೋಧ ವ್ಯಕ್ತಪಡಿಸುವವರು ಇದ್ದಾರೆ. ನೈಸರ್ಗಿಕ ಚಟುವಟಿಕೆಯಲ್ಲಿ ಮನುಷ್ಯನ ಹಸ್ತಕ್ಷೇಪವು ತಪ್ಪು ಮತ್ತು ಧರ್ಮ ವಿರೋಧಿಯಾದದ್ದು. ಜೈವಿಕ ಮತ್ತು ತಳಿ ತಂತ್ರಜ್ಞಾನದ ಫಲಿತಾಂಶಗಳು, ಉದಾಹರಣೆಗೆ ಕುಲಾಂತರಿ ಶಿಶುವಿನ ಸೃಷ್ಟಿ, ಕಾನೂನಿನ ತೊಡಕುಗಳನ್ನು ಸೃಷ್ಟಿಸುತ್ತದೆ. ಕುಲಾಂತರಿ ಜೀವಿಗಳು ಇಡೀ ಸೃಷ್ಟಿಯ, ನಿಸರ್ಗದಲ್ಲಿನ ಪರಿಸರದ ಮೇಲೆ ಮಾಡುವ ಪ್ರಭಾವವು ಯಾವ ರೀತಿಯದೆಂದು ಸಂಪೂರ್ಣವಾಗಿ ಊಹಿಸಲು ಸಾಧ್ಯವಿಲ್ಲದಿರುವಾಗ ಜೈವಿಕ ತಂತ್ರಜ್ಞಾನದಿಂದ ಒಳ್ಳೆಯ ಪರಿಣಾಮಗಳೇ ಆಗುತ್ತವೆ ಎಂದು ಹೇಳುವುದು ಸಾಧ್ಯವೇ ಎಂಬ ಪ್ರಶ್ನೆಗಳು ಎದ್ದಿವೆ. ಜೆನಿಟಿಕ್ ಇಂಜಿನೀರಿಂಗ್ ಮುಖಾಂತರ ಔಷಧ ಉತ್ಪಾದಿಸಲು, ಅಥವಾ ಈ ವಿಧಾನದಿಂದ ಆಹಾರವನ್ನು ತಯಾರಿಸಲು ಎಫ್‌ಡಿಎ (ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್) ಮತ್ತು ಎನ್‌ಐಎಚ್ (ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಹೆಲ್ತ್) ಗಳಿಂದ ಅನುಮತಿ ಪಡೆಯುವುದು ಕಡ್ಡಾಯವೆಂದು ಅಮೆರಿಕ ನಿಗದಿಪಡಿಸಿದೆ. ಕುಲಾಂತರಿಗಳ ಸೃಷ್ಟಿಯಲ್ಲಿ ತೊಡಗಿರುವ ಜೈವಿಕ ತಂತ್ರಜ್ಞಾನವು ಹಸಿವಿನಿಂದ ಹಿಡಿದು ರೋಗಗಳವರೆಗೆ ಎಲ್ಲ ಆಧುನಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತದೆ ಎಂದು ಈ ತಂತ್ರಜ್ಞಾನದ ಪ್ರತಿಪಾದಕರು ಹೇಳಿದರೆ, ಸಮಸ್ಯೆಗಳ ಪರಿಹಾರಕ್ಕಿಂತ ಈ ಹೊಸ ತಂತ್ರಜ್ಞಾನವು ಪರಿಸರದ ನಾಶಕ್ಕೆ ಕಾರಣವಾಗುತ್ತದೆ ಮತ್ತು ಜೀವಿಗಳ ಸಮತೋಲನವನ್ನು ಹಾಳು ಮಾಡುತ್ತದೆ ಎಂದು ವಾದಿಸುತ್ತಾರೆ. ಕುಲಾಂತರಿ ಮನುಷ್ಯರ ಸೃಷ್ಟಿಗೆ ಹಲವಾರು ದೇಶಗಳು ಕಾನೂನು ವಿರೋಧವನ್ನು ಒಡ್ಡಿವೆ. ಇತರ ಕುಲಾಂತರಿ ಜೀವಿಗಳ ಸೃಷ್ಟಿಗೆ ಪ್ರಾಣಿ ಹಕ್ಕುಗಳ ಸಂಘ ವಿರೋಧವನ್ನು ಸೂಚಿಸಿವೆ. ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸೂಕ್ತ ಕಾನೂನುಗಳ ರಚನೆ ಇನ್ನೂ ಆಗಬೇಕಾಗಿದೆ. ಜೈವಿಕ ತಂತ್ರಜ್ಞಾನವು ಮನುಷ್ಯರ ಮತ್ತು ಪ್ರಾಣಿಗಳ ನೋವು ನರಳಿಕೆಗಳನ್ನು ಕುಗ್ಗಿಸುವ, ಪರಿಸರವನ್ನು ಸಂರಕ್ಷಿಸುವ, ಭೂಮಿ ಮತ್ತು ಭೂಮಿಯ ಅಮೂಲ್ಯ ಜೀವಿಗಳನ್ನು ಕಾಪಾಡುವ ದಿಕ್ಕಿನಲ್ಲಿ ಬೆಳೆಯಲಿ ಎಂದು ತಜ್ಞರು ಅಭಿಪ್ರಾಯಿಸಿದ್ದಾರೆ. (ಓ.ಎಲ್.ಎಸ್.)

**ಜೆನ್ನರ್, ಎಡ್ವರ್ಡ್ ೧೭೪೯–೧೮೨೩:** ಇಂಗ್ಲೆಂಡಿನ ವೈದ್ಯ. ದೇವಿ ಹಾಕುವುದರ ಮೂಲಕ ಮನುಷ್ಯನಿಗೆ ಸಿಡುಬು ರೋಗದ ವಿರುದ್ಧ ರಕ್ಷಣೆಯನ್ನು ನೀಡುವ ವಿಧಾನವನ್ನು ಮೊದಲಿಗೆ ಆವಿಷ್ಕರಿಸಿದಾತ. ಜನನ: ಮೇ ೧೭, ೧೭೪೯ ; ಮರಣ: ಜನವರಿ ೨೬, ೧೮೨೩. ಸ್ವಂತ ಪಟ್ಟಣ ಬರ್ಕ್ಲಿ. ಮೊದಲು ಸಾಡ್‌ಬರಿ ಎಂಬಲ್ಲಿಯೂ ೧೭೭೦ರ ಅನಂತರ ಲಂಡನ್ನಿನಲ್ಲಿಯೂ ವೈದ್ಯವಿದ್ಯಾಭ್ಯಾಸ ಮಾಡಿದ. ತನ್ನ ಊರಿನಲ್ಲೆ ವೈದ್ಯವೃತ್ತಿಯಲ್ಲಿ ತೊಡಗಿದ. ರಾಡ್‌ಬರೋ ಎಂಬಲ್ಲಿ ವೈದ್ಯರ ಒಂದು ಸಂಘವನ್ನು ಸ್ಥಾಪಿಸಿ ಅದರ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ. ವೈದ್ಯಕೀಯದಲ್ಲಿ ಮಾತ್ರವಲ್ಲ ಇತರ ವಿಜ್ಞಾನಗಳಲ್ಲಿಯೂ ಈತನಿಗೆ ಬಲು ಆಸಕ್ತಿ. ಒಬ್ಬೆ ಮುಳ್ಳುಹಂದಿಯ ಶಿಶಿರನಿದ್ರೆ (ಹೈಬರ್‌ನೇಷನ್ ಇನ್ ಹೆಡ್ಜ್ ಹಾಗ್), ಅನ್ಯ ಪಕ್ಷಿಗಳ ಗೂಡಿನಲ್ಲಿ ಕೋಗಿಲೆ ಮರಿಯ ಜನನ ಮತ್ತು ಬೆಳೆವಣಿಗೆ, ತನ್ನ ಪ್ರಾಂತ್ಯದಲ್ಲಿನ ಖನಿಜ ಸ್ವರೂಪ–ಇವುಗಳ ವ್ಯಾಸಂಗವನ್ನೂ ಕೈಗೊಂಡಿದ್ದ. ಹೈಡ್ರೋಜನ್ ತುಂಬಿ ಆಕಾಶಬುಟ್ಟಿಯನ್ನು ತಯಾರಿಸುವ ಪ್ರಯತ್ನವನ್ನು ತನ್ನ ಪ್ರಾಂತ್ಯದಲ್ಲಿ ಪ್ರಪ್ರಥಮವಾಗಿ ಮಾಡಿದ. ಇವೆಲ್ಲವುಗಳ ಜೊತೆಗೆ ಈತ ಒಬ್ಬ ಕವಿ ಹಾಗೂ ಸಂಗೀತಜ್ಞ. ಒಟ್ಟಿನಲ್ಲಿ ಬಹುಮುಖ ಚಟುವಟಿಕೆಯುಳ್ಳವನಾಗಿ ಜನರ ವಿಶ್ವಾಸ ಪಡೆದಿದ್ದಾತ. ಶರೀರ ಚಿಕಿತ್ಸಕನಾಗಿ (ಫಿಸಿಷಿಯನ್) ಮಾತ್ರ ವೈದ್ಯವೃತ್ತಿಯನ್ನು ಮುಂದುವರಿಸಬೇಕೆಂದು ನಿರ್ಧರಿಸಿ, ಅದಕ್ಕೆ ತಕ್ಕ ಯೋಗ್ಯತೆ ಪಡೆಯಲು ಸೇಂಟ್ ಆಂಡ್ರೊ ಕಾಲೇಜಿನ ಎಂ.ಡಿ. ಡಿಗ್ರಿಯನ್ನು ಪಡೆದ (೧೭೯೨).

ದನದ ಸಿಡುಬು ಎದ್ದ ಮನುಷ್ಯರಿಗೆ ಮಾನವ ಸಿಡುಬುರೋಗ ಅಂಟುವುದಿಲ್ಲವೆಂಬುದು ಆಗಿನ ಕಾಲದಲ್ಲಿ ಜನಜನಿತ ವಿಷಯ. ಸಾಡ್‌ಬರಿಯಲ್ಲಿ ಜೆನ್ನರ್ ಶಿಷ್ಯ ವೃತ್ತಿಯಲ್ಲಿದ್ದಾಗ ಕವಾಡಗಿತ್ತಿಯೊಬ್ಬಳು ತನಗೆ ದನದ ಸಿಡುಬು ಬಂದಿತ್ತಾದ್ದರಿಂದ ಮಾನವ ಸಿಡುಬಿನ ಹೆದರಿಕೆ ಇಲ್ಲವೆಂದು ಹೇಳಿದ್ದನ್ನು ಕೇಳಿದ. ಅಂದಿನಿಂದ ಈತ ಈ ಪರಿಹಾರದ ವಿಚಾರ ಯೋಚಿಸುತ್ತಿದ್ದುದುಂಟು. ಕೊನೆಗೆ 1788ರಲ್ಲಿ ದನದ ಸಿಡುಬು ಮಾನವರಲ್ಲಿ ಕಂಡುಬಂದಿದ್ದಂತೆ ಒಂದು ಚಿತ್ರವನ್ನು ತಯಾರಿಸಿ ಲಂಡನ್ನಿನಲ್ಲಿ ಕೆಲವು ಪ್ರಮುಖವೈದ್ಯರಿಗೆ ತೋರಿಸಿದ್ದೂ ಆಯಿತು. ಆದರೆ ವಿಷಯಗ್ರಹಣೆಗೆ ಸಾಕಷ್ಟು ಸಾಮಗ್ರಿ ಇಲ್ಲವೆಂದು ತೋರಿದ್ದರಿಂದ ಜೆನ್ನರನ್ನು ವಾಪಸ್ಸು ಬರ್ಕ್ಲಿಗೆ ತೆರಳಿ ವ್ಯಾಸಂಗವನ್ನು ಮುಂದುವರಿಸಬೇಕಾಯಿತು. ಈ ವ್ಯಾಸಂಗದಿಂದ ದನದ ಹಾಗೂ ಮಾನವರ ಸಿಡುಬುಗಳಿಗೆ ಇರುವ ಹೋಲಿಕೆ ವ್ಯತ್ಯಾಸಗಳು ಮನದಟ್ಟಾದುವು. ಕುದುರೆಗಳ ಹಿಮ್ಮಡಿರೋಗ ಕೂಡ ದನದ ಮತ್ತು ಮಾನವರ ಸಿಡುಬಿಗೆ ಸಂಬಂಧಿಸಿದ್ದೇ ಎಂಬುದೂ ಸ್ಪಷ್ಟವಾಯಿತು. ಕೊನೆಗೆ ಜೆನ್ನರ್ 1796ರ ಮೇ 14ನೆಯ ತಾರೀಖಿನ ದಿನ ಒಬ್ಬ ಹಾಲು ಕರೆಯುವ ಹುಡುಗಿಯ ಕೈಮೇಲಿದ್ದ ದನದ ಸಿಡುಬಿನ ಗುಳ್ಳೆಯ ರಸಿಕೆಯನ್ನು 8 ವರ್ಷದ ಹುಡುಗನೊಬ್ಬನ ಚರ್ಮಕ್ಕೆ ಚುಚ್ಚಿದ. ಸುಮಾರು 2 ತಿಂಗಳಾದ ಬಳಿಕ ಅದೇ ಹುಡುಗನಿಗೆ ಮಾನವ ಸಿಡುಬಿನ ರಸಿಕೆಯನ್ನು ಚುಚ್ಚಿದ. ಹುಡುಗನಿಗೆ ಸಿಡುಬುರೋಗ ಉಂಟಾಗಲಿಲ್ಲ. ಮುಂದೆ ಕೆಲಕಾಲ ದನದ ಸಿಡುಬಿನ ಕೀವು ದೊರಕಲಿಲ್ಲವಾದ್ದರಿಂದ ಪರೀಕ್ಷೆಯನ್ನು ಮುಂದುವರಿಸಲಾಗಲಿಲ್ಲ. 1798ರ ವಸಂತಋತುವಿನಲ್ಲಿ ಪುನಃ ದನದ ಸಿಡುಬು ಕಂಡುಬಂದಾಗ ಜೆನ್ನರ್ ತನ್ನ ವ್ಯಾಸಂಗವನ್ನು ಮುಂದುವರಿಸಿ ಮೇಲೆ ಹೇಳಿದ ಪ್ರಯೋಗಫಲವನ್ನು ಖಚಿತಪಡಿಸಿದ. ದನದ ಸಿಡುಬುರೋಗದ ಕಾರಣ ಹಾಗೂ ಅದರ ರಸಿಕೆಯ ಪರಿಣಾಮಗಳ ಬಗ್ಗೆ ನಡೆಸಿದ ಪರಿಶೀಲನೆಗಳು ಎಂಬ ಒಂದು ಕೃತಿಯನ್ನು ಬರೆದು ಪ್ರಚುರಪಡಿಸಿದ ಕೂಡ. ಮಾನವರಲ್ಲಿ ದನದ ಸಿಡುಬೂ ಮಾನವನ ಸಿಡುಬೂ ಕೆಲವು ವೇಳೆ ಒಂದೇ ರೀತಿ ಕಾಣಬರುತ್ತವೆ. ದನಗಳಲ್ಲಿ ಕೆಚ್ಚಲಿನ ಮೇಲೆ ಸಿಡುಬಿನ ಹಾಗೆ ಕಾಣುವ ಇತರ ವ್ರಣಗಳೂ ಇರುವುವು. ಇವನ್ನು ಬಿಟ್ಟು ಎಚ್ಚರಿಕೆಯಿಂದ ದನದ ಸಿಡುಬಿನ ರಸಿಕೆಯನ್ನು ಮಾತ್ರ ತೆಗೆದು ಉಪಯೋಗಿಸಬೇಕು ; ಹಾಗೆ ಮಾಡಿದರೆ ಮಾತ್ರ ಕ್ಷೇಮ–ಹೀಗೆಂದು ಜೆನ್ನರ್ ಸಾರಿ ಸಾರಿ ಹೇಳುತ್ತಿದ್ದರೂ ಕೆಲವರು ಇದನ್ನು ಗ್ರಹಿಸದೆ ಬೇಕಾಬಿಟ್ಟಿಯಾಗಿ ರಸಿಕೆಯನ್ನು ಉಪಯೋಗಿಸುತ್ತಿದ್ದುದರಿಂದ ಎಷ್ಟೋ ಅನರ್ಥಗಳಾದದ್ದುಂಟು. 1799ರಲ್ಲಿ ಜಾರ್ಜ್ ಪಿಯರ್ಸನ್ ಎಂಬಾತ ಈ ರೀತಿ ನ್ಯೂನತೆಯಿಂದ ಕೂಡಿದ ದೇವಿ ಹಾಕುವ ವಿಧಾನವನ್ನು ಧರ್ಮಾರ್ಥವಾಗಿ ನಡೆಸಲು ಲಂಡನ್ನಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸುವ ಏರ್ಪಾಡು ಮಾಡುತ್ತಿದ್ದುದನ್ನು ತಿಳಿದ ಜೆನ್ನರ್ ಇಂಥ ಕ್ರಮದಿಂದ ಆಗಬಹುದಾದ ಅನರ್ಥಗಳನ್ನು ಸಂಬಂಧಪಟ್ಟ ಗೌರವಾನ್ವಿತ ವ್ಯಕ್ತಿಗಳಿಗೆ ವಿವರಿಸಿ ಆ ಸಂಸ್ಥೆಯ ಸ್ಥಾಪನೆಗೆ ತಡೆಹಾಕಿದ. ಕೆಲಕಾಲ ಲಂಡನ್ನಿನಲ್ಲಿ ನಿಂತು ಆಸಕ್ತ ವೈದ್ಯರಿಗೆ ತನ್ನ ನೇತೃತ್ವದಲ್ಲಿ ದೇವಿಹಾಕುವ ವಿಧಾನವನ್ನು ತೋರಿಸಿಕೊಟ್ಟಿದ್ದೂ ಇತ್ತು. ಈ ಕಾಲದಲ್ಲಿ ಜೆನ್ನರನಿಗೆ ರಾಜಮನೆತನದವರ ಪರಿಚಯವಾಗಿ ಅವರ ಹಾಗೂ ವೈದ್ಯರ ಬೆಂಬಲದಿಂದ ದೇವಿಹಾಕುವ ವಿಧಾನ ಜನಪ್ರಿಯ ಮಾಡಿದ. ಮುಂದೆ 2 ವರ್ಷಗಳಲ್ಲಿ ಇಂಗ್ಲೆಂಡಿನಲ್ಲೆಲ್ಲ ದೇವಿ ಹಾಕುವುದು ಬಳಕೆಗೆ ಬಂತು. 1802ರಲ್ಲಿ ಇಂಗ್ಲೆಂಡಿನ ಸಂಸತ್ತಿನಲ್ಲಿ ಜೆನ್ನರನಿಗೆ 10,000 ಪೌಂಡುಗಳನ್ನು ಸಹಾಯಧನವಾಗಿ ಕೊಡಬೇಕೆಂಬ ವಿಚಾರವನ್ನು ಮಂಡಿಸಲಾಯಿತು. ಮಂಡನೆಗೆ ಮನ್ನಣೆ ದೊರಕಿದರೂ ಜೆನ್ನರನಿಗೆ ಹಣ ದೊರಕಿದ್ದು 2 ವರ್ಷಗಳ ಅನಂತರವೇ. ಅದರಲ್ಲಿ ಖರ್ಚಿಗೆಂದು 1000 ಪೌಂಡು ವಜಾ ಬೇರೆ. ಲಂಡನ್ನಿನಲ್ಲಿ ಜನ್ನೇರಿಯನ್ ಇನ್ಸ್‌ಟಿಟ್ಯೂಟ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದೂ ಅದರಲ್ಲಿ ಮಾನವನ ಸಿಡುಬು ಹಾಗೂ ದೇವಿ ಹಾಕುವ ವಿಧಾನ ಇವುಗಳ ಅಧ್ಯಯನ ಪ್ರಾರಂಭಿಸಬೇಕೆಂದೂ ಜೆನ್ನರ್ ಆ ಸಂಸ್ಥೆಯ ಅಧ್ಯಕ್ಷನಾಗಬೇಕೆಂದೂ ನಿರ್ಧಾರವಾಯಿತು (1803). ಜೆನ್ನರ್ ಲಂಡನ್ನಿಗೆ ಬಂದು ಆಸಕ್ತ ವ್ಯಕ್ತಿಗಳಿಗೆ ಖುದ್ದಾಗಿ ದೇವಿ ಹಾಕುವುದಕ್ಕೆ ಪ್ರಾರಂಭಿಸಿದ. ಬಡಬಗ್ಗರಿಗೆ ಮುಫತ್ತಾಗಿಯೇ ದೇವಿ ಹಾಕಲ್ಪಡುತ್ತಿತ್ತು. ದಿನವೂ 300ಕ್ಕೆ ಮೇಲ್ಪಟ್ಟು ಜನ ಹೀಗೆ ದೇವಿ ಹಾಕಿಸಿಕೊಳ್ಳುತ್ತಿದ್ದರು. ಆದರೆ ಸಂಸ್ಥೆಯ ಕಾರ್ಯನಿರ್ವಾಹಕ ವ್ಯಕ್ತಿಯ ಕರ್ತವ್ಯಪಾಲನೆಯಲ್ಲಿ ಶಿಸ್ತು ಇಲ್ಲದಿದ್ದರಿಂದ ಸಂಸ್ಥೆ ಬೇಗ ಮುಳುಗಿಹೋಯಿತು. ಅಲ್ಲದೆ ಸರ್ಕಾರದಿಂದ ನೆರವು ಪಡೆದಿರುವುದರಿಂದ ಎಲ್ಲರಿಗೂ ಮುಫತ್ತಾಗಿ ದೇವಿ ಹಾಕಬೇಕೆಂದು ನಿರೀಕ್ಷೆ ವ್ಯಕ್ತಪಟ್ಟಿತು. ಇದರಿಂದ ಜೆನ್ನರನಿಗೆ ತನ್ನ ವೈದ್ಯವೃತ್ತಿಯನ್ನು ಬದಿಗಿಟ್ಟು ಲಂಡನ್ನಿನಲ್ಲಿ ತಂಗಿರುವುದಕ್ಕೆ ವ್ಯವಧಾನ ಸಾಲದೆ ಪುನಃ ಬರ್ಕ್ಲಿಗೆ ಮರಳಿದ. ಅನಂತರ ಅವನ ಸ್ನೇಹಿತರು ದೇವಿ ಹಾಕುವ ಉಪಯುಕ್ತತೆಯ ವಿಚಾರವಾಗಿ ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ ಸಂಸ್ಥೆಯವರಿಗೆ ಮಾಹಿತಿ ಒದಗಿಸಬೇಕೆಂದು ಆತನನ್ನು ಒತ್ತಾಯಪಡಿಸಿದರು. ಇದರ ಫಲವಾಗಿ ಸಾರ್ವತ್ರಿಕವಾಗಿ ದೇವಿ ಹಾಕುವುದು ಸೂಕ್ತಮಾರ್ಗ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದರಿಂದ ಪ್ರಭಾವಿತನಾದ ಮಾರ್ಕ್ವಿಸ್ ಆಫ್ ಲ್ಯಾನ್ಸ್‌ಡೌನ್ ಎಂಬಾತ ಸಂಸತ್ತಿನ ಮುಂದೆ ಪುನಃ ಈ ವಿಷಯವನ್ನು ಮಂಡಿಸಿದ (1906). ಸಂಸತ್ತು ಜೆನ್ನರನಿಗೆ 30,000 ಪೌಂಡುಗಳ ಸಹಾಯಧನವನ್ನು ಮಂಜೂರು ಮಾಡಿತು. ಅಲ್ಲದೆ ಮುಫತ್ತಾಗಿ ದೇವಿ ಹಾಕಬೇಕೆಂಬ ಕಡ್ಡಾಯವನ್ನೂ ವಿಧಿಸಲಿಲ್ಲ. ಬಂದ ಹಣದಲ್ಲಿ ಜೆನ್ನರ್ 7000 ಪೌಂಡುಗಳನ್ನು ಭಾರತದಲ್ಲಿ ದೇವಿ ಹಾಕುವ ಕ್ರಮ ವ್ಯಾಪಕವಾಗುವಂತೆ ಮೊದಲು ಕಳುಹಿಸಿಕೊಟ್ಟನೆಂದು ತಿಳಿದಿದೆ. ಇನ್ನೊಂದು ವರದಿಯ ಪ್ರಕಾರ ಭಾರತದಿಂದಲೇ 7383 ಪೌಂಡುಗಳ ಸಹಾಯಧನ ಜೆನ್ನರಿಗೆ ಒದಗಿತೆಂದೂ ಹೇಳಲಾಗಿದೆ. 1808ರಲ್ಲಿ ನ್ಯಾಷನಲ್ ವ್ಯಾಕ್ಸಿನ್ ಎಸ್‌ಟ್ಯಾಬ್ಲಿಷ್‌ಮೆಂಟ್ ಎಂಬ ಸಂಸ್ಥೆ ಸ್ಥಾಪಿತವಾಯಿತು. ಪ್ರಾರಂಭದಲ್ಲಿ ಈ ಸಂಸ್ಥೆಗೆ ಜೆನ್ನರ್ ನಿರ್ದೇಶಕನಾಗಿದ್ದ. ಅನಂತರ ಸಲಹೆಗಾರನಾಗಿ ಕೆಲಸಮಾಡಿದ. ಅನೇಕ ಹೊರದೇಶದವರು ಜೆನ್ನರನನ್ನು ಬಹು ಆದರದಿಂದ ಕಂಡು ಪ್ರಮುಖ ವಿಜ್ಞಾನ ಸಂಸ್ಥೆಗಳ ಗೌರವ ಸದಸ್ಯತ್ವವನ್ನೂ ಗೌರವ ಪ್ರಶಸ್ತಿಗಳನ್ನೂ ಕೊಟ್ಟು ಗೌರವಿಸಿದರು. ನೆಪೋಲಿಯನ್ ಚಕ್ರವರ್ತಿ ಒಮ್ಮೆ ಒಬ್ಬ ಇಂಗ್ಲಿಷ್ ಕೈದಿಯನ್ನು ಬಿಡಕೂಡದೆಂದು ತೀರ್ಮಾನಿಸಿದ್ದಾಗ ಪತ್ನಿ ಜೊಸೆಫೈನ್ ಜೆನ್ನರನ ಹೆಸರನ್ನು ಹೇಳಿದಳಂತೆ. ನೆಪೋಲಿಯನ್ 'ಆಹಾ, ನಾವು ಆತನಿಗೆ ಏನನ್ನೂ ನಿರಾಕರಿಸಲಾಗುವುದಿಲ್ಲ' ಎಂದು ಹೇಳಿ ಕೈದಿಯನ್ನು ಬಿಡುಗಡೆ ಮಾಡಿದನಂತೆ.

೧೮೧೦ರಲ್ಲಿ ತನ್ನ ಹಿರಿಯ ಮಗ ಕಾಲವಾದ್ದರಿಂದ ಹಾಗೂ ತನ್ನಲ್ಲಿ ರಕ್ತದ ಒತ್ತಡ ಕಂಡುಬಂದದ್ದರಿಂದ ಜೆನ್ನರ್ ತನ್ನ ಬಿಡುವಿಲ್ಲದ ಕಾರ್ಯಕ್ರಮಗಳಿಂದ ವಿಶ್ರಾಂತಿ ಪಡೆದ. 1813ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಈತನಿಗೆ ಎಂ.ಡಿ. ಗೌರವ ಪ್ರಶಸ್ತಿಯನ್ನು ಕೊಟ್ಟಿತು. 1815ರಲ್ಲಿ ಜೆನ್ನರನ ಪತ್ನಿ ತೀರಿಹೋದಳು. ಇದರಿಂದ ಅವನಿಗೆ ಸಿಡುಬಿನ ಕಾರ್ಯಕ್ರಮದಲ್ಲಿ ಆಸಕ್ತಿ ಇನ್ನೂ ತಗ್ಗಿ ಪ್ರಕೃತಿ ವ್ಯಾಸಂಗದಲ್ಲಿ ನಿರತನಾಗಿರುವಂತಾಯಿತು. ಜನಪ್ರಿಯನಾಗಿದ್ದರಿಂದ ಗೌರವನ್ಯಾಯಾಧಿಕಾರಿಯಾಗಿ ಕೆಲಸವನ್ನು ಮಾಡಲೇಬೇಕಾಗಿದ್ದಿತು. ಕೆಲವು ರೋಗಗಳಲ್ಲಿ ಗುಳ್ಳೆಗಳನ್ನೆಬ್ಬಿಸುವುದರ ಪರಿಣಾಮ ಎಂಬ ವಿಷಯವನ್ನು ಕುರಿತ ತನ್ನ ಕೃತಿಯನ್ನು 1822ರಲ್ಲಿ ಬರೆದು ಪ್ರಚುರಪಡಿಸಿದ. ಹಕ್ಕಿಗಳ ಸಂಚಾರ ಎಂಬ ತನ್ನ ಕೊನೆಯ ಪ್ರಕಟನೆಯನ್ನು ರಾಯಲ್ ಸೊಸೈಟಿಗೆ ಅರ್ಪಿಸಿದ (1823). ***

**ಜೆರ್ಬಿಲ್:** ಇಲಿ, ಹೆಗ್ಗಣಗಳ ಗುಂಪಿಗೆ (ರೊಡೆಂಷಿಯ) ಸೇರಿದ ಬಿಲದಲ್ಲಿ ವಾಸಿಸುವ ಪ್ರಾಣಿ. ಟಟೆರ, ಮರಳು ಇಲಿ ಎಂದೂ ಕರೆಯುತ್ತಾರೆ. ಹೆಚ್ಚಿನವುಗಳು ಆಫ್ರಿಕ ಮತ್ತು ಏಷ್ಯ ಖಂಡಗಳ ಶುಷ್ಕ ಮತ್ತು ಮರಳುಗಾಡಿನಲ್ಲಿ ಕಂಡುಬಂದರೆ ಕೆಲವು ಹುಲ್ಲುಗಾವಲು, ಕೃಷಿ ಪ್ರದೇಶ ಮತ್ತು ಕಾಡುಗಳಲ್ಲಿ ಕಂಡುಬರುತ್ತವೆ. ದೊಡ್ಡದಾದ ಕಿವಿ, ಕಣ್ಣುಗಳು ಮತ್ತು ಕಂದು ಬಣ್ಣದ ಮೃದುವಾದ ರೋಮಗಳಿವೆ. ಹೊಟ್ಟೆಯ ಭಾಗದಲ್ಲಿ ಬಿಳಿ ಬಣ್ಣದ ರೋಮಗಳುಂಟು. ಸು. 30 ಸೆಂಮೀ ನಷ್ಟು ಉದ್ದವಿದ್ದು. ಬಾಲವೇ ಸು. 15 ಸೆಂಮೀ ನಷ್ಟು ಉದ್ದವಿರುತ್ತದೆ. ಗಂಡು ಜೆರ್ಬಿಲ್ 103 ಗ್ರಾಂ ಮತ್ತು ಹೆಣ್ಣು ಜೆರ್ಬಿಲ್ 91 ಗ್ರಾಂ ತೂಕವಿರುತ್ತದೆ. ಬಾಲದ ತುದಿಯಲ್ಲಿ ಕೂದಲಿನ ಗೊಂಚಲು ಇದೆ. ಹಿಂದಿನ ಕಾಲುಗಳು ಮುಂದಿನ ಕಾಲುಗಳಿಗಿಂತ ಉದ್ದವಾಗಿವೆ. ಕಾಲುಗಳ ಅಂಗಾಲಿನಲ್ಲಿ ಕೂದಲುಗಳಿಲ್ಲ. ಬೀಜಗಳು, ಬೇರುಗಳು, ಧಾನ್ಯಗಳು ಎಲೆಗಳು, ಕೀಟಗಳು ಹಾಗೂ ಹಕ್ಕಿಗಳ ಮೊಟ್ಟೆಗಳನ್ನು ಆಹಾರವಾಗಿ ಸೇವಿಸುತ್ತವೆ. ಕೆಲವು ನಿಶಾಚರಿಗಳು. ಮತ್ತೆ ಕೆಲವು ಹಗಲಿನಲ್ಲಿ ಚಟುವಟಿಕೆಯಿಂದಿರುತ್ತವೆ. ಕೆಲವು ಆಫ್ರಿಕ ಮತ್ತು ಪಶ್ಚಿಮ ಏಷ್ಯದ ಮರಳು ಇಲಿಗಳು ಚಿಕ್ಕದಾದ ಮತ್ತು ಸರಳವಾದ ಬಿಲಗಳನ್ನು ಕೊರೆಯುತ್ತವೆ. ಆದರೆ ರಷ್ಯದ ದೊಡ್ಡ ಮರಳು ಇಲಿ ದೊಡ್ಡದಾದ ನೆಲಮಾಳಿಗೆಯಂತಹ ಬಿಲಗಳನ್ನು ಕೊರೆಯುತ್ತದೆ.

ಇವುಗಳಲ್ಲಿ ಸುಮಾರು ನೂರು ಪ್ರಭೇದಗಳಿವೆ. ರಷ್ಯದ ದೊಡ್ಡ ಮರಳು ಇಲಿಗಳು (ಸಾಮ್ಮೊಮಿಸ್ ಒಬಿಸಸ್) ಕೃಷಿಗೆ ಉಪದ್ರವಕಾರಿಗಳು. ಆಫ್ರಿಕದ ಜೆರ್ಬಿಲ್‌ಗಳು (ಮೆರಿಯೋನ್ಸ್ ಮೆಂಡಿಯಾ) ಬಬೋನಿಕ್ ಪ್ಲೇಗ್ ಅನ್ನು ಹರಡುತ್ತವೆ. ಇವುಗಳ ಗರ್ಭಾವಸ್ಥೆ 26–30 ದಿನಗಳವರೆಗೆ ಇರುತ್ತದೆ. ಸಾಮಾನ್ಯವಾಗಿ 3–7 ಮರಿಗಳನ್ನಿಡುತ್ತವೆ. ಮರಿಗಳು 14 ದಿನಗಳ ಅನಂತರ ಕಣ್ಣು ಬಿಡುತ್ತವೆ. 21–30 ದಿನಗಳಲ್ಲಿ ಮರಿಗಳು ತಾಯಿಯಿಂದ ಸ್ವತಂತ್ರವಾಗುತ್ತವೆ. 10–16 ವಾರಗಳಲ್ಲಿ ಲೈಂಗಿಕ ಪ್ರಬುದ್ಧತೆಯನ್ನು ಪಡೆಯುತ್ತವೆ. ಇವುಗಳ ಸಂಖ್ಯೆಯು ಜನವರಿ ತಿಂಗಳಲ್ಲಿ ಅತೀ ಕಡಿಮೆ ಇದ್ದು ಮಾರ್ಚ್‌ನಿಂದ ಸೆಪ್ಟೆಂಬರ್ ತಿಂಗಳಿನವರೆಗೆ ಹೆಚ್ಚುತ್ತಾ ಹೋಗುತ್ತದೆ. ಪ್ರಾಣಿಸಂಗ್ರಹಾಲಯದಲ್ಲಿ ನಿರ್ಬಂಧದಲ್ಲಿ ಇಟ್ಟಾಗ ಸುಮಾರು ಏಳು ವರ್ಷಗಳವರೆಗೆ ಬದುಕುತ್ತವೆ ಹಾಗೂ ತಮ್ಮ ಮರಿಗಳನ್ನು ತಿನ್ನುತ್ತವೆ. ಇವು ವರ್ಷ ಪೂರ್ತಿ ವಂಶಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗುತ್ತವೆ. ಕೃಷಿಕರಿಗೆ ಪಿಡುಗಾಗಿ ಕಾಣಿಸಿದರೂ ಕೃಷಿಗೆ ತೊಂದರೆ ಕೊಡುವ ಕೀಟಗಳನ್ನು ತಿನ್ನುವುದರಿಂದ ಕೃಷಿಕರಿಗೆ ಪರೋಕ್ಷವಾಗಿ ಸಹಾಯಮಾಡುತ್ತವೆ. ಟಟೇರ ಇಂಡಿಕ ಭಾರತದಲ್ಲಿನ ಪ್ರಭೇದ. (ಬಿ.ಪಿ.)

**ಜೆರ್ಬೋವ ಇಲಿ:** ಆಫ್ರಿಕ, ಏಷ್ಯ ಮತ್ತು ಪೂರ್ವ ಯೂರೋಪುಗಳಲ್ಲಿ ಕಂಡುಬರುವ ವಿಚಿತ್ರ ಬಗೆಯ ಪ್ರಾಣಿ. ಇದಕ್ಕೆ ಜಿಗಿಯುವ ಇಲಿ ಎಂಬ ಇನ್ನೊಂದು ಹೆಸರೂ ಉಂಟು. ರಾಡೆನ್‌ಷಿಯ ಗಣ, ಸಿಂಪ್ಲಿಸಿಡೆಂಟೇಟ ಉಪ ಗಣ, ಮಯೊಮಾರ್ಫ ವಿಭಾಗದ ಡೈಪೋಡಿಡೆ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಡೈಪಸ್. ಈ ಕುಟುಂಬಕ್ಕೆ ಸೇರಿದ ಇನ್ನಿತರ ಜಾತಿಗಳಿಗೂ ಜೆರ್ಬೋವ ಎಂಬ ಸಾಮಾನ್ಯ ಹೆಸರೇ ಉಂಟು. ಡೈಪಸ್ ಜಾತಿಯಲ್ಲಿ ಹತ್ತು ಪ್ರಭೇದಗಳಿವೆ. ಮರುಭೂಮಿಯ ಕುರುಚಲು ಪ್ರದೇಶಗಳಲ್ಲಿ ಮಾತ್ರ ವಾಸಿಸುತ್ತದೆ. ಇದು ಪುಟ್ಟ ಗಾತ್ರದ ಪ್ರಾಣಿ. ದೇಹದ ಉದ್ದ ಸು. 18 ಸೆಂಮೀ ದೇಹಕ್ಕಿಂತ ಉದ್ದವಾದ ಅಂದರೆ ಸು. 20.5 ಸೆಂಮೀ ಉದ್ದವಾದ, ಬಾಲ ಉಂಟು.



ಬಾಲದ ತುದಿ ಕುಚ್ಚಿನಂತಿದೆ. ಬಾಲದ ಮೇಲೆ ಬಿಳಿ ಮತ್ತು ಕಪ್ಪು ಬಣ್ಣದ ಪಟ್ಟೆಗಳಿವೆ. ದೇಹದ ಮೇಲೆ ಕಂದು ಬಣ್ಣದ ಕೂದಲಿನ ಹೊದಿಕೆಯುಂಟು. ಉದರ ಭಾಗ ಬಿಳಿ. ಜೆರ್ಬೋವದ ವಿಚಿತ್ರ ಲಕ್ಷಣವೆಂದರೆ ಮುಂಗಾಲುಗಳು ಚಿಕ್ಕವಾಗಿದ್ದು, ಹಿಂಗಾಲುಗಳು ಮಾತ್ರ ಬಹಳ ಉದ್ದವಾಗಿರುವುದು. ಇದರಿಂದ ಇದು ಕಾಂಗರೂವಿನಂತೆ ಕಾಣುತ್ತದೆ. ಈ ಕಾರಣದಿಂದ ಅಮೆರಿಕದಲ್ಲಿ ಇದನ್ನು 'ಕಾಂಗರೂ ಇಲಿ' ಎಂದು ಕರೆಯುತ್ತಾರೆ. ಪಾದದ ಮೂಳೆಗಳು ಕೂಡ ಬಹಳ ಉದ್ದವಾಗಿದ್ದು ಒಂದಕ್ಕೊಂದು ಕೂಡಿಕೊಂಡಿವೆ. ಹಿಂಗಾಲಿನಲ್ಲಿ ಮೂರು ಬೆರಳುಗಳುಂಟು. ಕತ್ತಿನ ಕಶೇರುಗಳು ಕೂಡಿಕೊಂಡಿರುವುದು ಇದರ ಮತ್ತೊಂದು ಸೋಜಿಗದ ಲಕ್ಷಣ. ಇಂಥ ದೇಹದ ರಚನಾ ವಿನ್ಯಾಸದಿಂದಾಗಿ ಜೆರ್ಬೋವ ದೂರ ದೂರಕ್ಕೆ ನೆಗೆಯುವ ಶಕ್ತಿಯನ್ನು ಪಡೆದಿದೆ. ಒಂದು ನೆಗೆತಕ್ಕೆ 90–120 ಸೆಂಮೀ ದೂರವನ್ನು ಕ್ರಮಿಸಬಲ್ಲುದು. ಜಿಗಿಯುತ್ತಿರುವಾಗ ಬಾಲವನ್ನು ನೀಳವಾಗಿ ನೀಡುವುದರ ಮೂಲಕ ದೇಹದ ಸಮತೋಲನೆಯನ್ನು ಕಾಪಾಡಿಕೊಳ್ಳುತ್ತದೆ. ಕಾಲುಗಳ ಕೆಲಭಾಗದಲ್ಲಿ ಕೂದಲಿನ ಜೊಂಪೆಗಳಿವೆ. ಕಿವಿಗಳು ಅಗಲ, ಮೂತಿ ಇಲಿಯದರಷ್ಟು ಉದ್ದವಲ್ಲ. ಬಾಚಿಹಲ್ಲುಗಳು ಬಹಳ ಉದ್ದವೂ ಶಕ್ತಿಯುತವೂ ಆಗಿವೆ. ಇದರಿಂದ ಇದು ಭೂಮಿಯಲ್ಲಿ ಬಿಲಗಳನ್ನು ಕೊರೆಯಬಲ್ಲುದು. ಜೆರ್ಬೋವದ ಬಣ್ಣ ಸುತ್ತಲ ಮರಳಿನ ಬಣ್ಣವನ್ನೇ ಹೋಲುವುದರಿಂದ ಇದು ಶತ್ರುಗಳ ಕಣ್ಣಿಗೆ ಬೇಗನೆ ಗೋಚರಿಸುವುದಿಲ್ಲ. ಅರಬರು ಇದರ ಮಾಂಸವನ್ನು ತಿನ್ನುತ್ತಾರೆ. ಇದರಿಂದ ಕೆಲವೊಮ್ಮೆ ಇದನ್ನು ಇಸ್ರೇಲಿನ 'ಕುರಿ' ಎಂದು ಕರೆಯುವುದುಂಟು. ಬೆಳಗಿನ ಹೊತ್ತಿನಲ್ಲಿ ಬಿಲದಲ್ಲಿ ವಿಶ್ರಮಿಸುತ್ತಿದ್ದು ರಾತ್ರಿಯ ವೇಳೆಯಲ್ಲಿ ಮಾತ್ರ ತನ್ನ ಆಹಾರದ ಬೇಟೆಗಾಗಿ ಹೊರಬರುತ್ತದೆ. ಹೂ ಮತ್ತು ಬೀಜಗಳೇ ಇದರ ಮೆಚ್ಚಿನ ಆಹಾರ. ಜೆರ್ಬೋವ ನೀರು ಕುಡಿಯದೇ ಬಹಳ ದಿವಸ ಜೀವಿಸಬಲ್ಲುದು. ವಸಂತಋತು ಮತ್ತು ಬೇಸಿಗೆ ಕಾಲದಲ್ಲಿ ಎರಡರಿಂದ ನಾಲ್ಕು ಮರಿಗಳಿಗೆ ಜನ್ಮ ಕೊಡುತ್ತದೆ. ಹಾವು, ಗೂಬೆ ಮತ್ತು ಮರಳುನಾಡಿನ ನರಿಗಳಿಗೆ ಇದು ಮುಖ್ಯ ಆಹಾರವೆನಿಸಿದೆ. (ಎಂ.ಎನ್.ಎಚ್.ಇ.)

**ಜೇಡ:** ಆರ್ತ್ರಾಪೊಡ ವಂಶದ ಆರ್ಯಾಕ್ನಿಡ ವರ್ಗದ ಆರನೀಯಿಡ ಗಣದ ಸದಸ್ಯ. ಆಂಗ್ಲ ಭಾಷೆಯಲ್ಲಿ ಸ್ಪೈಡರ್ ಎನ್ನುವರು. ಆರ್ಯಾಕ್ನಿಡ ವರ್ಗದಲ್ಲಿ ಹನ್ನೊಂದು ಗಣಗಳಿವೆ. ಈ ಎಲ್ಲಾ ಗಣಗಳಲ್ಲಿ ಬಹುಸಂಖ್ಯೆ ಪ್ರಭೇದ ಜೇಡಗಳಿವೆ. ಇವನ್ನು ಆರ್ತ್ರಾಪೊಡ ವಂಶದ ಸದಸ್ಯರುಗಳಿಂದ ಭಿನ್ನವಾಗಿ ಗುರುತಿಸಲಾಗಿದೆ. ಕಾರಣ, ಜೇಡದ ದೇಹ ಪ್ರೋಸೋಮ ಅಥವಾ ಸೆಫಲೊತೋರ್‍ಯಾಕ್ಸ್ (ಶೀರೋವಕ್ಷ) ಮತ್ತು ಒಫಿಸ್ತೊಸೋಮ ಅಥವಾ ಉದರ ಎಂಬ ಎರಡು ಭಾಗವಾಗಿದೆ. ವಿಷಗ್ರಂಥಿಗಳು, ಕೆಲಿಸೆರೆ ಉಪಾಂಗಗಳಿವೆ. ಪ್ರತಿಯೊಂದು ಕೆಲಿಸೆರದಲ್ಲೂ ಮ್ಯಾಂಡಿಬಲ್ ಬುಡಭಾಗ ಮತ್ತು ನಖ ತುದಿಭಾಗ ಇದೆ. ವಿಷ ಗ್ರಂಥಿಗಳಿಂದ ಹೊರಡುವ ನಾಳ ಕೆಲಿಸೆರದ ತುದಿಯಲ್ಲಿ ಹೊರತೆಗೆಯುತ್ತದೆ. ಒಫಿಸ್ತೊಸೋಮ ಮತ್ತು ಪ್ರೋಸೋಮ ಅಖಂಡವಾಗಿವೆ. ಉಸಿರಾಟ ಪದರಘುಪ್ಪುಸ (ಬುಕ್‌ಲಂಗ್) ಮತ್ತು ಶ್ವಾಸನಾಳ (ಟ್ರೇಕಿಯ) ಗಳಿಂದ ನಡೆಯುತ್ತದೆ. ಗಂಡು ಜೇಡದ ಪ್ಯಾಲ್ಪಿನ ಕೊನೆಯ ಖಂಡ ವೀರ್ಯಾಣು ವಾಹಕ ಅಂಗವಾಗಿ ಮಾರ್ಪಟ್ಟಿದೆ.

ಜೇಡಗಳಿಗೆ ಅತ್ಯಂತ ಪ್ರಾಚೀನವಾದ ಇತಿಹಾಸ ಇದೆ. ಮೊಟ್ಟಮೊದಲು ಜೇಡವೆಂದು ಖಚಿತವಾಗಿ ಹೇಳಲಾಗಿದ್ದ ಕೀಟ ಪ್ರೋಟೊಲೈಕೋಸ ಆಂತ್ರಕಾಫಿಲ ಎಂಬುದು ಪೇಲಿಯೊಜೋಯಿಕ್ ಯುಗದ ಕಾರ್ಬಾನಿಫೆರಸ್ ಅವಧಿಯಲ್ಲಿ ಜೀವಿಸಿತ್ತು. ಆಧುನಿಕ ಜೇಡ ಕುಟುಂಬದ ಲೈಕಾಸಿಡೀಯ ಸದಸ್ಯರುಗಳನ್ನು ಮೇಲ್ನೋಟಕ್ಕೆ ಹೋಲುವ ಇದು ಖಂಡೀಭವನವಾದ ಉದರ ಹೊಂದಿತ್ತು. ಕಣ್ಣುಗಳು ಪರಸ್ಪರ ಹತ್ತಿರದಲ್ಲಿದ್ದವು. ಉದ್ದ ಕಾಲುಗಳಿದ್ದವು. ಟರ್ಷಿಯರಿ ಅವಧಿಯಲ್ಲಿ ಜೀವಿಸಿದ್ದ ಕೆಲವು ಜೇಡಗಳ ಫಾಸಿಲುಗಳು (ಪಳೆಯುಳಿಕೆಗಳು) ಅಂಬರಿನಲ್ಲಿ ಒಳ್ಳೆಯ ಸ್ಥಿತಿಯಲ್ಲಿ ರಕ್ಷಿತವಾಗಿವೆ. ಇದರಿಂದಾಗಿ ಬಹಳ ಪ್ರಾಚೀನ ಕಾಲದಿಂದ ಸ್ತನಿಗಳಾಗಲಿ, ಹಕ್ಕಿಗಳಾಗಲಿ, ದ್ವಿಚರಿ ಮತ್ತು ಉರಗಗಳ ಬಹುಪಾಲು ಪ್ರಭೇದಗಳಾಗಲಿ, ಭೂಮಿಯ ಮೇಲೆ ಅವತರಿಸುವ ಮನ್ನವೇ ಜೇಡಗಳು ತಮ್ಮ ಇಂದಿನ ಬಾಹ್ಯಸ್ವರೂಪದಲ್ಲಿ ಜೀವಿಸಿದ್ದವು ಎಂದು ವ್ಯಕ್ತವಾಗುತ್ತದೆ.

ವಿವಿಧ ಬಗೆಗಳ ವಯಸ್ಕ ಜೇಡಗಳ ಗಾತ್ರದಲ್ಲಿ ವ್ಯತ್ಯಾಸವಿದೆ. ಅತ್ಯಂತ ಚಿಕ್ಕಗಾತ್ರದ ಜೇಡವೆಂದರೆ: ಈಪೈರಿಡೆ ಕುಟುಂಬಕ್ಕೆ ಸೇರಿದ ಓಗಲ್‌ನಿಯಸ್ ಆಬ್‌ಟೆಕ್ಟಸ್. ಇದು ಅಮೆಜಾನ್ ನದಿಯ ಕಾಡುಗಳಲ್ಲಿ ವಾಸಿಸುತ್ತದೆ. ಇದರ ಉದ್ದ ಒಂದು ಮಿಮೀ ಗಿಂತ ಕಡಿಮೆ. ಸಾಮಾನ್ಯವಾಗಿ ಗಂಡು ಜೇಡಗಳು ಹೆಣ್ಣುಗಳಿಗಿಂತಲೂ ಚಿಕ್ಕವು. ಬ್ರೆಜಿಲಿನಲ್ಲಿ ವಾಸಿಸುವ ಲೇಸಿಯಾಡೊ ಜೇಡ ಗಾತ್ರದಲ್ಲಿ ವ್ಯತ್ಯಾಸವಿದೆ. ಇದರ ಉದ್ದ ಸು. 9 ಸೆಂಮೀ. ತೂಕ 93 ಗ್ರಾಂ. ತೆಫೋಸಿಡೆ ಮತ್ತು ಲೈಫಸ್ಟೈಯಿಡೆ ಕುಟುಂಬದ ಜೇಡಗಳು ದೊಡ್ಡ ಗಾತ್ರದುವು.



ಅರೆನಿಯಸ್ ಇಂಡಿಕಸ್




ಟೆಟ್ರಾಗ್ನಾತ ಮತ್ತು ಅದರ ಬಲೆ

ಜೇಡ ದೇಹದ ಮುಂಭಾಗ ಸೆಫಲೊತೋರ್‍ಯಾಕ್ಸ್ ಏಕರೂಪದ ರಚನೆಯಿಂದಾಗಿದೆ. ಇದರ ಮೇಲ್ಮೈ ನಯವಾಗಿದೆ. ಆದರೆ, ಅನೇಕ ವೇಳೆ ಇದನ್ನು ತಲೆ ಮತ್ತು ವಕ್ಷಭಾಗ ಎಂದು ಎರಡು ಭಾಗಗಳಾಗಿ ವಿಂಗಡಿಸುವರು. ತಲೆಯ ಭಾಗಕ್ಕೆ ಪಾರ್ಸ್ ಸೆಫ್ಯಾಲಿಕ್

ಎಂಬ ಹೆಸರಿದೆ. ಇದರ ಮುಂತುದಿಯಲ್ಲಿ ನೇತ್ರಭಾಗವಿದೆ. ಇದರಲ್ಲಿ 8 ಕಣ್ಣುಗಳಿವೆ. ಕಣ್ಣುಗಳು ಸಂಯುಕ್ತ ಬಗೆಯವಲ್ಲ. ಇವು ಸರಳ ಆಸೆಲೈಗಳು. ಸೆಫಲಾನಿನ ತುದಿಗೂ, ಮೊದಲ ಜೊತೆ ಕಣ್ಣುಗಳಿಗೂ ನಡುವೆ ಇರುವ ಭಾಗಕ್ಕೆ ಕ್ಲೈಪಿಯಸ್ ಎಂದು ಹೆಸರು. ಜೇಡಗಳ ವಿವಿಧ ಜಾತಿಗಳನ್ನು ಗುರುತಿಸುವಲ್ಲಿ ಕ್ಲೈಪಿಯಸಿನ ಗಾತ್ರ, ಅಗಲ ಮತ್ತು ಪ್ರವಣತೆಗಳನ್ನು ಬಳಸಲಾಗುತ್ತದೆ. ನೇತ್ರಭಾಗ ಹಲವಾರು ರೀತಿಗಳಲ್ಲಿ ಮುಂಚಾಚಿಕೊಂಡಿದೆ. ಉದಾ: ವಾಲ್ಕನೀರ ಮತ್ತು ಪೋಲ್ಕಸ್ ಪ್ರಭೇದಗಳಲ್ಲಿ ಕಾಣುವ ವಿಚಿತ್ರ ರಚನೆಗಳು ಇಂಥ ಮುಂಚಾಚುಗಳೇ. ಸೆಫಲೊತೋರ್‍ಯಾಕ್ಸಿನ ಮೇಲೆ ಅರೀಯ ರೀತಿಯಲ್ಲಿ ಜೋಡಣೆಗೊಂಡ ಎಂಟು ಉದ್ದಗೆರೆಗಳಿವೆ. ಇವು ಕಾಲುಗಳ ಮಾಂಸಖಂಡಗಳ ಸೇರುವೆಗಳನ್ನು ಸೂಚಿಸುತ್ತವೆ. ಕೆಲವು ಪ್ರಭೇದಗಳಲ್ಲಿ ಸೆಫಲೊತೋರ್‍ಯಾಕ್ಸಿನ ಮೇಲೆ ಮುಳ್ಳುಗಳಿವೆ.

ತೆಳುವಾದ ಸೊಂಟ ಅಥವಾ ವೃಂತದ ಮೂಲಕ ಸೆಫಲೊತೋರ್‍ಯಾಕ್ಸ್ ಉದರಕ್ಕೆ ಸೇರಿಕೊಂಡಿದೆ". ವೃಂತ ಸೂಕ್ಷ್ಮವಾದ ಬಂಧ, ಉದರ ಬಹಳ ಮುಂದಕ್ಕೆ ಚಾಚಿರುವುದರಿಂದ ವೃಂತ ಕಣ್ಣಿಗೆ ಕಾಣುವುದಿಲ್ಲ. ಮೇಲ್ಭಾಗದಲ್ಲಿ ಲೋದಮ್ ಮತ್ತು ಕೆಳಭಾಗದಲ್ಲಿ ಪ್ಲಾಗ್ಯುಲ ಎಂಬ ಕೈಟಿನ್ ಫಲಕಗಳು ಇದಕ್ಕೆ ರಕ್ಷಣೆಯನ್ನು ಮತ್ತು ಬಲವನ್ನು ಕೊಡುತ್ತವೆ. ವೃಂತದ ವ್ಯಾಸ ಚಿಕ್ಕದು. ಇದರ ಮುಖಾಂತರ ಒಂದು ಅಪಧಮನಿಯ ಮುಖ್ಯ ನರಹುರಿ ಜೀರ್ಣನಾಳದ ಒಂದಂಶವೂ ಹಾದುಹೋಗುತ್ತವೆ.

ಉದರ ಉದ್ದನೆಯ ಉರುಳೆಯಂಥ ಚೀಲ. ಇದರಲ್ಲಿ ಖಂಡಗಳಿಲ್ಲ. ಆದರೆ, ಇದು ಹೆಚ್ಚಿನ ವೈವಿಧ್ಯ ತೋರುತ್ತದೆ. ಕೆಲವು ಕುಟುಂಬಗಳ ಜೇಡಗಳಲ್ಲಿ ಉದರ ವರ್ಣಮಯ ಮತ್ತು ವಿನ್ಯಾಸಪೂರಿತವಾಗಿದ್ದು, ಸುಂದರವಾಗಿದೆ. ಅನೇಕ ವೇಳೆ ಬೆನ್ನು ಮೇಲೆ ಕಿರಿಯಗಲದ ಮತ್ತು ಉದ್ದುದ್ದವಾದ ಗುರುತು ಇದೆ. ವರ್ತುಲಾಕಾರದ ಬಲೆನೇಯುವ ಜೇಡಗಳ ಉದರದ ಮೇಲೆ ಅಗಲವಾದ ಎಲೆಯಾಕಾರದ ಗುರುತು ಇದೆ. ಈ ಗುರುತಿಗೆ 'ಪೋಲಿಯುವ್' ಎಂದು ಹೆಸರು. ಕೆಲವು ಜೇಡಗಳಲ್ಲಿ ಸಮರೂಪದಲ್ಲಿ ಅಳವಡಿಕೆಯಾಗಿರುವ ಸಣ್ಣ ಸಣ್ಣ ತಗ್ಗುಗಳಿವೆ. ಉದರದ ಆಕಾರದಲ್ಲಿ ಅಸಾಧಾರಣ ವೈವಿಧ್ಯ ಇದೆ. ಉದಾ: ಫ್ರಿಕಾಟಿಲಸ್ ಸ್ಟೆಲಿಗರ್ ಪ್ರಭೇದದಲ್ಲಿ ಉದರ ಮೇಲ್ಮುಖವಾಗಿ ಬಾಗಿರುವ ಶಂಕುವಿನಾಕಾರದ ರಚನೆಯಾಗಿ ಮಾರ್ಪಟ್ಟಿದೆ. ಇದರ ತುದಿಯಲ್ಲಿ ತೊಟ್ಟುಳ್ಳ ನಕ್ಷತ್ರದಾಕಾರದ ಒಂದು ಬುರುಡೆ ಇದೆ. ಪಾಲ್ಟಿಸ್ ಇಡಿಯೀ ಪ್ರಭೇದದಲ್ಲಿ ಉದರದ




ಮೇಲ್ಭಾಗ ಉದ್ದವಾದ, ತೆಳುವಾದ, ಸುಲಭವಾಗಿ ಬಾಗುವಂಥ ಉರುಳೆಯಾಗಿ ಮಾರ್ಪಟ್ಟಿದೆ. ಲೆಪ್ಟೊಪಫಾಲ್ಕಸ್ ಸಿಗ್ನಿಫರ್ ಜೇಡದ ಉದರದ ಹಿಂತುದಿ ಉದ್ದವಾದ ತೆಳುವಾದ ರಚನೆಯಾಗಿ ಚಾಚಿದೆ. ಮುಳ್ಳುಗಳಿಂದ ಕೂಡಿದ ಉದರವಿರುವ ಜೇಡಗಳಲ್ಲಿ ವಿವಿಧತೆಯನ್ನು ನೋಡಬಹುದು. ಪೊರಾನ್‌ಸಿಡಿಯ ಟ್ರೈಸ್ಪೈನೋಸದಲ್ಲಿ ಸಮಾನ ಗಾತ್ರದ 3 ಮುಳ್ಳುಗಳಿವೆ. ಅರನೀಯಿಸ್ ಪೆಂಟಕ್ಯಾಂತದಲ್ಲಿ 5 ಮುಳ್ಳುಗಳೂ ಮ್ಯುಕ್ರತೀನ ಸೈಯಾಣಿಯೊಸ್ಟೈದಲ್ಲಿ ಹಿಮ್ಮುಖವಾಗಿ ಚಾಚಿರುವಂಥ 8 ಮುಳ್ಳುಗಳಿವೆ. ಪಿಕ್ನಕ್ಯಾಂತ ಟ್ರಿಬ್ಯುಲಸ್‌ದಲ್ಲಿ ವಿವಿಧ ಗಾತ್ರಗಳ ಹಲವಾರು ಮುಳ್ಳುಗಳಿವೆ. ಇವುಗಳಲ್ಲಿ ಎರಡು ಮುಳ್ಳುಗಳು ಉದ್ದವಾಗಿದ್ದು, ಹೊರಮುಖವಾಗಿ ಬಾಗಿದಂತೆ ಇವೆ. ಇವುಗಳ ತುದಿ ಇಬ್ಭಾಗವಾಗಿದೆ. ಉದರದ ಈ ತೆರನ ಆಕಾರದ ಮತ್ತು ಬಣ್ಣದ ವ್ಯತ್ಯಾಸಗಳು ಜೇಡಗಳಿಗೆ ಹಲವಾರು ರೀತಿಯಲ್ಲಿ ಉಪಯುಕ್ತವಾಗಿವೆ. ಜೇಡಗಳು ವಾಸಮಾಡುವ ನೆಲೆಯಲ್ಲಿನ ಅನೇಕ ಬಗೆಯ ವಸ್ತುಗಳನ್ನು ಇವು ಹೋಲುತ್ತವಾದ್ದರಿಂದ ಜೇಡಗಳಿಗೆ ರಕ್ಷಣೆ ಸಿಕ್ಕುತ್ತದೆ. ಇಂಥ ಮುಳ್ಳುಗಳಿರುವುದರಿಂದ ಜೇಡಗಳು ಇತರ ಪ್ರಾಣಿಗಳ ಆಕಾರವನ್ನು ಅನುಕರಿಸುತ್ತವೆ ಅಥವಾ ಮೆದುಬಾಯಿಯುಳ್ಳ ಭಕ್ಷಕ ಪ್ರಾಣಿಗಳು ಜೇಡಗಳನ್ನು ತಿನ್ನಲಾರದಂತೆ ಇಂಥ ಮುಳ್ಳುಗಳು ರಕ್ಷಣೆಯೊದಗಿಸುತ್ತವೆ.

ಉದರದ ತಳಭಾಗ ಬೆನ್ನಿಗಿಂತ ಹೆಚ್ಚು ವೈವಿಧ್ಯವಾಗಿದೆ. ವೃಂತದ ಪಕ್ಕದಲ್ಲಿರುವ ಭಾಗ ಉದರದ ಉಳಿದ ಭಾಗಕ್ಕಿಂತ ಹೆಚ್ಚು ಪೀನಮಧ್ಯವಾಗಿದೆ. ಇದಕ್ಕೆ ಎಪಿಗ್ಯಾಸ್ಟ್ರಿಮ್ ಎಂದು ಹೆಸರು. ಇದಕ್ಕೂ ಉಳಿದ ಭಾಗಕ್ಕೂ ಮಧ್ಯ ಎಪಿಗ್ಯಾಸ್ಟ್ರಿಕ್ ಜಾಡು ಇದೆ. ಎರಡು ಪದರ ಫುಪ್ಫುಸಗಳು ಅಥವಾ ನಾಲ್ಕು ಪದರ ಫುಪ್ಫುಸಗಳು ಮುಂಭಾಗದ ಎರಡು ಎಪಿಗ್ಯಾಸ್ಟ್ರಿಕ್ ಪ್ರದೇಶದಲ್ಲಿ ಸ್ಥಿತವಾಗಿವೆ. ಎಪಿಗ್ಯಾಸ್ಟ್ರಿಕ್ ಜಾಡಿನ ಮಧ್ಯ ಭಾಗದಲ್ಲಿ ಜನನಾಂಗಗಳ ತೆರಪು ಇದೆ. ಈ ತೆರಪು ಗಂಡಿನಲ್ಲಿ ಸೂಕ್ಷ್ಮವಾದ ರಂಧ್ರದಂತಿದೆಯಾದರೆ ಹೆಣ್ಣಿನಲ್ಲಿ ಸರಳವಾದ ದೊಡ್ಡ ತೂತಿನಂತಿದೆ. ಕೆಲವೊಮ್ಮೆ ಇದರ ಸುತ್ತ ಕುಳಿಗಳು, ಚಾಚುಗಳು ಇವೆ. ಬೇತಿಫಾಂಟಿಸ್ ಪ್ರಭೇದದಲ್ಲಿನ ಈ ಚಾಚುಗಳು ಟೊಳ್ಳಾಗಿಯೂ ಅಕ್ಕಪಕ್ಕಗಳಲ್ಲಿರುವಂಥವು ಆಗಿವೆ. ಮೊಟ್ಟೆಯಿಡುವ ಸಾಧನವಾಗಿ ಇವು ಬಳಕೆಯಾಗುತ್ತವೆ. ಉದರಭಾಗದ ಹಿಂತುದಿಯಲ್ಲಿ 6 ತಂತುಕಗಳು (ಸ್ಪಿನರೆಟ್ಸ್) ಇವೆ. ಉದರದೊಳಗಿರುವ ರೇಷ್ಮೆ ಗ್ರಂಥಿಗಳಲ್ಲಿ ಉತ್ಪತ್ತಿಯಾಗುವ ದ್ರವ ಈ ತಂತುಕಗಳ ಮೂಲಕ ಹೊರಬಂದು, ಎಳೆಗಳಾಗಿ ಗಟ್ಟಿಯಾಗುತ್ತದೆ. ತಂತುಕಗಳನ್ನು ಕ್ರಸ್ಟೇಸಿಯ ಪ್ರಾಣಿಗಳ ದ್ವಿಶಾಖಿ ಪ್ಲವಪಾದಗಳಿಗೆ (ಬೈರ್‍ಯಾಮಸ್ ಪ್ಲಿಯೊಪಾಡ್ಸ್) ಸದೃಶ ರಚನೆಗಳೆಂದು ತಿಳಿಯಲಾಗಿದೆ. ತಂತುಕಗಳ ಕೊಂಚ ಮೇಲ್ಭಾಗದಲ್ಲಿ ಶಂಕುವಿನಾಕಾರದ ಉಬ್ಬು ಇದೆ. ಇದೇ ಗುದದ್ವಾರದ ಗುಬಟು (ಏನಲ್ ಟ್ಯೂಬರ್ಕಲ್). ಇದರ ಮಧ್ಯದಲ್ಲಿ ಗುದದ್ವಾರ ಇದೆ.

ಒಂದು ಜೊತೆ ಕೆಲಿಸೆರೇ, ಒಂದು ಜೊತೆ ಪ್ಯಾಲ್ಪಿ ಮತ್ತು ಎಂಟು ಕಾಲುಗಳು ಸೆಫಲೊತೋರ್‍ಯಾಕ್ಸಿನಲ್ಲಿರುವ ಉಪಾಂಗಗಳು. ಕೆಲಿಸೆರೇ ಮತ್ತು ಪ್ಯಾಲ್ಪಿಗಳು ಬಾಯಿ ಸುತ್ತುವರಿದಿವೆ. ಕೆಲಿಸೆರೆಗಳೇ ಜೇಡದ ಆಯುಧಗಳು. ಕೆಲಿಸೆರದಲ್ಲಿ 2 ಖಂಡಗಳಿವೆ. ತುದಿಭಾಗದ ಖಂಡದಲ್ಲಿ ಮೊನಚಾದ ನಖ ಉಂಟು. ಮೈಗಲೊಮಾರ್ಫ್ ಗುಂಪಿನ ಜೇಡಗಳಲ್ಲಿ ನಖಗಳು ತುಂಬ ದೊಡ್ಡವು. ಕೆಲವು ಜೇಡಗಳಲ್ಲಿ ಕೆಲಿಸೆರೆಗಳು ಅತ್ಯಂತ ಚಿಕ್ಕವು ಮತ್ತು ದುರ್ಬಲವಾಗಿವೆ. ಕೆಲವು ಜಾತಿಯ ಜೇಡಗಳಲ್ಲಿ ಇವು ದೊಡ್ಡವಾಗಿದ್ದು, ಕಟ್ಟುಮಸ್ತಾಗಿವೆ. ಪ್ಯಾಲ್ಪಿಗಳಲ್ಲಿ ತಲಾ 6 ಖಂಡಗಳಿವೆ. ಮರಿಗಳಲ್ಲಿ, ಹೆಣ್ಣುಗಳಲ್ಲಿ ಇವು ಸ್ಪರ್ಶೇಂದ್ರಿಯಗಳಾಗಿ ಕಾರ್ಯನಿರ್ವಹಿಸುತ್ತವೆ. ವಯಸ್ಕ ಗಂಡಿನಲ್ಲಿ ಪ್ಯಾಲ್ಪಿಗಳ ತುತ್ತ ತುದಿಯ ಖಂಡ ಮೈಥುನಾಂಗವಾಗಿ ಮಾರ್ಪಾಟಾಗಿದೆ. ಪ್ಯಾಲ್ಪಿಗಳ ಮೊದಲನೆಯ ಖಂಡ ಆಹಾರವನ್ನು ಅರೆಯಲು ನೆರವಾಗುವ ದವಡೆಯಾಗಿ ಕೆಲಸಮಾಡುತ್ತದೆ. ಜೇಡಗಳ ವಿವಿಧ ಪ್ರಭೇದಗಳನ್ನು ಗುರುತಿಸಲು ಪ್ಯಾಲ್ಪಿಗಳ ರಚನೆ ಅತ್ಯುಪಯುಕ್ತ. ಕಾಲುಗಳು ತಲಾ ಏಳು ಖಂಡಗಳಿಂದ ಕೂಡಿವೆ. ಪ್ರತಿಯೊಂದು ಖಂಡವು ಕೈಟಿನ್ ವಸ್ತುವಿನಿಂದ ರಚಿತವಾದ ಉರುಳೆಯಂತಿದೆ. ಸಾಧಾರಣವಾಗಿ ಒಂದನೆಯ ಮತ್ತು ನಾಲ್ಕನೆಯ ಜೊತೆ ಕಾಲುಗಳು ಉಳಿದವಕ್ಕಿಂತ ಬಹಳ ಉದ್ದವಾಗಿವೆ. ವಿವಿಧ ಜಾತಿಗಳನ್ನು ವಿಂಗಡಿಸುವಲ್ಲಿ ಕಾಲುಗಳ ಸಾಪೇಕ್ಷ ಉದ್ದ ಬಹಳ ಸಹಕಾರಿ. ಈ ಲಕ್ಷಣಕ್ಕೆ ಜೇಡಗಳ ಕಾಲು ಸೂತ್ರ ಎಂದು ಹೆಸರು.

ಜೇಡದ ಮೈಮೇಲೆ ಮತ್ತು ಕಾಲುಗಳ ಮೇಲೆ ಸೀಟೆ(ಸೂಕ್ಷ್ಮ ಕೂದಲು)ಗಳ ಹೊದಿಕೆ ಇದೆ. ಇವು ಸ್ಪರ್ಶಸಂವೇದಿಗಳಾಗಿವೆ. ಕಾಲುಗಳ ಮೇಲಿರುವ ಕೆಲವು ಸೀಟೆಗಳು ಬಲೆ ಹೆಣೆಯುವ ಕಾರ್ಯದಲ್ಲಿ ಸಹಾಯಕವಾಗಿವೆ. ಇವುಗಳಲ್ಲಿ ಮೂರು ಬಗೆ. ಕಾಲು ಮತ್ತು ಪ್ಯಾಲ್ಪಗಳ ಮೇಲಿರುವ ದೃಢವಾದ, ಚೂಪಾದ ಮುಳ್ಳುಗಳಂಥ ಕೂದಲುಗಳು, ಶಬ್ದಗ್ರಾಹಿಗಳು, ಗದೆಯಾಕಾರದ ಅಥವಾ ಚಮಚದಾಕಾರ ಅಥವಾ ಕವಲೊಡೆದ ಅಥವಾ ಮುಳ್ಳುಗಳಂತಿರುವ ಮಧ್ಯಮ ಗಾತ್ರದ ಸೀಟೆಗಳು.

ಜೇಡದ ಚರ್ಮದಲ್ಲಿ ಕ್ಯೂಟಿಕಲ್ ಮತ್ತು ಎಪಿಡರ್ಮಿಸ್ ಎಂಬ ಎರಡು ಪದರಗಳಿವೆ. ಜೇಡಗಳ ಮೈಯಿನ ವರ್ಣಸ್ಫುರಣ, ಅಲ್ಲದೆ 3 ತೆರನಾದ ರಾಸಾಯನಿಕಗಳು ವರ್ಣವೈವಿಧ್ಯವನ್ನುಂಟುಮಾಡುತ್ತವೆ. ಕಪ್ಪು, ಬೂದು ಮತ್ತು ಕಗ್ಗಂದು ಬಣ್ಣಕ್ಕೆ ಮೆಲನಿನ್ ಎಂಬ ವರ್ಣಕ ಕಾರಣ. ಬಿಳಿಯ ಬಣ್ಣ, ಗ್ವಾನಿನ್‌ನಿಂದ ಉಂಟಾಗುತ್ತದೆ.

ಕ್ಯಾರೊಟಿನಾಯಿಡ್ಡುಗಳು ಕಿತ್ತಳೆ, ಹಳದಿ, ಕೆಂಪು ಮುಂತಾದ ಬಣ್ಣಗಳನ್ನು ಉಂಟುಮಾಡುತ್ತವೆ. ಕೆಲವು ಜೇಡಗಳು ಸುತ್ತಣ ಸನ್ನಿವೇಶಕ್ಕೆ ಅನುಗುಣವಾಗಿ ತಮ್ಮ ಬಣ್ಣವನ್ನು ಬದಲಿಸುತ್ತವೆ. ದೇಹದೊಳಗೆ ಕೆಲವೆಡೆಗಳಲ್ಲಿ ಚರ್ಮ ಗಡುಸಾದ ಚಾಚುಗಳಂತೆ ಬೆಳೆದುಕೊಂಡು ಮಾಂಸಖಂಡಗಳ ಬಂಧನಕ್ಕೆ ನೆರವಾಗುತ್ತದೆ. ಇಂಥ ಚಾಚುಗಳಿಗೆ ಅಪೊಡೀಮಲುಗಳೆಂದು ಹೆಸರು.

ಸೆಫಲೊತೋರ್ಯಾಕ್ಸಿನಲ್ಲಿ ಕೇಂದ್ರೀಕೃತವಾಗಿರುವ ಎರಡು ನರಗ್ರಂಥಿ ರಾಶಿಗಳೇ ನರವ್ಯವಸ್ಥೆಯ ಪ್ರಧಾನ ಭಾಗಗಳು. ಇವುಗಳಲ್ಲಿ ದೊಡ್ಡದು ಅನ್ನನಾಳದ ಕೆಳಗೆ, ಸಣ್ಣದು ಮೇಲೆ ಇವೆ. ಮಿದುಳು ಚಿಕ್ಕ ಗಾತ್ರದ್ದು, ದೃಷ್ಟಿಸಂಬಂಧದ ನರಗಳನ್ನು ಮತ್ತು ಕೆಲಿಸೆರೆಗಳ ನರಗ್ರಂಥಿಗಳನ್ನು ಒಳಗೊಂಡಿದೆ.

ಅನ್ನನಾಳದಲ್ಲಿ ಅಗ್ರ ಜೀರ್ಣನಾಳ, ಮಧ್ಯಜೀರ್ಣನಾಳ ಮತ್ತು ಪಶ್ಚಜೀರ್ಣನಾಳ ಎಂಬ ಮೂರು ಭಾಗಗಳಿವೆ. ಅಗ್ರಜೀರ್ಣನಾಳದ ಫ್ಯಾರಿಂಕ್ಸ್ ಭಾಗ ಆಹಾರವನ್ನು ಹೀರುವುದಕ್ಕೆ ಸಹಾಯಕ. ಜಠರ ಆಹಾರವನ್ನು ಮುನ್ನೂಕಲು ಸಹಾಯಕ. ಮಧ್ಯಜೀರ್ಣನಾಳ 4 ಮುಖ್ಯ ಭಾಗಗಳಾಗಿದೆ. ಇದರ ಮುಂಭಾಗದಲ್ಲಿ ತೋರಸೆಂಟ್ರಾನ್ ಎಂಬ ಅನೇಕ ವಿನಾಳಗಳು (ಡೈವರ್ಟಿಕ್ಯುಲ) ಇವೆ. ಇದರ ಮಧ್ಯಭಾಗ ತೆಳುವಾದ ತೊಟ್ಟಿನ ಮೂಲಕ ಹಾದುಹೋಗುತ್ತದೆ. ಮಧ್ಯ ಜೀರ್ಣನಾಳದ ಹಿಂಭಾಗಕ್ಕೆ ಕೈಲೆಂಟ್ರಾನ್ ಎಂದು ಹೆಸರು. ಗ್ರಂಥಿಮಯವಾದ ಇದನ್ನು ಅನೇಕ ವೇಳೆ ಯಕೃತ್ ಎಂಬ ಹೆಸರಿನಿಂದ ಕರೆಯಲಾಗುವುದು. ಕೈಲೆಂಟ್ರಾನಿನಿಂದ ಮುಂದಕ್ಕೆ ಇರುವ ಭಾಗವೆಲ್ಲ ಕರುಳು. ಇದರ ತುದಿಯಲ್ಲಿ ಗುದದ್ವಾರವಿದೆ. ಉದರಭಾಗದಲ್ಲಿರುವ ಮ್ಯಾಲ್ಪಿಗಿಯನ್ ನಾಳಗಳು ಮತ್ತು ಸೆಫಲೊತೋರ್ಯಾಕ್ಸಿನಲ್ಲಿರುವ ಕಾಕ್ಸಲ್ ಗ್ರಂಥಿಗಳು ವಿಸರ್ಜನಾಂಗಗಳು. ನೆಪ್ರೊಸೈಟುಗಳು ವಿಸರ್ಜನೆಯಲ್ಲಿ ನೆರವಾಗುತ್ತವೆ.

ಬಹುತೇಕ ಜೇಡಗಳಲ್ಲಿ ವಿಷಗ್ರಂಥಿಗಳಿವೆ. ಕೆಲಿಸೆರೆಯ ತುದಿಯಲ್ಲಿ ಇವು ಹೊರಕ್ಕೆ ತೆರೆಯುತ್ತವೆ. ಉದರದೊಳಗೆ ರೇಷ್ಮೆ ಗ್ರಂಥಿಗಳಿವೆ. ಇವು ಸ್ರಾವಕೋಶಗಳಿಂದ ರಚಿತವಾಗಿವೆ. ಜೇಡಗಳ ವಿವಿಧ ಗುಂಪುಗಳಲ್ಲಿ ವಿಭಿನ್ನವಾಗಿವೆ.

ಜೇಡಗಳ ರಕ್ತ ವರ್ಣರಹಿತ. ಹೃದಯ ಉದ್ದವಾದ ಒಂದು ಸರಳಕೊಳವೆಯಂತಿದ್ದು, ಉದರದ ಬೆನ್ನುಭಾಗದ ಮಧ್ಯದಲ್ಲಿದೆ. ಆಸ್ಟಿಯಗಳೆಂಬ ಸೀಳುಗಳ ಮೂಲಕ ರಕ್ತ ಹರಿಯುತ್ತದೆ. ಈ ಸೀಳುಗಳ ಸಂಖ್ಯೆ ಜೇಡಗಳ ಕುಟುಂಬಕ್ಕನುಗುಣವಾಗಿ ವ್ಯತ್ಯಾಸವಾಗಿದೆ.

ಉಸಿರಾಟ, ಟ್ರೇಕಿಯಗಳ ಮತ್ತು ಪದರ ಫುಪ್ಫುಸಗಳ ಸಹಾಯದಿಂದ ನಡೆಯುತ್ತದೆ. ಪದರ ಫುಪ್ಫುಸಗಳು ಆರ್ಯಾಕ್ನಿಡ ಜೀವಿಗಳಿಗೆ ವಿಶಿಷ್ಟವಾದುವು. ಇವುಗಳ ಸಂಖ್ಯೆ ಸಾಧಾರಣವಾಗಿ ಎರಡು. ಇವು ಚೀಲದಂತಿವೆ. ಒಳಗೆ ಎಲೆಗಳಂಥ 15–20 ಸಮಾಂತರ ಬಡುಗಳಿವೆ. ಇವುಗಳ ಮೂಲಕ ರಕ್ತ ಪ್ರವಹಿಸುವುದು. ಸಾಮಾನ್ಯವಾಗಿ ಜೇಡಗಳಲ್ಲಿ ಟ್ರೇಕಿಯಗಳು ದೇಹದ ಎಲ್ಲ ಭಾಗಗಳಿಗೂ ಹರಡುವುದಿಲ್ಲ. ಈ ಲಕ್ಷಣದಲ್ಲಿ ಜೇಡಗಳು ಕೀಟಗಳಿಂದ ಭಿನ್ನವಾಗಿವೆ.

ಜೇಡಗಳು ಭಿನ್ನಲಿಂಗಿಗಳು. ಗಂಡಿನ ವೃಷಣಗಳು ಹೆಣ್ಣಿನ ಅಂಡಾಶಯಗಳು ಉದರ ಭಾಗದೊಳಗೆ ನಾಳಸಮೂಹದಂತೆ ಇವೆ. ವೀರ್ಯಾಣುಗಳು ಗಂಡಿನ ಪೆಡಿಪ್ಯಾಲ್ಪ್‌ಗಳ ನೆರವಿನಿಂದ ಹೆಣ್ಣಿಗೆ ವರ್ಗಾವಣೆಯಾಗಿ ಅಲ್ಲಿ ಅಂಡಗಳನ್ನು ನಿಷೇಚಿಸುತ್ತವೆ. ಅನಂತರ ಹೆಣ್ಣು ರೇಷ್ಮೆ ಗೂಡಿನಲ್ಲಿ ಈ ಮೊಟ್ಟೆಗಳನ್ನಿಡುತ್ತದೆ. ಅಂಡವಿರುವ ಉಂಡೆಯನ್ನು ಬಲೆಗೆ ಅಥವಾ, ಗಿಡಕ್ಕೆ ಅಂಟಿಸುತ್ತದೆ ಅಥವಾ ಹೆಣ್ಣು ಜೇಡ ಹೊತ್ತು ಅಲೆದಾಡುತ್ತದೆ. ಮೊಟ್ಟೆಯೊಡೆದು ಹೊರಬರುವ ಮರಿಗಳು ತಾವು ಓಡಾಡುವಷ್ಟು ಸಾಮರ್ಥ್ಯವನ್ನು ಪಡೆದ ಮೇಲೆ ನಯವಾದ ಎಳೆಯಿಂದಾದ ಗೂಡನ್ನು ಬಿಟ್ಟು ಹೊರಬರುತ್ತವೆ. ಜೇಡಗಳ ಕೂಡುವಿಕೆ ಅತ್ಯಂತ ವಿಚಿತ್ರ. ಇವು ಸಂಭೋಗ ಕ್ರಿಯೆಯಲ್ಲಿ ತೊಡಗುವ ಮುನ್ನ ಕೆಲವು ಪೂರ್ವಸಿದ್ಧತೆಗಳನ್ನು ಆರಂಭಿಸುವುವು. ಬಲೆ ನೇಯುವ ಜೇಡಗಳಲ್ಲಿ ಗಂಡುಗಳು ಉದ್ರೇಕದ ಒಂದು ಘಟ್ಟ ತಲುಪಿದಾಗ, ಬಲೆಯ ಎಳೆಗಳನ್ನು ನುಲಿಚತೊಡಗುತ್ತವೆ. ಜೊತೆಗೆ ಉದರದ ಹಾಗೂ ಪ್ಯಾಲ್ಪಿಯ ಚಲನೆಗಳನ್ನು ಪ್ರದರ್ಶಿಸತೊಡಗುತ್ತವೆ. ಅಲೆಮಾರಿ ಜೇಡಗಳಲ್ಲಿ (ವ್ಯಾಗಬಂಡ್ ಸ್ಪೈಡರ್) ಈ ವರ್ತನೆ ಇನ್ನೂ ವಿಸ್ತಾರವಾದದ್ದು. ಗಂಡು ಜೇಡಗಳು ಹೆಣ್ಣುಗಳ ಮುಂದೆ ತಮ್ಮ ಪ್ಯಾಲ್ಪಿಗಳನ್ನು, ಕಾಲುಗಳನ್ನು (ಕೆಲವೊಮ್ಮೆ ಎರಡನ್ನು) ಆಡಿಸುತ್ತ ವಿಚಿತ್ರ ಭಂಗಿಗಳನ್ನು ತಾಳುತ್ತ ನರ್ತಿಸುತ್ತವೆ. ಇಂಥ ವರ್ತನೆಗೆ ಕಾರಣಗಳು ಹಲವು. ಲೈಂಗಿಕ ಆಯ್ಕೆ ಒಂದು ಕಾರಣವಾದರೆ, ಹೆಣ್ಣಿನ ಗಮನವನ್ನು ಸೆಳೆಯುವುದು ಇನ್ನೊಂದು ಕಾರಣ. ಉದ್ರಿಕ್ತ ಸ್ಥಿತಿ, ಸ್ವರಕ್ಷಣೆ ಇವು ಇನ್ನಿತರ ಕಾರಣಗಳು ಎಂದು ತಜ್ಞರ ಅಭಿಪ್ರಾಯ. ಸಂಭೋಗದ ಕಾಲಾವಧಿಯಲ್ಲಿ ಉಂಟಾಗುವ ತೀವ್ರ ತೆರನಾದ ಶಾರೀರಿಕ ಚಟುವಟಿಕೆಯ ಬಾಹ್ಯಪ್ರದರ್ಶನ ಹಾಗೂ ಹೆಣ್ಣು ಜೇಡವನ್ನು ಪ್ರಚೋದಿಸಲು ಗಂಡು ನಡೆಸುವ ಪ್ರಣಯಾಚರಣೆ ಎಂಬ ಅಭಿಪ್ರಾಯ ಇದೆ. ಹಲವಾರು ಭಂಗಿಗಳಲ್ಲಿ ಕೂಡುವಿಕೆ ನಡೆಯುತ್ತದೆ. ಇದು ಪ್ರತಿಯೊಂದು ಜಾತಿ ಮತ್ತು ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿವೆ.

ಜೇಡಗಳ ಸಂವೇದನ ಅಂಗಗಳಲ್ಲಿ ಮುಖ್ಯವಾದ್ದು ಕಣ್ಣು. ಬಹುತೇಕ ಜೇಡಗಳಲ್ಲಿ 8 ಕಣ್ಣುಗಳಿವೆ. ಕೆಲವು ಜಾತಿಯ ಜೇಡಗಳಲ್ಲಿ ೬ ಕಣ್ಣುಗಳಿವೆ. ಶ್ರೀಲಂಕಾದಲ್ಲಿ ವಾಸಿಸುವ ಟೆಟ್ರಬ್ಲೆಮ ಜೇಡದಲ್ಲಿ ೪ ಕಣ್ಣುಗಳಿವೆ. ದಕ್ಷಿಣ ಅಮೆರಿಕ ನಿವಾಸಿಯಾದ ನಾಪ್ಸ್ ಜೇಡದಲ್ಲಿ ಕೇವಲ ೨ ಕಣ್ಣುಗಳಿವೆ. ಗುಹಾವಾಸಿಯಾದ ಆಂತ್ರೋಬಿಯ ಜೇಡಕ್ಕೆ ಕಣ್ಣುಗಳಿಲ್ಲ. ಕಣ್ಣುಗಳಲ್ಲಿ ಎರಡು ಭಿನ್ನಬಗೆಗಳಿವೆ. ಒಂದು ನೇರ ರೀತಿಯದು. ಇದರಲ್ಲಿ ಅಕ್ಷಿಪಟ ಕೋಶಗಳ ನ್ಯೂಕ್ಲಿಯೈಗಳು ಅಕ್ಷಿಪಟಕ್ಕೆ ವಿರುದ್ಧ ದಿಕ್ಕಿನಲ್ಲಿವೆ. ಇನ್ನೊಂದು 'ಪರೋಕ್ಷ' ಅಥವಾ ನೇರವಲ್ಲದ ರೀತಿಯದು. ಇದರಲ್ಲಿ ಅಕ್ಷಪಟದ ಕೋಶಗಳ ನ್ಯೂಕ್ಲಿಯಸುಗಳು ಮಸೂರಕ್ಕೆ ಎದುರಾಗಿವೆ. ಜೇಡಗಳಿಗೆ ಕೆಂಪು ಬಣ್ಣ ತುಂಬಾ ಇಷ್ಟ. ಹಳದಿ, ಹಸಿರು ಮತ್ತು ನೀಲಿ ಬಣ್ಣಗಳಿಂದಲೂ ಇವು ಆಕರ್ಷಿತವಾಗಿವೆ.

ಜೇಡಗಳಲ್ಲಿ ಸ್ಪರ್ಶಜ್ಞಾನ ತುಂಬಾ ಚೆನ್ನಾಗಿದೆ. ದೈನಂದಿನ ಜೀವನ ನಿರ್ವಹಣೆಗೆ ಇದು ಬಲು ಮುಖ್ಯ. ದೇಹದ ಎಲ್ಲ ಭಾಗಗಳು ಸ್ಪರ್ಶ ಸಂವೇದಿಗಳಾಗಿವೆಯಾದರೂ, ಸೀಟೆಗಳಲ್ಲಿ ಈ ಗುಣ ಹೆಚ್ಚು ಪ್ರಖರವಾಗಿದೆ. ಬಲೆ ನೇಯುವ ಜೇಡಗಳಲ್ಲಿ ಇದು ಇನ್ನೂ ತೀಕ್ಷ್ಣ. ಬಲೆಯ ಯಾವ ಮೂಲೆಯಲ್ಲಾದರೂ ಕೊಂಚ ಚಲನೆಯಾದರೆ, ಜೇಡ ಅದನ್ನು ತಕ್ಷಣ ಗ್ರಹಿಸುವುದು ಮತ್ತು ಬಲೆಯನ್ನು ಮುಟ್ಟುತ್ತಿರುವ ಪ್ರಾಣಿ ಯಾವುದು ಎಂಬುದನ್ನು ತಿಳಿದುಕೊಳ್ಳಬಲ್ಲುದು. ಜೇಡಗಳು ಟ್ರೈಕೊಬಾಕ್ರಿಯಗಳೆಂಬ ಸೂಕ್ಷ್ಮ ಕೂದಲಗಳ ಸಹಾಯದಿಂದ ಶಬ್ದವನ್ನು ಗ್ರಹಿಸಬಲ್ಲುವು. ಅಲ್ಲದೆ ತಮ್ಮ ಅಂಗಗಳ ಗಡಸು ಭಾಗಗಳನ್ನು ಉಜ್ಜುವ ಮೂಲಕ ಒಂದು ತೆರನ ಕೀಚು ಧ್ವನಿಯನ್ನು ಉಂಟುಮಾಡುತ್ತವೆ. ಜೇಡಗಳು ಲೈರಿಫಾರಮ್ ಅಂಗಗಳೆಂಬ ವಿಶಿಷ್ಟ ರಚನೆಗಳ ಸಹಾಯದಿಂದ ವಾಸನೆಯನ್ನು ಗ್ರಹಿಸಬಲ್ಲುವು. ಈ ಅಂಗಗಳು ಕಾಲು ಮತ್ತು ಪ್ಯಾಲ್ಪಿಗಳ ಮೇಲೆ ವ್ಯಾಪಿಸಿವೆ. ಅಲ್ಲದೆ ಪ್ಯಾಲ್ಪಿಗಳ ಮೇಲೆ ರುಚಿಗ್ರಾಹಿ ರಚನೆಗಳಿವೆ.

ಜೇಡಗಳು ವಿವಿಧ ರೀತಿಯ ನೆಲೆಗಳಲ್ಲಿ ವಾಸಿಸುತ್ತವೆ. ಅನೇಕ ಜೇಡಗಳು ನೆಲದ ಮೇಲೆ ಅಥವ ಸನಿಹದಲ್ಲಿ ವಾಸಿಸುವುವು. ಸುರಂಗಗಳನ್ನು ಕೊರೆದು ಅಥವ ಸ್ವಾಭಾವಿಕವಾದ ಕುಹರಗಳಲ್ಲಿ, ಬಿರುಕುಗಳಲ್ಲಿ ಜೀವಿಸುತ್ತವೆ. ಕೆಲವು ಕಲ್ಲುಗಳ ಅಥವಾ ದಿಮ್ಮಿಗಳ ಕೆಳಗೆ ವಾಸಿಸುವುವು. ಹುಲ್ಲಿನಲ್ಲಿ, ಪೊದೆಗಳಲ್ಲಿ, ಮರಗಳಲ್ಲಿ ವಾಸಿಸುವ ಜೇಡಗಳಿವೆ. ವಾಸದ ಮನೆಗಳಲ್ಲಿ ಜೇಡಗಳು ಸಾಮಾನ್ಯ. ಇವು ಕತ್ತಲಿರುವ ಮತ್ತು ನೆರಳಿರುವ ಹಾಗೂ ಆರ್ದ್ರತೆ ಹೆಚ್ಚಾಗಿರುವ ನೆಲೆಗಳನ್ನು ಇಚ್ಛಿಸುತ್ತವೆ.

ಜೇಡಬಲೆಗಳು : ಜೇಡ ಎಂದ ತತ್‌ಕ್ಷಣ ಎಲ್ಲರ ಮನಸ್ಸಿಗೆ ಬರುವುದು ಅವುಗಳ ಬಲೆ. ಜೇಡ ನೇಕಾರನಂತೆ ಬಲೆ ನೇಯುವ ಸ್ವಭಾವದ ಆರಂಭ ಲೈಫಿಸಿಟಿಯೊಮಾರ್ಫಿ ಕುಟುಂಬದಲ್ಲಿ ಕಂಡು ಬರುತ್ತದೆ. ಈ ಗುಂಪಿನ ಜೇಡಗಳು ಸುರಂಗದಂಥ ಬಿಲವನ್ನು ರಚಿಸಿ ಅದರ ಸುತ್ತ ನಯವಾದ ಮೆತ್ತೆಯನ್ನು ರಚಿಸುತ್ತವೆ. ಈ ಬಿಲಕ್ಕೆ ಕೀಲು ಕವಾಟ ಇರುತ್ತದೆ. ಈ ಬಿಲದಿಂದ ಮುಂದಿನ ಹಂತವೆಂದರೆ ಮನೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಗೋಜುಗೋಜಾದ ಜೇಡ ಬಲೆಗಳು. ಇದರಲ್ಲಿ ಒಂದು ಕೊಳವೆಯಂಥ ಗೂಡು ಇದೆ. ಆದರೆ, ಇದರ ಅರುಗಿನಲ್ಲಿರುವ ಎಳೆಗಳು ತುಂಬ ವಿಸ್ತಾರವಾಗಿ ಬಲೆಯ ರೂಪದಲ್ಲಿ ಹರಡಿಕೊಂಡಿವೆ. ಎತ್ತರದಲ್ಲಿ ಹಾರಾಡುವ ಕೀಟಗಳನ್ನು ಹಿಡಿಯುವ ಉದ್ದೇಶವೇ ಈ ರೀತಿ ಬಲೆ ನೇಯುವ ಪ್ರವೃತ್ತಿಗೆ ಮೂಲ ಕಾರಣ. ಸುಂದರವಾದ ವೃತ್ತಾಕಾರದ ಜೇಡಬಲೆಗಳು (ಆರ್ಬ್ ವೆಬ್ಸ್)ಬಲೆ ನೇಯುವ ಪ್ರವೃತ್ತಿಯ ವಿಕಾಸದಲ್ಲಿ ಕೊನೆಯ ಹಂತ. ಇಂಥ ಬಲೆಯಲ್ಲಿ ಐದು ಭಾಗಗಳಿವೆ : 1. ಮೂಲ ರೇಖೆಗಳ ಚೌಕಟ್ಟು. 2. ಅರೀಯ ಎಳೆಗಳು. 3. ಅಂಟಂಟಾದ ಸುರುಳಿ, 4. ಕಚ್ಚುಗಳುಳ್ಳ ವಲಯ, 5. ಗುಂಬ. ಬಲೆನೇಯುವುದು ಮತ್ತು ಮೂಲ ಎಳೆಗಳನ್ನು ಕಟ್ಟುವುದರಿಂದ ಆರಂಭವಾಗುತ್ತದೆ. ಮೊದಲು ಯಾವುದೋ ಒಂದು ಬಿಂದುವನ್ನು ಆರಂಭ ಸ್ಥಾನವನ್ನಾಗಿ ಇಟ್ಟುಕೊಂಡು ಇಲ್ಲಿಗೆ ಒಂದು ಎಳೆಯನ್ನು ಅಂಟಿಸಿ, ಅಲ್ಲಿಂದ ನಿರ್ದಿಷ್ಟ ದೂರದಲ್ಲಿನ ಇನ್ನೊಂದು ನೆಲೆಗೆ ಕ್ಷಿತಿಜೀಯ ಎಳೆಯೊಂದನ್ನು ವಿಸ್ತರಿಸುತ್ತದೆ. ಎಳೆ ಯಾವುದೇ ವಸ್ತುವಿನೊಂದಿಗೆ ಸಿಕ್ಕಿಕೊಳ್ಳದಂತೆ (ತೊಡಕಿ ಹಾಕಿಕೊಳ್ಳದಂತೆ) ನಾಲ್ಕನೆಯ ಜೋಡಿಕಾಲುಗಳು ಎಳೆಯನ್ನು ಎತ್ತಿಹಿಡಿಯುತ್ತವೆ.

ಜೇಡಬಲೆಗಳಲ್ಲಿ ಹಲವಾರು ಬಗೆಗಳಿವೆ. ಇದು ಪ್ರಭೇದಕ್ಕೆ ವಿಶಿಷ್ಟವಾದದ್ದು ಮತ್ತು ಆಯಾ ಜೇಡ ಪ್ರಭೇದದ ಹುಟ್ಟಿನಿಂದ ಬಂದ ಗುಣ. ಮನೆಗಳಲ್ಲಿ ವಾಸಿಸುವ ಜೇಡಗಳಲ್ಲಿ ಹೆಚ್ಚಿನವು ಖಚಿತ ಆಕಾರವಿಲ್ಲದೆ ಹೆಣಿಗೆ ರಚನೆಯ ಬಲೆಗಳನ್ನು ನೇಯುತ್ತವೆ. ನವುರಾದ ಎಳೆಗಳಿಂದ ಹೆಣೆಯಲ್ಪಟ್ಟ ಇವು ಮೂರು ಆಯಾಮಗಳುಳ್ಳವು. ಇವುಗಳಲ್ಲಿ ಬರಿ ಎಳೆಗಳಲ್ಲದೆ ದೂಳು ಕಸಕಡ್ಡಿ ಮುಂತಾದುವು ಸೆರೆ ಸಿಕ್ಕುತ್ತವೆ. ಸಾಮಾನ್ಯವಾಗಿ ಗುಂಪು ಗುಂಪಾಗಿ ವಾಸಿಸುವ ಜೇಡಗಳು ಇಂಥ ಬಲೆಗಳನ್ನು ನಿರ್ಮಿಸುತ್ತವೆ. ಆಗಿಂದಾಗ್ಗೆ ಬಲೆಗಳನ್ನು ದೊಡ್ಡದು ಮಾಡುವುದು, ದುರಸ್ತು ಮಾಡುವ ಚಟುವಟಿಕೆಗಳು ಇರುತ್ತವೆ.

ಬಯಲಿನಲ್ಲಿ ಜೀವಿಸುವಂಥ ಜೇಡಗಳು ಹಡಗಿನ ಕೂವೆಕಂಬಗಳಿಂದ ಹರಡಿಕೊಂಡಿರುವ ಹಾಯಿಪಟಗಳ ಮಾದರಿಯಲ್ಲಿ ಹುಲ್ಲು ಮತ್ತು ಉದ್ದ ತೊಟ್ಟಿನ ಹೂಗಳಿಂದ ಹರಡಿ ಬಿದ್ದಿರುವ ಹಾಳೆ ರೀತಿಯ ಬಲೆಗಳನ್ನು ರಚಿಸುತ್ತವೆ. ಕೆಲವು ಜೇಡಗಳು ಸರ್ಕಸ್ಸಿನಲ್ಲಿ






ಗ್ಯಾಸಟರ್‌ಕಾಂತಿನೆ ಪ್ರಭೇದದ ಜೇಡ ಬಲೆ

ನಳಿಕೆಯಾಕಾರದ ಡಿಫ್ಲರಿಡಿಯೆ ಪ್ರಭೇದದ ಬಲೆ



ಹಾಳೆಯಂತಿರುವ ಬಲೆ ಲಿನ್ಯಪಿಲಿಡೆ ಪ್ರಭೇದ





ನಾಳದಾಕೃತಿಯ ಬಲೆ ಲಿಫೂನಿಸ್ ಪ್ರಭೇದ



ಬಳಸುವ ಜಿಗಿಬಲೆಗಳಂಥ (ಟ್ರ್ಯಾಂಪಲೀನ್) ಬಲೆಗಳನ್ನು ನಿರ್ಮಿಸಿ ಕೀಟಗಳನ್ನು ಹಿಡಿಯುತ್ತವೆ. ಕೆಲವು ಜೇಡಗಳು ಗುಮ್ಮಟ, ಆಲಿಕೆ, ಕೊಳವೆ ಅಥವ ಸಂಚಿಗಳಂಥ ಬಲೆಗಳನ್ನು ರಚಿಸುತ್ತವೆ. ಬಲೆಗಳಲ್ಲೆಲ್ಲ ಅತ್ಯಂತ ಕುತೂಹಲಕಾರಿ ಮತ್ತು ಸಂಕೀರ್ಣ ಬಗೆಯದು ಒಂದೇ ಒಂದು ಸಮಪಾತಳಿಯಲ್ಲಿ ವಿಸ್ತರಿಸಿರುವ ವೃತ್ತಾಕಾರದ ಬಲೆಗಳು (ಆರ್ಬ್ ವೆಬ್ಸ್). ಇಂಥ ಬಲೆಗಳಲ್ಲಿ ಹಲವಾರು ಬಗೆಯ ಎಳೆಗಳಿರುತ್ತವೆ. ಇವುಗಳ ವ್ಯಾಸ 0.03 ಮೈಮೀ ಯಿಂದ 0.1 ಮೈಮೀ ವರೆಗೆ ಇರುತ್ತವೆ. ಈ ತೆರನ ಬಲೆಯನ್ನು ನೇಯುವುದಕ್ಕೆ ಆರಂಭಿಸುವ ಮೊದಲು ಅತ್ಯಂತ ಭಾರವಾದ ಮತ್ತು ಹಲವಾರು ಕೆಲಸಗಳಿಗೆ ಬರುವಂಥ ದೃಢವಾದ ಎಳೆಯನ್ನು ರಚಿಸುತ್ತ ಸೂಕ್ತವಾದ ಜಾಗವನ್ನು ಹುಡುಕಿಕೊಂಡು ಓಡಾಡುತ್ತದೆ. ಈ ದೃಢವಾದ ಎಳೆಗೆ ಕರ್ಷಣಸೂತ್ರ (ಡ್ರ್ಯಾಗ್‌ಲೈನ್ ) ಎಂದು ಹೆಸರು. ಜೇಡ ಸ್ಥಳದಿಂದ ಸ್ಥಳಕ್ಕೆ ಓಡಾಡುವಾಗಲೆಲ್ಲ ಇದು ರಚಿತವಾಗುತ್ತಲೇ ಇರುತ್ತದೆ. ಜೇಡ ಯಾವುದಾದರೊಂದು ಸ್ಥಳದಲ್ಲಿ ರೆಂಬೆ ಮುಂತಾದುವುಗಳಿಂದ ಇಳಿಯ ಬೇಕೇನಿಸಿದಾಗ ಈ ಕರ್ಷಣಸೂತ್ರವನ್ನು ರಚಿಸುತ್ತಲೆ ಇಳಿಯುತ್ತದೆ. ಬೇಕೆನಿಸಿದಾಗ ಅಥವ ಸಮೀಪದಲ್ಲೆಲ್ಲೊ ಅಪಾಯವಿದೆ ಎನಿಸಿದಾಗ ಕರ್ಷಣಸೂತ್ರದಿಂದ ಜೇಡ ಮೇಲಕ್ಕೇರಬಲ್ಲುದು. ಮೊದಲು ಪರಸ್ಪರ ದೂರದಲ್ಲಿರುವ ಎರಡು ಬಿಂದುಗಳನ್ನೂ ಸೇರಿಸುವಂತೆ ಒಂದು ಕ್ಷಿತಿಜೀಯ ಸೇತುವೆ ನಿರ್ಮಾಣವಾಗುತ್ತದೆ. ಇದು ಕರ್ಷಣಸೂತ್ರದಿಂದ ನಿರ್ಮಿತವಾಗಿರುತ್ತದೆ. ಹೀಗೆ ಮಾಡಲು ಸಾಧ್ಯವಾಗದಿದ್ದಾಗ, ಅಂದರೆ ಸಣ್ಣ ಹಳ್ಳ, ಝರಿ ಮುಂತಾದುವುಗಳ ಮೇಲೆ ಹಾದುಹೋಗುವಂಥ ಸಂದರ್ಭಗಳಲ್ಲಿ ಜೇಡ ತನ್ನ ಉದರಭಾಗವನ್ನು ಕೊಂಚ ಮೇಲೆತ್ತಿ ತೆಳುವಾದ ನಯವಾದ ಎಳೆಯೊಂದನ್ನು ಹೊರಸೂಸಲಾರಂಭಿಸುತ್ತದೆ. ಗಾಳಿ ಪ್ರವಾಹದ ಮೂಲಕ ಈ ಎಳೆ ದೂರ ಒಯ್ಯಲ್ಪಟ್ಟು ಯಾವುದಾದರೊಂದು ಟೊಂಗೆಗೋ, ಎಲೆಗೋ ಸಿಕ್ಕಿಕೊಳ್ಳುತ್ತದೆ. ಆಗ ಜೇಡ ಬಲೆ ನಿಲ್ಲಿಸಿ ಎಳೆಯನ್ನು ಬಿಗಿಯಾಗಿ ಜಗ್ಗಿ ಎಳೆದು ಬಂಧಿಸುತ್ತದೆ. ಅನಂತರ ತೆಳುವಾದ ಈ ಎಳೆಯ ಮೇಲೆ ಅತ್ತಿಂದಿತ್ತ ಓಡಾಡಿ ಹೆಚ್ಚು ಹೆಚ್ಚಾಗಿ ಕರ್ಷಣಸೂತ್ರವನ್ನು ಹೊಸೆದು ಬಲಪಡಿಸುವುದು.

ಹೀಗೆ ಒಂದು ಅಸ್ತಿಭಾರವನ್ನು ಹಾಕಿದ ಮೇಲೆ ಬಲೆಯ ಕೇಂದ್ರವನ್ನು ನಿರ್ಧರಿಸಿ ಅದರ ಮೂಲಕ ಹಾಯುವಂತೆ ಒಂದು ಎಳೆಯನ್ನು ಹೊಸೆಯುತ್ತದೆ. ಅನಂತರ ಒಂದೊಂದಾಗಿ ತ್ರಿಜ್ಯರೇಖೆಗಳನ್ನು ರಚಿಸುತ್ತದೆ. ಒಂದು ತ್ರಿಜ್ಯರೇಖೆ ಪೂರ್ಣಗೊಂಡಮೇಲೆ ಬಲೆಯ ಗುಂಬಕ್ಕೆ ವಾಪಸ್ಸು ಬಂದು ಮತ್ತೊಂದು ಹೊಸ ತ್ರಿಜ್ಯ ರೇಖೆ ಹೊಸೆಯುವುದು ಇದರ ವಾಡಿಕೆ. ಹೀಗೆ 25 ಅಥವಾ ಅದಕ್ಕೂ ಹೆಚ್ಚು ಅರೀಯ ಎಳೆಗಳನ್ನು ಹೊಸೆದನಂತರ ಈ ಎಳೆಗಳನ್ನು ಸರಿಯಾಗಿ ಹಿಡಿದಿಡುವಂತೆ ಒಂದು ಆಸರೆ ಸುರುಳಿಯನ್ನು (ಗೈಸ್ಪೈರಲ್) ರಚಿಸುತ್ತದೆ. ತರುವಾಯ ಹೆಚ್ಚು ಸ್ಥಿತಿಸ್ಥಾಪಕತೆಯುಳ್ಳ ಮತ್ತು ಅಂಟಂಟಾದ ರೇಷ್ಮೆಯಿಂದ ಇನ್ನೊಂದು ಸುರುಳಿಯನ್ನು ಕೇಂದ್ರಭಿಗಾಮಿಯಾಗಿ ಹೊಸೆಯುತ್ತ ಬರುತ್ತದೆ. ಪ್ರತಿಯೊಂದು ಅರೀಯ ಎಳೆಗೆ ಈ ಸುರುಳಿಯನ್ನು ಅಂಟಿಸುವ ಮುನ್ನ ತನ್ನ ಹಿಂಗಾಲೊಂದರಿಂದ ಒಂದು ಸಲ ಜೀಕು ಹೊಡೆದು ಜಗ್ಗಿಸುತ್ತದೆ. ಇದರಿಂದಾಗಿ ಅರೀಯ ಎಳೆಗಳಲ್ಲಿ ಚಲನೆಗೆ ಕೊಂಚ ಅವಕಾಶವಿರುತ್ತದೆ (ತೊನೆತವಿರುತ್ತದೆ). ಈ ಎಳೆಗಳಲ್ಲಿ ಯಾವುದಾದರೂ ಕೀಟ ಸಿಕ್ಕಿಹಾಕಿಕೊಂಡರೆ ಅದು ಅತ್ತಿಂದಿತ್ತ ಪುಟನೆಗೆದು ಬಿಡಿಸಿಕೊಳ್ಳಲಾರದಂತೆ ಇತರ ಎಳೆಗಳಲ್ಲಿ ಸಿಕ್ಕುಬೀಳುತ್ತದೆ. ಅಂಟಂಟಾದ ಸುರುಳಿಯನ್ನು ರಚಿಸುತ್ತ ಹೋದಂತೆ ಆಸರೆ ಸುರುಳಿಯನ್ನು ಕತ್ತರಿಸುತ್ತದೆ. ನಂತರ ಗುಂಬದಲ್ಲಿ ಸಂಗ್ರಹಗೊಂಡಿರುವ ಎಳೆಗಳನ್ನೆಲ್ಲ ತಿಂದುಹಾಕುತ್ತದೆ. ಹೀಗೆ ಬಲೆಯನ್ನು ಸಂಪೂರ್ಣಗೊಳಿಸಿದ ಮೇಲೆ ಯಾವುದಾದರೊಂದು ಅರೀಯ ಎಳೆಯನ್ನು ಆಯ್ದುಕೊಂಡು ಅದರ ಮೂಲಕ ನಡೆದು ಬಲೆಯಿಂದ ಆಚೆ ಬಂದು ಕೊಂಚ ದೂರದಲ್ಲಿ ಜೇಡ ನಿಲ್ಲುತ್ತದೆ. ಈ ಎಳೆಯೇ ಜಾಡು ಎಳೆ (ಗೈಡ್ ಲೈನ್). ಬಲೆಯ ಸಮೀಪಕ್ಕೆ ಯಾವುದಾದರೂ ಕೀಟ ಬಂದರೆ ಈ ಜಾಡು ಎಳೆ ಅಲುಗಲಾರಂಭಿಸುತ್ತದೆ. ಇದರಿಂದಾಗಿ ಮರೆಯಲ್ಲಿ ಅಡಗಿರುವ ಜೇಡ ಕೀಟದ ಮೇಲೆ ಬಂದೆರಗಿ ಅದರ ಸುತ್ತ ಅನೇಕ ಎಳೆಗಳನ್ನು ಸುತ್ತಿ ಬಿಗಿದು ಅದನ್ನು ತಿನ್ನಲಾರಂಭಿಸುತ್ತದೆ.

ಬಲೆಯನ್ನು ನೇಯುವ ಕ್ರಿಯೆಯನ್ನು ಪ್ರಯೋಗಾಲಯಗಳಲ್ಲಿ ಅಭ್ಯಸಿಸಲಾಗಿದೆ. ಸಾಮಾನ್ಯವಾಗಿ ಅತ್ಯಂತ ತಂಪಾಗಿರುವ ಸಮಯದಲ್ಲಿ ಈ ಚಟುವಟಿಕೆ ಹೆಚ್ಚು. ಅನೇಕ ಬಗೆಯ ಜೇಡಗಳು ಪ್ರತಿನಿತ್ಯ ಒಂದೊಂದು ಹೊಸ ಬಲೆಯನ್ನು ನೇಯುತ್ತವಾದರೂ ಕೆಲವು ಒಂದೇ ಬಲೆಯನ್ನು ಅನೇಕ ದಿನಗಳವರಗೆ ಉಪಯೋಗಿಸುತ್ತವೆ. ಸಾಧಾರಣವಾಗಿ 20–30 ನಿಮಿಷಗಳಲ್ಲಿ ಒಂದು ಬಲೆಯನ್ನು ರಚಿಸಬಲ್ಲುವು. ಈ ಚಟುವಟಿಕೆ ಜೇಡಗಳಿಗೆ ಕಲಿಕೆಯಿಂದ ಬಂದ ಚಾತುರ್ಯವಲ್ಲ, ಇದೊಂದು ಸಹಜ ಪ್ರವೃತ್ತಿ. ಮರಿಜೇಡಗಳು ಮೊದಲು ಸಣ್ಣಪುಟ್ಟ ಬಲೆಗಳನ್ನು ರಚಿಸಿ, ಅನಂತರ ಅಭ್ಯಾಸ ನಡೆಸಿ, ಕಾಲಕ್ರಮೇಣ ದೊಡ್ಡ ಬಲೆಗಳನ್ನು ನಿರ್ಮಿಸತೊಡಗುತ್ತವೆ ಎಂದು ಭಾವಿಸಲಾಗಿತ್ತು. ಆದರೆ, ಮೊಟ್ಟೆಯೊಡೆದು ಹೊರಬರುವ ಮರಿ ಜೇಡವನ್ನು ಅದರ ತಾರುಣ್ಯದವರೆಗೂ ಏಕಾಂತಬಂಧನದಲ್ಲಿ ಒಂದು ಎಳೆಯನ್ನೂ ಅದು ನೂಲದಂತೆ ನಿಯಂತ್ರಣಗೊಳಿಸಿ, ಅನಂತರ ಮುಕ್ತಗೊಳಿಸಿದರೆ ಆ ಜೇಡ ಪ್ರಥಮ ಯತ್ನದಲ್ಲೇ ಪರಿಪೂರ್ಣವಾದ ಒಂದು ದೊಡ್ಡ ಗಾತ್ರದ ಬಲೆಯನ್ನು ರಚಿಸುತ್ತದೆ ಎಂದು ರಷ್ಯನ್  ವಿಜ್ಞಾನಿಗಳ ಪ್ರಯೋಗಗಳಿಂದ ವ್ಯಕ್ತವಾಗಿದೆ. ಬಲೆಯನ್ನು ನೇಯುವ ಚಟುವಟಿಕೆಯಲ್ಲಿ ಹಲವು ಕುತೂಹಲಕಾರಿ ಅಂಶಗಳಿವೆ. ಬಲೆ ನೇಯಲು ಲಭ್ಯವಿರುವ ಪ್ರೋಟೀನ್‌ಯುಕ್ತವಾದ ರೇಷ್ಮೆಯ ಮೊತ್ತವನ್ನವಲಂಬಿಸಿ ಬಲೆಯ ವಿನ್ಯಾಸವನ್ನು ಜೇಡ ನಿರ್ಧರಿಸುತ್ತದೆ. ಪ್ರೋಟೀನ್ ಪೂರೈಕೆ ಕಡಿಮೆಯಿರುವಾಗ ಬಲೆಯ ಗಾತ್ರವನ್ನು ಕಡಿಮೆ ಮಾಡುವುದಲ್ಲದೆ ಎಳೆಗಳನ್ನು ಹೆಚ್ಚು ತೆಳುವಾಗಿ ರಚಿಸುತ್ತದೆ. ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸುವ ಸಾಮರ್ಥ್ಯವುಳ್ಳ ಫೈಸೊಸ್ಟಿಗ್ಮಿನ್ ರಾಸಾಯನಿಕವನ್ನು ಜೇಡಗಳಿಗೆ ಉಣಿಸಿದಾಗ ದೊಡ್ಡ ಗಾತ್ರದ ಬಲೆಗಳನ್ನು ನೇಯುವುವು. ಅಂತೆಯೇ ಜೇಡಗಳು ಭಾರವಾಗಿದ್ದರೆ ಬಲೆಗಳು ದೃಢವಾಗಿ ಗಡುಸಾಗಿ ಇರುತ್ತವೆ. ಹಗುರವಾದ ಜೇಡವೊಂದಕ್ಕೆ ಸೀಸದ ಸಣ್ಣ ತುಂಡನ್ನು ಕಟ್ಟಿದರೆ ಅದು ಭಾರವಾದ ಎಳೆಯ ಬಲೆಯನ್ನು ರಚಿಸುವುದು. ಆದರೆ ಇಂಥ ಬಲೆಯನ್ನು ನಿರ್ಮಿಸುವುದಕ್ಕೆ ಹೆಚ್ಚು ಮೊತ್ತದ ರೇಷ್ಮೆ ಬೇಕಾಗುವುದರಿಂದ ಅಷ್ಟು ರೇಷ್ಮೆಯನ್ನು ಪೂರೈಸಲಾರದೆ ಬಲೆಯ ತ್ರಿಜ್ಯಗಳನ್ನು ಸುರುಳಿಗಳನ್ನು ಕಡಿಮೆ ಮಾಡಿ ಸರಿದೂಗಿಸುತ್ತದೆ.

ಬಲೆ ನೇಯುವ ಚಟುವಟಿಕೆಗೆ ಜೇಡದ ದೇಹದಲ್ಲಿನ ಹಲವಾರು ವಿವಿಧ ವ್ಯವಸ್ಥೆಗಳ ಸುಸಂಘಟಿತ ಹಾಗೂ ಸುಗಮ ಕಾರ್ಯನಿರ್ವಹಣೆ ಅತ್ಯಗತ್ಯ. ಇವುಗಳಲ್ಲಿ ಯಾವ ಒಂದು ವ್ಯವಸ್ಥೆಗೆ ಆತಂಕವುಂಟಾದರೂ ಅದರಿಂದ ಬಲೆಯ ವಿನ್ಯಾಸದಲ್ಲಿ ನಿರ್ದಿಷ್ಟವಾದ ಮತ್ತು ಕ್ರಮವಾಗಿ ಪುನರಾವರ್ತನೆಯಾಗುವ ಬದಲಾವಣೆಗಳು ಕಂಡುಬರುತ್ತವೆ. ಉದಾ: ಜೇಡಗಳ ಮುಂಗಾಲುಗಳಲ್ಲಿ ಯಾವುದಾದರೂ ಒಂದನ್ನು ಕತ್ತರಿಸಿಹಾಕಿದರೆ ಅಂಥ

ಜೇಡಗಳು ರಚಿಸುವ ಬಲೆಗಳ ಆಕಾರ ಕಾಲು ತೆಗೆದುಹಾಕದಿರುವ ಜೇಡಗಳಿಂದ ನಿರ್ಮಿತವಾದ ಬಲೆಗಳ ಆಕಾರದಂತೆಯೇ ಇದ್ದರೂ ಆ ಬಲೆಗಳಲ್ಲಿನ ತ್ರಿಜ್ಯಗಳ ಮತ್ತು ಕೆಲವು ಸಲ ಸುರುಳಿಗಳ ಕೋನಗಳು ಅನಿಯತವಾಗಿರುತ್ತವೆ. ಇದರಿಂದ ಆ ರೀತಿಯ ಕೋನಗಳನ್ನು ಅಳೆಯಲು ಮುಂಗಾಲು ಅವಶ್ಯಕ.

ಇತ್ತೀಚೆಗೆ ಲೇಸರ್ ಕಿರಣಗಳನ್ನು ಬಳಸಿ ಜೇಡಗಳ ಸೆಫಲೊತೋರ್‍ಯಾಕ್ಸಿನಲ್ಲಿರುವ ಮಿದುಳಿನಲ್ಲಿ ಗಾಯಗಳನ್ನುಂಟುಮಾಡಿ ಬಲೆ ನಿರ್ಮಾಣದ ಚಟುವಟಿಕೆಯ ಮೇಲೆ ಯಾವ ರೀತಿಯ ಪರಿಣಾಮವಾಗುತ್ತದೆ ಎಂಬುದನ್ನು ಅಭ್ಯಸಿಸಲಾಗಿದೆ. ಅಂತೆಯೇ ವಿವಿಧ ರೀತಿಯ ರಾಸಾಯನಿಕಗಳ ಪ್ರಭಾವದ ಬಗ್ಗೆ ಅಧ್ಯಯನಗಳು ನಡೆದಿವೆ. ಉದಾ: ಮೆಸ್ಕಲೀನ್ ಮತ್ತು ಪೆಂಟೊಬಾರ್ಬಿಟಾಲುಗಳನ್ನು ಪ್ರಯೋಗಿಸಿದರೆ ಜೇಡಗಳ ಪ್ರೇರಕ ನಡವಳಿಕೆಗಳ ಮೇಲೆ ತೀವ್ರ ಪರಿಣಾಮಗಳಾಗುವುವು. ಇದರಿಂದಾಗಿ ಜೇಡಗಳು ಸಣ್ಣ ಗಾತ್ರದ ಮತ್ತು ಅನಿಯತ ಆಕಾರದ ಬಲೆಗಳನ್ನು ನಿರ್ಮಿಸುವುವು. ಕ್ಲೋರ್ ಪ್ರೋಮಜೀನ್ ಅಥವಾ ಸೈಲೋಸೈಬಿನ್ ಪ್ರಯೋಗದಿಂದ ಜೇಡಗಳು ಬಲೆ ನೇಯುವ ಪ್ರವೃತ್ತಿಯಲ್ಲಿ ಆಸಕ್ತಿಯನ್ನೇ ಕೊಂಚಕಾಲ ಕಳೆದುಕೊಳ್ಳುತ್ತವೆ.

ಸಾಮಾನ್ಯವಾಗಿ ಬಲೆಗಳನ್ನು ಮರಗಿಡಗಳು ಮತ್ತು ಕಲ್ಲುಬಂಡೆಗಳ ಮೇಲೆ ನಿರ್ಮಿಸವುದಾದರೂ ಕೆಲವು ಬಗೆಯ ಜಲವಾಸಿ ಜೇಡಗಳು (ಉದಾ: ಏಷ್ಯ ಮತ್ತು ಯೂರೋಪ್‌ಗಳಲ್ಲಿ ಕಾಣುವ ಆರ್ಗೋನೀಟ ಅಕ್ವಾಟಿಕ ಜೇಡ) ನೀರಿನೊಳಗೆ ಬಲೆಯನ್ನು ರಚಿಸಿ ಸಣ್ಣ ಪುಟ್ಟ ಮೀನುಮರಿಗಳನ್ನು, ಕಠಿಣಚರ್ಮಿಗಳನ್ನು ಹಿಡಿಯುತ್ತದೆ. ಇಂಥ ಜೇಡಗಳು ಹೆಚ್ಚಾಗಿ ನೀರಪಾತಳಿಯ ಮೇಲೆಯೇ ಇರುತ್ತವೆ. ಬಲೆಯ ಬಳಿಗೆ ಹೋಗಬೇಕಾದ ಒಂದು ದೊಡ್ಡ ಗಾಳಿಗುಳ್ಳೆಯನ್ನು ಮೈಗೆ ಅಂಟಿಸಿಕೊಂಡು ಮುಳುಗುತ್ತವೆ. ಇದರಿಂದ ನೀರಿನೊಳಗಿದ್ದುಕೊಂಡು ಉಸಿರಾಡಬಲ್ಲುವು.

ಜೇಡಬಲೆಯ ನಯವಾದ, ಎಳೆ ರೇಷ್ಮೆಗಿಂತ ಹೆಚ್ಚು ದೃಢ, ಹಗುರ ಮತ್ತು ನಾಜೂಕಾಗಿದೆ. ಇದನ್ನು ಬಟ್ಟೆ ತಯಾರಿಕೆಯಲ್ಲಿ ಉಪಯೋಗಿಸಲು ಪ್ರಯತ್ನಗಳು ನಡೆದಿವೆ. ಆದರೆ, ಆರ್ಥಿಕ ದೃಷ್ಟಿಯಿಂದ ಇದನ್ನು ಪರಿಗಣಿಸಿಲ್ಲ. ಕಾರಣ, ಬಟ್ಟೆ ತಯಾರಿಕೆಗೆ ಸಾಕಾಗುವಷ್ಟು ರೇಷ್ಮೆಯನ್ನು ಪಡೆಯಲು ಜೇಡಗಳನ್ನು ಸಾಕುವುದಕ್ಕೆ ತಗಲುವ ವೆಚ್ಚ ಅಪಾರ. ಮಡಗಾಸ್ಕರಿನಲ್ಲಿ ೧೯ನೇ ಶತಮಾನದಲ್ಲಿ ಜೇಡಗಳನ್ನು (ನೆಫೈಲ ಮಡಗಾಸ್ಕರಿಯೆನ್ಸಿಸ್ ಎಂಬ ಪ್ರಭೇದ) ದೊಡ್ಡ ಗುಂಪುಗಳಲ್ಲಿ ಸಾಕುವ ಪ್ರಯತ್ನ ನಡೆಯಿತು. ಆದರೆ ಅಧಿಕ ಖರ್ಚಿನಿಂದಾಗಿ ಈ ಯತ್ನವನ್ನು ಕೈಬಿಡಲಾಯಿತು. ಈಗ ಜೇಡ ಬಲೆಯ ರೇಷ್ಮೆಯನ್ನು ದೃಗ್ಯಂತ್ರ ಸಲಕರಣೆಗಳ ರೇಖಾ ಫಲಕಗಳ (ಗ್ರೀಟಿಂಗ್ಸ್) ತಯಾರಿಕೆಯಲ್ಲಿ ಬಳಸಲಾಗುತ್ತಿದೆ. ಜೇಡಬಲೆಗೆ ಔಷಧೀಯ ಮಹತ್ತ್ವವಿದೆ. ಗಾಯ ಮತ್ತು ಕೊಯ್ತಗಳಲ್ಲಿ ಇದನ್ನು ಕಟ್ಟುಪಟ್ಟಿಯಾಗಿ ಬಳಸುವ ಕ್ರಮ ಆಫ್ರಿಕದ ಕೆಲವು ಜನಾಂಗಗಳಲ್ಲಿ ಇದೆ. ಇದರಿಂದ ಗಾಯಗಳು ಬೇಗ ವಾಸಿಯಾಗುವುವು.

ಜೇಡಗಳು ವಿಷಪೂರಿತವಾಗಿವೆ. ಎರಡು ಕುಟುಂಬಗಳಿಗೆ ಸೇರಿದ ಜೇಡಗಳನ್ನು ಬಿಟ್ಟರೆ ಉಳಿದವೆಲ್ಲ ವಿಷಯುಕ್ತವಾದುವು. ಅವುಗಳಲ್ಲಿ ಕೆಲವೇ ಜೇಡಗಳು ಮಾತ್ರ ಮನುಷ್ಯನಿಗೆ ಅಪಾಯಕಾರಿಯಾದ ವಿಷವನ್ನು ಉತ್ಪಾದಿಸುವುವು. ಇಂಥ ಜೇಡಗಳ ವಿಷ ಕೆಲವೊಮ್ಮೆ ಸಾವನ್ನು ತರಬಲ್ಲದು. ಉದಾ: ಲ್ಯಾಟ್ರೊಡೆಕ್ಟಸ್ ಮ್ಯಾಕ್ಟನ್ಸ್ (ಕರಿಜೇಡ) ಕಡಿತ ಮಾನವನಿಗೆ ಮಾರಕ. ಜೇಡಗಳ ಕಡಿತದ ಪ್ರಭಾವಕ್ಕೆ ಆರ್‍ಯಾಕ್ನಿಡಿಸಮ್ ಎಂದು ಹೆಸರು. ವಿಷದ ಪ್ರಭಾವ ವಿಶೇಷವಾಗಿ ನರಮಂಡಲ, ಮೂತ್ರಪಿಂಡಗಳು ಮತ್ತು ಯಕೃತ್ತುಗಳ ಮೇಲೆ ಆಗುತ್ತದೆ. ದಕ್ಷಿಣ ಅಮೆರಿಕದಲ್ಲಿ ವಾಸಿಸುವ ಕೆಲವು ಬಗೆಯ ಟರ್‍ಯಾಂಟಲ ಜೇಡಗಳ ವಿಷ ಮಂಪರು ಉಂಟುಮಾಡುವುದಲ್ಲದೆ ಕೆಲವು ಫುಪ್ಫುಸ ಸ್ನಾಯುಗಳ ಪಾರ್ಶ್ವವಾಯುವನ್ನು ತರುವುದು. ಲ್ಯಾಟ್ರೊಡೆಕ್ಟಸಿನ ವಿಷ ನರಗಳ ಮೇಲೆ ಪ್ರಭಾವ ಬೀರುವುದಾದರೂ, ಮಾಂಸಖಂಡಗಳ ಬಿಗುವನ್ನು ಕಡಿಮೆ ಮಾಡುವುದರ ಮೂಲಕ ಉದರದ ಸೆಡೆತವನ್ನುಂಟುಮಾಡುತ್ತದೆ. ಜೊತೆಗೆ ರಕ್ತದ ಒತ್ತಡ, ದೇಹದ ಉಷ್ಣತೆ, ಬೆವರುವಿಕೆ ಮತ್ತು ಪ್ರತಿವರ್ತನೆಗಳನ್ನು ಹೆಚ್ಚು ಮಾಡುವುದಲ್ಲದೆ ಪಿತ್ತೋದ್ರೇಕ, ಊದುವಿಕೆ, ಬಿಳಿರಕ್ತಕಣಗಳ ಹೆಚ್ಚಳಗಳನ್ನುಂಟುಮಾಡುತ್ತದೆ. ಕೆಲವು ತೆರನ ಜೇಡಗಳ ನಂಜಿನಿಂದ ಅಂಗಗಳು ಕೊಳೆಯುವುದು. ಲೈಕೋಸ ರ್‍ಯಾಪ್ಟೋರಿಯ ಜೇಡದ ವಿಷದಿಂದ ಚರ್ಮ ಮತ್ತು ಮಾಂಸಖಂಡಗಳ ಮೇಲೆ ತೀವ್ರ ಪರಿಣಾಮ ಆಗುತ್ತದೆ. ಈ ವಿಷಕ್ಕೆ ಪ್ರಬಲ ಕ್ಷಾರೀಯ ಗುಣಗಳಿವೆ. ಇದು ನೀರಿನಲ್ಲಿ ಕರಗುತ್ತದೆ. ಆದರೆ ಈಥರಿನಲ್ಲಾಗಲಿ, ಆಲ್ಕೊಹಾಲಿನಲ್ಲಾಗಲಿ ಕರಗದು. ಜೇಡಗಳ ದೇಹದ ಬೇರೆ ಭಾಗಗಳಲ್ಲಿ ಮತ್ತು ಮೊಟ್ಟೆಗಳಲ್ಲಿ, ರಕ್ತಕಣಗಳನ್ನು, ಪ್ರೋಟೀನು ವಸ್ತುಗಳನ್ನು ಒಡೆಯುವ ಗುಣವುಳ್ಳ ಅನೇಕ ವಸ್ತುಗಳಿವೆ. ಇಂಥ ವಸ್ತುಗಳಲ್ಲಿ ಮುಖ್ಯವಾದುವು ಎಪೈರಾಲೈಸಿನ್, ಆರ್‍ಯಾಕ್ನೊಟಾಕ್ಸಿನ್, ಆರ್‍ಯಾಕ್ನೊಲೈಸಿನ್ ಮತ್ತು ಎಪೈರಾಟಾಕ್ಸಿನ್.

ಜೇಡಗಳ ಗಣ ಆರನೀಯಿಡವನ್ನು ಕೆಲಿಸೆರೆಗಳ ಸಂರಚನೆಯ ಆಧಾರದ ಮೇಲೆ ಆರ್ತೊನ್ಯಾತ (ಏವಿಕ್ಯುಲರಾಯ್ಡಿಯ) ಮತ್ತು ಲ್ಯಾಬಿಡೊನ್ಯಾತ (ಅರ್ಜಿಯೊಪಾಯ್ಡಿಯ) ಎಂಬ ಎರಡು ಉಪಗಣಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಉಪಗಣಕ್ಕೆ ಸೇರಿದ ಜೇಡಗಳು ಮುಖ್ಯವಾಗಿ ಉಷ್ಣವಲಯದುವು. ಇವು ದೊಡ್ಡ ದೇಹದುವು ಮತ್ತು ದೃಢವಾದ ಕಾಲುಗಳುಳ್ಳವು. ನೆಲದಲ್ಲಿ ಬಿಲ ನಿರ್ಮಿಸಿಕೊಂಡು ವಾಸಿಸುವ ಜೇಡಗಳು, ಟರ್‍ಯಾಂಟಲಗಳು, ಆಲಿಕೆ ಬಲೆಯ ಟರ್‍ಯಾಂಟಲಗಳ ಈ ಗುಂಪಿಗೆ ಸೇರಿವೆ. ಇದರಲ್ಲಿ ಆರು ಕುಟುಂಬಗಳಿವೆ. ಲ್ಯಾಬಿಡೊನ್ಯಾತ ಉಪಗಣದಲ್ಲಿ ಕ್ರೈಬೆಲೇಟೀ ಮತ್ತು ಈಕ್ರೈ ಬೆಲೇಟೀ ಎಂಬ ಎರಡು ಪಂಗಡಗಳಿವೆ. ಮೊದಲನೆಯ ಪಂಗಡಕ್ಕೆ ಸೇರಿದ ಜೇಡಗಳ ಸ್ಪಿನರೆಟ್ಟುಗಳ ಮುಂಭಾಗದಲ್ಲಿ ಕ್ರೈಬೆಲಿಮ್ ಎಂಬ ಅಂಗವೂ ಹಿಂಗಾಲುಗಳ ಮೇಲೆ ಕ್ಯಾಲಮೈಸ್ಟ್ರಮ್ ಎಂಬ ಬಿರುಗೂದಲುಗಳಿವೆ. ಕ್ಯಾಲಮೈಸ್ಟ್ರಮ್ ಇರುವುದರಿಂದ ಈ ಜೇಡಗಳು ರಿಬ್ಬನ್ನಿನಂಥ ರೇಷ್ಮೆ ಪಟ್ಟಿಯನ್ನು ರಚಿಸುತ್ತವೆ. ಈ ಪಂಗಡಗಳಲ್ಲಿ ಎಂಟು ಕುಟುಂಬಗಳಿವೆ.

ಈಕ್ರೈಬೆಲೇಟೀ ಪಂಗಡಕ್ಕೆ ಸೇರಿದ ಜೇಡಗಳಲ್ಲಿ ಕ್ರೈಬೆಲಮ್ ಮತ್ತು ಕ್ಯಾಲಮೈಸ್ಟ್ರಮ್ ಇಲ್ಲ. ಇದರಲ್ಲಿ ಇಪ್ಪತ್ತಾರಕ್ಕೂ ಹೆಚ್ಚು ಕುಟುಂಬಗಳಿವೆ. ಈ ಜೇಡಗಳೆಲ್ಲವು ಸಣ್ಣ ಗಾತ್ರದುವು. ಜಿಗಿ ಜೇಡಗಳು, ಅಲೆಮಾರಿ ಜೇಡಗಳು, ಬೇಟೆಗಾರ ಜೇಡಗಳು, ಉದ್ದಕಾಲಿಕ ಜೇಡಗಳು, ಏಡಿ ಜೇಡಗಳು, ಆಲಿಕೆ ಬಲೆಯ ಜೇಡಗಳು, ಮೀನುಗಾರ ಜೇಡಗಳು, ತೋಳ ಜೇಡಗಳು, ಕುಬ್ಜ ಜೇಡಗಳು ಈ ಪಂಗಡದಲ್ಲಿವೆ. ಜಿಗಿ ಜೇಡಗಳು ಸಾಲ್ಟಿಸಿಡೆ ಕುಟುಂಬಕ್ಕೆ ಸೇರಿವೆ. ಉಷ್ಣವಲಯಗಳಲ್ಲೆಲ್ಲ ಇವು ಬಲುಸಾಮಾನ್ಯ. ಇವು ಬಲೆ ನೇಯುವುದಿಲ್ಲ. ಸಾಮಾನ್ಯವಾಗಿ ಜಿಗಿಯುತ್ತ ನೆಲದ ಮೇಲೆ ಅಲೆದಾಡುತ್ತವೆ. ದೇಹದ ಮೇಲೆ ದಟ್ಟವಾದ ಕೂದಲುಗಳಿವೆ. ಸಾಧಾರಣವಾಗಿ ಇವು ಕಲ್ಲು, ಕಸಕಡ್ಡಿಗಳ ಅಡಿಯಲ್ಲಿ ಅಡಗಿದ್ದು ಎರೆಗಳಿಗಾಗಿ ಹೊಂಚುಹಾಕಿ ಅವು ಸಿಕ್ಕಿದಾಗ ಅವುಗಳ ಮೇಲೆರಗಿ ಬೇಟೆಯಾಡುತ್ತವೆ.

(ಕೆ.ಜಿ.ಎನ್.; ಕೆ.ಪಿ.ಆರ್.)

**ಜೇಡಕೋತಿ:** ಪ್ರೈಮೇಟ್ ಗಣದ ಪ್ಲಾಟಿರೈನಿ ಬುಡಕಟ್ಟಿನ ಸಿಬಿಡೆ ಕುಟುಂಬದ ಅಟಿಲಿನೆ ಉಪಕುಟುಂದ ಸದಸ್ಯ. ಆಂಗ್ಲ ಭಾಷೆಯಲ್ಲಿ ಸ್ಪೈಡರ್ ಮಂಕಿ ಎನ್ನುವರು. ಇದಕ್ಕೆ ಜೇಡಕ್ಕಿರುವಂಥ ಉದ್ದ ಕಾಲುಗಳಿರುವುದರಿಂದ ಈ ಹೆಸರು. ಇದರ ವೈಜ್ಞಾನಿಕ ಹೆಸರು ಆಟಿಲಿಸ್. ಇದರ ತವರು ದಕ್ಷಿಣ ಅಮೆರಿಕ. ಜೇಡಕೋತಿ ಮರಗಳ ಮೇಲೆ ವಾಸಮಾಡುತ್ತದೆ. ಇದರ ಉದ್ದನೆಯ ಕೊಂಡಿಯಾಕಾರದ ಬೆರಳುಗಳು ಮತ್ತು ಮುಂಗಾಲುಗಳು ಕೊಂಬೆಯಿಂದ ಕೊಂಬೆಗೆ ನೆಗೆದು ಸಾಗುವುದಕ್ಕೆ ಸಹಾಯಕವಾಗಿವೆ. ಆದರೆ ಇದಕ್ಕೆ ಹೆಬ್ಬೆರಳು ಇಲ್ಲ. ಈ ಕೋತಿಯು ಕೊಂಬೆ-ರೆಂಬೆಗಳನ್ನು ಬಾಲದಿಂದ ಹಿಡಿದುಕೊಳ್ಳುವ ಅದ್ಭುತ ಸಾಮರ್ಥ್ಯ ಹೊಂದಿದೆ. ಬಾಲವು ತಲೆ ಮತ್ತು ದೇಹದ ಒಟ್ಟು

ಉದ್ದಕ್ಕಿಂತ ದೊಡ್ಡದು. ಕೆಲವು ಪ್ರಭೇದಗಳಲ್ಲಿ 76 ಸೆಂಮೀ ಉದ್ದದ ಬಾಲವಿದೆ. ಹಿಡಿತಕ್ಕೂ, ತೂಗಾಡುವಿಕೆಗೂ ಅನುಕೂಲವಾದ ಮತ್ತು ಸ್ಪರ್ಶಗ್ರಾಹಿ ಗುಣವನ್ನುಳ್ಳ ಬಾಲದಿಂದಾಗಿ ಜೇಡಕೋತಿ ಬೇರೆ ಕೋತಿಗಳಿಂದ ವಿಭಿನ್ನವಾಗಿದೆ. ಇದು ಸಂಘಜೀವಿ. ಹಣ್ಣು, ಕಾಯಿ ಮತ್ತು ಕೀಟಗಳು ಇದರ ಪ್ರಧಾನ ಆಹಾರ. ಜೇಡಕೋತಿಗಳಲ್ಲಿ 10–12 ಪ್ರಭೇದಗಳಿವೆ. ಇವುಗಳನ್ನು ಮುಖ್ಯವಾಗಿ ಅವುಗಳ ಆಕಾರ ಮತ್ತು ದೇಹದ ಬಣ್ಣದಿಂದ ಗುರುತಿಸಬಹುದು. ಕೂದಲುಗಳು ಕಪ್ಪು ಬಣ್ಣದುವು ಹಾಗೂ ಉದ್ದವಾಗಿವೆ. ಕೆಲವೊಂದು ಪ್ರಭೇದಗಳಲ್ಲಿ ನಸುಬೂದಿ, ಹಳದಿ ಮತ್ತು ನಸುಕೆಂಪು-ಕಂದು ಬಣ್ಣದ ಕೂದಲುಗಳಿವೆ. ಜೇಡಕೋತಿ ತನ್ನ ಕಾಲುಗಳ ಮತ್ತು ದೇಹದ ಗಾತ್ರದಲ್ಲಿ ಪ್ರಾಚೀನ ಪ್ರಪಂಚದ ಗಿಬನ್-ವಾನರವನ್ನು ಸ್ವಲ್ಪ ಮಟ್ಟಿಗೆ ಹೋಲುವುದರಿಂದ ಹೋಲಿಕೆ ಅಂಗರಚನಾವಿಜ್ಞಾನಿಗಳ ಆಸಕ್ತಿಯನ್ನು ಕೆರಳಿಸಿದೆ. ಜೇಡಕೋತಿಯ ಮಿದುಳು ದೊಡ್ಡದಾಗಿದೆ. ಇದು ಬಹಳ

ಚುರುಕಾದ ಪ್ರಾಣಿ. ಅಂತೆಯೇ ಬಹಳ ಸಾಧು. ಇದನ್ನು ಸಾಕಲು ಬಳಸುತ್ತಾರೆ. ಆದಕಾರಣ, ಇದರ ಸಂರಕ್ಷಣೆ ಅಗತ್ಯ. (ಕೆ.ವಿ.ಆರ್.ಜಿ.)

**ಜೇನು ಚಿಕಿತ್ಸೆ:** ಜೀವಂತ ಜೇನ್ನೊಣಗಳಿಂದ ದೇಹಕ್ಕೆ ಚುಚ್ಚಿಸಿಕೊಂಡು ಚಿಕಿತ್ಸೆ ಪಡೆಯುವ ನೈಸರ್ಗಿಕ ವಿಧಾನ. ವೈಜ್ಞಾನಿಕವಾಗಿ ಈ ಚಿಕಿತ್ಸೆಗೆ ಬೀ ಆಕ್ಯುಪಂಕ್ಚರ್ ಥೆರಪಿ ಎನ್ನುವರು. ಭಾರತವು ಸೇರಿದಂತೆ ಏಷ್ಯಾಖಂಡದ ಹಲವು ರಾಷ್ಟ್ರಗಳಲ್ಲಿ ಜನಪ್ರಿಯಗೊಳ್ಳುತ್ತಿದೆ. ಕಾರಣ, ಜೇನುದುಂಬಿಯ ವಿಷ ಔಷಧಿಯ ಗುಣಗಳನ್ನೊಳಗೊಂಡಿದ್ದು ರೋಗ ಪೀಡಿತ ಅಂಗಾಂಗಗಳ ರೋಗದ ಉಪಶಮನಕ್ಕೆ ರಾಮಬಾಣ. ಮೂಳೆ ನೋವು, ಸಂಧಿವಾತ ಮತ್ತು ಅಲರ್ಜಿ ಕಾಯಿಲೆಗಳಿಂದ ನರಳುವ ರೋಗಿಗಳು ಹೆಚ್ಚಿನ ಖರ್ಚಿಲ್ಲದೆ ಈ ಚಿಕಿತ್ಸೆ ಪಡೆದು ಗುಣಮುಖವಾಗಿರುವ ಅನೇಕ ವರದಿಗಳಿವೆ.

ವನ್ಯ ಪ್ರದೇಶದಲ್ಲಿ ಜೀವಿಸುವ ಹೆಜ್ಜೇನು (ಉದಾ:ಏಪಿಸ್ ಡಾರ್‌ಸೇಟ, ಏಪಿಸ್ ಫ್ಲೋರಿಯ) ಮತ್ತು ಸಾಕು ಜೇನು (ಉದಾ:ಏಪಿಸ್ ಸಿರಾನ, ಏಪಿಸ್ ಇಂಡಿಕಾ, ಏಪಿಸ್ ಮೆಲ್ಲಿಫೇರ) ಕೀಟಗಳನ್ನು ಜೀವಂತವಾಗಿ ಹಿಡಿದು, ಅವುಗಳ ಉದರದ ತುದಿಯಲ್ಲಿರುವ ಮುಳ್ಳಿನಿಂದ ರೋಗಗ್ರಸ್ತ ಅಂಗಾಂಗಗಳಿಗೆ ಚುಚ್ಚಿಸಬೇಕು. ಪರಿಣಾಮ, ವಿಷ ಗ್ರಂಥಿಯಿಂದ ವಿಷವು ಹನಿ ಹನಿಯಾಗಿ ಸಣ್ಣ ನಾಳ ಹೊಂದಿರುವ ಮುಳ್ಳಿನ ಮೂಲಕ ರೋಗದಿಂದ ಬಳಲುವ ಕೋಶಗಳಿಗೆ ಹರಿಯುತ್ತದೆ. ಆಮ್ಲೀಯ ಗುಣವಿರುವ ಜೇನುವಿಷದ ಸಂಪರ್ಕದಿಂದ ಕೋಶಗಳೊಳಗಿನ ತೊಂದರೆ ಗುಣವಾಗುತ್ತದೆ. ಹಿಸ್ಟಮೈನ್, ಡೊಪಮೈನ್, ಮೆಲಟನೀನ್, ಪೆಪ್‌ಟೈಡ್‌ಗಳಂತಹ ಉಪಯುಕ್ತ ಔಷಧೀಯ ಗುಣ ಹೊಂದಿರುವ ರಾಸಾಯನಿಕಗಳು ಜೇನುವಿಷದಲ್ಲಿರುವುದರಿಂದ ಕಾಯಿಲೆಯಿಂದ ಬಳಲುವ ಕೋಶ ಅಥವಾ ಅಂಗಗಳು ಗುಣಮುಖವಾಗುತ್ತವೆ.

ಪುರಾತನ ಕಾಲದಿಂದಲೂ ಜೇನು ಚಿಕಿತ್ಸೆ ಚೀನ ಮತ್ತು ಜಪಾನ್ ದೇಶದಲ್ಲಿ ಪ್ರಚಲಿತಲ್ಲಿದೆ. ಕಾಡು ಮೇಡುಗಳಲ್ಲಿ ವಾಸಿಸುವ ಆದಿವಾಸಿ ಬಡಜನರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ ಜೇನು ಚಿಕಿತ್ಸೆ ವರದಾನವಾಗಿದೆ. ನಗರವಾಸಿಗಳು ಸಹ ಜೇನು ಚಿಕಿತ್ಸೆಯಂತಹ ನೈಸರ್ಗಿಕ ವಿಧಾನಕ್ಕೆ ಮಾರು ಹೋಗುತ್ತಿರುವುದು ಈ ಚಿಕಿತ್ಸೆಯ ಮಹತ್ವಕ್ಕೆ ಹಿಡಿದ ಕೈಗನ್ನಡಿ. ಇತ್ತೀಚಿನ ದಿನಗಳಲ್ಲಿ ಜೇನು ಚಿಕಿತ್ಸೆಗೆ ಸಹಾಯಕವಾಗುವಂತೆ ಅನೇಕ ಬಗೆಯ ಉಪಕರಣಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಮತ್ತು ಚೀನ, ಜಪಾನ್ ದೇಶಗಳಲ್ಲಿ ಈ ಉಪಕರಣಗಳು ಲಭ್ಯ. ಪ್ರಮುಖವಾದ ಉಪಕರಣಗಳ ಪಟ್ಟಿ ಹೀಗಿದೆ.

1. ಬೀ ಟ್ವೀಸರ್ಸ್: ಜೇನ್ನೊಣವನ್ನು ಹಿಡಿದು ರೋಗಿಯ ದೇಹಕ್ಕೆ ಚುಚ್ಚಿಸುವಾಗ, ಜೇನುನೊಣಕ್ಕೆ ಯಾವುದೇ ತೊಂದರೆ ಆಗದಂತೆ ರಕ್ಷಿಸಲು ಈ ಉಪಕರಣ ಬಳಸುತ್ತಾರೆ.

2. ಚೀನ ಬೀ ಸ್ಟಿಂಗ್ ಥೆರಪಿ ಬಾಕ್ಸ್: ಗಾಜಿನ ಪೆಟ್ಟಿಗೆ ಮತ್ತು ರಬ್ಬರ್ ತುಂಡಿನ ಸ್ವಯಂಚಾಲಿತ ಕದಗಳನ್ನು ಹೊಂದಿರುವ ಉಪಯುಕ್ತ ಪೆಟ್ಟಿಗೆ.

ಬೀ ಬಾಕ್ಸ್, ಟಿಪ್ ಟ್ವೀಸರ್ಸ್, ಬೀ ಬಾಕ್ಸ್ ಪ್ರೊ, ಇ–ಝು ಲಿಡ್, ಮಲ್ಟಿ ಟ್ರೀಟ್‌ಮೆಂಟ್ ಮೆಶ್, ಕೋರ್ ಸ್ಟಿಂಗ್ ಮತ್ತು ಹ್ಯಾಂಡಿ ವಿಎಸಿ, ಜೇನು ಚಿಕಿತ್ಸೆಯಲ್ಲಿ ಉಪಯೋಗಿಸುವ ಇತರ ಉಪಕರಣಗಳು.

ಇಂತಹ ಹಲವಾರು ಉಪಕರಣಗಳನ್ನು ಬಳಸಿಕೊಂಡು ಇತ್ತೀಚಿನ ದಿನಗಳಲ್ಲಿ ಚೀನ, ಜಪಾನ್, ಆಸ್ಟ್ರೇಲಿಯ, ಅಮೆರಿಕ ಮತ್ತು ರಷ್ಯಾ ದೇಶಗಳಲ್ಲಿ ಜೇನು ಚಿಕಿತ್ಸೆಯನ್ನು ಭಾರಿ ಪ್ರಮಾಣದಲ್ಲಿ ಕೈಗೊಳ್ಳಲಾಗುತ್ತಿದೆ. (ಬಿ.ಎಸ್.)

**ಜೇನುನೊಣ:** ಹೈಮನಾಪ್ಟರ ಗಣದ ಕ್ಲೈಸ್ಟೊಗ್ಯಾಸ್ಟ್ರ ಅಥವಾ ಅಪೊಕ್ರೈಟ ಉಪಗಣಗಳ ಏಪಿಯಿಡೆ ಅಧಿಕುಟುಂಬಕ್ಕೆ ಸೇರಿದ ಕೀಟ (ಬೀ). ಈ ಅಧಿಕುಟುಂಬದಲ್ಲಿ ಸುಮಾರು 20,000 ಪ್ರಭೇದಗಳಿವೆಯಾದರೂ ಜೇನ್ನೊಣ ಎಂದ ತಕ್ಷಣ ಮನಸ್ಸಿಗೆ ಬರುವಂಥದು ಮಧುವನ್ನು ಸಂಗ್ರಹಿಸುವ ಜೇನ್ನೊಣವೇ (ಹನಿ ಬೀ). ಇದು ಏಪಿಡೆ ಕುಟುಂಬದ ಏಪಿನೆ ಉಪಕುಟುಂಬಕ್ಕೆ ಸೇರಿದೆ. ಪ್ರಸಕ್ತ ಲೇಖನದಲ್ಲಿ ಇರುವ ವಿವರಣೆಯೆಲ್ಲ ಈ ಪ್ರಭೇದಕ್ಕೆ ಹೆಚ್ಚಾಗಿ ಅನ್ವಯಿಸುತ್ತದೆ. ಜೇನ್ನೊಣ ಕಣಜಗಳಿಗೆ ಬಲುಹತ್ತಿರ ಸಂಬಂಧಿ. ಇದಕ್ಕೂ ಕಣಜಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಅವುಗಳ ಆಹಾರ ಸೇವನೆಯ ಕ್ರಮ. ಜೇನ್ನೊಣಗಳು ಸಸ್ಯಾಹಾರಿಗಳು; ಅಲ್ಲದೆ ತಮ್ಮ ಮರಿಗಳಿಗೆ ಪರಾಗ ಮತ್ತು ಜೇನುಗಳ ಮಿಶ್ರಣವನ್ನು ಉಣಿಸುತ್ತವೆ. ಈ ಮಿಶ್ರ ಆಹಾರವನ್ನು ತಮ್ಮ ಗೂಡುಗಳಲ್ಲಿ (ಹುಟ್ಟು, ಎರಿ) ಸಂಗ್ರಹಿಸಿಟ್ಟುಕೊಂಡಿರುವುವು. ಕಣಜಗಳಾದರೂ ಮಾಂಸಾಹಾರಿಗಳು ಹಾಗೂ ಅವು ತಮ್ಮ ಮರಿಗಳಿಗೆ ಸಿದ್ಧಗೊಳಿಸಿದ ಮಾಂಸಾಹಾರವನ್ನು ತಿನ್ನಿಸುತ್ತವೆ. ಅಲ್ಲದೆ ತಮ್ಮ ಗೂಡಿನಲ್ಲಿ ಕೀಟಗಳನ್ನೋ ಜೇಡಗಳನ್ನೋ ಹಿಡಿದು ತಂದು ಸಂಗ್ರಹಿಸಿಡುತ್ತವೆ. ಜೇನ್ನೊಣಗಳ ದೇಹ ನುಣುಪಾಗಿರಬಹುದು ಇಲ್ಲವೆ ಮೃದುವಾದ ತುಪ್ಪುಳದಿಂದ ಆವೃತವಾಗಿರಬಹುದು. ದೇಹದ ಬಣ್ಣ ಸಾಮಾನ್ಯವಾಗಿ ಕಪ್ಪು. ಅನೇಕ ವೇಳೆ ಹೊಳೆಯುವ ಬಣ್ಣದಿಂದ ಕೂಡಿರಲೂಬಹುದು. ಜೇನ್ನೊಣಗಳಲ್ಲಿ ಅತ್ಯಂತ ವ್ಯವಸ್ಥಿತ ರೂಪದ ಸಮಾಜ ಜೀವನ ಉಂಟು. ಕೆಲವಲ್ಲಿ ಮಾತ್ರ ಕೆಳಮಟ್ಟದ ಸಮಾಜ ಜೀವನವೋ ಇಲ್ಲವೇ ಒಂಟಿ ಜೀವನಕ್ರಮವೋ ಕಂಡುಬರುತ್ತವೆ. ಇವುಗಳ ಸಮಾಜದಲ್ಲಿ ಜಾತಿಭೇದಗಳಿದ್ದು ಕೆಲಸಗಾರ, ಗಂಡು ಮತ್ತು ರಾಣಿಗಳೆಂಬ ಮೂರು ಬಗೆಯ ನೊಣಗಳಿರುತ್ತವೆ. ಗಂಡು ನೊಣ ಕೆಲಸಗಾರ ನೊಣಗಳಿಗಿಂತ ದೊಡ್ಡದು. ಇದಕ್ಕೆ ಚುಚ್ಚುಮುಳ್ಳಾಗಲಿ, ಪರಾಗ ಅಥವಾ ಮಧುವನ್ನು ಸಂಗ್ರಹಿಸುವ ಸಾಮರ್ಥ್ಯವಾಗಲಿ ಇಲ್ಲ. ಇದರ ಕುಡಿಮೀಸೆಗಳಲ್ಲಿ 12 ಖಂಡಗಳೂ ಹೆಣ್ಣಿನ ಕುಡಿಮೀಸೆಗಳಲ್ಲಿ 13 ಖಂಡಗಳೂ ಇವೆ. ಕೆಲಸಗಾರ ನೊಣಗಳ ಬಾಯಿಯ ಲಿಗ್ಯುಲ ಮತ್ತು ಗ್ಲಾಸ ಎಂಬ ಉಪಾಂಗಗಳು ಮಧುವನ್ನು ಹೀರುವ ನಳಿಕೆಯಾಗಿ ಮಾರ್ಪಾಟ್ಟಿವೆ. ಈ ನಳಿಕೆಗೆ ಹೀರುನಳಿಕೆ ಅಥವಾ ಸೊಂಡಿಲು ಎಂದು ಹೆಸರು. ತಲೆ ಮತ್ತು ಎದೆಯ ಭಾಗಗಳ ಮೇಲೆ ತುಪ್ಪುಳದಂಥ ಕೂದಲು ಉಂಟು. ಪ್ರೋನೋಟಮ್ ಭಾಗ ಟೆಗುಲೆಯನ್ನು ಮುಟ್ಟುವುದಿಲ್ಲ. ರಾಣಿ ಮತ್ತು ಕೆಲಸಗಾರ ನೊಣಗಳಲ್ಲಿ ಹಿಂಬದಿಯ ಕಾಲಿನಲ್ಲಿ ಪುಷ್ಪಗಳ ಪರಾಗವನ್ನು ಶೇಖರಿಸುವ ಪರಾಗ ಕುಂಚ (ಪೋಲನ್ ಬ್ರಷ್) ಇವೆ. ಇವಕ್ಕೆ ಕಾರ್ಬಿಕ್ಯುಲೀ ಎಂದು ಹೆಸರು. ಲಾರ್ವಗಳಿಗೆ ಕಾಲುಗಳೇ ಇಲ್ಲ. ಇವು ಗೂಡಿನಲ್ಲಿ ಸಂಗ್ರಹಗೊಂಡಿರುವ ಮಧು ಮತ್ತು ಪರಾಗವನ್ನು ದಾದಿನೊಣಗಳಿಂದ ಸ್ವೀಕರಿಸಿ ಬೆಳೆಯುತ್ತವೆ.



ಜೇನುನೊಣಗಳಲ್ಲಿ ಸಮಾಜ ಜೀವನದ ವಿಕಸನ : ಕೆಲವು ಪ್ರಾಣಿಗಳಲ್ಲಿ ಸಾಮೂಹಿಕ ಜೀವನ ಇದೆಯಾದರೂ ನಿಜವಾದ ಸಾಮಾಜಿಕ ಜೀವನ ಕಂಡುಬರುವುದು ಗೆದ್ದಲು, ಇರುವೆ, ಕಣಜ ಮತ್ತು ಜೇನುನೊಣಗಳಲ್ಲಿ ಮಾತ್ರ. ಈ ತೆರನ ಬದುಕು ಅನೇಕ ಹಂತಗಳಲ್ಲಿ ವಿಕಾಸಗೊಂಡಿದೆ. ಸಮಾಜ ಜೀವನ ಕುಟುಂಬವೆಂಬ ಘಟಕದಿಂದ ಪ್ರಾರಂಭವಾಗುವುದು. ವಂಶಾಭಿವೃದ್ಧಿಗೆಂದು ಸಂಭೋಗದಲ್ಲಿ ಒಂದುಗೂಡಿದ ಗಂಡು ಹೆಣ್ಣುಗಳು ತಮ್ಮ ಬಾಂಧವ್ಯವನ್ನು ಮುಂದುವರೆಸಿ, ಮರಿಗಳನ್ನು ಪಡೆದು ಒಂದು ಸಣ್ಣ ಕುಟುಂಬವಾಗಿ ಪರಿಣಮಿಸುವುವು. ಈ ಕುಟುಂಬ ಜೀವನದಲ್ಲಿ ತಾಯಿತಂದೆಗಳ ಆಯಸ್ಸು ವರ್ಧಿಸಿ ತೀರ ದುರ್ಬಲವಾಗಿರುವ ಹಾಗೂ ಅಪೂರ್ಣ ಬೆಳೆದ ಮರಿಗಳ ಲಾಲನೆ ಪಾಲನೆ ಮುಂತಾದ ಚಟುವಟಿಕೆಗಳಿಂದಾಗಿ ಒಂದು ಕುಟುಂಬದ ಕೀಟಗಳು ಇನ್ನೂ ಕೆಲವು ಕಾಲದವರೆಗೆ ಒಟ್ಟುಗೂಡಿ ವಾಸಿಸತೊಡಗುವುವು. ಇಂಥ ಒಂದು ಸಂಸಾರದ ಜೀವಿಗಳ ನಡುವೆ ಒಂದು ನಿಕಟ ಸಂಬಂಧ ಹುಟ್ಟುವುದಲ್ಲದೆ ಅವುಗಳಲ್ಲಿ ಪರಸ್ಪರ ಪ್ರೇಮ, ವಾತ್ಸಲ್ಯಗಳು ಉದಿಸಿ, ಒಂದು ಸಣ್ಣ ಕುಟುಂಬ ಪ್ರಾರಂಭವಾಗುತ್ತದೆ. ಕಾಲಕ್ರಮೇಣ ಈ ಸಣ್ಣ ಕುಟುಂಬವೇ ಬೃಹದಾಕಾರವಾಗಿ ಬೆಳೆದು ಒಂದು ಸಮಾಜವಾಗುತ್ತದೆ. ಸಾಮಾಜಿಕ ಜೀವನದಲ್ಲಿ ಎಲ್ಲ ಜೀವಿಗಳಿಗೂ ರಕ್ಷಣೆ ಮತ್ತಿತರ ಸೌಲಭ್ಯಗಳು ದೊರೆಯುವುದರಿಂದ ಇಂಥ ಸಾಮಾಜಿಕ ಕೀಟಗಳು ಒಂಟಿಜೀವನ ನಡೆಸುವ ಇತರ ಪ್ರಾಣಿ ಪ್ರಭೇದಗಳೊಡನೆ ಜೀವನದ ನಿರಂತರ ಹೋರಾಟದಲ್ಲಿ ಜಯಶಾಲಿಗಳಾಗಿ ತಮ್ಮ ಬಾಳ್ವೆಯನ್ನು ಸಾರ್ಥಕಪಡಿಸಿಕೊಳ್ಳುತ್ತವೆ. ವಿಕಾಸದ ಹಾದಿಯಲ್ಲಿ ಸಾವಿರಾರು

ವರ್ಷಗಳ ಅವಧಿಯಲ್ಲಿ ಇಂಥ ಸಮಾಜ ಜೀವನ ಅನೇಕ ರೀತಿಯಲ್ಲಿ ಅನೇಕ ತಪ್ಪು ನೆಪ್ಪುಗಳ ಮೂಲಕ ಬದಲಾಗುತ್ತ ಬಂದು ಒಂದು ವ್ಯವಸ್ಥಿತ ರೀತಿಯ ಸಮಾಜದಲ್ಲಿ ಪರ್ಯವಸಾನಗೊಳ್ಳುತ್ತದೆ.

ಜೇನುನೊಣಗಳಲ್ಲಿ ಒಂಟಿಜೀವಿಗಳೂ ಉಂಟು. ಇಂಥ ಜೀವನ ನಡೆಸುವ ಕೆಲವನ್ನು (ಉದಾಹರಣೆಗೆ, ಜ್ಯಲೊಕೋಪ ಜಾತಿಯ ಬಡಗಿ ಜೇನ್ನೊಣ) ಮನೆಗಳ ಸೂರು, ಚಾವಣಿಗೆ ಹಾಕಿರುವ ಮರ ಮತ್ತು ಬಿದಿರುಗಳಲ್ಲಿ ಕಾಣಬಹುದು. ಇದು ತನ್ನ ಹರಿತವಾದ ದವಡೆಗಳ ಸಹಾಯದಿಂದ ಮರ ಮತ್ತು ಬಿದಿರುಗಳಲ್ಲಿ ದುಂಡನೆಯ ರಂಧ್ರಮಾಡಿ, ಉದ್ದವಾದ ನಳಿಕೆಗಳನ್ನು ತಯಾರಿಸಿ, ಅದರ ಉದ್ದಕ್ಕೂ, ಒಂದರ ಮೇಲೊಂದರಂತೆ ಅನೇಕ ಕೋಶಗಳನ್ನು ರಚಿಸುತ್ತದೆ. ಪುಷ್ಪಗಳಿಂದ ಪರಾಗ ಮತ್ತು ಮಧುವನ್ನು ಸಂಗ್ರಹಿಸಿ, ಅದನ್ನು ರೊಟ್ಟಿಯಂತೆ ಕಲಸಿ, ತನ್ನ ಗೂಡಿನ ಕೋಶಗಳಲ್ಲಿ ಶೇಖರಿಸಿಟ್ಟು, ಅದರ ಮೇಲೆ ಪ್ರತಿಕೋಶಕ್ಕೂ ಒಂದರಂತೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯೊಡೆದು ಹೊರ ಬಂದ ಮರಿ ಅಲ್ಲಿಯ ಆಹಾರವನ್ನು ಸೇವಿಸಿ, ಬೆಳೆದು, ರೂಪಾಂತರಗೊಂಡು ಜೇನುನೊಣವಾಗಿ ಹೊರಬರುತ್ತದೆ. ತಾಯಿದುಂಬಿ ತನ್ನ ಮರಿಗಳೆಲ್ಲವೂ ಹೊರ ಬೀಳುವವರೆಗೂ ತನ್ನ ಗೂಡಿನ ಬಳಿಯೇ ಇದ್ದು, ಅವುಗಳನ್ನು ರಕ್ಷಿಸುವುದು.

ಇನ್ನೊಂದು ಉದಾಹರಣೆ ಮೆಗಕೈಲ್ ಎಂಬ ಹೆಸರಿನ ಬಹಳ ಚುರುಕು ಬುದ್ಧಿಯ ಸುಂದರವಾದ ಒಂದು ಸಣ್ಣ ಜೇನುನೊಣ. ಇದು ಮೃದುವಾದ ಮರಗಳ ಕಾಂಡವನ್ನು ಕೊರೆದು, ಉದ್ದವಾದ ನಳಿಕೆಗಳನ್ನು ರಚಿಸಿ, ಅವುಗಳ ಅಡ್ಡಳತೆಗೆ ಸರಿಯಾಗಿ ಗುಲಾಬಿ ಗಿಡದ ಎಲೆಗಳನ್ನು ಎರಡು ಆಕಾರದಲ್ಲಿ ಕತ್ತರಿಸುವುದು. ಅಂಡಾಕಾರದ ಎಲೆ ತುಂಡುಗಳಿಂದ ಕಾಂಡದ ನಳಿಕೆಯ ಗೋಡೆಗೆ ಹತ್ತಿಕೊಂಡಂತೆ ಒಂದು ಸಣ್ಣ ನಳಿಕೆಯನ್ನು ತಯಾರಿಸುವುದು. ಈ ನಳಿಕೆಯ ಎರಡೂ ತುದಿಗಳನ್ನು ಮುಚ್ಚುವುದಕ್ಕಾಗಿ ಅದೇ ಅಳತೆಯ ದುಂಡಾದ ಎಲೆ ತುಂಡುಗಳನ್ನು ಕತ್ತರಿಸಿ ತಂದು, ತಳ ಮತ್ತು ಮುಚ್ಚಳವನ್ನು ತಯಾರಿಸುವುದು. ಹೀಗೆ ತಯಾರಿಸಿದ ನಳಿಕೆಗಳಲ್ಲಿ ಮಧು ಮತ್ತು ಪರಾಗವನ್ನು ಶೇಖರಿಸಿಟ್ಟು ಅದರಲ್ಲಿ ತತ್ತಿಗಳನ್ನಿಡುತ್ತದೆ. ತನ್ನ ಗೂಡನ್ನು ರಚಿಸಲು ಇದು ಸುಮಾರು 3000 ಎಲೆ ತುಂಡುಗಳನ್ನು ಕತ್ತರಿಸುವುದು.

ಗಂಡು ಕೆಲಸಗಾರ ರಾಣಿ

ಜ್ಯಲೊಕೋಪ ಮತ್ತು ಮೆಗಕೈಲಗಳಲ್ಲಿ ಸಮಾಜ ಜೀವನ ಕಾಣದಿದ್ದರೂ ಮಕ್ಕಳ ಸಂರಕ್ಷಣೆ, ಗೃಹನಿರ್ಮಾಣ, ಆಹಾರ ಶೇಖರಣೆ ಇತ್ಯಾದಿ ಗುಣಗಳು ಒಂದು ವಿಶೇಷ ರೀತಿಯಲ್ಲಿ ವಿಕಾಸಗೊಂಡಿರುವುದನ್ನು ಗಮನಿಸಬಹುದು. ಈ ಗುಣಗಳೇ ಸಮಾಜ ಜೀವನದ ವಿಕಾಸದಲ್ಲಿ ಪ್ರಥಮ ಘಟ್ಟ ಎನ್ನಬಹುದು. ಈ ಘಟ್ಟವನ್ನು ಒಂಟಿಜೀವನ ಅಥವಾ ಸಾಮೂಹಿಕ ದಾಸ್ತಾನು ಎಂದು ಕರೆಯಲಾಗುತ್ತದೆ.

ಕುಟುಂಬ ಜೀವಿಗಳು: ಸಮಾಜ ಜೀವನದ ಪ್ರಗತಿಯಲ್ಲಿ ಎರಡನೆಯ ಘಟ್ಟ ಕುಟುಂಬ ಜೀವನ. ಇದಕ್ಕೆ ಉದಾಹರಣೆ ಬಂಬಲ್ ಬೀ ಅಥವಾ ಗುಪ್ಪಳದ ಜೇನುನೊಣ. ಇದು ಸಮಶೀತೋಷ್ಣವಲಯಗಳಲ್ಲಿ ಬಲುಸಾಮಾನ್ಯ. ಉತ್ತರ ಭಾರತದ ಪರ್ವತಪ್ರದೇಶಗಳಲ್ಲಿ ಕಾಣದೊರೆಯುತ್ತದೆ. ಹೊಲಗಳಲ್ಲಿ, ಇಲಿ ಮೊದಲಾದ ಪ್ರಾಣಿಗಳು ತ್ಯಜಿಸಿಹೋದ ಬಿಲಗಳಲ್ಲಿ ತನ್ನ ಗೂಡನ್ನು ಕಟ್ಟುವುದು. ಬೇಸಿಗೆಯ ಅಂತ್ಯದಲ್ಲಿ ಗಂಡಿನೊಡನೆ ಕೂಡಿ ಗರ್ಭಧರಿಸಿ ಮರಳಿ ಬರುವ ಒಂಟಿಯಾದ ಹೆಣ್ಣು ಜೇನುನೊಣ ಚಳಿಗಾಲದ ವೇಳೆಗೆ ಮರದ ಪೊಟರೆ, ಗೋಡೆಗಳ ಬಿರುಕುಗಳಲ್ಲಿ ಸೇರಿಕೊಂಡು ವಿಶ್ರಾಂತಿ ಪಡೆಯುತ್ತದೆ. ವಸಂತಋತುವಿನ ಕಾಲಕ್ಕೆ ಗೂಡಿನಿಂದ ಹೊರಬಿದ್ದು, ಯಾವುದಾದರೂ ಬಿಲವನ್ನು ಹುಡುಕಿ ತನ್ನ ಗೂಡನ್ನು ಕಟ್ಟಲು ಪ್ರಾರಂಭಿಸುವುದು. ಮೇಣದಿಂದ ಹಲವಾರು ದುಂಡನೆಯ ಕೋಶಗಳನ್ನು ರಚಿಸಿ, ಹೂಗಳಿಂದ ಸಂಗ್ರಹಿಸಿದ ಮಧು ಮತ್ತು ಪರಾಗವನ್ನು ಕೂಡಿಡುವುದು. ಇಂಥ ಕೋಶಗಳ ಮೇಲೆ ಬೇರೆ ಬೇರೆ ರೀತಿಯ ಮೇಣದ ಕೋಶಗಳನ್ನು ರಚಿಸಿ, ಅವುಗಳಲ್ಲಿ ಮೊಟ್ಟೆಗಳನ್ನಿಡುವುದು. ನಾಲ್ಕು ದಿನಗಳ ಅನಂತರ ಮೊಟ್ಟೆಯೊಡದು ಮರಿಗಳು ಹೊರಬಂದು ಆಹಾರವನ್ನು ತಿಂದು ಬೆಳೆಯುವುವು. ಆಹಾರ ಮುಗಿದನಂತರ ತಾಯಿ ಮತ್ತೆ ಪರಾಗ ಮತ್ತು ಮಧುವನ್ನು ಹೊರಗಿನಿಂದ ಸಂಗ್ರಹಿಸಿ ತಂದು ಮರಿಗಳಿಗೆ ಉಣಿಸುತ್ತದೆ. ಹತ್ತು ದಿನಗಳ ಅನಂತರ ಸಂಪೂರ್ಣ ಬೆಳೆದ ಮರಿಗಳು ಕೋಶಾವಸ್ಥೆಯನ್ನು ಸೇರಿ ಸಂಪೂರ್ಣವಾಗಿ ರೂಪಪರಿವರ್ತನೆಯಾಗಿ 22–23 ದಿನಗಳ ತರುವಾಯ ಜೇನುನೊಣಗಳಾಗಿ ಹೊರಬರುತ್ತವೆ. ಈ ಜೇನುನೊಣದ ಸಮಾಜದಲ್ಲಿ ಮೊಟ್ಟಮೊದಲಿಗೆ ಜಾತಿಭೇದವನ್ನು ನೋಡುತ್ತೇವೆ. ಮೊದಲು ಹುಟ್ಟುವ ಮರಿಗಳೆಲ್ಲವೂ ಬಂಜೆಗಳಾದ ಹಾಗೂ ಸಂಪೂರ್ಣ ಬೆಳೆಯದ ಹೆಣ್ಣುನೊಣಗಳು. ಇವಕ್ಕೆ ಸಂತಾನವೃದ್ಧಿ ಸಾಮರ್ಥ್ಯ ಇಲ್ಲ. ಇವು ತಮ್ಮ ಗೂಡಿನ ಎಲ್ಲ ಕೆಲಸಗಳ ಜವಾಬ್ದಾರಿಯನ್ನು ಹೊತ್ತು, ತಮ್ಮ ತಾಯಿಯನ್ನು ಗೂಡಿನ 'ರಾಣಿ' ಎಂದು ಗೌರವಿಸಿ, ಇದುವರೆಗೂ ಅದು ಮಾಡುತ್ತಿದ್ದ ಕಾರ್ಯವನ್ನೆಲ್ಲ ತಾವೇ ಮಾಡುವುವು. ಇಲ್ಲಿಂದ ಮುಂದೆ ರಾಣಿಯ ಕೆಲಸ ಬರಿಯ ಮೊಟ್ಟೆಗಳನ್ನಿಡುವುದು ಮಾತ್ರ. ಬಂಜೆಗಳಾದ ಈ ಹೆಣ್ಣು ನೊಣಗಳಿಗೆ ಕೆಲಸಗಾರ ನೊಣಗಳು ಎಂದು ಹೆಸರು. ತಮ್ಮ ದೇಹದಿಂದ ಸ್ರವಿಸುವ ಮೇಣದಿಂದ ಹೊಸ ಕೋಶಗಳನ್ನು ರಚಿಸಿ, ಮಧು ಮತ್ತು ಪರಾಗವನ್ನು ಹೊರಗಿನಿಂದ ತಂದು ಸಂಗ್ರಹ ಮಾಡುವುವು. ರಾಣಿ ನೊಣ ಮತ್ತೆ ಹೊಸ ಕೋಶಗಳಲ್ಲಿ ಮೊಟ್ಟೆ ಇಡುತ್ತದೆ. ಮೊಟ್ಟಮೊದಲು ಇಟ್ಟ 200–400 ಮೊಟ್ಟೆಗಳೆಲ್ಲ ಊಳಿಗದ ನೊಣಗಳಾಗುತ್ತವೆ. ಇದಾದನಂತರ ಇಡಲ್ಪಡುವ ಮೊಟ್ಟೆಗಳು ಸಂತಾನ ಶಕ್ತಿಯುಳ್ಳ ಗಂಡು ಮತ್ತು ಹೆಣ್ಣುನೊಣಗಳಾಗಿ ಹುಟ್ಟುತ್ತವೆ. ತಾಯಿನೊಣ ಮುಂದಿನ ಪೀಳಿಗೆಯ ರಾಣಿಗಳಾಗುವ ಮೊಟ್ಟೆಗಳನ್ನು ಸ್ವಲ್ಪ ವಿಶಾಲವಾದ ಕೋಶಗಳಲ್ಲೂ ಕೆಲಸಗಾರ ನೊಣಗಳಾಗುವ ಮೊಟ್ಟೆಗಳನ್ನು ಸ್ವಲ್ಪ ಚಿಕ್ಕ ಕೋಶಗಳಲ್ಲೂ ಇಡುವುದು. ವಿಶಾಲವಾದ ಕೋಶಗಳಿಂದ ಹುಟ್ಟಿಬರುವ ನೊಣಗಳೇ ಮುಂದಿನ ಪೀಳಿಗೆಯ ರಾಣಿ ಮತ್ತು ಗಂಡುನೊಣಗಳು. ಬೇಸಿಗೆಯ ಅಂತ್ಯದಲ್ಲಿ ಹೊರಬೀಳುವ ಗಂಡು ಹೆಣ್ಣು ನೊಣಗಳು ಮದನಯಾತ್ರೆ ಹೊರಡುವುವು. ಇದನ್ನು ಒಂದು ರೀತಿಯ ಸ್ವಯಂವರ ಎನ್ನಬಹುದು. ಹೆಣ್ಣು ತನ್ನನ್ನು ಓಟದಲ್ಲಿ ಸೋಲಿಸುವ ಶಕ್ತಿಯುಳ್ಳ ಒಂದು ಗಂಡಿನೊಡನೆ ಜೋಡಿಯಾಗುವುದು. ಜೋಡಿಯಾಗಿ ಗರ್ಭಧರಿಸಿದ ಹೆಣ್ಣುನೊಣ ತನ್ನ ಗೂಡಿಗೆ ಮರಳಿ ಬರುವುದು. ಗಂಡುನೊಣಗಳು ಮಾತ್ರ ಒಮ್ಮೆ ಗೂಡನ್ನು ಬಿಟ್ಟವೆಂದರೆ ಮರಳಿ ಹಿಂತಿರುಗುವುದಿಲ್ಲ. ಈ ವೇಳೆಗೆ ಮೊದಲಿನ ರಾಣಿ ನೊಣವು ಸತ್ತು, ಅದರೊಡನೆ ಅದರ ಗೂಡು ಸಹ ನಾಶವಾಗುವುದು. ಆದರೆ ಗರ್ಭಧರಿಸಿದ ಕಿರಿಯ ರಾಣಿ ನೊಣ ಚಳಿಗಾಲವನ್ನು ಒಂಟಿಯಾಗಿ ಕಳೆಯುವುದು. ಚಳಿಗಾಲದ ಅನಂತರ ವಸಂತ ಕಾಲದಲ್ಲಿ ಪುನಃ ತನ್ನ ಸಂಸಾರವನ್ನು ಪ್ರಾರಂಭಿಸುವುದು. ಇದು ಒಂದು ಅಪೂರ್ಣವಾದ ಸಮಾಜ. ಏಕೆಂದರೆ ಈ ಸಮಾಜದ ಆಯಸ್ಸು ಒಂದು ವರ್ಷ ಮಾತ್ರ. ಇದು ಸಮಾಜ ಜೀವನದ ವಿಕಾಸದಲ್ಲಿ ಮಧ್ಯಘಟ್ಟ.

ಸಂಪೂರ್ಣವಾದ ಸಮಾಜ : ಸಂಪೂರ್ಣ ಸಮಾಜ ಜೀವನಕ್ಕೆ ಅತ್ಯುತ್ತಮವಾದ ಉದಾಹರಣೆಯೆಂದರೆ ಮಾನವನಿಗೆ ಮಧುವನ್ನು ಒದಗಿಸುವ ಜೇನ್ನೊಣಗಳ ಸಮಾಜ. ಇದು ಕೀಟವರ್ಗಗಳಲ್ಲಿಯೇ ಅತ್ಯುತ್ತಮವಾದ ಮತ್ತು ಸುವ್ಯವಸ್ಥಿತವಾದ ಸಮಾಜ. ಇವುಗಳ ಸಮಾಜದಲ್ಲಿ ರಾಣಿನೊಣ, ಗಂಡುನೊಣ, ಮತ್ತು ಕೆಲಸಗಾರ ನೊಣಗಳೆಂಬ ಮೂರು ಬಗೆಯ ನೊಣಗಳಿವೆ. ಒಂದೊಂದು ಜೇನು ಹುಟ್ಟಿನಲ್ಲಿಯೂ 30,000 ದಿಂದ 80,000ದವರೆಗೆ ಕೆಲಸಗಾರ ನೊಣಗಳಿರುವುವು. ಗಂಡುನೊಣಗಳ ಸಂಖ್ಯೆ 1,000 ದಿಂದ 1,500 ವರೆಗೆ ಮಾತ್ರ. ರಾಣಿ ಮಾತ್ರ ಒಂದೇ ಒಂದು. ವಿವಿಧ ಕಾರ್ಯರಂಗಗಳಲ್ಲಿ ಕೆಲಸಮಾಡುವ ಆಯಾ ಬಗೆಯ ನೊಣಗಳ ದೇಹರಚನೆ, ಆಕಾರ, ಗಾತ್ರ, ಗುಣ ಮತ್ತು ನಡತೆಗಳೆಲ್ಲವೂ ಆಯಾ ಕಾರ್ಯಕ್ಕೆ ಅನುಗುಣವಾಗಿರುತ್ತವೆ. ಸಮಾಜದ ನೊಣಗಳೆಲ್ಲವೂ ಒಂದೇ ಒಂದು ಪ್ರಭೇದಕ್ಕೆ ಸೇರಿದ್ದರೂ ಸಹ ಅವುಗಳಲ್ಲಿ ಕಾರ್ಯಕ್ಕನುಗುಣವಾಗಿ ಮೂರು ಬಗೆಗಳಿವೆ. ಇವೆಲ್ಲವೂ ಪರಸ್ಪರ ಸಹಕಾರದಿಂದ ಸಮಾಜದ ಶ್ರೇಯಸ್ಸಿಗಾಗಿ ದುಡಿಯುತ್ತವೆ. ಒಂದು ಸಮಾಜದ ನೊಣಗಳು ತೋರುವ ಸ್ನೇಹ, ತ್ಯಾಗಬುದ್ಧಿ ಒಗ್ಗಟ್ಟು ಮುಂತಾದುವು ಅಚ್ಚರಿ ಉಂಟುಮಾಡುವಂಥವು.

1. ರಾಣಿನೊಣ : ಒಂದು ಗೂಡಿನ ಎಲ್ಲ ನೊಣಗಳ ತಾಯಿ. ಗಾತ್ರದಲ್ಲಿ ಎಲ್ಲದಕ್ಕಿಂತ ದೊಡ್ಡದು. ಮೈಬಣ್ಣ ಹೊಳೆಯುವ ಕಪ್ಪು. ಕಾಲುಗಳು ಅರಿಶಿನ ಬಣ್ಣದುವು. ಮೈಮೇಲೆಲ್ಲ ಅತಿ ಸೂಕ್ಷ್ಮವಾದ ರೋಮಗಳಿವೆ. ರೆಕ್ಕೆಗಳು ದೇಹದ ಅರ್ಧಭಾಗವನ್ನು ಮುಚ್ಚಿರುತ್ತವೆ. ಹೊಟ್ಟೆ ಉದ್ದವಾಗಿದೆ. ದೇಹದ ಕೊನೆಯಲ್ಲಿ ಮೊಟ್ಟೆಗಳನ್ನಿಡುವ ಮೊನಚಾದ ಕೊಳವೆಯೊಂದಿದೆ. ಇದು 2–3 ವರ್ಷ, ಒಮ್ಮೊಮ್ಮೆ 5 ವರ್ಷಗಳವರೆಗೂ ಬದುಕಿರುವುದು. ತನ್ನ ಜೀವಮಾನವನ್ನೆಲ್ಲ ವಂಶಾಭಿವೃದ್ಧಿಯಲ್ಲಿಯೇ ಕಳೆಯುವುದು. ಇದರ ತಲೆ ಗುಂಡಗಿದೆ; ಕುಡಿಮೀಸೆಗಳಲ್ಲಿ 12 ಖಂಡಗಳುಂಟು. ಕಣ್ಣುಗಳು ಬಹಳ ಅಗಲ. ಇದರಲ್ಲಿ ಮೇಣದ

ಗ್ರಂಥಿಗಳಾಗಲಿ ಪರಾಗವನ್ನು ಸಂಗ್ರಹಿಸುವ ಉಪಾಂಗಗಳಾಗಲಿ ಇಲ್ಲ. ಗರ್ಭಧರಿಸಿ ಗೂಡಿಗೆ ಹಿಂತಿರುಗಿದ ರಾಣಿನೊಣ ಮೊದಮೊದಲು ದಿನ ಒಂದಕ್ಕೆ 12–20 ರಿಂದ ಪ್ರಾರಂಭಿಸಿ ಕ್ರಮೇಣ ದಿನಒಂದಕ್ಕೆ ನೂರಾರು ಮೊಟ್ಟೆಗಳನ್ನಿಡುತ್ತ ಹೋಗುವುದು. ಕೊನೆಯಲ್ಲಿ ದಿನ ಒಂದಕ್ಕೆ 1,500ರಿಂದ 2,000–3,000 ಮೊಟ್ಟೆಗಳನ್ನಿಡುವುದುಂಟು. ಒಂದು ವರ್ಷದಲ್ಲಿ ರಾಣಿನೊಣ 1,50,000 ದಿಂದ 2,00,000ದವರೆಗೂ ಮೊಟ್ಟೆಗಳನ್ನಿಡುತ್ತದೆ ಎಂದು ಹೇಳಲಾಗಿದೆ.

ಪ್ರಾರಂಭದಲ್ಲಿ ಜೇನುಹುಟ್ಟಿನ ಕೋಣೆಗಳೆಲ್ಲ ಖಾಲಿಯಾಗಿರುವಾಗ ರಾಣಿ ವೃತ್ತಾಕಾರವಾಗಿ ಸುತ್ತುತ್ತ ಮೊಟ್ಟೆಗಳನ್ನಿಡುತ್ತ ಹೋಗುತ್ತದೆ. ಕೊನೆಗೆ ಗೂಡಿನ ಕೋಶಗಳೆಲ್ಲವೂ ವಿವಿಧ ಅವಸ್ಥೆಗಳಲ್ಲಿ ಬೆಳೆಯುತ್ತಿರುವ ಮರಿಗಳಿಂದ, ಕೋಶಾವಸ್ಥೆ ಸೇರಿದ ಮರಿಗಳಿಂದ ತುಂಬಿ ಹೋಗಿ ರಾಣಿ ಮೊಟ್ಟೆಯಿಡುವ ವೇಗ ಕಡಿಮೆಯಾಗುವುದು. ವಸಂತಕಾಲದ ವೇಳೆಗೆ ಮಧುವಿನ ಸುಗ್ಗಿ ಸನ್ನಿಹಿತವಾಗಿ ರಾಣಿಯು ತತ್ತಿಗಳನ್ನಿಡುವುದೂ ಕ್ಷೀಣಿಸಿ, ಬೇಸಿಗೆಯ ವೇಳೆಗೆ ವಂಶಾಭಿವೃದ್ಧಿಯ ಕೆಲಸ ಅಂತ್ಯಗೊಳ್ಳುವುದು.

ರಾಣಿಯು ಎರಡು ತರಹ ಮೊಟ್ಟೆಗಳನ್ನಿಡುವುದು. ಒಂದು ಬಗೆಯ ಮೊಟ್ಟೆಗಳು ವೀರ್ಯಾಣುಗಳೊಡನೆ ಸಂಯೋಗ ಹೊಂದಿ ಗರ್ಭಕಟ್ಟುವುವು. ಇವುಗಳಿಂದ ಹೊರಬರುವ ಲಾರ್ವಗಳು ಹೆಣ್ಣುಗಳಾಗಿ ಬೆಳೆಯುತ್ತವೆ. ಮತ್ತೊಂದು ಬಗೆಯವು ವೀರ್ಯಾಣುಗಳ ಸಂಯೋಗವಿಲ್ಲದೆ ಗರ್ಭಕಟ್ಟದೆಯೇ ಬೆಳೆಯಲಾರಂಭಿಸಿ ಗಂಡುನೊಣಗಳಾಗಿ ಹೊರಬೀಳುವುವು. ಹೀಗೆ ರಾಣಿನೊಣ ತನ್ನ ಗೂಡಿನಲ್ಲಿ ಗಂಡು ಹೆಣ್ಣುಗಳ ಸಂಖ್ಯೆಯನ್ನು ತನ್ನ ಇಷ್ಟದಂತೆ ಮಾರ್ಪಡಿಸಬಲ್ಲುದು. ಗರ್ಭಕಟ್ಟಿದ ಮೊಟ್ಟೆಗಳಿಂದ ಮುಂದಿನ ಪೀಳಿಗೆಯ ರಾಣಿ ಮತ್ತು ಕೆಲಸಗಾರ ನೊಣಗಳು ಹೊರಬೀಳುತ್ತವೆ. ಸಾಮಾನ್ಯವಾಗಿ ಚಳಿಗಾಲದ ಅನಂತರ ಇಡುವ ಮೊಟ್ಟೆಗಳು ಹೆಣ್ಣುಗಳಾಗಿಯೂ ವಸಂತಕಾಲದಲ್ಲಿನ ಮೊಟ್ಟೆಗಳು ಗಂಡುಗಳಾಗಿಯೂ ಬೆಳೆಯುತ್ತವೆ. ಮೊಟ್ಟೆಗಳನ್ನಿಟ್ಟಮೇಲೆ ರಾಣಿಯ ಕೆಲಸ ಮುಗಿದಂತೆ. ಮರಿಗಳ ಪೋಷಣೆಯ ಜವಾಬ್ದಾರಿಯೆಲ್ಲ ಕೆಲಸಗಾರ ನೊಣಗಳಿಗೆ ಸೇರಿದೆ.

2. ಕೆಲಸಗಾರ ನೊಣಗಳು : ಜೇನ್ನೊಣದ ಸಮಾಜದಲ್ಲಿ ಇವುಗಳ ಸಂಖ್ಯೆಯೇ ಹೆಚ್ಚು. ಇವೆಲ್ಲವೂ ಹೆಣ್ಣುನೊಣಗಳು. ಆದರೆ ಬಂಜೆಗಳು. ಇವುಗಳ ಅಂಡಾಶಯ ಕ್ಷೀಣಿಸಿರುವುದರಿಂದ ಸಂತಾನವೃದ್ಧಿಸಾಮರ್ಥ್ಯ ಇಲ್ಲ. ಗಾತ್ರದಲ್ಲಿ ಚಿಕ್ಕವಾದರೂ ಸಮಾಜದ ಸಮಸ್ತ ಚಟುವಟಿಕೆಗಳನ್ನೆಲ್ಲ ಇವೇ ನಿರ್ವಹಿಸುವುವು. ಬಹಳ ಚಟುವಟಿಕೆಯಿಂದ ಎಡೆಬಿಡದೆ ಕೆಲಸ ಮಾಡುತ್ತವೆ. ಇವುಗಳಿಗೆ ವಿಷದ ಮುಳ್ಳಿದೆ.

3. ಗಂಡುನೊಣಗಳು : ಇವು ಕೆಲಸಗಾರ ನೊಣಗಳಿಗಿಂತ ದೊಡ್ಡವು. ದೇಹ ಕಪ್ಪು ಬಣ್ಣದ್ದು. ಗುಂಡಗಿದೆ. ಇವಕ್ಕೆ ಅತ್ಯಂತ ದೊಡ್ಡದಾದ ಕಣ್ಣುಗಳುಂಟು. ಕುಡಿಮೀಸೆಗಳು ಉದ್ದವಾಗಿದ್ದು 13 ಖಂಡಗಳನ್ನು ಒಳಗೊಂಡಿವೆ. ಇವುಗಳ ನಾಲಿಗೆ ಚಿಕ್ಕದು. ಮಧುವನ್ನು ಗೂಡಿನಿಂದ ಹೀರಲು ಇಲ್ಲವೇ ಕೆಲಸಗಾರ ನೊಣಗಳ ಬಾಯಿಂದ ಗುಟುಕು ತೆಗೆದುಕೊಳ್ಳಲು ಮಾತ್ರ ಯೋಗ್ಯವಾಗಿದೆ. ಇವಕ್ಕೆ ಸ್ವತಃ ಮಧು ಅಥವಾ ಪರಾಗವನ್ನು ಸಂಗ್ರಹಿಸುವ ಸಾಮರ್ಥ್ಯವಿಲ್ಲ. ವಿಷದ ಮುಳ್ಳೂ ಇಲ್ಲ. ಇವು ಬಹಳ ಸೋಮಾರಿಗಳು. ಕೆಲಸಗಾರ ನೊಣಗಳು ಸಂಗ್ರಹಿಸಿಟ್ಟ ಮಧುವನ್ನು ಸ್ವೇಚ್ಛೆಯಾಗಿ ಹೀರಿ, ವೃಥಾ ಕಾಲಹರಣ ಮಾಡುತ್ತವೆ. ಮಧ್ಯಾಹ್ನ ಬಿಸಿಲು ಇರುವಾಗ ಮಾತ್ರ ಹೊರಬರುತ್ತವೆ. ಆದರೂ ಸಮಾಜದ ಮುಂದಿನ ಪೀಳಿಗೆಯ ಅಭಿವೃದ್ಧಿಗೆ ಇವುಗಳ ಅವಶ್ಯಕತೆ ಇರುವುದರಿಂದ ಇವುಗಳ ಸೋಮಾರಿತನವನ್ನು ಕೆಲಸಗಾರ ನೊಣಗಳು ಸಹಿಸಿಕೊಂಡಿರುತ್ತವೆ. ಚಳಿಗಾಲ ಸಮೀಪಿಸಿ, ನಿಸರ್ಗದಲ್ಲಿ ಪುಷ್ಪಗಳ ಸಂಖ್ಯೆ ಕಡಿಮೆಯಾಗಿ, ಮಧುಸೂಸುವಿಕೆಯು ನಿಂತಕೂಡಲೆ ಮುಂಜಾಗ್ರತೆಯುಳ್ಳ ಕೆಲಸಗಾರ ನೊಣಗಳು ಇವನ್ನು ಗೂಡಿನಿಂದ ಅಟ್ಟುತ್ತವೆ. ಇವು ಗೂಡಿನಿಂದ ಹೊರಹೋಗದಿದ್ದರೆ ನಾಲ್ಕಾರು ನೊಣಗಳು ಇವುಗಳೊಡನೆ ಕಾದಾಡಿ ರೆಕ್ಕೆಗಳನ್ನು ಕಡಿದುಹಾಕಿ ಅಂಗವಿಕಲರನ್ನಾಗಿ ಮಾಡಿ ಹೊರಗಟ್ಟುತ್ತವೆ.

ಜೇನುಹುಟ್ಟು ಅಥವಾ ಎರಿ : ಇದು ಮೇಣದಿಂದ ತಯಾರಾಗುವುದು. ಅತ್ಯಲ್ಪ ಪ್ರಮಾಣದ ಮೇಣದಿಂದ ಅತಿಕಡಿಮೆ ಜಾಗದಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಜೇನು ಮತ್ತು ಪರಾಗವನ್ನು ದಾಸ್ತಾನುಮಾಡಲು ಸಾಧ್ಯವಾಗುವಂತೆ ಕ್ರಮಬದ್ಧವಾದ ಷಟ್ಕೋನಾಕಾರದ ಕೋಶಗಳಿಂದ ರಚಿತವಾಗಿದೆ. ಜೇನು ಹುಟ್ಟಿನಲ್ಲಿ ಸಾವಿರಾರು ಕೋಣೆಗಳುಂಟು. ಇವು ಎದುರುಬದುರಾಗಿದ್ದು ಜೇನು ಹುಟ್ಟು ಯಾವ ಬದಿಯಿಂದಲೂ ಒತ್ತಡದಿಂದ ಹಾಳಾಗದಂತೆ ರಚಿಸಲ್ಪಟ್ಟಿರುವುದು. ಸಾಮಾನ್ಯವಾಗಿ ಒಂದು ಗೂಡಿನಲ್ಲಿ ಅನೇಕ ಹುಟ್ಟುಗಳಿದ್ದು ಅವೆಲ್ಲವೂ ಮೇಲಿನ ಆಸರೆಯಿಂದ ತೂಗುಬಿದ್ದಿರುತ್ತವೆ.

ಕೆಲಸಗಾರ ನೊಣಗಳ ಮೇಣದ ಗ್ರಂಥಿಗಳಲ್ಲಿ ಮೇಣ ಉತ್ಪತ್ತಿಯಾಗಿ, ಅಲ್ಲಿಂದ ಹರಿದು ಬಂದು ನೊಣಗಳ ಹೊಟ್ಟೆಯ ತಳಭಾಗದಲ್ಲಿರುವ ಮೇಣದ ಪಟ್ಟಿಗಳ ಮೇಲೆ ಪದರಪದರವಾಗಿ ಸಂಗ್ರಹಗೊಳ್ಳುತ್ತದೆ. ಒಂದು ಜೀವಂತ ಬಲೆಯಂತೆ ನೂರಾರು ನೊಣಗಳು ಯಾವುದಾದರೂ ಸೂಕ್ತ ಆಸರೆಯ ಮೇಲಿನಿಂದ ಮೇಣದ ಪಟ್ಟಿಗಳಿಂದ ತೆಳುವಾದ ಮೇಣದ ಫಲಕಗಳನ್ನು ತಮ್ಮ ಕಾಲಿನ ತುದಿಯ ಮುಳ್ಳಿನಿಂದ ತೆರೆದು, ಚುಚ್ಚಿ ಅದನ್ನು ತಮ್ಮ ದವಡೆಗಳಿಗೆ ಸಾಗಿಸಿ, ಅಲ್ಲಿ ಮೇಣದ ಪದರವನ್ನು ತಮ್ಮ ಜೊಲ್ಲಿನೊಡನೆ ಬೆರೆಸಿ ಮೃದುಮಾಡಿ ಅದರಿಂದ ಕೋಣೆಗಳನ್ನು ರಚಿಸುತ್ತವೆ. ಮೇಣ ಹೆಚ್ಚುಹೆಚ್ಚಾಗಿ ತಯಾರಾಗಲು ಸಾಕಷ್ಟು ಆಹಾರ ಬೇಕಿದ್ದು, ಜೇನುಗೂಡಿನಲ್ಲಿ ಸಾಕಷ್ಟು ಜೇನುತುಪ್ಪ ಮತ್ತು ಪರಾಗವಿದ್ದಾಗ ಮಾತ್ರ ಗೂಡಿನ ರಚನೆ ಬಹು ಚುರುಕಾಗಿ ನಡೆಯುತ್ತದೆ. ಒಂದು ಸೇರು ಮೇಣ ತಯಾರಾಗುವುದಕ್ಕೆ 4 ಸೇರಿನಷ್ಟು ಜೇನುತುಪ್ಪ ಅಗತ್ಯ. ಜೇನು ಹುಟ್ಟನ್ನು ಮೇಲೆ ಮತ್ತು ಅಕ್ಕಪಕ್ಕಗಳಲ್ಲಿ ಆಸರೆಗಳಿಗೆ ಚೆನ್ನಾಗಿ ಅಂಟಿಕೊಂಡಿರುವಂತೆ ಮಾಡಲು ಒಂದು ವಿಶೇಷವಾದ ಗೋಂದನ್ನು ಕೆಲಸಗಾರ ನೊಣಗಳು ವಿವಿಧ ರೀತಿಯ ಮರಗಿಡಗಳ ಮೊಗ್ಗುಗಳಿಂದ ಸಂಗ್ರಹಿಸಿ ತರುತ್ತವೆ. ಹುಟ್ಟಿನ ಗೋಡೆಯಲ್ಲಿರುವ ಬಿರುಕು ಮುಂತಾದುವುಗಳನ್ನು ಮುಚ್ಚುವುದಕ್ಕೆ ಸಹ ಈ ಅಂಟನ್ನು ಉಪಯೋಗಿಸುವುವು. ಇದಕ್ಕೆ ಪ್ರೊಪೋಲಿಸ್ ಎಂದು ಹೆಸರು.

ಜೇನುಗೂಡಿನಲ್ಲಿ ಎರಡು ಮೂರು ಅಳತೆಯ ಕೋಣೆಗಳಿರುವುದುಂಟು. ಅತಿ ಚಿಕ್ಕದಾದ ಕೋಣೆಗಳಲ್ಲಿ ಬೆಳೆಯುವ ಲಾರ್ವಗಳು ಕೆಲಸಗಾರಗಳಾಗಿಯೂ ಅದಕ್ಕೂ ಸ್ವಲ್ಪ ದೊಡ್ಡದಾದ ಕೋಣೆಗಳಲ್ಲಿ ಬೆಳೆಯುವ ಲಾರ್ವಗಳು ಗಂಡುಗಳಾಗಿಯೂ ಬೆಳೆಯುವುವು. ರಾಣಿಗಳಾಗಿ ಬೆಳೆಯುವ ಮೊಟ್ಟೆಗಳು ಇನ್ನೂ ದೊಡ್ಡ ಗಾತ್ರದ ಮತ್ತು ಕಡಲೆಕಾಯಿ ಆಕಾರದ ಕೋಣೆಗಳಲ್ಲಿರುತ್ತವೆ. ರಾಣಿ ಕೋಣೆಗಳು ಜೇನುಗೂಡಿನ ಕೆಳಭಾಗದಲ್ಲಿರುತ್ತವೆ.

ಜೇನುಗೂಡಿನಲ್ಲಿರುವ ಸಣ್ಣ ಮರಿಗಳ ರಕ್ಷಣೆ, ಲಾಲನೆಪಾಲನೆಗಳೆಲ್ಲವೂ ಕೆಲಸಗಾರ ನೊಣಗಳಿಗೆ ಸೇರಿದ್ದು. ಇವನ್ನು ದಾದಿಯರು ಎನ್ನಬಹುದು. ಇವು ಮೊಟ್ಟೆಗಳಿಂದ ಹೊರಬರುವ ಮರಿಗಳನ್ನು ಮೂರು ದಿನಗಳವರೆಗೆ ತಮ್ಮ ಲಾಲಾರಸ ಹಾಗೂ ವಿವಿಧ ರೀತಿಯ ಪೌಷ್ಟಿಕ ಆಹಾರದ ಮಿಶ್ರಣವನ್ನು ಕೊಟ್ಟು ಪೋಷಿಸುತ್ತವೆ. ಈ ಆಹಾರದಲ್ಲಿ ಪ್ರೋಟೀನು ಮತ್ತು ಕೊಬ್ಬು ಹೆಚ್ಚು ಮೊತ್ತದಲ್ಲಿರುತ್ತವೆ. ಇದನ್ನು ಹೆಚ್ಚಾಗಿ ರಾಣಿಯಾಗುವ ಮರಿಗಳಿಗೆ ಮಾತ್ರ ಕೊಡುವುದರಿಂದ ಇದಕ್ಕೆ 'ರಾಯಲ್ ಜೆಲ್ಲಿ' ಅಥವಾ 'ರಾಜಪಾಕ' ಎಂದು ಹೆಸರು. ದಾದಿಯರು ಮೊಟ್ಟೆಯೊಡೆದು ಹೊರಬಂದ ಎಲ್ಲ ಜಾತಿಯ ಮರಿಗಳಿಗೂ ಮೂರು ದಿನಗಳವರೆಗೆ ಈ ರಾಜಪಾಕವನ್ನು ಕೊಟ್ಟು ಸಲಹುತ್ತವೆ. ಆದರೆ, ಮುಂದೆ ತಮ್ಮಂತೆಯೇ ಕೆಲಸಗಾರ ನೊಣಗಳಾಗುವ ಮರಿಗಳಿಗೆ ನಾಲ್ಕನೆಯ ದಿನದ ಅನಂತರ ಈ ಆಹಾರದ ಬದಲು ಬರಿಯ ಮಧು ಮತ್ತು ಪರಾಗದಿಂದ ತಯಾರಾದ ಜೇನುರೊಟ್ಟಿಯನ್ನು ಕೊಟ್ಟು ಸಾಕುತ್ತವೆ. ಗಂಡು ನೊಣಗಳಾಗುವ ಮರಿಗಳಿಗೂ ಇದೇ ಆಹಾರವನ್ನು ಕೊಡುತ್ತವೆ. ಜೇನು ರೊಟ್ಟಿಯಲ್ಲಿ ಶರ್ಕರಪಿಷ್ಟಾದಿಗಳು ಹೆಚ್ಚಾಗಿದ್ದು ಅದನ್ನು ತಿಂದು ಬೆಳೆಯುವ ಮರಿಗಳ ಬೆಳವಣಿಗೆ ಕುಗ್ಗಿ ಅವು ಸಣ್ಣ ಶರೀರವುಳ್ಳವಾಗಿ, ಅವುಗಳ ಅಂಡಾಶಯ ಪೂರ್ಣ ಬೆಳೆಯದೆ ಬಂಜೆಯರಾದ ಕೆಲಸಗಾರ ನೊಣಗಳಾಗಿ ಮಾರ್ಪಾಟು ಹೊಂದುತ್ತವೆ. ರಾಜಪಾಕದಲ್ಲಿ ಪ್ಯಾಂಟೋತೆನಿಕ್ ಆಮ್ಲ ಮತ್ತು ಇನ್ನು ಕೆಲವು ಜೀವಸತ್ವಗಳಿರುವುದು ತಿಳಿದುಬಂದಿದೆ. ಮುಂದೆ ರಾಣಿಯಾಗುವ ಮರಿಗಳಿಗೆ 6 ದಿನಗಳ ಪೂರ್ತಿ ರಾಜಪಾಕವನ್ನೇ ಉಣಿಸುವುವು.

ಮರಿಗಳ ಬೆಳವಣಿಗೆ : ಜೇನುನೊಣದ ಮೊಟ್ಟೆ 1.5 ಮಿಮೀ ಉದ್ದವಿದೆ. ಇದರ ಬಣ್ಣ ಬಿಳಿ. ತತ್ತಿಯಿಂದ ಹೊರಬರುವ ಲಾರ್ವದ ತೂಕ ಸುಮಾರು 1 ಮಿಗ್ರಾಂ. ಇದು ಆರು ದಿನಗಳಲ್ಲಿ 200 ಮಿಗ್ರಾಂ ಆಹಾರವನ್ನು ಸೇವಿಸಿ, ತೂಕದಲ್ಲಿ 1,500 ಮಿಗ್ರಾಂ ಗಳಷ್ಟು ಹೆಚ್ಚುವುದು. ಈ ಘಟ್ಟವನ್ನು ಜೀರ್ಣಿಸಿಕೊಳ್ಳುವ ಘಟ್ಟ ಎಂದು ಕರೆಯುವರು. ಲಾರ್ವದ ಬೆಳವಣಿಗೆಗೆ ಒಂದು ನಿರ್ದಿಷ್ಟವಾದ ಉಷ್ಣತೆ ಬೇಕಾಗಿದ್ದು ಜೇನುಹುಟ್ಟಿನಲ್ಲಿ ಯಾವಾಗಲೂ $35^{0}$ಸೆ. ಉಷ್ಣತೆ ಇದ್ದೇ ಇರುತ್ತದೆ. ದಾದಿನೊಣಗಳು ಮರಿಗಳಿರುವ ಪ್ರತಿಕೋಣೆಯನ್ನೂ ದಿನವೊಂದಕ್ಕೆ 1,300 ಸಲ ಭೇಟಿಕೊಟ್ಟು ಆಹಾರವನ್ನು ಒದಗಿಸುತ್ತವೆ. ಒಂದು ಮರಿಯ ಜೀವಿತ ಕಾಲದ 6 ದಿನಗಳಲ್ಲಿ ದಾದಿನೊಣಗಳು ಸುಮಾರು 10,000 ಸಲ ಆಹಾರವನ್ನು ಅವಕ್ಕೆ ಪೂರೈಸುತ್ತವೆ.

ಆದಷ್ಟು ಆಹಾರವನ್ನು ತಿಂದು ಮರಿಗಳು ಏಳನೆಯ ದಿನ ಕೋಶಾವಸ್ಥೆಯನ್ನು ಸೇರುತ್ತವೆ. ಚೆನ್ನಾಗಿ ಬೆಳೆದು ಬಲಿತ ಮರಿ ಇಡೀ ಕೋಣೆಯನ್ನೆಲ್ಲ ತುಂಬಿಕೊಳ್ಳುವುದು. ಮರಿಗಳು ಹಿಕ್ಕೆಯನ್ನೇ ಹಾಕುವುದಿಲ್ಲ. ಗೂಡಿನ ನೈರ್ಮಲ್ಯಕ್ಕೆ ಇದೂ ಒಂದು ಕಾರಣ. ಆದರೆ ಕೋಶವನ್ನು ರಚಿಸುವುದಕ್ಕೆ ಮೊದಲು ಹಿಕ್ಕೆಯನ್ನು ಹಾಕಿ, ಅದರಿಂದ ತನ್ನ ಹಿಂಭಾಗವನ್ನು ಅಂಟಿಸಿಕೊಳ್ಳುವುದು. ಅನಂತರ ರೇಷ್ಮೆದಾರದಂಥ ಬಲು ನವುರಾದ ದಾರದಿಂದ ತನ್ನ ಸುತ್ತ ಕೋಶವೊಂದನ್ನು ರಚಿಸಿಕೊಳ್ಳುವುದು. ಕೋಶಗಳಿರುವ ಕೋಣೆಗಳನ್ನು ಕೆಲಸಗಾರ ನೊಣಗಳು ಸಣ್ಣ ರಂಧ್ರಗಳಿಂದ ಕೂಡಿದ ಮೇಣದ ತಟ್ಟೆಗಳಿಂದ ಮುಚ್ಚುತ್ತವೆ. ಈ ಕೋಣೆಗಳಲ್ಲಿ ರಾಣಿ ನೊಣ 2 ದಿನ, ಕೆಲಸಗಾರ ನೊಣಗಳು 3 ದಿನ

ಮತ್ತು ಗಂಡುನೊಣಗಳು 4 ಅಥವಾ 5 ದಿನಗಳವರೆಗೆ ಅಲುಗಾಡದೆ ನಿದ್ರಾವಸ್ಥೆಯಲ್ಲಿರುತ್ತವೆ. ಕೋಶಾವಸ್ಥೆಯನ್ನು ಸೇರಿದ ಮರಿಗಳ ದೇಹದಲ್ಲಿ ವಿಶೇಷ ಮಾರ್ಪಾಟುಗಳಾಗುವುವು. ಈ ಘಟ್ಟದಲ್ಲಿ ಇವುಗಳ ತೂಕ ಕಡಿಮೆಯಾಗುವುದರಿಂದ ಇದನ್ನು ದೇಹ ಕ್ಷೀಯಿಸುವ ಘಟ್ಟ ಎನ್ನುವರು. ಈ ಅವಸ್ಥೆಯಲ್ಲಿರುವಾಗ ಮರಿನೊಣಗಳ ಇಡೀ ದೇಹವೇ ಮೇಣದಂತೆ ಕರಗಿ, ಅದು ಲೇಹ್ಯದ ಮುದ್ದೆಯಂತೆ ಕಾಣುವುದು. ಹೀಗಿದ್ದರೂ ಅದರಲ್ಲಿ ಅನೇಕ ಜೀವಕೋಶಗಳು ಹುಟ್ಟಿ ಮುಂದಿನ ಜೇನುನೊಣದ ಸರ್ವಾಂಗಗಳೆಲ್ಲ ಮೂಡುತ್ತವೆ. ಹೀಗೆ ಸ್ವಲ್ಪ ರೂಪುಗೊಂಡ ಜೇನುನೊಣ ತನ್ನ ರೇಷ್ಮೆಯ ಕೋಶದಿಂದ ಹೊರಬಿದ್ದು ಜೇನುಗೂಡಿನ ಕೋಣೆಯಲ್ಲಿ ತನ್ನ ಬೆಳವಣಿಗೆಯನ್ನು ಮುಂದುವರಿಸುತ್ತದೆ. ಕೋಶದಿಂದ ಹೊರಬರುವ ನೊಣಕ್ಕೆ ಯಾವುದೇ ಬಣ್ಣವಿಲ್ಲ. ರೆಕ್ಕೆಗಳಿಲ್ಲ. ಇದಕ್ಕೆ ಬರಿಯ ತಲೆ, ಎದೆ, ಹೊಟ್ಟೆ, ಬಾಗಿದ ಕುಡಿಮೀಸೆ, ನಾಲಿಗೆ, ಕಾಲುಗಳು ಮಾತ್ರ ಉಂಟು. ಕಾಲಕ್ರಮೇಣ ಅದರ ಬಣ್ಣ ಮಾಸಲು ಹಳದಿ ಬಣ್ಣಕ್ಕೆ ತಿರುಗುತ್ತದಲ್ಲದೆ ರೆಕ್ಕೆಗಳೂ ಹುಟ್ಟಿಕೊಳ್ಳುತ್ತವೆ. ಒಂದು ನಿಶ್ಚಿತ ಅವಧಿಯ ಅನಂತರ ಪೂರ್ತಿ ರೂಪುಗೊಂಡ ನೊಣ ಹೊರಬರುವುದು. ಮೊಟ್ಟೆಯಿಂದ ಹೊರಬಂದ ಲಾರ್ವ ರಾಣಿನೊಣವಾಗಲು 16 ದಿನಗಳೂ ಕೆಲಸಗಾರ ನೊಣವಾಗಲು 21 ದಿನಗಳೂ ಗಂಡುನೊಣವಾಗಲು 24 ದಿನಗಳೂ ಬೇಕಾಗುವುವು.

ಜೇನುನೊಣಗಳ ಬೆಳವಣಿಗೆಯಲ್ಲಿ ಲಾರ್ವಗಳು ಸೇವಿಸುವ ಆಹಾರವೇ ಬಹುಮುಖ್ಯವಾದುದು ಎಂಬುದು ವ್ಯಕ್ತವಾಗುತ್ತದೆ. ತತ್ತಿಯಿಂದ ಹೊರಬರುವ ಮರಿಗಳೆಲ್ಲವೂ ಒಂದೇ ವಿಧವಾಗಿವೆಯಾದರೂ ನಾಲ್ಕನೆಯ ದಿನದ ಅನಂತರ ಅವಕ್ಕೆ ಒದಗುವ ಆಹಾರದ ಮೇಲೆ ಅವುಗಳ ಮುಂದಿನ ಬೆಳವಣಿಗೆ ಅವಲಂಬಿಸಿದೆ. ಬರಿಯ ರಾಜಪಾಕವನ್ನೇ ಉಣ್ಣುವ ಲಾರ್ವ ರಾಣಿನೊಣವಾಗಿಯೂ ಮಧು ಮತ್ತು ಪರಾಗವನ್ನು ಸೇವಿಸುವ ಲಾರ್ವಗಳು ಕೆಲಸಗಾರ ಮತ್ತು ಗಂಡುನೊಣಗಳಾಗಿಯೂ ಬೆಳೆಯುವುವು. ಇದರಿಂದ ಒಂದು ಗೂಡಿನಲ್ಲಿರುವ ಕೆಲಸಗಾರ ನೊಣಗಳು ಮುಂದೆ ತಮಗೆ ಎಷ್ಟು ರಾಣಿನೊಣಗಳು ಬೇಕು ಎಂಬುದನ್ನು ನಿಶ್ಚಯಿಸಬಲ್ಲವು.

ಸಾವಿರಾರು ವರ್ಷಗಳಿಂದ ಜೇನುನೊಣಗಳ ಸಮಾಜದಲ್ಲಿ ಕಾಣುವ ರೀತಿ ನೀತಿಗಳು ಅನೇಕ ಸಂಶೋಧಕರ ಕುತೂಹಲವನ್ನು ಕೆರಳಿಸಿವೆ. ರೋಷ್ ಎಂಬಾತ ಜೇನುಗೂಡಿನಲ್ಲಿ ನಡೆಯುವ ಸಮಸ್ತ ಕಾರ್ಯಕಲಾಪಗಳನ್ನೆಲ್ಲ ವಿಶದವಾಗಿ ವಿವರಿಸಿದ್ದಾನೆ. ಪರಸ್ಪರ ಸಹಕಾರ, ಕೆಲಸಗಳ ಸಮನ್ವಯ, ಒಗ್ಗಟ್ಟು, ಶ್ರದ್ಧೆ ಕಾರ್ಯದಕ್ಷತೆ ಮೊದಲಾದವನ್ನು ಜೇನುನೊಣಗಳ ನಿತ್ಯ ಜೀವನದಲ್ಲಿ ಕಾಣಬಹುದು. ಜೇನುನೊಣಗಳು ಗೂಡಿನ ನೈರ್ಮಲ್ಯ ಮತ್ತು ಹೊರಗೆ ಬಂದ ಕೂಡಲೆ ತಾವಿದ್ದ ಕೋಶದ ಕಸವನ್ನು ತೆಗೆದು ಸ್ವಚ್ಛಮಾಡುತ್ತವೆ. ಅನಂತರ 2–3 ದಿನಗಳವರೆಗೆ ಈ ಕೆಲಸದಲ್ಲೇ ನಿರತವಾಗಿದ್ದು, ಇಡೀ ಗೂಡನ್ನು ಯಾವಾಗಲೂ ನಿರ್ಮಲವಾಗಿಟ್ಟಿರುತ್ತವೆ. ಗೂಡಿನಲ್ಲಿ ಸತ್ತುಬಿದ್ದ ಇತರ ನೊಣಗಳ ಶವಗಳನ್ನು ಹೊರಕ್ಕೆ ಸಾಗಿಸುವುದು, ಒಂದು ವೇಳೆ ಗೂಡಿನಿಂದ ಹೊರಕ್ಕೆ ಸಾಗಿಸಲು ಅಸಾಧ್ಯವಾದಂಥ ಶತ್ರುಗಳಿದ್ದರೆ ಅವನ್ನು ತಮ್ಮ ವಿಷದ ಮುಳ್ಳಿನಿಂದ ಚುಚ್ಚಿ ಸಾಯಿಸಿ, ಅವು ಕೊಳೆತು ನಾರದಂತೆ ಅವುಗಳ ಶವವನ್ನು ಮೇಣ ಮತ್ತು ಗೋಂದಿನಿಂದ ಮುಚ್ಚಿ ಸಮಾಧಿ ಮಾಡುವುದು ಮುಂತಾದ ಕಾರ್ಯಗಳಲ್ಲಿ ತೊಡಗುವುದು ಇವುಗಳ ವಿಚಿತ್ರ ಲಕ್ಷಣ.

4–5 ದಿನ ಪ್ರಾಯದ ನೊಣಗಳು ಕಸ ಬಳಿಯುವ ಕೆಲಸವನ್ನು ಹೊಸದಾಗಿ ಹುಟ್ಟಿಬರುವ ಎಳೆಯ ನೊಣಗಳಿಗೆ ಬಿಟ್ಟುಕೊಟ್ಟು ಮುಂದೆ ದಾದಿಯರಾಗಿ ಕೆಲಸಮಾಡುತ್ತವೆ. ಮೊಟ್ಟೆಗಳಿಂದ ಹೊರಬರುವ ಮರಿಗಳ ರಕ್ಷಣೆಯನ್ನೂ ಲಾಲನೆ ಪಾಲನೆಯನ್ನೂ ವಹಿಸಿಕೊಂಡು ಅವಕ್ಕೆ ದಿನಕ್ಕೆ ಸಾವಿರಾರು ಸಲ ಆಹಾರವನ್ನು ಗುಟುಕು ಕೊಟ್ಟು ಪೋಷಿಸುತ್ತವೆ. ಈ ರೀತಿಯಾಗಿ 15 ದಿನಗಳವರೆಗೆ ದಾದಿಯರಾಗಿ ಕೆಲಸಮಾಡುತ್ತವೆ. ಈ ಕಾಲದಲ್ಲಿ ಇವು ಗುಂಪುಗುಂಪಾಗಿ ಪರಸ್ಪರ ಸಹಕಾರದಿಂದ ಗೂಡಿನ ಕಸಬಳಿಯುವುದು, ಮೇಣದಿಂದ ಕೋಣೆಗಳನ್ನು ರಚಿಸುವುದು, ಇತ್ಯಾದಿ ಕೆಲಸಗಳನ್ನು ಮಾಡುವುವು. ಇದೇ ಕಾಲದಲ್ಲಿ ಹೊರಗಿನಿಂದ ಜೇನುನೊಣಗಳು ತಂದ ಮಕರಂದ ನೀರಾಗಿರುತ್ತದೆ. ಅದು ಜೇನುತುಪ್ಪವಾಗಬೇಕಾದರೆ ಅದರಲ್ಲಿರುವ ನೀರಿನಂಶ ಕಡಿಮೆಯಾಗಬೇಕು. ಕೆಲಸಗಾರ ನೊಣಗಳು ತಮ್ಮ ರೆಕ್ಕೆಗಳನ್ನು ಸತತವಾಗಿ ಬಡಿದು ನೀರನ್ನು ಕಡಿಮೆ ಮಾಡುವುವು. ಜೇನುಗೂಡಿನ ಕೋಣೆಗಳು ಪಕ್ವವಾದ ಮಧುವಿನಿಂದ ತುಂಬಿದ ಕೂಡಲೆ ಅದರ ಬಾಯನ್ನು ಮೇಣದಿಂದ ಮುಚ್ಚುತ್ತವೆ.

ನೈರ್ಮಲ್ಯ ಪಾಲಕರು : ಜೇನುಗೂಡಿನ ನೈರ್ಮಲ್ಯವನ್ನು ಕಾಪಾಡುವ ಕೆಲವು ನೊಣಗಳೂ ಉಂಟು. ಇಂತ ನೊಣಗಳು ಹೊರಗಿನಿಂದ ಮಧು ಮತ್ತು ಪರಾಗವನ್ನು ತರುವ ಜೇನುನೊಣಗಳನ್ನು ತಮ್ಮ ಕುಡಿಮೀಸೆಯಿಂದ ಮುಟ್ಟಿದಾಗ ಅವು ತಮ್ಮ ಮೈಯನ್ನು ಅಲುಗಾಡಿಸಿದರೆ ಇವುಗಳಿಂದ ಸ್ವಚ್ಛಮಾಡಿಸಿಕೊಳ್ಳಲು ಒಪ್ಪಿಗೆಕೊಟ್ಟಂತೆ. ಕೂಡಲೆ ಒಂದು ಅಥವಾ ಎರಡು ನೊಣಗಳು ಅದರ ಇಬ್ಬದಿಯಲ್ಲೂ ನಿಂತುಕೊಂಡು ಅದರ ಮೈಮೇಲಿನ ಪರಾಗದ ಧೂಳು ಮತ್ತಿತರ ಕಸಗಳನ್ನು ತಮ್ಮ ಬಾಯಿಯಿಂದ ಸ್ವಚ್ಛಗೊಳಿಸುವುವು.

ಮೇಣದ ಉತ್ಪತ್ತಿ : 12 ರಿಂದ 18 ದಿನ ಪ್ರಾಯದ ಕೆಲಸಗಾರ ನೊಣಗಳಲ್ಲಿ ಮೇಣದ ಗ್ರಂಥಿಗಳು ಚೆನ್ನಾಗಿ ಬಲಿತು ಮೇಣ ತಯಾರಾಗುತ್ತದೆ. ಈ ಕಾಲದಲ್ಲಿ ಅವು ಜೇನುತುಪ್ಪವನ್ನು ವಿಶೇಷವಾಗಿ ಕುಡಿಯುತ್ತವೆ. ಜೇನಿನಲ್ಲಿನ ಕೊಬ್ಬಿನಂಶ ಮೇಣವಾಗಿ ಮಾರ್ಪಾಟು ಹೊಂದುವುದು. ಅನಂತರ ಸೂಕ್ಷ್ಮವಾದ ನಳಿಕೆಗಳ ಮೂಲಕ ಹರಿದುಬಂದು ಅವುಗಳ ಹೊಟ್ಟೆಯ ಕೆಳಗಡೆ ಪದರ ಪದರವಾಗಿ ಶೇಖರವಾಗುವುದು. ಪ್ರತಿಯೊಂದು ಜೇನ್ನೊಣದ ಹೊಟ್ಟೆಯ ಕೆಳಗಡೆ ಮೇಣದ ಎಂಟು ಪದರಗಳಿವೆ. ಮೂರನೆಯ ವಾರದ ಅಂತ್ಯದಲ್ಲಿ ಮೇಣದ ಗ್ರಂಥಿಗಳು ಕ್ಷಯಿಸಿ ಹೋಗುವುದರಿಂದ ಜೇನ್ನೊಣಗಳು ಮೇಣವನ್ನು ತಯಾರಿಸಲು ಅಸಮರ್ಥವಾಗುತ್ತವೆ. ಆದ್ದರಿಂದ 18ನೆಯ ದಿನದ ಅನಂತರ ಅವು ದ್ವಾರಪಾಲಕರಾಗಿ ಕೆಲಸ ಮಾಡುವುವು. ಗೂಡಿನ ಹೊರಗೇ ಇದ್ದು ಬಹಳ ಜಾಗರೂಕತೆಯಿಂದ ಕಾಯುತ್ತವೆ. ಶತ್ರುಗಳು ಬಂದಾಗ ಇವು ತಮ್ಮ ರೆಕ್ಕೆಗಳನ್ನು ಬಡಿದು ಎಚ್ಚರಿಕೆ ಕೊಡುತ್ತವೆ. ಅನಂತರ ಒಮ್ಮೆಲೇ ಶತ್ರುವಿನ ಮೇಲೆ ಬಿದ್ದು ಕಾದಾಡುವುವು.

ಮಧು ಮತ್ತು ಪರಾಗ ಸಂಗ್ರಹಣೆ : ದ್ವಾರಪಾಲಕರಾಗಿ ಕೆಲಸ ಮಾಡಿದ ಮೇಲೆ ಅವು ಮಧು ಮತ್ತು ಪರಾಗ ಶೇಖರಣೆಯಲ್ಲಿ ತೊಡಗುತ್ತವೆ. ಗೂಡಿನ ಸುತ್ತ ಕೆಲವು ಕಾಲ ಹಾರಾಡುತ್ತ ಇದ್ದು ತಮ್ಮ ಗೂಡಿಗೆ ಮರಳಿಬರಲು ದಾರಿಯ ಪರಿಚಯ ಚೆನ್ನಾಗಿ ಆದ ಅನಂತರ ಗೂಡಿನಿಂದ ಹೊರಕ್ಕೆ ಹೋಗಿ ಹೂಗಳನ್ನು ಹುಡುಕಿ, ಅವುಗಳಿಂದ ಮಧು ಮತ್ತು ಪರಾಗವನ್ನು ಸಂಗ್ರಹಿಸುವುವು. ಮಧು ಸೂಸುವ ಹೂವನ್ನು ಕಂಡುಕೊಂಡ ಅನಂತರ ಪದೇ ಪದೇ ಅದೇ ಹೂವಿನ ಗಿಡಕ್ಕೆ ಹೋಗುವುವು. ತಮ್ಮ ನಾಲಗೆಯ ಸಹಾಯದಿಂದ ಮಕರಂದವನ್ನು ಹೀರಿಕೊಳ್ಳುವುವು. ಮಕರಂದವನ್ನು ತಮ್ಮ ಜಠರದ ಮುಂದಿನ ಭಾಗವಾದ ಜೇನುತುಪ್ಪ ಕೋಶದಲ್ಲಿ (ಹನಿ ಚೇಂಬರ್) ತುಂಬಿಕೊಳ್ಳುವುವು. ಪರಾಗದ ದೂಳನ್ನು ತಮ್ಮ ಹಿಂದಿನ ಕಾಲುಗಳಲ್ಲಿರುವ ಪರಾಗದ ಬುಟ್ಟಿಯಲ್ಲಿ (ಪೋಲನ್ ಬ್ಯಾಸ್ಕೆಟ್) ತುಂಬಿಕೊಂಡು ಗೂಡಿಗೆ ತರುತ್ತವೆ. ಗೂಡಿಗೆ ಬಂದ ನಂತರ ಪರಾಗ ಮತ್ತು ಮಧುವನ್ನು ಬೇರೆ ಬೇರೆ ಕೋಣೆಗಳಲ್ಲಿ ಕೂಡಿಡುತ್ತವೆ. ಮಕರಂದ ಬರಿಯ ಸುಕ್ರೋಸ್ ಎಂಬ ಸಕ್ಕರೆಯ ದ್ರಾವಣ. ಇದು ಜೇನುನೊಣಗಳ ಜೇನುಕೋಶದಲ್ಲಿರುವಾಗ ಸ್ವಲ್ಪ ಮಟ್ಟಿಗೆ ಜೀರ್ಣಿಸಿ, ಪಕ್ವವಾಗಿ, ಅತ್ಯಂತ ರುಚಿಕರವಾದ ಮಧು ಅಥವಾ ಜೇನುತುಪ್ಪವಾಗಿ ಮಾರ್ಪಾಟಾಗುತ್ತದೆ. ಜೇನುತುಪ್ಪದಲ್ಲಿ ಗ್ಲೂಕೋಸ್ ಮತ್ತು ಲೆವ್ಯುಲೋಸ್ ಎಂಬ ಸಕ್ಕರೆಗಳು ಹೆಚ್ಚಾಗಿದ್ದು ನೀರಿನಂಶ ಕಡಿಮೆಯಾಗಿರುವುದು. ಪಕ್ವವಾದ ಜೇನುತುಪ್ಪವನ್ನು ಗೂಡಿನ ಸಾವಿರಾರು ಕೋಣೆಗಳಲ್ಲಿ ಶೇಖರಿಸಿ ಮೊಹರು ಮಾಡುತ್ತವೆ.

ಒಂದು ಜೇನುನೊಣ ಹೆಚ್ಚೆಂದರೆ 70 ಮಿಗ್ರಾಂ ಗಳಷ್ಟು ಮಧುವನ್ನು ಶೇಖರಿಸಿ ಹೊತ್ತು ತರಬಲ್ಲದು. ಆದರೂ ಸರಾಸರಿ ಮೊತ್ತ 40 ಮಿಗ್ರಾಂ ಮೀರುವುದಿಲ್ಲ. ಅದರಲ್ಲಿ 10 ಮಿಗ್ರಾಂ ನಷ್ಟು ಮಕರಂದವನ್ನು ತನ್ನ ಆಹಾರವನ್ನಾಗಿ ಉಪಯೋಗಿಸಿಕೊಂಡು ಉಳಿದ 30 ಮಿಗ್ರಾಂ ಗಳಷ್ಟು ಮಧುವನ್ನು ಗೂಡಿನಲ್ಲೇ ಶೇಖರಿಸಿಡುತ್ತದೆ. ದಿನಕ್ಕೆ 10 ಬಾರಿಯಂತೆ ಮಧುವನ್ನು ತಂದರೆ ದಿನವೊಂದಕ್ಕೆ 300 ಮಿಗ್ರಾಂ ನಷ್ಟು ಕೂಡಿಡಬಹುದು. ಹೀಗೆ 20 ದಿನಗಳವರೆಗೆ ಕೆಲಸಮಾಡಿದರೆ 6,000 ಮಿಗ್ರಾಂ ಅಂದರೆ 0.006 ಕಿಗ್ರಾಂ ನಷ್ಟು ಇಲ್ಲವೆ 6 ಮಿಲೀ ಎಂದರೆ 120 ತೊಟ್ಟಿನಷ್ಟು ಮಧುವನ್ನು ಶೇಖರಿಸಬಹುದು. ಮಕರಂದ ನೀರಾಗಿದ್ದು ಅದು ಪಕ್ವವಾದ ಜೇನುತುಪ್ಪವಾಗಲು, ಅದರಲ್ಲಿಯ ನೀರಿನಂಶ ಕಡಿಮೆಯಾಗಬೇಕು. ಆದ್ದರಿಂದ ಒಂದು ಕಿಗ್ರಾಂ. ಜೇನುತುಪ್ಪವನ್ನು ತಯಾರಿಸಲು 2 ಕಿಗ್ರಾಂ ನಷ್ಟು ಮಕರಂದವನ್ನು ಶೇಖರಿಸಬೇಕು. ಒಂದು ಚಮಚ ಮಧುವನ್ನು ಶೇಖರಿಸಲು ಒಂದು ಜೇನ್ನೊಣ 20,000 ಸಲ ಓಡಾಡಬೇಕಾಗುವುದು. ಅವು ಮಧು ಸಂಗ್ರಹಕ್ಕಾಗಿ 3 ಕಿಮೀ ದೂರದವರೆಗೆ ಹಾರಿಹೋಗಬಲ್ಲವು. 1 ಕಿಗ್ರಾಂ ನಷ್ಟು ಜೇನುತುಪ್ಪವನ್ನು ತಯಾರಿಸಲು ಒಂದು ನೊಣ ಒಂದು ಲಕ್ಷ ಡ್ಯಾಂಡಿಲೈಯನ್ ಹೂಗಳು ಇಲ್ಲವೆ 15 ಲಕ್ಷದಿಂದ 20 ಲಕ್ಷದಷ್ಟು ಗೊಬ್ಬಳಿಹೂಗಳು ಇಲ್ಲವೆ 6 ರಿಂದ 7 ಲಕ್ಷ ಕೆಂಪು ಕ್ಲೋವರ್ ಹೂಗಳನ್ನು ಸಂದರ್ಶಿಸಿ, ಅವುಗಳಿಂದ ಮಕರಂದವನ್ನು ಹೀರಿ ತರಬೇಕೆಂದು ಅಂದಾಜು ಮಾಡಲಾಗಿದೆ.

ಜೇನ್ನೊಣಗಳು ಈ ಮಧುಸಂಗ್ರಹ ಕಾರ್ಯದಲ್ಲಿ ಹಾರಾಡಬೇಕಾದ ದೂರದ ಪ್ರಮಾಣ ಕೂಡ ದಿಗ್ಭ್ರಮೆ ಹಿಡಿಸುವಂಥದು. ಅರ್ಧ ಕಿಗ್ರಾಂ ನಷ್ಟು ಮಧುವನ್ನು ಶೇಖರಿಸಲು ಒಂದೇ ಒಂದು ಜೇನ್ನೊಣ ಒಂದು ದಿವಸವೂ ವಿರಮಿಸದಂತೆ 8 ವರ್ಷಗಳವರೆಗೆ ಕೆಲಸಮಾಡುತ್ತದೆ ಮತ್ತು ಈ ಕೆಲಸಮಾಡುವುದರಲ್ಲಿ ಅದು ಭೂಮಧ್ಯರೇಖೆಯ ಸುತ್ತ ಎರಡು ಸಲ ಭೂಮಿಯನ್ನು ಪ್ರದಕ್ಷಿಣೆ ಮಾಡಿದಷ್ಟು ದೂರ ಹಾರಾಡುವುದು.

ಜೇನ್ನೊಣಗಳ ಭಾಷೆ : ಜೇನ್ನೊಣಗಳು ಮಧುವನ್ನು ಸಂಗ್ರಹಿಸಿಕೊಂಡು ಗೂಡಿಗೆ ಮರಳಿ ಬಂದ ಅನಂತರ ತಮ್ಮ ಸಹೋದ್ಯೋಗಿಗಳಿಗೆ ಮಧು ಸಿಗುವ ಸ್ಥಳವನ್ನು ತಮ್ಮದೇ ಆದ ಒಂದು ಸಾಂಕೇತಿಕ ಭಾಷೆಯಿಂದ ತಿಳಿಸುತ್ತವೆ. ಈ ಭಾಷೆಯನ್ನು

ತಿಳಿದುಕೊಳ್ಳಲು ಆಸ್ಟ್ರಿಯದ ಕಾರ್ಲ್ ಫಾನ್ ಫ್ರಿಷ್ ಎಂಬಾತ ಸುಮಾರು 20 ವರ್ಷಗಳವರೆಗೆ ಅನೇಕ ಪ್ರಯೋಗಗಳನ್ನು ನಡೆಸಿ ಜೇನ್ನೊಣಗಳು ಮಧು ಇಂಥ ಕಡೆಯಲ್ಲಿ ದೊರೆಯುತ್ತದೆ ಎಂಬುದನ್ನು ಒಂದು ವಿಶಿಷ್ಟವಾದ ನೃತ್ಯಭಂಗಿಯ ಮೂಲಕ ಇತರ ಸಹೋದ್ಯೋಗಿಗಳಿಗೆ ತಿಳಿಸಿಕೊಡುತ್ತವೆ ಎಂದು ಪತ್ತೆಹಚ್ಚಿದ.

ಮಧು ದೊರೆಯುವ ಸ್ಥಳ ನೂರು ಗಜಗಳ ಅಂತರದೊಳಗೆ ಇದ್ದರೆ ಮಧುವನ್ನು ತುಂಬಿಕೊಂಡು ಗೂಡಿಗೆ ಬಂದ ನೊಣಗಳು ತಮ್ಮ ಗೂಡಿನ ಮೇಲೆ ಪೂರ್ಣಾಚಂದ್ರಾಕಾರವಾಗಿ ನೃತ್ಯವನ್ನು ಮಾಡುತ್ತವೆ. ಇದನ್ನು ಇತರ ನೊಣಗಳು ಕುತೂಹಲದಿಂದ ವೀಕ್ಷಿಸುತ್ತವಲ್ಲದೆ ಹೀಗೆ ಕುಣಿಯುವ ನೊಣದ ಮೈಯನ್ನು ತಮ್ಮ ಕುಡಿಮೀಸೆಗಳಿಂದ ಮುಟ್ಟಿ, ಅದರ ಮೈಯ ವಾಸನೆಯನ್ನು ಮೂಸಿ, ಅದು ಯಾವ ಜಾತಿಯ ಹೂವನ್ನು ಸಂದರ್ಶಿಸಿ ಮಧುವನ್ನು ತಂದಿದೆ ಎಂದು ತಿಳಿದುಕೊಳ್ಳುತ್ತವೆ. ಮಧುವನ್ನು ತರುವ ನೊಣ ಈ ರೀತಿ ಗೂಡಿನ ನಾಲ್ಕಾರು ಕಡೆ ನೃತ್ಯವನ್ನು ಮಾಡುತ್ತದೆ. ಮಧು ದೊರೆಯುವ ಸ್ಥಳ ನೂರು ಗಜಕ್ಕೂ ಹೆಚ್ಚು ದೂರದಲ್ಲಿದ್ದಾಗ ಮಧುವನ್ನು ಶೇಖರಿಸಿ ತಂದ ಜೇನ್ನೊಣ ಅರ್ಧಚಂದ್ರಾಕಾರವಾಗಿ ನೃತ್ಯಮಾಡುವುದು. ಈ ರೀತಿ ಎರಡು ರೀತಿಯ ನೃತ್ಯದ ಮೂಲಕ ಮಧು ಸಿಗುವ ಸ್ಥಳದ ದೂರವನ್ನು ಇತರ ನೊಣಗಳಿಗೆ ಸೂಚಿಸುವುವು. ಅಲ್ಲದೆ ಮಧು ಗೂಡಿಗೆ ಯಾವ ದಿಕ್ಕಿನಲ್ಲಿದೆ ಎಂಬುದನ್ನೂ ಸಹ ಮತ್ತೊಂದು ರೀತಿಯ ನೃತ್ಯದಿಂದ ತಿಳಿಸಿಕೊಡುವುವು. ಗೂಡಿನ ಮೇಲೆ ಕೆಳಗಿಂದ ಮೇಲುಗಡೆಗೆ ಉದ್ದಕ್ಕೂ ತನ್ನ ಹೊಟ್ಟೆಯನ್ನು ಎಡಬಲಗಳಿಗೆ ವಾಲಿಸತ್ತಾ, ಸರಸರನೆ ಓಡುತ್ತ ನೃತ್ಯಮಾಡಿದರೆ ಸೂರ್ಯನಿರುವ ದಿಕ್ಕಿಗೆ ಹಾರಿಹೋದರೆ ಮಧು ದೊರೆಯುತ್ತದೆ ಎಂದು ಸೂಚನೆ. ಗೂಡಿನ ಮೇಲುಭಾಗದಿಂದ ಕೆಳಭಾಗಕ್ಕೆ ತನ್ನ ಹೊಟ್ಟೆಯನ್ನು ಎರಡೂ ಪಕ್ಕಗಳಿಗೆ ಬಾಗಿಸುತ್ತ ಕುಣಿದರೆ ಸೂರ್ಯನಿಗೆ ಎದುರಾಗಿ ಹಾರಿಹೋದರೆ ಮಧು ಸಿಗುತ್ತದೆ ಎಂದು ಅರ್ಥ. ಒಂದು ಗೂಡಿನ ಕೆಳಗಿನ ಮೂಲೆಯಿಂದ $60^0$ ಅಂತರದಲ್ಲಿ ಮೇಲಿನ ಮೂಲೆಗೆ ಕುಣಿಯುತ್ತಾ ಹೋದರೆ ಸೂರ್ಯನ ಬಲಕ್ಕೆ $60^0$ ಕೋನದಲ್ಲಿ ಹೋಗಬೇಕೆಂದು ಅರ್ಥ. ಗೂಡಿನ ಮೇಲುಗಡೆಯ ಒಂದು ಮೂಲೆಯಿಂದ ಎದುರಿನ ಮೂಲೆಗೆ ಕುಣಿದಾಡುತ್ತ ಹೋದರೆ ಸೂರ್ಯನ ಬಲಕ್ಕೆ $120^0$ ಕೋನದಲ್ಲಿ ಹಾರಿಹೋಗಬೇಕೆಂದು ಅರ್ಥ. ಒಂದು ಕ್ಲುಪ್ತ ಅವಧಿಯಲ್ಲಿ ಹಲವಾರು ಬಾರಿ ಅದೇ ರೀತಿಯ ನೃತ್ಯವನ್ನು ಪುನರಾವರ್ತಿಸಿದರೆ ಅದು ಮಧುವಿನ ಸಾಂದ್ರತೆ ಮತ್ತು ಮಾಧುರ್ಯವನ್ನು ಸೂಚಿಸುವುದು. ಒಂದು ವೇಳೆ ತಾವು ಸಂದರ್ಶಿಸಿ ಬಂದ ಹೂವಿನಲ್ಲಿ ಮಧುವಿಲ್ಲದಿದ್ದರೆ ಆಗ ಅವು ಯಾವುದೇ ರೀತಿಯ ನೃತ್ಯವನ್ನೂ ಮಾಡುವುದಿಲ್ಲ. ಆದ್ದರಿಂದ ಈ ನೃತ್ಯವೇ ಜೇನ್ನೊಣಗಳ ಒಂದು ಸಾಂಕೇತಿಕ ಭಾಷೆ. ಜೇನ್ನೊಣಗಳಿಗೆ ದಿನ, ವಿವಿಧ ಗಂಟೆಗಳನ್ನು ತಿಳಿಯುವ ಮತ್ತು ಜ್ಞಾಪಕದಲ್ಲಿಟ್ಟುಕೊಳ್ಳುವ ಮತ್ತು ಕಾಲದ ಅವಧಿಯ ಜ್ಞಾನ ಸಹ ಉಂಟು. ಬೆಳಗ್ಗೆ 8 ರಿಂದ 10 ಗಂಟೆವರೆಗೆ ಒಂದು ನಿಶ್ಚಿತ ಜಾಗದಲ್ಲಿ ಜೇನ್ನೊಣಗಳಿಗೆ ಆಹಾರ ಕೊಡುತ್ತಿದ್ದು ಇದಕ್ಕಾಗಿ ಬಂದ ನೊಣಗಳನ್ನು ಕೆಂಪುಬಣ್ಣದಿಂದ ಗುರುತಿಸಿ ಪ್ರಯೋಗಗಳನ್ನು ನಡೆಸಲಾಗಿದೆ. ಈ ರೀತಿ ಗುರುತಿಸಿದ ಜೇನ್ನೊಣಗಳು ಪ್ರತಿನಿತ್ಯವೂ ಕ್ಲುಪ್ತವಾದ ಅವಧಿಯಲ್ಲಿ ಅದೇ ಸ್ಥಳಕ್ಕೆ ಆಹಾರಕ್ಕಾಗಿ ಬರುತ್ತಿದ್ದವು. ಒಂದು ವೇಳೆ ಅಲ್ಲಿ ಆಹಾರವಿರದಿದ್ದರೂ ಅದೇ ವೇಳೆಗೆ ಕೆಂಪು ಗುರುತಿನ ನೊಣಗಳು ಆ ಸ್ಥಳಕ್ಕೆ ಹಾರಿಬರುತ್ತಿದ್ದವು. ಈ ಪ್ರಯೋಗದಿಂದ ಜೇನ್ನೊಣಗಳಿಗೆ ಕಾಲ, ಸ್ಥಳ, ದೂರ ಮತ್ತು ದಿಕ್ಕುಗಳ ಜ್ಞಾನವಿದೆ ಎಂದು ತಿಳಿಯುತ್ತದೆ. ಆದರೆ ಕಾಲವನ್ನು ಯಾವ ರೀತಿಯಲ್ಲಿ ಅವು ತಿಳಿದುಕೊಳ್ಳುತ್ತವೆ ಎಂಬುದನ್ನು ಇನ್ನೂ ಖಚಿತವಾಗಿ ತಿಳಿಯಲಾಗಿಲ್ಲ.

ಮಧುಸಂಗ್ರಹ ಕಾರ್ಯದಲ್ಲಿ ನೂರಾರು ಗಜಗಳ ದೂರ ಹಾರಿಹೋಗಿಬರುವ ಜೇನ್ನೊಣಗಳು ದಾರಿತಪ್ಪದೆ ತಮ್ಮ ಗೂಡಿಗೆ ಬರುವುದು ಕೂಡ ಸೋಜಿಗದ ವಿಷಯವಾಗಿದೆ. ಸುಮಾರು 40 ವರ್ಷಗಳ ಹಿಂದ ಬಿಕೆ ಎಂಬಾತ ಜೇನುಗೂಡಿನಿಂದ ಮಾನವನ ಕಣ್ಣಿಗೆ ಕಾಣದ ಒಂದು ವಿಧವಾದ ಕಿರಣಗಳು ಎಲ್ಲ ದಿಕ್ಕಿಗೂ ಪ್ರಸರಿಸುತ್ತವೆಂದೂ ದೂರ ಹೋದ ಜೇನ್ನೊಣಗಳಿಗೆ ದಾರಿಯನ್ನು ತೋರುತ್ತವೆ ಎಂದೂ ಪ್ರತಿಪಾದಿಸಿ ಆ ಕಿರಣಗಳನ್ನು ರೇಡಿಯೋ ಅಲೆಗಳಿಗೆ ಹೋಲಿಸಿದನು. ಆದರೆ ಅದು ನಿಜವಲ್ಲ ಎಂದು ಈಚಿನ ಪ್ರಯೋಗಗಳಿಂದ ಗೊತ್ತಾಗಿದೆ.

ಈಚೆಗೆ ಉಲ್ಫ್ ಎಂಬ ವಿಜ್ಞಾನಿ ನಡೆಸಿದ ಪ್ರಯೋಗಗಳಿಂದ ಈ ವಿಷಯವಾಗಿ ಹೆಚ್ಚು ಮಾಹಿತಿ ದೊರೆತಿದೆ. ಜೇನುಗೂಡಿನ ರೂಪ, ಆಕೃತಿ ಮತ್ತು ಬಣ್ಣವನ್ನು ವಿವಿಧ ರೀತಿಯಲ್ಲಿ ಬದಲಾಯಿಸಿದರೂ ಸಹ ಮಧು ಸಂಗ್ರಹಕ್ಕಾಗಿ ಹೊರಗೆ ಹೋದ ನೊಣಗಳು ತಮ್ಮ ಗೂಡಿನ ವಾಸನೆ ಮತ್ತು ಸುತ್ತಮುತ್ತಲಿರುವ ಕೆಲವೊಂದು ಗುರುತುಗಳ ಸಹಾಯದಿಂದ ತಮ್ಮ ಗೂಡನ್ನು ಸೇರುತ್ತವೆ ಎಂದು ಈತನ ಪ್ರಯೋಗಗಳಿಂದ ತಿಳಿದುಬಂದಿದೆ. ತಮ್ಮ ಕುಡಿಮೀಸೆಯಲ್ಲಿರುವ ಸೂಕ್ಷ್ಮ ಜ್ಞಾನೇಂದ್ರಿಯಗಳ ಸಹಾಯದಿಂದ ಇವು ತಾವಿರುವ ಜಾಗವನ್ನು ಪತ್ತೆ ಹಚ್ಚುತ್ತವೆ. ಆತನು ನಡೆಸಿದ ಇನ್ನೊಂದು ಪ್ರಯೋಗದಿಂದ ಜೇನ್ನೊಣಗಳಿಗೆ ತಾವು ಯಾವ ದಿಕ್ಕಿನಿಂದ ಎಷ್ಟು ದೂರ ಹಾರಿಬಂದೆವು ಎಂಬುದು ತಿಳಿಯುತ್ತದೆ ಎಂದು ಗೊತ್ತಾಗಿದೆ. ಜೇನ್ನೊಣಗಳು ಸೂರ್ಯರಶ್ಮಿಯ ಸಹಾಯದಿಂದ ತಮ್ಮ ಮಾರ್ಗವನ್ನು ಕಂಡು ಹಿಡಿಯುತ್ತವೆ ಎಂಬ ಅಭಿಪ್ರಾಯವಿದೆಯಾದರೂ ಸೂರ್ಯ ಮೋಡಗಳಿಂದ ಮುಸುಕಿದ್ದರೂ ಜೇನ್ನೊಣಗಳು ತಮ್ಮ ಹಾದಿಯನ್ನು ಕಂಡುಹಿಡಿದುಕೊಳ್ಳಬಲ್ಲವು ಎಂದು ವ್ಯಕ್ತವಾಗಿದೆ.

ಜೇನುನೊಣಗಳು ತಮ್ಮ ಗೂಡಿನ ಹವಾಮಾನ ಯಾವಾಗಲೂ ಒಂದೇರೀತಿಯಲ್ಲಿರುವಂತೆ ಎಚ್ಚರಿಕೆ ವಹಿಸುತ್ತವೆ. ಬೇಸಿಗೆಯಲ್ಲಿ ಸೂರ್ಯನ ಝಳದಿಂದ ಗೂಡಿನ ಉಷ್ಣತೆ ಹೆಚ್ಚಿದ ಕೂಡಲೆ ಹತ್ತಾರು ಕೆಲಸಗಾರ ನೊಣಗಳು ಗೂಡಿನ ಬಾಗಿಲ ಬಳಿ ಸಾಲಾಗಿ ನಿಂತುಕೊಂಡು ಬಹಳ ವೇಗವಾಗಿ ತಮ್ಮ ರೆಕ್ಕೆಗಳನ್ನು ಬಡಿದು, ಗೂಡಿನ ಉಷ್ಣತೆ ಕಡಿಮೆಯಾಗುವಂತೆ ಮಾಡುತ್ತವೆ. ನಡುಬೇಸಿಗೆಯಲ್ಲಿ ನೂರಾರು ನೊಣಗಳು, ನೀರನ್ನು ಹೀರಿಕೊಂಡು ತಮ್ಮ ಗೂಡಿನ ಕೊಶಗಳಲ್ಲಿ ಶೇಖರಿಸಿಟ್ಟು, ನೀರು ಆವಿಯಾಗಿ, ಜೇನುಗೂಡಿನ ಹವೆ ತಂಪಾಗಿರುವಂತೆ ಮಾಡುವುದೂ ಉಂಟು.

ಚಳಿಗಾಲದಲ್ಲಿ ಚಳಿ ಹೆಚ್ಚಾದರೆ, ಸಾವಿರಾರು ನೊಣಗಳು ಒಂದರ ಮೇಲೆ ಒಂದು ಹತ್ತಿಕೊಂಡು ಗುಂಪುಕಟ್ಟಿಕೊಳ್ಳುವುವು. ಈ ರೀತಿ ಗುಂಪಿನಲ್ಲಿದ್ದರೆ ಮೈಯಲ್ಲಿಯ ಶಾಖ ಬೇಗನೆ ಕಡಿಮೆಯಾಗುವುದಿಲ್ಲ. ರಾಣಿನೊಣದ ಸುತ್ತಲೂ ನೂರಾರು ನೊಣಗಳು ಮುತ್ತಿಕೊಂಡು ಅದರ ಮೈಯನ್ನು ಯಾವಾಗಲೂ ಬೆಚ್ಚಗಿಟ್ಟಿರುತ್ತವೆ. ಚಳಿಗಾಲದಲ್ಲಿ ತಮ್ಮ ಮೈಯ ಶಾಖ ಹೆಚ್ಚಾಗುವುದಕ್ಕಾಗಿ ಜೇನುನೊಣಗಳು ಹೆಚ್ಚು ಮಧುವನ್ನು ಕುಡಿಯುತ್ತವೆ. ಆದ್ದರಿಂದ ಅವು ಚಳಿಗಾಲಕ್ಕೆ ಮೊದಲೇ ತಮಗೆ ಬೇಕಾದಷ್ಟು ಮಧುವನ್ನು ಸಂಗ್ರಹಿಸಿಡುತ್ತವೆ. ಎಂಥ ಕಠಿಣವಾದ ಚಳಿಗಾಲದಲ್ಲಿಯೂ ಜೇನುಹುಟ್ಟಿನ ಉಷ್ಣತೆ $21^0$–$32^0$ ಸೆ. ಇರುತ್ತದೆ.

ವಿಷದ ಮುಳ್ಳು ಮತ್ತು ವಿಷ : ಜೇನುನೊಣಗಳು ಕೋಪಬಂದಾಗ ತಮ್ಮ ವಿಷದ ಮುಳ್ಳಿನಿಂದ ಶತ್ರುಗಳನ್ನು ಚುಚ್ಚಿ, ಅವಕ್ಕೆ ಅತಿಶಯವಾದ ನೋವನ್ನುಂಟುಮಾಡುತ್ತವೆ. ಜೇನುನೊಣದ ಹೊಟ್ಟೆಯಲ್ಲಿ ಎರಡು ವಿಧವಾದ ಗ್ರಂಥಿಗಳಿದ್ದು ಒಂದು ಗ್ರಂಥಿ ಆಮ್ಲದಂಥ ಒಂದು ದ್ರವವನ್ನೂ ಮತ್ತೊಂದು ಗ್ರಂಥಿ ಕ್ಷಾರವಾದ ಒಂದು ರಸವನ್ನೂ ಉತ್ಪತ್ತಿಮಾಡುತ್ತವೆ. ಜೇನ್ನೊಣವು ಚುಚ್ಚಿದಾಗ ಈ ಎರಡೂ ಗ್ರಂಥಿಗಳ ದ್ರವ ಸೂಕ್ಷ್ಮವಾದ ನಳಿಕೆ ಮುಖಾಂತರ ಹರಿದು ಬಂದು ಅದು ಚುಚ್ಚಿದ ಶರೀರವನ್ನು ಸೇರುವುದು. ಆಗ ಅಲ್ಲಿ ನವೆ ಮತ್ತು ಉರಿ ಉಂಟಾಗಿ ಚುಚ್ಚಿದ ಜಾಗವನ್ನು ಕೆರೆದುಕೊಂಡಾಗ ಆ ಸ್ಥಳ ಬಾತುಕೊಳ್ಳುವುದು. ಇದರ ವಿಷ ಬಹಳ ತೀಕ್ಷ್ಣ. ಈಚೆಗೆ ಈ ವಿಷವನ್ನು ಸಂಧಿವಾತ ಚಿಕಿತ್ಸೆಗಾಗಿ ಉಪಯೋಗಿಸಲಾಗುತ್ತಿದೆ. ವಿಷದ ಮುಳ್ಳು ಜೇನ್ನೊಣಗಳ ಆಯುಧ. ಒಮ್ಮೆ ಚುಚ್ಚಿದ ಜೇನ್ನೊಣ ಮತ್ತೊಮ್ಮೆ ಚುಚ್ಚಲಾರದು. ಮುಳ್ಳು ಗರಗಸದಂಥ ಹಲ್ಲುಗಳಿಂದ ಕೂಡಿರುವುದರಿಂದ ಅದು ಶತ್ರುವಿನ ಮೈಯಲ್ಲೇ ಉಳಿದು, ನೊಣ ತಕ್ಷಣವೇ ಹಾರಲು ಪ್ರಯತ್ನಿಸಿದಾಗ, ಅದರ ಮುಳ್ಳು, ಕರುಳುಸಹಿತವಾಗಿ ಕಿತ್ತುಬಂದು ನೊಣ ಸಾಯುತ್ತದೆ.

ರಾಣಿ ನೊಣ ಮತ್ತು ವಂಶಾಭಿವೃದ್ಧಿ: ಪ್ರಾಣಿಗಳ ಜೀವನದಲ್ಲಿ ವಂಶಾಭಿವೃದ್ಧಿ ಒಂದು ಮುಖ್ಯ ಕಾರ್ಯ. ಜೇನ್ನೊಣಗಳ ಸಮಾಜದಲ್ಲಿ ರಾಣಿಯೇ ವಂಶಾಭಿವೃದ್ಧಿಗೆ ಬಹಳ ಮುಖ್ಯವಾದ್ದರಿಂದ ಅದಕ್ಕೆ ಎಲ್ಲಿಲ್ಲದ ಗೌರವ. ಇತರ ನೊಣಗಳು ರಾಣಿಯನ್ನು ಅತ್ಯಂತ ಎಚ್ಚರಿಕೆಯಿಂದ ಕಾಪಾಡುತ್ತವಲ್ಲದೆ ಅದರ ಸೇವೆಯನ್ನು ಬಹಳ ನಮ್ರತೆಯಿಂದ ಮಾಡುತ್ತವೆ. ಕೆಲವೊಮ್ಮೆ ಒಂದು ಗೂಡಿನ ರಾಣಿ ಇದ್ದಕ್ಕಿಂದಂತೆ ಕಾಣೆಯಾಗುವುದುಂಟು. ಆಗ ಹಲವಾರು ನೊಣಗಳು ಅದಕ್ಕಾಗಿ ಎಲ್ಲ ಕಡೆಯಲ್ಲೂ ಹುಡುಕಾಡುವುವು. ರಾಣಿ ಪತ್ತೆಯಾಗದಿದ್ದರೆ, ಬೇರೊಂದು ರಾಣಿಯನ್ನು ಬೆಳೆಸಲು ಆರಂಭಿಸುವುವು. ಅಂಥ ಸಮಯದಲ್ಲಿ ಹಿಂದಿನ ರಾಣಿ ಇಟ್ಟ ಮೊಟ್ಟೆಗಳಲ್ಲಿ ಕೆಲವನ್ನು ಆರಿಸಿ, ಅವುಗಳಿಂದ ಸಣ್ಣ ಮರಿಗಳು ಹೊರಬಂದ ಕೂಡಲೆ ಅವಕ್ಕೆ ರಾಜಪಾಕವನ್ನು ತಿನ್ನಿಸುವುವು. 6 ದಿನಗಳವರೆಗೆ ಹೀಗೆ ತಿನ್ನಿಸಿ, ಹುಳುಗಳನ್ನು ವಿಶೇಷ ಕೋಶಗಳಲ್ಲಿರಿಸಿ, ಬಾಯನ್ನು ಮುಚ್ಚಿ ಸುತ್ತಲೂ ಕಾವಲು ಕಾಯುತ್ತವೆ. ಹೊಸ ರಾಣಿಯರು ಕೋಶಾವಸ್ಥೆಯನ್ನು ಕಳೆದು ಹೊರಗೆ ಬರುವಾಗ ಗೂಡಿನಲ್ಲಿ ಎಲ್ಲಿಲ್ಲದ ಉತ್ಸಾಹ, ಕೋಲಾಹಲ ಮತ್ತು ಚಟುವಟಿಕೆ ಕಾಣಬರುತ್ತದೆ. ಹೀಗೆ ಬಂದ ರಾಣಿಯರಲ್ಲಿ ಯಾವುದಾದರೂ ಒಂದು ನೊಣ ಗೂಡಿನ ಯಜಮಾನಿಕೆಯನ್ನು ವಹಿಸಿಕೊಳ್ಳುವುದು. ಒಮ್ಮೊಮ್ಮೆ ಈ ರಾಣಿಯರಲ್ಲಿ ದ್ವಂದ್ವಯುದ್ಧ ನಡೆಯುವುದೂ ಉಂಟು.

ವಸಂತಋತುವಿನಲ್ಲಿ ಜೇನುಗೂಡಿನ ಕಾರ್ಯಚಟುವಟಿಕೆ ಬಹಳ ಹೆಚ್ಚಾಗಿ ಅದರಲ್ಲಿರುವ ನೊಣಗಳ ಸಂಖ್ಯೆ ಮಿತಿಮೀರಿ ಬೆಳೆಯುವುದು. ಮಧು ಸಂಗ್ರಹಣೆಯೂ ಹೆಚ್ಚುವುದು. ಗೂಡಿನ ಜನಸಂಖ್ಯೆ ಯಾವುದೋ ಒಂದು ನಿರ್ದಿಷ್ಟ ಮಿತಿಯನ್ನು ಮೀರಿದರೆ ಜೇನುಗೂಡಿನಲ್ಲಿರುವ ಎಲ್ಲ ಜೇನ್ನೊಣಗಳಿಗೂ ಸಾಕಷ್ಟು ಸ್ಥಳವಿಲ್ಲದೆ, ಅವು

ಬೇರೆ ಬೇರೆ ಗುಂಪುಗಳಾಗಿ ವಿಭಾಗವಾಗಿ ಬೇರೆ ಕಡೆ ವಲಸೆಹೋಗುವುವು. ಇದು ನಿಸರ್ಗದ ಒಂದು ಸ್ವಾಭಾವಿಕ ಧರ್ಮ. ಈ ಸಮಯದಲ್ಲಿ 3–4 ರಾಣಿನೊಣಗಳು ಗೂಡಿನಲ್ಲಿರುವುವು. ವಲಸೆಹೋಗುವುದಕ್ಕೆ ಮೊದಲು ಕೆಲವು ನೊಣಗಳು ಬೇಹುಗಾರರಂತೆ (ಸ್ಕೌಟ್ ನೊಣಗಳು) ಅತ್ತಿತ್ತ ತಿರುಗಾಡಿ, ಅನುಕೂಲವಾದ ಜಾಗವನ್ನು ಗೊತ್ತುಮಾಡಿಕೊಂಡು ತಮ್ಮ ಗೂಡಿಗೆ ವಾಪಸ್ಸು ಬರುತ್ತವೆ. ಕೆಲವು ದಿನಗಳಲ್ಲಿ ಹಿರಿಯ ರಾಣಿ ತನ್ನ ಜೊತೆಯಲ್ಲಿ ಸಾವಿರಾರು ಕೆಲಸಗಾರ ನೊಣಗಳನ್ನು ಕರೆದುಕೊಂಡು, ತನ್ನ ಹಳೆಯ ಗೂಡನ್ನು ಕಿರಿಯ ರಾಣಿಯರಿಗೆ ಒಪ್ಪಿಸಿ, ಬೇರೆ ಕಡೆ ವಲಸೆ ಹೋಗುವುದು.

ಹಳೆಯ ಗೂಡಿನಲ್ಲಿ ಒಂದು ಅಥವಾ ಎರಡು ಕಿರಿಯ ರಾಣಿಯರು ಮಾತ್ರವೇ ಹಿಂದುಳಿದು ಅವುಗಳಲ್ಲಿ ಬಲಿಷ್ಠವಾದ್ದು, ಗೂಡಿನ ಆಡಳಿತವನ್ನು ವಹಿಸಿಕೊಳ್ಳುವುದು. ಹೊಸ ರಾಣಿ ಅಧಿಕಾರವನ್ನು ವಹಿಸಿಕೊಂಡ ಕೂಡಲೆ ಗೂಡಿನ ಕೋಲಾಹಲವೆಲ್ಲ ಅಡಗಿ ಮೊದಲಿನಂತೆಯೇ ಎಲ್ಲ ಚಟುವಟಿಕೆಗಳೂ ಮುಂದುವರಿಯುತ್ತವೆ. ಹೀಗೆ ಅಧಿಕಾರ ವಹಿಸಿಕೊಂಡ ಹೊಸ ರಾಣಿ ಹಲವಾರು ಗಂಡುಗಳೊಡನೆ ಮದನಯಾತ್ರೆ ಹೊರಟು ಕೊನೆಗೆ ಒಂದು ಗಂಡಿನೊಡನೆ ಕೂಡಿಕೊಂಡು ವಾಪಸು ಗೂಡಿಗೆ ಬಂದು 3–4 ದಿನಗಳ ನಂತರ ತತ್ತಿಯನ್ನಿಡಲು ಪ್ರಾರಂಭಿಸುವುದು. ಸಾಧಾರಣವಾಗಿ ಒಂದು ಗೂಡಿಗೆ ಒಂದೇ ರಾಣಿ ಇರುವುದು. ಹೊಸ ರಾಣಿ ತತ್ತಿಯನ್ನಿಡಲು ಆರಂಭಿಸಿದ ಕೂಡಲೆ ಇತರ ರಾಣಿನೊಣಗಳನ್ನು ಕೆಲಸಗಾರ ನೊಣಗಳು ಚುಚ್ಚಿ ಸಾಯಿಸುತ್ತವೆ ಮತ್ತು ಇನ್ನೂ ಕೋಶಾವಸ್ಥೆಯಲ್ಲಿರುವ ರಾಣಿನೊಣಗಳನ್ನೂ ಚುಚ್ಚಿ ನಾಶಪಡಿಸುತ್ತವೆ. ರಾಣಿನೊಣಕ್ಕೂ ವಿಷದ ಮುಳ್ಳಿದ್ದು, ಅದನ್ನು ಅದು ಬೇರೆ ರಾಣಿ ನೊಣಗಳೊಡನೆ ಕಾದಾಡುವಾಗ ಮಾತ್ರ ಉಪಯೋಗಿಸುವುದು. ರಾಣಿಯ ವಿಷದ ಮುಳ್ಳಿಗೂ ಕೆಲಸಗಾರ ನೊಣಗಳ ಮುಳ್ಳಿಗೂ ರಚನೆ ಮತ್ತು ಆಕಾರದಲ್ಲಿ ವ್ಯತ್ಯಾಸವುಂಟು. ರಾಣಿ ಚುಚ್ಚಿದಾಗ ಅದರ ವಿಷದ ಮುಳ್ಳು ಮುರಿಯುವುದಿಲ್ಲ.

ಒಂದು ಗೂಡಿನ ನೊಣಗಳು ಬೇರೊಂದು ಗೂಡಿನ ರಾಣಿಯನ್ನು ಸುಲಭವಾಗಿ ಸ್ವೀಕರಿಸುವುದಿಲ್ಲ. ಪ್ರತಿಯೊಂದು ಗೂಡಿಗೂ ಒಂದು ವಿಶಿಷ್ಟ ವಾಸನೆ ಇರುತ್ತದೆ. ಈ ವಾಸನಾಬಲದಿಂದ ಅವು ತಮ್ಮ ಸಹೋದ್ಯೋಗಿಗಳನ್ನು ಗುರುತು ಹಿಡಿಯುತ್ತವೆ. ಬೇರೆ ಗೂಡಿನ ನೊಣಗಳು ಹತ್ತಿರ ಬಂದರೆ ಅವನ್ನು ಹೊರಕ್ಕೆ ಅಟ್ಟುತ್ತವೆ. ಆದರೆ ಪಾಲಾಗುವ ಸಮಯದಲ್ಲಿ ಮಾತ್ರ ಬೇರೆ ಬೇರೆ ಗೂಡಿನ ನೊಣಗಳು ಒಂದಾಗುವುವು. ***

**ಜೇನುವಿಷ:** ಕೀಟ ವರ್ಗದ ಹೈಮನಾಪ್ಟರ ಗಣದ ಸಾಮಾಜಿಕ ಕೀಟಗಳಾದ ಏಪಿಸ್ ಜಾತಿಯ ಜೇನು ಕೀಟಗಳ ಹಲವು ಉಪಯುಕ್ತ ಉಪ ಉತ್ಪನ್ನಗಳಲ್ಲಿ ಒಂದು. ಜೀವಂತ ಕೆಲಸಗಾರ ಜೇನ್ನೊಣಗಳ ಉದರದ ತುದಿಯಲ್ಲಿರುವ ವಿಷಪೂರಿತ ಚುಚ್ಚುವ ಅಂಗವೇ ಜೇನು ವಿಷಕ್ಕೆ ಮೂಲ. ಜೇನು ಕೀಟದ ವಿಷಪೂರಿತ ಅಂಗದಲ್ಲಿ ವಿಷಗ್ರಂಥಿ, ಆಮ್ಲೀಯ ಮತ್ತು ಕ್ಷಾರೀಯ ಗ್ರಂಥಿಗಳಿದ್ದು ಈ ಗ್ರಂಥಿಗಳು ಸ್ರವಿಸುವ ರಾಸಾಯನಿಕ ದ್ರವವು ವಿಷ ಗ್ರಂಥಿ ಚೀಲದಲ್ಲಿ ಶೇಖರಣೆಯಾಗುತ್ತದೆ. ಈ ವಿಷ ಗ್ರಂಥಿಯು ಮೊನಚಾದ ಮುಳ್ಳನ್ನು ಹೊಂದಿದ್ದು, ಈ ಮುಳ್ಳು ಸೂಕ್ಷ್ಮ ರಂಧ್ರವನ್ನು ಹೊಂದಿದೆ. ಜೀವಂತ ಕೆಲಸಗಾರ ಜೇನ್ನೊಣ (ಉದಾ: ಏಪಿಸ್ ಪ್ರಭೇದದ–ಸಾಕು ಜೇನ್ನೊಣ ಅಥವಾ ವನ್ಯ ಜೇನ್ನೊಣ) ತೊಂದರೆಗೆಳಗಾದಾಗ ಅಥವಾ ವೈರಿಗಳು ಇದರತ್ತ ದಾಳಿ ನಡೆಸಿದಾಗ ದೇಹ ರಕ್ಷಣೆಗೆ ಈ ಆಯುಧವನ್ನು ಬಳಸಿಕೊಳ್ಳುತ್ತದೆ.

ಜೇನು ದುಂಬಿಯ ವಿಷವು ಆಮ್ಲೀಯ ಗುಣ ಹೊಂದಿದ್ದು 1.131 ಸಾಪೇಕ್ಷ ಸಾಂದ್ರತೆ ಹೊಂದಿದೆ. ಬೆಕ್ (1935) ವಿಜ್ಞಾನಿ ಜೇನು ವಿಷದಲ್ಲಿರುವ ರಾಸಾಯನಿಕಗಳ ಬಗ್ಗೆ ವರದಿಸಿದ್ದಾನೆ. ಹಿಸ್ಟಮೈನ್, ಡೊಪಮೈನ್, ಮೆಲಟನೀನ್, ಆಫ್‌ಮೈನ್, ಪೆಪ್ಟೈಡ್, ಮಿನಿಮೈನ್ ಮತ್ತು ಕಿಣ್ವಗಳಾದ ಪೊಸ್ಪುಲೈಪೇಸ್ 'ಎ' ಮತ್ತು ಹೈಯಾಲುರೋನಿಡೇಸ್ ಇದರಲ್ಲಿನ ಪ್ರಮುಖ ರಾಸಾಯನಿಕಗಳು. ಈಲಿಯಟೆ ಎಂಬ ವಿಜ್ಞಾನಿ ಏಪಿಸ್ ಮೆಲ್ಲಿಫೆರಾ ಪ್ರಭೇದದ ಜೇನ್ನೊಣದಿಂದ 5.5 ಮೈಕ್ರೋಗ್ರಾಂ ವಿಷ ಪಡೆಯಬಹುದೆಂದು ತಿಳಿಸಿದ್ದಾನೆ. ಈ ವಿಷದಲ್ಲಿ 1425 ನ್ಯಾನೋಗ್ರಾಂ ಹಿಸ್ಟಮೈನ್ ಮತ್ತು 388 ನ್ಯಾನೊಗ್ರಾಂ ಡೋಪಮೈನ್ ರಾಸಾಯನಿಕಗಳಿರುವ ಬಗ್ಗೆ ಸಂಶೋಧಕರು ವರದಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಚಾಲಿತ ಉಪಕರಣ ಬಳಸಿ ಜೇನ್ನೊಣಗಳನ್ನು ಜೀವಸಹಿತ ಹಿಡಿದು ವಿಷವನ್ನು ತೆಗೆಯಬಹುದು. ಜೀವಂತ ಜೇನ್ನೊಣಗಳನ್ನು ವಿದ್ಯುತ್ ಚಾಲಿತ ಯಂತ್ರದಲ್ಲಿಟ್ಟು ಚುಚ್ಚುವ ಸೂಚಕ (ಸ್ಟಿಂಗಿಂಗ್ ರೆಸ್ಪಾನ್ಸ್) ದಿಂದ ಸೂಕ್ಷ್ಮ ವಿದ್ಯುತ್ ತರಂಗಗಳನ್ನು ನೀಡಿದಾಗ ಜೇನ್ನೊಣಗಳು ಇದಕ್ಕೆ ಸ್ಪಂದಿಸಿ ಉದರದ ತುದಿಯಲ್ಲಿನ ವಿಷ ಗ್ರಂಥಿಯ ಮುಳ್ಳಿನಿಂದ ವಿಷ ಸ್ರವಿಸುವ ಬಗ್ಗೆ ವರದಿಸಲಾಗಿದೆ. ಈ ವಿಷವನ್ನು ಗಾಜಿನ ತಟ್ಟೆಯ ಮೇಲೆ ಶೇಖರಿಸಿ, ಗಟ್ಟಿಗೊಳಿಸಿ ಮಾರಾಟ ಮಾಡಬಹುದಾಗಿದೆ. ಈ ರೀತಿ ಹೆಚ್ಚು ಹಿಂಸಿಸದೆ, ಜೀವಂತ ಜೇನ್ನೊಣಗಳಿಂದ ಪಡೆಯುವ ವಿಷ ಅನೇಕ ರೀತಿಯಲ್ಲಿ ಬಳಕೆಯಾಗುತ್ತಲಿದೆ. ಜೇನುವಿಷವನ್ನು ಔಷಧಿ ಕ್ಷೇತ್ರದಲ್ಲಿ ಬಳಸಲಾಗುತ್ತದೆ. ಮಾನವನಿಗೆ ಬರುವ ನಾನಾ ಕಾಯಿಲೆಗಳನ್ನು ಗುಣಪಡಿಸಲು ಜೇನುವಿಷ ಸಂಜೀವಿನಿಯಾಗಿದೆ. (ಬಿ.ಎಸ್.)

**ಜೇನು ಸಾಕಣೆ:** ಲಾಭದಾಯಕವಾದ ಜೇನುತುಪ್ಪ ಮತ್ತು ಮೇಣವನ್ನು ಪಡೆಯಲು ಕೆಲವು ಜಾತಿಯ ಜೇನುನೊಣಗಳನ್ನು ಸಾಕುವ ಕೃಷಿ. ಬಹಳ ಹಿಂದಿನಿಂದಲೂ ಜೇನುಸಾಕಣೆ ಒಂದಲ್ಲ ಒಂದು ಒರಟು ರೀತಿಯಲ್ಲಿ ನಡೆಯುತ್ತಬಂದಿದೆ. ಆದರೆ 19ನೆಯ ಶತಮಾನದ ಮಧ್ಯಭಾಗದಿಂದೀಚೆಗೆ ಇದರಲ್ಲಿ ಸಾಕಷ್ಟು ಸುಧಾರಣೆ ನಡೆಯಿತು. 1851ರಲ್ಲಿ ಎಲ್. ಎಲ್. ಲಾಂಗ್‌ಸ್ಟ್ರಾಕ್ ಎಂಬಾತ ಕಂಡುಹಿಡಿದ ಚಲಿತ ಚೌಕಟ್ಟಿನ ಸುಧಾರಿತ ಜೇನುಪೆಟ್ಟಿಗೆ, 1865ರಲ್ಲಿ ಕಂಡುಹಿಡಿದ ಜೇನುತುಪ್ಪ ತೆಗೆಯುವ ಯಂತ್ರ (ಹನಿ ಎಕ್ಸ್‌ಟ್ರಾಕ್ಟರ್) ಮತ್ತು ಕ್ವಿನ್‌ಬ್ ಎಂಬಾತ 1870ರಲ್ಲಿ ಕಂಡುಹಿಡಿದ ಹೊಗೆಬುಡ್ಡಿಗಳು (ಸ್ಮೋಕರ್) ಜೇನು ಸಾಕಣೆಯ ಸುಧಾರಣೆಗೆ ಮೂಲವಾದುವು. ಭಾರತದಲ್ಲಿ ಈ ತರಹದ ಸುಧಾರಿತ ಜೇನುಪೆಟ್ಟಿಗೆಯಲ್ಲಿ ಜೇನು ಸಾಕುವುದು 1882ರಲ್ಲಿ ಬಂಗಾಳದಲ್ಲಿ ಮೊದಲ ಬಾರಿಗೆ ಪ್ರಾರಂಭವಾಯಿತು. ಅನಂತರ ಪಂಜಾಬಿನಲ್ಲಿ 1883ರಲ್ಲಿ ಪ್ರಾರಂಭವಾಯಿತು. ಆಮೇಲೆ ಭಾರತದ ಉಳಿದ ರಾಜ್ಯಗಳಿಗೆ ಈ ಉದ್ಯಮ ಹರಡಿತು.

ಜೇನುನೊಣದ ನಾಲ್ಕು ಬಗೆಗಳಲ್ಲಿ ಮೂರು ಭಾರತದಲ್ಲಿವೆ. ಇವು ಹೆಜ್ಜೇನು (ಏಪಿಸ್ ಡಾರ್ಸೇಟ), ಕೋಲುಜೇನು (ಏಪಿಸ್ ಫ್ಲೋರಿಯ) ಮತ್ತು ತುಡುಬೆ ಜೇನು (ಏಪಿಸ್ ಇಂಡಿಕ ಅಥವಾ ಸಿರಾನ). ಈ ಮೂರಲ್ಲದೆ ಅಷ್ಟು ಮುಖ್ಯವಲ್ಲದ ಮೆಲಿಪೋನ ಮತ್ತು ಟ್ರೈಗೋನ ಬಗೆಗೆ ಸೇರಿದ ಡಾಮರ್ ಜೇನುಗಳು ಕೂಡ ಭಾರತದಲ್ಲಿವೆ. ಇವು ಮರದ ಪೊಟರೆ ಅಥವಾ ಗೋಡೆಯ ಬಿರುಕುಗಳಲ್ಲಿ ಗೂಡುಕಟ್ಟುತ್ತವೆ. ಇವು ಕೂಡಿಡುವ ಜೇನುತುಪ್ಪದ ಮೊತ್ತ ಬಲು ಕಡಿಮೆ. ಯೂರೋಪ್ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿ ಸಾಕುವ ಜೇನು ಏಪಿಸ್ ಮೆಲಿಫೆರ ಎಂಬುದು.

ಹೆಜ್ಜೇನು : ಇದು ಭಾರತದಲ್ಲೆಲ್ಲ ಕಾಣಬರುವ ಪ್ರಭೇದ. ಗಾತ್ರದಲ್ಲಿ ಬೇರೆ ಜೇನುನೊಣಗಳಿಗಿಂತ ದೊಡ್ಡದು. ಎತ್ತರವಾದ ಮರದ ಕೊಂಬೆ, ಬಂಡೆ ಮತ್ತು ಎತ್ತರವಾದ ಕಟ್ಟಡಗಳ ತೊಲೆಗಳಿಂದ ನೇತಾಡುವ ಒಂದೇ ಒಂದು ದೊಡ್ಡ ಎರಿಯನ್ನು ಕಟ್ಟುತ್ತದೆ. ಎರಿ ಸುಮಾರು 2.5 ಮೀ ಅಗಲ ಮತ್ತು 1.0 ಮೀ ಎತ್ತರವಿದೆ. ಬೇರೆ ಬಗೆಯ ಜೇನುನೊಣಗಳಿಗಿಂತ ಜೇನು ಕೂಡಿಡುವುದು ಹೆಚ್ಚು. ಒಂದು ಜೇನುಗೂಡಿನಿಂದ ವರ್ಷಕ್ಕೆ ಸುಮಾರು 40 ಕಿಗ್ರಾಂ ಗಳವರೆಗೂ ಜೇನುತುಪ್ಪವನ್ನು ಪಡೆಯಬಹುದು. ನೊಣಗಳು ಮುಂಗೋಪದ ಸ್ವಭಾವದುವು. ಸಾಕಲು ಯೋಗ್ಯವಲ್ಲ. ಸಾಮಾನ್ಯವಾಗಿ ಹೊಗೆ ಮತ್ತು ಬೆಂಕಿಯನ್ನು ಹಾಕಿ ಎರಿಗಳನ್ನು ಕಿತ್ತು, ಹಿಂಡಿ ಜೇನುತುಪ್ಪ ಮತ್ತು ಮೇಣವನ್ನು ತೆಗೆಯುತ್ತಾರೆ.

ಕೋಲುಜೇನು : ಈ ಜೇನು ಗಾತ್ರದಲ್ಲಿ ಸಣ್ಣದು. ಮರಗಿಡಗಳ ಪೊದರುಗಳಲ್ಲಿ ರೆಂಬೆಗಳಿಂದ ನೇತಾಡುವ ಒಂದೇ ಒಂದು ಎರಿಯನ್ನು ಕಟ್ಟುತ್ತದೆ. ಎರಿ ಸುಮಾರು 8–10 ಸೆಂಮೀ ಅಗಲವೂ 12–15 ಸೆಂಮೀ ಎತ್ತರವೂ ಇದೆ. ಜೇನು ತುಪ್ಪ ಸಂಗ್ರಹಣೆ ಎರಿಯ ಮೇಲ್ಭಾಗದಲ್ಲಿಯೂ ಮರಿಗಳ ಸಾಕಣೆ ತಳಭಾಗದಲ್ಲಿಯೂ ಆಗುತ್ತದೆ. ಒಂದು ಎರಿಯಲ್ಲಿ ಸುಮಾರು 0.5 ಕಿಗ್ರಾಂ ಜೇನುತುಪ್ಪವಿರಬಹುದು. ಈ ಜೇನು ಸ್ವಭಾವತಹ ಹೆಚ್ಚು ವಲಸೆ ಹೋಗುವ ಜಾತಿ. ಹೆಜ್ಜೇನಿನ ಹಾಗೆ ಇದೂ ಕೂಡ ಸಾಕಲು ಯೋಗ್ಯವಿಲ್ಲ.

ತುಡುವೆ ಜೇನು : ಈ ಜೇನು ಭಾರತದ ಎಲ್ಲ ಕಡೆಯಲ್ಲಿ ಕಾಣದೊರೆಯುತ್ತದೆ. ಗಾತ್ರದಲ್ಲಿ ಹೆಜ್ಜೇನಿಗಿಂತ ಸ್ವಲ್ಪ ಸಣ್ಣ. ಮರದ ಪೊಟರೆ, ನೆಲದ ಬಿರುಕು, ಹಳೆಹುತ್ತ ಮುಂತಾದ ಮರೆಯಾದ ಸ್ಥಳಗಳಲ್ಲಿ ಸಮಾನಾಂತರದಲ್ಲಿ ಕಟ್ಟಿರುವ ಹಲವು ಎರಿಗಳುಳ್ಳ ಗೂಡಿನಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ಗೂಡಿನ ಕೆಲವು ಎರಿಗಳಲ್ಲಿ ಜೇನುತುಪ್ಪ ಸಂಗ್ರಹಿಸುತ್ತವೆ. ಇತರ ಎರಿಗಳಲ್ಲಿ ಮೊಟ್ಟೆ, ಮರಿಗಳನ್ನು ಸಾಕುತ್ತವೆ. ಭಾರತದಲ್ಲೆಲ್ಲ ಸಾಕುವುದು ಇದೇ ವಂಶದ ಜೇನನ್ನು. ತುಡುಬೆ ಜೇನಿನಲ್ಲಿ ಕೆಲವು ಜಾತಿಗಳಿವೆ. ಇವುಗಳಲ್ಲಿ ಗುಡ್ಡಗಾಡಿನ ಜಾತಿ ಮತ್ತು ಮೈದಾನದ ಜಾತಿಗಳು ಮುಖ್ಯ.

ಭಾರತದಲ್ಲಿ ಸುಧಾರಿತ ಜೇನುಸಾಕಣೆಯ ಜೊತೆಗೆ ಹಿಂದಿನಿಂದಲೂ ರೂಢಿಯಲ್ಲಿರುವ ಹಲವು ರೀತಿಯ ಒರಟು ಪದ್ಧತಿಗಳೂ ಉಂಟು. ಮಣ್ಣಿನ ಮಡಕೆ, ಟೊಳ್ಳುಮಾಡಿದ ತೆಂಗಿನ ಅಥವಾ ಈಚಲು ಮರದ ಕಾಂಡದ ತುಂಡು, ಖಾಲಿ ಪೆಟ್ಟಿಗೆ ಮುಂತಾದವನ್ನು ಮನೆಯ ಸೂರಿನ ಕೆಳಗೆ ಅಥವಾ ಮನೆಯ ಸುತ್ತಮುತ್ತ ಹಲಗೆಯ ಮೇಲೆ ಇಟ್ಟು ಜೇನು ಸಾಕಣೆಗೆ ಉಪಯೋಗಿಸುವುದು ವಾಡಿಕೆ. ಈ ಪದ್ಧತಿಯಲ್ಲಿ ಜೇನುಹುಳುಗಳು ಹೇಗೆ ಕೆಲಸ ಮಾಡುತ್ತಿವೆ, ಯಾವುದಾದರೂ ಶತ್ರುಗಳು ಗೂಡಿನೊಳಗೆ ಸೇರಿವೆಯೇ ಮುಂತಾದ ವಿಷಯಗಳನ್ನು ತಿಳಿದುಕೊಳ್ಳುವ ಅವಕಾಶ ಇಲ್ಲ. ಜೇನುತುಪ್ಪ ಬೇಕಾದಾಗ ಗೂಡಿನಿಂದ ಬೇಕಾದಷ್ಟು ತುಪ್ಪ ತುಂಬಿದ ಎರಿಗಳನ್ನು ಕಿತ್ತು, ಅವುಗಳನ್ನು ಹಿಂಡಿ

ಜೇನುತುಪ್ಪ ತೆಗೆದುಕೊಳ್ಳುವರು. ಈ ರೀತಿ ತೆಗೆದ ಜೇನುತುಪ್ಪ ಬಹಳ ಅಶುದ್ಧವಾಗಿರುತ್ತದೆ. ಏಕೆಂದರೆ, ಇದರಲ್ಲಿ ಮೊಟ್ಟೆ, ಮರಿಗಳ ರಸ ಮತ್ತು ಮೇಣದ ಚೂರುಗಳು ಸೇರಿರುತ್ತವೆ.

ಸುಧಾರಿತ ಪದ್ಧತಿಯೆಂದರೆ ನಿಗದಿಯಾದ ಮರದ ಪೆಟ್ಟಿಗೆ ಗೂಡುಗಳಲ್ಲಿ ಜೇನು ಸಾಕುವುದು. ಭಾರತದ ಅನೇಕ ಕಡೆ ವಿವಿಧ ಅಳತೆಯುಳ್ಳ ಪೆಟ್ಟಿಗೆಗಳನ್ನು ಉಪಯೋಗಿಸುತ್ತಾರೆ. ದಕ್ಷಿಣ ಭಾರತದಲ್ಲಿ ಬಹುಮಟ್ಟಿಗೆ ನ್ಯೂಟನ್ ಪೆಟ್ಟಿಗೆಗಳನ್ನು ಸ್ವಲ್ಪ ಮಾರ್ಪಡಿಸಿ ಬಳಸುವರು. ಸುಧಾರಿತ ಜೇನು ಸಾಕಣೆಗೆ ಬೇಕಾಗುವ ಇತರ ಸಾಮಗ್ರಿಗಳು ಹೀಗಿವೆ; ಜೇನುತುಪ್ಪ ತೆಗೆಯುವ ಸಾಧನ: ಇದನ್ನು ಉಪಯೋಗಿಸಿ ತುಪ್ಪ ತುಂಬಿದ ಎರಿಗಳಿಂದ ಶುದ್ಧವಾದ ತುಪ್ಪವನ್ನು ಎರಿಗಳನ್ನು ಹಾಳುಮಾಡದೆ ತೆಗೆಯಬಹುದು. ಜೇನುನೊಣಗಳನ್ನು ಸೌಮ್ಯ ಸ್ಥಿತಿಗೆ ತರುವುದಕ್ಕೆ ಹೊಗೆಬುಡ್ಡಳ: ಇದರಿಂದ ಒಂದೆರಡು ಸಾರಿ ಹೊಗೆ ಬಿಡಬೇಕು. ಮೇಣದ ಅಚ್ಚುಹಾಳೆ (ವ್ಯಾಕ್ಸ್ ಫೌಂಡೇಷನ್) : ಇದನ್ನು ಎರಿ ಚೌಕಟ್ಟಿಗೆ ಒದಗಿಸುವುದರಿಂದ ಕೆಲಸಗಾರ ನೊಣಗಳು ಕಡಿಮೆ ಶ್ರಮದಲ್ಲಿ ಎರಿಯನ್ನು ಕಟ್ಟಬಹುದು. ಹೊಸದಾಗಿ ಕೂಡಿಸಿರುವ ಜೇನು ಸಮುದಾಯದಿಂದ ನೊಣಗಳು ಬಿಟ್ಟುಹೋಗದಂತೆ ತಡೆಯಲು ಪ್ರವೇಶ ತಡೆಯನ್ನು ಉಪಯೋಗಿಸಬಹುದು. ಈ ತಡೆಯಿಂದ ರಾಣಿ ನೊಣ ಹೊರಗೆ ಹೋಗಲಾಗುವುದಿಲ್ಲ. ಮುಖಪರದೆ ಮತ್ತು ಕೈಚೀಲಗಳನ್ನು ಜೇನುಗಳು ಚುಚ್ಚದಂತೆ ಮಾಡಲು ಉಪಯೋಗಿಸಬಹುದು.

ಜೇನುಸಾಕಣೆ ಪ್ರಾರಂಭ ಮಾಡಬೇಕಾದರೆ ಕೆಲವು ವಿಧಾನಗಳಿವೆ. ಮರದ ಪೊಟರೆಯಲ್ಲಾಗಲಿ, ನೆಲದ ಬಿರುಕುಗಳಲ್ಲಾಗಲಿ ಸ್ವಾಭಾವಿಕವಾಗಿ ಸಿಗುವ ಗೂಡಿನಿಂದ ಜೇನು ಸಮುದಾಯವನ್ನು ಸುಧಾರಿತ ಮರದ ಪೆಟ್ಟಿಗೆಗೆ ಹಾಕಿ ಸಾಕಬಹುದು. ಈ ರೀತಿ ಮರದ ಪೆಟ್ಟಿಗೆಗೆ ಜೇನುನೊಣಗಳನ್ನು ಸೇರಿಸುವಾಗ ರಾಣಿನೊಣ ಪೆಟ್ಟಿಗೆಯೊಳಕ್ಕೆ ಬಂದಿದೆ ಎಂಬುದನ್ನು ಖಚಿತ ಮಾಡಿಕೊಳ್ಳಬೇಕು. ಹಳೆಯ ಗೂಡಿನಲ್ಲಿದ್ದ ಮೊಟ್ಟೆ, ಮರಿ ಮತ್ತು ಜೇನುತುಪ್ಪವಿರುವ ಕೆಲವು ಎರಿಗಳನ್ನು ಪೆಟ್ಟಿಗೆ ಗೂಡಿನಲ್ಲಿರುವ ಖಾಲಿಚೌಕಟ್ಟುಗಳಿಗೆ ಜೋಡಿಸಿ ಕಟ್ಟಿ ಅನಂತರ ಜೇನುನೊಣಗಳನ್ನು ಪೆಟ್ಟಿಗೆಯೊಳಗೆ ಸೇರಿಸಬೇಕು. ಈ ರೀತಿ ಜೇನು ನೊಣಗಳನ್ನು ಸೇರಿಸಿದ ಮೇಲೆ ಪೆಟ್ಟಿಗೆಯನ್ನು ಎಲ್ಲಿಗೆ ಬೇಕೋ ಅಲ್ಲಿಗೆ ಸಾಗಿಸಬಹುದು.

ಜೇನುಸಾಕಣೆ ಪ್ರಾರಂಭ ಮಾಡುವುದಕ್ಕೆ ಎರಡನೆ ವಿಧಾನವೆಂದರೆ ವಲಸೆ ಹೊರಟ ಜೇನುನೊಣಗಳ ಹಿಂಡನ್ನು ಮಡಕೆ ಅಥವಾ ತೆಂಗಿನ ಕಾಂಡದಿಂದ ಮಾಡಿದ ಗೂಡನ್ನು ಅಲ್ಲಲ್ಲೆ ಇಟ್ಟು ಆಕರ್ಷಿಸುವುದು. ಈ ರೀತಿ ಆಕರ್ಷಿತಗೊಂಡ ಸಮುದಾಯವನ್ನು ಸುಮಾರು ಒಂದು ತಿಂಗಳವರೆಗೆ ಅದರಲ್ಲಿಯೇ ಬಿಟ್ಟಿದ್ದು ಅನಂತರ ಸುಧಾರಿತ ಪೆಟ್ಟಿಗೆಗೆ ಹಾಕಬಹುದು. ಆಗತಾನೆ ವಲಸೆ ಹೊರಟ ಜೇನ್ನೊಣಗಳ ಹಿಂಡು ಮರದ ಪೊಟರೆ ಮುಂತಾದ ಮರೆಯಾದ ಸ್ಥಳದಲ್ಲಿ ಗೂಡು ಕಟ್ಟುವುದಕ್ಕೆ ಮುಂಚೆ ಯಾವುದಾದರೂ ಮರದ ಕೊಂಬೆಯ ಮೇಲೆ ಸ್ವಲ್ಪ ಹೊತ್ತು ತಂಗುವುದು ವಾಡಿಕೆ. ಇಂಥ ಹಿಂಡನ್ನು ಹಿಡಿದು ಪೆಟ್ಟಿಗೆಯಲ್ಲಿ ಹಾಕಿ ಸಾಕಬಹುದು.

ಯಾವ ರೀತಿಯಿಂದ ಜೇನುನೊಣಗಳನ್ನು ಪೆಟ್ಟಿಗೆಗೆ ಸೇರಿಸಿ ಹಾಕಲು ಪ್ರಾರಂಭವಾಡಿದರೂ ಮೊದಲ ಎರಡು ಮೂರು ದಿನಗಳು ಇವನ್ನು ಗಾಬರಿಗೊಳಿಸಬಾರದು. ರಾಣಿನೊಣ ಹೊರಕ್ಕೆ ಹೋಗದ ಹಾಗೆ ನೋಡಿಕೊಳ್ಳಬೇಕು. ಅನಂತರ ವಾರಕ್ಕೊಂದು ಸಾರಿ ಪೆಟ್ಟಿಗೆ ತೆರೆದು ತಳದ ಮಣೆಯನ್ನು (ಬಾಟಮ್ ಬೋರ್ಡ್) ಶುಚಿ ಮಾಡಬೇಕು. ನೊಣಗಳು ಬಹಳ ಚಟುವಟಿಕೆಯಿಂದ ಕೆಲಸ ಮಾಡುವ ವೇಳೆ ಪೆಟ್ಟಿಗೆಯನ್ನು ತೆರೆದು ಪರೀಕ್ಷಿಸಬೇಕು. ನೊಣಗಳ ಸಂಖ್ಯೆ ಗೂಡಿನಲ್ಲಿ ಬಹಳವಾದಾಗ ಹಾಗೂ ರಾಣಿನೊಣಕ್ಕೆ ಮೊಟ್ಟೆಗಳನ್ನಿಡಲು ಸಾಕಷ್ಟು ಖಾಲಿ ಕೋಣೆಗಳಿಲ್ಲದೇ ಹೋದಾಗ ಇವು ವಲಸೆ ಹೋಗಲು ತಯಾರು ಮಾಡಿಕೊಳ್ಳುತ್ತವೆ. ಆಗ ಗೂಡಿನಲ್ಲಿ ಗಂಡುಗಳು ಮತ್ತು ಹೊಸರಾಣಿ ಕೋಣೆಗಳು ಕಾಣಿಸಿಕೊಳ್ಳುತ್ತವೆ. ಈ ರೀತಿ ವಲಸೆ ಹೋಗುವುದನ್ನು ಹಲವು ರೀತಿಯಲ್ಲಿ ತಪ್ಪಿಸಬಹುದು. ವಿಶೇಷವಾಗಿ ಹೂ ಬಿಡುವ ಕಾಲದಲ್ಲಿ ಮತ್ತು ಬೇಸಗೆಯಲ್ಲಿ ದುಂಬಿಗಳು ಜೇನುತುಪ್ಪ ಕೂಡಿಡುವ ಕಾಲ. ಈ ಕಾಲಕ್ಕೆ ಸರಿಯಾದ ಸಿದ್ದತೆ ಮಾಡಿಕೊಳ್ಳಬೇಕು. ಪೆಟ್ಟಿಗೆಯ ಕೆಳಭಾಗದ ಎರಿಗಳು ತುಂಬಿದಾಗ ಮೇಲ್ಭಾಗದ ಚೌಕಟ್ಟನ್ನು (ಸೂಪರ್) ಜೋಡಿಸಬೇಕು. ನೊಣಗಳು ಇದರಲ್ಲಿರುವ ಎರಿಗಳಲ್ಲಿ ತುಪ್ಪವನ್ನು ಸೇರಿಸುತ್ತವೆ. ಎರಿಗಳಲ್ಲಿ ತುಪ್ಪ ತುಂಬಿದ ಮೇಲೆ ತುಪ್ಪ ತೆಗೆಯುವ ಸಾಧನದ ಮೂಲಕ ಹೊರತೆಗೆಯಬಹುದು.

ಜೇನುನೊಣದ ಶತ್ರುಗಳು : ಜೇನುಹುಳುಗಳ ಬಹಳ ಮುಖ್ಯವಾದ ಶತ್ರುವೆಂದರೆ ಮೇಣದ ಪತಂಗ. ಇದರ ಮರಿಹುಳು ಮೇಣದ ಎರಿಗಳನ್ನು ಕೊರೆಯುವುದರಿಂದ ಸಮುದಾಯ ಕ್ರಮೇಣ ನಶಿಸಿ ಕೊನೆಗೆ ಗೂಡನ್ನು ಬಿಟ್ಟು ಹೋಗುತ್ತದೆ. ಚೆನ್ನಾಗಿ ಕೆಲಸ ಮಾಡುತ್ತಿರುವ ಮತ್ತು ಹೆಚ್ಚು ನೊಣಗಳಿರುವ ಗೂಡಿನೊಳಗೆ ಪತಂಗ ಹೊಕ್ಕು ಮೊಟ್ಟೆಗಳನ್ನಿಡಲು ಅವಕಾಶವಿರುವುದಿಲ್ಲ. ಕೆಲವು ವೇಳೆ ಹಳದಿಪಟ್ಟಿಯ ಕಣಜವೊಂದು ಗೂಡಿನ ಬಳಿ ಹಾರುವ ಜೇನುನೊಣಗಳನ್ನು ಹಿಡಿದು ತಿನ್ನುತ್ತದೆ.

ಜೇನುಮೇಣ : ಜೇನು ಸಾಕಣೆ ಉದ್ಯಮದ ಒಂದು ಉಪೋತ್ಪನ್ನ. ಗ್ರೀಕ್ ಮತ್ತು ರೋಮನರಿಗೆ ಇದರ ಉಪಯೋಗ ಚೆನ್ನಾಗಿ ಗೊತ್ತಿತ್ತು. ಜೇನುನೊಣ ಎರಿಗಳನ್ನು ರಚಿಸುವಾಗ ಬಳಸುವ ವಸ್ತು ಇದೇ.

ಜೇನುಮೇಣ ಹಳೆಯ ಎರಿಗಳಿಂದಲೂ ಮತ್ತು ಜೇನುತುಪ್ಪ ತೆಗೆಯುವ ವೇಳೆಯಲ್ಲಿ ತೆಗೆದುಹಾಕುವ ಗೂಡುಗಳ ಮುಚ್ಚಳ ಮತ್ತು ಚೂರು ಎರಿಗಳಿಂದಲೂ ದೊರೆಯುತ್ತದೆ. ಆಧುನಿಕ ರೀತಿಯ ಜೇನುಸಾಕಣೆಯಲ್ಲಿ ಜೇನುಮೇಣದ ಉತ್ಪತ್ತಿ ಬಹಳ ಕಡಿಮೆ. ಏಕೆಂದರೆ ತುಪ್ಪ ತೆಗೆದ ಎರಿಗಳನ್ನು ತೆಗೆದುಹಾಕದೆ ಮತ್ತೆ ಮತ್ತೆ ಉಪಯೋಗಿಸುವುದರಿಂದ ಮೇಣದ ಉತ್ಪತ್ತಿಗೆ ಅವಕಾಶ ಕಡಿಮೆ. ಭಾರತದಲ್ಲಿ ಹೆಜ್ಜೇನಿನ ಎರಿಗಳನ್ನು ಹಿಂಡಿ ತುಪ್ಪವನ್ನು ತೆಗೆಯುವುದರಿಂದ ಈ ಮೂಲಕ ಮೇಣದ ಉತ್ಪತ್ತಿ ಹೆಚ್ಚು.

ಜೇನುಮೇಣ ಸ್ವಲ್ಪ ಹಳದಿಮಿಶ್ರಿತ ಬೂದಿಬಣ್ಣದ ಒಂದು ಘನವಸ್ತು. ಸಾಮಾನ್ಯ ಉಷ್ಣತೆಯಲ್ಲಿ ಸುಲಭವಾಗಿ ಮುರಿಯಬಲ್ಲ ಇದು ಕೈಯಲ್ಲಿ ಹಿಡಿದುಕೊಂಡರೆ ಶಾಖಕ್ಕೆ ಮೃದುವಾಗಬಲ್ಲದು. ನೀರಿನಲ್ಲಿ ಕರಗುವುದಿಲ್ಲ. ಈಥರ್ ಮತ್ತು ಕ್ಲೋರೊಫಾರ್ಮ್‌ಗಳಲ್ಲಿ ಸುಲಭವಾಗಿ ಕರಗುತ್ತದೆ. ಇದು ಸುಮಾರು $63^{0} - 65^{0}$ಸೆ. ಉಷ್ಣತೆಯಲ್ಲಿ ಕರಗಿ ನೀರಾಗುತ್ತದೆ. ಜೇನುಮೇಣದಲ್ಲಿ ಸಿರೊಟಿಕ್ ಆಮ್ಲ ಮತ್ತು ಮೈರಿಸಿಲ್ ಮುಂತಾದ ರಾಸಾಯನಿಕ ವಸ್ತುಗಳಿವೆ.

ಪ್ರತಿ ಜೇನುಸಾಕಣೆ ಕೇಂದ್ರದಲ್ಲಿ ಸುಲಭದಲ್ಲಿ ತಯಾರಿಸಬಹುದಾದ ಜೇನು ಮೇಣ ತೆಗೆಯುವ ಒಂದು ಸಾಧನವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಒಂದು ಸಾಮಾನ್ಯ ಡಬ್ಬದ ಮಧ್ಯಭಾಗದಲ್ಲಿ ಒಂದು ತಂತಿಯ ಜಾಲರಿಯನ್ನು ಮೂಡಿಸಬೇಕು. ಹಳೆ ಎರಿ, ತುಂಡು ಎರಿ, ಮುಂತಾದ ಜೇನುತುಪ್ಪ ತೆಗೆಯುವಾಗ ಮತ್ತು ಆಗಾಗ್ಗೆ ಜೇನುಗೂಡು ಪರೀಕ್ಷೆ ಮಾಡುವಾಗ ತೆಗೆಯುವ ಎರಿಯ ಚೂರುಗಳನ್ನು ಈ ಜಾಲರಿಯ ಮೇಲೆ ಹಾಕುತ್ತ ಹೋಗಬೇಕು. ಈ ರೀತಿ ಹಾಕಿದ ಡಬ್ಬವನ್ನು ಬಿಸಿಲಿನಲ್ಲಿ ಇಡುವುದರಿಂದ ಮೇಣ ಕರಗಿ ಡಬ್ಬದ ತಳಭಾಗದಲ್ಲಿ ಸಂಗ್ರಹಗೊಳ್ಳುತ್ತದೆ. ಜೇನುನೊಣಗಳು ಈ ಡಬ್ಬದೊಳಗೆ ಹೋಗಲು ಅವಕಾಶವಿರಬಾರದು. ಹೀಗೆ ಸಂಗ್ರಹಗೊಂಡ ಮೇಣವನ್ನು ಅಗೆದು ಡಬ್ಬವನ್ನು ಆಗಾಗ್ಗೆ ಶುದ್ಧ ಮಾಡಬೇಕು. ಈ ರೀತಿ ಮಾಡುವುದರಿಂದ ಜೇನು ಸಾಕಾಣೆಯಲ್ಲಿ ಹಾಳಾಗುವ ಮೇಣವನ್ನೆಲ್ಲ ಸ್ವಲ್ಪವೂ ಪೋಲಾಗದಂತೆ ಕೂಡಿಡಬಹುದು. ಹೆಜ್ಜೇನಿನ ಎರಿಗಳಂತೆ ಹೆಚ್ಚು ಎರಿಗಳೇನಾದರೂ ಇದ್ದರೆ, ಅವನ್ನು ಸ್ವಲ್ಪ ನೀರು ಹಾಕಿ ಯಾವುದಾದರೂ ಪಾತ್ರೆಯಲ್ಲಿ ಕರಗಿಸಬೇಕು. ಈ ರೀತಿ ಕರಗಿಸಿದಾಗ ಮೇಣವೆಲ್ಲಾ ಕರಗಿ ಪಾತ್ರೆಯ ತಳಭಾಗಕ್ಕೆ ಸೇರುತ್ತದೆ. ಹಗುರವಾದ ಕಸಕಡ್ಡಿ ಮೇಲಕ್ಕೆ ತೇಲುತ್ತವೆ. ಭಾರವಾದದ್ದು ಕರಗಿದ ಮೇಣದ ತಳಭಾಗದಲ್ಲಿರುತ್ತವೆ. ಅನಂತರ ಕಾದ ಮೇಣವನ್ನು ತಣ್ಣಗೆ ಮಾಡುವುದರಿಂದ ಗಟ್ಟಿಯಾಗುತ್ತದೆ. ಈ ರೀತಿಯಾಗಿ ಗಟ್ಟಿಯಾದ ತಳಭಾಗ ಮತ್ತು ಮೇಲ್ಭಾಗದಲ್ಲಿ ಕಚ್ಚಿಕೊಂಡಿರುವ ಕಸಕಡ್ಡಿಯನ್ನು ಚಾಕುವಿನಿಂದ ಕೆರೆದು ತೆಗೆಯಬಹುದು. ಮತ್ತೆ ಮತ್ತೆ ನೀರು ಹಾಯಿಸುವುದರಿಂದ, ಕಸಕಡ್ಡಿ ಬೇರ್ಪಡಿಸುವುದರಿಂದ ಶುದ್ಧವಾದ ಮೇಣವನ್ನು ಪಡೆಯಬಹುದು. ಹೀಗೆ ಮಾಡುವುದರಿಂದ ಮೇಣ ಹೊಸ ಎರಿಗಳಿಂದ ಮತ್ತು ಗೂಡುಗಳ ಮುಚ್ಚಳಗಳಿಂದ ಬರುವ ಮೇಣ ಬಹಳ ಉತ್ತಮವಾದದ್ದು ಮತ್ತು ಅದಕ್ಕೆ ಹೆಚ್ಚು ಬೆಲೆ ಉಂಟು.

ಜೇನುಮೇಣವನ್ನು ವಿವಿಧ ಕೈಗಾರಿಕೆಗಳಲ್ಲಿ ಉಪಯೋಗಿಸುತ್ತಾರೆ. ಇದರ ಮುಖ್ಯ ಉಪಯೋಗ ಮುಖಕ್ಕೆ ಹಚ್ಚುವ ಸ್ನೋ ಮತ್ತು ಕ್ರೀಮ್ಸ್, ಮುಲಾಮು, ತುಟಿಯ ಬಣ್ಣ ಮುಂತಾದುವುಗಳನ್ನು ತಯಾರು ಮಾಡುವ ಕೈಗಾರಿಕೆಯಲ್ಲಿ. ಚರ್ಚ್‌ಗಳಲ್ಲಿ ಹತ್ತಿಸುವ ಮೇಣದ ಬತ್ತಿಗಳ ತಯಾರಿಕೆಯಲ್ಲೂ ಅದರ ಬಳಕೆಯುಂಟು. ಜೇನುಮೇಣ ಕರಗುವ ಉಷ್ಣತೆ ಬೇರೆ ಮೇಣಗಳಿಗಿಂತ ಏಕವಾಗಿರುವುದರಿಂದ ಈ ಮೇಣದ ಬತ್ತಿಗಳನ್ನು ಹತ್ತಿಸಿದಾಗ ಅವು ಬಗ್ಗುವುದಿಲ್ಲ. ಅಲ್ಲದೆ ಜೇನುಮೇಣದಿಂದ ಮಾಡಿದ ಬತ್ತಿಗಳಿಂದ ಹೊಗೆ ಬರುವುದೂ ಕಡಿಮೆ. ಮೇಲಾಗಿ ಜೇನು ಸಾಕಾಣೆಯಲ್ಲಿ ಉಪಯೋಗಿಸುವ ಮೇಣದ ಹಾಳೆಗಳನ್ನು ಜೇನು ಮೇಣದಿಂದಲೇ ತಯಾರಿಸಬೇಕು. ಗೋಡೆಗಳಿಗೆ ಬಳಿಯುವ ಬಣ್ಣ, ವಾರ್ನಿಷ್ ತಯಾರಿಕೆಯಲ್ಲಿ ಇದರ ಉಪಯೋಗ ಬಹಳ. ಇದೂ ಅಲ್ಲದೆ ಪಾದರಕ್ಷೆಗೆ ಬಳಿಯುವ ಬಣ್ಣ, ಅಚ್ಚು ತಯಾರಿಕೆ, ಪ್ರತಿಮೆಗಳನ್ನು ಮಾಡುವುದು ಮುಂತಾದ ಉದ್ಯಮಗಳಲ್ಲೂ ಮೇಣದ ಬಳಕೆ ಇದೆ. ದಂತಚಿಕಿತ್ಸೆಯಲ್ಲಿ ಬೇಕಾಗುವ ಕೆಲವು ವಸ್ತುಗಳ ತಯಾರಿಕೆಯಲ್ಲೂ ಜೇನುಮೇಣದ ಬಳಕೆ ಇದೆ. (ಜಿ.ಪಿ.ಸಿ.)

**ಜೈವಿಕ ಔಷಧಗಳು:** ರೋಗಗಳ ಚಿಕಿತ್ಸೆ ನಿರೋಧಕಗಳಿಗಾಗಿ ಉಪಯೋಗಿಸುವ ವಿವಿಧ ವಿಷಪದಾರ್ಥಗಳು. ವಿಷಹಾರಿಗಳು, ದುರ್ಬಲೀಕೃತ ಅಥವಾ ನಿರ್ಜೀವ ವಿಷಾಣುಗಳನ್ನು ಒಳಗೊಂಡ ಲಸಿಕೆಗಳು, ಚಿಕಿತ್ಸೆಗಾಗಿ ಉಪಯೋಗಿಸುವ ರಕ್ತದ್ರವ ಇತ್ಯಾದಿಗಳು (ಬಯೊಲಾಜಿಕಲ್ ಪ್ರಾಡಕ್ಟ್ಸ್). ಸಹಜ ರೋಗದಿಂದ ವಿಮುಕ್ತವಾದಾಗ ಪಡೆಯುವ ನೈಸರ್ಗಿಕ ರಕ್ಷೆಯನ್ನೇ ಇವು ವ್ಯಕ್ತಿಯಲ್ಲಿ ಉಂಟುಮಾಡುತ್ತವೆ. ಪೋಲಿಯೊ ವಿರುದ್ಧ ಉಪಯೋಗಿಸುವ ಜೈವಿಕ ಔಷಧ ಮಾತ್ರ ಬಾಯಲ್ಲಿ ತೆಗೆದುಕೊಳ್ಳಬಹುದಾದಂಥದ್ದು. ಇದನ್ನು ಹೀಗೆ ಸೇವಿಸಿದಾಗ ವ್ಯಕ್ತಿಯಲ್ಲಿ ಇದು ಅತ್ಯಲ್ಪ ತೀವ್ರತೆಯ ಕರುಳಿನ ಪೋಲಿಯೊವನ್ನು ಉಂಟುಮಾಡಿದರೂ ಎಲ್ಲ ರೀತಿಯ ಪೋಲಿಯೊ ವಿರುದ್ಧ ನಿರೋಧಕವಸ್ತುಗಳು ವ್ಯಕ್ತಿಯ ದೇಹದಲ್ಲಿ ಉತ್ಪತ್ತಿಯಾಗುವಂತೆ ಮಾಡುತ್ತದೆ. ಅದೇ ರೀತಿ ಟೈಫಾಯಿಡ್ ವಿರುದ್ಧ ಪ್ರತಿರೋಧಶಕ್ತಿಯನ್ನು ಬೆಳಸುವ ಬಾಯಿ ಲಸಿಕೆಗಳೂ ಬಂದಿವೆ. ರೋಗನಿರೋಧಕ ಚಿಕಿತ್ಸೆಗಳಿಗೆ ಉಪಯೋಗಿಸಲಾಗುವ ರಕ್ತ ಮತ್ತು ರಕ್ತರಸವನ್ನು (ಸೀರಮ್) ಕೂಡ ಜೈವಿಕ ಔಷಧಗಳೆಂದೇ ಪರಿಗಣಿಸಲಾಗಿದೆ. ಚಿಕಿತ್ಸೆಗೆ ಉಪಯೋಗಿಸುವ ರಕ್ತರಸವನ್ನು ನಿರ್ದಿಷ್ಟ ಪ್ರಾಯೋಗಿಕ ಸನ್ನಿವೇಶಗಳಲ್ಲಿ ಪ್ರಾಯೋಗಿಕ ಪ್ರಾಣಿಗಳ ರಕ್ತವನ್ನು ಶೇಖರಿಸಿ ಗರಣೆಕಟ್ಟಿಸಿ ಗರಣೆಯಿಂದ ಸೋಸಲಾಗುತ್ತದೆ. ಈ ಮೂಲಕ ರಕ್ತವು ಕಣಗಳನ್ನು ಕಳೆದುಕೊಳ್ಳುವುದೇ ಅಲ್ಲದೆ ರಕ್ತದ್ರವ (ಪ್ಲಾಸ್ಮ) ಗರಣೆಕಟ್ಟುವುದೂ ತಪ್ಪುತ್ತದೆ. ಇಂಥ ರಕ್ತರಸಗಳನ್ನು ಚುಚ್ಚುಮದ್ದಿನ ಮೂಲಕ ದೇಹದೊಳಗೆ ಹೊಗಿಸಲಾಗುತ್ತದೆ.

ಮಾನವರು ಇಲ್ಲವೆ ಪ್ರಾಣಿಗಳು ಯಾವುದೇ ಸೋಂಕಿನ ರೋಗದಿಂದ ವಿಮುಕ್ತವಾದ ಬಳಿಕ ಸಾಮಾನ್ಯವಾಗಿ ಅವರ ದೇಹದಲ್ಲಿ ಆ ಸೋಂಕಿನ ವಿರುದ್ಧದ ವಸ್ತು ಇರುತ್ತದೆ. ಅಂಥವರ ರಕ್ತವನ್ನೊ, ರಕ್ತದ್ರವವನ್ನೊ, ರಕ್ತರಸವನ್ನೊ ಕೂರಾದ ರೋಗ (ಅಕ್ಯೂಟ್ ಇಲ್ನೆಸ್) ಚಿಕಿತ್ಸೆಗಾಗಿ ಇಲ್ಲವೆ ತಾತ್ಕಾಲಿಕ ರೋಗನಿರೋಧಕವಾಗಿ ಬಳಸಬಹುದು. ಇವು ವಿಷಾಣುಗಳಿಗೆ ಮಾರಕವಾಗಿ ವ್ಯಕ್ತಿಯನ್ನು ಸೋಂಕಿನಿಂದ ರಕ್ಷಿಸುತ್ತವೆ. ವಿಷವಸ್ತುಗಳನ್ನು ಮಾನವರಿಗೂ ಪ್ರಾಣಿಗಳಿಗೂ ಚುಚ್ಚುಮದ್ದಿನ ಮೂಲಕ ಒಂದು ಮಿಲೀ ನಷ್ಟು ಕೊಟ್ಟರೆ ಮಾರಕ. ಆದರೆ ಸೂಕ್ತವಾಗಿ ಕಡಿಮೆ ಪ್ರಮಾಣದಲ್ಲಿ ಕೊಟ್ಟರೆ ಇವು ಸ್ವೀಕೃತ. ದೇಹದಲ್ಲಿ ತಮಗೇ ವಿರುದ್ಧವಾದ ವಸ್ತುಗಳನ್ನು ಉತ್ಪಾದಿಸಿ ವ್ಯಕ್ತಿ ಅದೇ ವಿಷವಸ್ತುವಿನ ವಿರುದ್ಧ ರಕ್ಷಣೆ ಪಡೆವ ಸ್ಥಿತಿಯನ್ನು ಸೃಜಿಸುತ್ತವೆ. ಇವು ಜೀವಿವಿಷಗಳಿರಬಹುದು. ಸೋಂಕು ರೋಗಗಳ ವಿಷವಸ್ತುಗಳನ್ನು ಒಂದೊಂದೇ ಆಗಿ ಉಪಯೋಗಿಸುವುದಕ್ಕಿಂತ ಅನೇಕ ವಿಷಾಣುಗಳ ವಿಷಗಳ ಮಿಶ್ರಣವನ್ನು ಉಪಯೋಗಿಸುವುದೂ ರೂಢಿಯಲ್ಲಿ ಉಂಟು. ಇಂಥ ವಿಷಮಿಶ್ರಣವನ್ನು ತಯಾರಿಸಬೇಕಾದರೆ ಮೊದಲು ಸೂಕ್ತರೀತಿಯ ವಿಷಾಣುಗಳನ್ನು ಕೃತಕ ಮಾಧ್ಯಮದಲ್ಲಿ ಕೃಷಿಮಾಡಿ ಶೇಖರಿಸಿ ಬಳಿಕ ಅವನ್ನು ಚೆನ್ನಾಗಿ ತೊಳೆಯಲಾಗುತ್ತದೆ. ಅನಂತರ ಅವನ್ನು ಬೇರ್ಪಡಿಸಿ ಅವಕ್ಕೆಂದೇ ತಯಾರಾದ ವಿಶಿಷ್ಟವಾದ ಯಂತ್ರದಲ್ಲಿ ಅರೆದು ಪುನಃ ಅಪಕೇಂದ್ರೀಕರಿಸಿ ನೀರಿನಂತೆ ಸ್ವಚ್ಛವಾದ ವಿಷದ್ರಾವಣವನ್ನು ಬೇರ್ಪಡಿಸಲಾಗುವುದು. ಅಲ್ಪ ಪ್ರಮಾಣದಿಂದ ಪ್ರಾರಂಭಿಸಿ ಸ್ವಲ್ಪಸ್ವಲ್ಪವಾಗಿ ಹೆಚ್ಚಿಸುತ್ತ ಪ್ರಯೋಗಪ್ರಾಣಿಗಳಿಗೆ ಇಂಥ ಯಾವುದೇ ವಿಷವಸ್ತುವನ್ನು ಕೊಟ್ಟರೆ ಅವುಗಳ ರಕ್ತದಲ್ಲಿ ವಿಶಿಷ್ಟ ಪ್ರತಿವಿಷವಸ್ತು ಅಧಿಕವಾಗಿ ಉತ್ಪನ್ನವಾಗುತ್ತದೆ. ಈ ವಸ್ತು ಇರುವ ರಕ್ತರಸವನ್ನು ಮಾನವರಲ್ಲಿ ರೋಗ ಚಿಕಿತ್ಸೆ ನಿರೋಧಕ್ಕಾಗಿ ಕೊಡಲಾಗುವುದು. ಇಂಥ ಜೈವಿಕ ಔಷಧಿಗಳಿಗೆಲ್ಲ ಅವುಗಳ ನಿರ್ದಿಷ್ಟ ಚಿಕಿತ್ಸಾ ಸಾಮರ್ಥ್ಯವಿರುವ ಕಾಲಾವಧಿ ಇರುತ್ತದೆ. ಆ ಗಡು ಕಳೆದ ಬಳಿಕ ಸ್ವಲ್ಪ ಕಾಲ ಸಾಮಾನ್ಯವಾಗಿ ಇವನ್ನು ಉಪಯೋಗಿಸಬಹುದಾದರೂ ಅಂಥ ಉಪಯೋಗದಿಂದ ನಿರೀಕ್ಷಿತ ಗುಣ ದೊರೆಯುವುದು ಕಷ್ಟ. ಕೆಲವು ವೇಳೆ ಇಂಥ ಕಾಲಾವಧಿ ಮೀರಿದ ಜೈವಿಕ ಔಷಧಗಳಿಂದ ದೇಹಕ್ಕೆ ಘಾತವೇ ಆಗಬಹುದು. ಜೈವಿಕ ಔಷಧಗಳ ಗುಂಪಿಗೆ ಹಾವಿನ ವಿಷ, ಅಗ್ಲೂಟಿನಿನ್, ರಕ್ತರಸ, ಪ್ರತಿಜೈವಿಕಗಳು (ಆಂಟಿಬಯೋಟಿಕ್ಸ್), ರಕ್ತದ್ರವ, ಲಸಿಕೆಗಳು (ವಿಷಮಜ್ವರದ ವಿರುದ್ಧವಾದ ಟಿಎಬಿ, ನೆಗಡಿವಿರುದ್ಧ ಲಸಿಕೆ, ಪೋಲಿಯೊ ವಿರುದ್ಧ ಲಸಿಕೆ ಇತ್ಯಾದಿ), ನಿರೋಧಜನಕಗಳು (ಆಂಟಿಜೆನ್‌ಗಳು), ನಿರ್ಬಲಗೊಳಿಸಿದ ವಿಶಿಷ್ಟ ಏಕಾಣು ಇಲ್ಲವೆ ಏಕಾಣುಗಳ ಮಿಶ್ರಣ, ಡಿಫ್ತೀರಿಯಾ, ನಾಯಿಕೆಮ್ಮು ಮತ್ತು ಧನುರ್ವಾಯುಗಳ ನಿವಾರಣೆಗಾಗಿ ಉಪಯೋಗಿಸುವ ದುರ್ಬಲಗೊಳಿಸಿದ ವಿಷವಸ್ತು ಇಲ್ಲವೆ ಪ್ರತಿವಿಷಗಳು ಇವೆಲ್ಲ ಸೇರಿವೆ.

ಜೈವಿಕ ಔಷಧಗಳ ವರ್ಗೀಕರಣ : ೧ ಕೂರಾದ ರೋಗಚಿಕಿತ್ಸೆಗೆ ಮತ್ತು ತಾತ್ಕಾಲಿಕ ರೋಗನಿವಾರಣೆಗೆ ಉಪಯೋಗಿಸತಕ್ಕವು. ಇವು ಕ್ರಿಯಾತ್ಮಕವಲ್ಲದ (ಪ್ಯಾಸಿವ್) ರೋಗನಿವಾರಣಸಾಮರ್ಥ್ಯವನ್ನು ನೀಡುತ್ತವೆ. ಉದಾಹರಣೆ: (a) ಪ್ರತಿವಿಷಗಳು (ಹಾವು ಜೇಡರಹುಳುವಿನ ವಿಷದ ವಿರುದ್ಧ) (b) ವಿಶಿಷ್ಟವಾಗಿ ತಯಾರಿಸಿದ ರಕ್ತರಸ.

ಕ್ರಿಯಾತ್ಮಕವಲ್ಲದ ರೋಗನಿವಾರಕಗಳ ಉಪಯೋಗದಿಂದ ವ್ಯಕ್ತಿಗೆ ಯಾವಾಗಲೂ ಅನುಕೂಲವಾಗುತ್ತದೆ ಎಂದು ಹೇಳುವಂತಿಲ್ಲ. ಕೆಲವು ವೇಳೆ ವ್ಯಕ್ತಿಯಲ್ಲಿ ಈ ನಿವಾರಕಗಳ ವಿರುದ್ಧವಾಗಿಯೇ ಪ್ರತಿವಸ್ತುಗಳು ಉತ್ಪನ್ನವಾಗಬಹುದು. ಮುಂದಿನ ಸಾರಿ ಈ ನಿವಾರಕವನ್ನು ಉಪಯೋಗಿಸಿದಾಗ ಅದು ರಕ್ಷಣೆಯನ್ನು ಒದಗಿಸುವ ಬದಲು ದೈಹಿಕ ತೊಂದರೆಗಳನ್ನೇ ಉಂಟುಮಾಡುತ್ತದೆ. ಕೆಲವು ವೇಳೆ ಇದು ಮಾರಕವೇ ಆಗಬಹುದು. ಜೈವಿಕ ಔಷಧದಿಂದ ಉಂಟಾಗುವ ಅನಪೇಕ್ಷಣೀಯ ಪರಿಣಾಮಕ್ಕೆ ಅನಾಫೈಲಾಕ್ಸಿಸ್ ಎಂದು ಹೆಸರು. ಇಂಥ ದುಷ್ಪರಿಣಾಮ ಉಂಟಾಗುವ ಸಂಭವವಿರುವುದರಿಂದ ಈ ಜೈವಿಕ ಔಷಧಗಳನ್ನು ಉಪಯೋಗಿಸುವುದಕ್ಕೆ ಮೊದಲು ಅವು ವ್ಯಕ್ತಿಗೆ ಕ್ಷೇಮಕರವೇ ಅಲ್ಲವೇ ಎಂಬುದನ್ನು ಪೂರ್ವಭಾವಿಯಾಗಿ ಪರೀಕ್ಷಿಸಬೇಕಾಗುತ್ತದೆ. ಬಹು ಸ್ವಲ್ಪಪ್ರಮಾಣದಲ್ಲಿ ಇಂಥ ಜೈವಿಕ ಔಷಧವನ್ನು ಚರ್ಮದ ಒಳಹೊಗಿಸಲಾಗುತ್ತದೆ. ಕ್ಷೇಮಕರವಾಗಿದ್ದರೆ ಚುಚ್ಚಿದ ಸ್ಥಳದಲ್ಲಿ ಕಡಿತ ಉಂಟಾಗಿ ದದ್ದು ಏಳುತ್ತದೆ. ಪ್ರತಿಕ್ರಿಯೆ ತೀವ್ರವಾಗಿದ್ದರೆ ಹೊಪ್ಪಳೆಯುಂಟಾಗಬಹುದು. ಜೈವಿಕ ಔಷಧವನ್ನು ಪ್ರಯೋಗಿಸುವಾಗ ಅದರೊಡನೆ ಸ್ವಲ್ಪ ಅಡ್ರೀನಲಿನ್ನನ್ನು ಸೇರಿಸಿಕೊಟ್ಟರೆ ಸಂಭವಿಸಬಹುದಾದ ಅಹಿತಕರ ಪರಿಣಾಮಗಳು ಉಂಟಾಗುವುದಿಲ್ಲವಾದರೂ ಅಲ್ಪವಾಗಿರುತ್ತವೆ. ಅನಪೇಕ್ಷಣೀಯ ಪರಿಣಾಮಗಳು ಉಂಟಾದರೆ ಹಿಸ್ಟಮಿನ್ ಪ್ರತಿವಸ್ತುಗಳು, ಕ್ಯಾಲ್ಸಿಯಮ್ ಗ್ಲೂಕೊನೇಟ್ ಇತ್ಯಾದಿಗಳನ್ನು ಕೊಡಬೇಕಾಗುತ್ತದೆ. ಬೇಡದ ಪರಿಣಾಮ ತತ್‌ಕ್ಷಣವೇ ಕಾಣಿಸಿಕೊಳ್ಳದೆ ನಾಲ್ಕಾರು ದಿವಸಗಳಾದ ಬಳಿಕ ಕಾಣಿಸಿಕೊಳ್ಳಬಹುದು. ಇದಕ್ಕೆ ಸೀರಮ್ ಸಿಕ್‌ನೆಸ್ ಎಂದು ಹೆಸರು. ಜ್ವರ, ಮೈಮೇಲೆಲ್ಲ ಗಂದೆಗಳು, ಕೀಲುನೋವು ಇತ್ಯಾದಿ ಬಾಧೆಗಳು ಈ ಸ್ಥಿತಿಯಲ್ಲಿ ಕಂಡುಬರುತ್ತವೆ. ಆದರೂ ಈ ಸ್ಥಿತಿ ಅನಾಫೈಲಾಕ್ಸಿಸ್‌ನಷ್ಟು ತೀವ್ರವಾಗಿರುವುದಿಲ್ಲ.

ಬಾಲ್ಯದಲ್ಲಿ ಇಲ್ಲವೆ ಅನಂತರ ಬಂದ ದಡಾರ, ಪೋಲಿಯೊ, ಇತ್ಯಾದಿ ರೋಗಗಳಿಂದ ಗುಣಹೊಂದಿದ ರೋಗಿಗಳ ರಕ್ತದಲ್ಲಿ ಈ ರೋಗಗಳ ಪ್ರತಿರೋಧ ವಸ್ತುಗಳು ಜೀವಮಾನಪರ್ಯಂತ ಇರುತ್ತವೆಂದು ನಂಬಲಾಗಿದೆ. ಸಮಾಜದಲ್ಲಿ ಅನೇಕರು ಕಂಡಹಾಗೆಯೇ, ಕೆಲವರು ಅವ್ಯಕ್ತವಾಗಿ ಇಂಥ ಕಾಯಿಲೆಗಳಿಂದ ನರಳಿರುವುದರಿಂದಲೂ, ಮಿಕ್ಕವರು ಇಂಥ ರೋಗಿಗಳೊಡನೆ ಬಹುಕಾಲಿಕ ನಿಕಟ ಸಂಪರ್ಕ ಉಳ್ಳವರಾಗಿರುವ ಕಾರಣದಿಂದಲೂ, ಸಾಮಾನ್ಯವಾಗಿ ಎಲ್ಲ ವಯಸ್ಕರಲ್ಲೂ ಇಂಥ ಪ್ರತಿರೋಧವಸ್ತುಗಳು ಇದ್ದೇ ಇರುತ್ತವೆ ಎಂಬ ಭಾವನೆಯಿಂದ ಕ್ರಿಯಾತ್ಮಕವಲ್ಲದ ರೋಗಚಿಕಿತ್ಸೆ ನಿವಾರಣೆಗಳಿಗೆ ವಯಸ್ಕರ ರಕ್ತದ್ರವವನ್ನು ಉಪಯೋಗಿಸಿದಾಗ ಉಂಟಾಗುವ ಅನಪೇಕ್ಷಣೀಯ ಪರಿಣಾಮಗಳು ಉಂಟಾಗುವುದಿಲ್ಲ.

ನಿರ್ದಿಷ್ಟ ರಕ್ತರಸದ ತಯಾರಿ : ಇದಕ್ಕೆ ಕುದುರೆ, ದನ, ಮೇಕೆ, ಮೊಲ ಮುಂತಾದ ವಸ್ತುಗಳನ್ನು ಉಪಯೋಗಿಸಲಾಗುತ್ತದೆ. ಸೂಕ್ಷ್ಮಾಣು, ಏಕಾಣು, ವಿಷಾಣುಗಳ ವಿಷ, ಹಾವು, ಚೇಳು ಇವುಗಳ ವಿಷ ಮುಂತಾದ ಯಾವುದಾದರೂ ಪ್ರತಿರೋಧಜನಕವನ್ನು ಅಲ್ಪಪ್ರಮಾಣದಲ್ಲಿ, ಅವಶ್ಯಕವಾಗಿದ್ದರೆ ನಿರ್ಬಲಗೊಳಿಸಿ, ಈ ಪ್ರಾಣಿಗಳಿಗೆ ಚುಚ್ಚುಮದ್ದಾಗಿ ಕೊಡಲಾಗುತ್ತದೆ. ಕೆಲವು ತಿಂಗಳುಗಳ ಪರ್ಯಂತ ಇಂಥ ಪ್ರತಿರೋಧಜನಕದ ಪ್ರಮಾಣವನ್ನು ಕ್ರಮೇಣ ಹೆಚ್ಚಿಸಲಾಗುತ್ತದೆ. ಈ ಅವಧಿಯಲ್ಲಿ ಪ್ರಾಯೋಗಿಕ ಪ್ರಾಣಿಯಲ್ಲಿ ಅನುರೂಪವಾದ ಪ್ರತಿರೋಧವಸ್ತು ಉತ್ಪಾದನೆಯಾಗಿ ಗಣನೀಯ ಪ್ರಮಾಣದಲ್ಲಿ ಅದರ ರಕ್ತದಲ್ಲಿರುತ್ತದೆ. ಪ್ರಾಯೋಗಿಕ ಪ್ರಾಣಿಗೆ ಮಾರಕ ಪ್ರಮಾಣಕ್ಕಿಂತ ೫–೧೦ ಪಟ್ಟು ಅಥವಾ ಇನ್ನೂ ಹೆಚ್ಚು ವಿಷವಸ್ತುವನ್ನು ಕೊಟ್ಟರೂ ಅದು ಕ್ಷೇಮವಾಗಿಯೇ ಇರುವಂಥ ಸ್ಥಿತಿ ಏರ್ಪಟ್ಟಿರುತ್ತದೆ. ಇಂಥ ಪ್ರಾಣಿಯ ರಕ್ತವನ್ನು ಶೇಖರಿಸಿ ಅದನ್ನು ಗರಣೀಕರಿಸಿ ಅದರಿಂದ ರಕ್ತರಸವನ್ನು ಬೇರ್ಪಡಿಸಲಾಗುತ್ತದೆ. ರಕ್ತರಸದ ಗ್ಯಾಮಾಗ್ಲಾಬ್ಯುಲಿನ್ ಎಂಬ ಪ್ರೊಟೀನ್ ಅಂಶವನ್ನೇ ಬೇರ್ಪಡಿಸಬಹುದು. ಇಂಥ ಗ್ಯಾಮಾಗ್ಲಾಬ್ಯುಲಿನ್ ಅಂಶದಲ್ಲಿ ಪ್ರತಿರೋಧವಸ್ತು ಇರುವುದರಿಂದ ಇದು ಅತಿ ಪ್ರಬಲವಸ್ತುವಾಗಿರುವುದು. ಇದನ್ನು ಅಲ್ಪಪ್ರಮಾಣದಲ್ಲಿ ಉಪಯೋಗಿಸಬಹುದು. ಇಂಥ ರಕ್ತರಸವನ್ನೋ ಗ್ಯಾಮಾಗ್ಲಾಬ್ಯುಲಿನ್ ದ್ರಾವಣವನ್ನೋ ಸೂಕ್ತವಾಗಿ ಕಾಯಿಸಿ ಸೋಸಿ ಅನ್ಯವಿಷಾಣು ವಿಷಪದಾರ್ಥಗಳಿಂದ ಮುಕ್ತಗೊಳಿಸಿ ಶುದ್ಧಿಮಾಡಿ, ಅದರ ಸಾಮರ್ಥ್ಯ ಕಡಿಮೆ ಆಗದಂತೆ ಬಹುಕಾಲ ರಕ್ಷಿಸುವ ಸೂಕ್ತ ರಕ್ಷಣಾವಸ್ತುವನ್ನು ಸೇರಿಸಿ, ಬೇಡದ ಪರಿಣಾಮಗಳನ್ನು ಉಂಟುಮಾಡುವುದಿಲ್ಲವೆಂದು ಪ್ರಾಯೋಗಿಕವಾಗಿ ಪರೀಕ್ಷಿಸಿ ನಿರ್ಧರಿಸಿ ಗಾಜಿನ ಕೊಳವೆಗಳೊಳಗೆ ಹಾಕಿ ಮೊಹರು ಮಾಡಲಾಗುತ್ತದೆ. ಇವುಗಳ ಪ್ರಾಣಿಮೂಲ, ಸಾಮರ್ಥ್ಯ, ಕಾಲಾವಧಿಗಳನ್ನು ನಿರ್ದಿಷ್ಟವಾಗಿ ಸೂಚಿಸಿರುತ್ತದೆ.

೨. ಬಹುಕಾಲಿಕ ರೋಗಚಿಕಿತ್ಸೆಗೆ ಮತ್ತು ದೀರ್ಘಾವಧಿ ರೋಗನಿವಾರಣೆಗೆ ಉಪಯೋಗಿಸತಕ್ಕವು. ಇವು ದೇಹದಲ್ಲಿ ಕ್ರಿಯಾತ್ಮಕ ರೋಗನಿವಾರಣ ಸಾಮರ್ಥ್ಯವನ್ನು ಉಂಟುಮಾಡುತ್ತವೆ. ಇವುಗಳೆಂದರೆ: a) ಶಕ್ತಿಗುಂದಿಸಿದ ಇಲ್ಲವೆ ಜೀವವಿಲ್ಲದ ಏಕಾಣುಗಳನ್ನುಳ್ಳ ವಸ್ತುಗಳು b) ವಿಷವಸ್ತುಗಳು ಮತ್ತು ಶಕ್ತಿಗುಂದಿಸಿದ ವಿಷವಸ್ತುಗಳು c) ವಿಷವಸ್ತು ಪ್ರತಿವಿಷಗಳ ಮಿಶ್ರಣ d) ಟ್ಯುಬರ್‌ಕ್ಯುಲಿನ್ ಮತ್ತು e) ಸೂಕ್ಷ್ಮಾಣುಗಳ ಲಸಿಕೆ.

ಕ್ರಿಯಾತ್ಮಕ ರೋಗನಿವಾರಣೆಗೆ (ಆ್ಯಕ್ಟಿವ್ ಇಮ್ಯೂನೈಸೇಷನ್) ಲಸಿಕೆಗಳು, ವಿಷಾಣುಗಳ ವಿಷ (ಅವಶ್ಯಬಿದ್ದರೆ ದುರ್ಬಲಗೊಳಿಸಿದ್ದು), ದುರ್ಬಲಗೊಳಿಸಿದ ವಿಷಾಣುಗಳು ಮುಂತಾದವನ್ನು ಪ್ರತಿರೋಧ ಜನಕಗಳಾಗಿ ಉಪಯೋಗಿಸಲಾಗುತ್ತದೆ. ದುರ್ಬಲಗೊಳಿಸಿ ತಯಾರಿಸಿದ ರೋಗಾಣುಗಳ ಹೆಸರಿನಿಂದಲೇ ಲಸಿಕೆಗಳನ್ನು ಕರೆಯಲಾಗುತ್ತದೆ. ಉದಾ: ಟೈಫಾಯಿಡ್ ವ್ಯಾಕ್ಸೀನ್, ಪೋಲಿಯೊ ವ್ಯಾಕ್ಸೀನ್, ಡಿಫ್ತೀರಿಯ ಟಾಕ್ಸಾಯ್ಡ್ ಇತ್ಯಾದಿಗಳು ಇಂಥ ಹೆಸರಿರುವ ಲಸಿಕೆಗಳು. ಈ ಲಸಿಕೆಗಳ ತಯಾರಿಕೆಗಾಗಿ ಪ್ರತಿರೋಧಕಗಳನ್ನು ಅತಿಯಾಗಿ ದುರ್ಬಲಗೊಳಿಸಲಾಗದು. ಹಾಗಾದರೆ ಇಂಥ ಜೈವಿಕ ಔಷಧವನ್ನು ಸ್ವೀಕರಿಸಿದ ವ್ಯಕ್ತಿಯಲ್ಲಿ ಪ್ರತಿರೋಧಕಗಳು ಉತ್ಪನ್ನವಾಗದೇ ಇರಬಹುದು. ಸಿಡುಬು, ಪೀತಜ್ವರ, ಕ್ಷಯ ಈ ರೋಗಗಳ ವಿಷಾಣುಗಳನ್ನು ದುರ್ಬಲೀಕರಿಸಿ ವ್ಯಕ್ತಿಯ ದೇಹದೊಳಕ್ಕೆ ಸೇರಿಸಿದರೂ ಅವು ಕೆಲಮಟ್ಟಿಗೆ ವೃದ್ಧಿಹೊಂದುತ್ತವೆ. ಆದರೆ ದೇಹವೆಲ್ಲ ವ್ಯಾಪಿಸದೆ ಸ್ಥಳೀಯವಾಗಿ ನೆಲೆಸಿ ಅಲ್ಪಕಾಲದ, ಅಲ್ಪತೀಕ್ಷ್ಣತೆಯ ರೋಗವನ್ನು ಉಂಟುಮಾಡಿ ಮುಂದೆ ಪ್ರಾಪ್ತವಾಗಬಹುದಾದ ಪ್ರಬಲ ಸೋಂಕಿನ ವಿರುದ್ಧ ರಕ್ಷಣೆಯನ್ನು ಒದಗಿಸುತ್ತವೆ. ಟೈಫಾಯಿಡ್, ನಾಯಿಕೆಮ್ಮು, ಪೋಲಿಯೊ ವಿಷಾಣುಗಳನ್ನು ಪೂರ್ಣವಾಗಿ ಸಾಯಿಸಿ ಜೈವಿಕ ಔಷಧವನ್ನಾಗಿ ಉಪಯೋಗಿಸಲಾಗುತ್ತದೆ. ಡಿಫ್ತೀರಿಯ, ಟೆಟನಸುಗಳ ವಿಷಾಣು ವಿಷಗಳನ್ನು ಕಾವು ಮತ್ತು ರಾಸಾಯನಿಕ ಮಿಶ್ರಣದಿಂದ ದುರ್ಬಲೀಕರಿಸಲಾಗುತ್ತದೆ. ಏಕಾಣುಗಳನ್ನು ದುರ್ಬಲೀಕರಿಸಲು ಅವನ್ನು ನಿರ್ದಿಷ್ಟ ಕೃತಕ ಮಾಧ್ಯಮದಲ್ಲಿ ಪದೇ ಪದೇ, ಇಲ್ಲವೆ ವಿಶೇಷ ಪರಿಸ್ಥಿತಿಗಳಲ್ಲಿ ಕೃಷಿ ಮಾಡಲಾಗುತ್ತದೆ. ಸೂಕ್ಷ್ಮಾಣುಗಳ (ವೈರಸ್) ಕೃಷಿಗೆ ಜೀವಂತ ಮಾಧ್ಯಮ ಬೇಕಾಗಿರುವುದರಿಂದ ಇವನ್ನು ವೃದ್ಧಿಯಾಗುತ್ತಿರುವ ತತ್ತಿಯೊಳಗೊ ಅಂಗಾಂಶಗಳ ಕೃತಕ ಬೆಳೆವಣಿಗೆಯಲ್ಲೊ ನಾಟಿ ಹಾಕಲಾಗುತ್ತದೆ. ಪದೇ ಪದೇ ಹೀಗೆ ಮಾಡಿ ಅನೇಕ ಸಂತತಿಗಳಾದ ಬಳಿಕ ತತ್ತಿಯ ಸಾರ, ಅಂಗಾಂಶಗಳ ಸಾರದಲ್ಲಿ ದುರ್ಬಲಗೊಂಡ ಸೂಕ್ಷ್ಮಾಣು ಇರುತ್ತದೆ. ಇದನ್ನು ಜೈವಿಕ ಔಷಧವಾಗಿ ಉಪಯೋಗಿಸಬಹುದು. ವಿಷಾಣುವಿನ ವಿಷದ ಬದಲು ಅದಕ್ಕೆ ಸ್ಫಟಿಕವನ್ನೋ, ಅಲ್ಯೂಮಿನಿಯಮ್ ಫಾಸ್ಫೇಟನ್ನೋ ಸೇರಿಸಿದಾಗ ವಿಷವಸ್ತು ಕಣಗಳಂತಾಗಿ ಮಾರ್ಪಟ್ಟು ಪ್ರಯೋಗಪಾತ್ರೆಯ ತಳದಲ್ಲಿ ಶೇಖರವಾಗುತ್ತದೆ. ಇದನ್ನು ಬೇರ್ಪಡಿಸಿ ಶುದ್ಧಿಮಾಡಿ ಕದಡನ್ನಾಗಿ ಮಾರ್ಪಡಿಸಿ ಜೈವಿಕ ಔಷಧಿಯಾಗಿ ಉಪಯೋಗಿಸಲಾಗುವುದು. ಇದು ಸಾಮರ್ಥ್ಯಗುಂದಿಸಿದ ಜೀವಿವಿಷದ ಉಪಯೋಗಕ್ಕಿಂತ ಉತ್ತಮ. ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಇಂಥ ಕದಡನ್ನು ಉಪಯೋಗಿಸಬಹುದು. ಪಟಿಕದಿಂದ ತಳ ಸೇರಿಸಿದ ಇಂಥ ವಿಷವಸ್ತುವನ್ನು ಒಂದೇ ಜೀವವಿಷದಿಂದ ತಯಾರುಮಾಡುವ ಬದಲು ಮೂರು ನಾಲ್ಕು ಜೀವವಿಷಗಳ ಮಿಶ್ರಣದಿಂದ ತಯಾರು ಮಾಡಲಾಗುತ್ತದೆ. ಇದನ್ನು ಕೊಡುವುದರಿಂದ ವ್ಯಕ್ತಿಗೆ ರೋಗನಿರೋಧಕ ಸಾಮರ್ಥ್ಯ ಒದಗಿಬರುವುದಕ್ಕೆ ಬೇಕಾದ ಕಾಲಾವಧಿಯಲ್ಲಿ ಅನೇಕ ತಿಂಗಳುಗಳು ಉಳಿತಾಯವಾಗುತ್ತದೆ. ಡಿಫ್ತೀರಿಯ , ಧನುರ್ವಾಯು, ನಾಯಿಕೆಮ್ಮು ಇವು ಮೂರು ರೋಗಾಣುಗಳ ವಿಷಗಳ ವಿಷಯದಲ್ಲಿ ಹೀಗೆ ಮಾಡುವುದು ವಾಡಿಕೆ. ಮೂರು ರೀತಿಯ ಪೋಲಿಯೊ ಸೂಕ್ಷ್ಮಾಣುಗಳ ಮಿಶ್ರಣವನ್ನು ಹೀಗೆ ತಯಾರುಮಾಡುವುದು ರೂಢಿಯಲ್ಲಿದೆ. ಇದೇ ರೀತಿ ವಿಷಮಜ್ವರ ಮತ್ತು ಧನುರ್ವಾಯುವಿನ ವಿಷಾಣುಗಳ ವಿಷಮಿಶ್ರಣವನ್ನೂ ತಯಾರಿಸಿದೆ. ಆದರೆ ವಿವಿಧ ವಿಷಾಣುಗಳ ವಿಷಮಿಶ್ರಣವನ್ನು ತಯಾರಿಸುವ ಕೇಂದ್ರದಲ್ಲೆ ಸೂಕ್ತವಾಗಿ ಮಾಡಲಾಗುವುದೇ ಹೊರತು ಚುಚ್ಚುಮದ್ದು ಚುಚ್ಚುವ ಕ್ಷಣದಲ್ಲಿ ಬೇಕಾಬಿಟ್ಟಿಯಾಗಿ ಬೆರೆಸುವುದಿಲ್ಲ.

೩. ಚಿಕಿತ್ಸೆ ನಿವಾರಣೆಗಾಗಿ ದೇಹದಲ್ಲಿ ಸ್ವಾಭಾವಿಕಪ್ರೋಟೀನಿನ ಬಳಕೆ. ಇದು ನಿರ್ದಿಷ್ಟ ಅಥವಾ ಅನಿರ್ದಿಷ್ಟ ಉದ್ದೇಶಗಳಿಗಾಗಿ ಬಳಸಬಹುದಾಗಿರುವ ಮಾರ್ಗ. ತಕ್ಕ ಪ್ರೋಟೀನುಗಳನ್ನೋ ವಸ್ತುಗಳ ಸಾರವನ್ನೋ ಅಲರ್ಜೆನ್ನುಗಳನ್ನೋ ಇಂಥ ಚಿಕಿತ್ಸೆಗೆ ಉಪಯೋಗಿಸಲಾಗುತ್ತದೆ.

೪. ಕೃತಕ ಲಸಿಕೆಗಳು: ವೈರಸ್ ಖಾಯಿಲೆಗಳಿಗೆ ಜೈವಿಕ ಔಷಧ ತಯಾರಿಸುವಾಗ ವಿಷಾಣುಗಳ ಬದಲಿಗೆ, ಇವುಗಳ ನಿರ್ದಿಷ್ಟ ಪ್ರೋಟೀನ್‌ನಷ್ಟೆ ತಯಾರಿಸುವ ಜೀನ್ ಅನ್ನು (ಡಿಎನ್ಎ ತುಣುಕು) ಕೃತಕವಾಗಿ ಯೀಸ್ಟ್, ಎಶ್ಚರಿಷಿಯಾ ಕೋಲಿ ಮುಂತಾದ ಸೂಕ್ಷ್ಮಜೀವಿಗಳಲ್ಲಿ ಹುದುಗಿಸಿ, ಬೆಳೆಸಿ ಶೇಖರಿಸಲಾಗಿದೆ. ತದನಂತರ ಈ ಪ್ರೋಟೀನ್‌ಗಳನ್ನು ಪ್ರತ್ಯೇಕಿಸಿ ಔಷಧ ತಯಾರಿಸಲಾಗುತ್ತದೆ. ಜೀವಂತ ಪ್ರಾಣಿಗಳಿಗೆ ನೀಡುವ ಹಿಂಸೆ ಇದರಿಂದ ನಿವಾರಣೆಯಾಗುವುದಲ್ಲದೆ, ಒಂದೇ ಕೃಷಿಯಲ್ಲಿ ಮೂರ್‍ನಾಲ್ಕು ರೋಗಾಣುಗಳ ಪ್ರತಿ ಔಷಧಗಳನ್ನು ತಯಾರಿಸಬಹುದು.

೫. ರೋಗ ತನಿಖೆಯ ಕ್ರಮದಲ್ಲಿ ಉಪಯೋಗಿಸುವಂಥವು: ಮೇಲಿನ ಗುಂಪುಗಳಲ್ಲಿರುವ ಅನೇಕ ವಸ್ತುಗಳ ಪ್ರೋಟೀನುಗಳು, ವಿಷವಸ್ತುಗಳು, ಟ್ಯುಬರ್‌ಕ್ಯುಲಿನ್ ಇತ್ಯಾದಿ.

೬. ನೈಸರ್ಗಿಕ ಏಕಾಣುನಿರೋಧಕ ಸೂಕ್ಷ್ಮಾಣುಗಳು : ಬ್ಯಾಕ್ಟೀರಿಯೋಫೇಜುಗಳು.

೭. ಇತರ ಜೈವಿಕ ಔಷಧಗಳು : ರಕ್ತದ್ರವ, ರಕ್ತದ್ರವದಲ್ಲಿರುವ ಆಲ್ಬುಮೆನ್ ಎಂಬ ಪ್ರೋಟೀನು, ಕುಸುಮರೋಗ (ಹಿಮೋಫೀಲಿಯಾ) ಚಿಕಿತ್ಸೆಗಾಗಿ ಬಳಸುವ ಆಂಟಿಹೀಮೋಫೀಲಿಕ್ ಗ್ಲಾಬ್ಯುಲಿನ್ (ಎಎಚ್‌ಜಿ), ರಕ್ತವನ್ನು ಗರಣೆ ಕಟ್ಟಿಸಬಲ್ಲ ವಿಶಿಷ್ಟ ಪ್ರೋಟೀನುಗಳು ಇವನ್ನೂ ಜೈವಿಕ ಔಷಧಿಗಳೆಂದೇ ಪರಿಗಣಿಸಿದೆ. ಇವು ದೇಹದಲ್ಲಿ ವಿಶಿಷ್ಟ ರಕ್ಷಣೆಯನ್ನು ಪ್ರಚೋದಕರೀತಿಯಲ್ಲಿ ಮಾಡುವುದಿಲ್ಲ. ಆದರೆ ಮಿಕ್ಕ ಜೈವಿಕ ಔಷಧಗಳಂತೆಯೇ ಇವುಗಳ ತಯಾರಿಕೆ, ಪರೀಕ್ಷೆ, ಸಂಗ್ರಹಣೆ, ಪ್ರಯೋಗ ಇವೆಲ್ಲವೂ ಇರುವುದರಿಂದ ಇವನ್ನು ಜೈವಿಕ ಔಷಧಗಳ ಪಟ್ಟಿಗೆ ಸೇರಿಸುವುದು ರೂಢಿಯಾಗಿದೆ. ಇದೇ ಗಣನೆಯಂತೆ ಜೈವಿಕ ಔಷಧಗಳ ಪಟ್ಟಿಗೆ ಸೇರಿರುವ ಇತರ ವಸ್ತುಗಳು ಇವು; (a) ರಕ್ತವರ್ಗಣೆ ಮಾಡಲು ಉಪಯೋಗಿಸುವ ಅಗ್ಲೂಟಿನಿನ್ನುಗಳು (b) ವಿಷಾಣುಗಳನ್ನು ಗುರುತಿಸಲು ಉಪಯೋಗಿಸುವ ಪ್ರತಿವಸ್ತುಗಳು (c) ರಕ್ತದಲ್ಲಿ ವಿಶಿಷ್ಟ ಗ್ಯಾಮಾಗ್ಲಾಬ್ಯುಲಿನುಗಳು ಇರುವುದನ್ನು ಪತ್ತೆ ಹಚ್ಚಬಲ್ಲ ವಿಷಾಣುಗಳು ಇಲ್ಲವೆ ಅವುಗಳ ಉತ್ಪನ್ನಗಳು (d) ವ್ಯಕ್ತಿಯಲ್ಲಿ ಒಗ್ಗದಿಕೆ ಎಂಬ ವಿಶೇಷ ಸೂಕ್ಷ್ಮತೆಯನ್ನು ಪತ್ತೆಮಾಡಲು ಉಪಯೋಗಿಸುವ ವಿಷಾಣುಗಳು, ಬೂಷ್ಟು, ಅಣಬೆಗಳು ಸಸ್ಯಪ್ರಾಣಿಗಳ ಸಾರಗಳು ಮತ್ತು ಉತ್ಪನ್ನಗಳು ಇತ್ಯಾದಿ. (ಎಸ್.ಆರ್.ಎಸ್)

**ಜೈವಿಕ ಗಡಿಯಾರಗಳು:** ಅನೇಕ ಜೈವಿಕ ಪ್ರಕ್ರಿಯೆಗಳು ಸುಮಾರು 24 ಗಂಟೆಗಳ ದೈನಿಕ ಅವಧಿಯಲ್ಲಿ ಕ್ರಮಬದ್ಧವಾಗಿ ಆವರ್ತನೆಯಾಗುವ ಪ್ರಮಾಣಾತ್ಮಕ ಮತ್ತು ಗುಣಾತ್ಮಕ ಬದಲಾವಣೆಗೆ ಒಳಗಾಗುತ್ತವೆ. ಪರಿಸರದ ಪರಿಸ್ಥಿತಿಗಳಾದ ಹಗಲು ಮತ್ತು ರಾತ್ರಿ ಕಾಲಗಳ ಪ್ರಕಾಶ ಮತ್ತು ಉಷ್ಣತೆ ಚಕ್ರಗಳು ಬದಲಾದರೂ ಈ 24 ಗಂಟೆಗಳ ಜೈವಿಕ ಲಯ ಬದಲಾಗದೆ ಉಳಿಯುತ್ತದೆ. ಹೀಗೆ ಈ ಲಯ ಸ್ಥಿರ ಪರಿಸ್ಥಿತಿಗಳಲ್ಲೂ ಉಳಿಯುವುದು ಜೀವಿಯಲ್ಲಿ ಒಂದು ರೀತಿಯ ಗಡಿಯಾರ ಕ್ರಿಯಾವಿನ್ಯಾಸ (ಮೆಕ್ಯಾನಿಸಮ್) ಇದೆ ಎಂಬುದನ್ನು ಸೂಚಿಸುತ್ತದೆ. ಇದೇ ಜೈವಿಕ ಗಡಿಯಾರ (ಬಯೊಲಾಜಿಕಲ್ ಕ್ಲಾಕ್). ಜೀವಿಯ ಶಾರೀರಿಕ ಪ್ರಕ್ರಿಯೆಗಳ ಕಾಲನಿಯಮಕ್ಕೆ ಜೈವಿಕ ಗಡಿಯಾರವೇ ಕಾರಣ.

ಬಗೆಬಗೆಯ ಪ್ರಾಯೋಗಿಕ ಪರಿಸ್ಥಿತಿಗಳಲ್ಲಿ ಜೈವಿಕ ಲಯಗಳನ್ನು ಅಭ್ಯಸಿಸುವುದರ ಮೂಲಕ ಈ ಗಡಿಯಾರದ ಕ್ರಿಯಾವಿನ್ಯಾಸದ ಸ್ವಭಾವವನ್ನು ಗೊತ್ತುಪಡಿಸಲು ಪ್ರಯತ್ನಿಸಲಾಗಿದೆ. ಇಂಥ ಪ್ರಯೋಗಗಳ ಫಲವಾಗಿ ಜೈವಿಕ ಗಡಿಯಾರದ ಲಕ್ಷಣಗಳ ಬಗ್ಗೆ ಇಷ್ಟು ತಿಳಿದಿದೆ : 1. ಇದು ಜೀವಿಯ ಹುಟ್ಟಿನಿಂದಲೇ ಬರುವಂಥದು; 2. ಸಾಮಾನ್ಯವಾಗಿ, (ಅಂದರೆ ಯಾವಾಗಲೂ ಅಲ್ಲ) ಲಯದ ಅವಧಿ 24 ಗಂಟೆಗಳಿಗಿಂತ ಕೊಂಚ ಹೆಚ್ಚು ಅಥವಾ ಕಡಿಮೆಯಾಗಿರುತ್ತದೆ (ಇದಕ್ಕೆ ದೈನಿಕ ಲಯ ಎಂದು ಹೆಸರು); 3. ಈ ಅವಧಿ ಉಷ್ಣತೆಯಿಂದ ಸ್ವಲ್ಪವೇ ಸ್ವಲ್ಪ ಬದಲಾಗಬಹುದು ಅಥವಾ ಬದಲಾಗದೇ ಇರಬಹುದು 4. ಚಯಾಪಚಯವೇ ಆಗಲಿ, ಪ್ರತಿಬಂಧಕಗಳಾಗಲಿ, ಔಷಧ ವಸ್ತುಗಳಾಗಲಿ, ಮತ್ತಿತರ ರಾಸಾಯನಿಕಗಳಾಗಲಿ ಈ ಅವಧಿಯ ಮೇಲೆ ಪರಿಣಾಮ ಉಂಟುಮಾಡವು; 5. ಲಯದ ಪ್ರಾವಸ್ಥೆಯು (ಫೇಸ್) ಪ್ರದೀಪ್ತಿ ಅಥವಾ ಉಷ್ಣತಾ ಚಕ್ರಗಳ ನಿಯಂತ್ರಣಕ್ಕೆ ಒಳಗಾಗಿದೆ.

ಜೈವಿಕ ಗಡಿಯಾರದ ಸ್ವಭಾವದ ಬಗ್ಗೆ ಎರಡು ಪರಿಕಲ್ಪನೆಗಳುಂಟು: 1. ಇದು ತನ್ನ ಕಾಲದ ಅಂತರಗಳನ್ನು ತಾನೇ ರೂಪಿಸಿಕೊಳ್ಳಬಲ್ಲ ಸ್ವಾಯತ್ತ ವ್ಯವಸ್ಥೆ; 2. ಇದು ತನಗೆ ಒದಗಿಸಲಾದ ಮಾಹಿತಿಯ ಆಧಾರದ ಮೇಲೆ ಕಾಲವನ್ನು ಸೂಚಿಸುವ ವ್ಯವಸ್ಥೆಯೇ ಹೊರತು ಇದಕ್ಕೆ ಸ್ವತಂತ್ರವಾದ ಕಾಲನಿಯಮನ ಕ್ರಿಯಾವಿನ್ಯಾಸ ಇಲ್ಲ.

ಭೂಮಿಯ ಸುತ್ತುವಿಕೆಯಿಂದಾಗಿ ಭೂಭೌತ ಬಲಗಳಲ್ಲಿ ಹೆಚ್ಚಿನವು ತಮ್ಮ ತೀವ್ರತೆ, ಸದಿಶ ಮುಂತಾದ ಗುಣಗಳಲ್ಲಿ 24 ಗಂಟೆಗಳ ವ್ಯತ್ಯಾಸಗಳಿಗೆ ಒಳಗಾಗುತ್ತವೆ. ಭೂಕಾಂತತೆ, ವಿಶ್ವಕಿರಣ (ಕಾಸ್ಮಿಕ್ ರೇಡಿಯೇಷನ್), ಗುರುತ್ವ ಇತ್ಯಾದಿ ಲಯದ ಬಲಗಳು ಪ್ರಯೋಗಶಾಲೆಗಳ ಸ್ಥಿರ ಪರಿಸ್ಥಿತಿಗಳನ್ನು ವ್ಯಾಪಿಸುವುದು ಸರ್ವವಿದಿತ. ಆದ್ದರಿಂದ ಇಂಥ ಒಂದು ಅಥವಾ ಹಲವಾರು ಭೂಭೌತ ಬಲಗಳ ಲಯಬದ್ಧ ಬದಲಾವಣೆಗಳಿಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬಲ್ಲ ಒಂದು ಜೀವಿಯು, ಸ್ಥಿರವೆಂದು ಹೇಳಲಾಗುವ ಪರಿಸ್ಥಿತಿಗಳಲ್ಲಿ ತನ್ನ ಚಟುವಟಿಕೆಗಳನ್ನು ಸುಲಭವಾಗಿ, ಕಾಲಕ್ಕೆ ಅನುಗುಣವಾಗಿ ಹೊಂದಿಸಿಕೊಂಡು ಸಾಗಿಸಬಲ್ಲದು. ಈ ಕಾಲನಿಯಮನ ಮಾಹಿತಿ ಜೀವಿಯ ಹೊರಗಿನ ಪರಿಸರದಲ್ಲಿ ಉದ್ಭವಿಸುವುದರಿಂದ ಈ ಅವಧಿ ಉಷ್ಣತೆಯ ಪ್ರಭಾವದಿಂದ ಮುಕ್ತವಾಗಿರುವುದೆಂದೂ, ರಾಸಾಯನಿಕ ಕ್ಷೋಭೆಗಳಿಂದ ಇದು ಪ್ರಭಾವಿತವಾಗದೆಂದೂ ನಿರೀಕ್ಷಿಸಬಹುದು. ಇದುವರೆಗೆ ಯಾವ ಭೂಭೌತ ಬಲವನ್ನೂ ಕಾಲನಿಯಮಜನಕವೆಂದು ತೋರಿಸಲು ಸಾಧ್ಯವಾಗಿಲ್ಲದಿರುವುದು ಈ ಪರಿಕಲ್ಪನೆಯ ದೌರ್ಬಲ್ಯ. ಆದರೂ ಭೂಕಾಂತತೆ, ವಿಶ್ವಕಿರಣ, ಸ್ಥಿರಭೂವಿದ್ಯುತ್ ಕ್ಷೇತ್ರ ಮುಂತಾದ 24 ಗಂಟೆಗಳಿಗೊಮ್ಮೆ ಪುನರಾವರ್ತಿತವಾಗುವ

ಸರ್ವವ್ಯಾಪಿ ಭೂಭೌತ ಬಲಗಳೆಲ್ಲವೂ ಜೀವಂತ ವಸ್ತುಗಳ ಮೇಲೆ ಪ್ರಭಾವವನ್ನು ಬೀರುವುವು ಎಂದು ತೋರಿಸಲಾಗಿದೆ.

ಸ್ವಾಯುತ್ತ ಗಡಿಯಾರ ಪರಿಕಲ್ಪನೆಯ ಪ್ರಕಾರ ಜೈವಿಕ ಗಡಿಯಾರವು ತನ್ನ ಕಾಲದ ಅಂತರಗಳನ್ನು ತಾನೇ ರೂಪಿಸಿಕೊಳ್ಳುವ ವ್ಯವಸ್ಥೆ. ಅಂದರೆ ಇದೊಂದು ಗತಿಕಾರಕ (ಪೇಸ್ ಮೇಕರ್). ತಮ್ಮ ಅವಸ್ಥೆಗಳನ್ನು ಬದಲಾಯಿಸಬಲ್ಲ ಹಾಗೂ ಉಷ್ಣತೆಯ ಪ್ರಭಾವದಿಂದ ಮುಕ್ತವಾಗಿರುವ ಲಯಗಳನ್ನು ಪ್ರೇರಿಸಲು ಅವಶ್ಯವಾಗಿರುವ ಎಲ್ಲ ಗುಣಗಳನ್ನೂ ಪಡೆದಿರುವ ಗಡಿಯಾರ ಇದು ಎಂದು ಭಾವಿಸಲಾಗಿದೆ. ವಂಶವಿಕಾಸದ ಹಾದಿಯಲ್ಲಿ ಮುಂದುವರಿಯುತ್ತಿದ್ದ ಜೀವಿಗಳು 24 ಗಂಟೆಗಳ ಉದ್ದದ ಅವಧಿಗಳನ್ನು ಅಳೆಯಲು ಸಮರ್ಥವಾಗಿರುವ ಈ ಗಡಿಯಾರಗಳನ್ನು ರೂಪಿಸಿಕೊಂಡಿವೆ ಎನ್ನಲಾಗಿದೆ. ಸ್ವಾಭಾವಿಕ ನೆಲೆಗಳಲ್ಲಿ ಈ ಗಡಿಯಾರದ ಸಂಕೀರ್ಣ ವ್ಯವಸ್ಥೆ ಹಗಲು–ರಾತ್ರಿಗಳ ಹಾಗೂ ಉಷ್ಣತೆಯ ಶಿಸ್ತಿಗೆ ಒಳಪಟ್ಟಿದೆ. ಆದರೆ ಪ್ರಯೋಗಶಾಲೆಗಳ ಸ್ಥಿರ ಪರಿಸ್ಥಿತಿಗಳಲ್ಲಿ ಇದು ತನ್ನಲ್ಲಿ ಅಂತರ್ಗತವಾಗಿರುವ ಸುಮಾರು 24 ಗಂಟೆಗಳ ದೈನಿಕ ವೇಗದಿಂದ ನಡೆಯುತ್ತದೆ.

ಈ ಬಗೆಯ ಸಂಬಂಧಕ ಗಡಿಯಾರಕ್ಕೆ (ಎಸ್ಕೇಪ್‌ಮೆಂಟ್ ಕ್ಲಾಕ್) ಜೀವಭೌತ ತಳಹದಿ ಇರಬೇಕೆಂದು ನಿರೀಕ್ಷಿಸುವುದು ಸಹಜ. ಆದರೆ ಇದರ ವಾಸ್ತವಿಕ ಕ್ರಿಯಾ ವಿನ್ಯಾಸವನ್ನು ಅರ್ಥ ಮಾಡಲು ಆಗಿಲ್ಲ. ಪ್ರಾಣಿಗಳ ಹಾಗೂ ಸಸ್ಯಗಳ ಲಯಗಳ ಅವಧಿಯನ್ನು ಇಲ್ಲವೆ ಅವಸ್ಥೆಯನ್ನು ಬದಲಾಯಿಸುವ ಪ್ರಯತ್ನಗಳಲ್ಲಿ ಅನೇಕ ಬಗೆಯ ರಾಸಾಯನಿಕ ಪ್ರತಿಬಂಧಕಗಳನ್ನು, ಪ್ರಚೋದಕಗಳನ್ನು ಮತ್ತು ಔಷಧಗಳನ್ನು ಬಳಸಲಾಗಿದೆ. ಇಂಥ ಬಳಕೆಯಿಂದ ಕೆಲವು ಲಯಗಳ ವೈಶಾಲ್ಯವನ್ನು ಶೂನ್ಯಕ್ಕೆ ಇಳಿಸಲಾಗಿದೆಯಾದರೂ ಅವಧಿಯಲ್ಲಿ ಕೆಲವೇ ವಾಸ್ತವ ವ್ಯತ್ಯಾಸಗಳನ್ನು ಸಾಧಿಸಲು ಸಾಧ್ಯವಾಗಿದೆ. ಜೈವಿಕ ಲಯಗಳ ಹೆಚ್ಚಿನ ಗುಣಗಳನ್ನು ಈ ಪರಿಕಲ್ಪನೆಯಲ್ಲಿ ವಿವರಿಸಲಾಗಿದೆಯಾದರೂ ಜೀವಕೋಶಗಳ ವಿವಿಧ ಭಾಗಗಳಿಗೂ ಅವುಗಳ ಕ್ರಿಯಾಚಟುವಟಿಕೆಗೂ ಇರುವ ಸಂಬಂಧಗಳನ್ನು ಸ್ಪಷ್ಟವಾಗಿ ನಿಷ್ಕರ್ಷಿಸಲಾಗಿಲ್ಲ. ಈ ಕ್ಲಿಷ್ಟತೆಯ ನಿವಾರಣೆಯ ಪ್ರಯತ್ನದಲ್ಲಿ ದೂತ ಆರ್‌ಎನ್‌ಎಯ ನೆರವಿನಿಂದ ನಡೆಯುವ ಪ್ರತಿಸೃಜನ ಆವರ್ತನಗಳನ್ನು ವಿವರಿಸುವ ಮಾದರಿಯೊಂದನ್ನು ರೂಪಿಸಲಾಗಿದೆ. ಪ್ರತಿಯೊಂದು ಜೀವಕೋಶದಲ್ಲೂ ಕ್ರೋನಾನ್‌ಗಳೆಂಬ ನೂರಾರು ರಚನೆಗಳಿವೆಯೆಂದೂ ಇವು ಒಂದೊಂದು 200–2000 ಸಿಸ್ಟ್ರಾನುಗಳನ್ನೊಳಗೊಂಡ ಅಖಂಡ ಬಹುಸಿಸ್ಟ್ರಾನ್ ಸಂಕೀರ್ಣ ಎಂದೂ ತರ್ಕಿಸಲಾಗಿದೆ. ಕ್ರೋನಾನಿನ ಒಂದು ತುದಿಯಿಂದ ದೂತ ಅಣುಗಳ ಸಂಶ್ಲೇಷಣೆ ಆರಂಭವಾಗಿ ಕ್ರಮಾನುಗತವಾಗಿ ಮುಂದುವರಿದು ಇನ್ನೊಂದು ತುದಿಯಲ್ಲಿ ಕೊನೆಗೊಳ್ಳುತ್ತದೆ. ಸಿಸ್ಟ್ರಾನುಗಳ ನಡುವೆ ಅನೇಕ ರೀತಿಯ ಅಂತರಕ್ರಿಯೆಗಳು ನಡೆಯುತ್ತಿದ್ದು ಇವು ಒಂದು ಸಿಸ್ಟ್ರಾನಿನ ಪ್ರತಿ ಸೃಜನೆಯನ್ನು ನಿಲ್ಲಿಸಿ ಇನ್ನೊಂದರದ್ದನ್ನು ಪ್ರಾರಂಭಿಸುವುದರಿಂದ ಒಂದು ಸಂಪೂರ್ಣ ಕ್ರೋನಾನಿನ ಪ್ರತಿಸೃಜನೆಯ ದರ ಲಂಬಿತವಾಗುವುದು. ಅಲ್ಲದೆ ಹೀಗೆ ಒಂದು ಸಿಸ್ಟ್ರಾನಿನ ಪ್ರತಿಸೃಜನೆಯನ್ನು ನಿಲ್ಲಿಸಿ ಮತ್ತೊಂದರದ್ದನ್ನು ಪ್ರಾರಂಭಿಸುವುದಕ್ಕೋಸ್ಕರ ನವಜಾತ (ನ್ಯಾಸೆಂಟ್) ದೂತ ಆರ್‌ಎನ್‌ಎ ಕೋಶದ್ರವ್ಯದ ಒಳ ಸಾಗಿ ಅಲ್ಲಿ ಬಹುಪೆಪ್ಟೈಡಿನ ಸಂಶ್ಲೇಷಣೆಯನ್ನು ನಿರ್ದೇಶಿಸುತ್ತದೆ. ಹೀಗೆ ರೂಪುಗೊಂಡ ಬಹುಪೆಪ್ಟೈಡುಗಳಲ್ಲಿ ಕೆಲವು ಸಿಸ್ಟ್ರಾನುಗಳ ಪ್ರತಿಸೃಜನೆಯನ್ನು ಪ್ರಾರಂಭಿಸುತ್ತವೆ. ಈ ರೀತಿಯ ಸುತ್ತು ಬಳಸು ಪ್ರಯಾಣಕ್ಕೆ ಒಂದು ಸಂಪೂರ್ಣ ಕ್ರೋನಾನಿನ ಪ್ರತಿಸೃಜನೆಗೆ ಹಿಡಿಯುವ ಕಾಲಕ್ಕಿಂತ ಹೆಚ್ಚು ಕಾಲ ಬೇಕಾಗುತ್ತದೆ ಅಲ್ಲದೆ ಈ ಪೂರ್ಣಪ್ರಕ್ರಿಯೆ ಅವಧಿ ಮೂಲತಃ ವಿಸರಣ ಪ್ರಭಾವಗಳ (ಡಿಫ್ಯೂಷನ್ ಇನ್‌ಫ್ಲೂಯೆನ್ಸಸ್) ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದ ಇಡೀ ವ್ಯವಸ್ಥೆ ಉಷ್ಣತೆಯ ಪ್ರಭಾವದಿಂದ ಹೆಚ್ಚು ಕಡಿಮೆ ಮುಕ್ತವಾಗಿದೆ. ಒಂದು ಕ್ರೋನಾನಿನ ಅಂತ್ಯ ಸಿಸ್ಟ್ರಾನಿನ ಪ್ರತಿಸೃಜನೆ ಮುಗಿದ ಮೇಲೆ ಕೊಂಚಕಾಲ ಕೋಶದ್ರವ್ಯದಲ್ಲಿ ಪ್ರೋಟೀನ್ ಸಂಶ್ಲೇಷಣೆಯೂ ಸಿಸ್ಟ್ರಾನ್ ಉತ್ಪಾದನೆಯನ್ನು ಆರಂಭಿಸುವ ವಸ್ತುವಿನ ಸಂಶ್ಲೇಷಣೆಯೂ ನಡೆಯುತ್ತವೆ. ಈ ವಸ್ತು ಸಂಗ್ರಹಗೊಂಡು ಕೆಲ ವೇಳೆಯ ಅನಂತರ ನ್ಯೂಕ್ಲಿಯಸಿನ ಒಳಗೆ ಹೋಗಿ ಕ್ರೋನಾನಿನ ಪ್ರಾರಂಭಿಕ ಸಿಸ್ಟ್ರಾನನ್ನು ಪುನರುತ್ಪ್ರೇರಣಗೊಳಿಸುತ್ತದೆ. ಹೀಗೆ ಪ್ರತಿಸೃಜನೆಗೆ ಒಳಗಾಗುವ ಕ್ರೋನಾನ್ ಬಲು ಉದ್ದವಾಗಿರುವುದರಿಂದ ಈ ಚಟುವಟಿಕೆಗೆ ಪೂರ್ಣಗೊಳ್ಳಲು ಸರಿಸುಮಾರು 24 ಗಂಟೆಗಳು ಬೇಕು. ಬೆಳಕು ಮತ್ತು ಉಷ್ಣತೆ ಚಕ್ರಗಳ ಪ್ರಾವಸ್ಥಾ ಪ್ರವರ್ತಕ ಸಾಮರ್ಥ್ಯಕ್ಕೆ ಒಂದು ವಿವರಣೆ ಸ್ಪರ್ಶಕೋಶೀಯ ಘಟಕಗಳಿಂದ ಈ ಪ್ರತಿರೂಪವನ್ನು ರಚಿಸಲು ಸಾಧ್ಯವಿರುವುದರಿಂದ ಇದಕ್ಕೆ ಆರೋಪಿಸುವ ಹಲವಾರು ಲಕ್ಷಣಗಳನ್ನು ನೇರವಾಗಿ ಪರೀಕ್ಷಿಸಬಹುದು.

ಜೈವಿಕ ಗಡಿಯಾರದ ಗತಿಕಾರಕ ಅಂಗವೆನ್ನುವುದೇನಾದರೂ ಜೀವಿಗಳಲ್ಲಿರಬಹುದೇ ಎಂದು ಪ್ರಯೋಗಗಳ ಮೂಲಕ ಪರೀಕ್ಷಿಸಲಾಗಿದೆ. ಮಾನವನ ಮಸ್ತಿಷ್ಕದಲ್ಲಿರುವ ಪೀನಿಯಲ್ ಗ್ರಂಥಿಯು ಇಂಥ ಗತಿಕಾರಕವಾಗಿರಬಹುದೆಂಬ ಗುಮಾನಿ ಇದೆ. ಪೀನಿಯಲ್ ಗ್ರಂಥಿಯು ಬೆಳಕು ಹಾಗೂ ತಾಪಮಾನದ ಗತಿ ಚಕ್ರಗಳಿಗೆ ಪ್ರತಿಸ್ಪಂದಿಸುವುದು ಈ ಗುಮಾನಿಗೆ ಕಾರಣ. ಉರಗಗಳಲ್ಲಿ ಈ ಗ್ರಂಥಿ ಬೆಳಕು ಹಾಗೂ ತಾಪಮಾನಕ್ಕೆ ಪ್ರತಿಕ್ರಿಯಿಸುತ್ತದೆ.

***

**ಜೈವಿಕ ತಂತ್ರಜ್ಞಾನ:** ಇಂಜಿನಿಯರಿಂಗ್ ತತ್ವಗಳ ಆಧಾರದ ಮೇಲೆ ಜೀವಿಗಳನ್ನು ಬಳಸಿಕೊಂಡು ಉತ್ಪನ್ನ ಹಾಗೂ ಸೇವೆಗಳನ್ನು ಪಡೆಯುವ ತಾಂತ್ರಿಕ ವಿಜ್ಞಾನ ಹಂಗೇರಿಯ ಇಂಜಿನಿಯರ್ ಕಾರ್ಲ್ ಎರಿಕೇ 1919 ರಲ್ಲಿ 'ಜೈವಿಕ ತಂತ್ರಜ್ಞಾನ' ಎಂಬ ಪದವನ್ನು ಮೊದಲಬಾರಿಗೆ ಪರಿಚಯಿಸಿದ. ಜೀವವಿಜ್ಞಾನ, ರಸಾಯನಿಕ ವಿಜ್ಞಾನ ಹಾಗೂ ಇಂಜಿನಿಯರಿಂಗ್ ತತ್ವಗಳ ಆಧಾರಗಳ ಮೇಲೆ ರೂಪಿತವಾದ ಈ ಜೈವಿಕ ವಿಜ್ಞಾನ 20ನೇ ಶತಮಾನದ ಕೊನೆ ದಶಕಗಳಿಂದ ಎಲ್ಲರ ಗಮನ ಸೆಳೆಯು ತ್ತಿದೆ. ಜೀವಶಾಸ್ತ್ರ ತಳಿವಿಜ್ಞಾನ ಶಾಖೆಯಿಂದ ಪುಟಿದೆದ್ದು ಇಂದು ಕೃಷಿ, ಪಶುಸಂಗೋಪನೆ, ವೈದ್ಯಕೀಯ, ಔಷಧಿ ಉತ್ಪನ್ನ ಕ್ಷೇತ್ರಗಳಲ್ಲಿ ಹಾಗೂ ಪರಿಸರ ಸಂರಕ್ಷಣಾ ವಲಯಗಳಲ್ಲಿ ಪರಿಣಾಮಕಾರಿಯಾದ ಬದಲಾವಣೆ ತರುತ್ತಿದೆ.

ಜೀವಿಕೋಶಗಳನ್ನು ಅಥವಾ ಜೀವಿಗಳನ್ನು ಪ್ರಚೋದಿಸಿ ಜೈವಿಕ ಕಾರ್ಖಾನೆಗಳ ಮಾದರಿಯಲ್ಲಿ ಪ್ರೋಟೀನ್ ಔಷಧಿಗಳಾದ ಇನ್ಸುಲಿನ್, ಇಂಟರ್‌ಫೆರಾನ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿ ಮಾಡಬಹುದು.

1973ರಲ್ಲಿ ಸ್ಟಾನ್ಲಿ ಕೊಹೆನ್ ಮತ್ತು ಹರ್ಬರ್ಟ್ ಬಾಯರ್ ವಿಜ್ಞಾನಿಗಳು ಮಾನವನ ತಳಿಗುಣ ಜೀನ್ ಒಂದನ್ನು ಬ್ಯಾಕ್ಟೀರಿಯಾ ಕೋಶಕ್ಕೆ ವರ್ಗಾಯಿಸಿದರು. ಆ ಬ್ಯಾಕ್ಟೀರಿಯಾವನ್ನು ಪ್ರಚೋದಿಸಿ ವರ್ಗಾಯಿಸಿದ ಜೀನ್‌ನಿಂದ ಪ್ರೋಟೀನ್ ಉತ್ಪಾದಿಸಿದರು. ನೈಸರ್ಗಿಕವಾದ ಪ್ರಜನನ ಕ್ರಿಯೆ ಹೊರತು ಪಡಿಸಿ, ಸಂಬಂಧವೇ ಇಲ್ಲದ ಸೂಕ್ಷ್ಮ ಜೀವಿಗೆ ಮಾನವ ಜೀನನ್ನು ಸಂಕರಣಗೊಳಿಸಿದರು. ಈ ತಂತ್ರಜ್ಞಾನಕ್ಕೆ ಜೆನಿಟಿಕ್ ಇಂಜಿನಿಯರಿಂಗ್ ಎನ್ನುವರು. ಈ ತಂತ್ರಜ್ಞಾನದ ಆವಿಷ್ಕಾರದಿಂದ ಜೈವಿಕ ತಂತ್ರಜ್ಞಾನದ ದಿಕ್ಕೆ ಬದಲಾಯಿತು. ಮಾನವ ಅಥವಾ ಯಾವುದೇ ಪ್ರಾಣಿಯ ಜೀನ್‌ಗಳನ್ನು ಸಸ್ಯ, ಸೂಕ್ಷ್ಮಜೀವಿ, ಇತರೆ ಪ್ರಾಣಿಗಳಿಗೆ ವರ್ಗಾಯಿಸಲು ಜೆನಿಟಿಕ್ ಇಂಜಿನಿಯರಿಂಗ್ ಬಳಕೆ ಆರಂಭವಾಯಿತು. ಜೈವಿಕ ತಂತ್ರಜ್ಞಾನ ಏರುಗತಿಯಲ್ಲಿ ಸಾಗಲು ಜೆನಿಟಿಕ್ ಇಂಜಿನಿಯರಿಂಗ್ ಸಾಧನಗಳ ಬಳಕೆಯಾದವು. ಈ ತಂತ್ರಜ್ಞಾನದಿಂದ ದೊಡ್ಡ ಪ್ರಮಾಣದಲ್ಲಿ ಸುರಕ್ಷಿತವಾದ ಔಷಧಿಗಳನ್ನು ತಯಾರಿಸಲು ಸಾಧ್ಯವಾಗಿದೆ. ಉದಾ: ನೂರು ಗ್ರಾಂ ಇನ್ಸುಲಿನ್ ಪಡೆಯಲು ಔಷಧಿ ಕಂಪನಿಗಳು 50 ಹಸು ಮತ್ತು 100 ಹಂದಿಗಳನ್ನು ಕೊಂದು ಅವುಗಳ ಮೇದೋಜೀರಕ ಅಂಗದಿಂದ ಇನ್ಸುಲಿನ್ ಸಂಸ್ಕರಿಸುತ್ತಿದ್ದರು. ಜೆನಿಟಿಕ್ ಇಂಜಿನಿಯರಿಂಗ್ ವಿಧಾನದಿಂದ ಮನುಷ್ಯನ ಇನ್ಸುಲಿನ್ ಜೀನ್ ಅನ್ನು ಅಪಾಯವಿಲ್ಲದ ಬ್ಯಾಕ್ಟೀರಿಯಾಗಳಿಗೆ ವರ್ಗಾಯಿಸಲಾಗುತ್ತದೆ. ಈ ಕುಲಾಂತರಿ ಬ್ಯಾಕ್ಟೀರಿಯಾಗಳನ್ನು ದೊಡ್ಡ ಬ್ಯಾರೆಲ್ ರೂಪದ ಬಯೋರಿಯಾಕ್ಟರ್ ಗಳಲ್ಲಿ ಬೆಳೆಸಿ, ಅವುಗಳನ್ನು ಪ್ರಚೋದಿಸಿ ಇನ್ಸುಲಿನ್ ಉತ್ಪತ್ತಿ ಮಾಡಲಾಗುತ್ತಿದೆ. ನಮ್ಮ ದೇಶದ ಶಾಂತ ಬಯೋಟೆಕ್, ಬಯೋಕಾನ್ ಕಂಪನಿಗಳು ಈ ತಂತ್ರಜ್ಞಾನಗಳಲ್ಲಿ ಮುಂದಿವೆ. 200 ಗ್ರಾಂ ಇನ್ಸುಲಿನ್ ಪಡೆಯಲು ಸಾವಿರ ಲೀಟರ್ ಸಾಮರ್ಥ್ಯದ ಬಯೋರಿಯಾಕ್ಟರ್ ಸಾಕು!

1975ರಲ್ಲಿ ಜಾರ್ಜ್ ಕೊಹ್ಲರ್ ಮತ್ತು ಸೀಸರ್ ಮಿಲ್‌ಸ್ಟನ್ ಎಂಬ ವಿಜ್ಞಾನಿಗಳು ಹೈಬ್ರಿಡೋಮಾ ತಂತ್ರಜ್ಞಾನವನ್ನು ಪರಿಚಯಿಸಿದರು. ನೊಬೆಲ್ ಪ್ರಶಸ್ತಿ ಪಡೆದ ಈ ತಂತ್ರಜ್ಞಾನದಿಂದ ಬೃಹತ್ ಪ್ರಮಾಣದಲ್ಲಿ ರೋಗನಿರೋಧಕ ಲಸಿಕೆ ತಯಾರಿಸಲು ಸಾಧ್ಯವಾಗಿದೆ. ವಿವಿಧ ರೀತಿಯ ರೋಗಾಣುಗಳ ಪತ್ತೆಗೆ, ಕ್ಯಾನ್ಸರ್ ಕೋಶಗಳ ಪತ್ತೆಗೆ ಈ ತಂತ್ರಜ್ಞಾನ ಬಳಕೆಯಾಗುತ್ತಿದೆ. ಕ್ಯಾನ್ಸರ್ ಚಿಕಿತ್ಸೆಗೂ ಇದು ಸಹಕಾರಿ. ರೋಗ ನಿರೋಧಕ ಲಸಿಕೆ ಉತ್ಪತ್ತಿ ಅತ್ಯಂತ ಸಂಕೀರ್ಣ, ಕಠಿಣ ಹಾಗೂ ನಿಧಾನಗತಿಯದ್ದಾಗಿದ್ದರಿಂದ ವಿಜ್ಞಾನಿಗಳು ಸರಳ ವಿಧಾನದ ಪತ್ತೆ ಬಗ್ಗೆ ಸಂಶೋಧನೆ ನಡೆಸಿದ್ದರು. ಹೈಬ್ರಿಡೋಮ ತಂತ್ರಜ್ಞಾನದ ಆವಿಷ್ಕಾರದಿಂದ ದೊಡ್ಡ ಪ್ರಮಾಣದಲ್ಲಿ ಲಸಿಕೆ ತಯಾರಿಸಬಹುದು. ಧಿಡೀರನೆ ಕಾಣಿಸಿಕೊಳ್ಳುವ ಇನ್‌ಫ್ಲೂಯೆನ್ಜಾ, ಆಂಥ್ರಾಕ್ಸ್ ಮುಂತಾದ ರೋಗಗಳಿಗೆ ತಕ್ಷಣ ಈ ಲಸಿಕೆಗಳನ್ನು ನೀಡಿ ಲಕ್ಷಾಂತರ ಜನರ ಮತ್ತು ಜಾನುವಾರುಗಳ ಪ್ರಾಣ ರಕ್ಷಿಸಬಹುದು.

1997ರಲ್ಲಿ ವೆಲೆಂಡರ್ ಮತ್ತು ಅವನ ಸಹೋದ್ಯೋಗಿಗಳು ಮಾನವನ ಪ್ರೋಟೀನ್ ಸಿ ಉತ್ಪತ್ತಿ ಮಾಡುವ ಜೀನ್ ಹಂದಿಗೆ ವರ್ಗಾಯಿಸಿದರು. ಹಂದಿ ನೀಡುವ ಹಾಲಿನಲ್ಲಿ ಮಾನವ ಪ್ರೋಟೀನ್ ಸಿ ಪತ್ತೆ ಹಚ್ಚಿದರು! ಪ್ರೋಟೀನ್ ಸಿ ಕೊರತೆಯಿಂದ ನರಳುವ ಮಾನವರಿಗೆ ಹೀಗೆ ಉತ್ಪತ್ತಿ ಮಾಡಿದ ಔಷಧಿ ನೀಡಿ ಅವರನ್ನು ಈ ತೊಂದರೆಯನ್ನು ನಿವಾರಿಸಲಾಯಿತು.. ಈ ಪ್ರೋಟೀನ್ ಕೊರತೆ ಇದ್ದರೆ ರಕ್ತ ಹೆಪ್ಪುಗಟ್ಟುವುದಿಲ್ಲ!

ಹೀಗೆ ಒಂದು ನಿರ್ದಿಷ್ಟ ಜೀನ್‌ಅನ್ನು ನಾವು ಕೃಷಿ ಸಸ್ಯಗಳಿಗೆ ಅಥವಾ ಪ್ರಾಣಿಗಳಿಗೆ ವರ್ಗಾಯಿಸಿ ಕುಲಾಂತರಿ ಸಸ್ಯಗಳನ್ನು, ಪ್ರಾಣಿಗಳನ್ನು ಪಡೆಯಬಹುದು. ಇದೇ ರೀತಿ

ಕುಲಾಂತರಿ ಹಸು, ಹಂದಿ, ಕುರಿಗಳನ್ನು ಸೃಷ್ಟಿಸಲಾಗಿದೆ. ಅಂತಹ ಸಸ್ಯಗಳ ಅಥವಾ ಪ್ರಾಣಿಗಳ ತದ್ರೂಪಿಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಿ ಮಾನವ ಸಮಾಜಕ್ಕೆ ಬೇಕಾದ ಪ್ರೊಟೀನ್ ರಾಸಾಯನಿಕಗಳನ್ನು ಪಡೆಯಲಾಗುತ್ತಿದೆ. (ನೋಡಿ ಕುಕಲಾಂತರಿ ಪ್ರಾಣಿಗಳು).

ಇತ್ತೀಚೆಗೆ ಸ್ವಿಸ್ ದೇಶದ ಇಂಗೋಪೆಟ್ರಿಕಸ್, ಪೀಟರ್ ಬೇಯರ್ ಕಬ್ಬಿಣ ಅಂಶ ಹಾಗೂ ಎ ಜೀವಸತ್ವ ಉತ್ಪಾದಿಸುವ ಜೀನ್‍ಗಳನ್ನು ಸೂಕ್ಷ್ಮಜೀವಿ ಹಾಗೂ ಇತರೆ ಸಸ್ಯಗಳಿಂದ ಬೇರ್ಪಡಿಸಿ ಭತ್ತಕ್ಕೆ ಸಂಕರಣ ಗೊಳಿಸಿದ್ದಾರೆ. ಇದನ್ನು ಬಂಗಾರದ ಅಕ್ಕಿ ಎಂದು ನಾಮಕರಣ ಮಾಡಿ ಕಬ್ಬಿಣದ ಅಂಶ ಹಾಗೂ ಜೀವಸತ್ವ ಕೊರತೆಯಿಂದ ನರಳುತ್ತಿರುವ ದೇಶಗಳಿಗೆ ಬಿಡುಗಡೆ ಮಾಡಿದ್ದಾರೆ. ಈ ಕುಲಾಂತರಿ ಅಕ್ಕಿ ಭಾರತದಲ್ಲೂ ಸಿಗುತ್ತದೆ.

ಜೈವಿಕ ತಂತ್ರಜ್ಞಾನದಿಂದ ಔಷಧಿಗಳು, ಜೀವಸತ್ವಗಳು ಅಗತ್ಯ ಪೋಷಕಾಂಶ, ಜೀವರಕ್ಷಕ ಲಸಿಕೆಗಳನ್ನು ಉತ್ಪಾದಿಸುವ ಜೀನ್‍ಗಳನ್ನು ಸೊಪ್ಪು, ಹಣ್ಣು ಬಿಡುವ ಸಸ್ಯ, ತರಕಾರಿಗಳಾದ ಟೊಮ್ಯಾಟೋ, ಕೋಸುಗಳಲ್ಲಿ ಅಂತರ್ಗತಗೊಳಿಸಿ ನಮಗೆ ಬೇಕಾದ ಕುಲಾಂತರಿ ಸಸ್ಯಗಳನ್ನು, ಪ್ರಾಣಿಗಳನ್ನು ಪಡೆಯಬಹುದಾಗಿದೆ. ಗಾಳಿಯಲ್ಲಿರುವ ಸಾರಜನಕವನ್ನು ಹೀರಿ ಬೆಳೆಯುವ ಭತ್ತದ ತಳಿಗಳು ಮಾರುಕಟ್ಟೆಗೆ ಬರಲಿವೆ. ಅತಿ ಬಿಸಿಲು ಅಥವಾ ಅತಿ ಚಳಿಯನ್ನು ತಡೆಯಬಲ್ಲ ಸಸ್ಯಗಳು, ಅತಿ ಲವಣಾಂಶ ವಿರುವ ಭೂಮಿಯಲ್ಲಿ ಬೆಳೆಯಬಹುದಾದ ಸಸ್ಯಗಳು, ಕಡಲೆಬೀಜ ಹಾಗೂ ಗೆಣಸುಗಳಲ್ಲಿ ಜೀರ್ಣಕಾರಿ ಅಂಶ ಇರುವ ತಳಿಗಳು ಬರಲಿವೆ. ಬ್ಯಾಕ್ಟೀರಿಯಾದ ಜೀನುಗಳನ್ನು ಬಳಸಿಕೊಂಡು ಉತ್ಪತ್ತಿ ಮಾಡುವ ಕುಲಾಂತರಿ ಜೈವಿಕ ಕೀಟನಾಶಕಗಳೂ ಲಭ್ಯವಾಗಿವೆ.

ಭಾರತ ದೇಶ ಒಳಗೊಂಡಂತೆ, ಜಗತ್ತಿನಾದ್ಯಂತ ಜೈವಿಕ ತಂತ್ರಜ್ಞಾನದ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಹಾಗಾಗಿ, ಭಾರತ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಗಳು ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುತ್ತಿವೆ. ವಿವಿಧ ಕ್ಷೇತ್ರಗಳಲ್ಲಿ ಜೈವಿಕ ವಿಜ್ಞಾನದ ಉಪಯೋಗಗಳು:

ಅ) ವೈದ್ಯಕೀಯ ಜೈವಿಕ ತಂತ್ರಜ್ಞಾನ :
1. ಆಂಟಿಬಯೋಟಿಕ್ಸ್ ಉತ್ಪಾದನೆ,
2. ಇನ್ಸುಲಿನ್, ಇಂಟರ್‌ಫೆರಾನ್, ಪ್ರೋಟೀನ್ ಸಿ ಮುಂತಾದ ಪ್ರೊಟೀನು ಔಷಧಿಗಳ ಉತ್ಪಾದನೆ.,
3. ರೋಗರಕ್ಷಕ ಲಸಿಕೆ,
4. ರೋಗಕಾರಕಗಳ ಪತ್ತೆ ಹಚ್ಚುವ ವಿಧಾನಗಳು,
5. ಆನುವಂಶೀಯ ರೋಗಗಳಿಗೆ ಚಿಕಿತ್ಸೆ.

ಆ) ಕೃಷಿ ಜೈವಿಕ ತಂತ್ರಜ್ಞಾನ :
1. ರೋಗನಿರೋಧಕ, ಹೆಚ್ಚು ಇಳುವರಿ ಕೊಡುವ ಆಹಾರ ತಳಿಗಳು,
2. ಅತಿಸಾರ, ಅತಿಚಳಿ ಪರಿಸ್ಥಿತಿಯಲ್ಲಿ ಕಡಿಮೆ ನೀರಿನಲ್ಲಿ ಬೆಳೆಯುವ ಆಹಾರ ತಳಿಗಳು,
3. ಅಂಗಾಂಶ ಕೃಷಿ ವಿಧಾನದಿಂದ ಔಷಧೀಯ ರಾಸಾಯನಿಕಗಳ ಉತ್ಪತ್ತಿ,
4. ಕುಲಾಂತರಿ ಸಸ್ಯಗಳು.

ಇ) ಪಶುಸಂಗೋಪನೆಯಲ್ಲಿ ಜೈವಿಕ ತಂತ್ರಜ್ಞಾನ :
1. ಹೆಚ್ಚು ಇಳುವರಿ ಕೊಡುವ ಜಾನುವಾರುಗಳು,
2. ರೋಗರಹಿತ ಜಾನುವಾರುಗಳು,
3. ಕುಲಾಂತರಿ ಪ್ರಾಣಿಗಳಿಂದ ಮಾನವನಿಗೆ ಅಗತ್ಯವಾದ ಪ್ರೋಟೀನ್ ಔಷಧಿಗಳ ಉತ್ಪಾದನೆ,
4. ಜಾನುವಾರುಗಳಿಗೆ ಬೇಕಾದ ಲಸಿಕೆ, ರಸದೂತಗಳು.

ಈ) ಔದ್ಯೋಗಿಕ ಜೈವಿಕ ತಂತ್ರಜ್ಞಾನ :
1. ಆಹಾರ, ಬೇಕರಿ, ಮುಂತಾದ ಉದ್ದಿಮೆಗಳಿಗೆ ಬೇಕಾದ ಕಿಣ್ವಗಳ ತಯಾರಿಕೆ,
2. ಸ್ಪಿರುಲೈನಾ ಮುಂತಾದ ಜೀವಿಗಳಿಂದ ಪ್ರೊಟೀನ್ ಉತ್ಪಾದನೆ,
3. ಸಿಟ್ರಿಕ್ ಆಮ್ಲ, ಲ್ಯಾಕ್ಟಿಕ್ ಆಮ್ಲ, ಗ್ಲಿಸರಾಲ್‍ಗಳ ಉತ್ಪಾದನೆ,
4. ಸೂಕ್ಷ್ಮಜೀವಿಗಳನ್ನು ಬಳಸಿಕೊಂಡು ಖನಿಜಗಳಾದ ಚಿನ್ನ ತಾಮ್ರಗಳ ಗಣಿಗಾರಿಕೆ.

ಉ) ಪರಿಸರ ಜೈವಿಕ ಜೈವಿಕ ತಂತ್ರಜ್ಞಾನ :
1. ಹಾನಿಕಾರಕ ರಾಸಾಯನಿಕಗಳಾದ ಕ್ಯಾಡ್‌ಮಿಯಂ, ಯುರೇನಿಯಂ, ಬೆನ್‌ಜೀನ್, ಟಾಲಿನ್‍ಗಳ ಸಂಸ್ಕರಣೆ,
2. ಚರ್ಮ ಹದ ಮಾಡುವ ಉದ್ದಿಮೆಗಳಿಂದ ಬಂದ ತ್ಯಾಜ್ಯ ವಸ್ತುಗಳ ವಿಲೇವಾರಿ,
3. ಮುನಿಸಿಪಲ್ ತ್ಯಾಜ್ಯಗಳ ಸಂಸ್ಕರಣೆ ಹಾಗೂ ವಿಲೇವಾರಿ.
4. ಪರಿಸರ ಮಲಿನತೆಯನ್ನು ಪತ್ತೆ ಹಚ್ಚುವ ವಿಧಾನಗಳು
5. ಅಪರೂಪದ, ವಿನಾಶದ ಅಂಚಿನಲ್ಲಿರುವ ವನ್ಯ ಪ್ರಾಣಿಗಳ ಪುನರುತ್ಪತ್ತಿ ಹಾಗೂ ಸಂರಕ್ಷಣೆ.

ಜೈವಿಕ ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗಳನ್ನು ತರುತ್ತಿದೆ. ಈ ಕಾರಣದಿಂದ ನಾಗರೀಕ ಸಮಾಜದಲ್ಲಿ ಜೈವಿಕ ತಂತ್ರಜ್ಞಾನದ ಬಗ್ಗೆ ಪರ ಹಾಗೂ ವಿರೋಧ ಮಾತುಗಳು, ಚರ್ಚೆಗಳು ಕೇಳಿಬರುತ್ತಿವೆ.

ಮೂಲತಃ ಜೀನ್‍ಗಳನ್ನು ಮಾನವನು ತನ್ನ ಅನುಕೂಲಕ್ಕೆ ತಕ್ಕಂತೆ, ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ಮಾರ್ಪಾಟು ಮಾಡುತ್ತಿರುವುದು ಕೆಲವರ ಪ್ರಕಾರ ಅಪವಿತ್ರ ಕ್ರಿಯೆ. ಈ ಬದಲಾವಣೆ ಪರಿಸರಕ್ಕೆ ಹಾನಿ ಮಾಡುತ್ತದೆ ಎನ್ನುವ ವಾದವಿದೆ. ಆಕಸ್ಮಿಕವಾಗಿ ರೋಗಕಾರಕ ಕುಲಾಂತರಿ ಜೀವಿಗಳು ಪ್ರಯೋಗಶಾಲೆಯಿಂದ ಹೊರಬಂದರೆ ಭಯಂಕರ ಸಮಸ್ಯೆ ಎದುರಾಗುವುದು ಎಂಬ ಭೀತಿ ಇದೆ. ಜೊತೆಗೆ ಶತ್ರುವಿಗೋ, ಭಯೋತ್ಪಾದಕರಿಗೋ ಸಿಕ್ಕರೆ ಜೈವಿಕ ಸಮರವಾದೀತು ಎಂಬ ಆತಂಕ!

ವಿಜ್ಞಾನ ಹಾಗೂ ತಂತ್ರಜ್ಞಾನದ ಪರಿಯೇ ಹೀಗೆ. ಹೊಸತಾಗಿ ಉಂಟಾದ ಬದಲಾವಣೆ ಎಲ್ಲಾ ಕಾಲಕ್ಕೂ ಮಾನವ ಸಮಾಜದಲ್ಲಿ ಆಂತಕ ಮೂಡಿಸಿವೆ. ಆದರೆ ತಂತ್ರಜ್ಞಾನಗಳು ತಡೆ ಇಲ್ಲದೆ ಮುನ್ನಡೆದಿವೆ. ಯಾವುದೇ ತಂತ್ರಜ್ಞಾನವಾಗಲಿ ಒಳ್ಳೆಯದ್ದಕ್ಕೂ ಬಳಸಬಹುದು, ಕೆಟ್ಟದ್ದಕ್ಕೂ ಬಳಸಬಹುದು. ಈ ದ್ವಂದ್ವ ವಿಜ್ಞಾನ ತಂತ್ರಜ್ಞಾನ ಹುಟ್ಟಿದ ಕ್ಷಣದಿಂದಲೂ ಇದೆ! (ಎನ್.ಬಿ.)

**ಜೈವಿಕ ಮಾಹಿತಿ ತಂತ್ರಜ್ಞಾನ:** ಜೈವಿಕ ಮಾಹಿತಿ ತಂತ್ರಜ್ಞಾನವು ಜೀವವಿಜ್ಞಾನದ ನವ್ಯ ಶಾಖೆಯಾಗಿದ್ದು, ಇದು ಜೀವವಿಜ್ಞಾನ ಹಾಗೂ ಜೈವಿಕ ತಂತ್ರಜ್ಞಾನಗಳಲ್ಲಿ ಕ್ರಾಂತಿಕಾರಕ ಬದಲಾವಣೆ ಉಂಟು ಮಾಡುವುದರ ಜೊತೆಗೆ ವೈದ್ಯಕೀಯ ತಂತ್ರಜ್ಞಾನ ಹಾಗೂ ಔಷಧಿ ಉದ್ದಿಮೆಗಳಲ್ಲಿ ಅನೇಕ ವಿಚಾರಗಳ ಮೇಲೆ ಬೆಳಕು ಚೆಲ್ಲಿದೆ.

ಇದು ಜೀವವಿಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನವನ್ನು ಒಳಗೊಂಡ ಜ್ಞಾನ ಶಾಖೆ. ಇತ್ತೀಚಿನ ವರ್ಷಗಳಲ್ಲಿ ಜೈವಿಕ ತಂತ್ರಜ್ಞಾನ ಹಾಗೂ ಮಾನವ ವಂಶವಾಹಿನಿಗಳ ಅಧ್ಯಯನದಿಂದ ಪ್ರೊಟೀನುಗಳ, ಜೀನುಗಳ ರಚನೆ ಹಾಗೂ ಕಾರ್ಯವೈಖರಿಗಳ ಬಗ್ಗೆ ಮಾಹಿತಿಯ ಮಹಾಪೂರವೇ ಹರಿದಿದೆ. ಆ ಮಾಹಿತಿಯನ್ನು ಅರ್ಥೈಸಲು ಹಾಗೂ ಪ್ರಾಣಿ ಅಥವಾ ಸಸ್ಯಗಳಲ್ಲಿ ಅಧ್ಯಯನ ಮಾಡಲು ಹೆಚ್ಚು ಸಮಯ ಹಾಗೂ ಹಣ ಬೇಕಾಗುತ್ತದೆ. ಅದಕ್ಕೆ ಬದಲಾಗಿ ಕಂಪ್ಯೂಟರ್‌ನಲ್ಲಿ ಮಾಹಿತಿಯನ್ನು ಸಂಸ್ಕರಿಸಿ, ಪ್ರಾಣಿ ಅಥವಾ ಸಸ್ಯಗಳಲ್ಲಿ ಜೀನ್‍ಗಳ ಮತ್ತು ಪ್ರೊಟೀನ್‍ಗಳ ಕಾರ್ಯವಿಧಾನ ಅರಿಯಬಹುದು. ಈ ವಿಧಾನದಿಂದ ಸಮಯದ ಉಳಿತಾಯ ಹಾಗೂ ಸಂಶೋಧನಾ ವೆಚ್ಚ ಕಡಿಮೆ. ಹಾಗಾಗಿ ಕಂಪ್ಯೂಟರ್ ವಿಜ್ಞಾನಿಗಳು ಜೀವವಿಜ್ಞಾನವನ್ನು ಅರಿತು ಈ ಮಾಹಿತಿ ಅರ್ಥೈಸಲು ಅನೇಕ ತಂತ್ರಾಂಶಗಳನ್ನೂ, ಯಂತ್ರಾಂಶಗಳನ್ನೂ ಕಂಡುಹಿಡಿದಿರುವರು. ಇನ್ನೂ ಲಕ್ಷಾಂತರ ವಿಷಯಗಳ ಸಂಸ್ಕರಣೆ ಆಗಬೇಕಾಗಿರುವುದರಿಂದ ಹಾಗೂ ಅವುಗಳನ್ನು ವೈದ್ಯಕೀಯ ಕ್ಷೇತ್ರಗಳಲ್ಲಿ, ಕೃಷಿವಲಯದಲ್ಲಿ, ಔಷಧೋತ್ಪಾದನಾ ಶಾಖೆಗಳಲ್ಲಿ ಅಳವಡಿಸುವುದರಿಂದ ಮುಂದಿನ 25 ವರ್ಷಗಳ ಕಾಲ ಈ ಜ್ಞಾನ ಶಾಖೆಗೆ ಬೇಡಿಕೆ ಇರುತ್ತದೆ. ಪ್ರತಿನಿತ್ಯ 1 ಲಕ್ಷ ಅಂತರ್ಜಾಲ ಪುಟಗಳು ಜೈವಿಕ ತಂತ್ರಜ್ಞಾನದ ಮಾಹಿತಿಯಿಂದ ತುಂಬುತ್ತಿವೆ ! ಅದರ ಸಂಸ್ಕರಣೆಗೆ ಬೇಕಾದ ತಂತ್ರಾಂಶಗಳ ಬೆಳವಣಿಗೆ ನಿಧಾನಗತಿಯಲ್ಲಿದೆ !

ಆಧುನಿಕ ಪ್ರಪಂಚದಲ್ಲಿ ಜೈವಿಕ ಮಾಹಿತಿ ವಿಜ್ಞಾನದ ಅನುಕೂಲಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಮಾಲಿಕ್ಯುಲಾರ್ ಔಷಧಿಗಳು :
ಅ) ಜೀನ್ ಚಿಕಿತ್ಸೆ,
ಆ) ವ್ಯಕ್ತಿಗತವಾದ ಔಷಧಿಗಳ ಆವಿಷ್ಕಾರ,
ಇ) ಹೆಚ್ಚು ನಿರ್ದಿಷ್ಟ ಔಷಧಿಗಳ ಆವಿಷ್ಕಾರ,
ಈ) ರೋಗ ನಿವಾರಣಾ ತಂತ್ರಗಳು.

2. ಸೂಕ್ಷ್ಮಾಣು ವಿಜ್ಞಾನದಲ್ಲಿ ಜೈವಿಕ ಮಾಹಿತಿ ತಂತ್ರಜ್ಞಾನ:
ಅ) ತ್ಯಾಜ್ಯವಸ್ತುಗಳ ವಿಲೇವಾರಿ,
ಆ) ಆಂಟಿಬಯೋಟಿಕ್ಸ್ ಔಷಧಿಗಳಿಗೆ ಉಂಟಾಗುತ್ತಿರುವ ಪ್ರತಿನಿರೋಧಗಳ ನಿವಾರಣೆ,
ಇ) ಜೈವಿಕ ಸಮರಕ್ಕೆ ಪ್ರತ್ಯಾಸ್ತ್ರಗಳ ತಯಾರಿಕೆ,
ಈ) ಹವಾಮಾನ ಬದಲಾವಣೆ ಬಗ್ಗೆ ಅಧ್ಯಯನ,

ಉ) ಪರ್ಯಾಯ ಮೂಲಗಳು,

ಊ) ಜೀವವಿಕಾಸದ ಅಧ್ಯಯನ.

3. ಕೃಷಿಯಲ್ಲಿ ಜೈವಿಕ ಮಾಹಿತಿ ತಂತ್ರಜ್ಞಾನ

ಅ) ಕೃಷಿ ಆಧಾರಿತ ಸಸ್ಯಗಳ ಬೆಳೆವಣಿಗೆ,

ಆ) ಸಸ್ಯಗಳಲ್ಲಿ ಕೀಟ ನಿರೋಧಕ ಗುಣಗಳ ಬೆಳೆವಣಿಗೆ ಅಧ್ಯಯನ,

ಇ) ಧಾನ್ಯ ಹಾಗೂ ಇತರೆ ಕೃಷಿ ಉತ್ಪನ್ನಗಳಲ್ಲಿ ಪೌಷ್ಠಿಕ ಅಂಶ ಹೆಚ್ಚಿಸುವ ಸಾಧ್ಯತೆ,

ಈ) ಬರಡು ನೆಲದಲ್ಲಿ ಸಸ್ಯಗಳನ್ನು ಬೆಳೆಸುವ ವಿಧಾನ.

4. ಜಾನುವಾರುಗಳಲ್ಲಿ ಜೈವಿಕ ಮಾಹಿತಿ ತಂತ್ರಜ್ಞಾನ

ಅ) ಜಾನುವಾರುಗಳಾದ ಕುದುರೆ, ಹಸು, ಕುರಿ, ಕೋಳಿ, ಮೀನುಗಳಲ್ಲಿ ಇಳುವರಿ ಹೆಚ್ಚಿಸುವ ವಿಧಾನಗಳು,

ಆ) ರೋಗನಿರೋಧಕ ಶಕ್ತಿ ಹೆಚ್ಚಿಸುವುದು,

ಇ) ಕುಲಾಂತರಿ ಹಸು, ಹಂದಿ ಮುಂತಾದವುಗಳಲ್ಲಿ ಜೀನ್ ಮತ್ತು ಪ್ರೊಟೀನ್‌ಗಳ ಕಾರ್ಯವಿಧಾನ ಅರಿಯುವಿಕೆ.

ಹೀಗೆ ಜೀವವಿಜ್ಞಾನದ ಮಾಹಿತಿಗಳನ್ನು ಸಂಸ್ಕರಿಸುವುದರ ಜೊತೆಗೆ ಪ್ರಾಣಿ, ಸಸ್ಯ, ಸೂಕ್ಷ್ಮಾಣುಗಳಲ್ಲಿ ವಿವಿಧ ಜೀನ್ ಮತ್ತು ಪ್ರೊಟೀನ್‌ಗಳ ರಚನೆ, ಕಾರ್ಯವಿಧಾನಗಳನ್ನು ಕಂಪ್ಯೂಟರ್‌ನಲ್ಲಿ ಸಂಯೋಜಿಸಿ ಮುಂದೆ ಆಗಬಹುದಾದ ಕ್ರಿಯೆ, ಪ್ರತಿಕ್ರಿಯೆಗಳನ್ನು ಊಹಿಸಬಹುದು.

ಈ ಕಾರಣದಿಂದ 1987ರಲ್ಲಿ ಭಾರತ ಸರ್ಕಾರವು ಜೈವಿಕ ತಂತ್ರಜ್ಞಾನ ಮಾಹಿತಿ ಅಂತರ್ಜಾಲ ಸಂಸ್ಥೆಯನ್ನು ಜಗತ್ತಿನಲ್ಲೇ ಮೊಟ್ಟ ಮೊದಲ ಬಾರಿಗೆ ಸ್ಥಾಪಿಸಿತು. ಅಂದಿನಿಂದ ಈ ಜ್ಞಾನಶಾಖೆಗೆ ಪೂರಕವಾದ ಪ್ರಯೋಗ ಶಾಲೆಗಳು, ಸಂಶೋಧನಾ ಸಂಸ್ಥೆಗಳು, ವಿದ್ಯಾಸಂಸ್ಥೆಗಳು ಆರಂಭವಾಗಿದ್ದು ನಮ್ಮ ದೇಶದ ನಾಗರೀಕರಿಗೆ, ಹೊರ ದೇಶದ ನಾಗರೀಕರಿಗೆ ಅಗತ್ಯವಾದ ಬೇಡಿಕೆಗಳನ್ನು ಪೂರೈಸುತ್ತಿವೆ. ಬೆಂಗಳೂರಿನ ಭಾರತೀಯ ಸಂಶೋಧನಾ ಸಂಸ್ಥೆ, ಜೈವಿಕ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಸಂಶೋಧನೆ, ವಾಣಿಜ್ಯ ಸಹಭಾಗಿತ್ವ ಮುಂತಾದವುಗಳನ್ನು ನಿರ್ವಹಿಸಲಾಗುತ್ತಿದೆ. ಭಾರತ ಸರ್ಕಾರದ ಜೈವಿಕ ಮಾಹಿತಿ ತಂತ್ರಜ್ಞಾನ ನೀತಿ, 2004ರಲ್ಲಿ ಬಿಡುಗಡೆಯಾಗಿದೆ. ಈ ಜ್ಞಾನಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡಿ ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಹಾಗೂ ಉದ್ದಿಮೆ ಸೃಷ್ಟಿಸುವಲ್ಲಿ ಈ ನೀತಿ ಮಾರ್ಗ ದರ್ಶನ ನೀಡಿದೆ.

ಮುಂದಿನ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಸು. 410 ಮಿಲಿಯನ್ ಡಾಲರ್ ವಹಿವಾಟು ಅಗುವ ಅಂದಾಜಿದೆ. ಒಂದು ಬಿಲಿಯನ್ ಡಾಲರ್ ವಾಣಿಜ್ಯ ಹಾಗೂ ವೈದ್ಯಕೀಯ ವಸ್ತುಗಳ ವಹಿವಾಟು ಸಾಧ್ಯ ಎಂದು ಊಹಿಸಲಾಗಿದೆ. ವೈದ್ಯಕೀಯ ಜೈವಿಕ ಮಾಹಿತಿ ತಂತ್ರಜ್ಞಾನದ ಅಗ್ರಗಣ್ಯ ಐದು ಪ್ರಮುಖ ರಾಷ್ಟ್ರಗಳಲ್ಲಿ ಹಾಗೂ. ಕೃಷಿ ವಿಚಾರದ ಪ್ರಮುಖ ಮೂರು ರಾಷ್ಟ್ರಗಳ ಪೈಕಿ ಭಾರತ ದೇಶವೂ ಒಂದು. (ಎನ್.ಬಿ.)

**ಜೈವಿಕ ಸಮರ:** ರೋಗಾಣುಗಳಾದ ಬ್ಯಾಕ್ಟೀರಿಯ, ಶಿಲೀಂಧ್ರ ಹಾಗೂ ವೈರಾಣುಗಳನ್ನು ಯುದ್ಧಾಸ್ತ್ರದಂತೆ ಬಳಸುವ ತಂತ್ರ. ಎನ್ನುವರು. ಸ್ಫೋಟಕಗಳನ್ನು ಬಳಸುವ ಯುದ್ಧಗಳಲ್ಲಿ ಜನ, ಜಾನುವಾರುಗಳ ಸಾವಿನ ಜೊತೆಗೆ ಅಪಾರವಾದ ಆಸ್ತಿ, ಕಾರ್ಖಾನೆಗಳು, ಸೇತುವೆಗಳು, ಬ್ಯಾಂಕ್ ಹಾಗೂ ಲಕ್ಷಾಂತರ ಯಂತ್ರಗಳು ನಾಶವಾಗುವುವು. ಈ ಯುದ್ಧಗಳಿಂದ ಶತ್ರು ಸುಲಭವಾಗಿ ಗುರುತಿಸಲ್ಪಡುತ್ತಾನೆ. ಆದರೆ ಜೈವಿಕ ಸಮರದಲ್ಲಿ ಜನ ಜಾನುವಾರುಗಳು ಸಾಯುತ್ತವೆ. ಆಸ್ತಿಪಾಸ್ತಿ ಹಾಗೇ ಉಳಿಯುತ್ತದೆ, ಶತ್ರುಗಳ ನಾಶವಾಗುತ್ತದೆ !

ಜೈವಿಕ ಸಮರ ತಂತ್ರಗಳು ಘಟಿಸಿದ ಬಗ್ಗೆ ಚರಿತ್ರೆಯಲ್ಲಿ ಉದಾಹರಣೆಗಳಿವೆ. 1200ನೇ ಇಸವಿಯಿಂದಲೂ ಶತ್ರುದೇಶ ದೊಳಗೆ ಸತ್ತು ನಾರುತ್ತಿರುವ ಜನ ಹಾಗೂ ಜಾನುವಾರುಗಳಾದ ಕುದುರೆ, ಹಂದಿ, ಹಸುಗಳ ಹೆಣಗಳನ್ನು ಚೆಲ್ಲಾಡಿದಾಗ ಜನರು ವಾಸನೆ, ರೋಗಾಣುಗಳ ಕಾಟದಿಂದ ಓಡಿಹೋದ ನಿದರ್ಶನಗಳಿವೆ. ಬ್ರಿಟಿಷ್ ಯೋಧರು ಸಿಡುಬು ರೋಗಿಯ ಕೀವನ್ನು ಸಂಗ್ರಹಿಸಿ ಗಡಿ ಪ್ರದೇಶದ ಜನಗಳಿಗೆ ಸೋಂಕು ತಗುಲಿಸಿ ಶತ್ರುಗಳಿಗೆ ಹಾನಿ ಮಾಡುತ್ತಿದ್ದರು. ಅವರು ಅಮೆರಿಕಾದ ಮೂಲನಿವಾಸಿಗಳ ಮೇಲೆ ಯುದ್ಧ ಮಾಡುವ ಸಮಯ, ಸಿಡುಬು ರೋಗಿಗಳ ಬಟ್ಟೆ, ಕರವಸ್ತ್ರ, ಹೊದಿಕೆಗಳನ್ನು ದಾನ ಮಾಡಿ ಅವರಿಗೆ ರೋಗ ಅಂಟಿಸುತ್ತಿದ್ದರು.

ಜಪಾನ್ ಮಿಲಿಟರಿ ಆಡಳಿತ ಜೈವಿಕ ಸಮರಕ್ಕೆ ಒತ್ತು ಕೊಟ್ಟ ನಿದರ್ಶನಗಳಿವೆ. ಯುನಿಟ್ 731 ಎಂದು ಗುರುತಿಸಲ್ಪಡುತ್ತಿದ್ದ ಕುಖ್ಯಾತ ಜಪಾನ್ ಯೋಧರ ತಂಡ ನೆರಡಿ (ಅಂತ್ರಾಕ್ಸ್), ಪ್ಲೇಗ್ ಹಾಗೂ ಟೈಫಾಯಿಡ್ ರೋಗಾಣುಗಳನ್ನು ಶತ್ರುಗಳ ಮೇಲೆ ಪ್ರಯೋಗಿಸುತ್ತಿದ್ದರು. ಎರಡನೆ ಮಹಾಯುದ್ಧದ ಕೊನೆ ಘಳಿಗೆಯಲ್ಲಿ ಎಲ್ಲಾ ದಾಖಲೆಗಳನ್ನು ಸುಟ್ಟು ಟೋಕಿಯೋ ಬಿಟ್ಟು ಹೋದರು. ಮಹಾಯುದ್ಧ ಪರಿಸಮಾಪ್ತಿ ಆದ ಮೇಲೆ ಯುದ್ಧ ಕೈದಿಗಳನ್ನು ಪರಸ್ಪರ ಬಿಡುವಾಗ ಈ ಗುಪ್ತ ವಿಷಯ ಬಾಯಿ ಬಿಟ್ಟರಂತೆ !

ಎರಡನೆ ಮಹಾಯುದ್ಧದ ಕೊನೆ ಭಾಗದಲ್ಲಿ ಅಮೆರಿಕಾ ಹಾಗೂ ಸೋವಿಯತ್ ರಷ್ಯಾ ಜೈವಿಕ ಸಮರಕ್ಕೆ ಬೇಕಾದ ನೆರಡಿ, ಪ್ಲೇಗ್, ಟೈಫಾಯಿಡ್ ರೋಗಾಣುಗಳ ಶೇಖರಣೆಯಲ್ಲಿ ಪೈಪೋಟಿ ಮಾಡಿದರು. ಅದು ಶೀತಲ ಸಮರದ ಕಾಲದಲ್ಲೂ ಮುಂದುವರೆದಿತ್ತು. 1969ರಲ್ಲಿ ಈ ರೋಗಾಣುಗಳು ಹೇಗೆ ಹಾನಿ ಉಂಟು ಮಾಡುತ್ತವೆ ಎಂದು ತಿಳಿಯಲು ಪೆಸಿಫಿಕ್ ದ್ವೀಪಗಳಲ್ಲಿ ಪರೀಕ್ಷೆ ನಡೆಸಿದ್ದರು. ಆದರೆ ನಾಗರೀಕರ ಒತ್ತಡ ಹಾಗೂ ಮಾನವ ಹಕ್ಕು ಸಂಸ್ಥೆ, ವಿಶ್ವಸಂಸ್ಥೆ, ವಿಶ್ವ ಆರೋಗ್ಯಸಂಸ್ಥೆಗಳ ಒತ್ತಾಸೆ ಮೇರೆಗೆ 1972ರಲ್ಲಿ ಅಮೆರಿಕಾ, ರಷ್ಯಾ, ಜಪಾನ್, ಬ್ರಿಟನ್, ಭಾರತ ಒಳಗೊಂಡಂತೆ ನೂರು ರಾಷ್ಟ್ರಗಳ ಪ್ರತಿನಿಧಿಗಳು ಸಭೆ ಸೇರಿ ಜೈವಿಕ ಸಮರ ಅಮಾನವೀಯವಾದುದು, ಅದು ಯೋಧರನ್ನಲ್ಲದೆ ಸಾಮಾನ್ಯರನ್ನೂ ಬಲಿ ತೆಗೆದುಕೊಳ್ಳುವುದು ಎಂದು ತೀರ್ಮಾನಿಸಿ ಜೈವಿಕ ಸಮರದ ಬಗ್ಗೆ ನಿಷೇಧ ಹೇರಿದರು. 1990ರವರೆಗೆ ರಷ್ಯಾದ ಕೆಲವು ವಿಜ್ಞಾನಿಗಳು ಜೈವಿಕ ಸಮರಕ್ಕೆ ಬಳಸುವ ರೋಗಾಣುಗಳನ್ನು ಕುತಂತ್ರದಿಂದ ಶೇಖರಿಸಿಟ್ಟಿದ್ದರಲ್ಲದೆ ಇರಾಕ್‌ನ ಸದ್ದಾಂ ಹುಸೇನ್ ಸರ್ಕಾರಕ್ಕೆ ಮಾರಿರುವ ಆಪಾದನೆಗಳಿವೆ. ಸದ್ದಾಂ, ಇರಾನ್, ಕುವೈತ್ ಮೇಲೆ ನೆರಡಿ ರೋಗಾಣುಗಳನ್ನು ಬಳಸಿ ಜೈವಿಕ ಸಮರ ನಡೆಸಿರುವ ನಿದರ್ಶನಗಳಿವೆ.

ತಜ್ಞರ ಪ್ರಕಾರ, ಸಿಡುಬು, ನೆರಡಿ, ಪ್ಲೇಗ್, ಟೈಫಾಯಿಡ್, ಎಬೋಲ ರೋಗಾಣುಗಳು ಸುಲಭವಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಹರಡಿ ವ್ಯಾಪಕವಾಗಿ ಸಾವು ನೋವು ಉಂಟು ಮಾಡುತ್ತವೆ. ಅವುಗಳನ್ನು ಪೌಡರ್ ರೂಪದಲ್ಲಿ ಪತ್ರದ ಜೊತೆ ರವಾನಿಸ ಬಹುದು 2001ರಲ್ಲಿ ಭಯೋತ್ಪಾದಕರ ಕೈಗೆ ಇವುಗಳಲ್ಲಿ ಕೆಲವು ರೋಗಾಣುಗಳು ಸಿಕ್ಕಿರುವ ಬಗ್ಗೆ ಮಾಹಿತಿ ಇದೆ. 2001 ಡಿಸೆಂಬರ್‌ನಲ್ಲಿ ನ್ಯೂಯಾರ್ಕ್‌ನ ಅನೇಕ ಮಾಧ್ಯಮ ಕಛೇರಿಗಳಿಗೆ, ಕೆಲವು ಸೆನೆಟರ್‌ಗಳ ಕಛೇರಿಗಳಿಗೆ ಆಂತ್ರಾಕ್ಸ್ ಪುಡಿಯನ್ನು ಪತ್ರದೊಳಗಿಟ್ಟು ರವಾನಿಸಲಾಗಿತ್ತು. ಉಸಿರಾಟದ ಮೂಲಕ ಈ ರೋಗಾಣು ದೇಹ ಸೇರಿ ದಾಂಧಲೆ ಎಬ್ಬಿಸುತ್ತವೆ. ಮೈಯೆಲ್ಲಾ ಕೀವುಗುಳ್ಳೆ ಆಗಿ ರೋಗಿ ಸಾಯುತ್ತಾನೆ. ಆಂತ್ರಾಕ್ಸ್ ಜೀವಾಣುಗಳು ಪ್ರೊಟಿಯೇಸ್ ಎಂಬ ಕಿಣ್ವ ಉತ್ಪಾದನೆ ಮಾಡಿ ರೋಗಿಯಲ್ಲಿನ ಬಹುತೇಕ ಪ್ರೊಟೀನ್‌ಗಳನ್ನು ನಾಶ ಮಾಡುತ್ತವೆ.

ಜೈವಿಕ ಸಮರದ ತಂತ್ರಗಳು ಕೃಷಿ ಕ್ಷೇತ್ರವನ್ನು ಆವರಿಸಿರುವುದು ಆತಂಕದ ವಿಷಯ. 2000ನೇ ಇಸವಿಯಲ್ಲಿ ನ್ಯೂ ಸೈಂಟಿಸ್ಟ್ ಪತ್ರಿಕೆ ವರದಿ ಪ್ರಕಾರ ಅಮೆರಿಕಾ 32 ವರ್ಷಗಳ ಹಿಂದೆಯೇ ಸೋವಿಯತ್ ರಷ್ಯಾ ಗೋಧಿ ಹೊಲಗಳ ಮೇಲೆ ಸಿಂಪಡಿಸಲೆಂದು 30,000 ಟನ್ ರೋಗಾಣುಗಳನ್ನು ದಾಸ್ತಾನು ಇಟ್ಟುಕೊಂಡಿತ್ತು ! ಸೋವಿಯತ್ ರಷ್ಯಾವು ಅಮೆರಿಕಾದ ಮೇಲೆ ಧಾಳಿ ಮಾಡಲೆಂದು ಗೋಧಿಯ ಕಾಂಡ ಕೊಳೆಯಿಸುವ ರೋಗಾಣುಗಳ ದಾಸ್ತಾನು ಇಟ್ಟುಕೊಂಡಿತ್ತು !

ಈ ಘಟನಾವಳಿಗಳನ್ನು ಅವಲೋಕಿಸಿದರೆ ಯಾವುದೇ ರಾಷ್ಟ್ರದ ಜಂಘಾಬಲವನ್ನು ಉಡುಗಿಸಲು ಮಿಲಿಟರಿಯ ಅಗತ್ಯವೇ ಇಲ್ಲ ಎಂಬಂತಾಗಿದೆ. ಏಕೆಂದರೆ ಈ ರೀತಿಯ ಜೈವಿಕ ಬಾಂಬುಗಳ ತಯಾರಿಕೆ ಕೇವಲ ವಿಜ್ಞಾನಿಗಳಿಗಷ್ಟೇ ಸೀಮಿತವಾಗಿರುವುದಿಲ್ಲ. ಅದೇ ಶಸ್ತ್ರವನ್ನು ಭಯೋತ್ಪಾದಕರು ಹಾಗೂ ಹಿಟ್ಲರ್‌ಶಾಹಿಗಳು ತಮ್ಮ ದುರುದ್ದೇಶಗಳಿಗೆ ಬಳಸಿದರೆ ಏನೆಲ್ಲಾ ಅನರ್ಥವಾಗಬಹುದು. ಇನ್ನು ಎಚ್‌ಐವಿ. ಹಾಗೂ ಹೆಪಾಟೈಟಿಸ್ ರೋಗಾಣುಗಳನ್ನು ಬಳಸಲು ಆರಂಭಿಸಿದರೆ ಗತಿಯೇನು ಎಂಬ ಆತಂಕವೂ ಇದೆ. ಮುಂದೆ ಉಂಟಾಗಬಹುದಾದ ಇಂತಹ ಪರಿಸ್ಥಿತಿ ಎದುರಿಸಲು ಅಮೆರಿಕಾದಂತಹ ಮುಂದುವರೆದ ರಾಷ್ಟ್ರಗಳು ಜೈವಿಕ ಕವಚ ಎಂಬ ಯೋಜನೆ ಅಡಿ ಪ್ರತ್ಯಾಸ್ತ್ರಗಳನ್ನು ಸಂಶೋಧಿಸುತ್ತಿದ್ದಾರೆ.

ಅಮೆರಿಕಾದ ಅಂಚೆ ಇಲಾಖೆ ಎಲೆಕ್ಟ್ರಾನ್ ಬೀಮ್‌ಗಳಿಂದ ರೋಗಗ್ರಸ್ತ ಪತ್ರಗಳನ್ನು ವಿಕಿರಣಕ್ಕೆ ಒಳಪಡಿಸಿ ಶುದ್ಧಗೊಳಿಸಲು ಸಾಧ್ಯವೇ ಎಂದು ಪರೀಕ್ಷಿಸಿದೆ.

ವ್ಯಕ್ತಿಯಲ್ಲಿ ಅಥವಾ ಪರಿಸರದಲ್ಲಿ ಆಂತ್ರಾಕ್ಸ್ ರೋಗಾಣುಗಳಿವೆಯೇ ಎಂದು ಒಂದು ಗಂಟೆಯೊಳಗೆ ಪರೀಕ್ಷಿಸಬಲ್ಲ ಸಾಧನ ವನ್ನು ವಾಷಿಂಗ್‌ಟನ್ ಮೇಯೋಕ್ಲಿನಿಕ್ ಅಭಿವೃದ್ಧಿಪಡಿಸಿದೆ. ಇದನ್ನು ಸಾಮಾನ್ಯ ಜನರು ಬಳಸುವಂತಹ ವಿಧಾನವನ್ನು ಸ್ವಿಟ್ಜರ್‌ಲ್ಯಾಂಡ್‌ನ 'ರೋಷ್' ಕಂಪನಿ ಅಭಿವೃದ್ಧಿಪಡಿಸಲಿದೆ.

ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಜೀವ ರಾಸಾಯನಿಕ ವಿಭಾಗವು ಆಂತ್ರಾಕ್ಸ್‌ಗೆ ಪ್ರಭಾವಶಾಲಿ ಮತ್ತು ಸುರಕ್ಷಾ ರೋಗನಿರೋಧಕ ಲಸಿಕೆ ಅಭಿವೃದ್ಧಿಪಡಿಸಿದೆ.

ಆಂತ್ರಾಕ್ಸ್, ಸಾರ್ಸ್, ಎಚ್‌ಐವಿ., ಮುಂತಾದ ರೋಗಾಣುಗಳ ಪತ್ತೆಗೆ ಜೀನ್ ಅಥವಾ ಡಿಎನ್‌ಎ. ಬೆರಳಚ್ಚು ತಂತ್ರಜ್ಞಾನ ಸಹಾಯಕವಾಗುತ್ತದೆ. (ಎನ್.ಬಿ.)

**ಜೈವಿಕ ಹೊಂದಾಣಿಕೆ:** ಹೊಂದಾಣಿಕೆ ಎಲ್ಲಾ ಜೀವಿಗಳ ಮೂಲಗುಣ. ಸಂತಾನೋತ್ಪತ್ತಿ, ಪ್ರತಿಕ್ರಿಯೆ, ಬೆಳವಣಿಗೆ ಗುಣಗಳಿದ್ದಂತೆ. ಜೀವಿಯು ಹುಟ್ಟಿನಿಂದಿಡಿದು ಸಾಯುವವರೆಗೆ ಪರಿಸರದಲ್ಲಿರುವ ಜೈವಿಕ ಘಟಕಗಳಾದ ಇತರೆ ಜೀವಿಗಳ ಜೊತೆ ಹಾಗೂ ಅಜೈವಿಕ ಘಟಕಗಳಾದ ವಾತಾವರಣದ ಅಂಶಗಳ ಜೊತೆ ನಿರಂತರ ಒಡನಾಟವಿರುತ್ತದೆ. ಈ ಚೌಕಟ್ಟಿನಲ್ಲಿ ಪ್ರತಿಯೊಂದು ಜೀವಿಯೂ ಹೊಂದಿಕೊಂಡು ಬಾಳಬೇಕು. ಹೊಂದಿಕೊಳ್ಳಲಾಗದ ಆಗದ ಜೀವಿಗಳು ಅಳಿದು ಹೋಗುತ್ತವೆ. ಪಳೆಯುಳಿಕೆಯ ಸಂಪುಟದಲ್ಲಿ ಸೇರುತ್ತವೆ. ಅಂದರೆ ಜೀವಿಯು ಉಳಿಯಲು, ಸಂತಾನೋತ್ಪತ್ತಿ ಮಾಡಿ ವೃದ್ಧಿಯಾಗಲು ಹೊಂದಾಣಿಕೆ ಅವಶ್ಯಕ. ಏಕೆಂದರೆ ಜೈವಿಕ ಹಾಗೂ ಅಜೈವಿಕ ಪರಿಸರ ಘಟಕಗಳು ಸ್ಥಿರವಾಗಿರುವುದಿಲ್ಲ. ಅವು ಸದಾ ಚಲನಶೀಲವಾಗಿದ್ದು ಮಾರ್ಪಾಟುಗಳಿಗೆ ಒಳಗಾಗುತ್ತವೆ. ಪ್ರಪಂಚದಲ್ಲಿರುವ ವಿವಿಧ ಪರಿಸರ ವ್ಯವಸ್ಥೆಗಳಾದ ಕಾಡು, ಮರುಭೂಮಿ, ಸಾಗರ, ನದಿ, ಮಾನವ ಪರಿಸರ ಸದಾ ಬದಲಾಗುತ್ತಿರುತ್ತವೆ. ಈ ಬದಲಾವಣೆಗಳಿಗೆ ಜೀವಿಗಳು ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಹೊಂದಾಣಿಕೆ ಯಶಸ್ವಿಯಾದಾಗ ಆ ಜೀವಿ ಬದುಕುವ ಅರ್ಹತೆ ಪಡೆಯುತ್ತದೆ.

ವಿಜ್ಞಾನಿಗಳು ಜೀವಿಗಳಲ್ಲಿ ನಾಲ್ಕು ಹೊಂದಾಣಿಕೆ ಪ್ರಕ್ರಿಯೆಗಳನ್ನು ಗುರುತಿಸಿದ್ದಾರೆ.

1) ರಚನಾತ್ಮಕ ಹೊಂದಾಣಿಕೆ : ಜೀವಿಗಳು ತಮ್ಮ ಪರಿಸರದಲ್ಲಿರುವ ಜೈವಿಕ ಹಾಗೂ ಅಜೈವಿಕ ಘಟಕಗಳ ವೈಪರೀತ್ಯಕ್ಕೆ ಅನುಗುಣವಾಗಿ ತಮ್ಮ ದೇಹ ರಚನೆಯಲ್ಲಿ ಬದಲಾವಣೆ ಮಾಡಿಕೊಂಡು ಹೊಂದಾಣಿಕೆ ಮಾಡಿಕೊಂಡಿರುತ್ತವೆ. ಉದಾ: ನೀರಿನಲ್ಲಿ ವಾಸಿಸುವ ಮೀನುಗಳು ಈಜಲು ಈಜುರೆಕ್ಕೆ, ಉಸಿರಾಡಲು ಕಿವಿರು ಹೊಂದಿರುತ್ತವೆ. ನೆಲದ ಮೇಲೆ ವಾಸಿಸುವ ಹಲ್ಲಿಗಳಲ್ಲಿ ಚಲಿಸಲು 5 ಬೆರಳುಗಳುಳ್ಳ ನಾಲ್ಕು ಕಾಲುಗಳಿರುತ್ತವೆ. ಉಸಿರಾಡಲು ಶ್ವಾಸಕೋಶಗಳಿರುತ್ತವೆ. ಮರಳುಗಾಡಿನಲ್ಲಿ ವಾಸಿಸುವ ಸಸ್ಯಗಳಲ್ಲಿ ಎಲೆಗಳು ಮುಳ್ಳುಗಳಾಗಿ ಬದಲಾಗಿರುತ್ತವೆ. ಇದರಿಂದಾಗಿ ಬಾಷ್ಪೀಕರಣದಿಂದ ನೀರು ಹೊರಹೋಗುವುದು ಕಡಿಮೆಯಾಗುತ್ತದೆ. ಏಕೆಂದರೆ ಮರಳುಗಾಡಿನಲ್ಲಿ ನೀರಿಗೆ ಬರ. ಹೀಗೆ ಸೂಕ್ಷ್ಮಜೀವಿಯಿಂದ ಹಿಡಿದು ಮಾನವನವರೆಗೆ, ಅವು ವಾಸಿಸುವ ಇರುನೆಲೆಗಳಿಗೆ ಶಾರೀರಿಕ ಹೊಂದಾಣಿಕೆ ಕಂಡುಬರುತ್ತದೆ.

2) ಕ್ರಿಯಾತ್ಮಕ ಹೊಂದಾಣಿಕೆ : ಜೀವಿಗಳು ತಮ್ಮಲ್ಲಿ ನಡೆಯುವ ಜೈವಿಕ ಕ್ರಿಯೆಗಳನ್ನು ಪರಿಸರಕ್ಕೆ ತಕ್ಕ ಹಾಗೆ ಹೊಂದಾಣಿಕೆ ಮಾಡಿಕೊಳ್ಳುತ್ತವೆ. ಇದನ್ನು ಕ್ರಿಯಾತ್ಮಕ ಹೊಂದಾಣಿಕೆ ಎನ್ನುವರು. ಉದಾ: ಮಾನವರು ಎತ್ತರದ ಪ್ರದೇಶಕ್ಕೆ ವಲಸೆ ಹೋದರೆ ಆಮ್ಲಜನಕದ ಪ್ರಮಾಣ ಅಲ್ಲಿ ಕಡಿಮೆ ಇರುವ ಕಾರಣ ಕೆಲವು ನಿಮಿಷ ಉಸಿರಾಟದ ತೊಂದರೆ ಅನುಭವಿಸುವರು. ಆದರೆ, 10–15 ನಿಮಿಷಗಳಲ್ಲಿ ಉಸಿರಾಟ ಸಹಜವಾಗುವುದು. ಈ ಸಮಯದಲ್ಲಿ ದೇಹದೊಳಗೆ ಹೆಚ್ಚು ಕೆಂಪು ರಕ್ತಕಣಗಳು ಉತ್ಪತ್ತಿಯಾಗುವುವು. ಅವು ವಾತಾವರಣದಲ್ಲಿ ಕಡಿಮೆ ಇದ್ದ ಆಮ್ಲಜನಕವನ್ನು ಗರಿಷ್ಠ ಪ್ರಮಾಣದಲ್ಲಿ ದೇಹ ಬಳಸಿಕೊಳ್ಳುವಂತೆ ಮಾಡುವುವು. ಇನ್ನೊಂದು ಸರಳ ಉದಾಹರಣೆ. 1960ರಲ್ಲಿ ಸೊಳ್ಳೆಗಳ ಮೇಲೆ ಡಿಡಿಟಿ. ಬಳಸಿದ ವಿಜ್ಞಾನಿಗಳು ತಾವು ಸೊಳ್ಳೆಗಳ ಸಂಪೂರ್ಣ ನಿರ್ನಾಮ ಮಾಡಿದೆವು ಅಂದು ಕೊಂಡರು. ಆದರೆ ಮುಂದೆ ಆದದ್ದೇ ಬೇರೆ. ಕೆಲವು ಸೊಳ್ಳೆಗಳು ಡಿಡಿಟಿಗೆ ನಿರೋಧಕ ಶಕ್ತಿ ಬೆಳೆಸಿಕೊಂಡುವು. ಜೀನ್‌ನಲ್ಲಿ ಉಂಟಾದ ಬದಲಾವಣೆಯಿಂದ ಅವು ಡಿಡಿಟಿ. ಇರುವ ಪರಿಸರದಲ್ಲಿ ತೊಂದರೆಗೆ ಒಳಗಾಗದೆ ಬದುಕುವ ರಾಸಾಯನಿಕ ಕ್ರಿಯಾ ವಿಧಾನಗಳನ್ನು ಬದಲಿಸಿಕೊಂಡುವು ! ಇದೇ ರೀತಿ ನೂರಾರು ರೋಗಕಾರಕ ಸೂಕ್ಷ್ಮಜೀವಿಗಳು ಆಂಟಿಬಯೋಟಿಕ್ಸ್‌ಗೆ ನಿರೋಧಕ ಶಕ್ತಿ ಬೆಳೆಸಿ ಕೊಂಡಿರುವುವು ಅವು ತಮ್ಮ ಕ್ರಿಯಾತ್ಮಕ ಬದಲಾವಣೆಗಳಿಂದ ಹೊಂದಾಣಿಕೆ ಮಾಡಿಕೊಂಡಿ ದ್ದಾವೆ. ಈ ಕ್ರಿಯೆ ಎಲ್ಲಾ ಜೀವಿಗಳಲ್ಲೂ ಕಂಡು ಬರುವ ಮೂಲ ಗುಣ.

3) ವರ್ತನಾಶೀಲ ಹೊಂದಾಣಿಕೆ : ಪರಿಸರಕ್ಕೆ ತಕ್ಕಂತೆ ವರ್ತಿಸಿ ತನ್ನನ್ನು ರಕ್ಷಿಸಿಕೊಳ್ಳುವ, ಆಹಾರ ಪಡೆಯುವ ಹಾಗೂ ಸಂಗಾತಿಯನ್ನು ಆಕರ್ಷಿಸಿದ ಕ್ರಿಯೆಗಳಿಗೆ ವರ್ತನಾಶೀಲ ಹೊಂದಾಣಿಕೆ ಎನ್ನುವರು. ಕೆಲವು ಪ್ರಾಣಿಗಳು ಶತ್ರುಗಳಿಂದ ರಕ್ಷಣೆ ಪಡೆಯಲು ಉಂಡೆಯಾಕಾರದಲ್ಲಿ ಸುತ್ತಿಕೊಳ್ಳುತ್ತವೆ. ಚಿಪ್ಪು ಹಂದಿ, ಒನಕೆ ಬಂಡಿಹುಳ ಈ ರೀತಿ ವರ್ತಿಸುತ್ತವೆ. ಅದೇ ರೀತಿ ಗೋಸುಂಬೆ ತಾನು ಇರುವ ಮರದ ರೆಂಬೆಗಳಿಗೆ, ಎಲೆಗಳ ಬಣ್ಣದಂತೆ ತನ್ನ ದೇಹದ ಬಣ್ಣ ಬದಲಿಸುತ್ತದೆ. ಗೂಡು ಕಟ್ಟದ ಕೋಗಿಲೆ, ಕಾಗೆಯ ಗೂಡಿನಲ್ಲಿ ಮೊಟ್ಟೆಯಿಡುವುದು ಇನ್ನೊಂದು ವರ್ತನಾಶೀಲ ಹೊಂದಾಣಿಕೆಗೆ ಉದಾಹರಣೆ.

4) ಆನುವಂಶಿಕ ಹೊಂದಾಣಿಕೆ : ಮೇಲೆ ತಿಳಿಸಿದ ಎಲ್ಲಾ ಬದಲಾವಣೆಗಳ ಹೊಂದಾಣಿಕೆಯ ಕ್ರಮಕ್ಕೆ ದೇಹದೊಳಗಿರುವ ಜೀನ್‌ಗಳು ಬದಲಾಗಬೇಕು. ಆದರೆ ಜೀನ್‌ಗಳ ಬದಲಾವಣೆ ಒಳ್ಳೆಯದು ಆಗಬಹುದು ಅಥವಾ ಕೆಟ್ಟದ್ದು ಆಗಬಹುದು. ಸಾಮಾನ್ಯವಾಗಿ ಉಂಟಾಗುವ ಜೀನ್ ಬದಲಾವಣೆಗೆ ಜೀನ್ ವಿಕೃತಿ ಎನ್ನುವರು. ಯಾವುದೇ ಜೀನ್ ವಿಕೃತಿ ಆ ಜೀವಿಯ ಬದುಕಿಗೆ ಹೊಂದಾಣಿಕೆ ಉಂಟು ಮಾಡಿದರೆ ಅದು ಜೈವಿಕ ವಿಕಾಸ ಕ್ರಿಯೆಯಲ್ಲಿ ಪ್ರಕೃತಿಯಿಂದ ಆಯ್ಕೆಗೆ ಒಳಪಡುತ್ತದೆ. ಅಂತಹ ಉಪಕಾರಿ ಜೀನ್ ವಿಕೃತಿಗಳು ಶೇಖರಣೆಗೊಂಡಾಗ, ಆ ನಿರ್ದಿಷ್ಟ ಜೀವಿ ತನ್ನ ಪರಿಸರದಲ್ಲಿ ಅಗ್ರಮಟ್ಟದ ಹೊಂದಾಣಿಕೆ ತೋರುತ್ತದೆ. ವಂಶಾಭಿವೃದ್ಧಿಯಿಂದ ತನ್ನ ಸಂತತಿಯ ಸಂಖ್ಯೆ ಹೆಚ್ಚಿಸಿಕೊಳ್ಳುತ್ತದೆ.

ಹೀಗೆ ಈ ಭೂಗ್ರಹದ ಪರ್ವತ ಶಿಖರದಿಂದ ಭೂ ಶಿಖರ ದವರೆಗೆ, ನೀರಿನ ಮೇಲ್ಮೈಯಿಂದ ಸಾಗರದ ತಳದವರೆಗೆ ವ್ಯಾಪಿಸಿರುವ ಸಕಲ ಇರುನೆಲೆಗಳಾದ ಕಾಡು, ನಾಡು, ಗ್ರಾಮ, ಸಾಗರ, ನದಿ, ಕೆರೆ, ಕುಂಟೆಗಳಲ್ಲಿರುವ ಪ್ರಾಣಿ, ಸಸ್ಯ, ಸೂಕ್ಷ್ಮ ಜೀವಿಗಳು ಜೈವಿಕ ಹೊಂದಾಣಿಕೆ ಗುಣ ಪಡೆದಿವೆ. ಜೀವಿಗಳು ವಿಶ್ವವ್ಯಾಪಿಯಾಗಿ ಹರಡಲು ಈ ಸಾಮರ್ಥ್ಯವೇ ಮುಖ್ಯ ಕಾರಣ. (ಎನ್.ಬಿ.)

**ಜೊರಿಲ:** ಕಾರ್ನಿವೊರ ಗಣದ ಮಸ್ಟೆಲಿಡೆ ಕುಟುಂಬಕ್ಕೆ ಸೇರಿದ ಒಂದು ಮಾಂಸಾಹಾರಿ ಸ್ತನಿ. ವೀಸಲ್, ಗ್ಲಟನ್, ಸ್ಕಂಕ್, ಬ್ಯಾಜರ್ ಮುಂತಾದುವುಗಳಿಗೆ ಹತ್ತಿರ ಸಂಬಂಧಿ. ಇಕ್ಟೊನಿಕ್ಸ್ ಸ್ಟ್ರಯೇಟ ಇದರ ಶಾಸ್ತ್ರೀಯ ಹೆಸರು. ಆಫ್ರಿಕದ ಪೋಲ್‌ಕ್ಯಾಟ್, ಸ್ಟಿಂಕ್ ಮೌಸ್ ಹೌಂಡ್ ಮುಂತಾದ ಹೆಸರುಗಳೂ ಇದಕ್ಕೆ ಉಂಟು. ಆಫ್ರಿಕದ ಮೂಲವಾಸಿ. ಸೆನೆಗಲ್, ಉತ್ತರ ನೈಜೀರಿಯ, ಸೂಡಾನ್, ಈತೀಯೋಪಿಯ, ದಕ್ಷಿಣ ಆಫ್ರಿಕ ಇಲ್ಲೆಲ್ಲ ಇದರ ವ್ಯಾಪ್ತಿ ಉಂಟು. ೨೮–೩೮ ಸೆಂಮೀ ಉದ್ದದ ಪ್ರಾಣಿಯಿದು. ಇದರ ಬಾಲದ ಉದ್ದವೇ ೨೦–೩೦ ಸೆಂಮೀ ದೇಹದ ಬಣ್ಣ ಕಪ್ಪು. ಬೆನ್ನ ಮೇಲೆ ಬಿಳಿಯ ಪಟ್ಟಿಗಳೂ ಮುಖದ ಮೇಲೆ ಬಿಳಿಯ ಮಚ್ಚೆಗಳೂ ಇವೆ. ದೇಹದ ಮೇಲೆಲ್ಲ ಉದ್ದ ಕೂದಲಿನ ತುಪ್ಪುಳ ಉಂಟು. ಬಾಲವೂ ರೋಮಮಯ. ಗುದದ್ವಾರದ ಬಳಿ ಸ್ಕಂಕ್‌ಗಳಲ್ಲಿರುವಂತೆ ದುರ್ಗಂಧ ದ್ರವವನ್ನು ಸ್ರವಿಸುವ ಗ್ರಂಥಿಗಳಿವೆ.

ಜೊರಿಲ ನಿಶಾಚರಿ. ಹಗಲೆಲ್ಲ ಕಲ್ಲುಬಂಡೆಗಳ ಅಡಿಯಲ್ಲೊ ತಾನೇ ರಚಿಸಿದ ಇಲ್ಲವೆ ಬೇರೆ ಪ್ರಾಣಿಗಳು ನಿರ್ಮಿಸಿದ ಬಿಲಗಳಲ್ಲೊ ಅಡಗಿದ್ದು ರಾತ್ರಿ ಆಹಾರದ ಬೇಟೆಗೆ ಹೊರಡುತ್ತದೆ. ಇಲಿ, ಕೀಟ, ಹಾವು, ಹಕ್ಕಿ ಇದರ ಪ್ರಧಾನ ಆಹಾರ. ಹೀಗಾಗಿ ಇದು ಮಾನವ ಉಪಯುಕ್ತ ಪ್ರಾಣಿಯೆನಿಸಿದೆ. ಸಾಮಾನ್ಯವಾಗಿ ಇದರ ಚಟುವಟಿಕೆಯೆಲ್ಲ ನೆಲದ ಮೇಲೆ. ಆದರೂ ಜೊರಿಲ ಚೆನ್ನಾಗಿ ಮರವನ್ನೇರಬಲ್ಲುದು ಹಾಗು ಈಜಬಲ್ಲದು. ಇದು ಸಾದಾರಣವಾಗಿ ಒಂಟೊಂಟಿಯಾಗಿಯೇ ಓಡಾಡುತ್ತದೆ. ಶತ್ರುಪ್ರಾಣಿಗಳು ಇದನ್ನು ಮುತ್ತಿದಾಗ ಬಾಲವನ್ನು ನಿಮಿರಿಸಿ ಗುದಗ್ರಂಥಿಗಳಿಂದ ದ್ರವವನ್ನು ಶತ್ರುವಿನ ಮುಖಕ್ಕೇ ನೇರವಾಗಿ ಹೊರಚಿಮ್ಮುತ್ತದೆ. ಜೊರಿಲ ಒಂದು ಸಲಕ್ಕೆ ೨–೩ ಮರಿಗಳನ್ನು ಈಯುತ್ತದೆ. ***

**ಜೊಲ್ಲು:** ಬಾಯಿಯನ್ನು ಒದ್ದೆಯಾಗಿಟ್ಟಿರುವ ದ್ರವ : ಜೊಲ್ಲಿನ ಗ್ರಂಥಿಗಳಿಂದ (ನೋಡಿ) ಬಾಯಿಯ ಒಳಕ್ಕೆ ಸ್ರವಿಸಲ್ಪಡುತ್ತದೆ (ಸಲೈವ). ಲಾಲಾರಸ ಪರ್ಯಾಯನಾಮ. ಇದು ವರ್ಣರಹಿತ ಅಲ್ಪಪಾರದರ್ಶಕ ದ್ರವ. ಸಾಂದ್ರತೆ 1.003. ಕಿಂಚಿತ್ ಪ್ರತ್ಯಾಮ್ಲೀಯ ಸ್ವಭಾವ ಉಳ್ಳದ್ದು. ಪೊಟ್ಯಾಷಿಯಮ್ ಮತ್ತು ಸೋಡಿಯಮ್ ಲವಣಗಳು–ಮುಖ್ಯವಾಗಿ ಬೈಕಾರ್ಬೊನೇಟ್ , ಮ್ಯೂಸಿನ್ ಎಂಬ ಲೋಳೆಯುಕ್ತವಾದ ಪ್ರೊಟೀನ್, ಟೈಯಲಿನ್ ಎಂಬ ಕಿಣ್ವ –ಇವು ಜೊಲ್ಲಿನ ಮುಖ್ಯ ಘಟಕಗಳು. ಬಾಯಿಯ ಲೋಳೆಪೊರೆಯಲ್ಲಿ ಹುದುಗಿರುವ ಸಾವಿರಾರು ಸಣ್ಣ ಗ್ರಂಥಿಗಳು ಅಲ್ಪ ಪ್ರಮಾಣದಲ್ಲಿ ಜೊಲ್ಲನ್ನು ನಿರಂತರವಾಗಿ ಸ್ರವಿಸುತ್ತವೆ. ಇದರಿಂದ ಬಾಯಿ ಸದಾ ಒದ್ದೆಯಾಗಿರುತ್ತದೆ. ಈ ಕಾರಣದಿಂದ ನಮಗೆ

ಮಾತಾಡುವುದು ಸಾಧ್ಯವಾಗುವುದು. ದೇಹದಲ್ಲಿ ದ್ರವಾಂಶ ಕಡಿಮೆ ಆದಾಗ ಬಾಯಿ ಒಣಗಿ ನೀರಡಿಕೆಯನ್ನು ಉಂಟು ಮಾಡುತ್ತದೆ. ವ್ಯಕ್ತಿ ಇದರಿಂದ ನೀರಿಗಾಗಿ ಹಾತೊರೆಯುವಂತಾಗಿ ನೀರನ್ನು ಸೇವಿಸುವಂಥ ಬಲವಂತ ಸಂದರ್ಭ ಉಂಟಾಗುವುದು. ವ್ಯಕ್ತಿ ಸಾಕಷ್ಟು ನೀರು ಸೇವಿಸಿ ದೇಹದಲ್ಲಿ ಕೊರತೆಯುಂಟಾದ ದ್ರವಾಂಶವನ್ನು ಪೂರೈಸಿಕೊಳ್ಳುವ ನೈಸರ್ಗಿಕ ಏರ್ಪಾಡು ಇದು. ಬಾಯಾರಿಕೆ, ನೀರಡಿಕೆ ಎರಡೂ ಸಾಮಾನ್ಯವಾಗಿ ಪರ್ಯಾಯ ಪದಗಳಾದರೂ ಅವುಗಳ ನಡುವೆ ಒಂದು ಸೂಕ್ಷ್ಮ ಭೇದ ಉಂಟು : ನೀರಡಿಕೆ ಇಲ್ಲದೆ ಬಾಯಾರಿರಬಹುದು–ಅತಿಭೀತಿ, ತೀವ್ರ ಮಾನಸಿಕ ಧಕ್ಕೆ, ಅಟ್ರೋಪೀನ್ ಮುಂತಾದ ಕೆಲವು ಔಷಧಗಳ ಸೇವನೆಯಂಥ ಸಂದರ್ಭಗಳು.

ಪೆರೋಟಿಡ್, ಸಬ್‌ಮ್ಯಾಕ್ಸಿಲರಿ ಮತ್ತು ಸಬ್‌ಲಿಂಗ್ವಲ್ ಗ್ರಂಥಿಗಳಿಗೆ ಜೊಲ್ಲಿನ ದೊಡ್ಡ ಗ್ರಂಥಿಗಳೆಂದು ಹೆಸರು (ನೋಡಿ–ಜೊಲ್ಲಿನ ಗ್ರಂಥಿಗಳು). ಇವುಗಳಿಂದ ಜೊಲ್ಲು ಅಧಿಕ ಮೊತ್ತದಲ್ಲಿ ಸ್ರವಿಸುತ್ತದೆ. ಈ ಸ್ರವನ ನಿರ್ದಿಷ್ಟ ವೇಳೆಗಳಲ್ಲಿ ಮಾತ್ರ ಕಂಡುಬರುವುದು. ನರಪ್ರಚೋದನೆಯೇ ಇದರ ಕಾರಣ. ಪೆರೋಟಿಡ್ ಗ್ರಂಥಿಗಳ ಸ್ರಾವ ಬಹುನೀರಾದ ಆದರೆ ಕಿಣ್ವಯುತವಾದ ಜೊಲ್ಲು. ಇದು ಲೋಳೆಯಾಗಿರುವುದಿಲ್ಲ. ಮಿಕ್ಕ ಎರಡು ಗ್ರಂಥಿಗಳ ಸ್ರಾವದಲ್ಲಿ ಕಿಣ್ವ ಮತ್ತು ಮ್ಯೂಸಿನ್ ಎರಡೂ ಇದ್ದು ಈ ಜೊಲ್ಲು ಮಂದವಾಗಿ ಲೋಳೆಯಾಗಿ ಇರುತ್ತದೆ. ವಿವಿಧ ಸಂದರ್ಭಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ಲೋಳೆ ಅಂಶ ಹೆಚ್ಚಾಗಿರುವ ಇಲ್ಲವೆ ಕಿಣ್ವ ಅಂಶ ಹೆಚ್ಚಾಗಿರುವ ಜೊಲ್ಲು ಅಗತ್ಯವಾದಷ್ಟು ಪ್ರಮಾಣದಲ್ಲಿ ಸ್ರಾವವಾಗುವುದು. ಅಗಿಯುವಾಗ ಒಣ ಆಹಾರ ಜೊಲ್ಲಿನೊಡನೆ ಸೇರಿ ತುತ್ತಾಗದ ಒಣತುಣುಕನ್ನು ನುಂಗಲು ಬಲುಕಷ್ಟ. ಆಗ ಅದನ್ನು ಉಗಿದು ಬಾಯನ್ನು ಶುದ್ಧ ಮಾಡಿಕೊಳ್ಳಲು ಅನುಕೂಲವಾಗುವಂತೆ ಅತಿ ತೆಳುವಾದ ಜೊಲ್ಲು ಅಧಿಕವಾಗಿ ಸ್ರಾವವಾಗುವುದು. ರುಚಿ ಪತ್ತೆ ಮಾಡುವಾಗಲೂ ಹೊಟ್ಟೆ ತೊಳಸುವಾಗಲೂ ಇದೇ ರೀತಿ ಜೊಲ್ಲಿನ ಸ್ರವನ ಅಧಿಕವಾಗಿರುತ್ತದೆ. ಈ ಕ್ರಮಗಳಿಂದ ದಿನಕ್ಕೆ ಪ್ರಾಯಶ: 1–1.5 ಲೀ ಗಳಷ್ಟು ಜೊಲ್ಲು ಸ್ರವಿಸಬಹುದು.

ಪಚನಕಾರ್ಯದ ವಿವಿಧ ಹಂತಗಳಲ್ಲಿ ಆಹಾರದೊಡನೆ ಮಿಶ್ರವಾಗುವ ಪ್ರಥಮ ಜೀರ್ಣರಸ ಜೊಲ್ಲು. ಆಹಾರದಲ್ಲಿನ ಪಿಷ್ಟ ಜೊಲ್ಲಿನಲ್ಲಿರುವ ಟೈಯಲಿನ್ ಅಥವಾ ಅಮೈಲೇಸ್ ಎಂಬ ಕಿಣ್ವದಿಂದ ಮಾಲ್ಟ್ ಸಕ್ಕರೆಯಾಗಿ ಪರಿವರ್ತಿತವಾಗುತ್ತದೆ. ಈ ಕಾರ್ಯಕ್ಕೆ ಪ್ರತ್ಯಾಮ್ಲ ಮಾಧ್ಯಮ ಅಗತ್ಯ. ಜೊಲ್ಲಿನ ಸೋಡಿಯಮ್ ಬೈಕಾರ್ಬೊನೇಟ್ ಅಂಶಗಳು ಜೊಲ್ಲಿನಿಂದ ಜೀರ್ಣವಾಗುವುದಿಲ್ಲ. ಜೊಲ್ಲಿನ ಪ್ರತ್ಯಾಮ್ಲೀಯತೆಯಿಂದ ಜಠರರಸದ ಆಮ್ಲತೆ ಕ್ಷೀಣಿಸುವಂಥ ಸೌಲಭ್ಯವೂ ಒದಗಿದಂತಾಗಿದೆ.

ಜೊಲ್ಲಿನಲ್ಲಿ ವಿಷಾಣುನಿರೋಧಕ ವಸ್ತು ಉಂಟು. ಬಹುವಿಧ ವಿಷಾಣುಗಳ ಸೋಂಕಿಗೆ ನಿರಂತರವಾಗಿ ಒಡ್ಡಲ್ಪಟ್ಟಿರುವ ಬಾಯಿಗೆ ಇದು ತಕ್ಕಷ್ಟು ರಕ್ಷಣೆಯನ್ನು ಒದಗಿಸುವುದು. ಅನೇಕ ವೇಳೆ ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿಯೂ ಕಂಡುಬರುವುದುಂಟು. ಜೊಲ್ಲಿನಲ್ಲಿರುವ ವಿಷಾಣುಗಳು ಹುಳುಕು ಹಲ್ಲು (ಕೇರೀಸ್), ಕೀತವಸಡು (ಪಯೋರ್‍ರಿಯಾ ಅಲ್ವಿಯೋಲ್ಯಾರಿಸ್) ಮುಂತಾದುವುಗಳಿಗೆ ಕಾರಣವಾಗುತ್ತದೆ. ಬಾಯಿಯಲ್ಲಿ ವ್ರಣವಾಗಿದ್ದರೆ ಅಲ್ಲಿ ವೃದ್ಧಿಸುತ್ತಿರುವ ವಿಷಾಣುಗಳು ಜೊಲ್ಲಿನೊಡನೆ ಅಧಿಕ ಸಂಖ್ಯೆಯಲ್ಲಿ ಜಠರವನ್ನು ಸೇರಿ, ಅನೇಕ ಜೀರ್ಣಾಂಗರೋಗ ಸ್ಥಿತಿಗಳನ್ನು ಉಂಟುಮಾಡಬಹುದು. ನೆಗಡಿ, ಕೆಮ್ಮು, ಗಂಟಲು ನೋವು, ಕ್ಷಯ, ಡಿಫ್ತೀರಿಯ, ಸಿಫಿಲಿಸ್ ಇವುಗಳ ವಿಷಾಣುಗಳು ಆಯಾ ಸಂದರ್ಭಗಳಲ್ಲಿ ಜೊಲ್ಲಿನಲ್ಲಿ ಇರುವುದು ಸಾಮಾನ್ಯ. ಕೆಮ್ಮಿದಾಗ, ಸೀನಿದಾಗ, ಉಗುಳಿದಾಗ ಈ ವಿಷಾಣುಗಳ ಪ್ರಸಾರವಾಗಿ ನೆರೆವ್ಯಕ್ತಿಗಳಿಗೆ ಸೋಂಕು ಹರಡಬಹುದು. ಹುಚ್ಚುನಾಯಿಯ ಉಗುಳಿನಲ್ಲಿ ನಾಯಿ ಹುಚ್ಚಿನ (ರೇಬೀಸ್) ವಿಷಾಣು ಇರುವುದಿರಂದ ಅದರ ಜೊಲ್ಲಿನ ಸಂಪರ್ಕ ಗಾಯಗೊಂಡ ಸ್ಥಳದಲ್ಲಿ ಉಂಟಾದರೆ ಸೋಂಕು ತಗಲಿ ಕಾಲಕ್ರಮದಲ್ಲಿ ನಾಯಿ ಹುಚ್ಚು ಕಂಡುಬರುತ್ತದೆ.

ಜೊಲ್ಲಿನ ಮೂಲಕ ಕೆಲವು ವಸ್ತುಗಳು ವಿಸರ್ಜಿತವಾಗಬಹುದು. ಹೊಗೆ ಸೊಪ್ಪು ಸೇವಿಸುವವರ ಜೊಲ್ಲಿನಲ್ಲಿ ಪೊಟ್ಯಾಷಿಯಮ್ ಥೈಯೋಸೈಯನೇಟ್ ವಿಸರ್ಜಿತವಾಗುವುದನ್ನು ಉದಾಹರಿಸಬಹುದು. ಪಾದರಸ ಸಂಯುಕ್ತಗಳು, ಸೀಸ ಸಂಯುಕ್ತಗಳು, ಪೊಟ್ಯಾಸಿಯಮ್ ಅಯೊಡೈಡ್ ಇತ್ಯಾದಿಗಳೂ ಹೀಗೆ ವಿಸರ್ಜಿತವಾಗುವುದಕ್ಕೋಸ್ಕರ ಜೊಲ್ಲಿನ ಸ್ರವನವನ್ನು ಅಧಿಕಗೊಳಿಸುತ್ತವೆ ಎಂದು ತೋರುತ್ತದೆ. ಇನ್ನು ಕೆಲವು ಔಷಧಿಗಳು–ಸ್ಯಾಲಿಸಿಲಿಕ್ ಆಮ್ಲ, ಪೈರೊಕಾರ್ಪಿನ್ ಇತ್ಯಾದಿಗಳು ಜೊಲ್ಲನ್ನು ಅಧಿಕಗೊಳಿಸುತ್ತವೆ. ಬಾಯಲ್ಲಿ ಜೊಲ್ಲು ಅಧಿಕವಾಗಿ ಸುರಿಯುವುದಕ್ಕೆ ಇನ್ನೂ ಬೇರೆ ಕಾರಣಗಳುಂಟು. ಬಾಯಿ ಹುಣ್ಣು (ಸ್ಟೋಮೆಟೈಟಿಸ್), ಹುಳುಕು ಹಲ್ಲು, ಮುರಿದ ಹಲ್ಲಿನ ವಕ್ರತೆಯಿಂದ ಬಾಯಿಯಲ್ಲಿ ಗಾಯ, ಜಠರ ರೋಗಗಳು, ಗರ್ಭಾವಸ್ಥೆಯ ಪ್ರಾರಂಭ ಕಾಲ, ಕೆಲವು ವ್ಯಕ್ತಿಗಳಲ್ಲಿ ಪ್ರತಿಸಲ ಮುಟ್ಟಾದಾಗ–ಈ ಸಂದರ್ಭಗಳಲ್ಲೆಲ್ಲ ಜೊಲ್ಲಿನ ಸ್ರವನ ಅಧಿಕವಾಗುತ್ತದೆ. ಸ್ರವಿಸಿದ ಜೊಲ್ಲನ್ನು ನುಂಗಲಾಗದಿದ್ದರೆ ಅದು ಬಾಯಿಂದ ಹೊರಸುರಿಯುತ್ತದೆ. ಬಹುಶ: ಗಂಟಲುನೋವು, ಗದ್ದಕಟ್ಟು (ಮಂಪ್ಸ್), ಕೆಳದವಡೆ ಉಳುಕು ಮುರುಕು, ವಾಯುನೋವು ಈ ಕಾರಣಗಳಿಂದ ನುಂಗುವುದಕ್ಕಾಗದಿರಬಹುದು. ಇಲ್ಲವೇ ಡಿಫ್ತೀರಿಯ, ಮುಖಸೆಟೆತ (ಫೇಷಿಯಲ್ ಪ್ಯಾಲ್ಸಿ), ಮಯಸ್ಥೀನಿಯ ಗ್ರೇವಿಸ್ ಇಂಥ ರೋಗಗಳಲ್ಲಿ ಕಂಡುಬರುವಂತೆ ಸ್ನಾಯುಗಳ ಸ್ವಾಧೀನನಾಶದಿಂದ ಉಗುಳು ನುಂಗುವುದಕ್ಕಾಗದಿರಬಹುದು. ಪೆದ್ದರು, ಮಾನಸಿಕ ಬೆಳವಣಿಗೆ ಕಡಿಮೆ ಇರುವ ವ್ಯಕ್ತಿಗಳು ಇವರಲ್ಲೂ ಜೊಲ್ಲು ಬಾಯಿಯಿಂದ ಹೊರ ಸುರಿಯುತ್ತಿರುತ್ತದೆ. ಬಹುಶಃ ಉಗುಳನ್ನು ಪದೇಪದೇ ನುಂಗಿಕೊಂಡು ಅದು ಹೊರಸುರಿದು ಕೊಳೆ ಆಗದಂತೆ ಮಾಡಬೇಕು, ಶುಭ್ರವಾಗಿರಬೇಕು ಎನ್ನುವುದು ಇವರಿಗೆ ತಿಳಿಯದ್ದರಿಂದ ಹೀಗೆ ಎಂದು ತೋರುತ್ತದೆ. ***

# ಝ

**ಝೇಂಕಾರ ಪಕ್ಷಿಗಳು:** ಭೂಮಿಯ ಪಶ್ಚಿಮಾರ್ಧಗೋಳದಲ್ಲಿ ಮಾತ್ರ ಕಂಡು ಬರುವ ಒಂದು ತೆರನ ಹಕ್ಕಿಗಳು (ಹಮಿಂಗ್ ಬರ್ಡ್ಸ್). ದಕ್ಷಿಣ ಅಮೆರಿಕ, ಮೆಕ್ಸಿಕೊ, ಉತ್ತರ ಅಮೆರಿಕ, ವೆಸ್ಟ್ ಇಂಡೀಸ್‌ಗಳಲ್ಲಿ ಇವನ್ನು ನೋಡಬಹುದು. ಆ್ಯಪೋಡಿಫಾರ್ಮಿಸ್ ಗಣದ ಟ್ರೋಕಿಲಿಡೆ ಕುಟುಂಬಕ್ಕೆ ಸೇರಿವೆ. ಸುಮಾರು 320 ಬಗೆಯ ಝೇಂಕಾರ ಪಕ್ಷಿಗಳುಂಟು. ತಮ್ಮ ಮೈಬಣ್ಣದ ಉಜ್ಜ್ವಲತೆಗೆ ಹೆಸರಾಗಿವೆ. ಕಣ್ಣು ಕೋರೈಸುವ ಕಾಮನಬಿಲ್ಲಿನಂಥ ಇವುಗಳ ಬಣ್ಣವನ್ನು ಸರಿಗಟ್ಟುವ ಇತರ ಹಕ್ಕಿಗಳೆಂದರೆ ಸೂರಕ್ಕಿಗಳು (ಸನ್‌ಬರ್ಡ್ಸ್) ಮತ್ತು ಸಗ್ಗವಕ್ಕಿಗಳು (ಬರ್ಡ್ಸ್ ಆಫ್ ಪ್ಯಾರಡೈಸ್). ಕೆಲವು ತೆರನ ಝೇಂಕಾರ ಪಕ್ಷಿಗಳ ಗಂಡುಗಳ ತಲೆಯ ಮೇಲೆ ವಿಚಿತ್ರ ರೀತಿಯ ಶಿಖೆಗಳೂ ಕತ್ತಿನಲ್ಲಿ ಬಣ್ಣಬಣ್ಣದ ಪುಕ್ಕಗಳ ಗುಚ್ಛಗಳೂ ಬಾಲದಲ್ಲಿ ಉದ್ದನೆಯ ರೆಕ್ಕೆಗಳೂ ಇರುವುದುಂಟು. ಇವೆಲ್ಲ ಅಲಂಕಾರಗಳಿಂದಾಗಿ ಈ ಹಕ್ಕಿಗಳು ಪಕ್ಷಿ ಜಗತ್ತಿನ ರತ್ನಗಳೆನಿಸಿಕೊಂಡಿವೆ. ಇವುಗಳ ವರ್ಣವೈವಿಧ್ಯ ಎಷ್ಟಿದೆಯೆಂದರೆ ಹಿಂದೆ ಇವುಗಳ ಚರ್ಮದಿಂದ ಆಭರಣಗಳನ್ನು ತಯಾರಿಸುತ್ತಿದ್ದರು. 19ನೆಯ ಶತಮಾನದಲ್ಲಿ ವೆಸ್ಟ್ ಇಂಡೀಸ್, ಕೊಲಂಬಿಯ ಮುಂತಾದೆಡೆಗಳಿಂದ ಇವುಗಳ ಚರ್ಮ ಯೂರೋಪಿಗೆ ಲಕ್ಷಾಂತರ ಸಂಖ್ಯೆಯಲ್ಲಿ ರಫ್ತಾಗುತ್ತಿದ್ದವು. ಈ ವ್ಯಾಪಾರ ಈಗ ನಿಂತುಹೋಗಿದೆಯಾದರೂ ಝೇಂಕಾರ ಪಕ್ಷಿಗಳ ವೈಜ್ಞಾನಿಕ ಅಧ್ಯಯನ ಆರಂಭವಾದದ್ದು ಈ ಚರ್ಮಗಳಿಂದಲೇ. ಬಹುಪಾಲು ಝೇಂಕಾರ ಪಕ್ಷಿಗಳನ್ನು ಜೀವಂತವಾಗಿ ಅವುಗಳ ಸ್ವಾಭಾವಿಕ ನೆಲೆಯಲ್ಲಿ ಅಭ್ಯಸಿಸಲಾಗಿದೆಯಾದರೂ ಕೆಲವು ಪ್ರಭೇದಗಳ ಪರಿಚಯ ಅವುಗಳ ಚರ್ಮದ ಮೂಲಕ ಮಾತ್ರ ಆಗಿದೆ. ಬಲು ಪುಟ್ಟ ಗಾತ್ರದ ಹಕ್ಕಿಗಳಿವು. ಉದಾಹರಣೆಗೆ, ಕ್ಯೂಬದಲ್ಲಿ ಜೀವಿಸುವ ಜೇನು ಝೇಂಕಾರ ಪಕ್ಷಿ ಕೇವಲ 6.35 ಸೆಂಮೀ ಉದ್ದ ಇದೆ. ಇದರ ತೂಕ 2 ಗ್ರಾಂ ಮಾತ್ರ. ಅತ್ಯಂತ ದೊಡ್ಡ ಗಾತ್ರದ ಝೇಂಕಾರ ಪಕ್ಷಿಯೆಂದರೆ ಎಕ್ವಡಾರ್, ಚಿಲಿಗಳಲ್ಲಿ ಕಾಣಸಿಗುವ ದೈತ್ಯ ಝೇಂಕಾರ ಪಕ್ಷಿ. ಇದರ ಉದ್ದ 21.50 ಸೆಂಮೀ; ತೂಕ ಸು. 20 ಗ್ರಾಂ. ಝೇಂಕಾರ ಪಕ್ಷಿಗಳ ದೇಹ ವರ್ಣಮಯ. ದೇಹದ ಬಣ್ಣ ಮುಖ್ಯವಾಗಿ ಕಪ್ಪು, ಕಂದು, ಇಲ್ಲವೆ ಹಸಿರು. ಕತ್ತು, ಹಣೆ, ನೆತ್ತಿ, ಪಾರ್ಶ್ವ, ಬೆನ್ನು ಮೊದಲಾದೆಡೆ ಮಿರುಗುವ ಹಸಿರು, ನೀಲಿ, ನೇರಳೆ, ಬಂಗಾರದ ಬಣ್ಣಗಳ ಗುರುತುಗಳುಂಟು. ಇವುಗಳ ಕೊಕ್ಕು ತೆಳುವಾಗಿಯೂ ಚೂಪಾಗಿಯೂ ಸಾಮನ್ಯವಾಗಿ ನೇರವಾಗಿಯೂ ಇದೆ. ಕಾಸ್ಟರೀಕ, ಎಕ್ವಡಾರ್‌ಗಳಲ್ಲಿ ವಾಸಿಸುವ ಕುಡುಗೊಕ್ಕು ಝೇಂಕಾರ ಪಕ್ಷಿಯ ಕೊಕ್ಕು ಮಾತ್ರ ಬಿಲ್ಲಿನಂತೆ ಬಾಗಿದೆ.

ದಕ್ಷಿಣ ಅಮೆರಿಕದ ಕತ್ತಿಕೊಕ್ಕಿನ ಝೇಂಕಾರ ಪಕ್ಷಿಯಲ್ಲಿ ಅದರ ದೇಹದ ಉದ್ದಕ್ಕಿಂತ ಹೆಚ್ಚು ಉದ್ದದ ಕೊಕ್ಕು ಉಂಟು. ಈ ಹಕ್ಕಿಗಳ ಇನ್ನೊಂದು ವಿಚಿತ್ರ ಲಕ್ಷಣವೆಂದರೆ ನಾಲಗೆಯನ್ನು ಕೊಕ್ಕಿಗಿಂತ ಮುಂದಕ್ಕೆ ಚಾಚುವ ಸಾಮರ್ಥ್ಯ. ಕೆಲವು ಪ್ರಭೇದಗಳಲ್ಲಿ ನಾಲಗೆ ನಳಿಕೆಯಂತಿದೆ. ಇನ್ನು ಕೆಲವಲ್ಲಿ ನಾಲಗೆಯ ತುದಿ ಕುಂಚದಂತಿದೆ. ಹೂಗಳಿಂದ ಮಧುವನ್ನು ಹೀರುವುದಕ್ಕೆ, ಸಣ್ಣ ಪುಟ್ಟ ಕೀಟಗಳನ್ನು ಹಿಡಿಯುವುದಕ್ಕೆ ಇದರಿಂದ ಅನುಕೂಲ.

ಉದ್ದ ಕೊಕ್ಕಿನ ಝೇಂಕಾರ ಪಕ್ಷಿ

ಝೇಂಕಾರ ಪಕ್ಷಿಗಳು ತಮ್ಮ ರೆಕ್ಕೆಗಳನ್ನು ಅತ್ಯಂತ ತ್ವರಿತ ಗತಿಯಲ್ಲಿ ಬಡಿಯಬಲ್ಲವು (ಸೆಕೆಂಡಿಗೆ 50–90 ಸಲ ಎಂದು ಹೇಳಲಾಗಿದೆ). ಇವು ಹಾರುವಾಗ ಉಂಟಾಗುವ ಝೇಂಕಾರ ಶಬ್ದಕ್ಕೆ ಇದೇ ಕಾರಣ. ರೆಕ್ಕೆ ಬಡಿತ ಎಷ್ಟು ರಭಸವೆಂದರೆ ಬರಿಗಣ್ಣಿಗೆ ಕಾಣುವುದು ಬರಿಯ ಒಂದು ಮುಸುಕು ಛಾಯೆ ಮಾತ್ರ. ಇವು ಬಹು ವೇಗವಾಗಿ ಹಾರಲೂ ಬಲ್ಲವು; ಇವುಗಳ ವೇಗ ಗಂಟೆಗೆ 48 ಕಿಮೀ. ಝೇಂಕಾರ ಪಕ್ಷಿಗಳ ಅತ್ಯಂತ ಸೋಜಿಗದ ಲಕ್ಷಣವೆಂದರೆ ಹಠಾತ್ತನೆ ಹೆಲಿಕಾಪ್ಟರಿನಂತೆ ಸ್ಥಿರವಾಗಿ ಗಾಳಿಯಲ್ಲಿ ರೆಕ್ಕೆ ಬಡಿಯುತ್ತ ನಿಲ್ಲಬಲ್ಲ ಸಾಮರ್ಥ್ಯ. ಅಂತೆಯೇ ಮೇಲಕ್ಕೆ, ಕೆಳಕ್ಕೆ ಚಲಿಸಬಲ್ಲವಲ್ಲದೆ ಹಿಮ್ಮುಖವಾಗಿ ಹಾರುವ ಲಕ್ಷಣ ಇವುಗಳಲ್ಲಿ ಮಾತ್ರ ಕಂಡುಬರುವಂಥದು. ಈ ಹಕ್ಕಿಗಳಿಗೆ ಭರ್ಜರಿಯಾದ ರೆಕ್ಕೆ ಸ್ನಾಯುಗಳಿರುವುದೂ ಎದೆ ಮೂಳೆಯಲ್ಲಿ ಆಳವಾದ ಹಾಗೂ ದೃಢವಾದ ಅಡಿಗಟ್ಟು (ಕೀಲ್) ಇರುವುದೂ ರೆಕ್ಕೆಯ ಮೂಳೆಗಳು ಭುಜದ ಮೂಲಕ್ಕೆ ವಿಚಿತ್ರರೀತಿಯ ತಿರುಪುಕೀಲಿನಿಂದ ಸೇರಿಕೊಂಡಿರುವುದೂ ಅವುಗಳ ಹಾರಾಟದ ನಿಪುಣತೆಗೆ ಕಾರಣ. ಇವುಗಳ ಕಾಲುಗಳು ತುಂಬ ಚಿಕ್ಕವು ಹಾಗೂ ದುರ್ಬಲವಾದುವು. ಇದರಿಂದಾಗಿ ರೆಂಬೆಗಳ ಮೇಲೆ ಕೂತುಕೊಳ್ಳುವುದಕ್ಕೆ ಮಾತ್ರ ಇವು ಬಳಕೆಯಾಗುತ್ತವೆ. ಒಂದು ಸ್ಥಳದಿಂದ ಇನ್ನೊಂದಕ್ಕೆ ಚಲಿಸುವಾಗ, ದೂರ ಎಷ್ಟೇ ಕಡಿಮೆಯಿರಲಿ, ಇವು ಹಾರುತ್ತವೆಯೇ ವಿನಾ ಕಾಲಿನಿಂದ ನಡೆಯವು. ಝೇಂಕಾರ ಪಕ್ಷಿಗಳು ತಮ್ಮ ಗಾತ್ರದ ಅಲ್ಪತೆಯನ್ನೂ ಹಾರುವ ನಿಪುಣತೆಯನ್ನೂ ಸಮರ್ಥವಾಗಿ ಬಳಸಿಕೊಂಡು ಇನ್ನಾವುದೇ ಹಕ್ಕಿಯ ಸ್ಪರ್ಧೆಯಿರದ ಜೈವಿಕ ಕ್ಷೇತ್ರವನ್ನು, ಅಂದರೆ ಹೂಗಳ ಪ್ರಪಂಚವನ್ನು, ಆಕ್ರಮಿಸಿವೆ. ತಮ್ಮ ಹಾರಾಟಕ್ಕೆ ಬೇಕಾಗುವ ಅಗಾಧ ಶಕ್ತಿಯನ್ನು ಹೂಗಳಲ್ಲಿನ ಮಧುವಿನಿಂದಲೂ ಪ್ರೋಟೀನುಗಳನ್ನು ಹೂಗಳಲ್ಲೇ ವಾಸಿಸುವ ಕೆಲವು ಕೀಟಗಳಿಂದಲೂ ಪಡೆಯುತ್ತವೆ. ಆಗೊಮ್ಮೆ ಈಗೊಮ್ಮೆ ಕೀಟಗಳಿಗಾಗಿಯೇ ಬೇಟೆಯಾಡುವುದೂ ಉಂಟು. ಅಪೂರ್ವವಾಗಿ ಗಿಡಮರಗಳ ಗಾಯಗಳಿಂದ ಒಸರುವ ರಸವನ್ನು ಕುಡಿಯುತ್ತವೆ. ಹೀಗೆ ತಮ್ಮ ಆಹಾರಕ್ಕಾಗಿ ಹೂವಿನಿಂದ ಹೂವಿಗೆ ಅಲೆಯುವ ಇವು ಪರೋಕ್ಷವಾಗಿ ಪರಾಗಸ್ಪರ್ಶ ಕ್ರಿಯೆಯನ್ನೂ ನಡೆಸುವುದರಿಂದ ಬಹಳ ಉಪಕಾರಿಗಳೆನಿಸಿವೆ.

ಝೇಂಕಾರ ಪಕ್ಷಿಗಳ ಚಯಾಪಚಯ ಕ್ರಿಯೆಗಳ ದರ ಅತ್ಯಂತ ಹೆಚ್ಚು. ಇದಕ್ಕಾಗಿ ಅತ್ಯಧಿಕ ಮೊತ್ತದ ಆಹಾರವನ್ನು ಇವು ಸೇವಿಸುತ್ತವೆ. ಇದರಲ್ಲಿ ಹೆಚ್ಚಿನ ಆಹಾರ ಇವುಗಳ ಚರ್ಮದ ಕೆಳಗೆ ಕೊಬ್ಬಿನ ಒಂದು ದಪ್ಪ ಪದರವಾಗಿ ಸಂಗ್ರಹಗೊಂಡಿರುತ್ತದೆ. ಕೆಲವು ಪ್ರಭೇದಗಳಲ್ಲಿ ಕೊಬ್ಬಿನ ಸಂಗ್ರಹ ಇರುವುದಿಲ್ಲ. ಇಂಥವು ಮೇಲಿಂದಮೇಲೆ ಮಧುವನ್ನು ಕುಡಿಯುತ್ತಿದ್ದು ಅದರಲ್ಲಿನ ಸಕ್ಕರೆಯಿಂದ ಶಕ್ತಿಯನ್ನು ಪಡೆಯುತ್ತವೆ. ಅಲ್ಲದೆ ಹಗಲಿನಲ್ಲಿ $40^0$–$45^0$ಸೆ. ಇರುವ ಇವುಗಳ ದೇಹದ ಉಷ್ಣತೆ ರಾತ್ರಿ ಕಾಲಗಳಲ್ಲಿ $18^0$ ಸೆ ಗೆ ಇಳಿದುಬಿಡುತ್ತದೆಯೆಂದು ಗೊತ್ತಾಗಿದೆ. ಆಗ ಇವುಗಳ ಚಯಾಪಚಯ ಕ್ರಿಯೆಗಳ ವೇಗ ಕಡಿಮೆಯಾಗಿ ಶಕ್ತಿಯ ಉಳಿತಾಯ ಆಗುತ್ತದೆ. ಇದರಿಂದಾಗಿ ಇವು ರಾತ್ರಿವೇಳೆ ಒಂದು ರೀತಿಯ ಸುಪ್ತಾವಸ್ಥೆಯಲ್ಲಿದ್ದು ಶಕ್ತಿಯನ್ನು ಸಂಚಯಿಸಿಕೊಂಡು ಬೆಳಗ್ಗೆ ಬಿಸಿಲು ಬಿದ್ದ ಮೇಲೆ ಮತ್ತೆ ಚುರುಕಾಗುತ್ತವೆ. ಇವುಗಳ ಕೂಗು ಬಲು ಕ್ಷೀಣವಾದುದು. ದಕ್ಷಿಣ ಅಮೆರಿಕದ ಉತ್ತರ ಭಾಗಗಳಲ್ಲಿ ಕಾಣಸಿಗುವ ನೇರಳೆ ಕಿವಿಯ ಝೇಂಕಾರ ಪಕ್ಷಿಯನ್ನು ಬಿಟ್ಟರೆ ಉಳಿದ ಬಗೆಗಳ ಗಂಡುಗಳು ಬಹುಪತ್ನೀಕಗಳು. ಪ್ರತಿಯೊಂದು ಗಂಡು ಹಕ್ಕಿಯೂ ತನ್ನದೇ ಆದ ಅಧೀನ ಪ್ರಾಂತವೊಂದನ್ನು ಸ್ಥಾಪಿಸಿಕೊಂಡು ಅದರೊಳಗೆ ಬರುವ ಬೇರೆ ಗಂಡುಗಳನ್ನು ಓಡಿಸುತ್ತಿದ್ದು, ಹೆಣ್ಣುಗಳನ್ನು ತನ್ನ ವಿಚಿತ್ರ ಭಂಗಿಯ ಹಾರಾಟಗಳಿಂದ ಆಕರ್ಷಿಸುತ್ತದೆ. ಒಂದು ಹೆಣ್ಣಿನೊಂದಿಗೆ ಕೂಡಿದ ಅನಂತರ ಗಂಡು ಇನ್ನೊಂದರ ಗಮನ ಸೆಳೆಯತೊಡಗುತ್ತದೆ. ಗರ್ಭ ಧರಿಸಿದ ಹೆಣ್ಣು ಮರಗಿಡಗಳ ರೆಂಬೆಗಳ ಮೇಲೆ ಗೂಡು ಕಟ್ಟಿ 2 ಮೊಟ್ಟೆಗಳನ್ನಿಡುವುದು. ಮೊಟ್ಟೆಗಳ ಬಣ್ಣ ಅಚ್ಚಬಿಳಿ. 14–19 ದಿವಸಗಳ ತರುವಾಯ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ. ಸುಮಾರು 20 ದಿವಸಗಳ ಕಾಲ ತಾಯ ಪೋಷಣೆಯಲ್ಲಿ ಬೆಳೆದು ಅನಂತರ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ.

ನೀಳಬಾಲದ ಝೇಂಕಾರ ಪಕ್ಷಿ

ಆರ್ಕಿಲೋಖಸ್ ಕೊಲುಬ್ರಿಸ್ (ರೂಬಿ ಕತ್ತಿನ ಝೇಂಕಾರ ಪಕ್ಷಿ), ಎನ್ಸಿಫೆರ ಎನ್ಸಿಫೆರ (ಕತ್ತಿ ಕೊಕ್ಕಿನ ಝೇಂಕಾರ ಪಕ್ಷಿ), ಯುಟೊಕ್ಸೆರಿಸ್ ಆಕ್ವಿಲಾ (ಕುಡುಗೊಕ್ಕು ಝೇಂಕಾರ ಪಕ್ಷಿ), ಮೆಲ್ಲಿಸುಗಾ ಹೆಲೆನೆ (ಜೇನು ಝೇಂಕಾರ ಪಕ್ಷಿ) ಮತ್ತು ಪಟಗೋನ ಜೈಗಾಸ್ (ದೈತ್ಯ ಝೇಂಕಾರ ಪಕ್ಷಿ) ಕೆಲವು ಪ್ರಭೇದಗಳು.

***

# ಟ

**ಟಬಾನಿಡೆ:** ಕೀಟ ವರ್ಗದ ಡಿಪ್ಟೆರ ಗಣದ ಕುಟುಂಬ. ಬಲವಾದ ಮೈಕಟ್ಟಿನ ಹಾಗೂ ಚುರುಕಾದ ಕೀಟಗಳಿವು. ಭಾರತದಲ್ಲಿರುವ ೧೫೦೦ಕ್ಕೂ ಹೆಚ್ಚು ಪ್ರಭೇದಗಳೂ ಸೇರಿ ಸು. ೨೫೦೦ ಪ್ರಭೇದಗಳಿವೆ. ಬಿರುಗೂದಲುಗಳಿಲ್ಲದ ದೇಹ, ಎಡಬಲಗಳಿಗೆ ಹೊರಚಾಚಿರುವ ದೊಡ್ಡ ಕಣ್ಣುಗಳು, ಮೂರನೆಯ ಖಂಡದಲ್ಲಿ ಉಂಗುರುಗಳಂಥ ಗುರುತುಗಳನ್ನುಳ್ಳ ಕುಡಿಮೀಸೆ (ಆಂಟೆನಾ) ಇದೆ. ಆಹಾರವನ್ನು ಚುಚ್ಚಲು ಅನುಕೂಲವಾಗಿರುವ ವದನಾಂಗಗಳಿವೆ. ಹೆಣ್ಣು ಕೀಟಗಳು ಹಸುವಿನ ದೇಹದಿಂದ ರಕ್ತ ಹೀರಿ ಬದುಕುತ್ತವೆ. ಕೆಲವು ಬಾರಿ ಮಾನವನನ್ನೂ ಪೀಡಿಸುವುದುಂಟು. ನೀರಿನ ಬಳಿ ಬೆಳೆಯುವ ಸಸ್ಯಗಳ ಮೇಲೆ ಮೊಟ್ಟೆಯಿಡುತ್ತವೆ. ಮೊಟ್ಟೆಯೊಡೆದು ಹೊರಬರುವ ಎಳೆಯ ಡಿಂಬಗಳ ದೇಹದ ಮೇಲೆ ಅಡ್ಡಡ್ಡವಾದ ಏಣುಗಳಿವೆ. ಡಿಂಬಗಳು ತೇವದ ಪ್ರದೇಶದಲ್ಲಿ ಒಂದೆರಡು ತಿಂಗಳುಗಳ ಕಾಲ ಸೂಕ್ಷ್ಮಾಣುಗಳನ್ನು ತಿಂದು ಬೆಳೆಯುತ್ತವೆ. ನಂತರ ಕೋಶಾವಸ್ಥೆಯನ್ನು ಸೇರುವುವು. ಈ ಅವಸ್ಥೆಯಲ್ಲಿ ರೂಪಪರಿವರ್ತನೆ ನಡೆದು ಪ್ರೌಢಕೀಟಗಳು ಹೊರಬರುತ್ತವೆ. ದಕ್ಷಿಣ ಭಾರತದಲ್ಲಿ ಟಬಾನಸ್ ಸ್ಟ್ರಯೇಟಸ್, ಕ್ರೈಸಾಪ್ಸ್ ಡಿಸ್ಪಾರ್,

ಪ್ಯಾಂಗೋನಿಯ (ಕೊರಿಸ್ನೊನ್ನೂರ), ಟ್ಯಾಪ್ರೊಬಾನ್ (ಮೈಸೂರಿನ ಚಾಮುಂಡಿ ಬೆಟ್ಟ ಪ್ರದೇಶದಲ್ಲಿ) ಮತ್ತು ಹೆಮಟೋಪ ಮಾನ್ವಾನ್ (ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ ಪ್ರದೇಶದಲ್ಲಿ) ಪ್ರಭೇದಗಳು ವಾಸಿಸುತ್ತವೆ. ಟಬಾನಸ್ ಜಾತಿಯ ಕೀಟಗಳು ವೈರಸ್ಸುಗಳಿಂದ ಮತ್ತು ಬ್ಯಾಕ್ಟೀರಿಯಗಳಿಂದುಂಟಾಗುವ ವ್ಯಾಧಿಗಳನ್ನು ಹರಡುವುವು. (ಕೆ.ಜಿ.ಎನ್.)

**ಟಾರ್ಮಿಗನ್:** ಗ್ಯಾಲಿಫಾರ್ಮಿಸ್ ಗಣದ ಟೆಟ್ರವೋನಿಡೆ ಕುಟುಂಬಕ್ಕೆ ಸೇರಿದ ಪಕ್ಷಿ. ಗ್ರೌಸ್ ಪರ್ಯಾಯ ನಾಮ. ಶಾಸ್ತ್ರೀಯ ಹೆಸರು ಲ್ಯಾಗೋಪಸ್. ಇದರಲ್ಲಿ ನಾಲ್ಕು ಪ್ರಭೇದಗಳುಂಟು: 1 ರಾಕ್ ಟಾರ್ಮಿಗನ್ (ಲ್ಯಾಗೋಪಸ್ ಮ್ಯೂಟಾಸ್)– ಸ್ಕಾಟ್ಲೆಂಡ್, ಸ್ವೀಡನ್, ನಾರ್ವೆ, ಕೆನಡ, ಲ್ಯಾಪ್‌ಲೆಂಡ್ ಮತ್ತು ಸೈಬೀರಿಯಗಳಲ್ಲಿ ಕಾಣದೊರೆಯುತ್ತದೆ. 2 ವಿಲೊ ಟಾರ್ಮಿಗನ್ (ಲ್ಯಾಗೋಪಸ್ ಲ್ಯಾಗೋಪಸ್)– ಉತ್ತರ ಯೂರೋಪ್, ಉತ್ತರ ಅಮೆರಿಕಗಳ ಮೂಲವಾಸಿ. 3 ವೈಟ್ ಟೇಲ್ಡ್ ಟಾರ್ಮಿಗನ್ (ಲ್ಯಾಗೋಪಸ್ ಲ್ಯೂಕ್ಯೂರಸ್)– ಉತ್ತರ ಅಮೆರಿಕದಲ್ಲಿ ವಾಸಿಸುವುದು. 4 ರೆಡ್ ಗ್ರೌಸ್ (ಲ್ಯಾಗೋಪಸ್ ಸ್ಕಾಟಿಕಸ್)– ಬ್ರಿಟಿಷ್ ದ್ವೀಪ, ಉತ್ತರ ಇಂಗ್ಲೆಂಡ್, ಸ್ಕಾಟ್ಲೆಂಡ್, ವೇಲ್ಸ್ ಮತ್ತು ಐರ್ಲೆಂಡ್‌ಗಳಲ್ಲಿ ಜೀವಿಸುತ್ತದೆ.

ಟಾರ್ಮಿಗನ್

ಇವು ಸುಮಾರು 600–1200 ಮೀ ಎತ್ತರದ ಕಲ್ಲುಬಂಡೆಗಳ ಮಧ್ಯದಲ್ಲಿರುವ ಬಂಜರು ಪ್ರದೇಶದಲ್ಲಿ ವಾಸಿಸುವುದರಿಂದ ಇವುಗಳ ವಿಷಯ ಹೆಚ್ಚು ಪರಿಚಿತವಲ್ಲ. ಇವುಗಳ ಸರಾಸರಿ ಉದ್ದ ಸು. 35 ಸೆಂಮೀ. ಮೈಬಣ್ಣ ಕೆಂಪು. ಮೇಲೆಲ್ಲ ಕಪ್ಪು ಮಿಶ್ರಿತ ಕಂದು ಬಣ್ಣದ ಅಡ್ಡಪಟ್ಟೆಗಳಿವೆ. ಚಳಿಗಾಲದಲ್ಲಿ ಮಾತ್ರ ಮೈಬಣ್ಣ ಸಂಪೂರ್ಣವಾಗಿ ಬಿಳಿಯ ಬಣ್ಣಕ್ಕೆ ತಿರುಗುವುದರಿಂದ (ರೆಡ್‌ಗ್ರೌಸ್ ಮಾತ್ರ ವರ್ಷವಿಡೀ ಕೆಂಪು ಬಣ್ಣದ್ದಾಗಿಯೇ ಉಳಿಯುತ್ತದೆ) ಹಿನ್ನೆಲೆಯಲ್ಲಿನ ಮಂಜಿನಲ್ಲಿ ಇವನ್ನು ಗುರುತಿಸುವುದು ಕಷ್ಟವಾಗುತ್ತದೆ. ಕಾಲುಗಳ ಮೇಲೂ ಕಾಲ್ಬೆರಳುಗಳ ಮೇಲೂ ಪುಕ್ಕಗಳ ಹೊದಿಕೆಯುಂಟು. ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು, ಹೆಣ್ಣು ಹಕ್ಕಿಗಳು ಜೊತೆ ಜೊತೆಯಾಗಿ ಗುಂಪಿನಿಂದ ಹೊರಟು ಗೂಡುಕಟ್ಟಲು ಯೋಗ್ಯವಾದ ಸ್ಥಳ ಹುಡುಕುತ್ತವೆ. ಪೊದೆಯ ಸಂದಿಯಲ್ಲಿ ಅಥವಾ ಬಂಡೆಯ ಮಧ್ಯದಲ್ಲಿ ನೆಲದ ಮೇಲೆ ಅಷ್ಟು ಆಳವಿಲ್ಲದ ಗುಳಿಯನ್ನು ಮಾಡಿ ಅದರ ಸುತ್ತ ಎಲೆ ಅಥವಾ ಗಿಡಗಳಿಂದ ಅಲಂಕರಿಸುತ್ತವೆ. ಒಂದಾವರ್ತಿಗೆ 6–10 ಮೊಟ್ಟೆಗಳನ್ನಿಟ್ಟು 2 ವಾರದವರೆಗೆ ಕಾವು ಕೊಡುತ್ತವೆ. ಮೊಟ್ಟೆಯ ಬಣ್ಣ ಕೆಂಪು ಮಿಶ್ರಿತ ಹಳದಿ ಅಥವಾ ಬಿಳಿಮಿಶ್ರಿತ ಹಳದಿ. ಅಲ್ಲಲ್ಲಿ ಕಂದುಬಣ್ಣದ ಚುಕ್ಕೆಗಳೂ ಇವೆ. (ಟಿ.ಎಲ್.ಆರ್.)

**ಟಾರ್ಸಿಯರ್ ಕೋತಿ:** ಪ್ರೈಮೇಟು ಗಣ ಹಾಗೂ ಪ್ರೊಸಿಮಿಯೈ ಉಪಗಣಗಳ ಟಾರ್ಸೈಯಿಡೆ ಕುಟುಂಬಕ್ಕೆ ಸೇರಿದ ಪ್ರಾಣಿ. ಟಾರ್ಸಿಯಸ್ ಎಂಬುದು ಇದರ ಶಾಸ್ತ್ರೀಯ ನಾಮ. ಇಂಡೋಮಲಯ ಪ್ರದೇಶದ ದಟ್ಟಕಾಡುಗಳಲ್ಲಿ ಮಾತ್ರ ಕಂಡು ಬರುತ್ತದೆ. ಇದರಲ್ಲಿ ಟಾ.ಸೈರಿಕ್ಟ (ಫಿಲಿಪೀನ್ಸ್ ಟಾರ್ಸಿಯರ್), ಟಾ.ಟ್ಯಾಂಕಾನಸ್ (ಮಲೇಷಿಯದ ಟಾರ್ಸಿಯರ್) ಮತ್ತು ಟಾ.ಸ್ಪೆಕ್ಟ್ರಮ್ (ಸೆಲಬೀಸ್ ಟಾರ್ಸಿಯರ್) ಎಂಬ ಮೂರು ಮುಖ್ಯಪ್ರಭೇದಗಳಿವೆ. ಮೊದಲನೆಯ ಪ್ರಭೇದ ಫಿಲಿಪೀನ್ಸ್ ದ್ವೀಪಸ್ತೋಮದ ಸಾಮಾರ್, ಲೇಟೀ, ಬೋಹಾಲ್ ಮತ್ತು ಮಿಂಡನಾವೊ ದ್ವೀಪಗಳಲ್ಲೂ ಎರಡನೆಯದು ಸುಮಾತ್ರದ ದಕ್ಷಿಣ ಭಾಗ, ಬೋರ್ನಿಯೊ, ಬ್ಯಾಂಕ ಮತ್ತು ಬಲೀಟಾನ್ ಹಾಗೂ ದಕ್ಷಿಣ ಚೀನ ಸಮುದ್ರದ ನಾಟುವ ದ್ವೀಪಗಳಲ್ಲೂ, ಮೂರನೆಯದು ಸೆಲಬೀಸ್ ಮತ್ತು ಸಲಾಯಾರ್ ದ್ವೀಪಗಳಲ್ಲೂ, ವಾಸಿಸುತ್ತವೆ. ಇವು ಜೀವಿಸುವ ಸ್ಥಳಗಳ ಆಧಾರದ ಮೇಲೆ ಇವನ್ನು ಹಲವು ಉಪಪ್ರಭೇದಗಳಾಗಿ ವಿಂಗಡಿಸಲಾಗಿದೆ.

ಸೈರಿಕ್ಟ ಪ್ರಭೇದ ಇಡೀ ಕುಟುಂಬದ ಪ್ರರೂಪೀ ಬಗೆಯಾಗಿದೆ. ಇದರ ಗುಣಲಕ್ಷಣಗಳು ಈ ರೀತಿ ಇವೆ: ಬಲು ಪುಟ್ಟ ಗಾತ್ರದ ಪ್ರಾಣಿಯಿದು; ದೇಹದ ಗಾತ್ರ ಕೇವಲ 8–16 ಸೆಂಮೀ, ತೂಕ 80–150 ಗ್ರಾಂ. ದೇಹದ ಎರಡರಷ್ಟು ಉದ್ದದ ಬಾಲ ಇದೆ. ಬಾಲದ ಮೇಲೆ ಕೂದಲುಗಳಿಲ್ಲ. ತುದಿಯಲ್ಲಿ ಮಾತ್ರ ರೋಮಗುಚ್ಛವಿದೆ. ಬೆನ್ನ ಮೇಲೆಲ್ಲ ಬೂದುಮಿಶ್ರಿತ ಕಂದು ಇಲ್ಲವೆ ದಟ್ಟಕಂದು ಬಣ್ಣದ ರೇಷ್ಮೆಯಂತೆ ಮೃದುವಾದ ಕೂದಲುಗಳಿವೆ. ಹೊಟ್ಟೆಯ ಮೇಲಿನ ಕೂದಲಿನ ಬಣ್ಣ ಬೂದಿ ಇಲ್ಲವೆ ಮಾಸಲು ಕಂದು. ತಲೆ ಗುಂಡಗಿದೆ. ಮೂತಿ ಹಾಗೂ ಕತ್ತುಗಳು ಚಿಕ್ಕವು. ಕಣ್ಣುಗಳು ಬಲು ದೊಡ್ಡವು; ಇವುಗಳ ಸುತ್ತಳತೆ ಸುಮಾರು 16 ಸೆಂಮೀ. ಕಿವಿಗಳು ತೆಳುವಾಗಿಯೂ ರೋಮರಹಿತವಾಗಿಯೂ ಇವೆ. ಮೂಗಿನ ಹೊಳ್ಳೆಗಳ ಅಂಚುಗಳ ಮೇಲೆ ಮತ್ತು ತುಟಿಗಳ ಮೇಲ್ಭಾಗದಲ್ಲಿ ಮೋಟು ಕೂದಲುಗಳಿವೆ. ಈ ಲಕ್ಷಣದಿಂದಾಗಿ ಟಾರ್ಸಿಯರ್ ಕೋತಿಗಳು ಲೆಮುರ್ ಕೋತಿಗಳಿಂದ ಬೇರೆಯೆನಿಸಿವೆ. ಮುಂಗಾಲುಗಳು (ಕೈಗಳು) ಚಿಕ್ಕವು. ಹಿಂಗಾಲುಗಳು ತುಂಬ ಉದ್ದವಾಗಿವೆ. ಕೈಯಿನ ಹಾಗೂ ಕಾಲಿನ ಬೆರಳುಗಳು ನೀಳವಾಗಿ ತೆಳುವಾಗಿವೆಯಲ್ಲದೆ ಇವುಗಳ ತುದಿಯಲ್ಲಿ ದೊಡ್ಡ ಅಂಟುಮೆತ್ತೆಗಳಿವೆ. ಇದರಿಂದಾಗಿ ಟಾರ್ಸಿಯರ್ ಸುಲಭವಾಗಿ ಮರದ ರಂಬೆಗಳನ್ನು ಹಿಡಿಯಬಲ್ಲುದು. ಎರಡು ಮತ್ತು ಮೂರನೆಯ ಬೆರಳುಗಳಲ್ಲಿ ಪಂಜದಂಥ ಉಗುರುಗಳಿವೆಯಾದರೆ ಉಳಿದ ಬೆರಳುಗಳಲ್ಲಿ ಮನುಷ್ಯನಲ್ಲಿರುವಂಥ ಉಗುರುಗಳಿವೆ. ಇದಕ್ಕೆ ತನ್ನ ತಲೆಯನ್ನು ಹೆಚ್ಚುಕಡಿಮೆ $360^0$ ತಿರುಗಿಸಬಲ್ಲ ಸಾಮರ್ಥ್ಯವಿದೆ.

ಇದು ನಿಶಾಚರಿ ಹಾಗೂ ಪ್ರಧಾನವಾಗಿ ವೃಕ್ಷವಾಸಿ. ಹಗಲೆಲ್ಲ ಯಾವುದಾದರೊಂದು ರೆಂಬೆಯನ್ನು ಗಟ್ಟಿಯಾಗಿ ಕೈಕಾಲುಗಳಿಂದ ಹಿಡಿದು ನಿದ್ರಿಸುತ್ತದೆ. ಹೀಗೆ ಮಲಗಿರುವಾಗ ಜಾರದೆ ಇರುವುದಕ್ಕಾಗಿ ಬಾಲವನ್ನು ರೆಂಬೆಗುಂಟ ಚಾಚಿ ಆಧಾರವನ್ನಾಗಿ ಮಾಡಿಕೊಂಡಿರುತ್ತದೆ. ಮರದಿಂದ ಮರಕ್ಕೆ ಸುಲಭವಾಗಿ ಮರಗಪ್ಪೆಯ ರೀತಿಯಲ್ಲಿ ನೆಗೆಯುತ್ತ ಓಡಾಡುತ್ತದೆ. ನೆಲದ ಮೇಲೂ ಹೀಗೆಯೇ ಕುಪ್ಪಳಿಸುತ್ತ ಸಾಗುತ್ತದೆ. ಕೆಲವು ಸಲ ನಾಲ್ಕು ಕಾಲುಗಳ ಮೇಲೆ ನಡೆಯುವುದೂ ಉಂಟು. ಟಾರ್ಸಿಯರ್ ಒಂಟಿಜೀವಿ. ಅಪೂರ್ವವಾಗಿ ಜೋಡಿಗಳಲ್ಲಿ ಇಲ್ಲವೆ 3–4ರ ಗುಂಪುಗಳಲ್ಲಿ ಇರುತ್ತವೆ.

ಇದರ ಆಹಾರ ಮುಖ್ಯವಾಗಿ ಕೀಟಗಳು. ಕೆಲವೊಮ್ಮೆ ಸಣ್ಣಪುಟ್ಟ ಓತಿಕೇತಗಳನ್ನು, ಮರಗಪ್ಪೆಗಳನ್ನು, ಬಸವನಹುಳುಗಳನ್ನು ತಿನ್ನುತ್ತದೆ. ಹೊಂಚುಹಾಕಿ ತನ್ನೆರಡು ಕೈಗಳಿಂದ ಒಂದೇ ಸಲಕ್ಕೆ ಎರೆಯನ್ನು ಹಿಡಿದು ನಿಧಾನವಾಗಿ ತಿನ್ನುವುದು. ತಿನ್ನುವಾಗ ತನ್ನೆರಡು ಕಣ್ಣುಗಳನ್ನೂ ಬಲವಾಗಿ ಮುಚ್ಚಿಕೊಳ್ಳುವುದು ಇದರ ವಿಚಿತ್ರ ಲಕ್ಷಣ. ನಾಯಿಗಳ ರೀತಿಯಲ್ಲಿ ನೀರನ್ನು ಕುಡಿಯುತ್ತದೆ. ಟಾರ್ಸಿಯರ್ ಸಾಧುಸ್ವಭಾವದ ಪ್ರಾಣಿ. ಇದನ್ನು ಸುಲಭವಾಗಿ ಸಾಕಬಹುದು ಎಂದು ಹೇಳಲಾಗಿದ್ದರೂ ಪ್ರಾಣಿಸಂಗ್ರಹಾಲಯಗಳಲ್ಲಿ ಇದು ಅಪರೂಪ. ಬಹುಶಃ ಇದರ ಆಹಾರ ಕ್ರಮದ ಬಗ್ಗೆ ಹೆಚ್ಚು ಮಾಹಿತಿ ಇಲ್ಲದಿರುವುದರಿಂದ ಇವನ್ನು ಸಾಕಲಾಗಿಲ್ಲ ಎಂದು ಕಾಣುತ್ತದೆ.

ಸಂತಾನೋತ್ಪತ್ತಿ ವರ್ಷದ ಯಾವ ಕಾಲದಲ್ಲಾದರೂ ನಡೆಯಬಹುದು. ಒಂದು ಸಲಕ್ಕೆ ಒಂದೇ ಒಂದು ಮರಿ ಹುಟ್ಟುತ್ತದೆ. ಆಗತಾನೇ ಹುಟ್ಟಿದ ಮರಿ ಪೂರ್ಣವಾಗಿ ರೂಪಗೊಂಡಿರುತ್ತದೆ. ಇದು ಮರಗಳನ್ನು ಹತ್ತಬಲ್ಲುದು. ಸಮತಟ್ಟಾದ ನೆಲದಲ್ಲಿ ನೆಗೆಯುತ್ತ ಓಡಾಡಲೂ ಬಲ್ಲುದು. ಆದರೂ ಒಂದೆರಡು ತಿಂಗಳವರೆಗೂ ತಾಯೊಂದಿಗೆ ಇದ್ದು ಅನಂತರ ಬೇರೆ ಹೋಗುತ್ತದೆ.

ಟಾರ್ಸಿಯರ್ ಬಹು ಪುರಾತನ ಕಾಲದಿಂದಲೂ ಜೀವಂತವಾಗಿರುವ ಕಪಿ ಪ್ರಭೇದ. ಯೂರೋಪು, ಉತ್ತರ ಅಮೆರಿಕಗಳಲ್ಲಿ ಪೇಲಿಯೊಸೀನ್ ಶಿಲೆಗಳಲ್ಲಿ (ಅಂದರೆ 65 ದಶಲಕ್ಷ ವರ್ಷಗಳ ಹಿಂದಿನ ಶಿಲೆಗಳಲ್ಲಿ) ಇದರ ಪಳೆಯುಳಿಕೆಗಳು ದೊರೆತಿವೆ. (ಎನ್.ವಿ.ಎ.)

**ಟಾಸ್ಮೇನಿಯ ತೋಳ:** ಟಾಸ್ಮೇನಿಯದಲ್ಲಿ ಮಾತ್ರ ಕಂಡುಬರುವ ಒಂದು ವಿಚಿತ್ರ ರೀತಿಯ ಸ್ತನಿ. 1930ಕ್ಕೂ ಮುಂಚೆ ಆಸ್ಟ್ರೇಲಿಯದಲ್ಲೂ ಜೀವಿಸಿದ್ದಿತಂತೆ. ಈಗ ಅಲ್ಲಿ ಇದರ ಪಳೆಯುಳಿಕೆಗಳು ಮಾತ್ರ ಸಿಕ್ಕಿವೆ. ಬಹುಶಃ ಡಿಂಗೋ ನಾಯಿಗಳಿಂದಾಗಿ ಇದು ನಾಶವಾಗಿರಬೇಕು. ಇದು ಮಾರ್ಸ್ಯೂಪಿಯೇಲಿಯ ಗಣದ ಥೈಲ್ಯಾಸಿಡೆ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಥೈಲ್ಯಾಸಿನಸ್ ಸೈನೋಸಿಫ್ಯಾಲಸ್ (ತೋಳದ ತಲೆಯುಳ್ಳ ಮಾರ್ಸ್ಯೂಪಿಯಲ್ ನಾಯಿ ಎಂದು ಈ ಹೆಸರಿನ ಅರ್ಥ). ಈ ಗಣದ ಇತರ ಪ್ರಾಣಿಗಳಿಗೆ

ಹೋಲಿಸಿದರೆ ಇದೇ ಅತ್ಯಂತ ದೊಡ್ಡದು. ಇದಕ್ಕೂ ನಾಯಿ ಮತ್ತು ತೋಳಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲ.

ಬಾಲವೂ ಸೇರಿದಂತೆ ಇದರ ಉದ್ದ 100–110 ಸೆಂಮೀ ನಾಯಿಯಂತೆ ಚೂಪಾದ ತಲೆಯುಳ್ಳ ಇದು ಬಾಯನ್ನು ನಾಯಿಗಿಂತ ಬಹಳ ಅಗಲವಾಗಿ ತೆರೆಯಬಲ್ಲುದು. ಇದರ ಮೈಬಣ್ಣ ಕೆಂಪು ಮಿಶ್ರಿತ ಕಂದು. ಬೆನ್ನಿನ ಮೇಲೆ ಕಪ್ಪು ಬಣ್ಣದ ಅಡ್ಡ ಪಟ್ಟೆಗಳಿವೆ. ಇದರಿಂದಾಗಿ ಇದನ್ನು "ಟಾಸ್ಮೇನಿಯ ಹುಲಿ" ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಕಿವಿಗಳು ಗಿಡ್ಡವಾಗಿ, ಗುಂಡಾಗಿ, ನೆಟ್ಟಗಿವೆ. 50 ಸೆಂಮೀ ಉದ್ದದ ಚೂಪಾದ ಬಾಲವಿದೆ. ಮೊದಲನೆಯ ಕಾಲ್ಬೆರಳು ಇಲ್ಲವೇ ಇಲ್ಲ. ಬಾಲ ಬುಡದಲ್ಲಿ ದಪ್ಪನಾಗಿದ್ದು ಕಾಂಗರೂವಿನ ಬಾಲದಂತೆ ಬಗ್ಗಿದೆ. ಚರ್ಮದ ಪದರದಿಂದ ರಚಿತವಾಗಿರುವ ಚಿಕ್ಕದಾದ, ಅರ್ಧಚಂದ್ರಾಕೃತಿಯ ಹೊಟ್ಟೆಚೀಲವೊಂದಿದೆ. ಚೀಲದ ಒಳಗೆ ನಾಲ್ಕು ಮೊಲೆತೊಟ್ಟುಗಳಿವೆ. ಈ ಚೀಲದ ಬಾಯಿ ಹಿಮ್ಮುಖವಾಗಿ ತೆರೆಯುತ್ತದೆ.



ಇದು ಒಂದು ನಿಶಾಚರಿ. ತನ್ನ ಎರೆಗಳ ಜಾಡನ್ನು ವಾಸನೆಯಿಂದ ಕಂಡುಹಿಡಿಯುತ್ತದೆ. ಕಾಂಗರೂ, ವಾಲಬೀ, ಸಣ್ಣ ಪುಟ್ಟ ಸ್ತನಿಗಳು, ಹಕ್ಕಿಗಳು ಇದರ ಆಹಾರ. ಎರೆಗಳನ್ನು ಒಂಟಿಯಾಗಿ ಇಲ್ಲವೆ 3–4 ಪ್ರಾಣಿಗಳ ಗುಂಪುಗಳಾಗಿ ಬೇಟೆಯಾಡುತ್ತದೆ. ನಾಯಿಯಷ್ಟು ಚುರುಕಾಗಿ, ವೇಗವಾಗಿ ಓಡಲಾರದು. ಇದು ಹಲವಾರು ರೀತಿಗಳಲ್ಲಿ ಕೂಗಬಲ್ಲುದು. ತನ್ನ ಜಾತಿಯ ಇತರ ಪ್ರಾಣಿಗಳೊಂದಿಗೆ ಸಂಪರ್ಕಿಸುವಾಗ ಕುಂಯ್‌ಗುಡುತ್ತದೆ. ರೇಗಿದಾಗ ಗುರುಗುಡುತ್ತದೆ. ಬೇಟೆಯಾಡುವಾಗ ಕೆಮ್ಮುವಂತೆ ಬೊಗಳುತ್ತದೆ.

ಟಾಸ್ಮೇನಿಯ ತೋಳ ಒಂದು ಸೂಲಿನಲ್ಲಿ 2–4 ಮರಿಗಳನ್ನು ಈಯುತ್ತದೆ. ಮರಿಗಳನ್ನು ತನ್ನ ಹೊಟ್ಟೆ ಚೀಲದಲ್ಲಿ ಹೊತ್ತು ತಿರುಗುತ್ತಿದ್ದು ಅವು ಶಕ್ತವಾಗುವವರೆಗೂ ಸಲಹುತ್ತದೆ. (ಎ.ಎಸ್.ಎಚ್.)

**ಟಿಂಗಿಡೆ:** ಹೆಮಿಪ್ಟರ ಗಣದ ಕುಟುಂಬ. ಇದರಲ್ಲಿ ಸಸ್ಯಾಹಾರಿ ಕೀಟಗಳಿವೆ. ಇವನ್ನು ಕಲಾಬತ್ತು ತಿಗಣೆಗಳು (ಲೇಸ್ ಬಗ್ಸ್) ಎನ್ನುವರು. ಇವು ಬಹಳ ಸಣ್ಣಗಾತ್ರದ ಕೀಟಗಳು. ಇವುಗಳ ಉದ್ದ 4–5 ಮಿಮೀ. ದೇಹ ತೆಳುವಾಗಿ ಮತ್ತು ಚಪ್ಪಟೆಯಾಗಿದೆ. ದೇಹದ ಮೇಲೆ ಮುಳ್ಳುಗಳಿವೆ. ಪ್ರೊನೋಟಮ್ ಭಾಗ ತಲೆಯನ್ನು ಆವರಿಸಿ ಒಂದು ಬಗೆಯ ಕುಂಚಿಗೆಯಾಗಿ ಮಾರ್ಪಟ್ಟಿದೆ. ಜೊತೆಗೆ ಪ್ರೊತೋರ್‍ಯಾಕ್ಸಿನ್‌ನ ಅಕ್ಕ–ಪಕ್ಕ ತಟ್ಟೆಯಾಕಾರದ ಹಾಲೆಗಳಿವೆ. ಇವಕ್ಕೆ ಪ್ಯಾರನೋಟ ಎಂದು ಹೆಸರು. ಉದರಭಾಗದ ಮೇಲೆ ಅಗಲವಾದ ರೆಕ್ಕೆಗಳಂಥ ರಚನೆಗಳಿವೆ. ಇವಕ್ಕೆ ಹೆಮಿಎಲಿಟ್ರ ಎಂದು ಹೆಸರು. ಕುಂಚಿಗೆ, ಪ್ಯಾರನೋಟ ಮತ್ತು ಹೆಮಿಎಲಿಟ್ರಗಳು ತೆಳುವಾಗಿ ಮತ್ತು ಪಾರದರ್ಶಕವಾಗಿವೆ. ಇವುಗಳ ಮೇಲೆ ಬಲೆ ರೀತಿಯ ವಿನ್ಯಾಸವಿದೆ. ಇದರಿಂದಾಗಿ ಇವು ಕಲಾಬತ್ತು ವಿನ್ಯಾಸದಂತೆ ಕಾಣುತ್ತವೆ. ಕಲಾಬತ್ತು (ಲೇಸ್) ತಿಗಣೆಗಳು ಮರಗಿಡಗಳ ಊತಕಗಳನ್ನು ಕೊರೆದು ಮೊಟ್ಟೆಯಿಡುವುವು. ಡಿಂಬಗಳು ಎಲೆಗಳನ್ನು ತಿಂದು ಬೆಳೆಯುತ್ತವೆ. ಇವುಗಳ ಹಾವಳಿಗೆ ತುತ್ತಾದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ, ಬಿದ್ದುಹೋಗುತ್ತವೆ. ಕೆಲವು ಪ್ರಭೇದಗಳು (ಕೋಪಿಯಮ್ ಕಾರ್ನ್ಯೂಟಮ್ ಮತ್ತು ಕೋ. ಟ್ಯೂಕ್ರಿಯೈ) ಯೂರೋಪಿನಲ್ಲಿ ಬೆಳೆಯುವ ಟ್ಯೂಕ್ರಿಯಮ್ ಸಸ್ಯಗಳ ಎಲೆಗಂತಿಗಳನ್ನು (ಗಾಲ್ಸ್) ಉಂಟುಮಾಡುವುವು. ಕೋರಿತೂಕ ಸಿಲಿಯೇಟ (ಸಿಕಮೋರ್ ಲೇಸ್ ಬಗ್) ಉತ್ತರ ಅಮೆರಿಕದ ಸಿಕಮೋರ್ ಮರಗಳ ಪಿಡುಗೆನಿಸಿರುವ ಕೀಟ. ಗರ್ಗಾಫಿಯ ಸೊಲಾನಿ ಹತ್ತಿ, ಬದನೆ, ಮುಂತಾದ ಗಿಡಗಳ ಮೇಲೆ ಜೀವಿಸುವ ಕೀಟ. ಸ್ಟೆಫನೈಟಿಸ್ ಪೈರಿ ಯೂರೋಪಿನಲ್ಲಿ ಸೇಬು, ಪಿಯರ್ ಹಣ್ಣಿನ ಗಿಡಗಳ ಮೇಲೆ ವಾಸಿಸುತ್ತದೆ. ಸ್ಟೆಫನೈತಿಸ್ ಆಂಬಿಗುವ, ಜಪಾನಿನಲ್ಲಿ ಚೆರಿ ಮತ್ತು ಸೇಬು ಹಣ್ಣಿನ ಗಿಡಗಳ ಮೇಲೆ ವಾಸವಾಗಿವೆ. (ಎ.ಎಸ್.ಎಚ್)

**ಟಿನಮೂ:** ರ್‍ಯಾಟಿಟೆ ಗುಂಪಿನ ಟಿನ್ಯಾಮಿಫಾರ್ಮಿಸ್ ಗಣದ ಟಿನ್ಯಾಮಿಡೆ ಕುಟುಂಬಕ್ಕೆ ಸೇರಿದ ಹಕ್ಕಿ. ದಕ್ಷಿಣ ಮೆಕ್ಸಿಕೊದಿಂದ ಪಟಗೋನಿಯವರೆಗಿನ ಕಾಡುಗಳಲ್ಲಿ, ಹುಲ್ಲುಗಾವಲುಗಳಲ್ಲಿ ಜೀವಿಸುತ್ತದೆ. ರೀಯ ಹಕ್ಕಿಗಳಿಗೆ ಹತ್ತಿರ ಸಂಬಂಧಿ. ಹೊರನೋಟಕ್ಕೆ ಗೌಜಲು (ಕವುಜಗ) ಹಕ್ಕಿಯಂತೆ ಕಾಣುತ್ತದೆ. ಇದರಲ್ಲಿ ಸು. 9 ಜಾತಿಗಳೂ 45 ಪ್ರಭೇದಗಳೂ ಉಂಟು. ಕ್ರಿಪ್ಟುರೆಲ್ಲಸ್ ಸೌಯಿ (ಲಿಟಲ್ ಟಿನಮೂ), ಕ್ರಿಪ್ಟುರೆಲ್ಲಸ್ ವೇರಿಗೇಟಸ್ (ವೇರಿಗೇಟೆಡ್ ಟಿನಮೂ), ಯುಡ್ರೋಮಿಯ ಎಲಿಗಾನ್ಸ್ (ಮಾರ್ಟಿನೇಟಾ ಟಿನಮೂ) ಮತ್ತು ನಾಥೋಪ್ರಾಕ್ಟಾ ಒರ್ನಾಟಾ (ಒರ್ನೇಟ್ ಟಿನಮೂ) ಇವುಗಳಲ್ಲಿ ಕೆಲವು. ಸುಮಾರು 20–30 ಸೆಂಮೀ ಉದ್ದದ ಹಕ್ಕಿಗಳಿವು. ತೆಳುವಾದ ಕೊಕ್ಕು, ಸಣ್ಣ ತಲೆ, ಗುತ್ತವಾದ ದೇಹ, ದುಂಡನೆಯ ಅಂಚಿನ ರೆಕ್ಕೆ, ಮೋಟು ಬಾಲ, ಬಲವಾದ ಕಾಲುಗಳು–ಇವು ಟಿನಮೂಗಳ ಮುಖ್ಯ ಲಕ್ಷಣಗಳು. ದೇಹದ ಬಣ್ಣ ಕಂದುಮಿಶ್ರಿತ ಹಳದಿ, ಕಂದು ಇಲ್ಲವೆ ಬೂದಿ. ಜೊತೆಗೆ ಮಚ್ಚೆಗಳೂ ಪಟ್ಟೆಗಳೂ ಇವೆ. ಇದರಿಂದಾಗಿ ತಾವು ಜೀವಿಸುವ ಸ್ಥಳದ ಹಿನ್ನೆಲೆಯೊಂದಿಗೆ ಸುಲಭವಾಗಿ ಹೊಂದಿಕೊಳ್ಳುವುವು. ಈ ಲಕ್ಷಣದಲ್ಲಿ ಇವು ಅಮೆರಿಕದ ಸಿಪ್ಲೆ ಹಕ್ಕಿಗಳನ್ನು (ಕ್ವೈಲ್) ಹೋಲುತ್ತವೆ. ಅವುಗಳಂತೆಯೇ ಅಪಾಯವೊದಗಿದಾಗ ಸರ್ರನೆ ಬಲು ವೇಗವಾಗಿ ಬಿಟ್ಟ ಬಾಣದಂತೆ ಹಾರಿಹೋಗುತ್ತವೆ.



ಟಿನಮೂ

ಹೆಚ್ಚಿನ ಪ್ರಭೇದಗಳು ಒಂಟಿಜೀವಿಗಳು. ಮುಂಜಾವಿನ ಹಾಗೂ ಮುಸ್ಸಂಜೆಯ ವೇಳೆಯಲ್ಲಿ ತಮ್ಮ ಮೆಚ್ಚಿನ ಆಹಾರವಾದ ಬೀಜಗಳು, ಎಳೆಯ ಬೇರುಗಳು, ಕೀಟಗಳು ಮುಂತಾದವನ್ನು ಅರಸಿಕೊಂಡು ಓಡಾಡುತ್ತವೆ. ಹೀಗೆ ಓಡಾಡುವಾಗ ಕೆಳದನಿಯಲ್ಲಿ ಸಿಳ್ಳೆಹಾಕಿದಂತೆ ಇಂಪಾಗಿ ಕೂಗುವುದುಂಟು. ಗಂಡುಹಕ್ಕಿಗಳು ಯಾವುದಾದರೂ ಮರದ ಬುಡದಲ್ಲಿ ನೆಲವನ್ನು ಅರೆದು ಗುಂಡಿ ಮಾಡಿ ಹುಲ್ಲು, ಪುಕ್ಕಗಳ ಮೆತ್ತೆಯನ್ನು ಹಾಕಿ ಗೂಡು ನಿರ್ಮಿಸುತ್ತವೆ. ಇಂಥ ಗೂಡಿನಲ್ಲಿ ಹೆಣ್ಣು ಸುಮಾರು 10 ಮೊಟ್ಟೆಗಳನ್ನು ಇಟ್ಟು ಹೋಗುವುದು. ಮೊಟ್ಟೆಗಳ ಬಣ್ಣ ಮಿರುಗುವ ನೀಲಿ, ಹಸಿರು, ಹಳದಿ, ಊದಾಮಿಶ್ರಿತ ಕಂದು ಹೀಗೆ ವೈವಿಧ್ಯಪೂರ್ಣ. ಮೊಟ್ಟೆಗಳಿಗೆ ಕಾವು ಕೊಡುವುದು, ಮರಿಗಳನ್ನು ಪೋಷಿಸುವುದು ಸಂಪೂರ್ಣವಾಗಿ ಗಂಡಿನ ಕೆಲಸ. (ಟಿ.ಎಲ್.ಆರ್.)

**ಟಿನೊಫೊರ:** ಮೆಟಜೋವ ಗುಂಪಿಗೆ ಸೇರಿದ ಸೀಲೆಂಟರೇಟ ವಂಶದಲ್ಲಿರುವ ಒಂದು ವಿಭಾಗ. ಇದರಲ್ಲಿ ಟೆಂಟ್ಯಾಕ್ಯುಲೇಟ ಮತ್ತು ನ್ಯೂಡ ವರ್ಗಗಳಿವೆ. ಈ ಎರಡು

ವರ್ಗಗಳಲ್ಲಿ 80 ಪ್ರಭೇದಗಳಿವೆ. ಎಲ್ಲವೂ ಸಾಗರವಾಸಿಗಳು. ಕೆಲವು ಪ್ರಭೇದಗಳು ಉಷ್ಣವಲಯದಿಂದ ಧ್ರುವಪ್ರದೇಶದ ಎಲ್ಲಾ ಸಾಗರಗಳಲ್ಲಿ ವಾಸಿಸುತ್ತವೆ. ಉದಾ: ಪ್ಲೂರೊಬ್ರೇಕಿಯ ಪೈಲಿಯಸ್ ಮತ್ತು ಬೆರೋಯಿೀ ಕ್ಯುಕಮಿಸ್. ಪ್ಲೂರೊಬ್ರೇಕಿಯ



ಪ್ಲೂರೊಬ್ರೇಕಿಯ

ಪೈಲಿಯಸ್ ಅನ್ನು ಸಾಮಾನ್ಯವಾಗಿ ಕಡಲ ನೆಲ್ಲಿಕಾಯಿ, ಕಡಲ ಅಕ್ರೋಟು ಅಥವಾ ಬೆಕ್ಕಿನ ಕಣ್ಣು ಎಂದು ಕರೆಯುವರು. ಕೆಲವು ಪ್ರಭೇದಗಳು ಹೆಚ್ಚು ಆಳವಿಲ್ಲದ ಪ್ರದೇಶಗಳಲ್ಲಿ ವಾಸಿಸಿದರೆ, ಕೆಲವು ಮಾತ್ರ 3000 ಮೀ ಆಳವಿರುವ ಸ್ಥಳಗಳಲ್ಲಿ ಜೀವಿಸುತ್ತವೆ.

ಈ ಪ್ರಾಣಿಗಳು ಅಂಡಾಕಾರ ಅಥವಾ ಚಂಡಿನಾಕಾರದುವು. ಇವುಗಳ ಗಾತ್ರ 5–20 ಮಿಮೀ. ಕೆಲವು ಪ್ರಭೇದಗಳ ಗಾತ್ರ ದೊಡ್ಡದು. ಉದಾ: ಬೆರೋಯಿೀ ಪ್ರಭೇದ 9 ಸೆಂಮೀ ಉದ್ದ ಇದೆ. ಯೂಕ್ಯಾರಿಸ್ ಮಲ್ಟಿಕಾರ್ನಿಸ್ 10 ಸೆಂಮೀ ಉದ್ದವಿದೆ. ಸೆಸ್ಟಸ್ ವನೆರಿಸ್ (ವೀನಸ್ ಡಾಬು) 1.5 ಮೀ ಉದ್ದವಿದ್ದು, ಚಪ್ಪಟೆಯಾದ ಪಟ್ಟಿಯಂತಿದೆ. ಕೆಲವು ವರ್ಣರಹಿತ ಜೀವಿಗಳಲ್ಲಿ ವರ್ಣ ಸ್ಫುರಣಸಾಮರ್ಥ್ಯ ಇದೆ. ಇವು ತುಂಬ ನಾಜೂಕಾದ ಪ್ರಾಣಿಗಳು.

ಇವು ಸಂದೀಪ್ತಶೀಲಗಳು. ರಾತ್ರಿವೇಳೆಯಲ್ಲಿ ಉಜ್ವಲವಾದ ಹಸಿರು ಇಲ್ಲವೆ ನೀಲಿ ಬಣ್ಣದಿಂದ ಬೆಳಗುತ್ತವೆ.

ಈ ಜೀವಿಗಳ ದೇಹರಚನೆ ವಿಶಿಷ್ಟವಾಗಿದೆ. ಸೈಡಿಪ್ಪಿಡ ಗಣದ ಪ್ಲೂರೊಬ್ರೇಕಿಯ ಪ್ರಭೇದದ ದೇಹ ಗುಂಡಾಗಿದೆ. ಇದರ ಒಂದು ಪಾರ್ಶ್ವದಲ್ಲಿ (ಮುಖಭಾಗ) ಬಾಯಿ ಇದೆ. ಪಾರ್ಶ್ವದ ವಿರುದ್ಧ ಭಾಗದಲ್ಲಿ (ಅಪಮುಖಭಾಗ) ಸ್ಟ್ಯಾಟೊಸಿಸ್ಟ್ ಎಂಬ ಜಟಿಲವಾದ ಸಂವೇದನಾಂಗವಿದೆ. ಸ್ಟ್ಯಾಟೊಸಿಸ್ಟಿನಲ್ಲಿ ಸುಣ್ಣದಿಂದ ರಚಿತವಾದ ಗಂಟುಗಳ (ಸ್ಟ್ಯಾಟೊಲಿತ್ಸ್) ಗೊಂಚಲು ಇದೆ. ಇದರಿಂದ ಹೊರಟ ಮತ್ತು ಪರಸ್ಪರ ಕೂಡಿಕೊಂಡ ಶಿಲಕೆಗಳ 4 ಗುಂಪುಗಳಿವೆ. ಇವೆರಡನ್ನೂ ಆವರಿಸಿರುವ ಒಂದು ಗುಮ್ಮಟ (ಬೆಲ್) ಇದೆ. ಅಪಮುಖ ಭಾಗದಿಂದ ಬಾಯಿಯ ಕಡೆಗೆ ಉದ್ದುದ್ದವಾದ 8 ಸಾಲು ಫಲಕಗಳಿವೆ. ಇವಕ್ಕೆ ಹಣಿಗೆ ಫಲಕಗಳು (ಕೂಂಬ್ ಪ್ಲೇಟ್ಸ್) ಎನ್ನುವರು. ಇವುಗಳಲ್ಲಿ ಸೂಕ್ಷ್ಮವಾದ ಶಿಲಕೆಗಳಿವೆ. ಈ ಶಿಲಕೆಗಳ ಸುಸಂಘಟಿತ ಬಡಿತದ ಮೂಲಕ ಪ್ರಾಣಿ ನೀರಿನಲ್ಲಿ ಚಲಿಸುತ್ತದೆ. ಹೀಗೆ ಚಲಿಸುವಾಗ ಮುಖಭಾಗ ಮುಂದಕ್ಕಿದೆ. ದೇಹದ ಆಚೀಚೆ ಹಣಿಗೆ ಫಲಕಗಳ ನಡುವೆ ಆಳವಾದ ಎರಡು ಸಂಚಿಗಳಿವೆ. ಇವುಗಳಿಂದ ಒಂದೊಂದು ಸ್ಪರ್ಶಕ (ಟೆಂಟಕಲ್) ಹೊರಡುತ್ತದೆ. ಒಂದೊಂದರ ಮೇಲೂ ಸೂಕ್ಷ್ಮವಾದ ಹಲವಾರು ಕವಲುಗಳಿವೆ. ಸ್ಪರ್ಶಕಗಳ ಸಹಾಯದಿಂದ ಆಹಾರವನ್ನು ಬಾಯಿಗೆ ಎಳೆದುಕೊಳ್ಳುತ್ತದೆ. ಸ್ಪರ್ಶಕಗಳ ಮೇಲೆ ವಿಶೇಷ ರೀತಿಯ ಕೋಶಗಳಿವೆ. ಇವಕ್ಕೆ ಲ್ಯಾಸೊ ಕೋಶಗಳು ಅಥವಾ ಕಾಲೊಬ್ಲಾಸ್ಟುಗಳು ಎಂದು ಹೆಸರು. ಇವು ಒಂದು ಬಗೆಯ ಅಂಟುದ್ರವವನ್ನು ಸ್ರವಿಸುತ್ತವೆ. ಈ ಸ್ಪರ್ಶಕವನ್ನು ಮುಟ್ಟುವ ಆಹಾರ ಪ್ರಾಣಿಗಳು ಸಿಕ್ಕಿಕೊಂಡು ಬಿಡುತ್ತವೆ.

ಟಿನೊಫೊರ ಗುಂಪಿನ ಪ್ರಾಣಿಗಳು ಸ್ವತಂತ್ರ ಜೀವಿಗಳು. ಸಣ್ಣ ತೇಲು ಜೀವಿಗಳು, ಸಣ್ಣ ಹುಳುಗಳು, ಕೋಪಿಪೊಡ ಗುಂಪಿನ ಪ್ರಾಣಿಗಳನ್ನು, ಮೀನುಗಳ ಮೊಟ್ಟೆ ಹಾಗೂ ಮರಿಗಳನ್ನು, ಸೀಗಡಿ ಡಿಂಬಗಳನ್ನು ತಿಂದು ಜೀವಿಸುತ್ತವೆ. ಕೆಲವು ಪ್ರಭೇದಗಳು ಪರಾವಲಂಬಿಗಳಾಗಿ ಬೇರೆ ಪ್ರಾಣಿಗಳ ಮೇಲೆ ಬದುಕುತ್ತವೆ.

ಬಾಯಿಯ ಮೂಲಕ ಒಳಸಾಗುವ ಆಹಾರ ಅಗಲವಾದ ಫ್ಯಾರಿಂಕ್ಸ್‌ನೊಳಕ್ಕೆ ಹೋಗುತ್ತದೆ. ಫ್ಯಾರಿಂಕ್ಸ್‌ನಿಂದ ಸ್ಪರ್ಶಕ ಸಂಚಿಗಳ ಬುಡದೆಡೆಗೆ ಸಾಗುವ ಎರಡು ಪ್ರಧಾನ ಕಾಲುವೆಗಳಿವೆ. ಇವು ಕವಲೊಡೆದು 12 ಚಿಕ್ಕ ಕಾಲುವೆಗಳಾಗಿ ರೂಪುಗೊಂಡಿವೆ. ಈ ಕಾಲುವೆ ವ್ಯವಸ್ಥೆಯೇ ಜೀರ್ಣಾಂಗಮಂಡಲ. ಈ 12 ಕಾಲುವೆಗಳಲ್ಲಿ 8 ಕಾಲುವೆಗಳು ಹಣಿಗೆ ಫಲಕಗಳ ಹಿಂಭಾಗದಲ್ಲಿ (ಇವಕ್ಕೆ ಮೆರಿಡಿಯೋನಲ್ ಕಾಲುವೆಗಳೆಂದು ಹೆಸರು), ಎರಡು ಕಾಲುವೆಗಳು ಫ್ಯಾರಿಂಕ್ಸ್‌ಗೆ ಸಮಾಂತರವಾಗಿ (ಫ್ಯಾರಿಂಜಿಯಲ್ ಕಾಲುವೆಗಳು) ಉಳಿದೆರಡು ಸ್ಪರ್ಶಕ ಸಂಚಿಗಳ ಉದ್ದಕ್ಕೂ (ಟೆಂಟ್ಯಾಕ್ಯುಲರ್ ಕಾಲುವೆಗಳು) ಸಾಗುತ್ತವೆ. ಜೊತೆಗೆ ಇನ್ನೊಂದು ದೊಡ್ಡ ಕಾಲುವೆ ಅಪಮುಖಭಾಗದಲ್ಲಿನ ಸಂವೇದನಾಂಗದೆಡೆಗೆ ಸಾಗಿ ಎರಡು ಸೂಕ್ಷ್ಮರಂಧ್ರಗಳ (ಗುದರಂಧ್ರಗಳು) ಮೂಲಕ ಹೊರತೆರೆಯುತ್ತವೆ. ಸೇವಿಸಿದ ಆಹಾರ ಫ್ಯಾರಿಂಕ್ಸಿನಲ್ಲಿ ಸ್ವಲ್ಪ ಜೀರ್ಣವಾಗಿ, ಅನಂತರ ಕಾಲುವೆಗಳಲ್ಲೆಲ್ಲ ಹಾದು ಪಚನವಾಗುತ್ತದೆ. ಜೀರ್ಣವಾಗದ ಆಹಾರ ಬಾಯಿಯ ಮೂಲಕ ಗುದರಂಧ್ರಗಳ ಮೂಲಕ ಹೊರಬರುತ್ತವೆ.

ದೇಹದಲ್ಲಿ ಎಕ್ಟೋಡರ್ಮ್ (ಹೊರದರ್ಮ) ಹೊರಪದರ, ಎಂಡೋಡರ್ಮ್ (ಒಳದರ್ಮ) ಒಳಪದರ ಇವೆ. ಇವೆರಡು ಪದರಗಳ ನಡುವೆ ಮೀಸೊಗ್ಲೀಯ ಜೆಲಿ ಸದೃಶ ವಸ್ತುವಿದೆ. ಕೆಲವು ಭಾಗಗಳಲ್ಲಿ ಸ್ನಾಯುಕೋಶಗಳಿವೆ. ಇವುಗಳ ಸಹಾಯದಿಂದ ಸ್ಪರ್ಶಕಗಳ ಚಲನೆ, ಬಾಯಿಯ ತೆರೆಯುವಿಕೆ ಮತ್ತು ಮುಚ್ಚುವಿಕೆ ನಡೆಯುತ್ತವೆ. ಮೀಸೊಗ್ಲೀಯದಲ್ಲಿ ಅಲ್ಲಲ್ಲಿ ಚದುರಿದಂತೆ ಇರುವ ಬೇರೆ ರೀತಿಯ ಕೋಶಗಳಿವೆ. ಇವನ್ನು, ಸ್ನಾಯುಕೋಶಗಳನ್ನು ಒಟ್ಟಾರೆಯಾಗಿ ಮೀಸೊಡರ್ಮ್ ಎಂದು ಕರೆಯಲಾಗುತ್ತದೆ. ಈ ಲಕ್ಷಣದಿಂದ ಟಿನೊಫೊರ ಉಳಿದ ಸೀಲೆಂಟರೇಟಗಳಿಗಿಂತ ಹೆಚ್ಚು ಮುಂದುವರಿದಿದೆ.

ಟಿನೊಫೊರ ಪ್ರಾಣಿಗಳ ಚಟುವಟಿಕೆಗಳನ್ನು ಸಂಯೋಜನೆಗೊಳಿಸುವ ಕಾರ್ಯ ನಿಮ್ನ ರೀತಿಯ ನರಕೋಶಜಾಲದಿಂದ ನಡೆಯುತ್ತದೆ. ಈ ನರಕೋಶಗಳು ದೇಹಾದಾದ್ಯಂತ ವ್ಯಾಪಿಸಿವೆ. ಇವು ಪ್ರಧಾನವಾಗಿ ಹಣಿಗೆ ಫಲಕಗಳ ತಳಭಾಗದಲ್ಲಿ ಸಾಂದ್ರಗೊಂಡಿವೆ.

ಇವು ಉಭಯಲಿಂಗಿಗಳು. ಪ್ರಜನನ, ಲೈಂಗಿಕ ರೀತಿಯಿಂದಾಗುತ್ತದೆ. ಮೆರಿಡಿಯೋನಲ್ ಕಾಲುವೆಗಳ ಎಂಡೋಡರ್ಮ್ ಕೋಶಗಳಲ್ಲಿ ಅಂಡಗಳು ಮತ್ತು ವೀರ್ಯಾಣುಗಳು ಉತ್ಪತ್ತಿಯಾಗುವುವು. ಈ ಕಾಲುವೆಗಳ ಮತ್ತು ಇವನ್ನು ಆವರಿಸಿರುವ ಪದರಗಳ ಸೀಳುವಿಕೆಯಿಂದಾಗಿ ಲೈಂಗಿಕ ಕೋಶಗಳು ದೇಹದಿಂದ ಹೊರಬರುವುವು. ನಿಷೇಚನೆ ಹಾಗೂ ಭ್ರೂಣದ ಬೆಳೆವಣಿಗೆ ನೀರಿನಲ್ಲಿ ನಡೆಯುತ್ತವೆ. ಪ್ಲೂರೊಬ್ರೇಕಿಯದಲ್ಲಿ ನಿಷೇಚಿತ ಮೊಟ್ಟೆ ನೇರವಾಗಿ ಪ್ರೌಢಜೀವಿಯಾಗಿ ಬೆಳೆಯುತ್ತದೆ. ಆದರೆ, ಉಳಿದ ಪ್ರಭೇದಗಳಲ್ಲಿ ಮೊಟ್ಟೆಯಿಂದ ಮೊದಲು ಸೈಡಿಪ್ಪಿಡ್ ಡಿಂಬ ಹುಟ್ಟುತ್ತದೆ. ಅನಂತರ ಇದು ಪ್ರೌಢಜೀವಿಯಾಗಿ ಬೆಳೆಯುವುದು.

ಟಿನಾಫೊರ ವಿಭಾಗವನ್ನು 2 ವರ್ಗಗಳಾಗಿ ವಿಂಗಡಿಸಲಾಗಿದೆ. ನ್ಯೂಡ ಮತ್ತು ಟೆಂಟ್ಯಾಕ್ಯುಲೇಟ. ಈ ಗುಂಪಿನ ಪ್ರಾಣಿಗಳಲ್ಲಿ ಸ್ಪರ್ಶಾಂಗಗಳಿವೆ. ಆದರೆ, ನ್ಯೂಡ ವರ್ಗದ ಪ್ರಾಣಿಗಳಲ್ಲಿ ಸ್ಪರ್ಶಾಂಗಗಳಿಲ್ಲ. ಟೆಂಟ್ಯಾಕ್ಯುಲೇಟ ವರ್ಗದಲ್ಲಿ 4 ಗಣಗಳಿವೆ.

(1) ಸೈಟಿಪ್ಪಿಡ ಈ ಗಣದ ಪ್ರಾಣಿಗಳು ಪ್ರಪಂಚದ ಬಹುಭಾಗಗಳಲ್ಲಿ ವಾಸಿಸುತ್ತವೆ. ದೇಹ ಅಂಡಾಕಾರದ್ದು. ಉದಾ: ಪ್ಲೂರೊಬ್ರೇಕಿಯ, ಹಾರ್ಮಿಫೊರ, ಕೇಲಿಯಾನಿರ.

(2) ಲೋಬೇಟ: ಇವುಗಳ ದೇಹ ಚಪ್ಪಟೆಯಾಗಿದೆ. ಸ್ಪರ್ಶಾಂಗಕ್ಕೆ ಕೋಶವಿಲ್ಲ. ಉದಾ: ಬೋಲಿನಾಪ್ಸಿಸ್. ಇವು ಬ್ರಿಟಿಷ್ ದ್ವೀಪ, ಅಮೆರಿಕಾದ ಅಟ್ಲಾಂಟಿಕ್ ಮತ್ತು ಆರ್ಕ್‌ಟಿಕ್ ತೀರದಲ್ಲಿ ವಾಸಿಸುತ್ತವೆ. ನೆಮಿಯಾಪ್ಸಿಸ್ ಪ್ರಭೇದದ ಜೀವಿ ಅಮೆರಿಕಾದ ಕೇಪ್ ಕಾಡ್ ಮತ್ತು ಕ್ಯಾರಲೈನದಲ್ಲಿ ವಾಸಿಸುತ್ತದೆ.

(3) ಸೆಸ್ಟಿಡ: ಈ ಗಣದ ಜೀವಿಗಳ ದೇಹ ಅಗಲವಾಗಿ ಮತ್ತು ಚಪ್ಪಟೆಯಾಗಿದೆ. ಉದಾ: ಸೆಸ್ಟಮ್ (ವೀನಸ್ ಡಾಬು ಎನ್ನುವ) ಮತ್ತು ವೆಲಾಮೆನ್ ದಕ್ಷಿಣ ಮೆಡಿಟರೇನಿಯನ್

ಸಮುದ್ರದಲ್ಲಿ ವಾಸಿಸುವ ಸಣ್ಣ ಜೀವಿಗಳು. ಸ್ಪರ್ಶಾಂಗಗಳ ಸಹಾಯದಿಂದ ಅಲೆಯಂತೆ ಚಲಿಸಿ, ಈಜಾಡುತ್ತವೆ.

(4) ಪ್ಲಾಟಿಕ್ಟೀನಿಯ: ಇವುಗಳ ದೇಹ ಚಪ್ಪಟೆಯಾಗಿದೆ. ಇವು ತೆವಳುತ್ತ ಚಲಿಸುತ್ತವೆ. ದೇಹದ ರಚನೆ ಉಳಿದ ಟಿನೊಫೋರಗಳಿಗಿಂತ ಭಿನ್ನವಾಗಿದೆ. ಇವುಗಳ ಲಾರ್ವ ಜನಕ ಪ್ರಾಣಿಯಲ್ಲಿನ ದೇಹದಲ್ಲಿರುವ ಕಾವುಗೂಡುಗಳಲ್ಲಿ ಬೆಳೆಯುತ್ತವೆ. ಉದಾ: ಸೀಲೊಪ್ಲೇನ ಮತ್ತು ಟೀನೊಪ್ಲೇನ. ಇವು ಕೆಂಪು ಸಮುದ್ರ ಮತ್ತು ಜಪಾನ್ ದ್ವೀಪ ತೀರಗಳಲ್ಲಿ ಆಲ್ಸಿಯೊನೇಸಿಯ ಮೃದು ಹವಳ ಜೀವಿಯ ಮೇಲೆ ವಾಸಿಸುತ್ತವೆ. ಜಾಲ್ ಫಿಯೆಲ, ಅಂಬೆಲುಲ ಮೃದು ಹವಳದ ಮೇಲೆ ವಾಸಿಸುತ್ತದೆ. ಇದು ಹೆಚ್ಚಾಗಿ ಗ್ರೀನ್‌ಲೆಂಡ್ ತೀರದಲ್ಲಿದೆ.

ವರ್ಗ 2 ನ್ಯೂಡ: ಇದರಲ್ಲಿ ಬೆರಾಯ್ಡ ಎಂಬ ಒಂದೇ ಗಣವಿದೆ. ಇವುಗಳ ಆಕಾರ ಕುಲಾವಿಯಂತೆ. ಬಾಯಿ ಅಗಲವಾಗಿದೆ. ಗಂಟಲು ದೊಡ್ಡದು. ಜಠರ ಬಹಳ ಕವಲೊಡೆದಿದೆ. ಈ ಗಣದ ಬೆರೋಯೀ ತಂಪುನೀರಿನ ಕಡಲುಗಳಲ್ಲಿ ವಾಸಿಸುತ್ತದೆ.

ಟಿನೊಫೊರ ಪ್ರಾಣಿಗಳು ವಿಚಿತ್ರವಾದುವು. ಇವುಗಳ ದೇಹರಚನೆ ಮತ್ತು ವಿನ್ಯಾಸ ಸೀಲೆಂಟರೇಟ (ಕುಟುಕು ಕಣವಂತಗಳ) ಮತ್ತು ಪ್ಲ್ಯಾಟಿಹೆಲ್ಮಿಂತೀಸ್ (ಚಪ್ಪಟೆಹುಳುಗಳ) ವಿಭಾಗಗಳ ನಡುವಿನ ಲಕ್ಷಣಗಳಾಗಿದ್ದು, ಸೀಲೆಂಟರೇಟಗಳಿಗಿಂತ ಬಹಳ ಭಿನ್ನವಾಗಿವೆ. ಇವು ವಿಕಾಸ ಹಾದಿಯಲ್ಲಿ ಸೀಲೆಂಟರೇಟ್‌ಗಳಿಗಿಂತ ಮೊದಲೇ ಉದ್ಭವಿಸಿರಬಹುದೆಂಬ ತರ್ಕಕ್ಕೆ ಎಡೆಮಾಡಿಕೊಟ್ಟಿದೆ. ಟಿನೊಫೊರ ವಿಭಾಗ ಪ್ಲ್ಯಾಟಿಹೆಲ್ಮಿಂತೀಸ್ ವಿಭಾಗದಿಂದ ಉದ್ಭವಿಸಿ ತನ್ನ ಎಲ್ಲ ಮುಖ್ಯ ಗುಣಗಳನ್ನು ಕಳೆದುಕೊಂಡು ನಿಮ್ನರೂಪಕ್ಕೆ ಮರಳಿರಬಹುದೆಂಬ ವಾದವೂ ಇದೆ. ತಮ್ಮ ಸ್ಪರ್ಶಾಂಗ, ಸ್ಟ್ಯಾಟೊಸಿಸ್ಟ್, ಕುಟುಕು ಕಣಗಳನ್ನು ಹೋಲುವ ನಿಡೊಬ್ಲಾಸ್ಟ್‌ಗಳು ಮತ್ತು ದೇಹದ ಒಂದೇ ಜಠರಾವಕಾಶಗಳು ಒಂದೆಡೆ ಸೀಲೆಂಟರೇಟ ಪ್ರಾಣಿಗಳನ್ನು ಹೋಲುತ್ತಿದ್ದರೆ, ಇನ್ನೊಂದೆಡೆ ಚಪ್ಪಟೆದೇಹ, ತೆವಳುವಿಕೆ ಮತ್ತು ಬೆಳವಣಿಗೆ ರೀತಿಯಲ್ಲಿ ಪ್ಲ್ಯಾಟಿಹೆಲ್ಮಿಂತೀಸ್ ವಿಭಾಗದ ಪ್ರಾಣಿಗಳನ್ನು ಹೋಲುತ್ತವೆ. ಕಾರಣ, ಈ ಎರಡು ವಿಭಾಗಗಳನ್ನು ಹೋಲುವ ಗುಣಲಕ್ಷಣಗಳನ್ನು ಪಡೆದಿರುವ ಈ ಗುಂಪಿಗೆ ಪ್ರಾಣಿಪ್ರಪಂಚದಲ್ಲಿ ವಿಶೇಷ ಸ್ಥಾನವಿದೆ. (ಎಂ.ಎನ್.ಎಚ್.ಇ.)

**ಟಿರಾನೊಡಾನ್:** ಮೀಸೊಜೋಯಿಕ್ ಯುಗದ ಕ್ರಿಟೇಷಿಯಸ್ ಅವಧಿಯಲ್ಲಿ ಜೀವಿಸಿದ್ದ ಹಾರುವ ಪ್ರಾಣಿ. ಟೀರೊಸಾರಿಯ ಗಣಕ್ಕೆ ಸೇರಿದೆ. ಅಮೆರಿಕದ ಕಾನ್ಸಾಸ್ ಸೀಮೆಸುಣ್ಣದ ಶಿಲೆಯಲ್ಲಿ ಇದರ ಪಳೆಯುಳಿಕೆಗಳು ಸಿಕ್ಕಿವೆ. ಸರೀಸೃಪಗಳಿಂದ ಹಕ್ಕಿಗಳ ವಿಕಾಸದಲ್ಲಿ ಇದು ಒಂದು ಮುಖ್ಯ ಘಟ್ಟವನ್ನು ಪ್ರತಿನಿಧಿಸುತ್ತದೆ. 0.75 ಮೀ ಹರವನ್ನು ಪಡೆದ ಈ ಪ್ರಾಣಿ ಇದುವರೆಗೆ ಪರಿಚಿತವಾಗಿರುವ ಹಾರುವ ಪ್ರಾಣಿಗಳಲ್ಲೆಲ್ಲ ಅತಿ ದೊಡ್ಡದು. ಇದರ ತಲೆ ಬುರುಡೆಯ ಉದ್ದ 1.2 ಮೀ ತಲೆಬುರುಡೆಯ ಹಿಂಭಾಗ ಶಿಖೆಯಂತೆ ಚಾಚಿಕೊಂಡಿದೆ. ದವಡೆಗಳು ಕೊಕ್ಕಿನಂತೆ ಇವೆ. ಹಲ್ಲುಗಳಿಲ್ಲ. ದೇಹ ಚಿಕ್ಕದು. ಮುಂಗಾಲುಗಳು ಹಿಂಗಾಲುಗಳಿಗಿಂತ ಬಲು ಉದ್ದ. ಮುಂಗಾಲಿನ ಮಣಿಕಟ್ಟು ಮತ್ತು ನಾಲ್ಕನೆಯ ಬೆರಳುಗಳು ಅತಿ ಉದ್ದವಾಗಿವೆಯಲ್ಲದೆ ದೇಹ ಹಾಗೂ ಮುಂಗಾಲಿನ ಬೆರಳುಗಳ ನಡುವೆ ಹರಡಿರುವ ತೆಳುವಾದ ಚರ್ಮದ ಪದರವೊಂದು ಇದೆ. ಇದರಿಂದಾಗಿ ಇದು ಇಂದಿನ ಬಾವಲಿಗಳಂತೆ ಇತ್ತು ಎನ್ನಲಾಗಿದೆ. ಕರಾವಳಿ ಪ್ರದೇಶಗಳಲ್ಲಿ, ಗುಡ್ಡಬೆಟ್ಟಗಳ ಪ್ರಪಾತಗಳಲ್ಲಿ ತನ್ನ ಕಾಲುಗಳ ನಖಗಳ ಸಹಾಯದಿಂದ ನೇತುಬಿದ್ದು ವಿಶ್ರಮಿಸುತ್ತಿದ್ದು ಆಹಾರಾನ್ವೇಷಣೆಗೆಂದು ಹೋಗುತ್ತಿತ್ತು ಎಂದು ಅಭಿಪ್ರಾಯ ಪಡಲಾಗಿದೆ. ಆದರೆ ಇದರ ಎದೆಯ ಮೂಳೆಗಳು ಇಂದಿನ ಹಕ್ಕಿಗಳಲ್ಲಿರುವಷ್ಟು ದೊಡ್ಡವಲ್ಲವಾದ್ದರಿಂದ ಎದೆಯ ಸ್ನಾಯುಗಳು ಚಿಕ್ಕವಾಗಿದ್ದುವೆಂದೂ ಇದು ರೆಕ್ಕೆ ಬಡಿಯುತ್ತ ಹಾರುವ ಬದಲು ಕೇವಲ ಗಾಳಿಯಲ್ಲಿ ತೇಲುತ್ತ ಸಂಚರಿಸುತ್ತಿತ್ತೆಂದೂ ಹೇಳಲಾಗಿದೆ. ಇದು ಬಹುಶಃ ಮೀನು ತಿಂದು ಬದುಕುತ್ತಿತ್ತು ಎಂದು ತೋರುತ್ತದೆ. (ಜೆ.ಎಸ್.ವಿ.)



ಟಿರಾನೊಡಾನ್

**ಟೆತಿಸ್ ಸಮುದ್ರ:** ಪುರಾತನ ಕಾಲದ ಸಮುದ್ರ. ಆಧುನಿಕ ಮೆಡಿಟರೇನಿಯನ್ ಸಮುದ್ರದ ಪೂರ್ವಜ. ಪರ್ಮಿಯನ್ ಕಲ್ಪದ ತರುಣದಲ್ಲಿ, ಸು. 280 ದಶಲಕ್ಷ ವರ್ಷಗಳಷ್ಟು ಪ್ರಾಚೀನದಲ್ಲಿ ಅಸ್ತಿತ್ವಕ್ಕೆ ಬಂತು. ಪೆಸಿಫಿಕ್ ಹಾಗೂ ಆರ್ಕ್‌ಟಿಕ್ ಸಾಗರಗಳ ನಡುವಿನ ಸಂಯೋಜಕವಾಗಿ ಉತ್ತರದಲ್ಲಿ ಅಂಗಾರ ಮತ್ತು ದಕ್ಷಿಣದಲ್ಲಿ ಗೊಂಡ್ವಾನ ಭೂಖಂಡಗಳನ್ನು ಪ್ರತ್ಯೇಕಿಸುವ ಜಲರಾಶಿಯಾಗಿತ್ತು. ಕಾರ್ಬಾನಿಫೆರಸ್ ಕಲ್ಪದ (350 ದ.ಲ.ವ.ಪ್ರಾ. –280 ದ.ಲ.ವ. ಪ್ರಾ.) ಅಂತ್ಯಕಾಲದಲ್ಲಿ ಮಹತ್ತರ ಬದಲಾವಣೆಗಳಾದವು. ನೆಲ–ಜಲಗಳ ಪುನರ್ ವರ್ಗೀಕರಣವಾಯಿತು. ಇದಕ್ಕೆ ಸಂಬಂಧಿಸಿದಂತೆ ಪರ್ವತ ರಚನೆ ನಡೆಯಿತು. ಆಗ ಉದಯಿಸಿದ ಪರ್ವತಗಳಲ್ಲಿ ಹರ್ಷಿನಿಯನ್ ಪರ್ವತ ಮುಖ್ಯವಾದದ್ದು. ಆದ್ದರಿಂದ ಈ ಪರ್ವಕಾಲಕ್ಕೆ ಹರ್ಷೀಯನ್ ಪ್ರಳಯವೆಂಬ ಹೆಸರಿದೆ. ಇದರ ತರುವಾಯ ಪ್ರಪಂಚದ ಭೂಭಾಗಗಳು ಎರಡು ದೊಡ್ಡ ಖಂಡಗಳಾಗಿದ್ದುವು. ಇವೆರಡರ ಭೂಮಧ್ಯ ಭಾಗದಲ್ಲಿ ಇದ್ದ ಜಲರಾಶಿಯೇ ಟೆತಿಸ್ ಸಮುದ್ರ.

ಟೆತಿಸ್ ಸಮುದ್ರದಲ್ಲಿ ಶಿಲಾನಿಕ್ಷೇಪ ಕಾರ್ಯ ಕಾರ್ಬಾನಿಫೆರಸ್ ಯುಗದ ಅಂತ್ಯಕಾಲದಿಂದ ಇಯೊಸೀನ್ ಕಲ್ಪದ ವರೆಗೆ (೨೮೦ ದ.ಲ.ವ. ಪ್ರಾ.–೬೦ ದ.ಲ.ವ. ಪ್ರಾ) ನಡೆಯಿತು. ಇಷ್ಟು ಅಗಾಧವಾದ ಶಿಲಾರಾಶಿ ನಿಕ್ಷೇಪಗೊಳ್ಳುತ್ತಿದ್ದಾಗ ಸಾಗರದ ತಳ ಕ್ರಮೇಣ ಕುಸಿಯಿತು. ಈ ಕುಸಿತದ ಪ್ರಮಾಣ ಶಿಲಾನಿಕ್ಷೇಪದ ಪ್ರಮಾಣಕ್ಕೆ ಸಮವಾಗಿರಬೇಕೆಂದು ಭೂವಿಜ್ಞಾನಿಗಳ ಅಭಿಪ್ರಾಯ. ಇಂಥ ವಿಶಾಲವಾದ ಮತ್ತು ಯುಗಯುಗಾಂತರಗಳವರೆಗೆ ನೆಲೆಸಿದ್ದ ಸಾಗರ ತಗ್ಗು ಪ್ರದೇಶಗಳಿಗೆ ಭೂಅಭಿನತಿಗಳು (ಜಿಯೊಸಿಂಕ್ಲೈನ್ಸ್) ಎಂದು ಹೆಸರು. ಟೆತಿಸ್ ಸಮುದ್ರವು ಆಲ್ಪ್ಸ್, ಕಾರ್ಪೇತಿಯ ಕಾಕಸಸ್, ಎಲ್ ಬುರ್ಜ್, ಝಗ್ರೋಸ್ ಮತ್ತು ಹಿಮಾಲಯ ಪ್ರದೇಶಗಳನ್ನೆಲ್ಲ ಆವರಿಸಿ, ಪಶ್ಚಿಮಕ್ಕೆ ಸ್ಪೇನ್ ಮತ್ತು ಆಫ್ರಿಕದ ವಾಯವ್ಯ ಭಾಗಗಳಿಗೂ, ಪೂರ್ವದಲ್ಲಿ ಬರ್ಮ, ಇಂಡೊನೇಷ್ಯಗಳ ಮೂಲಕ ನ್ಯೂಗಿನಿಯವರೆಗೂ ವಿಸ್ತರಿಸಿತ್ತು. ಈ ಸಾಗರ ಭಾರತದಲ್ಲಿ ಹಿಮಭರಿತ ಹಿಮಾಲಯ ಪರ್ವತಪ್ರದೇಶವನ್ನು ಆಕ್ರಮಿಸಿಕೊಂಡಿದ್ದುದಲ್ಲದೆ ಪಶ್ಚಿಮದಲ್ಲಿ ಇದರ ಒಂದು ಶಾಖೆ ಬಲೂಚಿಸ್ತಾನ ಮತ್ತು ಸಾಲ್ಟ್ ರೇಂಜ್ ಪ್ರದೇಶಗಳಿಗೂ ಪೂರ್ವದಲ್ಲಿ ಮತ್ತೊಂದು ಶಾಖೆ ಬರ್ಮದ ಕೆಲವು ಭಾಗಗಳಿಗೂ ವಿಸ್ತರಿಸಿದ್ದುವು.

ಟೆತಿಸ್ ನಿಕ್ಷೇಪಗಳು ಭಾರತದಲ್ಲಿ ಕಾಶ್ಮೀರದಿಂದ ಎವರೆಸ್ಟ್ ಪ್ರದೇಶವರೆಗಿನ ಟಿಬೆಟ್ ಪ್ರಾಂತ್ಯದಲ್ಲಿ ಚೆನ್ನಾಗಿ ರೂಪುಗೊಂಡಿವೆ. ಸ್ಪಿಟಿ ಮತ್ತು ಕಾಶ್ಮೀರ ಪ್ರದೇಶಗಳ ಶಿಲಾಸ್ತೋಮಗಳು ಅತ್ಯುತ್ತಮವಾದವು. ಕಾಶ್ಮೀರ ಪ್ರದೇಶ ಕಾರ್ಬಾನಿಫೆರಸ್ ಕಲ್ಪದ ಮಧ್ಯಕಾಲದವರೆಗೂ (ಸು.೩೦೫ ದ.ಲ.ವ.ಪ್ರಾ.) ಜಲಪ್ರದೇಶವಾಗಿದ್ದು ಪ್ರಶಾಂತ ವಾತಾವರಣವನ್ನು ಹೊಂದಿತ್ತು. ಕಾರ್ಬಾನಿಫೆರಸ್ ಅಂತ್ಯದಲ್ಲಿ (೨೮೦ ದ.ಲ.ವ.ಪ್ರಾ.) ಈ ವಾತಾವರಣ ಅತಿ ಉಗ್ರ ಜ್ವಾಲಾಮುಖಿಗಳ ಆಸ್ಫೋಟನೆಯಿಂದ ಕಲಕಲ್ಪಟ್ಟಿತು. ಹೀಗೆ ಕಾಶ್ಮೀರವು ಗೊಂಡವಾನ ಖಂಡದ ವಾಯವ್ಯ ಎಲ್ಲೆಯೆನಿಸಿದೆ. ಇಲ್ಲಿ ಗೊಂಡವಾನ ಖಂಡ ಮತ್ತು ಅಂಗಾರ ಖಂಡಗಳೆರಡರ ಸಸ್ಯವರ್ಗಗಳ ಮಿಶ್ರಣ ಇರುವುದರಿಂದ ಈ ಭಾಗ ಇವೆರಡು ಖಂಡಗಳ ಸಂಪರ್ಕ ಸೇತುವೆ ಎನಿಸಿದೆ.

ಕ್ರಿಟೇಷಿಯಸ್ ಕಲ್ಪದ ಕೊನೆಯಲ್ಲಿ (೬೫ ದ.ಲ.ವ.ಪ್ರಾ.) ಮಹತ್ತರ ಬದಲಾವಣೆಗಳಾದವು. ಆಧುನಿಕ ಕಾಲದ ಮೇಲ್ಮೈ ಲಕ್ಷಣಗಳು ಮೈದಳೆದದ್ದು ಆಗಲೇ. ಅದುವರೆಗೂ ಒಂದಾಗಿದ್ದ ಗೊಂಡವಾನ ಭೂಭಾಗ ಆಧುನಿಕ ಇಂಡಿಯ, ಆಸ್ಟ್ರೇಲಿಯ, ಆಫ್ರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳಾಗಿ ಬೇರ್ಪಟ್ಟಿತು. ಹೀಗೆ ಬೇರ್ಪಟ್ಟ ಖಂಡಗಳ ಚಲನೆಯಿಂದ ಆ ಕಾಲದಲ್ಲಿ ಭೂ ಮಧ್ಯ ಪ್ರದೇಶದಲ್ಲಿ ಬಹುಕಾಲದಿಂದಿದ್ದ ಟೆತಿಸ್ ಸಮುದ್ರ ನಿರ್ಗಮಿಸಬೇಕಾಯಿತು. ಇದರಲ್ಲಿ ನಿಕ್ಷೇಪವಾಗಿದ್ದ ಜಲಶಿಲೆಗಳು ಭೂಚಲನೆಗಳ ಒತ್ತಡಕ್ಕೆ ಸಿಕ್ಕಿ ಅಟ್ಲಾಸ್, ಪೈರನೀಸ್, ಆಲ್ಪ್ಸ್ ಮತ್ತು ಹಿಮಾಲಯ ಪರ್ವತಗಳಾಗಿ ಮೇಲಕ್ಕೆದ್ದುವು. ಈ ಕಾರ್ಯ ಕ್ರಿಟೇಷಿಯಸ್ ಕಲ್ಪದಲ್ಲಿ (೧೩೫ ದ.ಲ.ವ. ಪ್ರಾ.– ೬೫ ದ.ಲ.ವ. ಪ್ರಾ.) ಪ್ರಾರಂಭವಾಗಿ ಸಾಗರ ಪ್ರದೇಶಗಳಲ್ಲಿ ಆಳ ಕಡಿಮೆಯಾಗಿ, ಫ್ಲಿಸ್ಷ್ ನಿಕ್ಷೇಪವಾಗಿದೆ. ಇಲ್ಲಿ ನಮ್ಮುಲಿಟಿಕ್ ಸಣ್ಣಶಿಲೆ ನಿಕ್ಷೇಪಗೊಂಡಿರುವುದು. ಇದು ಹಿಮಾಲಯ ಪರ್ವತೋದಯದ ಮೊದಲನೆಯ ಹಂತ. ಈ ಕಾರ್ಯ ಆಲಿಗೊಸೀನ್ ಕಲ್ಪದಲ್ಲಿ (೪೦ ದ.ಲ.ವ. ಪ್ರಾ.–೨೫ ದ.ಲ.ವ.ಪ್ರಾ) ತೀವ್ರಗೊಂಡಿತು. ಈ ಕಲ್ಪದಲ್ಲಿ ಟೆತಿಸ್ ಸಮುದ್ರ ಮುಕ್ಕಾಲು ಭಾಗ ನಿರ್ಗಮಿಸಿ ಅಲ್ಲಲ್ಲಿ ಕ್ಯಾಸ್ಪಿಯನ್ ಸಮುದ್ರದ ಹಾಗೆ ಲಡಕ್, ಹುಂಡೆಸ್ ಮತ್ತು ಕುಮಾಯುನ್ ಪ್ರದೇಶಗಳಲ್ಲಿ ವಿಶಾಲವಾದ ಸರೋವರಗಳಾಗಿ ಉಳಿಯಿತು. ಟೆತಿಸ್ ಸಮುದ್ರದ ನೀರು ದಕ್ಷಿಣ ಸಮುದ್ರಕ್ಕೆ ಎರಡು ಖಾರಿಗಳ ಮೂಲಕವಾಗಿ ತಳ್ಳಲ್ಪಟ್ಟಿತು. ಆ ಎರಡು ಖಾರಿಗಳು ಪೂರ್ವದಲ್ಲಿ ಬಲೂಚಿಸ್ತಾನ್–ಸಿಂದ್ ಖಾರಿ, ಪಶ್ಚಿಮದಲ್ಲಿ ಅಸ್ಸಾಮ್–ಬರ್ಮ ಖಾರಿ. ಮಧ್ಯಮಯೋಸೀನ್ ಕಲ್ಪದ (ಸು.೧೮ ದ.ಲ.ವ. ಪ್ರಾ) ಚಲನೆಯಿಂದ ಟೆತಿಸ್ ಸಮುದ್ರದ ಈ ಅವಶೇಷಗಳೆಲ್ಲ ಇಲ್ಲವಾದವು. (ಡಿ.ಆರ್.)

**ಟೆರಟೋಮ:** ಭ್ರೂಣಾವಸ್ಥೆಯ ತ್ರಿಪದರಗಳಲ್ಲಿ ಎರಡು ಅಥವಾ ಮೂರು ಪದರಗಳಿಂದ ಉದ್ಭವಿಸಿದ ಅರ್ಬುದ. ಇತರ ದುರ್ಮಾಂಸಗಳಂತೆ ಅನಿರ್ದಿಷ್ಟವಾಗಿ ಬೆಳೆದದ್ದಲ್ಲ; ಬದಲು ವ್ಯಕ್ತಿಯ ಅಂಗದೊಳಗೆ ಇನ್ನೊಂದು ವ್ಯಕ್ತಿ ರೂಪುಗೊಳ್ಳುವ ಪ್ರಯತ್ನವಾಗಿ ಬೆಳೆದುದು. ಏಡಿಗಂತಿಯಂತೆ (ಕ್ಯಾನ್ಸರ್) ಮಾರಕಸ್ಥಿತಿಯದಲ್ಲ. ಆದರೆ ಅರ್ಬುದದಲ್ಲಿಯೇ (ಟ್ಯೂಮರ್) ಏಡಿಗಂತಿ ಉಂಟಾಗುಬಹುದು. ಅದು ಕಾರ್ಸಿನೋಮ ಅಥವಾ ಸಾರ್ಕೋಮ ಯಾವುದಾದರೂ ಆಗಿರಬಹುದು. ಟೆರಟೋಮ ಭ್ರೂಣದಂತೆ ಸಹಜರೀತಿಯಲ್ಲಿ ವೃದ್ಧಿಸಿ ಗುಂಡಿಗೆ ಇರದ ಒಂದು ಶಿಶುವಿನಂತೆ ರೂಪಗೊಂಡು ಆತಿಥೇಯ ಶಿಶುವಿನ ದೇಹದೊಳಗೆ ಯಾವುದೂ ಅಂಗಕ್ಕೆ ಅಂಟಿಕೊಂಡಿರುವ ಪರಾವಲಂಬಿ ಜೀವಿಯಾಗಿರಬಹುದು. ಇಲ್ಲವೆ ಯದ್ವಾತದ್ವಾ ಜೋಡಣೆಗೊಂಡ ಅನೇಕ ಅಂಗಗಳ ಸಮೂಹವಾದ ಅರ್ಬುದವಾಗಿ ಮೇಲ್ದವಡೆಗೂ ಬೆನ್ನಿನ ಕೆಳಭಾಗದ ಮಧ್ಯಕ್ಕೂ ನೇತುಬಿದ್ದಿರಬಹುದು. ಅಂಥ ಅರ್ಬುದ ಅಂಡಾಶಯ ವೃಷಣಗಳೊಳಗೂ ಕಂಡುಬರಬಹುದು. ಒಂದು ಅಥವಾ ಎರಡು ಅಂಗ, ಅಂಗಾಂಶಗಳು ಮಾತ್ರವಿರುವ ಸರಳರಚನೆಯ ಟೆರಟೋಮ ಮಾತ್ರ ಪಿಂಡದೊಳಗೆ ಕಾಣಬರುತ್ತದೆ; ಇಲ್ಲವೆ ಚರ್ಮದ ಒಳಗೆ ಹುದುಗಿಕೊಂಡಿದ್ದು ವೃದ್ಧಿಸಿದ ಬಳಿಕ ಗಂಟಿನಂತಿರುವ ಡರ್ಮಾಯ್ಡ್‌ಗಳಾಗಿ ಕಾಣಬರುತ್ತದೆ. ಟೆರಟೋಮ ಒಳಗೆ ಸ್ಥಳಾವಕಾಶವಿಲ್ಲದ ಗಡುಸುಗಂಟಾಗಿರುಬಹುದು. ಇಲ್ಲವೆ ಒಳಗೆ ಟೊಳ್ಳಾಗಿರುವ ಗಂಟಾಗಿರಬಹುದು. ಕ್ರಮವಾಗಿ ರೂಪುಗೊಳ್ಳದಿರುವ ಟೆರಟೋಮದಲ್ಲಿ ಚರ್ಮ, ನರಕೋಶಹುರಿಗಳು, ಕೂದಲು, ಮೂಳೆ, ಹಲ್ಲು, ಮೃದ್ವಸ್ಥಿ, ಸ್ನಾಯುಗಳು, ಗ್ರಂಥಿಗಳು – ಇವೆಲ್ಲ ಗಜಿಬಿಜಿಯಾಗಿ ಜೋಡಿಸಲ್ಪಟ್ಟಿರಬಹುದು. ಟೆರಟೋಮವಿರುವ ಸ್ಥಳದಲ್ಲಿ ಈ ಅಂಗಗಳು ನೈಸರ್ಗಿಕವಾಗಿ ಇರುವುದಿಲ್ಲವೆಂಬುದು ಸ್ಪಷ್ಟ.

ಅಂಡಾಣುವಿನ ನಿಷೇಚನದ ಅನಂತರ ಅದು ವೃದ್ಧಿಗೊಂಡು ಭ್ರೂಣವಾಗುವುದು. ಈ ಕ್ರಿಯೆಯಲ್ಲಿ ಫಲಿತ ಅಂಡಾಣು ವಿಭಜಿಸಿ 2,4,8 ಇತ್ಯಾದಿ ಕೋಶಗಳಾಗಿ ವೃದ್ಧಿಯಾಗುತ್ತಿರುವ ಪ್ರಾರಂಭಿಕ ಕಾಲದಲ್ಲಿ ಯಾವುದೂ ಕೋಶ ಸ್ಥಳಪಲ್ಲಟಗೊಳ್ಳುವುದೆ ಟೆರಟೋಮಕ್ಕೆ ಕಾರಣ. ಈ ಹಂತದಲ್ಲಿ ಸ್ಥಳ ಪಲ್ಲಟಗೊಂಡ ಕೋಶಕ್ಕೆ ವ್ಯವಸ್ಥಿತ ರೀತಿಯಲ್ಲಿ ಇನ್ನೊಂದು ಭ್ರೂಣವಾಗಿಯೆ ಬೆಳೆಯುವ ಸಾಮರ್ಥ್ಯವಿರುತ್ತದೆ. ಭ್ರೂಣದ ಬೆಳವಣಿಗೆ ಇನ್ನೂ ಸ್ವಲ್ಪ ಮುಂದುವರೆದ ಬಳಿಕ ಸ್ಥಾನಪಲ್ಲಟಗೊಳ್ಳುವ ಕೋಶಕ್ಕೆ ಎಲ್ಲ ಅಂಗಗಳಾಗಿ ಬೆಳೆಯುವ ಸಾಮರ್ಥ್ಯವಿದ್ದರು ವಿತರಣೆ ಇಲ್ಲದೆ ಅಡ್ಡಾದಿಡ್ಡಿಯಾಗಿರುವ ಅಂಗಸಮೂಹವಾಗುತ್ತದೆ. ಸಾಮಾನ್ಯವಾಗಿ ಟೆರಟೋಮ, ಅಂಡಾಶಯ, ವೃಷಣಗಳಲ್ಲಿ ಕಾಣಬಹುದು. ಮಿದುಳು, ಎದೆಮಧ್ಯ, ಬೆನ್ನು ಭಿತ್ತಿಯ ಒಳಗೆ – ಈ ಸ್ಥಳಗಳಲ್ಲಿಯೂ ಟೆರಟೋಮ ಸಾಮಾನ್ಯ. ಅಂಡಾಶಯದಲ್ಲಿರುವ ಟೆರಟೋಮ ಸಾಧಾರಣವಾಗಿ ನಿರುಪದ್ರವಿ. ಬಹುಕಾಲ ಇದು ಗಾತ್ರವೃದ್ಧಿಯನ್ನು ತೋರಿಸಬಹುದು. ಇಲ್ಲವೇ ಒಳಗೇ ಟೊಳ್ಳು ಉಂಟಾಗಿ ಸ್ಥಳಾವಕಾಶ ಹೆಚ್ಚುತ್ತ ಸ್ವಲ್ಪ ದಪ್ಪವಾಗಬಹುದು. ವೃಷಣದ ಟೆರಟೋಮ ಏಡಿಗಂತಿಯಾಗಿ ಮಾರ್ಪಡುವುದು ಸಾಮಾನ್ಯ. ಶಸ್ತ್ರಕ್ರಿಯೆಯಿಂದ ತೆಗೆದು ಹಾಕುವುದೇ ಟೆರಟೋಮಕ್ಕೆ ಚಿಕಿತ್ಸೆ. ನಿರ್ದಿಷ್ಟ ಸಂದರ್ಭಗಳಲ್ಲಿ ಕ್ಷಕಿರಣ ವಿಕಿರಣತೆಗಳಿಗೆ ಒಳಪಡಿಸಿ ಚಿಕಿತ್ಸೆಮಾಡುವುದೂ ಉಂಟು.

***

**ಟೈರೊತ್ರೈಸಿನ್:** ಮಣ್ಣಿನಲ್ಲಿ ವಾಸಿಸುವ ಬ್ಯಾಸಿಲ್ಲಸ್ ಬ್ರೆವಿಸ್ ನಿರುಪದ್ರವಿ ಏಕಾಣುಜೀವಿ ಉತ್ಪಾದಿಸುವ ಪ್ರತಿಜೈವಿಕ ಪದಾರ್ಥ. ಅಮೆರಿಕದ ರಾಕ್‌ಫೆಲ್ಲರ್ ಇನ್‌ಸ್ಟಿಟ್ಯೂಟ್ ಫಾರ್ ಮೆಡಿಕಲ್ ರಿಸರ್ಚ್ ಸಂಸ್ಥೆ ವಿಜ್ಞಾನಿ ರೀನೆ ಡ್ಯೂಬಾಸ್ ಬ್ಯಾಸಿಲ್ಲಸ್ ಬ್ರೆವಿಸ್ಸನ್ನು ಪ್ರಯೋಗಾಲಯದಲ್ಲಿ ಕೃಷಿ ಮಾಡಿ ಅದರ ಮಾಧ್ಯಮದಿಂದ ಟೈರೊತ್ರೈಸಿನನ್ನು ಪ್ರಥಮವಾಗಿ ಪ್ರತ್ಯೇಕಿಸಿದ. ಇದು ಬೆಳ್ಳಗಿರುವ ಪುಡಿ. ನೀರಿನಲ್ಲಿ ಕರಗದು. ಆದರೆ, ಮದ್ಯಸಾರದಲ್ಲಿ ಕರಗುತ್ತದೆ. ಇದು ಬೃಹದಣು. ೨೪ ಅಮೈನೋ ಆಮ್ಲಗಳ ಜೋಡಣೆಯಿಂದಾದ, ತುಂಡು ಸರಪಣಿಯಂತಿರುವ ಪಾಲಿಪೆಪ್ಟೈಡ್. ಇದು ಸ್ಥಿರ ಅಣುರಚನೆ ಹೊಂದಿದ್ದು, ಇದರ ಸತ್ತ್ವನಾಶವಾಗದು. ಇದು ವಾಸ್ತವವಾಗಿ ಗ್ರಾಮಿಸೈಡಿನ್ (ಶೇ. ೨೦) ಮತ್ತು ಟೈರೊಸೈಡಿನ್ (ಶೇ.೮೦) ಎಂಬ ರಾಸಾಯನಿಕಗಳ ಮಿಶ್ರಣ. ಗ್ರಾಮಿಸೈಡಿನ್ ಪ್ರಬಲ ವಸ್ತು. ಆದರೆ ಗ್ರಾಮ್ ಋಣಾಣುಗಳ ಮೇಲೆ ಇದರ ಪ್ರಭಾವ ಕಡಿಮೆ. ಅದಕ್ಕೆ ಟೈರೊಸೈಡಿನಿನ ಪ್ರಭಾವ ಹೆಚ್ಚು. ಟೈರೊತ್ರೈಸಿನ್ನು ಕೀತ ಹಾಗೂ ಕೊಳೆತ ಸ್ಥಿತಿಗಳಲ್ಲಿ ಕೂಡ ಪರಿಣಾಮಕಾರಿ. ನ್ಯೂಮೋಕಾಕ್ಕೈ, ಸ್ಟಾಫಿಲೋಕಾಕ್ಕೈ, ಸ್ಟ್ರೆಪ್ಟೋಕಾಕ್ಕೈ, ಡಿಫ್ಥಿರಿಯ ವಿಷಾಣುಗಳ ಚಯಾಪಚಯ ಕ್ರಿಯೆಗಳಲ್ಲಿ ಉತ್ಕರ್ಷಣ ರಂಜಕೀಕರಣ (ಆಕ್ಸಿಡೇಟಿವ್ ಫಾಸ್ಫಾರಿಲೇಷನ್) ಬಂಧವನ್ನು ಟೈರೊತ್ರೈಸಿನ್ ಛೇದಿಸುವುದರ ಮೂಲಕ ಸೂಕ್ಷ್ಮಾಣುಗಳ ಶ್ವಾಸಕ್ರಿಯೆ ಹಾಗೂ ಶಕ್ತಿಸಂಚಯಗಳಿಗೆ ಅಡ್ಡಿಮಾಡಿ ಅವುಗಳಿಗೆ ಮಾರಕವಾಗುವುದು. ಈ ಸೂಕ್ಷ್ಮಾಣುಗಳಲ್ಲಿ ಪಿಷ್ಟ ವಸ್ತುಗಳ ಚಯಾಪಚಯ ಕ್ರಿಯೆಗೆ ಅಡ್ಡಿ ಮಾಡಿ ಅವುಗಳ ಬೆಳವಣಿಗೆಯನ್ನು ಗ್ರಾಮಿಸೈಡಿನ್ ತಡೆಯುತ್ತದೆ. ಟೈರೊತ್ರೈಸಿನ್ ಜಠರ ರಸದಿಂದ ಜೀರ್ಣಿಸುವುದರಿಂದ ಅದನ್ನು ಸೇವಿಸಿದರೆ ಪ್ರಯೋಜನವಾಗುವುದಿಲ್ಲ. ಮದ್ಯಸಾರ ದ್ರಾವಣ ರೂಪದಲ್ಲಿ ಅದನ್ನು ಸೂಜಿಮದ್ದಾಗಿ ಕೊಡಬಹುದು. ಆದರೆ, ಟೈರೊತ್ರೈಸಿನ್ ನಂಜುಕಾರಿ. ಯಕೃತ್ತು, ಮೂತ್ರಪಿಂಡಗಳ ಕಾರ್ಯಕ್ಕೆ ತೊಂದರೆ ಮಾಡುತ್ತದೆ. ವಾಸನೆಗೆಡಿಕೆ, ಅಂಗಗಳ ಒಳಗೆ ರಕ್ತಸ್ರಾವ ಉಂಟಾಗುತ್ತವೆ. ಹೀಗಾಗಿ ಟೈರೊತ್ರೈಸಿನ್ನನ್ನು ಆಂತರಿಕ ಔಷಧವನ್ನಾಗಿ ಉಪಯೋಗಿಸುವುದಿಲ್ಲ. ಆದರೆ, ದ್ರಾವಣ ಅಥವಾ ಮುಲಾಮು ರೀತಿಯಲ್ಲಿ ಹೊರಲೇಪನವಾಗಿ ಉಪಯೋಗಿಸುವರು. ಗಾಯ, ಕುರು, ಕೀತವ್ರಣ, ಎಲುಬಿನ ಉರಿಊತ, ಕಣ್ಣು ಕುಟಿಕೆ, ಗ್ರಾಮ್ ಧನಾಣುಗಳಿಂದ ಉಂಟಾದ ಚರ್ಮರೋಗಗಳು, ಕಿವಿ–ಮೂಗು ನೋವುಗಳಿಗೆ ಟೈರೊತ್ರೈಸಿನ್ ಉಪಯುಕ್ತ. ಗಂಟಲು ನೋವು ಮತ್ತಿತರ ಗಂಟಲು ಬೇನೆಗಳಲ್ಲಿ ಇದನ್ನು ಉಪಯೋಗಿಸುವರು.

(ಎಸ್.ಕೆ.ಎಚ್.)

**ಟೈರೋಸಿನ್:** ಪ್ರೋಟೀನುಗಳಲ್ಲಿ ಸಾಧಾರಣವಾಗಿ ಇರುವ ಒಂದು ಅಮೈನೋ ಆಮ್ಲ. ರಾಸಾಯನಿಕ ಸೂತ್ರ ಪ್ಯಾರಾಹೈಡ್ರಾಕ್ಸಿ ಫೀನೈಲ್ ಅಲಾನಿನ್. ಟೈರೋಸಿನ್ ನೀರಿನಲ್ಲಿ ಅಷ್ಟಾಗಿ ವಿಲೀನವಾಗುವುದಿಲ್ಲ. ಬಿಸಿನೀರಿನಲ್ಲಿ ವಿಲೀನತೆ ಹೆಚ್ಚು..

ಟೈರೋಸಿನ್ ಮಾನವನ ದೇಹದಲ್ಲಿ ಫೀನೈಲ್ ಅಲಾನಿನ್ ಆಮ್ಲದಿಂದ ಉತ್ಪತ್ತಿಯಾಗುವದರಿಂದ ಇದೊಂದು ಅತ್ಯಗತ್ಯ ಅಮೈನೋ ಆಮ್ಲವೇನೂ ಅಲ್ಲ. ಬ್ಯಾಕ್ಟೀರಿಯಗಳು ಎರಿಥ್ರೋಸ್ ಫಾಸ್ಫೇಟನ್ನು ಮೂಲ ವಸ್ತುವನ್ನಾಗಿ ಬಳಸಿ ಈ ಅಮೈನೋ ಆಮ್ಲವನ್ನು ಸಂಶ್ಲೇಷಿಸುತ್ತವೆ. ಮಾನವನ ದೇಹದಲ್ಲಿ ಟೈರೋಸಿನ್ ಅಲಾನಿನ್ನಗಳು ಒಂದೇ ಮಾರ್ಗದಲ್ಲಿ ಜೀರ್ಣಗೊಂಡು ಮೆಲಾನಿನ್ ಎಂಬ ವರ್ಣವಸ್ತುಗಳನ್ನು ಕೊಡುತ್ತವೆ. ಚರ್ಮದ ಬಣ್ಣಕ್ಕೆ ಇವೇ ಕಾರಣ. ಈ ಕ್ರಿಯೆಗೆ ಟೈರೋಸಿನ್ ಆಕ್ಸಿಡೇಸ್ ಕಿಣ್ವ ಅಗತ್ಯ. ವರ್ಣಹೀನತೆ (ಆಲ್ಬಿನಿಸಮ್) ಎಂಬ ಆನುವಂಶಿಕ ರೋಗದಿಂದ ನರಳುವ ವ್ಯಕ್ತಿಯಲ್ಲಿ ಈ ಕಿಣ್ವವಿರುವುದಿಲ್ಲ.

***

**ಟ್ಯಾಕಿನಿಡೆ:** ಪರಾವಲಂಬಿ ಕೀಟಗಳ ಕುಟುಂಬ. ಇದು ಡಿಪ್ಟರ ಗಣಕ್ಕೆ ಸೇರಿದೆ. ಈ ಗಣದಲ್ಲಿ ಸು. 300 ಜಾತಿಗಳು, 5,000 ಪ್ರಭೇದಗಳಿವೆ. ಇವುಗಳ ಡಿಂಬಗಳು ಬೇರೆ ಜಾತಿಯ ಪ್ರೌಢ ಕೀಟಗಳ ಅಥವಾ ಡಿಂಬಗಳ ಮೇಲೆ ಪರಾವಲಂಬಿಗಳಾಗಿವೆ. ಲೆಪಿಡಾಪ್ಟರ, ಹೈಮನಾಪ್ಟರ ಮತ್ತು ಕೋಲಿಯಾಪ್ಟರ ಗಣದ ಕೀಟಗಳ ಡಿಂಬಗಳು ಮತ್ತು ಕೋಲಿಯಾಪ್ಟರ, ಆರ್ಥಾಪ್ಟರ ಮತ್ತು ಹೆಮಿಪ್ಟರ ಗಣದ ಪ್ರೌಢ ಕೀಟಗಳು ಇವುಗಳ ದಾಳಿಗೆ ಒಳಗಾಗುತ್ತವೆ. ಇವು ಸಣ್ಣ ಅಥವ ಮಧ್ಯಮ ಗಾತ್ರದ ಕೀಟಗಳು. ದೇಹ ದಷ್ಟ ಪುಷ್ಟವಾಗಿದೆ. ಮೈಬಣ್ಣ ಕಪ್ಪು, ಬೂದಿ ಅಥವಾ ಕಂದು. ಉದರದ ಮೇಲೆ ಬಿರುಗೂದಲುಗಳಿವೆ. ತಲೆ ದೊಡ್ಡದು. ಕುಡಿಮೇಸೆಗಳು, ಎರಡು ಕಣ್ಣುಗಳ ನಡುವೆ ಇವೆ. ರೆಕ್ಕೆಗಳು ದೊಡ್ಡವು.

ಟ್ಯಾಕಿನಿಡೆ ಕೀಟಗಳಲ್ಲಿ ಫಲವಂತಿಕೆ ಹೆಚ್ಚು. ಹೆಣ್ಣು ಕೀಟ ನೂರಾರು ಅಥವಾ ಸಾವಿರಾರು ಮೊಟ್ಟೆಗಳನ್ನಿಡುತ್ತದೆ. ಕೆಲವು ಕೀಟಗಳಲ್ಲಿ ಡಿಂಬಗಳು ಹೆಣ್ಣುಕೀಟದಿಂದ ನೇರವಾಗಿ ಹುಟ್ಟುತ್ತವೆ. ಹೆಣ್ಣುಕೀಟ ತಾನು ಉತ್ಪತ್ತಿಮಾಡುವ ಮೊಟ್ಟೆ ಅಥವಾ ಡಿಂಬ ಪೋಷಕ ಜೀವಿಯ ದೇಹವನ್ನು ತಲುಪುವಂತೆ ಮಾಡಲು ಹಲವಾರು ವಿಧಾನಗಳನ್ನು ಅನುಸರಿಸುತ್ತದೆ. 1. ಮೊಟ್ಟೆಗಳನ್ನು ಪೋಷಕ ಜೀವಿಯ ಡಿಂಬದ ಮೇಲೆ ಇಡುತ್ತವೆ. ಮೊಟ್ಟೆಗಳು ಒಡೆದು ಡಿಂಬಗಳು ಹೊರಬಂದು ಪೋಷಕ ಜೀವಿಯ ದೇಹವನ್ನು ಕೊರೆದು ಒಳಸೇರುತ್ತವೆ. 2. ಪೋಷಕ ಜೀವಿಯ ಡಿಂಬ ತಿನ್ನುವ ಆಹಾರ ಗಿಡಗಳ ಎಲೆಗಳ ಮೇಲೆ ಮೊಟ್ಟೆಗಳನ್ನಿಡುತ್ತದೆ. ಪೋಷಕ ಜೀವಿ ಎಲೆಗಳನ್ನು ತಿಂದಾಗ ಮೊಟ್ಟೆಗಳು ಅದರ ಜೀರ್ಣನಾಳ ಸೇರಿ ಒಡೆದು ಡಿಂಬಗಳು ಹೊರಬರುವುವು. ಇವು ಜೀರ್ಣನಾಳದ ಗೋಡೆಯನ್ನು ಕೊರೆದು ಜೀರ್ಣನಾಳದ ಗೋಡೆ ಮತ್ತು ದೇಹದ ಗೋಡೆಗೂ ನಡುವೆ ಇರುವ ದೇಹಾವಕಾಶದಲ್ಲಿ ನೆಲಸುತ್ತವೆ. 3. ಪೋಷಕ ಜೀವಿಯ ಚರ್ಮದ ಮೇಲೆಯೇ ನೇರವಾಗಿ ಡಿಂಬಗಳನ್ನಿಡುತ್ತವೆ. ಇವು ದೇಹದ ಗೋಡೆಯನ್ನು ಕೊರೆದು ಒಳಹೋಗುತ್ತವೆ. 4. ಪ್ರೌಢ ಹೆಣ್ಣುಕೀಟ ಮೊದಲು ಪೋಷಕ ಜೀವಿಯ ಚರ್ಮದಲ್ಲಿ ಗಾಯವುಂಟುಮಾಡಿ, ಅನಂತರ ಡಿಂಬಗಳನ್ನು ನೇರವಾಗಿ ಇಡುತ್ತದೆ. ಆ ಗಾಯದ ಮೂಲಕ ಡಿಂಬಗಳು ಪೋಷಕಜೀವಿಯ ದೇಹವನ್ನು ಸೇರುತ್ತವೆ. 5. ಸಸ್ಯಗಳ ಮೇಲೆ, ಸಣ್ಣ ಬಟ್ಟಲಿನಾಕಾರದ ಪೊರೆಯಲ್ಲಿ ಡಿಂಬಗಳನ್ನಿಡುತ್ತದೆ. ಪೋಷಕ ಜೀವಿ ಇಂಥ ಬಟ್ಟಲಿನ ಬಳಿ ಬಂದಾಗ ಡಿಂಬಗಳು ಬಾಯಿ ಬಳಿಯಿರುವ ಕೊಂಡಿಗಳ ಸಹಾಯದಿಂದ ಪೋಷಕ ಜೀವಿಯ ದೇಹಕ್ಕೆ ತಗುಲಿಕೊಂಡು ಅನಂತರ ದೇಹದ ಗೋಡೆಯ ಮೂಲಕ ಒಳಹೊಗುವುವು. ಡಿಂಬಗಳ ದೇಹದ ಆಕಾರ ಅಂಡದಂತೆ ಅಥವಾ ಉರುಳೆಯಂತೆ. ಇದರ ಮುಂದಿನ

ತುದಿ ಚೂಪಾಗಿದ್ದು, ಹಿಂದಿನ ತುದಿಯ ಮೇಲೆ ಒಂದು ಜೊತೆ ಪ್ರಮುಖವಾದ ಶ್ವಾಸರಂಧ್ರ ಅಥವಾ ಸ್ಪೈರಕಲ್‌ಗಳಿವೆ. ಡಿಂಬಗಳು ಪೂರ್ಣವಾಗಿ ಬೆಳೆದ ಅನಂತರ ಪೋಷಕ ಜೀವಿಯ ದೇಹವನ್ನು ಕೊರೆದು ಹೊರಬರುತ್ತವೆ. ಅನಂತರ ಸತ್ತ ಪೋಷಕ ಜೀವಿ ದೇಹದ ಭಾಗಗಳಲ್ಲಿ ಕೋಶಾವಸ್ಥೆ ತಲುಪುವುವು.

ಪೋಷಕ ಜೀವಿಯ ದೇಹದೊಳಗೆ ಡಿಂಬದ ಜೀವನಚಕ್ರ ವೈವಿಧ್ಯದಿಂದ ಮುಗಿಯುತ್ತದೆ. ಇದು ಪ್ರಭೇದದಿಂದ ಪ್ರಭೇದಕ್ಕೆ ವ್ಯತ್ಯಾಸವಿದೆ. ಡಿಂಭದ ಹಂತದಲ್ಲಿ ಕ್ಯುಟಿಕಲ್ ಕವಚವನ್ನು ರಚಿಸಿಕೊಂಡು, ಪೋಷಕ ಜೀವಿಯ ದೇಹದೊಳಕ್ಕೆ ಬರಲು ಕೊರೆದಿದ್ದ ರಂಧ್ರಗಳ ಮೂಲಕ ಅಥವಾ ಶ್ವಾಸನಾಳದ ಮೂಲಕ ಹೊರಪ್ರಪಂಚದೊಡನೆ ಸಂಪರ್ಕ ಕಲ್ಪಿಸಿಕೊಂಡು ಗಾಳಿಯನ್ನು ಪಡೆಯುತ್ತದೆ.

ಪೌರಸ್ತ್ಯ ವಲಯದಲ್ಲಿ ಕಾರ್ಸಿಲಿಯ ಕೊಕಿಯಾನ ಪ್ರಭೇದ ವಿಶೇಷವಾಗಿ ಹರಡಿದೆ. ಪ್ರೌಢ ಕೀಟದ ಜೀವಿತಾವಧಿ ಸು. 33 ದಿನಗಳು. ಲೆಪಿಡಾಪ್ಟರ ಗಣದ ಅನೇಕ ಕೀಟಗಳ ಡಿಂಬಗಳ ದೇಹದ ಮೇಲೆ ಈ ಪ್ರಭೇದದ ಹೆಣ್ಣು ಕೀಟಗಳು ಡಿಂಬಗಳನ್ನು ನೇರವಾಗಿ ಇಡುತ್ತವೆ. ಯುಟಕ್ಸೈನ ಸಿವಿಲಾಯ್‌ಡಿಸ್ ಪ್ರಭೇದ ಭಾರತಾದ್ಯಂತ ವಾಸಿಸುತ್ತದೆ. ಇದು ಮೊಟ್ಟೆಯಿಡುವ ಪ್ರಭೇದ. ಇದರ ಜೀವನ ಚಕ್ರದ ಅವಧಿ 3 ವಾರಗಳು. ಟೈಕೋಮಿಯ ರಿಮೋಟ, ಸ್ಟುರ್ಮಿಯ ಇನ್ಕಾಂಸ್ಪಿಕ್ಯುಯೆಲ ಭಾರತದಲ್ಲಿ ವಿಶೇಷವಾಗಿ ಹರಡಿಕೊಂಡಿವೆ. ಇವೆರಡರಲ್ಲಿ ಜೀವನಚಕ್ರದ ಅವಧಿ 3 ವಾರಗಳು. ಪ್ರೌಢ ಕೀಟ 10 ದಿನ ಬದುಕಿರುತ್ತದೆ. ಹೆಣ್ಣುಕೀಟ ಸು. 50ಕ್ಕೂ ಹೆಚ್ಚು ಮೊಟ್ಟೆಗಳನ್ನಿಡುತ್ತದೆ. ಸ್ಟುರ್ಮಿಯ ಪ್ರಭೇದದ ಕೀಟ ಭಾರತದಾದ್ಯಂತ ತೇಗ ಮರದ ಎಲೆಗಳನ್ನು ತಿಂದು ಹಾಳುಮಾಡುವ ಹೈಬ್ಲೇಯಿಯ ಪ್ಯೂರ (ಲೆಪಿಡಾಪ್ಟರ ಗಣ) ಕೀಟದ ಮೇಲೆ ಪರಾವಲಂಬಿಯಾಗಿ ಜೀವಿಸುವುದು. ಇದು ಹೈಬ್ಲೇಯಿಯವನ್ನು ಹತೋಟಿಯಲ್ಲಿಡುವ ಒಂದು ಸಾಧನವಾಗಿದೆ. ಫೋರೊಸೀರ ಎಂಬುದು ಜಿಪ್ಸಿ ಮತ್ತು ಕಂದುಬಾಲದ ಪತಂಗಗಳ ಪರಾವಲಂಬಿಯಾಗಿದೆ. ವಿಂತೀಮಿಯ ಕ್ವಾಡ್ರಿಪಸ್ಟ್ಯುಲೇಟ, ಅರ್ಕೈಟಾಸ್, ಪೈಲಿವೆಂಟ್ರಿಸ್ ಮತ್ತು ಡೆಕ್ಸಿಯ ವೆಂಟ್ರ್ಯಾಲಿಸ್ ಮುಖ್ಯವಾದುವು. (ಕೆ.ಜಿ.ಎನ್.)

**ಟ್ರಿಪ್ಯಾನಸೋಮ:** ಏಕಕೋಶಗಳ ವಂಶ (ಪ್ರೋಟೋಜ಼ೋವ)ದ ಕಶಾಂಗಿ (ಮಾಸ್ಟಿಗಾಫೂರ ಅಥವಾ ಫ್ಲಾಜೆಲೇಟ) ವರ್ಗದ ಸದಸ್ಯ. ಕಶೇರುಕಗಳ ರಕ್ತದಲ್ಲಿ ಪರಾವಲಂಬಿಯಾಗಿ ಜೀವಿಸುತ್ತದೆ. ಹೀಮೋಫ್ಲಾಜೆಟ್ಸ್ ಗಣಕ್ಕೆ ಸೇರುತ್ತದೆ. ಪರಾವಲಂಬಿ ಜೀವನಕ್ಕೋಸ್ಕರ ಆತಿಥೇಯ ಜೀವಿಯ ದೇಹದೊಳಗೆ ಹೋಗಲು ರಕ್ತಹೀರುವ ಅಕಶೇರುಕಗಳು ಸಹಾಯವಾಗಿರುವುದು ಸಾಮಾನ್ಯ. ಇಂಥ ಮಧ್ಯವರ್ತಿ ಆತಿಥೇಯಗಳಲ್ಲಿ ಸ್ವಲ್ಪಮಟ್ಟಿಗೆ ಬೆಳೆದ ತರುವಾಯ ಮೂಲ ಆತಿಥೇಯ ಜೀವಿಯಲ್ಲಿ ತನ್ನ ಜೀವನವನ್ನು ಮುಂದುವರಿಸುತ್ತದೆ. ಆಂಟೋನಿ ಫಾನ್ ಲೀವೆನ್ ಹೂಕ್ ಸು. ೩೦೦ ವರ್ಷಗಳಷ್ಟು ಹಿಂದೆ ಇವನ್ನು ಗುರುತಿಸಿದ. ೧೮೮೦ರಲ್ಲಿ ಕುದುರೆನೊಣಗಳ ಕರುಳಿನ ಟ್ರಿಪ್ಯಾನಸೋಮ ಥೈಲರಿಯನ್ನು ಗುರುತಿಸಿ, ವಿವರಿಸಲಾಯಿತು. ಟ್ರೌಟ್‌ಮೀನುಗಳ ರಕ್ತದಲ್ಲಿ ವ್ಯಾಲೆನ್‌ಟಿನ್ನನು (೧೮೪೧), ಕಪ್ಪೆಗಳ ರಕ್ತದಲ್ಲಿ ಗ್ಲೂಗ್, ಮೇಯರ್, ಗ್ರೂಬಿ ವಿಜ್ಞಾನಿಗಳು ಪ್ರತ್ಯೇಕವಾಗಿ (೧೮೪೨–೪೩) ಈ ಸೂಕ್ಷ್ಮಾಣುಗಳನ್ನು ಗುರುತಿಸಿದರು. ಗ್ರೂಬಿಯೇ, ಟಿಮೋತಿ ಲೆವಿಸ್ (೧೮೭೩–೭೯) ಇವುಗಳಿಗೆ ಟ್ರಿಪ್ಯಾನಸೋಮ ಎಂದು ಹೆಸರಿಟ್ಟರು. ಭಾರತದ ಇಲಿಗಳ ರಕ್ತದಲ್ಲಿ ಪತ್ತೆಹಚ್ಚಿದ ಪ್ರಭೇದಕ್ಕೆ ಟ್ರೆ. ಲೆವೀಸಿಯೈ ಎಂದು ಹೆಸರಿದೆ. ಭಾರತದ ಕುದುರೆ ಮತ್ತು ಒಂಟೆಗಳಲ್ಲಿ ಸರ್ರ ರೋಗವನ್ನು ಟ್ರಿಪ್ಯಾನಸೋಮ ಉಂಟುಮಾಡುವುದನ್ನು ಗ್ರಿಫಿತ್ ಇವಾನ್ಸ್ (೧೮೮೦) ಪಶುವೈದ್ಯಾಧಿಕಾರಿ ತೋರಿಸಿದ್ದರಿಂದ, ಆ ಪ್ರಭೇದಕ್ಕೆ ಟ್ರಿ. ಇವಾನ್ಸಿ ಎಂದು ಹೆಸರು ಬಂತು. ೧೮೯೪ರಲ್ಲಿ ಬ್ರೂಸ್ ಎಂಬಾತ ದಕ್ಷಿಣ ಆಫ್ರಿಕದ ಕಾಲ್ನಡೆಗಳಲ್ಲಿ ತೀವ್ರ ಮಾರಕ ರೋಗವನ್ನುಂಟುಮಾಡುವ ಟ್ರಿಪ್ಯಾನಸೋಮದ ಪ್ರಭೇದವನ್ನು ಆವಿಷ್ಕರಿಸಿದ. ಇದನ್ನು ಟ್ರಿ. ಬ್ರೂಸೈ ಎಂದು ಕರೆದ. ಇನ್ನೂ ಅನೇಕ ಪ್ರಭೇದಗಳನ್ನು ಕಂಡುಹಿಡಿಯಲಾಗಿದೆ.

ಟ್ರಿಪ್ಯಾನಸೋಮದ ದೇಹ ನೀಳವಾಗಿದ್ದು, ಚಪ್ಪಟೆಯಾದ ಕದಿರಿನ ಆಕಾರದಲ್ಲಿದೆ. ಎರಡು ತುದಿಗಳು ಚೂಪಾಗಿವೆ. ಹೆಚ್ಚು ಚೂಪಾಗಿರುವ ಮುಂದಿನ ತುದಿಯಲ್ಲಿ ಚಾವಟಿಯಂತಿರುವ ಕಶ (ಫ್ಲಾಜೆಲಮ್), ದೇಹ ಮಧ್ಯದಲ್ಲಿ ದೊಡ್ಡದಾದ ನ್ಯೂಕ್ಲಿಯಸ್ ಇವೆ. ಹಿಂದಿನ ತುದಿಯ ಹತ್ತಿರ ಬುಡರೇಣು (ಬೇಸಲ್ ಗ್ರ್ಯಾನ್ಯೂಲ್) ಕಣ ಇದೆ. ಕಶ ಇದರಿಂದ ಪ್ರಾರಂಭವಾಗುತ್ತದೆ. ಕಶಾಂಗ ಮುಂದಿನ ತುದಿಯನ್ನು ತಲುಪುವ ಅಂತರದಲ್ಲಿ ಒಂದು ಬಳುಕುಪಟಲ (ಅಂಡ್ಯುಲೇಟಿಂಗ್ ಮೆಂಬ್ರೇನ್) ದೇಹದುದ್ದಕ್ಕೂ ಅಂಟಿಸಿದೆ. ಕಶ ಅಲ್ಲಿಂದ ನಿರ್ಬಂಧಿತವಾಗಿ ಚಾಟಿಯಂತೆ ಮುಂದಿನ ತುದಿಯಿಂದ ಆಚೆಗೆ ಚಾಚಿಕೊಂಡಿದೆ. ಬುಡರೇಣುವಿನ ಕೆಳಗೆ ಕಶಾಧಾರಕಾಯವಿದ್ದು (ಪ್ಯಾರ ಬೇಸಲ್ ಬಾಡಿ) ಇವೆರಡು ಒಂದು ತಂತುವಿನಿಂದ ಜೋಡಿಸಲ್ಪಟ್ಟಿವೆ. ಈ ಒಟ್ಟು ರಚನೆಗೆ ಚಲನಾಣು (ಕೈನೆಟೋಪ್ಲಾಸ್ಟ್) ಎಂದು ಹೆಸರು. ಚಾಟಿ, ಬಳುಕುಪಟಲಗಳು ಟ್ರಿಪ್ಯಾನಸೋಮದ ಚಲನೆಗೆ ಸಹಾಯಕ. ಟ್ರಿಪ್ಯಾನಸೋಮದ ಕೆಲವು ಪ್ರಭೇದಗಳಲ್ಲಿ ಕಶವೇ ಇಲ್ಲ. ಟ್ರಿಪ್ಯಾನಸೋಮಗಳ ಸಂಖ್ಯಾಭಿವೃದ್ಧಿ ಆಗುವುದು ದ್ವಿಭಜನೆಯಿಂದ (ಬೈನರಿ ಫಿಷನ್). ಎಳೆಯ ಜೀವಿ ಂತಿಥೇಯ ಜೀವಿಯ ರಕ್ತವನ್ನು ಸೇವಿಸಿ, ಬೆಳೆದು, ದೊಡ್ಡದಾದ ಮೇಲೆ ದೇಹದುದ್ದಕ್ಕು ಸೀಳಿ ಎರಡು ಎಳೆಯ ಜೀವಿಗಳಾಗಿ ರೂಪುಗೊಳ್ಳುತ್ತದೆ. ಟ್ರಿಪ್ಯಾನಸೋಮದಲ್ಲಿ ಅನೇಕ ಪ್ರಭೇದಗಳಿವೆ.ಸ್ತನಿಗಳನ್ನುಳಿದು ಇತರ ಕಶೇರುಕಳಲ್ಲಿರುವ ಪ್ರಭೇದಗಳು ಬಹುಶಃ ನಿರುಪ್ರದವಿಗಳು. ಸ್ತನಿಗಳಲ್ಲಿರುವ ಪ್ರಭೇದಗಳಲ್ಲಿ ಕೆಲವು ಮಾತ್ರ ರೋಗಕಾರಕಗಳು. ಟ್ರಿಪ್ಯಾನಸೋಮಗಳಿಂದ ಉಂಟಾದ ರೋಗ ಸ್ಥಿತಿಗಳಿಗೆಲ್ಲ ಟ್ರಿಪ್ಯಾನಸೋಮಿಯಾಸಿಸ್ ಎಂದು ಹೆಸರು. ವಿವಿಧ ಪ್ರಭೇದಗಳು ಉಂಟುಮಾಡುವ ರೋಗಕ್ಕೆ ಬೇರೆ ಬೇರೆ ಹೆಸರನ್ನು ಇಡಲಾಗಿದೆ. ನೋಡಿ–ಟ್ರಿಪ್ಯಾನಸೋಮಿಯಾಸಿಸ್;

(ಎಸ್.ಬಿ.ಎಂ.; ಕೆ.ಪಿ.ಆರ್.)

**ಟ್ರಿಪ್ಯಾನಸೋಮಿಯಾಸಿಸ್:** ಟ್ರಿಪ್ಯಾನಸೋಮ ಎಂಬ ಏಕಕೋಶಿಕ ಜೀವಿಯ (ಪ್ರೋಟೊಜ಼ೋವ) ಪ್ರಭೇದಗಳ ಸೋಂಕಿನಿಂದ ಉಂಟಾದ ರೋಗಪರಿಸ್ಥಿತಿ. ಟ್ರಿಪ್ಯಾನಸೋಮ ಮಾನವರಲ್ಲೆ ಅಲ್ಲದೆ ಮಂಗಗಳು, ಕತ್ತೆ, ಕುದುರೆ, ಹೇಸರಕತ್ತೆ, ದನ, ಕುರಿ, ಮೇಕೆ, ನಾಯಿ, ಒಂಟೆ, ಆನೆ ಮುಂತಾದ ಸಾಕುಪ್ರಾಣಿಗಳಲ್ಲೂ ಬಾವಲಿ, ಕಾಡೆಮ್ಮೆ, ಜಿಂಕೆ, ಕಾಡಿನಲ್ಲಿರುವ ಇತರ ಶಿಕಾರಿ ಪ್ರಾಣಿಗಳಲ್ಲೂ ಇರುತ್ತದೆ. ಸ್ತನಿಗಳಲ್ಲದ ಇತರ ಕಶೇರುಕ ವರ್ಗಗಳಿಗೆ ಸೇರಿದ ಪಕ್ಷಿ, ಹಾವು, ಹಲ್ಲಿಗಳು, ಮೊಸಳೆ, ಆಮೆಗಳು, ಕಪ್ಪೆ, ಮೀನುಗಳಲ್ಲಿಯೂ ಟ್ರಿಪ್ಯಾನಸೋಮ ಆಯಾ ಜೀವಿಗಳ ರಕ್ತದಲ್ಲಿ ಪರಾವಲಂಬಿಜೀವಿಯಾಗಿ ವಾಸಿಸುತ್ತದೆ. ಸ್ತನಿಗಳನ್ನು ಬಿಟ್ಟು ಉಳಿದ ಕಡೆ ಟ್ರಿಪ್ಯಾನಸೋಮ ನಿರುಪದ್ರವಿ. ಸ್ತನಿಗಳಲ್ಲಿರುವ ಟ್ರಿಪ್ಯಾನಸೋಮಗಳಲ್ಲೂ ಎಲ್ಲವೂ ರೋಗಕಾರಕಗಳಲ್ಲ. ಟ್ರಿಪ್ಯಾನಸೋಮದ ಇರುವಿಕೆಯಿಂದ ರೋಗ ಉಂಟಾದರೆ ಮಾತ್ರ ಆ ಸ್ಥಿತಿಯನ್ನು ಟ್ರಿಪ್ಯಾನಸೋಮಿಯಾಸಿಸ್ ಎಂದು ಕರೆಯುವುದು ವಾಡಿಕೆ.

ಮಾನವರ ಟ್ರಿಪ್ಯಾನಸೋಮಿಯಾಸಿಸ್ನಲ್ಲಿ ಎರಡು ಬಗೆ: ಆಫ್ರಿಕ ಖಂಡದ್ದು ಮತ್ತು ದಕ್ಷಿಣ ಅಮೆರಿಕ ಖಂಡದ್ದು. ಆಫ್ರಿಕದ ಟ್ರಿಪ್ಯಾನಸೋಮಿಯಾಸಿಸ್ ಟ್ರಿಪ್ಯಾನಸೋಮ ಗ್ಯಾಂಬಿಯೆನ್ಸಿ ಮತ್ತು ಟ್ರಿ. ರೋಡೀಸಿಯೆನ್ಸಿ ಎಂಬ ಎರಡು ಪ್ರಭೇದಗಳಿಂದ ಉಂಟಾಗುತ್ತದೆ. ಸೋಂಕು ಮಾನವರಿಂದ ಮಾನವರಿಗೆ ಟ್ಸೆಟ್ಸೀ ನೊಣಗಳ (ಗ್ಲಾಸೀನ ಪ್ರಭೇದಗಳು) ಕಡಿತದಿಂದ ಹರಡುತ್ತದೆ. ರೋಗಿಯ ರಕ್ತದಲ್ಲಿರುವ ಟ್ರಿಪ್ಯಾನಸೋಮಗಳು ನೊಣದ ದೇಹದಲ್ಲಿ ಎರಡು ಮೂರು ವಾರ ಬೆಳೆದು, ಸಂಖ್ಯೆ ವೃದ್ಧಿಸಿ ಅದರ ಲಾಲಾ ಗ್ರಂಥಿಗಳನ್ನು ಸೇರುತ್ತವೆ. ಇಂಥ ನೊಣ ಇನ್ನೊಬ್ಬ ವ್ಯಕ್ತಿಯನ್ನು ಕಡಿದಾಗ ಟ್ರಿಪ್ಯಾನಸೋಮಗಳು ಆ ವ್ಯಕ್ತಿಯ ದೇಹದೊಳಗೆ ಸೇರುತ್ತವೆ. ನೊಣಗಳು ನೇರಬಿಸಿಲಿಲ್ಲದ ಉಷ್ಣ ಹಾಗೂ ತೇವವಾಗಿರುವ ಸ್ಥಳಗಳಲ್ಲಿ ಮಾತ್ರ ವೃದ್ಧಿಸಬಲ್ಲವಾದ್ದರಿಂದ ದ. ಆಫ್ರಿಕದ ನದಿ ಹಾಗೂ ತೀರಪ್ರದೇಶಗಳ ಕಾಡುಗಳಲ್ಲಿ ವಿಶೇಷವಾಗಿ ಇರುತ್ತವೆ. ಆದ್ದರಿಂದ ಇಂಥ ಪ್ರದೇಶಗಳಲ್ಲಿ ಟ್ರಿಪ್ಯಾನಸೋಮಿಯಾಸಿಸ್ ಸಾಮಾನ್ಯ. ಗ್ಲಾಸಿನ ಪ್ಯಾಲ್ಪ್ಯಾಲಿಸ್ ನೊಣ ಗ್ಯಾಂಬಿಯಾ ನದಿಯ ದಡದ ಕಾಡುಗಳಲ್ಲಿದ್ದು ಪಶ್ಚಿಮ ಮತ್ತು ಮಧ್ಯ ಆಫ್ರಿಕದಲ್ಲಿ ಟ್ರಿ. ಗ್ಯಾಂಬಿಯೆನ್ಸಿ ಪ್ರಭೇದದ ಸೋಂಕು ಹರಡುವಿಕೆಗೆ ಕಾರಣವಾಗಿದೆ. ಗ್ಲಾ. ಮಾರ್ಸಿಟಾನ್ಸ್ ನೊಣ ರೊಡೇಸಿಯ ಮತ್ತು ಪೂರ್ವ ಆಫ್ರಿಕ ತೀರಪ್ರದೇಶದ ಕಾಡುಗಳಲ್ಲಿ ಟ್ರಿ. ರೊಡೀಸಿಯೆನ್ಸಿ ಪ್ರಭೇದದ ಸೋಂಕನ್ನು ಹರಡುತ್ತದೆ. ಈ ಟ್ರಿಪ್ಯಾನಸೋಮ ಪ್ರಭೇದಗಳಿಗೆ ಈ ಪ್ರಾಂತ್ಯಗಳಲ್ಲಿರುವ ಸಾಕುಪ್ರಾಣಿಗಳು ಹಾಗೂ ವನ್ಯಮೃಗಗಳು ಸ್ವಾಭಾವಿಕ ಸಂಗ್ರಹಸ್ಥಳಗಳಾಗಿರಬಹುದು ಎನ್ನಿಸಿದೆ. ಟ್ಸೆಟ್ಸಿ ನೊಣಗಳು ಅವುಗಳ ರಕ್ತವನ್ನು ಹೀರಿ ಟ್ರಿಪ್ಯಾನಸೊಮಗಳನ್ನು ಆಗಿಂದಾಗ್ಗೆ ಪಡೆಯುತ್ತವೆ ಮತ್ತು ಮಾನವರಿಗೂ ವರ್ಗಮಾಡುತ್ತವೆ ಎಂದು ತೋರುತ್ತದೆ. ಟ್ರಿ. ಗ್ಯಾಂಬಿಯೆನ್ಸಿ ಮತ್ತು ರೊಡೀಸಿಯೆನ್ಸಿಗಳ ಸೋಂಕಿನಿಂದ ಮಾನವರಿಗೆ ಬರುವ ರೋಗ ಜೋಗರಿಕೆ ಬೇನೆ ಅಥವಾ ನಿದ್ರಾಬೇನೆ (ಸ್ಲೀಪಿಂಗ್ ಸಿಕ್‌ನೆಸ್). ಟ್ರಿ. ಗ್ಯಾಂಬಿಯೆನ್ಸಿ ಸೋಂಕಿನಿಂದ ಜ್ವರ ತತ್‌ಕ್ಷಣವೇ ಕಂಡುಬಂದರೂ ರೋಗ ಪ್ರಬಲಿಸಬೇಕಾದರೆ ಎರಡು ಮೂರು ವರ್ಷಗಳಾಗಬಹುದು. ನೊಣಕಡಿತದಿಂದ ದೇಹದೊಳಹೊಕ್ಕ ಟ್ರಿಪ್ಯಾನಸೋಮಗಳು ರಕ್ತ, ದುಗ್ಧರಸಗಳ ಮೂಲಕ ಯಕೃತ್ತು, ಗುಲ್ಮ, ನರವ್ಯೂಹ ಮುಂತಾಗಿ ದೇಹದ ಎಲ್ಲೆಡೆಯೂ ವ್ಯಾಪಿಸುತ್ತವೆ. ನೊಣ ಕಡಿದ ಸ್ಥಳದಲ್ಲಿ ತೀವ್ರನೋವು, ಊತಗಳು ಉಂಟಾಗುತ್ತವೆ. ಒಂದು ವಾರದ ಬಳಿಕ ಆ ಸ್ಥಳ ನೇರಳೆ ಬಣ್ಣಕ್ಕೆ ತಿರುಗಿ ಕಡಿತ ಕೆರೆತಗಳಿಂದ ವ್ರಣವಾಗಿ ನಿಧಾನವಾಗಿ ಮಾಯವಾಗುತ್ತದೆ. ಈ ಕಾಲದಲ್ಲಿ ಮತ್ತು ಇನ್ನೆರಡು ವಾರಗಳ ಪರ್ಯಂತ ಟ್ರಿಪ್ಯಾನಸೋಮಗಳು ವ್ಯಕ್ತಿಯ ದೇಹದಲ್ಲಿ ವೃದ್ಧಿಗೊಳ್ಳುತ್ತ, ಹಬ್ಬುತ್ತ, ಕೊನೆಗೆ ಜ್ವರ, ಸುಸ್ತು, ತಲೆನೋವು, ಗುಂಡಿಗೆಯ ವೇಗಮಿಡಿತಗಳನ್ನು ಉಂಟುಮಾಡುತ್ತವೆ. ಇಂಥ ಸ್ಥಿತಿಗೆ ಗ್ಯಾಂಬಿಯ ಜ್ವರವೆಂದು ಹೆಸರು. ದುಗ್ಧರಸಗ್ರಂಥಿಗಳು ದೊಡ್ಡವಾಗಿ ಸೋಂಕು ಕ್ರಮೇಣ ನರವ್ಯೂಹಕ್ಕೆ ವ್ಯಾಪಿಸಿದ ಬಳಿಕ ಜೋಗರಿಕೆ ಬೇನೆಯ

ಲಕ್ಷಣಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಚಿತ್ತಕೆರಳಿಕೆ, ಗಲಿಬಿಲಿ, ಮಸಕಾದ ನೆನಪು, ನಿರಾಸಕ್ತಿ, ವ್ಯಕ್ತಿತ್ವನಾಶ ಮುಂತಾದವು ಕಂಡುಬಂದು ವ್ಯಕ್ತಿ ಸದಾಕಾಲವೂ ಜೋಗರಿಸುತ್ತಿರುವಂತೆಯೋ ನಿದ್ರೆಮಾಡುತ್ತಿರುವಂತೆಯೋ ಕಾಣಿಸುತ್ತದೆ. ಊಟಮಾಡುವುದಕ್ಕೂ ಆತನನ್ನು ಎಚ್ಚರಿಸಬೇಕು. ಊಟಮಾಡುತ್ತಿರುವಾಗಲೇ ತೂಕಡಿಸುತ್ತ ವ್ಯಕ್ತಿ ಮುದುರಿಕೊಳ್ಳುವುದು ಸಾಮಾನ್ಯ. ಮುಖದಲ್ಲಿ ಬಾವು, ಸ್ನಾಯುಸೆಳೆತ, ಕೀಲುನೋವು, ಅಸ್ಥಿರ ನಡಿಗೆ, ತುಟಿ, ನಾಲಿಗೆ, ಕೈಗಳ ಅದಿರುವಿಕೆ, ನಿಧಾನವಾದ ಮಾತು–ಇವು ಇತರ ಲಕ್ಷಣಗಳು. ರಕ್ತ ಮತ್ತು ಮಿದುಳುಬಳ್ಳಿದ್ರವಗಳಲ್ಲಿ ಟ್ರಿಪ್ಯಾನಸೋಮಗಳಿರುವುದನ್ನು ಸೂಕ್ಷ್ಮದರ್ಶಕ ಪರೀಕ್ಷೆಯಿಂದ ಸ್ಥಿರಪಡಿಸಿಕೊಳ್ಳಬಹುದು. ರೋಗಕ್ಕೆ ಚಿಕಿತ್ಸೆ ಮಾಡದಿದ್ದರೆ ಕ್ರಮೇಣ 5–6 ವರ್ಷಗಳಲ್ಲಿ ಅದು ಮಾರಕವಾಗಬಹುದು. ಈ ನಡುವೆ ಆಗಿಂದಾಗ ರೋಗ ತಾನಾಗಿಯೇ ಗುಣವಾಯಿತೇನೋ ಎನ್ನುವಂತಿರುತ್ತದೆ. ಬಹುಶಃ ಇವು ಟ್ರಿಪ್ಯಾನಸೋಮಗಳಿಗೆ ಪ್ರತಿಕೂಲ ಕಾಲ. ಈ ಕಾಲದಲ್ಲಿ ಕಶಾಂಗವನ್ನು (ಫ್ಲಾಜೆಲ್ಲಮ್) ಕಳೆದುಕೊಂಡು ಅಂಡಾಕಾರವಾಗಿ ಸುಪ್ತಾವಸ್ಥೆಯಲ್ಲಿರುತ್ತವೆ. ಪರಿಸ್ಥಿತಿ ಅನುಕೂಲವಾದೊಡನೆ ಕಶಾಂಗವನ್ನು ಬೆಳೆಸಿ ಚೇತರಿಸಿಕೊಂಡು ಮತ್ತೊಮ್ಮೆ ತಮ್ಮ ದೇಹ ಚಟುವಟಿಕೆಗಳನ್ನು ಪುನರಾರಂಭಿಸುತ್ತವೆ. ರೋಗ ಆಗ ಮರುಕಳಿಸಿದಂತೆ ತೋರುತ್ತದೆ.

ಟ್ರಿ. ರೊಡೀಸಿಯೆನ್ಸಿ ಸೋಂಕಿನಲ್ಲಿ ರೋಗ ಬಹುಬೇಗ ತೀವ್ರವಾಗುತ್ತ ಸುಮಾರು ಒಂದು ವರ್ಷದಲ್ಲೇ ಮಾರಕವಾಗಿ ಪರ್ಯಾವಸಾನಗೊಳ್ಳುತ್ತದೆ. ಸೋಂಕು ರಕ್ತದ ಮೂಲಕ ವ್ಯಾಪಿಸುತ್ತ ನಾಲ್ಕಾರು ವಾರಗಳಲ್ಲಿ ನರವ್ಯೂಹವನ್ನು ಸೇರಿ ಜೋಗರಿಕೆ ಸ್ಥಿತಿ ವಗೈರೆಗಳನ್ನು ಉಂಟುಮಾಡುತ್ತದೆ. ಆಫ್ರಿಕದ ಟ್ರಿಪ್ಯಾನಸೋಮಿಯಾಸಿಸ್ಸಿನಿಂದ ಬರುವ ಈ ನಿದ್ರಾಬೇನೆಗೆ ಚಿಕಿತ್ಸೆಗಳು ಸುರಾಮಿನ್, ಪೆಂಟಾಮಿಡಿನ್ ಐಸೋಥೈಯೋನೇಟ್, ಪೆಂಟಾಮಿಡೀನ್ ಮಿಥೇನ್ ಸಲ್ಫೋನೇಟ್. ಇವು ರಕ್ತ ಮತ್ತು ಮಿದುಳುಬಳ್ಳಿರಸದಲ್ಲಿರುವ ಟ್ರಿಪ್ಯಾನಸೋಮಗಳನ್ನು ನಾಶಮಾಡುತ್ತವೆ. ಮೆಲಾರ್ಸೋಪ್ರಾಲ್, ಮೆಲಾರ್ಸೊನೈಲ್ ಪೊಟ್ಯಾಸಿಯಮ್, ಟ್ರಿಪಾರ್ಸಮೈಡ್ ಮತ್ತು ನೈಟ್ರೊಫ್ಯೂರಜೋಲುಗಳನ್ನೂ ಚಿಕಿತ್ಸೆಗೆ ಉಪಯೋಗಿಸುತ್ತಾರೆ.

ದಕ್ಷಿಣ ಅಮೆರಿಕದ ಟ್ರಿಪ್ಯಾನಸೋಮಿಯಾಸಿಸ್ ; ಶ್ಯಾಗನವ್ಯಾಧಿ ಎಂದೂ ಹೆಸರುಂಟು. ಇದು ಟ್ರಿ. ಕ್ರೂಸಿಯೈ ಎಂಬ ಪ್ರಭೇದದ ಸೋಂಕಿನಿಂದುಂಟಾದುದು. ದಕ್ಷಿಣ ಅಮೆರಿಕದ ಬ್ರಜ಼ಿಲ್, ಪೆರು, ವೆನಿಜ಼ೂಲಾ ಪ್ರಾಂತ್ಯಗಳಲ್ಲಿ, ಮಧ್ಯ ಅಮೆರಿಕದ ಕೆಲವು ಭಾಗಗಳಲ್ಲಿ ಮಾತ್ರ ಕಂಡುಬರುತ್ತದೆ. ಮಾನವನಿಂದ ಮಾನವನಿಗೆ ಸೋಂಕು ತಿಗಣೆಗಳಿಂದ ಹಬ್ಬುತ್ತದೆ. ತಿಗಣೆಯ ದೇಹದಲ್ಲಿ ಕೆಲವು ದಿವಸಗಳು ಬೆಳೆದ ಬಳಿಕ ಟ್ರಿಪ್ಯಾನಸೋಮಗಳು ಮಾನವರಲ್ಲಿ ರೋಗಕಾರಕಗಳಾಗುವ ಸಾಮರ್ಥ್ಯವನ್ನು ಪಡೆಯುತ್ತವೆ. ತಿಗಣೆಗಳು ಕಚ್ಚಿ ರಕ್ತಹೀರುವಾಗ ಅವನ್ನು ಹಿಚುಕಿ ಹಾಕುವುದೂ ಕಡಿದ ಸ್ಥಳವನ್ನು ಕೆರೆದುಕೊಂಡು ಗಾಯಗೊಳಿಸಿ ಕೊಳ್ಳುವುದೂ ಸಾಮಾನ್ಯ. ಇಂಥ ಸಂದರ್ಭಗಳಲ್ಲಿ ತಿಗಣೆಯ ಮಲದಲ್ಲಿ ವಿಸರ್ಜಿತವಾಗುವ ಟ್ರಿಪ್ಯಾನಸೋಮಗಳು ಗಾಯದ ಮೂಲಕ ಮಾನವ ದೇಹವನ್ನು ಪ್ರವೇಶಿಸುತ್ತವೆ. ರೋಗ ಸಣ್ಣ ಮಕ್ಕಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ತಿಗಣೆ ಕಡಿದ ಸ್ಥಳದಲ್ಲಿ ಸಣ್ಣ ಗಂಟಾಗುತ್ತದೆ. ದುಗ್ಧರಸದ ಮೂಲಕ ಟ್ರಿಪ್ಯಾನಸೋಮಗಳು ದೇಹದ ಎಲ್ಲ ಕಡೆಗೂ ವ್ಯಾಪಿಸುತ್ತವೆ. ಯಕೃತ್ತು, ಗುಲ್ಮ, ಸ್ನಾಯುಗಳು, ಹೃದಯ ಇವುಗಳ ಕೋಶಗಳನ್ನು ಹೊಕ್ಕು, ಸುಮಾರು ಮೂರು ವಾರಗಳಲ್ಲಿ ತಮ್ಮ ಪ್ರಭಾವದಿಂದ ಏಕಾಏಕಿ ರೋಗಲಕ್ಷಣಗಳನ್ನು ಹೊರಪಡಿಸುತ್ತವೆ. ಹಣೆ, ರೆಪ್ಪೆ, ಕೆನ್ನೆ, ತುಟಿ ಇವುಗಳ ಊತ, ಸ್ಥಳೀಯ ದುಗ್ಧರಸಗ್ರಂಥಿಗಳ ಗಾತ್ರವೃದ್ಧಿ, ಜ್ವರ, ಗುಂಡಿಗೆಯ ಮಿಡಿತಗಳಲ್ಲಿ ಅಕ್ರಮ ಈ ಲಕ್ಷಣಗಳು ಕಂಡು ಬಂದು ಕೊನೆಗೆ ಗುಂಡಿಗೆಯ ದೌರ್ಬಲ್ಯದಿಂದ ಸಾವು ಉಂಟಾಗುತ್ತದೆ. ನರವ್ಯೂಹದ ಮೇಲೆ ಪರಿಣಾಮ ಅಷ್ಟಾಗಿ ಕಂಡು ಬರುವುದಿಲ್ಲ. ರೋಗ ಚಿಕಿತ್ಸೆ ಅಸಮರ್ಪಕ. ಆಫ್ರಿಕದ ಟ್ರಿಪ್ಯಾನಸೋಮಿಯಾಸಿಸ್ಸಿನ ಚಿಕಿತ್ಸಕಗಳು ಇಲ್ಲಿ ಉಪಯುಕ್ತವೆನಿಸಿಲ್ಲ. ಆರ್ಸಿನೋ ಬೆನ್‌ಜ಼ೈಲ್ ಸಲ್ಫೇಟನ್ನು ಚಿಕಿತ್ಸಕವಾಗಿ ಪ್ರಯತ್ನಿಸಬಹುದು. ಕೀಟನಾಶಕಗಳಿಂದ ತಿಗಣೆಗಳನ್ನು ನಾಶಪಡಿಸಿ ರೋಗದ ಹಬ್ಬುವಿಕೆಯನ್ನು ತಡೆಗಟ್ಟುವುದು ಮೇಲು.

ಕುದುರೆ ಮತ್ತು ಒಂಟೆಗಳಲ್ಲಿ ಕಂಡುಬರುವ ಟ್ರಿಪ್ಯಾನಸೋಮಿಯಾಸಿಸ್ಸುಗಳು ಹಲವು ಬಗೆ. ಭಾರತದ ಕುದುರೆ, ಒಂಟೆಗಳಲ್ಲಿ ಉಂಟಾಗುವ ಸರ್ರ ಎಂಬ ರೋಗಸ್ಥಿತಿ ಒಂದು. ಈ ರೋಗಕ್ಕೆ ಕಾರಣ ಟ್ರಿಪ್ಯಾನಸೋಮ ಎಂಬುದನ್ನು ಭಾರತದಲ್ಲಿ ಪಶುವೈದ್ಯಾಧಿಕಾರಿಯಾಗಿದ್ದ ಗ್ರಿಫಿತ್ ಇವಾನ್ಸ್ ಎಂಬಾತ 1880ರಲ್ಲಿ ತೋರಿಸಿದ್ದ. ಟ್ರಿಪ್ಯಾನಸೋಮದ ಈ ಪ್ರಭೇದಕ್ಕೆ ಟ್ರಿ. ಇವಾನ್ಸಿ ಎಂದೇ ಹೆಸರಿಡಲಾಯಿತು. ಪ್ರಾಣಿಯಿಂದ ಪ್ರಾಣಿಗೆ ಸೋಂಕು ಟೆಬೆನಾಸ್ ಮತ್ತು ಇತರ ವಿವಿಧ ನೊಣಗಳ ಕಡಿತದಿಂದ ಹರಡುತ್ತದೆ. ಟ್ರಿಪ್ಯಾನಸೋಮವು ನೊಣದಲ್ಲಿ ಯಾವ ರೀತಿಯ ಬೆಳೆವಣಿಗೆಯನ್ನೂ ತೋರದೆ ನೊಣದ ದೇಹದೊಳಕ್ಕೆ ಹೊಕ್ಕಂತೆಯೇ ಯಾಂತ್ರಿಕವಾಗಿ ಹೊರಬಿದ್ದು ಬೇರೆ ಕುದುರೆ ಅಥವಾ ಒಂಟೆಯ ದೇಹವನ್ನು ಸೇರುತ್ತವೆ. ಇದು ಈ ಟ್ರಿಪ್ಯಾನಸೋಮ ಪ್ರಭೇದದ ವೈಶಿಷ್ಟ್ಯ. ಟ್ರಿ. ಇವಾನ್ಸಿ ಬೇರೆ ಸ್ತನಿಗಳಲ್ಲಿಯೂ ಕಂಡುಬರಬಹುದು. ಇವುಗಳಲ್ಲೆಲ್ಲ ಈ ಏಕಕೋಶಿಕ ನಿರುಪದ್ರವಿಯಾದರೂ ಒಂಟೆ, ಕುದುರೆಗಳಲ್ಲಿ ಒಂದೆರಡು ತಿಂಗಳಲ್ಲೆ ಮಾರಕವಾಗಿ ಪರಿಣಮಿಸುವುದು. ಸೋಂಕು ತಗುಲಿದ ಎರಡರಿಂದ ಎಂಟು ದಿವಸಗಳಲ್ಲಿ ರೋಗ ಚಿಹ್ನೆಗಳು ಪ್ರಾರಂಭವಾಗುತ್ತವೆ. ಜ್ವರ, ಹಸಿವಿಲ್ಲದಿರುವಿಕೆ, ಮೈಮೇಲೆ ಅಲ್ಲಲ್ಲಿ ಗಂದೆಗಳು ಇವು ಪ್ರಾರಂಭಿಕ ಹಾಗೂ ಅನಿಶ್ಚಿತ ಲಕ್ಷಣಗಳು. ಮುಂದಕ್ಕೆ ಕಾಣಬರುವುದು ನೆಗಡಿ, ದವಡೆ ಕೆಳಗಿನ ಗ್ರಂಥಿಗಳ ಊತ, ದೇಹ ಕೃಶವಾಗುವಿಕೆ, ಬಿಟ್ಟು ಬಿಟ್ಟು ಬರುವ ಜ್ವರ, ಕೊನೆಗೆ ಮರಣ. ಸಾವು ಹತ್ತಿರ ಬಂದಂತೆ ಹಿಂದಿನ ಕಾಲುಗಳ ಮೇಲೆ ಹತೋಟಿ ತಪ್ಪುತ್ತದೆ. ಕೆಲವು ಸಂದರ್ಭಗಳಲ್ಲಿ ಪ್ರಾಣಿ ಅತಿಯಾದ ನೋವಿನಿಂದ ತೀವ್ರವಾಗಿ ಒದ್ದಾಡಿ ಆಯಾಸದಿಂದ ಪ್ರಾಣಬಿಡುತ್ತದೆ. ಚಿಕಿತ್ಸೆಗೆ ಸುರಾಮಿನ್ ಉಪಯೋಗಿಸಬಹುದು ; ತೃಪ್ತಿಕರವಲ್ಲ.

ಕುದುರೆಯ ಇನ್ನೊಂದು ಟ್ರಿಪ್ಯಾನಸೋಮಿಯಾಸಿಸ್ಸಿಗೆ ಡೌರಿನ್ ಎಂದು ಹೆಸರು. ಇದು ಟ್ರಿ. ಇಕ್ವಿಪರ್ಡಮ್ ಎಂಬ ಪ್ರಭೇದದ ಸೋಂಕಿನಿಂದುಂಟಾದುದು. ಸಂಭೋಗಕಾರ್ಯದಿಂದ ರೋಗಿಷ್ಟ ಪ್ರಾಣಿಯಿಂದ ಇನ್ನೊಂದು ಪ್ರಾಣಿಗೆ ಸೋಂಕು ಹಬ್ಬುವುದು ಇದರ ವೈಶಿಷ್ಟ್ಯ. ರೋಗ ತಗುಲಿದಾಗ ಮೊದಲು ಜನನಾಂಗಗಳು ಊದಿಕೊಳ್ಳುತ್ತವೆ. ಮೂತ್ರವಿಸರ್ಜನೆ ಮಾಡುವಾಗ ನೋವಾಗುತ್ತದೆ. ಸುಮಾರು ಒಂದು ತಿಂಗಳಲ್ಲಿ ದೇಹದ ಅನೇಕ ಭಾಗಗಳಲ್ಲಿ ಚರ್ಮದ ಕೆಳಗೆ ಅಲ್ಲಲ್ಲಿ ತಗಡಿನ ಚೂರುಗಳಿರುವಂತೆ ಸ್ಥಳಗಳು ಗಡುಸಾಗುತ್ತವೆ (ಪ್ಲೇಕ್ಸ್). ಆದರೆ ಈಗ ಗಡಸು ಸ್ಥಳಗಳು ಬಿಸಿಯಾಗಿರುವುದಿಲ್ಲ. ನೋಯುವುದೂ ಇಲ್ಲ. ಸುಮಾರು ಹತ್ತು ತಿಂಗಳಾಗುವಷ್ಟರಲ್ಲಿ ರಕ್ತಹೀನತೆ ಹಾಗೂ ಕಾಲುಗಳು ಸ್ವಾಧೀನ ನಾಶಗಳು ಕಂಡುಬಂದು ಶೀಘ್ರದಲ್ಲೆ ಪ್ರಾಣಿ ಮೃತಹೊಂದುತ್ತದೆ. ಈ ರೋಗಕ್ಕೆ ಚಿಕಿತ್ಸೆ ಇಲ್ಲ. ರೋಗಿಷ್ಟ ಪ್ರಾಣಿಗಳು ಸಂಭೋಗಕಾರ್ಯದಲ್ಲಿ ಭಾಗವಹಿಸದಂತೆ ಅವನ್ನು ಸಾಯಿಸುವುದು ಮೇಲು.

ಟ್ರಿ. ಥೈಲೆರಿ ಎಂಬುದು ಪ್ರಪಂಚಾದ್ಯಂತ ದನಗಳಲ್ಲಿರುವ ನಿರುಪದ್ರವಿ ಪ್ರಭೇದ. ಆದರೆ ದೊಡ್ಡ ರೋಗಕ್ಕೆ (ರಿನ್‌ಡರ್ ಪೆಸ್ಟ್) ಲಸಿಕೆ ಹಾಕುವಿಕೆ, ಶಸ್ತ್ರಕ್ರಿಯೆಯಿಂದ ಗುಲ್ಮವನ್ನು ತೆಗೆದುಹಾಕುವುದು ಇತ್ಯಾದಿ ಒತ್ತಡ ಸಂದರ್ಭಗಳಲ್ಲಿ (ಸ್ಟ್ರೆಸ್) ಇವು ರೋಗಕಾರಕವಾಗಿ ದನಗಳಲ್ಲಿ ಗರ್ಭಪಾತ, ಹಾಲಿನ ಇಳುವರಿ ಕುಗ್ಗುವಿಕೆ, ನೆರಡಿ ರೋಗವೇನೋ ಎಂಬ ಸಂಶಯ ಹುಟ್ಟುವಂತೆ ಹಠಾತ್ ಮರಣ ಮುಂತಾದ ಸ್ಥಿತಿಗಳಿಗೆ ಕಾರಣವಾಗಬಹುದು. ವಾಸ್ತವವಾಗಿ ಥೈಲರ್ ಈ ಪ್ರಭೇದವನ್ನು ಆವಿಷ್ಕರಿಸಿದ್ದು ಗಾಲ್‌ಜಿಕ್ನೆ ಎಂಬ ವಿಚಿತ್ರವಾದ ಪಿತ್ತಕೋಶ ರೋಗದಿಂದ ನರಳುತ್ತಿದ್ದ ದನಗಳಿಂದಲೇ. ಬಹುಶಃ ಆ ರೋಗಕ್ಕೆ ಅವೇ ಕಾರಣ. 1902ರಲ್ಲಿ ಟ್ರಾನ್ಸ್‌ವಿಟ್ ಎಂಬಲ್ಲಿ ಥೈಲರ್ ಪ್ರತ್ಯೇಕಿಸಿ ವ್ಯಾಸಂಗಿಸಿದ ಈ ಪ್ರಭೇದ ಟ್ರಿಪ್ಯಾನಸೋಮಗಳಲ್ಲಿ ಅಸಾಮಾನ್ಯಗಾತ್ರದ ಪ್ರಭೇದ.

ಕುದುರೆ, ಕತ್ತೆ, ಹೇಸರಕತ್ತೆ, ಕುರಿ, ಮೇಕೆ, ಒಂಟೆ, ಹಂದಿ, ನಾಯಿ, ದನ ಇವುಗಳಲ್ಲಿ ಕಂಡು ಬರುವ ಇನ್ನೊಂದು ಟ್ರಿಪ್ಯಾನಸೋಮಿಯಾಸಿಸ್ಸಿಗೆ ನಗಾನ ಎಂದು ಹೆಸರು. ಟ್ರಿ. ಬ್ರೂಸೈ ಎಂಬ ಪ್ರಭೇದ ಇದಕ್ಕೆ ಕಾರಣ. 1874ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಬ್ರೂಸ್ ಎಂಬಾತ ಇದನ್ನು ಪ್ರಪ್ರಥಮವಾಗಿ ಆವಿಷ್ಕರಿಸಿದ್ದರಿಂದ ಈ ಪ್ರಭೇದಕ್ಕೆ ಟ್ರಿ. ಬ್ರೂಸೈ ಎಂದು ಹೆಸರಾಯಿತು. ರೋಗವು ಪ್ರಾಣಿಯಿಂದ ಪ್ರಾಣಿಗೆ ಟ್ಸೆಟ್ಸೀ ನೊಣಗಳ ಕಡಿತದಿಂದ ಹಬ್ಬುತ್ತದೆ. ನಗಾನ ತೀವ್ರ ಮಾರಕ ರೋಗ. ರೋಗತಗುಲಿದ ಒಂದೆರಡು ತಿಂಗಳಲ್ಲಿ ಪ್ರಾಣಿಗಳು ಸಾವನ್ನು ಅಪ್ಪುವುವು. ಮಾಲ್ ಡಿ ಕೆಡೆರಾನ್ ಎಂಬುದು ಕುದುರೆಗಳ ಮತ್ತೊಂದು ತೀವ್ರರೀತಿಯ ಟ್ರಿಪ್ಯಾನಸೋಮಿಯಾಸಿಸ್. ಅಪರೂಪವಾಗಿ ಇದು ಮೆಲಕು ಹಾಕುವ ಪ್ರಾಣಿಗಳಲ್ಲೂ ನಾಯಿಗಳಲ್ಲೂ ಕಂಡುಬರಬಹುದು. ಇದರ ಹರಡುವಿಕೆ ಹೇಗೆಂಬುದು ತಿಳಿಯದು. (ಎಸ್.ಬಿ.ಎಂ.)

**ಟ್ರೈಟ್ಯೂಬರ್‌ಕ್ಯುಲೇಟ:** ವಿನಾಶವಾಗಿರುವ ಕೀಟಾಹಾರಿ ಸ್ತನಿಗಳ ಗಣ. ಪ್ಯಾಂಟೊಥೀರಿಯ ಇದರ ಪರ್ಯಾಯನಾಮ. ಯೂರೋಪು ಮತ್ತು ಅಮೆರಿಕದ ಜುರಾಸಿಕ್ ಶಿಲೆಗಳಲ್ಲಿ ಈ ಸ್ತನಿಗಳ ಕೆಳದವಡೆಯ ಪಳೆಯುಳಿಕೆಗಳು ದೊರಕಿವೆ. ಕೆಳದವಡೆಯ ರಚನಾಕ್ರಮದ ಆಧಾರದ ಮೇಲೆ, ಈ ಗುಂಪು ಆಧುನಿಕ ಸ್ತನಿಗಳ ಉದ್ಭವಕ್ಕೆ ಕಾರಣವಾದ ಗುಂಪಿಗೆ ನೇರವಾದ ಸಂಬಂಧ ಹೊಂದಿತ್ತೆಂದು ಹೇಳುವರು. ಈ ಗಣದ ಉದಾಹರಣೆಯಾದ ಆಂಫಿತೀರಿಯಮಿನ ಕೆಳದವಡೆಯ ಪಳೆಯುಳಿಕೆ ಪ್ರತಿಭಾಗದಲ್ಲಿ ನಾಲ್ಕು ಬಾಚಿಹಲ್ಲುಗಳು, ಒಂದು ಕೋರೆಹಲ್ಲು, ನಾಲ್ಕುಮುಂದವಡೆ ಹುಲ್ಲುಗಳು ಮತ್ತು ಏಳು ದವಡೆಹಲ್ಲುಗಳು ಇವೆ. ಮೇಲು ದವಡೆಯ ದವಡೆಹಲ್ಲುಗಳು ತ್ರಿಕೋನಾಕಾರದಲ್ಲಿವೆ. ಇದರಲ್ಲಿ ಪ್ರಧಾನವಾದ ಒಂದು ಒಳಕೋಡು ಒಂದು ದೊಡ್ಡ ಹೊರಕೋಡು ಮತ್ತು ಹಲವಾರು ಸಣ್ಣ ಕೋಡುಗಳು ಇವೆ. ಕೆಳದವಡೆಯ ದವಡೆಹಲ್ಲುಗಳಲ್ಲಿ ಅಸಮ

ತ್ರಿಕೋನಾಕಾರದಲ್ಲಿ ಅಳವಡಿಕೆಯಾದ ಮೂರು ಪ್ರಧಾನ ಕೋಡುಗಳು, ಅವುಗಳ ಹಿಂದೆ ಟಾಲೊನಿಡ್ ಅಥವಾ ಹಿಮ್ಮಡಿ ಎಂಬ ಪ್ರದೇಶ ಮತ್ತು ಇದರ ಮೇಲೆ ಮತ್ತೊಂದು ಕೋಡು ಇದೆ. (ಎಸ್.ಆರ್.ಕೆ.ಎ.)

**ಟ್ರೈಪೆಟಿಡೆ:** ಡಿಪ್ಟರ ಗಣದ ಒಂದು ಕುಟುಂಬ. ಇದಕ್ಕೆ ಟ್ರೈಪಾನ್ಯೆಯಿಡೆ ಮತ್ತು ಯೂರಿಬೈಯಿಡೆ ಎಂಬ ಹೆಸರಿನಿಂದ ಕರೆಯುವರು. ಈ ಕುಟುಂಬದ ಕೀಟಗಳು ಹಲವಾರು ಗಿಡಗಳ ಹಣ್ಣು, ಹೂವು, ಎಲೆ, ಕಾಂಡಗಳಲ್ಲಿ ಮೊಟ್ಟೆಗಳನ್ನಿಡುತ್ತವೆ. ಡಿಂಬಗಳು ಈ ಭಾಗಗಳನ್ನು ತಿಂದು ಹಾಳು ಮಾಡುತ್ತವೆ. ಈ ಕೀಟಗಳನ್ನು ಹಣ್ಣಿನ ನೊಣಗಳು (ಫ್ರೂಟ್‌ಫ್ಲೈಸ್) ಎನ್ನುವರು. ಈ ನೊಣಗಳು ಸಣ್ಣ ಅಥವಾ ಮಧ್ಯಮ ಗಾತ್ರದ ಕೀಟಗಳು. ಇವುಗಳ ಉದ್ದ 1.5–6.0 ಮಿಮೀ. ಇವುಗಳ ಬಣ್ಣ ಹಳದಿ, ಕಂದು, ಕಿತ್ತಳೆ, ಕಪ್ಪು ಅಥವಾ ಈ ಎಲ್ಲಾ ಬಣ್ಣಗಳ ಮಿಶ್ರಣದಿಂದಾಗಿವೆ. ರೆಕ್ಕೆಗಳ ಮೇಲೆ ಚುಕ್ಕೆಗಳು ಅಥವಾ ಪಟ್ಟೆಗಳಿವೆ. ಕೆಲವು ಪ್ರಭೇದಗಳು ಗಿಡಗಂಟೆಗಳ ಮೇಲೆ ಕುಳಿತಾಗ ತಮ್ಮ ರೆಕ್ಕೆಗಳನ್ನು ನಿಧಾನವಾಗಿ ಮೇಲಕ್ಕೆ ಕೆಳಕ್ಕೆ ಆಡಿಸುವುವು. ಇದರಿಂದಾಗಿ ಇವಕ್ಕೆ ನವಿಲು ನೊಣಗಳು ಎಂಬ ಹೆಸರೂ ಇದೆ. ಇವುಗಳ ರೆಕ್ಕೆಯಲ್ಲಿರುವ ಸಬ್‌ಕಾಸ್ಟ ನರದ ಆಕಾರದಿಂದ ಇವನ್ನು ಸುಲಭವಾಗಿ ಗುರ್ತಿಸಬಹುದು. ಈ ನರ ರೆಕ್ಕೆಯ ಮೇಲೆ ಕೊಂಚ ದೂರ ಸಾಗಿ ನಂತರ ಸಮಕೋನದಲ್ಲಿ ಬಾಗಿ ಕ್ರಮೇಣ ಕಣ್ಮರೆಯಾಗುತ್ತದೆ. ಹೆಣ್ಣುಗಳಲ್ಲಿ ಪ್ರಮುಖವಾದ ಅಂಡನಿಕ್ಷೇಪಕ (ಓವಿಪಾಸಿಟರ್) ಇದೆ.

ಟ್ರೈಪೆಟಿಡೆ ನೊಣಗಳ ಡಿಂಬಗಳು ಸಸ್ಯಾಹಾರಿಗಳು. ಪೂರ್ಣವಾಗಿ ಬೆಳೆದ ಮರಿಗಳ ಆಕಾರ ದುಂಡಗೆ ಅಥವಾ ಪೀಪಾಯಿಯಂತೆ ಇದೆ. ಹೊಟ್ಟೆಯ ಕೊನೆಯಲ್ಲಿ ಒಂದು ಜೊತೆ ಕೊಳವೆ (ಏನಲ್ ಟ್ಯೂಬ್ಯೂಲ್ಸ್)ಗಳಿವೆ. ಮರಿಗಳ ಜೀವನ ಕ್ರಮದ ಆಧಾರದ ಮೇಲೆ ಇವನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೆಯ ಗುಂಪಿನ ಹುಳುಗಳು ರಸಭರಿತ ಹಣ್ಣುಗಳ ಮೇಲೆ ಜೀವಿಸುತ್ತವೆ. ಉದಾ: ಡ್ಯಾಕಸ್ ಮತ್ತು ಸೆರಟೈಟಿಸ್. ಆಸ್ಟರೇಸೀ ಕುಟುಂಬದ ಹೂವುಗಳ (ಉದಾ: ಸೂರ್ಯಕಾಂತಿ ಹೂವು) ಮೇಲೆ ಜೀವಿಸುವ ಹುಳುಗಳು ಎರಡನೆಯ ಗುಂಪಿಗೆ ಸೇರಿವೆ (ಉದಾ: ಟೆಫ್ರೈಟಸ್ ಮತ್ತು ಯೂರೋಫೋರ ಜಾತಿ). ಮೂರನೆಯ ಗುಂಪಿನ ನೊಣಗಳ ಮರಿಗಳು ಎಲೆ ಅಥವಾ ಕಾಂಡದಲ್ಲಿ ಸುರಂಗ ಕೊರೆದು ಜೀವಿಸುತ್ತವೆ (ಉದಾ: ಫೈಲೊಫಿಲ, ಯುರೀಬಿಯ). ನಾಲ್ಕನೆಯ ಗುಂಪಿಗೆ ಸೇರಿದ ನೊಣಗಳ ಮರಿಗಳು ಸಸ್ಯಗಳ ವಿವಿಧಭಾಗಗಳಲ್ಲಿ ಗಂಟುಗಳನ್ನು (ಗಾಲ್ಸ್) ಉಂಟುಮಾಡುತ್ತವೆ. ಈ ಗುಂಪಿಗೆ ಸೇರಿದ ನೊಣಗಳಲ್ಲಿ ಸೆರಟೈಟಿಸ್ ಕ್ಯಾಪಿಟೇಟ್ ಮುಖ್ಯವಾದುದು. ಇದನ್ನು ಮೆಡಿಟರೇನಿಯನ್ ಹಣ್ಣುನೊಣ ಎನ್ನುವರು.

ಭಾರತದಲ್ಲಿ ಮಾವಿನಹಣ್ಣು, ಸೀಬೆಹಣ್ಣು, ಮತ್ತಿತರ ಹಣ್ಣುಗಳ ಮೇಲೆ ಇವುಗಳ ಹಾವಳಿ ಹೆಚ್ಚು. ಮೊಟ್ಟೆಗಳಿಂದ ಹೊರಬರುವ ಮರಿಗಳು ಹಣ್ಣುಗಳನ್ನು ತಿಂದು, ಕೊಳೆಸಿ ಬಹಳ ನಷ್ಟ ಉಂಟುಮಾಡುತ್ತವೆ. ಕೆಲವು ಜಾತಿಯ ನೊಣಗಳು ಕುಂಬಳಕಾಯಿ, ಸೋರೆಕಾಯಿಗಳಲ್ಲಿ ಮೊಟ್ಟೆಯಿಟ್ಟು ಅವನ್ನು ಹಾಳು ಮಾಡುತ್ತವೆ. ಉದಾ: ಡ್ಯಾಕಸ್ ಮತ್ತು ಕೀಟೋಡ್ಯಾಕಸ್. (ಟಿ.ಎಸ್.ಟಿ.)

**ಟ್ರೈಲೊಬೈಟ:** ಪೇಲಿಯೊಜೋಯಿಕ್ ಯುಗದ ಕೇಂಬ್ರಿಯನ್, ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಕಲ್ಪಗಳ ಶಿಲೆಗಳಲ್ಲಿ ದೊರೆತಿರುವ ಪಳೆಯುಳಿಕೆಗಳು (ಫಾಸಿಲ್). ಅತ್ಯಂತ ಪ್ರಾಚೀನಕಾಲದ ಪಳೆಯುಳಿಕೆಗಳಿವು. ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಕಲ್ಪಗಳಲ್ಲಿ ಅತ್ಯಂತ ಹೇರಳ ಸಂಖ್ಯೆಯಲ್ಲಿದ್ದುವು. ಅನಂತರ ನಿರ್ವಂಶವಾಗುತ್ತ ಪರ್ಮಿಯನ್ ಕಲ್ಪದ ವೇಳೆಗೆ ಕೇವಲ 3 ಪ್ರಭೇದಗಳು ಮಾತ್ರ ಉಳಿದುವು. ಇವುಗಳನ್ನು ಸಂಧಿಪದಿಗಳ ವಂಶದಲ್ಲಿ ಸೇರಿಸಲಾಗಿದೆ.

ಟ್ರೈಲೊಬೈಟ್ ಪ್ರಾಣಿಗಳ ದೇಹದ ಉದ್ದಕ್ಕೂ ಎರಡು ಹಳ್ಳಗಳಿರುವುದರಿಂದ ದೇಹದಲ್ಲಿ ಮೂರು ತೆವರುಗಳನ್ನು (ಲೋಬ್ಸ್) ಕಾಣಬಹುದು. ಆದ್ದರಿಂದ, ಇವಕ್ಕೆ ಟ್ರೈಲೊಬೈಟ್ಸ್ ಎಂಬ ಹೆಸರು. ದೇಹದಲ್ಲಿ ತಲೆ, ಎದೆ ಮತ್ತು ಪಿಜಿಡಿಯಮ್ ಮೂರು ಭಾಗಗಳಿವೆ. ಈ ಭಾಗಗಳು ಉಂಗುರಗಳಂತಿರುವ ಖಂಡಗಳಿಂದ ರಚಿತವಾಗಿವೆ. ತಲೆಯಲ್ಲಿ ಐದು ಖಂಡಗಳಿವೆ. ಇವೆಲ್ಲವು ಪರಸ್ಪರ ಕೂಡಿಕೊಂಡು, ಗಟ್ಟಿಯಾದ ಪೊರೆಯಿಂದ ಆವೃತವಾಗಿವೆ. ಈ ಪೊರೆಗೆ ಶಿರಕವಚ ಎಂದು ಹೆಸರು. ಶಿರಕವಚದ ಮೇಲ್ಭಾಗದಲ್ಲಿ ಮೂರು ತೆವರುಗಳಿವೆ. ಮಧ್ಯದ ತೆವರು, ಪಕ್ಕ ತೆವರುಗಳಿಗಿಂತ ಹೆಚ್ಚು ಉಬ್ಬಿಕೊಂಡಿದೆ. ಮಧ್ಯದ ತೆವರನ್ನು ಗ್ಲಾಬೆಲ ಎಂದು, ಪಕ್ಕತೆವರುಗಳನ್ನು ಕೆನ್ನೆತೆವರುಗಳು (ಫ್ರೀ ಚೀಕ್ಸ್) ಎಂದು ಕರೆಯಲಾಗುತ್ತದೆ.. ಕೆನ್ನೆತೆವರುಗಳು ತ್ರಿಕೋನಾಕಾರದವು. ಇವುಗಳ ಹಿಮ್ಮೂಲೆ ದುಂಡಾಗಿದ್ದು, ಉದ್ದವಾದ ಮುಳ್ಳಿನಂತೆ ಚಾಚಿಕೊಂಡಿವೆ. ಈ ಮುಳ್ಳಿಗೆ ಗೀನಲ್‌ಸ್ಪೈನ್ ಎಂದು ಹೆಸರು. ಪ್ರತಿ ಕೆನ್ನೆತೆವರಿನ ಒಳಭಾಗ ಅಚಲಿತವಾಗಿದ್ದು, ಹೊರಭಾಗ ಚಲಿಸಬಲ್ಲದು. ಇವೆರಡು ಭಾಗಗಳು ಒಂದಕ್ಕೊಂದು ಹೊಲಿದಂತೆ ಸೇರಿಕೊಂಡಿವೆ. ಈ ಸೇರುವಿಕೆಯ ಮಧ್ಯಭಾಗದಲ್ಲಿ ಒಂದು ತಿರುವು ಇದ್ದು ಇದರಲ್ಲಿ ಚಲಿತ ತೆವರಿಗೆ ಹೊಂದಿಕೊಂಡಂತಿರುವ ಒಂದು ಸಂಯುಕ್ತ ನೇತ್ರ ಇದೆ.

ಎದೆಯಲ್ಲಿರುವ ಖಂಡಗಳು ಬಿಡಿಬಿಡಿಯಾಗಿದ್ದು ಒಂದರ ಮೇಲೊಂದು ಚಲಿಸುವಂತಿವೆ. ಕ್ಯಾಲಿಮೀನ್ ಜಾತಿಯ ಟ್ರೈಲೊಬೈಟ್‌ಗಳು ಅಪಾಯ ಒದಗಿದಾಗ ತಮ್ಮನ್ನು ರಕ್ಷಿಸಿಕೊಳ್ಳಲು ದೇಹವನ್ನು ಸುರುಳಿ ಸುತ್ತಿಕೊಳ್ಳುತ್ತಿದ್ದುವು. ಎದೆಯಲ್ಲಿ ಮೂರು ತೆವರುಗಳಿವೆ. ಮಧ್ಯತೆವರು ಪಕ್ಕದ ತೆವರುಗಳಿಗಿಂತ ಹೆಚ್ಚು ಉಬ್ಬಿದೆ. ಕೆಲವು ಜಾತಿಗಳಲ್ಲಿ ಪಕ್ಕದ ತೆವರುಗಳ ಉದ್ದಕ್ಕೂ ಒಂದು ಚಿಕ್ಕ ಹಳ್ಳ ಅಥವಾ ಚಿಕ್ಕ ತೆವರು ಇದೆ. ಮತ್ತೆ ಕೆಲವು ಪ್ರಭೇದಗಳಲ್ಲಿ ಎರಡು ತೆರನ ತೆವರುಗಳಿವೆ. ಕೆಲವು ಜೀವಿಗಳಲ್ಲಿ ತೆವರುಗಳು ಇಲ್ಲ. ಇವುಗಳ ದೇಹ ನುಣುಪಾಗಿ ಇದೆ. ಪಕ್ಕದ ತೆವರುಗಳ ಅಂಚು ದುಂಡಾಗಿರಬಹುದು ಅಥವ ಹಿಮ್ಮುಖವಾಗಿ ಚಾಚಿರುವ ಮುಳ್ಳುಗಳಿಂದ ಕೂಡಿರಬಹುದು.

ದೇಹದ ಪಿಜಿಡಿಯಮಿನ ಆಕಾರ ತ್ರಿಕೋನದಂತೆ ಅಥವಾ ಅರ್ಧವೃತ್ತದಂತಿದೆ. ಆದ್ಯ ಅವಸ್ಥೆಯಲ್ಲಿರುವ ಕೆಲವು ಜಾತಿಗಳಲ್ಲಿ ಪಿಜಿಡಿಯಮ್ ಭಾಗ ಇಲ್ಲ. ಕೆಲವು ಜಾತಿಗಳಲ್ಲಿ ಇದು ಚಿಕ್ಕದಾಗಿದೆ. ಹೆಚ್ಚು ವಿಕಾಸ ಹೊಂದಿದ ಜಾತಿಗಳಲ್ಲಿ ತಲೆಯಷ್ಟೇ ದೊಡ್ಡದಾಗಿದೆ. ಪಿಜಿಡಿಯಮಿನ ಹಿಂತುದಿ ದುಂಡಾಗಿದ್ದು, ಮುಳ್ಳುಗಳಾಗಿ ಚಾಚಿದೆ ಅಥವಾ ಒಂದೇ ಒಂದು ದೊಡ್ಡ ಮುಳ್ಳಿನಂತೆ ಚಾಚಿಕೊಂಡಿದೆ.

ತಲೆಯ ಕೆಳಭಾಗದಲ್ಲಿ ಬಾಯಿ ಇದೆ. ಬಾಯಿ ಕೆಳಗೆ ಗುರಾಣಿ ಆಕಾರದ ಫಲಕ ಇದೆ. ಇದಕ್ಕೆ ಹೈಪೊಸ್ಟೋಮ ಎಂದು ಹೆಸರು. ತಲೆಯ ಕೆಳಭಾಗದಲ್ಲಿ ಐದು ಜೊತೆ ಉಪಾಂಗಗಳಿವೆ. ಮೊದಲನೆಯ ಜೊತೆ ಉಪಾಂಗಗಳು ದಾರದಂತೆ ಉದ್ದವಾಗಿದ್ದು ಅನೇಕ ಕೀಲುಗಳಿಂದ ಕೂಡಿವೆ. ಇವು ಸ್ಪರ್ಶಾಂಗಗಳು. ಉಳಿದ ನಾಲ್ಕು ಜೊತೆ ಉಪಾಂಗಗಳು, ಎದೆ ಮತ್ತು ಪಿಜಿಡಿಯಮ್ ಭಾಗಗಳಲ್ಲಿವೆ. ಇವು ಆಹಾರವನ್ನು ಕತ್ತರಿಸಲು ಮತ್ತು ಜಗಿಯಲು ಸಹಾಯಕವಾಗಿವೆ.

ಎದೆಯ ಪ್ರತಿಖಂಡದಲ್ಲಿ ಒಂದು ಜೊತೆ ಉಪಾಂಗಗಳಿವೆ. ತಲೆಯ ಸಮೀಪದ ಖಂಡಗಳ ಉಪಾಂಗಗಳು ಬಹು ಉದ್ದವಾಗಿವೆ. ದೇಹದ ಹಿಂಭಾಗಕ್ಕೆ ಹೋದಂತೆ ಕ್ರಮೇಣ ಚಿಕ್ಕದಾಗುತ್ತವೆ. ಪ್ರತಿಯೊಂದು ಉಪಾಂಗದಲ್ಲಿ ತಳ ಕೀಲು, ಒಳಕೀಲು ಮತ್ತು ಹೊರಕೀಲುಗಳಿವೆ. ಒಳಕೀಲು, ಆರು ಚಿಕ್ಕಕೀಲುಗಳಿಂದ ರಚಿತವಾಗಿದೆ. ಇದು ಈಜಲು ಸಹಕಾರಿಯಾಗಿತ್ತೆಂದು ಹೇಳಲಾಗಿದೆ. ಹೊರಕೀಲಿನ ಹಿಂಭಾಗದಲ್ಲಿ ಬಿರುಗೂದಲುಗಳಿವೆ. ಹೊರಕೀಲುಗಳು ತೆವಲಲು ಸಹಕಾರಿ. ತಳಕೀಲುಗಳು ಒಂದರೊಳಗೊಂದು ಸೇರಿಕೊಂಡು ಆಲಿಕೆಗಳಂತಿವೆ. ಇಂಥ ರಚನೆಯನ್ನು ತೋರುವ ಅಂಗಕ್ಕೆ ಬೈರೆಮಸ್ ಉಪಾಂಗ ಎಂದು ಹೆಸರು. ಪಿಜಿಡಿಯಮಿನಲ್ಲಿ ಕೊನೆಯ ಖಂಡವನ್ನು ಬಿಟ್ಟು, ಉಳಿದ ಖಂಡಗಳಲ್ಲಿ ತಲಾ ಒಂದು ಜೊತೆ ಉಪಾಂಗಗಳಿವೆ. ಇವು ಎದೆ ಭಾಗದ ಉಪಾಂಗಗಳನ್ನೇ ಹೋಲುತ್ತವೆ. ಆದರೆ, ಇವು ಎಲೆಯಂತೆ ಅಗಲವಾಗಿವೆ. ದೇಹದ ಕೊನೆಯ ಖಂಡದಲ್ಲಿ ಗುದದ್ವಾರವಿದೆ.

ಗ್ಲಾಬೆಲದ ಆಕಾರ ಮತ್ತು ಅದರ ವಿಂಗಡಣೆ, ಒಳಕೆನ್ನೆ ಮತ್ತು ಹೊರಕೆನ್ನೆಗಳ ಪ್ರಮಾಣ ಮತ್ತು ಸೇರಿಕೆಯ ಸ್ಥಾನ, ಸಂಯುಕ್ತ ನೇತ್ರಗಳ ರೂಪ, ಎದೆಯ ಭಾಗಗಳ ಸಂಖ್ಯೆ ಮತ್ತು ಪಿಜಿಡಿಯಮಿನ ಗಾತ್ರ ಅಧ್ಯಯನದಿಂದ ವಿವಿಧ ರೀತಿಯ ಟ್ರೈಲೊಬೈಟ್‌ಗಳ ವಿಕಾಸವನ್ನು ತಜ್ಞರು ನಿರ್ಧರಿಸಿದ್ದಾರೆ.

ಟ್ರೈಲೊಬೈಟ್‌ಗಳ ಸ್ಪರ್ಶಾಂಗ ಮತ್ತು ಇತರ ಉಪಾಂಗಗಳ ರಚನಾಕ್ರಮವು ಕ್ರಸ್ಟೇಸಿಯ ಗುಂಪಿನೊಡನೆ ಹೊಂದಿರುವ ಸಂಬಂಧವನ್ನು, ಎದೆ ಮತ್ತು ಪಿಜಿಡಿಯಮ್‌ಗಳ ಖಂಡಗಳ ಸಂಖ್ಯೆ ನಿಗದಿಯಾಗಿಲ್ಲದಿರುವುದು ಬ್ರಾಕಿಯಾಪೊಡಗಳಿಗೂ, ಟ್ರೈಲೊಬೈಟ್‌ಗಳಿಗೂ ಇರಬಹುದಾದ ಬಾಂಧವ್ಯವನ್ನೂ ಸೂಚಿಸುತ್ತವೆ. ಆದರೆ ಈ ಪ್ರಾಣಿಗಳ ದೇಹ ಮೂರು ತೆವರುಗಳಾಗಿ ವಿಂಗಡಣೆಯಾಗಿದ್ದು, ಕೆನ್ನೆ ಭಾಗಗಳ ಸೇರಿಕೆ ಮತ್ತು ಪಿಜಿಡಿಯಮ್ ಭಾಗಗಳು ಅಚಲವಾಗಿರುವಿಕೆ ವಿಭಿನ್ನವಾಗಿದೆ. ಇವು ಟ್ರೈಲೊಬೈಟ್‌ಗಳು, ಆರ್ತ್ರಾಪೊಡ ವಂಶದಲ್ಲಿ, ಆದ್ಯ ಅವಸ್ಥೆಯಲ್ಲಿ ಇರುವ ಉಪವರ್ಗಕ್ಕೆ ಸೇರಿದ ಪ್ರಾಣಿಗಳು ಎಂದು ಸೂಚಿಸುತ್ತವೆ.

ವಿವಿಧ ಪ್ರಭೇದಗಳ ಬೆಳವಣಿಗೆಯ ಕ್ರಮವನ್ನು ಅಧ್ಯಯನ ಮಾಡಲಾಗಿದೆ. ಡಿಂಬಗಳಲ್ಲಿ ತಲೆ ಮತ್ತು ಪಿಜಿಡಿಯಮಗಳ ಸೂಚನೆ ಮಾತ್ರ ಕಂಡುಬರುತ್ತದೆ. ತುಂಬ ಸೂಕ್ಷ್ಮಗಾತ್ರದ ಇವುಗಳಲ್ಲಿ ದೇಹದ ಹಿಂಭಾಗದಿಂದ ಮುಂಭಾಗದೆಡೆ ಮುಂದುವರಿದು ಖಂಡಗಳು ಮೂಡುತ್ತ ಬರುವುವು.

ಟ್ರೈಲೊಬೈಟುಗಳೆಲ್ಲವು ಸಾಗರವಾಸಿಗಳಾಗಿದ್ದುವು. ಇವುಗಳಲ್ಲಿ ಕೆಲವು ಸಮುದ್ರಗಳ ಮರಳು ಅಥವಾ ಕೆಸರುಮಯ ತಳದ ಮೇಲೆ ಜೀವಿಸುತ್ತಿದ್ದುವು. ಇನ್ನು ಕೆಲವು ಹವಳದಿಬ್ಬಗಳಲ್ಲಿ, ಆಳಸಮುದ್ರಗಳಲ್ಲಿ ಜೀವಿಸುತ್ತಿದ್ದುವೆನ್ನಲಾಗಿದೆ. ಪ್ರಪಂಚದಾದ್ಯಂತ ಇವು ವ್ಯಾಪಿಸಿದ್ದುವು. ಕೆಲವು ಕಡೆ ಇವು ಎಷ್ಟು ಹೇರಳ ಸಂಖ್ಯೆಯಲ್ಲಿದ್ದುವೆಂದರೆ ಅಂಥಲ್ಲಿನ ಶಿಲಾಸ್ತರಗಳೆಲ್ಲ ಇವುಗಳ ಅವಶೇಷಗಳಿಂದಲೇ ತುಂಬಿಹೋಗಿವೆ. ಇವುಗಳಲ್ಲಿ ಕೆಲವು 6 ಮಿಮೀ ನಷ್ಟಿದ್ದರೆ ಇನ್ನು ಕೆಲವು 75 ಸೆಂಮೀ ಉದ್ದವಿದ್ದವು. ಬಹುತೇಕ ಪ್ರಭೇದಗಳ ಉದ್ದ 3–8 ಸೆಂಮೀ ನಷ್ಟಿತ್ತು. (ಡಿ.ಆರ್.; ಜಿ.ಎಸ್.ಆರ್.)

**ಟ್ರೈಸೊಮಿ:** ಜೀವಕೋಶಗಳಲ್ಲಿ ಕ್ರೊಮೋಸೋಮುಗಳು ಜೋಡಿಗಳಾಗಿ ಇರುವುದರ ಬದಲು ತ್ರಿವಳಿಯಾಗಿರುವ ಸಂದರ್ಭ. ಸಸ್ಯ ಪ್ರಾಣಿಗಳಲ್ಲಿ ಇಂಥ ಸನ್ನಿವೇಶಗಳು ಹೆಚ್ಚಾಗಿರಬಹುದಾದರೂ ಮಾನವರಲ್ಲಿ ಮಾತ್ರ ಅಪರೂಪ. ಹೀಗಾದಾಗ ಮಾನವಕೋಶಗಳಲ್ಲಿ ೨೩ ಜೋಡಿ ಮತ್ತು ಒಂದು ತ್ರಿವಳಿ ಒಟ್ಟು ೪೭ ಕ್ರೊಮೋಸೋಮುಗಳಿರುತ್ತವೆ. ಊತಕ ಕೃಷಿ(ಟಿಷ್ಯೂಕಲ್ಚರ್), ಕೋಲ್ಚಿಸೀನ್ ಮತ್ತು ಉಪ್ಪು ನೀರಿನ ಪ್ರಯೋಗ, ಆಟೋರೇಡಿಯೋಗ್ರಫಿ ಮುಂತಾದ ನವೀನ ತಂತ್ರಗಳನ್ನು ಅನುಸರಿಸಿ ಕೋಶಗಳನ್ನು ಪ್ರಬಲಸೂಕ್ಷ್ಮದರ್ಶಕದಿಂದ ಪರೀಕ್ಷಿಸಿದಾಗ ಅವುಗಳಲ್ಲಿರುವ ಕ್ರೊಮೋಸೋಮುಗಳನ್ನು ವೈಯಕ್ತಿಕವಾಗಿ ಗುರುತಿಸಬಹುದು.

ತ್ರಿವಳಿಸ್ಥಿತಿ ಇತ್ಯಾದಿಯಂತೆ ದೇಹದಲ್ಲಿ ಹೆಚ್ಚುವರಿ ಕ್ರೊಮೋಸೋಮ್ ವಸ್ತು ಇರುವುದು ದೈಹಿಕ ಹಾಗೂ ಮಾನಸಿಕ ನ್ಯೂನತೆಗಳನ್ನು ಉಂಟುಮಾಡುವಂಥದ್ದು. ದೊಡ್ಡ ಕ್ರೊಮೋಸೋಮ್ ತ್ರಿವಳಿಯಾಗಿದ್ದರೆ ಬದುಕೇ ಅಸಾಧ್ಯ. ಮಾನವರಲ್ಲಿ ೨೩ ಕ್ರೊಮೋಸೋಮ್ ಜೋಡಿಗಳ ಪೈಕಿ ಯಾವುದೇ ಜೋಡಿ ತ್ರಿವಳಿಸ್ಥಿತಿಯನ್ನು ತೋರಬಹುದಾದ ಸಾಧ್ಯತೆ ಇದ್ದರೂ ಸಣ್ಣ ಕ್ರೊಮೋಸೋಮ್‌ನ ತ್ರಿವಳಿಸ್ಥಿತಿ ಮಾತ್ರ ವ್ಯಕ್ತವಾಗುವುದು ಈ ಕಾರಣದಿಂದ. ಅತ್ಯಂತ ಸಣ್ಣದಾದ ಗುಂಪಿನ ಕ್ರೊಮೋಸೋಮ್ ತ್ರಿವಳಿಸ್ಥಿತಿ (ಇದಕ್ಕೆ ಟ್ರೈಸೊಮಿ–೨೧ ಎಂದು ಹೆಸರು) ಹೆಚ್ಚು ಮಾರಕವಾಗಿರದೆ ಇದರಲ್ಲಿ ವ್ಯಕ್ತಿಗಳು ಬಲುಕಾಲ ಬದುಕಿರಬಲ್ಲರು. ಕೆಲವರು ಸಂತಾನವನ್ನೂ ಪಡೆಯಬಲ್ಲವರಾಗಿರುತ್ತಾರೆ. ಇದನ್ನು ಬಿಟ್ಟರೆ E ಗುಂಪಿನ ಟ್ರೈಸೊಮಿ–೧೮ ಮತ್ತು D ಗುಂಪಿನ ಟ್ರೈಸೊಮಿ–೧೩ ಇವು ಇತರ ಸಾಮಾನ್ಯ ತ್ರಿವಳಿಸ್ಥಿತಿಗಳು. ೧ರಿಂದ ೨೨ನೆಯ ಕ್ರೊಮೋಸೋಮುಗಳು ದೈಹಿಕ ಲಕ್ಷಣಗಳಿಗೆ ಕಾರಣವಾಗಿರುವುದರಿಂದ ಇವನ್ನು ದೈಹಿಕ ಕ್ರೊಮೋಸೋಮುಗಳು ಎನ್ನುತ್ತಾರೆ. ೨೩ನೆಯ ಜೋಡಿ ಲಿಂಗ ವ್ಯತ್ಯಾಸಕ್ಕೆ ಮುಖ್ಯವಾಗಿ ಕಾರಣ. ಸ್ತ್ರೀಯರಲ್ಲಿ ಈ ಕ್ರೊಮೋಸೋಮ್ ಕಟ್ಟು ೨ X ಕ್ರೊಮೋಸೋಮುಗಳಿಂದಲೂ ಪುರುಷರಲ್ಲಿ X ಮತ್ತು Y ಕ್ರೊಮೋಸೋಮುಗಳಿಂದಲೂ ಆಗಿ ಲಿಂಗ ವ್ಯತ್ಯಾಸಗಳನ್ನು ಉಂಟುಮಾಡಿವೆ. ಈ ಜೋಡಿಯಲ್ಲೂ ತ್ರಿವಳಿಸ್ಥಿತಿ ಕಂಡುಬರಬಹುದು. ಅಂದರೆ ೨೨ ಜೊತೆ ಆಟೋಸೋಮುಗಳೊಡನೆ XXX, XXY, XYY ತ್ರಿವಳಿಗಳಿರಬಹುದು (YYY ತ್ರಿವಳಿಸ್ಥಿತಿ ಸಾಧ್ಯವೇ ಇಲ್ಲ). ಲಿಂಗ ಕ್ರೊಮೋಸೋಮುಗಳ ತ್ರಿವಳಿಸ್ಥಿತಿಯಲ್ಲಿ ನ್ಯಾಯವಾಗಿಯೇ ಲೈಂಗಿಕ ವ್ಯತ್ಯಾಸಗಳನ್ನೂ ನಿರೀಕ್ಷಿಸಬಹುದು. ಅಲ್ಲದೆ ಆ ಸ್ಥಿತಿ ನಿರ್ದಿಷ್ಟ ಲಿಂಗದ ವ್ಯಕ್ತಿಗೆ ಮೀಸಲಾಗಿರುತ್ತದೆ. ಆದರೆ ಆಟೋಸೋಮುಗಳ ತ್ರಿವಳಿಸ್ಥಿತಿ ಗಂಡು ಹೆಣ್ಣುಗಳಲ್ಲಿ ಹೆಚ್ಚುಕಡಿಮೆ ಸಮಸಂಖ್ಯೆಯಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಆಟೋಸೋಮುಗಳ ತ್ರಿವಳಿಸ್ಥಿತಿಗೆ ಮಾತ್ರ ಟ್ರೈಸೊಮಿ ಎಂದು ಕರೆಯುವುದು ರೂಢಿ.

ಎಲ್ಲ ಟ್ರೈಸೊಮಿಗಳಲ್ಲೂ ಮಾನಸಿಕ ಬೆಳೆ'ವಣಿಗೆ ಅಲ್ಪವಾಗಿ ಅಥವಾ ಹೆಚ್ಚಾಗಿ ಕುಂಠಿತವಾಗಿರುವುದಲ್ಲದೆ ಆಯಾ ಕ್ರೊಮೋಸೋಮುಗಳ ಹೆಚ್ಚುವರಿಯಿಂದ ನಿರ್ದಿಷ್ಟ ದೈಹಿಕ ನ್ಯೂನತೆಗಳು ಕಂಡುಬರುತ್ತವೆ. ಆದ್ದರಿಂದ ಇಂಥದೇ ಕ್ರೊಮೋಸೋಮ್ ತ್ರಿವಳಿ ಆಗಿದೆ ಎಂದು ತಿಳಿದು ನವೀನ ಕ್ರೊಮೋಸೋಮ್ ಪರೀಕ್ಷಾವಿಧಾನದಿಂದ ಇದನ್ನು ಪತ್ತೆಹಚ್ಚಬಹುದು. ಕ್ರೊಮೋಸೋಮಿನ ತ್ರಿವಳಿಸ್ಥಿತಿ ಉಂಟಾಗುವುದು ಮುಖ್ಯವಾಗಿ ಅಂಡಾಣು ಪುರುಷಾಣುಗಳು ಉತ್ಪತ್ತಿಯಾಗುವಾಗ ಇಲ್ಲವೇ ಭ್ರೂಣಾಣುವಿನ ಮೊದಲನೆಯ ಅಥವಾ ಎರಡನೆಯ ವಿಭಜನೆಯ ಕಾಲದಲ್ಲಿ. ಆದ್ದರಿಂದ ಟ್ರೈಸೊಮಿಯ ಪರಿಣಾಮಗಳು ಆಜನ್ಮವಾಗಿ ಕಂಡುಬರುತ್ತವೆ. ಆದರೆ ಆಜನ್ಮ ನ್ಯೂನತೆಗಳೆಲ್ಲವೂ ಟ್ರೈಸೊಮಿಯಿಂದಾದವು ಎಂದು ಹೇಳಲಾಗದು. ಅಂಡಾಣು/ಪುರುಷಾಣುಗಳ ಉತ್ಪಾದನೆಯಲ್ಲಿ ಅವುಗಳ ಜನಕ ಕೋಶಗಳಲ್ಲಿನ ೨೩ ಕ್ರೊಮೋಸೋಮುಗಳು ಮಾತ್ರ ಸಾಗುತ್ತವೆ. ನಿಷೇಚನೆ ಆದಾಗ ಭ್ರೂಣದಲ್ಲಿ ಪುನಃ ೨೩ ಜೊತೆ ಕ್ರೊಮೋಸೋಮುಗಳು ಮಾತ್ರ ಇರುವಂತೆ ಆಗಿರುವ ನೈಸರ್ಗಿಕ ಏರ್ಪಾಡು ಇದು. ಯಾವುದೇ ಜೋಡಿ ಒಡೆಯದೆ ಒಟ್ಟಾಗಿಯೇ ಸಾಗಿದರೆ ಅಂಥ ಅಂಡಾಣು/ಪುರುಷಾಣುಗಳ ಪೈಕಿ ಕೆಲವಲ್ಲಿ ೨೪ ಕ್ರೊಮೋಸೋಮುಗಳಿರುವುದೂ ಕೆಲವಲ್ಲಿ ೨೨ ಕ್ರೊಮೋಸೋಮುಗಳಿರುವುದೂ ವ್ಯಕ್ತ. ನಿಷೇಚನೆಯ ಕಾಲದಲ್ಲಿ ೨೪ ಕ್ರೊಮೋಸೋಮುಗಳಿರುವ ಅಂಡಾಣುವೋ ಪುರುಷಾಣುವೋ ಪಾಲುಗೊಂಡಾಗ ಫಲಿಸುವ ಭ್ರೂಣದಲ್ಲಿ ಒಟ್ಟು ೪೭ ಕ್ರೊಮೋಸೋಮುಗಳಿರುವುದೂ ಅವುಗಳಲ್ಲಿ ೨೨ ಜೋಡಿಯಾಗಿಯೂ ಒಂದು ತ್ರಿವಳಿಯಾಗಿಯೂ ಇರಬಹುದು. ಕೆಲವೊಮ್ಮೆ ಇದರ ಮುಂದಿನ ಹಂತದಲ್ಲಿಯೂ ತ್ರಿವಳಿಯುಂಟಾಗ ಬಹುದು. ನಿಷೇಚನೆಯಾದ ಈ ಕೋಶದ ಅದರ ೪೬ ಕ್ರೊಮೋಸೋಮುಗಳು ಪ್ರತಿಯೊಂದೂ ಸೀಳಿ ಎರಡಾಗುತ್ತವೆ. ಅನಂತರ ಪ್ರತಿ ಜೊತೆಯೂ ಒಡೆದು ಬೇರ್ಪಟ್ಟು ಭ್ರೂಣಾಣುವಿನ ಎರಡು ಸಂತತಿಕೋಶಗಳಿಗೂ ಒಟ್ಟು ೪೬ ಕ್ರೊಮೋಸೋಮುಗಳು ಸಾಗುತ್ತವೆ.

ಇದು ಮಾಮೂಲಾಗಿ ಕಂಡುಬರುವ ವಿಧಾನ. ಹೀಗಾಗುವ ಬದಲು ಯಾವುದೋ ಕ್ರೊಮೋಸೋಮು ಎರಡಾಗಿ ಸೀಳಿದ ಬಳಿಕ ಬೇರ್ಪಡದೆ ಎರಡೂ ಸೀಳುಗಳೂ ಒಂದೇ ಕೋಶದೆಡೆ ಸಾಗುವುದು ಉಂಟು. ಅಂದರೆ ೨ನೆಯ ಸಂತತಿಯ ಇಂಥ ಕೋಶದಲ್ಲಿ ೪೭ ಕ್ರೊಮೋಸೋಮುಗಳು ಇದ್ದು ಇದರಿಂದ ಉತ್ಪತ್ತಿಯಾಗುವ ಕೋಶಗಳಲ್ಲೆಲ್ಲ ೪೭ ಕ್ರೊಮೋಸೋಮುಗಳು ಕಂಡು ಬರುತ್ತವೆ. ಹೀಗಾಗಿ ಮುಂದೆ ಜನಿಸುವ ವ್ಯಕ್ತಿಯ ಕೋಶಗಳ ಪೈಕಿ ಅರ್ಧಕೋಶಗಳಲ್ಲಿ ೪೭ ಕ್ರೊಮೋಸೋಮುಗಳೂ ಮಿಕ್ಕ ಅರ್ಧದಲ್ಲಿ ೪೫–೪೬ ಕ್ರೊಮೋಸೋಮುಗಳೋ ಇರುತ್ತವೆ. ಇಂಥ ಮಿಶ್ರಸ್ಥಿತಿಗೆ ಮೊಸೈಸಿಸಮ್ ಎಂದು ಹೆಸರು. ಸಹಜವಾಗಿಯೇ ಈ ಸ್ಥಿತಿಯಲ್ಲಿ ಎಲ್ಲ ಕೋಶಗಳಲ್ಲಿಯೂ ೪೭ ಕ್ರೊಮೋಸೋಮುಗಳಿರುವ ಸ್ಥಿತಿಗಿಂತ ಅಲ್ಪವಾದ ಏರುಪೇರುಗಳು ಉಂಟಾಗುತ್ತವೆ. ಭ್ರೂಣಾಣುವಿನ ಎರಡನೆಯ ವಿಭಜನೆಯಲ್ಲಿ ಮೇಲೆ ಹೇಳಿದಂತೆ ಕ್ರೊಮೋಸೋಮಿನ ಸಾಗಣೆಯಲ್ಲಿ ವ್ಯತ್ಯಾಸವಾಗಿ ಮೊಸೈಸಿಸಮ್ ಉಂಟಾದರೆ ಅದರ ಪರಿಣಾಮ ಇನ್ನೂ ಅಲ್ಪ ಎನ್ನುವುದನ್ನು ಮನಗಾಣಬಹುದು. ಒಂದು ಕೋಶ ಮುಂದಿನ ಪೀಳಿಗೆಯ ೨ ಕೋಶಗಳಾಗುವ ಪ್ರಮೇಯದಲ್ಲಿ ಕ್ರೊಮೋಸೋಮುಗಳು ಮಾಮೂಲಿನಂತೆ ಬೇರ್ಪಟ್ಟು ೨ ಮರಿಕೋಶಗಳಿಗೂ ಸಮಸಂಖ್ಯೆ ಅಥವಾ ಪ್ರಮಾಣದಲ್ಲಿ ಏಕೆ ಹಂಚಿಕೆ ಆಗುವುದಿಲ್ಲ ಎನ್ನುವುದಕ್ಕೆ ಕಾರಣ ಸರಿಯಾಗಿ ತಿಳಿಯದು. ಸಂತಾನ ಸೌಲಭ್ಯಕಾಲದ ಕೊನೆಯ ವರ್ಷಗಳಲ್ಲಿ, ಅಂದರೆ ವಯಸ್ಕ ದಂಪತಿಗಳಿಗೆ, ತತ್ರಾಪಿ ವಯಸ್ಕ ತಾಯಿಗೆ, ಟ್ರೈಸೊಮಿಯಿಂದ ಬಾಧಿತವಾದ ಮಗು ಹುಟ್ಟುವುದು ಬಲು ಸಂದರ್ಭಗಳಲ್ಲಿ ಕಂಡುಬಂದಿದೆ. ಬಹುಶಃ ವಯಸ್ಸಾದಂತೆ ಕೋಶಸಂಖ್ಯಾವೃದ್ಧಿ ಕ್ರಿಯೆಯಲ್ಲಿ ಕ್ರೊಮೋಸೋಮುಗಳು ಅಗತ್ಯ ಪ್ರಾಬಲ್ಯದ ಆಕರ್ಷಣೆಯಿಂದ ಎದುರು ಬದಿರು ದಿಶೆಗಳಿಗೆ ಸಾಗಿ ಸಹಜರೀತಿಯಲ್ಲಿ ಹಂಚಿಕೆ ಆಗಲಾರವು ಎಂದು ತೋರುತ್ತದೆ.

ಈ ಕೆಳಗೆ ಖಚಿತವಾದ ಕೆಲವು ಟ್ರೈಸೊಮಿ ಸ್ಥಿತಿಗಳನ್ನು ವಿವರಿಸಿದೆ :

ಟ್ರೈಸೊಮಿ–೨೧: ಇದು G ಗುಂಪಿಗೆ ಸೇರಿದ ೨೧ನೆಯ ಅಥವಾ ೨೨ನೆಯ ಕ್ರೊಮೋಸೋಮಿನ ತ್ರಿವಳಿಸ್ಥಿತಿಯಾದರೂ ಬಲು ವೇಳೆ ಪರೀಕ್ಷಾವಿಧಾನಗಳಿಂದ ಪತ್ತೆಮಾಡಲು ಸಾಧ್ಯವಿಲ್ಲದ್ದರಿಂದ ಈ ಸ್ಥಿತಿಗೆ ಒಟ್ಟಾರೆ ಟ್ರೈಸೋಮಿ–೨೧ ಎಂದು ಕರೆಯುವುದು ವಾಡಿಕೆ. ಲಾಂಗ್ಡನ್ ಡೌನ್ ಎಂಬಾತ ಈ ರೋಗದ ಲಕ್ಷಣಗಳನ್ನು ೧೮೬೬ರಲ್ಲಿ ಮೊದಲಿಗೆ ವಿವರಿಸಿ ಇದಕ್ಕೆ ಮಂಗೋಲಿಸಮ್ ಎಂದು ಕರೆದ ; ಈ ರೋಗಿಗಳಲ್ಲಿ ಕಣ್ಣುಗಳು ಓರೆಯಾಗಿರುವುವಲ್ಲದೆ, ಚಪ್ಪಟೆ ಮೂಗು, ಮುಖಗಳು, ಕೆಳಮೊಗವಾಗಿರುವ ಬಾಯಿಮೂಲೆಗಳು, ಸಣ್ಣತಲೆ, ಸಣ್ಣದವಡೆಗಳು, ಸಣ್ಣವಾದರೂ ಅಗಲವಾಗಿರುವ ಹಸ್ತಗಳು, ಕುಳ್ಳಾಗಿರುವಿಕೆ ಇತ್ಯಾದಿ ಲಕ್ಷಣಗಳಿರುವುವು. ಇವರು ಮಂಗೋಲಿಯನ್ನರನ್ನು ಹೋಲುವುದರಿಂದ ಈ ಸ್ಥಿತಿಗೆ ಆತ ಈ ಹೆಸರಿಟ್ಟ. ಇದು ತಪ್ಪು ಮಾತ್ರವೇ ಅಲ್ಲದೆ ಆ ಜನತೆಗೆ ಅಪಮಾನಕಾರಿಯೂ ಆಗಿರುವುದರಿಂದ ಈಚೆಗೆ ಈ ಸ್ಥಿತಿಗೆ ಮಂಗೊಲಿಸಮ್ ಎನ್ನುವುದರ ಬದಲು ಡೌನನ ಸಿನ್‌ಡ್ರೋಮ್(ಲಕ್ಷಣ) ಎಂದು ಕರೆಯುವುದೇ ವಾಡಿಕೆಯಾಗಿದೆ. ಲೆಜ್ಯೂನ್ ಎಂಬಾತ ಇಂಥ ರೋಗಿಗಳ ಕೋಶಗಳಲ್ಲಿ ೪೭ ಕ್ರೊಮೋಸೋಮುಗಳು ಇರುವುದನ್ನು ಪತ್ತೆ ಮಾಡಿದ (೧೯೫೯). ಅನಂತರ ಹೆಚ್ಚುವರಿ ಕ್ರೊಮೋಸೋಮು G ಗುಂಪಿಗೆ ಸೇರಿದ ಕ್ರೊಮೋಸೋಮಿನ ತ್ರಿವಳಿಸ್ಥಿತಿಯಿಂದಾದುದು ತಿಳಿಯಿತು. ಈ ಸ್ಥಿತಿಯಲ್ಲಿ ದೈಹಿಕ, ಮಾನಸಿಕ ಬೆಳೆವಣಿಗೆಗಳು ತಡವಾಗಿ ವ್ಯಕ್ತಿ ಹೆಚ್ಚು ಕಡಿಮೆ ಪೆದ್ದಾಗಿರುವುದು ಸಾರ್ವತ್ರಿಕ. ಗುಂಡುತಲೆ, ತಲೆಹಿಂಭಾಗ ಚಪ್ಪಟೆ ಆಗಿರುವುದು. ಕಣ್ಣಿನ ಒಳಮೂಲೆಯಲ್ಲಿ ಪರೆ, ಮೂಗಿನಿಂದ ಯಾವಾಗಲೂ ಸಿಂಬಳ ಸುರಿಯುತ್ತಿರುವುದು, ಬಾಯಲ್ಲಿ ಉಸಿರಾಡುವಿಕೆ, ಹೊರಚಾಚಿಕೊಂಡಿರುವ ಮತ್ತು ಸಾಲು ಸಾಲಾಗಿ ಆಳದ ಗೆರೆಗಳಿರುವ ನಾಲಿಗೆ, ತಡವಾಗಿ ಹುಟ್ಟಿದ ಸಣ್ಣ, ಹಾಗೂ ಸಾಲು ತಪ್ಪಿ ಅಡ್ಡಾದಿಡ್ಡಿ ಇರುವ ಹಲ್ಲುಗಳು, ಚಿಕ್ಕವಾದರೂ ಅಗಲವಾಗಿರುವ ಹಾಗೂ ಮಾಮೂಲು ಸ್ಥಳಕ್ಕಿಂತ ಕೆಳಗೇ ಇರುವ ಕಿವಿಗಳು, ಸಣ್ಣ ಗೂಟಗಳಂತಿರುವ ಕೈಬೆರಳುಗಳು, ಕಾಲಿನಲ್ಲಿ ಹೆಬ್ಬೆರಳು ಎರಡನೆಯ ಬೆರಳುಗಳ ನಡುವೆ ಹೆಚ್ಚು ಅಂತರ, ಬಾಹ್ಯ ಜನನಾಂಗಗಳು ಬಾಲ್ಯಾವಸ್ಥೆಯಲ್ಲಿದ್ದಂತೆ

ಇರುವಿಕೆ, ಆದರೂ ಅನೇಕರಲ್ಲಿ ಸಂತಾನಪಡೆಯಬಲ್ಲ ಸಾಮರ್ಥ್ಯ–ಇವು ಕಣ್ಣಿಗೆ ಕಾಣುವ ಲಕ್ಷಣಗಳು. ಕೈಬೆರಳುಗಳಲ್ಲಿ ಶಂಖಚಕ್ರದ ಆಕಾರಗಳಲ್ಲಿ ಗೆರೆಗಳಿರುವ ಬದಲು ಬರೀ ಕಮಾನಿನಂತಿರುವ ಗೆರೆಗಳಿರುವುದು ಒಂದು ವಿಶೇಷ, ಈ ಎಲ್ಲ ಅಥವಾ ಕೆಲವು ಲಕ್ಷಣಗಳ ಜೊತೆಗೆ ಆಂತರಿಕವಾಗಿಯೂ ಅನೇಕ ಏರುಪೇರುಗಳಿರುವುವು. ಗುಂಡಿಗೆಯ ಹೃತ್ಕರ್ಣ ಹೃತ್ಕುಕ್ಷಿಗಳ ನಡುವಿನ, ಎಡಬಲ ಹೃತ್ಕರ್ಣಗಳ ನಡುವಿನ ತಡಿಕೆಗಳು ಲೋಪವಾಗಿರುವುದು, ಮುಂಗರುಳು (ಡುಯೋಡೀನಮ್) ಲೋಪವಾಗಿರುವುದು, ದೊಡ್ಡ ಕರುಳಿನ ಸಂಕೋಚನಸಾಮರ್ಥ್ಯ ನಾಶವಾಗಿ ದೀರ್ಘಕಾಲಾವಧಿ ಮಲಬದ್ಧತೆ ಉಂಟಾಗುವುದು ಇತ್ಯಾದಿ. ಹುಟ್ಟಿದ ಮಗುವಿಗೆ ಮೊಲೆಯುಣ್ಣಲು ಚೀಪುವ ಸಾಮರ್ಥ್ಯವಿಲ್ಲದಿರುವಿಕೆ, ಚಪ್ಪಟೆಮುಖ, ಓರೆಕಣ್ಣು, ಕಣ್ಣಿಗೆ ಕರಿಗುಡ್ಡೆಯಲ್ಲಿ ಬಿಳಿಚುಕ್ಕೆಗಳು, ಬಾಯಿಂದ ಹೊರ ಚಾಚಿಕೊಂಡಿರುವ ನಾಲಿಗೆ, ವಿಕಾರದ ಕಿವಿ, ಒಳಬಾಗಿರುವ ಕೈಯ ಕಿರಿಬೆರಳು, ಕುತ್ತಿಗೆಯ ಹಿಂದೆ ಹೆಚ್ಚುವರಿ ಚರ್ಮ ಇವುಗಳಿಂದ ಮಗುವಿನಲ್ಲಿ ಟ್ರೈಸೊಮಿ–೨೧ ಇರಬಹುದು ಎಂದು ಶಂಕಿಸಿ ಕ್ರೊಮೋಸೋಮು ಪರೀಕ್ಷಾ ವಿಧಾನದಿಂದ ನಿಖರವಾಗಿ ಪತ್ತೆಮಾಡಬೇಕಾಗುತ್ತದೆ. ಏಕೆಂದರೆ ಥೈರಾಯಿಡ್ ಗ್ರಂಥಿಯ ಆಜನ್ಮಕ್ರಿಯಾ ವೈಫಲ್ಯದಿಂದಲೂ ಇಂಥ ಅನೇಕ ಲಕ್ಷಣಗಳು ಕಂಡುಬರಬಹುದು. ಆದರೆ ಥೈರಾಕ್ಸಿನ್ ವಗೈರೆ ಮದ್ದುಗಳ ಚಿಕಿತ್ಸೆಯಿಂದ ಅದನ್ನು ಗುಣಪಡಿಸಬಹುದು. ಟ್ರೈಸೊಮಿಸ್ಥಿತಿ ಇಂದಂತೂ ಚಿಕಿತ್ಸಾತೀತ.

ಟ್ರೈಸೊಮಿ–೧೮: ಇದು E ಗುಂಪಿಗೆ ಸೇರಿದ ಕ್ರೊಮೋಸೋಮಿನ ತ್ರಿವಳಿ ಸ್ಥಿತಿ. ನವೀನ ಪರೀಕ್ಷಾವಿಧಾನಗಳಿಂದ ೧೮ನೆಯ ಕ್ರೊಮೋಸೋಮಿನ ತ್ರಿವಳಿಸ್ಥಿತಿ ಎಂದು ನಿರ್ಧರಿಸಲಾಗಿದೆ. ಇದು ಟ್ರೈಸೋಮಿ–೨೧ಕ್ಕಿಂತ ಅಪರೂಪ. ೩೦೦೦ ಜೀವಂತ ಜನನಗಳಲ್ಲಿ ಒಂದು ಮಗು ಈ ಸ್ಥಿತಿಯನ್ನು ತೋರಬಹುದು ಎಂದು ಅಂದಾಜು ಇದೆ. ಬುದ್ಧಿಮಟ್ಟ ಬಲು ತಗ್ಗು ಅಲ್ಲದೆ ಮಾನಸಿಕ ಬೆಳೆವಣಿಗೆ ಅತಿ ನಿಧಾನ. ತಲೆ ಹಿಂಭಾಗ ಗೂಟದಂತೆ ಹಾಯ್ದುಕೊಂಡಿರುವುದು, ವಿಕಾರವಾದ ಕಿವಿ, ಕೈ ಬೆರಳುಗಳಲ್ಲಿ ತೋರು ಮತ್ತು ಕಿರಿಬೆರಳುಗಳು ಮಧ್ಯದ ಎರಡು ಬೆರಳುಗಳ ಮೇಲೆ ಹಾಯ್ದಿರುವುದು, ಇಲ್ಲವೇ ಬೆರಳುಗಳು ಕೂಡಿಕೊಂಡಿರುವುದು, ಬೆರಳುಗಳಲ್ಲಿ ಶಂಖಚಕ್ರಗಳಿಲ್ಲದ ಬರೀ ಐದೋ ಆರೋ ಕಮಾನಿನಂತಿರುವ ಗೆರೆಗಳಿರುವುದು, ಕುಳ್ಳಾಗಿ ಮೇಲೆ ಎದ್ದುಕೊಂಡಿರುವ ಕಾಲ ಹೆಬ್ಬೆರಳು–ಇವು ಈ ಮಕ್ಕಳಲ್ಲಿ ಕಾಣಬರುವ ಲಕ್ಷಣಗಳು. ಗುಂಡಿಗೆಯಲ್ಲಿ ಹಾಗೂ ಮೂತ್ರ ಪಿಂಡದಲ್ಲಿ ಆಜನ್ಮನ್ಯೂನತೆಗಳು ಬಲುಸಾಮಾನ್ಯ. ೧೦% ಮಕ್ಕಳು ೧ ತಿಂಗಳೊಳಗೆ ೯೦% ಮಕ್ಕಳು ಒಂದು ವರ್ಷ ಆಗುವುದರೊಳಗೂ ಸಾಯುತ್ತವೆ. ಈ ಸ್ಥಿತಿ ಗಂಡುಮಕ್ಕಳಿಗಿಂತ ಹೆಣ್ಣು ಮಕ್ಕಳಲ್ಲಿ ಮೂರುಪಟ್ಟು ಹೆಚ್ಚು. ಇಂಥ ಮಕ್ಕಳೂ ವಯಸ್ಕ ತಾಯಿಯರಿಗೇ ಹುಟ್ಟುವುದು ಹೆಚ್ಚು ಎಂದು ಕಂಡುಬಂದಿದೆ.

ಟ್ರೈಸೊಮಿ–೧೩ :ಇದು D ಗುಂಪಿಗೆ ಸೇರಿದ ಕ್ರೊಮೋಸೋಮಿನ ತ್ರಿವಳಿಸ್ಥಿತಿ. ೧೩ನೆಯ ಕ್ರೊಮೋಸೋಮ್ ಪರೀಕ್ಷಾ ವಿಧಾನಗಳಿಂದಲೂ ನಿಷ್ಕರ್ಷಿಸಲ್ಪಟ್ಟಿದೆ. ಇದು ಬಲು ಅಪರೂಪ ಪರಿಸ್ಥಿತಿ. ಜನಿಸಿದ ೫೦೦೦ ಶಿಶುಗಳ ಪೈಕಿ ಒಂದು ಈ ಸ್ಥಿತಿಯನ್ನು ತೋರಬಹುದು ಎಂದು ಅಂದಾಜಾಗಿದೆ. ಮಕ್ಕಳು ಪೆದ್ದು. ಸಣ್ಣತಲೆ, ಹರಿದ ಮೇಲ್ತುಟಿ, ಹರಿದ ಬಾಯಿ ಅಟ್ಟ, ಕಣ್ಣೇ ಇಲ್ಲದಿರುವಿಕೆ, ಹಣೆ ಮಧ್ಯದಲ್ಲಿ ಒಂದೇ ಕಣ್ಣಿರುವಿಕೆ ಇಲ್ಲವೇ ಕಿರುಗಣ್ಣು, ಮೂಗೇ ಇಲ್ಲದಿರುವಿಕೆ, ಹೆಚ್ಚುವರಿ ಬೆರಳುಗಳು, ಕೊಡತಿ ಆಕಾರದ ಪಾದಗಳು, ಹಿಂಚಾಚಿರುವ ಹಿಮ್ಮಡಿ, ಗುಂಡಿಗೆಯ ನ್ಯೂನತೆಗಳು–ಇವು ಈ ಸ್ಥಿತಿಯ ಲಕ್ಷಣಗಳು. ಮಸ್ತಿಷ್ಕದ ಮುಂಭಾಗ ಎಡಬಲ ಅರ್ಧಗೋಳವಾಗಿರದೆ ಕೂಡಿಯೇ ಇರುತ್ತದೆ. ಸಾಮಾನ್ಯವಾಗಿ ಮಕ್ಕಳು ಆರುತಿಂಗಳಷ್ಟು ಹೊತ್ತಿಗೇ ಸಾಯುತ್ತವೆ. ೩೦% ಮಕ್ಕಳು ವರ್ಷವಾದಮೇಲೂ ಜೀವಂತವಾಗಿರಬಹುದು.

ಲೈಂಗಿಕ ಕ್ರೊಮೋಸೋಮಿನ ತ್ರಿವಳಿಸ್ಥಿತಿಗಳು : ಇವುಗಳಲ್ಲಿಯೂ ವ್ಯಕ್ತಿಗಳು ಹೆಚ್ಚುಕಡಿಮೆ ಬುದ್ಧಿಮಾಂದ್ಯ ಉಳ್ಳವರಾಗಿರುತ್ತಾರೆ. ಆದರೆ ಈ ಸ್ಥಿತಿ ಟ್ರೈಸೊಮಿ–೧೩ರಂತೆ ಶೀಘ್ರ ಮಾರಕಸ್ಥಿತಿ ಅಲ್ಲ. ಭ್ರೂಣವು X ಕ್ರೋಮೊಸೊಮ್‌ಉಳ್ಳ ಅಂಡಾಣು ಹಾಗೂ X ಇಲ್ಲವೆ Y ಕ್ರೊಮೋಸೋಮ್ ಉಳ್ಳ ಪುರುಷಾಣುಗಳ ಮಿಲನದಿಂದ ಉದ್ಭವಿಸುವುದರಿಂದ ಈ ತ್ರಿವಳಿಸ್ಥಿತಿಯಲ್ಲಿ ಎಲ್ಲ ಕೋಶಗಳಲ್ಲಿಯೂ X ಕ್ರೊಮೋಸೋಮ್ ಇದ್ದೇ ಇರುತ್ತದೆ. ಇನ್ನೆರಡು ಕ್ರೊಮೋಸೋಮುಗಳ ಪೈಕಿ ಎರಡೂ X ಕ್ರೊಮೋಸೋಮುಗಳಾಗಿರಬಹುದು. ಎರಡೂ Y ಕ್ರೊಮೋಸೋಮುಗಳಾಗಿರಬಹುದು. ಇಲ್ಲವೇ ಒಂದು X ಮತ್ತೊಂದು Y ಕ್ರೊಮೋಸೋಮ್ ಆಗಿರಬಹುದು. ಒಂದೋ ಎರಡೋ Y ಕ್ರೊಮೋಸೋಮುಗಳಿದ್ದರೆ ವ್ಯಕ್ತಿ ಗಂಡೂ Y ಕ್ರೊಮೋಸೋಮ್ ಇಲ್ಲದಿದ್ದರೆ ವ್ಯಕ್ತಿ ಹೆಣ್ಣೂ ಆಗಿರುವುದು ತಿಳಿದದ್ದೇ. ಈ ತ್ರಿವಳಿಗಳ ಪೈಕಿ XXY ಇರುವ ಸ್ಥಿತಿಗೆ ಕ್ಲೈನ್‌ಫೆಲ್ಟರನ ಸಿನ್‌ಡ್ರೋಮ್ ಎಂದು ಹೆಸರು. ಸಾಮಾನ್ಯವಾಗಿ ಇಂಥ ವ್ಯಕ್ತಿಗಳೆಲ್ಲರನ್ನೂ ಗಂಡಸರೆಂದು ಗುರುತಿಸಬಹುದು. ಆದರೆ ಇವರಲ್ಲಿ ಅನೇಕ ಸ್ತ್ರೀಲಕ್ಷಣಗಳನ್ನೂ ಕಾಣಬಹುದು. ಎಲ್ಲರೂ ಗೊಡ್ಡುಗಳು ಇಲ್ಲವೇ ನಿರ್ವೀರ್ಯರು. ಅನೇಕರು ಶಿಖಂಡಿಗಳಾಗಿಯೂ ಇರಬಹುದು. XXX- ಸಿನ್‌ಡ್ರೋಮ್ ಉಳ್ಳವರೆಲ್ಲರೂ ಸ್ತ್ರೀವ್ಯಕ್ತಿಗಳು. ಇಂಥ ವ್ಯಕ್ತಿಗಳನ್ನು ಅತಿ ಸ್ತ್ರೀಯರು (ಸೂಪರ್ ಫೀಮೇಲ್ಸ್) ಎಂದು ಕರೆಯಲಾಗಿದೆ. ಆದರೆ ಇವರಿಗೆ ಹೆಚ್ಚುವರಿ ಹೆಣ್ಣು ಲಕ್ಷಣಗಳಾಗಲಿ, ಹೆಚ್ಚಿನ ಸ್ತ್ರೀದೈಹಿಕ ಕ್ರಿಯಾಸಾಮರ್ಥ್ಯವಾಗಲಿ ಇರುವುದಿಲ್ಲ. ಅಲ್ಪ ಸ್ವಲ್ಪ ಬುದ್ಧಿಮಾಂದ್ಯ ಸಾಮಾನ್ಯ. ಆದರೆ ಯಾವ ಲೈಂಗಿಕ ಅಕ್ರಮಗಳೂ ಪ್ರಕಟವಾಗದೆ ಅನೇಕರು ಮಕ್ಕಳನ್ನೂ ಪಡೆಯಬಲ್ಲವರಾಗಿರುತ್ತಾರೆ. ಹುಟ್ಟಿದ ಮಕ್ಕಳಲ್ಲಿ ೪೬ ಕ್ರೊಮೋಸೋಮುಗಳೇ ಇದ್ದು ಅವು ಆರೋಗ್ಯವಾಗಿ ಇರುತ್ತವೆ. XYY ಸ್ಥಿತಿ ಇರುವ ವ್ಯಕ್ತಿಗಳೆಲ್ಲರೂ ಗಂಡಸರು. ಬುದ್ಧಿಮಾಂದ್ಯ ಅನೇಕರಲ್ಲಿ ವ್ಯಕ್ತಪಡುತ್ತದೆ. ವ್ಯಕ್ತಿಗಳು ಬಲು ಎತ್ತರವಾಗಿ ಬೆಳೆಯುವರು. ಸಾಮಾನ್ಯವಾಗಿ ಶೀಘ್ರಕೋಪಿಗಳು ಆಗಿರುತ್ತಾರೆ. ಸಂತಾನಪಡೆಯಬಲ್ಲರು. ಹುಟ್ಟಿದ ಮಕ್ಕಳಲ್ಲಿ ಹೆಚ್ಚುವರಿ ಕ್ರೊಮೋಸೋಮ್ ಇರುವುದಿಲ್ಲ. ಮಕ್ಕಳು ಆರೋಗ್ಯವಾಗಿರುತ್ತವೆ. ***

**ಟ್ರೋಕೊಫೋರ್:** ಅನೆಲಿಡ (ವಲಯವಂತಗಳು), ಪಾಲಿಕೀಟ ಮತ್ತು ಮೃದ್ವಂಗಿಗಳ (ಮಾಲಸ್ಕ) ಜೀವನ ಚರಿತ್ರೆಯಲ್ಲಿ ಕಂಡುಬರುವ ಒಂದು ಲಾರ್ವ. ನಿಷೇಚನಗೊಂಡ ಮೊಟ್ಟೆಯೊಡೆದಾಗ ಈ ಸ್ವತಂತ್ರ ಲಾರ್ವ ಹೊರಬರುವುದು. ಇದರ ಆಕಾರ ಪಿಯರ್ ಹಣ್ಣಿನಂತೆ. ಲಾರ್ವದ ಹೊರದರ್ಮ ಪದರ ತೆಳುವಾಗಿರುವುದರಿಂದ ದೇಹ ಪಾರದರ್ಶಕವಾಗಿದೆ. ದೇಹದ ಮಧ್ಯದಲ್ಲಿ ಬಾಯಿ ಉಂಟು. ಬಾಯಿಯಿಂದ ಮುಂದಕ್ಕೆ ಸ್ಟೊಮೋಡಿಯಮ್ ಎಂಬ ಭಾಗ ಇದೆ. ಸ್ಟೊಮೋಡಿಯಮ್ ಕೆಳಮುಖವಾಗಿ ಬಾಗಿ ನಡುಗರುಳಿಗೆ ಸಾಗುತ್ತದೆ. ನಡುಗರುಳಿನ ಮುಂದಿನ ಭಾಗಕ್ಕೆ ಪ್ರೋಕ್ಟೋಡಿಯಮ್ ಎಂದು ಹೆಸರು. ಗುದದ್ವಾರದ ಮೂಲಕ ಇದು ಹೊರಕ್ಕೆ ತೆರೆಯುತ್ತದೆ. ದೇಹದ ಒಂದು ಕೊನೆಯಲ್ಲಿ ಎರಡು ಅಗ್ರಸ್ಥ ತಟ್ಟೆಗಳೂ ಎರಡು ನರಮುಡಿಗಳೂ ಶಿಲಕೆಗಳೂ ಇವೆ. ತಟ್ಟೆಗಳ ಕೆಳಭಾಗದಲ್ಲಿ ಒಂದು ನೇತ್ರಬಿಂದು (ಐ ಸ್ಪಾಟ್) ಉಂಟು. ಬಾಯಿಯ ಮುಂಭಾಗದಲ್ಲಿ ಶಿಲಕೆಗಳ ಒಂದು ವರ್ತುಲ ಉಂಟು. ಇದಕ್ಕೆ ಅಗ್ರವದನ ವರ್ತುಲ ಎಂದು ಹೆಸರು. ಅಂತೆಯೇ ಹಿಂಭಾಗದಲ್ಲಿ ಶಿಲಕೆಗಳ ವರ್ತುಲ ಉಂಟು. ಇದನ್ನು ಪಶ್ಚವದನ ವರ್ತುಲ ಎನ್ನುತ್ತಾರೆ. ಗುದದ್ವಾರದ ಸುತ್ತಲೂ ಇರುವ ಶಿಲಕೆಗಳ ವರ್ತುಲಕ್ಕೆ ಏನಲ್ ವರ್ತುಲ ಎಂದು ಹೆಸರು. ಶಿಲಕೆಗಳು ಈಜುವಿಕೆಗೆ ಸಹಾಯಮಾಡುತ್ತವೆ. ಹೊರದರ್ಮ ಮತ್ತು ಅನ್ನನಾಳಗಳ ನಡುವೆ ಒಂದು ವಿಸ್ತಾರವಾದ ಅವಕಾಶವಿದೆ. ಇದಕ್ಕೆ ಬ್ಲಾಸ್ಟೋಸೀಲ್ ಎಂದು ಹೆಸರು. ಇದರಲ್ಲಿ ಮೀಸೆನ್‌ಕೈಮ್ ಜೀವಕೋಶಗಳು, ಲಾರ್ವದ ಮಧ್ಯದರ್ಮ ಮತ್ತು ಒಂದು ಜೊತೆ ನೆಫ್ರೀಡಿಯಗಳಿವೆ. ನೆಫ್ರೀಡಿಯ ಸಮೀಪದಲ್ಲಿ ಒಂದು ಅಡೊಸಿಸ್ಟ್ ಇದೆ.



ಟ್ರೋಕೊಫೋರ್

1. ಬಾಯಿ, 2. ಸ್ಟೊಮೋಡಿಯಮ್,
3. ಮಧ್ಯಕರುಳು, 4. ಪ್ರೋಕ್ಟೊಡಿಯಮ್,
5. ಗುದದ್ವಾರ, 6. ತುದಿಗುಚ್ಛ,
7. ಮುಂತುದಿಯ ವರ್ತುಲ,
8. ಹಿಂತುದಿ (ಗುದ) ವರ್ತುಲ.

ವಿವಿಧ ಪ್ರಭೇದಗಳ ಟ್ರೋಕೊಫೋರ್ ಲಾರ್ವಗಳು ನೀರಿನ ಮೇಲ್ಮೈನಲ್ಲಿ ಈಜುತ್ತ ಇರುವುವು. ಈ ಅವಸ್ಥೆಯಲ್ಲಿ 15 ನಿಮಿಷಗಳಿಂದ ಕೆಲವು ದಿವಸಗಳವರೆಗೆ ಇರುವುದುಂಟು.

ತೇಲುಜೀವಿಗಳು ಮತ್ತಿತ್ತರ ಸೂಕ್ಷ್ಮಜೀವಿಗಳು ಇವುಗಳ ಆಹಾರ. ಕೆಲವು ಕಾಲಾನಂತರ ವಲಯವಂತಗಳ ಟ್ರೋಕೊಫೋರ್ ಲಾರ್ವ ಕಡಲ ತಡಿಯನ್ನು ಸೇರಿ ರೂಪಪರಿವರ್ತನೆಗೆ ಒಳಗಾಗುತ್ತವೆ. ಈ ಕಾಲದಲ್ಲಿ ಬಾಯಿಯ ಮುಂಭಾಗ ಪ್ರೋಸ್ಟೋಮಿಯಮ್ ಆಗಿ ಮಾರ್ಪಾಡಾಗುತ್ತದೆ. ಬಾಯಿಯ ಹಿಂಭಾಗ ನೀಳವಾಗುತ್ತದಲ್ಲದೆ ಖಂಡ ವಿಂಗಡಣೆಗೆ ಒಳಗಾಗುವುದು. ಪ್ರಬುದ್ಧಜೀವಿಯ ವಿವಿಧ ಅಂಗಗಳು ರೂಪುಗೊಳ್ಳುತ್ತವೆ. ಮೃದ್ವಂಗಿಗಳ ಪಟೆಲದಲ್ಲಿಯೂ ಮೇಲಿನ ಮಾದರಿಯ ಟ್ರೋಕೊಫೋರ್ ಲಾರ್ವವನ್ನು ಕಾಣಬಹುದು. ಆದರೆ ಇವುಗಳಲ್ಲಿ ಈ ಲಾರ್ವ ರೂಪಪರಿವರ್ತನೆಗೊಳ್ಳದೆ ಮತ್ತೊಂದು ಬಗೆಯ ಲಾರ್ವವಾಗಿ ಮಾರ್ಪಡುತ್ತದೆ. ಇದಕ್ಕೆ ವೆಲಿಜರ್ ಲಾರ್ವ ಎಂದು ಹೆಸರು. ಆದಿಮ ಗ್ಯಾಸ್ಟ್ರಾಪೊಡ ಮತ್ತು ಇತರ ಮೃದ್ವಂಗಿಗಳಲ್ಲಿ ಟ್ರೋಕೊಫೋರ್ ಲಾರ್ವಾವಸ್ಥೆ ಮೊಟ್ಟೆಯೊಳಗಡೆಯೇ ಮುಗಿದುಹೋಗಿರುತ್ತದೆ. ಮೊಟ್ಟೆಯೊಡೆದಾಗ ಹೊರಬರುವುದು ವೆಲಿಜರ್ ಲಾರ್ವ ಮಾತ್ರ. ಟ್ರೋಕೊಫೋರ್ ಲಾರ್ವ ವಲಯವಂತಗಳ ಮತ್ತು ಮೃದ್ವಂಗಿಗಳ ವಿಕಾಸದ ಮೇಲೆ ಬೆಳಕನ್ನು ಬೀರುತ್ತದಲ್ಲದೆ ಈ ಎರಡು ವಂಶಗಳು ಒಂದೇ ಮೂಲದಿಂದ ವಿಕಾಸಗೊಂಡಿವೆ ಎಂಬುದಕ್ಕೆ ಆಧಾರವನ್ನು ನೀಡುತ್ತದೆ. (ಬಿ.ಕೆ.ಜೆ.)

**ಟ್ರೌಟ್ ಮೀನು:** ಸ್ಯಾಲ್ಮಾನಿಡೆ ಕುಟುಂಬಕ್ಕೆ ಸೇರಿದ ಹೆಸರು ವಾಸಿಯಾದ ಆಹಾರ ಮೀನು. ಸಾಮಾನ್ಯವಾಗಿ ಶೀತಲವಾದ ಸಿಹಿನೀರಿನಲ್ಲಿ ವಾಸಿಸುವುದು. ಆದರೆ ಕೆಲವು ಪ್ರಭೇದಗಳು ತಮ್ಮ ಜೀವನದ ಬಹುಪಾಲನ್ನು ಸಾಗರದಲ್ಲೇ ಕಳೆಯುವುದುಂಟು. ಎಲ್ಲ ಸನ್ನಿವೇಶಗಳಿಗೂ ಹೊಂದಿಕೊಂಡು ಸ್ಥಳೀಯ ಮೀನುಗಳೊಡನೆ ಶೀಘ್ರವಾಗಿ ಬೆರೆಯುವುದರಿಂದ ಇವುಗಳ ಸರಿಯಾದ ವರ್ಗೀಕರಣ ಇನ್ನೂ ಸಾಧ್ಯವಾಗಿಲ್ಲ. ಅವ್ಯವಸ್ಥಿತ ದೇಹರಚನೆ, ವಿವಿಧ ವರ್ಣ ಹಾಗೂ ಅಸ್ಥಿರವಾದ ಸ್ವಭಾವಗಳೇ ಈ ಅಸಮರ್ಥತೆಗೆ ಕಾರಣವೆಂದು ಊಹಿಸಲಾಗಿದೆ. ಸೂಕ್ಷ್ಮ ಹುರುಪೆಗಳಿಂದ ಆವೃತವಾದ ಉದ್ದನೆಯ ಶರೀರ, ಹುರುಪೆರಹಿತ ತಲೆ ಮತ್ತು ಮೃದುವಾದ ಬೆನ್ನುರೆಕ್ಕೆಗಳು ಟ್ರೌಟ್ ಮೀನುಗಳ ವೈಶಿಷ್ಟ್ಯ.

ಕಡಲ ಟ್ರೌಟುಗಳು : ಇವುಗಳಲ್ಲಿ ಕೆಲವು ಉಪ್ಪುನೀರಿನಲ್ಲೂ ಕೆಲವು ಸಿಹಿ ನೀರಿನಲ್ಲೂ ವಾಸಿಸುತ್ತವೆ. ಸಮುದ್ರವಾಸಿಯಾದ ಸ್ಯಾಲ್ಮೊ ಟ್ರಟ್ಟಾ ಎಂಬುದು ಸಂತಾನಭಿವೃದ್ಧಿಗಾಗಿ ಮಾತ್ರ ನದಿಗೆ ವಲಸೆಹೋಗುತ್ತದೆಯಾದರೂ ಸ್ಯಾಲ್ಮೊ ಫೇರಿಯೊ ಎಂಬುದು ತನ್ನ ಜೀವನವಿಡೀ ಸಿಹಿನೀರಿನಲ್ಲೇ ಕಳೆಯುತ್ತದೆ. ಶ್ವೇತಸಮುದ್ರದಲ್ಲಿ, ಐರ್ಲೆಂಡಿನ ಹತ್ತಿರದಲ್ಲಿ ಹಾಗೂ ಸ್ಪೇನಿನ ಉತ್ತರ ಭಾಗದಲ್ಲಿ ಸಾಗರವಾಸಿಗಳು ಹೇರಳ. ಸರೋವರವಾಸಿಯಾದ ಸ್ಯಾಲ್ವೆಲೈನಸ್ ನಾಮಾಯ್ಕುಶ್ ಅಮೆರಿಕದ ಪಂಚಮಹಾಸರೋವರ ಹಾಗೂ ಉತ್ತರ

ಸ್ಯಾಲ್ಮೊ ಟ್ರಟ್ಟಾ

ಧ್ರುವ ಪ್ರದೇಶದ ಆಳವಾದ ಸರೋವರಗಳಲ್ಲಿ ಜೀವಿಸುತ್ತದೆ. ಸಿಹಿನೀರು ನಿವಾಸಿಗಳು ಸ್ವಭಾವತಃ ವಲಸೆಪ್ರಿಯಗಳಲ್ಲದಿದ್ದರೂ ವಂಶಾಭಿವೃದ್ಧಿಗಾಗಿ ಮುಖಜ ಭೂಮಿಗಳತ್ತ ವಲಸೆ ಹೋಗುವುದುಂಟು. ಕಪ್ಪು, ನೀಲಿ, ಕಂದು ಮತ್ತಿತ್ತರ ವರ್ಣಗಳಿಂದ ಕೂಡಿದ ಬೆನ್ನುಭಾಗ, ಬೂದುವರ್ಣದ ಉದರ ಭಾಗ, ಹಳದಿ ಬಣ್ಣದ ಪಾರ್ಶ್ವಭಾಗ ಮತ್ತು ವರ್ಣರಂಜಿತ ಚುಕ್ಕೆಗಳಿಂದ ಅಲಂಕೃತವಾದ ಹೊರಮೈ ಟ್ರೌಟುಗಳ ವೈಶಿಷ್ಟ್ಯ. ಬೆನ್ನು ಮತ್ತು ಪಾರ್ಶ್ವಗಳೆರಡೂ ಬೂದಿ ವರ್ಣದವಾಗಿದ್ದು ನಕ್ಷತ್ರಾಕಾರದ ಕಪ್ಪುಚುಕ್ಕೆಗಳನ್ನು ಪಡೆದಿರುವುದು ಸಮುದ್ರ ವಾಸಿಗಳ ಬಾಹ್ಯ ಲಕ್ಷಣ. ಸಂತಾನಕಾಲದಲ್ಲಿ ಗಂಡುಮೀನಿನ ಉದರ ಗುಲಾಬಿ ವರ್ಣವನ್ನು ತಳೆಯುತ್ತದೆ. ಸ್ಯಾಲ್ಮೊ ಕ್ಲಾರ್ಕಿ ಎಂಬುದರ ಕೆಳದವಡೆಯ ಇಕ್ಕೆಡೆಯಲ್ಲೂ ಕೆಂಪು ಗೆರೆಗಳೂ ಇರುತ್ತವೆ. ಆದರೆ ವರ್ಣಾಲಂಕಾರರಹಿತವಾದ ಮತ್ತು ಸರೋವರವಾಸಿಯಾದ ಸ್ಯಾಲ್ವೆಲೈನಸ್ ನಾಮಾಯ್ಕುಶ್ ಎಂಬುದರಲ್ಲಿ ತಿಳಿಹಳದಿ ಬೂದುವರ್ಣದ ಚುಕ್ಕೆಗಳಿವೆ.

ದೋಣಿಯಾಕಾರದ ಟ್ರೌಟ್ ಮೀನುಗಳ ಉದ್ದ ಮತ್ತು ತೂಕಗಳು ಅನುಕ್ರಮವಾಗಿ 100 ಸೆಂಮೀ ಮತ್ತು 45 ಕಿಗ್ರಾಂಗಳು. ಸ್ಥೂಲದೇಹಿಗಳಾದ ಕಡಲ ವಾಸಿಗಳ ಬಾಲ ಹೆಚ್ಚು ಕಡಿಮೆ ಚಚ್ಚೌಕಾಗಿದೆ. ಆದರೆ ಸರೋವರವಾಸಿಯಾದ ಸ್ಯಾಲ್ಮೊ ಫೆರೋಕ್ಸಿನಲ್ಲಿ ಈ ರೀತಿಯ ಬಾಲವಿಲ್ಲ. ಎಲ್ಲ ಟ್ರೌಟ್ ಮೀನುಗಳಲ್ಲಿ ಹಿಂಬೆನ್ನು ರೆಕ್ಕೆಗೂ ಪಾರ್ಶ್ವರೇಖೆಗೂ ಮಧ್ಯೆ 12–15 ಹುರುಪೆಗಳಿವೆ. ಅಗಲವಾದ ಬಾಯಿ, ಪ್ರಬಲವಾದ ಓಷ್ಠ (ವೋಮರ್) ದಂತಪಂಕ್ತಿ ಕೂಡ ಟ್ರೌಟುಗಳ ವೈಶಿಷ್ಟ್ಯ. ಇವುಗಳ ಬೆಳವಣಿಗೆಯ ವೇಗ ಇವು ವಾಸಿಸುವ ನೀರಿನ ಉಷ್ಣತೆಯನ್ನು ಆಧರಿಸಿದೆ. ಉತ್ತರದ ಶೀತಲ ಹಾಗೂ ಪರ್ವತ ಶ್ರೇಣಿಗಳಲ್ಲಿರುವ ಮೀನುಗಳ ಬೆಳವಣಿಗೆ ದಕ್ಷಿಣದ ಬಿಸಿ ಹಾಗೂ ಗಡಸು ನೀರಿನಲ್ಲಿರುವುವಕ್ಕಿಂತ ನಿಧಾನ. ಸರೋವರವಾಸಿಗಳ ಬೆಳವಣಿಗೆ ಅತಿ ಬಿರುಸು. ಇವು ದೀರ್ಘಾಯುಷಿಗಳೂ ಹೌದು. ಸೆಪ್ಟೆಂಬರ್–ಅಕ್ಟೋಬರ್ ಮಾಸಗಳಲ್ಲಿ ನೆರೆ ಬಂದಾಗ ಗಂಡು ಮತ್ತು ಹೆಣ್ಣುಗಳೆರಡೂ ವಂಶಾಭಿವೃದ್ಧಿಗಾಗಿ ಕಲ್ಲುನೆಲೆಯನ್ನರಸಿ ವಲಸೆಹೋಗುತ್ತವೆ. ಸಮುದ್ರವಾಸಿಗಳೂ ನದಿಗೆ ವಲಸೆಹೋಗುವುವು. 7–10 ಸೆಂಮೀ ಆಳದ ಜಲ್ಲಿಕಲ್ಲಿನ ತಗ್ಗುನೆಲೆಯಲ್ಲಿ ಹೆಣ್ಣುಗಂಡುಗಳು ಕೂಡುತ್ತವೆ. ತತ್ತಿ ಮತ್ತು ವೀರ್ಯಗಳೆರಡೂ ಏಕಕಾಲದಲ್ಲಿ ಬಿಡುಗಡೆಯಾಗಿ ನೀರಿನಲ್ಲಿ ನಿಷೇಚನ ನಡೆಯುತ್ತದೆ. ನಿಷೇಚಿತ ಅಂಡಗಳ ಬೆಳವಣಿಗೆ ನೀರಿನ ಉಷ್ಣತೆಯನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಮೊಟ್ಟೆ ಇಟ್ಟ 5–6 ತಿಂಗಳಲ್ಲಿ ಮರಿಗಳು ಹೊರಬರುತ್ತವೆ. ಕಡಲುವಾಸಿಗಳ ಮರಿಗಳು ಸಮುದ್ರಾಭಿಮುಖವಾಗಿ ತೆರಳುವುವು. ಮೊದಮೊದಲು ಇವು ಜಲಕೀಟಗಳ ಮರಿಗಳನ್ನೂ ಬೆಳೆದಂತೆಲ್ಲ ಜಲಜಂತು ಮತ್ತು ಮೃದ್ವಂಗಿಗಳನ್ನೂ ತಿಂದು ಜೀವಿಸುತ್ತವೆ.

ಕಾಮನ ಬಿಲ್ಲಿನ ಟ್ರೌಟು (ರೇನ್‌ಬೋ ಟ್ರೌಟ್ಸ್): ಇವುಗಳ ವರ್ಣರಂಜಿತ ಪಾರ್ಶ್ವದಿಂದಾಗಿ ಈ ಹೆಸರು ಬಂದಿದೆ. ಸ್ಯಾಲ್ಮೊ ಗೇರ್ಡ್ನೆರಿ ಎಂಬುದು ಕ್ಯಾಲಿಫೋರ್ನಿಯ ಮತ್ತು ಅಲಾಸ್ಕದ ದಕ್ಷಿಣ ನದಿಗಳಲ್ಲಿ ವಾಸಿಸುವುದು. ಇದರ ಸಾಕಣೆ ಬಹು ಸುಲಭ ಹಾಗೂ ಲಾಭದಾಯಕವಾದ್ದರಿಂದ 1880ರಿಂದೀಚೆಗೆ ಬ್ರಿಟಿಷರು ಆಮದು ಮಾಡಿಕೊಳ್ಳುತ್ತಿದ್ದಾರೆ. ಈ ಟ್ರೌಟಿನ ಉದ್ದ 25–50 ಸೆಂಮೀ. ; ತೂಕ 3.85 ಕಿಗ್ರಾಂ. ಹಸಿರು ಮಿಶ್ರಿತ ಬೂದು, ನೀಲಿ ಇಲ್ಲವೆ ಕಪ್ಪು ಬಣ್ಣದ ಬೆನ್ನೂ ಶರೀರದುದ್ದಕ್ಕೂ ಪ್ರಸರಿಸಿರುವ ಗುಲಾಬಿ ವರ್ಣದ ಗೆರೆಗಳಿರುವ ಪಾರ್ಶ್ವವೂ ಬೆಳನೆಯ ಉದರ ಬಾಗವೂ

ರೇನ್‌ಬೋ ಟ್ರೌಟ್ಸ್

ಈ ಮೀನಿನ ವೈಶಿಷ್ಟ್ಯ. ತಲೆಯ ಮೇಲೆ ಕಪ್ಪು ಚುಕ್ಕೆಗಳಿವೆ. ಬೆನ್ನು, ಪಾರ್ಶ್ವ ಹಾಗೂ ಈಜುರೆಕ್ಕೆಗಳೂ ಕುಂಕುಮ ವರ್ಣದ ಭುಜ ಮತ್ತು ಕಟಿರೆಕ್ಕೆಗಳೂ ಇವುಗಳ ಹೆಗ್ಗುರುತು. ಈ ಟ್ರೌಟುಗಳು ಇತರ ಬಗೆಯ ಮೀನುಗಳಿಗಿಂತ ವೇಗವಾಗಿ ಬೆಳೆಯುವುದರಿಂದ ಕೇವಲ ಎರಡು ವರ್ಷಗಳಲ್ಲೇ ಉತ್ತಮ ಫಲವೀಯುತ್ತವೆಯಲ್ಲದೆ ಮತ್ಸ್ಯಕೃಷಿಗೆ ಯೋಗ್ಯವಾದ ಮೀನುಗಳೆನಿಸಿವೆ. ಆದರೆ ಈ ಉದ್ದಿಶ್ಯಕ್ಕಾಗಿ ಕೂಡಿಟ್ಟ ಮೀನುಗಳು ಕಾಲಾನಂತರ ಸಮುದ್ರಕ್ಕೆ ವಲಸೆಹೋಗುವುದರಿಂದ ಆಗಾಗ್ಗೆ ಪುನರ್ಭರ್ತಿ ಮಾಡಬೇಕಾಗುವುದು. ಇವು ಸಾಮಾನ್ಯವಾಗಿ ವಸಂತಕಾಲದಲ್ಲಿ ವಂಶಾಭಿವೃದ್ಧಿಗೆ ತೊಡಗುತ್ತವೆ. ವಸತಿನಿರ್ಮಾಣ ಕಾರ್ಯದಲ್ಲಿ ಗಂಡು ಹೆಣ್ಣಿಗೆ ನೆರವಾಗುತ್ತದೆ. ಇವುಗಳ ಮೊಟ್ಟೆ ಉಳಿದ ಬಗೆಯವಕ್ಕಿಂತ ಸಣ್ಣ ಗಾತ್ರದವು. ಸಂಧಿಪದಿ ಮುಂತಾದ ಅಕಶೇರುಕಗಳು ಇವುಗಳ ವಿಶೇಷ ಆಹಾರವಾದರೂ ಇನ್ನಿತರ ಬಗೆಯ ಸಣ್ಣ ಮೀನುಗಳನ್ನು ತಿಂದು ಜೀವಿಸುವುದೂ ಉಂಟು.

(ಎಸ್.ಎಚ್.ಒ.)

# ಡ

**ಡಾಮ:** ಆರ್ಟಿಯೊಡಾಕ್ಟಿಲ ಗಣ, ಸರ್ವಿಡೆ ಕುಟುಂಬ, ಸರ್ವಿನೆ ಉಪ ಕುಟುಂಬಕ್ಕೆ ಸೇರಿದ ಜಿಂಕೆ. ಇದಕ್ಕೆ ಫ್ಯಾಲೊ ಜಿಂಕೆ ಎಂಬ ಹೆಸರೂ ಇದೆ. ಇದರಲ್ಲಿ ಡಾಮ ಡಾಮ ಮತ್ತು ಡಾಮ ಮೆಸೊಪೊಟೇಮಿಕ ಎಂಬ ಎರಡು ಪ್ರಭೇದಗಳಿವೆ. ಮೊದಲನೆಯದು ದಕ್ಷಿಣ ಯೂರೋಪಿನ ಮೆಡಿಟರೇನಿಯನ್ ವಲಯ ಮತ್ತು ಏಷ್ಯ ಮೈನರ್‌ಗಳಲ್ಲೂ, ಎರಡನೆಯದು ಪರ್ಷಿಯ, ಇರಾಕ್‌ಗಳಲ್ಲೂ ಕಂಡುಬರುತ್ತವೆ. ಡಾಮ ಡಾಮವನ್ನು ಗ್ರೇಟ್ ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ, ಪಶ್ಚಿಮ ಉಕ್ರೇನ್, ಬಾಲ್ಟಿಕ್ ದೇಶಗಳಿಗೆ ಕೊಂಡೊಯ್ದು ಬಿಡಲಾಗಿದೆ. ಡಾಮ ಡಾಮ ಜಿಂಕೆಯ ಎತ್ತರ ಸುಮಾರು 1 ಮೀ. ಉದ್ದ 1.3–1.6 ಮೀ. ತೂಕ 40–80 ಕಿಗ್ರಾಂ. ಇದಕ್ಕೆ ಸು. 18 ಸೆಂಮೀ ಉದ್ದದ ಬಾಲವಿದೆ. ದೇಹದ ಬಣ್ಣ ಹಳದಿಮಿಶ್ರಿತ ಕಂದು. ಬೆನ್ನಮೇಲೆಲ್ಲ ಬಿಳಿಯ ಚುಕ್ಕೆಗಳಿವೆ. ಉದರ ಭಾಗದ ಬಣ್ಣ ಬಿಳಿ. ಚಳಿಗಾಲದಲ್ಲಿ ದೇಹದ ಬಣ್ಣ ಬೂದಿ ಮಿಶ್ರಿತ ಹಳದಿಗೆ ತಿರುಗುತ್ತದೆ. ಚುಕ್ಕೆಗಳೂ ಕಾಣೆಯಾಗುವುವು. ಗಂಡು ಜಿಂಕೆಗಳಲ್ಲಿ ಮಾತ್ರ ಉದುರುಗೊಂಬುಗಳಿವೆ. ಕೊಂಬುಗಳು ಚಪ್ಪಟೆಯಾಗಿ ಅಗಲವಾಗಿ ಹಸ್ತದಂತೆ ಹರಡಿಕೊಂಡಿವೆ. ಇವುಗಳ ಅಂಚಿನಲ್ಲಿ ಬೆರಳುಗಳಂಥ ಅನೇಕ ಕವಲುಗಳಿವೆ. ಸಾಧಾರಣವಾಗಿ ಕೊಂಬುಗಳು ಏಪ್ರಿಲ್ ತಿಂಗಳಿನಲ್ಲಿ ಉದುರಿಬಿದ್ದು ಮತ್ತೆ ಆಗಸ್ಟ್ ವೇಳೆಗೆ ಹೊಸ ಕೊಂಬುಗಳು ಹುಟ್ಟಿಕೊಳ್ಳುವುವು.

ಡಾಮ ಸಂಘಜೀವಿ; ಸಣ್ಣ ಹಿಂಡುಗಳಲ್ಲಿ ಜೀವಿಸುತ್ತದೆ. ಬೆದೆಗಾಲವನ್ನುಳಿದು ಬೇರೆ ಸಮಯದಲ್ಲಿ ಗಂಡುಗಳು ಪ್ರತ್ಯೇಕ ಗುಂಪುಗಳಲ್ಲಿಯೂ ಹೆಣ್ಣು ಮತ್ತು ಚಿಕ್ಕಮರಿಗಳು ಬೇರೆ ಗುಂಪುಗಳಲ್ಲಿಯೂ ತಿರುಗಾಡುತ್ತವೆ. ಗಂಡು ಹೆಣ್ಣುಗಳು ಕೂಡುವ ಕಾಲ ಸೆಪ್ಟೆಂಬರ್–ಅಕ್ಟೋಬರ್. ಆ ಕಾಲದಲ್ಲಿ ಗಂಡುಗಳು ಅನೇಕ ಹೆಣ್ಣುಗಳ ಜೊತೆಗೆ ಗುಂಪು ಕಟ್ಟಿಕೊಂಡು

ಸ್ಪರ್ಧಿಗಳೊಂದಿಗೆ ಸೆಣಸಿ ಓಡಿಸುವುವಲ್ಲದೆ ಮಂದ್ರಸ್ವರದಲ್ಲಿ ಧ್ವನಿಗೈಯುತ್ತ ಒಂದು ವಿಧದ ಪ್ರಣಯ ನೃತ್ಯವಾಡುತ್ತ ಕಾಲಕಳೆಯುವುವು. ಜೂನ್–ಜುಲೈ ವೇಳೆಗೆ ಮರಿಗಳು ಹುಟ್ಟುವುವು. ಗರ್ಭಧಾರಣೆಯ ಅವಧಿ ಸುಮಾರು 230 ದಿವಸಗಳು. ಒಂದು ಸೂಲಿಗೆ ಒಂದೇ ಒಂದು ಮರಿ ಹುಟ್ಟುತ್ತದೆ. ಮರಿಗಳ ಮೈಬಣ್ಣ ವಯಸ್ಕಗಳಿಗಿಂತ ಗಾಢವಾದುದು. ಬಿಳಿ ಚುಕ್ಕೆಗಳು ಇದ್ದೇ ಇರುತ್ತವೆ. ಡಾಮ ಜಿಂಕೆಯ ಆಯಸ್ಸು ಸುಮಾರು 15 ವರ್ಷಗಳು. ಇವನ್ನು ಸುಲಭವಾಗಿ ಸಾಕಬಹುದು. (ಎಂ.ಎ.ಡಿ.ಎಚ್.)

**ಡಾರ್ವಿನ್, ಚಾರ್ಲ್ಸ್ ರಾಬರ್ಟ್** **(೧೮೦೯–೧೮೮೨)** : ಇಂಗ್ಲೆಂಡಿನ ಪ್ರಖ್ಯಾತ ಪ್ರಕೃತಿ ವಿಜ್ಞಾನಿ. ಜೀವವಿಕಾಸಕ್ಕೆ ನಿಸರ್ಗದ ಆಯ್ಕೆಯೇ ಮೂಲ ಹಾಗೂ ಆಧಾರ ಎಂದು ಪ್ರತಿಪಾದಿಸಿ ಜೀವವಿಜ್ಞಾನದ, ಅಷ್ಟೇಕೆ ಮಾನವನ ವಿಚಾರಧಾಟಿಯನ್ನು ಬದಲಿಸಿದ ಕ್ರಾಂತಿಕಾರಿ.

೧೮೦೯ರ ಫೆಬ್ರವರಿ ೧೨ ರಂದು ಇಂಗ್ಲೆಂಡಿನ ಷ್ರೂಸ್‌ಬರಿಯಲ್ಲಿ ಜನಿಸಿದ. ತಂದೆ ರಾಬರ್ಟ್ ವಾರಿಂಗ್ ಡಾರ್ವಿನ್ ಹೆಸರಾಂತ ವೈದ್ಯ. ತಾಯಿ ಸುಸಾನ್ ವಿದ್ಯಾವಂತೆ, ಒಳ್ಳೆಯ ಗೃಹಿಣಿ, ಇಂಗ್ಲೆಂಡಿನ ಸುಸಂಸ್ಕೃತ ಹಾಗೂ ಕುಂಭಕಲೆಗೆ ಹೆಸರಾಗಿದ್ದ ವೆಜ್‌ವುಡ್ ಮನೆತನದಿಂದ ಬಂದವಳು. ತಾತ ಎರ್ಯಾಸ್ಮಸ್ ಡಾರ್ವಿನ್ ಇಂಗ್ಲೆಂಡಿನ ಪ್ರಸಿದ್ಧ ವೈದ್ಯ, ಪ್ರಕೃತಿವಿಜ್ಞಾನಿ ಹಾಗೂ ಕವಿ.

ಡಾರ್ವಿನ್ನನ ಬಾಲ್ಯ ವಿದ್ಯಾಭ್ಯಾಸ ತವರೂರಿನಲ್ಲೇ ಆರಂಭವಾಯಿತು. ಎಂಟನೆಯ ವಯಸ್ಸಿನಲ್ಲಿ ಯೂನಿಟೇರಿಯನ್ ಚರ್ಚಿಗೆ ಸೇರಿದ್ದ ಪಾಠಶಾಲೆಗೆ ಹೋಗಲಾರಂಭಿಸಿದ. ಮಾರನೆಯ ವರ್ಷ ಆ ಶಾಲೆಯನ್ನು ಬಿಟ್ಟು ಅದೇ ಊರಿನ ಮತ್ತೊಂದು ಶಾಲೆಗೆ ಪ್ರವೇಶ. ಆ ಶಾಲೆಯ ಉಪಾಧ್ಯಾಯ ಸ್ಯಾಮ್ಯುಯಲ್ ಬಟ್ಲರ್ ಸಾಂಪ್ರದಾಯಿಕ ಪಂಥದವರು. ಅವರು ಹೇಳಿ ಕೊಡುತ್ತಿದ್ದ ವ್ಯಾಕರಣ, ಲಕ್ಷಣಶಾಸ್ತ್ರಗಳು ಚಾರ್ಲ್ಸ್‌ಗೆ ಹಿಡಿಸುತ್ತಿರಲಿಲ್ಲ. ಬದಲು ಕಾಡಿಗೆ ಹೋಗಿ ವಿವಿಧ ಬಗೆಯ ಸಸ್ಯಗಳನ್ನು ಸಂಗ್ರಹಿಸುವುದು, ಚಿಟ್ಟೆಗಳೇ ಮೊದಲಾದ ಪುಟ್ಟಪುಟ್ಟ



ಪ್ರಾಣಿಗಳನ್ನು ಹಿಡಿಯುವುದು ಮತ್ತು ಅವುಗಳ ರೂಪರಚನೆಗಳನ್ನು ಅಧ್ಯಯನ ಮಾಡುವುದು ಇವನಿಗೆ ಪ್ರಿಯವೆನಿಸಿತು. ಇದರಿಂದಾಗಿ ತಂದೆಯ ಕೋಪಕ್ಕೆ ಗುರಿಯಾಗಿದ್ದುದೂ ಉಂಟು. ಅನಂತರ ತಂದೆಯ ಅಪೇಕ್ಷೆಯಂತೆ ವೈದ್ಯ ಶಿಕ್ಷಣಕ್ಕೆ ೧೮೨೫ರಲ್ಲಿ ಎಡಿನ್‌ಬರೋವಿಗೆ ಹೋದ. ಕೆಲವು ತಿಂಗಳುಗಳಲ್ಲಿಯೇ ವೈದ್ಯಶಿಕ್ಷಣವೂ ಬೇಸರವೆನಿಸಿತು. ಆದರೆ ಅಲ್ಲಿದ್ದ ಪ್ರಕೃತಿವಿಜ್ಞಾನದ ಶಾಖೆ ಆಕರ್ಷಿಸಿತು. ಅಲ್ಲಿ ಗಿಡಮರಗಳನ್ನೂ, ವಿವಿಧ ಪ್ರಾಣಿಗಳನ್ನೂ ಅಧ್ಯಯನ ಮಾಡಲು ಪ್ರಾರಂಭಿಸಿದ. ಅಲ್ಲಿನ ಪ್ರಕೃತಿವಿಜ್ಞಾನದ ಶಿಕ್ಷಕರಾಗಿದ್ದ ರಾಬರ್ಟ್ ಎಡ್ಮಂಡ್ ಗ್ರಂಟ್ ಮತ್ತು ವಿಲಿಯಮ್ ಮ್ಯಾಕ್‌ಗಿಲಿವ್ರೆಯವರೊಡನೆ ನಿಕಟ ಸಂಬಂಧ ಬೆಳೆಯಿತು. ಅಲ್ಲದೆ ಅಲ್ಲಿಯ ಪ್ಲಿನಿಯನ್ ಸಂಘದ ಆಶ್ರಯದಲ್ಲಿ ಆಗಾಗ್ಗೆ ಸಮುದ್ರತೀರಕ್ಕೆ ಹೋಗಿ ಪ್ರಾಣಿ ಮತ್ತು ಸಸ್ಯಗಳ ಅಧ್ಯಯನದಲ್ಲಿ ತೊಡಗುತ್ತಿದ್ದ. ಮಗನ ಚಟುವಟಿಕೆಗಳಿಗೆ ಬೇಸತ್ತ ತಂದೆ ಈತ ಮತಧರ್ಮಶಾಸ್ತ್ರದಲ್ಲಿ ಶಿಕ್ಷಣ ಪಡೆದು ಮಠಾಧಿಪತಿಯಾದರೂ ಆಗಲೆಂದು ಡಾರ್ವಿನ್ನನನ್ನು ಕೇಂಬ್ರಿಜ್ ವಿಶ್ವವಿದ್ಯಾಲಯಕ್ಕೆ (೧೮೨೭) ಕಳುಹಿಸಿದ. ಡಾರ್ವಿನ್ ಅಲ್ಲಿನ ಕ್ರೈಸ್ಟ್ ಕಾಲೇಜಿಗೆ ಸೇರಿದ. ಆದರೆ ಅಲ್ಲಿಯೂ ಶಿಕ್ಷಣದಲ್ಲಿ ಆಸಕ್ತಿಯುಂಟಾಗಲಿಲ್ಲ. ಆಗಿನ ಕಾಲಕ್ಕೆ ಈ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಮತ್ತು ಗಣಿತಶಾಸ್ತ್ರಗಳಿಗೆ ಪ್ರಾಧಾನ್ಯ ಇತ್ತೇ ವಿನಾ ಪ್ರಕೃತಿವಿಜ್ಞಾನಕ್ಕೆ ಪ್ರಾಮುಖ್ಯವಿರಲಿಲ್ಲ. ಅಲ್ಲಿದ್ದ ಸಸ್ಯಶಾಸ್ತ್ರದ ಶಿಕ್ಷಕರಾದ ಜಾನ್ ಸ್ಟೀವೆನ್ಸ್ ಹೆನ್ಸ್ಲೊ ಮತ್ತು ಭೂವಿಜ್ಞಾನದ ಶಿಕ್ಷಕರಾದ ವಿಲಿಯಮ್ ಸೆಜ್‌ವಿಕ್ ಅವರ ಪಾಠಪ್ರವಚನಗಳು ಮಾತ್ರ ಈತನನ್ನು ಆಕರ್ಷಿಸಿದುವು. ಮತಧರ್ಮಶಾಸ್ತ್ರದ ಪರೀಕ್ಷೆಯಲ್ಲಿ ಸಾಮಾನ್ಯದರ್ಜೆಯಲ್ಲಿ ಉತ್ತೀರ್ಣನಾಗಿ ಬಿ.ಎ. ಪದವಿಯನ್ನು ಪಡೆದ (೧೮೩೧).

ಅದೇ ಸಮಯಕ್ಕೆ ಸರಿಯಾಗಿ ಎಚ್‌ಎಂಎಸ್ ಬೀಗಲ್ ಎಂಬ ಬ್ರಿಟಿಷ್ ಹಡಗು ದಕ್ಷಿಣ ಅಮೆರಿಕ ಹಾಗೂ ಆಸ್ಟ್ರೇಲಿಯ ಖಂಡಗಳ ತೀರಪ್ರದೇಶಗಳಿಗೆ ಅಲ್ಲಿನ ಭೂವಿಜ್ಞಾನ, ಪ್ರಕೃತಿವಿಜ್ಞಾನ ಮೊದಲಾದವುಗಳ ಬಗ್ಗೆ ಅಧ್ಯಯನ ನಡೆಸುವ ಸಲುವಾಗಿ ಯಾನ ಹೊರಟಿತ್ತು. ಅದಕ್ಕೆ ಒಬ್ಬ ಪ್ರಕೃತಿ ವಿಜ್ಞಾನಿಯ ಅವಶ್ಯಕತೆಯಿತ್ತು. ಡಾರ್ವಿನ್ನನಿಗೆ ಈ ಕರ್ತವ್ಯಭಾರವನ್ನು ಹೊರುವ ಕರೆ ಬಂತು. ಮೊದಲಮೊದಲು ಡಾರ್ವಿನ್ನನ ತಂದೆ ವಿರೋಧಿಸಿದ. ಆದರೆ ಡಾರ್ವಿನ್ನನ ಸೋದರಮಾವ ಜೊಸೈಯ ವೆಜ್‌ವುಡ್ II ನ ಶಿಫಾರಸಿನಿಂದಾಗಿ ಪ್ರಕೃತಿವಿಜ್ಞಾನಿಯಾಗಿ ಸೇರಿಕೊಂಡ. ೧೮೩೧–೧೮೩೬ರ ವರೆಗೆ ೫ ವರ್ಷಗಳ ಕಾಲ ಬೀಗಲ್ ಹಡಗು ದಕ್ಷಿಣ ಅಮೆರಿಕದ ತೀರದ ರೇವುಗಳಲ್ಲಿ ತಂಗಿದ್ದು ಬ್ರಜಿಲ್,

ರಯೊಡಿಜನಿರೊ, ಮಾಂಟಿವಿಡಿಯೋ, ಬೆರಿಯ ಬ್ಲಾಂಕ, ಉರುಗ್ವೆ, ಪಟಗೋನಿಯ, ಟೀಯೆರ ಡೆಲ್ ಫ್ಯೂಯೇಗೋ, ಚಿಲಿ, ಭೂಮಧ್ಯರೇಖೆಯ ಬಳಿಯಿರುವ ಮತ್ತು ದಕ್ಷಿಣ ಅಮೆರಿಕ ಖಂಡಕ್ಕೆ ೮೦೦–೯೫೦ ಕಿಮೀ ದೂರವಿರುವ ಗಲಾಪಾಗಸ್ ದ್ವೀಪಗಳನ್ನು ಸಂದರ್ಶಿಸಿ ಮುಂದುವರಿದು ತಾಹಿತಿ ದ್ವೀಪಗಳು, ನ್ಯೂಜ಼ೀಲೆಂಡ್, ಆಸ್ಟ್ರೇಲಿಯ, ಕೀಲಿಂಗ್ ದ್ವೀಪಗಳು, ಮಾರಿಷಸ್, ಸೇಂಟ್ ಹೆಲಿನ, ಬೇಹಿಯ ಮೊದಲಾದ ಪ್ರದೇಶಗಳಿಗೆ ಭೇಟಿಕೊಟ್ಟು ಕೊನೆಗೆ ತಾಯ್ನಾಡಿಗೆ ಹಿಂದಿರುಗಿತು.

ಚಾರ್ಲ್ಸ್ ಒಳ್ಳೆಯ ಸಂಶೋಧಕ, ನೋಡಿದ್ದನ್ನು ನಿಖರವಾಗಿ ವರದಿ ಮಾಡತಕ್ಕವ. ಬೇಸರಪಡದೆ ತಾಳ್ಮೆಯಿಂದ ಪ್ರಕೃತಿದತ್ತವಾದ ಸಸ್ಯ ಪ್ರಾಣಿಗಳನ್ನು ಪರೀಕ್ಷಿಸುವುದೇ ಅಲ್ಲದೆ ಅವುಗಳನ್ನು ಮತ್ತು ಆಯಾ ಪರಿಸರಗಳಲ್ಲಿ ದೊರಕುವ ಗತಕಾಲದ ಜೀವಿಗಳ ಪಳೆಯುಳಿಕೆಗಳನ್ನು ಈತ ಸಂಗ್ರಹಿಸಿದ. ಹೀಗೆ ಸಂಗ್ರಹಿಸಿದ ವಸ್ತುಗಳನ್ನು ಹಡಗಿನಲ್ಲಿ ತುಂಬಿಕೊಳ್ಳುತ್ತಿದ್ದುದೇ ಅಲ್ಲದೆ ಪ್ರತಿ ರೇವಿನಲ್ಲೂ ಅವನ್ನು ಮನೆಗೆ ಕಳುಹಿಸಿಕೊಡುತ್ತಿದ್ದ. ಪಟಗೋನಿಯ ಮತ್ತು ಟೀಯೆರಡೆಲ್ ಫ್ಯೂಯೇಗೋಗಳಲ್ಲಿ ಆ ಕಾಲದ ಮತ್ತು ಗತಿಸಿದ ಕಾಲದ ಜೀವರಾಶಿಗಳಲ್ಲಾಗುವ ಬದಲಾವಣೆಯನ್ನು ನೋಡಿ ಜೀವಿಗಳು ನಿರಂತರವಾಗಿ ಬದಲಾವಣೆ ಹೊಂದುತ್ತವೆಂಬುದನ್ನು ಮನಗಂಡ. ಜೀವ ವಿಕಾಸದ ಸ್ಥೂಲಚಿತ್ರ ಮಸುಕು ಮಸುಕಾಗಿ ಈತನ ಮನಸ್ಸಿನಲ್ಲಿ ಹೊಳೆಯಿತು. ಆ ಕಾಲಕ್ಕೆ ಸರ್ ಚಾರ್ಲ್ಸ್ ಲೈಯಲ್ಲನ ಭೂ ವಿಜ್ಞಾನದ ಪುಸ್ತಕವನ್ನು ಈತ ಓದಿದ್ದ. ಲೈಯಲ್ ತನ್ನ ಪುಸ್ತಕದಲ್ಲಿ ಭೂಮಿಯ ಲಕ್ಷಣಗಳು ನಿರಂತರವಾಗಿ ಬದಲಾಗುತ್ತಲೇ ಇರುತ್ತವೆ, ಇಂದಿನ ಭೂಲಕ್ಷಣಗಳು ಹಿಂದಿನ ಭೌಗೋಳಿಕ ಲಕ್ಷಣಗಳನ್ನು ನಿರ್ಧರಿಸಬಹುದು ಎಂದು ನಿರೂಪಿಸಿದ್ದ. ಈ ಸಿದ್ಧಾಂತದ ಹಿನ್ನೆಲೆಯಲ್ಲಿ ಇಂದಿನ ಪ್ರಾಣಿಗಳನ್ನು ಮತ್ತು ಗತಿಸಿದ ಪ್ರಾಣಿಗಳ ಫಾಸಿಲುಗಳನ್ನು ಡಾರ್ವಿನ್ ತುಲನಾತ್ಮಕವಾಗಿ ಅಧ್ಯಯನ ಮಾಡಿದ.

ಗಲಾಪಾಗಸ್ ದ್ವೀಪಗಳು ಅಗ್ನಿಪರ್ವತಗಳ ಚಟುವಟಿಕೆಯಿಂದ ರೂಪುಗೊಂಡ ದ್ವೀಪಗಳು. ಇವು ಪ್ರಾಕೃತಿಕ ಪ್ರಯೋಗಾಲಯಗಳಂತಿದ್ದು ಜೀವ ಪ್ರಭೇದಗಳ ಹುಟ್ಟಿನ ಇತಿಹಾಸವನ್ನು ವಿವರಿಸುವಂತಿದ್ದುವು. ಆ ದ್ವೀಪಗಳಲ್ಲಿ ವಾಸಿಸುತ್ತಿದ್ದ ದೈತ್ಯಾಕಾರದ ಆಮೆಗಳು ಒಂದೊಂದು ದ್ವೀಪದಲ್ಲೂ ಒಂದೊಂದು ತೆರನಾಗಿದ್ದುದನ್ನು ಡಾರ್ವಿನ್ ಗಮನಿಸಿದ. ಹೊರನೋಟಕ್ಕೆ ಬೇರೆ ಬೇರೆಯಾಗಿದ್ದರೂ ಅವು ಪರಸ್ಪರ ಸಂಬಂಧಿಗಳೆಂಬ ಅಂಶ ಎದ್ದು ಕಾಣುತ್ತಿತ್ತು. ಈ ತುಲನಾತ್ಮಕ ಅಧ್ಯಯನದಿಂದ ಹತ್ತಿರದ ಖಂಡಪ್ರದೇಶಗಳಲ್ಲಿ ವಾಸಿಸುವ ಒಂದು ಮೂಲ ಆಮೆಯ ಗುಂಪಿನಿಂದ ಶಾಖೋಪಶಾಖೆಗಳಾಗಿ ಕವಲೊಡೆದು ಕೊನೆಗೆ ಈಗಿನ ಆಮೆಗಳು ಹೊರಹೊಮ್ಮಿ ರೂಪುಗೊಂಡಿರುವುವೆಂದು ಡಾರ್ವಿನ್ನನಿಗೆ ಭಾಸವಾಯಿತು. ಇದೇ ಕತೆ ಅಲ್ಲಿದ್ದ ಫಿಂಚ್ ಪಕ್ಷಿಗಳಿಗೂ ಅನ್ವಯವಾಗುವುದನ್ನು ಮನದಟ್ಟು ಮಾಡಿಕೊಂಡ. ಈ ಯಾನ ಡಾರ್ವಿನ್ನನ ಜೀವನದಲ್ಲಿಯೇ ಅತ್ಯಂತ ಮುಖ್ಯ ಘಟನೆಯೆನಿಸಿತು. ತಾಯ್ನಾಡಿಗೆ ಹಿಂದಿರುಗಿದ ಮೇಲೆ ಸಾಕುಪ್ರಾಣಿ ಹಾಗೂ ಸಾಗುವಳಿ ಸಸ್ಯಗಳಲ್ಲಿ ಕಂಡುಬರುವ ವಿವಿಧತೆಗಳ ಬಗ್ಗೆ ಹಾಗೂ ಉತ್ತಮೋತ್ತಮ ತಳಿಗಳ ಆಯ್ಕೆ ಮಾಡಿ ಉತ್ತಮ ತಳಿಗಳನ್ನು ವೃದ್ಧಿಪಡಿಸುವುದರ ಬಗ್ಗೆ ಮಾಹಿತಿ ಮತ್ತು ವಿವರಗಳನ್ನು ಕಲೆಹಾಕಲಾರಂಭಿಸಿದ. ಮಾನವನ ಫಲದಾಯಕ ಪ್ರಗತಿಗೆ ಆಯ್ಕೆಯೇ ಪ್ರಧಾನವೆಂಬುದು ಈತನಿಗೆ ವೇದ್ಯವಾಯಿತು. ಭೂವಿಜ್ಞಾನ, ವ್ಯವಸಾಯ, ಮಾನವ ವಿಜ್ಞಾನ ಬಗ್ಗೆ ಹೊಸ ಹೊಸ ವಿಷಯಗಳಿಗಾಗಿ ತಜ್ಞರೊಡನೆ ಪತ್ರ ವ್ಯವಹಾರಮಾಡಿ ವಿಷಯಗಳನ್ನು ಸಂಗ್ರಹಿಸಿದ. ಏತನ್ಮಧ್ಯೆ ನೌಕಾಯಾತ್ರೆಯಲ್ಲಿ ಆದ ಅನುಭವಗಳನ್ನು ಬೀಗಲ್ ಯಾತ್ರೆಯಲ್ಲಿ ನಡೆಸಿದ ಭೂವೈಜ್ಞಾನಿಕ ಮತ್ತು ಪ್ರಕೃತಿವೈಜ್ಞಾನಿಕ ಸಂಶೋಧನೆಗಳು (೧೮೩೯), ಪ್ರಕೃತಿ ವಿಜ್ಞಾನಿಯ ಪ್ರಪಂಚಯಾತ್ರೆ (೧೮೪೫) ಎಂಬ ಲೇಖನಗಳಲ್ಲಿ ಬರೆದ. ಇವುಗಳ ಜೊತೆಗೆ ಹವಳದಿಣ್ಣೆಗಳ ರಚನೆ ಮತ್ತು ಪ್ರಸರಣ (೧೮೪೨), ಬೀಗಲ್ ಯಾತ್ರೆಯ ಪ್ರಾಣಿವಿಜ್ಞಾನ (೧೮೪೩), ಅಗ್ನಿಪರ್ವತ ದ್ವೀಪಗಳು (೧೮೪೪), ಭೂವಿಜ್ಞಾನದ ಸಂಕ್ಷೇಪಣಗಳು (೧೮೪೪–೪೬) ಎಂಬ ಪ್ರಬಂಧಗಳನ್ನೂ ರಚಿಸಿದ.

೧೮೩೮ರಲ್ಲಿ ಈತನ ಜೀವನದಲ್ಲಿ ಎರಡು ಪ್ರಮುಖ ಘಟನೆಗಳು ಜರುಗಿದವು. ಮೊದಲನೆಯದು ತನ್ನ ಸೋದರಮಾವನ ಮಗಳಾದ ಎಮ್ಮ ವೆಜ್‌ವುಡ್‌ಳೊಂದಿಗೆ ವಿವಾಹ. ಎರಡನೆಯದು ಸಮಾಜವಿಜ್ಞಾನ ಹಾಗೂ ಗಣಿತಗಳಿಗೆ ಸಂಬಂಧಿಸಿದ ತಾಮಸ್ ರಾಬರ್ಟ್ ಮ್ಯಾಲ್ತಸ್‌ನ ಜೀವಸಂದಣಿಯ ತತ್ತ್ವಗಳಿಗೆ ಸಂಬಂಧಿಸಿದ ಪ್ರಬಂಧವನ್ನು (೧೭೯೮) ಓದಿದ್ದು. ಈ ಗ್ರಂಥ ಡಾರ್ವಿನ್ನನ ಮನಸ್ಸಿನಲ್ಲಿ ಜೀವವಿಕಾಸದ ವಿಚಾರಸರಣಿಯನ್ನು ವೈಜ್ಞಾನಿಕ ನಿಟ್ಟಿನಲ್ಲಿ ಕರೆದೊಯ್ಯಲನುವಾಯಿತು. ಮನುಷ್ಯರ ಸಂಖ್ಯೆ ಜ್ಯಾಮಿತೀಯ ಶ್ರೇಣಿಯಲ್ಲಿ ಹೆಚ್ಚುತ್ತದೆಯೆಂದೂ ಇದರಿಂದ ಪ್ರಕೃತಿ ಒದಗಿಸುವ ಆಹಾರಕ್ಕೆ ಚ್ಯುತಿಬರುತ್ತದೆಂದೂ ತತ್ಫಲವಾಗಿ ಬಾಳ್ವೆಗಾಗಿ ಹೋರಾಟ ನಡೆಯುತ್ತದೆ. ಹಸಿವು, ರೋಗರುಜಿನಗಳು, ಯುದ್ಧ ಮೊದಲಾದವು ಮಾನವ ಸಂಖ್ಯೆಯನ್ನು ಒಂದು ಮಿತದಲ್ಲಿಡುವುವೆಂದೂ ಮ್ಯಾಲ್ತಸ್ ತನ್ನ ಗ್ರಂಥದಲ್ಲಿ ವಿವರಿಸಿದ್ದ. ಇದರ ಜೊತೆಗೆ ತನ್ನ ದೇಶಪರ್ಯಟನೆಯಲ್ಲಿ ಗಮನಿಸಿದ ಜೀವನದ ಹೋರಾಟ, ಬಲಿಷ್ಠರ ಉಳಿವು, ಅಬಲರ ಅಳಿವು ಮುಂತಾದವುಗಳ ಫಲವಾಗಿ ಪ್ರಭೇದಗಳ ಉಗಮ ಎಂಬ ಜೀವವಿಕಾಸದ ಕಲ್ಪನೆ ಡಾರ್ವಿನ್ನನ ಮನಸ್ಸಿನಲ್ಲಿ ರೂಪುಗೊಂಡಿತು. ಜೀವಿಗಳ ಮೇಲೆ ನಿಸರ್ಗದ ಆಯ್ಕೆ (ನ್ಯಾಚುರಲ್ ಸೆಲೆಕ್ಷನ್) ಬೀರುವ ಪ್ರಭಾವದ ಅರಿವಾದುದು ಈ ಗ್ರಂಥದ ಮೂಲಕವೇ. ಫ್ರಾನ್ಸಿನ ಜೀವವಿಕಾಸವಾದಿ ಲಮಾರ್ಕ್ (ನೋಡಿ) ಎಲ್ಲಿ ಎಡವಿದ್ದನೋ ಅಲ್ಲಿ ಈತ ಜಯಗಳಿಸಿದ್ದ. ಆದರೂ ಲಮಾರ್ಕನ ವಿಚಾರಸರಣಿಯನ್ನು ಡಾರ್ವಿನ್ ಭಾಗಶಃ ಒಪ್ಪಿಕೊಂಡಿದ್ದ. ಆದರೆ ಈತನ ದೃಷ್ಟಿಯಲ್ಲಿ ಜೀವಿಪ್ರಭೇದಗಳ ಉಗಮಕ್ಕೆ ನಿಸರ್ಗದ ಆಯ್ಕೆಯೇ ಪ್ರಮುಖ ಹಾಗೂ ಪ್ರಬಲ ಅಂಶ.

೧೮೪೨ರ ಹೊತ್ತಿಗೆ ಡಾರ್ವಿನ್ನನ ಮನಸ್ಸಿನಲ್ಲಿ ಜೀವವಿಕಾಸದ ತತ್ತ್ವಗಳ ಪ್ರಮುಖ ರೂಪರೇಖೆಗಳ ಚೌಕಟ್ಟು ನಿರ್ಮಾಣವಾಗಿತ್ತು. ಈ ವೇಳೆಗೆ ಡಾರ್ವಿನ್ನನ ಆರೋಗ್ಯ ಕುಂಠಿತಗೊಂಡುದರಿಂದ ಈತ ಲಂಡನ್ ನಗರವನ್ನು ಬಿಟ್ಟು ಕೆಂಟ್ ಪ್ರದೇಶದಲ್ಲಿರುವ ಡೌನ್ ಎಂಬ ಗ್ರಾಮಕ್ಕೆ ಬಂದು ನೆಲೆಸಿದ. ಇದೇ ಈತನ ಮುಂದಿನ ಜೀವನದ ಕ್ರಿಯಾಕ್ಷೇತ್ರವಾಯಿತು. ೧೮೪೪ರಲ್ಲಿ ತನ್ನ ತತ್ವದ ವಿವರಗಳನ್ನು ಹೆಚ್ಚಿಸಿ ೨೩೧ ಪುಟದ ಪ್ರಬಂಧದಲ್ಲಿ ಬರೆದಿಟ್ಟ. ಆದರೆ ಅದನ್ನು ಪ್ರಕಟಿಸುವ ಧೈರ್ಯ ಮಾಡಲಿಲ್ಲ. ತನ್ನ ಲೇಖನವನ್ನು ಆಪ್ತರಾದ ಸರ್ ಚಾರ್ಲ್ಸ್ ಲೈಯಲ್‌ಗೆ (೧೭೯೭–೧೮೭೫) ತೋರಿಸಿದ. ಡಾರ್ವಿನ್ ೧೮೩೮–೪೧ರವರೆಗೆ ಲಂಡನ್ನಿನ ಭೂವಿಜ್ಞಾನದ ಸಂಘದ ಕಾರ್ಯದರ್ಶಿಯಾಗಿ ಕೆಲಸಮಾಡುತ್ತಿದ್ದ ಕಾಲದಲ್ಲಿ ಲೈಯಲ್ ಒಡನೆ ನಿಕಟ ಸಂಪರ್ಕ ಬೆಳಸಿಕೊಂಡಿದ್ದ.

೧೮೪೬–೫೪ರ ವರೆಗೂ ತನ್ನ ದಿನಚರಿಯ ಹೆಚ್ಚು ಕಾಲವನ್ನು ಆಧುನಿಕ ಮತ್ತು ಪ್ರಾಚೀನ ಸಿರಿಪೀಡಿಯಗಳ ಅಧ್ಯಯನದ ಬಗ್ಗೆ ವ್ಯಯಿಸಿದ. ಇದರ ಫಲವೇ ಬದುಕಿರುವ ಸಿರಿಪೀಡಿಯ ಮತ್ತು ಬ್ರಿಟನ್ನಿನ ಪ್ರಾಚೀನ ಸಿರಿಪೀಡಿಯ ಎಂಬ ಗ್ರಂಥದ ಪ್ರಕಟನೆ (೧೮೫೪).

ಕೊನೆಗೂ ಧೈರ್ಯಮಾಡಿ ತನ್ನ ಮನಸ್ಸಿನಲ್ಲೇ ರೂಪುಗೊಂಡಿದ್ದ ಜೀವಿ ವಿಕಾಸದ ತತ್ವಗಳನ್ನು ಪ್ರಬಂಧದ ರೂಪದಲ್ಲಿ ೧೮೫೬ರಲ್ಲಿ ಬರೆಯಲಾರಂಭಿಸಿದ. ಅಷ್ಟರ ಹೊತ್ತಿಗೆ ಅದೇ ವರ್ಷದ ಜೂನ್ ತಿಂಗಳಲ್ಲಿ ಅಲ್ಫ್ರಡ್ ರೆಸೆಲ್ ವ್ಯಾಲೇಸ್‌ನಿಂದ (೧೮೨೩–೧೯೧೩) ಒಂದು  ಕಾಗದ ಬಂತು. ಇಂಗ್ಲೆಂಡಿನ ಪ್ರಕೃತಿವಿಜ್ಞಾನಿಯಾಗಿದ್ದ ಈತ ದಕ್ಷಿಣ ಅಮೆರಿಕ ಮತ್ತು ಈಸ್ಟ್ ಇಂಡೀಸ್‌ಗಳಿಗೆ ಬೇಟಿಕೊಟ್ಟು ವಲಯ ದ್ವೀಪಸ್ತೋಮಗಳಲ್ಲಿ ಒಂದಾದ ಮಲಕಸ್‌ನಲ್ಲಿರುವ ಟೆರ್‌ನಾಟ್ ಎಂಬಲ್ಲಿ ಸಂಶೋಧನೆ ನಡೆಸುತ್ತಿದ್ದ. ಪತ್ರದಲ್ಲಿ ಡಾರ್ವಿನ್ನನ ಮನಸ್ಸಿನಲ್ಲಿಯೇ ಇದ್ದ ಜೀವವಿಕಾಸದ ಚಿತ್ರದ ಸಂಕ್ಷಿಪ್ತ ವಿವರಣೆ ಇತ್ತು. ಈ ಕಾಗದವನ್ನು ಆಪ್ತರಾದ ಲೈಯಲ್ ಮತ್ತು ಹುಕರ್ ಅವರಿಗೆ ತೋರಿಸಿದ. ಅವರು ವ್ಯಾಲೇಸ್ ಪ್ರಬಂಧವನ್ನೂ ಡಾರ್ವಿನ್ ಬರೆದಿದ್ದ ಪ್ರಬಂಧದ ಸಾರಾಂಶವನ್ನೂ ಲಿನಿಯನ್ ಸಂಘದಲ್ಲಿ ಓದುವಂತೆ ಡಾರ್ವಿನ್ನನ ಮನವೊಲಿಸಿದರು. ಈ ಲೇಖನಗಳನ್ನು ೧೮೫೮ ಜುಲೈ ಒಂದನೆಯ ತಾರೀಕು ಓದಿದ. ಅಲ್ಲದೆ ಸಂಘದ ಪತ್ರಿಕೆಯಲ್ಲಿ ಈ ಲೇಖನ ಪ್ರಕಟವೂ ಆಯಿತು. ವ್ಯಾಲೇಸ್ ಕೂಡ ಚಾರ್ಲ್ಸ್ ಡಾರ್ವಿನ್ನನ ಜೀವವಿಕಾಸದ ತತ್ವಗಳನ್ನು ಪ್ರತಿಪಾದಿಸಿದ್ದರೂ, ಮಾಹಿತಿಗಳನ್ನು ಸಂಗ್ರಹಿಸಿ ಒಪ್ಪವಾದ ರೀತಿಯಲ್ಲಿ ಅಳವಡಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ ಕೀರ್ತಿ ಡಾರ್ವಿನ್ನನಿಗೆ ಸಲ್ಲುತ್ತದೆ.

ಡಾರ್ವಿನ್ನನಿಗಿಂತ ಹಿಂದೆಯೇ ಹಲವಾರು ಪ್ರಕೃತಿವಿಜ್ಞಾನಿಗಳು, ಕವಿಗಳು, ತತ್ವಶಾಸ್ತ್ರಜ್ಞರು, ದಾರ್ಶನಿಕರು ಬಹು ಹಿಂದಿನಿಂದ ಜೀವಿಸ್ವರೂಪದಲ್ಲಿ ಕಂಡು ಬರುವ ಬದಲಾವಣೆಗಳನ್ನು ವಿವರಿಸುತ್ತ ಬಂದಿದ್ದರೂ (ಡಾರ್ವಿನ್ನನ ತಾತ ಎರ್ಯಾಸ್ಮಸನೂ ಜೀವವಿಕಾಸ  ತತ್ವ ಪ್ರತಿಪಾದಿಸಿದವನು) ಬೈಬಲಿನಲ್ಲಿ ನಿರೂಪಣೆಯಾಗಿದ್ದ ವಿಶೇಷ ಸೃಷ್ಟಿಯ ಬಗ್ಗೆ ಪ್ರತಿಭಟನೆ ನಡೆದಿರಲಿಲ್ಲ. ಆದರೆ ಡಾರ್ವಿನ್ ತಾನು ಸಂಗ್ರಹಿಸಿದ್ದ ಸಾಕ್ಷ್ಯಾಧಾರಗಳ ಮೂಲಕ ವೈಜ್ಞಾನಿಕ ದಾಖಲೆಗಳನ್ನು ನೀಡಿ ೧೮೫೯ರಲ್ಲಿ ನಿಸರ್ಗದ ಆಯ್ಕೆಯಿಂದ ಪ್ರಭೇದಗಳ ಉಗಮ ಎಂಬ ಕ್ರಾಂತಿಕಾರಿ ಗ್ರಂಥವನ್ನು ಪ್ರಕಟಿಸಿದ. ಮ್ಯಾಲ್ತಸ್‌ನ ಪುಸ್ತಕದ ಓದುವಿಕೆಯಿಂದ ನಿಸರ್ಗದ ಆಯ್ಕೆಯ ಅರಿವು ಉಂಟಾಯಿತಾದರೂ ಈತನ ತತ್ವ ಪ್ರತಿಪಾದನೆಗೆ ಬೇಕಾದ ಬಾಳ್ವೆಗಾಗಿ ಹೋರಾಟ ಅಥವಾ ಜೀವನದ ಹೋರಾಟ, ಯೋಗ್ಯತಮ ಜೀವಿಗಳ ಉಳಿವು ಎಂಬ ಉಪಯುಕ್ತ ಪದಸಮುಚ್ಚಯಗಳನ್ನು ಹರ್ಬರ್ಟ್ ಸ್ಪೆನ್ಸರನ (೧೮೨೦–೧೯೦೩) ಲೇಖನಗಳು ಒದಗಿಸಿದವು. ಈ ಗ್ರಂಥದಲ್ಲಿ ಜೀವವಿಕಾಸದ ತರ್ಕ ಸರಳವಾಗಿದೆ. ಸ್ಪಷ್ಟವಾಗಿದೆ. ಇದು ಪ್ರಕಟಣೆಯಾದ ದಿನವೇ (೨೪, ನವೆಂಬರ್ ೧೮೫೯) ಮುದ್ರಿಸಿದ ೧೨೫೦ ಪ್ರತಿಗಳಲ್ಲೆವೂ ಖರ್ಚಾದವಂತೆ. ಇದರಿಂದ ಅದೇ ವರ್ಷ ಈ ಗ್ರಂಥದ ಎರಡನೆಯ ಮುದ್ರಣ ಹೊರಬಿತ್ತು. ಈ ಗ್ರಂಥ ಜನಪ್ರಿಯವಾಗಿ

ಡಾರ್ವಿನ್ನನ ಜೀವಮಾನದಲ್ಲಿಯೇ ನಾಲ್ಕು ಬಾರಿ ೧೮೬೧, ೧೮೬೬, ೧೮೬೯ ಮತ್ತು ೧೮೭೨ಗಳಲ್ಲಿ ಪರಿಷ್ಕರಿಸಲ್ಪಟ್ಟಿತು.

ಇಂಗ್ಲೆಂಡು, ಯೂರೋಪು ಮತ್ತು ಅಮೆರಿಕಗಳ ವಿಜ್ಞಾನಿಗಳು ಡಾರ್ವಿನ್ನನ ಜೀವವಿಕಾಸವಾದವನ್ನು ಒಪ್ಪಿಕೊಂಡು, ಸ್ವಾಗತಿಸಿದರು. ಆದರೆ ಮತಧರ್ಮದಲ್ಲಿ ಅದರಲ್ಲೂ ಬೈಬಲಿನ ನಿರೂಪಣೆಯಲ್ಲಿ ನಂಬಿಕೆಯನ್ನಿಟ್ಟಿದ್ದವರಿಗೂ ವಿಕಾಸವಾದವನ್ನು ಒಪ್ಪಿಕೊಂಡ ಹೊಸ ಪಂಥದವರಿಗೂ ಘರ್ಷಣೆಗಳಾರಂಭವಾದವು. ಡಾರ್ವಿನ್ ತನ್ನ ಸಿದ್ಧಾಂತವನ್ನು ಪ್ರಚುರಪಡಿಸುವುದಕ್ಕಾಗಲೀ ಪ್ರತಿಪಾದಿಸುವುದಕ್ಕಾಗಲೀ ಸಾರ್ವಜನಿಕವಾಗಿ ವೇದಿಕೆಯ ಮೇಲೆ ನಿಂತವನಲ್ಲ. ಆದರೆ ಇಂಗ್ಲೆಂಡಿನ ತಾಮಸ್ ಹೆನ್ರಿ ಹಕ್ಸ್ಲೀ (೧೮೨೫–೧೮೯೫) ಜರ್ಮನಿಯ ಎರ್ನೆಸ್ಟ್ ಹೆಕೆಲ್ ಮತ್ತು ಅಮೆರಿಕದ ಅಸಾ ಗ್ರೇ ಅವರು ಬೈಬಲ್ಲಿನಲ್ಲಿ ನಿವೇದಿಸಿರುವ ಮಾನವನ ವಿಶೇಷ ಸೃಷ್ಟಿ ಸುಳ್ಳೆಂದು ಹೇಳಿ ಪ್ರತಿಯೊಂದು ಜೀವಿರಾಶಿಯೂ ಪ್ರಕೃತಿ ಕೈವಾಡದಿಂದ ರೂಪುಗೊಂಡಿರುವುದೆಂಬ ಡಾರ್ವಿನ್ನನ ವಿಚಾರಸರಣಿಗಳನ್ನು ಮತ್ತು ತತ್ತ್ವ ನಿರೂಪಣೆಗಳನ್ನು ತಮ್ಮ ತಮ್ಮ ತಾಯ್ನಾಡುಗಳಲ್ಲಿ ವಿವರಿಸಿದರು.

ಡಾರ್ವಿನ್ ತನ್ನ ಕ್ರಾಂತಿಕಾರಿ ಕೃತಿಗೆ ಸಂಪೋಷಣೆ ಕೊಡುವ ಮತ್ತೆ ಮೂರು ಗ್ರಂಥಗಳನ್ನು ಪ್ರಕಟಿಸಿದ. ಪಳಗಿಸಿದ ಸಸ್ಯ ಮತ್ತು ಪ್ರಾಣಿಗಳ ವಿವಿಧತೆಗಳು (೧೮೬೮), ಮಾನವನ ಅವತರಣ (೧೮೭೧) ಮತ್ತು ಮಾನವನ ಮತ್ತು ಪ್ರಾಣಿಗಳಲ್ಲಿ ಸಂವೇಗಗಳ ಅಭಿವ್ಯಕ್ತತೆ (೧೮೭೨) – ಇವೇ ಈ ಗ್ರಂಥಗಳು. ತನ್ನ ವಾದಕ್ಕೆ ಹೆಚ್ಚಿನ ಸಾಕ್ಷ್ಯಾಧಾರಗಳನ್ನು ಈ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾನೆ. ಇವು ಮತಾನುಯಾಯಿಗಳನ್ನು ಮತ್ತೆ ಮತ್ತೆ ಕೆರಳಿಸಿದ್ದವು.

ಡಾರ್ವಿನ್ ವೈಯಕ್ತಿಕವಾಗಿ ಸಹೃದಯ, ದಯಾಳು, ವಿನಯಪರ, ಉದಾರಿ. ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಎಂದೂ ಮುಂದೆ ಬಂದವನಲ್ಲ. ಮೇಲಿನ ಕೃತಿಗಳಲ್ಲದೆ ತನ್ನ ಗ್ರಾಮದಲ್ಲಿಯೇ ಇದ್ದು ಮೌನವಾಗಿ ಸಂಶೋಧನೆ ನಡೆಸಿ ಅನೇಕ ಗ್ರಂಥಗಳನ್ನು ಪ್ರಕಟಿಸಿದ. ಇವುಗಳಲ್ಲಿ ಮುಖ್ಯವಾದವು: ಆರ್ಕಿಡ್ ಹೂಗಳಲ್ಲಿ ನಿಷೇಚನೆ (೧೮೬೨), ಸುರುಳಿ ಬಳ್ಳಿಗಳ ಚಲನೆ ಮತ್ತು ಸ್ವಭಾವ (೧೮೬೫), ಕೀಟಾಹಾರಿ ಸಸ್ಯಗಳು (೧೮೭೫), ಸ್ವಕೀಯ ಮತ್ತು ಪರಕೀಯ ಪರಾಗ ಸ್ಪರ್ಶದಿಂದ ಸಸ್ಯವರ್ಗಗಳಲ್ಲಾಗುವ ಬದಲಾವಣೆಗಳು (೧೮೭೬), ಒಂದೇ ಜೀವಿ ಪ್ರಭೇದದ ಸಸ್ಯದ ಹೂಗಳಲ್ಲಿ ಕಂಡುಬರುವ ರೂಪವೈವಿಧ್ಯ (೧೮೭೭), ಸಸ್ಯಗಳಲ್ಲಿ ಚಲನಶಕ್ತಿ (೧೮೮೦), ಎರೆ ಹುಳುಗಳು ಮಣ್ಣನ್ನು ಸಜ್ಜುಗೊಳಿಸುವ ಕ್ರಿಯೆ (೧೮೮೧).

ಡಾರ್ವಿನ್ ದಂಪತಿಗಳಿಗೆ ಹತ್ತು ಜನ ಮಕ್ಕಳು. ಅವರಲ್ಲಿ ಮೂವರು ಎಳೆ ವಯಸ್ಸಿನಲ್ಲಿಯೇ ತೀರಿಕೊಂಡರು. ಗಂಡು ಮಕ್ಕಳಲ್ಲಿ ನಾಲ್ವರು ಹೆಸರಾಂತ ವಿಜ್ಞಾನಿಗಳು. ಹಿರಿಯ ಮಗ ವಿಲಿಯಂ ಎರ್‍ಯಾಸ್ಮಸ್ ಡಾರ್ವಿನ್, ಸೌತ್ ಹಾಂಪ್ಟನ್‌ನಲ್ಲಿ; ಹಾವರ್ಡ್ ಡಾರ್ವಿನ್ (೧೮೪೫–೧೯೧೨), ಈತ ಬ್ರಿಟನ್ನಿನ ಹೆಸರಾಂತ ಖಗೋಳವಿಜ್ಞಾನಿ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ. ಸೌರವ್ಯೂಹದ ವಿಕಾಸದ ಬಗ್ಗೆ ಪ್ರೌಢತತ್ತ್ವವನ್ನು ನಿರೂಪಿಸಿದ. ಅಲ್ಲದೆ ಸಾಗರದ ಅಲೆಗಳ ಬಗ್ಗೆ ಸಂಶೋಧನೆಯನ್ನೂ ನಡೆಸಿದ. ಮೂರನೆಯ ಮಗ ಸರ್ ಫ್ರಾನ್ಸಿಸ್ ಡಾರ್ವಿನ್ (೧೮೪೮–೧೯೨೫) ಲಂಡನ್ನಿನ ಸೇಂಟ್ ಜಾರ್ಜ್ ಆಸ್ಪತ್ರೆಯಲ್ಲಿ ವೈದ್ಯವೃತ್ತಿಗಾಗಿ ಶಿಕ್ಷಣ ಪಡೆದಿದ್ದರೂ ಆ ಕ್ಷೇತ್ರದಲ್ಲಿ ಮುಂದುವರಿಯದೆ ತಂದೆಯ ಕೆಲಸದಲ್ಲಿ ಸಹಾಯಕನಾಗಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಸಸ್ಯವಿಜ್ಞಾನದ ರೀಡರ್ ಆಗಿದ್ದ. ಈತ ತಂದೆಯೊಡನೆ ಸೇರಿಕೊಂಡು ಸಸ್ಯಗಳ ಚಲನಶಕ್ತಿಯ ಬಗ್ಗೆ ಸಂಶೋಧನೆ ನಡೆಸಿದ. ತನ್ನ ತಂದೆಯ ಜೀವನ ಚರಿತ್ರೆಯನ್ನೂ ಈತ ಬರೆದಿದ್ದಾನೆ. ನಾಲ್ಕನೆಯ ಮಗನೇ ಲಿಯೊನಾರ್ಡ್ ಡಾರ್ವಿನ್, ರಾಯಲ್ ಎಂಜಿನಿಯರಿಂಗ್ ಶಾಲೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದವನು ಮತ್ತು ಖಗೋಳವಿಜ್ಞಾನದಲ್ಲಿ ಸಂಸೊಧನೆ ನಡೆಸಿದವನು. ಹಾರಸ್ ಡಾರ್ವಿನ್ ಎಂಬವನು ಐದನೆಯವನು. ಈತ ಯಂತ್ರವಿಜ್ಞಾನದಲ್ಲಿ ಚತುರ. ಕೇಂಬ್ರಿಜ್ ವಿಶ್ವವಿದ್ಯಾಲಯದ ವಿಜ್ಞಾನೋಪಕರಣಗಳ ಕಾರ್ಖಾನೆಯನ್ನು ವೃದ್ಧಿಪಡಿಸಿದ.

ಡಾರ್ವಿನ್ನನ ಮುಪ್ಪಿನ ಸಮಯದಲ್ಲಿ ಅವನಿಗೆ ಕೇಂಬ್ರಿಜ್ ವಿಶ್ವವಿದ್ಯಾಲಯ ಎಲ್‌ಎಲ್.ಡಿ. ಗೌರವ ಪದವಿಯನ್ನು ನೀಡಿತು (೧೮೭೭). ಇದಕ್ಕೆ ಆರು ವರ್ಷಗಳ ಹಿಂದೆಯೇ ಈತನಿಗೆ ಪ್ರಷ್ಯನ್ ಆರ್ಡರ್ ಆಫ್ ನೈಟ್‌ಹುಡ್ ಎಂಬ ಅಂತಾರಾಷ್ಟ್ರೀಯ ಪ್ರಶಸ್ತಿಯೂ ಬಂದಿತ್ತು. ೧೮೭೯ರಲ್ಲಿ ಲಂಡನ್ನಿನ ಫಿಸೀಷಯನ್ಸ್ ಕಾಲೇಜಿನವರು ಒಂದು ಸ್ವರ್ಣಪದಕವನ್ನು ಕೊಟ್ಟು ಸತ್ಕರಿಸಿದರು. ೧೮೮೨ರ ಏಪ್ರಿಲ್ ೨೬ರಂದು ಈತ ತೀರಿಕೊಂಡಾಗ ಈತನ ಪಾರ್ಥೀವ ಶರೀರವನ್ನು ವೆಸ್ಟ್ ಮಿನ್‌ಸ್ಟರ್ ಅಬೆಯಲ್ಲಿ ಐಸಾಕ್ ನ್ಯೂಟನ್ನನ ಸಮಾಧಿಯ ಪಕ್ಕದಲ್ಲಿ ಹೂಳಲಾಯಿತು. ಅಂತ್ಯ ಸಂಸ್ಕಾರದ ಸಮಯದಲ್ಲಿ ಇವನ ಆಪ್ತರಾದ ಹುಕರ್, ಹಕ್ಸಲೀ ಮತ್ತು ವ್ಯಾಲೇಸ್ ಇದ್ದರಲ್ಲದೆ ಅಮೆರಿಕದ ರಾಯಭಾರಿ ಜೇಮ್ಸ್ ರಸೆಲ್ ಹಾಗೂ ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೇನ್ ಮತ್ತು ರಷ್ಯಗಳ ರಾಜತಾಂತ್ರಿಕರೂ ಇದ್ದರು.

(ಬಿ.ಎಸ್.ಬಿ.;ಜೆ.ಆರ್.ವಿ.)

ಜೀವವಿಕಾಸ ಮೂಲತಃ ಡಾರ್ವಿನ್ನನ ಕಲ್ಪನೆಯಲ್ಲವೆಂಬುದು ಗಮನಿಸಬೇಕಾದ ಅಂಶ. ಕೆಳವರ್ಗದ ಜೀವಿಗಳಲ್ಲಿ ಕಂಡುಬರುವ ವಿಕಾಸಗಳ ಅಂತಿಮ ಫಲವೇ ಮನುಷ್ಯ ಮತ್ತು ಆತನ ದೇಹರಚನೆ ಮತ್ತು ವರ್ತನೆಗಳಲ್ಲಿ ಮೂಲಾಂಶರೂಪಗಳಲ್ಲಿ ಕಂಡುಬರುತ್ತದೆ ಎಂಬ ವಿಚಾರ ಬಹಳ ಪ್ರಾಚೀನವಾದುದು. ಭಾರತೀಯ ವಿಚಾರಧಾರೆಯಲ್ಲಿಯೂ (ಜೈನ ಮತ್ತು ವೈದಿಕ) ಜೀವವಿಕಾಸಕ್ಕೆ ಸಂಬಂಧಿಸಿದಂತೆ ಕೆಲವು ಒಳನೋಟಗಳು ಅಲ್ಲಲ್ಲಿ ಹೊಳೆದಿರುವುದನ್ನು ಕಾಣಬಹುದು. ಜೀವಿಯೊಂದು ಜನ್ಮ ಜನ್ಮಾಂತರಗಳಲ್ಲಿ ವಿವಿಧ ಪ್ರಾಣಿ ಮತ್ತು ಮಾನವ ರೂಪಗಳನ್ನು ತಾಳಬಹುದೆಂಬ ಜೈನ ಕಲ್ಪನೆಯಲ್ಲಿ ವಿಕಾಸ ಮತ್ತು ಅವನತಿ ಭಾವಗಳೆರಡೂ ಅಡಕವಾಗಿದ್ದರೆ ವೈದಿಕ ದರ್ಶನದ ಅವತಾರ ಕಲ್ಪನೆಯಲ್ಲಿ ವಿಕಾಸ ವಿಚಾರ ಹೊಳೆದಿರುವುದನ್ನು ಕಾಣಬಹುದು. ಇದರಂತೆಯೇ ಪಾಶ್ಚಾತ್ಯರಲ್ಲಿಯೂ ಪ್ರಾಚೀನ ಹಾಗೂ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳ ದಾರ್ಶನಿಕರಲ್ಲಿಯೂ ಕೆಲವರು ಜೀವಿ ವಿಕಾಸದ ಬಗ್ಗೆ ವಿಚಾರ ಮಾಡಿದ್ದುದು ಕಂಡುಬರುತ್ತವೆ. ಪ್ರಾಣಿಗಳ ಮತ್ತು ಮಾನವನ ಉಗಮಕ್ಕೆ ಸಂಬಂಧಿಸಿದಂತೆ, ಡಾರ್ವಿನ್ನನ ಕಾಲದಲ್ಲಿಯೇ ವಿವಿಧ ವಿಚಾರಧಾರೆಗಳು ಪ್ರಚಲಿತವಾಗಿದ್ದವು. ಪ್ರತಿಯೊಂದು ಪ್ರಾಣಿವರ್ಗವೂ ಪ್ರತ್ಯೇಕವಾಗಿ ಸೃಷ್ಟಿಯಾಗಿದೆ ಎಂಬ ನಂಬಿಕೆ ಆ ಕಾಲದಲ್ಲಿ ಬಹಳ ಪ್ರಬಲವಾಗಿತ್ತು. ಒಂದು ಪ್ರಾಣಿವರ್ಗ ಮತ್ತೊಂದು ಪ್ರಾಣಿವರ್ಗವನ್ನಾಗಿ ಕ್ರಮೇಣ ಮಾರ್ಪಡುವ ಸಾಧ್ಯತೆ ಇದೆ ಎಂಬ ವಿಚಾರ ಅಲ್ಲಲ್ಲಿ ಕಂಡುಬರುತ್ತಿತ್ತಾದರೂ ಅದನ್ನು ಪುಷ್ಟೀಕರಿಸುವಂಥ ಪುರಾವೆಗಳು ಅಸ್ಪಷ್ಟ ಹಾಗೂ ಅಪೂರ್ಣವಾಗಿದ್ದವು. ಬಹಳ ಕಾಲದಿಂದ ಈ ಪುರಾವೆಗಳ ಅರಿವಿದ್ದರೂ, ಹರಿದು ಹಂಚಿದಂತಿದ್ದ ಅವುಗಳನ್ನೆಲ್ಲ ಸಂಶ್ಲೇಷಿಸುವ ಮಹಾತ್ಕಾರ್ಯ ಡಾರ್ವಿನ್ನನ ಪಾಲಿನದಾಗಿತ್ತು. ಬೀಗಲ್ ಯಾನದಿಂದ ತಾನು ಸಂಗ್ರಹಿಸಿದ ಮಾಹಿತಿಗಳನ್ನು ಮತ್ತು ಆಗಲೇ ಸಿದ್ಧರೂಪದಲ್ಲಿದ್ದ ಕೆಲವು ಪುರಾವೆಗಳನ್ನು ಕ್ರೋಢಿಕರಿಸಿ, ತನ್ನ ಪ್ರಬಲ ವಿಚಾರಗಳ ವಿಶ್ಲೇಷಣೆಯ ಒರೆಗಲ್ಲ ಮೇಲಿಟ್ಟು, ಈ ಎಲ್ಲ ತಾಥ್ಯಾಂಶಗಳ ಮತ್ತು ವಿಚಾರಗಳ ನಡುವಣ ಸಂಬಂಧಗಳನ್ನು ಗುರುತಿಸಿ ಆತ ತನ್ನ ಜೀವವಿಕಾಸ ಸಿದ್ಧಾಂತವನ್ನು ರೂಪಿಸಿದ. ತನ್ನ ಸಿದ್ಧಾಂತವನ್ನು ಸಮರ್ಥಿಸಲು ಆತ ಅವಲಂಬಿಸಿದ ಪುರಾವೆಗಳಲ್ಲಿ ಮುಖ್ಯವಾದವುಗಳೆಂದರೆ ಭೂವಿಜ್ಞಾನ ದಾಖಲೆಗಳು, ತಪ್ಪಿದ ಕೊಂಡಿಗಳು, ಭೌಗೋಳಿಕ ವಿತರಣೆ, ತೌಲನಿಕ ಅಂಗಾಂಗಶಾಸ್ತ್ರ, ಇತ್ಯಾದಿ. ಇಂಥ ಪುರಾವೆಗಳಲ್ಲದೆ ತನ್ನ ವಾದವನ್ನು ಪುಷ್ಟಿಕರಿಸಲೋಸ್ಕರ ಡಾರ್ವಿನ್ ನೈಸರ್ಗಿಕ ಆಯ್ಕೆಯ ಸಿದ್ಧಾಂತವನ್ನು ರೂಪಿಸಿದ.

ಕೇವಲ ತಾರ್ಕಿಕ ವಾದವಿವಾದಗಳ ಜಟಿಲಜಾಲವಾಗಿ ಮಾನಸಿಕ ತತ್ತ್ವಶಾಸ್ತ್ರ (ಮೆಂಟಲ್ ಫಿಲಾಸಫಿ) ಎನಿಸಿಕೊಂಡು ಶತ ಶತಮಾನಗಳವರೆಗೆ ಉಳಿದು ಬಂದಿದ್ದ ಒಂದು ಜ್ಞಾನಕ್ಷೇತ್ರ ಇಂದು ಆಧುನಿಕ ಮನೋವಿಜ್ಞಾನವೆನಿಸಿ ವೈವಿಧ್ಯಪೂರ್ಣವಾಗಿ ಅಭಿವೃದ್ಧಿ ಹೊಂದಲು ಡಾರ್ವಿನ್ನನ ವಿಕಾಸವಾದವೂ ಪ್ರಮುಖ ಕಾರಣವಾಗಿದೆ ಎಂಬುದು ಗಮನಾರ್ಹ ಸಂಗತಿ. ಜೀವಿಗಳ ವರ್ತನೆಯನ್ನು ಅವಲೋಕನಾತ್ಮಕ ಹಾಗೂ ಪ್ರಾಯೋಗಿಕ ವಿಜ್ಞಾನಗಳಿಂದ ವಸ್ತುನಿಷ್ಠ ರೀತಿಯಲ್ಲಿ ಅಧ್ಯಯನ ಮಾಡಲೂ ಪ್ರಾಣಿಗಳು ಮತ್ತು ಮಾನವ ವರ್ತನೆಗಳ ತೌಲನಿಕ ಪರಿಶೀಲನೆಗೂ ಮೇಲಿನ ಸಿದ್ಧಾಂತ ಪ್ರಬಲ ಆಧಾರವಾಗಿ ಪರಿಣಮಿಸಿತು. ಅಂದಮೇಲೆ ತೌಲನಿಕ ಮನೋವಿಜ್ಞಾನದ (ಕಂಪ್ಯಾರಟಿವ್ ಸೈಕಾಲಜಿ) ಉಗಮ ಮತ್ತು ಬೆಳೆವಣಿಗೆಗಳಿಗೆ ಇದರ ಕೊಡುಗೆ ಅಪಾರವಾದುದು ಎಂದು ಹೇಳಿದರೆ ತಪ್ಪಾಗದು. ಇಷ್ಟವಿಲ್ಲದೆ, ಡಾರ್ವಿನ್ನನೇ ಸ್ವಂತ ಸಂಶೋಧನೆಗಳಿಂದ ಮನೋವಿಜ್ಞಾನಕ್ಕೆ ಕೊಡುಗೆ ಇತ್ತಿದ್ದಾನೆ ಎಂಬುದು ಇನ್ನೂ ಕುತೂಹಲಕಾರಿಯಾದ ಅಂಶ.

ತನ್ನ ಸಿದ್ಧಾಂತವನ್ನು ಸ್ಥಾಪಿಸುವ ಸಲುವಾಗಿ ಡಾರ್ವಿನ್ನನು ನಡೆಸುತ್ತಿದ್ದ ಸಂಶೋಧನೆಗಳಲ್ಲಿ, ಚಾರಿತ್ರಿಕವಾಗಿ ಪ್ರಾಮುಖ್ಯವೆನಿಸಿರುವ ಸಂವೇಗಗಳ ಮೇಲಿನ ಅವಲೋಕನಗಳೂ ಸೇರುತ್ತವೆ. ಅಂಥ ಅವಲೋಕನಗಳಿಂದ ದೊರೆತ ತಥ್ಯಾಂಶಗಳನ್ನೆಲ್ಲ ಕ್ರೋಡೀಕರಿಸಿ, ಮನುಷ್ಯ ಮತ್ತು ಪ್ರಾಣಿಗಳಲ್ಲಿ ಸಂವೇಗಗಳ ಅಭಿವ್ಯಕ್ತತೆ ಎಂಬ ಗ್ರಂಥವನ್ನು ಈತ ಪ್ರಕಟಿಸಿದ. ಮಾನವನ ಸಂವೇಗಗಳಿಗೆ ಸಂಬಂಧಿಸಿದಂತೆ ತನ್ನದೇ ಆದ ಒಂದು ಸಿದ್ಧಾಂತವನ್ನು ಡಾರ್ವಿನ್ ಈ  ಪುಸ್ತಕದಲ್ಲಿ ಪ್ರತಿಪಾದಿಸಿರುವುದನ್ನು ಕಾಣಬಹುದು. ಈತನ ಪ್ರಕಾರ, ಮನುಷ್ಯರಲ್ಲಿ ಕಂಡು ಬರುವ ಅನೇಕ ಸಂವೇಗಗಳು, ಪ್ರಾಣಿ ಪೂರ್ವಜರಿಂದ ಆನುವಂಶೀಯವಾಗಿ ಬಂದ ಕೊಡುಗೆಗಳು. ಪ್ರಾಣಿಗಳ ಹಂತದಲ್ಲಿ ಉಪಯುಕ್ತವೆನಿಸಿದ್ದ ಈ ಸಂವೇಗಗಳು, ಮಾನವನಲ್ಲಿ ಕೇವಲ ಉಳಿಕೆಗಳೆನಿಸಿ ನಿರುಪಯುಕ್ತವಾಗುತ್ತವೆ. ಉದಾಹರಣೆಗೆ ಕೋಪೋದ್ರಿಕ್ತಸ್ಥಿತಿಯ ಮನುಷ್ಯ ತನ್ನ ಕೋರೆಹಲ್ಲುಗಳನ್ನು ಮಸೆಯುವ ಪ್ರವೃತ್ತಿಯನ್ನು ತೋರುತ್ತಾನೆ. ಹಾಗೆ ಮಾಡುವುದು ನಿರುಪಯುಕ್ತ ಎನಿಸಿದರೂ ಆ ಪ್ರತಿಕ್ರಿಯೆ ನಡೆಯುತ್ತದೆ. ಆದರೆ ಇದೇ ರೀತಿಯ ಪ್ರತಿಕ್ರಿಯೆ ಪ್ರಾಣಿಗಳಲ್ಲಿ ಕಂಡುಬಂದಾಗ, ಕೋಪಕ್ಕೆ ಕಾರಣವಾದ ಜೀವಿಯನ್ನು ಬೆದರಿಸುವುದರ ಜೊತೆಗೆ ಅದರ ಮೇಲೆ ಹಲ್ಲುಗಳನ್ನು ಪ್ರಯೋಗಿಸುವ ಉದ್ದೇಶವೂ ಇರುತ್ತದೆ. ಪ್ರಾಣಿಗಳ ಮಟ್ಟದಲ್ಲಿ ಯಾವುದೋ ಉಪಯುಕ್ತ

ಪಾತ್ರವನ್ನು ನಿರ್ವಹಿಸುತ್ತಿದ್ದು, ಮುಂದೆ ವಿಕಾಸ ಪ್ರಕ್ರಿಯೆ ಫಲವಾಗಿ ಮಾನವನಲ್ಲಿಯೂ ಕಾಣಿಸಿಕೊಳ್ಳಬಹುದಾದ ಇಂಥ ಉಳಿಕೆಗಳೂ ವಿಕಾಸವಾದಕ್ಕೆ ಪುರಾವೆಗಳೆನಿಸಿವೆ.

ಇಂದು ಆಧುನಿಕ ಮನೋವಿಜ್ಞಾನದಲ್ಲಿ ಕಲಿಕೆ, ಅಲೋಚನೆ, ಅಭಿಪ್ರೇರಣೆ ಮೊದಲಾದ ವರ್ತನಾ ಪ್ರಕಾರಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗೆಲ್ಲ ಡಾರ್ವಿನ್ನನ ವಿಕಾಸವಾದ ಭದ್ರವಾದ ನೆಲಗಟ್ಟನ್ನು ಒದಗಿಸಿದೆ ಎಂದು ಹೇಳಬಹುದು. ಮಾನವನ ಮಟ್ಟದಲ್ಲಿ ಹೆಚ್ಚು ಜಟಿಲವಾಗಿ ಕಂಡುಬರುವ ವರ್ತನೆಯ ಮೂಲ ರೂಪಗಳನ್ನು ಪ್ರಾಣಿಗಳ ಮಟ್ಟದಲ್ಲಿ ಅವಲೋಕಿಸಿ, ತನ್ಮೂಲಕ ರೂಪಿಸಲಾದ ಸಿದ್ಧಾಂತಗಳನ್ನು, ಮಾನವ ವರ್ತನೆಯನ್ನು ಅರ್ಥಮಾಡಿಕೊಳ್ಳಲು ಅನ್ವಯಿಸುವ ಅನುಕೂಲ ಇದರಿಂದ ಪ್ರಾಪ್ತವಾಗಿದೆ. ಅಲ್ಲದೆ ಅನೇಕ ವೇಳೆ ನೈತಿಕ ಅಥವಾ ಇತರ ಕಾರಣಗಳಿಗಾಗಿ ಮಾನವನ ಮೇಲೆ ನಡೆಸಲಾದ ಪ್ರಯೋಗಗಳನ್ನು ಪ್ರಾಣಿಗಳ ಮೇಲೆ ನಡೆಸಿ ಅನೇಕ ಜಟಿಲಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯುವುದು ಸಾಧ್ಯವಾಗಿದೆ. ಒಟ್ಟಿನಲ್ಲಿ ಪ್ರಾಣಿಗಳ ಮತ್ತು ಮನುಷ್ಯನ ಜೈವಿಕ ಹಾಗೂ ಮಾನಸಿಕ ಘಟನೆಗಳ ತೌಲನಿಕ ಅಧ್ಯಯನಗಳಿಗೆ ಡಾರ್ವಿನ್ ಕೊಟ್ಟಿರುವ ಕೊಡುಗೆ ಅನುಪಮವಾದುದು ಎಂದು ಹೇಳಬಹುದು. (ಡಿ.;ಎಸ್.ಕೆ.ಆರ್.)

**ಡಾಲ್ಫಿನ್:** ಸಿಟೇಶಿಯ ಗಣದ ಡೆಲ್ಫಿನಿಡೆ, ಪ್ಲಾಟನಿಸ್ಟಿಡೆ ಮತ್ತು ಸ್ಟೆನಿಡೆ ಕುಟುಂಬಗಳಿಗೆ ಸೇರಿದ ಸಮುದ್ರವಾಸಿ ಸ್ತನಿಗಳಿಗಿರುವ ಸಾಮಾನ್ಯ ಹೆಸರು. ದೊಡ್ಡ ದೇಹ ಮತ್ತು ಲಂಬವಾದ ಕೊಕ್ಕಿನಂತಹ ಮೂತಿ ಇವುಗಳ ವೈಶಿಷ್ಟ್ಯ. ಬುದ್ಧಿವಂತಿಕೆ ಮತ್ತು ಸ್ನೇಹಸ್ವಭಾವಕ್ಕೆ ಹೆಸರುವಾಸಿ. ಡೆಲ್ಫಿನಸ್ ಡೆಲ್ಫಿಸ್ ಮತ್ತು ಟರ್ಸಿಯಾಪ್ಸ್ ಟ್ರಂಕೇಟಸ್ ಪ್ರಭೇದಗಳು ಸರ್ವೇಸಾಮಾನ್ಯವಾದ ಡಾಲ್ಫಿನ್‌ಗಳು. ಇವುಗಳನ್ನು ಬಾಟಲ್ ನೋಸ್ಡ್ ಡಾಲ್ಫಿನ್‌ಗಳೆನ್ನುವುದುಂಟು. ಡೆಲ್ಫಿನಿಡೆ ಕುಟುಂಬಕ್ಕೆ ಸೇರಿವೆ. ಈ ಕುಟುಂಬದಲ್ಲಿ ಒಟ್ಟು 32 ಪ್ರಭೇದಗಳಿವೆ. ಉದಾ, ಕಪ್ಪು ಅಥವಾ ಕಂದು ಬಣ್ಣದ ಮೇಲ್ಭಾಗ ಮತ್ತು ತಿಳಿಬಣ್ಣದ ಉದರ ಭಾಗವನ್ನು ಹೊಂದಿವೆ. 1–4 ಮೀ ಉದ್ದ ಬೆಳೆಯುತ್ತವೆ. ತೂಕ ಸು. 200 ಕಿಗ್ರಾಂ. ಮೀನುಗಳು ಇವುಗಳ ಆಹಾರ. ದೊಡ್ಡ ದೊಡ್ಡ ಗುಂಪಿನಲ್ಲಿರುತ್ತವೆ. ಪ್ಲಾಟನಿಸ್ಟಿಡೆ ಕುಟುಂಬದವನ್ನು ನದಿ ಡಾಲ್ಫಿನ್‌ಗಳೆನ್ನುತ್ತಾರೆ. 4 ಜಾತಿಗಳಿವೆ. ದಕ್ಷಿಣ ಅಮೇರಿಕ ಮತ್ತು ಏಷ್ಯದ ಸಿಹಿನೀರಿನಲ್ಲಿ ವಿಸ್ತರಿಸಿವೆ. ಮೂತಿ ತೆಳ್ಳಗಿದ್ದು ಉದ್ದವಾಗಿದೆ. ದೃಷ್ಟಿ ಅಷ್ಟೇನೂ ಸಮರ್ಪಕವಾಗಿಲ್ಲ. ಸ್ಟೆನಿಡೆ




ಪ್ಲಾಟನಿಸ್ಟ ಇಂಡಿ (ಇಂಡಸ್ ಡಾಲ್ಫಿನ್)
**ಅ. ಪಾರ್ಶ್ವ ನೋಟ, ಆ. ಮೇಲ್ಭಾಗದ ನೋಟ**

ಕುಟುಂಬ 8 ಪ್ರಭೇದಕ್ಕೆ ಸೇರಿದ ಉದ್ದ ಮೂತಿಯ ಡಾಲ್ಫಿನ್‌ಗಳನ್ನೊಳಗೊಂಡಿದೆ. ಇವುಗಳ ಮೂತಿ ಉಳಿದೆರಡು ಕುಟುಂಬಗಳಿಗೆ ಸೇರಿದ ಡಾಲ್ಫಿನ್‌ಗಳಿಗಿಂತ ಉದ್ದವಾಗಿರುತ್ತದೆ. ಉಷ್ಣವಲಯದ ನದಿ ಮತ್ತು ಸಮುದ್ರಗಳಲ್ಲಿ ಕಾಣಸಿಗುತ್ತವೆ.

ಟರ್ಸಿಯಾಪ್ಸ್ ಟ್ರಂಕೇಟಸ್‌ನಲ್ಲಿ ಬೆನ್ನಿನ ಮೇಲಿರುವ ರೆಕ್ಕೆ ಚೂಪಾದ ಹಾಗೂ ಹಿಂದಕ್ಕೆ ಬಾಗಿದ ತುದಿಯನ್ನು ಹೊಂದಿದೆ. 80–88 ಶಂಖಾಕೃತಿಯ ಚೂಪಾದ ಹಲ್ಲುಗಳಿವೆ.

ಸಂತಾನೋತ್ಪತ್ತಿಯ ಕಾರ್ಯ ವಸಂತಕಾಲದಿಂದ ಬೇಸಿಗೆವರೆಗೆ. ಗರ್ಭಾವಧಿಯ ಸಮಯ 11–12 ತಿಂಗಳು. ಮರಿ ಹೊರಬರುವ ಸಮಯದಲ್ಲಿ ಇನ್ನೆರಡು ಹೆಣ್ಣುಗಳು ತಾಯಿಯ ಅಕ್ಕಪಕ್ಕದಲ್ಲಿದ್ದು ಶಾರ್ಕ್‌ಗಳಿಂದ ರಕ್ಷಿಸುತ್ತವೆ. ಮರಿ ತಾಯಿಯ ಹೊಟ್ಟೆಯಿಂದ ಹೊರಬಂದಾಕ್ಷಣವೆ ಸುಲಲಿತವಾಗಿ ಈಜಲು ಪ್ರಾರಂಭಿಸುತ್ತದೆ. ಆದರೆ ಮೊದಲೆರಡು ವಾರ ತಾಯಿಯ ಜೊತೆಯಲ್ಲಿಯೇ ಇರುತ್ತದೆ. ಈ ಸಮಯದಲ್ಲಿ ಗಂಟೆಗೆ ಎರಡು ಬಾರಿ ತಾಯಿ ಮರಿಗೆ ಹಾಲುಣಿಸುತ್ತದೆ. (ಎಸ್.ಕೆ.ಎಚ್)

**ಡಾಸ್ಯೂರ್:** ಆಸ್ಟ್ರೇಲಿಯ ಹಾಗೂ ಟಾಸ್ಮೇನಿಯಗಳಲ್ಲಿ ವಾಸಿಸುವ ಒಂದು ಬಗೆಯ ಸ್ತನಿ. ಇದು ಮೆಟತೀರಿಯ ಉಪವರ್ಗದ ಮಾರ್ಸ್ಯುಪಿಯೇಲಿಯ ಗಣದ ಡಾಸಿಯೂರಿಡೆ ಕುಟುಂಬಕ್ಕೆ ಸೇರಿದೆ. ಆಸ್ಟ್ರೇಲಿಯದಲ್ಲಿ ಇದಕ್ಕೆ "ಸ್ಥಳೀಯ ಬೆಕ್ಕು" ಎಂಬ ಹೆಸರಿದೆ. ಇದರ ದೇಹದ ಉದ್ದ 40–45 ಸೆಂಮೀ. ಬಾಲದ ಉದ್ದ 20–30 ಸೆಂಮೀ. ದೇಹದ ಬಣ್ಣ ಗಾಢ ಕಂದು. ಜೊತೆಗೆ ಬಿಳಿಚುಕ್ಕೆಗಳಿವೆ. ಆದ್ದರಿಂದ ಡಾಸ್ಯೂರನ್ನು ಚುಕ್ಕೆ ಬೆಕ್ಕು ಎಂದು ಕರೆಯುತ್ತಾರೆ. ಇದು ಮಾಂಸಾಹಾರಿ ಮತ್ತು ನಿಶಾಚರಿ. ಹಗಲಿನಲ್ಲಿ ಹೊರಗಿನ ಶಬ್ದ ಕೇಳದಂತೆ ತನ್ನ ಕಿವಿಗಳನ್ನು ಮಡಚಿಕೊಂಡು ಮರದ ಪೊಟರೆ ಅಥವಾ ಕಲ್ಲುಗಳ ಮಧ್ಯೆ ನಿರ್ಮಿಸಿಕೊಂಡ ಬಿಲಗಳಲ್ಲಿ ಮಲಗಿರುತ್ತದೆ. ಕೀಟಗಳು, ಹಲ್ಲಿಗಳು, ಮೀನು, ಸಣ್ಣ ಸಣ್ಣ ಪಕ್ಷಿಗಳು ಹಾಗೂ ಸ್ತನಿಗಳು ಇದರ ಮುಖ್ಯ ಆಹಾರ. ಮರವನ್ನು ಸುಲಭವಾಗಿ ಹತ್ತಬಲ್ಲುದು. ತಾಯಿ ಮರಿಗಳನ್ನು ತನ್ನ ಹೊಟ್ಟೆಯ ತಳಭಾಗದಲ್ಲಿರುವ ಚೀಲದಲ್ಲಿ ಅಡಗಿಸಿಕೊಂಡು, ಮೊಲೆಯುಣಿಸಿ ಸಾಕುತ್ತದೆ. ಡಾಸ್ಯೂರ್ ಮಾನವ ನೆಲೆಗೆ ಬಹಳ ಸುಲಭವಾಗಿ ಹೊಂದಿಕೊಳ್ಳುವುದರಿಂದ ಇದನ್ನು ಪಳಗಿಸಿ ಸಾಕುಪ್ರಾಣಿಯಾಗಿ ಉಪಯೋಗಿಸಬಹುದು. ಪೈರನ್ನು ನಾಶಮಾಡುವ ಇಲಿ, ಹೆಗ್ಗಣ, ಮೊಲ ಮುಂತಾದವನ್ನು ನಾಶಮಾಡಲು ಇದು ಬಹಳ ಸಹಕಾರಿಯಾಗಿದೆ. ಆದರೆ ಕೆಲವು ಸಾರಿ ಇದು ಕುರಿ, ಕೋಳಿಗಳನ್ನು ಕೊಲ್ಲುವುದುಂಟು.

ಡಾಸ್ಯೂರಿನಲ್ಲಿ ಡಾಸ್ಯೂರಸ್, ಡಾಸ್ಯೂರಿನಸ್, ಸೇಟನೆಲಸ್ ಮತ್ತು ಡಾಸ್ಯೂರಾಪ್ಸ್ ಎಂಬ ನಾಲ್ಕು ಮುಖ್ಯ ಜಾತಿಗಳಿವೆ. (ಕೆ.ಪಿ.ಆರ್.)

**ಡಿಂಗೊ:** ಸ್ತನಿ ವರ್ಗದ, ಕಾರ್ನಿವೊರ ಗಣದ ಕ್ಯಾನಿಡೆ ಕುಟುಂಬಕ್ಕೆ ಸೇರಿದೆ. ವೈಜ್ಞಾನಿಕ ಹೆಸರು ಕ್ಯಾನಿಸ್ ಡಿಂಗೊ. ಇದು ಆಸ್ಟ್ರೇಲಿಯದ ಕಾಡು ನಾಯಿ. ಆಸ್ಟ್ರೇಲಿಯದ ಜರಾಯು ಪ್ರಾಣಿಗಳಲ್ಲಿ ಒಂದು. ವಾರಿಗಲ್ ಇದರ ಪರ್ಯಾಯ ನಾಮ. ಸು. 40,000 ವರ್ಷಗಳ ಹಿಂದೆ, ಏಷ್ಯದಿಂದ ಆಸ್ಟ್ರೇಲಿಯಕ್ಕೆ ವಲಸೆ ಹೋದ ಮಾನವ ಈ ನಾಯಿಯನ್ನು ತನ್ನ ಜೊತೆಯಲ್ಲಿ ಕೊಂಡೊಯ್ದಿರಬೇಕೆಂದು ಹೇಳಲಾಗಿದೆ. ಹೀಗೆ ಕೊಂಡೊಯ್ಯುವಾಗ ಸಾಕುಪ್ರಾಣಿಯಾಗಿಯೇ ಇತ್ತೆಂದು, ಕಾಲಕ್ರಮೇಣ ವಿಕಾಸದ ಹಾದಿಯಲ್ಲಿ ಕಾಡುಪ್ರಾಣಿಯಂತೆ ಪರಿವರ್ತನೆಯಾಗಿದೆ ಎಂದು ನಂಬಲಾಗಿದೆ. ಇದು ತೋಳಕ್ಕಿಂತ ಚಿಕ್ಕಗಾತ್ರದ ಪ್ರಾಣಿ. ಇದು ನ್ಯೂಗಿನಿ, ಇಂಡೋನೇಷಿಯ, ಮಲೇಷಿಯಾ, ಫಿಲಿಫೈನ್ಸ್, ಬರ್ಮ, ಥೈಲ್ಯಾಂಡ್ ಮತ್ತು ದಕ್ಷಿಣ ಚೀನಾ ದೇಶದಲ್ಲಿ ವಾಸಿಸುತ್ತದೆ. ಎತ್ತರ 60 ಸೆಂಮೀ, ಉದ್ದ 90 ಸೆಂಮೀ, ಸು. 30 ಸೆಂಮೀ ಉದ್ದದ ಪೊದೆ ಪೊದೆಯಾದ ಬಾಲವಿದೆ. ದೇಹದ ಮೇಲೆಲ್ಲ ಕೆಂಗೆಂದು ಬಣ್ಣದ ಮೃದುವಾದ ತುಪ್ಪುಳದಂಥ ಕೂದಲಿವೆ. ಕೆಲವು ಸಲ ಮೈ ಬಣ್ಣ ಕಪ್ಪಾಗಿರುವುದು. ದೇಹದ ಗಾತ್ರಕ್ಕೆ ಹೋಲಿಸಿದರೆ ಕೊಂಚ ಉದ್ದ ಕಾಣುವ ಕಾಲುಗಳಿವೆ. ಮೂತಿ ಅಗಲವಾಗಿದ್ದು ಮೋಟಾಗಿದೆ. ಇದು 10 ರಿಂದ 24

ಡಿಂಗೊ

ಕಿಗ್ರಾಂ ತೂಕವಿರುತ್ತದೆ. ದವಡೆಗಳು ಬಹಳ ಬಲವಾಗಿದ್ದು, ಕೆಳದವಡೆ ಮೇಲಕ್ಕೆ ಕೆಳಕ್ಕೆ ಮಾತ್ರ ಚಲಿಸುವಂತಿದೆ. ಇದರಿಂದ ತನ್ನ ಎರೆಗಳು ತಪ್ಪಿಸಿಕೊಳ್ಳದ ಹಾಗೆ ಹಿಡಿಯಲು

ಅನುಕೂಲ. ಮುಂದಿನ ಕಾಲಿನಲ್ಲಿ ಐದು ಬೆರಳುಗಳು ಹಿಂಗಾಲಿನಲ್ಲಿ ನಾಲ್ಕು ಬೆರಳುಗಳಿವೆ. ಬೆರಳಿನಲ್ಲಿರುವ ಉಗುರುಗಳನ್ನು ಹಿಂದಕ್ಕೆ ಎಳೆದುಕೊಳ್ಳಲಾರದು. ಇದರಿಂದ ಡಿಂಗೊ ನಡೆಯುತ್ತಿರುವಾಗ ಶಬ್ದವುಂಟಾಗುತ್ತದೆ. ಬಯಲಿನ ಕುರುಚಲುಕಾಡು ಪ್ರದೇಶದಲ್ಲಿ ಡಿಂಗೋ ವಾಸಿಸುತ್ತದೆ. ಹಗಲೆಲ್ಲ ಪೊದೆಯೊಂದರಲ್ಲಿ ಅಡಗಿದ್ದು ರಾತ್ರಿ ಬೇಟೆಗೆಂದು ಹೊರಡುತ್ತದೆ. ಕಾಂಗರೂ ಇದರ ಮೆಚ್ಚಿನ ಆಹಾರ. ಒಂಟೊಂಟಿಯಾಗಿ ಅಥವಾ ಸಣ್ಣಗುಂಪುಗಳಲ್ಲಿ ಬೇಟೆಯಾಡುತ್ತದೆ. ಕೆಲವು ಸಲ ಕೋಳಿ–ಕುರಿಗಳನ್ನೂ ಹಿಡಿದು ತಿನ್ನುತ್ತದೆ. ಇದು ನಾಯಿಯಾಗಿದ್ದರೂ ಬೊಗುಳುವುದಿಲ್ಲ. ಕುಂಯಿಗುಡುತ್ತದೆ ಅಥವಾ ಊಳಿಡುತ್ತದೆ. ನಾಯಿ ಕುಟುಂಬದ ಇತರ ಪ್ರಾಣಿಗಳಲ್ಲಿರುವಂತೆ ಡಿಂಗೋವಿನಲ್ಲೂ ಗಂಡಿನ ಶಿಶ್ನದ ಮುಂಭಾಗದ ಸುತ್ತಲೂ ಹಿಂದಕ್ಕೆ ಬಾಗಿರುವ ಕೊಕ್ಕೆಗಳಂಥ ರಚನೆಗಳಿವೆ. ಇವು ಸಂಭೋಗ ಕಾಲದಲ್ಲಿ ಉಬ್ಬಿಕೊಳ್ಳುವುದರಿಂದ ಸಂಭೋಗದ ಅವಧಿ ಹೆಚ್ಚಾಗುವುದಲ್ಲದೆ, ಸಂಭೋಗಕ್ರಿಯೆ ಮುಗಿಯುವವರೆಗೂ ಶಿಶ್ನವನ್ನು ಸುಲಭವಾಗಿ ಹಿಂತೆಗೆದುಕೊಳ್ಳಲು ಆಗುವುದಿಲ್ಲ. ಏಷ್ಯಾ ದೇಶಗಳಲ್ಲಿ ಆಗಸ್ಟ್‌ನಿಂದ ಸೆಪ್ಟೆಂಬರ್‌ನಲ್ಲಿ ಸಂತಾನ ನಡೆಸುತ್ತವೆ. ಗರ್ಭಧಾರಣೆಯ ಅವಧಿ 2 ತಿಂಗಳು. ಹೆಣ್ಣು ಡಿಂಗೊ, ಒಂದು ಸಲಕ್ಕೆ 4–8 ಮರಿಗಳಿಗೆ ಜನ್ಮ ನೀಡುತ್ತದೆ. ಮರಿಗಳು ಎರಡು ತಿಂಗಳು ಹಾಲು ಕುಡಿಯುತ್ತವೆ. 6–8 ತಿಂಗಳ ಅನಂತರ ಸ್ವತಂತ್ರವಾಗಿ ತಾಯಿಯ ಆರೈಕೆ ಇಲ್ಲದೆ ಜೀವಿಸಲು ಆರಂಭಿಸುತ್ತವೆ. ಲೈಂಗಿಕ ಪ್ರಭುದ್ಧತೆಯನ್ನು ಒಂದು ವರ್ಷದ ಅನಂತರ ಪಡೆಯುತ್ತವೆ. (ಬಿ.ಪಿ)

**ಡಿಂಬ:** ಕೆಲವು ಪ್ರಾಣಿ ಪ್ರಭೇದಗಳಲ್ಲಿ ಕಂಡು ಬರುವ, ಫಲಿತ ಅಂಡದ ಬೆಳವಣಿಗೆಯಿಂದ ಹೊರಬರುವ, ತಂದೆ–ತಾಯಿಯನ್ನು ಗಾತ್ರ, ರಚನೆ, ಸ್ವಭಾವ, ಆಹಾರ ಸೇವನೆ ಹಾಗು ಚಲನೆಗಳಲ್ಲಿ ಹೋಲದ, ಬೆಳವಣಿಗೆಯ ಒಂದು ಹಂತ. ಮುಂದೆ ಬೆಳೆಯುತ್ತ ಹೋದಂತೆ ಸಾಕಷ್ಟು ಬದಲಾವಣೆಗೆ ಒಳಗಾಗಿ ಡಿಂಬ ಪ್ರಬುದ್ಧಾವಸ್ಥೆಯನ್ನು ಪಡೆದು ತಂದೆತಾಯಿಯನ್ನು ಹೋಲತೊಡಗುತ್ತದೆ. ಪ್ರತಿ ಪ್ರಾಣಿಗುಂಪಿಗೂ ವಿಶಿಷ್ಟ ರೀತಿಯ ಡಿಂಬವಿದ್ದು ಒಂದೇ ಪ್ರಾಣಿಯ ಜೀವನ ಚರಿತ್ರೆಯಲ್ಲಿ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಡಿಂಬಾವಸ್ಥೆಗಳಿರಬಹುದು.

ಬಹುತೇಕ ಜಲಜೀವಿಗಳ, ಅದರಲ್ಲೂ ಕಡಲಜೀವಿಗಳ, ಅಂಡಗಳು ಗಾತ್ರದಲ್ಲಿ ಚಿಕ್ಕವು. ಇವನ್ನು ಸೂಕ್ಷ್ಮದರ್ಶಕದ ಮೂಲಕ ಮಾತ್ರ ನೋಡಬಹುದು. ಇಂಥ ಚಿಕ್ಕ ಫಲಿತ ಅಂಡಗಳಲ್ಲಿ ಬೆಳೆಯುತ್ತಿರುವ ಭ್ರೂಣಗಳಿಗೆ ಸಾಕಾಗುವಷ್ಟು ಆಹಾರವಿರುವುದಿಲ್ಲ. ಉದಾಹರಣೆಗೆ ಕಪ್ಪೆಯ ಅಂಡದಲ್ಲಿ ಬೃಹತ್ ಗಾತ್ರದ ಮರಿಕಪ್ಪೆಗೆ ಬೇಕಾಗುವಷ್ಟು ಆಹಾರವಿರುವುದಿಲ್ಲ. ಅಂತೆಯೇ ನಕ್ಷತ್ರ ಮೀನು ಹಾಗೂ ಸಿಂಪಿಯ ಅಂಡಗಳು ಕಪ್ಪೆಯ ಮೊಟ್ಟೆಗಿಂತ ಬಲು ಚಿಕ್ಕವು. ಈ ಕಾರಣದಿಂದ ಇವುಗಳಿಂದ ರೂಪುಗೊಳ್ಳುವ ಡಿಂಬಗಳು ಚಿಕ್ಕವು, ಸರಳರೀತಿಯವು ಹಾಗೂ ತಂದೆತಾಯಿಗಳಿಗಿಂತ ಬೇರೆಯಾಗಿರುವಂಥವು. ಕಪ್ಪೆಯ ಮರಿಗೆ ಗೊದ ಮೊಟ್ಟೆ ಎಂದು ಹೆಸರು. ಸಿಂಪಿ, ಕ್ಲ್ಯಾಮ್, ನಕ್ಷತ್ರಮೀನು, ಜೆಲಿಮೀನು, ಕಪ್ಪೆ ಮೊದಲಾದವು ಚಿಕ್ಕಗಾತ್ರದ ಆದರೆ ಹೆಚ್ಚಿನ ಸಂಖ್ಯೆಯ ಅಂಡಗಳನ್ನಿಡುತ್ತವೆ. ಅಧಿಕ ಸಂಖ್ಯೆಯಿಂದಾಗಿ ಶತ್ರು ಹಾಗೂ ಪರಿಸರದ ಅಡಚಣೆಗಳನ್ನು ಎದುರಿಸಿ ಕನಿಷ್ಠ ಕೆಲವಾದರೂ ಪ್ರೌಢಾವಸ್ಥೆಯನ್ನು ತಲುಪುವುದಕ್ಕೆ ಅನುಕೂಲವಾಗುತ್ತದೆ. ಕಪ್ಪೆಯ ಅಂಡದ ಗಾತ್ರ 1 ಮಿಮೀ ನಷ್ಟು, ನಕ್ಷತ್ರಮೀನು, ಜೆಲಿಮೀನು ಹಾಗೂ ಸ್ಕ್ಯಾಲಪ್‌ಗಳ ಅಂಡಗಳಾದರೋ 0.125 ಮಿಮೀ ನಷ್ಟಿರುತ್ತವೆ.

ಪ್ರತಿಯೊಂದು ಬಗೆಯ ಡಿಂಬವು ತನ್ನದೇ ಆದ ರೀತಿಯಲ್ಲಿ ಚಲಿಸುವುದು. ಶಿಲಿಕೆಗಳು ಡಿಂಬಗಳ ನಿತ್ಯ ಚಲನಾಂಗಗಳು. ಕಡಲಪೋರದಲ್ಲಿ ಚಾಚಿಕೊಂಡಿರುವ ಬಾಹುಗಳ ಮೇಲೆ, ನಕ್ಷತ್ರ ಮೀನುಗಳಲ್ಲಿ ಚಾಚಿಕೊಂಡಿರುವ ಮಡಿಕೆ ಅಥವ ಏಣುಗಳ ಮೇಲೆ, ಕಡಲ ಹುಳು ಮತ್ತು ಮೃದ್ವಂಗಿಗಳಲ್ಲಿ ನಡವಣ ಸುತ್ತು ಫಲಕದ ಮೇಲೆ, ಜೆಲಿಮೀನಿನ ಡಿಂಬದಲ್ಲಿ ದೇಹದ ಸುತ್ತಲೂ ಶಿಲಿಕೆಗಳಿವೆ. ಶಿಲಿಕೆಗಳುಳ್ಳ ಡಿಂಬ ನೀರಿನಲ್ಲಿ ಸುಲಭವಾಗಿ ಚಲಿಸಬಲ್ಲುದು. ಆಹಾರ ಜೀವಿಗಳನ್ನು ಹಿಡಿಯಲು ಸಹ ಶಿಲಿಕೆಗಳು ಸಹಾಯಕವಾಗುತ್ತವೆ. ಗೊದಮೊಟ್ಟೆಯಲ್ಲಿ ಈಜುರೆಕ್ಕೆ ಚಲನೆಗೆ ಸಹಕಾರಿಯಾಗುತ್ತದೆ. ಡಿಂಬಗಳ ಚಲನ ಸಾಮರ್ಥ್ಯದಿಂದಾಗಿ ಪ್ರಭೇದಗಳ ಪ್ರಸರಣ ನಡೆಯುತ್ತದೆ.

ಡಿಂಬ ಕ್ರಮೇಣ ರೂಪ ಪರಿವರ್ತನೆಗೊಳಗಾಗಿ ಆಕಾರದಲ್ಲಿ ತಂದೆತಾಯಿಗಳನ್ನು ಹೋಲಲಾರಂಭಿಸುತ್ತದೆ. ಉದಾಹರಣೆಗೆ ಮೀನಿನಂತಿರುವ, ಸಸ್ಯಾಹಾರಿಯಾದ ಹಾಗೂ ನೀರನ್ನು ಉಸಿರಾಡುವ ಗೊದಮೊಟ್ಟೆ ಮಾಂಸಾಹಾರಿಯಾದ, ಗಾಳಿಯನ್ನು ಉಸಿರಾಡುವ ಉಭಯವಾಸಿ ಕಪ್ಪೆಯಾಗಿ ಪರಿವರ್ತನೆಗೊಳ್ಳುತ್ತದೆ. ರೂಪಪರಿವರ್ತನೆಗೆ ಡಿಂಬಗಳ ದೇಹದಲ್ಲಿರುವ ಗ್ರಂಥಿಗಳು ಮತ್ತು ಸುತ್ತಲಿನ ಪರಿಸರ ಕಾರಣ. ಗೊದಮೊಟ್ಟೆ ಕಪ್ಪೆಯಾಗಿ ಪರಿವರ್ತನೆಗೊಳ್ಳಲು ಅದರಲ್ಲಿರುವ ಥೈರಾಯ್ಡ್ ಗ್ರಂಥಿ ಕಾರಣ. ಈ ಗ್ರಂಥಿಯ ಸ್ರಾವ ರೂಪಪರಿವರ್ತನೆಯನ್ನು ಚುರುಕುಗೊಳಿಸುತ್ತದೆ. ಈ ಗ್ರಂಥಿಯ ಜೀವಕೋಶಗಳನ್ನು ಗೊದಮೊಟ್ಟೆಗೆ ಬಲವಂತವಾಗಿ ತಿನ್ನಿಸಿದಾಗ ಅದು ಬೇಗನೆ ಕಪ್ಪೆಯಾಗಿ ಬದಲಾಗುತ್ತದೆ. ಗೊದಮೊಟ್ಟೆಯ ಥೈರಾಯ್ಡ್ ಗ್ರಂಥಿಯನ್ನು ತೆಗೆದುಹಾಕಿದರೆ ಅದು ಎಂದಿಗೂ ಕಪ್ಪೆಯಾಗಿ ಪರಿವರ್ತನೆಗೊಳ್ಳುವುದಿಲ್ಲ; ಬದಲಾಗಿ ದೈತ್ಯಾಕಾರದ ಗೊದಮೊಟ್ಟೆಯಾಗಿಯೇ ಉಳಿಯುತ್ತದೆ. ಕೀಟಗಳಲ್ಲಿ ಮೆದುಳಿನ ಸಮೀಪದಲ್ಲಿರುವ ಗ್ರಂಥಿಯೊಂದು ರೂಪಪರಿವರ್ತನೆಯನ್ನು ನಿಯಂತ್ರಿಸುತ್ತದೆ. ಸಿಂಪಿ ಮತ್ತು ಸಿಫಲಾಗಳ ಡಿಂಬಗಳು ಸೂಕ್ತವಾದ ಆಧಾರವಸ್ತು ದೊರೆಯುವವರೆಗೂ ನೀರಿನಲ್ಲಿ ಸುತ್ತುತ್ತಿರುತ್ತವೆ. ಇಂಥ ವಸ್ತು ಸಿಕ್ಕ ಅನಂತರ ಅದಕ್ಕೆ ಅಂಟಿಕೊಂಡು ರೂಪಪರಿವರ್ತನೆಗೆ ಒಳಗಾಗಿ ಪ್ರೌಢಜೀವಿಗಳಾಗಿ ಬೆಳೆಯುತ್ತವೆ. ಆಧಾರವಸ್ತುವಿನಲ್ಲಿರುವ ಅತ್ಯಲ್ಪಪ್ರಮಾಣದ ತಾಮ್ರ ರೂಪಪರಿವರ್ತನೆಗೆ ಕಾರಣವಾಗುತ್ತದೆ. ತಾಮ್ರವಿಲ್ಲದೆ ಇವುಗಳಲ್ಲಿ ರೂಪ ಪರಿವರ್ತನೆ ನಡೆಯುವುದಿಲ್ಲ.

ತಿತ್ತಿರಿಯಲ್ಲಿ (ಸಿಕಾಡ) ಒಂದು ವಿಚಿತ್ರ ರೀತಿಯ ಬೆಳವಣಿಗೆಯನ್ನು ಕಾಣಬಹುದು. ಹೆಣ್ಣು ತಿತ್ತಿರಿ ಮರಗಿಡಗಳ ತೊಗಟೆಯಲ್ಲಿ ಮೊಟ್ಟೆಯಿಡುತ್ತದೆ. ಮೊಟ್ಟೆಯೊಡೆದು ಹೊರಬರುವ ಕಂಬಳಿಹುಳು (ಗ್ರಬ್) ತೆವಳಿಕೊಂಡು ಇಳಿದು ಮರದ ಬುಡದಲ್ಲಿರುವ ಮಣ್ಣಿನೊಳಕ್ಕೆ ಸೇರಿ ಹೋಗುತ್ತದೆ. 13–17 ವರ್ಷಗಳ ಕಾಲ ಹೀಗೆ ಮಣ್ಣಿನಲ್ಲಿ ಇದ್ದು (ಕೆಲವು ಬಗೆಗಳಲ್ಲಿ 2–3 ವರ್ಷ ಹೀಗೆ ಇರುವುದುಂಟು) ನಿಧಾನವಾಗಿ ಬೆಳೆದು ಅನಂತರ ದೊಡ್ಡ ಕಂಬಳಿಹುಳುವಾಗಿ ಹೊರಕ್ಕೆ ಬರುತ್ತದೆ. ಅಲ್ಲಿಂದ ಮರದ ಕೊಂಬೆಯ ತುದಿಗೆ ಏರುತ್ತದೆ. ಇಲ್ಲಿ ಕೊನೆಯ ಬಾರಿ ಪೊರೆಯನ್ನು ಕಳಚಿ ಹಾರಾಡುವ ಕೀಟವಾಗಿ ಮಾರ್ಪಡುತ್ತದೆ. ಪೊರೆ ಕಳಚಿದ ತರುವಾಯ ಬಹುಕಾಲ ಅಂದರೆ ಬೇಸಗೆಯ ಕಾಲಾವಧಿಯ ವರೆಗೆ ಏನನ್ನೂ ತಿನ್ನಲಿಚ್ಛಿಸುವುದಿಲ್ಲ. ಆದರೆ ಈ ಕಾಲದಲ್ಲಿ ಇದಕ್ಕೆ ಸಂಭೋಗ ಸಾಮರ್ಥ್ಯವಿರುತ್ತದೆ.

ಹಲವು ಪ್ರಾಣಿ ಪ್ರಭೇದಗಳ ಜೀವನ ಚಕ್ರದಲ್ಲಿ ಕಂಡುಬರುವ ಡಿಂಬ, ಅವುಗಳ ಉಳಿವಿಗೆ ಸಹಾಯಕವಾಗಿವೆಯಲ್ಲದೆ ಪ್ರಾಣಿಗಳ ವಿಕಾಸದ ಅಭ್ಯಾಸದಲ್ಲಿ ಮಹತ್ವದ ಮಾಹಿತಿಯನ್ನು ಒದಗಿಸುತ್ತದೆ. (ಬಿ.ಕೆ.ಜೆ.)

**ಡಿಎನ್‌ಎ ಬೆರಳಚ್ಚು:** ವ್ಯಕ್ತಿ ವಿಶಿಷ್ಟತೆಯನ್ನು ತಳಿ ಸಂಕೇತಗಳ ಮೂಲಕ ಖಚಿತಪಡಿಸುವ ವಿನೂತನ ತಂತ್ರ. ಇದರಲ್ಲಿ ಡಿಎನ್‌ಎ ರಾಸಾಯನಿಕದ ವ್ಯಕ್ತಿ ವೈಶಿಷ್ಟ್ಯತೆಯನ್ನು ಪತ್ತೆ ಮಾಡಲಾಗುತ್ತದೆ. ಅಪರಾಧಶೋಧನೆ, ವಿಕಾಸ ವಿಜ್ಞಾನ, ಪ್ರಾಣಿ ಸಂರಕ್ಷಣೆ, ಇತ್ಯಾದಿಗಳಿಗೆ ಉಪಯುಕ್ತವಾದ ತಂತ್ರ. ಅಪರಾಧಿಗಳನ್ನು ಕಂಡುಹಿಡಿಯಲು ಬೆಳೆಸಿಕೊಂಡು ಬಂದಂತಹ ಅತಿ ಮುಖ್ಯವಾದ ಪದ್ಧತಿ ಎಂದರೆ ಫಿಂಗರ್ ಪ್ರಿಂಟಿಂಗ್. ಬೆರಳ ಗುರುತುಗಳು ಪ್ರತಿ ವ್ಯಕ್ತಿಗೂ ವಿಶಿಷ್ಟವಾಗಿವೆ ಎನ್ನುವ ಅರಿವನ್ನು ಇಲ್ಲಿ ಬಳಸಲಾಗುತ್ತದೆ. ಇದೇ ಬಗೆಯಲ್ಲಿ ಪ್ರತಿ ವ್ಯಕ್ತಿಯ ಡಿಎನ್‌ಎಯೂ ವಿಶಿಷ್ಟವಾಗಿದೆಯಾದ್ದರಿಂದ ಡಿಎನ್‌ಎ ಬೆರಳಚ್ಚು ತಂತ್ರ ರೂಪಿಸಲಾಗಿದೆ. ಪ್ರತಿಯೊಂದು ಕೋಶದಲ್ಲೂ ಡಿಎನ್‌ಎ ಇರುತ್ತದೆ. ಆದರೆ ಬೇರೆ ಬೇರೆ ಜೀವಿಗಳಲ್ಲಿ ಇರುವ ಡಿಎನ್‌ಎ ಬೇರೆ ಬೇರೆ. ಯಾವುದೇ ಒಂದು ವಂಶದ ಪರಂಪರೆಯ ಡಿಎನ್‌ಎ ತೆಗೆದುಕೊಂಡು ಆ ವಂಶಕ್ಕೆ ಸೇರಿದ ಒಬ್ಬ ವ್ಯಕ್ತಿಯ ಡಿಎನ್‌ಎ ಜೊತೆ ಹೋಲಿಸಿ ಅಣುಜೀವ ವೈಜ್ಞಾನಿಕ ವಿಧಾನಗಳ ಸಹಾಯದಿಂದ ಪರೀಕ್ಷಿಸಿದಾಗ, ಅವನು ಆ ವಂಶದ ಪರಂಪರೆಗೆ ಸೇರಿದವನೆಂದು ಬಹಳ ನಿಖರವಾಗಿ ಹೇಳಬಹುದು. ಈ ಪರೀಕ್ಷೆಯನ್ನು ತುಂಬಾ ಕಟ್ಟುನಿಟ್ಟಾಗಿ ನಡೆಸಬೇಕು.

ಡಿಎನ್‌ಎ ಫಿಂಗರ್ ಪ್ರಿಂಟಿಂಗ್ ಅಥವಾ ಡಿಎನ್‌ಎ ಬೆರಳಚ್ಚು ಅಥವಾ ಡಿಎನ್‌ಎ ಒತ್ತಚ್ಚಿನ ರೂಪ (ಪ್ರೊಫೈಲಿಂಗ್) ಎಂದು ಈ ತಂತ್ರವನ್ನು ಕರೆಯುತ್ತಾರೆ. ಇದನ್ನು ಇಂಗ್ಲೆಂಡಿನ ಲೀಸೆಸ್ಟರ್ ವಿಶ್ವವಿದ್ಯಾಲಯದ ಸರ್ ಅಲೆಕ್ ಜೆಫ್ರೆಸ್ ಎಂಬ ವಿಜ್ಞಾನಿ ಮೊದಲಿಗೆ ರೂಪಿಸಿದನು. ಆತ ಮಯೋಗ್ಲೊಬಿನ್ ಜೀನ್‌ನ ಆನುವಂಶೀಯತೆಯ ಬಗ್ಗೆ ಅಧ್ಯಯನ ನಡೆಸುವಾಗ, ಮಯೋಗ್ಲೊಬಿನ್ ಜೀನ್‌ನಲ್ಲಿ ಪುನರಾವರ್ತಿಯಾಗಿರುವ ಡಿಎನ್‌ಎ ತುಣುಕುಗಳು ಕಂಡುಬಂದವು. ಈ ಪುನರಾವರ್ತಿ ಎಲ್ಲ ವ್ಯಕ್ತಿಗಳಲ್ಲಿಯೂ ಒಂದೇ ತೆರನಾಗಿರುವುದಿಲ್ಲ. ಪುನರಾವರ್ತಿಗೊಂಡ ತುಣುಕಿನ ಉದ್ದ ಮತ್ತು ಸಂಖ್ಯೆ ಪ್ರತಿ ವ್ಯಕ್ತಿಯಲ್ಲಿಯೂ ಬೇರೆ ಬೇರೆಯಾಗಿರುತ್ತದೆ. ಇವನ್ನು ವಿಎನ್‌ಟಿಆರ್ (ವೇರಿಯಬಲ್ ನ್ಯೂಕ್ಲಿಯೋಟೈಡ್ ರಿಪೀಟ್) ಎನ್ನುತ್ತಾರೆ. ಮಿನಿಸೆಟಲೈಟ್ ಎಂದೂ ಹೇಳುವುದುಂಟು. ಇವುಗಳನ್ನು ಡಿಎನ್‌ಎಯಿಂದ ತುಂಡರಿಸಿ, ಪ್ರತ್ಯೇಕಿಸಿ, ಕ್ರಮಾನುಗತಿಯನ್ನು ನಿರ್ಧರಿಸಬಹುದು. ನ್ಯೂಕ್ಲಿಯೊಟೈಡು ಕ್ರಮಾನುಗತಿಯನ್ನು ನಿರ್ಧರಿಸುವ ವಿಧಾನಕ್ಕೆ ಜೆನೆಟಿಕ್ ಫಿಂಗರ್ ಪ್ರಿಂಟಿಂಗ್ ಎಂದು ಹೇಳಲಾಗುತ್ತದೆ. ವಿಎನ್‌ಟಿಆರ್‌ಗಳು ಪ್ರತಿಯೊಂದು ಜೀವಿಯಲ್ಲೂ ಬೇರೆ ಬೇರೆ ಗಾತ್ರ ಮತ್ತು ಸಂಖ್ಯೆಯಲ್ಲಿ ಸಂಯೋಜನೆಗೊಂಡಿದೆ. ವಿಎನ್‌ಟಿಆರ್‌ಗಳನ್ನು ವಂಶಾವಳಿಗಳಿಂದ ಬೇರ್ಪಡಿಸಿ, ಶುದ್ಧೀಕರಿಸಿ, ರೇಡಿಯೋ ಆಕ್ಟಿವ್ ಐಸೋಟೋಪ್ಸ್ (ವಿಕಿರಣಶೀಲ ಐಸೋಟೋಪು) ಉಪಯೋಗಿಸಿ

ಕ್ರಮಾನುಗತಿಯನ್ನು ಕಂಡುಹಿಡಿಯುವ ವಿಧಾನಕ್ಕೆ ಜೆನೆಟಿಕ್ ಫಿಂಗರ್ ಪ್ರಿಂಟಿಂಗ್ ಎಂದು ಹೇಳಲಾಗುತ್ತದೆ.

ಡಿಎನ್‌ಎ ಬೆರಳಚ್ಚು ತಯಾರಿಸುವ ವಿಧಾನವನ್ನು ಸರಳವಾಗಿ ಹೀಗೆ ವಿವರಿಸಬಹುದು. ಮೊದಲಿಗೆ ಬೆರಳಚ್ಚು ಮಾಡಬೇಕಾದ ಜೀವಿಯ ಕೋಶದಿಂದ ಡಿಎನ್‌ಎಯನ್ನು ಪ್ರತ್ಯೇಕಿಸುತ್ತಾರೆ. ಈ ಬೃಹದಣುವನ್ನು ಅನಂತರ ರಿಸ್ಟ್ರಿಕ್ಷನ್ ಎಂಡೋನ್ಯೂಕ್ಲಿಯೇಸ್ ಎಂಬ ಕಿಣ್ವಗಳನ್ನು ಬಳಸಿ ತುಂಡರಿಸುತ್ತಾರೆ. ಈ ಕಿಣ್ವಗಳು ಡಿಎನ್‌ಎ ಯ ನಿರ್ದಿಷ್ಟ ಭಾಗಗಳಲ್ಲಿಯಷ್ಟೆ ಬಂಧವನ್ನು ಕತ್ತರಿಸುವುದರಿಂದ, ವಿವಿಧ ಗಾತ್ರದ ಡಿಎನ್‌ಎ ತುಣುಕುಗಳು ದೊರೆಯುತ್ತವೆ. ಈ ತುಣುಕುಗಳನ್ನು ಗಾತ್ರಕ್ಕನುಗುಣವಾಗಿ ಇಲೆಕ್ಟ್ರೊಫೊರೆಸಿಸ್ ವಿಧಾನದಿಂದ ವಿಂಗಡಿಸಲಾಗುತ್ತದೆ. ಎಲೆಕ್ಟ್ರೊಫೊರೆಸಿಸ್‌ಗೆ ಬಳಸುವ ಜೆಲ್ಲಿ ಹಾಳೆಯ ಮೇಲೆ ವಿವಿಧ ಗಾತ್ರದ ತುಣುಕುಗಳು ಪ್ರತ್ಯೇಕ ಗೆರೆಗಳ ರೂಪದಲ್ಲಿ ಬೇರೆಯಾಗಿರುತ್ತವೆ. ಇದೀಗ ಈ ಗೆರೆಗಳಲ್ಲಿ ಯಾವ್ಯಾವುದರಲ್ಲಿ ಯಾವುದಾದರೂ ಒಂದು ವಿಎನ್‌ಟಿಆರ್ ಇದೆಯೋ, ಇಲ್ಲವೋ ಎಂದು ಗುರುತಿಸಬಹುದು. ನಿರ್ದಿಷ್ಟ ವಿಎನ್‌ಟಿಆರ್ ತುಣುಕಿಗೆ ವಿಕಿರಣಶೀಲ ಅಥವಾ ಸ್ವಯಂ ಸ್ಫುರಣಶೀಲ ರಾಸಾಯನಿಕವನ್ನು ಜೋಡಿಸಿ, ಜೆಲ್ಲಿಹಾಳೆಯ ಮೇಲೆ ಲೇಪಿಸಬಹುದು. ಇದನ್ನು ಶೋಧಕ ಅಣು (ಪ್ರೋಬ್ ಮಾಲಿಕ್ಯೂಲ್) ಎನ್ನುವರು. ಆಗ ಆ ವಿಎನ್‌ಟಿಆರ್ ತುಣುಕುಗಳಿರುವ ಗೆರೆಗಳ ಜೊತೆಗಷ್ಟೆ ವಿಕಿರಣಶೀಲ–ಸ್ಫುರಣಶೀಲ ಶೋಧಕ ಅಣು ಅಂಟಿಕೊಳ್ಳುತ್ತದೆ. ಹೀಗೊಂದು ವಿಶಿಷ್ಟ ವಿಕಿರಣಶೀಲ–ಸ್ಫುರಣಶೀಲ ಗೆರೆಗಳ ವಿನ್ಯಾಸ ದೊರೆಯುತ್ತದೆ. ಇದರ ಛಾಯಾಚಿತ್ರವನ್ನೂ ತೆಗೆಯಬಹುದು. ಇದುವೇ ಡಿಎನ್‌ಎ ಬೆರಳಚ್ಚು. ಬೇರೆ ಬೇರೆ ವ್ಯಕ್ತಿಗಳಿಂದ ಪಡೆದ ಡಿಎನ್‌ಎಯ ಬೆರಳಚ್ಚನ್ನು ತಾಳೆ ನೋಡಬಹುದು. ನಿಕಟ ಸಂಬಂಧಿಗಳ ಬೆರಳಚ್ಚಿನಲ್ಲಿ ಸಂಬಂಧಕ್ಕನುಗುಣವಾಗಿ ತಾಳೆಯಾಗುತ್ತದೆ. ಉದಾ : ತಂದೆ–ಮಗನ ಬೆರಳಚ್ಚುಗಳಲ್ಲಿ ಅರ್ಧದಷ್ಟು ಗೆರೆಗಳು ಒಂದೇ ರೀತಿ / ಸ್ಥಾನದಲ್ಲಿರುತ್ತವೆ. ತಾಯಿ–ಮಗನ ಬೆರಳಚ್ಚಿನಲ್ಲೂ ಅಷ್ಟೆ ! ಆದರೆ ತಾಯಿ–ತಂದೆಯ ಬೆರಳಚ್ಚಿನಲ್ಲಿ ವ್ಯತ್ಯಾಸವಿರುತ್ತದೆ.

ಡಿಎನ್‌ಎ ಬೆರಳಚ್ಚುಗಳನ್ನು ಹೋಲಿಸುವ ಮೂಲಕ ಆ ಡಿಎನ್‌ಎ ಎಲ್ಲಿಂದ ಬಂದಿರಬಹುದೆಂದು ಊಹಿಸಬಹುದು. ಹೀಗಾಗಿ ಅಪರಾಧ ಪತ್ತೆಯಲ್ಲಿ ಇದರ ಬಳಕೆ ಉಪಯುಕ್ತವಾಗಿದೆ. ಉದಾಹರಣೆಗೆ: ಪೂರ್ವಪ್ರಧಾನಮಂತ್ರಿ ರಾಜೀವಗಾಂಧಿಯವರನ್ನು ಹತ್ಯೆ ಮಾಡಿದವರು ಯಾರೆಂಬುದನ್ನು ಗುರುತಿಸಲು ಈ ವಿಧಾನವನ್ನು ಬಳಸಲಾಯಿತು. ಮೃತ ಜೀವಕೋಶಗಳಿಂದ ಪಡೆದ ಡಿಎನ್‌ಎ, ಅಪರಾಧ ನಡೆದ ಸ್ಥಳದಲ್ಲಿ ದೊರೆತ ಕೂದಲು, ಚರ್ಮದ ಕೋಶಗಳು, ರಕ್ತದ ಕೋಶಗಳು ಇತ್ಯಾದಿಗಳಿಂದ ಡಿಎನ್‌ಎ ಅಣುಗಳನ್ನು ಪ್ರತ್ಯೇಕಿಸಿ, ಪಾಲಿಮರೇಸ್ ಚೈನ್ ರಿಯಾಕ್ಷನ್ (ಪಿಸಿಆರ್) ತಂತ್ರ ಬಳಸಿ ಪ್ರಮಾಣ ವರ್ಧಿಸಬಹುದು. ತದನಂತರ ಇವುಗಳ ಬೆರಳಚ್ಚು ಪಡೆಯಬಹುದು. ಆದ್ದರಿಂದ ಡಿಎನ್‌ಎ ಬೆರಳಚ್ಚು ತಂತ್ರ ಅಪರಾಧ ವಿಜ್ಞಾನದಲ್ಲಿ ಪ್ರಾಮುಖ್ಯತೆ ಪಡೆಯುತ್ತಿದೆ. ಹೀಗೆಯೇ, ಪ್ರಾಣಿಗಳ ಮಲ (ಉದಾ: ಆನೆಯ ಲದ್ದಿ) ದಿಂದಲೂ ಡಿಎನ್‌ಎ ಹೊರತೆಗೆದು ಬೆರಳಚ್ಚು ಮಾಡಬಹುದು. ವನ್ಯ ಪ್ರಾಣಿಗಳ ಗಣತಿ, ಸಂರಕ್ಷಣೆಯಲ್ಲಿ ಈ ವಿಧಾನ ಹೀಗೆ ಉಪಕಾರಿ.

ಡಿಎನ್‌ಎ ಬೆರಳಚ್ಚಿನಿಂದ ಇಷ್ಟೆಲ್ಲಾ ಅನುಕೂಲಗಳಿವೆ ಎಂದು ಹೇಳಿದರೂ ಸಹ, ಕೆಲವು ತೊಂದರೆಗಳು ತಪ್ಪಿದ್ದಲ್ಲ. ಕೆಲವು ಸಲ ಡಿಎನ್‌ಎ ಬೆರಳಚ್ಚಿನ ಪರಿಣಾಮ 100% ಭರವಸೆ ಕೊಡಲಾಗುವುದಿಲ್ಲ. ಒಬ್ಬ ವ್ಯಕ್ತಿಯ ವಿಎನ್‌ಟಿಆರ್ ಮಾದರಿಯು ಆ ನಿರ್ದಿಷ್ಟ ವ್ಯಕ್ತಿಗೆ ಸೀಮಿತವಾಗಿರುತ್ತದೆ. ಆದರೆ ತುಂಬಾ ಅಪರೂಪವಾಗಿ, ಬಹುಶಃ 20 ಬಿಲಿಯನ್ ಜನರಲ್ಲಿ ಇಬ್ಬರು ಒಂದೇ ತರಹದ ಡಿಎನ್‌ಎಯನ್ನು ಹೊಂದಿರಬಹುದು. ಹಾಗೆಯೇ ಅವಳಿ ಮಕ್ಕಳಲ್ಲಿ ಒಂದೇ ತರಹದ ಡಿಎನ್‌ಎ ಇರುತ್ತದೆ.

ಕೆಲವು ಸಲ ಡಿಎನ್‌ಎ ಪರೀಕ್ಷೆಯಲ್ಲಿ ಮಿಶ್ರಣ ಮತ್ತು ಪರೀಕ್ಷೆಗಳನ್ನು ಮಾಡುವ ವಿಧಾನದಲ್ಲಿ ತಪ್ಪಾಗುವ ಸಾಧ್ಯತೆಗಳು ಇರುತ್ತದೆ. ಅಪರಾಧ ಪತ್ತೆಯಲ್ಲಿ ಇದು ನಿರಪರಾಧಿಯತ್ತ ಅಪರಾಧಿ ಎಂದು ಬೆರಳು ತೋರಿಸಿಬಿಡಬಹುದು. ಹಾಗಾದಲ್ಲಿ. ಇದು ಕ್ಷಮಿಸಲಾಗದ ಅಪರಾಧವಾಗುತ್ತದೆ. ಆದ್ದರಿಂದ ಈ ಪರೀಕ್ಷೆಗಳನ್ನು ಮಾಡುವಾಗ ತಂತ್ರಜ್ಞರು ಅತ್ಯಂತ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. (ಎನ್.ಬಿ.ಆರ್.)

**ಡಿಪ್ಟರ:** ಕೀಟವರ್ಗದ ಗಣ. ಇದರಲ್ಲಿ ನೊಣ, ಸೊಳ್ಳೆ ಮತ್ತು ಸೊಳ್ಳೆಗಳಂತಿರುವ ಕೀಟಗಳಿವೆ. ಈ ಗಣದ ಸದಸ್ಯರು ಸರ್ವವ್ಯಾಪಿಗಳು. ಇವುಗಳಿಗೆ ಒಂದು ಜೊತೆ ರೆಕ್ಕೆಗಳಿವೆ. ಇವು ಮುಂಭಾಗದ ರೆಕ್ಕೆಗಳು. ಹಿಂಭಾಗದ ರೆಕ್ಕೆಗಳು ಮಾರ್ಪಾಡಾಗಿ ಸಣ್ಣ ಗುಬಟುಗಳಂತಿವೆ. ಇವಕ್ಕೆ ಹಾಲ್ಟೇರ್‌ಗಳು ಎಂದು ಹೆಸರು. ಕೀಟ ಹಾರುತ್ತಿರುವಾಗ ಸಮತೋಲನವನ್ನು ಕಾಯ್ದುಕೊಳ್ಳಲು ಇವು ಸಹಾಯಕ.

ಈ ಗಣದ ಕೀಟಗಳು, ಬೇರೆ ಗಣದ ಕೀಟಗಳೊಡನೆ ಹೋಲಿಸಿದರೆ ಗಾತ್ರದಲ್ಲಿ ಚಿಕ್ಕವು. ಕೆಲವು ತುಂಬಾ ಸೂಕ್ಷ್ಮಗಾತ್ರದುವು. ದೇಹ ಮೆದುವಾಗಿದೆ. ಇವುಗಳು ಆರ್ಥಿಕ ಪ್ರಾಮುಖ್ಯತೆ ಪಡೆದಿವೆ. ಉದಾ: ನೊಣ, ಸೊಳ್ಳೆ, ಕಪ್ಪುನೊಣ, ಕುದುರೆ ನೊಣಗಳು ರಕ್ತಹೀರುವ ಕೀಟಗಳಾಗಿದ್ದು, ಮನುಷ್ಯ ಹಾಗೂ ಪ್ರಾಣಿಗಳಿಗೆ ಪಿಡುಗುಗಳಾಗಿವೆ. ಇವು ರೋಗವಾಹಕ ಕೀಟಗಳೆಂದು ಪ್ರಸಿದ್ಧಿ. ಉದಾ: ಮಲೇರಿಯ, ಹಳದಿ ಜ್ವರ, ಆನೆಕಾಲುರೋಗ, ನಿದ್ರಾರೋಗ, ಟೈಫಾಯಿಡ್, ಅತಿಸಾರದಂತಹ ರೋಗಗಳು ಈ ಕೀಟಗಳಿಂದ ಹರಡುವುವು. ಹೇಸಿಯನ್ ನೊಣ, ಸೇಬುನೊಣಗಳು ಕೃಷಿ ಬೆಳೆಗಳ ಪೀಡೆಗಳಾಗಿವೆ. ಆದರೆ, ಕೆಲವು ಜಾತಿಯ ಕೀಟ ಪಿಡುಗುಗಳ ಮೇಲೆ ಪರಾವಲಂಬಿಗಳಾಗಿ ಜೀವಿಸುವುವು. ಅಪಾಯಕಾರಿ ಕಳೆ ಸಸ್ಯಗಳನ್ನು ತಿಂದು ಬದುಕುವ ಉಪಕಾರಿಗಳು ಸಹ ಡಿಪ್ಟರಗಣದಲ್ಲಿವೆ.




ಈ ಕೀಟಗಳ ಬಾಯಿಯ ವದನಾಂಗಗಳು ಆಹಾರವನ್ನು ಹೀರುವುದಕ್ಕೆ ಅನುಕೂಲವಾಗಿವೆ. ಅನೇಕ ಕೀಟಗಳು ಆಹಾರವನ್ನು ಚುಚ್ಚುವುದರಿಂದ, ಇನ್ನು ಕೆಲವು ಆಹಾರವನ್ನು ಒದ್ದೆಮಾಡಿ, ನೆಕ್ಕುತ್ತವೆ. ಕೆಲವು ಕೀಟಗಳಲ್ಲಿ ಬಾಯಿಯ ವದನಾಂಗಗಳು ಕ್ಷೀಣವಾಗಿದ್ದು, ಆಹಾರ ಹೀರಲು ಅನುಪಯುಕ್ತವಾಗಿವೆ.

ಸಂತಾನೋತ್ಪತ್ತಿ ಮತ್ತು ಬೆಳವಣಿಗೆ : ಡಿಪ್ಟರ ಕೀಟಗಳು ಲೈಂಗಿಕ ರೀತಿಯ ಸಂತಾನೋತ್ಪತ್ತಿ ನಡೆಸುವುವು. ಮೊಟ್ಟೆಗಳು ವೈವಿಧ್ಯವಾಗಿವೆ. ನೊಣ, ಜೀವಿತಕಾಲದಲ್ಲಿ 2000 ಮೊಟ್ಟೆಗಳನ್ನು 75–150 ಗುಂಪುಗಳಲ್ಲಿಡುತ್ತದೆ. ಇವು ನೀರು ಮತ್ತು ಕೊಳೆತ ವಸ್ತುಗಳ ಬಳಿ ಮೊಟ್ಟೆಗಳನ್ನು ಗುಂಪಾಗಿ ಅಥವಾ ಸಾಲಾಗಿ ಇಡುತ್ತವೆ. ಕ್ಯೂಲೆಕ್ಸ್ ಸೊಳ್ಳೆ ಮೊಟ್ಟೆಗಳನ್ನು ಗಟ್ಟಿಸಾಲುಗಳಾಗಿ ಇಡುತ್ತದೆ. ಕೆಲವು ನೊಣಗಳು ಮರಿಗಳಿಗೆ ಸಾಕಷ್ಟು ಆಹಾರ ಸಿಗುವ ಜಾಗದಲ್ಲಿ ಬಿಡಿ ಬಿಡಿಯಾಗಿ ಮೊಟ್ಟೆಗಳನ್ನಿಡುತ್ತವೆ. ಕೆಲವು ಎಲೆಗಳ ಮೇಲೆ ಇಡುತ್ತವೆ. ಪರೋಪಜೀವಿ ಕೀಟಗಳು ಆಶ್ರಯ ಕೀಟಗಳ ದೇಹದೊಳಗೆ ಅಥವಾ ಅವುಗಳ ಮೇಲೆ ಮೊಟ್ಟೆಗಳನ್ನಿಡುತ್ತವೆ. ಕೆಲವು ನೆಮೆಸ್ಟ್ರಿನಿಡ್ ನೊಣಗಳು, ಮರಗಳ ಬಿರುಕುಗಳಲ್ಲಿ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳಿಂದ ಹೊರಬಂದ ಮರಿಗಳು ಗಾಳಿ ಮೂಲಕ ತೂರಿಹೋಗಿ ಮಣ್ಣಿನಲ್ಲಿರುವ ಬಿಳಿದುಂಬಿಯ ಮರಿಗಳನ್ನು ಹಿಡಿಯುತ್ತವೆ. ಮೈಯಾಸ್ಟರ್ ನೊಣದ ಮರಿಗಳೇ ಸಂತಾನೋತ್ಪತ್ತಿ ಮಾಡುತ್ತವೆ. ಮೊಟ್ಟೆಯೊಡೆದು, ಹೊರ ಬಂದು ಮರಿ ಬೆಳೆಯುತ್ತಿರುವಾಗ, ಅದರೊಳಗೆ ಅನೇಕ ಮರಿಗಳು ಬೆಳೆದು,

ತಾಯಿ ದೇಹವನ್ನು ಕೊರೆದು ಹೊರಕ್ಕೆ ಬರುತ್ತವೆ. ಕೆಲವು ನೊಣಗಳು ಮೊಟ್ಟೆಯಿಡುವ ಬದಲು ನೇರವಾಗಿ ಮರಿಗಳಿಗೆ ಜನ್ಮ ನೀಡುತ್ತವೆ. ಕೆಲವು ನೊಣಗಳು ಮೊಟ್ಟೆ ಮತ್ತು ಮರಿಗಳಿಗೂ ಜನ್ಮನೀಡುತ್ತವೆ. ಈ ಗಣದ ಕೀಟಗಳಲ್ಲಿ ಸಂಪೂರ್ಣ ರೀತಿಯ ರೂಪಪರಿವರ್ತನೆ ಇದೆ. ಡಿಂಬಗಳಿಗೆ ಕಾಲುಗಳಿಲ್ಲ. ಹುಳುಗಳಂತಿರುವ. ಇವಕ್ಕೆ 'ಮ್ಯಾಗಟ್ಸ್' ಎನ್ನುವರು. ನೆಮಟೊಸೀರ ಕುಟುಂಬಗಳಲ್ಲಿ ಡಿಂಬಗಳಿಗೆ ಚೆನ್ನಾಗಿ ರೂಪುಗೊಂಡ ತಲೆಯಿದ್ದು, ಬಾಯಿಯ ಮ್ಯಾಂಡಿಬಲ್ (ಕೆಳದವಡೆ) ಭಾಗಗಳು ಅಕ್ಕ–ಪಕ್ಕಕ್ಕೆ ಚಲಿಸುತ್ತವೆ. ಬ್ರ್ಯಾಕಿಸೀರ, ಸೈಕ್ಲೊರೇಫ ಕುಟುಂಬಗಳಲ್ಲಿ ತಲೆ ಕ್ಷೀಣಿಸಿದ್ದು, ಬಾಯಕೊಕ್ಕೆಗಳು ಮೇಲಿನಿಂದ ಕೆಳಕ್ಕೆ ಚಲಿಸುತ್ತವೆ. ಬ್ರ್ಯಾಕಿಸೀರ ಕುಟುಂಬದ ನೊಣಗಳ ಡಿಂಬಗಳ ತಲೆ ಗಡುಸಾಗಿದ್ದು ಒಳಕ್ಕೆ ಸೆಳೆದುಕೊಳ್ಳುವಂತಿದೆ. ಈ ಗಣದ ಡಿಂಬಗಳು ಜಲವಾಸಿಗಳು. ಕೊಳ, ಕೆರೆ, ನದಿ, ತೊರೆ, ಜೌಳು ನೀರಿನ ಕುಂಟೆ ಮುಂತಾದ ವಿವಿಧ ನೆಲೆಗಳಲ್ಲಿ ವಾಸಿಸುತ್ತವೆ. ಡಿಂಬಗಳು ಸಸ್ಯಹಾರಿ ಮತ್ತು ಮಾಂಸಾಹಾರಿಗಳಾಗಿವೆ. ಸಸ್ಯಹಾರಿಗಳು ಗಿಡಗಂಟೆಗಳ ವಿವಿಧ ಅಂಗಗಳನ್ನು ಕೊರೆದು, ಗೂಡು ಮಾಡಿಕೊಂಡು ಬದುಕುವುವು. ಮಾಂಸಾಹಾರಿಗಳು ನೀರಿನಲ್ಲಿ, ಮಣ್ಣಿನಲ್ಲಿ, ಕಲ್ಲುಗಳ ಅಡಿಯಲ್ಲಿ ವಾಸಿಸುತ್ತಾ, ಸಣ್ಣಪುಟ್ಟ ಕೀಟಗಳನ್ನು ಅಥವಾ ಅಕಶೇರುಕ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಕೆಲವು ಬಗೆಯ ಡಿಂಬಗಳು ಕೊಳೆಯುತ್ತಿರುವ ಸಸ್ಯ ಪ್ರಾಣಿಗಳ ಅವಶೇಷಗಳನ್ನು ತಿಂದು ಜೀವಿಸುತ್ತವೆ. ಕೆಲವು ನೊಣಗಳು ವಿಚಿತ್ರ ರೀತಿಯ ಜೀವನಕ್ರಮವನ್ನು ಪ್ರದರ್ಶಿಸುತ್ತವೆ. ಉದಾ: ಎಫಿಡ್ರಿಡೆ ಕುಟುಂಬದ ಸೈಲೋಪ ಪೆಟ್ರೋಲೈ ನೊಣದ ಡಿಂಬ ಕಚ್ಚಾಪೆಟ್ರೋಲಿಯಮ್ಮಿನ ಮಡುಗಳಲ್ಲಿ ಜೀವಿಸುತ್ತದಾದರೆ ಇದೇ ಕುಟುಂಬದ ಇನ್ನಿತರ ಜಾತಿಯ ನೊಣಗಳ ಡಿಂಬಗಳು ಫಾರ್ಮಲಿನ್ ದ್ರಾವಣದಲ್ಲಿ ನೆನೆಯಿಟ್ಟ ಶವಗಳ ಮೇಲೆ ಜೀವಿಸುತ್ತವೆ. ಪ್ರೌಢನೊಣಗಳು ಸಸ್ಯಗಳ ಕಾಂಡರಸ, ಮಕರಂದವನ್ನು ಸೇವಿಸುತ್ತವೆ. ಕೆಲವು ನೊಣಗಳು ಪ್ರಾಣಿಗಳ ರಕ್ತ ಹೀರಿ ಬದುಕುತ್ತವೆ. ಕೆಲವು ನೊಣಗಳು ಬೇರೆ ಕೀಟಗಳನ್ನು ತಿಂದು ಬದುಕುತ್ತವೆ.

ಈ ಗಣದ ಕೀಟಗಳು ಅತ್ಯಂತ ವೇಗವಾಗಿ ಹಾರಬಲ್ಲವು. ಕೆಲವು ಪ್ರಭೇದದ ನೊಣಗಳು ಗಂಟೆಗೆ 80 ಕಿಮೀ ವೇಗದಲ್ಲಿ ಹಾರುತ್ತವೆ. ಹಾರುವಾಗ ಸದ್ದುಮಾಡುವುದು ಈ ಕೀಟಗಳ ಮುಖ್ಯಲಕ್ಷಣ. ಆದರೆ, ಈನಿಗ್‌ಮ್ಯಾಟಿಯಾಸ್ ಮತ್ತು ಈನಿಗ್‌ಮ್ಯಾಟಿಸ್ಟಿಸ್ ನೊಣಗಳಲ್ಲಿ ರೆಕ್ಕೆಗಳಾಗಲಿ ಹಾಲ್ಟಿಯರುಗಳಾಗಲಿ ಇಲ್ಲ. ಕೆಲವು ನೀರಪಾತಳಿಯ ಮೇಲೆ ತುಂಬ ಚುರುಕಾಗಿ ಓಡಬಲ್ಲವು ಅಥವಾ ಜಾರುತ್ತ ಚಲಿಸುತ್ತವೆ. ಕೆಲವು ನೊಣಗಳು ನೀರಿನಲ್ಲಿ ಈಜುತ್ತವೆ, ಇಂಥವುಗಳ ರೆಕ್ಕೆ ಮತ್ತು ಕಾಲುಗಳು ಈಜುವಿಕೆಗೆ ಅನುಕೂಲವಾಗುವಂತೆ ಮಾರ್ಪಾಟಾಗಿವೆ.

ವರ್ಗೀಕರಣ : ರೆಕ್ಕೆದಿಂಡುಗಳು ಮತ್ತು ಕುಡಿಮೀಸೆಗಳ ರಚನೆಯ ಆಧಾರದ ಮೇಲೆ ಡಿಪ್ಟರಗಣವನ್ನು ನೆಮಟೊಸೀರ (ಆರ್ತೊರೇಫ), ಬ್ರ್ಯಾಕಿಸೀರ ಮತ್ತು ಸೈಕ್ಲೊರೇಫ ಎಂದು 3 ಉಪಗಣಗಳನ್ನಾಗಿ ವಿಂಗಡಿಸಲಾಗಿದೆ. ನೆಮಟೊಸೀರ ಉಪಗಣದ ನೊಣಗಳ ಸ್ಪರ್ಶಾಂಗಗಳಲ್ಲಿ ಅಧಿಕ ಸಂಖ್ಯೆಯ ಖಂಡಗಳಿದ್ದರೆ, ಬ್ರ್ಯಾಕಿಸೀರ ಹಾಗೂ ಸೈಕ್ಲೊರೇಫದ ನೊಣಗಳಲ್ಲಿ ಐದು ಅಥವಾ ಇನ್ನೂ ಕಡಿಮೆ ಖಂಡಗಳಿವೆ. ಬ್ರ್ಯಾಕಿಸೀರದ ಡಿಂಬಾವಸ್ಥೆಯ ಕೊನೆಯ ಹಂತವಾದ ಪ್ಯೂಪೇರಿಯಮ್ಮಿನಿಂದ ಪ್ರೌಢಕೀಟಗಳು T ಆಕಾರದ ತೆರಪಿನ ಮೂಲಕ ಹೊರಬರುವುವು. ಸೈಕ್ಲೊರೇಫನ ಪ್ರೌಢ ಕೀಟಗಳು ದುಂಡನೆಯ ಆಕಾರದ ತೆರಪಿನ ಮುಖಾಂತರ ಹೊರಬರುತ್ತವೆ. ಪ್ರತಿಯೊಂದು ಉಪಗಣವನ್ನು ಅನೇಕ ಕುಟುಂಬಗಳಾಗಿ ವಿಂಗಡಿಸಲಾಗಿದೆ. ಈ ಕುಟುಂಬಗಳಲ್ಲಿ ಅನೇಕ ಜಾತಿಯ ಕೀಟ ಪ್ರಭೇದಗಳಿವೆ. (ನೋಡಿ: ಸೊಳ್ಳೆ, ಕುದುರೆನೊಣ). (ಎಂ.ಪಿ.ಆರ್.)

**ಡಿಪ್ನಾಯ್:** ಆಸ್ಟಿಕ್ತಿಯೀಸ್ ವರ್ಗಕ್ಕೆ ಸೇರಿದ ಒಂದು ಮತ್ಸ್ಯ ಗಣ. ಫುಪ್ಫುಸ ಹಾಗೂ ಕಿವಿರುಗಳೆರಡನ್ನೂ ಪಡೆದಿರುವ ಮೀನುಗಳನ್ನು ಒಳಗೊಂಡಿದೆ. ಇವುಗಳ ವಾಸ ಸಿಹಿನೀರಿನಲ್ಲಿ. ಡಿವೋನಿಯನ್ ಯುಗದಲ್ಲಿ ಹೇರಳ ಸಂಖ್ಯೆಯಲ್ಲಿ ಕಂಡುಬರುತ್ತಿದ್ದವೆಂದು ಹೇಳಲಾಗಿದೆ. ಟ್ರಯಾಸಿಕ್ ಕಲ್ಪದ ಹೊತ್ತಿಗೆ ಇವುಗಳ ಜಾತಿಸಂಖ್ಯೆ ಕಡಿಮೆಯಾಗಿ ಈಗ ಕೇವಲ ಮೂರು ಜಾತಿಗಳಿಂದ ಪ್ರತಿನಿಧಿತವಾಗಿವೆ. ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡಿನ ಸರೋವರಗಳಲ್ಲಿ ಮತ್ತು ನದಿಗಳಲ್ಲಿ ಕಾಣಬರುವ ಎಪಿಸೆರಟೋಡಸ್, ಆಫ್ರಿಕದ ಕೆಲವು ಜೌಗುಗಳಲ್ಲಿ ಜೀವಿಸುವ ಪ್ರೋಟಾಪ್ಟರಸ್ ಮತ್ತು ದಕ್ಷಿಣ ಅಮೆರಿಕದ ಜೌಗು ಭೂಮಿಗಳಲ್ಲಿ ಕಂಡುಬರುವ ಲೆಪಿಡೊಸೈರನ್ ಎಂಬುವೇ ಈ ಮೂರು ಜಾತಿಗಳು.

ಇವುಗಳ ದೇಹ ಉದ್ದವಾಗಿಯೂ ತೆಳುವಾಗಿಯೂ ಇದೆ. ಕಣ್ಣುಗಳು ಚಿಕ್ಕವು. ಮೇಲುದವಡೆಯ ಮುನ್ನೆಲುಬಾಗಲೀ (ಪ್ರೀಮ್ಯಾಕ್ಸಿಲ) ಮೇಲುದವಡೆ ಎಲುಬಾಗಲೀ (ಮ್ಯಾಕ್ಸಿಲ) ಇವುಗಳಲ್ಲಿಲ್ಲ. ಬಾಯಂಗುಳದ ಮೇಲೆ ಮತ್ತು ಕೆಳದವಡೆಯ ಅಂಚಿನಲ್ಲಿ ಮೂರು ಜೊತೆ ದೃಢವಾದ ದಂತಫಲಕಗಳುಂಟು. ದೇಹದ ಮೇಲೆಲ್ಲ ಸೈಕ್ಲಾಯ್ಡ್ ಹುರುಪೆಗಳ ಹೊದಿಕೆಯಿದೆ. ಈಜುರೆಕ್ಕೆಗಳು ಕಿರಿ ಅಗಲದವು. ಬೆನ್ನಿನ, ಬಾಲದ ಹಾಗೂ ಗುದದ್ವಾರದ ಈಜುರೆಕ್ಕೆಗಳು ಒಂದು ಅವಿಚ್ಛಿನ್ನವಾದ ನಡು ಈಜುರೆಕ್ಕೆಯಿಂದ ಕೂಡಿಕೊಂಡಿವೆ. ಕಿವಿರುಗಳನ್ನು ಸುತ್ತುವರಿದಿರುವ ಕಿವಿರು ಮುಚ್ಚಳ (ಓಪರ್‌ಕ್ಯುಲಮ್) ಉಂಟು. ನೋಟೋಕಾರ್ಡ್ ಇರುವುದು ಈ ಮೀನುಗಳ ಲಕ್ಷಣಗಳಲ್ಲೊಂದು. ಉಸಿರಾಟದ ದ್ವಾರಗಳು ಅಂತಸ್ಥವಾಗಿದ್ದು ಬಾಯಿಯ ಅಂಗುಳದೊಂದಿಗೆ ಸಂಪರ್ಕಿಸುವುವು. ದವಡೆಯ ತೂಗಾಡುವಿಕೆ ಸ್ವಯಂಕೀಲದ (ಆಟೊಸ್ಟೈಲಿಕ್) ರೀತಿಯದು. ಎಲ್ಯಾಸ್ಮೊಬ್ರಾಂಕ್ ಮೀನುಗಳಲ್ಲಿರುವಂತೆ ಇವುಗಳ ಅನ್ನನಾಳದಲ್ಲಿ ಚೆನ್ನಾಗಿ ಅಭಿವೃದ್ಧಿಹೊಂದಿದ ಒಂದು ಸುರುಳಿ ಕವಾಟವಿದೆ (ಸ್ಪೈರಲ್ ವಾಲ್ವ್).

ಈ ಮೀನಿನಲ್ಲಿರುವ ಫುಪ್ಫುಸಗಳು ವಾಯುಚೀಲದ ಮಾರ್ಪಾಟಿನಿಂದ ಉಂಟಾಗಿವೆ. ವಾಯುಚೀಲಗಳ ಭಿತ್ತಿಗಳ ಕೋಶೀಕರಣ (ಸ್ಯಾಕ್ಯುಲೇಷನ್), ಸ್ನಾಯೀಕರಣ (ಮಸ್ಕ್ಯುಲರೈಸೇಷನ್) ಹಾಗೂ ನಾಳೀಕರಣ (ವ್ಯಾಸ್ಕ್ಯುಲರೈಸೇಷನ್) ಗಳಿಂದ ಬಲು ಸಮರ್ಥವಾದ ಫುಪ್ಫುಸಗಳ ನಿರ್ಮಾಣವಾಗಿದೆ. ಮೀನುಗಳು ವಾಸಿಸುವ ನೆಲೆಗಳಲ್ಲಿ ನೀರು ಇಂಗಿಹೋದಾಗ ಉಸಿರಾಟ ನಡೆಯುವುದು ಫುಪ್ಫುಸಗಳಿಂದಲೇ.

ಇವುಗಳ ಗುಂಡಿಗೆ ತನ್ನ ರಚನೆಯಲ್ಲಿ ಹೆಚ್ಚು ಕಡಿಮೆ ದ್ವಿಚರಿಗಳ ಹೃದಯವನ್ನೇ ಹೋಲುತ್ತದೆ. ಹೃತ್ಕರ್ಣ ಹಾಗೂ ಹೃತ್ಕುಕ್ಷಿಗಳ ಭಾಗಗಳ ನಡುವೆ ಆಂಶಿಕ ತಡಿಕೆಯಿರುವುದರಿಂದ ಈ ಮೀನುಗಳ ಶ್ವಾಸಾಪಧಮನಿ ಮತ್ತು ದೈಹಿಕ ರಕ್ತಪರಿಚಲನೆಗಳೂ ಅಂಶತಃ ಪ್ರತ್ಯೇಕಿಸಲ್ಪಟ್ಟಿವೆ. ದ್ವಿಚರಿಗಳು, ಸರೀಸೃಪಗಳು, ಪಕ್ಷಿಗಳು ಮತ್ತು ಸ್ತನಿಗಳಲ್ಲಿ ವಿಶೇಷವಾಗಿ ಕಂಡುಬರುವ ದ್ವಿರಕ್ತಪರಿಚಲನೆ ಇಂಥ ಪೂರ್ವಜ ಸ್ಥಿತಿಯಿಂದಲೇ ಆರಂಭವಾಯಿತೆಂದು ಅಭಿಪ್ರಾಯ ಪಡಲಾಗಿದೆ. ಡಿಪ್ನಾಯ್ ಮೀನುಗಳ ಆಹಾರ ಅಕಶೇರುಕಗಳು ಮತ್ತು ಸಸ್ಯ ಪದಾರ್ಥಗಳು.

ಡಿಪ್ನಾಯ್ ಗಣದಲ್ಲಿ ಸೆರಟೋಡಾಂಟಿಡೆ ಮತ್ತು ಲೆಪಿಡೋಸೆರೆನಿಡೆ ಎಂಬ ಎರಡು ಕುಟುಂಬಗಳುಂಟು. ಸೆರಟೋಡಾಂಟಿಡೆಗೆ ನಿಯೋಸೆರಟೋಡಸ್ ಫಾರ್ಸ್ಟರೈ ಎಂಬ ಮೀನು ಸೇರಿದೆ. ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡಿನ ಬರ್ನೆಟ್ ಹಾಗೂ ಮೇರಿ ನದಿಗಳಲ್ಲಿ ವಾಸಿಸುವ ಇದರ ಉದ್ದ ಸುಮಾರು 1.15 ಮೀ ಇದರ ಈಜುರೆಕ್ಕೆಗಳು ಎಲೆಯಂತಿವೆ. ಇದು ಒಂಟಿ ಫುಪ್ಫುಸವುಳ್ಳದ್ದು. ನದಿಗಳಲ್ಲಿ ನೀರು ಬತ್ತಿ ಹೋದಾಗ ನೀರಿನ ಪಾತಳಿಗೆ ಏರಿ ವಾಯುವನ್ನು ಒಳ ತೆಗೆದುಕೊಳ್ಳುತ್ತದೆ.

ಲೆಪಿಡೋಸೆರೆನಿಡೆಗೆ ಸೇರಿದ ಮೀನುಗಳ ದೇಹ ಹಾವು ಮೀನು ರೀತಿಯದು. ಹುರುಪೆಗಳು ಚಿಕ್ಕವು. ಇವುಗಳಲ್ಲಿ ತಂತುಗಳ ಹಾಗಿರುವ ಈಜುರೆಕ್ಕೆಗಳೂ ಎರಡು ಫುಪ್ಫುಸಗಳೂ ಉಂಟು. ಜೌಗು ನೆಲದಲ್ಲಿ ವಾಸಿಸುವ ಈ ಮೀನುಗಳು ನೀರು ಇಂಗಿಹೋದಾಗ ಮಣ್ಣಿನಲ್ಲಿ ಲೋಳೆಯ ಪದಾರ್ಥದಿಂದ ರಚಿತವಾದ ಒಳ ಆವರಣದಿಂದ ಕೂಡಿದ ಲಂಬವಾಗಿರುವ ಬಿಲದಲ್ಲಿ ಏಕಾಂತವಾಸ ಮಾಡುತ್ತವೆ. ಈ ಕುಟುಂಬದಲ್ಲಿ ಎರಡು ಜಾತಿಗಳುಂಟು. ಒಂದು ದಕ್ಷಿಣ ಅಮೆರಿಕದ ಬಯಲಿನ ಸಿಹಿನೀರಿನಲ್ಲಿ ವಾಸಿಸುವ 90 ಸೆಂಮೀ ಉದ್ದದ ಲೆಪಿಡೋಸೈರೆನ್ ಪ್ಯಾರಡಾಕ್ಸ್, ಇನ್ನೊಂದು ಆಫ್ರಿಕದ ಪ್ರೋಟಾಪ್ಟರಸ್ ಆ್ಯನ್ನೆಕ್ಟನ್ಸ್ ಮತ್ತು ಇನ್ನೆರಡು ಪ್ರಭೇದಗಳು. ಪ್ರೋಟಾಪ್ಟರಸ್ ಜಾತಿಯವೂ ಸು. 90 ಸೆಂಮೀ ಉದ್ದ ಬೆಳೆಯುವುದುಂಟು.

***

**ಡಿವೋನಿಯನ್:** ಪೇಲಿಯೊಜೋಯಿಕ್ ಯುಗದ (ಪ್ರಾಗ್ಜೀವ ಯುಗ) ನಾಲ್ಕನೆಯ ಅವಧಿ. ಇದರ ಕಾಲ ಸುಮಾರು 400 ದಶಲಕ್ಷ ವರ್ಷ ಪ್ರಾಚೀನದಿಂದ 350 ದ.ಲ.ವ. ಪ್ರಾಚೀನದ ವರೆಗೆ ಇತ್ತು. ಈ ಕಲ್ಪದ ಇಕ್ಕೆಲಗಳಲ್ಲಿ ಸೈಲೂರಿಯನ್ (440–400 ದ.ಲ.ವ. ಪ್ರಾಚೀನ) ಹಾಗೂ ಕಾರ್ಬಾನಿಫೆರಸ್ (350–280 ದ.ಲ.ವ. ಪ್ರಾಚೀನ) ಕಲ್ಪಗಳು ಇದ್ದುವು. ಡಿವೋನಿಯನ್ ರೂಪಗಳ ಪೈಕಿ ಅತ್ಯುತ್ತಮವಾಗಿ ಪ್ರಕಾಶಕ್ಕೆ ಬಂದಿರುವಂಥವು ಪ್ರಾಯಶಃ ವೇಲ್ಸ್, ಉತ್ತರ ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವಾಯುವ್ಯ ಸೋವಿಯೆತ್ ಒಕ್ಕೂಟದ ಹಳೆ ಕೆಂಪು ಮರಳು ಶಿಲೆಗಳು. ಇವು ಕಾರ್ಬಾನಿಫೆರಸ್ ಕಲ್ಪದ ಶಿಲಾಸ್ತೋಮಗಳ ಕೆಳಗೆ ನಿಕ್ಷೇಪಗೊಂಡಂಥವು; ಮೇಲೆ ನಿಕ್ಷೇಪಗೊಂಡಂಥವುಗಳಿಗೆ ಹೊಸ ಕೆಂಪು ಮರಳು ಶಿಲೆಗಳು ಎಂದು ಹೆಸರು. ವೇಲ್ಸ್–ಬೆಲ್ಜಿಯಮ್ ದಿಬ್ಬ ಕೆಲೆಡೋನಿಯನ್ ಪರ್ವತ ಸ್ತೋಮಗಳ ದಕ್ಷಿಣ ಸರಹದ್ದು. ಇದು ಪೂರ್ವ–ಪಶ್ಚಿಮಾಭಿಮುಖವಾಗಿದೆ. ಇದರ ದಕ್ಷಿಣಕ್ಕೆ ಡಿವೋನಿಯನ್ ಸಾಗರ ನಿಕ್ಷೇಪಗಳು ಹೊರಹೊಮ್ಮಿವೆ. ಇವೇ ಡಿವೋನಿಯನ್ ಶಿಲಾಸ್ತೋಮಗಳು. ವೇಲ್ಸ್‌ನಿಂದ ಬೆಲ್ಜಿಯಮ್ ವರೆಗೂ ಈ ಸ್ತೋಮಗಳಿಗೆ ಒಂದೇ ರೀತಿಯ ಶಿಲಾಸಂಯೋಜನೆ ಇರುವುದರಿಂದ ಈ ಪ್ರದೇಶದಲ್ಲೆಲ್ಲ ಒಂದೇ ರೀತಿಯ ಶಿಲಾಸಂಯೋಜನೆ ವ್ಯಾಪಿಸಿತ್ತು ಎಂದು ತಿಳಿಯುವುದು.

ಹಳೆ ಕೆಂಪು ಮರಳು ಶಿಲೆಗಳು : ಸ್ಕಾಟ್ಲೆಂಡಿನ ಕೆಲೆಡೋನಿಯನ್ ಮತ್ತು ವೇಲ್ಸ್ ಸರೋವರಗಳಲ್ಲಿ ಕೆಂಪು ಮರಳು ಶಿಲೆ ಸೈಲೂರಿಯನ್ ಮತ್ತು ಕಾರ್ಬಾನಿಫೆರಸ್'ಲ್ಪಗಳ ಸಾಗರ ಶಿಲೆಗಳ ಮಧ್ಯೆ ನಿಕ್ಷೇಪಗೊಂಡಿದೆ. ಸೈಲೂರಿಯನ್ ಮತ್ತು ಕೆಂಪು ಮರಳು

ಶಿಲೆಗಳ ಮಧ್ಯೆ ಅಥವಾ ಕೆಂಪು ಮರಳು ಶಿಲೆ ಮತ್ತು ಕಾರ್ಬಾನಿಫೆರಸ್ ಶಿಲೆಗಳ ಮಧ್ಯೆ ಅನನುರೂಪ್ಯತೆಯಿಲ್ಲ. ವೇಲ್ಸ್ ಪ್ರದೇಶದ ಕೆಂಪು ಮರಳುಶಿಲೆಗಳು ಸೂಕ್ಷ್ಮ ಮರಳು ಕಣಗಳಿಂದ ಕೂಡಿವೆ. ಅವುಗಳ ತಳಭಾಗದಲ್ಲಿ ಸಾಗರವಾಸಿ ಜೀವಿಗಳ ಅವಶೇಷಗಳೂ ಸರೋವರವಾಸಿ ಮತ್ಸ್ಯಗಳ ಅವಶೇಷಗಳೂ ಒಟ್ಟಿಗೆ ಸಿಗುತ್ತವೆ. ಆದ್ದರಿಂದ ಈ ಸರೋವರಕ್ಕೆ ಪ್ರಾರಂಭದಲ್ಲಿ ಸಮುದ್ರ ಸಂಪರ್ಕ ಇದ್ದಿರಬೇಕೆಂದೂ, ಸಂಪರ್ಕ ಕಡಿದುಬಿದ್ದ ಬಳಿಕ ಪೂರ್ಣವಾಗಿ ಸರೋವರ ಸನ್ನಿವೇಶ ಉಂಟಾಗಿರಬೇಕೆಂದೂ ತಿಳಿಯಬಹುದಾಗಿದೆ. ಇವೆರಡು ಪ್ರದೇಶಗಳ ಕೆಂಪು ಮರಳು ಶಿಲೆಗಳನ್ನು ಕೆಳಭಾಗ ಮತ್ತು ಮೇಲ್ಭಾಗ ಎಂದು ವಿಭಜಿಸಬಹುದು. ಇವೆರಡರ ಮಧ್ಯೆ ಅನುರೂಪ ಸಂಪರ್ಕ ಕಂಡುಬರುತ್ತದೆ. ಇವುಗಳಲ್ಲಿ ಇರುವ ಮತ್ಸ್ಯಗಳ ಅವಶೇಷಗಳಿಗೆ ಸ್ವಂತ ವೈಶಿಷ್ಟ್ಯ ಉಂಟು. ಇವು ಆ ಎರಡು ಭಾಗಗಳ ನಡುವಿನ ಕಾಲವನ್ನೂ ಸೂಚಿಸುತ್ತವೆ.

ಕೆಲೆಡೋನಿಯನ್ ಸರೋವರಕ್ಕೆ ಉತ್ತರದಲ್ಲಿದ್ದ ಆರ್ಕಡಿ ಸರೋವರದಲ್ಲಿಯೂ ಕೆಂಪು ಮರಳು ಶಿಲೆಗಳು ನಿಕ್ಷೇಪಗೊಂಡಿವೆ. ಇವು ಪೂರ್ಣವಾಗಿ ಭೂಜಲಿಜ ಶಿಲೆಗಳು. ಇವನ್ನೂ ಕೆಳ ಮತ್ತು ಮೇಲ್ಭಾಗಗಳಾಗಿ ವಿಭಜಿಸಬಹುದು. ಮೇಲ್ಭಾಗದಲ್ಲಿ ಸಿಕ್ಕುವ ಮತ್ಸ್ಯಾವಶೇಷಗಳು ಕೆಲೆಡೋನಿಯನ್ ಮತ್ತು ವೇಲ್ಸ್ ಪ್ರದೇಶಗಳ ಮೇಲ್ಭಾಗದಲ್ಲಿ ಸಿಕ್ಕುವ ಮತ್ಸ್ಯಾವಶೇಷಗಳನ್ನು ಹೋಲುತ್ತವೆ. ಆದರೆ ಕೆಳಭಾಗದಲ್ಲಿರುವಂಥವು ಕೆಲೆಡೋನಿಯನ್–ವೇಲ್ಸ್ ಪ್ರದೇಶಗಳ ಕೆಳಭಾಗದ ಮತ್ಸ್ಯಾವಶೇಷಗಳನ್ನು ಹೋಲುವುದಿಲ್ಲ. ಆ ಪ್ರದೇಶಗಳ ಕೆಳ ಮತ್ತು ಮೇಲ್ಭಾಗದ ಮತ್ಸ್ಯಾವಶೇಷಗಳ ಮಧ್ಯಾವಸ್ಥೆಯನ್ನು ಸೂಚಿಸುತ್ತವೆ.

ಡಿವೊನಿಯನ್ ಶಿಲಾಸ್ತೋಮ: ಇದರಲ್ಲಿ ಗ್ರೇವೇಕ್ ಶಿಲೆ ಪ್ರಧಾನವಾದುದು. ಸುಣ್ಣಶಿಲೆ, ಜೇಡು ಶಿಲೆ, ಜ್ವಾಲಾಮುಖಜ ಶಿಲೆಗಳೂ ಆಳಪ್ರದೇಶದ ನಿಕ್ಷೇಪಗಳೂ ಇವೆ. ತೀರ ನಿಕ್ಷೇಪಗಳಲ್ಲಿ ಮರಳಿನ ಅಂಶ ಹೆಚ್ಚು. ಅವು ಉತ್ತರ ಡಿವೋನ್‌ಷೈರಿನಲ್ಲಿ ನಿಕ್ಷೇಪಗೊಂಡಿವೆ. ಆಳಪ್ರದೇಶದ ನಿಕ್ಷೇಪಗಳು ಡಿವೋನ್‌ಷೈರಿನ ದಕ್ಷಿಣಭಾಗದಲ್ಲಿ ನಿಕ್ಷೇಪಗೊಂಡಿವೆ. ಇವುಗಳಲ್ಲಿ ಸುಣ್ಣದ ಅಂಶವೇ ಹೆಚ್ಚು. ಈ ಎರಡು ಬಗೆಯ ನಿಕ್ಷೇಪಗಳಲ್ಲಿರುವ ಅವಶೇಷಗಳು ಸ್ವಾಭಾವಿಕವಾಗಿ ಭಿನ್ನ ರೀತಿಯವು. ಸಾಗರ ನಿಕ್ಷೇಪಗಳ ಮಧ್ಯೆ ಮೂರು ಅಂತರಗಳಲ್ಲಿ ಹಳೆ ಕೆಂಪು ಮರಳು ಶಿಲೆಯ ಪದರಗಳು ನಿಕ್ಷೇಪಗೊಂಡಿವೆ. ಇವು ಅನುಕ್ರಮವಾಗಿ ಸೀಗನಿಯನ್ (ಕೆಳ), ಕೌವಿನಿಯನ್(ಮಧ್ಯ) ಮತ್ತು ಪೆಮ್ಮೆನಿಯನ್ (ಮೇಲೆ) ಕಾಲದವು. ಆದ್ದರಿಂದ ಡಿವೋನಿಯನ್ ಶಿಲಾಸ್ತೋಮದ ಎರಡು ನಿಕ್ಷೇಪ ಮುಖಗಳನ್ನು ಪರಸ್ಪರ ಹೋಲಿಸಲು ಸಾಧ್ಯವಾಗಿದೆ. ಯೂರೋಪ್ ಖಂಡದಲ್ಲಿ ಫ್ರಾನ್ಸ್, ಬೆಲ್ಜಿಯಮ್, ಜರ್ಮನಿ ಮುಂತಾದ ಕಡೆ ಡಿವೋನಿಯನ್ ಶಿಲಾಸ್ತೋಮಗಳು ಅತ್ಯುತ್ತಮ ರೀತಿಯಲ್ಲಿ ರೂಪುಗೊಂಡಿವೆ. ಅವು ಅಷ್ಟು ಕಲಕಿಕೊಂಡೂ ಇಲ್ಲ. ಆದ್ದರಿಂದ ಅವನ್ನು ಮಾದರಿ ಶಿಲಾಸ್ತೋಮಗಳಾಗಿ ಪರಿಗಣಿಸಲಾಗಿದೆ.

ಉತ್ತರ ಅಮೆರಿಕ : ಇಲ್ಲಿ ಡಿವೋನಿಯನ್ ಕಲ್ಪದ ಪ್ರಾರಂಭ ಶಾಂತ ವಾತಾವರಣದಲ್ಲಿ ಆಯಿತು. ಆಪಲೇಚಿಯನ್ ಪರ್ವತಸ್ತೋಮಗಳನ್ನು ಬಿಟ್ಟರೆ ಭೂ ಮೇಲ್ಮೈಲಕ್ಷಣ ಸಮತಲವಾಗಿತ್ತು. ಡಿವೋನಿಯನ್ ಕಲ್ಪದ ಆದಿಯಲ್ಲಿ ಅಟ್ಲಾಂಟಿಕ್ ಸಾಗರ ಅಪಲೇಚಿಯನ್ ಪರ್ವತಗಳ ಪಶ್ಚಿಮದ ತಗ್ಗು ಪ್ರದೇಶವನ್ನು ಆಕ್ರಮಿಸಿತು. ಮೊದಲನೆಯ ಹಂತದಲ್ಲಿ ನ್ಯೂಫೌಂಡ್‌ಲೆಂಡಿನಿಂದ ನ್ಯೂಯಾರ್ಕ್ ವರೆಗೆ ಆಕ್ರಮಿಸಿ ಡಿವೋನಿಯನ್ ಮಧ್ಯ ಕಾಲದಲ್ಲಿ ಮಿಸ್ಸಿಸಿಪಿಯವರೆಗೆ ವ್ಯಾಪಿಸಿತು. ಈ ಕಾಲದಲ್ಲಿಯೇ ಉತ್ತರದಿಂದ ಆರ್ಕ್‌ಟಿಕ್ ಸಾಗರ ಕೆನಡದ ಭಾಗವನ್ನೂ ಪೆಸಿಫಿಕ್ ಸಾಗರ ದಕ್ಷಿಣ ಭಾಗವನ್ನೂ ಆಕ್ರಮಿಸಿ ಅವೆರಡೂ ಯೂಟಾ ಮತ್ತು ನವೇಡ ಹತ್ತಿರ ಸಂಧಿಸಿದುವು. ಹೀಗೆ ಮಧ್ಯ ಡಿವೋನಿಯನ್ ಕೆಳಕಲ್ಪದಲ್ಲಿ ಆಪಲೇಚಿಯನ್ ಪ್ರದೇಶದಲ್ಲಿ ಮಾತ್ರವಲ್ಲದೆ ಪಶ್ಚಿಮದಲ್ಲಿ ಮಿಚಿಗನ್ ಮತ್ತು ಕಾರ್ಡಿಲೆರಾನ್ ಪ್ರದೇಶಗಳಲ್ಲಿ ನಿಕ್ಷೇಪ ಕಾರ್ಯ ನಡೆಯಿತು. ಈ ಪ್ರದೇಶಗಳ ನಡುವೆ ಪರಸ್ಪರ ಸಂಪರ್ಕ ಇರಲಿಲ್ಲವಾದ್ದರಿಂದಲೂ ಇವು ಬೇರೆ ಜೀವಿಪ್ರಾಂತಗಳಿಗೆ ಸೇರಿದವುಗಳಾದ್ದರಿಂದಲೂ ಶಿಲಾಸಂಯೋಜನೆ ಮತ್ತು ಪಳೆಯುಳಿಕೆಗಳಲ್ಲಿ ಭಿನ್ನತೆ ಉಂಟು.

ಮಧ್ಯ ಡಿವೋನಿಯನ್ ಕಲ್ಪದಲ್ಲಿ ಆಪಲೇಚಿಯನ್ ಪ್ರದೇಶದಲ್ಲಿ ಆಗಾಧವಾದ ಭೂಚಲನೆ ಆಗಿ ಅದರ ಪರಿಣಾಮವಾಗಿ ಆಕೆಡಿಯನ್ ಪರ್ವತಸ್ತೋಮಗಳ ಉದಯವಾಯಿತು. ಇವು ಆಪಲೇಚಿಯನ್ ಪರ್ವತಗಳ ಎರಡನೆಯ ತಲೆಮಾರಿನ ಪರ್ವತಗಳು. ಈ ಅವಧಿಯಲ್ಲಿ ಹೆಚ್ಚು ಪ್ರಮಾಣದ ಶಿಲಾರಸ ಹೊರಹೊಮ್ಮಿ ಕ್ವಿಬೆಕ್‌ನ ದಕ್ಷಿಣ ಭಾಗ, ಗಾಸ್ಪ್, ನ್ಯೂ ಬ್ರನ್ಸ್‌ವಿಕ್ ಮತ್ತು ಮೇನ್ ಪ್ರಾಂತಗಳನ್ನು ಆವರಿಸಿಕೊಂಡಿತು. ಮೇನ್ ಮತ್ತು ಇತರೆಡೆಗಳಲ್ಲಿ ಶಿಲಾರಸದ ಹೊರಹೊಮ್ಮುವಿಕೆಗೆ ಸಂಬಂಧಿಸಿದ ಡೈಕುಗಳು ಇವೆ. ಆಕೆಡಿಯನ್ ಪರ್ವತೋದಯ ಆ ಪ್ರದೇಶದ ನದಿಗಳಿಗೆ ಹೊಸ ಜೀವ ತುಂಬಿದಂತಾಯಿತು. ಅವು ಮೆಕ್ಕಲನ್ನು ತಂದು ಆಪಲೇಚಿಯನ್ ತಗ್ಗುಪ್ರದೇಶವನ್ನು ಮುಚ್ಚಿ ನದೀಮುಖಜ ಭೂಮಿಗಳನ್ನು ಸ್ಥಾಪಿಸಿದುವು. ಇಂಥವುಗಳಲ್ಲಿ ನ್ಯೂಯಾರ್ಕ್ ಮತ್ತು ಪೆನ್ಸಿಲ್ವೇನಿಯ ಪ್ರದೇಶಗಳಲ್ಲಿರುವ ಕ್ಯಾಟಸ್ಕಿಲ್ ಮುಖಜಭೂಮಿ ಒಂದು. ಉತ್ತರ ಅಮೆರಿಕದ ಡಿವೋನಿಯನ್ ಶಿಲಾಸ್ತೋಮ ನ್ಯೂಯಾರ್ಕ್ ಪ್ರಾಂತದಲ್ಲಿ ಉತ್ತಮವಾಗಿ ನಿಕ್ಷೇಪಗೊಂಡಿದೆ. ಇದು ಆ ಖಂಡಕ್ಕೆ ಮಾದರಿ ಶಿಲಾಸ್ತೋಮ. ಇದನ್ನು ಪಳೆಯುಳಿಕೆಗಳ ಆಧಾರದ ಮೇಲೆ ಮೂರು ಭಾಗಗಳನ್ನಾಗಿ ವಿಭಜಿಸಿ ಆ ಭಾಗಗಳನ್ನು ಯೂರೋಪಿನ ಶಿಲಾಸ್ತೋಮದ ಮೂರು ಭಾಗಗಳಿಗೆ ಅನುಕ್ರಮವಾಗಿ ಹೊಂದಿಸಿದ್ದಾರೆ.

ಇಂಡಿಯ : ಇಲ್ಲಿ ಸ್ಪತಿ, ಕುಮಾವ್, ಕಾಶ್ಮೀರದ ಲಿಡಾರ್ ಕಣಿವೆ ಮುಂತಾದ ಕಡೆಗಳಲ್ಲಿ ಸೈಲೂರಿಯನ್ ಕಲ್ಪದ ಪೆಂಟಮೀರಸ್ ಒಬ್ಲಾಂಗ ಪದರಗಳ ಮೇಲೆ ಅನುರೂಪತೆಯಿಂದ ಸುಮಾರು 1250 ಸೆಂಮೀ ನಿಂದ 3750 ಸೆಂಮೀ ದಪ್ಪದ ಬಿಳಿ ಬೆಣಚು ಶಿಲೆ ನಿಕ್ಷೇಪಗೊಂಡಿವೆ. ಇದರ ಮೇಲೆ ಕಾರ್ಬಾನಿಫೆರಸ್ ಕಲ್ಪದ ಆದಿಕಾಲದ ಶಿಲೆಗಳು ನಿಕ್ಷೇಪಗೊಂಡಿವೆ. ಈ ಬೆಣಚುಶಿಲೆಗಳು ಸ್ಪತಿ ಹತ್ತಿರದ ಮತ್ ಕಣಿವೆಯಲ್ಲಿ ಪ್ರಮುಖವಾಗಿ ಹೊರಹೊಮ್ಮಿರುವುದರಿಂದ ಇವಕ್ಕೆ ಮೆತ್ ಬೆಣಚುಶಿಲೆಗಳು ಎಂದು ಹೆಸರಿಡಲಾಗಿದೆ. ಇವುಗಳಲ್ಲಿ ಪಳೆಯುಳಿಕೆಗಳಿಲ್ಲ. ಇವು ಸೆಲ್ಯೂರಿಯನ್ ಕಲ್ಪದ ಅಂತ್ಯಭಾಗವನ್ನೂ ಇಡೀ ಡಿವೋನಿಯನ್ ಕಲ್ಪವನ್ನೂ ಪ್ರತಿನಿಧಿಸುತ್ತವೆ. ಚಿತ್ರಾಲ್ ಮತ್ತು ಬರ್ಮದಲ್ಲಿ ಡಿವೋನಿಯನ್ ಕಲ್ಪವನ್ನು ಸುಣ್ಣಶಿಲೆಗಳು ಪ್ರತಿನಿಧಿಸುತ್ತವೆ. ಈ ಶಿಲಾಸ್ತೋಮಗಳಲ್ಲಿ ಆ ಕಾಲದ ಜೀವರಾಶಿ ಯಥೇಚ್ಛವಾಗಿವೆ.

ಡಿವೋನಿಯನ್ ಕಲ್ಪದ ಜೀವರಾಶಿ : ಡಿವೋನಿಯನ್ ಕಲ್ಪದ ಜೀವರಾಶಿಯಲ್ಲಿ ಸೈಲೂರಿಯನ್ ಜೀವರಾಶಿಯ ಛಾಯೆ ಕಾಣಿಸಿದರೂ ನವೀನತೆ ಎದ್ದು ತೋರುತ್ತದೆ. ಸೈಲೂರಿಯನ್ ಜೀವರಾಶಿಯ ಪ್ರಮುಖ ಜೀವಿ ಗುಂಪುಗಳೂ ಸೈಲೂರಿಯನ್ ಕಲ್ಪದ ಅಂತ್ಯದಲ್ಲಿ ಪೂರ್ಣ ನಾಶವಾದುವು. ಇನ್ನೂ ಕೆಲವು ತೀವ್ರ ಇಳಿಮುಖವಾಗಿ ಪ್ರಾಮುಖ್ಯವನ್ನು ಕಳೆದುಕೊಂಡವು. ಕೆಲವು ಜೀವಿಗುಂಪುಗಳು ಪರಿವರ್ಧಿಸಿ ಪ್ರಮುಖಸ್ಥಾನವನ್ನು ಗಳಿಸಿಕೊಂಡಿರುವುದೂ ವ್ಯಕ್ತವಾಗುತ್ತದೆ. ಸೈಲೂರಿಯನ್ ಕಲ್ಪದಲ್ಲಿ ನಾನಾಕಡೆಗಳಲ್ಲಿ ನೆಲೆಸಿ ಎಲ್ಲ ಗುಂಪುಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿದ್ದ ಗ್ರಾಪ್ಟೊಲೈಟುಗಳು ಡಿವೋನಿಯನ್ ಪ್ರಾರಂಭಕ್ಕೆ ಮುಂಚೆ ಹೇಳ ಹೆಸರಿಲ್ಲದಂತೆ ಆದುವು. ಟ್ರೈಲೊಬೈಟ್‌ಗಳು ಗಣನೀಯ ಪರಿವರ್ತನೆಯಿಲ್ಲದೆ ಉಳಿದವಾದರೂ ಅವುಗಳ ಸಂಖ್ಯೆ ಮಿತಿಗೊಂಡಿತು. ಟ್ರಾಟಾಸ್ಪಿಸ್ ಮತ್ತು ಹೆಮಿಯಾರ್ಗಿಸ್ ಎಂಬ ಜಾತಿಯ ಟ್ರೈಲೊಬೈಟುಗಳಲ್ಲಿ ಮುಳ್ಳುಗಳಿದ್ದುದರಿಂದ ಭಯಂಕರವಾಗಿ ಕಾಣುತ್ತಿದ್ದುವು. ಇವು ಟ್ರೈಲೊಬೈಟುಗಳ ಅವನತಿಯ ಸ್ಪಷ್ಟ ಕುರುಹು. ಸೈಲೂರಿಯನ್ ಕಲ್ಪದಿಂದ ಡಿವೋನಿಯನ್ ಕಲ್ಪಕ್ಕೆ ಮುಂದುವರಿದವುಗಳಲ್ಲಿ ಫೆಕಾಪ್ಸ್ ಮತ್ತು ಟ್ರೈಮೆರೊಕೆಪಲಸ್ ಮುಖ್ಯವಾದವು. ಹೊಮೊಲೊನೊಟಸ್ ಪ್ರಬಲವಾಗಿತ್ತು. ದಪ್ಪ ರುಂಡದ ಹಾರ್ಪೆಸ್ ಮತ್ತು ದೊಡ್ಡ ಕಿಬ್ಬೊಟ್ಟೆಯ ಬ್ರಾಂಟೆಸ್ ಈ ಕಾಲದ ವಿಶಿಷ್ಟ ಟ್ರೈಲೊಬೈಟ್‌ಗಳು. ಸಾಗರದ ನೀರು ಸ್ವಚ್ಛವಾಗಿದ್ದ ಕಡೆಗಳಲ್ಲೆಲ್ಲ ಹವಳಗಳು ದಿಬ್ಬಗಳನ್ನು ರಚಿಸಿರುತ್ತವೆ. ಸ್ಟ್ರೊಮಟೊಪೋರ, ಬ್ರಯೋಜೋವ ಮತ್ತು ಕ್ರೈನಾಯಿಡ್ ಜಾತಿಯ ಪ್ರಾಣಿಗಳ ಕೊಡುಗೆಯೂ ಇಂಥ ದಿಬ್ಬಗಳಿಗೆ ಗಣನೀಯ ಪ್ರಮಾಣದಲ್ಲಿದೆ. ಹವಳ ದಿಬ್ಬಗಳಲ್ಲಿ ಫೆವೊಸೈಟಿಸ್, ಅಸೆರ್ವುಲೇರಿಯ, ಸಯತೋಫಿಲ್ಲಮ್ ಪ್ರಿಸ್ಮೆಟೋಫಿಲ್ಲ ಮತ್ತು ಫಿಲಿಪ್ಸಾಸ್ಟ್ರಿಯಗಳ ಅವಶೇಷಗಳು ಹೇರಳವಾಗಿವೆ. ಜಫ್ರಾಂಟಿಸ್, ಸಿಸ್ಟಿಫಿಲ್ಲಮ್, ಹೆಲಿಯೊಫಿಲ್ಲಮ್ ಮತ್ತು ಕ್ಯಾಲ್ಸಿಯೋಲ ಸ್ಯಾಂಡಲೈನ ಆ ಕಾಲದಲ್ಲಿದ್ದ ರೂಗೋಸ್ ಹವಳಗಳು. ಕೊನೆಯದು ಮಧ್ಯ ಡಿವೋನಿಯನ್ ಶಿಲೆಗಳ ವೈಶಿಷ್ಟ್ಯ ಅವಶೇಷ. ಡಿವೋನಿಯನ್ ಕಲ್ಪದಲ್ಲಿ ಸಿಸ್ಟಿಡ್‌ಗಳು ಅವನತಿಗೊಂಡವು. ಆದರೆ ಎಕಿನಾಯಿಡ್, ಕ್ರೈನಾಯಿಡ್ ಮತ್ತು ಬ್ಲಾಸ್ಟಾಯಿಡ್‌ಗಳು ಉನ್ನತಿಯ ತುದಿ ಮುಟ್ಟಿದುವು. ಅಥಿರಿಸ್ ಮತ್ತು ಸ್ಪಿರಿಫೆರ್‌ಗಳು, ಹೆಚ್ಚು ಸಂಖ್ಯೆಯಲ್ಲಿದ್ದುವು. ಟೆರಬ್ರಾಟುಲ ಮೊದಲ ಬಾರಿಗೆ ಕಾಣಿಸಿಕೊಂಡಿತು. ಕಪ್ಪೆಚಿಪ್ಪು ಪ್ರಾಣಿಗಳೂ, ಶಿರಪಾದಿ (ಸೆಫಲೊಪೊಡ)ಗಳು ಅಭಿವೃದ್ಧಿಮಾರ್ಗದಲ್ಲಿ ನಡೆದವು. ಮೆಗಲೊಡಾನ್ ಮತ್ತು ಟೆರಿನ ಜಾತಿಯ ಕಪ್ಪೆಚಿಪ್ಪುಗಳ ಪ್ರಾಣಿಗಳು ಹೇರಳವಾಗಿದ್ದುವು. ಆರ್ಥೋಸೆರಾಸ್, ಸಿರ್ಟೋಸೆರಾಸ್, ಬ್ರ್ಯಾಕ್ಟೈಟಿಸ್, ನಾಟಿಲಸ್ ಈ ಕಲ್ಪದ ಶಿರಪಾದಿಗಳು. ಗೋನಿಯ ಟೈಟಿಸ್ ಮೊದಲ ಬಾರಿಗೆ ಕಾಣಿಸಿದುದು ಶಿರಪಾದಿಗಳ ಬೆಳೆವಣಿಗೆಯಲ್ಲಿ ಒಂದು ಮುಖ್ಯ ಹೆಜ್ಜೆ. ಆಸ್ಟ್ರಕೋಡ ಜಾತಿಯ ಪ್ರಾಣಿಗಳೂ ಹೆಚ್ಚಾಗಿದ್ದು ಎಂಟೊಮಿಸ್ ಒಂದು ವಿಶಿಷ್ಟ ಅವಶೇಷವಾಗಿದೆ. ನದಿ ಕೊಳಗಳಲ್ಲಿ ಯೂರಿಪ್ಟರಿಸ್ ಎಂಬ ಚೇಳು ಜಾತಿಯ ಪ್ರಾಣಿಗಳು ನೆಲೆಸಿದ್ದುವು. ಅವು ಬಲು ದೊಡ್ಡವಾಗಿದ್ದವು. ನಶಿಸಿ ಹೋದ ಆಸ್ಟ್ರಾಕೊಡರ್ಮ್ ಜಾತಿಯ ಮತ್ಸ್ಯಗಳೂ ಹೇರಳವಾಗಿದ್ದುವು. ಭೂಮಿ ಮೊದಲ ಬಾರಿಗೆ ಸಸ್ಯ ಹೊದಿಕೆಯನ್ನು ಪಡೆದಿತ್ತು. ಈ ಸಸ್ಯಗಳು ಬೇರು ಎಲೆಗಳಿಲ್ಲದೆ ವಿಕಾಸಪಥದಲ್ಲಿ ಬಲು ಕೆಳದರ್ಜೆಗೆ ಸೇರಿದ ಸಿಲೊಪ್ಸೈಟೀಲಿಸ್ ಸಸ್ಯ ಗುಂಪಿಗೆ ಸೇರಿದಂಥವು. ರೈನಿಯ, ಹಾರ್ನಿಯ ಮತ್ತು ಆಸ್ಟೆರೊಕ್ಸೈಲಾನ್ ಇವುಗಳಲ್ಲಿ ಮುಖ್ಯವಾದವು. (ಡಿ.ಆರ್.)

**ಡೆ ವ್ರೀಸ್, ಹ್ಯೂಗೊ (1848–1935):** ಹೆಸರಾಂತ ಡಚ್ ಸಸ್ಯ ವಿಜ್ಞಾನಿ. ಆಮ್‌ಸ್ಟರ್‌ಡ್ಯಾಮ್ ವಿಶ್ವವಿದ್ಯಾಲಯದಲ್ಲಿ 1877ರಲ್ಲಿ ಅಧ್ಯಾಪಕನಾಗಿ ಸೇರಿ

ಮರುವರ್ಷದಲ್ಲಿಯೇ ಸಸ್ಯಶರೀರವಿಜ್ಞಾನದಲ್ಲಿ ಪ್ರಾಧ್ಯಾಪಕನಾದ. ಜನನ ನೆದರ್‌ಲ್ಯಾಂಡ್ಸ್‌ನಲ್ಲಿರುವ ಹಾರ್ಲೆಮ್‌ನಲ್ಲಿ, 16–2–1848ರಂದು. ವಿದ್ಯಾಭ್ಯಾಸ ನಡೆದದ್ದು ಲೀಡನ್, ಹೈಡಲ್‌ಬರ್ಗ್ ಮತ್ತು ವುರ್ಜ್‌ಬರ್ಗ್‌ನಲ್ಲಿ. ಸಸ್ಯಗಳಲ್ಲಿ ಕಂಡುಬರುವಂಥ ಪ್ಲಾಸ್ಮಾಲಿಸಿಸ್ ಕ್ರಿಯೆಯನ್ನು ಕುರಿತು ಈತ ಪ್ರಾಧ್ಯಾಪಕನಾದ ಆರಂಭದಲ್ಲಿಯೇ ವಿಪುಲವಾದ ಸಂಶೋಧನೆಗಳನ್ನು ನಡೆಸಿ ಅಭಿಸರಣ ಕ್ರಿಯೆಯ ಕ್ರಿಯಾವಿನ್ಯಾಸದ (ಮೆಕ್ಯಾನಿಸಮ್) ಬಗ್ಗೆ ಮಹತ್ತ್ವದ ಅಂಶಗಳನ್ನು ಪ್ರಕಟಿಸಿದ. ಅದೇ ವೇಳೆಗೆ ತಾನಿದ್ದ ಪ್ರದೇಶದ ಬಯಲುಗಳಲ್ಲಿ ಅಲ್ಲಲ್ಲಿ ಹುಲುಸಾಗಿ ಬೆಳೆಯುತ್ತಿದ್ದ ಅಮೆರಿಕೆಯ ಸಂಜೆಮಲ್ಲಿಗೆಯಾದ ಈನೋತೀರ ಎಂಬ ಪ್ರಭೇದದ ಸಸ್ಯಸಮುದಾಯದಲ್ಲಿ ಆಗಾಗ್ಗೆ ಕಂಡುಬರುತ್ತಿದ್ದ ಹೊಸ ಬಗೆಯ ಸಸ್ಯಪೀಳಿಗೆಗಳನ್ನು ಪರಿಶೀಲಿಸಿದ. ಹೊಸ ಬಗೆಯವುಗಳ ಪೀಳಿಗೆ ಹೇಗೆ ಅಸ್ತಿತ್ವಕ್ಕೆ ಬಂದಿರಬಹುದೆಂಬುದರ ಬಗ್ಗೆ ಸತತವಾಗಿ ಸಂಕರ ಪ್ರಯೋಗಗಳನ್ನು ನಡೆಸಿ ಒಂದು ಹೊಸ ಸಿದ್ಧಾಂತವನ್ನು ಮನಸ್ಸಿನಲ್ಲೇ ಕಲ್ಪಿಸಿಕೊಂಡ (1900). ಇದನ್ನು ಪ್ರಕಟಿಸುವುದಕ್ಕಿಂತ ಮುಂಚೆ ಹಿಂದಿನ ವಿಜ್ಞಾನಿಗಳು ಯಾರಾದರೂ ಇದೇ ಬಗೆಯ ಸಂಕರ ಪ್ರಯೋಗಗಳನ್ನು ನಡೆಸಿ ಫಲಿತಾಂಶಗಳನ್ನು ಪ್ರಕಟಿಸಿದ್ದಾರೆಯೇ ಎಂದು ತಿಳಿಯಲು ಕುತೂಹಲದಿಂದ ಸಂಶೋಧನಾ ಲೇಖನಗಳನ್ನು ಅಧ್ಯಯಿಸುತ್ತಿದ್ದಾಗ ತಾನು ರೂಪಿಸಬೇಕೆಂದುಕೊಂಡಿದ್ದ ಸಿದ್ಧಾಂತವನ್ನು ಈ ಮೊದಲೇ ಪ್ರಯೋಗಗಳ ಆಧಾರದಿಂದ 1886ರಲ್ಲಿ ಆಸ್ಟ್ರಿಯದ ಪಾದ್ರಿ–ವಿಜ್ಞಾನಿ ಗ್ರೆಗರ್ ಮೆಂಡಲ್ ಎಂಬಾತ ಸೂಚಿಸಿರುವುದನ್ನು ಕಂಡುಹಿಡಿದ. ಪ್ರಾಮಾಣಿಕ ಸಸ್ಯವಿಜ್ಞಾನಿಯಾದ ಡೆ ವ್ರೀಸ್ ಮೆಂಡಲನ ಸಿದ್ಧಾಂತವನ್ನು ಪುನರುತ್ಥಾನಗೊಳಿಸಿದುದಲ್ಲದೆ ತಾನು ನಡೆಸಿದ ಪ್ರಯೋಗಗಳ ಫಲಿತಾಂಶವನ್ನು ಮೆಂಡಲ್ ಸಿದ್ಧಾಂತದ ಹಿನ್ನೆಲೆಯಲ್ಲಿ ಸಮರ್ಥವಾಗಿ ನಿರೂಪಿಸಿದ. ಇದೇ ಸಮಯದಲ್ಲಿ ರೆಷಿಕ್ ಫಾನ್ ಷೆರ್ಮಾಕ್ ಮತ್ತು ಕಾರ್ಲ್ ಕಾರೆನ್ಸ್ ಎಂಬ ವಿಜ್ಞಾನಿಗಳೂ ಸ್ವತಂತ್ರವಾಗಿ ಮೆಂಡಲ್ ಸಿದ್ಧಾಂತವನ್ನು ಸಮರ್ಥಿಸಿದ್ದರು.

ಡೆ ವ್ರೀಸ್ 1904ರಿಂದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಕೊಂಚ ಸಮಯ ಅಧ್ಯಾಪಕ ವೃತ್ತಿಯಲ್ಲಿದ್ದು 1918ರಲ್ಲಿ ನಿವೃತ್ತನಾದ. ಅನಂತರ ಮತ್ತೆ ಈನೋತೀರ ಸಸ್ಯಗಳಲ್ಲಿ ತನ್ನ ಸಂಶೋಧನೆಗಳನ್ನು ಮುಂದುವರಿಸಿದ. ಈ ಸಸ್ಯಗಳಲ್ಲಿ ಕಂಡುಬರುವಂಥ ಆಕಸ್ಮಿಕ ಬದಲಾವಣೆಗಳು ಒಮ್ಮೆಗೇ ಒಂದೇ ಹಂತದಲ್ಲಿ ಉತ್ಪರಿವರ್ತನೆಗೊಂಡು ವಿಕಾಸಹೊಂದಿವೆ ಎಂಬುದು ಈತನ ಅಭಿಪ್ರಾಯ. ಉತ್ಪರಿವರ್ತನೆಗಳ ಬಗ್ಗೆ ಹಾಗೂ ಜೀವವಿಕಾಸದಲ್ಲಿ ಅವುಗಳ ಪಾತ್ರದ ಬಗ್ಗೆ ವಿಪುಲವಾದ ಅಭ್ಯಾಸವನ್ನು ನಡೆಸಿದ. ಜೀವಿಗಳಲ್ಲಿ ಕಂಡುಬರುವ ವಿಕಾಸವನ್ನು ಪ್ರಾಯೋಗಿಕವಾಗಿ ತೋರಿಸಿದುದರ ಶ್ರೇಯಸ್ಸು ಈತನಿಗೆ ಸಲ್ಲುತ್ತದೆ (ಹೊಸ ಬಗೆಯ ಈನೋತೀರ ಸಸ್ಯಗಳ ಉಗಮಕ್ಕೆ ಕಾರಣ– ಕ್ರೊಮೋಸೋಮುಗಳಲ್ಲಾಗುವ ಸ್ಥಾನಾಂತರಣ ಹಾಗೂ ಸಂಲಗ್ನಗೊಂಡ ಜೀನ್ ಸಂಕೀರ್ಣದಲ್ಲಾಗುವ ಮರುಸಂಯೋಗ ಎಂಬುದು ಈಗ ತಿಳಿದಿದೆ). 1935ರ ಮೇ 21 ರಂದು ಆಮ್‌ಸ್ಟರ್‌ಡ್ಯಾಮಿನಲ್ಲಿ ಈತ ಮಡಿದ. ಇವನು ಬರೆದ ಇಂಟ್ರಾಸೆಲ್ಯುಲೇರ್ ಪ್ಯಾನ್‌ಜೆನಿಸಿನ್ (1889), ಡೀ ಮ್ಯುಟೇಟ್ಸಿಯೋನ್ಸ್ ಥಿಯೊರಿ (1900) ಮತ್ತು ಒಪೇರಾ ಎ ಪೆರಿಯೋಡಿಕಸ್ ಕೋಲೇಟ (1918–1927) ಎಂಬ ಪುಸ್ತಕಗಳು ಪ್ರಾಯೋಗಿಕ ವಿಜ್ಞಾನದಲ್ಲಿ ಉತ್ತಮ ಗ್ರಂಥಗಳೆನಿಸಿವೆ. ***

**ಡೈಟಿಸ್ಕಿಡೆ:** ಕೀಟವರ್ಗದ ಕೋಲಿಯಾಪ್ಟರ ಗಣಕ್ಕೆ ಸೇರಿದ ಕುಟುಂಬ. ಇದರಲ್ಲಿ ಹಿಂಸ್ರಸ್ವಭಾವದ ಜೀರುಂಡೆಗಳಿವೆ. ಈ ಕೀಟಗಳ ದೇಹ ಮೃದು. ಬಣ್ಣ ಹೊಳೆಯುವ ಕಪ್ಪು ಅಥವಾ ಕಂದು. ಇವು ಜಲವಾಸಿಗಳಾಗಿರುವುದರಿಂದ ಕಾಲುಗಳು ಚಪ್ಪಟೆಯಾಗಿವೆ. ಕಾಲುಗಳ ಅಂಚುಗಳಲ್ಲಿರುವ ಕೂದಲುಗಳಿಂದ ಈಜಲು ಅನುಕೂಲ. ನೀರಿನೊಳಗಿದ್ದಾಗ ರೆಕ್ಕೆಗಳ ಕೆಳಗೆ ಗಾಳಿ ಶೇಖರಿಸಲು ಜಾಗವಿದೆ. ಪ್ರೌಢಜೀರುಂಡೆ ಮತ್ತು ಅವುಗಳ ಮರಿಗಳು (ಗ್ರಬ್ಸ್) ನೀರಿನಲ್ಲಿರುವ ಸಣ್ಣ ಕೀಟಗಳನ್ನು ಮತ್ತು ಸಣ್ಣ ಮೀನುಮರಿಗಳನ್ನು ತಿನ್ನುತ್ತವೆ. ಆದರೆ ಇವು ಉಪಕಾರಿ ಕೀಟಗಳು. ಪ್ರೌಢಜೀವಿಗಳು ರಾತ್ರಿ ಹಾರಬಲ್ಲವು. ಡೈಟಿಸ್ಕಸ್ ಮಾರ್ಜಿನ್ಯಾಲಿಸ್ ದೊಡ್ಡ ಗಾತ್ರದ ಜೀರುಂಡೆ. ಇದರ ಡಿಂಬ ತನ್ನ ಆಹಾರವನ್ನು ನುಂಗುವ ಮೊದಲು ಅದನ್ನು ಜೊಲ್ಲುರಸದಿಂದ ಜೀರ್ಣಿಸಿ ನಂತರ ಕಬಳಿಸುತ್ತದೆ. ಕೆಲವು ಸಲ ಸಣ್ಣ ಕೀಟ, ಹುಳು, ಅಥವಾ ಬಸವನಹುಳು ಶರೀರದೊಳಕ್ಕೆ ಬಾಯಿಂದ ಪಚನರಸಗಳನ್ನು ಸೇರಿಸಿ ದ್ರವೀಕರಿಸಿ ಅನಂತರ ಆಹಾರವನ್ನು ಹೀರುತ್ತವೆ. ಗಂಡು ಜೀರುಂಡೆಗಳ ಮುಂಗಾಲುಗಳ ಹರಡುಗಳಲ್ಲಿ ತಟ್ಟೆಗಳಿದ್ದು, ಹೆಣ್ಣನ್ನು ಹಿಡಿದುಕೊಳ್ಳಲು ನಿರ್ವಾತ ಬಟ್ಟಲುಗಳಂತೆ ಇವು ಸಹಾಯಕವಾಗಿವೆ. ಮೊಟ್ಟೆಗಳನ್ನು ಗುಂಪಾಗಿ ಅಥವಾ ಒಂಟೊಂಟಿಯಾಗಿ ನೀರಿನಲ್ಲಿರುವ ವಸ್ತುಗಳ ಮೇಲೆ ಅಥವಾ ಜಲಸಸ್ಯಗಳ ಅಂಗಾಂಶದೊಳಗೆ ಇಡುತ್ತವೆ. ಮೊಟ್ಟೆಯಿಂದ ಮರಿಗಳು ಹೊರಕ್ಕೆ ಬಂದು ಮಣ್ಣನ್ನು ಕೊರೆದು ಕೋಶಗಳಾಗುತ್ತವೆ.

ಈ ಕುಟುಂಬದಲ್ಲಿ 90 ಬಗೆಯ ಜೀರುಂಡೆ ಜಾತಿಗಳು, 2050 ಪ್ರಭೇದಗಳಿವೆ. ಪ್ರಪಂಚದ ಎಲ್ಲಾ ಕಡೆ ಇವು ವಾಸಿಸುತ್ತವೆ. (ಪಿ.ಎಂ.)

**ಡೈನೊಸಾರ್:** ಮೀಸೊಜ಼ೋಯಿಕ್ ಯುಗದಲ್ಲಿ ಜೀವಿಸಿದ ಒಂದು ದೈತ್ಯ ಸರೀಸೃಪ. ಆ ಯುಗದ ಸರೀಸೃಪಗಳಲ್ಲೆಲ್ಲ ಇದು ಅತ್ಯಂತ ಪ್ರಭಾವಯುತವಾದುದೂ ಗಮನಾರ್ಹವಾದುದೂ ಆಗಿತ್ತು. ಡೈನೊಸಾರ್ ಎಂದರೆ ಭಯಂಕರ ಹಲ್ಲಿ ಎಂದರ್ಥ. ಹೆಚ್ಚಿನ ಡೈನೊಸಾರುಗಳು ಬೃಹದಾಕಾರದವೇನೋ ನಿಜ. ಆದರೆ ಚಿಕ್ಕಗಾತ್ರದವೂ ಇದ್ದುವು. ಎರಡನೆಯದಾಗಿ ಅವು ಹಲ್ಲಿಗಳಲ್ಲ. ಹಲ್ಲಿಗಳಿಗೆ ದೂರ ಸಂಬಂಧಿಗಳು. ಬಹುಪಾಲು ಡೈನೊಸಾರುಗಳು 20 ಟನ್ನಿಗಿಂತ ಹೆಚ್ಚು ತೂಗುತ್ತಿದ್ದುವು. ಕೆಲವು 50 ರಿಂದ 80 ಟನ್ನು ತೂಗುತ್ತಿದ್ದುದೂ ಉಂಟು. ಆದ್ದರಿಂದ ಇವು ಅತ್ಯಂತ ದೊಡ್ಡ ಗಾತ್ರದ ಪ್ರಾಣಿಗಳೆಂದು ನಿಸ್ಸಂಶಯವಾಗಿ ಹೇಳಬಹುದು.

ಡೈನೊಸಾರುಗಳು ಮೂಲರೂಪದ ತೀಕೊಡಾಂಟ್‌ಗಳ ಸಂತತಿ. ಹೆಚ್ಚು ಕಡಿಮೆ ಎಲ್ಲ ಡೈನೊಸಾರ್‌ಗಳೂ ಎರಡು ಕಾಲುಗಳ ಮೇಲೆ ಸಂಚರಿಸುತ್ತಿದ್ದುವು. ಕೆಲವು ಮಾತ್ರ ಒಮ್ಮೊಮ್ಮೆ ನಾಲ್ಕು ಕಾಲುಗಳ ಮೇಲೂ ನಡೆಯುತ್ತಿದ್ದುವು. ಎರಡನೆಯ ಬಗೆಯವುಗಳಲ್ಲಿ ಸಹ ಹಿಂಗಾಲುಗಳು ಮುಂಗಾಲುಗಳಿಗಿಂತ ಉದ್ದ ಮತ್ತು ಶಕ್ತಿಯುತವಾಗಿ ಇದ್ದುವು. ಆದ್ದರಿಂದ ಇವುಗಳ ಶರೀರ ಸೊಂಟಕ್ಕೆ ತಿರುಗಣಿಯ ಮೂಲಕ ಸೇರಿದ್ದು ಅದನ್ನು ಸರಿದೂಗಲು ಉದ್ದವಾದ ಮತ್ತು ಭಾರವಾದ ಬಾಲ ಇತ್ತು. ಅಲ್ಲದೆ ಸೊಂಟದೆಲುಬು ಇತರ ಸರೀಸೃಪಗಳಲ್ಲಿ ಇದ್ದಂತೆ ಮೂರರ ಬದಲು ಐದು ಬೆನ್ನೆಲುಬುಗಳಿಗೆ ಬೆಸೆದುಕೊಂಡಿದ್ದು, ಶರೀರ ಚಲನೆಯ ಕಾರ್ಯವನ್ನು ನಿರ್ವಹಿಸಲು ಶಕ್ತಿಯುತವಾಗಿತ್ತು. ಹಿಂಗಾಲುಗಳು ಉದ್ದವಾಗಿದ್ದುವು. ಇವಕ್ಕೆ ದೇಹದ ಭಾರವನ್ನು ಹೊರುವ ಸಾಮರ್ಥ್ಯವಿತ್ತು. ಕಾಲುಗಳಲ್ಲಿ ಇರಬೇಕಾದ ಐದು ಬೆರಳುಗಳಲ್ಲಿ ಮೊದಲನೆಯದು ನಶಿಸಿಹೋಗಿತ್ತು.

ಡೈನೊಸಾರ್‌ಗಳ ಗುಂಪು ಪ್ರಾರಂಭದಲ್ಲಿಯೇ ಎರಡು ಶಾಖೆಗಳಾಗಿ ಕವಲೊಡೆಯಿತು. ಒಂದು ಶಾಖೆಯ ಡೈನೊಸಾರ್‌ಗಳ ಸೊಂಟದೆಲುಬು ಇತರ ಸರೀಸೃಪಗಳಲ್ಲಿದ್ದಂತೆಯೇ ಇತ್ತು. ಮತ್ತೊಂದು ಶಾಖೆಯವುಗಳ ಸೊಂಟದೆಲುಬು ಪಕ್ಷಿಗಳಲ್ಲಿದ್ದಂತೆ ಇತ್ತು. ಈ ಎರಡೂ ಶಾಖೆಗಳನ್ನು ಅನುಕ್ರಮವಾಗಿ ಸಾರಿಸ್ಕಿಯನ್ ಮತ್ತು ಆರ್ನಿತಿಸ್ಕಿಯನ್ ಶಾಖೆಗಳೆಂದು ಕರೆಯಲಾಗಿದೆ.

ನೆಲವಾಸಿಗಳ ಸೊಂಟದೆಲುಬಿನಲ್ಲಿ ಮೂರು ಎಲುಬುಗಳೂ ಒಂದು ತಿರುಗು ಕುಳಿಯೂ ಉಂಟು. ತಿರುಗುಕುಳಿಗೆ ಅಸಿಟ್ಯಾಬ್ಯುಲಮ್ ಎಂದೂ ಅದರ ಮೇಲೆ ಬೆನ್ನೆಲುಬಿಗೆ ಬೆಸೆದುಕೊಂಡಿರುವ ಎಲುಬಿಗೆ ಇಲಿಯಮ್ ಎಂದೂ ಹೆಸರಿವೆ. ಅಸಿಟ್ಯಾಬ್ಯುಲಮ್ಮಿನ ಕೆಳಗೆ ಎರಡು ಎಲುಬುಗಳಿವೆ. ಮುಂದಿನದಕ್ಕೆ ಪ್ಯೂಬಿಸ್ ಎಂದೂ ಹಿಂದಿನದಕ್ಕೆ ಇಶ್ಕಿಯಮ್ ಎಂದೂ ಹೆಸರು. ಸಾರಿಸ್ಕಿಯನ್ ಡೈನೊಸಾರುಗಳಲ್ಲಿ ಪ್ಯೂಬಿಸ್ ಮತ್ತು ಇಶ್ಕಿಯಮ್ ಎಲುಬುಗಳು ಕೆಳಕ್ಕೆ ಅಗಲವಾಗುತ್ತ ಹೋಗಿ, ಸೊಂಟದೆಲುಬು ಮೂರು ಕಡೆಗೆ ವಿಸ್ತರಿಸಿದೆ. ಆರ್ನಿತಿಸ್ಕಿಯನ್ ಡೈನೊಸಾರ್‌ಗಳಲ್ಲಿ ಪ್ಯೂಬಿಸ್ ಹಿಂದಕ್ಕೆ ಇಶ್ಕಿಯಮ್ ಎಲುಬಿಗೆ ಸಮಾಂತರವಾಗಿಯೂ ಅದರ ಮತ್ತೊಂದು ಶಾಖೆ ಮುಂದಕ್ಕೆ ಇಲಿಯಮ್ ಎಲುಬಿಗೆ ಸಮಾಂತರವಾಗಿಯೂ ಬಾಗಿದ್ದು ಸೊಂಟದೆಲುಬು ನಾಲ್ಕು ಕಡೆಗೆ ವಿಸ್ತರಿಸಿದೆ.

ಸಾರಿಸ್ಕಿಯನ್ ಡೈನೊಸಾರುಗಳಲ್ಲಿ ಕೆಲವು ಮಾಂಸಾಹಾರಿಗಳು, ಕೆಲವು ಸಸ್ಯಾಹಾರಿಗಳು. ಮಾಂಸಾಹಾರಿಗಳು ಎರಡು ಕಾಲುಗಳಿಂದಲೂ ಸಸ್ಯಾಹಾರಿಗಳು ನಾಲ್ಕು ಕಾಲುಗಳಿಂದಲೂ ಸಂಚರಿಸುತ್ತಿದ್ದವು. ದವಡೆಯ ತುಂಬ (ಮುಂಭಾಗದಲ್ಲಿ ಸಹ) ಹಲ್ಲುಗಳಿದ್ದವು. ಅಲ್ಲದೆ ಬೆರಳುಗಳ ಕೊನೆಯಲ್ಲಿ ಗಟ್ಟಿಯಾದ ಮತ್ತು ಮೊನಚಾದ ಪಂಜಗಳಿದ್ದವು. ಆರ್ನಿತಿಸ್ಕಿಯನ್ ಡೈನೊಸಾರ್‌ಗಳೆಲ್ಲವೂ ಸಸ್ಯಾಹಾರಿಗಳು. ಇವು ನಾಲ್ಕು ಕಾಲುಗಳಿಂದ ನಡೆಯುತ್ತಿದ್ದುವು. ದವಡೆಯ ಮುಂಭಾಗದಲ್ಲಿ ಹಲ್ಲುಗಳಿರಲಿಲ್ಲ. ದವಡೆ ಕೊಕ್ಕಿನಂತೆ ಮಾರ್ಪಾಡಾಗಿದ್ದಿತು. ಕಾಲ್ಬೆರಳುಗಳಲ್ಲಿ ಉಗುರುಗಳು ಅಥವಾ ಗೊರಸುಗಳಿದ್ದವು. ಕೆಳಗಿನವು ಮುಖ್ಯವಾದ ಡೈನೋಸಾರ್‌ಗಳು.

1.ಸಾರಿಸ್ಕಿಯ :

ತೀರೋಪೊಡ – ಮಾಂಸಾಹಾರಿಗಳು

ಸಾರೋಪೊಡ – ಸಸ್ಯಾಹಾರಿಗಳು

2.ಆರ್ನಿತಿಸ್ಕಿಯ:

ಆರ್ನಿತಾಪೊಡ – ಬಾತುಮೂತಿಯ ಡೈನೊಸಾರುಗಳು

ಸ್ಟಿಗೋಸಾರಸ್ – ಕವಚರಕ್ಷಿತ ಡೈನೊಸಾರುಗಳು

ಅಂಕಿಲೊಸಾರಸ್

ಸೆರಟಾಪ್ಸ – ಕೊಂಬುಳ್ಳ ಡೈನೊಸಾರುಗಳು.

ತೀರೋಪೊಡ : ಸಾರಿಸ್ಕಿಯನ್ ಜಾತಿಯ ಇವು ಡೈನೊಸಾರುಗಳಲ್ಲೆಲ್ಲ ಮೊದಲು,

ಅಂದರೆ ಟ್ರಯಾಸಿಕ್ ಯುಗದ ಅಂತ್ಯದಲ್ಲಿ ಕಾಣಿಸಿಕೊಂಡವು. ಇವುಗಳ ಮೂಲ ಪ್ರಕಾರಗಳು ಚಿಕ್ಕವಾಗಿ ತೆಳುವಾಗಿದ್ದುವು. ಇವು ಎರಡು ಕಾಲುಗಳಲ್ಲೇ ಸಂಚರಿಸುತ್ತಿದ್ದುವಲ್ಲದೆ ಇವಕ್ಕೆ ವೇಗವಾಗಿ ಚಲಿಸುವ ಶಕ್ತಿಯಿತ್ತು. ಆದ್ದರಿಂದ ಇವು ಸಣ್ಣ ಸರೀಸೃಪಗಳನ್ನು ಮತ್ತು ಇತರ ಪ್ರಾಣಿಗಳನ್ನು ಹಿಡಿದು ತಿಂದು ಜೀವಿಸುತ್ತಿದ್ದುವು. ಈ ಮೂಲಶಾಖೆಯಿಂದ ಮೀಸೋಜ಼ೋಯಿಕ್ ಯುಗದ ಉಳಿದ ಅವಧಿಗಳಲ್ಲಿ ಮೂರು ಹೊಸ ಸಂತತಿಗಳು ಉದಯಿಸಿದವು.

ಮೊದಲನೆಯ ಸಂತತಿಯ ಮಾದರಿಯಾಗಿ ಕೊಯಲೊಫೈಸಿಸನ್ನು ತೆಗೆದುಕೊಳ್ಳಬಹುದು. ಇದು ಬಹು ಚಿಕ್ಕ ಪ್ರಾಣಿ. ಇದರಲ್ಲಿ ಆರ್ಕಿಯೋಸಾರಿಯನ್ ಸರೀಸೃಪ ಲಕ್ಷಣಗಳೆಲ್ಲವೂ ಇದ್ದುವು. ಇದು ಪಕ್ಷಿ ರೀತಿಯ ಹಿಂಗಾಲುಗಳನ್ನು ಪಡೆದಿರುವ, ಎರಡು ಕಾಲಲ್ಲಿ ಸಂಚರಿಸುವ ಉದ್ದದ ಪ್ರಾಣಿಯಾಗಿತ್ತು. ಶರೀರ ಸೊಂಟಕ್ಕೆ ತಿರುಗಣಿ ಸಂಧಿಯ ಮೂಲಕ ಸೇರಿದ್ದು ಉದ್ದವಾದ ಬಾಲದಿಂದ ಸಮದೂಗಲ್ಪಟ್ಟಿತ್ತು. ತಲೆಬುರುಡೆಯಲ್ಲಿ ಕಪೋಲ ರಂಧ್ರ ಮತ್ತು ನೇತ್ರದ ಹಿಂದಿನ ರಂಧ್ರಗಳಿದ್ದುವು. ದವಡೆಯ ತುಂಬ ಹಲ್ಲುಗಳಿದ್ದು ಅವೆಲ್ಲವೂ ಗುಳಿಯಲ್ಲಿ ಅಡಕವಾಗಿದ್ದವು. ಸೊಂಟದೆಲುಬು ಸರೀಸೃಪ ಮಾದರಿಯದು. ಆದರೆ ಮೂಲ ಸರೀಸೃಪಗಳಲ್ಲಿರುವಂತೆ ಅಸಿಟ್ಯಾಬ್ಯುಲಮ್ ಮುಚ್ಚಿರಲಿಲ್ಲ. ಪ್ಲೇಟಿಯೊಸಾರಸ್ ಮತ್ತು ಅರ್ನಿತೊಸಾರಸ್‌ಗಳು ಕೊಯಿಲೋಫೈಸಿಸ್ಸನ್ನೇ ಹೋಲುವ ಇನ್ನೆರಡು ಪ್ರಕಾರಗಳು. ಎರಡನೆಯದರಲ್ಲಿ ಮುಂಗಾಲುಗಳು ಉದ್ದವಾಗಿದ್ದು, 4 ಮತ್ತು 5 ನೆಯ ಬೆರಳುಗಳು ನಶಿಸಿದ್ದುವು.

ಎರಡನೆಯ ಶಾಖೆಯ ಪ್ರಾಣಿಗಳು ಆಸ್ಟ್ರಿಚ್ ಪಕ್ಷಿಯನ್ನು ಹೋಲುವ ಡೈನೊಸಾರುಗಳು. ಆಸ್ಟ್ರಿಚೋಮಿಮಸ್ ಎಂಬುದು ಈ ಶಾಖೆಯ ಮಾದರಿ ಎನ್ನಬಹುದು. ಇವು ಕೊಯಿಲೊಫೈಸಿಸ್ಸನ್ನೇ ಹೋಲುತ್ತಿದ್ದುವು. ಆದರೆ ಗಾತ್ರದಲ್ಲಿ ಬಹು ದೊಡ್ಡವು. ಇವುಗಳ ಹಿಂಗಾಲುಗಳು ಉದ್ದವಾಗಿ, ತೆಳುವಾಗಿ, ಪಕ್ಷಿ ರೀತಿಯ ಪಾದಗಳನ್ನು ಪಡೆದಿದ್ದುವು. ಉದ್ದವಾದ ಕೊಂಕು ಕುತ್ತಿಗೆಯ ಕೊನೆಯಲ್ಲಿ ಚಿಕ್ಕತಲೆ ಇರುವುದೇ ಇವುಗಳ ಪ್ರಮುಖ ಲಕ್ಷಣ.

ಮೂರನೆಯ ಶಾಖೆ ಭೂಮಿಯ ಮೇಲೆ ಜೀವಿಸಿದ್ದ ಅತ್ಯಂತ ದೊಡ್ಡ ಮಾಂಸಾಹಾರಿಗಳನ್ನು ಒಳಗೊಂಡಿದೆ. ಟಿರಾನೊಸಾರಸ್ ಇದಕ್ಕೆ ಉದಾಹರಣೆ. ಹೀಗೆಂದರೆ ಪುಂಡ ಸರೀಸೃಪ ಎಂದು ಅರ್ಥ. ಇದು ಅಸಾಧಾರಣ ಬಲಿಶಾಲಿಯಾಗಿತ್ತೆಂದು ಹೇಳಲಾಗಿದೆ. ಅಲೋಸಾರಸ್, ಟಿರಾನೊಸಾರಸ್ ಮೊದಲಾದುವು ಪ್ರಕೃತಿಯಲ್ಲಿ ಕಾಣಿಸಿಕೊಂಡ ದೊಡ್ಡ ಮಾಂಸಾಹಾರಿಗಳು. ಇವುಗಳ ಹಿಂಗಾಲುಗಳು ಬಲಯುತವಾಗಿದ್ದವಾದರೂ ಮುಂಗಾಲುಗಳು ಅಪ್ರಯೋಜಕವೆನಿಸಿದ್ದುವು. ಇವುಗಳಲ್ಲಿ ಅನೇಕ ಪ್ರಾಣಿಗಳಿಗೆ ಬರ್ಜಿಯಂಥ ಹಲ್ಲುಗಳಿದ್ದುದರಿಂದ, ದೊಡ್ಡಪ್ರಾಣಿಗಳನ್ನು ಕೊಂದು ತಿನ್ನುವುದರಲ್ಲಿ ಇವು ಯಶಸ್ವಿಗಳಾಗಿದ್ದುವು.



ಟಿರಾನೊಸಾರಸ್

ಸಾರೋಪೊಡ್‌ಗಳು: ಟ್ರಯಾಸಿಕ ಅಂತ್ಯದಲ್ಲಿಯೇ ಸಾರಿಸ್ಕಿಯನ್ ಜಾತಿಯ ಒಂದು ಗುಂಪು ಸಸ್ಯಾಹಾರಿಗಳಾಗಿ ರೂಪುಗೊಂಡಿತು. ಈ ಗುಂಪಿನ ಪ್ರಾಣಿಗಳಿಗೆ ಸಾರೋಪೊಡ್ ಡೈನೊಸಾರ್‌ಗಳೆಂದು ಹೆಸರು. ಇವು ನಾಲ್ಕು ಕಾಲುಗಳ ಸಹಾಯದಿಂದ ಸಂಚರಿಸುತ್ತಿದ್ದುವಾದರೂ ಇವುಗಳ ಹಿಂಗಾಲುಗಳು ಮುಂಗಾಲುಗಳಿಗಿಂತ ಉದ್ದ ಮತ್ತು ಹೆಚ್ಚು ಬಲಯುತವಾಗಿ ಇದ್ದುವು. ಸಾರೋಪೊಡ್‌ಗಳು ಎರಡು ಕಾಲಿನ ಸಂಚಾರಿಗಳಿಂದ ರೂಪುಗೊಂಡಂತವು ಎಂಬುದನ್ನು ಇದು ಸೂಚಿಸುತ್ತದೆ. ಭೂಮಿಯ ಮೇಲೆ ವಾಸಿಸಿದ್ದ ಅತ್ಯಂತ ಭಾರಿಗಾತ್ರದ ಪ್ರಾಣಿಗಳಾದ ಬ್ರಾಂಟೊಸಾರಸ್, ಡಿಪ್ಲೊಡೋಕಸ್ ಮೊದಲಾದುವನ್ನು ಇವು ಒಳಗೊಂಡಿದ್ದುವು. ಇವುಗಳ ಉದ್ದ 24–27 ಮೀ. ತೂಕ 40–50 ಟನ್ ಇತ್ತೆಂದು ನಂಬಲಾಗಿದೆ. ಸಾರೋಪೊಡ್‌ಗಳು ಜುರಾಸಿಕ್ ಮತ್ತು ಕ್ರಿಟೇಷಿಯಸ್ ಯುಗಗಳಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿದ್ದುವು ಹಾಗೂ ಜುರಾಸಿಕ್ ಅಂತ್ಯದಲ್ಲಿಯೇ ಉನ್ನತಿಯ ಶಿಖರವನ್ನು ಮುಟ್ಟಿದ್ದವು.



ಬ್ರಾಂಟೊಸಾರಸ್

ಉದ್ದವಾದ ಕುತ್ತಿಗೆಯ ತುದಿಯಲ್ಲಿದ್ದ ಸಾರೋಪೊಡ್‌ಗಳ ತಲೆ, ದೇಹದ ಗಾತ್ರಕ್ಕೆ ಹೋಲಿಸಿದರೆ ಬಹು ಚಿಕ್ಕದಾಗಿತ್ತು. ಕಣ್ಣುಗಳೂ ಹೊಳ್ಳೆಗಳೂ ಅಗಲವಾಗಿದ್ದು ತಲೆಯ ಮೇಲ್ಭಾಗದಲ್ಲಿದ್ದವು. ಆದ್ದರಿಂದ ಈ ಪ್ರಾಣಿಗಳು ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ಅದೃಶ್ಯವಾಗಿರಲು ಸಹಾಯಕವಾಗಿತ್ತು. ದವಡೆಗಳು ಚಿಕ್ಕವಾಗಿದ್ದುವು. ಹಲ್ಲುಗಳು ಬಲಯುತವಾಗಿರಲಿಲ್ಲ. ಪ್ರಾಣಿಗಳ ಗಾತ್ರಕ್ಕೆ ಹೋಲಿಸಿದರೆ ಮಿದುಳು ಬಲು ಚಿಕ್ಕದಾಗಿತ್ತು. ಬೆನ್ನಿನ ನರಬಳ್ಳಿ ನಿತಂಬಗಳ ಮಧ್ಯೆ ಸ್ಥಿತವಾಗಿದ್ದು ಮಿದುಳಿಗಿಂತ ಬಲು ದೊಡ್ಡದಾಗಿ ಹಿಗ್ಗಿತ್ತು. ಸೊಂಟದೆಲುಬು ಬಲು ದೊಡ್ಡದು. ಹಿಂಗಾಲುಗಳು ಭಾರಿ ಗಾತ್ರದವಾಗಿಯೂ ನೇರವಾಗಿಯೂ ಇದ್ದವು. ಪಾದಗಳು ಅಗಲವಾಗಿ, ಗುಂಡಾಗಿ ಮೆತ್ತೆಗಳಿಂದ ಕೂಡಿದ್ದವು. ಕಾಲ್ಬೆರಳುಗಳು ಚಿಕ್ಕವಾಗಿದ್ದುವು. ಅವುಗಳಲ್ಲಿ ಕೆಲವಕ್ಕೆ ಮಾತ್ರ ಪಂಜಗಳಿದ್ದವು. ಸಾರೋಪೊಡ್‌ಗಳ ದೇಹರಚನೆಯಿಂದ ಇವು ದ್ವಿಚರ ಪ್ರಾಣಿಗಳಾಗಿದ್ದುವೆಂದೂ ನದಿ, ಕೊಳ ಮತ್ತು ಜೌಗುಪ್ರದೇಶಗಳಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದವೆಂದೂ ತಿಳಿಯುತ್ತದೆ.



ಡಿಪ್ಲೊಡೋಕಸ್

ಅರ್ನಿತೊಪೊಡ: ಈ ಗುಂಪಿನಲ್ಲಿ ಅನೇಕ ಮೂಲ ಶಾಖೆಗಳುಂಟು. ಈ ಪ್ರಾಣಿಗಳ ಸೊಂಟದೆಲುಬು ಪಕ್ಷಿ ರೀತಿಯದು. ಇವು ಎರಡು ಕಾಲುಗಳಲ್ಲಿ ಸಂಚರಿಸುತ್ತಿದ್ದುವು. ಹಿಂಗಾಲುಗಳು ಹೆಚ್ಚು ಬಲಯುತವಾಗಿದ್ದುವು. ಮುಂಗಾಲುಗಳು ಚಿಕ್ಕವಾದರೂ ಸಾಕಷ್ಟು ಬಲಯುತವಾಗಿಯೇ ಇದ್ದುವು. ವೇಗವಾಗಿ ಓಡಬೇಕಾದಾಗಲೆಲ್ಲ ಎರಡು ಕಾಲುಗಳನ್ನೂ ಬಳಸುತ್ತಿದ್ದುವು. ಈ ಗುಂಪಿನ ಪ್ರಾಣಿಗಳೆಲ್ಲವೂ ಸಸ್ಯಾಹಾರಿಗಳು.

ಜುರಾಸಿಕ್ ಅಂತ್ಯಕಾಲ ಮತು ಕ್ರಿಟೇಷಿಯಸ್ ಆದಿಕಾಲಗಳಲ್ಲಿ ಜೀವಿಸಿದ್ದ ಕ್ಯಾಂಪ್ಟೊಸಾರಸ್ಸನ್ನು ಈ ಗುಂಪಿನ ಮಾದರಿಯಾಗಿ ತೆಗೆದುಕೊಳ್ಳಬಹುದು. ಈ ಪ್ರಾಣಿ ಸಾಮಾನ್ಯವಾಗಿ 1.8 – 2.1 ಮೀ ಉದ್ದವಿತ್ತು. ಕೆಲವು ವೇಳೆ 6 ಮೀ ಉದ್ದವಿದ್ದುದೂ ಉಂಟು. ತಲೆಬುರುಡೆ ಚಪ್ಪಟೆಯಾಗಿತ್ತು. ಕಪೋಲರಂಧ್ರ ವಿಶಾಲವಾಗಿತ್ತು. ಆದರೆ ನೇತ್ರದ ಹಿಂದಿನ ರಂಧ್ರ ಚಿಕ್ಕದಾಗಿದ್ದು ನಶಿಸುವ ದಾರಿಯಲ್ಲಿ ಸಾಗಿದ್ದುದನ್ನು ಸೂಚಿಸುತ್ತದೆ. ಕೆಳದವಡೆಗಳು ಹಲ್ಲು ಸಾಲಿಗಿಂತಲೂ ಕೆಳಮಟ್ಟದಲ್ಲಿ ಕ್ವಾಡ್ರೇಟ್ ಎಲುಬಿಗೆ ತಾಗಿದ್ದುವು. ಇದರಿಂದ ದವಡೆಹಲ್ಲುಗಳ ಅಗಿಯುವ ಶಕ್ತಿ ಹೆಚ್ಚಾಗಿತ್ತು. ದವಡೆ ಹಲ್ಲುಗಳು ಅಗಲವಾಗಿ ಎಲೆಯಾಕಾರದವಾಗಿದ್ದುವು. ದವಡೆಯ ಮುಂಭಾಗ ಹಲ್ಲಿಲ್ಲದೆ, ಕೊಕ್ಕಾಗಿ ಮಾರ್ಪಟ್ಟಿತ್ತು.

ಕ್ಯಾಂಪ್ಟೊಡಾನ್ ಮೂಲಶಾಖೆಯಿಂದ ಅನೇಕ ಶಾಖೆಗಳು ಉದಯಿಸಿ ವಿಕಾಸಗೊಂಡವು. ಅವುಗಳಲ್ಲಿ ಕ್ರಿಟೇಷಿಯಸ್ ಯುಗದ ಹ್ಯಾಡ್ರೊಸಾರಸ್ ಮತ್ತು ಟ್ರ್ಯಾಕೊಡಾನ್ ಗಮನ ಸೆಳೆಯುವಂಥವು. ಟ್ರ್ಯಾಕೊಡಾನ್ ಅತ್ಯಂತ ದೊಡ್ಡಗಾತ್ರದ್ದಾದರೂ ದ್ವಿಪಾದಸಂಚಾರಿಯಾಗಿತ್ತು. ಹಿಂಗಾಲುಗಳು ದೊಡ್ಡವೂ ಬಲಯುತವಾದವೂ ಆಗಿದ್ದುವು. ಪಾದಗಳು ಅಗಲವಾಗಿದ್ದು ಬಲೆ ಬೆರಳುಗಳಿಂದ ಕೂಡಿದ್ದುವು. ತಲೆಯ ಮುಂಭಾಗ ಮತ್ತು ದವಡೆಗಳು ಚಪ್ಪಟೆಯಾಗಿದ್ದು ಬಾತು ಮೂತಿಯನ್ನು ಹೋಲುತ್ತಿದ್ದುದು ಈ ಪ್ರಾಣಿಯ ವಿಶಿಷ್ಟ ಲಕ್ಷಣ. ಆದ್ದರಿಂದಲೇ ಇವನ್ನು ಬಾತುಮೂತಿಯ ಡೈನೊಸಾರ್‌ಗಳೆಂದು ಕರೆದಿರುವುದು. ದವಡೆಹಲ್ಲುಗಳ ಅಗಿಯುವ ಸಾಮರ್ಥ್ಯ ಅಧಿಕವಾಗಿತ್ತು.

ಇತರ ಜಾತಿಯ ಆರ್ನಿತಿಸ್ಕಿಯನ್‌ಗಳು: ಪಕ್ಷಿರೀತಿಯ ಎಲ್ಲ ಡೈನೊಸಾರ್‌ಗಳೂ ಸಸ್ಯಾಹಾರಿಗಳೇ. ಆರ್ನಿತಾಪೊಡ್ ಗುಂಪಿನ ಪ್ರಾಣಿಗಳನ್ನು ಬಿಟ್ಟು ಉಳಿದವೆಲ್ಲವೂ ನಾಲ್ಕು ಕಾಲಿನಲ್ಲಿಯೇ ಸಂಚರಿಸುತ್ತಿದ್ದುವು. ಆದ್ದರಿಂದ ಇವು ಮಂದಗಾಮಿಗಳಾಗಿದ್ದುವು. ಆದರೆ ಮಾಂಸಾಹಾರಿ ಡೈನೊಸಾರ್‌ಗಳಿಂದ ರಕ್ಷಿಸಿಕೊಳ್ಳಲು ಒಂದಲ್ಲ ಒಂದು ರೀತಿ ಸಜ್ಜಿತಗೊಂಡಿದ್ದವು.

ಸ್ಟೀಗೋಸಾರಸ್: ಜುರಾಸಿಕ್ ಅಂತ್ಯಕಾಲದಲ್ಲಿದ್ದ ಸ್ಟೀಗೋಸಾರಸ್ ಎಂಬುದು ಬಹು ಪರಿಚಿತ ಕವಚರಕ್ಷಿತ ಡೈನೊಸಾರ್. ಅದು 6 ಮೀ ಗಿಂತ ಉದ್ದವಾಗಿದ್ದ ದೊಡ್ಡಪ್ರಾಣಿ. ನಾಲ್ಕು ಕಾಲಿನ ಸಂಚಾರಿ. ಆದರೆ ಹಿಂಗಾಲುಗಳು ಮುಂಗಾಲುಗಳಿಗಿಂತ ಉದ್ದವಾಗಿಯೂ ದಪ್ಪವಾಗಿಯೂ ಇದ್ದುವು. ಆದ್ದರಿಂದ ಇದರ ಸೊಂಟದ ಭಾಗವೇ ಅತ್ಯಂತ ಚಿಕ್ಕವಾಗಿದ್ದುವು. ನರಬಳ್ಳಿ ಸೊಂಟದ ಹತ್ತಿರ ತುಂಬ ಹಿಗ್ಗಿತ್ತು. ಆದ್ದರಿಂದ ಸ್ಟೀಗೋಸಾರ್‌ಗಳು ಎರಡು ಮಿದುಳುಗಳನ್ನು ಪಡೆದಿದ್ದವೆಂಬ ನಂಬಿಕೆಯಿದೆ. ತಲೆಯ ಹಿಂಭಾಗದಿಂದ ಮೊದಲ್ಗೊಂಡು ಬೆನ್ನಿನ ಉದ್ದಕ್ಕೂ ಎರಡು ಸಾಲು ತ್ರಿಕೋಣಾಕಾರದ ಎಲುಬಿನ ಹಲಗೆಗಳು ಇರುವುದು ಈ ಡೈನೊಸಾರಿನ ವಿಶಿಷ್ಟ ಲಕ್ಷಣ. ಹಲಗೆಗಳು ಬುಡದಲ್ಲಿ ದಪ್ಪವಾಗಿಯೂ ತುದಿಯಲ್ಲಿ ತೆಳುವಾಗಿಯೂ ಇದ್ದು ನೆಟ್ಟಗೆ ನಿಂತಿದ್ದುವು. ಬಾಲದ ಮೇಲೆ ಉದ್ದವಾದ ಎಲುಬಿನ ನಾಲ್ಕು ಮುಳ್ಳುಗಳಿದ್ದುವು. ಕ್ರಿಟೇಷಿಯಸ್ ಯುಗದ ಆದಿಕಾಲದಲ್ಲಿ ಸ್ಟೀಗೋಸಾರಸ್ ವಿನಾಶವಾಯಿತು.



ಸ್ಟೀಗೋಸಾರರ್

ಅಂಕಿಲೋಸಾರಸ್: ಕ್ರಿಟೇಷಿಯಸ್ ಯುಗದಲ್ಲಿ ಅಂಕಿಲೊಸಾರಸ್ ಎಂಬ ಇನ್ನೊಂದು ಕವಚರಕ್ಷಿತ ಡೈನೊಸಾರ್ ಜೀವಿಸಿತ್ತು. ಇದು 6 ಮೀ ಉದ್ದದ ಬಹುತೂಕದ ಪ್ರಾಣಿ. ಇದರ ತಲೆ ಬಹು ಅಗಲ. ಬಾಲದ ಕೊನೆಯಲ್ಲಿ ಎಲುಬು ಗದೆಯಾಕಾರದಲ್ಲಿ ಗಂಟು ಕಟ್ಟಿತ್ತು. ಶರೀರ ಅಗಲವಾಗಿಯೂ ತೆಳುವಾಗಿಯೂ ಇದ್ದು ಆಮೆಯೋಪಾದಿಯಲ್ಲಿ ಮೈಯೆಲ್ಲ ಬಹುಭುಜಾಕೃತಿಯ ಎಲುಬಿನ ಹಲಗೆಗಳಿಂದ ಆವೃತವಾಗಿತ್ತು. ತಲೆ ಬಾಲ ಮತ್ತು ಕಾಲುಗಳು ಸಹ ಇದೇ ರೀತಿಯಲ್ಲಿ ರಕ್ಷಿತವಾಗಿದ್ದುವು.

ಸೆರಟಾಪ್ಸ್ ಅಥವಾ ಕೊಂಬು ಡೈನೊಸಾರ್‌ಗಳು: ಕ್ರಿಟೇಷಿಯಸ್ ಯುಗದ ಅಂತ್ಯಕಾಲದಲ್ಲಿ ಕೊಂಬು ಡೈನೊಸಾರ್‌ಗಳು ಕಾಣಿಸಿಕೊಂಡವು. ಡೈನೊಸಾರ್‌ಗಳಲ್ಲೆಲ್ಲ ಇವೇ ಕೊನೆಯದಾಗಿ ಕಾಣಿಸಿಕೊಂಡಂಥವು. ಇವು ಸಹ ಕ್ರಿಟೇಷಿಯಸ್ ಯುಗ ಮುಗಿಯುವುದರೊಳಗಾಗಿ ನಶಿಸಿದುವು. ಈ ಸ್ವಲ್ಪ ಕಾಲದಲ್ಲಿಯೇ ಇವುಗಳ ಸಂಖ್ಯೆ ಹೆಚ್ಚಿ ನಾನಾ ಶಾಖೆಗಳಾಗಿ ಕವಲೊಡೆದು ಇವು ಸರೀಸೃಪ ವೃಂದದಲ್ಲಿ ಪ್ರಮುಖವೆನಿಸಿದುವು.

ಸೆರಟಾಪ್ಸಿಯನ್ ತಲೆಬುರುಡೆಯಲ್ಲಿ ಈ ಗುಂಪಿನ ಲಕ್ಷಣಗಳೆಲ್ಲ ಇವೆ. ತಲೆಬುರುಡೆ ಬಲು ದಪ್ಪ. ಸ್ಕ್ವಾಮೋಸಲ್ ಮತ್ತು ಪರೈಟಲ್ ಎಲುಬುಗಳು ಹಿಂದಕ್ಕೆ ಚಾಚಿಕೊಂಡು ಎಲುಬಿನ ಹೊದಿಕೆಯಾಗಿ ಮಾರ್ಪಟ್ಟಿವೆ. ಕುತ್ತಿಗೆಯನ್ನು ಮಾಂಸಾಹಾರಿಗಳಿಂದ ರಕ್ಷಿಸಿಕೊಳ್ಳಲು ಈ ಹೊದಿಕೆ ಸಹಕಾರಿಯಾಗಿದೆ. ಕಣ್ಣು ಮತ್ತು ಮೂಗುಗಳ ಮೇಲೆ ಕೊಂಬುಗಳಿರುವುದು, ಈ ಡೈನೊಸಾರ್‌ಗಳ ಮತ್ತೊಂದು ಮುಖ್ಯ ಲಕ್ಷಣ. ಟ್ರೈಸೆರಟಾಪ್ಸಿನಲ್ಲಿ ಕಣ್ಣುಗಳ ಮೇಲೆ ಒಂದು ಜೊತೆ ಕೊಂಬುಗಳು ಮತ್ತು ಮೂಗಿನ ಮೇಲೆ ಮತ್ತೊಂದು ಕೊಂಬು ಇದ್ದುವು. ಮಾನೊಕ್ಲೋನಿಯಸ್ಸಿನಲ್ಲಿ ಮೂಗಿನ ಮೇಲಣ ಒಂದು ಕೊಂಬು ಮಾತ್ರ ಇತ್ತು. ಮಂಗೋಲಿಯದ ಪ್ರೋಟೊಸೆರಟಾಪ್ಸ್ ಮತ್ತು ಉತ್ತರ ಅಮೇರಿಕದ ಲೆಪ್ಟೊಸೆರಟಾಪ್ಸ್‌ಗಳಿಗೆ ಕೊಂಬುಗಳೇ ಇರಲಿಲ್ಲ. ಆದರೆ ಇವುಗಳಲ್ಲಿ ಕೊಂಬುಗಳನ್ನು ಬಿಟ್ಟು ಎಲ್ಲ ಸೆರಟಾಪ್ಸ್ ಲಕ್ಷಣಗಳೂ ಇದ್ದುವು. ಕುತ್ತಿಗೆಯ ಮೇಲಣ ಎಲುಬಿನ ಹೊದಿಕೆ ಸಹ ಇತ್ತು. ಇವೆರಡೂ ಈ ಗುಂಪಿನ ಮೂಲರೂಪಗಳು.



ಟ್ರೈಸೆರಟಾಪ್ಸ್

ಮಂಗೋಲಿಯದ ಪ್ರೋಟೊಸೆರಟಾಪ್ಸ್ ವಿಶೇಷ ಗಮನವನ್ನು ಸೆಳೆಯುವಂಥದು. ಇವುಗಳ ಅವಶೇಷಗಳು ಉತ್ತಮ ರೀತಿಯಲ್ಲಿ ರಕ್ಷಿತವಾಗಿರುವುದೇ ಅಲ್ಲದೆ, ಶೈಶವಾವಸ್ಥೆಯಿಂದ ಪ್ರೌಢಾವಸ್ಥೆಯವರೆಗಿನ ಬೆಳವಣಿಗೆಯನ್ನು ಪ್ರತಿನಿಧಿಸುವ ಪ್ರಾಣಿಗಳ ಅವಶೇಷಗಳೂ ಸಿಕ್ಕಿವೆ. ಮೊಟ್ಟೆಗಳು ಸಹ ಸಿಕ್ಕಿವೆ. ಪ್ರೋಟೊಸೆರಟಾಪ್ಸ್ ವರೆಗೆ ವಿಕಾಸ ಎರಡು ದಿಕ್ಕುಗಳಲ್ಲಿ ಸಾಗಿದೆ. ಒಂದು ದಿಕ್ಕಿನಲ್ಲಿ ದೇಹದ ಗಾತ್ರಕ್ಕೂ ಮತ್ತೊಂದು ದಿಕ್ಕಿನಲ್ಲಿ ಕೊಂಬುಗಳ ಬೆಳವಣಿಗೆಗೂ ಆದ್ಯತೆ ಇದೆ. (ಡಿ.ಆರ್.; ಕೆ.ಎಂ.ವಿ.)

**ಡೈನೋಥೀರಿಯಮ್:** ಆನೆ ಮುಂತಾದ ಸೊಂಡಿಲುಳ್ಳ ಸ್ತನಿಗಳನ್ನು ಒಳಗೊಂಡಿರುವ ಪ್ರೊಬೊಸಿಡಿಯ ಗಣಕ್ಕೆ ಸೇರಿದ ಒಂದು ಗತಜೀವಿ. ಮಯೋಸೀನ್ ಮತ್ತು ಪ್ಲಿಯೊಸೀನ್ ಕಾಲದಲ್ಲಿ ಜೀವಿಸಿತ್ತೆಂದು ಹೇಳಲಾಗಿದೆ. ಫ್ರಾನ್ಸ್, ಜರ್ಮನಿ, ಗ್ರೀಸ್ ಮತ್ತು ಉತ್ತರ ಭಾರತದಲ್ಲಿ ಇದರ ಪಳಿಯುಳಿಕೆಗಳು ಪತ್ತೆಯಾಗಿವೆ. 1836 ರಲ್ಲಿ ಹೆಸ್ಸೆ–ಡಾರ್ಮ್‌ಷ್ಟಾಟ್ ಎಂಬಲ್ಲಿ ಇದರ ಒಂದು ತಲೆಬುರುಡೆ ಪತ್ತೆಯಾಯಿತು. ಇದು 1.35 ಮೀ ಉದ್ದ ಹಾಗು 0.90 ಮೀ ಅಗಲ ಇದೆ. ಇದರಿಂದ ಈ ಪ್ರಾಣಿ ಗಾತ್ರದಲ್ಲಿ ಇಂದಿನ ಆನೆಯನ್ನೂ ಮೀರಿಸಿತ್ತೆಂದು ಗೊತ್ತಾಗುತ್ತದೆ.

ಡೈನೋಥೀರಿಯಮಿನ ಮೇಲ್ದವಡೆಯಲ್ಲಿ ಬಾಚಿ ಕೋರೆಹಲ್ಲುಗಳಿಲ್ಲ. ಪ್ರತಿ ಪಕ್ಕದಲ್ಲೂ ಐದು ದವಡೆಹಲ್ಲುಗಳಿದ್ದವು. ಈ ದೃಷ್ಟಿಯಲ್ಲಿ ಇದು ಮಿಕ್ಕೆಲ್ಲ ಪ್ರೊಬೊಸಿಡಿಯಗಳಿಗಿಂತ ಭಿನ್ನವಾಗಿದೆ. ಇದರ ಕೆಳದವಡೆಯ ಮುಂಭಾಗ ತನ್ನ ಸಿಂಫೈಸಿಸ್ ಭಾಗದಿಂದ ಅಧೋಮುಖವಾಗಿ ಬಾಗಿದೆಯಲ್ಲದೆ ಕೆಳದವಡೆಯ ಒಂದು ಜೊತೆ ದಂತಗಳೂ ಕೆಳಮುಖವಾಗಿ ಬಾಗಿವೆ. ಕೆಳದವಡೆಯಲ್ಲಿ ಐದು ದವಡೆ ಹಲ್ಲುಗಳಿವೆ. ಇವು ಈ ಗುಂಪಿನ ಇತರ ಪ್ರಾಣಿಗಳ ಎಲ್ಲ ಹಲ್ಲುಗಳಿಗಿಂತ ಅತ್ಯಂತ ಸರಳ ರಚನೆಗಳು. ಪ್ರತಿ ದವಡೆ ಹಲ್ಲಿನಲ್ಲಿ ಎರಡು ಉಬ್ಬುಗಳು ಮತ್ತು ಹಿಂಭಾಗದಲ್ಲಿ ಒಂದು ಚಿಕ್ಕ ಪಾಲಿ ಇವೆ. ಎಲ್ಲ ದವಡೆಹಲ್ಲುಗಳೂ ಒಂದೇ ಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದುದು ಇದರ ವೈಶಿಷ್ಟ್ಯ. ಡೈನೊಥೀರಿಯಮಿನಲ್ಲಿ ಚೆನ್ನಾಗಿ ರೂಪುಗೊಂಡ ಸೊಂಡಿಲಿತ್ತು ಎಂಬುದಕ್ಕೆ ಆಧಾರವಿದೆ. ಉಳಿದ ಅಸ್ಥಿಪಂಜರ ಮೂಲತಃ ಪ್ರೊಬೊಸಿಡಿಯ ಮಾದರಿಯನ್ನು ಹೋಲುತ್ತದೆ. ತಲೆಬುರುಡೆಯ ಆಕ್ಸಿಪಿಟಲ್ ಪ್ರದೇಶ ಕಡಿದಾಗಿ ಮುಂದಕ್ಕೆ ಬಾಗಿದೆ. ಜೊತೆಗೆ ಅದರಲ್ಲಿ ಯಾವುದೇ ಡಿಪ್ಲಾಯ್‌ಗಳಿಲ್ಲ.

ಈ ಮೇಲಿನ ಎಲ್ಲ ಲಕ್ಷಣಗಳನ್ನು ಅಭ್ಯಸಿಸಿದ ಈವೆನ್ ಎಂಬಾತ ಡೈನೊಥೀರಿಯಮನ್ನು ಪ್ರೊಬೊಸಿಡಿಯ ಗುಂಪಿಗೆ ಸೇರಿಸಿರುವುದನ್ನು ಸಮರ್ಥಿಸಿದ್ದಾನೆ. ಆದರೆ ಡೆ ಬ್ಲೆಯಿನ್ ವಿಲ್ ಎಂಬಾತ ಇದನ್ನು ಒಂದು ಜಲಸ್ತನಿ ಎಂದು ಪರಿಗಣಿಸಿ ಇದು ಮ್ಯಾನಟೀಯನ್ನು ಬಹುವಾಗಿ ಹೋಲುತ್ತದೆ ಎಂದು ಅಭಿಪ್ರಾಯಪಡುತ್ತಾನೆ. ಆಗಾಗ ದಡಕ್ಕೆ ಬಂದಾಗ ಇದು ತನ್ನ ಹಿಂಬಾಗಿದ ದಂತಗಳನ್ನು ಊರುಗೋಲನ್ನಾಗಿ ಬಳಸಿಕೊಳ್ಳುತ್ತಿತ್ತು ಎಂದು ಆತನ ಭಾವನೆ. ಇತ್ತೀಚೆಗೆ ದೊರೆತ ಇದರ ಕಾಲಿನ ಮೂಳೆಗಳು ಇದು ಪ್ರೊಬೊಸಿಡಿಯಾದ ಒಂದು ಶಾಖೆ ಎಂಬುದನ್ನು ಸ್ಪಷ್ಟಪಡಿಸಿವೆ.

ಏನೇ ಆಗಲಿ ಡೈನೋಥೀರಿಯಮಿನ ಉಗಮದ ಬಗ್ಗೆ ಯಾವುದೇ ಖಚಿತ ಮಾಹಿತಿಯನ್ನು ಕೊಡುವಂತಿಲ್ಲ. ಈ ಶಾಖೆ ಪ್ರಾಯಶಃ ಪ್ರೊಬೊಸಿಡಿಯದ ಮೂಲದಿಂದ ಬಹುಬೇಗನೆ ಅಂದರೆ ಆಲಿಗೊಸೀನ್ ಕಾಲದ ಫಯೊಮಿಯಗಿಂತಲೂ

(ಮೋರೊಯೊತೀರಿಯಮಿನ ಅನಂತರದ ಪೀಳಿಗೆ) ಮೊದಲೇ ಕವಲೊಡೆದಿತ್ತು ಎಂದು ಊಹಿಸಬಹುದು.

ರೂಮೇನಿಯದಲ್ಲಿ ಪ್ಲಿಯೊಸೀನ್ ಕಾಲದ ಒಂದು ದೈತ್ಯಾಕಾರದ ಅಸ್ಥಿಪಂಜರ ಸಿಕ್ಕಿದೆ. ಇದಕ್ಕೆ ಡೈನೊತೀರಿಯಮ್ ಜೈಗ್ಯಾಂಟಿಕಸ್ ಎಂದು ಹೆಸರು. ಇದರ ಕಾಲುಗಳು ಅತ್ಯಂತ ದೊಡ್ಡದಾದ ಮೈಸ್ಟೊಡಾನ್ ಕಾಲುಗಳನ್ನೂ ಮೀರಿಸುತ್ತವೆ. ಈ ಪ್ರಭೇದ ಅರೆಜಲವಾಸಿಯೇ ಅಥವಾ ಜೌಗು ಪ್ರದೇಶದ ನಿವಾಸಿಯೇ ಎಂಬುದು ಖಚಿತವಾಗಿಲ್ಲ. (ಬಿ.ಕೆ.ಜೆ)

**ಡೋಡೋ:** ನಿರ್ವಂಶವಾಗಿರುವ ಒಂದು ವಿಲಕ್ಷಣ ಪಕ್ಷಿ. ಹಾರುಪಕ್ಷಿಗಳ ಗುಂಪಿಗೆ ಸೇರಿದ್ದರೂ ಹಾರಲಾರದೆ ನೆಲದ ಮೇಲೆ ವಾಸಿಸುತ್ತಿತ್ತು. ಪಾರಿವಾಳ, ಕಪೋತ (ಬೆಳವಗಳು) ಮತ್ತು ಸಾಲಿಟೇರಿಯಸ್ ಪಕ್ಷಿಗಳನ್ನು ಒಳಗೊಂಡಿರುವ ಕೊಲಂಬಿಫಾರ್ಮಿಸ್ ಗಣದ ರ್‍ಯಾಫಿಡೆ ಕುಟುಂಬಕ್ಕೆ ಸೇರಿದೆ. ಡೈಡಸ್ ಅಥವಾ ರ್‍ಯಾಫಸ್ ಇದರ ವೈಜ್ಞಾನಿಕ ಹೆಸರು. 1861 ರವರೆಗೆ ಇದು ಜೀವಿಸಿತ್ತು ಎನ್ನುವುದಕ್ಕೆ ದಾಖಲೆ ಇದೆ. 17 ನೆಯ ಶತಮಾನದಲ್ಲಿ ಹಿಂದೂ ಮಹಾಸಾಗರದ ದ್ವೀಪಗಳನ್ನು ಸಂದರ್ಶಿಸಿದ ಪ್ರವಾಸಿಗಳು ರಚಿಸಿದ ವರ್ಣಚಿತ್ರಗಳಿಂದ ಇದರ ಸ್ವರೂಪವನ್ನು ಕಂಡುಕೊಳ್ಳಬಹುದು. ರೋಯೆಲೆಂಡ್ ಸಾವೆರಿ 1576–1539 ಎಂಬ ಡಚ್ ಕಲೆಗಾರ ರಚಿಸಿದ ಚಿತ್ರಗಳು ಬರ್ಲಿನ್, ವಿಯೆನ್ನ, ಹ್ಯೂಗ್ ಮುಂತಾದ ಕಡೆಗಳಲ್ಲಿವೆ.

ಹಿಂದು ಮಹಾಸಾಗರದ ಮಾರಿಷಸ್ ಹಾಗೂ ರೀಯೂನಿಯನ್ ದ್ವೀಪಗಳ ಕಾಡುಗಳಲ್ಲಿ ಡೋಡೋ ವಾಸಿಸುತ್ತಿತ್ತು. 1507ರಲ್ಲಿ ಮಾರಿಷಸ್ ದ್ವೀಪಕ್ಕೆ ಪ್ರಥಮ ಬಾರಿಗೆ ಭೇಟಿಯಿತ್ತ ಪೋರ್ಚುಗೀಸ್ ನಾವಿಕರು ಈ ಪಕ್ಷಿಗಳನ್ನು ಕಂಡು ಇದನ್ನು ಸಿಂಪಲ್‌ಟನ್ ಎಂದು ಕರೆದರು. ಇವರ ನಂತರ ಅನೇಕ ಶ್ವೇತವರ್ಣೀಯ ಪ್ರವಾಸಿಗರು ಈ ದ್ವೀಪಗಳಿಗೆ ವಲಸೆ ಬಂದರು. ಡೋಡೋ ಎಂಬ ಹೆಸರು ಈ ಪಕ್ಷಿಯ ಜಡಸ್ವಭಾವವನ್ನು ಸೂಚಿಸುತ್ತದೆ. ಜೊತೆಗೆ ಬಾತಿನ ಮರಿಯಂತೆ ಇದು ಮಾಡುವ ಧ್ವನಿಗೂ ಈ ಹೆಸರು ಅನ್ವಯವಾಗುತ್ತದೆ. 1610 ಮತ್ತು 1620 ಅವಧಿಯಲ್ಲಿ ಈ ಪಕ್ಷಿಯನ್ನು ಯೂರೋಪಿನ ಪ್ರದರ್ಶನಾಲಯಗಳಿಗೆ ಕೊಂಡೊಯ್ಯಲಾಯಿತು. ಇಂದು ಇದರ ಪೂರ್ಣ ದೇಹವನ್ನು ಉಳಿಸಿಕೊಳ್ಳಲಾಗದಿದ್ದರೂ ಮಾರಿಷಸ್ ಮತ್ತು ಇತರ ದ್ವೀಪಗಳ ಜೌಗು ಪ್ರದೇಶಗಳಲ್ಲಿ ದೊರೆತ ಮೂಳೆಗಳನ್ನು ಸಂಗ್ರಹಿಸಿ ಕಂಕಾಲವನ್ನು ನಿರ್ಮಿಸಲಾಗಿದೆ. ಆಕ್ಸ್‌ಫರ್ಡ್‌ನ ಅಷ್‌ಮೋಲಿಯಮ್ ವಸ್ತುಸಂಗ್ರಹಾಲಯದಲ್ಲಿ ಇದರ ಕಂಕಾಲವನ್ನು ನೋಡಬಹುದು.



ಡೋಡೋ ಗಾತ್ರದಲ್ಲಿ ಟರ್ಕಿ ಕೋಳಿಯ ಎರಡರಷ್ಟಿತ್ತು. ತೂಕ ಸು. 23 ಕಿಗ್ರಾಂ. ಆಕಾರದಲ್ಲಿ ಹೆಬ್ಬಾತನ್ನು ಹೋಲುತ್ತಿತ್ತು. ದೊಡ್ಡ ತಲೆ, ನೀಳಕುತ್ತಿಗೆ, ಪುಷ್ಟವಾದ ಮಾಂಸದ ಗಿಡ್ಡದೇಹ ಇದರ ವಿಶಿಷ್ಟ ಲಕ್ಷಣಗಳು, ಕೊಕ್ಕು ಅಗಲವಾಗಿದ್ದು ಕೊಂಡಿಯಂತೆ ಬಾಗಿರುವ ಕೊಂಬಿನ ರಚನೆಯಿಂದ ಕೂಡಿತ್ತು. ಕೊಕ್ಕಿನ ಉದ್ದ 23 ಸೆಂಮೀ. ಕಾಲು ಮತ್ತು ಪಾದಗಳು ಬಲಿಷ್ಠವಾಗಿದ್ದವು. ಕಾಲುಗಳ ಕೆಳಭಾಗದಲ್ಲಿ ಹುರುಪೆಗಳಿದ್ದು ಮೇಲ್ಭಾಗದಲ್ಲಿ ಪುಕ್ಕಗಳಿದ್ದವು. ಕತ್ತಿನ ತುದಿಯಲ್ಲಿ ಕೆಂಪಾದ ಕವಚವನ್ನು ಹೊಂದಿತ್ತು. ಪಾದಗಳು ಹಳದಿ ಬಣ್ಣ, ರೆಕ್ಕೆಗಳು ಬಿಳಿ ಬಣ್ಣ ಮತ್ತು ಎದೆ ಬಿಳೀಯ ಬಣ್ಣದಿಂದ ಕೂಡಿದ್ದವು. ಬೆನ್ನು ಬೂದು ಕಂದುಬಣ್ಣ ಮತ್ತು ಬಾಲ ಬೂದುಮಿಶ್ರಿತ ಹಳದಿ ಬಣ್ಣದವಾಗಿದ್ದವು. ಬಾಲದ ಗರಿಗಳು ಕುಚ್ಚಿನಂತೆ ಬಾಗಿದ್ದವು. ಅದರ ಕಪೋಲಗಳ ಮೇಲೆ ಪುಕ್ಕಗಳಿರಲಿಲ್ಲ. ರೆಕ್ಕೆಗಳು ಹಾರಲು ಸಹಾಯವಾಗುವಷ್ಟು ಬಲವಾಗಿರಲಿಲ್ಲ. ಎದೆಯ ಅಡಿಗಟ್ಟು ಪರಿಪೂರ್ಣವಾಗಿ ರೂಪುಗೊಂಡಿರಲಿಲ್ಲ. ಕೊರಕಾಯಿಡ್ ಮತ್ತು ಸ್ಕ್ಯಾಪುಲ ಮೂಳೆಗಳು ಅಧಿಕ ಕೋನದಲ್ಲಿ ಕೂಡಿಕೊಂಡಿದ್ದರಿಂದ ಇವಕ್ಕೆ ಹಾರುವ ಸಾಮರ್ಥ್ಯ ಇರಲಿಲ್ಲ. ಹೆಣ್ಣುಪಕ್ಷಿ ನೆಲದ ಮೇಲೆ ಹುಲ್ಲನ್ನು ರಾಶಿಹಾಕಿ, ಗೂಡನ್ನು ನಿರ್ಮಿಸಿ, ದೊಡ್ಡಗಾತ್ರದ ಬಿಳಿಬಣ್ಣದ ಒಂದೇ ಒಂದು ಮೊಟ್ಟೆ ಇಡುತ್ತಿತ್ತು.

ಡೋಡೋ ಹಕ್ಕಿಯ ಅವನತಿಗೆ ಅದರ ಜಡಸ್ವಭಾವ ಹಾಗೂ ರುಚಿಕರವಾದ ಮಾಂಸ ಮತ್ತು ಮೊಟ್ಟೆಗಳು ಕಾರಣ. ದ್ವೀಪಗಳಿಗೆ ಮೊದಲು ವಲಸೆ ಬಂದವರು ಸುಲಭವಾಗಿ ಸಿಗುವ ಈ ಹಕ್ಕಿಗಳನ್ನು ಆಹಾರಕ್ಕಾಗಿ ಬೇಟೆಯಾಡಲಾರಂಭಿಸಿದರು. ವೇಗವಾಗಿ ಚಲಿಸಿ ತಪ್ಪಿಸಿಕೊಳ್ಳಲಾರದೆ ಈ ಹಕ್ಕಿಗಳು ಸಾಮೂಹಿಕ ಹತ್ಯೆಗೆ ಗುರಿಯಾದವು. ವಲಸೆಗಾರರ ಜೊತೆಯಲ್ಲಿ ಬಂದ ಸಾಕು ಪ್ರಾಣಿಗಳಾದ ನಾಯಿ ಮತ್ತು ಹಂದಿಗಳು 1861ರ ಹೊತ್ತಿಗೆ ಡೋಡೋಗಳ ಕಗ್ಗೊಲೆಯನ್ನು ಪೂರ್ಣಗೊಳಿಸಿದ್ದವು. ಇದರಿಂದಾಗಿ ಇದರ ಪರಿಚಯ ಇಂದು ಚಿತ್ರಗಳ ಮೂಲಕ ಮಾತ್ರ ಲಭಿಸುವಂತಾಗಿದೆ.

ಇದರ ತಲೆ ಮತ್ತು ಕಾಲು ಆಕ್ಸ್‌ಫರ್ಡ್‌ನಲ್ಲಿ, ಕಾಲು ಬ್ರಿಟಿಷ್ ಪ್ರಾಣಿಸಂಗ್ರಹಾಲಯದಲ್ಲಿ, ತಲೆ ಕೋಪನ್‌ಹೇಗನ್‌ನಲ್ಲಿ ಮತ್ತು ಅಸ್ಥಿಪಂಜರ ಅಮೆರಿಕಾ ಹಾಗೂ ಯೂರೋಪಿನ ಆರು ಪ್ರಾಣಿಸಂಗ್ರಹಾಲಯಗಳಲ್ಲಿವೆ.

ಡೋಡೋ ಜಾತಿಯಲ್ಲಿ ಮೂರು ಪ್ರಭೇದಗಳಿವೆ: 1. ರ್‍ಯಾಫಸ್ ಕ್ಯುಕುಲೇಟಸ್ (ನೈಜ ಡೋಡೋ): ಮಾರಿಷಸ್ ದ್ವೀಪಗಳಲ್ಲಿ ವಾಸಿಸುತ್ತಿದ್ದುವು. 2. ರ್‍ಯಾಫಸ್ ಸಾಲಿಟೇರಿಯಸ್: ರಿಯೂನಿಯನ್ ಅಥವಾ ಬಾರ್ಬನ್ ದ್ವೀಪಗಳಲ್ಲಿ ವಾಸಿಸುತ್ತಿದ್ದವು. 3. ಪೆಜೋಫಾಸ್ ಸಾಲಿಟೇರಿಯಾ: ರಾಡ್ರಿಗಸ್ ದ್ವೀಪದಲ್ಲಿ ವಾಸಿಸುತ್ತಿದ್ದುವು. (ಬಿ.ಕೆ.ಜೆ., ಬಿ.ಪಿ.)

**ಡೋರ್‌ಮೌಸ್:** ರೊಡೆನ್ಷಿಯಾ ವರ್ಗದ ಗ್ಲೈರಿಡೆ ಕುಟುಂಬಕ್ಕೆ ಸೇರಿದ ಜರಾಯು ಸ್ತನಿ. ಚಿಟ್ಟು ಇಲಿ ಎಂದೂ ಹೆಸರುಂಟು. ಅನೇಕ ಪ್ರಭೇದಗಳಿವೆ. ಗ್ಲಿಸ್ ಗ್ಲಿಸ್, ಗ್ಲಿರ್‍ಯುಲಸ್ ಜಪೊನಿಕಸ್, ಡ್ರೈಯೊಮಿಸ್ ನಿಟೆಡುಲ ಮತ್ತು ವಿಲೋಮಿಸ್ ಇವುಗಳಲ್ಲಿ ಕೆಲವು. ಪುಟ್ಟ ಅಳಿಲು ಅಥವಾ ಇಲಿ ಹಾಗೆ ಗೋಚರಿಸುವ ಚಿಕ್ಕ ಮೂತಿ, ದೊಡ್ಡ ಕಣ್ಣುಗಳು, ಚುರುಕಾಗಿ ತಿರುಗುವ ಕಿವಿಗಳಿರುವ ಪ್ರಾಣಿ. ಏಷಿಯಾ, ಆಫ್ರಿಕ ಮತ್ತು ಯೂರೋಪಿನಲ್ಲಿ ಕಂಡುಬರುತ್ತವೆ. 26 ಪ್ರಭೇದಗಳಿದ್ದು ಅವುಗಳಲ್ಲಿ 15 ಪ್ರಕಾರದವು ಏಷಿಯಾದಲ್ಲಿವೆ. ಐಯುಸಿಎನ್ ಇದನ್ನು ವಿನಾಶದ ಅಂಚಿನಲ್ಲಿರುವ ಪ್ರಾಣಿಯೆಂದು ಗುರುತಿಸಿ ಸಾಕುಪ್ರಾಣಿಯೆಂದು ಪ್ರಚುರಪಡಿಸಿದೆ. ಇಂಗ್ಲೆಂಡಿನಲ್ಲಿ ಈಗಾಗಲೇ ಕೆಂಪು ಪಟ್ಟಿ ದಸ್ತಾವೇಜು ಪುಸ್ತಕಗಳಲ್ಲಿ (ರೆಡ್ ಡಾಟಾ ಬುಕ್) ಇವುಗಳ ಹೆಸರು ಸೇರಿಸಿದ್ದಾರೆ. ಗಾತ್ರದಲ್ಲಿ 10–15 ಸೆಂಮೀ ಉದ್ದವಿದ್ದು, 3–5 ವರ್ಷ ಬದುಕುತ್ತವೆ. ನಿಶಾಚರಿಯಾಗಿದ್ದು ಸಾಯಂಕಾಲದ ಹೊತ್ತಿನಲ್ಲಿ ಚಟುವಟಿಕೆಯಿಂದ ಕೂಡಿರುತ್ತವೆ.

ಡೋರ್ ಮೌಸ್

ಇವು ಸಂಘ ಜೀವಿಯಾಗಿದ್ದು ವಿವಿಧ ಆವಾಸಗಳಾದ ಕಾಡು, ಹುಲ್ಲುಗಾವಲುಗಳಲ್ಲಿ ವಾಸಿಸುತ್ತವೆ. ಬಿಲ ಇಲ್ಲವೆ ಪಕ್ಷಿಗಳ ಗೂಡು ಇವುಗಳ ಆವಾಸಸ್ಥಾನ. ತಮ್ಮ ಬಹುತೇಕ ಸಮಯ ಗಿಡಗಳ ಮೇಲೆ ಕಳೆಯುವುದರಿಂದ ಗಿಡದಿಂದ ಗಿಡಕ್ಕೆ ಹಾರುತ್ತವೆ. ಮಿಶ್ರಾಹಾರಿಗಳಾಗಿದ್ದು ಹೂವು, ಹಣ್ಣು, ಕೀಟಗಳನ್ನು ತಿನ್ನುತ್ತವೆ. ತಮ್ಮ ಕಾರ್‍ಯಕ್ಷೇತ್ರ ಗುರುತಿಸಿಕೊಂಡು ಅದನ್ನು ಕಾಪಾಡುತ್ತವೆ. ಒಂದು ವರ್ಷದಲ್ಲಿ 1–2 ಸಾರಿ ಗರ್ಭಧರಿಸಿ 24 ದಿನಗಳ ನಂತರ 5–6 ಮರಿ ಹಾಕುತ್ತವೆ. ಯೂರೋಪಿನ

ಪ್ರಭೇದ (ಫ್ಯಾಟ್ ಡೋರ್ ಮೌಸ್) ವನ್ನು ಮನುಷ್ಯರು ಆಹಾರವಾಗಿ ಉಪಯೋಗಿಸುತ್ತಾರೆ. ವಾತಾವರಣ ಉಷ್ಣತೆ $21^0$ ಸೆ. ಗಿಂತ ಕಡಿಮೆಯಾದಲ್ಲಿ ಶಿಶಿರ ನಿದ್ರೆಗೆಜಾರುತ್ತವೆ. (ಬಿ.ಬಿ.ಎಚ್.)

**ಡ್ರೋಸಾಫಿಲ:** ಆರ್ತ್ರಾಪೊಡ ವಂಶದ ಇನ್ಸೆಕ್ಟ ವರ್ಗಕ್ಕೆ ಸೇರಿದ ಡಿಪ್ಟಿರಗಣದ ಸದಸ್ಯ. ಇದು ತಳಿವಿಜ್ಞಾನದ ಸಿಂಡ್ರೆಲ ಎಂದೇ ಪ್ರಸಿದ್ಧಿ. ಇದಕ್ಕೆ ಹಣ್ಣಿನ ನೊಣ ಅಥವಾ ವಿನಿಗರ್ ನೊಣ ಎಂಬ ಹೆಸರುಗಳೂ ಇವೆ. ಹಣ್ಣು, ತರಕಾರಿ ಮತ್ತು ಕೊಳೆಯುತ್ತಿರುವ ಪದಾರ್ಥಗಳ ಬಳಿ ಇರುತ್ತದೆ. ಗಾತ್ರದಲ್ಲಿ ಸೊಳ್ಳೆಗಿಂತ ಸ್ವಲ್ಪ ಚಿಕ್ಕದು. ಇದರ ಕಣ್ಣು ಕೆಂಪು.

ಈ ಹಣ್ಣು ನೊಣಗಳ ಉದ್ದ 4 ಸೆಂಮೀ. ಎರಡು ಜೊತೆ ರೆಕ್ಕೆಗಳಿವೆ. ಅದರಲ್ಲಿ ಒಂದು ಜೊತೆ ರೆಕ್ಕೆಗಳು ಹಾರಾಟಕ್ಕೆ ಉಪಯೋಗವಾಗುವುವು. ಮತ್ತೊಂದು ಜೊತೆ ರೆಕ್ಕೆಗಳು ದೇಹದ ಸಮತೋಲನ ಕಾಪಾಡುವ ಅಂಗ (ಹಾಲ್ಟೇರ್) ಗಳಾಗಿ ಮಾರ್ಪಾಟಾಗಿವೆ. ದೇಹದ ಬಣ್ಣ ಬೂದು. ದೇಹವನ್ನು ತಲೆ, ಎದೆ ಮತ್ತು ಉದರ ಭಾಗಗಳಾಗಿ ವಿಂಗಡಿಸಲಾಗಿದೆ. ತಲೆಯಲ್ಲಿ ಒಂದು ಜೊತೆ ಸಂಯುಕ್ತಾಕ್ಷಿಗಳಿದ್ದು, ಗರಿಯಾಕಾರದ ಅರಿಸ್ಟಾ ಸ್ಪರ್ಶಾಂಗವಾಗಿ ಕಾರ್ಯನಿರ್ವಹಿಸುತ್ತದೆ. ಎದೆಯ ಭಾಗದಲ್ಲಿ 3 ಜೊತೆ ಕೀಲು ಕಾಲುಗಳಿವೆ. ಉದರದಲ್ಲಿ 8 ಖಂಡಗಳಿವೆ. ಗಂಡು–ಹೆಣ್ಣುಗಳಲ್ಲಿ ವ್ಯತ್ಯಾಸವಿದೆ.



ಡ್ರೋಸಾಫಿಲ

ಅವು ಹೀಗಿವೆ. 1) ಗಂಡು ಕೀಟಗಳಲ್ಲಿ ಮೊದಲನೆಯ ಜೊತೆಯ ಕಾಲುಗಳ ಪ್ರಥಮ ಟಾರ್ಸಲ್ ಖಂಡದ ಮುಂತುದಿಯಲ್ಲಿ ದಪ್ಪಗೆ ಹಾಗು ಕಪ್ಪಗಿರುವ ಹಣಿಗೆಗಳಿವೆ. ಹೆಣ್ಣುಕೀಟಗಳಲ್ಲಿ ಇಂಥ ರಚನೆ ಇಲ್ಲ. 2) ಗಂಡು ಕೀಟಗಳ ಉದರ ಹೆಣ್ಣು ಕೀಟಗಳಿಗಿಂತ ವಿಭಿನ್ನವಾಗಿದ್ದು, ಕಪ್ಪು ಬಣ್ಣಕ್ಕಿರುತ್ತದೆ. 3) ಗಂಡು ಕೀಟಗಳಲ್ಲಿ ಶಿಶ್ನ ಹಾಗು ಕಪ್ಪಗಿರುವ ಲಿಂಗ ಕಮಾನು ಇದೆ. ಆದರೆ, ಹೆಣ್ಣುಕೀಟಗಳಲ್ಲಿ ತಿಳಿಬಣ್ಣದ ಅಂಡನಿಕ್ಷೇಪಕ ಇದೆ.

ಗಂಡು ಹೆಣ್ಣುಗಳ ಮಿಲನದ ಅನಂತರ, ಹೆಣ್ಣು ನೊಣ 200 ರಿಂದ 300 ಮೊಟ್ಟೆಗಳನ್ನಿಡುತ್ತದೆ. ಇವುಗಳ ಜೀವನ ಚಕ್ರವು 10 ದಿನಗಳಲ್ಲಿ ವಿವಿಧ ಹಂತಗಳಿಂದ ಉದಾ: ಮೊಟ್ಟೆ, ಲಾರ್ವ (ಡಿಂಬ), ಪ್ಯೂಪಾ ಹಾಗೂ ಪ್ರೌಢ ನೊಣದ ಘಟ್ಟ ತಲುಪುತ್ತವೆ. ಹೀಗೆ ಹೊರಬಂದ ಹೆಣ್ಣುಗಂಡು ನೊಣಗಳು 6 ಗಂಟೆಗಳ ಅನಂತರ ಸಂತಾನೋತ್ಪತ್ತಿ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತವೆ. ಇವುಗಳ ಜೀವಿತಾವಧಿ 40 ದಿವಸಗಳು.

ಇಪ್ಪತ್ತನೆಯ ಶತಮಾನದ ಆದಿಯಿಂದಲೂ ತಳಿವಿಜ್ಞಾನ ಹಾಗು ವಿಕಾಸಕ್ರಿಯೆಯ ಅಧ್ಯಯನದಲ್ಲಿ ಪ್ರಪಂಚದಾದ್ಯಂತ ಅನೇಕ ಸಂಶೋಧಕರು ಡ್ರೋಸಾಫಿಲ ಬಳಸಿಕೊಳ್ಳುತ್ತಿದ್ದಾರೆ. ತಳಿವಿಜ್ಞಾನದ ಮೂಲಭೂತ ತತ್ವಗಳನ್ನು ಅರ್ಥಮಾಡಿಕೊಳ್ಳಲು ಡ್ರೋಸಾಫಿಲ ಬಹಳ ಸಹಕಾರಿ. ಇದರ ಮೇಲೆ ನಡೆದಿರುವ ಪ್ರಯೋಗಗಳ ಫಲವಾಗಿ ಲಭಿಸಿರುವ ಫಲಿತಾಂಶಗಳು ಹಾಗು ಅದರಿಂದ ವೃದ್ಧಿಯಾದ ಜ್ಞಾನ ಸಂಪತ್ತಿನಿಂದ ಜೀವ ವೈಜ್ಞಾನಿಕ ಸಾಹಿತ್ಯ ಶ್ರೀಮಂತವಾಗಿದೆ.

ಡ್ರೊಸಾಫಿಲದಲ್ಲಿ ಸು. 2,000 ಪ್ರಭೇದಗಳಿವೆ. ಇವು ವಿಶ್ವದಾದ್ಯಂತ ಹರಡಿವೆ. ಉದಾ: ಡ್ರೋಸಾಫಿಲ ಮೆಲನೋಗ್ಯಾಸ್ಟರ್ ಮತ್ತು ಡ್ರೋ. ಅನಾನಸೆ ಕರ್ನಾಟಕದಲ್ಲಿವೆ. ಡ್ರೋ. ಫ್ಲೆವಿಪೆನ್ನಿಸ್ ಬ್ರಜಿಲ್ ದೇಶಕ್ಕೆ ಸೀಮಿತವಾಗಿದೆ. ಹಲವು ಪ್ರಭೇದಗಳು ಮಾನವ ನಿವಾಸಗಳಲ್ಲಿ ವಾಸಿಸುತ್ತವೆ. ಉದಾ: ಡ್ರೋ. ಮೆಲನೋಗ್ಯಾಸ್ಟರ್ ಮತ್ತು ಡ್ರೊ. ಅನಾನಸೆ. ಕೆಲವೊಂದು ಪ್ರಭೇದಗಳು ವನ ಪ್ರದೇಶಗಳಲ್ಲಿ ವಾಸಿಸುತ್ತವೆ. ಉದಾ: ಡ್ರೋ. ರಾಜಶೇಖರಿ. ಡ್ರೋ. ಮೈಸೂರೆನ್ಸಿಸ್ ಮತ್ತು ಡ್ರೋ. ಸೂಡೊಅಬ್‌ಸ್ಕ್ಯೂರ ಪ್ರಭೇದಗಳು.

ಈ ಕೀಟಗಳನ್ನು ಅನುವಂಶೀಯ ಜೀನ್‌ಗಳ ಅಧ್ಯಯನಕ್ಕೆ ಬಳಸಬಹುದೆಂದು 1909 ರಲ್ಲಿ ಟಿ.ಎಚ್. ಮಾರ್ಗಾನ್ ಮೊದಲು ತೋರಿಸಿಕೊಟ್ಟರು. ಅನಂತರ ಹಲವಾರು ಸಂಶೋಧಕರು ವಿವಿಧ ತಳಿವಿಜ್ಞಾನದ ಸಂಶೋಧನೆಗಳಿಗೆ ಈ ಕೀಟವನ್ನು ಬಳಸಲು ಆರಂಭಿಸಿದರು.

ಕೋಶೀಯ ತಳಿವಿಜ್ಞಾನ ಹಾಗೂ ವಿಕಾಸದ ಅಧ್ಯಯನಕ್ಕೆ ಡ್ರೋಸಾಫಿಲ ಅತಿ ಸೂಕ್ತ ಪ್ರಾಣಿ. ಏಕೆಂದರೆ, 1) ಈ ಕೀಟಗಳನ್ನು ಪ್ರಯೋಗಶಾಲೆಯಲ್ಲಿ ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಸಾಕಿ, ಹೆಚ್ಚಿನ ಸಂಖ್ಯೆಯಲ್ಲಿ ಸಂತತಿಗಳನ್ನು ಉತ್ಪತ್ತಿ ಮಾಡಬಹುದು ಮತ್ತು ತಳಿ ಸಂಕರಣಕ್ರಿಯೆ ನಡೆಸಬಹುದು. 2) ಇದರ ಜೀವನ ಚಕ್ರ, ಕೇವಲ 10–12 ದಿನಗಳಲ್ಲಿ ಮುಗಿಯುತ್ತದೆ. ಕೀಟಗಳ ಸಂಖ್ಯೆ ಬಹಳ ಶೀಘ್ರಗತಿಯಲ್ಲಿ ವೃದ್ಧಿಯಾಗುತ್ತದೆ. 3) ಡ್ರೋಸಾಫಿಲ ಡಿಂಬಗಳಲ್ಲಿನ ಲಾಲಾಗ್ರಂಥಿಗಳಲ್ಲಿ ದೈತ್ಯ ಕ್ರೊಮೊಸೋಮುಗಳಿವೆ. 4) ತಳಿವಿಜ್ಞಾನ ಹಾಗೂ ವಿಕಾಸದ ಪ್ರಯೋಗಗಳ ಫಲಿತಾಂಶವನ್ನು ನಿಖರವಾಗಿ ಚರ್ಚಿಸಬೇಕಾದರೆ ಸಂಖ್ಯಾಶಾಸ್ತ್ರದ ನೆರವು ಬೇಕು. ಇಂಥ ಪ್ರಯೋಗಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜೀವಿಗಳು ಬೇಕು. ಇದನ್ನು ಡ್ರೋಸಾಫಿಲ ಸಾಕಣೆಯಿಂದ ಪಡೆಯಬಹುದು. ಇದರಿಂದ ತಳಿವಿಜ್ಞಾನದ ಜ್ಞಾನವೃದ್ಧಿಯಾಗಿದ್ದು, ಹಿಂದಿನಿಂದ ಇಂದಿನವರೆಗೂ ನಡೆದು ಬಂದಿರುವ ಅಧ್ಯಯನಗಳ ಫಲಿತಾಂಶಗಳ ಸಹಾಯದಿಂದ ಮುಂದಿನ ಸಂಶೋಧಕರು ಅದರ ಸಹಾಯವನ್ನು ಪಡೆಯಬಹುದು.

ತಳಿ ವಿಜ್ಞಾನಿಗಳನ್ನು ಆಕರ್ಷಿಸಿದ ಡ್ರೋಸಾಫಿಲದ ಅತಿ ಮುಖ್ಯವಾದ ಗುಣವೆಂದರೆ ಶೀಘ್ರಗತಿಯಲ್ಲಾಗುವ ಅದರ ಜೀವನಚಕ್ರ ಹಾಗೂ ಅತಿ ಹೆಚ್ಚಿನ ಸಂತಾನೋತ್ಪತ್ತಿ.

ರವೆ, ಬೆಲ್ಲದ ಪಾಯಸ ಹಾಗೂ ಯೀಸ್ಟ್ ಈ ಕೀಟಗಳ ಪ್ರಮುಖ ಆಹಾರ. ಮೂರನೆ ಹಂತದ ಲಾರ್ವಗಳಲ್ಲಿರುವ ಹಲವು ದಾರಗಳ ವರ್ಣತಂತುಗಳು ದೈತ್ಯಾಕಾರವಾಗಿದ್ದು, ಸಾಮಾನ್ಯವಾದ ವರ್ಣತಂತುವಿಗಿಂತ ಸಾವಿರ ಪಟ್ಟು ದೊಡ್ಡದಿರುತ್ತವೆ. ಇದರಿಂದ ವರ್ಣತಂತುವಿನ ರಚನೆ ಹಾಗೂ ಕಾರ್ಯ ಅಭ್ಯಾಸಮಾಡಲು ಹಾಗೂ ವರ್ಣತಂತುವಿನ ಅಪಸರಣೆ ವಿಕೃತಿಗಳಾದ ಇನ್‌ವರ್ಷನ್ಸ್, ಟ್ರಾನ್ಸ್‌ಲೋಕೇಷನ್ಸ್, ಡ್ಯೂಪ್ಲಿಕೇಷನ್ಸ್ ಹಾಗೂ ಡಿಲೀಷನ್ಸ್ ಚಿಕ್ಕದೊಂದು ಸೂಕ್ಷ್ಮದರ್ಶಕದಿಂದ ಅಭ್ಯಾಸ ಮಾಡಬಹುದಾಗಿದೆ.

ಸಾವಾಾನ್ಯವಾಗಿ ಈ ಕೀಟಗಳಲ್ಲಿ ಡಿಪ್ಲಾಯಿಡ್ ಸಂಖ್ಯೆಯು 8 ಕ್ರೊಮೋಸೋಮ್‌ಗಳು ($2n = 8$) ಇವೆ. ಒಂದು ಜೊತೆ ಅಲೊಝೋಮ್, ಎರಡು ಜೊತೆ ಆಟೋಝೋಮ್ ಹಾಗೂ ಒಂದು ಜೊತೆ ಡಾಟ್ ವರ್ಣತಂತುಗಳಿವೆ. ಡ್ರೊಸಾಫಿಲ ಮೆಲನೋಗ್ಯಾಸ್ಟರ್ ಪ್ರಭೇದಗಳಲ್ಲಿ 8 ಕ್ರೊಮೋಸೋಮುಗಳಿವೆ. ಡ್ರೋ. ಅಲ್ಬೋಮಿಕಾನ ಪ್ರಭೇದದಲ್ಲಿ 6 ಕ್ರೊಮೋಸೋಮುಗಳಿವೆ. ಕ್ರೊಮೋಸೋಮುಗಳ ಸಂಖ್ಯೆ ಮತ್ತು ಅವುಗಳ ಬಾಹ್ಯ ರಚನೆ ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿದೆ. ಅದನ್ನು ಕೋಶೀಯ ವರ್ಗೀಕರಣ ಶಾಸ್ತ್ರದ ಅಧ್ಯಯನದಿಂದ ತಿಳಿಯಬಹುದು. ಡ್ರೋಸಾಫಿಲದಲ್ಲಿನ ಡಿಂಬಗಳ ಲಾಲಾಗ್ರಂಥಿಗಳಲ್ಲಿರುವ ದೈತ್ಯ ಕ್ರೊಮೋಸೋಮುಗಳು, ಪ್ರಾಣಿ ಪ್ರಪಂಚದಲ್ಲಿಯೇ ಅತಿ ದೊಡ್ಡ ಕ್ರೊಮೋಸೋಮುಗಳೆನಿಸಿವೆ. ಇವು ಸಾಮಾನ್ಯ ಕ್ರೊಮೋಸೋಮುಗಳಿಗಿಂತ 1000 ಪಟ್ಟು ದೊಡ್ಡವು. ಜೊಲ್ಲುರಸ ಗ್ರಂಥಿಗಳ ಕೋಶಗಳಲ್ಲಿ ಕ್ರೊಮೋಸೋಮುಗಳು ವಿಭಜನೆಗೊಳ್ಳುತ್ತವೆ. ಆದರೆ, ವಿಭಜಿತ ಕ್ರೊಮೋಸೋಮುಗಳು ಬೇರೆಯಾಗದೇ ಅದೇ ಕೋಶದಲ್ಲಿ ಉಳಿದುಬಿಡುತ್ತವೆ. ಏಕೆಂದರೆ, ಕ್ರೊಮೋಸೋಮುಗಳ ವಿಭಜನೆಯ ಅನಂತರ ಕೋಶ ವಿಭಜನೆಯಾಗುವುದಿಲ್ಲ. ಹೀಗಾಗಿ ಕ್ರೊಮೋಸೋಮುಗಳು ವಿಭಜನೆಗೊಂಡು ಅವುಗಳ ಮೊತ್ತ ಜಾಸ್ತಿಯಾಗುವುದಲ್ಲದೇ ಗಾತ್ರ ಕೂಡ ಹೆಚ್ಚಾಗುತ್ತದೆ. ಈ ಕ್ರಿಯೆಗೆ 'ಎಂಡೊಮೈಟೊಸಿಸ್' ಎಂದು ಹೆಸರು. ಮತ್ತೊಂದು ಸೋಜಿಗವೆಂದರೆ ಒಂದೇ ಕೋಶದೊಳಗೆ ವಿಭಜನೆಗೊಂಡ ಕ್ರೊಮೋಸೋಮುಗಳು ಬೇರೆ ಬೇರೆಯಾಗದೇ ಜೊತೆಯಲ್ಲಿಯೇ ಇರುತ್ತವೆ. ಹೀಗೆ ಜೊತೆಯಲ್ಲಿಯೇ ಇರುವುದನ್ನು 'ಸೊಮ್ಯಾಟಿಕ್ ಪೇರಿಂಗ್' ಎಂದು ಕರೆಯುವರು. ದೈತ್ಯ ಕ್ರೊಮೋಸೋಮುಗಳ ಸೆಂಟ್ರೋಮಿಯರ್ ಭಾಗಗಳು ಒಟ್ಟುಗೂಡಿ ಕ್ರೊಮೋಸೆಂಟರ್ ಘಟಕ ರೂಪಗೊಂಡು ಅದರಿಂದ ಕ್ರೊಮೋಸೋಮುಗಳ ಬಾಹುಗಳು ಆಚೀಚೆ ಚಾಚಿಕೊಳ್ಳುತ್ತವೆ.

ದೈತ್ಯ ಕ್ರೊಮೋಸೋಮುಗಳ ಬಾಹುಗಳಲ್ಲಿ ಪಟ್ಟಿಗಳು (ಬ್ಯಾಂಡ್ಸ್) ಹಾಗೂ ಅಂತರಪಟ್ಟಿಗಳು ಇವೆ. ಇವುಗಳ ರೂಪ, ಸಂಖ್ಯೆ ಹಾಗೂ ಜೋಡಣೆ ಪ್ರತಿ ಬಾಹುವಿನಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಡ್ರೋ. ಮೆಲನೋಗ್ಯಾಸ್ಟರ್‌ನ ಕ್ರೊಮೋಸೋಮುಗಳ ಹಾಗೂ ವಿವಿಧ ಪ್ರಭೇದಗಳ ದೈತ್ಯ ಕ್ರೊಮೋಸೋಮುಗಳ ನಕ್ಷೆಯನ್ನು (ಮ್ಯಾಪ್) ಸಂಶೋಧಕರು ತಯಾರಿಸಿದ್ದಾರೆ. ಈ ಕೀಟದ ಸಂಪೂರ್ಣ ತಳಿನಕ್ಷೆ 2000 ಮಾರ್ಚ್‌ನಲ್ಲಿ ಬಿಡುಗಡೆಯಾಗಿದೆ. ಇದರ ಜೀನೋಮ್ ಗಾತ್ರ 165

ಮಿಲಿಯನ್ ಬೇಸ್‌ಪೇರ್‌ಗಳು. ವಿವಿಧ ಜೀವಿಗಳ ತಳಿನಕ್ಷೆಗಳ ತುಲನಾತ್ಮಕ ಅಭ್ಯಾಸದಿಂದ ತಳಿಜ್ಞಾನಿಗಳು ಡ್ರೋಸಾಫಿಲ ಕೀಟದ ತಳಿನಕ್ಷೆಯನ್ನು ಹೋಲಿಕೆ ಮಾಡಿದ್ದಾರೆ.

ಈ ರೀತಿ ವಿವಿಧ ಪ್ರಭೇದಗಳ ದೈತ್ಯ ಕ್ರೊಮೋಸೋಮುಗಳ ನಕ್ಷೆಯನ್ನು ಹೋಲಿಸುವುದರ ಮೂಲಕ ಈ ಪ್ರಭೇದಗಳಿಗಿರುವ ಸಂಬಂಧ ಹಾಗೂ ವಿಭೇದೀಕರಣವನ್ನು ತಿಳಿಯಬಹುದು. ದೈತ್ಯ ಕ್ರೊಮೋಸೋಮುಗಳ ಅವ್ಯವಸ್ಥೆಗಳ ಕಳೆತ, ದ್ವಿಗುಣಿಕತೆ, ವಿಪರ್ಯಯ ಮತ್ತು ಸ್ಥಾನಪಲ್ಲಟಗಳನ್ನು ಸುಲಭವಾಗಿ ಅಭ್ಯಾಸಮಾಡಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ ದೈತ್ಯ ಕ್ರೊಮೋಸೋಮುಗಳನ್ನು ಜೀನ್ ಚಟುವಟಿಕೆಯ ಅಭ್ಯಾಸಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ. ವಿಕಿರಣ ಕ್ರಿಯೆಯುಳ್ಳ ಐಸೊಟೋಪುಗಳನ್ನು ಉಪಯೋಗಿಸಿಕೊಂಡು ಜೀನ್ ಚಟುವಟಿಕೆಯ ಎರಡು ಪ್ರಮುಖ ಮುಖಗಳಾದ ಡಿಆಕ್ಸಿರೈಬೊ ನ್ಯೂಕ್ಲಿಯಿಕ್ ಆಮ್ಲ ಮತ್ತು ರೈಬೊನ್ಯೂಕ್ಲಿಯಿಕ್ ಆಮ್ಲಗಳ ಸಂಶ್ಲೇಷಣೆಗಳನ್ನು ಅಭ್ಯಾಸ ಮಾಡಬಹುದು. ಜೀನ್‌ಗಳ ಕ್ರಿಯಾಶೀಲತೆ ಹಾಗೂ ಅದರ ನಿಯಂತ್ರಣಗಳನ್ನು ಅರ್ಥಮಾಡಿಕೊಳ್ಳಲು (ಮುಖ್ಯವಾಗಿ ಯೂಕ್ಯಾರಿಯೋಟ ಜೀವಿಗಳಲ್ಲಿ), ಜೀನ್‌ನ್ನು ಅರ್ಥಮಾಡಿಕೊಳ್ಳಲು ದೈತ್ಯ ಕ್ರೊಮೋಸೋಮುಗಳು ಸಹಕಾರಿಯಾಗಿವೆ. ಆನುವಂಶೀಯತೆಯ ಮೂಲಭೂತ ತತ್ವಗಳು ಹಾಗೂ ತಳಿವಿಜ್ಞಾನ ಪ್ರವರ್ಧಮಾನಕ್ಕೆ ಬರಲು ಈ ಕೀಟಗಳ ಮೇಲೆ ನಡೆಸಿರುವ ಅಧ್ಯಯನಗಳೇ ಕಾರಣ. ವಿಕಿರಣಗಳ ಅಥವಾ ಕೆಲವೊಂದು ರಾಸಾಯನಿಕಗಳ ಸಹಾಯದಿಂದ ಈ ಕೀಟಗಳಲ್ಲಿ ವಿಕೃತಿಗಳನ್ನುಂಟುಮಾಡಿ ಆ ಗುಣಗಳ ಆನುವಂಶೀಯತೆಯ ಬಗ್ಗೆ ಅಭ್ಯಾಸ ಮಾಡಬಹುದು. ಉದಾಹರಣೆಗೆ ಡ್ರೋಸಾಫಿಲದ ಕಣ್ಣುಗಳು ಸಾಮಾನ್ಯವಾಗಿ ಕೆಂಪಗಿರುತ್ತವೆ. ಆದರೆ ವಿಕಿರಣಕ್ಕೆ ಒಡ್ಡುವುದರಿಂದ ಬಿಳಿ ಮತ್ತು ಕಂದು ಬಣ್ಣದ ಕಣ್ಣುಗಳನ್ನು ಪಡೆಯಬಹುದು. ಇದೇ ರೀತಿ ರೆಕ್ಕೆ, ದೇಹದ ಬಣ್ಣಗಳ ವಿಕೃತಿಗಳನ್ನುಂಟುಮಾಡಬಹುದು. ಈಗಾಗಲೇ ಇಂಥ ಸು. 5 ಸಾವಿರ ವಿಕೃತಿಗಳನ್ನು ಗುರುತಿಸಲಾಗಿದೆ. ಈ ವಿಕೃತಿಗಳನ್ನು ಪ್ರಯೋಗಗಳಿಗೆ ಉಪಯೋಗಿಸಿಕೊಂಡು ಆನುವಂಶೀಯತೆಯ ತತ್ವಗಳಾದ ಜೀನ್‌ಗಳ ಪ್ರತ್ಯೇಕತೆ, ಸ್ವತಂತ್ರ ವಿಂಗಡಣೆ, ಲಿಂಗಸಂಲಗ್ನತೆ, ಜೀನ್‌ಗಳ ಅಂತರವರ್ತನೆ, ಬಹುಜೀನ್‌ಗಳ ಆನುವಂಶೀಯತೆ ಮುಂತಾದ ತತ್ವಗಳನ್ನು ಅರ್ಥಮಾಡಿಕೊಳ್ಳಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಡ್ರೊಸಾಫಿಲಾದ ತಳಿಸಂಗ್ರಹಣಾ ಕೇಂದ್ರವಿದೆ. ಇದು ಏಶಿಯಾ ಖಂಡದಲ್ಲೇ ದೊಡ್ಡ ಡ್ರಾಸೋಫಿಲಾ ತಳಿಸಂಗ್ರಹಣ ಕೇಂದ್ರವಾಗಿದೆ. ಈ ಕೇಂದ್ರವು ಪ್ರೊ. ಎಚ್.ಎ. ರಂಗನಾಥ್, ಪ್ರೊ. ಎಸ್.ಎನ್. ಹೆಗಡೆ, ಪ್ರೊ. ಎಸ್.ಆರ್. ರಮೇಶ್. ಹಾಗೂ ಪ್ರೊ. ವಿ. ವಾಸುದೇವ್‌ರವರ ನೇತೃತ್ವದಲ್ಲಿ ಸ್ಥಾಪಿತವಾಯಿತು. ಈ ಕೇಂದ್ರದಲ್ಲಿ ವಿವಿಧ ದೇಶಗಳಿಂದ ಅಂದರೆ ಜರ್ಮನಿ, ಬ್ಲೂಮಿಂಗ್‌ಟನ್, ಯು.ಎಸ್.ಎ. ಹಾಗೂ ಟಾಟಾ ಇನ್‌ಸ್ಟಿಟ್ಯೂಟ್, ಮುಂಬಯಿ ಮತ್ತು ಬೆಂಗಳೂರು ಕೇಂದ್ರಗಳಿಂದ ಸಂಗ್ರಹಿಸಿದ ಸು. 2000 ಡ್ರೋಸಾಫಿಲ ತಳಿಗಳಿವೆ. ಸು. 50 ಪ್ರಭೇದಗಳ ಸಂಗ್ರಹವಿದೆ. ಈ ಕೇಂದ್ರದಿಂದ ಕಾಲೇಜು ಹಾಗೂ ಸಂಶೋಧನ ಕೇಂದ್ರಗಳ ಬೇಡಿಕೆಗನುಗುಣವಾಗಿ ಯಾವ ಧನಾಪೇಕ್ಷೆಯಿಲ್ಲದೆ ವಿವಿಧ ತಳಿಗಳನ್ನು ಪೂರೈಸಲಾಗುತ್ತಿದೆ. ಇದರಿಂದ, ವಿದ್ಯಾರ್ಥಿಗಳಿಗೆ ಆನುವಂಶೀಯ ಗುಣಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹೇಗೆ ಪ್ರಸಾರವಾಗುತ್ತವೆ ಎಂದು ಕಡಿಮೆ ಅವಧಿಯಲ್ಲಿ ಅಭ್ಯಾಸ ಮಾಡಲು ಸಹಾಯವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಪ್ರೊ. ಎಂ.ಆರ್. ರಾಜಶೇಖರಶೆಟ್ಟಿಯವರ ನೇತೃತ್ವದಲ್ಲಿ ಪ್ರಾರಂಭವಾದ ಈ ಕೀಟಗಳ ಸಂಶೋಧನೆ ಇಂದಿನವರೆವಿಗೂ ನಡೆಯುತ್ತಲೇ ಇದೆ. ಜೀವವಿಜ್ಞಾನದ ವಿವಿಧ ಮಜಲುಗಳಾದ ಆನುವಂಶೀಯತೆ, ನಡವಳಿಕೆ, ವರ್ಗೀಕರಣ, ವಿಕಾಸವಾದ, ವರ್ಣತಂತು, ಕಿಣ್ವಗಳು, ಕೋಶತಳಿಶಾಸ್ತ್ರ, ಬೆಳವಣಿಗೆ ಬಗ್ಗೆ ಸಂಶೋಧಕರು ಅಭ್ಯಾಸಮಾಡಿ ಸಂಶೋಧನಾ ಲೇಖನಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಿಸಿ ಖ್ಯಾತಿ ಪಡೆದಿದ್ದಾರೆ.

ಈ ಕೀಟಗಳಿಂದ ನಮ್ಮ ಅವಶ್ಯಕತೆಗೆ ತಕ್ಕಂತೆ ವಿವಿಧ ತಳಿಗಳನ್ನು ಪಡೆಯಬಹುದು. ಈ ಕೀಟಗಳಲ್ಲಿ ಹಾರುವ ಜೀನ್ ಅಪಾರ ಸಂಖ್ಯೆಯಲ್ಲಿದ್ದು, ಅಪೇಕ್ಷಿತ ವಿಕೃತಿಗಳನ್ನು ಪಡೆಯಲು ಮುಖ್ಯ ಪಾತ್ರ ವಹಿಸಿದೆ.

ವಿವಿಧ ಡ್ರೊಸಾಫಿಲ ಪ್ರಭೇದಗಳು ಸಂಶೋಧನೆಗಳಲ್ಲಿ ಬಳಕೆಯಾಗುತ್ತಿದ್ದು, ಅವುಗಳ ಕೊಡುಗೆ ಅಪಾರ. ಮೈಸೂರು ಆಸುಪಾಸಿನಲ್ಲೇ ಸು. 20 ಪ್ರಭೇದಗಳನ್ನು ಸಂಶೋಧಕರು, ವಿಜ್ಞಾನಿಗಳು (ಮೈಸೂರು ವಿಶ್ವವಿದ್ಯಾನಿಲಯದವರು) ಗುರುತಿಸಿದ್ದಾರೆ. ಡ್ರೋ. ಮಲರ್‌ಕೊಟ್ಲಿಯಾನ, ಡ್ರೋ. ಬೈಪೆಕ್ಟಿನೇಟ, ಡ್ರೋ. ರಾಜಶೇಖರಿ, ಡ್ರೋ. ನಸುಟ, ಡ್ರೋ. ನಿಯಾನಸುಟ, ಡ್ರೋ. ಕಿಕ್ಕವಾಯಿ, ಡ್ರೋ. ಗಂಗೋತ್ರಿ, ಡ್ರೋ. ಅನೋಮೆಲನಿ, ಡ್ರೋ. ಆಗುಂಬೆನ್‌ಸಿಸ್, ಡ್ರೋ. ಅನಾನಸ್ಸೆ ಪ್ರಮುಖವಾದುವುಗಳು.

ಇತ್ತೀಚೆಗೆ ಮಾನವನ ಹಲವು ಆನುವಂಶೀಯ ರೋಗಗಳನ್ನು ಅಭ್ಯಸಿಸಿ, ಅರ್ಥಮಾಡಿಕೊಳ್ಳುವ ದಿಶೆಯಲ್ಲಿ ಸಂಶೋಧನೆಗಳಾಗುತ್ತಿವೆ. ಮನುಷ್ಯನ ಆನುವಂಶೀಯ ಕಾಯಿಲೆಗಳಾದ ಜುವೆನೈಲ್ ಪಾರ್‌ಕಿನ್‌ಸನ್, ಅಲ್ಜೀಮಿರ್, ಥೈರಾಯಿಡ್‌ನ ಅರ್ಬುದ, ಲ್ಯೂಕೇಮಿಯಾ, ಶ್ವಾಸಕೋಶದ ಅರ್ಬುಧಗಳನ್ನುಂಟುಮಾಡುವ ಜೀನ್‌ಗಳ ಹೋಲಿಕೆಯ ಜೀನ್‌ಗಳು ಈ ನೊಣಗಳಲ್ಲಿರುವುದನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಅವುಗಳ ಕಾರ್ಯ ಹಾಗೂ ನಡವಳಿಕೆಯನ್ನು ಅರ್ಥಮಾಡಿಕೊಳ್ಳಲು ತಳಿವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ. ಈ ಖಾಯಿಲೆಗಳನ್ನು ಕೃತಕವಾಗಿ ಇಲಿಗಳಲ್ಲಿ ಉಂಟುಮಾಡಲು ಆರು ತಿಂಗಳು ಬೇಕಾದರೆ, ಈ ನೊಣಗಳಲ್ಲಿ 10 ದಿನ ಸಾಕು ಎಂದು ವಿಜ್ಞಾನಿ ನಾನ್ಸಿ ಬೋನಿನಿ ಹಾಗೂ ಅವರ ಸಹಾಯಕರು 1999 ರಲ್ಲಿ ತೋರಿಸಿಕೊಟ್ಟಿದ್ದಾರೆ.

ಪ್ರಭೇದಗಳ ಅಥವಾ ಜೀವಸಮುದಾಯದ ಆನುವಂಶೀಯ ವಸ್ತು ಮತ್ತು ಪರಿಸರಗಳ ಅಂತರವರ್ತನೆಯ ಮೂಲಕ ಜೀವಿಗಳ ಪೀಳಿಗೆ ಮುಂದುವರಿದುಕೊಂಡು ಹೋಗುತ್ತದೆ. ಇದನ್ನು ಕೂಲಂಕುಷವಾಗಿ ಅಭ್ಯಸಿಸುವುದೇ ಪರಿಸರ ತಳಿವಿಜ್ಞಾನ ಶಾಸ್ತ್ರ. ಈ ವಿಭಾಗಕ್ಕೂ ಡ್ರೋಸಾಫಿಲ ತನ್ನ ಕೊಡುಗೆಯನ್ನು ನೀಡಿದೆ. ಪರಿಸರದ ಅಂಶಗಳಾದ ಉಷ್ಣತೆ, ಮಳೆ, ಆರ್ದ್ರತೆ, ಜೀವಸಂದಣಿಯ ಸಾಂದ್ರತೆ ಮುಂತಾದುವುಗಳ ಪ್ರಭಾವ ಮತ್ತು ಜೀವಸಮುದಾಯದ ಆನುವಂಶೀಯ ವಸ್ತುವಿನ ಪ್ರತಿಕ್ರಿಯೆಗಳನ್ನು ಅಭ್ಯಾಸಮಾಡಲಾಗಿದೆ. ನಿಸರ್ಗದಲ್ಲಿನ ಋತು ಬದಲಾವಣೆಗಳು ತಮ್ಮ ಪ್ರಭಾವವನ್ನು ಜೀವಸಂದಣಿಯ ಮೇಲೆ ಹೇಗೆ ಬೀರಬಲ್ಲವು? ಇದಕ್ಕೆ ಜೀವಸಂದಣಿ ಹೇಗೆ ಹೊಂದಿಕೊಳ್ಳುತ್ತದೆ? ಅದರ ಆನುವಂಶೀಯ ವಸ್ತುವಿನಲ್ಲಾಗುವ ಬದಲಾವಣೆಗಳು ಏನು? ಮುಂತಾದ ಸಮಸ್ಯೆಗಳನ್ನು ಡ್ರೋಸಾಫಿಲ ಸಮುದಾಯಗಳಲ್ಲಿ ಅಭ್ಯಾಸಮಾಡಲಾಗಿದೆ.

ನಡವಳಿಕೆ ಪ್ರಾಣಿಯ ಅವಿಭಾಜ್ಯ ಗುಣ. ಪ್ರಾಣಿಗಳ ಆನುವಂಶೀಯ ವಸ್ತು ಮತ್ತು ಪರಿಸರದ ಅಂತರವರ್ತನೆಯಿಂದ ಈ ಗುಣದ ರೀತಿನೀತಿಗಳು ನಿರ್ಧಾರಗೊಳ್ಳುತ್ತವೆ. ಇದನ್ನು ಅಭ್ಯಸಿಸುವ ವಿಭಾಗವೇ ನಡವಳಿಕೆ ತಳಿವಿಜ್ಞಾನ. ಡ್ರೋಸಾಫಿಲ ಪ್ರಭೇದಗಳಲ್ಲಿ ಸಂಭೋಗ ನಡವಳಿಕೆಯನ್ನು ಆಳವಾಗಿ ಅಭ್ಯಾಸಮಾಡಲಾಗಿದೆ. ಪ್ರತಿಯೊಂದು ಪ್ರಭೇದಕ್ಕೂ ಒಂದೊಂದು ವಿಶಿಷ್ಟ ರೀತಿಯ ಸಂಭೋಗ ನಡವಳಿಕೆ ಇದೆ. ವಿವಿಧ ಪ್ರಭೇದಗಳ ಸಂಭೋಗ ನಡವಳಿಕೆಯನ್ನು ಹೋಲಿಸುವುದರ ಮೂಲಕ ಪ್ರಜನನಯುಕ್ತತೆ ಹೇಗಾಗಿರಬಹುದು ಎಂಬುದನ್ನು ಅದರ ವಿಕಾಸವನ್ನು ಅರ್ಥಮಾಡಿಕೊಳ್ಳಬಹುದು. ಡ್ರೋಸಾಫಿಲದ ವಿವಿಧ ಆನುವಂಶೀಯ ತಳಿಗಳನ್ನು ಹಾಗು ಪ್ರತ್ಯಯಗಳನ್ನು ಉಪಯೋಗಿಸಿಕೊಂಡು ನಡವಳಿಕೆಗಳ ಮೇಲೆ ವಿವಿಧ ಜೀನುಗಳು ಬೀರುವ ಪ್ರಭಾವವನ್ನು ಗುರುತಿಸಲಾಗಿದೆ.

ಜೀವಪ್ರಪಂಚದಲ್ಲಿ ವಿಕಾಸ ಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ. ಜೀವಿಗಳ ಉಗಮ, ವಿವಿಧ ಪರಿಸರಗಳಲ್ಲಿ ಅವುಗಳ ಉಳಿವು, ಹೊಂದಾಣಿಕೆ, ಜೀವಿಗಳ ಅಳಿವು ಜೀವಿಸಮುದಾಯಗಳ ಚಟುವಟಿಕೆಗಳನ್ನು ವಿಶ್ಲೇಷಿಸಲು ತತ್ವಗಳಿವೆ. ಇಂದಿನ ಪ್ರಮುಖ ತತ್ವಗಳಾದ ಡಾರ್ವಿನಿಸಂ, ನಿಯೋಡಾರ್ವಿನಿಸಂ ಹಾಗೂ ನಾನ್‌ಡಾರ್ವಿನಿಯನ್ ತತ್ವಗಳಿಗೆ ಬೇಕಾದ ಆಧಾರಗಳನ್ನು ಡ್ರೋಸಾಫಿಲಗಳಲ್ಲಿ ನಡೆಸಿರುವ ಪ್ರಯೋಗಗಳಲ್ಲಿ ವಿಕಾಸವಾದಿಗಳು ಕಂಡುಕೊಂಡಿದ್ದಾರೆ.

ಪ್ರಕೃತಿಯ ಆಯ್ಕೆ, ವಿಕೃತಿ ಕ್ರಿಯೆ, ಜೀನ್‌ಗಳ ಪ್ರವಾಸ, ಜೆನೆಟಿಕ್ ಡ್ರಿಫ್ಟ್ ಮತ್ತು ಕ್ಯಾನಲೈಸೇಷನ್ ಮುಂತಾದ ವಿಕಾಸ ಕ್ರಿಯೆಗಳಿಗೆ ಡ್ರೋಸಾಫಿಲ ಪ್ರಯೋಗಗಳು ಆಧಾರಸ್ತಂಭಗಳಾಗಿವೆ. ವಿಕಾಸ ಕ್ರಿಯೆಯ ಅತ್ಯಂತ ಪ್ರಮುಖವಾದ ಹಾಗೂ ಅತಿ ಕುತೂಹಲಕಾರಿಯಾದ ಪ್ರಭೇದೀಕರಣ ಕ್ರಿಯೆಯನ್ನು ಅಧ್ಯಯನ ಮಾಡಲು ಡ್ರೋಸಾಫಿಲ ಪ್ರಭೇದಗಳು ಬಹಳ ಸಹಕಾರಿಗಳಾಗಿವೆ. ಈ ದಿಕ್ಕಿನಲ್ಲಿ ನಡೆದ ಅಧ್ಯಯನಗಳು ಪ್ರಭೇದೀಕರಣದ ವಿವಿಧ ಹಂತಗಳಾದ, ಉಪಪ್ರಭೇದ, ಅತಿ ಪ್ರಭೇದ ಪಂಗಡ, ಉಪಪಂಗಡ, ಬುಡಕಟ್ಟು ಮುಂತಾದ ಹಂತಗಳನ್ನು ಬೆಳಕಿಗೆ ತಂದಿವೆ. ಡ್ರೋಸಾಫಿಲಗಳ ಕಿಣ್ವಗಳ ಬಹುರೂಪತೆಯನ್ನು ಅಭ್ಯಾಸಮಾಡುವುದರ ಮೂಲಕ ಒಂದು ಪ್ರಭೇದಕ್ಕೂ ಮತ್ತೊಂದು ಪ್ರಭೇದಕ್ಕೂ ಹಾಗು ಒಂದೇ ಪ್ರಭೇದದ ಒಂದು ಜೀವಸಮುದಾಯಕ್ಕೂ ಮತ್ತೊಂದಕ್ಕೂ ಇರುವ ವ್ಯತ್ಯಾಸಗಳಿಗೆ ಕಾರಣವಾಗಿರುವ ಅಣುಮೂಲಗಳನ್ನು ಗುರುತಿಸಿ, ಅವುಗಳಿಗಿರುವ ಆನುವಂಶೀಯ ಅಂತರವನ್ನು ಅಳೆಯಬಹುದು.

ಒಟ್ಟಿನಲ್ಲಿ ಜೀವವಿಜ್ಞಾನದ ಹೊಸಶಾಖೆಯ ಬೆಳವಣಿಗೆಗೆ ಡ್ರೋಸಾಫಿಲ ನಾಂದಿಹಾಡಿದೆ. ಇದೊಂದು ಅತಿ ಚಿಕ್ಕ ಕೀಟವಾದರೂ ಇದರ ಪ್ರಯೋಗಗಳ ಮೌಲ್ಯ ಅತಿ ಹಿರಿದು. ಇದರ ಸಹಾಯದಿಂದ ವಿಜ್ಞಾನ ಪ್ರಪಂಚಕ್ಕೆ ಸಂದಿರುವ ಕೊಡುಗೆ ಅಪಾರ. (ಎಚ್.ಎ.ಆರ್; ವಿ.ಎಸ್)

# ತ

**ತದ್ರೂಪಿಸೃಷ್ಟಿ:** ಕ್ಲೋನಿಂಗ್ ನೋಡಿ.

**ತಲೆಬುರುಡೆ:** ಹಲವಾರು ಮೂಳೆ ಹಾಗೂ ಮೃದ್ವಸ್ಥಿಗಳಿಂದಾದ ಶಿರದ ಅಸ್ಥಿಪಂಜರ (ಹೆಡ್). ಕೆಳದವಡೆಯನ್ನು ಬಿಟ್ಟು ಉಳಿದ ಭಾಗದ ತಲೆಬುರುಡೆಗೆ ಮಿದುಳುಪೆಟ್ಟಿಗೆ (ಕ್ರೇನಿಯಮ್) ಎಂದೂ ಮುಖದ ಎಲುಬುಗಳನ್ನು ಬಿಟ್ಟು ಉಳಿದ ತಲೆಬುರುಡೆಯ ಭಾಗಕ್ಕೆ ತಲೆಯ ಗುಮ್ಮಟ (ಕ್ಯಾಲ್‌ವೇರಿಯ) ಎಂದೂ ಹೆಸರು. ಕೆಳದವಡೆಯ ವಿನಾ ಉಳಿದ ಎಲ್ಲ ಮೂಳೆಗಳೂ ಚಲನರಹಿತವಾಗಿ ಒಂದಕ್ಕೊಂದು ಗಟ್ಟಿಯಾಗಿ ಅಂಟಿಕೊಂಡಿವೆ. ಬಾಲ್ಯದಲ್ಲಿ ಇವುಗಳ ಜೋಡಣೆಯ ಬಿಗಿ ಕಡಿಮೆ ಆಗಿದ್ದರೂ ಯೌವನದ ಹೊತ್ತಿಗೆ ಚಲನೆ ಅಸಾಧ್ಯವೆನ್ನುವಷ್ಟು ಇವು ಅಂಟಿಕೊಳ್ಳುತ್ತವೆ. ತಲೆಬುರುಡೆಯ ಬೆಳವಣಿಗೆಯ ಕಾಲದಲ್ಲಿ ಮೂಳೆಗಳ ಮಧ್ಯೆ ಸ್ವಲ್ಪಮಟ್ಟಿಗೆ ಚಲನೆ ಇದ್ದು ಶಿಶುವಿನ ಜನನ ಮತ್ತು ಮುಂದಿನ ಮಿದುಳಿನ ಬೆಳವಣಿಗೆ ಸಹಾಯಕವಾಗಿರುತ್ತದೆ. ಕೆಳದವಡೆ ಮಾತ್ರ ಉಳಿದ ತಲೆಬುರುಡೆಯೊಡನೆ ಯಾವಾಗಲೂ ಚಲಿಸುವ ಎಡಬಲಕೀಲುಗಳಿಂದ ಸಂಪರ್ಕಿಸಲ್ಪಟ್ಟಿದೆ. ತಲೆಬುರುಡೆಯ ಮೇಲ್ಛಾವಣಿ (ತಲೆಯಚಿಪ್ಪು, ವಾಲ್ಟ್) ಯ ಮೂಳೆಗಳು ಮಗು ಜನಿಸಿದಾಗ ಅಲ್ಲಲ್ಲಿ ಸಂಧಿಬಿಟ್ಟು ತೆಳ್ಳಗಿದ್ದು ಕ್ರಮೇಣ ದಪ್ಪವೂ ಗಟ್ಟಿಯೂ ಆಗುವುದಲ್ಲದೆ ಸಂಧಿಗಳು ಮುಚ್ಚಿಕೊಳ್ಳುತ್ತವೆ. ಸಂಧಿಗಳ ಪೈಕಿ ಎರಡನ್ನು ನೆತ್ತಿಬಾಯಿ ಎಂದು ಕರೆಯುವುದುಂಟು.

ತಲೆಬುರುಡೆಯಲ್ಲಿ ಒಟ್ಟು 28 ಮೂಳೆಗಳಿದ್ದು ಇವುಗಳ ಪೈಕಿ 6 ಏಕವಾಗಿಯೂ 11 ಜೊತೆಯಾಗಿಯೂ ಇದ್ದು 14 ಮುಖಕ್ಕೂ 8 ಮಿದುಳು ಪೆಟ್ಟಿಗೆಗೂ ಸಂಬಂಧಿಸಿವೆ. ಮಧ್ಯಕಿವಿಯಲ್ಲಿ ಅಡಗಿರುವ 3 ಮೂಳೆಗಳು ಅತಿ ಸಣ್ಣವು. ಅಲ್ಲಲ್ಲಿ ತಲೆಬುರುಡೆ ಮೃದ್ವಸ್ಥಿಗಳಿಂದ ರಚಿತವಾಗಿದೆ. ಕಿವಿಯಲ್ಲಿರುವ ಮೂಳೆಗಳಲ್ಲಿ ಶಬ್ದದ ತರಂಗಗಳು ಹರಿಯುತ್ತವೆ. ಕಿವಿಯ ಹಿಂದೆ ಇರುವ ಕಚಾಗ್ರಮೂಳೆ ಚಾಚು (ಮ್ಯಾಸ್ಟಾಯ್ಡ್ ಪ್ರಾಸೆಸ್) ಮಾನವ ಬುರುಡೆಯ ವೈಶಿಷ್ಟ್ಯ. ತಲೆಬುರುಡೆಯ ಮೂಳೆಗಳು ಎರಡು ಪದರಗಳಲ್ಲಿವೆ. ಅವುಗಳ ಮಧ್ಯದಲ್ಲಿ ತಿರುಳಿನ ತೆರನಾದ ಕೆಂಪು ಮಜ್ಜೆ ಉಂಟು. ಇದು ರಕ್ತವರ್ಧಕಾಂಗ. ಆದ್ದರಿಂದ ಕೂದಲಿನಷ್ಟು ಸೂಕ್ಷ್ಮವಾದ ಬಹುರಕ್ತನಾಳಗಳು ಇಲ್ಲಿವೆ. ಮೂಳೆಯ ಹೊರಪದರ ದಪ್ಪ ಮತ್ತು ಗಟ್ಟಿಯಾಗಿ ಇದೆ. ಒಳಪದರ ತೆಳುವಾದರೂ ಬಿರುಸಾಗಿ ಉಂಟು. ಎರಡು ಪದರಗಳ ಮಧ್ಯೆ ಸ್ಪಂಜಿನಂತೆ ಕಾಣುವ ಲಘುರಚನೆಯ ಮೂಳೆ ಇದೆ. ಸ್ಪಂಜಿನ ತೆರಪಿನಲ್ಲಿ ತುಂಬಿಕೊಂಡಿರುವುದೆ ಕೆಂಪುಮಜ್ಜೆ. ಸ್ಪಂಜು ಮೂಳೆ ಕಾಪುತಡೆಯ (ಬಫರ್) ಕೆಲಸ ಮಾಡುತ್ತದೆ. ಆದ್ದರಿಂದ ಸಣ್ಣ ಪೆಟ್ಟುಗಳು ತಲೆಬುರುಡೆಯ ಮೇಲೆ ಬಿದ್ದಾಗ ಮೂಳೆಯ ಹೊರಪದರ ಒಡೆಯುತ್ತದೆಯೆ ಹೊರತು ಒಳಪದರಕ್ಕೆ ಧಕ್ಕೆ ತಗಲುವುದಿಲ್ಲ. ತಲೆಬುರುಡೆ ಸುಮಾರು ದುಂಡಗಿದೆ. ಆದಕಾರಣ ಬುರುಡೆಗೆ ಭಾರಿ ಪೆಟ್ಟು ಬಿದ್ದಲ್ಲಿ ಪೆಟ್ಟಿನ ಬಿರುಸು ಅಕ್ಕಪಕ್ಕದ ಮೂಳೆಗಳ ಮೂಲಕ ಹರಿದು ನೇರವಾದ ಎದುರು ಮೂಳೆಯಲ್ಲಿ ವ್ಯಕ್ತವಾಗಿ ಅದು ಒಡೆಯಬಹುದು. ಇದರಿಂದಾಗಿ ಮಿದುಳಿಗೆ ಹೆಚ್ಚಿನ ಏಟು ತಗಲುವುದಿಲ್ಲ. ಬುರುಡೆಯ ಒಳಭಾಗದಲ್ಲಿ ಅನೇಕ ಕೋಣೆಗಳಿವೆ. ಅತಿದೊಡ್ಡದಾದ ಕೋಣೆಯ ಒಳಗೆ ಮಿದುಳು ಹುದುಗಿದೆ. ನಾಲ್ಕು ಮಧ್ಯಮಗಾತ್ರದ ಕೋಣೆಗಳು ಬರುಡೆಯ ಮುಂಭಾಗದಲ್ಲಿವೆ. ಎರಡು ಕೋಣೆಗಳು ಕಣ್ಣುಗಳಿಗೆ, ಒಂದು ಮೂಗಿಗೆ ಇನ್ನೊಂದು ನಾಲಿಗೆಗೆ ನಿಗದಿಯಾಗಿವೆ. ಎರಡೂ ಕಪಾಲದ ಮೂಳೆಗಳಲ್ಲಿ ಅನೇಕ ಚಿಕ್ಕ ಕೋಣೆಗಳಿವೆ. ಇವುಗಳಲ್ಲಿ ಶಬ್ದಗ್ರಹಣ ಮತ್ತು ಸಮತೋಲನದ (ಈಕ್ವಿಲಿಬ್ರಿಯಮ್) ಅಂಗಾಂಗವೂ ಅಡಕವಾಗಿದೆ. ಈ ಮೇಲಿನ ಕೋಣೆಗಳು ಚರ್ಮ ಹೊರತಾಗಿ ಉಳಿದ ಪಂಚೇಂದ್ರಿಯಗಳನ್ನು ರಕ್ಷಿಸುತ್ತವೆ. ಶಬ್ದಗ್ರಹಣ ಮತ್ತು ಸಮತೋಲನದ ಅಗಾಂಗ ಅಡಕವಾಗಿರುವ ಕಪಾಲಮೂಳೆಯ ಭಾಗ ತಲೆಬುರುಡೆಯ ಮೂಳೆಗಳಲ್ಲೆಲ್ಲ ಅತಿಗಟ್ಟಿಯಾದ ಭಾಗ. ಪ್ರಚೋದನೆಗಳನ್ನು ಬಲು ಸುಲಭವಾಗಿ ಗ್ರಹಿಸಿ ತಕ್ಕ ಪ್ರತಿಕ್ರಿಯೆಯನ್ನು ತತ್‌ಕ್ಷಣವೆ ಉಂಟುಮಾಡುವುದಕ್ಕಾಗಿ ಶಬ್ದಗ್ರಹಣದ ಮತ್ತು ಸಮತೋಲನದ ಅಂಗಾಂಗಗಳು ಬಲು ಸೂಕ್ಷ್ಮ ರಚನೆಗಳು ಕೂಡ ಹೌದು. ಇಂಥ ಸೂಕ್ಷ್ಮ ರಚನೆಯ ಅಂಗಾಂಗಗಳಿಗೆ ಅಪಘಾತ, ಒರಟಾಟ ಮುಂತಾದವುಗಳಿಂದ ಪೆಟ್ಟಾಗದಂತೆ ರಕ್ಷಣೆ ಒದಗಿರಬೇಕಾದುದು ಅಗತ್ಯ. ಆದ್ದರಿಂದ ಅವು ಗಟ್ಟಿಮೂಳೆಯಲ್ಲಿ ಅಡಕವಾಗಿವೆ. ಈ ಮೇಲಿನ ದೊಡ್ಡ ದೊಡ್ಡ ಕೋಣೆಗಳಲ್ಲದೆ ತಲೆಬುರುಡೆಯ ಇತರ ಕೆಲವು ಮೂಳೆಗಳಲ್ಲಿಯೂ ಸಣ್ಣ ಸಣ್ಣ ವಾಯುತುಂಬಿದ ಅನೇಕ ಕೋಶಗಳಿವೆ (ಹಣೆ ಎಲುಬು, ಮೇಲ್ದವಡೆ, ಸ್ಫೀನಾಯ್ಡ್, ಎತ್ಮಾಯ್ಡ್ ಈ ಮೂಳೆಗಳಲ್ಲಿ). ವಾಯುತುಂಬಿದ ಈ ಎಲ್ಲ ಕೋಣೆಗಳೂ ಮೂಗಿನ ಕೋಣೆಗೆ ಪ್ರತ್ಯೇಕ ತೆರೆಯುತ್ತವೆ. ಇವು ಶಬ್ದತರಂಗಗಳಿಗೆ ಮಾರ್ದನಿ ಪೆಟ್ಟಿಗೆಗಳಾಗಿ ವರ್ತಿಸಿ ಶಬ್ದವನ್ನು ಇಂಪಾಗುವಂತೆ ಮಾಡುತ್ತವೆ.

ಕೆಳದವಡೆ ಮುಖದ ಮೂಳೆಗಳ ಪೈಕಿ ಅತಿದೊಡ್ಡದು ಮತ್ತು ಗಟ್ಟಿಯಾದದ್ದು. ಕೆಳದವಡೆಯ ಮುಂಭಾಗವೆ ಗಲ್ಲ. ಇದು ಮಾನವ ವೈಶಿಷ್ಯ. ಕೆಳದವಡೆಯ ಹಿಂಭಾಗ ಶಿರದ ಕಡೆಗೆ ಬಾಗಿ ಕಪಾಲಮೂಳೆಯೊಡನೆ ಇಕ್ಕೆಡೆಗಳಲ್ಲೂ ಕಪಾಲ ಕೆಳದವಡೆ ಕೀಲುಗಳಾಗಿ ಏರ್ಪಟ್ಟು ಆಹಾರವನ್ನು ಅಗಿಯಲು ಸಹಾಯ ಮಾಡುವುದು. ಕೆಳದವಡೆಗೆ ಕುದುರೆ ಗೊರಸಿನ ಆಕಾರ ಉಂಟು. ಕೆಳ ಮತ್ತು ಮೇಲ್ದವಡೆಗಳಲ್ಲಿ ಹಲ್ಲುಗಳು ಅಡಕವಾಗಿವೆ. ಕೆಳದವಡೆ ಮೇಲೆ ಕೆಳಗೆ ಹಾಗೂ ಅಕ್ಕ ಪಕ್ಕವಾಗಿ ಚಲಿಸಿ ಮೇಲ್ದವಡೆಯೊಂದಿಗೆ ವರ್ತಿಸಿ ಆಹಾರವನ್ನು ಅಗಿದು ನುಂಗಬಲ್ಲ ತುತ್ತಾಗಿ ಮಾಡಲು ನೆರವಾಗುತ್ತದೆ. ಹಲ್ಲುಗಳು ಎರಡು ತಂಡಗಳಲ್ಲಿ ಹುಟ್ಟುತ್ತವೆ: ಒಂದು ತಾತ್ಕಾಲಿಕ ಮತ್ತೊಂದು ಶಾಶ್ವತ. ತಾತ್ಕಾಲಿಕ ಹಲ್ಲುಗಳಿಗೆ ಹಾಲುಹಲ್ಲುಗಳೆಂದು ಹೆಸರು. ಒಟ್ಟು 20 ಹಾಲುಹಲ್ಲುಗಳು 32 ಶಾಶ್ವತ ಹಲ್ಲುಗಳು ಇವೆ. ಇವುಗಳ ಪೈಕಿ ಹಾಲುಹಲ್ಲುಗಳು ಮೇಲ್ದವಡೆ ಮತ್ತು ಕೆಳದವಡೆಗಳಲ್ಲಿ ತಲಾ 10 ರಂತೆಯೇ ಶಾಶ್ವತ ಹಲ್ಲುಗಳು ತಲಾ 16ರಂತೆಯು ಇರುವುವು. ಆಕಾರಗಳ ಮೇಲೆ ಹಲ್ಲುಗಳನ್ನು ಮೂರು ಬಗೆಗಳಾಗಿ ವಿಂಗಡಿಸಬಹುದು ; ಮುಂಭಾಗದವು ಬಾಚಿಹಲ್ಲುಗಳು, ಬದಿಯಲ್ಲಿರುವವು ಕೋರೆಹಲ್ಲುಗಳು, ಹಿಂಭಾಗದ ದವಡೆಹಲ್ಲುಗಳು. ಬಾಚಿಹಲ್ಲುಗಳು ಆಹಾರವನ್ನು ಹಿಡಿದು ಕತ್ತರಿಸಲು, ಕೋರೆಹಲ್ಲುಗಳು ಅದನ್ನು ಸಿಗಿಯಲು, ದವಡೆಹಲ್ಲುಗಳು ಅದನ್ನು ಅರೆಯಲು ಸಹಾಯಮಾಡುತ್ತವೆ. ಎರಡು ಪಕ್ಕಗಳಿಂದ ಮತ್ತು ಮೇಲ್ದವಡೆಯ ತಳಭಾಗದಿಂದ ಕಮಾನಿನಂತಿರುವ ಚಪ್ಪಟೆಯಾದ ಮೂಳೆಗಳು ಒಳಚಾಚಿ ಬಾಯಿಯ ಅಟ್ಟವಾಗಿ ಬಾಯನ್ನು ಮೂಗಿನ ಕೋಣೆಗಳಿಂದ ಬೇರ್ಪಡಿಸುತ್ತವೆ. ಅಟ್ಟದ ಮೂಳೆ ಆಹಾರವನ್ನು ಅಗಿದು ನುಂಗಲು ಅಲ್ಲದೆ ಮಾತಾಡಲು ಕೂಡ ಸಹಾಯ ಮಾಡುತ್ತದೆ. ಮೇಲ್ದವಡೆ ಮತ್ತು ಕೆಳದವಡೆಗಳು ಸಮರ್ಥವಾಗಿ ಮಾಸಖಂಡಗಳಿಂದ ಕೂಡಿಕೊಂಡಿವೆ. ಇವು ತಮ್ಮ ಪ್ರಬಲ ಚಲನೆಗಳಿಂದ ಆಹಾರವನ್ನು ಕಚ್ಚುವುದು, ಕೀಳುವುದು, ಅರೆಯುವುದು ಇತ್ಯಾದಿ ಕ್ರಿಯೆಗಳನ್ನು ಸಾಧ್ಯವಾಗಿಸುತ್ತವೆ.

ಮಿದುಳು ಪೆಟ್ಟಿಗೆ 8 ಮೂಳೆಗಳಿಂದ ರಚಿತವಾಗಿದೆ. ಇದು ಮಿದುಳನ್ನು ರಕ್ಷಿಸುತ್ತದೆ. ಈ ಪೆಟ್ಟಿಗೆಯ ತಳಭಾಗದಲ್ಲಿ ಅನೇಕ ತೂತುಗಳಿವೆ. ಇವುಗಳ ಮೂಲಕ 12 ಜೊತೆ ಶಿರನರಗಳು (ಕ್ರೇನಿಯಲ್ ನರ್ವ್ಸ್) ಹೊರಬೀಳುತ್ತವೆ. ತಳದ ಮುಂಭಾಗದಲ್ಲಿ ಒಂದು ದೊಡ್ಡ ತೂತು ಉಂಟು. ಇದರಿಂದ ಮಿದುಳು ಬಳ್ಳಿಯಾಗಿ ಮುಂದುವರಿದು ಹೊರಬಂದು ಬೆನ್ನುಮೂಳೆಯ ಉದ್ದಕ್ಕೂ ಹರಡಿದೆ. ಈ ತೂತಿನ ಪಕ್ಕಗಳಲ್ಲಿರುವ ಉಬ್ಬುಗಳು ಮೊದಲನೆಯ ಬೆನ್ನುಮೂಳೆಯೊಡನೆ ಕೀಲಕವಾಗಿ ವರ್ತಿಸಿ ಮುಂಡದ ಮೇಲೆ ತಲೆಬುರುಡೆಯ ಹಿಂದು ಮುಂದಿನ ಚಲನೆಗೆ ಸಹಾಯ ಮಾಡುವುವು. ಅಲ್ಲದೆ ಈ ಕೀಲು ತಲೆಬರುಡೆಯನ್ನು ಬೆನ್ನಂಬದ ಮೇಲೆ ಸ್ಥಿರವಾಗಿ ನಿಲ್ಲುವಂತೆ ಕೂಡ ಮಾಡುತ್ತದೆ. ಮೊದಲನೆಯ ಮತ್ತು ಎರಡನೆಯ ಬೆನ್ನುಮೂಳೆಗಳ ನಡುವೆ ಇರುವ ಕೀಲಿನಿಂದ ತಲೆಮುಂಡದ ಮೇಲೆ ಬಲ ಹಾಗೂ ಎಡಗಡೆಗೆ ತಿರುಗಲು ಸಾಧ್ಯವಾಗುತ್ತದೆ. ಮಿದುಳು ಪೆಟ್ಟಿಗೆಯ ತಳಭಾಗದ ಒಳಮುಖ ಮೂರು ಭಾಗಗಳಾಗಿ ವಿಂಗಡಣೆ ಆಗಿದೆ. ಇದರಲ್ಲಿ ಮಿದುಳಿನ ಬೇರೆ ಬೇರೆ ಭಾಗಗಳು ಅಡಕವಾಗಿವೆ. ಮುಂಬದಿಯಲ್ಲಿ ಹಿರಿಮಸ್ತಿಷ್ಕದ ಮುಂಭಾಗವೂ (ಫ್ರಾನ್‌ಟಲ್‌ಲೋಬ್) ಮಧ್ಯದಲ್ಲಿ ಹಿರಿಮಸ್ತಿಷ್ಕದ ಮಧ್ಯಭಾಗವೂ (ಪೆರೈಟೋ ಟೆಂಪೊರಲ್ ಲೋಬ್) ಹಿಂಬದಿಯಲ್ಲಿ ಕಿರಿಮಸ್ತಿಷ್ಕವೂ (ಸೆರಿಬೆಲ್ಲಮ್) ಅಳವಡಿಕೆಗೊಂಡಿವೆ. ಕಿರಿಮಸ್ತಿಷ್ಕ ಸಮತೋಲನದ ಒಂದು ಮುಖ್ಯವಾದ ಅಂಗ. ಮಧ್ಯಭಾಗದಲ್ಲಿ ಮಿದುಳಿನ ಜೊತೆಗೆ ಅಂತಃಸ್ರಾವಕ ಗ್ರಂಥಿಗಳಲ್ಲೆಲ್ಲ ಅತಿಮುಖ್ಯ ಗ್ರಂಥಿಯಾದ ಪಿಟ್ಯುಟರಿಗ್ರಂಥಿ ಉಂಟು. ಮಿದುಳು ಪೆಟ್ಟಿಗೆಯ ಒಳಭಾಗದಲ್ಲಿ ಉದ್ದುದ್ದವಾಗಿ ಕಂಡುಬರುವ ಅಗಲವಾದ ಕಾಲುವೆಗಳಲ್ಲಿ ಮಲಿನ ರಕ್ತನಾಳಗಳು (ವೀನಸ್ ಸೈನಸಸ್) ಅಡಕವಾಗಿವೆ. ಮೇಲೆ ಹೇಳಿದ ತೂತುಗಳಲ್ಲದೆ ತಲೆಬುರುಡೆಯಲ್ಲಿ ಅನೇಕ ಸಣ್ಣ ಸಣ್ಣ ರಂಧ್ರಗಳು ಕೂಡ ಉಂಟು. ಇವುಗಳಲ್ಲಿ ಅನೇಕ ಸಣ್ಣ ಸಣ್ಣ ರಕ್ತನಾಳಗಳು ನರಗಳು ಒಳಗಿನಿಂದ ಹೊರಗು ಹೊರಗಿನಿಂದ ಒಳಗು ಹಾಯುತ್ತವೆ. ತಲೆಯ ಚಿಪ್ಪಿನ ಹೊರಭಾಗ ನುಣುಪಾಗಿಯು ಅಂಡಾಕಾರವಾಗಿಯು ಇದೆ. ತೆಳುವಾದ ಮಾಂಸಖಂಡಗಳಿಂದ ಕೂಡಿದ ಆದರೆ ಒರಟಾಗಿಯು ದಪ್ಪವಾಗಿಯು ಇರುವ ಚರ್ಮ ಇದಕ್ಕೆ ಹೊದಿಸಿದಂತೆ ಸುತ್ತುವರಿದಿದೆ.

ತಲೆಬುರುಡೆಯ ಹಿಂಭಾಗದಲ್ಲಿ ಅನೇಕ ಉಬ್ಬು ತಗ್ಗುಗಳಿವೆ. ಇವುಗಳಿಗೆ ಮಾಂಸಖಂಡಗಳು ತಂತುಗಟ್ಟುಗಳು ಅಂಟಿಕೊಂಡಿವೆ. ತಲೆಬುರುಡೆಯ ಎರಡು ಪಕ್ಕಗಳಲ್ಲಿ ಕಾಣಿಸುವುದು ಮಟ್ಟಸವಲ್ಲದ ಮೇಲ್ಮೈ. ಇದರ ಮಧ್ಯಭಾಗದಲ್ಲಿ ಹೊರಕಿವಿಯ ರಂಧ್ರ ಉಂಟು. ಈ ಭಾಗದಲ್ಲಿ ಕೂಡ ಅನೇಕ ಮಾಂಸಖಂಡಗಳು ಮತ್ತು ತಂತುಗಟ್ಟುಗಳು ಅಂಟಿಕೊಂಡಿವೆ. ತಲೆಬುರುಡೆಯ ಮುಂಭಾಗ ತೀರ ಅಸಮರೂಪ. ಇದರ ಮೇಲ್ಭಾಗ ಹಣೆ. ಈ ಭಾಗ ಮಾತ್ರ ಚಪ್ಪಟೆ ಹಾಗೂ ಮಟ್ಟಸವಾಗಿದೆ. ಇದರ ಮೇಲ್ತುದಿಯ ಇಕ್ಕಡೆಗಳಲ್ಲಿ ಹಣೆಯುಬ್ಬು ಉಂಟು. ಹಣೆಯ ಕೆಳಭಾಗದಲ್ಲಿ ಕಣ್ಣಿನ ಎರಡು ಗೂಡುಗಳಿವೆ. ಇವು ಬಹುಭುಜಾಕೃತಿಯವು. ಆದರೂ ಸುಮಾರಾಗಿ ಗುಂಡಗೆ ಇವೆ. ಕಣ್ಣುಗೂಡಿನ ಮೇಲೆ ಹುಬ್ಬಿನ ಉಬ್ಬು ವಾನರಗಳಲ್ಲಿ ಕಂಡುಬರುವುದಾದರೂ ಮಾನವರಲ್ಲಿ ಈ ಉಬ್ಬುಗಳಿರುವುದಿಲ್ಲ. ಕಣ್ಣು ಗೂಡುಗಳು ಕಣ್ಣುಗಳನ್ನೂ ಇವಕ್ಕೆ ಸಂಬಂಧಪಟ್ಟ ಮಾಂಸಖಂಡಗಳನ್ನೂ ನರಗಳನ್ನೂ ರಕ್ಷಿಸುತ್ತವೆ. ಗೂಡುಗಳು ಮುಖದ ಹಾಗೂ ತಲೆಬುರುಡೆಯ ಮೂಳೆಗಳ ಸೇರುವಿಕೆಯಿಂದ ರಚಿತವಾಗಿವೆ. ಇವೆರಡರ ನಡುವೆ ಮುಖ ಮಧ್ಯದಲ್ಲಿ ಮೂಗಿನ ಡೊಗರು ಉಂಟು. ಇದರ ಮೇಲ್ಭಾಗ ಉಬ್ಬು ಹಾಗೂ ಚೂಪು. ಇದರ ಕೆಳಗಿರುವವು ಮೇಲ್ದವಡೆ ಹಾಗೂ ಕೆಳದವಡೆಗಳು. ಮೂಗಿನ ಡೊಗರಿನ ಒಳಭಾಗ ಮಧ್ಯಗೋಡೆಯಿಂದ ಬಲ ಹಾಗೂ ಎಡ ಅರ್ಧಕೋಣೆಗಳಾಗಿ ವಿಂಗಡಣೆ ಆಗಿದೆ. ಮಧ್ಯಗೋಡೆ ಸಾಮಾನ್ಯವಾಗಿ ಬಲಭಾಗಕ್ಕೆ ಉಬ್ಬಿಕೊಂಡಿದೆ. ಇದರಿಂದಾಗಿ ಎಡ ಅರ್ಧ ಕೋಣೆ ದೊಡ್ಡದಾಗಿದೆ. ಮಧ್ಯಗೋಡೆಯ ಹಿಂಭಾಗ ಎರಡು ತೆಳುವಾದ ಮೂಳೆಗಳಿಂದ ಹಾಗು ಮುಂಭಾಗ ಒಂದು ಮೃದ್ವಸ್ಥಿಯಿಂದ ರಚಿತವಾಗಿದೆ. ಕೋಣೆಯ ಪಕ್ಕದ ಗೋಡೆಗಳು ಏರುತಗ್ಗುಗಳಿಂದ ಕೂಡಿವೆ. ಈ ಏರುತಗ್ಗುಗಳು ಕೋಣೆಯ ವಿಸ್ತೀರ್ಣವನ್ನು ಹೆಚ್ಚಿಸುತ್ತವೆ. ಇವು ಗೋಡೆ ಪೊರೆಯಂತಿರುವ ಬುಗುರೆಲುಬುಗಳೆಂಬ ಮೂಳೆಗಳಿಂದ ರಚಿಸಲ್ಪಟಿವೆ. ಇವುಗಳಲ್ಲಿ ಅಧಿಕ ರಕ್ತನಾಳಗಳುಂಟು. ಇದರಿಂದ ಉಚ್ಛ್ವಾಸದ ವಾಯುವನ್ನು ಉಷ್ಣತೆಗೆ ತರಲು, ತೇವಾಂಶವನ್ನು ಹೆಚ್ಚಿಸಲು ಸಹಾಯವಾಗುತ್ತದೆ. ಮೊದಲು ತಿಳಿಸಿದಂತೆ ಚಿಕ್ಕ ಚಿಕ್ಕ ವಾಯುತುಂಬಿದ ಕೋಣೆಗಳ ಹೊರತೂತುಗಳನ್ನು ಇಲ್ಲಿ ಕಾಣಬಹುದು. ಬುಗುರೆಲುಬುಗಳು ಅತಿಸೂಕ್ಷ್ಮವಾಗಿವೆ. ತಲೆಬುರುಡೆಯ ತಳಭಾಗದ ಹೊರಮುಖದಲ್ಲಿ ಹಳ್ಳಗಳೂ ಅನೇಕ ರಂಧ್ರಗಳೂ ಇರುವುವು. ತಲೆಬರುಡೆಯ ಎಲ್ಲ ಮೂಳೆಗಳ ಒಳ ಮತ್ತು ಹೊರಭಾಗಗಳು ತೆಳುವಾದ ರಕ್ತನಾಳಗಳಿಂದ ಕೂಡಿದ ಹೊದಿಕೆಯಿಂದ ಆವೃತವಾಗಿವೆ. ಈ ಹೊದಿಕೆ ಮೂಳೆಗಳಿಗೆ ರಕ್ತ ಪೂರೈಕೆ ಹಾಗೂ ರಕ್ಷಣೆಯನ್ನು ಒದಗಿಸುತ್ತದೆ. ಮೂಳೆಯೂ ಒಂದು ಜೀವವಿರುವ ಅಂಗವಾದ್ದರಿಂದ ಇದರಲ್ಲೂ ರಕ್ತನಾಳಗಳಿರುವುದು ನಿರೀಕ್ಷಿತವೆ ಆಗಿದೆ. ಮನುಷ್ಯನ ಲಿಂಗಭೇದವನ್ನು ಅರಿಯಲು ಮತ್ತು ವಯಸ್ಸನ್ನು ನಿರ್ಧರಿಸಲು ತಲೆಬುರುಡೆ, ಕಂಕಾಲದಲ್ಲಿನ ಸೊಂಟದಮೂಳೆಯ ಹೊರತಾಗಿ ಒಂದು ಮುಖ್ಯಭಾಗವಾಗಿದೆ. ವಯಸ್ಸನ್ನು ಶೋಧಿಸಲು ಹಲ್ಲುಗಳೂ, ಕೆಳದವಡೆಯೂ ಹಾಗು ಮೂಳೆಗಳ ಜಂಟಿಗೆರೆಗಳೂ (ಸೂಚರ್ಸ್) ಸಹಾಯಕವಾಗುತ್ತವೆ. ಲಿಂಗಭೇದವನ್ನು ಅರಿಯಲು ತೂಕ, ಗಾತ್ರ ಹಳ್ಳತಿಟ್ಟುಗಳ ಶ್ರೇಣಿ ಮತ್ತು ಕೆಳದವಡೆಯ ವೈಶಿಷ್ಟ್ಯ– ಇವು ಸಹಾಯಕ. (ಆರ್. ವಿ.)

ಶಿಶುತಲೆಬುರುಡೆಯ ವೈಶಿಷ್ಟ್ಯಗಳು : ಆಗತಾನೆ ಜನಿಸಿದ ಶಿಶುವಿನ ತಲೆ ಬುರುಡೆಯಲ್ಲಿ ಮೇಲೆ ಹೇಳಿರುವ ಅನೇಕ ಲಕ್ಷಣಗಳು ಕಂಡುಬರುವುದಿಲ್ಲ. ಅಲ್ಲದೆ ಕೆಲವು ವ್ಯತ್ಯಾಸಗಳೂ ಉಂಟು. ಮಗುವಿನಲ್ಲಿ ಮಿದುಳು ಪೆಟ್ಟಿಗೆಯನ್ನು ರಚಿಸುವ ಎಂಟು ಮೂಳೆಗಳು ಪ್ರತ್ಯೇಕವಾಗಿರುವುವಲ್ಲದೆ ಅವುಗಳ ನಡುವೆ ತಕ್ಕಷ್ಟು ಅಂತರ ಇರುವುದು. ಇದರಿಂದ ತಲೆಬುರುಡೆಗೆ ಸ್ವಲ್ಪ ಮಟ್ಟಿಗೆ ಸ್ಥಿತಿಸ್ಥಾಪಕ ಸಾಮರ್ಥ್ಯ ದೊರಕಿದಂತಾಗಿದೆ. ಜನಿಸುವ ವೇಳೆ ತಾಯಿಯ ಜನನ ಮಾರ್ಗದಲ್ಲಿ ಮಗುವಿನ ತಲೆಬುರುಡೆ ಸುತ್ತಲೂ ಒತ್ತಲ್ಪಡುತ್ತದೆ. ಆಗ ಈ ಮೂಳೆಗಳ ಅಂತರ ಕಡಿಮೆ ಆಗುವುದಲ್ಲದೆ ಅವು ಒಂದರ ಮೇಲೊಂದು ಚಾಚಿಕೊಂಡು ಬುರುಡೆಯ ಗಾತ್ರ ಕಡಿಮೆ ಆಗುವುದು ಸಾಧ್ಯ. ತತ್ಫಲವಾಗಿ ಮಗುವಿನ ಜನನ ಸುಲಭ. ಮಗುವಿನ ಮುಖ ಮೂಳೆಗಳನ್ನು ಮಿದುಳು ಪೆಟ್ಟಿಗೆಯ ಮೂಳೆಗಳಿಗೆ ಹೋಲಿಸಿದರೆ ಅವುಗಳ ಅಳತೆ ಸಣ್ಣ. ಹಲ್ಲುಮೊಳಕೆಗಳು ಮಾತ್ರ ಇರುವುದರಿಂದ ಮೇಲ್ದವಡೆಯಂತು ಬಲು ಸಣ್ಣದಾಗಿರುವುದು. ಅಲ್ಲದೆ ಅದರೊಳಗೆ ವಾಯು ತುಂಬಬಲ್ಲ ಕೋಣೆ ಇನ್ನೂ ಉಂಟಾಗಿರುವುದಿಲ್ಲ. ಹುಟ್ಟಿದ ಮಗುವಿನ ಕೆಳದವಡೆಯ ಕೊನೆಯಲ್ಲಿ ಮೇಲ್ಚಾಚಿಕೊಂಡಿರುವ ಭಾಗ ಲೋಪವಾಗಿರುತ್ತದೆ. ಕಿವಿಯ ಹಿಂದಿರುವ ಕುಶಾಗ್ರ ಮೂಳೆ ಚಾಚೂ ಅಷ್ಟೆ. ಕಪಾಲಮೂಳೆಯಲ್ಲಿ ಮೂಳೆಯಿಂದಲೆ ಸೃಷ್ಟಿಯಾದ ಹೊರಕಿವಿನಾಳ ಇರುವುದಿಲ್ಲ. ಬದಲು ಒಂದು ಕಂಡಿ ಮಾತ್ರ ಇರುತ್ತದೆ. ಇದರ ಅಂಚಿನಿಂದ ಮುಂದೆ ಮಗು ಬೆಳೆದಂತೆ ಎಲುಬು ಕಿವಿನಾಳ ಬೆಳೆಯುತ್ತದೆ. ಮಗುವಿನ ಬುರುಡೆಯಲ್ಲಿ ನೆತ್ತಿಬಾಯಿ ಅಥವಾ ನೆತ್ತಿಸುಳಿ ಇರುವುದನ್ನು ಮೇಲೆ ಹೇಳಿದೆ.

ತಲೆಬುರುಡೆಯ ವಿಕಾಸ: ಪ್ರಾಣಿಗಳ ವಿಕಾಸದಲ್ಲಿ ತಲೆಬುರುಡೆ ತೋರುವ ಬದಲಾವಣೆಗಳು ಸಾಮಾನ್ಯವಾಗಿ ತಾಯಿಯ ಗರ್ಭಕೋಶದಲ್ಲಿ ಬೆಳೆಯುತ್ತಿರುವ ಭ್ರೂಣದಲ್ಲಿಯು ಕಾಣಬರುವುದುಂಟು. ತಲೆಬುರುಡೆಯ ವಿಕಾಸದಲ್ಲಿ ಮುಖ್ಯವಾದ ಘಟ್ಟಗಳು ಇವು : ತಲೆಬುರುಡೆ ಆಗುವ ಭಾಗ ಮೊದಲು ಮಿದುಳನ್ನು ಹೊದ್ದುಕೊಂಡಿರುವ ಕವಚ ಮಾತ್ರ. ಈ ಕವಚದಲ್ಲಿ ಮೂಗಿಗಾಗಿ ಎರಡು ಗುಳಿಗಳು, ಕಣ್ಣಿಗಾಗಿ ಎರಡು, ಕಿವಿಗಾಗಿ ಎರಡು ಗುಳಿಗಳು ಇರುತ್ತವೆ. ಇವು ವಾಸ್ತವವಾಗಿ ಕಿವಿಯಲ್ಲಿನ ಸಮತೋಲನ ಕ್ರಿಯಾಭಾಗಕ್ಕಾಗಿ ಮೀಸಲಾದವು. ಶೀಘ್ರದಲ್ಲಿ ಕಿವಿಗುಳಿಗಳಲ್ಲಿ ಪೂರ್ತಿಯಾಗಿ, ಕಣ್ಣು ಮೂಗು ಗುಳಿಗಳಲ್ಲಿ ಭಾಗಶಃವಾಗಿ ಮೃದ್ವಸ್ಥಿ ಕಂಡುಬರುತ್ತದೆ. ಭ್ರೂಣದ ತಲೆಯ ಮುಂಭಾಗದಲ್ಲಿ ದಬ್ಬೆಯಾಕಾರದ ಬಲವರ್ಧಕಗಳು ಹಿಂಭಾಗದಲ್ಲಿ ಇದೇ ರೀತಿ ಬಲವರ್ಧಕ ಮೃದ್ವಸ್ಥಿಯೂ ವಿಕಸಿಸುತ್ತವೆ. ಅನಂತರ ಮುಂದು ಹಿಂದಿನ ಮೃದ್ವಸ್ಥಿಗಳು ಸೇರಿ ಮಿದುಳಿನ ಬುಡವನ್ನು ಹೊರುವ ಬುರುಡೆಯ ಭಾಗವಾಗುತ್ತದೆ. ಕಣ್ಣು, ಕಿವಿ, ಮೂಗುಗಳ ಮೃದ್ವಸ್ಥಿಗಳು ಇದರೊಡನೆ ಸೇರಿಕೊಳ್ಳುವುದು ಅನಂತರ ಮೃದ್ವಸ್ಥಿ ಮಿದುಳಿನ ಮೇಲು ಭಾಗಕ್ಕೆ ಹರಡಿ ಪೂರ್ಣವಾಗಿ ಮಿದುಳನ್ನು ಮೃದ್ವಸ್ಥಿಕವಚ ಮುಚ್ಚುವಂತಾಗುವುದು ಮುಂದಿನ ಘಟ್ಟ. ಇದು ವಿಕಾಸ ಕ್ರಮದಲ್ಲಿ ಅಲ್ಲದೆ ಮಾನವನೂ ಸೇರಿದಂತೆ ಎಲ್ಲ ಕಶೇರುಕಗಳ ಭ್ರೂಣಗಳ ಬೆಳೆವಣಿಗೆಯಲ್ಲಿ ಕಂಡುಬರುತ್ತದೆ. ನಾಯಿಮೀನಿನ ವರ್ಗಕ್ಕೆ ಸೇರಿದ ಪ್ರಾಣಿಗಳ ತಲೆಬುರುಡೆ ಜನನವಾದ ಮೇಲೆ ಬೆಳೆದ ಸ್ಥಿತಿಯಲ್ಲೂ ಪೂರ್ಣವಾಗಿ ಮೃದ್ವಸ್ಥಿಯಿಂದಲೆ ಆದದ್ದು.

ಮುಂದಿನ ವಿಕಾಸದಲ್ಲಿ ಎಲುಬಿನ ತುಕ್ಕಡಿಗಳು ಅಲ್ಲಲ್ಲಿ ಕಂಡುಬಂದು ಬುರುಡೆ ಹೆಚ್ಚು ದೃಢವಾಗುತ್ತದೆ. ಗ್ಯಾನಾಯ್ಡ್‌ಗಳೆಂಬ ಮೀನುವರ್ಗದಲ್ಲಿ ಹೀಗೆ, ಎಲುಬಿನ ತುಕ್ಕಡಗಳು ಬುರುಡೆಯಲ್ಲೆ ಅಲ್ಲದೆ ದೇಹದ ಇತರ ಭಾಗಗಳಲ್ಲೂ ಅಸ್ತಿತ್ವಗೊಳ್ಳುತ್ತವೆ. ಇವನ್ನು ಚರ್ಮ ಸಂಬಂಧಿಕ ಎಲುಬುಗಳೆಂದು (ಡರ್ಮಲ್ ಬೋನ್ಸ್) ಕರೆಯಲಾಗಿದೆ. ಕಾರಣ ಇವು ಚರ್ಮಕ್ಕೆ ಸಂಬಂಧಿಸಿದ ಮತ್ತು ಇತರ ಬಂಧನಾಂಗಾಂಶಗಳಲ್ಲಿ ಬೆಳೆದು ಬಂದಂಥವು. ಪ್ರಪಂಚದಲ್ಲಿ ವ್ಯಾಪಕವಾಗಿ ಕಂಡುಬರುವ ಎಲುಬು ಮೀನುವರ್ಗದಲ್ಲಿ ತಲೆಬುರುಡೆ ಇಂಥ ಮೂಳೆಗಳಿಂದಾದದ್ದು. ವಿಕಾಸದಲ್ಲಿ ಮೀನುಗಳಿಗಿಂತ ಉಚ್ಚ ವರ್ಗಗಳಲ್ಲಿ ತಲೆಯ ಮೇಲು ಭಾಗದಲ್ಲಿನ ಮೂಳೆ ಚರ್ಮಕ್ಕೆ ಸಂಬಂಧಿಸಿದ ಬಂಧನಾಂಗಾಂಶದಿಂದ ಮಾತ್ರವೆ ಉದ್ಭವಿಸಿದೆ. ಮೂಳೆಯಿಂದಾದ ಹೊರತಲೆಬುರುಡೆಯ ಒಳಗೆ ಮೃದ್ವಸ್ಥಿಯಿಂದಾದ ಪ್ರಾಚೀನ ಬುರುಡೆ ಇದ್ದಂತಿರುವ ಸ್ಥಿತಿ ಇದು. ಕ್ರಮೇಣ ಮಿದುಳಿನ ಅಡಿಯಲ್ಲಿ ಹಾಗೂ ಕಣ್ಣು, ಕಿವಿ, ಮೂಗುಗಳೆಡೆಯಲ್ಲಿ ಈ ಮೃದ್ವಸ್ಥಿ ಬುರುಡೆ ಎಲುಬಾಗಿ ಪರಿವರ್ತಿತವಾಗುತ್ತದೆ. ಈ ಮೂಳೆ ಭಾಗಗಳೊಡನೆ ಚರ್ಮ ಸಂಬಂಧಿಕ ಮೂಳೆಗಳು ಕಶೇರುಕಗಳ ವಿವಿಧ ವರ್ಗಗಳಲ್ಲಿ ವಿವಿಧ ಪ್ರಮಾಣದಲ್ಲಿ ಜಂಟಿಯಾಗಿ ಆ ವರ್ಗದ ವೈಶಿಷ್ಟ್ಯ ಪೂರಿತ ಬುರುಡೆಯ ನಿರ್ಮಾಣವಾಗುತ್ತದೆ.

ಕೆಳದವಡೆ ಹಾಗೂ ಹಯಾಯ್ಡ್ ಮೂಳೆ ವಾಸ್ತವಾಗಿ ಗಂಟಲಿಗೆ ಸಂಬಂಧಿಸಿದಂತೆ ವಿಕಸಿಸಿರುವುವು. ಕೆಳದರ್ಜೆ ಮೀನುಗಳಲ್ಲಿ ಗಂಟಲು ಪ್ರದೇಶದ ಮೃದ್ವಸ್ಥಿ ದಬ್ಬೆಗಳು ಕಿವಿರುಗಳಿಗೆ (ಗಿಲ್ಸ್) ಆಶ್ರಯ ಕೊಡುವವು. ಈ ಮೀನುಗಳ ಮೇಲ್ದವಡೆ ಪೆಲೇಟೋ ಕ್ವಾಡ್ರೇಟ್ ದಬ್ಬೆ . ಇದೂ ಮೃದ್ವಸ್ಥಿಯೇ, ಕೆಳದವಡೆ ಮೆಕ್ಕೆಲನ ಮೃದ್ವಸ್ಥಿ. ದವಡೆಗಳ ಹಿಂದಿನ ತುದಿಗಳು – ಕ್ವಾಡ್ರೇಟ್ ಮತ್ತು ಕೀಲಿನ ಮೃದ್ವಸ್ಥಿ (ಆರ್ಟಿಕ್ಯುಲರ್ ಕಾರ್ಟಿಲೇಜ್) ಸಂಪರ್ಕಿಸಿ ದವಡೆ ಕೀಲಾಗಿದೆ. ವಿಕಾಸಕ್ರಮದಲ್ಲಿ ಚರ್ಮಸಂಬಂಧಿಕ ಎಲುಬುಗಳು ಇವುಗಳ ನೆರೆಯಲ್ಲಿ ಕಂಡು ಬಂದಾಗ ಪ್ರಾರಂಭದಲ್ಲಿ ದವಡೆಯ ಕೀಲು ಹೀಗೆಯೇ ಇದ್ದರೂ ವಿಕಾಸ ಮುಂದುವರಿದಂತೆ ಈ ಕೀಲಿನ ನಿರ್ಮಾತೃಗಳಾದ ಕ್ವಾಡ್ರೇಟ್ ಹಾಗೂ ಕೀಲಿನ ಮೃದ್ವಸ್ಥಿಗಳು ಅನುಕ್ರವಾಗಿ ನಡುಕಿವಿಯ ಇನ್‌ಕಸ್ ಮತ್ತು ಮ್ಯಾಲಿಯಸ್ ಎಂಬ ಸಣ್ಣ ಮೂಳೆಗಳಾಗಿ ಮಾರ್ಪಡುತ್ತವೆ. ಬಲ ದವಡೆಯ ಕೀಲು ಚರ್ಮ ಸಂಬಂಧಿಕ ಮೂಳೆಯಿಂದಾದ ಕೆಳದವಡೆ ಹಾಗೂ ತಲೆಬುರುಡೆಯ ಕಪಾಲಮೂಳೆ ಇವುಗಳ ನಡುವೆ ಏರ್ಪಡುತ್ತದೆ. ಮೀನುಗಳ ಎರಡನೆಯ ಹಾಗೂ ಮೂರನೆಯ ಕಿವಿರು ಆಶ್ರಯ ದಬ್ಬೆಗಳು ವಿಕಾಸಕ್ರಮದಲ್ಲಿ ಬದಲಾಯಿಸಿ ಮೇಲ್ದರ್ಜೆ ಪ್ರಾಣಿಗಳ ಹಯಾಯ್ಡ್ ಮೂಳೆ, ಸ್ಟೈಲಾಯ್ಡ್‌ವಾಲ (ಪ್ರಾಸೆಸ್) ಮತ್ತು ಇವೆರಡರ ನಡುವೆ ಇರುವ ತಂತುಗಟ್ಟಾಗಿ ಮಾರ್ಪಡುತ್ತವೆ. ನಡುಕಿವಿಯ ಮೂರನೆಯ ಮೂಳೆ ಸ್ಟೇಪೀಸ್ ಕೂಡ ಬಹುಶಃ ಎರಡನೆಯ ಕಿವಿರು ಆಶ್ರಯದಬ್ಬೆಯಿಂದಲೆ ಆಗಿದೆ. ಮಿಕ್ಕ ಕಿವಿರು ಆಶ್ರಯದಬ್ಬೆಗಳು ಧ್ವನಿಪೆಟ್ಟಿಗೆಯ ನಿರ್ಮಾಣದಲ್ಲಿ ಅದರ ಮೃದ್ವಸ್ಥಿಕಟ್ಟಾಗಿ ವಿಕಸಿಸುತ್ತವೆ. ಒಟ್ಟಿನಲ್ಲಿ ಮಾನವ ತಲೆಬುರುಡೆ ಹೀಗೆ ವಿಕಾಸವಾದಂತಿದೆ : ಬುರುಡೆಯ ತಳಭಾಗ ಬಹಳ ಹಳತು; ಅಂತೆಯೇ ಕಿವಿ, ಮೂಗು ಕಣ್ಣುಗಳಿಗೆ ಸಂಬಂಧಿಸಿದ ಮೂಳೆಗಳು. ಇವಕ್ಕೆ ಹೋಲಿಸಿದರೆ ಕೆಳದವಡೆ, ಮುಖಮೂಳೆಗಳು ಹಾಗೂ ತಲೆಗುಮ್ಮಟ ಇವು ಈಚಿನವು ಹಾಗೂ ದರ್ಮ ಸಂಬಂಧಿಕ ಮೂಳೆಯಿಂದಾದವು.

ಮಾನವ ಶಾಸ್ತ್ರದಲ್ಲಿ (ಆಂಥ್ರೊಪಾಲಜಿ) ತಲೆಬುರುಡೆಯ ಪ್ರಾಮುಖ್ಯ : ಮಾನವ ತಲೆಬುರುಡೆಯ ವೈಶಿಷ್ಟ್ಯಗಳು ಹಲವಾರು. ಇವುಗಳಿಂದ ಮಾನವನನ್ನು ವಾನರಗಳಿಂದಲೂ ಆದಿಮಾನವರಿಂದಲೂ ವಿಂಗಡಿಸಬಹುದಲ್ಲದೆ ಪ್ರಸಕ್ತಕಾಲೀನ ಮಾನವರನ್ನೂ ವರ್ಗೀಕರಿಸಬಹುದಾಗಿದೆ. ಮಾನವನ ಮಿದುಳು ಪೆಟ್ಟಿಗೆಯ ಘನ ಅಳತೆ 1,351–1,450 ಮಿಲೀ ಗಳಷ್ಟು. ಇದಕ್ಕಿಂತ ಸ್ವಲ್ಪ ದಪ್ಪ ಅಥವಾ ಸಣ್ಣಗಿರುವ ಮಾನವ ತಲೆಬುರುಡೆಗಳು ಅಸಹಜಸ್ಥಿಯವಾಗಿದ್ದು ಅಂಥ ಮಾನವ ವ್ಯಕ್ತಿಗಳು ಸಾಮಾನ್ಯವಾಗಿ ಹುಟ್ಟುದಡ್ಡರಾಗಿರುತ್ತಾರೆ. ಆದಿಮಾನವರ ಮಿದುಳುಪೆಟ್ಟಿಗೆ ಸುಮಾರು 900 – 1,000 ಮಿಲೀ ಗಳಷ್ಟೂ ಗೊರಿಲ್ಲದ್ದು ಸುಮಾರು 350 ಮಿಲೀ ಗಳಷ್ಟೂ ಇರುತ್ತವೆ. ಆದಿಮಾನವರ ಮಿದುಳುಪೆಟ್ಟಿಗೆಯಲ್ಲಿ ಇರಬಹುದಾದ ಮಿದುಳಿನ ಗಾತ್ರ ಅವರ ವಿಕಾಸಕ್ಕೆ ತಕ್ಕಷ್ಟು ಅಧಿಕವಾಗಿರಲಾರದೆ ಅವರು ಅಳಿದುಹೋದರೆಂದು ಅಭಿಪ್ರಾಯವಿದೆ. ಆದರೆ ಸುಮಾರು 1,500–1,600 ಮಿಲೀ ಘನ ಅಳತೆಯುಳ್ಳ ತಲೆಬುರುಡೆಯನ್ನು ಹೊಂದಿದ ಮಾನವಕುಲ ಆಫ್ರಿಕದಲ್ಲಿತ್ತೆಂದೂ ಅಷ್ಟು ದೊಡ್ಡ ಮಿದುಳಿದ್ದರೂ ಆ ಕುಲ ಪರಿಸರದ ತೊಡರುಗಳನ್ನು ಎದುರಿಸಿ ಬಾಳಲಾರದೆ ಅಳಿದುಹೋಯಿತೆಂದೂ ತಿಳಿದಿದೆ. ಮಾನವನ ತಲೆಬುರುಡೆಯಲ್ಲಿ ಹಣೆಮೂಳೆ ನುಣ್ಣಗೂ ಲಂಬಗತಿಯಲ್ಲೂ ಇದೆ. ವಾನರ, ಆದಿಮಾನವರಲ್ಲಿ ಹಣೆ ಓರೆಯಾಗಿರುವುದು. ಮೇಲ್ದವಡೆಯಲ್ಲಿ ಕೋರೆಹಲ್ಲಿರುವ ಸ್ಥಳಕ್ಕಿಂತ ಮೇಲೆ ಹಳ್ಳವಾಗಿರುವುದು ಮಾನವ ವೈಶಿಷ್ಟ್ಯ. ವಾನರ, ಆದಿಮಾನವರಲ್ಲಿ ಹಳ್ಳವಿರುವುದಿಲ್ಲ. ಬದಲು ಆ ಭಾಗ ದಿಬ್ಬಾಗಿಯೇ ಇರಬಹುದು. ಮಿದುಳುಬಳ್ಳಿ ಮಿದುಳನ್ನು ಸೇರಿಕೊಳ್ಳಲು ತೂರುವ ರಂಧ್ರ ಮಾನವರಲ್ಲಿ ನೆಲಮಟ್ಟಕ್ಕೆ ಸಮವಾಗಿದೆ. ಗೊರಿಲ್ಲದಲ್ಲಿ ಸ್ವಲ್ಪ ಓರೆಯಾಗಿದೆ. ಚತುಷ್ಪಾದಿಗಳಲ್ಲಿ ಇದು ಲಂಬವಾಗಿಯೆ ಇರುವುದು. ಮಾನವನ ಕೆಳದವಡೆ ವೈಶಿಷ್ಟ್ಯಪೂರಿತವಾಗಿದೆ. ಹಿಂದಿನ ತುದಿ ಮೇಲಕ್ಕೆ ಚಾಚಿಕೊಂಡಿರುವುದು. ಆ ಚಾಚಿನಲ್ಲಿ ದವಡೆ ಕೀಲು ಏರ್ಪಡಲು ಒಂದು ಗಂಟು (ಕಾನ್‌ಡೈಲ್) ಇರುವುದು. ಗಲ್ಲ ಮುಂದಿನ ಉಬ್ಬಾಗಿ ಕಾಣಿಸುವುದು. ಇವು ವಾನರಗಳ ಕೆಳದವಡೆಯಲ್ಲಿ ಕಾಣಬರುವುದಿಲ್ಲ. ವಾನರಗಳ ಕೆಳದವಡೆಯ ಗಲ್ಲದ ಹಿಂಬದಿಯಲ್ಲಿ ಒಂದು ಉಬ್ಬು ಉಂಟು. ಇದು ಮಾನವರಲ್ಲಿ ಇರುವುದಿಲ್ಲ. ಬಹುಶಃ ಆದಿಮಾನವರಲ್ಲಿ ಇದು ಇರಲಿಲ್ಲವೆಂದು ತೋರುತ್ತದೆ.

ತಲೆಬುರುಡೆಯ ಅತಿ ಹೆಚ್ಚಿನ ಉದ್ದದ ಮತ್ತು ಅಗಲದ ಅಳತೆಯ ಪ್ರಮಾಣ ವಿವಿಧ ಮಾನವಜನಾಂಗಗಳನ್ನು ಅರಿಯಲು ಸಹಾಯಕವಾಗಿವೆ. ಹುಬ್ಬುಗಳ ನಡುಮಧ್ಯಸ್ಥಳಕ್ಕೂ (ಗ್ಲಬೆಲ್ಲ) ತಲೆಬುರುಡೆಯ ಅತ್ಯಂತ ಹಿಂಬದಿ ಭಾಗಕ್ಕೂ ಇರುವ ಅಂತರ ತಲೆಯ ಉದ್ದ, ಕಿವಿರಂಧ್ರಕ್ಕೆ ಸ್ವಲ್ಪ ಮೇಲೆ ಹಾಗೂ ಸ್ವಲ್ಪ ಹಿಂದೆ ಇರುವ ಸ್ಥಳಗಳ ನಡುವೆ ಇರುವ ಅಂತರವೆ ಸಾಮಾನ್ಯವಾಗಿ ತಲೆಬುರುಡೆಯ ಗರಿಷ್ಠ ಅಗಲ. ಈ ಉದ್ದ ಅಗಲಗಳನ್ನು ಸೂಕ್ತ ವ್ಯಾಸಮಾಪಕದಿಂದ (ಕ್ಯಾಲಿಪರ್ಸ್) ಅಳೆಯಲಾಗುತ್ತದೆ. ಅಗಲ ಉದ್ದಗಳ ನಡುವಿರುವ ನಿಷ್ಪತ್ತಿಯನ್ನು (ರೇಷಿಯೋ) 100 ರಿಂದ ಗುಣಿಸಿದರೆ ಲಬ್ಧವಾಗುವ ಸಂಖ್ಯೆಗೆ ತಲೆಯ ಸೂಚ್ಯಂಕ (ಸಿಫ್ಯಾಲಿಕ್ ಇನ್‌ಡೆಕ್ಸ್) ಎಂದು ಹೆಸರು. ಈ ಅಂಕ 75ಕ್ಕಿಂತ ಕಡಿಮೆ ಇದ್ದರೆ ಅದಕ್ಕೆ ನಿಡುದಲೆ (ಡಾಲಿಕೊ ಸಿಫ್ಯಾಲಿಕ್ ಹೆಡ್) ಎಂದು ಹೆಸರು. ಮೇಲಿನಿಂದ ನೋಡಿದರೆ ಇಂಥ ತಲೆ ಸೌತೆಕಾಯಿಯಂತೆ ಉದ್ದುದ್ದವಾಗಿರುತ್ತದೆ. ಇದು ಆಸ್ಟ್ರೇಲಿಯದ ದೇಶೀಯ ಜನಾಂಗದ ತಲೆಯ ವೈಶಿಷ್ಟ್ಯ. ತಲೆಯ ಸೂಚ್ಯಂಕ 80ಕ್ಕೆ ಮೇಲ್ಪಟ್ಟು ಇದ್ದರೆ ತಲೆ ಗಿಡ್ಡಾಗಿಯೂ ದಪ್ಪವಾಗಿಯೂ ಇದೆ ಎಂದು ಅರ್ಥ. ಇದಕ್ಕೆ ಮೋಟುತಲೆ (ಬ್ರ್ಯಾಕಿ ಸಿಫ್ಯಾಲಿಕ್ ಹೆಡ್) ಎಂದು ಹೆಸರು. ಇದು ಮಂಗೋಲಿಯನ್ನರಲ್ಲು ಅಂಡಮಾನಿನ ದೇಶೀಯ ನಿವಾಸಿಗಳಲ್ಲು ಕಂಡುಬರುವಂಥ ತಲೆ. ತಲೆಸೂಚ್ಯಂಕ 75 ರಿಂದ 80ರ ಒಳಗೆ ಇದ್ದರೆ ಇಂಥ ತಲೆಗೆ ಅಂಡಾಕಾರದ ತಲೆ (ಮಿಸ್ಸಾಟಿ ಸಿಫ್ಯಾಲಿಕ್ ಹೆಡ್) ಎಂದು ಹೆಸರು. ಯೂರೋಪ್ ಹಾಗೂ ಚೀನಾದೇಶದ ಜನಾಂಗ ಸಾಮಾನ್ಯವಾಗಿ ಅಂಡಾಕಾರದ ತಲೆಯವರು. ***

**ತಹರ್:** ಕಾಡು ಮೇಕೆ, ಕಾಡು ಆಡಿನ ಜಾತಿಗೆ ಸೇರಿದ ಪ್ರಾಣಿ. ಆರ್ಟಿಯೊಡ್ಯಾಕ್ಟೈಲ ಗಣದ ಬೋವಿಡೆ ಕುಟುಂಬಕ್ಕೆ ಸೇರಿದೆ. ಹಿಂಡುಹಿಂಡಾಗಿ ಮರಗಿಡಗಳಿರುವ ಪರ್ವತಶ್ರೇಣಿಗಳಲ್ಲಿ ಅಥವಾ ಮರುಭೂಮಿಗಳಲ್ಲಿ ವಾಸಿಸುತ್ತವೆ. ಸುಮಾರು 90 ರಿಂದ 100 ಕಿಗ್ರಾಂ ತೂಕ, 1–1.5 ಮೀ ಉದ್ದ ಹಾಗೂ 0.5 – 0.7 ಮೀ ಗಳಷ್ಟು ಎತ್ತರಕ್ಕೆ ಬೆಳೆಯುತ್ತವೆ. ಗಂಡು ಮತ್ತು ಹೆಣ್ಣುಗಳೆರಡರಲ್ಲೂ ಕೊಂಬುಗಳಿವೆ. ಗಂಡುಗಳಲ್ಲಿ ಕೊಂಬು ಸುಮಾರು 45 ಸೆಂಮೀ ಗಳಷ್ಟು ಉದ್ದಕ್ಕೆ ಬೆಳೆಯಬಲ್ಲದು. ಆದರೆ ಹೆಣ್ಣು ಪ್ರಾಣಿಗಳಲ್ಲಿ ಕೊಂಬುಗಳು ಚಿಕ್ಕದಾಗಿರುತ್ತವೆ. ಕಣ್ಣುಗಳು ದೊಡ್ಡದಾಗಿದ್ದು ಸಣ್ಣ ಮತ್ತು ಚೂಪಾದ ಕಿವಿಗಳನ್ನು ಹೊಂದಿವೆ. ಬಾಲದಲ್ಲಿ ಕಂಪು ಸೂಸುವ ಗ್ರಂಥಿಗಳಿವೆ. ಸಾಮಾನ್ಯವಾಗಿ ಗಂಡು ಪ್ರಾಣಿಗಳು ವಂಶಾಭಿವೃದ್ಧಿಯ ಸಂದರ್ಭವನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ತಮ್ಮ ಮರಿಗಳ ಜೊತೆ ಹೆಣ್ಣು ಪ್ರಾಣಿಗಳಿಂದ ಬೇರೆಯಾಗಿ ವಾಸಿಸುತ್ತವೆ. ಪ್ರಾತಃಕಾಲ ಮತ್ತು ಮುಸ್ಸಂಜೆ ಹೊತ್ತಿನಲ್ಲಿ ಮೇಯುತ್ತವೆ. ದಿನದ ಬಾಕಿ ಸಮಯದಲ್ಲಿ ಕಾಡಿನಲ್ಲಿ ಅವಿತಿಟ್ಟುಕೊಂಡು ವಿಶ್ರಾಂತಿ ಪಡೆಯುತ್ತಾ ಮೆಲುಕು ಹಾಕುತ್ತವೆ. ಚಳಿಗಾಲದಲ್ಲಿ ಮೈಯಲ್ಲಿ ಕೆಂಪು ಮಿಶ್ರಿತ ಕಂದು ಬಣ್ಣದ ಉಣ್ಣೆಯು ದಟ್ಟವಾಗಿ ಬೆಳೆಯುತ್ತದೆ. ಆದರೆ ವಸಂತ ಕಾಲದಲ್ಲಿ ಇವುಗಳ ಮೈಮೇಲಿನ ಉಣ್ಣೆಯ ಬಣ್ಣ ಮತ್ತು ಸಾಂದ್ರತೆ ಕಡಿಮೆಯಾಗುತ್ತವೆ. ವಯಸ್ಸಾದ ಗಂಡು ಕಾಡು ಮೇಕೆಗಳಲ್ಲಿ ಕತ್ತು ಮತ್ತು ಭುಜದ ಭಾಗದಲ್ಲಿ ಒರಟಾದ ಕೂದಲಿನ ಉದ್ದವಾದ ಕೇಸರವು ಬೆಳೆಯುತ್ತದೆ. ಹೆಣ್ಣು ಕಾಡು ಮೇಕೆಗಳಲ್ಲಿ ಗರ್ಭಧಾರಣೆಯ ಅವಧಿಯು 6–8 ತಿಂಗಳಿನದಾಗಿದ್ದು ಸಾಮಾನ್ಯವಾಗಿ ಒಂದೇ ಮರಿ ಹಾಕುತ್ತವೆ. ತಾಯಿ ಮೇಕೆಯು ಮರಿಗೆ ಸುಮಾರು ಆರು ತಿಂಗಳವರೆಗೆ ಮೊಲೆಯುಣಿಸುತ್ತದೆ. ಮರಿಗಳು ಲೈಂಗಿಕ ಪ್ರಬುದ್ಧತೆಯನ್ನು ಸುಮಾರು ಹದಿನೆಂಟು ತಿಂಗಳುಗಳಲ್ಲಿ ಪಡೆಯುತ್ತವೆ.

ನೀಲಗಿರಿ ತಹರ್

ಹಿಮಾಲಯದ ತಹರ್

ಕಾಡು ಮೇಕೆಗಳಲ್ಲಿ ಮೂರು ಪ್ರಭೇದಗಳಿವೆ: 1) ಹಿಮಾಲಯ ಕಾಡುಮೇಕೆ (ಹೆಮಿಟ್ರಾಗಸ್ ಜೆಮ್‌ಲಾಹಿಕಸ್), 2) ಅರೇಬಿಯಾ ಕಾಡುಮೇಕೆ (ಹೆ. ಜೇಕರಿ), 3) ನೀಲಗಿರಿ ಕಾಡುಮೇಕೆ (ಹೆ. ಹೈಲೊಕ್ರಿಯಸ್). ಅರೇಬಿಯನ್ ಮತ್ತು ನೀಲಗಿರಿ ಕಾಡುಮೇಕೆಗಳ ವಾಸಸ್ಥಾನದ ನಾಶ ಮತ್ತು ಬೇಟೆಯಾಡುವುದರಿಂದ ಅವುಗಳ ಸಂತತಿಯು ವಿನಾಶದ ಅಂಚಿನಲ್ಲಿದೆ. ಆದ ಕಾರಣ ಇವುಗಳನ್ನು ಅಪಾಯಕ್ಕೊಳಪಟ್ಟ ಜೀವಿಗಳಿಗೆ ಸಂಬಂಧಪಟ್ಟ ಕೆಂಪು ಅಂಕಿ ಅಂಶಗಳ ಪುಸ್ತಕದಲ್ಲಿ ವಿರಳ ಎಂದು ಉಲ್ಲೇಖಿಸಲ್ಪಟ್ಟಿದೆ. ನೀಲಗಿರಿ ಕಾಡುಮೇಕೆ ದಕ್ಷಿಣ ಭಾರತದಲ್ಲಿ ಕಂಡುಬರುತ್ತದೆ. ಇವು ಕಂದು ಬಣ್ಣದ ಜೊತೆಗೆ ಬಿಳಿಕಪ್ಪು ಮಿಶ್ರಿತ ಉಣ್ಣೆಯನ್ನು ಹೊಂದಿವೆ.

ಅರೇಬಿಯಾದ ಕಾಡುಮೇಕೆ ಈ ಮೂರು ಜಾತಿಯ ಮೇಕೆಗಳಲ್ಲಿ ಅತೀ ಚಿಕ್ಕದು. ಇದು ಬೂದು ಕಂದು ಬಣ್ಣದ ರೋಮಗಳು ಮತ್ತು ಬೆನ್ನಮೇಲೆ ಕಪ್ಪುಪಟ್ಟಿಗಳನ್ನು ಹೊಂದಿರುತ್ತದೆ. ಕೊಂಬು ಗಿಡ್ಡ ಮತ್ತು ದಪ್ಪವಾಗಿರುತ್ತವೆ. ವಯಸ್ಸಾದ ಗಂಡು ಅರೇಬಿಯನ್ ಕಾಡುಮೇಕೆಗಳಲ್ಲಿ ಗಡ್ಡವು ಬೆಳೆಯುತ್ತದೆ. ಆದರೆ ಎಳಸು ಗಂಡು ಪ್ರಾಣಿಗಳಲ್ಲಿ ಗಡ್ಡವಿರುವುದಿಲ್ಲ. ಮರಿಗಳು ಜನ್ಮ ತಾಳುವಾಗ ಸಾಮಾನ್ಯವಾಗಿ ಬೂದುಬಣ್ಣದ ತುಪ್ಪಳ ಹೊಂದಿರುತ್ತವೆ. ಆದರೆ ಇವುಗಳಿಗೆ ಕೊಂಬುಗಳು ಬೆಳೆಯಲು ಪ್ರಾರಂಭಿಸುವಾಗ ಬೂದು ಕಂದು ಬಣ್ಣ ಮಿಶ್ರಿತವಾದ ರೋಮಗಳು ಬೆಳೆಯುತ್ತವೆ. ಚುರುಕಾದ ಪರ್ವತಾರೋಹಿಗಳಾಗಿದ್ದು ಪ್ರತಿದಿನವೂ ನೀರು ಕುಡಿಯಲು ಬಯಸುತ್ತವೆ. ಬೆಟ್ಟಗಳಲ್ಲಿರುವ ಕಡಿದಾದ ಕಲ್ಲು ಬಂಡೆಗಳ ಅಡಿಯಲ್ಲಿ ಆಶ್ರಯ ಪಡೆಯುತ್ತವೆ. ಕಲ್ಲು ಬಂಡೆಗಳ ಮೇಲೆ ವಿರಳವಾಗಿ ಬೆಳೆಯುವ ಹುಲ್ಲು, ಗಿಡ ಮತ್ತು ಪೊದೆಗಳ ಎಲೆಗಳನ್ನು ತಿಂದು ಜೀವಿಸುತ್ತವೆ. ಹಿಮಾಲಯ ಕಾಡು ಮೇಕೆಯು ಭಾರತದಲ್ಲಿ ಕಾಶ್ಮೀರದಿಂದ ಸಿಕ್ಕಿಂನವರೆಗೆ ಹಾಗೂ ನ್ಯೂಜಿಲೆಂಡ್‌ನಲ್ಲಿ ಕಂಡುಬರುತ್ತವೆ. ಇವುಗಳ ರೋಮವು ಕೆಂಪು ಮಿಶ್ರಿತ ಕಂದು ಬಣ್ಣ ಅಥವಾ ಕಡು ಕಂದು ಬಣ್ಣದ್ದಾಗಿರುತ್ತದೆ. ಶರೀರದ ಗಾತ್ರಕ್ಕೆ ಹೋಲಿಸಿದಾಗ ಗಿಡ್ಡವಾದ ಕಾಲುಗಳು, ಚಿಕ್ಕದಾದ ತಲೆ, ದೊಡ್ಡದಾದ ಕಣ್ಣುಗಳು ಮತ್ತು ಸಣ್ಣ, ಚೂಪನೆಯ ಕಿವಿಗಳನ್ನು ಹೊಂದಿವೆ. ಇವುಗಳು ಸುಮಾರು ಹತ್ತು ವರ್ಷ ಜೀವಿಸುತ್ತವೆ. ನ್ಯೂಜಿಲೆಂಡಿನಲ್ಲಿ ಇವುಗಳ ಬೇಟೆಯಾಡುವುದು ಒಂದು ವಿನೋದದ ಹವ್ಯಾಸವಾಗಿದೆ. (ಬಿ.ಪಿ.)

**ತಳಿಮಾಲಿನ್ಯ:** ಒಂದು ಜೀವಿಯ ಜೀನುಗಳು ಇನ್ನೊಂದು ಪ್ರಭೇದದ ಕ್ರೊಮೋಸೋಮುಗಳಿಗೆ ಸೇರಿಕೊಂಡು ತನ್ಮೂಲಕ ಆ ಜೀವಿಯ ಮೂಲತಳಿಗುಣಗಳು ಮಾರ್ಪಾಡು ಹೊಂದುವ ಪ್ರಕ್ರಿಯೆ (ಜೀನ್ ಪೊಲ್ಯೂಷನ್). ಇದರಿಂದ ಜೀವಿಯ (ಉದಾ: ಮಾನವ) ಗುಣ, ಸ್ವಭಾವ, ಬುದ್ಧಿವಂತಿಕೆ, ಆರೋಗ್ಯ, ಇನ್ನಿತರ ಲಕ್ಷಣಗಳನ್ನು ನಿರ್ಧರಿಸುವ ಜೀನ್‌ಗಳ ಕಾರ್ಯಸೂಚಿಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಮೂಲ ಜೀನ್‌ಗಳ ಕಾರ್ಯಸೂಚಿಯಲ್ಲಿ ವೈಪರೀತ್ಯ ಉಂಟುಮಾಡಿ ಅಗತ್ಯ ಅಥವಾ ಅನಗತ್ಯ ಗುಣಗಳ ಜೀನ್‌ಗಳನ್ನು ನಾಶಪಡಿಸಬಹುದು. ಉದಾ: ಸಸ್ಯಗಳಲ್ಲಿರುವ ಸಿಹಿ-ಕಹಿ ಗುಣ, ರುಚಿಕರವಾದ ಸ್ವಾದದ ಗುಣ, ಪೀಡೆಕೀಟಗಳ ಬಾಧೆ ತಡೆದುಕೊಳ್ಳುವ ಗುಣ, ಕಳೆನಾಶಕಗಳಿಂದ ರಕ್ಷಿಸಿಕೊಳ್ಳುವ ಗುಣ, ಟೊಮ್ಯಾಟೊ ಸಸ್ಯದ ಕಾಯಿಗಳು ನಿಧಾನಗತಿಯಲ್ಲಿ ಹಣ್ಣಾಗುವ ಗುಣ, ಇತ್ಯಾದಿ ಮಾರ್ಪಾಡಾಗಿ ತಳಿ ಮಾಲಿನ್ಯವಾಗುವುದು.

ತಳಿ ಮಾಲಿನ್ಯಕ್ಕೆ ಕಾರಣಗಳು ಹಲವು. ಅವುಗಳಲ್ಲಿ ಪ್ರಮುಖವಾದದ್ದು ಕುಲಾಂತರಿ ತಂತ್ರಜ್ಞಾನದಿಂದ ಅಭಿವೃದ್ಧಿಸಿದ ಜೀವಿಗಳು. ಉದಾ: ಕುಲಾಂತರಿ ಸಸ್ಯಗಳು, ಕುಲಾಂತರಿ ಪ್ರಾಣಿಗಳು ಮತ್ತು ಕುಲಾಂತರಿ ಸೂಕ್ಷ್ಮಾಣು ಜೀವಿಗಳು. ಗುಣಲಕ್ಷಣಗಳ ವೈವಿಧ್ಯವೇ ಜೀವ ಸಂಕುಲದ ವಿಶಿಷ್ಟತೆ. ಜೀವಿಗಳ ದೇಹದೊಳಗಿರುವ ಜೀನ್‌ಗಳ ಮಿಶ್ರಣ ಹಲವು ಶತಮಾನಗಳ ವಿಕಾಸ ಕ್ರಿಯೆಯ ಪರಿಣಾಮದಿಂದಾಗಿ ಒಂದು ಸಂಕೀರ್ಣ ಸಮಸ್ಥಿತಿಯಲ್ಲಿದೆ. ಕುಲಾಂತರಿ ತಂತ್ರಜ್ಞಾನದಿಂದ ಯಾವುದೇ ಸಂಬಂಧವಿರದ ಜೀವಿಯ ಜೀನ್ ಅನ್ನು ಇನ್ಯಾವುದೋ ಜೀವಿಯೊಳಗೆ ಸೇರಿಸಿ, ಮಿಶ್ರಣಮಾಡುವುದರಿಂದ ದೇಹೀಯ ಅಥವ ಪ್ರಜನನ ಕೋಶಗಳ ಕ್ರೊಮೋಸೋಮುಗಳಲ್ಲಿನ ಜೀನ್‌ಗಳು ಸಮಸ್ಥಿತಿ, ಸಮತೋಲನ ಕಳೆದುಕೊಂಡು ಅಪಾಯ ಉಂಟುಮಾಡುವ ಸಾಧ್ಯತೆಯಿದೆ.

ತಳಿಮಾಲಿನ್ಯದ ತುಣುಕುಗಳು: ಅಂಬಲಿ ಮೀನಿನಲ್ಲಿರುವ ಹಸಿರು ಮಿನುಗಿಸುವ ತಳಿಗುಣವನ್ನು ನಿರುಪದ್ರವಿ ವೈರಾಣುವಿನಲ್ಲಿ ಸೇರಿಸಿ, ಆ ವೈರಾಣುಗಳನ್ನು ಕೋತಿಯ ಅಂಡಾಣುಗಳಲ್ಲಿ ಸೇರಿಸಿ ಅನಂತರ ಕೋತಿಯ ವೀರ್ಯಾಣುವಿನ ಮಿಲನ ಮಾಡಿಸಿ, ಕುಲಾಂತರಿ ಕೋತಿಯನ್ನು ಸೃಷ್ಟಿಸಲಾಗಿದೆ. ಒರೆಗಾನ್ ಪ್ರಾಂತೀಯ ವಾನರ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ಅಭಿವೃದ್ಧಿಸಿದ ಈ ಕೋತಿಯ ದೇಹಕ್ಕೆ ಎರಡು ವಿಭಿನ್ನ ಕುಲದ ಪ್ರಾಣಿಗಳ ಜೀನ್‌ಗಳು ಸೇರಿದ್ದವು. ಈ ರೀತಿ ಯಾವುದೋ ಜೀವಿಯ ಜೀನ್‌ಗಳು ಯಾವ ಯಾವುದೋ ಜೀವಿಗೆ ಸೇರುವುದರಿಂದ ಜೀನ್‌ಗಳ ದೊಡ್ಡ ಗುಂಪು (ಜೆನಿಟಿಕ್ ಲೋಡ್) ಉಂಟಾಗುತ್ತದೆ. ಇದು ಮುಂದೊಂದು ದಿನ ಮೂಲ ಜೀನ್‌ಗಳ ಮಾಲಿನ್ಯಕ್ಕೆ ಕಾರಣವಾಗಬಹುದೆಂಬ ಅನುಮಾನವಿದೆ. ಏಕೆಂದರೆ, ಕುಲಾಂತರಿ ಕೋತಿ ಪರಿಪೂರ್ಣವಾಗಿ ಬೆಳೆದು ಬದುಕಲಿಲ್ಲ.

ಅಮೆರಿಕದ ಕೃಷಿ ಇಲಾಖೆಯ ವಿಜ್ಞಾನಿಗಳು ಬೆಲ್ಟ್‌ವಿಲ್ಲೆ ಜಾತಿಯ ಹಂದಿಗಳನ್ನು ಕುಲಾಂತರಿ ತಂತ್ರಜ್ಞಾನದಿಂದ ಅಭಿವೃದ್ಧಿಪಡಿಸಿದ್ದಾರೆ. ಈ ಹಂದಿಗಳಿಗೆ ಶೀಘ್ರ ಬೆಳವಣಿಗೆಯನ್ನು ಪ್ರಚೋದಿಸುವ ಹಾರ್ಮೋನಿನ ಸ್ರವಿಕೆಗೆ ಕಾರಣವಾಗಿರುವ ಜೀನ್ ಅನ್ನು ಸೇರಿಸಲಾಗಿದೆ. ಇವು ಕಡಿಮೆ ಅವಧಿಯಲ್ಲಿ ದಷ್ಟಪುಷ್ಟವಾಗಿ ಬೆಳೆದು ಹೆಚ್ಚು ಮಾಂಸವನ್ನೇನೋ ಕೊಡುತ್ತವೆ. ಆದರೆ, ಇವುಗಳಿಗೆ ಎಲುಬು ಮತ್ತು ಗಂಟುಗಳ ಸವೆತರೋಗ ಕಾಣಿಸಿಕೊಳ್ಳತೊಡಗಿತು. ಪರಿಣಾಮ, ಈ ಹಂದಿಗಳು ಎದ್ದು ನಿಲ್ಲುವುದು, ನಡೆದಾಡುವುದು ಕೂಡಾ ಕಷ್ಟವಾಯಿತು. ಇದು ತಳಿಮಾಲಿನ್ಯಕ್ಕೊಂದು ಉತ್ತಮ ನಿದರ್ಶನ.

ಕ್ಯಾನ್‌ಬೆರಾದ ವಿಜ್ಞಾನಿಗಳು ಇಲಿಗಳ ಸಂತಾನ ನಿಯಂತ್ರಣಕ್ಕೆ ಸಿಡುಬು (ಸ್ಮಾಲ್‌ಪಾಕ್ಸ್) ರೋಗಾಣುವಿನಂತಹ ವೈರಾಣುವಿನಿಂದ ಲಸಿಕೆ ತಯಾರಿಸಲು ಒಂದು ಭಯಂಕರ ವೈರಾಣುವನ್ನು ಸೃಷ್ಟಿಸಿದ್ದಾರೆ. ಈ ವೈರಾಣು ಸದ್ಯಕ್ಕೆ ಮನುಷ್ಯರಿಗೆ ಯಾವ ಅಪಾಯ ಉಂಟುಮಾಡುವುದಿಲ್ಲವೆಂದು ಅವರ ಅಭಿಪ್ರಾಯ. ಆದರೆ, ಮುಂದೊಂದು ದಿನ ಈ ವೈರಾಣು ಇಡೀ ಮನುಕುಲಕ್ಕೆ ಯಾವ ಅಪಾಯ ತಂದೊಡ್ಡಬಹುದೆಂದು ಸಂಶೋಧಕರು ಭಯಪಡುತ್ತಿದ್ದಾರೆ.

ಮೌಸ್ ಪಾಕ್ಸ್ (ಇಲಿ ಸಿಡುಬು) ವೈರಾಣುವಿನ ಕಾರ್ಯವೈಖರಿಯನ್ನು ಇನ್ನಷ್ಟು ಬಲಗೊಳಿಸಲು ಆಸ್ಟ್ರೇಲಿಯನ್ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಐಯಾನ್ ರಾಂಶ್ ಮತ್ತು ವನ್ಯ ತಜ್ಞ ರಾನ್ ಜಾಕ್ಸನ್ ಇಂಟರ್ ಲೂಕಿನ್-4 (ಐಎಲ್-4) ಎಂಬ ಜೀವರೋಧಕವನ್ನು ಉತ್ಪಾದಿಸಬಲ್ಲ ಜೀನ್ ಅನ್ನು ಸೇರಿಸಿ ಹೊಸ ವೈರಾಣು ಸೃಷ್ಟಿಸಿದರು. ಈ ವೈರಾಣುವನ್ನು ಇಲಿಗಳಿಗೆ ಚುಚ್ಚಿ ಸಿಡುಬು ರೋಗ ನಿಯಂತ್ರಣ ಮಾಡಲು ಪ್ರಯತ್ನಿಸಿದರು. ಆದರೆ, ಇಲಿಗಳು ಸತ್ತುಹೋದವು. ಇನ್ನಷ್ಟು ಇಲಿಗಳಿಗೆ ಅದೇ ಹೊಸ ವೈರಾಣುವನ್ನು ಚುಚ್ಚಿ, ಅನಂತರ ವೈರಾಣು ನಿರೋಧಕ ಲಸಿಕೆಯನ್ನು ಚುಚ್ಚಿ ನೋಡಿದರು. ಯಾವ ಲಸಿಕೆಗೂ ಸ್ಪಂದಿಸದೆ ಮತ್ತೆ ಇಲಿಗಳೆಲ್ಲ ಸತ್ತವು. ಇದು ತಳಿಮಾಲಿನ್ಯದ ಪರಿಣಾಮವೆಂದು ಈ ಇಬ್ಬರು ವಿಜ್ಞಾನಿಗಳು ಅನಂತರ ತೀರ್ಮಾನಿಸಿದರು. ಹಂದಿಗಳಿಗೆ ಬರುವ ಸಿಡುಬಿಗೆ ಐಎಲ್-4 ಜೀನ್ ಸೇರಿಸಿದರೆ ದೇಶದ ಎಲ್ಲಾ ಹಂದಿಗಳನ್ನು ಒಂದೇ ಬಾರಿಗೆ ಸಾಯಿಸಬಹುದು. ಇದು ಪಶುಸಂಗೋಪನಾ ವಾಣಿಜ್ಯವನ್ನೇ ದಿವಾಳಿ ಎಬ್ಬಿಸುವುದರಲ್ಲಿ ಸಂದೇಹವಿಲ್ಲ. ಅದೇ ರೀತಿ ಮನುಷ್ಯನ ಸಿಡುಬಿನ ವೈರಾಣುವಿಗೆ ಐಎಲ್-4 ಜೀನ್ ಸೇರ್ಪಡೆ ಮಾಡಿದರೆ ಇಡೀ ಮನುಕುಲಕ್ಕೆ ಅಪಾಯ! ಇಂತಹ ಘೋರ ಅಪಾಯಗಳು ತಳಿಮಾಲಿನ್ಯಕ್ಕೆ ಉತ್ತಮ ಉದಾಹರಣೆಗಳು.

ಬ್ರಿಟನ್ನಿನ ತಳಿ ತಂತ್ರಜ್ಞರು ಆಲೂಗೆಡ್ಡೆಯ ಹೊಸ ಕುಲಾಂತರಿ ತಳಿಗಳ ಬಗ್ಗೆ ಕಳವಳಪಡುತ್ತಿದ್ದಾರೆ. ಏಕೆಂದರೆ, ಆಲೂಗೆಡ್ಡೆ ಸಸ್ಯಗಳ ರಸ ಹೀರುವ ತಿಗಣೆಗಳನ್ನು ನಿಯಂತ್ರಿಸಲು ಹೊಸ ಆಲೂಗಡ್ಡೆ ತಳಿಯಲ್ಲಿ ಈ ತಿಗಣೆಗಳಿಗೆ ವಾಕರಿಕೆ ಬರುವಂಥ ರಸವನ್ನು ಸ್ರವಿಸಬಲ್ಲ ಜೀನ್‌ಗಳನ್ನು ಸೇರಿಸಿದ್ದಾರೆ. ತಳಿಮಾಲಿನ್ಯ ಬಿಳಿ ತಿಗಣೆಗಳನ್ನಷ್ಟೇ ಅಲ್ಲದೆ ಇವುಗಳನ್ನು ತಿನ್ನುವ ಲೇಡಿಬರ್ಡ್ ಕೀಟವನ್ನೂ ಕೊಲ್ಲುತ್ತಿದೆ. ಕುಲಾಂತರಿ ಹತ್ತಿಗಿಡದ ರಸವನ್ನು ಹೀರಿ ಜೀವಿಸುತ್ತಿದ್ದ ತಿಗಣೆಗಳನ್ನು ಲೇಡಿಬರ್ಡ್ ಕೀಟಗಳು ತಿಂದು ಸಾಯುತ್ತಿರುವ ಬಗ್ಗೆ ನ್ಯೂ ಸೈಂಟಿಸ್ಟ್ ಪತ್ರಿಕೆ ವರದಿ ಮಾಡಿದೆ.

ಅಮೆರಿಕದ ವಿಜ್ಞಾನಿಗಳು ಕುಲಾಂತರಿ ತಂತ್ರಜ್ಞಾನದಿಂದ ಲಿಗ್ನಿನ್‌ರಹಿತ ಕಟ್ಟಿಗೆ ನೀಡುವ ಕುಲಾಂತರಿ ವೃಕ್ಷಗಳನ್ನು ಅಭಿವೃದ್ಧಿಸಿದ್ದಾರೆ. ಈ ವೃಕ್ಷಗಳ ಪರಾಗಕಣಗಳು ಗಾಳಿಯಲ್ಲಿ ತೇಲಿಹೋದಲ್ಲೆಲ್ಲಾ ಬೇರೆ ಪ್ರಭೇದದ ಲಿಗ್ನಿನ್‌ಯುಕ್ತ ಗಟ್ಟಿ ನಾಟ ಕೊಡುವ ಮರಗಳ ಹೂವುಗಳನ್ನು ಪರಾಗಸ್ಪರ್ಶಗೊಳಿಸುತ್ತವೆ. ಇದರಿಂದ ಗಟ್ಟಿನಾಟ ಕೊಡುವ ತಳಿಗುಣಗಳು ಮಾರ್ಪಾಡಾಗಿ ಅವೂ ಸಹ ಲಿಗ್ನಿನ್ ರಹಿತ, ಮೃದು ಕಟ್ಟಿಗೆ ನೀಡುತ್ತವೆ. ಇದೂ ಕೂಡ ತಳಿ ಮಾಲಿನ್ಯ. ಇದರಿಂದಾಗಿ ಅವಶ್ಯಕ ವಸ್ತುಗಳಾದ ಮೇಜು, ಕುರ್ಚಿ, ಇನ್ನಿತರೆ ಸಾಮಾನುಗಳ ತಯಾರಿಕೆಗೆ ಬೇಕಾಗುವ ಗಟ್ಟಿ ಕಟ್ಟಿಗೆಯ ಕೊರತೆಯಾಗಿದೆ.

ಜರ್ಮನಿ ವಿಜ್ಞಾನಿಗಳು ಬಸ್ತಾ ರಾಸಾಯನಿಕ ಕಳೆನಾಶಕವನ್ನು ಬಳಸಿ ಕುಲಾಂತರಿ ತಂತ್ರಜ್ಞಾನದಿಂದ ಕುಸುಬೆ ಎಣ್ಣೆಕಾಳು ಸಸ್ಯಗಳಲ್ಲಿ ಕಳೆನಿರೋಧಕ ಗುಣವಿರುವ ಕುಲಾಂತರಿ ಸಸ್ಯಗಳನ್ನು ಅಭಿವೃದ್ಧಿಸಿದ್ದಾರೆ. ಈ ಸಸ್ಯಗಳ ಪರಾಗರೇಣುಗಳು ವನ್ಯಗೆಜ್ಜರಿ, ಸಾಸಿವೆ ಮತ್ತು ಕಳೆ ಸಸ್ಯಗಳ ಹೂವಿನೊಡನೆ ಪರಾಗಸ್ಪರ್ಶಗೊಂಡು ಅವುಗಳ ಮೂಲ ತಳಿಗುಣಗಳಲ್ಲಿ ಮಾರ್ಪಾಡಾಗಿವೆ. ಇದರಿಂದ ವನ್ಯ ಗೆಜ್ಜರಿ ಮತ್ತು ಸಾಸಿವೆ ಸಸ್ಯಗಳಲ್ಲಿ ಕಳೆ ನಿರೋಧಕ ಜೀನ್‌ಗಳು ಸೇರಿವೆ. ಕಳೆ ಸಸ್ಯಗಳಲ್ಲಿ ನಿರೋಧಕ ಗುಣ ವೃದ್ಧಿಯಾಗಿ ತಳಿಮಾಲಿನ್ಯಕ್ಕೆ ಕಾರಣವಾಗಿದೆ.

ಆರ್ಕ್‌ಟಿಕ್ ಫ್ಲೌಂಡರ್ ಮೀನಿನಲ್ಲಿರುವ ಪೌಷ್ಟಿಕಾಂಶಯುಕ್ತ ಪ್ರೊಟೀನ್‌ಗೆ ಕಾರಣವಾದ ಜೀನ್‌ಗಳನ್ನು ಟೊಮ್ಯಾಟೊ ಸಸ್ಯಕ್ಕೆ ಸೇರಿಸಿ ಕುಲಾಂತರಿ ಪೌಷ್ಟಿಕ ವೃದ್ಧಿತ ಟೊಮ್ಯಾಟೊ ಸಸ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆದರೆ, ಮೀನಿನ ಗುಣಾಣುಗಳನ್ನು ಸೇರಿಸಿ ವೃದ್ಧಿಸಿದೆ. ಈ ಸಸ್ಯಗಳ ಹಣ್ಣನ್ನು ತಿನ್ನಲು ಶುದ್ಧ ಸಸ್ಯಾಹಾರಿಗಳು ಅನುಮಾನಿಸುತ್ತಿರುವರೆಂದು ತಜ್ಞರು ವರದಿಸಿದ್ದಾರೆ. ಈ ರೀತಿ ಅನೇಕ ವಿವಾದಗಳು ಸೃಷ್ಟಿಯಾಗಿ, ತಳಿ ಮಾಲಿನ್ಯದ ಪರಿಣಾಮ ನೇರವಾಗಿ ಮಾನವನ ವ್ಯಾವಹಾರಿಕ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿದೆ.

ಸಸ್ಯ, ಮಾನವ, ಜಾನುವಾರುಗಳ ಮತ್ತು ಉಪಕಾರಿ ಜೀವಿಗಳ ಆರೋಗ್ಯದ ಮೇಲೆ ಕುಲಾಂತರಿಗಳ ಪ್ರಭಾವ ಕುರಿತ ಕಾಳಜಿಯೂ ವಿಶ್ವವ್ಯಾಪಿ ವ್ಯಕ್ತವಾಗುತ್ತಿವೆ. ಕುಲಾಂತರಿಗಳ, ಕಳೆನಾಶಕ ನಿರೋಧಕ ಮತ್ತು ಕೀಟ ನಿರೋಧಕ ತಳಿಗುಣಗಳು ಕುಪ್ಪಳಿಸಿ, ಬೇರೆ ಬೇರೆ ಸಸ್ಯಗಳಿಗೆ, ಉಪಕಾರಿ ಕೀಟಗಳಿಗೂ ಸೇರಿ ಅನಾಹುತ ಮಾಡುವ ಬಗ್ಗೆ ವಿಜ್ಞಾನಿಗಳು ಆತಂಕಗೊಂಡಿದ್ದಾರೆ.

ಕುಲಾಂತರಿ ತಳಿಗಳನ್ನು ಸೃಷ್ಟಿಸುವಾಗ ಒಂದು ಜೀವಿಯ ಯುಗ್ಮಜಗಳಿಗೆ ಬೇರೊಂದು ಜೀವಿಯ (ಬಾಹ್ಯ) ಜೀನ್‌ಗಳನ್ನು ಸೇರಿಸುವರು. ಅಂತಹ ಜೀನ್‌ಗಳು ತಾವೇ ತಾವಾಗಿ ದೇಹದ ಎಲ್ಲಾ ಕೋಶಗಳಿಗೂ ಹಬ್ಬಿಕೊಳ್ಳುತ್ತವೆ ಮತ್ತು ಮುಂದಿನ ತಲೆಮಾರುಗಳಿಗೂ ಹರಿದುಹೋಗುವ ಸಾಧ್ಯತೆಗಳಿವೆ. ಹೀಗೆ ಮಾನವನೂ ಸೇರಿದಂತೆ ಯಾವುದೇ ಪ್ರಾಣಿಗಳ ಜೀನ್‌ಗಳನ್ನು ಮಾರ್ಪಡಿಸಿ, ಜೀವಕೋಶ ಅಥವಾ ಜನನಕೋಶಗಳೊಳಗೆ ಅಂತರ್ಗತಗೊಂಡು ತಮ್ಮದೇ ರೀತಿಯಲ್ಲಿ ಕಾರ್ಯಪ್ರವೃತ್ತಗೊಳ್ಳಬಹುದು. ಇದರಿಂದ ಭವಿಷ್ಯದಲ್ಲಿ ಎಂತೆಂತಹ ವಿಚಿತ್ರ ಗುಣ-ಸಾಮರ್ಥ್ಯಗಳುಳ್ಳ ಪ್ರಾಣಿಗಳ ಸೃಷ್ಟಿಯಾಗಬಹುದೆಂದು ಊಹಿಸಲಸಾಧ್ಯ. (ಬಿ.ಎಸ್.)

**ತಳಿವಿಜ್ಞಾನ:** ಜೀವವಿಜ್ಞಾನದ ಪ್ರಮುಖ ಶಾಖೆಗಳಲ್ಲೊಂದು (ಜೆನೆಟಿಕ್ಸ್). ಆನುವಂಶೀಯತೆ, ವಿಚರಣೆಗಳು, ಜೀವವಿಕಾಸ ಮುಂತಾದ ವಿಷಯಗಳನ್ನು ಅರಿಯಲು ಈ ಶಾಖೆ ಸಹಾಯ ಮಾಡುತ್ತದೆ. ಜೀವರಸಾಯನ ವಿಜ್ಞಾನ ಬೆಳೆವಣಿಗೆ, ವಿಭೇದೀಕರಣ ಮುಂತಾದ ವಿಚಾರಗಳೂ ಈ ಶಾಖೆಯ ಪ್ರಕಾರದೊಳಗೆ ಬರುತ್ತವೆ. ಅತ್ಯಂತ ಸೂಕ್ಷ್ಮ ಜೀವಿಗಳಾದ ವೈರಸ್‌ಗಳಿಂದ ಹಿಡಿದು ಮಾನವನವರೆಗಿನ ಜೀವಿಗಳಲ್ಲಿನ ಆನುವಂಶೀಯ ಗುಣಗಳು ಯಾವುವು ಮತ್ತು ಆನುವಂಶೀಯತೆಗೆ ಸಂಬಂಧಿಸಿದ ರಾಸಾಯನಿಕ ಕ್ರಿಯೆಗಳು ಹೇಗೆ ನಡೆಯುತ್ತವೆ ಎಂಬುದನ್ನು ತಳಿಶಾಸ್ತ್ರ ಚರ್ಚಿಸುತ್ತದೆ. ಪಿತೃಗಳಿಂದ ಪೀಳಿಗೆಗೆ ಆನುವಂಶೀಯ ಗುಣಗಳು ಹೇಗೆ ಸಾಗಿ ಬರುತ್ತವೆ ಎಂಬುದನ್ನು ತಿಳಿಸುವುದೇ ಅಲ್ಲದೆ ಆನುವಂಶೀಯತೆಗೆ ಮೂಲ ಘಟಕಗಳಾದ ಜೀನ್‌ಗಳು ಎಂದರೇನು? ಇವುಗಳಲ್ಲಿರುವ ರಾಸಾಯನಿಕ ವಸ್ತುಗಳಾವುವು? ಎಂಬೆಲ್ಲ ವಿಚಾರಗಳನ್ನು ಈ ಶಾಖೆ ಸವಿಸ್ತಾರವಾಗಿ ಚರ್ಚಿಸುತ್ತದೆ.

ತಳಿವಿಜ್ಞಾನ ನಿಖರವಾಗಿ ೧೮೬೬ರಲ್ಲಿ ಆಸ್ಟ್ರಿಯದ ಪಾದ್ರಿ ಗ್ರೆಗರ್ ಮೆಂಡಲನ ಪ್ರಯೋಗಗಳಿಂದ ಮತ್ತು ಆತ ಪ್ರತಿಪಾದಿಸಿದ ಆನುವಂಶೀಯ ನಿಯಮಗಳಿಂದ ಪ್ರಾರಂಭವಾಯಿತೆನ್ನಬಹುದು. ಆದರೆ ಈತನ ಪ್ರಯೋಗಗಳು ೧೯೦೦ರ ವರೆಗೂ ಬೆಳಕಿಗೆ ಬರಲಿಲ್ಲ. ಆ ವರ್ಷ ಕಾರೆನ್ಸ್, ಡೆ ವ್ರೀಸ್ ಮತ್ತು ಷೆರ್ಮಾಕ್ ಎಂಬ ವಿಜ್ಞಾನಿಗಳು ಸ್ವತಂತ್ರವಾಗಿ ಏಕಕಾಲದಲ್ಲಿ ಮೆಂಡಲನ ತತ್ತ್ವಗಳನ್ನು ಆವಿಷ್ಕರಿಸಿದರು. ಆದರೆ ತಳಿವಿಜ್ಞಾನ ಕೇವಲ ಮೆಂಡಲನಿಂದ ಈಚೆಗೆ ಹುಟ್ಟಿಬಂದ ಶಾಖೆಯೇನಲ್ಲ. ಏಕೆಂದರೆ ಆದಿಯಿಂದಲೂ ಆನುವಂಶೀಯತೆಯ ಬಗ್ಗೆ ನಾನಾ ರೀತಿಯ ಊಹಾಪೋಹಗಳು ಇದ್ದವು ಎಂಬುದಕ್ಕೆ ಸಾಕ್ಷ್ಯಾಧಾರಗಳು ಇವೆ. ಇಂಥ ಭಾವನೆಗಳು ಮಾನವನ ಉಗಮದಿಂದಲೇ ಹುಟ್ಟಿಬಂದಿರಬೇಕು. ಕ್ರಿ.ಪೂ.೪೦೦೦ಕ್ಕೂ ಮುಂಚಿನ ಬ್ಯಾಬಿಲೋನಿಯನ್ನರ ಶಾಸನಗಳಲ್ಲಿ ಕುದುರೆಯ ಶಿರದ ಆಕಾರ ಮತ್ತು ಅದರ ಕುತ್ತಿಗೆಯ ಮೇಲಿನ ಅಲಿಯಾನ ಬೆಳೆವಣಿಗೆಯ ಬಗ್ಗೆ ಐದು ಪೀಳಿಗೆಯ ವರೆಗಿನ ವಂಶವೃಕ್ಷವಿರುವುದು ಕಂಡುಬಂದಿದೆ. ಕ್ರಿಸ್ತಪೂರ್ವ ಕಾಲದ ಕೆಲವು ಶಾಸನಗಳಲ್ಲಿ ಖರ್ಜೂರದ ಮರಗಳ ತಳಿಸಂಕರ ಕ್ರಿಯೆಯ ಬಗ್ಗೆ ನಿರೂಪಣೆ ಇದೆ. ಅಂದಿನ ಜನರಿಗೆ ಲೈಂಗಿಕ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಅಡಗಿರುವ ಕೆಲವು ವಿಚಾರಗಳ ಬಗ್ಗೆ ಅರಿವಿತ್ತು ಎಂಬುದು ಈ ನಿರೂಪಣೆಗಳಿಂದ ಅರ್ಥವಾಗುತ್ತದೆ. ಕ್ರಿಸ್ತಪೂರ್ವದ ಶತಮಾನಗಳಲ್ಲಿ ಚೀನೀಯರಿಗೆ ಸಂಕರ ತಳಿಗಳ ಹಾಗೂ ವಿಶಿಷ್ಟ ತಳಿಯ ಆಯ್ಕೆಯ ಬಗ್ಗೆ ಆಸಕ್ತಿಯಿತ್ತು. ಈ ದಿಕ್ಕಿನಲ್ಲಿ ಅವರು ಯಶಸ್ವೀ ಪ್ರಯೋಗಗಳನ್ನು ನಡೆಸಿದ್ದರು ಎಂಬುದಕ್ಕೆ ದಾಖಲೆಗಳಿವೆ. ನಮ್ಮ ಸಮಕಾಲೀನ ಬೆಳೆಗಳಾದ ಬತ್ತ, ರಾಗಿ, ಹತ್ತಿ ಮುಂತಾದವು ಈಗಿನ ರೂಪದಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿರಲಿಲ್ಲ. ಇವನ್ನು ನಮ್ಮ ಪೂರ್ವಜರು ಕಾಡುಗಿಡಗಳ ತಳಿಸಂಕರ ಕ್ರಿಯೆಯಿಂದ ಪಡೆದರು. ಹೀಗೆ ವಿಕಾಸಗೊಂಡ ಈ ಸಂಕರತಳಿಗಳು ಕೇವಲ ಮಾನವನ ಆಶ್ರಯದಲ್ಲಿ ಬೆಳೆಯಬಲ್ಲವೇ ಹೊರತು ತಮಗೆ ತಾವೇ ಬದುಕಲಾರವು. ಈಗಿರುವ ಸಾಕುಪ್ರಾಣಿಗಳೆಲ್ಲವೂ ಪ್ರಕೃತಿಯಲ್ಲಿದ್ದ ವನ್ಯಜೀವಿಗಳ ಸಂಕರಕ್ರಿಯೆಯಿಂದಲೇ ಹುಟ್ಟಿ ಬಂದವು; ಕಾಡಿನಲ್ಲಿ ಈಗ ಬದುಕಲಾರವು. ಇವಕ್ಕೆ ಮಾನವನ ಆಶ್ರಯ ಬೇಕೇಬೇಕು. ಇದೆಲ್ಲವನ್ನೂ ವಿಚಾರ ಮಾಡಿದಾಗ ತಳಿವಿಜ್ಞಾನ ಮಾನವನ ಉಗಮದೊಂದಿಗೇ ಆರಂಭವಾದ ಜ್ಞಾನಶಾಖೆ ಎಂಬುದು ವೇದ್ಯವಾಗುತ್ತದೆ.

ವೈಜ್ಞಾನಿಕವಾಗಿ ತಳಿವಿಜ್ಞಾನ ಪ್ರಾರಂಭವಾದ ಬಗ್ಗೆ ನಿಖರವಾದ ದಾಖಲೆಗಳು ಇಲ್ಲದಿದ್ದಲ್ಲಿ ಪೈತಾಗರಸನ ಕಾಲದಿಂದಲೇ ಇದು ಬೆಳೆದು ಬಂದಿರುವುದನ್ನು ನಾವು ಕಾಣಬಹುದು. ತಳಿವಿಜ್ಞಾನದ ಬಗ್ಗೆ ಇವನಿಗಿದ್ದ ಕೆಲವು ಭಾವನೆಗಳು ಅತ್ಯಂತ ಕುತೂಹಲಕಾರಿಗಳಾಗಿವೆ. ಸಂಭೋಗ ಕ್ರಿಯೆಯ ಕಾಲದಲ್ಲಿ ಗಂಡಿನ ವಿವಿಧ ಅಂಗಗಳಿಂದ ತೇವಭರಿತವಾದ ಒಂದು ರೀತಿಯ ಹಬೆ ಹುಟ್ಟಿಬರುತ್ತದೆ ಎಂದು ಈತನೂ ಈತನ ಸಮಕಾಲೀನ ಎಂಪೆಡಾಕ್ಲೀಸನೂ ನಂಬಿದ್ದರು. ಈ ಹಬೆ ಹೆಣ್ಣಿನ ಗರ್ಭಕೋಶದೊಳಗೆ ಸೇರಿ ಬೆಳೆಯುವ ಭ್ರೂಣದಲ್ಲಿನ ವಿವಿಧ ಅಂಗಗಳನ್ನು ಉತ್ಪಾದಿಸುತ್ತದೆ ಎಂದು ಇವರು ತರ್ಕಿಸಿದರು. ಪೈತಾಗರಸನ ಪ್ರಕಾರ ಬೆಳೆಯುವ ಭ್ರೂಣಕ್ಕೆ ಹೆಣ್ಣು ಯಾವ ಕೊಡುಗೆಯನ್ನು ನೀಡುವುದಿಲ್ಲ. ಆದರೆ ಎಂಪೆಡಾಕ್ಲೀಸನ ಪ್ರಕಾರ ಹೆಣ್ಣು ಮತ್ತು ಗಂಡುಗಳೆರಡೂ ಭ್ರೂಣದ ಬೆಳೆವಣಿಗೆಯಲ್ಲಿ ಸಹಕರಿಸುತ್ತವೆ.

ಇವರ ನಂತರದ ತತ್ತ್ವಜ್ಞಾನಿ ಅರಿಸ್ಟಾಟಲನಾದರೋ ಗಂಡಿನಿಂದ ಹುಟ್ಟಿ ಬರುವ ವೀರ್ಯ ಅತ್ಯಂತ ಶುದ್ಧವಾದ ರಕ್ತವೆಂದು ಹೇಳಿದ. ಈ ಪರಿಶುದ್ಧ ರಕ್ತ ಹೆಣ್ಣಿನಲ್ಲಿ ಹೊಸ ಜೀವಿಯನ್ನು ಕೊಡುತ್ತದೆ ಎಂದು ಈತ ತೀರ್ಮಾನಿಸಿದ. ಈತನ ಪ್ರಕಾರ ಹೆಣ್ಣು ಬಹಿಷ್ಠೆಯಾದಾಗ ಹೊರಬರುವ ದ್ರವ ಅಶುದ್ಧ ವಸ್ತು. ಹೆಣ್ಣಿನ ಈ ಅಶುದ್ಧ ರಕ್ತದಿಂದ ಭ್ರೂಣ ತನ್ನ ಬೆಳೆವಣಿಗೆಗೆ ಬೇಕಾದ ವಸ್ತುಗಳನ್ನು ಆರಿಸಿಕೊಂಡು ಬೆಳೆಯುತ್ತದೆ ಎಂಬುದು ಈತನ ಅಭಿಪ್ರಾಯ. ಅಂದರೆ ಈತನ ಪ್ರಕಾರ ಗಂಡಿನಲ್ಲಿ ಜೀವ ಕೊಡುವ ವಸ್ತುವಿದೆಯಾದರೆ ಹೆಣ್ಣಿನಲ್ಲಿ ಆ ಜೀವದ ಬೆಳೆವಣಿಗೆಗೆ ಬೇಕಾದ ಎಲ್ಲ ವಸ್ತುಗಳೂ ಇವೆ. ಅರಿಸ್ಟಾಟಲನ ತತ್ತ್ವವನ್ನು ಆಧಾರರಹಿತ ಹಾಗೂ ನಿರುಪಯುಕ್ತ ಎಂದು ವೈಜ್ಞಾನಿಕವಾಗಿ ತೋರಿಸುವವರೆಗೆ ಅದು ಚಾಲ್ತಿಯಲ್ಲಿತ್ತು.

ಹದಿನೇಳನೆಯ ಶತಮಾನದ ಕೊನೆಯ ಭಾಗದಲ್ಲಿ ಲ್ಯೂವೆನ್ ಹೂಕ್ ಎಂಬಾತ ಗಂಡಿನ ವೀರ್ಯದಲ್ಲಿರುವ ರೇತ್ರಾಣುಗಳನ್ನು ಸೂಕ್ಷ್ಮದರ್ಶಕದ ಸಹಾಯದಿಂದ ಗುರುತಿಸಿದ. ಪ್ರಪ್ರಥಮವಾಗಿ ಹೆಣ್ಣಿನ ಮೊಟ್ಟೆಯನ್ನು ಗುರುತಿಸಿದ ಕೀರ್ತಿಯೂ ಈತನಿಗೆ ಸಲ್ಲುತ್ತದೆ. ರೇತ್ರಾಣು ಭ್ರೂಣಕ್ಕೆ ಜೀವ ಕೊಡುತ್ತದೆ. ಮೊಟ್ಟೆ ಭ್ರೂಣದ ಬೆಳೆವಣಿಗೆಗೆ ಆಹಾರವನ್ನು ಒದಗಿಸುತ್ತದೆ ಎಂಬುದು ಈತನ ನಂಬಿಕೆ. ತನ್ನ ನಂಬಿಕೆ ನಿಜವೆಂದು ತೋರಿಸಲು ಕೆಲವು ಪ್ರಯೋಗಗಳನ್ನೂ ಈತ ನಡೆಸಿದ. ಕಂದು ಬಣ್ಣದ ಗಂಡು ಮೊಲವನ್ನು ಬಿಳಿಯ ಬಣ್ಣದ ಹೆಣ್ಣು ಮೊಲದೊಡನೆ ಸಂಕರ ಕ್ರಿಯೆಗೊಳಪಡಿಸಿ ಪ್ರಥಮ ಪೀಳಿಗೆಯಲ್ಲಿ ಎಲ್ಲ ಮರಿಗಳೂ ಕಂದು ಬಣ್ಣವನ್ನೇ ಪಡೆಯುವುದನ್ನು ತೋರಿಸಿದ. ಆದ್ದರಿಂದ ಹುಟ್ಟುವ ಪೀಳಿಗೆಯಲ್ಲಿ ಗಂಡಿನ ಗುಣವೇ ಪ್ರಧಾನವೆಂದೂ ಹೆಣ್ಣು ಕೇವಲ ಗಂಡಿನ ಗುಣಗಳ ಬೆಳೆವಣಿಗೆಗೆ ಪೂರಕವಾದ ಆಹಾರ ವಸ್ತುಗಳನ್ನು ನೀಡುತ್ತದೆ ಎಂದೂ ಈತ ತೀರ್ಮಾನಿಸಿದ.

ಈತನ ತರುವಾಯ ಸ್ವಾಮರ್‌ಡ್ಯಾಮ್ ಎಂಬ ವಿಜ್ಞಾನಿ ಪೂರ್ವೋದ್ಭವ ಸಿದ್ಧಾಂತವನ್ನು ಪ್ರತಿಪಾದಿಸಿದ. ಇದರ ಪ್ರಕಾರ ಮುಂದೆ ಬೆಳೆದು ರೂಪುಗೊಳ್ಳುವ ಜೀವಿ ಗಂಡಿನ ರೇತ್ರಾಣುವಿನಲ್ಲಿ ಮತ್ತು ಹೆಣ್ಣಿನ ಅಂಡದಲ್ಲಿ ಪೂರ್ವಭಾವಿಯಾಗಿ ರೂಪಗೊಂಡಿರುತ್ತದೆ. ಹೀಗೆ ಅಡಗಿರುವ ಈ ಜೀವಿ ಮುಂದೆ ದೊಡ್ಡದಾಗಿ ಬೆಳೆದು ಹೊರಬರುತ್ತದೆ. ಈ ಸಿದ್ಧಾಂತ ಕೇವಲ ಕಾಲ್ಪನಿಕವಾಗಿದ್ದರೂ ದೈವ ಸೃಷ್ಟಿ ಮತ್ತು ಮಾಟ ಮುಂತಾದ ನಂಬಿಕೆಗಳನ್ನು ತಳ್ಳಿಹಾಕಿ ವಾಸ್ತವ ದೃಷ್ಟಿಯನ್ನು ಬೆಳೆಸಿಕೊಳ್ಳಲು ಕೆಲಮಟ್ಟಿಗೆ ಸಹಾಯ ಮಾಡಿತು.

೧೮ನೆಯ ಶತಮಾನದಲ್ಲಿ ಜೀವಿಸಿದ್ದ ಮಪಾರ್ಟಿಯಸ್ ಎಂಬ ವಿಜ್ಞಾನಿ ಪೂರ್ವೋದ್ಭವ ಸಿದ್ಧಾಂತವನ್ನು ಒಪ್ಪದೆ ಅದಕ್ಕೆ ಬದಲಾಗಿ ದ್ವಿಪಿತೃ ಆನುವಂಶೀಯತೆಯ ತತ್ತ್ವವನ್ನು ಪ್ರತಿಪಾದಿಸಿದ. ಈತನ ಪ್ರಕಾರ ಗಂಡು ಮತ್ತು ಹೆಣ್ಣುಗಳೆರಡೂ ಭವಿಷ್ಯ ಜೀವಿಯ ರೂಪುಗೊಳ್ಳುವಿಕೆಗೆ ಸಹಾಯ ಮಾಡುತ್ತವೆ. ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಮತ್ತು ಹೆಣ್ಣುಗಳೆರಡೂ ವೀರ್ಯವನ್ನು ಉತ್ಪಾದಿಸುತ್ತವೆ. ಈ ವೀರ್ಯದಲ್ಲಿ ಅತಿ ಸೂಕ್ಷ್ಮವಾದ ಕಣಗಳು ಅಡಗಿರುತ್ತವೆ. ಈ ಎರಡು ಕಣಗಳು ಒಂದರೊಡನೊಂದು ಕೂಡುವುದರಿಂದ ಭವಿಷ್ಯ ಜೀವಿಯ ನಿರ್ದಿಷ್ಟ ಅಂಗಗಳು ರೂಪುಗೊಳ್ಳುವುವು. ಗಂಡಿನಿಂದ ಬಂದ ಕಣಗಳು ಪ್ರಬಲ ಗುಣಗಳನ್ನು ಪಡೆದಿದ್ದರೆ ಆ ಜೀವಿ ತಂದೆಯನ್ನೇ ಹೆಚ್ಚು ಹೋಲುತ್ತದೆ. ಹಾಗಲ್ಲದೆ ತಾಯಿಯಿಂದ ಬಂದ ಕಣಗಳು ಪ್ರಬಲ ಗುಣಗಳನ್ನು ಪಡೆದಿದ್ದರೆ ಆ ಜೀವಿ ತಾಯಿಯನ್ನೇ ಹೆಚ್ಚು ಹೋಲುತ್ತದೆ. ಅಲ್ಲದೆ ಪಿತೃಗಳಲ್ಲಿ ಈ ರೀತಿಯ ಕಣಗಳು ಅವರ ಎಲ್ಲ ಅಂಗಗಳಲ್ಲಿಯೂ ಉತ್ಪತ್ತಿಯಾಗಿ ಕೊನೆಗೆ ಅವೆಲ್ಲವೂ ಸಂತಾನಾಂಗದೊಳಕ್ಕೆ ಹರಿದು ಬಂದು ಅಲ್ಲಿಂದ ಸಂಭೋಗ ಕ್ರಿಯೆಯ ಕಾಲದಲ್ಲಿ ಜೊತೆಗೂಡಿ ಮುಂದಿನ ಜೀವಿಯನ್ನು ಕೊಡುತ್ತವೆ ಎಂಬುದು ಮಪಾರ್ಟಿಯಸನ ಅಭಿಪ್ರಾಯ.

ಇದೇ ತತ್ತ್ವವನ್ನು ಮುಂದೆ ಚಾರ್ಲ್ಸ್ ಡಾರ್ವಿನ್ ಆನುವಂಶೀಯ ಕ್ರಿಯೆ ಹೇಗೆ ಆಗುತ್ತದೆ ಎಂಬುದನ್ನು ತಿಳಿಸಲು ಬಳಸಿಕೊಂಡ. ಈತನ ಪ್ಯಾನ್‌ಜೀನುಗಳ ತತ್ತ್ವ ಮಪಾರ್ಟಿಯಸನ ತತ್ತ್ವದ ಪ್ರತಿರೂಪ. ಡಾರ್ವಿನ್ ಇಷ್ಟಕ್ಕೇ ತನ್ನ ಪ್ರತಿಪಾದನೆಗಳನ್ನು ನಿಲ್ಲಿಸದೆ ವಂಶವೃಕ್ಷಗಳನ್ನು ಸಂಗ್ರಹಿಸಿ ಅವುಗಳ ಆನುವಂಶೀಯತೆಯನ್ನು ವಿವರಿಸಿದುದು

ಆನುವಂಶೀಯತೆಯ ಬಗ್ಗೆ ಆತನಿಗಿದ್ದ ಆಸಕ್ತಿಯನ್ನು ತೋರಿಸುತ್ತದೆ. ಕೆಲವು ಸಂಸಾರಗಳಲ್ಲಿ ಸಾಮಾನ್ಯ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಬೆರಳುಗಳಿರುವುದನ್ನು ಗುರುತಿಸಿದ ಈತ ಬಹು ಬೆರಳಿನ ಆನುವಂಶೀಯತೆಯ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಆ ಮನೆತನದ ವಂಶವೃಕ್ಷಗಳನ್ನು ಮೊದಲ ಬಾರಿಗೆ ಕರಾರುವಾಕ್ಕಾಗಿ ವಿವರಿಸಿದ. ಜೊತೆಗೆ ತಳಿಶಾಸ್ತ್ರವನ್ನು ಅರ್ಥ ಮಾಡಿಕೊಳ್ಳಲು ಸಂಕರ ಪ್ರಯೋಗಗಳನ್ನೂ ಈಗ ನಡೆಸಿದ್ದ.

ಬಾನೆಟ್ ಎಂಬ ಇನ್ನೊಬ್ಬ ವಿಜ್ಞಾನಿ ಡಾರ್ವಿನ್ನನ ತತ್ತ್ವಗಳಿಗೆ ವಿರುದ್ಧವಾದ ಭಾವನೆಗಳನ್ನು ಹೊಂದಿದ್ದ. ಈತನ ಪ್ರಕಾರ ಭವಿಷ್ಯದಲ್ಲಿ ಹುಟ್ಟುವ ಎಲ್ಲ ಜೀವಿಗಳ ಅತಿ ಸೂಕ್ಷ್ಮ ಅಚ್ಚುಗಳು ಹೆಣ್ಣಿನ ಶರೀರದಲ್ಲಿ ಇರುತ್ತವೆ. ಇವು ಚೀನೀಯರ ಪೆಟ್ಟಿಗೆಗಳಂತೆ ಹೆಣ್ಣಿನ ಅಂಡದಲ್ಲಿ ಒಂದರೊಳಗೊಂದು ಅಡಗಿದ್ದು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹರಿದು ಬರುತ್ತವೆ. ಇದು ಕೂಡ ಒಂದು ರೀತಿಯ ಪೂರ್ವೋದ್ಭವ ಸಿದ್ಧಾಂತವೇ.

೧೮ ನೆಯ ಶತಮಾನದ ಉತ್ತರಾರ್ಧದಲ್ಲಿ ವುಲ್ಫ್ ಎಂಬ ಜರ್ಮನ್ ವಿಜ್ಞಾನಿ ಪೂರ್ವೋದ್ಭವ ಸಿದ್ಧಾಂತವನ್ನು ಅಲ್ಲಗಳೆದ. ಕೋಳಿಯ ಮೊಟ್ಟೆಯಲ್ಲಿ ಮರಿ ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಈತ ಅಭ್ಯಾಸ ಮಾಡಿದ. ಈ ಅಭ್ಯಾಸದ ಫಲವಾಗಿ ಭವಿಷ್ಯ ಜೀವಿಯ ಬೆಳವಣಿಗೆ, ವಿಭೇದೀಕರಣಕ್ಕೊಳಗಾಗದಿರುವ ನಿಷೇಚಿತ ಮೊಟ್ಟೆಯಿಂದ ಭವಿಷ್ಯ ಜೀವಿ ತರ್ಕಬದ್ಧವಾದ ರೀತಿಯಲ್ಲಿ ಅನುಕ್ರಮವಾಗಿ ವಿಭೇದೀಕರಣ ಕ್ರಿಯೆಗೊಳಗಾಗಿ ಬೆಳೆದುಬರುತ್ತದೆ ಎಂದೂ, ಮೊಟ್ಟೆಯಲ್ಲಾಗುವ ಕೋಶ ವಿಭಜನೆಯಿಂದ ಈ ಬೆಳವಣಿಗೆ ಆಗುತ್ತದೆ ಎಂದೂ ಪ್ರಾಯೋಗಿಕವಾಗಿ ಈತ ತೋರಿಸಿದ, ಈ ತತ್ತ್ವಕ್ಕೆ ಎಪಿಜೆನಿಸಿಸ್ ತತ್ತ್ವವೆಂದು ಹೆಸರು. ಇದು ಇಂದಿಗೂ ಮಾನ್ಯವಾಗಿರುವ ತತ್ತ್ವ.

ವಿಜ್ಞಾನ ಬೆಳೆದಂತೆ, ವೈಜ್ಞಾನಿಕ ಮನೋಭಾವಗಳು ಬೆಳೆದಂತೆ, ಆನುವಂಶೀಯತೆಯ ಬಗ್ಗೆ ಮಾನವ ಕುತೂಹಲವೂ ಬೆಳೆಯಿತು. ಆನುವಂಶೀಯತೆಗೆ ಕಾರಣಗಳು ಯಾವುವು? ವಿಚರಣೆಗಳು ಹೇಗೆ ಉದ್ಭವಿಸುತ್ತವೆ? ಎಂಬ ಪ್ರಶ್ನೆಗಳು ಸಹಜವಾಗಿಯೇ ಹುಟ್ಟಿಕೊಂಡವು. ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಲಮಾರ್ಕ್ ಎಂಬ ವಿಜ್ಞಾನಿ (೧೭೪೪–೧೮೨೯) ಪ್ರಯತ್ನಿಸಿದ, ಅಂಗಗಳ ಉಪಯೋಗ ಮತ್ತು ಅನುಪಯೋಗ ಸಿದ್ಧಾಂತ ಹಾಗೂ ಅರ್ಜಿತ ಗುಣಗಳ ಆನುವಂಶೀಯತೆಯ ತತ್ತ್ವವನ್ನು ಈತ ಪ್ರತಿಪಾದಿಸಿದ. ಈತನ ಪ್ರಕಾರ ಜೀವಿಗಳಿಗೆ ನಾನಾ ಅವಶ್ಯಕತೆಗಳು ಹಾಗೂ ಆಕಾಂಕ್ಷೆಗಳು ಇರುತ್ತವೆ. ಇದಕ್ಕೆ ಹೊಣೆ ಪರಿಸರ. ಜೀವಿಯ ಆ ಆಕಾಂಕ್ಷೆಗಳು ಅದರ ಅಂಗಗಳ ಉಪಯೋಗವನ್ನು ಹಾಗೂ ನಿರುಪಯೋಗವನ್ನು ತೀರ್ಮಾನಿಸುತ್ತದೆ, ಈ ತೀರ್ಮಾನದಿಂದ ಅದು ತನ್ನ ಅಂಗಗಳಲ್ಲಿ ಮಾರ್ಪಾಟುಗಳನ್ನು ಮಾಡಿಕೊಳ್ಳುತ್ತದೆ. ಹೀಗೆ ಒಂದು ಪೀಳಿಗೆಯಲ್ಲಿ ಮಾರ್ಪಾಟಾದ ಅಂಗಗಳು ಮುಂದಿನ ಪೀಳಿಗೆಗೆ ಸಾಗಿ ಬರುತ್ತವೆ ಎಂದು ಈತ ಪ್ರತಿಪಾದಿಸಿದ. ಆನುವಂಶೀಯತೆಯನ್ನು ಮತ್ತೊಂದು ರೀತಿಯಲ್ಲಿ ಡಾರ್ವಿನ್ ಪ್ರತಿಪಾದಿಸಿದ. ಆತ ಪ್ರತಿಪಾದಿಸಿದ ಪ್ಯಾನ್‌ಜೀನುಗಳ ತತ್ತ್ವವನ್ನು ಹಿಂದೆ ಹೇಳಿದೆ. ಈ ತತ್ತ್ವದ ಪ್ರಕಾರ ಶರೀರದ ಎಲ್ಲ ಅಂಗಗಳೂ ಸೂಕ್ಷ್ಮವಾದ ಪ್ಯಾನ್‌ಜೀನ್‌ಗಳನ್ನು ಉತ್ಪಾದಿಸಿ ಸಂತಾನಾಂಗಗಳಿಗೆ ಕಳುಹಿಸುತ್ತವೆ. ಅನಂತರ ಪ್ಯಾನ್‌ಜೀನ್‌ಗಳು ಗಂಡಿನ ರೇತ್ರಾಣು, ಹಾಗೂ ಹೆಣ್ಣಿನ ಅಂಡದ ಮೂಲಕ ಹೊರಬಿದ್ದು ಒಂದುಗೂಡಿ ಮುಂದೆ ಹುಟ್ಟುವ ಜೀವಿಗಳಲ್ಲಿ ಪ್ರಕಾಶಕ್ಕೆ ಬರುತ್ತವೆ. ಹೀಗೆ ದ್ವಿಪಿತೃ ಸಂತಾನದಿಂದ ಹುಟ್ಟಿಬರುವ ಜೀವಿಗಳಲ್ಲಿ ಈ ಎರಡೂ ಪಿತೃಜೀವಿಗಳ ಗುಣಲಕ್ಷಣಗಳು ಬೆರೆತಿರುವುದನ್ನು ಕಾಣಬಹುದು ಎಂದು ಡಾರ್ವಿನ್ ಪ್ರತಿಪಾದಿಸಿದ್ದಾನೆ.

೧೯ ನೆಯ ಶತಮಾನದ ಕೊನೆಯ ಭಾಗದಲ್ಲಿ ವೈಸ್‌ಮನ್ ಡಾರ್ವಿನ್ ಪ್ರತಿಪಾದಿಸಿದ ತತ್ತ್ವದ ಸತ್ಯತೆಯನ್ನು ಪ್ರಶ್ನಿಸಿದ. ಜೀವಿಗಳಲ್ಲಿ ಪ್ಯಾನ್‌ಜೀನ್ ಇಲ್ಲವೆಂದೂ ಅದಕ್ಕೆ ಬದಲಾಗಿ ಪ್ರಜನನರಸ ಮುಖ್ಯವೆಂದೂ, ಇದೇ ಆನುವಂಶೀಯತೆಗೆ ಕಾರಣವೆಂದೂ ತರ್ಕಿಸಿದ. ಈತ ಪ್ರಜನನರಸ ಸಿದ್ಧಾಂತವನ್ನು (ತಿಯೊರಿ ಆಫ್ ಜರ್ಮ್‌ಪ್ಲಾಸಮ್) ಪ್ರತಿಪಾದಿಸಿದ. ಈ ತತ್ತ್ವದ ಪ್ರಕಾರ ಎಲ್ಲ ಬಹುಕೋಶ ಜೀವಿಗಳಲ್ಲೂ ಪ್ರಜನನರಸ ಪ್ರತ್ಯೇಕವಾಗಿ ವಿಶಿಷ್ಟ ಅಂಗದಲ್ಲಿರುತ್ತದೆ. ಈ ಪ್ರಜನನರಸ ಕೋಶವಿಭಜನೆಗಳಿಂದ ಬದಲಾಗದಂತೆ ಉಳಿದುಕೊಂಡಿರುವ ರೀತಿಯಲ್ಲಿ ಆ ಜೀವಿಯ ದೇಹ ಕಾಪಾಡಿಕೊಂಡು ಬರುತ್ತದೆ. ಗಂಡು ಮತ್ತು ಹೆಣ್ಣಿನ ಪ್ರಜನನರಸಗಳ ಮಿಲನದಿಂದ ಬರುವ ಜೀವವೇ ಪ್ರಜನನರಸದಿಂದ ಹುಟ್ಟಿ ಬರುವ ಕೂಸು. ಈ ರಸಕ್ಕೆ ಜೀವಿಯ ವಿವಿಧ ಅಂಗಗಳನ್ನು ಕೊಡುವ ಶಕ್ತಿಯಿದೆ. ಅಲ್ಲದೆ ಈ ರಸ ಪರಿಸರದ ಪ್ರಭಾವಕ್ಕೆ ಒಳಗಾಗುವುದಿಲ್ಲ.

ವೈಸ್‌ಮನ್ ಅನಂತರ ಬಂದ ಡೆವ್ರೀಸ್ ಎಂಬ ವಿಜ್ಞಾನಿ ೧೯೦೦ರಲ್ಲಿ ವಿಕೃತಿ ಸಿದ್ಧಾಂತವನ್ನು (ಮ್ಯುಟೇಷನ್ ತಿಯೊರಿ) ಪ್ರತಿಪಾದಿಸಿದ. ಈತನ ಪ್ರಕಾರ ಜೀವಿಗಳಲ್ಲಿ ಇದ್ದಕಿದ್ದಂತೆಯೇ ಯಾವುದಾದರೊಂದು ಹಳೆಯ ಗುಣಕ್ಕೆ ಬದಲಾಗಿ ಹೊಸ ಗುಣ ಹುಟ್ಟಿಕೊಳ್ಳುತ್ತದೆ. ಇಂಥ ಬದಲಾವಣೆಯನ್ನು ಈತ ವಿಕೃತಿ (ಮ್ಯುಟೇಷನ್) ಎಂದು ಕರೆದ. ವಿಕೃತಿ ಆನುವಂಶೀಯವಾಗಿ ಪೀಳಿಗೆಯಿಂದ ಪೀಳಿಗೆಗೆ ಸಾಗಿ ಬರುತ್ತದೆ. ಇದರಿಂದಾಗಿ ಜೀವಿಗಳಲ್ಲಿ ಹಿಂದೆ ಇರದಿದ್ದ ಹೊಸ ಗುಣಗಳು ಹುಟ್ಟಿಕೊಂಡು ವಿಕಾಸದಲ್ಲಿ ಅತಿಮುಖ್ಯ ಪಾತ್ರ ವಹಿಸುವುವು ಎಂಬುದೇ ಈತನ ವಾದದ ತಿರುಳು. ಈ ತತ್ತ್ವಕ್ಕೆ ಈಗ ಮಾನ್ಯತೆ ಇಲ್ಲವಾದರೂ ಜೀವ ವಿಕಾಸದ ಬಗ್ಗೆ ಹೆಚ್ಚು ತಿಳಿಯಲು ಇದರಿಂದ ಅವಕಾಶವಾಯಿತು.

ಗ್ರೆಗೊರ್ ಮಂಡಲ್ ಆಧುನಿಕ ತಳಿವಿಜ್ಞಾನದ ಜನಕ. ಈ ವಿಜ್ಞಾನ ಒಂದು ನಿರ್ದಿಷ್ಟ ಜ್ಞಾನವಾಗಿ ಬೆಳೆಯಲು ಈತನ ಕೊಡುಗೆಗಳು ಸಹಾಯ ಮಾಡಿದವು. ಮಾತಾಪಿತೃಗಳಿಂದ ಬರುವ ಗುಣಗಳು, ಲಕ್ಷಣಗಳು ಒಂದರೊಡನೊಂದು ಬೆರೆತುಹೋಗುತ್ತವೆ ಎಂಬ ಹಳೆಯ ತತ್ತ್ವವನ್ನು ಸಂಪೂರ್ಣವಾಗಿ ತೊಡೆದುಹಾಕಿ ಅದಕ್ಕೆ ಬದಲಾಗಿ ಘಟಕ ಆನುವಂಶೀಯ ತತ್ತ್ವವನ್ನು ತನ್ನ ಪ್ರಯೋಗಗಳ ಮೂಲಕ ಈತ ಶ್ರುತಪಡಿಸಿದ. ಈತ ತನ್ನ ಪ್ರಯೋಗಗಳಿಗೆ ಆರಿಸಿಕೊಂಡ ಜೀವಿ ಬಟಾಣಿ ಗಿಡ. ಇದರ ಒಂದೊಂದೇ ಗುಣವನ್ನು ಆರಿಸಿಕೊಂಡು ಆ ಗುಣದ ಆನುವಂಶೀಯತೆಯ ರೀತಿ ನಿಯಮಗಳನ್ನು ನಿರ್ದಿಷ್ಟವಾಗಿ ಅಭ್ಯಾಸ ಮಾಡಿ ತನ್ನ ತತ್ತ್ವಗಳನ್ನು ಈತ ಪ್ರತಿಪಾದಿಸಿದ. ತನ್ನ ಪ್ರಯೋಗಗಳಲ್ಲಿ ಉಪಯೋಗಿಸಿದ ಬಟಾಣಿ ಗಿಡಗಳ ಹೂವಿನ ಬಣ್ಣ, ಹೂವು ಗಿಡದ ಯಾವ ಭಾಗದಲ್ಲಿದೆ? ರೆಂಬೆಯ ತುದಿಯಲ್ಲಿದೆಯೆ? ಎಲೆಗಳ ಕಂಕುಳಲ್ಲಿದೆಯೆ? ಬೀಜಗಳ ಆಕಾರ, ಬಣ್ಣ, ಇತ್ಯಾದಿ ಏಳು ಪ್ರತ್ಯೇಕ ಗುಣಗಳನ್ನು ಆಯ್ದುಕೊಂಡು ಅವುಗಳ ಆನುವಂಶೀಯತೆಯ ಬಗ್ಗೆ ಶಾಸ್ತ್ರೀಯವಾಗಿ ಮೆಂಡಲ್ ಅಭ್ಯಾಸ ಮಾಡಿದ. ಬಟಾಣಿ ಗಿಡಗಳು ಶುದ್ಧ ತಳಿಗಳು. ಸ್ವಕೀಯ ಪರಾಗಸ್ಪರ್ಶ ಇವುಗಳ ಒಂದು ಗುಣ. ಹೀಗಾಗಿ ಈ ಗಿಡ ಈತನ ಪ್ರಯೋಗಕ್ಕೆ ಬಹಳ ಉಪಯುಕ್ತವಾಯಿತು. ವಿರುದ್ಧ ಗುಣಗಳುಳ್ಳ ಒಂದು ಜೊತೆ ಶುದ್ಧ ತಳಿಗಳನ್ನು ಈತ ತನ್ನ ಪ್ರಥಮ ಪ್ರಯೋಗಕ್ಕೆ ಆರಿಸಿಕೊಂಡ. ಉದಾಹರಣೆಗೆ ಕೆಂಪು ಬಣ್ಣದ ಹೂವಿನ ಗಿಡವನ್ನು ಬಿಳಿಯ ಬಣ್ಣದ ಹೂವಿನ ಗಿಡದೊಂದಿಗೆ ಅಡ್ಡ ಹಾಯಿಸಿದ. ಈ ಗಿಡಗಳನ್ನು ಪಿತೃ ಪೀಳಿಗೆ ಎಂದೂ ಈ ಪೀಳಿಗೆಯಿಂದ ಹುಟ್ಟಿಬಂದ ಪೀಳಿಗೆಯನ್ನು ಪ್ರಥಮ ಪೀಳಿಗೆ ಅಥವಾ $F_1$ ಪೀಳಿಗೆ ಎಂದೂ ಹೆಸರಿಸಿದ. ಈ ಪೀಳಿಗೆಯಲ್ಲಿ ಕೆಂಪು ಹೂ ಬಿಡುವ ಸಸ್ಯಗಳು ಮಾತ್ರ ಹುಟ್ಟಿದವು. ಇದರಿಂದಾಗಿ ಕೆಂಪು ಬಣ್ಣ ಪ್ರಬಲ ಗುಣವೆಂದೂ ಬಿಳಿಯ ಬಣ್ಣ ಅಪ್ರಬಲ ಗುಣವೆಂದೂ ಈತ ತೀರ್ಮಾನಿಸಿ, ಪ್ರಥಮ ಪೀಳಿಗೆಯಲ್ಲಿ ಪ್ರಬಲ ಗುಣ ಮಾತ್ರ ವ್ಯಕ್ತಗೊಳ್ಳುತ್ತದೆಂದೂ ಅಪ್ರಬಲ ಗುಣ ಆ ಗಿಡಗಳಲ್ಲಿದ್ದರೂ ವ್ಯಕ್ತಗೊಳ್ಳುವುದಿಲ್ಲವೆಂದೂ ತಿಳಿಸಿದ. ಪ್ರಥಮ ಪೀಳಿಗೆ ಪಿತೃಪೀಳಿಗೆಯಂತೆ ಶುದ್ಧ ತಳಿಗಳಲ್ಲ. ಇವು ಸಂಕರಗಳು. ಅನಂತರ ಪ್ರಥಮ ಪೀಳಿಗೆ ಜೀವಿಗಳನ್ನು ಒಂದರೊಡನೊಂದು ಅಡ್ಡಹಾಯಿಸಿ ದ್ವಿತೀಯ ಪೀಳಗೆಯನ್ನೂ ಪಡೆದ. ದ್ವಿತೀಯ ಪೀಳಿಗೆಗೆ ಈತ $F_2$ ಪೀಳಿಗೆ ಎಂದು ಹೆಸರಿಟ್ಟ. ಈ ಪೀಳಿಗೆಯಲ್ಲಿ ಕೆಂಪು ಮತ್ತು ಬಿಳಿ ಬಣ್ಣ ಕೊಡುವ ಎರಡೂ ಬಗೆಯ ಗಿಡಗಳು ಒಂದು ನಿರ್ದಿಷ್ಟಪ್ರಮಾಣದಲ್ಲಿ ಅಂದರೆ ೩ : ೧ ರ ಅನುಪಾತದಲ್ಲಿ ಹುಟ್ಟಿಕೊಂಡವು.

ಅನಂತರ ಮೆಂಡಲ್ ಎರಡು ಗುಣಗಳನ್ನು ತೆಗೆದುಕೊಂಡು ತನ್ನ ಮುಂದಿನ ಪ್ರಯೋಗಗಳನ್ನು ನಡೆಸಿದ. ಈ ಪ್ರಯೋಗಗಳಲ್ಲಿ ಈತ ೯ :೩ : ೩ : ೧ ರ ಅನುಪಾತದಲ್ಲಿ ಈ ಗುಣಗಳ ವಿಂಗಡಣೆಯನ್ನು ಕಂಡ. ಇಲ್ಲಿ ಮೆಂಡಲನ ಪ್ರಯೋಗಗಳ ನಿಖರತೆ, ಗುಣಗಳನ್ನು ಆರಿಸಿಕೊಂಡ ವಿಧಾನ, ಇವುಗಳ ಆನುವಂಶೀಯತೆಯ ರೀತಿ – ಇವು ಅತಿ ಮುಖ್ಯ. ಈತನ ತತ್ತ್ವಗಳು ಇಂದಿಗೂ ಸರ್ವಮಾನ್ಯ. ಮೆಂಡಲನ ಮೊದಲ ತತ್ತ್ವಕ್ಕೆ ಪ್ರತ್ಯೇಕತೆಯ ನಿಯಮ (ಲಾ ಆಫ್ ಸೆಗ್ರಿಗೇಷನ್) ಎಂದೂ ಎರಡನೆಯ ತತ್ತ್ವಕ್ಕೆ ಸ್ವತಂತ್ರ ವಿಂಗಡಣೆಯ ನಿಯಮ (ಲಾ ಆಫ್ ಇಂಡಿಪೆಂಡೆಂಟ್ ಅಸಾರ್ಟ್‌ಮೆಂಟ್) ಎಂದೂ ಹೆಸರು.

ಮೆಂಡಲನ ಆನುವಂಶೀಯ ನಿಯಮಗಳನ್ನು ಆಧಾರವಾಗಿಟ್ಟುಕೊಂಡು ಬ್ಯಾಕ್ಟೀರಿಯ, ಶಿಲೀಂಧ್ರಗಳು, ಡ್ರೊಸಾಫಿಲ, ಇಲಿ, ಕುರಿ, ಹಸು ಹಾಗೂ ಇನ್ನಿತರ ಜೀವಿಗಳ ಮೇಲೆ ಪ್ರಯೋಗಗಳನ್ನು ವಿಜ್ಞಾನಿಗಳು ನಡೆಸಿದ್ದಾರೆ. ಮೆಂಡಲನ ತತ್ತ್ವಗಳನ್ನು ವಿಶ್ವಮಾನ್ಯವೆಂದು ಈ ಪ್ರಯೋಗಗಳಿಂದ ಸ್ಥಿರೀಕರಿಸಲಾಗಿದೆ.

ಹೀಗೆ ಆನುವಂಶೀಯತೆಯ ವಿಧಾನಗಳು ಅರ್ಥವಾದಂತೆ ಜೀವಕೋಶ ವಿಜ್ಞಾನವೂ ಜೊತೆಯಲ್ಲಿಯೇ ಬೆಳೆದುಬಂತು. ಜೀವಕೋಶ, ಅದರ ವಿಭಜನೆ ಹಾಗೂ ವಿಭಜನೆಯ ಹಂತಗಳು, ದೈಹಿಕ ಕೋಶಗಳಲ್ಲಿ ಕ್ರೊಮೋಸೋಮುಗಳ ನಡೆವಳಿಕೆ, ಗ್ಯಾಮೀಟುಗಳು ಉತ್ಪಾದನೆ, ನಿಷೇಚನಕ್ರಿಯೆ ಮುಂತಾದ ವಿವಿಧ ರೀತಿಯ ಕ್ರಿಯೆಗಳನ್ನು ಕೋಶವಿಜ್ಞಾನಿಗಳು ಅರ್ಥಮಾಡಿಕೊಂಡರು. ಈ ಎಲ್ಲ ಸಂಶೋಧನೆಗಳಿಂದ ಕ್ರೊಮೋಸೋಮುಗಳು ಆನುವಂಶೀಯ ವಸ್ತುವನ್ನು ಹೊತ್ತು ಸಾಗುವ ವಾಹಕಗಳು ಎಂದು ಗೋಚರವಾಯಿತಲ್ಲದೆ ಆನುವಂಶೀಯ ಘಟಕಗಳಾದ ನೂರಾರು ಜೀನ್‌ಗಳು ಕ್ರೊಮೋಸೋಮುಗಳಲ್ಲಿ ಸ್ಥಿತವಾಗಿವೆ

ಎಂಬುದು ತಿಳಿದುಬಂತು. ಜೀವಕೋಶ ವಿಜ್ಞಾನ ಬೆಳೆದಂತೆ ಕ್ರೊಮೋಸೋಮುಗಳಲ್ಲಿ ಲಿಂಗಕ್ರೋಮೋಸೊಮುಗಳು ಮತ್ತು ಆಟೋಸೋಮುಗಳು ಎಂಬ ಎರಡು ಬಗೆಯವು ಇವೆ ಎಂಬುದೂ ಲಿಂಗಕ್ರೊಮೋಸೋಮುಗಳು ಆಟೊಸೋಮುಗಳಿಗಿಂತ ಭಿನ್ನರೀತಿಯಲ್ಲಿ ವರ್ತಿಸುತ್ತವೆ ಎಂಬುದೂ ಬೆಳಕಿಗೆ ಬಂತು. ಅಲ್ಲದೆ ಒಂದೇ ಜೀನ್ ನಾನಾ ರೂಪದಲ್ಲಿ ಇರಬಲ್ಲುದು ಎಂಬುದು ವೇದ್ಯವಾಯಿತು. ಇದರಿಂದಾಗಿ ಬಹುಗುಣಗಳುಳ್ಳ ಜೀನ್‌ಗಳ ಅಲೀಲ್ ಶ್ರೇಣಿ ಇದೆ ಎಂಬುದು ಅರ್ಥವಾಯಿತು. ಎಲ್ಲದಕ್ಕಿಂತ ಹೆಚ್ಚಾಗಿ ಕೆಲವು ಬಾರಿ ಒಂದು ಗುಣವನ್ನು ಅನೇಕ ಜೀನ್‌ಗಳು ತಮ್ಮ ಹಿಡಿತದಲ್ಲಿಟ್ಟುಕೊಂಡಿರಬಹುದು ಎಂಬುದು ಶ್ರುತಪಟ್ಟಿತು.

ಜೀನ್‌ಗಳ ಸಂಲಗ್ನತೆ, ಜೀನ್‌ಗಳ ಅದಲುಬದಲು ಕ್ರಿಯೆಯ ಅಭ್ಯಾಸದಿಂದ ಜೀನ್‌ಗಳ ಸಂಲಗ್ನತೆಯ ಪಟಗಳನ್ನು ತಯಾರಿಸಲಾಯಿತು. ಜೀನ್‌ಗಳ ವಿಕೃತಿ, ವಿಕೃತಕಾರಕ ಹಾಗೂ ಪ್ರೇರಕ ರಾಸಾಯನಿಕಗಳು, ಅಯಾನುಕಾರಕ ವಿಕಿರಣಗಳು ಮುಂತಾದುವು ಜೀನುಗಳ ಕಾರ್ಯಶೀಲತೆಯ ಮೇಲೆ ಬೆಳಕು ಚೆಲ್ಲಿವೆ. ಈ ಎಲ್ಲ ವಿಚಾರಗಳಿಂದಾಗಿ ಆನುವಂಶೀಯತೆಯ ವಿಧಾನವನ್ನು ಬಹಳ ಮಟ್ಟಿಗೆ ಅರ್ಥ ಮಾಡಿಕೊಳ್ಳಲಾಗಿದೆ. ವಿಭೇದೀಕರಣ ಕ್ರಿಯೆ, ಜೀನುಗಳ ಚಟುವಟಿಕೆಯ ಹರವು ಮುಂತಾದ ಕ್ಲಿಷ್ಟ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಇಂದು ಬಹುಮಟ್ಟಿಗೆ ಸಾಧ್ಯವಾಗಿದೆ.

ಪ್ರಾಥಮಿಕವಾಗಿ ತಳಿವಿಜ್ಞಾನದ ಗುರಿ ಆನುವಂಶೀಯ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದೇ ಆಗಿತ್ತು. ೧೯೩೦ ರ ವೇಳೆಗೆ ಈ ಗುರಿಯ ಸಾಧನೆ ಸಂಪೂರ್ಣವಾಗಿ ಮುಗಿದಿತ್ತು. ಇದೇ ಕಾಲದಲ್ಲಿ ಜೀನ್‌ಗಳ ಕ್ರಿಯೆಯ ಬಗ್ಗೆ ಅನೇಕ ಜೀವವಿಜ್ಞಾನಿಗಳ ಗಮನ ಹರಿದಿತ್ತು. ೧೯೨೩ ರಲ್ಲಿ ಗೆರಾಡ್ ಎಂಬ ವೈದ್ಯ ಅಲ್ಕ್ಯಾಪ್ಟೋನ್ಯೂರಿಯ ಎಂಬ ಕಾಯಿಲೆಯನ್ನು ಪತ್ತೆಹಚ್ಚಿದ. ಈ ರೋಗಕ್ಕೆ ಹೋಮೋಜೆನಿಸಿಟಿಕ್ ಆಮ್ಲ ಕಾರಣವೆಂದು ಈತ ಕಂಡುಕೊಂಡ. ಈ ರೋಗದಿಂದ ನರಳುವ ವ್ಯಕ್ತಿ ತನ್ನಲ್ಲಿ ಉತ್ಪತ್ತಿಯಾಗುವ ಹೋಮೋಜೆನಿಸಿಟಿಕ್ ಆಮ್ಲವನ್ನು ಉತ್ಸರ್ಜಿಸಲಾರ. ಈ ಆವಿಷ್ಕಾರದಿಂದ ತಳಿವಿಜ್ಞಾನಕ್ಕೆ ಒಂದು ಹೊಸ ತಿರುವು ಸಿಕ್ಕಿತು. ಈ ರೋಗಕ್ಕೂ ಜೀನ್ ಒಂದಕ್ಕೂ ಸಂಬಂಧ ಇದೆಯೆಂದು ಕಲ್ಪಿಸಲಾಯಿತು. ಸುಸ್ಥಿತಿಯಲ್ಲಿದ್ದ ಒಂದು ಜೀನ್ ವಿಕೃತಿಗೊಂಡಿರುವುದೇ ಈ ರೋಗಕ್ಕೆ ಕಾರಣವೆಂದು ತಿಳಿಯಲಾಯಿತು. ಜೊತೆಗೆ ಜೀನ್‌ಗಳು ಶರೀರದಲ್ಲಿ ನಡೆಯುವ ಪ್ರತಿಯೊಂದು ರಾಸಾಯನಿಕ ಕ್ರಿಯೆಯನ್ನೂ ತಮ್ಮ ಹಿಡಿತದಲ್ಲಿಟ್ಟು ಕೊಂಡಿರುತ್ತವೆ ಎಂಬುದು ತಿಳಿಯಿತು. ಹೀಗೆ ತಳಿವಿಜ್ಞಾನದ ಹೊಸ ಶಾಖೆಯಾದ ರಾಸಾಯನಿಕ ತಳಿವಿಜ್ಞಾನ ಹುಟ್ಟಿಕೊಂಡಿತು. ಇದರಿಂದ ಜೀನ್‌ನ ಕಾರ್ಯರಂಗವನ್ನು ಅರ್ಥಮಾಡಿಕೊಳ್ಳಲು ಹೊಸ ವಿಧಾನಗಳನ್ನು ಕಂಡುಕೊಳ್ಳಬೇಕಾಯಿತು. ಇದನ್ನರಿಯಲು ಉನ್ನತವರ್ಗದ ಜೀವಿಗಳಾದ ಇಲಿ, ಮನುಷ್ಯ, ಡ್ರೊಸಾಫಿಲ ಮುಂತಾದುವು ಸೂಕ್ತವಲ್ಲ ಎಂದು ತಳಿವಿಜ್ಞಾನಿಗಳು ಆಸ್ಕೊಮೈಸೀಟ್ ಶಿಲೀಂಧ್ರವಾದ ನ್ಯೂರಾಸ್ಪೊರವನ್ನು ತಮ್ಮ ಪ್ರಯೋಗಕ್ಕೆ ಆರಿಸಿಕೊಂಡರು. ಇದರಲ್ಲಿ ಆಹಾರ ಪೋಷಣೆಗೆ ಸಂಬಂಧಿಸಿದ ಹೊಸ ಹೊಸ ವಿಕೃತಿಗಳನ್ನು ಅಭ್ಯಾಸ ಮಾಡಿ ಒಂದು ಜೀನ್ ಒಂದು ಕಿಣ್ವ ಎಂಬ ತತ್ತ್ವವನ್ನು ಬೀಡಲ್ ಮತ್ತು ಟಾಟಮ್ ಎಂಬುವರು ಪ್ರತಿಪಾದಿಸಿದರು. ಅಂದರೆ ಒಂದು ಜೀನ್ ಒಂದು ಕಿಣ್ವದ ಉತ್ಪತ್ತಿ ನಡೆವಳಿಕೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ ಎಂದು ಇವರು ತಿಳಿಸಿದರು. ಈಗ ಈ ತತ್ತ್ವದಲ್ಲಿ ಸ್ವಲ್ಪ ಬದಲಾವಣೆ ಮಾಡಿ ಒಂದು ಜೀನ್ ಬಹು ಕಿಣ್ವಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರಬಹುದು ಎಂಬ ಅಭಿಪ್ರಾಯವನ್ನು ತಳೆಯಲಾಗಿದೆ. ಹೀಗೆ ತಳಿವಿಜ್ಞಾನ ಸಾವಕಾಶವಾಗಿ ಅಣುತಳಿವಿಜ್ಞಾನವಾಗಿ ಮಾರ್ಪಟ್ಟಿದೆ. ಜೀನ್‌ಗೂ ಅದರಿಂದ ಉತ್ಪತ್ತಿಯಾಗಿರುವ ವಸ್ತುಗಳಿಗೂ ಇರುವ ಸಂಬಂಧವನ್ನು ವಿಶ್ಲೇಷಿಸಲು ಇದು ಅನುವು ಮಾಡಿಕೊಟ್ಟಿದೆ. ಜೀನ್‌ಗಳ ಜೋಡಣೆಗೂ ಉತ್ಪತ್ತಿಯಾಗಿರುವ ವಸ್ತುಗಳಿಗೂ ಒಂದು ರೀತಿಯ ಸಹರೇಖೀಯ (ಕೋಲೀನಿಯರ್) ಸಂಬಂಧವಿದೆ ಎಂಬುದನ್ನು ಅಣುತಳಿವಿಜ್ಞಾನ ಶ್ರುತಪಡಿಸಿದೆ. ಈ ಎಲ್ಲ ಬೆಳವಣಿಗೆಗಳಿಂದ ಮೂರು ಅತಿ ಮುಖ್ಯ ವಿಚಾರಗಳನ್ನು ತಿಳಿಯಲು ಸಹಾಯವಾಗಿದೆ. ಅವುಗಳೆಂದರೆ :

೧. ಆನುವಂಶೀಯ ವಸ್ತುವಿನ ರಾಸಾಯನಿಕ ರಚನೆ (ಇದು ಡಿಎನ್‌ಎ ಎಂದು ಗೊತ್ತಾಗಿದೆ)

೨. ಡಿಎನ್‌ಎ ಎಂಬುದು ಎರಡು ಎಳೆಗಳಿಂದಾಗಿರುವ ಬಹು ನ್ಯೂಕ್ಲಿಯೊಟೈಡುಗಳ ಸರಪಣಿ ಎಂದೂ ಇದರಲ್ಲಿರುವ ಒಂದು ಎಳೆ ಮತ್ತೊಂದು ಎಳೆಗೆ ಪೂರಕ ರೂಪದಲ್ಲಿದೆ ಎಂದೂ ಈ ಸರಪಣಿ ದ್ವಿಕುಂಡಲಿನೀ ರೂಪದಲ್ಲಿದೆ ಎಂಬ ವಿಚಾರ.

೩. ಇನ್‌ಸುಲಿನ್ ಮುಂತಾದ ಪ್ರೊಟೀನ್ ಅಣುಗಳಲ್ಲಿ ಇರುವ ಅಮೈನೋ ಆಮ್ಲಗಳ ಸಂಖ್ಯೆ ಹಾಗೂ ಅವುಗಳ ಜೋಡಣೆ.

ಕಳೆದ ಶತಮಾನದಲ್ಲಿನ ಸಂಶೋಧನೆಗಳಿಂದಾಗಿ ಆನುವಂಶೀಯ ಸಂದೇಶಗಳು ಹೇಗೆ ಡಿಎನ್‌ಎ ಯಲ್ಲಿ ಅಡಗಿವೆ? ಅವು ಹೇಗೆ ಪುನರುತ್ಪಾದಿತವಾಗುತ್ತವೆ? ದೂತ ಆರ್‌ಎನ್‌ಎ ಉತ್ಪತ್ತಿ, ಪ್ರೊಟೀನು ಸಂಶ್ಲೇಷಣೆ ಮುಂತಾದ ಮೂಲಭೂತ ಕ್ರಿಯೆಗಳು ಹೇಗೆ ನಡೆಯುತ್ತವೆ ಎಂಬುದರ ಸಮಗ್ರ ಅರಿವು ಈಗ ತಿಳಿದಿದೆ.

ಬ್ಯಾಕ್ಟೀರಿಯಗಳ ಮೇಲೆ ನಡೆದಿರುವ ಸಂಶೋಧನೆಗಳಿಂದ ಬ್ಯಾಕ್ಟೀರಿಯ ಕ್ರೊಮೋಸೋಮಿನ ರಚನೆ. ಟ್ರಾನ್ಸ್‌ಡಕ್ಷನ್ ಕ್ರಿಯೆ ಹಾಗೂ ಅದರಿಂದ ನಡೆಯುವ ಜೀನ್‌ಗಳ ಅದಲುಬದಲು, ಜೊತೆಗೆ ಬ್ಯಾಕ್ಟೀರಿಯಗಳಲ್ಲಿರುವ ಲೈಂಗಿಕ ಕ್ರಿಯೆ, ಟ್ರಾನ್ಸ್‌ಫರ್ಮೇಷನ್ ಕ್ರಿಯೆ ಮುಂತಾದುವು ಪೂರ್ಣವಾಗಿ ಬೆಳಕಿಗೆ ಬಂದಿವೆ.

ತಳಿವಿಜ್ಞಾನದ ಮತ್ತೊಂದು ಮುಖ್ಯ ಶಾಖೆ ಎಂದರೆ ಜೀವಿಸಂದಣಿ ತಳಿವಿಜ್ಞಾನ. ಮೆಂಡಲದ ತತ್ತ್ವಗಳನ್ನು ಜೀವಿಸಂದಣಿಗೆ ಅನ್ವಯಿಸಿ ಅದಕ್ಕೂ ವಿಕಾಸಕ್ಕೂ ಇರುವ ಸಂಬಂಧಗಳನ್ನು ಅರಿಯುವುದಲ್ಲದೆ ಪ್ರಯೋಗಗಳನ್ನು ನಡೆಸಿಯೊ ಇಲ್ಲವೆ ಬಾಹ್ಯ ಪರಿಸರದಲ್ಲಿ ನಡೆಯುತ್ತಿರುವ ಆನುವಂಶೀಯತೆಯ ವಿಧಾನಗಳನ್ನು ಅಭ್ಯಾಸ ಮಾಡಿಯೊ ವಿಕಾಸ ಹೇಗೆ ಆಗುತ್ತದೆ ಎಂಬುದನ್ನು ತಿಳಿಯುವುದು ಇದರ ಮುಖ್ಯ ಗುರಿ. ವಿಕೃತಿಗಳು, ಅವುಗಳ ಆಯ್ಕೆ, ಜೀನ್‌ಗಳ ವಲಸೆ, ಜೀವಿಸಂದಣಿಯ ಗಾತ್ರ, ಪರಿಸರದ ವಿಭಿನ್ನತೆಗಳು ಹಾಗೂ ಜೀವಿಸಂದಣಿಯ ಮೇಲೆ ಪರಿಸರ ಬೀರುವ ಪ್ರಭಾವ ಮುಂತಾದ ವಿಚಾರಗಳನ್ನು ಜೀವಿಸಂದಣಿ ತಳಿವಿಜ್ಞಾನ ಚರ್ಚಿಸುತ್ತದೆ.

ತಳಿವಿಜ್ಞಾನದ ಅತಿ ಮುಖ್ಯ ಸಾಧನೆಯೆಂದರೆ ಸಂಕರತಳಿಗಳ ಸೃಷ್ಟಿ. ಇದರಿಂದ ಮನುಷ್ಯನ ಆಹಾರ ಸಮಸ್ಯೆಗಳಿಗೆ ಕೊಂಚ ಪರಿಹಾರ ದೊರಕಿದೆಯಲ್ಲದೆ ವೈದ್ಯಕೀಯ ವಿಜ್ಞಾನದಲ್ಲಿ ಆನುವಂಶೀಯ ರೋಗಗಳ ಬಗ್ಗೆ ಹೆಚ್ಚಿನ ಅರಿವು ಮೂಡಿದೆ. ಇದರಿಂದಾಗಿ ತಳಿವೈಜ್ಞಾನಿಕ ಸಲಹೆ (ಜೆನೆಟಿಕ್ ಕೌನ್ಸೆಲಿಂಗ್) ಕೊಡುವುದು ಸಾಧ್ಯವಾಗಿದೆ.

ತಳಿವಿಜ್ಞಾನ ಇಂದು ಮಾನವಿಕ ವಿಜ್ಞಾನಗಳ ನಾನಾ ಪ್ರಾಕಾರಗಳಿಗೆ ಪ್ರವೇಶಿಸಿದೆ. ಸಮಾಜ ವಿಜ್ಞಾನ, ನೀತಿವಿಜ್ಞಾನ ಮುಂತಾದ ಪ್ರಾಕಾರಗಳಲ್ಲಿ ತಳಿವಿಜ್ಞಾನದ ಬಗ್ಗೆ ಸಾಕಷ್ಟು ಚರ್ಚೆ ಪ್ರಾರಂಭವಾಗಿದೆ. ಮನುಷ್ಯ ತನ್ನ ಜೀನ್‌ಗಳನ್ನೇ ಮಾರ್ಪಾಟುಗೊಳಿಸಿ ಉತ್ತಮ ತಳಿ ಸೃಷ್ಟಿಗೆ ಕೈ ಹಾಕುತ್ತಿದ್ದಾನೆ. ಈಗ ತಳಿವಿಜ್ಞಾನಿಗಳು ಮನುಷ್ಯರಲ್ಲಿ ಶುದ್ಧತಳಿಯ ಸೃಷ್ಟಿ ಮತ್ತು ಜೆನೆಟಿಕ್ ಇಂಜನಿಯರಿಂಗ್‌ಗಳ ಬಗ್ಗೆ ಪ್ರಯೋಗಗಳನ್ನು ಪ್ರಾರಂಭಿಸಿದ್ದಾರೆ.

ಜೀನ್‌ಗಳ ಸಂಕೇತ ಭಾಷೆಯನ್ನು ತಿಳಿದುಕೊಂಡಿರುವ ಮಾನವ ಜೀವರಸಾಯನ ವಿಜ್ಞಾನದ ಸಂಶೋಧನೆಗಳ ಮೂಲಕ ಜೀನ್‌ಗಳ ಕಾರ್ಯ ಚಟುವಟಿಕೆಗಳ ಚೌಕಟ್ಟನ್ನು ತನ್ನ ಇಷ್ಟಕ್ಕೆ ತಕ್ಕಂತೆ ಪುನರ್‌ರೂಪಿಸಲು ಪ್ರಯತ್ನಿಸುತ್ತಿದ್ದಾನೆ. ಇದರಿಂದ ಮನುಷ್ಯನ ಮುಂದಿನ ವಿಕಾಸವನ್ನು ಬೇಕೆನಿಸಿದ ಕಡೆಗೆ ತಿರುಗಿಸಲು ಸಾಧ್ಯವೇ ಎಂಬುದನ್ನು ಅರಿಯಲು ತೀವ್ರವಾಗಿ ಸೆಣಸುತ್ತಿದ್ದಾನೆ. ಮಾನವರಲ್ಲಿ ಶುದ್ಧತಳಿಯ ಸೃಷ್ಟಿ ಅಥವಾ ಏಕರೀತಿಯಲ್ಲಿರುವ ವ್ಯಕ್ತಿಗಳ ಸೃಷ್ಟಿಯನ್ನು (ತದ್ರೂಪಿ-ಕ್ಲೋನ್) ಸಾಧಿಸಲು ಪ್ರಯತ್ನಗಳು ನಡೆದಿವೆ. ಪ್ರಪಂಚದ ಅತಿ ಬುದ್ಧಿವಂತನೊಬ್ಬನನ್ನು ಮಾದರಿಯಾಗಿಟ್ಟುಕೊಂಡು ಆತನ ಜೀವಕೋಶಗಳಿಂದ ಆತನಂತೆಯೇ ಇರುವ ಸಹಸ್ರಾರು ವ್ಯಕ್ತಿಗಳನ್ನು ಸೃಷ್ಟಿಸುವುದು ಈ ಶುದ್ಧ ತಳೀಕರಣದ ಪರಿಕಲ್ಪನೆ. ಹೆಣ್ಣಿನ ಶರೀರದಿಂದ ಅಂಡವನ್ನು ತೆಗೆದು ಹೊರ ಪ್ರನಾಳದಲ್ಲಿ ನಿಷೇಚಿಸಿ ಅದನ್ನು ಮತ್ತೆ ಗರ್ಭಕೋಶದೊಳಕ್ಕೆ ವರ್ಗಾಯಿಸಿ ಮಕ್ಕಳನ್ನು ಪಡೆಯುವ ಕ್ರಮ ಆಗಲೇ ಯಶಸ್ವಿಯಾಗಿದೆ.

ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದ ಸ್ಟೀವರ್ಡ್ ಎಂಬ ವಿಜ್ಞಾನಿ ಗಜ್ಜರಿ ಸಸ್ಯದ ಬೇರುಗಳ ಜೀವಕೋಶಗಳನ್ನು ಒಂದೊಂದಾಗಿ ಬೇರ್ಪಡಿಸಿ ಆ ಒಂದೊಂದು ಕೋಶದಿಂದ ಪಿತೃ ಅಥವಾ ಮಾತೃವಿನಂತೆಯೇ ಇರುವ ಗಜ್ಜರಿ ಗಿಡಗಳನ್ನು ಶುದ್ಧ ತಳೀಕರಣ ಕ್ರಿಯೆಯಿಂದ ಬೆಳೆಸಿದ (೧೯೬೦). ಪ್ರಾಣಿಗಳ ಜೀವಕೋಶಗಳನ್ನು ಈಗ ಕೃಷಿ ಮಾಡಲಾಗುತ್ತಿದೆ. ಇಂಥ ಕೃಷಿಯಿಂದ ಈ ಜೀವಕೋಶಗಳನ್ನು ಪುನರ್ ವಿಭೇದೀಕರಣಕ್ಕೊಳಪಡಿಸಿ ಪೂರ್ಣ ಪ್ರಾಣಿಯನ್ನು ಪಡೆಯುವ ಹವಣಿಕೆಯೂ ನಡೆದಿದೆ. ಇಂಗ್ಲೆಂಡಿನ ರೋಸಲಿಂಡ್ ಸಂಸ್ಥೆಯ ವಿಜ್ಞಾನಿಗಳು ಪ್ರಪ್ರಥಮವಾಗಿ ೧೯೯೭ರಲ್ಲಿ ಹೀಗೊಂದು ಸಫಲ ಪ್ರಯೋಗ ನಡೆಸಿ 'ಡಾಲಿ' ಎಂಬ ತದ್ರೂಪಿ ಕುರಿಯನ್ನು ಸೃಷ್ಟಿಸಿದರು.

ಶುದ್ಧ ತಳೀಕರಣ ಕಾರ್ಯದ ಮೂಲಕ ಸಸ್ಯ ಹಾಗೂ ಪ್ರಾಣಿ ತಳಿ ಉತ್ಪಾದನಾ ಕೇಂದ್ರಗಳಲ್ಲಿ ನಿರ್ದಿಷ್ಟ ಆನುವಂಶೀಯ ಗುಣಗಳುಳ್ಳ ತಳಿಗಳನ್ನು ಈಗ ಉತ್ಪಾದಿಸಲಾಗುತ್ತಿದೆ. ಅತಿ ಹೆಚ್ಚು ಫಸಲು ಕೊಡುವ ಗಿಡಗಳು, ಹೆಚ್ಚು ಹಾಲು ಕೊಡುವ ಹಸು, ಹೆಚ್ಚು ಮೊಟ್ಟೆಯಿಡುವ ಕೋಳಿಗಳನ್ನು ಈಗಾಗಲೇ ಉತ್ಪಾದಿಸಲಾಗಿದೆ. ಇದು ಮನುಷ್ಯನ ಹಂತದ ವರೆಗೂ ಬಂದರೆ ಏನಾಗಬಹುದು ಎಂಬುದನ್ನು ಊಹಿಸಲಸಾಧ್ಯ. ಇದು ಸಾಧ್ಯವಾದಲ್ಲಿ ಅತಿ ಮಾನವ ಸೃಷ್ಟಿ ಸಾಧ್ಯ. ಅರಿಸ್ಟಾಟಲನಂತ ತತ್ತ್ವಜ್ಞಾನಿಗಳನ್ನು,

ಐನ್‌ಸ್ಟೀನ್‌ನಂಥ ವಿಜ್ಞಾನಿಗಳನ್ನು, ಕ್ಯಾಷಿಯಸ್ ಕ್ಲೇನಂಥ ಶಕ್ತಿವಂತರನ್ನು ಎಷ್ಟು ಬೇಕಾದರೂ ಉತ್ಪಾದಿಸುವ ಮಟ್ಟಕ್ಕೆ ತಳಿಶಾಸ್ತ್ರ ತಲುಪಬಹುದು. ಯಾವುದಾದರೊಂದು ಕುಟುಂಬದಲ್ಲಿ ಇದ್ದ ಒಬ್ಬನೇ ಮಗ ಅಕಸ್ಮಾತ್ತಾಗಿ ಸಾವಿಗೀಡಾದರೆ ಕೆಲವು ಗಂಟೆಗಳ ಅನಂತರ ಆ ವ್ಯಕ್ತಿಯ ಶರೀರದ ಬದುಕಿರುವ ಜೀವಕೋಶಗಳನ್ನು ತೆಗೆದುಕೊಂಡು ಅವನಂತೆಯೇ ಇರುವ ವ್ಯಕ್ತಿಯನ್ನು ಸೃಷ್ಟಿ ಮಾಡಬಹುದು. ತಳಿವಿಜ್ಞಾನ ಇಂದು ಈ ಹಂತದವರೆಗೂ ಬಂದಿದೆ.

ಜೆನೆಟಿಕ್ ಇಂಜನಿಯರಿಂಗ್ ಮತ್ತು ಈ ಶುದ್ಧತಳೀಕರಣ ಕ್ರಿಯೆಯಿಂದಾಗಿ ಹೊಸ ಹೊಸ ಶಾಖೆಗಳು ಈಗ ತಳಿವಿಜ್ಞಾನದಲ್ಲಿ ಹುಟ್ಟಿಕೊಂಡಿವೆ. ಜೀನ್‌ನ ಸಂಕೇತ ಭಾಷೆ. ಅದರ ರಾಸಾಯನಿಕ ಕ್ರಿಯೆಗಳು ಗೊತ್ತಾದ ಮೇಲೆ ಮಾನವ ವಿಕಾಸ ಕ್ರಿಯೆಯನ್ನು ನಿಯಂತ್ರಿಸುವ ಹಾದಿಯಲ್ಲಿದ್ದಾನೆ. ಆನುವಂಶೀಯ ರೋಗಗಳ ನಿವಾರಣೆ, ಬೇಡದಿರುವ ಜೀನ್‌ಗಳನ್ನು ಕಿತ್ತು ಹೊಸ ಜೀನ್‌ಗಳನ್ನು ಕಸಿ ಮಾಡುವ ವಿಧಾನ ಇತ್ಯಾದಿ ಕ್ರಿಯೆಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ. ***

**ತಳಿಸಂಕೇತ:** ನ್ಯೂಕ್ಲಿಯಿಕ್ ಆಮ್ಲಗಳ ರಾಸಾಯನಿಕ ರೂಪದ ಬಗ್ಗೆ ಮತ್ತು ಅನುವಂಶೀಯತೆಯ ಕಾರ್ಯದಲ್ಲಿ ಅವುಗಳ ಪ್ರಾಮುಖ್ಯದ ಬಗ್ಗೆ ಹೆಚ್ಚು ವಿವರಗಳು ದೊರೆತ ಅನಂತರ ಜೀನ್ ಎಂಬುದರ ಅರ್ಥ ಬಹುಮಟ್ಟಿಗೆ ಸರಳವಾಯಿತು. ಜೀವಿಯ ಒಂದು ಗುಣವನ್ನು ತೋರ್ಪಡಿಸುವ ಸಾಮರ್ಥ್ಯವನ್ನು ಪಡೆದಿರುವ ಒಂದು ಕ್ರಿಯಾಶೀಲವಾದ ಅಂಗ ಇದು ಎಂಬ ನಂಬಿಕೆ ದೃಢವಾಯಿತು. ಗುಣವನ್ನು ವ್ಯಕ್ತಪಡಿಸುವ ಈ ಬಗೆಯ ಸಾಮರ್ಥ್ಯ ಎಲ್ಲ ಜೀವಿಗಳಲ್ಲಿದ್ದರೂ ಅಭಿವ್ಯಕ್ತಿ ಮಾತ್ರ ಬಹುಮಟ್ಟಿಗೆ ಪರಿಸರಕ್ಕೆ ಸಂಬಂಧಿಸಿರುತ್ತದೆ. ಸಾಧಾರಣವಾಗಿ ಜೀವಿಯಲ್ಲಿ ಹಲವಾರು ಗುಣಗಳು ಸುಪ್ತವಾಗಿದ್ದು ಯಾವುದೋ ಒಂದು ಸ್ಥಿತಿಯಲ್ಲಿ ಇವು ವ್ಯಕ್ತಗೊಳ್ಳುತ್ತವೆ. ಈ ರೀತಿ ಸುಪ್ತವಾಗಿರುವ ಗುಣಸಂಚಯಕ್ಕೆ ಜೀನ್‌ರೂಪವೆಂದು (ಜೀನೊಟೈಪ್) ಹೆಸರು. ಅಭಿವ್ಯಕ್ತಿ ಸಾಮರ್ಥ್ಯಕ್ಕೆ ನೋಟ ರೂಪವೆಂದು (ಫೀನೋಟೈಪ್) ಹೆಸರು.

ಬೀಡಲ್ ಮತ್ತು ಟಾಟಮ್ ಎಂಬುವರು ಸೂಕ್ಷ್ಮ ಜೀವಿಯಾದ ನ್ಯೂರಾಸ್ಪೋರ ಎಂಬ ಬೂಷ್ಟಿನಲ್ಲಿ 1940 ರಲ್ಲಿ ನಡೆಸಿದ ಪ್ರಯೋಗಗಳು ಜೀನ್ ಅಧ್ಯಯನದ ಬಗ್ಗೆ ಹೊಸ ನಿಲುವನ್ನು ನೀಡಿದುವು. ಕ್ಷ-ಕಿರಣಗಳ ಹಾಗೂ ಅತಿನೇರಿಳೆ ವಿಕಿರಣಗಳ ಸಹಾಯದಿಂದ ನ್ಯೂರಾಸ್ಪೋರದಲ್ಲಿ ವಿಕೃತಿಗಳನ್ನು ಪಡೆಯುವುದರಲ್ಲಿ ಇವರು ಯಶಸ್ವಿಯಾದರು. ಬೂಷ್ಟು ಸಾಮಾನ್ಯವಾಗಿ ತನಗೆ ಬೇಕಾದ ಹಲವು ಅವಶ್ಯಕ ರಾಸಾಯನಿಕಗಳನ್ನು ಸ್ವತಃ ಸಂಶ್ಲೇಷಿಸುತ್ತದೆ. ಈ ರೀತಿ ಎಲ್ಲ ಅವಶ್ಯಕ ರಾಸಾಯನಿಕಗಳನ್ನು ಸಂಶ್ಲೇಷಿಸಿಕೊಳ್ಳುವ ಸಾಮರ್ಥ್ಯವಿರುವ ಜೀವಿಗೆ ಕಾಡು ಬಗೆ (ವೈಲ್ಡ್ ಟೈಪ್ ) ಎಂದು ಹೆಸರು. ಇಂಥ ಕಾಡುಬಗೆ ಜೀವಿಗಳನ್ನು ವಿಕಿರಣದ ಪ್ರಭಾವಕ್ಕೆ ಒಡ್ಡಿದಾಗ ಕೆಲವು ಸಲ ಅತ್ಯಲ್ಪ ಪ್ರಮಾಣದಲ್ಲಿ ವಿಕೃತಿಗಳು ಉದ್ಭವಿಸುತ್ತವೆ. ಹೀಗೆ ಉದ್ಭವಿಸಿದ ವಿಕೃತ ಜೀವಿಗಳು ಕೆಲವು ವಿಶಿಷ್ಟ ರಾಸಾಯನಿಕಗಳನ್ನು ಪ್ರಧಾನವಾಗಿ ಅಮೈನೋ ಆಮ್ಲಗಳನ್ನು. ಸಂಶ್ಲೇಷಿಸುವುದರಲ್ಲಿ ಅಸಮರ್ಥವಾಗುವುದರಿಂದ ಬದುಕಲಾರವು. ಅವಶ್ಯಕ ಅಮೈನೋ ಆಮ್ಲಗಳನ್ನು. ಇವುಗಳಿಗೆ ಊಡಿಸಿದಾಗ ಇವು ತಮ್ಮ ಜೀವನವನ್ನು ಸುಗಮವಾಗಿ ನಡೆಸಬಲ್ಲ ಸಾಮರ್ಥ್ಯವನ್ನು ಗಳಿಸುವುವು. ಹೀಗೆ ಅಮೈನೋ ಆಮ್ಲಗಳನ್ನು ಸಂಶ್ಲೇಷಿಸಲು ಅಸಮರ್ಥವಾಗಿರುವ ಹಲವಾರು ವಿಕೃತ ಜೀವನಗಳನ್ನು ಬೀಡಲ್ ಮತ್ತು ಅವರ ಸಹೋದ್ಯೋಗಿಗಳು ಬೇರ್ಪಡಿಸಿ ವಿಕೃತಿಗಳ ಜೀವರಾಸಾಯನಿಕ ನಡವಳಿಕೆಯನ್ನು ವ್ಯಾಪಕವಾಗಿ ಅಭ್ಯಾಸಮಾಡಿ ಹಲವು ಹೊಸ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ.

ಮೆಂಡಲೀಯ ಭಾವನೆಯ ಪ್ರಕಾರ ಜೀನ್ ಎಂದರೆ ಕಣ್ಣಿಗೆ ಗೋಚರವಾಗುವಂಥ ಗುಣ. ಯಾವುದೇ ಜೀವಿಯ ಜೀವನಕ್ಕೆ ಸಾಧಾರಣವಾಗಿ ಬೇಕಾಗುವ ಪ್ರೋಟೀನುಗಳ ಸಂಶ್ಲೇಷಣೆ ವಿವಿಧ ಅವಶ್ಯಕ ಅಮೈನೋ ಆಮ್ಲಗಳ ಪಾಲಿಮರೀಕರಣದಿಂದ ಸಾಧ್ಯ ಎಂದು ಬೀಡಲ್ ಮತ್ತು ಸಂಗಡಿಗರು ನಡೆಸಿದ ಪ್ರಯೋಗಗಳಿಂದ ವ್ಯಕ್ತವಾಗಿದೆ. ಜೀನ್ ಎಂದರೆ ಒಂದು ನಿರ್ದಿಷ್ಟ ಕ್ರಮದಲ್ಲಿ ಅಮೈನೋ ಆಮ್ಲಗಳ ಸರಣಿಯ ಸಂಶ್ಲೇಷಣ ಸಾಮರ್ಥ್ಯವಿರುವ ಜೀವಧಾತುವಿನ ಅಂಗವೆಂದು ವಿವಿಧ ಕ್ಷೇತ್ರಗಳಲ್ಲಿ ನಡೆಸಿದ ಅಭ್ಯಾಸಗಳಿಂದ ಗೊತ್ತುಪಡಿಸಲಾಗಿದೆ.

ಬಹುಪಾಲು ಜೀವಿಗಳ ಬದುಕಿಗೆ ಅವಶ್ಯಕವಾದ ಎಲ್ಲ ರಾಸಾಯನಿಕಗಳ ಸಂಶ್ಲೇಷಣೆಗೆ ಬೇಕಾಗುವಂಥ ಮಾಹಿತಿ ಡಿಆಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲದಲ್ಲಿ (ಡಿಎನ್‌ಎ) ಅಡಕವಾಗಿದೆ ಎಂದು ಹಲವಾರು ಪ್ರಯೋಗಗಳಿಂದ ತಿಳಿದುಬಂದಿದೆ. ಈ ಮಾಹಿತಿಯು ವಿಶೇಷ ರೀತಿಯ ರೈಬೊನ್ಯೂಕ್ಲಿಯಕ್ ಆಮ್ಲದ (ಆರ್‌ಎನ್‌ಎ) ರೂಪದಲ್ಲಿ ಕೋಶದ್ರವ್ಯದಲ್ಲಿ ಸ್ಥಿತವಾಗಿರುವ, ಪ್ರೋಟೀನ್ ಸಂಶ್ಲೇಷಣೆಯ ಕಾರ್ಯಾಗಾರಗಳಾದ ರೈಬೊಸೋಮುಗಳಿಗೆ ರವಾನೆಯಾಗುತ್ತದೆ, ಸ್ವ-ಸ್ಥಿತಿಯಲ್ಲಿ ಡಿಎನ್‌ಎ ದ್ವಿಕುಂಡಲಿನಿಯ ಎರಡು ಎಳೆಗಳಲ್ಲಿ ಒಂದರಿಂದ ಲಿಪ್ಯಂತರಗೊಂಡು (ಟ್ರಾನ್ಸ್‌ಕ್ರಿಪ್ಷನ್) ಕೋಶದ್ರವ್ಯಕ್ಕೆ ಬರುತ್ತದೆ. (ಈ ಲಿಪ್ಯಂತರ ಕ್ರಿಯೆ ಆರ್‌ಎನ್‌ಎ-ಪಾಲಿಮರೇಸ್ ಎಂಬ ಕಿಣ್ವದ ಸಹಾಯದಿಂದ ನಡೆಯುತ್ತದೆ) ಮುಂದುವರಿದ ಜೀವಿಗಳಲ್ಲಿ ಅಂದರೆ ಯೂಕ್ಯಾರಿಯೋಟಗಳಲ್ಲಿ ಈ ವಿಧಾನ ನಡೆಯುವುದೆಂದು ತಿಳಿದುಬಂದಿದೆ. ನ್ಯೂಕ್ಲಿಯಸ್ ಸ್ಪಷ್ಟರೂಪದಲ್ಲಿರದ ನಿಮ್ನಜೀವಿಗಳಲ್ಲಿ ಅಂದರೆ ಪ್ರೋಕ್ಯಾರಿಯೋಟ್‌ಗಳಲ್ಲಿ ಪ್ರತಿಫಲನ ವಲಯದಲ್ಲಿಯೇ ಕೋಶದ್ರವ್ಯ ವಲಯ ಇರುತ್ತದೆ. ಪ್ರೊಟೀನ್ ಸಂಶ್ಲೇಷಣೆಗೆ ಅಗತ್ಯವಾದ ಮಾಹಿತಿಯನ್ನು ಹೊತ್ತು ತರುವ ಆರ್‌ಎನ್‌ಎ ಅಣುಗಳಿಗೆ ದೂತ ಆರ್‌ಎನ್‌ಎ (ಮೆಸೆಂಜರ್ ಆರ್‌ಎನ್‌ಎ) ಎಂದು ಹೆಸರು.

ಪ್ರೊಟೀನುಗಳು 20 ಬಗೆಯ ಅಮೈನೋ ಆಮ್ಲಗಳಿಂದ ರಚಿತವಾಗಿವೆ. ಡಿಎನ್‌ಎ ಯಲ್ಲಿರುವ 4 ಬಗೆಯ ಪ್ರತ್ಯಾಮ್ಲಗಳ ವಿವಿಧ ರೀತಿಯ ಜೋಡಣೆಯಿಂದ 20 ಬಗೆಯ ಅಮೈನೋ ಆಮ್ಲಗಳ ತಯಾರಿಕೆಯ ಸಾಧ್ಯತೆಯ ಬಗ್ಗೆ ಹಲವಾರು ಸಿದ್ಧಾಂತಗಳು ಹುಟಿಕೊಂಡವು. ತಳಿಸಂಕೇತದ ಹೆಚ್ಚು ವ್ಯಾಪಕವಾದ ಸಂಶೋಧನೆಗಳು ಪ್ರಧಾನವಾಗಿ 1961 ರಿಂದ 1966 ರ ವರೆಗೆ ನಡೆದವು.

ತಳಿಸಂಕೇತವನ್ನು ಆರು ಹಂತಗಳಲ್ಲಿ ಅಭ್ಯಾಸ ಮಾಡಬಹುದು: 1. ಚಾರಿತ್ರಿಕ ಹಿನ್ನೆಲೆ, 2. ಸಿದ್ಧಾಂತಗಳ ಅಭ್ಯಾಸ, 3. ಜೀವರಾಸಾಯನಿಕ ದೃಷ್ಟಿ 4. ರಾಸಾಯನಿಕ ದೃಷ್ಟಿ, 5. ಸಾಮಾನ್ಯ ಗುಣಗಳು, 6 ತಳಿಸಂಕೇತ ಮತ್ತು ವಿಕೃತಿ.

ಚಾರಿತ್ರಿಕ ಹಿನ್ನೆಲೆ : ತಳಿಸಂಕೇತದ ಬಗ್ಗೆ ಮೊತ್ತಮೊದಲು ಸಿದ್ಧಾಂತವೊಂದನ್ನು ಸೂಚಿಸಿದಾತ ಡೌನ್ಸ್ ಎಂಬ ವಿಜ್ಞಾನಿ (1952). ಡಿಎನ್‌ಎ ಯ ದ್ವಿಕುಂಡಲಿನೀರೂಪದ ಮಾದರಿಯನ್ನು ವಾಟ್‌ಸನ್ ಮತ್ತು ಕ್ರಿಕ್ ಸೂಚಿಸುವುದಕ್ಕೆ ಮೊದಲೇ ಡಿಎನ್‌ಎ ಎಳೆಯಲ್ಲಿ ಅನುರೇಖೀಯವಾಗಿರುವ ನ್ಯೂಕ್ಲಿಯೊಟೈಡ್ ಸರಣಿಗಳಿಗೂ ಪ್ರೊಟೀನ್ (ಪಾಲಿಪೆಪ್ಟೈಡ್) ಅಣುವಿನಲ್ಲಿ ರೇಖೀಯ ರೂಪದಲ್ಲಿರುವ ಅಮೈನೋ ಆಮ್ಲಗಳ ಸರಣಿಗೂ ಒಂದು ನಿರ್ದಿಷ್ಟವಾದ ಸಂಬಂಧವಿರಬೇಕೆಂದು ಡೌನ್ಸ್ ಊಹಿಸಿದ್ದರು. ಅಲ್ಲದೆ ನಿರ್ದಿಷ್ಟ ರೂಪದಲ್ಲಿ ಅಮೈನೋ ಆಮ್ಲಗಳನ್ನು ಗುರುತಿಸುವ ವಿಷಯಗಳು ಡಿಎನ್‌ಎ ಯಲ್ಲಿ ಶೇಖರಗೊಂಡಿದ್ದು. ಈ ವಿಷಯಗಳನ್ನು ವ್ಯಕ್ತಗೊಳಿಸುವುದರಲ್ಲಿ ಕೆಲವು ಬಗೆಯ ಅಣುಗಳು ಮಧ್ಯವರ್ತಿಗಳಾಗಿ ಸಹಕರಿಸುತ್ತವೆ ಎಂದು ನಂಬಲಾಗಿತ್ತು. ಇಂಥ ಸಹಸಂಬಂಧಕ್ಕೆ ಜೀವಧಾತುವೇ ಕಾರಣ ಎಂಬ ವಿಜ್ಞಾನಿಗಳ ನಂಬಿಕೆ ಈ ಬಗೆಯ ಸಿದ್ಧಾಂತಕ್ಕೆ ಸಹಕಾರಿಯಾಗಿತ್ತು. ಕೆಲವು ಸಂಕೇತಗಳು ಜೀವದ್ರವ್ಯವಾದ ಡಿಎನ್‌ಎಯಿಂದ ಒಂದು ಗುಣದ ಅಭಿವ್ಯಕ್ತಿ ಕ್ರಿಯೆಯಲ್ಲಿ ನೆರವಾಗುವುವೆಂದು 1954ರಲ್ಲಿ ಗ್ಯಾಮೋ ಎಂಬವರು ತಿಳಿಸಿದ್ದರು. ಡಿಎನ್‌ಎಯಲ್ಲಿ ಕೇವಲ ನಾಲ್ಕು ಬಗೆಯ ಪ್ರತ್ಯಾಮ್ಲಗಳಿರುವುದರಿಂದಲೂ ಜೀವಿಯ ಗುಣದ ಅಭಿವ್ಯಕ್ತಿ 20 ಬಗೆಯ ಅಮೈನೋ ಆಮ್ಲಗಳ ಮೂಲಕ ನಡೆಯುವುದರಿಂದಲೂ ಪ್ರತ್ಯಾಮ್ಲಗಳಿಗೆ ಮತ್ತು ಅಮೈನೋ ಆಮ್ಲಗಳಿಗೆ ಒಂದು ಬಗೆಯ ನಿಕಟ ಸಂಬಂಧವಿರಬೇಕೆಂಬ ಊಹೆ ಮೂಡಿತು. ನಾಲ್ಕು ಪ್ರತ್ಯಾಮ್ಲಗಳಲ್ಲಿ ಒಂದೊಂದೂ ಒಂದೊಂದು ಅಮೈನೋ ಆಮ್ಲದ ಸಂಶ್ಲೇಷಣೆಗೆ ಸಂಕೇತ ನೀಡಲಾರದು. ಒಂದು ಪಕ್ಷ ಹೀಗಾಗುವುದಾದರೆ ಕೇವಲ ನಾಲ್ಕು ಬಗೆಯ ಅಮೈನೋ ಆಮ್ಲಗಳು ಸಂಶ್ಲೇಷಿತವಾಗಲು ಸಾಧ್ಯ. (ಜೀವಿಗೆ 20 ಬಗೆಯ ಅಮೈನೋ ಆಮ್ಲಗಳು ಬೇಕಾಗುವುದರಿಂದ ಈ ಬಗೆಯ ಕ್ರಿಯಾವಿನ್ಯಾಸ ಅಸಾಧ್ಯ). ಒಂದು ವೇಳೆ ಎರಡು ಪ್ರತ್ಯಾಮ್ಲಗಳು ಒಂದು ಬಗೆಯ ಅಮೈನೋ ಆಮ್ಲದ ಸಂಶ್ಲೇಷಣೆಗೆ ಸಂಕೇತ ನೀಡಬಹುದೆಂದು ಭಾವಿಸಿದರೆ ಕೇವಲ 16 ಬಗೆಯ ಅಮೈನೋ ಆಮ್ಲದ ಸಂಶ್ಲೇಷಿತಗೊಳ್ಳಲು ಸಾಧ್ಯ. ಒಂದು ವೇಳೆ ಮೂರು ಪ್ರತ್ಯಾಮ್ಲಗಳು ಸೇರಿಕೊಂಡು ಒಂದು ಬಗೆಯ ಅಮೈನೋ ಆಮ್ಲ ಸಂಶ್ಲೇಷಣೆಗೆ ಸಂಕೇತ ನೀಡಬಹುದೆಂದು ಊಹಿಸಿದರೆ 20 ಅವಶ್ಯಕ ಅಮೈನೋ ಆಮ್ಲದ ಸಂಶ್ಲೇಷಣೆಗೆ ಸುಮಾರು 64 ಬಗೆಯ ಸಂಕೇತಗಳು ಲಭಿಸುವುವು. ಈ ಮೂರನೆಯ ಸಾಧ್ಯತೆಯನ್ನು ಗ್ಯಾಮೋ ಯೋಚಿಸಿ ಡಿಎನ್‌ಎಯಿಂದ ಸಂಕೇತಗಳು ತ್ರಿವಳಿ ರೂಪದಲ್ಲಿ ಲಿಪ್ಯಂತರಗೊಂಡು ಮತ್ತೊಂದು ಬಗೆಯ ಕ್ರಿಯಾವಿನ್ಯಾಸದ ಮೂಲಕ ಪಾಲಿಪೆಪ್ಟೈಡ್ ಭಾಷೆಗೆ ಭಾಷಾಂತರಗೊಳ್ಳುವುವು (ಟ್ರಾನ್ಸ್‌ಲೇಷನ್) ಎಂದು ಹೇಳಿದರು. ಈ ವೇಳೆಗೆ ಪ್ರೋಟೀನ್ ಸಂಶ್ಲೇಷಣೆ ಕೋಶದ್ರವ್ಯದಲ್ಲಿ ರೈಬೋಸೋಮಿನ ಆವರಣದಲ್ಲಿ ನಡೆಯುವುದೆಂದೂ ಡಿಎನ್‌ಎಯಿಂದ ಸಂಕೇತಗಳನ್ನು ದೂತ ಆರ್‌ಎನ್‌ಎ ಹೊತ್ತು ತರುವುದೆಂದೂ ವಿಜ್ಞಾನಿಗಳು ಗಮನಿಸಿದ್ದರು.

ಗ್ಯಾಮೋ ಸೂಚನೆಗಳ ತರುಣದಲ್ಲಿ ಡಿಎನ್‌ಎಯ ದ್ವಿಕುಂಡಲಿನೀ ರೂಪದ ಮಾದರಿಯನ್ನು ಸೂಚಿಸುವುದರಲ್ಲಿ ಒಬ್ಬರಾದ ಕ್ರಿಕ್ ಮತ್ತು ಅವರ ಸಂಗಡಿಗರು ತಳಿಸಂಕೇತದ ಬಗ್ಗೆ ಹೆಚ್ಚು ವ್ಯಾಪಕವಾದ ಸಂಶೋಧನೆಗಳನ್ನು ನಡೆಸಲಾರಂಭಿಸಿದರು. ಮತ್ತೊಬ್ಬರಾದ ವಾಟ್ಸನ್ ತಳಿಸಂಕೇತದ ಮೂಲಕ್ರಿಯೆಯಾದ ಲಿಪ್ಯಂತರಕ್ರಿಯೆ ಹಾಗೂ ಪ್ರೋಟೀನ್ ಸಂಶ್ಲೇಷಣೆಯ ಬಗ್ಗೆ ಸಂಶೋಧನೆಗಳನ್ನು ನಡೆಸಲಾರಂಭಿಸಿದರು.

ಸಿದ್ಧಾಂತಗಳ ಅಭ್ಯಾಸ : ಕೆಲವು ಮೂಲಭೂತ ಸಂಶೋಧನೆಗಳ ಫಲವಾಗಿ ಕ್ರಿಕ್ ಮತ್ತು ಅವರ ಸಂಗಡಿಗರು ತಳಿಸಂಕೇತದ ಬಗ್ಗೆ ಹಲವಾರು ಸೈದ್ಧಾಂತಿಕ ನಂಬಿಕೆಗಳನ್ನು 1961 ರಲ್ಲಿ ಪ್ರಕಟಿಸಿದರು. ಅವರು ಸೂಚಿಸಿದ ನಂಬಿಕೆಗಳು ಹೆಚ್ಚು ಮಹತ್ತ್ವದವು. ತಳಿಸಂಕೇತದ ಅಭ್ಯಾಸ ಬಲುಮಟ್ಟಿಗೆ ಈ ನಂಬಿಕೆಗಳ ತಳಹದಿಯಲ್ಲೇ ರೂಪುಗೊಂಡಿದೆ. ತಳಿಸಂಕೇತದ ಬಗ್ಗೆ ಅವರು ಗಮನಿಸಿದ ಪ್ರಮುಖ ಅಂಶಗಳಿವು; (ಈ ಅಂಶವನ್ನು ಸಾಮೂಹಿಕವಾಗಿ ಸಂಕೇತ ನಿಘಂಟು ಎಂದು ಕರೆಯುವುದುಂಟು).

1. ಮೂರು ಅಥವಾ ಅದರ ಗುಣಕಗಳುಳ್ಳ ಪ್ರತ್ಯಾಮ್ಲಶ್ರೇಣಿ ಒಂದು ಅಮೈನೋ ಆಮ್ಲವನ್ನು ಸಂಕೇತಿಸುತ್ತದೆ. ಇದಕ್ಕೆ ತ್ರಿವಳಿ ಸಂಕೇತ (ಟ್ರಿಪ್ಲೆಟ್ ಕೋಡ್) ಎಂಬ ಜನಪ್ರಿಯ ಹೆಸರುಂಟು. ಪ್ರತಿಯೊಂದು ತ್ರಿವಳಿ ಸಂಕೇತವನ್ನು ಒಂದು ಕೋಡಾನ್ (ನೋಡಿ) ಎಂದು ಕರೆಯುತ್ತಾರೆ. ತಳಿಸಂಕೇತದಲ್ಲಿ 64 ಕೋಡಾನ್‌ಗಳಿವೆ.

2. ಕೋಡಾನಿನ ಪ್ರತಿಯೊಂದು ಅಕ್ಷರಕ್ಕೂ ಸಂಕೇತಾಕ್ಷರ ಎಂದು ಹೆಸರು.

3. ಸಂಕೇತಕ್ಕೆ ಅಧಿವ್ಯಾಪಕ ಗುಣ ಇಲ್ಲ.

4. ಪ್ರತ್ಯಾಮ್ಲಗಳು ಒಂದು ನಿರ್ದಿಷ್ಟ ಸ್ಥಾನದಿಂದ ಆರಂಭಗೊಂಡು ತ್ರಿವಳಿ ರೂಪದಲ್ಲಿ ಪಠಿಸಲ್ಪಡುತ್ತವೆ. ಒಂದು ತುದಿಯಿಂದ ಮತ್ತೊಂದು ತುದಿಯ ವರೆಗೆ ಪಠಿಸಲ್ಪಡುವಾಗ ಮಧ್ಯೆ ಎಲ್ಲಿಯೂ ವಿರಾಮ ಅಥವಾ ಅರ್ಧವಿರಾಮ ಚಿಹ್ನೆ ಇಲ್ಲ. ಸಾಧಾರಣವಾಗಿ ರೈಬೋಸ್ ಶರ್ಕರವುಳ್ಳ ನ್ಯೂಕ್ಲಿಯೊಟೈಡ್ ಸರಣಿಯಲ್ಲಿ 5' ತುದಿಯಿಂದ 3' ತುದಿಯ ಕಡೆಗೆ ಪಠಣ ಆಗುತ್ತದೆ.

5. ತ್ರಿವಳಿಗಳ ಪಠಣ ಒಮ್ಮೆ ಆರಂಭವಾದರೆ ಪಠಣವಾಗಬೇಕಾದ ಭಾಗ ಪೂರ್ಣವಾಗುವವರೆಗೂ ನಡೆಯುತ್ತದೆ. ಈ ಭಾಗಕ್ಕೆ ಪಠಣ ಚೌಕಟ್ಟು (ರೀಡಿಂಗ್ ಫ್ರೇಮ್) ಎಂದು ಹೆಸರು, ಪಠಣ ಚೌಕಟ್ಟನ್ನು ತ್ರಿವಳಿಯ ಒಂದು ಸಂಕೇತಾಕ್ಷರದಿಂದ ಮತ್ತೊಂದು ಸಂಕೇತಾಕ್ಷರಕ್ಕೆ ಬದಲಾಯಿಸಬಹುದು.

6. ಸಂಕೇತಕ್ಕೆ ಯಾವಾಗಲೂ ಸ್ಥಿತಿಬಾಹುಳ್ಯ ಉಂಟು. ಅಂದರೆ ಒಂದು ಅಮೈನೋ ಆಮ್ಲಕ್ಕೆ ಒಂದಕ್ಕಿಂತ ಹೆಚ್ಚು ತ್ರಿವಳಿ ಸಂಕೇತಗಳಿರಬಹುದು ಉದಾಹರಣೆಗೆ ಸೆರೀನ್ ಎಂಬ ಅಮೈನೋ ಆಮ್ಲಕ್ಕೆ ಕನಿಷ್ಠ ಪಕ್ಷ 6 ಸಂಕೇತಗಳಿವೆ.

7. ಸಂಕೇತಗಳಿಗೆ ಸಂದಿಗ್ಧ ಗುಣವೂ ಉಂಟು. ಅಂದರೆ ಒಂದು ತ್ರಿವಳಿ ಸಂಕೇತ ಒಂದಕ್ಕಿಂತ ಹೆಚ್ಚು ಅಮೈನೋ ಆಮ್ಲಗಳ ಸಂಶ್ಲೇಷಣೆಗೆ ಕಾರಣವಾಗಿರಬಹುದು. ಉದಾಹರಣೆಗೆ ಮೆಥೈಯನೀನ್ ಮತ್ತು ಫಾರ್ಮೈಲ್ ಮೆಥೈಯನೀನ್ ಎಂಬ ಅಮೈನೋ ಆಮ್ಲಗಳನ್ನು AUG ಎಂಬ ಸಂಕೇತ ಗುರುತಿಸುತ್ತದೆ.

8. ಸಂಕೇತಗಳು ಸಾರ್ವತ್ರಿಕ. ಅಂದರೆ ಎಲ್ಲ ಜೀವಿಗಳಲ್ಲೂ ಸಂಕೇತಗಳು 64 ತ್ರಿವಳಿ ರೂಪಗಳಲ್ಲಿವೆ.

ಒಟ್ಟಾರೆ ಹೇಳುವುದಾದರೆ ಮೂರು ನ್ಯೂಕ್ಲಿಯೊಟೈಡ್‌ಗಳಿರುವ ಒಂದು ಗುಂಪೇ ತಳಿಸಂಕೇತ, ಉದಾಹರಣೆಗೆ ದೂತ ಆರ್‌ಎನ್‌ಎಯಲ್ಲಿ ಯುರಾಸಿಲ್ ಎಂಬ ನ್ಯೂಕ್ಲಿಯೊಟೈಡು UUU ರೂಪದಲ್ಲಿ ಜೋಡಣೆಗೊಂಡಿರುವುದು. ಹೀಗೆ ಸಂಕೇತದಲ್ಲಿ ಜೋಡಣೆಗೊಂಡಿರುವ ಪ್ರತಿಯೊಂದು ನ್ಯೂಕ್ಲಿಯೊಟೈಡಿಗೆ ಸಂಕೇತಾಕ್ಷರ ಎಂದು ಹೆಸರು. ಡಿಎನ್‌ಎಯಿಂದ ಬರುವ ದೂತ ಆರ್‌ಎನ್‌ಎಯಲ್ಲಿರುವ ಸಂಕೇತಾಕ್ಷರಗಳಿಗೆ ಅನುಗುಣವಾಗಿ ಕೋಶದ್ರವ್ಯದಲ್ಲಿರುವ ವಾಹಕ ಆರ್‌ಎನ್‌ಎ (ಟ್ರಾನ್ಸ್‌ಫರ್ ಆರ್‌ಎನ್‌ಎ) ಎಳೆಯ ಮೇಲೆ ಪ್ರತಿಸಂಕೇತಾಕ್ಷರಗಳಿವೆ. ಇಂಥ ಮೂರು ಅಕ್ಷರಗಳ ಗುಂಪಿಗೆ ಪ್ರತಿ ಸಂಕೇತ (ಆ್ಯಂಟಿಕೋಡಾನ್) ಎಂದು ಹೆಸರು. ಪಟುಗೊಂಡ ಅಮೈನೋ ಆಮ್ಲವನ್ನು ಗುರುತಿಸುವ ಅಥವಾ ಪಠಿಸುವ ಸಾಮರ್ಥ್ಯವಿರುವ ಸಂಕೇತಕ್ಕೆ ಅರ್ಥಪೂರ್ಣ ಸಂಕೇತ ಎಂದು ಹೆಸರು. ಅಮೈನೋ ಆಮ್ಲವನ್ನು ಪಠಿಸುವಂಥ ಕಾರ್ಯದಲ್ಲಿ ಅಸಮರ್ಥವಾಗಿರುವ ಸಂಕೇತಕ್ಕೆ ಅಸಂಗತ ಅಥವಾ ಅಬದ್ಧ ಸಂಕೇತ (ನಾನ್‌ಸೆನ್ಸ್ ಕೋಡ್) ಎಂದು ಹೆಸರು. (ಇದನ್ನು ಸ್ಥಗಿತಕ ಎಂದು ಕರೆಯುತ್ತಾರೆ). ದೂತ ಆರ್‌ಎನ್‌ಎಯಲ್ಲಿರುವ ಸಂಕೇತಕ್ಕೆ ಅನುಸಾರವಾಗಿ ಆಯಾ ಅಮೈನೋ ಆಮ್ಲವನ್ನು ಗುರುತಿಸುವ ಕ್ರಿಯೆಗೆ ಸಂಕೇತ ಪಠಣ (ರೀಡಿಂಗ್ ಆಫ್ ದಿ ಕೋಡ್) ಅಥವಾ ಸಂಕೇತ ಸ್ಫುರಣ ಎಂದು ಹೆಸರು. ಡಿಎನ್‌ಎ ಯಿಂದ ಸಂಕೇತಗಳು ಅನುರೂಪವಾಗಿ ದೂತ ಆರ್‌ಎನ್‌ಎ ಎಳೆಯ ಮೇಲೆ ನಕಲು ಆಗುವ ಕಾರ್ಯಕ್ಕೆ ಲಿಪ್ಯಂತರ (ಟ್ರಾನ್ಸ್‌ಕ್ರಿಪ್ಷನ್) ಎಂದು ಹೆಸರು. ಈ ಕ್ರಿಯೆ ಆರ್‌ಎನ್‌ಎ ಪಾಲಿಮರೇಸ್ ಎಂಬ ಕಿಣ್ವದ ಸಹಾಯದಿಂದ ನಡೆಯುತ್ತದೆ. ಸಂಕೇತಕ್ಕೆ ಅನುಸಾರವಾಗಿ ಪ್ರತಿಸಂಕೇತಗಳಿರುವ ವಾಹಕ ಆರ್‌ಎನ್‌ಎ ಪಟುಗೊಂಡ ಅಮೈನೋ ಆಮ್ಲಗಳನ್ನು ಹೊತ್ತು ರೈಬೋಸೋಮಿನ ವಲಯಕ್ಕೆ ತಂದು ಅವನ್ನು ಪಾಲಿಮರೀಕರಣ ಒಳಪಡಿಸುವ ಕಾರ್ಯವೇ ಭಾಷಾಂತರ (ಟ್ರಾನ್ಸ್‌ಲೇಷನ್).

ಮೇಲೆ ಉಲ್ಲೇಖಿತವಾಗಿರುವ ಗುಣಗಳನ್ನು ಹಾಗೂ ಸಂಕೇತ ನಿಘಂಟಿನಲ್ಲಿರುವ ಬಹುಶಃ ಎಲ್ಲ ಪದಗಳ ಅರ್ಥವನ್ನು ಪ್ರಾಯೋಗಿಕವಾಗಿ ಗಮನಿಸಿದ ಶ್ರೇಯಸ್ಸು ಬಲುಮಟ್ಟಿಗೆ ಕ್ರಿಕ್ ಮತ್ತು ಅವರ ಸಹೋದ್ಯೋಗಿಗಳಿಗೆ ಸಲ್ಲುತ್ತದೆ. ಅವರು ತಮ್ಮ ಪ್ರಯೋಗಗಳಿಗೆ ಮುಖ್ಯವಾಗಿ ಎಶ್ಚಿರೀಷಿಯ ಕೋಲಿ ಎಂಬ ಬ್ಯಾಕ್ಟೀರಿಯವನ್ನು ದಾಳಿ ಮಾಡತಕ್ಕ $T_2$ ಎಂಬ ವೈರಸನ್ನು ಬ್ಯಾಕ್ಟೀರಿಯೊಫಾಜ್ ವೈರಸನ್ನು ಬಳಸಿದರು. ಈ ಬ್ಯಾಕ್ಟೀರಿಯೊಫಾಜಿನ ಕ್ರೊಮೋಸೋಮಿನಲ್ಲಿರುವ ಹಲವಾರು ಕೇಂದ್ರಗಳಲ್ಲಿ Y II ಎಂಬ ಕೇಂದ್ರವನ್ನು ಪ್ರಯೋಗಗಳಿಗಾಗಿ ಆಯ್ದುಕೊಂಡರು. ಈ ಕೇಂದ್ರದ ಬಗ್ಗೆ ಈ ಮೊದಲೇ ಬೆನ್‌ಜರ್ ಎಂಬುವರು ವಿಶೇಷವಾಗಿ ಅಭ್ಯಾಸ ಮಾಡಿದ್ದರು. ಅವರ ಪ್ರಕಾರ ಈ ಕೇಂದ್ರದಲ್ಲಿ A ಮತ್ತು B ಎಂಬ ಎರಡು ಭಾಗಗಳಿವೆ. ಜೀನ್‌ನ್ನು ಸೂಕ್ಷ್ಮರೂಪವನ್ನು ಅಭ್ಯಸಿಸುವ ಸಲುವಾಗಿ ಬೆನ್‌ಜರ್ A ಭಾಗವನ್ನು ಆರಿಸಿಕೊಂಡರು. ಕ್ರಿಕ್ ಮತ್ತು ಅವರ ಸಂಗಡಿಗರು B ಭಾಗವನ್ನು ತಮ್ಮ ಪ್ರಯೋಗಕ್ಕೆ ಆರಿಸಿಕೊಂಡು ವಿವಿಧ ಹಾಗೂ ನಿರ್ದಿಷ್ಟ ರೀತಿಯ ವಿಕೃತಿಗಳ ಸಹಾಯದಿಂದ ಮತ್ತು ರಾಸಾಯನಿಕಗಳ ಪ್ರೇರಣೆಯಿಂದ ತಳಿಸಂಕೇತದ ಗುಣಗಳನ್ನೆಲ್ಲ ಅಭ್ಯಾಸಮಾಡಿದ್ದಾರೆ.

ಜೀವರಾಸಾಯನಿಕ ದೃಷ್ಟಿ : ಕ್ರಿಕ್ ಮತ್ತು ಸಂಗಡಿಗರು ನಡೆಸಿದ ಪ್ರಯೋಗಗಳ ಹಾಗೂ ಸೂಚಿಸಿದ ಸಿದ್ಧಾಂತಗಳ ಸತ್ಯತೆ ಮನವರಿಕೆಯಾಗುತ್ತಿದ್ದಂತೆಯೇ 64 ಸಂಕೇತಗಳ ಸ್ಫುರಣದ ಕಡೆ ವಿಜ್ಞಾನಿಗಳ ಗಮನ ಹರಿಯಿತು. 20 ಬಗೆಯ ಅಮೈನೋ ಆಮ್ಲಗಳನ್ನು ಗುರುತಿಸುವುಕ್ಕಾಗಿ 64 ಸಂಕೇತಗಳು ಇರುವುದರಿಂದ ಇವುಗಳಲ್ಲಿ ಕೇವಲ 20 ಸಂಕೇತಗಳು ಅರ್ಥಪೂರ್ಣವಾಗಿವೆ ಎಂದು ನಂಬಲಾಗಿತ್ತು. ಮಿಕ್ಕ 44 ಸಂಕೇತಗಳು ಅಸಂಗತವೆಂದು ಭಾವಿಸಲಾಗಿತ್ತು. ಯಾವ ಸಂಕೇತ ಯಾವ ಅಮೈನೋ ಆಮ್ಲವನ್ನು ಸಂಶ್ಲೇಷಿಸುತ್ತದೆ ಎಂಬುದರ ಬಗ್ಗೆ ಪ್ರಮುಖವಾಗಿ ಒಚಾವ ಮತ್ತು ನಿರೆನ್‌ಬರ್ಗ್ ಅವರ ಪ್ರಯೋಗಶಾಲೆಗಳಲ್ಲಿ ಪ್ರತ್ಯೇಕವಾಗಿ ಪ್ರಯತ್ನಗಳು ನಡೆದವು. 1961ರಲ್ಲಿ ಈ ದಿಸೆಯಲ್ಲಿ ನಿರೆನ್‌ಬರ್ಗ್ ಮತ್ತು ಅವರ ಸಂಗಡಿಗರಾದ ಮಥಾಯ್ ನಡೆಸಿದ ಪ್ರಯೋಗಗಳು ಹಾಗೂ ಲಭಿಸಿದ ಫಲಿತಾಂಶಗಳು ತಳಿಸಂಕೇತದ ಅಭ್ಯಾಸಕ್ಕೆ ಅಪೂರ್ವ ಕೊಡುಗೆ ಎನಿಸಿವೆ. ಈ ಪ್ರಯೋಗಗಳು ಕಿಣ್ವದ ಸಹಾಯದಿಂದ ಪಾಲಿಪೆಪ್ಟೈಡ್ ಸಂಶ್ಲೇಷಣೆಯನ್ನು ನಡೆಸುವುದರ ಮೇಲೆ ಆಧರಿತವಾಗಿವೆ. ಇವಕ್ಕೆ ಮುಖ್ಯವಾಗಿ ಎರಡು ಅಂಶಗಳು ಬೇಕಾಗಿತ್ತು. ಗೊತ್ತಾದ ಪ್ರಮಾಣದ ಪ್ರತ್ಯಾಮ್ಲವುಳ್ಳ ಆರ್‌ಎನ್‌ಎ ಸಂಶ್ಲೇಷಣೆ ಮೊದಲನೆಯ ಅಂಶವಾದರೆ ಪಾಲಿಪೆಪ್ಟೈಡ್ ಸಂಶ್ಲೇಷಣೆಯನ್ನು ನಿಖರ ರೂಪದಲ್ಲಿ ನಡೆಸುವಂಥ ಕೋಶಭಿತ್ತಿರಹಿತ ವ್ಯವಸ್ಥೆ (ಸೆಲ್–ಫ್ರೀ ಸಿಸ್ಟಮ್) ಎರಡನೆಯ ಅಂಶ. ಮೊದಲ ಅವಶ್ಯಕತೆಯನ್ನು ಪಡೆಯಲು ಅಷ್ಟೇನೂ ತೊಂದರೆಯಾಗಲಿಲ್ಲ. ಒಚಾವ ಅವರ ಪ್ರಯೋಗಾಲಯದ ಉತ್ಪನ್ನವಾದ ಪಾಲಿನ್ಯೂಕ್ಲಿಯೊಟೈಡ್ ಫಾಸ್‌ಫಾರಿಲೇಸ್ ಎಂಬ ಕಿಣ್ವದ ಸಹಾಯದಿಂದ ಗೊತ್ತಾದ ಪ್ರತ್ಯಾಮ್ಲವುಳ್ಳ ನ್ಯೂಕ್ಲಿಯೊಟೈಡ್ ಸರಣಿ ಸಂಶ್ಲೇಷಿಸುವುದರಲ್ಲಿ ನಿರೆನ್‌ಬರ್ಗ್ ಮತ್ತು ಅವರ ಸಂಗಡಿಗರು ಯಶಸ್ವಿಯಾದರು. ಈ ಕಿಣ್ವ ಮೂರು ಫಾಸ್ಫೇಟ್‌ಗಳುಳ್ಳ ಬಿಡಿ ಪ್ರತ್ಯಾಮ್ಲಗಳನ್ನು ಕೆಲವು ಮಧ್ಯವರ್ತಿ ರಾಸಾಯನಿಕಗಳ ಸಹಕಾರದಿಂದ ಒಂದು ನಿರ್ದಿಷ್ಟ ತುದಿಯಲ್ಲಿ (5'ತುದಿ) ಜೋಡಿಸಬಲ್ಲುದು. ನಿರೆನ್‌ಬರ್ಗ್ ಮತ್ತು ಮಥಾಯ್ ಅವರು ಆರಂಭದಲ್ಲಿ ಯುರಾಸಿಲ್ ಪ್ರತ್ಯಾಮ್ಲವನ್ನು ಟ್ರೈಫಾಸ್ಫೇಟ್ ರೂಪದಲ್ಲಿ ತೆಗೆದುಕೊಂಡು ಕಿಣ್ವಾಕ ಸಹಾಯದಿಂದ ಕೇವಲ ಯುರಾಸಿಲ್ ಪ್ರತ್ಯಾಮ್ಲ ಮಾತ್ರ ಇರುವಂಥ ನೀಳವಾದ ಒಂದು ಕೃತಕ ದೂತ ಆರ್‌ಎನ್‌ಎಯನ್ನು ತಯಾರಿಸಿದರು. ಇದನ್ನು ಅವರು ಪಾಲಿ – U ಎಂದು ಕರೆದರು. ( ಈ ಪಾಲಿ U ಗೆ 5'-3' ತುದಿಗಳಿದ್ದವು) . ಇದೇ ರೀತಿ ಪ್ರಯೋಗಿಕವಾಗಿ ಪಾಲಿ – A, ಪಾಲಿ–C, ಪಾಲಿ–G ಉಳ್ಳ ಕೃತಕ ಆರ್‌ಎನ್‌ಎಗಳನ್ನು ಕೂಡ ಇವರು ಸಂಶ್ಲೇಷಿಸಿದರು. ಅನಂತರ ಕೃತಕ ಆರ್‌ಎನ್‌ಎ ಯಲ್ಲಿರುವ ಒಂದೇ ಬಗೆಯ ಸಂಕೇತಗಳನ್ನು ಪಠಿಸುವಂಥ ಒಂದು ಜೀವಕೋಶ ಸಂಯಂತ್ರದ ಅವಶ್ಯಕತೆ ಉಂಟಾಯಿತು. ಈ ಬಗೆಯ ಜೀವಕೋಶ ಸಂಯಂತ್ರಕ್ಕೆ ಕೋಶಭಿತ್ತಿರಹಿತ ವ್ಯವಸ್ಥೆ ಎಂಬ ಹೆಸರೂ ಉಂಟು. ನಿರೆನ್‌ಬರ್ಗ್ ಮತ್ತು ಮಥಾಯ್ ಅವರು ಸೂಕ್ಷ್ಮಜೀವಿಯಾದ ಎಶ್ಚಿರೀಷಿಯ ಕೋಲಿಯನ್ನು ಇಂಥ ವ್ಯವಸ್ಥೆಯಾಗಿ ಆರಿಸಿದ್ದರು. ಪ್ರಯೋಗಗಳಿಗೆ ಅವರು W3110 ಎಂಬ ವಿಧದ ಕೋಲಿಯನ್ನು ಅತಿಶೀತ ವಾತಾವರಣದಲ್ಲಿ ಸಂಗ್ರಹಿಸಿ ಅಲ್ಯುಮಿನಾ ಹರಳುಗಳು ಹಾಗೂ ತತ್ಸಮಾನವಾದ ಬಫರ್‌ನೊಂದಿಗೆ ಸೇರಿಸಿ ಅರೆದು ಕೋಲಿ ಬ್ಯಾಕ್ಟೀರಿಯಗಳ ಕೋಶಗಳು ಒಡೆಯುವಂತೆ ಮಾಡಿದರು. ಆಗ ಹೊರಬಂದ ಕೋಶಸಾರವನ್ನು ಸುಮಾರು 20 ಮಿನಿಟುಗಳ ಕಾಲ ಅತ್ಯಪಕೇಂದ್ರಕ (ಅಲ್ಟ್ರಾಸೆಂಟ್ರಿಫ್ಯೂಜ್) ಯಂತ್ರದಲ್ಲಿ 20,000 g. ಗೂ ಹೆಚ್ಚು ವೇಗದಲ್ಲಿ ತಿರುಗಿಸಿದಾಗ ಲಭಿಸಿದ ಗಸಿಯಲ್ಲಿ ಕೋಶಭಿತ್ತಿಗಳು ಹಾಗೂ ಒಡೆಯದ ಜೀವ ಕೋಶಗಳೂ ಮೇಲಿನ ತಿಳಿರಸದಲ್ಲಿ ಕೋಶದೊಳಗಿದ್ದ ಎಲ್ಲ ಅಂಶಗಳೂ ಬೇರೆ ಬೇರೆಯಾಗಿ ನಿಂತವು. ಇದೇ ಸಾರವನ್ನು ಮತ್ತೊಮ್ಮೆ 30,000g. ಗೂ ಹೆಚ್ಚಿನ ವೇಗದಲ್ಲಿ 30 ಮಿನಿಟುಗಳ ಕಾಲ ತಿರುಗಿಸಿದಾಗ ಈ ತಿಳಿರಸದಲ್ಲಿ ಇದ್ದಿರಬಹುದಾದ ಇತರ ಕೋಶಭಿತ್ತಿ ಚೂರುಗಳೂ ಬೇರ್ಪಟ್ಟವು. ಅನಂತರ ಗಸಿಯಿಂದ ತಿಳಿರಸವನ್ನು ಬೇರ್ಪಡಿಸಲಾಯಿತು, ಈ ರಸದಲ್ಲಿ ಡಿಎನ್‌ಎ, ಆರ್‌ಎನ್‌ಎ,

ರೈಬೋಸೋಮುಗಳು ಹಾಗೂ ಕಿಣ್ವಗಳ ಜೊತೆಗೆ ಜೈವಿಕ ಕಾರ್ಯಕ್ಕೆ ಅಗತ್ಯವಾದ ಮತ್ತಿತರ ಅಂಶಗಳು ಇದ್ದವು. ಈ ರಸವೇ ಕೋಶಭಿತ್ತಿರಹಿತ ವ್ಯವಸ್ಥೆ. ಇದಕ್ಕೆ S-30 ಎಂಬ ಹೆಸರೂ ಉಂಟು. ಇದಕ್ಕೆ ಅನುಕೂಲಕರವಾದ ಪ್ರಮಾಣದಲ್ಲಿ ಶಕ್ತಿ (ಎಟಿಪಿ) ಹಾಗೂ ಮೆಗ್ನೇಸಿಯಮ್‌ಗಳನ್ನು ಸೇರಿಸಿದಾಗ ತನ್ನ ಬದುಕಿಗೆ ಬೇಕಾದ ಅವಶ್ಯಕ ಅಮೈನೋ ಆಮ್ಲ ಹಾಗೂ ಪ್ರೊಟೀನ್ ಇತ್ಯಾದಿಗಳನ್ನು ಸಂಶ್ಲೇಷಿಸಿಕೊಂಡು ಹೋಗುವ ಸಾಮರ್ಥ್ಯ ಉಂಟು. ಈ ವ್ಯವಸ್ಥೆಯನ್ನು ಹಾಗೆಯೇ ಬಹಳ ಕಾಲದವರೆಗೂ ಶೇಖರಿಸಿ ಇಡಲಾಗುವುದಿಲ್ಲ. ಆದರೆ ಬೀಟ– ಮರ್ಕ್ಯಾಪ್ಟೊ ಎಥನಾಲ್ ಎಂಬ ರಾಸಾಯನಿಕವನ್ನು ಸೇರಿಸುವುದರಿಂದ ಹಾಗೂ ಅದನ್ನು –15° ಸೆ ಉಷ್ಣತೆಯಲ್ಲಿ ಸಂಗ್ರಹಿಸುವುದರಿಂದ ಬಹಳ ಕಾಲದವರೆಗೆ ಇಡಬಹುದು. ಇಂಥ ವ್ಯವಸ್ಥೆಯನ್ನು ಪೂರ್ವನಿಯೋಜಿತ ಪ್ರಯೋಗಗಳಿಗೆ ಬಳಸಿಕೊಳ್ಳಬೇಕಾದರೆ, ಪ್ರೋಟೀನ್ ಸಂಶ್ಲೇಷಣೆಯನ್ನು ಇಚ್ಛಾಪೂರ್ವಕವಾಗಿ ನಿಯಂತ್ರಿಸಬೇಕಾದರೆ ಈ ವ್ಯವಸ್ಥೆಯಲ್ಲಿರುವ ಇತರ ಕೋಶಾಂಗಗಳು ಶುದ್ಧವಾದ ರೂಪದಲ್ಲಿ ಇರುವಂತೆ ಮಾಡಬೇಕು. ಸಾಧಾರಣವಾಗಿ ಯಾವುದೇ ಕೋಶಭಿತ್ತಿರಹಿತ ವ್ಯವಸ್ಥೆಯಲ್ಲಿ ಆಯಾ ಪ್ರಭೇದಕ್ಕೆ ಅನುಸಾರವಾಗಿ ಜೀವದಾತುವಿನೊಂದಿಗೆ ಸ್ಫುರಣಗೊಳ್ಳಬೇಕಾಗಿರುವ ದೂತ ಆರ್‌ಎನ್‌ಎ, ಸ್ಫುರಣದ ಫಲವಾಗಿ ಸಂಶ್ಲೇಷಿತಗೊಂಡ ಪಾಲಿಪೆಪ್‌ಟೈಡ್‌ಗಳು, ಪ್ರತಿಕೋಡಾನುಗಳನ್ನು ಹೊತ್ತ ವಾಹಕದ ಆರ್‌ಎನ್‌ಎ - ಇವು ಇರಬಹುದು. ಆದರೆ ಕೃತಕವಾಗಿ ತಯಾರಿಸಿದ ಆರ್‌ಎನ್‌ಎಯ ಕಾರ್ಯವನ್ನು ನಿಖರವಾಗಿ ಅಭ್ಯಸಿಸಬೇಕಾದರೆ ಕೋಶಭಿತ್ತಿರಹಿತ ವ್ಯವಸ್ಥೆಯಲ್ಲಿ ಶುದ್ಧೀಕರಿಸಿದ ರೈಬೋಸೋಮಿನ ಹೊರತು ಯಾವುದೇ ಸಂಶ್ಲೇಷಿತ ವಸ್ತುವೂ ಇರಬಾರದು. ಈ ಉದ್ದೇಶದಿಂದ ಅಶುದ್ಧ ರೂಪದ S-30 ಸಾರಕ್ಕೆ ಡೀಆಕ್ಸಿರೈಬೋನ್ಯೂಕ್ಲಿಯೇಸ್ ಮುಂತಾದ ಜೀರ್ಣಕಾರಿ ಕಿಣ್ವಗಳನ್ನು ಉಪಯೋಗಿಸಿ ಕೋಶಬಿತ್ತಿರಹಿತ ವ್ಯವಸ್ಥೆಯಲ್ಲಿದ್ದ ಡಿಎನ್‌ಎ ಸರಪಣಿ ಬಿಡಿ ಬಿಡಿ ನ್ಯೂಕ್ಲಿಯೊಟೈಡ್‌ಗಳಾಗಿ ಛಿದ್ರಗೊಂಡು ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವಂತೆ ಮಾಡಲಾಯಿತು.

ಈ ರೀತಿ ಪಡೆದ ಕೋಶಭಿತ್ತಿರಹಿತ ಸಾರದಲ್ಲಿ ಈಗ ರೈಬೋಸೋಮುಗಳು. ದೂತ ಆರ್‌ಎನ್‌ಎ, ವಾಹಕ ಆರ್‌ಎನ್‌ಎ (ಎ.ಕೋಲೈ ಜೀವಿಯದೇ) ಹಾಗೂ ಕೆಲವು ಬಗೆಯ ಕಿಣ್ವಗಳಿದ್ದವು. ಈ ಸಾರದಲ್ಲಿನ ದೂತ ಆರ್‌ಎನ್‌ಎ ಅಣುಗಳನ್ನು ರೈಬೋನ್ಯೂಕ್ಲಿಯೇಸ್ ಎಂಬ ಕಿಣ್ವದ ಬಳಕೆಯಿಂದ ಜೀರ್ಣಗೊಳಿಸಬಹುದಾಗಿದ್ದರೂ ಈ ರೀತಿ ಮಾಡುವುದರಿಂದ ದೂತ ಆರ್‌ಎನ್‌ಎ ಹಾಗೂ ವಾಹಕ ಆರ್‌ಎನ್‌ಎ ಗಳೆರಡೂ ಕಿಣ್ವದ ಚಟುವಟಿಕೆಗೆ ತುತ್ತಾಗುವುದರಿಂದ ಬೇರೊಂದು ಬಗೆಯ ತಂತ್ರವನ್ನು ಬಳಸಬೇಕಾಯಿತು. ಸಾರವನ್ನು ಸುಮಾರು 15 ಮಿನಿಟುಗಳ ತನಕ 37° ಸೆ ಉಷ್ಣತೆಯಲ್ಲಿ ಬಿಸಿಮಾಡಿ ವಿಶಿಷ್ಟ ಬಗೆಯ ಅಭಿಸರಣಾ ಕ್ರಿಯೆಯಾದ ಡೈಯಾಲಿಸಿಸ್ ತಂತ್ರದ ಬಳಕೆಯಿಂದ ಹೆಚ್ಚು ಅಣುತೂಕವಿರುವ ದೂತ ಆರ್‌ಎನ್‌ಎಯನ್ನು ಬೇರ್ಪಡಿಸಲಾಯಿತು. ದೂತ ಆರ್‌ಎನ್‌ಎರಹಿತವಾದ ಈ ವ್ಯವಸ್ಥೆಯಲ್ಲಿ ರೈಬೋಸೋಮುಗಳು. ವಾಹಕ ಆರ್‌ಎನ್‌ಎ ಮತ್ತು ಜೈವಿಕ ಕ್ರಿಯೆಗೆ ಅವಶ್ಯಕವಾಗಿರುವ ಕೆಲವು ಬಗೆಯ ಕಿಣ್ವಗಳಿದ್ದವು. ಇಂಥ ಶುದ್ಧರೂಪದ S-30 ಸಾರಕ್ಕೆ ಎಲ್ಲ ಬಗೆಯ ಪ್ರೊಟೀನ್ ಸಂಶ್ಲೇಷಣೆಯನ್ನು ನಡೆಸುವ ಸಾಮರ್ಥ್ಯವಿದೆಯಲ್ಲದೆ ಇದನ್ನು ಸುಲಭವಾಗಿ ನಿಯಂತ್ರಿಸಲೂಬಹುದು. ಅನಂತರ ಶುದ್ಧೀಕರಿಸಿದ S-30 ಸಾರವನ್ನು ಬಿಸಿಮಾಡಿ, ನಿರ್ದಿಷ್ಟ ಪ್ರಮಾಣದಲ್ಲಿ ಮೆಗ್ನೀಸಿಯಮ್ ಅಯಾನು, ಲವಣಮಿಶ್ರಿತ ದುರ್ಬಲ ಆಮ್ಲ, ಶಕ್ತಿಯ ಮೂಲಗಳಾದ ಜಿಟಿಪಿ, ಎಟಿಪಿಗಳನ್ನೂ ಎಲ್ಲ 20 ಅವಶ್ಯಕ ಅಮೈನೋಆಮ್ಲಗಳ ಮಿಶ್ರಣವನ್ನೂ ಸೇರಿಸಲಾಯಿತು. ಅಮೈನೋ ಆಮ್ಲಗಳನ್ನು ಸೇರಿಸುವಾಗ ಒಂದೊಂದರಲ್ಲಿಯೂ 19 ಸಾಧಾರಣ ರೀತಿಯ ಅಮೈನೋ ಆಮ್ಲಗಳೂ ಒಂದು ವಿಕಿರಣಪಟು ಇಂಗಾಲ (C14) ಇರುವ ಅಮೈನೋ ಆಮ್ಲವೂ ಇರುವಂತೆ ನೋಡಿಕೊಳ್ಳಲಾಗಿತ್ತು (ವಿಕಿರಣಪಟು ಇಂಗಾಲವುಳ್ಳ ಅಮೈನೋ ಆಮ್ಲ ಒಂದೊಂದು ಮಿಶ್ರಣದಲ್ಲಿ ಒಂದೊಂದು ಬಗೆಯದಾಗಿತ್ತು.). ಹೀಗೆ ರೂಪಿಸಿದ ಪ್ರಯೋಗ ಮಿಶ್ರಣದಲ್ಲಿ ಅವಶ್ಯಕವಾಗಿ ಬೇಕಾದ ಎಲ್ಲ ರಾಸಾಯನಿಕಗಳೂ ಇದ್ದು ಇದಕ್ಕೆ ಕೃತಕವಾಗಿ ಸಂಶ್ಲೇಷಿಸಿದ ದೂತ ಆರ್‌ಎನ್‌ಎ ಯನ್ನು ಸೇರಿಸಿದಾಗ 37° ಸೆ ಉಷ್ಣತೆಯಲ್ಲಿ ರೈಬೊಸೋಮಿನ ವಲಯದಲ್ಲಿ ಪ್ರೊಟೀನ್ ಸಂಶ್ಲೇಷಣೆ ನಡೆಯಿತು. ಹೀಗೆ ರೂಪುಗೊಂಡ ಯಾವುದೋ ಒಂದು ಪ್ರೊಟೀನ್‌ನಲ್ಲಿ (ಅಂದರೆ ಪಾಲಿಪೆಪ್‌ಟೈಡ್ ಸರಪಣೆಯಲ್ಲಿ) ಮಾತ್ರ ದೂತ ಆರ್‌ಎನ್‌ಎ ಯಲ್ಲಿರುವ ಸಂಕೇತಕ್ಕೆ ಅನುಗುಣವಾಗಿ ವಿಕಿರಣಪಟು ಕಾರ್ಬನ್ ಉಳ್ಳ ಅಮೈನೋ ಆಮ್ಲ ವಿಲೀನಗೊಂಡಿರುತ್ತದೆ. ಸಂಶ್ಲೇಷಿತ ಪಾಲಿಪೆಪ್‌ಟೈಡ್ ಸಾರಕ್ಕೆ 90° ಸೆ ಉಷ್ಣತೆಯುಳ್ಳ 10% ಟ್ರೈಕ್ಲೋರೋ ಆಸಿಟಿಕ್ ಅಮ್ಲವನ್ನು ಸೇರಿಸಿದರೆ ಪ್ರೊಟೀನ್ ಗಸಿಗೊಳ್ಳುತ್ತದೆ. ಈ ಗಸಿಯನ್ನು ಬೇರ್ಪಡಿಸಿ, ವಿಕಿರಣವನ್ನು ಪತ್ತೆಹಚ್ಚುವ ಯಂತ್ರದ ಸಹಾಯದಿಂದ ಪಾಲಿಪೆಪ್‌ಟೈಡ್ ಸರಪಣಿಯಲ್ಲಿ ಯಾವ ಅಮೈನೋ ಆಮ್ಲ ವಿಲೀನಗೊಂಡಿದೆ ಎಂಬುದನ್ನು ಸುಲಭವಾಗಿ ಕಂಡುಹಿಡಿಯಬಹುದು. ಇದರಿಂದ ಕೃತಕ ಆರ್‌ಎನ್‌ಎ ಯಲ್ಲಿರುವ ಪ್ರತ್ಯಾಮ್ಲಗಳ ಜೋಡಣೆ ವಿನ್ಯಾಸ ಯಾವ ಅಮೈನೋ ಆಮ್ಲವನ್ನು ಗುರುತಿಸುತ್ತದೆ ಎಂದು ಹೇಳಬಹುದು.

ನಿರೆನ್‌ಬರ್ಗ್ ಮತ್ತು ಮಥಾಯ್ ಅವರು ಇಂಥ ಒಂದು ಸಾರ ಸಂಕೀರ್ಣವನ್ನು ಸಮರ್ಥ ರೀತಿಯಲ್ಲಿ ತಯಾರಿಸಿದ್ದಲ್ಲದೆ, ಪಾಲಿನ್ಯೂಕ್ಲಿಯೊಟೈಡ್ ಫಾಸ್ಫಾರಿಲೇಸ್ ಕಿಣ್ವಕ ಸಹಾಯದಿಂದ ತಯಾರಿಸಿದ ಕೃತಕ ಬಹು ನ್ಯೂಕ್ಲಿಯೊಟೈಡ್ ಸರಪಣಿಯ ಪೈಕಿ ಪಾಲಿ–U ಎಂಬುದನ್ನು ತಮ್ಮ ಪ್ರಯೋಗಕ್ಕೆ ಬಳಸಿಕೊಂಡರು. ಪಾಲಿ–U ನಲ್ಲಿ ಸಮ ಪ್ರಮಾಣದ ಏಕರೀತಿಯ ಪ್ರತ್ಯಾಮ್ಲಶ್ರೇಣಿ UUUUUUU ರೂಪದಲ್ಲಿರುತ್ತದೆ. ಮೇಲೆ ವಿವರಿಸಿರುವಂಥೆ ಕೃತಕ ಪಾಲಿ–U ಆರ್‌ಎನ್‌ಎ ಯನ್ನು ಬಳಸಿದಾಗ ಅದು ಫೀನೈಲ್ ಅಲನೀನ್ ಅಮೈನೋ ಆಮ್ಲವನ್ನು ಮಾತ್ರ ಗುರುತಿಸಿ ಈ ಆಮ್ಲದ ಪಾಲಿಪೆಪ್‌ಟೈಡ್ ಸರಪಣಿಯನ್ನು ರೂಪಿಸುವುದು ಕಂಡುಬಂತು. ಈ ಪ್ರಯೋಗದ ಆಧಾರದ ಮೇಲೆ ಪಾಲಿ–U ನ್ಯೂಕ್ಲಿಯೊಟೈಡ್ ಸರಪಣಿ ಫೀನೈಲ್ ಅಲನೀನ್ ಎಂಬ ಅಮೈನೋ ಆಮ್ಲಗಳ ಶ್ರೇಣಿಯನ್ನು ಸಂಶ್ಲೇಷಿಸುತ್ತದೆ ಎಂದು ತಿಳಿಯಲಾಯಿತು. ಮೊತ್ತಮೊದಲ ಬಾರಿಗೆ ಸಂಕೇತ ಸ್ಫುರಣದ ಹೊಸ ಹಾದಿಯನ್ನು ಈ ಫಲಿತಾಂಶ ತೋರಿಸಿಕೊಟ್ಟಿತು.

ಈ ದಿಸೆಯಲ್ಲಿ ಯಶಸ್ಸನ್ನು ಕಂಡ ಬಳಿಕ ನಿರೆನ್‌ಬರ್ಗ್ ಮತ್ತು ಮಥಾಯ್ ಅವರು ಕೃತಕವಾಗಿ ತಯಾರಿಸಿದ ಇನ್ನಿತರ ಏಕರೀತಿಯ ಸಮಪ್ರಮಾಣದ ಬಹು ನ್ಯೂಕ್ಲಿಯೊಟೈಡ್ ಸರಪಣಿಗಳಾದ ಪಾಲಿ -A, ಪಾಲಿ -C ಪಾಲಿ–G ಗಳನ್ನು ಪ್ರಯೋಗಕ್ಕೆ ಬಳಸಿದರು. ಆಗ ಇವು ಅನುಕ್ರಮವಾಗಿ ಲೈಸೀನ್, ಪ್ರೋಲೀನ್ ಮತ್ತು ಗ್ಲೈಸೀನ್ ಅಮೈನೋ ಆಮ್ಲಗಳನ್ನು ಗುರುತಿಸುವುದು ಗಮನಕ್ಕೆ ಬಂದಿತು. ಪಾಲಿ–G ಎಂಬುದು ಆರಂಭದಲ್ಲಿ ಪ್ರತ್ಯೇಕವಾಗಿ ಕಾರ್ಯಶೀಲತೆಯನ್ನು ತೋರಿಸದಿದ್ದರೂ ಇತರ ಪ್ರತ್ಯಾಮ್ಲಗಳೊಡನೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆತಿದ್ದಾಗ ಕೆಲವು ಅಮೈನೋ ಆಮ್ಲಗಳನ್ನು ಗುರುತಿಸುವುದೆಂದು ಕಂಡು ಬಂದಿದೆ. ವಿವಿಧ ಪ್ರಮಾಣಗಳಲ್ಲಿ ಈ ಪ್ರತ್ಯಾಮ್ಲಗಳನ್ನು ಸೇರಿಸಿ, ಎರಡು ಬಗೆಯ ಪ್ರತ್ಯಾಮ್ಲಗಳಿರುವ ಕೃತಕ ಆರ್‌ಎನ್‌ಎ ಯನ್ನು ತಯಾರಿಸಿ ಅದು ಗುರುತಿಸುವ ಅಮೈನೋ ಆಮ್ಲಗಳನ್ನೂ ಈ ವಿಜ್ಞಾನಿಗಳು ಗಮನಿಸಿದ್ದಾರೆ. ಈ ತೆರನ ಪ್ರಯೋಗದಿಂದ 64 ಸಂಕೇತಗಳಲ್ಲಿ ಸುಮಾರು 40 ಸಂಕೇತಗಳು ವಿವಿಧ ರೀತಿಯ ಅಮೈನೋ ಆಮ್ಲಗಳನ್ನು ಗುರುತಿಸುತ್ತವೆ ಎಂದು ತಿಳಿದುಬಂದಿದೆ.

ಕೃತಕವಾಗಿ ತಯಾರಿಸಿದ ದೂತ ಆರ್‌ಎನ್‌ಎ ಗಳಿಂದ ಎಷರೀಕಿಯ ಕೋಲೈನ ಕೋಶಭಿತ್ತಿರಹಿತ ವ್ಯವಸ್ಥೆ ಶಿಸ್ತಿನಿಂದ ಪಠಿಸುವುದಾದರೆ ಬೇರೆ ಜೀವಿಗಳ ದೂತ ಆರ್‌ಎನ್‌ಎ ಸಹ ಹೀಗೆಯೇ ಪಠಿಸಬಹುದೆಂಬ ನಂಬಿಕೆ ಮೂಡಿತು. ಇದನ್ನು ಅಭ್ಯಸಿಸುವ ಸಲುವಾಗಿ ಆರ್‌ಎನ್‌ಎ ಜೀವಧಾತುವನ್ನು ಪಡೆದಿರುವ ಕೆಲವು ಬಗೆಯ ವೈರಸ್‌ಗಳನ್ನು ಆರಿಸಿಕೊಳ್ಳಲಾಯಿತು. ಇವುಗಳ ಪೈಕಿ $f_2$ ಎಂಬ ಜಾತಿಗೆ ಸೇರಿದ ವೈರಸ್ [ಹೊಗೆಸೊಪ್ಪಿನ ಶಬಲ (ಮೋಸೇಕ್) ರೋಗವನ್ನು ಉಂಟುಮಾಡುವ] ಮುಖ್ಯವಾದುದು. ಈ ವೈರಸ್ಸಿನಲ್ಲಿರುವ ಆರ್‌ಎನ್‌ಎ ಯನ್ನು ಪ್ರತ್ಯೇಕಿಸಿ ಸುಧಾರಿತ ಕೋಶಭಿತ್ತಿರಹಿತ ವ್ಯವಸ್ಥೆಗೆ ಸೇರಿಸಿದಾಗ, ಆ ಆರ್‌ಎನ್‌ಎ ರೈಬೋಸೋಮಿನೊಂದಿಗೆ ಬಂಧಿತಗೊಂಡು ತನ್ನ ಪ್ರಭೇದಕ್ಕೆ ಅನುಗುಣವಾದ ಪ್ರೋಟೀನನ್ನು ಉತ್ಪಾದಿಸಿತು. ಸಂಕೇತಗಳು ಸರ್ವವ್ಯಾಪಿ ಎಂಬುದಕ್ಕೆ ಇಂಥ ಹಲವಾರು ಪ್ರಯೋಗಗಳಿಂದ ಆಧಾರ ದೊರೆಯಿತು.

ನಿರೆನ್‌ಬರ್ಗ್ ಮತ್ತು ಅವರ ಸಂಗಡಿಗರು ನಡೆಸಿದ ಈ ಬಗೆಯ ಪ್ರಯೋಗಗಳು ಅತ್ಯಂತ ಯಶಸ್ವಿಯಾದರೂ ಕೆಲವು ಸಂಕೇತಗಳು ಯಾವ ಅಮೈನೋ ಆಮ್ಲಗಳನ್ನು ಗುರುತಿಸುತ್ತವೆ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟವಾಯಿತು. ಅಲ್ಲದೆ ಸಂಕೇತದಲ್ಲಿ ಸಂಕೇತಾಕ್ಷರಗಳ ಕ್ರಮವನ್ನು ಹೇಳುವುದೂ ಕಷ್ಟವಾಗಿತ್ತು. ಉದಾಹರಣೆಗೆ UUG, UGU, GUU ಎಂಬ ಸಂಕೇತಗಳಲ್ಲಿ U ಮತ್ತು G ಪ್ರತ್ಯಾಮ್ಲಗಳ ಪ್ರಮಾಣ ಒಂದೇ ಆದರೂ ಅವು ಸ್ಥಿತಗೊಂಡಿರುವ ಕ್ರಮವೂ ಗುರುತಿಸುವ ಅಮೈನೋ ಆಮ್ಲಗಳು ಬೇರೆ ಬೇರೆಯಾಗಿವೆ. ಈ ಮೂರು ಸಂಕೇತಗಳು ವ್ಯಾಲೀನ್, ಸಿಸ್‌ಟೀನ್ ಮತ್ತು ಲೂಸೀನ್ ಗಳನ್ನು ಗುರುತಿಸುತ್ತವೆ. ಆದರೆ ಯಾವ ಸಂಕೇತ ಯಾವ ಅಮೈನೋ ಆಮ್ಲವನ್ನು ಗುರುತಿಸುವುದೆಂದು ಹೇಳುವುದು ಅಸಾಧ್ಯ. ಇದಕ್ಕಾಗಿ ನಿರೆನ್‌ಬರ್ಗ್ ತಮ್ಮ ಮತ್ತೊಬ್ಬ ಸಹೋದ್ಯೋಗಿ ಲೆಡರ್‌ರೊಂದಿಗೆ 1964ರಲ್ಲಿ ಸಂಶೋಧನೆಗಳನ್ನು ನಡೆಸಿ ಕೇವಲ ಮೂರು ಪ್ರತ್ಯಾಮ್ಲಗಳುಳ್ಳ ಸಣ್ಣ ಟ್ರೈನ್ಯೂಕ್ಲಿಯೊಟೈಡ್‌ಗಳನ್ನು ಕೃತಕವಾಗಿ ತಯಾರಿಸಿ ಕೋಶಭಿತ್ತಿರಹಿತ ವ್ಯವಸ್ಥೆಗೆ ಸೇರಿಸಿ ಆ ಟ್ರೈನ್ಯೂಕ್ಲಿಯೋಟೈಡ್ ರೈಬೋಸೋಮಿನೊಂದಿಗೆ ಸಮರ್ಥ ರೀತಿಯಲ್ಲಿ ಬಂಧಿತವಾಗುವುದನ್ನು ಕಂಡುಕೊಂಡರು. ಈ ಬಗೆಯ ಪ್ರಯೋಗಗಳಿಂದ UUG, UGU, ಮತ್ತು GUU ಸಂಕೇತಗಳು ಅನುಕ್ರಮವಾಗಿ ವ್ಯಾಲೀನ್, ಸಿಸ್‌ಟೀನ್, ಲೂಸೀನ್‌ಗಳನ್ನು ಗುರುತಿಸುವುವೆಂದು ಖಚಿತವಾಗಿ ತಿಳಿದುಬಂದಿತು. ಅಲ್ಲದೆ ಸಂಕೇತಪಠಣ ಎಡದಿಂದ ಬಲಕ್ಕೆ ಅಂದರೆ 5' ತುದಿಯಿಂದ 3' ತುದಿಯ ಕಡೆಗೆ

ಸಾಗುವುದೆಂದೂ ತಿಳಿಯಿತು. ಹಾಗೆಯೇ ಅನೇಕ ಸಂಕೇತಗಳು ಸ್ಥಿತಿ ಬಾಹುಳ್ಯ ಗುಣವನ್ನು ಪ್ರದರ್ಶಿಸುವುವೆಂಬುದನ್ನು ಗಮನಿಸಲಾಯಿತು. 64 ಸಂಕೇತಗಳ ಪೈಕಿ ಕೊನೆಯ ಪಕ್ಷ ಮೂರು ಸಂಕೇತಗಳು ಅಸಂಗತ ರೀತಿಯವು ಎಂದು ಕಂಡು ಬಂದಿತು.

ರಾಸಾಯನಿಕ ದೃಷ್ಟಿ : ನಿರೆನ್‌ಬರ್ಗ್ ಮತ್ತು ಅವರ ಸಂಗಡಿಗರು ಸಂಕೇತದ ಸ್ಫುರಣದ ಬಗ್ಗೆ ಹೊರಗೆಡಹಿದ ಫಲಿತಾಂಶಗಳು ಹಲವಾರು ವಿಜ್ಞಾನಿಗಳನ್ನು ಆಕರ್ಷಿಸಿದರೂ ತತ್‌ಕ್ಷಣ ಸರ್ವಸಮ್ಮತವಾಗಲಿಲ್ಲ. ಇವರು ನಡೆಸಿದ ಪ್ರಯೋಗಗಳು ಕಿಣ್ವಾಶ್ರಿತವಾಗಿದ್ದು ಕೇವಲ ಎಶ್ಚಿರೀಷಿಯ ಕೋಲಿ ಜೀವಿಯ ಕೋಶಭಿತ್ತಿರಹಿತ ವ್ಯವಸ್ಥೆಯಲ್ಲಿ ನಡೆಯುವ ಸಂಕೇತ ಸ್ಫುರಣ ಚಟುವಟಿಕೆಯನ್ನು ತೋರಿಸಿಕೊಟ್ಟವು. ಕೋಲೈ ಜೀವಿ ತನ್ನ ಬದುಕಿನಲ್ಲಿ ತೋರುವಂತ ಸಂಕೇತ ಪಠಣ ಇತರ ಜೀವಿಗಳಲ್ಲೂ ಇದ್ದಿರಬಹುದಾದರೂ, ಸಂಕೇತಗಳ ಸರ್ವವ್ಯಾಪಕತೆ ನಿರ್ದಿಷ್ಟವಾಗಿ ತಿಳಿದಿರಲಿಲ್ಲ. ಅಲ್ಲದೆ ಗೊತ್ತಾದ ದೂತ ಆರ್‌ಎನ್‌ಎ ಯಲ್ಲಿ ಯಾವ ಪ್ರಮಾಣದಲ್ಲಿ ಪ್ರತ್ಯಾಮ್ಲಗಳು ಬಂಧಿತಗೊಂಡಿವೆ ಎಂಬುದು ಖಚಿತವಾಗಿ ತಿಳಿಯದಿರುವುದರಿಂದ ಸಂಕೇತಸ್ಫುರಣದ ಬಗ್ಗೆ ಗೊತ್ತಾದ್ದು ಪರೋಕ್ಷ ರೀತಿಯ ಪ್ರಯೋಗಗಳಿಂದ ದೊರೆತ ಫಲಿತಾಂಶಗಳ ಮೂಲಕ. ಅಲ್ಲದೆ ಸಂಕೇತಗಳಲ್ಲಿ ಸ್ಥಗಿತಕ ಹಾಗೂ ಆರಂಭಿಕಗಳಿರುವ ವಿಷಯವನ್ನು ಹಲವು ವಿಜ್ಞಾನಿಗಳು ತೋರಿಸಿದ್ದರು. ಇದರಿಂದಾಗಿ ಸಂಕೇತದ ಎಲ್ಲ ಗುಣಗಳನ್ನು ಸ್ಪಷ್ಟವಾಗಿ ನೇರವಾಗಿ ವ್ಯಕ್ತಪಡಿಸುವಂಥ ಪ್ರಯೋಗಗಳನ್ನು ನಡೆಸಬೇಕಾಯಿತು. ಇದಕ್ಕಾಗಿ ನಿರ್ದಿಷ್ಟ ರೀತಿಯಲ್ಲಿ ಜೋಡಣೆಗೊಂಡಿರುವ ಪ್ರತ್ಯಾಮ್ಲಗಳ ಸರಣಿಯುಳ್ಳ ಕೃತಕ ದೂತ ಆರ್‌ಎನ್‌ಎ ಗಳ ಸಂಶ್ಲೇಷಣೆ ನಸೆಯಬೇಕಾಗಿತ್ತು. ಈ ದಿಸೆಯಲ್ಲಿ ಹರ್‌ಗೋವಿಂದ್ ಖೊರಾನಾ ಅವರ ಪ್ರಯೋಗಗಳು ಅತ್ಯಂತ ಮಹತ್ತ್ವಪೂರ್ಣ ಎನಿಸಿವೆ.

ಖೊರಾನಾ (ನೋಡಿ) ಅವರು ಸಂಕೇತಸ್ಫುರಣಕಾರ್ಯಕ್ಕೆ ಬೇಕಾದ ದೂತ ಆರ್‌ಎನ್‌ಎ ಗಳ ತಯಾರಿಕೆಗೆ ಕಿಣ್ವಗಳ ಪಡೆಯಲಿಲ್ಲ. ಈ ದಿಸೆಯಲ್ಲಿ ಖೊರಾನಾ ಅವರ ಕಾರ್ಯವಿಧಾನ ನಿರೆನ್‌ಬರ್ಗ್ ಅವರದ್ದಕ್ಕಿಂತ ಸಂಪೂರ್ಣ ಬೇರೆಯಾಗಿತ್ತು. ರಾಸಾಯನಿಕವಾಗಿ ಅವರು ರೈಬೋಸ್ ಹಾಗೂ ಡಿಆಕ್ಸಿರೈಬೋಸ್ ಶರ್ಕರವುಳ್ಳ ವಿವಿಧ ಪ್ರತ್ಯಾಮ್ಲಗಳಿರುವ ಬಿಡಿಬಿಡಿಯಾದ ನ್ಯೂಕ್ಲಿಯೊಟೈಡ್‌ಗಳನ್ನು ಸಂಶ್ಲೇಷಿಸಿದರು. ಈ ನ್ಯೂಕ್ಲಿಯೊಟೈಡ್‌ಗಳು ವಿಶೇಷಬಗೆಯ ರಾಸಾಯನಿಕಗಳ ಸಹಾಯದಿಂದ ತಮಗೆ ಬೇಕಾದ ಕ್ರಮದಲ್ಲಿ ಒಂದಕ್ಕೊಂದು ಬಂಧನಗೊಳ್ಳಲು ಸಮರ್ಥವಾಗಿದ್ದವು, ಉದಾಹರಣೆಗೆ ಅಡನೈನ್(A) ಮತ್ತು ಸೈಟೊಸೀನ್ (C) ಪ್ರತ್ಯಾಮ್ಲವಿರುವ ಎರಡು ಬಿಡಿ ನ್ಯೂಕ್ಲಿಯೊಟೈಡ್‌ಗಳಿವೆ ಎಂದುಕೊಳ್ಳೋಣ. ಇವನ್ನು ಎರಡು ರೀತಿಯಲ್ಲಿ ಬಂಧಿಸಬಹುದು ; A ಯೊಂದಿಗೆ C ಬಂಧಿತವಾಗಬಹುದು ಅಥವಾ C ಯೊಂದಿಗೆ A ಬಂಧಿತವಾಗಬಹುದು. ಅಂದರೆ ಬಂಧನ ಕ್ರಮವನ್ನು ಅನುಸರಿಸಿ ಎರಡು ಬಗೆಯ ಪಾಲಿ ನ್ಯೂಕ್ಲಿಯೊಟೈಡ್ ಎಳೆಯನ್ನು ಪಡೆಯಬಹುದು ; ಪಾಲಿ AC ಹಾಗೂ ಪಾಲಿ CA. ಈ ಎಳೆಯಲ್ಲಿ ನ್ಯೂಕ್ಲಿಯೊಟೈಡ್‌ಗಳು ಸ್ಥಿತವಾಗಿರುವ ರೀತಿ ಕ್ರಮವಾಗಿ ACACACAC ಮತ್ತು CACACACA —ಹೀಗೆ ಇತ್ತು. ಹೀಗೆ ಬಂಧಿತಗೊಂಡ ನ್ಯೂಕ್ಲಿಯೊಟೈಡ್‌ಗಳ ಎಳೆ ಸುಮಾರು 10-15 ನ್ಯೂಕ್ಲಿಯೊಟೈಡ್‌ಗಳ ಸರಪಣಿಗೆ ಡೈನ್ಯೂಕ್ಲಿಯೊಟೈಡ್ ಎಳೆ ಎಂದು ಹೆಸರು. ಈ ರೀತಿ ಅವರು ಡಿಆಕ್ಸಿರೈಬೋಸ್ ಹಾಗೂ ರೈಬೋಸ್ ಶರ್ಕರವುಳ್ಳ ನ್ಯೂಕ್ಲಿಯೊಟೈಡ್‌ಗಳನ್ನು ಗೊತ್ತಾದ ಕ್ರಮದಲ್ಲಿ ಬಂಧಿಸಿ ಡೈನ್ಯೂಕ್ಲಿಯೊಟೈಡ್ ಹಾಗೂ ಟೆಟ್ರನ್ಯೂಕ್ಲಿಯೊಟೈಡ್ ಎಳೆಗಳನ್ನು ತಯಾರಿಸಿದರು. ಒಂದು ನಿರ್ದಿಷ್ಟ ಕ್ರಮದಲ್ಲಿರುವ ಡಿಆಕ್ಸಿರೈಬೋಸ್ ಶರ್ಕರವಿರುವ ತುಂಡು ನ್ಯೂಕ್ಲಿಯೊಟೈಡ್ ಎಳೆಯನ್ನು ತೆಗೆದುಕೊಂಡು ಡಿಎನ್‌ಎ ಪಾಲಿಮರೇಸ್ ಎಂಬ ಕಿಣ್ವದ ಆಶ್ರಯದಲ್ಲಿ, ಅದಕ್ಕೆ ಅವಶ್ಯಕವಾದ ರಾಸಾಯನಿಕಗಳನ್ನು ಪೂರೈಸಿದಾಗ ಈ ಎಳೆಯು ತನಗೆ ಪೂರಕವಾದ ಪ್ರತ್ಯಾಮ್ಲಗಳನ್ನು ಸಂಶ್ಲೇಷಿಸಿಕೊಂಡು ದ್ವಿಕುಂಡಲಿನಿಯನ್ನು ರಚಿಸುವುದು. ಇದರ ನ್ಯೂಕ್ಲಿಯೊಟೈಡ್‌ಗಳ ಜೋಡಣಾಕ್ರಮ ವಿರುದ್ಧ ಗತಿಯಲ್ಲಿದ್ದು . ಈ ಎಳೆ ಎಲ್ಲ ರೀತಿಯಲ್ಲೂ ಡಿಎನ್‌ಎ ಅಣುವನ್ನು ಹೋಲುತ್ತಿತ್ತು. ಮತ್ತೊಂದು ಪ್ರಯೋಗದಲ್ಲಿ ತುಂಡು ನ್ಯೂಕ್ಲಿಯೊಟೈಡ್ ಎಳೆಗೆ ಆರ್‌ಎನ್‌ಎ ಪಾಲಿಮರೇಸ್ ಕಿಣ್ವವನ್ನು ಸೇರಿಸಿದಾಗ ನ್ಯೂಕ್ಲಿಯೊಟೈಡಿನ ಸಂಕೇತಕ್ಕೆ ಅನುಸಾರವಾಗಿ ಲಿಪ್ಯಂತರ ಹೊಂದಿದ ಆರ್‌ಎನ್‌ಎ ಸಂಶ್ಲೇಷಿತವಾಯಿತು. ಡಿಎನ್‌ಎ ಪಾಲಿಮರೇಸಿನ ಸಹಾಯದಿಂದ ನಿರ್ಮಿತವಾದ ದ್ವಿಕುಂಡಲಿನಿಗೆ ಆರ್‌ಎನ್‌ಎ ಪಾಲಿಮರೇಸ್‌ನ್ನು ಸೇರಿಸಿದಾಗ ಎರಡು ಬಗೆಯ ಲಿಪ್ಯಂತರವನ್ನು ತೋರುವ ದೂತ ಆರ್‌ಎನ್‌ಎ ಸಂಶ್ಲೇಷಣೆಗೊಂಡಿತು. (ಅದುವರೆಗೂ ತಿಳಿದಂತೆ ಸ್ವಸ್ಥಿತಿಯಲ್ಲಿ ಆರ್‌ಎನ್‌ಎ ಅಣುವಿನಲ್ಲಿರುವ ಎರಡು ಪಾಲಿನ್ಯೂಕ್ಲಿಯೊಟೈಡ್ ಎಳೆಗಳ ಪೈಕಿ ಒಂದು ಮಾತ್ರ ದೂತ ಆರ್‌ಎನ್‌ಎ ಸಂಶ್ಲೇಷಣೆಯಲ್ಲಿ ಭಾಗವಹಿಸುತ್ತದೆ). ಸೈದ್ಧಾಂತಿಕವಾಗಿ ದ್ವಿಕುಂಡಲಿನಿಯ ಎರಡು ಪಾಲಿನ್ಯೂಕ್ಲಿಯೊಟೈಡ್ ಎಳೆಗಳಿಗೂ ಪ್ರತ್ಯೇಕವಾಗಿ ದೂತ ಆರ್‌ಎನ್‌ಎ ಯನ್ನು ಸಂಶ್ಲೇಷಣೆ ಮಾಡುವ ಸಾಮರ್ಥ್ಯ ಉಂಟು. ಬೇಕಾದ ಎಳೆಯಿಂದ ದೂತ ಆರ್‌ಎನ್‌ಎ ಯಲ್ಲಿ ಒಂದು ಗೊತ್ತಾದ ಕ್ರಮದಲ್ಲಿ ಪ್ರತ್ಯಾಮ್ಲಗಳು ಸ್ಥಿತವಾಗಿರುವುದರಿಂದ, ಯಾವ ಬಗೆಯ ಅಮೈನೋ ಆಮ್ಲಗಳನ್ನು ಈ ಸಂಕೇತಗಳು ಗುರುತಿಸುತ್ತವೆ ಎಂಬುದನ್ನು ಸುಭವಾಗಿ ತಿಳಿಯಬಹದು. ಉದಾಹರಣೆಗೆ ಖೊರಾನ ತಯಾರಿಸಿದ ಪಾಲಿಡೈನ್ಯೂಕ್ಲಿಯೊಟೈಡ್ UC (ಎಂದರೆ ದೂತ ಆರ್‌ಎನ್‌ಎ ಯಲ್ಲಿ ನ್ಯೂಕ್ಲಿಯೊಟೈಡ್‌ಗಳ ಶ್ರೇಣಿ ಈ ರೀತಿ ಇರುತ್ತದೆ – UCUCUCUCUC ........) ಎಂಬುದನ್ನು ಕೋಶಭಿತ್ತಿರಹಿತ ವ್ಯವಸ್ಥೆಗೆ ಸೇರಿಸಿದಾಗ ಅದರ ಸಂಕೇತಗಳು ತ್ರಿವಳಿ ರೂಪದಲ್ಲಿ ಒಂದು ನಿರ್ದಿಷ್ಟ ಸ್ಥಾನದಿಂದ ಪಠಿಸಲ್ಪಡುತ್ತವೆ ಎಂದು ಭಾವಿಸಿದರೆ, ಎರಡು ಬಗೆಯ ಸಂಕೇತಗಳು ಲಭಿಸುವುವು. UCU ಮತ್ತು CUC. ಅಂದರೆ ಈ ಎರಡು ಸಂಕೇತಗಳು ಎರಡು ಬಗೆಯ ಅಮೈನೋ ಆಮ್ಲಗಳನ್ನು ಗುರುತಿಸಬಲ್ಲವು. ಈ ಪಾಲಿ -UC ಯನ್ನು ಪ್ರೊಟೀನ್ ಸಂಶ್ಲೇಷಣಾ ಕಾರ್ಯಕ್ಕೆ ಅನುಗೊಳಿಸಿದಾಗ ಇದು ನಿರೀಕ್ಷಿಸಿದಂತೆ ಕ್ರಮವಾಗಿ ಸೆರೀನ್ ಮತ್ತು ಲೂಸೀನ್ ಅಮೈನೋ ಆಮ್ಲಗಳನ್ನು ಗುರುತಿಸಿತು. ಇದರಿಂದ ಸಂಕೇತಸ್ಫುರಣದ ಕಾರ್ಯದಲ್ಲಿ UCU ಎಂಬುದು ಸೆರೀನನ್ನೂ CUC ಎಂಬುದು ಲೂಸೀನನ್ನೂ ಗುರುತಿಸುತ್ತವೆ ಎಂದಾಯಿತು.

ಒಂದು ವೇಳೆ ಪಠಣ ಚೌಕಟ್ಟಿನ ಮೊದಲ ಸಂಕೇತಾಕ್ಷರ U ನಿಂದ C ಗೆ ಬದಲಾದರೆ ಆಗ ತ್ರಿವಳಿ ಸಂಕೇತದ ಕ್ರಮ CUC ಮತ್ತು UCU ಎಂದಾಗುತ್ತದೆ. ಆಗ ಬದಲಾದ ಎಳೆಯಲ್ಲಿನ ಸಂಕೇತ ತ್ರಿವಳಿ ರೂಪದಲ್ಲಿ ಪಠಿಸುವುದಾದರೆ ಕ್ರಮವಾಗಿ ಲೂಸೀನ್ ಮತ್ತು ಸೆರೀನುಗಳನ್ನು ಗುರುತಿಸಬೇಕು. ಪ್ರಾಯೋಗಿಕವಾಗಿ ಪಾಲಿ -UC ಎಳೆಯ ಆರಂಭದ ಪ್ರತ್ಯಾಮ್ಲವಾದ U ವನ್ನು ನಿಯಂತ್ರಿಸಿದಾಗ ಲೂಸೀನ್ ಮತ್ತು ಸೆರೀನ್‌ಗಳು ಪರ್ಯಾಯವಾಗಿ ಉತ್ಪತ್ತಿಯಾದುವು. ಇದರಿಂದ ಲೂಸೀನ್ ಮತ್ತು ಸೆರೀನ್ ಅಮೈನೋ ಆಮ್ಲಗಳಿರುವ ನಿರ್ದಿಷ್ಟ ಸಂಕೇತಗಳಷ್ಟೇ ಅಲ್ಲದೆ ಸಂಕೇತಾಕ್ಷರಗಳ ಕ್ರಮವೂ ತಿಳಿಯಿತು. ಅಲ್ಲದೆ ಸಂಕೇತಗಳು ತ್ರಿವಳಿ ರೂಪದಲ್ಲಿವೆ, ಅಧಿವ್ಯಾಪನರಹಿತವಾಗಿವೆ, ಅನುರೇಖೀಯ ರೂಪದಲ್ಲಿವೆ ಎಂಬುದೂ ಇವು ಒಂದು ನಿರ್ದಿಷ್ಟ ಸ್ಥಾನದಿಂದ ಪಠಿಸಲ್ಪಸುತ್ತವೆ ಎಂಬುದೂ ಇದರಿಂದ ತಿಳಿದುಬಂತು. ಹೀಗೆ ವಿವಿಧ ಬಗೆಯ ಪಾಲಿಡೈ, ಟ್ರೈ ಹಾಗೂ ಟೆಟ್ರನ್ಯೂಕ್ಲಿಯೊಟೈಡ್ ಎಳೆಗಳನ್ನು ತಯಾರಿಸಿ, ತಳಿಸಂಕೇತಗಳು ಗುರುತಿಸುವಂಥ ಅಮೈನೋ ಆಮ್ಲಗಳನ್ನು ಗಮನಿಸಿರುವುದಲ್ಲದೆ ತಳಿಸಂಕೇತದ ಇತರ ಪ್ರಮುಖ ಗುಣಗಳೀಂದ ಸ್ಥಿತಿಬಾಹುಳ್ಯ ಹಾಗೂ ಸಂದಿಗ್ಧತೆಗಳನ್ನು ನಿಖರವಾಗಿ ಗೊತ್ತುಪಡಿಸಲಾಗಿದೆ. ಅಲ್ಲದೆ ಅಸಂಗತ ಸಂಕೇತಗಳಾದ UAG, UGA ಮತ್ತು UAA ಸ್ಥಗಿತಕಗಳಾಗಿಯೂ (ಟರ್ಮಿನೇಟರ್ಸ್) GUG, AUG ಎಂಬ ಸಂಕೇತಗಳು ಆರಂಭಿಕಗಳಾಗಿಯೂ (ಇನಿಶಿಯೇಟರ್ಸ್) ತಳಿಸಂಕೇತ ಕಾರ್ಯದಲ್ಲಿ ಭಾಗವಹಿಸುವುವೆಂದು ತಿಳಿದುಬಂದಿದೆ. ಸ್ಥಗಿತಕ ಹಾಗೂ ಆರಂಭಿಕಗಳನ್ನು ಗುರುತಿಸುವಂಥ ವಾಹಕ ಆರ್‌ಎನ್‌ಎ ಗಳ ರಾಸಾಯನಿಕ ರೂಪ ಹಾಗೂ ಕಾರ್ಯ ಶೀಲತೆಯ ಬಗ್ಗೆ ಖೊರಾನ ಸಂಶೋಧನೆಗಳನ್ನು ನಡೆಸಿದ್ದಾರೆ.

ಈಗ ಬಲುಮಟ್ಟಿಗೆ ಎಲ್ಲ ಸಂಕೇತಗಳ ಅರ್ಥವೊಂದೇ ಅಲ್ಲದೆ ಸಂಕೇತಗಳನ್ನು ಗುರುತಿಸುವ ವಾಹಕ ಆರ್‌ಎನ್‌ಎ ಗಳಲ್ಲಿರುವ ಪ್ರತ್ಯಾಮ್ಲಗಳ ಜೋಡಣೆಯ ಕ್ರಮದ ಬಗ್ಗೆ ಹೆಚ್ಚು ಅಂಶಗಳು ತಿಳಿದಿವೆ. ಸಾಧಾರಣವಾಗಿ ವಾಹಕ ಆರ್‌ಎನ್‌ಎ ಯಲ್ಲಿರುವ ಸುಮಾರು 77-80 ಪ್ರತ್ಯಾಮ್ಲಗಳ ಪೈಕಿ 36, 37, 38 ನೆಯ ಪ್ರತ್ಯಾಮ್ಲಗಳು ಪ್ರತಿಕೋಡಾನಿನ ಕಾರ್ಯವನ್ನು ನಿರ್ವಹಿಸುವುವು. ಈ ಮೂರು ಪ್ರತ್ಯಾಮ್ಲಗಳು ಸಾಧಾರಣವಾಗಿ ಒಂದು ಬಗೆಯ [ಅಂದರೆ ಒಂದು ಅಮೈನೋ ಆಮ್ಲವನ್ನು ಗುರುತಿಸುವ] ವಾಹಕ ಆರ್‌ಎನ್‌ಎ ಗೆ ನಿರ್ದಿಷ್ಟವಾಗಿರುತ್ತವೆ. ಪ್ರತಿಕೋಡಾನು ಸಂಕೇತಗಳನ್ನು ಗುರುತಿಸುವಾಗ 36 ಮತ್ತು 37 ನೆಯ ಪ್ರತ್ಯಾಮ್ಲಗಳು ಸಂಕೇತದ ಪ್ರಥಮ ಮತ್ತು ದ್ವಿತೀಯ ಸಂಕೇತಾಕ್ಷರಗಳಿಗೆ ಪೂರಕವಾಗಿದ್ದು ಅವುಗಳೊಂದಿಗೆ ಬಿಗಿಯಾದ ಹೈಡ್ರೊಜನ್ ಬಂಧದಿಂದ ಕೂಡಿಕೊಳ್ಳುತ್ತವೆ. ಸಂಕೇತದ ಮೂರನೆಯ ಸಂಕೇತಾಕ್ಷರದಲ್ಲಿ (38ನೆಯ ಪ್ರತ್ಯಾಮ್ಲ) – ಯಾವ ಪ್ರತ್ಯಾಮ್ಲ ಇದೆ ಎಂಬುದನ್ನು ಅನುಸರಿಸಿ ಹೈಡ್ರೊಜನ್ ಬಂಧ ಏರ್ಪಡುತ್ತದೆ. (ಇದಕ್ಕೆ 1-3 ಜೊತೆಗಾರಿಕೆ ಎಂಬ ಹೆಸರುಂಟು). ಈ ಬಗೆಯ ಬಂಧನ ಪೂರಕವಾಗಿರಬಹುದು ಅಥವಾ ಇಲ್ಲದಿರಬಹುದು. ಹೀಗೆ ಸಂಕೇತದ ಮೂರನೆಯ ಸಂಕೇತಾಕ್ಷರವನ್ನು ಗುರುತಿಸುವಾಗ ಪ್ರತಿ ಕೋಡಾನು ಒಂದು ಬಗೆಯ ಹಂದಾಟವನ್ನು ಪ್ರದರ್ಶಿಸುತ್ತದೆ. ಇಂಥ ಹಂದಾಟದ ಸಾಧ್ಯತೆಯನ್ನು ಕ್ರಿಕ್ ಯೋಚಿಸಿ, ಪ್ರಾಯೋಗಿಕ ಆಧಾರಗಳಿಂಧ ಮನಗಂಡು 1966 ರಲ್ಲಿ ಒಂದು ಆಧಾರಭಾವನೆಯನ್ನು (ಹೈಪಾಥಿಸಿಸ್) ರೂಪಿಸಿದರು. ಇದಕ್ಕೆ ಹಂದಾಟ (ವಾಬಲ್) ಆಧಾರಭಾವನೆ ಎಂದು ಹೆಸರು. ಇದರ ಪ್ರಕಾರ ಪ್ರತಿ ಕೋಡಾನಿನ 5' ತುದಿಯಲ್ಲಿರುವ ಪ್ರತ್ಯಾಮ್ಲ ಮಿಕ್ಕೆರಡು ಪ್ರತ್ಯಾಮ್ಲಗಳಂತೆ ನಿರ್ದಿಷ್ಟವಾಗಿರುವುದಿಲ್ಲ. ಇದು ಸಂಕೇತದ 3' ತುದಿಯಲ್ಲಿರುವ ಯಾವುದೇ ಪ್ರತ್ಯಾಮ್ಲದೊಂದಿಗೆ ಹೈಡ್ರೊಜನ್ ಬಂಧನವನ್ನು ಏರ್ಪಡಿಸಿಕೊಳ್ಳಬಹುದು. ಅಲ್ಲದೆ ಪ್ರತಿಕೋಡಾನಿನ ಸಂಕೇತಾಕ್ಷರಗಳ ಪೈಕಿ ಸ್ಥಿತಿಬಾಹುಳ್ಯ ಗುಣವನ್ನು ಅತ್ಯಧಿಕವಾಗಿ ಈ

ಮೂರನೆಯ ಸಂಕೇತಾಕ್ಷರದಲ್ಲಿ ಕಾಣಬಹುದು. ಎರಡನೆಯ ಸಂಕೇತಾಕ್ಷರದಲ್ಲಿ ಯಾವ ಬಗೆಯ ಸ್ಥಿತಿಬಾಹುಳ್ಯವೂ ಕಾಣದು. ಆದರೆ ಮೊದಲನೆಯ ಸಂಕೇತಾಕ್ಷರದಲ್ಲಿ ಸ್ವಲ್ಪಮಟ್ಟಿಗೆ ಸ್ಥಿತಿಬಾಹುಳ್ಯ ಗುಣವನ್ನು ಕಾಣಬಹುದು. ಕ್ರಿಕ್ ಸೂಚಿಸಿದ ಹಲವು ನಿಯಮಗಳ ಪ್ರಕಾರ ಒಂದು ವಾಹಕ ಆರ್‌ಎನ್‌ಎ ಯು 4 ರೀತಿಯ ಸಂಕೇತಗಳನ್ನು ತನ್ನ ಮೂರನೆಯ ಸಂಕೇತಾಕ್ಷರದಿಂದ ಗುರುತಿಸಲಾರದು. ಅಲ್ಲದೆ ಮೂರು ಸಂಕೇತಗಳನ್ನು ಒಂದೇ ವಾಹಕ ಆರ್‌ಎನ್‌ಎ ಯಿಂದ ಗುರುತಿಸಬಹುದಾದರೆ, ಪ್ರತಿ ಕೋಡಾನಿನ ಮೂರನೆಯ ಸಂಕೇತಾಕ್ಷರದ ಸ್ಥಾನದಲ್ಲಿ ಇನೋಸೆನ್ ಎಂಬ ಪ್ರತ್ಯಾಮ್ಲ ಇರಬೇಕು. ಇದು ಪ್ರತ್ಯಾಮ್ಲವಾದ ಅಡನೈನಿನಿಂದ ಸಂಶ್ಲೇಷಿತವಾಗುತ್ತದೆ. ಒಂದು ವೇಳೆ ಪ್ರತಿಕೋಡಾನಿನ ಮೂರನೆಯ ಸಂಕೇತಾಕ್ಷರ U ಆಗಿದ್ದರೆ ಅದು A ಮತ್ತು G ಯೊಂದಿಗೆ ಜೊತೆಗೂಡಬಹುದು. ಅನೇಕ ಆಧಾರಗಳಿಂದ ಈ ಸಿದ್ಧಾಂತಕ್ಕೆ ಹೆಚ್ಚು ಪುಷ್ಟಿ ದೊರತಿದೆ. ಉದಾಹರಣೆಗೆ ಸೆರೀನ್ ಎಂಬ ಅಮ್ಯೆನೋ ಆಮ್ಲ UCU, UCC, UCA, UCG, AGU ಮತ್ತು AGC ಎಂಬ ಸಂಕೇತಗಳಿಂದ ಪಠಿಸಲ್ಪಡುತ್ತದೆ. ಈ ಸಂಕೇತಗಳ ಪೈಕಿ ಮೊದಲ ನಾಲ್ಕು ಸಂಕೇತಗಳಲ್ಲಿ ಮೊದಲ ಹಾಗೂ ಎರಡನೆಯ ಸಂಕೇತಾಕ್ಷರಗಳು ಒಂದೇ ಆಗಿದ್ದು ಕೊನೆಯ ಸಂಕೇತಾಕ್ಷರ ಮಾತ್ರ ಬದಲಾಗಿದೆ. ಉಳಿದೆರಡು ಸಂಕೇತಗಳಲ್ಲಿ ಮೊದಲೆರಡು ಸಂಕೇತಾಕ್ಷರಗಳು ಮಾತ್ರ ಒಂದೇ ರೀತಿಯವು.

ಸಾಮಾನ್ಯ ಗುಣಗಳು : ತಳಿಸಂಕೇತದ ಅಭ್ಯಾಸ ನಡೆಯುತ್ತಿದ್ದಂತೆ, ತಳಿಸಂಕೇತ ಪಟ್ಟಿಯಲ್ಲಿ ಹಲವಾರು ವೈಶಿಷ್ಟ್ಯಪೂರ್ಣ ಗುಣಗಳಿರುವುದು ಕಂಡುಬಂದಿದೆ. ತಳಿಸಂಕೇತದ ಪಟ್ಟಿ ಹಾಗೂ ಸಂಕೇತಗಳು ಗುರುತಿಸುವ ಅಮ್ಯೆನೋ ಅಮ್ಲಗಳು ಮೆಂಡಲೀಫನ ಆವರ್ತ ಕೋಷ್ಟಕದಷ್ಟೇ ಮಹತ್ತ್ವ ಗಳಿಸಿವೆ ಎಂದು ಕೆಲವು ವಿಜ್ಞಾನಿಗಳು ನಂಬಿದ್ದಾರೆ. ತಳಿಸಂಕೇತದ ಕೆಲವು ಪ್ರಮುಖ ಗುಣಗಳನ್ನು ಗಮನಿಸೋಣ.

ಸ್ಥಿತಿಬಾಹುಳ್ಯ ಗುಣ ಎಲ್ಲ ಅಮ್ಯೆನೋ ಅಮ್ಲಗಳ ಬಗ್ಗೆಯೂ ಒಂದೇ ಸಮವಾಗಿರುವುದಿಲ್ಲ. ಉದಾಹರಣೆಗೆ ಅರ್ಜನಿನ್, ಸೆರೀನ್ ಮತ್ತು ಲೂಸೀನ್‌ಗಳಿಗೆ 6 ಸಂಕೇತಗಳಿವೆ ; ಇದು ಗರಿಷ್ಠ ಮಿತಿ. ವ್ಯಾಲೀನ್, ಪ್ರೋಲೀನ್, ತ್ರೀಯನೀನ್, ಆ್ಯಲನೀನ್ ಮತ್ತು ಗ್ಲೈಸೀನ್‌ಗಳಿಗೆ 4 ಸಂಕೇತಗಳಿವೆ. ಐಸೋಲ್ಯೂಸಿನ್ ಎಂಬುದಕ್ಕೆ ಮಾತ್ರ 3 ಸಂಕೇತಗಳಿವೆ. ಫೀನೈಲ್ ಅಲನೀನ್ ಟೈರೊಸೀನ್, ಹಿಸ್ಟಿಡೀನ್ ಗ್ಲುಟಾಮಿನ್, ಆಸ್ಪರಜೀನ್, ಲೈಸೀನ್, ಆಸ್ಪಾರ್ಟಿಕ್ ಆಮ್ಲ, ಗ್ಲುಟಾಮಿಕ್ ಆಮ್ಲ ಮತ್ತು ಸಿಸ್ಟೀನ್‌ಗಳಿಗೆ ಪ್ರತಿಯೊಂದಕ್ಕೂ 2 ಸಂಕೇತಗಳಿವೆ. ಮಥೈಯೊನೀನ್ ಮತ್ತು ಟ್ರಿಪ್ಟಫ್ಯಾನ್‌ಗಳಿಗೆ ಕೇವಲ ಒಂದೊಂದು ಸಂಕೇತ ಉಂಟು. ಇದು ಸ್ಥಿತಿಬಾಹುಳ್ಯ ಗುಣದ ಕನಿಷ್ಠ ಮಿತಿ.

(ಸಂಕೇತಗಳಿಗೆ ಒಂದು ನಿರ್ದಿಷ್ಟ ರಚನೆಯುಂಟು. ಒಂದು ಅಮ್ಯೆನೋ ಆಮ್ಲವನ್ನು ಗುರುತಿಸುವಂಥ ಸಮಾನ ಗುಣದ ಸಂಕೇತಗಳೆಲ್ಲವೂ ಬಲುಮಟ್ಟಿಗೆ ಒಂದೇ ಚೌಕದಲ್ಲಿರುವುದನ್ನು ತಳಿಸಂಕೇತದ ಪಟ್ಟಿಯಲ್ಲಿ ಗಮನಿಸಬಹುದು. ಸಾಮಾನ್ಯವಾಗಿ ಸಮಾನ ಗುಣದ ಸಂಕೇತಗಳು ತಮ್ಮ ಮೂರನೆಯ ಸಂಕೇತಾಕ್ಷರದಲ್ಲಿ ವ್ಯತ್ಯಾಸವನ್ನು ತೋರುತ್ತದೆ).

ಕೆಲವು ಸೂಕ್ಷ್ಮಜೀವಿಗಳ ಹಾಗೂ ಬಹುಪಾಲು ಉಚ್ಚ ಜೀವಿಗಳ ಡಿಎನ್‌ಎ ಯಲ್ಲಿ ಗ್ವಾನೀನ್ ಮತ್ತು ಸೈಟೊಸೀನ್ ಪ್ರತ್ಯಾಮ್ಲಗಳ ಅಂಶ ಅಧಿಕವಾಗಿರುತ್ತದೆ. G ಮತ್ತು C ಪಡೆದಿರುವ ಸಂಕೇತಾಕ್ಷರಗಳನ್ನು ಗಮನಿಸಿದರೆ ಒಂದೆರಡು ಅಂಶಗಳು ವ್ಯಕ್ತವಾಗುತ್ತವೆ. ಪ್ರೋಲೀನ್, ಅರ್ಜನೀನ್, ಅಲನೀನ್ ಹಾಗೂ ಗ್ಲೈಸೀನ್ ಅಮ್ಯೆನೋ ಆಮ್ಲಗಳು ಜೀವಿ ಉತ್ಪಾದಿಸುವ ಪ್ರೊಟೀನ್‌ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದರೆ G ಮತ್ತು C ಅಂಶಗಳು ಜೀವಧಾತುವಿನಲ್ಲಿರುವುದು ವ್ಯಕ್ತವಾಗುತ್ತದೆ. ಹಾಗೆಯೇ ಫೀನೈಲ್ ಆ್ಯಲನೀನ್, ಟೈರೊಸೀನ್, ಐಸೋಲೂಸೀನ್, ಮಥೈಯನೀನ್, ಆಸ್ಪರಜೀನ್, ಲೈಸೀನ್ ಅಮ್ಯೆನೋ ಆಮ್ಲಗಳು ಹೆಚ್ಚಿದ್ದರೆ G ಮತ್ತು C ಅಂಶಗಳು ಜೀವಧಾತುವಿನಲ್ಲಿ ಕಡಿಮೆ ಪ್ರಮಾಣದಲ್ಲಿವೆ ಎಂದು ತಿಳಿದುಬರುತ್ತದೆ. ಒಂದು ಅಮ್ಯೆನೋ ಆಮ್ಲಕ್ಕೆ ಹಲವಾರು ಸಂಕೇತಗಳಿದ್ದರೆ ಸಾಧಾರಣವಾಗಿ ಈ ಸಂಕೇತಗಳಿಗೆ ಪರಸ್ಪರ ಸಂಬಂಧವಿರುತ್ತದೆ. ಅಂದರೆ ಸಂಬಂಧಿತ ಸಂಕೇತಗಳಲ್ಲಿ ಒಂದು ಪ್ರತ್ಯಾಮ್ಲದ ವ್ಯತ್ಯಾಸದಿಂದ ವಿವಿಧ ರೀತಿಯ ಅಮ್ಯೆನೋ ಆಮ್ಲಗಳು ಗುರುತಿಸಲ್ಪಡುವುವು. ಪರಸ್ಪರ ಸಂಬಂಧಿಸಿರುವ ಅಮ್ಯೆನೋ ಆಮ್ಲಗಳಿಗೆ ಸಾಧಾರಣವಾಗಿ ಸಂಬಂಧಿ ಸಂಕೇತಗಳುಂಟು. ಅಮ್ಯೆನೋ ಆಮ್ಲಗಳ ಕ್ಷಾರತೆ, ಆಮ್ಲೀಯತೆ, ಜಲ ವಿರೋಧಿ ಗುಣಗಳೂ ಅವುಗಳ ಸಂಶ್ಲೇಷಣೆಯ ಮೂಲಾಧಾರವೂ ಒಂದೇ ಆಗಿದ್ದರೆ ಇಂಥವಕ್ಕೆ ಪರಸ್ಪರ ಸಂಬಂಧಿತ ಅಮ್ಯೆನೋ ಆಮ್ಲಗಳು ಎಂದು ಹೆಸರು. ಉದಾಹರಣೆಗೆ ಎರಡನೆಯ ಸಂಕೇತಾಕ್ಷರ U ಆಗಿರುವಂಥ ಅಮ್ಯೆನೋ ಆಮ್ಲಗಳೆಲ್ಲವೂ ಹೆಚ್ಚಿನ ಮಟ್ಟದ ಜಲವಿರೋಧಿ ಗುಣವನ್ನು ತೋರ್ಪಡಿಸುತ್ತವೆ. ಎರಡನೆಯ ಸಂಕೇತಾಕ್ಷರ C ಆಗಿರುವ ಸಂಕೇತಗಳಿಗೂ ಸಾಧಾರಣವಾಗಿ ಜಲವಿರೋಧಿ ಗುಣ ಉಂಟು. ಅಥವಾ ಎರಡನೆಯ ಸಂಕೇತಾಕ್ಷರ G ಆಗಿರುವ ಸಂಕೇತಗಳಿಂದ ಗುರುತಿಸಲ್ಪಡುವ ಅಮ್ಯೆನೋ ಆಮ್ಲಗಳಲ್ಲಿ ಕ್ರಿಯಾಶೀಲವಾದ ನೆರೆಗುಂಪುಗಳು (ಸೈಡ್ ಗ್ರೂಪ್ಸ್) ಇರುವುವು. ಇಂಥ ಅಮ್ಯೆನೋ ಆಮ್ಲಗಳು ಕವಲುಗೊಂಡ ಮೀಥೈಲ್ ಗುಂಪನ್ನೂ C ಅಂಕಣದಲ್ಲಿರುವ ಅಮ್ಯೆನೋ ಆಮ್ಲಗಳು (ಆ್ಯಲನೀನ್ ಬಿಟ್ಟು) ಹೈಡ್ರಾಕ್ಸಿಲ್ ಗುಂಪನ್ನೂ ಪಡೆದಿರುತ್ತವೆ. ಎರಡನೆಯ ಸಂಕೇತಾಕ್ಷರ G ಅಥವಾ A ಆಗಿರುವಂಥ ಸಂಕೇತಗಳು ಗುರುತಿಸುವ ಅಮ್ಯೆನೋ ಆಮ್ಲಗಳಲ್ಲಿ ಬಹುಮಟ್ಟಿಗೆ ಎಲ್ಲವೂ ಜಲಾಕರ್ಷಕ ಗುಣವನ್ನು ಪಡೆದಿರುತ್ತವೆ.

ಕಾರ್ಯಶೀಲತೆಯ ದೃಷ್ಟಿಯಿಂದ ಒಂದೇ ಬಗೆಯ ಜೈವಿಕ ಕ್ರಿಯೆಯಿಂದ ಉತ್ಪತ್ತಿಯಾದ ಅಮ್ಯೆನೋ ಆಮ್ಲಗಳಿಗೆ ಇರುವಂಥ ಸಂಕೇತಗಳು ಒಂದು ಪ್ರತ್ಯಾಮ್ಲದ ಬದಲಾವಣೆಯಿಂದ ಆ ಗುಂಪಿನ ಮತ್ತೊಂದು ಅಮ್ಯೆನೋ ಆಮ್ಲವನ್ನು ಗುರುತಿಸಬಹುದು. ಪ್ರೋಪಿಯಾನಿಕ್ ಆಮ್ಲದಿಂದ ಅಲನೀನ್, ಸೆರಿನ್, ಫೀನೈಲ್ ಆ್ಯಲನೀನ್, ಟೈರೊಸೀನ್, ಸಿಸ್ಟೀನ್, ಟ್ರಿಪ್ಟಫ್ಯಾನ್, ಹಿಸ್ಟಡೀನ್ ಉತ್ಪತ್ತಿಯಾಗುತ್ತವೆ. ಗ್ಲುಟಾಮಿಕ್ ಆಮ್ಲ ಮತ್ತು ಗ್ಲೈಸೀನ್‌ಗಳು ಗ್ಲುಟಾರಿಕ್ ಆಮ್ಲದಿಂದ ಉತ್ಪತ್ತಿಯಾಗುತ್ತವೆ. ಆಸ್‌ಪಾರ್‌ಟಿಕ್ ಆಮ್ಲ ಮತ್ತು ಆಸ್ಪರಜೀನ್‌ಗಳು ಸಕ್ಸಿನಿಕ್ ಆಮ್ಲದಿಂದ ಉತ್ಪತ್ತಿಯಾಗುತ್ತವೆ.

ತಳಿಸಂಕೇತ ಮತ್ತು ವಿಕೃತಿಗಳು : ತಳಿಸಂಕೇತಗಳು ನಿರ್ದಿಷ್ಟ ಬಗೆಯ ಅಮ್ಯೆನೋ ಆಮ್ಲಗಳನ್ನು ಗುರುತಿಸುತ್ತವೆ ಎಂಬುದೂ ತಳಿಸಂಕೇತದಲ್ಲಿ ಪ್ರತ್ಯಾಮ್ಲದ ಕ್ರಮ ಬೇರೆಯಾದರೆ ಬೇರೆ ಅಮ್ಯೆನೋ ಅಮ್ಲವನ್ನು ಗುರುತಿಸತೊಡಗುತ್ತವೆ ಎಂಬುದೂ ತಿಳಿದ ವಿಚಾರವೇ. ಪ್ರತ್ಯಾಮ್ಲಗಳ ಬದಲಾವಣೆ ಸ್ವಾಭಾವಿಕವಾಗಿಯೂ ಆಗಬಹುದು. ಉದಾಹರಣೆಗೆ ಮನುಷ್ಯನ ರಕ್ತದಲ್ಲಿ ಹೀಮೊಗ್ಲೋಬಿನ್ ಎಂಬ ಸಂಯುಕ್ತ ಪ್ರೊಟೀನ್ ಉಂಟು. ಸಾಮಾನ್ಯವಾಗಿ ಕೆಂಪು ರಕ್ತಕಣಗಳು ದುಂಡಾಗಿರುತ್ತದೆ. ಕೆಲವೊಮ್ಮೆ ಹೀಮೊಗ್ಲೋಬೀನ್‌ನಲ್ಲಿ ವಿಕೃತಿಯುಂಟಾಗಿ ರಕ್ತಹೀನತೆ (ಕುಡುಗೋಲುಕಣ ಅನೀಮಿಯ) ಕಾಣಿಸಿಕೊಳ್ಳಬಹುದು. ಈ ರೋಗ ಆಫ್ರಿಕದ ಕೆಲವು ಜನಾಂಗಗಳಲ್ಲಿ ಹೆಚ್ಚು ವ್ಯಾಪಕವಾಗಿದೆ. ಹೀಮೊಗ್ಲೋಬಿನ್‌ನಲ್ಲಿ ನಾಲ್ಕು ಗ್ಲೋಬಿನ್ ಸರಪಳಿಗಳು ಉಂಟು. ಮೂಲಭೂತವಾಗಿ ಇವು ಎರಡು ಬಗೆಯವು. ಇವಕ್ಕೆ ಅಲ್ಫ ಮತ್ತು ಬೀಟ ಸರಪಳಿ ಎಂದು ಹೆಸರು. ಅಲ್ಫ ಸರಪಳಿ 141 ಅಮ್ಯೆನೋ ಆಮ್ಲಗಳಿಂದ ಕೂಡಿದೆಯಾದರೆ, ಬೀಟ ಸರಪಳಿಯಲ್ಲಿ 146 ಅಮ್ಯೆನೋ ಆಮ್ಲಗಳಿವೆ. ಈ ಸರಪಳಿಗಳ ಪೈಕಿ ಬೀಟ ಸರಪಳಿಯಲ್ಲಿ ಆರನೆಯ ಅಮ್ಯೆನೋ ಆಮ್ಲ ಗ್ಲುಟಾಮಿಕ್ ಆಮ್ಲ, ಇದಕ್ಕೆ ಬದಲಾಗಿ ವ್ಯಾಲೀನ್ ಎಂಬ ಅಮ್ಯೆನೋ ಆಮ್ಲ ಇದ್ದುಬಿಟ್ಟರೆ ಹೀಮೊಗ್ಲೋಬೀನ್ ಆಕ್ಸಿಜನ್ನನ್ನು ಹೊರುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಅಲ್ಲದೆ ಕೆಂಪು ರಕ್ತಕಣಗಳು ಕುಡುಗೋಲಿನ ಆಕಾರವನ್ನು ಪಡೆಯುತ್ತವೆ. ಇನ್ನೂ ಕೆಲವು ಜನಾಂಗಗಳಲ್ಲಿ ಬೀಟ ಸರಪಳಿಯಲ್ಲಿರುವ ಗ್ಲುಟಾಮಿಕ್ ಆಮ್ಲಕ್ಕೆ ಬದಲಾಗಿ ಲೈಸೀನ್ ಎಂಬ ಅಮ್ಯೆನೋ ಅಮ್ಲ ಇರುವುದು ಗಮನಕ್ಕೆ ಬಂದಿದೆ. ಇಂಥ ರಕ್ತಕಣಗಳಿರುವ ಹೀಮೊಗ್ಲೋಬೀನ್ನಿಗೆ ಹೀಮೊಗ್ಲೋಬೀನ್ ಎಂದು ಹೆಸರು. ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ: ಬೀಟ ಸರಪಳಿಯಲ್ಲಿ ಸಾಧಾರಣವಾಗಿ ಆರನೆಯ ಸ್ಥಾನದಲ್ಲಿ ಕಂಡುಬರುವ ಅಮ್ಯೆನೋ ಆಮ್ಲವನ್ನು ಗುರುತಿಸುವ ಸಂಕೇತ ಎರಡು ರೀತಿಯಲ್ಲಿ ವಿಕೃತಿಗೊಳ್ಳಬಹುದು. ಮೊದಲನೆಯ ಉದಾಹರಣೆಯಲ್ಲಿ ಗ್ಲುಟಾಮಿಕ್ ಆಮ್ಲಕ್ಕೆ ಬದಲಾಗಿ ವ್ಯಾಲೀನ್ ಇದೆಯಾದರೆ ಎರಡನೆಯದರಲ್ಲಿ ಗ್ಲುಟಾಮಿಕ್ ಆಮ್ಲಕ್ಕೆ ಬದಲಾಗಿ ಲೈಸೀನ್ ಇದೆ. ಈ ಮೂರು ಬಗೆಯ ಅಮ್ಯೆನೋ ಆಮ್ಲಗಳ ಸಂಕೇತಗಳು ಯಾವುವೆಂದು ಗಮನಿಸೋಣ: ಗ್ಲುಟಾಮಿಕ್ ಆಮ್ಲ GAA ಅಥವಾ GAG: ವ್ಯಾಲೀನ್ GUA ಅಥವಾ GUG ; ಲೈಸೀನ್ AAA ಅಥವಾ AAG; ಗ್ಲುಟಾಮಿಕ್ ಆಮ್ಲ, ಸಂಕೇತ GAG ಯಲ್ಲಿ ಒಂದು ಸಂಕೇತಾಕ್ಷರದ ಬದಲಾವಣೆಯ ಕಾರಣದಿಂದ ಎರಡು ಬಗೆಯ ವಿಕೃತಿಗಳು ಸಾಧ್ಯ:

1 AAG (ಲೈಸೀನ್) (ಇಲ್ಲಿ ಮೊದಲ ಸಂಕೇತಾಕ್ಷರ G ಗೆ ಬದಲಾಗಿ A ಪ್ರತ್ಯಾಮ್ಲ ಬಂದಿದೆ) 2. GUG (ವ್ಯಾಲೀನ್) ಇಲ್ಲಿ ಮೂರನೆಯ ಸಂಕೇತಾಕ್ಷರ G ಗೆ ಬದಲಾಗಿ A ಬಂದಿದೆ. ಇದರಿಂದ ಸಂಕೇತದಲ್ಲಿ ಕಂಡು ಬಂದಿರುವ ವಿಕೃತಿಗಳನ್ನು ಹೀಗೆ ನಮೂದಿಸಬಹುದು :

| | ಕುಡುಗೋಲಿನಾಕಾರದ ಹೀಮೋಗ್ಲೋಬಿನ್ | ಸಾಧಾರಣ ಹೀಮೋಗ್ಲೋಬಿನ್ | C– ಹೀಮೋಗ್ಲೋಬಿನ್ |
|---|---|---|---|
| ಅಮ್ಯೆನೋ ಆಮ್ಲ | ವ್ಯಾಲೀನ್ | ಗ್ಲುಟಾಮಿಕ್ ಆಮ್ಲ | ಲೈಸೀನ್ |
| ಸಂಕೇತ | GUA ಅಥವಾ GUG | GAA ಅಥವಾ GUG | AAA ಅಥವಾ AAG |

ಇದೇ ರೀತಿ ಹಲವಾರು ತಳಿಸಂಕೇತಾತ್ಮಕ ವಿಕೃತಿಗಳನ್ನು ಟ್ರಿಪ್ಟೊಫ್ಯಾನ್ ಸಿಂತೆಟೇಸ್ ಎಂಬ ಕಿಣ್ವದಲ್ಲಿ ಮತ್ತು ಹೊಗೆಸೊಪ್ಪಿನ ಶಬಲರೋಗಕಾರಕ ವೈರಸುಗಳಲ್ಲಿ ಗಮನಿಸಲಾಗಿದೆ. (ಎ.ಎನ್.ಎಸ್.)

ಕೃತಕ ಜೀನಿನ ಸಂಶ್ಲೇಷಣೆ: ಕೇವಲ ರಾಸಾಯನಿಕ ತಂತ್ರಗಳಿಂದಲೇ 207 ನ್ಯೂಕ್ಲಿಯೊಟೈಡ್ ಘಟಕಗಳನ್ನು, ಅವು ನೈಸರ್ಗಿಕ ಜೀನಿನಲ್ಲಿ ಇರುವ ಅನುಕ್ರಮದಲ್ಲಿಯೇ, ಪೋಣಿಸಿ ನೈಸರ್ಗಿಕ ಜೀನಿನಲ್ಲಿರುವ ಆಕೃತಿಯಲ್ಲಿ ಜೋಡಿಸಿರುವ ಸಿದ್ಧಿ (1979) ಅಂದರೆ ಜೀವಿಗಳ ಉಳಿವು ಬೆಳವಣಿಗೆ ಮುಂತಾದ ರಹಸ್ಯಗಳನ್ನು ಹೊತ್ತಿರುವ ಜೀನ್‌ನ ತಯಾರಿಕೆಯನ್ನು ಜೀವಿಯಿಂದ ಹೊರಗೆ ಕೃತಕವಾಗಿ ಅಜೀವ ಮೂಲಗಳಿಂದ ಮಾಡುವುದು ಸಾಧ್ಯ ಎಂದಾಯಿತು. ಇಂಥ ಸಂಶ್ಲೇಷಿತ ಜೀನ್‌ನ್ನು ಜೀವಿಯ ಕೋಶಕ್ಕೆ ಸೇರಿಸಿದಾಗ ಇದು ನೈಸರ್ಗಿಕ ಜೀನಿನಂತೆಯೇ ಕಾರ್ಯ ನಿರ್ವಹಿಸಿದೆ.

ನೈಸರ್ಗಿಕ ಜೀನ್‌ನ ಸಂರಚನೆ, ರಸಾಯನ ವೃತ್ತಾಂತ ಮುಂತಾದವನ್ನು ಆವಿಷ್ಕರಿಸಿದ ಬಳಿಕ (ನೋಡಿ–ಜೀನ್) ಆ ಆಧಾರದ ಮೇಲೆ ಪ್ರಯೋಗ ಮಂದಿರದಲ್ಲಿ ಕೃತಕವಾಗಿ ಜೀನ್‌ನ್ನು ಸಂಶ್ಲೇಷಿಸುವುದು ಸಾಧ್ಯವಾದೀತೇ ಎಂಬ ಪ್ರಶ್ನೆ ಸಹಜವಾಗಿ ಮೊಳೆಯುತ್ತದೆ. ಈ ದಿಶೆಯಲ್ಲಿ ಭಾರತ ಸಂಜಾತ ವಿಜ್ಞಾನಿ ಹರ್ ಗೋವಿಂದ ಖೊರಾನಾ (ನೋಡಿ ಖೊರಾನಾ ಹರ್ ಗೋವಿಂದ) ಅವರ ಸಹೋದ್ಯೋಗಿ ಕರ್ನಾಟಕದ ಬೆಳಗಜೆ ರಾಮಮೂರ್ತಿ ಮತ್ತು ಅನುಯಾಯಿಗಳು 1969ರಿಂದ ಈಚೆಗೆ ಶ್ರಮಿಸಿದುದರ ಫಲ ಈ ಹೊಸ ಸಾಧನೆ.

1969ರ ಮಧ್ಯಭಾಗದಲ್ಲಿ ಖೊರಾನಾ ನೈಸರ್ಗಿಕ ಜೀನೊಂದನ್ನು ಕೃತಕವಾಗಿ ಸಂಶ್ಲೇಷಿಸಿ ತಮ್ಮ ಸಾಧನೆಯನ್ನು 1970 ರಲ್ಲಿ ಪ್ರಕಟಿಸಿದರು. ಸಂಶ್ಲೇಷಣೆಗೊಳ್ಳುತ್ತಿರುವ ಪ್ರೋಟೀನಿನಲ್ಲಿ ಅಗತ್ಯವಾದ ಎಡೆಯಲ್ಲಿ ಅಲನೀನನ್ನು ತಂದು ಸೇರಿಸಲು ಬೇಕಾಗುವ ವಾಹಕ ಆರ್‌ಎನ್‌ಎ (ಟಿಆರ್‌ಎನ್‌ಎ) ಅಣುವನ್ನು ಸಂಕೇತಿಸುವ ಜೀನ್‌ನ ಸಂಶ್ಲೇಷಣೆಯನ್ನು ಇವರಾಗ ಸಾಧಿಸಿದ್ದರು. 77 ಘಟಕಗಳ ಜೀನ್ ಇದು. ಈ ಪ್ರಯೋಗದ ಅಂಗವಾಗಿ ಹಲವಾರು ಹೊಸ ರಾಸಾಯನಿಕ ಹತ್ತಾರುಗಳು ಬಳಕೆಗೆ ಬಂದುವು. ಇದು ಗಮನಾರ್ಹವಾದ ಸಿದ್ಧಿಯೇ ಆಗಿದ್ದರೂ ಜೈವಿಕವಾಗಿ ವಿಜ್ಞಾನಿಗಳನ್ನು ಒಂದು ಕುರುಡು ಕೊನೆಗೆ ಒಯ್ದಿತ್ತು. ಉದಾಹರಣೆಗೆ, ಈ ಸಂಶ್ಲೇಷಿತ ಜೀನ್‌ನ್ನು ಯೀಸ್ಟ್ ಕೋಶಗಳ ಕೃಷಿಕೆಗೆ (ಕಲ್ಚರ್) ಸೇರಿಸಿದ್ದಾದರೆ ಇದು ಕಾರ್ಯನಿರತವಾಗಿದೆಯೇ ಇಲ್ಲವೇ ಎಂಬುದನ್ನು ಪತ್ತೆ ಮಾಡುವ ವಿಧಾನವೇ ಇರಲಿಲ್ಲ. ಅಲ್ಲದೇ ಇದಕ್ಕೆ "ತೊಡಗು" ಮತ್ತು "ನಿಲ್ಲು" ಸಂಜ್ಞೆಗಳು ಯಾವುವು ಮತ್ತು ಅವುಗಳ ಸ್ವಭಾವ ಏನು ಎಂಬುದೂ ವಿಜ್ಞಾನಿಗಳಿಗೆ ತಿಳಿದಿರಲಿಲ್ಲ – ಕೋಶ ಸಂರಚನೆ ಜೀನನ್ನು ಗುರುತಿಸಿ ಅದರ ಮಾಹಿತಿಯನ್ನು ಕೋಡ್ ಪ್ರಕ್ರಿಯೆಗಳಲ್ಲಿ ಬಳಸಿಕೊಳ್ಳಲು ಇವು ಅತ್ಯವಶ್ಯ.

ಹೀಗಾಗಿ ಖೊರಾನಾ ಮತ್ತು ಅವರ ಅನುಯಾಯಿಗಳ ಲಕ್ಷ್ಯ ಈ ಮೇಲಿನ ಮನುಷ್ಯ ಕೃತ ಜೀನ್‌ನಿಂದ ಎಶ್ಚಿರೀಷಿಯ ಕೋಲಿ ಎಂಬ ಏಕಾಣುಜೀವಿಯಲ್ಲಿ (ಬ್ಯಾಕ್ಟೀರಿಯ) ಕಂಡುಬರುವ ಒಂದು ಜೀನ್‌ನತ್ತ ಹೊರಳಿತು.

ಟೈರೊಸೀನ್ ಆರ್‌ಎನ್‌ಎ ಅಣುವಿಗಾಗಿ ಇದು ಸಂಕೇತವನ್ನು ಒದಗಿಸುತ್ತದೆ. ಈ ಜೀನಿನ 126 ನ್ಯೂಕ್ಲಿಯೊಟೈಡುಗಳ ಅನುಕ್ರಮವನ್ನು ಆ ಮೊದಲೇ ಕೇಂಬ್ರಿಜಿನ (ಇಂಗ್ಲೆಂಡ್) ವಿಜ್ಞಾನಿಗಳು ನಿರ್ಧರಿಸಿ ಇದರ ಮೇಲೆ ಸಾಕಷ್ಟು ಪ್ರಯೋಗ ಮಾಡಿದ್ದುದರಿಂದ ಅಲ್ಲಿಂದ ಮುಂದುವರಿಯಲು ಖೊರಾನಾ ತಂಡಕ್ಕೆ ಯೋಗ್ಯ ಹಾಗೂ ದಕ್ಷವಾದ ಒಂದು ವೇದಿಕೆ ದೊರೆದಂತಾಯಿತು. ಟೈರೊಸೀನ್ ಟಿಆರ್‌ಎನ್‌ಎ ಜೀನನ್ನು ಕೂಡ ಸಂಶ್ಲೇಷಿಸಬೇಕೆಂದು ಇವರು, ನಿರ್ಧರಿಸಿದರು. ಇದರಿಂದ ತಮಗೆ ಜೀವಂತ ಕೋಶವೊಂದರೊಳಗೆ ಜೀನುಗಳು ಕಾರ್ಯನಿರತರಾಗಿರುವುದನ್ನು ತಿಳಿಯುವ ಸೌಲಭ್ಯ ದೊರೆಯುವುದೆಂಬುದೇ ಇದರ ಕಾರಣ. ಏ. ಕೋಲೈನಲ್ಲಿ ಹೆಚ್ಚಿನ ಜೀನ್‌ಗಳು ಪ್ರೋಟೀನುಗಳ ಸಂಶ್ಲೇಷಣೆಯನ್ನು ನಿಯಂತ್ರಿಸುತ್ತವೆ. ಒಮ್ಮೊಮ್ಮೆ ಜೀನಿನ ರಾಸಾಯನಿಕ ಮಾಟದಲ್ಲಿ ಎಲ್ಲೋ ಏನೋ ಒಡಕು ಉಂಟಾಗಿ ವಿಕೃತಿ (ಮ್ಯುಟೇಷನ್) ತಲೆದೋರುವುದಿದೆ. ಆಗ ಜೀನಿನ ಒಂದು ತುಣುಕು ಪೂರ್ಣ ಪ್ರೊಟೀನ್ ಸಂಶ್ಲೇಷಣೆಗೆ ತಡೆ ಸಂಜ್ಞೆಯಾಗಿ ವರ್ತಿಸುವುದು. ಇದರ ಫಲ ಒಂದು ನಿಷ್ಕ್ರಿಯಾವಂತ ಪ್ರೊಟೀನ್. ಇದು ಸಾಧಾರಣ ಪ್ರೋಟೀನಿಗಿಂತ ಕಿರಿದು. ಈ ವಿಕೃತಿಯನ್ನು ಎ. ಕೋಲಿನ ಇನ್ನೊಂದು ಜೀನ್‌ನಲ್ಲಿನ ವಿಕೃತಿಯಿಂದ ನಿಗ್ರಹಿಸಬಹುದೆಂಬುದಾಗಿ ವಿಜ್ಞಾನಿಗಳು ಕಂಡುಕೊಂಡರು. ಈ ಎರಡನೆಯ ವಿಕೃತಿ ಟೈರೊಸೀನ್ ಟಿಆರ್‌ಎನ್‌ಎ ಜೀನ್‌ನ ಒಳಗಡೆ ಇದೆ ಎಂಬುದಾಗಿ ಇಂಗ್ಲಿಷ್ ವಿಜ್ಞಾನಿಗಳು ಆವಿಷ್ಕರಿಸಿದ್ದರು. ಈಗ ಖೊರಾನಾ ಹಾಗೂ ಅವರು ಅನುಯಾಯಿ ಬೆಳಗಜೆ ರಾಮಮೂರ್ತಿ ಸಂಶ್ಲೇಷಿಸಿರುವ ಎರಡನೆಯ ಜೀನ್‌ನ್ನು ಈ ಕಾರಣದಿಂದ ಅನೇಕ ವೇಳೆ ಟೈರೊಸೀನ್ ಟಿಆರ್‌ಎನ್‌ಎ ಜೀನ್ ಎಂದು ಕರೆಯುವುದುಂಟು. ಈ ನಿಗ್ರಹ ಟಿಆರ್‌ಎನ್‌ಎ ಯು ತಡೆ ಸಂಜ್ಞೆಯನ್ನು ರದ್ದುಗೊಳಿಸಿ ಅದರ ಬದಲಾಗಿ ಅಮೈನೋ ಆಮ್ಲ ಟೈರೊಸೀನನ್ನು ಪ್ರವೇಶಗೊಳಿಸುತ್ತದೆ. ಇದರ ಫಲವಾಗಿ ಎಂದಿನ ಸಾಮಾನ್ಯ ಉದ್ದದ ಪ್ರೊಟೀನಿನ ಉತ್ಪತ್ತಿ ಆಗುವುದು. ಬಹುತೇಕ ಸಂದರ್ಭಗಳಲ್ಲಿ ಇದು ಪೂರ್ಣ ಕಾರ್ಯನಿರತವಾಗಿರುತ್ತದೆ. ವಿಕೃತ ಏಕಾಣುಜೀವಿಯೊಂದರೊಳಕ್ಕೆ ವೈರಸಿನ ಮೂಲಕ ಈ ಮನುಷ್ಯ ಕೃತ ಜೀನ್‌ನ್ನು ಹೋಗುವಂತೆ ಮಾಡಿ ಅದು ಅಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ತಪಾಸಿಸಬಹುದು. ಜೀನ್ ಕೆಲಸಮಾಡಿದರೆ ಎ. ಕೋಲೈನ ಪ್ರೊಟೀನುಗಳು ಪ್ರಸಾಮಾನ್ಯವಾಗಿವೆ (ನಾರ್ಮಲ್) ಎಂಬುದು ಸಿದ್ಧವಾಗುತ್ತದೆ. ವಾಸ್ತವವಾಗಿ ಕೃತಕ ಜೀನನ್ನು ಎ. ಕೋಲಿಯ ಕೃಷಿಕೆಗೆ ವೈರಸ್ ಮುಖೇನ ಒಯ್ದಾಗ ಅದು ನಿರೀಕ್ಷಿಸಿದ ತೆರನಾಗಿಯೇ ಕೆಲಸ ಮಾಡಿತು.

ಜೀನ್‌ನ್ನೂ ಅದರ ನಿಯಂತ್ರಣ ಸಂಜ್ಞೆಗಳನ್ನೂ ಖೊರಾನಾ ತಂಡ ಸಂಶ್ಲೇಷಿಸಿದ್ದು ಹೇಗೆ ಎಂಬುದನ್ನು ಈಗ ನೋಡೋಣ. ಉಪಜೋಡಣೆಯ ತತ್ತ್ವವನ್ನು (ಪ್ರಿನ್ಸಿಪಲ್ ಆಫ್ ಸಬ್ ಅಸೆಂಬ್ಲಿ) ಅವರು ಬಳಸಿಕೊಂಡು ಹಲವಾರು ಹಂತಗಳಲ್ಲಿ ಇದನ್ನು ಸಾಧಿಸಿದರು. ವಾಣಿಜ್ಯ ಕ್ಷೇತ್ರದಿಂದ ನ್ಯೂಕ್ಲಿಯೊಟೈಡುಗಳನ್ನು ಖರೀದಿ ಮಾಡಿದರು. ಬಳಿಕ ನೈಸರ್ಗಿಕ ಟೈರೊಸೀನ್ ಟಿಆರ್‌ಎನ್‌ಎ ಯಲ್ಲಿ ಇರುವ ಕ್ರಮದಲ್ಲಿಯೇ ಅವನ್ನು ಪೋಣಿಸಿ 10-15 ನ್ಯೂಕ್ಲಿಯೋಟೈಡುಗಳ ಉದ್ದ ಇರುವ ಜೀನ್ ಘಟಕಗಳನ್ನು ತಯಾರಿಸಲು ಅವಶ್ಯವಾಗುವ ರಾಸಾಯನಿಕ ವಿಧಾನಗಳನ್ನು ಅಭಿವರ್ಧಿಸಿದರು. ಪ್ರತಿಯೊಂದು ಘಟಕವೂ ಜೀನ್‌ನ್ನೇ ರೂಪಿಸುವ ಡಿಎನ್‌ಎಯ ಎರಡು ಪೂರಕ ಎಳೆಗಳ ಒಂದು ಭಾಗವಾಗಿತ್ತು. ಹೀಗೆ ಒಂದೊಂದು ನ್ಯೂಕ್ಲಿಯೋಟೈಡನ್ನೂ ರಚಿಸಿದ ಬಳಿಕ ಅದನ್ನು ಶುದ್ಧೀಕರಿಸುವುದು ಅವಶ್ಯ. ಅಯಾನ್ ವಿನಿಮಯ ಸ್ತಂಭ ಕ್ರೋಮಟಾಗ್ರಫಿ (ಅಯಾನ್ ಎಕ್ಸ್‌ಚೇಂಜ್ ಕಾಲಮ್ ಕ್ರೋಮಟಾಗ್ರಫಿ) ಅಥವಾ ವೇಗಯುತ ಉನ್ನತ ಸಂಮರ್ದದ್ರವ ಕ್ರೋಮಟಾಗ್ರಫಿ (ರ‍್ಯಾಪಿಡ್ ಹೈಪ್ರೆಶರ್ ಲಿಕ್ವಿಡ್ ಕ್ರೋಮಟಾಗ್ರಫಿ) ವಿಧಾನವನ್ನು ಉಪಯೋಗಿಸಿಕೊಂಡು ಇದನ್ನು ಸಾಧಿಸಲಾಯಿತು. ಈ ತೆರನಾಗಿ ಶುದ್ಧೀಕೃತವಾದ ನ್ಯೂಕ್ಲಿಯೋಟೈಡುಗಳ 40 ಘಟಕಗಳು ತಯಾರಾದಾಗ ಇದನ್ನು ನೈಸರ್ಗಿಕ ಜೀನ್‌ಗೆ ಹೊಂದುವಂತೆ ಎರಡೆಳೆಯ ಡಿಎನ್‌ಎ ಅಣುವಾಗಿ ಪೋಣಿಸಲು ಎಂಜೈಮುಗಳನ್ನು ಉಪಯೋಗಿಸಲಾಯಿತು.

ಆಣ್ವಕ ಮಟ್ಟದಲ್ಲಿ ಜೀನುಗಳು ಹೇಗೆ ತಮ್ಮ ಅನುವಂಶಿಕ ಸಂದೇಶವನ್ನು ನಿರ್ವಹಿಸುತ್ತವೆ ಎಂಬುದನ್ನು ರಸಾಯನ ವಿಜ್ಞಾನಿಗಳು ಅಭ್ಯಸಿಸಲು ಸಾಧ್ಯವಾಗಿರುವುದು ಈ ಸಂಶೋಧನೆಯ ಮಹಾಸಿದ್ಧಿ. ಜೀನಿನ ಸಂರಚನೆಯಲ್ಲಿ ನಿರ್ದಿಷ್ಟ ಬದಲಾವಣೆಗಳನ್ನು ಮಾಡಿ ರಾಸಾಯನಿಕವಾಗಿ ವ್ಯತ್ಯಸ್ತಗೊಂಡ ಇವನ್ನು ಜೀವಂತ ಕೋಶದ ಒಳಕ್ಕೆ ಸೇರಿಸಿದಾಗ ಅಲ್ಲಿ ಮತ್ತು ಪ್ರಯೋಗಪಾತ್ರೆಯಲ್ಲಿ ಏನಾಗುವುದೆಂಬುದನ್ನು ಗಮನಿಸಬಹುದು. ತತ್ಪರಿಣಾಮವಾಗಿ, ಕುಡುಗಲುಕೋಶ ಅನೀಮಿಯ, ಮಧು ಮೇಹ ಮೊದಲಾದ ಅನುವಂಶಿಕ ವ್ಯಾಧಿಗಳಿಗೆ ಕಾರಣವಾಗುವ ಜೀನ್‌ನ ಅಪಗತಿಗಳೇನು (ಅಬರೇಷನ್ಸ್) ಎಂಬುದನ್ನು ವಿವರಿಸಲು ಸಾಧ್ಯವಾಯಿತು. ಪ್ರಸಾಮಾನ್ಯ ಕೋಶವೊಂದರ ಜೀನುಗಳು ತಮ್ಮ ನಿಯಂತ್ರಗಳ ಹದ್ದುಮೀರಿ ಕೋಶಗಳು ಯದ್ವಾತದ್ವಾ ಬೆಳೆಯತೊಡಗುವಾಗ ಆ ವ್ಯಾಧಿಯನ್ನು ಏಡಿಗಂತಿ (ಕ್ಯಾನ್ಸರ್) ಎಂಬುದಾಗಿ ಪರಿಗಣಿಸುತ್ತಾರೆ. ಇದು ಏಕೆ ಹೀಗಾಗುವುದು ಎಂಬುದನ್ನು ಜೀನ್‌ನ ಮೇಲಿನ ಪ್ರಯೋಗಗಳು ತೋರಿಸಿಕೊಟ್ಟಿವೆ. ಕೆಲವು ಏಕಾಣು ಜೀವಿಗಳ ಜೀನ್ ನಿರ್ವಹಣ ತಂತ್ರವನ್ನು ಬೇರೆ ಏಕಾಣುಜೀವಿಗಳ ತಂತ್ರದೊಡನೆ ಲಗತ್ತಿಸಿ ನಮಗೆ ಉಪಯುಕ್ತವಾಗಬಲ್ಲಂಥ ಪದಾರ್ಥಗಳನ್ನು ಪಡೆಯುವುದು ಸಾಧ್ಯ. ಉದಾಹರಣೆಗೆ ಸಂಶ್ಲೇಷಿತ ಜೀನನ್ನು ಕೆಲವು ಬಗೆಯ ಏಕಾಣುಜೀವಿಗಳ ಒಳಹುಗಿಸಿ ಸಾಕಷ್ಟು ಪ್ರಮಾಣದಲ್ಲಿ ಇನ್ಸುಲಿನ್ನನ್ನು ಸುಲಭವಾಗಿ ಪಡೆಯುವುದು ಕೈಗೂಡಿದೆ. ಇಂಥ ಕುಲಾಂತರಿ ಏಕಾಣುಜೀವಿಗಳು ಜೀವಂತ ರಾಸಾಯನಿಕ ಸ್ಥಾವರಗಳಾಗಿ ಉಪಯುಕ್ತ ಔಷಧಗಳು, ರಾಸಾಯನಿಕಗಳನ್ನು ಒದಗಿಸುತ್ತವೆ. ಜೀನ್‌ಗಳ ಸಾರ್ವತ್ರಿಕತೆಯ ಲಾಭವನ್ನು ಪಡೆದು ಯಾವುದೋ ಜೀವಿಯ ಜೀನ್‌ನ್ನು ಇನ್ಯಾವುದೋ ಜೀವಿಯ ತಳಿಗೂಣಗಳ ಜೊತೆಗೆ ಕೂಡಿಸಿ ಕುಲಾಂತರಿ ಜೀವಿಗಳ ಸೃಷ್ಟಿ ಮಾಡಲಾಗಿದೆ. ಬ್ಯಾಕ್ಟೀರಿಯಾಗಳಿಂದ ವಿಷೋತ್ಪಾದಕ ಜೀನ್ ತೆಗೆದು ಸಸ್ಯಗಳಲ್ಲಿ ಸೇರಿಸಿ ಕೀಟರೋಧಕ ಹತ್ತಿ, ತಂಬಾಕು ಮೊದಲಾದ ಸಸ್ಯಗಳನ್ನು ನಿರ್ಮಿಸಲಾಗಿದೆ. (ಬಿ.ಆರ್.ಎ.)

**ತಿಮಿಂಗಿಲ:** ಸಿಟೇಷಿಯ ಗಣದ ಹಲವಾರು ಬಗೆಯ ಬೃಹದ್ಗಾತ್ರದ ಸ್ತನಿಗಳಿಗಿರುವ ಸಾಮಾನ್ಯ ಹೆಸರು (ವೇಲ್). ಜಲವಾಸಿಗಳಾದ ಇವು ಬಹುವಾಗಿ ಸಾಗರಗಳಲ್ಲಿ ಜೀವಿಸುವುವು. ಕೆಲವು ಬಗೆಯವು ಉಷ್ಣವಲಯದ ನದಿಗಳಲ್ಲೂ ಸರೋವರಗಳಲ್ಲೂ ಕಾಣದೊರೆಯುವುವು. ಈ ಗುಂಪಿನ ಸಣ್ಣ ಗಾತ್ರದ ಜೀವಿಗಳಿಗೆ ಡಾಲ್ಫನ್ ಮತ್ತು ಪಾರ್ಪಾಯಿಸ್‌ಗಳೆಂದು ಕರೆಯುತ್ತಾರೆ.

ಸಾಮಾನ್ಯ ಲಕ್ಷಣಗಳು: ಸಿಟೇಷಿಯ ಗಣದಲ್ಲಿ ಮೂರು ಮುಖ್ಯ ಉಪಗಣಗಳಿವೆ: ಹಲ್ಲುಗಳುಳ್ಳ ಹಾಗೂ ಗತವಂಶಿಗಳಾದ ತಿಮಿಂಗಿಲಗಳನ್ನು ಒಳಗೊಂಡ ಆರ್ಕಿಯಾಸಿಟೈ;

ಹಲ್ಲುಗಳುಳ್ಳ ಆಧುನಿಕ ತಿಮಿಂಗಿಲಗಳ ಗುಂಪಾದ ಒಡಾಂಟೊಸೀಟೈ ಮತ್ತು ತಿಮಿಮೂಳೆಯುಳ್ಳ (ಹ್ವೇಲ್ ಬೋನ್ ಅಥವಾ ಬಲೀನ್) ತಿಮಿಂಗಿಲಗಳನ್ನು ಒಳಗೊಂಡಿರುವ ಮಿಸ್ಟಿಸೇಟೈ. ಈ ಮೂರು ಗುಂಪುಗಳ ತಲೆಬರುಡೆ ಲಕ್ಷಣಗಳಲ್ಲಿ ಮಾತ್ರವಲ್ಲದೆ ದಂತವಿನ್ಯಾಸದಲ್ಲೂ ವ್ಯತ್ಯಾಸಗಳಿವೆ. ಆರ್ಕಿಯಾಸೀಟೈ ಗುಂಪಿನ ತಿಮಿಂಗಲಗಳು ವಿಷಮದಂತಿಗಳಾಗಿದ್ದುವು (ಅಂದರೆ ಇವುಗಳ ದವಡೆಯ ಮುಂಭಾಗದ ಹಲ್ಲುಗಳು ಹಾಗೂ ಹಿಂಭಾಗದ ಹಲ್ಲುಗಳ ಆಕಾರದಲ್ಲಿ ಭಿನ್ನತೆಯಿತ್ತು.) ಹಾಗೆಯೇ ಚಿಕ್ಕ ವಯಸ್ಸಿನ ತಿಮಿಂಗಿಲಗಳು ವಯಸ್ಸಿಗೆ ಬಂದಾಗ ಹಾಲುಹಲ್ಲುಗಳು ಬಿದ್ದುಹೋಗಿ ಶಾಶ್ವತ ಹಲ್ಲುಗಳು ಹುಟ್ಟಿಕೊಳ್ಳುತ್ತಿದ್ದವು. (ಈ ಲಕ್ಷಣದಲ್ಲಿ ಈ ಗುಂಪಿನ ತಿಮಿಂಗಿಲಗಳು ಬಹುಪಾಲು ಸ್ತನಿಗಳನ್ನು ಹೋಲುತ್ತವೆ.) ಒಡಾಂಟೋಸೀಟೈ ಉಪಗಣದವು ಸಮದಂತಿಗಳು. ಹೆಚ್ಚಿನವುಗಳಲ್ಲಿ ಹಾಲುಹಲ್ಲುಗಳಿಲ್ಲ. ಮಿಸ್ಟಸೀಟೈ ಗುಂಪಿನ ವಯಸ್ಕ ತಿಮಿಂಗಿಲಗಳಲ್ಲಿ ಹಲ್ಲುಗಳೇ ಇಲ್ಲ. ಬದಲಿಗೆ ತಿಮಿಮೂಳೆಯ ಫಲಕಗಳು ಇವೆ.

ಒಡಾಂಟೋಸೀಟೈ ಗುಂಪಿನಲ್ಲಿ ಸುಮಾರು 70 ಪ್ರಭೇದಗಳಿವೆ. ಪಾರ್ಪಾಯಿಸ್, ಡಾಲ್ಫಿನ್, ಚಾಲಕ ತಿಮಿಂಗಿಲ (ಪೈಲಟ್ ಹ್ವೇಲ್), ಕಿಲರ್ ಹ್ವೇಲ್, ಕೊಕ್ಕಿನ ತಿಮಿಂಗಿಲ (ಬಿಕ್ಡ್ ಹ್ವೇಲ್), ಸ್ಪರ್ಮ್ ತಿಮಿಂಗಿಲ ಮುಂತಾದವು ಈ ಗುಂಪಿಗೆ ಸೇರಿವೆ. ಇವುಗಳ ಉದ್ದ ಸುಮಾರು 1.3 ಮೀಟರಿನಿಂದ ಹಿಡಿದು ಸುಮಾರು 18 ಮೀಟರಿನವರೆಗೆ ಇದೆ. ಮಿಸ್ಟಿಸೀಟೈ ಗುಂಪಿನಲ್ಲಿ 10 ಪ್ರಭೇದಗಳಿವೆ. ಉದಾಹರಣೆ ಪಿಗ್ಮಿ ರೈಟ್ ಹ್ವೇಲ್, ನೀಲಿ ತಿಮಿಂಗಿಲ (ಬ್ಲೂ ಹ್ವೇಲ್), ಇವುಗಳ ಉದ್ದ 6 ಮೀಟರಿನಿಂದ 30 ಮೀಟರ್‌ವರೆಗೆ ವ್ಯತ್ಯಾಸವಾಗುತ್ತದೆ. ತೂಕದಲ್ಲೂ ಈ ವ್ಯತ್ಯಾಸ ಕಾಣಬಹುದು. ಉದಾಹರಣೆಗೆ ಕೆಲವು ತೆರನ ಪಾರ್ಪಾಯಿಸುಗಳು 45 ಕಿಗ್ರಾಂ, ನೀಲಿ ತಿಮಿಂಗಿಲ 1,36,000 ಕಿಗ್ರಾಂ (36 ಟನ್) ತೂಗುತ್ತದೆ. ನೀರಿನಲ್ಲಿ ಈಜಲು ಸಹಾಯಕವಾಗುವಂತೆ ಆಧುನಿಕ ತಿಮಿಂಗಿಲಗಳ ದೇಹದ ಹಿಂತುದಿ ಮತ್ತು ಮುಂತುದಿಗಳು ಚೂಪಾಗಿವೆ; ಮುಂಚಲನೆಗೆ ಅನುಕೂಲವಾಗುವಂತೆ ಬಾಲದಲ್ಲಿ ಅಡ್ಡಡ್ಡವಾದ ಈಜುರೆಕ್ಕೆಯಿದೆ. ಇದರಲ್ಲಿ ಎಲುಬಿಲ್ಲ. ಬೆನ್ನ ಮೇಲೂ ಒಂದು ಈಜುರೆಕ್ಕೆ ಇದೆ. ಇದಕ್ಕೂ ಎಲುಬಿಲ್ಲ. ಉಸಿರಾಟ ತಲೆಯ ಮೇಲ್ಭಾಗದಲ್ಲಿರುವ ಊದುಗಂಡಿಗಳ (ಬ್ಲೋಹೋಲ್ಸ್) ಮೂಲಕ ನಡೆಯುತ್ತದೆ. ಒಡಾಂಟೋಸೀಟೈ ಗುಂಪಿನವುಗಳಲ್ಲಿ ಒಂದೇ ಒಂದು ಊದುಗಂಡಿಯಿದ್ದರೆ, ಮಿಸ್ಟಿಸೀಟೈ



ನೀಲಿ ತಿಮಿಂಗಿಲ

ಗುಂಪಿನ ತಿಮಿಂಗಿಲಗಳಲ್ಲಿ ಎರಡು ಕಂಡಿಗಳಿವೆ. ಉಸಿರನ್ನು ಈ ಕಂಡಿಗಳಿಂದ ಹೊರಬಿಟ್ಟಾಗ ಅದರಲ್ಲಿನ ನೀರು ತತ್‌ಕ್ಷಣ ಘನೀಭೂತವಾಗಿರುವುದರಿಂದ ಒಂದು ತೆರನ ಕಾರಂಜಿಯುಂಟಾಗುತ್ತದೆ. ಅನಂತರ ಗಾಳಿಯನ್ನು ಒಳಗೆಳೆದುಕೊಂಡು ತಿಮಿಂಗಿಲ ನೀರಿನೊಳಕ್ಕೆ ಮುಳುಗಿಕೊಂಡೇ ಈಜುತ್ತದೆ. ಹೀಗೆ ಮುಳುಗಿಕೊಂಡಾಗ ಅದು ಕೆಲವು ನಿಮಿಷಗಳಿಂದ ಹಿಡಿದು (ಚಿಕ್ಕಗಾತ್ರದ ತಿಮಿಂಗಿಲಗಳಲ್ಲಿ) ಒಂದು ಇಲ್ಲವೇ ಕೆಲವು ಗಂಟೆಗಳವರೆಗೆ (ದೊಡ್ಡ ಗಾತ್ರದ ತಿಮಿಂಗಿಲಗಳಲ್ಲಿ) ಉಸಿರನ್ನು ಹಿಡಿದಿಟ್ಟುಕೊಂಡಿರಬಲ್ಲುದು.

ತಿಮಿಂಗಲದ ದೇಹ ಬಾಲದ ಕಡೆಗೂ ಮೂತಿಯೆಡೆಗೂ ಚೂಪಾಗಿದೆ. ಮೂತಿ ಹೆಚ್ಚು ಕಡಿಮೆ ಚೂಪಾದ ಕೊಕ್ಕಿನಂತಿರಬಹುದು ಗುಂಡಾಗಿರಬಹುದು. ಚಪ್ಪಟೆಯಾಗಿರಬಹುದು. ಮುಂಗಾಲುಗಳು ದೋಣಿಯ ಹುಟ್ಟಿನ ಆಕಾರದ ಇಲ್ಲವೆ ಕುಡುಗೋಲಿನ ಆಕಾರದವು. ಇವಕ್ಕೆ ಫ್ಲಿಪರ್ಸ್ ಎಂದು ಹೆಸರು. ಇವು ದೇಹದ ಸಮತೋಲವನ್ನು ಕಾಪಾಡುವುವಲ್ಲದೆ ಈಜುವಾಗ ದಿಕ್ಕನ್ನು ಬದಲಿಸಲೂ ಸಹಾಯಕವಾಗುವುವು. ಫ್ಲಿಪರುಗಳಲ್ಲಿ ಸ್ತನಿಗಳ ಮುಂಗಾಲಿನಲ್ಲಿ ಇರುವ ಎಲ್ಲ ಮೂಳೆಗಳನ್ನೂ ಗುರುತಿಸಬಹುದು. ತಿಮಿಂಗಿಲಗಳಲ್ಲಿ ಹಿಂಗಾಲಿನ ಬಾಹ್ಯಗೋಚರ ಭಾಗಗಳಾವುವೂ ಇಲ್ಲ. ದೊಡ್ಡ ಗಾತ್ರದ ಕೆಲವು ತಿಮಿಂಗಿಲಗಳಲ್ಲಿ ವಸ್ತಿಕುಹರಕ್ಕೆ ಅಂಟಿಕೊಂಡಂತೆ ಹಿಂಗಾಲಿನ ಕೆಲವು ಮೂಳೆಗಳನ್ನೂ ಕಾಣಬಹುದು.

ತಲೆಯ ಉದ್ದ ದೇಹದ ಒಟ್ಟು ಉದ್ದದ ಹತ್ತನೇ ಒಂದು ಭಾಗದಷ್ಟಿರಬಹುದು (ಹಲ್ಲಿರುವ ಕೆಲವು ಬಗೆಗಳಲ್ಲಿ) ಇಲ್ಲವೇ ಹೆಚ್ಚು ಕಡಿಮೆ ಅರ್ಧದಷ್ಟಿರಬಹುದು (ಸ್ಪರ್ಮ್ ಹ್ವೇಲ್). ಕಿವಿಯ ರಂಧ್ರಗಳು ಅತ್ಯಂತ ಚಿಕ್ಕವಾಗಿವೆ : ಹೊರಗಿವಿ ಇಲ್ಲ. ಕಣ್ಣುರೆಪ್ಪೆಗಳುಂಟು.

ಚರ್ಮದಲ್ಲಿ ತೆಳುವಾದ ಕೊಬ್ಬಿನ ಹೊರಪದರವಿದೆ. ಒಳಪದರಿನ ಬಣ್ಣ ಸಾಮಾನ್ಯವಾಗಿ ಮೇಲೆ ಕಪ್ಪು, ಕೆಳಗೆ ಬಿಳಿ, ಕೆಲವು ಮಾತ್ರ ಪೂರ್ತಿ ಕಪ್ಪು ಅಥವಾ ಬಿಳಿ. ದಕ್ಷಿಣ ಧ್ರುವದ ರಾರ್ಕ್‌ವಲ್‌ಗಳ ದೇಹದ ಮೇಲೆ ಡಯಾಟಮ್‌ಗಳು ಇರುವುದರಿಂದ ಅವುಗಳ ಮೈ ಹಳದಿ ಬಣ್ಣದ್ದಾಗಿ ಕಾಣುವುದು. ಚರ್ಮದಲ್ಲಿ ಯಾವ ಗ್ರಂಥಿಗಳೂ ಇಲ್ಲ. ಚರ್ಮದ ಕೆಳಭಾಗದಲ್ಲಿ ಬ್ಲಬರ್ ಎಂಬ ಕೊಬ್ಬಿನ ದಪ್ಪ ಪದರವಿದೆ. ಇದು ತಿಮಿಂಗಿಲದ ವಿಶಿಷ್ಟ ಲಕ್ಷಣ. ಇದರಲ್ಲಿ ಹೇರಳವಾಗಿ ಎಣ್ಣೆಯಿದೆ. ಸ್ಪರ್ಮ್ ತಿಮಿಂಗಿಲದಲ್ಲಿ ಇದರ ದಪ್ಪ 35 ಸೆಂಮೀ ಗ್ರೀನ್ ಲೆಂಡ್ ತಿಮಿಂಗಿಲದಲ್ಲಿ 50 ಸೆಂಮೀ. 70 ಟನ್ನು ಭಾರದ ತಿಮಿಂಗಿಲದಲ್ಲಿನ ಬ್ಲಬರ್ ತೂಕ 30 ಟನ್ನು ಇರುತ್ತದೆ. ಕೂದಲು ಇಲ್ಲದ ಕಾರಣ ದೇಹದ ಉಷ್ಣತೆ ಕಡಿಮೆಯಾಗದಂತೆಯೂ ಉಷ್ಣ ದೇಶಗಳಲ್ಲಿ ಹೆಚ್ಚಾಗದಂತೆಯೂ ಈ ಬ್ಲಬರ್ ತಡೆಯುವುದು, ಅಲ್ಲದೆ ಆಹಾರ ಕಡಿಮೆಯಾದಲ್ಲಿ ಬ್ಲಬರ್ ನಲ್ಲಿರುವ ಕೊಬ್ಬು ಆಹಾರವಾಗಿ ಉಪಯೋಗವಾಗುವುದು. ಚಯಾಪಚಯ ಕ್ರಿಯೆಗಳಿಗೆ ಅಗತ್ಯವಾದ ನೀರನ್ನು ಸಹ ಇದು ಒದಗಿಸುವುದು, ಆಳಕ್ಕೆ ಮುಳುಗಿದಾಗ ನೀರಿನ ಒತ್ತಡದಿಂದ ಅಂಗಾಂಗಗಳು ಜಜ್ಜಿಹೋಗದಂತೆ ಕಾಪಾಡುತ್ತದೆ.

ಪಾರ್ಪಾಯಿಸ್‌ಗಳು ಮತ್ತು ಕಡಲಹಂದಿಗಳಂಥ ಹಲ್ಲಿರುವ ತಿಮಿಂಗಿಲಗಳು ಮುಖ್ಯವಾಗಿ ಮೀನುಗಳನ್ನು ತಿನ್ನುತ್ತವೆ. ಇವುಗಳಲ್ಲಿ ಸಾಮಾನ್ಯವಾಗಿ ಎರಡು ದವಡೆಗಳಲ್ಲಿಯೂ ಹಲ್ಲುಗಳು ಒಂದೇ ಬಗೆಯ ಗೂಟಗಳಂತಿರುವುವು. ದವಡೆಗಳು ಉದ್ದವಾಗಿರುವುದರಿಂದ ಹಲ್ಲುಗಳ ಅಗಿಯುವ ಕೆಲಸ ಕಡಿಮೆಯಾಗಿದೆ. ಬಹುಶಃ ಆಹಾರವನ್ನು ಹಿಡಿದುಕೊಳ್ಳಲು ಹಲ್ಲುಗಳು ಸಹಕಾರಿಯಾಗಿವೆ. ಕಿಲ್ಲರ್ ತಿಮಿಂಗಿಲ ಆರ್ಸಿನಸ್‌ನಲ್ಲಿ ಬಲವಾದ ದವಡೆಗಳು ಮತ್ತು ಹಲ್ಲುಗಳಿವೆ. ಇವು ಮೀನುಗಳ ಜೊತೆಗೆ ಕಡಲುಹಂದಿ, ಹಕ್ಕಿ, ಕಡಲುನಾಯಿ ಹಾಗೂ ದೊಡ್ಡ ತಿಮಿಂಗಿಲಗಳ ಮಾಂಸವನ್ನು ತಿನ್ನುತ್ತವೆ. ಕೇವಲ ಸ್ಕ್ವಿಡ್ಡುಗಳನ್ನೇ ತಿನ್ನುವ ಪ್ರಭೇದಗಳಲ್ಲಿ ಹಲ್ಲುಗಳ ಸಂಖ್ಯೆ ಕಡಿಮೆಯಾಗುವ ಪ್ರವೃತ್ತಿಯನ್ನು ಕಾಣಬಹುದು. ಉದಾಹರಣೆಗೆ ಸ್ಪರ್ಮ್ ತಿಮಿಂಗಿಲದಲ್ಲಿ ಹಲ್ಲುಗಳು ಕೇವಲ ಕೆಳದವಡೆಯಲ್ಲಿ ಮಾತ್ರ ಇವೆ. ಬುರುಡೆ ಮೂಗು ಅಥವಾ ಕೊಕ್ಕಿನ ತಿಮಿಂಗಿಲಗಳಲ್ಲಿ ಒಂದು ಅಥವಾ ಎರಡು ಜೊತೆ ಹಲ್ಲುಗಳು ಮಾತ್ರ ಇವೆ.

ತಿಮಿಮೂಳೆ ತಿಮಿಂಗಿಲಗಳಲ್ಲಿ ಹಲ್ಲುಗಳು ಭ್ರೂಣಾವಸ್ಥೆಯಲ್ಲಿವೆ. ತಿಮಿಮೂಳೆಗಳ ಸಹಾಯದಿಂದಲೇ ಉಪಜೀವಿಗಳನ್ನು ಸಂಗ್ರಹಿಸಿ ಇವು ತಿನ್ನುತ್ತವೆ. ಇವುಗಳ ದವಡೆಗಳು ತುಂಬ ಉದ್ದವಾಗಿವೆ. ಗ್ರೀನ್ ಲೆಂಡ್ ರೈಟ್ ತಿಮಿಂಗಿಲಗಳಲ್ಲಿ ದವಡೆಗಳು ದೇಹದ ಒಟ್ಟು ಉದ್ದದ ಮೂರನೇ ಒಂದು ಭಾಗದಷ್ಟಿವೆ; ಮೇಲಿನ ದವಡೆಯಲ್ಲಿ ಒಂದೊಂದು ಪಕ್ಕದಲ್ಲೂ ತ್ರಿಭುಜಾಕಾರದ 300–400 ಕೊಂಬಿನ ಫಲಕಗಳಿಂದ ರಚಿತವಾದ ತಿಮಿಮೂಳೆ ಉಂಟು. ಎರಡೂ ಪಕ್ಕಗಳ ತಿಮಿಮೂಳೆಗಳು ಮುಂತುದಿಯಲ್ಲಿ ಕೂಡಿಕೊಂಡಿವೆ. ಫಲಕಗಳು ಒಸಡಿನಲ್ಲಿ ಹೂತುಕೊಂಡಂತಿವೆ. ಇವುಗಳ ಕೆಳ ಅಂಚಿನಲ್ಲಿ ಉದ್ದವಾದ ಕೊಂಬಿನ ಕೂದಲುಗಳಿವೆ. ಬಾಯಿ ಮುಚ್ಚಿಕೊಂಡಾಗ ಫಲಕಗಳು ಹಿಂದಕ್ಕೆ ಬಾಗುವುವು. ಮತ್ತು ಬಾಯಿ ತೆರೆದಾಗ ನೀಳವಾಗಿ ನಿಲ್ಲುವುವು. ಗ್ರೀನ್ ಲೆಂಡ್ ತಿಮಿಂಗಿಲದಲ್ಲಿ ತಿಮಿಮೂಳೆಯ ಉದ್ದ 5 ಮೀ. ಕೆಳದವಡೆಯ ಎರಡು ಪಾರ್ಶ್ವಗಳು ಹೊರಕ್ಕೆ ಬಾಗಿರುವುದರಿಂದ ಬಾಯಿ ವಿಶಾಲವಾಗಿದೆ. ನಾಲಗೆ ತುಂಬಾ ದಪ್ಪ. ಫಲಕಗಳ ಹೊರತುದಿಗಳನ್ನು ದೊಡ್ಡ ಕೆಳತುಟಿಗಳು ಮುಚ್ಚಿರುವುದರಿಂದ ನೀರು ತಿಮಿಮೂಳೆಯ ಕೂದಲಿನ ಮಧ್ಯೆ ಹೊರ ಹೋಗಬೇಕಾಗುವುದು. ತೇಲುಜೀವಿಗಳು ಹೇರಳವಾಗಿ ಇರುವಕಡೆ ಬಾಯಿ ತೆರೆದುಕೊಂಡು ತಿಮಿಂಗಿಲ ಈಜುವಾಗ ನೀರಿನ ಜೊತೆಯಲ್ಲಿ ಇವು ಬಾಯಿಯನ್ನು ಸೇರುವುವು ಅನಂತರ ಬಾಯಿ ಮುಚ್ಚಿ ನಾಲಿಗೆಯನ್ನು ಎತ್ತರಿಸಿದಾಗ ನೀರು ತಿಮಿಮೂಳೆಯ ಕೂದಲಿನ ಮಧ್ಯೆ ಹೊರಬರುವುದು. ತೇಲುಜೀವಿಗಳು ಮಾತ್ರ ಬಾಯಿಯಲ್ಲೇ ಉಳಿಯುವುವು. ಈ ವಿಧಾನದಿಂದ ಅಗಾಧ ಪ್ರಮಾಣದ ತೇಲುಜೀವಿಗಳನ್ನು ತಿಮಿಂಗಿಲಗಳು ನುಂಗುವುವು. ಉತ್ತರ, ದಕ್ಷಿಣ ಧ್ರುವಗಳಲ್ಲಿ ತೇಲುಜೀವಿಗಳು ಅತ್ಯಧಿಕ. ತಿಮಿಂಗಿಲಗಳು ಆಹಾರಕ್ಕಾಗಿ ಅಲ್ಲಿಗೆ ವಲಸೆ ಹೋಗುವುವು. ಈ ತೆರನ ಆಹಾರ ಸಮೃದ್ಧಿಯಿಂದ ಕೆಲವು ತಿಮಿಂಗಿಲಗಳು ದೈತ್ಯಾಕಾರವಾಗಿ ಬೆಳೆಯಲು ಅನುಕೂಲವಾಗಿದೆ.

ಇತರ ಸ್ತನಿಗಳಂತೆ ತಿಮಿಂಗಿಲಗಳು ಮರಿಗಳನ್ನು ಈಯುತ್ತವೆ. ತಿಮಿಮೂಳೆ ತಿಮಿಂಗಿಲಗಳು ಎರಡು ವರ್ಷಗಳಿಗೊಮ್ಮೆ ಈಯುತ್ತವಾದರೆ ಉಷ್ಣವಲಯದ ಪ್ರಭೇದಗಳಲ್ಲಿ (ಸ್ಪರ್ಮ್ ತಿಮಿಂಗಿಲ) ನಿರ್ದಿಷ್ಟ ಋತುಕಾಲವಿಲ್ಲ. ಸಾಮಾನ್ಯವಾಗಿ ಗರ್ಭಧಾರಣೆ ಕಾಲ; ಒಂದು ವರ್ಷ. ಒಂದು ಸಲಕ್ಕೆ ಒಂದು ಮರಿ ಹುಟ್ಟುತ್ತದೆ. ಅಪರೂಪಕ್ಕೆ ಅವಳಿಗಳಾಗಬಹುದು. ನೀಲ ತಿಮಿಂಗಿಲದಲ್ಲಿ 7 ಮರಿಗಳು ಹುಟ್ಟಿದ ದಾಖಲೆ ಇದೆ. ಹುಟ್ಟಿದ ಮರಿ ತಾಯಿಯ ಮೂರನೇ ಒಂದು ಭಾಗದಷ್ಟು ಉದ್ದ ಇರುವುದು. ತಿಮಿಮೂಳೆ ತಿಮಿಂಗಿಲದ ಮರಿ 6 ಮೀ. ಉದ್ದ ಇರುತ್ತದೆ. ತಾಯಿ ತಿಮಿಂಗಿಲದ ತೊಡೆಯ ಪ್ರದೇಶದಲ್ಲಿ ಒಂದು ಜೊತೆ ಮೊಲೆ ತೊಟ್ಟುಗಳಿವೆ. ಸ್ತನ ಗ್ರಂಥಿಗಳಲ್ಲಿ ವಿಶೇಷ ರೀತಿಯ

ಸಂಗ್ರಹ ಕೋಶ ಮತ್ತು ಮಾಂಸಗಳಿವೆ. ಇದರಿಂದಾಗಿ ಹಾಲನ್ನು ಮರಿಯ ಬಾಯಿಗೆ ಪಂಪ್ ಮಾಡಲು ಸಹಾಯಕವಾಗಿದೆ.

ಆಹಾರ ಅನ್ವೇಷಣೆಗೆ ಹಾಗೂ ಸಂತಾನೋತ್ಪತ್ತಿಗೆ ಕೆಲವು ಪ್ರಭೇದಗಳು ವಲಸೆ ಹೋಗುತ್ತವೆ. ಉದಾಹರಣೆಗೆ ಗೂನುಬೆನ್ನು ತಿಮಿಂಗಿಲಗಳು ಬೇಸಿಗೆಯಲ್ಲಿ ದಕ್ಷಿಣ ಧ್ರುವದಲ್ಲಿ ಕ್ರಿಲ್ ತಿಂದು ಕಾಲ ಕಳೆದು ಸಂತಾನೋತ್ಪತ್ತಿಗೆಂದು ಎತ್ತರದ ಉಷ್ಣವಲಯದ ನೀರಿಗೆ ಬರುತ್ತವೆ. ತಿಮಿಂಗಿಲಗಳ ಆಯಸ್ಸು ಎಷ್ಟು ಎಂದು ನಿರ್ದಿಷ್ಟವಾಗಿ ತಿಳಿಯದು. ಮರಿ ಒಂದು ವರ್ಷದವರೆಗೆ ತಾಯಿಯ ಜೊತೆಯಲ್ಲಿದ್ದು ಹಾಲನ್ನು ಕುಡಿದು 12–16 ಮೀ.ಗಳ ವರೆಗೂ ಬೆಳೆಯುವುದು. ತಿಮಿಂಗಿಲಗಳು ಸಂಘಜೀವಿಗಳು. ಗುಂಪಾಗಿ ಚಲಿಸುವುವು. ಗಾಯಗೊಂಡ ಅನುಯಾಯಿ ಅಥವಾ ಆಗತಾನೇ ಜನಿಸಿದ ಮರಿಗಳು ನೀರಿನ ಮೇಲೆಯೇ ಇರುವಂತೆ ಮಾಡಲು ತಿಮಿಂಗಿಲಗಳು ಪರಸ್ಪರ ಸಹಕರಿಸುತ್ತವೆ. ಒಂದೇ ಸಮನೆ ಎಷ್ಟೋ ದಿವಸಗಳವರೆಗೆ ಹಡಗುಗಳನ್ನು ಹಿಂಬಾಲಿಸುವುದರಿಂದ ತಿಮಿಂಗಿಲಗಳು ನಿದ್ರಿಸುವುದಿಲ್ಲವೆಂಬ ಅಭಿಪ್ರಾಯವಿದೆ.



ಸ್ಪರ್ಮ್ ತಿಮಿಂಗಿಲ

ತಿಮಿಂಗಿಲಗಳ ದೇಹದಿಂದ ಹಲವು ಉಪಯುಕ್ತ ಪದಾರ್ಥಗಳನ್ನು ಪಡೆಯಬಹುದು. ತಿಮಿಮೂಳೆಗಳನ್ನು ಮೀನು ಹಿಡಿಯುವ ಕಡ್ಡಿಗಳಾಗಿಯೂ ಬಿಗಿಯಾದ ಕುಪ್ಪಸಗಳಿಗೆ ಮತ್ತು ಬ್ರಷ್ ಗಳಿಗೆ ಉಪಯೋಗಿಸುತ್ತಾರೆ. ಬ್ಲಬರ್ ನಿಂದ ತೆಗೆದ ಎಣ್ಣೆಯನ್ನು ಕೃತಕ ಬೆಣ್ಣೆ, ಸಾಬೂನು ಮತ್ತು ಹೆರೆಯೆಣ್ಣೆಯ ತಯಾರಿಕೆಯಲ್ಲಿ ಬಳಸುವರು. ಸ್ಪರ್ಮ್ ತಿಮಿಂಗಿಲದಿಂದ ಬಿಳಿ ಮೇಣದಂಥ ಸ್ಪರ್ಮಸಿಟಿಯನ್ನು ಮತ್ತು ಕರುಳಿನಲ್ಲಿರುವ ಗಡುಸಾದ ಆಂಬರ್‌ಗ್ರಿಸ್ ಅನ್ನು (ಪನ್ನಂಬರ್) ಪಡೆಯಲಾಗುತ್ತದೆ. ಸ್ಪರ್ಮಸಿಟಿಯನ್ನು ಔಷಧಿ ಮತ್ತು ಕಾಂತಿವರ್ಧಕ ಪದಾರ್ಥಗಳಲ್ಲಯೂ ಆಂಬರ್‌ಗ್ರಿಸ್ ಅನ್ನು ಪರಿಮಳ ದ್ರವ್ಯಗಳಲ್ಲಿಯೂ ಉಪಯೋಗಿಸಲಾಗುವುದು. ಮೂಳೆ ಮತ್ತು ಮಾಂಸವನ್ನು ಒಣಗಿಸಿ ಪುಡಿ ಮಾಡಿ ಗೊಬ್ಬರವಾಗಿ (ಗ್ವಾನೋ) ಉಪಯೋಗಿಸುತ್ತಾರೆ. ಕೆಲವು ಪ್ರಭೇದಗಳ ಮಾಂಸವನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಆದ ಕಾರಣ ತಿಮಿಂಗಿಲಗಳನ್ನು ಬೇಟೆಯಾಡುವ ಉದ್ಯಮ ನಾಲ್ಕಾರು ಶತಮಾನಗಳಿಂದ ನಡೆದು ಬಂದಿದೆ. (ಎ.ಎಸ್.ಸಿ.)

**ತುತ್ತೂರಿ ಮೀನು:** ಪೈಸೀಸ್ ಅಧಿವರ್ಗದ ಟೀಲಿಯಾಸ್ಟಿಯೈ ವರ್ಗಕ್ಕೆ ಸೇರಿದ ಮೂಳೆ ಮೀನು (ಪೈಪ್ ಫಿಷ್). ನೆರೋಫಿಸ್ ಎಕ್ವೋರಿಯಸ್ (ಸ್ನೇಕ್ ಪೈಪ್ ಫಿಷ್), ಫೈಕೊಡ್ಯುರಸ್ ಇಕ್ವಿಸ್ (ಸೀ ಡ್ರಾಗನ್), ಸಿಂಗ್ನಾತಸ್ ಅಕುಸ್ (ಗ್ರೇಟ್ ಪೈಪ್ ಫಿಷ್), ಸಿಂ. ಫ್ಲಾರಿಡೆ (ಫ್ಲಾರಿಡಾ ಪೈಪ್ ಫಿಷ್) ಮತ್ತು ಸಿಂ. ಟಿಪ್ಲೆ (ಅಗಲಮೂತಿಯ ಪೈಪ್ ಫಿಷ್) ಕೆಲವು ಪ್ರಭೇದಗಳು. ಸಾಮಾನ್ಯವಾಗಿ ಭಾರತ ಮತ್ತು ಚೀನಾ ಸಮುದ್ರಗಳಲ್ಲಿ ದೊರೆಯುತ್ತದೆ. ಆಕಾರದಲ್ಲಿ ಉಳಿದ ಬಗೆಯ ಮೀನುಗಳಿಗಿಂತ ಬೇರೆ. ದೇಹ ಈಲ್ ಮೀನಿನ ದೇಹದಂತೆ ಸಣ್ಣಗೆ ಉದ್ದವಾಗಿದೆ. ದೇಹದ ಉದ್ದ ಸು. 45 ಸೆಂಮೀ. ಬಣ್ಣ ಕಂದು. ಹೊರಮೈ ಮೇಲೆ ಒಂದು ಬಗೆಯ ಉಂಗುರಾಕಾರದ, ಗಟ್ಟಿಯಾದ ಹಾಗೂ ಒರಟಾದ ಶಲ್ಕಗಳುಂಟು. ಬಾಲ ಉದ್ದವಾಗಿದೆ. ಬಾಲದ ಈಜುರೆಕ್ಕೆ ಮಾತ್ರ ಚಿಕ್ಕಗಾತ್ರದ್ದು. ಬೆನ್ನಿನ ಈಜುರೆಕ್ಕೆಗಳಿಲ್ಲ. ಎದೆಯ ಈಜುರೆಕ್ಕೆಯೂ ಕಿರಿದಾಗಿದೆ. ಇದರ ಮೇಲೆ ಚುಕ್ಕೆಗಳುಂಟು. ಮೂತಿಯ ಉದ್ದ ತಲೆಯ ಒಟ್ಟು ಉದ್ದದ ಅರ್ಧದಷ್ಟು. ಕಿವಿರುಗಳು ಸರಿಯಾಗಿ ಬೆಳೆದಿಲ್ಲ; ಸಣ್ಣ ರಂಧ್ರಗಳಂತೆ ಕಾಣುತ್ತದೆ. ಬಾಯಲ್ಲಿ ಹಲ್ಲುಗಳಿಲ್ಲ. ಬಾಯಿ ಹೀರುಬಟ್ಟಲಿನಂತೆ ಕೆಲಸ ಮಾಡುತ್ತದೆ.

ತುತ್ತೂರಿ ಮೀನಿನಲ್ಲಿ ಕಾಣಬರುವ ಅತಿಸೋಜಿಗದ ಸಂಗತಿ ಎಂದರೆ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುವ ಹೊಣೆ ಗಂಡು ಮೀನಿಗೆ ಸೇರಿರುವುದು. ಗಂಡು ಮೀನಿನ ಉದರ ಭಾಗದಲ್ಲಿ ಎರಡು ಜೋಲುಮುಚ್ಚಳಗಳುಂಟು. ಸಂತಾನ ವೃದ್ಧಿಯ ಶ್ರಾಯದಲ್ಲಿ ಇವೆರಡು ಮುಚ್ಚಳಗಳು ಕೂಡಿಕೊಂಡು ಒಂದು ಚೀಲವನ್ನು ರಚಿಸುವುವು. ಕೆಲವು ಬಗೆಯ ತುತ್ತೂರಿ ಮೀನುಗಳ ಉದರಭಾಗದಲ್ಲಿ ಮೃದುಚರ್ಮದ ಅಸ್ತರಿ (ಲೈನಿಂಗ್) ಇರುವ ಒಂದು ತೋಡು (ಗ್ರೂವ್) ಇರುವುದೂ ಉಂಟು. ಗಂಡು, ಹೆಣ್ಣು ಮೀನುಗಳು ಕೂಡುವ ಸಮಯದಲ್ಲಿ ಮೊದಲು ಹಲವಾರು ಸಲ ಪರಸ್ಪರ ಹಾಯುವಂತೆ ಈಜಾಡುವುವು. ಅನಂತರ ಗಂಡು ಮೀನು ಹೆಣ್ಣಿನ ಉದರವನ್ನು ತನ್ನ ಉದ್ದ ಮೂತಿಯಿಂದ ಉಜ್ಜುವುದು. ಆಗ ಹೆಣ್ಣು ತನ್ನ ಕೊಳವೆಯಂಥ ಅಂಡನಾಳವನ್ನು (ಓವಿಡಕ್ಟ್) ಗಂಡಿನ ಉದರ ಚೀಲದೊಳಕ್ಕೆ ಸೇರಿಸಿ ಅಂಡಗಳನ್ನು ಇಡುವುದು. ಅನಂತರ ಗಂಡಿನ ಉದರ ಚೀಲದೊಳಗೆ ಈ ಅಂಡಗಳ ನಿಷೇಚನೆ ನಡೆಯುತ್ತದೆ. ತನ್ನ ಕರ್ತವ್ಯ ಪೂರೈಸಿದ ಹೆಣ್ಣು ಹೊರಟುಹೋಗುತ್ತದೆ. ಗಂಡು

ಸಿನ್‌ಗ್ನಾತಸ್

ಮೀನು ನಿಷೇಚಿತ ಮೊಟ್ಟೆಗಳು ಮರಿಯಾಗುವವರೆಗೂ ಅಂದರೆ ಸು. 2 ವಾರಗಳ ಕಾಲ ತನ್ನ ಸಂಚಿಯಲ್ಲಿ ಹೊತ್ತುಕೊಂಡು ತಿರುಗುತ್ತದೆ. ತರುವಾಯ ಗಂಡು ಮೀನಿನ ಉದರಸಂಚಿ ತೆರೆದುಕೊಂಡು ಅದರಲ್ಲಿನ ದಾರದಂಥ ಮರಿಮೀನುಗಳು ಹೊರಬೀಳುವುವು. ಇವು ಬೆಳೆದು ದೊಡ್ಡವಾಗುವವರೆಗೂ ಗಂಡುಮೀನಿನ ಬಳಿಯಲ್ಲಿಯೇ ಈಜಿಕೊಂಡು ಇರುತ್ತವಲ್ಲದೆ ಅಪಾಯ ಒದಗಿದಾಗ ಅದರ ಸಂಚಿಗೆ ನುಗ್ಗಿ ಅಡಗಿಕೊಳ್ಳುವುವು. ***

**ತುಪ್ಪುಳ:** ಕೆಲವು ಪ್ರಾಣಿಗಳ ದೇಹದ ಮೇಲೆ ಸಣ್ಣ, ದಟ್ಟವಾದ, ನವಿರಾದ ಕೂದಲಿನ ಮೇಲ್ಮೈಹೊದಿಕೆ (ಫರ್) ಗೆ ತುಪ್ಪುಳ ಎನ್ನುವರು. ಇದು ಪ್ರಾಣಿಗಳಿಗೆ ಚಳಿ, ಗಾಳಿ ಮತ್ತು ಮಳೆಗಳಿಂದ ರಕ್ಷಣೆ ನೀಡುತ್ತದೆ. ಮಾನವ ತುಪ್ಪುಳದ ಬಳಕೆಯನ್ನು ಅತನ ಉಗಮದಿಂದಲೇ ಅರಂಭಿಸಿದ. ಪ್ರಾಚೀನ ಮಾನವನಿಗೆ ಅಹಾರ ಮತ್ತು ರಕ್ಷಣೆ ಬಹಳ ಮುಖ್ಯ ಅಗತ್ಯಗಳಾಗಿದ್ದವು. ಅತ ಪ್ರಾಣಿಗಳ ಮಾಂಸವನ್ನು ಅಹಾರವನ್ನಾಗಿ ಮತ್ತು ತುಪ್ಪುಳ, ತುಪ್ಪುಳ ಚರ್ಮಗಳನ್ನು ದೇಹರಕ್ಷಣೆಯ ಸಾಧನಗಳನ್ನಾಗಿ ಬಳಸಿದ.

ಪ್ರತಿಯೊಂದು ನಾಗರಿಕತೆಯಲ್ಲೂ ತುಪ್ಪುಳ ಒಂದು ಅಲಂಕಾರ ಸಾಧನವಾಗಿ ಉಪಯೋಗದಲ್ಲಿತ್ತು. ಚೀನೀಯರು ಇದನ್ನು 3,500 ವರ್ಷಗಳ ಹಿಂದೆಯೇ ಬಳಸುತ್ತಿದ್ದರು. ರೋಮನ್ನರು ತುಪ್ಪುಳವನ್ನು ಒಂದು ಘನತೆಯ ಸಂಕೇತವಾಗಿ ಉಪಯೋಗಿಸುವುದನ್ನು ಗ್ರೀಕರಿಂದ ಕಲಿತರು. ತುಪ್ಪುಳ ಕೆಲವು ಜಾತಿಯ ಸ್ತನಿಗಳ ಚರ್ಮದ ಕೂದಲಿನ ಮೇಲುಹೊದಿಕೆಯಾಗಿದೆ. ಬೆಚ್ಚನೆಯ ಸಾಧನವಾಗಿ ಬಳಕೆಯಾಗಿದೆ. ವಾಣಿಜ್ಯೋದ್ಯಮದಲ್ಲಿ ಉಡುಗೆ ತೊಡಿಗೆಗಳಾಗಿ ಉಪಯೋಗವಾಗಿದೆ. ತುಪ್ಪುಳದ ಉದ್ಯಮ ಆರ್ಥಿಕ ದೃಷ್ಟಿಯಿಂದ ಮುಖ್ಯ.

ತುಪ್ಪುಳ ಪ್ರಾಣಿಗಳು : ಮೂರು ವಿಧದ ಪ್ರಾಣಿಗಳು ತುಪ್ಪುಳ ಒದಗಿಸುತ್ತವೆ. ಕಾಡುಪ್ರಾಣಿಗಳು, ಮುದ್ದಿನ ಪ್ರಾಣಿಗಳು ( ಪೆಟ್ಸ್) ಮತ್ತು ಸಾಕುಪ್ರಾಣಿಗಳು. ಕಾಡುಪ್ರಾಣಿಗಳ ಕೂದಲ ಹೊದಿಕೆಯಲ್ಲಿ ಎರಡು ವಿಧದ ಕೂದಲುಗಳಿವೆ. ರಕ್ಷಕ ರೋಮ ಮತ್ತು ತುಪ್ಪುಳ ರೋಮ (ಗಾರ್ಡ ಹೇರ್ ಅಂಡ್ ಫರ್ ಹೇರ್). ರಕ್ಷಕ ರೋಮಗಳು ಉದ್ದವಾಗಿ ಮತ್ತು ಒರಟಾಗಿವೆ. ಇವು ಮಳೆ ಮತ್ತು ಗಾಳಿಯಿಂದ ರಕ್ಷಣೆ ಕೊಡುತ್ತವೆ. ಇವು ಅಗಾಗ್ಗೆ ಬಿದ್ದುಹೋಗುತ್ತಿವೆ. ಅವುಗಳ ಜಾಗದಲ್ಲಿ ಹೊಸ ಕೂದಲು ಬೆಳೆಯುತ್ತದೆ. ತುಪ್ಪುಳ ರೋಮ ಚಿಕ್ಕದಾಗಿ ಮತ್ತು ನವಿರಾಗಿದ್ದು, ಪ್ರಾಣಿ ದೇಹವನ್ನು ಚಳಿಯಿಂದ ರಕ್ಷಿಸುತ್ತದೆ.

ಮುದ್ದಿನ ಪ್ರಾಣಿಗಳಾದ ನಾಯಿ, ಬೆಕ್ಕು, ಮಿಂಕ್, ಬೆಳ್ಳಿನರಿ (ಸಿಲ್ವರ್ ಫಾಕ್ಸ್) ಗಳನ್ನು. ತುಪ್ಪುಳಕ್ಕೋಸ್ಕರವೇ ಸಾಕುತ್ತಾರೆ. ಸಾಕುಪ್ರಾಣಿಗಳಾದ ಕುರಿ ಮತ್ತು ಮೇಕೆಗಳಿಂದ ಉಣ್ಣೆಯನ್ನು ಪಡೆಯುತ್ತಾರೆ.

ವಿವಿಧ ಭೌಗೋಳಿಕ ವಲಯಗಳಲ್ಲಿ ವಾಸಿಸುವ ಪ್ರಾಣಿಗಳಲ್ಲಿ, ವಿವಿಧ ರೀತಿಯ, ಬೇರೆ ಬೇರೆ ಸಾಂದ್ರತೆಯುಳ್ಳ ಮತ್ತು ಹಲವು ಬಗೆಯ ನವಿರಾದ ತುಪ್ಪುಳ ದೊರೆಯುತ್ತದೆ. ಇದು ಪ್ರಾಣಿಯ ದೇಹ ಪ್ರಮಾಣದ ಮೇಲೆ ಪ್ರಭಾವ ಬೀರುತ್ತವೆ. ಉತ್ತರ ಮೇರು ಪ್ರದೇಶ, ಉತ್ತರ ಮತ್ತು ದಕ್ಷಿಣ ಶೀತವಲಯ ಉತ್ತರ ಮತ್ತು ದಕ್ಷಿಣ ಸಮಶೀತೋಷ್ಣವಲಯ. ದಕ್ಷಿಣ ಮೇರು ವಲಯದಲ್ಲಿ ತುಪ್ಪುಳ–ಕೈಗಾರಿಕೆಗೆ ಉಪಯೋಗಿಸುವಂಥ ತುಪ್ಪುಳ ದೊರೆಯುವುದಿಲ್ಲ.

ತುಪ್ಪುಳ ಗುಣ ನಿಯಂತ್ರಣದಲ್ಲಿ ಕೆಲವು ಅಂಶಗಳನ್ನು ಗಮನಿಸಬೇಕು. (a) ಗಾತ್ರ ವ್ಯತ್ಯಾಸಗಳು : ತುಪ್ಪುಳದ ಗುಣ, ವಿನ್ಯಾಸ ಮತ್ತು ನವಿರಿನ ಮಟ್ಟವನ್ನು ಕಾಪಾಡುವಲ್ಲಿ

ಆಯಾ ಪ್ರದೇಶದ ವಾಯುಗುಣ ಪ್ರಮುಖ ಪಾತ್ರವಹಿಸುತ್ತದೆ. ಚಳಿ ಪ್ರದೇಶದಲ್ಲಿ ತುಪ್ಪುಳ ಉಷ್ಣ ಪ್ರದೇಶಕ್ಕಿಂತ ಬಹಳ ಸಾಂದ್ರವೂ ಮತ್ತು ಉದ್ದ ಇರುತ್ತದೆ. ಉಷ್ಣಪ್ರದೇಶದಲ್ಲಿ ಚಳಿಗಾಲ ಕಡಿಮೆ ಮತ್ತು ಸೌಮ್ಯವಾಗಿರುವುದರಿಂದ ತುಪ್ಪುಳ ದಟ್ಟವಾಗಿರುತ್ತದೆ. ಉದಾ: ಚಿರತೆ (ಲೆಪರ್ಡ್) ಜಾತಿಗೆ ಸೇರಿದ ಪ್ರಾಣಿಗಳು.

(b) ಬಣ್ಣ ವ್ಯತ್ಯಾಸಗಳು : ತುಪ್ಪುಳದಲ್ಲಿ ಕಂಡುಬರುವ ಬಣ್ಣ ವ್ಯತ್ಯಾಸಗಳು ಪ್ರಾಣಿಗಳು ವಾಸಿಸುವ ಪರಿಸರ ಮತ್ತು ವಾಯುಗುಣವನ್ನು ಅವಲಂಬಿಸಿವೆ. ಕೂದಲಿನ ಒಳರಚನೆಯಲ್ಲಿ ಹುದುಗಿರುವ ವರ್ಣಕಗಳ ಬಗೆ, ಗಾತ್ರ ಮತ್ತು ಸಾಂದ್ರತೆಗಳಲ್ಲಿ ವ್ಯತ್ಯಾಸವಿರುವುದರಿಂದ ಕೂದಲಿನ ಮೇಲೆ ಬೆಳಕಿನ ಕಿರಣಗಳು ಬಿದ್ದಾಗ ವಿವಿಧ ಬಣ್ಣದ ಹೊಳಪು ಉಂಟಾಗುತ್ತದೆ. ಬಣ್ಣ ತಿಳಿಹಳದಿಯಿಂದ ಬೂದುಬಣ್ಣದವರೆಗೆ ವ್ಯತ್ಯಾಸವಾಗುವುದು. ಕೂದಲಿನ ಬಣ್ಣ ಪ್ರಾಣಿಗಳು ತಿನ್ನುವ ಆಹಾರ, ಕುಡಿಯುವ ನೀರನ್ನು ಅವಲಂಬಿಸಿದೆ. ಕಾರಣ, ಭೂಗುಣವೂ ಪರೋಕ್ಷ ರೀತಿಯಲ್ಲಿ ಪ್ರಭಾವ ಬೀರಿದೆ. ಉದಾ: ವಾಯುವ್ಯ ಅಮೆರಿಕದ ಪ್ರಾಣಿಗಳ ತುಪ್ಪುಳದ ಬಣ್ಣ ನೀಲಿಮಿಶ್ರಿತ ಹಸಿರಾಗಿದೆ. ಕಾರಣ, ಇಲ್ಲಿನ ಮಣ್ಣು ಸುಣ್ಣಕಲ್ಲು (ಕರಲು) ಮಿಶ್ರಿತ. ಉತ್ತರ ಅಮೆರಿಕದ ಕರಾವಳಿ ಪ್ರದೇಶದಲ್ಲಿ ಕಿತ್ತಳೆ ಬಣ್ಣ ಮಿಶ್ರಿತ ತುಪ್ಪುಳ ಹೆಚ್ಚು. ಚೀನಾ ಮತ್ತು ಜಪಾನ್‌ಗಳಲ್ಲಿ ಹಳದಿ ಬಣ್ಣ ಮತ್ತು ಬೂದುಮಿಶ್ರಿತ ಹಳದಿ ಸಾಮಾನ್ಯ. ತಂಪು ಪ್ರದೇಶಗಳಲ್ಲಿ ವಾಸಿಸುವ ಪ್ರಾಣಿಗಳ ಕೂದಲಿನ ವರ್ಣದ ಸಾಂದ್ರತೆ ಜಾಸ್ತಿಯಾಗಿರುವುದರಿಂದ ತುಪ್ಪುಳದ ಬಣ್ಣ ಹೆಚ್ಚು ಗಾಢವಾಗಿದೆ. ಒಣಪ್ರದೇಶದ ಪ್ರಾಣಿಗಳ ರೋಮಗಳಲ್ಲಿ ವರ್ಣಕ ಕಡಿಮೆ ಪ್ರಮಾಣದಲ್ಲಿರುವುದರಿಂದ ತುಪ್ಪುಳ ತಿಳಿಬಣ್ಣದ್ದು.

(c) ಶ್ರಾಯಕ ಬದಲಾವಣೆಗಳು (ಸೀಸನಲ್ ಚೇಂಜಸ್) : ಒಂದು ಶ್ರಾಯದಿಂದ (ಸೀಸನ್) ಮತ್ತೊಂದು ಶ್ರಾಯಕ್ಕೆ ಬದಲಾಗುವ ಹವಾಗುಣ ಕೂಡ ತುಪ್ಪುಳದ ಗುಣದ ಮೇಲೆ ಪ್ರಭಾವ ಬೀರುತ್ತದೆ. ವಸಂತ ಋತುವಿನಲ್ಲಿ ಕೂದಲು ಕಳಚುವಿಕೆ (ಮೋಲ್ಟಿಂಗ್) ಮತ್ತು ರಕ್ಷಕ ರೋಮದ ಉದ್ದ ಹೆಚ್ಚಾಗಿರುವುದರಿಂದ ಮಳೆಯಿಂದ ರಕ್ಷಣೆ ಸಿಗುತ್ತದೆ.

ಶ್ರಾಯಕ ಬದಲಾವಣೆಗಳು ಸಮಶೀತೋಷ್ಣವಲಯಗಳಲ್ಲಿ ಹೆಚ್ಚು. ಮೇರು ಪ್ರದೇಶದಲ್ಲಿ ತುಪ್ಪುಳ, ವರ್ಷದ ಹೆಚ್ಚುಕಾಲ ದಟ್ಟವಾಗಿರುತ್ತದೆ. ಉಷ್ಣವಾತಾವರಣ ಪ್ರಾರಂಭವಾದಂತೆ ಕಳಚುವಿಕೆ ಪ್ರಾರಂಭವಾಗುತ್ತದೆ. ಉಷ್ಣವಲಯಗಳಲ್ಲಿ ಉಷ್ಣತೆಯ ಬದಲಾವಣೆ ಹೆಚ್ಚಾಗಿಲ್ಲದ ಕಾರಣ ತುಪ್ಪುಳದ ಬೆಳವಣಿಗೆ ಕಡಿಮೆ ಇರುತ್ತದೆ. ಅದರ ರಕ್ಷಕ ರೋಮಗಳು ಹೆಚ್ಚಾಗಿರುವುವು. ಗೊರಸುಳ್ಳ ಪ್ರಾಣಿಗಳ ತುಪ್ಪುಳದಲ್ಲಿ ಯಾವ ವಿಧವಾದ ಬದಲಾವಣೆಗಳೂ ಕಂಡುಬರುವುದಿಲ್ಲ.

(d) ತುಪ್ಪುಳದ ಮೂಲಗಳು : ತುಪ್ಪುಳ ಉದ್ಯಮದಲ್ಲಿ ತುಪ್ಪುಳ ಪ್ರಾಣಿಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

| ರಾಡೆನ್ಷಿಯ | ಉದಾ: | ಮೊಲ |
|---|---|---|
| ಕ್ಯಾನಿಡೆ | " | ನಾಯಿ |
| ಫೀಲಿಡೆ | " | ಬೆಕ್ಕು, ಹುಲಿ |
| ಮಸ್ಟೆಲಿಡೆ | " | ವೀಸಲ್ |
| ಮಾರ್ಸ್ಯುಪಿಯೇಲಿಯ | " | ಕಾಂಗರೂ |
| ಅಂಗ್ಯುಲೇಟ್ | " | ಕುದುರೆ, ಜಿಂಕೆ |
| ಪ್ಲಾಂಟಿಗ್ರೇಡ್ | " | ಕರಡಿ, ರಕೂನ್ |
| ಇತರ ಗುಂಪುಗಳು | " | ಸೀಲ್, ಇತ್ಯಾದಿ. |

ಉತ್ತರ ಅಮೆರಿಕ: ಉ. ಅಮೆರಿಕದ ದೊಡ್ಡ ಗಾತ್ರದ ತುಪ್ಪುಳಪ್ರಾಣಿಗಳಲ್ಲಿ ಮುಖ್ಯವಾದವು – ಕಸ್ತೂರಿ ಇಲಿ (ಮಸ್ಕ್ ರ್‍ಯಾಟ್), ಬೀವರ್, ಸ್ಕಂಕ್, ರಕೂನ್, ಒಪಾಸಮ್ ಮತ್ತು ಮಿಂಕ್.

ಸಣ್ಣಗಾತ್ರದ ಪ್ರಾಣಿಗಳಲ್ಲಿ ಲಿಂಕ್ಸ್ ಬೆಕ್ಕು, ಮಾರ್ಟನ್, ನೀಲಿನರಿ, ಬಿಳಿನರಿ, ಬೂದುನರಿ, ನೀರುನಾಯಿ, ತುಪ್ಪುಳ ಸೀಲ್, ಹೇರ್‌ಸೀಲ್, ಅಳಿಲು. ಇವುಗಳಲ್ಲಿ ಅನೇಕ ಪ್ರಾಣಿಗಳನ್ನು ತುಪ್ಪುಳಕ್ಕೋಸ್ಕರ ಸಾಕುವರು.

ಯುರೋಪ್ : ಯುರೋಪಿನ ಉತ್ತರ ಭಾಗಗಳಲ್ಲಿ ಬಿಳಿನರಿ, ಕೆಂಪುನರಿ, ತೋಳ ಮತ್ತು ವೀಸಲ್‌ಗಳು ಮುಖ್ಯವೆನಿಸಿವೆ. ಇತ್ತೀಚೆಗೆ ಅಮೆರಿಕದಿಂದ ಕಸ್ತೂರಿ ಇಲಿಗಳನ್ನು ತಂದು ಸಾಕಲಾಗಿದೆ. ದಕ್ಷಿಣ ಪ್ರಾಂತ್ಯಗಳಲ್ಲಿ ಕೆಂಪುನರಿ, ಬಾಮ್ ಮಾರ್ಟನ್, ಸ್ಟೋನ್ ಮಾರ್ಟನ್, ಮಾರ್ಮಟ್ ಮತ್ತು ಮೊಲಗಳಿಂದ ಸಾಕಷ್ಟು ತುಪ್ಪುಳ ಪಡೆಯಲಾಗುತ್ತದೆ.

ಏಷ್ಯಾ : ಏಷ್ಯಾದಲ್ಲಿ ಅಳಿಲು, ಕೆಂಪುನರಿ, ಬಿಳಿನರಿ, ಬಾಮ್ ಮಾರ್ಟನ್, ಜಾಪ್ ಮಾರ್ಟನ್, ಮಾರ್ಮಟ್, ಪರ್ಷಿಯಾ ಕುರಿ, ಕಾರಕುಲ್ ಪ್ರಾಣಿಗಳಿಂದ ತುಪ್ಪುಳ ಬರುತ್ತದೆ. ಕೊಂಚ ಪ್ರಮಾಣದಲ್ಲಿ ನೀರುನಾಯಿ, ಏಷ್ಯದ ರಕೂನ್, ಸೇಬಲ್, ಹಾರುವ ಅಳಿಲು, ಎರ್ಮಿನ್, ಲಿಂಕ್ಸ್, ಚಿರತೆ, ನರಿ, ತುಪ್ಪುಳಸೀಲ್, ಮತ್ತು ತೋಳಗಳಿಂದಲೂ ತುಪ್ಪುಳ ತೆಗೆಯುವರು.

ಆಸ್ಟ್ರೇಲಿಯ : ಕಾಡುಮೊಲಗಳಿಂದ ಅತ್ಯಧಿಕ ಪ್ರಮಾಣದಲ್ಲಿ ತುಪ್ಪುಳ ಸಿಗುತ್ತದೆ. ವಾಲಬಿ, ಆಸ್ಟ್ರೇಲಿಯದ ಒಪಾಸಮ್‌ಗಳನ್ನು ತುಪ್ಪುಳ ಪಡೆಯಲು ಉಪಯೋಗಿಸುವರು.

ಆಫ್ರಿಕ : ಆಫ್ರಿಕದ ತುಪ್ಪುಳ ಪ್ರಾಣಿಗಳು ವಿವಿಧ ತೆರನ ಕೆಂಪುನರಿ ಮತ್ತು ಇತರ ನರಿಗಳು, ಚಿರತೆ ಜಾತಿಗೆ ಸೇರಿದ ಪ್ರಾಣಿಗಳು, ಕೋತಿಗಳು ಮತ್ತು ಸೀಲ್‌ಗಳು.

ತುಪ್ಪುಳ ಉದ್ಯಮ ಮತ್ತು ಅದರ ಇತಿಹಾಸ : ತುಪ್ಪುಳ ಉದ್ಯಮ ಮೂಲತಃ ಪ್ರಪಂಚದ ಉತ್ತರಾರ್ಧಕ್ಕೆ ಸೀಮಿತವಾಗಿತ್ತು. ಕಾರಣ ಅಲ್ಲಿನ ಪ್ರಾಣಿಗಳು ಪ್ರಪಂಚದ ಬೇರೆಡೆಗಿಂತ ಹೆಚ್ಚಿನ ತುಪ್ಪುಳ ಒದಗಿಸುವಂಥವು. ಅದ್ದರಿಂದ, ಬೇಡಿಕೆ ಹೆಚ್ಚಾಗುತ್ತ ಹೋಯಿತು. ಐತಿಹಾಸಿಕ ದೃಷ್ಟಿಯಿಂದ ನೋಡಿದಾಗ, ತುಪ್ಪುಳದ ಉದ್ಯಮ ೧೧ನೆ ಶತಮಾನದಿಂದ ೧೭ನೆ ಶತಮಾನದವರೆಗೆ ಯೂರೋಪಿನ ಭೌಗೋಳಿಕ ಮತ್ತು ವಾಣಿಜ್ಯ ವಿಸ್ತರಣೆಯೊಂದಿಗೆ ಹೊಂದಿಕೊಂಡು ಹೋಗಿದೆ. ರಷ್ಯದಲ್ಲಿ ತುಪ್ಪುಳ ಉದ್ಯಮದ ದಾಖಲೆಗಳಿವೆ. ಆದರೆ ೧೯ನೆ ಶತಮಾನದ ಉತ್ತರಾರ್ಧದ ಹೊತ್ತಿಗೆ, ಸೈಬೀರಿಯ, ಅಲಾಸ್ಕ, ಕೆನಡ ಮತ್ತು ಅಮೆರಿಕದಲ್ಲಿ ತುಪ್ಪುಳ ಉದ್ಯಮ ಕೊನೆಗೊಂಡಿತೆಂದು ಹೇಳಲಾಗುತ್ತದೆ. ಈ ಕೆಳಗಿನವು ತುಪ್ಪುಳ ಉದ್ಯಮದ ಇತಿಹಾಸದ ಮುಖ್ಯ ಅಂಶಗಳು.

(1) ಪ್ರಪಂಚದಾದ್ಯಂತ ತುಪ್ಪುಳ ಉದ್ಯಮ ಹೊಸ ಪ್ರದೇಶಗಳ ಅನ್ವೇಷಣೆಗೆ ಉತ್ತೇಜನ ಕೊಟ್ಟಿತು. ತುಪ್ಪುಳ ಪ್ರಾಣಿಗಳು ಸಂಪತ್ತಿನ ಒಂದು ಪ್ರಮುಖ ಮೂಲವಾಗಿ ಅವುಗಳ ಶೋಷಣೆ ನಡೆಯದಂತೆ, ಹೊಸ ಪ್ರದೇಶಗಳನ್ನು ಅನ್ವೇಷಣೆ ಮಾಡುತ್ತ ಹೋದಂತೆ, ಭೌಗೋಳಿಕ ಜ್ಞಾನ ಬೆಳೆಯುತ್ತ ಹೋಯಿತು.

(2) ತುಪ್ಪುಳ ಉದ್ಯಮ ಯುರೋಪಿನ ನಾಗರಿಕತೆಯ ವಿಕಾಸ ಮತ್ತು ವಿಸ್ತರಣೆಯ ಪ್ರಮುಖ ಕರ್ತೃ.

(೩) ತುಪ್ಪುಳ ಉದ್ಯಮ ಯೂರೋಪ್ ಮತ್ತು ಮೂಲನಿವಾಸಿ ಸಂಸ್ಕೃತಿಗಳ ಸಂಮ್ಮಿಲನದ ಮುಖ ಕರ್ತೃ.

(೪) ತುಪ್ಪುಳ ಉದ್ಯಮ ಅಂತಾರಾಷ್ಟ್ರೀಯ ಯುದ್ಧಗಳಲ್ಲಿ ಗಣನೀಯ ಪಾತ್ರ ವಹಿಸಿದ್ದು ಗಮನಾರ್ಹ. ಉದಾ: ಕೆನಡದಲ್ಲಾದ ಆಂಗ್ಲೊ–ಫ್ರೆಂಚ್ ಕದನ, ಅಮೆರಿಕನ್ನರ ಮತ್ತು ಬ್ರಿಟಿಷರ ನಡುವೆ 1783 ರ ನಂತರ ನಡೆದ ಯುದ್ಧ ಮತ್ತು ರಷ್ಯನರು, ಬ್ರಿಟನ್ನರು ಮತ್ತು ಅಮೆರಿಕನ್ನರನ್ನು ಉತ್ತರ ಪೆಸಿಫಿಕ್‌ನಿಂದ ಓಡಿಸಿದ ಚಾರಿತ್ರಿಕ ಘಟನೆಗಳು ತುಪ್ಪುಳ ಉದ್ಯಮದ ಬೆಳವಣಿಗೆಗೆ ಪ್ರಮುಖ ಕೊಡುಗೆ ನೀಡಿವೆ. ಏಕೆಂದರೆ, ಅಂತಾರಾಷ್ಟ್ರೀಯ ಯುದ್ಧಗಳಲ್ಲಿ ತುಪ್ಪುಳದ ಬಳಕೆ ಅಧಿಕವಾಗಿತ್ತೆಂದು ಪುರಾವೆಗಳಿವೆ. (ಎಚ್.ಬಿ.ಡಿ.)

**ತೈರಾಯ್ಡು:** (ಗುರಾಣಿಕ ಗ್ರಂಥಿ) ಮುಖ್ಯವಾಗಿ, ದೇಹದಲ್ಲಿ ಬೆಳವಣಿಗೆ ಮತ್ತು ಚಯಾಪಚಯ (ಮೆಟಬಾಲಿಸಂ) ಕ್ರಿಯೆಗಳ ವೇಗವನ್ನು ನಿಯಂತ್ರಿಸುವ ಥೈರಾಕ್ಸಿನ್ ಎಂಬ ಹಾರ್ಮೋನನ್ನು ಉತ್ಪತ್ತಿ ಮಾಡುವ ಒಂದು ಅಂತಃ ಸ್ರಾವಕ ಗ್ರಂಥಿ. ದೇಹದಲ್ಲಿ ಇದರ ಪ್ರಭಾವಕ್ಕೆ ಈಡಾಗದ ಅಂಗವೆ ಇಲ್ಲ ಎನ್ನಬಹುದಾದರು ಕೆಲವು ಅಂಗಗಳ ಮೇಲಂತು ಇದರ ಪ್ರಭಾವ ಬಲು ಹೆಚ್ಚು. ಶ್ವಾಸನಾಳದ ಎರಡು ಪಕ್ಕಗಳಲ್ಲೂ ಇರುವ ಎರಡು ಹಾಲೆಗಳು ಅವನ್ನು ಅಡ್ಡಗೂಡಿಸುವ ಸಂಧಿಸ್ಥಳ (ಇಸ್ತ್‌ಮಸ್) ಗ್ರಂಥಿಭಾಗಗಳಾಗಿವೆ. ನುಂಗುವಾಗಲೆಲ್ಲ ಗುರಾಣಿಕ ಗ್ರಂಥಿ ಮೇಲಕ್ಕೂ ಕೆಳಕ್ಕೂ ಆಗುವುದು. ಹೆಚ್ಚು ಕಡಿಮೆ ದುಂಡಾಗಿರುವ ಅರೆ ಮಿಮೀ. ಗು ಕಿರಿದಾಗಿರುವ ಕೋಶಿಕೆಗಳು (ಫಾಲಿಕಲ್ಸ್) ಗ್ರಂಥಿಯ ತುಂಬ ಇವೆ. ಈ ಕೋಶಿಕೆಗಳ ಗೋಡೆ ಜೀವಕೋಶಗಳಿಂದಾಗಿದೆ. ಇದರ ಹೊರಗೆ ಸುತ್ತಲೂ ತೆಳು ಪೊರೆ ಉಂಟು. ಇದನ್ನು ದಟ್ಟವಾಗಿ ಹೆಣೆದುಕೊಂಡು ಸುತ್ತುವರಿದಿರುವ ರಕ್ತದ ಲೋಮನಾಳಗಳಿಂದ ತೆಳು ಪೊರೆಯ ಮೂಲಕ ಜೀವಕೋಶಗಳಿಗೆ ಒಂದೇ ಸಮನಾಗಿ ರಕ್ತರಸ (ಪ್ಲಾಸ್ಮ) ಧಾರಾಳವಾಗಿ ಸರಬರಾಜಾಗುವುದು. ಮೈಯಲ್ಲಿ ಬಹುವಾಗಿ ರಕ್ತಪೂರೈಕೆಯಾಗುವ ಕೆಲವೆ ಅಂಗಗಳಲ್ಲಿ ಇದೂ ಒಂದು. ಇಷ್ಟು ಸಣ್ಣ ಅಂಗಕ್ಕೆ 4 – 5 ಅಪಧಮನಿಗಳು (ಆರ್ಟರಿಸ್) ಇವೆ. ಅಭಿಧಮನಿಗಳು (ವೇನ್ಸ್) ಇನ್ನೂ ಹೆಚ್ಚು. ಕೋಶಿಕೆಗಳ ಸುತ್ತಲು ರಕ್ತನಾಳಗಳಲ್ಲದೆ ಹಾಲುರಸನಾಳಗಳೂ, ನರಗಳೂ ಇವೆ. ಕೋಶಿಕೆಗಳಲ್ಲಿ ಹಳದಿ ಬಣ್ಣದ ಮಂದ ದ್ರವವಾದ ಕೊಲಾಯ್ಡ್, ಎಂದರೆ ಶೇಖರಿಸಿಡಲ್ಪಟ್ಟ ಗುರಾಣಿಕ ಗ್ರಂಥಿಯ ಸ್ರಾವ ಇದೆ. ಎಳೆಮಕ್ಕಳಲ್ಲಿ ತಯಾರಾದ ಹಾರ್ಮೋನ್ ಎಲ್ಲ ಶೀಘ್ರವಾಗಿ ಬಳಕೆಯಾಗುವುದರಿಂದ ಅದು ಶೇಖರವಾಗುವುದು ಕಡಿಮೆ. ಮೆಡ್ಡೆಗಣ್ಣಿನ ಗಳಗಂಡದಲ್ಲಿ (ಎಕ್ಸಾಫ್ಥಾಲ್ಮಿಕ್ ಗಾಯ್ಟರ್) ಗುರಾಣಿಕ ಗ್ರಂಥಿ ಬಲು ಚುರುಕಾಗಿ ಹಾರ್ಮೋನನ್ನು ತಯಾರಿಸುತ್ತಿದ್ದರೂ ಅಷ್ಟೂ ಬಳಕೆಯಾಗುವುದರಿಂದ ಅದು ಶೇಖರವಾಗುವುದಿಲ್ಲ ಗಳಗಂಡರೋಗದಲ್ಲಿ ಇದರ ತಲೆಕೆಳಗು ಸ್ಥಿತಿ ಕಂಡುಬರುತ್ತದೆ.

ಗುರಾಣಿಕ ಗ್ರಂಥಿಯ ಒಂದೊಂದು ಕೋಶಿಕೆಯೂ ಹಾರ್ಮೋನನ್ನು ತಯಾರಿಸಿ, ಕೂಡಿಟ್ಟುಕೊಂಡಿದ್ದು ಸಂದರ್ಭಾನುಸಾರವಾಗಿ ಬಿಡುಗಡೆ ಮಾಡಿ ರಕ್ತಗತವಾಗುವಂತೆ ಮಾಡುತ್ತದೆ. ಈ ಸ್ರಾವದಲ್ಲಿ ಎಲ್‌ಥೈರಾಕ್ಸಿನ್, ಎಲ್–ಟ್ರೈಅಯೋಡೊಥೈರೊನೀನ್ ಎಂಬ ಎರಡು ರಾಸಾಯನಿಕಗಳಿರುವುವು. ಸಾಮಾನ್ಯವಾಗಿ ಮೊದಲಿನದೆ ಹೆಚ್ಚಾಗಿರುತ್ತದೆ. ಗ್ರಂಥಿಯಲ್ಲಿ ಇವೆರಡು ರಾಸಾಯನಿಕ ಅಣುಗಳಲ್ಲಿ ಸಂಯುಕ್ತವಾಗಿರುವ ಅಯೋಡಿನ್ ಪರಮಾಣುಗಳ ತೂಕ ಗ್ರಂಥಿಯ ತೂಕದ' ಅರೆಪಾಲಿಗೂ ಮೀರಿರುತ್ತದೆ. ಆಹಾರ, ತಿಂಡಿಗಳಲ್ಲಿ ವ್ಯಕ್ತಿ ಸೇವಿಸುವ ಅಯೋಡಿನೆಲ್ಲವೂ ರಕ್ತಗತವಾದ ಬಳಿಕ ಅದು ಗುರಾಣಿಕ ಗ್ರಂಥಿಯಲ್ಲಿ ಮಾತ್ರ ಸೇರಿಕೊಳ್ಳುವುದು. ಆಹಾರದಲ್ಲಿ ಅಯೋಡಿನ್ ಪೂರೈಕೆ ಸಾಕಾಗದಿದ್ದಲ್ಲಿ ಗುರಾಣಿಕ ಗ್ರಂಥಿಯ ಸ್ರಾವದ ತಯಾರಿಕೆಯೂ ತಗ್ಗುವುದು. ಸಮುದ್ರದಿಂದ ಬಲು ದೂರವಿರುವ ಹಿಮಾಲಯದ ತಪ್ಪಲಿನಂಥ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಇಲ್ಲವೇ ಬಳಸುವ ಉಪ್ಪಿನಲ್ಲಿ ಅಥವಾ ಆಹಾರದಲ್ಲಿ ಅಯೋಡೀನ್ ಸಾಕಷ್ಟು ಇಲ್ಲವಾದರೆ ಕೊರಳಿನಲ್ಲಿ ಗಳಗಂಡವಾಗಿ ಈ ಗ್ರಂಥಿ ದಪ್ಪವಾಗಿರುವುದು.

ಅಯೋಡೀನನ್ನು ಸಂಗ್ರಹಿಸಿ ಗ್ರಂಥಿ ಹಾರ್ಮೋನನ್ನು ಹೇಗೆ ತಯಾರಿಸುವುದೆಂಬುದನ್ನು ಆಮೇಲೆ ಅದು ಗ್ರಂಥಿಯಲ್ಲಿ ಎಲ್ಲಿ ಸೇರುವುದೆಂಬುದನ್ನೂ ವಿಕಿರಣಪಟು ಅಯೋಡಿನ್ ದ್ರವವ''ನ್ನೂ ವ್ಯಕ್ತಿಗೆ ಕುಡಿಸಿ ಕಂಡುಕೊಳ್ಳಬಹುದು. ಲೋಮನಾಳಗಳಿಂದ ಜೀವಕಣಗಳೊಳಕ್ಕೆ ಹೀರಲ್ಪಡುವ ಅಯೊಡೈಡು ಜೀವಕಣಗಳಲ್ಲೆ ಉಳಿದು ಸಾಂದ್ರವಾಗುತ್ತದೆ. ಜೈವಿಕ ಸಂಯುಕ್ತಗಳಲ್ಲಿ ಅಯೊಡೈಡು ಸೇರಿಕೊಂಡು ಥೈರಾಕ್ಸಿನ್, ಟ್ರೈ ಅಯೊಡೊಥೈರೊನಿನ್ ರ‍್ಯಾಡಿಕಲ್ಲುಗಳಾಗಿ ದೊಡ್ಡ ಪ್ರೋಟೀನು ಥೈರೊಗ್ಲಾಬ್ಯುಲಿನ್ನಿನೊಂದಿಗೆ ತಗುಲಿಕೊಳ್ಳುವುವು. ಕೊಲಾಯ್ಡಿನ ಕಡೆ ಇರುವ ಜೀವಕಣದ ಅಂಚಿನಲ್ಲಿ ಇದೆಲ್ಲ ನಡೆಯುತ್ತದೆ. ಕೊಲಾಯ್ಡಿನಲ್ಲಿರುವ ಥೈರೊಗ್ಲಾಬ್ಯುಲಿನ್ನೊಂದಿಗೆ ಬೆರೆತು ಈ ಹೊಸ ಥೈರೊಗ್ಲಾಬ್ಯುಲಿನ್ ಅಂತಃಸ್ರಾವ ಶೇಖರವಾಗಿರುತ್ತದೆ. ಗುರಾಣಿಕದ ಕೋಶಗಳಲ್ಲಿ ಉತ್ಪತ್ತಿಯಾಗುವ ಒಂದು ಜೈವಿಕ ಕಿಣ್ವ ಈ ಥೈರೊಗ್ಲಾಬ್ಯುಲಿನ್ನನ್ನು ವಿಭಜಿಸಿ ನೈಜಸ್ರಾವವನ್ನು ಬಿಡುಗಡೆ ಮಾಡುವುದು. ಹೀಗೆ ಬಿಡುಗಡೆಯಾದ ನೈಜಸ್ರಾವಗಳಾದ ಥೈರಾಕ್ಸಿನ್, ಟ್ರೈ ಅಯೊಡೊಥೈರನೀನ್ ಅಣುಗಳು ಸಾಕಷ್ಟು ಸಣ್ಣಗಿರುವುದರಿಂದ ಜೀವ ಕೋಶದ ಗೋಡೆಯನ್ನು ದಾಟಿ ಕೋಶಿಕೆಯ ಸುತ್ತ ರಕ್ತಗತವಾಗಿ ಗುಂಡಿಗೆಗೆ ಒಯ್ಯಲ್ಪಟ್ಟು ಮುಂದೆ ದೇಹದ ಎಲ್ಲ ಭಾಗಗಳನ್ನೂ ತಲಪುತ್ತದೆ.

ರಕ್ತದಲ್ಲಿ ಈ ರಾಸಾಯನಿಕಗಳು ರಕ್ತರಸದ ಪ್ರೋಟೀನುಗಳಿಗೆ (ಮುಖ್ಯವಾಗಿ ಅಲ್ಫಗ್ಲಾಬ್ಯುಲಿನ್‌ಗೆ) ಸಡಿಲವಾಗಿ ಅಂಟಿಕೊಳ್ಳುತ್ತವೆ. ಆದ್ದರಿಂದ ರಕ್ತದಲ್ಲಿನ ಸ್ರಾವದ ಪ್ರಮಾಣ ಅಳೆಯಲು, ರಕ್ತರಸದ ಪ್ರೊಟೀನಿಗೆ ಹತ್ತಿರವಿರುವ ಅಯೋಡಿನ್ (ಪ್ರೊಟಿನ್ ಬೌಂಡ್ ಆಯೋಡಿನ್: ಪಿ ಬಿ ಐ) ಪ್ರಮಾಣದಿಂದ, ರಕ್ತದಲ್ಲಿನ ಗುರಾಣಿಕ ಸ್ರಾವದ ಪ್ರಮಾಣ ಸರಿಯಾಗಿದೆಯೊ ಇಲ್ಲವೊ ಗೊತ್ತಾಗುತ್ತದೆ. ಇಡೀ ಮೈಯಲ್ಲಿ ಎಲ್ಲ ಜೀವಕಣಗಳಲ್ಲು ಅಹಾರವಸ್ತುಗಳ ಉತ್ಕರ್ಷಣೆಯ ವೇಗವನ್ನು ಈ ರಾಸಾಯನಿಕಗಳೆ ನಿಯಂತ್ರಿಸುವುದರಿಂದ, ಈ ಪ್ರಮಾಣ ಹೆಚ್ಚು ಕಡಿಮೆಯಾದರೆ ನಿಜಗೆಲಸಗಳು ಏರುಪೇರಾಗುತ್ತವೆ.

ಗುರಾಣಿಕ ಗ್ರಂಥಿ ತಯಾರಿಸುವ ಅಂತಃಸ್ರಾವದ ಪ್ರಮಾಣವನ್ನು ಇನ್ನೊಂದು ನಿರ್ನಾಳ ಗ್ರಂಥಿಯಾದ ಪಿಟ್ಯುಟರಿ ನಿಯಂತ್ರಿಸುತ್ತದೆ. ಗುರಾಣಿಕ ಗ್ರಂಥಿಯ ಅಂತಃಸ್ರಾವ ಬಳಕೆಯಾಗಿ ರಕ್ತದಲ್ಲಿನ ಮಟ್ಟ ಇಳಿದಾಗ, ಆ ಗ್ರಂಥಿಯನ್ನು ಚೋದಿಸುವ ಒಂದು ಹಾರ್ಮೋನನ್ನು (ಥೈರಾಯಿಡ ಸ್ಟಿಮುಲೇಟಿಂಗ್ ಹಾರ್ಮೋನ್) ಪಿಟ್ಯುಟರಿ ಗ್ರಂಥಿ ಹೆಚ್ಚಾಗಿ ಸ್ರವಿಸುತ್ತದೆ. ಇದು ಥೈರೊಗ್ಲಾಬ್ಯುಲಿನ್ ವಿಭಜನೆಯನ್ನು ವೇಗಗೋಳಿಸಿ ಕಲಾಯ್ಡಿನಲ್ಲಿ ಕೂಡಿಟ್ಟಿರುವ ಗುರಾಣಿಕ ಅಂತಃಸ್ರಾವವನ್ನು ಬಿಡುಗಡೆ ಮಾಡಿಸುತ್ತದೆ. ಇದರಿಂದ ಕೋಶಿಕೆಗಳಲ್ಲಿರುವ ಕೊಲಾಯ್ಡಿನ ಪ್ರಮಾಣ ತಗ್ಗುವುದು. ಒಂದೇ ಸಮನೆ ಹೀಗೆ ಚೋದನೆ ಆಗುತ್ತಲೆ ಇದ್ದರೆ ಕೋಶಗಳು ಪೂರ್ತಿ ಬರಿದಾಗಲೂಬಹುದು. ಗುರಾಣಿಕ ಗ್ರಂಥಿಯೂ ಚುರುಕಾಗಿ ಅಂತಃಸ್ರಾವವನ್ನು ತಯಾರಿಸುತ್ತದೆ. ಇವೆರಡು ಕಾರಣಗಳಿಂದ ಗುರಾಣಿಕ ಹಾರ್ಮೋನಿನ ಪ್ರಮಾಣ ಬೇಗನೆ ಸರಿ ಪ್ರಮಾಣಕ್ಕೆ ಬಂದು ಬಿಡುವುದು. ಹೀಗಾದಾಗ ಪಿಟ್ಯುಟರಿ ಗ್ರಂಥಿ ಗುರಾಣಿಕ ಗ್ರಂಥಿಯನ್ನು ಚೋದಿಸುವುದನ್ನು ನಿಲ್ಲಿಸುತ್ತದೆ. ಗುರಾಣಿಕ ಗ್ರಂಥಿಯ ಜೀವಕೋಶಗಳು ಎಂದಿನ ಗಾತ್ರಕ್ಕೆ ಹಿಂತಿರುಗುತ್ತವೆ. ಹೀಗೆ ಪಿಟ್ಯುಟರಿ ಗುರಾಣಿಕ ಗ್ರಂಥಿಗಳು ನಿಜಗೆಲಸದಲ್ಲಿ ಒಂದಕ್ಕೊಂದು ಹೊಂದಿಕೊಂಡು ನಿಯಂತ್ರಿಸುವುವು.

ಥೈರಾಕ್ಸಿನ್ ಕೊರತೆಯಿಂದ ಚಿಕ್ಕ ಮಕ್ಕಳಲ್ಲಿ ಬೆಳವಣಿಗೆ ಕುಂಠಿತವಾಗಿ, ಬುದ್ಧಿ ಮಾಂದ್ಯತೆಯುಂಟಾಗುತ್ತದೆ, ಈ ಸ್ಥಿತಿಯನ್ನು ಕ್ರೆಟಿನಿಸಂ ಎಂದು ಹೇಳುವುದುಂಟು, ವಯಸ್ಕರಲ್ಲಿ ಇದರ ಕೊರತೆಯಾದರೆ ಮಿಕ್ಸೆಡಿಮ ಎಂಬ ರೋಗ ಉಂಟಾಗುತ್ತದೆ. ಆಹಾರ ಸೇವನೆಯಲ್ಲಿ ಅಯೋಡಿನ್ ಕೊರತೆಯಿದ್ದರೆ ಗಳಗಂಡ ರೋಗವುಂಟಾಗುತ್ತದೆ.

***

**ತೋಳ:** ಕಾರ್ನಿವೊರ ಗಣದ ಕೇನಿಡೆ ಕುಟುಂಬಕ್ಕೆ ಸೇರಿದ ವನ್ಯವಾಸಿ ಸ್ತನಿ (ವುಲ್ಫ್). ನಾಯಿಯ ಹತ್ತಿರ ಸಂಬಂಧಿ. ನಾಯಿಯೂ, ತೋಳವೂ ಕೇನಿಸ್ ಎಂಬ ಜಾತಿಗೆ ಸೇರಿವೆ. ತೋಳದ ವೈಜ್ಞಾನಿಕ ಹೆಸರು ಕೇನಿಸ್ ಲೂಪಸ್. ಕೇನಿಡೆ ಕುಟುಂಬದ ಪ್ರಾಣಿಗಳಲ್ಲೆಲ್ಲ ತೋಳವೇ ಅತ್ಯಂತ ದೊಡ್ಡದು. ಗಂಡುತೋಳವೊಂದು ಮೂತಿಯಿಂದ ಬಾಲದ ತುದಿಯ ವರೆಗೆ ಏಳು ಅಡಿ ಉದ್ದ ಇರುತ್ತದೆ. ಇದರ ಬಾಲ ಪೊದರಿನಂತಿದ್ದು 6 ಸೆಂಮೀ ಉದ್ದವಿರುತ್ತದೆ. ಹೆಣ್ಣುತೋಳ ಗಾತ್ರದಲ್ಲಿ ಗಂಡಿಗಿಂತ ಸ್ವಲ್ಪ ಚಿಕ್ಕದು. ಉತ್ತರ ವಲಯದ ತೋಳಗಳು ದಕ್ಷಿಣವಲಯದ ತೋಳಗಳಿಗಿಂತ ಗಾತ್ರದಲ್ಲಿ ದೊಡ್ಡವು. ತೋಳದ ಮೈಮೇಲಿನ ತುಪ್ಪಟ ಒತ್ತಾಗಿ ಉದ್ದವಾಗಿ ಇದೆ. ಅಲ್ಲದೆ ಇದು ನಯವಾಗಿಯೂ ಮೃದುವಾಗಿಯೂ ಇರುತ್ತದೆ. ತುಪ್ಪಟದ ಬಣ್ಣ ಬೂದು ಅಥವಾ ಕೆಂಪು. ಕಪ್ಪು ಮಿಶ್ರಿತ ಕೆಂಪು, ಕಪ್ಪು ಇಲ್ಲವೆ ಬಿಳಿಯ ಬಣ್ಣದ ತೋಳಗಳೂ ಇವೆ. ತೋಳ ಪ್ರಭೇದಗಳಲ್ಲೆಲ್ಲಾ ಬೂದು ಬಣ್ಣದ ತೋಳವೇ ಅತ್ಯಂತ ಬಲಶಾಲಿಯಾದದ್ದು. ಇದರ ತಲೆಬುರುಡೆ ಅಗಲವಾಗಿರುವುದಲ್ಲದೆ ಕಾಲುಗಳು ದಪ್ಪಗೆ ಬಲಯುತವಾಗಿದ್ದು ಪಾದ ಅಗಲವಾಗಿರುತ್ತದೆ. ಎದೆಗೂಡು ಕಿರಿದು, ಒಂದು ಕಾಲದಲ್ಲಿ ಬೂದು ಬಣ್ಣದ ತೋಳಗಳು ಯುರೋಪ್, ಏಷ್ಯ ಮತ್ತು ಅಮೇರಿಕಗಳಲ್ಲಿ ಅಪಾರ ಸಂಖ್ಯೆಯಲ್ಲಿದ್ದವು. ಈಗ ಇವು ಉತ್ತರ ಅಮೇರಿಕದ ಅಲಾಸ್ಕ. ಉತ್ತರ ಕೆನಡದ ಕೆಲವು ಭಾಗಗಳಲ್ಲಿ ಮಾತ್ರ ಹೆಚ್ಚಾಗಿ ಇವೆ. ರಾಕಿ ಪರ್ವತ ಸ್ತೋಮಗಳ ಬಳಿ ಇವು ಅಲ್ಲಲ್ಲಿ ಕಂಡುಬರುತ್ತವೆ. ಬ್ರಿಟಿಷ್ ದ್ವೀಪಗಳು, ಪಶ್ಚಿಮ ಯುರೋಪ್, ಮುಂತಾದ ಕಡೆಗಳಲ್ಲಿ ಇವು ಇಲ್ಲವೇ ಇಲ್ಲ. ಭಾರತದ ದಕ್ಷಿಣ ಭಾಗದಲ್ಲೂ ಇವನ್ನು ಕಾಣಬಹುದು.

ಬೂದು ಬಣ್ಣದ ತೋಳ ಭಯವನ್ನೇ ಅರಿಯದು. ಆಕ್ರಮಣಕಾರಿ ಪ್ರವೃತ್ತಿಯುಳ್ಳ ಇದು ಕುದುರೆ, ಎಮ್ಮೆ, ಕುರಿ, ಜಿಂಕೆ, ಸಾರಂಗ, ಮುಂತಾದ ಪ್ರಾಣಿಗಳನ್ನು ತಿನ್ನುತ್ತದೆ. ತೋಳಗಳು ಸಾಮಾನ್ಯವಾಗಿ ಚಿಕ್ಕಚಿಕ್ಕ ಗುಂಪುಗಳನ್ನು ಕಟ್ಟಿಕೊಂಡು ಬೇಟೆಯಾಡುತ್ತವೆ. ಬೇಟೆಯ ಕಾಲದಲ್ಲಿ ಇವು ತೋರುವ ತಾಳ್ಮೆ ಹಾಗೂ ವೇಗ ಮೆಚ್ಚತಕ್ಕದ್ದು. ದೊಡ್ಡ ಪ್ರಾಣಿಗಳನ್ನೇ ಅಲ್ಲದೆ, ಮೊಲ, ಇಲಿ, ಮುಂತಾದ ಚಿಕ್ಕ ಪ್ರಾಣಿಗಳನ್ನು ಕೂಡ ಇವು ತಿನ್ನುತ್ತವೆ. ಬಲು ಹೊಟ್ಟೆಬಾಕ ಪ್ರಾಣಿಗಳಾದ ಇವು ಬೇಟೆ ದೊರೆಯದಿದ್ದಾಗ ಕೊಳೆತ ಮಾಂಸವನ್ನು ಕೂಡ ತಿನ್ನಬಲ್ಲವು. ತೋಳಗಳು ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆಯನ್ನು ಹತೋಟಿಯಲ್ಲಿಡಲು ನೆರವಾಗುತ್ತವೆ. ಆದರೆ ಮುದಿ ತೋಳಗಳು ಹೆಚ್ಚಾಗಿ ರೈತನ ಸಾಕು ಪ್ರಾಣಿಗಳನ್ನು ಬೇಟೆಯಾಡುವುವು. ಕೆಲವು ಬಾರಿ ಮಕ್ಕಳ ಮೇಲೆ ಹಾಗೂ ಮನುಷ್ಯರ ಮೇಲೆ ಎರಗುತ್ತವೆ. ಜನಸಂದಣಿಯಿಂದ ದೂರವಿದ್ದು ಒತ್ತಾದ ಮರಗಳಿರುವ ಪೊದೆ ಹಾಗೂ ಗುಡ್ಡಗಾಡುಗಳಲ್ಲಿ ಇವು ವಾಸಿಸುತ್ತವೆ.

ತೋಳಗಳು 2–3 ವರ್ಷ ವಯಸ್ಸಿಗೆ ಬೆದೆಗೆ ಬರುತ್ತವೆ. ಗಂಡು ಮತ್ತು ಹೆಣ್ಣುಗಳು ತಮ್ಮ ಜೀವನದ ಕೊನೆಯವರೆಗೆ ಅನ್ಯೋನ್ಯವಾಗಿ ಸಂಗಾತಿಗಳಾಗಿ ಬಾಳುತ್ತವೆ. ಇವುಗಳ ಸಂತಾನೋತ್ಪತ್ತಿಯ ಕಾಲ ಡಿಸೆಂಬರ್ ತಿಂಗಳಿನಿಂದ ಏಪ್ರಿಲ್ ತಿಂಗಳವರೆಗೆ. ಗರ್ಭ ಧರಿಸಿದ 63 ದಿವಸಗಳ ಅನಂತರ ಹೆಣ್ಣು ಮರಿ ಹಾಕುತ್ತದೆ. 4–14 ಮರಿಗಳನ್ನು ಈಯಬಲ್ಲವು.

ಗುಹೆಯಂತಿರುವ ದೊಗರು ಗವಿ ಮುಂತಾದ ತಾಣಗಳನ್ನು ಇವು ವಾಸಕ್ಕೆ ಆರಿಸಿಕೊಳ್ಳುತ್ತವೆ. ಬೇರಾವುದಾದರೂ ಪ್ರಾಣಿ ನಿರ್ಮಿಸಿಕೊಂಡಿದ್ದ ಸ್ಥಳಗಳನ್ನು ಆಕ್ರಮಿಸಿಕೊಳ್ಳುತ್ತವೆ. ನಿವಾಸ ಸ್ಥಾನದ ಸುತ್ತಮುತ್ತ ಗಾಳಿ ಮತ್ತು ಬೆಳಕು ಚೆನ್ನಾಗಿ ಬೀಳುತ್ತಿರುವಂತೆ ಇರುವ ಸ್ಥಳಗಳನ್ನು ಇವು ಆಶಿಸುತ್ತವೆ. ಒಂದೇ ಕುಟುಂಬದ ತೋಳಗಳು ಒಂದರೊಡನೊಂದು ಹೊಂದಿಕೊಂಡು ಸ್ನೇಹಮಯಿಯಾಗಿ ಬದುಕುತ್ತವೆ. ಮರಿಗಳನ್ನು ಅತಿ ಪ್ರೀತಿಯಿಂದ ಜೋಪಾನವಾಗಿ ಸಾಕುತ್ತವೆ. ತಮ್ಮ ಗುಂಪಿಗೆ ಬೇರೆಯ ಗುಂಪಿನ ತೋಳಗಳನ್ನು ಇವು ಸೇರಿಸುವುದಿಲ್ಲ.

ಕೇನಿಸ್ ನೈಜರ್ ಎಂಬುದು ಕೆಂಪು ತೋಳ. ಇದು ಉತ್ತರ ಅಮೇರಿಕದ ದಕ್ಷಿಣ ಭಾಗಗಳ ಒಳನಾಡಿನಲ್ಲಿ ಕಂಡುಬರುತ್ತವೆ. ಗಾತ್ರದಲ್ಲಿ ಬೂದುಬಣ್ಣದ ತೋಳಕ್ಕಿಂತ ಚಿಕ್ಕದು. ಮೈಬಣ್ಣ ಕೆಂಪು ಅಥವಾ ಕಪ್ಪು.

ಅಂಟಾರ್ಕ್ಟಿಕ್ ಪ್ರದೇಶದ ತೋಳ ನರಿಯ ಆಕಾರದ್ದು. ಇದಕ್ಕೆ ಡೂಸಿಕಾಯಿನ್ ಎಂದು ಹೆಸರು. ದಕ್ಷಿಣ ಅಮೇರಿಕದ ಜಾತಿಯನ್ನು ಕ್ರೈಸೊಕಾಯಿನ್ ಎನ್ನಲಾಗುವುದು. ಆಫ್ರಿಕದ ತೋಳಕ್ಕೆ ಪ್ರೋಟೆಲಿಸ್ ಎಂದು ಹೆಸರು. ಇದು ಕಿರುಬನ ಜಾತಿಗೆ ಸೇರಿದೆ.

(ಎನ್.ಬಿ.ಕೆ.)

**ತೌಲನಿಕ ಮನೋವಿಜ್ಞಾನ:** ಇಂದು ವಿಸ್ತಾರವಾಗಿಯೂ ಸೊಂಪಾಗಿಯೂ ಬೆಳೆಯುತ್ತಿರುವ ಆಧುನಿಕ ಮನೋವಿಜ್ಞಾನದ ಪ್ರಮುಖ ಶಾಖೆಯೊಂದಾಗಿ ಬೆಳೆದು ಉಪಶಾಖೆಗಳನ್ನು ಹೊರಹೊಮ್ಮಿಸುತ್ತಿರುವ ವಿಜ್ಞಾನದ ವಿವಿಧ ಪ್ರಾಣಿಗಳನ್ನೂ ಒಳಗೊಂಡಂತೆ ಸರ್ವಜೀವಿಗಳ ವರ್ತನಾ ರೀತಿಗಳನ್ನು ಹೋಲಿಸಿ ನಿರ್ಧರಿಸುವುದೇ ಇದರ ಮುಖ್ಯ ಗುರಿ. ಈ ವಿಜ್ಞಾನದ ಉಗಮದ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಇದು ಕಾಲಗರ್ಭದಿಂದ ಉದಿಸಿಬಂದಿದೆ ಎಂದು ಸುಲಭವಾಗಿ ಹೇಳಿಬಿಡಬಹುದು. ಆದರೂ ಇದರ ಪ್ರಥಮ ಕುರುಹುಗಳನ್ನು ನಾವು ಕಾಣುವುದು ಪ್ರಸಂಗನಿರೂಪಣೆಗಳಲ್ಲಿ. ಅನೇಕ ಜನರು ತಾವು ಸಾಕಿದ ಹಾಗೂ ತಮಗೆ ಪ್ರಿಯವಾದ ಪ್ರಾಣಿಗಳ ವರ್ತನೆಗಳಲ್ಲಿ ವಿಶೇಷತೆಗಳನ್ನು ಗುರುತಿಸಿ ಹಾಗೂ ಮಾನವ ವರ್ತನೆಗಳೊಂದಿಗೆ ಅವುಗಳಿಗಿರುವ ಹೋಲಿಕೆಗಳನ್ನು ಗಮನಿಸಿ ದಾಖಲು ಮಾಡಿರುವ ಹಲವು ದೃಷ್ಟಾಂತಗಳು ನಮಗೆ ಕಾಣಸಿಗುತ್ತವೆ. ಆದರೆ ಅಂಥ ಪ್ರಸಂಗನಿರೂಪಣೆಗಳಲ್ಲಿ ಮಾನವತ್ವಾರೋಪಣ ಮತ್ತು ವ್ಯಕ್ತಿಯೊಲವಿನ ದೋಷಗಳು ಅಧಿಕ ಪ್ರಮಾಣದಲ್ಲಿ ಕಂಡು ಬರುವುದರಿಂದ, ಅವುಗಳಲ್ಲಿ ವಸ್ತುನಿಷ್ಠತೆ ಬಹಳ ಕಡಿಮೆ. ತೌಲನಿಕ ಮನೋವಿಜ್ಞಾನದ ಉಗಮದಲ್ಲಿ ಒಂದು ಸ್ಪಷ್ಟ ಮೈಲಿಗಳನ್ನು ನಾವು ಚಾರ್ಲ್ಸ್ ಡಾರ್ವಿನ್ನನ ಜೀವವಿಕಾಸ ಸಿದ್ಧಾಂತದ ಪ್ರಕಟನೆಯಾದ ಅನಂತರದ ಸಂಶೋಧನೆಗಳಲ್ಲಿ ಕಾಣಬಹುದು. ಡಾರ್ವಿನ್ನನ ಸಿದ್ಧಾಂತ ಮತ್ತು ತೌಲನಿಕ ಅಂಗಾಂಗವಿಜ್ಞಾನ ಹಾಗೂ ತೌಲನಿಕ ಶರೀರವಿಜ್ಞಾನಗಳಲ್ಲಿ ಆದ ಪ್ರಗತಿ ಇವುಗಳ ತೌಲನಿಕ ಮನೋವಿಜ್ಞಾನಕ್ಕೆ ಪ್ರಚೋದನೆ ನೀಡಿದ್ದರಿಂದ ಈ ಕ್ಷೇತ್ರದಲ್ಲಿ ಪ್ರಾಯೋಗಿಕ ವಿಧಾನದ ಬಳಕೆ ಪ್ರಾರಂಭವಾಯಿತು. ತತ್ಫಲವಾಗಿ ತ್ವರಿತಗತಿಯ ಪ್ರಗತಿಯುಂಟಾದುದನ್ನು ಕಾಣಬಹುದು.

ಪ್ರಸಂಗನಿರೂಪಣೆಯ ಸ್ಥಾನದಲ್ಲಿ ಪ್ರಾಯೋಗಿಕ ವಿಧಾನ ಹೆಚ್ಚು ಬಳಕೆಗೆ ಬಂದುದಲ್ಲದೆ, ಇತರ ಪಾರಿಮಾಣಿಕ ವಿಧಾನಗಳೂ ಬಳಕೆಗೆ ಬಂದುದನ್ನು ಕಾಣಬಹುದು. ಈ ಒಲವಿನಲ್ಲಿ ವೈಜ್ಞಾನಿಕ ಅಭಿವ್ಯಕ್ತಿ ಮತ್ತು ವೈಜ್ಞಾನಿಕ ಮಾರ್ಗಗಳ ಬೆಳವಣಿಗೆ ಪ್ರತಿಫಲಿತವಾಗಿರುವುದನ್ನು ಕಾಣಬಹುದು.

ಚಾರ್ಲ್ಸ್ ಡಾರ್ವಿನ್ ಮಾನವನ ಅವಿತರಣ (ಡಿಸೆಂಟ್ ಆಫ್ ಮ್ಯಾನ್ 1871) ಮತ್ತು ಮನುಷ್ಯ ಮತ್ತು ಪ್ರಾಣಿಗಳಲ್ಲಿ ಸಂವೇಗದ ಪ್ರಕಟಣೆ (ದಿ ಎಕ್ಸ್‌ಪ್ರೆಷನ್ ಆಫ್ ಎಮೋಷನ್ ಇನ್ ಮ್ಯಾನ್ ಅಂಡ್ ಅನಿಮಲ್ಸ್ 1872) ಎಂಬ ಗ್ರಂಥಗಳಲ್ಲಿ ತೌಲನಿಕ ವಿಧಾನವನ್ನು ಅನುಸರಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಜೀವಪ್ರಭೇದಗಳ ಉಗಮವನ್ನು ಕುರಿತ ಗ್ರಂಥದಲ್ಲಿ (ಆರಿಜಿನಲ್ ಆಫ್ ಸ್ಪೀಷೀಸ್) ರೂಪಿಸಿದ ತತ್ತ್ವಗಳನ್ನು ಆತ ಮಾನವನ ದೈಹಿಕ, ಮಾನಸಿಕ ಮತ್ತು ಸಂವೇದನಾತ್ಮಕ ಬೆಳವಣಿಗೆಗೆ ಅನ್ವಯಿಸಿರುವುದು ಮೇಲಿನ ಗ್ರಂಥಗಳಲ್ಲಿ ಕಾಣುತ್ತದೆ. ಮಾನವನ ಅವಿತರಣ ಗ್ರಂಥದಲ್ಲಿ ಮೊದಲು ದೈಹಿಕ ರಚನೆಯ ಬಗ್ಗೆ ಪ್ರಸ್ತಾವಿಸಿ ಅನಂತರ ಮಾನಸಿಕ ಬೆಳವಣಿಗೆಯನ್ನು ಆತ ವಿವರಿಸಿದ್ದಾನೆ; ಮಾನವನೂ ಸೇರಿದಂತೆ ಎಲ್ಲ ಪ್ರಾಣಿಗಳ ನಡುವೆ ಇರುವ ವ್ಯತ್ಯಾಸಗಳು ಗುಣಾತ್ಮಕವಾಗಿರದೇ ಪಾರಿಮಾಣಿಕವಾಗಿರುತ್ತದೆ ಎಂಬುದನ್ನು ಪ್ರತಿಪಾದಿಸಿದ್ದಾನೆ. ಮನುಷ್ಯ ಮತ್ತು ಪ್ರಾಣಿಗಳು ಒಂದೇ ರೀತಿಯ ಇಂದ್ರಿಯಗಳು, ಮೂಲಪ್ರೇರಣಾತ್ಮಕ ವರ್ತನೆ, ಮೂಲಭೂತ ಸಂವೇಗಗಳು ಮತ್ತು ಮೇಲ್ಮಟ್ಟದ ಮಾನಸಿಕ ಪ್ರಕ್ರಿಯೆಗಳಾದ ಅವಧಾನ, ಸ್ಮೃತಿ, ಕಲ್ಪನೆ, ಆಯ್ಕೆಶಕ್ತಿ ಮುಂತಾದವನ್ನು ಪಡೆದಿರುತ್ತವೆ ಎಂಬುದೇ ಆತನ ಈ ನಿಬಂಧದ ಪ್ರಮುಖ ವಿಷಯ. ಮನುಷ್ಯನ ಬುದ್ಧಿಶಕ್ತಿಯಂತೆಯೇ ಕಾಣುವ ಬುದ್ಧಿಶಕ್ತಿಯನ್ನು ಪ್ರಾಣಿಗಳೂ ಪಡೆದಿರುತ್ತವೆ ಎಂದೂ ಆತ ವಾದಿಸಿದ್ದಾನೆ.

ಮನುಷ್ಯ ಮತ್ತು ಪ್ರಾಣಿಗಳಲ್ಲಿ ಸಂವೇಗದ ಪ್ರಕಟನೆ ಎಂಬ ಗ್ರಂಥದಲ್ಲಿ ಪ್ರಾಣಿಗಳಲ್ಲಿ ಸಂವೇಗ ಪ್ರಕಟವಾಗುವ ರೀತಿಯನ್ನು ವಿವರಿಸಿ, ಆ ಪ್ರಾಕ್ಕಲ್ಪನೆಯ ಮೂಲಕ ಮನುಷ್ಯನಲ್ಲಿ ಸಂವೇಗದ ಪ್ರಕಟನೆಯನ್ನು ವಿವರಿಸುವ ಸಾಧ್ಯತೆಯನ್ನು ಡಾರ್ವಿನ್ ಹೇಳಿದ್ದಾನೆ. ಇದಕ್ಕಾಗಿ ಆತ ರೂಪಿಸಿದ ತತ್ತ್ವಗಳು ಇವು : 1 ಸಹಯೋಗಿತ ಅಭ್ಯಾಸಗಳ ತತ್ತ್ವ 2. ವಿರೋಧನ್ಯಾಸ ತತ್ತ್ವ ಮತ್ತು 3 ತಂತುಮಂಡಲದ ನೇರಕ್ರಿಯಾ ತತ್ತ್ವ.

ಈ ತತ್ತ್ವಗಳು ಪ್ರಾಣಿಗಳ ಮತ್ತು ಮನುಷ್ಯರ ಸಂವೇಗ ಪ್ರಕಟನೆಯಲ್ಲಿ ಕಂಡುಬರುವ ಸಾದೃಶ್ಯವನ್ನು ಅರಿಯಲು ನೆರವಾಗುತ್ತವೆ. ಆದರೆ ಇಂದಿನ ಒರೆಗಲ್ಲುಗಳ ಪ್ರಕಾರ ಮನುಷ್ಯ ಮತ್ತು ಪ್ರಾಣಿಗಳ ನಡುವಣ ಸಂವೇಗಾತ್ಮಕ ವರ್ತನೆಯ ಸಾದೃಶ್ಯಕ್ಕೆ ಡಾರ್ವಿನ್ ಕೊಟ್ಟಿರುವ ಪುರಾವೆಗಳು ಅಷ್ಟಾಗಿ ಮಾನ್ಯತೆ ಪಡೆಯದಿರಬಹುದು. ಏಕೆಂದರೆ ಆತ ಕೇವಲ ಕೆಲವು ಶಿಶುಗಳು ಮತ್ತು ಪ್ರಾಣಿಗಳ ವರ್ತನೆಯನ್ನು ಆಧರಿಸಿ ತನ್ನ ವಾದವನ್ನು ರೂಪಿಸಿದ್ದಾನೆ. ಆದರೂ ಈ ಕಾರ್ಯಕ್ಕಾಗಿ ಆತ ಛಾಯಾಚಿತ್ರಣ ಮತ್ತು ಭಿತ್ತಿಚಿತ್ರಣ ಪ್ರವಿಧಿಗಳನ್ನು ಬಳಸಿದ್ದ. ಜೀವೋತ್ಪತ್ತಿ ವಿಧಾನವನ್ನು ಆತ ಬಳಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಡಾರ್ವಿನ್ನನ ಅನಂತರ ನಡೆದ ಹಲವು ಸಂಶೋಧನೆಗಳಲ್ಲಿ ಮೇಲ್ಮಟ್ಟದ ಮಾನಸಿಕ ಪ್ರಕ್ರಿಯೆಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವ ಪ್ರಯತ್ನಗಳು ನಡೆಯಲೂ ವಿಕಾಸವಾದ ಪ್ರೇರಕ ಶಕ್ತಿಯಾಯಿತು. ಇದರಿಂದ ಮೂಡಿದ ಹೊಸಚೈತನ್ಯ ತೌಲನಿಕ ಮನೋವಿಜ್ಞಾನವನ್ನು ತತ್ತ್ವಶಾಸ್ತ್ರದ ಕಪಿಮುಷ್ಟಿಯಿಂದ ವಿಮುಕ್ತಗೊಳಿಸಲು ಬಹುಮಟ್ಟಿಗೆ ಕಾರಣವಾಯಿತು. ಅನೇಕ ಪ್ರತಿಸ್ಪರ್ಧಿಸಿದ್ಧಾಂತಗಳೊಂದಿಗೆ (ಉದಾ ; ದೈವಸೃಷ್ಟಿವಾದ) ವಿಕಾಸವಾದ ಅವಿರತವಾಗಿ ನಡೆಸಿದ ಹೋರಾಟ ಇಲ್ಲಿ ಗಮನಿಸಬೇಕಾದ ಅಂಶ. ಮೇಲೆ ಪ್ರಸ್ತಾಪಿಸಲಾದ ಒಲವುಗಳಿಗೆ ಸಂಬಂಧಿಸಿದಂತೆಯೇ ಸಂಶೋಧನಾ ಸಮಸ್ಯೆಗಳಲ್ಲಿಯೂ ಹೆಚ್ಚಳ ಕಂಡುಬಂದಿತು. ಮಾನವವರ್ತನೆಯ ಬಗ್ಗೆ ಕೇಳಲಾಗುತ್ತಿರುವ ಪ್ರತಿಯೊಂದು ಮೂಲ ಅಥವಾ ಪ್ರಮುಖ ಪ್ರಶ್ನೆಯನ್ನೂ ಇತರ ಪ್ರಾಣಿಗಳ ವರ್ತನೆಗಳ (ಉದಾ; ಕಲಿಕೆ, ಬುದ್ಧಿಶಕ್ತಿ, ಸಂಘಜೀವನ ಇತ್ಯಾದಿ) ಬಗ್ಗೆಯೂ ಕೇಳಲಾಯಿತು. ಈ ಕ್ಷೇತ್ರದಲ್ಲಿ ನಡೆದ ಅಧ್ಯಯನಗಳಿಗೆ ಸ್ಪಷ್ಟ ಉದ್ದೇಶಗಳು ರೂಪುಗೊಂಡವು.

ತೌಲನಿಕ ಮನೋವಿಜ್ಞಾನದ ಪ್ರಮುಖ ಉದ್ದೇಶವೆಂದರೆ ಮನುಷ್ಯನೂ ಸೇರಿದಂತೆ ವಿವಿಧ ವರ್ಗದ ಪ್ರಾಣಿಗಳ ನಡುವೆ ವರ್ತನಾ ರೀತಿಗಳಲ್ಲಿರಬಹುದಾದ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಕಂಡುಹಿಡಿದು ತನ್ಮೂಲಕ ಮಾನಸಿಕ ಪ್ರಕ್ರಿಯೆಗಳ ಉಗಮ ಮತ್ತು ವಿಕಾಸಗಳಿಗೆ ಸಂಬಂಧಿಸಿದಂತೆ ಸಿದ್ಧಾಂತಗಳನ್ನು ರೂಪಿಸುವುದು. ಅಲ್ಲದೇ, ಹಾಗೆ ರೂಪಿಸಲಾದ ಸಿದ್ಧಾಂತಗಳನ್ನು ಪ್ರಧಾನವಾಗಿ ಮಾನವ ವರ್ತನೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಈ ಕ್ಷೇತ್ರದ ಉದ್ದೇಶ ಪ್ರಾಣಿಮನೋವಿಜ್ಞಾನದ ಉದ್ದೇಶಕ್ಕಿಂತ ಸ್ವಲ್ಪ ಭಿನ್ನವಾಗಿರುವುದನ್ನು ಕಾಣಬಹುದು. ಪ್ರಾಣಿಮನೋವಿಜ್ಞಾನದ ಮುಖ್ಯ ಗುರಿ ವಿವಿಧ ಪ್ರಾಣಿಗಳ ವರ್ತನಾ ರೀತಿಗಳನ್ನು ಅರಿಯುವುದೇ ಆಗಿದ್ದರೆ, ತೌಲನಿಕ ಮನೋವಿಜ್ಞಾನದ ಮುಖ್ಯಗುರಿ ಮೇಲೆಯೇ ಹೇಳಿರುವಂತೆ ವಿವಿಧ ಪ್ರಾಣಿವರ್ಗಗಳ ವರ್ತನಾ ರೀತಿಗಳನ್ನು ತುಲನಾತ್ಮಕವಾಗಿ ಪರಿಶೀಲಿಸುವುದು. ಈ ದೃಷ್ಟಿಯಿಂದ ನೋಡಿದಾಗ ಈ ಕ್ಷೇತ್ರದ ವ್ಯಾಪ್ತಿ ಹೆಚ್ಚು ವಿಶಾಲವಾಗಿರುವುದು ಕಂಡುಬರುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಮನುಷ್ಯರು ಹಾಗೂ ಪ್ರಾಣಿಗಳ ವರ್ತನಾ ರೀತಿಗಳನ್ನು ಮಾತ್ರವಲ್ಲದೇ, ಸಸ್ಯಗಳ ವರ್ತನಾರೀತಿಗಳ ಅಧ್ಯಯನಕ್ಕೂ ಈ ಕ್ಷೇತ್ರದಲ್ಲಿ ಅವಕಾಶವಿದೆ ಎಂಬುದು, ವಾರ್ಡನ್, ಜೆಂಕಿನ್ಸ್ ಮತ್ತು ವಾರ್ನರ್ ಇವರುಗಳ ತೌಲನಿಕ ಮನೋವಿಜ್ಞಾನ ಗ್ರಂಥಗಳಲ್ಲಿ ಸಸ್ಯವರ್ತನೆಗೆ ಸಂಬಂಧಿಸಿದಂತೆ ವಿಪುಲ ಮಾಹಿತಿಯನ್ನು ಕೊಡಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಕ್ಷೇತ್ರದಲ್ಲಿ ಸಸ್ಯಗಳು ಮತ್ತುಪ್ರಾಣಿಗಳು. ಪ್ರಾಣಿಗಳು ಮತ್ತು ಮನುಷ್ಯರು ಹಾಗೂ ಮನುಷ್ಯರು ಹಾಗೂ ಮನುಷ್ಯರಲ್ಲೇ ವಿವಿಧ ಸಮೂಹಗಳು. ಸಂಸ್ಕೃತಿಗಳು ಮತ್ತು ಜನಾಂಗಗಳು ವರ್ತನಾರೀತಿಗಳಲ್ಲಿ ಕಂಡುಬರುವ ಹೋಲಿಕೆ ಮತ್ತು ವ್ಯತ್ಯಾಸಗಳ ಬಗ್ಗೆ ಸಂಶೋಧನೆಗಳನ್ನು ನಡೆಸಿ ಸಿದ್ಧಾಂತಗಳನ್ನು ರೂಪಿಸಲಾಗುತ್ತದೆ.

ಮೇಲೆ ಪ್ರಸ್ತಾಪಿಸಲಾದಂಥ ಅಧ್ಯಯನ ರೀತಿಗಳ ಹಿನ್ನೆಲೆಯಲ್ಲಿರುವ ವೈಜ್ಞಾನಿಕ ವಿವೇಚನೆಯೆಂದರೆ, ಜಟಿಲ ವರ್ತನಾ ರೀತಿಗಳನ್ನು ಅರ್ಥಮಾಡಿಕೊಳ್ಳಲು ಅವುಗಳ ಸರಳ ಮೂಲರೂಪಗಳನ್ನು ಭೇದಿಸುವುದು ಅವಶ್ಯಕ ಎಂಬುದು. ಇದೇ ರೀತಿಯ ವಿವೇಚನೆಯನ್ನು ಪ್ರಾಣಿಗಳ ದೇಹರಚನೆಗೆ ಸಂಬಂಧಿಸಿದ ತೌಲನಿಕ ಅಂಗಾಗವಿಜ್ಞಾನ ಮತ್ತು ತೌಲನಿಕ ಶರೀರವಿಜ್ಞಾನಗಳಲ್ಲಿ ಕಾಣಬಹುದು. ಒಟ್ಟಿನಲ್ಲಿ, ಇದರಿಂದ ವರ್ತನೆಯ ಮೂಲರೂಪಗಳ ನೇರವಾದ ಅಧ್ಯಯನ ಮಾಡಲು ಸಾಧ್ಯವಾಗುವುದಲ್ಲದೇ, ಪ್ರಾಯೋಗಿಕ ನಿಯಂತ್ರಣಕ್ಕೂ ಹೆಚ್ಚು ಆಸ್ಪದವಾಗುತ್ತದೆ. ಉದಾಹರಣೆಗೆ, ಮಾನವ ತಂತುವ್ಯವಸ್ಥೆಯ ರಚನೆ ಮತ್ತು ಮಾನವವರ್ತನೆಗಳ ನಡುವಣ ಸಂಬಂಧವನ್ನು ಅರಿಯಲು ಪ್ರಾಣಿಗಳ ಮೇಲೆ ನಡೆಸಲಾದ ಸಂಶೋಧನೆಗಳು ಮಹತ್ತರವಾದ ನೆರವು ನೀಡುವುದನ್ನು ಕಾಣಬಹುದು. ಹಲವು ಕಾರಣಗಳಿಂದ ಇದು ಸಾಧ್ಯವಾಗುತ್ತದೆ. ಮೊದಲನೆಯದಾಗಿ ಪ್ರಾಣಿಗಳನ್ನು ಸುಲಭವಾಗಿ ಪ್ರಾಯೋಗಿಕ ನಿಯಂತ್ರಣಗಳಿಗೆ ಒಳಪಡಿಸಬಹುದು. ಉದಾಹರಣೆಗೆ, ಲ್ಯಾಷ್ಲೆ ಮಾಡಿದ ರೀತಿಯಲ್ಲಿ, ಪ್ರಾಣಿಗಳ ಮಸ್ತಿಷ್ಕದ ಮೇಲೆ ಶಸ್ತ್ರಕ್ರಿಯೆ ನಡೆಸಿ ತತ್ಪರಿಣಾಮವಾಗಿ ಅವುಗಳ ವರ್ತನೆಯಲ್ಲಿ ಉಂಟಾಗುವ ಮಾರ್ಪಾಡುಗಳನ್ನು ತಿಳಿಯಬಹುದು. ಇಷ್ಟಲ್ಲದೇ ಮಸ್ತಿಷ್ಕವನ್ನು ವಿದ್ಯುತ್ ಅಥವಾ ಮದ್ದು ಪ್ರಚೋದನೆಗಳಿಗೆ ಒಳಪಡಿಸಿ, ನಿರ್ದಿಷ್ಟ ಅನುಕ್ರಿಯೆಗಳನ್ನು ನಿಯಂತ್ರಿಸಿ ನಿರ್ದೇಶಿಸುವ ಮಸ್ತಿಷ್ಕ ಪ್ರದೇಶಗಳನ್ನು ಗುರುತಿಸಬಹುದು. ಆದರೆ, ನೈತಿಕ ಕಾರಣಗಳಿಗಾಗಿ ಇಂಥ ಪ್ರಯೋಗಗಳನ್ನು ಮನುಷ್ಯರ ಮೇಲೆ ನಡೆಸಲಾಗುವುದಿಲ್ಲ. ಎರಡನೆಯದಾಗಿ, ಮಾನವ ವರ್ತನೆಯೊಂದಿಗೆ ಹೋಲಿಸಿದಾಗ ಪ್ರಾಣಿ ವರ್ತನೆ ಹೆಚ್ಚು ಸರಳರೂಪದಲ್ಲಿರುವುದರಿಂದ ವೈಜ್ಞಾನಿಕ ನಿಯಂತ್ರಣಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಮೂರನೆಯದಾಗಿ, ಪ್ರಾಣಿವರ್ತನೆಯ ಅಧ್ಯಯನಗಳಲ್ಲಿ ವಿವಿಧ ನಿಯಂತ್ರಣ ಅವಲೋಕನ ಮತ್ತು ದಾಖಲು ಪ್ರವಿಧಿಗಳನ್ನು ಹೆಚ್ಚು ಉಪಯುಕ್ತವಾಗಿ ಬಳಸಿಕೊಂಡು ವಸ್ತುನಿಷ್ಠತೆಯನ್ನು ಕಾಯ್ದುಕೊಳ್ಳಲು ಹೆಚ್ಚು ಸಾಧ್ಯವಾಗುತ್ತದೆ. ಕೊನೆಯದಾಗಿ, ಪ್ರಾಯೋಗಿಕ ಅಧ್ಯಯನಗಳಿಗೆ ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ಪ್ರಾಣಿಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಉದಾಹರಣೆಗೆ ಅನುವಂಶೀಯತೆ ಮತ್ತು ಪ್ರತ್ಯಾವರಣಗಳ ಪರಸ್ಪರ

ಸಾಹಚರ್ಯವನ್ನು ಅರಿಯಲು ಬೇಕಾದ ನಿಯಂತ್ರಣವನ್ನು ಸಾಧಿಸುವಲ್ಲಿ ಪ್ರಾಣಿಗಳು ಮನುಷ್ಯರಿಗಿಂತ ಹೆಚ್ಚು ಉಪಯುಕ್ತವಾಗಬಲ್ಲವು. ಕಲಿಕೆ ಶಕ್ತಿಯ ಅನುವಂಶೀಯತೆಯನ್ನು ನಿರ್ಧರಿಸುವಲ್ಲಿ ಟ್ರೈಯಾನ್ ನಡೆಸಿದ ಪ್ರಯೋಗ ಇದಕ್ಕೆ ಜೀವಂತ ನಿದರ್ಶನ. ಚುರುಕಾದ ಇಲಿಗಳು ಚುರುಕಾದ ಮರಿಗಳಿಗೂ ಮತ್ತು ಮಂದವರ್ತನೆಯ ಇಲಿಗಳು ಮಂದವರ್ತನೆಯ ಮರಿಗಳಿಗೂ ಜನ್ಮಕೊಡುತ್ತವೆ ಎಂಬ ಸಿದ್ಧಾಂತವನ್ನು ರೂಪಿಸಲು ಆತ ಹದಿನೆಂಟು ಪೀಳಿಗೆಗಳ ಮೇಲೆ ಪ್ರಯೋಗ ನಡೆಸಲು ಸಾಧ್ಯವಾಯಿತು.

ಒಟ್ಟಿನಲ್ಲಿ ಹೇಳುವುದಾದರೆ, ಪ್ರಾಣಿಗಳ ಮೇಲೆ ನಡೆಸಲಾಗಿರುವ ಸಂಶೋಧನೆಗಳು, ಬುದ್ಧಿಶಕ್ತಿಯ ವಿಕಾಸ, ಕಲಿಕೆಯ ಪ್ರಕ್ರಿಯೆ ಮತ್ತು ಸ್ವಭಾವ ಹಾಗೂ ನಮ್ಮ ಮಾನಸಿಕ ಕ್ರಿಯೆಗಳ ಹಿನ್ನೆಲೆಯಲ್ಲಿರುವ ಶಾರೀರಿಕ ರಚನೆಗಳ ಬಗ್ಗೆ ಗಣನೀಯ ಒಳನೋಟಗಳನ್ನು ಒದಗಿಸಿವೆ. ಇದಕ್ಕಿಂತ ಹೆಚ್ಚಾಗಿ ಅಂಥ ಸಂಶೋಧನೆಗಳು, ಮಾನವವರ್ತನೆಯನ್ನು ಸಮೀಕ್ಷಿಸುವಲ್ಲಿ ಹೆಚ್ಚು ಫಲದಾಯಕ ಮಾರ್ಗಗಳನ್ನು ಸೂಚಿಸಿವೆಯಲ್ಲದೇ, ಒಂದು ಕಾಲದಲ್ಲಿ ಕೇವಲ ಅಂತರವಲೋಕನದಿಂದ ಮಾತ್ರ ಸಾಧ್ಯವೆಂಬಂತಿದ್ದ ಮಾನಸಿಕ ವ್ಯಾಪಾರಗಳ ವಿವರಗಳನ್ನು ಅರಿಯಲು ವಿಧಾನಗಳನ್ನು ಸೂಚಿಸಿರುವುದನ್ನು ಕಾಣಬಹುದು. ಉದಾಹರಣೆಗೆ ಇಂದು ಪ್ರಚಲಿತವಾಗಿರುವ ಕಲಿಕೆ ಸಿದ್ಧಾಂತಗಳು ಬಹುಮುಖ್ಯವಾಗಿ ಪ್ರಾಣಿಗಳ ಮೇಲಿನ ಅಧ್ಯಯನಗಳಿಂದ ರೂಪಿತವಾಗಿರುವುದಲ್ಲದೇ ಅವುಗಳ ಪರಿಶೀಲನೆಯೂ ಪ್ರಾಣಿಗಳ ಮೇಲೆ ನಡೆಸುವ ಪ್ರಯೋಗಗಳಿಂದಲೇ ಆಗುತ್ತದೆ. ವೈದ್ಯ ವಿದ್ಯಾರ್ಥಿ ಸರಳರೀತಿಯ ಪ್ರಾಣಿಗಳಾದ ಮೀನು, ಬೆಕ್ಕು ಮತ್ತು ನಾಯಿಗಳ ಮೇಲೆ ಶಸ್ತ್ರಕ್ರಿಯೆಗಳನ್ನು ನಡೆಸುವುದರ ಮೂಲಕ ಕೆಲವು ವಿವರಗಳನ್ನು ಅರಿಯಲು ಪ್ರಾರಂಭಿಸುವಂತೆ ಮನೋವಿಜ್ಞಾನದ ವಿದ್ಯಾರ್ಥಿ ಕೂಡ ಕಲಿಕೆಯ ಮೇಲಿನ ಅಧ್ಯಯನವನ್ನು ಸರಳ ಪ್ರಾಣಿಗಳಲ್ಲಿ ಕಂಡುಬರುವ ಕಲಿಕೆಯ ಅಧ್ಯಯನದಿಂದ ಪ್ರಾರಂಭಿಸುತ್ತಾನೆ. ಕೆಳ ಪ್ರಾಣಿಗಳ ಮೇಲೆ ನಡೆಸಲಾಗುವ ಇಂಥ ಅಧ್ಯಯನಗಳಿಂದ ದೊರೆತ ಜ್ಞಾನದಿಂದ, ಮಾನವ ವರ್ತನೆಯ ಆದರ್ಶಗಳು, ಉದ್ದೇಶಗಳು ಅಭಿವ್ಯಕ್ತಿಗಳು ಮತ್ತು ಸಾಂಸ್ಕೃತಿಕವಾಗಿ ಅನುಬಂಧಿತವಾಗಿರುವ ಜಟಿಲವರ್ತನೆಗಳ ಒಳಹೊಕ್ಕು, ಇತರ ಪ್ರಾಣಿವರ್ಗದೊಂದಿಗೆ ನಾವು ಹಂಚಿಕೊಂಡಿರುವ ವರ್ತನೆಗಳ ಆಧಾರಗಳೇನು ಎಂಬುದನ್ನೂ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಈ ವಿಧಾನದ ಅನುಸರಣೆಯಿಂದ ಹೆಚ್ಚು ಹೆಚ್ಚು ಜಟಿಲವಾದ ಮಾನವವರ್ತನೆಯನ್ನು ಅರಿತುಕೊಳ್ಳಲು ವಿಜ್ಞಾನಿ ಹೆಚ್ಚು ಶಕ್ತನಾಗುತ್ತಾನೆ.

ಯಾವುದೇ ಪ್ರಾಣಿಯ ಅಥವ ಪ್ರಾಣಿವರ್ಗದ ವರ್ತನೆಯನ್ನು ವಸ್ತುನಿಷ್ಠವಾಗಿ ಸಮೀಕ್ಷಿಸಿ, ಇತರ ಪ್ರಾಣಿ ಅಥವಾ ಪ್ರಾಣಿವರ್ಗದ ವರ್ತನೆಯೊಂದಿಗೆಹೋಲಿಸಿ ನೋಡಬೇಕಾದರೆ ಅವೆರಡರ ಸ್ವಭಾವ, ಹೊಂದಾಣಿಕೆಯ ಮೌಲ್ಯ, ಸನ್ನಿವೇಶ ಮತ್ತು ಜೈವಿಕ ರಚನೆ ಹಾಗೂ ಆ ಪ್ರಾಣಿಗಳ ಅನುಭವದ ಹಿನ್ನೆಲೆಯಲ್ಲಿರುವ ಇತರ ನಿರ್ಧಾರಕಗಳು– ಇವನ್ನೆಲ್ಲ ಸಮಗ್ರವಾಗಿ ಪರಿಶೀಲಿಸಬೇಕಾಗುತ್ತದೆ.

ವ್ಯಕ್ತಿಯ ವರ್ತನೆಗೆ ಪ್ರಧಾನ ದೈಹಿಕ ಆಧಾರವೆಂದರೆ ನರ ಮಂಡಲವೆಂಬುದು ಇಂದು ನಿರ್ವಿವಾದವಾದ ಸಂಗತಿ. ಮನುಷ್ಯ ಮತ್ತು ಇತರ ಪ್ರಾಣಿವರ್ಗಗಳ ವರ್ತನೆಯ ಜಟಿಲತೆಯಲ್ಲಿ ಕಂಡುಬರುವ ಹೋಲಿಕೆ ವ್ಯತ್ಯಾಸಗಳಿಗೆ ನರಮಂಡಲ ಒಂದು ಪ್ರಮುಖ ಕಾರಣ.

ಎಲ್ಲ ರೀತಿಯ ಸಸ್ಯ ಮತ್ತು ಪ್ರಾಣಿಗಳು ಕೆಲವು ಸರಳ ರೂಪಗಳಿಂದ ಪ್ರಾರಂಭವಾಗಿ, ಆಯ್ಕೆ ಪ್ರಕ್ರಿಯೆಯ ಫಲವಾಗಿ ಕ್ರಮೇಣ ವಿಕಾಸ ಹೊಂದಿ ನಾನಾ ರೀತಿಯ ಜಟಿಲ ರೂಪಗಳಾಗಿ ಪರಿಣಮಿಸಿವೆ ಎಂಬುದು ವಿಕಾಸವಾದದ ತಿರುಳು. ಹೀಗೆ ಪರಿಣಮಿಸುತ್ತಿರುವ ವಿವಿಧ ದೈಹಿಕ ಮತ್ತು ಮಾನಸಿಕ ವ್ಯಾಪಾರಗಳನ್ನು ಸಂಘಟಿಸಿ ನಿರ್ದೇಶಿಸುವ ಪ್ರಧಾನ ವ್ಯವಸ್ಥೆ ನರಮಂಡಲ. ಜೀವವಿಕಾಸದ ಮೊದಮೊದಲ ಹಂತಗಳಲ್ಲಿ ಅತಿ ಸರಳ ರಚನೆಯಾಗಿದ್ದು ಕ್ರಮೇಣ ಹೆಚ್ಚು ಹೆಚ್ಚು ಜಟಿಲವಾಗುತ್ತ ಹೋಗಿ, ಕಡೆಯಲ್ಲಿ ಅಂದರೆ ಮನುಷ್ಯರಲ್ಲಿ ಜಟಿಲತೆಯ ತುತ್ತ ತುದಿಯನ್ನು ಮುಟ್ಟಿದೆ. ಇದರ ವಿಕಾಸಕ್ಕೆ ಅನುಗುಣವಾಗಿ ಜೀವಿ ವರ್ತನೆಯಲ್ಲೂ ಹೆಚ್ಚು ಹೆಚ್ಚು ಜಟಿಲತೆ ಕಂಡುಬರುವುದು ಗಮನಾರ್ಹ. ಏಕಕೋಶ ಜೀವಿಗಳಲ್ಲಿ (ಉದಾ; ಅಮೀಬ) ಪ್ರತ್ಯೇಕ ನರರಚನೆಯಿಲ್ಲ. ಆದರೆ ಬಹುಕೋಶಿ ಜೀವವರ್ಗದ ಮೂಲರೂಪವೆನಿಸಿದ ಸ್ಪಂಜು ಸಂವೇದನ ಮತ್ತು ಸಂಕೋಚನ ಕ್ರಿಯೆಗಳಿಗೆ ಪ್ರತ್ಯೇಕ ಭಾಗಗಳನ್ನು ಹೊಂದಿರುತ್ತದೆ. ಮುಂದೆ ನರಮಂಡಲದ ವಿಕಾಸದ ಎರಡು ನಿರ್ದಿಷ್ಟ ಹಂತಗಳನ್ನು ಸಿಲೆಂಟರೇಟುಗಳಲ್ಲಿ ಕಾಣಬಹುದು. ಅನಂತರ ಲೋಳೆ ಮೀನಿನಲ್ಲಿ ತಂತುಜಾಲ ರೂಪುಗೊಂಡು ಸಂವೇದನ ಮತ್ತು ವಿದಾಯಕ ವಿಭಾಗಗಳನ್ನು ಸಂಘಟಿಸುವುದರ ಜೊತೆಗೆ ಅಲ್ಪ ಮಟ್ಟಿಗೆ ವಹನ ಕಾರ್ಯವನ್ನು ನಿರ್ವಹಿಸುವುದನ್ನೂ ನಾವು ಕಾಣಬಹುದು.

ಮೇಲ್ವರ್ಗದ ಅಕಶೇರುಕಗಳಲ್ಲಿ ಅಕ್ಷಾತ್ಮಕ ವ್ಯವಸ್ಥೆ ಕಾಣಿಸಿಕೊಂಡು ಅದರಲ್ಲಿ ಸ್ವತಂತ್ರ ಕ್ರಿಯಾಶಕ್ತಿಯುಳ್ಳ ನರತಂತುಕೋಶಗಳು ತುಂಬಿರುತ್ತವೆ. ಅಲ್ಲದೇ ಸ್ಥಾನೀಯ ಉದ್ದೀಪನೆಗಳಿಗೆ ಸ್ಥಾನೀಯ ಪ್ರತಿಕ್ರಿಯೆಗಳನ್ನುಂಟುಮಾಡಲು ಕಾರಣವಾಗುತ್ತದೆ. ಆದರೆ ಅಕಶೇರುಕಗಳಲ್ಲೇ ಹೆಚ್ಚು ವ್ಯವಸ್ಥಿತ ರೂಪದಲ್ಲಿರುವ ತಂತುವ್ಯವಸ್ಥೆಯೆಂದರೆ, ಪ್ರತಿಕ್ಷೇಪಚಾಪ. ಇದು ಎರೆಹುಳುವಿನಂಥ ಜೀವಿಗಳಲ್ಲಿ ಕಂಡುಬರುತ್ತದೆ. ಈ ವ್ಯವಸ್ಥೆಯಲ್ಲಿ ನರತಂತು ವ್ಯವಸ್ಥೆಯಲ್ಲಿರಬೇಕಾದ ಮೂಲ ರಚನಾಂಶಗಳಿರುವುದು ಗಮನಾರ್ಹ. ಆ ರಚನಾಂಶಗಳೆಂದರೆ ಸಂವೇದನ ನರ, ವಿಧಾಯಕ ನರ ಮತ್ತು ಸಂದಾಯಕ ನರಗಳು. ಮುಂದೆ ಈ ವ್ಯವಸ್ಥೆ ಸಂಧಿಪದಿಗಳಲ್ಲಿ ಅಂಶಿಕ ಏಕತೆಯನ್ನು ಪಡೆದು ತಲೆಯ ಭಾಗದಲ್ಲಿ ಬೃಹತ್ ನರಗುಚ್ಛಗಳು ರೂಪಗೊಂಡು ಮಿದುಳನ್ನು ಹೋಲುವ ರಚನೆಯುಂಟಾಗುತ್ತದೆ. ಜೀವಿಗಳಲ್ಲಿ ಆಗುತ್ತಿರುವ ವಿವಿಧ ಪ್ರತಿಕ್ರಿಯೆಗಳು ಸಂಘಟನೆಗೆ ಈ ವ್ಯವಸ್ಥೆ ಕಾರಣವಾಗುತ್ತದೆ. ಇದರ ನಾಶದಿಂದ ಜೀವಿಯ ಚಲನೆಯ ವೇಗ ಹಾಗೂ ಚಲನೆಯ ದಿಶೆಗಳಿಗೆ ತೀವ್ರ ಹಾನಿಯುಂಟಾಗುತ್ತದೆ.

ಅತ್ಯುಚ್ಚ ಅಕಶೇರುಕ ವರ್ಗದಿಂದ, ಅತ್ಯಂತ ನಿಕೃಷ್ಟವಾದ ಕಶೇರುಕ ವರ್ಗಕ್ಕೆ ಬಂದಾಗ ತಂತುಮಂಡಲ ವಿಕಾಸದಲ್ಲಿ ಮಹತ್ತ್ವಪೂರ್ಣ ಪ್ರಗತಿ ಕಂಡುಬರುತ್ತದೆ. ಈ ಅವಸ್ಥೆಯಲ್ಲಿ ಮಿದುಳು ಬಳ್ಳಿ ತಂತು ಆವೇಗಗಳನ್ನು ನಿರ್ದೇಶಿಸುವುದಲ್ಲದೇ, ಪ್ರತಿಕ್ಷೇಪ ವರ್ತನೆಗಳ ಕೇಂದ್ರವೂ ಆಗಿರುತ್ತದೆ. ಮಸ್ತಿಷ್ಕವಾಗಿ ಪರಿಣಮಿಸುವ ಮಿದುಳುಬಳ್ಳಿಯ ಮೇಲ್ಭಾಗ ಕಶೇರುಕ ವಿಕಾಸದಲ್ಲಿ ಅದ್ಭುತ ಪ್ರಗತಿಯಿಂದ ಕೂಡಿರುತ್ತದೆ.

ಕಶೇರುಕಗಳಲ್ಲಿ ಕಂಡುಬರುವ ಮಿದುಳಿನ ರೂಪರಚನೆಗಳ ಜಟಿಲತೆ ಹಾಗೂ ಸೂಕ್ಷ್ಮತೆಗಳಲ್ಲಿ ಹೆಚ್ಚು ಮಹತ್ತ್ವಪೂರ್ಣ ವಿಕಾಸವಾಗಿರುವುದನ್ನು ಕಾಣಬಹುದು. ನಾಯಿ ಮತ್ತು ದೊಡ್ಡ ನರವಾನರಗಳ ಮಿದುಳಿನೊಂದಿಗೆ ಹೋಲಿಸಿದಾಗ ಮಾನವ ಮಿದುಳಿನಲ್ಲಿ ಗಾತ್ರ, ಜಟಿಲತೆ ಮತ್ತು ಸೂಕ್ಷ್ಮತೆಗಳಲ್ಲಿ ಅತ್ಯಂತ ಬೃಹತ್ ಪ್ರಮಾಣದ ವಿಕಾಸವಾಗಿರುವುದು ಕಂಡುಬರುತ್ತದೆ. ಮಾನವ ಮಿದುಳು ಬಹುಮಟ್ಟಿಗೆ ಸಂವೇದನ ಕಾರ್ಯ ಸಂಘಟನೆಯಿಂದ ವಿಮುಕ್ತವಾಗಿ, ಉತ್ಕೃಷ್ಟ ಹಾಗೂ ಜಟಿಲವಾದ ಆಲೋಚನೆ, ವಿವೇಚನೆ, ಸ್ಮರಣೆ ಮುಂತಾದ ಮನೋವ್ಯಾಪಾರಗಳಿಗೆ ಕೇಂದ್ರವಾಗಿರುವುದು ಕಂಡುಬರುತ್ತದೆ.

ಮೀನಿನಿಂದ ಮಾನವನ ವರೆಗಿನ ಕಶೇರುಕ ಜೀವಿವರ್ಗಗಳಲ್ಲಿ ವಿಕಾಸ ಶ್ರೇಣಿಯಲ್ಲಿ ಮೇಲು ಮೇಲೇರಿದಂತೆಲ್ಲ, ಹೆಚ್ಚು ಹೆಚ್ಚು ಜಟಿಲವಾಗುವ ನರಮಂಡಲವನ್ನು ಅನುಸರಿಸಿ ಜೀವಿಗಳ ವರ್ತನೆಯ ಜಟಿಲತೆಯಲ್ಲಿಯೂ ಮಹತ್ತ್ವಪೂರ್ಣ ವಿಕಾಸವಾಗುವುದನ್ನೂ ಮನಗಾಣಬಹುದು. ಹೀಗಿರುವಲ್ಲಿ ಮಾನವನ ಮಟ್ಟದಲ್ಲಿ ಕಂಡುಬರುವ ವರ್ತನೆಯ ಜಟಿಲ ಜಾಲವನ್ನು ಬಿಡಿಸಲು ಕೆಳಪ್ರಾಣಿಗಳಲ್ಲಿ ಕಂಡುಬರುವ ಸರಳ ವರ್ತನಾರೂಪ ರಚನೆಗಳ ಅಧ್ಯಯನಗಳಿಂದ ಅಧಿಕ ನೆರವು ದೊರೆಯುವುದು ತೌಲನಿಕ ಅಧ್ಯಯನಗಳಿಗೆ ಪುಷ್ಟಿ ಕೊಡುತ್ತದೆ.

ಕಲಿಕೆ : ಆಧುನಿಕ ಮನೋವಿಜ್ಞಾನದಲ್ಲಿ ಕಲಿಕೆಗೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳು ನಡೆದಿವೆ. ಇವುಗಳಲ್ಲಿ ತೌಲನಿಕ ಅಧ್ಯಯನಗಳಿಗೆ ಕೊರತೆಯಿಲ್ಲ. ಪ್ರಾಣಿಗಳ ಮತ್ತು ಮಾನವಕಲಿಕೆಯ ತೌಲನಿಕ ಅಧ್ಯಯನಗಳು ಕಲಿಕೆ ಕ್ಷೇತ್ರ ಶ್ರೀಮಂತಗೊಳಿಸಿವೆ. ಕಲಿಕೆಗೆ ಸಂಬಂಧಿಸಿದಂಥ ಸಿದ್ಧಾಂತಗಳನ್ನು ನಿಯಮಗಳನ್ನು ರೂಪಿಸುವಲ್ಲಿ ಬಹುಮಟ್ಟಿಗೆ ನೆರವಾಗಿವೆ.

ಕಲಿಕೆಗೆ ಸಂಬಂಧಿಸಿದಂತೆ ನಡೆಸಿರುವ ಪ್ರಯೋಗಗಳಲ್ಲಿ ಹೇಗೋ ಹಾಗೆ ಆ ಪ್ರಯೋಗಗಳಲ್ಲಿ ಬಳಸಲಾದ ಸಮಸ್ಯೆಗಳ ಹಾಗೂ ಪ್ರಯೋಗೋಪಕರಣಗಳಲ್ಲಿಯೂ ವೈವಿಧ್ಯವಿದೆ. ಮುಖ್ಯವಾಗಿ ನಾನಾ ರೀತಿಯ ವ್ಯೂಹಗಳು, ಸಮಸ್ಯಾಪೆಟ್ಟಿಗೆಗಳು ಮತ್ತು ಇತರ ಸಲಕರಣೆಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಏಕಕೋಶಪ್ರಾಣಿವರ್ಗದಿಂದ ಮೇಲ್ಪಟ್ಟ ಎಲ್ಲ ಪ್ರಾಣಿವರ್ಗಗಳಿಗೂ ಸಾಪೇಕ್ಷವಾಗಿ ಕಲಿಯುವ ಶಕ್ತಿ ಇರುತ್ತದೆ ಎಂಬುದು ತೌಲನಿಕ ಅಧ್ಯಯನಗಳಿಂದ ಹೊರಬಿದ್ದಿರುವ ಸತ್ಯ.

ಅಕಶೇರುಕಗಳನ್ನು ಪರಿಗಣಿಸಿದಾಗ ಪ್ಯಾರಾಮಿಶಿಯಂನಂಥ ನಿಕೃಷ್ಟ ಜೀವಿಯಲ್ಲಿಯೂ ಅದರ ವಿಭಜನೆಯ ಕ್ರಿಯೆಯಲ್ಲಿ ಒಂದು ಅನುಭವಕ್ಕಿಂತ ಮತ್ತೊಂದು ಅನುಭವ ಉತ್ತಮವಾದುದಕ್ಕೆ ಪ್ರಾಯೋಗಿಕ ಆಧಾರಗಳಿವೆ. ಎರೆಹುಳು ಮತ್ತು ಅದಕ್ಕೆ ಮೇಲ್ಪಟ್ಟ ವರ್ಗದ ಪ್ರಾಣಿಗಳಲ್ಲಿ ಕಲಿಯುವಿಕೆ ಇರುವುದರಲ್ಲಿ ಎರಡಭಿಪ್ರಾಯವಿಲ್ಲ. ಪ್ರಯೋಗವೊಂದರಲ್ಲಿ, ಒಂದು ಸರಳ ಆಕಾರದ ವ್ಯೂಹದಲ್ಲಿ ಎರೆಹುಳು ಬಲ ಮತ್ತು ಎಡಭಾಗಗಳಿಗೆ ತಿರುಗಲು ಮೊದಲು ಕಲಿತುದಲ್ಲದೇ ತಾನು ಕಲಿತದ್ದನ್ನು ಮೂರು ವಾರಗಳ ವರೆಗೆ ನೆನಪಿನಲ್ಲಿಟ್ಟುಕೊಳ್ಳಲು ಸಮರ್ಥವಾಗಿತ್ತು ಎಂಬುದು ಮರು ಪ್ರಯೋಗದಿಂದ ಸ್ಥಿರಪಟ್ಟಿತು. ಇದರಂತೆಯೇ ಚುಕ್ಕಿ ಮೀನು, ಬಸವನಹುಳು, ಜಿರಲೆ, ಇರುವೆ ಮುಂತಾದ ಅನೇಕ ಅಕಶೇರುಕ ಪ್ರಾಣಿಗಳು ಕಲಿಯುವ ಶಕ್ತಿಯನ್ನು ಹೊಂದಿರುವುದು ಪ್ರಯೋಗಗಳಿಂದ ಪ್ರಕಟವಾಗುತ್ತದೆ.

ಕಲಿಯುವ ಶಕ್ತಿ ಕಶೇರುಕಗಳಲ್ಲಿ ಗಣನೀಯವಾಗಿ ಪ್ರಕಟವಾಗುತ್ತದೆ. ಕಲಿಯುವುದರಲ್ಲಿ ವೈವಿಧ್ಯವೂ ಕಂಡುಬರುತ್ತದೆ. ತೌಲನಿಕ ಅಧ್ಯಯನಗಳಲ್ಲಿ ವ್ಯೂಹ ಬಹು ಉಪಯುಕ್ತವಾಗಿದೆ.

ಪ್ರಯೋಗವೊಂದರಲ್ಲಿ ಇಲಿಗಳ ವ್ಯೂಹ ಕಲಿಕೆ ಮತ್ತು ಕಾಲೇಜು ವಿದ್ಯಾರ್ಥಿಗಳ ವ್ಯೂಹಕಲಿಕೆಗಳನ್ನು ಹೋಲಿಸಿ ನೋಡಿದಾಗ, ಮೂಲಭೂತ ವ್ಯತ್ಯಾಸಗಳು ಕಂಡುಬರದಿರುವುದು ಗಣನೀಯ ಸಂಗತಿ. ಇದಕ್ಕೆ ಬಹುಶಃ ಸಮಸ್ಯೆಯ ಸರಳತೆ ಕಾರಣವಾಗಿದೆ ಎಂಬುದು ತಜ್ಞರ ಅಭಿಮತ. ಸರಳ ಸಮಸ್ಯೆಗಳ ಕಲಿಕೆಯಲ್ಲಿ, ಜೀವವಿಕಾಸ ಶ್ರೇಣಿಯ ವಿವಿಧ ಹಂತಗಳಲ್ಲಿ ಅದರಲ್ಲಿಯೂ ಹೆಚ್ಚಾಗಿ ಸಸ್ತನಿಗಳಲ್ಲಿ ಅಷ್ಟಾಗಿ ವ್ಯತ್ಯಾಸಗಳು ಕಂಡುಬರದಿದ್ದರೂ ಜಟಿಲ ಸಮಸ್ಯೆಗಳ ಕಲಿಕೆಯಲ್ಲಿ ವ್ಯಾಪಕ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಉದಾಹರಣೆಗೆ ಜಂಕಿನ್ಸನ ಸಮಸ್ಯಾ ಪೆಟ್ಟಿಗೆಯ ಮರ್ಮವನ್ನು ಭೇದಿಸುವಲ್ಲಿ ವಿವಿಧ ಸ್ತನಿಗಳು ಗಣನೀಯ ವ್ಯತ್ಯಾಸಗಳನ್ನು ತೋರಿಸಿದವು. ಈ ಸಮಸ್ಯೆಯನ್ನು ಬಿಡಿಸುವಲ್ಲಿ ಗಿನಿ ಹಂದಿಗಳು ಸಂಪೂರ್ಣ ವಿಫಲವಾದರೆ, ಬೆಕ್ಕುಗಳು ಸ್ವಲ್ಪ ಯಶಸ್ಸು ಗಳಿಸಿದವು. ಆದರೆ ಮಂಗಗಳು ನಿಷ್ಕೃಷ್ಟವಾಗಿ ಕಲಿಯಲು ಸಮರ್ಥವಾದವು.

ವಿವೇಚನೆ : ವಿವೇಚನೆ ಕೇವಲ ಮನುಷ್ಯನಲ್ಲೇ ಇರುವ ಶಕ್ತಿಯಲ್ಲ. ಪ್ರಾಣಿಗಳಲ್ಲಿಯೂ ಸಾಪೇಕ್ಷವಾಗಿ ಅದು ಕಂಡುಬರುತ್ತದೆ ಎಂಬುದು ತೌಲನಿಕ ಅಧ್ಯಯನಗಳಿಂದ ಬೆಳಕಿಗೆ ಬಂದಿದೆ. ಮನುಷ್ಯ ವಿವೇಚನಾಶೀಲ ಜೀವಿ ಎಂದು ಹೇಳುತ್ತ ಕೇವಲ ವಿವೇಚನೆಯ ಆಧಾರದ ಮೇಲೆಯೇ ಪ್ರಾಣಿಗಳಿಂದ ಮನುಷ್ಯ ವಿಭಿನ್ನನಾಗಿದ್ದಾನೆ ಎಂದು ಹೇಳುವುದಕ್ಕೆ ಆಧಾರವಿಲ್ಲವೆಂಬುದು ಇಂದು ಸಿದ್ಧ ಸತ್ಯ. ತೌಲನಿಕ ಮನೋವಿಜ್ಞಾನಿಗಳು, ಪ್ರಾಣಿಗಳು ಮತ್ತು ಮನುಷ್ಯರನ್ನು ಸಾಪೇಕ್ಷವಾಗಿ ಸಮಾನವೆನಿಸುವ ಸನ್ನಿವೇಶಗಳಲ್ಲಿ ಪ್ರಯೋಗಗಳಿಗೆ ಒಳಪಡಿಸಿ ಅಲ್ಲಿ ಪ್ರಕಟವಾಗುವ ವಿವೇಚನಾ ವರ್ತನೆಯನ್ನು ತುಲನಾತ್ಮಕವಾಗಿ ಪರಿಶೀಲಿಸುವ ಪ್ರಯತ್ನದಲ್ಲಿ ಸ್ವಲ್ಪಮಟ್ಟಿಗೆ ಜಯಶಾಲಿಗಳಾಗಿದ್ದಾರೆ ಎಂದು ಹೇಳಬಹುದು.

ಮನುಷ್ಯರಲ್ಲಿರುವಂತೆ ಕೆಲವು ಪ್ರಾಣಿವರ್ಗಗಳಲ್ಲಿಯೂ ವಿವೇಚನೆಯಂಥ ಸಾಂಕೇತಿಕ ಮನೋವ್ಯಾಪಾರಗಳಿರುತ್ತವೆಂಬ ಪ್ರಾಕ್ಕಲ್ಪನೆಯನ್ನು ಪರಿಶೀಲಿಸಲು ಅನೇಕ ಪ್ರಯೋಗಗಳು ನಡೆದಿವೆ. ಇವುಗಳಲ್ಲಿ ಪ್ರಮುಖವಾದದು ವಿಲಂಬಿತ ಅನುಕ್ರಿಯೆ ಪ್ರಯೋಗ. ಈ ಪ್ರಯೋಗಕ್ಕೆ ಹಂಟರನ ವಿಲಂಬಿತ ಅನುಕ್ರಿಯೆ ಪ್ರಯೋಗೋಪಕರಣ ಬಹು ಉಪಯುಕ್ತವೆನಿಸಿದೆ. ಇಂಥ ಉಪಕರಣವನ್ನು ಉಪಯೋಗಿಸಿಕೊಂಡು ವಿವಿಧ ಪ್ರಾಣಿಗಳು ಮತ್ತು ಮಾನವ ಶಿಶುಗಳ ಮೇಲೆ ನಡೆಸಲಾದ ತೌಲನಿಕ ಅಧ್ಯಯನಗಳಿಂದ ತಿಳಿದುಬಂದ ತಥ್ಯಾಂಶವೆಂದರೆ, ಸಾಂಕೇತಿಕ ಮನೋವ್ಯಾಪಾರ ಮೇಲ್ವರ್ಗದ ಪ್ರಾಣಿಗಳಲ್ಲಿಯೂ ಮನುಷ್ಯನಲ್ಲಿಯೂ ಕಂಡುಬರುವ ಮನೋವ್ಯಾಪಾರವೆಂಬುದು. ಇಲಿಗಳು ಮತ್ತು ನಾಯಿಗಳಲ್ಲಿ ಅಷ್ಟರಮಟ್ಟಿಗೆ ಕಂಡುಬರದ ಈ ವ್ಯಾಪಾರ ಚಿಂಪಾಂಜಿಗಳು ಮತ್ತು ಮಾನವ ಶಿಶುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಬುದ್ಧಿಶಕ್ತಿ: ತೌಲನಿಕ ಮನೋವಿಜ್ಞಾನ ಪ್ರಕಾರ. ಸಮರ್ಪಕ ಹೊಂದಾಣಿಕೆಗಳನ್ನು ಸಾಧಿಸಿಕೊಳ್ಳಲು ಬೇಕಾದ ಕಾರ್ಯಗಳನ್ನು ನಿರ್ವಹಿಸುವ ಶಕ್ತಿಯೇ ಬುದ್ಧಿಶಕ್ತಿಯೆನಿಸುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಬುದ್ಧಿಶಕ್ತಿ ಕೇವಲ ಮನುಷ್ಯನಿಗೆ ಮೀಸಲಾಗಿಲ್ಲವೆಂಬುದು ವೇದ್ಯವಾಗುತ್ತದೆ. ಅಂದ ಮೇಲೆ ಪ್ರಾಣಿಗಳು ಮತ್ತು ಮನುಷ್ಯರ ಬುದ್ಧಿಶಕ್ತಿಯ ನಡುವಣ ಹೋಲಿಕೆ ಮತ್ತು ವ್ಯತ್ಯಾಸಗಳ ಪ್ರಮಾಣವೆಷ್ಟು ಎಂಬ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ದೊರಕಿಸಿಕೊಳ್ಳಲು ನಾವು ತೌಲನಿಕ ವಿಧಾನವನ್ನು ಆಶ್ರಯಿಸದೆ ಗತ್ಯಂತರವಿಲ್ಲ. ಬುದ್ಧಿಶಕ್ತಿ ಮಾಪನಕ್ಕೆ ನೆರವಾದ ಎರಡು ಪ್ರಮುಖ ಧೃತಿಕಲ್ಪನೆಗಳು ಹೀಗಿವೆ : 1. ಶಕ್ತಿಸಾಮರ್ಥ್ಯದ ಮಟ್ಟ ವ್ಯಕ್ತಿಯ ವರ್ತನೆಯಲ್ಲಿ ಪ್ರತಿಫಲಿಸುತ್ತದೆ. ಹೀಗಿರುವುದರಿಂದ, ಪ್ರಕಟ ವರ್ತನೆಯ ಮೌಲ್ಯಮಾಪನ ಮಾಡುವುದರ ಮೂಲಕ ವ್ಯಕ್ತಿಯ ಶಕ್ತಿಸಾಮರ್ಥ್ಯವನ್ನು ಅಳೆಯಲು ಸಾಧ್ಯ ಮತ್ತು 2. ವಿವಿಧ ವ್ಯಕ್ತಿಗಳಿಗೆ ಸಮಾನಾವಕಾಶಗಳನ್ನು ಕೊಟ್ಟಾಗ ಹೆಚ್ಚು ಬುದ್ಧಿಶಾಲಿಯಾದ ವ್ಯಕ್ತಿ ತನ್ನ ಸಮವಯಸ್ಕರಿಗಿಂತ ತನ್ನ ನಿತ್ಯದ ಅನುಭವಗಳಿಂದ ಹೆಚ್ಚು ಲಾಭವನ್ನು ಪಡೆದುಕೊಳ್ಳುವನಲ್ಲದೇ, ಸಮಸ್ಯೆಗಳನ್ನು ಪರಿಹರಿಸುವುದರಲ್ಲಿಯೂ ಹೆಚ್ಚು ಸಮರ್ಥನಾಗಿ ವರ್ತಿಸುತ್ತಾನೆ. ಈ ಧೃತಿಕಲ್ಪನೆಗಳನ್ನು ತೌಲನಿಕ ಅಧ್ಯಯನಗಳಲ್ಲೂ ಬಳಸಿಕೊಂಡು, ಬುದ್ಧಿಶಕ್ತಿಯ ವಿಕಾಸವನ್ನು ಪುನರ್ರಚಿಸಲಾಗಿದೆ.

ಹಿಂದೆಯೇ ತಿಳಿಸಿದಂತೆ, ಮನುಷ್ಯರು ಮತ್ತು ಪ್ರಾಣಿಗಳ ಅಂತರವನ್ನು ಕುಗ್ಗಿಸಿದ ಹಾಗೂ ಹಿಗ್ಗಿಸಿದ ಶ್ರೇಯಸ್ಸು ಜೀವವಿಕಾಸ ಸಿದ್ಧಾಂತಕ್ಕೆ ಸೇರಿದ್ದು. ಮನುಷ್ಯನ ಮಟ್ಟದಲ್ಲಿ ಸಾಮಾನ್ಯವಾಗಿ ಕಂಡುಬರುವ ಎಲ್ಲ ಗುಣಗಳ ಮೂಲ ಸ್ವರೂಪಗಳನ್ನೂ ಪ್ರಾಣಿಗಳ ಮಟ್ಟದಲ್ಲಿಯೇ ಕಾಣಲು ಸಾಧ್ಯವಿದೆ ಎಂಬ ವೈಜ್ಞಾನಿಕ ನಂಬಿಕೆಯ ಬೆಳವಣಿಗೆಗೆ ಮೇಲಿನ ಸಿದ್ಧಾಂತ ಕಾರಣವಾದುದು ಸರಿಯಷ್ಟೇ. ಇತರ ಕೆಲವು ಗುಣಗಳಂತೆಯೇ ಮನುಷ್ಯನ ಬೌದ್ಧಿಕ ಶಕ್ತಿ ಸಾಮರ್ಥ್ಯಗಳೂ ಜೀವಜಾತಿ ವಿಕಾಸದ ಫಲಗಳು ಎಂದು ನಿರ್ಣಯಿಸಲು ತೌಲನಿಕ ಮನೋವಿಜ್ಞಾನದಲ್ಲಿ ನಡೆದಿರುವ ಸಂಶೋಧನೆಗಳು ಅಮೂಲ್ಯ ದತ್ತಾಂಶಗಳನ್ನು ಒದಗಿಸಿದೆ.

ಬುದ್ಧಿಶಕ್ತಿಯ ಅಧ್ಯಯನಕ್ಕೆಂದೇ ತೌಲನಿಕ ಮನೋವಿಜ್ಞಾನದಲ್ಲಿ ನಡೆದಿರುವ ಸಂಶೋಧನೆಗಳ ಸಂಖ್ಯೆ ಬಹಳ ಕಡಿಮೆ ಇದ್ದರೂ ಕಲಿಕೆ ಮತ್ತು ವಿವೇಚನೆಗಳ ಮೇಲೆ ನಡೆಸಲಾಗಿರುವ ಅನೇಕ ಅಧ್ಯಯನಗಳು ಬುದ್ಧಿಶಕ್ತಿಯ ವಿಕಾಸದ ಚಿತ್ರವನ್ನು ಪುನರ್ರಚಿಸುವಲ್ಲಿ ಕೆಲವು ಪುರಾವೆಗಳನ್ನು ಒದಗಿಸುತ್ತಿವೆ ಎಂದು ಹೇಳಬಹುದು. ಅಂಥ ಕೆಲವು ಪುರಾವೆಗಳನ್ನು ಸಮರ್ಥವಾಗಿ ಬಳಸಿಕೊಂಡುಬುದ್ಧಿ ಶಕ್ತಿಯ ವಿಕಾಸದ ಚಿತ್ರವೊಂದನ್ನು ಪುನರ್ರಚಿಸಿದ ಶ್ರೇಯಸ್ಸು ನಿಸೆನ್‌ಗೆ ಸೇರಬೇಕು. ಮನುಷ್ಯನೂ ಸೇರಿದಂತೆ ಪ್ರಾಣಿಪ್ರಪಂಚದಲ್ಲಿ ಕಂಡುಬರುವ ಬುದ್ಧಿಶಕ್ತಿ ವಿಕಾಸದ ಒಂದು ಸ್ಥೂಲ ಅಂದಾಜನ್ನು ಆತ ಮಾಡಿದ್ದಾನೆ. ಜೀವ ಜಾತಿ ವಿಕಾಸ ಮುಂದುವರಿದಂತೆ ಮೇಲ್ವರ್ಗದ ಪ್ರಾಣಿಗಳು ಹೆಚ್ಚು ಜಟಿಲ ಸಮಸ್ಯೆಗಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹಾಗೂ ಹೆಚ್ಚು ಶೀಘ್ರವಾಗಿ ಬಿಡಿಸಲು ಸಮರ್ಥವಾಗುತ್ತವೆ ಎಂಬುದು ಈತನ ಕಲ್ಪನೆ.

ಬುದ್ಧಿ ಶಕ್ತಿಯ ತುಲನಾತ್ಮಕ ಅಧ್ಯಯನ ನಡೆಸುವಾಗ ತೌಲನಿಕ ಮನೋವಿಜ್ಞಾನಿ ಗಮನದಲ್ಲಿಡುವ ಪ್ರಮುಖ ಅಂಶಗಳೆಂದರೆ, ಬುದ್ಧಿಯ ನಿಕಷಗಳು, ವರ್ತನೆಯಲ್ಲಿ ಕಂಡುಬರುವ ಒಳನೋಟಗಳು, ಪರೋಕ್ಷ ಪರಿಹಾರವನ್ನು ಪಡೆಯಲು ಇರುವ ಸಾಪೇಕ್ಷ ಅಭಿಕ್ಷಮತೆ, ವಿವೇಚನೆ, ಮನೋಮುದ್ರೆಗಳಿಂದ (ಸ್ಟೀರಿಯೋಟೈಪ್) ಸಾಪೇಕ್ಷ ಸ್ವಾತಂತ್ರ್ಯ – ಮುಂತಾದುವುಗಳು.

ಬುದ್ಧಿಶಕ್ತಿಯ ವಿಕಾಸವನ್ನು ಪುನರ್ರಚಿಸಲು ತೌಲನಿಕ ಮನೋವಿಜ್ಞಾನಿಗಳು ಬಳಸಿಕೊಂಡಿರುವ ಅಧ್ಯಯನಗಳಲ್ಲಿ ಪ್ರಧಾನವಾದವುಗಳೆಂದರೆ ಕೆಲವು ಕಲಿಕೆ ಹಾಗೂ ವಿವೇಚನಾ ಅಧ್ಯಯನಗಳು (ಉದಾ; ವ್ಯೂಹಕಲಿಕೆ, ಸಮಸ್ಯಾಪೂರಣ, ಬಹುವರಣ ಇತ್ಯಾದಿ ಸಮಸ್ಯೆಗಳಿಗೆ ಸಂಬಂಧಿಸಿದ ಅಧ್ಯಯನಗಳು. ಉದಾಹರಣೆಗೆ ಸಮಸ್ಯಾಪೆಟ್ಟಿಗೆಯನ್ನು ಒಂದು ಬುದ್ಧಿಶಕ್ತಿ ಪರೀಕ್ಷೆ ಎಂದು ಕೆಲವರು ಪರಿಗಣಿಸಿರಲು ಕಾರಣವೆಂದರೆ, ಸಮಸ್ಯೆಯನ್ನು ಬಿಡಿಸುವುದರಲ್ಲಿ ಕಂಡುಬರುವ ನಮ್ಯವರ್ತನೆ. ತಂತಿಯನ್ನು ಎಳೆಯುವುದು, ಅಗಳಿಯನ್ನು ನೂಕುವುದು ಮುಂತಾದ ಪ್ರಕ್ರಿಯೆಗಳಲ್ಲಿ ಸಾಂಕೇತಿಕ ಮನೋವ್ಯಾಪಾರಗಳಿರುವ ಸಾಧ್ಯತೆಯನ್ನು ಕೆಲವು ಸಂಶೋಧಕರು ಒಪ್ಪುತ್ತಾರೆ. ವಿಮೋಚನಾ ತಟ್ಟೆಗಳ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಜಂಕಿನ್ಸ್ ಒಂದು ಸಮಸ್ಯಾಪೆಟ್ಟಿಗೆಯ ಜಟಿಲತೆಯನ್ನು ಹೆಚ್ಚಿಸಿದ್ದನ್ನು ಇಲ್ಲಿ ಪ್ರಸ್ತಾಪಿಸಬಹುದು. ಇಂಥ ಸಮಸ್ಯೆಗಳನ್ನು ಬಿಡಿಸುವಾಗ ಅಧಿಕ ಬುದ್ಧಿ ಮತ್ತು ಮಂದಬುದ್ಧಿ ಪ್ರಾಣಿ ಸಮೂಹಗಳ ನಡುವೆ ಸ್ಪಷ್ಟವ್ಯತ್ಯಾಸವಿರುವುದನ್ನು ಕಾಣಬಹುದು.

ಸಮಸ್ಯಾಪೆಟ್ಟಿಗೆಗಳಂತೆಯೇ, ಕೊಯ್‌ಹ್ಲರ್ ಬಳಸಿದ ಪೆಟ್ಟಿಗೆ ಮತ್ತು ಕೋಲುಗಳ ಸಮಸ್ಯೆಗಳು, ಯರ್ಕೀಸನ ಬಹುವರಣ ಸಮಸ್ಯೆ, ಹಂಟರನ ದ್ವಿಪರ್ಯಾಯ ಸಮಸ್ಯೆ, ಮೆಯರ್ ಬಳಸಿದ ಸಮಸ್ಯೆಗಳು ಇವೇ ಮುಂತಾದವು ಬುದ್ಧಿಶಕ್ತಿಯ ತೌಲನಿಕ ಅಧ್ಯಯನಗಳಿಗೆ ಬಹು ಉಪಯುಕ್ತ ಸಾಧನಗಳೆನಿಸಿವೆ. ಕೊಯ್‌ಹ್ಲರನ ಅಧ್ಯಯನಗಳಲ್ಲಿ ಚಿಂಪಾಂಜಿಯೊಂದು ಎರಡು ಕೋಲುಗಳನ್ನು ಸೇರಿಸಿ ಸಮಸ್ಯೆಯನ್ನು ಬಿಡಿಸಿದ್ದು. ಒಳಮಾಳಿಗೆಯಲ್ಲಿ ನೇತುಬಿದ್ದಿದ್ದ ಬಾಳೆಯ ಹಣ್ಣನ್ನು ಮುಟ್ಟಲೋಸುಗ ಪೆಟ್ಟಿಗೆಗಳನ್ನು ಒಂದರ ಮೇಲೊಂದು ಸೇರಿಸಿದ್ದು, ಕಂಬಗಳನ್ನು ಹತ್ತುವ ಸಾಧನಗಳಾಗಿ ಪೆಟ್ಟಿಗೆಗಳನ್ನು ಬಳಸಿಕೊಂಡದ್ದು ಮುಂತಾದ ಅನೇಕ ಪ್ರಾಯೋಗಿಕ ನಿದರ್ಶನಗಳು ಪ್ರಾಣಿಗಳಲ್ಲಿ ಬುದ್ಧಿಶಕ್ತಿಯಿರುವುದನ್ನು ಸೂಚಿಸುತ್ತವೆಯಲ್ಲದೇ, ಅಂಥ ವರ್ತನೆಗಳನ್ನು ಇತರ ಪ್ರಾಣಿಗಳ ಹಾಗೂ ಮನುಷ್ಯರ ವರ್ತನೆಯೊಂದಿಗೆ ಹೋಲಿಸಿ ನೋಡಲೂ ಅನುವು ಮಾಡಿಕೊಡುತ್ತವೆ.

ಮನುಷ್ಯರಲ್ಲಿ ಕಂಡುಬರುವ ಬುದ್ಧಿಶಕ್ತಿ ಜೀವವಿಕಾಸದ ಫಲವೆಂಬುದರ ಬಗ್ಗೆ ಇಂದು ಸಂಶೋಧಕರಲ್ಲಿ ಅಷ್ಟಾಗಿ ಭಿನ್ನಾಭಿಪ್ರಾಯ ಕಂಡುಬರುತ್ತಿಲ್ಲ. ಅನೇಕ ದೃಷ್ಟಾಂತಗಳು ಬುದ್ಧಿಶಕ್ತಿಯ ವೈಕಾಸಿಕ ಹಿನ್ನೆಲೆಯನ್ನು ಪ್ರತಿಪಾದಿಸುತ್ತವೆ. ಹೀಗಿರುವುದರಿಂದ ಬುದ್ಧಿಶಕ್ತಿ ಆಧಾರದ ಮೇಲೆ ಮನುಷ್ಯ ಮತ್ತು ಪ್ರಾಣಿಗಳ ನಡುವೆ ಭೇದಮಾಡುವುದು ಸಮಂಜಸವೆನಿಸದು. ಜೀವವಿಕಾಸ ಶ್ರೇಣಿಯ ಕೆಳ ಹಂತಗಳಲ್ಲಿ ಬುದ್ಧಿಶಕ್ತಿಯ ಪ್ರವರ್ತನೆ ಅಸ್ಪಷ್ಟವಾಗಿದ್ದರೂ ಆ ಶ್ರೇಣಿಯ ಮೇಲೆ ಮೇಲೇರಿದಂತೆಲ್ಲ ಅದು ಹೆಚ್ಚು ಹೆಚ್ಚು ಪ್ರಕಟವಾಗುವುದನ್ನು ಕಾಣಬಹುದು. ಸ್ತನಿಗಳ ಮಟ್ಟದಲ್ಲಿ ಅದರಲ್ಲಿಯೂ ವಾನರರಲ್ಲಿ ಅದು ಸ್ಪಷ್ಟವಾಗಿ ಕಾರ್ಯನಿರ್ವಹಿಸುವುದನ್ನು ಕಾಣಬಹುದು. ಅಂದಮೇಲೆ ಮಾನವನಲ್ಲಿ ಕಂಡುಬರುವ ಜಟಿಲರೂಪದ ಬುದ್ಧಿಶಕ್ತಿಯ ಸರಳ ಮೂಲರೂಪಗಳು ಪ್ರಾಣಿಗಳ ಮಟ್ಟದಲ್ಲಿಯೇ ಕ್ರಿಯಾಶೀಲವಾಗಿರುತ್ತವೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಸಾಮಾಜಿಕ ವರ್ತನೆಯಲ್ಲಿಯೂ ಕೆಲವು ಗುಣಲಕ್ಷಣಗಳು ವೈಕಾಸಿಕ ಹಿನ್ನೆಲೆಯನ್ನು ಹೊಂದಿದೆ ಎಂಬುದು ಕೆಲವರ ಅಭಿಮತ. ಇವುಗಳಲ್ಲಿ ಮುಖ್ಯವಾಗಿ ಸಾಮಾಜಿಕ ಮಿಲನ, ಸಾಮಾಜಿಕ ಅನುಕೂಲನ, ದರ್ಪವೃತ್ತಿ ಸ್ನೇಹ, ಸಹಕಾರ ಮುಂತಾದ ಸಾಂಘಿಕ ವರ್ತನೆಗಳು ಮೇಲ್ವರ್ಗದ ಕಶೇರುಕಗಳಲ್ಲಿ ಅದರಲ್ಲಿಯೂ ಹೆಚ್ಚಾಗಿ ಮೇಲ್ವರ್ಗದ ಸಸ್ತನಿಗಳಲ್ಲಿ ಕಂಡುಬರುವುದು ಗಮನಾರ್ಹ ಅಂಶ. ಸಾಮಾಜಿಕ ಮಿಲನ ಆಶ್ಚರ್ಯಕರವೆನಿಸುವ ರೀತಿಯಲ್ಲಿ ವಲಯವಂತ ಜೀವ ವರ್ಗದಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಇರುವೆಗಳಲ್ಲಿ ಅದು ಚೆನ್ನಾಗಿ ವಿಕಾಸ ಹೊಂದಿರುವುದನ್ನು ಷ್ವೀಲರನ ಅಧ್ಯಯನಗಳು ಬೆಳಕಿಗೆ ತಂದಿವೆ.

ಆದರೆ ವಿಕಾಸ ಶ್ರೇಣಿಯಲ್ಲಿ ಮೇಲೇರಿರುವ ಕೆಲವು ಪಕ್ಷಿಗಳಲ್ಲಿ ಇದು ಕಂಡುಬರದು. ಆದ್ದರಿಂದ ಸಾಮಾಜಿಕ ಮಿಲನದ ಮತ್ತು ಜೀವವಿಕಾಸಗಳ ನಡುವೆ ಸ್ಪಷ್ಟ ಸಹಸಂಬಂಧವಿರುವುದಕ್ಕೆ ನಿರ್ದಿಷ್ಟ ಆಧಾರಗಳು ಕಾಣವು.

ಮಾನವನಲ್ಲಿ ಸಾಮಾನ್ಯವಾಗಿ ಕಂಡುಬರುವ ಸಾಮಾಜಿಕ ಅನುಕೂಲನ ಕೆಳ ಪ್ರಾಣಿವರ್ಗಗಳಲ್ಲಿರುವುದಕ್ಕೆ ಸ್ಪಷ್ಟನಿದರ್ಶನಗಳಿಲ್ಲ. ಆದರೆ ಕೆಳಗಿನ ಮತ್ತು ಮೇಲಿನ ಕಶೇರುಕಗಳಲ್ಲಿ ಆ ವರ್ತನೆ ಕಂಡುಬರುತ್ತದೆ. ಉದಾಹರಣೆಗೆ 2.4 ಅಥವಾ 8 ಮೀನುಗಳು ಒಟ್ಟಿಗೆ ಅಕ್ವೇರಿಯಂ ವ್ಯೂಹವನ್ನು ಹೆಚ್ಚು ಬೇಗ ಕಲಿಯುತ್ತವೆ. ಪಕ್ಷಿ, ಇಲಿ, ಬೆಕ್ಕು, ಕುರಿ ಮತ್ತು ಮಂಗಗಳು ಗುಂಪುಗಳಲ್ಲಿ ಹೆಚ್ಚು ಆಹಾರವನ್ನು ಸೇವಿಸುವುದು ಗಮನಾರ್ಹ ಅಂಶ. ಸಾಮಾಜಿಕ ಅನುಕೂಲನದಂತೆಯೇ, ದರ್ಪವೃತ್ತಿಯೂ ಪ್ರಾಣಿಗಳಲ್ಲಿ ಕಂಡುಬರುತ್ತವೆ. ಕೆಲವು ಪ್ರಾಣಿವರ್ಗಗಳಲ್ಲಿ ಸಾಂಘಿಕ ಸಾಹಚರ್ಯದಲ್ಲಿ ಪ್ರಭುತ್ವ ಶಕ್ತಿಗನುಗುಣವಾಗಿ ಒಂದು ಅನುಕ್ರಮಶ್ರೇಣಿಯೇ ನಿರ್ಮಿತವಾಗಿರುವುದನ್ನು ಕಾಣಬಹುದು. ಷೆಲ್ಡರಪ್–ಎಬ್ ನಡೆಸಿದ ಕುಕ್ಕುವರ್ತನೆಯ (ಪೆಕಿಂಗ್ ಬಿಹೇವಿಯರ್) ಮೇಲಿನ ಅಧ್ಯಯನಗಳು ಕೋಳಿ, ಮೀನು, ಉರಗ, ಬೆಕ್ಕು, ನಾಯಿ, ಅಡು, ಕುರಿ, ದನ, ಸಿಂಹ, ಮಂಗ, ವಾನರ, ಈ ಪ್ರಾಣಿಸಮೂಹಗಳಲ್ಲಿ ದರ್ಪವೃತ್ತಿ ಸ್ಪಷ್ಟವಾಗಿ ಅಸ್ತಿತ್ವದಲ್ಲಿರುವುದನ್ನು ಬೆಳಕಿಗೆ ತಂದಿವೆ. ಇದೇ ರೀತಿಯಲ್ಲಿ ಸ್ನೇಹ ಮತ್ತು ಸಹಕಾರವರ್ತನೆಗಳ ಸರಳರೂಪಗಳು ಮೇಲ್ಮಟ್ಟದ ಪ್ರಾಣಿವರ್ಗಗಳಲ್ಲಿ ಕಂಡುಬರುತ್ತವೆ ಎಂಬುದನ್ನು ತೌಲನಿಕ ಅಧ್ಯಯನಗಳು ಪ್ರತಿಪಾದಿಸುತ್ತವೆ.

ಮಾನವನನ್ನು ಪ್ರಾಣಿಗಳೊಡನೆ ತುಲನೆ ಮಾಡುವಾಗ, ತೌಲನಿಕ ಮನೋವಿಜ್ಞಾನಿ ಪ್ರಮುಖವಾಗಿ ಕಾಲ ದೇಶ ಅಭಿಪ್ರೇರಣೆ ಮತ್ತು ಸಂವೇಗ, ದೈಹಿಕ ಚಲನೆ, ಭಾಷೆ, ಸಂದೇಶವಿನಿಮಯ, ಸಾಂಘಿಕ ಸಾಹಚರ್ಯ, ಅಪಸಾಮಾನ್ಯವರ್ತನೆ ಮುಂತಾದ ಅಂಶಗಳಿಗೆ ಗಮನ ಕೊಡುತ್ತಾರೆ. (ಡಿ.)

# ಥ

**ಥೈಮಸ್:** ಕೆಳಕುತ್ತಿಗೆ ಹಾಗೂ ಎದೆಯ ಮೇಲು ಭಾಗಗಳಲ್ಲಿ ತೈರಾಯ್ಡ್ ಗ್ರಂಥಿಯ ಕೆಳಗಿನಿಂದ 4 ನೆಯ ಪಕ್ಕೆಲುಬಿನವರೆಗೆ ಪಸರಿಸಿ, ಎದೆಮೂಳೆ ಹಿಂದೆ ಇರುವ ಚಪ್ಪಟೆ ಹಾಗೂ ಮೃದುವಾದ ಒಂದು ಅಂಗ. ಇದರ ಎಡಬಲ ಪಸರಿಕೆಗಳನ್ನು ಗುರುತಿಸಬಹುದು. ಇವು ಗುಂಡಿಗೆ ಶ್ವಾಸನಾಳಗಳ ಮೇಲೆ ಕವುಚಿಕೊಂಡಿರುತ್ತವೆ. ಜನನವಾದಾಗ ಥೈಮಸ್ಸಿನ ತೂಕ ಶಿಶುವಿನ ತೂಕದ 0.42% ರಷ್ಟು – ಸುಮಾರು 12 ಗ್ರಾಮ್‌ಗಳು. ವ್ಯಕ್ತಿತೂಕಕ್ಕೆ ಹೋಲಿಸಿದರೆ ಇದೇ ಗರಿಷ್ಠ ಅನುಪಾತ. ಮುಂದೆ ಪ್ರಬುದ್ಧತೆವರೆಗೂ ಥೈಮಸ್ ವೃದ್ಧಿ ಆಗಿ, ಪರಮಾವಧಿ ತೂಕ ಸುಮಾರು 37 ಗ್ರಾಮ್‌ಗಳಷ್ಟಾಗುತ್ತದೆ. ಅನಂತರ ಕುಗ್ಗುತ್ತ ಬಂದು ವಾರ್ಧಿಕ್ಯದಲ್ಲಿ ಸುಮಾರು 6 ಗ್ರಾಮ್‌ಗಳಷ್ಟು ಮಾತ್ರವಿರುತ್ತದೆ. ಅನೇಕ ವ್ಯಕ್ತಿಗಳಲ್ಲಿ ಸೋಂಕು, ಅಪಘಾತ ಇತ್ಯಾದಿ ಕಾರಣಗಳಿಂದ ಥೈಮಸ್ ನಡುವಯಸ್ಸಿನಲ್ಲಿ ಉಡುಗಿಹೋಗುವುದೂ ಉಂಟು.

ಥೈಮಸ್ಸನ್ನು ಪೂರ್ಣವಾಗಿಮುಚ್ಚಿಕೊಂಡಿರುವ ಹೊದಿಕೆ ಇದ್ದು, ಒಳಗೆ ತಿರುಳಿದೆ. ತಿರುಳಿನ (ಪ್ಯಾರೆಂಕೈಮ) ಹಾಲೆಗಳು ಬಲು ಚಿಕ್ಕವು – ಗರಿಷ್ಠ 1 – 2 ಮಿಮೀ. ಗಳಷ್ಟು. ಜಾಲ ಚಾಚುಗಳುಳ್ಳ ಕೋಶಗಳ ಜಾಲದಲ್ಲಿ ದುಗ್ಧರಸಕಣಗಳು ಒತ್ತಾಗಿ ತುಂಬಿಕೊಂಡು ತಿರುಳು ನಿರ್ಮಿತವಾಗಿದೆ. ಪ್ರತಿಯೊಂದು ಹಾಲೆಯ ಒಳಭಾಗದ ರಚನೆ ಸಡಿಲವಾಗಿದ್ದು, ಅಲ್ಲಿ ಹೆಸಾಲನ ಸೂಕ್ಷ್ಮಾಂಗಗಳೆಂಬ (ಹೆಸಾಲ್ಸ್ ಕಾರ್ಪಸಲ್ಸ್) ಕೋಶಗಳ ಗುಂಪುಗಳು ಇವೆ. ಪ್ರತಿಯೊಂದು ಸೂಕ್ಷ್ಮಾಂಗದ ಮಧ್ಯಭಾಗದಲ್ಲಿ ಒಂದೆರಡು ದುಂಡಾದ ಕೋಶಗಳು, ಅವುಗಳ ಸುತ್ತ ಈರುಳ್ಳಿ ಸಿಪ್ಪೆಗಳಂತೆ ಒಂದರಮೇಲೆ ಹೊದ್ದುಕೊಂಡಿರುವ ಹಲವಾರು ಶುಷ್ಕಕೋಶಗಳು – ಇದಿಷ್ಟು ಈ ಸೂಕ್ಷ್ಮಾಂಗಗಳ ರಚನೆ. ಮಧ್ಯಮ ಕೋಶಗಳಲ್ಲಿ ಅನ್ಯಕೋಶಗಳ ಅವಶೇಷಗಳು ಇರುವುದೂ ಉಂಟು. ವಯಸ್ಸಾದಂತೆ ತಂತುಗಳು ಹಾಗೂ ಕೊಬ್ಬು ಅಲ್ಲಲ್ಲಿ ಶೇಖರವಾಗಿ ಸಾಕ್ಷಾತ್ ಥೈಮಸ್ಸಿನ ಕೋಶಗಳ ಸಂಖ್ಯೆ ಕಡಿಮೆ ಆಗಿ ತಿರುಳು ಗಡುಸಾಗುತ್ತದೆ. ಎಳೆಪ್ರಾಣಿಗಳ ಥೈಮಸ್ಸು ತಿನ್ನಲು ಬಲುರುಚಿ. ಥೈಮಸ್ಸು ಭ್ರೂಣದ ಗಂಟಲಿನ ಭಾಗದ 3 ನೆಯ ಸಂಚಿಯಿಂದ (ಫೆರಿನ್‌ಜಿಯಲ್ ಪೌಚ್) ಬೆಳೆದುಬಂದ ಅಂಗ. ಪ್ರಾರಂಭದಲ್ಲಿ ಇದು ಒಳಪದರ (ಎಂಡೊಡರ್ಮ್) ಕೋಶಗಳ ಒಟ್ಟಿಲು ಮಾತ್ರ. ಕ್ರಮೇಣ ಸುತ್ತಲಿನ ದುಗ್ಧರಸನಾಳಜಾಲ ಒಳಹೊಕ್ಕು ರಚನೆಯನ್ನು ಸಡಿಲಪಡಿಸುತ್ತದೆ. ಅನಂತರ ಹೊರಗಿನಿಂದ ರಕ್ತದಮೂಲಕ ದುಗ್ಧರಸಕಣಗಳು ಬಂದು ನೆಲೆಸಿ ಗುಣಿತಗೊಳ್ಳತೊಡಗುವುವು. ಥೈಮಸ್ಸಿನ ಒಳಗಿರುವ ಕಣಗಳು ಈ ರೀತಿ ಹೊರಗಿನಿಂದ ವಲಸೆಬಂದ ದುಗ್ಧರಸಕಣಗಳೆ ಆದರೂ ಇತರ ದುಗ್ಧರಸಕಣಗಳಿಂದ ಭಿನ್ನವಾಗಿರುತ್ತವೆ. ಥೈಮಸ್‌ಕಣಗಳಲ್ಲಿ ಮೈಟೊಕಾಂಡ್ರಿಯ, ಜಾಲ ರಚನೆ ಮುಂತಾದ ಕೋಶ ವೈಶಿಷ್ಟ್ಯಗಳು ಚೆನ್ನಾಗಿ ವ್ಯಕ್ತವಾಗಿರುವುದಿಲ್ಲ. ದುಗ್ಧರಸಕಣಗಳ ಸಂಖ್ಯಾವೃದ್ಧಿಯನ್ನು ಉಂಟುಮಾಡುವ ಪ್ರಚೋದನೆಗಳು ಥೈಮಸ್ ಕಣಗಳ ಸಂಖ್ಯಾವೃದ್ಧಿಯನ್ನು ಉಂಟುಮಾಡುವುದಿಲ್ಲ. ದುಗ್ಧರಸಕಣಗಳ ಆಯುಷ್ಯ ಹಲವಾರು ತಿಂಗಳುಗಳು – ಬಹುಶಃ ವರ್ಷಗಳೇ. ಥೈಮಸ್‌ಗಳ ಕಣಗಳ ಆಯುಷ್ಯವಾದರೋ 3 – 4 ದಿವಸಗಳು ಮಾತ್ರ. ಆದ್ದರಿಂದ ಥೈಮಸ್ ಕಣಗಳನ್ನು ಬೇರೆ ಎಂದೇ ಗಣಿಸಿ ಅವನ್ನು ತೈಮೊಸೈಟ್‌ಗಳೆಂದು ಕರೆಯಲಾಗಿದೆ.

ವ್ಯಕ್ತಿಯಲ್ಲಿ ಥೈಮಸ್ಸಿನ ಅಸ್ತಿತ್ವದ ಅವಧಿ ಹಾಗೂ ಅದರ ಕ್ರಿಯೆಯ ವಿಷಯವಾಗಿ ಬಹುಕಾಲದಿಂದಲೂ ವಿವಾದವಿದೆ. ಶೈಶವ–ಬಾಲ್ಯದಲ್ಲಿ ಮಾತ್ರ ಗಣನೀಯ ಗಾತ್ರವಾಗಿರುವ ಥೈಮಸ್ ಹದಿವಯಸ್ಸಿನಲ್ಲಿ ಉಡುಗುವುದಕ್ಕೆ ಪ್ರಾರಂಭಿಸಿ ನಡುವಯಸ್ಸಿನ ಹೊತ್ತಿಗೆ ಹೆಚ್ಚು ಕಡಿಮೆ ಪೂರ್ಣವಾಗಿ ನಾಶವಾಗಿ ಹೋಗುತ್ತದೆ ಎಂದೂ, ಏನಿದ್ದರೂ ಅದರ ಕ್ರಿಯೆ ಬೆಳೆಯುವ ವಯಸ್ಸಿಗೆ ಸೀಮಿತವಾಗಿದ್ದು, ಅದರಲ್ಲಿರುವ ರಕ್ತಕಣಗಳ ಅಗತ್ಯ ಬೆಳೆಯುವ ವಯಸ್ಸಿನಲ್ಲೆ ಹೆಚ್ಚಾಗಿರುತ್ತದೆ ಎಂದೂ, ಬೆಳವಣಿಗೆ ಮುಗಿಯುತ್ತ ಲೈಂಗಿಕಚಟುವಟಿಕೆ ಪ್ರಾರಂಭವಾದಂತೆ ಥೈಮಸ್ಸಿನ ಪ್ರಾಮುಖ್ಯ ಕುಗ್ಗುತ್ತವೆ ಎಂದೂ ವಿವರಿಸಲಾಗುತ್ತಿತ್ತು. ಇದು ಸುಮಾರು 200 ವರ್ಷಗಳಿಂದ ವಿಜ್ಞಾನಿಗಳು ವ್ಯಕ್ತಪಡಿಸುತ್ತಿದ್ದ ದೃಷ್ಟಿ. 1900 ರಲ್ಲಿ ಬಿಯರ್ಡ್ ಎಂಬಾತ ದೇಹಕ್ಕೆ ಅಗತ್ಯವಾದ ವರ್ಣರಹಿತ ಕಣಗಳು ತಯಾರಾಗುವ ಸ್ಥಳಗಳಲ್ಲಿ ಥೈಮಸ್‌ಕಣಗಳು ಬೀಜಗಳಂತೆ ನೆಡಲ್ಪಡುತ್ತವೆ ಎಂದು ಅಭಿಪ್ರಾಯಪಟ್ಟಿದ್ದ. 1938 ರಲ್ಲಿ ಹ್ಯಾಮರ್ ಎಂಬಾತ ದೇಹದಲ್ಲಿ ಥೈಮಸ್ ಪ್ರತಿವಿಷಗಳನ್ನು ತಯಾರಿಸುತ್ತವೆಂಬ ತೀರ್ಮಾನಕ್ಕೆ ಬಂದ. ಹೊರನೋಟಕ್ಕೆ ಥೈಮಸ್ ಒಂದು ನಿರ್ನಾಳಗ್ರಂಥಿಯಂತೆ ಇದ್ದು ಅದು ಒಂದು ಅಂತಃಸ್ರಾವಕ ಗ್ರಂಥಿ ಎಂಬ ವಿಷಯದ ಪರ ಹಾಗೂ ವಿರುದ್ಧವಾಗಿ ಬಲುಕಾಲದಿಂದಲು ಜಿಜ್ಞಾಸೆ ಇದ್ದೇ ಇದೆ. ಅದು ಒಂದು ಅಂತಃಸ್ರಾವಿ ಎಂಬುದು ನಿಜ ಅಥವಾ ಸುಳ್ಳು ಎಂದು ಪ್ರಯೋಗಗಳಿದ ರುಜುವಾತು ಮಾಡುವುದಕ್ಕೆ ಸಾಧ್ಯವಾಗಿಲ್ಲ. ವಯಸ್ಸಾದ ಮೇಲು ಥೈಮಸ್ಸಿನ ಗಾತ್ರ ಉಡುಗದೆ ಇದ್ದವರಲ್ಲಿ ತೀವ್ರ ರೀತಿಯ ಉಬ್ಬಸರೋಗ ಕಂಡುಬರುವುದೆಂದು ಅನೇಕರು ಇದ್ದಕ್ಕಿಂದ್ದಂತೆ ಮೃತರಾಗುವರೆಂದು ತಿಳಿದಿತ್ತು. ಬಹುಶಃ ಥೈಮಸ್ಸಿಗೂ ಈ ಸಂದರ್ಭಗಳಿಗು ನೇರಸಂಬಂಧ ಇಲ್ಲ. ಅಡ್ರಿನಲ್ ಗ್ರಂಥಿಯ ಹಠಾತ್ ಕ್ರಿಯಾನಾಶ ಅನೇಕವೇಳೆ ಹಠಾತ್ ಮರಣಕ್ಕೂ ಸಂಬಂಧ ಕಲ್ಪಿಸುವುದಿಲ್ಲ. ಅಡ್ರಿನಲ್ ಗ್ರಂಥಿಯ ಹಾಗೂ ಪ್ರಜನನಾಂಗಗಳ ಹಾರ್ಮೋನುಗಳು ರೋಗಕಾರಣದಿಂದಾಗಲಿ, ಕೃತಕಪ್ರಚೋದನೆಯಿಂದಾಗಲಿ ಸೂಜಿಮದ್ದಾಗಿ ಒಳ ಸೇರಿಸುವಿಕೆಯಿಂದಾಗಲಿ ಅಧಿಕಪ್ರಮಾಣದಲ್ಲಿ ಇರುವಂತಾದರೆ ಥೈಮಸ್ಸು ಕುಗ್ಗುವುದು ತಿಳಿದಿದೆ. ಬಹುಶಃ ಇದಕ್ಕೆ ವಿಪರ್ಯಾಯವಾಗಿ ಥೈಮಸ್ಸಿನ ಕ್ರಿಯಾಧಿಕ್ಯದಿಂದ ಯಾವಾಗಲೊ ಅಡ್ರಿನಲ್ ಗ್ರಂಥಿಯ ಕ್ರಿಯಾನಾಶ ಉಂಟಾಗಿ ಹಠಾತ್ ಮರಣ ಸಂಭವಿಸಬಹುದು. 1960 ರಿಂದ ಈಚಿನ ವ್ಯಾಸಂಗಗಳಿಂದ ಸೋಂಕು ವಿಷಗಳ ವಿರುದ್ಧ ದೇಹ ರಕ್ಷಣೆಯ ಹೊಮ್ಮಿಕೆಯಲ್ಲಿ ಥೈಮಸ್ಸಿನ ಪಾತ್ರ ಬಲು ಹೆಚ್ಚು ಎನ್ನುವುದು ವ್ಯಕ್ತವಾಗಿದೆ. ರಚನೆಯಲ್ಲಿ ಥೈಮಸ್ಸು ಸ್ಥೂಲವಾಗಿ ಇತರ ದುಗ್ಧರಸಾಂಗಗಳಂತೆ ಇರುವುದು ಮುಂಚಿನಿಂದಲು ತಿಳಿದ ವಿಷಯ. ಇತ್ತೀಚಿನ ವ್ಯಾಸಂಗಗಳಲ್ಲಿ ಪ್ರಬಲ ಸೂಕ್ಷ್ಮದರ್ಶಕಗಳೂ ಗಣನೀಯವಾಗಿ ಹೆಚ್ಚಿನ ವಿವರಣೆಯನ್ನು ಒದಗಿಸಿಲ್ಲ. ಆದರೆ ವಿವಿಧ ಪ್ರಚೋದಕಗಳು ಥೈಮಸ್ಸಿನಲ್ಲೂ ಮಿಕ್ಕ ದುಗ್ಧರಸಾಂಗಗಳಲ್ಲು ಬೇರೆ ಬೇರೆ ಪರಿಣಾಮಗಳನ್ನು ಉಂಟುಮಾಡುವ, ಅಂತೆಯೆ ಥೈಮಸ್ಸಿನ ನಿರ್ಮೂಲನ ಪ್ರಚೋದನೆಗಳು ಪಕ್ಷಿಕುಲದಲ್ಲಿ ಫ್ಯಾಬ್ರೀಷಿಯಸ್ಸಿನ ಬರ್ಸ ಎಂಬ ಅಂಗದ ನಿರ್ಮೂಲನ ಪ್ರಚೋದನೆಗಳಿಂದ ಉಂಟಾಗುವ ಪರಿಣಾಮಗಳಂಥವನ್ನೆ ಉಂಟುಮಾಡುವುದು ವ್ಯಕ್ತವಾಗಿದೆ. ಬಹುಶಃ ಥೈಮಸ್ ಹಾಗೂ ಪ್ಯಾಬ್ರೀಷಿಯಸ್ಸಿನ ಬರ್ಸ – ಇವು ಮೂಲ

ದುಗ್ಧರಸಗ್ರಂಥಿಗಳು. ಇವುಗಳ ನೆರವಿನಿಂದ ಭ್ರೂಣದಲ್ಲಿ ಮಿಕ್ಕವು ಉದ್ಭವಿಸಿ ಇವುಗಳ ಅಂಕೆಯಂತೆ ಕ್ರಿಯೆಯುಳ್ಳವಾಗಿರುತ್ತವೆ ಎಂಬ ಭಾವನೆ ಮೂಡಿದೆ. ಇದು ನವೀನ ಪ್ರಯೋಗಗಳ ಫಲ. 1964 ರಲ್ಲಿ ಮೆಟ್‌ಕಾಫ್ ಎಂಬುವ 3 – 4 ದಿವಸಗಳಷ್ಟು ಅಲ್ಪಾಯುಸ್ಸಿನ ಕೋಶಗಳು ಥೈಮಸ್ಸಿನಲ್ಲಿ ಅಸಂಖ್ಯಾತವಾಗಿ ಉತ್ಪತ್ತಿಯಾಗುವುದನ್ನು ಖಚಿತವಾಗಿ ತೋರಿಸಿ ಇದಕ್ಕೆ ಯಾವುದೊ ಪ್ರಬಲ ಕಾರಣವಿರಬೇಕು ಎನ್ನುವ ತೀರ್ಮಾನಕ್ಕೆ ಬಂದ. 1965 – 66 ರಲ್ಲಿ ಸಾಲ್‌ವಿನ್, ರೋಲ್ಡ್‌ಸ್ಟೈಯ್ನ್ ಮುಂತಾದವರು ಮಯಾಸ್ಥೀನಿಯ ಗ್ರೇವಿಸ್ ಎಂಬ ರೋಗಕ್ಕೂ ಥೈಮಸ್ಸಿಗೂ ಇರುವ ಸಂಬಂಧವನ್ನು ಗಣಿಸಿ ಬಹುಶಃ ಥೈಮಸ್ ವಿಷವಸ್ತು ನಿರ್ಮೂಲನ ಕ್ರಮದಲ್ಲಿ ಪಾತ್ರವಹಿಸುತ್ತದೆಂದು ಸೂಚಿಸಿದರು. ಸಿನ್ ಮುಂತಾದವರು 1965 ರಿಂದ ಈಚೆಗೆ ನಡೆಸಿದ ವ್ಯಾಸಂಗಗಳಿಂದ ರಕ್ತದ ಎಲ್ಲ ಬಗೆಯ ಕಣಗಳ ಸಂಖ್ಯಾವೃದ್ಧಿಯಲ್ಲು ಥೈಮಸ್ ಭಾಗವಹಿಸುತ್ತದೆಂದೂ ಅದು ರೋಗಗ್ರಸ್ತವಾದರೆ ಅಲ್ಪಕಣರಕ್ತತೆ (ಎಪ್ಲಾಸ್ಟಿಕ್ ಅನೀಮಿಯ), ಸೋಂಕುವಿಷಯಗಳ ವಿರುದ್ಧ ತಗ್ಗಿದ ರಕ್ಷಣೆ ಮುಂತಾದವು ಉಂಟಾಗುವುವೆಂದೂ ಸ್ಥಿರಪಡಿಸಿದರು.

ಥೈಮಸ್ಸಿನ ವಿಶಿಷ್ಟಕ್ರಿಯೆ ಎಂದು ಇಂದು ಒಪ್ಪಿಕೊಂಡಿರುವುದು ದುಗ್ಧರಸಕಣಗಳ ಸಂಖ್ಯಾವೃದ್ಧಿ ಮತ್ತು ರೋಧಕಜನಕಕಣಗಳನ್ನು ಅಗತ್ಯವೆನಿಸುವಷ್ಟು ವೈವಿಧ್ಯ ಹಾಗೂ ಸಂಖ್ಯೆಯಲ್ಲಿ ಅಸ್ತಿತ್ವದಲ್ಲಿಟ್ಟಿರುವುದು. ಇವೆರಡೂ ಪರಸ್ಪರ ಸಂಬಂಧಪಟ್ಟಿವೆಯೆ ಎಂಬುದು ವ್ಯಕ್ತವಾಗಿಲ್ಲ. ಥೈಮಸಿನಲ್ಲಿ ಅಗಾಧ ಸಂಖ್ಯೆಯಲ್ಲಿ ವೃದ್ಧಿಸುತ್ತಿರುವ ಕಣಗಳು ಮೂಲತಃ ಮಜ್ಜೆ ಮುಂತಾದ ಕಡೆಗಳಿಂದ ವಲಸೆ ಬಂದು ನೆಲೆಸಿದ ವಿವಿಧರೀತಿಯ ಕಣಗಳು. ಆಂತರಿಕ ಪ್ರಚೋದನೆಯಿಂದಲೇ ಇವು ವೃದ್ಧಿಸುತ್ತವೆ. ಹೀಗೆ ಉತ್ಪತ್ತಿಯಾದ ಕಣಗಳಲ್ಲಿ ಸುಮಾರು 95% ಕಣಗಳು 3 – 4 ದಿವಸಗಳಲ್ಲೆ ಥೈಮಸ್ಸಿನಲ್ಲಿ ನಾಶವಾಗುತ್ತವೆ. ಬಹುಶಃ ಇಷ್ಟು ತ್ವರಿತವಾದ ಕೋಶಗುಣಿತದಿಂದ ಕಣಗಳಲ್ಲಿ ಅಸಂಖ್ಯಾತ ವೈವಿಧ್ಯ ಉಂಟಾಗಬಹುದು. ಅಷ್ಟು ವಿಧಗಳಲ್ಲಿ ದೇಹಕ್ಕೆ ಉಪಯುಕ್ತವಾದ ವಿಧಗಳು ಮಾತ್ರ ಉಳಿದುಕೊಂಡು ಅಪಾಯಕರವಾದ ವಿಧಗಳೆಲ್ಲ ನಾಶವಾಗುತ್ತವೆಂದೂ ಥೈಮಸ್ಸಿನ ಆಂತರಿಕಕೋಶಗಳು ಇಂಥ ವಿಂಗಡಣೆ ಹಾಗೂ ನಾಶದಲ್ಲಿ ಪಾತ್ರವಹಿಸುತ್ತವೆಂದೂ ಊಹಿಸಲಾಗಿದೆ. ಆದರೆ ವಿಂಗಡಣೆ ಯಾವ ರೀತಿಯಲ್ಲಿ ಆದೀತು ಎನ್ನುವುದು ತಿಳಿಯದು. ವಿಂಗಡಣೆ ನಾಶಗಳು ತಕ್ಕಷ್ಟು ಕ್ಷೇಮರೀತಿಯಲ್ಲಿ ಜರುಗುವುದಿಲ್ಲವೇನೊ ಎಂದೂ ಅನ್ನಿಸಿದೆ. ಅಳಿಯದೆ ಉಳಿದ ಕಣಗಳು ಬೇರೆಡೆ ವಲಸೆಹೋಗಿ ನೆಲೆಸುವುದೂ ಅಗತ್ಯ ಕಾಲದಲ್ಲಿ ಅಲ್ಲೆ ಪ್ರಚೋದನೆಗೊಂಡು ಸಂಖ್ಯಾವೃದ್ಧಿ ಆಗುವುದೂ ಥೈಮಸ್ಸನ್ನೇ ಅವಲಂಬಿಸಿದೆ. ಪರಿಸರದ ಒತ್ತಡದ ಜೀವನವನ್ನು ಎದುರಿಸಲು ಅನುವಾಗುವ ಅಡ್ರಿನಲ್ ಗ್ರಂಥಿಯ ಹಾರ್ಮೋನುಗಳು ಥೈಮಸ್ಸಿನ ಕಣಗಳಿಗೆ ಮಾರಕ ಎಂದು ಹಿಂದೆ ಹೇಳಿದೆ. ಥೈಮಸ್ ಕಣಗಳ ಅಗಾಧ ನಾಶದಿಂದ ಪರಿಸರದ ಒತ್ತಾಯವನ್ನು ಎದುರಿಸುವ ಸಾಮರ್ಥ್ಯ, ದೇಹದ ರಿಪೇರಿ ಇತ್ಯಾದಿಗಳಿಗೆ ಅನುಕೂಲವಾಗುವ ಯಾವುದಾದರೂ ವಸ್ತುಗಳ ಬಿಡುಗಡೆ ಆಗುವುದೊ ತಿಳಿಯದು.

ಥೈಮಸ್ಸಿನ ನಿರ್ಮೂಲನದ ನೇರ ಪರಿಣಾಮ ದೇಹದ ರೋಧಸಾಮರ್ಥ್ಯದ ಬಲಗುಂದುವಿಕೆ. ರೋಧಜನಕಕೋಶಗಳ ಸಂಖ್ಯೆ ತಗ್ಗುವುದರಿಂದ ಹೀಗಾಗುತ್ತದೆ ಎನ್ನುವುದು ಸ್ಪಷ್ಟವಾಗಿದೆ. ಶೈಶವದಲ್ಲಿ ಥೈಮಸ್ಸನ್ನು ನಿರ್ಮೂಲಮಾಡಿದರೆ ಇದು ಕೂಡಲೆ ವ್ಯಕ್ತವಾಗುವ ಪರಿಣಾಮ, ಆದರೆ ಎಲ್ಲ ರೀತಿಯ ರೋಧಕಗುಣಗಳೂ ಒಂದೆ ಸಮವಾಗಿ ಕುಂದಿಹೋಗುವುದಿಲ್ಲ. ರೋಧಕ ಗ್ಲಾಬ್ಯುಲಿನ್‌ಗಳ ತಯಾರಿಕೆಯ ನಿಯಂತ್ರಣ ಬೇರೆಯೇ, ಬಹುಶಃ ಅನ್ನನಾಳಕ್ಕೆ ಸಂಬಂಧಿಸಿದ ದುಗ್ಧರಸಗ್ರಂಥಿಗಳಲ್ಲಿ ಈ ವಸ್ತುಗಳು ತಯಾರಾಗುತ್ತವೆ. ಥೈಮಸ್ಸಿನಿಂದ ಉತ್ಪತ್ತಿಯಾದ ಕೋಶಗಳು ಸ್ವಜಾತಿಯ ವಸ್ತುಗಳ ಗುರುತು ಹಿಡಿಯುವ ಕ್ರಿಯೆಗೆ ಮೀಸಲು. ಆದ್ದರಿಂದ ವಿಸರ್ಜನೆ ಮಾಡತಕ್ಕ ರೋಧಜನಕ ಕಣಗಳು ಉತ್ಪತ್ತಿಯಾಗುವುದಿಲ್ಲ. ಬೆಳೆದ ವ್ಯಕ್ತಿಯಲ್ಲಿ ಥೈಮಸ್ಸಿನ ನಿರ್ಮೂಲನ ಇಷ್ಟು ಶೀಘ್ರವಾಗಿ ಪರಿಣಮಿಸುವುದಿಲ್ಲ. ನಿರ್ಮೂಲನಕ್ಕೆ ಮೊದಲೇ ತಯಾರಾಗಿ ಎಲ್ಲೆಲ್ಲೊ ನೆಲೆಸಿರುವ ರೋಧಜನಕಕೋಶಗಳು ಕೆಲವು ತಿಂಗಳುಗಳ ಪರ್ಯಂತ ಅಸ್ತಿತ್ವದಲ್ಲಿದ್ದು ದೇಹರಕ್ಷಣೆಯನ್ನು ಒದಗಿಸುತ್ತವೆ. ಕ್ರಮೇಣ ಇವುಗಳ ಸಂಖ್ಯೆ ಕಡಿಮೆ ಆಗುತ್ತ ಕೊನೆಗೆ ರೋಧ ಸಾಮರ್ಥ್ಯವೇ ಕುಂದಿಹೋಗುತ್ತದೆ. ಥೈಮಸ್ಸಿನಿಂದ ವಲಸೆಹೋಗುವ ಕೋಶಗಳು ಬಲು ಕಡಿಮೆ. ಆದರೆ ಇವು ದೇಹದ ರೋಧಕ ಕ್ರಿಯೆಯಲ್ಲಿ ಮುಖ್ಯಪಾತ್ರ ವಹಿಸುತ್ತವೆ ಎಂದು ತೋರುವುದು. ಬಹುಶಃ ರೊಧಕಗಳನ್ನು ಉತ್ಪತ್ತಿಮಾಡಬಲ್ಲ ಕೋಶಗಳು ಮೊದಲು ಮಜ್ಜೆ ಮುಂತಾದ ಸ್ಥಳಗಳಿಂದ ವಲಸೆ ಹೋಗಿ ಥೈಮಸ್ಸಿನಲ್ಲಿ ನೆಲೆಸುತ್ತವೆ. ಅನಂತರ ಯಾವಾಗಲಾದರೂ ಒಮ್ಮೊಮ್ಮೆ ಇಂಥ ಕೋಶಗಳು ಥೈಮಸ್ಸಿನಿಂದ ಹೊರಗೆ ಹೋಗಿ ನೆಲೆಸಿ ಅಲ್ಲಿ ತಮ್ಮ ಕಾರ್ಯವನ್ನು ಸಾಧಿಸುತ್ತವೆ. ಅವುಗಳ ಕ್ರಿಯೆಗೆ ಥೈಮಸ್ಸಿನ ನೆರವು ಬೇಕಿಲ್ಲ. ಆದರೆ ಅವು ಕಾರಣಾಂತರದಿಂದ ನಾಶಹೊಂದುತ್ತಲೇ ಇರುತ್ತವೆ. ರೋಧಜನಕಗಳ ಸಂಖ್ಯೆ ತಕ್ಕಷ್ಟು ಪ್ರಮಾಣದಲ್ಲಿ ಉಳಿದಕೊಂಡು ಬರಬೇಕಾದರೆ ಅವು ಎಲ್ಲಿ ನೆಲೆಸಿರುವುವೋ ಅಲ್ಲೇ ಗುಣಿತಗೊಳ್ಳಬೇಕು. ಇಲ್ಲವೆ ಹೊಸ ಹೊಸದಾಗಿ ಥೈಮಸ್ಸಿನಿಂದ ವಲಸೆ ಬಂದುನೆಲೆಸುತ್ತಿರಬೇಕು. ಇವೆರಡಕ್ಕೂ ಥೈಮಸ್ಸಿನ ಅಸ್ತಿತ್ವ ಅಗತ್ಯ. ಥೈಮಸ್ ಕಳೆದ ಎಳೆಯ ಪ್ರಾಣಿಗೆ ಬೇರೆ ಥೈಮಸ್ಸನ್ನು ನಾಟಿಹಾಕಿ ಅದರಿಂದ ಏನೂ ಹೊರಬಂದು ದೇಹದ ಮಿಕ್ಕೆಡೆ ವ್ಯಾಪಿಸದಂತೆ ನೋಡಿಕೊಂಡರೆ ರೋಧಜನಕಕಣಗಳ ಸಂಖ್ಯಾಕ್ಷೀಣತೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ. ಅದೇ ಥೈಮಸ್ಸನಿಂದ ಕಣಗಳಿಲ್ಲದಿದ್ದರೂ ಚಿಂತೆ ಇಲ್ಲ, ದ್ರವ ದೊರಕುವಂತಾದರೂ ಸಂಖ್ಯಾ ಪ್ರಮಾಣ ಕುಗ್ಗುವುದಿಲ್ಲ. ಆದ್ದರಿಂದ ಥೈಮಸ್ಸಿನಿಂದ ಯಾವುದೋ ಹಾರ್ಮೋನ್ ಉತ್ಪಾದಿತವಾಗಿ ರೋಧಜನಕಕಣಗಳ ಗುಣಿತಕ್ಕೆ ಸಾಧಕವಾಗಿರುತ್ತದೆ ಎನಿಸುತ್ತದೆ. ಆದರೆ ಯಾವ ಇಂಥ ಹಾರ್ಮೋನನ್ನೂ ಥೈಮಸ್ಸನಿಂದ ಇನ್ನೂ ಬೇರ್ಪಡಿಸಲಾಗಿಲ್ಲ.

ಥೈಮಸ್ಸಿನ ಕ್ರಿಯೆಯನ್ನು ನಿಯಂತ್ರಿಸುವ ಹೊರಗಿನ ಪ್ರಭಾವ ವ್ಯಕ್ತವಾಗಿಲ್ಲ. ಬಹುಶಃ ದೇಹದ ಬೇರೆಡೆಗಳಲ್ಲಿ ರೋಧಜನಕ ಕೋಶಗಳನ್ನು ಪ್ರಚೋದಿಸುವುದೆಂದು ಭಾವಿಸಿರುವ ಕಾಲ್ಪನಿಕ ಥೈಮಸ್ ಹಾರ್ಮೋನೇ ಸ್ವತಃ ಥೈಮಸ್ಸಿನ ಕ್ರಿಯೆಯನ್ನು ನಿಯಂತ್ರಿಸುವುದೆಂದು ತೋರುತ್ತದೆ. ಥೈಮಸ್ಸಿನ ಗಾತ್ರ ಹೆಚ್ಚಿ ಅದರ ಕ್ರಿಯಾಭ್ರಷ್ಟತೆಯಿಂದ ವಿನಾಕಾರಣ ಛಿದ್ರತೆ, ಪರ್ಪುರಲೂಪಸ್, ಮಯಸ್ಥೀನಿಯಗ್ರೇವಿಸ್, ಹ್ಯಾಷಿಮೋಟೋರೋಗ ಇತ್ಯಾದಿಯಾಗಿ ಅನೇಕ ರೋಗಗಳು ಉಂಟಾಗುತ್ತವೆಂದು ನಂಬಲಾಗಿದೆ. ಬಹುಶಃ ದೇಹಕ್ಕೆ ಅಪಾಯಕರವಾದ ವಸ್ತುಗಳನ್ನು ಉತ್ಪತ್ತಿಮಾಡುವ ಕಣಗಳು ಥೈಮಸ್ಸಿನಲ್ಲಿ ವೃದ್ಧಿಸಿ ನಾಶಗೊಳ್ಳದೆ ಉಳಿದುಕೊಳ್ಳುವುದರಿಂದ ಇಂಥ ರೋಗಗಳು ಉಂಟಾಗುತ್ತವೆ. ***

# ದ

**ದಂತ:** ಪ್ರಾಣಿಗಳಲ್ಲಿ ಆಹಾರವನ್ನು ಸುಲಭವಾಗಿ ಜೀರ್ಣವಾಗುವಂತೆ ಅಗೆದು ಪುಡಿ ಮಾಡುವುದಕ್ಕೆ ಬಾಯಿಯಲ್ಲಿ ಬೆಳವಣಿಗೆಯಾದ ಅಂಗ (ಟೂತ್). ಹಲ್ಲು ಸಾಮಾನ್ಯ ಹೆಸರು. ಕಶೇರುಕಗಳಲ್ಲಿ ಹೊರಚರ್ಮದ ಹಲ್ಲುಗಳು ಹಾಗೂ ನೈಜ ಹಲ್ಲುಗಳೆಂಬ ಎರಡು ಬಗೆಗಳಿವೆ. ಹೊರಚರ್ಮದ ಹಲ್ಲು, ಚಕ್ರಾಸ್ಯಗಳು (ಸೈಕ್ಲೊಸ್ಟೋಮ್), ಉಭಯಜೀವಿಗಳ ಲಾರ್ವಗಳಲ್ಲಿ, ಪ್ಲಾಟಿಪಸ್ ಮುಂತಾದ ಕೆಲವೇ ಗುಂಪುಗಳಲ್ಲಿ ಮಾತ್ರ ಇವೆ. ಉಳಿದ ಕಶೇರುಕಗಳಲ್ಲಿ ನೈಜ ಹಲ್ಲು ಇರುತ್ತವೆ. ಹೊರರಚನೆ ಹಾಗೂ ಆಕಾರಗಳಲ್ಲಿ ವ್ಯತ್ಯಾಸಗಳಿದ್ದರೂ ಒಳರಚನೆಯಲ್ಲಿ ಎಲ್ಲ ಬಗೆಯ ಹಲ್ಲುಗಳೂ ಒಂದೇ ಬಗೆಯಲ್ಲಿರುತ್ತವೆ. ಮಾನವನ ಹಲ್ಲನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಅದರ ರಚನೆ ಹೀಗಿದೆ. ಹಲ್ಲಿನಲ್ಲಿ ಗಾಜುಲೇಪ (ಇನ್ಯಾಮಲ್), ದಂತದ್ರವ್ಯ (ಡೆಂಟೈನ್), ತಿರುಳು (ಪಲ್ಪ್) ಹಾಗೂ ಹಲ್ಲುಗಾರೆ (ಸಿಮೆಂಟಮ್) ಎಂಬ ನಾಲ್ಕು ಮುಖ್ಯ ಭಾಗಗಳಿವೆ. ಇದಲ್ಲದೆ, ಹೊರದಂತ ಮೂಳೆನಾರು (ಪೆರಿಯೊಡಾಂಟಲ್ ಲಿಗಮೆಂಟ್) ಹಾಗೂ ಹಲ್ಲುಗೂಡಿನ ಮೂಳೆಗಳು ಹಲ್ಲನ್ನು ಸುತ್ತುವರಿದಿರುತ್ತವೆ.

ಗಾಜುಲೇಪ (ಇನ್ಯಾಮಲ್): ಹಲ್ಲಿನ ದಂತಾಗ್ರದ ಹೊರಭಾಗವನ್ನು ಆವರಿಸಿರುತ್ತದೆ. ಇದರಲ್ಲಿ ಖನಿಜ ಭಾಗವು ಹೆಚ್ಚಾಗಿದ್ದು ಅದರ ವ್ಯವಸ್ಥೆ ಹರಳಿನಂತಿರುವುದು. ಇದು ಮಾನವ ದೇಹದ ಅತ್ಯಂತ ಗಟ್ಟಿಯಾದ ಮೂಳೆಗಟ್ಟಿದ (ಕ್ಯಾಲ್ಸಿಫೈಡ್) ಭಾಗ. ಅದರಿಂದ ಗಟ್ಟಿಯಾದ ಆಹಾರವನ್ನು ಅಗಿಯಲು ಸೂಕ್ತ. ಗಟ್ಟಿಯಾಗಿದ್ದರೂ ಪೆಡುಸಾಗಿದ್ದು

ಅಡಿಪಾಯದ ದಂತದ್ರವ್ಯ ಕಳೆದು ಹೋದಾಗ ಅದರ ಗುಣ ವ್ಯಕ್ತವಾಗುತ್ತದೆ. ಇದು ಅರ್ಧಪ್ರವೇಶ್ಯ ಒಳಪೊರೆ (ಸೆಮಿ–ಪರ್ಮಿಯೆಬಲ್) ಯಾಗಿಯೂ ಕೆಲಸ ನಿರ್ವಹಿಸುತ್ತದೆ. ಪಾರದರ್ಶಕತೆ ಹಾಗೂ ಲೇಪದ ದಪ್ಪ ಹಲ್ಲಿನ ಬಣ್ಣ ನಿರ್ಧರಿಸುತ್ತವೆ. ಸಾಮಾನ್ಯವಾಗಿ ಬಿಳಿ, ಬಿಳಿ–ಹಳದಿ ಅಥವಾ ಬೂದು–ಹಳದಿ ಬಣ್ಣವಿರುವುದು. ಗಾಜುಲೇಪ ತೆಳುವಾಗಿ ಪಾರದರ್ಶಕವಿದ್ದರೆ ಒಳಭಾಗದ ಡೆಂಟೈನ್ ಅಥವಾ ದಂತದ್ರವ್ಯದ ಹಳದಿ ಬಣ್ಣ ಗೋಚರಿಸುತ್ತದೆ. ಬೂದು ಬಣ್ಣದ ಹಲ್ಲುಗಳಲ್ಲಿ ದಪ್ಪವಾದ ಅಪಾರದರ್ಶಕ ಗಾಜುಲೇಪವಿರುತ್ತದೆ. ಇನ್ಯಾಮಲ್‌ನ ದಪ್ಪ ದವಡೆ ಮತ್ತು ಚರ್ವಣದಂತಾಗ್ರ ಹಲ್ಲಿನ ಚಾಚು ಮೊನೆಯಲ್ಲಿ ಇದು ದಪ್ಪವಿದ್ದು ಹಲ್ಲಿನ ಕುತ್ತಿಗೆಯನ್ನು ತಲುಪಿದಾಗ ಕಡಿಮೆಯಾಗುತ್ತದೆ. ಗಾಜುಲೇಪದಲ್ಲಿ 96% ರಷ್ಟು ಅಜೈವಿಕ ಅಂಗಾಂಶ, 27% ರಷ್ಟು ಆಂಗಿಕ ಅಂಗಾಂಶ ಹಾಗೂ 4% ನೀರು ಇರುತ್ತದೆ. ಅಜೈವಿಕ ಭಾಗದಲ್ಲಿ ಹೈಡ್ರಾಕ್ಸಿಅಪಟೈಟ್ ಹರಳುಗಳ ರೂಪದಲ್ಲಿರುವ ಕ್ಯಾಲ್ಷಿಯಂ ಹಾಗೂ ಫಾಸ್ಫರಸ್ ಖನಿಜಗಳಿರುವುವು. ಈ ಹರಳುಗಳು ಗಾಜುಲೇಪ ದಂಡಗಳು ಅಥವಾ ಆಶ್ರಗಗಳ ರೂಪದಲ್ಲಿ (ಇನ್ಯಾಮಲ್ ರಾಡ್ ಅಥವಾ ಪ್ರಿಸಂ) ಜೋಡಿಸಿಕೊಂಡಿದ್ದು ದಂಡಕೋಶ (ರೊಡ್ ಶೀತ್) ಹಾಗೂ ಇವೆಲ್ಲವನ್ನೂ ಬಂಧಿಸುವ ಮಧ್ಯ ಆಶ್ರಗವಸ್ತುವನ್ನೂ (ಇಂಟರ್ ಪ್ರಿಸ್ಮಾಟಿಕ್ ಸಬಸ್ಟನ್ಸ) ಹೊಂದಿರುತ್ತದೆ. ಆಂಗಿಕ ಅಂಗಾಂಶವು ಕ್ರಾಸ್ ಬಿ ಪ್ರೋಟೀನುಗಳ ಅಣುವಿನ ರಚನೆಯಿರುವ ಸೀರೀನ್, ಗ್ಲುಟಾಮಿಕ್ ಆಮ್ಲ ಹಾಗು ಗ್ಲೈಸೀನ್ ಗಳನ್ನು ಹೊಂದಿರುತ್ತದೆ.




ಮಾನವನ ಹಲ್ಲುಗಳು: 1. ಕ್ಯಾನೈನ್ 2. ಪ್ರೀಮೊಲಾರ್ 3. ಮೊಲಾರ್: C R ಕಿರೀಟ, C ಹಲ್ಲುಗಾರೆ, D ದಂತದ್ರವ್ಯ, E ಗಾಜುಲೇಪ, N ಕುತ್ತಿಗೆ, P ತಿರುಳು, R ಬೇರು.

ದಂತದ್ರವ್ಯ (ಡೆಂಟೈನ್): ಇನ್ಯಾಮಲ್‌ನ ಕೆಳಗಿನ ಮುಖ್ಯ ಭಾಗ. ಇದರ ತಯಾರಿಕೆ ಗಾಜುಲೇಪಕ್ಕಿಂತ ಮುಂಚೆ ಶುರುವಾಗುವುದರಿಂದ ಹಲ್ಲಿನ ಆಕಾರ, ಬೇರುಗಳ ಸಂಖ್ಯೆ ಮತ್ತು ಆಳತೆಯನ್ನು ನಿರ್ಧರಿಸುವುದು. ಇದು ಜೈವಿಕ ಅಂಗಾಂಶ. ದಂತದ್ರವ್ಯದ ನಾಳಿಕೆಗಳಲ್ಲಿರುವ ಒಡಂಟೋಬ್ಲಾಸ್ಟ್ ಕೋಶಗಳ ಇದನ್ನು ತಯಾರಿಸುತ್ತವೆ. ಭೌತಿಕ ಮತ್ತು ರಾಸಾಯನಿಕವಾಗಿ ಇದು ಮೂಳೆಯನ್ನು ಹೋಲುತ್ತದೆ. ಬಣ್ಣವು ತೆಳು ಹಳದಿಯಾಗಿದ್ದು ದಿನಕಳೆದಂತೆ ಗಾಢವಾಗುತ್ತದೆ. ಇದು ಅಂಟು ಪ್ರತ್ಯಾಸ್ಥವಾಗಿದ್ದು (ವಿಸ್ಕೊಇಲಾಸ್ಟಿಕ್) ಸ್ವಲ್ಪ ರೂಪ ವಿಕೃತಿಗೆ (ಡಿಫಾರ್ಮೇಶನ್) ಒಳಪಡುತ್ತದೆ. ಮೂಳೆಗಿಂತಲೂ ಗಟ್ಟಿಯಾಗಿದ್ದರೂ ಗಾಜುಲೇಪಕ್ಕಿಂತ ಮೃದುವಾಗಿದೆ. 35% ಆಂಗಿಕ ಅಂಗಾಂಶ ಮತ್ತು ನೀರು ಹಾಗೂ 65% ರಷ್ಟು ಅಜೈವಿಕ ಅಂಗಾಂಶವಿರುತ್ತವೆ. ಆಂಗಿಕ ಅಂಗಾಂಶದಲ್ಲಿ ಕೊಲಾಜೆನ್ ಸಣ್ಣೆಳೆಗಳು ಮತ್ತು ಆಧಾರ ವಸ್ತುವಾದ (ಗ್ರೌಂಡ್ ಸಬಸ್ಟಂಸ್) ಮ್ಯೂಕೊಪಾಲಿಸ್ಯಾಕರೈಡುಗಳು, ಪ್ರೋಟಿಯೋಗ್ಲೈಕಾನ್ಸ ಮತ್ತು ಗ್ಲೈಕೊಸೆಮಿನೊಗ್ಲೈಕಾನ್ಸ ಇರುತ್ತವೆ. ಅಜೈವಿಕ ಅಂಗಾಂಶವು ಹೈಡ್ರಾಕ್ಸಿಅಪಟೈಟ್‌ನಿಂದಾಗಿದೆ. ಇದರ ಹರಳುಗಳು ತಟ್ಟೆಯ ಆಕಾರವಿದ್ದು ಗಾಜುಲೇಪಕ್ಕಿಂತ ಚಿಕ್ಕದಾಗಿರುತ್ತವೆ. ಸ್ವಲ್ಪ ಫಾಸ್ಫೇಟ್, ಕಾರ್ಬನೇಟ್ ಮತ್ತು ಸಲ್ಫೇಟ್‌ಗಳಿರುತ್ತವೆ.

ತಿರುಳು (ಪಲ್ಪ): ಮೃದುವಾದ ಬಂಧ ಅಂಗಾಂಶವುಳ್ಳ ಹಲ್ಲಿನ ಮಧ್ಯಭಾಗ. ಆಕಾರ ಹಲ್ಲಿಗೆ ತಕ್ಕಂತೆ ಇರುತ್ತದೆ. ತಿರುಳುಗೂಡಿನಲ್ಲಿದ್ದು ದಂತದ್ರವ್ಯದಿಂದ ಸುತ್ತುವರಿದಿರುತ್ತದೆ. ಅದರ ಹೊರವಲಯದಲ್ಲಿ ದಂತದ್ರವ್ಯ ತಯಾರಿಸುವ ಕೋಶಗಳಿರುತ್ತವೆ. ದವಡೆ ಹಲ್ಲುಗಳ ತಿರುಳು ಬಾಚಿಹಲ್ಲುಗಳ ತಿರುಳಿಗಿಂತ ನಾಲ್ಕುಪಟ್ಟು ದೊಡ್ಡದಾಗಿರುತ್ತದೆ.

ಪಲ್ಪ ಎರಡು ಭಾಗಗಳಿಂದ ಕೂಡಿದೆ. ತಿರುಳಿನಲ್ಲಿ ದಂತಾಗ್ರದ ಮಧ್ಯದಲ್ಲಿರುವ ಮುಕುಟ ತಿರುಳು (ಕರೊನಲ್) ಮತ್ತು ಹಲ್ಲಿನ ಕುತ್ತಿಗೆಯಿಂದ ಬೇರಿನ ತುದಿಯವರೆಗೆ ಇರುವ ಮೂಲಾಂಕುರ ತಿರುಳು (ರ್‍ಯಾಡಿಕುಲರ್) ಎಂಬ ಎರಡು ಭಾಗಗಳಿವೆ. ಇದರಲ್ಲಿ ಅನೇಕ ಬಗೆಯ ಕೋಶಗಳು, ಕೊಲಾಜೆನ್ ಎಳೆ ಹಾಗೂ ಕೆಲವು ರಕ್ಷಣಾ ಕೋಶಗಳೂ ಇರುತ್ತವೆ. ಜೊತೆಗೆ ರಕ್ತ ಪರಿಚಲನಾ ಕೋಶಗಳಾದ ನ್ಯೂಟ್ರೋಫಿಲ್, ಇಯೋಸಿನೊಫಿಲ್, ಲಿಂಫೊಸೈಟ್ ಮತ್ತು ಮೊನೊಸೈಟುಗಳೂ ಇರುವುವು. ರಕ್ತನಾಳ, ನರ ಮತ್ತು ದುಗ್ಧನಾಳಗಳು ತಿರುಳನ್ನು ಪ್ರವೇಶಿಸುತ್ತವೆ. ದಂತದ್ರವ್ಯ ಚೊದನೆ ಹಾಗೂ ತಯಾರಿಕೆ ಇದರ ಮುಖ್ಯ ಕೆಲಸ. ಹಲ್ಲಿನ ಪೋಷಣೆ, ರಕ್ಷಣೆ ಹಾಗೂ ದುರಸ್ತಿನ ಕೆಲಸಗಳನ್ನೂ ಮಾಡುತ್ತದೆ.

ಹಲ್ಲುಗಾರೆ (ಸಿಮೆಂಟಮ್): ಹಲ್ಲಿನ ಬೇರುಗಳನ್ನು ಸುತ್ತುವರಿದ ಭಾಗ. ಹಲ್ಲಿನ ಕುತ್ತಿಗೆಭಾಗದ ಹಲ್ಲುಗಾರೆ–ಗಾಜುಲೇಪಗಳ ಸಂಧಿಸ್ಥಾನದಿಂದ ಹಲ್ಲಿನ ತುದಿಯವರೆಗೂ ಕಂಡುಬರುತ್ತದೆ. ಹಲ್ಲನ್ನು ಸುತ್ತುವರೆದಿರುವ ವಸ್ತುಗಳಿಗೆ ಹಲ್ಲನ್ನು ಬಂಧಿಸುವ ಕೊಲಾಜೆನ್ ಎಳೆಗಳಿಗೆ ಇದು ಮಾಧ್ಯಮ. ವಿಶೇಷವಾದ ಜೋಡಿಸುವ ಅಂಗಾಂಶ. ಭೌತಿಕವಾಗಿ, ರಾಸಾಯನಿಕವಾಗಿ ಮತ್ತು ರಚನೆಯಲ್ಲಿ ಮೂಳೆಯನ್ನು ಹೋಲುವುದಾದರೂ, ಸಂಪೂರ್ಣ ಮೂಳೆಯಂತಿರದೆ ಪರಿಚಲನೆಯುಳ್ಳ ಅಂಗಾಂಶ. ತೆಳು ಹಳದಿ ಬಣ್ಣ ದಂತದ್ರವ್ಯಕ್ಕಿಂತ ಮೃದುವಾಗಿದೆ. ದಪ್ಪ ಹಲ್ಲಿನ ಬೇರಿನ ತುದಿಯಲ್ಲಿ ಹೆಚ್ಚು ದಪ್ಪವಿದ್ದು, ಹಲ್ಲುಗಾರೆ–ಗಾಜುಲೇಪಗಳ ಸಂಧಿಸ್ಥಾನದಲ್ಲಿ ತೆಳುವಾಗಿರುತ್ತದೆ. 45–50% ಅಜೈವಿಕ ಅಂಗಾಂಶ, 50–55% ಆಂಗಿಕ ಅಂಗಾಂಶ ಮತ್ತು ನೀರು ಇರುತ್ತದೆ. ಅಜೈವಿಕ ಅಂಗಾಂಶದಲ್ಲಿ ಕ್ಯಾಲ್ಷಿಯಂ ಮತ್ತು ಫಾಸ್ಫರಸ್ ಗಳು, ಹೈಡ್ರಾಕ್ಸಿಅಪಟೈಟ್ ಹರಳುಗಳ ರೂಪದಲ್ಲಿರುತ್ತವೆ. ಖನಿಜೀಕರಿಸಿದ ಈ ಅಂಗಾಂಶಗಳಲ್ಲಿ ಹೆಚ್ಚು ಫ್ಲೋರೈಡ್ ಇರುತ್ತದೆ. ಆಂಗಿಕ ಅಂಗಾಂಶದಲ್ಲಿ ಕೊಲಾಜೆನ್ ಮತ್ತು ಪ್ರೊಟೀನ್ ಪಾಲಿಸಾಕರೈಡು ಇರುತ್ತವೆ. ಹಲ್ಲುಗಾರೆ–ಗಾಜುಲೇಪಗಳ ಸಂಧಿಸ್ಥಾನ ಬೇರಿನ ತುದಿಯ ವರೆಗೆ ಕೋಶಗಳಿರುವುದಿಲ್ಲ. ಉಳಿದ ಭಾಗದಲ್ಲಿ ಕೋಶಗಳಿರುವುವು.

ಹೊರದಂತ ಮೂಳೆನಾರು (ಪೆರಿಯೊಡಾಂಟಲ್ ಲಿಗಮೆಂಟ್): ಹಲ್ಲುಗಳನ್ನು ವದನಾಸ್ತಿಯ ಮೂಳೆಗೆ ಬಂಧಿಸುವ ಹಾಗೂ ಕಾರ್ಯನಿರತ ಹಲ್ಲುಗಳಿಗೆ ಆಧಾರನೀಡುವ ಭಾಗ. ಎರಡು ಖನಿಜೀಕರಿಸಿದ ಅಂಗಾಂಶಗಳು ಹಾಗೂ ಇನ್ನೆರಡು ಎಳೆಗಳಿಂದ ಕೂಡಿದ ಅಂಗಾಂಶಗಳನ್ನು ಹೊಂದಿದೆ. ಅನೇಕ ಬಗೆಯ ಕೋಶಗಳು, ರಕ್ತನಾಳ, ದುಗ್ಧನಾಳ ಮತ್ತು ನರಗಳಿರುತ್ತವೆ.

ಹಲ್ಲುಗೂಡಿನ ಮೂಳೆ: ವಸಡಿನ ಒಳಭಾಗದ ಮ್ಯಾಕ್ಸಿಲ್ಲ ಹಾಗೂ ಮ್ಯಾಂಡಿಬಲ್ ಮೂಳೆಗಳ ಭಾಗವಾಗಿದ್ದು ಹಲ್ಲು ಗೂಡನ್ನು ರೂಪಿಸಿ ಆಧಾರ ನೀಡುತ್ತದೆ. ಇದರಲ್ಲಿ, ಹಲ್ಲು ಗೂಡಿನ ಮೂಲಮೂಳೆ ಮತ್ತು ಆಸರೆಯಾಗಿರುವ ಹಲ್ಲುಗೂಡಿನ ಮೂಳೆ ಎಂಬ ಎರಡು ಭಾಗಗಳಿವೆ. ಆಸರೆ ಹಲ್ಲುಗೂಡಿನ ಮೂಳೆಯಲ್ಲಿ, ದೃಢವಾದ ಮೂಳೆಯುಳ್ಳ ಒಳತಟ್ಟೆ ನಿರ್ಮಿಸುವ ತಿರುಳುತಟ್ಟೆ ಮತ್ತು ತಿರುಳುತಟ್ಟೆ ಹಾಗು ಹಲ್ಲುಗೂಡಿನ ಮೂಲಮೂಳೆಯ ನಡುವಿನ ಸ್ಪಂಜು ಮೂಳೆ ಎಂಬ ಎರಡು ಉಪವಿಧಗಳಿವೆ. ಇದರಲ್ಲಿ 65% ಅಜೈವಿಕ ಮತ್ತು 35% ಜೈವಿಕ ಅಂಗಾಂಶಗಳಿರುತ್ತವೆ. ಜೈವಿಕ ಅಂಗಾಂಶದಲ್ಲಿ ಕೊಲಾಜೆನ್, ಗ್ಲೈಕೊಪ್ರೊಟೀನ್, ಪ್ರೋಟಿಯೊಗ್ಲೈಕಾನ್ಸ್‌ಗಳು, ಅಜೈವಿಕ ಅಂಗಾಂಶದಲ್ಲಿ ಕ್ಯಾಲ್ಷಿಯಂ ಆರ್ಥೊಫಾಸ್ಫರಸ್, ಹೈಡ್ರಾಕ್ಸಿಅಪಟೈಟ್ ಹರಳುಗಳು ಇರುತ್ತವೆ.

(ಎಸ್.ಎಸ್.ಎಚ್.)

**ದಂತ ವಿನ್ಯಾಸ:** ಆಹಾರವನ್ನು ಕತ್ತರಿಸಿ ಅಗೆದು ಪುಡಿಮಾಡಿ ಸುಲಭವಾಗಿ ಜೀರ್ಣಿಸುವುದಕ್ಕಾಗಿ ಬೆಳೆದ ಹಲ್ಲುಗಳು, ಆಹಾರಸೇವನೆಯ ವಿಧಾನವನ್ನವಲಂಬಿಸಿ ವಿವಿಧ ಪ್ರಾಣಿಗಳಲ್ಲಿ ಆದ ಮಾರ್ಪಾಡು (ಡೆಂಟಿಷನ್). ಅನೇಕ ಕಶೇರುಕಗಳಲ್ಲಿ ಹಲ್ಲುಗಳು ಕೇವಲ ಆಹಾರವನ್ನು ಹಿಡಿಯುವುದಕ್ಕೆ ಉಪಯೋಗವಾಗುತ್ತವೆ. ಸ್ತನಿಗಳಲ್ಲಿ ಮಾತ್ರ ಆಹಾರವನ್ನು ಅಗೆದು ಪುಡಿಮಾಡುವುದಕ್ಕೂ ಉಪಯುಕ್ತವಾಗುವುವು. ಕಶೇರುಕಗಳಲ್ಲಿ ಹೊರಚರ್ಮದ ಹಾಗೂ ನೈಜ ಹಲ್ಲುಗಳೆಂಬ ಎರಡು ಬಗೆಗಳಿವೆ. ಎಪಿತೀಲಿಯ ಪದರದಿಂದ ಹೊರಚಾಚಿಕೊಂಡು ಗಟ್ಟಿಯಾಗಿ, ಚೂಪಾಗಿ, ಕೊಂಬಿನಂತೆ ಮಾರ್ಪಾಡಾಗಿರುವ ಹೊರಚರ್ಮದ ಹಲ್ಲುಗಳು ಕೆಲವು ಕಶೇರುಕಗಳಲ್ಲಿ ಮಾತ್ರ ಇರುತ್ತವೆ. ಚಕ್ರಾಸ್ಯಗಳ ಉಪವಂಶಕ್ಕೆ ಸೇರುವ ಲೆಂಫ್ರಿಗಳಲ್ಲಿ ಬಾಯಿಯ ಲಾಳಿಕೆಯ ಒಳಗಿನ ಹೊರತಲದಲ್ಲಿ ಹಾಗೂ ನಾಲಿಗೆಯ ಮೇಲೆ ಮತ್ತು ಉಭಯಜೀವಿಗಳ ಲಾರ್ವಗಳ ವದನಾಸ್ಥಿಯ ತುದಿಯಲ್ಲಿ ಹೊರಚರ್ಮದ ಹಲ್ಲುಗಳಿರುವುವು. ಹೊರಚರ್ಮದ ಹಲ್ಲುಗಳು ಸಾಮಾನ್ಯವಾಗಿ ಚೂಪಾಗಿ ಗೋಪುರಾಕಾರದಲ್ಲಿರುವುವು. ಇರುವೆಭಕ್ಷಕಗಳಲ್ಲಿ ಇವು ಬಹುಶೃಂಗೀ ತಟ್ಟೆಗಳಾಗಿ ಮಾರ್ಪಾಡಾಗಿರುತ್ತವೆ. ಕಡಲ ಹಸುಗಳನ್ನೊಳಗೊಂಡ ಸಿರೆನಿಯಗಳಲ್ಲಿ ಬಹುಶೃಂಗಿಗಳಾಗಿದ್ದು ಪುಡಿಮಾಡುವ ತಟ್ಟೆಗಳಾಗಿ ಮಾರ್ಪಾಡಾಗಿವೆ. ಇವುಗಳ ಜೊತೆಗೆ ನೈಜ ಹಲ್ಲುಗಳೂ ಇರುವುವು.

ನೈಜಹಲ್ಲು ಒಳಚರ್ಮದಿಂದ ಬೆಳೆಯುತ್ತದೆ. ಸ್ತನಿಗಳಲ್ಲಿ ಈ ಹಲ್ಲುಗಳನ್ನು ಸುತ್ತುವರಿದ ಗಟ್ಟಿಯಾದ ಹೊಳಪಾಗಿರುವ ಎನಾಮಲ್ ಅಥವಾ ದಂತಾಗ್ರ ಹೊರಚರ್ಮದಿಂದ

ಬೆಳೆಯುತ್ತದೆ. ಮೀನುಗಳಲ್ಲಿ, ಉಭಯಜೀವಿಗಳಲ್ಲಿ ಮೀಸೆಂಖೈಮ್ ನಿಂದ ಹುಟ್ಟುವ ವಿಟ್ರೋಡೆಂಟೈನ್ ಇರುತ್ತದೆ. ಮೃದ್ವಸ್ಥಿ ಮೀನುಗಳಲ್ಲಿ ವಿಟ್ರೋಡೆಂಟೈನ್‌ನಿಂದೊಡಗೂಡಿದ ಹಲ್ಲುಗಳು ಪಟ್ಟಿಯಾಕಾರದ ಶಲ್ಕಗಳಂತಿರುತ್ತವೆ. ಪುರಾತನ ಮೀನು, ಮೃದ್ವಸ್ಥಿ ಮೀನುಗಳ ಶಲ್ಕಗಳಿಗೂ, ನೈಜಹಲ್ಲುಗಳಿಗೂ ರಚನೆಯಲ್ಲಿ ಸಾಮ್ಯವಿರುವುದರಿಂದ ಇವು ಶಲ್ಕಗಳಿಂದಲೇ ಉದ್ಭವಿಸಿರಬೇಕು ಎಂದು ಭಾವಿಸಲಾಗುತ್ತಿದೆ.

ಹಲ್ಲುಗಳ ರಚನೆ: ನೋಡಿ – ದಂತ.

ಅನೇಕ ಪ್ರಾಣಿಗಳಲ್ಲಿ ಒಮ್ಮೆ ಬೆಳೆದ ಹಲ್ಲು ಜೀವಿತಾವಧಿಯಲ್ಲಿ ಅನೇಕ ಬಾರಿ ಬಿದ್ದು ಹೊಸ ಹಲ್ಲುಗಳು ಹುಟ್ಟುತ್ತವೆ. ಇವುಗಳನ್ನು ಪೊಲಿಫೈಯೊಡಾಂಟ್ ಎನ್ನುವರು. ಕೆಲವು ಸ್ತನಿಗಳಲ್ಲಿ ಎರಡು ಶ್ರೇಣಿಗಳಿರುವುವು. ಮೊದಲ ಶ್ರೇಣಿಯ ಹಲ್ಲುಗಳು ಹಾಲು ಹಲ್ಲುಗಳು. ಇವು ನಿಶ್ಚಿತ ಅವಧಿಯಲ್ಲಿ ಬಿದ್ದು ಎರಡನೇ ಶ್ರೇಣಿಯ ಹಲ್ಲುಗಳು ಬೆಳೆಯುವುವು. ಎರಡನೆಯ ಶ್ರೇಣಿಯನ್ನು ಶಾಶ್ವತ ಹಲ್ಲು ಎನ್ನುವರು. ಈ ಸ್ಥಿತಿಗೆ ಡೈಫೈಯೊಡಾಂಟ್ ಎಂದು ಹೆಸರು. ಜೀವನ ಪರ್ಯಂತ ಒಂದೇ ಶ್ರೇಣಿ ಹಲ್ಲುಗಳಿದ್ದರೆ ಅದನ್ನು ಮೊನೊಫೈಯೊಡಾಂಟ್ ಎಂದು ಕರೆಯುತ್ತಾರೆ.

ಹಲ್ಲುಗಳನ್ನು ಬಾಯಲ್ಲಿ, ಫೆರಿಂಜಿಯಲ್ ಗೋಡೆಗಳ ಮಧ್ಯದಲ್ಲಿರುವ ಹೊರಚರ್ಮ ಹಾಗೂ ದವಡೆಗಳಿಗೆ ಆಧಾರವಾಗಿರುವ ಮೃದ್ವಸ್ಥಿ ಅಥವಾ ಮೂಳೆಗಳಿರುವಲ್ಲಿ ಕಾಣಬಹುದು. ಕೆಲವು ಮೀನುಗಳಲ್ಲಿ ನಾಲಿಗೆಯ ಅಥವಾ ಕಿವಿರುಕಮಾನುಗಳ ಮೇಲೆ ಹಲ್ಲುಗಳಿರುವುವು. ಸ್ತನಿಗಳಿಗಿಂತ ಕೆಳಸ್ತರದ ಪ್ರಾಣಿಗಳಲ್ಲಿ ಹಲ್ಲುಗಳೆಲ್ಲವೂ ಒಂದೇ ತೆರನಾಗಿರುತ್ತವೆ. ಈ ಸ್ಥಿತಿಯನ್ನು ಹೊಮೊಡಾಂಟ್ ಎನ್ನುವರು. ಕೆಲವು ಮೀನುಗಳಲ್ಲಿ ಹಾಗೂ ಅನೇಕ ಸ್ತನಿಗಳಲ್ಲಿ ಬಾಚಿಹಲ್ಲು, ಕೋರೆಹಲ್ಲು, ಚರ್ವಣಹಲ್ಲು ಅಥವಾ ಮುಂದವಡೆ ಹಲ್ಲು ಹಾಗೂ ದವಡೆ ಹಲ್ಲುಗಳೆಂಬ ನಾಲ್ಕು ಬಗೆಯ ಹಲ್ಲುಗಳಿವೆ. ಈ ಹಲ್ಲುಗಳ ಆಕಾರ ಹಾಗೂ ವ್ಯವಸ್ಥೆಯಲ್ಲಿ ವ್ಯತ್ಯಾಸಗಳಿರುತ್ತವೆ. ಇದನ್ನು ಹೆಟರೊಡಾಂಟ್ ಎನ್ನುವರು.




1. ಪ್ಲೂರೋಡಾಂಟ್ 2. ಆಕ್ರೋಡಾಂಟ್ 3. ಥಿಕೋಡಾಂಟ್ 4. ಥಿಕೋಡಾಂಟ್ (ಮುಚ್ಚಿದ ಬೇರು)

ಹಲ್ಲುಗಳು ಮೂಳೆಗೆ ಜೋಡಿಸಿಕೊಂಡ ಬಗೆಯಲ್ಲೂ ವ್ಯತ್ಯಾಸಗಳಿವೆ. ಕೆಲವು ಪ್ರಭೇದಗಳಲ್ಲಿ ಹಲ್ಲುಗಳು ದವಡೆ ಮೂಳೆಗಳ ಮೇಲೆ ಏಣುಗಳಂತೆ ಜೋಡಿಸಿಕೊಂಡಿರುತ್ತವೆ. ಈ ಹಲ್ಲುಗಳನ್ನು ಪ್ಲೂರೊಡಾಂಟ್ ಎನ್ನುವರು. ದವಡೆ ಮೂಳೆಗಳ ಮೇಲೆ ಏಣುಗಳಿದ್ದು ಅವುಗಳ ನಡುವಿನ ಕುಳಿಗಳಲ್ಲಿ ಹಲ್ಲುಗಳಿದ್ದರೆ ಅವು ಅಕ್ರೊಡಾಂಟ್ ಹಲ್ಲುಗಳು. ಕೆಲವು ಮೀನುಗಳಲ್ಲಿ, ಮೊಸಳೆಗಳಲ್ಲಿ ಹಾಗೂ ಸ್ತನಿಗಳಲ್ಲಿ ಹಲ್ಲುಗಳು ಹೆನ್ವಸ್ತಿ ಮೂಳೆಗಳ ಗೂಡಿನಲ್ಲಿರುವುವು. ಇದನ್ನು ಥಿಕೋಡಾಂಟ್ ಮಾದರಿ ಎನ್ನುವರು. ಕೆಲವು ಸರೀಸೃಪ ಪಳೆಯುಳಿಕೆಗಳು, ಆರ್ಕಿಯಾಪ್ಟೆರಿಕ್ಸ್ ಪಕ್ಷಿ ಇದಕ್ಕೆ ಉದಾಹರಣೆ. ಸ್ತನಿಗಳಲ್ಲಿ ತೆರೆದ ಹಾಗು ಮುಚ್ಚಿದ ಬೇರುಗಳಿರುವುವು. ತೆರೆದ ಬೇರಿನಲ್ಲಿ ಪಲ್ಪ ಕುಹರ ಅಥವಾ ಬೇರಿನ ನಾಳ ತೆರೆದಿದ್ದು, ಹೊಸ ಡೆಂಟಿನ್‌ನ ತಯಾರಿಕೆಯಿಂದ ಹಲ್ಲುಗಳು ಜೀವನ ಪರ್ಯಂತ ಬೆಳೆಯುತ್ತಿರುತ್ತವೆ. ಆನೆಯ ದಂತ ಹಾಗೂ ಇಲಿಗಳ ಬಾಚಿಹಲ್ಲುಗಳು ಉದಾಹರಣೆ. ಮುಚ್ಚಿದ ಹಲ್ಲುಗಳಲ್ಲಿ ಬೇರಿನ ನಾಳ ತುಂಬಾ ಚಿಕ್ಕದಾಗಿದ್ದು ನರಗಳು ಹಾಗೂ ರಕ್ತನಾಳಗಳಿಗೆ ರಹದಾರಿಯಾಗಿರುತ್ತದೆ. ಈ ಹಲ್ಲುಗಳು ತಮ್ಮ ನಿರ್ಧಾರಿತ ಅಳತೆಯನ್ನು ತಲುಪಿದ ನಂತರ ಬೆಳೆಯುವುದಿಲ್ಲ.

ಕೆಲವು ಕಶೇರುಕಗಳಲ್ಲಿ ಹಲ್ಲಿನ ಜೋಡಣೆ ಸಾಧಾರಣವಾಗಿರುತ್ತದೆ. ಶಾರ್ಕ್ ಮತ್ತು ರೇಗಳಲ್ಲಿ ಹಲ್ಲುಗಳು ನೇರವಾಗಿ ಮೃದ್ವಸ್ಥಿಯಿಂದಾದ ದವಡೆ ಎಲುಬುಗಳಿಗೆ ಜೋಡಿಸಿದೆ. ಅನೇಕ ಕಶೇರುಕಗಳಲ್ಲಿ ಹಲ್ಲುಗಳು ಕೆಳಗಿನ ಮೂಳೆಗಳಿಗೆ ಬೆಸೆದಿರುತ್ತವೆ. ಇದನ್ನು ಅಕ್ರೋಡಾಂಟ್ ವಿಧವೆನ್ನುವರು. ಕೆಲವು ಮೀನುಗಳಲ್ಲಿ ಹಲ್ಲುಗಳಿಗೆ ಕೀಲುಗಳಿರುವುವು. ಮೂಳೆನಾರುಗಳು ಈ ಹಲ್ಲುಗಳನ್ನು ಸ್ವಸ್ಥಾನದಲ್ಲಿ ಬಂಧಿಸುತ್ತವೆ. ಇವುಗಳನ್ನು ಪ್ಲೂರೊಡಾಂಟ್ ಎನ್ನುವರು.

ಕಡಲಕುದುರೆ, ಕೊಳಿವೆ ಮೀನು, ಸ್ಟರ್ಜನ್ ಮೀನು, ಕಾಡುಗಪ್ಪೆ, ಆಮೆ ಹಾಗೂ ಎಲ್ಲ ಹಕ್ಕಿಗಳಲ್ಲಿ ಹಲ್ಲುಗಳಿರುವುದಿಲ್ಲ. ಉಳಿದ ಮೀನುಗಳಲ್ಲಿ ನೈಜ ಹಲ್ಲುಗಳಿರುವುವು. ಶಂಕುವಿನಾಕಾರದ ಈ ಹಲ್ಲುಗಳು ಮುಂದೆ ಚಾಚಿಕೊಂಡಿರುವುವು. ಕೆಲವು ಪ್ರಭೇದಗಳಲ್ಲಿ ತ್ರಿಕೋನಾಕಾರದಲ್ಲಿರುತ್ತವೆ. ದ್ವಿಚರಿಗಳಲ್ಲಿ ಹಲ್ಲುಗಳು ಶಂಕುವಿನಾಕಾರದಲ್ಲಿದ್ದು ಮೇಲಿನ ಹಾಗೂ ಕೆಳ ದವಡೆಯ ಕೆಲವು ಮೂಳೆಗಳಿಗೆ ಮಾತ್ರ ಸೀಮಿತವಾಗಿರುವುವು. ಕೆಲವು ನವ್ಯ ದ್ವಿಚರಿಗಳಲ್ಲಿ ಹಲ್ಲುಗಳು ಉರುಳೆಯಾಕಾರದಲ್ಲಿವೆ. ಕೆಳಭಾಗ ಚಿಕ್ಕದಾಗಿದ್ದು ಕಾಂಡಗಳಂತೆ ಮಾರ್ಪಾಡಾಗಿವೆ. ಇವುಗಳನ್ನು ಪೆಡಿಕುಲೇಟ್ ಹಲ್ಲುಗಳೆನ್ನುವರು. ಹಾವುಗಳ ವಿಷದ ಹಲ್ಲುಗಳಲ್ಲಿ ಒಂದು ತೋಡು ಇದ್ದು ಅದರ ಮೂಲಕ ವಿಷನಾಳ ಹಾಯುತ್ತದೆ. ಸರೀಸೃಪಗಳಲ್ಲಿ ಅಕ್ರೊಡಾಂಟ್, ಪ್ಲೂರೊಡಾಂಟ್ ಅಥವಾ ಥಿಕೊಡಾಂಟ್ ಹಲ್ಲುಗಳಿರುವುವು. ಕೆಲವು ಹಾವು ಹಲ್ಲಿಗಳ ಭ್ರೂಣ ಬೆಳವಣಿಗೆಯಾಗುವಾಗ ಮೊಟ್ಟೆ ಹಲ್ಲುಗಳೆಂಬ ವಿಶೇಷ ಹಲ್ಲುಗಳು ಬೆಳೆಯುತ್ತವೆ. ಭ್ರೂಣ ಪೂರ್ತಿ ಬೆಳೆದಾಗ ಮೊಟ್ಟೆಯ ಕವಚವನ್ನು ಭೇದಿಸಿ ಹೊರಬರಲು ಇವು ಸಹಕರಿಸುತ್ತವೆ. ಮರಿಗಳು ಬೆಳೆದಂತೆ ಇವು ಬಿದ್ದು ಹೊಸ ಹಲ್ಲುಗಳು ಹುಟ್ಟುತ್ತವೆ.

ಸ್ತನಿಗಳಲ್ಲಿ ಪ್ಲಾಟಿಪಸ್‌ನಲ್ಲಿ ಹೊರಚರ್ಮದ ಹಲ್ಲುಗಳು ಮಾತ್ರ ಇರುವುವು. ಎಕಿಡ್ನ, ಇರುವೆ ಭಕ್ಷಕ, ಕೆಲವು ತಿಮಿಂಗಿಲಗಳಲ್ಲಿ ಹಲ್ಲುಗಳಿರುವುದಿಲ್ಲ. ಹಲ್ಲುಗಳಿರುವ ತಿಮಿಂಗಿಲಗಳಲ್ಲಿ ಹೊಮೊಡಾಂಟ್ ಸ್ಥಿತಿಯಿರುತ್ತದೆ. ಉಳಿದ ಸ್ತನಿಗಳೆಲ್ಲವೂ ಹೆಟಿರೊಡಾಂಟ್ ವಿಧಗಳು. ಪ್ರತಿಯೊಂದು ಸ್ತನಿ ಪ್ರಭೇದದಲ್ಲೂ ಹಲ್ಲುಗಳ ಸಂಖ್ಯೆ ಹಾಗೂ ವಿಧ ನಿಶ್ಚಿತವಾಗಿರುತ್ತದೆ. ಈ ಸಂಖ್ಯೆ ಹಾಗೂ ಮಾದರಿಯನ್ನು ನಮೂದಿಸುವುದನ್ನು ದಂತ ಸೂತ್ರ ಎನ್ನುವರು. ಮಾದರಿ ಸ್ತನಿಗಳಲ್ಲಿ ಮೇಲ್ದವಡೆಯಲ್ಲಿ ಇಪ್ಪತ್ತೆರಡು ಹಾಗೂ ಕೆಳದವಡೆಯಲ್ಲಿ ಇಪ್ಪತ್ತೆರಡು ಹೀಗೆ ಒಟ್ಟು ನಲವತ್ತನಾಲ್ಕು ಹಲ್ಲುಗಳಿರುವುವು. ಅದನ್ನು,

$$\frac{3,\ 1,\ 4,\ 3}{3,\ 1,\ 4,\ 3}$$

ಎಂದು ನಮೂದಿಸುವರು. 3,1,4,3/3,1,4,3 ಮಾದರಿ ಸ್ತನಿಯ ದಂತ ಸೂತ್ರ. ಈ ಸೂತ್ರದಲ್ಲಿ, ಗೆರೆಯ ಮೇಲ್ಭಾಗದಲ್ಲಿರುವ ಸಂಖ್ಯೆಗಳು ಮೇಲ್ದವಡೆಯ ಒಂದು ಭಾಗದ ಹಲ್ಲುಗಳನ್ನೂ, ಕೆಳಭಾಗದ ಸಂಖ್ಯೆಗಳು ಕೆಳದವಡೆಯ ಒಂದು ಭಾಗದ ಹಲ್ಲುಗಳ ಸಂಖ್ಯೆಯನ್ನೂ ತಿಳಿಸುತ್ತವೆ. ಅಂದರೆ ಈ ಜೀವಿಯ ಒಂದೊಂದು ದವಡೆಯ ಒಂದು ಕಡೆಯಲ್ಲಿ ಕ್ರಮವಾಗಿ ಮೂರು ಬಾಚಿ ಹಲ್ಲುಗಳು, ಒಂದು ಕೋರೆ ಹಲ್ಲು, ನಾಲ್ಕು ಚರ್ವಣ ಹಲ್ಲು ಹಾಗೂ ಮೂರು ದವಡೆ ಹಲ್ಲುಗಳಿವೆ ಎಂದರ್ಥ. ಕುದುರೆ ಹಾಗೂ ಹಂದಿಗಳಲ್ಲಿ ಮಾತ್ರ ನಲವತ್ತನಾಲ್ಕು ಹಲ್ಲುಗಳಿರುವುವು. ಉಳಿದ ಪ್ರಭೇದಗಳಲ್ಲಿ ಹಲ್ಲುಗಳ ಸಂಖ್ಯೆಯಲ್ಲಿ ವ್ಯತ್ಯಾಸವಿರುತ್ತದೆ. ಮಾನವನ ದಂತ ಸೂತ್ರ 2,1,2,3/2123(=32). ಬೆಕ್ಕು 3,1,3,1/3,1,2,1(=30), ಮೊಲ 2,0,3,3/1,0,3,3(28), ಇಲಿ 1,0,0,3/1,0,0,3(=16).

ಸ್ತನಿಗಳ ಹಲ್ಲುಗಳ ಸಂಖ್ಯೆ ಹಾಗೂ ದಂತ ವಿನ್ಯಾಸ ಅವುಗಳ ಆಹಾರವನ್ನು ಅವಲಂಬಿಸಿದೆ. ಅಳಿಲು, ಮೊಲ, ಇಲಿ ಮುಂತಾದ ಸಸ್ಯಾಹಾರಿ ಪ್ರಾಣಿಗಳಲ್ಲಿ ಕೋರೆಹಲ್ಲು ಹಾಗೂ ಅದರ ಪಕ್ಕದ ಒಂದು ಅಥವಾ ಎರಡು ಮುಂದವಡೆ ಹಲ್ಲುಗಳು ಬೆಳೆಯುವುದಿಲ್ಲ. ದವಡೆಯಲ್ಲಿ ಖಾಲಿಯಿರುವ ಈ ಸ್ಥಳವನ್ನು ಡೈಯಸ್ಟೀಮಾ ಎನ್ನುವರು. ಮಾಂಸಾಹಾರಿ ಪ್ರಾಣಿಗಳಲ್ಲಿ ಮೇಲ್ದವಡೆಯ ಕೋರೆಹಲ್ಲು ಹಾಗೂ ಕೆಳದವಡೆಯ ಮೊದಲ ಮುಂದವಡೆ ಹಲ್ಲುಗಳು ಬಲವಾಗಿ ಬೆಳೆದಿರುತ್ತವೆ. ಈ ಹಲ್ಲುಗಳ ಮೇಲೆ ವಿಶೇಷವಾದ ಪ್ರಭಾವಳಿಯಿದ್ದು ಅವನ್ನು ಕ್ಯಾರ್ನೆಸಿಯಲ್ ಹಲ್ಲುಗಳೆನ್ನುವರು. ಮಾಂಸವನ್ನು ಕಚ್ಚಿ ಸುಲಭವಾಗಿ ತುಂಡು ಮಾಡಲು ಈ ಮಾರ್ಪಾಡು.

ದವಡೆಹಲ್ಲುಗಳ ಮೇಲೆ ಸಾಮಾನ್ಯವಾಗಿ ಏಣುಗಳಿರುವುವು. ಈ ಏಣುಗಳ ಸಂಖ್ಯೆ ಹಾಗೂ ರಚನೆ ಕೂಡ ಆಹಾರವನ್ನು ಅವಲಂಬಿಸಿರುತ್ತದೆ. ಮನುಷ್ಯನ ದವಡೆ ಹಲ್ಲುಗಳಲ್ಲಿರುವಂತೆ ಚಿಕ್ಕ ಗುಂಡಾದ ಏಣುಗಳಿದ್ದರೆ ಅದನ್ನು ಬ್ಯುನೊಡಾಂಟ್ ಎಂದು, ಮೇಲ್ಭಾಗದಲ್ಲಿ ಕಿರೀಟದಂತೆ ಎತ್ತರವಾಗಿದ್ದು ಹರಿತವಾಗಿದ್ದರೆ ಅವನ್ನು ಸೀಕೊಡಾಂಟ್ ಎಂದೂ, ಚೌಕಾಕಾರದ ಏಣುಗಳಿದ್ದರೆ ಅವನ್ನು ಸೆಲೆನೊಡಾಂಟ್ ಎಂದೂ, ಆನೆಗಳ ಹಲ್ಲುಗಳಂತೆ ಏಣುಗಳು ಉದ್ದವಾದ ಶ್ರೇಣಿಗಳಂತಿದ್ದರೆ ಲೊಫೊಡಾಂಟ್ ಎಂದು ಹೇಳುವರು.

ಕೆಲವು ಸ್ತನಿಗಳಲ್ಲಿ ಕೋರೆ ಹಲ್ಲುಗಳು ವಿಶೇಷವಾಗಿ ಮಾರ್ಪಾಡಾಗಿವೆ. ಆನೆಯ ಮೇಲ್ದವಡೆಯ ಕೋರೆ ಹಲ್ಲು ಹೊರಚಾಚಿಕೊಂಡಿದ್ದು, ಜೀವನ ಪರ್ಯಂತ ಬೆಳೆಯುತ್ತಲೇ ಇರುತ್ತದೆ. ಕೆಳದವಡೆಯಲ್ಲಿ ಕೋರೆ ಹಲ್ಲುಗಳೇ ಇರುವುದಿಲ್ಲ. ಕಾಡುಹಂದಿಗಳಲ್ಲಿ ಮೇಲಿನ ಹಾಗೂ ಕೆಳಗಿನ ದವಡೆಯ ಕೋರೆ ಹಲ್ಲುಗಳೂ ದಂತಗಳಾಗಿ

ಮಾರ್ಪಾಡಾಗಿರುತ್ತವೆ. ವಾಲ್‍ರಸ್‍ಗಳಲ್ಲಿಯೂ ಮೇಲ್ದವಡೆಯ ಕೋರೆ ಹಲ್ಲುಗಳು ದಂತಗಳಾಗಿ ಮಾರ್ಪಾಡಾಗಿರುವುವು. ದಂಶಕಗಳಲ್ಲಿ ಮುಂಭಾಗದ ಬಾಚಿಹಲ್ಲುಗಳ ಮೇಲೆ ಬಿರುಸಾದ ದಂತಾಗ್ರ ಅಥವಾ ಎನಾಮಲ್ ಆವರಿಸಿದ್ದು ಗಟ್ಟಿಯಾದ ಕಾಯಿಗಳನ್ನೂ ಕೂಡ ಇವು ಸುಲಭವಾಗಿ ಕೆರೆದು ತಿನ್ನಬಲ್ಲವು. ದಂತಾಗ್ರ ಸದಾ ಬೆಳೆಯುತ್ತಿರುತ್ತದೆ.

ಹಲವು ಸ್ತನಿಗಳ ಹೆಣ್ಣು ಗಂಡುಗಳ ದಂತ ವಿನ್ಯಾಸದಲ್ಲಿಯೂ ವ್ಯತ್ಯಾಸಗಳಿರುವುವು. ಗಂಡು ಕೋತಿಗಳ ಮುಂದವಡೆ ಹಲ್ಲುಗಳು ಹೆಣ್ಣಿಗಿಂತ ದೊಡ್ಡದಾಗಿರುತ್ತವೆ. ಏಷ್ಯಾದ ಆನೆಗಳಲ್ಲಿ ಗಂಡು ಆನೆಗಳಲ್ಲಿ ಮಾತ್ರ ದಂತ ಬೆಳೆದಿರುವುದು. ಹೆಣ್ಣಾನೆಗಳಲ್ಲಿ ದಂತ ಬೆಳೆಯುವುದಿಲ್ಲ.

ನಿಮ್ನ ಕಶೇರುಕಗಳಲ್ಲಿ ಶಂಕುವಿನಾಕಾರದ ಸರಳ ಹಲ್ಲುಗಳಿವೆ. ಉಚ್ಚ ಕಶೇರುಕಗಳ ಹಲ್ಲುಗಳ ರಚನೆ ಜಟಿಲವಾಗಿದೆ. ಆದರೂ ಹಲ್ಲುಗಳ ವಿಕಾಸದ ಬಗ್ಗೆ ಕೆಲವು ವಾದ ವಿವಾದಗಳಿವೆ. ಬಾಚಿಹಲ್ಲು ಹಾಗೂ ಕೋರೆ ಹಲ್ಲುಗಳಲ್ಲಿ ಒಂದೇ ಬೇರು ಇದ್ದು ಅವು ಹೆಚ್ಚು ಮಾರ್ಪಾಡಾಗುವುದಿಲ್ಲ. ಮೂಲ ಕಶೇರುಕಗಳಲ್ಲಿ ಬಹುಶಃ ಅವು ಉದ್ಭವಿಸಿರಬೇಕು. ಇಂಥ ಮೂರು ಹಲ್ಲುಗಳು ಕೂಡಿ ಏಣುಗಳಿರುವ ದವಡೆಹಲ್ಲುಗಳು ಉದಯವಾಗಿರಬಹುದು ಎಂದು ಹಲವರ ಅಭಿಪ್ರಾಯ. ಪಳೆಯುಳಿಕೆಗಳ ಅಧ್ಯಯನವೂ ಕೂಡ ಈ ತತ್ವವನ್ನು ಪುಷ್ಟೀಕರಿಸುತ್ತದೆ. (ಎಸ್.ಎಸ್.ಎಚ್.)

**ದಾಸರ ಹಾವು:** ಸರೀಸೃಪ ವರ್ಗ ಮತ್ತು ಬೊಯಿಡೆ ಕುಟುಂಬಕ್ಕೆ ಸೇರಿದ ಸುಮಾರು 6 ಜಾತಿಯ ಮತ್ತು 50 ಪ್ರಭೇದಗಳ ಹಾವುಗಳು. ಬೋವಾ ಪರ್ಯಾಯ ಹೆಸರು. ಕೆಲವರು ಹೆಬ್ಬಾವುಗಳನ್ನೂ ಸೇರಿಸುವರು. ಹೆಬ್ಬಾವುಗಳ ಹತ್ತಿರದ ಸಂಬಂಧಿಗಳು. ದಕ್ಷಿಣ ಅಮೇರಿಕಾದ ದೈತ್ಯ ಅನಕೊಂಡ ಕೂಡ ಇದರಲ್ಲಿ ಸೇರಿದೆ. ಸ್ಯಾಂಡ್ ಬೋವಾ, ಎರಿಕ್ಸ್, ವುಡ್‍ಸ್ನೇಕ್ಸ್, ಟ್ರೋಪಿಡಾಲಫಸ್ ಮುಂತಾದುವು ಈ ಗುಂಪಿಗೆ ಸೇರುತ್ತವೆ.



ನೆಲದ ಮೇಲೆ ಅಥವಾ ಮರದ ಮೇಲೆ ವಾಸಿಸುತ್ತವೆ. ಸ್ಯಾಂಡ್ ಬೋವ ಉತ್ತರ ಆಫ್ರಿಕಾ ಮತ್ತು ದಕ್ಷಿಣ ಏಷ್ಯಾಗಳ ಅರೆ ಮರುಭೂಮಿಗಳಲ್ಲಿ ಬಿಲ ತೋಡಿ ವಾಸಿಸುವುವು. ಉತ್ತರ ಅಮೇರಿಕಾದಲ್ಲಿ ರೋಝಿ ಮತ್ತು ರಬ್ಬರ್ ದಾಸರ ಹಾವುಗಳು, ಸ್ಯಾಂಡ್ ಬೋವಾಗಳನ್ನೆ ಹೋಲುತ್ತವೆ.

ಎಲ್ಲ ದಾಸರ ಹಾವುಗಳು ವಿಷರಹಿತವಾದವು. ಆಹಾರವನ್ನು ನುಂಗಿ ಉಸಿರು ಕಟ್ಟಿಸಿ ಶರೀರವನ್ನು ಕುಗ್ಗಿಸಿ ಸಾಯಿಸುತ್ತವೆ. ರಾತ್ರಿ ವೇಳೆಯಲ್ಲಿ ಬಹಳ ಚಟುವಟಿಕೆಯಿಂದ ಇರುತ್ತವೆ. ನಾಲಗೆ ಮೇಲೆ ತಮ್ಮ ಆಹಾರದ ಶಾಖವನ್ನು ಗ್ರಹಿಸುವ ಕುಳಿಗಳಿವೆ. ಶರೀರದ ಮೇಲೆ ಸುಂದರವಾದ ಗುರುತು ಹಾಗೂ ಬಣ್ಣಗಳಿವೆ. ಆಕರ್ಷಕವಾಗಿರುವುವು. ರೇನ್‍ಬೊ ಬೋವಾ ಹೆಚ್ಚು ಆಕರ್ಷಕವಾದುದು.

ಬೋವ ಕಾನ್‍ಸ್ಟ್ರಿಕ್ಟರ್ ಚೆನ್ನಾಗಿ ತಿಳಿದಿರುವ ಪ್ರಭೇದ. ಇದು ಮೆಕ್ಸಿಕೊದಿಂದ ಅರ್ಜೆಂಟೈನ ತನಕ ಮತ್ತು ವೆಸ್ಟ್ ಇಂಡೀಸ್‍ನಲ್ಲಿ ಕಾಣಬರುತ್ತದೆ. ಇದರ ಉದ್ದ 2–3 ಮೀ. ಗರಿಷ್ಟ 5.6 ಮೀ. ಬೆಳೆದ ದಾಖಲೆ ಇದೆ.

ದೊಡ್ಡ ಹಲ್ಲಿ ಮತ್ತು ಪಕ್ಷಿಗಳು ಇವುಗಳ ಆಹಾರ. ಅಳಿಲು, ಇಲಿಗಳು ಮುಂತಾದ ಸ್ತನಿಗಳನ್ನು ತಿನ್ನುವುವು. ನಿರಂತರವಾಗಿ ಆಹಾರವನ್ನು ತೆಗೆದುಕೊಳ್ಳುವುದಿಲ್ಲ. ಒಂದು ಬಾರಿ ಆಹಾರ ತೆಗೆದುಕೊಂಡರೆ ಮಧ್ಯೆ ಹೆಚ್ಚಿನ ಅಂತರವಿರುತ್ತದೆ. ಚಟುವಟಿಕೆ ಇಲ್ಲದಿದ್ದಾಗ ಬಹಳ ಕಡಿಮೆ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತವೆ. ಆ ಸಮಯದಲ್ಲಿ ಆಹಾರವಿಲ್ಲದೆ, ಅನೇಕ ದಿನಗಳು ಬದುಕಬಲ್ಲುವು.

ಚಲನೆ ನಿಧಾನ. ಆದ್ದರಿಂದ, ಚಲಿಸುವ ಪ್ರಾಣಿಗಳ ಮೇಲೆ ಆಹಾರಕ್ಕಾಗಿ ವೇಗವಾಗಿ ಎರಗಲಾಗುವುದಿಲ್ಲ, ಬದಲಾಗಿ ರಹಸ್ಯವಾಗಿ ಅನುಮಾನ ಬಾರದ ರೀತಿಯಲ್ಲಿ ಪ್ರಾಣಿಗಳ ಮೇಲೆ ಹರಿಯುತ್ತವೆ. ಅಪಾಯವಿದಾಗ ಅದರಿಂದ ದೂರ ಹೋಗುವುವು. ಅಥವಾ ಬುಸುಗುಟ್ಟಿ ಹೆದರಿಸುವುವು. ಬುಸುಗುಟ್ಟುವ ಶಬ್ದ ಹಬೆ ಹೋಗುವಾಗಿನ ಶಬ್ದದ ರೀತಿಯಿರುತ್ತದೆ. ಈ ಶಬ್ದ 30 ಮೀ. ದೂರ ಕೇಳಿಸುತ್ತದೆ.

ಮರಿಗಳಿಗೆ ಜನ್ಮಕೊಡುತ್ತವೆ. ಡಿಸೆಂಬರ್‌ನಿಂದ ಮಾರ್ಚ್ ತಿಂಗಳುಗಳಲ್ಲಿ ಸಂಭೋಗ ಕ್ರಿಯೆ ನಡೆಯುತ್ತದೆ. ಮರಿಗಳ ಉದ್ದ 50 ಸೆಂಮೀ. ಒಮ್ಮೆ 20 ರಿಂದ 60 ಮರಿಗಳಿಗೆ ಜನ್ಮಕೊಡುತ್ತವೆ. ಮೊದಲನೆ ವರ್ಷದಲ್ಲಿ ಮರಿಗಳ ಉದ್ದ ಎರಡರಷ್ಟಾಗುತ್ತದೆ. ಇವುಗಳ ಬೆಳವಣಿಗೆಯ ವೇಗ, ಉಷ್ಣಾಂಶ ಮತ್ತು ಆಹಾರವನ್ನವಲಂಬಿಸಿದೆ. 2 ಅಥವಾ 3 ವರ್ಷಗಳಲ್ಲಿ ಪೂರ್ತಿ ಬೆಳೆಯುತ್ತವೆ. (ಎಸ್.ಆರ್.ಎಸ್.)

**ದುಗ್ಧರಸ:** ಲೋಮ ರಕ್ತನಾಳಗಳಿಂದ ಒಸರಿ ನೆರೆಯಲ್ಲಿರುವ ಇತರ ಲೋಮನಾಳಗಳಲ್ಲಿ ಹರಿಯುವ ದ್ರವ (ಲಿಂಫ್). ಲಸೀಕ, ದುಗ್ಧಜಲ, ವಸ, ಅಮೃಕ್ಕರ, ಇವು ಪರ್ಯಾಯ ನಾಮಗಳು. ಮೇಲ್ಮಟ್ಟದ ಪ್ರಾಣಿಗಳಲ್ಲಿ ಗುಂಡಿಗೆಯಿಂದ ಹೊರಟ ರಕ್ತನಾಳಗಳು ಗುಂಡಿಗೆಯನ್ನು ಪುನಃ ಸೇರುವವರೆಗೂ ಎಲ್ಲೂ ತೆರೆದುಕೊಂಡಿರುವುದಿಲ್ಲ. ಇವುಗಳಲ್ಲಿ ಕೇಶಾಲಗಳ (ಲೋಮನಾಳ, ಕ್ಯಾಪಿಲ್ಲರೀಸ್) ಸಂಖ್ಯೆ ಅಮಿತವಾಗಿದೆ. ಲೋಮನಾಳಗಳ ಭಿತ್ತಿಯ ಮೂಲಕ ಪ್ರೋಟೀನ್‌ರಹಿತ ರಕ್ತದ್ರವ ಊತಕ ರಸಕ್ಕೆ (ಟಿಷ್ಯೂಫ್ಲೂಯಿಡ್) ಸೇರುತ್ತದೆ. ಶರೀರದ ಪ್ರತಿಯೊಂದು ಕೋಶವನ್ನೂ ಊತಕರಸ ಆವರಿಸಿರುವುದು. ಈ ತೆರನಾಗಿ ಆಹಾರ ರಕ್ತದಿಂದ ಶರೀರದ ಪ್ರತಿಯೊಂದು ಕೋಶಕ್ಕು ಒದಗುತ್ತದೆ. ನೀರು ಮತ್ತು ಅದರಲ್ಲಿ ಕರಗಿರುವ ವಸ್ತುಗಳು ಲೋಮನಾಳಗಳ ಮಡಿಲುಗಳ ಮೂಲಕ ರಕ್ತದಿಂದ ಊತಕ ರಸಕ್ಕೆ ಆ ರಸದಿಂದ ರಕ್ತಕ್ಕೆ ತಡೆಯಿಲ್ಲದೆ ಸಂಚರಿಸುತ್ತವೆ. ಆದರೆ ಪ್ರೋಟೀನ್ ಬೃಹದಣು ಹೀಗೆ ಸಂಚರಿಸಲಾರದು. ಯಾವುದೆ ಕಾರಣದಿಂದ ಊತಕರಸಕ್ಕೆ ಸೇರಿರಬಹುದಾದ ಪ್ರೋಟೀನ್ ಬೃಹದಣುಗಳನ್ನು ಒಯ್ಯುವುದಕ್ಕಂದೆ ವಿಶೇಷ ಲೋಮನಾಳಗಳಿವೆ. ಕೊಂಚ ಊತಕರಸ ಪ್ರೋಟೀನುಗಳ ವಾಹಕವಾಗಿ ಇಂಥ ಲೋಮನಾಳಗಳನ್ನು ಸೇರುತ್ತದೆ. ಇವುಗಳೊಳಗಿನ ದ್ರವವೆ ದುಗ್ಧರಸ. ಈ ನಾಳಗಳು ದುಗ್ಧರಸ ನಾಳಗಳು ಅಥವಾ ವಾಹಿನಿಗಳು. ಒಂದಕ್ಕೊಂದು ಸೇರಿ ದೊಡ್ಡ ದೊಡ್ಡ ನಾಳಗಳಾದರೂ ಈ ವಾಹಿನಿಗಳು ಎಂದೂ ಸಣ್ಣ ರಕ್ತನಾಳಕ್ಕಿಂತ ದಪ್ಪವಾಗಿರುವುದಿಲ್ಲ. ದುಗ್ಧರಸ ಲೋಮನಾಳಗಳ ಅಗ್ರಗಳು ಮುಚ್ಚಿಕೊಂಡಿರುತ್ತವೆ. ಅಂದರೆ ಅವು ಕುರುಡಾಗಿ ಪ್ರಾರಂಭವಾಗುತ್ತವೆ. ಯಾವ ಅಂಗದೊಳಕ್ಕು ತೆರೆದಿರುವುದಿಲ್ಲ.

ದುಗ್ಧವಾಹಿನಿಗೂ ಊತಕ ರಸಕ್ಕೂ ನಡುವೆ ನಿರಂತರವಾದ ತೆಳು ಊತಕರಸ ಲೋಮನಾಳದ ಮದಿಲು ಉಂಟು. ಅತಿ ಸಣ್ಣ ದುಗ್ಧರಸ ಲೋಮನಾಳದ ಮದಿಲು ಒಂದು ಸಾಲುತೆಳು ಕೋಶಗಳ ಜೋಡಣೆಯಿಂದ ನಿರ್ಮಿತವಾದದ್ದು. ವಾಹಿನಿಗಳು ವಿಶಾಲವಾದಂತೆ ಅವು ಇನ್ನೆರಡು ಪೊರೆಗಳನ್ನು ಪಡೆಯುತ್ತವೆ. ಮಧ್ಯದ ಪೊರೆ ಅನೈಚ್ಛಿಕ ಸ್ನಾಯುವಿನ ತೆಳುಹಾಳೆಯಿಂದಲೂ ಹೊರಗಣ ಪೊರೆ ನಾರೆಳೆಗಳ ತೆಳುಹಾಳೆಯಿಂದಲೂ ಆಗಿರುವುದು. ಕವಾಟಗಳು ಸಮೃದ್ಧಿಯಾಗಿರುತ್ತವೆ. ಒಂದೊಂದು ಕವಾಟವೂ ನೀಳವಾದ ಎರಡು ಕದಗಳ (ಕಸ್ಪ್ಸ್) ಜೋಡಣೆಯಿಂದ ನಿರ್ಮಿತವಾಗಿದ್ದು ದುಗ್ಧರಸ ಒಂದೆ ದಿಶೆಯಲ್ಲಿ ಚಲಿಸುವುದಕ್ಕೆ ಸಾಧನವಾಗಿದೆ. ವಾಹಿನಿಗಳೊಳಗೆ ಹೆಚ್ಚು ದುಗ್ಧರಸ ಹರಿಯುತ್ತಿರುವಾಗ ಅವು ಗುಟಿಕ ರೂಪವಾಗಿ ಕಾಣುತ್ತವೆ. ಕಾಲುಗಳು, ಉದರ, ಎಡಗೈ ಮತ್ತು ಎದೆಯ ಎಡಭಾಗಗಳು ಇವುಗಳ ವಾಹಿನಿಗಳು ಒಟ್ಟುಗೂಡಿ ದುಗ್ಧರಸವನ್ನು ಎದೆಯಲ್ಲಿರುವ ಪ್ರಮುಖ ದುಗ್ಧರಸನಾಳಕ್ಕೆ (ಥೊರಾಸಿಕ್ ಡಕ್ಟ್) ಸುರಿಯುತ್ತವೆ. ಪ್ರಮುಖ ದುಗ್ಧರಸನಾಳ ಕುತ್ತಿಗೆಯ ಎಡಭಾಗದಲ್ಲಿರುವ ಜ್ಯೂಗ್ಯುಲರ್ ಅಭಿಧಮನಿ ಎಂಬ ರಕ್ತನಾಳವನ್ನು ಸೇರುವುದರಿಂದ ದುಗ್ಧರಸ ರಕ್ತದೊಡನೆ ಮಿಶ್ರವಾಗುತ್ತದೆ. ಎದೆಯ ಬಲಭಾಗ, ಬಲಗೈ ಮತ್ತು ತಲೆ ಕುತ್ತಿಗೆಗಳ ಬಲಭಾಗಗಳಿಂದ ಬರುವ ದುಗ್ಧರಸ ಪ್ರಮುಖ ದುಗ್ಧರಸನಾಳಕ್ಕಿಂತ ಸ್ವಲ್ಪ ಸಣ್ಣದಾದ ನಾಳದ ಮೂಲಕ ಬಲ ಜ್ಯೂಗ್ಯುಲರ್ ಅಭಿಧಮನಿಯನ್ನು ಸೇರುತ್ತವೆ. ಎರಡು ನಾಳಗಳಿಂದಲೂ ದಿನ ಒಂದಕ್ಕೆ 0.3 ರಿಂದ 2.8 ಲಿ. ಗಳಷ್ಟು ದುಗ್ಧರಸ ರಕ್ತಗತವಾಗುತ್ತದೆ.

ಮಾನವನನ್ನು ಒಳಗೊಂಡ ಸ್ತನಿವರ್ಗದಲ್ಲಿ ದುಗ್ಧರಸನಾಳಗಳು ನರ, ಅಸ್ಥಿ ಮಜ್ಜೆ ಮತ್ತು ಗುಲ್ಮದ ತಿರುಳುಗಳನ್ನು (ಸ್ಪ್ಲೀನಿಕ್ ಪಲ್ಪ್) ಹೊರತುಪಡಿಸಿ ಇನ್ನೆಲ್ಲ ಅಂಗ ಮತ್ತು ಊತಕಗಳಲ್ಲಿಯು ಇವೆ. ದುಗ್ಧವಾಹಿನಿಗಳು ಅಂಗಾಂಗಗಳಿಂದ ಹೊರಟು ಜ್ಯೂಗುಲರ್ ಅಭಿಧಮನಿಗಳನ್ನು ಸೇರುವ ಮುನ್ನ ಅಥವಾ ಹೆಚ್ಚು ಸಂಖ್ಯೆ ದುಗ್ಧರಸ ಗ್ರಂಥಿಯನ್ನು ಒಳಹೊಕ್ಕೇ ಮುಂದುವರಿಯುತ್ತವೆ. ಕೆಲವು ಮೀನುಗಳ ದುಗ್ಧರಸವಾಹಿನಿಗಳಲ್ಲಿ ರಕ್ತವೂ ದುಗ್ಧರಸವೂ ಮಿಶ್ರಿತವಾಗಿವೆ. ಇವುಗಳಲ್ಲಿ ಕವಾಟಗಳಿಲ್ಲವಾದ್ದರಿಂದ ದುಗ್ಧರಸ ರೇಚಕಗಳು (ಲಿಂಫ್ ಹಾರ್ಟ್ಸ್) ತಮ್ಮ ಸ್ಪಂದನದಿಂದ ದುಗ್ಧವನ್ನು ಮುಂದಕ್ಕೆ ಸಾಗಿಸುತ್ತದೆ. ಉಭಯಚರಿ ಹಾಗು ಸರೀಸೃಪ ವರ್ಗಗಳಲ್ಲಿ ದುಗ್ಧವು ರಕ್ತಮಿಶ್ರಿತವಾಗದಿದ್ದಾಗ್ಯೂ ದುಗ್ಧರಸ ಹೃದಯ ಉಂಟು.

ದುಗ್ಧರಸದ ಘಟಕಗಳು (ಕಾಂಪೊಸಿಷನ್) : ದುಗ್ಧರಸ ಸಾಮಾನ್ಯವಾಗಿ ಸ್ಫಟಿಕದಂತೆ ಸ್ವಚ್ಛವಾಗಿದ್ದು, ವರ್ಣರಹಿತ ರಕ್ತಕೋಶಗಳು (ಕಲರ್‌ಲೆಸ್ ಕಾರ್ಪಸಲ್ಸ್), ಲವಣಗಳು ಮತ್ತು ಅಸ್ಥಿರ ಪ್ರಮಾಣದಲ್ಲಿ ಪ್ರೋಟೀನುಗಳನ್ನು ಹೊಂದಿರುತ್ತದೆ. ದುಗ್ಧರಸದಲ್ಲಿ ವಿಲೀನವಾಗಿರುವ ವಸ್ತುಗಳು ಊತಕರಸದಷ್ಟೇ ಪ್ರಮಾಣದಲ್ಲಿ ಇವೆ ಎಂದು ಸರ್ವತ್ರ ಅಂಗೀಕಾರವಿದೆ. ದುಗ್ಧರಸದಲ್ಲಿ ಸೋಡಿಯಮ್, ಪೊಟ್ಯಾಷಿಯಮ್, ಕ್ಯಾಲ್ಷಿಯಮ್ ಮತ್ತು ಮೆಗ್ನೀಸಿಯಮ್ ಕ್ಲೋರೈಡ್, ಬೈಕಾರ್ಬೋನೇಟ್, ಫಾಸ್ಫೇಟ್ ಆಯಾನುಗಳು ಊತಕರಸದಲ್ಲಿರುವಂತೆಯೇ ಇವೆ. ಸಿ. ಕೆ. ಡ್ರಿಂಕರ್ ಮತ್ತು ಅನುಯಾಯಿಗಳು ಪ್ರೋಟೀನಿನ ಪ್ರಮಾಣವು ಇವೆರಡು ರಸಗಳಲ್ಲಿ ಒಂದೇ ಸಮ ಇವೆಯೆಂಬುದಕ್ಕೆ ಸಾಕ್ಷ್ಯವನ್ನು ಒದಗಿಸಿದ್ದಾರೆ. ಅಂದರೆ ದುಗ್ಧರಸನಾಳದ ಮದಿಲಿನ ಎರಡೂ ಕಡೆಗಳಲ್ಲಿರುವ ದುಗ್ಧರಸ ಮತ್ತು ಊತಕರಸಗಳಲ್ಲಿ ವ್ಯತ್ಯಾಸವೇ ಇಲ್ಲವೆಂದಾಯ್ತು. ಮೇದಸ್ಸು ಪದಾರ್ಥದ ಆಹಾರವನ್ನು ಸೇವಿಸಿದ ಬಳಿಕ ದುಗ್ಧರಸ ಹಾಲಿನಂತೆ ಬೆಳ್ಳಗಿರುತ್ತದೆ. ಮೇದಸ್ಸು ಜೀರ್ಣವಾದಾಗ ಅದು ಛೇದಿಸಲ್ಪಟ್ಟು ಅತಿಸೂಕ್ಷ್ಮವಾದ ಹನಿಗಳಾಗಿರುವುದೇ ಕಾರಣ. ಚಿಕ್ಕ ಕರುಳಿನ ಈ ದುಗ್ಧವಾಹಿನಿಗಳಿಗೆ ಲ್ಯಾಕ್ಟಿಯಲ್ಸ್ ಎಂದು ಹೆಸರು (ಲ್ಯಾಕ್ಟಿಯಲ್ ಅಂದರೆ ಕ್ಷೀರವಾಹಿನಿ).

ದುಗ್ಧರಸ ಕೋಶಗಳು: ದುಗ್ಧರಸ ಕೋಶಗಳು ಮಾತ್ರವೇ ದುಗ್ಧರಸದಲ್ಲಿ ಇರಲು ಸಾಧ್ಯ. ದುಗ್ಧರಸ ಗ್ರಂಥಿಗಳನ್ನು ರಸ ಹಾದುಹೋಗುವಾಗ ಇವು ಅದನ್ನು ಸೇರುವುವು. ಯಾವ ಒಂದು ಮುಹೂರ್ತದಲ್ಲಿ ದುಗ್ಧರಸದಲ್ಲಿ ಎಷ್ಟು ಕೋಶಗಳಿರುತ್ತವೆಂದು ಹೇಳಲು ಸಾಧ್ಯವಿಲ್ಲ. ಪ್ರಾರಂಭ ಸ್ಥಳಗಳಲ್ಲಿ 1 ಮಿಲೀ.ಗೆ 300–400 ಕೋಶಗಳು ಮಾತ್ರ ಇರುವುವು. ಪ್ರಮುಖ ದುಗ್ಧರಸನಾಳದಲ್ಲಿ 1 ಮಿಲೀ.ಗೆ 10–20 ಸಾವಿರದವರೆಗೆ ಉಂಟು. ಕೆಲವು ವೇಳೆ ಇದರ ನಾಲ್ಕು ಪಟ್ಟು ಇರುವುದಿದೆ. ದುಗ್ಧರಸಗ್ರಂಥಿಗಳನ್ನು ಅದುಮಿದರೂ ಕೋಶಗಳ ಸಂಖ್ಯೆ ಹೆಚ್ಚುತ್ತದೆ. ವ್ಯಾಯಾಮಾನಂತರ ದುಗ್ಧರಸಕೋಶಗಳ ಸಂಖ್ಯೆ ಹೆಚ್ಚಾಗುವುದು ಇದರಿಂದಲೆ ಎಂದು ನಿಶ್ಚಯವಾಗಿ ಹೇಳಬಹುದು. ದುಗ್ಧರಸದಲ್ಲಿ ಕೆಂಪು ರಕ್ತ ಕಣಗಳು ಇರುವುದು ಬಲು ಅಪರೂಪ.

ದುಗ್ಧರಸೋತ್ಪಾದನೆಯ ರೀತಿ: ದುಗ್ಧರಸಲೋಮನಾಳದ ಭಿತ್ತಿಕೋಶಗಳ ಸ್ವಸಾಮರ್ಥ್ಯದಿಂದಲೇ ದುಗ್ಧರಸ ಉದ್ಭವಿಸುವುದೆಂದು ಅಭಿಪ್ರಾಯವಿತ್ತು. ಇದಕ್ಕೆ ದುಗ್ಧರಸ ಪ್ರಚೋದಕ (ಸೆಕ್ರಿಟೋಗೋಗ್ಸ್) ಪದಾರ್ಥಗಳೇ ಮುಖ್ಯವಾದ ಸಾಧನವೆಂದಿತ್ತು. ಈಚೆಗೆ ಈ ಅಭಿಪ್ರಾಯವನ್ನು ಕೈಬಿಡಲಾಗಿದೆ. ಲೋಮನಾಳಗಳಿಂದ ನೀರೂ, ರಕ್ತದಲ್ಲಿ ವಿಲೀನವಾಗಿರುವ ಪದಾರ್ಥಗಳೂ ಊತಕಾವಕಾಶಕ್ಕೆ (ಟಿಶ್ಯೂ ಸ್ಪೇಸ್) ಹೋಗಲು ಮೂರು ಮುಖ್ಯ ಕಾರಣಗಳಿವೆ. ರಕ್ತದ ಒತ್ತಡ, ವಿಸರಣ (ಡಿಫ್ಯೂಷನ್), ಪರಾಸರಣ (ಆಸ್ಮಾಸಿಸ್).

ಲೋಮನಾಳಗಳ ರಕ್ತದ ಒತ್ತಡ ಪರಾಸರಣ ಒತ್ತಡಕ್ಕಿಂತ ಹೆಚ್ಚಾಗಿದ್ದು ಲೋಮನಾಳಗಳ ನೆರೆಯಲ್ಲಿ ಒಟ್ಟು ಒತ್ತಡ ಕಡಿಮೆಯಾಗಿರುವುದರಿಂದ ನೀರು ಮತ್ತು ಕರಗಿರುವ ಪದಾರ್ಥಗಳು ಪರಾಸರಣ ತತ್ತ್ವಗಳಿಗೆ ಅನುಸಾರವಾಗಿ ಲೋಮನಾಳಗಳಿಂದ ಹೊರಬಂದು ಊತಕರಸವಾಗುತ್ತವೆ. ಇದರಿಂದ ಪೋಷಕ ಪದಾರ್ಥಗಳು ಕೋಶಗಳಿಗೆ ಸೇರುತ್ತವೆ. ಸತತ ಉತ್ಪತ್ತಿಯಾಗುತ್ತಿರುವ ಊತಕ ರಸ ನಿರಂತರವಾಗಿ ಪುನಃ ಲೋಮನಾಳಕ್ಕೆ ಹೀರಿಕೊಳ್ಳಲ್ಪಡುತ್ತದೆ. ಹೀಗಾಗಿ ಊತಕಾವಕಾಶದಲ್ಲಿ ಊತಕರಸ ಸಂಗ್ರಹವಾಗುವುದಿಲ್ಲ. ಹಾಗೆ ಯಾವುದೇ ಕಾರಣದಿಂದ ಸಂಗ್ರಹವಾದರೆ ಶೋಫೆ (ಎಡೀಮ) ಪ್ರಾಪ್ತವಾಗುತ್ತದೆ. ಊತಕರಸ ಪುನಃ ಲೋಮನಾಳದೊಳಕ್ಕೆ ಹೀರಲ್ಪಡುವುದು ಹೀಗೆ. ಲೋಮನಾಳದ ಅಂತ್ಯ ಭಾಗದಲ್ಲಿ ಒತ್ತಡ ಪರಾಸರಣ ಒತ್ತಡಕ್ಕಿಂತ ಕಡಿಮೆ. ಇದರ ನಿವ್ವಳ ಪರಿಣಾಮವಾಗಿ ಪರಾಸರಣ ಒತ್ತಡದ ಪ್ರಭಾವವೇ ವ್ಯಕ್ತವಾಗುವುದು. ಹೀಗೆ ವ್ಯಕ್ತವಾಗುವ ಪರಾಸರಣ ಒತ್ತಡದಿಂದ ಲೋಮನಾಳದ ಒಳಗಿರುವ ರಕ್ತ ಲೋಮನಾಳದ ಹೊರಗಿನಿಂದ ನೀರು ಮತ್ತು ನೀರಿನಲ್ಲಿ ಕರಗಿರುವ ವಸ್ತುಗಳನ್ನೂ ಲೋಮನಾಳದ ಭಿತ್ತಿಯಮೂಲಕ ಹೀರಿಕೊಳ್ಳುತ್ತದೆ. ಈ ವಿಧಿಗಳು ವಾಸ್ತವವಾಗಿ ನಡೆಯುವುವೆಂಬುದನ್ನು ಸ್ಟಾರ್ಲಿಂಗ್ ಮತ್ತು ಲ್ಯಾಂಡಿಸ್ ಎಂಬ ಇಬ್ಬರು ವಿಜ್ಞಾನಿಗಳು ಪ್ರಾಣಿಗಳ ಮೇಲಿನ ಪ್ರಯೋಗಗಳ ಮೂಲಕ ದೃಢ ಪಡಿಸಿದ್ದಾರೆ.

ಯಾವುದೇ ಅಂಗದಲ್ಲಿ ಅದರ ಕ್ರಿಯೆಗಳ ಚಟುವಟಿಕೆ ಹೆಚ್ಚಿದರೆ ಆ ಸಂದರ್ಭದಲ್ಲಿ ಊತಕರಸದ ಉತ್ಪತ್ತಿಯೂ ಹೆಚ್ಚುತ್ತದೆ. ಹೀಗೆ ಅಧಿಕವಾಗಿ ಉತ್ಪನ್ನವಾದ ಊತಕರಸದಲ್ಲಿ ಪ್ರೋಟೀನುಗಳೂ ಸೇರಿರುವ ಸಾಧ್ಯತೆ ಉಂಟು. ಅಂಗದ ಕ್ರಿಯಾಧಿಕ್ಯದಿಂದಲೂ ಪ್ರೋಟೀನುಗಳ ಉತ್ಪನ್ನವಾಗಿ ಅದು ಕೋಶಗಳಿಂದ ಹೊರಬಂದು ಊತಕರಸದೊಡನೆ ಮಿಶ್ರವಾಗಬಹುದು. ಇಂಥ ಸಂದರ್ಭಗಳಲ್ಲಿ ಶೋಫೆ ಕಂಡು ಬರುವ ಸಾಧ್ಯತೆ ಇದ್ದರೂ ಹಾಗಾಗುವುದಿಲ್ಲ. ಏಕೆಂದರೆ ಅಧಿಕವಾಗಿ ಉದ್ಭವಿಸಿದ ಊತಕರಸ ದುಗ್ಧರಸಲೋಮನಾಳಗಳನ್ನು ಸೇರಿ ದುಗ್ಧರಸ ಎನ್ನಿಸಿಕೊಂಡು ಅವುಗಳ ಮೂಲಕ ಒಯ್ಯಲ್ಪಡುತ್ತದೆ. ಊತಕರಸದಲ್ಲಿರುವ ಪ್ರೋಟೀನು ಈ ರಸ ಲೋಮನಾಳದೊಳಕ್ಕೆ ಹೀರಲ್ಪಡಲು ಸ್ವಲ್ಪಮಟ್ಟಿಗೆ ಅಡ್ಡಿಮಾಡುವುದರಿಂದ ಹೆಚ್ಚುವರಿ ರಸ ದುಗ್ಧರಸನಾಳಗಳನ್ನು ಸೇರಲು ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಪೋಷಕಪದಾರ್ಥಗಳನ್ನು ತಂದ ರಕ್ತದಿಂದ ಹರಿವ ಊತಕರಸ ಊತಕಾವಕಾಶವನ್ನು ಸೇರಿ ಶರೀರಕೋಶಗಳಿಗೆ ಆಹಾರವನ್ನು ಒದಗಿಸಿ ಅಲ್ಲಿ ಉತ್ಪತ್ತಿಯಾದ ಉಪಯುಕ್ತ ಹಾಗೂ ಅನುಪಯುಕ್ತ ಪದಾರ್ಥಗಳನ್ನು ಪಡೆದುಕೊಳ್ಳುತ್ತವೆ. ಈ ರಸ ಪುನಃ ರಕ್ತವನ್ನು ಸೇರಲು ಎರಡು ದಾರಿಗಳಿವೆ. ಒಂದು ಲೋಮನಾಳಗಳ ಅಂತ್ಯಭಾಗದ ಮೂಲಕ; ಎರಡು ದುಗ್ಧರಸನಾಳಗಳ ಮೂಲಕ.

ದುಗ್ಧ ರಸದ ಚಲನೆ: ರಕ್ತಕ್ಕೆ ಪರಿಚಲನ ಸಂಯಂತ್ರ ಉಂಟು. ದುಗ್ಧರಸಕ್ಕಾದರೋ ಇಂಥ ಸಂಯಂತ್ರ ಇಲ್ಲ. ಸ್ನಾಯುಗಳ ಸಂಕೋಚನ ವ್ಯಾಕೋಚನ ದುಗ್ಧರಸವನ್ನು ನಾಳಗಳಲ್ಲಿ ಮುಂದಕ್ಕೆ ತಳ್ಳುತ್ತದೆ, ಈ ನಾಳಗಳಲ್ಲಿ ಅಲ್ಲಲ್ಲಿ ಕವಾಟಗಳಿವೆ. ಇವು ದುಗ್ಧರಸವನ್ನು ಗುಂಡಿಗೆಗೆ ಎದುರು ದಿಕ್ಕಿನಲ್ಲಿ ಹರಿಯಲು ಆಸ್ಪದ ಕೊಡುವುದಿಲ್ಲ. ದುಗ್ಧರಸ ಚಲನೆಗೆ ಇದೇ ಮುಖ್ಯ ಸಾಧನ. ಯಕೃತ್ತು ಮತ್ತು ಜೀರ್ಣಕಾರಿ ಅಂಗಗಳಲ್ಲಿ ದುಗ್ಧರಸದ ಚಲನೆ ಸದಾ ಕ್ರಿಯಾಶೀಲವಾಗಿರುವುದು. ಮೇಲೆ ವಿವರಿಸುವಂತೆ ಪ್ರಮುಖ ದುಗ್ಧನಾಳದ ಮೂಲಕ ಇಲ್ಲಿನ ದುಗ್ಧರಸವೆಲ್ಲವೂ ಕುತ್ತಿಗೆಯ ಬುಡದಲ್ಲಿರುವ ಎಡ ಜ್ಯೂಗ್ಯುಲರ್ ಅಭಿಧಮನಿಗೆ ಸುರಿಯುತ್ತದೆ. ಈ ಕಾರ್ಯ ವಪೆಯ ಸಂಕೋಚನ–ವ್ಯಾಕೋಚನದಿಂದಲೂ ಮಹಾಪಧಮನಿಯ (ಅಯೋರ್ಟಾ) ಸ್ಪಂದನದಿಂದಲೂ ಕಾರ್ಯಗತವಾಗುವುದು. ಹೀಗೆ ದುಗ್ಧರಸ ದುಗ್ಧರಸನಾಳಗಳನ್ನು ಹೊಕ್ಕಾಗ್ಯೂ ಕೊನೆಗೆ ಅಭಿಧಮನಿಯನ್ನು ಸೇರುತ್ತದೆ. ದುಗ್ಧರಸನಾಳಗಳ ಮಾರ್ಗದಲ್ಲಿ ಅಲ್ಲಲ್ಲಿ ದುಗ್ಧಗ್ರಂಥಿಗಳಿವೆ. ದುಗ್ಧರಸನಾಳಗಳು ಇವನ್ನು ಸೇರಿ, ಹೊಸ ನಾಳಗಳು ಉದ್ಭವವಾಗಿ ಕುತ್ತಿಗೆಯ ಅಭಿಧಮನಿಯನ್ನು ಸೇರಲು ಮುಂದುವರಿಯುವವು. ಈ ಗ್ರಂಥಿಗಳು ಆಹಾರ ಪಚನಕಾರ್ಯದಲ್ಲಿ ಸಹಾಯಮಾಡುವುದಿಲ್ಲ. ಇವುಗಳಲ್ಲಿ ದುಗ್ಧರಸಕಣಗಳು ಉದ್ಭವವಾಗಿ ರಕ್ತಕ್ಕೆ ಸೇರಿಕೊಂಡು ಒಂದು ಬಗೆಯ ರಕ್ತದ ವರ್ಣರಹಿತ ಕಣಗಳಾಗುತ್ತವೆ. ಈ ಗ್ರಂಥಿಗಳ ಇನ್ನೊಂದು ಮುಖ್ಯ ಕಾರ್ಯವೆಂದರೆ ಇವು ಅಲ್ಲಲ್ಲಿ ಶರೀರವನ್ನು ಪ್ರವೇಶಿಸುವ ವಿಷಾಣುಗಳನ್ನೂ ಅವು ನಿರ್ಮಿಸುವ ವಿಷ ಪದಾರ್ಥಗಳನ್ನೂ ತಡೆಗಟ್ಟಿ ಅವು ಶರೀರಕ್ಕೆ ಅಪಾಯಕಾರಿಗಳಾಗದಂತೆ ಕಾಪಾಡುತ್ತವೆ.

***

**ದೃಷ್ಟಿ:** ದೇಹದ ನಾಲ್ಕು ಬಗೆಯ ವಿಶಿಷ್ಟ ಇಂದ್ರಿಯಗಳಲ್ಲಿ (ಸ್ಪೆಷಲ್ ಸೆನ್ಸ್) ಒಂದಾದ ಕಣ್ಣಿನ ಕ್ರಿಯೆ ಮತ್ತು ಅದರ ಪರಿಣಾಮವಾಗಿ ಉಂಟಾಗುವ ವಸ್ತುಗಳ ಆಕಾರ, ಗಾತ್ರ, ವರ್ಣ, ಮತ್ತು ಅವುಗಳ ದೂರ ಹಾಗು ಅನುಭವ (ವಿಷನ್), ಇಷ್ಟೇ ಅಲ್ಲ. ಏಕೆಂದರೆ ದೃಷ್ಟಿಯೆಂಬುದು ಕೇವಲ ಕ್ರಿಯೆಯಿಂದಲೇ ಫಲಿಸುವ ಜ್ಞಾನವಲ್ಲ ಕಣ್ಣುಗಳಲ್ಲಿ ಬಾಹ್ಯವಸ್ತುವಿನ ಸ್ಪಷ್ಟ ರೂಪುಗೊಳ್ಳುವುದು ತಿಳಿದಿದೆ. ಬಾಹ್ಯವಸ್ತುವಿನಿಂದ ತಕ್ಕಷ್ಟು ಪ್ರಕಾಶ ಉದ್ಭವವಾದ ಅಥವಾ ಪ್ರತಿಫಲಿಸಿದ ಬೆಳಕಿನ ಕಿರಣಗಳು ಕಣ್ಣಿನೊಳಗೆ ಹೋಗುವಾಗ ವಕ್ರೀಕರಣಗೊಂಡು (ರಿಫ್ರಾಕ್ಷನ್) ಅಕ್ಷಿಪಟಲದ (ರೆಟಿನ) ಮೇಲೆ ಸ್ಪಷ್ಟ ಪ್ರತಿಬಿಂಬ ಮೂಡುತ್ತದೆ ಎಂಬುದು ಸಾಮಾನ್ಯ ವಿವರಣೆ. ಕಣ್ಣುಗಳಿಂದಲೇ ಅನುಭವಕ್ಕೆ ಬರುವ ವಿಶಿಷ್ಟ ಅಲೆಯುದ್ದದ ಕಾಂತ ಶಕ್ತಿಯ ಅಲೆಗಳನ್ನು ಬೆಳಕು ಎಂದು ಕರೆಯಲಾಗಿದೆ. ವಸ್ತುವಿನಿಂದ ಅಥವಾ ವಸ್ತು ಪ್ರತಿಫಲಿಸಬಲ್ಲ ವಿದ್ಯುತ್‌ಕಾಂತ ಶಕ್ತಿಯು ಬಹು ವ್ಯಾಪಕ. ಅವುಗಳಲ್ಲಿ ಸುಮಾರು ೩೮೦ μ ನಿಂದ ೭೭೦ μ (μ = ೦.೦೦೦೦೦೦೦೦ ೧ಮೀ = ೧೦$^{-೯}$ ಮೀ.) ಅಲೆಯುದ್ದದ ಅಲೆಗಳು ಮಾತ್ರ ಕಣ್ಣಿನಲ್ಲಿ ಪರಿಣಾಮವನ್ನು ಉಂಟುಮಾಡುತ್ತವೆ. ಇವೇ ಬೆಳಕಿನ ಅಲೆಗಳು. ದೃಷ್ಟಿಗೆ ಅಗತ್ಯವಾದವು.

೧. ದೃಷ್ಟಿಯ ವೈಜ್ಞಾನಿಕ ವಿಶ್ಲೇಷಣೆ : ಅಕ್ಷಿಪಟಲದ ಮೇಲೆ ಮೂಡಿದ ಪ್ರತಿಬಿಂಬ ದೃಷ್ಟಿ ನರಗಳನ್ನು ಪ್ರಚೋದಿಸುತ್ತದೆ. ಈ ಪ್ರಚೋದನೆ ಮಿದುಳಿನ ವಿಶಿಷ್ಟ ಭಾಗಕ್ಕೆ ಒಯ್ಯಲ್ಪಡುತ್ತದೆ. ಆಲ್ಲಿ ಆಗುವ ಪರಿಣಾಮದಿಂದ ದೃಷ್ಟಿಯ ಅನುಭವ ಉಂಟಾಗುತ್ತದೆ. ಅಂದರೆ ನೇತ್ರ ಸಂಬಂಧಿತ, ನರಸಂಬಂಧಿತ ಮತ್ತು ಮನಸಂಬಂಧಿತ ಸೀಮೆಗಳಲ್ಲೆಲ್ಲ ಸಂವೇದನೆ ಹಾದು ಒಟ್ಟಿನಲ್ಲಿ ಉಂಟುಮಾಡುವ ಪರಿಣಾಮವೇ ದೃಷ್ಟಿ ಎನ್ನಬಹುದು. ಈ ಮೂರು ಸೀಮೆಗಳಲ್ಲಿ ಯಾವುದು ನಿಷ್ಕ್ರಿಯೆಗೊಂಡರೂ ದೃಷ್ಟಿ ನಾಶವಾಗುತ್ತದೆ. ದೃಷ್ಟಿ ಕ್ರಿಯೆಯನ್ನು ಈ ರೀತಿ ವಿವರಿಸಿರುವುದು ಕೂಡ ಸರಿ ಎಂದು ಹೇಳುವ ಹಾಗೆ ಇಲ್ಲ. ಕಣ್ಣು ಗುಡ್ಡೆಯ ಮೇಲೆ ಗುದ್ದಿದರೆ ಏನೋ ಕಂಡಂತೆ ಭಾಸವಾಗುವುದು ಬಹುಜನರ ಅನುಭವ. ರೋಗ, ಅತಿಬಳಲಿಕೆ, ಕೆಲವು ಔಷಧಿಗಳ ಸೇವನೆ ಈ ಸ್ಥಿತಿಯಲ್ಲಿ ಮತ್ತು ಕನಸು ಹಾಗೂ ಮಾನಸಿಕ ಕಲ್ಪನೆಗಳಲ್ಲಿ ವಸ್ತುಗಳನ್ನು ನೋಟಗಳನ್ನು ನೋಡಿದ ಅನುಭವ ಕೂಡ ಸಾಮಾನ್ಯ. ಅದರಿಂದ ಪರಿಸರದಲ್ಲಿ ಬೆಳೆಯುವ ಯಾವುದೇ ವಸ್ತು ಅಥವಾ

ನೋಟ ದೃಷ್ಟಿಗೆ ಅಗತ್ಯವಲ್ಲ ಎನ್ನುವುದು, ವ್ಯಕ್ತಿ, ಕಗ್ಗತ್ತಲು, ನೀಲಿ ಆಕಾಶ ಇವುಗಳಲ್ಲಿ ಏನೋ ಕಂಡಂತಾಗುವುದೂ ಹೀಗೆ. ಬಹುಶಃ ದೃಷ್ಟಿಯ ಮಾನಸಿಕ ಅಂಶ ಸಾಮಾನ್ಯವಾಗಿ ಯಾವಾಗಲೂ ತನ್ನ ಕ್ರಿಯೆಯಲ್ಲಿ ಉದ್ಯುತ್ತವಾಗಿದ್ದು ಇದರ ಮೇಲೆ ಬೆಳಕಿನ ಪ್ರತಿಕ್ರಿಯೆಯಾಗಿ ಕಣ್ಣಿನಿಂದ ಪ್ರಾರಂಭವಾದ ನರಪ್ರಚೋದನೆಯ ಪರಿಣಾಮ ಹೇರಲ್ಪಡುವುದೆಂದು ತೋರುತ್ತದೆ. ತತ್ಫಲವಾಗಿ ನೋಡಿದ ವಸ್ತುವಿನ ವರ್ಣದೂರ ಗಾತ್ರ ಇತ್ಯಾದಿ ವೈಶಿಷ್ಟ್ಯಗಳು ಮನಸ್ಸಿನಲ್ಲಿ ಮೂಡಿ ಬಾಹ್ಯಲೋಕದಲ್ಲಿ ಆ ವಸ್ತುವನ್ನು ಕಂಡಂತಾಗುತ್ತದೆ. ದೃಷ್ಟಿಯಿಂದ ತಪಶೀಲಾಗಿ ಹಾಗೂ ವಿವರವಾಗಿ ಹಾಗೂ ವ್ಯಾಪಕವಾಗಿ ಒದಗುವಷ್ಟು ಜ್ಞಾನ ಬೇರೆ ರೀತಿಯಿಂದ ಒದಗುವುದಿಲ್ಲ. ಆದ್ದರಿಂದಲೇ ಅಂಧತ್ವದಿಂದ ಪರಿಣಮಿಸಿದ ಅಸಹಾಯತೆ. ಶ್ರವಣನಾಶ ಇಲ್ಲವೇ ಇನ್ನೂ ಯಾವುದಾದರೂ ಸಂವೇದನೆಯ ನಾಶದಿಂದ ಪರಿಣಮಿಸುವ ಅಸಹಾಯತೆಗಿಂತ ಬಹುತೀವ್ರ. ಮಾನವ, ಮಂಗ, ಪಕ್ಷಿ–ಇವುಗಳಲ್ಲಿ ದೃಷ್ಟಿಗೆ ಮೀಸಲಾಗಿರುವ ಮತ್ತು ದೃಷ್ಟಿ ಆಂಗಕ್ಕೆ ಸಂಬಂಧಿಸಿರುವ ಮಿದುಳಿನ ಭಾಗ ಅಗಾಧವಾಗಿದ್ದು ದೃಷ್ಟಿ ಒಂದು ಮುಖ್ಯ ಸಂವೇದನೆ ಆಗಿದೆ. ಆದ್ದರಿಂದ ದೃಷ್ಟಿನಾಶದ ಪರಿಣಾಮ ಇವುಗಳಲ್ಲಿ ಮಿಕ್ಕ ಪ್ರಾಣಿಗಳಿಗಿಂತ ಹೆಚ್ಚು.

ಗೋಚರವಾಗುವ ಪರಿಸರ ಪ್ರತಿಕಣ್ಣಿನಲ್ಲಿಯೂ ಭೌತನಿಯಮಗಳಿಗೆ ಅನುಸಾರವಾಗಿಯೇ ಪ್ರತಿಬಿಂಬಿಸಲ್ಪಡುತ್ತದೆ. ಪ್ರತಿಬಿಂಬ ತಲೆಕೆಳಗಾಗಿಯೂ ದೂರಕ್ಕೆ ತಕ್ಕಂತೆ ಸಣ್ಣದಾಗಿಯೂ ಇರುವುದು. ಬಾಹ್ಯವಸ್ತುವಿನಿಂದ ಪ್ರಸಾರವಾದ ಬೆಳಕಿನ ಕಿರಣಗಳು ಕಣ್ಣಿನ ಮುಂಭಾಗದ ಪಾರದರ್ಶಕ ಪಟಲದಲ್ಲಿ (ಕಾರ್ನಿಯ) ಹಾಯುವಾಗ ಬಹುವಾಗಿ ವಕ್ರೀಕರಿಸಲ್ಪಡುತ್ತವೆ. ಇವು ಮುಂದುವರಿದು ಪಾಪೆಯ (ಪ್ಯೂಪಿಲ್) ಮೂಲಕ ಒಳಹಾದು ಕಣ್ಣಿನ ಮಸೂರವನ್ನು ತಲಪುವಾಗ ಮಸೂರದ ಆಗಿನ ಗಾತ್ರಕ್ಕೆ ತಕ್ಕಂತೆ ಇನ್ನಷ್ಟು ವಕ್ರೀಕೃತವಾಗಿ ಅಂತು ಅಕ್ಷಿಪಟಲದ ಮೇಲೆ ನಾಭಿಸ್ಥವಾಗುತ್ತದೆ. ಇದನ್ನು ಕಣ್ಣಿನ ವಕ್ರೀಕರಣ ಕ್ರಿಯೆ ಎಂದೂ ಅದರ ಸಾಮರ್ಥ್ಯ ೫೮ ಡಯಾಪ್ಟರಗಳಷ್ಟಿದೆ (+೫೮ d) ಎಂದೂ ಹೇಳುತ್ತೇವೆ. ಮಸೂರದ ನಾಭಿದೂರ ೧/೧೪ ಮೀಟರಿನಷ್ಟಿದ್ದರೆ ಅದರ ಸಾಮರ್ಥ್ಯ ೧೪ d ; ೧/೩೩ ಮೀಟರಿನಷ್ಟಿದ್ದರೆ ೨೨ d ; ೨ ಮೀಟರುಗಳಷ್ಟಿದ್ದರೆ ೦.೫ d ಹೀಗೆ ಮಸೂರದ ವಕ್ರೀಕರಣ ಸಾಮರ್ಥ್ಯವನ್ನು ನೇತ್ರತಜ್ಞರು ನಿರೂಪಿಸಿರುವುದು ವಾಡಿಕೆ. ಇಂಥ ನಿರೂಪಣೆಯಲ್ಲಿ ನಿಮ್ನ ಮಸೂರಗಳಿಗೆ – ಚಿಹ್ನೆಯನ್ನೂ ಪೀನ ಮಸೂರಗಳಿಗೆ + ಚಿಹ್ನೆಯನ್ನೂ ಬಳಸುವುದು ಸಂಪ್ರದಾಯ. ಕಣ್ಣಿನ ಒಟ್ಟೂ +೫೮ d ವಕ್ರೀಕರಣ ಸಾಮರ್ಥ್ಯದಲ್ಲಿ +೪೫ d ಗಳಷ್ಟು ಸಾಮರ್ಥ್ಯ ಪಾರದರ್ಶಕ ಪಟಲದ್ದೇ. ಅಂದರೆ ವಕ್ರೀಕರಣ ಬಹುವಾಗಿ ಪಾರದರ್ಶಕ ಪಟಲದಿಂದಲೇ ಎನ್ನುವುದು ವ್ಯಕ್ತ. ವಾಸ್ತವವಾಗಿ ೬.೦ ಮೀಟರಿಗಿಂತಲೂ (ಇದನ್ನು ದೃಷ್ಟಿಕ್ರಿಯೆಯಲ್ಲಿ ಅನಂತದೂರ ಎಂದು ಗಣಿಸಲಾಗಿದೆ) ಹೆಚ್ಚು ದೂರದಿಂದ ಪ್ರಸಾರವಾದ ಬೆಳಕಿನ ಕಿರಣಗಳು ಪಾರದರ್ಶಕ ಪಟಲದ ವಕ್ರೀಕರಣದಿಂದಲೇ ಅಕ್ಷಿಪಟಲದ ಮೇಲೆ ನಾಭಿಸ್ಥವಾಗುತ್ತವೆ. ಇನ್ನೂ ಹತ್ತಿರದ ಬೆಳಕಿನ ಕಿರಣಗಳು ಅಕ್ಷಿಪಟಲದ ಮೇಲೆ ನಾಭಿಸ್ಥವಾಗಬೇಕಾದರೆ, ಅವುಗಳ ಉಗಮ ದೂರ ಕಡಿಮೆ ಆದಂತೆ ಹೆಚ್ಚು ವಕ್ರೀಯವಾಗಬೇಕು. ಇಂಥ ಅಗತ್ಯ ವಕ್ರೀಕರಣ ಮಸೂರದ ವಿಶಿಷ್ಟ ಕ್ರಿಯೆ. ತೀರ ಸಮೀಪ ದೃಷ್ಟಿಯಲ್ಲಿ (ಸುಮಾರು ೬–೧೨ ಸೆ.ಮೀ.) ಮಸೂರದ ಗರಿಷ್ಠ ವಕ್ರೀಕರಣ ಸಾಮರ್ಥ್ಯ. (+ ೧೩ d ಗಳಷ್ಟು) ವ್ಯಕ್ತವಾಗುತ್ತದೆ.

ಕಣ್ಣಿನ ಮಸೂರ ಮೆದುವಾಗಿದ್ದು ಕುಗ್ಗುವ ಮತ್ತು ಹಿಗ್ಗುವ ಗುಣವನ್ನು ಹೊಂದಿದೆ. ಅದರ ಅಂಚಿನ ಸುತ್ತ ತಂತುಗಳು ಅದನ್ನು ಬಿಗಿಯಾಗಿ ಎಳೆದು ಸ್ವಲ್ಪ ಬದಿಯಲ್ಲಿ ಕಣ್ಣಿನ ಭಿತ್ತಿಗೆ ಬಂಧಿಸಿವೆ. ಆದ್ದರಿಂದ ಮಸೂರ ತೆಳ್ಳಗಿದ್ದು ಅದರ ವಕ್ರೀಕರಣ ಸಾಮರ್ಥ್ಯ ವ್ಯಕ್ತವಾಗುವಂತಿರುವುದಿಲ್ಲ. ಸಮೀಪ ದೃಷ್ಟಿಯಲ್ಲಿ ಇಂಥ ಸಾಮರ್ಥ್ಯ ವ್ಯಕ್ತವಾಗಬೇಕಾಗುತ್ತದೆ. ಮಸೂರದ ಗಾತ್ರ ಹೆಚ್ಚುವುದರಿಂದ ಇದು ಸಾಧ್ಯ. ಬಿಗಿಹಿಡಿದಿರುವ ತಂತುಗಳು ಸಡಿಲವಾಗಿ ಮಸೂರದ ಮಧ್ಯ ಪ್ರದೇಶ ಉಬ್ಬಿಕೊಂಡು ಮಸೂರದ ವಕ್ರೀಕರಣ ಸಾಮರ್ಥ್ಯ ಹೆಚ್ಚಾಗುತ್ತದೆ. ಹೀಗಾಗುವುದು ನಿಜವೆಂದು ಅನೇಕ ಪ್ರಯೋಗಗಳಿಂದ ತೋರಿಸಲಾಗಿದೆ. ಕಣ್ಣು ಭಿತ್ತಿಗೆ ತಂತುಗಳು ಸುತ್ತಲೂ ಜಂಟಿಸುವ ವರ್ತುಲಾಕಾರವಾದ ವಲಯದಲ್ಲಿ ಸೀಲಿಯರಿ ಎಂಬ ಅನೈಚ್ಛಿತ ಸ್ನಾಯು ಪಸರಿಸಿದೆ. ಇದರ ಸಂಕೋಚನದಿಂದ ತಂತುಬಂಧನ ಪ್ರದೇಶ ಮುಂದಕ್ಕೆ ಎಳೆಯಲ್ಪಡುತ್ತದೆ. ತತ್ಫಲವಾಗಿ ತಂತುಗಳು ಸಡಿಲವಾಗುತ್ತವೆ. ತಂತುಗಳು ಎನ್ನುವುದು ಎಷ್ಟು ಸಡಿಲವಾಗಿ ಮಸೂರ ಎಷ್ಟು ದಪ್ಪವಾಗಬೇಕು ಅರ್ಥಾತ್ ಅದರ ವಕ್ರೀಕರಣ ಸಾಮರ್ಥ್ಯ ಎಷ್ಟು ವ್ಯಕ್ತವಾಗಬೇಕು ಎನ್ನುವುದು ಸೀಲಿಯರಿ ಸ್ನಾಯುವಿನ ಸಂಕೋಚನವನ್ನು ಅವಲಂಬಿಸಿದೆ. ಅಗತ್ಯವಾದಷ್ಟೇ ಸಂಕೋಚನವಾಗುವಂತೆ ಅನೈಚ್ಛಿಕವಾದ ನರನಿಯಂತ್ರಣದ ಏರ್ಪಾಡು ಇದೆ. ದೃಷ್ಟಿಯನ್ನು ಪುನಃ ದೂರವಾದ ವಸ್ತುವಿನ ಕಡೆಗೆ ಹೊರಳಿಸಿದರೆ ಸೀಲಿಯರಿ ಸ್ನಾಯು ಅಗತ್ಯವಾದಷ್ಟು ವ್ಯಾಕೋಚಿಸಿ ವಸ್ತುವಿನ ಪ್ರತಿಬಿಂಬ ಅಕ್ಷಿಪಟಲದ ಮೇಲೆ ಸ್ಪಷ್ಟವಾಗಿ ಮೂಡುವಂತೆ ಮಾಡುತ್ತದೆ. ಸೀಲಿಯರಿ ಸ್ನಾಯುವಿನ ಸಂಕೋಚನ ಸಾಮರ್ಥ್ಯ ಕುಗ್ಗಿ ಹೋದರೆ. ಇಲ್ಲವೇ ಮಸೂರದ ಮೆದುತನ ಕಡಿಮೆ ಆದರೆ ಮೇಲೆ ವಿವರಿಸಿರುವ ಕ್ರಿಯೆಗೆ ಧಕ್ಕೆ ಆಗಿ ಸಮೀಪದೃಷ್ಟಿ ಕುಂಠಿತವಾಗುತ್ತದೆ. ಅಂಥ ಸಂದರ್ಭಗಳಲ್ಲಿ ಕೃತಕ ಮಸೂರ ಅಗತ್ಯವಾಗಿ ಪೀನ ಮಸೂರ ಕನ್ನಡಕ'ವನ್ನು ಬಳಸಬೇಕಾಗುತ್ತದೆ. ಇದೇ ಚಾಳೀಸಿನ ಕನ್ನಡಕ.

ಸಮೀಪದೃಷ್ಟಿಯಲ್ಲಿ ನಾವು ನೋಡಿದ ವಸ್ತುವಿನಿಂದ ಪ್ರಸಾರವಾಗುವ ಬೆಳಕಿನ ಕಿರಣಗಳು ಅಧಿಕ ಸಂಖ್ಯೆಯಲ್ಲಿ ಕಣ್ಣಿನ ಒಳಹೋಗಬೇಕಾಗಿಲ್ಲ. ವಾಸ್ತವವಾಗಿ ಹಾಗೆ ಹೋಗುವುದರಿಂದ ಅಕ್ಷಿಪಟಲದಲ್ಲಿ ಪ್ರತಿಬಿಂಬ ಅಸ್ಪಷ್ಟವಾಗುತ್ತದೆ. ಆದ್ದರಿಂದ ಹೆಚ್ಚು ಕಣ್ಣಿನ ಒಳ ಹೋಗದಂತೆ ಕಣ್ಣಿನ ಪಾಪೆ ಕಿರಿದಾಗುವುದು. ಈ ಪಾಪೆ ನಿಜವಾಗಿ ಪಾಪೆ ಪೊರೆಯ (ಐರಿಸ್) ಮಧ್ಯದಲ್ಲಿರುವ ರಂಧ್ರ. ಪಾಪೆ ಪೊರೆ ಸ್ನಾಯುಯುಕ್ತ : ಪಾಪೆಯ ಅಂಚಿನ ಸುತ್ತಲೂ ಉಂಗುರದಂತೆ ಇರುವ ಸ್ನಾಯು ಒಂದು ಪಟಲದ ಅಡ್ಡಗಲದಲ್ಲಿ ತ್ರಿಜ್ಯದಂತೆ ಎಲ್ಲ ದಿಕ್ಕಿನಲ್ಲಿ ಪಸರಿಸಿರುವ ಸ್ನಾಯು ಇನ್ನೊಂದು ಉಂಗುರ ಸ್ನಾಯು ಸಂಕೋಚಿಸಿದಾಗ ತ್ರಿಜ್ಯ ಸ್ನಾಯು ವ್ಯಾಕೋಚಿಸುವಂತೆಯೂ ತ್ರಿಜ್ಯ ಸ್ನಾಯು ಸಂಕೋಚಿಸಿದಾಗ ಉಂಗುರ ಸ್ನಾಯು ವ್ಯಾಕೋಚಿಸಿಸುವಂತೆಯೂ ಅನೈಚ್ಛಿತ ನರ ನಿಯಂತ್ರಣ ಇದೆ. ಉಂಗುರ ಸ್ನಾಯುವಿನ ಸಂಕೋಚನದಿಂದ ಪಾಪೆ ಕಿರಿದಾಗುತ್ತದೆ. ತ್ರಿಜ್ಯ ಸ್ನಾಯುವಿನ ಸಂಕೋಚನದಿಂದ ತಾರಕೆಯ ಅಗಲ ಕಿರಿದಾಗಿ ಪಾಪೆ ದೊಡ್ಡದಾಗುತ್ತದೆ. ಸಮೀಪ ದೃಷ್ಟಿಯಲ್ಲಿ ಪಾಪೆ ಕಿರಿದಾಗುವುದೂ, ದೃಷ್ಟಿಯನ್ನ ದೂರವಸ್ತು ವೀಕ್ಷಣೆಗೆ ಬದಲಿಸಿದಾಗ ಪಾಪೆ ತಕ್ಕಷ್ಟು ದೊಡ್ಡದಾಗುವುದೂ ಇಂಥ ಅನೈಚ್ಛಿಕ ಕ್ರಿಯೆಯಿಂದ.

ದೃಷ್ಟಿಸುವಾಗ ನಮ್ಮ ಎರಡು ಕಣ್ಣುಗಳೂ ದೃಷ್ಟಿತ ವಸ್ತುವಿನ ದಿಕ್ಕಿಗೆ ಕರಾರುವಾಕ್ಕಾಗಿ ಚಲಿಸುತ್ತವೆ. ವೀಕ್ಷಿತ ವಸ್ತು ಅನಂತರ ದೂರದಲ್ಲಿದ್ದರೆ (೬ ಮೀಟರಿಗಿಂತ) ಎರಡು ಕಣ್ಣುಗಳು ಅಕ್ಷಗಳೂ ಒಂದೇ ದಿಕ್ಕಿನಲ್ಲಿರುತ್ತವೆ. ಇದಕ್ಕೆ ಕಣ್ಣುಗಳ ಯುಗ್ಮ ಚಲನವೆಂದು ಹೆಸರು (ಕಾನ್‌ಜುಗೇಟ್ ಮೂವ್‌ಮೆಂಟ್). ಆರು ಮೀಟರಿಗಿಂತ ಹತ್ತಿರ ಇರುವ ವಸ್ತುಗಳನ್ನು ವೀಕ್ಷಿಸುವಾಗ ಎರಡು ಕಣ್ಣುಗಳೂ ಮೂಗಿನ ಕಡೆಗೆ ಹೊರಳಿಸಲ್ಪಡುತ್ತವೆ. ಎರಡರ ಅಕ್ಷಗಳೂ ದೃಷ್ಟಿತ ವಸ್ತುವಿನಲ್ಲಿ ಸಂಧಿಸುವುವು. ವಸ್ತು ಹತ್ತಿರವಾದಷ್ಟೂ ಅಕ್ಷಗಳ ನಡುವೆ ಇರುವ ಕೋನದ ಮೌಲ್ಯ ಹೆಚ್ಚು ಕಣ್ಣುಗಳ ಅಭಿಸರನೆಯೂ (ಕನ್‌ವರ್ಜೆನ್ಸ್) ಹೆಚ್ಚು. ಅಗತ್ಯ ರೀತಿಯಲ್ಲಿ ಎರಡು ಕಣ್ಣುಗಳ ಯುಗ್ಮ ಚಲನೆ ಮತ್ತು ಅಭಿಸರಣ ಚಲನೆ (ಕನ್‌ವರ್‌ಜೆಂಟ್ ಮೂವ್‌ಮೆಂಟ್) ಏರ್ಪಡುವುದು ಕಣ್ಣುಗುಡ್ಡೆಯ ಹೊರ ಭಿತ್ತಿಯ ಎಡಬಲಭಾಗಗಳಿಗೆ ಬಂಧಿಸಲ್ಪಟ್ಟಿರುವ ಎರಡು ಸ್ನಾಯುಗಳಿಂದ ಕಣ್ಣುಗುಡ್ಡೆಯನ್ನು ಮೇಲಕ್ಕೆ ಕೆಳಕ್ಕೆ ಮತ್ತು ಇನ್ನಿತರ ಅಕ್ಷಗಳಲ್ಲಿ ಚಲಿಸುವಂತೆ ಮಾಡಲು ಇನ್ನೂ ನಾಲ್ಕು ಸ್ನಾಯುಗಳು ಇವೆ. ಇವು ಕಣ್ಣುಗುಡ್ಡೆಯ ಹೊರಭಿತ್ತಿಯ ಮೇಲೆ ಹಾಗೂ ಕೆಳಗೆ ಬಂಧಿಸಲ್ಪಟ್ಟಿವೆ. ಈ ಆರು ಸ್ನಾಯುಗಳ ಸಂಕೋಚನ ವ್ಯಾಕೋಚನಗಳು ಅಗತ್ಯಕ್ಕೆ ತಕ್ಕಂತೆ ಜರಗುವುವು. ನರಗಳ ನಿಯಂತ್ರಣದಿಂದ ಕಣ್ಣುಗುಡ್ಡೆಯ ಚಲನೆ ಸಾಮಾನ್ಯವಾಗಿ ಐಚ್ಛಿಕವಾಗಿ ಜರಗುವುದಾದರೂ ಅನೇಕ ವೇಳೆ ಅದು ಇಚ್ಛಾತೀತವಾಗಿರುವುದೂ ಉಂಟು. ಒಂದು ಕಣ್ಣು ಚಲಿಸಿದರೆ ಇನ್ನೊಂದು ಕಣ್ಣೂ ಅಗತ್ಯ ರೀತಿಯ ಯುಗ್ಮಚಲನೆಯನ್ನೂ ಅಭಿಸರಣ ಚಲನೆಯನ್ನು ತೋರಿಸುವುದನ್ನು ಐಚ್ಛಿಕವಾಗಿ ತಪ್ಪಿಸುವುದಕ್ಕಾಗುವುದಿಲ್ಲ. ಚಲನೆಯಲ್ಲಿ ಹೇಗೋ ಹಾಗೆಯೇ ಮಸೂರದ ಗಾತ್ರ ಹೆಚ್ಚಾಗುವಿಕೆ – ಕಣ್ಣಿನ ಪಾಪೆ ಕಿರಿದಾಗುವಿಕೆ – ಈ ಕ್ರಿಯೆಗಳಲ್ಲಿ ಎರಡು ಕಣ್ಣುಗಳೂ ಸಮವಾಗಿ ಭಾಗವಹಿಸುತ್ತವೆ. ಎಡ ಹಾಗೂ ಬಲಗಡೆಯ ಸಂಬಂಧಪಟ್ಟ ಎಲ್ಲ ಸ್ನಾಯುಗಳನ್ನೂ ನಿಯಂತ್ರಿಸುವ ನರಗಳು ಮಿದುಳಿನಲ್ಲಿ ತಮ್ಮ ಉಗಮಸ್ಥಾನಗಳಲ್ಲಿ ಪರಸ್ಪರ ಸಂಪರ್ಕಗೊಂಡು ಒಂದನ್ನೊಂದು ಪ್ರಭಾವಿಸುವುದರಿಂದ ಎರಡು ಕಣ್ಣುಗಳಲ್ಲೂ ಏಕಕಾಲಿಕವಾಗಿ ಒಂದೇ ಕ್ರಿಯೆ ಜರಗುತ್ತದೆ.

ಒಟ್ಟಿನಲ್ಲಿ ಎರಡು ಅಕ್ಷಿಪಟಲಗಳ ಮೇಲೂ ಹೊರವಸ್ತುವಿನ ಚಿತ್ರ ಸ್ಪಷ್ಟವಾಗಿ ಮಾಡಬೇಕಾದುದು ಮುಖ್ಯ. ಇದಕ್ಕಾಗಿ ಕಣ್ಣುಗುಡ್ಡೆಯನ್ನು ವಸ್ತುವಿನ ದಿಕ್ಕಿಗೆ ಹೊರಳಿಸುವುದೂ ವಸ್ತುವಿನ ದೂರ ಹಾಗೂ ಹೊಳಪಿಗೆ ತಕ್ಕಂತೆ ಕಣ್ಣಿನ ಪಾಪೆಯ ವ್ಯಾಸವನ್ನು ಸರಿ ಹೊಂದಿರುವುದೂ ವಸ್ತುವಿನ ದೂರಕ್ಕೆ ತಕ್ಕಂತೆ ಕಣ್ಣಿನ ಮಸೂರದ ಗಾತ್ರವನ್ನೂ ಕ್ರಮಪಡಿಸುವುದೂ ಇತ್ಯಾದಿ ಕ್ರಿಯೆಗಳು ಅವಶ್ಯಕವಾಗಿದ್ದು ಅವುಗಳಿಗೆ ಮೀಸಲಾದ ಸ್ನಾಯುಗಳ ಸಂಕೋಚನ ವ್ಯಾಕೋಚನಗಳು ಇಚ್ಛಾತೀತವಾಗಿಯೇ ಜರುಗುತ್ತವೆ. ಜೊತೆಗೆ ಎರಡು ಕಣ್ಣುಗಳಲ್ಲೂ ಇಂಥ ವ್ಯತ್ಯಾಸಗಳು ಏಕಕಾಲಿಕವಾಗಿ ಉಂಟಾಗುವುದರಿಂದ ಅವುಗಳ ಅಕ್ಷಿಪಟಲದ ಅನುರೂಪ ಸ್ಥಾನಗಳಲ್ಲಿ ವಸ್ತುವಿನ ಪ್ರತಿಬಿಂಬ ಮೂಡುತ್ತದೆ. ಇದರಿಂದ ದ್ವಿನೇತ್ರ ದೃಷ್ಟಿಯ (ಬೈನಾಕ್ಯುಲರ್ ವಿಷನ್) ಅನುಕೂಲತೆಗಳೆಲ್ಲವೂ ಲಭಿಸುವಂತಾಗುತ್ತದೆ. ವಸ್ತುವಿನ ದೂರ ಗಾತ್ರಗಳ ನಿಷ್ಕೃಷ್ಟ ಅಂದಾಜು, ಅದರ ವಿವರವಾದ ನೋಟ, ಅಸ್ಫುಟವಾಗಿಯಾದರೂ ಕಾಣುವ ಬದಿಯ ಭಾಗದ ವೈಶಾಲ್ಯ–ಇವೇ ಈ ಅನುಕೂಲತೆಗಳು. ವಸ್ತುವಿನ ಘನಕೃತಿಯ ಗ್ರಹಿಕೆಯೇ (ಸ್ಟೀರಿಯಾಪ್ಸಿಸ್) ದ್ವಿನೇತ್ರ ದೃಷ್ಟಿಯ ಪ್ರಮುಖ ಉಪಯುಕ್ತತೆ.

ಅಕ್ಷಿಪಟಲದ ಮೇಲೆ ಮೂಡಿರುವ ಪ್ರತಿಬಿಂಬದ ದ್ಯುತಿಶಕ್ತಿಯಿಂದ ಅಕ್ಷಿಪಟಲದಲ್ಲಿರುವ ಶಂಕು ಹಾಗೂ ದಂಡಕೋಶಗಳಲ್ಲಿ (ಕೋನ್ಸ್ ಅಂಡ್ ರಾಡ್ಸ್) ಪ್ರತಿಕ್ರಿಯೆ ಉಂಟಾಗುತ್ತದೆ. ಶಂಕು ಹಾಗೂ ದಂಡಕೋಶಗಳಲ್ಲಿ ಅನುಕ್ರಮವಾಗಿ ಅಯೊಡಾಪ್ಸಿನ್ ಮತ್ತು ರೋಡಾಪ್ಸಿನುಗಳೆಂಬ ರಾಸಾಯನಿಕಗಳಿವೆ. ಎ–ಜೀವಸತ್ತ್ವ ಸಂಬಂಧಿಸಿದಂತೆ ರೆಟಿನೀನ್ ಎಂಬ ರಾಸಾಯನಿಕ ಮತ್ತು ಸ್ಕೋಟಾಪ್ಸಿನ್ ಎಂಬ ಪ್ರೋಟೀನಿನ ಸಂಯುಕ್ತವೇ ರೋಡಾಪ್ಸಿನ್. ಅಯಾಡಾಪ್ಸಿನಿನಲ್ಲಿ ಸ್ಕೋಟಾಪ್ಸಿನ್ನನ ಬದಲು ಫೋಟಾಪ್ಸಿನ್ ಎಂಬ ಬೇರೆ ಪ್ರೋಟೀನ್ ಉಂಟು. ಬೆಳಕು ರೋಡಾಪ್ಸಿನ್ ಮತ್ತು ಅಯೊಡಾಪ್ಸಿನುಗಳ ಮೇಲೆ ವರ್ತಿಸಿ ಅವುಗಳ ರಾಸಾಯನಿಕ ವಿಭಜನೆಯನ್ನು ಉಂಟುಮಾಡಬಲ್ಲದೆಂದು ಪ್ರಾಯೋಗಿಕವಾಗಿ ತೋರಿಸಿದ್ದಾರೆ. ಬೆಳಕಿನಲ್ಲಿ ಅಲ್ಲದೆ ಅಕ್ಷಿಪಟಲದಲ್ಲಿ ಹೊರವಸ್ತುವಿನ ಚಿತ್ರ ಮೂಡಿರುವಾಗ ಕೂಡ ರ್‍ಹೊಡಾಪ್ಸಿನ ರೆಟಿನೀನ್ ಮತ್ತು ಸ್ಕೋಟಾಪ್ಸಿನಾಗಿ ವಿಭಜನೆಗೊಳ್ಳುತ್ತದೆ. ಬೆಳಕಿನಿಂದ ದಂಡಕೋಶ ಪ್ರಚೋದಿಸಲ್ಪಡುವುದು ಮುಗಿದ ಕೂಡಲೆ (ಅಂದರೆ ದೃಷ್ಟಿ ಬದಲಾಯಿಸಿದಾಗ, ಕಣ್ಣು ಮುಚ್ಚಿಕೊಂಡಾಗ, ಕತ್ತಲೆಯಲ್ಲಿ ಇತ್ಯಾದಿ) ರೋಡಾಪ್ಸಿನ ಪುನಃ ಸಂಯೋಗವಾಗುತ್ತದೆ. ಒಡನೆ ಅಕ್ಷಿಪಟಲದ ಆ ಭಾಗದಲ್ಲಿ ಪುನಃ ನೋಟ ಸಾಧ್ಯವಾಗುತ್ತದೆ. ಈ ಸಂಯೋಜನೆ ಆಗದಿದ್ದರೆ ನೋಟ ಸಾಧ್ಯವಿಲ್ಲ. ಪುನಃ ಸಂಯೋಜನೆಗೆ ಎ–ಜೀವಸತ್ತ್ವ ಬಹು ಉಪಯುಕ್ತ ಆದ್ದರಿಂದ ವ್ಯಕ್ತಿಯ ದೇಹದಲ್ಲಿ ಸಾಕಷ್ಟು ಎ–ಜೀವಸತ್ತ್ವ ಕೊರತೆ ಪ್ರಸಂಗಗಳಲ್ಲಿ ಮಬ್ಬುಬೆಳಕಿನ ನೋಟ ಕುಂಠಿತವಾಗುತ್ತದೆ. ರೋಡಾಪ್ಸಿನ ದಂಡಕೋಶಗಳಲ್ಲಿ ಮಾತ್ರ ಇರುವುದರಿಂದ ಮಬ್ಬುಬೆಳಕಿನ ದೃಷ್ಟಿ ದಂಡಕೋಶಗಳ ಕ್ರಿಯೆಯೇ ಎನ್ನುವುದು ವ್ಯಕ್ತ. ನಿಶಾಚರಿಗಳಾದ ಬೆಕ್ಕು, ಗೂಬೆ, ಇತ್ಯಾದಿಗಳ ಅಕ್ಷಿಪಟಲದಲ್ಲಿ ಇರುವುದು ಮುಖ್ಯವಾಗಿ ದಂಡಕೋಶಗಳೇ ಮಬ್ಬುಬೆಳಕಿನಲ್ಲಿ ವಸ್ತುವಿನ ಆಕಾರ ಗಾತ್ರಗಳು ಸ್ಥೂಲವಾಗಿ ತಿಳಿಯುತ್ತವೆಯೇ ವಿನಾ ಅವುಗಳ ಸೂಕ್ಷ್ಮ ವಿನ್ಯಾಸ, ವಿವರಗಳು, ವರ್ಣ ಇತ್ಯಾದಿಗಳು ತಿಳಿಯುವುದಿಲ್ಲ. ನೇರದೃಷ್ಟಿಯಲ್ಲಿ ಅಕ್ಷಿಪಟಲದ ಮೇಲೆ ಬಿಂಬ ಮೂಡುವ ಭಾಗದಲ್ಲಿ ದಂಡಕೋಶಗಳಿರುವುದಿಲ್ಲ, ರೋಡಾಪ್ಸಿನ್ನೂ ಇರುವುದಿಲ್ಲವೆಂಬುದೂ ವ್ಯಕ್ತ. ಆದ್ದರಿಂದ ಮಬ್ಬು ಬೆಳಕಿನಲ್ಲಿ ನೇರದೃಷ್ಟಿಯಿಂದ ವಸ್ತುಗಳ ಇರವನ್ನು ಗ್ರಹಿಸುವುದು ಕಷ್ಟ. ಓರೆಗಣ್ಣಿನಿಂದ ವೀಕ್ಷಿಸಿದಾಗ ವಸ್ತುವಿನ ಚಿತ್ರ ಅಕ್ಷಿಪಟಲದಲ್ಲಿ ಹೆಚ್ಚು ದಂಡಕೋಶಗಳೇ ಇರುವ ಕಡೆ ಮೂಡುತ್ತದೆ. ಆದ್ದರಿಂದ ಮಬ್ಬುಬೆಳಕಿನಲ್ಲಿ ಓರೆ ದೃಷ್ಟಿ ಲಾಭದಾಯಕ. ಕತ್ತಲು ಕೊಠಡಿಯಲ್ಲಿ ಅಥವಾ ರಾತ್ರಿಕಾಲದಲ್ಲಿ ಓರೆದೃಷ್ಟಿಯಿಂದ ಏನೋ ಸಣ್ಣ ವಸ್ತು ಗೋಚರಿಸಿದಂತಾಗಿ ದೃಷ್ಟಿಯನ್ನು ನೇರವಾಗಿ ಅಲ್ಲಿಗೆ ಬದಲಿಸಿದರೆ ಏನೂ ಕಾಣಿಸದಿರುವುದು ಬಹುಜನಕ್ಕೆ ಗೊತ್ತಿದೆ. ಆಕಾಶದಲ್ಲಿ ಅನೇಕ ಮಬ್ಬಾದ ನಕ್ಷತ್ರಗಳು ಈ ರೀತಿ ಗೋಚರವಾಗುವುದನ್ನು ಅದನ್ನು ಎಲ್ಲರೂ ಬಲ್ಲರು. ಚರವಸ್ತುವಿನ ಚಲನೆ ಬಲು ನಿಧಾನವಾಗಿದ್ದರೆ ನೇರದೃಷ್ಟಿಯಿಂದ ಅರಿಯುವುದಕ್ಕಿಂತ ಸುಲಭವಾಗಿ ಓರೆದೃಷ್ಟಿಯಿಂದ ಅರಿಯಬಹುದು. ಯಾವುದೇ ವಸ್ತುವನ್ನು ನೇರವಾಗಿ ನೋಡುತ್ತಿದ್ದಾಗ ಅದರ ನೆರೆಯಲ್ಲಿ ಒಂದು ಸಣ್ಣ ಇರುವೆಯೊ ಕೀಟವೊ ಹರಿದಾಡುತ್ತಿದ್ದಂತೆ ಭಾಸವಾಗುವುದು ಮತ್ತು ಅದು ನಿಜವೇ ಎಂದು ನಿರ್ಧರಿಸಿಕೊಳ್ಳಲು ದೃಷ್ಟಿಯನ್ನು ಅದರೆಡೆಗೆ ತಿರುಗಿಸಿದರೆ ಚಲನೆ ಪತ್ತೆಯಾಗದಿರುವುದು ಕೂಡ ಸಾಮಾನ್ಯವಾಗಿ ಎಲ್ಲರ ಅನುಭವಕ್ಕೂ ಬಂದಿರುತ್ತದೆ. ಇವೇ ದಂಡಕೋಶಕ್ರಿಯೆಯ ವೈಶಿಷ್ಟ್ಯಗಳು.

ಬೆಳಕಿನ ಉಜ್ವಲತೆ ಹೆಚ್ಚಾಗಿದ್ದಾಗ ವಸ್ತುಗಳ ವರ್ಣ, ವಿನ್ಯಾಸ, ಇತ್ಯಾದಿ ವಿವರಗಳನ್ನು ಗ್ರಹಿಸಬಹುದು. ಇದಕ್ಕಾಗಿ ಸಾಮಾನ್ಯವಾಗಿ ಬೆಳಕಿನಲ್ಲಿ ವಸ್ತುಗಳನ್ನು ನೇರದೃಷ್ಟಿಯಿಂದಲೇ ವೀಕ್ಷಿಸಲಾಗುತ್ತದೆ. ಮೇಲೆ ಹೇಳಿರುವಂತೆ ಇಂತ ನೇರ ದೃಷ್ಟಿಯಿಂದ ಅಕ್ಷಿಪಟಲದಲ್ಲಿ ಚಿತ್ರ ಮೂಡುವ ಸ್ಥಳದಲ್ಲಿ ದಂಡಕೋಶಗಳಿರುವುದಿಲ್ಲ. ಬದಲಾಗಿ ಅಲ್ಲಿ ಶಂಕುಕೋಶಗಳು ಮಾತ್ರ ಇರುತ್ತವೆ. ವರ್ಣಾನುಭವ ತಪಶೀಲು ವೀಕ್ಷಣೆ – ಇವು ಶಂಕುಕೋಶಗಳ ಕ್ರಿಯೆ; ಮತ್ತು ಇವು ತಕ್ಕಷ್ಟು ಪ್ರಕಾಶವಾದ ಬೆಳಕಿನಲ್ಲೇ ಹಾಗೂ ನೇರದೃಷ್ಟಿಯಿಂದಲೇ ಲಭಿಸತಕ್ಕವು. ಅಕ್ಷಿಪಟಲದಲ್ಲಿ ಒಂದು ಶಂಕು ಕೋಶದ ಅಳತೆಯಷ್ಟು ಬಿಂಬವನ್ನು ಮೂಡಿಸಬಲ್ಲ ಅಳತೆಯ ವಸ್ತುವೇ ಬಹುಶಃ ದೃಷ್ಟಿಗೋಚರವಾಗಬಲ್ಲ ಅತ್ಯಂತ ಕಿರಿದಾದ ವಸ್ತು. ಈ ಅಳತೆಯ ವಸ್ತು ಅಥವಾ ವಸ್ತು ಭಾಗದಿಂದ ಕಣ್ಣಿನ ನಾಭಿಯಲ್ಲಿ ಅಳವಡುವ ಕೋನ ೧/೬೦ ಅಥವಾ ೧ ಕೋನಮಿನಿಟ್. ಇಷ್ಟು ಎದುರು ಕೋನವಿರುವ ವಸ್ತು ಕಣ್ಣಿನಿಂದ ೬೦ ಸೆಂಮೀ. ದೂರದಲ್ಲಿದ್ದರೆ ಅದರ ಅಳತೆ ೦.೦೧೫ ಸೆಂಮೀ. ಇರಬೇಕು. ಇದೇ ಲೆಕ್ಕದ ಮೇಲೆ ಸುಮಾರು ೧.೬ ಕಿಮೀ. ದೂರದಲ್ಲಿರುವ ವಸ್ತು ४೫ ಸೆಂಮೀ. ಉದ್ದ ಮತ್ತು ಅಗಲವಿದ್ದರೆ ಮಾತ್ರ ಅದರ ವಿವರ ಗೋಚರವಾಗಿ ಅದನ್ನು ಗುರುತು ಹಿಡಿಯಬಹುದು. ಅಂದರೆ ಈ ವಿವರಣೆ ಸರ್ವಥಾ ವಾಸ್ತವಿಕ ಎನ್ನುವಂತಿಲ್ಲ. ವಿವರ ದೃಗ್ಗೋಚರವಾಗುವಿಕೆಗೆ ದೂರಕ್ಕೆ ತಕ್ಕಂತೆ ವಸ್ತುವಿನ ಕನಿಷ್ಠ ಅಳತೆ ಮಾತ್ರ ಅಲ್ಲ ; ವಸ್ತುವಿನ ಹೊಳಪು ವಸ್ತುವಿನ ಹಿನ್ನೆಲೆ ಇವೂ ಮುಖ್ಯ. ದೃಷ್ಟಿಯನ್ನು ಮಸಕಾಗಿಸುವ ಇಬ್ಬನಿ, ತೆರೆಮರೆ – ಇವು ತಪಶೀಲು ಸ್ಪಷ್ಟ ದೃಷ್ಟಿಗೆ ಮಾರಕ ಎನ್ನುವುದು ಎಲ್ಲರ ಅನುಭವವೇ. ಸ್ಪಷ್ಟ ಅರಿವಿಗೆ ವಸ್ತುವಿನ ಹಿನ್ನೆಲೆ ಎಷ್ಟು ಮುಖ್ಯ ಎಂಬುದನ್ನು ಸುಲಭವಾಗಿ ಗ್ರಹಿಸಬಹುದು. ಒಂದು ಕರಿಯ ದಾರ ಕರಿಯ ಬಟ್ಟೆಯ ಮೇಲಿದ್ದರೆ ಬೆಳಕು ಉಜ್ವಲವಾಗಿರದಿದ್ದಲ್ಲಿ ದಾರ ದೃಗ್ಗೋಚರವಾಗದೆ ಇರಬಹುದು. ಅದೇ ದಾರ ಬಿಳಿಯ ಬಟ್ಟೆಯ ಮೇಲೆ ಇದ್ದರೆ ಬೆಳಕು ಅಷ್ಟು ಉಜ್ವಲವಾಗಿಲ್ಲದಿದ್ದರೂ ದಾರ ಸ್ಪಷ್ಟವಾಗಿ ದೃಗ್ಗೋಚರವಾಗುತ್ತದೆ.

ಹಗಲು ಪ್ರಾಣಿಗಳ (ಅಳಿಲು, ಪಾರಿವಾಳ ಇತ್ಯಾದಿ) ಅಕ್ಷಿಪಟಲದಲ್ಲಿ ಮುಖ್ಯವಾಗಿ ಶಂಕು ಕೋಶಗಳೇ ಇವೆ. ಮಾನವರಲ್ಲಿ ಶಂಕು ಹಾಗೂ ದಂಡಕೋಶಗಳು ಎರಡೂ ಇದೆ ಎಂದು ಮೇಲಿನ ವಿವರಣೆಯಿಂದ ಆಗಲೇ ತಿಳಿದಿದೆ. ಈ ಕೋಶಗಳು ಬಹು ಸಣ್ಣವು ನೇರದೃಷ್ಟಿಯಲ್ಲಿ ಚಿತ್ರ ಮೂಡುವ ಅಕ್ಷಿಪಟದ ಭಾಗ ಮತ್ತು ಅದರ ಸುತ್ತ ಸುಮಾರು ೨–೩ ಮಿಮೀ. ಕ್ಷೇತ್ರದಲ್ಲಿ ಹೆಚ್ಚಾಗಿ ಶಂಕುಕೋಶಗಳೇ ಇರುತ್ತವೆ. ಅಕ್ಷಿಪಟದ ವಲಯ ಹೊರಹೊರಗಾದಂತೆ ಶಂಕುಕೋಶಗಳು ಕಡಿಮೆ ಆಗುತ್ತ ದಂಡಕೋಶಗಳು ಹೆಚ್ಚಾಗುವುವು. ಅಕ್ಷಿಪಟದ ಕೇಂದ್ರದಲ್ಲಿ ಕೇವಲ ಶಂಕುಕೋಶಗಳೂ ಅದರ ಅಂಚಿನಲ್ಲಿ ಕೇವಲ ದಂಡ ಕೋಶಗಳೂ ಇರುತ್ತವೆ. ಮಾನವರ ಅಕ್ಷಿಪಟದಲ್ಲಿ ಒಟ್ಟು ೭ ಮಿಲಿಯನ್ ಶಂಕುಕೋಶಗಳೂ ೧೩೦ ಮಿಲಿಯನ್ ದಂಡ ಕೋಶಗಳು ಇವೆ ಎಂದು ಅಂದಾಜು. ಎರಡು ಬಗೆಯ ಕೋಶಗಳೂ ಇರುವುದರಿಂದ ಮಾನವರಿಗೆ ಉಜ್ವಲವಾದ ಬೆಳಕಿನಲ್ಲೂ, ಮುಬ್ಬು ಬೆಳಕಿನಲ್ಲೂ ದೃಷ್ಟಿ ಸಾಧ್ಯ. ವಸ್ತುಗಳ ಸ್ಥೂಲ ಲಕ್ಷಣವೇ ಅಲ್ಲದೆ ವರ್ಣ ವಿವರಗಳು – ಇವುಗಳ ಅರಿವು ಕೂಡ ಸಾಧ್ಯ. ಹಗಲು ಹೊತ್ತು ದೃಷ್ಟಿಕ್ರಿಯೆಯಲ್ಲಿ ಮುಖ್ಯವಾಗಿ ಶಂಕುಕೋಶಗಳೇ ಭಾಗ ವಹಿಸುತ್ತವೆ. ದಂಡಕೋಶಗಳು ಹೆಚ್ಚು ಕಡಿಮೆ ನಿಷ್ಕ್ರಿಯಗೊಂಡಿರುತ್ತವೆ. ಏಕೆಂದರೆ ಉಜ್ವಲ ಬೆಳಕಿನ ಫಲವಾಗಿ ಅವುಗಳಲ್ಲಿ ರೋಡಾಪ್ಸಿನ್ ವಿಭಜನೆಗೊಂಡಿರುತ್ತದೆ. ಪುನಃ ಸಂಯೋಜನೆಗೆ ಪರಿಸ್ಥಿತಿ ಅನುಕೂಲವಾಗಿರುವುದಿಲ್ಲ. ಹಠಾತ್ತಾಗಿ ಬೆಳಕಿನ ಉಜ್ವಲತೆ ತಗ್ಗಿದರೆ ಇಲ್ಲವೇ ವ್ಯಕ್ತಿ ಥಟ್ಟನೆ ಕತ್ತಲೆ ಕೋಣೆಯೊಳಹೊಕ್ಕರೆ ಕೂಡಲೇ ಯಾವ ವಸ್ತುವೂ ದೃಷ್ಟಿಗೆ ಬೀಳುವುದಿಲ್ಲ. ಏಕೆಂದರೆ ಶಂಕುಗಳು ಮಬ್ಬು ಬೆಳಕಿನಲ್ಲಿ ಪ್ರಚೋದಿತವಾಗುವುದಿಲ್ಲ. ದಂಡಗಳು ನಿಷ್ಕ್ರಿಯಗೊಂಡಿರುತ್ತವೆ. ಆದರೆ ಶೀಘ್ರದಲ್ಲೆ ರೋಡಾಪ್ಸಿನ್ನಿನ ಪುನಃ ಸಂಯೋಜನೆ ಪ್ರಾರಂಭವಾಗಿ ದಂಡಕೋಶಗಳು ದೃಷ್ಟಿಕ್ರಿಯೆಯಲ್ಲಿ ತಮ್ಮ ಕರ್ತವ್ಯವನ್ನು ವಹಿಸಿಕೊಳ್ಳುವಂತಾಗುತ್ತದೆ. ಪರಿಸರದ ಉಜ್ವಲತೆ ೦.೧ ಲ್ಯಾಮ್‍ಬರ್ಟನಷ್ಟು ಇದ್ದಾಗ ಅರ್ಥಾತ್ ದೃಷ್ಟಿಸಿದ ವಸ್ತುವಿನ ಪ್ರಭೆ ೧ ಘಂಟೆ ಕ್ಯಾಂಡಲ್ಲಿಗೆ ಸಮವಾಗಿದ್ದಾಗ ದಂಡಕೋಶಗಳ ಕರ್ತವ್ಯ ಪ್ರಾರಂಭವಾಗುವುದೆಂದು ಪ್ರಾಯೋಗಿಕವಾಗಿ ತೋರಿಸಲಾಗಿದೆ. ದಂಡಕೋಶಗಳಲ್ಲಿ ರೋಡಾಪ್ಸಿನ್ ಪುನಃ ಸಂಯೋಜನೆ ಆಗುತ್ತಿರುವಂತೆಯೇ ಒಂದೆರಡು ಮಿನಿಟುಗಳಲ್ಲೆ ಕತ್ತಲಿನಲ್ಲಿ ವಸ್ತುಗಳು ಸ್ಥೂಲವಾಗಿ ಗೋಚರಿಸುವುದಕ್ಕೆ ಪ್ರಾರಂಭವಾಗಿ ೫ – ೧೦ ಮಿನಿಟುಗಳಲ್ಲಿ ತಕ್ಕಮಟ್ಟಿಗೆ ಚೆನ್ನಾಗಿಯೇ ಕಾಣುವಂತಾಗುವುದು. ಕಣ್ಣು ಮಬ್ಬು ಬೆಳಕಿಗೆ ಹೊಂದಿಕೊಳ್ಳುವುದು, ಅದಕ್ಕೆ ಆಗತ್ಯವಾದ ಕಾಲಾವಧಿ, ಇವನ್ನು ವಿಶೇಷವಾಗಿ ವ್ಯಾಸಂಗಿಸಲಾಗಿದೆ. ಎ–ಜೀವಸತ್ತ್ವ ಕೊರತೆ ಇರುವ ವ್ಯಕ್ತಿಗಳಲ್ಲಿ ಕತ್ತಲೆ ದೃಷ್ಟಿಗೆ ಹೊಂದಿಕೊಳ್ಳುವ ಕಾಲ ಮಿಕ್ಕವರಿಗಿಂತ ಹೆಚ್ಚು ಎನ್ನುವುದು ವ್ಯಕ್ತವಾಗಿಯೇ ಇದೆ. ಕತ್ತಲೆದೃಷ್ಟಿ ಲಭಿಸಬೇಕಾದರೆ ಇವರಿಗೆ ಸುಮಾರು ೧/೪ ಗಂಟೆ – ೧/೨ ಗಂಟೆಯೇ ಬೇಕಾದೀತು. ವಾಸ್ತವವಾಗಿ ವ್ಯಕ್ತಿಗಳಲ್ಲಿ ಎ–ಜೀವಸತ್ತ್ವದ ಕೊರತೆ ಇದೆಯೇ ಎಂದು ಪರೀಕ್ಷಿಸಲು ಅವರು ಕತ್ತಲೆ ದೃಷ್ಟಿಲಾಭಕ್ಕಾಗಿ ಎಷ್ಟು ಕಾಲ ತೆಗೆದುಕೊಳ್ಳುತ್ತಾರೆ ಎಂದು ನಿರ್ಧರಿಸುವುದು ರೂಢಿ. ಛಾಯಾ ಚಿತ್ರಕಾರರು, ಎಕ್ಸ್–ಕಿರಣತಜ್ಞರು, ರಾತ್ರಿ ಸಂಚರಿಸುವ ಕ್ಷಿಪ್ರ ವಾಹನ ಚಾಲಕರು ಮುಂತಾದವರು ಕತ್ತಲೆ ದೃಷ್ಟಿಗೆ ಬಹು ಶೀಘ್ರವಾಗಿ ಹೊಂದಿಕೊಳ್ಳಬೇಕಾಗಿರುವುದು ಆಗತ್ಯ. ಹೆಚ್ಚು ಉಜ್ವಲತೆ ಇಲ್ಲದ ಕೆಂಪು ಬೆಳಕು ದೃಷ್ಟಿಯಿಂದ ಕತ್ತಲು ದೃಷ್ಟಿಗೆ ಹೆಚ್ಚು ಕಡಿಮೆ ತತಕ್ಷಣವೇ ಹೊಂದಿಕೊಳ್ಳಬಹುದಾಗಿದೆ. ಆದ್ದರಿಂದ ಇಂಥ ಉದ್ಯೋಗಿಗಳು ಬೆಳಕಿನಲ್ಲಿ ಮಾಡಬೇಕಾದ ಕೆಲಸಗಳನ್ನು ಕೆಂಪು ದೀಪದ ಬೆಳಕಿನಲ್ಲಿ ಮಾಡುವುದೂ ಬೆಳಕಿನಲ್ಲಿ ಕೆಲಸ ಮಾಡುವಾಗ ಸದಾ ಕೆಂಪುಗಾಜಿನ ಕನ್ನಡಕವನ್ನು ಬಳಸುವುದೂ ಬಲು ಅನುಕೂಲ ಎಂದು ಕಂಡುಬಂದಿದೆ.

ಅಕ್ಷಿಪಟದಲ್ಲಿ ಶಂಕುಗಳಲ್ಲಿ ನರಕೋಶಗಳೊಡನೆ ಸಂಪರ್ಕವಿರುವುದು ಕಡಿಮೆ ಸಮೀಪದಲ್ಲಿ ನೆಟ್ಟದೃಷ್ಟಿಯಿಂದ ಸಣ್ಣವಸ್ತುವಿನ ಚಿತ್ರಮಾಡುವ ಕಡೆಯಂತೂ ಇಂಥ ಸಂಪರ್ಕ ಇಲ್ಲವೇ ಇಲ್ಲವೆನ್ನಬಹುದು ಆದರೆ ದಂಡಕೋಶಗಳು ನೆರೆಯ ದಂಡ ಹಾಗೂ ಶಂಕುಗಳೊಡನೆ ಬಹಳ ರೀತಿಯಲ್ಲಿ ಸಂಪರ್ಕ ಹೊಂದಿವೆ. ಇಂಥ ಸಂಪರ್ಕಗಳಿಂದ ಪ್ರತಿಬಿಂಬ ಮೂಡಿರುವ ಕಡೆ ಇರುವ ಶಂಕು ದಂಡಕೋಶಗಳಲ್ಲಿ ಮಾತ್ರವಲ್ಲದೆ ನೆರೆಯ ಅಸಂಖ್ಯಾತ ಕೋಶಗಳಲ್ಲೂ ಪ್ರತಿಕ್ರಿಯೆ ಉಂಟಾಗುತ್ತದೆ. ಇವುಗಳಲ್ಲಿ ಕೆಲವು ಮೂಲಪ್ರತಿಕ್ರಿಯೆಯನ್ನು ವರ್ಧಿಸುವಂಥವು. ಇನ್ನು ಕೆಲವು ಅದನ್ನು ಅಡಗಿಸುವಂಥವು. ಈ ಕ್ರಿಯೆಗಳೆಲ್ಲ ಜರುಗಿ ಕೊನೆಗೆ ಪ್ರತಿಬಿಂಬ ಮೂಡಿದ ಸ್ಥಳದಿಂದುದ್ಭವಿಸಿದ ನರಪ್ರಚೋದನೆ

ಅಲ್ಲಿಯ ನರತಂತುಗಳ ಮೂಲಕ ಮುಂದುವರಿಯುತ್ತದೆ. ಕಣ್ಣುಗುಡ್ಡೆಯ ಹಿಂಬದಿಯಲ್ಲಿ ಅಕ್ಷಿಪಟದ ಎಲ್ಲ ಭಾಗಗಳಿಂದ ಹೊರಡುವ ನರತಂತುಗಳೂ ಸೇರಿ ಕಂತೆಗಟ್ಟಿಕೊಂಡು ದೃಷ್ಟಿನರವಾಗುತ್ತದೆ (ಆಪ್ಟಿಕ್ ನರ್ವ್). ಮುಂದೆ ಇದು ಮಿದುಳಿನ ನಿರ್ದಿಷ್ಟ ಭಾಗವನ್ನು ತಲುಪುತ್ತದೆ. ಬಲ ಅಕ್ಷಿಪಟದ ಒಳಾರ್ಧದಿಂದ ಹೊರಟ ನರತಂತುಗಳಿಂದಾದ ಬಲನರದ ಭಾಗವೂ, ಎಡ ಅಕ್ಷಿಪಟದ ಒಳಾರ್ಧದಿಂದ ಹೊರಟ ನರತಂತುಗಳಿಂದಾದ ಎಡ ದೃಷ್ಟಿನರದ ಭಾಗವೂ ಮಸ್ತಿಷ್ಕದ ಅಡಿಯಲ್ಲಿ ಒಂದನ್ನೊಂದು ಅಡ್ಡಹಾದು, ಬಲಗಣ್ಣಿನದು ಎಡಗಡೆಗೂ ಎಡಗಣ್ಣಿನದು ಬಲಗಡೆಗೂ ಸಾಗಿ ಅಲ್ಲಿ ಆಯಾ ಕಣ್ಣಿನ ದೃಷ್ಟಿ ನರದ ಮಿಕ್ಕ ಅರ್ಧಭಾಗದೊಡನೆ ಸೇರಿಕೊಳ್ಳುತ್ತದೆ. ಆನಂತರ ಈ ಮಿಶ್ರನರದಿಂದ ಒಂದು ಅಂಶ ಬೇರ್ಪಟ್ಟು ನೆರೆಯಲ್ಲಿರುವ ಮಧ್ಯ ಮಿದುಳಿನ ಭಾಗವಾದ ಆ ಕಡೆಯ ಉನ್ನತ ಕಾಲಿಕ್ಯುಲಸ್ಸನ್ನು ತಲಪುವುದು. ಮಿಕ್ಕ ನರತಂತುಗಳು ಥ್ಯಾಲಮಸ್ಸಿನ ಭಾಗವಾದ ಆ ಕಡೆಯ ಹೊರಜೆನಿಕ್ಯುಲೇಟ್ ಕಾಯವನ್ನು ಸೇರಿ ಅಲ್ಲಿ ಅಂತ್ಯಗೊಳ್ಳುವುವು. ಅಲ್ಲಿಂದ ಹೊಸ ನರತಂತುಗಳು ಪ್ರಾರಂಭವಾಗಿ ಹಿರಿಮಸ್ತಿಷ್ಕದ ಹಿಂಬದಿಯಲ್ಲಿ ನಿರ್ದಿಷ್ಟ ಸ್ಥಾನವನ್ನು ತಲುಪುವುವು. ಇವೆಲ್ಲವನ್ನೂ ೧೯ನೇ ಶತಮಾನದ ಅಂತ್ಯ ಮತ್ತು ಆದಿಯಲ್ಲಿ ಅನೇಕ ವಿಜ್ಞಾನಿಗಳು ಹಲವಿಧವಾದ ಪ್ರಯೋಗಗಳಿಂದ ಸ್ಥಿರೀಕರಿಸಿದ್ದಾರೆ. ಅಕ್ಷಿಪಟದಿಂದ ಹೊರಟ ಪ್ರತಿಯೊಂದು ನರತಂತುವೂ ಹೊರಜೆನಿಕ್ಯುಲೇಟ್ ಕಾಯದಲ್ಲಿ ನಿರ್ದಿಷ್ಟ ನರಕೋಶದ ನೆರೆಯಲ್ಲಿ ಅಂತ್ಯಗೊಳ್ಳುವುದನ್ನೂ ಆ ನರಕೋಶದಿಂದ ಹೊರಟ ಹೊಸ ನರತಂತು ಮಸ್ತಿಷ್ಕದಲ್ಲಿಯೂ ನಿರ್ದಿಷ್ಟ ನರಕೋಶದೊಡನೆಯೇ ಸಂಪರ್ಕಗೊಂಡು ಅದನ್ನು ಮಾತ್ರ ಪ್ರಚೋದಿಸುವುದನ್ನೂ ಇದೇ ರೀತಿ ವಿಶದಗೊಳಿಸಲಾಗಿದೆ. ಎರಡು ಅಕ್ಷಿಪಟಗಳ ಎಡಾರ್ಧಗಳ ಪ್ರತಿಯೊಂದು ಬಿಂದುವೂ ಹಿರಿಮಸ್ತಿಷ್ಕದ ಎಡಾರ್ಧದಲ್ಲಿ ಪ್ರತಿನಿಧಿಸಲ್ಪಟ್ಟಿದೆ. ಅದೇ ರೀತಿ ಅಕ್ಷಿಪಟಗಳ ಬಲಾರ್ಧದ ಪ್ರತಿಬಿಂದುವೂ ಹಿರಿಮಸ್ತಿಷ್ಕದ ಬಲಾರ್ಧದಲ್ಲಿ ಅನುಗುಣವಾದ ಕೋಶದಲ್ಲಿ ಮಾತ್ರ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆ. ಅಕ್ಷಿಪಟಗಳ ಎಡಾರ್ಧಗಳಲ್ಲಿ ನಮ್ಮ ಬಲಭಾಗಕ್ಕಿರುವ ವಸ್ತುಗಳ ಚಿತ್ರ ಮೂಡುತ್ತದೆ ಎನ್ನುವುದು ಭೌತಶಾಸ್ತ್ರ ಸಿದ್ಧಾಂತಕ್ಕೆ ಅನುಗುಣವಾದ ವ್ಯಕ್ತ ವಿಷಯ. ಆದ್ದರಿಂದ ನಮ್ಮ ಬಲಕ್ಕಿರುವ ವಸ್ತುಗಳು ಹಿರಿಮಸ್ತಿಷ್ಕದ ಎಡಾರ್ಧದಿಂದಲೂ, ಎಡಕ್ಕಿರುವ ವಸ್ತುಗಳು ಬಲಾರ್ಧದಿಂದಲೂ ಗ್ರಹಿಸಲ್ಪಡುತ್ತವೆ. ನೆಟ್ಟದೃಷ್ಟಿಯಿಂದ ವೀಕ್ಷಿಸಲ್ಪಡುವ ಯಾವುದೇ ವಸ್ತುವೂ ಮಸ್ತಿಷ್ಕದ ಎರಡು ಭಾಗಗಳಿಂದಲೂ ಗ್ರಹಿಸಲ್ಪಡುತ್ತದೆ ಎನ್ನುವುದಕ್ಕೆ ಆಧಾರ ಇದೆ. ಮಸ್ತಿಷ್ಕದ ದೃಷ್ಟಿಭಾಗದಲ್ಲಿ ಪ್ರತಿಕ್ರಿಯೆಯಾಗಿ ಕಾಣಬರುವ ಮಾರ್ಪಾಡುಗಳು ತಿಳಿಯುವುವು.

ಅಕ್ಷಿಪಟಗಳಲ್ಲಿ ವಸ್ತುವಿನ ಚಿತ್ರ ಭೌತಶಾಸ್ತ್ರ ಸಿದ್ಧಾಂತರೀತ್ಯ ತಲೆಕೆಳಗಾಗಿ ಮೂಡಿದರೂ ವಸ್ತು ನೆಟ್ಟಗಿರುವಂತೆಯೇ ಹೇಗೋ ಭಾಸವಾಗುತ್ತದೆ. ಶೈಶವ್ಯದಿಂದಲೂ ವಸ್ತುಗಳನ್ನು ದೃಷ್ಟಿಸಿ ಅವುಗಳ ಸ್ವರೂಪವನ್ನು ಗ್ರಹಿಸಲು ಇತರ ಸಂವೇದನೆಗಳನ್ನೂ ಬಳಸಿಕೊಂಡು ದೃಷ್ಟಿಲಾಭ ಪಡೆಯುವುದನ್ನು ರೂಢಿಸಿಕೊಳ್ಳುವುದರಿಂದ ಬಹುಶಃ ಇದು ಸಾಧ್ಯವಾಗಿದೆ. ಗ್ರಹಿಕೆ ಈ ರೀತಿ ಪೂರ್ವಾನುಭವದಿಂದ ಕಲಿತದ್ದು ಎನ್ನುವುದಕ್ಕೆ ಇನ್ನೊಂದು ಉದಾಹರಣೆ – ಸುಮಾರು ೬೦ ಮೀಟರ್ ದೂರದಲ್ಲಿರುವ ಒಂದು ಬಂಡಿಯು ೧/೪ ಮೀಟರ್ ದೂರದಲ್ಲಿ ಅದರಂತೆಯೇ ಇರುವ ಆಟದ ಸಾಮಾನಿನ ಬಂಡಿಯೂ ಅಕ್ಷಿಪಟದಲ್ಲಿ ಬಹುಶಃ ಒಂದೇ ಅಳತೆಯ ಚಿತ್ರವನ್ನು ಮೂಡಿಸುತ್ತವೆ. ಆದರೆ ಒಂದು ನಿಜವಾದ ಬಂಡಿ ಅದು ಸುಮಾರು ಇಷ್ಟು ಉದ್ದ ಅಗಲ ಎತ್ತರವಾಗಿದೆ ಎಂದೂ, ಇನ್ನೊಂದು ಪುಟಾಣಿ ಆಟದ ಸಾಮಾನೆಂದೂ ಗ್ರಹಿಸಲಾಗುತ್ತದೆ. ಮಸ್ತಿಷ್ಕದ ಎಡಬಲ ಎರಡು ಭಾಗಗಳಲ್ಲೂ ಆಗುವ ಪ್ರತಿಕ್ರಿಯೆಗಳು ಹೇಗೋ ಮಿಲಾಯಿಸುತ್ತವೆ. ಇದರಿಂದ ಎರಡು ಕಣ್ಣುಗಳಿಂದ ವೀಕ್ಷಿಸಿದರೂ ಎರಡು ಅಕ್ಷಿಪಟಗಳ ಮೇಲೂ ಪ್ರತಿಬಿಂಬ ಮೂಡಿ ನರಪ್ರಚೋದನೆ ಉಂಟಾಗಿ ಮಿದುಳಿನ ಎರಡು ಭಾಗಗಳಿಗೆ ತಲುಪಿದರೂ ನೋಡಿದ ವಸ್ತು ಎರಡಾಗಿ ಕಾಣದೆ ಒಂದೇ ಆಗಿ ಕಾಣಿಸುತ್ತದೆ. ಎರಡು ಕಣ್ಣುಗಳ ದೃಷ್ಟಿಯೂ ಮಾನಸಿಕವಾಗಿ ಹೀಗೆ ಒಂದುಗೂಡುವುದರಿಂದಲೇ ವಸ್ತುವಿನ ಗಾತ್ರ ಗ್ರಹಿಕೆ ಅರ್ಥಾತ್ ಘನಾಕೃತಿಯ ಅರಿವು ಸಾಧ್ಯವಾಗುವುದು. ಮಾನಸಿಕ ಮಿಲನವಾಗದೆ ವಸ್ತು ಎರಡಾಗಿ ಕಂಡರೆ – ಕೆಲವು ವೇಳೆ ಹೀಗಾಗುವುದುಂಟು – ವಸ್ತುವಿನ ಗಾತ್ರ ಗ್ರಹಿಕೆ ಸಾಧ್ಯವಾಗುವುದಿಲ್ಲ. ಎಡಬಲಗಳು ಎರಡು ಅಕ್ಷಿಪಟಲಗಳಲ್ಲಿಯೂ ಸಂವಾದೀ ಸ್ಥಾನಗಳಲ್ಲಿ ಹೊರವಸ್ತುವಿನ ಪ್ರತಿಬಿಂಬಗಳು ಉಂಟಾದರೆ ಅವು ಮಾನಸಿಕವಾಗಿ ವಿಲೀನವಾಗಬಲ್ಲವು. ಹೀಗೆ ಅಕ್ಷೀಸಂವಾದೀ ಸ್ಥಾನಗಳಲ್ಲಿ ಪ್ರತಿಬಿಂಬಗಳು ಉಂಟಾಗದಿದ್ದರೆ ಅವು ಮಿಲನವಾಗದೆ ವಸ್ತು ಎರಡಾಗಿ ಕಾಣಿಸುತ್ತದೆ. ಇನ್ನೊಂದು ಸಂಗತಿ ಎಂದರೆ ಪ್ರತಿಬಿಂಬಗಳು ಒಂದನ್ನೊಂದು ಪೂರ್ಣವಾಗಿ ಹೋಲುವುದಿಲ್ಲ. ಎಡಗಣ್ಣಿನಲ್ಲಿ ಪ್ರತಿಬಿಂಬಿತವಾದ ಹೊರವಸ್ತುವಿನ ಎಡಭಾಗಕ್ಕಿಂತಲೂ ಹೆಚ್ಚು ಭಾಗ ಬಲಗಣ್ಣಿನಲ್ಲಿ ಪ್ರತಿಬಿಂಬಿತವಾಗುತ್ತದೆ. ಅಂದರೆ ಎಡಗಣ್ಣಿನಲ್ಲಿ ವಸ್ತುವಿನ ಹೆಚ್ಚುವರಿ ಎಡಭಾಗವೂ ಪ್ರತಿಬಿಂಬಿತವಾಗಿ ಎರಡು ಕಣ್ಣುಗಳಲ್ಲಿ ಮೂಡಿರುವ ಪ್ರತಿಬಿಂಬಗಳೂ ಸ್ವಲ್ಪಮಟ್ಟಿಗೆ ಭಿನ್ನವಾಗಿರುತ್ತವೆ. ಎರಡು ಕಣ್ಣುಗಳಲ್ಲಿ ಮೂಡುವ ಪ್ರತಿಬಿಂಬಗಳ ಮಾನಸಿಕ ಮಿಲನಕ್ಕೆ ಅವುಗಳ ಇಷ್ಟರ ಮಟ್ಟಿನ ಭಿನ್ನತೆ ಅವು ಸಂವಾದೀ ಸ್ಥಾನಗಳಲ್ಲಿ ಇರಬೇಕು. ಈ ಭಿನ್ನತೆ ಅಗಾಧವಾಗಿದ್ದರೆ ಅಥವಾ ಪ್ರತಿಬಿಂಬಗಳು ಪೂರ್ಣವಾಗಿ ಹೋಲುವಂತಿದ್ದರೆ ಆಗಲೂ ಮಾನಸಿಕ ಮಿಲನ ಕಷ್ಟಸಾಧ್ಯ, ಇಲ್ಲವೇ ಅಸಾಧ್ಯ. ಮಾನಸಿಕ ಮಿಲನವಾಗದೇ ಹೋದ ಎಲ್ಲ ಸಂದರ್ಭಗಳಲ್ಲೂ ನೋಡಿದ ವಸ್ತು ಎರಡಾಗಿ ಕಾಣಿಸುತ್ತದೆ. ಆದರೆ ಶೀಘ್ರದಲ್ಲೆ ಒಂದು ಕಣ್ಣಿನಿಂದ ಒದಗುವ ದೃಷ್ಟಿಯ ಅನುಭವ ಅಡಗಿ ವಸ್ತು ಎರಡಾಗಿ ಕಾಣಿಸುವುದು ತಪ್ಪುತ್ತದೆ. ಹೀಗೆ ಅಡಗುವಾಗ ಒಂದು ಪ್ರತಿಬಿಂಬ ಬಲಗಣ್ಣಿನದು, ಇನ್ನೊಂದು ಪ್ರತಿಬಿಂಬ ಎಡಗಣ್ಣಿನದು ಅಡಗುತೀರುವುದರಿಂದ ವಸ್ತುವನ್ನು ಆಯಾ ಕಾಲದಲ್ಲಿ ಎಡಗಣ್ಣಿನಿಂದ ಅಥವಾ ಬಲಗಣ್ಣಿನಿಂದ ಮಾತ್ರ ನೋಡಿದಂತೆ ಭಾಸವಾಗುತ್ತದೆ. ಇದಕ್ಕೆ ದ್ವಿನೇತ್ರ ಪೈಪೋಟಿ (ಬೈನಾಕ್ಯುಲರ್ ರೈವಲ್ರಿ) ಎಂದು ಹೆಸರು. ಕೊನೆಗೆ ಯಾವುದೋ ಒಂದು ಕಣ್ಣು ಹೆಚ್ಚು ಸಾಮರ್ಥ್ಯ ಉಳ್ಳದ್ದು, ದೃಷ್ಟಿಕ್ರಿಯೆಯನ್ನು ಮುಂದುವರಿಸುತ್ತದೆ. ವಾಸ್ತವವಾಗಿ ಇದು ಏಕನೇತ್ರದೃಷ್ಟಿಯೇ. ಇಂಥ ಪರಿಸ್ಥಿತಿಯಲ್ಲಿ ವಸ್ತುವಿನ ಗಾತ್ರ ಗ್ರಹಿಕೆ ಸ್ಥೂಲ, ಕರಾರುವಾಕ್ಕಾಗಿರುವುದಿಲ್ಲ. ಮಾನಸಿಕ ಮಿಲನಕ್ಕೆ ಅಗತ್ಯವಾಗಿರುವುದು ಛಾಯಾಚಿತ್ರವಲ್ಲ, ಘನಾಕೃತಿಯುಕ್ತವಾಗಿ ಕಂಡುಬರುವ ನೈಜವಸ್ತುವನ್ನು ಎಂಬ ಭಾವನೆ ಬರುತ್ತದೆ. ಏಕೆಂದರೆ ಚಿತ್ರಗಳು ಹೀಗೆ ಮಾನಸಿಕವಾಗಿ ಮಿಲನವಾದಾಗ ಚಿತ್ರದಲ್ಲಿರುವ ವಸ್ತುಗಳ ಗಾತ್ರ, ಅವುಗಳ ಹಿಂದೆ ಅಥವಾ ಮುಂದೆ ಇರುವ ಇತರ ವಸ್ತುಗಳ ಅಂತರ ಇವು ಕಂಡುಬಂದಂತೆ ಭಾಸವಾಗುತ್ತದೆ. ಘನದರ್ಶಕ (ಸ್ಟೀರಿಯೋಸ್ಕೋಪ್) ಪೆಟ್ಟಿಗೆಯ ತಯಾರಿಕೆಯಲ್ಲಿ ಅಳವಡಿಸಿಕೊಂಡಿರುವುದು ಈ ತತ್ತ್ವವನ್ನೇ.

ಮೇಲೆ ವಿವರಿಸಿರುವ ದೃಷ್ಟಿಕ್ರಿಯೆ ನವಜಾತಶಿಶುವಿನಲ್ಲಿ ಕಂಡು ಬರುವುದಿಲ್ಲ. ಆ ಮಗುವಿನಲ್ಲೂ ಕಣ್ಣು ದೊಡ್ಡವರಂತೆಯೇ ವಿನ್ಯಾಸಗೊಂಡಿರುವುದಾದರೂ ಈ ಮಾತು ನಿಜ. ಮಗು ಕೈಕಾಲುಗಳ ಬಳಕೆಯನ್ನು ಕಲಿತುಕೊಳ್ಳುವಂತೆಯೇ ಕಣ್ಣಿನ ಬಳಕೆಯನ್ನೂ ಕಲಿತುಕೊಳ್ಳಬೇಕು. ಹೀಗೆಂದು ಹೇಳಿದರೆ ಆಶ್ಚರ್ಯವಾಗಿ ಕಾಣಬಹುದು. ಆದರೆ ಮಗುವಿನಲ್ಲಿ ನೆಟ್ಟನೋಟಸ್ಥಾಪನೆ ಆಗಬೇಕಾದರೆ ಕೆಲವು ವಾರಗಳು ಬೇಕು ಎನ್ನುವುದು ಎಳೆಮಕ್ಕಳ ಪಾಲನೆಯಲ್ಲಿ ತೊಡಗಿರುವುವವರೆಲ್ಲರಿಗೂ ಗೊತ್ತು. ನೆಟ್ಟದೃಷ್ಟಿಯಿಂದಲೇ ದ್ವಿನೇತ್ರ ದೃಷ್ಟಿ ಲಾಭ ಸಾಧ್ಯ ಎನ್ನುವುದನ್ನು ಮೇಲೆ ಹೇಳಿದೆ. ನೆಟ್ಟದೃಷ್ಟಿಗಾಗಿ ಕಣ್ಣುಗುಡ್ಡೆಗಳನ್ನು ಹೊರಳಿಸುವ ಸ್ನಾಯುಗಳ ಸಂಕೋಚನ ಪ್ರಾಬಲ್ಯದ ಅರ್ಥವನ್ನು ಮಗು ಗ್ರಹಿಸಿ ಅದಕ್ಕೆ ತಕ್ಕಂತೆ ಪಾಪೆ ಮಸೂರಗಳಿಗೆ ಸಂಬಂಧಪಟ್ಟ ನಿರಂಕುಶ ಕ್ರಿಯೆಗಳನ್ನು ರೂಢಿಸಿಕೊಳ್ಳುವುದೆಂದು ತೋರುತ್ತದೆ. ಇದರಿಂದ ಅಕ್ಷಿಪಟಲದಲ್ಲಿ ಸ್ಪಷ್ಟಚಿತ್ರ ಮೂಡುವಂತಾಗುತ್ತದೆ. ಆದರೂ ಇಂಥ ಸ್ಪಷ್ಟ ಚಿತ್ರದಿಂದ ಅಕ್ಷಿಪಟಲದಲ್ಲಿ ಉದ್ಭವವಾಗುವ ನರಪ್ರಚೋದನೆ ಮಿದುಳಿನಲ್ಲಿ ಅರ್ಥವತ್ತಾಗಿ ಪ್ರತಿಕ್ರಿಯೆಯನ್ನು ಹೇಗೆ ಉಂಟುಮಾಡುವುದೆಂಬುದು ಆಶ್ಚರ್ಯದ ಸಂಗತಿಯೇ ಸರಿ. ಮಿದುಳಿನ ಮಿಕ್ಕ ಭಾಗಗಳು ಅವುಗಳ ಅರ್ಥವತ್ತಾದ ಕ್ರಿಯೆಯನ್ನು ರೂಢಿಸಿಕೊಳ್ಳುವುದು ಇನ್ನೂ ತಡ. ಆದರೆ ಸ್ಪರ್ಶ, ಶ್ರವಣ ಮುಂತಾದ ಇತರ ಸಂವೇದನೆಗಳನ್ನು ರೂಢಿಸಿಕೊಂಡ ಮೇಲೆ ದೃಷ್ಟಿಕ್ರಿಯೆ ಹೆಚ್ಚು ಹೆಚ್ಚು ಉಪಯುಕ್ತವಾಗುತ್ತ ಬಂದು ಮಗು ದೃಷ್ಟಿಕಲಿಕೆಯನ್ನು ಪೂರ್ಣಗೊಳಿಸಿಕೊಳ್ಳುತ್ತದೆ.

೨. ವರ್ಣ ದೃಷ್ಟಿ: ಸೂರ್ಯ ರಶ್ಮಿಯನ್ನು ಅಶ್ರಗದ (ಪ್ರಿಸ್ಮ) ಮೂಲಕ ವಿಭಜಿಸಿದಾಗ ಉಂಟಾಗುವ ವರ್ಣಪಟಲ (ಸ್ಪೆಕ್ಟ್ರಮ್) ದಲ್ಲಿ ೭ ವರ್ಣಗಳಿವೆ. ಎಂದು ವಿವರಿಸಿದ್ದರೂ ವಾಸ್ತವವಾಗಿ ಅದನ್ನು ದೃಷ್ಟಿಸಿ ಸುಮಾರು ೧೫೦ ವಿವಿಧ ವರ್ಣಗಳನ್ನು (ಹ್ಯೂ) ಗುರುತಿಸಬಹುದು. ವರ್ಣಪಟಲದಲ್ಲಿ ಇಲ್ಲದ ಕೆನ್ನೀಲಿ ಅಥವಾ ಊದಾಬಣ್ಣಗಳಲ್ಲಿ (ಪರ್ಪಲ್) ಸುಮಾರು ೨೦ ವಿಧಗಳನ್ನು ಗುರುತಿಸಬಹುದು. ಪ್ರತಿಯೊಂದು ಬಿಳಿ ಬಣ್ಣದೊಡನೆ ಹೆಚ್ಚಾಗಿ ಅಥವಾ ಕಡಿಮೆಯಾಗಿ ಸೇರಿ ಅದರ ಸಂತೃಪ್ತತೆ (ಸ್ಯಾಚುರೇಷನ್) ತಗ್ಗಿರಬಹುದು. ಈ ಎಲ್ಲಾ ರೀತಿಯ ವ್ಯತ್ಯಾಸಗಳಿಂದ ದೃಷ್ಟಿಗೆ ಪ್ರತ್ಯೇಕವಾಗಿ ಗೋಚರವಾಗುವ ಬಣ್ಣಗಳು ಕೋಟ್ಯಾನುಕೋಟಿ. ಬೆಳಕೂ, ಬೆಳಕಿನಲ್ಲಿ ಕಾಣಿಸುವವಲ್ಲವೂ ದ್ಯುತ್‌ಕಾಂತ ಶಕ್ತಿಯ ವಿಶಿಷ್ಟ ಅಲೆಯುದ್ದದ ಅಲೆಗಳ ಪ್ರಭಾವ ಎಂದೂ, ಈ ಅಲೆಗಳ ಅಲೆಯುದ್ದ ೩೮೦ μ ಗಿಂತ ಕಡಿಮೆಯಾಗಿಯೂ ೭೨೦ μ ಹೆಚ್ಚಾಗಿಯೂ ಇರುವುದಿಲ್ಲವೆಂದೂ ಹಿಂದೆ ಹೇಳಿದೆ. ಅಲೆಯುದ್ದ ಸುಮಾರು ೩೮೦–೪೦೦ μ ಇರುವುದು ಅತಿ ನೇರಳೇ ಬಣ್ಣದ (ವಯೋಲೆಟ್) ಅನುಭವವನ್ನು ಉಂಟುಮಾಡುತ್ತದೆ. ಅಲೆಯುದ್ದ ಹೆಚ್ಚು ಹೆಚ್ಚಾದಂತೆ ಕಾಣಿಸುವ ಬಣ್ಣ ನೀಲಿ, ಹಸಿರು, ಹಳದಿ ಆಗಿ ಕಿತ್ತಲೆ ಹಣ್ಣಿನ ಸಿಪ್ಪೆ ಬಣ್ಣದ್ದಾಗಿ, ಕೊನೆಗೆ ಅಲೆಯುದ್ದ ೬೭೦ μ ಗಿಂತ ಹೆಚ್ಚಾದಾಗ ಅಚ್ಚಕೆಂಪಾಗಿ ಕಾಣಿಸುತ್ತದೆ. ಅಲೆಯುದ್ದ ೩೮೦ μ ಗಿಂತ ಕಡಿಮೆ ಮತ್ತು ೭೨೦ μ ಗಿಂತ ಹೆಚ್ಚು ಇರುವ ವಿದ್ಯುತ್

ಕಾಂತ ಅಲೆಗಳು ಕಣ್ಣಿನೊಳ ಹೊಕ್ಕರೂ ಅಕ್ಷಿಪಟದಲ್ಲಿ ರೋಡಾಪ್ಸಿನ್ನನ್ನಾಗಲಿ ಅಯೋಡಾಪ್ಸಿನ್ನನ್ನಾಗಲೀ ವಿಭಜನೆ ಮಾಡಲಾರವು. ಅರ್ಥಾತ್ ಅವು ದೃಗ್ಗೋಚರವಾಗುವುದಿಲ್ಲ. ಅವುಗಳ ಉಗಮಸ್ಥಾನ ಒಂದು ವಸ್ತುವಾಗಿ ದೃಷ್ಟಿಗೆ ಬೀಳುವುದಿಲ್ಲ. ಸೂರ್ಯರಶ್ಮಿ ಅಚ್ಚ ಬಿಳಿ ಎಂದು ವಿವರಿಸುವುದು ವಾಡಿಕೆ. ಆಗಸದಲ್ಲಿ ತೋರಿಬಂದ ಮೇಲೆ ಇದು ವರ್ಣಪಟಲವಾಗಿ ಕಾಣಿಸುವುದರಿಂದ ವರ್ಣಪಟಲದ ಎಲ್ಲ ಅಲೆಯುದ್ದದ ಅಲೆಗಳೂ ನೈಸರ್ಗಿಕ ಪರಿಮಾಣದಲ್ಲಿ ಒಟ್ಟಾಗಿ ಅಕ್ಷಿಪಟವನ್ನು ಪ್ರಚೋದಿಸುತ್ತವೆ ಎಂಬುದೂ ಹಾಗೆ ಪ್ರಚೋದಿಸಿದಾಗ ಬಿಳಿಬಣ್ಣ ಅನುಭವಕ್ಕೆ ಬರುವುದೆಂಬುದೂ ವ್ಯಕ್ತ. ೧೯ನೆಯ ಶತಮಾನದಲ್ಲಿ ಬಣ್ಣ, ವರ್ಣದೃಷ್ಟಿ ಮುಂತಾದವನ್ನು ವಿಶೇಷವಾಗಿ ವ್ಯಾಸಂಗಿಸಿದ ತಾಮಸ್ ಯಂಗ್ ಮತ್ತು ಹೆಲ್ಮ್ ಹೋಲ್ಟ್ಸ್ ಎಂಬ ವಿಜ್ಞಾನಿಗಳು ಸಮಪ್ರಮಾಣದಲ್ಲಿ ಕೆಂಪು, ಹಸಿರು, ನೀಲಿ, ಬಣ್ಣಗಳು ಒಟ್ಟಿಗೇ ಅಕ್ಷಿಪಟವನ್ನು ಪ್ರಚೋದಿಸಿದಾಗ ಬಿಳುಪಾಗಿ ಕಾಣಿಸುವುದೆಂದೂ ಇವುಗಳಲ್ಲಿ ಎರಡು ಅಥವಾ ಮೂರು ಬಣ್ಣಗಳನ್ನು ವಿವಿಧ ಪ್ರಮಾಣಗಳಲ್ಲಿ ಸೇರಿಸಿ ವರ್ಣಪಟಲದ ಎಲ್ಲಾ ವರ್ಣಗಳನ್ನೇ ಅಲ್ಲದೆ ಊದಾ ವರ್ಣಗಳನ್ನು ಪಡೆಯಬಹುದೆಂದು ತೋರಿಸಿ ಈ ವರ್ಣಗಳಿಗೆ ಪ್ರಾಥಮಿಕ ವರ್ಣಗಳೆಂದು (ಪ್ರೈಮರಿ ಕಲರ್ಸ್) ಹೆಸರಿಸಿದರು. ದೃಷ್ಟಿಸಿದಾಗ ಪ್ರಾಥಮಿಕ ವರ್ಣಗಳು ವ್ಯಕ್ತಿಗೆ ಪ್ರತ್ಯೇಕವಾಗಿ ಅನುಭವಕ್ಕೆ ಬರುವುದು ಹೇಗೆ ಎಂದು ವಿವರಿಸಿದರೆ ಬಿಳುಪೂ ಸೇರಿ ಮಿಕ್ಕ ವರ್ಣಗಳೂ ಹೇಗೆ ಅನುಭವಕ್ಕೆ ಬರುತ್ತವೆ ಎನ್ನುವುದು ವಿಷದವಾಗುತ್ತವೆ ಎನ್ನುವ ಸತ್ಯವನ್ನು ಇವರು ಮನಗಂಡು ಅಕ್ಷಿಪಟಲದಲ್ಲಿ ಕೆಂಪು, ಹಸಿರು, ನೀಲಿ ಬಣ್ಣದ ದ್ಯುತಿಯಿಂದಲೇ ಪ್ರತ್ಯೇಕವಾಗಿ ಪ್ರಚೋದಿತವಾಗಬಲ್ಲ ಮೂರೂ ಬಗೆಯ ಕೋಶಗಳು (ಅವು ಶಂಕು ಕೋಶಗಳೇ ಆಗಿರಬೇಕು ಎನ್ನುವುದು ವ್ಯಕ್ತ) ಇರಬೇಕೆಂಬ ತೀರ್ಮಾನಕ್ಕೆ ಬಂದರು. ಯಾವುದಾದರೂ ಒಂದು ಬಗೆಯ ಶಂಕುಕೋಶ ಮಾತ್ರ ಪ್ರಚೋದಿತವಾದರೆ ಅದಕ್ಕೆ ತಕ್ಕ ಪ್ರಾಥಮಿಕ ಅನುಭವವಾಗುತ್ತದೆ. ಮೂರೂ ಬಗೆಯವೂ ಒಟ್ಟಿಗೆ ಪ್ರಚೋದನೆ ಗೊಂಡರೆ ಬಿಳಿಬಣ್ಣವೆಂದೂ ಎರಡು ಅಥವಾ ಮೂರು ಬಗೆಯ ಶಂಕು ಕೋಶಗಳೂ ವಿವಿಧ ಸಂಖ್ಯೆಯಲ್ಲಿ ಪ್ರಚೋದನೆಗೊಂಡರೆ ಮಿಕ್ಕೆಲ್ಲ ವರ್ಣಗಳ ಅನುಭವ ಉಂಟಾಗುವುದೆಂದು ಇವರು ವಿವರಿಸಿದರು. ಅಂದರೆ ಯಾವುದೇ ವರ್ಣದ ಅನುಭವ ಆಗಬೇಕಾದರೂ ಕನಿಷ್ಠವಾಗಿ ಎರಡು ಮೂರು ಶಂಕುಗಳ ಪ್ರಚೋದನೆಗೊಳ್ಳಬೇಕೆಂದೂ, ವರ್ಣಾನುಭವ ದೊರೆಯುವ ಅಕ್ಷಿಪಟದ ಭಾಗದಲ್ಲಿ ಮೂರು ಬಗೆಯ ಶಂಕುಗಳು ಸಮಸಂಖ್ಯೆಯಲ್ಲಿ ಸಮಾಂತರದಲ್ಲಿ ಇರಬೇಕೆನ್ನುವುದೂ, ಮೂರುಬಗೆಯ ಶಂಕು ಕೋಶಗಳಲ್ಲಿರುವ ಪ್ರಕಾರದಿಂದ ವಿಭಜನೆಗೊಳ್ಳಬಲ್ಲ ರಾಸಾಯನಿಕಗಳು ಬೇರೆ ಬೇರೆ ಆಗಿರಬೇಕೆನ್ನುವುದೂ ಯಂಗ್-ಹೆಲ್ಮ ಹೋಲ್ಟ್ಸ್‌ರ ವರ್ಣ ದೃಷ್ಟಿ ವಿವರಣೆಯಿಂದ ತರ್ಕಿಸಿ ತಿಳಿಯಬಹುದಾದ ವಿಷಯಗಳು. ಇವು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ನಿಖರವಾದ ಪ್ರಯೋಗಗಳಿಂದ ಸಾಧಿಸಲು ಸಾಧ್ಯವಾಗಿಲ್ಲ. ಅಲ್ಲದೆ ಈ ವಿವರಣೆಯ ಪ್ರಕಾರ ಕರೀ ಬಣ್ಣದ ಅನುಭವ ಉಂಟಾಗುವುದು ಹೇಗೆ ಎನ್ನುವುದು ತಿಳಿಯುವಂತಿಲ್ಲ. ಆದರೂ ವರ್ಣದೃಷ್ಟಿಯ ಈ ವಿವರಣೆಯೇ ಹೆರಿಂಗ್ ಮುಂತಾದ ಇತರ ವಿಜ್ಞಾನಿಗಳ ವಿವರಣೆಗಳಿಗಿಂತ ಸಮಂಜಸವಾಗಿದೆ. ಹಲವಾರು ಪ್ರಯೋಗಗಳು ವಿವಿಧ ವರ್ಣಾಂಧತೆಗಳು ಇತ್ಯಾದಿಗಳಿಂದ ಸ್ಥೂಲವಾಗಿಯದರೂ ಯಂಗ್-ಹೆಲ್ಮ ಹೋಲ್ಟ್ಸ್‌ರ ವರ್ಣದೃಷ್ಟಿ ವಿವರಣೆ ಸರಿಯಾಗಿರಬೇಕು ಎನ್ನಿಸಿದೆ. ವರ್ಣದೃಷ್ಟಿ ಲೋಪವಾಗಿರುವ ಸ್ಥಿತಿ ವರ್ಣಾಂಧತೆ ಪೂರ್ಣ ವರ್ಣಾಂಧತೆ ಅಪರೂಪ. ಇಂಥವರು ಯಾವ ಬಣ್ಣವನ್ನೂ ಗುರುತಿಸಲಾರರು. ಎಲ್ಲವೂ ಬೇರೆ ಬೇರೆ ರೀತಿಯ ಬೂದು ಬಣ್ಣದ್ದಾಗಿ ಇವರಿಗೆ ಕಾಣಿಸುತ್ತದೆ. ಭಾಗಶಃ ವರ್ಣಾಂಧತೆ ಹೆಚ್ಚು ಸಾಮಾನ್ಯ. ಗಂಡಸರಲ್ಲಿವರ್ಣಾಂಧತೆ ಹೆಚ್ಚು. ವರ್ಣಾಂಧತೆ ಆನುವಂಶಿಕ ಎನ್ನುವುದಕ್ಕೆ ಆಧಾರವಿದೆ. ಜನತೆಯಲ್ಲಿ ಸುಮಾರು ೬-೮% ಗಂಡಸರು ವರ್ಣಾಂಧರಾಗಿರುತ್ತಾರೆಂದು ತಿಳಿದಿದೆ. ಇವರ ಪೈಕಿ ಅನೇಕರಿಗೆ ಕೆಂಪು ಬಣ್ಣ ಇಲ್ಲವೇ, ಹಸಿರು ಬಣ್ಣ ಗುರುತಿಸುವುದಕ್ಕೆ ಆಗುವುದಿಲ್ಲ. ಇವುಗಳಿಗೂ ವರ್ಣ ಪಟಲದಲ್ಲಿನ ಇವುಗಳ ಅಕ್ಕಪಕ್ಕದ ಬಣ್ಣಗಳಿಗೂ ವ್ಯತ್ಯಾಸ ಗೊತ್ತಾಗುವುದಿಲ್ಲ. ಕೆಲವರು ಹಸಿರು ಕೆಂಪು ವರ್ಣಗಳ ವ್ಯತ್ಯಾಸವನ್ನು ಗ್ರಹಿಸಲಾರರು. ನೀಲಿ ವರ್ಣಾಂಧತ್ವ ಅಪರೂಪ. ಜೀವನದಲ್ಲಿ ವರ್ಣಾಂಧತ್ವ ದೋಷದಿಂದ ಗಣನೀಯ ಅನನುಕೂಲತೆ ಏನೂ ಇಲ್ಲ. ಇಂಥವರು ಬಣ್ಣ ಏನೆಂದು ಖಚಿತವಾಗಿ ಗುರುತಿಸಲಾರರಾದರೂ ಏನೋ ವ್ಯತ್ಯಾಸ ಇರುವುದೆಂದು ಗ್ರಹಿಸಿ ಪೂರ್ವಾನುಭವದಿಂದ ಅರ್ಥ ಮಾಡಿಕೊಳ್ಳುತ್ತಾರೆ. ಆದರೆ ಉದ್ಯೋಗಗಳಲ್ಲಿ ವರ್ಣಗಳನ್ನು ಗುರುತಿಸುವುದು ಮುಖ್ಯವಾದಾಗ ವರ್ಣಾಂಧತೆ ಮುಖ್ಯ ದೋಷವೇ. ಬಣ್ಣಬಣ್ಣದ ಹೂ ಗಿಡಗಳ ಆಲಂಕರಿಕ ವ್ಯೂಹ ನಿರ್ಮಾಣದಲ್ಲಿ ನಿರತರಾದ ತೋಟಗಾರರು ವರ್ಣಚಿತ್ರಗಳನ್ನು ಬರೆಯಬೇಕಾದ ಚಿತ್ರಲೇಖಕರು ಮುಂತಾದ ವರ್ಣ ವ್ಯವಹಾರಿಗಳು ಭಾಗಶಃ ವರ್ಣಾಂಧರಾದರೂ ಅನಾನುಕೂಲವೇ. ರೈಲು, ವಿಮಾನ, ಚಾಲನೆಯಲ್ಲಿ ವರ್ಣ ಸಂಕೇತಗಳಿಗೆ ನಾವೆ, ವಿಶಿಷ್ಟ ಪ್ರಾಮುಖ್ಯ ಇರುವುದು ತಿಳಿದಿರುವ ವಿಷಯ. ಇವನ್ನು ಗುರುತಿಸಲಾರದ ವ್ಯಕ್ತಿಗಳು ಅಂಥ ಸಂಸ್ಥೆಗಳಲ್ಲಿ ಹಾಗೂ ನಿಯಂತ್ರಣದಲ್ಲಿ ಕಾರ್ಯನಿರತರಾಗಿದ್ದರೆ ಅನಾಹುತ ಸಂಭವಿಸಬಹುದು. ವ್ಯಕ್ತಿಯಲ್ಲಿ ವರ್ಣಾಂಧತೆ ಇದೆಯೇ ಇಲ್ಲವೇ ಎಂದು ಕಂಡುಹಿಡಿಯಲೂ, ಇದ್ದರೆ ಅದು ಯಾವ ಬಗೆಯದು ಎನ್ನುವುದನ್ನು ನಿರ್ಣಯಿಸಲು ವಿಶಿಷ್ಟವಾದ ವರ್ಣರಂಜಿತ ನಕಾಶೆಗಳೂ ಇತರ ಸಲಕರಣೆಗಳೂ ಇವೆ. ಯಂಗ್-ಹೆಲ್ಮ ಹೋಲ್ಟ್ಸ್‌ರ ವಿವರಣೆಯಂತೆ ವರ್ಣಾಂಧತೆ ಯಾವುದೋ ಒಂದು ಅಥವಾ ಎರಡು ಬಗೆಯ ಶಂಕುಗಳ ಅಭಾವದಿಂದ ಉಂಟಾಗಿರುತ್ತದೆ ಎಂದು ಅರಿಯಬಹುದು. ವರ್ಣಾಂಧತೆ ಚಿಕಿತ್ಸಾತೀತ. ***

**ದೊಡ್ಡ ಕರುಳು:** ಉದರದಲ್ಲಿ ಸಣ್ಣ ಕರುಳಿನ ಕುಣಿಕೆಗಳ ಸುತ್ತ ಕಮಾನಿನ ರೀತಿಯಲ್ಲಿ ಬಳಸಿಕೊಂಡಿರುವ ಜೀರ್ಣನಾಳದ ಕೊನೆಯ ಭಾಗ (ಕೋಲನ್; ಲಾರ್ಜ್ ಇನ್‌ಟೆಸ್ಟೈನ್). ಜೀರ್ಣನಾಳದಲ್ಲಿ ದೊಡ್ಡ ಕರುಳು ಸಣ್ಣ ಕರುಳಿನ ಮುಂದುವರಿದ ಭಾಗವಾದರೂ ಅವುಗಳ ಆದಿ ಅಂತ್ಯಗಳು ಜಂಟಿ ಆಗುವುದಿಲ್ಲ. ಬದಲು ದೊಡ್ಡ ಕರುಳಿನ ಅಗ್ರದಿಂದ ಸು. 6.35–7.5 ಸೆಂಮೀ ಮೇಲೆ ಸು. 1.5 ಮೀ. ಗಳಷ್ಟು ಇದೆ. ಸಣ್ಣ ಕರುಳಿನ ನಯವಾದ ಹೊರಮೈಗೆ ಭಿನ್ನವಾಗಿ ದೊಡ್ಡ ಕರುಳಿನ ಉದ್ದಕ್ಕೂ ಮೂರು ಸ್ನಾಯುಪಟ್ಟಿಗಳೂ (ಟೀನಿಯ ಕೋಲೈ), ಹಲವು ಉಬ್ಬು ಚೀಲಗಳೂ (ಸ್ಯಾಕ್ಯುಲೇಷನ್ಸ್), ಕೊಬ್ಬಿನ ಗಂಟುಗಳೂ (ಅಪೆಂಡಿಸಿಸ್ ಎಪಿಪ್ಲೋಯಿಕೆ) ಇವೆ.

ದೊಡ್ಡ ಕರುಳು ಕಿಬ್ಬೊಟ್ಟೆಯ ಬಲಮೂಲೆಯಲ್ಲಿ ಸೊಂಟದ ಮೂಳೆಯ ಮುಂದೆ ಪ್ರಾರಂಭವಾಗಿ ಉದರದ ಬಲ ಅಂಚಿನಲ್ಲಿ ಏರಿ ಪಕ್ಕೆಲುಬುಗಳ ಮಟ್ಟವನ್ನು ತಲುಪುತ್ತದೆ. ಅಲ್ಲಿ ಎಡಕ್ಕೆ ಬಾಗಿ, ಉದರದ ಎಡ ಉನ್ನತ ಮೂಲೆಯ ತನಕ ಮಾಲೆಯಂತೆ ಡೊಂಕಾಗಿ ಹಾಗೂ ಅಡ್ಡವಾಗಿ ಸಾಗುತ್ತದೆ. ಈ ಮೂಲೆಯಲ್ಲೂ ಪುನಃ ಕೆಳಕ್ಕೆ ಬಾಗಿ ಉದರದ ಎಡಕೆಳ ಮೂಲೆಯ ತನಕ ಇಳಿದು ತೊಡೆ ಸಂದಿಗೆ ಸಮಾಂತರವಾಗಿ ಕ್ರಮಿಸಿ ಕಿಬ್ಬೊಟ್ಟೆಯಲ್ಲಿ ~ ಆಕಾರದಂತೆ (ಸೀಕಮ್) ಮತ್ತು ಕ್ರಿಮಿ ರೂಪದ ಅಂತ್ರಪುಚ್ಛ (ವರ್ಮಿಫಾರಮ್ ಅಪೆಂಡಿಕ್ಸ್), ಸ್ವಯಂ ದೊಡ್ಡ ಕರುಳು (ಕೋಲನ್ ಪ್ರಾಪರ್), ಗುದನಾಳ (ರೆಕ್ಟಮ್) ಮತ್ತು ಆಸನನಾಶ (ಏನಲ್ ಕೆನಾಲ್) ಇವು ದೊಡ್ಡ ಕರುಳಿನಲ್ಲಿ ಗುರುತಿಸಲಾಗುವ ಭಾಗಗಳು. ಅಂಧಾಂತ್ರ ಮತ್ತು ಗುದನಾಳಗಳ ವ್ಯಾಸ ಮಿಕ್ಕ ಭಾಗಗಳಿಗಿಂತ ಸ್ವಲ್ಪ ಹೆಚ್ಚು.

ಅಂಧಾಂತ್ರ: ದೊಡ್ಡ ಕರುಳಿನ ಆದಿ ಭಾಗ ಬಲಸೊಂಟ ಮೂಳೆಯ ಮುಂದೆ ಇದೆ. ತುದಿ ಮುಚ್ಚಿದ ಕುರುಡು ಕೊಳವೆಯಂತೆ ಇದು ಪ್ರಾರಂಭವಾಗುವುದರಿಂದ ಇದಕ್ಕೆ ಪಾಶ್ಚಾತ್ಯ ವೈದ್ಯದಲ್ಲಿ ಸೀಕಮ್ ಎಂದು ಹೆಸರುಂಟು (ಸೀಕಮ್ ತುದಿ ಮುಚ್ಚಿದ ಕೊಳವೆ). ದೊಡ್ಡ ಕರುಳಿನ ಅಗ್ರದಿಂದ ಸಣ್ಣ ಕರುಳು ದೊಡ್ಡ ಕರುಳನ್ನು ಸೇರುವ ಸ್ಥಳದವರೆಗೆ ಇದರ ವ್ಯಾಪ್ತಿ. ಈ ಉದ್ದ 6.25 ಸೆಮೀ. ವ್ಯಾಸ ಕುಡ ಸಾಮಾನ್ಯವಾಗಿ ಇಷ್ಟೆ ಅಥವಾ ಇದಕ್ಕಿಂತ 1 ಸೆಮೀ. ಹೆಚ್ಚಾಗಿಯೇ ಇರಬಹುದು. ಅಂಧಾಂತ್ರ ಭರ್ತಿ ಆಗಿರುವಾಗ ಅದು ಉದರದ ಹಿಂದುಮುಂದು ಭಿತ್ತಿಗಳಿಗೆ ತಾಗಿಕೊಂಡಿರುತ್ತದೆ. ನೆಟ್ಟಗೆ ನಿಂತಾಗ ಅಂಧಾಂತ್ರ ಸಾಮಾನ್ಯವಾಗಿ ಕಿಬ್ಬೊಟ್ಟೆಗೆ ಇಳಿದಿರುತ್ತದೆ. ಖಾಲಿ ಆಗಿದ್ದಾಗ ಇದರ ಮುಂದೆ ಸಣ್ಣ ಕರುಳಿನ ಕುಣಿಕೆಗಳು ಇರಬಹುದು. ಅಂಧಾಂತ್ರವನ್ನು ಸಾಮಾನ್ಯವಾಗಿ ಪರಿವೇಷ್ಟನ (ಪೆರಿಟೋನಿಯಮ್) ಪೂರ್ಣವಾಗಿ ಕವಿದಿರುತ್ತದೆ. ಯಾವ ಬಂಧನವೂ ಇಲ್ಲದೆ ಬಿಡುವಾಗಿರುವುದರಿಂದ ಅನೇಕ ವೇಳೆ ಅಂತ್ರವೃದ್ಧಿಯಲ್ಲಿ (ಹರ್ನಿಯ) ಕಂಡುಬರಬಹುದು. ಸು. 5%ರಷ್ಟು ಜನರಲ್ಲಿ ಅಂಧಾಂತ್ರದ ಉದರದ ಹಿಂಭಿತ್ತಿಗೆ ಅಂಟಿಕೊಂಡು ಅದರ ಮುಂಭಾಗದಲ್ಲಿ ಮಾತ್ರ ಪರಿವೇಷ್ಟನದ ಮುಸುಕು ಇರುತ್ತದೆ. ಟ್ರೀವ್ಸ್ ಎಂಬ ಅಂಗರಚನಾ ವಿಜ್ಞಾನಿಯ ವಿವರಣೆಯಂತೆ ಅಂಧಾಂತ್ರದ ವಿನ್ಯಾಸ 4 ಬಗೆ:

1) ಸು. 2% ಜನರಲ್ಲಿ ಇದರ ಆಕಾರ ಲಾಳಿಕೆಯಂತಿದ್ದು, (ಫನಲ್) ಇದರ ಕೆಳತುದಿಯಿಂದ ಅಂತ್ರಪುಚ್ಛ ಕೆಳಕ್ಕೆ ಚಾಚಿಕೊಂಡಿರುತ್ತದೆ.

2) ಸು. 3% ಜನರಲ್ಲಿ ಅಂಧಾಂತ್ರ ಆಳವಾದ ಬಿರುಕಿನಿಂದ ಎರಡು ಭಾಗಗಳಾಗಿ ವಿಂಗಡವಾಗಿದೆ. ಇವುಗಳ ನಡುವೆ ಮುಂದಿನ ಪಟ್ಟಿಸ್ನಾಯು ಪ್ರಾರಂಭವಾಗುತ್ತದೆ. ಅಂತ್ರಪುಚ್ಛ ದೊಡ್ಡ ಕರುಳಿಗೆ ಇಲ್ಲಿಯೆ ಅಂಟಿಕೊಂಡಿರುವುದು.

3) ಸು. 90% ಜನರಲ್ಲಿ ಅಂಧಾಂತ್ರದ ಬಲಭಾಗ ಪ್ರಧಾನ. ಇದೇ ಸ್ವಯಂ ಅಂಧಾಂತ್ರದಂತೆ ಕಂಡುಬರಬಹುದು. ಅಂತ್ರಪುಚ್ಛ ಅಂಟಿಕೊಂಡಿರುವುದು ಈ ಸ್ಥಳದಲ್ಲೆ. ಬಲಭಾಗವೇ ಪ್ರಧಾನವಾಗಿರುವುದರಿಂದ ದೊಡ್ಡ ಕರುಳಿನ ಸ್ನಾಯುಪಟ್ಟಿಗಳು ಸಮಾಂತರವಾಗಿ ಇಲ್ಲದೆ ಎಡಕ್ಕಿರುತ್ತವೆ.

4) ಸು. 4% ಜನರಲ್ಲಿ ಎಡಭಾಗ ಪೂರ್ಣವಾಗಿ ಲೋಪವಾಗಿದ್ದು ಸಣ್ಣ ಕರುಳು ದೊಡ್ಡ ಕರುಳಿನ ಅಗ್ರತುದಿಗೆ ಸೇರಿಕೊಂಡಿರುತ್ತದೆ.

ಅಂತ್ರಪುಚ್ಛ: ಹುಳುವಿನಂತಿರುವ ಈ ಅಂಗದ ಉದ್ದ 2 ರಿಂದ 20 ಸೆಂಮೀ. ಸರಾಸರಿ 8 ಸೆಂಮೀ. ವ್ಯಾಸ 5 ರಿಂದ 10 ಮಿಮೀ. ಸಣ್ಣ ಕರುಳು ದೊಡ್ಡ ಕರುಳುಗಳ ಸಂಗಮ ಸ್ಥಳದಲ್ಲಿ ಪ್ರಾರಂಭವಾಗಿ ಇದು ಸಾಮಾನ್ಯವಾಗಿ ದೊಡ್ಡ ಕರುಳಿನ ಹಿಂದೆ ಇರುತ್ತದೆ. ಅಪರೂಪವಾಗಿ ಅಂತ್ರಪುಚ್ಛ ಕೆಳಮುಖವಾಗಿದ್ದು ಕಿಬ್ಬೊಟ್ಟೆಯ ಅಂಗವಾಗಿರುಬಹುದು. ಅಂತ್ರಪುಚ್ಛಪೊಳ್ಳು, ಆದರೆ ಒಳವ್ಯಾಸ ಬಲು ಸಣ್ಣ. ಸಂಗಮದ ಕೆಳಗೆ ಅಂಧಾಂತ್ರದೊಳಕ್ಕೆ ತೆರೆದುಕೊಂಡಿರುತ್ತದೆ.

ಸಣ್ಣ ಕರುಳು ದೊಡ್ಡ ಕರುಳುಗಳ ಸಂಗಮ ಸ್ಥಳದಲ್ಲಿ ಸಣ್ಣ ಕರುಳು ದೊಡ್ಡ ಕರುಳಿನೊಳಗೆ ಚಾಚಿಕೊಂಡು ಎರಡು ತುಟಿಗಳಂತೆ ಕಂಡುಬರುತ್ತದೆ. ಈ ತುಟಿಗಳು ಸಂಗಮ ದ್ವಾರದ ಕವಾಟದಂತೆ (ಐಲಿಯೊಸೀಕಲ್ ವಾಲ್ವ್) ವರ್ತಿಸುತ್ತವೆ.

ಸ್ವಯಂ ದೊಡ್ಡ ಕರುಳು: ಇದನ್ನು ಏರುವಾಗ (ಅಸೆಂಡಿಂಗ್ ಕೋಲನ್), ಅಡ್ಡಭಾಗ (ಟ್ರಾನ್ಸ್‌ವರ್ಸ್ ಕೋಲನ್), ಇಳಿಭಾಗ (ಡಿಸೆಂಡಿಗ್ ಕೋಲನ್), ಸೊಂಟಭಾಗ, (ಐಲಿಯಕ್ ಕೋಲನ್) ಮತ್ತು ಇಮ್ಮೊಗ ಇಳಿಭಾಗ (ಸಿಗ್‌ಮಾಯ್ಡ್ ಕೊಲನ್) ಎಂಬುದಾಗಿ ಗುರುತಿಸಬಹುದಾಗಿದೆ. ಏರುಭಾಗದ ಉದ್ದ 12.7–20.3 ಸೆಂಮೀ. ಉದರದ ಬಲಭಾಗದಲ್ಲಿ ಏರುತ್ತ ಯಕೃತ್ತಿನ ಬಲಹಾಲೆ ಮಟ್ಟವನ್ನು ತಲುಪಿ ಅಲ್ಲಿ ಎಡಗಡೆಗೆ ತಿರುಗುತ್ತದೆ. ಇದೇ ದೊಡ್ಡ ಕರುಳಿನ ಬಲಬಾಗು (ರೈಟ್ ಕಾಲಿಕ್ ಫ್ಲೆಕ್ಷರ್). ಯಕೃತ್ತನ್ನು ಸದಾ ಒತ್ತುತ್ತಿರುವುದರಿಂದ ಯಕೃತ್ತಿನ ಆ ಸ್ಥಳದಲ್ಲಿ ಒಂದು ಗುಳಿ ಇರುತ್ತದೆ. ಏರುಗರುಳು ಉದರದ ಹಿಂಭಿತ್ತಿಗೆ ಅಲುಗಾಡದಂತೆ ಅಂಟಿಕೊಂಡಿದೆ. ಮುಂಭಾಗದಲ್ಲಿ ಮಾತ್ರ ಪರಿವೇಷ್ಟನದ ಹೊದಿಕೆ ಇದೆ. ಏರುಗರುಳಿನ ಮುಂದೆ ಸಣ್ಣ ಕರುಳಿನ ಕುಣಿಕೆಗಳೂ ಉದರದ ಮುಂಭಿತ್ತಿಯೂ ಇವೆ.

ಅಡ್ಡ ಭಾಗ: ಉದ್ದ 45. 7–50.8 ಸೆಂಮೀ. ದೊಡ್ಡ ಕರುಳಿನ ಅತ್ಯಂತ ದೊಡ್ಡ ಭಾಗವಿದು. ಅದರ ಬಲಬಾಗಿನಿಂದ ಪ್ರಾರಂಭವಾಗಿ ಹೊಕ್ಕಳಿನಿಂದ ಸ್ವಲ್ಪ ಮೇಲ್ಮಟ್ಟದಲಿ ಎಡಕ್ಕೆ ಹಾದು ಉದರದ ಎಡಪಾರ್ಶ್ವವನ್ನು ಸೇರುತ್ತದೆ. ಅಲ್ಲಿಂದ ಗುಲ್ಮದವರೆಗೆ ಮೇಲೇರಿ ಪುನಃ ಮಡಿಚಿಕೊಂಡು ಕೆಳಕ್ಕೆ ಇಳಿಯುತ್ತದೆ. ಈ ಮಡಿಕೆಯೇ ದೊಡ್ಡ ಕರುಳಿನ ಎಡಬಾಗು (ಲೆಫ್ಟ್ ಕಾಲಿಕ್ ಫ್ಲೆಕ್ಷರ್). ಇದು ಬಲಬಾಗಿಗಿಂತ ಹೆಚ್ಚು ಮೇಲ್ಮಟ್ಟ ಮತ್ತು ಇನ್ನಷ್ಟು ಹಿಂದುಗಡೆ ಇದೆ. ಫ್ರೆನಿಕೊಕಾಲಿಕ್ ಲಿಗ್‌ಮೆಂಟ್ ಎಂಬ ಬಂಧನ ಇದನ್ನೂ ಸ್ವಲ್ಪಮಟ್ಟಿಗೆ ಗುಲ್ಮವನ್ನೂ ವಪೆಗೆ ಬಂಧಿಸಿ ಸ್ಥಳಾಂತರಗೊಳ್ಳದಂತೆ ಮಾಡಿದೆ. ನೆಟ್ಟಗೆ ನಿಂತಾಗ ಅಡ್ಡಭಾಗದ ಮಧ್ಯೆ ಮಾಲೆಯಂತೆ ಗಂಡಸರಲ್ಲಿ 7.66–10.2 ಸೆಂಮೀ ಹೆಂಗಸರಲ್ಲಿ 10.2–12.7 ಸೆಂಮೀ ಕೆಳಕ್ಕೆ ಇಳಿಬಿದ್ದಿರುತ್ತದೆ. ಅಡ್ಡಭಾಗ ಸ್ವಲ್ಪ ಮೇಲಕ್ಕೆ ಅಥವಾ ಕೆಳಕ್ಕೆ ಇಳಿ ಬಿದ್ದಿರುತ್ತದೆ. ಅಡ್ಡ ಭಾಗಕ್ಕೆ ಪರಿವೇಷ್ಟನದ ಕವಚ ಪೂರ್ಣವಾಗಿದೆ. ಅಲ್ಲದೆ ಅಂತ್ರಪಟಲದ ಮಡಿಕೆಯೂ (ಮಿಸೆಂಟರಿ) ಇರುವುದರಿಂದ ಅಡ್ಡಭಾಗ ಸ್ವಲ್ಪ ಮೇಲಕ್ಕೆ ಅಥವಾ ಕೆಳಕ್ಕೆ ಸ್ಥಳಾಂತರಗೊಳ್ಳಬಹುದು.

ಇಳಿಭಾಗ: ಉದ್ದ 10–15 ಸೆಂಮೀ. ಎಡಬಾಗಿನಿಂದ ಉದರದ ಎಡ ಅಂಚಿನಲ್ಲಿ ಇಳಿಯುವುದು. ಏರುಭಾಗದಂತೆಯೆ ಪರಿವೇಷ್ಟನದಿಂದ ಮುಂದುಗಡೆ ಮಾತ್ರ ಹೊದ್ದಿಸಲ್ಪಟ್ಟು ಅಲ್ಲಾಡದಂತೆ ಉದರದ ಹಿಂಭಿತ್ತಿಗೆ ಅಂಟಿಕೊಂಡಿದೆ. ಸಾಮಾನ್ಯವಾಗಿ ಇದು ಸಂಕುಚಿಸಿ ಇರುವುದರಿಂದ ಇದರ ವ್ಯಾಸ ಏರುಭಾಗಕ್ಕಿಂತ ಕಡಿಮೆ. ಉದರದಲ್ಲಿ ಇದು ಏರುಭಾಗಕ್ಕಿಂತ ಹಿಂದೆ ಇದೆ.

ಸೊಂಟಭಾಗ: ಇಳಿಭಾಗ ಮುಂದುವರಿದು ಸೊಂಟದ ಮೂಳೆಯ ಮುಂದಿರುವ ಭಾಗ. ಉದ್ದ 12.5–15 ಸೆಂಮೀ. ಕಿಬ್ಬೊಟ್ಟೆಯಲ್ಲಿ ಅಡ್ಡವಾಗಿ ಎಡದಿಂದ ಮಧ್ಯರೇಖೆಯವರೆಗೆ ಗಮಿಸುತ್ತದೆ. ಇದೂ ಉದರದ ಹಿಂಭಿತ್ತಿಗೆ ಅಂಟಿಕೊಂಡು ಮುಂದೆ ಮಾತ್ರ ಪರಿವೇಷ್ಟನದ ಹೊದಿಕೆಯಿದೆ. ಇಮ್ಮೊಗಡೊಂಕು ಭಾಗ: ಉದ್ದ 40–42.5 ಸೆಂಮೀ. ಪರಿವೇಷ್ಟನದ ಹಾಗೂ ಅಂತ್ರಪಟಲದ ಮಡಿಕೆ ಇದೆ. ಸ್ವಲ್ಪಮಟ್ಟಿಗೆ ಚಲನೆ ಸಾಧ್ಯವಿರುವುದರಿಂದ ನೆಟ್ಟಗೆ ನಿಂತಾಗ ಸಾಮಾನ್ಯವಾಗಿ ಕಿಬ್ಬೊಟ್ಟೆಯ ಅಂಗವಾಗಿಯೆ ಇರುತ್ತದೆ. ಇದರ ಆದಿ ಕಿಬ್ಬೊಟ್ಟೆಯ ಮೇಲು ಭಾಗದಲ್ಲಿ ಅಂತ್ಯ ತ್ರಿಕಾಸ್ಥಿಯ (ಸೇಕ್ರಮ್) ಮೂರನೆ ಮಣಿಯ ಮುಂದೆ.

ಗುದನಾಳ: ಉದ್ದ 12.5–15 ಸೆಂಮೀ. ತ್ರಿಕಾಸ್ಥಿಯ ಮೂರನೆ ಮಣಿಯ ಮಟ್ಟದಿಂದ ಕೆಳಕ್ಕೆ ಇಳಿದು ಆಸನನಾಳವಾಗಿ ಕೊನೆಯಲ್ಲಿ ಆಸನದ್ವಾರದ ಮೂಲಕ ಹೊರಕ್ಕೆ ತೆರೆದುಕೊಳ್ಳುತ್ತದೆ. ಗುದನಾಳದ ಮೇಲೆ ಸ್ನಾಯುಪಟ್ಟಿಯಾಗಲಿ, ಉಬ್ಬುಚೀಲ ಕೊಬ್ಬಿನ ಗಂಟುಗಳಾಗಲಿ ಇಲ್ಲ. ಕೊನೆಕೊನೆಯಲ್ಲಿ ಇದರ ವ್ಯಾಸ ಹೆಚ್ಚಾಗುತ್ತದೆ. ಈ ಭಾಗ ವಿಸ್ತೃತ ಗುದನಾಳಾಗ್ರ (ರೆಕ್ಟಲ್ ಆಂಪುಲ್ಲ). ಗುದನಾಳದ ಮೇಲು ತುದಿ ಹಿಂದಕ್ಕೂ ಕೆಳತುದಿ ಮುಂದಕ್ಕೂ ಬಾಗಿವೆ. ಅಲ್ಲದೆ ಮೇಲುಭಾಗದಲ್ಲಿ ಬಲಕ್ಕೂ ತ್ರಿಕಾಸ್ಥಿ ಗುದಾಸ್ಥಿಗಳ (ಕಾಕ್ಸಿಕ್ಸ್) ಸಂಧಿಯ ಮಟ್ಟದಲ್ಲಿ ಎಡಕ್ಕೂ ಬಾಗಿವೆ. ಗುದನಾಳದ ಕೆಳಭಾಗ ಸಂಕುಚಿಸಿ ವ್ಯಾಸ ಕಡಿಮೆ ಆದಾಗ ಲೋಳೆಪೊರೆಯಲ್ಲಿ ಉದ್ದುದ್ದ ಮಡಿಕೆಗಳು ಕಂಡುಬರುತ್ತದವೆ. ಅಲ್ಲದೆ ಅರ್ಧಚಂದ್ರಾಕಾರದ ಮೂರು ಅಡ್ಡ ಮಡಿಕೆಗಳು ಗುದನಾಳದಲ್ಲಿ ಸ್ಥಿರವಾಗಿ ಇರುತ್ತದೆ; ಮೊದಲನೆಯದು ಮೇಲುತುದಿಯ ಬಲಗಡೆ. ಎರಡನೆಯದು ಸು. 2.5 ಸೆಂಮೀ. ಕೆಳಗೆ ಎಡಗಡೆ ಮೂರನೆಯದು ಮೂತ್ರಕೋಶದ ಮೇಲುಮಟ್ಟದಲ್ಲಿ. ಮೂರನೆಯ ಮಡಿಕೆಯೆ ಎಲ್ಲಕ್ಕಿಂತ ದೊಡ್ಡದು. ಈ ಮಡಿಕೆಗಳನ್ನು ಸುಶ್ರುತ ತನ್ನ ಸಂಹಿತೆಯ ಶಾರೀರ ಭಾಗದಲ್ಲಿ ಪ್ರವಾಹನೆ, ವಿಸರ್ಜನಿ ಮತ್ತು ಸಂವರಣೀ ಎಂದು ವಿವರಿಸಿದ್ದಾನೆ. ಕೆಲವರಲ್ಲಿ ನಾಲ್ಕನೆಯ ಮಡಿಕೆಯೂ ಇರುವುದುಂಟು. ಇದು ಆಸನದ್ವಾರದಿಂದ ಸು. 2.5 ಸೆಂಮೀ. ಮೇಲಿದೆ. ಈ ಅಡ್ಡಮಡಿಕೆಗಳು ಸು. 1.25 ಸೆಂಮೀ. ಅಗಲವಾಗಿದ್ದು ಸೆಟೆದುಕೊಂಡಿರುತ್ತವೆ. ಮಡಿಕೆಗಳಲ್ಲಿರುವ ಸ್ನಾಯುತಂತುಗಳ ಸಂಕೋಚನ ಇದಕ್ಕೆ ಕಾರಣ. ಗುದನಾಳ ಖಾಲಿಯಾಗಿದ್ದಾಗ ಮಡಿಕೆಗಳು ತಡೆಯುತ್ತವೆ. ಆಸನ ನಾಳಕ್ಕೆ ಮಲ ನುಗ್ಗಿದ ಕೂಡಲೆ ಮಲವಿಸರ್ಜನೆಗೆ ಅವಸರವಾಗುತ್ತದೆ. ಗುದನಾಳದ ಉದ್ದಕ್ಕೂ ಪೂರ್ತಿಯಾಗಿ ಪರಿವೇಷ್ಟನವಿಲ್ಲ. ಆಸನದ್ವಾರದಿಂದ ಗಂಡಸರಲ್ಲಿ 7.5 ಸೆಂಮೀ. ಹೆಂಗಸರಲ್ಲಿ 5.5 ಸೆಂಮೀ. ಮೇಲೆ ಮಾತ್ರ ಪರಿವೇಷ್ಟನವಿದೆ. ಶಸ್ತ್ರಕ್ರಿಯೆಯಿಂದ ಗುದನಾಳದ ಕೆಳಭಾಗವನ್ನು ತೆಗೆದು ಹಾಕಬೇಕಾದ ಸಂದರ್ಭಗಳಲ್ಲಿ ಇದನ್ನು ಜ್ಞಾಪಕದಲ್ಲಿ ಇಟ್ಟುಕೊಂಡಿರಬೇಕಾದದ್ದು ಮುಖ್ಯ.

ಆಸನನಾಳ: ದೊಡ್ಡಕರುಳಿನ ಅಂತ್ಯಭಾಗ. ಉದ್ದ ಸು. 2.5–4 ಸೆಂಮೀ. ಗುದನಾಳ ಹಠಾತ್ತಾಗಿ ಹಿಂದಕ್ಕೆ ಬಾಗಿ ಮುಂದುವರಿದು ಆಸನನಾಳವಾಗಿದೆ. ಆಸನನಾಳಕ್ಕೆ ಪರಿವೇಷ್ಟನವಿಲ್ಲ. ಆಸನನಾಳದ ಮೇಲುಭಾಗದ ಭಿತ್ತಿಯಲ್ಲಿ ಸುತ್ತುವರಿದ ಸ್ನಾಯು ಒಳ ಉಂಗುರ ಸ್ನಾಯುವಾಗಿದೆ (ಇಂಟರ್‌ನರ್ ಸ್ಫೋಂಕ್ಟರ್). ಎರಡು ಪಕ್ಕಗಳಲ್ಲಿಯೂ ಲಿವೇಟರ್ ಏನ್ಯ ಎಂಬ ಸ್ನಾಯುಗಳು ಆಸನನಾಳಕ್ಕೆ ಆಸರೆ ಆಗಿವೆ. ಹೊರ ಅಥವಾ ಉಂಗುರ ಸ್ನಾಯು ಆಸನದ್ವಾರವನ್ನು ಸುತ್ತುವರಿದಿದೆ. ಮಾಂಸ ಮತ್ತು ನಾರು ಕೂಡಿದ ಮುದ್ದೆ ನಾಳದ ಹಿಂದಿದೆ. ಆಸನನಾಳದ ಮೇಲಿನ ಅರ್ಧದಲ್ಲಿ ಅಭಿದಮನಿ ಬಲೆಗಳಿರುವ ಹಲವು ಉದ್ದುದ್ದ ಮಡಿಕೆಗಳು (ಗುದಮಡಿಕೆಗಳು, ರೆಕ್ಟಲ್ ಕಾಲಮ್ಸ್) ಉಂಟು. ಇವುಗಳ ನಡುವೆ ಗುದಕುಳಿಗಳು (ರೆಕ್ಟಲ್ ಸೈನೂಸಸ್) ಇವುಗಳ ಕೆಳ ಅಂಚುಗಳಲ್ಲಿ ಒಂದರ ಕೊನೆಗೆ ಇನ್ನೊಂದರ ಕೊನೆ ಅಂಟಿಕೊಂಡಿರುವ ಆಸನ ಕವಾಟುಗಳೂ ಇವೆ. ಉರಿಯೂತವಾದ ಗುದಮಡಿಕೆಗಳಿಂದ ರಕ್ತ ಸೋರುವುದೆ ಮೂಲವ್ಯಾಧಿ.

ದೊಡ್ಡ ಕರುಳಿನ ಸೂಕ್ಷ್ಮ ರಚನೆ: ದೊಡ್ಡ ಕರುಳಿನ ಭಿತ್ತಿಯಲ್ಲಿ ನಾಲ್ಕು ಪದರಗಳಿದ್ದು ಸ್ನಾಯು ಪಟ್ಟಿಗಳ ಉದ್ದ ಮಿಕ್ಕ ಪದರಗಳಿಗಿಂತ ಚಿಕ್ಕದಾಗಿರುವುದರಿಂದ ಭಿತ್ತಿಗೆ ನಿರಿಗೆ ಮಾಡಿದಂತಾಗಿ ದೊಡ್ಡ ಕರುಳಿನಮ ಒಳಗೆ ಅರ್ಧಚಂದ್ರ ಮಡಿಕೆಗಳಾಗಿವೆ. ಅರ್ಧಚಂದ್ರ ಮಡಿಕೆಗಳಲಲಿ ಮೇಲಕ್ಕೆ ನಾಲ್ಕು ಪದರಗಳೂ ಇವೆ.

1) ಲೋಳೆಪೊರೆ: ಇಲ್ಲಿ ಲೋಮಗಳಿಲ್ಲ ಅದ್ದರಿಂದ ಒಳಮೈ ನುಣ್ಣಗಿದೆ. ಒಳಮೈ ಮೇಲೆ ಅನೇಕ ಸಣ್ಣ ತೂತುಗಳು ಕಾಣುತ್ತವೆ. ಇವು ದೊಡ್ಡಕರುಳಿಗೆ ವಿಶಿಷ್ಟವಾದ ಕೊಳವೆ ಗ್ರಂಥಿಗಳ ಬಾಯಿಗಳು. ಒಳಮೈ ಕೋಶಗಳ ನಡುವೆ ಲೋಳೆ ಸ್ರವಿಸುವ ಹಲವು ಹೂಜಿಕಣಗಳುಂಟು. ಲೋಲೆಪೊರೆಯ ಸ್ನಾಯು ಪದರದಲ್ಲಿ ಒಳವರ್ತುಲ ಮತ್ತು ಹೊರ ಉದ್ದುದ್ದ ಸ್ನಾಯುತಂತುಗಳಿವೆ. ಅಲ್ಲಲ್ಲಿ ದುಗ್ಧ ರಸಗ್ರಂಥಿಗಳು ಇವೆ.

2) ಲೋಳೆಪೊರೆಯ ಅಡಿಯೂತಕ: ದಪ್ಪ, ಉದ್ದಕ್ಕೂ ಒಂದೇ, ಸಡಿಲ ನಾರೆಳೆಗಳ ಜಲದಿಂದಾಗಿದ್ದು ಇದು ಲೋಳೆಪೊರೆಯನ್ನು ಪೇಶಿಪದರಕ್ಕೆ ಬಂಧಿಸುತ್ತದೆ. ಇದರಲ್ಲಿ ಕವಲೊಡೆಯುವ ಸಣ್ಣ ರಕ್ತ ಮತ್ತು ದುಗ್ಧನಾಳಗಳ ಜಾಲವಗೂ ಹುದುಗಿವೆ.

3) ಸ್ನಾಯುಪದರ: ಅನೈಚ್ಛಿಕ ಸ್ನಾಯುತಂತುಗಳಿಂದಾಗಿವೆ. ಒಳವರ್ತುಲ ಅದರ ಅಂಧಾಂತ್ರದಲ್ಲಿ ಮತ್ತು ಸ್ವಯಂ ದೊಡ್ಡ ಕರುಳಿನಲ್ಲಿ ತೆಳುವಾಗಿದೆ; ಅರ್ಧಚಂದ್ರ ಮಡಿಕೆಗಳಲ್ಲಿ ಸ್ವಲ್ಪ ದಪ್ಪವಾಗಿದೆ; ಗುದನಾಳದ ಉದ್ದಕ್ಕೂ ಒಂದೇ ದಪ್ಪವುಳ್ಳುದಾಗಿದೆ. ಒಳ ಆಸನ ಉಂಗುರಸ್ನಾಯು ಈ ಪದರದಿಂದಾಗಿದೆ.

ಉದ್ದುದ್ದ ಸ್ನಾಯು ಪದರದ ತಂತುಗಳು 12 ಮಿಮೀ. ಅಗಲವುಳ್ಳ ಮೂರು ಪಟ್ಟಿಗಳಲ್ಲಿ ಕೂಡಿಕೊಂಡು ಸಮಾಂತರ ಲಾಡಿಗಳಾಗಿವೆ. ಅ) ಹಿಂದಿನ ಲಾಡಿ ಅಡ್ಡ ಕರುಳಿಗೆ ಅಂತ್ರಪಟಲ ಅಂಟಿಕೊಂಡಿರುವ ಅಂಚಿನಲ್ಲಿದೆ. ಬ) ಮುಂದಿನ ಲಾಡಿಯನ್ನು ಏರು ಮತ್ತು ಇಳಿಗರುಳುಗಳ ಮುಮ್ಮೈಮೇಲೆ ಸುಲಭವಾಗಿ ನೋಡಬಹುದು. ದೊಡ್ಡ ಪರಿವೇಷ್ಟನ ಪಟಲ (ಗ್ರೇಟರ್ ಒಮೆನ್‌ಟಮ್) ಅಂಟಿಕೊಂಡಿರುವುದರಿಂದ ಅಡ್ಡಗರುಳಿನ ಮೇಲೆ ಮುಂದಿನ ಲಾಡಿ ಕಾಣಿಸುವುದಿಲ್ಲ. ಕ) ಪಕ್ಕದ ಲಾಡಿ ಏರುಗರುಳಿನ ಎಡದಲ್ಲೂ ಇಳಿಗರುಳಿನ ಬಲದಲ್ಲೂ ಅಡ್ಡಗರುಳಿನ ಹಿಂದೆಯೂ ಇದೆ. ಅಂಧಾಂತ್ರದ ಮೇಲಿರುವ ಮುಂದಿನ ಲಾಡಿಯಿಂದ ಅಂತ್ರಪುಚ್ಛವನ್ನು ಸುಲಭವಾಗಿ ಪತ್ತೆಮಾಡಬಹುದು. ಲಾಡಿಗಳು ಭಿತ್ತಿಯ ಇತರ ಪದರಗಳಿಗಿಂತ ಹ್ರಸ್ವವಾಗಿರುವುದರಿಂದ ಭಿತ್ತಿಗೆ ನಿರಿಗೆ ಹಾಕಿದಂತಾಗಿ ದೊಡ್ಡಕರುಳಿಗೆ ವಿಶಿಷ್ಟವಾದ ಸಮಾಂತರ ಉಬ್ಬುಗಳಾಗಿ ಇವುಗಳ ನಡುವೆ ಒಳಕ್ಕೆ ನುಗ್ಗುವ ಅರ್ಧಚಂದ್ರ ಮಡಿಕೆಗಳಿವೆ.

4) ವಸೆಪೊರೆಯ ಪದರ: ಕರುಳಿನ ಹೊರನುಣುಪು ವಸೆಪೊರೆ (ಸೀರಸ್ ಕೋಟ್) ಪರಿವೇಷ್ಟನದಿಂದಾದುದು. ಅಂಧಾಂತ್ರ, ಅಂತ್ರಪುಚ್ಛ, ಅಡ್ಡ ಮತ್ತು ಇಮ್ಮೊಗ. ಕರುಳುಗಳ ಮೇಲೆ ಅಂತ್ರಪಟಲ ಅಂಟಿಕೊಂಡಿರುವ ರೇಖೆಯನ್ನು ಬಿಟ್ಟು ಮಿಕ್ಕೆಲ್ಲ ಭಾಗಗಳ ಮೇಲೆ ಇದು ಪೂರ್ಣ ಹೊದಿಕೆಯಾಗಿದೆ. ಏರು ಮತ್ತು ಇಳಿಗರುಳುಗಳ ಹಾಗೂ ಗುದನಾಳದ ಮೇಲೆ ವಸೆಪೊರೆ ಅಪೂರ್ಣ ಹೊದಿಕೆಯಾಗಿದೆ.

ವಿಶೇಷ ಲಕ್ಷಣಗಳು: ಅ) ಸಣ್ಣ ದೊಡ್ಡ ಕರುಳುಗಳ ಸಂಗಮ ಕವಾಟ: ಇದರ ಎರಡು ತುಟಿಗಳೂ ವರ್ತುಲ ಸ್ನಾಯುತಂತುಗಳಿರುವ ಲೋಳೆಪೊರೆ ಮಡಿಕೆಗಳು ಉದ್ದುದ್ದ ಸ್ನಾಯುತಂತುಗಳೂ ಪರಿವೇಷ್ಟನವೂ ಸಣ್ಣ ಕರುಳಿನಿಂದ ದೊಡ್ಡ ಕರುಳಿಗೆ ತಡೆಯಿಲ್ಲದೆ ಹೋಗುತ್ತದೆ. ಸಣ್ಣ ಕರುಳಿನ ಕಡೆ ಮೇಲ್ತುಟಿಯ ಮೇಲೆ ಲೋಮಗಳಿವೆ; ದೊಡ್ಡಕರುಳಿನ ಕಡೆ ಲೋಮಗಳಿಲ್ಲದೆ ದೊಡ್ಡ ಕರುಳಿಗೆ ವಿಶಿಷ್ಟವಾದ ಕೊಳವೆ ಗ್ರಂಥಿಗಳ ಸಣ್ಣ ರಂಧ್ರಗಳಿವೆ. ದೊಡ್ಡ ಕರುಳಿನಿಂದ ಆಹಾರಶೇಷ ಸಣ್ಣ ಕರುಳಿಗೆ ಹಿನ್ನುಗ್ಗುವುದನ್ನು ಈ ಕವಾಟ ತಡೆಯುತ್ತದೆ ಎಂಬುದು ಹಲವರ ಅಭಿಪ್ರಾಯ. ಸಣ್ಣ ಕರುಳಿನಲ್ಲಿರುವ ದ್ರವರೂಪದ ಆಹಾರಶೇಷ ಬೇಗ ಬೇಗ ದೊಡ್ಡ ಕರುಳಿಗೆ ನುಗ್ಗಿ ಹೋಗುವುದನ್ನು ಬಹುಶಃ ಅದು ತಪ್ಪಿಸಬಹುದು.

ಬ) ಕ್ಷುದ್ರ ಅಂತ್ರಪುಚ್ಛಗಳು: ಇವು ದೊಡ್ಡ ಕರುಳಿನ ವೈಲಕ್ಷಣಗಳು. ಉದರದ ಗಾಯದಿಂದ ಹೊರಬಂದ ಕರುಳು ದೊಡ್ಡದೊ ಚಿಕ್ಕದೊ ಎಂಬುದನ್ನು ಇವುಗಳಿಂದ ಸುಲಭವಾಗಿ ಗುರ್ತಿಸಬಹುದು. ಇವುಗಳ ವ್ಯಾಸ 0.5 ರಿಂದ 1 ಸೆಮೀ. ಇವು ಪರಿವೇಷ್ಟನದ ಹೊದಿಕೆಯಿರುವ ಮತ್ತು ಸುಮಾರಾಗಿ ದುಂಡಗಿರುವ ಕೊಬ್ಬಿನ ಸಣ್ಣ ಮುದ್ದೆಗಳು. ಸಣ್ಣ ತೊಟ್ಟುಗಳಿಂದ ಇವು ಕರುಳಿಗೆ ಅಂಟಿಕೊಂಡು ಜೋತುಬಿದ್ದಿವೆ. ಸಾಮಾನ್ಯವಾಗಿ ಲಾಡಿಯ ಹತ್ತಿರ ಹೆಚ್ಚು ಸಂಖ್ಯೆಯಲ್ಲಿವೆ. ಅಡ್ಡಗರುಳಿನ ಮೇಲೆ ಇವುಗಳ ಸಂಖ್ಯೆ ಹೆಚ್ಚು.

ಕ) ಕ್ರಿಮಿರೂಪದ ಅಂತ್ರಪುಚ್ಛ: ಇದರ ಭಿತ್ತಿಯಲ್ಲೂ ನಾಲ್ಕು ಪದರಗಳಿವೆ. ಒಳಮೈ ಕೋಶಗಳು ಮತ್ತು ಗ್ರಂಥಿಗಳು ದೊಡ್ಡ ಕರುಳಿನ ಇತರ ಭಾಗಗಳಲ್ಲಿ ಇದ್ದಂತಿವೆ. ಆದರೆ ಗ್ರಂಥಿಗಳ ಸಂಖ್ಯೆ ಕಡಿಮೆ. ಲೋಲೆಪೊರೆ ಮತ್ತು ಲೋಳೆಪೊರೆಯ ಅಡಿ ಊತಕಗಳ ದಪ್ಪ ಹೆಚ್ಚು. ಇವುಗಳಲ್ಲಿ ದುಗ್ಧರಸ ಗ್ರಂಥಿಗಳೂ ತುಂಬಿಕೊಂಡಿವೆ. ಲಾಡಿಗಳ ಆಕಾರದಲ್ಲಿಲ್ಲದೆ ಉದ್ದುದ್ದ ಸ್ನಾಯುತಂತುಗಳು ಸಮವಾಗಿ ಹರಡಿವೆ. ಉದ್ದುದ್ದ ಸ್ನಾಯುತಂತುಗಳಿಗಿಂತ ವರ್ತುಲ ತಂತುಗಳೆ ಹೆಚ್ಚು.

ಇ) ಆಸನನಾಳ: ಇದರ ಲೋಳೆಪೊರೆ ದಪ್ಪವಾಗಿದ್ದು ಹೆಚ್ಚು ರಕ್ತನಾಳಗಳಿಂದ ಕೂಡಿದೆ. ಗುದಮಡಿಕೆಗಳ ಕೆಳಗೆ ದೊಡ್ಡ ಅಭಿಧಮನಿಗಳು ಯದ್ವಾತದ್ವಾ ಗಂಟುಹಾಕಿಕೊಂಡಿವೆ. ಮೇಲಿನ ಮತ್ತು ಕೆಳ ಅಂತ್ರಪಟಲ ಅಭಿಧಮನಿಗಳೂ ಉಪಾಭಿಧಮನಿಗಳೂ ಕೊನೆಗಳಿಂದ ಒಂದಕ್ಕೊಂದು ಕೂಡಿವೆ. ಆಸನದಿಂದ 1.5 ರಿಂದ 2 ಸೆಮೀ. ಮೇಲಕ್ಕೆ ಮೇಲ್ಮಟ್ಟದ ಒಂಟಿಕೋಶಗಳಿಂದಾದ ಪೊರೆ ಇದ್ದಕ್ಕಿದ್ದಂತೆ ಹಲವು ಪದರಗಳ ಪೊರೆಯಾಗಿ ಚರ್ಮದ ಹೊರಪದರದೊಡನೆ ಅವಿಚ್ಛಿನ್ನವಾಗುತ್ತದೆ. ಈ ಬದಲಾವಣೆ ಬರಿಗಣ್ಣಿಗೆ ಬಿಳಿಗೆರೆಯಂತೆ ಕಾಣುತ್ತದೆ. ಇದಕ್ಕಿಂತ ಕೆಳಗಿರುವ ಭಾಗ ಚರ್ಮದಂತಿದೆ. ಬಿಳಿಗೆರೆಯಲ್ಲಿ ಆಸನಗ್ರಂಥಿಗಳ ಸಣ್ಣ ಬಾಯಿಗಳಿವೆ. ಇವು ವಿಶೇಷಗೊಂಡ ಚರ್ಮ ಗ್ರಂಥಿಗಳು. ವರ್ತುಲ ಪೇಶಿಪದರ ಗುದನಾಳದ ಪದರದೊಡನೆ ಅವಿಚ್ಛಿನ್ನವಾಗಿದ್ದರೂ ಹೆಚ್ಚು ದಪ್ಪವಾಗಿದ್ದು ಆಸನದ ಒಳ ಉಂಗುರಪೇಶಿಯಾಗಿದೆ. ಆಸನದ ಹೊರ ಉಂಗುರ ಪೇಶಿ ತಂತುಗಳು ಅಡ್ಡಗೆರೆಗಳುಳ್ಳವು. ಇವು ಆಸನದ್ವಾರವನ್ನು ಸುತ್ತುವರಿದಿವೆ. ಆಸನವನ್ನೆತ್ತುವ ಪೇಶಿ ಇದರಿಂದ ಮೇಲಕ್ಕೆ ಹರಡಿ ಶ್ರೋಣಿಭಿತ್ತಿಗೆ ಅಂಟಿಕೊಂಡಿದೆ. ಆಸನದ ಸುತ್ತಲಿರುವ ಚರ್ಮವನ್ನು ನಿರಿಗೆ ಮಾಡುವ ಪೇಶಿ ಚರ್ಮದ ಕೆಳಗೆ ಅಡ್ಡಗೆರೆಗಳಿರುವ ಸಣ್ಣ ಪೇಶಿ ತಂತುಗಳಿಂದಾಗಿದೆ. ಇವುಗಳಲ್ಲಿ ಕೆಳಗುವ ಅಭಿಧಮನಿಗಳ ಉಪಶಾಖೆಗಳ ಜಾಲವಾಗಿ ಗುದಮಡಿಕೆಗಳಲ್ಲಿ ಇರುವ ಉಪಾಭಿಧಮನಿಜಾಲಗಳ ರಕ್ತ ಈ ಉಪಶಾಖೆಗಳಲ್ಲಿ ಹರಿದುಹೋಗುತ್ತದೆ. ಪೇಶಿತಂತುಗಳು ಸಂಕುಚಿಸಿದ ಸ್ಥಿತಿಯಲ್ಲೇ ಮುಂದುವರಿದರೆ ರಕ್ತ ಹರಿದು ಹೋಗಲು ಕಷ್ಟವಾಗುತ್ತದೆ.

ರಕ್ತನಾಳಗಳು: ಮೇಲಿನ ಕೆಳ ಮಧ್ಯಾಂತ್ರ ಅಪಧಮನಿಗಳು ಅಯೋರ್ಟಾದ ನೇರಶಾಖೆಗಳು. ಇವುಗಳ ಶಾಖೆಗಳು ಪಟ್ಟಿಗರುಳಿನ ಭಿತ್ತಿಯನ್ನು ಪ್ರವೇಶಿಸಿ ಪೇಶಿಪದರಗಳ ನಡುವೆ ಕವಲೊಡೆದು ರಕ್ತ ಒದಗಿಸುತ್ತವೆ. ಕೆಳಲೋಳೆಪೊರೆಯಲ್ಲಿ ಸಣ್ಣ ಶಾಖೆಗಳು ಕವಲೊಡೆದು ಲೋಳೆಪೊರೆಗೆ ರಕ್ತ ಒದಗಿಸುತ್ತವೆ. ಇವಲ್ಲದೆ ಮೇಲಿನ ಗುದರಕ್ತನಾಳ ಒಂಟಿಯಾಗಿ ಕೆಳಕ್ಕಿಳಿದು ಎರಡು ಶಾಖೆಗಳನ್ನು ಕೊಡುತ್ತದೆ. ಇವು ಗುದನಾಳದ ಪಕ್ಕಭಿತ್ತಿಯಲ್ಲಿ ಇಳಿದು ಆಸನದಿಂದ 1.25 ಸೆಮೀ. ಮೇಲೆ ಆರು ಶಾಖೆಗಳಾಗಿ ಪೇಶಿಪದರವನ್ನು ತೂರಿ ಪೇಶಿಪದರ ಲೋಳೆಪೊರೆಗಳ ನಡುವೆ ಸಾಗಿ ಗುದಮಡಿಕೆಗಳಲ್ಲಿ ಶಾಖೆಗಳಾಗುತ್ತವೆ. ಇವು ಕೆಳಕ್ಕಿಳಿದು ಆಸನದ್ವಾರದ ಸುತ್ತ ಒಂದಕ್ಕೊಂದು ಸಂಬಂಧ ಹೊಂದಿ ಕುಣಿಕೆಗಳ ಮಾಲೆಯಾಗುತ್ತದೆ.

ಅಭಿಧಮನಿಗಳು ಗುದಭಿತ್ತಿಯಲ್ಲಿ ಮೊದಲಾಗುತ್ತವೆ. ಆಸನನಾಳ ಭಿತ್ತಿಯಲ್ಲಿರುವ ಅಭಿಧಮನಿ ಜಾಲದಲ್ಲಿ ಕೆಲವು ಆಸನದ ಅಂಚಿನಲ್ಲಿ ಉಬ್ಬಿವೆ. ಆರು ಅಭಿಧಮನಿಗಳು ಸಮಾಂತರದಲ್ಲಿ ಲೋಳೆಪೊರೆ ಪೇಶಿಪದರಗಳ ನಡುವೆ 12 ಸೆಮೀ. ಅಷ್ಟು ಏರಿ ಒಂದುಗೂಡಿದಾಗ ಮೇಲ್ಗುದದ ಅಭಿಧಮನಿ ಪ್ರಾರಂಭವಾಗುತ್ತದೆ. ಈ ಅಭಿಧಮನಿ ವ್ಯವಸ್ಥೆಯೇ ಗುದ ಅಥವಾ ಮೂಲ (ರಕ್ತಾವ) ಅಭಿಧಮನಿ. ಇದು ಕೆಳ ಹಾಗೂ ಮಧ್ಯ ಗುದ ಅಭಿಧಮನಿ ಪ್ರಾರಂಭವೇ ಅಲ್ಲದೆ ಸಾಮಾನ್ಯ (ದೇಹ) ರಕ್ತಪರಿಚಲನೆ ಹಾಗೂ ಯಕೃದ್ದ್ವಾರ ರಕ್ತಪರಿಚಲನೆಗಳ ಸಂಧಿ. ಕುಡಿತ ಇಲ್ಲವೆ ಇತರ ಕಾರಣದಿಂದ ಯಕೃತ್ ಕೆಟ್ಟು ನಾರುಮುದ್ದೆಯಾದಾಗ ಅಡಚಣೆ ಉಂಟಾಗಿ ಆಹಾರನಾಳ ಭಿತ್ತಿಯ ರಕ್ತ ಕೆಳಕ್ಕಿಳಿದು ಗುದ ಅಭಿಧಮನಿಗಳು ಉಬ್ಬಿಕೊಂಡು ಮೂಲವ್ಯಾಧಿ ಆಗುತ್ತದೆ.

ನರಗಳು: ದೊಡ್ಡ ಕರುಳಿನ ಎಡಬಾಗಿನವರೆಗೆ ಹತ್ತನೆಯ ತಲೆ (ಅಲೆಮಾರಿ) ನರಗಳೂ ಅನುವೇದನ ನರಗಳೂ ಅಲ್ಲಿಂದ ಮುಂದೆ ತ್ರಿಕಾಸ್ಥಿನರಗಳೂ ಕೆಳ ಅನುವೇದನ ನರಗಳೂ ದೊಡ್ಡ ಕರುಳು ಭಿತ್ತಿಗೆ ಒದಗುತ್ತವೆ. ಅನುವೇದನ ನರಗಳಿಂದ ಕರುಳು ವಿಕಾಸಗೊಂಡು ಆಸನನಾಳದ ಒಳ ಉಂಗುರ ಪೇಶಿ ಸಂಕುಚಿಸಿ ಕರುಳು ತುಂಬಿಕೊಳ್ಳುತ್ತದೆ. ತಲೆ ಮತ್ತು ತ್ರಿಕಾಸ್ಥಿ ನರಗಳಿಂದ ಪ್ರಚೋದನೆಯಿಂದ ಮಲವಿಸರ್ಜನೆಯಾಗುತ್ತದೆ.

ಹೋಲಿಕೆ ರಚನೆ: ಮೃದ್ವಸ್ಥಿ ಮೀನುಗಳು, ಚಿಮರ ಮತ್ತು ಕೆಲವು ಮೂಳೆ ಮೀನುಗಳಲ್ಲಿ ಜಠರದಿಂದ ಆಸನದವರೆಗೆ ಕರುಳು ನೆಟ್ಟಗಿವೆ. ಫುಪ್ಪುಸಮೀನುಗಳಲ್ಲಿ ಕರುಳು ಸಿಗ್ಮದಂತಿವೆ (Σ). ಹಲವು ವಿಶಿಷ್ಟ ಮೀನುಗಳಲ್ಲಿ ಕರುಳು ಹೆಚ್ಚು ನುಲುಚಿಕೊಂಡಿದ್ದು ಗಡಿಯಾರದ ಸುರುಳಿಯಂತಿರುವ ಕುಣಿಕೆಗಳನ್ನು ಹೊಂದಿದೆ. ಉಭಯಚರಿಗಳಲ್ಲಿ ಜಠರದಿಂದ ಮಲಕೂಪದವರೆಗೆ ಕರುಳು ನೆಟ್ಟಗಿದೆ. ಮೀನು, ಉಭಯಚರಿ ಮತ್ತು ಸರೀಸೃಪಗಳಲ್ಲಿ ಪರಿವೇಷ್ಟನದಿಂದಾಗುವ ಮಧ್ಯಾಂತ್ರ ಕರುಳಿಗೆ ಆಧಾರಪೊರೆ ಆಗಿರುತ್ತದೆ. ಇವುಗಳಲ್ಲಿ ಹೊಕ್ಕಳ ಕಡೆಯ ಮಧ್ಯಾಂತ್ರ ಮಾಯವಾಗಿ ಅದರ ಅಲ್ಪಾವಶೇಷಗಳು ಮಾತ್ರ ಇವೆ. ಪಕ್ಷಿ ಮತ್ತು ಸ್ತನಿಗಳ ಸಾಮಾನ್ಯ ಪೂರ್ವಜರಲ್ಲಿ ಕರುಳಿನ ಉದ್ದ ಹೆಚ್ಚಿ ಮಡಿಕೆಗಳಾದವು. ಈಗ ಜೀವಿಸಿರುವ ಪಕ್ಷಿ ಹಾಗು ಸ್ತನಿಗಳಲ್ಲಿ ಕರುಳಿನ ಮೂರು ಭಾಗಗಳಿವೆ: 1) ದ್ವಾದಶಾಂತ್ರ (ಡೀಯೋಡೀನಮ್), 2) ಮೆಕೆಲ್ ನಾಳ (ಮಾನವನ ಜೆಜುನಮ್ ಮತ್ತು ಐಲಿಯಮ್), 3) ಕುರುಡುಗರುಳು, ಆಸನಗಳ ನಡುವೆ ಇರುವ ಹಿಂಗರುಳು, ಈ ವಿಭಾಗಗಳು ಅವುಮಾಡುವ ಬೇರೆ ಬೇರೆ ಕೆಲಸಗಳಿಗೆ ತಕ್ಕಂತೆ ಆಗಿವೆ. ಮೆಕೆಲ್ ನಾಳದ ಮುಖ್ಯ ಕೆಲಸ ಜೀರ್ಣವಾದ ಆಹಾರವನ್ನು ಹೀರುವುದು. ಹೀಗಾಗಿ ಇದು ಅತಿ ಉದ್ದವಾಗಿದೆ. ಪ್ರಾಣಿ ವಿಕಾಸದಲ್ಲಿ ಕಾರ್ಯಕ್ಕೆ ತಕ್ಕಂತೆ ಅಂಗಗಳು ಹೊಂದಿಕೊಳ್ಳುತ್ತವೆ. ಕರುಳು ಕೂಡ ಅದೇ ರೀತಿ ಹೊಂದಿಕೊಳ್ಳುತ್ತದೆ. ಮುಖ್ಯ ಹೊಂದಾಣಿಕೆಯೆಂದರೆ ರಕ್ತನಾಳಗಳು ಹೆಚ್ಚಿ ಕರಗಿದ ಆಹಾರವನ್ನು ಹೀರಿಕೊಳ್ಳಲು ಲೋಳೆಪೊರೆಯ ಒಳಮೈ ಹೆಚ್ಚುವುದು. ಆಹಾರದ ಸ್ವಭಾವಕ್ಕೆ ತಕ್ಕಂತೆ ವ್ಯತ್ಯಾಸಗಳಾಗುತ್ತವೆ. ಸಸ್ಯಾಹಾರವಾದರೆ ಕರುಳಿನ ಉದ್ದ ಹೆಚ್ಚು. ಮೀನೇ ಆಹಾರವಾಗಿರುವ ಹಕ್ಕಿ ಸ್ತನಿಗಳಲ್ಲಿ ಆಹಾರನಾಳದ ಉದ್ದ ಹೆಚ್ಚಿ ಭಿತ್ತಿ ದಪ್ಪವಾಗಿ ಒಳವ್ಯಾಸ ಕಡಿಮೆಯಾಗಿರುತ್ತದೆ; ಜಠರ, ಚಿಕ್ಕ ದೊಡ್ಡ ಕರುಳು ಇತ್ಯಾದಿಗಳು ನಡುವೆ ವ್ಯತ್ಯಾಸ ಕಡಿಮೆ.

ಹಣ್ಣೇ ಆಹಾರವಾಗುಳ್ಳ ಹಕ್ಕಿಗಳಲ್ಲಿ ಆಹಾರನಾಳ ಅತಿ ಕುರುಚಾಗಿ ಅಗಲವಾಗಿ ಸರಳವಾಗಿರುತ್ತದೆ. ಆದರೆ ಹಣ್ಣುಗಳನ್ನೇ ತಿನ್ನುವ ಸ್ತನಿಗಳಲ್ಲಿ ಈ ರೀತಿಯ ವ್ಯವಸ್ಥೆ ಕಾಣಬರುವುದಿಲ್ಲ. ಮಾಂಸಾಹಾರಿ ಪಕ್ಷಿ, ಸ್ತನಿಗಳಲ್ಲಿ ಆಹಾರನಾಳದ ಉದ್ದ ಕಡಿಮೆ.

ಕುರುಡುಗರುಳು: ಇದು ಮೆಕೆಲ್ ನಾಳ ಮತ್ತು ಹಿಂಗರುಳ ಸಂಧಿಯಲ್ಲಿ, ಅಂದರೆ ಚಿಕ್ಕದೊಡ್ಡ ಕರುಳುಗಳು ಕೂಡುವೆಡೆಯಲ್ಲಿ, ಜೊತೆಯಾಗಿ ಇಲ್ಲವೆ ಒಂಟಿಯಾಗಿ ಉಂಟು. ಸ್ಥಾನದಲ್ಲಿ ವ್ಯತ್ಯಾಸವಿದ್ದಂತೆ ಕಂಡುಬಂದರೂ ಪಕ್ಷಿ ಮತ್ತು ಸ್ತನಿಗಳೆರಡರಲ್ಲೂ ಕುರುಡುಗರಳಿನ ಉಗಮ ಒಂದೆ. ಇದು ದೊಡ್ಡಕರುಳಿನ ಆದಿಭಾಗದಿಂದ ಬೆಳೆಯುವ, ಕೊನೆ ಮುಚ್ಚಿಕೊಂಡಿರುವ ಕೊಳವೆ. ಇದರ ಗಾತ್ರ ವ್ಯತ್ಯಾಸವುಳ್ಳದ್ದು. ಇದರ ವೃದ್ಧಿಗೂ ಆಹಾರದ ಸ್ವಭಾವಕ್ಕೂ ಒಂದೇ ರೀತಿಯ ಸಂಬಂಧವಿಲ್ಲ. ಹಲವು ಪ್ರಾಣಿಗಳಲ್ಲಿ ಕುರುಡುಗರಳಿನ ಭಿತ್ತಿ ಗ್ರಂಥಿಯುತವಾಗಿ ದುಗ್ಧಧಾತುವಿನಿಂದ ಕೂಡಿದೆ. ಕೆಲವು ಪಕ್ಷಿ ಹಾಗೂ ಸ್ತನಿಗಳಲ್ಲಿ ಒಳಗೆ ಟೊಳ್ಳೆ ಇಲ್ಲದೆ ಗಟ್ಟಿಯಾಗಿರುವಷ್ಟು ದುಗ್ಧ ಧಾತು ಇರುತ್ತದೆ. ಕುರುಡು ಗರುಳು, ಸಾಧಾರಣವಾಗಿ ಸಸ್ಯಾಹಾರಿಗಳಲ್ಲಿ ದೊಡ್ಡದಾಗಿದ್ದು ಇದರಲ್ಲಿ ಕ್ರಿಮಿಗಳ ಸಹಾಯದಿಂದ ಸಸ್ಯಗಳಲ್ಲಿರುವ ನಾರಿನ ಅಂಶದ ಪಚನಕ್ರಿಯೆ ನಡೆಯುತ್ತದೆ. ಬೇಸಾಯ ಮಾಡಿ ಅಡುಗೆಮಾಡಿ ತಿನ್ನುವ ಮಾನವನಲ್ಲಿ ಇದಕ್ಕೆ ಕಾರ್ಯವಿಲ್ಲದೆ ಬೆಲೆಯದೆ ಕುರುಚಾಗಿವೆ. ವೃದ್ಧಿಹೊಂದದ ಕುರುಡುಗರುಳಿನ ಭಾಗವಾದ ಹುಳುಗರುಳು ಮನುಷ್ಯ ಮತ್ತು ಇತರ ಕೆಲವು ಪ್ರಾಣಿಗಳಲ್ಲಿ ಮಾತ್ರ ಇದೆ. ಇದು ನಿಜವಾಗಿ ವೃದ್ಧಿಕುಂಠಿತವಾದ ಕುರುಡುಗರುಳಿನ ಭಾಗ.

ದೊಡ್ಡಕರುಳಿನ ಮುಖ್ಯ ಕಾರ್ಯ, ಸಣ್ಣಕರುಳಿನಿಂದ ಬರುವ, ಜೀರ್ಣವಾಗದ ಹಾಗು ತ್ಯಾಜ್ಯವಸ್ತುಗಳಿಂದ ಕೂಡಿದ ಆಹಾರ ಶೇಷದಲ್ಲಿರುವ ನೀರನ್ನು ಹೀರಿಕೊಂಡು, ಮಲವನ್ನು ವಿಸರ್ಜಿಸುವುದು. ***

**ದೊಡ್ಡರೋಗ:** ಮೆಲಕು ಹಾಕುವ ಪ್ರಾಣಿಗಳಿಗೆ (ಉದಾ:ದನ–ಕರುಗಳು) ತಗಲುವ ಮಾರಕ ಅಂಟುಜಾಡ್ಯ (ರಿಂಡರ್ ಪೆಸ್ಟ್). ಭಾರತ, ಏಷ್ಯಾ ದೇಶಗಳು ಹಾಗೂ ಆಫ್ರಿಕ ದೇಶದ ಕೆಲವು ಭಾಗಗಳಿಗೆ ಸೀಮಿತವಾಗಿರುವ ಈ ರೋಗ ೧೮ನೇ ಶತಮಾನದಿಂದ ಚಿರಪರಿಚಿತ. ಈ ರೋಗ ವೈರಸ್‌ನಿಂದ ಬರುತ್ತದೆ. ರೋಗಪೀಡಿತ ಪ್ರಾಣಿಗಳ ಬಾಯಿ, ಮೂಗು ಕಣ್ಣುಗಳಿಂದ ಒಸರುವ ರಸ ಹಾಗೂ ಸಗಣಿಯ ಮೂಲಕ ಹರಡುತ್ತದೆ. ರೋಗ ಪೀಡಿತ ಪ್ರಾಣಿಗಳು ತೀವ್ರ ಜ್ವರ (೩೭°–೩೮° ಸೆ) ದಿಂದ ಬಳಲುತ್ತವೆ. ಕೆಂಪಡರಿದ ಕಣ್ಣುಗಳು, ಬಾಯಿ, ನಾಸಿಕ, ಕಣ್ಣುಗಳಿಂದ ಕೀವು ಸರಿಯುವುದು. ಬಾಯಲ್ಲಿ ಸಣ್ಣ ಗಾತ್ರದ ವ್ರಣಗಳಾಗುವುವು. ಜ್ವರ ಆರಂಭವಾದ ೪–೫ ದಿವಸಗಳಲ್ಲಿ ರಕ್ತಭೇದಿಯುಂಟಾಗುತ್ತದೆ. ಸಗಣಿ ದುರ್ವಾಸನೆಯಿಂದ ಕೂಡಿರುತ್ತದೆ. ರೋಗದ ಲಕ್ಷಣಗಳು ಹೊರಹೊಮ್ಮಲು ಬೇಕಾಗುವ ಕಾಲ ೮–೯ ದಿವಸಗಳು. ನಂತರ ಪ್ರಾಣಿ ಸು. ೧ ವಾರ ಕಾಲ ರೋಗದಿಂದ ಬಳಲಿ, ಸಾಯುತ್ತದೆ. ಕೆಲವೊಮ್ಮೆ ರೋಗದ ತೀವ್ರತೆ ವಿಪರೀತವಾದಾಗ ೨–೩ ದಿವಸಗಳಲ್ಲೇ ರೋಗ ಪೀಡಿತ ಪ್ರಾಣಿ ಸಾಯುವುದುಂಟು. ಭಾರತೀಯ ದನದ ತಳಿಗಳು ರೋಗಕ್ಕೆ ನಿರೋಧವನ್ನು ಪಡೆದಿವೆ. ರೋಗಪೀಡಿತ ಪ್ರಾಣಿ ತುಂಬ ಕೃಶವಾಗುತ್ತದೆ. ಅದರ ನಾಲ್ಕನೆಯ ಜಠರ ಭಾಗ (ಅಬೊಮೆಸಮ್), ದೊಡ್ಡ ಕರುಳಿನ ಅಂಧಾಂತ್ರ (ಸೀಕಮ್) ಮತ್ತು ಗುದನಾಳಗಳು (ರೆಕ್ಟಮ್) ತೀವ್ರ ರಕ್ತಸಂಚಯಕ್ಕೆ ಒಳಗಾಗಿ ಕರುಳಿನ ಊತ ಹಾಗೂ ಬಾಯಿ ಮತ್ತು ಗಂಟಲು ಕುಹರದ ಲೋಳೆ ಪೊರೆಯ ಮೇಲೆ ಕೆಂಪು ಮತ್ತು ಬೂದಿ ಬಣ್ಣದ ಕಲೆಗಳು ಉಂಟಾಗುವುವು. ಪರಿಣಾಮ ರೋಗಪೀಡಿತ ಪ್ರಾಣಿಗಳು ಸಾವಿಗೀಡಾಗುವುವು. ಒಂದು ವೇಳೆ ರೋಗದಿಂದ ಬದುಕುಳಿದರೆ, ಅಂಥ ಪ್ರಾಣಿ ತನ್ನ ಜೀವಮಾನದುದ್ದಕ್ಕೂ ರೋಗಕ್ಕೆ ನಿರೋಧತೆಯನ್ನು ಪಡೆದುಕೊಳ್ಳುತ್ತದೆ.

ದೊಡ್ಡ ರೋಗದ ವೈರಸ್ಸನ್ನು ಮೇಕೆ, ಮೊಲ ಮತ್ತು ಕೋಳಿ ಭ್ರೂಣಗಳಲ್ಲಿ ಬೆಳೆಸಿ, ರೋಗನಿರೋಧಕ ಲಸಿಕೆ (ವ್ಯಾಕ್ಸಿನ್) ಉತ್ಪತ್ತಿಮಾಡಲು ಬಳಸುವರು. ಇಂಥ ಲಸಿಕೆಯನ್ನು ಆರೋಗ್ಯವಂತ ಪ್ರಾಣಿಗಳಿಗೆ ಕೊಡುವುದರಿಂದ ಅವುಗಳಲ್ಲಿ ರೋಗನಿರೋಧಕ ಸಾಮರ್ಥ್ಯ ವೃದ್ಧಿಯಾಗುವುದು. ಈ ರೋಗದ ಚಿಕಿತ್ಸೆಗೆ ಬಳಸುವ ಪ್ರತಿವಿಷ (ಆಂಟಿಸೀರಮ್) ತಯಾರಿಸಲಾಗಿದೆ.

ದೊಡ್ಡ ರೋಗ ಹಂದಿಗಳಿಗೂ ಬರುತ್ತದೆ. ಆದರೆ, ಕುದುರೆ ಮತ್ತು ಮಾಂಸಹಾರಿ ಸ್ತನಿಗಳು ಮಾತ್ರ ಈ ರೋಗದಿಂದ ಮುಕ್ತವಾಗಿವೆ. ***

**ದ್ವಿಚರಿಗಳು:** ಮೀನುಗಳು ಮತ್ತು ಸರೀಸೃಪಗಳ ನಡುವಿನ ಕಶೇರುಕ ಪ್ರಾಣಿಗಳ ಒಂದು ವರ್ಗ (ಆಂಫಿಬಿಯ) ನೋಡಿ: ಉಭಯಜೀವಿಗಳು. ***

**ದ್ವಿನಾಮ ನಾಮಕರಣ:** ಜೀವಿಗಳನ್ನು ವೈಜ್ಞಾನಿಕವಾಗಿ ಹೆಸರಿಸುವ ವಿಧಾನ. ಸ್ವೀಡನ್ನಿನ ಕರೋಲಸ್ ಲಿನೇಯಸ್ (1707–1778) ಮೊದಲು ಬಳಕೆಗೆ ತಂದ ಪದ್ಧತಿ. ಸ್ಪೀಷೀಸ್ ಪ್ಲಾಂಟಾರಮ್ ಮತ್ತು ಸಿಸ್ಟಮಾ ನ್ಯಾಚುರೆ ಎಂಬ ಪುಸ್ತಕಗಳಲ್ಲಿ ಸುಮಾರು ಹತ್ತು ಸಾವಿರ ಸಸ್ಯಗಳನ್ನು ವರ್ಗೀಕರಿಸಿರುವುದಲ್ಲದೆ ಇವುಗಳಿಗೆ ವೈಜ್ಞಾನಿಕ ಹೆಸರುಗಳನ್ನು ಕೊಟ್ಟಿರುವ ಹೆಗ್ಗಳಿಕೆ ಲಿನೇಯಸ್‌ನದು.

ವೈಜ್ಞಾನಿಕ ಹೆಸರುಗಳು ಒಂದು ಸ್ಥಳ ಅಥವಾ ಭಾಷೆಗನುಗುಣವಾಗಿ ಬದಲಾಗದೆ ಸಾರ್ವತ್ರಿಕವಾಗಿ ವಿಶ್ವದ ಎಲ್ಲಾ ಕಡೆಯೂ ಅಂಗೀಕರಿಸಲ್ಪಟ್ಟಿವೆ. ಈ ಹೆಸರುಗಳು ಲ್ಯಾಟಿನ್ ಭಾಷೆಯಲ್ಲಿವೆ. ಉದಾ : ಪರ್ವತ ಸಿಂಹವು (ಮೌಂಟೇನ್ ಲಯನ್) ಪ್ಯೂಮ ಅಥವಾ ಕೌಗರ್ ಎಂದು ಪರಿಚಿತ. ಸಿಲ್ವರ್ ಲಯನ್, ಅಮೆರಿಕನ್ ಲಯನ್, ಮೌಂಟನ್ ಡಿಮನ್, ಕಿಂಗ್‌ಕ್ಯಾಟ್, ಟ್ರೌನಶ ಟೈಗರ್ ಮುಂತಾದ ಸಾಮಾನ್ಯ ಹೆಸರುಗಳೂ ಬಳಕೆಯಲ್ಲಿವೆ. ಆದರೆ ಲಿನೇಯಸ್ (ದ್ವಿನಾಮ ನಾಮಕರಣ) ಪದ್ಧತಿಯಂತೆ ಜಗತ್ತಿನ ಎಲ್ಲಾ ಜೀವ ವಿಜ್ಞಾನಿಗಳು ಸಾರ್ವತ್ರಿಕವಾಗಿ ಬಳಸುವ ಹೆಸರು ಫೆಲಿಸ್ ಕಾನ್‌ಕೊಲರ್.

ಪ್ರತಿ ವೈಜ್ಞಾನಿಕ ಹೆಸರೂ ಎರಡು ಪದಗಳನ್ನು ಹೊಂದಿದೆ. ಮೊದಲನೆಯ ಪದ ಜಾತಿಯನ್ನು ಸೂಚಿಸಿದರೆ ಎರಡನೆಯದು ಪ್ರಭೇದವನ್ನು ಸೂಚಿಸುತ್ತದೆ. ಹಸುವಿನ ವೈಜ್ಞಾನಿಕ ಹೆಸರು ಬಾಸ್ ಟೌರಸ್. ಬಾಸ್ ಜಾತಿಯಾದರೆ ಟೌರಸ್ ಪ್ರಭೇದ. ಜಾತಿಯ ಮೊದಲ ಅಕ್ಷರ ಆಂಗ್ಲಭಾಷೆಯ ದೊಡ್ಡ ಅಕ್ಷರದಲ್ಲಿ ಬರೆಯಲಾಗುವುದು. ಪ್ರಭೇದದ ಹೆಸರು ಸಣ್ಣ ಅಕ್ಷರದಿಂದ ಪ್ರಾರಂಭವಾಗುತ್ತದೆ. ವೈಜ್ಞಾನಿಕ ಹೆಸರು ಯಾವಾಗಲೂ ಓರೆಯ ಅಕ್ಷರಗಳಲ್ಲಿ (ಇಟಾಲಿಕ್ಸ್) ಮುದ್ರಣವಾಗುತ್ತದೆ. ಕೈಬರಹದಲ್ಲಿದ್ದಾಗ ಪದದ ಕೆಳಗೆ ಗೆರೆ ಎಳೆದು ಲ್ಯಾಟಿನ್ ಭಾಷೆಯಲ್ಲಿದೆ ಎಂದು ತೋರಿಸಲಾಗುತ್ತದೆ.

ಹಲವು ಜೀವಿಗಳಲ್ಲಿ ಬಳಕೆಯಲ್ಲಿರುವ ದ್ವಿನಾಮ ನಾಮಕರಣಗಳನ್ನು ಈ ಕೋಷ್ಟಕದಲ್ಲಿ ತೋರಿಸಲಾಗಿದೆ.

| | | | |
|---|---|---|---|
| 1. | ಎಂಟಮೀಬ | – | ಎಂಟಮೀಬ ಹಿಸ್ಟೋಲಿಟಿಕ |
| 2. | ಕಪ್ಪೆ | – | ರಾನ ಟೈಗ್ರಿನ |
| 3. | ಹುಲಿ | – | ಫೆಲಿಸ್ ಟೈಗ್ರಿಸ್ |
| 4. | ಕಿತ್ತಳೆ | – | ಸಿಟ್ರಸ್ ರೆಟಿಕ್ಯುಲೇಟ |
| 5. | ಬೆಕ್ಕು | – | ಫೆಲಿಸ್ ಡೊಮೆಸ್ಟಿಕಸ್ |
| 6. | ಈರುಳ್ಳಿ | – | ಎಲಿಯಂ ಸಿಪ |
| 7. | ತೆಂಗು | – | ಕೊಕೊಸ್ ನ್ಯೂಸಿಫೆರ |
| 8. | ಮಾನವ | – | ಹೋಮೊ ಸೆಪಿಯನ್ಸ್ |
| 9. | ಆಲ | – | ಫೈಕಸ್ ಬೆಂಗಾಲೆನ್ಸಿಸ್ |
| 10. | ಅರಳಿ | – | ಫೈಕಸ್ ರಿಲಿಜಿಯೋಸ |

(ಎಚ್.ಪಿ.ಜಿ.)

# ಧ

**ಧಮನಿ:** ರಕ್ತಪ್ರವಹಿಸುವ ನಾಳ, ಪರ್ಯಾಯನಾಮ ರಕ್ತನಾಳ (ಬ್ಲಡ್ ವೆಸಲ್). ಹೃದಯದಿಂದ ತಳ್ಳಲ್ಪಟ್ಟ ರಕ್ತವನ್ನು ದೇಹದ ಎಲ್ಲ ಭಾಗಗಳಿಗೂ ಒಯ್ದು ಅಲ್ಲೆಲ್ಲ ರಕ್ತದ ವಿಶಿಷ್ಟ ಕ್ರಿಯೆಯಾದ ವಸ್ತುವಿನಿಮಯ ಜರಗುವಂತೆ ಅನುಕೂಲ ಮಾಡಿಕೊಟ್ಟು ಪುನಃ ರಕ್ತವನ್ನು ಹೃದಯಕ್ಕೆ ವಾಪಸು ಒಯ್ಯುವುದು ಧಮನಿಗಳ ಕಾರ್ಯ. ಹೃದಯದಿಂದ ರಭಸವಾಗಿ ಹೊರಬರುವ ರಕ್ತವನ್ನು ಒಯ್ದು ದೇಹದ ಎಲ್ಲ ಭಾಗಗಳಿಗೂ ಹಂಚುವ ರಕ್ತನಾಳಗಳಿಗೆ ಅಪಧಮನಿಗಳೆಂದೂ (ಆರ್ಟರಿ), ರಕ್ತದ ವಿನಿಮಯ ಕ್ರಿಯೆಗೆ ಅನುಕೂಲತೆ ಮಾಡಿಕೊಡುವ ನಾಳಗಳಿಗೆ ಲೋಮನಾಳಗಳೆಂದೂ (ಕ್ಯಾಪಿಲ್ಲರಿ) ಹಾಗು ರಕ್ತವನ್ನು ಹೃದಯಕ್ಕೆ ವಾಪಸು ಒಯ್ಯುವ ನಾಳಗಳಿಗೆ ಅಭಿಧಮನಿಗಳೆಂದೂ (ವೇಯ್ನ್) ಹೆಸರು. ಈ ಕ್ರಿಯೆಗಳಿಗೆ ತಕ್ಕಂತೆ ನಾಳಗಳ ರಚನೆಯಲ್ಲಿ ವ್ಯತ್ಯಾಸ ಉಂಟು. ಮರಣಾನಂತರ ದೇಹರಕ್ತವೆಲ್ಲ ಹೃದಯ ಹಾಗೂ ಅಭಿಧಮನಿಗಳಲ್ಲಿ ಅಡಕವಾಗಿರುತ್ತದೆ.

1 ಹಿನ್ನೆಲೆ : ಕ್ರಿಸ್ತಪೂರ್ವದ ಪಾಶ್ಚಾತ್ಯ ವೈದ್ಯರು ಅಪಧಮನಿಗಳಲ್ಲಿ ರಕ್ತವಿರದೆ ಜೀವಂತ ಸ್ಥಿತಿಯಲ್ಲೂ ಇವು ಅನಿಲವನ್ನು ಒಯ್ಯುವುವೆಂದು ಭಾವಿಸಿದ್ದರಿಂದ ಇವುಗಳಿಗೆ ಆರ್ಟರಿ (= ಅನಿಲವನ್ನು ಒಯ್ಯುವ ನಾಳ) ಎಂದು ಹೆಸರಿಟ್ಟಿದ್ದರು. ಮರಣಾನಂತರ ಪರೀಕ್ಷೆಯಲ್ಲಿ ಕಾಣಬರುವಂತೆ ರಕ್ತ ಭರ್ತಿ ಆಗಿರುವ ನಾಳಗಳನ್ನೆಲ್ಲ ವೇಯ್ನ್‌ಗಳೆಂದು ಕರೆಯಲಾಗುತ್ತಿತ್ತು. 1 ನೆಯ ಶತಮಾನದ ಕೊನೆಯಲ್ಲಿ ರೋಮಿನಲ್ಲಿದ್ದ ಗ್ಯಾಲೆನ್ ಎಂಬ ವೈದ್ಯ ಪ್ರಾಣಿಗಳು ಜೀವಂತವಾಗಿದ್ದಾಗ ಅಪಧಮನಿಗಳಲ್ಲಿಯೂ ರಕ್ತ ಇರುವುದೆಂದು

ತೋರಿಸಿದ್ದ, ಆದರೆ ಆಗ ರಕ್ತನಾಳಗಳ ವಿಷಯದಲ್ಲಿ ಸರಿಯಾದ ತಿಳಿವಳಿಕೆ ಇರಲಿಲ್ಲ. ವಾಸ್ತವವಾಗಿ 1928ರಲ್ಲಿ ವಿಲಿಯಮ್ ಹಾರ್ವೆ ಎಂಬ ಇಂಗ್ಲಿಷ್ ವೈದ್ಯ ರಕ್ತಪರಿಚಲನಾ ಸಿದ್ಧಾಂತವನ್ನು ಮಂಡಿಸುವವರೆಗೂ ಅಪಧಮನಿ ಅಭಿಧಮನಿಗಳಿಗಿರುವ ವ್ಯತ್ಯಾಸ ಖಚಿತವಾಗಿ ಗೊತ್ತಿರಲಿಲ್ಲ. ವಿವಿಧ ಪ್ರಾಣಿಗಳ ಮೇಲೆ ಅವು ಜೀವಂತವಾಗಿರುವಾಗಲೆ ಅನೇಕ ಪ್ರಯೋಗಗಳನ್ನು ಮಾಡಿ ಪ್ರತ್ಯಕ್ಷ ಅವಲೋಕನದಿಂದ ಹಾರ್ವೆ ಕಂಡುಕೊಂಡ ವಿಷಯಗಳಲ್ಲಿ ಕೆಲವು ಇವು: ಅಪಧಮನಿಗಳಲ್ಲಿ ರಕ್ತ ರಭಸವಾಗಿ ಹೃದಯದಿಂದ ದೂರ ದೂರಕ್ಕೆ ಒಯ್ಯಲ್ಪಡುತ್ತವೆ. ಯಾವುದಾದರೂ ಅಪಧಮನಿಯನ್ನು ಕೊಯ್ದರೆ ಅದರಿಂದ ಉಜ್ಜ್ವಲ ಕೆಂಬಣ್ಣದ ನೆತ್ತರು ಹೃದಯದ ಪ್ರತಿಮಿಡಿತದ ಅನಂತರ ಚಿಮ್ಮುತ್ತದೆ. ಅಭಿಧಮನಿಗಳಲ್ಲಿ ರಕ್ತ ಚಲನೆ ಮಂದ ಮತ್ತು ಸದಾ ಹೃದಯದ ಎಡೆಗೆ. ಅದರಲ್ಲಿರುವ ನೆತ್ತರಿನ ಬಣ್ಣ ಮಸಕು ಕೆಂಪು ಅಭಿಧಮನಿಗಳಲ್ಲಿ ಅಲ್ಲಲ್ಲೆ ಇರುವ ಹಾಗೂ ಹೃದಯದ ಕಡೆಗೆ ಮಾತ್ರ ತೆರೆದುಕೊಳ್ಳುವ ಕವಾಟಗಳಿಂದಾಗಿ ರಕ್ತ ಹಿಮ್ಮೊಗವಾಗಿ ಚಲಿಸದೆ ಹೃದಯದ ಕಡೆಗೆ ಪ್ರವಹಿಸುವುದು ಸಾಧ್ಯವಾಗಿದೆ. ಪಲ್ಮನರಿ ಆರ್ಟರಿ ಮತ್ತು ಪಲ್ಮನರಿವೆಯ್ನ್‌ಗಳಲ್ಲಿ ಮಾತ್ರ ರಕ್ತದವರ್ಣ ಮೇಲೆ ಹೇಳಿರುವುದಕ್ಕೆ ವಿರುದ್ಧವಾಗಿ, ಅಪಧಮನಿಯಲ್ಲಿ ಮಸಕು ಕೆಂಪು ರಕ್ತವೂ, ಅಭಿಧಮನಿಯಲ್ಲಿ ವೆಯ್ನ್‌ಗಳಲ್ಲಿ ಉಜ್ಜ್ವಲ ಕೆಂಪು ರಕ್ತವೂ ಇರುತ್ತದೆ. ಆರೋಗ್ಯಸ್ಥಿತಿಯಲ್ಲಿ ರಕ್ತ ಯಾವಾಗಲೂ ಹೊರಗೆ ಬರದೆ ಹೃದಯ ಮತ್ತು ಧಮನಿಗಳಲ್ಲಿ ಮಾತ್ರ ಅಡಕವಾಗಿದ್ದು ಪ್ರವಹಿಸುತ್ತಿರುತ್ತದೆ. ಅಪಧಮನಿಗಳಿಂದ ದೇಹದ ನಾನಾ ಭಾಗಗಳಿಗೆ ಒಯ್ಯಲ್ಪಟ್ಟ ರಕ್ತ ಅಭಿಧಮನಿಗಳಿಗೆ ಬಂದು ಸೇರಬೇಕಾದರೆ ಅವೆರಡರ ನಡುವೆ ಸಂಪರ್ಕನಾಳಗಳು ಇದ್ದೇ ಇರಬೇಕು – ಇತ್ಯಾದಿಯಾಗಿ ಭಾವಿಸಲಾಗಿತ್ತು. ಹಾರ್ವೆ ಕಾಲವಾದ ಸುಮಾರು 70 ವರ್ಷಗಳ ತರುವಾಯ ಈ ಸಂಪರ್ಕನಾಳಗಳ ಅಸ್ತಿತ್ವವನ್ನು ಮಾಲ್ಪಿಜಿ ಎಂಬ ಇಟಲಿಯ ವಿಜ್ಞಾನಿ ತೋರಿಸಿದ. ಕೂದಲಿಗಿಂತಲೂ ಬಹು ತೆಳ್ಳಗಿದ್ದು ಬರಿಯ ಕಣ್ಣಿಗೆ ಗೋಚರವಾಗದಿರುವ ಈ ನಾಳಗಳಿಗೆ ಲೋಮನಾಳಗಳು ಎಂದು ಹೆಸರಿಡಲಾಯಿತು.

2 ಧಮನಿಗಳ ಸಾಮಾನ್ಯ ವಿನ್ಯಾಸ : ಎಡಹೃತ್ಕುಕ್ಷಿಯಿಂದ ರಕ್ತವನ್ನು ಹೊರ ಒಯ್ಯುವ ಅಪಧಮನಿಗೆ ಅಯೋರ್ಟ ಎಂದು ಹೆಸರು. ಇದು ಒಂದು ಮಹಾಪಧಮನಿ (ಲಾರ್ಜ್ ಆರ್ಟರಿ). ಇದರ ಕವಲುಗಳು ರುಂಡ, ಮುಂಡ ಕೈಕಾಲುಗಳು ಎಲ್ಲೆಡೆಯೂ ಸಾಗುತ್ತವೆ. ಅಯೋರ್ಟದ ಆರಂಭ ಕವಲುಗಳಿಗೆ ವಿಶಿಷ್ಟ ಹೆಸರುಗಳನ್ನು ಇಡಲಾಗಿದೆ. ಇವು ರುಂಡ ಮುಂಡ ಕೈಕಾಲುಗಳಲ್ಲಿ ಪುನಃ ಪುನಃ ಕವಲಾಗುತ್ತ ಹೆಸರಿರದ ಕಿರಿ ಅಪಧಮನಿಗಳಾಗುವುವು (ಸ್ಮಾಲ್ ಆರ್ಟರಿ, ಆರ್ಟಿರಿಯೋಲ್). ಪ್ರತಿಯೊಂದು ಕಿರಿ ಅಪಧಮನಿಯೂ ಅಗಾಧವಾಗಿ ಕವಲೊಡೆದು ಲೋಮನಾಳಗಳಾಗುತ್ತವೆ. ಇವು ಒಂದರೊಡನೊಂದು ಜಂಟಿಸಿ ಪುನಃ ಪ್ರತ್ಯೇಕವಾಗುತ್ತ ಬಲೆಯಂತೆ ಹರಡಿಕೊಂಡಿರುವುವಲ್ಲದೆ ಪುನಃ ಅದೇ ಸ್ಥಳದ ಲೋಮನಾಳಗಳೆಲ್ಲವೂ ಸೇರಿಕೊಂಡು ಅನುಗುಣವಾದ ಕಿರಿ ಅಭಿಧಮನಿ (ವೆನ್ಯೂಲ್) ಆಗುತ್ತವೆ. ಅನೇಕ ಕಿರಿ ಅಭಿಧಮನಿಗಳುಸೇರಿ ಮಧ್ಯಂತರ ಅಭಿಧಮನಿಗಳು ಹಾಗೂ ಅನೇಕ ಮಧ್ಯಂತರ ಅಭಿಧಮನಿಗಳು ಸೇರಿ ಮಹಾಭಿಧಮನಿಗಳಾಗುವುವು. ಇವು ಗುಂಡಿಗೆಯನ್ನು ಸೇರಿ ಅದರ ಬಲ ಹೃತ್ಕರ್ಣ ಭಾಗಕ್ಕೆ ತಾವು ಸಂಗ್ರಹಿಸಿ ಒಯ್ಯುತ್ತಿರುವ ರಕ್ತವನ್ನೆಲ್ಲ (ಅಂದರೆ ಫುಪ್ಫುಸಗಳನ್ನು ಬಿಟ್ಟು ದೇಹದ ಎಲ್ಲ ಭಾಗಗಳಿಂದಲೂ ವಾಪಸಾಗುವ ರಕ್ತ) ಸುರಿಯುವುವು. ಹೃದಯಕ್ಕಿಂತ ಉನ್ನತದೇಹಭಾಗಗಳಿಂದ ರಕ್ತವನ್ನು ತರುವ ಮಹಾಭಿಧಮನಿಗೆ ಉನ್ನತಮಹಾಭಿಧಮನಿ ಎಂದೂ (ಸುಪೀರಿಯರ್ ವೀನಾ ಕೇವ) ಕೆಳ ಭಾಗಗಳಿಂದ ರಕ್ತವನ್ನು ಒಯ್ಯುವ ನಾಳಕ್ಕೆ ಅವನತ ಮಹಾಭಿಧಮನಿ ಎಂದೂ (ಇನ್‌ಫೀರಿಯರ್ ವೀನಾ ಕೇವ) ಹೆಸರು. ಬಲಹೃತ್ಕರ್ಣಕ್ಕೆ ದೇಹದ ಎಲ್ಲೆಡೆಯಿಂದಲೂ ವಾಪಸಾಗಿ ಬಂದ ರಕ್ತ ಬಲ ಹೃತ್ಕುಕ್ಷಿಗೆ ಹರಿದುಬರುವುದು. ಬಲಹೃತ್ಕುಕ್ಷಿಯಿಂದ ಹೊರಡುವ ಪಲ್ಮನರಿ ಆರ್ಟರಿ ಎಡಬಲಭಾಗಗಳಾಗಿ ಆಯಾ ಕಡೆಯ ಫುಪ್ಫುಸಗಳನ್ನು ಸೇರುತ್ತದೆ. ಅಲ್ಲಿ ಕವಲಾಗಿ ನೂರಾರು ಮಧ್ಯಂತರ ಹಾಗೂ ಕಿರಿ ಅಪಧಮನಿಗಳು ಕಂಡುಬರುತ್ತವೆ. ಇವುಗಳ ಲೋಮನಾಳಗಳು ಫುಪ್ಫುಸದ ಎಲ್ಲೆಡೆಯೂ ರಕ್ತವನ್ನು ಸಾಗಿಸುತ್ತ ಪುನಃ ಎಲ್ಲವೂ ಕ್ರಮವಾಗಿ ಸೇರಿ ಎಡ ಹಾಗೂ ಬಲ ಪಲ್ಮನರಿ ವೆಯ್ನ್‌ಗಳೆಂಬ ಮಹಾಭಿಧಮನಿಗಳಾಗಿ ಪುಪ್ಪುಸಗಳಿಂದ ಹೊರಬಂದು ಹೃದಯದ ಎಡಹೃತ್ಕರ್ಣ ಭಾಗವನ್ನು ಸೇರಿ ಅಲ್ಲಿ ರಕ್ತವನ್ನು ಸುರಿಯುತ್ತವೆ. ಮುಂದೆ ಈ ರಕ್ತ ಎಡಹೃತ್ಕುಕ್ಷಿಗೆ ಹರಿದು ಬಂದು ಅದರಿಂದ ರೇಚಿತವಾಗಿ ಪುನಃ ತನ್ನ ಸಂಚಾರವನ್ನು ಪ್ರಾರಂಭಿಸುತ್ತದೆ. ಇದೇ ದೇಹದಲ್ಲಿನ ಧಮನಿಗಳ ವ್ಯೂಹ (ಬ್ಲಡ್ ವ್ಯಾಸ್ಕ್ಯುಲರ್ ಸಿಸ್ಟಮ್) ಹಾಗೂ ರಕ್ತ ಪರಿಚಲನಾ ಕ್ರಮ.

3 ಧಮನಿಗಳ ರಚನಾವೈವಿಧ್ಯ : ಅಪಧಮನಿಗಳಲ್ಲಿ ವೇಗವಾಗಿ ಹರಿದು ಬಂದು ಒಂದು ಸ್ಥಳಕ್ಕೆ ಪೂರೈಕೆ ಆಗುವ ರಕ್ತದ ಪ್ರಮಾಣ ಆ ಸ್ಥಳದ ಪ್ರಾಮುಖ್ಯ ಮತ್ತು ಚಟುವಟಿಕೆಗಳಿಗೆ ಅನುಗುಣವಾಗಿದೆ. ಆ ಸ್ಥಳದಿಂದ ಅಭಿಧಮನಿಗಳ ಮೂಲಕ ಇಷ್ಟು ರಕ್ತವೂ ವಾಪಸಾಗುವಾಗ ಮಂದಗತಿಯಿಂದ ಚಲಿಸುವುದರಿಂದ ಅಭಿಧಮನಿಗಳು ಅದಕ್ಕೆ ಸಂವಾದೀ (ಕರೆಸ್‌ಪಾಂಡಿಂಗ್) ಅಪಧಮನಿಗಳಿಗಿಂತ ಹೆಚ್ಚು ಸ್ಥಳಾವಕಾಶವುಳ್ಳ ನಾಳಗಳಾಗಿರುತ್ತದೆ. ಸಾಮಾನ್ಯವಾಗಿ ಅಪಧಮನಿಗಳು ಚರ್ಮದ ಮೇಲ್ಮೈಯಿಂದ ಆಳವಾಗಿ ಹುದುಗಿರುತ್ತವೆ. ಅಭಿಧಮನಿಗಳು ವಿಶೇಷವಾಗಿ ಚರ್ಮದ ಅಡಿಯಲ್ಲೆ ಇರುವುವು. ಆಳದಲ್ಲಿರುವ ಅಪಧಮನಿಗಳಿಗಿಂತ ಮೇಲೆ ಇರುವ ಅಭಿಧಮನಿಗಳಿಗೆ ಘಾತವಾಗುವ ಸಂದರ್ಭಗಳು ಹೆಚ್ಚು. ಆದ್ದರಿಂದ ಇವು ಸುಲಭವಾಗಿ ಛಿದ್ರಿಸದಂತೆ, ಹರಿಯದಂತೆ ಇವುಗಳ ಭಿತ್ತಿಯಲ್ಲಿ ಅಧಿಕವಾಗಿ ಬಿಳಿ ನಾರೆಳೆಗಳು ಇವೆ. ಅಭಿಧಮನಿಯಲ್ಲಿ ರಕ್ತ ಮಂದಗತಿಯಿಂದ ಪ್ರವಹಿಸುವುದರಿಂದಲೂ ಸಂವಾದೀ ಅಪಧಮನಿಗಿಂತ ಇದು ಹೆಚ್ಚು ಸ್ಥಳಾವಕಾಶ ಹೊಂದಿರುವುದರಿಂದಲೂ ಈ ರಕ್ತದಿಂದ ಧಮನಿಯ ಭಿತ್ತಿಯ ಮೇಲೆ ಪ್ರಯುಕ್ತವಾಗುವ ಒತ್ತಡ ಕಡಿಮೆ (ಸುಮಾರು 20 ಮಿಮೀ ಪಾದರಸ ಅಥವಾ ಇನ್ನೂ ಕಡಿಮೆ.). ಆದ್ದರಿಂದ ಅಭಿಧಮನಿಯ ಭಿತ್ತಿ ತೆಳುವಾಗಿಯೆ ಇರುವುದು. ಆದರೆ ಅದಕ್ಕೆ ಸಂವಾದಿಯಾದ ಅಪಧಮನಿಯಲ್ಲಿ ಪ್ರವಹಿಸುವ ರಕ್ತ ಭಿತ್ತಿಯ ಮೇಲೆ ಉಂಟುಮಾಡುವ ಒತ್ತಡ ಹೆಚ್ಚು (ಸುಮಾರು 100 ಮಿಮೀ. ಪಾದರಸ ಅಥವಾ ಇನ್ನೂ ಹೆಚ್ಚು ). ಆದ್ದರಿಂದ ಅಪಧಮನಿ ಇಷ್ಟು ಅಗಾಧವಾದ ಒಳಒತ್ತಡವನ್ನು ತೆಗೆದುಕೊಳ್ಳಲು ಶಕ್ತವಾಗಿರುವಂತೆ ಅದರ ಭಿತ್ತಿ ಸಂವಾದಿ ಅಭಿಧಮನಿಯ ಭಿತ್ತಿಗಿಂತ ದಪ್ಪವಾಗಿರುವುದಲ್ಲದೆ ಭಿತ್ತಿಯಲ್ಲಿ ಪುಟಿತ ಹಳದಿ ನಾರೆಳೆಗಳು ಅಧಿಕವಾಗಿವೆ ಕೂಡ. ಅಗತ್ಯವಾದಾಗ ಹಿಗ್ಗಿ ಪೂರ್ವಸ್ಥಿತಿಗೆ ವಾಪಸಾಗಬಲ್ಲ ಅಪಧಮನಿಯ ಭಿತ್ತಿ ಹೃದಯದ ಪ್ರತಿಮಿಡಿತದಲ್ಲೂ ಹೆಚ್ಚು ಕಡಿಮೆ ಆಗುತ್ತ ಇರುವ ರಕ್ತದ ಒತ್ತಡವನ್ನು ಈ ರೀತಿ ಭರಿಸಬಲ್ಲದು. ಹೃದಯದ ಪ್ರತಿಮಿಡಿತಕ್ಕೂ ತಾಳೆ ಆಗುವ ಅಪಧಮನಿ ಭಿತ್ತಿಯ ಹಿಗ್ಗುವಿಕೆ ಮತ್ತು ಪೂರ್ವಸ್ಥಿತಿಗೆ ವಾಪಸಾಗುವಿಕೆಗಳೇ ನಾಡಿಮಿಡಿತ (ಪಲ್ಸ್). ನಾಡಿ ಮಿಡಿತದಿಂದ ಅಪಧಮನಿಗಳಲ್ಲಿ ರಕ್ತ ಹೃದಯದ ಮಿಡಿತಕ್ಕೆ ಅನುಗುಣವಾಗಿ ಬಿಟ್ಟು ಬಿಟ್ಟು ಹರಿಯದೆ (ಡಿಸ್‌ಕನ್‌ಟಿನ್ಯೂಯಸ್ ಫ್ಲೊ) ಸಮಪ್ರಮಾಣದ ಪ್ರವಾಹವಲ್ಲದಿದ್ದರೂ (ಯೂನಿಫಾರಮ್ ಫ್ಲೊ) ಏಕಧಾರೆಯಾಗಿ (ಕನ್‌ಟಿನ್ಯೂಯಸ್ ಫ್ಲೊ) ಹರಿಯುವುದು ಸಾಧ್ಯವಾಗಿದೆ. ಅಪಧಮನಿಗಳ ಪುಟಿತತೆ ಕಾರಣಾಂತರದಿಂದ ಕುಂದಿದರೆ ಅವುಗಳ ಭಿತ್ತಿ ಹೃದಯದ ಪ್ರತಿ ಮಿಡಿತ ಕಾಲದಲ್ಲೂ ರಕ್ತದ ಒತ್ತಡದ ಆಧಿಕ್ಯದಿಂದ ಘಾತಗೊಂಡಂತೆ ಆಗುವ ಪ್ರಮೇಯ ಉಂಟು. ಇದರಿಂದ ಅಪಧಮನಿಯ ಭಿತ್ತಿ ಕ್ರಮೇಣ ಶಿಥಿಲಗೊಳ್ಳುತ್ತ ಯಾವುದಾದರೂ ದುರ್ಬಲ ಜಾಗದಲ್ಲಿ ಹೊರಚಾಚಿ ಉಬ್ಬಿಕೊಳ್ಳಬಹುದು (ಇದಕ್ಕೆ ಅನ್ಯೂರಿಸಮ್ ಎಂದು ಹೆಸರು). ಇಲ್ಲದಿದ್ದರೆ ಅಂಥ ಸ್ಥಳದಲ್ಲಿ ಅಪಧಮನಿಯ ಭಿತ್ತಿ ಹರಿದೇ ಹೋಗಬಹುದು. (ಮಿದುಳಿನ ಅಪಧಮನಿಗಳುಹೀಗೆ ಹರಿಯುವುದರಿಂದ ಹಠಾತ್ ಪಕ್ಷಘಾತ, ಮರಣ ಸಂಭವಿಸುವುದು ಅಪರೂಪವಲ್ಲ.) ಅಪಧಮನಿ ಪೆಡಸಣೆ ರೋಗ (ಅಥಿರೊ ಸ್ಕ್ಲೀರೋಸಿಸ್) ಎಂಬ ಸ್ಥಿತಿಯಲ್ಲೂ ಅಪಧಮನಿಯ ಪುಟಿತತೆ ನಾಶವಾಗಿ ರಕ್ತದ ಒತ್ತಡದ ಆಧಿಕ್ಯ ಮುಂತಾದ ವಿವಿಧ ಘಾತಕ ಪರಿಣಾಮಗಳಿಗೆ ಕಾರಣವಾಗಿರುತ್ತದೆ.

ಧಮನಿಯ ಭಿತ್ತಿಯ ಒಳಮೈ–ಅದು ಅಪಧಮನಿಯೆ ಆಗಿರಲಿ, ಅಭಿಧಮನಿಯೆ ಆಗಿರಲಿ, ಲೋಮನಾಳವೆ ಆಗಿರಲಿ–ಬಲು ನುಣುಪಾಗಿರುವುದು. ರಕ್ತ ಅದನ್ನು ತೋಯಿಸಬಾರದು. ಹೃದಯದ ಒಳಮೈಯೂ ಅಷ್ಟೆ ಇಂಥ ಒಳಮೈ ಇರುವುದರಿಂದಲೇ ಹೃದಯದಲ್ಲಿ ಮತ್ತು ರಕ್ತನಾಳಗಳಲ್ಲಿ ರಕ್ತ ಗರಣೆ ಕಟ್ಟಿಕೊಳ್ಳುವುದಿಲ್ಲ. ಅಭಿಧಮನಿಯ ಉರಿಯೂತ ಸ್ಥಿತಿಯಲ್ಲಿ (ಫ್ಲೆಬೈಟಿಸ್) ಇಲ್ಲವೆ ಅಪಧಮನಿಯ ಪೆಡಸಣೆ ಸ್ಥಿತಿಯಲ್ಲಿ ಆಯಾ ರಕ್ತನಾಳದ ಒಳಮೈ ಒರಟಾಗಿರುವುದು. ಅಲ್ಲದೆ ರಕ್ತ ಅದನ್ನು ತೋಯಿಸಬಲ್ಲದು. ಇಂಥ ಪರಿಸ್ಥಿತಿಗಳಲ್ಲಿ ರಕ್ತ ಆಯಾ ಸ್ಥಳಗಳಲ್ಲಿ ಗರಣೆ ಕಟ್ಟಿಕೊಂಡು ನಾನಾ ರೀತಿಯ ತೊಂದರೆಗಳಿಗೆ ಕಾರಣವಾಗಬಹುದು. ***

**ಧ್ರುವ ಕರಡಿ:** ಉತ್ತರಧ್ರುವ ವಾಸಿ ಕರಡಿ ಪ್ರಭೇದ. ಪೋಲಾರ್ ಬೇರ್, ಹಿಮಕರಡಿ, ಶ್ವೇತ ಕರಡಿ, ಸಮುದ್ರ ಕರಡಿ ಮುಂತಾದುವು ಪರ್ಯಾಯ ಹೆಸರುಗಳು. ಕಶೇರುಕ ವಂಶಕ್ಕೆ ಸೇರಿದ ಸ್ತನಿ. ತಲಾರ್ ಕ್ಟಾಸ್ಮಾರಿಟಿಮ್ ಜೈವಿಕ ಹೆಸರು. ಉತ್ತರಧ್ರುವದಲ್ಲಿ ಮತ್ತು ಅದಕ್ಕೆ ಹತ್ತಿರವಿರುವ ಕೆನಡಾ, ಗ್ರೀನ್‌ಲೆಂಡ್, ನಾರ್ವೆ, ರಷ್ಯ, ಅಲಾಸ್ಕ, ಐಸ್‌ಲೆಂಡ್‌ಗಳ ನದಿಗಳಲ್ಲಿ, ಆರ್ಕ್ಟಿಕ್ ಸಮುದ್ರ ತೀರದಲ್ಲಿ ಕಂಡುಬರುತ್ತವೆ. ಸೀಲ್‌ಗಳು ಇವುಗಳ ಪ್ರಿಯ ಆಹಾರ.

ಧ್ರುವಕರಡಿಯ ಉದ್ದ ಸರಾಸರಿ 210 ಸೆಂಮೀ ನಿಂದ 300 ಸೆಂಮೀ. ಗಂಡು ಕರಡಿಯ ಉದ್ದ 240–300 ಸೆಂಮೀ. ತೂಕ 420 ರಿಂದ 500 ಕಿಗ್ರಾಂ ಹೆಣ್ಣುಕರಡಿ ಗಂಡಿಗಿಂತ ಗಾತ್ರದಲ್ಲಿ ಚಿಕ್ಕದು. ಇವುಗಳ ಉದ್ದ : 180 ರಿಂದ 240 ಸೆಂಮೀ. ತೂಕ: 250–350 ಕಿಗ್ರಾಂ. ಇವುಗಳ ಜೀವಿತಾವಧಿ ಸು. 25 ವರ್ಷಗಳು.

ಹೆಣ್ಣು ಕರಡಿ 5 ವರ್ಷಕ್ಕೆ ಮರಿಗಳಿಗೆ ಜನ್ಮ ನೀಡುತ್ತದೆ. ಒಂದು ಬಾರಿಗೆ ಎರಡು ಮರಿಗಳನ್ನು ಈಯುತ್ತದೆ. ಮರಿಕರಡಿ ಹುಟ್ಟಿದಾಗ 450 ಗ್ರಾಂ ತೂಕ ಇರುವುದು.

ದೇಹ ಸಂಪೂರ್ಣವಾಗಿ ಶ್ವೇತ ವರ್ಣದ ತುಪ್ಪುಳದಿಂದ ಆವೃತವಾಗಿದೆ. ಕೇವಲ ಮೂಗು ಮತ್ತು ಬಾಲ ಕಪ್ಪು. ಇವುಗಳ ಪಾದದಲ್ಲಿಯೂ ಕೂದಲುಗಳು ಇರುವುದರಿಂದ ಹಿಮದ ಮೇಲೆ ಜಾರದೇ ಸರಾಗವಾಗಿ ನಡೆದಾಡಬಲ್ಲವು. ಮುಂಗಾಲು ಈಜುಪಾದವಾಗಿದ್ದು ಸುಲಭವಾಗಿ ಈಜಬಲ್ಲುವು. ಬೆರಳುಗಳಲ್ಲಿರುವ ಚೂಪಾದ ಬಲಿಷ್ಠ ಉಗುರುಗಳಿಂದ ಹಿಮದಲ್ಲಿ ಅಡಗಿರುವ ಸೀಲ್‌ಗಳನ್ನು ಹಿಡಿದೆಳೆದು ತಿನ್ನುತ್ತವೆ, ಮೀನನ್ನು ಬೇಟೆಯಾಡುತ್ತವೆ ಮತ್ತು ಸತ್ತಿರುವ ತಿಮಿಂಗಿಲಗಳನ್ನು ತಿನ್ನುತ್ತವೆ. ಆದ್ದರಿಂದ ಇವುಗಳ ಯಕೃತ್ತಿನಲ್ಲಿ ಅಸಾಧಾರಣ ಪ್ರಮಾಣದಲ್ಲಿ ಜೀವಸತ್ವ–ಎ ಸಂಗ್ರಹವಾಗಿರುತ್ತದೆ. ಆದರೆ ಅದು ಮನುಷ್ಯರಿಗೆ ವಿಷವಾಗಿ ಪರಿಣಮಿಸುತ್ತದೆ.

ಇವುಗಳ ದೇಹದ ಪ್ರತಿರೋಮವು ಅಚ್ಚ ಬಿಳಿಯದಾಗಿದ್ದು ಪಾರದರ್ಶಕವಾದ ಕೊಳವೆಯಂತಿರುತ್ತದೆ. ಬೇಸಿಗೆಯಲ್ಲಿ ತೆಳುಹಳದಿ ಅಥವಾ ಪಾಚಿ ಬೆಳೆಯುವ ಕಾರಣ ಹಸಿರು ಬಣ್ಣಕ್ಕೆ ತಿರುಗುತ್ತದೆ. ಈ ರೋಮಗಳು ಸೂರ್ಯನಲ್ಲಿರುವ ನೀಲಾತೀತ ಕಿರಣಗಳನ್ನು ಹೀರಿಕೊಂಡು ಪ್ರಾಣಿಯ ದೇಹವನ್ನು ಬೆಚ್ಚಗಿಡಬಲ್ಲವು. ರೋಮಗಳು ಜಲ ನಿರೋಧಕವಾಗಿರುವುದರಿಂದ ಈ ಪ್ರಾಣಿ ನೀರಿನಲ್ಲಿದ್ದಾಗ್ಯೂ ನೆನೆಯುವುದಿಲ್ಲ. ಚರ್ಮದ ಕೆಳಗೆ ಸುಮಾರು 10 ಸೆಂಮೀ ದಪ್ಪನೆಯ ಕೊಬ್ಬಿನ ಪದರವಿದೆ. ಈ ಪದರ ಶೀತಗಾಳಿ ಮತ್ತು ಚಳಿಯಿಂದ ರಕ್ಷಿಸುತ್ತದಲ್ಲದೆ ನೀರಿನಲ್ಲಿ ತೇಲಲು ಸಹಾಯಕವಾಗಿದೆ.

ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ಎದೆಬಡಿತ, ಉಸಿರಾಟದ ವೇಗ, ದೇಹದ ಉಷ್ಣತೆ ಮುಂತಾದ ದೇಹ ಚಟುವಟಿಕೆಗಳು ಕೂಡ ಗಣನೀಯವಾಗಿ ಕ್ಷೀಣಿಸುತ್ತವೆ. ಆದ್ದರಿಂದ ಹೆಣ್ಣುಕರಡಿಯು ಆರ್ಕ್ಟಿಕ್ ಸಮುದ್ರದಂಚಿನಲ್ಲಿ ಅಥವಾ ಮಂಜುಗಡ್ಡೆಯಲ್ಲಿ ಗುಂಡಿ ತೋಡಿಕೊಂಡು ಅದರಲ್ಲಿ ವಸಂತಮಾಸ ಬರುವವರೆಗೂ ಕಾಲಕಳೆಯುತ್ತದೆ. ಇದಕ್ಕೆ ಚಳಿಗಾಲದ ನಿದ್ರೆ ಎಂದು ಹೆಸರು. ಗಂಡು ಕರಡಿ ಚಳಿಗಾಲದ ನಿದ್ರೆಗೆ ಶರಣಾಗದೆ ವರ್ಷ ಪೂರ್ತಿ ಬೇಟೆಯ ಹುಡುಕಾಟದಲ್ಲಿ ಅಲೆಯುತ್ತಿರುತ್ತದೆ. ಇದರ ದೇಹದಲ್ಲಿಯ ಚಟುವಟಿಕೆ ಚಳಿಗಾಲದಲ್ಲಿ ಕಡಿಮೆಯಾಗುವುದರಿಂದ ಇದನ್ನು ನಡೆದಾಡುವ ನಿದ್ರೆ ಎನ್ನಲಾಗುತ್ತದೆ. ಇವುಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುತ್ತವೆ. ದಿನವೊಂದಕ್ಕೆ ಸರಾಸರಿ 20 ಕಿಮೀ ಗಳಂತೆ ವರ್ಷಕ್ಕೆ 9000 ಕಿಮೀ ಗಳವರೆಗೆ ಪ್ರಯಾಣಿಸುವುವು.

ಹಿಮಕರಡಿಗಳು ಸರಿ ಸುಮಾರು 30 ಮಿಲಿಯನ್ ವರ್ಷಗಳ ಹಿಂದೆಯೇ ಕಂಡುಬಂದಂತಹವು. ಇತ್ತೀಚಿನ ಗಣತಿಯ ಪ್ರಕಾರ ಇವುಗಳ ಸಂಖ್ಯೆ 16,000 ದಿಂದ 35,000. ಇವು 19 ಗುಂಪುಗಳಲ್ಲಿ ಕಂಡುಬಂದು ಕೆನಡಾ ಒಂದರಲ್ಲೇ ಶೇಕಡಾ 60% ರಷ್ಟು ಇವೆ. ಅಲಾಸ್ಕ ಪ್ರಾಂತದಲ್ಲಿ 3000 ದಿಂದ 5000 ಹಿಮಕರಡಿಗಳಿವೆ. ಆದ್ದರಿಂದಲೇ ಇವುಗಳನ್ನು ರಕ್ಷಿತ ಪ್ರಾಣಿಗಳೆಂದು ಪರಿಗಣಿಸಿಲ್ಲ. ಪರಿಸರ ಮಾಲಿನ್ಯದಿಂದ ಇಂದು ಭೂತಾಪಮಾನ ಹೆಚ್ಚುತ್ತಿದೆ (ಗ್ಲೋಬಲ್ ವಾರ್ಮಿಂಗ್). ಹೆಚ್ಚುತ್ತಿರುವ ತಾಪಮಾನ ಈ ಪ್ರಾಣಿ ಸಂಕುಲಕ್ಕೆ ಮುಳುವಾಗಿ ಪರಿಣಮಿಸಲಿದೆ. ವಿಜ್ಞಾನಿಗಳ ಪ್ರಕಾರ ಹೆಚ್ಚಿದ ತಾಪಮಾನ ಇವುಗಳ ದೇಹತೂಕವನ್ನು ಗಣನೀಯವಾಗಿ ಕಡಿಮೆ ಮಾಡಬಲ್ಲದು. ಕುಂಠಿತ ದೇಹ ಬೆಳವಣಿಗೆ ಅವುಗಳ ಸಂತಾನಾಭಿವೃದ್ಧಿಯ ಮೇಲೆ ನೇರ ಪರಿಣಾಮ ಬೀರುತ್ತದೆ. ದೇಹ ತೂಕದಲ್ಲಿ ಕಡಿಮೆ ಇರುವ ಹೆಣ್ಣು ಧ್ರುವಕರಡಿ ಸಂತಾನಾಭಿವೃದ್ಧಿಯಲ್ಲಿ ತೊಡಗುವುದಿಲ್ಲ. ಒಂದು ವೇಳೆ ತಾಯಿಯಾದರೂ ಅದು ತನ್ನ ಮರಿಗಳಿಗೆ ಹಾಲುಣಿಸಲಾರದು. ಈಗಾಗಲೇ ಇವುಗಳ ಸಂತಾನಾಭಿವೃದ್ಧಿ ಶೇಕಡಾ 15 ರಷ್ಟು ಕಡಿಮೆ ಆಗಿರುವುದನ್ನು ವಿಜ್ಞಾನಿಗಳು ಸಾಬೀತುಪಡಿಸಿದ್ದಾರೆ. ನಾವು ಪ್ಲಾಸ್ಟಿಕ್ ಉತ್ಪಾದನೆಯಲ್ಲಿ ಬಳಸುವ ಪಿಸಿಬಿ ಎಂಬ ವಿಷವಸ್ತು ಧ್ರುವಪ್ರದೇಶವನ್ನು ಸೇರುತ್ತಿರುವುದರಿಂದ ಅವುಗಳ ರೋಗನಿರೋಧಕ ಶಕ್ತಿ ಕುಗ್ಗಿರುವುದಾಗಿ ತಿಳಿದುಬಂದಿದೆ. ಮೂರನೆಯದಾಗಿ ಅಲಾಸ್ಕದಲ್ಲಿ ಸ್ಥಾಪನೆಗೊಂಡಿರುವ ತೈಲ ಮತ್ತು ಅನಿಲ ಸ್ಥಾವರಗಳು ಇವುಗಳ ಚಳಿಗಾಲದ ನಿದ್ರೆಯ ಜಾಗವನ್ನು ಆಕ್ರಮಿಸಿಕೊಂಡಿವೆ. ಈ ಮೂರು ಮನುಷ್ಯನಿರ್ಮಿತ ತೊಂದರೆಯನ್ನು ನಿವಾರಿಸಿದಲ್ಲಿ ಧ್ರುವಕರಡಿಯನ್ನು ಉಳಿಸಬಹುದು. (ವಿ.ಸಿ.)

**ಧ್ರುವ ಪಕ್ಷಿ:** ಪ್ರೋಸೆಲ್ಲರಿಫಾರ್ಮಿಸ್ ಉಪಗಣದ ಪ್ರೋಸಿಲ್ಲಾರಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ಪಕ್ಷಿ (ಫುಲ್ಮರ್). ಫುಲ್ಮರಸ್ ಗ್ಲೇಸಿಯಾಲಿಸ್ ಶಾಸ್ತ್ರೀಯನಾಮ. ಇದರಲ್ಲಿ ಎರಡು ಬಗೆಗಳುಂಟು: 1. ಉತ್ತರ ಧ್ರುವ ಸಮುದ್ರ, ಉತ್ತರ ಅಟ್ಲಾಂಟಿಕ್ ಹಾಗೂ ಪೆಸಿಫಿಕ್ ಸಾಗರದ ಉತ್ತರ ಭಾಗಗಳಲ್ಲಿ ಕಾಣದೊರೆಯುವ ಉತ್ತರ ಧ್ರುವಪಕ್ಷಿ (ನಾರ್ತರ್ನ್ ಫುಲ್ಮರ್). 2. ಅಂಟಾರ್ಕ್‌ಟಿಕ ಮತ್ತು ಸುತ್ತಮುತ್ತಲಿನ ದ್ವೀಪಗಳಲ್ಲಿ ವಾಸಿಸುವ ಬೂದುಬೆಳ್ಳಿ ಧ್ರುವಪಕ್ಷಿ (ಸಿಲ್ವರ್‌ಗ್ರೇ ಫುಲ್ಮರ್). ಎರಡು ಬಗೆಗಳೂ ಸುಮಾರು 45ಸೆಂಮೀ. ಉದ್ದ ಇವೆ. ಮೈಬಣ್ಣ ಉತ್ತರ ಅಟ್ಲಾಂಟಿಕ್ ಧ್ರುವಪಕ್ಷಿಯಲ್ಲಿ ಬೂದುಮಿಶ್ರಿತ ಬೆಳ್ಳಿಯಾದರೆ ಪೆಸಿಫಿಕ್ ಸಾಗರದ ಧ್ರುವಪಕ್ಷಿಯಲ್ಲಿ ಕಂದು. ಮೇಲಿನ ಹಾಗೂ ಕೆಳಗಿನ ಕೊಕ್ಕುಗಳ ಗಡುಸಾದ ಚರ್ಮ ಅನೇಕ ಫಲಕಗಳಿಂದ ರಚಿತವಾಗಿದೆ. ಕೊಕ್ಕು ಕೊಕ್ಕೆಯಾಕಾರದ್ದು. ಮೂಗಿನ ಹೊಳ್ಳೆಗಳು ಉದ್ದುದ್ದವಾಗಿವೆ. ಎರಡು ಬಗೆಯ ಧ್ರುವ ಪಕ್ಷಿಗಳಲ್ಲೂ ನೀಲಿಬಣ್ಣದ ಜಾಲಪಾದಗಳಿವೆ. ಹಾರುವ ಸಾಮರ್ಥ್ಯದಲ್ಲಿ ಶಿಯರ್‌ವಾಟರ್ ಪಕ್ಷಿಯಂತಿವೆಯಾದರೂ ನೋಡಲು ಗಲ್‌ಪಕ್ಷಿಯ ಹಾಗೆ ಕಾಣುವುವು. ಸಾಮಾನ್ಯವಾಗಿ ಸಾಗರದ ತೇಲುಜೀವಿಗಳನ್ನು ತಿಂದು ಬದುಕುವುವು. ಸಂತಾನಾಭಿವೃದ್ಧಿಗೋಸ್ಕರ ಕಲ್ಲುಬಂಡೆ ಮತ್ತು ಕಡಿದಾದ ತೀರಪ್ರದೇಶವನ್ನು ಆರಿಸಿಕೊಳ್ಳುತ್ತವೆ. ಆಗ ಇವುಗಳ ಇಂಪಾದ ಸ್ವರ ಬೆಟ್ಟದ ತುದಿಯಿಂದ ಆಗಾಗ ಕೇಳಿಬರುತ್ತದೆ. ಮೊಟ್ಟೆಯಿಡುವ ಕಾಲದಲ್ಲಿ ಗೂಡುಗಳ ಸನಿಹಕ್ಕೆ ವೈರಿಗಳೇನಾದರೂ ಬಂದರೆ ತಮ್ಮ ಜಠರದಲ್ಲಿ ಉತ್ಪತ್ತಿಯಾಗುವ ಒಂದು ತೆರನ ಕೆಟ್ಟ ವಾಸನೆಯ ತೈಲವನ್ನು ಉಗುಳುತ್ತವೆ. ಇದರಿಂದಾಗಿ ಇವುಗಳ ನೆಲೆ ಅತ್ಯಂತ ದುರ್ವಾಸನೆಯಿಂದ ಕೂಡಿರುವುದುಂಟು. ಈ ಗುಣದಿಂದಾಗಿಯೇ ಇವಕ್ಕೆ ಫುಲ್ಮರ್ ಎಂಬ ಹೆಸರು ಬಂದಿರುವುದು (ಪ್ರಾಚೀನ ನಾರ್ಸ್ ಭಾಷೆಯಲ್ಲಿ ಫುಲ್ಮರ್ ಎಂದರೆ ದುರ್ವಾಸನೆಯ ಗಲ್‌ಹಕ್ಕಿ ಎಂದರ್ಥ). ಹೆಣ್ಣುಪಕ್ಷಿ ಸಾಮಾನ್ಯವಾಗಿ ಒಂದು ಸಲಕ್ಕೆ ಒಂದು ಮೊಟ್ಟೆಯನ್ನು ಇಡುತ್ತದೆ. ಮೊಟ್ಟೆಗೆ ಕಾವು ಕೊಡುವ ಕೆಲಸ ಗಂಡುಪಕ್ಷಿಯದು. ಸುಮಾರು 40–60 ದಿನಗಳ ಅನಂತರ ಮೊಟ್ಟೆಯೊಡೆದು ಮರಿ ಹೊರಬರುತ್ತದೆ. ಈ ಮರಿ ನಿಧಾನವಾಗಿ ಬೆಳೆದು 6–8 ವಾರಗಳ ಅನಂತರ ಗೂಡನ್ನು ಬಿಟ್ಟು ಹೊರಗೆ ಬರುತ್ತದೆ. ಧ್ರುವಪಕ್ಷಿಯನ್ನು ಬಿಟ್ಟರೆ ಬೇರೆ ಯಾವ ಪಕ್ಷಿಯೂ ತನ್ನ ಇಡೀ ಜೀವನವನ್ನು ಸಮುದ್ರತೀರದಲ್ಲಿ ಕಳೆಯುವುದಿಲ್ಲ. (ಎಂ.ಎನ್.ವಿ.)

**ಧ್ವನಿ (ಧ್ವನಿವಿಜ್ಞಾನ):** ಮಾನವ ಹಾಗೂ ಅನೇಕ ಪ್ರಾಣಿಗಳ ಬಾಯಿ, ಮೂಗು, ಗಂಟಲುಗಳಿಂದ ಹೊರ ಹೊರಡುವ ಶಬ್ದ (ವಾಯ್ಸ್). ವ್ಯಕ್ತಿ ತನ್ನ ಅಭಿಪ್ರಾಯವನ್ನು ಬೇರೆಯವರಿಗೆ ಮಾತಿನ ಮೂಲಕವೂ ವಿವಿಧ ನಾದಗಳ (ಸೌಂಡ್) ಮೂಲಕವೂ ತಿಳಿಸಲು ನೆರವಾಗುವ ಮಾಧ್ಯಮವಿದು. ಅಭಿಪ್ರಾಯ ತಿಳಿಸಬೇಕೆಂಬ ಸಂಕಲ್ಪ ವ್ಯಕ್ತಿಯ ಮನಸ್ಸಿನಲ್ಲಿ ಉಂಟಾದೊಡನೆ ಘುಪ್ಪುಸಗಳಿಂದ ವಾಯು ಹೊರ ಬಂದು ಎದೆ ಕುತ್ತಿಗೆಗಳಲ್ಲಿರುವ ಶ್ವಾಸಮಾರ್ಗಗಳಲ್ಲಿ ಸಂಚರಿಸುತ್ತ ಶಬ್ದವನ್ನು ಉಂಟುಮಾಡುತ್ತದೆ. ಬಾಯಿ, ಮೂಗು, ಗಂಟಲು ಮುಂತಾದ ಪ್ರದೇಶಗಳಲ್ಲಿ ಈ ಶಬ್ದ ವ್ಯತ್ಯಸ್ತಗೊಂಡು ವಿವಿಧ ಧ್ವನಿಗಳಾಗುತ್ತವೆ. ಇವನ್ನು ಅರ್ಥವತ್ತಾಗಿ ಬಳಸುವುದೆ ಭಾಷೆ. ಧ್ವನಿಯನ್ನು ಗುರುತಿಸಲು ಅರ್ಥಮಾಡಿಕೊಳ್ಳಲು ಶ್ರವಣ ಸಾಮರ್ಥ್ಯ ಅಗತ್ಯ. ಕಿವಿಯಿಂದ ಕೇಳಿ, ಧ್ವನಿಯನ್ನು ಗುರುತಿಸಿ ಅರ್ಥಮಾಡಿಕೊಂಡರೆ ಎಳೆಯ ವ್ಯಕ್ತಿ ತಾನೂ ಅದರಂತೆ ಅರ್ಥವತ್ತಾದ ಧ್ವನಿ ಹೊರಡಿಸುವುದನ್ನು ಕಲಿಯಬಹುದು. ಮಕ್ಕಳು ಈ ತೆರನಾಗಿ ಮಾತು ಕಲಿಯುವುದು. ಹುಟ್ಟು ಕಿವುಡಾದ ಇಲ್ಲವೆ ಎಳೆವಯಸ್ಸಿನಲ್ಲೇ ಪೂರ್ತಿ ಕಿವುಡಾದ ಮಕ್ಕಳು ಈ ಕಾರಣದಿಂದಲೆ ಮಾತಾಡುವುದನ್ನು ಕಲಿಯಲಾರದೆ ಮೂಕರಾಗಿರುವುದು ಸಹಜ. ಇವರು ಧ್ವನಿಯನ್ನು ಹೊರಡಿಸಬಲ್ಲರೆ ವಿನಾ ಅದನ್ನು ಅರ್ಥವತ್ತಾದ ಮಾತಾಗಿ ಬಳಸಲಾರರು.

ಧ್ವನಿ ಹೊರಡಿಸುವಿಕೆಯಲ್ಲಿ ಮೊದಲ ಘಟನೆ ಮನಸ್ಸಿನಲ್ಲಿ ಸೂಕ್ಷ್ಮವಾಗಿ ಸಂಕಲ್ಪ ಮೂಡುವುದು. ಎದೆ ಮತ್ತು ಕಂಠ ಭಾಗಗಳಲ್ಲಿ ಅತ್ಯಲ್ಪ ಕಾಲ ಮುಂದುವರಿಯುತ್ತ ಶಬ್ದವಾಗಿ ಪ್ರಕಟವಾಗುವುದು ಎರಡನೆಯ ಹಂತ. ಕೊನೆಗೆ ಸ್ಥೂಲರೂಪದಿಂದ ಧ್ವನಿಯಾಗಿ, ಮಾತಾಗಿ ಮುಖದಿಂದ ಹೊರಟು ವಾತಾವರಣದಲ್ಲಿ ಅಲೆಅಲೆಯಾಗಿ ಪಸರಿಸುತ್ತ ಕಿವಿಗೆ ತಾಕಿ ಗ್ರಹಿಸಲ್ಪಡುತ್ತದೆ. ಈ ಶಬ್ದಕ್ಕೆ ವೈಖರಿ ಎಂದು ಹೆಸರು.

ಧ್ವನಿ ಉತ್ಪಾದನೆಯಲ್ಲಿ ಭಾಗವಹಿಸುವ ಪ್ರಮುಖ ಅಂಗಗಳೆಂದರೆ ಫುಪ್ಫುಸಗಳು ಹಾಗೂ ಶ್ವಾಸಮಾರ್ಗದ ಅಂಗಗಳು. ಗೋಮಾಳೆಯಲ್ಲಿರುವ ಧ್ವನಿಪೆಟ್ಟಿಗೆ ಇವುಗಳ ಪೈಕಿ ಒಂದು. ವಾಸ್ತವವಾಗಿ ಶಬ್ದ ಹುಟ್ಟುವುದು ಇಲ್ಲೆ. ಧ್ವನಿಪೆಟ್ಟಿಗೆ ಶ್ವಾಸನಾಳದ (ಟ್ರೇಕಿಯ, ವಿನ್ಡ್‌ಪೈಪ್) ಪ್ರಾರಂಭ ಭಾಗದಲ್ಲಿರುವ ಹಿಗ್ಗಲಿಕೆ. ಇದು ಶಬ್ದೋತ್ಪಾದನೆ ಮಾಡುವ ಅಂಗ ಮಾತ್ರವಲ್ಲದೆ ಉಸಿರಿನ ವಾಯು ಹೊರತು ಶ್ವಾಸನಾಳದೊಳಕ್ಕೆ ಮತ್ತೇನೂ ಹೋಗದಂತೆ ರಕ್ಷಿಸುವ ಚಮತ್ಕಾರ ರಚನೆಯೂ ಹೌದು. ಮೃದ್ವಸ್ಥಿಗಳ ಆಧಾರದಿಂದ ರಚಿತವಾಗಿರುವ ಈ ಪೆಟ್ಟಿಗೆಯಲ್ಲಿ ಎಳೆದು ಕಟ್ಟಿದಂತಿರುವ ಎರಡು ತಂತುಯುಕ್ತ ಹಾಳೆಗಳು (ವೋಕಲ್ ಕಾರ್ಡ್ಸ್) ಇವೆ. ಧ್ವನಿಪೆಟ್ಟಿಗೆಯ ಒಳಗೆ ಹಾಗೂ ಮೇಲೆ ಇರುವ ಸ್ನಾಯುಗಳಿಂದ ಈ ಹಾಳೆಗಳು ಬಿಗಿ ಸಡಿಲಗೊಳ್ಳಬಲ್ಲವು. ಉಸಿರಾಡುವಾಗ ಇವು ಸಡಿಲವಾಗಿದ್ದು ಆಚೀಚೆ ಕಡೆ ಹಾಳೆಗಳ ಅಂಚುಗಳ ನಡುವೆ ಸಂದುಬಿಟ್ಟು ಮೂಗು ಬಾಯಿಗಳಿಂದ ವಾಯು ಶ್ವಾಸನಾಳಕ್ಕೆ ಹೋಗಲು ಅಲ್ಲಿಂದ ವಾಪಸಾಗಲು ಅಡಚಣೆ ಇಲ್ಲದಂತೆ ಇರುತ್ತದೆ. ಆದರೆ ನುಂಗಿದಾಗ ಸ್ನಾಯುಗಳ ಅನೈಚ್ಛಿಕ ಸಂಕೋಚನದಿಂದ ಧ್ವನಿಹಾಳೆಗಳು ಬಿಗಿಯಾಗಿ ಈ ಸಂದು ಪೂರ್ಣವಾಗಿ ಮುಚ್ಚಿಕೊಂಡು ಆಹಾರ ಪಾನೀಯ ಮುಂತಾದ ಘನದ್ರವ ವಸ್ತುಗಳು ಶ್ವಾಸನಾಳದೊಳಕ್ಕೆ ಹೋಗದಂತೆ ತಡೆಯುತ್ತದೆ. ಶಬ್ದೋತ್ಪಾದನೆಯ ಕಾಲದಲ್ಲಿಯೂ ಈ ಹಾಳೆಗಳು ಬಿಗಿಯಾಗಿದ್ದು ಅವುಗಳ ಅಂಚುಗಳ ನಡುವೆ ಬಲು ಇಕ್ಕಟ್ಟಾದ ಸಂದು ಇರುವುದು. ತಕ್ಕಷ್ಟು ಪ್ರಬಲವಾದ ಒತ್ತಡವಿದ್ದರೆ ಮಾತ್ರ ವಾಯು ಈ ಸಂದಿನ ಮೂಲಕ ಹೊರಕ್ಕಾಗಲಿ ಒಳಕ್ಕಾಗಲಿ, ಅಂದರೆ ಪ್ರಬಲ ನಿಶ್ವಾಸ, ಉಚ್ಛ್ವಾಸಗಳಿಂದ ಸಂಚರಿಸಬಹುದು. ಹಾಗೆ ಬಲವಂತದಿಂದ ವಾಯು ಒಳಕ್ಕಾಗಲಿ ಹೊರಕ್ಕಾಗಲಿ ಕ್ರಮಿಸುವಾಗ ಧ್ವನಿಹಾಳೆಗಳು ಕಂಪಿಸುತ್ತ ಶಬ್ದವನ್ನು ಉಂಟುಮಾಡುತ್ತವೆ. ಮಾತಾಡುವಾಗಲು ಅನ್ಯ ಕಾಲಗಳಲ್ಲು ಇಲ್ಲಿ ಉಂಟಾಗುವ ಶಬ್ದಗಳು ಬೇರೆ ಬೇರೆಯೆ. ಬಹುತೇಕವಾಗಿ ಪ್ರಪಂಚದ ಪ್ರಚಲಿತ ಭಾಷೆಗಳನ್ನು ಆಡುವಾಗ ನಿಶ್ವಾಸದ ಉಸಿರಿನಿಂದಲೆ ಧ್ವನಿಹಾಳೆಗಳ ಕಂಪನವನ್ನು ಉಂಟುಮಾಡಿ ಶಬ್ದವನ್ನು ಹೊರಡಿಸುವುದಾಗಿದೆ. ಉಸಿರೆಳೆದುಕೊಳ್ಳುತ್ತ ಶಬ್ದೋತ್ಪಾದನೆ ಮಾಡಿ ಮಾತಾಡುವುದು ಬಲು ಅಪರೂಪ. ಕೆಲವು ಆದಿವಾಸಿ ಜನಾಂಗಗಳ ಭಾಷೆ ಹೀಗಿದೆ ಎಂದು ತಿಳಿದಿದೆ. ಉಸಿರಿನ ಸಂಚಾರಭೇದದಿಂದ ಮಂದ್ರ, ಮಧ್ಯಮ ಮತ್ತು ತಾರ ಎಂಬ ಮೂರು ಬಗೆಯ ಶಬ್ದಗಳು ಉಂಟಾಗುತ್ತದೆ. ಉಸಿರಿನ ಬಲ ಇನ್ನೂ ಸ್ವಲ್ಪ ಹೆಚ್ಚಾಗಿದ್ದು ಕಂಠಪ್ರದೇಶದಲ್ಲಿ ಉಚ್ಚರಿತವಾಗುವಂತಿದ್ದರೆ ಅದು ಮಧ್ಯಮ. ಎದೆಯಲ್ಲೆ ತಗ್ಗಿ ಉಚ್ಚರಿತವಾದ ಶಬ್ದ ಮೃದು ಅಥವಾ ಮಂದ್ರ. ಉಸಿರು ಅಧಿಕ ಬಲದ್ದಾಗಿ ಉಚ್ಚಾರಣೆಯಲ್ಲಿ ತಲೆಯ ಅಂಗಗಳೂ ಭಾಗವಹಿಸಿದಾಗ ಹೊರಡುವ ಶಬ್ದ ಕರ್ಕಶ ಅಥವಾ ತಾರ.

ಧ್ವನಿಪೆಟ್ಟಿಗೆಯಿಂದ ಹೊರಟ ಶಬ್ದ ಮೂಗುಬಾಯಿಗಳಿಂದ ಹೊರಬಂದಾಗ ಅದು ಮಾನವಸಹಜವಾದ ಧ್ವನಿ ಎಂದೂ ಮಾನವನ ಗಂಟಲು ಮೂಗು ಬಾಯಿಗಳಿಂದಲೇ ಹೊರಹೊರಟ ಶಬ್ದವೆಂದೂ ಗುರುತಿಸಬಹುದು. ಧ್ವನಿಯಲ್ಲಿ ನಾದ, ಶ್ವಾಸ ಮತ್ತು ಹ ಕಾರವೆಂದು ಮೂರು ಬಗೆ. ಶಬ್ದೋತ್ಪಾದನೆಯಲ್ಲಿ ನಿರತವಾದ ಕಂಠದ ಅಂಗಗಳು ಸಂಕುಚಿತವಗಿ ಧ್ವನಿ ಹೊರಟರೆ ಅದು ನಾದ. ಕಂಠದ ಅಂಗಗಳು ವಿಕಾಸವಾಗಿ ಸಡಿಲಗೊಂಡು ಧ್ವನಿ ಹೊರಟರೆ ಅದು ಶ್ವಾಸ. ಕಂಠದ ಅಂಗಗಳು ಬಿಗಿತುಕೊಳ್ಳದೆ ಸಡಿಲಗೊಳ್ಳದೆ ಮಧ್ಯಸ್ಥಿತಿಯಲ್ಲಿ ಇದ್ದರೆ ಹೊರಡುವ ಧ್ವನಿಗೆ ಹ ಕಾರವೆಂದು ಹೆಸರು. ನಾದ ಶ್ವಾಸ ಮತ್ತು ಹ ಕಾರ ಧ್ವನಿಗಳು ತಾಲು (ಪ್ಯಾಲೆಟ್) ನಾಲಿಗೆತುಟಿಗಳ ಐಚ್ಛಿಕಚಲನಗಳಿಂದ ಸ್ವರ ಮತ್ತು ವ್ಯಂಜನ ವರ್ಣಗಳಾಗಿ ಪರಿವರ್ತನೆ ಆಗುತ್ತವೆ. ಸ್ವರವರ್ಣಗಳು ಹಾಗೂ ಘೋಷವರ್ಣಗಳ ಉಚ್ಚಾರಣೆ ಆಗಬೇಕಾದಾಗ ನಾದಧ್ವನಿಯೂ, ಅಘೋಷವರ್ಣಗಳ ಉಚ್ಚಾರಣೆ ಆಗಬೇಕಾದಾಗ ಶ್ವಾಸಧ್ವನಿ ಹಾಗು ಸ್ವಯಂ ಹಕಾರ ಮತ್ತು ವರ್ಗೀಯ ವ್ಯಂಜನದ ನಾಲ್ಕನೆಯ ವರ್ಣಗಳ ಉಚ್ಚಾರಣೆ ಆಗಬೇಕಾದಾಗ ಹಕಾರ ಧ್ವನಿಯೂ ಬಳಸಲ್ಪಡುತ್ತವೆ. ವಾಸ್ತವವಾಗಿ ಧ್ವನಿ ಇಚ್ಛೆಪಟ್ಟ ವರ್ಣವಾಗುವುದು ಸ್ಥಾನ, ಕರಣ, ಪ್ರಯತ್ನ ಮತ್ತು ಕಾಲಗಳೆಂಬ ನಾಲ್ಕು ಬಗೆಯ ಭೇದೋಚ್ಚಾರಣೆಗಳಿಂದ ಸಾಧ್ಯವಾಗಿದೆ. ಉದಾಹರಣೆಗಳು ಇವು–ಕೇವಲ ಹ ಕಾರ ಹೊರಡಿಸುವುದು ಕಂಠದಲ್ಲಿ; ಆದರೆ ಸಂತಸ್ಥ ಹಾಗೂ ಪಂಚಮ ವರ್ಣಸಂಯುಕ್ತವಾದ ಹ ಕಾರವನ್ನು ಹೊರಡಿಸುವುದು ಎದೆಯಲ್ಲಿ. ಹಾಗೆಯೇ ಚ ವರ್ಗದ (ತಾಲವ್ಯ) ಸ್ಥಾನ ತಾಲು, ತವರ್ಗದ (ದಂತ್ಯ) ಸ್ಥಾನ ದಂತಮೂಲದ ಅಧೋಭಾಗ, ಪ ವರ್ಗದ (ಓಷ್ಠ್ಯ) ಸ್ಥಾನ ತುಟಿ ಇತ್ಯಾದಿ. ಇಂಥ ಸ್ಥಾನಗಳಲ್ಲಿ ಸಂಬಂಧಪಟ್ಟ ಅಂಗಗಳು ಪಾಲುಗೊಳ್ಳುವಂತೆ ಮಾಡುವುದು ಕರಣ. ಉಚ್ಚಾರಣೆಗೆ ಅಗತ್ಯವಾದ ಪ್ರಯತ್ನ ಭೇದದಿಂದ ವರ್ಗೀಯ ವ್ಯಂಜನಗಳ ಅಲ್ಪಪ್ರಾಣ ಮಹಾಪ್ರಾಣಗಳಾಗುತ್ತವೆ. ಉಚ್ಚಾರಣೆಯ ಕಾಲ ವ್ಯತ್ಯಾಸದಿಂದ ಹ್ರಸ್ವದೀರ್ಘ ವರ್ಣಗಳ ಉಚ್ಚಾರಣೆ ಸಾಧ್ಯವಾಗಿದೆ. ರೂಪ ಮತ್ತು ಸ್ವರವೆಂಬ ಇನ್ನೆರಡು ಯತ್ನಗಳು ಧ್ವನಿಬಳಕೆಯಲ್ಲಿ ಉಂಟು. ವರ್ಣಗಳನ್ನು ಅರ್ಥಾತ್ಮಕವಾಗಿ ಸೇರಿಸಿ ಒಂದು ರೂಪಕೊಟ್ಟು ಉಚ್ಚರಿಸುವುದು ಪದ. ಯೋಜಿತ ಪದಸಮುಚ್ಚಯ ವಾಕ್ಯ. ವಾಕ್ಯವೇ ವ್ಯಕ್ತಿಯ ಅಭಿಪ್ರಾಯವನ್ನು ನಿರ್ದಿಷ್ಟವಾಗಿ ತಿಳಿಸುವ ಸಾಧನ. ಧ್ವನಿ, ವರ್ಣ, ಪದ ವಾಕ್ಯಗಳನ್ನು ಸರಿಗಮಪಧನಿ ಎಂಬ ಏಳು ಸ್ವರಗಳಲ್ಲಿ ಪ್ರಯೋಗಿಸಿ ಮಾನವ ಸಂಗೀತವನ್ನು ಸೃಷ್ಟಿಸಿಕೊಂಡಿರುವುದಾಗಿದೆ. ಆದರೆ ವಾಕ್ಯ ಸಂಗೀತಗಳ ಆಧಾರವಾದ ವರ್ಣಗಳನ್ನು ಅವುಗಳ ಸ್ಥಾನಕರಣಗಳನ್ನು ಬದಲಿಸಿ ಬೇರೆ ರೀತಿಯಲ್ಲಿ ಉಚ್ಚರಿಸಿದಲ್ಲಿ(ಅನೇಕ ವೇಳೆ ಇದು ಅಸಾಧ್ಯ) ಬೇರೆ ಬೇರೆ ಅರ್ಥಗಳು ಉಂಟಾಗಬಹುದೆಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ***

# ನ

**ನಂಗು:** ಚಪ್ಪಟೆ ಮೀನುಗಳ ಗುಂಪಿಗೆ (ಫ್ಲಾಟ್ ಫಿಷಸ್) ಸೇರಿದ ಒಂದು ಬಗೆಯ ಮೀನು (ಸೋಲ್). ಹ್ಯಾಲಿಬಟ್, ಪ್ಲೇಸ್, ಫ್ಲೌಂಡರ್, ಟರ್ಬಟ್, ಡ್ಯಾಬ್ಸ್ ಮುಂತಾದ ಮೀನುಗಳಿಗೆ ಹತ್ತಿರ ಸಂಬಂಧಿ. ಆಸ್ಟಿಕ್ತಿಯೀಸ್ ವರ್ಗ, ಹೆಟಿರೊಸೋಮೇಟ (ಫ್ಲೂರೊನೆಕ್ಟಿಫಾರ್ಮಿಸ್) ಗಣ. ಸೋಲೀಯಿಡೆ ಮತ್ತು ಸೈನೊಗ್ಲಾಸಿಡೆ ಕುಟುಂಬಗಳಿಗೆ ಸೇರಿದೆ. ಸೋಲಿಯ ಓವೇಟ, ಸೋಲಿಯ ಸೋಲಿಯ, ಸೈನೊಗ್ಲಾಸಸ್ ಸೆಮಿಫ್ಯಾಸಿಯೇಟಸ್ ಮುಂತಾದ ಹಲವಾರು ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಇವುಗಳಲ್ಲಿ ಸೋಲಿಯ ಒವೇಟ ಎಂಬುದು ಭಾರತದ ಕೇರಳ ಕರಾವಳಿ ಪ್ರದೇಶಗಳಲ್ಲೂ ಸೈನೊಗ್ಲಾಸಸ್ ಜಾತಿಯ ಕೆಲವು ಪ್ರಭೇದಗಳು ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ಪ್ರದೇಶಗಳ ಕಲರಾವಳಿಗಳಲ್ಲೂ ಕಾಣದೊರೆಯುವುವು. ಸೋಲಿಯ ಸೋಲಿಯ ಪ್ರಭೇದ ಯೂರೋಪಿನಲ್ಲಿ ಹೇರಳ. ಅಮೆರಿಕದ ಅಟ್ಲಾಂಟಿಕ್ ಕರಾವಳಿಯಲ್ಲೂ ಒಂದು ತೆರನ ನಂಗುಮೀನು ಉಂಟು. ಹ್ಯಾಲಿಬಟ್ ಮೀನಿನಂತೆಯೇ ನಂಗು ಕೂಡ ತಟ್ಟೆಯಂತೆ ಚಪ್ಪಟೆಯಾಗಿದ್ದು ಸಾಗರತಲದ ಮಣ್ಣಿನ ಮೇಲೆ ವಾಸಿಸುತ್ತದೆ. ಹಗಲು ಹೊತ್ತು ಹುದುಗಿಕೊಂಡಿರುವ ಇದು ರಾತ್ರಿ ವೇಳೆ ತನ್ನ ಆಹಾರವಾದ ಹುಳುಗಳು, ಶ್ರಿಂಪ್‌ಗಳು ಮುಂತಾದುವನ್ನು ಅರಸಿಕೊಂಡು ತೆವಳುತ್ತಾ ಅಲೆದಾಡುತ್ತದೆ.

ನಂಗುವಿನ ದೇಹ ಚಪ್ಪಟೆಯಾಗಿರುವುದರಿಂದ ಇದರ ಬಾಹ್ಯರೂಪದಲ್ಲಿ ಹಲವಾರು ವಿಚಿತ್ರಗಳನ್ನು ಕಾಣಬಹುದು. ದೇಹದ ಒಂದು ಪಾರ್ಶ್ವದಲ್ಲಿ ಮಾತ್ರ ಕಡುಬಣ್ಣದ ವರ್ಣಕಗಳು ಇವೆ. ಸಹಾ ಮಣ್ಣಿನ ಸಂಪರ್ಕದಲ್ಲಿರುವ ಇನ್ನೊಂದು ಪಾರ್ಶ್ವ ವರ್ಣರಹಿತ. ಕಣ್ಣುಗಳೆರಡೂ ದೇಹದ ಮೇಲು ಭಾಗದಲ್ಲೇ ಸ್ಥಿತವಾಗಿವೆ. ಬಾಯಿ ತಿರುಚಿಕೊಂಡಂತಿದೆ. ಬೆನ್ನು, ಗುದ ಹಾಗೂ ಉದರ ಭಾಗಗಳ ಈಜುರೆಕ್ಕೆಗಳೆಲ್ಲ ಪರಸ್ಪರ ಕೂಡಿಕೊಂಡು ದೇಹದ ಸುತ್ತ ಕುಚ್ಚಿನಂತೆ ಹರಡಿಕೊಂಡಿವೆ. ತಲೆಯ ಭಾಗದಲ್ಲಿ ಮಾತ್ರ ತಳದ ಈಜುರೆಕ್ಕೆಯ ಕೆಲವು ಕಡ್ಡಿಗಳು ತಂತುಗಳ ರೂಪದ ಸ್ಪರ್ಶೇಂದ್ರಿಯಗಳಾಗಿ ಮಾರ್ಪಾಡುಗೊಂಡಿವೆ. ಹೀಗೆ ನಂಗುವಿನ ರೂಪ ವಿಚಿತ್ರ ತೆರನಾಗಿರುವುದು ವಯಸ್ಕ ಜೀವಿಯಲ್ಲಿ ಮಾತ್ರ.

ಮೊಟ್ಟೆಯೊಡೆದು ಮರಿಮೀನು ಹೊರಬಂದಾಗ ಯಾವುದೇ ಇತರ ಜಾತಿಯ ಮೀನಿನ ಮರಿಯಂತೆಯೇ ದೇಹ ದ್ವಿಪಾರ್ಶ ಸಮಾಂಗತೆಯನ್ನು ತೋರುತ್ತದೆ. ಇವು ನೀರಿನ ಮೇಲ್ಮೈ ಬಳಿ ನೇರವಾಗಿ ಈಜಿಕೊಂಡು ಚಲಿಸುತ್ತವೆ. ಆದರೆ ಮರಿಯ ಮುಂದಿನ ಬೆಳವಣಿಗೆಯ ಕಾಲದಲ್ಲಿ ಒಂದು ಕಣ್ಣಿನ ಮೇಲಿರುವ ಮೃದ್ವಸ್ಥಿ ಇಂಗಿ ಹೋಗಿ ಆ ಕಣ್ಣು ಇನ್ನೊಂದು ಪಾರ್ಶ್ವದೆಡೆಗೆ ಚಲಿಸಲು ಆರಂಭಿಸುತ್ತದೆ. ತನ್ನ ಮೂಲ ಸ್ಥಾನದಿಂದ ತಲೆಯನ್ನು ಬಳಸಿ ಹೊರಟ ಈ ಕಣ್ಣು ಕ್ರಮೇಣ ಇನ್ನೊಂದು ಕಣ್ಣಿನ ಸನಿಹಕ್ಕೆ ಬಂದು ನೆಲೆಸುತ್ತದೆ. ನೀರಿನ ಪಾತಳಿಯಲ್ಲೇ ಈಜುತ್ತಿದ್ದ ಎಳೆಯ ಮೀನು ಈಗ ಕಡಲ ತಳಕ್ಕೆ ಮುಳುಗಿ ತನ್ನ ಒಂದು ಪಕ್ಕದ ಮೇಲೆ ವಿರಮಿಸಿ ಚಪ್ಪಟೆಯಾಗುವುದು. ನಂಗುವಿನ ದೇಹದ ಮೇಲ್ಭಾಗದಲ್ಲಿರುವ ಭುಜದ ಈಜುರೆಕ್ಕೆಯ ಮೇಲೆ ಕಡುನೀಲಿಯ ಕಲೆಯೊಂದಿದೆ. ಗಾಬರಿಗೊಂಡಾಗ ಮೀನು ಮರಳಿನಲ್ಲಿ ಹೋಗಿ ಹುದುಗಿಕೊಂಡು ತನ್ನ ಭುಜದ ಈಜುರೆಕ್ಕೆಯನ್ನು ಸಣ್ಣ ಬಾವುಟದಂತೆ ಎತ್ತಿಹಿಡಿಯುವುದು. ಆಹಾರಯೋಗ್ಯವಲ್ಲದ ವೀವರ್ ಮೀನಿನ ಬೆನ್ನುಭಾಗದ ಈಜುರೆಕ್ಕೆಯನ್ನು ಇದು ಹೋಲುವುದರಿಂದ ಶತ್ರುಗಳು ನಂಗುವನ್ನು ಆಕ್ರಮಿಸುವುದಿಲ್ಲ.

ನಂಗು ಬಹಳ ರುಚಿಕರವಾದ ಮೀನೆಂದು ಹೆಸರುವಾಸಿಯಾಗಿದೆ. ಸತ್ತ ಮೂರು ದಿನಗಳ ಬಳಿಕ ಇದಕ್ಕೆ ಒಂದು ಬಗೆಯ ರುಚಿ ಬರುತ್ತದೆ. ಕೊಳೆಯುವಿಕೆಯಿಂದ ಉತ್ಪತ್ತಿಯಾಗುವ ಒಂದು ರೀತಿಯ ರಾಸಾಯನಿಕ ಪದಾರ್ಥ ಈ ರುಚಿಗೆ ಕಾರಣ ಎನ್ನಲಾಗಿದೆ. ಹೀಗಾಗಿ ಇದೊಂದು ಅತ್ಯಮೂಲ್ಯವಾದ ಆಹಾರ ಮೀನು. ಇದು ಸು. 60 ಸೆಂಮೀ ಉದ್ದ ಬೆಳೆಯುತ್ತದೆ. (ಎಚ್.ಎಚ್.ಎಸ್.)

**ನಂದಿನ:** ಮುಚ್ಚಲು ಜಾತಿಗೆ ಸೇರಿದ ಮೀನು. ಲೇಬಿಯೊ ನಂದಿನ ಇದರ ಶಾಸ್ತ್ರೀಯ ಹೆಸರು. ಬಂಗಾಳ, ಅಸ್ಸಾಮ್, ಬರ್ಮಗಳಲ್ಲಿ ಕಾಣದೊರೆಯುತ್ತದೆ. ಬಹಳ ದಪ್ಪ ಬಗೆಯ ಮೀನಿದು. ಬೆನ್ನಿನ ಮತ್ತು ಉದರದ ಎರಡು ಅಂಚುಗಳೂ ಉಬ್ಬಿಕೊಂಡಿವೆ. ತುಟಿಗಳು ದಪ್ಪನಾಗಿದ್ದು ಛಿದ್ರಗೊಂಡಿವೆ. ಮೀಸೆಗಳು ಚಿಕ್ಕವು. ಬಾಲದರೆಕ್ಕೆ ಬಹಳ ಆಳವಾಗಿ ಇಬ್ಭಾಗವಾಗಿದೆ. ಪಾರ್ಶ್ವದ ರೇಖೆಯ ಮೇಲೆ 42–44 ಹುರುಪೆಗಳಿವೆ. ಇದರ ಬಣ್ಣ ಕಪ್ಪುಮಿಶ್ರಿತ ಹಸಿರು. ಉದರ ಭಾಗದಲ್ಲಿ ಕೊಂಚ ತಿಳಿಯಾಗಿದೆ. (ಬಿ.ಎನ್.)

**ನಕ್ಷತ್ರ ಮೀನು:** ಆಸ್ಟೆರಾಯ್ಡಿಯ ವರ್ಗಕ್ಕೆ ಸೇರಿದ ಹಲವಾರು ಬಗೆಯ ಸಾಗರವಾಸಿ ಕಂಟಕಚರ್ಮಿಗಳ ಸಾಮಾನ್ಯ ಹೆಸರು (ಸ್ಟಾರ್‌ಫಿಶ್). ಈ ಮೀನುಗಳು ಸಮುದ್ರದಲ್ಲಿ ಮರಳುಕಲ್ಲಿರುವ ಪ್ರದೇಶಗಳಲ್ಲಿ ಅಡಗಿ ಜೀವಿಸುತ್ತವೆ. ಪ್ರೌಢಜೀವಿಯ ದೇಹಕ್ಕೆ ಚಪ್ಪಟೆ ನಕ್ಷತ್ರಾಕಾರವಿದೆ. ದೇಹದ ಮಧ್ಯಭಾಗ ಚಪ್ಪಟೆಯಾಗಿದ್ದು ಅದರಿಂದ ಸುತ್ತ ಕಿರಣಗಳಂತೆ ಹರಡಿರುವ ಐದು ತೋಳುಗಳಿವೆ. ಇವು ಬುಡದಲ್ಲಿ ಅಗಲವಾಗಿದ್ದು ಕ್ರಮೇಣ ತುದಿಯ ಕಡೆಗೆ ಕಿರಿದಾಗಿರುವುವು. ಸಾಧಾರಣವಾಗಿ ತೋಳುಗಳು ಚಪ್ಪಟೆಯಾಗಿಯೂ ಒಂದೇ ಸಮವಾಗಿಯೂ ಇರುತ್ತವೆ. ಕೆಲವು ಪ್ರಭೇದಗಳಲ್ಲಿ 6, 7, 8 ಅಥವಾ ಹೆಚ್ಚಿನ ಸಂಖ್ಯೆಯ ತೋಳುಗಳಿರುವುದುಂಟು. ಆದರೆ ಈ ಸಂಖ್ಯೆ ನಲವತ್ತನ್ನು ಮೀರುವುದಿಲ್ಲ. ಆಸ್ಟೇರಿಯಸ್‌ನಲ್ಲಿರುವಂತೆ ತೋಳುಗಳು ಉದ್ದವಾಗಿರಬಹುದು. ಕೆಲವೊಮ್ಮೆ ದುಂಡಾಗಿರುವುದುಂಟು. ತೋಳುಗಳು ಒಟ್ಟುಗೂಡಿ ದೇಹಾಕಾರ ಪಂಚಕೋನದಂತೆ ಇರಬಹುದು. ಈ ಐದು ಕೋನಗಳೇ ತೋಳುಗಳ ಸಂಖ್ಯೆಯನ್ನು ಸೂಚಿಸುತ್ತವೆ. ಎರಡು ತೋಳುಗಳ ಮಧ್ಯೆ ಇರುವ ಪ್ರದೇಶಕ್ಕೆ ತ್ರಿಜ್ಯಮಧ್ಯಭಾಗ ಎಂದು ಹೆಸರು.

ಒಂದೊಂದು ತೋಳಿನಲ್ಲಿಯೂ ಪ್ರಾಣಿಯ ಮುಖ್ಯಾಂಗಗಳು ಒಂದೇ ಸಮನಾಗಿ ಹರಡಿರುವುವು. ಈ ಅಂಗಗಳ ಕೇಂದ್ರಭಾಗ ತಟ್ಟೆಯಂತಿರುವ ಮಧ್ಯಭಾಗದಲ್ಲಿರುವುದು. ಸಮುದ್ರದ ಮರಳಿನೊಂದಿಗೆ ಸಂಪರ್ಕವಿರುವ ಭಾಗಕ್ಕೆ ಅಧೋಭಾಗವೆಂದೂ ಮೇಲೆ ಕಾಣುವ ಭಾಗಕ್ಕೆ ಊರ್ಧ್ವಭಾಗವೆಂದೂ ಹೆಸರು. ಅಧೋಭಾಗದ ಮಧ್ಯೆ ಬಾಯಿ ಉಂಟು. ಕಿರಿಅಗಲದ ತೋಡುಗಳು ಬಾಯಿಯಿಂದ ಹೊರಟು ತೋಳುಗಳ ತುದಿಯವರೆಗೆ ಹರಿಯುವುವು. ಈ ತೋಡುಗಳಿಗೆ ಆಂಬುಲ್ಯಾಕ್ರಲ್ ತೋಡುಗಳೆಂದು ಹೆಸರು. ತೋಳಿನ ತುದಿಯಲ್ಲಿ ಒಂದು ಕೆಂಪು ಚುಕ್ಕೆಯಿದೆ. ಈ ಚುಕ್ಕೆ ಬೆಳಕಿಗೆ ಸಂವೇದನಶೀಲವೇ ಎಂಬುದು ಖಚಿತವಾಗಿ ತಿಳಿದಿಲ್ಲ. ತೋಳುಗಳ ತುದಿಯಲ್ಲಿ ತೆಳುವಾದ ಕೋಡುಗಳಿವೆ.

ಆಂಬುಲ್ಯಾಕ್ರಲ್ ತೋಡಿನಿಂದ ನಳಿಕೆಪಾದಗಳು (ಟ್ಯೂಬ್‌ಫೀಟ್) ಹೊರಬೀಳುತ್ತವೆ. ಇವು ಪ್ರತಿ ತೋಳಿನಲ್ಲಿಯೂ 2 ರಿಂದ 4 ಸಾಲುಗಳಲ್ಲಿ ಸ್ಥಿತವಾಗಿವೆ. ಹಿಂದುಳಿದ ಬಗೆಯ ನಕ್ಷತ್ರ ಮೀನುಗಳಲ್ಲಿ ಇವು ಎರಡು ಸಾಲುಗಳಲ್ಲಿವೆ. ಅವುಗಳ ಸಂಖ್ಯೆಯೂ ಕಡಿಮೆ. ಮುಂದುವರಿದ ನಕ್ಷತ್ರ ಮೀನುಗಳಲ್ಲಿ ನಳಿಕೆಪಾದಗಳ ಸಂಖ್ಯೆ ಹೆಚ್ಚಾಗಿದ್ದು ಇವು ಎರಡು ಸಾಲುಗಳಲ್ಲಿರುವುವು. ಸ್ನಾಯುತಂತುಗಳಿಂದ ರಚಿತವಾಗಿರುವ ಇವುಗಳ ತುದಿಯಲ್ಲಿ ಹೀರುಬಟ್ಟಲುಗಳಿವೆ. ನಳಿಕೆಪಾದಗಳ ಮುಖ್ಯ ಕಾರ್ಯ ಪ್ರಾಣಿಯ ಚಲನೆಯಲ್ಲಿ ನೆರವಾಗುವುದು.





ನಕ್ಷತ್ರ ಮೀನು

ಊರ್ಧ್ವಭಾಗದ ಮಧ್ಯಬಿಂದುವಿನ ಒಂದು ಪಕ್ಕಕ್ಕೆ ಆಸನ ದ್ವಾರವುಂಟು. ಕೆಲವು ಬಗೆಯ ನಕ್ಷತ್ರ ಮೀನುಗಳಲ್ಲಿ ಆಸನದ್ವಾರ ಇರುವುದೇ ಇಲ್ಲ. ಯಾವುದೇ ಎರಡು ತೋಳುಗಳು ಸಂಧಿಸುವ ಪ್ರದೇಶದಲ್ಲಿ ಮ್ಯಾಡ್ರಿಪೊರೈಟ್ ತಟ್ಟೆಯಿದೆ. ಇದರ ಆಕಾರ ಚಕ್ರದಂತೆ. ಇದರಲ್ಲಿ ಸಾಕಷ್ಟು ತೋಡುಗಳೂ ರಂಧ್ರಗಳೂ ಇವೆ. ಗತವಂಶಿಗಳಾದ ಕೆಲವು ನಕ್ಷತ್ರ ಮೀನುಗಳಲ್ಲಿ ಮ್ಯಾಡ್ರಿಪೊರೈಟ್ ಅಧೋಭಾಗದಲ್ಲಿದೆ. ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಮ್ಯಾಡ್ರಿಪೊರೈಟ್ ತಟ್ಟೆಗಳುಳ್ಳ ನಕ್ಷತ್ರ ಮೀನುಗಳೂ ಇಲ್ಲದಿಲ್ಲ.

ಚರ್ಮದಲ್ಲಿ ಸುಣ್ಣದ ಸಣ್ಣ ಫಲಕಗಳು ಹುದುಗಿಕೊಂಡಿರುವುವು. ಇವುಗಳಿಂದ ಚರ್ಮಕ್ಕೆ ದೃಢತೆ ಲಭಿಸಿದೆ. ಸ್ನಾಯುಪಟ್ಟಿಗಳ ನೆರವಿನಿಂದ ಒಂದಕ್ಕೊಂದು ಕೂಡಿಕೊಂಡಿವೆ. ಜೀವಂತ ನಕ್ಷತ್ರ ಮೀನುಗಳಲ್ಲಿ ದೇಹ ಗಡುಸಾಗಿದ್ದರೂ ತೋಳುಗಳು ನಮ್ಯವಾಗಿವೆಯಲ್ಲದೆ ಅವಕ್ಕೆ ಅಲುಗಾಡುವ ಶಕ್ತಿಯೂ ಉಂಟು. ಆಂಬುಲ್ಯಾಕ್ರಲ್ ತೋಡಿನ ಇಕ್ಕೆಡೆಗಳಲ್ಲಿ ಆಂಬುಲ್ಯಾಕ್ರಲ್ ಫಲಕಗಳುಂಟು. ಇವಕ್ಕೆ ಕೀಲುಸಂದುಗಳ ರೀತಿಯಲ್ಲಿ ಚಲಿಸುವ ಸಾಮರ್ಥ್ಯವುಂಟು. ಈ ಫಲಕಗಳಿಗೆ ಅಂಟಿರುವ ಮುಳ್ಳುಗಳು ಒಟ್ಟುಗೂಡಿದರೆ ತೋಡುಗಳು ಮುಚ್ಚಿಕೊಂಡು ಅದರಿಂದ ನಳಿಕೆಪಾದಗಳಿಗೆ ರಕ್ಷಣೆ ಒದಗುತ್ತದೆ. ಊರ್ಧ್ವಭಾಗದಲ್ಲಿ ಫಲಕಗಳ ಮೇಲೆ ಮುಳ್ಳುಗಳಿರುವುದು ಸಾಧಾರಣ. ಕೆಲವು ಸಲ ಅವುಗಳ ಬದಲು ಸಣ್ಣ ಸಣ್ಣ ಗಂಟುಗಳಿರಬಹುದು. ಆಸ್ಟ್ರೊಪೆಕ್ಟನ್ ಎಂಬ ನಕ್ಷತ್ರ ಮೀನಿನಲ್ಲಿ ಊರ್ಧ್ವಭಾಗದ ಫಲಕಗಳ ಮೇಲೆ ತೆಳುವಾದ ಸಲಾಕೆಗಳಂಥ ರಚನೆಗಳಿರುವುವು. ಇವುಗಳ ತುದಿಯಲ್ಲಿ ತೆಳುವಾದ ಅನೇಕ ಕಡ್ಡಿಗಳಿರುವುವು. ಇವಕ್ಕೆ ಪ್ಯಾಕ್ಸಿಲ್ಲಗಳೆಂದು ಹೆಸರು. ಮುಳ್ಳುಗಳ ನಡುವೆ ಚಿಮುಟದಂತಿರುವ ಪೆಡಿಸಲ್ಲೇರಿಯಗಳೂ ಡರ್ಮಲ್ ಬ್ರಾಂಕಿಯಗಳೂ (ಉಸಿರಾಟಕ್ಕೆ) ಉಂಟು.

ನಕ್ಷತ್ರ ಮೀನುಗಳಿಗೆ ಹೊಟ್ಟೆಬಾಕತನ ಹೆಚ್ಚು. ಸಮುದ್ರದಲ್ಲಿ ಜೀವಿಸುವ ಕಪ್ಪೆಚಿಪ್ಪು ಮತ್ತು ಶಂಖಪ್ರಾಣಿಗಳು ಇವುಗಳ ಸಾಧಾರಣ ಆಹಾರ. ಜೀರ್ಣವಾಗದ ಗಟ್ಟಿ ಪದಾರ್ಥವನ್ನು ದೇಹದೊಳಗೆ ತೆಗೆದುಕೊಳ್ಳದಿರುವುದು ಇವುಗಳ ಆಹಾರ ಸೇವನೆಯ ವೈಶಿಷ್ಟ್ಯ.

ಸಾಧಾರಣವಾಗಿ ನಕ್ಷತ್ರ ಮೀನುಗಳು ಏಕಲಿಂಗಿಗಳು. ಆದರೆ ಆಸ್ಟರೈನ ಗಿಬ್ಬೋಸ ಎಂಬುದು ದ್ವಿಲಿಂಗಿ. ಇದು ಪ್ರೌಢಾವಸ್ಥೆಗೆ ಬಂದಾಗ ಮೊದಲು ವೀರ್ಯಾಣುಗಳನ್ನೂ ಅನಂತರ ತತ್ತಿಗಳನ್ನೂ ಉತ್ಪತ್ತಿಮಾಡುತ್ತದೆ. ಸೈನಾಪ್ಟಿಡೆ ಕುಟುಂಬದ ದ್ವಿಲಿಂಗಿ ನಕ್ಷತ್ರ ಮೀನುಗಳು ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುವುವು; ಇವು ಮೊದಲು ತತ್ತಿಗಳನ್ನು ಉತ್ಪತ್ತಿಮಾಡಿ ಅನಂತರ ವೀರ್ಯಾಣುಗಳನ್ನು ಉತ್ಪಾದಿಸುವುವು. ಜೀವನ ಚರಿತ್ರೆಯಲ್ಲಿ ಯುಗ್ಮಕಗಳು ಮೊದಲು ಲಾರ್ವಗಳಾಗಿ ಅನಂತರ ರೂಪಪರಿವರ್ತನೆಗೊಂಡು ಪ್ರೌಢಜೀವಿಗಳಾಗುತ್ತವೆ.

ನಕ್ಷತ್ರ ಮೀನುಗಳಲ್ಲಿ ಸಂತಾನರಕ್ಷಣೆ ಸ್ವಲ್ಪಮಟ್ಟಿಗೆ ಕಂಡುಬರುತ್ತದೆ. ಹೆನ್‌ರಿಸಿಯ ಮತ್ತು ಲೆಪ್ಟಾಸ್ಟೀರಿಯಸ್ ಪ್ರಭೇದಗಳು ತಮ್ಮ ಮರಿಗಳನ್ನು ತೋಳಿನಲ್ಲಿ ಇಟ್ಟುಕೊಂಡು ಸಂರಕ್ಷಿಸುತ್ತವೆ. ಟಿರಾಸ್ಟರ್ ಎಂಬುದು ತನ್ನ ಊರ್ಧ್ವಭಾಗದ ಮೇಲಿನ ಚರ್ಮದಲ್ಲಿ ಒಂದು ವಿಧವಾದ ಚೀಲವನ್ನು ರೂಪಿಸಿಕೊಂಡು ಇದರಲ್ಲಿ ಮರಿಯನ್ನು ಬೆಳೆಸುತ್ತದೆ. ಕೆಲವು ಪ್ರಭೇದಗಳಲ್ಲಿ ನೀರಿನಲ್ಲಿ ಈಜಾಡುವ ಲಾರ್ವಾವಸ್ಥೆಯಾಗಲೀ ರೂಪಪರಿವರ್ತನೆಯಾಗಲೀ ಕಾಣಬರುವುದಿಲ್ಲ.

ನಕ್ಷತ್ರ ಮೀನುಗಳು ಸಾಧಾರಣ ಇತರ ಯಾವ ಪ್ರಾಣಿಗಳಿಗೂ ಆಹಾರವಲ್ಲ. ಇವುಗಳ ಚಲನೆ ಬಹಳ ನಿಧಾನ. ಸಾಧಾರಣವಾಗಿ ಹೆಚ್ಚು ಆಳವಿಲ್ಲದ ಸ್ಥಳಗಳಲ್ಲಿ ವಾಸಿಸುವುವು. ಬ್ರಿಸಿಂಗ್ ಹೈಮಿನಾಸ್ಟರ್ ಮತ್ತು ಪಾರೆಸೆಲ್ಲ ನಾಸ್ಟರ್‌ಗಳು ಆಳ ಸಮುದ್ರದ ನಿವಾಸಿಗಳು.

ಪುನರುತ್ಪಾದನ ಸಾಮರ್ಥ್ಯ ಈ ಪ್ರಾಣಿಗಳಲ್ಲಿ ಹೆಚ್ಚು. ಕೆಲವು ನಕ್ಷತ್ರ ಮೀನುಗಳಲ್ಲಿ ಸರಾಗವಾಗಿ ಮತ್ತು ಸಾಮಾನ್ಯವಾಗಿ ತೋಳುಗಳು ಮುರಿದು ಕಳಚಿಹೋಗುವುದುಂಟು. ಹೀಗೆ ಮುರಿದುಹೋದ ತೋಳಿನ ತುಂಡುಗಳನ್ನೂ ಕಳೆದುಹೋದ ಇತರ ಭಾಗಗಳನ್ನೂ ಹೊಸ ಬಾಯಿಯನ್ನೂ ಇವು ಅಷ್ಟೇ ಸರಾಗವಾಗಿ ಪುನಾ ರಚಿಸಿಕೊಳ್ಳುವುವು. ನಕ್ಷತ್ರ ಮೀನುಗಳ ಪಳೆಯುಳಿಕೆಗಳು ಸೈಲ್ಯೂರಿಯನ್ ಯುಗದಲ್ಲಿ ದೊರೆತಿವೆ. (ಸಿ.ಎ.ಆರ್.)

**ನಕ್ಷತ್ರ ವೀಕ್ಷಕ:** ಯುರ್ರ್ಯಾನೊಸ್ಕಾಪಿಡೆ ಕುಟುಂಬಕ್ಕೆ ಸೇರಿದ ಒಂದು ಮೀನು (ಸ್ಟಾರ್‌ಗೇಜರ್). ಯುರ್ರ್ಯಾನೊಸ್ಕೋಪಸ್ ಇದರ ಶಾಸ್ತ್ರೀಯ ಹೆಸರು. ದಕ್ಷಿಣ ಮತ್ತು ಉತ್ತರ ಅಟ್ಲಾಂಟಿಕ್ ಮಹಾಸಾಗರದ ಕರಾವಳಿಯಲ್ಲಿ ದೊರೆಯುತ್ತದೆ. ಸುಮಾರು 30 ಸೆಂಮೀ. ಉದ್ದಕ್ಕೆ ಬೆಳೆಯುವುದು. ಚಪ್ಪಟೆ ದೇಹ ಮತ್ತು ಘನಾಕೃತಿಯ ತಲೆ ಇರುವ ಈ ಮೀನು ಬಹಳ ಕುರೂಪಿ. ಕಣ್ಣುಗಳು ತಲೆಯ ಮೇಲ್ಭಾಗದಲ್ಲಿ ಇರುವುದರಿಂದ ಸದಾಕಾಲ ನಕ್ಷತ್ರಗಳನ್ನೇ ವೀಕ್ಷಿಸುವುವೋ ಎಂಬಂತೆ ನೆಟ್ಟಗೆ ಮೇಲಕ್ಕೆ ನೋಡುತ್ತಿರುವಂತೆ ಭಾಸವಾಗುತ್ತದೆ. ಆದ್ದರಿಂದಲೇ ಈ ಮೀನಿಗೆ ನಕ್ಷತ್ರ ವೀಕ್ಷಕ ಎಂಬ ಹೆಸರು ಬಂದಿದೆ. ಕಣ್ಣುಗಳ ಹಿಂಭಾಗದಲ್ಲಿ ಎರಡು ವಿದ್ಯುತ್ ಅಂಗಗಳುಂಟು. ಎಕ್ಸ್ಟ್ರಾಆಕ್ಯುಲರ್ ಸ್ನಾಯುಗಳ



ನಕ್ಷತ್ರ ವೀಕ್ಷಕ

ಮಾರ್ಪಾಡಿನಿಂದ ರೂಪುಗೊಂಡಿರುವ ಇವು ಒಂದು ಸಲಕ್ಕೆ ಸುಮಾರು 50 ವೋಲ್ಟ್ ವಿದ್ಯುತ್ತನ್ನು ಉತ್ಪಾದಿಸಬಲ್ಲುವು. ತಮ್ಮ ಎದೆಯನ್ನು ಆಘಾತಗೊಳಿಸಲು ಈ ವಿದ್ಯುತ್ತನ್ನು ಬಳಸಬಹುದೆಂದು ಶಂಕಿಸಲಾಗಿದೆ. ಆದರೆ ತಮ್ಮ ಸುತ್ತ ಒಂದು ವಿದ್ಯುತ್ ಕ್ಷೇತ್ರವನ್ನು ರಚಿಸಿ ಅದರಿಂದ ತಮ್ಮ ಹಿಂದೆ ಮುಂದೆ ಬರುವ ಇತರ ಜೀವಿಗಳನ್ನು ಪತ್ತೆಹಚ್ಚುವ ಸಾಧನವಾಗಿ ಈ ಅಂಗಗಳನ್ನು ಬಳಸಿಕೊಳ್ಳುವುದೆಂಬ ಊಹೆಯೂ ಇದೆ. ಈ ಮೀನುಗಳು ಬಂಡೆಗಳ ಮಧ್ಯೆ ಇರುವ ಉಸುಬಿನಲ್ಲಿ ಕಣ್ಣುಗಳನ್ನು ಬಿಟ್ಟು ತಮ್ಮ ಉಳಿದೆಲ್ಲ ದೇಹವನ್ನು ಹೂತುಕೊಂಡು ವಾಸಿಸುವ ಸ್ವಭಾವದುವು. ಇವು ಈ ಸ್ಥಿತಿಯಲ್ಲಿಯೆ ಇದ್ದುಕೊಂಡು ತಮ್ಮ ಹತ್ತಿರ ಸುಳಿದಾಡುವ ಇತರ ಸಣ್ಣ ಪುಟ್ಟ ಪ್ರಾಣಿಗಳನ್ನು ಬೇಟೆಯಾಡುತ್ತವೆ. ಆದರೆ ವಯಸ್ಕ ನಕ್ಷತ್ರ ವೀಕ್ಷಕಗಳಿಂದ ಸ್ವರೂಪದಲ್ಲಿ ಬೇರೆಯಾಗಿ ಕಾಣುವ ನಕ್ಷತ್ರ ವೀಕ್ಷಕಗಳ ಮರಿಗಳು ಮಹಾಸಾಗರದಲ್ಲಿ ತೇಲುತ್ತಿರುವಾಗ ಟ್ಯೂನ ಮೀನುಗಳ ಆಹಾರವಾಗುವುದುಂಟು. ನಕ್ಷತ್ರ ವೀಕ್ಷಕ ತಿನ್ನಲು ರುಚಿ. ಆದರೂ ಆರ್ಥಿಕ ದೃಷ್ಟಿಯಿಂದ ಈ ಮೀನನ್ನು ಬಳಸಲಾಗುತ್ತಿಲ್ಲ. (ಎಸ್.ಬಿ.ಎಂ.)

**ನರ:** ನರವು ಬರಿಗಣ್ಣಿಗೆ ಗೋಚರಿಸುವಂತೆ ಬೆಳ್ಳಗೆ ಉದ್ದವಾದ ದಾರದಂತಿದ್ದು ಎಡ ಬಲ ಭಾಗಗಳಲ್ಲಿ ಒಂದೇ ರೀತಿಯಲ್ಲಿ ಮಿದುಳು ಮತ್ತು ಮಿದುಳುಬಳ್ಳಿಗಳಿಗೆ ಸೇರಿಕೊಂಡಿರುವ ಜೀವಂತರಚನೆ ನರತಂತು (ನರ್ವ್). ಸೇರ್ಪಡೆಯ ಸ್ಥಳದಿಂದ ಹೊರಕ್ಕೆ ಕ್ರಮಿಸುವ ಮಾರ್ಗದ ಉದ್ದಕ್ಕೆ ಪ್ರತಿಯೊಂದು ನರವೂ ಕವಲೊಡೆದು ಕಿರಿದಾಗುತ್ತ ಕೊನೆಗೆ ಯಾವುದೋ ಸ್ನಾಯು ಗ್ರಂಥಿ, ಮೂಳೆ ಅಥವಾ ಅಂಗವನ್ನೋ ಚರ್ಮದ ಬುಡವನ್ನೋ ಹೊಕ್ಕು ಕಣ್ಮರೆ ಆಗುತ್ತದೆ. ಕವಲುಗಳೂ ಹೀಗೆಯೇ. ಈ ರೀತಿ ನರಗಳು ದೇಹದ ಎಲ್ಲ ಭಾಗಗಳನ್ನೂ ಮಿದುಳು ಮತ್ತು ಮಿದುಳು ಬಳ್ಳಿಗಳಿಗೆ ಸಂಪರ್ಕಿಸುವ ಸಾಧನಗಳಾಗಿವೆ. ನರವೆಂದು ಗುರುತಿಸಬಹುದಾದ ಅವಯವ ಅತಿ ದಪ್ಪವೆಂದರೆ 8–9 ಮಿಮೀಗಳಷ್ಟಿರಬಹುದು. ವಾಸ್ತವವಾಗಿ ಇದು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾದ ನೂರಾರು ತಂತುಗಳಿಂದಾದುದು. ಈ ತಂತುಗಳು ಸಾಮಾನ್ಯವಾಗಿ ನರದ ಬುಡದಿಂದ ಕೊನೆಯವರೆಗೂ ಅವಿಚ್ಛಿನ್ನವಾಗಿ ಹರಡಿಕೊಂಡಿರುತ್ತವೆ. ನರದ ಕವಲುಗಳಿಗೆ ನರತಂತುಗಳು ಅಖಂಡವಾಗಿ ಹೋಗುವುದೇ ವಿನಾ ಸ್ವತಃ ಒಂದು ನರತಂತು ಕವಲಾಗುವುದು ಅಪರೂಪ. ದೇಹದ ಹೊರ ಮತ್ತು ಒಳ ಆವರಣಗಳ ವ್ಯತ್ಯಾಸಗಳಿಂದ ಪಂಚೇಂದ್ರಿಯಗಳಲ್ಲಿಯೂ ದೇಹದ ಇತರ ಭಾಗಗಳಲ್ಲಿಯೂ ಉದ್ಭವಿಸಿದ ಇಂದ್ರಿಯ ಜ್ಞಾನ ಮತ್ತು ಇತರ ಸಂವೇದನೆಗಳನ್ನು ಮಿದುಳು ಮತ್ತು ಮಿದುಳು ಬಳ್ಳಿಗಳಿಗೆ ಒಯ್ದು, ತತ್ಫಲವಾಗಿ ಅಲ್ಲಿ ಉಂಟಾಗುವ ಪ್ರತಿಕ್ರಿಯಾ ಸಂದೇಶಗಳನ್ನು ಸ್ನಾಯು, ರಸಗ್ರಂಥಿ ಮುಂತಾದ ಕ್ರಿಯಾಂಗಗಳಿಗೆ ತಲಪಿಸುವುದು ನರತಂತುಗಳ ಕಾರ್ಯ. ಇಂಥ ತಂತುಗಳಿಗೆ ಅನುಕ್ರಮವಾಗಿ ಜ್ಞಾನವಾಹಿ ಮತ್ತು ಕ್ರಿಯಾವಾಹಿ ನರತಂತುಗಳೆಂದು ಹೆಸರು (ಸೆನ್ಸರಿ ಮತ್ತು ಮೋಟರ್ ನರ್ವ್ಸ್).

ಎಲ್ಲ ನರತಂತುಗಳೂ ಮಿದುಳು, ಮಿದುಳುಬಳ್ಳಿ ಅಥವಾ ನರಗ್ರಂಥಿಗಳಲ್ಲಿರುವ (ಗ್ಯಾನ್ಗ್ಲಿಯ) ನರಕೋಶಗಳ ಅಪವಾಹಿ (ಇಫರೆಂಟ್) ಅಥವಾ ಅಭಿವಾಹಿ (ಅಫರೆಂಟ್) ಚಾಚುಗಳ (ಆ್ಯಕ್ಸಾನ್ ಮತ್ತು ಡೆನ್‌ಡ್ರಾನ್) ಮುನ್ನಡೆಗಳೇ ಆಗಿವೆ. ನರತಂತುಗಳು ವಿವಿಧ ಗಾತ್ರದುವು. ಕೆಲವು 1 ಮೈಮಿಗಿಂತ (0.001 ಮಿಮೀ) ತೆಳ್ಳಗೂ ಇನ್ನು ಕೆಲವು 20 ಮೈಮಿಗಳಷ್ಟು ದಪ್ಪಗೂ ಇರುವುವು. ಪ್ರತಿಯೊಂದು ನರತಂತುವನ್ನೂ ಎಂಡೊನ್ಯೂರಿಯಮ್ ಎಂಬ ಅತಿ ತೆಳುವಾದ ಬಂಧನಾಂಗಾಂಶದಿಂದಾದ (ಕನೆಕ್ಟಿವ್ ಟಿಶ್ಯೂ) ಪೊರೆ ಆವರಿಸಿದೆ. ಹತ್ತಾರು ನರತಂತುಗಳು ಸೇರಿ ಸಣ್ಣ ಮತ್ತು ದೊಡ್ಡಕಟ್ಟುಗಳಾಗಿ ವಿನ್ಯಾಸಗೊಂಡಿರುತ್ತವೆ. ಕಟ್ಟುಗಳ ನಡುವೆ ತಡಿಕೆಯಂತೆಯೂ ಅವುಗಳಿಗೆ ಹೊದ್ದಿಕೆಯಾಗಿಯೂ ಇರುವುದು, ಪೆರಿನ್ಯೂರಿಯಮ್ ಎಂಬ ಬಂಧನಾಂಗಾಂಶದ ಕವಚ. ಇದು ತಕ್ಕಮಟ್ಟಿಗೆ ದಪ್ಪವಾಗಿ ದೃಢವಾಗಿರುವ ಪೊರೆ. ಏಟು ಬಿದ್ದಾಗ ಒಳಗಿರುವ ಸೂಕ್ಷ್ಮವಾದ ನರತಂತುಗಳಿಗೆ ಘಾತವಾಗುವುದನ್ನು ಬಹುಮಟ್ಟಿಗೆ ತಪ್ಪಿಸುತ್ತದೆ. 2–3 ಮಿಮೀಗಳಿಗಿಂತ ದಪ್ಪವಾದ ನರಗಳಿಗೆ ರಕ್ತಪೂರೈಕೆ ಆಗುವುದಲ್ಲದೆ ಸ್ವತಃ ಅವಕ್ಕೇ ನರಪೂರೈಕೆಯೂ ಆಗುತ್ತದೆ. ಸ್ವಾಭಾವಿಕವಾಗಿಯೇ ಅತಿ ಸಣ್ಣವಾದ ಈ ರಕ್ತ ನಾಳಗಳೂ ನರಗಳೂ ಎಪಿನ್ಯೂರಿಯಮ್ಮನ್ನು ಕೊರೆದು ಒಳಹೋಗುತ್ತವೆ.

ನರತಂತುಗಳು ಎರಡು ಬಗೆ: ಬಿಳಿಯವು ಮತ್ತು ಭಸ್ಮವರ್ಣದವು. ಬಿಳಿಯವು ದಪ್ಪ, ಭಸ್ಮವರ್ಣದವು ಬಲು ತೆಳು (0.7 ಮೈಮೀ –2 ಮೈಮೀ). ನರಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವವು ಬಿಳಿಯವೇ. ಇವುಗಳಿಗೆ ಮೈಯಲಿನ್ ಅಥವಾ ಮೆಡ್ಯುಲ್ಲರಿ ಹೊದಿಕೆ ಇರುವುದರಿಂದ ಇವು ಬೆಳ್ಳಗೂ ದಪ್ಪಗೂ ಕಾಣುವುವು.

ಹೊದಿಕೆ ಇಲ್ಲದ ನರತಂತು ಭಸ್ಮವರ್ಣದ್ದಾಗಿರುತ್ತದೆ. ನರತಂತುವನ್ನು ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದಾಗ ಅದರ ಮಧ್ಯದಲ್ಲಿ ಉದ್ದಕ್ಕೂ ಕಾಂಡದಂತೆ ಕಾಣಬರುವುದು ತಿರುಳುಧಾರೆ (ಆ್ಯಕ್ಸಿಸ್ ಸಿಲಿಂಡರ್). ವಾಸ್ತವವಾಗಿ ನರಕೋಶದ ಅಪವಾಹಿ ಅಥವಾ ಅಭಿವಾಹಿ ಚಾಚಿನ ಮುನ್ನಡೆ ಆಗಿರುವುದು ಇದೇ. ಇದನ್ನು ಸುತ್ತುವರಿದು ನ್ಯೂರಿಲೆಮ್ಮ ಎಂಬ ಅತಿ ತೆಳುವಾದ ಪೊರೆ ಇದೆ. ಅಷ್ಟು ತೆಳು ಪೊರೆಯಂತಿದ್ದರೂ ನಿಜವಾಗಿ ಇದು ಕೋಶಗಳಿಂದಾದ ಪೊರೆ. ಕೋಶಗಳ ಮಧ್ಯೆ ಇರುವ ಅಣುಕೇಂದ್ರ ಹಾಗೂ ಅದರ ಸುತ್ತ ಮಾತ್ರ ಗೋಚರವಾಗುವ ಜೀವವಸ್ತುವಿನಿಂದ ನ್ಯೂರಿಲೆಮ್ಮ ಕೋಶಗಳ ಇರುವು ವ್ಯಕ್ತವಾಗುತ್ತದೆ. ನ್ಯೂರಿಲೆಮ್ಮ ತಿರುಳುಧಾರೆಯ ಉದ್ದಕ್ಕೂ ಹೊದ್ದಿರುವುದಾದರೂ ನರತಂತು ಅಂತ್ಯಗೊಳ್ಳುವಾಗ ಮತ್ತು ತಂತು ಮಿದುಳು, ಮಿದುಳು ಬಳ್ಳಿ ಮತ್ತು ನರಗ್ರಂಥಿಗಳಲ್ಲಿ

ಕೋಶವನ್ನು ಸೇರಿಕೊಳ್ಳಲು ಕ್ರಮಿಸುತ್ತಿರುವಾಗ ಸ್ವಲ್ಪದೂರ ಲೋಪವಾಗಿದ್ದು ಆ ಭಾಗದಲ್ಲಿ ತಿರುಳುಧಾರೆ ನಗ್ನವಾಗಿರುತ್ತದೆ. ಭಸ್ಮವರ್ಣದ ನರತಂತುವಿನ ರಚನೆ ಇಷ್ಟೆ. ಬಿಳಿ ನರತಂತುಗಳ ರಚನೆಯಲ್ಲಿ ಇವುಗಳ ಜೊತೆಗೆ ತೆಳುವಾದ ಅಥವಾ ದಪ್ಪವಾದ ಮೈಯಲಿನ್ ಹೊದ್ದಿಕೆಯೂ ಸೇರಿದೆ. ಮೇಲೆಯೇ ಹೇಳಿರುವಂತೆ ಈ ಕಾರಣದಿಂದಲೇ ಅವು ಬೆಳ್ಳಗೆ ಕಾಣುವುದು ಮತ್ತು ವಿವಿಧ ಗಾತ್ರದವಾಗಿರುವುದು (2 ಮೈಮಿ–20 ಮೈಮಿ). ಮೈಯಲಿನ್ ಹೊದ್ದಿಕೆ ನ್ಯೂರಿಲೆಮ್ಮಕ್ಕೂ ತಿರುಳುಧಾರೆಗೂ ನಡುವೆ ಉಪಸ್ಥಿತವಾಗಿದೆ. ಮೈಯಲಿನ್ ವಸ್ತು ಒಂದು ಸ್ನಿಗ್ಧ ರಾಸಾಯನಿಕವಾಗಿದ್ದು (ಲೈಪಿಡ್) ನರತಂತುವನ್ನು ಸುತ್ತಲಿನ ಅಂಗಾಂಗಗಳಿಂದ ವಿದ್ಯುದ್ರೋಧಿಸುತ್ತದೆ (ಇನ್‌ಸುಲೇಟ್). ಆದರೆ ನ್ಯೂರಿಲೆಮ್ಮದಂತೆ ನರತಂತುವಿನ ಉದ್ದಕ್ಕೂ ಅವಿರತವಾಗಿ ಮೈಯಲಿನ್ ಹೊದ್ದಿಕೆ ಇರುವುದಿಲ್ಲ. ಕ್ಲುಪ್ತ ಅಂತರಗಳಲ್ಲಿ ನ್ಯೂರಿಲೆಮ್ಮ ಮಡಚಿಕೊಂಡು ತಡಿಕೆಯಂತೆ ಒಳನುಗ್ಗಿ ಮೈಯಲಿನ್ ಹೊದ್ದಿಕೆಯನ್ನು ಸಮ ತುಂಡುಗಳಾಗಿ ಭಿನ್ನಗೊಳಿಸುತ್ತದೆ. ನರತಂತುವನ್ನು ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದಾಗ ಇಂಥ ಒಂದೊಂದು ಸ್ಥಳವೂ ಬಿದಿರು ಗಳುವಿನ ಅಥವಾ ಕಬ್ಬಿನ ಜಲ್ಲೆಯ ಗಿಣ್ಣುಗಳನ್ನು ನೆನಪುಮಾಡಿಕೊಡುತ್ತದೆ. ಇವನ್ನು ಮೊತ್ತಮೊದಲು ನಿಖರವಾಗಿ ವರ್ಣಿಸಿದ ವಿಜ್ಞಾನಿ ರ್‍ಯಾನ್ವಿಯರನ ಗೌರವಾರ್ಥವಾಗಿ, ರ್‍ಯಾನ್‌ವಿಯರನ ಗಿಣ್ಣುಗಳೆಂದೇ ಹೆಸರಿಸಲಾಗಿದೆ. ವಾಸ್ತವವಾಗಿ ನ್ಯೂರಿಲೆಮ್ಮದ ಅಕ್ಕಪಕ್ಕದ ಕೋಶಗಳು ಸೇರುವ ಕಡೆ ಉಂಟಾದ ಕೋಶಭಿತ್ತಿಗಳ ಜಂಟಿಸ್ಥಾನವೇ ಒಳನುಗ್ಗಿ ಗಿಣ್ಣಿನಂತಾಗಿದೆ. ಎರಡು ಗಿಣ್ಣುಗಳ ನಡುವಿನ ಉದ್ದಕ್ಕೂ ಪಸರಿಸಿ ನ್ಯೂರಿಲೆಮ್ಮದ ಒಂದೇ ಕೋಶ ಉಂಟು. ಇದರ ಮಧ್ಯದಲ್ಲೆ ಇದರ ಅಣುಕೇಂದ್ರ ಗುರುತಾಗುವಂತೆ ಇದೆ. ಗಿಣ್ಣುಗಳಿರುವ ಕಡೆ ತಿರುಳುಧಾರೆಗೆ ಮಡಿಚಿ ಒಳನುಗ್ಗಿರುವ ನ್ಯೂರೆಲೆಮ್ಮ ಕೋಶಗಳ ಜಂಟಿಸ್ಥಾನ ಮಾತ್ರ ಹೊದ್ದಿಕೆ. ಮೈಯಲಿನ್ ಹೊದ್ದಿಕೆ ಇಲ್ಲ. ಆದ್ದರಿಂದ ಇಲ್ಲಿ ವಿದ್ಯುತ್‌ಬೇರ್ಪಡೆ ಕುಸಿದು ನೆರೆಯಲ್ಲಿ ಪ್ರವಹಿಸಬಹುದಾದ ವಿದ್ಯುತ್ತು ನರತಂತುವನ್ನು ಪ್ರಚೋದಿಸಬಹುದಾಗಿದೆ. ನರತಂತುಗಳ ದಪ್ಪಕ್ಕೆ ಅನುಸಾರವಾಗಿ ಗಿಣ್ಣುಗಳು ಏರ್ಪಟ್ಟಿವೆ. ದಪ್ಪ ನರತಂತುಗಳಲ್ಲಿ ಗಿಣ್ಣುಗಳು ವಿರಳ. ಸಣ್ಣ ನರತಂತುಗಳಲ್ಲಿ ಹೇರಳ. ಭಸ್ಮವರ್ಣದ ನರತಂತುಗಳಿಗೆ ಹೋಲಿಸಿದರೆ ಬಿಳೀ ನರತಂತುಗಳಲ್ಲಿ ನರ ಪ್ರಚೋದನೆ (ನರ್ವ್ ಇಂಪಲ್ಸ್) ಒಯ್ಯಲ್ಪಡುವುದು ಅತಿಶೀಘ್ರ. ಈ ವ್ಯತ್ಯಾಸಕ್ಕೆ ಕಾರಣ: ಭಸ್ಮ ವರ್ಣದ ನರತಂತುವಿನಲ್ಲಿ ನರಪ್ರಚೋದನೆ ಒಂದು ಸ್ಥಳದಿಂದ ಅದರ ಒತ್ತಿನ ಸ್ಥಳಕ್ಕೆ ಕವರಿಕೊಂಡು ಉದ್ದಕ್ಕೂ ಪಸರಿಸುತ್ತ ಹೋಗುತ್ತದೆ– ಪಟಾಕಿಮದ್ದಿನ ದಾರವನ್ನು ಹೊತ್ತಿಸಿದರೆ ಅದು ಉದ್ದಕ್ಕೂ ಉರಿದುಕೊಂಡು ಹೋಗುವಂತೆ. ನರಪ್ರಚೋದನೆ ಉಂಟಾಗುವ ಸಮಯದಲ್ಲಿ ಸ್ಥಳೀಯವಾಗಿ ಕಿಂಚಿತ್ ವಿದ್ಯುತ್ ಬದಲಾವಣೆ ಕಂಡು ಬಂದು ಆ ನೆರೆಯಲ್ಲಿ ವಿದ್ಯುತ್‌ಪ್ರವಾಹ ಏರ್ಪಡುತ್ತದೆ. (ಆದ್ದರಿಂದಲೇ ಬಹುಶಃ ವಿದ್ಯುಚ್ಛಕ್ತಿಯೂ ನರಪ್ರಚೋದನೆಯನ್ನು ಉಂಟು ಮಾಡಬಲ್ಲುದು). ಆದರೆ ಈ ವಿದ್ಯುತ್ ಪ್ರವಾಹ ಆ ಸ್ಥಳದ ಒತ್ತಿನ ಸ್ಥಳದಲ್ಲಿ ನರಪ್ರಚೋದನೆ ಉಂಟುಮಾಡುವುದೇ ಹೊರತು ಲೋಹತಂತಿಯಲ್ಲಿ ಒಯ್ಯಲ್ಪಡುವಂತೆ ನರದ ಮೂಲಕ ಹರಿದು ದೂರದಲ್ಲಿ ಎಲ್ಲೋ ನರಪ್ರಚೋದನೆಯನ್ನು ಉಂಟುಮಾಡುವುದಿಲ್ಲ. ಹಾಗೆ ಹರಿದು ಹೋಗುವಂತಿದ್ದರೆ ನರಪ್ರಚೋದನೆ ವಿದ್ಯುದ್ವೇಗದಲ್ಲಿ (ಅಂದರೆ ಸೆಕೆಂಡಿಗೆ ಸುಮಾರು 3 ಲಕ್ಷ ಕಿಮೀ) ಪ್ರಸಾರವಾಗಬೇಕಾಗಿತ್ತು. ಆದರೆ ವಾಸ್ತವವಾಗಿ ಬಿಳೀ ನರತಂತುವಿನಲ್ಲೂ ಅದರ ಗರಿಷ್ಠ ವೇಗ ಸೆಕೆಂಡಿಗೆ ಸುಮಾರು 120 ಮೀಗಳಷ್ಟು ಮಾತ್ರ. ಭಸ್ಮವರ್ಣದ ತಂತುವಿನಲ್ಲಿ ಇದರ ವೇಗ ಸೆಕೆಂಡಿಗೆ ಸುಮಾರು 1/2 ಮೀಟರಿನಷ್ಟು ಕಡಿಮೆ ಇರಬಹುದು. ಬಿಳೀ ನರತಂತುವಿನಲ್ಲಿ ನರಪ್ರಚೋದನೆಯ ಮುನ್ನಡೆಯ ರೀತಿ ಬೇರೆ. ಅದರಲ್ಲಿ ನರಪ್ರಚೋದನೆಯ ಸಾಗಣೆ ಶೀಘ್ರ. ಬಿಳೀನರತಂತುವಿನಲ್ಲಿ ನರಪ್ರಚೋದನೆ ಮೈಯಲಿನ್ನಿನ ವಿದ್ಯುತ್ ಬೇರ್ಪಡೆಯಿಂದಾಗಿ ಒಂದು ಗಿಣ್ಣಿನ ಹೊರವಲಯದಲ್ಲಿ ಮಾತ್ರ ವಿದ್ಯುತ್ ಬದಲಾವಣೆಯನ್ನು ಉಂಟುಮಾಡುವಂತಿರುವುದರಿಂದ ಅದರ ನೆರೆಯಲ್ಲಿ ಒಂದೆರಡು ಗಿಣ್ಣುಗಳಷ್ಟು ದೂರದಲ್ಲೆ ಕ್ಷೀಣಿಸುವ ವಿದ್ಯುತ್‌ಪ್ರವಾಹ ಏರ್ಪಡುತ್ತದೆ. ಈ ಪ್ರವಾಹ ಮುಂದಿನ ಗಿಣ್ಣಿನಲ್ಲಿ ಉದ್ದೀಪಕವಾಗಿ (ಸ್ಟಿಮ್ಯುಲಸ್) ವರ್ತಿಸಿ ಅಲ್ಲಿ ನರಪ್ರಚೋದನೆಯನ್ನು ಉಂಟುಮಾಡುತ್ತದೆ. ತತ್ಫಲವಾಗಿ ಆ ವಲಯದಲ್ಲಿ ಮಾತ್ರ ವಿದ್ಯುತ್ ಬದಲಾವಣೆ. ಅದರ ನೆರೆಯಲ್ಲಿ ವಿದ್ಯುತ್ ಪ್ರವಾಹ ಅದು ಮುಂದಿನ ಗಿಣ್ಣಿನಲ್ಲಿ ಉದ್ದೀಪಕವಾಗಿ ವರ್ತಿಸುವುದು. ಈ ರೀತಿ ನರಪ್ರಚೋದನೆ ಗಿಣ್ಣು ಗಿಣ್ಣಿಗೆ ಕುಪ್ಪಳಿಸುತ್ತಾ ವಿದ್ಯುದ್ವೇಗದಲ್ಲಿ ಮುಂದುವರಿಯುತ್ತದೆ. ಈ ಕಾರಣದಿಂದ ನರಪ್ರಚೋದನೆಯ ಇಂಥ ಮುಂದೋಟ ಗಿಣ್ಣುಗಳು ಹತ್ತಿರ ಹತ್ತಿರವಾಗಿರುವ ನರತಂತುವಿಗಿಂತ ಗಿಣ್ಣುಗಳು ದೂರದೂರವಾಗಿರುವ ನರತಂತುವಿನಲ್ಲಿ ಶೀಘ್ರತರ. ಗಿಣ್ಣುಗಳೇ ಇಲ್ಲದಿದ್ದರೆ ಕುಪ್ಪಳಿಕೆ ಸಾಧ್ಯವಿಲ್ಲದೆ ನರಪ್ರಚೋದನೆಯ ಸಾಗಣೆ ಬಲು ನಿಧಾನ. ಗಿಣ್ಣುಗಳ ಅಂತರ ತಂತುವಿನ ಗಾತ್ರಕ್ಕೆ ತಕ್ಕಂತಿರುವುದರಿಂದ ನರಪ್ರಚೋದನೆಯ ಸಾಗಣೆಯೂ ಅಷ್ಟೆ. ಸಾಗಣೆಯ ವೇಗ 1 ಮೈಮಿ ದಪ್ಪಕ್ಕೆ ಸರಾಸರಿ 6 ಮೀಟರುಗಳಷ್ಟು ಇರುವುದು ವ್ಯಕ್ತವಾಗಿದೆ. ಅಂದರೆ ಸಾಮಾನ್ಯವಾಗಿ ಬಿಳಿ ನರತಂತುಗಳಲ್ಲಿ ಸೆಕೆಂಡಿಗೆ 12 ರಿಂದ 120 ಮೀಟರ್‌ಗಳಷ್ಟು ವೇಗದಲ್ಲಿ ನರಪ್ರಚೋದನೆ ಮುಂದುವರಿಯುತ್ತದೆ ಎಂದಾಯಿತು. ಒಟ್ಟಿನಲ್ಲಿ ನರಪ್ರಚೋದನೆಯ ಪ್ರಸಾರವೇಗ ಭಸ್ಮ ವರ್ಣ ತಂತುವೋ, ಬಿಳಿತಂತುವೋ (ಬಿಳಿ ತಂತುವಾದರೆ ಅದರ ದಪ್ಪವೆಷ್ಟು) ಎನ್ನುವುದರ ಮೇಲೆ ಅವಲಂಬಿಸಿದೆ. ನರತಂತುಗಳಲ್ಲಿನ ಇನ್ನಾವ ವ್ಯತ್ಯಾಸವೂ ಸಂದೇಶ ಪ್ರಸಾರವೇಗದ ಮೇಲೆ ಪ್ರಭಾವ ಹೊಂದಿಲ್ಲ.

ಒಂದು ನರತಂತುವಿನಲ್ಲಿ ಅದರ ನಿರ್ದಿಷ್ಟ ವೇಗಪ್ರಮಾಣದಲ್ಲಿ ನರಪ್ರಚೋದನೆ ಮೇಲೆ ವಿವರಿಸಿರುವ ಕ್ರಮಗಳಿಂದ ಹಿಂದಕ್ಕಾಗಲಿ ಮುಂದಕ್ಕಾಗಲಿ ಸಾಗಬಹುದು.

ಆದರೆ ದೇಹದಲ್ಲಿ ಇರುವ ಏರ್ಪಾಡಿನಂತೆ ಜ್ಞಾನವಾಹಿಗಳು ತಮ್ಮ ಅಂತ್ಯಗಳಿಂದ ಮಿದುಳು ಮತ್ತು ಮಿದುಳುಬಳ್ಳಿಗಳ ಕಡೆಗೂ ಕ್ರಿಯಾವಾಹಿಗಳು ಮಿದುಳು ಮತ್ತು ಮಿದುಳುಬಳ್ಳಿಗಳಿಂದ ತಮ್ಮ ಅಂತ್ಯಗಳಿಗೂ ಮಾತ್ರ ನರಪ್ರಚೋದನೆಯನ್ನು ಒಯ್ಯುವಂತಿವೆ. ಇದಕ್ಕೆ ಕಾರಣ ಹೀಗೆ : ಎಲ್ಲ ನರತಂತುಗಳೂ ನರಕೋಶಗಳ ಅಪವಾಹಿ ಅಥವಾ ಅಭಿವಾಹಿ ಚಾಚುಗಳು ಎಂದು ಹಿಂದೆಯೇ ಹೇಳಿದೆ. ಪ್ರತಿಯೊಂದು ನರಕೋಶಕ್ಕೂ ಒಂದು ಅಪವಾಹಿ ಮತ್ತು ಒಂದೋ ಹೆಚ್ಚಾಗಿಯೋ ಅಭಿವಾಹಿಗಳು ಇರುವುದು ಸಾಮಾನ್ಯ. ಅಭಿವಾಹಿ ಚಾಚು ಅನೇಕ ಕವಲುಗಳಿರುವ ಅತಿ ಸೂಕ್ಷ್ಮಾಕಾರದ ಮರದಂತಿದೆ. ಕವಲುಗಳ ಅಂತ್ಯದ ಆವರಣದಲ್ಲಿ ನಿರ್ದಿಷ್ಟ ಭೌತಿಕ ವ್ಯತ್ಯಾಸ ಉಂಟಾದಾಗ ಇಲ್ಲವೆ ನಿರ್ದಿಷ್ಟ ರಾಸಾಯನಿಕ ಬಿಡುಗಡೆಯಾಗಿದ್ದಾಗ ಅವು ಪ್ರಚೋದನೆಗೊಂಡು ನರಪ್ರಚೋದನೆ ಕವಲಿನಲ್ಲಿ ಹಬ್ಬುತ್ತಾ ಕೊನೆಗೆ ಮಾತೃಕೋಶವನ್ನು ತಲಪುತ್ತದೆ. ಹಾಗೆ ತಲಪಿದಾಗ ಮಾತೃಕೋಶ ಪ್ರತಿಕ್ರಿಯೆ ತೋರುವುದರಿಂದ ಮರುನರಪ್ರಚೋದನೆ ಉಂಟಾಗಿ ಅದು ಕೋಶದ ಅಪವಾಹಿ ಚಾಚುವಿನ ಮೂಲಕ ಮುಂದುವರಿಯುತ್ತದೆ. ಅದರ ಅಂತ್ಯವನ್ನು ತಲಪಿದಾಗ ಅಲ್ಲಿ ನಿರ್ದಿಷ್ಟ ರಾಸಾಯನಿಕ ಬಿಡುಗಡೆಯಾಗುತ್ತದೆ. ಆದರೆ ಇದೇ ನರಪ್ರಚೋದನೆ ಅಭಿವಾಹಿಗಳ ಮೂಲಕ ಅಕಸ್ಮಾತ್ ಹರಿದು ಅವುಗಳ ಅಂತ್ಯವನ್ನು ತಲಪಿದರೆ ಅಲ್ಲಿ ಏನು ಪರಿಣಾಮವೂ ಉಂಟಾಗದೆ ನರಪ್ರಚೋದನೆ ನಂದಿಹೋಗುತ್ತದೆ. ಅಪವಾಹಿ ಚಾಚು ಉದ್ದವಾದ ದಾರದಂತಿರುತ್ತದೆ. ಗಮನಿಸುವ ಮಾರ್ಗಕ್ಕೆ ಅಲ್ಲೊಂದು ಇಲ್ಲೊಂದು ಕವಲುಗಳಿರಬಹುದು ಅಷ್ಟೆ. ಅಪವಾಹಿಗಳ ಅಂತ್ಯಗಳಲ್ಲಿ ಆಗಿರಬಹುದಾದ ಆವರಣ ವ್ಯತ್ಯಾಸಗಳಿಂದ ಅವು ಉದ್ರೇಕಗೊಳ್ಳುವುದಿಲ್ಲ. ಯಾವುದೇ ರೀತಿಯಿಂದ ಅವು ಉದ್ರೇಕಗೊಂಡು ನರಪ್ರಚೋದನೆ ಉಂಟಾಗಿ ಅದು ಅಭಿಮುಖವಾಗಿ ಪಸರಿಸುತ್ತಾ ಮಾತೃಕೋಶವನ್ನು ತಲಪಿದರೂ ಅದಕ್ಕೆ ಕೋಶ ಏನು ಪ್ರತಿಕ್ರಿಯೆಯನ್ನೂ ತೋರುವುದಿಲ್ಲ. ಅಂದರೆ ಅಭಿವಾಹಿಯಲ್ಲಿ ಕೋಶದಿಂದ ಮುನ್ನಡೆಯಬಹುದಾದ ನರಪ್ರಚೋದನೆ ನಂದಿಹೋಗುವಂತೆಯೇ ಅಪವಾಹಿಯಲ್ಲಿ ಕೋಶದ ಕಡೆಗೆ ಪಸರಿಸಬಹುದಾದ ನರಪ್ರಚೋದನೆಯೂ ನಂದಿಹೋಗುತ್ತದೆ. ಇಂಥ ನೈಸರ್ಗಿಕ ಏರ್ಪಾಡಿನಿಂದ ಕಾರ್ಯತಃ ನರಪ್ರಚೋದನೆ ಅಭಿವಾಹಿಯಲ್ಲಿ ಕೋಶದ ಕಡೆಗೆ ಮಾತ್ರ ಮತ್ತು ಅಪವಾಹಿಯಲ್ಲಿ ಕೋಶದ ಮುಂದಕ್ಕೆ ಮಾತ್ರ ಪಸರಿಸುವಂತಿದೆ. ಕ್ರಿಯಾವಾಹಿಗಳು ನಿರ್ದಿಷ್ಟ ನರಕೋಶಗಳ ಅಪವಾಹಿಗಳು. ಈ ನರಕೋಶಗಳಿಗೆ ಕ್ರಿಯಾತ್ಮಕ ನರಕೋಶಗಳೆಂದು ಹೆಸರು (ಮೋಟಾರ್ ನರ್ವ್‌ಸೆಲ್ಸ್, ಮೋಟಾರ್ ನ್ಯುರೊನ್ಸ್). ಇವು ಮಿದುಳುಬಳ್ಳಿ ಮತ್ತು ಅನೈಚ್ಛಿಕ ಕ್ರಿಯಾ ನರ ಗ್ರಂಥಗಳಲ್ಲಿ (ಆಟೋನಾಮಿಕ್ ಗ್ಯಾನ್‌ಗ್ಲಿಯಾ) ಇರುವುವು. ಆದ್ದರಿಂದ ನರಪ್ರಚೋದನೆ ಈ ಸ್ಥಳಗಳಿಂದ ಹೊರಕ್ಕೆ ಮುನ್ನಡೆಯುತ್ತದೆ. ಕ್ರಿಯಾತ್ಮಕ ಕೋಶಗಳಿಗೆ ಸದೃಶವಾಗಿ ಇರುವ ನರಕೋಶಗಳು ಸಂವೇದನಾತ್ಮಕ ನರಕೋಶಗಳು (ಸೆನ್ಸರಿ ನರ್ವ್ ಸೆಲ್) ಇವು ಮಿದುಳಿನಲ್ಲಿ ಮತ್ತು ಮಿದುಳುಬಳ್ಳಿ ನರಗ್ರಂಥಿಗಳಲ್ಲಿ (ಸ್ಪೈನಲ್ ಗ್ಯಾನ್‌ಗ್ಲಿಯಾ) ಇರುವುವು. ಇವುಗಳ ಅಭಿವಾಹಿಗಳೆ ಜ್ಞಾನವಾಹಿ ನರತಂತುಗಳು. ಆದ್ದರಿಂದಲೇ ಇವುಗಳಲ್ಲಿ ನರಪ್ರಚೋದನೆ ಕೋಶಗಳ ಕಡೆಗೆ ಪಸರಿಸುತ್ತದೆ. ಸಂವೇದನಾತ್ಮಕ ನರಕೋಶಗಳ ಅಭಿವಾಹಿಗಳು ಇತರ ನರಕೋಶಗಳ ಅಭಿವಾಹಿಗಳಂತೆಯೇ ರಚಿತವಾಗಿರುತ್ತದೆ. ಮತ್ತು ಅಪವಾಹಿಯಂತೆಯೇ ಮಾತೃಕೋಶಕ್ಕೆ ಒಂದು ಮಾತ್ರ ಅಭಿವಾಹಿಯಿರುವುದು ಈ ನರಕೋಶಗಳ ವೈಶಿಷ್ಟ್ಯ. ಹೀಗಾಗಿ ಜ್ಞಾನವಾಹಿ ನರತಂತುಗಳಲ್ಲಿ ನರಪ್ರಚೋದನೆ ವಿವಿಧ ಜ್ಞಾನೇಂದ್ರಿಯಗಳಿಂದ (ಸೆನ್ಸರಿ ಆರ್ಗನ್ಸ್) ಮಿದುಳು ಮತ್ತು ಮಿದುಳುಬಳ್ಳಿಗೆ ಮಾತ್ರ ಹಾಗೂ ಕ್ರಿಯಾವಾಹಿ ತಂತುಗಳಲ್ಲಿ ಮಿದುಳು ಮತ್ತು ಮಿದುಳುಬಳ್ಳಿಗಳಿಂದ ದೇಹದ ವಿವಿಧ ಭಾಗಗಳಲ್ಲಿರುವ ಕ್ರಿಯಾಂಗಗಳಿಗೆ ಮಾತ್ರ ಪ್ರವಹಿಸಬಲ್ಲುದು.

ಆಘಾತದಿಂದ ನರ ಛಿದ್ರಗೊಂಡರೆ ಅಥವಾ ಉದ್ದೇಶಪೂರ್ವಕವಾಗಿ ಅದನ್ನು ಛಿದ್ರಗೊಳಿಸಿದರೆ ನರದ ನೈಸರ್ಗಿಕ ದುರಸ್ತಿ ಇನ್ನಿತರ ಅಂಗಗಳಲ್ಲಿರುವಂತೆ ಇರುವುದಿಲ್ಲ. ಚರ್ಮ, ಮೂಳೆ, ಸ್ನಾಯು ಮುಂತಾದುವುಗಳಲ್ಲಿ ಭಿನ್ನವಾದ ಭಾಗಗಳ ಅಂತ್ಯಗಳು

ಒಂದಕ್ಕೊಂದು ಬಹಳ ದೂರದಲ್ಲಿಲ್ಲದಿದ್ದರೆ ಒಂದೆರಡು ದಿನ ಅಥವಾ ವಾರಗಳಲ್ಲಿ ಬೆಸೆದುಕೊಂಡು ಗಾಯಪೂರ್ವಸ್ಥಿತಿ ಲಭ್ಯವಾಗುತ್ತದೆ. ನರಛಿದ್ರವಾದರೆ ಎರಡು ತುದಿಗಳನ್ನೂ ಸಂಪರ್ಕಿಸಿ ಕಟ್ಟಿದರೆ ಮಾತ್ರ ಅಥವಾ ಎರಡು ತುದಿಗಳು 1–1 1/2 ಸೆಂಮೀ ಗಿಂತ ಹೆಚ್ಚು ದೂರದಲ್ಲಿ ಇಲ್ಲದಿದ್ದರೆ ಮಾತ್ರ ಅವು ಸೇರಿಕೊಂಡು ದುರಸ್ತಿ ಆಗಲು ಸಾಧ್ಯ. ಹಾಗಾಗಲು 3 ತಿಂಗಳೋ 6 ತಿಂಗಳೋ ಬೇಕು. ಹೆಚ್ಚುಕಡಿಮೆ ಮೊದಲಿನಂತೆ ಕ್ರಿಯಾಸೌಲಭ್ಯ ಲಭಿಸಬೇಕಾದರೆ ಒಂದು ವರ್ಷವೇ ಬೇಕಾದೀತು. ನರ ಛಿದ್ರವಾದಾಗ ಛಿದ್ರಿತ ಸ್ಥಳದಿಂದ ಮುಂದಕ್ಕೆ ಉದ್ದಕ್ಕೂ ನರತಂತುವಿನ ತಿರುಳುಧಾರೆ ಹಾಗೂ ಮೈಯಲಿನ್ ಹೊದ್ದಿಕೆ ನಶಿಸಿ ಜೀರ್ಣಿಸಿ ಹೋಗುತ್ತವೆ. ಆದರೆ ನ್ಯೂರಿಲೆಮ್ಮದ ಕೋಶಗಳ ಸಂಖ್ಯಾವೃದ್ಧಿ ಆಗುವುದು ಒಂದು ವಿಶೇಷ. ಈ ಮಾರ್ಪಾಡುಗಳು ನರ ಛಿದ್ರವಾದ ಒಂದೆರಡು ದಿನಗಳಲ್ಲೇ ಪ್ರಾರಂಭವಾದರೂ 2–3 ತಿಂಗಳುಗಳ ತನಕ ಮುಂದುವರಿದು ಕೊನೆಗೆ ಉಳಿದುಕೊಳ್ಳುವುದು ನ್ಯೂರಿಲೆಮ್ಮ ಕೋಶಗಳಿಂದ ಭರ್ತಿ ಆದ ಎನ್‌ಡೋನ್ಯೂರಿಯಮ್ ಕೊಳವೆ. ಗಾಯಸ್ಥಳದಿಂದ ಹಿಂದಕ್ಕೂ ನರತಂತುವಿನಲ್ಲಿ ಇಂಥ ನಾಶ ಕಂಡುಬರುತ್ತದೆ. ಆದರೆ ಸಾಮಾನ್ಯವಾಗಿ ಅತಿ ಹತ್ತಿರದ ರ್‍ಯಾನ್‌ವಿಯರನ ಗಿಣ್ಣಿನ ತನಕ ಮಾತ್ರ. ಛಿದ್ರಿತ ಸ್ಥಳದಿಂದ ಕೆಳಗಿರುವ ಭಾಗದ ತುದಿಯಲ್ಲಿ (ಲೋಯರ್ ಕಟ್ ಎಂಡ್) ನ್ಯೂರಿಲೆಮ್ಮಕೋಶಗಳ ಸಂಖ್ಯಾವೃದ್ಧಿಯಿಂದ ಆ ತುದಿ ಮೇಲಿನ ತುದಿಯನ್ನು ಸೇರಿಕೊಳ್ಳಲು ಬೆಳೆಯುತ್ತಿರುವಂತೆ ಕಾಣಿಸುತ್ತದೆ. ಮೇಲಿನ ತುದಿಯಲ್ಲಿ ಕೂಡ ಇಂಥ ಸ್ಥಿತಿ ಕಂಡುಬಂದರೂ ಕೆಳಗಿನ ತುದಿಯಲ್ಲಿರುವಷ್ಟು ಇರುವುದಿಲ್ಲ. ಅಂತೂ ಇವೆರಡು ತುದಿಗಳ ನಡುವೆ ನ್ಯೂರಿಲೆಮ್ಮಕೋಶಗಳ ಸೇತುವೆ ಸೃಷ್ಟಿ ಆಗುತ್ತದೆ. ಮೇಲೆ ಹೇಳಿದಂತೆ ಸಾಮಾನ್ಯವಾಗಿ ಈ ಸೇತುವೆ 1–1 1/2 ಸೆಂಮೀನಷ್ಟು ಇರುವುದಾದರೂ ಕೆಲವು ಸಂದರ್ಭಗಳಲ್ಲಿ 3 ಸೆಂಮೀನಷ್ಟು ಉದ್ದದ ಸೇತುವೆಯ ಸೃಷ್ಟನೆಯೂ ಸಾಧ್ಯ. ಛಿದ್ರ ತಂತುವಿನ ಕೆಳ ತುಂಡಿನಲ್ಲಿ ಮೇಲೆ ಹೇಳಿರುವ ಪರಿವರ್ತನೆಗಳು ಆಗುತ್ತಿರುವ ಕಾಲದಲ್ಲೇ ಮೇಲಿನ ತುಂಡಿನ ತಿರುಳುಧಾರೆಯ ತುದಿ ಕೊನರುವುದಕ್ಕೆ ಪ್ರಾರಂಭಿಸಿ ಹತ್ತಾರು ಕಿರುಧಾರೆಗಳು ಎಲ್ಲ ದಿಶೆಗಳಲ್ಲೂ ಬೆಳೆದು ಮುಂದುವರಿಯುತ್ತದೆ. ಛಿದ್ರಿತ ಸ್ಥಳದಲ್ಲಿ ನ್ಯೂರಿಲೆಮ್ಮ ಸೇತುವೆಯನ್ನು ತಲಪಿದ ಕಿರುಧಾರೆಗಳು ಕೆಳತುಂಡು ನಶಿಸಿ ಉಳಿಕೆಯಾಗಿರುವ ಎನ್‌ಡೋನ್ಯೂರಿಯಮ್ ಕೊಳವೆಯ ಒಳಹೊಕ್ಕು ಮುಂದುವರಿಯುವುವು. ಕ್ರಮೇಣ ಯಾವುದೋ ಒಂದು ಕಿರುಧಾರೆ ಉಳಿದುಕೊಂಡು ಮಿಕ್ಕವೆಲ್ಲ ನಶಿಸಿ ಹೋಗುತ್ತವೆ. ಉಳಿದುಕೊಂಡಿರುವ ಕಿರುಧಾರೆ ಸಹಜ ಗಾತ್ರದ ತಿರುಳುಧಾರೆಯಾಗಿ ವೃದ್ಧಿ ಆಗುತ್ತದೆ. ಎನ್‌ಡೊನ್ಯೂರಿಯಮ್ ಕೊಳವೆಯೊಳಗೆ ಇರುವ ನ್ಯೂರಿಲೆಮ್ಮ ಕೋಶಗಳ ಚಟುವಟಿಕೆಯಿಂದ ಇದಕ್ಕೆ ಮೈಯಲಿನ್ ವಸ್ತುವಿನ ಕವಚ ಕ್ರಮೇಣ ಲಭಿಸುವುದಲ್ಲದೆ ಆ ಕೋಶಗಳೂ ಸರಿಯಾಗಿ ಜೋಡಣೆಗೊಂಡು ತಿರುಳುಧಾರೆಗೆ ನ್ಯೂರಿಲೆಮ್ಮದ ಹೊದಿಕೆಯೂ ದೊರೆಯುವಂತಾಗುತ್ತದೆ. ಛಿದ್ರಿಸಿ ಅವನತಿಗೊಂಡ ನರದ ದುರಸ್ತಿ ಪೂರ್ತಿ ಆಗುವುದು ಈ ರೀತಿ. ಇದು ಮುಗಿಯಲು 6–8 ತಿಂಗಳುಗಳು, ಬಹುಶಃ ಒಂದು ವರ್ಷವೇ ಬೇಕಾಗಬಹುದು. ಎಷ್ಟೇ ಅಚ್ಚುಕಟ್ಟಾಗಿ ದುರಸ್ತಿ ಆದರೂ ಈ ತಂತು ಗರಿಷ್ಠ ಎಂದರೆ ಗಾಯಪೂರ್ವ ಗಾತ್ರದ 80% ಮಾತ್ರವಿರುತ್ತದೆ. ನರ ಛಿದ್ರಿಸದೆ ನಜ್ಜುಗುಜ್ಜಾಗಿದ್ದರೆ ದುರಸ್ತಿ ಶೀಘ್ರತಮ ಮತ್ತು ತೃಪ್ತಿಕರ. ಛಿದ್ರಿಸಿದ ನರದ ತುದಿಗಳು ಒಂದಕ್ಕೊಂದು ಅತಿ ದೂರದಲ್ಲಿದ್ದರೆ ಅಥವಾ ಅವುಗಳ ನಡುವೆ ರಕ್ತಗರಣೆ ಇತ್ಯಾದಿ ದುರ್ಮಾಂಸ ಇದ್ದರೆ ದುರಸ್ತಿ ಅಸಾಧ್ಯ. ಇಂಥ ಸಂದರ್ಭಗಳಲ್ಲಿ ಮೇಲಿನ ತುಂಡಿನ ತಿರುಳುಧಾರೆಯ ಕೊನರುಗಳೂ ಕೆಳತುಂಡಾದ ಎನ್ಡೋನ್ಯೂರಿಯಮ್ ಕೊಳವೆಯೂ ಕ್ರಮೇಣ ನಶಿಸಿ ಹೋಗುತ್ತವೆ. ಆದರೆ ಶಸ್ತ್ರಕ್ರಿಯೆಯಿಂದ ಎರಡು ತುದಿಗಳನ್ನೂ ಜೋಡಿಸಿದರೆ ಇಲ್ಲವೇ ವಿಶಿಷ್ಟವಾದ ಕೃತಕ ಕೊಳವೆಗಳನ್ನು ಆ ತುದಿಗಳ ನಡುವೆ ಸ್ಥಾಪಿಸಿದರೆ ಅಂಥ ಸಂದರ್ಭದಲ್ಲೂ ದುರಸ್ತಿ ಸಾಧ್ಯ. ಅಂತೂ ದುರಸ್ತಿ ಇಂಥ ನೈಸರ್ಗಿಕ ಮಾರ್ಗದಿಂದ ಆಗಬೇಕೇ ಹೊರತು ಬೇರೆ ಮಾರ್ಗದಿಂದಲ್ಲ. ಛಿದ್ರಿತ ನರದ ಎರಡು ತುದಿಗಳ ನಡುವೆ ಇನ್ನೊಂದು ನರದ ತುಂಡನ್ನು ನಾಟಿ ಹಾಕಿ ನರ ದುರಸ್ತಿ ಮಾಡುವ ಶಸ್ತ್ರಚಿಕಿತ್ಸೆ.

ನರ ಛಿದ್ರಗೊಂಡಾಗ ನರತಂತುಗಳು ನಶಿಸಿ ಹೋದರೂ ಅವುಗಳ ಕೊನೆಯಲ್ಲಿ ಸಾಮಾನ್ಯವಾಗಿ ಇರುವ ವಿವಿಧ ರೀತಿಯ ಅಂತ್ಯಾಂಗಗಳು (ಎಂಡ್ ಆರ್ಗನ್ಸ್)–ಅವು ಜ್ಞಾನವಾಹಿಗಳ ಅಂತ್ಯಾಂಗಗಳಾಗಲಿ, ಕ್ರಿಯಾವಾಹಿಗಳ ಅಂತ್ಯಾಂಗಗಳಾಗಲಿ–ಬಹುಕಾಲ ಅಸ್ತಿತ್ವದಲ್ಲಿರುತ್ತವೆ. ದುರಸ್ತಿ ಆದಾಗ ಮೊದಲಿನಂತೆಯೇ ಆಯಾ ತಂತುಗಳು ಆಯಾ ಅಂತ್ಯಾಂಗಗಳನ್ನು ಕೂಡಿಕೊಳ್ಳುತ್ತವೆ. ದುರಸ್ತಿ ಕಾಲದಲ್ಲಿ ಹೆಚ್ಚುವರಿ ಕಿರುಧಾರೆಗಳು ನಶಿಸಿಹೋಗುವಂತೆಯೇ ತನ್ನದಲ್ಲದ ಎನ್‌ಡೊನ್ಯೂರಿಯಮ್ ಕೊಳವೆಯೊಳಗೆ ಅಕಸ್ಮಾತ್ ಹೊಕ್ಕ ಕಿರುಧಾರೆಯೂ ನಶಿಸಿಹೋಗುವುದು ನಿಜ. ತನ್ನದಲ್ಲದ ಕೊಳವೆ ಎನ್ನುವ ವಿಷಯ ಕಿರುಧಾರೆಗೆ ಹೇಗೆ ಅರ್ಥವಾಗುತ್ತದೆ ಎನ್ನುವುದು ತಿಳಿಯದು. ಈ ರೀತಿ ತಪ್ಪು ಹೊಗುವಿಕೆ ಮತ್ತು ನಾಶ ಮೇಲೆ ಮೇಲೆ ಆಗುತ್ತ ಬಹುಕಾಲ ಅಂತ್ಯಾಂಗಕ್ಕೆ ನರತಂತುವಿನ ಸಂಪರ್ಕ ದೊರೆಯದೇ ಹೋದರೆ ಅಂತಿಮವಾಗಿ ಅದೂ ನಶಿಸಿ ಹೋಗುತ್ತದೆ. ಬಹು ಅಪರೂಪವಾಗಿ ಹೀಗೆ ನಶಿಸಿ ಹೋದಮೇಲೂ ಒಂದು ಕಿರುಧಾರೆ ಆ ಸ್ಥಳ ತಲಪಿದರೆ ಹೊಸ ಅಂತ್ಯಾಂಗದ ಸೃಷ್ಟಿ ಆಗುವುದೂ ಉಂಟು; ತನ್ನದಲ್ಲದ ಕೊಳವೆಯೊಳಗೆ ಅಪವಾದಾತ್ಮಕವಾಗಿಯೇ ಕಿರುಧಾರೆ ಮುಂದುಚವರಿದು ತನ್ನ ಸ್ವಭಾವಕ್ಕೆ ಅನುಸರಿಸುವಂತೆ ಅಂತ್ಯಾಂಗದ ರಚನೆಯನ್ನೇ ಬದಲಾಯಿಸುವುದೂ ಉಂಟು; ಇಲ್ಲವೇ ಸಂಪರ್ಕದ ವೈಪರೀತ್ಯದಿಂದ ಕ್ರಿಯಾವೈಪರೀತ್ಯ ಕಂಡುಬಂದು ಊಹಿಸಲಾಗದ ಅವ್ಯವಸ್ಥೆಯ ಸ್ಥಿತಿ ಒದಗುವುದೂ ಉಂಟು. ಆದರೆ ಸಾಮಾನ್ಯವಾಗಿ ಇಂಥ ಧಕ್ಕೆಗಳು ಒದಗದಂತೆ, ಅಸ್ತವ್ಯಸ್ತ ಸಂಪರ್ಕಗಳು ಉಂಟಾಗದಂತೆ ನರ ದುರಸ್ತಿ ಆಗುವುದು ಆಶ್ಚರ್ಯದ ಹಾಗೂ ಇನ್ನೂ ಸರಿಯಾಗಿ ತಿಳಿಯದ ವಿಷಯವಾಗಿದೆ.

ಮಿದುಳಿಗೇ ನೇರವಾಗಿ ಸೇರಿಕೊಂಡಿರುವ ನರಗಳನ್ನು ತಲೆನರಗಳೆಂದು (ಕ್ರೇನಿಯಲ್ ನರ್ವ್ಸ್) ಪ್ರತ್ಯೇಕವಾಗಿ ವಿವರಿಸಲಾಗಿದೆ. ಇವು 12 ಜೊತೆ. ಕಣ್ಣು, ಕಿವಿ, ಮೂಗು, ನಾಲಗೆ, ರುಂಡದ ಚರ್ಮ ಹಾಗೂ ಸ್ನಾಯುಗಳು. ಲಾಲಾಗ್ರಂಥಿಗಳು, ಗುಂಡಿಗೆ ಘುಪ್ಪುಸಗಳು, ಜಠರ, ಮೇದೋಜೀರಕಾಂಗ ಇತ್ಯಾದಿಗಳಿಗೆ ಈ ನರಗಳಿಂದ ಪೂರೈಕೆ ಆಗುತ್ತದೆ. ಮೇಲಿನಿಂದ ಕೆಳಕ್ಕೆ ಅನುಕ್ರಮವಾಗಿ ಇವನ್ನು ಮೊದಲನೆಯ, ಎರಡನೆಯ, ಇತ್ಯಾದಿ, ಹನ್ನೆರಡನೆಯ ತಲೆನರವೆಂದೇ ಸಂಬೋಧಿಸುವುದು ವಾಡಿಕೆ. ಅವು ಪೂರೈಸುವ ಅಂಗಗಳು, ಜರುಗಿಸುವ ಕ್ರಿಯೆ, ಇತ್ಯಾದಿಗಳಿಗೆ ಅನುಸಾರವಾಗಿ ಅವಕ್ಕೆ ವಿಶಿಷ್ಟ ಹೆಸರುಗಳೂ ಉಂಟು. ಮೊದಲನೆಯ ತಲೆನರಕ್ಕೆ ಆಲ್ಫ್ಯಾಕ್ಟರಿ ನರ (ವಾಸನಗ್ರಾಹಿ ನರ) ಎಂದು ಹೆಸರು. ಅನಂತರ ಈ ನರಗಳಿಗೆ ಅನುಕ್ರಮವಾಗಿ ಪ್ರಕಾಶ (ಆಪ್ಟಿಕ್), ನೇತ್ರಚಾಲಕ (ಆಕ್ಯುಲೋಮೋಟರ್) ರಾಟೆಯುಕ್ತ (ಟ್ರೋಕ್ಲಿಯರ್), ತ್ರೈಮೂಲಿಕ (ಟ್ರೈಜೆಮಿನಲ್), ನೇತ್ರ ಹೊರಚಾಲಕ (ಆಬ್ಡ್ಯೂಸೆಂಟ್), ಮುಖಸಂಬಂಧಿಕ (ಫೇಶಿಯಲ್), ಶ್ರವಣಸಂಬಂಧಿಕ (ಆಡಿಟರಿ) , ನಾಲಗೆ–ಗಂಟಲು ಸಂಬಂಧಿಕ (ಗ್ಲಾಸೊಫೆರಿಂಜಿಯಲ್), ಅಲೆಮಾರಿ (ವೇಗಸ್), ಅನುಬಂಧಿಕ (ಆಕ್ಸೆಸರಿ) ಮತ್ತು ನಾಲಗೆಯಡಿ (ಹೈಪೊಗ್ಲಾಸಲ್) ನರಗಳೆಂದು ಹೆಸರು. ಇವುಗಳಲ್ಲಿ 1, 2 ಮತ್ತು 8ನೆಯ ನರಗಳು ಸಂಪೂರ್ಣವಾಗಿ ಜ್ಞಾನವಾಹಿಗಳು; ಇವು ಅನುಕ್ರಮವಾಗಿ ವಾಸನೆ ದೃಷ್ಟಿ ಮತ್ತು ಶ್ರವಣಗಳಿಗೆ ಮೀಸಲಾದುವು. 3, 4, 6, 11 ಮತ್ತು 12ನೆಯ ನರಗಳು ಸಂಪೂರ್ಣವಾಗಿ ಕ್ರಿಯಾವಾಹಿಗಳು. 3, 4, 6ನೆಯ ನರಗಳೂ ಕಣ್ಣುಗುಡ್ಡೆಯನ್ನು ಚಲಿಸುವ ಸ್ನಾಯುಗಳಿಗೆ ಮತ್ತು ಕಣ್ಣಿನ ಪಾಪೆಯನ್ನು ಕಿರಿದು ಮಾಡುವ ಸ್ನಾಯುವಿಗೆ ಪೂರೈಕೆ ಆಗಿವೆ. 11ನೆಯದು ಹೆಕ್ಕತ್ತಿನ ಸ್ನಾಯುಗಳನ್ನೂ 12ನೆಯದು ನಾಲಗೆಯ ಸ್ನಾಯುಗಳನ್ನೂ ಪೂರೈಸುತ್ತವೆ. 5, 7, 9 ಮತ್ತು 10ನೆಯ ರುಂಡನರಗಳು ಮಿಶ್ರನರಗಳು. 5ನೆಯ ರುಂಡನರ ಚರ್ವಣ ಸ್ನಾಯುಗಳಿಗೂ (ಮ್ಯಾಸ್ಟಿಕೇಟರಿ ಮಸಲ್ಸ್) ಮುಖ ನಾಲಗೆಗಳ ಮೇಲ್ಮೈಗೂ ಪೂರೈಕೆ ಆಗಿ ಅಗಿಯುವ ಕ್ರಿಯೆಗೆ ಮತ್ತು ಮುಖ ನಾಲಗೆಗಳಲ್ಲಿ ಸ್ಪರ್ಶ, ಶೀತೋಷ್ಣ ಮತ್ತು ನೋವು ಇವುಗಳ ಗ್ರಹಿಕೆಗೆ ಕಾರಣವಾಗಿದೆ. 7ನೆಯದು ಮುಖ ಸ್ನಾಯುಗಳನ್ನು ಪೂರೈಸಿ ಮುಖಭಾವವನ್ನು (ಫೆಶಿಯಲ್ ಎಕ್ಸ್‌ಪ್ರೆಶನ್) ವ್ಯಕ್ತಪಡಿಸುವುದಕ್ಕೂ ಲಾಲಾಗ್ರಂಥಿಗಳನ್ನು ಪೂರೈಸಿ ಅವುಗಳ ಸ್ರವನಕ್ಕೂ ನಾಲಗೆಯ ಮುಂಭಾಗದಲ್ಲಿ ರುಚಿಗ್ರಹಣೆಗೂ ಕಾರಣವಾಗಿದೆ. 9ನೆಯ ನರ ಗಂಟಲಿನ ಸ್ನಾಯುಗಳಿಗೂ ಲಾಲಾಗ್ರಂಥಿಗಳಿಗೂ ಪೂರೈಕೆ ಆಗುವ ಕ್ರಿಯಾವಾಹಿ ಹಾಗೂ ನಾಲಗೆಯ ಹಿಂಭಾಗದ ರುಚಿಗ್ರಾಹಿ ಜ್ಞಾನವಾಹಿ. 10ನೆಯದಕ್ಕೆ ಅಲೆಮಾರಿ ನರವೆಂದು ಅನ್ವರ್ಥನಾಮ. ಏಕೆಂದರೆ ಇದು ರುಂಡನರವಾದರೂ ಮುಂಡದಲ್ಲಿ ಎದೆ ಮತ್ತು ಉದರ ಎರಡು ಕಡೆಯೂ ವ್ಯಾಪಕವಾಗಿ ಪಸರಿಸುವ ನರ. ಗುಂಡಿಗೆಯ ಮಿಡಿತದ ದರ, ಜಠರ, ಮೇದೋಜೀರಕಾಂಗಗಳ ಸ್ರವನ, ಜಠರ ಕರುಳುಗಳ ಚಲನೆ ಇವುಗಳಿಗೆ ಸಂಬಂಧಪಟ್ಟ ಕ್ರಿಯಾವಾಹಿ ಆಗಿರುವುದಲ್ಲದೆ ಘುಪ್ಪುಸಗಳಿಂದ ಪ್ರಜ್ಞಾಹೀನ ಸಂವೇದನೆಗಳಿಗೆ (ಅನ್‌ಕಾನ್ಶಿಯಸ್ ಸೆನ್ಸೇಷನ್ಸ್) ಮತ್ತು ಮುಂಡದ ಕೆಲವು ಅಂಗಗಳ ಯಾತನಾಗ್ರಹಣಕ್ಕೆ ಸಂಬಂಧಿಸಿದ ಜ್ಞಾನವಾಹಿಯೂ ಹೌದು.

ಮಿದುಳುಬಳ್ಳಿಗೆ ಸೇರಿಕೊಂಡಿರುವ ನರಗಳು 31 ಜೊತೆ. ಇವು ಬೆನ್ನುಹುರಿನರಗಳು (ಸ್ಪೈನಲ್ ನರ್ವ್ಸ್). ಇವೆಲ್ಲವೂ ಮಿಶ್ರನರಗಳೇ. ಆದರೆ ಇವು ಮಿದುಳುಬಳ್ಳಿಯೊಡನೆ ಸಂಪರ್ಕ ಪಡೆಯುವುದಕ್ಕೆ ಮೊದಲು ಕ್ರಿಯಾವಾಹಿ ತಂತುಗಳೂ ಜ್ಞಾನವಾಹಿ ತಂತುಗಳೂ ಬೇರ್ಪಟ್ಟು ನರ ಇಬ್ಭಾಗವಾಗಿ ಮಿದುಳುಬಳ್ಳಿಯನ್ನು ಕ್ರಿಯಾವಾಹಿ ಭಾಗ ಮುಂದುಗಡೆಯೂ ಜ್ಞಾನವಾಹಿ ಭಾಗ ಹಿಂದುಗಡೆಯೂ ಸೇರಿಕೊಳ್ಳುತ್ತವೆ. ಅಂದರೆ ಪ್ರತಿ ಮುಂಡನರಕ್ಕೂ ಮುಮ್ಮೂಲ ಅಥವಾ ಕ್ರಿಯಾಮೂಲ (ವೆಂಟ್ರಲ್ ರೂಟ್, ಮೋಟರ್ ರೂಟ್) ಮತ್ತು ಹಿಮ್ಮೂಲ ಅಥವಾ ಜ್ಞಾನಮೂಲ (ಡಾರ್ಸಲ್ ರೂಟ್, ಸೆನ್ಸರಿ ರೂಟ್) ಇದ್ದಂತಾಯಿತು. ಹಿಮ್ಮೂಲದಲ್ಲಿ ಉಬ್ಬಿದ ಗಂಟಿನಂತಿರುವ ಸ್ಥಳ ಉಂಟು. ಇದಕ್ಕೆ ಮಿದುಳುಬಳ್ಳಿಯ

ನರಗ್ರಂಥಿ (ಸ್ಪೈನಲ್ ಗ್ಯಾನ್‌ಗ್ಲಿಯಾನ್) ಎಂದು ಹೆಸರು. ಮುಂಡನರದ ಜ್ಞಾನವಾಹಿ ತಂತುಗಳ ಮಾತೃಕೋಶಗಳಾದ ಸಂವೇದನಾತ್ಮಕ ನರ ಕೋಶಗಳು ಇರುವುದು ಇಲ್ಲೇ. ಈ ಕೋಶದ ಅಭಿವಾಹಿ ಚಾಚುಗಳೇ ಜ್ಞಾನವಾಹಿ ನರತಂತುಗಳಾಗಿರುವ ವಿಷಯವನ್ನು ಮೇಲೆ ಹೇಳಿದೆ. ಜ್ಞಾನವಾಹಿ ನರತಂತುಗಳ ಅಂತ್ಯದಲ್ಲಿ ವಿಶೇಷ ರಚನೆ ಉಳ್ಳ ಅತ್ಯಾಂಗಗಳಿರುವುದನ್ನೂ ಮೇಲೆ ಸೂಚಿಸಿದೆ. ಆಲ್ಫ್ಯಾಕ್ಟರಿ ನರದ ಅಂತ್ಯಾಂಗಗಳು ಮೂಗಿನ ಲೋಳೆಪೊರೆಯಲ್ಲೂ, ಪ್ರಕಾಶನರದ ಅಂತ್ಯಾಂಗಗಳು ಕಣ್ಣಿನ ದೃಷ್ಟಿಪಟದಲ್ಲೂ ಶ್ರವಣನರದ ಅಂತ್ಯಾಂಗಗಳು ಒಳಕಿವಿಯಲ್ಲಿರುವ ಕಾರ್ಟಿಯ ಅಂಗದಲ್ಲೂ (ಆರ್ಗನ್ ಆಫ್ ಕಾರ್ಟಿ), 7ನೆಯ ಮತ್ತು 9ನೆಯ ರುಂಡನರದ ಜ್ಞಾನವಾಹಿ ತಂತುಗಳ ಅಂತ್ಯಾಂಗಗಳು ನಾಲಗೆಯ ಲೋಳೆಪೊರೆಯಲ್ಲೂ ಅಡಗಿವೆ. ಈ ಒಂದೊಂದು ಸ್ಥಳದಲ್ಲಿ ಇರುವ ಅಂತ್ಯಾಂಗಗಳಿಗೂ ಸ್ವಂತ ವಿಶಿಷ್ಟ ರಚನೆ ಉಂಟು. ಕಣ್ಣಿನಲ್ಲಿರುವುದು ದ್ಯುತಿ ಅಲೆಗಳಿಂದ ಮಾತ್ರ, ಕಿವಿಯಲ್ಲಿರುವುದು ಶಬ್ದ ಅಲೆಗಳಿಂದ ಮಾತ್ರ, ಮೂಗು ನಾಲಗೆಗಳಲ್ಲಿರುವುವು ವಿಶಿಷ್ಟ ರಾಸಾಯನಿಕ ಆವಿ, ದ್ರಾವಣಗಳ ಸ್ಪರ್ಶದಿಂದ ಮಾತ್ರ ಉದ್ರೇಕಿಸಲ್ಪಡುತ್ತವೆ. 5ನೆಯ ರುಂಡನರ ಹಾಗೂ ಎಲ್ಲ ಮುಂಡನರಗಳ ಜ್ಞಾನವಾಹಿಗಳೂ ವಿಶೇಷವಾಗಿ ದೇಹದ ಎಲ್ಲ ಭಾಗಗಳಲ್ಲೂ ಚರ್ಮದ ಅಡಿಯಲ್ಲಿ ಮೂರುನಾಲ್ಕು ವಿಶಿಷ್ಟ ಮಾದರಿಯ ಸಂವೇದನಾಂತ್ಯಾಂಗಗಳಾಗಿ ಕೊನೆಗೊಳ್ಳುತ್ತವೆ. ಒಂದು ಮಾದರಿಯದು ಅದಕ್ಕೆ ಏನಾದರೂ ತಾಕಿದರೆ ಮಾತ್ರ ಉದ್ರೇಕಗೊಳ್ಳುತ್ತದೆ. ಇನ್ನೊಂದು ಅದು ಇರುವ ಸ್ಥಳದ ಉಷ್ಣತೆ ಕಡಿಮೆ ಆದಾಗ ಮಾತ್ರ ಉದ್ರೇಕಗೊಂಡರೆ ಮಗದೊಂದು ಅದು ಇರುವ ಸ್ಥಳದ ಉಷ್ಣತೆ ಹೆಚ್ಚಾದಾಗ ಮಾತ್ರ ಉದ್ರೇಕಗೊಳ್ಳುತ್ತದೆ. ಯಾವ ವಿಶಿಷ್ಟ ರಚನೆಯನ್ನೂ ತೋರದೆ ತಂತುವಾಗಿಯೇ ಅಂತ್ಯವಾಗುವ ಜ್ಞಾನವಾಹಿಗಳು ಸ್ಥಳೀಯವಾದ ಅನಿಷ್ಟ ಹಾಗೂ ಕೋಶಮಾರಕ ಪ್ರಚೋದನೆಗಳಿಂದ (ನಾಕ್ಕಿಯಸ್ ಸ್ಟಿಮುಲೈ) ಉದ್ರೇಕಗೊಳ್ಳುತ್ತವೆ. ಇದರಿಂದ ನಮಗೆ ನೋವಿನ ಅರಿವು ಉಂಟಾಗುವುದು. ದೇಹದ ಎಲ್ಲ ಕೀಲುಗಳಿಗೂ ಐಚ್ಛಿಕ ಸ್ನಾಯುಗಳಿಗೂ 5ನೆಯ ರುಂಡನರದ ಮತ್ತು ಎಲ್ಲ ಮುಂಡನರಗಳ ಜ್ಞಾನವಾಹಿಗಳ ಪೂರೈಕೆ ಆಗುತ್ತದೆ. ಈ ಸ್ಥಳಗಳಲ್ಲೆಲ್ಲ ವಿಶೇಷ ರಚನೆಯುಳ್ಳ ಅಂತ್ಯಾಂಗಗಳಿವೆ. ವೇಗಸ್ ನರದ ಜ್ಞಾನವಾಹಿಗಳು ಫುಪ್ಫುಸಗಳಿಗೆ ಪೂರೈಕೆಯಾಗಿ ಅಂತ್ಯವಾಗುವ ಕಡೆಗಳಲ್ಲಿ ಇಂಥವೇ ಅಂತ್ಯಾಂಗಗಳಿವೆ. ಸ್ಥಳೀಯ ವಿಸ್ತರಣೆಯಿಂದ (ಸ್ಟ್ರೆಚಿಂಗ್) ಮಾತ್ರ ಇವು ಉದ್ರೇಕಗೊಳ್ಳುವುವು. ಇವು ಒಯ್ಯುವ ನರಪ್ರಚೋದನೆಗಳಿಂದ ಮುಖ್ಯವಾಗಿ ಪ್ರಜ್ಞಾಹೀನ ಸಂವೇದನೆ ಆಗಿದ್ದು ಅವು ಇಚ್ಛಾತೀತ ಪ್ರತಿಕ್ರಿಯೆಯನ್ನು ಉಂಟುಮಾಡುವಂಥವು. ಇವೇ ಜ್ಞಾನವಾಹಿಗಳಿಂದ ಆಯಾ ಸ್ಥಳಗಳ ಚಲನೆ ನೋವುಗಳೂ ಅರಿವಿಗೆ ಬರುವುದುಂಟು.

ಮಿದುಳುಬಳ್ಳಿ ನರಗ್ರಂಥಿಕೋಶಗಳ ಅಪವಾಹಿ ತಂತುಗಳು ಮಿದುಳುಬಳ್ಳಿಯ ಒಳಹೊಕ್ಕು ಅಲ್ಲಿ ನಿರ್ದಿಷ್ಟ ಕಂತೆಗಳಾಗಿ ವಿನ್ಯಾಸಗೊಂಡು ಮುಂದುವರಿದು ಮಿದುಳಿನಲ್ಲಿ ನಿರ್ದಿಷ್ಟ ಸ್ಥಾನವನ್ನು ತಲಪಿ ಅಲ್ಲಿಯ ಕೋಶಗಳ ನೆರೆಯಲ್ಲಿ ಅಂತ್ಯಗೊಳ್ಳುತ್ತವೆ. 5ನೆಯ ಕಪಾಲನರದ ಜ್ಞಾನವಾಹಿಗಳೂ ಬಹುಶಃ 7 ಮತ್ತು 9ನೆಯ ಕಪಾಲನರದ ಜ್ಞಾನವಾಹಿಗಳೂ ಮಿದುಳಿನಲ್ಲಿ ಇದೇ ಸ್ಥಳವನ್ನು ಸೇರಿ ಅಂತ್ಯಗೊಳ್ಳುತ್ತವೆ. ಆಲ್ಫ್ಯಾಕ್ಟರಿ, ಪ್ರಕಾಶ, ಶ್ರವಣ ಮತ್ತು ವೇಗಸ್ ನರಗಳ ಜ್ಞಾನವಾಹಿಗಳು ಮಿದುಳಿನಲ್ಲಿ ಇನ್ನು ಬೇರೆ ಬೇರೆ ನಿರ್ದಿಷ್ಟ ಸ್ಥಳಗಳಲ್ಲಿ ಅಂತ್ಯಗೊಳ್ಳುತ್ತವೆ. ಎಲ್ಲ ಜ್ಞಾನವಾಹಿಗಳೂ ಒಯ್ಯುವ ನರಪ್ರಚೋದನೆಗಳು ಬಹುಶಃ ಒಂದೇ ವಿಧ. ಆದರೆ ಒಂದೊಂದು ತಂತುವೂ ನಿರ್ದಿಷ್ಟ ಸ್ಥಳದಲ್ಲಿರುವ ನಿರ್ದಿಷ್ಟ ಅಂತ್ಯಾಂಗದಿಂದಲೇ ನರಪ್ರಚೋದನೆಯನ್ನು ಪಡೆಯುವುದರಿಂದಲೂ ವಿವಿಧ ಸಂವೇದನೆಗಳಿಗೆ ಕಾರಣವಾದ ಎಲ್ಲ ಜ್ಞಾನವಾಹಿಗಳೂ ಮಿದುಳಿನಲ್ಲಿ ಆಯಾ ನಿರ್ದಿಷ್ಟ ಸ್ಥಳಗಳಿಗೆ ಮಾತ್ರ ನರಪ್ರಚೋದನೆಯನ್ನು ಒಯ್ಯುವುದರಿಂದಲೂ ನಮಗೆ ಸಂವೇದನೆಗಳ ವೈವಿಧ್ಯದ ಅರಿವು ಉಂಟಾಗುತ್ತದೆ. ಅಲ್ಲದೆ ನೋವು, ಸ್ಪರ್ಶ, ಶೈತ್ಯೋಷ್ಣಗಳ, ದ್ಯುತಿ, ಶಬ್ದಗಳ ಉಗಮಸ್ಥಳದ ಅರಿವೂ ಉಂಟಾಗುತ್ತದೆ. ಜ್ಞಾನವಾಹಿಗಳು ಒಯ್ಯುವ ಎಲ್ಲ ಪ್ರಚೋದನೆಗಳಿಂದಲೂ ವಿವಿಧ ಸಂವೇದನೆಗಳು ತಿಳಿವಳಿಕೆಗೆ ಬರುತ್ತವೆಂದು ಹೇಳಲಾಗುವುದಿಲ್ಲ. ಹೀಗೆ ಬಂದರೂ ಬರದಿದ್ದರೂ ಈ ಪ್ರಚೋದನೆಗಳು ಮಿದುಳು ಮತ್ತು ಮಿದುಳುಬಳ್ಳಿಯಲ್ಲಿ ಪರಿಣಾಮವನ್ನು ಉಂಟುಮಾಡುವುದು ಖಚಿತ.

ಬೆನ್ನುಹುರಿನರದ ಮುಮ್ಮೂಲ ಕ್ರಿಯಾವಾಹಿಗಳಿಂದಾದುದು ಎಂದೂ ಈ ತಂತುಗಳು ಮಿದುಳುಬಳ್ಳಿಯಲ್ಲಿರುವ ಕ್ರಿಯಾತ್ಮಕ ನರಕೋಶಗಳ ಅಪವಾಹಿಗಳೂ ಎಂದೂ ಹೇಳಿದೆ. ರುಂಡನರಗಳ ಕ್ರಿಯಾವಾಹಿಗಳೂ ಮಿದುಳಿನಲ್ಲಿ ನಿರ್ದಿಷ್ಟ ಸ್ಥಾನಗಳಲ್ಲಿರುವ ಕ್ರಿಯಾತ್ಮಕ ನರಕೋಶಗಳ ಅಪವಾಹಿಗಳು. ಇವೂ ಸೇರಿದಂತೆ ಎಲ್ಲ ಕ್ರಿಯಾವಾಹಿಗಳು ದೇಹದ ನಾನಾ ಭಾಗಗಳಲ್ಲಿರುವ ನಾಳಯುಕ್ತ ರಸಗ್ರಂಥಿಗಳಿಗೂ, ಗುಂಡಿಗೆಯ ಸ್ನಾಯುವೂ ಕೂಡಿ ಎಲ್ಲ ಅನೈಚ್ಛಿಕ ಮತ್ತು ಐಚ್ಛಿಕ ಸ್ನಾಯುಗಳಿಗೂ ಪೂರೈಕೆ ಆಗುತ್ತದೆ. ಇವುಗಳಲ್ಲಿ ಪಸರಿಸುವ ನರಪ್ರಚೋದನೆಯ ಫಲ: ರಸಗ್ರಂಥಿಗಳ ಸ್ರವನ ಮತ್ತು ಸ್ನಾಯುಗಳ ಸಂಕೋಚನ. ಸ್ಪಷ್ಟವಾಗಿ ಕಾಣಬರುವಂಥ ದೈಹಿಕ ಚಲನೆಗಳು ಸಾಮಾನ್ಯವಾಗಿ ಐಚ್ಛಿಕ. ರಸಗ್ರಂಥಿಗಳ ಸ್ರವನವೂ ಜಠರ, ಕರುಳು, ಮೂತ್ರಕೋಶ ಅಪಧಮನಿಗಳು, ಗುಂಡಿಗೆ, ಶ್ವಾಸನಾಳಗಳು ಮುಂತಾದ ಸ್ಥಳಗಳಲ್ಲಿ ಕಂಡುಬರುವ ಚಲನೆಯೂ ಐಚ್ಛಿಕ ನಿಯಂತ್ರಣಕ್ಕೆ ಹೊರಪಟ್ಟವು. ಅನೈಚ್ಛಿಕ ಕ್ರಿಯೆಗಳು ಜರಗುವಂತೆ ಮಾಡುವ ಕ್ರಿಯಾವಾಹಿಗಳನ್ನೆಲ್ಲ ಬೇರೆಯಾಗಿಯೇ ಗಣಿಸಿ ಅವಕ್ಕೆ ಒಟ್ಟಾಗಿ ಅನೈಚ್ಛಿಕನರಮಂಡಲ ಅಥವಾ ಜೀವಿತಾಧಿಷ್ಠಾನ ನರಮಂಡಲ (ಆಟೋನಾಮಿಕ್ ನರ್ವಸ್‌ಸಿಸ್ಟಮ್) ಎಂದು ಕರೆದಿದೆ. ಮಿಕ್ಕ ನರಗಳನ್ನೆಲ್ಲ ಮನೋಧಿಷ್ಠಾನ ನರಮಂಡಲಕ್ಕೆ (ಸೊಮ್ಯಾಟಿಕ್ ನರ್ವಸ್ ಸಿಸ್ಟಮ್) ಸೇರಿದವೆಂದು ಗಣಿಸಲಾಗಿದೆ. ಎಲ್ಲ ಅನೈಚ್ಛಿಕ ಕ್ರಿಯೆಗಳೂ ಪ್ರಥಮವಾಗಿ ಮಿದುಳು ಮತ್ತು ಮಿದುಳು ಬಳ್ಳಿಯಲ್ಲಿರುವ ಕ್ರಿಯಾತ್ಮಕ ನರಕೋಶಗಳ ಪ್ರತಿಕ್ರಿಯೆಯ ಪರಿಣಾಮವೇ ಆದರೂ ಕ್ರಿಯಾತ್ಮಕ ಅಂತ್ಯಾಂಗಗಳಿಗೆ (ಅನೈಚ್ಛಿಕ ಸ್ನಾಯುಗಳಿಗೆ ಮತ್ತು ನಾಳಯುಕ್ತ ರಸಗ್ರಂಥಿಗಳಿಗೆ) ಅಂತಿಮವಾಗಿ ಒದಗುವ ನರಪ್ರಚೋದನೆ ನರಗ್ರಂಥಿಗಳಲ್ಲಿರುವ ಕೋಶಗಳಲ್ಲಿ ಜನಿಸಿದುದು. ಈ ನರಗ್ರಂಥಿಗಳನ್ನೆಲ್ಲ ಅನೈಚ್ಛಿಕ ನರಗ್ರಂಥಿಗಳೆಂದು (ಆಟೊನಾಮಿಕ್ ಗ್ಯಾನ್‌ಗ್ಲಿಯ) ಕರೆದಿದೆ. ಅಂದರೆ ಅನೈಚ್ಛಿಕ ಕ್ರಿಯಾವಾಹಿಯ ಮಾರ್ಗ ವಿಚ್ಛಿನ್ನವಾಗಿದ್ದು ಈ ಮಾರ್ಗದಲ್ಲಿ ನರಗ್ರಂಥಿಪೂರ್ವ ಭಾಗ ಮತ್ತು ನರಗ್ರಂಥಿ ಉತ್ತರಭಾಗ ಇರುವುವೆಂಬುದನ್ನು ಇಲ್ಲಿ ಗಮನಿಸಬೇಕು. ವಾಸ್ತವವಾಗಿ ಇವೆರಡು ಭಾಗಗಳೂ ಬೇರೆ ಬೇರೆ ನರತಂತುಗಳೇ. ಅನೈಚ್ಛಿಕ ನರಗ್ರಂಥಿಗಳು ದೇಹದಲ್ಲಿ ಮೂರು ನಿರ್ದಿಷ್ಟ ಸ್ಥಳಗಳಲ್ಲಿ ಕಂಡುಬರುತ್ತವೆ. ಕಶೇರುಕ ಕಂಬದ (ವರ್ಟಿಬ್ರಲ್ ಕಾಲಮ್) ಇಕ್ಕೆಲಗಳಲ್ಲಿ ಉದ್ದಕ್ಕೂ ಇರುವವು ಒಂದು ಗುಂಪು. ಇವು ನರತಂತುಗಳಿಂದ ಒಂದಕ್ಕೊಂದು ಸೇರಿಸಲ್ಪಟ್ಟು ಎರಡು ಕಡೆಯೂ ಒಂದೊಂದು ಸರಪಣಿಯಂತಿವೆ. ಇವಕ್ಕೆ ಸಂವೇದಕ ಸರಪಣಿ (ಸಿಂಪಥೆಟಿಕ್ ಚೇಯ್ನ್) ಎಂದು ಹೆಸರು. ಎರಡನೆಯ ಗುಂಪಿಗೆ ಸೇರಿದುವು ಮಧ್ಯಾಂತರ ನರಗ್ರಂಥಿಗಳು (ಇಂಟರ್‌ಮೀಡಿಯಟ್ ಗ್ಯಾನ್‌ಗ್ಲಿಯ). ಇವು ದೇಹಮಧ್ಯಗೆರೆಗೆ ಇನ್ನೂ ಸ್ವಲ್ಪ ದೂರದಲ್ಲಿ ಉದರದ ಹಿಂಭಿತ್ತಿಗೆ ಅಂಟಿಕೊಂಡಿವೆ. ಮೂರನೆಯ ಗುಂಪಿನವು ಅಂತ್ಯನರಗ್ರಂಥಿಗಳು (ಟರ್ಮಿನಲ್ ಗ್ಯಾನ್‌ಗ್ಲಿಯ). ಇವು ಅನೈಚ್ಛಿಕ ಕ್ರಿಯಾವಾಹಿ ನರಗಳು ಪೂರೈಕೆ ಆಗುವ ಅಂಗಗಳಲ್ಲೆ ಸಾಮಾನ್ಯ ಹುದುಗಿಕೊಂಡಿರುತ್ತವೆ.

ಅನೈಚ್ಛಿಕ ಕ್ರಿಯಾವಾಹಿಯ ನರಗ್ರಂಥಿ ಪೂರ್ವಭಾಗ ಮಿದುಳು ಮತ್ತು ಮಿದುಳುಬಳ್ಳಿಯಲ್ಲಿ ಇರುವ ನಿರ್ದಿಷ್ಟ ಕ್ರಿಯಾತ್ಮಕ ನರಕೋಶದ ಅಪವಾಹಿಯಾಗಿ ಹೊರಬಿದ್ದು ಮೇಲೆ ಹೇಳಿರುವ ಮೂರು ನರಗ್ರಂಥಿ ಗುಂಪುಗಳ ಪೈಕಿ ಒಂದು ನರಗ್ರಂಥಿಯನ್ನು ಸೇರಿ ಅಲ್ಲಿಯ ನರಕೋಶಗಳ ಸೆರೆಯಲ್ಲಿ ಅಂತ್ಯವಾಗುವುದು. ಈ ಕೋಶಗಳ ಅಪವಾಹಿ ತಂತುಗಳೂ ನರಗ್ರಂಥಿಯಿಂದ ಹೊರ ಹೊರಟು ಅನೈಚ್ಛಿಕ ಕ್ರಿಯಾವಾಹಿಯ ನರಗ್ರಂಥಿ ಉತ್ತರ ಭಾಗವಾಗಿ ಮುಂದುವರಿದು ಕ್ರಿಯಾಂಗಕ್ಕೆ ಪೂರೈಕೆ ಆಗುತ್ತದೆ. ಅನೈಚ್ಛಿಕ ಕ್ರಿಯಾವಾಹಿ ಮಾರ್ಗಗಳಲ್ಲೆಲ್ಲ ಇಂಥ ಏರ್ಪಾಡು ಕಡ್ಡಾಯವಾಗಿರುವುದು ಕಂಡುಬರುವುದು. ಈ ಏರ್ಪಾಡಿನಂತೆ ಅನೈಚ್ಛಿಕ ಕ್ರಿಯಾವಾಹಿ ಮಾರ್ಗದಲ್ಲಿ ಒಂದು ನರಗ್ರಂಥಿ ಇರಲೇಬೇಕು. ಕೆಲವು ಮಾರ್ಗಗಳಲ್ಲಿ ಎರಡೊ ಮೂರೊ ನರಗ್ರಂಥಿಗಳು ಇರುವುದೂ ಉಂಟು. ಆದರೆ ಅಂಥ ಕ್ರಿಯಾವಾಹಿ ವಿಚ್ಛಿನ್ನವಾಗುವುದು ಕೊನೆಯ ನರಗ್ರಂಥಿಯಲ್ಲಿ ಮಾತ್ರ. ಅದರ ಹಿಂದಿನ ನರಗ್ರಂಥಿ ಅಥವಾ ಗ್ರಂಥಿಗಳಲ್ಲಿ ಗ್ರಂಥಿಪೂರ್ವ ಭಾಗ ಅಂತ್ಯಗೊಳ್ಳದೆ ಕುಂದಿಲ್ಲದೆ (ಇನ್‌ಟ್ಯಾಕ್ಟ್) ಹಾಯ್ದು ಹೊರಬರುತ್ತದೆ. ಇನ್ನೊಂದು ಗಮನಾರ್ಹ ಅಂಶವೆಂದರೆ ನರಗ್ರಂಥಿ ಪೂರ್ವಭಾಗ ಯಾವಾಗಲೂ ಬಿಳಿನರತಂತುಗಳಿಂದಾಗಿರುವುದು ಮತ್ತು ನರಗ್ರಂಥಿ ಉತ್ತರಭಾಗ ಭಸ್ಮವರ್ಣತಂತು ಗಳಿಂದಾಗಿರುವುದು.

ಅನೈಚ್ಛಿಕ ನರಮಂಡಲವು ಸಂವೇದಕ (ಸಿಂಪಥೆಟಿಕ್) ಮತ್ತು ಅನುಸಂವೇದಕ (ಪ್ಯಾರಾ ಸಿಂಪಥೆಟಿಕ್) ಎಂಬ ಎರಡು ವಿಭಾಗಗಳಾಗಿ ವಿನ್ಯಾಸಗೊಂಡಿದೆ. ಅನುಸಂವೇದಕ ವಿಭಾಗಕ್ಕೆ ಕಪಾಲ ನರಗಳ ಅನೈಚ್ಛಿಕ ಕ್ರಿಯಾವಾಹಿಗಳೂ (ಅಂದರೆ 3, 7, 9 ಮತ್ತು 10ನೆಯ ನರಗಳದ್ದು) ಮತ್ತು ಮುಂಡನರಗಳಲ್ಲಿ ಮೇಲಿನಿಂದ ಎಣಿಸಿದಂತೆ 26, 27 ಬಹುಶಃ 28ನೆಯ ಜೊತೆಯೂ ಸೇರಿವೆ. ಇವೆಲ್ಲವೂ ನರಗ್ರಂಥಿಪೂರ್ವ ಭಾಗಗಳೇ. ಮುಂಡನರಗಳ ಅನೈಚ್ಛಿಕ ಕ್ರಿಯಾವಾಹಿಗಳು ಇಕ್ಕೆಲಗಳಲ್ಲೂ ಪೆಲ್ವಿಕ್ ನರ್ವ್ಸ್ ಎಂಬ ನರಗಳಾಗಿ ಕಿಬ್ಬೊಟ್ಟೆಯಲ್ಲಿ ಮುಂದುವರಿದು ಮೂತ್ರಕೋಶ ಮತ್ತು ಗುದನಾಳಗಳು ತಗಲಿಕೊಂಡಿರುವ ಸ್ಥಳದಲ್ಲಿ ಹುದುಗಿರುವ ಹೈಪೊಗ್ಯಾಸ್ಟ್ರಿಕ್ ನರಗ್ರಂಥಿಯೆಂಬ ಅಂತ್ಯನರಗ್ರಂಥಿಯಲ್ಲಿ ಕೊನೆಗೊಳ್ಳುತ್ತವೆ. ಅದರಿಂದ ಹೊರಟ ನರಗ್ರಂಥ್ಯೋತ್ತರ ಭಾಗಗಳು ಸನಿಹದಲ್ಲೇ ಇರುವ ಗುದನಾಳ ಹಾಗೂ ಮೂತ್ರಕೋಶಗಳ ಅನೈಚ್ಛಿಕ ಸ್ನಾಯುಗಳಿಗೆ ಪೂರೈಕೆ ಆಗುತ್ತವೆ. ಕಪಾಲನರಗಳೂ ಹೀಗೆಯೇ ನಿರ್ದಿಷ್ಟ ಅಂತ್ಯನರಗ್ರಂಥಿಯಲ್ಲಿ ವಿಚ್ಛಿನ್ನವಾಗಿ ನರಗ್ರಂಥ್ಯೋತ್ತರ ಭಾಗಗಳು ನೆರೆಯಲ್ಲೆ ಇರುವ ಅನೈಚ್ಛಿಕ ಕ್ರಿಯಾಂಗಗಳಿಗೆ




1. 2. 3.




4. 5. 6. 7. 8.




9.

1. A–ಸೀ ಅನಿಮೋನ್ ಪ್ರಾಣಿಯಲ್ಲಿ ಸಾಮಾನ್ಯವಾದ ಗ್ರಾಹೀಕೋಶ: B– ಈ ಕೋಶಕ್ಕೂ ಸ್ನಾಯುವಿಗೂ ನಡುವೆ ಒಂದೇ ಸಂಧಿಸ್ಥಳ (ಸೈನಾಪ್ಸ್) ಇದೆ.
2. ಎರೆಹುಳುವಿನಲ್ಲಿ ನರಗ್ರಂಥಿ (G), ಗ್ರಾಹೀಕೋಶ (R) ಮತ್ತು ಸ್ನಾಯುಗಳ (E) ಸಂಪರ್ಕ ವಿಧಾನ.
3. ಕಶೇರುಕಗಳಲ್ಲಿ ಅನೈಚ್ಛಿಕ ಪ್ರಚೋದನಾ ಪ್ರಕ್ರಿಯೆಗಳ ಮಾರ್ಗದ ವಿವಿಧ ರೂಪಗಳು.
4. ಸಾಲ್ಮನ್ ಮೀನಿನ ಮಿದುಳು. F– ಮಿದುಳಿನ ಅಗ್ರಭಾಗ: Op. L.– ದೃಷ್ಟಿಭಾಗ: C – ಸೆರಿಬೆಲ್ಲಮ್ (ಇವೆರಡೂ ಚೆನ್ನಾಗಿ ಬೆಳೆದಿದೆ): M.O. – ಮಿದುಳಿನ ಅಂತ್ಯಭಾಗ.
5. ಉರಗದ ಮಿದುಳು. F– ಅಗ್ರಭಾಗ (ಸಣ್ಣ); –ವಾಸನಾಗ್ರಾಹಿಭಾಗ (ಚೆನ್ನಾಗಿ ಬೆಳೆದಿದೆ.)
6. ಹಕ್ಕಿಗಳ ಮಿದುಳು. – ಅಗ್ರಭಾಗ; C– ಸೆರಿಬೆಲ್ಲಮ್ (ಇವೆರಡೂ ಅಭಿವೃದ್ಧಿಯಾಗಿವೆ.)
7. ಇಲಿಯ ಮಿದುಳು. O.B. – ವಾಸನಾಗ್ರಾಹಿಭಾಗ (ಸಣ್ಣದು); F– ಅಗ್ರಭಾಗ (ಎರಡು ಅರ್ಧಗೋಳಗಳಾಗಿ) ಮತ್ತು C– ಸೆರಿಬೆಲ್ಲಂ (ಇವೆರಡೂ ಪ್ರಗತ.)
8. ಮಾನವನ ಮಿದುಳು. F – ಅಗ್ರಭಾಗ (ಹೆಚ್ಚು ಪ್ರಗತಿಹೊಂದಿ ದೊಡ್ಡದಾಗಿದ್ದು ಮೇಲಿನಿಂದ ನೋಡಿದರೆ ಇನ್ಯಾವ ಭಾಗವೂ ಕಾಣುವಂತಿಲ್ಲ); C– ಸೆರಿಬೆಲ್ಲಂ (ಇದೂ ಪ್ರಗತಿಹೊಂದಿ ಅಭಿವೃದ್ಧಿಯಾದದ್ದೇ); M.O. – ಮಿದುಳಿನ ಅಂತ್ಯಭಾಗ.
9. ನರಕೇಶಗಳ ಪರಸ್ಪರ ಸಂಪರ್ಕಗಳು: 1. ತಿರುಳುಧಾರೆಯ ಅಂತ್ಯಕವಲು ಇನ್ನೊಂದು ನರಕೋಶದೊಡನೆ ಸಂಪರ್ಕಿಸುವುದು, 2. ನರಕೋಶ, 3. ತಿರುಳುಧಾರೆ, 4. ನರಕೋಶದ ಚಾಚುಗಳೊಡನೆ ಇನ್ನೊಂದು ತಿರುಳುಧಾರೆ, 5. ಇಂಥ ಸಂಪರ್ಕಗಳಿಂದ ಆದ ನರಕೇಶ ಜಾಲ 6. ನೇರಸ್ಪರ್ಶ ಇಲ್ಲದಿರುವಿಕೆ.

ಪೂರೈಕೆ ಆಗುತ್ತವೆ. ಅನುಸಂವೇದಕ ನರಗಳು ಎಲ್ಲವೂ ಹೀಗೆ ಅಂತ್ಯನರಗ್ರಂಥಿಗಳಲ್ಲಿ ವಿಚ್ಛಿನ್ನವಾಗುವುದು ಮಾಮೂಲು. ಸಂವೇದಕ ವಿಭಾಗದ ನರಗ್ರಂಥಿಪೂರ್ವಭಾಗಗಳು 10ರಿಂದ 24ನೆಯ ಮುಂಡನರಗಳ ಮುಮ್ಮೂಲದ ಮೂಲಕ ಹೊರಬಿದ್ದ ಮಿದುಳುಬಳ್ಳಿಯ ನಿರ್ದಿಷ್ಟ ಕ್ರಿಯಾತ್ಮಕ ನರಕೋಶಗಳ ಅಪವಾಹಿಗಳು. ಶೀಘ್ರದಲ್ಲೆ ಇವು ಮುಂಡನರದಿಂದ ಬೇರ್ಪಟ್ಟು ಅದೇ ನೇರದಲ್ಲಿರುವ ಸರಪಣಿ ನರಗ್ರಂಥಿಯನ್ನು ಸೇರುತ್ತವೆ. ಈ ಸೇರ್ಪಡೆ ತುಕ್ಕಡಕ್ಕೆ ಬಿಳೀ ಸಂಪರ್ಕಶಾಖೆ (ವೈಟ್ ರೇಮಸ್ ಕಮ್ಯೂನಿಕ್ಯಾನ್‌ಟಿಸ್)ಎಂದು ಹೆಸರು. ಕೆಲವು ನರಗ್ರಂಥಿಪೂರ್ವ ತಂತುಗಳು ಇಲ್ಲೆ ಅಂತ್ಯವಾಗಬಹುದು, ಇಲ್ಲವೇ ಸರಪಣಿಯ ಮೂಲಕ ಮೇಲಿನ ಅಥವಾ ಕೆಳಗಿನ ಒಂದೆರಡು ನರಗ್ರಂಥಿಗಳಲ್ಲಿ ಅಂತ್ಯವಾಗಬಹುದು. ಅವುಗಳಿಗೆ ಅನುಗುಣವಾದ ನರಗ್ರಂಥ್ಯೋತ್ತರ ತಂತುಗಳು ಹೊರಬಂದು ಪುನಃ ಮುಂಡನರವನ್ನೇ ಸೇರಿ ಅದರೊಡನೆಯೇ ಕ್ರಮಿಸುತ್ತ ಅದು ಪೂರೈಕೆ ಆಗುವ ಭಾಗಗಳಲ್ಲಿರುವ ಅನೈಚ್ಛಿಕ ಕ್ರಿಯಾಂಗಗಳನ್ನು ಪೂರೈಸುತ್ತವೆ. ಹೀಗೆ ಪುನಃ ಮುಂಡನರಕ್ಕೆ ಸೇರಿಕೊಳ್ಳುವ ತುಣುಕಿಗೆ ಭಸ್ಮ ವರ್ಣದ ಸಂಪರ್ಕ ಶಾಖೆ (ಗ್ರೆ ರೇಮಸ್ ಕಮ್ಯೂನಿಕ್ಯಾನ್‌ಟಿಸ್) ಎಂದು ಹೆಸರು. ಬಿಳೀ ಸಂಪರ್ಕ ಶಾಖೆಗಳಲ್ಲಿರುವ ಹೊರಬಂದು ಕೂಡಿಕೊಂಡು 2–3 ಸ್ಪ್ಲಾನ್‌ಕ್ನಿಕ್ ನರಗಳಾಗುತ್ತವೆ. ಇವು ಎಲ್ಲ 13 ಅಥವಾ 14ನೆಯ ಮುಂಡನರದಿಂದ 19–20ನೆಯ ಮುಂಡನರದವರೆಗೆ ಅವುಗಳ ಮುಮ್ಮೂಲಕ ಪ್ರಥಮವಾಗಿ ಹೊರಬಂದ ನರತಂತುಗಳು. ಸ್ಪ್ಲಾನ್‌ಕ್ನಿಕ್ ನರಗಳು ಇನ್ನೂ ನರಗ್ರಂಥಿಪೂರ್ವ ಭಾಗಗಳಾದ್ದರಿಂದ ಬಿಳೀ ನರಗಳೇ ಆಗಿವೆ. ಇವು ಮಧ್ಯಾಂತರ ನರಗ್ರಂಥಿಗಳಾದ ಸೀಲಿಯಕ್ ಮತ್ತು ಸುಪೀರಿಯರ್ ಮಿಸೆಂಟೆರಿಕ್ ನರಗ್ರಂಥಿಗಳಲ್ಲಿ, ಬಹುಶಃ ಇನ್‌ಫೀರಿಯರ್ ಮಿಸೆಂಟೆರಿಕ್ ನರಗ್ರಂಥಿಯಲ್ಲೂ ಅಂತ್ಯಗೊಳ್ಳುತ್ತವೆ. ಅವುಗಳಿಂದ ಹೊರಡುವ ನರಗ್ರಂಥ್ಯೋತ್ತರ ಭಾಗಗಳು– ಭಸ್ಮವರ್ಣದ ನರತಂತುಗಳು–ಉದರದಲ್ಲಿರುವ ಸ್ನಾಯುಯುಕ್ತ ಮತ್ತು ಗ್ರಂಥಿಯುಕ್ತ ಅಂಗಗಳಿಗೆ ಪೂರೈಕೆ ಆಗುತ್ತದೆ. ಹೀಗೆ ಸಂವೇದಕ ನರಗಳಲ್ಲಿ ವಿಚ್ಛಿನ್ನತೆ ಸರಪಣಿನರಗ್ರಂಥಿಗಳಲ್ಲಿ ಅಥವಾ ಮಧ್ಯಾಂತರ ನರಗ್ರಂಥಿಗಳಲ್ಲಿ ಕಂಡುಬರುವುದೇ ವಾಡಿಕೆ. ಸಂವೇದಕ ನರ ಅಂತಿಮ ನರಗ್ರಂಥಿಯಲ್ಲಿ ವಿಚ್ಛಿನ್ನವಾಗುವುದು ತೀರ ಅಸಾಧಾರಣ.

ಸಂವೇದಕ ಮತ್ತು ಅನುಸಂವೇದಕ ಎರಡು ವಿಧದ ನರಗಳೂ ಎಲ್ಲ ಅನೈಚ್ಛಿಕ ಕ್ರಿಯಾಂಗಗಳಿಗೂ ಸಾಮಾನ್ಯವಾಗಿ ಪೂರೈಕೆ ಆಗುತ್ತವೆ. ಯಾವುದೂ ಒಂದೇ ಬಗೆಯ ನರಪೂರೈಕೆ ಆಗುವುದು ಅಪರೂಪ. ದೇಹದಲ್ಲಿ ಎಲ್ಲೊ ಹಲವು ಸ್ಥಳಗಳಲ್ಲಿ ಮಾತ್ರ ದ್ವಂದ್ವ ನರಪೂರೈಕೆ ಇರುವ ಅಂಗಗಳಲ್ಲಿ ಸಂವೇದಕ ಮತ್ತು ಅನುಸಂವೇದಕ ನರಗಳು ಒಂದಕ್ಕೊಂದು ವ್ಯತಿರಿಕ್ತ ಪ್ರತಿಕ್ರಿಯೆಯನ್ನು ಉಂಟುಮಾಡುವಂತಿದೆ. ಅವುಗಳಲ್ಲಿ ಒಂದು ಯಾವ ಕ್ರಿಯಾಂಗದಲ್ಲಿಯಾದರೂ ಉದ್ರೇಕದಿಂದ ಚಟುವಟಿಕೆಯನ್ನು ಹೆಚ್ಚಿಸಿದರೆ ಇನ್ನೊಂದು ಅದೇ ಅಂಗದ ಚಟುವಟಿಕೆಯನ್ನು ಶಮನ ಮಾಡುತ್ತದೆ. ಕುದುರೆಯ ಎರಡು ಲಗಾಮುಗಳಂತೆ ಈ ಜೋಡಿಹತೋಟಿ ಇರುವುದರಿಂದ ಅಂಗಗಳ ಕ್ರಿಯಾಸಾಧನೆಯನ್ನು ಅಗತ್ಯಕ್ಕೆ ಅನುಸಾರವಾಗಿ ನಿಯಮಿತಗೊಳಿಸಲು ಸುಲಭವಾಗಿದೆ. ಉದಾಹರಣೆಗೆ ಹೃದಯವನ್ನು ತೆಗೆದುಕೊಳ್ಳಬಹುದು. ಹೃದಯಕ್ಕೆ ಒದಗುವ ಅನುಸಂವೇದಕನರ ವೇಗಸ್ ನರದ ಮೂಲಕ ಬಂದೊದಗಿರುವುದು. ಇದು ಹೃದಯಕ್ಕೆ ಒಯ್ಯುವ ನರಪ್ರಚೋದನೆಯಿಂದ ಹೃದಯ ಮಿಡಿತದ ದರ ಕಡಿಮೆ ಆಗುತ್ತದೆ. ಅಂದರೆ ಹೃದಯದ ವಿಚಾರದಲ್ಲಿ ಅನುಸಂವೇದಕ ನರದ ಕ್ರಿಯೆ ಶಮನ (ಇನ್‌ಹಿಬಿಷನ್). ಹೃದಯಕ್ಕೆ ಒದಗುವ ಸಂವೇದಕ ನರಗಳು ಅದಕ್ಕೆ ಒಯ್ಯುವ ನರಪ್ರಚೋದನೆಯಿಂದ ಮೇಲೆ ಹೇಳಿದ ಕ್ರಿಯೆಗೆ ವ್ಯತಿರಿಕ್ತವಾದ ಪರಿಣಾಮ ಕಂಡುಬರುತ್ತದೆ. ಹೃದಯ ಉದ್ರೇಕಿಸಲ್ಪಟ್ಟು ಅದರ ಮಿಡಿತದ ದರ ಹೆಚ್ಚುತ್ತದೆ (ಆ್ಯಕ್ಸಲರೇಷನ್). ಹೃದಯದ ಮಿಡಿತದ ದರ, ವ್ಯಾಯಾಮ ಅಥವಾ ಶ್ರಮ ಕೆಲಸಗಳನ್ನು ಮಾಡುತ್ತಿರುವಾಗ ಮಾಮೂಲಿಗಿಂತ ಅಧಿಕವಾಗಿರುವುದು. ಈ ಹೆಚ್ಚಳ ಅನುಸಂವೇದಕ ನರದ ಮೂಲಕ ಹೃದಯಕ್ಕೆ ಒದಗುವ ಶಾಮಕನರ ಪ್ರಚೋದನೆಗಳನ್ನು ಸ್ವಲ್ಪವಾಗಿ ಅಥವಾ ಪೂರ್ಣವಾಗಿ ತಡೆಹಿಡಿಯುವುದರಿಂದ ಕಾರ್ಯಗತವಾಗಬಹುದು. ಇಲ್ಲದೇ ಇದ್ದರೆ ಸಂವೇದಕ ನರದ ಮೂಲಕ ಒದಗುವ ಪ್ರಚೋದಕ ನರಪ್ರಚೋದನೆಗಳನ್ನು ಹೆಚ್ಚಿಸಿ ಹೃದಯ ಮಿಡಿತದ ವೇಗವನ್ನು ಹೆಚ್ಚಿಸಬಹುದು. ಯಾವುದೇ ಒಂದು ಹತೋಟಿಯಿಂದ ಅಗತ್ಯಕ್ಕೆ ತಕ್ಕಷ್ಟು ವೇಗವೃದ್ಧಿಯನ್ನು ಉಂಟುಮಾಡಬಹುದಾದರೂ ದೇಹದಲ್ಲಿ ನೈಸರ್ಗಿಕವಾಗಿ ಕಾಣಬರುವ ಏರ್ಪಾಡು ಎರಡು ಬಗೆ ನರಪ್ರಚೋದನೆಗಳ ಸಮಕಾಲಿಕವಾದ ನಿಯಂತ್ರಣ. ಈ ರೀತಿಯಿಂದ ಎಷ್ಟು ಅವಶ್ಯವೋ ಅಷ್ಟು ವೇಗವಾಗಿ ಹೃದಯ ಮಿಡಿತದ ದರ ಇರುವಂತೆ ಶೀಘ್ರವಾಗಿ ನಿಯಂತ್ರಿಸಬಹುದು. ದೇಹದಲ್ಲಿ ಎಲ್ಲ ಅಪಧಮನಿಗಳಿಗೂ ಸ್ವೇದಗ್ರಂಥಿಗಳಿಗೂ ಸಾಮಾನ್ಯವಾಗಿ ಸಂವೇದಕ ನರಪೂರೈಕೆ ಮಾತ್ರ ಆಗುತ್ತದೆ. ಬಹುಶಃ ಮೂತ್ರಕೋಶದ ಉಂಗುರ ಸ್ನಾಯುವಿಗೂ ಹೀಗೆಯೇ. ಇದಕ್ಕೆ ನರಗಳಿಲ್ಲ. ಜಠರ, ಮೇದೋಜೀರಕಾಂಗ ಇವುಗಳಿಗೂ ಕಣ್ಣಿನ ಪಾಪೆ ಮತ್ತು ಮೂತ್ರಕೋಶಗಳ ಸ್ನಾಯುಗಳಿಗೂ ಅನುಸಂವೇದಕ ನರ ಮಾತ್ರ ಪೂರೈಕೆ ಆಗುತ್ತದೆ ಎನ್ನಲಾಗಿದೆ. ಈ ಸ್ಥಳಗಳಲ್ಲಿ ಸಂವೇದಕ ನರಗಳ ಪೂರೈಕೆ ಆದರೂ ಬಹುಶಃ ಅವುಗಳ ಪ್ರಭಾವ ಬಲು ಕಡಿಮೆ ಆಗಿರುವುದರಿಂದ ಕಾರ್ಯತಃ ಅನುಸಂವೇದಕ ನರ ಪೂರೈಕೆ ಮಾತ್ರ ಇರುವಂತಿದೆ.

ಬೆನ್ನು ಹುರಿನರದ ಇತರ ಕ್ರಿಯಾವಾಹಿಗಳು ಐಚ್ಛಿಕ ಸ್ನಾಯುಗಳಿಗೆ ಪೂರೈಕೆ ಆಗುತ್ತವೆ. ಇವುಗಳಿಂದ ಸ್ನಾಯುಗಳಿಗೆ ಒದಗುವ ಎಲ್ಲ ನರಪ್ರಚೋದನೆಗಳೂ ಸ್ನಾಯುವನ್ನು ಸಂಕೋಚಿಸುವಂಥವು. ಐಚ್ಛಿಕ ಸ್ನಾಯುಗಳಿಗೆ ಶಾಮಕ ಮತ್ತು ಪ್ರಚೋದಕ ಎಂಬ ಎರಡು ರೀತಿಯ ನರಪ್ರಚೋದನೆಗಳಿಲ್ಲ. ಅಂತೆಯೆ ಅವುಗಳಿಗೆ ಯಾವ ಶಾಮಕನರಗಳೂ ಇಲ್ಲ. ಪ್ರಚೋದನೆ ಮುಂದುವರಿಯದಿದ್ದರೆ ತಾನಾಗಿಯೆ ಸ್ನಾಯು ಸಂಕೋಚನ ಅಂತ್ಯವಾಗಿ ಸ್ನಾಯು ಸಡಿಲಗೊಳ್ಳುತ್ತದೆ. ಅಂದರೆ ಐಚ್ಛಿಕ ಕ್ರಿಯೆಯ ನಿಯಂತ್ರಣಕ್ಕೆ ದ್ವಂದ್ವ ಹತೋಟಿ ಇಲ್ಲವೆಂದಾಯಿತು.

ಈ ರೀತಿಯಲ್ಲಿ ಜ್ಞಾನವಾಹಿ ನರತಂತುಗಳು ದೇಹದ ವಿವಿಧ ಭಾಗಗಳಲ್ಲಿರುವ ಜ್ಞಾನಾತ್ಮಕ ಅಂತ್ಯಾಂಗಗಳನ್ನು ಮಿದುಳುಬಳ್ಳಿಯಲ್ಲಿ ಮತ್ತು ಮಿದುಳಿನಲ್ಲಿ ನಿರ್ದಿಷ್ಟ ಜ್ಞಾನಾತ್ಮಕ ಪ್ರದೇಶಗಳಿಗೂ, ಇವುಗಳಿಗೆ ಅನುಗುಣವಾದ ಕ್ರಿಯಾತ್ಮಕ ಪ್ರದೇಶಗಳನ್ನು ಕ್ರಿಯಾವಾಹಿ ನರತಂತುಗಳು ದೇಹದ ವಿವಿಧ ಭಾಗಗಳಲ್ಲಿರುವ ಕ್ರಿಯಾತ್ಮಕ ಅಂತ್ಯಾಂಗಗಳಾದ ಐಚ್ಛಿಕ ಮತ್ತು ಅನೈಚ್ಛಿಕ ಸ್ನಾಯುಗಳು ಹಾಗೂ ನಾಳಯುಕ್ತ ರಸಗ್ರಂಥಿಗಳಿಗೂ ಸಂಪರ್ಕಿಸುವ ಸಾಧನಗಳಾಗಿವೆ. ಇಂಥ ಸಂಪರ್ಕಗಳಿಂದ ದೇಹದ ವಿವಿಧ ಭಾಗಗಳು ಮಿದುಳು ಮತ್ತು ಮಿದುಳುಬಳ್ಳಿಯಲ್ಲಿ ಅವುಗಳಿಗೇ ಮೀಸಲಾಗಿರುವ ಬೇರೆಬೇರೆ ಭಾಗಗಳೊಡನೆ ನಿಕಟ ಸಂಬಂಧ ಹೊಂದಿವೆ. ತತ್ಫಲವಾಗಿ ದೇಹಕಾರ್ಯಗಳ ಸಮನ್ವಯ ಸಾಧ್ಯವಾಗಿದೆ. ಇದೇ ನರಗಳ ಮತ್ತು ನರಮಂಡಲದ ವಿಶಿಷ್ಟ ಕಾರ್ಯಭಾರ. (ಎಸ್.ಆರ್.ಆರ್.)

**ನರ ಮತ್ತು ಮನೋರೋಗ ಔಷಧಶಾಸ್ತ್ರ:** ನರಕೋಶಗಳ ಕ್ರಿಯೆಯ ಮೇಲೆ ಪ್ರಭಾವ ಬೀರುವ ಔಷಧಿಗಳಿಗೆ ಸಂಬಂಧಿಸಿದ ಅಧ್ಯಯನ ನರರೋಗ ಔಷಧಶಾಸ್ತ್ರ (ನ್ಯೂರೊಫಾರ್ಮಕಾಲಜಿ); ಮನೋವಿಕಲತೆ ಮತ್ತು ಭಾವಾವೇಶ ಸಂದರ್ಭಗಳಲ್ಲಿ (ಸೈಕಾಟಿಕ್ ಮತ್ತು ನ್ಯೂರಾಟಿಕ್ ಸ್ಟೇಟ್ಸ್) ಉಪಯುಕ್ತವಾಗುವ ಔಷಧಗಳಿಗೆ ಸಂಬಂಧಿಸಿದ ಅಧ್ಯಯನ ಮನೋರೋಗ ಔಷಧ ಶಾಸ್ತ್ರ (ಸೈಕೊಫಾರ್ಮಕಾಲಜಿ). ಈ ಔಷಧಿಗಳು ಸಾಮಾನ್ಯವಾಗಿ ನರಮಂಡಲದ ಮೇಲೆ ಮಾತ್ರ ಪ್ರಭಾವ ಬೀರುವುದೆಂಬುದು ವ್ಯಕ್ತ. ಇವುಗಳ ಪೈಕಿ ಕೆಲವೊಂದರ ಅನುಭವಜನಿತ ಉಪಯೋಗಗಳು ಹಲವಾರು ಶತಮಾನಗಳಿಂದಲೇ ತಿಳಿದಿವೆ. ಉದಾಹರಣೆಗೆ ಅರಿವಳಿಕಗಳು (ಅನೀಸ್ಥೆಟಿಕ್ಸ್), ನೋವಳಿಕಗಳು (ಅನಾಲ್‌ಜೆಸಿಕ್ಸ್), ಮದ್ಯಸಾರಗಳು (ಅಲ್ಕೊಹಾಲ್ಸ್), ನಿದ್ರಾಜನಕಗಳು (ಹಿಪ್ನಾಟಿಕ್ಸ್) ಇತ್ಯಾದಿ. ಸ್ಟ್ರಿಕ್ನೀನ್, ಕೆಫೀನ್, ಅಂಫಿಟಮೀನ್ ಇತ್ಯಾದಿ ದ್ರವ್ಯಗಳೂ ಬಹುಕಾಲದಿಂದ ಬಳಕೆಯಲ್ಲಿವೆ. ಆದರೆ ಆರೋಗ್ಯಸ್ಥಿತಿಯಲ್ಲಿ ನರಮಂಡಲಚೋದನಕಾರಿಗಳಾದ ಈ ದ್ರವ್ಯಗಳು ಮನೋರೋಗಗಳಿಂದ ಆತಂಕಗೊಂಡ ರೋಗಿಗಳಲ್ಲಿ ಅಷ್ಟೇನೂ ಪರಿಣಾಮಕಾರಿಗಳಾಗಿಲ್ಲ ಮತ್ತು ಅದರ ಚರ್ಯೆಗಳನ್ನು ಉತ್ತಮಪಡಿಸಲು ಸಾಮಾನ್ಯವಾಗಿ ಅನುಕೂಲಕಾರಿಗಳಾಗಿಯೂ ಇಲ್ಲ. ಪ್ರಸಕ್ತ ಶತಮಾನದ ಮಧ್ಯಭಾಗದ ತನಕ ಇಂಥ ಔಷಧಗಳಿಗೆ ಸಂಬಂಧಪಟ್ಟ ವಿಜ್ಞಾನದ ಬೆಳವಣಿಗೆಯ ಸುಳಿವೂ ಇರಲಿಲ್ಲ. ಅನಂತರ ಕೆಲವು ಪ್ರಮುಖ ಮನೋರೋಗಗಳಲ್ಲಿ ಉಪಯುಕ್ತವಾಗಿ ಕಂಡುಬಂದ ರಿಸರ್ಪಿನ್ (ಸರ್ಪಗಂಧಿ) ಮತ್ತು ಕ್ಲೋರ್‌ಪ್ರೋಮಜೀನ್ ಇವುಗಳ ವ್ಯಾಸಂಗದಿಂದ ಈ ಶಾಸ್ತ್ರಗಳು ಆರಂಭವಾದುವು ಎನ್ನಬಹುದು. ಸ್ಕಿಜೊಫ್ರೇನಿಯಾ ಎಂಬ ಮನೋರೋಗಕ್ಕೆ ರಿಸರ್ಪಿನ್ನನ್ನು ಚಿಕಿತ್ಸಕವಾಗಿ ಬಳಸಿದ್ದೇ ಈ ದಿಶೆಯಲ್ಲಿ ಪ್ರಥಮ ಹೆಜ್ಜೆ. ಇದು ಸಮಾಧಾನಕಾರಿ (ಟ್ರ್ಯಾನ್‌ಕ್ವಿಲೈಸರ್) ಎಂಬ ಅಂಶ ಗೊತ್ತಾಯಿತು. ಸ್ಕಿಜೊಫ್ರೇನಿಯವೇ ಅಲ್ಲದೆ ಹಲವಾರು ಬಗೆಯ ಮನೋರೋಗಗಳಲ್ಲಿ ಕೂಡ ಇದು ಉಪಯುಕ್ತವಾಗಿರುವುದು ತಿಳಿಯಿತು. ರಿಸರ್ಪಿನ್ ಅಲ್ಲದೆ ಬೇರೆ ಸ್ವಾಸ್ಥ್ಯಕಾರಿಗಳ ಶೋಧನೆಗಾಗಿ ಅನೇಕ ರಾಸಾಯನಿಕಗಳನ್ನೂ ದ್ರವ್ಯಗಳನ್ನೂ ಪ್ರಾಣಿಗಳ ಮೇಲೆ ಪ್ರಯೋಗಿಸಿ ವ್ಯಾಸಂಗವನ್ನು ಮುಂದುವರಿಸಲಾಗಿದೆ. ಇಂಥ ಸಮಾಧಾನಕಾರಿ ಔಷಧಿಗಳು ಮನೋರೋಗಗಳಲ್ಲಿ ಉಪಯುಕ್ತವಾಗಿವೆ ಎಂಬ ತಿಳಿವಳಿಕೆಯಿಂದ ಮನೋರೋಗಔಷಧಶಾಸ್ತ್ರ ಮಹತ್ತರವಾಗಿ ಅಭಿವೃದ್ಧಿಗೊಳ್ಳುತ್ತಿದೆ.

ತೀವ್ರ ರೀತಿಯ ಮಾನಸಿಕ ಕಾಯಿಲೆಗಳಿಗೆ ಮೊಟ್ಟಮೊದಲ ಪರಿಣಾಮಕಾರಿ ಔಷಧಿಯಾಗಿ ಕ್ಲೋರ್‌ಪ್ರೊಮಜಿನ್ ೧೯೫೦ರಲ್ಲಿ ಬಳಕೆಗೆ ಬಂದಿತು. ನ್ಯೂರೋಲೆಪ್ಟಿಕ್ಸ್ ಅಥವಾ ಮೇಜರ್ ಟ್ರಾನ್‌ಕ್ವಿಲೈಸರ್ಸ್ ಎಂದು ಕರೆಸಿಕೊಂಡ ಫೀನೋತೈಯಾಜೀನ್ಸ್, ಪಿಪರ್‌ಜೀನ್ಸ್, ತೈಯೋಕ್ಸಾಲೀನ್ಸ್, ಬುಟರೋಫೀನ್ನೈನ್ಸ್ ಅನಂತರ ಬಳಕೆಗೆ ಬಂದುವು. ಮೆಂಟಲ್ ಅಸೈಲಮ್‌ಗಳಲ್ಲಿ (ಹುಚ್ಚಾಸ್ಪತ್ರೆ) ಚಿಕಿತ್ಸೆ ಇಲ್ಲದೆ ಕೊಳೆಯುತ್ತಿದ್ದ ಸ್ಕಿಜೋಫ್ರೀನಿಯಾ, ಮೇನಿಯಾ ರೋಗಿಗಳು ಈ ಔಷಧಿಗಳಿಂದ ಉತ್ತಮಗೊಂಡರು. ಅಸೈಲಮ್‌ಗಳಿಂದ

ಬಿಡುಗಡೆ ಪಡೆದರು. ಕೇವಲ ಒಳರೋಗಿ ವ್ಯವಸ್ಥೆ ಇದ್ದ, ಮಾನಸಿಕ ಆಸ್ಪತ್ರೆಗಳಲ್ಲಿ ಹೊರರೋಗಿವಿಭಾಗಗಳು ಅಸ್ತಿತ್ವಕ್ಕೆ ಬಂದುವು. ಮನೋರೋಗಿಗಳು ತಮ್ಮ ಮನೆಯಲ್ಲಿ ಇದ್ದು, ಚಿಕಿತ್ಸೆ ಪಡೆದು ಗುಣಮುಖರಾಗತೊಡಗಿದರು. ಈಗ ಎಟಿಪಿಕಲ್ ಆಂಟಿಸೈಕಾಟಿಕ್ಸ್‌ಗಳಾದ ರಿಸ್ಪಿರಿಡಾನ್, ಓಲಾಂಜೆಪಿನ್, ಜಿಪ್ರೊಸಿಡಾನ್, ಕ್ಲೋಜಪಿನ್, ಅಲಿಪಿಪ್ರಜೋಲ್ ಹೆಚ್ಚು ಬಳಕೆಯಲ್ಲಿವೆ.

ನರರೋಗ ಮತ್ತು ಮನೋರೋಗಗಳ ಚಿಕಿತ್ಸೆಗೆ ಬಳಸುವ ಇನ್ನಿತರ ಔಷಧಗಳಲ್ಲಿ ಖಿನ್ನತೆ ನಿವಾರಕಗಳು (ಆಂಟಿಡಿಪ್ರೆಸೆಂಟ್ಸ್), ನಿದ್ರಾಜನಕಗಳು (ಸೆಡೆಟಿವ್ಸ್), ಭಾವನೆಗಳನ್ನು ಸಮಸ್ಥಿತಿಯಲ್ಲಿಡುವ ಔಷಧಿ, ಆತಂಕಹಾರಿಗಳು (ಆಂಕ್ಸಿಯೋಲೈಟಿಕ್ಸ್) ಇತ್ಯಾದಿ ಗುಂಪುಗಳಿಗೆ ಸೇರಿದುವು ಇವೆ. ಈ ಎಲ್ಲ ಔಷಧದ್ರವ್ಯಗಳೂ ರೋಗಿಯ ಲಹರಿ (ಮೂಡ್) ಮತ್ತು ವರ್ತನೆಗಳನ್ನು (ಬಿಹೇವಿಯರ್) ಬದಲಿಸುವಂಥವು. ಇವು ನರಮಂಡಲದ ಯಾವ ವಿಶಿಷ್ಟ ಭಾಗದಲ್ಲಿ ಮತ್ತು ಹೇಗೆ ಕ್ರಿಯಾಶೀಲವಾಗುತ್ತವೆ ಈಗೀಗ ತಿಳಿಯುತ್ತಿದೆ. ನರವಾಹಕಗಳ ರಿಸೆಪ್ಟಾರ್ಸ್ ಮೇಲೆ ಅವು ಪ್ರಭಾವ ಬೀರುತ್ತವೆ. ಸ್ವತಂತ್ರ ನರಮಂಡಲದ ಮೇಲೆ (ಆಟೊನಾಮಿಕ್ ನರ್ವಸ್ ಸಿಸ್ಟಮ್) ಕೆಲವು ಪ್ರಭಾವ ಬೀರುತ್ತವೆ. ಇದರಿಂದ ಹೃದಯದ ಕ್ರಿಯೆ, ರಕ್ತದ ಒತ್ತಡ, ಕರುಳಿನ ಚಲನವಲನ, ಚರ್ಮದ ಬಣ್ಣ, ಕಣ್ಣಿನ ಪಾಪೆ ಇವುಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಮಿದುಳಿನ ಮೇಲೆ ಕೆಲವು ನೇರವಾಗಿ ವರ್ತಿಸಿ ಅಲ್ಲಿಂದ ಹಲವು ರಾಸಾಯನಿಕಗಳು (ನ್ಯೂರೊಟ್ರಾನ್ಸ್‌ಮಿಟರ್ಸ್) ಬಿಡುಗಡೆಯಾಗುವಂತೆ ಇಲ್ಲವೇ ಅಲ್ಲೇ ತಡೆಹಿಡಿಯುವಂತೆ ಮಾಡುತ್ತವೆ. ಇವು ನರ, ಸ್ನಾಯು ಮತ್ತು ಇತರ ಕೋಶಗಳ ಕ್ರಿಯೆಗಳ ಮೇಲೆ ಪ್ರಭಾವ ಬೀರುವುವೆಂದು ತಿಳಿದಿದೆ. ಅನೇಕ ಔಷಧಗಳು ಮನೋವಿಕಲತೆ (ಸೈಕೊಸಸ್) ಮತ್ತು ಭಾವೋದ್ವೇಗದ ಮನೋರೋಗಗಳಲ್ಲಿ (ನ್ಯೂರೊಸಿಸ್) ಪರಿಣಾಮಕಾರಿ. ಆತಂಕಗೊಂಡ ಮನೋರೋಗಿಗಳನ್ನು ಸ್ವಸ್ಥಗೊಳಿಸುವಲ್ಲಿ, ಉದ್ರೇಕಗೊಂಡ ಮನೋರೋಗಿಗಳನ್ನು ಸಮಾಧಾನ ಮಾಡುವಲ್ಲಿ ಭ್ರಮೆಯನ್ನು ಕಡಿಮೆ ಮಾಡಲು ಮತ್ತು ಭ್ರಮೆಯಿಂದ ಬಳಲುವ ರೋಗಿಗಳನ್ನು ಗುಣಪಡಿಸುವಲ್ಲಿ ಈ ಔಷಧಗಳು ಅತ್ಯುಪಯುಕ್ತವಾಗಿ ಅಂಥ ರೋಗಿಗಳ ಸಂಖ್ಯೆಯನ್ನು ಆಸ್ಪತ್ರೆಗಳಲ್ಲಿ ಕಡಿಮೆ ಮಾಡಲು ಬಹು ಉಪಕಾರಿಗಳಾಗಿರುವುದಂತೂ ನಿಜ.

ಖಿನ್ನತೆ, ಬೇಗುದಿ ತಳಮಳಗಳನ್ನು ಹೋಗಲಾಡಿಸುವ ಔಷಧದ್ರವ್ಯಗಳೂ ಉಂಟು. ಜೀವನದಲ್ಲಿ ಮಾನಸಿಕ ಸಿಡಿಯುವಿಕೆಯ ಅನುಭವವಾಗುವುದು ಅಪರೂಪವಲ್ಲ. ಈ ಸ್ಥಿತಿಯಲ್ಲಿ ಹಲವು ಟಿಪಿಕಲ್ ಮತ್ತು ಎಟಿಪಿಕಲ್ ಆಂಟಿ ಸೈಕಾಟಿಕ್ ಔಷಧಗಳು ಮಾತ್ರೆ, ಸಿರಪ್ ಮತ್ತು ಸೂಜಿರೂಪದಲ್ಲಿ ಲಭ್ಯವಿದ್ದು ವರಪ್ರದವಾಗಿರುವುವು. ಇಂಥ ಎಲ್ಲ ಔಷಧಗಳನ್ನೂ ಅಧಿಕ ಪ್ರಮಾಣದಲ್ಲಿ ದೀರ್ಘಕಾಲಿಕವಾಗಿ ಬಳಸಬೇಕಾಗುವ ಸಂದರ್ಭಗಳು ಅನೇಕ ಉಂಟು. ಆದರೆ ಹಾಗೆ ಬಳಸುವುದರಿಂದ ಸಾಮಾನ್ಯವಾಗಿ ಚಟ ಹತ್ತುವುದಾಗಲಿ ನಂಜು (ಟಾಕ್ಸಿಸಿಟಿ) ಏರುವುದಾಗಲಿ, ಅಥವಾ ಬೇರೆ ವಿಧದ ದುಷ್ಪರಿಣಾಮಗಳಾಗಲಿ ಕಂಡುಬಂದಿಲ್ಲ.

ಮನೋರೋಗ ಚಿಕಿತ್ಸೆಗಾಗಿ ಪುರಾತನ ಕಾಲದಿಂದ ಆಚರಣೆಯಲ್ಲಿದ್ದ ಅಮಾನುಷ ದೈಹಿಕ ವಿಧಾನಗಳನ್ನು ತೊಡೆದುಹಾಕಿ, ಮಾನಸಿಕ ರೋಗಗಳನ್ನು ಸರ್ವೇಸಾಮಾನ್ಯವಾದ ದೈಹಿಕ ರೋಗಗಳಂತೆ ಮಾನವತೆಯ ಆಧಾರದ ಮೇಲೆ ಚಿಕಿತ್ಸೆಮಾಡಲು ಈ ನರರೋಗ ಔಷಧಗಳು ಮತ್ತು ಮನೋರೋಗ ಔಷಧಗಳು ಒಂದು ಪವಾಡವನ್ನೇ ಮಾಡಿದಂತಾಗಿವೆ. ಇತ್ತೀಚೆಗೆ ಮನೋರೋಗಿಗಳನ್ನು ಅವರವರ ಮನೆಯಲ್ಲಿ ಇಟ್ಟುಕೊಂಡು ಉಪಚರಿಸಿ ಶುಶ್ರೂಷೆಮಾಡಿ ಗುಣಪಡಿಸಲು ಈ ಔಷಧಗಳು ಮಹಾವರಗಳೇ ಆಗಿವೆ. ಮನೋರೋಗಕ್ಕೆ ಮದ್ದಿಲ್ಲ ಎಂಬ ನಾಣ್ಣುಡಿ ಈಗ ಸುಳ್ಳಾಗಿದೆ. (ಎನ್.ಬಿ.ಎಸ್.)

**ನರಮಂಡಲ:** ಜೀವಿಯು ತನ್ನ ಹೊರ ಅಥವಾ ಒಳ ಆವರಣದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಗುರುತಿಸಿ ಅವಕ್ಕೆ ತಕ್ಕಂತೆ ಜೀವಿಗೆ ಅನುಕೂಲವಾಗುವ ಪ್ರತಿಕ್ರಿಯೆಗಳನ್ನು ಕಲ್ಪಿಸಿ, ಕ್ರಿಯೆ ಜರಗುವ ದೇಹಭಾಗಗಳಿಗೆ ಪ್ರತಿಕ್ರಿಯಾದೇಶಗಳನ್ನು ಒಯ್ಯುವ ಅಂಗಗಳ ಸಮೂಹ (ನರ್ವಸ್ ಸಿಸ್ಟಮ್). ಪ್ರಪಂಚದಲ್ಲಿ ಇಂದು ಅಸ್ತಿತ್ವದಲ್ಲಿರುವ ಅತ್ಯಂತ ಪ್ರಾಚೀನ ಜೀವಿಗಳು ಕಾಲಾನಂತರ ವಿಕಸಿಸಿದವುಗಳಿಗಿಂತ ಸುಲಭ ರಚನೆಯುಳ್ಳವಾಗಿಯೂ ಸಣ್ಣವಾಗಿಯೂ ಇವೆಯಷ್ಟೆ. ಏಕಕೋಶಿಕವಾದ ಅಮೀಬದಲ್ಲಿ ಚಲನೆ, ದೃಷ್ಟಿ, ಆಹಾರ ಪಚನ ಮುಂತಾದುವಕ್ಕೆಂದೇ ಮೀಸಲಾದ ವಿಶಿಷ್ಟ ಅಂಗಗಳಿಲ್ಲ. ಅದರ ಮೇಲ್ಮೈಯ ಯಾವ ಭಾಗವನ್ನು ಮುಟ್ಟಿ ಪ್ರಚೋದಿಸಿದರೂ ಒಂದೇ ರೀತಿಯ ಪ್ರತಿಕ್ರಿಯೆ ಉಂಟಾಗುವುದಲ್ಲದೆ ಆ ಪ್ರತಿಕ್ರಿಯೆ ಪೂರ್ತಿಯಾಗಿ ಕೋಶವನ್ನು ಆವರಿಸುತ್ತದೆ.

ವಿಕಾಸಕ್ರಮದಲ್ಲಿ ಬಹುಕೋಶಿಕ ಜೀವಿಗಳು ಉದ್ಭವಿಸಿದ ತರುವಾಯ ಕೋಶ ಕ್ರಿಯೆಗಳಲ್ಲಿ ಬಗೆಬಗೆಯ ವೈಶಿಷ್ಟ್ಯಗಳು ಉದ್ಭವಿಸಿದವು. ಉದಾಹರಣೆಗೆ ಸ್ಪಂಜಿನಲ್ಲಿ ದೇಹದಿಂದ ನೀರನ್ನು ಹೊರ ಹಾಕಲು ನರಕೋಶದಂತೆಯೂ ಸ್ನಾಯು ಕೋಶದಂತೆಯೂ ಕೂಡಿಯೇ ಕ್ರಿಯೆ ಇರುವ ವಿಶಿಷ್ಟ ಕೋಶಗಳಿವೆ. ಆದರೆ, ಇವು ಹೆಚ್ಚೂ ಕಡಿಮೆ ಒಂದಕ್ಕೊಂದು ಸಂಬಂಧವಿಲ್ಲದಂತೆ ವರ್ತಿಸುವುವು. ಸ್ಪಂಜಿಗಿಂತ ಹೆಚ್ಚು ವಿಕಸಿತವಾದ ಚಪ್ಪಟೆ ಹುಳುಗಳಲ್ಲಿ (ಫ್ಲ್ಯಾಟ್ ವರ್ಮ್) ನಿರ್ದಿಷ್ಟ ನರಕೋಶಗಳುಂಟು. ಅವೆಲ್ಲ ಸಂಪರ್ಕಗೊಂಡು ನರರಜ್ಜುಗಳಾಗಿವೆ (ನರ್ವ್ ಕಾರ್ಡ್ಸ್). ಜೊತೆಗೆ ಕೆಲವು ನರಕೋಶಗಳು ಗುಂಪಾಗಿ ಸೇರಿ ಪ್ರಾಚೀನ ಮಿದುಳು ಎನ್ನಿಸಿಕೊಳ್ಳಬಲ್ಲ ಅಂಗವಾಗಿಯೂ ಮಾರ್ಪಟ್ಟಿವೆ. ಎರೆ ಹುಳುವಿನಲ್ಲಿ ಇದೇ ರೀತಿ ಇದ್ದರೂ ಮಿದುಳು ಇನ್ನೂ ಹೆಚ್ಚು ಅಭಿವೃದ್ಧಿ ಹೊಂದಿದೆ. ಅದರಲ್ಲಿ ಮಿದುಳಿನಂತಿರುವ ನರಕೋಶಗಳ ಗುಂಪಿನಿಂದ ಎರಡು ನರಗಳು ಹೊರಟು ಹುಳುವಿನ ಮುಂತುದಿಯನ್ನು ಸೇರುತ್ತವೆ. ಇವು ನೇತ್ರಬಿಂದುಗಳು (ಐಸ್ಪಾಟ್ಸ್). ಈ ಸ್ಥಳಗಳ ಮೇಲೆ ಬೆಳಕು ಬಿದ್ದಾಗ ಸಮಾಚಾರ ಮಿದುಳಿನೆಡೆಗೆ ಒಯ್ಯಲ್ಪಡುತ್ತದೆ. ನೇತ್ರಬಿಂದುಗಳು ಹೆಚ್ಚಿನ ಕ್ರಿಯೆ ಏನನ್ನೂ ತೋರಿಸಲಾರವು. ಅವು ಕಣ್ಣುಗಳಲ್ಲ. ಅವುಗಳಿಂದ ದೃಷ್ಟಿ ಲಾಭವಿಲ್ಲ. ಇವೆಲ್ಲದರಿಂದ ಅರ್ಥವಾಗುವುದು ಇಷ್ಟು ; ವಿಕಾಸ ವರ್ಧಿಸಿದಂತೆಲ್ಲ ಅಂಗಗಳಲ್ಲಿ ಜಟಿಲತೆ ಉಂಟಾಗುವುದು. ಅವುಗಳಿಗೆ ವಿಶಿಷ್ಟ ಕ್ರಿಯೆಗಳು ಇರುವುದು ಕಂಡುಬರುತ್ತದೆ. ಅವೆಲ್ಲವನ್ನೂ ನರಮಂಡಲ ಅನುಕರಿಸುತ್ತದೆ. ನರಮಂಡಲದ ವಿಕಾಸದ ಸಂಕ್ಷಿಪ್ತ ಕಥೆ ಇದೇ. ನಡುವಣ ಹಂತಗಳನ್ನು ಬಿಟ್ಟು ಉನ್ನತ ದರ್ಜೆಯ ಪ್ರಾಣಿಗಳ ನರಮಂಡಲವನ್ನು ಮುಂದೆ ವಿವರಿಸಿದೆ.

ಮಾನವರಲ್ಲಿ ನರಮಂಡಲವನ್ನು ಕೇಂದ್ರ ನರಮಂಡಲ, (ಸೆಂಟ್ರಲ್ ನರ್ವಸ್ ಸಿಸ್ಟಮ್) ಮತ್ತು ಸ್ವತಂತ್ರ ನರಮಂಡಲವೆಂಬ (ಆಟೋನಾಮಿಕ್ ನರ್ವಸ್ ಸಿಸ್ಟಮ್) ಬೇರೆ ಬೇರೆ ವಿಶಿಷ್ಟ ಕ್ರಿಯೆಗಳುಳ್ಳ ಭಾಗಗಳಾಗಿ ವಿಂಗಡಿಸಿದ್ದಾರೆ. ಕೇಂದ್ರ ನರಮಂಡಲದಲ್ಲಿ ಮಿದುಳು, ಮಿದುಳು ಬಳ್ಳಿ (ಸ್ಪೈನಲ್ ಕಾರ್ಡ್), ನರಗಳು ಹಾಗೂ ಜ್ಞಾನೇಂದ್ರಿಯಗಳು (ಸೆನ್ಸರಿ ಆರ್ಗನ್ಸ್) ಇವೆ. ನರ ಒಮ್ಮೆಗೇ ಅನೇಕ ಸಂದೇಶಗಳನ್ನು ಒಯ್ಯಲಾರದು. ಪ್ರತಿಸಲವೂ ಒಂದು ಸಂದೇಶವನ್ನು ಮಾತ್ರ ಒಯ್ಯಬಲ್ಲುದು. ಜ್ಞಾನೇಂದ್ರಿಯಗಳಿಂದ ಸಂಗ್ರಹಿತವಾಗಿ ಒಳಮುಖವಾಗಿ ಮಿದುಳಿಗೆ ಒಯ್ಯಲ್ಪಡುವ ಸಂದೇಶಗಳೂ, ಮಿದುಳು, ಮಿದುಳು ಬಳ್ಳಿಗಳಿಂದ ಹೊರಟು ಹೊರಮುಖವಾಗಿ ಸ್ನಾಯುಗಳಿಗೆ ಒಯ್ಯಲ್ಪಡುವ ಸಂದೇಶಗಳೂ, ವಿದ್ಯುತ್ ಸ್ಪಂದನಗಳಾಗಿ ಮಾರ್ಪಡುತ್ತವೆ. ಇವೇ ನರಪ್ರಚೋದನೆಗಳು (ನರ್ವ್ ಇಂಪಲ್ಸಸ್). ನರಪ್ರಚೋದನೆಗಳನ್ನು ಕೇಂದ್ರಕ್ಕೆ ಒಯ್ಯುವ ನರಗಳಿಗೆ ಅಭಿವಾಹಿ ಸಂವೇದನಾ ನರಗಳೆಂದೂ (ಅಫರೆಂಟ್, ಸೆನ್ಸರಿ ನರ್ವ್) ಹೊರಕ್ಕೆ ಒಯ್ಯುವ ನರಗಳಿಗೆ ಅಪವಾಹಿ ಚಾಲಕನರಗಳೆಂದೂ (ಇಫರೆಂಟ್, ಮೋಟರ್ ನರ್ವ್) ಹೆಸರು. ಮಿದುಳಿನಲ್ಲಾಗಲೀ ಮಿದುಳು ಬಳ್ಳಿಯಲ್ಲಾಗಲೀ ನರಗ್ರಂಥಿಯಲ್ಲಾಗಲೀ, (ಗ್ಯಾನ್‌ಗ್ಲಿಯಾನ್) ಇರುವ ಪ್ರತಿಯೊಂದು ನರಕೋಶಕ್ಕೂ ತಂತುವಿನಂಥ ಚಾಚು (ಆಕ್ಸಾನ್) ಉಂಟು. ಇದೇ ನರಪ್ರಚೋದನೆಯನ್ನು ಒಯ್ಯುವ ನರ. ಬಹುತೇಕ ನರಗಳು ಹೊರ ಹೊರಡುವುದಕ್ಕೆ ಮುನ್ನ ಮಿದುಳುಬಳ್ಳಿಯ ಮೂಲಕ ಹಾಯಬೇಕು. ಮಿದುಳು ಬಳ್ಳಿ ಬೆನ್ನುಮೂಳೆಯಲ್ಲಿ ಸುರಕ್ಷಿತವಾಗಿ ಅಡಗಿದೆ.

ಕೇಂದ್ರ ನರಮಂಡಲದ ಮುಖ್ಯ ಭಾಗ ಮಿದುಳು. ಇದರಲ್ಲಿ ನರಕೋಶಗಳೇ ಪ್ರಧಾನ. ಇವು ಸಂಖ್ಯಾವೃದ್ಧಿಯನ್ನು ತೋರಲಾರವು. ಆದ್ದರಿಂದ ಒಂದು ನರಕೋಶವು ಸತ್ತು ಹೋದರೆ, ಮೂಳೆ ಅಥವಾ ರಕ್ತದಲ್ಲಿ ಆಗುವಂತಲ್ಲದೇ ಅದರ ಜಾಗದಲ್ಲಿ ಇನ್ನೊಂದು ಕೋಶದ ಸೃಷ್ಟಿ ಆಗದು. ಮಿದುಳಿನಲ್ಲಿ ಬಲು ದೊಡ್ಡ ಹಾಗೂ ಮುಖ್ಯವಾದ ಭಾಗ ಮಹಾಮಸ್ತಿಷ್ಕ (ಸೆರಿಬ್ರಮ್). ತರುವಾಯ ಉಪ ಮಸ್ತಿಷ್ಕ (ಸೆರಿಬೆಲ್ಲಮ್), ಕೊನೆಗೆ ಮಿದುಳುಬಳ್ಳಿಯಾಗಿ ಲಂಬಿಸುವ ಮೆಡುಲ್ಲ ಅಬ್ಲಾಂಗೇಟ.

ಮಾನವರ ನರಮಂಡಲ ಕ್ರಿಯೆಯಲ್ಲಿ ಮಹಾಮಸ್ತಿಷ್ಕದ ರಗಟೆಯ (ಕಾರ್ಟೆಕ್ಸ್) ಪಾತ್ರವೇ ಪ್ರಧಾನ. ಈ ರಗಟೆ ಬಲುಕಾಲವಾದ ಮೇಲೆ ವಿಕಸಿಸಿದ ಭಾಗ. ಆದ್ದರಿಂದ ಕೆಳದರ್ಜೆ ಪ್ರಾಣಿಗಳಲ್ಲಿ ಮಸ್ತಿಷ್ಕದ ರಗಟೆ ಭಾಗದ ನರಕೋಶಗಳು ಆ ಪ್ರಾಣಿಗಳ ಒಳಭಾಗದಲ್ಲಿರುವ ಕೋಶಗಳಿಗಿಂತ ಭಿನ್ನವಾಗಿಲ್ಲ. ಅಲ್ಲದೇ ರಗಟೆಯ ಮೇಲ್ಮೈ ನುಣುಪಾಗಿಯೂ ಇದೆ. ಆದರೆ, ಮಾನವರ ಮಹಾಮಸ್ತಿಷ್ಕದ ಮೇಲ್ಮೈ ವಿಶಿಷ್ಟವಾದ ಡೊಂಕುಮಡಿಕೆಗಳಿಂದ (ಗೈರೈ) ಕೂಡಿದೆ. ಇಂಥ ರಚನೆಯಿಂದ ಮೇಲ್ಮೈ ಕ್ಷೇತ್ರ ಪ್ರಮಾಣ ಹೆಚ್ಚಿ ಅಲ್ಲಿ ಗಾತ್ರದಲ್ಲಿ ಅಧಿಕ ಕೋಶಗಳು ಅಡಗಿರಲು ಸಾಧ್ಯವುಂಟು. ಮಹಾಮಸ್ತಿಷ್ಕದ ಪ್ರತಿ ಅರ್ಧಗೋಳವನ್ನೂ ನಡುಸೀಳು (ಸೆಂಟ್ರಲ್ ಸಲ್ಕಸ್) ಹೆಚ್ಚು ಕಡಿಮೆ ಒಂದೇ ರೀತಿಯಾಗಿ ಕಾಣುವ ಮುಂಭಾಗಗಳಾಗಿ ವಿಭಜಿಸಿದೆ. ಮುಂಭಾಗಕ್ಕೆ ಮುಂದಿನ ಹಾಲೆ (ಫ್ರಾಂಟಲ್ ಲೋಬ್) ಎಂದೂ ಸೀಳಿನ ಹಿಂದಿರುವ ಭಾಗಕ್ಕೆ ಹೊರಹಾಲೆ (ಪೆರೈಟಲ್ ಲೋಬ್) ಎಂದೂ ಹೆಸರು. ಹೊರಹಾಲೆಗಿಂತ ಇನ್ನೂ ಹಿಂದಿರುವ ಭಾಗಕ್ಕೆ ಹಿಂದಲೆಹಾಲೆ (ಆಕ್ಸಿಪಿಟಲ್ ಲೋಬ್) ಎಂದೂ ಕೆಳ ಮತ್ತು ಪಕ್ಕದಲ್ಲಿ ಇರುವ ಭಾಗಕ್ಕೆ ಕಪೋಲಹಾಲೆ (ಟೆಂಪೋರಲ್ ಲೋಬ್) ಎಂದೂ ಹೆಸರು.

ಬಲುಮುಖ್ಯ ಅಂಗವೇ ಆದ ಮಹಾಮಸ್ತಿಷ್ಕದ ರಗಟೆ ಕೇಂದ್ರ ಅಂಚೆ ಕಚೇರಿಯನ್ನು ನೆನಪಿಗೆ ತರುವಂತೆ ಇದೆ. ಅದಕ್ಕಿಂತಲೂ ಮಿಗಿಲು ಎಂದೇ ಹೇಳಬಹುದು. ರಗಟೆಯಲ್ಲಿ ವಿಶಿಷ್ಟ ಕ್ರಿಯೆಗಳಿಗೆ ಮೀಸಲಾದ ವಿಶಿಷ್ಟ ಕ್ಷೇತ್ರಗಳಿವೆ. ಉದಾಹರಣೆಗೆ, ದೃಷ್ಟಿಕ್ರಿಯೆಯ ಕ್ಷೇತ್ರ ಹಿಂದಲೆಹಾಲೆಯ ಅತ್ಯಂತ ಹಿಂಭಾಗದಲ್ಲಿ ಉಪಸ್ಥಿತವಾಗಿದೆ. ಕಣ್ಣುಗುಡ್ಡೆಯಿಂದ ಹೊರಟ ನರಪ್ರಚೋದನೆ ಇಲ್ಲಿ ಅಂತ್ಯಗೊಳ್ಳುವುದು. ಈ ಸ್ಥಳ ರೋಗದಿಂದ ಹಾನಿಗೊಂಡಾಗ ಇಲ್ಲವೇ ಇದನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಿದಾಗ ವ್ಯಕ್ತಿಯ ಕಣ್ಣುಗಳು ಮಾಮೂಲಿನಂತೆ ಕ್ರಿಯಾಗತವಾಗಿದ್ದರೂ, ನರ ಮಾರ್ಗ ಅವಿಚ್ಛಿನ್ನವಾಗಿದ್ದರೂ ವ್ಯಕ್ತಿ ಕುರುಡಾಗುವುದು ನಿಜ. ಹೀಗೆಯೇ ಶ್ರವಣಕ್ಕೆ ಮೀಸಲಾದ ಸ್ಥಳ, ಸ್ಪರ್ಶಕ್ಕೆ ಮೀಸಲಾದ ಸ್ಥಳ ಇತ್ಯಾದಿ ಇವೆ. ಇವೆಲ್ಲ ಒಂದಲ್ಲ ಒಂದು ಸಂವೇದನೆಯನ್ನು ಅನುಭವ ಮಾಡಿಕೊಡುವ ಸ್ಥಳಗಳಾಗಿದ್ದರಿಂದ ಇವೆಲ್ಲಕ್ಕೂ ಒಟ್ಟಿಗೆ ಸಂವೇದನಾ ಕ್ಷೇತ್ರವೆಂದು (ಸೆನ್ಸರಿ ಏರಿಯಾ) ಹೆಸರಿದೆ. ಇದೇ ರೀತಿ ಒಂದಲ್ಲ ಇನ್ನೊಂದು ಅಂಗದ ಚಲನೆಗೆ ಕಾರಣಭೂತವಾದ ಕ್ಷೇತ್ರಗಳಿಗೆ ಚಾಲಕಕ್ಷೇತ್ರಗಳೆಂಬ (ಮೋಟರ್ ಏರಿಯಾಸ್) ಹೆಸರುಂಟು. ಮಹಾಮಸ್ತಿಷ್ಕ ಸಂವೇದನಾನುಭವ ಹಾಗೂ ಚಾಲಕಕ್ರಿಯೆಗಳ ನೆಲೆಯಾಗಿರುವುದಲ್ಲದೇ, ಯೋಚನೆ, ತರ್ಕ ಮುಂತಾದ ಉಚ್ಚ ಮಾನಸಿಕ ಕ್ರಿಯೆಗಳಿಗೆ ಹೊಣೆಯೂ ಆಗಿದೆ.

ಮಸ್ತಿಷ್ಕದ ಕಾರ್ಯಕ್ಷೇತ್ರಗಳನ್ನು ಪ್ರತ್ಯೇಕವಾಗಿ ಗುರುತಿಸಲೂ ಅವು ಯಾವ ಅಂಗಕ್ಕೆ ಸಂಬಂಧಿಸಿವೆ ಎಂಬುದನ್ನು ಪತ್ತೆ ಮಾಡಲೂ ಅನೇಕ ವಿಧಾನಗಳಿವೆ. ಇವುಗಳಲ್ಲಿ ವಿದ್ಯುತ್ತಿನಿಂದ ಮಿದುಳಿನ ನಿರ್ದಿಷ್ಟ ಸ್ಥಳವನ್ನು ಪ್ರಚೋದಿಸುವುದೂ ಒಂದು. ಮುಂದಿನ ಹಾಲೆ ಮತ್ತು ಹೊರ ಹಾಲೆಗಳನ್ನು ವಿಭಜಿಸುವ ನಡುಸೀಳಿನ ಒತ್ತಿನಲ್ಲಿ ಎರಡು ಅರ್ಧಗೋಳಗಳಲ್ಲಿಯೂ ಕಾಲು ಬೆರಳುಗಳ ಚಲನೆಗೆ ಕಾರಣವಾದ ಒಂದೊಂದು ಚಿಕ್ಕ ಕ್ಷೇತ್ರ ಉಂಟು. ಯಾವುದೇ ಕ್ಷೇತ್ರವನ್ನು ವಿದ್ಯುತ್ತಿನಿಂದ ಪ್ರಚೋದಿಸಿದಾಗ ದೇಹದ ವಿರುದ್ಧ ಭಾಗದ ಕಾಲು ಬೆರಳುಗಳು ಅಲುಗಾಡುತ್ತವೆ.

ಉಪಮಸ್ತಿಷ್ಕ ತಲೆಯ ಹಿಂಭಾಗದಲ್ಲಿ ಮಹಾಮಸ್ತಿಷ್ಕದ ಬುಡದಲ್ಲಿ ಇದೆ. ಇದೂ ಮಿದುಳಿನ ಭಾಗವೇ ಆಗಿದ್ದರೂ ಉಚ್ಚ ಮಾನಸಿಕ ಕ್ರಿಯೆಗಳಿಗೆ ಏನೂ ಸಂಬಂಧಪಟ್ಟಿಲ್ಲ. ಉಪಮಸ್ತಿಷ್ಕ ಮುಖ್ಯವಾಗಿ ನಿಲವಿನ ಭಂಗಿ (ಪಾಶ್ಚರ್) ಹಾಗೂ ನಡೆಯುವ ರೀತಿ ಅಥವಾ ಠೀವಿಗೆ (ಗೆಯ್ಟ್) ಹಾಗೂ ಸಮತೋಲನ ಚಲನೆಗೆ ಸಂಬಂಧಪಟ್ಟಿದೆ. ಶಸ್ತ್ರಕ್ರಿಯೆಯಿಂದ ಉಪಮಸ್ತಿಷ್ಕವನ್ನು ಕಳೆದುಕೊಂಡು ಅನಂತರ ಚೇತರಿಸಿಕೊಂಡಿರುವ ಇಲಿಯಲ್ಲಿ ಇಲ್ಲವೇ ಪಾರಿವಾಳದಲ್ಲಿ ಸಮತೋಲ ತಪ್ಪಿರುವುದೂ ಅಮಲೇರಿದಂತೆ ನಡೆಯುವುದೂ ಕಂಡುಬರುವುದು.

ಬೆನ್ನುಮೂಳೆಯಲ್ಲಿ ಮಿದುಳು ಬಳ್ಳಿಯಾಗಿ ಮುಂದುವರಿಯುವ ಮೆಡುಲ್ಲ ಅಂಬ್ಲಾಗೇಟ ಎಂಬ ಭಾಗ, ಉಸಿರಾಟ, ರಕ್ತ ಪರಿಚಲನೆ ಮುಂತಾದ ಕ್ರಿಯೆಗಳ ಮೂಲಸ್ಥಾನ. ಮೆಡುಲ್ಲ ಒಂದು ಪ್ರತ್ಯೇಕ ಅಂಗವಾಗಿರದೇ ಮೇಲೆ ಮಿದುಳಿನ ಬೇರೆ ಭಾಗಗಳಿಗೆ ಸೇರಿಸುವ ಮಧ್ಯ ಮಸ್ತಿಷ್ಕದೊಡನೆ (ಮಿಡ್ ಬ್ರೆಯ್ನ್) ಅಖಂಡವಾಗಿದೆ. ಮೆಡುಲ್ಲ, ಮಧ್ಯ ಮಸ್ತಿಷ್ಕಗಳಿಗೆ ಒಟ್ಟಿಗೆ ಮಿದುಳು ಕಾಂಡ (ಬ್ರೆನ್ ಸ್ಟೆಮ್) ಎಂದು ಹೆಸರು. ಇದರ ಅಗ್ರಭಾಗ ತೆಲಮಸ್. ಇದೊಂದು ರಿಲೆಸ್ಟೇಶನ್ ಇದ್ದ ಹಾಗೆ. ಸಂವೇದನಾನುಭವ ಕ್ರಿಯೆಯಲ್ಲಿ ತೆಲಮಸ್ ಮತ್ತು ಮಹಾಮಸ್ತಿಷ್ಕದ ರಗಟೆಗಳು ಜಂಟಿಯಾಗಿ ಒಂದೇ ಅಂಗದಂತೆ ಕೆಲಸ ಮಾಡುತ್ತವೆ ಎಂದು ಈಗ ನಂಬಲಾಗಿದೆ. ತೆಲಮಸ್ಸಿನ ಅಡಿಯಲ್ಲಿ ಇರುವುದು ಹೈಪೋತೆಲಮಸ್. ಇದು ಹಸಿವು, ನೀರಡಿಕೆ ಮುಂತಾದ ಒಳಾಂಗಗಳ ಕಾರ್ಯಾಚರಣೆಯ ನಿಯಂತ್ರಣದಲ್ಲಿ ಉದ್ಯುಕ್ತವಾಗಿದೆ. ಉದಾಹರಣೆಗೆ ಹಸಿವಾದಾಗ ವಾಸ್ತವವಾಗಿ ಜಠರದ ಸ್ನಾಯುಗಳು ಮೇಲಿಂದ ಮೇಲೆ ಸಂಕೋಚಿಸುತ್ತ ತೀವ್ರ ಕ್ಷುದ್ಬಾಧೆಯನ್ನು ಉಂಟುಮಾಡುವುವು. ಜಠರ ಸ್ನಾಯುಗಳ ಸಂಕೋಚನೆಯೂ ಕ್ಷುದ್ಬಾಧೆಯೂ ಹೈಪೋತೆಲಮಸ್ಸಿನಲ್ಲಿರುವ ನರಕೇಂದ್ರಗಳಿಂದ (ನ್ಯೂಕ್ಲಿಯೈ) ನಿಯಂತ್ರಿತವಾದುವು. ಈ ನರಕೇಂದ್ರಗಳನ್ನು ಪ್ರಚೋದಿಸಿದರೆ, ಜಠರದ ಸ್ನಾಯು ಸಂಕೋಚನವೇ ಅಲ್ಲದೇ ಹಸಿವೂ ಕಡಿಮೆ ಆಗುತ್ತದೆ. ಈ ಕೇಂದ್ರಗಳಿಗೂ ನರಮಂಡಲದ ಇತರ ಭಾಗಗಳಿಗೂ ಇರುವ ಸಂಪರ್ಕ ಕಡಿಯಲ್ಪಟ್ಟರೆ ಜಠರದ ಸಂಕೋಚನಗಳು ಇದ್ದಕ್ಕಿದ್ದಂತೆ ಹೆಚ್ಚುವುವಲ್ಲದೇ ಮುಕ್ಕಿರಿದು ತಿನ್ನುವಂತೆ ಕೂಡ ಆಗುತ್ತದೆ. ಇಂಥ ಸ್ಥಿತಿಯಲ್ಲಿರುವ ಪ್ರಾಣಿಗಳು ಅವುಗಳ ಗಾತ್ರದ ಮೂರರಷ್ಟು ಆಹಾರವನ್ನು ಮುಕ್ಕಬಹುದು. ಭಾವೋದ್ರೇಕವನ್ನು ಹೊರಪಡಿಸಲು ಕೂಡ ಹೈಪೋತೆಲಮಸ್ ಕಾರಣವಾಗಿದೆ. ಹೈಪೋತೆಲಮಸ್ಸಿನ ನಿರ್ದಿಷ್ಟ ಭಾಗಗಳನ್ನು ವಿದ್ಯುತ್ತಿನಿಂದ ಪ್ರಚೋದಿಸಿದಾಗ ರೇಗುವುದು, ಕೋಪಗೊಳ್ಳುವುದು ಇತ್ಯಾದಿ ಹೊರಸೂಚನೆಗಳು ಕಂಡುಬರುತ್ತವೆ. ಇಂಥ ಸ್ಥಿತಿಯಲ್ಲಿರುವ ಬೆಕ್ಕು ಕಮಾನಿನಂತೆ ಬೆನ್ನು ಬಗ್ಗಿಸಿ, ಕೂದಲನ್ನು ನಿಮಿರಿಸಿ, ಹಲ್ಲು ಕಡಿದು ಕೋಪದಿಂದ ಗುರುಗುಟ್ಟುವುದುಂಟು.

ಸ್ವತಂತ್ರ ನರಮಂಡಲ : ನಾವು ಬಾಹ್ಯ ಪರಿಸ್ಥಿತಿಗೆ (ಎಕ್ಸ್‌ಟರ್ನಲ್ ಎನ್ವೈರನ್‌ಮೆಂಟ್) ಒಗ್ಗಿಕೊಳ್ಳಲು ನಮಗೆ ಅಗತ್ಯವಾದ ಹೊಂದಾಣಿಕೆಗಳು ಕೇಂದ್ರ ನರಮಂಡಲದ ಆಣತಿಗಳಂತೆ ಜರಗುತ್ತವೆ. ಉದಾಹರಣೆಗೆ ಕಣ್ಣಿನ ಮೇಲೆ ಬಿಸಿಲು ಬಿದ್ದಾಗ ತಲೆ ಒತ್ತಟ್ಟಿಗೆ ತಿರುಗುವುದು ಕೇಂದ್ರ ನರಮಂಡಲದ ಕ್ರಿಯೆಯಿಂದ. ಹೀಗೆಯೇ ನಾವು ಬಾಹ್ಯಾವರಣದ ಪ್ರಚೋದನೆಗಳಿಗೆ ನೂರಾರು ರೀತಿಯಲ್ಲಿ ಹೊಂದಿಕೊಳ್ಳುತ್ತೇವೆ. ಬಾಹ್ಯಾವರಣದಂತೆಯೇ ಗಣನೆಗೆ ತೆಗೆದುಕೊಳ್ಳಬೇಕಾದುದು ಆಂತರಿಕಾವರಣ. ಅಪಾಯದಿಂದ ಪಾರಾಗಲೆಂದು ಓಡಿ ಹೋಗುವಾಗ ಕೈಕಾಲು, ಮುಂಡಗಳ ಸ್ನಾಯುಗಳು ಹೆಚ್ಚಾಗಿ ಕೆಲಸ ಮಾಡಬೇಕಾಗಿ ಬಂದು ರಕ್ತ ಒದಗಿಸುತ್ತಿರುವ ಶಕ್ತಿ ಮೂಲವಸ್ತು ಸಾಲದೇ ಹೋಗುತ್ತದೆ. ಆದ್ದರಿಂದ ಇಂಥ ವೇಳೆ ಅಗತ್ಯವಾದಷ್ಟು ಮೂಲವಸ್ತುವನ್ನು ಸರಬರಾಜು ಮಾಡಲು ಎದೆಗುಂಡಿಗೆ ತ್ವರೆಯಿಂದ ಮಿಡಿಯಬೇಕು ಮತ್ತು ಗ್ಲೈಕೋಜೆನ್ ಗ್ಲೂಕೋಸ್ ಪರಿವರ್ತನೆಗೊಂಡು ಯಕೃತ್ತಿನಿಂದ ಬಿಡುಗಡೆ ಆಗಬೇಕು. ಇಷ್ಟೇ ಅಲ್ಲ, ಹೆಚ್ಚುಹೆಚ್ಚಾಗಿ ಶೇಖರಣೆಗೊಳ್ಳುವ ಇಂಗಾಲದ ಡೈಆಕ್ಸೈಡನ್ನು ಫುಪ್ಫುಸಗಳು ವಿಸರ್ಜಿಸಲೂ ಬೇಕು. ಇವಕ್ಕೆಲ್ಲ ಅಗತ್ಯ ಪ್ರಚೋದನೆಗಳು ದೇಹದ ಒಳಗೇ ಅಂದರೆ, ಅಂಗಗಳ ಆಂತರಿಕಾವರಣದಲ್ಲಿ ಉದ್ಭವಿಸುತ್ತವೆ. ಅಂದರೆ ಓಡುವುದರಿಂದ ದೇಹದ ಆಂತರಿಕಾವರಣದಲ್ಲಿ ಪ್ರಚೋದನಾಸರಪಣಿಯೇ ಸೃಷ್ಟಿ ಆಗುತ್ತದೆ. ದೇಹದ ಯಾವುದೋ ಅಂಗ ಕ್ರಿಯೆ ಹಠಾತ್ತಾಗಿ ಹೆಚ್ಚಾಗಬಹುದು. ಇಲ್ಲವೇ ಕಡಿಮೆ ಆಗಬಹುದು. ಇದರಿಂದ ಸಂಬಂಧಪಟ್ಟ ಇತರ ಅಂಗಗಳಲ್ಲಿ ಆಯ ತಪ್ಪಿದಂತಾಗಿ ಅವು ಶೀಘ್ರವಾಗಿ ಸ್ವಪ್ರಯತ್ನದಿಂದಲೇ ಸರಿ ಹೊಂದಿಸಿಕೊಳ್ಳಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಸ್ವತಂತ್ರ ನರಮಂಡಲದ ಕ್ರಿಯೆ ವ್ಯಕ್ತವಾಗುವುದು. ಸ್ವತಂತ್ರ ನರಮಂಡಲ ಕೇಂದ್ರ ನರಮಂಡಲದಿಂದ ಪೂರ್ತಿ ನಿರಂಕುಶವಾಗಿಲ್ಲದಿದ್ದರೂ ಬಲುಮಟ್ಟಿಗೆ ನಿರಂಕುಶಿಯಾಗಿ ಕೆಲಸ ಮಾಡಬಲ್ಲದು.

ಜಠರ, ಯಕೃತ್ತು ಮುಂತಾದ ಆಂತರಿಕಾಂಗಗಳನ್ನು ಪೂರೈಸುವ ಸ್ವತಂತ್ರ ನರಮಂಡಲದಲ್ಲಿ ಸಂವೇದಕ ಹಾಗೂ ಅನುಸಂವೇದಕ ಎಂಬ ಎರಡು ಭಾಗಗಳುಂಟು. ಸಾಮಾನ್ಯವಾಗಿ ಇವೆರಡೂ ವಿಭಾಗಗಳು ಪರಸ್ಪರ ವಿರುದ್ಧವಾಗಿ ಕಾರ್ಯಾಚರಣೆ ಮಾಡುವುವು. ಉದಾಹರಣೆಗೆ ಸಂವೇದಕ ನರಗಳ ಪ್ರಭಾವದಿಂದ ಗುಂಡಿಗೆಯ ಮಿಡಿತದ ದರ ಹೆಚ್ಚುತ್ತದೆ ಮತ್ತು ಪಚನಕ್ರಿಯೆ ಕಡಿಮೆ ಆಗುತ್ತದೆ. ಆದರೆ ಅನುಸಂವೇದಕ ನರಗಳ ಪ್ರಭಾವಗಳು ಹೃದಯ ಮಿಡಿತದ ದರವನ್ನು ಕಡಿಮೆ ಮಾಡಿ, ಪಚನ ಕ್ರಿಯೆಯನ್ನು ವೃದ್ಧಿಸುವಂಥವು. ಆಂತರಿಕಾಂಗಗಳು ಸದಾ ಒಂದು ನಿರ್ದಿಷ್ಟ ಮಟ್ಟದ ಚಟುವಟಿಕೆ ತೋರುವುದೂ ಕಾಲಕ್ಕೆ ಅನುಸಾರವಾಗಿ ಈ ಚಟುವಟಿಕೆ ಮಟ್ಟವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುವುದೂ ಈ ರೀತಿ ಸಾಧ್ಯವಾಗಿದೆ. ಸ್ವತಂತ್ರ ನರಮಂಡಲ ತಾನಾಗಿಯೇ ಕೆಲಸ ಮಾಡುವುದರ ಜೊತೆಗೆ ಹಾರ್ಮೋನುಗಳ ನೆರವಿನಿಂದ ಶರೀರ ಏಕೈಕ ಸಂಸ್ಥೆಯಾಗಿ ವರ್ತಿಸುವಂತೆ ಮಾಡಿ ಅನೇಕಾಂಗಗಳ ವಿವಿಧ ಕ್ರಿಯೆಗಳು ಏಕೀಭವಿಸುವಂತೆ ಕೂಡ ಮಾಡುತ್ತದೆ.

***

**ನರಮಂಡಲ ರೋಗವಿಜ್ಞಾನ:** ರೋಗಗಳಿಂದಾಗಿ ಮಿದುಳು, ಮಿದುಳುಬಳ್ಳಿ ಹಾಗೂ ನರಕೋಶಗಳಲ್ಲಿ ಆಗುವ ಬದಲಾವಣೆ ಹಾಗೂ ಲಕ್ಷಣ ವೈಶಿಷ್ಟ್ಯಗಳನ್ನು ತಿಳಿಸುವ ವಿಜ್ಞಾನ (ನ್ಯೂರೊಪೆಥಾಲಜಿ). ಇದು ವೈದ್ಯ ವಿಜ್ಞಾನದಲ್ಲಿ ಇನ್ನೂರು ವರ್ಷಗಳಿಂದ ಈಚಿನ ಬೆಳವಣಿಗೆ. ವಿಷ ವಸ್ತುಗಳು ಕೇಂದ್ರ ನರಮಂಡಲಕ್ಕೆ ವ್ಯಾಪಿಸುವುದು ಬಹುಶಃ ನರಕಾಂಡಗಳ (ನರ್ವ್‌ಟ್ರಂಕ್ಸ್) ಮೂಲಕ ಎಂಬುದಾಗಿ ಮಾರ್ಗಾಗ್ನಿ ಎಂಬ ವೈದ್ಯವಿಜ್ಞಾನಿ 1769ರಲ್ಲಿ ಸಲಹೆ ಮಾಡಿದ್ದೇ ಈ ವಿಜ್ಞಾನದ ಪ್ರಾರಂಭ ಎನ್ನಬಹುದು. ಈ ಸಲಹೆಯ ವಾಸ್ತವತೆಯನ್ನು ಫಾಂಟಾನಾ ಎಂಬಾತ 1781ರಲ್ಲಿ ಪ್ರಾಯೋಗಿಕವಾಗಿ ಪರಿಶೋಧಿಸಿ ಸ್ಥಿರೀಕರಿಸಿದ. ಇದಕ್ಕಾಗಿ ಇವನು ಹಾವಿನ ವಿಷವನ್ನು ಬಳಸಿದ್ದು ತಿಳಿದಿದೆ. ಆದರೆ, ನಿಜವಾಗಿ ನರಮಂಡಲ ರೋಗವಿಜ್ಞಾನಕ್ಕೆ ಭದ್ರವಾದ ತಳಹದಿ ಹಾಕಿದಂತಾದದ್ದು ಇನ್ನೂ ನೂರು ವರ್ಷಗಳ ಮೇಲೆ. 1889–91ರ ಅವಧಿಯಲ್ಲಿ ಸಾಂಟಿಯಾಗೋ ರೇಮನ್ ವೈ ಕಹಾಲ್, ಹಿಸ್, ಪೊವೆಲ್ ಇವರುಗಳ ಆದಿ ಪರಿಶೋಧನೆಗಳಿಂದ ನರಮಂಡಲದ ರಚನಾ ಘಟಕವೂ ಕ್ರಿಯಾಘಟಕವೂ ನರಕೋಶವೇ ಎಂಬ ಮೂಲಸಿದ್ಧಾಂತ ಪ್ರತಿಪಾದಿತವಾಯಿತು. 19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆದಿ ವರ್ಷಗಳಲ್ಲಿ ಇವರ ಮತ್ತು ಫ್ರಾನ್ಸ್ ನಿಸ್ಲ್, ವೀಗರ್ಟ್ ಮುಂತಾದ ಇತರ ಪ್ರಸಿದ್ಧ ವಿಜ್ಞಾನಿಗಳ ವ್ಯಾಸಂಗಗಳಿಂದ ನರಮಂಡಲ ರೋಗ ವಿಜ್ಞಾನ ಸ್ಫುರಿಸಿತು ಎನ್ನುವುದರಲ್ಲಿ ಅನುಮಾನವಿಲ್ಲ. ನರಮಂಡಲ ರೋಗವಿಜ್ಞಾನದಲ್ಲಿ ರೋಗಸ್ಥಳ ನಿರ್ದೇಶನ, ನರಮಂಡಲದಲ್ಲಿ ರೋಗದಿಂದಾದ ವಿಕೃತಿ, ರೋಗಲಕ್ಷಣಗಳು ಇವೆಲ್ಲವುಗಳ ತಪಶೀಲುಗಳ ಗಣನೆ ಮುಖ್ಯ. ಚಾರ್‌ಕಾಟ್ ಆದಿಯಾಗಿ ಫ್ರೆಂಚ್ ವಿಜ್ಞಾನಿಗಳು ಇಂಥ ವಿಕೃತಿಗಳಿಂದ ನರ ಕೋಶಕೇಂದ್ರಗಳಿಗೂ (ನರ್ವ್ ಸೆಂಟರ್ಸ್, ನ್ಯೂಕ್ಲಿಯೈ) ನರಪಥಗಳಿಗೂ ಇರುವ

ಸಂಬಂಧವನ್ನು ಪ್ರಮುಖವಾಗಿ ಗಮನಿಸಿದರು. ಅಲ್ಲದೆ ಇವರ ವ್ಯಾಸಂಗದಿಂದ ತಿಳಿದುಬಂದಂತೆ ನರಮಂಡಲದಲ್ಲಿ ವ್ಯಾಧಿಗ್ರಸ್ತ ಸ್ಥಳಕ್ಕೂ ರೋಗದ ವಿಶಿಷ್ಟ ಲಕ್ಷಣಗಳಿಗೂ ಇರುವ ಸಂಬಂಧದ ಗಣನೆ ಮಾನವನ ಮಿದುಳು, ಮಿದುಳುಬಳ್ಳಿಯ ನರಕೋಶಕೇಂದ್ರಗಳ ಮತ್ತು ನರಪಥಗಳ ವಿಶಿಷ್ಟ ಕ್ರಿಯೆಯನ್ನು ಅರಿತುಕೊಳ್ಳಲು ಸಹಾಯಕವಾಯಿತು.

ಇದಕ್ಕೆ ವಿರುದ್ಧವಾಗಿ ವೀಗರ್ಟ್, ನಿಸ್ಲ್, ಆಲ್ಜೈಮರ್ ಮುಂತಾದ ಜರ್ಮನ್ ವಿಜ್ಞಾನಿಗಳು ನರಕೋಶಗಳಲ್ಲಿ ಹಾಗೂ ನ್ಯೂರೋಗ್ಲಿಯ ಎಂಬ ಆಧಾರಕೋಶಗಳಲ್ಲಿ ಉಂಟಾಗುವ ವ್ಯತ್ಯಾಸಗಳೇ ನರಮಂಡಲ ರೋಗಕ್ಕೆ ಕಾರಣಗಳು ಹಾಗೂ ರೋಗಲಕ್ಷಣಗಳನ್ನು ಉಂಟುಮಾಡತಕ್ಕವು ಎಂದು ಪ್ರತಿಪಾದಿಸಿದರು. ಈಗ ಇವೆರಡು ದೃಷ್ಟಿಗಳನ್ನೂ ಮೇಳೈಸಿ ನರಮಂಡಲದ ಸ್ಥೂಲರಚನೆ, ಕೋಶರಚನೆ ಹಾಗೂ ಕೋಶಗಳಲ್ಲಿಯ ರಾಸಾಯನಿಕಗಳು ಇವುಗಳಲ್ಲಿ ಉಂಟಾಗಿರುವ ವ್ಯತ್ಯಾಸಗಳನ್ನು ಗಮನಿಸಿ ಅವುಗಳ ಅನುಕಲನದಿಂದ ರೋಗದ ಸ್ವಭಾವವನ್ನು ಅರಿಯಬಹುದಾಗಿದೆ.

ನರಮಂಡಲರೋಗಗಳಲ್ಲಿ ಕೆಲವು ಆಜನ್ಮ ನ್ಯೂನಾತಿರೇಕಗಳು ಮಿದುಳೇ ಇಲ್ಲದಿರುವಿಕೆ (ಆ್ಯನೆನ್‌ಕಿಫೆಲಿ), ಮಿದುಳು ಚಿಕ್ಕದಾಗಿ ಅಥವಾ ದೊಡ್ಡದಾಗಿದ್ದು ಅದಕ್ಕೆ ತಕ್ಕಂತೆ ತಲೆಗಾತ್ರವಾಗಿರುವಿಕೆ (ಮೈಕ್ರೊಕೆಫೆಲಿ ಮತ್ತು ಮೆಗಕೆಫೆಲಿ), ಮಿದುಳುಬಳ್ಳಿ ಭಾಗಶಃ ಹೊರಚಾಚಿರುವಿಕೆ (ಸ್ಪೈನ ಬೈಫಿಡ), ಮಿದುಳು ಮಿದುಳುಬಳ್ಳಿಗಳನ್ನು ಆವರಿಸಿರುವ ಪದರದ ನೀರ್ಗುಳ್ಳೆಗಳು (ಮೆನಿಂಗೊಸೀಲ್, ಮೆನಿಂಗೊಎನ್‌ಕಿಫೆಲೊಸೀಲ್ ಮತ್ತು ಮೆನಿಂಗೊಮೈಯಲೊಸೀಲ್), ಆಜನ್ಮಬುದ್ಧಿ ಮಾಂದ್ಯತೆ (ಮುಂಗೋಲಿಸಮ್ / ಡೌನ್ಸ್ ಸಿಂಡ್ರೋಮ್) ಇಂಥವು.

ನರಮಂಡಲದ ಇನ್ನು ಕೆಲವು ರೋಗಗಳು ಉರಿಊತದಿಂದಾದುವು. ಉರಿಊತಕ್ಕೆ ವೈರಸುಗಳು, ಏಕಾಣುಗಳು, ಬೂಷ್ಟು, ಪರಪಿಂಡಿಗಳು ಯಾವುವಾದರೂ ಕಾರಣವಾಗಿರಬಹುದು. ಇವು ಮಿದುಳುಬಳ್ಳಿಯ ಒಳಗಾಗಲಿ ಅವನ್ನು ಆವರಿಸಿರುವ ಪೊರೆಯಲ್ಲಾಗಲಿ ರೋಗವನ್ನು ಉಂಟುಮಾಡಬಹುದು. ಕ್ಷಯರೋಗದ ಏಕಾಣುಗಳು ಆರು ತಿಂಗಳಿಂದ ಐದು ವರ್ಷ ವಯಸ್ಸಿನ ಮಕ್ಕಳಲ್ಲಿ ಸಾಮಾನ್ಯವಾಗಿ ಸೋಂಕನ್ನು ಉಂಟುಮಾಡುವುದಾದರೂ ಯಾವ ವಯಸ್ಸಿನವರೂ ಇವಕ್ಕೆ ಹೊರತಲ್ಲ. ಈ ರೋಗದಲ್ಲಿ ಮಿದುಳಿನ ಪೊರೆ ವ್ಯಾಪಕವಾಗಿ ರೋಗಗ್ರಸ್ತವಾಗಿರಬಹುದು (ಟ್ಯುಬರ್‌ಕ್ಯುಲರ್ ಮೆನಿನ್‌ಜೈಟಿಸ್) ಇಲ್ಲವೆ ಮಿದುಳು ಹಾಗೂ ಮಿದುಳುಬಳ್ಳಿಯ ಒಳಗೆ ರೋಗಾಣುಗಳು ನೆಲಸಿ ಅಲ್ಲಿ ಗಂಟುಗಳಾಗಬಹುದು (ಟ್ಯುಬರ್‌ಕ್ಯುಲೋಮ). ಸ್ಟ್ರೆಪ್ಟೊಮೈಸಿನ್, ಐ.ಎನ್.ಎಚ್, ಇತ್ಯಾದಿ ಔಷಧಗಳು ಬರುವ ಮುನ್ನ ಈ ರೋಗ ಸಾಮಾನ್ಯವಾಗಿ ಮಾರಕವಾಗಿಯೇ ಪರಿಣಮಿಸುತ್ತಿತ್ತು. ಪರಂಗಿರೋಗದ ಏಕಾಣುಗಳಿಂದ (ಸ್ಪೈರೊಕೀಟ ಪ್ಯಾಲಿಡ) ನರಮಂಡಲಕ್ಕೆ ಸೋಂಕು ಉಂಟಾಗಬಹುದು. ರೋಗ ಮಿದುಳಿಗೆ ಮತ್ತು ಮಿದುಳಿನ ಪೊರೆಗೆ ಮಾತ್ರ ಸೀಮಿತವಾಗಿರಬಹುದು. ಇಲ್ಲವೆ ಮಿದುಳುಬಳ್ಳಿಗೆ ಸೀಮಿತವಾಗಿರಬಹುದು. ಮಿದುಳುಪೊರೆ ರೋಗಗ್ರಸ್ತವಾದಾಗ ಅದರ ಊತದಿಂದ ಶಿರನರಗಳು (ಕ್ರೇನಿಯಲ್ ನರ್ವ್ಸ್) ಮುಖ್ಯವಾಗಿ 3ನೆಯ, 4ನೆಯ ಮತ್ತು 6ನೆಯ ಶಿರನರಗಳು ಬಾಧಿತವಾಗಬಹುದು. ತತ್ಫಲವಾಗಿ ಮಾಲಗಣ್ಣು, ದ್ವಿದೃಷ್ಟಿ (ಡಿಪ್ಲೋಪಿಯ), ಕಣ್ಣುರೆಪ್ಪೆ ಇಳಿಬೀಳುವುದು ಕಂಡುಬರಬಹುದು. ಚಿಕಿತ್ಸೆಗೆ ಒಳಗಾಗದ ಪರಂಗಿರೋಗ (ಸಿಫಿಲಿಸ್) ತಗಲಿದ ಎರಡು ವರ್ಷದಿಂದ ಹದಿನೈದು ವರ್ಷಗಳ ಅವಧಿಯಲ್ಲಿ ಯಾವಾಗಲಾದರೂ ಮಿದುಳುಬಳ್ಳಿಗೆ ವ್ಯಾಪಿಸಿ ಟೇಬೀಸ್ ಡಾರ್ಸ್ಯಾಲಿಸ್ (ಲೋಕೊಮೋಟರ್ ಅಟಾಕ್ಸಿಯ) ಎಂಬ ರೋಗವನ್ನು ಉಂಟುಮಾಡಬಹುದು. ಸ್ನಾಯುಸಂಕೋಚನಜ್ಞಾನದ ನಾಶ, ಸ್ಪಂದನಗ್ರಹಿಕೆಯ ನಾಶ, ಇನ್ನಿತರ ಸಂವೇದನಾನುಭವಗಳಲ್ಲಿ ಏರುಪೇರು, ಚಲನ ಸಾಮರ್ಥ್ಯದ ದೌರ್ಬಲ್ಯ ಇವು ಈ ರೋಗದ ಲಕ್ಷಣಗಳು. ಮಿದುಳು ಮಿದುಳುಬಳ್ಳಿಯ ಒಳಗೆ ಗುಮ್ಮ ಎಂಬ ವಿಶಿಷ್ಟ ರೀತಿಯ ವ್ರಣಗಳೂ ಕಂಡುಬರಬಹುದು. ಕೊನೆಯದಾಗಿ ನರಮಂಡಲದ ಪರಂಗಿರೋಗದಲ್ಲಿ ಮನೋವಿಕಲತೆ ಹಾಗೂ ಸಂಪೂರ್ಣ ನಿಶ್ಚೇಷ್ಟತೆ (ಜನರಲ್ ಪೆರಾಲಿಸಿಸ್ ಆಫ್ ದಿ ಇನ್‌ಸೇನ್–ಜಿ.ಪಿ.ಐ.) ಉಂಟಾಗಬಹುದು. ಇನ್ನು ಕೆಲವು ಏಕಾಣುಗಳ ಸೋಂಕಿನಿಂದ ಮಿದುಳಿನಲ್ಲಿ ಕೀವುಹುಣ್ಣು ಆಗಬಹುದು. ಧನುರ್ವಾಯುವಿನ (ಟೆಟನಸ್) ಏಕಾಣು ಸೋಂಕಿನಲ್ಲಿ ಏಕಾಣುಜನಿತವಿಷ ನರತಂತುಗಳ ನಡುವೆ ನಾಳರೂಪದಲ್ಲಿರುವ ಸ್ಥಳಗಳ ಮೂಲಕ ಪಸರಿಸಿ ಮಿದುಳನ್ನು ತಲಪುವುದನ್ನು ಖಚಿತವಾಗಿ ತೋರಿಸಲಾಗಿದೆ. ಇದೇ ರೀತಿ ನಾಯಿಹುಚ್ಚನ್ನು (ರೇಬೀಸ್, ಹೈಡ್ರೊಫೋಬಿಯ) ಉಂಟುಮಾಡುವ ವೈರಸ್ ಮತ್ತು ಪೋಲಿಯೊ ವೈರಸ್ಸುಗಳೂ ನರಗಳ ಮೂಲಕ ಪಸರಿಸುತ್ತವೆ. ಇವು ರಕ್ತಪರಿಚಲನೆಯಿಂದ ಪಸರಿಸಬಹುದೆಂಬುದೂ ತಿಳಿದಿದೆ.

ನರಮಂಡಲದಲ್ಲಿ ಗಂತಿಯಂತೆ ದುರ್ಮಾಂಸ (ಟ್ಯುಮರ್) ಬೆಳೆಯಬಹುದು. ಗ್ಲೈಯೋಮ ಮತ್ತು ಪ್ರಸಾರ ಮೂಲಕ ನಾಟಿಯಾದ ಏಡಿಗಂತಿ–ಇವು ಮಿದುಳು ಮತ್ತು ಮಿದುಳುಬಳ್ಳಿಯಲ್ಲಿ ಕಂಡುಬರಬಹುದು. ಗ್ಲೈಯೋಬ್ಲಾಸ್ಟೋಮ, ಮೆಡ್ಯುಲ್ಲೊಬ್ಲಾಸ್ಟೋಮ ಮುಂತಾದ ದುರ್ಮಾಂಸಗಳು ವಾಸ್ತವವಾಗಿ ನರಮಂಡಲದ ಏಡಿಗಂತಿಗಳೇ. ದುರ್ಮಾಂಸ ಮಿದುಳಿನ ಹೊರಗೆ ಕಂಡುಬರಬಹುದು. ಮಿದುಳು ಪೊರೆಯ ಗಂತಿ (ಮೆನಿಂಜಿಯೋಮ), ಶ್ರವಣನರಗಂತಿ (ಅಕೂಸ್ಟಿಕ್ ನ್ಯೂರೋಮ), ಪಿಟ್ಯುಯಿಟರಿ ಗ್ರಂಥಿಯ ದುರ್ಮಾಂಸ ಇವು ನೆರೆಯಲ್ಲಿರುವ ಮಿದುಳಿನ ಪ್ರಾಂತ್ಯದ ಮೇಲೆ ಒತ್ತಡವನ್ನು ಉಂಟುಮಾಡಿ ವಿವಿಧ ಬಾಧೆಗಳಿಗೆ ಕಾರಣವಾಗಬಹುದು. ನರಗಳಲ್ಲಿ ಗಂತಿ ಕಂಡುಬರಬಹುದು. ಕೋರಿಯ ಮತ್ತು ಪಾರ್ಕಿನ್‌ಸನ್ನನ ರೋಗಗಳ ಕಾರಕಗಳು ಯಾವುವು ಎಂದು ತಿಳಿಯದು. ಉಪಾಪಚಯ ವ್ಯತ್ಯಾಸಗಳಿಂದ ಕೆಲವು ನರಮಂಡಲರೋಗಗಳು ಉಂಟಾಗಬಹುದು.

ಇವಲ್ಲದೆ ನರಮಂಡಲದ ಕ್ರಿಯೆಗೆ ಸಂಬಂಧಪಟ್ಟಂತೆ ಅನೇಕ ಮನೋರೋಗಗಳಿರುವುದು ವ್ಯಕ್ತ ವಿಷಯ. ಸಹಜಕ್ರಿಯೆಯ ಏರುಪೇರಿಗೆ ಕಾರಣವೇನೆಂಬುದು ಬಹುಸಂದರ್ಭಗಳಲ್ಲಿ ಅವ್ಯಕ್ತ. ಆದರೆ ಈಚಿನ ವ್ಯಾಸಂಗಗಳಿಂದ ಇಂಥ ಎಷ್ಟೊ ಮನೋರೋಗ ಪ್ರಸಂಗಗಳಲ್ಲಿ ರೋಗ ಪೀಡಿತ ಪ್ರದೇಶಗಳು ನರಮಂಡಲದಲ್ಲಿ ಇರುವುದು ಖಚಿತವೆಂದೂ ಅವೇ ಮನೋರೋಗಕ್ಕೆ ಕಾರಣವೆಂದೂ ವಿಶದಪಟ್ಟಿದೆ. ಅಲ್ಲದೆ ಮಿದುಳಿನಲ್ಲಿ ಹೈಪೊತೆಲಮಸ್ ಮತ್ತು ಪ್ರಿಫ್ರಾಂಟಲ್‌ಲೋಬ್ ಎಂಬ ಭಾಗಗಳಲ್ಲಿ ಆಗುವ ನರವಾಹಕಗಳ ವ್ಯತ್ಯಾಸ ಅಥವಾ ಹಾನಿಯ ಮನೋರೋಗ ಲಕ್ಷಣಗಳಿಗೆ ಕಾರಣ ಎಂದು ಸ್ಪಷ್ಟವಾಗತೊಡಗಿದೆ. ನರಮಂಡಲದ ರೋಗಲಕ್ಷಣಗಳನ್ನು ಗಮನಿಸಿ ರೋಗ ನಿರ್ಧಾರಮಾಡುವಾಗ ಈ ವಿಷಯವನ್ನೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ. ***

**ನರಮಂಡಲವಿಜ್ಞಾನ, ತುಲನಾತ್ಮಕ:** ಪ್ರಾಣಿಗಳು ಹೆಚ್ಚು ಹೆಚ್ಚು ವಿಕಾಸವಾದಂತೆ ಅವುಗಳ ನರಮಂಡಲಗಳ ರಚನೆ ಮತ್ತು ಕಾರ್ಯಾಚರಣೆಯಲ್ಲಿ ಹೆಚ್ಚುತ್ತಿರುವ ಜಟಿಲತೆಗಳನ್ನು ಒಂದರೊಡನೊಂದನ್ನು ಹೋಲಿಸಿ ಪಡೆಯುವ ಜ್ಞಾನ (ಕಂಪ್ಯಾರಟಿವ್ ನ್ಯೂರಾಲಜಿ). ಅತ್ಯಲ್ಪ ವಿಕಸಿತ ಆದಿಪ್ರಾಣಿವರ್ಗ ಮೊದಲ್ಗೊಂಡು ಮಾನವನವರೆಗೂ ಜೀವನಕಾರ್ಯಗಳಿಗೆ ಆವಶ್ಯಕವಾದ ಬೌದ್ಧಿಕ ಚಟುವಟಿಕೆಗಳೆಲ್ಲವೂ ನರಮಂಡಲದ ಪ್ರಭಾವದಿಂದಲೇ ನಡೆಯುವುದಾಗಿದೆ. ಆವರಣದ ವ್ಯತ್ಯಾಸಗಳಿಗೆ ಅನುಕೂಲವಾಗಿ ಹೊಂದಿಕೊಳ್ಳುವುದು ಜೀವಿಗಳ ಸಹಜಗುಣ. ಈ ವ್ಯತ್ಯಾಸಗಳು ಜೀವಿಗಳ ಮೇಲೆ ಪ್ರಚೋದಕಗಳಾಗಿ ಪರಿಣಮಿಸುವುದರಿಂದ ಅವುಗಳಲ್ಲಿ ತಕ್ಕ ಪ್ರತಿಕ್ರಿಯೆಗಳು, ಬಹುತೇಕವಾಗಿ ಅವುಗಳಿಗೆ ಸುಖವನ್ನು ಉಂಟುಮಾಡುವ ಪ್ರತಿಕ್ರಿಯೆಗಳಂತೆಯೇ ಕಂಡುಬರುತ್ತವೆ.

ಆವರಣದ ವಿವಿಧ ವ್ಯತ್ಯಾಸಗಳು ಅರ್ಥಾತ್ ವಿವಿಧ ಪ್ರಚೋದನೆಗಳು ದೇಹದ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಪ್ರತಿಕ್ರಿಯೆಯನ್ನು ಉಂಟುಮಾಡುವುವು. ಈ ಸ್ಥಳಗಳಲ್ಲಿ ಪ್ರಚೋದನೆಯನ್ನು ಗ್ರಹಿಸಲು ವಿಶೇಷ ಕೋಶಗಳು ನಿರ್ಮಿತವಾಗಿರುತ್ತವೆ. ಇವುಗಳಿಗೆ ಗ್ರಾಹಿಗಳೆಂದು ಹೆಸರು. ಪ್ರಾಣಿಗಳಲ್ಲಿ ವಿವಿಧ ಗ್ರಾಹಿಗಳು ಸ್ಪರ್ಶನ, ಉಷ್ಣತಾವ್ಯತ್ಯಾಸ ರಾಸಾಯನಿಕ ಪ್ರಚೋದನೆ, ನೋವು, ಸ್ನಾಯುಸಂಕೋಚನಗಳನ್ನು ಗ್ರಹಿಸುತ್ತವೆ. ಇಂಥ ಗ್ರಾಹಿಗಳು ಸಾಮಾನ್ಯವಾಗಿ ಪ್ರಾಣಿಗಳ ಮೈಮೇಲೆಲ್ಲ ಇರುತ್ತವೆ. ಇವುಗಳಲ್ಲದೆ ಮೂಗು, ಕಣ್ಣು, ಕಿವಿ, ನಾಲಗೆ ಈ ಸ್ಥಳಗಳಲ್ಲಿ ವಾಸನೆ, ಬೆಳಕು, ಶಬ್ದ, ರುಚಿ ಇವು ಅನುಕ್ರಮವಾಗಿ ಗ್ರಹಿಸಲ್ಪಡುತ್ತವೆ. ಇಂಥ ವಿಶೇಷ ಪ್ರಚೋದನೆಗಳನ್ನು ಗ್ರಹಿಸುವ ದೇಹ ಭಾಗಗಳಿಗೆ ಅಂದರೆ ಮೂಗು ವಗೈರೆ ಅಂಗಗಳಿಗೆ ವಿಶೇಷ ಜ್ಞಾನೇಂದ್ರಿಯಗಳೆಂದು (ಸ್ಪೆಶಲ್ ಸೆನ್ಸಸ್) ಹೆಸರು.

ಗ್ರಾಹಿಕೋಶದಲ್ಲಿ ಪ್ರಚೋದನೆಯಿಂದ ಉಂಟಾದ ಪ್ರತಿಕ್ರಿಯೆ ಸಂಘಟ್ಟಿತ ಸ್ಥಳದಿಂದ ಹರಡಿ ದೂರದಲ್ಲಿರುವ ಇತರ ಗ್ರಾಹಿಗಳನ್ನು ಪ್ರೇರೇಪಿಸುತ್ತದೆ. ಇಂಥ ಹರಡುವಿಕೆಗೆ ಸಂವಹನಸಾಮರ್ಥ್ಯವೆಂದು ಹೆಸರು. ಪ್ರಚೋದನೆಗೆ ಪ್ರತಿಕ್ರಿಯೆ ತೋರುವಂತೆಯೇ ಸಂವಹನಸಾಮರ್ಥ್ಯ ಕೂಡ ಎಲ್ಲ ಕೋಶಗಳ ಸಾಮಾನ್ಯ ಲಕ್ಷಣ. ಆದರೆ ನರಕೋಶಗಳಲ್ಲಿ ಮತ್ತು ನರಗಳಲ್ಲಿ ಪ್ರತಿಕ್ರಿಯಾಸಾಮರ್ಥ್ಯ ಹಾಗೂ ಸಂವಹನಸಾಮರ್ಥ್ಯ ಉತ್ತಮ. ಅತ್ಯಂತ ಕೆಳಮಟ್ಟದ ಪ್ರಾಣಿಗಳು ಏಕಕೋಶಿಕಗಳು, ಕೋಶದಲ್ಲಿ ಮೋಟೋರಿಯಮ್ ಎಂಬ ಸ್ಥಳದಿಂದ ತಂತುಗಳು ಕೋಶದ ಎಲ್ಲ ಭಾಗಗಳಿಗೂ ಹಬ್ಬಿರುತ್ತದೆ. ಇದರಿಂದ ಪ್ರಚೋದನೆ ಕೋಶದೊಳಗೆಲ್ಲ ಹರಡಿ ಜೀವಿ ಚಲಿಸಲು ಸಾಧ್ಯವಾಗುತ್ತದೆ. ಜೆಲ್ಲಿಮೀನು ಎಂಬ ಜಲಪ್ರಾಣಿಯಲ್ಲಿ ಗ್ರಾಹಿಕೋಶಗಳೇ ಕಾರ್ಯಕಾರೀ ಕೋಶಗಳಾದ್ದರಿಂದ ಅವೇ ಆಹಾರ ಸ್ವೀಕರಣೆ ಮತ್ತು ಚಲನೆಗಳನ್ನು ನಡೆಸುತ್ತವೆ. ಸೀ ಅನಿಮೋನ್ ಎಂಬ ಸ್ವಲ್ಪ ಹೆಚ್ಚು ವಿಕಸಿತವಾದ ಪ್ರಾಣಿಯಲ್ಲಿ ಕಾರ್ಯಕಾರಿಯಾಗಿ ಬೇರೆಯಾಗಿಯೇ ಸ್ನಾಯುಗಳು ಆಗಲೇ ಉದ್ಭವಿಸಿರುತ್ತದೆ. ಗ್ರಾಹಿಕೋಶಗಳು ಪ್ರಾಣಿಯ ಅಂಗಕಗಳಲ್ಲಿದ್ದು (ಟೆಂಟಕಲ್ಸ್) ಆಹಾರ ಮತ್ತು ಇತರ ಸಂವೇದನೆಗಳಿಂದ ಪ್ರಚೋದಿತವಾಗುತ್ತವೆ. ಇವುಗಳ ಪ್ರತಿಕ್ರಿಯೆಯ

ಫಲವಾಗಿ ಆ ಅಂಗಕದ ಸ್ನಾಯುವಿಗೇ ಅಲ್ಲದೆ ಎಲ್ಲ ಅಂಗಕಗಳ ಸ್ನಾಯುಗಳಿಗೂ ಪ್ರಚೋದನೆ ಸಂವಹನಿಸುವಂತೆ ಏರ್ಪಟ್ಟಿದೆ. ಇದರಿಂದ ಎಲ್ಲ ಅಂಗಕಗಳೂ ಕಾರ್ಯಕಾರಿಗಳಾಗಿ, ಬಗ್ಗಿ ಆಹಾರವನ್ನು ಬಾಯಿಯೊಳಕ್ಕೆ ದಬ್ಬುತ್ತವೆ. ಎರೆಹುಳು ಮತ್ತು ಕೀಟಗಳಲ್ಲಿ ತಲೆಭಾಗದ ನರಕೇಂದ್ರಗಳು ಪ್ರಮುಖವಾಗಿ ಅತ್ಯಲ್ಪ ವಿಕಸಿತವಾದ ಮಿದುಳಿನಂತೆ (ಮಸ್ತಿಷ್ಕದಂತೆ) ವರ್ತಿಸುತ್ತವೆ. ಇವುಗಳಿಂದ ಹೊರಟ ಎರಡು ನರತಂತುಗಳು ಶರೀರದ ಉದ್ದಕ್ಕೂ ಪಸರಿಸಿವೆ. ಖಂಡದೇಹಿಗಳಾದ (ಸೆಗ್‌ಮೆಂಟೆಡ್ ಬಾಡಿ) ಈ ಪ್ರಾಣಿಗಳಲ್ಲಿ ಪ್ರತಿಯೊಂದು ಖಂಡದಲ್ಲಿಯೂ ಬೆನ್ನಿನ ಕಡೆ ತಳಗಡೆ ಎರಡೆರಡು ನರಗ್ರಂಥಿಗಳಿದ್ದು ಅವುಗಳ ನಡುವೆಯೂ ನರತಂತುಗಳೊಡನೆಯೂ ಸಂಪರ್ಕವಿರುತ್ತದೆ. ಆದ್ದರಿಂದ ಯಾವ ಖಂಡದಲ್ಲಿ ಸಂವೇದನೆ ಉದ್ಭವವಾದರೂ ನರಗ್ರಂಥಿಗಳು, ನರತಂತುಗಳು, ಮಿದುಳು ಇವುಗಳ ಮೂಲಕ ದೇಹದ ಎಲ್ಲ ಸ್ನಾಯುಗಳಿಗೂ ಪ್ರಚೋದನೆ ಒಯ್ಯಲ್ಪಟ್ಟು ಕ್ರಮಬದ್ಧ ಪ್ರತಿಕ್ರಿಯೆ ಜರುಗುವಂತೆ ಏರ್ಪಟ್ಟಿದೆ.

ಹೆಚ್ಚು ವಿಕಸಿತವಲ್ಲದ ಕೆಳದರ್ಜೆ ಪ್ರಾಣಿಗಳ ಒಂದು ವೈಶಿಷ್ಟ್ಯವೆಂದರೆ ಸಹಜಪ್ರವೃತ್ತಿಗಳು (ಇನ್‌ಸ್ಟಿಂಕ್ಟ್ಸ್), ಇವು ಮೇಲೆ ವಿವರಿಸಿರುವ ಪ್ರಚೋದನ ಪ್ರತಿಕ್ರಿಯೆಗಳಿಗಿಂತ ಮೇಲ್ಮಟ್ಟದ ಕಾರ್ಯಸಾಧಕಗಳು, ಅವಶ್ಯಕ ಪ್ರಚೋದನೆ ಇದ್ದರೆ ಸಾಕು. ಅದಕ್ಕೆ ಅನುಕೂಲವಾದ, ಅನೇಕ ಜಟಿಲವಾದ, ಕಾರ್ಯಗಳು ಕೂಡಲೆ ಆಚರಣೆಗೆ ಬರುತ್ತವೆ. ಸಹಜಪ್ರವೃತ್ತಿ ಆಜನ್ಮ ಕ್ರಿಯೆ. ಶಿಕ್ಷಣವಿಲ್ಲದೆ ವ್ಯಕ್ತವಾಗುವಂಥದು. ಉದಾಹರಣೆಗೆ ಜೇನುಗೂಡು ಕಟ್ಟುವುದು, ನಾಯಿಗಳು ಹೊಸಬರು ಬಂದೊಡನೆ ಬೊಗಳುವುದು, ಕರುಗಳು ಹುಟ್ಟಿದ ಸ್ವಲ್ಪ ಹೊತ್ತಿನಲ್ಲೆ ಮೊಲೆಹಾಲನ್ನು ಸೇವಿಸುವುದು ಇತ್ಯಾದಿ. ಸಹಜಪ್ರವೃತ್ತಿಯ ಅವಶಿಷ್ಟ ಮಾನವನಲ್ಲಿಯೂ ಇದೆ- ಮಗು ಹುಟ್ಟಿದ ಕೂಡಲೇ ಅಳುವುದು, ಹುಟ್ಟಿದ ಕೆಲವೇ ಮಿನಿಟುಗಳಲ್ಲಿ ಸ್ತನಾಗ್ರವನ್ನೋ ಬೆರಳುತುದಿಯನ್ನೋ ಬಾಯೊಳಗೆ ಇಟ್ಟರೆ ಚೀಪುವುದು, ಇತ್ಯಾದಿ.

ಕಶೇರುಕಗಳಲ್ಲಿ ನರಮಂಡಲದ ರಚನೆ ಹೆಚ್ಚು ಜಟಿಲವಾಗಿದೆ, ಕಾರ್ಯಶೀಲತೆ ಹೆಚ್ಚು ಕ್ಲಿಷ್ಟವಾಗಿದೆ. ಈ ನರಮಂಡಲದ ಅತಿಮುಖ್ಯಭಾಗಗಳೆಂದರೆ ತಲೆಬುರುಡೆಯೊಳಗೆ ಅಡಗಿರುವ ಮಿದುಳು ಮತ್ತು ಬೆನ್ನು ಮೂಳೆಯ ತೋಡಿನಲ್ಲಿ ಅಡಗಿರುವ ಮಿದುಳುಬಳ್ಳಿ, ಮಿದುಳು ಅಗ್ರಭಾಗ (ಫೋರ್ ಬ್ರೇಯ್ನ್), ಅಂತರಭಾಗ (ಬಿಟ್‌ವೀನ್ ಬ್ರೇಯ್ನ್), ಮಧ್ಯಭಾಗ (ಮಿಡ್ ಬ್ರೇಯ್ನ್), ಉಪಮಿದುಳು ( ಸೆರಿಬೆಲ್ಲಮ್) ಮತ್ತು ಅಂತ್ಯಭಾಗ (ಮೆಡ್ಯುಲ್ಲ ಆಬ್ಲಾಂಗೇಟ) ಈ ಭಾಗಗಳನ್ನು ಒಳಗೊಂಡಿದೆ. ವಿವಿಧ ಪ್ರಾಣಿಗಳ ಚರ್ಯೆಗೆ ತಕ್ಕಂತೆ ಈ ಭಾಗಗಳ ಗಾತ್ರ ಮತ್ತು ಕಾರ್ಯಶೀಲತೆಗಳಲ್ಲಿ ವ್ಯತ್ಯಾಸ ಉಂಟು. ಮಿದುಳು ಬಳ್ಳಿ ಸಾಧಾರಣವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುವ ಭಾಗವಾಗಿದ್ದರೂ ನಿರ್ದಿಷ್ಟ ವೇಳೆಗಳಲ್ಲಿ ಅದು ಮಿದುಳಿನಿಂದ ಪ್ರಭಾವಿತವಾಗುತ್ತಲೇ ಇರುವುದು. ಕಶೇರುಕ ಪ್ರಾಣಿಗಳಲ್ಲಿ ಹೆಚ್ಚು ಹೆಚ್ಚು ವಿಕಾಸವಾಗುತ್ತ ಇಂಥ ಪ್ರಭಾವ ಹೆಚ್ಚುತ್ತಲೇ ಹೋಗುತ್ತದೆ. ಮಾನವನಲ್ಲಿ ಮಿದುಳು ಬಳ್ಳಿ ಸಾಧಾರಣವಾಗಿ ಮಿದುಳಿನ ಹತೋಟಿಯಲ್ಲೆ ಕೆಲಸ ಮಾಡುವುದು. ನೇರವಾಗಿ ಮಿದುಳು ಬಳ್ಳಿಯ ಪ್ರತಿಕ್ರಿಯೆ ಮಾನವನಲ್ಲಿ ಕಂಡುಬರುವುದು ಅಪರೂಪ.

ಮಿದುಳಿನಲ್ಲಿ ತೊಗಟೆಯಂತಿರುವ ಹೊರಭಾಗದಲ್ಲಿ ಸಂವೇದಕ (ಸೆನ್ಸರಿ), ಚಾಲಕ (ಮೋಟರ್) ಮತ್ತು ಸಂಬಂಧಿಕ (ಅಸೋಸಿಯೇಷನ್) ಕ್ಷೇತ್ರಗಳಿರುವುದನ್ನು ಗುರುತಿಸಬಹುದು. ಸಂಬಂಧಿಕ ಕ್ಷೇತ್ರದ ವ್ಯಾಪಕತೆ ಪ್ರಾಣಿಯ ವಿಕಾಸದಲ್ಲಿ ಎಷ್ಟು ಉನ್ನತಮಟ್ಟದ್ದು ಎನ್ನುವುದನ್ನು ಅವಲಂಬಿಸಿದೆ. ಸಹಜವಾಗಿಯೇ ಮಾನವನಲ್ಲಿ ಈ ಕ್ಷೇತ್ರ ವ್ಯಾಪಕವಾಗಿಯೂ ಅತ್ಯಂತ ಜಟಿಲವಾಗಿಯೂ ಇದೆ. ಹೀಗಿರುವುದರಿಂದಲೇ ಕಣ್ಣು, ಕಿವಿ, ಮೂಗು ಇತ್ಯಾದಿಗಳಿಂದಲೂ ಶರೀರದ ಇನ್ನಿತರ ಭಾಗಗಳಿಂದಲೂ ಒದಗುವ ಸಂವೇದನೆಗಳು ತೆಲಮಸ್ ಮತ್ತು ಮಹಾಮಸ್ತಿಷ್ಕದ ಮೂಲಕ ಒಂದಕ್ಕೊಂದು ಅರ್ಥವತ್ತಾಗಿ ಸಂಬಂಧಗೊಂಡು ಪ್ರಾಣಿ ಉನ್ನತ ಸ್ಥಿತಿಯಲ್ಲಿ ಇರಲು ನೆರವಾಗುತ್ತದೆ.

ಹೆಚ್ಚು ಹೆಚ್ಚು ವಿಕಾಸವಾದಂತೆ ಮೇಲ್ಮಟ್ಟದ ಪ್ರಾಣಿವರ್ಗಗಳಲ್ಲಿ ಸಂವೇದನ ಮತ್ತು ಪ್ರತಿಕ್ರಿಯೆಗಳ ವೇಗ ಹೆಚ್ಚುತ್ತ ಹೋಗುತ್ತವೆ. ಈ ಕಾರಣದಿಂದ ಮಾನವನಲ್ಲಿ ಈ ಕಾರ್ಯಗಳ ವೇಗ ಜೆಲ್ಲಿ ಮೀನಿನಲ್ಲಿಯ ವೇಗದ ನೂರು ಮಡಿಯಷ್ಟು ಇದೆ. ಅಲ್ಲದೆ ಸಂವೇದನ ಸ್ವರೂಪದ ಪ್ರಚೋದನೆಯ ವ್ಯಾಪ್ತಿ ಅನುಕಲನದಿಂದಾಗಿ (ಇಂಟೆಗ್ರೇಷನ್) ಪ್ರತಿಕ್ರಿಯೆಯ ತೀವ್ರತೆ ಮತ್ತು ವ್ಯಾಪ್ತಿ ಹೆಚ್ಚಾಗಬಹುದು ಇಲ್ಲವೇ ಕಡಿಮೆ ಆಗಬಹುದು.

ಮಾನವನಲ್ಲಿ ಮಾತ್ರ ಮಸ್ತಿಷ್ಕ ಹಿಂದೆ ಪಡೆದ ಅನುಭವಗಳನ್ನು ಮುಂದಾಗಬಹುದಾದ ಘಟನೆಗಳಿಗೆ ಅನುಕಲನ ಮಾಡುವ ಯೋಗ್ಯತೆಯನ್ನು ಹೊಂದಿದೆ. ಇದರಿಂದಾಗಿ ಪುಸ್ತಕಗಳನ್ನು ಓದಿ ಅಭಿಮತ ಮತ್ತು ವ್ಯಕ್ತಿತ್ವವನ್ನು ರೂಢಿಸಿಕೊಂಡು, ಇದರ ನಿಮಿತ್ತ ಮುಂದಾಲೋಚನೆ, ಕಲ್ಪನೆ, ರಸಗ್ರಹಣ ಸಾಮರ್ಥ್ಯ (ಈಸ್ಥೆಟಿಕ್ ಸೆನ್ಸ್) ಮತ್ತು ನೈತಿಕ ಗುಣಗಳನ್ನು ಸ್ಫುರಿಸಿಕೊಳ್ಳುವ ಸೌಲಭ್ಯವನ್ನು ಮಾನವ ಪಡೆದಿದ್ದಾನೆ. ***

**ನರುಳ್ಳಿ ಹಂದಿ:** ಸ್ತನಿವರ್ಗದ, ಅಂಗ್ಯುಲೇಟ ಗಣ, ಆರ್ಟಿಯೊಡ್ಯಾಕ್ಟಿಲ ಉಪಗಣ ಮತ್ತು ಸುಯಿಡೆ ಕುಟುಂಬಕ್ಕೆ ಸೇರಿದ ಒಂದು ವನ್ಯಪ್ರಾಣಿ (ವಾರ್ಟ್ ಹಾಗ್). ಫ್ಯಾಕೋಕೀರಸ್ ಈತಿಯಾಪಿಕಸ್ ಇದರ ವೈಜ್ಞಾನಿಕ ಹೆಸರು. ಆಫ್ರಿಕದಲ್ಲಿ ಕಂಡುಬರುತ್ತದೆ. ಹಂದಿಗಳಲ್ಲೆಲ್ಲ ವಿಶಿಷ್ಟ ರೀತಿಯ ಹಾಗೂ ನೋಡಲು ಬಲು ವಿಕಾರವಾದ ಪ್ರಾಣಿ. ದೇಹದ ಉದ್ದ ಸುಮಾರು ಒಂದು ಮೀಟರು; ಎತ್ತರ ಭುಜದ ಬಳಿ 70 ಸೆಂಮೀ. ತೂಕ 75–100 ಕಿಗ್ರಾಂ. ಗಂಡಿನಲ್ಲೂ ಹೆಣ್ಣಿನಲ್ಲೂ ಉದ್ದನೆಯ ಕೋರೆಗಳಿವೆ. ಗಂಡಿನ ಕೋರೆಗಳು 25–60 ಸೆಂಮೀ ಇದ್ದರೆ ಹೆಣ್ಣಿನವು 15–25 ಸೆಂಮೀ ಉದ್ದ ಇವೆ. ಕತ್ತಿನಿಂದ ಹಿಡಿದು ಬೆನ್ನ ಉದ್ದಕ್ಕೂ ಉದ್ದನೆಯ ಒರಟು ಕೂದಲುಗಳ ಅಯಾಲು ಇದೆ. ಪೃಷ್ಠ ಭಾಗದಲ್ಲೂ ವಿರಳವಾಗಿ ಕೂದಲು ಇವೆ. ದೇಹದ ಉಳಿದೆಡೆಗಳಲ್ಲಿ ಇರುವುದು ಬಿರುಗೂದಲುಗಳು ಮಾತ್ರ. ದೇಹದ ಬಣ್ಣ ಕಗ್ಗಂದು ಇಲ್ಲವೆ ಕಪ್ಪು. ಮರಿಗಳು ಕೆಂಗಂದು ಬಣ್ಣಕ್ಕಿವೆ. ಕೆನ್ನೆಗಳ ಮೇಲೆ ಉದ್ದನೆಯ ಮಡಿಕೆಯಿರುವುದೂ ಕಣ್ಣುಗಳ ಮುಂಭಾಗ ಹಾಗೂ ಮೂತಿಯ ಆಚೀಚೆ ದಪ್ಪಗಂತಿಗಳಿರುವುದೂ ನರುಳ್ಳಿ ಹಂದಿಯ ವಿಚಿತ್ರ ಲಕ್ಷಣ. ಈ ಗಂತಿಗಳು ಕೇವಲ ಚರ್ಮದ ಬೆಳೆವಣಿಗೆಗಳಾಗಿದ್ದು ಇವುಗಳಲ್ಲಿ ಮೂಳೆಗಳಿರುವುದಿಲ್ಲ.

ನರುಳ್ಳಿ ಹಂದಿ ಜೌಗುಪ್ರದೇಶದಲ್ಲಿ ವಾಸಿಸುತ್ತದೆ. ಹುಲ್ಲು, ಗೆಡ್ಡೆಗಳು, ಸಣ್ಣಮಟ್ಟ ಹಣ್ಣುಗಳು, ಮರಗಿಡಗಳ ತೊಗಟೆ ಇದರ ಪ್ರಧಾನ ಆಹಾರ. ತನ್ನ ಕೋರೆಗಳಿಂದ ಗೆಡ್ಡೆಗಳನ್ನು ಹೆಕ್ಕಿ ತಿನ್ನುತ್ತವೆ. ಹೀಗೆ ಆಹಾರವನ್ನು ಕೆದಕುವಾಗ ತನ್ನ ಮಂಡಿಗಳನ್ನು ಊರುವುದೂ, ಗುರುಗುಡುವುದೂ ಮಾಡುತ್ತದೆ. ಹೆಣ್ಣು ಹಂದಿಗಳು ಒಂಟಿಯಾಗಿ ಇಲ್ಲವೆ ಜೊತೆ ಜೊತೆಯಾಗಿ ಇಲ್ಲವೆ ಸಣ್ಣ ಗುಂಪುಗಳಲ್ಲಿ ಓಡಾಡುವುವು. ಗಂಡುಗಳು ಮಾತ್ರ ಒಂಟಿಯಾಗಿಯೇ ಇರುವುವು. ಎಲ್ಲ ಹಂದಿಗಳಂತೆ ಈ ಹಂದಿಗೂ ಕೆಸರಲ್ಲಿ ಹೊರಳಾಡುವುದೆಂದರೆ ಬಲು ಇಷ್ಟ. ನೋಡಲು ಭೀಕರವಾಗಿ ಕಂಡರೂ ನರುಳ್ಳಿ ಹಂದಿ ತಾನಾಗಿಯೇ ಆಕ್ರಮಣ ಮಾಡದು. ಆದರೆ ಶತ್ರುಗಳಿಂದ ಆವೃತವಾದಾಗ ಹೋರಾಡುತ್ತದೆ.

ಇದರ ಸಂತಾನಾಭಿವೃದ್ಧಿಯ ಶ್ರಾಯ ಅಕ್ಟೋಬರ್–ನವೆಂಬರ್. ಒಂದು ಸಲಕ್ಕೆ 2–4 ಮರಿಗಳು ಹುಟ್ಟುವುವು. ಇದರ ಮಾಂಸ ರುಚಿಕರವಾಗಿದೆಯಾದ್ದರಿಂದ ಇದನ್ನು ಬೇಟೆಯಾಡುವುದಿದೆ. ***

**ನವಿಲು:** ಗ್ಯಾಲಿಫಾರ್ಮಿಸ್ ಗಣದ ಫ್ಯಾಸಿಯಾನಿಡೆ ಕುಟುಂಬದ ಪ್ಯಾವೋನಿನೆ ಉಪಕುಟುಂಬಕ್ಕೆ ಸೇರಿದ ಸುಂದರ ಪಕ್ಷಿ (ಪೀಫೌಲ್, ಪೀಕಾಕ್). ಮಯೂರ ಪರ್ಯಾಯ ನಾಮ. ಇದರಲ್ಲಿ ಮೂರು ಮುಖ್ಯ ಬಗೆಗಳುಂಟು. ಇವುಗಳಲ್ಲಿ ಬಲು ಸುಂದರವಾದ್ದು, ಪರಿಚಿತವಾದ್ದು ಭಾರತದ ನವಿಲು. ಇದರ ವೈಜ್ಞಾನಿಕ ಹೆಸರು ಪಾವೋ ಕ್ರಿಸ್ಟೇಟಸ್. ಇದು ಶ್ರೀಲಂಕಾದಲ್ಲೂ ಉಂಟು. ನವಿಲಿನ ಇನ್ನೊಂದು ಬಗೆ ಜಾವದ ಹಸುರು ನವಿಲು. ಪಾವೋ ಮ್ಯೂಟಿಕಸ್ ಎಂಬುದು ಶಾಸ್ತ್ರೀಯ ಹೆಸರು. ಇದರ ವ್ಯಾಪ್ತಿ ಬರ್ಮದಿಂದ ಜಾವದವರೆಗೆ. ಮೂರನೆಯ ಬಗೆಯಾದ ಆಫ್ರೋಪಾವೋ ಕಾಂಗೆನ್ಸಿಸ್ ಎಂಬುದು ಆಫ್ರಿಕದ ಕಾಂಗೋ ರಾಜ್ಯದಲ್ಲಿ ಕಾಣದೊರೆಯುತ್ತದೆ.

ಭಾರತದ ನವಿಲು ದೊಡ್ಡ ಗಾತ್ರದ ಪಕ್ಷಿ. ಇದರ ದೇಹ ಸುಮಾರು 75 ಸೆಂಮೀ ಉದ್ದ ಇದೆ. ಗಂಡಿನಲ್ಲಿ ಸುಮಾರು 150 ಸೆಂಮೀ ಉದ್ದದ ಬಾಲ ಉಂಟು. ಇದು ವಾಸ್ತವವಾಗಿ ಬಾಲದ ಗರಿಗಳಿಂದ ರಚಿತವಾದುದಲ್ಲ. ಬಾಲದ ಮೇಲ್ಭಾಗದಲ್ಲಿರುವ ನೂರಾರು ಅಲಂಕಾರಿಕ ಗರಿಗಳಿಂದ ರೂಪುಗೊಂಡಿದೆ. ಒಂದೊಂದು ಗರಿಯ ತುದಿಯಲ್ಲೂ ತುಂಬ ಸುಂದರವಾದ ಕಣ್ಣು ಉಂಟು. ನೀಲಿ ಮತ್ತು ಕಂಚಿನ ಬಣ್ಣಗಳ ಈ ಕಣ್ಣುಗಳು ಗರಿಗಳ ಅಂದವನ್ನು ಹೆಚ್ಚಿಸಿವೆ. ಪ್ರತಿ ಡಿಸೆಂಬರ್ ವೇಳೆಗೆ ಗರಿಗಳು ಬಿದ್ದು ಹೋಗುವುವು. ಹೆಣ್ಣುಗಳಲ್ಲಿ ಬಾಲ ಇಲ್ಲ. ನವಿಲಿಗೆ ಉದ್ದವಾದ ಕಾಲುಗಳೂ ಉದ್ದನೆಯ ಹಾಗೂ ಸಪೂರಾದ ಬಳಕುವ ಕತ್ತೂ ಉಂಟು. ಗಂಡು ನವಿಲಿನ ಮೈ ಬಣ್ಣ ಮನಮೋಹಕ. ಮಿಂಚುವ ಲೋಹೀಯ ನೀಲಿ, ಹಸುರುಗಳ ಮಿಶ್ರ ಬಣ್ಣ ಇದು. ಗಂಡು ಮತ್ತು ಹೆಣ್ಣುಗಳೆರಡರಲ್ಲೂ ತಲೆಯ ಮೇಲೆ ಕೆಲವು ತುರಾಯಿ ಗರಿಗಳಿಂದ ರಚಿತವಾದ ಶಿಖೆ ಉಂಟು. ಹೆಣ್ಣಿನ ಮೈಬಣ್ಣ ಗಂಡಿನದರಷ್ಟು ಮೋಹಕವಲ್ಲ.

ನವಿಲು ಸಾಮಾನ್ಯವಾಗಿ ಪರ್ಣಪಾತಿ ಕಾಡುಗಳಲ್ಲಿ, ಬೆಟ್ಟ ಸೀಮೆಗಳಲ್ಲಿ ಸಣ್ಣ ಸಣ್ಣ ಗುಂಪುಗಳಲ್ಲಿ ವಾಸಿಸುತ್ತದೆ. ಆದಷ್ಟು ನೀರಿನ ನೆಲೆಗಳಿಗೆ (ನದಿ, ಝರಿಗಳಿಗೆ) ಹತ್ತಿರದಲ್ಲೇ ಇದರ ವಾಸ್ತವ್ಯ. ಕೆಲವು ಸಲ ಹಳ್ಳಿಗಳ ಸನಿಹದಲ್ಲಿ ಕಾಣದೊರೆಯುವುದೂ ಉಂಟು. ಮುಂಬೆಳಗಿನ ಹಾಗೂ ಸಾಯಂಕಾಲದ ವೇಳೆ ತನ್ನ ಆಹಾರವನ್ನು ಅರಸಿಕೊಂಡು ತಿರುಗುತ್ತದೆ. ರಾತ್ರಿಕಾಲವನ್ನು ಎತ್ತರ ಮರಗಳಲ್ಲಿ ಕಳೆಯುತ್ತದೆ. ಕಾಳುಕಡ್ಡಿ, ಹುಳುಹುಪ್ಪಟೆ, ಹಲ್ಲಿ, ಕಪ್ಪೆ, ಹಾವು ಮುಂತಾದುವು ಇದರ ಆಹಾರ. ಭಾರತದಲ್ಲಂತೂ ನವಿಲಿಗೆ ನಾಗರಹಾವಿನ ವೈರಿ ಎಂಬ ಪ್ರಖ್ಯಾತಿಯೂ ಉಂಟು. ಇದು ಮರಿ ನಾಗರಗಳನ್ನು

ಮೆಚ್ಚಿನಿಂದ ತಿನ್ನುತ್ತದೆ ಎನ್ನಲಾಗಿದೆ. ಇದರಿಂದಾಗಿ ನವಿಲು ಇರುವ ಕಡೆ ನಾಗರ ಹಾವಿನ ಕಾಟ ಕಡಿಮೆ. ಅರಣ್ಯಗಳಲ್ಲಿ ಹುಲಿ, ಚಿರತೆ ಮುಂತಾದ ಹಿಂಸ್ರ ಪ್ರಾಣಿಗಳ ಚಲನವಲನಗಳ ಬಗ್ಗೆಯೂ ನವಿಲು ತನ್ನ ವಿಶಿಷ್ಟ ಕೇಕೆಯಿಂದ ಇತರ ಪ್ರಾಣಿಗಳ ಮತ್ತು ಮನುಷ್ಯರ ಗಮನ ಸೆಳೆಯುತ್ತದೆ. ಇವೆರಡು ಕಾರಣಗಳಿಂದಾಗಿ ನವಿಲು ಉಪಯುಕ್ತ ಹಾಗೂ ಜನಪ್ರಿಯ ಹಕ್ಕಿಯಾಗಿದೆ. ತುಂಬ ನಾಚಿಕೆ ಸ್ವಭಾವದ ಹಾಗೂ ಚುರುಕಾದ ಪಕ್ಷಿ ಇದು. ಅಪಾಯದ ಸುಳಿವು ಸಿಕ್ಕಾಗ ಸಾಮಾನ್ಯವಾಗಿ ಪೊದೆಗಳ ನಡುವೆ ಮೆಲ್ಲನೆ ನುಸುಳಿಕೊಂಡು ಹೋಗುತ್ತದೆ. ಅಗತ್ಯವೆನಿಸಿದರೆ ಭಾರವಾಗಿ ರೆಕ್ಕೆ ಬಡಿದು ಕೆಳಮಟ್ಟದಲ್ಲಿ ಹಾರಬಲ್ಲುದು.




ನವಿಲಿನಲ್ಲಿ ಬಹುಪತ್ನಿತ್ವ ಉಂಟು. ಇದರ ಸಂತಾನೋತ್ಪತ್ತಿಯ ಕಾಲ ಪ್ರಮುಖವಾಗಿ ಮಳೆಗಾಲ (ಜನವರಿ–ಅಕ್ಟೋಬರ್). ಈ ಕಾಲದಲ್ಲಿ ಒಂದೊಂದು ಗಂಡು ನವಿಲೂ 2–5 ಹೆಣ್ಣುಗಳ ಜೊತೆಗೂಡಿಕೊಂಡು ಮೋಹಕವಾದ ಪ್ರಣಯಾಚರಣೆಯ ನಾಟ್ಯದಲ್ಲಿ ತೊಡಗುತ್ತವೆ. ಆಗ ತನ್ನ ಆಲಂಕಾರಿಕವಾದ ಗರಿಗಳನ್ನು ಮೇಲಕ್ಕೆತ್ತಿ ಬೀಸಣಿಗೆಯಂತೆ ಹರಡಿಕೊಂಡು, ರೆಕ್ಕೆಗಳನ್ನು ಬಿಚ್ಚಿಕೊಂಡು, ಆಗಿಂದಾಗ್ಗೆ ಕಂಪಿಸುತ್ತ ಬಿಂಕದಿಂದ ವಿವಿಧ ಭಂಗಿಗಳಲ್ಲಿ ನೃತ್ಯ ಗೈಯುತ್ತದೆ. ಕೆಲವೊಮ್ಮೆ ಮಳೆ ಬರುವ ಮುನ್ನ ಮೋಡ ಕವಿದಾಗ ಉಂಟಾಗುವ ತಂಪು ಗಾಳಿಯಿಂದ ಉತ್ತೇಜಿತಗೊಂಡು ಹರ್ಷದಿಂದ ಹೀಗೆ ಕುಣಿಯುವುದೂ ಉಂಟು. ಗಂಡು ನವಿಲಿನ ಈ ನೃತ್ಯದ ಬಗ್ಗೆ ಎರಡು ರೀತಿಯ ವೈಜ್ಞಾನಿಕ ವಿವರಣೆಗಳುಂಟು. ಒಂದರ ಪ್ರಕಾರ ಈ ನೃತ್ಯ ಹೆಣ್ಣಿನ ಲಕ್ಷ್ಯ ಸೆಳೆಯುವ ಪ್ರಕ್ರಿಯೆ. ಆದರೆ, ವಾಸ್ತವವಾಗಿ ಗಂಡು ನವಿಲು ಹೆಣ್ಣು ನವಿಲಿಗೆ ಎದುರಾಗಿ ನಿಂತು ಕುಣಿಯುವುದೇ ಇಲ್ಲ. ಹೆಣ್ಣು ನವಿಲು ಗಂಡಿನೆಡೆಗೆ ಬರುತ್ತಿದ್ದಂತೆಯೇ ಗಂಡು ವಿರುದ್ಧ ದಿಕ್ಕಿಗೆ ತಿರುಗಿ ನಿಂತುಕೊಳ್ಳುತ್ತದೆ. ಈ ವಿಚಿತ್ರ ನಡತೆ ಹಲವಾರು ಸಲ ನಡೆದ ನಂತರ ಗಂಡು ಹೆಣ್ಣುಗಳು ಕೂಡುತ್ತವೆ. ಆಸ್ಕರ್ ಹೈನ್‌ರಾತ್ ಎಂಬ ಪಕ್ಷಿ ವಿಜ್ಞಾನಿಯ ಅಭಿಪ್ರಾಯದಂತೆ ಗಂಡು ನವಿಲು ತನ್ನ ಗರಿಗಳನ್ನು ಹರಡುವುದು ಹೆಣ್ಣಿನ ಲಕ್ಷ್ಯ ಸೆಳೆಯುವ ಸಲುವಾಗಿ ಇರುವ ಒಂದು ರೀತಿಯ ಜಾಹೀರಾತು. ಆದರೆ, ಶೆಂಕೆಲ್ ಎಂಬಾತನ ಪ್ರಕಾರ ಗ್ಯಾಲಿಫಾರ್ಮಿಸ್ ಗಣದ ಇತರ ಹಕ್ಕಿಗಳಲ್ಲಿ (ಉದಾಹರಣೆಗೆ, ಕೋಳಿ) ಸಂತಾನಾಭಿವೃದ್ಧಿಯ ಶ್ರಾಯದಲ್ಲಿ ಗಂಡು ಹೆಣ್ಣು ಕೂಡುವ ಮುನ್ನ ಗಂಡು ಹಕ್ಕಿ ಹೆಣ್ಣಿಗೆ ಆಹಾರವನ್ನು ಅರ್ಪಿಸುವ ವಿಚಿತ್ರ ಪರಿಪಾಠವುಂಟು. ಇದೇ ನಡವಳಿಕೆ ನವಿಲಿನಲ್ಲೂ ಇದ್ದು, ಯಾವುದೇ ಆಹಾರ ಇಲ್ಲದಿದ್ದರೂ ಒಂದು ತೆರನ ಆಚರಣೆ ವಿಧಿಯಾಗಿ ಬಿಟ್ಟಿದೆ. ನವಿಲು ತನ್ನ ನೃತ್ಯದಲ್ಲಿ ತೊಡಗಿರುವಾಗ ಆಗಾಗ ಕೇಕೆ ಹಾಕುತ್ತಿರುತ್ತದೆ. ಹೆಣ್ಣು ನವಿಲು ಪೊದೆಗಳ ಸಂದಿಯಲ್ಲಿ ಕಡ್ಡಿ, ಎಲೆಗಳನ್ನು ಸೇರಿಸಿ ಒರಟು ಬಗೆಯ ಗೂಡು ರಚಿಸಿ 3–5 ಮೊಟ್ಟೆಗಳನ್ನು ಇಡುತ್ತದೆ. ಕೆಲವೊಮ್ಮೆ ಮರಗಳ ಪೊಟರೆಗಳಲ್ಲಿ, ಹದ್ದು, ಗಿಡುಗ ಮುಂತಾದುವು ತೊರೆದು ಹೋದ ಗೂಡುಗಳಲ್ಲಿ ಮೊಟ್ಟೆ ಇಡುವುದೂ ಉಂಟು. ಮೊಟ್ಟೆಗಳು ಹೊಳೆಯುವ ಕೆನೆಯ ಬಣ್ಣಕ್ಕಿವೆ. 28 ದಿವಸಗಳ ತರುವಾಯ ಮೊಟ್ಟೆಯೊಡೆದು ಮರಿಗಳು ಹೊರಬರುವುವು.

ನವಿಲು ಬಹಳ ಹಿಂದಿನಿಂದಲೂ ಪರಿಚಿತವಾಗಿರುವ ಅಲಂಕಾರ ಪಕ್ಷಿ. 4000 ವರ್ಷಗಳ ಹಿಂದೆ ವ್ಯಾಪಾರಿಗಳ ಮೂಲಕ ಇದು ಮೆಸೊಪೊಟೇಮಿಯಾಕ್ಕೆ ಹೋಯಿತೆನ್ನಲಾಗಿದೆ. ಅಲ್ಲಿಂದ ಮೆಡಿಟರೇನಿಯನ್ ದೇಶಗಳಿಗೂ ಹರಡಿತು. ನವಿಲಿನ ಸೌಂದರ್ಯ, ಬೇರೆ, ಬೇರೆ ವಾತಾವರಣಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯ ಹಾಗೂ ಇದನ್ನು ವೃದ್ಧಿಸುವ ಸುಲಭ ಸಾಧ್ಯತೆಯಿಂದಾಗಿ ಇದು ಯುರೋಪ್, ಅಮೆರಿಕಗಳಂಥ ಶೀತ ದೇಶಗಳಲ್ಲಿಯೂ ಜನಪ್ರಿಯವಾಗಿದೆ. ನವಿಲನ್ನು ಭಾರತದಲ್ಲಿ ಶ್ರೀ ಸರಸ್ವತಿ ಹಾಗೂ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ವಾಹನವೆಂದು ಪರಿಗಣಿಸಲಾಗಿದ್ದು ಇದು ಪೂಜ್ಯನೀಯವೆನಿಸಿದೆ. ಆದರೂ ಕೆಲವೆಡೆಗಳಲ್ಲಿ ಇದನ್ನು ಕೊಬ್ಬಿಗಾಗಿ (ನವಿಲಿನ ಎಣ್ಣೆ) ಹೆಚ್ಚಿನ ಪರಿಮಾಣದಲ್ಲಿ ಕೊಲ್ಲಲಾಗುತ್ತಿತ್ತು. ಈ ಎಣ್ಣೆ ಕೂದಲ ಬೆಳೆವಣಿಗೆಗೆ, ಸಂಧಿವಾತ ರೋಗಕ್ಕೆ ಒಳ್ಳೆಯ ಔಷಧಿ ಎಂದು ಹೇಳಲಾಗಿದೆ. ನವಿಲು ಈಗ ಭಾರತದ ರಾಷ್ಟ್ರ ಪಕ್ಷಿ. ಆದ್ದರಿಂದ ಇದಕ್ಕೆ ಕಾನೂನಿನ ರಕ್ಷಣೆ ದೊರೆತಿದೆ. ಅನೇಕ ವರ್ಷಗಳ ತಳೀಕರಣದಿಂದಾಗಿ ಪೂರ್ಣ ಬಿಳಿಯ ಬಣ್ಣದ ನವಿಲು, ಮಚ್ಚೆಗಳಿರುವ ನವಿಲು, ಕಪ್ಪು ರೆಕ್ಕೆಯ ನವಿಲು ಮುಂತಾದ ಹಲವಾರು ಬಗೆಗಳನ್ನು ವೃದ್ಧಿಸಲಾಗಿದೆ.

ಹಿಂದಿನ ಕಾಲದಿಂದಲೂ ನವಿಲುಗರಿಯನ್ನು ಬಹಳ ಪವಿತ್ರವೆಂದು ಪರಿಗಣಿಸಲಾಗಿದೆ. ಶ್ರೀಕೃಷ್ಣ ತನ್ನ ಕಿರೀಟದಲ್ಲಿ ನವಿಲು ಗರಿಗಳನ್ನು ಧರಿಸುತ್ತಿದ್ದನೆನ್ನಲಾಗಿದೆ. ಭಾರತದ ರಾಜರು, ಚಕ್ರಾಧಿಪತಿಗಳು ದರ್ಬಾರು ಮಾಡುವಾಗ ಅಥವಾ ಹೊರ ಹೊರಟಾಗ ಅವರ ಅಕ್ಕಪಕ್ಕಗಳಲ್ಲಿ ಶೋಭಾಯಮಾನವಾದ ನವಿಲು ಗರಿಗಳನ್ನು ಚಾಮರದಂತೆ ಹಿಡಿದುಕೊಂಡು ಗಾಳಿ ಹಾಕುವ ಸೇವಕಿಯರಿರುವುದು ಸಾಮಾನ್ಯವಾಗಿತ್ತು. ಅವಾಗಿಯೇ ಉದುರಿದ ಗರಿಗಳಿಂದ ಬೀಸಣಿಗೆಗಳನ್ನು ತಯಾರಿಸಲಾಗುತ್ತದೆ. ಹಿಂದಿನ ಕಾಲದ ಹಡಗುಗಳ ಮುಂಭಾಗ ನವಿಲಿನಾಕಾರದಲ್ಲಿರುತ್ತಿತ್ತು. ಮೊಗಲ್ ಚಕ್ರಾಧಿಪತಿ ಷಹಜಹಾನನ ಪ್ರಸಿದ್ಧವಾದ ಸಿಂಹಾಸನ ನವಿಲಿನಾಕಾರವಾಗಿತ್ತು.

ಜಾವದ ಹಸುರು ನವಿಲು ಹೆಚ್ಚು ಕಡಿಮೆ ಭಾರತದ ನವಿಲಿನ ಗಾತ್ರದ್ದೇ. ಆದರೆ, ಹೆಸರೇ ಹೇಳುವಂತೆ ಇದರ ಮೈಬಣ್ಣ ಹಸುರು. ಇದರ ಜೀವನ ಕ್ರಮವೂ ಭಾರತದ ನವಿಲಿನಂತೆಯೇ ಇದೆ. ಆದರೆ, ಇದು ಬೇರೆ ಬಗೆಯ ಸಾಕುಪಕ್ಷಿಗಳೊಂದಿಗೆ ಬೆರೆಯುವುದಿಲ್ಲವಾದ್ದರಿಂದ ಹಾಗೂ ಕಡು ಚಳಿಯನ್ನು ತಡೆದುಕೊಳ್ಳುವುದಿಲ್ಲವಾದ್ದರಿಂದ ಇದನ್ನು ಸಾಕುವುದು ಕಷ್ಟ.

ಕಾಂಗೋ ನವಿಲು ದೇಹ ಗಾತ್ರದಲ್ಲಿ, ಸೌಂದರ್ಯದಲ್ಲಿ ಭಾರತದ ನವಿಲಿಗಿಂತ ಭಿನ್ನವಾಗಿದೆ. ಇದರ ಪತ್ತೆಯಾದದ್ದು 1936ರಲ್ಲಿ. ಅಲ್ಲಿಯವರೆಗೆ ಆಫ್ರಿಕದಲ್ಲಿ ನವಿಲು ಇಲ್ಲವೆಂದೇ ತಿಳಿಯಲಾಗಿತ್ತು. ಭಾರತದ ನವಿಲಿನಂತಲ್ಲದೇ ಕಾಂಗೋ ನವಿಲಿನಲ್ಲಿ ಏಕಪತ್ನಿತ್ವ ಇದೆ. (ಎಂ.ಎನ್.ವಿ.ಐ)

**ನಳ್ಳಿ ಜೇಡ:** ಆರ್ಥ್ರಾಪೊಡ ವಂಶದ ಅರ್ಯಾಕ್ನಿಡ ವರ್ಗದ ತೋಮಿಸಿಡೆ ಕುಟುಂಬದ ಸದಸ್ಯ. ಇವುಗಳನ್ನು ಸಾಮಾನ್ಯವಾಗಿ ಕ್ರ್ಯಾಬ್‌ಸ್ಪೈಡರ್‌ಗಳೆನ್ನುವರು. ಇವುಗಳ ಶಿರೋಕ್ಷದ ಇಕ್ಕೆಡೆಗಳಿಗೂ ಪ್ರಸರಿಸಿರುವ ಕಾಲುಗಳಿಂದಾಗಿ ಇವು ನೈಜ ನಳ್ಳಿಗಳಂತೆ ನಡೆಯುತ್ತವೆ. ಆದ್ದರಿಂದ ಈ ಹೆಸರು. ಪ್ರಪಂಚಾದ್ಯಂತ ವ್ಯಾಪಿಸಿವೆ. ತೋಮಿಸಿನೆ ಉಪಕುಟುಂಬಕ್ಕೆ ಸೇರಿದ ಕ್ಸೆಸ್ಟಿಕಸ್ ಕ್ರಿಸ್ಟೇಟಸ್ ಪ್ರಭೇದ ಹುಲ್ಲು ಮತ್ತು ಪೈರುಗಳಿರುವಲ್ಲಿ ವಾಸಿಸುವುದು. ಶರತ್ಕಾಲದಲ್ಲಿ ಇದರ ಮರಿಗಳು ಹೊರ ಬರುತ್ತವೆ. ಇದರ ಸಂಬಂಧಿ ಮಿಸುಮೇನ ವ್ಯಾಟಿಯ ಸುಂದರ ರೂಪದ ಪ್ರಾಣಿ. ಹೆಣ್ಣಿನ ಉದರದ ಬಣ್ಣ ಹಳದಿ ಅಥವಾ ಹಸಿರು. ಇದರ ಮೇಲೆ ಹೊಳೆಯುವ ಕೆಂಪು ಪಟ್ಟಿಗಳಿವೆ. ಗಂಡುಗಳ ಬಣ್ಣ ಕಪ್ಪು. ಇದು ಮರ ಅಥವಾ ಪೊದೆವಾಸಿ. ಈ ಗುಂಪಿನ ಇನ್ನೊಂದು ಸದಸ್ಯ ಡಯೆಯಿಯ ಡಾರ್ಸೆಟ ಎಂಬುದು ಇಂಗ್ಲೆಂಡಿನ ಅಂದವಾದ ಜೇಡಗಳಲ್ಲಿ ಒಂದು. ತಿಳಿಹಸಿರು ಬಣ್ಣದ ಕಾಲು ಹಾಗೂ ಶಿರೋಕ್ಷ ಮತ್ತು ನಸುಗೆಂಪು ಗುರುತುಗಳಿರುವ, ಹಳದಿ ವರ್ಣದ ಉದರ ಇದೆ.

ಫಿಲೋಡ್ರೋಮಿನೆ ಉಪಕುಟುಂಬಕ್ಕೆ ಸೇರಿದ ಫಿಲೋಡ್ರೋಮಸ್ ಮಾರ್ಗ್ಯಾರಿಟೇಟಸ್ ಜೇಡ, ಕೀಟಗಳನ್ನು ಕಬಳಿಸಲು ನಸುನೀಲಿಯ ಶಿಲಾವಲ್ಕದ ರೂಪದಲ್ಲಿ ರೆಂಬೆಗಳ ಮೇಲೆ ಕಾದು ಕುಳಿತಿರುತ್ತದೆ. ಸಮಶೀತೋಷ್ಣ ವಲಯದಲ್ಲಿ ವಾಸಿಸುವ ಟೈಬೆಲಸ್ ಆಬ್ಲಾಂಗಸ್ ಜೇಡದ ಮೈಬಣ್ಣ ತಿಳಿಹಳದಿ. ಪ್ರಾಣಾಪಾಯದ ವೇಳೆಯಲ್ಲಿ ಇದು ಕಾಲುಗಳಿಂದ ಕಾಂಡವನ್ನು ಸುತ್ತುಗಟ್ಟಿ ಗಿಡಕ್ಕೆ ಅಂಟಿಕೊಂಡು ಅಚಲಿಯಾಗುತ್ತದೆ. ಸ್ಪಾರಾಸ್ಸಿನೀ ಉಪಕುಟುಂಬಕ್ಕೆ ಸೇರಿದ ಸು. 40 ಬಗೆಯ ಜೇಡಗಳಲ್ಲಿ ಕೆಲವು ಬಯಲು ವಾಸಿಗಳು. ಅನೇಕ ಜೀವಿಗಳು ಸಸ್ಯೋದ್ಯಾನ ಮತ್ತು ಗಾಜಿನ ಮನೆಗಳಲ್ಲಿ ವಾಸಿಸುತ್ತವೆ. ಅಮೆರಿಕದಲ್ಲಿ ವಾಸಿಸುವ ಅಫ್ಯಾಂಟೊಕಿಲಿನೆ ಉಪಕುಟುಂಬಕ್ಕೆ ಸೇರಿದ ಎರಡು ಬಗೆಯ ಜೇಡಗಳು ಇರುವೆಗಳನ್ನು ಅನುಕರಿಸಿ ಜೀವಿಸುವುವು.

ಸ್ಟಿಫ್ಯಾನೋಪ್ಸಿನೆ ಉಪಕುಟುಂಬದ ಜೀವಿಗಳು ಆಸ್ಟ್ರೇಲಿಯ, ಆಫ್ರಿಕ, ಜಾವ ಮತ್ತು ಸುಮಾತ್ರಗಳಲ್ಲಿ ಹೇರಳವಾಗಿವೆ. ಈ ಗುಂಪಿನ 16 ಜಾತಿಯ ಜೇಡಗಳಲ್ಲಿ ಫ್ರೈನಾರಕ್ನೆ ಡೆಸಿಪಿಯನ್ಸ್ ಅನುಕರಣೆಯಲ್ಲಿ ಅದ್ವಿತೀಯವೆನಿಸಿದೆ. ಎಲೆಯ ಮೇಲೆ ತಾನೇ ನೇಯ್ದ ಬಲೆಯ ಮಧ್ಯೆ ಅಂಗಾತ ಪವಡಿಸಿ ಎದೆಯ ಮೇಲೆ ಕಾಲುಗಳನ್ನು ಮಡಿಸಿಕೊಂಡು ಕೀಟಗಳಿಗಾಗಿ ಕಾಯುವುದು. ಈ ಸ್ಥಿತಿಯಲ್ಲಿ ಜೇಡವು ಪಕ್ಷಿಗಳ ಹಿಕ್ಕೆಯಂತೆ ಕಾಣುವುದರಿಂದ ಕೀಟಗಳು ಮೋಸಕ್ಕೊಳಗಾಗಿ ಬಲಿಯಾಗುತ್ತವೆ. ಸೆಲೆನೋಪಿನೆ ಗುಂಪಿಗೆ ಸೇರಿದ ಸೆಲೆನೋಪ್ಸ್ ಜಾತಿಯ ಜೇಡ ಉಷ್ಣವಲಯವಾಸಿ. ಇದರ ವಿಶಿಷ್ಟ ಗಾತ್ರ, ಚಪ್ಪಟೆಯಾದ

ದೇಹ ಮತ್ತು ಕಣ್ಣುಗಳ ವಿಚಿತ್ರ ಜೋಡಣೆಯಿಂದಾಗಿ ಇದನ್ನು ಸುಲಭವಾಗಿ ಗುರುತಿಸ ಬಹುದು. ಈ ಜಾತಿಯಲ್ಲಿ 12 ಪ್ರಭೇದಗಳಿವೆ. ಅಷ್ಟಾಕ್ಷಿಗಳು ಒಂದೇ ಸಾಲಿನಲ್ಲಿ ದೇಹಕ್ಕೆ ಜೋಡಣೆಗೊಂಡಿವೆ. ನಳಿ ಜೇಡಗಳು ಹಲವು ರೀತಿಯಲ್ಲಿ ಮಾನವನಿಗೆ ಉಪಕಾರಿಯಾಗಿವೆ. (ನೋಡಿ ಜೇಡ). (ಎಸ್.ಎಚ್.ಬಿ.)

**ನಾಗರಹಾವು:** ಸರೀಸೃಪ ವರ್ಗ, ಸ್ಕ್ವಾಮೇಟ ಗಣ, ಇಲ್ಯಾಪಿಡೆ ಕುಟುಂಬಕ್ಕೆ ಸೇರಿದ ವಿಷಪೂರಿತ ಹಾವು (ಕೋಬ್ರ). ನಾಜ ನಾಜ ಇದರ ವೈಜ್ಞಾನಿಕ ಹೆಸರು. ಉದ್ರೇಕಗೊಂಡಾಗ ಕತ್ತಿನ ಭಾಗದ ಪಕ್ಕೆಲಬುಗಳನ್ನು ಮೇಲಕೆ ಎತ್ತುವ ಮೂಲಕ ಕತ್ತಿನ ಸುತ್ತ ಸಡಿಲವಾಗಿ ಅಂಟಿಕೊಂಡಿರುವ ಚರ್ಮವನ್ನು ಅಗಲವಾದ ಹೆಡೆಯಾಗಿ ಹರಡುವ ಲಕ್ಷಣವನ್ನು ಈ ಹಾವಿನಲ್ಲಿ ಕಾಣಬಹುದು. ಇದೇ ಲಕ್ಷಣ ನಾಗರಹಾವಿನ ಹತ್ತಿರ ಸಂಬಂಧಿಗಳಾದ ಕಾಳಿಂಗಸರ್ಪ (ನಾಜ ಹನ್ನ), ಆಫ್ರಿಕದ ಕಪ್ಪುನಾಗರಹಾವು (ನಾಜ ನೈಗ್ರಿಕಾಲಿಸ್) ಮುಂತಾದುವುಗಳಲ್ಲೂ ಉಂಟು. ಮಾಂಬಾ, ಬೂಮ್‌ಸ್ಲಾಂಗ್ ಮುಂತಾದ ಹಾವುಗಳಲ್ಲೂ ಈ ರೀತಿಯ ಹೆಡೆ ಇದೆಯಾದರೂ ಇದು ಶ್ವಾಸನಾಳ ದಪ್ಪವಾಗುವುದರಿಂದ ಉಂಟಾಗುತ್ತದೆ.

ಸುಮಾರು ಹತ್ತು ಜಾತಿಯ ನಾಗರಹಾವುಗಳುಂಟು. ಇವೆಲ್ಲವೂ ಉಷ್ಣವಲಯ ನಿವಾಸಿಗಳು. ಭಾರತ, ದಕ್ಷಿಣ ಚೀನ, ಫಿಲಿಪೀನ್ಸ್ ದ್ವೀಪಗಳೂ ಮತ್ತು ಮಲಯ ಪರ್ಯಾಯ ದ್ವೀಪಗಳಲ್ಲಿ ಬಲುಸಾಮಾನ್ಯ. ಪ್ರಸಕ್ತ ಲೇಖನದಲ್ಲಿ ಮುಖ್ಯವಾಗಿ ಭಾರತದ ನಾಗರಹಾವು ಮತ್ತು ಕಾಳಿಂಗಗಳನ್ನು ವಿವರಿಸಲಾಗಿದೆ.

ನಾಗರಹಾವು ಭಾರತಾದ್ಯಂತ ಕಾಣದೊರೆಯುವುದು. ಕಾಡುಗಳಲ್ಲಿ, ಬಯಲು ಸೀಮೆಯಲ್ಲಿ ಹೀಗೆ ಎಲ್ಲ ತೆರನ ಪರಿಸರದಲ್ಲಿ ಇದು ವಾಸಿಸುತ್ತದೆ. ಶುಷ್ಕಪ್ರದೇಶದಲ್ಲಿ ನೀರಿಗೆ ಆದಷ್ಟು ಹತ್ತಿರಗಳಲ್ಲಿ ಇರುತ್ತದೆ; ಬೇಸಿಗೆಯಲ್ಲಿಯೂ ಹಾಗೆಯೇ. ನಿಶಾಚರಿಯಾದ ಇದು ಮುಸ್ಸಂಜೆಯ ಸಮಯದಲ್ಲಿ ಹೆಚ್ಚು ಚುರುಕಾಗಿ ಆಹಾರಾನ್ವೇಷಣೆಯಲ್ಲಿ ತೊಡಗುತ್ತದೆ. ಇಲಿ, ಕಪ್ಪೆ, ಹಕ್ಕಿಗಳ ಮೊಟ್ಟೆಗಳು ಇದರ ಪ್ರಧಾನ ಆಹಾರ.

ಇದರ ಸರಾಸರಿ ಉದ್ದ 1.3 – 2 ಮೀ. ಅಪರೂಪಕ್ಕೆ 2.5 – 3 ಮೀ ಉದ್ದ ಬೆಳೆದಿರುವುದುಂಟು. ದೇಹದ ಬಣ್ಣ ಕಗ್ಗಂದು. ಕೆಲವೊಮ್ಮೆ ಕಪ್ಪು ಬಣ್ಣ ಮಿಶ್ರಗೊಂಡಿದ್ದು ಅಂಥ ನಾಗರಹಾವನ್ನು ಕರಿನಾಗರವೆಂದು ಕರಿಯುವುದಿದೆ. ಹಾಗೆಯೇ ಹೊಂಬಣ್ಣದ ನಾಗರಗಳೂ ಉಂಟು. ನಾಗರಹಾವಿನ ಹೆಡೆಯ ಹಿಂಭಾಗದಲ್ಲಿ ಹೆಚ್ಚು ಕಡಿಮೆ ಕನ್ನಡಕದಂತೆ ಕಾಣುವ ಗುರುತು ಇದೆ. ಅಸ್ಸಾಮ್ ಪ್ರದೇಶದಲ್ಲಿ ಕಾಣಬರುವ ನಾಗರಹಾವಿನ ಹೆಡೆಯಲ್ಲಾದರೋ ಈ ಗುರುತು ಕನ್ನಡಕದಂತೆ ಇರದೆ ಉಂಗುರದಂತೆ ಇದೆ. ರಾಜಸ್ಥಾನ, ಪಂಜಾಬ್ ಕಡೆಗಳಲ್ಲಿನ ನಾಗರಹಾವುಗಳ ಹೆಡೆಯ ಕನ್ನಡಕದ ಗುರುತಿನ ಕೆಳಭಾಗ ಅಪೂರ್ಣವಾಗಿ ರೂಪುಗೊಂಡಿದೆ. ಅಂತೆಯೇ ಯಾವ ಗುರುತೂ ಇಲ್ಲದಿರುವ ಹೆಡೆಯ ನಾಗರಹಾವುಗಳು ಉಂಟು. ಹೆಡೆಯ ಒಳಭಾಗದಲ್ಲಿ ಎರಡು ಕಪ್ಪು ಮಚ್ಚೆಗಳಿವೆ. ಹೆಡೆಯ ಬುಡಭಾಗದಲ್ಲಿ ಕಪ್ಪುಬಣ್ಣದ ಮೂರು ಅಡ್ಡಪಟ್ಟೆಗಳುಂಟು. ಹೆಡೆಯ ಮೇಲೆ ಕನ್ನಡಕದ ಗುರುತಿರಲಿ ಬಿಡಲಿ ಈ ಅಡ್ಡಪಟ್ಟೆಗಳು ಮಾತ್ರ ಇದ್ದೇ ಇರುವುವು. ರಾಜಸ್ಥಾನದ ಕೆಲವೆಡೆಗಳಲ್ಲಿ ಬಿಳಿಚ (ಆಲ್‌ಬೈನೊ) ನಾಗರಗಳು ಕಂಡುಬಂದಿವೆ. ಇವನ್ನು ಅಲ್ಲಿಯ ಸ್ಥಳೀಯರು ವಾಸುಕಿ ನಾಗ ಎಂದು ಕರೆಯುವರು.



ನಾಗರಹಾವಿನ ಬಾಯ ಎರಡು ದವಡೆಗಳಲ್ಲೂ ಚಿಕ್ಕ ಹಲ್ಲುಗಳುಂಟು. ಮೇಲುದವಡೆಯ ಮುಂತುದಿಯಲ್ಲಿನ ಎರಡು ಹಲ್ಲುಗಳು ಸು. 0.5 ಸೆಂಮೀ ಉದ್ದವಿದ್ದು ವಿಷದ ಹಲ್ಲುಗಳಾಗಿ ಮಾರ್ಪಟ್ಟಿವೆ. ಒಂದೊಂದು ವಿಷದ ಹಲ್ಲೂ ಚೂಪಾದ ಕೊಳವೆಯಂತಿದೆ. ಇದರ ಮುಂಭಾಗದಲ್ಲಿ ಒಂದು ಚಿಕ್ಕ ಕಾಲುವೆಯುಂಟು. ಈ ಕಾಲುವೆಗೂ ಬಾಯಿ ಹಿಂಭಾಗದಲ್ಲಿ ಸ್ಥಿರವಾಗಿರುವ ವಿಷದ ಗ್ರಂಥಿಗಳಿಗೂ ಸಂಪರ್ಕವಿದೆಯಾಗಿ ಗ್ರಂಥಿಗಳಲ್ಲಿ ಉತ್ಪತ್ತಿಯಾಗುವ ವಿಷ ವಿಷದ ಹಲ್ಲಿಗೆ ಸಾಗಿಬರುತ್ತದೆ. ವಿಷದ ಹಲ್ಲುಗಳ ಬುಡದಲ್ಲಿ ಮೊಳಕೆ ರೂಪದ ಹೊಸ ವಿಷದ ಹಲ್ಲುಗಳುಂಟು. ಆಕಸ್ಮಿಕವಾಗಿ ವಿಷದ ಹಲ್ಲುಗಳು ಬಿದ್ದುಹೋದರೆ ಈ ಮೊಳಕೆಹಲ್ಲುಗಳು ವರ್ಧಿಸುವುವು. ವಿಷ ತೆಳುಹಳದಿ ಬಣ್ಣದ ಪಾರದರ್ಶಕ ಸ್ನಿಗ್ಧ ದ್ರವ. ಬಿಸಿಲಿಗೆ ಒಡ್ಡಿದರೆ ಕೊಂಚ ಬಗ್ಗಡವಾಗುತ್ತದೆ. ಒಂದು ಸಲಕ್ಕೆ ಒಂದು ಹಾವಿನಿಂದ ಸು. 0.2 ಗ್ರಾಂ (ಒಣತೂಕ) ವಿಷ ದೊರೆಯುತ್ತದೆ. ಬೇಸಗೆಯಲ್ಲಿ ವಿಷದ ಉತ್ಪಾದನೆ ಹೆಚ್ಚು ಎನ್ನಲಾಗಿದೆ. ವಯಸ್ಕ ನಾಗರಹಾವು ಮಾತ್ರವಲ್ಲದೆ ಮರಿನಾಗರದಲ್ಲೂ – ಅದು ಮೊಟ್ಟೆಯೊಡೆದು ಹೊರಬಂದ ದಿನದಿಂದ ಹಿಡಿದು – ವಿಷ ಉಂಟೇ ಉಂಟು. ಆದರೆ ಇದರ ಮೊತ್ತ ಕಡಿಮೆ ಇರುತ್ತದೆ. ವಿಷ ಆಮ್ಲೀಯ ಗುಣವುಳ್ಳದ್ದು. ಒಣಗಿಸಿದಾಗ ಸೂಜಿರೂಪದ ಹರಳುಗಳಾಗುತ್ತವೆ. ನೀರಿನಲ್ಲಿ ಕರಗಬಲ್ಲದು. ಇದು ಹಲವಾರು ಕಿಣ್ವಗಳ, ನ್ಯೂರೊಟಾಕ್ಸಿನು (ನರವ್ಯೂಹದ ವಿಷ) ಗಳ ಮಿಶ್ರಣ. ಕಿಣ್ವಗಳಲ್ಲಿ ಮುಖ್ಯವಾದುವು ಫಾಸ್ಫಾಟಿಡೇಸ್, ಪ್ರೊಟಿಯೇಸ್, ಎರೆಪ್ಸಿನ್, ಕೋಲಿನ್ ಎಸ್ಟರೇಸ್, ಹೈಯಾಲುರಾನಿಡೇಸ್, ರೈಬೊನ್ಯೂಕ್ಲಿಯೇಸ್, ಡಿಆಕ್ಸಿರೈಬೊನ್ಯೂಕ್ಲಿಯೇಸ್ ಮತ್ತು ಆಫಿಯೊ ಆಕ್ಸಿಡೇಸ್.

ರೇಗಿದಾಗ ನಾಗರಹಾವು ತನ್ನ ದೇಹವನ್ನು ಮೇಲಕ್ಕೆತ್ತಿ, ಹೆಡೆಯನ್ನು ಅಗಲಿಸಿ ಬುಸುಗುಡುತ್ತ ತನ್ನ ಎದುರಾಳಿಯನ್ನು ಹೊಡೆಯುತ್ತದೆ. ಕಡಿತದಿಂದ ಉಂಟಾಗುವ ಲಕ್ಷಣಗಳಲ್ಲಿ ಮುಖ್ಯವಾದುವು ಹೀಗೆವೆ: ಕಲಡಿತಕ್ಕೊಳಗಾದ ಜಾಗ ಕಂಪೇರುವುದಲ್ಲದೆ ಉರಿ ಉಂಟಾಗುತ್ತದೆ; ಕಡಿಸಿಕೊಂಡ ವ್ಯಕ್ತಿಗೆ ನಿದ್ರೆ ಅಥವಾ ಮಂಪರು ಉಂಟಾಗುವುದು; 35–50 ನಿಮಿಷಗಳ ತರುವಾಯ ಬಾಯಲ್ಲಿ ಜೊಲ್ಲು ಯಥೇಚ್ಛವಾಗಿ ಉತ್ಪತ್ತಿಯಾಗುವುದು. ವಾಂತಿಯಾಗುವುದೂ ಉಂಟು; ನಾಲಗೆ ಮತ್ತು ಧ್ವನಿನಾಳಗಳು ಉಬ್ಬಿಕೊಳ್ಳುವುವು; ಇದರಿಂದ ಮಾತನಾಡುವುದೂ ಉಗುಳು ನುಂಗುವುದೂ ಕಷ್ಟಕರವಾಗುತ್ತದೆ; ನಿಧಾನವಾಗಿ ಉಸಿರಾಟ ಇಳಿಮುಖವಾಗುತ್ತದೆ; ಗುಂಡಿಗೆ ಬಡಿತ ಹೆಚ್ಚಾಗುತ್ತದೆ; ಕೊನೆಗೆ ಉಸಿರಾಟವೂ ಹೃದಯ ಬಡಿತವೂ ನಿಂತುಹೋಗುವುವು. ವ್ಯಕ್ತಿ ಹಾವಿನ ಕಡಿತಕ್ಕೆ ಒಳಗಾದ ತತ್‌ಕ್ಷಣ ಪ್ರತಿವಿಷವನ್ನು ಕೊಡುವುದರಿಂದ ಸಾವನ್ನು ತಪ್ಪಿಸಬಹುದು.

ನಾಗರಹಾವಿನ ಸಂತಾನವೃದ್ಧಿಯ ಶ್ರಾಯ ಮೇ–ಜೂನ್ ತಿಂಗಳುಗಳು. ಗಂಡುಹೆಣ್ಣುಗಳು ಕೂಡಿದ 9–10 ತಿಂಗಳ ತರುವಾಯ ಹೆಣ್ಣು ಒಂದು ತೆರನ ಒರಟು ಗೂಡನ್ನು ರಚಿಸಿ 20–60 ಮೊಟ್ಟೆಗಳನ್ನಿಡುತ್ತದೆ. ಸಾಮಾನ್ಯವಾಗಿ ಗಂಡು – ಹೆಣ್ಣುಗಳೆರಡೂ ಮೊಟ್ಟೆಗಳ ಸನಿಹದಲ್ಲೇ ಇದ್ದು ಅವನ್ನು ಕಾಪಾಡುವುವು. ಸು. 58 ದಿವಸಗಳ ಅನಂತರ ಮೊಟ್ಟೆಗಳು ಒಡೆದು ಮರಿಹಾವುಗಳು ಹೊರಬರತೊಡಗುವುವು. ಮರಿನಾಗರಗಳಲ್ಲಿ ಚೆನ್ನಾಗಿ ರೂಪುಗೊಂಡ ಹೆಡೆಯುಂಟು. ಇವು ತಮ್ಮ ತಂದೆತಾಯಿಗಳಿಗಿಂತ ಹೆಚ್ಚು ಆಕ್ರಮಣ ಪ್ರವೃತ್ತಿಯುಳ್ಳವು. ಹುಟ್ಟಿದಾಗ 20–25 ಸೆಂಮೀ ಉದ್ದವಿರುವ ಇವು ಒಂದು ವರ್ಷದ ತರುವಾಯ 75 ಸೆಂಮೀ ಉದ್ದ ಬೆಳೆಯುವುವು. ನಾಲ್ಕು ವರ್ಷಗಳಲ್ಲಿ 2 ಮೀ ಉದ್ದ ಬೆಳೆಯುತ್ತವೆ. ಇವು ಮೂರು ವರ್ಷ ವಯಸ್ಸಿನವಾದಾಗ ಲೈಂಗಿಕ ಪ್ರಬುದ್ಧತೆಯನ್ನು ಪಡೆಯುವುವು.

ಭಾರತದಲ್ಲಿ ನಾಗರಹಾವನ್ನು ಪೂಜನೀಯವೆಂದು ಪರಿಗಣಿಸಲಾಗಿದೆ. ನಾಗಪಂಚಮಿ (ಜುಲೈ ತಿಂಗಳಲ್ಲಿ) ಮತ್ತು ಅನಂತ ಚತುರ್ದಶಿಗಳಂದು (ಸೆಪ್ಟಂಬರ್ ತಿಂಗಳಲ್ಲಿ) ನಾಗರಹಾವಿನ ಪೂಜೆಯನ್ನು ನಡೆಸಲಾಗುತ್ತದೆ. ನಾಗರಹಾವನ್ನು ಫಲವಂತಿಕೆಯ ಪ್ರತೀಕವೆಂದು ಬಗೆಯಲಾಗಿದೆ. ಮಕ್ಕಳಾಗದವರು ನಾಗರಕಲ್ಲನ್ನು ಪ್ರತಿಷ್ಠಾಪಿಸಿ ಪೂಜಿಸಿದರೆ ಮಕ್ಕಳಾಗುವುದೆಂಬ ನಂಬಿಕೆಯುಂಟು.

ನಾಗರಹಾವಿನ ಬಗ್ಗೆ ಅನೇಕ ತಪ್ಪು ಕಲ್ಪನೆಗಳುಂಟು. ನಾಗರಹಾವಿನ ತಲೆಯಲ್ಲಿ ಮಣಿ ಇದೆಯೆನ್ನುವುದು, ನಾಗರಹಾವು ಪುಂಗಿಯ ನಾದಕ್ಕೆ ಮರುಳಾಗಿ ಹೆಡೆಯಾಡಿಸುವುದೆನ್ನುವುದು, ಇದಕ್ಕೆ ಇಳಿವಯಸ್ಸಿನಲ್ಲಿ ಕೂದಲುಗಳು ಬೆಳೆಯುವುವು ಎನ್ನುವುದು, ಕೆಲವು ನಾಗರಹಾವುಗಳಿಗೆ ಒಂದಕ್ಕಿಂತ ಹೆಚ್ಚು ಹೆಡೆಗಳಿರುವುದುಂಟು ಎನ್ನುವುದು ಇಂಥ ತಪ್ಪು ಕಲ್ಪನೆಗಳಲ್ಲಿ ಕೆಲವು.

ಕಾಳಿಂಗಸರ್ಪ ನಾಗರಹಾವಿನ ಹತ್ತಿರ ಸಂಬಂಧಿ. ಅಸ್ಸಾಮ್, ನೀಲಗಿರಿ ಪ್ರದೇಶ, ಕರ್ನಾಟಕದ ಆಗುಂಬೆ, ಕಾರವಾರಗಳಲ್ಲಿ, ದಕ್ಷಿಣ ಚೀನ, ಆಗ್ನೇಯ ಏಷ್ಯಗಳಲ್ಲಿ ಇದು ಕಾಣದೊರೆಯುತ್ತದೆ. ಬೆಟ್ಟಸೀಮೆಗಳಲ್ಲಿ ಇದರ ವಾಸ. ನೆಲದ ಮೇಲೊಂದೇ ಅಲ್ಲದೆ ನೀರಿನಲ್ಲೂ ಮರಗಿಡಗಳಲ್ಲೂ ವಾಸಿಸುತ್ತದೆ. ನಾಗರಹಾವಿನ ಕುಟುಂಬದ ದೈತ್ಯ ಇದು; ವಿಷದ ಹಾವುಗಳಲ್ಲೇ ಅತ್ಯಂತ ದೊಡ್ಡದು. ಸು. 5 ಮೀ ಉದ್ದ ಬೆಳೆಯುತ್ತದೆ. 6 ಮೀ ಬೆಳೆದಿರುವ ದಾಖಲೆಯೂ ಉಂಟು. ನಾಗರಹಾವಿನಂತೆ ಇದು ಕೂಡ ಹೆಡೆಯನ್ನು ವಿಸ್ತರಿಸಬಲ್ಲದು. ಆದರೆ ಇದರ ಹೆಡೆಯ ಮೇಲೆ ಕನ್ನಡದ ಗುರುತು ಇಲ್ಲ. ಬದಲಿಗೆ ತಲೆಯಿಂದ ಹಿಡಿದು ದೇಹದುದ್ದಕ್ಕೂ ಮಾಸಲು ಹಳದಿ ಬಣ್ಣದ ಪಟ್ಟೆಗಳುಂಟು.

ದೇಹದ ಬಣ್ಣ ಆಲಿವ್ ಹಸುರು ಅಥವಾ ನಸುಗಪ್ಪು. ಕಾಳಿಂಗ ಸರ್ಪ ಬೇರೆ ಹಾವುಗಳನ್ನು ತಿಂದು ಜೀವಿಸುತ್ತದೆ. ಕೆಲವೊಮ್ಮೆ ತನ್ನ ಜಾತಿಯ ಎಳೆಯ ಕಾಳಿಂಗಗಳನ್ನು ತಿನ್ನುವುದುಂಟು.

ಕಾಳಿಂಗಸರ್ಪ ಹಾವುಗಳಲ್ಲೇ ಅತ್ಯಂತ ಆಕ್ರಮಣಕಾರಿ ಪ್ರವೃತ್ತಿಯುಳ್ಳದ್ದು. ಯಾವುದೇ ಪ್ರಚೋದನೆಯೂ ಇಲ್ಲದೆ ಮೇಲೆ ಬೀಳುತ್ತದೆ. ರೇಗಿದಾಗ ತನ್ನ ದೇಹವನ್ನು 1.5–2 ಮೀ ಎತ್ತರಕ್ಕೆ ಅಪ್ಪಳಿಸುತ್ತದೆ.

ನಾಗರಹಾವಿನಂತೆ ಇದೂ ಕೂಡ ಮಳೆಗಾಲದಲ್ಲಿ ಸಂತಾನಭಿವೃದ್ಧಿಯಲ್ಲಿ ತೊಡಗುತ್ತದೆ. ಬಿದಿರು, ಕಡ್ಡಿ, ಎಲೆಗಳನ್ನು ಬಳಸಿ ಗೂಡು ನಿರ್ಮಿಸುತ್ತದೆ. 20–30 ಮೊಟ್ಟೆಗಳನ್ನಿಟ್ಟು ತಂದೆ – ತಾಯಿ ಹಾವುಗಳೆರಡೂ ಕಾವಲು ನಿಲ್ಲುತ್ತವೆ. ಮೊಟ್ಟೆಯೊಡೆದು ಹೊರಬರುವ ಮರಿಗಳು ಮರಿಗಳು ಸು. 60 ಸೆಂಮೀ ಉದ್ದ ಇರುವುವು. (ಬಿ.ಎನ್.)

**ನಾಗರಹೊಳೆ:** ಕರ್ನಾಟಕದ ಪ್ರಸಿದ್ಧ ಅಭಯಾರಣ್ಯಗಳಲ್ಲೊಂದು. ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನ ವಿರಾಜಪೇಟೆಯ ಆಗ್ನೇಯಕ್ಕೆ 61 ಕಿಮೀ ದೂರದಲ್ಲಿದೆ. ಈ ಭಾಗದ ಆಗ್ನೇಯದಲ್ಲಿ ಹುಟ್ಟಿ, ಪೂರ್ವಕ್ಕೆ ಹರಿದು, ಮೈಸೂರು ಜಿಲ್ಲೆಯ ಕಪಿಲಾನದಿಯನ್ನು ಸೇರುವ ನಾಗರಹೊಳೆ ನದಿಯಿಂದಾಗಿ ಇದಕ್ಕೆ ಈ ಹೆಸರು. ಇದು ನಾಗರಹೊಳೆ, ಕಲ್ಲಹಳ್ಳಿ, ತಿತಿಮತಿ ಅರಣ್ಯಪ್ರದೇಶಗಳನ್ನು ಒಳಗೊಂಡಿದೆ. ಇದರ ಒಟ್ಟು ವಿಸ್ತೀರ್ಣ 288 ಚಕಿಮೀ. ಇದು ಸಮುದ್ರ ಮಟ್ಟದಿಂದ ಸು. 760 ಮೀ ಎತ್ತರದಲ್ಲಿದೆ. ಇದರ ದಕ್ಷಿಣದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಾಕನಕೋಟೆ ಅರಣ್ಯವಿದೆ. ಅಭಯಾರಣ್ಯದ ಉತ್ತರ ಭಾಗದಲ್ಲಿ ದಟ್ಟವಾದ ಅರಣ್ಯ ವೃಕ್ಷಗಳಿವೆ (ಉದಾ: ತೇಗ, ಬೀಟೆ, ಕರಿಮತ್ತಿ, ನಂದಿ, ಶ್ರೀಗಂಧ ವೃಕ್ಷ ಜಾತಿಗಳು). ದಕ್ಷಿಣ ಭಾಗದಲ್ಲಿ ಕಾಡುಪ್ರಾಣಿಗಳಿಗೆ ಬೇಕಾಗುವ ಹುಲ್ಲುಗಾವಲಿದೆ. ವರ್ಷದ ಎಲ್ಲಾ ದಿನಗಳಲ್ಲಿ ವನ್ಯಜೀವಿಗಳಿಗೆ ಇಲ್ಲಿ ಆಹಾರ ಮತ್ತು ನೀರಿನ ಸೌಕರ್ಯ ಇದೆ. ಕೃತಕವಾಗಿ ಪ್ರಾಣಿಗಳಿಗೆ ಪ್ರಿಯವಾದ ಉಪ್ಪುನೆಕ್ಕು (ಸಾಲ್ಟ್ ಲಿಕ್) ಗಳಿವೆ.

ವನ್ಯಪ್ರಾಣಿಗಳಾದ ಹುಲಿ, ಚಿರತೆ, ಕರಡಿ, ಕಾಡು ನಾಯಿ, ಆನೆ, ಕಾಡೆಮ್ಮೆ, ಜಿಂಕೆ, ಕಾಡುಬೆಕ್ಕು, ಕೆಂಪು ಅಳಿಲು, ಹಾರುವ ಅಳಿಲು, ಕೋತಿ, ನರಿ, ಮುಂಗುಸಿ ನಾಗರಹೊಳೆಯಲ್ಲಿವೆ. ಕಾಕನಕೋಟೆ ಸಮೀಪದ ಅರಣ್ಯದಲ್ಲಿ ನಾಲ್ಕು ಕೊಂಬಿನ ಹುಲ್ಲೆ ಇದೆ. ನಾಗರಹೊಳೆಯ ಪಕ್ಷಿ ಸಂಪತ್ತು ವೈವಿಧ್ಯಮಯ. ನವಿಲು, ಕಾಡು ಕೋಳಿ, ಗೌಜಲು, ಭೀಮರಾಜ, ಮರಕುಟಿಗ, ಪ್ಯಾರಡೈಸ್ ಫ್ಲೈ ಕ್ಯಾಚರ್, ಅರಿಶಿಣ ಬಣ್ಣದ ಕೊಕ್ಕುಳ್ಳ ಮಂಗಟ್ಟೆ (ಹಾರ್ನ್‌ಬಿಲ್), ಕಾಮಾಲೆಹಕ್ಕಿ (ಓರಿಯೋಲ್), ಬಾಬಾಬುಡನ್ ಗಿಣಿ, ಬೆಟ್ಟದ ಗೊರವಂಕ (ಹಿಲ್‌ಮೈನ್), ಬುಲ್‌ಬುಲ್ ಸೂರಕ್ಕಿ (ಸನ್‌ಬರ್ಡ್) ಮುಖ್ಯ ಪಕ್ಷಿಗಳು. ಹೆಬ್ಬಾವು, ನಾಗರಹಾವು, ಕಾಳಿಂಗಸರ್ಪಗಳಿವೆ. ಇಲ್ಲಿನ ಪ್ರಾಣಿ ಸಂಪತ್ತನ್ನು ಹತ್ತಿರದಿಂದ ನೋಡುವ ಅನುಕೂಲತೆಗಾಗಿ ಎತ್ತರದ ವೀಕ್ಷಣ ಗೋಪುರಗಳನ್ನು ಕಟ್ಟಿದ್ದಾರೆ. ಅಭಯಾರಣ್ಯವನ್ನು ಸುತ್ತುವ ಸಲುವಾಗಿ ವಾಹನ ಸೌಕರ್ಯವನ್ನೂ ಕಲ್ಪಿಸಲಾಗಿದೆ. ಸಾಕಿದ ಆನೆಗಳ ಮೇಲೆ ಪ್ರವಾಸಿಗರನ್ನು ಒಯ್ಯುವ ಅನುಕೂಲ ವ್ಯವಸ್ಥೆ ಇದೆ. ಇಲ್ಲಿ ಸುಸಜ್ಜಿತ ಪ್ರವಾಸಿ ಮಂದಿರ, ಪ್ರಾಣಿಗಳಿಗೆ ಸಂಬಂಧಿಸಿದ ಒಳ್ಳೆಯ ಗ್ರಂಥ ಭಂಡಾರವಿದೆ. ಈ ಕಾರಣಗಳಿಂದಾಗಿ ನಾಗರಹೊಳೆ ಅಭಯಾರಣ್ಯ ಬಲು ಜನಪ್ರಿಯ ತಾಣವಾಗಿದೆ. (ನೋಡಿ: ನಾಷನಲ್ ಪಾರ್ಕ್ಸ್). (ಎಸ್‌ಜಿ.ಎನ್)

**ನಾಯಿ:** ಮಾನವನ ಸಾಕು ಪ್ರಾಣಿಗಳಲ್ಲೊಂದು. ಮನುಷ್ಯನ ಒಡನಾಡಿ. ಭೂಮಂಡಲದ ಎಲ್ಲ ಭಾಗಗಳಲ್ಲಿ ಜೀವಿಸಬಲ್ಲ ಸ್ತನಿ. ಡೆನ್ಮಾರ್ಕನಲ್ಲಿ ಸಿಕ್ಕಿದ ಅವಶೇಷಗಳಿಂದ ಈ ಪ್ರಾಣಿ ಅಸಿಲಿಯನ್ ಸಂಸ್ಕೃತಿಯ ಕಾಲದಿಂದಲೂ ಅಂದರೆ ಮಧ್ಯಶಿಲಾಯುಗ ಕಾಲದಿಂದಲೂ ಮಾನವನ ಅತ್ಯುತ್ತಮ ಪ್ರಿಯ ಸಹಚರಜೀವಿ ಎಂಬುದು ಅರಿವಾಗುತ್ತದೆ. ಇಲ್ಲಿ ಸಿಕ್ಕಿದ ಮೂಳೆಗಳು 1600– 7000 ವರ್ಷದಷ್ಟು ಹಿಂದಿನವು. ನಾಯಿಗಳು ಮೆಸಪೊಟೇಮಿಯಾದ ಕಣಿವೆ ಮತ್ತು ಅದರ ಪೂರ್ವ ಪ್ರದೇಶದಲ್ಲಿ ಕಂಡುಬಂದುವು. ಮೊಟ್ಟ ಮೊದಲಿಗೆ ಇವನ್ನು ಎಲ್ಲಿ ಸಾಕಲಾರಂಭಿಸಲಾಯಿತೆಂಬುದಕ್ಕೆ ಪುರಾವೆಗಳಿಲ್ಲದಿದ್ದರೂ ಮಧ್ಯ ಯುರೋಪಿನ ಒಂದು ಪ್ರದೇಶದಲ್ಲಿ ಆರಂಭಿಸಿರಬೇಕೆಂದು ಊಹಿಸಲಾಗಿದೆ.

ನಾಯಿಗಳು ಕಾರ್ನಿವೋರ ಗಣದ ಕೇನಿಡೆ ಕುಟುಂಬದ ಸದಸ್ಯರು. ಕೇನಿಸ್ ಜಾತಿಯ ಫೆಮಿಲಿಯಾರಿಸ್ ಪ್ರಭೇದಕ್ಕೆ ಸೇರಿವೆ. ತೋಳಗಳು, ಗುಳ್ಳೆ ನರಿಗಳು (ಜ್ಯಾಕಲ್), ಆಸ್ಟ್ರೇಲಿಯಾದ ಡಿಂಗೋ ಮತ್ತು ಕಯೋಟ್‌ಗಳು ಇವುಗಳ ಹತ್ತಿರ ಸಂಬಂಧಿಗಳು. ಕೇನಿಡೆ ಕುಟುಂಬದ ವುಲ್ಪೆಸ್, ಯುರೋಸಯನ್ ಅಲೋಪೆಕ್ಸ್ ಜಾತಿಗಳಿಗೆ ಸೇರಿದ ನರಿಗಳು (ಫಾಕ್ಸ್) ಕಾಡುನಾಯಿಗಳು ನಾಯಿಯ ದೂರ ಸಂಬಂಧಿಗಳು. ಕಾಡುನಾಯಿಗಳಲ್ಲಿ ಲೈಕೋನ್ ಜಾತಿಯ ಆಫ್ರಿಕಾದ ಬೇಟೆನಾಯಿ ಇಕ್ಟಿಸಿಯಾನ ಜಾತಿಯ ದಕ್ಷಿಣ ಅಮೇರಿಕಾದ ಪೊದೆನಾಯಿ ಮತ್ತು ಕುವೋನ್ ಜಾತಿಯ ಭಾರತದ ಕಾಡುನಾಯಿ (ಧೋಲ್) ಪ್ರಮುಖವಾದವು.

ನಾಯಿ ಓಡುಗಾಲಿ (ಕರ್ಸೋರಿಯಲ್) ಪ್ರಾಣಿ. ಇದು ಬೆರಳುಗಳನ್ನು ನೆಲಕ್ಕೆ ಊರಿ ನಡೆಯುವುದರಿಂದ ಇದಕ್ಕೆ ಅಂಗುಲಿಗಾಮಿ (ಡಿಜಿಟಿಗ್ರೇಡ್) ಎಂಬ ಹೆಸರಿದೆ. ಗಾಳಿಯ ಮೂಲಕ ಹೆಚ್ಚು ತಡೆಯಾಗದಂತೆ ತೂರಿ ಹೋಗಲು ಅನುಕೂಲವಾದ, ನಯವಾದ ದೇಹದ ಆಕಾರ ಕಾಲುಗಳ ವೇಗದ ಚಲನೆಗೆ ಅನುಕೂಲವಾಗಿದೆ. ಕಾಲುಗಳು ಬಲವಾಗಿ, ಪಾದಗಳು ದುಂಡಾಗಿ ಇವೆ. ಮುಂಗಾಲಿನ ಪಾದಗಳಲ್ಲಿ ಐದು ಬೆರಳು, ಹಿಂಗಾಲಿನ ಪಾದಗಳಲ್ಲಿ ನಾಲ್ಕು ಬೆರಳುಗಳಿವೆ. ನಡೆಯುವಾಗ ಮುಂಗಾಲಿನ ಹೆಬ್ಬೆಟ್ಟುಗಳು ನೆಲಕ್ಕೆ ತಾಗುವುದಿಲ್ಲ. ಮುಂಗಾಲುಗಳಲ್ಲಿ ಹೆಬ್ಬೆಟ್ಟುಗಳಿಲ್ಲ. ಬೆರಳುಗಳನ್ನು ಊರಿ ನಡೆಯುತ್ತದೆ. ಅಂಗಾಲಿನಲ್ಲಿ ಮೃದುವಾದ ಮೆತ್ತೆಗಳಿವೆ. ಆದ್ದರಿಂದ, ನಡೆಯುವಾಗ ಸದ್ದಾಗುವುದಿಲ್ಲ. ಬೆರಳುಗಳಲ್ಲಿ ಬಾಗಿರುವ ಬಲವಾದ ಉಗುರುಗಳಿವೆ. ಚರ್ಮ ಮೈಗೆ ಬಿಗಿಯಾಗಿ ಅಂಟಿಕೊಳ್ಳದೆ ಸಡಿಲವಾಗಿದೆ.

ನಾಯಿಯ ಬಾಹ್ಯರೂಪ ಮತ್ತು ಗಾತ್ರಗಳಲ್ಲಿ ವೈವಿಧ್ಯವನ್ನು ಕಾಣಬಹುದು. ದೇಹದ ಬಣ್ಣದಲ್ಲಿ ವ್ಯತ್ಯಾಸವಿದೆ. ದೇಹ ಕಪ್ಪು, ಬಿಳಿ, ಕೆಂಪು, ಕಂದು ಬಣ್ಣದ್ದಾಗಿರುತ್ತದೆ. ಬಿಳಿ ಮತ್ತು ಕಪ್ಪು, ಬಿಳಿ ಹಾಗೂ ಕೆಂಪು, ಬಿಳಿಯ ಹೊದಿಕೆಯ ಮೇಲೆ ಚುಕ್ಕೆಗಳಿರುವ ಮಿಶ್ರಣಗಳಿರುವುದು ಇದೆ. ಮೈಮೇಲಿನ ಕೂದಲು ಮೊಟಕಾಗಿರಬಹುದು ಅಥವಾ

ಲ್ಯಾಬ್ರಡರ್ ತಳಿ

ಉದ್ದವಾಗಿರಬಹುದು. ಉದ್ದ ಕೂದಲಿನ ನಾಯಿಗಳಿಗೆ ಜೂಲು ನಾಯಿಗಳೆಂದು ಹೆಸರು. ತಲೆ ಮತ್ತು ಕಿವಿಯ ಆಕಾರ, ಕಾಲಿನ ಎತ್ತರ, ಗಾತ್ರ, ತೂಕ ಮುಂತಾದ ಲಕ್ಷಣಗಳಲ್ಲಿ ವ್ಯತ್ಯಾಸವಿದೆ. ನಾಯಿಗಳಲ್ಲಿ ಅತ್ಯಂತ ಸಣ್ಣ ನಾಯಿ ಮೆಕ್ಸಿಕೋದ ಚವಾವಾ ಸು. 1 ಕಿಗ್ರಾಂ ಭಾರವಿದ್ದರೆ, ಅತ್ಯಂತ ದೊಡ್ಡ ನಾಯಿ ಸೇಂಟ್ ಬರ್ನಾಡ್. ಇದರ ತೂಕ 72 ಕಿಗ್ರಾಂ. ಸಾಮಾನ್ಯವಾಗಿ ನಾಯಿಯ ಬಾಲ ಡೊಂಕು. ನಾಯಿಗಳು ಸಾಧಾರಣವಾಗಿ ಮಾಂಸಹಾರಿಗಳು. ಸಸ್ಯಾಹಾರವನ್ನು ಸೇವಿಸುತ್ತವೆ. ಇವುಗಳ ಹಲ್ಲುಗಳು ಮೂಳೆಯನ್ನು ಜಗಿಯುವಷ್ಟು ಗಟ್ಟಿಯಾಗಿವೆ. ಅಲ್ಲದೆ ಮಾಂಸವನ್ನು ಕಿತ್ತು ಅದನ್ನು ಅಗಿಯಲು ಹಲ್ಲುಗಳು ಹೊಂದಿಕೊಂಡಿವೆ. ಇದರ ದಂತ ಸೂತ್ರ 3/3, 1/1, 4/4, 2/3 42. ಕೋರೆ ಹಲ್ಲುಗಳು ಚೆನ್ನಾಗಿ ಬೆಳೆದಿವೆ. ಮೇಲುದವಡೆಯ ಒಂದು ಮುಂದವಡೆಹಲ್ಲು, ಕೆಳದವಡೆಯ ಮೊದಲ ದವಡೆ ಹಲ್ಲು ಮಾಂಸವನ್ನು ಅಗಿದು ತಿನ್ನಲು ಸಹಾಯಕಮಾಗಿರುವ ಕಾರ್ನೇಸಿಯಲ್ ಹಲ್ಲಾಗಿ ಮಾರ್ಪಟ್ಟಿವೆ. ನಾಯಿ ಬೆವರನ್ನು ನಾಲಿಗೆಯ ತುದಿಯಿಂದ ಸುರಿಸುವುದು. ಈ ಗುಣ ಇದಕ್ಕೆ ವಿಶಿಷ್ಟವಾದದ್ದು. ನಾಯಿ ನೀರನ್ನು ನಾಲಿಗೆಯಿಂದ ನೆಕ್ಕಿ ಕುಡಿಯುತ್ತದೆ. ನಾಯಿ ಪ್ರಾಣಿಗಳಲ್ಲೆಲ್ಲಾ ಅತ್ಯಂತ ಚುರುಕಾದ ಮತ್ತು ಬುದ್ಧಿಶಾಲಿಯಾದ ಪ್ರಾಣಿ. ಇದಕ್ಕೆ ಅನೇಕ ಕೆಲಸ ಕಾರ್ಯಗಳನ್ನು ಕಲಿಸಬಹುದು. ಜ್ಞಾಪಕ ಶಕ್ತಿ ಹೆಚ್ಚು. ಕಣ್ಣು ಮತ್ತು ಕಿವಿ ಸೂಕ್ಷ್ಮ. ಸ್ಪರ್ಶೇಂದ್ರಿಯ ಗ್ರಾಹಕಾಂಗಗಳು ಚೆನ್ನಾಗಿ ರೂಪುಗೊಂಡಿವೆ.

ಕೇನಿಡೆ ಕುಟುಂಬದ ಎಲ್ಲ ಪ್ರಾಣಿಗಳು ಅಲಿಗೊಸೀನ್ ಕಾಲದಲ್ಲಿ ಉಗಮವಾದುವು. ತೋಳ ಪಿತೃ ಗುಂಪಿನಿಂದ ಮೊದಲು ಕಾಡುನಾಯಿಗಳೂ, ನಂತರ ನರಿಗಳೂ ಹುಟ್ಟಿದವೆನ್ನಲಾಗಿದೆ. ನಂತರ ಆ ಪಿತೃ ಗುಂಪಿನಿಂದ ಕಯೋಟ್, ಆಫ್ರಿಕಾ ಮತ್ತು ದಕ್ಷಿಣ ಯುರೋಪಿನ ಗುಳ್ಳೆ ನರಿಗಳು ಜನ್ಮ ತಾಳಿದುವು. ಕಟ್ಟಕಡೆಯಲ್ಲಿ ತೋಳಗಳ ಒಂದು ಸಣ್ಣ ಬುಡಕಟ್ಟಿನಿಂದ ಸಾಕಿದ ನಾಯಿಗಳು, ನಂತರ ಈ ನಾಯಿಗಳಿಂದ ಆಸ್ಟ್ರೇಲಿಯಾದ ಡಿಂಗೋ ನಾಯಿಗಳು ಹುಟ್ಟಿದವು.

ಉಗಮ ಮತ್ತು ಚರಿತ್ರೆ : ನಾಯಿ, ತೋಳ, ಗುಳ್ಳೆ ನರಿ ಮತ್ತು ಕಯೋಟ್‌ಗಳೆಲ್ಲವೂ ಕೇನಿಸ್ ಜಾತಿಗೆ ಸೇರಿವೆ. ಈಗಿನ ತೋಳಗಳು ಮತ್ತು ಗುಳ್ಳೆನರಿಗಳು ನಾಯಿಗಳ ಹತ್ತಿರ ಸಂಬಂಧಿಗಳು. ಕೇನಿಸ್ ಲೂಪಸ್ ಪ್ರಭೇದದ ಬೂದು ತೋಳ ನಾಯಿಯ

ಪೂರ್ವಜವಾಗಿದ್ದಿರಬಹುದೆಂದು ನಂಬಲಾಗಿದೆ. ಈ ತೋಳಗಳ ಅನೇಕ ಉಪಪ್ರಭೇದಗಳು ಮತ್ತು ಸ್ಥಳೀಯ ಬಗೆಗಳು, ಮೊದಲಿಗೆ ಯೂರೋಪ್, ಏಷ್ಯ ಮತ್ತು ಉತ್ತರ ಅಮೇರಿಕಗಳಲ್ಲಿ ಪ್ರಸರಿಸಿದ್ದವು. ತೋಳಗಳ ಮೈಬಣ್ಣ ವೈವಿಧ್ಯಮಯ. ಕೆಲವು ಅಚ್ಚ ಕಪ್ಪಾದರೆ, ಕೆಲವು ಅಚ್ಚ ಬಿಳಿ. ಮಿಕ್ಕ ಕೆಲವಲ್ಲಿ ಬೂದು ಬಣ್ಣದ ಅನೇಕ ಛಾಯೆಗಳಿದ್ದುವು. ಉತ್ತರದ ದೇಶಗಳ ತೋಳಗಳು ದಕ್ಷಿಣ ದೇಶಗಳ ಸಣ್ಣ ಗಾತ್ರದ ತೋಳಗಳಿಂದ ಹುಟ್ಟಿರಬಹುದೆಂಬ ಅಭಿಪ್ರಾಯವಿದೆ. ಹಾಗಾದರೆ, ಗುಳ್ಳೆ ನರಿಗಳು ನಾಯಿಗಳ ಪೂರ್ವಜರಲ್ಲವೆ ಎಂಬ ವಾದಕ್ಕೆ ಅನೇಕ ಅಂಶಗಳು ಇಲ್ಲ ಎಂಬ ವಾದವನ್ನು ಪುಷ್ಟೀಕರಿಸುತ್ತವೆ. ಗುಳ್ಳೆ ನರಿಗಳ ಚೂಪಾದ ತಲೆ, ಕೂಗುವ ರೀತಿ ಹಾಗೂ ಅವುಗಳ ಸಮಾಜ ಜೀವನ ಮುಂತಾದ ಗುಣಲಕ್ಷಣಗಳು ನಾಯಿಗಳಿಗಿಂತ ಬೇರೆಯಾಗಿರುವುದರಿಂದ ಗುಳ್ಳೆನರಿಗಳು ನಾಯಿಗಳ ಪೂರ್ವಜರಾಗುವುದಕ್ಕೆ ಸಾಧ್ಯವಿಲ್ಲ ಎಂದು ತಜ್ಞರ ಅಭಿಪ್ರಾಯ.

ಮಾನವ ತನ್ನ ಅನುಕೂಲಕ್ಕಾಗಿ ನಾಯಿಗಳನ್ನು ಪಳಗಿಸಿದ ಮೇಲೆ ಇವುಗಳ ಬಾಹ್ಯ ರೂಪ ಮತ್ತು ಸ್ವಭಾವಗಳ ಅನೇಕ ಗುಣಗಳ ಆಯ್ಕೆ ಮಾಡಿದ. ನಾಯಿಗಳನ್ನು ಕಾಡಿನ ಅವುಗಳ ಪೂರ್ವಜರಿಂದ ಕೆಲವು ಲಕ್ಷಣಗಳ ಮೂಲಕ ಗುರುತಿಸಬಹುದು. ಇವುಗಳಲ್ಲಿ ಮುಖ್ಯವಾದದ್ದು ಬಾಲದ ಆಕಾರ. ಬಾಲ ಕೊಡಲಿಯಾಕಾರದಿಂದ ಸುರುಳಿಯಾಕಾರದವರೆಗೆ ಅನೇಕ ವ್ಯತ್ಯಾಸಗಳನ್ನು ತೋರಿಸುತ್ತದೆ. ಅತಿ ಮೊದಲು ಸಾಕಿದ ನಾಯಿಗಳ ವಿಕೃತಿಯಿಂದ ಈ ವ್ಯತ್ಯಾಸ ಕಾಣಿಸಿಕೊಂಡಿರಬಹುದು. ಆ ಗುಂಪಿನ ನಾಯಿಗಳೇ ಇತರ ಬಗೆಯ ನಾಯಿಗಳ ಪೂರ್ವಜಗಳಾಗಿರಬೇಕು. ನಾಯಿಯ ಹಲ್ಲುಗಳು ತೋಳದ ಹಲ್ಲುಗಳಿಗಿಂತ ಚಿಕ್ಕವು ಹಾಗೂ ದುರ್ಬಲ. ಆದ್ದರಿಂದ ಮಾನವ ಸಣ್ಣ ಗಾತ್ರದ ಹಲ್ಲು ರಚನೆಯ ಹಾಗೂ ತಾನು ಸುಲಭವಾಗಿ ಪಳಗಿಸಿ ಹಿಡಿತದಲ್ಲಿಟ್ಟುಕೊಳ್ಳಬಹುದಾದ ಪ್ರಾಣಿಗಳ ಕೃತಕ ಆಯ್ಕೆಯನ್ನು ಆದಷ್ಟು ಹಿಂದೆಯೇ ಮಾಡಿರಬೇಕು.

ವ್ಯಾಪ್ತಿ ಮತ್ತು ಚರಿತ್ರೆ : ನಾಯಿಗಳು ಮಾನವ ಸಾಕಣೆಗೆ ಒಳಗಾದ ಮೇಲೆ ಬಹು ತೀವ್ರವಾಗಿ ಪ್ರಪಂಚದ ನಾನಾ ಭಾಗಗಳಿಗೆ ಪ್ರಸರಿಸಿರಬಹುದು. ಉತ್ತರ ಅಮೇರಿಕಾಕ್ಕೆ ಬಿಳಿಯರು ತಮ್ಮ ಜೊತೆಯಲ್ಲಿ ನಾಯಿಗಳೊಡನೆ ಬರುವ ಹೊತ್ತಿಗೆ ಅಲ್ಲಿನ ಇಂಡಿಯನ್ ಜನಾಂಗದವರ ಹತ್ತಿರ ನಾಯಿಗಳು ಇದ್ದುವು. ಆಗ ಉತ್ತರ ಮತ್ತು ದಕ್ಷಿಣ ಅಮೇರಿಕಾಗಳಲ್ಲಿ ಸು. 20 ತಳಿಗಳಿದ್ದವು. ಆದರೆ ಕಾಲ ಕ್ರಮೇಣ ಮೆಕ್ಸಿಕೋದ ರೋಮ ರಹಿತ ನಾಯಿ ಹಾಗೂ ಎಸ್ಕಿಮೋ ನಾಯಿಗಳನ್ನುಳಿದು ಮಿಕ್ಕೆಲ್ಲಾ ನಾಯಿಗಳು ಕಾಣೆಯಾದುವು.

ಆಸ್ಟ್ರೇಲಿಯಾದ ಡಿಂಗೋ ಸಾಮಾನ್ಯವಾಗಿ ಕಾಡುಪ್ರಾಣಿ. ಈಗಲೂ ಕೆಲವು ಆದಿವಾಸಿಗಳು ಇವನ್ನು ಪಳಗಿಸಿ ಇಟ್ಟುಕೊಂಡಿದ್ದಾರೆ. ಈ ಆದಿವಾಸಿಗಳ ಪೂರ್ವಜರು ಡಿಂಗೋಗಳನ್ನು ಸಾಕಿದ ನಾಯಿಗಳಂತೆ ಆಸ್ಟ್ರೇಲಿಯಾಕ್ಕೆ ತಂದು ಆಮೇಲೆ ಸ್ವೇಚ್ಛೆಯಾಗಿರಲು ಬಿಟ್ಟಿರಬೇಕು (ನೋಡಿ: ಡಿಂಗೋ).

ಆಫ್ರಿಕಾದ ಎಲ್ಲಾ ಭಾಗಗಳಲ್ಲಿ ನಾಯಿಗಳಿದ್ದುವೆಂಬುದಕ್ಕೆ ಐತಿಹಾಸಿಕ ಪುರಾವೆಗಳಿವೆ. ಈಗ ಜೀವಂತವಾಗಿರುವ ಸ್ಥಳೀಯ ತಳಿಗಳಲ್ಲೊಂದಾದ ಬ್ಯಾಸೆಂಜಿ ತಳಿಯನ್ನು ಮಧ್ಯ ಆಫ್ರಿಕಾದ ಕುಳ್ಳ ಜನಾಂಗದವರು ಈಗಲೂ ಸಾಕುತ್ತಾರೆ. ಇದೇ ರೀತಿ ನಾಯಿಗಳು ಏಷ್ಯಾ ಮತ್ತು ಆಸ್ಟ್ರೇಲಿಯಾ ಸುತ್ತುಮುತ್ತಲಿನ ಅನೇಕ ದ್ವೀಪಗಳಲ್ಲಿ ಇದ್ದುವು.

ಬೇರೆ ದೇಶಗಳ ನಾಯಿಗಳಿಗಿಂತ ಯುರೋಪಿನ ನಾಯಿಗಳ ಬಗ್ಗೆ ಹೆಚ್ಚಿನ ವೈಜ್ಞಾನಿಕ ಮಾಹಿತಿಗಳು ಲಭ್ಯವಿವೆ. ಬಹು ಪುರಾತನ ಕಾಲದಿಂದಲೂ ವರ್ತಕರು ಮತ್ತು ಪ್ರವಾಸಿಗಳು ತಮ್ಮ ಪ್ರೀತಿಯ ನಾಯಿಗಳನ್ನು ಜೊತೆಯಲ್ಲಿ ಬಹುದೂರದ ದೇಶಗಳಿಗೆ ತೆಗೆದುಕೊಂಡು ಹೋಗುತ್ತಿದ್ದರಲ್ಲದೆ, ವಾಪಾಸು ಬರುವಾಗ ಅನೇಕ ವೇಳೆ ಹೊಸ ಮತ್ತು ವಿದೇಶಿ ತಳಿಗಳನ್ನು ತರುತ್ತಿದ್ದರು.

ನಾಯಿಗಳ ತಳೀಕರಣ ಎಲ್ಲ ದೇಶಗಳಲ್ಲೂ ಆಗಿದೆ. ಆದರೆ, ಇಂಗ್ಲೆಂಡಿನಲ್ಲಾದಷ್ಟು ಬೇರೆಲ್ಲೂ ಆಗಿಲ್ಲಾ. ಜಾನ್ ಕೇಯಸ್ ಪ್ರಕಾರ 16ನೆಯ ಶತಮಾನದ ಹೊತ್ತಿಗಾಗಲೆ ಇಂಗ್ಲೆಂಡಿನಲ್ಲಿ ಗ್ರೇಹೌಂಡ್, ಟೆರಿಯರ್, ಮ್ಯಾಸ್ಟಿಫ್ ಮತ್ತು ಕುರಿಗಾಹಿನಾಯಿ (ಶೆಪರ್ಡ್ ಡಾಗ್) ಎಂಬ ಆರು ತಳಿಗಳನ್ನು ವೃದ್ಧಿಸಲಾಗಿತ್ತು. ಇದರ ಜೊತೆಗೆ ಎಸ್ಕಿಮೋಗಳ ಗಾಡಿ ಎಳೆಯುವ ನಾಯಿಗಳು ಇದ್ದುವು. ದೊಡ್ಡ ಗಾತ್ರದ ಮತ್ತು ಡೊಂಕು ಬಾಲವುಳ್ಳ ಈ ನಾಯಿಗಳು ತೋಳಗಳನ್ನು ಉತ್ತರ ಯುರೋಪಿನ ಸಣ್ಣ ನಾಯಿಗಳೊಡನೆ ಅಡ್ಡ ಸಂಕರಣದಿಂದ ಪಡೆದ ನಾಯಿಗಳು. ಇವಕ್ಕೆ ಧ್ರುವ ಅಥವಾ ಸ್ಪಿಟ್ಸ್ ಗುಂಪಿನ ನಾಯಿಗಳೆಂದು ಹೆಸರು.

ಇದೇ ರೀತಿ ಸಾಮಾನ್ಯ ಬಗೆಯ ನಾಯಿಗಳು ಪ್ರಪಂಚದಾದ್ಯಂತ ಕಂಡುಬಂದಿದ್ದರೂ, ಅವುಗಳ ದೇಹದ ರೂಪ ಮತ್ತು ನಡವಳಿಕೆಗೆ ಸಂಬಂಧಿಸಿದ ಅನೇಕ ಗುಣಗಳು ಈಚೆಗೆ ಕಣ್ಮರೆಯಾಗಿವೆ. ಅನೇಕ ಪ್ರಾಚೀನ ತಳಿಗಳು ಬಹುವಾಗಿ ಬದಲಾಯಿಸಿವೆ, ಅಥವಾ ಪೂರ್ಣವಾಗಿ ಕಾಣೆಯಾಗಿವೆ. ಆದರೆ ಇರಾಕಿನ ಸಲೂಕಿ ಮತ್ತು ಕುರ್ದಿಷ್ ಎಂಬೆರಡು ತಳಿಗಳನ್ನು ಇವತ್ತಿಗೂ ನೋಡಬಹುದು. ದೊಡ್ಡ ಗಾತ್ರದ ಕುರ್ದಿಷ್ ನಾಯಿ ಕ್ರಿ.ಪೂ. 2200 ರಲ್ಲಿ ಬ್ಯಾಬಿಲೋನಿಯಾ ಕಲೆಯಲ್ಲಿ ಚಿತ್ರಿತವಾದ ಮ್ಯಾಸ್ಟಿಫ್ ಮತ್ತು ಯುದ್ಧದ ನಾಯಿಗಳನ್ನು ಹೋಲುತ್ತದೆ. ವಿವಿಧ ನಾಯಿ ತಳಿಗಳಲ್ಲಿ ಒಂದನ್ನು ಮತ್ತೊಂದು ತಳಿಯೊಡನೆ ಸಂಕರಿಸುವುದರಿಂದ ಅವುಗಳ ಪೂರ್ವಜಗಳನ್ನು ಗುರುತಿಸುವುದು ಕಷ್ಟವಾಗುವುದು.

ಡಾಲ್ಮೇಷಿಯನ್

ಬಹುತೇಕ ತಳಿಗಳ ಹೆಣ್ಣು ನಾಯಿಗಳು ಒಂದು ವರ್ಷದೊಳಗಾಗಿ ಕೆಲವು ಸಂಧರ್ಭಗಳಲ್ಲಿ ಆರು ತಿಂಗಳೊಳಗಾಗಿ ಬೆದೆಗೆ ಅಥವಾ ಈಸ್ಟ್ರಸ್‌ಗೆ ಬರುತ್ತವೆ. ಈ ವಿಷಯದಲ್ಲಿ ವಿವಿಧ ತಳಿಗಳಲ್ಲಿ ಮತ್ತು ಒಂದೇ ತಳಿಯ ವಿವಿಧ ಪ್ರಾಣಿಗಳಲ್ಲಿ ಹೆಚ್ಚಿನ ವೈವಿಧ್ಯ ಕಂಡುಬರುತ್ತದೆ. ಆಫ್ರಿಕಾದ ಬ್ಯಾಸೆಂಜಿ ಹೆಣ್ಣು ನಾಯಿ ವರ್ಷಕ್ಕೊಂದು ಬಾರಿ, ಶರತ್ಕಾಲದಲ್ಲಿ ಬೆದೆಗೆ ಬರುವುದು. ಅನೇಕ ಸಾಕು ನಾಯಿ ತಳಿಗಳು ವರ್ಷದ ಯಾವ ಋತುವಿನಲ್ಲಾದರೂ ಸು. 6 ತಿಂಗಳಿಗೊಮ್ಮೆ ಬೆದೆಗೆ ಬರುತ್ತವೆ. ಒಂದೊಂದು ನಾಯಿಯಲ್ಲೂ ಸಾಮಾನ್ಯವಾಗಿ ಒಂದು ಗೊತ್ತಾದ ಮಾದರಿ ಇದೆ. ಆದರೆ, ಬೆದೆಯ ಅವಧಿ, ಋತು ಚಕ್ರದ ಅವಧಿಯಲ್ಲಿ ವ್ಯತ್ಯಾಸವಿದೆ.

ಗರ್ಭಾವಸ್ಥೆಯ ಕಾಲ ಸು. 9 ವಾರಗಳು. ಮರಿಗಳ ಗಾತ್ರ ಆಯಾ ತಳಿಯ ವಯಸ್ಕ ನಾಯಿಯ ಗಾತ್ರವನ್ನವಲಂಬಿಸಿದೆ. ಹಾಗೆಯೆ ಮರಿಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಆಟಿಕೆ ತಳಿಗಳಲ್ಲಿ ಮರಿಗಳ ಸಂಖ್ಯೆ ಸಾಮಾನ್ಯವಾಗಿ 1–2 ಕ್ಕಿಂತ ಹೆಚ್ಚಾಗಿಲ್ಲ. ಆದರೆ, ದೊಡ್ಡ ಗಾತ್ರದ ತಳಿಗಳು 8–10 ಮರಿಗಳನ್ನು ಹಾಕುವುವು. 4–6 ಮರಿಗಳು ಸಾಮಾನ್ಯ. ಹೆಣ್ಣು ನಾಯಿಯ ಪ್ರಜನನ ಶಕ್ತಿ 5 ವರ್ಷ ವಯಸ್ಸಾದ ನಂತರ ಕಡಿಮೆಯಾಗುತ್ತದೆ. ಋತುಚಕ್ರ ಸಾಮಾನ್ಯವಾಗಿ ಎಂಟನೆಯ ವಯಸ್ಸಿಗೆ ನಿಂತುಹೋಗುತ್ತದೆ. ಗಂಡು ನಾಯಿಯ ಪ್ರಜನನ ಸಾಮರ್ಥ್ಯ ಇನ್ನೂ ಸ್ವಲ್ಪ ಹೆಚ್ಚು ವಯಸ್ಸಿನವರೆಗೂ ಇರುತ್ತದೆ. ನಾಯಿಗಳ ಸಂಪೂರ್ಣ ಆಯಸ್ಸು ಸು. 20 ವರ್ಷಗಳು.

ವರ್ತನೆ ಮತ್ತು ಸ್ವಭಾವ : ನಾಯಿಗಳು ತಮ್ಮ ಪೂರ್ವಜರಾದ ತೋಳಗಳ ಸ್ವಭಾವವನ್ನೇ ತೋರುತ್ತವೆ. ನಾಯಿ ತಾನು ವಾಸ ಮಾಡುವ ಸ್ಥಳ ಅಥವಾ ಯಜಮಾನನ ಮನೆಯನ್ನು ಬೇರೆ ನಾಯಿ ಅಥವಾ ಆಗಂತುಕರಿಂದ ರಕ್ಷಿಸುವುದು. ನಾಯಿಗಳು ಪ್ರಾಂತೀಯತೆಯ ಸ್ವಭಾವವನ್ನು ವ್ಯಕ್ತಪಡಿಸುವುದರಿಂದ ಹೀಗೆ ಮಾಡುತ್ತವೆ. ಮಲಗುವುದಕ್ಕೆ ಮುನ್ನ ಸುತ್ತುಸುತ್ತು ತಿರುಗಿ ಆಮೇಲೆ ಮಲಗುತ್ತದೆ. ಈ ಸ್ವಭಾವ ಅದರ ಪುರ್ವಜರ ಒಂದು ಗುಣ. ನಾಯಿಯ ಪೂರ್ವಜ ಪ್ರಾಣಿಗಳು ಕಾಡಿನಲ್ಲಿ ವಾಸಿಸುತ್ತಿದ್ದಾಗ ಹುಲ್ಲು ಬೆಳೆದ ಜಾಗಗಳಲ್ಲಿ ಮಲಗುತ್ತಿದ್ದವು. ಇದೇ ಸ್ವಭಾವ ನಾಯಿಯಲ್ಲಿ ಇನ್ನೂ ಇದೆ. ನಾಯಿಗಳು ತಮ್ಮ ಗುರುತಿಗಾಗಿ ಕೆಲವು ವಾಸನೆ ಸ್ಥಳಗಳನ್ನು ಮಾಡಿಕೊಳ್ಳುತ್ತವೆ. ಅವು ತಮ್ಮ ವಾಸ ಸ್ಥಳದಿಂದ ಹೊರ ಹೊರಟು ಸ್ವಲ್ಪ ದೂರದಲ್ಲಿ ಮೂತ್ರ ಅಥವಾ ಮಲ ವಿಸರ್ಜನೆ ಮಾಡುವುವು. ಈ ಸ್ಥಳಗಳೇ ಅವುಗಳ ಗುರುತಿನ ವಾಸನೆಯ ಸ್ಥಳಗಳು. ಇಂಥ ವರ್ತನೆಯಿಂದ ಅವು ಮನೆ ಅಥವಾ ವಾಸಸ್ಥಾನಗಳಿಂದ ಬಹು ದೂರ ಹೋದರೂ, ವಾಸನೆಯ ಸ್ಥಳಗಳನ್ನು ತಮ್ಮ ಸೂಕ್ಷ್ಮ ಜ್ಞಾನೇಂದ್ರಿಯ ಶಕ್ತಿಯಿಂದ ಗುರುತಿಸಿ ಹಿಂದಿರುಗುವುವು. ಇದು ಆಹಾರವನ್ನು ತಿನ್ನುವಾಗ ಗಬಗಬನೆ ಕಬಳಿಸುವುದಕ್ಕೆ, ಮತ್ತೊಂದು ಪ್ರಾಣಿ ಆಕ್ರಮಣ ಮಾಡುವುದೇ ಎಂಬ ಭಯವೇ ಕಾರಣ. ನಾಯಿಗಳು ಸ್ವಾಭಾವಿಕವಾಗಿ ಜಗಳ ಪ್ರವೃತ್ತಿಯವು. ಅಪರಿಚಿತ ಪ್ರಾಣಿಗಳ ಅಥವಾ ಮನುಷ್ಯರ ಮೇಲೆ ಬೀಳುವುದು, ಕೋಪ ಬಂದಾಗ ಗುರುಗುಡುವುದು, ಹೊಗಳಿದಾಗ ಅಥವಾ

ಸಂತೋಷವಾದಾಗ ಬಾಲವನ್ನು ಅಲ್ಲಾಡಿಸುವುದು, ಭಯವಾದಾಗ ಬಾಲವನ್ನು ಹಿಂಗಾಲುಗಳ ನಡುವೆ ತೂರಿಸಿ ಮುದುರಿಕೊಳ್ಳುವುದು, ನಾಯಿಗಳ ಕೆಲವು ಗುಣಗಳು. ಸಾಮಾನ್ಯವಾಗಿ ಎಲ್ಲ ತಳಿಯ ನಾಯಿಗಳೂ ಸಾಕಿದವನ ಆಜ್ಞೆಗಳನ್ನೂ, ಧ್ವನಿ ಕೈಸನ್ನೆಗಳನ್ನೂ ತಿಳಿದು ಅದರಂತೆ ನಡೆಯುತ್ತವೆ. ಸಾಕಿದವನಲ್ಲಿ ಆತನ ಆಪ್ತರಲ್ಲಿ, ಪ್ರೀತಿ ತೋರಿಸುವುವು. ಧಣಿಗೋಸ್ಕರ ಧೈರ್ಯದಿಂದ ಕಾದಾಡುವುದಲ್ಲದೆ, ಕೆಲವು ವೇಳೆ ಅವನಿಗೋಸ್ಕರ ಪ್ರಾಣವನ್ನು ತೆರಲೂ ಸಿದ್ಧವಾಗುವುವು.

ನಾಯಿಗಳು ತಮ್ಮ ಪ್ರಣಯಾಚರಣೆಯಲ್ಲಿ ವಿಶೇಷ ರೀತಿಯ ಚಟುವಟಿಕೆಯನ್ನು ತೋರಿಸುತ್ತವೆ. ಗಂಡು ಹೆಣ್ಣುಗಳು ತಮ್ಮ ದೇಹವನ್ನು ತಗ್ಗಿಸಿ ಮುಂಗಾಲುಗಳನ್ನು ಮುಂದೂಡುತ್ತವೆ. ಆಮೇಲೆ ತಮ್ಮ ತಲೆಗಳನ್ನು ನೆಟ್ಟಗೆ ಮಾಡಿ ಒಂದಕ್ಕೊಂದು ಉಜ್ಜುವುವು. ತರುವಾಯ ತಮ್ಮ ಮುಂಗಾಲುಗಳನ್ನು ಮತ್ತೊಂದರ ಸುತ್ತ ಹಾಕಿ ಆಡುತ್ತವೆ. ಇದಾದ ಮೇಲೆ ಒಂದನ್ನೊಂದು ಅಟ್ಟಿಸಿ ಸ್ವಲ್ಪ ದೂರ ಹೋಗುವುವು. ಈ ವಿಧವಾಗಿ ವಿವಿಧ ರೀತಿಯ ಪ್ರಣಯಾಚರಣೆ ಚಟುವಟಿಕೆಗಳನ್ನು ವ್ಯಕ್ತಪಡಿಸಿ ಅವು ಕೂಡುತ್ತವೆ. ಮರಿಗಳು ಹುಟ್ಟಿದ ಮೊದಲ 3 ವಾರಗಳು ತಾಯಿ ಹಾಲು ಕೊಟ್ಟು ಸಾಕುತ್ತದೆ.

ಪ್ರವೃತ್ತಿಯ ಬೆಳವಣಿಗೆ : ನಾಯಿಯ ಪೂರ್ಣ ಬೆಳವಣಿಗೆಯ ಅವಧಿಯನ್ನು ಕೆಲವು ನಿಖರವಾದ ಕಾಲಗಳನ್ನಾಗಿ ವಿಂಗಡಿಸಬಹುದು. 1. ಹುಟ್ಟಿದ ಹೊಸತರ ಕಾಲ: ಮರಿ ಹುಟ್ಟಿದ ದಿನದಿಂದ ಹಿಡಿದು ಸು. 14 ದಿವಸಗಳವರೆಗಿನ ಅವಧಿ. ಆಗ ತಾನೆ ಹುಟ್ಟಿದ ಮರಿ ಕಣ್ಣು ಮುಚ್ಚಿಕೊಂಡೇ ಇರುವುದು. ಕಿವಿಗಳ ಚಟುವಟಿಕೆಯು ಇರುವುದಿಲ್ಲ. ಆದ್ದರಿಂದ ಇದಕ್ಕೆ ಹೊರ ಪ್ರಪಂಚದ ಅರಿವು ಇರದು. ಹುಟ್ಟಿದ ದಿನಗಳು ಮರಿ ಹೆಚ್ಚು ನಿದ್ದೆಯಲ್ಲೇ ಕಳೆಯುತ್ತದೆ. ತಾಯಿ ಮರಿಗಳನ್ನು ತನ್ನ ಹತ್ತಿರವೇ ಇಟ್ಟುಕೊಂಡು ಅವುಗಳ ದೇಹವನ್ನು ಬೆಚ್ಚಗಿಟ್ಟಿರುತ್ತದೆ.

2. ಪರಿವರ್ತನೆಯ ಕಾಲ: ಸು. 14 ದಿನಗಳ ತರುವಾಯ ಮರಿ ಕಣ್ಣುಗಳನ್ನು ತೆರೆಯುತ್ತದೆ. ಇದು ಮರಿಯ ಬೆಳವಣಿಗೆಯ ಪರಿವರ್ತನೆಯ ಕಾಲದ ಪ್ರಾರಂಭವನ್ನು ಸೂಚಿಸುವುದು. ಮೂರನೆಯ ವಾರದಲ್ಲಿ ಮರಿಯ ಸ್ವಭಾವದಲ್ಲಿ ಮತ್ತು ಸಂವೇದಕ ಹಾಗೂ ವಾಹಕ ಕ್ರಿಯೆಗಳ ಸಾಮರ್ಥ್ಯದಲ್ಲಿ ಶೀಘ್ರ ಬದಲಾವಣೆಯಾಗುತ್ತದೆ. ಈ ಕಾಲದಲ್ಲಿ ಮರಿ ಶಬ್ದಗಳಿಗೆ ಪ್ರತಿಕ್ರಿಯೆಯನ್ನು ತೋರಿಸುವುದು. ಆದರೆ ಶ್ರವಣ ಸಾಮರ್ಥ್ಯ ಪ್ರಕಟಗೊಳ್ಳುತ್ತದೆ. ಪ್ರಥಮ ಹಲ್ಲುಗಳು ಕಾಣಿಸಿಕೊಂಡು ಮರಿ ಗಟ್ಟಿಯಾದ ಆಹಾರವನ್ನು ತಿನ್ನಲು ಪ್ರಯತ್ನಿಸುತ್ತದೆ.

3. ಸಾಂಘಿಕತೆಯ ಕಾಲ: ಮರಿ ತೆವಳುವುದನ್ನು ಬಿಟ್ಟು ಓಡಾಡುವ ಪ್ರಯತ್ನವನ್ನು ಮತ್ತು ಮನುಷ್ಯ ಹಾಗೂ ಇತರ ನಾಯಿಗಳೊಡನೆ ಇರಲು ಇಷ್ಟವನ್ನು ತೋರಿಸುತ್ತದೆ. ಈ ಕ್ರಿಯೆಗಳು ಸಹವಾಸ ಪ್ರಕ್ರಿಯೆಗೆ ನಾಂದಿ. ಆಮೇಲೆ ಹೊಸ ಮನುಷ್ಯರನ್ನು ಸಮೀಪಿಸುವುದಕ್ಕೆ, ಬಾಲವನ್ನು ಅಲ್ಲಾಡಿಸುವುದಕ್ಕೆ ಮತ್ತು ಗಲಾಟೆ ಮಾಡುವುದನ್ನು ಮಾಡುತ್ತದೆ. ತನ್ನ ಜೊತೆಯ ಮರಿಗಳೊಡನೆ ವಿನೋದಕ್ಕಾಗಿ ಜಗಳವಾಡುವುದು ಇದರ ಮತ್ತೊಂದು ಸಹವಾಸದ ಪ್ರತಿಕ್ರಿಯೆ. ಈ ಸಾಂಘಿಕತೆಯ ಕಾಲದಲ್ಲಿ (ಅಂದರೆ 10 ವಾರಗಳಲ್ಲಿ) ಮರಿ ಮತ್ತು ಯಜಮಾನನ ನಡುವೆ ಸಂಬಂಧವನ್ನು ಬೆಳೆಸುವುದು ಸುಲಭ ಸಾಧ್ಯ.

ಮರಿಯನ್ನು 4 ವಾರಗಳಾದ ಮೇಲೆ ಅದರ ತಾಯಿ ಮತ್ತು ಇತರ ಮರಿಗಳಿಂದ ಬೇರ್ಪಡಿಸಿದರೆ, ಅದು ಸಾಕುವವರಿಗೆ ಅನುಗುಣವಾಗಿ ಬೆಳೆಯುವುದು. ಮರಿಯನ್ನು ಅದರ ಜೊತೆಯ ಮರಿಗಳಿಂದ ಬೇರ್ಪಡಿಸಿದಾಗ ಅದು ಒಂದೇ ಸಮನೆ ಗುರೊ ಎಂದು ಗಲಾಟೆ ಮಾಡುವುದು. ಆದರೆ, ಅದನ್ನು ಪ್ರೀತಿಯಿಂದ ಕಂಡು ಜೊತೆಯಾಗಿದ್ದರೆ ಅದರ ಮನೋಗಲಭೆ ಕಡಿಮೆಯಾಗಿ ಯಜಮಾನನೊಡನೆ ಹೊಂದಿಕೊಂಡು ಸಂತೋಷದಿಂದಿರುತ್ತದೆ. ಮರಿಯನ್ನು ಆದಷ್ಟು ದೊಡ್ಡದಾದ ಮೇಲೆ ಬೇರ್ಪಡಿಸಿದರೆ ಅದು ಇತರ ನಾಯಿಗಳೊಡನೆ ಇರಲು ಹೆಚ್ಚು ಇಷ್ಟಪಡುವುದು. ಮರಿಯನ್ನು ಮನುಷ್ಯನಿಂದ ದೂರವಾಗಿ ಬೆಳೆಸಿದರೆ 14 ವಾರಗಳಲ್ಲಿ ಅದು ಕ್ರೂರ ಪ್ರವೃತ್ತಿಯುಳ್ಳದ್ದಾಗುತ್ತದೆ. ಆದ್ದರಿಂದ, ಈ ಕಾಲ ಸಾಮಾಜಿಕ ಸಂಬಂಧಗಳನ್ನು ತಿಳಿಯಲು ಬಹು ಮುಖ್ಯವಾದ ಕಾಲ. ಮರಿ ಈ ಕಾಲದಲ್ಲಿ ತನ್ನ ಪರಿಸರಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಆದ್ದರಿಂದ ಮರಿಯ ಮುಂದಿನ ಮನೆ ಯಾವುದಾಗುವುದೆಂದು ತಿಳಿದು ಆ ಪರಿಸರಕ್ಕೆ ಹೊಂದಿಕೊಳ್ಳಲು ಅನುವಾಗುವಂತೆ ಆದಷ್ಟು ಶೀಘ್ರ ನಿರ್ಧರಿಸುವುದು ಮುಖ್ಯ. ಮರಿಗಳನ್ನು 12 ವಾರಗಳಿಗಿಂತ ಹೆಚ್ಚಾಗಿ ಮನೆಯಿಂದಾಚೆಗೆ ಬಿಡದೆ ಗೂಡಿನ ವಾತಾವರಣದಲ್ಲೆ ಬೆಳೆಸಿ ನಂತರ ಹೊರ ಪ್ರಪಂಚಕ್ಕೆ ಬಿಟ್ಟರೆ ಅವು ಸಾಮಾನ್ಯವಾಗಿ ನಾಚಿಕೆ ಸ್ವಭಾವ ಮತ್ತು ಅಂಜಿಕೆ ಪ್ರವೃತ್ತಿಯುಳ್ಳವಾಗುತ್ತವೆ. ಆದ್ದರಿಂದ, ನಾಯಿಗಳನ್ನು ತಮಗೆ ಬೇಕಾದ ಪರಿಸರದಲ್ಲಿ ಬೆಳೆಸಬೇಕಾದರೆ ಸು. 8–10 ವಾರ ವಯಸ್ಸಿನೊಳಗಾಗಿ ಮರಿಗಳಿಗೆ ಸರಿಯಾದ ತರಬೇತಿ ಕೊಡಬೇಕು.

4. ಯೌವನದ ಕಾಲ : ಸಾಂಘಿಕ ಕಾಲದ ನಂತರ ಯೌವನ ಕಾಲ ಪ್ರಾರಂಭವಾಗುವುದು. ಇದು ಋತುಕಾಲದವರೆಗೂ ಅಂದರೆ, ಸಾಧಾರಣವಾಗಿ 6 ತಿಂಗಳ ವಯಸ್ಸಿನಿಂದ ಪ್ರಾಯದವರೆಗೆ ಮುಂದುವರೆಯುತ್ತದೆ. ಈ ಕಾಲದಲ್ಲಿ ಕಷ್ಟಕರವಾದ ತರಬೇತಿ ಕ್ರಮಗಳನ್ನು ಪ್ರಯತ್ನಿಸಕೂಡದು.

ಸಣ್ಣ ವಯಸ್ಸಿನಲ್ಲಿ ತರಬೇತಿ: ಸಾಮಾನ್ಯವಾಗಿ ನಾಯಿಯ ನರಮಂಡಲ 8 ವಾರ ವಯಸ್ಸಿನ ಹೊತ್ತಿಗೆ ಪೂರ್ಣ ಬೆಳೆದಿರುತ್ತದೆ. ಆದ್ದರಿಂದ, ಮನೆಯ ಸಾಕು ನಾಯಿಗೆ 8–12 ವಾರ ವಯಸ್ಸಿನಲ್ಲಿಯೇ ಮೂಲ ತರಬೇತಿ ಕೊಡಬೇಕು. ಈ ಸಂದರ್ಭದಲ್ಲಿ ನಾಯಿಗೆ ಬಾ, ಹೋಗು, ಪದಾರ್ಥವನ್ನು ತೆಗೆದುಕೊಂಡು ಬಾ, ಎಂಬ ಆಜ್ಞೆಗಳನ್ನು ಕಲಿಸಬಹುದು. ಈ ಕಾಲ ಅದರ ಸ್ವಭಾವದ ಬೆಳವಣಿಗೆಗೂ ಮುಖ್ಯ.

ತಳಿಕರಣ ಮತ್ತು ಸಂತಾನವೃದ್ಧಿ : ನಾಯಿಗಳ ಪೂರ್ವಜರಾದ ತೋಳಗಳ ಗಾತ್ರ ಮತ್ತು ಬಾಹ್ಯ ರೂಪಗಳಲ್ಲಿ ಬಹು ವೈವಿಧ್ಯವಿದೆ. ಅಂತೆಯೇ ಅವುಗಳಿಂದ ಹುಟ್ಟಿ ಬಂದ ನಾಯಿಗಳು ಸಹ ಸಾಕು ಪ್ರಾಣಿಗಳಲ್ಲೇ ಅತೀ ಹೆಚ್ಚಿನ ವೈವಿಧ್ಯ ತೋರಿಸುವುವು. ವ್ಯತ್ಯಾಸಗಳು ವಿವಿಧ ತಳಿಗಳ ನಡುವೆ ಕಂಡುಬರುವುದಲ್ಲದೆ, ಒಂದೇ ತಳಿಯ ವಿವಿಧ ಪ್ರಾಣಿಗಳಲ್ಲಿ ಇದೆ.

ಕೆಲವು ಬಾಹ್ಯ ಗುಣಗಳು ಆನುವಂಶೀಯವಾದುವು. ಯಾವ ಗುಣಗಳು ಆನುವಂಶೀಯವಾಗಿ ಕಾಣಿಸಿಕೊಳ್ಳುವೆಂಬುದನ್ನು ಸಂತಾನಭಿವೃದ್ಧಿ ಪ್ರಯೋಗಗಳಿಂದ ಪ್ರತಿಪಾದಿಸಲಾಗಿದೆ. ಅನೇಕ ಜೀನ್‌ಗಳು ದೇಹದ ಬಣ್ಣಕ್ಕೆ ಸಂಬಂಧಿಸಿವೆ. ಇಲ್ಲಿ ದೇಹದ ಬಣ್ಣದ ಮೇಲೆ ಪ್ರಭಾವ ಬೀರುವ ಕೆಲವು ಮುಖ್ಯ ಜೀನ್‌ಗಳ ವಿವರಣೆಯನ್ನು ಕೊಟ್ಟಿದೆ.

ಪೂರ್ವಜ ತೋಳದ ಬೂದು ಬಣ್ಣ ಅಥವಾ ಮೂಲ ಮಾದರಿ ಹೊದಿಕೆಯಲ್ಲಿ ಹೊರ ರಕ್ಷಣೆಯ ಉದ್ದಕೂದಲು, ಕಪ್ಪು ಮತ್ತು ಕೆಂಪು ಬಣ್ಣಗಳ ಪಟ್ಟೆಯಿಂದಲೂ, ಕೆಳಹೊದಿಕೆ ತೆಳು ಬಣ್ಣದ್ದಾಗಿಯೂ ಇವೆ. ಕೆಳ ಹೊದಿಕೆ ಚಳಿಗಾಲದಲ್ಲಿ ಒತ್ತಾಗಿ ಬೆಳೆದು ಬೇಸಗೆಯಲ್ಲಿ ಉದುರಿ ಹೋಗುತ್ತದೆ. ಮೂಲ ಮಾದರಿಯಂತೆ ವ್ಯತಿರಿಕ್ತ ಛಾಯೆಯ ಬಣ್ಣ ಪ್ರಸರಿಸುವುದು. ಅಂದರೆ, ದೇಹದ ಮೇಲ್ಭಾಗದಲ್ಲಿ ಹೆಚ್ಚು ಕಪ್ಪು ಬಣ್ಣವೂ, ಹೊಟ್ಟೆಯ ಭಾಗದಲ್ಲಿ ಬಿಳಿ ಬಣ್ಣ ಇದೆ. ಆದ್ದರಿಂದ, ಮೂಲತಃ ಕಪ್ಪು ಮತ್ತು ಕೆಂಪಿನ ಎರಡು ವರ್ಣ ದ್ರವ್ಯಗಳಿರುವುವು. ವರ್ಣದ್ರವ್ಯಗಳಿಲ್ಲದಿರುವಾಗ ದೇಹ ಬಿಳಿ ಬಣ್ಣದ್ದಾಗಿರುತ್ತದೆ. ಸಾಕು ನಾಯಿಗಳಲ್ಲಿ ಮೂಲ ಹೊದಿಕೆ ಉದ್ದ, ರಚನೆ, ಮಾದರಿ ಮತ್ತು ಬಣ್ಣಗಳ ವಿವಿಧ ಸಂಯೋಗಗಳ ಫಲವಾಗಿ ವಿಭಿನ್ನ ರೀತಿಯದ್ದಾಗಿದೆ.

ಬಣ್ಣವನ್ನು ಬದಲಾಯಿಸುವ ಸರಣಿ ಜೀನ್‌ಗಳಲ್ಲಿ, 'A' ಸರಣಿಯ ಜೀನ್‌ಗಳು ಪ್ರಮುಖವಾದುವು. ಈ ಜೀನ್‌ಗಳನ್ನು ಅವುಗಳ ಪ್ರಬಲತೆಯ ದೃಷ್ಟಿಯಿಂದ ಈ ಅನುಕ್ರಮದಲ್ಲಿ ಪಟ್ಟಿಮಾಡಲಾಗಿದೆ.

$A^s$ ಜೀನ್– ಕಡು ಕಪ್ಪು ಬಣ್ಣ.

Y ಜೀನ್–ಕೆಂಪು, ಸ್ವಚ್ಛ ಕೆಂಪಿನಿಂದ ಕಪ್ಪು ಮಿಶ್ರಿತ ಕೆಂಪು ಬಣ್ಣದವರೆಗೆ ವ್ಯತ್ಯಾಸವಾಗುವ ಬಣ್ಣ.

$A^w$ ಮೂಲ ಮಾದರಿ ಅಥವಾ ತೋಳ ಬೂದು.

$a^t$ (ಕಪ್ಪು ಮತ್ತು ಕೆಂಪು) ಅಂದರೆ ದೇಹದ ಮೇಲ್ಭಾಗದಲ್ಲಿ ಅಚ್ಚ ಕಪ್ಪು ಬಣ್ಣ, ಕೆಳಭಾಗದಲ್ಲಿ ಸ್ವಚ್ಛ ಕೆಂಪು, ಕಣ್ಣುಗಳ ಮೇಲೆ ಕಪ್ಪು ಚುಕ್ಕೆಗಳು ಇರುವುವು.

A ಸರಣಿ ಜೀನ್‌ಗಳ ಮೇಲೆ ಪ್ರಭಾವ ಬೀರುವ ಕೆಲವು ಜೀನ್‌ಗಳಿವೆ. ಇವುಗಳಲ್ಲಿ ee ಎಂಬ ದುರ್ಬಲ ಜೀನ್‌ಗಳು ಎಲ್ಲಾ ಕಪ್ಪು ಕೂದಲನ್ನು ಕೆಂಪು ಬಣ್ಣಕ್ಕೆ ಬದಲಾಯಿಸುವುವು. bb ಜೀನ್‌ಗಳು ಕಪ್ಪು ಬಣ್ಣದ ಕೂದಲನ್ನು ಕಂದು ಬಣ್ಣವನ್ನಾಗಿ (ಯಕೃತ್ತಿನ ಬಣ್ಣ) ಬದಲಾಯಿಸುತ್ತವೆ. ಬೇರೆ ಜೀನ್‌ಗಳು ದೇಹದ ಬಣ್ಣಕ್ಕೆ ಕಾರಣವಾದ ವರ್ಣಕಗಳನ್ನು ಇನ್ನೂ ಹೆಚ್ಚಾಗಿ ಮಾರ್ಪಡಿಸಿ, ಬಣ್ಣದಿಂದ ತೆಳುಬಣ್ಣದ ಎಲ್ಲಾ ಛಾಯೆಗಳಿಗೂ ಕಾರಣವಾಗಬಹುದು.

ಇವಲ್ಲದೆ ವಿವಿಧ ಗಾತ್ರದ ಬಿಳಿ ಚುಕ್ಕೆ ಹಾಗೂ ಬಿಳಿಯ ಬಣ್ಣದ ಹೊದಿಕೆಗೆ ಕಾರಣವಾದ ಇನ್ನೊಂದು ಸರಣಿಯ ಜೀನ್‌ಗಳಿವೆ.

ತಳಿವಿಜ್ಞಾನ : ಕೂದಲಿನ ಉದ್ದ, ಹೊದಿಕೆಯ ರಚನೆ ಗುಣಗಳು, ಆನುವಂಶೀಯ ಗುಣಗಳಾದರೂ, ಹೊದಿಕೆ ಬಣ್ಣದ ಗುಣದಷ್ಟು ಪ್ರಭಾವಿತವಾದುದಲ್ಲ. ಒಟ್ಟಿನಲ್ಲಿ ಕೂದಲಿನ ಉದ್ದ ಮತ್ತು ಹೊದಿಕೆಯ ರಚನೆಗಳಲ್ಲಿ ಮೋಟುತನ, ಒರಟುತನ, ನೇರಕೂದಲು ಮತ್ತು ಒರಟು ಹೊದಿಕೆ, ನಿಬಿಡ ಹೊದಿಕೆ, ಮುಂತಾದ ಗುಣಗಳು ಅನ್ವಯವಾಗಿ ಉದ್ದ, ನಯ, ಗುಂಗುರು ಕೂದಲು, ನಯ ಹೊದಿಕೆ ಮತ್ತು ಒತ್ತು ಕೂದಲಿನ ಹೊದಿಕೆಯ ಗುಣಗಳಿಗಿಂತ ಪ್ರಭಾವಿತವಾದುವು.

ಈ ಗುಣಗಳಲ್ಲಿ ಸಾಧ್ಯವಾಗುವ ಅನೇಕ ಸಂಯೋಗಗಳಿವೆ.

ಆಕಾರ : ನಾಯಿ ದೇಹ ಆಕಾರದಲ್ಲಿ ಬಹಳ ಹಿಂದೆಯೇ ಆದ ವಿಕೃತಿಯಿಂದ (ಮ್ಯುಟೇಶನ್) ಬಾಲ ಮೇಲ್ಮುಖವಾಗಿ ಬಾಗಿಕೊಂಡಿದೆ. ಡಾಕ್ಸ್‌ಹುಂಡ್ ಮತ್ತು ಬ್ಯಾಸೆಟ್‌ಹೌಂಡ್ ಮುಂತಾದ ತಳಿಗಳ ಮೋಟುಕಾಲುಗಳು ಪ್ರಮುಖ ವಿಕೃತಿಯಿಂದ

ಗೋಲ್ಡನ್ ರಿಟ್ರೈವರ್

ಉಂಟಾಗಿದೆ. ಮೋಟುಕಾಲಿನ ನಾಯಿ ಮತ್ತು ಸಾಮಾನ್ಯ ರೀತಿ ಕಾಲುಗಳಿರುವ ಮೊದಲನೆಯ ಸಂಕರದಿಂದ ಇವೆರಡರ ಮಧ್ಯಂತರ ಎತ್ತರದ ಕಾಲಿನ ನಾಯಿಗಳು ಹುಟ್ಟುತ್ತವೆ. ಬುಲ್‌ಡಾಗ್ ವಿಕೃತಿ ಮುಖ್ಯವಾಗಿ ತಲೆಗೆ ಸಂಬಂಧಿಸಿದ್ದು. ಈ ವಿಕೃತಿಯಿಂದ ಮುಸುಡಿ ಚಿಕ್ಕದಾಗಿ ಚಪ್ಪಟೆಯಾಗಿದ್ದು ಕೆಳದವಡೆ ಮುಂಚಾಚಿರುವುದು. ಬುಲ್‌ಡಾಗ್ ಮತ್ತು ಸಾಮಾನ್ಯ ರೀತಿ ಮುಖವಿರುವ ನಾಯಿಗಳ ಸಂಕರದಿಂದ ಮೊದಲ ಪೀಳಿಗೆಯಲ್ಲೆ ಇವೆರಡರ ಮಧ್ಯಂತರ ಮುಖವಿರುವ ನಾಯಿಗಳು ಹುಟ್ಟುವುವು.

ಕಿವಿಯ ಆಕಾರ ಮತ್ತು ರಚನೆ ಕೂಡ ಒಂದು ಆನುವಂಶಿಯ ಗುಣ. ನೆಟ್ಟಗಿರುವ ಕಿವಿಗಳಿಂದ ಉದ್ದವಾಗಿರುವ ಜೋಲು ಕಿವಿಗಳವರೆಗೂ ವಿವಿಧ ರೀತಿಯ ಕಿವಿಗಳು ಕಂಡುಬರುತ್ತವೆ.

ತೂಕ : ನಾಯಿಗಳಲ್ಲಿ ಬಹುವಾಗಿ ಬದಲಾಗುವ ಒಂದು ಮುಖ್ಯ ಗುಣ ದೇಹದ ತೂಕ. ಚವಾವ ಕುಬ್ಜ ತಳಿಗಳು ಒಂದು ಕಿಗ್ರಾಂಗಿಂತ ಕಡಿಮೆ ತೂಕವಿದ್ದರೆ, ಮಾಸ್ಟಿಫ್, ಸೇಂಡ್ ಬರ್ನಾಲ್ಡ್ ಮುಂತಾದ ದೊಡ್ಡ ತಳಿಗಳು ಸು. 72 ಕಿಗ್ರಾಂ ಗಳಷ್ಟು ಭಾರ ಇರುವುವು. ಈ ಗುಣ ಕೂಡ ಅನೇಕ ಜೀನ್‌ಗಳ ಪ್ರಭಾವಕ್ಕೆ ಒಳಪಟ್ಟಿದೆ.

ನಡವಳಿಕೆ ಮತ್ತು ಸ್ವಭಾವ : ಈ ಗುಣಗಳ ಆನುವಂಶೀಯತೆ ಬಹು ಜಟಿಲವಾದದ್ದು. ಒಂದು ತಳಿಯ ಗುಣ ಸ್ವತಂತ್ರವಾಗಿ ಹರಿಯುವ ಅನೇಕ ಗುಣಗಳ ಒಕ್ಕೂಟದ ಮೇಲೆ ಆಧಾರಿತವಾಗಿದೆ. ಒಂದೊಂದು ಗುಣಕ್ಕೂ ಒಂದು ಅಥವಾ ಎರಡು ಮುಖ್ಯ ಜೀನ್‌ಗಳು ಇವೆ. ಇವುಗಳ ಜೊತೆಗೆ ಕೆಲವು ಅಮುಖ್ಯ ಜೀನ್‌ಗಳು ಸೇರಿರುತ್ತವೆ. ಉದಾ: ಕಾಕರ್ ಸ್ಪೇನಿಯಲ್‌ನ ಬಾಗಿ ಕುಳಿತುಕೊಳ್ಳುವ ಸ್ವಭಾವ ಎರಡು ಸ್ವತಂತ್ರ ಗುಣಗಳಾದ ಬಾಗಿ(ಮುದುರಿ) ಕುಳಿತುಕೊಳ್ಳುವ ಮತ್ತು ನಿಶ್ಶಬ್ದವಾಗಿರುವ ಸ್ವಭಾವಗಳನ್ನು ಆಧರಿಸಿದೆ.

ಮನುಷ್ಯನ ಜೊತೆ ಜೀವಿಸುವ ಪ್ರಾಣಿಗಳಲ್ಲೆಲ್ಲಾ ನಾಯಿಗಳು ಬಹುಮುಖ್ಯವಾದುವು. ವಿಶೇಷ ಹಾಗೂ ಉದ್ದೇಶಪೂರ್ವಕ ಆಯ್ಕೆಯಿಂದ ಪೂರ್ವಜ ತೋಳಗಳ ಗುಣಗಳು ಸಾಕಿದ ವಿವಿಧ ತಳಿಗಳ ನಾಯಿಗಳಲ್ಲಿ ವೃದ್ಧಿಯಾಗಿವೆ ಅಥವಾ ಕಡಿಮೆಯಾಗಿವೆ. ಈ ವಿಶೇಷ ಗುಣಗಳನ್ನು ಅನುಸರಿಸಿ ಮನುಷ್ಯ ವಿವಿಧ ತಳಿಗಳನ್ನು ವಿವಿಧ ಕಾರ್ಯಗಳಿಗೆ ಬಳಸಿಕೊಂಡಿದ್ದಾನೆ.

ಬೇಟೆನಾಯಿಗಳು : ಹೌಂಡ್ ತಳಿಯ ನಾಯಿಗಳು ಬೇಟೆಯ ವಾಸನೆಯನ್ನು ಹಿಡಿದು ಬೇಟೆಯಾಡುತ್ತವೆ. ವಾಸನೆಯ ಜಾಡನ್ನು ಬಿಟ್ಟುಕೊಂಡು, ಓಡುವ ಭೂಸ್ತನಿಗಳನ್ನು ಅವುಗಳ ಜಾಡಿನ ಆಧಾರದ ಮೇಲೆ ಪತ್ತೆಹಚ್ಚಿ, ಅವುಗಳ ಹಿಂದೆ ಓಡಿ ಹಿಡಿಯಲು ಈ ತಳಿಗಳನ್ನು ಉಪಯೋಗಿಸುವರು. ಹೌಂಡ್ ನಾಯಿಗಳು ವಾಸನೆಯಿಂದಲೂ ಮತ್ತು ಚುರುಕಾದ ಕಣ್ಣುಗಳಿಂದಲೂ ಬೇಟೆಯನ್ನು ಪತ್ತೆಹಚ್ಚುತ್ತವೆ. ಬೇಟೆನಾಯಿಗಳಲ್ಲಿ ಹೌಂಡ್ ನಾಯಿಯಲ್ಲದೆ ಇನ್ನೂ ಕೆಲವು ಗುಂಪುಗಳಿವೆ. ಹಕ್ಕಿಯ ಬೇಟೆಯಾಡುವಾಗ ಪಾಯಿಂಟರ್ಸ್, ಸೆಟ್ಟರ್ ಮತ್ತು ರಿಟ್ರೀವರ್ ತಳಿಯ ನಾಯಿಗಳನ್ನು ಉಪಯೋಗಿಸುತ್ತಾರೆ. ಹಾರುವ ಹಕ್ಕಿಗಳನ್ನು ಬೇಟೆಯಾಡುವುದು ಕಷ್ಟ. ಅವು ಕುಳಿತುಕೊಂಡಾಗ ಅವುಗಳನ್ನು ಹಿಂಬಾಲಿಸಿದ ನಾಯಿಗಳು ಅಲ್ಲಿಯೇ ನಿಂತು ಬೇಟೆಗಾರ ಬರುವವರೆಗೂ ಕಾದು ಹಕ್ಕಿ ಇರುವ ತಾಣವನ್ನು ತೋರಿಸುತ್ತದೆ. ಇಂಥ ತಳಿಗಳಿಗೆ ಪಾಯಿಂಟರ್ ಮತ್ತು ಸೆಟ್ಟರ್ ನಾಯಿಗಳೆಂದು ಹೆಸರು. ರಿಟ್ರೀವರ್ ತಳಿಗಳು ಹೊಡೆದ ಗುಂಡನ್ನು ಗುರುತಿಸಿ, ಹಿಂಬಾಲಿಸಿ ಗುಂಡಿಗೆ ಆಹುತಿಯಾದ ಹಕ್ಕಿಯನ್ನು ಅಥವಾ ಪ್ರಾಣಿಯನ್ನು ಹುಡುಕಿ ಅದನ್ನು ಬೇಟೆಗಾರನಿಗೆ ತಂದೊಪ್ಪಿಸುತ್ತದೆ. ಸ್ಪೇನಿಯಲ್ ಮುಂತಾದ ತಳಿಗಳು ಕುಳಿತಿರುವ ಹಕ್ಕಿಗಳನ್ನು ಗಾಬರಿಗೊಳಿಸಿ ಅವು ಮೇಲಕ್ಕೆದ್ದು ಹಾರಿ ಹೋಗುವಂತೆ ಮಾಡುವುವು. ಆಗ ಬೇಟೆಗಾರ ಹಾರುವ ಹಕ್ಕಿಯನ್ನು ಬೇಟೆಯಾಡಲು ಸುಲಭವಾಗುತ್ತದೆ. ಸ್ಪೇನಿಯಲ್‌ಗಳಲ್ಲಿ ಎರಡು ಬಗೆ. ಬೇಟೆಯಾದ ಜಲಪಕ್ಷಿಗಳನ್ನು ನೀರಿನಿಂದ ಹೊರತರಲು ಉಪಯೋಗಿಸುವ ತಳಿಗಳನ್ನು ಜಲಸ್ಪೇನಿಯಲ್ ಎಂದು ಭೂವಾಸಿ ಪ್ರಾಣಿಗಳನ್ನು ಬೇಟೆಯಾಡುವಾಗ ಉಪಯೋಗಿಸುವ ನಾಯಿಗಳನ್ನು ನೆಲಸ್ಪೇನಿಯಲ್ ಎಂದು ಕರೆಯುವರು. ಮೊದಲಿಗೆ ನೆಲಸ್ಪೇನಿಯಲ್‌ಗಳನ್ನು ಡೇಗೆಗಳ ಬೇಟೆಯಲ್ಲಿ ಬಳಸಲಾಗುತ್ತಿತ್ತು. ಅತಿವೇಗವಾಗಿ ಚಲಿಸುವ ಮತ್ತು ಸೂಕ್ಷ್ಮ ದೃಷ್ಟಿಯುಳ್ಳ ವಿವಿಧ ಗ್ರೇಹೌಂಡ್ ತಳಿಗಳನ್ನು ಮೈದಾನ ಪ್ರದೇಶದಲ್ಲಿ ಬೇಟೆಯನ್ನು ಹಿಂಬಾಲಿಸಿ ಹಿಡಿಯಲು ಬಳಸುವರು.

ಕೋಪಸ್ವಭಾವದ ಟೆರಿಯರ್ ತಳಿಯ ನಾಯಿಗಳು ನೆಲದ ಬಿಲಗಳಲ್ಲಿ ವಾಸ ಮಾಡುವ ಮೊಲ, ಮುಂಗುಸಿ, ಮುಳ್ಳುಹಂದಿ ಮುಂತಾದ ಪ್ರಾಣಿಗಳ ವಾಸನೆ ಹಿಡಿದು ಬಿಲದೊಳಗೆ ಹೊಕ್ಕು ಹಿಡಿದು ತರುವುವು. ಟೆರಿಯರ್‌ಗಳಲ್ಲಿ ಹಲವು ವಿಧಗಳಿವೆ. ಉದಾ: ಫಾಕ್ಸ್ ಟೆರಿಯರ್, ಏರ್‌ಡೇಲ್ ಟೆರಿಯರ್ ಇತ್ಯಾದಿ.

ಆದಿನಾಯಿಗಳಲ್ಲಿ ವಿವಿಧ ಬೇಟೆಗಳಿಗೆ ಆಯ್ಕೆ ಮಾಡಿದ ಮೇಲೆ ಕೆಲವು ತಳಿಗಳಲ್ಲಿ ಪಿತೃ ತೋಳಗಳ ಕೆಲವು ಗುಣಗಳು ವೃದ್ಧಿಯಾಗಿ ಅವಕ್ಕಿಂತ ಶೀಘ್ರಗಾಮಿಗಳಾದ ಗ್ರೇಹೌಂಡ್, ಕೋಪಿಷ್ಠ ಮತ್ತು ಕ್ರೂರಿಗಳಾದ ಟೆರಿಯರ್‌ಗಳು ಉತ್ತಮ ಜಾಡುಗಾರ ತಳಿಗಳು ಉತ್ಪತ್ತಿಯಾದುವು.

ಅನೇಕ ತಳಿಗಳನ್ನು ಮನೆಕಾಯಲು ಮತ್ತು ಅನೇಕ ರಕ್ಷಣೆ ಕಾರ್ಯಗಳಿಗೆ ಉಪಯೋಗಿಸುತ್ತಾರೆ. ಇವನ್ನು ರಕ್ಷಣೆ ಮತ್ತು ಕಾವಲು ನಾಯಿಗಳೆನ್ನುವರು. ಜರ್ಮನ್ ಕುರಿಗಾಹಿ ಮತ್ತು ಡಾಬರ್‌ಮೆನ್, ಪಿನ್ಷರ್ ಮುಂತಾದ ತಳಿಗಳು ಪೋಲಿಸರಿಗೆ ರಕ್ಷಣಾ ಕಾರ್ಯಗಳಲ್ಲೂ, ಕಾವಲಿಗೂ, ಅಪರಾಧಿಗಳನ್ನು ಪತ್ತೆಹಚ್ಚುವ ಕೆಲಸಗಳಿಗೂ ನೆರವಾಗುವುವು. ಅಲ್ಲದೆ ಯುದ್ಧ ಕಾಲದಲ್ಲಿ ಗಸ್ತು ತಿರುಗುವ, ಸ್ಕೌಟಿಂಗ್ ಹಾಗೂ ಕಾವಲು ಸಿಪಾಯಿಗಳ ಅನೇಕ ಕಾರ್ಯಗಳಲ್ಲಿ ಇವು ಸಹಾಯ ಮಾಡುತ್ತವೆ. ಕುರಿ, ಆಡು ಮತ್ತು ದನಗಳ ಮಂದೆಗಳನ್ನು ಕಾಯಲು ಕೆಲವು ತಳಿಗಳಿವೆ. ಇವನ್ನು ಕುರಿ ಮತ್ತು ದನಗಾಹಿ ನಾಯಿಗಳೆನ್ನುವರು. ಹಿಂದಿನ ಕಾಲದಲ್ಲಿ ಕುರಿ, ದನದ ಮಂದೆಗಳನ್ನು ಮಾಂಸಹಾರಿಗಳಾದ ತೋಳ ಮತ್ತು ನರಿಗಳಿಂದ ರಕ್ಷಿಸಲು ದೊಡ್ಡ ಬಲಶಾಲಿ ಹಾಗೂ ಮುಂಗೋಪಿ ನಾಯಿಗಳನ್ನು ಆಯ್ಕೆಮಾಡುತ್ತಿದ್ದರು. ಜರ್ಮನಿಯ ರಾಟ್‌ವಿಲ್ಲರ್ಸ್ ತಳಿ ಒಳ್ಳೆಯ ದನಗಾಹಿ ನಾಯಿಯೆಂದು ಹೆಸರಾಗಿದೆ.

ಹೇಳಿಕೊಟ್ಟದ್ದನ್ನು ಜಾಗ್ರತೆ ಕಲಿಯುವ ಮತ್ತು ಆಜ್ಞೆಗಳನ್ನು ಪರಿಪಾಲಿಸುವ ವಿಧೇಯತಾ ಗುಣದ ಪರವೃತ್ತಿಗಳಿರುವ ಸಣ್ಣ ಅಥವಾ ಸಾಧಾರಣ ಗಾತ್ರದ ನಾಯಿಗಳಾದ ಬಾರ್ಡರ್ ಕಾಲಿಸ್ ತಳಿಗಳನ್ನು ಆರಿಸುವರು. ಗಾಲಿಗಳಿಲ್ಲದ ಗಾಡಿಗಳನ್ನು ಎಳೆಯುವುದಕ್ಕಾಗಿ ಉತ್ತರ ಧ್ರುವ ಹಿಮಪ್ರದೇಶದಲ್ಲಿ ಬಳಸುವ ನಾಯಿಗಳನ್ನು ಸ್ಲೆಡ್ ನಾಯಿಗಳೆನ್ನುವರು. ಬಿಳಿಯರು ಕುದುರೆಗಳನ್ನು ಉತ್ತರ ಅಮೆರಿಕಕ್ಕೆ ತರುವ ಮುನ್ನ ಅಲ್ಲಿನ ಸ್ಥಳೀಯ ಇಂಡಿಯನ್ ಜನ ಗಾಲಿಯಿಲ್ಲದ ಗಾಡಿಗಳಿಗೆ ನಾಯಿಗಳನ್ನು ಕಟ್ಟುತ್ತಿದ್ದರು.

ಅನೇಕ ಆಟಿಕೆನಾಯಿ ತಳಿಗಳನ್ನು ಮುದ್ದುನಾಯಿಗಳನ್ನಾಗಿ ಬೆಳೆಸುತ್ತಾರೆ. ಮುದ್ದಿಗಾಗಿ ಸಾಕುವ ತಳಿಗಳಲ್ಲಿ ಸಣ್ಣ ಅಥವಾ ಸಾಧಾರಣ ಗಾತ್ರದ ಫಾಕ್ಸ ಟೆರಿಯರ್, ಕಾಕರ್ ಸ್ಪೇನಿಯಲ್, ಪೊಮರೆನಿಯನ್ ಮತ್ತು ಬೀಗಲ್ ಮುಖ್ಯವಾದುವು. ಈ ನಾಯಿಗಳು ಮುದ್ದಿನ ಪ್ರಾಣಿಗಳಷ್ಟೆ ಅಲ್ಲದೆ ಮನೆಯನ್ನು ಕೂಡಾ ಕಾಯುವುವು.

ಪಶ್ಚಿಮ ದೇಶಗಳಲ್ಲಿ ಕುರುಡರಿಗೆ ದಾರಿಯನ್ನು ತೋರಲು ಮತ್ತು ಅವರ ನಿತ್ಯದ ಕಾರ್ಯಗಳಲ್ಲಿ ಅವರ ಮುಖ್ಯ ಸಂಗಾತಿಗಳಾಗಿ ನೆರವಾಗಲು ನಾಯಿಗಳಿಗೂ ಅವುಗಳ ಯಜಮಾನರಿಗೂ ತಕ್ಕ ಶಿಕ್ಷಣವನ್ನು ಕೊಡುವ ಕ್ರಮ ಇದೆ. ಇಂಥ ನಾಯಿಗಳು ತಮ್ಮ ಯಜಮಾನರಿಗೆ ಸಹಾಯ ಮಾಡಿ ಅವರ ಕಣ್ಣುಗಳಾಗಿ ಕೆಲಸಮಾಡುತ್ತವೆ. ಈ ಕೆಲಸಕ್ಕೆ ಜರ್ಮನ್ ಕುರಿಗಾಹಿ (ಅಲ್‌ಸೇಶಿಯನ್), ಡಾಬರ್‌ಮೆನ್, ಪಿನ್ಷರ್, ಬಾಕ್ಸರ್ ಮುಂತಾದ ತಳಿಗಳನ್ನು ಆಯ್ಕೆಮಾಡುವರು. ಅಲ್‌ಸೇಶಿಯನ್ ತಳಿಗಳನ್ನು ಆರಿಸುವುದೇ ಸಾಮಾನ್ಯ. ಇವಕ್ಕೆ ಮಾರ್ಗದರ್ಶಕ ನಾಯಿಗಳೆಂದು ಹೆಸರು.

ಮನುಷ್ಯ ನಾಯಿಗಳನ್ನು ಸಂಶೋಧನೆ ಕಾರ್ಯಗಳಲ್ಲಿ ಉಪಯೋಗಿಸುತ್ತಾನೆ. ನಾಯಿಗಳ ಮೇಲೆ ನಡೆಸಿದ ಕೆಲವು ಪ್ರಯೋಗಗಳಿಂದ ಪ್ರಾಣಿಗಳ ಮತ್ತು ಮನುಷ್ಯನ ಆರೋಗ್ಯವನ್ನು ಉತ್ತಮಗೊಳಿಸುವ ಅನೇಕ ವಿಷಯಗಳನ್ನು ಸಂಶೋಧಕರು ಕಂಡುಹಿಡಿದಿದ್ದಾರೆ. ರಷ್ಯನ್ ಚಯಾಪಚಯ ತಜ್ಞ ಪಾವ್‌ಲೋವ್ ನಿಯಮಾಧೀನ ಪ್ರತಿಕ್ರಿಯಾತ್ಮಕ ವಿಷಯಗಳನ್ನು ತಿಳಿಯಲು ನಾಯಿಗಳನ್ನು ತನ್ನ ಪ್ರಯೋಗಗಳಿಗೆ ಉಪಯೋಗಿಸಿದ್ದನು. ನಾಯಿಗಳನ್ನು ವೈದ್ಯಕೀಯ ರಂಗದಲ್ಲೂ ಬಳಸಲಾಗಿದೆ. ಇನ್‌ಸುಲಿನ್ ಚುಚ್ಚು ಮದ್ದನ್ನು ಪರೀಕ್ಷಿಸಲು ಮೊದಲು ನಾಯಿಗಳನ್ನೇ ಮಾಧ್ಯಮವಾಗಿ ಬಳಸಲಾಗಿತ್ತು.

ನಾಯಿಗಳು ತಮ್ಮ ಗುಣಲಕ್ಷಣಗಳಲ್ಲಿ ಮಿಕ್ಕ ಸಾಕುಪ್ರಾಣಿಗಳಿಗಿಂತ ಹೆಚ್ಚಿನ ವೈವಿಧ್ಯವನ್ನು ತೋರಿಸುವುದರಿಂದ ಆನುವಂಶೀಯತೆ ಮತ್ತು ಸ್ವಭಾವಗಳ ಸಂಬಂಧವನ್ನು ತಿಳಿಯಲು ಇವು ಬಹು ಉತ್ತಮ ಪ್ರಾಣಿಗಳೆನಿಸಿಕೊಂಡಿವೆ.

ನಾಯಿಗಳ ರೋಗಗಳು ಮತ್ತು ಪರಾವಲಂಬಿಗಳು : ನಾಯಿಗಳು ಅನೇಕ ರೋಗಗಳಿಗೆ ತುತ್ತಾಗುವುವು. ಈ ರೋಗಗಳು ಬ್ಯಾಕ್ಟೀರಿಯಾ, ವೈರಸ್ ಅಥವಾ ಪರಾವಲಂಬಿಗಳಿಂದ ಉಂಟಾಗುತ್ತವೆ. ಇವು ನಾಯಿಯ ಜೀವನ ಕ್ರಮ, ಅವು ವಾಸಿಸುವ ಪ್ರದೇಶದ ಹವಾಗುಣವನ್ನು ಆಧರಿಸಿದೆ. ನಾಯಿಗಳಿಗೆ ಕ್ಯಾನ್ಸರ್, ಹೃದಯರೋಗ, ಚರ್ಮ ರೋಗಗಳು ಬರುತ್ತವೆ.

ನಾಯಿಗಳಿಗೆ ಬರುವ ಹಲವು ರೋಗಗಳಲ್ಲಿ ಇನ್‍ಫ್ಲುಯೆಂಜ, ಜ್ವರದಂಥ ಡಿಸ್‍ಟೆಂಪರ್ ರೋಗವೂ ಒಂದು. ಇದು ಬಹು ದಿನ ನರಳಿಸುವ ಕಾಯಿಲೆ. ವೈರಸ್‍ಗಳಿಂದ ಉಂಟಾಗುವ ಈ ಸಾಂಕ್ರಾಮಿಕ ರೋಗದಿಂದ ನಾಯಿಗಳು ಹೆಚ್ಚು ಸಂಖ್ಯೆಯಲ್ಲಿ ಸಾಯುತ್ತವೆ. ಈ ಜ್ವರವನ್ನು ತಡೆಗಟ್ಟಲು ಚುಚ್ಚುಮದ್ದನ್ನು ಕೊಡಲಾಗುತ್ತದೆ.

ಯಕೃತ್ತು ಊತ ರೋಗ : ಈ ರೋಗ ವೈರಸ್‍ಗಳಿಂದ ಉಂಟಾಗುವುದು. ಯಕೃತ್ತಿನ ಕ್ರಿಯೆಯನ್ನು ಕೆಡಿಸುವ ವೈರಸ್‍ಗಳು ಮೂತ್ರದ ಮೂಲಕ ಹರಡುವುವು. ಈ ರೋಗದ ಪ್ರಾರಂಭದಲ್ಲಿ ತೀವ್ರವಾದ ಜ್ವರ ಬರುತ್ತದೆ. ಇದು ಡಿಸ್‍ಟೆಂಪರ್ ಜ್ವರದಷ್ಟು ಕಾಲ ಇರುವುದಿಲ್ಲ. ಈ ರೋಗವನ್ನು ಚುಚ್ಚುಮದ್ದಿನಿಂದ ತಡೆಗಟ್ಟಬಹುದು.

ನಾಯಿ ಹುಚ್ಚು (ಜಲಭಯ ರೋಗ) : ಇದು ಬಹು ಮಾರಕ ರೋಗ. ಟ್ರಾನ್ಸಿಲೈಟಿಸ್, ಇನ್‍ಫ್ಲುಯೆಂಜ ಮುಂತಾದ ರೋಗಗಳಿಗೂ ನಾಯಿಗಳು ತುತ್ತಾಗುತ್ತವೆ. ನಾಯಿಗಳಿಗೆ ಅನೇಕ ಪರೋಪಜೀವಿಗಳು ಅಂಟುತ್ತವೆ. ಇವುಗಳಲ್ಲಿ ಬಾಹ್ಯ ಪರೋಪಜೀವಿ ಮತ್ತು ಅಂತರ್ ಪರೋಪಜೀವಿ ಎಂದು ಎರಡು ವಿಧ.

ಅಂತರ್ ಪರೋಪ ಜೀವಿಗಳಾದ ದುಂಡುಹುಳುಗಳು ಮತ್ತು ಲಾಡಿಹುಳುಗಳು ಸೇರಿವೆ. ದುಂಡು ಹುಳುಗಳಲ್ಲಿ ಮುಖ್ಯವಾದುವು ಅಸ್ಕ್ಯಾರಿಸ್ ಜಾತಿಯ ದುಂಡುಹುಳುಗಳು. ಇವು ನಾಯಿಮರಿಗಳ ಮರಣಕ್ಕೆ ಕಾರಣವಾಗಿವೆ. ಲಾಡಿಹುಳುಗಳಲ್ಲಿ ಮುಖ್ಯವಾದುವು ಎಕೈನೊಕಾಕಸ್ ಜಾತಿಯ ಲಾಡಿಹುಳು. ಸಕಾಲದಲ್ಲಿ ಹುಳುನಾಶಕ ಔಷಧಿಯನ್ನು ನೀಡಿ ಈ ಹುಳುಗಳನ್ನು ನಾಶಮಾಡಬಹುದು.

ಬಾಹ್ಯ ಪರೋಪಜೀವಿಗಳಾದ ಮೈಟ್, ಹೇನು, ಉಣ್ಣಿ ಮತ್ತು ಚಿಗಟಗಳು ನಾಯಿಗಳಿಗೆ ಬಹಳ ಉಪದ್ರವಕಾರಿಗಳಾಗಿವೆ. ಮೇಂಜ್ ಎಂಬ ಚರ್ಮ ರೋಗ ಎರಡು ವಿಧದ ಮೈಟ್‍ಗಳಿಂದ ಉಂಟಾಗುತ್ತದೆ. ಈ ಪ್ರಾಣಿಗಳು ಕೂದಲಿನ ಬುಡದಲ್ಲಿ ವಾಸವಾಗಿರುವುದು. ಇವುಗಳಿಂದ ಪೀಡಿತವಾಗಿರುವ ನಾಯಿಗಳ ಕೂದಲು ಉದುರಿಹೋಗಿ ಆ ಸ್ಥಳಗಳಲ್ಲಿ ನವೆಯಾಗುವುದಲ್ಲದೆ, ಊದಿ ಇಸಬು ರೀತಿಯ ಹುಣ್ಣುಗಳಾವುವು. ಈ ಕಾಯಿಲೆಗೆ ಕೆಲವು ವಾರಗಳ ಚಿಕಿತ್ಸೆ ಅಗತ್ಯ.

ಕೆಲವು ಉಣ್ಣಿಗಳು ನಾಯಿಯನ್ನು ಪೀಡಿಸುತ್ತವೆ. ಹುಲ್ಲು ಮತ್ತು ಸಣ್ಣ ಪೊದೆಗಳಲ್ಲಿ ವೃದ್ಧಿಯಾಗುವ ಇವು ನಾಯಿ ತನ್ನ ದೇಹವನ್ನು ಸಸ್ಯಗಳಿಗೆ ಉಜ್ಜಿದಾಗ ನಾಯಿಯ ದೇಹಕ್ಕೆ ಅಂಟಿಕೊಳ್ಳುವುವು. ಸೀಮೆ ಎಣ್ಣೆ ಲೇಪಿಸಿ ಇವನ್ನು ನಿರ್ಮೂಲ ಮಾಡಬಹುದು. ಚಿಗಟಗಳು ನಾಯಿಗೆ ಬಾಧಕವಾಗಿವೆ.

ನಾಯಿಯ ಹೇನುಗಳು ಒಂದರಿಂದ ಮತ್ತೊಂದು ನಾಯಿಗೆ ನೇರವಾಗಿ ವರ್ಗಾವಣೆಯಾಗುತ್ತವೆ. ಸಾಬೂನು ಹಾಕಿ ಸ್ನಾನ ಮಾಡಿಸಿ, ಪ್ರೌಢ ಹೇನುಗಳನ್ನು ನಿರ್ಮೂಲ ಮಾಡಬಹುದು. ಆದರೆ, ಅವುಗಳ ಮರಿಗಳನ್ನು ಸುಲಭವಾಗಿ ನಾಶಮಾಡುವುದು ಕಷ್ಟ. ಕೀಟನಾಶಕ ಔಷಧಿ ಬೆರೆಸಿದ ಎಣ್ಣೆಯನ್ನು ಕೆಲವು ಸಾರಿ ಲೇಪಿಸಿ ಈ ಪೀಡೆಕಾರಕಗಳನ್ನು ನಿವಾರಿಸಬಹುದು. (ಎನ್.ವಿ.ಎ)

**ನಾರ್ ಅಡ್ರಿನಲೀನ್:** ಮೂತ್ರ ಜನಕಾಂಗಕ್ಕೆ ಹೊಂದಿಕೊಂಡಂತೆ ಇರುವ ಅಡ್ರಿನಲ್ ಗ್ರಂಥಿಯ ತಿರುಳು (ಮೆಡುಲ್ಲಾ) ಭಾಗ ಹಾಗು ಕೆಲವು ನರಕೋಶಗಳ (ಅನುವೇದನ ನರಮಂಡಲ) ತುದಿಗಳು ಸ್ರವಿಸುವ ಹಾರ್ಮೋನು. ನಾರ್ ಎಪಿನೆಫ್ರೀನ್ ಪರ್ಯಾಯ ನಾಮ. ರಾಸಾಯನಿಕವಾಗಿ ಇದು ಅಮೈನ ಆಗಿದ್ದು, ಕೆಟಕೊಲಮೈನ ಗುಂಪಿಗೆ ಸೇರಿದೆ. ಇದರ ಅಣುಸೂತ್ರ ಮತ್ತು ರಚನಾಸೂತ್ರಗಳು ಹೀಗಿವೆ.

$C_8H_{11}O_3N$

ಅಣುಸೂತ್ರ




ರಚನಾಸೂತ್ರ

ದೇಹದಲ್ಲಿ ನಡೆಯುವ ಜೀವ ವಸ್ತುಕರಣ (ಮೆಟಬಾಲಿಸಂ), ಅನೈಚ್ಛಿಕ ಸ್ನಾಯುಗಳು, ಹಾಗೂ ಹೃದಯದಿಂದ ಹೊರಹಾಕಲ್ಪಡುವ ರಕ್ತ ಪ್ರಮಾಣಗಳ ಮೇಲೆ, ನಾರ್ ಅಡ್ರಿನಲೀನ್ ಪರಿಣಾಮ ಗೌಣ. ಆದರೆ ರಕ್ತನಾಳಗಳು (ಅಪಧಮನಿಗಳು) ಸಂಕುಚಿತಗೊಳ್ಳುವಂತೆ ಮಾಡಿ ಆ ಮೂಲಕ ದೇಹದಲ್ಲಿನ ರಕ್ತದ ಒತ್ತಡ ಹೆಚ್ಚಿಸುವಲ್ಲಿ ಹೆಚ್ಚಿನ ಪರಿಣಾಮ ಬೀರುತ್ತದೆ. ಮೆಡುಲ್ಲಾದಿಂದ ನಾರ್ ಅಡ್ರಿನಲೀನ್‍ನ ಸ್ರವಿಕೆ ಹೈಪೊಥಲಾಮಸ್ ಅಥವಾ ನರಮಂಡಲದ ನಿಯಂತ್ರಣದಲ್ಲಿದೆ.

ರಾಸಾಯನಿಕ ಆರೋಮ್ಯಾಟಿಕ್ ಅಮೈನೋ ಆಮ್ಲಗಳಾದ ಟ್ರಿಪ್ಟೊಫೇನ್ ಮತ್ತು ಟೈರೋಸೀನ್‍ಗಳಿಂದ ಉತ್ಪತ್ತಿಯಾಗುತ್ತದೆ. ಅಡ್ರಿನಲ್ ಗ್ರಂಥಿಯ ಮೆಡುಲ್ಲಾ ಭಾಗದಲ್ಲಿನ ಕ್ರೊಮಾಫೆನ್ ಕೋಶಗಳಲ್ಲಿ ನಾರ್ ಅಡ್ರಿನಲೀನ್‍ನ, ಅಡ್ರಿನಾಲಿನ್ ಜೊತೆಗೆ ಉತ್ಪಾದನೆಯಾಗುತ್ತದೆ. ಹಲವು ಬಗೆಯ ಭೌತಿಕ ಮತ್ತು ಮಾನಸಿಕ ಒತ್ತಡಗಳು ನಾರ್‍ಅಡ್ರಿನಲೀನ್‍ನ ಉತ್ಪಾದನೆಗೆ ಪ್ರಚೋದನೆಯಾಗಿ ಪರಿಣಮಿಸುತ್ತವೆ. ಅಡ್ರಿನಲ್ ಗ್ರಂಥಿಯ ಮೆಡುಲ್ಲಾ ಬಾಗದಲ್ಲಿ ಉತ್ಪತ್ತಿಯಾಗುವ ಪ್ರಮುಖ ಹಾರ್ಮೋನಾದ ಅಡ್ರಿನಲೀನ್‍ನ ಪರಿಣಾಮಗಳೂ, ನಾರ್ ಅಡ್ರಿನಲೀನ್‍ನ ಪರಿಣಾಮಗಳೂ ಬಹುಪಾಲು ಒಂದೇ ಆಗಿರುತ್ತವೆ. ಆದರೆ ರಕ್ತನಾಳಗಳ ಮೇಲೆ ಮಾತ್ರ ಅವುಗಳ ಪರಿಣಾಮ ಭಿನ್ನವಾಗಿರುತ್ತದೆ. ಅಂದರೆ ನಾರ್ ಅಡ್ರಿನಲೀನ್ ಎಲ್ಲಾ ರಕ್ತನಾಳಗಳನ್ನು ಸಂಕುಚಿತಗೊಳ್ಳುವಂತೆ ಮಾಡಿ ರಕ್ತದ ಒತ್ತಡ ಹೆಚ್ಚುವಂತೆ ಮಾಡಿದರೆ ಅಡ್ರಿನಲೀನ್ ಹಾರ್ಮೋನು ಚರ್ಮ ಮತ್ತು ಜೀರ್ಣಾಂಗಕ್ಕೆ ರಕ್ತ ಸರಬರಾಜು ಮಾಡುವ ರಕ್ತನಾಳಗಳನ್ನುಮಾತ್ರ ಸಂಕುಚಿತಗೊಳ್ಳುವಂತೆ ಮಾಡಿ ಹಾಗೆಯೇ ಐಚ್ಛಿಕ ಸ್ನಾಯುಗಳಿಗೆ ಮತ್ತು ಮೆದುಳಿಗೆ ಸರಬರಾಜು ಮಾಡುವ ರಕ್ತನಾಳಗಳು ವಿಕಸನಗೊಳ್ಳುವಂತೆ ಮಾಡುತ್ತದೆ. ಅಡ್ರಿನಲೀನ್ ಮತ್ತು ನಾರ್ ಅಡ್ರಿನಲೀನ್‍ಗಳು ಜೀವಕೋಶ ಪೊರೆಗಳಲ್ಲಿರುವ ಎರಡು ಬಗೆಯ, ಆಲ್ಫಾ ಮತ್ತು ಬೀಟಾ ಅಡ್ರಿನರ್ಜಿಕ್ ಗ್ರಾಹಿಗಳ (ರಿಸೆಪ್ಟಾರ್ಸ್) ಮೂಲಕ, ಜೀವಕೋಶಗಳ ಕಾರ್ಯವನ್ನು ಪ್ರಚೋದಿಸುತ್ತವೆ. ಆಲ್ಫಾ ಮತ್ತು ಬೀಟಾ ಅಡ್ರಿನರ್ಜಿಕ್ ಗ್ರಾಹಿಗಳು, ಈ ಹಾರ್ಮೋನುಗಳೊಂದಿಗೆ ಕೂಡಿದಾಗ, ಅಡಿನೈಲ್ ಸೈಕ್ಲೇಸ್ ಪ್ರೋಟೀನನ್ನು ಕ್ರಿಯಾತ್ಮಕಗೊಳಿಸಿ ಎಟಿಪಿಯಿಂದ ಸೈಕ್ಲಿಕ್ ಎಎಂಪಿ ಉತ್ಪತ್ತಿಯಾಗುವಂತೆ ಮಾಡುತ್ತದೆ. ಸೈಕ್ಲಿಕ್ ಎಎಂಪಿಯು ನಿರ್ದಿಷ್ಟ ಪ್ರತಿಕ್ರಿಯೆ (ಆ ಜೀವಕೋಶ ಅಥವಾ ಅಂಗಾಂಶ ಅಥವಾ ಅಂಗಾಂಗಗಳಿಗೆ ಅನ್ವಯಿಸುವಂತೆ) ಜರುಗುವಂತೆ ಮಾಡುತ್ತದೆ. ಸಾಮಾನ್ಯವಾಗಿ ದೇಹದ ಎಲ್ಲಾ ಅಂಗಾಂಗಗಳಲ್ಲಿ ಆಲ್ಫಾ ಮತ್ತು ಬೀಟಾ ಗ್ರಾಹಿಗಳಿರುತ್ತವೆ.

ಸಾಮಾನ್ಯವಾಗಿ ಬೀಟ ಗ್ರಾಹಿಯೊಂದಿಗೆ ಈ ಹಾರ್ಮೋನುಗಳು ಬೆರೆತರೆ ಜೀವಕೋಶದಲ್ಲಿ ಪ್ರಚೋದನಾತ್ಮಕ ಪರಿಣಾಮಗಳಾದರೆ, ಆಲ್ಫಾ ಗ್ರಾಹಿ ಜೊತೆ ಬೆರೆತಾಗ ತದ್ವಿರುದ್ಧ ಪರಿಣಾಮವಾಗುತ್ತದೆ. ಕಾರಣ, ಯಾವುದೇ ಜೀವಕೋಶದಲ್ಲಿ ಈ ಹಾರ್ಮೋನುಗಳ ಪರಿಣಾಮ, ಜೀವಕೋಶದ ಪೊರೆಯಲ್ಲಿರುವ ಆಲ್ಫಾ ಅಥವಾ ಬೀಟಾ ಗ್ರಾಹಿಗಳ ಸಂಖ್ಯೆಯ ಮೇಲೆ ಅವಲಂಬಿಸಿದೆ. ಹೃದಯದ ಸ್ನಾಯುಗಳಲ್ಲಿರುವ ಬೀಟ ಗ್ರಾಹಿಗಳ ಪರಿಣಾಮದಿಂದ ಹೆಚ್ಚಿನ ರಕ್ತದೊತ್ತಡ ಉಂಟಾಗುತ್ತದೆ. ಕಾರಣ, ರಕ್ತದೊತ್ತಡವನ್ನು ನಿಯಂತ್ರಿಸಲು ಬೀಟಾ ಗ್ರಾಹಿಗಳ ಕಾರ್ಯ ಕುಂಠಿತಗಳನ್ನು ಬಳಸಲಾಗುತ್ತದೆ.

ಅನುವೇದನಾ ನರಮಂಡಲದ ನರಕೋಶಗಳ ತುದಿಯಲ್ಲಿ ಸ್ರವಿಸುವ ನಾರ ಎಡ್ರಿನಲೀನ್, ನರವಾಹಕವಾಗಿ, ಒಂದು ನರಕೋಶದಿಂದ, ಇನ್ನೊಂದು ನರಕೋಶಕ್ಕೆ ನರಸಂವೇದನೆ (ನರ್ವ್ ಇಂಪಲ್ಸ್) ಯನ್ನು ವರ್ಗಾಯಿಸುತ್ತದೆ. ಒಮ್ಮೆ ಉತ್ಪತ್ತಿಯಾಗಿ ನ್ಯೂರಾನಗಳ ನಡುವಿನ ಸಂಧಿಯಲ್ಲಿ ಸ್ರವಿಸಲ್ಪಟ್ಟ ನಾರ್ ಅಡ್ರಿನಲೀನ್ ಹಾರ್ಮೋನನ್ನು ಹಿಂಪಡೆಯುವುದು ಅಥವಾ ನಿಷ್ಕ್ರಿಯಗೊಳಿಸುವುದು ಕೇಂದ್ರ ಮತ್ತು ಪರಿಧಿನರವ್ಯೂಹಗಳಲ್ಲಿ ಭಿನ್ನವಾಗಿ ನಡೆಯುತ್ತಿದೆ. ಪರಿಧಿನರವ್ಯೂಹದಲ್ಲಿ ಸಂಬಂಧಿಸಿದ ನರಕೋಶಗಳೆ ನಾರ್ ಅಡ್ರಿನಲೀನ್ನು ಹಿಂಪಡೆದರೆ ಕೇಂದ್ರ ನರವ್ಯೂಹದಲ್ಲಿ ಕಿಣ್ವಗಳ ಸಹಾಯದಿಂದ ನಾರ್ ಅಡ್ರಿನಲೀನ್ ನಿಷ್ಕ್ರಿಯಗೊಳ್ಳುತ್ತದೆ. ಅಡ್ರಿನಲೀನ್ ಹಾರ್ಮೋನಿನ ನಿಷ್ಕ್ರಿಯಗೊಳ್ಳುವಿಕೆ ಕೂಡ ಹೀಗೆಯೇ ನಡೆಯುತ್ತಿದೆ. ಮೊನೋ ಅಮೈನೋ ಆಕ್ಸಿಡೇಸ್ (ಎಂಎಒ) ಮತ್ತು ಕೆಟಕಾಲ್ ಓ–ಮಿಥೈಲ್ ಟ್ರಾನ್ಸ್‌ಫರೇಸ್ (ಸಿಒಎಂಟಿ) ಎಂಬ ಎರಡು ಕಿಣ್ವಗಳು ನಾರ್ ಅಡ್ರಿನಲೀನ್ ಹಾರ್ಮೋನನ್ನು ನಿಷ್ಕ್ರಿಯಗೊಳಿಸಬಲ್ಲ ಪ್ರಮುಖವಾದ ಕಿಣ್ವಗಳು.

ವಿರೋಧ, ವಿವಾದಗಳಿಗೆ ಒಳಪಟ್ಟಿದ್ದರೂ, ಇಂದಿಗೂ ಕೆಲ ವೈದ್ಯರು ಸೆಪ್ಟಿಕ್ ಶಾಕ್ ನಂಥ ಸ್ಥಿತಿಯಲ್ಲಿ ನಾರ್ ಆಡ್ರಿನಲೀನ್‍ನ್ನೇ ಪ್ರಥಮ ಆಯ್ಕೆಯಾಗಿ ಪರಿಗಣಿಸಿ

ಚಿಕಿತ್ಸೆಯಲ್ಲಿ ಬಳಸುತ್ತಾರೆ. ಆಗ ನಾರ್ ಅಡ್ರಿನಲೀನ್, ಅತಿಯಾಗಿ ಹಿಗ್ಗಲ್ಪಟ್ಟಿರುವ ರಕ್ತನಾಳಗಳನ್ನು ಕುಗ್ಗಿಸುವ ಮೂಲಕ ರೋಗಿಗೆ ಸಹಾಯಕವಾಗುತ್ತಿದೆ.

(ಎಸ್.ಡಿ.ಎಂ.)

**ನಾರುಹುಣ್ಣಿನ ಹುಳು:** ನೇಮಟೋಡ ವಂಶಕ್ಕೆ ಸೇರಿದ ಪರಾವಲಂಬಿ ಜೀವಿ. ಗಿನಿಹುಳು ಪರ್ಯಾಯನಾಮ. ಡ್ರ್ಯಾಕಂಕ್ಯುಲಸ್ ಮೆಡಿನೆನ್ಸಿಸ್ ಇದರ ಶಾಸ್ತ್ರೀಯ ನಾಮ. ಗಂಡು ಅತಿ ವಿರಳ. ಇದುವರೆಗಿನ ಶೋಧನೆಯಿಂದಾಗಿ ಕೇವಲ ಒಂದೇ ಒಂದು ಗಂಡು ಹುಳು ಮಾನವನ ದೇಹದಲ್ಲಿ ದೊರಕಿದೆ. ಇದರಿಂದಾಗಿ ಗಂಡು ಹುಳುವಿನ ರೂಪ, ರಚನೆಗಳ ವಿಷಯವಾಗಲಿ, ನಾರುಹುಣ್ಣು ಹುಳುವಿನ ಜೀವನಚರಿತ್ರೆಯ ವಿಷಯವಾಗಲಿ ಸ್ಪಷ್ಟವಾಗಿ ಇನ್ನೂ ತಿಳಿದು ಬಂದಿಲ್ಲ. ಗಂಡುಹುಳು ಸಿಕ್ಕುವುದು ಇಷ್ಟು ವಿರಳವಾದರೆ ಹೆಣ್ಣು ಹುಳು ಹೇರಳವಾಗಿ ದೊರೆಯುತ್ತದೆ. ಹೆಣ್ಣು ಹುಳುವಿನ ಉದ್ದ 32–120 ಸೆಂಮಿ. ದೇಹದ ಬಣ್ಣ ಬಿಳಿ. ದೇಹದ ಹಿಂತುದಿಯಲ್ಲಿ ಕೊಕ್ಕೆಗಳಂತಿರುವ ಉಪಾಂಗಗಳಿವೆ. ಗಡಸು ಫಲಕಗಳಿರುವ ತಲೆಯೂ ಅಷ್ಟತುಟಿಗಳಿಂದ ಆವೃತವಾದ ಬಾಯಿಯೂ ಹೆಣ್ಣುಹುಳುಗಳ ಇತರ ವೈಶಿಷ್ಟ್ಯಗಳು. ಗರ್ಭದರಿಸಿದ ಅನಂತರ ಹೆಣ್ಣು ಹುಳು ಆಶ್ರಯ ಜೀವಿಯ ಚರ್ಮದ ಒಳಪದರದ ಮೂಲಕ ಕಾಲುಗಳನ್ನು ತಲುಪುತ್ತದೆ. ಆಗ ರೋಗಿಯಲ್ಲಿ ಜ್ವರ, ಮುಖ ಮತ್ತು ತೋಳುಗಳ ಊತ, ವಾಂತಿ, ಭೇದಿ ಮತ್ತು ಮೈಮೇಲೆಲ್ಲಾ ಗಂದೆಗಳೇಳುವುದು ಮುಂತಾದ ರೋಗಲಕ್ಷಣಗಳು ತಲೆದೋರುವುವು. ಕೆಲವು ವೇಳೆ ಉಸಿರಾಡಲು ಕಷ್ಟವಾಗಬಹುದು. ಇಷ್ಟೇ ಅಲ್ಲದೆ ಹುಳು ನೆಲೆಗೊಂಡಿರುವ ಸ್ಥಳದಲ್ಲಿ ಸುಮಾರು 2.5 ಸೆಂಮಿ. ಅಗಲದ ಬೊಬ್ಬೆ ಏಳುತ್ತದೆ. ಕೇವಲ ಒಂದೆರಡು ದಿನಗಳಲ್ಲಿ ಇದು ಒಡೆದು ಮಧ್ಯೆ ರಂದ್ರವಿರುವ ಹುಣ್ಣಾಗುತ್ತದೆ. ಈ ಹುಣ್ಣಿರುವ ಸ್ಥಳದೊಡನೆ ತಣ್ಣೀರಿನ ಸ್ಪರ್ಶವಾದರೆ ರಂಧ್ರದ ಮೂಲಕ ಹುಳುವಿನ ಗರ್ಭಕೋಶ ಹೊರಚಾಚಿ ವರ್ಣರಹಿತ ದ್ರವವೊಂದನ್ನು ಜಿನುಗಿಸುತ್ತದೆ. ಈ ದ್ರವದಲ್ಲಿ ಅಸಂಖ್ಯಾತ ಲಾರ್ವಗಳಿರುವುವು. ಇದರಿಂದಾಗಿ ದ್ರವ ಕ್ಷಣಮಾತ್ರದಲ್ಲೇ ಹಾಲಿನಂತೆ ಬೆಳ್ಳಗಾಗುವುದು. ವ್ರಣಪೀಡಿತನಾದ ವ್ಯಕ್ತಿ ಕೆರೆ, ಕೊಳ, ನದಿ ಮುಂತಾದುವುಗಳಿಗೆ ಇಳಿದಾಗ ಹುಣ್ಣಿನಿಂದ ಹೀಗೆ ಲಾರ್ವಗಳು ತಂಡೋಪತಂಡವಾಗಿ ನೀರನ್ನು ಸೇರುತ್ತವೆ. ಪ್ರತಿಯೊಂದು ಲಾರ್ವವೂ 500–750 ಮೈ. ಉದ್ದವಿರುತ್ತದೆ. ಹೀಗೆ ವಿಸರ್ಜಿಸಲ್ಪಟ್ಟ ಲಾರ್ವಗಳು ಕೇವಲ ಮೂರು ದಿವಸಗಳು ಮಾತ್ರ ಸ್ವತಂತ್ರವಾಗಿ ಜೀವಿಸಬಲ್ಲುವು. ಈ ಅವಧಿಯಲ್ಲಿ ಇವು ಜಲವಾಸಿ ಸೈಕ್ಲಾಪ್ಸ್ (ನೀರು ಚಿಗಟ) ಎಂಬ ಮಧ್ಯವರ್ತಿಯನ್ನು ಸೇರುತ್ತವೆ. ಆದಿಯಲ್ಲಿ ಲಾರ್ವಗಳು ಸೈಕ್ಲಾಪ್ಸಿನ ದೇಹದಲ್ಲಿ ಬಹು ಚುರುಕಾಗಿದ್ದು ಒಂದು ವಾರಾಂತ್ಯದಲ್ಲಿ ಪೊರೆ ಬಿಡುತ್ತವೆ. ಸುಮಾರು 15 ದಿವಸಗಳ ತರುವಾಯ ಬಲಿಯುವುವು. ಈ ಹಂತದಲ್ಲಿ ಲಾರ್ವಗಳ ಚಲನಶಕ್ತಿ ಕ್ಷೀಣವಾಗುವುದಲ್ಲದೆ ರೂಪ ರಚನೆಯಲ್ಲೂ ಅನೇಕ ಬದಲಾವಣೆಗಳಾಗುತ್ತದೆ. ಇಂಥ ಲಾರ್ವಯುತ ನೀರುಚಿಗಟಗಳಿರುವ ನೀರನ್ನು ಮನುಷ್ಯ ಕುಡಿದರೆ, ಆತನ ಜಠರರಸದ ಪ್ರಭಾವದಿಂದ ಮಧ್ಯವರ್ತಿಯ ಅಂದರೆ ನೀರುಚಿಗುಟದ ದೇಹ ಕರಗುತ್ತದೆ. ಆಗ ಲಾರ್ವಗಳು ಬಿಡುಗಡೆಯಾಗಿ ಚಲನಶಕ್ತಿಯನ್ನು ಮತ್ತೆ ಪಡೆದು, ಜಠರದ ಮಾಂಸಖಂಡಗಳನ್ನು ಭೇದಿಸಿ, ಆಶ್ರಯದಾತನ ಅಂಗಾಂಗಗಳಿಗೆಲ್ಲಾ ಹರಡುತ್ತವೆ. ಈ ಸಮಯದಲ್ಲೇ ಗಂಡು ಹೆಣ್ಣುಗಳ ಮಿಲನವಾಗುವುದೆಂದು ಭಾವಿಸಲಾಗಿದೆ. ಆದರೆ ಇದಾದ ನಂತರ ಗಂಡಿನ ಗತಿ ಏನಾಗುತ್ತದೆ ಎಂಬುದು ಇನ್ನೂ ಗೊತ್ತಾಗಿಲ್ಲ. ಗರ್ಭಧರಿಸಿದ ಹೆಣ್ಣು ಮಾತ್ರ ಅಂಗಾಂಗಗಳನ್ನು ಕೊರೆದು ಸುಮಾರು ಒಂದು ವರ್ಷದ ಅವಧಿಯಲ್ಲಿ ಮನುಷ್ಯನ ಚರ್ಮದ ಕೆಳಗೆ ಬಂದು ನೆಲೆಸುತ್ತದೆ. ಸಾಧಾರಣವಾಗಿ ಮನುಷ್ಯನ ಕೈಕಾಲು ಮತ್ತು ಹಿಮ್ಮಡಿ ಇವುಗಳ ವಾಸಸ್ಥಳ. ಆದರೆ ಕೆಲವೊಮ್ಮೆ ತೊಡೆ, ಎದೆ, ಬೆನ್ನು, ಹೊಟ್ಟೆ ಮತ್ತು ನಾಲಗೆಗಳಲ್ಲಿ ಕಾಣಿಸಿಕೊಳ್ಳುವುದುಂಟು.

ನಾರುಹುಣ್ಣಿನ ಭೀತಿ ಶುಷ್ಕಹವೆ ಇರುವ ಪ್ರಾಂತ್ಯಗಳಲ್ಲಿ ಅತ್ಯಧಿಕ. ಭಾರತ, ಅರೇಬಿಯ, ಇರಾನ್, ತುರ್ಕಿ, ದಕ್ಷಿಣ ಅಮೆರಿಕ ಮತ್ತು ಪಶ್ಚಿಮ ಆಫ್ರಿಕಗಳಲ್ಲಿ ಇದರ ಪ್ರಾಬಲ್ಯ ಹೆಚ್ಚು. ಕರ್ನಾಟಕದಲ್ಲಿ ಚಿತ್ರದುರ್ಗ, ಕೋಲಾರ, ತುಮಕೂರು, ಧಾರವಾಡ ಜಿಲ್ಲೆಗಳಲ್ಲಿ ಇದು ಹೆಚ್ಚಾಗಿದೆ.

ನಾರುಹುಣ್ಣು ಬೇನೆಯನ್ನು ತಡೆಗಟ್ಟಬೇಕಾದರೆ ಮೆಟ್ಟಿಲುಗಳಿರುವ ಬಾವಿ, ಕಲ್ಯಾಣಿ ಮತ್ತು ಕೊಳಗಳಲ್ಲಿ ಜನರು ಇಳಿದು ನೀರನ್ನು ಉಪಯೋಗಿಸದಂತೆ ನಿರ್ಬಂಧಿಸಿ ನೀರನ್ನು ಹಗ್ಗ ಅಥವಾ ರಾಟೆಗಳಿಂದ ಎಳೆದು ಉಪಯೋಗಿಸುವಂತೆ ಏರ್ಪಾಟು ಮಾಡಬೇಕು. ನಾರುಹುಳುವಿನ ಮಧ್ಯವರ್ತಿ ಪೋಷಕ ಜೀವಿಯಾದ ಸೈಕ್ಲಾಪ್ಸನ್ನು ನಾಶಮಾಡುವ ಕ್ರಿಮಿನಾಶಕ ವಸ್ತುಗಳನ್ನು ನೀರಿನಲ್ಲಿ ಹಾಕಬೇಕು. ನಾರುಹುಣ್ಣು ಬಂದಿರುವ ರೋಗಿಗಳ ಕೈಕಾಲುಗಳನ್ನು ನೀರಿನಲ್ಲಿ ಇಟ್ಟರೆ ನಾರುಹುಳು ಗಾಯದ ಮೂಲಕ ಹೊರಗೆ ಕಾಣಿಸಿಕೊಳ್ಳುತ್ತದೆ. ಆಗ ಒಂದು ಕಡ್ಡಿಯನ್ನು ತೆಗೆದುಕೊಂಡು, ಹುಳುವಿನ ಹತ್ತಿರ ಇಟ್ಟರೆ ಅದು ಕಡ್ಡಿಗೆ ಸುತ್ತಿಕೊಳ್ಳುತ್ತದೆ. ಬಹಳ ಜಾಗರೂಕತೆಯಿಂದ ನಾರುಹುಳು ಸಂಪೂರ್ಣವಾಗಿ ಸುತ್ತಿಕೊಳ್ಳುವವರೆಗೆ ಕಡ್ಡಿಯನ್ನು ದಿನಗಟ್ಟಲೆ ತಿರುಗಿಸುತ್ತಿರಬೇಕು. ಸಂಪೂರ್ಣವಾಗಿ ಸುತ್ತಿಕೊಂಡ ತರುವಾಯ ಅದನ್ನು ಹೊರ ತೆಗೆಯಬೇಕು. ಹುಳುವಿನ ದೇಹರಸ ತೀಕ್ಷ್ಣವಾದ ನಂಜುಕಾರಕವಾದ್ದರಿಂದ ಹೊರತೆಗೆಯುವಾಗ ಅದು ತುಂಡಾಗದಂತೆ ನೋಡಿಕೊಳ್ಳಬೇಕು. ಒಂದು ನಾರುಹುಳುವನ್ನು ಮೇಲೆ ಹೇಳಿದ ರೀತಿ ಹೊರತೆಗೆಯಬೇಕಾದರೆ ಕನಿಷ್ಠ ಪಕ್ಷ ಒಂದು ವಾರವಾದರೂ ಬೇಕಾಗುತ್ತದೆ. ಫಿನೋತಯಜೀನ್ ಎಂಬ ರಾಸಾಯನಿಕವನ್ನು ಹುಣ್ಣಿನ ಸುತ್ತ ಹಚ್ಚುವುದರಿಂದ ನಿಶ್ಚೇತನಗೊಳಿಸಬಹುದು. ಇದರಿಂದ ಅದನ್ನು ಹೊರತೆಗೆಯಲು ಸುಲಭವಾಗುತ್ತದೆ.

ಬೇನೆಯ ಪ್ರಾರಂಭದಲ್ಲಿ ಅಡ್ರೆನಲಿನ್ ಎಂಬ ಹಾರ್ಮೋನನ್ನು ರೋಗಿಗೆ ಚುಚ್ಚುಮದ್ದಿನ ರೂಪದಲ್ಲಿ ಕೊಟ್ಟು ನಾರುಹುಳುವಿನ ಉಪಟಳವನ್ನು ಆದಷ್ಟು ತಡೆಗಟ್ಟಬಹುದು. ಕುದಿಸಿದ ನೀರನ್ನು ಕುಡಿಯುವುದರಿಂದಲೂ ಪರ್‌ಕ್ಲೋರಾನ್, ಸುಣ್ಣ ಅಥವಾ ಚಲುವೆ ಪುಡಿಯಿಂದ ಶುದ್ಧಿಗೊಳಿಸಿದ ನೀರನ್ನು ಸೇವಿಸುವುದರಿಂದಲೂ ಈ ವ್ಯಾಧಿಯನ್ನು ತಡೆಗಟ್ಟಬಹುದು. ಇತ್ತೀಚೆಗೆ ಮಧ್ಯವರ್ತಿ ಆಶ್ರಯದಾತವಾದ ಸೈಕ್ಲಾಪ್ಸನ್ನು ಭಕ್ಷಿಸುವ ಮೀನುಗಳನ್ನು ಕೆರೆ, ಬಾವಿ, ನದಿ ಮುಂತಾದೆಡೆಗಳಲ್ಲಿ ಬಿಡುವುದು ವಾಡಿಕೆಯಾಗಿದೆ.

(ಎಸ್.ಎಚ್.ಓ; ಪಿ.ಎ.ಆರ್)

**ನಾರ್ವಾಲ್:** ಸಿಟೇಸಿಯ ಗಣದ ಡೆಲ್ಫಿನಿಡೆ ಕುಟುಂಬಕ್ಕೆ ಸೇರಿದ ಒಂದು ದೊಡ್ಡಜಾತಿಯ ಕಡಲಹಂದಿ (ಪಾರ್ಪಾಯಿಸ್). ಉತ್ತರ ಧ್ರುವದ ಕಡಲಿನಲ್ಲಿ ಇದು ಬಲು ಸಾಮಾನ್ಯ. 65 ಡಿಗ್ರಿ ಉತ್ತರ ಅಕ್ಷಾಂಶ ದಕ್ಷಿಣಕ್ಕೆ ತೀರ ವಿರಳವಾಗಿ ಕಂಡುಬರುತ್ತದೆ. ಇತರ ಬಗೆಯ ತಿಮಿಂಗಲಗಳಂತೆ ಇದು ಕೂಡ 15–20 ಪ್ರಾಣಿಗಳ ಗುಂಪುಗಳಲ್ಲಿ ಜೀವಿಸುತ್ತದೆ. ಬಿಳಿಯ ತಿಮಿಂಗಿಲ ಅಥವಾ ಬೆಲುಗ ಮತ್ತು ನಾರ್ವಾಲ್‌ಗಳೆರಡನ್ನು ಡೆಲ್ಫಿನಟೆರಿನೆ ಎಂಬ ಉಪಕುಟುಂಬದಲ್ಲಿ ಸೇರಿಸಲಾಗಿದೆ. ಪ್ರಾಯಶಃ ಬೆಲುಗ ಹಾಗೂ ನಾರ್ವಾಲ್‌ಗಳು ಇತರ ಕಡಲಹಂದಿಗಳಿಗಿಂತ ಹೆಚ್ಚು ಆದಿಮವಾಗಿ ವಿಕಾಸಗೊಂಡಂತೆ ಕಾಣುತ್ತವೆ. ಇವುಗಳ ಕಂಠದ ಕಶೇರುಮಣಿಗಳು ಬಿಡಿಬಿಡಿಯಾಗಿರುವುದೇ ಹೀಗೆ ಹೇಳಲು ಕಾರಣ. ಉಳಿದ ತಿಮಿಂಗಿಲಗಳಲ್ಲಾದರೋ ಅವುಗಳ ಕಂಠದ ಕಶೇರುಮಣಿಗಳು ಒಟ್ಟಿಗೆ ಕೂಡಿ ಕೊಂಡಿವೆ.

ನಾರ್ವಾಲಿನ ಬಣ್ಣ ಬೆನ್ನುಭಾಗದಲ್ಲಿ ಬೂದು ಮತ್ತು ಉದರ ಭಾಗದಲ್ಲಿ ಬಿಳಿ. ಜೊತೆಗೆ ದೇಹದ ಮೇಲೆ ಅಲ್ಲಲ್ಲಿ ಕಪ್ಪು ಚುಕ್ಕೆಗಳಿವೆ. ಚಿಕ್ಕವಯಸ್ಸಿನ ನಾರ್ವಾಲ್‌ಗಳ ಬಣ್ಣ ಕಪ್ಪು. ತಲೆ ಮೋಟು, ಗುಂಡಗಿದೆ. ನಾಸಿಕದ್ವಾರಗಳು ಮೂತಿಯ ಊರ್ಧ್ವ ಭಾಗದಲ್ಲಿ ಸ್ಥಿತವಾಗಿವೆ. ಕಣ್ಣುಗಳು ಚೆನ್ನಾಗಿ ರೂಪು ಗೊಂಡಿವೆ. ಬಾಹ್ಯ ಕಿವಿಗಳಿಲ್ಲ. ಕಿವಿಯ ಹೊರ ದ್ವಾರಗಳು ಬಲು ಚಿಕ್ಕವು. ಬೆನ್ನುಭಾಗದ ಈಜುರೆಕ್ಕೆ ಇಲ್ಲ, ಅದರ ಬದಲು ಒಂದು ಏಣು ಉಂಟು. ನಾರ್ವಾಲಿಗೆ ಹಿಂಗಾಲುಗಳಿಲ್ಲ. ಮುಂಗಾಲುಗಳು ಚಿಕ್ಕವು; ಚಪ್ಪಟೆ ಯಾಗಿವೆ. ಎರಡು ಮತ್ತು ಮೂರನೆಯ ಬೆರಳುಗಳು ಚೆನ್ನಾಗಿ ಬೆಳೆದಿವೆ. ಉಳಿದುವು ಮೊಟಕಾಗಿವೆ.

ದಂತ ಅಥವಾ ಕೋರೆ ನಾರ್ವಾಲಿನ ಅತ್ಯಂತ ಪ್ರಧಾನ ಲಕ್ಷಣ. ಗಂಡು ನಾರ್ವಾಲಿನಲ್ಲಿ ಮೇಲ್ದವಡೆಯ ಎಡಭಾಗದಿಂದ ಮುಂದಕ್ಕೆ ಚಾಚಿಕೊಂಡಂತೆ ಒಂದು ಕೋರೆ ಇದೆ. ಅದರ ಜೊತೆಯ ಬಲಭಾಗದ ಮೇಲ್ದವಡೆಯ ಕೋರೆ ಮಾತ್ರ ವಸಡಿನಲ್ಲಿಯೇ ಅಡಗಿರುತ್ತದೆ. ಎಡಗಡೆಯ ಕೋರೆ ಸಾಮಾನ್ಯವಾಗಿ ಪ್ರಾಣಿಯಷ್ಟೆ ಉದ್ದವಿದ್ದು ಸ್ವಲ್ಪ ಮಟ್ಟಿಗೆ ಚಪ್ಪಟೆಯಾದ ಹಾಗೂ ಮೊನಚಾದ ಉರುಳೆಯಂತಿದೆ. ಇದರ ಮಧ್ಯಭಾಗ ಟೊಳ್ಳು. ಇದರ ಹೊರಮೈಮೇಲೆ ಯಾವುದೇ ರೀತಿಯ ಎನಾಮಲ್ ಲೇಪವಿಲ್ಲ. ಕೋರೆಯ ಮೇಲ್ಮೈ ಹಳ್ಳ ಹಾಗೂ ಏಣುಗಳಿಂದ ಸುರುಳಿಗೊಂಡಿದೆ. ಈ ಸುರುಳಿಗಳು ಎಡಚ ಮಾದರಿಯವು (ಸಿನಿಸ್ಟ್ರಲ್). ಅಪರೂಪಕ್ಕೆ ಎಡ ಹಾಗೂ ಬಲಕೋರೆಗಳೆರಡೂ ಬೆಳೆದಿರುವುದುಂಟು. ಇದಕ್ಕೆ ದ್ವಿದಂತ (ಬೈಡೆಂಟಲ್) ಸ್ಥಿತಿ ಎಂದು ಹೆಸರು. ಹೆಣ್ಣು ನಾರ್ವಾಲಿನಲ್ಲಿ ಕೋರೆಗಳಿಲ್ಲ.

ಬಲು ವಿರಳವಾಗಿ ಒಂದೊಂದು ಕೋರೆ ಬೆಳೆದಿರುವ ವರದಿಯುಂಟು. ಪ್ರಾಯಶಃ ಲೈಂಗಿಕ ಹಾರ್ಮೋನುಗಳ ಸ್ರವಿಸುವಿಕೆಯಲ್ಲಿನ ಅಸಮತೆ ಇದಕ್ಕೆ ಕಾರಣವಿರಬಹುದು.

ನಾರ್ವಾಲಿಗೆ ಕೋರೆ ಯಾವ ತೆರನಾಗಿ ಉಪಯುಕ್ತ ಎಂಬುದು ಖಚಿತವಾಗಿ ಗೊತ್ತಿಲ್ಲ. ಹಿಮವನ್ನು ಪುಡಿ ಮಾಡಲು ಆಹಾರ ಜೀವಿಯನ್ನು ಕತ್ತರಿಸಲು ಅಥವಾ ಶತ್ರುವಿನೊಡನೆ ಹೋರಾಡಲು ಇದು ನೆರವಾಗುತ್ತದೆ ಎಂಬ ಅಭಿಪ್ರಾಯ ಇದೆ. ಆದರೆ ಇದಕ್ಕೆ ಯಾವ ಆಧಾರವೂ ಇಲ್ಲ. ಕತ್ತಿ ಮೀನುಗಳಂತೆ ಇವು ಹಡಗಿನ ಮೇಲೆರಗಿ ಅದರ ತಳವನ್ನು ಸೀಳಲು ಕೋರೆಯನ್ನು ಬಳಸುವುದೂ ಇಲ್ಲ. ಕೋರೆ ಶ್ರೇಷ್ಠ ದರ್ಜೆಯದು. ಆದರೂ ಮಧ್ಯೆ ಟೊಳ್ಳಾಗಿರುವುದರಿಂದ ಹೆಚ್ಚಿನ ಉಪಯೋಗಕ್ಕೆ ಬರದೆ ಚಿಕ್ಕಗಾತ್ರದ ವಸ್ತುಗಳ ತಯಾರಿಕೆಗೆ ಮಾತ್ರ ಉಪಯುಕ್ತವೆನಿಸಿದೆ. ಇಡೀ ದಂತವನ್ನು ಅಲಂಕಾರಿಕ ಸಾಧನವನ್ನಾಗಿ ಬಳಸುತ್ತಾರೆ.

ಧ್ರುವ ಕಡಲಿನ ಕಾಡ್ ಮೀನು, ಕ್ರಸ್ಟೇಸಿಯ ಹಾಗೂ ಗ್ರೀನ್‌ಲೆಂಡಿನ ಹ್ಯಾಲಿಬಟ್ ಮೀನು ನಾರ್ವಾಲ್‌ಗಳ ಮುಖ್ಯ ಆಹಾರ. ಬೇಸಿಗೆಯಲ್ಲಿ ಹಿಮ ಹಿಂದೆ ಸರಿದಂತೆ ನಾರ್ವಾಲ್‌ಗಳು ಉತ್ತರಕ್ಕೆ ವಲಸೆ ಹೋಗುತ್ತವೆ. ಮಾಗಿಯ ಕಾಲದಲ್ಲಿ ತಮ್ಮ ಮೊದಲಿನ ಸ್ಥಾನಕ್ಕೆ ಮರಳುವುವು. ಅನೇಕವೇಳೆ ಯೂರೋಪಿನ ಕಡಲ ತೀರದಿಂದ ದಕ್ಷಿಣದ ಕಡೆಗೆ ದಾರಿ ತಪ್ಪಿ ಹೋಗುವುದುಂಟು. ಹೀಗೆ ಮಾರ್ಗ ತಪ್ಪಿದ ನಾರ್ವಾಲ್‌ಗಳು ಇಂಗ್ಲೆಂಡಿನ ಥೇಮ್ಸ್ ಅಳಿವೆಯಲ್ಲೂ ಸಿಕ್ಕಿವೆ.

ಉತ್ತರ ಧ್ರುವದ ತ್ಯೂಲಿ ಹಾಗೂ ಗ್ರೀನ್‌ಲೆಂಡಿನ ವಾಯವ್ಯದ ಸುತ್ತಮುತ್ತಿನ ಪ್ರದೇಶಗಳಲ್ಲಿ ವಾಸಿಸುವ ಎಸ್ಕಿಮೋಗಳು ಇವನ್ನು ಚರ್ಮಕ್ಕಾಗಿ ಹಾಗೂ ನಾಯಿಗಳ ಆಹಾರಕ್ಕಾಗಿ ಬೇಟೆಯಾಡುತ್ತಾರೆ. ಹಿಂದೆ ಎಸ್ಕಿಮೋಗಳು ಎಣ್ಣೆ ಮತ್ತು ಆಹಾರಕ್ಕಾಗಿ ನಾರ್ವಾಲ್‌ಗಳನ್ನೇ ಆಶ್ರಯಿಸಿದ್ದರು. (ಬಿ.ಕೆ.ಜಿ.)

**ನಾಲಗೆ:** ರಸ ಅಥವಾ ರುಚಿಯ ಅನುಭವವನ್ನು ಒದಗಿಸುವ ಪಂಚೇಂದ್ರಿಯಗಳಲ್ಲೊಂದು ಅಂಗ (ಟಂಗ್). ಮಾತಾಡುವ, ಅಗಿಯುವ ಮತ್ತು ನುಂಗುವ ಕ್ರಿಯೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಇದರ ಮುಂಭಾಗ (2/3ರಷ್ಟು) ಬಾಯಲ್ಲೂ ಹಿಂಭಾಗ ಗಂಟಲಲ್ಲೂ ಉಂಟು. ಹಿಂದು ಮುಂದು, ಮೇಲೆ ಕೆಳಕ್ಕೆ ಮತ್ತು ಅಡ್ಡಲಾಗಿರುವ ಸ್ನಾಯುಗಳಿಂದ ಇದರ ಸ್ಥೂಲ ರಚನೆಯಾಗಿದೆ. ಕೆಳ ದವಡೆ ಮೂಳೆ, ತಾಲು ಮತ್ತು ಕಂಠದಲ್ಲಿರುವ ಹೈಯಾಯಿಡ್ ಮೂಳೆ ಇವುಗಳಿಗೆ ನಾಲಗೆಯ ಸ್ನಾಯುಗಳು ಅಂಟಿಕೊಂಡಿವೆ. ನಾಲಗೆಯ ಮುಂಭಾಗದ ಮೇಲೆ ಸಣ್ಣ ಗುಳ್ಳೆಗಳಿವೆ. ಮುಂಭಾಗದ ತಳ ನುಣ್ಣಗಿದ್ದು ಮಧ್ಯೆ ನಾಲಗೆ ಅತಿಯಾಗಿ ಹೊರಚಾಚಲಾಗದಂತೆ ತಡೆಯುವ ಒಂದು ಮಡಿಕೆ ಉಂಟು. ಈ ಮಡಿಕೆ ಕುರುಚಾಗಿದ್ದರೆ ನಾಲಗೆಯನ್ನು ಸರಿಯಾಗಿ ಹರಿದಾಡಿಸಲಾರದೆ ಕೆಲವು ಮಕ್ಕಳಲ್ಲಿ ಮಾತು ಕಲಿಯಲು ಕಷ್ಟವಾಗಬಹುದು. ಈ ನ್ಯೂನ್ಯತೆಗೆ ಬಂಧಿತ ಜಿಹ್ವೆ ಎಂದು ಹೆಸರು. ಅಲ್ಪ ಶಸ್ತ್ರಚಿಕಿತ್ಸೆಯಿಂದ ಇದನ್ನು ಗುಣಪಡಿಸಬಹುದು. ನಾಲಗೆಯ ಕೆಳಗಡೆ ಅಭಿಧಮನಿಗಳು ನೀಲಿಯಾಗಿ ಕಾಣುತ್ತವೆ. ಇದರ ಮೇಲೆ ಮತ್ತು ಕೆಳಗೆ ತಗ್ಗಾದ ಮಧ್ಯ ರೇಖೆ ಉಂಟು. ನಾಲಗೆಯ ಹಿಂಭಾಗದಲ್ಲಿ ಶ್ಲೇಷ್ಮ ಗ್ರಂಥಿಗಳೂ ಹೆಚ್ಚಾಗಿವೆ. ಅಲ್ಲದೆ ಸಣ್ಣ ಗಂಟುಗಳು ಎದ್ದು ಕಾಣುತ್ತವೆ. ಹಿಂಭಾಗಕ್ಕೂ ಮುಂಭಾಗಕ್ಕೂ ನಡುವೆ ಕೋಣ ಹಿಂದಕ್ಕಿರುವ, V ಆಕಾರದ ಸೀಳಿನಂತಿರುವ ಗೆರೆ ಇದೆ. ಇದರ ಮುಂದೆ ಸುಮಾರು ಹತ್ತು ದೊಡ್ಡ ಗುಳ್ಳೆಗಳು (1–2 ಮಿಮೀ) ಹಳ್ಳಗಳಲ್ಲಿ ಸ್ವಲ್ಪ ಮೇಲೆದ್ದು ಕಾಣುವಂತೆ ಹೂತಂತಿವೆ. ಈ ಹಳ್ಳಗಳಲ್ಲಿ ಸಣ್ಣ ಗ್ರಂಥಿಗಳು ರಸವನ್ನು ಸುರಿಸುತ್ತವೆ. ಘನಪದಾರ್ಥಗಳ ರುಚಿಯನ್ನು ಪತ್ತೆ ಮಾಡಲು ಈ ರಸ ಅಗತ್ಯ. ನಾಲಗೆಯ ಮುಂಭಾಗದ ಮೇಲಿನ ಗುಳ್ಳೆಗಳಲ್ಲಿ ಸಣ್ಣ ಬಿಳಿಯ ಮೊನಚಾದ ಗುಳ್ಳೆಗಳೆ ಹೆಚ್ಚು. ಇವುಗಳಿಗೆ ಸ್ಪರ್ಶಗ್ರಾಹಕ ಸಾಮರ್ಥ್ಯ ಉಂಟು. ಕೆಂಪಗೆ ರಾಗಿಯ ಕಾಳಿನಷ್ಟಿರುವ ಗುಳ್ಳೆಗಳಿಗೆ ಮತ್ತು ಸಾಲಿನಲ್ಲಿರುವ ದೊಡ್ಡ ಗುಳ್ಳೆಗಳಿಗೆ ಸಹ ರುಚಿಗ್ರಹಣ ಸಾಮರ್ಥ್ಯವಿದೆ. ರುಚಿಯ ನರತಂತುಗಳ ಕೊನೆಗಳಿರುವ ಮೊಗ್ಗುಗಳು (ರಸನಾಂಕುರ) ಈ ಗುಳ್ಳೆಗಳಲ್ಲಿ ಅಡಗಿರುವುದನ್ನು ಸೂಕ್ಷ್ಮದರ್ಶಕದಲ್ಲಿ ನೋಡಬಹುದು.

ನಾಲಗೆಗೆ ಎಂಟು ನರಗಳ ಪೂರೈಕೆಯುಂಟು. ಇವುಗಳ ಪೈಕಿ ಎರಡು ಸೂಕ್ಷ್ಮ ಸ್ಪರ್ಶಕ್ಕೂ ನಾಲ್ಕು ರುಚಿಗೂ ಎರಡು ಸ್ನಾಯುಗಳ ಯುಕ್ತಿವಂತ ಚಲನವಲನಕ್ಕೂ ಸಂಬಂಧಪಟ್ಟಿವೆ. ನಾಲಗೆಯ ತುದಿಯಲ್ಲಿ ಸಿಹಿ ಮತ್ತು ಉಪ್ಪು, ಅಂಚುಗಳಲ್ಲಿ ಹುಳಿ ಮತ್ತು ಹಿಂಭಾಗದಲ್ಲಿ ಕಹಿ ಹೆಚ್ಚು ವೇದ್ಯವಾಗುತ್ತವೆ; ಮಧ್ಯೆ ಷಡ್ರಸಗಳ ಅರಿವು ಹೆಚ್ಚಿಲ್ಲ. ರಸನಕ್ರಿಯೆ ಘ್ರಾಣಶಕ್ತಿಯನ್ನು ಸ್ವಲ್ಪಮಟ್ಟಿಗೆ ಅವಲಂಬಿಸಿದೆ. ಉದಾಹರಣೆಗೆ ನೆಗಡಿಯಿಂದ ಮೂಗು ಕಟ್ಟಿರುವಾಗ ಕಾಫಿಯ ರುಚಿ ಕಡಿಮೆ ಆಗುತ್ತದೆ. ರಸನ ಸಾಮರ್ಥ್ಯ ಎಲ್ಲರಲ್ಲೂ ಒಂದೇ ರೀತಿಯಾಗಿಲ್ಲ. ಕೆಲವರಲ್ಲಿ ಕಡಿಮೆ ಇರಬಹುದು. ಅಪರೂಪವಾಗಿ ಪೂರ್ಣ ಶೂನ್ಯತೆ ಇರುವುದುಂಟು. ಜ್ವರ ಮುಂತಾದ ನಂಜು ರೋಗಗಳಲ್ಲಿ ನಾಲಗೆಯ ಮೇಲೆ ಬೆಳ್ಳಗೆ ಪೊರೆ ಕೂತಂತಿರುತ್ತದೆ. ಇದು ಇರುವ ತನಕ ರುಚಿ ಮತ್ತು ಹಸಿವು ಕಡಿಮೆ ಆಗಿರುತ್ತದೆ. ನಾಲಗೆ ಅತಿ ಕೆಂಪಾಗಿದ್ದರೆ ಜೀವಸತ್ತ್ವಗಳ ಕೊರತೆ ಇರಬಹುದು. ನಾಲಗೆಯಿಂದ ವೈದ್ಯನಿಗೆ ರೋಗದ ಸ್ವಭಾವ ತಿಳಿಯಬಹುದು. ***

**ನಿದ್ರೆ:** ಮೈಮರೆತ ಸ್ಥಿತಿಯಿಂದ ಸುಲಭವಾಗಿ ಎಚ್ಚರಗೊಳಿಸಬಹುದಾದಂಥ ದೈಹಿಕ ಹಾಗೂ ಮಾನಸಿಕ ಅವಸ್ಥೆ; ಕೆಲವು ಗಂಟೆಗಳ ಕಾಲ ಪೂರ್ಣ ವಿಶ್ರಾಂತಿ ಪಡೆಯುವ ಪರಿಸ್ಥಿತಿ (ಸ್ಲೀಪ್). ಇದು ಅಭ್ಯಾಸಬಲದಿಂದ ಉಂಟಾಗುವ ಪ್ರತಿಕ್ರಿಯೆ. ಎಲ್ಲ ಜೀವಿಗಳಿಗೂ ಅವಶ್ಯ. ದಿನದ ಹಲವಾರು ಚಟುವಟಿಕೆಗಳಿಂದ ಬಳಲಿದ ಅಂಗೋಪಾಂಗಗಳಿಗೆ ವಿಶ್ರಾಂತಿಯನ್ನು ಒದಗಿಸಿ ಕೊಡುತ್ತದೆ. ವಿವಿಧ ಪ್ರಾಣಿ ಪಕ್ಷಿಗಳ ನಿದ್ರಾವಧಿಗಳಲ್ಲಿ ವ್ಯತ್ಯಾಸ ಇರಬಹುದು. ಕೆಲವು ಪ್ರಾಣಿಗಳು ದಿವಸವೊಂದರಲ್ಲಿ ಹಲವು ಬಾರಿ ನಿದ್ರೆ ಮಾಡಿದರೆ ಇನ್ನು ಕೆಲವು ನಿರ್ದಿಷ್ಟವಾಗಿ ದಿವಸದ ಅದೇ ಹೊತ್ತಿನಲ್ಲಿ ಸುಮಾರು ಅಷ್ಟೇ ಕಾಲ ನಿದ್ರೆ ಮಾಡುತ್ತವೆ. ಮಾನವ ಹಾಗೂ ಇತರ ದಿನಚರಿಗಳು ರಾತ್ರಿ ವೇಳೆ ನಿದ್ರೆ ಮಾಡುವುದೇ ರೂಢಿ. ಕೆಲವು ಸಂದರ್ಭಗಳಲ್ಲಿ ಹಗಲು ಹೊತ್ತೂ ಅಲ್ಪ ಸ್ವಲ್ಪ ಕೊಸರು ನಿದ್ರೆ ಮಾಡುವುದುಂಟು. ನಿಶಾಚರ ಪ್ರಾಣಿಗಳು ಹಗಲಿನಲ್ಲಿ ನಿದ್ರಿಸುವುದೇ ಹೆಚ್ಚು. ರಾತ್ರಿ ವೇಳೆ ಕೆಲಸ ಮಾಡುವ ಕಾರ್ಮಿಕರು ಮತ್ತು ಇತರರು ಹಗಲು ಹೊತ್ತು ನಿದ್ರೆ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿರುತ್ತಾರೆ.

ನಿದ್ರೆ ಮಾಡುವಾಗ ಹಲವು ಪ್ರಾಣಿಗಳಲ್ಲಿ ಹಲವು ಭಂಗಿಗಳಿರುತ್ತವೆ. ಪಕ್ಷಿ, ಕೋತಿ ಮುಂತಾದ ಪ್ರಾಣಿಗಳು ಗಿಡಗಳ ಮೇಲೆ ಕುಳಿತುಕೊಂಡು, ಬಾವಲಿಗಳು ಮರದ ಕೊಂಬೆಗಳಿಗೆ ತಲೆಕೆಳಗಾಗಿ ಜೋತುಕೊಂಡು, ಆನೆ, ಕುದುರೆ, ಝೀಬ್ರಾ ಮುಂತಾದ ಪ್ರಾಣಿಗಳು ನಿಂತುಕೊಂಡು, ಹಸು, ಎಮ್ಮೆ, ಕುರಿ, ಮೇಕೆ ಮುಂತಾದ ಪ್ರಾಣಿಗಳು ಹೊಟ್ಟೆಯ ಮೇಲೆ ಮಲಗಿಕೊಂಡು ನಿದ್ರಿಸುತ್ತವೆ. ಮನುಷ್ಯ ಬೆನ್ನಿನ ಮೇಲಾಗಲೀ ಹೊಟ್ಟೆಯ ಮೇಲಾಗಲೀ ಇಲ್ಲವೇ ಒಂದು ಪಕ್ಕಕ್ಕೆ (ಎಡ ಅಥವಾ ಬಲ) ಹೊರಳಿಕೊಂಡಾಗಲಿ ಮಲಗುತ್ತಾನೆ. ಹಲವು ವೇಳೆ ಕೂತುಕೊಂಡು ಇಲ್ಲವೇ ಕುರ್ಚಿಯಲ್ಲಿ ಒರಗಿಕೊಂಡು ನಿದ್ರೆ ಮಾಡುವುದೂ ಉಂಟು.

ನವಜಾತ ಶಿಶುಗಳಿಗೆ ಸಾಮಾನ್ಯವಾಗಿ 18–22 ಗಂಟೆ ಅವಧಿಯ ನಿದ್ರೆ ಅವಶ್ಯವಾದರೆ 70 ವರ್ಷ ವಯಸ್ಸಾದವರಲ್ಲಿ ಕೇವಲ 4–5 ಗಂಟೆ ಅವಧಿಯ ನಿದ್ರೆ ಸಾಕಾಗುತ್ತದೆ. ವಯಸ್ಸಾದಂತೆಲ್ಲ ನಿದ್ರೆಯ ಅವಧಿ ಕಡಿಮೆ ಆಗುತ್ತ ಹೋಗುತ್ತದೆ. ನಡುವಯಸ್ಕರಿಗೆ 6–8 ಗಂಟೆಗಳ ನಿದ್ರೆ ಅವಶ್ಯಕ. ನಿದ್ರೆ ಬರುವ ಮೊದಲು ಆಕಳಿಕೆ ಬರುತ್ತದೆ ಮತ್ತು ಪಂಚೇಂದ್ರಿಯಗಳ ಪ್ರತಿಕ್ರಿಯೆಗಳು ಕಡಿಮೆ ಆಗುತ್ತ ಹೋಗುತ್ತವೆ. ಸದ್ದು, ಬೆಳಕು, ವಾಸನೆ, ಸ್ಪರ್ಶ, ರುಚಿ ಮುಂತಾದುವನ್ನು ಕುರಿತ ಸಂವೇದನೆ ಕುಗ್ಗುತ್ತ ಹೋಗುತ್ತದೆ. ಕಣ್ಣನ್ನು ಮುಚ್ಚಿಕೊಳ್ಳುವುದರಿಂದ ಬೆಳಕಿನ ಪ್ರಚೋದನೆಯನ್ನು ಐಚ್ಛಿಕವಾಗಿ ತಪ್ಪಿಸಿಕೊಳ್ಳಲಾಗುತ್ತದೆ. ಮೊತ್ತಮೊದಲು ಕುಗ್ಗುವಂಥವೆಂದರೆ ವಾಸನೆ ಮತ್ತು ರುಚಿ ಸಂವೇದನೆಗಳು. ಕಟ್ಟಕಡೆಯದಾಗಿ ಶಬ್ದಗ್ರಹಣ ಸಾಮರ್ಥ್ಯ ಕುಗ್ಗುತ್ತದೆ.

ಎಚ್ಚರವಾಗಿರುವಾಗ ಮಿದುಳಿನ ಮಧ್ಯದಲ್ಲಿ ತಿರುಳಿನಂತೆ ಅಡಗಿರುವ ಜಾಲಂದ್ರ ರಚನೆ( ರೆಟಿಕ್ಯುಲಾರ್ ಫಾರ್ಮೇಶನ್) ತನ್ನ ನಿರಂತರ ಚಟುವಟಿಕೆಯಿಂದ ಮಹಾ ಮಿದುಳನ್ನು (ಸೆರಿಬ್ರಲ್ ಕಾರ್ಟೆಕ್ಸ್) ಉದ್ರೇಕಿಸುತ್ತ ನಿದ್ರೆ ಹತ್ತುವುದನ್ನು ವಿರೋಧಿಸುತ್ತದೆ. ಆದರೆ ನಿದ್ರೆ ಹತ್ತುವಾಗ ಈ ಉದ್ರೇಕ ಸಾಮರ್ಥ್ಯ ಕಡಿಮೆಯಾಗಿ ಅದು ಮಿದುಳಿನ ಮೇಲೆ ತನ್ನ ಪ್ರಭಾವವನ್ನು ಕಡಿಮೆ ಮಾಡುವುದರಿಂದ ಎಚ್ಚರದಿಂದಿರಲು ಸಾಧ್ಯವಾಗದೆ ಮನುಷ್ಯ ನಿದ್ರೆ ಹೋಗುತ್ತಾನೆ. ಆದ್ದರಿಂದಲೇ ಮನುಷ್ಯ ನಿದ್ರೆ ಹೋಗಬೇಕಾದರೆ ಬೆಳಕು ಕಡಿಮೆ ಇರುವ ಜಾಗ, ನಿಶ್ಶಬ್ದ ಪರಿಸರ, ಮೆತ್ತಗೆ ಮತ್ತು ಬೆಚ್ಚಗಿರುವ ಹಾಸಿಗೆ ಇವನ್ನು ಬಯಸುತ್ತಾನೆ. ಆದರೆ ಇಲ್ಲೆಲ್ಲ ಅಭ್ಯಾಸಬಲವೇ ಪ್ರಧಾನ. ಏನೂ ಇಲ್ಲದೆ ಸುಖನಿದ್ರೆ ಮಾಡುವವರೂ ಇದ್ದಾರೆ. ಎಲ್ಲವೂ ಇದ್ದು ನಿದ್ರೆ ಬಾರದವರೂ ಇದ್ದಾರೆ. ಇಲ್ಲೆಲ್ಲ ಜಾಲಂದ್ರ ರಚನೆಗೆ ಮಿದುಳಿನ ಮೇಲಿರುವ ಹತೋಟಿಯೇ ಇದರ ಕಾರಣ. ಮನಸ್ಸಿನ ಚಿಂತೆ, ಆತಂಕ, ದುಗುಡ ಇವು ಜಾಲಂದ್ರ ರಚನೆಯನ್ನು ಕೆದಕಿದಂತಾಗಿ ಮಿದುಳು ಸದಾ ಉದ್ರಿಕ್ತವಾಗಿರುವುದರಿಂದ ವ್ಯಕ್ತಿ ಎಚ್ಚರವಾಗಿಯೇ ಇರುವನು. ಅತಿಬೆಳಕು, ತೀವ್ರ ಶಬ್ದ, ಮೈ, ಕೈಕಾಲುಗಳ ನಿರಂತರ ಚಲನೆ ಇವುಗಳಿಂದಲೂ ಇದೇ ರೀತಿ ನಿದ್ರೆ ಬಾರದೆ ಹೋಗುತ್ತದೆ. ಆದರೆ ಇವೆಲ್ಲಕ್ಕೂ ಮಿತಿ ಉಂಟು. ಈ ಮಿತಿ ಮೀರಿದಾಗ ನಿದ್ರೆ ಅನಿವಾರ್ಯ.

ನಿದ್ರೆ ಬಂದ ಮೇಲೆ ಪುನಃ ಎಚ್ಚರವಾಗುವ ತನಕವೂ ನಿದ್ರಾವಸ್ಥೆ ಒಂದೇ ರೀತಿ ಇರುವುದಿಲ್ಲ. ವ್ಯಕ್ತಿಯ ನಿದ್ರಾವಸ್ಥೆಯಲ್ಲಿ ಹಲವಾರು ಹಂತಗಳಿವೆ. ನಿದ್ರೆ ಆರಂಭವಾಗಿ ಸುಮಾರು ಎರಡು ಗಂಟೆಗಳ ತನಕ ಗಾಢವಾಗಿದ್ದು ಮುಂದೆ ಅದರ ತೀವ್ರತೆ ತಗ್ಗುತ್ತದೆ. ಮುಂದಿನ ಹಂತದಲ್ಲಿ ಪುನಃ ಎರಡನೆಯ ಆವರ್ತಿ ಗಾಢ ನಿದ್ರೆ ಪ್ರಾರಂಭವಾಗಿ

ತಿಳಿಗೊಳ್ಳುವುದು. ಹೀಗೆ ತಿಳಿಗೊಂಡದ್ದು ವ್ಯಕ್ತಿಯ ಅರಿವಿಗೆ ಹತ್ತದೆ ನಿದ್ರಾವಸ್ಥೆ ಮುಂದುವರಿದಂತೆ ಅನುಭವಕ್ಕೆ ಬರುವುದೇ ರೂಢಿ. ಇಂಥ ತಿಳಿನಿದ್ರೆಗೆ ವಿರೋಧಾಭಾಸದ ನಿದ್ರೆ ಎಂದು ಹೆಸರು. ಈ ನಿದ್ರೆಯ ವೇಳೆ ಮನುಷ್ಯ ಹಲವಾರು ಸಲ ಹೊರಳಾಡಿರುತ್ತಾನೆ. ಕೈಕಾಲುಗಳನ್ನೂ ಆಡಿಸಿರುತ್ತಾನೆ. ನಿದ್ರಾವಸ್ಥೆಯಲ್ಲಿ ಮಾಂಸಖಂಡಗಳು ಸಡಿಲಗೊಂಡು ಪ್ರಚೋದನೆಗಳಿಗೆ ಪ್ರತಿಕ್ರಿಯೆಗಳು ಕುಗ್ಗಿದರೂ ನೋವಿನ ಸಂವೇದನೆಗೆ ಮಾತ್ರ ಪ್ರತಿಕ್ರಿಯೆ ಕುಗ್ಗಿರುವುದಿಲ್ಲ. ನೋವಿನಿಂದ ಪ್ರಚೋದಿಸಿದಾಗಲೂ ಎಚ್ಚರಗೊಳ್ಳದಿದ್ದರೆ ಅದು ನಿದ್ರೆ ಅಲ್ಲ. ಎಚ್ಚರಗೆಟ್ಟ ಸ್ಥಿತಿ ಎಂದು ಭಾವಿಸಬೇಕು. ನಿದ್ರಿಸುತ್ತಿರುವಾಗ ಎಷ್ಟೋ ವೇಳೆ ಮನುಷ್ಯ ಮಾತಾಡುವುದೂ ಉಂಟು. ಇಂಥ ಸಂದರ್ಭಗಳಲ್ಲಿ ಆತ ಕನಸು ಕಾಣುತ್ತಿರುವುದು ಸಾಮಾನ್ಯ. ಇದು ವಿರೋಧಾಭಾಸದ ನಿದ್ರೆಯ ವೇಳೆಯಲ್ಲಿ ಸರ್ವೇ ಸಾಮಾನ್ಯವಾದುದು. ಆಗ ನಿದ್ರೆ ಹೋಗುತ್ತಿರುವವನ ಕಣ್ಣಾಲಿಗಳು ವೇಗವಾಗಿ ಪಕ್ಕದಿಂದ ಪಕ್ಕಕ್ಕೆ ವ್ಯತ್ಯೋಪಾದಿಯಲ್ಲಿ ಚಲಿಸುತ್ತಿರುವುವು. ಈ ತರಹ ನಿದ್ರೆಯನ್ನು ವೇಗವಾಗಿ ಕಣ್ಣಾಲಿಗಳು ಚಲಿಸುವ ನಿದ್ರೆ (ರ್‍ಯಾಪಿಡ್ ಐ ಮೂವ್‌ಮೆಂಟ್–ಆರ್‌ಇಎಮ್ ಸ್ಲೀಪ್) ಎನ್ನುತ್ತಾರೆ.

ನಿದ್ರೆಯ ವೇಳೆಯಲ್ಲಿ ದೇಹಚಟುವಟಿಕೆಗಳಲ್ಲಿ ಹಲವಾರು ವ್ಯತ್ಯಾಸಗಳು ತಲೆದೋರುವುವು. ಉಸಿರಾಟದ ಗತಿ ಮತ್ತು ಹೃದಯ ಬಡಿತದ ದರ ನಿಧಾನವಾಗುತ್ತವೆ. ರಕ್ತದ ಒತ್ತಡ ಕಡಿಮೆ ಆಗುವುದು. ಮೈ ಉಷ್ಣತೆ $0.5^0$ ಸೆ ಯಷ್ಟು ತಗ್ಗುತ್ತದೆ. ಪಂಚೇಂದ್ರಿಯಗಳ ಕಾರ್ಯಚಟುವಟಿಕೆ ಮಂದವಾಗುತ್ತದೆ. ಕಣ್ಣಿನ ಪಾಪೆ ಸಂಕೋಚಿಸುತ್ತದೆ. ಮಾಂಸಖಂಡಗಳ ಬಿಗಿತ ಕಡಿಮೆಯಾಗಿ ಪ್ರತಿಕ್ರಿಯೆಗಳೆಲ್ಲ ಮಂದವಾಗಿರುತ್ತವೆ. ಉಪಾಪಚಯದ ದರ ತಗ್ಗಿರುವುದು. ಜೀರ್ಣರಸ ಸ್ರಾವ ಕಡಿಮೆ. ಆದರೂ ಹೊಟ್ಟೆ ಮತ್ತು ಕರುಳಿನ ಚಲನೆ ತೀವ್ರವಾಗಿರುವುದು. ಮೂತ್ರಪಿಂಡಗಳಲ್ಲಿ ರಕ್ತಸಂಚಾರ ಕಡಿಮೆಯಾಗಿದ್ದರೂ ತಗ್ಗಿದ ಮೊತ್ತದಲ್ಲಿ ಅಧಿಕ ಸಾಂದ್ರತೆಯ ಮೂತ್ರ ಉತ್ಪತ್ತಿಯಾಗುತ್ತದೆ. ನರಕ್ರಿಯೆಗಳಿಗೆ ಸಂಬಂಧಪಟ್ಟ ಅಂತಃಸ್ರಾವಗಳಲ್ಲಿ ವ್ಯತ್ಯಾಸ ಉಂಟಾಗಿ ಅಸಿಟೈಲ್ ಕೋಲಿನ್ ಎಂಬ ರಾಸಾಯನಿಕ ವಸ್ತುವಿನ ಉತ್ಪತ್ತಿ ಹೆಚ್ಚಾಗುತ್ತದೆಂದು ನಂಬಲಾಗಿದೆ.

ನಿದ್ರೆ ಬರುವುದು ಹೇಗೆ ಎನ್ನುವುದು ಇನ್ನೂ ನಿಖರವಾಗಿ ತಿಳಿದಿಲ್ಲ. ಹಲವು ಪ್ರಾಯೋಗಿಕ ನಿದರ್ಶನ ಮತ್ತು ಸಂಶೋಧನೆಗಳಿಂದ ಸ್ವಲ್ಪಮಟ್ಟಿನ ತಿಳಿವಳಿಕೆ ಲಭಿಸಿದೆ. ಕೆಲಸ ಮಾಡಿ ದಣಿದು ಆಯಾಸಗೊಂಡಾಗ, ದೇಹದಲ್ಲಿ ಉತ್ಪತ್ತಿಯಾಗುವ ರಾಸಾಯನಿಕ ವಸ್ತುಗಳು, ಮಿದುಳಿನಲ್ಲಿ ರಕ್ತ ಚಲನೆ ಕಡಿಮೆಯಾಗಿ ಆಮ್ಲಜನಕದ ಕೊರತೆ ಉಂಟಾಗುವುದು (ಆಕಳಿಕೆ ಬರುವುದು ಇದರಿಂದಲೇ ಎಂದು ನಂಬಲಾಗಿದೆ) ಮುಂತಾದುವನ್ನು ಪ್ರಾಯೋಗಿಕ ಸಮರ್ಥನೆ ಇಲ್ಲದೇ ಅಲ್ಲಗಳೆಯಲಾಗಿದೆ. ಆದರೆ, ಇವು ನಿದ್ರಾಕಾರಕ ಸನ್ನಿವೇಶಗಳೆಂಬುದು ಸಾಮಾನ್ಯ ಅನುಭವ.

ಬ್ರೆಮರ್ ಎಂಬಾತ ಪ್ರಾಣಿಗಳ ಮೇಲೆ ಅನೇಕ ಪ್ರಯೋಗಗಳನ್ನು ಮಾಡಿ (1954) ಮಿದುಳು ಬಳ್ಳಿ ಮತ್ತು ಕಾಂಡದಲ್ಲಿರುವ (ಬ್ರೈನ್ ಸ್ಟೆಮ್) ಜಾಲಂದ್ರ ರಚನೆಗೂ ಮಹಾಮಸ್ತಿಷ್ಕಕ್ಕೂ ನಿಕಟ ಸಂಬಂಧವಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ. ಪಂಚೇಂದ್ರಿಯಗಳಿಂದಲೂ ದೇಹಭಾಗಗಳಿಂದಲೂ ಬರುವ ಸಂವೇದನೆಗಳಿಂದ ಜಾಲಂದ್ರ ರಚನೆಯು ಚೇತನಗೊಂಡು ಮಿದುಳನ್ನು ಅತೀವ ಚಟುವಟಿಕೆಯಲ್ಲಿಟ್ಟು ಎಚ್ಚರದಿಂದಿರುವ ಹಾಗೆ ಮಾಡುತ್ತದೆ. ಜಾಲಂದ್ರ ರಚನೆಗೆ ಬರುವ ಸಂವೇದನೆಗಳು ಕಡಿಮೆಯಾದಾಗ ಇದರ ಚೇತನ ಮಂದವಾಗಿ ಮಿದುಳನ್ನು ಚಟುವಟಿಕೆಯಿಂದ ಇಡಲು ಸಾಧ್ಯವಾಗದೆ ನಿದ್ರಾವಸ್ಥೆ ಉಂಟಾಗುತ್ತದೆ. ಪಂಚೇಂದ್ರಿಯಗಳು ಅವ್ಯಾಹತವಾಗಿ ಜಾಲಂದ್ರ ರಚನೆಗೆ ಸಂದೇಶಗಳನ್ನು ಕಳಿಸುತ್ತಲೇ ಇರುವುವು. ಇವು ಬಲು ಕಡಿಮೆಯಾದಾಗ ಅಥವಾ ತಟಸ್ಥವಾದಾಗ ನಿದ್ರಾರಂಭಕ್ಕೆ ಎಡೆ ಆಗುವುದು. ಎಂದೇ ಇದಕ್ಕೆ ಪಟುಕಾರಿ ಜಾಲಂದ್ರ ವ್ಯವಸ್ಥೆ ಎಂಬ ಹೆಸರಿದೆ. ಈ ವ್ಯವಸ್ಥೆಗೂ ಮಿದುಳಿನ ಇನ್ನಿತರ ಭಾಗಗಳಾದ ಥ್ಯಾಲಮಸ್, ಹೈಪೋಥ್ಯಾಲಮಸ್ ಮತ್ತು ರೈನೆನ್‌ಸೆಫಲಾನ್ ಎಂಬ ಮಿದುಳು ಭಾಗಕ್ಕೂ ನಿಕಟ ಸಂಬಂಧವುಂಟು. ಈ ಸ್ಥಳಗಳು ಮನೋದ್ವೇಗಗಳಿಗೆ ಸಂಬಂಧಿಸಿದುವು. ಆದ್ದರಿಂದಲೇ ಮನಸ್ಸಿನ ಚಿಂತೆ, ದುಗುಡ, ಆತಂಕ, ಹೆದರಿಕೆ, ನೋವು ಇತ್ಯಾದಿಗಳಿದ್ದಾಗ ನಿದ್ರೆ ಬರುವುದು ಕಷ್ಟ. ಈ ಮಾನಸಿಕ ಉದ್ವೇಗಗಳು ಜಾಲಂದ್ರ ವ್ಯವಸ್ಥೆಯನ್ನು ಸದಾ ಕೆದಕುತ್ತಲೇ ಇರುವುವು. ಇಂಥ ಸಂದರ್ಭಗಳಲ್ಲಿ ಮನುಷ್ಯ ನಿದ್ರಾಕಾರಿಗಳ ಆಶ್ರಯ ಪಡೆಯುವುದು ಸಹಜವಾಗಿದೆ. ಈ ಮಾತ್ರೆಗಳು ಮಾನಸಿಕ ಉದ್ರೇಕಗಳು ಅತಿ ಆಗದಂತೆ ತಡೆದು ಜಾಲಂದ್ರ ವ್ಯವಸ್ಥೆ ಶಾಂತವಾಗಿರುವಂತೆ ಮಾಡುತ್ತವೆ. ಕೆಲವು ಸಂದರ್ಭಗಳಲ್ಲಿ ಅತಿ ಆಯಾಸದಿಂದ ನಿದ್ರಾಸೂಚನೆಗಳು ಕಂಡುಬಂದರೆ, ಇನ್ನು ಕೆಲವು ಸಂದರ್ಭಗಳಲ್ಲಿ ಅದರಿಂದ ನಿದ್ರಾಭಂಗವೇ ಆದೀತು. ಇದಕ್ಕೆ ಕಾರಣ ಇಂಥಾದ್ದೇ ಎಂದು ನಿರ್ದಿಷ್ಟವಾಗಿ ಗೊತ್ತಾಗಿಲ್ಲ. ಬಹುಶಃ ಬಹಳವಾಗಿ ಬಳಲಿದ ಮಾಂಸಖಂಡಗಳಿಂದಲೂ ಕೀಲುಗಳಿಂದಲೂ ಬರುವ ಸಂವೇದನೆಗಳು ಜಾಲಂದ್ರ ವ್ಯವಸ್ಥೆಯನ್ನು ಕೆದಕುವುದರಿಂದ ನಿದ್ರಾಭಂಗವಾಗಬಹುದು. ಇಲ್ಲವೇ ಸ್ವಲ್ಪ ಬಳಲಿದ ಮಾಂಸಖಂಡಗಳು ಪೂರ್ಣವಾಗಿ ಸಡಿಲಗೊಂಡು ಅವುಗಳಿಂದ ಉದ್ಭವವಾಗಬಲ್ಲ ಸಂವೇದನೆಗಳು ತಗ್ಗಿ ಜಾಲಂದ್ರ ರಚನೆಯ ಪ್ರಚೋದನೆಯೂ ತಗ್ಗಿ, ನಿದ್ರೆ ಹತ್ತುವುದಕ್ಕೆ ಮಾರ್ಗ ಸುಗಮವಾಗಬಹುದು. ಹೆಸ್ ಎಂಬಾತ ವಿವಿಧ ಪ್ರಯೋಗಗಳನ್ನು ಮಾಡಿ (1954) ನಿದ್ರಾವಸ್ಥೆಗೆ ಕಾರಣಗಳನ್ನು ಶೋಧಿಸಲು ಯತ್ನಿಸಿದ. ಅವನ ಪ್ರಕಾರ ನಿದ್ರೆಯನ್ನು ನಿಶ್ಚೇತನ ಕ್ರಿಯೆ ಎಂದು ಕರೆಯುವುದು ವಿರೋಧಾಭಾಸ; ದೇಹದ ಎಲ್ಲ ಕಾರ್ಯಗಳೂ ಆಗ ಮಂದವಾಗಿರುವುದಿಲ್ಲ. ಮೂತ್ರಪಿಂಡಗಳು ಮತ್ತು ಕರುಳು ಚುರುಕಾಗಿಯೇ ಕೆಲಸ ಮಾಡುತ್ತವೆ. ಉಸಿರಾಟ ಮತ್ತು ರಕ್ತ ಪರಿಚಲನೆ ನಿಲ್ಲುವುದಿಲ್ಲ. ದೇಹದಲ್ಲಿ ಹಲವಾರು ಅನೈಚ್ಛಿಕ ಚಟುವಟಿಕೆಗಳು ನಡೆದೇ ಇರುತ್ತವೆ. ಯೋಚನೆ ಮಾಡುವ ಕಾರ್ಯವಾಗಲೀ ಐಚ್ಛಿಕ ಚಟುವಟಿಕೆಗಳಾಗಲೀ ಇರಬಹುದು. ಕನಸು ಕಾಣುವುದು, ಕನಸಿನಲ್ಲಿ ಮಾತನಾಡುವುದು, ನಿದ್ರೆಯಲ್ಲಿ ಹೊರಳುವುದು ಮುಂತಾದವು ನರಕೋಶಗಳ ಚಟುವಟಿಕೆ ಇಲ್ಲದೇ ಸಾಧ್ಯವೇ? ಹಾಗಾದರೆ, ಇತರ (ಬಹುಶಃ ಐಚ್ಛಿಕ) ಅಂಗಗಳಿಗೆ ಇಷ್ಟು ದೀರ್ಘ ಕಾಲದ ವಿಶ್ರಾಂತಿ ಏಕೆ ಬೇಕು? ಇದಕ್ಕೆ ಉತ್ತರ ಸಿಕ್ಕುವುದು ಕಷ್ಟ. ಹೆಸ್ ತನ್ನ ಪ್ರಯೋಗಗಳನ್ನು ಬೆಕ್ಕುಗಳ ಮೇಲೆ ಮಾಡಿದ. ಮಿದುಳಿನ ಡಯನ್‌ಸೆಫಲಾನ್ ಎಂಬ ಭಾಗದಲ್ಲಿ (ಥ್ಯಾಲಮಸ್ಸಿನ ನೆರೆಯಲ್ಲಿ) ನಿರ್ದಿಷ್ಟವಾದ ಜಾಗವನ್ನು ವಿದ್ಯುತ್ ಚೋದಕದಿಂದ ಉದ್ರೇಕಗೊಳಿಸಿದಾಗ ಬೆಕ್ಕು ನಿದ್ರಾವಸ್ಥೆ ಹೊಂದುವುದನ್ನು ತೋರಿಸಿದ. ಆ ಸಂದರ್ಭದಲ್ಲಿ ಬೆಕ್ಕನ್ನು ಯಾವುದೇ ತರಹದ ಪಂಚೇಂದ್ರಿಯದ ಉದ್ರೇಕವೂ ಎಚ್ಚರಗೊಳಿಸಲಿಲ್ಲ. ಆದರೆ ವಿದ್ಯುತ್ ಚೋದಕವನ್ನು ನಿಲ್ಲಿಸಿದಾಗ ಶಬ್ದ ಅಥವಾ ವಾಸನೆ ಬೆಕ್ಕನ್ನು ಎಚ್ಚರಗೊಳಿಸುತ್ತಿತ್ತು. ಈ ಪ್ರಯೋಗಗಳಿಂದ ಇವನು ಮಿದುಳಿನ ಡಯನ್‌ಸೆಫಲಾನ್ ಜಾಗದಲ್ಲಿ ಥ್ಯಾಲಮಸ್ಸಿನ ಹತ್ತಿರ ನಿದ್ರಾಕೇಂದ್ರ ಇದೆ ಎಂದು ತೋರಿಸಿಕೊಟ್ಟ. ಇವರಿಬ್ಬರ ಜೊತೆ ಮೆಗೌನ್ ಮತ್ತು ಮೊರೌಜಿ ಎಂಬುವರೂ ಪ್ರಯೋಗಗಳನ್ನು ಮಾಡಿ ಜಾಲಂದ್ರ ರಚನೆ ಒಂದಲ್ಲ ಒಂದು ರೀತಿಯಲ್ಲಿ ಮಿದುಳನ್ನು ಚೇತನಗೊಳಿಸುತ್ತಿರುತ್ತದೆ; ಇದು ತಟಸ್ಥವಾದಾಗ ನಿದ್ರಾವಸ್ಥೆ ಉಂಟಾಗುವುದು ಎಂದು ಒಪ್ಪಿಕೊಂಡರು.

ನಿದ್ರಾವಸ್ಥೆಯಲ್ಲಿರುವಾಗ ನರಕೋಶಗಳ ಚಟುವಟಿಕೆಗಳಲ್ಲಿ ಅನೇಕ ವ್ಯತ್ಯಾಸಗಳಾಗುತ್ತವೆ. ಇವನ್ನು ಎಲೆಕ್ಟ್ರೊಎನ್ಸೆಫಲೊಗ್ರಫಿಯ (ಇಇಜಿ) ಮೂಲಕ ಅರಿಯಬಹುದು. ಮನುಷ್ಯ ನಿದ್ರೆಯ ಯಾವ ಹಂತದಲ್ಲಿದ್ದಾನೆ ಎಂಬುದನ್ನೂ ಇಇಜಿಯಿಂದ ಗೊತ್ತುಮಾಡಬಹುದು. ಇದರಲ್ಲಿ ಕಂಡುಬರುವ ತರಂಗಗಳ ವಿನ್ಯಾಸ ನಿದ್ರೆಯ ಹಲವು ಹಂತಗಳಲ್ಲಿ ಬೇರೆ ಬೇರೆ ಆಗಿರುತ್ತದೆ. $\alpha$, $\beta$ ಮತ್ತು $\delta$ ತರಂಗಗಳೆಂದು ಇದನ್ನು ಕರೆಯುತ್ತಾರೆ. ವ್ಯಕ್ತಿ ಗಾಢನಿದ್ರೆಯಲ್ಲಿರುವಾಗ $\delta$ ತರಂಗಗಳು ಎದ್ದು ಕಾಣುವುವು. ಅದರ ಆವರ್ತಾಂಕ ಸೆಕೆಂಡಿಗೆ 4–6ವರೆಗೆ. ಕೆಲವು ವೇಳೆ ಇನ್ನೂ ಕಡಿಮೆಯಾಗಬಹುದು. ಎಚ್ಚರವಾಗಿರುವವರಲ್ಲಿ $\alpha, \beta$ ತರಂಗಗಳೇ ಪ್ರಧಾನ. ಮನುಷ್ಯ ಎಷ್ಟು ದಿವಸಗಳ ತನಕ ನಿದ್ರೆ ಮಾಡದೆ ಇರಬಲ್ಲ ಎಂಬುದರ ಬಗ್ಗೆ ಅನೇಕ ದಾಖಲೆಗಳಿವೆ. ಎಪ್ಪತ್ತೆರಡು ದಿವಸಗಳ ತನಕವೂ ನಿದ್ರೆ ಬಿಟ್ಟಿದ್ದ ನಿದರ್ಶನಗಳಿವೆ. ಆದರೆ ಸಾಮಾನ್ಯವಾಗಿ 48–72 ಗಂಟೆಗಳ ತನಕವೂ ನಿದ್ರೆ ಕೆಟ್ಟಾಗ ಆತನ ಪ್ರತಿಕ್ರಿಯೆಗಳಲ್ಲಿ ಸಾಕಷ್ಟು ವ್ಯತ್ಯಾಸ ಉಂಟಾಗುತ್ತದೆ. ಸ್ಮರಣ ಸಾಮರ್ಥ್ಯ ಕುಂದುತ್ತದೆ. ಲೆಕ್ಕ ಮಾಡುವುದು ಮತ್ತು ಸೂಕ್ಷ್ಮತರಹ ಪ್ರತಿಕ್ರಿಯೆಯ ಕಾರ್ಯಗಳಲ್ಲಿ ತೊಡಗುವುದು ಕಷ್ಟವಾಗುತ್ತದೆ. ಮಾಂಸಖಂಡಗಳ ಚಲನವಲನಗಳ ಮೇಲೆ ಹತೋಟಿ ಇರುವುದಿಲ್ಲ. ಮಾನಸಿಕ ಹೊಂದಾಣಿಕೆಯಲ್ಲಿ ತಪ್ಪು ತಲೆ ಹಾಕುವುದು. ಪಂಚೇಂದ್ರಿಯಗಳು ಸರಿಯಾಗಿ ಕೆಲಸ ಮಾಡವು; ವ್ಯಕ್ತಿ ಹೆಚ್ಚು ಮುಂಗೋಪಿಯಾಗುತ್ತಾನೆ. ದೇಹದ ಮೇಲೆ ಮಿದುಳಿಗಿರುವ ಹತೋಟಿ ತಪ್ಪಿ ಎಲ್ಲ ಕ್ರಿಯೆಗಳೂ ವ್ಯಕ್ತಿಗೆ ಮತ್ತು ಸಂಬಂಧಪಟ್ಟವರಿಗೆ ತೊಂದರೆಯಾಗುತ್ತದೆ.

ಮನೋವೈಜ್ಞಾನಿಕ ದೃಷ್ಟಿ: ಪ್ರತಿಯೊಬ್ಬನಿಗೂ ನಿದ್ರೆ ಹಾಗೂ ಎಚ್ಚರಸ್ಥಿತಿಗಳ ಪರಿಚಯವೇನೋ ಇದೆ. ಆದರೆ ನಿದ್ರೆಯ ಬಗ್ಗೆ ಖಚಿತ ಜ್ಞಾನ ಬಲು ಮಂದಿಗೆ ಇರದು. ನಿದ್ರೆ ಏಕೆ ಬರುತ್ತದೆ, ನಿದ್ರೆ ಹರಿದು ಹೇಗೆ ಎಚ್ಚರವಾಗುತ್ತದೆ, ನಿದ್ರೆಯ ಉದ್ದೇಶವೇನು ಎಂಬವು ಪರಿಣತರಿಗೆ ಸಹ ಇನ್ನೂ ಸರಿಯಾಗಿ ಅರ್ಥವಾಗಿಲ್ಲ. ಕಳೆದ ಹಲವಾರು ದಶಕಗಳಿಂದ ಈ ಬಗ್ಗೆ ತೀವ್ರ ವ್ಯಾಸಂಗ ಮುನ್ನಡೆಯುತ್ತಲೇ ಇದೆ. ಮಿದುಳಿನಲ್ಲಿ ಉದ್ಭವವಾಗುವ ಅತಿ ದುರ್ಬಲ ವಿದ್ಯುತ್‌ಸ್ಪಂದಗಳನ್ನು ಅಗಾಧವಾಗಿ ವೃದ್ಧಿಸಿ ಲೇಖಿಸಬಲ್ಲ ಜಟಿಲ ಸಲಕರಣೆಗಳ (ಇಇಜಿ) ಆವಿಷ್ಕಾರ ಈಚೆಗೆ ಆಗಿರುವುದರಿಂದ ಮಿದುಳಿನ ಕಾರ್ಯವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಾಗಿವೆ.

ಹುಟ್ಟಿದ ತರುಣದಲ್ಲಿ, ಶೈಶವದಲ್ಲಿ ಮತ್ತು ವಯಸ್ಕ ಸ್ಥಿತಿಯಲ್ಲಿ ನಿದ್ರೆಯ ನಮೂನೆಯನ್ನು ಪರಿಶೀಲಿಸಿ ರಾತ್ರಿ ಹೊತ್ತೇ ಏಕೆ ನಿದ್ರೆ ಮಾಡುತ್ತೇವೆ, ಇದು ಹುಟ್ಟು ಲಕ್ಷಣವೋ ಕಲಿತಗುಣವೋ ಎನ್ನುವ ವಿಚಾರಗಳನ್ನು ತಿಳಿಯಬಹುದು. ನವಜಾತ ಶಿಶು ದಿವಸದಲ್ಲಿ 24 ಗಂಟೆಗಳ ಪೈಕಿ 23 ಗಂಟೆಗಳ ಕಾಲ ನಿದ್ರಿಸುತ್ತದೆ. ಅದಕ್ಕೆ ಗಂಟೆ ಗಂಟೆಯೂ

ಎಚ್ಚರವಾಗಿ ಹಲವು ನಿಮಿಷಗಳಲ್ಲಿ ಪುನಃ ನಿದ್ರೆ ಹತ್ತುವಂತೆ ಕಾಣುತ್ತದೆ. ಬೆಳೆಯುತ್ತ ನಿದ್ರೆ ಕಡಿಮೆ ಆಗುವುದಲ್ಲದೆ ಗಂಟೆ ಗಂಟೆಯೂ ಎಚ್ಚರವಾಗುವ ಬದಲು ಹೆಚ್ಚು ಕಾಲ ನಿದ್ರೆ ಮಾಡುವ ರೂಢಿ ಕಂಡುಬರುತ್ತದೆ. ಕ್ರಮೇಣ ಸಾಮಾಜಿಕ ಹಾಗೂ ಭೌತಿಕ ಪ್ರಭಾವಗಳ ಪರಿಣಾಮವಾಗಿ ದಿವಸದ 24 ಗಂಟೆಗಳ ಪೈಕಿ ಹಗಲು ಹೊತ್ತು ಎಚ್ಚರವಾಗಿರುವಂತೆಯೂ ರಾತ್ರಿ ನಿದ್ರಿಸುತ್ತಿರುವಂತೆಯೂ ಅಭ್ಯಾಸವಾಗಿ ಈ ತಾಳಗತಿಗೆ ತಕ್ಕಂತ ಶರೀರ ಕ್ರಿಯಾವೈಶಿಷ್ಟ್ಯಗಳು ರೂಢಿಸುತ್ತವೆ. ರಾತ್ರಿ ನಿದ್ರೆ ಮಾಡುತ್ತಿರುವಾಗ ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಕ್ರಿಯೆಗಳ ದಕ್ಷತೆ ಕುಗ್ಗುತ್ತದೆ. ನಿಶ್ವಾಸೋಚ್ಛ್ವಾಸಗಳು ದೀರ್ಘವಾಗುತ್ತವೆ. ದೇಹೋಷ್ಣತೆ ತಗ್ಗುತ್ತದೆ. ಒಂದೆರಡು ದಿವಸ ಹಗಲು ನಿದ್ರಿಸುತ್ತಿದ್ದು ರಾತ್ರಿ ಚಟುವಟಿಕೆಗಳಲ್ಲಿ ನಿರತನಾಗಿದ್ದುದಾದರೆ ಮೇಲಿನ ಲಕ್ಷಣಗಳು ರಾತ್ರಿ ಹೊತ್ತೇ ಕಂಡುಬರುತ್ತವೆ. ಆದ್ದರಿಂದ ವಾರದಲ್ಲಿ ಒಂದೋ ಎರಡೋ ರಾತ್ರಿ ಸರದಿಯಂತೆ ಕೆಲಸ ಮಾಡಲು ಬರುವ ವ್ಯಕ್ತಿಗಳ ಕೆಲಸ ಅದಕ್ಷತೆಯಿಂದ ಕೂಡಿರುವುದು ಸಹಜ. ಆದರೆ ಬಹುಕಾಲಿಕವಾಗಿ ಹಗಲುನಿದ್ರೆ, ರಾತ್ರಿ ಚಟುವಟಿಕೆಗಳನ್ನೇ ರೂಢಿಸಿಕೊಂಡಿರುವವರಲ್ಲಿ ಮೇಲಿನ ಶರೀರ ಕ್ರಿಯಾವೈಶಿಷ್ಟ್ಯಗಳೂ ಹಗಲಿನಲ್ಲಿ (ಅಂದರೆ ಅವರ ನಿದ್ರಾಕಾಲದಲ್ಲಿ) ಕಂಡುಬರುವುದೇ ಹೊರತು ರಾತ್ರಿ ಅಲ್ಲ.

ವ್ಯಕ್ತಿ ನಿಜವಾಗಿ ನಿದ್ರಿಸುತ್ತಿದ್ದಾನೋ ಅಥವಾ ನಿದ್ರೆಯ ಸೋಗು ಹಾಕಿದ್ದಾನೋ ಎನ್ನುವುದನ್ನು ಇಇಜಿಯಿಂದ ಪತ್ತೆ ಮಾಡಬಹುದು. ಮಿದುಳಿನ ವಿದ್ಯುತ್ ಪರಿಸ್ಥಿತಿಯಲ್ಲಿ ಉಂಟಾಗುವ ಬದಲಾವಣೆಗಳನ್ನು ಇದರಿಂದ ದಾಖಲಿಸಿ ವಿಶದವಾಗಿ ಪರಿಶೀಲಿಸಬಹುದು. ವ್ಯಕ್ತಿ ಬದುಕಿರುವಷ್ಟು ಕಾಲವೂ ಮಿದುಳಿನಲ್ಲಿ ನಿರಂತರವಾಗಿ ಜೈವಿಕ ಚಟುವಟಿಕೆಗಳು ನಡೆಯುತ್ತಿರುವುವು. ನಿದ್ರಾಕಾಲದಲ್ಲಿ ಇವು ಕಡಿಮೆ. ಎಚ್ಚೆತ್ತಿರುವ ಕಾಲದಲ್ಲಿ ಹೆಚ್ಚು ಅಷ್ಟೆ. ಇವುಗಳ ಫಲವಾಗಿ ಮಿದುಳಲ್ಲಿಯ ವಿದ್ಯುತ್ ಪರಿಸ್ಥಿತಿಯಲ್ಲಿ ಬದಲಾವಣೆಗಳು ನಿರಂತರವಾಗಿ, ಆದರೆ ಚಟುವಟಿಕೆಯ ಮಟ್ಟಕ್ಕೆ ಅನುಸಾರವಾಗಿ ಕಂಡುಬರುತ್ತವೆ. ದೈನಂದಿನ ಕಾರ್ಯಕಲಾಪಗಳಲ್ಲಿ ತೊಡಗಿರುವಾಗ ಸೆಕೆಂಡಿಗೆ ಸುಮಾರು 15 ಸ್ಪಂದಗಳನ್ನು ತೋರುವ, ಹಗಲು ವಿಶ್ರಮಿಸುತ್ತ ಎಚ್ಚರವಾಗೇ ಇರುವಾಗ ಸುಮಾರು 10–12 ಸ್ಪಂದಗಳನ್ನು ತೋರುವ ಮತ್ತು ನಿದ್ರಿಸುತ್ತಿರುವಾಗ 5–10 ಸ್ಪಂದಗಳನ್ನು ತೋರುವ ವಿದ್ಯುತ್ ವ್ಯತ್ಯಾಸಗಳು ಉಂಟಾಗುವುವೆಂಬುದು ಇಇಜಿ ಯಿಂದ ವಿಶದವಾಗುವುವು. ಎಚ್ಚರಾದ ಸ್ಥಿತಿಯಲ್ಲಿರಲು ಮಿದುಳು ಕಾಂಡದ ತಿರುಳಿನಲ್ಲಿ (ಕೋರ್ ಆಫ್ ದಿ ಬ್ರೇಯ್ನ್ ಸ್ಟೆಮ್) ನಿರ್ದಿಷ್ಟ ಭಾಗವೊಂದು ಪ್ರಚೋದನೆಗೊಳ್ಳುತ್ತಲೇ ಇರಬೇಕಾದುದು ಅಗತ್ಯ ಎಂಬುದು ಈಗ ತಿಳಿದು ಬಂದಿದೆ. ಮಿದುಳಿನ ಈ ಭಾಗಕ್ಕೆ ನರಸಂಪರ್ಕ ತಪ್ಪಿಹೋದರೆ ವ್ಯಕ್ತಿಯ ಕಣ್ಣು, ಕಿವಿಗಳೂ ಅವನ್ನು ಮಹಾಮಸ್ತಿಷ್ಕಕ್ಕೆ ಸಂಪರ್ಕಿಸುವ ನರಗಳೂ ಮಾಮೂಲಾಗಿ ಕೆಲಸ ಮಾಡುತ್ತ ಅಗಾಧ ಮೊತ್ತದಲ್ಲಿ ದ್ಯುತಿ ಮತ್ತು ಶಬ್ದ ಸಂವೇದಗಳನ್ನು ಮಿದುಳಿಗೆ ಒಯ್ಯುತ್ತಿದ್ದರೂ ನಿದ್ರಾವಸ್ಥೆಯಲ್ಲಿರುವ ವ್ಯಕ್ತಿಯನ್ನು ಎಚ್ಚರಿಸುವುದು ಅಸಾಧ್ಯ. ಇದಕ್ಕೆ ವಿರುದ್ಧವಾಗಿ ಮಿದುಳುಕಾಂಡಕ್ಕೆ ನರಸಂಪರ್ಕವಿದ್ದು ಮಹಾಮಸ್ತಿಷ್ಕಕ್ಕೆ ನರಸಂಪರ್ಕ ತಪ್ಪಿಹೋಗಿದ್ದರೆ ಶಬ್ದ ಮಾಡಿದಾಗ ಪ್ರಾಣಿ (ಅಂದರೆ ಪ್ರಯೋಗಕ್ಕಾಗಿ ಬಳಸಿದ ಬೆಕ್ಕು, ನಾಯಿ ಇತ್ಯಾದಿ) ಎಚ್ಚೆತ್ತು ಓಡುತ್ತದೆ. ಆದರೆ ಅದಕ್ಕೆ ಎಲ್ಲಿ, ಹೇಗೆ ಓಡಿ ಹೋಗಬೇಕೆಂಬ ಅರ್ಥವತ್ತಾದ ತಪಶೀಲುಗಳು ತಿಳಿಯವು. ಮಿದುಳು ಕಾಂಡದ ತಿರುಳು ಬಲು ಒತ್ತಾದ ಜಾಲಂದ್ರದಂತಿರುವುದರಿಂದ ಅದಕ್ಕೆ ಜಾಲಂದ್ರ ರಚನೆಯ ತಿರುಳು (ರೆಟಿಕ್ಯುಲಾರ್ ಕೋರ್, ರೆಟಿಕ್ಯುಲಾರ್ ಫಾರ್ಮೇಶನ್) ಎಂದೇ ಹೆಸರು. ಮಾನವರಲ್ಲಿ ಹಾಗೂ ಪ್ರಾಣಿಗಳಲ್ಲಿ ಎಚ್ಚರ ಸ್ಥಿತಿಯ ಸ್ವಾಭಾವಿಕತೆಗೆ ಈ ಭಾಗದ ಚಟುವಟಿಕೆಯೇ ಕಾರಣ. ಪರಿಸರದ ಪರಿಸ್ಥಿತಿಯಲ್ಲಿ ಪ್ರತಿಕ್ರಿಯೆ ತೋರಬೇಕಾದಂಥ ಬದಲಾವಣೆ ಆದಲ್ಲಿ ಅದರಿಂದ ಉದ್ಭವಿಸಿದ ವಿವಿಧ ಸಂವೇದನೆಗಳು ಮಿದುಳಿನ ಕಾಂಡದ ಈ ಭಾಗವನ್ನು ಅಧಿಕವಾಗಿ ಪ್ರಚೋದಿಸುತ್ತವೆ. ಅದರ ಫಲವಾಗಿ ಇಇಜಿಯಲ್ಲಿ ಎಚ್ಚರಿಕೆ ಹಾಗೂ ಚಟುವಟಿಕೆ ಸ್ಥಿತಿಯನ್ನು ಸೂಚಿಸುವ ವೇಗದರದ ಸಣ್ಣ ಸ್ಪಂದಗಳು ಕಂಡುಬರುತ್ತವೆ. ಬದಲಾವಣೆ ಒಂದು ಅಗಣನೀಯ ಪರಿಸ್ಥಿತಿ ಆಗಿದ್ದರೆ ಮಿದುಳಿನ ಕಾಂಡ ಹೆಚ್ಚಾಗಿ ಪ್ರಚೋದಿತವಾಗದು. ಆದ್ದರಿಂದ ಇಇಜಿಯಲ್ಲಿ ಎಚ್ಚರಿಕೆ ಸೂಚಿಸುವ ಸ್ಪಂದಗಳು ಮಾತ್ರ ಕಂಡುಬರುತ್ತದೆ. ನಿದ್ರೆ ಲಘುವಾಗಿದೆಯೋ ಗಾಢವಾಗಿದೆಯೋ ಸ್ವಪ್ನಯುಕ್ತವೋ ಎನ್ನುವ ಮಾಹಿತಿಗಳೂ ಈ ಸ್ಪಂದಗಳಿಂದ ದೊರೆಯುತ್ತವೆ. ಸ್ವಪ್ನರಹಿತ ನಿದ್ರೆಯಲ್ಲಿ ಸ್ಪಂದಗಳು ಮಂದದರದವೂ ದೊಡ್ಡವೂ ಆಗಿದ್ದರೆ ಸ್ವಪ್ನರಹಿತ ನಿದ್ರೆಯಲ್ಲಿ ರಭಸದರವೂ ಚಿಕ್ಕವೂ (ಹೆಚ್ಚುಕಡಿಮೆ ಎಚ್ಚರದ ಚಟುವಟಿಕೆಯಲ್ಲಿರುವಂತೆ) ಆಗಿರುವುವು. ಇದೇ ಕಾಲದಲ್ಲಿ ಮುಚ್ಚಿದ ರೆಪ್ಪೆಯೊಳಗೇ ಇರುವ ಕಣ್ಣುಗುಡ್ಡೆ ಅತ್ತಿಂದಿತ್ತ ಬಲು ಬೇಗ ಬೇಗ ಚಲಿಸುವುದೂ ಕಂಡುಬರುತ್ತದೆ. ಯುಕ್ತ ಸಲಕರಣೆಗಳಿಂದ ಕಣ್ಣುಗುಡ್ಡೆಯ ಇಂಥ ಚಲನೆಗಳನ್ನು ಲೇಖಿಸಲೂಬಹುದು. ನಿದ್ರಿಸುತ್ತಿದ್ದರೂ ಕಣ್ಣುಗುಡ್ಡೆಗಳನ್ನು ಬೇಗಬೇಗನೆ ಚಲಿಸುತ್ತಿರುವ ಹಾಗೂ ಎಚ್ಚೆತ್ತ ಸ್ಥಿತಿಯಲ್ಲಿರುವಂಥ ಸ್ಪಂದಗಳನ್ನು ಇಇಜಿಯಲ್ಲಿ ಉಂಟುಮಾಡುತ್ತಿರುವ ಇಂಥ ನಿದ್ರಾಸ್ಥಿತಿಗೆ ವಿರೋಧಾಭಾಸ ನಿದ್ರೆ (ಪ್ಯಾರಡಾಕ್ಸಿಕಲ್ ಸ್ಲೀಪ್, ರ‍್ಯಾಪಿಡ್ ಐ ಮೂವ್‌ಮೆಂಟ್–ಆರ್ ಇಎಮ್ ಸ್ಲೀಪ್) ಎಂದು ಹೆಸರು. ಇಂಥ ನಿದ್ರೆಯಿಂದ ಬಲವಂತವಾಗಿ ಎಚ್ಚರಿಸಲ್ಪಟ್ಟವ ತಾನು ಕನಸು ಕಾಣುತ್ತಿದ್ದೆನೆಂದು ಸಾಮಾನ್ಯವಾಗಿ ಹೇಳುತ್ತಾನೆ. ನಾಯಿ, ಬೆಕ್ಕು ಮುಂತಾದ ಪ್ರಾಣಿಗಳಲ್ಲೂ ಇಂಥ ವಿರೋಧಾಭಾಸನಿದ್ರೆ ಇರುತ್ತದೆ. ನಿದ್ರೆ ಮಾಡುತ್ತಿರುವಂತೆಯೇ ಅವುಗಳ ಬಾಲ, ಮೀಸೆಗಳ ಚಲನೆ, ಮುಖ ಸ್ನಾಯುಗಳ ತುಡಿತ ಕಂಡುಬರುವುದರಿಂದ ಬಹುಶಃ ಅವೂ ಕನಸು ಕಾಣುತ್ತವೆಂದು ತೋರುತ್ತದೆ.

ಬಲಾತ್ಕಾರವಾಗಿ ಒಂದು ಪ್ರಾಣಿಗೆ ನಿದ್ರೆ ಬರುವಂತೆ ಮಾಡಬಹುದು. ರಷ್ಯದ ಪ್ರಸಿದ್ಧ ಶರೀರಕ್ರಿಯಾವಿಜ್ಞಾನಿ ಪಾವ್ಲಾವ್ ಎಂಬಾತ ಬೇಜಾರು ಬರಿಸುವಂಥ ಪ್ರಚೋದನೆಗಳನ್ನು ಇನ್ನೂ ಬೇಜಾರಾಗುವಂತೆ ಪದೇ ಪದೇ ಪ್ರಯೋಗಿಸಿ ನಾಯಿಗಳಲ್ಲಿ ನಿದ್ರೆ ಬರಿಸಬಹುದೆಂದು ತೋರಿಸಿದ. ಪದೇ ಪದೇ ಉದ್ಭವಿಸುವ ಒಂದೇ ರೀತಿಯ ಪ್ರಚೋದನೆ ಮಿದುಳುಕಾಂಡದಲ್ಲಿ ಮಿಕ್ಕ ಪ್ರಚೋದನೆಗಳಂತೆ ಪ್ರತಿಕ್ರಿಯೆಯನ್ನು ಪ್ರೇರಿಸುವುದಿಲ್ಲ. ಅದಕ್ಕೆ ಬದಲಾಗಿ ಮಿದುಳಿನಲ್ಲಿ ಈ ಪ್ರಚೋದನೆಗಳು ಬೇಜಾರು ಪ್ರತಿಕ್ರಿಯೆಯನ್ನು ಉಂಟುಮಾಡಿ ಅದರ ಕ್ರಿಯಾಮಟ್ಟವನ್ನು ತಗ್ಗಿಸುತ್ತವೆ. ಇವೆರಡು ಕಾರಣಗಳಿಂದ ಇಂಥ ಪ್ರಚೋದನೆಗಳು ನಿದ್ರೆ ಬರಿಸುವುವು. ಮಸ್ತಿಷ್ಕದಲ್ಲಿ ವ್ಯಾಪಕವಾಗಿ ಕ್ರಿಯಾಮಟ್ಟ ತಗ್ಗಿದ್ದರೆ ಈ ಮೇಲೆ ಹೇಳಿದಂತೆ ನಿದ್ರೆ ಬರುವುದು. ಅದಿಲ್ಲದೆ ಮಿದುಳಿನ ನಿರ್ದಿಷ್ಟ ಸ್ಥಳಗಳಲ್ಲಿ ಅಲ್ಲಲ್ಲಿ ಮಾತ್ರ ಕ್ರಿಯಾಮಟ್ಟ ತಗ್ಗಿದ್ದರೆ ಉನ್ಮಾದ ಸುಪ್ತಸ್ಥಿತಿ (ಹಿಪ್ನಾಟಿಕ್ ಸ್ಟೇಟ್) ಉಂಟಾಗುತ್ತದೆ ಎಂಬುದಾಗಿ ಪಾವ್ಲಾವ್ ವಿಶದೀಕರಿಸಿದ್ದಾನೆ. ಅಂದರೆ ಪಾವ್ಲಾವನ ಪ್ರಕಾರ ವಶ್ಯಸುಪ್ತಸ್ಥಿತಿ ಎಚ್ಚರಸ್ಥಿತಿಗೂ ನಿದ್ರಾಸ್ಥಿತಿಗೂ ಮಧ್ಯಸ್ಥ. ಆದ್ದರಿಂದ ಇಂಥ ಸ್ಥಿತಿ ಇಇಜಿಯಲ್ಲಿ ಕೆಲವು ವೇಳೆ ಎಚ್ಚೆತ್ತಿರುವ ಸ್ಥಿತಿಯಲ್ಲಿ ಇರುವಂಥ, ಕೆಲವು ವೇಳೆ ನಿದ್ರಾಸ್ಥಿತಿಯಲ್ಲಿ ಇರುವಂಥ ಸ್ಪಂದಗಳಾಗಿ ಕಂಡುಬರುತ್ತದೆ.

ಬೇಜಾರು ಬರಿಸುವ ಪ್ರಚೋದನೆಗಳು ಮಸ್ತಿಷ್ಕದಲ್ಲಿ ಕ್ರಿಯಾಮಟ್ಟವನ್ನು ತಗ್ಗಿಸುವುದರಿಂದ ಮತ್ತು ಅದರ ಫಲವಾಗಿ ನಿದ್ರೆ ಹತ್ತುವಂತೆ ಮಾಡುವುದರಿಂದ ಅವು ವ್ಯಕ್ತಿಗೆ ಅನುಕೂಲವಾದವೇ ಸರಿ. ಎಚ್ಚರವಾಗಿದ್ದ ಕಾಲದಲ್ಲಿ ಜೀವನನಿರ್ವಹಣೆಗಾಗಿ ಕೈಗೊಂಡ ಚಟುವಟಿಕೆಗಳ ಫಲವಾಗಿ ಶಿಥಿಲಗೊಂಡು ದುರ್ಬಲವಾದ ದೇಹಭಾಗಗಳು ನಿದ್ರಾಕಾಲದಲ್ಲಿ ದುರಸ್ತಿಗೊಂಡು ಬಲಯುತವಾಗುವ ಸಾಧ್ಯತೆಯನ್ನು ಗಮನಿಸತಕ್ಕದ್ದು. ಅರ್ಥಾತ್ ಎಚ್ಚೆತ್ತಿರುವ ಕಾಲದಲ್ಲಿ ಅವಶ್ಯ ಹಾಗೂ ಸಹಜ ಚಟುವಟಿಕೆಗಳು ತಪ್ಪದಿರಬೇಕಾದರೆ ನಿದ್ರೆ (ಚಟುವಟಿಕೆ ಸ್ಥಗಿತವಾದ ಸ್ಥಿತಿ) ನಿಯಮಿತವಾಗಿ ಒದಗಿ ಬರುವಂತೆ ಇರಲೇಬೇಕು.

ನಿದ್ರಾಕಾರಿಗಳು : ಇವು ನರಮಂಡಲದ ಮೇಲೆ ಪ್ರಭಾವ ಬೀರಿ ವ್ಯಕ್ತಿಗೆ ನಿದ್ರೆ ಹತ್ತುವಂತೆ ಮಾಡುವ ವಸ್ತುಗಳು (ಹಿಪ್ನಾಟಿಕ್ಸ್). ಅಫೀಮಿನಲ್ಲಿರುವ ಮತ್ತು ಅದಕ್ಕೆ ಸಂಬಂಧಿಸಿದ ವಸ್ತುಗಳು ನಿದ್ರೆ ಬರಿಸುವುವಲ್ಲದೆ ನೋವನ್ನೂ ಮರೆಸುವುವು. ಮಿಕ್ಕ ನಿದ್ರಾಕಾರಿಗಳು ನೋವನ್ನು ಮರೆಸಲಾರವು ಮತ್ತು ನೋವಿರುವಾಗ ಅವನ್ನು ಉಪಯೋಗಿಸಿದರೆ ನಿದ್ರೆ ಬರಿಸಲೂ ಆಗವು. ನೋವು ಮರೆಸುವ ವಸ್ತುವಿನೊಂದಿಗೆ ಅವನ್ನು ಉಪಯೋಗಿಸಿದರೆ ಮಾತ್ರ ನಿದ್ರೆ ಬಂದೀತಷ್ಟೆ. ಹೇರಳವಾಗಿ ಉಪಯೋಗದಲ್ಲಿರುವ ನಿದ್ರಾಕಾರಿಗಳು ಬಾರ್ಬಿಟ್ಯುರೇಟ್ ಗುಂಪಿಗೆ ಸೇರಿದುವು. ಅಸಾಧ್ಯವಾದ ನೋವಿನಿಂದ ನರಳುವವನಿಗೆ ಮತ್ತು ಇನ್ನು ಹೆಚ್ಚು ಕಾಲ ಬದುಕಲಾರದಂಥ ರೋಗಿಗೆ (ಎಡಿಗಂತಿ ರೋಗಿ) ಮಾರ್ಫಿನ್ ಅಥವಾ ಪೆಥಿಡಿನ್ ಕೊಡುವುದು ರೂಢಿ. ಮಾರ್ಫಿನ್ ಮತ್ತು ಅಫೀಮಿಗೆ ಸಂಬಂಧಿಸಿದ ಇತರ ವಸ್ತುಗಳನ್ನು ಪದೇ ಪದೇ ಉಪಯೋಗಿಸುತ್ತ ಬಂದರೆ ಅವು ಚಟವಾಗುವುದರ ಜೊತೆಗೆ ಅವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಬೇಕು ಎಂದೂ ಅನ್ನಿಸುವುದು. ಇದರಿಂದ ಅವನ್ನು ಸೇವಿಸುವವನಿಗೂ ಸಮಾಜಕ್ಕೂ ಕೇಡು ಉಂಟಾಗುತ್ತದೆ. ಆದರೆ ನೋವಿನಿಂದ ನಿದ್ರೆಗೇಡಾಗುತ್ತಿದ್ದರೆ ಇದರ ಹೊರತು ಅನ್ಯ ಮಾರ್ಗ ಇಲ್ಲ. ಮಲಗುವ ಮೊದಲು ಯೋಗ, ಧ್ಯಾನ, ಸಂಗೀತದಿಂದ ಮನಸ್ಸಿಗೆ ನೆಮ್ಮದಿಯುಂಟಾಗಿ, ಸಹಜ ನಿದ್ರೆ ಬರುತ್ತದೆ.

ನಿದ್ರಾವೈಪರೀತ್ಯಗಳು. 1. ಅತೀವ ನಿದ್ರೆ: ಸಾಮಾನ್ಯವಾಗಿ ಎಚ್ಚರವಾಗಿರುವ ವೇಳೆಗಳಲ್ಲಿ ಇದ್ದಕ್ಕಿದ್ದಂತೆ ತಡೆಯಲಾರದ ನಿದ್ರೆ ಹತ್ತಿಬರುವ ಅವಸ್ಥೆ (ನಾರ್ಕೊಲೆಪ್ಸಿ). ಇದರಲ್ಲಿ ಎರಡು ಮೂಲ ವಿಧಗಳನ್ನು ಗುರುತಿಸಬಹುದು. ಮೊದಲನೆಯದು ಸಹಜವಾದ ನಿದ್ರೆಯನ್ನು ಹೋಲುವ ವಿಧ. ಇದು ಯಾವಾಗಲಾದರೂ ಎಲ್ಲಿಯಾದರೂ ಬರಬಹುದು. ಉದಾಹರಣೆಗೆ, ಊಟವಾದ ಬಳಿಕ, ಅಧಿಕ ದೈಹಿಕಾಯಾಸಾನಂತರ, ವಾಹನಗಳಲ್ಲಿ ಪ್ರಯಾಣ ಮಾಡುತ್ತಿರುವಾಗ ಅಥವಾ ಬೇಸರ ತರುವ ಉಪನ್ಯಾಸ, ಪಾಠ ಅಥವಾ ಭಾಷಣವನ್ನು ಕೇಳುವಾಗ ಇತ್ಯಾದಿ. ನಿದ್ರೆ ಹೋಗುವ ಮುನ್ನ ವ್ಯಕ್ತಿಗೆ ಅತಿಯಾದ

ತೂಕಡಿಕೆ ಹತ್ತಿ ನಿದ್ರಿಸಲೇಬೇಕೆಂಬ ಹತ್ತಿಕ್ಕಲಾರದ ಬಯಕೆ ಆಗುತ್ತದೆ. ಕೆಲವೇ ಸೆಕೆಂಡುಗಳ ಕಾಲದಿಂದ ಹಿಡಿದು ಒಂದು ಗಂಟೆಗೂ ಮೀರಿದ ತರುವಾಯ ವ್ಯಕ್ತಿ ಸ್ವಾಭಾವಿಕ ನಿದ್ರೆಯಲ್ಲಿದ್ದಂತೆಯೇ ಎಚ್ಚರಾಗುವುದು ಸಾಮಾನ್ಯ. ಬೇರೆಯವರು ಎಚ್ಚರಿಸಿದರೆ, ಇಲ್ಲವೇ ಹಠಾತ್ ನಿಶ್ಶಬ್ದ ಉಂಟಾದರೆ ಇಲ್ಲವೇ ಜೋರಾದ ಶಬ್ದವಾದರೆ ಎಚ್ಚರಿಕೆ ಆಗುವುದೂ ಈ ಸ್ಥಿತಿಗಳಲ್ಲಿ ನೈಸರ್ಗಿಕವಾಗಿ ಎಚ್ಚರಿಕೆಗೊಳ್ಳುವಂತೆಯೇ ಇರುವುದು. ದಿವಸದಲ್ಲಿ ಅನೇಕಬಾರಿ ಈ ಅವಸ್ಥೆ ಉಂಟಾಗುವುದು. ರಾತ್ರಿ ನಿದ್ರೆಯ ಮೇಲೆ ಇದರ ಪ್ರಭಾವ ಇರುವುದಿಲ್ಲವಾದರೂ ರಾತ್ರಿ ನಿದ್ರೆಗೆಟ್ಟರೆ ಇಂಥ ನಿದ್ರೆ ಹೆಚ್ಚಿಗೆ ಬರುವುದು ಸಾಮಾನ್ಯ. ಅತೀವ ನಿದ್ರೆಯಿಂದ ಎಚ್ಚೆತ್ತ ಬಳಿಕ ವ್ಯಕ್ತಿ ಯಾವ ಬದಲಾವಣೆಯನ್ನೂ ತೋರುವುದಿಲ್ಲ. ಸಾಮಾನ್ಯವಾಗಿ ಆತ ತನಗೆ ನಿದ್ರೆ ಬಂದಿತ್ತೆಂದು ಹೇಳಬಹುದು ಅಷ್ಟೆ.

2. ಕೆಟಪ್ಲೆಕ್ಸಿ : ಹಠಾತ್ತಾಗಿ ಅತೀವ ದುರ್ಬಲತೆ ಉಂಟಾಗಿ ಐಚ್ಛಿಕ ಸ್ನಾಯುಗಳ ಸತ್ತ್ವ ಕುಂದಿ ವ್ಯಕ್ತಿ ಕುಸಿಯುವುದು ಈ ಅವ್ಯವಸ್ಥೆಯ ವೈಶಿಷ್ಟ್ಯ. ಕೋಪ, ಸಂತೋಷ, ಆಶ್ಚರ್ಯ, ನಗು ಮುಂತಾದ ಮಾನಸಿಕ ಉದ್ವೇಗಗಳು ಹಠಾತ್ತಾಗಿ ಉಂಟಾದಾಗ ಕೆಟಪ್ಲೆಕ್ಸಿ ಸಂಭವಿಸಬಹುದು. ಈ ಪ್ರತಿಕ್ರಿಯೆ ಉಗ್ರವಾಗಿರುವ ಸಂದರ್ಭಗಳಲ್ಲಿ ಸ್ನಾಯುಗಳ ಸತ್ತ್ವ ಕುಂದುತ್ತದೆ. ತಲೆ ಮುಂದಕ್ಕೆ ಬಿದ್ದು, ದವಡೆ ಜೋತು, ಕಣ್ಣೆವೆಗಳು ಮುಚ್ಚಿ, ಮುಖ ಭಾವರಹಿತವಾಗುವುದಲ್ಲದೆ ಕೈಗಳು ಪಕ್ಕದಲ್ಲಿ ಜೋತುಬಿದ್ದು, ಕಾಲುಗಳು ಕುಸಿದು, ವ್ಯಕ್ತಿ ಜಡ ವಸ್ತುವಿನಂತೆ ಕೆಳಕ್ಕೆ ಬೀಳುವನು. ಮಾತಿಲ್ಲದವನಾಗಿ ಗಾಢನಿದ್ರಿತನಂತಿರುತ್ತಾನೆ. ಇವನಿಗೆ ಜ್ಞಾನ ತಪ್ಪಿರುವುದಿಲ್ಲ. ಆದರೂ ಅಲ್ಪ ಸ್ವಲ್ಪ ಹಂದಾಡುವುದೂ ಇಲ್ಲ. ಕಾರಣ ಅಷ್ಟು ನಿಶ್ಶಕ್ತನಾಗಿರುವನು. ಸ್ವಲ್ಪ ಗಳಿಗೆಗಳ ಬಳಿಕ ತಟ್ಟನೆ ತನ್ನ ಮೊದಲಿನ ಸ್ಥಿತಿಗೆ ಬರುತ್ತಾನೆ. ರೋಗಯುಕ್ತ ವ್ಯಕ್ತಿಯ ದೈಹಿಕ ರಚನೆಯಲ್ಲಿ ಯಾವ ವಿಲಕ್ಷಣಗಳೂ ಕಂಡುಬರುವುದಿಲ್ಲ. ಈ ರೋಗ ಹೆಂಗಸರಿಗಿಂತ ಗಂಡಸರಲ್ಲಿ ಹೆಚ್ಚು ಸಾಮಾನ್ಯ. 10–30 ವಯಸ್ಸಿನೊಳಗಿರುವ ವ್ಯಕ್ತಿ ಇದಕ್ಕೆ ತುತ್ತಾಗುವುದು ವಾಡಿಕೆ. ಹೈಪೋತ್ಯಾಲಮಸ್ಸಿನ ಕಾಯಿಲೆ, ಮಿದುಳಿನ ಉರಿಊತ (ಎನ್‌ಸೆಫಲೈಟಿಸ್) ಮತ್ತು ಸಿಫಿಲಿಸ್ ರೋಗ ಮುಂತಾದ ವ್ಯಾಧಿ ಸನ್ನಿವೇಶಗಳಲ್ಲಿಯೂ ಮಿದುಳಿಗೆ ಪೆಟ್ಟು ಇಲ್ಲವೇ ಸನ್ನಿ ಹೊಡೆತದ ಸಂದರ್ಭದಲ್ಲಿಯೂ ಅತೀವ ನಿದ್ರೆ ಉಂಟಾಗಬಹುದು. ಅತೀವ ನಿದ್ರಾಸ್ಥಿತಿಗೂ ಮೂರ್ಛಾರೋಗಕ್ಕೂ ಬಹುಶಃ ಏನೂ ಸಂಬಂಧ ಇಲ್ಲ.

3. ನಿದ್ರಾಸಂಚಾರ : ಮಿದುಳಿನ ವಿಕಾರ ಕ್ರಿಯೆಯಿಂದ ವ್ಯಕ್ತಿ ನಿದ್ರೆಯಲ್ಲಿ ನಡೆದಾಡುವ ಅಥವಾ ಇತರ ಕೆಲಸ ಮಾಡುವ ಸ್ಥಿತಿ (ಸೊಮ್ನ್ಯಾಂಬ್ಯುಲಿಸಮ್). ರಾತ್ರಿ ಕಾಲದಲ್ಲಿ ಮಲಗಿ ನಿದ್ರೆ ಹೋದ ಮೇಲೆ ಗೋಚರಿಸುವ ಈ ತೊಂದರೆ ತೀರ ಅಪರೂಪವೇನಲ್ಲ. 1%–6% ರಷ್ಟು ಜನರಲ್ಲಿ, ಹೆಚ್ಚಾಗಿ ಗಂಡಸರಲ್ಲಿ, ಅದರಲ್ಲೂ ಮಕ್ಕಳಲ್ಲಿ ಇದು ಕಂಡುಬರುವುದೆಂದು ತಿಳಿದಿದೆ. ಅನೇಕ ಬಾರಿ ಅವರ ಮನೆತನದ ಇತಿಹಾಸವನ್ನು ಪರಿಶೀಲಿಸಿದಾಗ ಇತರರಲ್ಲಿ ಆ ದೋಷವಿರುವುದು ಗೋಚರಿಸಬಹುದು. ನಿದ್ರಾಸಂಚಾರ ಕನಸಿನ ಪ್ರಭಾವದಿಂದ ಆಗುವುದೆಂಬ ಸಾಮಾನ್ಯ ತಿಳುವಳಿಕೆಗೆ ಯಾವ ಆಧಾರವೂ ಇಲ್ಲ. ವ್ಯಕ್ತಿ ನಿದ್ರೆ ಹೋದ ಪ್ರಾರಂಭದ ಕೆಲವು ಗಂಟೆಗಳ ತರುವಾಯ ಹಾಸಿಗೆಯಿಂದ ಎದ್ದು ಅಭ್ಯಾಸಗತ ಚಲನೆಯನ್ನು ತೋರ್ಪಡಿಸುತ್ತಾನೆ. ಕಣ್ಣು ತೆರೆದು ಯಾವ ಭಾವ ಪ್ರದರ್ಶನವೂ ಇಲ್ಲದೆ ತನ್ನ ಪರಿಸರದ ಬಗ್ಗೆ ಯಾವ ಲಕ್ಷ್ಯವನ್ನೂ ಹರಿಸದೆ ಓಡಾಡುತ್ತಾನೆ. ಬಾಗಿಲು ತೆರೆದು ಹೊರ ಹೋಗಬಲ್ಲ, ಮೆಟ್ಟಿಲು ಇಳಿಯಬಲ್ಲ, ಅನೇಕ ಕ್ಲಿಷ್ಟಕರ ಕಾರ್ಯಗಳನ್ನು ಕೈಗೊಳ್ಳಬಲ್ಲ, ಬೆರೆಯಬಲ್ಲ ಕೂಡ. ಕೆಲಬಾರಿ ಕೊಲೆಮಾಡಿದ ಉದಾಹರಣೆಗಳೂ ಇವೆ. ಇವೆಲ್ಲವೂ ಕೆಲವೊಂದು ಕ್ಷಣಗಳ ಕಾಲಾವಧಿಯಲ್ಲಿ ಜರಗಿಹೋಗಿರುತ್ತವೆ. ಬೆಳಿಗ್ಗೆ ಎದ್ದಮೇಲೆ ಆ ವ್ಯಕ್ತಿಗೆ ಹಿಂದಿನ ರಾತ್ರಿ ನಡೆದ ಘಟನೆಗಳ ಬಗ್ಗೆ ಯಾವುದೇ ನೆನಪು ಉಳಿದಿರುವುದಿಲ್ಲ. ಮಕ್ಕಳಲ್ಲಿ ಮತ್ತು ಹರೆಯದವರಲ್ಲಿ ಗೋಚರಿಸುವ ನಿದ್ರಾಸಂಚಾರ ಕೆಲವು ವರ್ಷಗಳ ತರುವಾಯ ದೂರವಾಗುತ್ತದೆ. ವಯಸ್ಕರಲ್ಲಿ ಅದು ಮಾನಸಿಕ ಸ್ಥಿತ್ಯಂತರದ ಫಲವಾಗಿ ತೋರಿಬರುತ್ತದೆ. ಕೆಲವೊಂದು ದೈಹಿಕ ಕ್ರಿಯೆಗಳ ನಿರ್ದೇಶಕ ಸ್ಥಾನಗಳು ಇಂಥ ಕಾಲದಲ್ಲಿ ವ್ಯಕ್ತಿಯ ಸಾಮಾನ್ಯ ಪ್ರಜ್ಞೆಯ ನಿಯಂತ್ರಣದಿಂದ ಬೇರ್ಪಟ್ಟು ಸ್ವತಂತ್ರ ನಿರ್ದೇಶಕ ಸ್ಥಾನದಂತೆ ಪ್ರಚೋದನೆ ನೀಡುವುದರಿಂದ ಈ ಕಾರ್ಯ ಚಟುವಟಿಕೆ ತೋರಿಬರುತ್ತದೆಂದು ಮನೋರೋಗತಜ್ಞರ ಅಭಿಪ್ರಾಯ. ನಿದ್ರಾಸಂಚಾರದಿಂದ ವ್ಯಕ್ತಿಗೆ ತಾಗಬಹುದಾದ ಪೆಟ್ಟು, ಗಾಯಗಳಿಂದ ಆತನಿಗೆ ರಕ್ಷಣೆ ಒದಗಿಸುವುದು ಮುಖ್ಯ. ಮುಂಜಾಗರೂಕತೆಯ ಕ್ರಮವಾಗಿ ಕೊಠಡಿಯ ಬಾಗಿಲು, ಕಿಟಕಿಗಳನ್ನು ಭದ್ರಪಡಿಸುವುದು ಮತ್ತು ಅಪಾಯಕಾರಿ ವಸ್ತುಗಳನ್ನು ತೆಗೆದಿರಿಸುವುದು ಅಗತ್ಯ. ಎಳೆಯರು ವಯಸ್ಸಾದಂತೆ ಈ ರೋಗದಿಂದ ಮುಕ್ತರಾಗಬಲ್ಲರಾದ್ದರಿಂದ ಅವರಿಗೆ ಯಾವುದೇ ಮಾನಸಿಕ ಚಿಕಿತ್ಸೆ ಅಗತ್ಯವಿಲ್ಲ. ವಯಸ್ಕರಲ್ಲಿ ಮಾನಸಿಕ ವ್ಯತ್ಯಯ ಸಾಮಾನ್ಯವಾದ್ದರಿಂದ ಅದನ್ನು ಅಭ್ಯಸಿಸಿ ಚಿಕಿತ್ಸೆ ನೀಡಬೇಕು.

ನಿದ್ರಾನಡಿಗೆಯು ಅಪಸ್ಮಾರದ ಒಂದು ವಿಭಾಗವಾಗಬಹುದು. ಮಿದುಳಿನ ಮುಂದಿನ ಹಾಲೆಯ ಹಾನಿಯಿಂದಲೂ ಉಂಟಾಗಬಹುದು. ಇದನ್ನು ಆರ್ಗ್ಯಾನಿಕ್ ಸೊಮ್ನಾಂಬುಲೀಸಂ ಎನ್ನುತ್ತಾರೆ. ಈ ಬಗೆಯ ನಿದ್ರಾ ನಡಿಗೆಯಲ್ಲಿ ವ್ಯಕ್ತಿ ಸಂಕೀರ್ಣ ಕೆಲಸಗಳನ್ನು ಮಾಡಲಾರ. ಉದಾಹರಣೆಗೆ, ಬಾಗಿಲಿನ ಬೀಗ ತೆಗೆಯುವುದು, ಅಡ್ಡ ಬಂದ ವಸ್ತುವನ್ನು ನಿವಾರಿಸುವುದು. ಈ ಬಗೆಯ ನಿದ್ರಾನಡಿಗೆಗೆ ಚಿಕಿತ್ಸೆಯೇ ಬೇರೆ.

4. ನಿದ್ರಾರಾಹಿತ್ಯ : ನಿದ್ರೆ ಬಾರದ ಪರಿಸ್ಥಿತಿ ಇಲ್ಲವೇ ಸ್ವಾಭಾವಿಕ ನಿದ್ರೆಯ ಮಧ್ಯೆ ಎಚ್ಚರಗೊಂಡು ಮತ್ತೆ ನಿದ್ರೆಬಾರದ ಸನ್ನಿವೇಶ (ಇನ್‌ಸೋಮ್ನಿಯ). ನಿದ್ರಾಹೀನತೆ, ನಿರ್ನಿದ್ರೆ ಎನ್ನುವುದೂ ಇದೆ. ಪ್ರತಿಯೊಬ್ಬ ವ್ಯಕ್ತಿಯ ನಿದ್ರೆಯ ಕಾಲಾವಧಿ ಮತ್ತು ಅದರ ಗಾಢತೆ ಇವುಗಳಲ್ಲಿ ಬಹಳಷ್ಟು ವ್ಯತ್ಯಾಸವಿದೆ. ದಿನದ ಚಟುವಟಿಕೆಯಿಂದಾದ ದಣಿವಿನಿಂದ ಚೇತರಿಸಿಕೊಳ್ಳಲು ನಿದ್ರೆ ಅತ್ಯಗತ್ಯ. ಆದ್ದರಿಂದ ನಿದ್ರೆಗೇಡಿನಿಂದ ಬಲಹೀನತೆ ತೋರಿಬರುತ್ತದಲ್ಲದೆ ವಸ್ತು ಮತ್ತು ವಿಷಯದ ಮೇಲೆ ಕೇಂದ್ರೀಕರಣವನ್ನು ಮಾಡಲಾಗುವುದಿಲ್ಲ. ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಕಡಿಮೆ ಆಗುವುದು. ತೀರ ಸಾಮಾನ್ಯ ರೋಗಗಳಿಂದ ಹಿಡಿದು ತೀವ್ರ ರೋಗಗಳ ಒಂದು ಗುಣಲಕ್ಷಣವಾಗಿ ನಿರ್ನಿದ್ರೆ ಸಾಮಾನ್ಯವಾಗಿ ತೋರಿಬರುತ್ತದೆಯೇ ವಿನಾ ಸ್ವತಃ ಅದೇ ಒಂದು ರೋಗ ಅಲ್ಲ. ನಿದ್ರೆ ಹೋಗಲು ತೊಂದರೆ, ನಿದ್ರೆಯ ಮಧ್ಯದಲ್ಲಿ ಎಚ್ಚರಗೊಳ್ಳುವುದು, ನಿದ್ರೆಯಿಂದ ಬಲು ಬೇಗ ಎಚ್ಚರ ಹೊಂದುವುದು ಈ ಮೂರೂ ರೂಪಗಳು ಒಟ್ಟಾಗಿ ಇಲ್ಲವೆ ಬೇರೆ ಬೇರೆಯಾಗಿ ವ್ಯಕ್ತಿಗಳಲ್ಲಿ ಗೋಚರಿಸಬಹುದು. ನೋವು, ದೈಹಿಕ ತೊಂದರೆಗಳು, ನರಮಂಡಲದ ವ್ಯತ್ಯಯ, ಮಾದಕವಸ್ತು ಸೇವನೆ ಚಟ, ಮಾನಸಿಕ ಕ್ಲೇಶಗಳು, ಭಾವೋದ್ವೇಗಗಳು ಇಲ್ಲವೆ ಒತ್ತಡ ಪರಿಸ್ಥಿತಿಯ ಫಲವಾಗಿ ನಿದ್ರೆಗೇಡಾಗಬಹುದು. ನಾಗರೀಕತೆಯ ಮುನ್ನಡೆಯೊಡನೆ ಲಭಿಸುವ ಬದುಕಿನ ಒತ್ತಡಗಳೂ ನಿದ್ರೆಗೇಡಿಗೆ ಕಾರಣವಾಗಿವೆ. ಪ್ರಚೋದಕಗಳಾದ ಕಾಫಿ, ಟೀ, ಕೋಲಾಗಳ ಹೆಚ್ಚು ಸೇವನೆ ಕಾರಣವಾಗಬಹುದು. ಬಹುತೇಕ ಮಾನಸಿಕ ಕಾಯಿಲೆಗಳಲ್ಲಿ ನಿದ್ರಾಹೀನತೆ ಅತಿ ಸಾಮಾನ್ಯ ರೋಗ ಲಕ್ಷಣ.

ಸರಿಯಾಗಿ ನಿದ್ರೆಬಾರದ ವ್ಯಕ್ತಿಗಳನ್ನು ಬಲು ಸುಲಭವಾಗಿ ನಿದ್ರೆಯಿಂದ ಎಚ್ಚರಗೊಳಿಸಬಹುದು. ನಿದ್ರಾಹೀನತೆಯಿರುವ ವ್ಯಕ್ತಿಗಳು ನಿದ್ರೆ ಹೋಗಲು ಅನೇಕ ಬಾರಿ ನಿದ್ರಾಕಾರಿ ಔಷಧಗಳ ಸೇವನೆಗೆ ಮೊರೆಹೋಗುವರು. ಅವು ಮಿದುಳಿನ ನಿರ್ದಿಷ್ಟ ಕಣಗಳ ಪ್ರತಿವರ್ತನೆಯ ಮಟ್ಟವನ್ನು ಹೆಚ್ಚಿಸಿ ಇಲ್ಲವೆ ತಗ್ಗಿಸಿ ಅಂದರೆ ಕೆಲವು ಮಿದುಳಿನ ಕೇಂದ್ರಗಳ ಕಾರ್ಯಚಟುವಟಿಕೆಯನ್ನು ಹೆಚ್ಚಿಸಿ ಇಲ್ಲವೇ ಕುಗ್ಗಿಸಿ ನಿದ್ರೆಯನ್ನು ಉಂಟುಮಾಡಬಲ್ಲುವು. ಬಾಯಿ ಮೂಲಕ ಸೇವಿಸಿದ ನಿದ್ರಾಕಾರಿಗಳು ಸುಲಭವಾಗಿ ಒಳಹೀರಲ್ಪಟ್ಟು, ಆರೆಂಟು ಗಂಟೆಗಳ ಕಾಲ ತಮ್ಮ ಪ್ರಭಾವವನ್ನು ಬೀರಿ, ಎಚ್ಚೆತ್ತ ಮೇಲೆ ನವ ಚೈತನ್ಯವನ್ನು ಉಂಟುಮಾಡುವಂತಿರಬೇಕು. ಡೈಜೆಪಾಮ್, ನೈಟ್ರಾಜೆಪಾಮ್, ಆಲ್ಪ್ರೊಜೊಲಾಮ್ ಬಲು ಕಾಲದಿಂದ ಬಳಸಲ್ಪಟ್ಟಿವೆ. ಈ ನಿದ್ರಾಕಾರಿಗಳ ಸೇವನೆ ಕೆಲವರಲ್ಲಿ ಚಟವಾಗಿ ಪರಿಣಮಿಸಬಲ್ಲುದು. ಹೆಚ್ಚು ಮೊತ್ತದ ಸೇವನೆ ಪೂರ್ಣ ನರಮಂಡಲದ ಕಾರ್ಯಚಟುವಟಿಕೆಯನ್ನು ಕುಗ್ಗಿಸುತ್ತದೆ. ಪ್ರಾರಂಭದಲ್ಲಿ ನಿದ್ರಾಕಾರಿ ಉಪಯುಕ್ತವಾಗಿ ಕಾಣಿಸಿದರೂ ಅನಂತರ ಅದು ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಅದರಿಂದಾಗಿ ದೀರ್ಘಾವಧಿ ಕಾಲ ನಿದ್ರಾಕಾರಿಗಳನ್ನು ತೆಗೆದುಕೊಳ್ಳುವವರ ಮೇಲೆ ಔಷಧ ಪರಿಣಾಮ ಸಾಕಷ್ಟು ಹೆಚ್ಚಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಅಲ್ಪಕಾಲಿಕ ಬೆಂಜೋಡೈಜಪೀನ್‌ಗಳು ಬಳಕೆಯಲ್ಲಿದ್ದು ಇವು ಸಾಕಷ್ಟು ಸುರಕ್ಷಿತ. ವೈದ್ಯರ ಮಾರ್ಗದರ್ಶನದಲ್ಲಿ ಇವನ್ನು ಸೇವಿಸಲು ಅಡ್ಡಿ ಇಲ್ಲ. ದೈಹಿಕ ಅಥವಾ ಮಾನಸಿಕ ರೋಗಗಳಿಂದ ನಿದ್ರೆಗೇಡಾಗುತ್ತಿದ್ದರೆ ಅದರ ಮೂಲ ಕಾರಣದ ಚಿಕಿತ್ಸೆ ಮತ್ತು ನಿದ್ರಾಕಾರಿಗಳ ಸೇವನೆ ಉಪಯುಕ್ತ. ಅಕಾರಣವಾಗಿ ನಿದ್ರೆಗೇಡಾಗುತ್ತಿದ್ದರೆ ಆ ವ್ಯಕ್ತಿಯನ್ನು ಮಾನಸಿಕ ಚಿಕಿತ್ಸೆಗೆ ಒಳಪಡಿಸುವುದು ಅತ್ಯಗತ್ಯ. ಮೈಮನಗಳು ವಿರಮಿಸಲು ಯೋಗ, ಧ್ಯಾನ, ಸಂಗೀತ ಸಹಾಯಕಾರಿ. ***

**ನಿಮ್ಮಿದುಳು:** ಕೇಂದ್ರ ನರಮಂಡಲದಲ್ಲಿರುವ ಒಂದು ಮುಖ್ಯ ಭಾಗ. ಇದರ ಪರ್ಯಾಯ ನಾಮ ಉಪಮಿದುಳು ಅಥವಾ ಉಪಮಸ್ತಿಷ್ಕ. ಆಂಗ್ಲಭಾಷೆಯಲ್ಲಿ ಸೆರಿಬೆಲ್ಲಮ್ ಎನ್ನುವರು. ಇದು ತಲೆಬುರುಡೆಯ ಒಳಗೆ ಇದೆ. ಮೂಲತಃ ಐಚ್ಛಿಕಸ್ನಾಯುಗಳ ಚಟುವಟಿಕೆಗಳನ್ನು ಅವುಗಳ ಉದ್ದೇಶ ಕೈಗೂಡುವಂತೆ ಸಂಘಟಿಸುವ ಅಂಗವಿದು. ಈ ಕ್ರಿಯೆಗಳನ್ನು ನಿಮ್ಮಿದುಳು ಅತಿ ದಕ್ಷತೆಯಿಂದ ನಿರ್ವಹಿಸುವುದು. ನಿಮ್ಮಿದುಳು ತಲೆಬುರುಡೆಯ ಹಿಂಭಾಗದ ಮಿದುಳಿನ (ಸೆರಿಬ್ರಮ್ ಅಥವ ಮಹಾಮಸ್ತಿಷ್ಕ) ಕೆಳಗೆ ಇದ್ದು, ಮಿದುಳು ಕಾಂಡದ (ಬ್ರೇಯ್ನ್‌ಸ್ಟೆಮ್) ಬೆನ್ನೇರಿ ಕುಳಿತಂತೆ ಕಾಣುತ್ತದೆ. ವರ್ಮಿಸ್ (ಹುಳುವಿನ ಆಕಾರದ್ದು) ಇದರ ಮಧ್ಯಭಾಗ, ಎರಡೂ ಬದಿಗೆ ಇರುವ ಅರ್ಧಗೋಳಗಳನ್ನು ಜೋಡಿಸುತ್ತದೆ.

ನಿಮ್ಮಿದುಳಿನ ಒಳಗೆ ಟಿಸಿಲೊಡೆದಂತೆ ಕಾಣುವ ಬಿಳಿದ್ರವ್ಯದ (ವೈಟ್ ಮ್ಯಾಟರ್) ತಿರುಳು ಇದನ್ನು ಆವರಿಸಿ ನಿಮ್ಮಿದುಳಿನ ಮೇಲ್ಮೈಯಾಗಿ ಬೂದುಬಣ್ಣದ ದ್ರವ್ಯದ (ಗ್ರೇಮ್ಯಾಟರ್) ರಗಟೆಯು (ಕಾರ್ಟೆಕ್ಸ್) ಇವೆ. ಬಿಳಿದ್ರವ್ಯದ ಆಳದಲ್ಲಿ ಎಡ ಮತ್ತು ಬಲ ಒಂದೊಂದು ಕಡೆಯು ಬೂದು ಬಣ್ಣದ ದ್ರವ್ಯದಿಂದಾದ ನಾಲ್ಕು ಆಳ ನರಕೋಶ ಕೇಂದ್ರಗಳಿವೆ (ಡೀಪ್ ನ್ಯೂಕ್ಲಿಯೈ). ಬಿಳಿದ್ರವ್ಯದ ತಿರುಳು ನಿಮ್ಮಿದುಳಿನ ಬೇರೆ ಬೇರೆ ಭಾಗಗಳ ನಡುವೆ ಹಾಗೂ ಕೇಂದ್ರ ನರಮಂಡಲದ ಇನ್ನಿತರ ಭಾಗಗಳ ನಡುವೆ ಸಂಪರ್ಕ ಸಾಧಿಸುವ ನರತಂತುಗಳಿಂದ ಕೂಡಿದೆ. ನಿಮ್ಮಿದುಳಿನ ಮೇಲ್ಮೈಯಲ್ಲಿ ಕ್ರಮಬದ್ಧವಾದ ಮತ್ತು ಬಲುಮಟ್ಟಿಗೆ ಸಮಾಂತರವಾಗಿ ಬಾಗಿದ ಮಡಿಕೆಗಳಿವೆ. ಈ ತೆರನಾದ ರಚನೆಯಿಂದ ಇದರ ಮೇಲ್ಮೈ ಸಲೆ ಅತಿಯಾಗಿ ವಿಸ್ತರಿಸಿದಂತಾಗಿದೆ. ನಿಮ್ಮಿದುಳಿನ ತೂಕ ಮಹಾಮಸ್ತಿಷ್ಕದ ತೂಕದ ಕೇವಲ 0.1ರಷ್ಟಿದ್ದರೂ, ಅದರ ಮೇಲ್ಮೈ ಸಲೆ ಮಹಾಮಸ್ತಿಷ್ಕದ ಮೇಲ್ಮೈ ಸಲೆಯ 0.75ರಷ್ಟಿದೆ.

ನಿಮ್ಮಿದುಳಿನ ಸ್ಥೂಲ ರಚನೆಗೆ ಅನುಸಾರವಾಗಿ ಮುಂದಿನ, ನಡುವಿನ ಮತ್ತು ಹಿಂದಿನ ಹಾಲೆಗಳು (ಲೋಬ್ಸ್) ಇವೆ. ಪ್ರತಿಹಾಲೆಯು ಹಲವಾರು ಕಿರುಹಾಲೆಗಳಿಂದ (ಲಾಬ್ಯೂಲ್ಸ್) ಕೂಡಿದೆ. ಜೀವವಿಕಾಸದ ಇತಿಹಾಸಕ್ಕೆ ಅನುಗುಣವಾಗಿ ನಿಮ್ಮಿದುಳನ್ನು ಪುರಾತನ ಉಪಮಸ್ತಿಷ್ಕ (ಆರ್ಕಿ–), ಪೂರ್ವಿಕ ಉಪಮಸ್ತಿಷ್ಕ (ಪೇಲಿಯೊ–) ಹಾಗೂ ನವೀನ ಉಪಮಸ್ತಿಷ್ಕ (ನಿಯೋ–ಸೆರಿಬೆಲ್ಲಮ್) ಎಂಬ ಭಾಗಗಳಾಗಿ ವಿಭಾಗಿಸಿದೆ. ಕ್ರಿಯಾತ್ಮಕ ಸಂಪರ್ಕಗಳಿಗೆ ಅನುಸಾರವಾಗಿ ಮಧ್ಯಭಾಗ (ವರ್ಮಿಸ್), ಮಧ್ಯಾಂತರ ಭಾಗ (ಪಾರ್ಸ್ ಇಂಟರ್‌ಮೀಡಿಯ) ಮತ್ತು ಪಾರ್ಶ್ವಭಾಗ (ಪಾರ್ಸ್ ಲ್ಯಾಟರಾಲಿಸ್) ಎಂದು ಗುರುತಿಸಿದೆ.

ನಿಮ್ಮಿದುಳು ಇಕ್ಕೆಲಗಳಲ್ಲಿ ಮೂರು ವೃಂತಗಳ (ಪೆಡಂಕಲ್ಸ್) ಮಿದುಳಿನ ಇತರ ಭಾಗಗಳಿಗೆ ಜೋಡಿಕೊಂಡಿದೆ. ಮೇಲಿನ (ಸುಪೀರಿಯರ್), ನಡುವಿನ (ಮಿಡ್ಲ್) ಹಾಗೂ ಕೆಳಗಿನ (ಇನ್‌ಫೀರಿಯರ್) ವೃಂತಗಳೆಂದು ಇವುಗಳ ಹೆಸರು. ನಿಮ್ಮಿದುಳಿಗೆ ಮಿದುಳು ಕಾಂಡದ ಮೂಲಕ ಮಿದುಳುಬಳ್ಳಿಯೊಡನೆ (ಸ್ಪೈನಲ್ ಕಾರ್ಡ್) ಸಂಪರ್ಕವಿದೆ.

ನಿಮ್ಮಿದುಳಿನ ರಗಟೆಯ ನರಕೋಶ ರಚನೆ, ಮಹಾಮಸ್ತಿಷ್ಕದ ರಚನೆಗೆ ವ್ಯತಿರಿಕ್ತವಾಗಿ ನಿಮ್ಮಿದುಳಿನ ರಗಟೆಗೆ ಗಣಕದಂತೆ ಜ್ಯಾಮಿತೀಯ ನಿಖರತೆಯುಳ್ಳ ಏಕಪ್ರಕಾರದ ರಚನೆ ಇದೆ. ಇದರಲ್ಲಿ ಐದು ಬಗೆಯ ನರಕೋಶಗಳು, ಮೂರು ಪದರಗಳಾಗಿ ಕ್ರಮಬದ್ಧವಾಗಿ ಅಣಿಗೊಳಿಸಲ್ಪಟ್ಟಿವೆ. ಹೊರಪದರ ನಕ್ಷತ್ರಾಕಾರದ (ಸ್ಟೆಲ್ಲೇಟ್) ಮತ್ತು ಕುಕ್ಕೆಯಂಥ (ಬ್ಯಾಸ್ಕೆಟ್ ಸೆಲ್ಸ್) ನರಕೋಶಗಳನ್ನು ಒಳಗೊಂಡಿದೆ. ಒಳಪದರದಲ್ಲಿ ರವೆಕೋಶಗಳೂ (ಗ್ರ್ಯಾನ್ಯೂಲ್ ಸೆಲ್ಸ್) ಗಾಲ್ಗಿಯ ಕೋಶಗಳೂ ಇವೆ. ಇವೆರಡರ ನಡುವೆ ಪರ್ಕಿನ್ಯೆ ಕೋಶಗಳ ಏಕಕೋಶಿಕ ನಡುಪದರವಿದೆ. ಮಾನವನ ನಿಮ್ಮಿದುಳಿನ ರಗಟೆಯಲ್ಲಿ ಸು. 3,000 ಕೋಟಿ ರವೆಕೋಶಗಳೂ 20 ಕೋಟಿ ನಕ್ಷತ್ರಾಕಾರ ಮತ್ತು ಕುಕ್ಕೆ ಕೋಶಗಳೂ 3 ಕೋಟಿ ಪರ್ಕಿನ್ಯೆ ಕೋಶಗಳು ಇವೆ.

ದೇಹದ ವಿವಿಧ ಭಾಗಗಳ ಸ್ನಾಯು, ಸ್ನಾಯುಹುರಿ (ಟೆಂಡನ್) ಮತ್ತು ಕೀಲುಗಳಲ್ಲಿರುವ ಜ್ಞಾನಗ್ರಾಹಿಗಳಿಂದ (ಸೆನ್ಸರಿ ರಿಸೆಪ್ಟರ್ಸ್) ಮತ್ತು ತ್ವಚೆ, ಚಕ್ಷು ಹಾಗೂ ಕರ್ಣ ಅಭಿಗ್ರಾಹಕಗಳಿಂದ ಒಳಕಿವಿಯ ನಡುವಿನ (ವೆಸ್ಟಿಬ್ಯೂಲ್) ಉಪಕರಣದಿಂದ ಮತ್ತು ಇತರ ಒಳಾಂಗ ಅಭಿಗ್ರಾಹಕಗಳಿಂದ ನರತಂತುಗಳು ಅನೇಕ ನರಪಥಗಳ ಮೂಲಕ ನಿಮ್ಮಿದುಳನ್ನು ತಲಪುತ್ತವೆ. ಇವುಗಳಿಂದ ದೇಹದ ಸ್ಥಾನವಿನ್ಯಾಸ, ಅಂಗಾಂಗಗಳ ಸ್ಥಿತಿ, ಅವುಗಳ ಪರಸ್ಪರ ಹಾಗೂ ಪರಿಸರದೊಡನೆ ಅವಕ್ಕೆ ಇರುವ ಸಂಬಂಧ ಮತ್ತು ಪ್ರಸ್ತುತ ನಡೆಯುತ್ತಿರುವ ಚಲನೆಗಳ ಬಗೆಗಿನ ವಿವರಗಳು ನಿಮ್ಮಿದುಳಿಗೆ ದೊರೆಯುತ್ತವೆ. ಮಹಾಮಸ್ತಿಷ್ಕದ ಚಾಲಕ ರಗಟೆಯಿಂದ (ಮೋಟರ್ ಕಾರ್ಟೆಕ್ಸ್) ಚಾಲಕನರಗಳ ಮುಖಾಂತರ ಐಚ್ಛಿಕ ಸ್ನಾಯುಗಳಿಗೆ ತಲಪುವ ಆದೇಶದ ವಿವರಗಳೂ ನರಸೇತುವೆ ಹಾಗೂ ಕೆಳಗಿನ ಆಲಿವರಿ ನರಕೇಂದ್ರಗಳ ಮೂಲಕ ಹಾಯುವ ಅದೇ ನರಗಳ ಕವಲುಗಳ ಮುಖಾಂತರ ನಿಮ್ಮಿದುಳಿನ ಹೆಚ್ಚಿನ ಭಾಗಗಳಿಗೆ ತಲುಪುತ್ತದೆ. ಈ ಎಲ್ಲ ವಿವರಗಳ ಪರಿಜ್ಞಾನ ಸಂಗ್ರಹಣೆ ಹಾಗೂ ವಿಶ್ಲೇಷಣೆಗಳು ಚಲನ ನಿಯಂತ್ರಣಕ್ಕೆ ಅಗತ್ಯವಾದ ಆಧಾರಗಳಾಗಿದ್ದು, ಅಂತಿಮವಾಗಿ ಐಚ್ಛಿಕ ಚಲನ ನಿಯಂತ್ರಣ ಪ್ರೇರಣೆಗಳು ನಿಮ್ಮಿದುಳಿನ ಪರ್ಕಿನ್ಯೆ ಕೋಶಗಳಲ್ಲಿ ಉದ್ಭವಿಸುತ್ತವೆ.

ನಿಮ್ಮಿದುಳಿನ ಪುರಾತನ ಭಾಗದಲ್ಲಿ ಉದ್ಭವವಾದ ಪ್ರೇರಣೆಗಳು ನೇರವಾಗಿ ಒಳಕಿವಿ ನಡುವಿನ ನರಕೋಶ ಕೇಂದ್ರಗಳಿಗೆ ಒಯ್ಯುತ್ತವೆ.

ಉಳಿದ ಭಾಗಗಳಿಂದ ಉದ್ಭವವಾದವು ಮೊದಲು ಆಳ ನರಕೋಶ ಕೇಂದ್ರಗಳಿಗೆ ಒಯ್ದು ಅಲ್ಲಿಂದ ಮುಂದೆ ಒಳಕಿವಿ ನಡುವಿನ ನರಕೇಂದ್ರ, ಮಿದುಳುಕಾಂಡದ ಜಾಲಂದ್ರ ರಚನೆ (ರೆಟಿಕ್ಯುಲರ್ ಫಾರ್ಮೇಶನ್) ಕೆಂಬಣ್ಣ ನರಕೇಂದ್ರ (ರೆಡ್ ನ್ಯೂಕ್ಲಿಯಸ್) ಇವುಗಳ ಮೂಲಕ ಮಿದುಳುಬಳ್ಳಿಯಲ್ಲಿರುವ ಚಾಲಕ ನರಕೋಶಗಳನ್ನು ತಲಪಿ ಕೊನೆಗೆ ದೇಹದ ಎಲ್ಲ ಐಚ್ಛಿಕ ಸ್ನಾಯುಗಳಿಗೂ ಸಾಗಿಸುತ್ತವೆ. ತೆಲಮಸ್ಸಿನ ಮೂಲಕ ಈ ಪ್ರೇರಣೆಗಳು ಮಹಾಮಸ್ತಿಷ್ಕದ ಚಾಲಕರಗಟೆಯನ್ನು ತಲಪುವುವು.

ನಿಮ್ಮಿದುಳು ಮತ್ತು ಕೇಂದ್ರನರಮಂಡಲದ ಇತರ ಭಾಗಗಳ ನಡುವೆ ಒಂದರಿಂದೊಂದಕ್ಕೆ ಸುತ್ತಿಬರುವ ಮಂಡಲ (ಸರ್ಕ್ಯೂಟ್) ದಂತೆ ವ್ಯಕ್ತವಾಗುವುದು. ಮಹಾಮಸ್ತಿಷ್ಕದೊಡನೆ ಇರುವ ಸಂಪರ್ಕದ ಮೂಲಕ ಸಂಕಲ್ಪಿಸಿದ ಚಲನೆಗಾಗಿ ಚಾಲಕ ರಗಟೆಯಿಂದ ಹೊರಟ ಆಜ್ಞೆಗಳ ವಿವರ ನಿಮ್ಮಿದುಳಿಗೆ ಬರುತ್ತದೆ. ಇದೇ ಆಜ್ಞೆಯಂತೆ ಪ್ರಸ್ತುತ ವಿಕಸಿತವಾಗುತ್ತಿರುವ ಚಲನೆಯ ವಿವರ ನಿಮ್ಮಿದುಳಿಗೆ ಮಿದುಳುಬಳ್ಳಿಯೊಡನೆ ಇರುವ ಸಂಪರ್ಕದ ಮೂಲಕ ಒದಗುತ್ತದೆ. ವಿಕಸಿಸುತ್ತಿರುವ ಚಲನೆಯನ್ನು ಸಂಕಲ್ಪಿತ ಚಲನೆಯೊಂದಿಗೆ ಹೋಲಿಸಿ ಕುಂದುಗಳು ಏನಾದರೂ ಇದ್ದು ಚಲನೆಯ ವೇಗ, ಬಲ, ದಿಕ್ಕು, ವ್ಯಾಪ್ತಿ ಇವುಗಳ ವ್ಯತ್ಯಾಸದಿಂದ ಸಂಕಲ್ಪಚಲನೆ ಸಿದ್ಧಿಸುವಂತಿಲ್ಲದಿದ್ದರೆ ತಿದ್ದುವ ಸಂಕೇತಗಳನ್ನು ನಿಮ್ಮಿದುಳು ಚಾಲಕರಗಟೆ ಮತ್ತು ಮಿದುಳುಬಳ್ಳಿ ಎರಡು ಕಡೆಗೂ ಕಳುಹಿಸುತ್ತದೆ. ಇದು ಲಂಬಿತವಾದ ಒಂದು ನರಸಂಬಂಧಿತ ಅನೈಚ್ಛಿಕ ಕ್ರಿಯಾರೂಪದಂತಿದ್ದು (ರಿಫ್ಲೆಕ್ಸ್ ಆಕ್ಷನ್) ಐಚ್ಛಿಕಸ್ನಾಯುಗಳ ಚಲನೆಗೆ ಮತ್ತು ಅವುಗಳ ನಿರಂತರ ಬಿಗಿತದ ಹದಕ್ಕೂ (ಟೋನ್) ಕಾರಣವಾಗಿ ಸ್ವನಿಯಂತ್ರಿತ ಚಲನೆ ಸಾರ್ಥಕವಾಗುವಂತೆ ಮಾಡುವುದು. ನಿಮ್ಮಿದುಳಿನ ಕಾರ್ಯವಿಧಾನವನ್ನು ಸಂಕ್ಷೇಪವಾಗಿ ಹೇಳಬೇಕೆಂದರೆ ಇದು ಗುರಿಯನ್ನು ಗುರುತಿಸುವ, ಕ್ಷಿಪಣಿಯನ್ನು ನಿಯಂತ್ರಿಸುವ, ಸಾಧನದಂತೆ ಕೆಲಸ ಮಾಡುತ್ತದೆ. ಆದರೆ, ಇದಕ್ಕಾಗಿ ಒಂದೇ ರೀತಿಯ ಸಂಕೇತವನ್ನು ಕಳುಹಿಸುವುದಕ್ಕೆ ಬದಲಾಗಿ ನಿಮ್ಮಿದುಳು ಅನೇಕ ವಿಧವಾದ ಹಾಗೂ ಕ್ರಮಾನುಸಾರವಾದ ತಿದ್ದುಪಡಿ ಸಂಕೇತಗಳನ್ನು ಒಂದೇ ಸಮನೆ ಒದಗಿಸುವುದು. ಮಹಾಮಸ್ತಿಷ್ಕದ ನಿಯಂತ್ರಣಕ್ಕೆ ವಿರುದ್ಧವಾಗಿ ನಿಮ್ಮಿದುಳು ದೇಹದ ಅದೇ ಬದಿಯ ಸ್ನಾಯುಗಳ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.

ನಿಮ್ಮಿದುಳಿನ ಕಾರ್ಯಗಳು:

1. ಐಚ್ಛಿಕ ಸ್ನಾಯುವಿನ ಹದವನ್ನು ಅವಶ್ಯಕತೆಗೆ ತಕ್ಕಂತೆ ಸರಿಹೊಂದಿಸಿ ಮೈ ನಿಲವನ್ನು (ಮಾನವನಲ್ಲಿ ನೆಟ್ಟ ನಿಲವು) ಸಮತೋಲನದಿಂದ ಕಾಪಾಡಲು ಸಹಾಯ ಮಾಡುತ್ತದೆ.

2. ಇತರ ಸಮತೋಲಕ ಪ್ರೇರಣೆಗಳನ್ನು ಸಂಯೋಜಿಸಿ ಅವೆಲ್ಲ ಸಫಲವಾಗುವಂತೆ ಮಾಡುವ ಮಹತ್ತ್ವದ ಪಾತ್ರವನ್ನು ವಹಿಸುತ್ತದೆ.

3. ಸ್ವತಃ ಚಲನೆಯನ್ನು ಪ್ರೇರೇಪಿಸುವುದಿಲ್ಲವಾದರೂ, ಚಾಲಕ ರಗಟೆಯಿಂದ ಪ್ರೇರೇಪಿಸಲ್ಪಟ್ಟ ಚಲನಕ್ರಿಯೆಗಳ ಮೇಲ್ವಿಚಾರಣೆ ಮಾಡಿ ಅವನ್ನು ತಿದ್ದಿ, ಅವು ಸುಗಮವಾಗಿ ಮತ್ತು ನಯವಾಗಿ ಸಂಕಲ್ಪಿತ ದಿಕ್ಕಿನಲ್ಲಿ ಸರಿಯಾದ ವೇಗದಲ್ಲಿ, ಸರಿಯಾದ ಮಟ್ಟಿಗೆ ನಡೆಯುವಂತೆ ಮಾಡುತ್ತದೆ.

4. ಅಭ್ಯಾಸ ಕುಶಲತೆಗಳನ್ನು ಬೆಳೆಸಲು ಸಹಾಯ ಮಾಡುತ್ತದೆ.

5. ನಮ್ಮ ಪರಿಪಾಠದ ಅನೇಕ ಚಲನವಲನಗಳು ಸುಪ್ತ ಪ್ರಜ್ಞೆಯ (ಸಬ್‌ಕಾನ್ಷಸ್) ಮಟ್ಟದಲ್ಲಿಯೇ ನೆರವೇರುವಂತೆ ಮಾಡಿ, ಮನಸ್ಸಿನ ಏಕಾಗ್ರತೆಯ ಭಾರವನ್ನು ನಿವಾರಿಸುತ್ತದೆ.

6. ದೇಹದ ನಿಲುವಿಗೆ ಸಂಬಂಧಿಸಿದ ಅನೇಕ ಅನೈಚ್ಛಿಕ ಸುಪ್ತ ಪ್ರಜ್ಞಿತ ಚಲನೆಗಳನ್ನು ನಿಯಂತ್ರಿಸುತ್ತದೆ.

ನಿಮ್ಮಿದುಳಿನ ರೋಗಗಳು: ಇವುಗಳ ಪೈಕಿ ಕೆಲವು ಆಜನ್ಮವಾದ ನ್ಯೂನಾತಿರೇಕಗಳಿಂದ ಬರುತ್ತವೆ. ಸಾಮಾನ್ಯವಾಗಿ ಉರಿಊತ, ಏಡಿಗಂತಿ ಪೆಟ್ಟು, ಬಿಳಿಹೊದ್ದಿಕೆಯ ನಾಶ (ಡಿಮೈಯಲಿನೇಷನ್), ರಕ್ತ ಹೆಪ್ಪುಗಟ್ಟುವಿಕೆ ಅಥವಾ ರಕ್ತನಾಳಗಳ ರೋಗದಿಂದ ಸರಿಯಾಗಿ ರಕ್ತಪೂರೈಕೆ ಆಗದಿರುವಿಕೆ, ತಲೆ ಬುರುಡೆಯ ವೈಪರೀತ್ಯಗಳು ನಿಮ್ಮಿದುಳಿನ ರೋಗಕ್ಕೆ ಕಾರಣಗಳು. ಪ್ರತಿರೋಧಕ ಚುಚ್ಚುಮದ್ದಿನ ಬಳಕೆಯ ಬಳಿಕ ಕೆಲವು ಸಲ ನಿಮ್ಮಿದುಳಿನ ರೋಗ ಸಂಭವಿಸಬಹುದು. ನಿಮ್ಮಿದುಳಿನ ರೋಗಗಳ ಲಕ್ಷಣಗಳು ಮೂಲತಃ ಏಕರೂಪವಾಗಿದ್ದರು ಅವು ರೋಗದ ಕಾರಣ, ವ್ಯಾಪ್ತಿ ಹಾಗೂ ಬೆಳೆವಣಿಗೆಯ ವೇಗಗಳನ್ನು ಅವಲಂಬಿಸಿವೆ. ನಿಮ್ಮಿದುಳು ರಗಟೆಯ ನಾಶದಿಂದ ಉಂಟಾಗುವ ಕಾರ್ಯಹಾನಿ ಕೆಲವು ಸಂದರ್ಭಗಳಲ್ಲಿ ನಿಮ್ಮಿದುಳಿನ ಆಳ ನರಕೇಂದ್ರಗಳು ನಷ್ಟವಾದ ಕಾರ್ಯಗಳನ್ನು ವಹಿಸುವುದರಿಂದ ಸ್ವಲ್ಪ ಮಟ್ಟಿಗೆ ಪರಿಹರಿಸಲ್ಪಡುತ್ತವೆ. ಆದರೆ, ನರಕೇಂದ್ರಗಳೇ ನಾಶವಾದಾಗ ಉಂಟಾಗುವ ಕಾರ್ಯಹಾನಿ ಶಾಶ್ವತ. ನಿಮ್ಮಿದುಳಿನ ಯಾವುದೇ ಒಂದು ಬದಿ ರೋಗಪೀಡಿತವಾಗಿದ್ದರೆ ರೋಗಲಕ್ಷಣಗಳು ದೇಹದ ಅದೇ ಬದಿಯಲ್ಲಿ ಕಾಣಿಸಿಕೊಳ್ಳುತ್ತದೆ.

ನಿಮ್ಮಿದುಳಿನ ರೋಗಪೀಡಿತ ಮನುಷ್ಯನ ಸ್ನಾಯುಗಳು ಸ್ವಾಭಾವಿಕ ಬಿಗಿತವನ್ನು ಕಳೆದುಕೊಂಡು ಸಡಿಲವಾಗುತ್ತವೆ. ರೋಗಪೀಡಿತರಿಗೆ ಮೈ ಬಾಗಿದ್ದು, ಹೆಗಲುತಗ್ಗಿ, ನಿಲುವು ಅಸಹಜವಾಗಿರುವುದು. ದೇಹದ ಅಂಗಗಳನ್ನು ಉದ್ದೇಶಪಟ್ಟು ಖಚಿತ ಭಂಗಿಯಲ್ಲಿ

ನಿಲ್ಲಿಸಲು ಅಸಾಧ್ಯ. ಬವಳಿಬಂದಂತಾಗುವುದು ಸಾಮಾನ್ಯ. ರೋಗಪೀಡಿತರಿಗೆ ಪದೇ ಪದೇ ಬೀಳುವ ಪ್ರವೃತ್ತಿ ಇರುವುದರಿಂದ ದೇಹದ ಸಮತೋಲನವನ್ನು ಕಾಯ್ದುಕೊಳ್ಳುವುದು ಕಷ್ಟ. ಸ್ನಾಯುಗಳು ಬಲಹೀನವಾಗಿದ್ದು ಬೇಗ ದಣಿವು ಉಂಟಾಗುತ್ತದೆ. ಸ್ನಾಯು ಚಟುವಟಿಕೆಗಳು ತಾಳತಪ್ಪಿದಂತಾಗಿ ಚಲನೆಗಳು ಕ್ರಮಗೆಟ್ಟು ಅವ್ಯವಸ್ಥಿತವಾಗಿರುತ್ತವೆ. ಇಂಥ ಸ್ಥಿತಿಗೆ ಅಟಾಕ್ಸಿಯ ಎಂದು ಹೆಸರು. ಚಲನೆಯ ಅಸಂಘಟಿತ ಸ್ಥಿತಿಯನ್ನು ಹಲವಾರು ರೀತಿಗಳಲ್ಲಿ ತಪಾಸಣೆ ಮಾಡಬಹುದು: 1. ಉದ್ದೇಶದಂತೆ ಚಲನೆಯನ್ನು ಆರಂಭಿಸುವುದು ಮತ್ತು ಮುಗಿಸುವುದು ಕಷ್ಟ. ಗುರಿಯನ್ನು ಮೀರಿ ಚಲನೆ ಮುಂದುವರಿಯಬಹುದು (ಪಾಸ್ಟ್ ಪಾಯಿಂಟಿಂಗ್) ಅಥವಾ ಮುಂಚೆಯೇ ನಿಂತುಹೋಗಬಹುದು (ಅಳತೆಗೊರೆ ಡಿಸ್‌ಮೆಟ್ರಿಯ). 2. ಗುರಿ ಹತ್ತಿರ ಬಂದಂತೆ ಅವಯವ ಒರಟಾದ ರೀತಿಯಲ್ಲಿ ಅದಿರ ತೊಡಗುವುದು (ಉದ್ದೇಶ ಕಂಪನ; ಇಂಟೆನ್ಷನ್ ಟ್ರೆಮರ್). 3. ಪರ್ಯಾಯ (ಅದಲು ಬದಲು) ಚಲನೆಗಳನ್ನು ಪದೇ ಪದೇ ತ್ವರಿತವಾಗಿ ಹಾಗೂ ಕ್ರಮವಾಗಿ ಮಾಡುವುದು ಅಸಾಧ್ಯ (ಏಡೈಯೊಡೋಕೋಕೈನೆಸಿಸ್). 4. ಚಲನೆಗಳು ಸುಗಮವಾಗಿ ಸಾಗದೆ ಬೇರೆ ಬೇರೆ ಕೀಲುಗಳ ಮಟ್ಟದಲ್ಲಿ ಪ್ರತ್ಯೇಕಿಸಿದಂತಾಗುತ್ತವೆ (ಡಿಕಾಂಪೊಸಿಷನ್ ಆಫ್ ಮೂವ್‌ಮೆಂಟ್ಸ್). 5. ಪ್ರತಿರೋಧ ವಿಳಂಬದಿಂದ ನಿರಂಕುಶವಾಗಿ ಪುಟಿದಂತೆ ಸ್ಫೋಟಕವಾಗಿರುವುದು (ರಿಬೌಂಡ್ ಫಿನಾಮಿನನ್). 6. ಎರಡು ಕಣ್ಣುಗಳ ಚಲನೆ ಒಂದಕ್ಕೊಂದು ಹೊಂದಿಕೊಂಡಿರುವುದಿಲ್ಲ (ಡಿಫೆಕ್ಟಿವ್ ಕಾನ್‌ಜುಗೇಟ್ ಮೂವ್‌ಮೆಂಟ್). ಕಣ್ಣುಗುಡ್ಡೆಗಳು ಕಿಂಚಿತ್ತಾಗಿ ಸದಾ ಆ ಕಡೆ ಚಲಿಸುತ್ತಲೇ ಇರುತ್ತವೆ (ನಿಸ್ಟಾಗ್ಮಸ್). 7. ಧ್ವನಿ ಸ್ಫೋಟಕವಾಗಿ ಮಾತುಗಳು ಅಸ್ಪಷ್ಟವಾಗುತ್ತವೆ. (ಎಕ್ಸ್‌ಪ್ಲೋಸಿವ್ ಸ್ಪೀಚ್). 8. ನಡಿಗೆ ಅಡ್ಡಡ್ಡವಾಗಿ, ಕಣ್ಣುತೆರೆದಿದ್ದರೂ ತತ್ತರಿಸುವಂತೆ ಇರುತ್ತದೆ (ಬ್ರಾಡ್‌ಬೇಸ್ಡ್ ಸ್ಟ್ಯಾಗರಿಂಗ್ ಗೇಯ್ಟ್). ***

**ನಿಯಾಂಡರ್‌ತಾಲ್ ಮಾನವ:** ಮಾನವನ ವಿಕಾಸದ ಹಾದಿಯಲ್ಲಿ ಪಿತಕ್ಯಾಂತ್ರಪಸ್ (ಹೋಮೊ) ಎರೆಕ್ಟಸ್ ಮಾನವನಿಗಿಂತ ಬಹು ಮುಂದುವರಿದ ಆದರೆ, ನವೀನ ಮಾನವನಿಗಿಂತ ಬಹು ಆದಿಮ ಬುಡಕಟ್ಟಿನ ಮಾನವನ ಗುಂಪು. ನಿಯಾಂಡರ್‌ತಾಲ್ ಮಾನವ ಪ್ಲೀಸ್ಟೋಸೀನ್ ಕಾಲದ ಉತ್ತರ ಭಾಗದಲ್ಲಿ ಕೊನೆಯ ಹಿಮಯುಗ ಪ್ರಾರಂಭವಾಗುವ ಮುನ್ನ ಯೂರೇಷ್ಯ ಮತ್ತು ಉತ್ತರ ಆಫ್ರಿಕಾದಲ್ಲಿ ಕಾಣಿಸಿಕೊಂಡು 50,000 ವರ್ಷಗಳ ಹಿಂದೆ ಗತವಂಶಿಯಾದ. ಈತನ ಪಳೆಯುಳಿಕೆಗಳು 1856ರಲ್ಲಿ

ಎ – ನಿಯಾಂಡರ್‌ತಾಲ್; ಬಿ – ಹೊಮೋ ಸೆಪಿಯನ್

ಮೊದಲ ಬಾರಿಗೆ ಜರ್ಮನಿಯ ಡಸೆಲ್‌ಡಾರ್ಫ್ ಪಟ್ಟಣದ ಹತ್ತಿರ ಇರುವ ನಿಯಾಂಡರ್ ಕಣಿವೆಯಲ್ಲಿ ದೊರಕಿದುವು. ಆದ್ದರಿಂದ ಈತನಿಗೆ ನಿಯಾಂಡರ್‌ತಾಲ್ ಮಾನವ ಎಂಬ ಹೆಸರು ಬಂತು. ಈತ ಸ್ವಲ್ಪ ಗಿಡ್ಡಾದ, ಬಲಿಷ್ಠ ದೇಹದ ಮಾನವ. ತಲೆಬುರುಡೆ ಬಹಳ ಮಂದವಾದ ಮೂಳೆಗಳಿಂದ ರಚಿತವಾಗಿತ್ತು. ಪಿತಕ್ಯಾಂತ್ರಪಸ್ ಮಾನವನ ಹಾಗೆ ಬಲವಾದ ಹುಬ್ಬಿನ ಏಣುಗಳು, ಮುಂಚಾಚಿದ ದವಡೆಗಳು, ಸ್ವಲ್ಪವೇ ಇರುವ ಗಲ್ಲ ಮತ್ತು ಇಳಿಜಾರಾದ ಹಣೆಯಿದ್ದುವು. ಆದರೆ, ಈತನ ಮೆದುಳು ಚೆನ್ನಾಗಿ ಬೆಳೆದಿತ್ತು. ಕಪಾಲದ ಪಾತ್ರ ಸುಮಾರು 1450 ಘ ಸೆಂಮೀ ಇತ್ತು. ಇದರಿಂದ ಈತ ಬಹುಮಟ್ಟಿಗೆ ಬುದ್ಧಿವಂತನಾಗಿದ್ದ ಎಂದು ತಿಳಿಯುತ್ತದೆ. ಈತ ಉಪಯೋಗಿಸುತ್ತಿದ್ದ ಚೂಪಾದ ಮತ್ತು ಹರಿತವಾದ ಆಯುಧಗಳ ಆಧಾರದ ಮೇಲೆ ಈತ ಒಳ್ಳೆಯ ಬೇಟೆಗಾರನಾಗಿದ್ದ ಎನ್ನಲಾಗಿದೆ. ಅಲ್ಲದೇ ಬೆಂಕಿಯನ್ನು ಉಂಟು ಮಾಡುವ ಉತ್ತಮ ಸಲಕರಣೆಗಳನ್ನು ತಯಾರಿಸುತ್ತಿದ್ದ. ಆಹಾರವನ್ನು ಬೇಯಿಸಿ ತಿನ್ನುತ್ತಿದ್ದ. ಅತಿಶೀತಕಾಲವಾದ ಅಂತ್ಯ ಹಿಮಯುಗದ ಕಡೆಯ ಭಾಗದಲ್ಲಿ ಯುರೋಪಿನ ಗುಹೆಗಳಲ್ಲಿ ವಾಸಿಸುತ್ತಿದ್ದ ನಿಯಾಂಡರ್‌ತಾಲ್ ಮಾನವ ಸತ್ತವರನ್ನು ಹೂಳುವಾಗ ಕೆಲವು ನಿಯಮಗಳನ್ನು ಪಾಲಿಸುತ್ತಿದ್ದ. ಇವು ಈತನ ಸಂಸ್ಕೃತಿಯನ್ನೂ ಅಂದಿನ ಸಮಾಜಧರ್ಮದ ಮನೋಭಾವಗಳನ್ನೂ ನಿರೂಪಿಸುತ್ತವೆ.

ನಿಯಾಂಡರ್‌ತಾಲ್ ಮಾನವನ ಅಂತ್ಯಕ್ಕೆ ಅನೇಕ ಕಾರಣಗಳನ್ನು ಕೊಡಲಾಗಿದೆ. ಪೂರ್ವ ದಿಕ್ಕಿನಿಂದ ಬಂದ ಆಧುನಿಕ ಮಾನವನಂಥ (ಹೋಮೊ ಸೇಪಿಯನ್ಸ್) ಮಾನವರು ಈತನ ಕುಲವನ್ನು ನಾಶಗೊಳಿಸಿರಬಹುದು. ಅಥವಾ ತನಗಿಂತ ಮುಂದುವರಿದ ಮತ್ತು ಒಳ್ಳೆಯ ಆಯುಧ ಹಾಗೂ ಹತ್ಯಾರುಗಳನ್ನು ಉಪಯೋಗಿಸುತ್ತಿದ್ದ ಮಾನವರೊಡನೆ ಈತ ಸ್ಪರ್ಧಿಸಲಾರದೆ ಅವರಿಂದ ನಾಶವಾಗಿರಬಹುದು.

ಮೇಲೆ ತಿಳಿಸಿದ ನಿಯಾಂಡರ್‌ತಾಲ್ ಮಾನವನ ಲಕ್ಷಣಗಳು ಸಹಜವಾದ ಲಕ್ಷಣಗಳಲ್ಲ. ಆತನ ಕಾಲದವರು ಸಾಮಾನ್ಯವಾಗಿ ರಿಕೆಟ್ಸ್ ರೋಗದಿಂದ ನರಳುತ್ತಿದ್ದುದರಿಂದ ಆ ಲಕ್ಷಣಗಳಿದ್ದುವೆಂಬ ಅಭಿಪ್ರಾಯವೂ ಉಂಟು. ನಿಯಾಂಡರ್‌ತಾಲ್ ಮಾನವ ರಿಕೆಟ್ಸ್ ರೋಗಕ್ಕೆ ತುತ್ತಾಗಲು ಆತ ಉಪಯೋಗಿಸುತ್ತಿದ್ದ ಆಹಾರದಲ್ಲಿ ವೈಟಮಿನ್ ಡಿ ಕೊರತೆಯಿತ್ತೆಂದು ಮತ್ತು ಆತ ಜೀವಿಸುತ್ತಿದ್ದ ಚಳಿ, ಮಳೆ ಹೆಚ್ಚಾಗಿದ್ದ ಹಿಮಯುಗದಲ್ಲಿ ದೇಹಕ್ಕೆ ಈ ವೈಟಮಿನ್ ಒದಗಲು ಸಹಾಯಕವಾದ ಸೂರ್ಯರಶ್ಮಿ ಬಹುಶಃ ಹೇರಳವಾಗಿ ದೊರಕುತ್ತಿರಲಿಲ್ಲ ಎಂಬ ಎರಡು ಕಾರಣಗಳನ್ನು ಕೊಡುತ್ತಾರೆ. (ಎನ್.ವಿ.ಎ)

**ನಿರಿಚ್ಛಾ ಪ್ರತಿಕ್ರಿಯೆ (ರಿಫ್ಲೆಕ್ಸ್ ಆಕ್ಷನ್):** ಜ್ಞಾನೇಂದ್ರಿಯಗಳಿಂದ ಜ್ಞಾನ ನರಗಳ ಮೂಲಕ ಮಿದುಳು ಬಳ್ಳಿಗೆ (ಸ್ಪೈನಲ್ ಕಾರ್ಡ್) ಸಾಗಿಸಲ್ಪಟ್ಟ ಆವೇದನೆಗಳು ಮಿದುಳಿನ ಪರ್ಯಾಲೋಚನೆ ಇಲ್ಲದೆ, ಕೂಡಲೆ ಕ್ರಿಯಾ ಪ್ರೇರಣೆಗಳಾಗಿ ಕ್ರಿಯಾಂಗಗಳಿಗೆ ಹಿಂದಕ್ಕೆ ಕಳುಹಿಸಲ್ಪಟ್ಟ ಕ್ರಿಯೆ. ಇಲ್ಲಿ ಮಿದುಳಿಗೆ ಸುದ್ದಿ ತಿಳಿಯುವ ಮೊದಲೆ ಪ್ರತಿಕ್ರಿಯೆಯು ನಡೆಯುವುದರಿಂದ ಇದನ್ನು ಪ್ರತಿಫಲನೆ (ರಿಫ್ಲೆಕ್ಸ್) ಎಂದು ಸಹ ಕರೆಯುತ್ತಾರೆ.

ನಿರಿಚ್ಛಾ ಪ್ರತಿಕ್ರಿಯೆಯಲ್ಲಿ, ಜ್ಞಾನೇಂದ್ರಿಯ (ಸೆನ್ಸ್ ಆರ್ಗನ್), ಜ್ಞಾನವಾಹಿನಿ ನರ (ಸೆನ್ಸರಿ ನರ್ವ್), ಜ್ಞಾನನರಗ್ರಂಥಿ (ಸೆನ್ಸರಿ ನರ್ವ್ ಗಾಂಗ್ಲಿಯನ್), ಜ್ಞಾನನರಕೋಶ (ಸೆನ್ಸರಿ ನ್ಯೂರೋನ್), ಮಧ್ಯಂತರ ನರಕೋಶ (ಇಂಟರ್‌ಮೀಡಿಯೇಟ್ ನ್ಯೂರೋನ್), ಕ್ರಿಯಾನರಕೋಶ (ಮೋಟಾರ್ ನ್ಯೂರೋನ್), ಕ್ರಿಯಾವಾಹಿನಿ ನರ (ಮೋಟಾರ್ ನರ್ವ್) ಮತ್ತು ಕ್ರಿಯಾಂಗ (ಮೋಟಾರ್ ಆರ್ಗನ್) ಭಾಗವಹಿಸುತ್ತವೆ. ಇವುಗಳ




ಜೋಡಣೆಯು ಒಂದು ಕಮಾನಿನ ಆಕಾರದಂತೆ ಇರುವುದರಿಂದ ಇದನ್ನು ಪ್ರತಿಕ್ರಿಯಾತ್ಮಕ ಕಮಾನು (ರಿಫ್ಲೆಕ್ಸ್ ಆರ್ಕ್) ಅಥವಾ ಪ್ರತಿಫಲನ ಕಮಾನು ಎಂದು ಕರೆಯಲಾಗಿದೆ. ಎಲ್ಲ ಪ್ರಾಣಿಗಳು ಅನೇಕ ನಿರಿಚ್ಛಾ ಪ್ರತಿಕ್ರಿಯೆಯನ್ನು ತೋರಿಸುತ್ತವೆ. ಉದಾಹರಣೆ: ಬರಿಗಾಲಲ್ಲಿ ನಡೆಯುತ್ತಿರುವಾಗ ಕಾಲಿಗೆ ಮುಳ್ಳು ಚುಚ್ಚಿದ ಕೂಡಲೇ ಕಾಲಿನ ಚರ್ಮದಲ್ಲಿರುವ ಜ್ಞಾನನರ ಕೋಶಗಳು ಈ ಚುಚ್ಚುವಿಕೆಯ ಪ್ರೇರಣೆಯನ್ನು ಜ್ಞಾನವಾಹಿನಿ ನರಗಳ ಮೂಲಕ ಮಿದುಳು ಬಳ್ಳಿಯಲ್ಲಿರುವ ಜ್ಞಾನ ನರಕೋಶಗಳಿಗೆ ಸಾಗಿಸುತ್ತವೆ. ಕೂಡಲೆ ಪ್ರೇರಣೆಯು ಮಧ್ಯಂತರ ನರಕೋಶಗಳ ಮೂಲಕ ಹಾಗು ಕ್ರಿಯಾ ನರಕೋಶಗಳನ್ನು ತಲುಪಿ, ಅಲ್ಲಿಂದ ಕ್ರಿಯಾಪ್ರೇರಣೆಯಾಗಿ ಕ್ರಿಯಾವಾಹಿನಿ ನರಗಳ ಮೂಲಕ ಕ್ರಿಯಾಂಗವಾದ ಕಾಲಿನ ಸ್ನಾಯುವನ್ನು ತಲುಪಿ, ಕಾಲನ್ನು ಚುಚ್ಚಿದ

ಸ್ಥಳದಿಂದ ಹೊರತೆಗೆಯುವಂತೆ ಪ್ರೇರಣೆ ಮಾಡುತ್ತದೆ. ಈ ಕಾರ್ಯವು ಕೆಲವೇ ಕ್ಷಣಗಳಲ್ಲಿ ನಡೆದುಹೋಗುತ್ತದೆ. ಇದೇ ರೀತಿಯಾಗಿ ನಾವು ಬಿಸಿಯಾದ ವಸ್ತುವನ್ನು ಮುಟ್ಟಿದ ಕೂಡಲೇ ಕೈಯನ್ನು ಹಿಂತೆಗೆದುಕೊಳ್ಳುತ್ತೇವೆ. ಇಂಥ ಕ್ರಿಯೆಗಳು ಪ್ರಾಣಿಗಳ ಉಳಿವಿಗೆ ಸಹಾಯಕ.

ಪ್ರಯೋಗಗಳ ಮೂಲಕ ನಿರಿಚ್ಛಾ ಪ್ರತಿಕ್ರಿಯೆಯಲ್ಲಿ ಮಿದುಳು ಭಾಗವಹಿಸುವುದಿಲ್ಲವೆಂದು ತೋರಿಸಬಹುದು. ಮಿದುಳನ್ನು ಮಾತ್ರ ನಾಶಪಡಿಸಿದ ಕಪ್ಪೆಯ ಕಾಲಿನ ಮೇಲೆ ದುರ್ಬಲ ಆಮ್ಲದಲ್ಲಿ ಅದ್ದಿದ ಕಾಗದದ ಚೂರನ್ನೊ ಅಥವಾ ಹತ್ತಿಯ ಚೂರನ್ನೊ ಇಟ್ಟಕೂಡಲೇ ಕಪ್ಪೆಯು ಅದನ್ನು ತನ್ನ ಕಾಲಿನ ಬೆರಳುಗಳಿಂದ ಕೆಳಕ್ಕೆ ತಳ್ಳುತ್ತದೆ. ಇದೇ ರೀತಿಯಾಗಿ ದುರ್ಬಲ ವಿದ್ಯುತ್ತನ್ನು ಕೊಟ್ಟಾಗ ಕಪ್ಪೆಯು ತನ್ನ ಕಾಲನ್ನು ಹಿಂದಕ್ಕೆ ಎಳೆದುಕೊಳ್ಳುವುದನ್ನು ಕಾಣಬಹುದು. ಇಲ್ಲಿ ಮಿದುಳು ನಾಶವಾಗಿರುವುದರಿಂದ ಈ ಕ್ರಿಯೆಗಳೆಲ್ಲ ಮಿದುಳು ಬಳ್ಳಿಯ ನಿರಿಚ್ಛಾ ಪ್ರತಿಕ್ರಿಯೆಯಿಂದಲೇ ಆಗಿದೆ ಎಂದು ಖಚಿತ ಹೇಳಬಹುದು. ***

**ನಿರೆನ್‌ಬರ್ಗ್, ಮಾರ್ಷಲ್ (1927 – ):** ಆನುವಂಶೀಕತೆಯ ರಾಸಾಯನಿಕ ತಳಹದಿಯನ್ನು ಬಯಲು ಮಾಡಿದವರಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಅಮೆರಿಕದ ಜೀವರಸಾಯನ ವಿಜ್ಞಾನಿ. 1948ರಲ್ಲಿ ಫ್ಲಾರಿಡ ವಿಶ್ವವಿದ್ಯಾಲಯದಿಂದ ಬಿ.ಎಸ್. ಡಿಗ್ರಿ ಪಡೆದ ನಿರೆನ್‌ಬರ್ಗ್ ಮುಂದೆ ಅದೇ ವಿಶ್ವವಿದ್ಯಾಲಯದ ಎಂ.ಎಸ್.ಡಿಗ್ರಿ (ಜೀವವಿಜ್ಞಾನ) ಕೂಡ ಪಡೆದ. ಅನಂತರ ಮಿಷಿಗನ್ ವಿಶ್ವವಿದ್ಯಾಲಯದಲ್ಲಿ ಜೀವರಸಾಯನ ವಿಜ್ಞಾನದ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿ ಪಿ.ಎಚ್.ಡಿ ಪದವಿಯನ್ನೂ ಗಳಿಸಿದ. ಆತನ ಸಂಶೋಧನಾ ಚಟುವಟಿಕೆಗಳಿಗೆ ಅಮೆರಿಕನ್ ಕ್ಯಾನ್ಸರ್ ಸಂಸ್ಥೆ ಬೆಂಬಲವಿತ್ತು. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಸಂಸ್ಥೆಯಲ್ಲಿ ಕೆಲಸ ಮಾಡಲು ಪೋಸ್ಟ್ ಡಾಕ್ಟರೇಟ್ ಫೆಲೊಷಿಪ್ಪನ್ನು ನೀಡಿತು. ನಿರೆನ್‌ಬರ್ಗ್ 1962ರಲ್ಲಿ ನ್ಯಾಷನಲ್ ಹಾರ್ಟ್ ಇನ್‌ಸ್ಟಿಟ್ಯೂಟಿನ ಬಯೋಕೆಮಿಕಲ್ ಜೆನೆಟಿಕ್ಸ್ ಪ್ರಯೋಗಾಲಯದ ಮುಖ್ಯಾಧಿಕಾರಿಯಾದ. ತಳಿವಿಜ್ಞಾನವನ್ನು ಜೀವರಾಸಾಯನಿಕ ದೃಷ್ಟಿಯಿಂದ ಅಭ್ಯಸಿಸುವುದು ಈ ವಿಭಾಗದ ಮುಖ್ಯ ಉದ್ದೇಶ. ನಿರೆನ್‌ಬರ್ಗ್ ಮತ್ತು ಅವರ ಸಹೋದ್ಯೋಗಿಗಳು ನಡೆಸಿದ ಸಂಶೋಧನೆಗಳು ಈ ಕ್ಷೇತ್ರದಲ್ಲಿ ನೂತನ ಯುಗವನ್ನೇ ಆವಾಹಿಸಿದವು ಎಂದರೆ ತಪ್ಪಾಗಲಾರದು. ಈ ಸಂಶೋಧನೆಗಳ ಮಹತ್ತ್ವವನ್ನು ಗಮನಿಸಿ 1968ರಲ್ಲಿ ನಿರೆನ್‌ಬರ್ಗ್ ಅವರಿಗೆ ನೊಬೆಲ್ ಪಾರಿತೋಷಿಕವನ್ನು ನೀಡಿ ಗೌರವಿಸಲಾಯಿತು.

ಮೆಂಡಲ್ (1822–1884) ತಳಿವಿಜ್ಞಾನಕ್ಕೆ ವಿಜ್ಞಾನದ ತಳಹದಿಯನ್ನು ಹಾಕಿದರೂ ಅನೇಕ ವರ್ಷಗಳ ಕಾಲ ಅದರ ರಾಸಾಯನಿಕ ಆಧಾರ ಸ್ಪಷ್ಟವಾಗಿರಲಿಲ್ಲ. 20ನೇ ಶತಮಾನದ ಆದಿಯಲ್ಲಿ ಗೆರಾರ್ಡ್ ಎಂಬವರು ಆನುವಂಶಿಕವಾಗಿ ಕೊಡುಗೆಯಾಗುವ ಕೆಲವು ರೋಗಗಳಿಗೂ ಕೋಶಗಳಲ್ಲಿ ಉತ್ಪತ್ತಿಯಾಗುವ ಕಿಣ್ವಗಳಿಗೂ ಸಂಬಂಧವಿರಬೇಕೆಂದು ಗುರುತಿಸಿದ. ವರ್ಣಹೀನತೆ, ಅಲ್‌ಕ್ಯಾಪ್ಟೋನ್ ಯೂರಿಯ, ಸಿಕಲ್‌ಸೆಲ್ ಅನೀಮಿಯ ಇತ್ಯಾದಿ ಆನುವಂಶಿಕ ರೋಗಗಳಿಗೆ, ಆ ರೋಗಿಗಳಲ್ಲಿ ವಿಶಿಷ್ಟವಾದ ಒಂದು ಕಿಣ್ವದ ಅಭಾವ ಕಾರಣ ಎಂದು ತಿಳಿದುಬಂದಿದೆ. ಕಿಣ್ವಗಳು ಪ್ರೋಟೀನುಗಳು. ಪ್ರೋಟೀನುಗಳು ಅಮೈನೋ ಆಮ್ಲಗಳೆಂಬ ಸರಳ ರಾಸಾಯನಿಕ ವಸ್ತುಗಳಿಂದ ರೂಪಿತವಾಗುವ ಬೃಹದಣುಗಳು. ಇವುಗಳ ಭೌತ, ರಾಸಾಯನಿಕ ಹಾಗೂ ಜೈವಿಕ ಗುಣಗಳೂ ಅಮೈನೊ ಆಮ್ಲಗಳ ಅನುಕ್ರಮವನ್ನು ಅವಲಂಬಿಸುತ್ತವೆ.

ಪ್ರೋಟೀನುಗಳು ಜೀವಿಗಳ ಕೋಶದಲ್ಲಿ ಸಂಶ್ಲೇಷಣೆಯಾಗುತ್ತವೆ. ಆದ್ದರಿಂದ ಪ್ರೋಟೀನುಗಳ ಸಂಶ್ಲೇಷಣೆಯ ಮೇಲೆ ಹತೋಟಿಯಿರುವ ಒಂದು ವ್ಯವಸ್ಥೆ ಕೋಶದಲ್ಲಿರಬೇಕು. ಕೋಶಗಳ ನ್ಯೂಕ್ಲಿಯಸ್ಸಿನಲ್ಲಿರುವ ವರ್ಣತಂತುಗಳು ರಾಸಾಯನಿಕವಾಗಿ ಪ್ರೋಟೀನನ್ನು ಒಳಗೊಂಡ ಡೀಆಕ್ಸಿ ರೈಬೊನ್ಯೂಕ್ಲಿಯಕ್ ಆಮ್ಲಗಳು (ಡಿಎನ್‌ಎ). ಡಿಎನ್‌ಎ ಅಡಿನೈನ್, ಗ್ವಾನೀನ್, ಸೈಟೋಸಿನ್, ಮತ್ತು ಥೈಮಿನ್ ಎಂಬ ಸಾರಜನಕಯುಕ್ತ ಪ್ರತ್ಯಾಮ್ಲಗಳು, ಡೀಆಕ್ಸಿ ರೈಬೋಸ್ ಎಂಬ ಸಕ್ಕರೆ, ಮತ್ತು ಫಾಸ್ಫೇಟ್ ಪುಂಜಗಳಿಂದ ರೂಪಿತವಾಗಿರುವ ಬೃಹದಣು. ಪ್ರೋಟೀನುಗಳಲ್ಲಿರುವ ವೈವಿಧ್ಯ ಡಿಎನ್‌ಎ ಯಲ್ಲಿಯೂ ಕಂಡುಬರುತ್ತದೆ. ಈ ಬಗೆಯ ವೈವಿಧ್ಯಕ್ಕೆ ಅವುಗಳಲ್ಲಿರುವ ಪ್ರತ್ಯಾಮ್ಲಗಳ ಮೊತ್ತ ಮತ್ತು ಅನುಕ್ರಮ ಕಾರಣ. ಪ್ರೋಟೀನಿನ ಸಂಶ್ಲೇಷಣೆ ಕ್ರೊಮೋಸೋಮ್‌ಗಳ ಹತೋಟಿಯಲ್ಲಿ ಅಂದರೆ ಡಿಎನ್‌ಎಯ ಹತೋಟಿಯಲ್ಲಿ ಇರುವುದಾದರೆ ಪ್ರೋಟೀನುಗಳಲ್ಲಿರುವ ಅಮೈನೊ ಆಮ್ಲಗಳ ಅನುಕ್ರಮವನ್ನು ಡಿಎನ್‌ಎ ನಿರ್ದೇಶಿಸುತ್ತದೆ ಎಂದಾಯಿತು. ಆದ್ದರಿಂದ ಡಿಎನ್‌ಎಯಲ್ಲಿರುವ ನೈಟ್ರೊಜನ್ ಪ್ರತ್ಯಾಮ್ಲಗಳ ಅನುಕ್ರಮಕ್ಕೂ ಪ್ರೋಟೀನುಗಳ ಅಮೈನೊ ಆಮ್ಲಗಳ ಅನುಕ್ರಮಕ್ಕೂ ಬಾಂಧವ್ಯವಿರಬೇಕೆಂಬುದು ಸ್ಪಷ್ಟ. ಡಿಎನ್‌ಎಯಲ್ಲಿ ಪ್ರತ್ಯಾಮ್ಲಗಳ ಸರಳ ನೀಳ ಅನುಕ್ರಮ, ಅಮೈನೊ ಆಮ್ಲಗಳ ಸಂಕೇತದಂತೆ ವರ್ತಿಸಬೇಕು. ಕ್ರಿಕ್ ಮತ್ತು ಬೆನ್ಸರ್ ಮತ್ತು ಇತರರ ಪ್ರಯೋಗಗಳಿಂದ ಮೂರು ಪ್ರತ್ಯಾಮ್ಲಗಳ ನೀಳ ಅನುಕ್ರಮ (ತ್ರಿವಳಿ) ಒಂದು ಅಮೈನೊ ಆಮ್ಲದ ಸಂಕೇತ ಎಂದು ತಿಳಿದು ಬಂದಿತು. ನಾಲ್ಕು ಪ್ರತ್ಯಾಮ್ಲಗಳನ್ನು ತ್ರಿವಳಿಗಳಂತೆ 64 ವಿಧಗಳಲ್ಲಿ ಜೋಡಿಸಬಹುದು. ಪ್ರೋಟೀನುಗಳಲ್ಲಿ ಸರಿಸುಮಾರಾಗಿ 21 ಬಗೆಯ ಅಮೈನೊ ಆಮ್ಲಗಳಿರುತ್ತವೆಯಾಗಿ ತ್ರಿವಳಿಗಳ ಸಂಖ್ಯೆ ಬೇಕಿರುವುದಕ್ಕಿಂತ ಹೆಚ್ಚಾಗಿಯೇ ಇದೆ. ದತ್ತ ತ್ರಿವಳಿ (ಉದಾಹರಣೆ ಉಉಉ) ಯಾವ ಅಮೈನೊ ಆಮ್ಲದ ಸಂಕೇತ ಎಂಬುದನ್ನು ತಿಳಿಯುವುದೇ ನಿರೆನ್‌ಬರ್ಗ್ ಮತ್ತು ಅವರ ಸಹೋದ್ಯೋಗಿಗಳು ಆಯ್ದುಕೊಂಡ ಕಾರ್ಯಕ್ಷೇತ್ರ.

ನಿರೆನ್‌ಬರ್ಗ್ ಮತ್ತು ಅವರ ಸಹೋದ್ಯೋಗಿಗಳು ತಮ್ಮ ಸಂಶೋಧನೆಗಳನ್ನು 1960ರಿಂದ ಪ್ರಾರಂಭಿಸಿದರು. ಮೂರು ಉದ್ದೇಶಗಳು ಅವರ ಗಮನದಲ್ಲಿದ್ದವು; 1. ತ್ರಿವಳಿ ಸಂಕೇತಗಳಲ್ಲಿ ಅಡಿನೈನ್, ಗ್ವಾನೀನ್, ಸೈಟೋಸಿನ್ ಮತ್ತು ಥೈಮೀನುಗಳ ಪರಸ್ಪರ ಪ್ರಮಾಣ ಏನು? 2. ಯಾವ ತ್ರಿವಳಿ ಯಾವ ಅಮೈನೋ ಆಮ್ಲದ ಸಂಕೇತ? 3. ಯಾವುದೇ ನಿರ್ದಿಷ್ಟ ಅಮೈನೋ ಆಮ್ಲವನ್ನು ಸೂಚಿಸುವ ತ್ರಿವಳಿಯಲ್ಲಿ ಪ್ರತ್ಯಾಮ್ಲಗಳ ಅನುಕ್ರಮ ಏನು ? ಈ ಉದ್ದೇಶಗಳ ಸಾಧನೆಗೆ ಅವರು ಎಶ್ಚಿರಿಷಿಯ ಕೋಲಿ ಎಂಬ ಸೂಕ್ಷ್ಮಜೀವಿಯಲ್ಲಿ ನಡೆಯುವ ಪ್ರೋಟೀನ್ ಸಂಶ್ಲೇಷಣೆಯನ್ನು ಅಭ್ಯಸಿಸಿದರು. ಇವುಗಳಲ್ಲಿ ಪ್ರೋಟೀನ್ ಸಂಶ್ಲೇಷಣೆ ಶೀಘ್ರವಾಗಿ ನಡೆಯುತ್ತದೆ ಮತ್ತು ಸಂಶ್ಲೇಷಣಾ ವ್ಯವಸ್ಥೆ ಪ್ರಾಣಿಕೋಶಗಳ ವ್ಯವಸ್ಥೆಗಿಂತ ಸರಳತರ. ಪ್ರಾಯೋಗಿಕ ದೃಷ್ಟಿಯಿಂದ ಇಡೀ ಕೋಶವನ್ನು ಬಳಸುವುದಕ್ಕಿಂತ ಅದನ್ನು ಒಡೆದು ಘಟಕ ವಸ್ತುಗಳನ್ನು ಬೇರ್ಪಡಿಸಿ ಅವನ್ನು ಉಪಯೋಗಿಸುವುದು ಅನುಕೂಲ. ಇಂಥ ವ್ಯವಸ್ಥೆಯನ್ನು ಬಳಸಿ ನಡೆಸಿದ ಪ್ರಯೋಗಗಳಿಂದ ರೈಬೋಸೋಮುಗಳ ಮೇಲೆ ಪ್ರೋಟೀನಿನ ಸಂಶ್ಲೇಷಣೆ ನಡೆಯುವುದೆಂದೂ ಡಿಎನ್‌ಎ ನೇತೃತ್ವದಲ್ಲಿ ಸಂಶ್ಲೇಷಿತವಾಗುವ ದೂತ ಆರ್‌ಎನ್‌ಎ ಅಣು ಅಮೈನೋ ಆಮ್ಲಗಳು ತಮ್ಮ ತಮ್ಮ ಸ್ಥಾನವನ್ನು ಸೇರಲು ಮಾರ್ಗದರ್ಶನ ಮಾಡುವುದೆಂದೂ ತಿಳಿದುಬಂತು. ಅಮೈನೋ ಆಮ್ಲಗಳು ನೇರವಾಗಿ ತ್ರಿವಳಿ ಸಂಕೇತವನ್ನು ಗುರುತಿಸಲಾರವು. ಬದಲಾಗಿ ವಾಹಕ ಆರ್‌ಎನ್‌ಎ ಎಂಬ ರೈಬೋನ್ಯೂಕ್ಲಿಯಿಕ್ ಆಮ್ಲ ವಿಶೇಷಗಳು ಅಮೈನೋ ಆಮ್ಲಗಳನ್ನು ಹೊತ್ತು ರೈಬೋಸೋಮುಗಳ ಬಳಿ ಒಯ್ಯುತ್ತವೆ. ವಿಶಿಷ್ಟ ಅಮೈನೋ ಆಮ್ಲವೊಂದನ್ನು ವಿಶಿಷ್ಟ ವಾಹಕ ಆರ್‌ಎನ್‌ಎಯೊಂದು ಮಾತ್ರ ಒಯ್ಯುತ್ತದೆ. ದೂತ ಆರ್‌ಎನ್‌ಎ ಮಾತ್ರ ಹೊತ್ತಿರುವ ಅಮೈನೋ ಆಮ್ಲದ ಸಂಕೇತವಾದ ತ್ರಿವಳಿಯನ್ನು ಗುರುತಿಸಬಲ್ಲ ಪ್ರತಿತ್ರಿವಳಿ ವಾಹಕ ಆರ್‌ಎನ್‌ಎ ಅಣುವಿನ ಒಂದು ಭಾಗದಲ್ಲಿ ಇರುತ್ತದೆ. ದೂತ ಆರ್‌ಎನ್‌ಎ ಅಣುವಿನಲ್ಲಿ ತ್ರಿವಳಿಗಳು ಒಂದಾದ ಮೇಲೆ ಒಂದರಂತೆ ಇರುವುದರಿಂದ ತತ್ಸಂಬಂಧಿತ ಅಮೈನೋ ಆಮ್ಲಗಳು ಒಂದಾದ ಮೇಲೆ ಒಂದರಂತೆ ಪೆಪ್ಟೈಡ್ ಬಂಧಗಳಿಂದ ಬದ್ಧವಾಗಿ ಪ್ರೋಟೀನ್ ಅಣು ಸೃಷ್ಟಿಯಾಗುತ್ತದೆ. ದೂತ ಆರ್‌ಎನ್‌ಎ, ನ್ಯೂಕ್ಲಿಯಸ್ಸಿನಲ್ಲಿರುವ ಡಿಎನ್‌ಎ ಅಣುವಿನಲ್ಲಿರುವ ಪ್ರತ್ಯಾಮ್ಲಗಳ ಅನುಸಾರವಾಗಿ ಯಾವುದೇ ಬಗೆಯ ತಪ್ಪುಗಳಾಗದಂತೆ ಸಂಶ್ಲೇಷಿತವಾಗುತ್ತದೆ. ಈ ಸಂಶ್ಲೇಷಣೆ ಪ್ರತ್ಯಾಮ್ಲ ಜೋಡಿಗಳ ನಿಯಮಕ್ಕೆ ಅನುಸಾರವಾಗಿ ನಡೆಯುತ್ತದೆ. ಅಂದರೆ, ಡಿಎನ್‌ಎನಲ್ಲಿ ಅಡಿನೈನ್ ಇದ್ದರೆ, ದೂತ ಆರ್‌ಎನ್‌ಎನಲ್ಲಿ ಅದಕ್ಕೆ ಹೊಂದಿಕೊಳ್ಳುವ ಸ್ಥಾನದಲ್ಲಿ ಯುರಾಸಿಲ್, ಗ್ವಾನಿನ್ ಇದ್ದರೆ ಸೈಟೋಸಿನ್, ಸೈಟೋಸಿನ್ ಇದ್ದರೆ ಗ್ವಾನಿನ್, ಥೈಮಿನ್ ಇದ್ದರೆ ಅಡಿನಿನ್ ಸೇರುತ್ತವೆ:

G-A-C-T-G-C-A-A-A...... ಊಹಾತ್ಮಕ ಡಿ ಎನ್ ಎ ಸರಣಿ

C-T-G-A-C-G-T-T-T ..... ಸಂಶ್ಲೇಷಿತವಾಗುವ ದೂತ ಆರ್‌ಎನ್‌ಎ

(ಆರ್‌ಎನ್‌ಎ ಅಣುವಿನಲ್ಲಿ ಥೈಮಿನ್ ಇರುವುದಿಲ್ಲ. ಬದಲಾಗಿ ಯುರಾಸಿಲ್ ಇರುತ್ತದೆ; ಡೀಆಕ್ಸಿರೈಬೋಸ್ ಬದಲು ರೈಬೋಸ್ ಇರುತ್ತದೆ). ವಾಹಕ ಆರ್‌ಎನ್‌ಎಗಳು ದೂತ ಆರ್‌ಎನ್‌ಎ ಅಣುವಿನ ತ್ರಿವಳಿಗಳನ್ನು ಇದೇ ತತ್ತ್ವದ ಆಧಾರದಿಂದ ಗುರುತಿಸುತ್ತದೆ. ಉದಾಹರಣೆಗೆ C-U-G ತ್ರಿವಳಿಯ ಪ್ರತಿ ಸಂಕೇತ G-A-C. ಇದು ಡಿಎನ್‌ಎ ಅಣುವಿನ ಸಂಕೇತ G-A-C ಗೆ ಸರಿಹೊಂದುತ್ತದೆ. ಪ್ರೋಟೀನ್ ಸಂಶ್ಲೇಷಣೆಯಲ್ಲಿ ರೈಬೋಸೋಮುಗಳನ್ನು ದೂತ ಆರ್‌ಎನ್‌ಎ ಹಗ್ಗದಂತೆ ಬಂಧಿಸುತ್ತದೆ. ಅಮೈನೋ ಆಮ್ಲಗಳನ್ನು ಹೊತ್ತ ವಾಹಕ ಆರ್‌ಎನ್‌ಎ ತನ್ನ ಪ್ರತಿ ತಿವಳಿಗೆ ಸರಿಹೊಂದುವ ಸ್ಥಾನವನ್ನು ದೂತ ಆರ್‌ಎನ್‌ಎಯಲ್ಲಿರುವ ತ್ರಿವಳಿಗೆ ಅನುಸಾರವಾಗಿ ಪತ್ತೆ ಹಚ್ಚಿ ತಾನೂ ರೈಬೋಸೋಮುಗಳಿಗೆ ಬದ್ಧವಾಗುತ್ತದೆ. ಈ ತತ್ತ್ವದ ಆಧಾರದಿಂದ ಸಂಕೇತದ ರಹಸ್ಯವನ್ನು ಬಯಲು ಮಾಡಲು ಸಾಧ್ಯವಾಯಿತು. ಪ್ರಾರಂಭದಲ್ಲಿ ನಿರೆನ್‌ಬರ್ಗ್ ಎಶ್ಚಿರಿಷಿಯಾ ಕೋಲಿ ಕೋಶರಹಿತ ವ್ಯವಸ್ಥೆಗೆ ಬೇರೆ ಮೂಲಗಳಿಂದ ಪಡೆದ ಆರ್‌ಎನ್‌ಎಗಳು ಮತ್ತು ವಿಕಿರಣಪಟು ಇಂಗಾಲವನ್ನು ಒಳಗೊಂಡ ಅಮೈನೋ ಆಮ್ಲ, ಒಂದು ಸಾಧಾರಣ ಅಮೈನೋ ಆಮ್ಲಗಳು ಇವನ್ನು ಸೇರಿಸಿ ಪ್ರೋಟೀನ್ ಸಂಶ್ಲೇಷಣೆಯನ್ನು

ಪ್ರೇರೇಪಿಸಿದರು. ಅನಂತರ ಇದೇ ವ್ಯವಸ್ಥೆಯನ್ನು ಸರಳಗೊಳಿಸಲು ಕೃತಕವಾಗಿ ತಯಾರಿಸಿದ ದೂತ ಆರ್‌ಎನ್‌ಎಗಳನ್ನು ಬಳಸಿ ಯಾವೊಂದು ಉದ್ದೇಶಿತ ಅಮೈನೋ ಆಮ್ಲವನ್ನು ಪೆಪ್ಟೈಡ್ ಬಂಧದಲ್ಲಿ ತೊಡಗುವಂತೆ ಮಾಡಲು ಸಾಧ್ಯವೇ ಎಂದು ಪರೀಕ್ಷಿಸಲಾಯಿತು. ಕೃತಕ ದೂತ ಆರ್‌ಎನ್‌ಎಯಲ್ಲಿ ಪ್ರತ್ಯಾಮ್ಲಗಳ ಪ್ರಮಾಣವನ್ನು ಇಷ್ಟಾನುಸಾರವಾಗಿ ಬದಲಾಯಿಸುವ ಸಾಧ್ಯತೆ ಇರುವುದರಿಂದ ಮತ್ತು ಅವುಗಳ ಪ್ರಮಾಣವನ್ನು ನಿರ್ಧರಿಸುವುದು ಸುಲಭವಾದ್ದರಿಂದ ಈ ಬಗೆಯ ತಂತ್ರ ಪ್ರಯೋಗ ದೃಷ್ಟಿಯಿಂದ ಉತ್ತಮವಾದದ್ದು. ಹೀಗೆ ನಡೆಸಿದ ಪ್ರಯೋಗವನ್ನು ಕೇವಲ ಯುರಾಸಿಲ್‌ನ್ನು ಮಾತ್ರ ಒಳಗೊಂಡ ಕೃತಕ ಆರ್‌ಎನ್‌ಎಯನ್ನು ಬಳಸಿದಾಗ 21 ಅಮೈನೋ ಆಮ್ಲಗಳ ಪೈಕಿ ಫಿನೈಲ್ ಅನಾನಿಲ್ ಮಾತ್ರ ಪಪ್ಟೈಡ್ ಬಂಧಗಳಲ್ಲಿ ತೊಡಗುತ್ತದೆ ಎಂದು ಪತ್ತೆಯಾಯಿತು. ಎಂದರೆ– UUU – ತ್ರಿವಳಿ, ಫೀನೈಲ್ ಅಲಾನಿನ್ನಿನ ಸಂಕೇತವಿರಬೇಕೆಂದು ಊಹಿಸಬಹುದು. ಇದೇ ರೀತಿ ಸೈಟೋಸಿನ್ ಮಾತ್ರ ಇರುವ ಬಹ್ವಂಶಿಯನ್ನು ಬಳಸಿದಾಗ ಪ್ರೊಲೀನ್ ಮಾತ್ರ ಇರುವ ಪ್ರೋಟೀನ್ ದೊರೆಯಿತು. ಇದರಿಂದ ಅಅಅ ಎಂಬುದು ಪ್ರೋಲೋನಿನ ಸಂಕೇತವಿರಬೇಕೆಂದಾಯಿತು. ಈ ಫಲಿತಾಂಶಗಳಿಂದ ಉತ್ತೇಜಿತಗೊಂಡ ನಿರೆನ್‌ಬರ್ಗ್ ಮತ್ತು ಸಂಗಡಿಗರು ಪ್ರತ್ಯಾಮ್ಲಗಳಾದ A, G, C, ಮತ್ತು U ಗಳನ್ನು ಸಾಧ್ಯವಾದ ಎಲ್ಲ ರೀತಿಗಳಲ್ಲಿ ವಿವಿಧ ಪ್ರಮಾಣಗಳಲ್ಲಿ ಜೋಡಿಸಿ ಹಲವಾರು ಕೃತಕ ದೂತ ಆರ್‌ಎನ್‌ಎಗಳನ್ನು ಸೃಷ್ಟಿಸಿದರು. ಕೋಶರಹಿತ ವ್ಯವಸ್ಥೆಗಳಲ್ಲಿ ಇವನ್ನು ದೂತ ಆರ್‌ಎನ್‌ಎ ಗಳಂತೆ ಬಳಸಿ ದೊರೆತ ಫಲಿತಾಂಶಗಳನ್ನು ಸಂಖ್ಯಾಕಲನಾತ್ಮವಾಗಿ ಪರಿಶೀಲಿಸಿ ಸಂಕೇತಗಳ ನಿಘಂಟನ್ನೇ ತಯಾರಿಸಿದರು. ಸಂಕೇತಗಳು ನಿರ್ದಿಷ್ಟವಾಗಿರದೇ ಸ್ವಾಲಿತ್ಯವನ್ನು ಪ್ರದರ್ಶಿಸುತ್ತವೆ. ಎಂದರೆ ಒಂದೇ ಅಮೈನೋ ಆಮ್ಲವನ್ನು ಒಂದಕ್ಕಿಂತ ಹೆಚ್ಚಾದ ತ್ರಿವಳಿಗಳು ಸೂಚಿಸುತ್ತವೆ. ಉದಾಹರಣೆಗೆ ಪ್ರೋಲೀನ್ ಅಮೈನೋ ಆಮ್ಲವನ್ನು CCU, CCC, CCA ಅಥವಾ CCGಗಳ ಪೈಕಿ ಯಾವುದೇ ಒಂದು ಜೋಡಣೆ ಸೂಚಿಸುತ್ತದೆ. ಹಲವು ಜೋಡಣೆಗಳು ಯಾವುದೇ ಅಮೈನೋ ಆಮ್ಲವನ್ನು ಸೂಚಿಸುವುದಿಲ್ಲ. ಅವು ಅರ್ಥರಹಿತ ಸಂಕೇತಗಳು. ದೂತ ಆರ್‌ಎನ್‌ಎ ಸಂಕೇತಗಳು ಅಮೈನೋ ಆಮ್ಲದ ಭಾಷೆಗೆ ತರ್ಜುಮೆಯಾಗುವ ಇರುವ ವಿರಾಮ ಚಿಹ್ನೆಗಳೇ ಇಂಥ ಅರ್ಥರಹಿತ ಸಂಕೇತಗಳು ಇರಬಹುದೆಂದು ಊಹಿಸಲಾಯಿತು. ಎಂದರೆ, ಈ ಪ್ರದೇಶಗಳು ಪ್ರೊಟೀನಿನ ಸಂಶ್ಲೇಷಣೆ ಇಲ್ಲಿಂದ ಪ್ರಾರಂಭವಾಗಲಿ, ಇಲ್ಲಿ ನಿಲ್ಲಲಿ ಎಂಬ ಸೂಚನೆಗಳನ್ನೀಯಬಹುದು. ನಿರೆನ್‌ಬರ್ಗ್ ಮತ್ತು ಸಂಗಡಿಗರು ಪ್ರಯೋಗಗಳನ್ನು ಎಷ್ಟು ಎಚ್ಚರಿಕೆಯಿಂದ ನಡೆಸಿ ದೊರೆತ ಫಲಿತಾಂಶಗಳನ್ನು ಎಷ್ಟು ಸರಿಯಾಗಿ ತರ್ಕಿಸಿದರೆಂದರೆ, ಅವರು ನಿರ್ಧರಿಸಿದ 50 ತ್ರಿವಳಿ ಸಂಕೇತಗಳ ಪೈಕಿ 45 ಸಂಕೇತಗಳು ಸತ್ಯ ಎಂದು ಅನಂತರ ನಡೆಸಿದ ಪ್ರಯೋಗಗಳು ಖಚಿತಗೊಳಿಸಿದುವು.

ಮೇಲಿನ ಪ್ರಯೋಗಗಳು ಯಾವೊಂದು ಅಮೈನೋ ಆಮ್ಲವನ್ನು ನಿರ್ದೇಶಿಸುವ ಸಂಕೇತದಲ್ಲಿರುವ ಪ್ರತ್ಯಾಮ್ಲಗಳ ಪ್ರಕೃತಿ ಮತ್ತು ಪರಸ್ಪರ ಪ್ರಮಾಣಗಳನ್ನು ಮಾತ್ರ ತಿಳಿಯಲು ಸಾಧ್ಯವಾಯಿತೇ ವಿನಾ ತ್ರಿವಳಿಯಲ್ಲಿರುವ ಪ್ರತ್ಯಾಮ್ಲಗಳು ಯಾವ ಅನುಕ್ರಮದಲ್ಲಿವೆ ಎಂಬುದನ್ನು ತಿಳಿಯಲಾಗಲಿಲ್ಲ. ಮುಂದಿನ ಹಂತದಲ್ಲಿ ನಿರೆನ್‌ಬರ್ಗ್ ಮತ್ತು ಸಹೋದ್ಯೋಗಿಗಳು ಗೊತ್ತಾದ ಅನುಕ್ರಮದಲ್ಲಿರುವ ಕೃತಕ ತ್ರಿವಳಿಗಳನ್ನು ಸಂಶ್ಲೇಷಿಸಿ ಕೋಶರಹಿತ ವ್ಯವಸ್ಥೆಯಲ್ಲಿ ಇವನ್ನು ದೂತ ಆರ್‌ಎನ್‌ಎ ಬದಲಾಗಿ ತಿಳಿಸಿದರು. ಪ್ರಯೋಗ ವ್ಯವಸ್ಥೆಯಲ್ಲಿ ಎಲ್ಲಾ ಅಮೈನೋ ಅಮ್ಲಗಳು, ಇವುಗಳಿಗೆ ವಿಶಿಷ್ಟವಾದ ವಾಹಕ ಆರ್‌ಎನ್‌ಎ ಹಾಗೂ ರೈಬೋಸೋಮುಗಳು ಮತ್ತು ಇತರ ಸಹಾಯಕ ವಸ್ತುಗಳನ್ನು ಅಳವಡಿಸಲಾಗಿತ್ತು. ಅಮೈನೋ ಆಮ್ಲಗಳ ಪೈಕಿ ಒಂದು ಅಮೈನೋ ಆಮ್ಲದಲ್ಲಿ ವಿಕಿರಣಪಟು ಕಾರ್ಬನ್ (14ಅ) ಇರುವಂತೆ ವ್ಯವಸ್ಥೆ ಮಾಡಲಾಗಿತ್ತು. ಇಂತಹ ವ್ಯವಸ್ಥೆಗೆ ಪೂರ್ವಯೋಜಿತ ಅನುಕ್ರಮವುಳ್ಳ ತ್ರಿವಳಿಯನ್ನು ಸೇರಿಸಿದಾಗ ತ್ರಿವಳಿಯಿಂದ ನಿರ್ದೇಶಿತವಾದ ಅಮೈನೋ ಆಮ್ಲವನ್ನು ಹೊತ್ತ ವಾಹಕ ಆರ್‌ಎನ್‌ಎ ಮಾತ್ರ ರೈಬೋಸೋಮುಗಳಿಗೆ ಬದ್ಧವಾಗುತ್ತದೆ ಎಂದು ನಿರೀಕ್ಷಿಸಬಹುದು. ಯಾವ ಅಮೈನೋ ಆಮ್ಲ ಈ ರೀತಿ ಬದ್ಧವಾಗುತ್ತದೆ ಎಂಬುದನ್ನು ನಿರೆನ್‌ಬರ್ಗ್ ಮತ್ತು ಸಂಗಡಿಗರು ವಿಶಿಷ್ಟ ತಂತ್ರವೊಂದರಿಂದ ಪತ್ತೆ ಹಚ್ಚಿದರು. ಇದರಿಂದ ಹೆಚ್ಚು ಕಡಿಮೆ ಎಲ್ಲ 64 ತ್ರಿವಳಿಗಳ ಸಂಕೇತದ ರಹಸ್ಯವನ್ನು ಬಯಲು ಮಾಡಲು ಸಹಾಯವಾಯಿತು.

ಈ ಫಲಿತಾಂಶಗಳ ಬೆಳಕಿನಲ್ಲಿ ನಿರೆನ್‌ಬರ್ಗ್ ತ್ರಿವಳಿಗಳನ್ನು ಗುರುತಿಸುವ ಪ್ರಕ್ರಮ, ವೈರಸ್ಸುಗಳು ಬ್ಯಾಕ್ಟೀರಿಯಾಗಳ ಮೇಲೆ ದಾಳಿ ನಡೆಸಿದಾಗ ನಡೆತಯುವ ಪ್ರೊಟೀನ್ ಸಂಶ್ಲೇಷಣೆಯ ಹತೋಟಿ ಕ್ರಮ, ಭ್ರೂಣದಲ್ಲಿ ಕೋಶಗಳು ವಿಶಿಷ್ಟ ವಿಭಜನೆಗಳಾಗುವ ರೀತಿ ಇತ್ಯಾದಿ ಕ್ಷೇತ್ರಗಳಲ್ಲಿ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿದ.

(ಎಚ್.ಎಸ್.ಎಸ್)

**ನೀರಾಮೆ:** ಸರೀಸೃಪ ವರ್ಗದ ಖಿಲೋನಿಯ ಗಣಕ್ಕೆ ಸೇರಿದ ಜಲವಾಸಿ ಪ್ರಾಣಿ (ಟರ್ಟಲ್). ಈ ಪ್ರಾಣಿಯನ್ನು ಅದರ ಚಿಪ್ಪಿನಿಂದ ಸುಲಭವಾಗಿ ಗುರುತಿಸಬಹುದು. ನೀರಾಮೆ ಗಾತ್ರದಲ್ಲಿ ದೊಡ್ಡದು; ಇದರ ಉದ್ದ 30 ಸೆಂಮೀ ನಷ್ಟಿರುತ್ತದೆ. ತೂಕ 45 ಕಿಗ್ರಾಂ. ನೀರಾಮೆ ದೀರ್ಘಾಯುವೂ ಹೌದು. ಮಾರಿಷಸ್‌ನ ನೀರಾಮೆಯೊಂದು ಸುಮಾರು 152 ವರ್ಷ ಬದುಕಿತ್ತೆನ್ನಲಾಗಿದೆ. ಕ್ಯಾಲಿಫೋರ್ನಿಯದ ಮೃಗಾಲಯ ಒಂದರಲ್ಲಿ ಸುಮಾರು 100 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಗಲಾಪಗಸ್ ದ್ವೀಪದ ನೀರಾಮೆ ಇದೆ. ನೀರಾಮೆಯ ದೇಹರಚನೆ ಹೆಚ್ಚು ಕಡಿಮೆ ಆಮೆಯದರಂತೆಯೇ ಇದೆ. ಆದರೆ ಆಮೆಗೂ ನೀರಾಮೆಗೂ ವ್ಯತ್ಯಾಸಗಳಿಲ್ಲದಿಲ್ಲ. ಆಮೆಯ ಬೆರಳುಗಳು ಬಿಡಿಯಾಗಿವೆಯಾದರೆ ನೀರಾಮೆಯ ಬೆರಳುಗಳು ಕೂಡಿಕೊಂಡು ಹುಟ್ಟುಗಳಂತೆ ಚಪ್ಪಟೆಯಾಗಿದ್ದು ಈಜಲು ಸಹಕಾರಿಯಾಗಿದೆ.

ನೀರಾಮೆ ಸಸ್ಯಾಹಾರಿ ಇಲ್ಲವೆ ಮಾಂಸಾಹಾರಿ ಆಗಿರಬಹುದು. ಕೆಲವಂತೂ ಸರ್ವ ಭಕ್ಷಕಗಳು. ಹಲ್ಲುಗಳೇ ಇಲ್ಲದಿರುವುದು ನೀರಾಮೆಗಳ ವಿಚಿತ್ರ ಲಕ್ಷಣ. ಆದರೆ ದವಡೆಗಳ ಅಂಚುಗಳಲ್ಲಿ ಚೂಪಾದ ಏಣುಗಳು ಇವೆ. ಇವುಗಳ ಮೇಲೆ ಗಟ್ಟಿಯಾದ ಕೊಂಬಿನ ಕೊಕ್ಕಿದೆ. ನೀರಾಮೆಗಳ ಚಯಾಪಚಯ ಕ್ರಿಯೆಗಳ ಗತಿ ಬಲು ನಿಧಾನ. ಆದರೂ ಆಮೆಗಳಿಗಿಂತ ನೀರಾಮೆಗಳು ಹೆಚ್ಚು ಚಟುವಟಿಕೆಯಿಂದಿರುತ್ತದೆ. ನೀರಾಮೆಯ ಕ್ಲೋಯಕ ರಂಧ್ರ ಉದ್ದ ಸೀಳಿಕೆಯಂತಿದೆ. ನೀರಾಮೆ ತನ್ನ ಎಲ್ಲ ಚಟುವಟಿಕೆಗಳನ್ನು ನೀರಲ್ಲೇ ನಡೆಸಿದರೂ ಮೊಟ್ಟೆ ಇಡಲು ತೀರ ಪ್ರದೇಶಗಳಿಗೆ ಬರುತ್ತದೆ. ಬಾಲ ಹಾಗೂ ಕಾಲುಗಳ ಸಹಾಯದಿಂದ ಬಿಲಗಳನ್ನು ರಚಿಸಿ, ಮೊಟ್ಟೆಗಳನ್ನು ಇಟ್ಟು ಅವುಗಳ ಸುಳಿವು ಕಾಣದ ಹಾಗೆ ಮಣ್ಣಿನಿಂದ ಮುಚ್ಚಿ ಜೋಪಾನ ಮಾಡುತ್ತದೆ. (ಎಂ.ಎನ್.ವಿ.ಐ.)

**ನೀರಿಲಿ:** ರೋಡೆಂಷಿಯ ಗಣದ ಕ್ರಿಸಿಟಿಡೆ ಕುಟುಂಬದ ಮೈಕ್ರೋಟಿನಿ ಉಪಕುಟುಂಬಕ್ಕೆ ಸೇರಿದ ಒಂದು ದಂಶಕ (ವಾಟರ್ ಪೋಲ್). ಆರ್ವಿಕೋಲ ಟೆರೆಸ್ಟ್ರಿಸ್ ಇದರ ವೈಜ್ಞಾನಿಕ ಹೆಸರು. ಯೂರೋಪಿನ, ರಷ್ಯದ ಕೆಲವು ಭಾಗಗಳು, ಸೈಬೀರಿಯಾ, ಏಷ್ಯಾ ಮೈನರ್, ಸಿರಿಯಾ, ಇಸ್ರೇಲ್, ಇರಾನ್‌ಗಳಲ್ಲಿ ಕಂಡುಬರುತ್ತವೆ. ನದಿ, ಝರಿ ಮುಂತಾದುವುಗಳ ತೀರದಲ್ಲಿ ಬಿಲ ಮಾಡಿಕೊಂಡು ವಾಸಿಸುವ ಇದು ಜಲವಾಸಕ್ಕೆ ತಕ್ಕಂತೆ ಮಾರ್ಪಾಟಾಗಿದೆ. ದಿನವಿಡೀ ಚಟುವಟಿಕೆಯಿಂದ ಈಜುತ್ತ, ಕೆಸರು ನೆಲದ ಮೇಲೆ ಓಡಾಡುತ್ತಾ ಕಾಲ ಕಳೆಯುತ್ತದೆ.

ಆರ್ವಿಕೋಲ ದೊಡ್ಡ ಗಾತ್ರದ್ದು ಇದರ ಉದ್ದ 150–200 ಮಿಮೀ. ದೇಹದ ಮೇಲೆಲ್ಲ ದಪ್ಪ ತುಪ್ಪುಳು ಉಂಟು. ಬಣ್ಣ ತಿಳಿಗಂದು ಇಲ್ಲವೇ ಕಗ್ಗಂದು. ಇದು ಸಸ್ಯಾಹಾರಿ. ಜೊಂಡು ಮತ್ತಿತರ ಜಲಸಸ್ಯಗಳೇ ಇದರ ಆಹಾರ. ಬಾಚೀಹಲ್ಲುಗಳು ಅಗಲವಾಗಿದ್ದು, ಸವೆದಂತೆಲ್ಲ ನಿರಂತರವಾಗಿ ಬೆಳೆಯುತ್ತಿರುತ್ತವೆ. ದವಡೆ ಹಲ್ಲುಗಳು ಮುಪ್ಪಟೆಯಾಗಿದ್ದು, ಘನಾಕೃತಿಯಲ್ಲಿರುವುದು ಇವುಗಳ ವಿಶೇಷ ಲಕ್ಷಣ. ದವಡೆ ಹಲ್ಲುಗಳೂ ನಿರಂತರವಾಗಿ ಬೆಳೆಯುತ್ತಿರುತ್ತವೆ.

ನೀರಿಲಿಗಳು ಸಾಮಾನ್ಯ ಇಲಿಗಳಿಗಿಂತ ಭಿನ್ನ. ದಷ್ಟಪುಷ್ಟವಾಗಿ ಕಾಣುತ್ತವೆ. ಮೂತಿ ಮೊಂಡು; ಕಣ್ಣುಗಳು ಹಾಗೂ ಕಿವಿಗಳು ಚಿಕ್ಕವು. ಕಾಲು ಮತ್ತು ಬಾಲ ಮೋಟು. ನೀರಿಲಿಯ ಆಯಸ್ಸು ಒಂದು ವರ್ಷ. ವರ್ಷಕ್ಕೆ ಕಡೆ ಪಕ್ಷ ಎರಡು ಸಲ ಮರಿ ಹಾಕುತ್ತದೆ. ಒಂದು ಸಲಕ್ಕೆ 5–6 ಮರಿಗಳು ಹುಟ್ಟುವುವು. (ಬಿ.ಕೆ.ಜೆ.)

**ನೀರುಕಾಗೆ:** ಫೆಲಿಕನಿಫಾರ್ಮಿಸ್ ಗಣದ ಫ್ಯಾಲಕ್ರೊಕೊರಾಸಿಡೆ ಕುಟುಂಬಕ್ಕೆ ಸೇರಿದ ಜಲಪಕ್ಷಿ (ಕಾರ್ಮೊರಾಂಟ್). ನೀರು ಕಾಗೆಗಳಲ್ಲಿ ಮೂರು ಪ್ರಕಾರಗಳಿದ್ದು ಅವುಗಳೆಂದರೆ ಪುಟ್ಟ ನೀರುಕಾಗೆ, ಭಾರತೀಯ ನೀರುಕಾಗೆ ಮತ್ತು ದೊಡ್ಡ ನೀರುಕಾಗೆ. ನೀರು ನವಿಲು ಅಥವಾ ಸರ್ಪಪಕ್ಷಿ ಅಥವಾ ಅನ್ಹಿಂಗಕ್ಕೂ (ಡಾರ್ಟರ್ ಅಥವಾ ಸ್ನೇಕ್ ಬರ್ಡ್) ಇದಕ್ಕೂ ಹತ್ತಿರದ ಸಂಬಂಧ. ಪುಟ್ಟ ನೀರುಕಾಗೆ ಸಾಮಾನ್ಯವಾಗಿ ಎಲ್ಲೆಡೆ ಕಂಡು ಬರುತ್ತಿದ್ದು ಉಳಿದವುಗಳು ವಿರಳವಾಗುತ್ತಿವೆ. ಫ್ಯಾಲಕ್ರೊಕೊರಾಕ್ಸ್ ಕಾರ್ಬೊ ಸಾಮಾನ್ಯ ನೀರುಕಾಗೆಯ ವೈಜ್ಞಾನಿಕ ಹೆಸರು. ಹ್ಯಾಲಿಯೇಟರ್ ಪಿಗ್ಮೇಯಸ್ ಪುಟ್ಟ ನೀರುಕಾಗೆಯ ವೈಜ್ಞಾನಿಕ ನಾಮ.

ಮೀನು ಇವುಗಳ ಮುಖ್ಯ ಆಹಾರ. ಜಲಚರ ಹಕ್ಕಿಗಳಾದರೂ ಇವುಗಳ ಪುಕ್ಕಗಳಿಗೆ ಜಲನಿರೋಧಕ ಶಕ್ತಿಯಿಲ್ಲ. ಇದೇ ಕಾರಣದಿಂದ ಇವು ಮೀನಿನ ಬೇಟೆ ಮಾಡಿದ ಅನಂತರ ಬಂಡೆಗಳ ಮೇಲೆ ಇಲ್ಲವೆ ಮರದ ಕೊಂಬೆಗಳ ಮೇಲೆ ಕುಳಿತು ರೆಕ್ಕೆಗಳನ್ನು ಅಗಲಿಸಿ ಒಣಗಿಸುತ್ತವೆ.

ಪುಟ್ಟ ನೀರುಕಾಗೆಯು ಮನೆಕಾಗೆಯ ಗಾತ್ರ ಹೊಂದಿದ್ದು ಉಳಿದುವುಗಳು ಸ್ವಲ್ಪ ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ಇವುಗಳು ಭಾರತ, ಬಾಂಗ್ಲಾ ಮತ್ತು ಸಿಲೋನ್ ದೇಶಗಳಲ್ಲಿ ಕಂಡುಬರುತ್ತವೆ.

ಜೂನ್–ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಗಂಡು ಹೆಣ್ಣು ಎರಡೂ ಸೇರಿ ಜಲಚರ ಪಕ್ಷಿಧಾಮಗಳಲ್ಲಿ ಇಲ್ಲವೆ ಮರಗಳ ಮೇಲೆ ಕಟ್ಟಿಗೆ ತುಣುಕು, ಎಲೆ ಮತ್ತು ಹುಲ್ಲು ಸೇರಿಸಿ ಅಷ್ಟೇನೂ ಸಂಕೀರ್ಣವಲ್ಲದ ಗೂಡು ನಿರ್ಮಿಸುತ್ತವೆ. 3–5 ತಿಳಿನೀಲಿ ಬಣ್ಣದ ಮೊಟ್ಟೆಗಳನ್ನಿಟ್ಟು ಎರಡೂ ಸೇರಿ ಕಾವುಕೊಟ್ಟು ಮರಿ ಮಾಡುತ್ತವೆ.

ಚೀನ ದೇಶದಲ್ಲಿ ದೊಡ್ಡ ನೀರುಕಾಗೆಗಳ ಕುತ್ತಿಗೆಗೆ ಉಂಗುರ ತೊಡಿಸಿ ಇವುಗಳ ಸಹಾಯದಿಂದ ಮೀನು ಹಿಡಿಯುತ್ತಾರೆ. ನೀರಿನ ಆಕರಗಳ ಸಮೀಪ ಇವುಗಳ ಇರುವಿಕೆ ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮೀನು ದೊರಕುವುದನ್ನು ಸೂಚಿಸುತ್ತದೆ.

(ಬಿ.ಬಿ.ಎಚ್.)

**ನೀರುಕುದುರೆ:** ಆರ್ಟಿಯೊಡ್ಯಾಕ್ಟಿಲ ಗಣದ ಹಿಪೋಪೊಟಮಿಡೆ ಕುಟುಂಬಕ್ಕೆ ಸೇರಿದ ಚತುಷ್ಪಾದಿ ಸ್ತನಿ (ಹಿಪೋಪೊಟಾಮಸ್). ಜಲವಾಸಕ್ಕೂ ನೆಲವಾಸಕ್ಕೂ ಹೊಂದಿಕೊಂಡು ಜೀವಿಸುವ ಉಭಯಚರಿ. ಇದರಲ್ಲಿ ಹಿಪೋಪೊಟಾಮಸ್ ಮತ್ತು ಕೀರಪ್ಸಿಸ್ ಎಂಬ ಎರಡು ಜಾತಿಗಳಿವೆ. ಒಂದೊಂದು ಜಾತಿಯಲ್ಲಿ ಒಂದೊಂದೇ ಪ್ರಭೇದ ಇದೆ.

*ಹಿಪೋಪೊಟಮಸ್ ಆಂಫಿಬಿಯಸ್* ಅಥವಾ ಬಿಗ್ ಹಿಪೊ, ಎಂಬುದು ದೊಡ್ಡಗಾತ್ರದ ಪ್ರಾಣಿ. ಹಿಂದೊಮ್ಮೆ ಆಫ್ರಿಕದ ಎಲ್ಲ ನದಿಗಳಲ್ಲೂ ಆಳನೀರಿನ ಹಳ್ಳಗಳಲ್ಲೂ ವಿಪುಲ ಸಂಖ್ಯೆಯಲ್ಲಿತ್ತು. ಆದರೆ ಮಾನವನ ಹಾವಳಿಯಿಂದಾಗಿ ಇದರ ಸಂಖ್ಯೆ ತುಂಬ ಇಳಿದಿದ್ದು ಈಗ $17^0$ ಉತ್ತರ ಅಕ್ಷಾಂಶ ರೇಖೆಯ ದಕ್ಷಿಣದ ಪ್ರದೇಶಗಳ ನದಿಗಳಿಗೆ ಮಾತ್ರ ಸೀಮಿತಗೊಂಡಿದೆ. ಜೊಂಡಿನಿಂದ ಕೂಡಿದ ನದಿಗಳಲ್ಲಿ ಹೆಚ್ಚಾಗಿ ಜೀವಿಸುವುವು. ಪೀಪಾಯಿ ಆಕಾರದ ಬೃಹತ್ ಶರೀರ, ಅಗಲ ಮುಸುಡು, ವಿಶಾಲ ಬಾಯಿ, ಮೋಟು ಕಂಬದಂಥ ಕಾಲುಗಳು, ಉಬ್ಬಿದ ಕಣ್ಣುಗಳು, ಸುಮಾರು 10 ಸೆಂಮೀ ಉದ್ದದ ಕಿವಿಗಳಿವೆ (ಕಿವಿಗಳೂ ತಲೆಯ ತೀರ ಹಿಂಬದಿಯಲ್ಲಿವೆ). ಮುಸುಡಿಯ ಮೇಲುಭಾಗದಲ್ಲಿ ಸ್ಥಿತವಾಗಿರುವ ಮೂಗಿನ ಹೊಳ್ಳೆಗಳು, ರೋಮರಹಿತವೆನ್ನುವ ಮಟ್ಟಿಗೆ ವಿರಳ ಸಂಖ್ಯೆಯಲ್ಲಿ ರೋಮಗಳುಳ್ಳ ಚರ್ಮ – ನೀರಾನೆಯ ಲಕ್ಷಣಗಳು. ಮೂಗಿನ ಹೊಳ್ಳೆಗಳನ್ನು ಆಗಿಂದಾಗ್ಗೆ ಮುಚ್ಚಿಕೊಳ್ಳುವ ವಿಚಿತ್ರ ಲಕ್ಷಣವೂ ಇದಕ್ಕೆ ಉಂಟು. ಅಂತೆಯೇ ನೀರುಕುದುರೆಯ ಮೈಮೇಲೆ ಕೆಂಪು ಬಣ್ಣದ ಮಂದವಾದ ಎಣ್ಣೆಯಂಥ ದ್ರವವನ್ನು ಸ್ರವಿಸುವ ವಿಶೇಷ ಗ್ರಂಥಿಗಳಿವೆ. ಈ ವಸ್ತು ಜಿನುಗಿದಾಗ ಕೆಂಪಗೆ ರಕ್ತದಂತೆ ಕಾಣುವುದರಿಂದ ನೀರಾನೆಗೆ ರಕ್ತಸ್ವೇದ ಎಂಬ ಹೆಸರು ಕೊಡಲಾಗಿದೆ. ನೀರುಕುದುರೆ ನೀರಿನಲ್ಲಿ ಮುಳುಗಿರುವಾಗಲೂ ಒಣ ಹವೆಗೆ ಒಡ್ಡಿದಾಗಲೂ ಚರ್ಮಕ್ಕೆ ರಕ್ಷಣೆಯನ್ನು ಈ ವಸ್ತು ಒದಗಿಸುವುದು. ಚರ್ಮದ ಅಡಿಯಲ್ಲಿ ಸುಮಾರು 5 ಸೆಂಮೀ ದಪ್ಪದ ಕೊಬ್ಬಿನ ಪದರವಿದೆ. ದೇಹದ ಉದ್ದ (ತಲೆಯೂ ಸೇರಿಕೊಂಡು) 3.75–4.6 ಮೀ ಭುಜದ ಬಳಿ ಎತ್ತರ ಸುಮಾರು 1.5 ಮೀ. ತೂಕ 3–4.5 ಮೆಟ್ರಿಕ್ ಟನ್‌ಗಳು. ಬಾಲದ ಉದ್ದ 60 ಸೆಂಮೀ. ಬಾಲದ ತುದಿಯಲ್ಲಿ ಹಲವಾರು ಬಿರುಗೂದಲುಗಳಿವೆ. ದೇಹದ ಬಣ್ಣ ಬೂದುಮಿಶ್ರಿತ ತಾಮ್ರಕಂದು, ಉದರದ ಕಡೆಗೆ ಊದಾ ಬಣ್ಣದ ಛಾಯೆಯಿದೆ. ಕಾಲುಗಳಲ್ಲಿ ತಲಾ ನಾಲ್ಕು ಬೆರಳುಗಳಿವೆ. ನಡೆಯುವಾಗ ನಾಲ್ಕು ಬೆರಳುಗಳನ್ನೂ ಊರುತ್ತದೆ. ಬೆರಳುಗಳ ತುದಿಯಲ್ಲಿ ಉಗುರಿನಂಥ ಗೊರಸುಗಳಿವೆ. ಜಠರದಲ್ಲಿ ಮೂರು ಕೋಣೆಗಳಿವೆ. ಬಾಚಿಹಲ್ಲುಗಳು ಹಾಗೂ ಕೋರೆಹಲ್ಲುಗಳು ದಾಡೆಗಳಂತಿವೆ. ಮೇಲ್ದವಡೆಯ ಬಾಚಿ ಮತ್ತು ಕೋರೆಹಲ್ಲುಗಳಿಗಿಂತ ಕೆಳದವಡೆಯವು ಹೆಚ್ಚು ಉದ್ದ.

ನೀರುಕುದುರೆ ತುಂಬ ಚೆನ್ನಾಗಿ ಈಜಬಲ್ಲುದು. ಆಗಿಂದಾಗ್ಗೆ ಮುಳುಗುವುದೂ ಉಂಟು. ಹೀಗೆ ಮುಳುಗಿದಾಗ ತನ್ನ ಮೂಗಿನ ಹೊಳ್ಳೆಗಳನ್ನು ಕಿವಿಗಳನ್ನೂ ಮುಚ್ಚಿಕೊಳ್ಳುತ್ತದೆ. ಸಾಮಾನ್ಯವಾಗಿ 3–5 ನಿಮಿಷಗಳ ಕಾಲ, ಕೆಲವೊಮ್ಮೆ ಅರ್ಧಗಂಟೆಯವರೆಗೂ ಮುಳುಗಿರಬಲ್ಲುದು. ಮುಳುಗಿ ತಳದ ಮೇಲೆ ನಡೆಯುವ ಸಾಮರ್ಥ್ಯವೂ ಇದಕ್ಕೆ ಇದೆ. ಅಂತೆಯೇ ಬರಿಯ ಕಣ್ಣು ಮತ್ತು ಮೂಗಿನ ಹೊಳ್ಳೆಗಳನ್ನು ಮಾತ್ರ ನೀರಿನ ಮೇಲ್ಮೈಗೆ ಒಡ್ಡಿ ನೀರಲ್ಲಿ ಓಡಾಡಬಲ್ಲುದು. ಹಿಪೊಪೊಟಾಮಸ್ ಸಾಮಾನ್ಯವಾಗಿ ಒಂಟೊಂಟಿಯಾಗಿರುತ್ತದೆ. ಕೆಲವೊಮ್ಮೆ ಗಂಡು ಹೆಣ್ಣುಗಳೂ ಜೊತೆ ಜೊತೆಯಾಗಿಯೂ 6ರಿಂದ 30ರ ಸಂಖ್ಯೆಯಲ್ಲಿ ಗುಂಪುಗೂಡಿಕೊಂಡಿರುವುದುಂಟು. ನೀರುಕುದುರೆ ಸಾಧುಸ್ವಭಾವದ್ದು. ಗಾಬರಿಗೊಂಡಾಗ ನೀರಿಗೆ ಧಾವಿಸುವುದೇ ಇದರ ಸಾಮಾನ್ಯ ಪ್ರತಿಕ್ರಿಯೆ. ಆದರೆ ಕೆಲವು ಸಲ ಕೆರಳುವುದುಂಟು. ಗಂಡು ನೀರುಕುದುರೆಗಳು ಆಗಾಗ್ಗೆ ಕಾದಾಡುತ್ತವೆ. ನೀರುಕುದುರೆಗೆ ಒಳ್ಳೆಯ ಘ್ರಾಣಶಕ್ತಿಯಿದೆ. ದೃಷ್ಟಿ ಸಾಧಾರಣ. ಇದು ಸಸ್ಯಾಹಾರಿ. ಹಗಲೆಲ್ಲ ನೀರಿನಲ್ಲೇ ಕಾಲ ಕಳೆಯುತ್ತಿದ್ದು ರಾತ್ರಿ ಮೇವನ್ನು ಅರಸಿಕೊಂಡು ನೆಲದ ಮೇಲೆ ಓಡಾಡುತ್ತದೆ. ಹುಲ್ಲು ಪ್ರಧಾನ ಆಹಾರ. ಕೆಲವೊಮ್ಮೆ ಪೈರಿಗೂ ನುಗ್ಗುವುದುಂಟು. ಎಳೆ ಚಿಗುರು, ಎಲೆಗಳು, ಬಿದ್ದ ಹಣ್ಣುಗಳು ನೀರಾನೆಯ ಆಹಾರದ ಪ್ರಧಾನ ಅಂಶ.

ನೀರುಕುದುರೆ ವರ್ಷದ ಎಲ್ಲ ಕಾಲಗಳಲ್ಲಿಯೂ ಸಂತಾನೋತ್ಪತ್ತಿ ನಡೆಸಬಲ್ಲುದು. ಹೆಣ್ಣು 7 ವರ್ಷ ವಯಸ್ಸಿನಲ್ಲಿ ಲೈಂಗಿಕ ಪ್ರಬುದ್ಧತೆಯನ್ನು ಪಡೆಯುತ್ತದೆ. ಗರ್ಭಾವಧಿ 227–240 ದಿವಸಗಳು. ಒಂದು ಬಾರಿ ಒಂದೇ ಮರಿ ಹುಟ್ಟುವುದು. ಮರಿ ಹುಟ್ಟಿದಾಗ ಸುಮಾರು 30–45 ಕಿಗ್ರಾಂ ತೂಗುತ್ತದೆ. ಇದು ನೀರಿನಲ್ಲಿ ಮುಳುಗಿಯೇ ಹಾಲು ಕುಡಿಯಬಲ್ಲದು. ನೀರುಕುದುರೆಯ ಆಯಸ್ಸು 40–50 ವರ್ಷ.

ನೀರುಕುದುರೆಯ ಇನ್ನೊಂದು ಪ್ರಭೇದವಾದ *ಕೀರಾಪ್ಸಿಸ್ ಲೈಬೀರಿಯೆನ್ಸಿಸ್* ಎಂಬುದು ಲೈಬೀರಿಯ, ಸಿಯೆರ ಲಿಯೋನ್‌ಗಳ ನದಿಗಳಲ್ಲಿ, ಜೌಗು ಭೂಮಿಗಳಲ್ಲಿ ಕಾಣದೊರೆಯುವುದು. ಇದು ಕುಳ್ಳು ಬಗೆಯದು; ದೇಹದ ಉದ್ದ 1.5–1.75 ಮೀ. ಎತ್ತರ 0.75–1.0 ಮೀ. ತೂಕ 160–240 ಕಿಗ್ರಾಂ. ಬಾಲ 15 ಸೆಂ.ಮೀ ಉದ್ದ ಇದೆ. ದೇಹದ ಬಣ್ಣ ಬೆನ್ನುಭಾಗದಲ್ಲಿ ಹಸುರುಮಿಶ್ರಿತ ಕಪ್ಪು, ಉದರ ಭಾಗದಲ್ಲಿ ಹಳದಿಮಿಶ್ರಿತ ಹಸಿರು ಇಲ್ಲವೆ ಬೂದಿ. ತಲೆ ಹೆಚ್ಚು ಗುಂಡಗಿದೆ. ದೊಡ್ಡ ನೀರಾನೆಯದರಷ್ಟು ಚಪ್ಪಟೆಯಾಗಲೀ ಅಗಲವಾಗಲೀ ಇಲ್ಲ. ಕಣ್ಣುಗಳು ಉಬ್ಬಿಕೊಂಡಿಲ್ಲ. ಇದು ಹೆಚ್ಚು ಗೌಪ್ಯ ಸ್ವಭಾವದ ಪ್ರಾಣಿ. ಇದರ ಗರ್ಭಾವಧಿಯ ಕಾಲ 201–210 ದಿವಸಗಳು. ಮಾಂಸಕ್ಕಾಗಿ ಇದನ್ನು ಬೇಟೆಯಾಡುವುದಿದೆ.

***

**ನೀರು ಕೋಳಿ:** ಗ್ರೂಯಿಫಾರ್ಮಿಸ್ ವರ್ಗ ಮತ್ತು ರ‍್ಯಾಲಿಡೆ ಕುಟುಂಬಕ್ಕೆ ಸೇರಿದ ಪಕ್ಷಿ (ಮೂರ್‌ಹೆನ್). ಇದರಲ್ಲಿ ಭಾರತದ ನೀರು ಕೋಳಿ ಮತ್ತು ಬಿಳಿ ಎದೆಯ ನೀರು ಕೋಳಿ ಎಂಬ ಎರಡು ಮುಖ್ಯ ಬಗೆಗಳುಂಟು. ಗ್ಯಾಲಿನುಲಾ ಕ್ಲೊರೋಪಸ್ ವೈಜ್ಞಾನಿಕ ನಾಮ.

ಬಿಳಿ ಎದೆಯ ನೀರು ಕೋಳಿ ಆಕಾರದಲ್ಲಿ ಕೋಳಿಯಂತೆಯೇ ಇದೆ. ಇದರ ಮುಖ, ಕುತ್ತಿಗೆ ಮತ್ತು ಎದೆಯ ಭಾಗ ಬೆಳ್ಳಗಿವೆಯಾದರೆ ರೆಕ್ಕೆಗಳು ಮತ್ತು ಹಿಂಭಾಗ ಕಂದು ಬಣ್ಣದುವು. ಜೌಗುಪ್ರದೇಶ, ಗದ್ದೆಗಳ ಅಂಚು ಮತ್ತು ಪೊದೆಗಳು ಬೆಳೆದಿರುವ ಸ್ಥಳಗಳನ್ನೇ ಇಷ್ಟಪಡುತ್ತದೆ. ದಿನವೆಲ್ಲ ಪೊದೆಗಳಲ್ಲಿ ಅಡಗಿದ್ದು ಬೆಳಗಿನ ಜಾವ ಮತ್ತು ಸಾಯಂಕಾಲ ಮಾತ್ರ ಹೊರಗೆ ಬಂದು ತನ್ನ ಆಹಾರವನ್ನು ಅರಸಿಕೊಂಡು ಓಡಾಡುತ್ತದೆ.

ಸಾಮಾನ್ಯವಾಗಿ ಗುಂಪುಗಳಲ್ಲೇ ಇರುತ್ತದೆ. ಕೀಟಗಳು, ಹುಳುಗಳು ಮತ್ತು ಕಾಳುಗಳು ಇದರ ಆಹಾರ.

ಸಂಭೋಗ ಕಾಲದಲ್ಲಿ ಒಡನಾಡಿಯನ್ನು ಆಕರ್ಷಿಸಲು ಗಂಡು ನೀರು ಕೋಳಿ ಬಹಳ ಗಟ್ಟಿಯಾಗಿ ಕೂಗುತ್ತದೆ. ಮಳೆಗಾಲದ ಆರಂಭ ಇದರ ಸಂತಾನವೃದ್ಧಿಯ ಕ್ರಾಯ. ಇದು ನೀರ ಮೇಲೆ ತೇಲುವ ಗೂಡನ್ನು ರಚಿಸಬಲ್ಲದು. ಕೆಲವು ಸಲ ಚಿಕ್ಕ ಮರದ ಮೇಲೆ ಅಥವಾ ಪೊದೆಗಳಲ್ಲಿ ಗೂಡನ್ನು ರಚಿಸುವುದುಂಟು. ಸಾಮಾನ್ಯವಾಗಿ ಒಂದು ಸಲಕ್ಕೆ ೪–೭ ಮೊಟ್ಟೆಗಳನ್ನಿಡುವುದು. ಮೊಟ್ಟೆಗಳ ಬಣ್ಣ ಕೆನೆಯಂತೆ. ಅಲ್ಲಲ್ಲಿ ಕಂದುಬಣ್ಣದ ಕಲೆಗಳಿವೆ. ಇದು ಶ್ರೀಲಂಕಾದ ನಿವಾಸಿ.

ಭಾರತದ ನೀರು ಕೋಳಿ ನೋಡಲು ಬಿಳಿ ಎದೆಯ ನೀರು ಕೋಳಿಯಂತೆಯೇ ಇದೆ. ಭಾರತಾದ್ಯಂತ ಇದರ ವ್ಯಾಪ್ತಿಯುಂಟು. ಇದರ ಬೆನ್ನುಭಾಗ ಕಪ್ಪು ಹಾಗೂ ಹಸಿರು ಬಣ್ಣಗಳ ಮಿಶ್ರಣ. ಒಂದು ಪಾರ್ಶ್ವದಲ್ಲಿ ಉದ್ದವಾದ ಬಿಳಿ ಪಟ್ಟಿ ಇದೆ. ಪುಕ್ಕದ ಕೆಳಭಾಗ ಬಿಳಿ. ಕಪ್ಪು ಪಟ್ಟಿಯೊಂದು ಇದನ್ನು ಎರಡು ಭಾಗವನ್ನಾಗಿ ಮಾಡಿದೆ. ಕೊಕ್ಕಿನ ತುದಿ ಹಳದಿ. ಉಳಿದ ಭಾಗ ಕಡುಗೆಂಪು ಬಣ್ಣದ್ದು. ಹಣೆಯ ಮೇಲೆ ಅಗಲವಾದ ಬಣ್ಣದ ಕೊಂಬುಂಟು.

ಭಾರತದ ನೀರು ಕೋಳಿ ಜೋಡಿಗಳಲ್ಲಿ ಅಥವಾ ಗುಂಪುಗಳಲ್ಲಿ ಕೆರೆ, ಸರೋವರಗಳಲ್ಲಿ ಕಂಡುಬರುತ್ತದೆ. ತನ್ನ ತಲೆಯನ್ನು ಅಲ್ಲಾಡಿಸುತ್ತ ನೀರಿನಲ್ಲಿ ಈಜುತ್ತಿದ್ದರೆ ದೂರದಿಂದ ಕಾಡುಕೋಳಿ ಅಥವಾ ಗ್ರೀಬ್‌ನಂತೆ ಕಾಣುತ್ತದೆ. ಇದು ಬಹಳ ಕಷ್ಟದಿಂದ ನಿಧಾನವಾಗಿ ಹಾರುತ್ತದೆ.

ನೀರಿನಲ್ಲಿರುವ ಕೀಟಗಳು, ಕಾಳುಗಳು ಮತ್ತು ಚಿಕ್ಕ ಚಿಕ್ಕ ಪ್ರಾಣಿಗಳು ಇದರ ಆಹಾರ. ಸಂತಾನಾಭಿವೃದ್ಧಿ ಕಾಲ ಮಾರ್ಚಿ–ಜುಲೈ ತಿಂಗಳ ಅವಧಿ. ಜೊಂಡುಗಳ ನಡುವೆ ಗೂಡುಕಟ್ಟಿ ೫–೮ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳ ಮೇಲೆ ನೇರಳೆ ಕೆಂಪು ಮಿಶ್ರಿತ ಕಂದುಬಣ್ಣದ ಕಲೆಗಳುಂಟು. (ಎಂ.ಎನ್.ವಿ.ಐ.)

**ನೀರು ಗಿಳಿ:** ಕೆರಾಡ್ರಿಯಿಫಾರ್ಮಿಸ್ ಗಣದ ಜಕ್ಯಾನಿಡೆ ಕುಟುಂಬಕ್ಕೆ ಸೇರಿದ ಜಲಪಕ್ಷಿ (ಝಾಸನ). ಉಷ್ಣ ಹಾಗೂ ಉಪೋಷ್ಣ ವಲಯಗಳ ನಿವಾಸಿ. ಕಮಲ, ನೈದಿಲೆ ಮುಂತಾದ ಜಲಸಸ್ಯಗಳು ಬೆಳೆದಿರುವಂಥ ಸರೋವರ, ಕೊಳಗಳು ಇದರ ನೆಚ್ಚಿನ ವಾಸಸ್ಥಾನ. ಇಂಥ ಸಸ್ಯಗಳ ಎಲೆಗಳ ಮೇಲೆ ಓಡಾಡುತ್ತ ತನ್ನ ಆಹಾರವಾದ ಜಲಕೀಟಗಳು, ಸಣ್ಣ ಮೃದ್ವಂಗಿಗಳು, ಮೀನುಗಳು, ಬೀಜಗಳು ಮುಂತಾದವನ್ನು ಅರಸಿ ತಿನ್ನುತ್ತ ಕಾಲ ಕಳೆಯುತ್ತವೆ.

ನೀರು ಗಿಳಿಗಳಲ್ಲಿ ಸುಮಾರು ಎಂಟು ಪ್ರಭೇದಗಳನ್ನು ಗುರುತಿಸಬಹುದು. ಇವುಗಳಲ್ಲಿ ಮುಖ್ಯವಾದವು; 1. ಅಮೆರಿಕದಲ್ಲಿ ವಾಸಿಸುವ ಝಾಸನ ಸ್ಪೈನೋಸ – ಇದು ಮೆಕ್ಸಿಕೋದಿಂದ ಹಿಡಿದು ಅರ್ಜಂಟೀನವರೆಗಿನ ಪ್ರದೇಶದಲ್ಲಿ ಬಲು ಸಾಮಾನ್ಯ. ಸುಮಾರು 25 ಸೆಂಮೀ ಉದ್ದದ ಹಕ್ಕಿಯಿದು; ಮೈಬಣ್ಣ ದಾಲ್ಚಿನ್ನಿ ಕೆಂಪು. ರೆಕ್ಕೆ ಬಿಚ್ಚಿ ಹಾರುವಾಗ ಹಳದಿ ಹಸಿರು ಬಣ್ಣದ ರೆಕ್ಕೆಯ ಬುಡ ಎದ್ದು ಕಾಣುತ್ತದೆ. ಈ ಜಾತಿಯ ನೀರು ಗಿಳಿಯ ತಲೆ ಕಪ್ಪು ಬಣ್ಣಕ್ಕಿದೆ.

2. ಭಾರತ, ಆಗ್ನೇಯ ಏಷ್ಯ, ಫಿಲಿಪೀನ್ಸ್‌ಗಳಲ್ಲೆಲ್ಲ ಕಾಣದೊರೆಯುವ ಹೈಡ್ರೊಫ್ಯಾಸಿಯಾನಸ್ ಚಿರುರ್ಗಸ್ (ಫೆಸೆಂಟ್–ಟೇಲ್ಡ್ ಝಾಸನ)– ಚಾಕಲೇಟ್–ಕಂದು ಬಣ್ಣದ ಬೆನ್ನುಭಾಗ, ಕಪ್ಪು ಉದರ, ಬಿಳಿಯ ಮುಖ ಹಾಗೂ ಕೊರಳು, ಹಳದಿ ಹೆಕ್ಕತ್ತು–ಇವು ಇದರ ದೇಹದ ಬಣ್ಣಗಳು. ಜೀವಂಜೀವದಲ್ಲಿ (ಫೆಸೆಂಟ್) ಇರುವಂಥ ಉದ್ದನೆಯ ಹಾಗೂ ಕುಡುಗೋಲಿನಾಕಾರದ ಬಾಲ ಇದಕ್ಕೆ ಉಂಟು. ಇದರಿಂದಾಗಿ ಈ ನೀರು ಗಿಳಿಯ ದೇಹದ ಉದ್ದ 50 ಸೆಂಮೀಗೂ ಹೆಚ್ಚಾಗಿದೆ.

ವರ್ಣವೈವಿಧ್ಯ, ಗಾತ್ರ ವ್ಯತ್ಯಾಸ ಏನೇ ಇರಲಿ ಎಲ್ಲ ಬಗೆಯ ನೀರು ಗಿಳಿಗಳಲ್ಲೂ ಗೋಚರವಾಗುವ ಸಾಮಾನ್ಯ ಲಕ್ಷಣಗಳು ಇಂತಿವೆ; ಉದ್ದ ಕಡ್ಡಿಕಾಲುಗಳು, ಜೇಡರ ಹುಳುವಿನ ಕಾಲಿನಂತೆ ಉದ್ದುದ್ದವಾಗಿ ಚಾಚಿರುವಂಥ ನಾಲ್ಕು ಕಾಲ್ಬೆರಳುಗಳು (ಇವುಗಳಲ್ಲಿ ಮೂರು ಮುಂದಕ್ಕೂ ಒಂದು ಹಿಂದಕ್ಕೂ ಚಾಚಿವೆ – ಇಂಥ ಕಾಲುಗಳಿರುವುದರಿಂದಲೇ ನೀರು ಗಿಳಿಗಳು ಜಲಸಸ್ಯಗಳ ಮೇಲೆ ಸರಾಗವಾಗಿ ಭಯವಿಲ್ಲದೆ ಓಡಾಡಬಲ್ಲವು), ರೆಕ್ಕೆ ಮಡಿಸುವ ಸ್ಥಳದಲ್ಲಿ ಚೂಪಾದ ಕೊಂಬಿನಂಥ ಮುಳ್ಳು, ಹಾರುವಾಗ ಕತ್ತನ್ನು ಮುಂದಕ್ಕೂ ಕಾಲುಗಳನ್ನು ಹಿಂದಕ್ಕೂ ಚಾಚಿಕೊಳ್ಳುವುದು, ನೀರಮೇಲೆ ಇಳಿಯುವಾಗ ರೆಕ್ಕೆಗಳ ಹಿಂಭಾಗ ಪರಸ್ಪರ ತಾಗುವಂತೆ ಅವನ್ನು ಎತ್ತಿಕೊಂಡಿರುವುದು, ಹೆಣ್ಣಿಗಿಂತ ಚಿಕ್ಕಗಾತ್ರದ ಗಂಡುಹಕ್ಕಿ.

ನೀರು ಗಿಳಿಗಳು ಜಲಸಸ್ಯಗಳ ಕಡ್ಡಿಗಳಿಂದ, ಜೊಂಡಿನಿಂದ ನೀರಮೇಲೆ ತೇಲುವ ಗೂಡನ್ನು ರಚಿಸುವುವು. ಕೆಲವು ಸಲ ನೀರ ಅಂಚಿನಲ್ಲಿ ಬೆಳೆಯುವ ಜೊಂಡಿನ ಮಧ್ಯೆ ಮೊಟ್ಟೆಯಿಡುವುದೂ ಉಂಟು. ಮೊಟ್ಟೆಗಳ ಸಂಖ್ಯೆ ನಾಲ್ಕು. ಮೊಟ್ಟೆಗಳಿಗೆ ಕಾವು ಕೊಡುವುದು, ಮರಿಗಳನ್ನು ಪಾಲಿಸುವುದು ಬಹುಮಟ್ಟಿಗೆ ಗಂಡಿನ ಕೆಲಸ. 23–24 ದಿವಸಗಳ ತರುವಾಯ ಮೊಟ್ಟೆಯೊಡೆದು ಮರಿ ಹೊರಬರುವುವು. (ಎಂ.ಎನ್.ವಿ.ಐ.)

**ನೀರುಗುಳ್ಳೆ:** ಮಾಲಸ್ಕ (ಮೃದ್ವಂಗಿ) ವಂಶದ ಗ್ಯಾಸ್ಟ್ರಾಪೊಡ ವರ್ಗಕ್ಕೆ ಸೇರಿದ ಒಂದು ತೆರನ ಬಸವನ ಹುಳು (ವಾಟರ್ ಸ್ನೇಲ್). ಸೇಬು ಬಸವನ ಹುಳು (ಆಪಲ್ ಸ್ನೇಲ್) ಪರ್ಯಾಯನಾಮ. ಮೃದ್ವಂಗಿಗಳ ಸಾಮಾನ್ಯ ರಚನೆಯನ್ನು ವಿವರಿಸಲು ಇದು ಉತ್ತಮ ಉದಾಹರಣೆ. ಇದರ ದೇಹ ಒಂದೇ ಚೂರಿನಿಂದುಂಟಾದ ದೊಡ್ಡ ಚಿಪ್ಪಿನೊಳಗೆ (ಶಂಖ) ಅಡಗಿದೆ. ಸುರುಳಿಯಂತಿರುವ ಈ ಶಂಖ ಬಲಕ್ಕೆ ಸುತ್ತಿಕೊಂಡಿದೆ. ಶಂಖಕ್ಕೆ ದೊಡ್ಡ ಬಾಯಿ ಅದನ್ನು ಮುಚ್ಚಲು ಚಿಪ್ಪಿನ ಚೂರಿನಿಂದಾದ ಒಂದು ಮುಚ್ಚಳವೂ ಇದೆ. ನೀರುಗುಳ್ಳೆ ನಿರಪಾಯ ಸ್ಥಿತಿಗಳಲ್ಲಿ ತನ್ನ ಶರೀರವನ್ನು ಶಂಖದಿಂದ ಹೊರಚಾಚುತ್ತದೆ. ಆದರೆ ದೇಹದ ಬಹು ಭಾಗ ಮಾತ್ರ ಚಿಪ್ಪಿನ ಒಳಗೇ ಇರುತ್ತದೆ. ಹೊರಚಾಚಿದ ಭಾಗಗಳಲ್ಲಿ, ಚೆನ್ನಾಗಿ ಬೆಳೆದ ತಲೆ, ಅದಕ್ಕೆ ಸಂಬಂಧಿಸಿದ ಸ್ಪರ್ಶತಂತುಗಳು ಮತ್ತು ಕಣ್ಣುಗಳು, ತಳಭಾಗದಲ್ಲಿ ಅಗಲವಾದ ಮಾಂಸಯುತವಾದ ಪಾದ ಇವೆ. ಪಾದದ ಸಹಾಯದಿಂದ ಈ ಪ್ರಾಣಿ ನಿಧಾನವಾಗಿ ತೆವಳುತ್ತದೆ. ಉಳಿದ ಭಾಗವೆಂದರೆ ಅಂಗಸ ಅಥವಾ ಕುಹರ (ವಿಸರ). ಈ ಭಾಗ ಶಂಖದ ಒಳಗೆ ಅದರ ಮೇಲ್ಭಾಗವನ್ನು ಆಕ್ರಮಿಸಿರುವುದಲ್ಲದೆ ಅದು ಕೂಡ ಶಂಖದಂತೆ ಸುರುಳಿ ಸುತ್ತಿಕೊಂಡಿದೆ. ಹೊರಚರ್ಮದ ಮಡಿಕೆ (ಮ್ಯಾಂಟಲ್) ಅಂಗಸವನ್ನು ಪೂರ್ಣವಾಗಿ ಆವರಿಸುವುದು ಮತ್ತು ಶರೀರಕ್ಕೂ ಮಧ್ಯೆ ಒಂದು ಅವಕಾಶವನ್ನು ಕಲ್ಪಿಸಿದೆ. ಇದಕ್ಕೆ ಹೊರ ಚರ್ಮದ ಅವಕಾಶ ಅಥವಾ ಮ್ಯಾಂಟಲ್ ಕುಹರವೆಂದು ಹೆಸರು. ಈ ಅವಕಾಶದ ಬಲಭಾಗದಲ್ಲಿ ಕಿವಿರುಗಳಿವೆ. ಕರುಳು, ಜನನೇಂದ್ರಿಯ ನಾಳ ಮತ್ತು ಶುದ್ಧೀಕರಣಾಂಗ ಇವುಗಳ ರಂಧ್ರಗಳು ತೆರೆಯುವುದು ಈ ಅವಕಾಶದಲ್ಲೇ. ನೀರುಗುಳ್ಳೆಯ ಹೊರಚರ್ಮದ ಎಡಗಡೆ, ಅವಕಾಶದ ಗೋಡೆಗೆ ಸಂಬಂಧಿಸಿದಂತೆ ತೆಳುವಾದ ಒಂದು ಚೀಲವಿದೆ. ಇದೇ ಶ್ವಾಸಕೋಶ. ಈ ಪ್ರಾಣಿ ಭೂಮಿಯ ಮೇಲಾಗಲೀ ಕೊಚ್ಚೆ ನೀರಿನಲ್ಲಾಗಲೀ ಇದ್ದಾಗ ಈ ಶ್ವಾಸಕೋಶದ ಸಹಾಯದಿಂದ ಉಸಿರಾಡುತ್ತದೆ. ನೀರುಗುಳ್ಳೆಯ ಬಾಯ ಅಂಗಳದಲ್ಲಿ ನಾಲಗೆಯಂತಿರುವ ಒಂದು ಹಲ್ಲಿನ ಅಂಗವಿದೆ. ಇದಕ್ಕೆ ರ್‍ಯಾಡುಲ ಎಂದು ಹೆಸರು. ಆಹಾರವನ್ನು ಅಗಿಯಲು ಇದು ಅತ್ಯಗತ್ಯ. (ಕೆ.ಎಂ.ವಿ)

**ನೀರುಜಿಂಕೆ:** ಆರ್ಟಿಯೊಡ್ಯಾಕ್ಟಿಲ ಗಣದ ಸರ್ವಿಡೆ ಕುಟುಂಬಕ್ಕೆ ಸೇರಿದ ಜಿಂಕೆ (ಚೈನೀಸ್ ವಾಟರ್ ಡಿಯರ್). ಹೈಡ್ರೊಪೋಟಸ್ ಇನರ್ಮಿಸ್ ಇದರ ವೈಜ್ಞಾನಿಕ ಹೆಸರು. ಕೊರಿಯ ಹಾಗೂ ಚೀನಾದ ಹಲವು ದ್ವೀಪಗಳು ಮತ್ತು ಯಾಂಗ್ಟ್ಸೀ ನದಿಯ ದಂಡೆಯ ಪ್ರದೇಶಗಳಲ್ಲಿ ವಾಸಿಸುತ್ತದೆ. ನದಿಯ ಅಂಚಿನ ಜೌಗು ಪ್ರದೇಶ ಇವುಗಳ

ಮೆಚ್ಚಿನ ಆವಾಸಸ್ಥಾನ. ಕೆಲವೊಮ್ಮೆ ಬೆಟ್ಟದ ಕಿಬ್ಬಿಗಳಲ್ಲಿನ ಉದ್ದ ಹುಲ್ಲಿನ ನಡುವೆ ಕೃಷಿ ಭೂಮಿಗಳಲ್ಲೂ ವಾಸಿಸುತ್ತವೆ. ಇದರ ಉದ್ದ ಸುಮಾರು 1ಮೀ. ಎತ್ತರ 50 ಸೆಂಮೀ. ತೂಕ 10 ಕಿಗ್ರಾಂ. ಮೈಬಣ್ಣ ಹಳದಿ ಕಂದು ಜೊತೆಗೆ ಬೆನ್ನಮೇಲೆ ಸೂಕ್ಷ್ಮವಾದ

ಕಪ್ಪುಚುಕ್ಕೆಗಳಿವೆ. ಮೂತಿ ಬೂದು ಇಲ್ಲವೆ ಕೆಂಪು ಮಿಶ್ರ ಕಂದು. ಉದರ ಭಾಗ ಬಿಳಿ. ಮೈಮೇಲೆ (ಮುಖ್ಯವಾಗಿ ಪಾರ್ಶ್ವಗಳಲ್ಲಿ ಪೃಷ್ಠಭಾಗದಲ್ಲಿ) ದಟ್ಟ ಕೂದಲುಗಳಿವೆ. ಗಂಡಿನಲ್ಲಾಗಲಿ ಹೆಣ್ಣಿನಲ್ಲಾಗಲಿ ಕೊಂಬುಗಳೇ ಇಲ್ಲ. ಗಂಡಿನಲ್ಲಿ ಮಾತ್ರ ಮೇಲ್ದವಡೆಯ ಕೋರೆಹಲ್ಲುಗಳು ಉದ್ದವಾಗಿದ್ದು ಹೊರಚಾಚಿಕೊಂಡಿವೆ. ಗಂಡು ಹೆಣ್ಣುಗಳೆರಡರಲ್ಲೂ ತೊಡೆಸಂದಿಯಲ್ಲಿ ಎರಡು ಗಜ್ಜಲು ಗ್ರಂಥಿಗಳಿವೆ. ಸರ್ವಿಡೆ ಕುಟುಂಬದ ಇನ್ನಾವ ಜಿಂಕೆಗಳಲ್ಲೂ ಇಂಥ ಗ್ರಂಥಿಗಳಿಲ್ಲ. ಹುಲ್ಲು, ಕಾಯಿ, ಹಣ್ಣು, ಜೊಂಡು ಇವೇ ಇದರ ಪ್ರಧಾನ ಆಹಾರ. ಶತ್ರುಗಳಿಂದ ತಪ್ಪಿಸಿಕೊಳ್ಳುವಾಗ ಮೊಲಗಳಂತೆ ಜಿಗಿದು ಹಾರುತ್ತ ಓಡುತ್ತವೆ. ನೀರುಜಿಂಕೆ ಇತರ ಜಿಂಕೆಗಳಿಗಿಂತ ಹೆಚ್ಚು ಮರಿ ಹಾಕುತ್ತದೆ. ಒಂದು ಸಲಕ್ಕೆ 4–7 ಮರಿಗಳು ಹುಟ್ಟುವುವು. ಹೊಸದಾಗಿ ಹುಟ್ಟಿದ ಮರಿಗಳ ಮೈಮೇಲೆ ಚುಕ್ಕೆಗಳೂ ಪಟ್ಟೆಗಳೂ ಇರುವುವು. ನೀರುಜಿಂಕೆಗಳನ್ನು ತಿನ್ನುವುದು ರೂಢಿಯಲ್ಲಿಲ್ಲ. ಇವನ್ನು ಸಾಕುವುದು ಸುಲಭ. (ಬಿ.ಕೆ.ಜಿ.)

**ನೀರು ನವಿಲು:** ಪೆಲಿಕಾನಿಫಾರ್ಮಿಸ್ ಗಣದ ಅನ್ಹಿಂಗ್‌ಯಿಡೆ ಕುಟುಂಬಕ್ಕೆ ಸೇರಿದ ಜಲಪಕ್ಷಿ (ಡಾರ್ಟರ್ ಅಥವಾ ಅನ್ಹಿಂಗ). ಭಾರತದಲ್ಲಿ ಅನ್ಹಿಂಗ ಪ್ರಭೇದ ಕಾಣಸಿಕ್ಕುತ್ತದೆ. ನದಿ ದಂಡೆಗಳ ಬಂಡೆಗಳ ಮೇಲೆ ಕುಳಿತು ರೆಕ್ಕೆಗಳನ್ನು ದೊಡ್ಡದಾಗಿ ಬಿಡಿಸಿ ಪುಕ್ಕಗಳು ಎದ್ದು ಕಾಣುವಂತೆ ಹರಡುವುದರಿಂದ ಈ ಹಕ್ಕಿಗೆ ನೀರು ನವಿಲು ಎಂದು ಹೆಸರು. ಇದರ ಕತ್ತು ಹಾವಿನ ತರಹ ದುಂಡಗೆ, ಉದ್ದವಾಗಿ ಇದ್ದು ಆಗಾಗ್ಗೆ ಮಣಿಯುವುದರಿಂದ ಸರ್ಪಪಕ್ಷಿ (ಸ್ನೇಕ್‌ಬರ್ಡ್) ಎಂಬ ಹೆಸರೂ ಇದೆ. ಅನ್ಹಿಂಗ ಮೆಲನೊಗ್ಯಾಸ್ಟರ್ ಭಾರತದಲ್ಲಿ ಸಿಗುವ ಪ್ರಭೇದ. ಉಷ್ಣ ಹಾಗೂ ಸಮಶೀತೋಷ್ಣ ವಲಯಗಳ ಎಲ್ಲ ದೇಶಗಳಲ್ಲೂ ನೀರು ನವಿಲು ಉಂಟು. ಇದಕ್ಕೂ ನೀರು ಕಾಗೆಗೂ (ಕಾರ್ಮೊರಾಂಟ್) ಬಲು ಹತ್ತಿರ ಸಂಬಂಧ. ಇದು ಹದ್ದಿನ ಗಾತ್ರದ ಪ್ರಾಣಿ. ಕತ್ತು ತುಂಬ ಉದ್ದವಾಗಿದ್ದು ಸುಲಭವಾಗಿ ಬಳುಕುವಂತಿದೆ. ಕೊಕ್ಕು ಉದ್ದ; ಚೂಪಾದ ಚೂರಿಯಂತಿದೆ. ದೇಹದ ಬಣ್ಣ ಪ್ರಧಾನವಾಗಿ ಕಪ್ಪು. ತಲೆ ಮತ್ತು ಕತ್ತುಗಳು ಮಾತ್ರ ಕಂದು. ಬೆನ್ನಮೇಲೆ ಬೂದು ಬಣ್ಣದ ಮಚ್ಚೆಗಳುಂಟು. ಮೈಮುಚ್ಚುವ ಪುಕ್ಕಗಳು ದಟ್ಟವಾಗಿ ಜೋಡಣೆಗೊಂಡಿವೆ. ತೋಕೆ ಉದ್ದ.

ಮೀನು ಇದರ ಪ್ರಧಾನ ಆಹಾರ. ಕಪ್ಪೆ, ಜಲಕೀಟಗಳು, ಸೀಗಡಿಗಳು ಮುಂತಾದುವನ್ನೂ ತಿನ್ನದೇ ಇಲ್ಲ. ಇದು ಮೀನಿನ ಬೇಟೆಯಾಡುವ ವೈಖರಿ ನಿಜಕ್ಕೂ ಕುತೂಹಲಕಾರಿ. ಕತ್ತು ಮಾತ್ರ ನೀರಿನ ಮೇಲೆ ಕಾಣುವಂತೆ ಎತ್ತಿಕೊಂಡು ಈಜುತ್ತಿದ್ದು ಮೀನು ಕಂಡೊಡನೆ ನೀರಿನೊಳಗೆ ಪೂರ್ತಿ ಮುಳುಗಿ ಕತ್ತನ್ನು S ಆಕಾರದಲ್ಲಿ ಕೊಂಕಿಸಿಕೊಂಡು ತನ್ನ ಏಟಿಗೆ ಮೀನು ಸಿಗುವಷ್ಟು ಹತ್ತಿರಕ್ಕೆ ಸಾಗಿ ಅನಂತರ ಸ್ಪ್ರಿಂಗ್ ಸುರುಳಿಯಿಂದಲೆಂಬಂತೆ ತನ್ನ ಚೂಪಾದ ಕೊಕ್ಕಿನಿಂದ ಎದೆಯನ್ನು ತಿವಿದು ಚುಚ್ಚಿ ಎತ್ತಿಕೊಳ್ಳುತ್ತದೆ. ತರುವಾಯ ನೀರಿನಿಂದ ಮೇಲಕ್ಕೆ ಬಂದು ಮೀನನ್ನು ಗಾಳಿಗೆ ತೂರಿ ಕೊಕ್ಕನ್ನು ಅಗಲಿಸಿ ಕೆಳಗೆ ಬೀಳುವ ಮೀನನ್ನು ಹಿಡಿದು ನುಂಗುತ್ತದೆ.

ನೀರು ಕಾಗೆಗಳಂತೆಯೇ ನೀರು ನವಿಲಿನಲ್ಲೂ ಚರ್ಮದಡಿ ಗಾಳಿ ಚೀಲಗಳಿಲ್ಲ. ಇವುಗಳ ಮೂಳೆಗಳು ಭಾರವಾಗಿಯೇ ಇವೆ. ಬೇಟೆಯಾಡಲೆಂದು ನೀರಲ್ಲಿ ಮುಳುಗಲು ಇದರಿಂದ ಅನುಕೂಲವಾಗಿದೆ. ಇನ್ನೊಂದು ವಿಚಿತ್ರ ಲಕ್ಷಣವೆಂದರೆ ವಯಸ್ಕ ಹಕ್ಕಿಗಳ ಹೊರನಾಸಿಕ ರಂಧ್ರಗಳು ಸಂಪೂರ್ಣವಾಗಿ ಮುಚ್ಚಿ ಹೋಗಿರುವುದು. ಇವುಗಳ ಜಠರದಲ್ಲಿ ರೋಮಾವೃತ ಅಸ್ತರಿ ಉಂಟು. ಇದರ ನಿರ್ದಿಷ್ಟ ಕಾರ್ಯವೇನೆಂದು ಗೊತ್ತಿಲ್ಲ. ಆದರೆ ಮೀನುಗಳ ಮೂಳೆ ಚೂರುಗಳನ್ನು ಸೋಸಿ ಹೊರತೆಗೆಯಲು ಇದು ಸಹಾಯಕವೆಂದು ತಿಳಿಯಲಾಗಿದೆ.

ನೀರು ನವಿಲು ತುಂಬ ಚೆನ್ನಾಗಿ ಈಜಬಲ್ಲುದಷ್ಟೇ ಅಲ್ಲ, ಅಷ್ಟೇ ಸೊಗಸಾಗಿ ಹಾರಲೂ ಬಲ್ಲುದು. ಗೂಡು ಕಟ್ಟುವಾಗ ಸಂಘಜೀವನವನ್ನು ಪ್ರದರ್ಶಿಸುತ್ತದೆ. ಹಲವಾರು ನೀರು ನವಿಲುಗಳು ಒಂದೆಡೆ ಸೇರಿ ತಮ್ಮ ತಮ್ಮ ಗೂಡುಗಳನ್ನು ರಚಿಸಿಕೊಂಡು ಮೊಟ್ಟೆಯಿಡುವುವು. ಆ ಕಾಲದಲ್ಲಿ ನಾರಾಯಣಿ (ಹೆರಾನ್), ಬೂಸಾ (ಐಬಿಸ್) ಹಕ್ಕಿಗಳೊಡನೆ ಸೇರಿಕೊಳ್ಳುವುದೂ ಉಂಟು. ನದಿದಂಡೆಯ ಮೇಲಿರುವ ಗಿಡಮರಗಳ ರೆಂಬೆಗಳಲ್ಲಿ ಎಲೆ, ಕಡ್ಡಿಗಳನ್ನು ಸೇರಿಸಿ ಗೂಡನ್ನು ರಚಿಸುವುವು. ಮೊಟ್ಟೆಗಳ ಸಂಖ್ಯೆ 3–4. 25–28 ದಿವಸಗಳ ಅನಂತರ ಮೊಟ್ಟೆಯೊಡೆದು ಮರಿಗಳು ಹೊರಬರುವುವು. ಗಂಡು ಹೆಣ್ಣುಗಳೆರಡೂ ಕಾವಿಗೆ ಕೂರುವುವಲ್ಲದೆ ಮರಿಗಳ ಪಾಲನೆ ಮಾಡುವುವು. ಹುಟ್ಟಿದಾಗ ಮರಿಗಳ ಮೈಮೇಲೆ ಪುಕ್ಕಗಳೇ ಇರುವುದಿಲ್ಲ. ಅಲ್ಲದೆ ಕಣ್ಣೂ ತೆರೆದಿರುವುದಿಲ್ಲ. ಆದರೆ ಬಲು ಬೇಗ ಇವಕ್ಕೆ ತುಪ್ಪಳಿನಂಥ ಬಿಳಿಯ ಪುಕ್ಕಗಳು ಬರುವುವು. ಸುಮಾರು ಏಳೆಂಟು ವಾರಗಳವರೆಗೆ ಗೂಡಿನಲ್ಲೇ ಇದ್ದು ಅನಂತರ ಸ್ವತಂತ್ರ ಜೀವನ ನಡೆಸಲು ಸಮರ್ಥವಾಗುತ್ತವೆ. (ಎಂ.ಎನ್.ಎಚ್.ಇ.)

**ನೀರುನಾಯಿ:** ಕಾರ್ನಿವೊರ ಗಣದ ಮಸ್ಟೆಲಿಡೆ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಜಲವಾಸಿ ಸ್ತನಿ (ಆಟರ್). ಇದರಲ್ಲಿ ಹಲವಾರು ಜಾತಿ ಹಾಗೂ ಪ್ರಭೇದಗಳಿವೆ. *ಟೀರೊನ್ಯೂರ ಬ್ರಸಿಲಿಯೆನ್ಸಿಸ್* ಎಂಬುದು ದಕ್ಷಿಣ ಅಮೆರಿಕದಲ್ಲೂ ಅಯೋನಿಕ್ಸ್ ಮತ್ತು ಪ್ಯಾರವೋನಿಕ್ಸ್ ಎಂಬುದು ಆಫ್ರಿಕದ ಬಹುಭಾಗಗಳಲ್ಲೂ ಲುಟ್ರ ಎಂಬುದು ಭಾರತ, ಯೂರೋಪ್, ಕೆನಡ, ಅಮೆರಿಕ ಸಂಯುಕ್ತ ಸಂಸ್ಥಾನ, ದಕ್ಷಿಣ ಅಮೆರಿಕ, ಉತ್ತರ ಆಫ್ರಿಕ, ಏಷ್ಯಖಂಡದ ಬಹುತೇಕ ದೇಶಗಳಲ್ಲೂ ಆಂಬ್ಲೊನಿಕ್ಸ್ ಎಂಬುದು ಭಾರತ, ದಕ್ಷಿಣ ಚೀನ, ಆಗ್ನೇಯ ಏಷ್ಯಗಳಲ್ಲೂ ಕಂಡುಬರುತ್ತವೆ. ಭಾರತದಲ್ಲಿನ ನೀರುನಾಯಿಗಳ ಪ್ರಭೇದಗಳು ಇಂತಿವೆ: 1. ಕಾಶ್ಮೀರ ಹಿಮಾಲಯ, ಅಸ್ಸಾಮ್, ದಕ್ಷಿಣ ಭಾರತಗಳಲ್ಲಿ ಸಿಕ್ಕುವ ಲುಟ್ರ ಲುಟ್ರ 2. ಭಾರತದ ಮೈದಾನ ಪ್ರದೇಶಗಳಲ್ಲಿ ಕಾಣಸಿಗುವ ಲುಟ್ರ ಪರ್ಸ್ಪಿಸಿಲೇಟ, 3. ಕುಲು ಕಣಿವೆಯಿಂದ ಅಸ್ಸಾಮ್ ಬೆಟ್ಟಗಳವರೆಗೆ ಪ್ರಸರಿಸಿದಂತೆ ಹಿಮಾಲಯದ ತಪ್ಪಲಿನ ಬೆಟ್ಟಗಳಲ್ಲಿ, ಕರ್ನಾಟಕದ ಕೊಡಗು, ತಮಿಳುನಾಡಿನ ನೀಲಗಿರಿ ಬೆಟ್ಟಗಳು, ಪಳನಿ ಬೆಟ್ಟಗಳಲ್ಲಿ ಸಿಕ್ಕುವ ಆಯೋನಿಕ್ಸ್ ಸಿನರಿಯ.

ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ ಎಲ್ಲ ಬಗೆಯ ನೀರುನಾಯಿಗಳೂ ಒಂದೇ ತೆರನಾಗಿವೆ. ಎಲ್ಲಕ್ಕೂ ಮಾದರಿಯಾಗಿ ಲುಟ್ರ ಲುಟ್ರವನ್ನು (ಸಾಮಾನ್ಯ ನೀರುನಾಯಿ) ವಿವರಿಸಲಾಗಿದೆ. ಇದು 60–80 ಸೆಂಮೀ ಉದ್ದದ ಪ್ರಾಣಿ. ಇದಕ್ಕೆ 45 ಸೆಂಮೀ ಉದ್ದದ ಬಾಲವುಂಟು. ಹೆಚ್ಚು ಕಡಿಮೆ ಮುಂಗುಸಿಯಂತೆ ಕಾಣುತ್ತದೆಯಾದರೂ ಇದಕ್ಕೂ ಮುಂಗುಸಿಗೂ ಅನೇಕ ವ್ಯತ್ಯಾಸಗಳುಂಟು. ಮುಂಗುಸಿ ನೆಲವಾಸಿ. ನೀರುನಾಯಿಯಾದರೋ ಹೆಚ್ಚಾಗಿ ಜಲವಾಸಿ. ಅಂತೆಯೇ ನೀರುನಾಯಿಯ ದೇಹದಲ್ಲಿ ಜಲಜೀವನಕ್ಕೆ ಅನುಕೂಲವಾಗಿರುವ ಅನೇಕ ಲಕ್ಷಣಗಳನ್ನು ಕಾಣಬಹುದು.

ದೇಹ ಉರುಳೆಯಂತಿದ್ದು ಸುಲಭವಾಗಿ ಬಳುಕುತ್ತದೆ. ಅಗಲವಾದ ಹಾಗೂ ಚಪ್ಪಟೆಯಾದ ತಲೆ ಇದಕ್ಕುಂಟು. ಇದರಿಂದಾಗಿ ನೀರಿನಲ್ಲಿ ಸರಾಗವಾಗಿ ನುಗ್ಗಿ ಈಜಲು ಅನುಕೂಲವಾಗಿದೆ. ದೇಹದ ಮೇಲೆಲ್ಲ ಒತ್ತೊತ್ತಾಗಿರುವ ನಯವಾಗಿರುವ ಜಲವಿರೋಧಿ ತುಪ್ಪಳಿನ ಹೊದಿಕೆಯುಂಟು. ಬಾಲ ದಪ್ಪವೂ ಸ್ನಾಯುಯುತವೂ ಆಗಿದೆ. ಪಾದಗಳು ಹುಟ್ಟಿನಂತೆ ಇವೆ (ಬೆರಳುಗಳ ನಡುವೆ ಚರ್ಮದ ಜಾಲವುಂಟು). ಮುಂಗಾಲುಗಳು ಹಿಂಗಾಲುಗಳಿಗಿಂತ ಚಿಕ್ಕವು. ಕಿವಿಗಳು ಚಿಕ್ಕವು. ನಾಸಿಕರಂಧ್ರಗಳಿಗೆ ನೀರು ಒಳನುಗ್ಗದಂತೆ

ತಡೆಯುವ ಕವಾಟಗಳಿವೆ. ಮೀಸೆಗಳು ತಂತಿಯಂತೆ ಬಿರುಸಾಗಿವೆ. ಸಂವೇದನಾಶೀಲವಾದ ಇವುಗಳ ನೆರವಿನಿಂದ ಮೀನುಗಳ ಇರವನ್ನು ಪತ್ತೆಹಚ್ಚಬಲ್ಲುದು. ಇದರ ಅಂಗಾಲುಗಳು ಕೂಡ ತುಂಬ ಸೂಕ್ಷ್ಮಗ್ರಾಹಿಗಳಾಗಿವೆಯಾಗಿ ನದಿಯ ತಳದ ಉಸುಕಿನಲ್ಲಿ ಹುದುಗಿರಬಹುದಾದ ಮೀನುಗಳನ್ನು ಸಲೀಸಾಗಿ ಪತ್ತೆಮಾಡಬಲ್ಲುದು. ಮೀನುಗಳ ಮೈ ಬಲು ನುಣುಪಾಗಿರುವುದರಿಂದ ಇವನ್ನು ದೃಢವಾಗಿ ಹಿಡಿದುಕೊಳ್ಳಲು ಅನುವಾಗುವಂತೆ ನೀರುನಾಯಿಯ ಹಲ್ಲುಗಳಲ್ಲಿ ಚೂಪಾದ ಹಲವಾರು ಮೊನೆಗಳುಂಟು.

ನೀರುನಾಯಿ ತುಂಬ ಸೊಗಸಾಗಿ ಈಜಬಲ್ಲುದು. ಈಜುವಾಗ ಬಾಲವನ್ನು ಚುಕ್ಕಾಣಿಯಂತೆ ಬಳಸಿಕೊಳ್ಳುತ್ತದೆ. ರಾತ್ರಿ ಹಗಲು ಎರಡು ಕಾಲಗಳಲ್ಲೂ ಚಟುವಟಿಕೆಯಿಂದ ಕೂಡಿರುತ್ತದೆ. ಇದರ ಪ್ರಧಾನ ಆಹಾರ ಮೀನು, ಕಪ್ಪೆ, ನೀರಾಮೆ, ಸೀಗಡಿ ಮುಂತಾದುವು. ಕೆಲವೊಮ್ಮೆ ಹಕ್ಕಿಗಳನ್ನೂ ಸಣ್ಣಪುಟ್ಟ ನೆಲವಾಸಿ ಸ್ತನಿಗಳನ್ನೂ ಬೇಟೆಯಾಡುವುದಿದೆ. ಆಹಾರವನ್ನರಸುವುದು ಒಂಟೊಂಟಿಯಾಗಿ. ಕೆಲವೊಮ್ಮೆ ಜೊತೆಜೊತೆಯಾಗಿ ನದಿಯ ದಂಡೆಗಳನ್ನು ಕೊರೆದು ಬಿಲ ರಚಿಸುತ್ತದೆ. ಒಣಸಸ್ಯಗಳನ್ನು ಸಂಗ್ರಹಿಸಿ ಬಿಲಗಳ ಗೋಡೆಗಳಿಗೆ ಮೆತ್ತುವ ಪರಿಪಾಠವೂ ಉಂಟು. ನೀರುನಾಯಿ ವರ್ಷಕ್ಕೊಮ್ಮೆ ಮರಿ ಹಾಕುತ್ತದೆ. ಒಂದು ಸೂಲಿಗೆ 2–3 ಮರಿಗಳು ಹುಟ್ಟುವುವು. ಮರಿಗಳ ಪಾಲನೆಯನ್ನು ತಾಯಿ ತುಂಬ ಚೆನ್ನಾಗಿ ನಡೆಸುತ್ತದೆ. ಮರಿಗಳಿಗೆ ಒಂದು ವರ್ಷ ವಯಸ್ಸಾಗುವವರೆಗೂ ತಾಯಿ ಅವನ್ನು ಸಾಕುತ್ತಿದ್ದು ಅವಕ್ಕೆ ಈಜುವುದು, ಬೇಟೆಯಾಡುವುದು ಮುಂತಾದ ಚಟುವಟಿಕೆಗಳನ್ನು ಕಲಿಸುತ್ತದೆ. ನೀರುನಾಯಿ ಪ್ರಾಣಿಸಂಗ್ರಹಾಲಯಗಳಲ್ಲಿ ಸುಮಾರು 20 ವರ್ಷ ಬದುಕಿದ ದಾಖಲೆಗಳಿವೆ. ***

**ನೀಲ ಏಡಿ:** ಸಂದಿಪದಿ ವಂಶದ ಕ್ರಸ್ಟೇಸಿಯ ವರ್ಗ, ಡೆಕಾಪೊಡ ಗಣ, ಪೋರ್ಟುನಿಡೆ ಕುಟುಂಬಕ್ಕೆ ಸೇರಿದ ಏಡಿ (ಬ್ಲೂ ಕ್ರ್ಯಾಬ್). ನೀಲಿ ನಳ್ಳಿ ಪರ್ಯಾಯನಾಮ. ಕ್ಯಾಲಿನೆಕ್ಟಸ್ ಸ್ಯಾಪಿಡಸ್ ಇದರ ವೈಜ್ಞಾನಿಕ ಹೆಸರು. ಫೆಸಿಫಿಕ್ ಕೊಲ್ಲಿ ಮತ್ತು ದ.ಅಟ್ಲಾಂಟಿಕ್ ಸಾಗರ ಇದರ ತೌರು. ನದಿಮುಖಜ ಭೂಮಿ ಹಾಗೂ ಸಿಹಿನೀರುವಾಸಿಗಳಾಗಿಯೂ ಬದುಕುವುದುಂಟು. ಬೇಸಿಗೆಯಲ್ಲಿ ಸಮುದ್ರತೀರಕ್ಕೆ ಸನಿಹದಲ್ಲಿದ್ದು, ಚಳಿಗಾಲದಲ್ಲಿ ಬಹು ಆಳಪ್ರದೇಶಕ್ಕೆ ತೆರಳುತ್ತದೆ. ಎರಡು ಕಣ್ಣುಗಳ ನಡುವೆ ಹಣೆಯಂಚಿನಲ್ಲಿರುವ ಎರಡು ಹಲ್ಲುಗಳು ಪೊರೆ ಬಿಡುವಾಗ ಪ್ರಸ್ಥಾನ ಪಾದಗಳ ಮೇಲೆ ಕಾಣುವ ವಿಶಿಷ್ಟ ಬಣ್ಣ ಈ ಏಡಿಯ ಹೆಗ್ಗುರುತು. ಶಿರೋವಕ್ಷಕ್ಕಿಂತ ಬಹು ಚಿಕ್ಕದಾದ ಇದರ ಉದರ ಯಾವಾಗಲೂ ಕವಚದಡಿಯಲ್ಲಿ ಮಡಿಚಿರುತ್ತದೆ. ಗಂಡು ಏಡಿಯಲ್ಲಿ ಎರಡು ಜೊತೆ, ಹೆಣ್ಣಿನಲ್ಲಿ ನಾಲ್ಕು ಜೊತೆ ಪ್ಲವಪಾದಗಳಿವೆ. ಗಂಡಿನ ಶಿರೋವಕ್ಷ ಕವಚ ಸರಾಸರಿ 6 ಸೆಂಮೀ ಉದ್ದವೂ 15–18 ಸೆಂಮೀ ಅಗಲ ಇದೆಯಾದರೂ ಹೆಣ್ಣಿನ ಕವಚ ಚಿಕ್ಕದು. ಇತರ ಏಡಿಗಳಂತೆ ನೀಲ ಏಡಿ ಸರ್ವಭಕ್ಷಿ. ಆದರೆ, ಕೊಳೆವ ಪ್ರಾಣಿಶೇಷ ಇದರ ಪ್ರಿಯ ಆಹಾರ. ಇದರ ಜೂಯಿಯಾ ಡಿಂಬಗಳು ದೈತ್ಯ ದ್ವಿಕಶಾಂಗಿಗಳನ್ನು (ಡೈನೋಫ್ಲಾಜಿಲೇಟ್) ಒದಗಿಸಿದರೆ ಮಾತ್ರ ಬದುಕಬಲ್ಲವು.



ನೀಲಿ ಏಡಿ ಮೆದು ಮತ್ತು ಕಠಿಣ ಚರ್ಮಧಾರಿ. ಪೊರೆಬಿಟ್ಟ ಮೇಲೆ ಬೆಳೆಯುವ ಹೊಸ ಕವಚ ಕೆಲವು ಕಾಲದವರೆಗೆ ಮೃದುವಾಗಿರುತ್ತದೆ. ಈ ಹಂತದಲ್ಲಿ ಇದನ್ನು ಮೆತುನಳ್ಳಿ ಎಂದು ಕರೆಯುತ್ತಾರೆ. ಈ ಏಡಿಗಳನ್ನು ಗಾಳದಿಂದ ಹಿಡಿದು, ಸಾಕಿ ಪೊರೆಬಿಟ್ಟ ನಂತರ ಮೈಮೆತುವಾಗಿರುವಾಗಲೇ ಮಾರುತ್ತಾರೆ. ಉದರದ ಒಳಾಂಗಗಳನ್ನು ತೆಗೆದ ಮೇಲೆ ಇಡೀ ದೇಹವನ್ನೇ ಬೇಯಿಸಿ ತಿನ್ನಲಾಗುತ್ತದೆ. ಪ್ರೌಢಾವಸ್ಥೆ ತಲುಪಿದ ಅನಂತರ ಈ ಏಡಿಗಳಲ್ಲಿ ಪೊರೆ ಕಳಚುವಿಕೆ ನಿಂತು ಹೋಗುತ್ತದೆ.

ನೀಲ ಏಡಿಯಲ್ಲಿ ಪ್ರಣಯಲೀಲೆಯನ್ನು ನೋಡಬಹುದು. ಗಂಡು ಏಡಿ ಹೆಣ್ಣಿನ ಮುಂದೆ ಮೊನೆಯುಗುರನ್ನು ಬಿಚ್ಚಿ, ಶರೀರವನ್ನು ಎತ್ತರಿಸಿ, ತೂಗಾಡುತ್ತ ನೃತ್ಯ ಪ್ರದರ್ಶಿಸುತ್ತದೆ. ಸಂಭೋಗಕ್ಕೂ ಮೊದಲು ಆಲಸಿ ಹೆಣ್ಣನ್ನು ಅನೇಕ ದಿನಗಳವರೆಗೆ ಗಂಡು ತನ್ನ ಅಧೋಭಾಗಕ್ಕೆ ಅಂಟಿಸಿಕೊಂಡಿರುತ್ತದೆ. ಆಳವಿಲ್ಲದ ನೀರಿನಲ್ಲಿ ಗಂಡು ಹೆಣ್ಣುಗಳು ಕೂಡುತ್ತವೆ. ಮೊಟ್ಟೆ ಇಡಲು ಹೆಣ್ಣು ಆಳವಾದ ನೀರಿಗೆ ವಲಸೆ ಹೋಗುತ್ತದೆ. ಪ್ರತಿ ಬೇಸಿಗೆಯಲ್ಲಿ ಇಡುವ ಸು. 10,00,000–50,00,000 ಮೊಟ್ಟೆಗಳನ್ನು ಡಿಂಬೋತ್ಪತ್ತಿಯ ತನಕ ಉದರದ ತಳಭಾಗದಲ್ಲಿ ರಕ್ಷಿಸುತ್ತದೆ. ತತ್ತಿಯಿಂದ ಬಂದ ಡಿಂಬಗಳು ಪುನಃ ಸಮುದ್ರದ ಅಂಚಿಗೆ ಬರುತ್ತವೆ. ಇವು ಕಡಲ ತಡಿಯಲ್ಲಿ ನಡೆಯ ಬಲ್ಲುವು, ಮೇಲ್ಮೈಯಲ್ಲಿ ಈಜ ಬಲ್ಲುವು. ನಡೆಯುವಾಗ ಎಲ್ಲ ದಿಕ್ಕಿಗೂ, ಈಜುವಾಗ ಹಿಂದಕ್ಕೂ, ಇಕ್ಕೆಡೆಗೂ ಚಲಿಸುತ್ತವೆ. ಸ್ವತಂತ್ರ ಜೀವಿಗಳಾದ ಡಿಂಬಗಳು ರೂಪಪರಿವರ್ತನೆಗೊಂಡು, ಪ್ರಬುದ್ಧಾವಸ್ಥೆಯನ್ನು ತಲಪಲು ಸು. 3 ವರ್ಷ ಬೇಕಾಗುವುದು. ***

**ನೀಲಿ ಮೀನು:** ಕರಾಂಗಿಡೆ ಕುಟುಂಬಕ್ಕೆ ಸೇರಿದ ಸಮುದ್ರವಾಸಿ ಅಸ್ಥಿಮೀನು (ಬ್ಲೂ ಫಿಶ್). ಮುಖ್ಯವಾಗಿ ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಸಾಗರಗಳಲ್ಲಿ ವಾಸಿಸುತ್ತದೆ. ಉತ್ತರ ಅಮೆರಿಕದ ಸಮುದ್ರತೀರದಲ್ಲಿ ಹೇರಳ. ಟೆಮ್ನೊಡಾನ್ ಸಾಲ್ಟೇಟರ್ ಶಾಸ್ತ್ರೀಯ ನಾಮ. ಇದರ ದೇಹ ಉದ್ದ ಹಾಗೂ ಚಪ್ಪಟೆಯಾಗಿದೆ. ಸರಾಸರಿ ಉದ್ದ ಸುಮಾರು 1 ಮೀ. ಕೆಲವೊಮ್ಮೆ 1.5 ಮೀ ಬೆಳೆಯುವುದೂ ಉಂಟು. ದೇಹದ ಮೇಲೆ



ಸೈಕ್ಲಾಯಿಡ್ ಹುರುಪೆಗಳ ಹೊದಿಕೆಯಿದೆ. ಬಾಯಿ ಅಗಲ. ದವಡೆಗಳಲ್ಲಿ ಬಹಳ ಗಟ್ಟಿಯಾದ ಹಾಗೂ ಚೂಪಾದ ಹಲ್ಲುಗಳಿವೆ. ಜೂನ್ – ಆಗಸ್ಟ್ ಸಂತಾನಾಭಿವೃದ್ಧಿಯ ಸಮಯ. ಅನಿಷೇಚನಗೊಂಡ ಮೊಟ್ಟೆಗಳಿಂದ 44–46 ಗಂಟೆಗಳಲ್ಲಿ 3 ಮಿಮೀ ಉದ್ದದ ಮರಿಮೀನುಗಳು ಹೊರಬರುತ್ತವೆ. ಒಂದು ವರ್ಷದಲ್ಲಿ ಸುಮಾರು 40 ಸೆಂಮೀ ಉದ್ದವಾಗುತ್ತವೆ.

ಇದು ಒಳ್ಳೆಯ ಆಹಾರ ಮೀನು ಎನಿಸಿದೆ. (ಪಿ.ಎ.ಆರ್.)

**ನೀಲಿ ಹರಳು ನೊಣ:** ಕೀಟವರ್ಗದ ಡಿಪ್ಟರ ಗಣದ, ಕ್ಯಾಲಿಪೋರಿಡೆ ಕುಟುಂಬದ ಸದಸ್ಯ. ಊಬಲು ನೊಣ ಪರ್ಯಾಯ ನಾಮ. ಆಂಗ್ಲ ಭಾಷೆಯಲ್ಲಿ ಬ್ಲೂ ಬಾಟಲ್ ಫ್ಲೈ ಎನ್ನುವರು. ವೈಜ್ಞಾನಿಕವಾಗಿ ಕ್ಯಾಲಿಪೊರ ಜಾತಿಗೆ ಸೇರಿದ ಕ್ಯಾ. ಎರಿತ್ರೊಸಿಫ್ಯಾಲ ಮತ್ತು ಕ್ಯಾ. ಒಮಿಟೋರಿಯ ಪ್ರಭೇದಗಳಿವೆ.

ನೀಲಿ ಹರಳು ನೊಣದ ಮೈ ಬಣ್ಣ ಹೊಳೆಯುವ ನೀಲಿ ಅಥವಾ ಹಸಿರು. ಇದು ಮಾಂಸಭಕ್ಷಿ. ಸತ್ತ ಪ್ರಾಣಿಯ ದೇಹ ಅಥವಾ ಮಲಗಳ ಮೇಲೆ ಮೊಟ್ಟೆಯಿಡುತ್ತದೆ. ಡಿಂಬಗಳು ಕೊಳೆಯುವ ಮಾಂಸವನ್ನು ತಿಂದು ಬೆಳೆಯುವುವು. ಈ ಡಿಂಬಗಳು ಸತ್ತಪ್ರಾಣಿಯ ದೇಹವನ್ನು ತಿನ್ನುವುದರ ಮೂಲಕ ಮನುಷ್ಯನಿಗೆ ಉಪಕಾರಿಗಳಾಗಿವೆ. ಅದು ಕೆಲವೊಮ್ಮೆ ಅತಿಸಾರ ರೋಗದ ಅಪಾಯಕರ ಕ್ರಿಮಿಗಳನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಸಾಗಿಸುವ ವಾಹಕವಾಗಿದೆ. ಕಾರಣ, ಈ ನೊಣ ಒಂದು ತೆರನ ಪಿಡುಗೆನ್ನಬಹುದು. ***

**ನೀಲ್ಗಾಯ್:** ಆರ್ಟಿಯೊಡ್ಯಾಕ್ಟಿಲ ಗಣದ ಬೋವಿಡೆ ಕುಟುಂಬಕ್ಕೆ ಸೇರಿದ ಚತುಷ್ಪಾದಿ. ನೀಲಿ ಗೂಳಿ (ಬ್ಲೂ ಬುಲ್) ಪರ್ಯಾಯನಾಮ. ಬಾಸಿಲ್ಯಾಫಸ್ ಟ್ರ್ಯಾಗೋಕಮೀಲಸ್ ವೈಜ್ಞಾನಿಕ ಹೆಸರು. ಇಡೀ ಏಷ್ಯ ಖಂಡದಲ್ಲೇ ಅತಿ ದೊಡ್ಡ ಆಂಟಿಲೋಪ್. ಇದು ಭಾರತದಲ್ಲಿ ಮಾತ್ರ ಇದೆ. ಉದ್ದ ಸುಮಾರು 2 ಮೀ. ಭುಜ ಎತ್ತರ 1.2–1.5 ಮೀ. ತೂಕ ಸುಮಾರು 200 ಕಿಗ್ರಾಂ. ಇದಕ್ಕೆ ಸುಮಾರು 500 ಮಿಮೀ ಉದ್ದದ ಬಾಲವುಂಟು. ತೂಕ ಹಾಗೂ ಗಾತ್ರದಲ್ಲಿ ಸಾಮಾನ್ಯವಾಗಿ ಹೆಣ್ಣಿಗಿಂತ ದೊಡ್ಡದಾಗಿರುವ ಗಂಡನ್ನು ನೀಲ್ಗಾವೋ ಎಂದೂ ಹೆಣ್ಣನ್ನು ನೀಲ್ಗಾಯ್ ಎಂದೂ ಕರೆಯುತ್ತಾರೆ. ನೀಲ್ಗಾಯ್ ವಿಚಿತ್ರ ಸ್ವರೂಪದ ಪ್ರಾಣಿ. ಮುಖ ಕುದುರೆಯದಂತಿದ್ದು, ದೇಹ ಹಸುವಿನಂತಿದೆ. ಕತ್ತು ಗಿಡ್ಡ, ದೇಹದ ಹಿಂಭಾಗ ಡುಬ್ಬಿನಿಂದ ಹಿಂದಕ್ಕೆ ಹೋದಂತೆ ಇಳಿಯುತ್ತಾ ಹೋಗುತ್ತದೆ.

ದೇಹದ ಮುಂಭಾಗ ಹಿಂಭಾಗಕ್ಕಿಂತ ಹೆಚ್ಚು ಮಾಂಸಖಂಡಗಳಿಂದ ಕೂಡಿ ದಪ್ಪವಾಗಿ ಕಾಣುತ್ತದೆ. ಗಂಡಿನಲ್ಲಿ ಮಾತ್ರ ಕೊಂಬುಗಳಿರುವುವು. ಇವು ಚೂಪಾಗಿಯೂ ಚಿಕ್ಕವಾಗಿಯೂ ಇದೆ. ಅಲ್ಲದೆ ಗಂಡಿನ ಕತ್ತಿನ ಮೇಲ್ಭಾಗದಲ್ಲಿ ಹಂದಿಯ ಕೇಸರದಂತೆ ಮತ್ತು ಕತ್ತಿನ ಕೆಳಭಾಗದಲ್ಲಿ ಕುಚ್ಚಿನಂತೆ ಇರುವ ಕೇಶರಾಶಿ ಇದೆ. ಕೆನ್ನೆಗಳ ಮೇಲೆ ಎರಡು ಬಿಳಿಯ ಚುಕ್ಕೆಗಳಿವೆ. ಗಂಡು ನೀಲ್ಗಾಯಿಯ ಬಣ್ಣ ಕಪ್ಪು ಮಿಶ್ರಿತ ಬೂದು, ಹೆಣ್ಣಿನದು ಬಿಳಿಮಿಶ್ರಿತ ಕಂದು ಬಣ್ಣ. ಹೆಣ್ಣು ಗಂಡುಗಳೆರಡರಲ್ಲೂ ಕತ್ತಿನ ಕೆಳಭಾಗ ಹಾಗೂ ಗೊರಸಿನ ಮೇಲ್ಭಾಗ ಬಿಳಿಯ ಕೂದಲಿನಿಂದ ತುಂಬಿವೆ. ಬಾಲದ ತುದಿ ಕುಂಚದಂತಿದೆ.

ನೀಲ್ಗಾಯ್ ಸಂಘ ಜೀವಿ : ಸಾಮಾನ್ಯವಾಗಿ ಒಂದು ಹಿಂಡಿನಲ್ಲಿ ನಾಲ್ಕರಿಂದ ಹನ್ನೆರಡು ಪ್ರಾಣಿಗಳಿರುವುವು. ಚೆನ್ನಾಗಿ ಬೆಳೆದ ಶಕ್ತಿಯುತವಾದ ಗಂಡು ಹಿಂಡಿನ ಮುಖಂಡ. ಸಾಮಾನ್ಯವಾಗಿ ನೀಲ್ಗಾಯ್‌ಗಳು ಸ್ಟೆಪೀಸ್ ಹುಲ್ಲುಗಾವಲು ಮತ್ತು ಕುರುಚಲು ಗಿಡದಿಂದ ಕೂಡಿರುವ ಪ್ರದೇಶದಲ್ಲಿ ವಾಸಿಸುವುವು. ಹಲವೊಮ್ಮೆ ಅರಣ್ಯಪ್ರದೇಶಗಳಲ್ಲಿ ಕೆಲವು ಗೊತ್ತಾದ ಸ್ಥಳಗಳಲ್ಲಿ ಮಾತ್ರ ಕಾಣಸಿಗುವುದುಂಟು. ನೀಲ್ಗಾಯ್‌ಗಳಲ್ಲಿ ತಮ್ಮ ಪ್ರದೇಶವನ್ನು ಗುರುತು ಮಾಡುವಂಥ ಯಾವುದೇ ವಿಧವಾದ ಕಾರ್ಯಚಟುವಟಿಕೆಗಳು ಕಂಡುಬಂದಿಲ್ಲ. ಆದರೆ, ಹಿಂಡುಗಳು ದಿನನಿತ್ಯವೂ ಗೊತ್ತಾದ ದಾರಿ ಮತ್ತು ಸ್ಥಳಗಳಲ್ಲಿ ಮಾತ್ರ ತಮ್ಮ ಕಾಲವನ್ನು ಕಳೆಯುತ್ತವೆ.

ಎಲಚಿ, ನೆಲ್ಲಿ ಮುಂತಾದ ಗಿಡಮರಗಳ ಎಳೆ ಚಿಗುರು ನೀಲ್ಗಾಯ್‌ಗಳ ಆಹಾರ. ಆಡಿನ ರೀತಿ ಮುಂಗಾಲುಗಳನ್ನು ಮೇಲೆತ್ತಿ ಮರಕ್ಕೆ ಆನಿಸಿ ಸೊಪ್ಪನ್ನು ತಿನ್ನುತ್ತವೆ. ನೆಲದ ಮೇಲೆ ಬಿದ್ದಿರುವ ಇಪ್ಪೆ ಹೂಗಳು ನೀಲ್ಗಾಯ್‌ಗಳಿಗೆ ಬಲು ಅಚ್ಚುಮೆಚ್ಚು. ಹಗಲು ವಿಶ್ರಮಿಸುತ್ತಿದ್ದು ಪ್ರಾತಃಕಾಲ ಹಾಗೂ ಸಾಯಂಕಾಲದ ಹೊತ್ತು ಆಹಾರ ಸೇವನೆಗಾಗಿ ಹಿಂಡುಗಳಲ್ಲಿ ಅಡ್ಡಾಡುತ್ತವೆ. ಇವು ಎರಡು ಮೂರು ದಿನಗಳಿಗೊಮ್ಮೆ ನೀರು ಕುಡಿಯುತ್ತವೆ. ಇವು ಓಡಾಡುವ ಜಾಗಗಳ ಹತ್ತಿರ ನೀರು ಇರಲೇಬೇಕೆಂಬ ನಿಯಮವಿಲ್ಲ. ಆದರೂ ಕೆಲವೊಮ್ಮೆ ತಲೆಯನ್ನು ನೀರಿನಲ್ಲಿ ಮುಳುಗಿಸಿ ಸೋರುತ್ತಿರುವ ನೀರನ್ನು ಡುಬ್ಬದ ಮೇಲೆ ಎರಚಿಕೊಳ್ಳುವುದು ಇವಕ್ಕೆ ಬಲು ಇಷ್ಟ.

ನೀಲ್ಗಾಯ್‌ಗಳ ಶ್ರವಣಶಕ್ತಿ ಮಂದ, ಆದರೂ ಕಣ್ಣು, ಮೂಗು ಬಹಳ ಚುರುಕಾಗಿವೆ. ಅಪಾಯದ ಸೂಚನೆ ಕಂಡುಬಂದಾಗ ಇವು ಕೆಳಧ್ವನಿಯಲ್ಲಿ ಗುಟುರು ಹಾಕುತ್ತವೆ. ಮತ್ತು ಶತ್ರುಗಳಿಂದ ತಪ್ಪಿಸಿಕೊಳ್ಳಲು ವೇಗವಾಗಿ ಓಡುತ್ತವೆ. ಹಳ್ಳಿ ಮತ್ತು ಗುಡ್ಡಗಾಡಿನ ಜನ ನೀಲ್ಗಾಯ್ ಅನ್ನು ಪೂಜನೀಯವೆಂದು ಭಾವಿಸುತ್ತಾರೆ.

ನೀಲ್ಗಾಯ್‌ಗಳು ಕೂಡುವ ಕಾಲ ಮಾರ್ಚಿ ತಿಂಗಳು. ಪ್ರಣಯಾಚರಣೆಯ ಸಮಯದಲ್ಲಿ ಗಂಡು ತನ್ನ ಕತ್ತನ್ನು ನೀಳವಾಗಿ ಚಾಚಿ ಹೆಣ್ಣಿನ ಹಿಂಭಾಗದ ಮೇಲೆ ತಲೆಯನ್ನು ಇಡುತ್ತದೆ. ಈ ಪ್ರಕಾರದ ವರ್ತನೆ ಗಂಡುಗಳು ಕೋಪದಿಂದ ಹೋರಾಟಕ್ಕೆ ನಿಂತಾಗಲೂ ಕಂಡು ಬರುತ್ತದೆ. ಕತ್ತನ್ನು ನೀಳವಾಗಿ ಚಾಚುವುದು ಬಹುಶಃ ಹೆದರಿಸುವ ಒಂದು ರೀತಿಯಿರಬೇಕು. ಎಂಟು ತಿಂಗಳ ಗರ್ಭಾವಧಿಯ ತರುವಾಯ ಹೆಣ್ಣು ಒಂದು ಅಥವಾ ಎರಡು ಮರಿಗಳನ್ನು ಹಾಕುತ್ತದೆ. ಮೊದಲ ಗರ್ಭಧಾರಣೆಯಲ್ಲಿ ಒಂದೇ ಒಂದು ಮರಿಯನ್ನೂ ಅನಂತರದ ಗರ್ಭಧಾರಣೆಗಳಲ್ಲಿ ಎರಡು ಮರಿಗಳನ್ನು ಹಾಕುವುದು ಸಾಮಾನ್ಯ. (ಎಂ.ಎನ್.ಎಚ್.ಇ.)

**ನುಸಿಗಳು:** ಇವು ಸಂದಿಪದಿ ವಂಶದ ಅರ್ಯಾಕ್ನಿಡಾ ವರ್ಗದ ಅಕರೈನಿಡೆ ಕುಟುಂಬದ ಸದಸ್ಯರು. ಇವು ಗಾತ್ರದಲ್ಲಿ ವಿಭಿನ್ನವಾಗಿವೆ. ಕೆಲವು ಕಣ್ಣಿಗೆ ಕಾಣುವಷ್ಟು ದೊಡ್ಡವಾಗಿದ್ದರೆ ಇನ್ನು ಕೆಲವು ಕಣ್ಣಿಗೆ ಕಾಣಿಸದಷ್ಟು ಚಿಕ್ಕವು. ಉದಾ: ಉಣ್ಣೆ ಮತ್ತು ಕೆಂಪು ಮಖಮಲ್ಲು ನುಸಿಗಳು ಸು. 1 ಸೆಂಮೀ ಉದ್ದ ಇರುತ್ತವೆ. ದೇಹ ರಚನೆ ಕೀಟಗಳಿಗಿಂತ ಭಿನ್ನ. ಇವುಗಳಿಗೆ ಕುಡಿಮೀಸೆಗಳಿಲ್ಲ. 4 ಜೊತೆ ಕಾಲುಗಳಿವೆ. ತಲೆ, ಎದೆ ಮತ್ತು ಉದರ ಭಾಗದ ಖಂಡ ವಿಭಾಗವಾಗಿರದೆ ಮತ್ತು ಸಂದುಗಳಿಲ್ಲದೆ ಶಿರೋವಕ್ಷಕ್ಕೆ ಸೇರಿಕೊಂಡಿದೆ. ಕೆಲವು ನುಸಿಗಳ ಶರೀರ ಹಿಂದೆ ಮತ್ತು ಮುಂದೆ ಕ್ರಮೇಣ ಸಣ್ಣದಾಗಿ ಹುಳುವಿನಂತೆ ಹಾಗೆ ಕಾಣುವುದು. ಸಾಮಾನ್ಯವಾಗಿ ಶರೀರ ಮೃದುವಾಗಿರುವುದು. ಆದರೆ, ಕೆಲವು ನುಸಿಗಳಿಗೆ ಗಡುಸಾದ ಹೊರಚರ್ಮವಿದೆ.' ಬಾಯಿಭಾಗ ಕಿರಿದು. ಬಾಯಿಯಲ್ಲಿ ವದನಾಂಗಗಳಿವೆ. ಈ ಭಾಗವನ್ನು ಕ್ಯಾಪಿಟುಲಮ್ ಎಂದು ಹೆಸರಿಸಲಾಗಿದೆ. ಮುಂಭಾಗ ಮತ್ತು ಹಿಂಭಾಗಗಳಲ್ಲಿ ಎರಡೆರಡು ಜೊತೆ ಕಾಲುಗಳಿವೆ. ಕಾಲುಗಳ ಹಿಂದಕ್ಕಿರುವ ದೇಹ ಭಾಗಕ್ಕೆ ಒಪಿಸ್ಟೋಸೋಮವೆಂದು ಹೆಸರು. ಕೆಲವು ವೇಳೆ ಬಾಯಿಭಾಗ ಮತ್ತು ಮುಂಭಾಗಗಳನ್ನು ಪ್ರೋಟರೋಸೋಮವೆಂದೂ ಮತ್ತು ಉಳಿದ ಭಾಗವನ್ನು ಹಿಸ್ಟಿರೊಸೋಮವೆಂದೂ ಕರೆಯಲಾಗುತ್ತದೆ. ಬೇಕರ್ ಮತ್ತು ವಾರ್ಟನ್ ಅಕರೈನ ಗಣದಲ್ಲಿ 5 ಉಪಗಣಗಳನ್ನು ಗುರುತಿಸಿದ್ದಾರೆ. ಉಪಗಣ 1. ಅಂಕೊಪ್ಯಾಲ್ಪಡ. ಇದರಲ್ಲಿ ಮೇಲ್ಭಾಗದ ಪಕ್ಕೆಗಳಲ್ಲಿ 4 ಜೊತೆ ಶ್ವಾಸರಂಧ್ರಗಳನ್ನುಳ್ಳ ನೋಟೊಸ್ಟಿಗ್ಮ್ಯಾಟ ಹಾಗೂ 2 ಜೊತೆ ಶ್ವಾಸರಂಧ್ರಗಳನ್ನುಳ್ಳ ಹಾಲೊತ್ತೈರಾಯ್ಡಿಯ ಗುಂಪುಗಳಿವೆ. ಉಪಗಣ 2. ಮೀಸೊಸ್ಟಿಗ್ಮ್ಯಾಟ. ಕಾಲುಗಳ ಪಕ್ಕದಲ್ಲಿ ಒಂದು ಜೊತೆ ಶ್ವಾಸರಂಧ್ರಗಳಿವೆ. ಉಪಗಣ 3. ಇಕ್ಸೋಡಿಡಿಸ್: ಇದರಲ್ಲಿ ಉನ್ನತಮಟ್ಟದ ಪ್ರಾಣಿಗಳ ಪರೋಪಜೀವಿಗಳಾದ ಉಣ್ಣಿಗಳೆಲ್ಲ ಸೇರಿವೆ. ಉಪಗಣ 4. ಟ್ರಾಂಬಿಡಿಫಾರ್ಮಿಸ್: ಈ ನುಸಿಗಳ ಬಾಯಿ ಭಾಗದಲ್ಲಿ ಒಂದು ಜೊತೆ ಶ್ವಾಸರಂಧ್ರಗಳಿವೆ. ವೈವಿಧ್ಯಮಯ ಪ್ರಭೇದಗಳನ್ನೊಳಗೊಂಡ ಈ ಉಪಗಣದಲ್ಲಿ ಸಸ್ಯಗಳ ಮೇಲೆ ಜೀವಿಸುವ ಇಲ್ಯೂತರಂಗೋನ ಮತ್ತು ಜಲಚರಿಗಳಾದ ಪ್ಯಾರಿಸಿಂಟಿಂಗೋನ ಸೇರಿವೆ. ಉಪಗಣ 5. ಸಾರ್ಕೊಪ್ಟಿಫಾರ್ಮಿಸ್: ಪ್ರಾಯಶಃ ಬಹಳ ಉನ್ನತಮಟ್ಟದ ಗುಂಪು. ಚೀಸ್‌ನುಸಿ, ಕಜ್ಜಿನುಸಿ ಮತ್ತು ಟೈರೋಗ್ಲಿಫಿಡೆಗೆ ಸೇರಿದ ಇತರ ನುಸಿಗಳನ್ನೊಳಗೊಂಡ ಅಕ್ಯಾರಿಡೆಯ ಮತ್ತು ಓರಿಬೇಟಿಯೈ ಅಥವಾ ಚಿಪ್ಪಿನ ನುಸಿ ಗುಂಪುಗಳು ಇದರಲ್ಲಿವೆ.

ಸ್ವತಂತ್ರಜೀವಿಗಳಾಗಿ ಬದುಕುವ ನುಸಿಗಳು ವಿವಿಧ ಸನ್ನಿವೇಶಗಳಿಗೆ ಹೊಂದಿಕೊಂಡಿವೆ. ಕೆಲವು ಎತ್ತರವಾದ ಬೆಟ್ಟ ಪ್ರದೇಶಗಳಲ್ಲಿ (ಸು. 5,000 ಮೀ ಎತ್ತರದಲ್ಲಿ ) ವಾಸಿಸುತ್ತವೆ. ಸಸ್ಯವರ್ಗ ಬೆಳೆಯುವ ಎಲ್ಲಾ ಸ್ಥಳಗಳಲ್ಲಿ ಇವನ್ನು ಕಾಣಬಹುದು. ಕೊಳೆಯುತ್ತಿರುವ ಸಸ್ಯಾವಶೇಷಗಳನ್ನುಳ್ಳ ಮೇಲುಮಣ್ಣಿನಲ್ಲಿ ಇವು ಹೆಚ್ಚಾಗಿರುತ್ತವೆ. ಕೆಲವು ನುಸಿಗಳು ಯಾವಾಗಲೂ ಭೂಮಿಯಲ್ಲಿರುವ ಬಿರುಕು, ರಂಧ್ರಗಳಲ್ಲಿ ಮತ್ತು ಬಿಲಗಳಲ್ಲಿ ವಾಸಿಸುತ್ತವೆ (ಉದಾ: ಯೂಪೋಡಿಡೆ, ಪೆಂತೇಲಿಡೆ, ಮತ್ತು ಕೆಲವು ಮೀಸೊಸ್ಟಿಗ್ಮ್ಯಾಟ). ಇವುಗಳ ಕಣ್ಣು ಕಿರಿದು. ಕೆಲವು ನುಸಿಗಳು ಜೌಗು ಪ್ರದೇಶಗಳಲ್ಲಿ ಕೆರೆ ಮತ್ತು ಕೊಳಗಳ ತಳಭಾಗದಲ್ಲಿ ಜೀವಿಸುತ್ತವೆ. ಇವು ಈಜಲಾರವು. ಇನ್ನೂ ಕೆಲವು ಗುಹೆಗಳಲ್ಲಿರುವ ನೀರಿನಲ್ಲಿ ಜೀವಿಸುತ್ತವೆ. ಹೈಡ್ರ್ಯಾಕ್ನೆಲ್ಲಿಡೆಗೆ ಸೇರಿದ ನುಸಿಗಳು ಕೊಳ ಮತ್ತು ಹೊಳೆಗಳ ನೀರಿನಲ್ಲಿ ಇದ್ದು ಈಜುತ್ತಾ, ಜೀವನ ನಡೆಸುವುವು. ಇದಕ್ಕೆ ಅನುಕೂಲವಾಗುವಂತೆ ಇವುಗಳ ಹಿಂಗಾಲುಗಳ ಮೇಲೆ ಕೂದಲುಗಳಿವೆ. ಕೆಲವು ನುಸಿಗಳು (ಉದಾ: ಹಾಲಕ್ಯಾರಿಡೆ) ಸಮುದ್ರತೀರದ ಆಳ ನೀರಿನಲ್ಲಿ (1400 ಮೀ ಆಳದ) ಇರುತ್ತವೆ. ಕೆಲವು ಜಾತಿಯ ನುಸಿಗಳು ಫಾರ್ಮೋಸ, ಕಾಶ್ಮೀರ, ಟಿಬೆಟ್ ಮತ್ತು ಅಮೆರಿಕದಲ್ಲಿನ ಬಿಸಿನೀರಿನ ಬುಗ್ಗೆಗಳಲ್ಲಿ ವಾಸಿಸುತ್ತವೆ. ಅನೇಕ ಜಾತಿಯ ಪಕ್ಷಿಗಳು, ಇಲಿ ಮತ್ತು ಇತರ ಸ್ತನಿಗಳ ಗೂಡುಗಳಲ್ಲಿ ವಿವಿಧ ಬಗೆಯ ನುಸಿಗಳು ಜೀವಿಸುತ್ತವೆ. ಹಲವು ನುಸಿಗಳು ಸಸ್ಯಗಳ ರಸ ಹೀರಿ ಬದುಕುತ್ತವೆ. ಕೆಲವು ನುಸಿಗಳು ಸಾಯುತ್ತಿರುವ ಜೀವಿಗಳ ಅಥವಾ ಕೊಳೆಯುತ್ತಿರುವ ವಸ್ತುಗಳ ಮೇಲೆ ವಾಸಿಸುತ್ತವೆ. ಕೆಲವು, ಸಣ್ಣಪ್ರಾಣಿಗಳನ್ನು ಅಂದರೆ ಸಸ್ಯಾಹಾರಿ ನುಸಿಗಳನ್ನು ತಿಂದು ಜೀವಿಸುತ್ತವೆ. ದಾಸ್ತಾನು ಮಾಡಿದ ಧಾನ್ಯಗಳು, ಚೀಸ್ ಮತ್ತು ದ್ರಾಕ್ಷಾರಸಗಳಲ್ಲಿ ಕೂಡ ಹಲವು ರೀತಿಯ ನುಸಿಗಳು ವಾಸಿಸುತ್ತವೆ.

ಎಲ್ಲಾ ತರಹದ ಪ್ರಾಣಿ, ಸಸ್ಯ ಮತ್ತು ಕೊಳೆಯುತ್ತಿರುವ ಪದಾರ್ಥಗಳು ನುಸಿಗಳಿಗೆ ಆಹಾರವಾಗಿವೆ. ಮಿಸೋಸ್ಟಿಗ್ಮ್ಯಾಟದ ಯೂರೋಪೂಡೀನಕ್ಕೆ ಸೇರಿದ ನುಸಿಗಳು ಕೊಳೆಯುತ್ತಿರುವ ಎಲೆಗಳು, ಸಗಣಿ ಮತ್ತು ಗೊಬ್ಬರದಲ್ಲಿ ವಾಸವಾಗಿದ್ದು, ಕೇವಲ ಬೂಷ್ಟುಗಳನ್ನು ತಿಂದು ಜೀವಿಸುತ್ತವೆ. ಓರಿಬೇಟಿಯೈಗೆ ಸೇರಿದುವು ನುಸಿಗಳು ಇದೇ ತರಹದ ಸನ್ನಿವೇಶಗಳಲ್ಲಿ ಬದುಕುವುವು. ಕೆಲವು ವೇಳೆ ಸ್ವಲ್ಪ ತೇವವಿರುವ ಮನೆಗಳಲ್ಲಿ, ಮರದಿಂದ ಮಾಡಿರುವ ಪೀಠೋಪಕರಣಗಳ ಮೇಲೆ ಗ್ಲೈಸಿಫ್ಯಾಜಿಡೆ ಕುಟುಂಬಕ್ಕೆ ಸೇರಿದ ಅಸಂಖ್ಯಾತ ನುಸಿಗಳು ವಾಸವಾಗಿರುತ್ತವೆ.

ಗುಹೆಗಳ ನೀರಿನಲ್ಲಿ ಜೀವಿಸುವ ಕೆಲವು ಹಾಲಕ್ಯಾರಿಡೆಗೆ ಸೇರಿದ ನುಸಿಗಳು ಆ ನೀರಿನಲ್ಲಿ ಬೆಳೆಯುವ ಪಾಚಿಯನ್ನು ತಿಂದು ಜೀವಿಸುತ್ತವೆ. ಕೆಲವು ಓರಿಬೇಟಿಯೈಗಳು ಬಂಡೆಯ ಮೇಲೆ ಬೆಳೆಯುವ ಕಲ್ಲುಹೂವಿನ ಮೇಲೆ ವಾಸಿಸುತ್ತವೆ.

ಅಕ್ಯಾರಸ್ ಸೈರೊ ದಾಸ್ತಾನು ಧಾನ್ಯಗಳಿಗೆ ಬಹಳ ಹಾನಿ ಮಾಡುತ್ತದೆ. ಕಾರ್ಪೋಗ್ಲಿಫಸ್ ಲ್ಯಾಕ್ಟಿಸ್ ಒಣಗಿದ ಹಣ್ಣು, ಹಾಲಿನ ಪುಡಿ ಮತ್ತು ಅಪರೂಪವಾಗಿ ದ್ರಾಕ್ಷಾರಸಕ್ಕೂ ಹಾನಿಯುಂಟುಮಾಡುತ್ತದೆ. ಕೆಲವು ನುಸಿಗಳು ಚರ್ಮ, ತುಪ್ಪುಳ, ಬಟ್ಟೆ ಮುಂತಾದ ಸಾಮಾನುಗಳನ್ನು ಹಾಳುಮಾಡುತ್ತವೆ.

ಅಂಕೋಪ್ಯಾಲ್ಪಿಡಕ್ಕೆ ಸೇರಿದ ನುಸಿಗಳು ಸಾಮಾನ್ಯವಾಗಿ ಚುರುಕಾಗಿವೆ. ಇವು ಕಲ್ಲುಗಳ ಕೆಳಗೆ ಮತ್ತು ತೇವಪೂರಿತ ಪ್ರದೇಶಗಳಲ್ಲಿ ವಾಸಿಸುವ ಅನೇಕ ಸಂದಿಪದಿಗಳನ್ನು ಹಿಡಿದು ತಿನ್ನುತ್ತವೆ. ಟ್ರಾಂಬಿಡಿಫಾರ್ಮಿಸ್ ಉಪಗಣದುವು ಸಣ್ಣ ಕೀಟಗಳನ್ನು ತಿನ್ನುವುವು. ಕೆಲವು ಹಾಲಕ್ಯಾರಿಡೆಗಳು ಸಮುದ್ರದ ಜೊಂಡು ಮತ್ತು ಬಂಡೆಯ ಮೇಲಿನ ಸಣ್ಣಪುಟ್ಟ ಪ್ರಾಣಿಗಳನ್ನು ಅವಲಂಬಿಸಿವೆ. ವಿವಿಧ ಬೆಳೆಗಳಿಗೆ ಬೀಳುವ ಕೀಟಗಳನ್ನು ತಿಂದು ಹತೋಟಿಯಲ್ಲಿಡಲು ಸಹಾಯ ಮಾಡುವ ಫಯಟೊಸೈಯಿಡೆ ಕುಟುಂಬದ ನುಸಿಗಳು ಇಲ್ಲಿ ಉಲ್ಲೇಖಾರ್ಹ. ಅಕ್ಯಾರಿಡಿಯಿಯಲ್ಲಿ ಕೆಲವು ನುಸಿಗಳು ವಿವಿಧ ಕೀಟಗಳ ಮೊಟ್ಟೆಗಳನ್ನು ತಿಂದು ಜೀವಿಸುತ್ತವೆ. ಅವುಗಳ ಜೀವನ ಚರಿತ್ರೆಯಲ್ಲಿ ಹೈಪೋಪಸ್ ಎಂಬ ಅವಸ್ಥೆಯಿದ್ದು ಅವು ಕೀಟಗಳ ಶರೀರಕ್ಕೆ ಅಂಟಿಕೊಂಡು ಸ್ಥಳದಿಂದ ಸ್ಥಳಕ್ಕೆ ಸಾಗಣೆಯಾಗುವುವು.

ಕೆಲವು ನುಸಿಗಳು ಬೇರೆ ಪ್ರಾಣಿಗಳ ಮೇಲೆ ಪರೋಪಜೀವನ ನಡೆಸುವುವು. ಟ್ರಾಂಬಿಡಿಫಾರ್ಮಿಸ್, ಮೀಸೊಸ್ಟಿಗ್ಮ್ಯಾಟ, ಇಕ್ಸೊಡಿಡಿಸ್ ಮತ್ತು ಸಾರ್ಕೋಪ್ಟಿಫಾರ್ಮಿಸ್‌ಗೆ ಸೇರಿದ ಅನೇಕ ನುಸಿಗಳು ಉದಾಹರಣೆಗಳು. ಅನೇಕ ನುಸಿಗಳು ರಾಸುಗಳನ್ನೊಳಗೊಂಡಂತೆ ವಿವಿಧ ಸ್ತನಿಗಳನ್ನು ಮುತ್ತುತ್ತವೆ. ಕುದುರೆ, ಕುರಿ ಮತ್ತು ದನಕರುಗಳ ಚರ್ಮದ ಮೇಲೆ ಮೇಂಜ್ ಎಂಬ ಕಜ್ಜಿಯನ್ನು ಉಂಟುಮಾಡುವ ಸೋರೋಪ್ಟಿಸ್ ಕಮ್ಯುನಿಸ್ ನುಸಿಗಳಲ್ಲಿ ಮುಖ್ಯವಾದುದು. ಕೆಲವು ಅಕ್ಯಾರಿಡ್ ನುಸಿಗಳು ಚರ್ಮ ಕೊರೆದುಕೊಂಡು ದೇಹದ ಒಳಹೋಗುವುವು. ಮನುಷ್ಯ ಮತ್ತು ಇತರ ಪ್ರಾಣಿಗಳಲ್ಲಿ ನವೆ, ಕೆರೆತ ಮತ್ತು ಕಜ್ಜಿಯನ್ನುಂಟುಮಾಡುವ ಸಾರ್ಕೊಪ್ಟಿಸ್ ಸ್ಕ್ಯಾಬಿಯೈ ಕಜ್ಜಿಹುಳು. ಡೀಮೊಡಿಸಿಡೆ ಕುಟುಂಬದ ನುಸಿಗಳು ಹೆಚ್ಚು ಕಡಿಮೆ ಹುಳುವಿನಂತಿದ್ದು ರೋಮಕೂಪದೊಳಕ್ಕೆ ಕೊರೆದುಕೊಂಡು ಹೋಗುವುದರಿಂದ ಕೂದಲುಗಳು ಉದುರಿಹೋಗುತ್ತವೆ. ಡೀಮೋಡೆಕ್ಸ್ ಫಾಲಿಕ್ಯುಲೋರಮ್, ಮನುಷ್ಯನಲ್ಲಿ, ನಾಯಿ ಮತ್ತು ಮೂಷಕಗಳಲ್ಲಿವೆ. ಜಿಗ್ಗರ್ ಹಾಗೂ ಟ್ರಾಂಬಿಕ್ಯೂಲಿಡೆ ನುಸಿಗಳ ಮರಿಗಳು ಮನುಷ್ಯ ಮತ್ತು ರಾಸುಗಳನ್ನು ಮುತ್ತುತ್ತವೆ. ಇವು ಚರ್ಮದ ಕೆರೆತ, ದದ್ದು ಮತ್ತು ಚರ್ಮದ ಊತವನ್ನುಂಟುಮಾಡುತ್ತವೆ. ಟ್ರಾಂಬಿಕ್ಯೂಲಕ್ಕೆ ಸೇರಿದ ಕೆಲವು ನುಸಿಗಳು ರಿಕೆಟ್ಸಿಯ ಕಾಯಿಲೆಯನ್ನು ಒಬ್ಬರಿಂದೊಬ್ಬರಿಗೆ ಹರಡುತ್ತವೆ. ಮೀಸೋಸ್ಟಿಗ್ಮ್ಯಾಟಕ್ಕೆ ಸೇರಿದ ರಕ್ತಹೀರುವ ನುಸಿಗಳು ಸಣ್ಣ ಗಾತ್ರದ ಸ್ತನಿಗಳನ್ನು ಮುತ್ತುತ್ತವೆ.

ರಕ್ತಹೀರುವ ನುಸಿಗಳಲ್ಲಿ ಇಕ್ಸೊಡಿಡಿಸ್‌ಗೆ ಸೇರಿದ ಉಣ್ಣಿಗಳು ಪ್ರಮುಖವಾದುವು. ಅರ್ಗ್ಯಾಸಿಡೆ ಉಣ್ಣಿಗಳು ಆಗಾಗ್ಗೆ ರಕ್ತಹೀರುತ್ತಿದ್ದು ನೆಲದ ಬಿರುಕುಗಳಲ್ಲಿ ಅಥವಾ ನೆಲದ ಮೇಲೆ ಕಾಲ ಕಳೆಯುತ್ತವೆ. ಆದರೆ, ಇಕ್ಸೋಡಿಡೆ ಕುಟುಂಬದ ಉಣ್ಣಿಗಳು ಪ್ರೌಢಾವಸ್ಥೆಯಲ್ಲಿ ಕೇವಲ ಒಂದು ಸಾರಿ ರಕ್ತಹೀರುತ್ತವೆ. ಉಣ್ಣಿಗಳು ತಾವು ರಕ್ತಹೀರುವ ಪ್ರಾಣಿಗಳ ಮೇಲೆ ಮತ್ತು ಅಡಗಿಕೊಂಡಿರುವ ನೆಲದ ಮೇಲೆ ಮೊಟ್ಟೆಗಳನ್ನಿಡುತ್ತೀವೆ. ಆರ್ನಿತೋಡೋರಸ್, ಆರ್ಗ್ಯಾಸ್, ಇಕ್ಸೋಡಿಸ್ ಮತ್ತು ಬುಫೈಲಸ್‌ಗಳು ಮನೆ ರಾಸುಗಳಲ್ಲಿ ಮುತ್ತುವ ಉಣ್ಣಿಗಳು.

ಪಕ್ಷಿಗಳನ್ನು ಮುತ್ತುವ ಇತರ ನುಸಿಗಳು ಅನೇಕ. ನಿಮಿಡೋಕಾಪ್ಟಿಸ್ ಗುಂಪಿಗೆ ಸೇರಿದ ಕೆಲವು ಪ್ರಭೇದಗಳು ಕೋಳಿಗಳ ಮೇಲೆ ಕಾಣಿಸಿಕೊಂಡು, ಅವುಗಳ ಪುಕ್ಕಗಳನ್ನು ಉದುರಿಸಿ ತೊಂದರೆ ಉಂಟು ಮಾಡುತ್ತವೆ. ರಕ್ತಹೀರುವ ಡರ್ಮ್ಯಾನಿಸ್ಸಸ್ ಮತ್ತು ಆರ್ನಿತೋನಿಸ್ಸಸ್, ಮೀಸೋಸ್ಟಿಗ್ಮ್ಯಾಟ ಮುಂತಾದುವು ಪಕ್ಷಿಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಇವು ಹಗಲು ನೆಲದ ಬಿರುಕುಗಳಲ್ಲಿ ಕಾಲಕಳೆದು ರಾತ್ರಿಯಲ್ಲಿ ಕೋಳಿಗಳ ರಕ್ತಹೀರುತ್ತವೆ.

ಸಂಧಿಪದಿಗಳು ನುಸಿಗಳು ಬಹಳ ವಿಶೇಷವಾಗಿ ಮುತ್ತುವ ಪ್ರಾಣಿಗಳು. ಕೀಟಗಳ ಪರೋಪಜೀವಿಗಳಾಗಿರುವ ನುಸಿಗಳಲ್ಲಿ ಟ್ರಾಂಬಿಡಿಫಾರ್ಮಿಸ್ ನುಸಿಗಳೇ ಅತಿಮುಖ್ಯ. ಅದರಲ್ಲಿ ಪೋಡಪೋಲಿಪೋಡಿಡೆ, ಎರಿತ್ರೆಯಿಡೆ ಮತ್ತು ಟ್ರಾಂಬಿಕೊಲಿಡೆ ನುಸಿಗಳು ಮಿಡತೆ, ಚಿಪ್ಪಿನ ಕೀಟಗಳು, ನೊಣ ಮುಂತಾದ ಕೀಟಗಳ ಮೇಲೆ ಕಾಣಿಸಿಕೊಳ್ಳುತ್ತವೆ. ನೀರಿನಲ್ಲಿರುವ ಅನೇಕ ಕೀಟಗಳನ್ನು ಕೂಡ ನುಸಿಗಳು ಬಿಡುವುದಿಲ್ಲ. ಇವುಗಳಲ್ಲಿ ಹೈಡ್ರಾಕ್ನೆಲಿಡೆ ಕುಟುಂಬದುವು ಮುಖ್ಯವಾದುವು.

ಪ್ರಾಣಿಗಳ ಶರೀರದೊಳಗೆ ವಾಸಮಾಡುವ ಪ್ರಭೇದಗಳಿವೆ. ಲೀಲಾಪ್ಟಿಡೆ ಕುಟುಂಬದ ಕೆಲವು ನುಸಿಗಳು ನೀರಿನಲ್ಲಿ ವಾಸಿಸುವ ಸ್ತನಿಗಳ ಶ್ವಾಸಕೋಶಗಳಲ್ಲಿ, ಮೂಗಿನ ದ್ವಾರಗಳಲ್ಲಿ ವಾಸಿಸುತ್ತವೆ. ವಿವಿಧ ಕೀಟಗಳ ಶ್ವಾಸನಾಳಗಳಲ್ಲಿ ಅನೇಕ ಟಾರ್ಸೋನಿಮಿನಿ ನುಸಿಗಳು ಜೀವಿಸುತ್ತವೆ. ಜೇನು ಹುಳುಗಳ ಗೂಡನ್ನು ಬಹಳ ಹಾನಿ ಮಾಡುವ ನುಸಿಜಾಡ್ಯಕ್ಕೆ ಕಾರಣ ಅಕಾರ್ಯಾಪಿಸ್‌ವುಡಿ ನುಸಿ. ಇದು ಜೇನುಹುಳುಗಳ ಶ್ವಾಸನಾಳಗಳಲ್ಲಿ ಜೀವಿಸುತ್ತದೆ.

ಸಸ್ಯಗಳ ಮೇಲೆ ಕಾಣುವ ಅನೇಕ ಸಸ್ಯಾಹಾರಿ ನುಸಿಗಳನ್ನು ತಿಂದು ಜೀವಿಸುವ ನುಸಿಗಳಿವೆ. ಆದರೆ ಟ್ರಾಂಬಿಡಿಫಾರ್ಮಿಸ್‌ಗೆ ಸೇರಿದ ಕೆಲವು ನುಸಿಗಳು ಮಾತ್ರ ಗಿಡಗಳ ರಸವನ್ನು ಹೀರಿ ಜೀವಿಸುವುದಕ್ಕೆ ಹೊಂದಿಕೊಂಡಿವೆ. ಈ ಉಪಗಣಕ್ಕೆ ಸೇರಿದ ಟೆಟ್ರಾನಿಕಿಡೆ ಅಥವಾ ಜೇಡನುಸಿಗಳು ಸಸ್ಯಾಹಾರಿ ನುಸಿಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವಂಥವು. ಜೇಡನುಸಿಗಳು ರಸ ಹೀರುವುದರಿಂದ ಎಳೆರೆಂಬೆ ಮತ್ತು ಎಲೆಗಳ ಮೇಲೆ ಮೂಡುವ ಬಿಳಿಚುಕ್ಕೆಗಳು ಸಾಮಾನ್ಯವಾಗಿ ಉಂಟಾಗುವ ಚಿಹ್ನೆಗಳು. ರಸ ಹೀರುವಾಗ ಸಸ್ಯ ರಸದೊಂದಿಗೆ ಅದರಲ್ಲಿರುವ ಹಸಿರುಬಣ್ಣದ ಕ್ಲೋರೋಫಿಲ್ಲನ್ನು ಹೀರಿಕೊಳ್ಳುವುದರಿಂದ ಈ ರೀತಿ ಬಿಳಿಮಚ್ಚೆಗಳು ಉಂಟಾಗುವುವು. ಜೇಡನುಸಿಗಳಾದ ಟೆಟ್ರಾನಿಕ್ಸ್‌ಗಳು ಸಾಮಾನ್ಯವಾಗಿ ಗಿಡಗಳ ಎಲೆ ಮತ್ತು ರೆಂಬೆಗಳ ಮೇಲೆ ಸೂಕ್ಷ್ಮ ಬಲೆಯನ್ನು ನೇಯ್ದು ಅದರ ಕೆಳಗೆ ಜೀವಿಸುತ್ತವೆ. ಬ್ರಯೋಬಿಯ ಜೇಡ ನುಸಿಗಳು ಈ ರೀತಿ ಬಲೆ ನೇಯುವುದಿಲ್ಲ. ಅನೇಕ ಜೇಡನುಸಿಗಳು ಬಗೆಬಗೆಯ ದ್ವಿದಳಧಾನ್ಯ, ಹಣ್ಣು, ತರಕಾರಿ ಮೊದಲಾದ ಬೆಳೆಗಳ ಹಾನಿಗೆ ಕೆಲವು ವೇಳೆ ಕಾರಣವಾಗುತ್ತವೆ. ವಾತಾವರಣ ಅನುಕೂಲವಾಗಿದ್ದಾಗ ವಾರಕ್ಕೊಮ್ಮೆ ಒಂದು ಜೀವನಚಕ್ರವನ್ನು ಮುಗಿಸುತ್ತವೆ.

ಟಾರ್ಸೋನೀಮಿಡೆಗೆ ಸೇರಿದ ಕೆಲವು ನುಸಿಗಳಾದ ಟಾರ್ಸೋನೀಮಸ್ ಮತ್ತು ಹೆಮಿಟಾರ್ಸೋನೀಮಸ್ ನುಸಿಗಳು ಹಲವು ಬಗೆಯ ತರಕಾರಿ, ಹಣ್ಣು ಮತ್ತು ಹೂಗಿಡಗಳಿಗೆ ಹಾನಿಕಾರಕವಾಗಿವೆ. ಈ ನುಸಿಗಳಿಂದ ಆವೃತವಾದ ಎಲೆಗಳು ವಕ್ರವಾಗಿ, ಕಿರಿದಾಗಿ, ತಿರುಚಿಕೊಂಡು, ಒರಟಾಗುತ್ತವೆ.

ಫೈಟೋಪ್ಟಿಪಾಲ್ಪಿಡೆಗೆ ಸೇರಿದ ಸಣ್ಣ ಕೆಂಪು ನುಸಿಗಳು ಹಲವಾರು ಗಿಡಗಳ ರಸ ಹೀರಿ ಜೀವಿಸುತ್ತವೆ. ಟೆನ್ಯೂಪಾಲ್ಪಿಸ್ ಮತ್ತು ಬ್ರೆವಿಪಾಲ್ಪಿಸ್ ನುಸಿಗಳು ಮುಖ್ಯವಾದುವು. ಇವು ಅನೇಕ ಬೆಳೆಗಳಿಗೆ ಹಾನಿಕಾರಕವಾಗಿವೆ.

ಎರಿಯೋಫೈಯಿಡೆಗಳು (ಗಂಟುನುಸಿ) ಸಸ್ಯಗಳ ರಸ ಹೀರಿ ಜೀವಿಸುತ್ತವೆ. ಇವುಗಳಲ್ಲಿ ಕೆಲವು ರಸ ಹೀರುವ ಗಿಡಗಳ ಮೇಲೆ ವಿವಿಧ ರೀತಿಯ ವಿಕಾರ ರೂಪವನ್ನುಂಟುಮಾಡುತ್ತವೆ. ಕೆಲವು ಸಸ್ಯಗಳಿಗೆ ತಗಲುವ ನಂಜುರೋಗಗಳನ್ನು ಹರಡುತ್ತವೆ. ಈ ನುಸಿಗಳು ರಸ ಹೀರುವುದರಿಂದ ಉಂಟಾಗುವ ಮುಖ್ಯ ಚಿಹ್ನೆಗಳು:

1. ಇವು ಅಂಟಿದ ಭಾಗ ಒರಟಾಗಿ ಬಣ್ಣ ಬದಲಾಯಿಸುವುದು,
2. ಎಲೆಗಳು ಮತ್ತು ರೆಂಬೆಗಳ ಮೇಲೆ ಮಖಮಲ್ಲಿನಂತೆ ಕೂದಲು ಬೆಳೆಯುವುದು,
3. ಟೊಳ್ಳಾದ ಗಂಟುಗಳು ಎಲೆಗಳು ಕಾಣಿಸಿಕೊಳ್ಳುವುದು,
4. ಕಜ್ಜಿಯ ಹಾಗೆ ಆಗುವುದು,
5. ಮೊಗ್ಗುಗಳ ಸುತ್ತ ಗಟ್ಟಿಗಂಟು ರೂಪುಗೊಳ್ಳುವುದು ಮತ್ತು
6. ರೆಂಬೆಗಳು ಮೊಟಕಾಗಿ ಮೊಂಡು ಪೊರಕೆಯ ಹಾಗೆ ಕಾಣುವುದು.

ಪರೋಪಜೀವಿಗಳಾದ ಲಾಡಿಹುಳು ಜಾತಿಗೆ ಸೇರಿದ ಜೀವಿಗಳಿಗೆ ಸಾರ್ಕೊಪ್ಟಿಫಾರ್ಮಿಸ್‌ಗೆ ಸೇರಿದ ನುಸಿಗಳು ಆಶ್ರಯದಾತಗಳಾಗಿ ವರ್ತಿಸುವುದರಿಂದ ಇವು ಲಾಡಿಹುಳುಗಳ ಅಭಿವೃದ್ಧಿ ಮತ್ತು ಹರಡುವಿಕೆಗೆ ಕಾರಣವಾಗುತ್ತವೆ. ಕೆಲವು ರಕ್ತ ಹೀರುವ ನುಸಿಗಳು ಫೈಲೇರಿಯ ಜಂತುಹುಳುಗಳನ್ನು ಹರಡುತ್ತವೆ. ಅಲ್ಲದೆ ಕಶೇರುಕ ಪ್ರಾಣಿಗಳಿಗೆ ತಗಲುವ ಅನೇಕ ಬ್ಯಾಕ್ಟೀರಿಯ ಮತ್ತು ನಂಜು ರೋಗಗಳನ್ನು ಹರಡುವುದರಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ನುಸಿಗಳು ಸಸ್ಯಗಳಿಗೆ ಹರಡುವ ನಂಜುರೋಗಗಳಲ್ಲಿ ಮುಖ್ಯವಾದುವು: ಅಮೆರಿಕದಲ್ಲಿ ಗೋದಿ ಬೆಳೆಗೆ ತಗಲುವ ಗೆರೆ ಮತ್ತು ಮಚ್ಚೆ ನಂಜುರೋಗಗಳು, ಅಂಜೂರದ ಮಚ್ಚೆ ರೋಗ ಮತ್ತು ದ್ವೀಪ ದ್ರಾಕ್ಷಿಯ ನಂಜುರೋಗ. ***

**ನೂ:** ಆಫ್ರಿಕದ ಟ್ಯಾಂಗನೀಕ ಮತ್ತು ಕೀನ್ಯಗಳ ದಕ್ಷಿಣದಲ್ಲಿ ಕಂಡುಬರುವ ವನ್ಯಪ್ರಾಣಿ. ಆರ್ಟಿಯೊಡ್ಯಾಕ್ಟಿಲ ಗಣದ ಬೋವಿಡೆ ಕುಟುಂಬಕ್ಕೆ (ಮೆಲಕು ಹಾಕುವ ಪ್ರಾಣಿಗಳ ಗುಂಪು) ಸೇರಿವೆ. ವೈಲ್ಡ್‌ಬೀಸ್ಟ್ ಪರ್ಯಾಯನಾಮ. ಕಾನೊಕೀಟಸ್ ಟಾರಿನಸ್ ಇದರ ವೈಜ್ಞಾನಿಕ ಹೆಸರು. ಸರಿ ಸುಮಾರು ಕುದುರೆಯಂಥ ಮೈಕಟ್ಟುಳ್ಳ ಪ್ರಾಣಿ ಇದು. ದೇಹದ ಉದ್ದ 1.5–2 ಮೀ. ಭುಜದ ಬಳಿಯ ಎತ್ತರ 1–1.3 ಮೀ. ಪ್ರೌಢವಯಸ್ಸಿನ ಗಂಡಿನ ತೂಕ 230–275 ಕಿಗ್ರಾಂ. ದೇಹದ ಬಣ್ಣ ಬೂದುಬೆಳ್ಳಿ. ಕತ್ತು, ಭುಜಗಳ ಬಳಿ ಕಂದು ಪಟ್ಟಿಗಳುಂಟು. ಮುಖ, ಅಯಾಲು, ಗಡ್ಡ ಮತ್ತು ಬಾಲದ ತುದಿಯಲ್ಲಿ ಕಪ್ಪು ಕೂದಲುಗಳಿವೆ. ಗಂಡುಹೆಣ್ಣುಗಳೆರಡರಲ್ಲೂ ಕೊಂಬು ಇವೆ. ಆಕಳು ಎಮ್ಮೆಗಳಂತೆ ಇದೂ ಕೂಡ ಇಗ್ಗೊರಸು ಪ್ರಾಣಿ.

ನೂ ಗಳು 5 ರಿಂದ 15ರ ಸಂಖ್ಯೆಯ ಹಿಂಡುಗಳಾಗಿ ಸಂಚರಿಸುವುದು ಸಾಮಾನ್ಯ. ಕೆಲವೊಮ್ಮೆ ಹಿಂಡಿನಲ್ಲಿ 100ಕ್ಕೂ ಮೇಲ್ಪಟ್ಟು ಪ್ರಾಣಿಗಳಿರುತ್ತವೆ. ಹಿಂಡು ಸಣ್ಣದಾಗಿದ್ದರೆ ಬಲಶಾಲಿಯಾದ ಗಂಡೊಂದು ನಾಯಕತ್ವ ವಹಿಸಿಕೊಳ್ಳುತ್ತದೆ. ಹಿಂಡು ದೊಡ್ಡದಾಗಿದ್ದರೆ ಹಲವಾರು ಗಂಡುಗಳು ನಾಯಕರಾಗಿರಬಹುದು. ಮುದಿಗಂಡುಗಳು ಗುಂಪನ್ನು ಬಿಟ್ಟು ಒಂಟೊಂಟಿಯಾಗಿಯೋ ಇಲ್ಲವೆ ತಮ್ಮವೇ ಗುಂಪನ್ನು ರಚಿಸಿಕೊಂಡೋ ಇರುವುದುಂಟು. ನೂ ಗೆ ಹುಲ್ಲು ಬೆಳೆದಿರುವ ಬಯಲು ನೆಲ ಬಲು ಅಚ್ಚುಮೆಚ್ಚು. ಅಂತೆಯೇ ಸನಿಹದಲ್ಲಿ ನೀರಿನ ಆಸರೆಯೂ ಇರಬೇಕು. ಮನುಷ್ಯರೇನಾದರೂ ನೂಗಳ ಹತ್ತಿರ ಹೋದರೆ, ಅವು ನೆಗೆದಾಡುವುದು, ನೆಲವನ್ನು ಗೊರಸಿನಿಂದ ಕೆರೆಯುವುದು, ಕೊಂಬಿನಿಂದ ಮಣ್ಣನ್ನು ಗೋರುವುದು, ಬಾಲ ಬಡಿಯುವುದು ಮುಂತಾದ ವಿಚಿತ್ರ ನಡವಳಿಕೆಗಳನ್ನು ಪ್ರದರ್ಶಿಸುತ್ತವೆ. ಬಲು ಹತ್ತಿರಕ್ಕೆ (ಸುಮಾರು 500 ಮೀಟರ್) ಸಾರಿದರೆ ಹೂಂಕರಿಸಿ ಕೊಂಚ ದೂರ ಓಡಿ, ಶತ್ರುವಿಗೆದುರಾಗಿ ತಿರುಗಿ ಮತ್ತೆ ತಮ್ಮ ವಿಚಿತ್ರ ಚಟುವಟಿಕೆಯನ್ನು ಪ್ರದರ್ಶಿಸುತ್ತವೆ. ನೂಗಳು ಆಹಾರ ಸೇವಿಸುವುದು ಬೆಳಿಗ್ಗೆ ಮತ್ತು ಸಂಜೆ. ಮಧ್ಯಾಹ್ನದ ಬಿಸಿಲಿನಲ್ಲಿ ಮರಗಳ ನೆರಳಿನಲ್ಲಿ ವಿಶ್ರಮಿಸುತ್ತವೆ.

ಗಂಡು–ಹೆಣ್ಣುಗಳು ಕೂಡುವ ಕಾಲ ಜೂನ್. 8–9 ತಿಂಗಳ ಗರ್ಭಾವಧಿಯ ಬಳಿಕ ಒಂದೇ ಒಂದು ಮರಿ ಹುಟ್ಟುತ್ತದೆ. ಮರಿ ಒಂದು ವಾರದ ಅನಂತರ ಹುಲ್ಲು ತಿನ್ನಲು ಆರಂಭಿಸುತ್ತಾದರೂ 7–8 ತಿಂಗಳವರೆಗೂ ತಾಯ ಹಾಲು ಕುಡಿಯುತ್ತದೆ. ನೂವಿನ ಆಯಸ್ಸು ಸುಮಾರು 16 ವರ್ಷಗಳು. ಇದರ ಮಾಂಸ ಗಟ್ಟಿ ಹಾಗೂ ಒರಟು. ತ್ವಚೆಯಿಂದ ಒಳ್ಳೆಯ ಚರ್ಮವನ್ನು ಪಡೆಯಬಹುದು. ಇದರ ಬಾಲದಿಂದ ಚವರಿ ತಯಾರಿಸುವುದಿದೆ. ***

**ನೂಡಿಬ್ರ್ಯಾಂಕಿಯ:** ಮೃದ್ವಂಗಿ ವಂಶದ ಗ್ಯಾಸ್ಟ್ರಾಪೊಡ (ಉದರಪಾದಿ)ವರ್ಗದ ಒಪಿಸ್ಥೊಬ್ರ್ಯಾಂಕಿಯ ಉಪವರ್ಗಕ್ಕೆ ಸೇರಿದ ಗಣ. ಇದಕ್ಕೆ ಸೇರಿದ ಮೃದ್ವಂಗಿಗಳನ್ನು ಸಮುದ್ರದ ಗೊಂಡೆ ಹುಳುಗಳು ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಇವಕ್ಕೆ ಚಿಪ್ಪಾಗಲೀ ಮ್ಯಾಂಟಲ್ ಕುಹರವಾಗಲೀ ಟೆನಿಡಿಯಮ್ ಆಗಲೀ ಇಲ್ಲ. ಕಿವಿರುಗಳು ಇರಬಹುದು.

ಈ ಪ್ರಾಣಿಗಳು ವಿವಿಧ ವರ್ಣಗಳಿಂದ ಕೂಡಿದ್ದು ಸಮುದ್ರದ ಅತ್ಯಂತ ಸುಂದರವಾದ ಪ್ರಾಣಿಗಳಲ್ಲಿ ಕೆಲವು ಎನಿಸಿವೆ. ಇವು ಇತರ ಪ್ರಾಣಿಗಳನ್ನು ಕೊಂದು ತಿನ್ನುವ ಸ್ವಭಾವದುವುಗಳು; ಪ್ರಮುಖವಾಗಿ ಕುಟುಕು ಕಣ ಜೀವಿಗಳನ್ನು ತಿಂದು ಜೀವಿಸುತ್ತವೆ. ಎಲ್ಲ ಸಮುದ್ರಗಳಲ್ಲೂ ಇದ್ದು ಮೊಣಕಾಲುದ್ದ ನೀರಿಂದ ಹಿಡಿದು ಸಾಧಾರಣ ಆಳವಿರುವೆಡೆಗಳಲ್ಲೂ ಕಂಡುಬರುತ್ತವೆ. ಆದರೆ ಇವುಗಳ ಅತಿ ಹೆಚ್ಚಿನ ವೈವಿಧ್ಯ ಕಾಣುವುದು ಉಷ್ಣವಲಯದ ಸಾಗರಗಳಲ್ಲಿ. ನ್ಯೂಡಿಬ್ರ್ಯಾಂಕಿಯದಲ್ಲಿ ಡೆಂಡ್ರೊನೋಡೆ (ಉದಾ: *ಡೆಂಡ್ರೊನೋಟಸ್*), ಡೋರಿಡಿಡೆ (ಉದಾ: *ಡೋರಿಸ್*), ಇಯೊಲಿಡಿಡೆ (ಉದಾ: ಇಯೋಲಿಸ್) ಮತ್ತು ಎಲಿಸೈಯಿಡೆ (ಉದಾ: ಎಲಿಸಿಯ) ಎಂಬ ನಾಲ್ಕು ಕುಟುಂಬಗಳಿವೆ. (ಕೆ.ಎಂ.ವಿ.)

**ನೆಕ್‌ಟಾನ್:** ಸಮುದ್ರ ಮತ್ತು ಸರೋವರಗಳ ನೀರಿನ ಮೇಲೆ ಈಜಾಡುವ ಪ್ರಾಣಿ ಮತ್ತು ಸಸ್ಯ ಸಮೂಹ. ಸಮುದ್ರದ ನೀರಿನಲ್ಲಿ ಸೂಕ್ಷ್ಮಕ್ರಿಮಿಗಳು, ಕೀಟಗಳು, ವಿಧವಿಧವಾದ ಮೀನುಗಳು, ಹಲವಾರು ಬಗೆಯ ಸಂಧಿಪದಿಗಳು, ಕಠಿಣ ಚರ್ಮಿಗಳು ವಾಸಿಸುವುವು. ಇವೆಲ್ಲವೂ ಈ ಗುಂಪಿಗೆ ಸೇರುತ್ತವೆ. ತಿಮಿಂಗಿಲ ಸಹ ನೆಕ್‌ಟಾನ್ ಗುಂಪಿಗೆ ಸೇರಿದುದೇ. (ಜಿ.ಎಂ.ಬಿ)

**ನೆಗಡಿ – ನೇಸಲ್ ಕೆಟಾರ್ಹ್:** ಶೀತದಿಂದ ಬರುವ ಸಾಮಾನ್ಯ ಸೋಂಕು ಖಾಯಿಲೆ. ಆಂಗ್ಲ ಭಾಷೆಯಲ್ಲಿ ಕಾಮನ್ ಕೋಲ್ಡ್ ಎನ್ನುವರು. ವೈರಸ್ ವಿಷಾಣುಗಳಿಂದ ಈ ಸೋಂಕು ಬರುತ್ತದೆ. ಇವು ಮೂಗಿನ ಹೊಳ್ಳೆಯ ಲೋಳೆಪೊರೆಯನ್ನು ಹೊಕ್ಕು, ಅಲ್ಲಿ ಉರಿಯೂತ ಉಂಟುಮಾಡಿ, ನೆಗಡಿ ಉಂಟು ಮಾಡುತ್ತವೆ. ಮಳೆಯಲ್ಲಿ ನೆನೆದರೆ ಅಥವಾ ಶೀತಗಾಳಿಯಲ್ಲಿ ಅಡ್ಡಾಡಿದರೆ ಸಾಮಾನ್ಯವಾಗಿ ನೆಗಡಿ ಬರುವುದು. ಶಾಲೆಗೆ ಹೋಗುವ 5–6 ವರ್ಷದ ಮಕ್ಕಳಿಗೆ ನೆಗಡಿ ಬರುವುದು ಹೆಚ್ಚು. ನಂತರ, ನೆಗಡಿ ಬರುವುದು ಕಡಿಮೆಯಾಗುವುದು. ಏಕೆಂದರೆ, ಅವರಲ್ಲಿ ಶೀತನಿರೋಧ ಬೆಳೆಯುತ್ತದೆ. 55 ವರ್ಷಗಳ ಮೇಲ್ಪಟ್ಟ ಆರೋಗ್ಯವಂತರಿಗೆ ಸಾಮಾನ್ಯವಾಗಿ ನೆಗಡಿ ಬರುವುದು ಅಪರೂಪ. ನೆಗಡಿಯ ವಿಷಾಣುಗಳಿರುವ ವಾಯುಸೇವನೆಯಿಂದ ಅರೋಗ್ಯ ವ್ಯಕ್ತಿಗಳಿಗೂ ನೆಗಡಿ ಸೋಂಕು ಉಂಟಾಗುತ್ತದೆ.

ನೆಗಡಿ ಸೋಂಕು ತಗಲಿದ 2–3 ದಿವಸಗಳ ನಂತರ ಬೇರೆ ಬೇರೆ ರೋಗಾಣುಗಳು ಸೇರಿಕೊಂಡು ಮರುಚಲ ಸೋಂಕಿಗೆ ಕಾರಣವಾಗುವುದರಿಂದ ನೆಗಡಿಯ ಅವಾಂತರ ಅಧಿಕವಾಗುತ್ತದೆ. ಮಂದವಾದ ಲೋಳೆದ್ರವ ಉತ್ಪತ್ತಿ ಆಗುತ್ತದೆ. ನೆಗಡಿ ಒಬ್ಬರಿಂದೊಬ್ಬರಿಗೆ ಹರಡುತ್ತದೆ. ರೋಗಿ ಕೆಮ್ಮಿದಾಗ ಅಥವಾ ಸೀನಿದಾಗ ವಿಷಾಣುಯುಕ್ತ ಹನಿಗಳು ಆವರಣದಲ್ಲಿ ಸೇರಿ ಸುತ್ತ ಇರುವವರಿಗೆ ಉಸಿರಾಟದ ಗಾಳಿ ಮೂಲಕ ವ್ಯಾಪಿಸುತ್ತವೆ. ಇಂಥ ಗಾಳಿ ನೀರಿನ ಅಂಶವನ್ನು ಕಳೆದುಕೊಂಡು 2–3 ದಿವಸಗಳ ತನಕ ಈ ವೈರಾಣುಗಳು ಇರುತ್ತವೆ. ಆಕಾರದಲ್ಲಿ ಬಲು ಸಣ್ಣದಾಗಿದ್ದು, ಹಗುರವಾಗಿರುವುದರಿಂದ, ಇವು ಗಾಳಿಯಲ್ಲಿ ಸ್ಥಳದಿಂದ ಸ್ಥಳಕ್ಕೆ ಒಯ್ಯಲ್ಪಟ್ಟು ಬೇರೆಯವರಿಗೆ ನೆಗಡಿಯನ್ನು ಅಂಟಿಸಬಲ್ಲುವು. ನೆಗಡಿ ಇರುವವರು ಉಪಯೋಗಿಸಿದ ಕೈವಸ್ತ್ರ, ಕಂಬಳಿ, ಪಾತ್ರೆ ಮುಂತಾದವುಗಳಿಂದಲೂ ರೋಗ ಇತರರಿಗೆ ಹರಡುತ್ತದೆ. ಒಟ್ಟು ರೋಗದ ಅವಧಿ 7–9 ದಿವಸಗಳು.

ರೋಗದ ಚಿಹ್ನೆಗಳು: ಮೂಗಿನಲ್ಲಿ ಉರಿಯಾಗಿ ಸೀನು ಬರುವುದು. ಲೋಳೆ ದ್ರವ ಹೆಚ್ಚಿನ ಮೊತ್ತದಲ್ಲಿ ಮೂಗಿನ ಹೊಳ್ಳೆಗಳಲ್ಲಿ ಉತ್ಪತ್ತಿ ಆಗುತ್ತದೆ. ರೋಗಿ ಬಾಯಿಂದ ಉಸಿರಾಡಬೇಕಾಗುವುದು. ಮೂಗಿನಿಂದ ಬರುವ ದ್ರವ ನೀರಿನಂತೆ ತೆಳ್ಳಗೆ ಇರುವುದು. ನಂತರ ಗಟ್ಟಿಯಾಗಿ ಬೆಳ್ಳಗಾಗುವುದು. ಬೇರೆ ವಿಷಕ್ರಿಮಿಗಳಿಂದ ಮರುಚಲ ಸೋಂಕು ಹತ್ತಿದರೆ ಮೂಗಿನ ಹೊಳ್ಳೆಗಳಿಂದ ಬರುವ ದ್ರವ ಹಸಿರು ಅಥವಾ ಹಳದಿ ಬಣ್ಣದಾಗಿರುತ್ತದೆ. ಹೀಗಾದರೆ ನೆಗಡಿ ಬಹಳ ತೀವ್ರವಾಗಿದೆಯೆಂದು ಅರ್ಥ. ನೆಗಡಿಯಿಂದ ವ್ಯಕ್ತಿ ನರಳುತ್ತಿರುವ ಕಾಲದಲ್ಲಿ ಜ್ವರ, ತಲೆನೋವು, ಮೈಕೈನೋವು, ಬೆನ್ನುನೋವು, ಮಲಬದ್ಧತೆ, ಕಣ್ಣು ಉರಿ, ಕಣ್ಣಿನಲ್ಲಿ ನೀರು ಬರುವುದು, ಮೂಗಿನಲ್ಲಿ ಉರಿ ಮತ್ತು ಕೆಮ್ಮು ಬರುವುದು ಮುಂತಾದ ಜಟಿಲತೆಗಳು ವ್ಯಕ್ತವಾಗುವುದು ಸಾಮಾನ್ಯ. ನೆಗಡಿ ಬಂದಾಗ ಮಕ್ಕಳಿಗೆ ಆಹಾರ ಸೇವಿಸಲು ಮತ್ತು ಉಸಿರಾಡಲು ಬಹಳ ಕಷ್ಟವಾಗುವುದು. ಮೂಗಿನ ಲೋಳೆಪೊರೆ ಉರಿಯೂತದಿಂದ ಕೆಂಪಗೆ ದಪ್ಪ ಆಗುವುದು. ಉರಿಯೂತಗಳು ಮೂಗಿನಿಂದ ಮೂಗಿನ ಹಿಂಭಾಗಕ್ಕೂ ಗಂಟಲಿಗೂ ಹರಡಬಹುದು. ನೆಗಡಿಯನ್ನು ಒಗ್ಗದಿಕೆಯ ಮೂಗುರಿತದಿಂದ (ಅಲರ್ಜಿಕ್ ರೈನಿಟಿಸ್) ಬೇರ್ಪಡಿಸಿ ಪತ್ತೆಮಾಡುವುದು ಅಗತ್ಯ. ಒಗ್ಗದಿಕೆಯ ಮೂಗುರಿತದಲ್ಲಿ ಮೂಗಿನಲ್ಲಿ ಬರುವ ದ್ರವದಲ್ಲಿ ಇಯೊಸಿನೊಫಿಲ್ ರಕ್ತಕಣಗಳಿರುವುವು. ನೆಗಡಿ ಇತರರಿಗೆ ಹರಡದಂತೆ ಕ್ರಮಗಳನ್ನು ಕೈಗೊಳ್ಳುವುದು ಸೂಕ್ತ. ನೆಗಡಿ ಬಂದ ರೋಗಿಯನ್ನು ಇತರರಿಂದ ಬೇರ್ಪಡಿಸುವುದು, ಒಂದೇ ಕೊಠಡಿಯಲ್ಲಿ ಬಹುಜನ ವಾಸಿಸುವುದನ್ನು ತಡೆಗಟ್ಟುವುದು, ರೋಗಿ ಉಪಯೋಗಿಸಿದ ವಸ್ತ್ರಗಳನ್ನು ಆದಷ್ಟು ಸುಟ್ಟುಹಾಕುವುದು ಇಲ್ಲವೆ ಸ್ವಚ್ಛಮಾಡುವುದು ಒಳ್ಳೆಯದು. ವ್ಯಕ್ತಿಗೆ ರೋಗ ಅಂಟದಂತೆ ರಕ್ಷಣೆ ಒದಗಿಸುವುದು, ಒಳ್ಳೆಯ ಪೌಷ್ಟಿಕ ಆಹಾರವನ್ನು ಒದಗಿಸುವುದು, ಕೊಠಡಿಗಳನ್ನು ಸ್ವಚ್ಛವಾಗಿ ಇಡುವುದು, ಗಾಳಿ, ಬೆಳಕು, ಧಾರಾಳವಾಗಿ ಬರುವಂತೆ ಏರ್ಪಡಿಸುವುದು, ಉಪಯುಕ್ತ ಮಾರ್ಗಗಳು. ಮೂಗಿನ ಮಧ್ಯದ ಪೊರೆ ಡೊಂಕಾಗಿದ್ದರೆ ಮತ್ತು ಮೂಗಿನ ಹೊಳ್ಳೆಯಲ್ಲಿ ದುರ್ಮಾಂಸವಿದ್ದರೆ ಅವನ್ನು ಶಸ್ತ್ರಕ್ರಿಯೆಯಿಂದ ನಿವಾರಿಸಿ ನೆಗಡಿ ಬಾರದಂತೆ ರಕ್ಷಣೆ ಒದಗಿಸಬಹುದು. ಅಗತ್ಯ ಚುಚ್ಚುಮದ್ದನ್ನು ಕೊಡುವುದು ರಕ್ಷಣೆಯ ಇನ್ನೊಂದು ವಿಧ. ***

**ನೆತ್ತಿಚರ್ಮ:** ತಲೆ ಚಿಪ್ಪಿನ ಮೇಲ್ಭಾಗದ ಮೃದುಕವಚ (ಸ್ಕ್ಯಾಲ್ಪ್). ಹೊರಗಿನಿಂದ ಒಳಕ್ಕೆ ಸರಿದಂತೆ ಅನುಕ್ರಮವಾಗಿ ಚರ್ಮ, ಕೊಬ್ಬು, ಸ್ನಾಯುಯುಕ್ತ ಬಂಧನಾಂಗಾಂಶದ ಹಾಳೆ, ಸಡಿಲವಾದ ಪದರ ಹಾಗೂ ಅಸ್ಥಿವೇಷ್ಟನ – ಈ ಐದು ಪದರಗಳು ಇವೆಯಾದರೂ, ತೆಳುವಾಗಿಯೇ (ಸು. 5 ಮಿಮೀ ದಪ್ಪ) ಇರುವುದರಿಂದ ಇದು ಬುರುಡೆಯ ಆಕಾರಕ್ಕೆ ಹೊಂದಿಕೊಂಡಿದೆ. ಇದರ ಮೂಲಕ ತಲೆಬುರುಡೆಯ ಮೂಳೆಗಳ ಮೇಲ್ಮೈಗಳನ್ನು ಮುಟ್ಟಿನೋಡಲು ಸಾಧ್ಯ. ಹೊರಗಿನ ಮೂರು ಪದರಗಳೂ ಒಂದಕ್ಕೊಂದು ಬಿಡಿಸಲಾರದಂತೆ ಅಂಟಿಕೊಂಡಿವೆ. ಐದನೆಯ ಪದರ ಬುರುಡೆಯ ಮೂಳೆಗಳಿಗೆ ಗಟ್ಟಿಯಾಗಿ ಅಂಟಿಕೊಂಡಿದ್ದು ಹೊರಗಿನ ಮೂರು ಪದರಗಳನ್ನೂ ಇದರ ಮೇಲೆ ಹಿಂದು ಮುಂದು ಮತ್ತು ಪಕ್ಕಗಳಿಗೆ ಸರಿಸುವಂತಿದೆ. ನಾಲ್ಕನೆಯ ಪದರ ಬಲು ತೆಳು ಮತ್ತು ಸಡಿಲವಾಗಿ ಇರುವುದರಿಂದ ಇದು ಸಾಧ್ಯ. ಮುಂದೆ ಕಣ್ಣುಗೂಡುಗಳ ಮೇಲಂಚುಗಳು, ಹಿಂದೆ ಹಿಂತಲೆಯ ಮೂಳೆಭಾಗದ ಕೆಳಅಂಚು, ಪ್ರತಿಪಕ್ಕದಲ್ಲಿ ಕಣತಲಸ್ನಾಯು ಅಂಚಿನಲ್ಲಿರುವ ಕಾಲರೇಖೆ (ಟೆಂಪೊರಲ್ ಲೈನ್) ಇವು ನೆತ್ತಿಚರ್ಮದ ಎಲ್ಲೆಗಳು.

ಹೊರಪದರವಾದ ತ್ವಚೆ ದೇಹದ ಇತರ ಎಡೆಗಳ ಚರ್ಮಕ್ಕಿಂತ ದಪ್ಪವಾಗಿದೆ. ಇದರಲ್ಲಿ ದೊಡ್ಡ ರೋಮಕೂಪಗಳು ಹೆಚ್ಚು ಹತ್ತಿರಹತ್ತಿರವಿದ್ದು ಎರಡನೆಯ ಪೇಶಿ ಪದರದೊಳಕ್ಕೂ ಚಾಚುತ್ತವೆ. ಇವುಗಳೊಡನೆ ಒಂದನೆಯ ಮತ್ತು ಮೂರನೆಯ ಪದರಗಳನ್ನು ಬಂಧಿಸುವ ತಂತುಗಳು ಇರುವುದರಿಂದ ಎರಡನೆಯ ಪದರದಲ್ಲಿರುವ ಕೊಬ್ಬು ಮಣಿಗಳಾಗಿ ಒಡೆದಂತಿದೆ. ಹಣೆಯ ಕೂದಲು ಬಲು ಸೂಕ್ಷ್ಮ. ಮಿಕ್ಕ ನೆತ್ತಿಚರ್ಮದ ಕೂದಲು (ತಲೆಕೂದಲು) ದೇಹದ ಇತರ ಭಾಗಗಳ ರೋಮಗಳಿಗಿಂತ ಹೆಚ್ಚು ಉದ್ದ. ನೆತ್ತಿಚರ್ಮದಲ್ಲಿ ಸುಮಾರು 10,000 ರೋಮಕೂಪಗಳುಂಟು. ಮೂರನೆಯ ಪದರದ ಹಿಂಭಾಗ ಮತ್ತು ಮುಂಭಾಗಗಳಲ್ಲಿ ಅಕ್ಸಿಪಿಟೊ ಫ್ರಾಂಟಾಲಿಸ್ (ಎಪಿಕ್ರೇನಿಯಸ್)

ಎಂಬ ತೆಳುಸ್ನಾಯು ಇದೆ. ಇದರ ಸಂಕೋಚನದಿಂದ ಹುಬ್ಬುಗಳು ಮೇಲಕ್ಕೆ ಹೋಗಿ ವಿಸ್ಮಯ ಭಾವ ಮುಖದ ಮೇಲೆ ಮೂಡುತ್ತದೆ. ನಾಲ್ಕನೆಯ ಪದರ ಸಡಿಲವಾಗಿರುವುದರಿಂದ ತಲೆಗೆ ಪೆಟ್ಟು ಬಿದ್ದು ಒಳಗಡೆಗೆ ರಕ್ತಸ್ರಾವವಾದರೆ ಆಗ ರಕ್ತ ಈ ಪದರದಲ್ಲಿ ಸಂಗ್ರಹೀತವಾಗಿ ನೆತ್ತಿ ಚರ್ಮದ ಎಲ್ಲೆಯವರೆಗೆ ಬಾತುಕೊಳ್ಳುತ್ತದೆ. ನಾಲ್ಕನೆಯ ಪದರದಲ್ಲಿ ಕೀವು ತುಂಬಿಕೊಂಡರೂ ಹೀಗಾಗುತ್ತದೆ. ಐದನೆಯ ಪದರ ವಾಸ್ತವವಾಗಿ ಬುರುಡೆಮೂಳೆಗಳ ಹೊರಕವಚ. ಇದರ ಕೆಳಗೆ ಗಂತಿ ಬೆಳೆದರೆ ಅಥವಾ ಕೀವು ತುಂಬಿದರೆ ಊತ ಆಯಾ ಮೂಳೆಯ ಆಕಾರವನ್ನು ಪಡೆಯುತ್ತದೆ.

ನೆತ್ತಿಚರ್ಮದ ನರ ಮತ್ತು ರಕ್ತನಾಳಗಳು ಎರಡನೆಯ ಪದರು ಹಾಗೂ ಕೊಬ್ಬು ಪದರಿನಲ್ಲಿವೆ. ಪ್ರತಿಯೊಂದು ಪಕ್ಕದಲ್ಲಿ ಐದು ಅಪಧಮನಿಗಳೂ ಹತ್ತು ನರಗಳೂ ಉಂಟು. ಕಿವಿಯ ಮುಂದೆ ಮೂರು ಅಪಧಮನಿ, ಐದು ನರಗಳೂ ಇವೆ. ಮುಂದಿನ ಐದು ನರಗಳ ಪೈಕಿ ನಾಲ್ಕು ಇಂದ್ರಿಯ ನರಗಳು. ಇವು ತ್ರಿವಳಿ ನರದ ಶಾಖೆಗಳು. ಇನ್ನೊಂದು ಸ್ನಾಯುನರ. ಇದು ಮುಖನರದ ಶಾಖೆ. ಹಿಂದಿನ ಐದು ನರಗಳ ಪೈಕಿ ಕೂಡ ನಾಲ್ಕು ಇಂದ್ರಿಯ ನರಗಳು. ಇವು ಮೇಲಿನ ಮೂರು ಬೆನ್ನುಹುರಿ ನರಗಳ ಶಾಖೆಗಳು. ಐದನೆಯದು ಸ್ನಾಯುನರ. ಇದು ಕೂಡ ಮುಖನರದ ಶಾಖೆ. ಮುಖನರದ ಎರಡು ಶಾಖೆಗಳಲ್ಲಿ ಉದ್ದೀಪನೆಗಳು ಮಿದುಳಿನಿಂದ ಹರಿದಾಗ ಹುಬ್ಬೇರಿಸುವ ಸ್ನಾಯುಗಳು ಸೆಟೆಯುತ್ತವೆ. ಅಪಧಮನಿಗಳು ನೆತ್ತಿ ಚರ್ಮ ಚಲಿಸಿದಾಗ ಮಡಚಿಕೊಳ್ಳದ ರೀತಿಯಲ್ಲಿ ಡೊಂಕುಡೊಂಕಾಗಿ ಇದೆ.

ನೆತ್ತಿಚರ್ಮದ ಅಭಿಧಮನಿಗಳು ಇತರ ಎಡೆಗಳಲ್ಲಿನಂತೆ ಅಪಧಮನಿಗಳ ಒಡನೆ ಇದ್ದರೂ, ಡೊಂಕುಡೊಂಕಾಗಿದೆ ನೆಟ್ಟಗಿವೆ ಮತ್ತು ಸ್ವಲ್ಪ ಆಳದಲ್ಲಿದೆ. ಕಿವಿ ಮುಂದಿನ ಮೂರು ಅಭಿಧಮನಿಗಳೂ ಮುಂಕತ್ತಿನ ಒಳಅಭಿಧಮನಿಯನ್ನು ಸೇರುತ್ತವೆ. ಹಿಂದಿನ ಎರಡು ಅಭಿಧಮನಿಗಳಲ್ಲಿ ಕಿವಿಯ ಹಿಂದಿನದು ಮುಂಕತ್ತಿನ ಅದಕ್ಕೂ ಹಿಂದಿನದು ಹಿಂಕತ್ತಿನ ಅಭಿಧಮನಿಗಳನ್ನು ಸೇರುತ್ತವೆ. ದುಗ್ಧನಾಳಗಳು ಅಭಿಧಮನಿಗಳನ್ನು ಅನುಸರಿಸುತ್ತವೆ. ಇವುಗಳಲ್ಲಿ ಮೂರು ಗುಂಪುಗಳನ್ನು ಗುರುತಿಸಬಹುದು. (1) ಹಣೆಯ ನಾಳಗಳು ಕಿವಿ ಮುಂದಿನ ಗಂತಿಗಳನ್ನು ಸೇರುತ್ತವೆ, ಹಣೆಯ ಗಾಯದಿಂದ ದವಡೆ ಕೆಳಗಿನ ಗಂತಿಗಳು ಊದಿಕೊಳ್ಳಬಹುದು; (2) ಪಾರ್ಶ್ವನಾಳಗಳು ಕಿವಿಯ ಮುಂದೆ ಹಾಗೂ ಹಿಂದೆ ಇರುವ ಗಂತಿಗಳಲ್ಲಿ ಕೊನೆ ಆಗುತ್ತವೆ; (3) ಹಿಂತಲೆಯ ನಾಳಗಳು ಹೆಕ್ಕತ್ತಿನ ಗಂತಿಗಳನ್ನು ಸೇರುತ್ತವೆ; ಕೆಲವು ಮಾತ್ರ ಕೆಳಮುಂಕತ್ತಿನಲ್ಲಿರುವ ಗಂತಿಗಳಲ್ಲಿ ಅಂತ್ಯ ಆಗುತ್ತವೆ.

ನೆತ್ತಿಚರ್ಮವನ್ನು ಚಲಿಸುವ ಸ್ನಾಯು ಮೂರನೆಯ ಪದರದಲ್ಲಿದೆ. ಮುಂದಿನ ಭಾಗಕ್ಕೆ ಫ್ರಾನ್‌ಟ್ಯಾಲಿಸ್ ಸ್ನಾಯು ಎಂದು ಹೆಸರು. ಹಿಂದಿನ ಭಾಗ ಅಕ್ಸಿಪಿಟ್ಯಾಲಿಸ್. ಇವುಗಳ ನಡುವೆ ಗ್ಯಾಲಿಯ ಅಪೋನ್ಯೂರೋಟಿಕ ಎಂಬ ಗಟ್ಟಿನಾರಿನ ತೆಳುಹಾಳೆ ಇದೆ. ಹಾಳೆ ವಿಸ್ತಾರವಾಗಿ ಇಲ್ಲವೇ ಚಿಕ್ಕದಾಗಿ ಇರಬಹುದು. ಸ್ನಾಯು ಭಾಗ ಹೆಚ್ಚಿದರೆ ಹಾಳೆಭಾಗ ಕಡಿಮೆ ಇರುವುದು ವ್ಯಕ್ತ. ನೆತ್ತಿಚರ್ಮದಲ್ಲಿ ಇಪ್ಪತ್ತು ಅಪಧಮನಿಗಳನ್ನು ಹೆಸರಿಸಲಾಗಿದೆ (ಹೆಸರಿಸದುವು ಹಲವಿವೆ). ಇವು ಪರಿಧಿಯಲ್ಲಿ ಪ್ರವೇಶಿಸಿ ಮಧ್ಯರೇಖೆಯ ಕಡೆಗೆ ಹೋಗಿ ಅಲ್ಲಿ ಎಡಬಲ ಎರಡು ಪಕ್ಕಗಳ ಶಾಖೆಗಳೂ ಕೂಡಿಕೊಳ್ಳುತ್ತವೆ. ಇಂಥ ಸನ್ನಿವೇಶ ದೇಹದ ಇತರ ಕಡೆ ಅಪರೂಪ. ಅಭಿಧಮನಿಗಳ ಭಿತ್ತಿ ಮೂರನೆಯ ಪದರದ ಗಟ್ಟಿನಾರ ಮಾಂಸಗಳಿಗೆ ಅಂಟಿಕೊಂಡಿರುವುದರಿಂದ ಗಾಯದ ಫಲವಾಗಿ ಅವು ತುಂಡಾದರೆ ಅವುಗಳ ಕೊನೆಗಳು ಸೆಟೆದು ಬೇರ್ಪಡುವುವು; ಅವುಗಳಿಗೆ ಸಂಕೋಚನವೂ ಸಾಧ್ಯವಾಗದು. ಹೀಗಾಗಿ ನೆತ್ತಿಚರ್ಮದ ಚಿಕ್ಕ ಗಾಯಗಳಿಂದಲೂ ರಕ್ತ ತಡೆ ಇಲ್ಲದೆ ಸೋರುತ್ತದೆ ಮತ್ತು ಹೆಚ್ಚು ಭಯವನ್ನು ಉಂಟುಮಾಡುತ್ತದೆ. ಮೂಳೆ ಸೀಳಿದ್ದರೂ ಗಾಯದಿಂದಾಗಿ ಅದನ್ನು ಗುರುತಿಸುವುದು ಕಷ್ಟ. ತಲೆಗೆ ಮೂಗುಪೆಟ್ಟು ಬಿದ್ದಾಗಲೂ ಒಳಗೆ ಮೂಳೆ ಸೀಳಿರಬಹುದಾದ್ದರಿಂದ ಎಕ್ಸ್–ಕಿರಣ ಪರೀಕ್ಷೆ ಅಗತ್ಯವಾಗಬಹುದು. ಬುರುಡೆ ಮೂಳೆ ಸೀಳಿದ್ದರೆ ತಲೆನೋವು, ವಾಂತಿ ಅಥವಾ ಓಕರಿಕೆ ಮತ್ತು ಪ್ರಜ್ಞಾಹೀನತೆ ಇರಬಹುದು. ಮೂಗುಪೆಟ್ಟಿನಿಂದ ನಾಲ್ಕನೆಯ ಪದರದಲ್ಲಿ ರಕ್ತಸ್ರಾವವಾಗಬಹುದು.

ತಲೆಗೆ ರಕ್ತಸರಬರಾಜು ಯಥೇಚ್ಛವಾಗಿರುವುದರಿಂದ ನೆತ್ತಿಚರ್ಮದ ಗಾಯಗಳು ಬೇಗ ವಾಸಿಯಾಗುತ್ತವೆ. ಅನೇಕ ಅಪಧಮನಿಗಳ ಶಾಖೆಗಳು ಮೂಳೆಗಳನ್ನು ಪ್ರವೇಶಿಸುತ್ತವೆ. ಮೂಳೆಗಳ ಭಾಗಗಳನ್ನು ಸರಪಣಿ ಗರಗಸದಿಂದ ಸ್ನಾಯುಬಂಧಗಳೊಡನೆ ಬೇರ್ಪಡಿಸಿ ಬುರುಡೆಯ ಒಳಗೆ ಶಸ್ತ್ರವೈದ್ಯವಾದ ಮೇಲೆ ಮೂಳೆಗಳನ್ನು ಸ್ವಸ್ಥಾನಗಳಲ್ಲಿ ಜೋಡಿಸಿ ಚರ್ಮ ಹೊಲಿದ ಬಳಿಕವೂ ಮೂಳೆಗಳು ಸಾಯದೆ ಬದುಕಿರುವುದು ಇಂಥ ರಕ್ತಪೂರೈಕೆಯಿಂದ ಮಾತ್ರ ಸಾಧ್ಯವಾಗಿದೆ.

ನೆತ್ತಿಚರ್ಮದ ಅಭಿಧಮನಿ ಹಾಗೂ ಬುರುಡೆ ಅಭಿಧಮನಿಗಳ ನಡುವೆ ಸಂಬಂಧ ವಿರುವುದರಿಂದ ಕುರು ಅಥವಾ ಹೊರಗಾಯಗಳಿಂದ ಕ್ರಿಮಿಗಳು ಬುರುಡೆ ಒಳಕ್ಕೆ ನುಗ್ಗಿ ಮಿದುಳಿಗೆ ಅಪಾಯ ಹಾಗೂ ಪ್ರಾಣಹಾನಿ ಆಗಬಹುದು. ಈ ಕಾರಣದಿಂದ ನೆತ್ತಿಚರ್ಮವನ್ನು ಅಪಾಯಪ್ರದೇಶ ಎನ್ನುತ್ತಾರೆ. ನೆತ್ತಿಚರ್ಮದಲ್ಲಿ ದೊಡ್ಡ ರೋಮಕೂಪಗಳು ಹೆಚ್ಚು ಸಂಖ್ಯೆಯಲ್ಲಿವೆ. ಅವುಗಳಲ್ಲಿ ಮೇದೋಗ್ರಂಥಿಗಳು ಹೆಚ್ಚಿರುವುದರಿಂದ ಅಲ್ಲಿ ಮೇದಸ್ಸು ಕೂಡಿಕೊಂಡು ಅರ್ಧಗೋಳ ಗಂಟುಗಳಾಗುವ ಸಂಭವ ದೇಹದ ಇತರ ಭಾಗಗಳಲ್ಲಿ ಇರುವುದಕ್ಕಿಂತ ಹೆಚ್ಚು. ನಾಲ್ಕನೆಯ ಪದರ ದುಗ್ಧ ಕುಳಿ. ಇದು ಬಲು ಅಳ್ಳಕವಾಗಿದೆ. ಇದರಲ್ಲಿ ಅನೇಕ ದುಗ್ಧರಸನಾಳಗಳಿವೆ. ನರಗಳಿಲ್ಲ. ಹೀಗಾಗಿ ಇಲ್ಲಿ ದ್ರವ ಕೂಡಿದಾಗ ನೋವಾಗುವುದಿಲ್ಲ. ಬುರುಡೆಯ ಚಪ್ಪಟೆ ಮೂಳೆಗಳ ನೀವನಿಗಳು (ಸಂಧಿ) ಮಧ್ಯ ವಯಸ್ಸಿಗೆ ಕೂಡುತ್ತವೆ. ಆ ತನಕ ಅಸ್ಥಿವೇಷ್ಟನ ಮಿದುಳಿನ ಪೊರೆಯೊಡನೆ ಕೂಡಿರುವುದರಿಂದ ವೇಷ್ಟನದ ಕೆಳಗೆ ಕೀವು ಕೂಡಿದಾಗ ಊತ ಮೂಳೆಯ ಆಕಾರವನ್ನು ಹೊಂದುತ್ತದೆ; ಹಾಗೂ ಕೀವು ಮಿದುಳು ಪೊರೆಗಳನ್ನು ಸೇರಿ ಪ್ರಾಣಾಪಾಯವಾಗಬಹುದು.

***

**ನೆಮಟೋಡ:** ಪ್ರಾಣಿಗಳ ಇಲ್ಲವೆ ಸಸ್ಯಗಳ ಪರಾವಲಂಬಿಗಳಾಗಿಯೊ ನೀರಿನಲ್ಲಿ ಇಲ್ಲವೆ ಮಣ್ಣಿನಲ್ಲಿ ಸ್ವತಂತ್ರಜೀವಿಗಳಾಗಿಯೋ ಜೀವಿಸುವ ಹುಳುಗಳನ್ನು ಒಳಗೊಂಡಿರುವ ವರ್ಗ. ಆಸ್ಕೆಲ್ಮಿಂತೀಸ್ ವಿಭಾಗಕ್ಕೆ ಸೇರಿದೆ. ದುಂಡು ಹುಳುಗಳು, ಈಲ್ ಹುಳುಗಳು, ಕೊಕ್ಕೆ ಹುಳುಗಳು, ಗಿನಿ ಹುಳುಗಳು ಮುಂತಾದುವು ಇದರ ಉದಾಹರಣೆಗಳು.

ಜೀವಿಸಲು ಸಾಧ್ಯವುಳ್ಳ ಎಲ್ಲೆಡೆಗಳಲ್ಲೂ ಇವನ್ನು ಕಾಣಬಹುದು. ಇವು ಹುಳುವಿನಂತಿರುವ ಜೀವಿಗಳಲ್ಲಿ ಅತ್ಯಂತ ಯಶಸ್ವೀ ಜೀವಿಗಳು. ಪ್ರಭೇದಗಳಲ್ಲಿ ಮತ್ತು ಸಂಖ್ಯೆಯಲ್ಲಿಯೂ ಕೂಡ ಈ ಮಾತು ನಿಜ. ಈ ಗುಂಪಿನ ಬಹುಪಾಲು ಹುಳುಗಳು ದನಕರುಗಳ, ಸಸ್ಯಗಳ ಮತ್ತು ಮನುಷ್ಯನ ಪರಾವಲಂಬಿಗಳಾಗಿ ಜೀವಿಸುತ್ತಿದ್ದು ವ್ಯವಸಾಯ ಪದಾರ್ಥಗಳನ್ನು ಹಾಳುಮಾಡುವುದರಲ್ಲಿ ಸಂದಿಪದಿಗಳಿಗೆ ಸಮ ಎನಿಸಿಕೊಂಡಿವೆ.

ಈ ಜೀವಿಗಳ ದೇಹರಚನೆ ತುಂಬ ವೈವಿಧ್ಯಮಯ. ಇದರಿಂದಾಗಿ ಅವುಗಳ ಸಾಮಾನ್ಯ ಗುಣಲಕ್ಷಣಗಳನ್ನು ಪಟ್ಟಿ ಮಾಡುವುದು ಕಷ್ಟ. ಒಂದು ಮಾದರಿ ದುಂಡು ಹುಳುವಿನಲ್ಲಿ ನೀಳವಾದ ಆದರೆ ಖಂಡಗಳಾಗಿ ವಿಭಾಗವಾಗಿಲ್ಲದ ದೇಹ ಉಂಟು. ದೇಹದ ಮೇಲೆ ಕ್ಯುಟಿಕಲ್ ಎಂಬ ಹೊರ ಹೊದಿಕೆಯಿದೆ. ಇದರ ಕೆಳಗೆ ಎಪಿಡರ್ಮಿಸ್ ಪದರ ಉಂಟು. ಸಂವೇದನಾಶೀಲವಾದ ಅಥವಾ ಅಲ್ಲದ ಬಿರುಗೂದಲುಗಳಿರಬಹುದು. ಭ್ರೂಣ ಮೊಟ್ಟೆಯೊಳಗಿರುವಾಗ ಒಂದು ಅಥವಾ ಎರಡು ಸಲ ಹಾಗೂ ಪ್ರೌಢಜೀವಿಯಾಗುವ ಕಾಲದಲ್ಲಿ ನಾಲ್ಕು ಸಲ ಪೊರೆ ಬಿಡುವುದು. ಎಪಿಡರ್ಮಿಸಿನ ಜೀವಕಣಗಳ ಒಂದುಗೂಡುವಿಕೆಯಿಂದ ಒಂದು ಕೊಳವೆಯ ಆಕಾರದ ರಚನೆ ರೂಪುಗೊಳ್ಳುವುದು. ಎಪಿಡರ್ಮಿಸಿನ ಜೀವಕಣಗಳು ವ್ಯಕ್ತವಾಗಿ ಕಾಣಬಹುದು ಅಥವಾ ಅದು ಕಣಾವರಣವಿಲ್ಲದ ಪದರವಾಗಿರಬಹುದು.

ಶುದ್ಧೀಕರಣ ವಿಧಾನ: ಮಲದ್ರವ ಅಧೋದಿಬ್ಬದಲ್ಲಿ ಉತ್ಪತ್ತಿಯಾಗಿ ಮುಂದುವರಿದು ದೇಹದ ಮುಂದಿನ ತುದಿಯ ಸ್ವಲ್ಪ ಹಿಂದೆ ಅಧೋಭಾಗದಲ್ಲಿ ಒಂದು ದ್ವಾರದ ಮೂಲಕ ಹೊರಬೀಳುವುದು. ಶುದ್ಧೀಕರಣ ನಾಳಗಳಿದ್ದರೆ ಪಕ್ಕದ ದಿಬ್ಬಗಳಲ್ಲಿ ಮಾತ್ರ ಇರುವುವು.

ಹೊರದರ್ಮದ ಕೆಳಗಿರುವ ಸ್ನಾಯುತಂತುಗಳು ದೇಹದೊಳಗಿರುವ ದೇಹಾಂತರ ಅವಕಾಶವನ್ನು ಆವರಿಸಿರುತ್ತದೆ. ಇವು ನೀಳವರ್ತುಲ ಚತುರ್ಥಾಂಶಗಳಲ್ಲಿ ನಾಲ್ಕು ಗುಂಪುಗಳಾಗಿ ಅಳವಡಿಕೆಯಾಗಿವೆ. ಕದುರಿನಾಕಾರದ ಈ ಸ್ನಾಯುತಂತುಗಳಲ್ಲಿ ಎರಡು ಭಾಗಗಳಿವೆ. ಕಣಭಿತ್ತಿಯಿರುವ ಭಾಗ ಬೊಬ್ಬೆಯಂತೆ ಉಬ್ಬಿ ದೇಹಾಂತರಾವಕಾಶದ ಕಡೆ ಇದೆ. ಮತ್ತೊಂದು ಭಾಗ ಸಂಕುಚಿಸುವ ಸಾಮರ್ಥ್ಯವುಳ್ಳದ್ದು ಮತ್ತು ಹೊರದರ್ಮದ ಒಳಭಾಗದ ಕಡೆಗಿರುವುದು. ಪ್ರತಿಯೊಂದು ಸ್ನಾಯುಕಣದ ಬಿಡಿತುದಿಯಲ್ಲಿಯೂ ಒಂದು ನರತಂತು ಉಂಟು. ಇದು ಊರ್ಧ್ವದಿಬ್ಬದ ಅಥವಾ ಅಧೋದಿಬ್ಬದಲ್ಲಿರುವ ನರಹುರಿಗೆ ಸಂಬಂಧ ಕಲ್ಪಿಸುವುದು.

ದೇಹಾಂತರಾವಕಾಶ ಜೀವಕಣಗಳ ಮಧ್ಯೆ ಸೀಳಿಕೆಯಿಂದಾದುದಲ್ಲ. ಆದ್ದರಿಂದ ಇದು ಸೀಲೋಮ್ ಅಲ್ಲ, ಬರಿಯ ಮಿಥ್ಯಾವಕಾಶ (ಸೂಡೋಸೀಲ್) ಎಂದು ಕರೆಯಬಹುದು. ಜೀರ್ಣನಾಳ ದೇಹದ ಉದ್ದಕ್ಕೂ ನೆಟ್ಟನೆಯ ಕೊಳವೆಯಂತೆ ಚಾಚಿಕೊಂಡಿದೆ. ಇದರ ಮುಂದಿನ ತುದಿಯಲ್ಲಿ ಬಾಯಿ ಉಂಟು. ಆಸನದ್ವಾರ ಮಲಕೂಪದಿಂದ ಹಿಂದಿನ ತುದಿಯ ಹತ್ತಿರದಲ್ಲಿ ಅಧೋಭಾಗದಲ್ಲಿ ಹೊರಗೆ ತೆರೆಯುವುದು. ಬಾಯಿಯ ಸುತ್ತ ತುಟಿಗಳೂ ಮತ್ತು ಇಂದ್ರಿಯ ಕೋಶಗಳೂ ಇವೆ. ಬಾಯಿ ಪ್ರದೇಶ ಮೊಟಕಾದ ಕೊಳವೆ. ಇದು ಅನ್ನನಾಳವನ್ನು ಸೇರುತ್ತದೆ. ಪ್ರಾಣಿಗಳ ಮತ್ತು ಸಸ್ಯಗಳ ಪರೋಪಜೀವಿಗಳಾಗಿ ಬದುಕುವ ದುಂಡು ಹುಳುಗಳಲ್ಲಿ ಬಾಯಲ್ಲಿ ಸೂಕ್ಷ್ಮವಾದ ಮತ್ತು ಚೂಪಾದ ಕೊಳವೆಯಿದೆ. ಇದು ಆಹಾರಪದಾರ್ಥಗಳನ್ನು ಒಳಕ್ಕೆ ಸೆಳೆದುಕೊಳ್ಳಲು ಅನುಕೂಲವಾಗಿದೆ. ಅನ್ನನಾಳ ಸ್ನಾಯುಪುಷ್ಟವಾದ್ದು. ನೀರಿನ ರೂಪದ ಆಹಾರವನ್ನು

ಒತ್ತಡದಿಂದ ಮುನ್ನೂಕುವುದಕ್ಕೂ ಸೂಕ್ಷ್ಮವಾದ ಘನ ಪದಾರ್ಥಗಳನ್ನು ನುಂಗುವುದಕ್ಕೂ ಇದು ಸಹಾಯಕವಾಗಿದೆ. ಕರುಳು ನೆಟ್ಟಗೆ ಕೊಳವೆಯಂತಿದೆ. ಇದರ ದಪ್ಪ ಒಂದು ಜೀವಕಣದಷ್ಟು. ಕರುಳಿನ ಹೊರ ಮತ್ತು ಒಳಭಾಗಗಳಲ್ಲಿ ಕೈಟಿನ್ ಹೊದಿಕೆಯುಂಟು. ಜೀರ್ಣನಾಳದ ಕೊನೆಯಭಾಗ (ಹೆಣ್ಣಿನಲ್ಲಿ ಗುದ, ಗಂಡಿನಲ್ಲಿ ಮಲಕೂಪ) ಮೇಲಿಂದ ಕೆಳಕ್ಕೆ ಚಪ್ಪಟೆಯಾದ ಮತ್ತು ಮೊಟಕಾದ ಕೊಳವೆಯಂತಿದ್ದು ಹಿಂದಿನ ತುದಿಯ ಭಾಗದಲ್ಲಿ ಹೊರ ತೆರೆಯುವುದು. ಕೆಲವು ವೇಳೆ ಗುದ ಗ್ರಂಥಿಗಳಿರುವುದುಂಟು. ಗಂಡಿನಲ್ಲಿ ಸಾಧಾರಣವಾಗಿ ಎರಡು ಪೀನಿಯಲ್ ಬಿರುಗೂದಲುಗಳು ಮಲಕೂಪ ದ್ವಾರದ ಮೂಲಕ ಹೊರಬರುತ್ತವೆ. ವೀರ್ಯಾಣುಗಳನ್ನು ಹೆಣ್ಣಿನ ದೇಹದೊಳಗೆ ಸಾಗಿಸಲು ಇವು ಸಹಕರಿಸುತ್ತವೆ. ಆದರೆ ಶಿಶ್ನದ ರೀತಿಯಲ್ಲಿ ಅಲ್ಲ.




1. ಟ್ರೈಕೊಸೆಫಾಲಸ್ ಟ್ರೈಕೂರಿಸ್
2. ಟ್ರೈಕಿನೆಲ್ಲ ಸ್ಪೈರಾಲಿಸ್
3. ಆಸ್ಕಾರಿಸ್ ಲುಂಬ್ರಿಕಾಯ್ಡಿಸ್
4. ಎಂಟರೋಬಿಯಸ್ ವರ್ಮಿಕ್ಯುಲಾರಿಸ್

ನೆಮಟೋಡ ಗುಂಪಿನವು ಏಕಲಿಂಗ ಪ್ರಾಣಿಗಳು. ಇವುಗಳ ಜನನೇಂದ್ರಿಯಗಳು ಸಾಧಾರಣವಾಗಿ ಕೊಳವೆಯಂಥ ರಚನೆಗಳು. ಗರ್ಭಕೋಶನಾಳ ಮತ್ತು ಬೀಜಾಶಯನಾಳಗಳು ಒಂದೇ ಒಂದು ಸಾಲು ಜೀವಕಣಗಳಿಂದ ರಚಿತವಾಗಿವೆ. ಈ ನಾಳಗಳು ಜನನೇಂದ್ರಿಯಗಳೊಂದಿಗೆ ಸೇರಿವೆ. ಒಂದು ಜೊತೆ ಅಂಡಾಶಯ ಮತ್ತು ಒಂದು ಬೀಜಾಶಯವಿರುವುದು ಸಾಮಾನ್ಯ. ಕೆಲವಲ್ಲಿ ಅಂಡಾಶಯ ಎರಡಕ್ಕಿಂತ ಹೆಚ್ಚಿರುವುದರಿಂದ ಈ ಅಂಶವನ್ನು ಕೆಲವು ವೇಳೆ ಗುಂಪಿನ ವರ್ಗೀಕರಣಕ್ಕೆ ಬಳಸಿಕೊಳ್ಳಲಾಗುವುದು. ಜನನೇಂದ್ರಿಯಗಳು ಕೆಲವೆಡೆಗಳಲ್ಲಿ ಉಬ್ಬಿ ವೀರ್ಯಾಣುಗಳನ್ನು ಸಂಗ್ರಹಿಸುವುದಕ್ಕೆ ನೆರವಾಗುವುವು.

ತತ್ತಿಗಳು ಭ್ರೂಣವಾಗಿ ಹುಳುವಿನಾಕಾರದ ಲಾರ್ವಗಳಾಗುವವರೆಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಮೊದಲೆ ಒದಗಿಸಿಕೊಳ್ಳುತ್ತವೆ. ತತ್ತಿಗಳ ಜೀವರಸದಲ್ಲಿ ಯಾವ ವಿಧವಾದ ಆಹಾರ ಶೇಖರಣೆಯೂ ಇರುವುದಿಲ್ಲ. ವೀರ್ಯಾಣುಗಳು ಅಮೀಬ ಆಕಾರದುವು. ಕೆಲವು ಕಶದ ರಚನೆಯುಳ್ಳವು. ಕೆಲವು ಬಗೆಯ ಹುಳುಗಳಲ್ಲಿ ವೀರ್ಯಾಣುಗಳು ಉದ್ದವಾಗಿವೆ. ಹೆಣ್ಣು ಗಂಡುಗಳ ಸಂಭೋಗ ಕಾಲದಲ್ಲಿ ವೀರ್ಯಾಣುಗಳು ಹೆಣ್ಣಿನ ಜನನೇಂದ್ರಿಯ ನಾಳಗಳನ್ನು ಹೊಕ್ಕು ಗರ್ಭಕೋಶದಲ್ಲಿ ಸಂಚರಿಸಿ ಸ್ವಲ್ಪ ಕಾಲ ಸಂಗ್ರಹಗೊಂಡಿರುವುವು. ನಿಷೇಚಿತ ತತ್ತಿಗಳು ತಮ್ಮ ಸುತ್ತ ಒಂದು ಕವಚವನ್ನು ರಚಿಸಿಕೊಳ್ಳುವುವು. ಅನಂತರ ಈ ಕವಚ ಒಳಭಾಗದಲ್ಲಿ ಇನ್ನೊಂದನ್ನು ಸ್ರವಿಸುತ್ತದೆ. ಹೊರಕವಚದಲ್ಲಿ ವಿವಿಧ ನಮೂನೆಗಳಿವೆ.

ನರಮಂಡಲ ಭ್ರೂಣದ ಹೊರದರ್ಮದಿಂದ ರೂಪಿತವಾಗುವಂಥವು. ಗಂಟಲಿನ ಸುತ್ತ ಉಂಗುರಾಕಾರದ ನರಹುರಿಯಿದೆ. ಇದರ ಮುಂಭಾಗದಿಂದ ಆರು ನರಗಳು ಮತ್ತು ಹಿಂಭಾಗದಿಂದ ಆರು ನರಗಳು ಹೊರಡುತ್ತವೆ. ಹಿಂಭಾಗದ ನರಗಳು ಉದ್ದವಾಗಿದ್ದು ಹಿಂದಿನ ತುದಿಯವರೆಗೂ ಚಾಚಿಕೊಂಡಿವೆ. ಈ ನರಗಳ ಪೈಕಿ ಎರಡು ನರಗಳು ದಪ್ಪವಾಗಿದ್ದು ಹೊರದರ್ಮದ ಊರ್ಧ್ವದಿಬ್ಬ ಮತ್ತು ಅಧೋದಿಬ್ಬದಲ್ಲಿ ಅಡಗಿಕೊಂಡಿವೆ. ಇವೆರಡರ ಸಂಬಂಧ ಕಲ್ಪಿಸುವ ಅನೇಕ ನರತಂತುಗಳಿವೆ. ಇವುಗಳ ಶೇಖರಣೆಯಿಂದ ನರಹುರಿಉಂಗುರದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಎರಡು ನರಮುಡಿಗಳು ರೂಪುಗೊಂಡಿವೆ.

ಇವುಗಳ ಶರೀರ ಶಾಸ್ತ್ರದ ವಿಚಾರವಾಗಿ ಹೆಚ್ಚಿಗೆ ತಿಳಿದುಬಂದಿಲ್ಲ. ರ್‍ಯಾಬ್ಡೈಟಿಸ್ ಎಂಬುದರ ವಿಷಯವಾಗಿ ಹೆಚ್ಚಿನ ಸಂಶೋಧನೆ ನಡೆದಿದೆ. ಜಂತುಹುಳು ವಿಚಾರವಾಗಿ ಅನೇಕ ಜೀವರಾಸಾಯನಿಕ ಸಂಶೋಧನೆಗಳು ಮುಂದುವರಿಯುತ್ತಿವೆ.

ದುಂಡು ಹುಳುಗಳಿಗೂ ಇತರ ಜೀವಿಗಳ ಗುಂಪುಗಳಿಗೂ ಇರುವ ಸಂಬಂಧ ಮತ್ತು ಅದೇ ವಂಶದಲ್ಲಿನ ಜೀವಗುಂಪುಗಳಿಗೂ ಇರುವ ಸಂಬಂಧ ಚರ್ಚಾಸ್ಪದ ವಿಷಯವಾಗಿದೆ. ಗ್ಯಾಸ್ಟ್ರೊಟ್ರೈಕಗಳಿಗೂ ಇವುಗಳಿಗೂ ಸಂಬಂಧ ಕಲ್ಪಿಸಬಹುದೆಂಬ ಅಭಿಪ್ರಾಯದ ಬಗ್ಗೆ ಮಾತ್ರ ಸಾಮಾನ್ಯ ಒಪ್ಪಿಗೆಯುಂಟು.

ದುಂಡು ಹುಳುಗಳು ತಮ್ಮ ಜೀವನವನ್ನು ಇತರ ಜೀವಿಗಳಿಗಿಂತ ಅತ್ಯುತ್ತಮ ರೀತಿಯಲ್ಲಿ ನಡೆಸುವುವು. ಬಹುಪಾಲು ದುಂಡು ಹುಳುಗಳು ಸಿಹಿನೀರಿನಲ್ಲಿ, ಸಮುದ್ರದಲ್ಲಿ ಮತ್ತು ಮಣ್ಣಿನಲ್ಲಿ ಜೀವಿಸುತ್ತವೆ. ನೀರಿನಲ್ಲಿ ವಾಸಿಸುವುವುಗಳಿಗೆ ಪಾಚಿ ಮುಖ್ಯ ಆಹಾರ. ಮಣ್ಣಿನಲ್ಲಿ ಜೀವಿಸುವುವು ಕೊಳೆತು ನಾರುವ ಪ್ರಾಣಿ ಹಾಗೂ ಸಸ್ಯಗಳನ್ನು ತಿಂದು ಬದುಕುವುವು. ಮನೋಂಕಸ್ ಜಾತಿಯವು ಮಾಂಸಾಹಾರಿಗಳು; ಇತರ ದುಂಡು ಹುಳುಗಳನ್ನು ಮತ್ತು ರೋಟಿಫೆರ್‌ಗಳನ್ನು ತಿನ್ನುತ್ತವೆ. ಆಂಗ್ವಿಲ್ಲ ಅಸಿಟಿ ಎಂಬುದು ಬ್ಯಾಕ್ಟೀರಿಯಗಳನ್ನು ತಿನ್ನುತ್ತದೆ. ಮತ್ತೆ ಕೆಲವು ಬಗೆಯವು ಸಸ್ಯಗಳನ್ನು ಕೊರೆದು ಸಸ್ಯರಸವನ್ನು ಹೀರುವುವು. ಟೈಲೆಂಕಸ್ ಟ್ರಿಟಿಸಿಯ ಮರಿಗಳು ಗೋಧಿಯ ದಂಟನ್ನು ಕೊರೆದು ಒಳಹೊಕ್ಕು ಗಂಟುಗಳನ್ನು (ಗಾಲ್) ಉಂಟುಮಾಡಿ ಅನೇಕ ಕಾಲ ಜೀವಿಸುವುವು. ಗಂಟುಗಳು ಭೂಮಿಗೆ ಬಿದ್ದು ತೇವದ ಸಂಪರ್ಕಕ್ಕೆ ಬಂದು ಮರಿಗಳು ಕೊಳೆತಾಗ ಇತರ ಗೋಧಿ ಸಸ್ಯಗಳನ್ನು ಒಳಹೊಕ್ಕು ಜೀವನ ಚರಿತ್ರೆ ಮುಂದುವರಿಸುವುವು.

ಆಂಗ್ವಿಲ್ಲುಲೈನ ಅಗಸ್ಟ ಎಂಬುದು ನೆಲವಾಸಿ. ಹಾಗೂ ಬತ್ತದ ಪೈರಿನಲ್ಲಿ ಗಂಟುಗಳನ್ನುಂಟು ಮಾಡುವುವು. ಸ್ಫಿರುಲೇರಿಯ ಬಾಂಬೈ ಎಂಬುದರ ಹೆಣ್ಣು ದುಂಡು ಹುಳು ಜೇನುನೊಣದ ದೇಹಾಂತರಾವಕಾಶದಲ್ಲಿ ಜೀವಿಸುವುದು. ಮನುಷ್ಯನಲ್ಲೂ ಅನೇಕ ತೆರನ ದುಂಡುಹುಳುಗಳು ಪರೋಪಜೀವನ ನಡೆಸುವುವು.

ನೆಮಟೋಡ ಗುಂಪಿನಲ್ಲಿ ಏಳು ಕುಟುಂಬಗಳಿವೆ. ಕುಟುಂಬ ೧. ಆಸ್ಕಾರಿಡೆ: ಉದಾ: ಮನುಷ್ಯನ ಪರೋಪಜೀವಿಯಾದ ಆಸ್ಕಾರಿಸ್ ಮತ್ತು ಸೂಜಿಹುಳುವಾದ *ಎಂಟರೋಬಿಯಸ್ ವರ್ಮಿಕುಲ್ಯಾರಿಸ್*.

ಕುಟುಂಬ ೨. ಸ್ಟ್ರಾಂಗೈಲಿಡೆ: ಉದಾ: ಕೋಳಿಗಳ ಗಂಟಲುನಾಳಗಳಲ್ಲಿ ವಾಸಿಸುವ ಸಿಂಗೇಮಸ್ ಟ್ರೇಕಿಯ, ಹಂದಿಗಳ ಮತ್ತು ದನಕರುಗಳ ಕರುಳಿನಲ್ಲಿರುವ ಇಸೊಫೇಗೊಸ್ಟೋಮಮ್, ಕುದುರೆಯಲ್ಲಿ ಜೀವಿಸುವ ಸ್ಟ್ರಾಂಗೈಲಸ್, ಮನುಷ್ಯನ ಕರುಳಿನಲ್ಲಿ ವಾಸಿಸುವ ಕೊಕ್ಕೆಹುಳು (ಆಂಕೈಲೊಸ್ಟೋಮ ಡುಯೊಡಿನೇಲ್) ಮತ್ತು ನಿಕೆಟರ್ ಅಮೆರಿಕಾನಸ್.

ಕುಟುಂಬ ೩. ಟ್ರೈಕೊಟ್ರಾಕೆಲಿಡೆ: ಉದಾ: ಚಾಟಿಹುಳುವಾದ ಟ್ರೈಕೊಸೆಫಾಲಸ್ ಟ್ರೈಕೂರಿಸ್ (ಮನುಷ್ಯನ ದೊಡ್ಡ ಕರುಳಿನ ಪರೋಪಜೀವಿ), ಇಲಿಗಳ ಕರುಳಿನಲ್ಲಿ ಜೀವಿಸುವ ಟ್ರೈಕಿನೆಲ್ಲ ಸ್ಪೈರಾಲಿಸ್ ಹುಳು. ಇದು ಹಂದಿ ಮತ್ತು ಮನುಷ್ಯನ ಪರೋಪಜೀವಿಯೂ ಹೌದು.

ಕುಟುಂಬ೪. ಫೈಲೇರಿಯೈಡೆ: ಇವು ಕಶೇರುಕಗಳ ಕಣಧಾತುಗಳ ಪರೋಪಜೀವಿಗಳು. ಉದಾಹರಣೆ: ವುಚೆರೆರಿಯ ಬಾನ್‌ಕ್ರಾಫ್ಟಿ ಅಥವಾ ಫೈಲೇರಿಯ ಹುಳು.

ಕುಟುಂಬ ೫. ಮೆರ್ಮಿತಿಡೆ: ಉದಾಹರಣೆ: ಮೆರ್ಮಿಸ್. ಇದರ ಪ್ರೌಢಜೀವಿಗಳು ಕಂಬಳಿ ಹುಳುಗಳ ಅಥವಾ ಮಿಡತೆಗಳಲ್ಲಿ ಪರೋಪಜೀವನ ನಡೆಸುವುವು. ಸ್ಫೆರುಲೇರಿಯಾ ಬಾಂಬೈ ಜೇನುನೊಣಗಳ ಪರೋಪಜೀವಿ.

ಕುಟುಂಬ ೬. ಆಂಗ್ವಿಲ್ಲುಲಿಡೆ: ಇವು ಸಣ್ಣ ಹುಳುಗಳು; ಪರೋಪಜೀವಿಗಳಲ್ಲ. ರ್‍ಯಾಬ್ಡೈಟಿಸ್, ಟೈಲೆಂಕಸ್ ಮತ್ತು ಆಂಗ್ವಿಲುಲ ಉದಾಹರಣೆಗಳು.

ಕುಟುಂಬ ೭. ಇನೋಪ್ಲಿಡೆ: ಸಾಮಾನ್ಯವಾಗಿ ಸಮುದ್ರವಾಸಿಗಳು ಉದಾಹರಣೆ: ಇನೋಪ್ಲಸ್. (ಎಸ್.ಕೆ.ಎಚ್.)

**ನೆಮಟ್ಹೆಲ್‌ಮಿನ್‌ತೆಸ್:** ಆಸ್ಕೆಲ್ಮಿಂತೀಸ್ ವಿಭಾಗಕ್ಕೆ ಸೇರಿದ ಉಪವಿಭಾಗ. ಇದಕ್ಕೆ ಸೇರಿದ ಹುಳುಗಳ ದೇಹ ದುಂಡಾಗಿಯೂ ನೀಳವಾಗಿಯೂ ಇದೆ. ಶಿಲಕೆಗಳಿಲ್ಲ. ದೇಹಭಿತ್ತಿಯಲ್ಲಿ ಉದ್ದುದ್ದನೆಯ ಸ್ನಾಯುಗಳು ಮಾತ್ರ ಉಂಟು. ಸ್ನಾಯುಕೋಶದ ಹೊರಭಾಗದಲ್ಲಿ ಸಂಕುಚನ ತಂತುಗಳೂ ಅಗಲವಾಗಿರುವ ಒಳಭಾಗದಲ್ಲಿ ಕೋಶಕೇಂದ್ರವೂ ಉಂಟು. ಜ್ವಾಲಾಕೋಶಗಳಿಲ್ಲ. ಈ ಉಪವಿಭಾಗದಲ್ಲಿ ನೆಮಟೋಡ ಮತ್ತು ನೆಮಟೋಮಾರ್ಫ ಎಂಬ ಎರಡು ವರ್ಗಗಳಿವೆ. ಈ ಗುಂಪಿನ ಹಲವಾರು ಪ್ರಾಣಿಗಳು ಪರೋಪಜೀವನ ನಡೆಸುವುವು. (ವಿವರಗಳಿಗೆ ನೋಡಿ–ನೆಮಟೋಡ.) ***

**ನೆಮರ್ಟಿನಿಯ:** ಏಸೀಲಮೇಟ (ದೇಹಾವಕಾಶರಹಿತ) ವಿಭಾಗಕ್ಕೆ ಸೇರಿದ ಅಕಶೇರುಕಗಳ ಒಂದು ಕಿರುವಂಶ. ಮೃದುವಾದ, ತೆಳುವಾದ, ಚಪ್ಪಟೆಯಾದ, ಖಂಡಮಯವಲ್ಲದ ದೇಹವುಳ್ಳ ಹುಳುಗಳನ್ನು ಒಳಗೊಂಡಿದೆ. ಈ ಹುಳುಗಳ ದೇಹ ಅತಿ ಉದ್ದವಾಗುವ ಮತ್ತು ಸಂಕುಚಿಸುವ ಸಾಮರ್ಥ್ಯವುಳ್ಳದ್ದು. ಕೆಲವು 5 ಮಿಮೀ ನಷ್ಟು ಚಿಕ್ಕದಿದ್ದರೆ ಮತ್ತೆ ಕೆಲವು 25 ಮೀ ಗಳಷ್ಟು ಉದ್ದವಾಗಿರುವುವು. ಈ ವಿಭಾಗದಲ್ಲಿ ಸುಮಾರು 500 ಪ್ರಭೇದಗಳಿವೆ. ಕೆಂಪು, ಹಳದಿ, ಕಂದು, ಬಿಳಿ, ಹಸಿರು ಮತ್ತು ವಿವಿಧ ಬಣ್ಣಗಳ ಜೀವಿಗಳಿವು. ಸಾಮಾನ್ಯವಾಗಿ ಕಡಲವಾಸಿಗಳು. ಕಲ್ಲಿನ ತಳದಲ್ಲಿ, ಪಾಚಿಯ ನಡುವೆ ಅಥವಾ ಮರಳಿನ ಬೊಕ್ಕೆಗಳಲ್ಲಿ ಸುರುಳಿಗಟ್ಟಿಕೊಂಡು ಜೀವಿಸುವುವು. ಕೆಲವು ಸಮುದ್ರದ ಆಳದಲ್ಲಿ ಜೀವಿಸುವುವು. ಪ್ರೋಸ್ಟೋಮ ಎಂಬ ಜಾತಿಯ ಹುಳು ಸಿಹಿನೀರಿನಲ್ಲಿಯೂ ಉಷ್ಣವಲಯದಲ್ಲಿನ *ಜಿಯೊನಿಮರ್ಟಿಸ್* ಎಂಬುದು ಜೌಗುಮಣ್ಣಿನಲ್ಲಿಯೂ *ಕಾರ್ಸಿಕೊನಿಮರ್ಟಿಸ್* ಎಂಬುದು ಸಮುದ್ರದಲ್ಲಿ ಜೀವಿಸುವ ಏಡಿಗಳ ಮೊಟ್ಟೆಗಳ ಗುಂಪುಗಳಲ್ಲಿ ಅಥವಾ ಕಿವಿರುಗಳಲ್ಲೂ ಮಾಲಕಾಬ್ಡೆಲ ಎಂಬುದು ಇಚ್ಚಿಪ್ಪು ಪೋಷಕ ಜೀವಿಗಳ ಮ್ಯಾಂಟಲ್ ಕುಹರದಲ್ಲಿಯೂ ಜೀವಿಸುವುವು.

ನೆಮರ್ಟಿನಿಯ ವಿಭಾಗದ ಪ್ರಾಣಿಗಳ ಹೊರಚರ್ಮ ಮೃದುವಾಗಿರುವುದು. ಶಿಲಕೆಗಳುಳ್ಳ ಲೋಳೆ ಪದಾರ್ಥ ಸ್ರವಿಸುವ ಮತ್ತು ಸೂಕ್ಷ್ಮವೇದಿ ಕಣಗಳುಳ್ಳ ಹೊರಚರ್ಮವಿದೆ. ಇದರ ಒಳಗೆ ವರ್ತುಲ ಹಾಗೂ ನೀಳ ಅಚ್ಚಿನ ಸ್ನಾಯುಗಳಿವೆ. ಶಿಲಕೆಗಳ ಹೊದಿಕೆಯ ಸಹಾಯದಿಂದ ಇವು ಚಲಿಸುವುವು. ಬಾಯಿಯ ಮೇಲ್ಭಾಗದಲ್ಲಿ ಮತ್ತು ದೇಹದ ಮುಂತುದಿಯಲ್ಲಿ ಒಂದು ದ್ವಾರವಿರುವುದು. ಇದರಲ್ಲಿ ಮೃದುವಾದ ಹೀರುಕೊಳವೆಯುಂಟು. ದೇಹದೊಳಗಿನ ಒಂದು ಚೀಲದಲ್ಲಿ ಹೀರುಕೊಳವೆ ಅಡಗಿರುತ್ತದೆ. ಇದರ ಮೇಲೆ ಸಣ್ಣ ಸಣ್ಣ ಮುಳ್ಳಿನಂಥ ರಚನೆಗಳಿರುವುದರಿಂದ ಸ್ವರಕ್ಷಣೆಗೂ ಆಕ್ರಮಣಕ್ಕೂ ಇದರಿಂದ ಅನುಕೂಲ. ಜೀರ್ಣನಾಳ ದೇಹದ ಉದ್ದಕ್ಕೂ ಹರಡಿದೆ. ನಾಳದ ಒಳಭಾಗ ಶಿಲಕೆಗಳಿಂದ ಕೂಡಿದೆ ಮತ್ತು ಇದರ ಇಕ್ಕೆಡೆಗಳಲ್ಲಿ ಸಣ್ಣ ಕುಡಿಗಳುಂಟು. ಇತರ ಸಣ್ಣಪುಟ್ಟ ಪ್ರಾಣಿಗಳು ಅಥವಾ ಸಸ್ಯಜೀವಿಗಳು ಇವುಗಳ ಆಹಾರ. ದೇಹದ ಇಕ್ಕೆಡೆಗಳಲ್ಲಿ ನೀಳವಾದ ಎರಡು ರಕ್ತನಾಳಗಳು ಹಾಗೂ ದೇಹದ ಉದ್ದಕ್ಕೂ ಚಾಚಿರುವ ಒಂದು ಊರ್ಧ್ವ ರಕ್ತನಾಳ ಉಂಟು. ದೇಹದ ಮುಂದಿನ ಭಾಗದಲ್ಲಿ ಮತ್ತು ಜೀರ್ಣನಾಳದ ಸುತ್ತ ಇವುಗಳನ್ನು ಸಂಬಂಧಿಸುವ ಅಡ್ಡರಕ್ತನಾಳಗಳು ಇವೆ. ರಕ್ತ ಕೆಂಪು ಬಣ್ಣದ್ದಾಗಿರಬಹುದು ಅಥವಾ ವರ್ಣರಹಿತವಾಗಿರಬಹುದು. ನಿರ್ದಿಷ್ಟವಾದ ಶ್ವಾಸಾಂಗಗಳಿಲ್ಲ. ಅನಿಲಗಳ ವಿನಿಮಯ ನಡೆಯುವುದು ಚರ್ಮದ ಮೂಲಕ. ದೇಹದೊಳಗೆ ಇಕ್ಕೆಡೆಯಲ್ಲಿ ನೀಳವಾದ ಹಾಗೂ ಕವಲೊಡೆದ ನಾಳಗಳಿರುವುವು. ಇವುಗಳ ತುದಿಯಲ್ಲಿರುವ ಜ್ವಾಲಾಕೋಶಗಳು (ಫ್ಲೇಮ್ ಸೆಲ್ಸ್) ರಕ್ತನಾಳಗಳ ಬಳಿ ಹರಡಿರುತ್ತವೆ. ದೇಹದ ಚರ್ಮಕ್ಕೂ ಒಳಗಿನ ಅಂಗಗಳಿಗೂ ನಡುವೆ ಇರುವ ಅವಕಾಶದಲ್ಲಿ ಪ್ಯಾರಂಕೈಮ ಕೋಶಗಳು ತುಂಬಿಕೊಂಡಿವೆ. ತಲೆಯಲ್ಲಿ ಎರಡು ದೊಡ್ಡ ನರಮುಡಿಗಳಿವೆ. ಇವುಗಳನ್ನು ನರತಂತು ಒಟ್ಟುಗೂಡಿಸುವುದು. ಈ ನರಮುಡಿಗಳು ಹೀರುಕೊಳವೆಗೆ ನರಗಳನ್ನು ಒದಗಿಸುತ್ತವೆ. ಇಕ್ಕೆಡೆಯಲ್ಲಿಯೂ ನೀಳವಾದ ಎರಡು ನರಗಳಿವೆ. ಇವುಗಳ ಮೇಲೆ ನರಮುಡಿಗಳು ಮತ್ತು ಇವುಗಳಿಗೆ ಸಂಬಂಧ ಕಲ್ಪಿಸುವ ಅಡ್ಡನರಗಳು ಉಂಟು. ಕಣ್ಣುಗಳು ಸರಳ ರೀತಿಯವು. ತಲೆಯ ಮೇಲೆ ಮತ್ತು ದೇಹದ ಇಕ್ಕೆಡೆಗಳಲ್ಲಿ ಸೂಕ್ಷ್ಮಗ್ರಾಹಿ ಇಂದ್ರಿಯಗಳುಂಟು.

ಈ ಜೀವಿಗಳು ಸಾಧಾರಣವಾಗಿ ಏಕಲಿಂಗಿಗಳು. ಜನನೇಂದ್ರಿಯಗಳು ಪ್ಯಾರಂಕೈಮದಲ್ಲಿ ಹುದುಗಿವೆ. ಪ್ರಜನನ ಜೀವಕಣಗಳು ದೇಹದ ಚರ್ಮವನ್ನು ಭೇದಿಸಿ ಹೊರಬರುವುವು. ಲಿನಿಯೈಡೆ ಕುಟುಂಬದ ಪ್ರಾಣಿಗಳಲ್ಲಿ ಪೈಲಿಡಿಯಮ್ ಲಾರ್ವಾವಸ್ಥೆ ಕಂಡುಬರುವುದು. ಉಳಿದುವುಗಳಲ್ಲಿ ಲಾರ್ವಾವಸ್ಥೆಯಿಲ್ಲ. ಭ್ರೂಣ ನೇರವಾಗಿ ಬೆಳೆದು ಮರಿಯಾಗುವುದು. ಪ್ರೌಢಜೀವಿಗೆ ಪುನರುತ್ಪಾದನಾ ಸಾಮರ್ಥ್ಯವುಂಟು. ದೇಹ ಅನೇಕ ತುಂಡುಗಳಾಗಿ ಒಡೆದು ಪ್ರತಿಯೊಂದು ತುಂಡೂ ಒಂದೊಂದು ಪೂರ್ಣ ಜೀವಿಯಾಗಿ ವೃದ್ಧಿಸುವುದು.

ಈ ಜೀವಿಗಳನ್ನು ಚಪ್ಪಟೆ ಹುಳುಗಳ ವಂಶಕ್ಕೆ (ಪ್ಲಾಟಿಹೆಲ್ಮಿಂತೀಸ್) ಸೇರಿಸುವುದುಂಟು. ಚರ್ಮ ಹಾಗೂ ನರಮಂಡಲಗಳ ರಚನೆ, ಜ್ವಾಲಾಕೋಶಗಳು, ಖಂಡರಹಿತ ಸ್ಥಿತಿ–ಇವುಗಳಲ್ಲಿ ನೆರ್ಮಟಿನಿಯಗಳಿಗೂ ಚಪ್ಪಟೆಹುಳುಗಳಿಗೂ ಸಾಮ್ಯ ಉಂಟು. ಆದರೆ ಬಾಯಿ ಮತ್ತು ಆಸನದ್ವಾರವಿರುವ ಜೀರ್ಣನಾಳ, ಸರಳ ರಚನೆಯ ಜನನೇಂದ್ರಿಯಗಳು, ಏಕಲಿಂಗತೆ–ಈ ಗುಣಲಕ್ಷಣಗಳಿಂದ ನೆಮರ್ಟಿನಿಯಗಳು ಚಪ್ಪಟೆ ಹುಳುಗಳಿಂದ ಬೇರೆಯಾಗಿವೆ.

ನೆಮರ್ಟಿನಿಯವನ್ನು ಆನೋಪ್ಲ ಮತ್ತು ಈನೋಪ್ಲ ಎಂಬ ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ***

**ನೆರಡಿ:** ಕುರಿ, ಹಸು, ಎಮ್ಮೆ, ಕುದುರೆ, ಹಂದಿ, ಮೇಕೆ, ಒಂಟೆ, ಜಿಂಕೆ ಮುಂತಾದ ಜಾನುವಾರುಗಳನ್ನು ಬಾಧಿಸುವ ವಿಷಮ ಸಾಂಕ್ರಮಿಕ ರೋಗ. ವೈಜ್ಞಾನಿಕವಾಗಿ ಈ ರೋಗವನ್ನು ಅಂತ್ರಾಕ್ಸ್ ಎನ್ನುವರು. ಬ್ಯಾಸಿಲಸ್ ಆಂತ್ರಸಿಸ್ ಕಡ್ಡಿ ಆಕಾರದ ಸೂಕ್ಷ್ಮಾಣುಜೀವಿ ಈ ರೋಗಕ್ಕೆ ಕಾರಣ. ಜ್ವರ, ಗುಲ್ಮ ದೊಡ್ಡದಾಗುವುದು, ದೇಹದೊಳಗಿನ ದ್ರವಗಳು ರಕ್ತಮಿಶ್ರಿತವಾಗಿರುವುದು ಈ ರೋಗದ ಮುಖ್ಯ ಚಿಹ್ನೆಗಳು. ಈ ರೋಗ ಮಾಂಸಾಹಾರಿ ಪ್ರಾಣಿಗಳಾದ ನಾಯಿ, ನರಿ, ಬೆಕ್ಕುಗಳಲ್ಲಿ ಕಾಣಿಸುವುದು ಅಪರೂಪ. ಕುರಿ ಮತ್ತು ಹಸುಗಳಲ್ಲಿ ಹಲವು ವೇಳೆ ರೋಗ ಹಠಾತ್ತನೆ ಸಂಭವಿಸಿ, ರೋಗದ ಚಿಹ್ನೆಗಳನ್ನು ಗುರ್ತಿಸುವ ಮೊದಲೇ ರಾಸು ಸಾಯುತ್ತವೆ. ಈ ರೋಗ ಮನುಷ್ಯನಿಗೂ ತಗಲುತ್ತದೆ. ಆಗ ವ್ರಣದ ರೂಪದಲ್ಲಿ ರೋಗ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಚರ್ಮ ಹದಮಾಡುವವರು, ಕುರಿ ತುಪ್ಪಟ ವಿಂಗಡಿಸುವವರು ಈ ರೋಗಕ್ಕೆ ಗುರಿಯಾಗುತ್ತಾರೆ.

ನೆರಡಿ ಪ್ರಪಂಚದೆಲ್ಲೆಡೆ ವ್ಯಾಪಿಸಿರುವ ರೋಗ. ಪುರಾತನ ಕಾಲದಿಂದಲೂ ಚಿರಪರಿಚಿತ. ಇದು ಸಾಂಕ್ರಾಮಿಕ ರೋಗವೆಂದು ಕ್ರಿ.ಶ. ೧೮೩೬ರಲ್ಲಿ ಗೊತ್ತಾಯಿತು. ರಾಬರ್ಟ್ ಕಾಕ್ ೧೮೭೬ರಲ್ಲಿ, ಲೂಯಿ ಪಾಶ್ಚರ್ ೧೮೮೧ರಲ್ಲಿ ಈ ರೋಗದ ಕ್ರಿಮಿಯನ್ನು ದೇಹದ ಹೊರಗೆ ಕೃತಕವಾಗಿ ಬೆಳೆಸುವ ವಿಧಾನವನ್ನು ಕಂಡುಹಿಡಿದರು. ನಂತರ ರೋಗನಿರೋಧಕ ಔಷಧಿ ತಯಾರಿಕೆಗೆ ಮಾರ್ಗ ತೋರಿಸಿದರು. ಕೃತಕವಾಗಿ ತಯಾರಿಸಿದ ಮದ್ದುಗಳಲ್ಲಿ ಆಂತ್ರಾಕ್ಸ್ ವ್ಯಾಕ್ಸೀನ್, ಸಪಾನಿನ್ ವ್ಯಾಕ್ಸೀನ್, ಆಂಟಿ–ಅಂತ್ರಾಕ್ಸ್ ಸೀರಮ್ ಮುಖ್ಯವಾದುವು. ಆದರೆ, ಪೆನಿಸಿಲಿನ್ ಬಳಕೆ ಯಶಸ್ವಿಯೆನಿಸಿದೆ.

ರೋಗ ಕಾಣಿಸಿಕೊಂಡ ನಂತರ ಚಿಕಿತ್ಸೆ ನೀಡುವುದಕ್ಕಿಂತ, ರೋಗ ಬಾರದಂತೆ ತಡೆಗಟ್ಟುವುದು ಹೆಚ್ಚು ಉತ್ತಮ. ಅಂತ್ರಾಕ್ಸ್ ಬ್ಯಾಕ್ಟೀರಿಯಮಿನ ಬೀಜಾಣುಗಳು ಮಣ್ಣಿನಲ್ಲಿ ೧೮ ವರ್ಷಗಳ ಕಾಲ ಬದುಕಿರಬಲ್ಲವು. ಇವಕ್ಕೆ ಹೆಚ್ಚು ಶಾಖವನ್ನು ತಡೆದುಕೊಳ್ಳಬಲ್ಲ ಸಾಮರ್ಥ್ಯ ಇದೆ. ಜೊತೆಗೆ ಗಾಳಿಗೆ ವಿಷಾಣುಗಳನ್ನು ತೆರೆದಿಟ್ಟಾಗ ಬಲುಬೇಗ ಬೀಜಾಣುಗಳು ರೂಪುಗೊಳ್ಳುವುದರಿಂದ ನೆರಡಿ ರೋಗದಿಂದ ಸತ್ತ ರಾಸುಗಳನ್ನು ಚರ್ಮ ಸುಲಿಯದೆ ನೆಲದಲ್ಲಿ ೨ ಮೀ ಆಳದ ಗುಂಡಿಗಳನ್ನು ತೋಡಿ ಸುಣ್ಣದೊಂದಿಗೆ ಹೂಳಿಬಿಡಬೇಕು. ರೋಗಪೀಡಿತ ಪ್ರಾಣಿಯ ಸಗಣಿ ಮತ್ತು ಎಲ್ಲಾ ತ್ಯಾಜ್ಯ ವಸ್ತುಗಳನ್ನು ಸುಟ್ಟುಹಾಕಬೇಕು. (ಎಸ್.ಎಚ್.ಒ.)

**ನೆಸ್ಟರ್:** ಸಿಟ್ಟಾಸಿಫಾರ್ಮಿಸ್ ಗಣದ ಸಿಟ್ಟಾಸಿಡೆ ಕುಟುಂಬ ನೆಸ್ಟೊರಿನೆ ಉಪ ಕುಟುಂಬಕ್ಕೆ ಸೇರಿದ ಮೋಹಕ ವರ್ಣಗಳ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು. ಗಿಳಿಗಳಿಗೂ ಇವಕ್ಕೂ ಹತ್ತಿರ ಸಂಬಂಧ ಉಂಟು. ಇವಕ್ಕೆ ದಪ್ಪ ತಲೆ, ಗಿಡ್ಡ ಕತ್ತು, ಬಲವಾದ ಮತ್ತು ಗಟ್ಟಿಯಾದ ಕೊಕ್ಕು, ಪುಷ್ಟವಾದ ಕಾಲುಗಳಿವೆ. ಇವುಗಳಲ್ಲಿ 3 ಪ್ರಭೇದಗಳುಂಟು–*ನೆಸ್ಟರ್ ಮೆರಿಡಿಯೊನೇಲಿಸ್* (ಕಾಕಾ), *ನೆಸ್ಟರ್ ಪ್ರೊಡಕ್ಟಸ್*, *ನೆಸ್ಟರ್ ನೊಟಾಬಿಲಿಸ್* (ಕೀಯಾ).

ಇವುಗಳಲ್ಲಿ ಮೊದಲಿನ ಎರಡು ಪ್ರಭೇದಗಳು 19ನೆಯ ಶತಮಾನದ ಮಧ್ಯಕಾಲದಲ್ಲಿ ನಿರ್ವಂಶವಾದವು ಎನ್ನಲಾಗಿದೆ. ಈಗ *ನೆಸ್ಟರ್ ನೊಟಾಬಿಲಿಸ್* ಎಂಬುದು ಮಾತ್ರ ಉಳಿದಿದೆ. ಇದಕ್ಕೆ ಕೀಯಾ ಎಂಬ ಸಾಮಾನ್ಯ ಹೆಸರುಂಟು. ಇದು ನ್ಯೂಜೀಲೆಂಡಿನ ನಿವಾಸಿ. ಅಲ್ಲಿನ ಪರ್ವತ ಪ್ರದೇಶಗಳಲ್ಲಿ ಇದು ಅಲ್ಪ ಸಂಖ್ಯೆಯ ಗುಂಪುಗಳಲ್ಲಿ ಕಂಡುಬರುತ್ತದೆ.

ಕಾಗೆಯ ಗಾತ್ರವಿರುವ ಇದು ದೂರದಿಂದ ವೀಕ್ಷಿಸುವವರಿಗೆ ಹದ್ದಿನಂತೆ ಕಾಣುತ್ತದೆ. ಇದರ ಉದ್ದ ಸುಮಾರು 50 ಸೆಂಮೀ. ಬಣ್ಣ ಕಂದುಮಿಶ್ರಿತ ಹಸುರು. ಇದಕ್ಕೆ ಕಪ್ಪು ಬಣ್ಣದ ಪಟ್ಟೆಯಿರುವ ಹಸುರು ಬಣ್ಣದ ಬಾಲ ಉಂಟು. ಇದು ಮಿಶ್ರಾಹಾರಿ; ಹುಳುಗಳು, ಕೀಟಗಳು, ಹೂವಿನ ಮಕರಂದ, ಹಣ್ಣುಹಂಪಲು ಇತ್ಯಾದಿಗಳನ್ನು ತಿಂದು ಬದುಕುತ್ತದೆ.

ಅಲ್ಲದೆ ಕುರಿಗಳ ಬೆನ್ನಿನ ಮೇಲೆ ವಾಸಿಸುವ ಹಲತರದ ಪರೋಪಜೀವಿಗಳನ್ನು ಹೆಕ್ಕಿ ತಿನ್ನುವ ಆಭ್ಯಾಸವೂ ಇದಕ್ಕೆ ಇದೆ. ಹಾಗೆ ತಿನ್ನುವಾಗ ಕುರಿಗಳ ಮಾಂಸದ ರುಚಿಯನ್ನು ಇದು ಸವಿಯುವುದುಂಟು. ನ್ಯೂಜಿಲೆಂಡಿನ ಕುರುಬರು ಕೀಯಾ ತಮ್ಮ ಕುರಿಗಳ ಬೆನ್ನನ್ನು ಕೊರೆದು ಕೊಬ್ಬನ್ನು ತಿನ್ನುತ್ತದೆ ಎಂಬ ಭಾವನೆ ತಳೆದು ಇವನ್ನು ಕೊಲ್ಲುವುದಿದೆ. 1886ರ ಕಾಲದಲ್ಲಿ ಪ್ರತಿ ಕೀಯಾವನ್ನು ಕೊಂದವರಿಗೆ 1 ಪೌಂಡು ಬಹುಮಾನವನ್ನು ಕೊಡಲಾಗುತ್ತಿತ್ತು. ಇಂದು ಕೂಡ ಕೀಯಾಗಳನ್ನು ಕೊಂದವರಿಗೆ ಕುರಿಪಾಲಕರು ಬಹುಮಾನವನ್ನು ಕೊಡುತ್ತಾರಂತೆ. ಇದರಿಂದಾಗಿ ಈ ಅಪೂರ್ವ ಗಿಳಿಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತ ಬರುತ್ತಿದೆ. ಜಾಕ್‌ಸನ್ ಎಂಬಾತ ಕೀಯಾಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದ್ದಾನೆ. ಆತನ ವರದಿಯಂತೆ, ಕೆಲವೊಮ್ಮೆ ಮುದಿ ವಯಸ್ಸಿನ ಗಂಡು ಕೀಯಾ ಕುರಿಗಳ ಬೆನ್ನು ಕೊರೆಯುವ ಹವ್ಯಾಸಕ್ಕೆ ಇಳಿಯುವುದಿದೆಯಂತೆ. ಇದನ್ನು ನೋಡಿದ ಇತರ ಕೀಯಾಗಳು ಕುರಿ ಹತ್ಯಾಕಾರ್ಯಕ್ಕೆ ಇಳಿಯುತ್ತವಂತೆ.

ಕೀಯಾ ಸಾಮಾನ್ಯವಾಗಿ ಮರದ ಇಲ್ಲವೇ ಬಂಡೆಕಲ್ಲುಗಳ ಪೊಟರೆಗಳಲ್ಲಿ ಗೂಡನ್ನು ಕಟ್ಟಿ ಜೀವಿಸುತ್ತದೆ. ಒಮ್ಮೆ ಕಟ್ಟಿದ ಗೂಡನ್ನು ಸಾಮಾನ್ಯವಾಗಿ ತನ್ನ ಜೀವನ ಪರ್ಯಂತ ಉಪಯೋಗಿಸಿಕೊಳ್ಳುತ್ತದೆ. ಸಾಮಾನ್ಯವಾಗಿ 2–4 ಮೊಟ್ಟೆಯಿಡುತ್ತದೆ. ಹೆಣ್ಣು ಹಕ್ಕಿ ಮಾತ್ರ ಮೊಟ್ಟೆಗಳಿಗೆ ಒಂದು ತಿಂಗಳ ಕಾಲ ಕಾವು ಕೊಡಲು ಕುಳಿತುಕೊಳ್ಳುವುದಲ್ಲದೆ ಮರಿಗಳನ್ನು ಬಹಳ ಪ್ರೀತಿಯಿಂದ ಪೋಷಿಸುತ್ತದೆ. ಆಹಾರವನ್ನು ನುಂಗಿ, ಅರೆ ಜೀರ್ಣಿಸಿ, ಮರಿಗಳಿಗೆ ಆಹಾರವನ್ನಾಗಿ ಉಣ್ಣಿಸುತ್ತದೆ. (ಆರ್.ಸಿ.)

**ನೇತ್ರದ್ರವ:** ಕಣ್ಣಿನ ಕರಿ ಗುಡ್ಡೆಗೂ (ಪಾರದರ್ಶಕ ಪಟಲ, ಕಾರ್ನಿಯ) ಮಸೂರಕ್ಕೂ ನಡುವೆ ಇರುವ ಸ್ಥಳವನ್ನು ತುಂಬಿಕೊಂಡಿರುವ ಸ್ವಚ್ಛ ನೀರಿನಂತಿರುವ ವಿಶೇಷ ದ್ರವ (ಏಕ್ವಿಯಸ್ ಹ್ಯೂಮರ್). ದೃಷ್ಟಿ ಕ್ರಿಯೆಯನ್ನು ಸಮರ್ಪಕವಾಗಿ ನಿರ್ವಹಿಸಲು ಕಣ್ಣಿನ ಭಾಗಗಳು ಮುಂದಿನಿಂದ ಹಿಂದಕ್ಕೆ ಹೀಗಿವೆ: ನೇತ್ರದ್ರವ, ಮಸೂರ ಮತ್ತು ಕಾಚಿದ್ರವ (ವಿಟ್ರಿಯಸ್). ಕರಿಯ ಗುಡ್ಡೆಗೂ ಮಸೂರಕ್ಕೂ ನಡುವೆ ಇರುವ ಸ್ಥಳವನ್ನು ಪಾಪೆಪೊರೆ ಮುಂದಿನ ಮತ್ತು ಹಿಂದಿನ ಕೋಣೆಗಳಾಗಿ ವಿಭಜಿಸುತ್ತದೆ. ಪೊರೆಯ ಮಧ್ಯದಲ್ಲಿರುವ ರಂಧ್ರವೆ ಪಾಪೆ. ಮುಂದಿನ ಕೋಣೆಗೂ ಹಿಂದಿನ ಕೋಣೆಗೂ ಪಾಪೆಯ ಮೂಲಕ ಸಂಪರ್ಕವಿದೆ.

ನೇತ್ರದ್ರವ ತಿಳಿನೀರಿನಂತೆ ಸ್ವಚ್ಛವಾದ ದ್ರವ. ಸಾಮಾನ್ಯವಾಗಿ ಹಿಂದಿನ ಕೋಣೆಯಲ್ಲಿ 57 ಘನ ಮಿಮೀ ಮತ್ತು ಮುಂದಿನ ಕೋಣೆಯಲ್ಲಿ 275 ಘನ ಮಿಮೀ ಇರುವುದು. ಮುಂದಿನ ಕೋಣೆಯ ಮಧ್ಯಭಾಗದ ಆಳ 2.5ರಿಂದ 3 ಮಿಮೀ. ಈ ಆಳ ಕಣ್ಣಿನ ರಚನೆಗೂ ವಯಸ್ಸಿಗೂ ಅನುಗುಣವಾಗಿರುವುದೇ ಅಲ್ಲದೆ ದೃಷ್ಟಿದೋಷ ಸ್ಥಿತಿಗಳಲ್ಲೂ ಹೆಚ್ಚುಕಡಿಮೆ ಅಗಿರುತ್ತದೆ. ತುಂಬ ಎಳೆವಯಸ್ಸಿನವರ ಅಂತೆಯೇ ವಯಸ್ಸಾದವರ ಕಣ್ಣಿನಲ್ಲಿ ಇದರ ಆಳ ಬಲು ಕಡಿಮೆ. 100 ಮಿಲಿ ನೇತ್ರದ್ರವದಲ್ಲಿ 1.08 ಗ್ರಾಮ್‌ಗಳಷ್ಟು ಘನದ್ರವ್ಯ ಇರುವುದು. ಮಿಕ್ಕಿದ್ದು ನೀರು. ನೀರಿನಲ್ಲಿ ವಿಲೀನವಾಗಿರುವ ಘಟಕಗಳೇ ಅಧಿಕ. 100 ಮಿಲಿ ನೇತ್ರದ್ರವದಲ್ಲಿ ಸಾರಜನಕ 0.02 ಗ್ರಾಮ್, ಅಮೈನೊ ಆಮ್ಲಗಳು 70 ಮಿಗ್ರಾ. ಈತನಕ 19 ಬಗೆಯ ಅಮೈನೊ ಆಮ್ಲಗಳು ಈ ದ್ರವದಲ್ಲಿರುವುದನ್ನು ತೋರಿಸಲಾಗಿದೆ. ಅಲ್ಲದೆ ಅಸ್ಕಾರ್ಬಿಕ್ ಆಮ್ಲ, ಲ್ಯಾಕ್ಟಿಕ್ ಆಮ್ಲ, ಯೂರಿಕ್ ಆಮ್ಲ, ಹಯಲ್ಯೂರಾನಿಕ್ ಆಮ್ಲ, ಕಾರ್ಬಾನಿಕ್ ಆಮ್ಲ, ಸಕ್ಕರೆ, ವಿದ್ಯುದ್ವಾಹಿ ಕಣಗಳಾದ (ಅಯಾನುಗಳಾದ) ಸೋಡಿಯಮ್, ಪೊಟ್ಯಾಷಿಯಮ್, ಕ್ಲೋರೈಡ್, ಸಲ್ಫೇಟ್ ಫಾಸ್ಫೇಟುಗಳೂ ಹಿಸ್ಟಮಿನೇಸ್, ಗ್ಲೂಕೋಸ್–6–ಫಾಸ್ಫೇಟ್ ಡಿ ಹೈಡ್ರಾಜಿನೇಸ್, ಲ್ಯಾಕ್ಟಿಕ್ ಮತ್ತು ಮ್ಯಾಲಿಕ್ ಡಿ ಹೈಡ್ರಾಜಿನೇಸ್, ಸಸಾರಜನಕ ಜೀರ್ಣಕ ಕಿಣ್ವ ಇವೇ ಮೊದಲಾದ ಅಂಶಗಳೂ ನೇತ್ರದ್ರವದಲ್ಲಿವೆ.

ನೇತ್ರದ್ರವದ ಸೂಕ್ಷ್ಮಾಭಿಸರಣ ಒತ್ತಡ (ಅಸ್ಮಾಟಿಕ್ ಪ್ರೆಶರ್) ಪ್ಲಾಸ್ಮ ದ್ರವದ ಸೂಕ್ಷ್ಮಾಭಿಸರಣ ಒತ್ತಡಕ್ಕಿಂತ ಬಲು ಪಾಲು ಜಾಸ್ತಿ ಉಂಟು. ಇದರ ಶ್ಯಾನತೆ (ವಿಸ್ಕಾಸಿಟಿ) 1.025ರಿಂದ 1.1; ರಿಫ್ರೇಕ್ಷಣಾಂಕ 1.336; ಮೇಲ್ಮೈಕರ್ಷಣ (ಸರ್ಫೇಸ್ ಟೆನ್‌ಷನ್) $18^{0}$ಸೆ ಯಲ್ಲಿ 1 ಚಸೆಂಮೀಗೆ 73 ಡೈನುಗಳು.

ಕರಿಗುಡ್ಡೆ (ಕಾರ್ನಿಯ) ಮತ್ತು ಮಸೂರದ ಆಹಾರ ಪೂರೈಕೆ, ಇವುಗಳ ಅಂತರ್ದಹನ ಕ್ರಿಯೆ, ಕಣ್ಣಿನ ಒಳಗಿನ ಒತ್ತಡ ಮಟ್ಟವನ್ನು ಸಮತೋಲದಲ್ಲಿ ಇಡುವುದು ಮತ್ತು ಕಣ್ಣಿನ ಸಹಜ ಆಕಾರವನ್ನು ಕಾಪಾಡುವುದು–ಈ ಕ್ರಿಯೆಗಳಿಗೆ ನೇತ್ರದ್ರವ ಬಲು ಮುಖ್ಯ. ಇದರ ಉತ್ಪತ್ತಿಗೆ ಕಣ್ಣೊಳಗಿನ ಲೋಮನಾಳಗಳ ರಕ್ತವೇ ಮೂಲ. ಕಣ್ಣಿನ ಸಿಲಿಯರಿ ಚಾಚುಗಳ ಮೇಲೆ ಪ್ರೆರೆಯ ಕೋಶಗಳ ಸ್ರವನ ಚಟುವಟಿಕೆಯಿಂದ ನೇತ್ರದ್ರವ ಉತ್ಪತ್ತಿಯಾಗುವುದು. ಆದರೆ ದ್ರವದ ಕೆಲವು ಘಟಕಗಳು ವಿಸರಣೆಯಂಥ (ಡಿಫ್ಯೂಷನ್) ಸರಳ ಕ್ರಮಗಳಿಂದ ಪರಿಣಮಿಸಿದವ ಎಂದೂ ತೋರಿಸಲಾಗಿದೆ. ಸೋಡಿಯಮ್, ಕ್ಲೋರೈಡ್, ಅಸ್ಕಾರ್ಬಿಕ್ ಆಮ್ಲ, ಹಯಲ್ಯೂರಾನಿಕ್ ಆಮ್ಲ ಇವನ್ನು ಕೋಶಗಳು ಸ್ರವಿಸುತ್ತವೆ. ಈ ಸ್ರವಿಕೆಗಳಿಂದ ನೇತ್ರದ್ರವದ ಸೂಕ್ಷ್ಮಾಭಿಸರಣ ಒತ್ತಡ ರಕ್ತದ್ರವದ ಸೂಕ್ಷ್ಮಾಭಿಸರಣ ಒತ್ತಡಕ್ಕಿಂತ ಜಾಸ್ತಿ ಇರುವುದು. ಹೀಗೆ ದ್ರವ ಹಿಂದಿನ ಕೋಣೆಯಲ್ಲಿ ಉತ್ಪತ್ತಿಯಾಗಿ ಅಲ್ಲಿಂದ ಮುಂದಿನ ಕೋಣೆಗೆ ಪಾಪೆಯ ಮೂಲಕ ಹರಿದು ಬರುತ್ತದೆ. ಇಲ್ಲಿಂದ ಕೋಣೆಯ ಪರಿಧಿಯ ಸಂಧಿಯಲ್ಲಿರುವ (ಫಿಲ್ರೇಷನ್ ಆ್ಯಂಗಲ್) ತಂತಿ ಬಲೆ ಮತ್ತು ನಾಳಗಳ ಜಾಲದ ಮೂಲಕ ಶ್ಲೆಮ್ಮನ ನಾಲೆ ಎಂಬ ಅಭಿಧಮನಿಯನ್ನು ಸೇರಿ ರಕ್ತಗತವಾಗುವುದು. ಇದು ನೇತ್ರದ್ರವದ ಸಹಜ ಪರಿಚಲನಕ್ರಮ.

ತಂತಿಬಲೆಯ ಹಂತದಲ್ಲಿ ನೇತ್ರದ್ರವ ರಕ್ತಗತವಾಗುವುದಕ್ಕೆ ತಡೆ ಉಂಟಾದಾಗ ಕಣ್ಣಿನ ಒಳ ಒತ್ತಡ ಜಾಸ್ತಿ ಅಗುವುದು. ನೈಜ ಕ್ರಿಯಾಕಾಲದಲ್ಲಿ ಕಣ್ಣಿನಲ್ಲಿ ಮಿನಿಟಿಗೆ 2.75 ಘನ ಮಿಮೀನಷ್ಟು ನೇತ್ರದ್ರವ ಉತ್ಪತ್ತಿ ಅಗಿ ರಕ್ತಗತವಾಗುತ್ತಿರುತ್ತದೆ. ಅಂದರೆ ಕಣ್ಣಿನಲ್ಲಿರುವ ಒಟ್ಟು ನೇತ್ರದ್ರವದಲ್ಲಿ ಸುಮಾರು ನೂರನೆಯ ಒಂದಂಶದಷ್ಟು ದ್ರವ ಪ್ರತಿ ಮಿನಿಟೂ ದೂಡಲ್ಪಟ್ಟು ಅಷ್ಟೇ ಉತ್ಪತ್ತಿಯಾಗುತ್ತಲೂ ಇರುವುದು. ಉತ್ಪತ್ತಿ ಮತ್ತು ಹೊರದೂಡುವಿಕೆ ಹೊಂದಾಣಿಕೆಯಾಗಿ ನಡೆಯುವುದರಿಂದ ಕಣ್ಣಿನ ಒತ್ತಡ ಸಮತೋಲದಲ್ಲಿ ಇರುವುದು ಸಾಧ್ಯ. ಈ ಕಾರ್ಯ ಸರಿಯಾಗಿ ನಡೆಯದಿದ್ದಲ್ಲಿ ಒತ್ತಡ ಹೆಚ್ಚು ಅಥವಾ ಕಡಿಮೆ ಅಗಿ ಅದರ ಕೆಟ್ಟ ಪರಿಣಾಮಗಳು ಕಣ್ಣಿನ ಮೇಲೆ ಅರ್ಥಾತ್ ದೃಷ್ಟಿಕ್ರಿಯೆಯ ಮೇಲೆ ಉಂಟಾಗುವುದು ನಿಶ್ಚಯ.

ಕಣ್ಣಿನ ಒಳಗಿನ ಅಧಿಕ ಒತ್ತಡ ಸ್ಥಿತಿಗೆ ಗ್ಲುಕೋಮ ಎಂದು ಹೆಸರು. ಇದರಲ್ಲಿ ಎರಡು ವಿಧಗಳಿವೆ. ಪ್ರಾಥಮಿಕ (ಪ್ರೈಮರಿ) ಗ್ಲುಕೋಮ ಮತ್ತು ಆನುಷಂಗಿಕ (ಸೆಕಂಡರಿ) ಗ್ಲುಕೋಮ. ಪ್ರಾಥಮಿಕ ಗ್ಲುಕೋಮದಲ್ಲಿ ಮತ್ತೆರಡು ಪ್ರಭೇದಗಳಿವೆ. ಒಂದರಲ್ಲಿ ಮುಂದಿನ ಕೋಣೆಯ ಸಂಧಿಸ್ಥಾನ ಬಹಳ ಕಿರಿದಾಗಿ ನೇತ್ರದ್ರವದ ಹೊರದೂಡುವಿಕೆ ಸರಿಯಾಗಿ ನಡೆಯುವುದಿಲ್ಲ. ಸಾಮಾನ್ಯವಾಗಿ ಇಂಥ ಕಣ್ಣಿನಲ್ಲಿ ಇದ್ದಕ್ಕಿದ್ದಂತೆ ಒತ್ತಡ ಜಾಸ್ತಿ ಅಗುತ್ತದೆ. ಕಣ್ಣು ಕೆಂಪಾಗುವಿಕೆ, ತಲೆನೋವು, ಕಣ್ಣು ಬಹಳ ನೋಯುವುದು, ನೋವಿನಿಂದ ವಾಂತಿ ಜ್ವರ, ದೃಷ್ಟಿ ಜಾಗ್ರತೆ ಮಸಕಾಗುವುದು_ಅದರ ಲಕ್ಷಣಗಳು. ಈ ಸ್ಥಿತಿ ಕಣ್ಣಿನ ತುರ್ತು ಪರಿಸ್ಥಿತಿ. ಇದಕ್ಕೆ ತತ್‌ಕ್ಷಣ ಚಿಕಿತ್ಸೆ ಮಾಡಬೇಕಾಗುವುದು. ಎರಡನೆಯ ವಿಧದ ಪ್ರಾಥಮಿಕ ಗ್ಲಾಕೋಮವನ್ನು ದೀರ್ಘಕಾಲೀನ ಎಂದೂ ಕರೆಯುವರು. ಇದರಲ್ಲಿ ಬಾಧೆ ಕೊಡುವ ಯಾವ ಲಕ್ಷಣವೂ ಬಲುಕಾಲ ತೋರದಿರುವುದರಿಂದ ಲಕ್ಷ್ಯಕ್ಕೆ ಬರದೆ ಬಹುಮಂದಿ ಕೊನೆಗೆ ಕುರುಡಾಗಿ ಹೋಗುವರು. ಇದರಲ್ಲಿ ಕಣ್ಣಿನ ಒತ್ತಡ ಹೆಚ್ಚಿದ್ದರೂ ತಲೆನೋವಾಗಲಿ ಕಣ್ಣು ಕೆಂಪಾಗುವುದಾಗಲಿ ಕಾಣಿಸವು. ಈಚಿನ ದಿನಗಳಲ್ಲೂ ದೀರ್ಘ ಗ್ಲುಕೋಮದ ಕಾರಣಗಳು ಸರಿಯಾಗಿ ವ್ಯಕ್ತಪಟ್ಟಿಲ್ಲವಾಗಿ ಈ ರೋಗ ಬರದಂತೆ ತಡೆಯುವ ಮತ್ತು ಪೂರ್ಣ ಗುಣ ಮಾಡುವ ಯಾವ ನಿಶ್ಚಿತ ಉಪಾಯವೂ ತಿಳಿದಿಲ್ಲ. ಆದರೆ ಕಣ್ಣಿನ ಒಳ ಒತ್ತಡ ಮಾಪನದಿಂದ ಈ ರೋಗ ಇರುವುದನ್ನು ತಿಳಿದು ಔಷಧ ಮತ್ತು ಶಸ್ತ್ರಚಿಕಿತ್ಸೆಯಿಂದ ಕಣ್ಣಿನ ಒತ್ತಡವನ್ನು ಸಹಜ ಮಟ್ಟದಲ್ಲಿಡಲು ಸಾಧ್ಯ. ಆನುಷಂಗಿಕ ಅಥವಾ ಅನ್ಯಕಾರಣಜನಿತ ಗ್ಲುಕೋಮದಲ್ಲಿ ಒತ್ತಡದ ಹೆಚ್ಚುವಿಕೆಗೆ ಬೇರೆ ರೋಗಸ್ಥಿತಿಗಳು ಕಾರಣವಾಗಿರುತ್ತವೆ. ಆ ಮೂಲ ಕಾರಣಗಳನ್ನು ತಕ್ಕ ಚಿಕಿತ್ಸೆ ಯಿಂದ ನಿರ್ಮೂಲಿಸಿದರೆ ಒತ್ತಡ ಯಥಾಪ್ರಾಕಾರ ಸಹಜಮಟ್ಟಕ್ಕೆ ಬರುವುದು.

ಕೆಲವು ವೇಳೆ ನೇತ್ರದ್ರವ ರಕ್ತದ್ರವದಂತೆಯೇ (ಪ್ಲಾಸ್ಮ) ಇರುವುದು. ಅದಕ್ಕೆ ಪ್ಲಾಸ್ಮಾಯ್ಡ್ ಎಕ್ವಿಯಸ್ ಎಂದು ಹೆಸರು. ರಕ್ತದ್ರವವನ್ನು ಹೋಲುವ ನೇತ್ರದ್ರವ ಹೊರಕೋಣೆಯ ತೆರೆಯುವಿಕೆಯಿಂದ, ಪಾಪೆಪೊರೆ ಮತ್ತು ಸಿಲಿಯರಿಚಾಚುಗಳ ಮೇಲು ಪೊರೆಯ ಊತದಿಂದ, ಕಣ್ಣಿಗೆ ಏಟು ಬೀಳುವುದರಿಂದ ಮತ್ತು ಕಣ್ಣಿನ ರಕ್ತಧಮನಿಗಳ ಉಬ್ಬುವಿಕೆಯಿಂದ ತಾತ್ಕಾಲಿಕವಾಗಿ ಉಂಟಾಗುತ್ತದೆ. ಈ ಪ್ಲಾಸ್ಮಾಯಿಡ್ ನೇತ್ರದ್ರವದಲ್ಲಿ ಸಾರಜನಕ, ಸ್ವಾಭಾವಿಕ ಪ್ರತಿರೋಧಕಗಳು, ಫೈಬ್ರಿನೋಜನ್, ಸಕ್ಕರೆ, ಯೂರಿಯ ಮತ್ತು ಲವಣಗಳು ರಕ್ತದಲ್ಲಿರುವ ಪ್ರಮಾಣದಂತೆ ಇರುವುವು. ತಾತ್ಕಾಲಿಕವಾಗಿ ಒತ್ತಡ ಜಾಸ್ತಿ ಆಗುವ ಸಂಭವವುಂಟು ಮತ್ತು ಅದರ ಸ್ವಚ್ಛತೆ ಕಡಿಮೆಯಾಗಿ ದೃಷ್ಟಿಮಾಂದ್ಯ ಉಂಟಾಗುವುದು.

***

**ನೈಮೀನು:** ಹಿನ್ನೀರು, ಚೌಳುನೀರು ಹಾಗೂ ನದಿ ನೀರಿನಲ್ಲಿ ವಾಸಿಸುವ ಪರ್ಸಿಫಾರ್ಮೀಸ್ ವರ್ಗದ ಪರ್‌ಕಾಯ್ಡಿ ಉಪವರ್ಗದ, ಸ್ಕ್ಯಾಟೋಫೇಗಿಡೆ ಕುಟುಂಬಕ್ಕೆ ಸೇರಿದ ಮೀನು. ವೈಜ್ಞಾನಿಕ ಹೆಸರು ಸ್ಕ್ಯಾಟೋಫೇಗಸ್ ಆರ್ಗಸ್. ಭಾರತದಿಂದ ಚೀನ ಸಮುದ್ರ ಹಾಗೂ ಆಸ್ಟ್ರೇಲಿಯಗಳವರೆಗೆ ಪಸರಿಸಿರುವ ಈ ಮೀನು ಆಹಾರಕ್ಕಾಗಿ ಅಳಿವೆಗಳನ್ನು ಪ್ರವೇಶಿಸುತ್ತದೆ. ಹೊಲಸು ಪದಾರ್ಥಗಳನ್ನು ತಿನ್ನುವ ಇದು ಹೆಚ್ಚು ಕಡಿಮೆ 0.5 ಮೀ ಉದ್ದ ಬೆಳೆಯುವುದು.

ಇದರ ದೇಹ ಕೊಂಚಮಟ್ಟಿಗೆ ಚತುರ್ಭುಜಾಕೃತಿಯದು. ಮೇಲುದವಡೆಯ ಎಲುಬು ಮೂತಿಯ ತುದಿ ಹಾಗೂ ಕಣ್ಣು ಕುಳಿಯ ಮುಂದಿನ ಅಂಚಿನ ಸುಮಾರು

ಅರ್ಧದಷ್ಟು ಮುಂದಕ್ಕೆ ಚಾಚಿದೆ. ಕಣ್ಣಿನ ಕುಳಿಯ ಎಲುಬಿನ ಕೆಳಅಂಚಿನ ಕೊನೆಯ ಅರ್ಧ ಭಾಗ ಸೂಕ್ಷ್ಮವಾದ ಗರಗಸದಂಥ ಹಲ್ಲುಗಳನ್ನು ಹೊಂದಿದೆ. ಕೆಲವು ವೇಳೆ ಮುಂಕಿವಿರು ಮುಚ್ಚಳದ ಎಲುಬಿನ ಮೂಲೆಯಲ್ಲೂ ಅದರ ಕೆಳಗಿನ ಅಂಚಿನುದ್ದಕ್ಕೂ ಹಲ್ಲುಗಳಿರುವುದುಂಟು. ಆದರೆ ಕಿವಿರು ಮುಚ್ಚಳದ ಕೆಳಗಿನ ಮತ್ತು ಕಿವಿರು ಮುಚ್ಚಳದ ಮಧ್ಯದ ಎಲುಬುಗಳು ಅಖಂಡವಾಗಿವೆ. ಕಿವಿರು ಮುಚ್ಚಳದ ಎಲುಬಿನಲ್ಲಿ ಒಂದು ದುರ್ಬಲ ಮುಳ್ಳಿದೆ. ದವಡೆಗಳಲ್ಲಿ ಲೋಮಾಕಾರದ ಹಲ್ಲುಗಳಿವೆ.

ಬೆನ್ನಿನ ಮುಳ್ಳುಗಳು ಬಹಳ ಬಲಯುತವಾದವು. ಮುಳ್ಳಿನ ಮಧ್ಯದ ಪೊರೆ ಕಚ್ಚಾಗಿದೆ. ನಾಲ್ಕನೆಯ ಮುಳ್ಳು ಉಳಿದವಕ್ಕಿಂತ ಅತ್ಯಂತ ಎತ್ತರವಾಗಿದೆ. ಗುದದ್ವಾರದ ಮುಳ್ಳುಗಳೆಲ್ಲವು ಒಂದೇ ಸಮನಾಗಿದ್ದು, ಪ್ರತಿಯೊಂದು ಪರ್ಯಾಯ ಮುಳ್ಳೂ ಬಲಿಷ್ಠವಾಗಿದೆ. ಬಾಲದ ಈಜುರೆಕ್ಕೆ ಬೀಸಣಿಗೆಯ ಆಕಾರದ್ದು. ಅದರ ಮಧ್ಯದ ಅಂತಸ್ಥ ಭಾಗಗಳು ಬೇರೆಯವಕ್ಕಿಂತ ತಕ್ಕಮಟ್ಟಿಗೆ ಉದ್ದವಾಗಿವೆ.

ದೇಹದ ಮೇಲೆ ಬಲುಸಣ್ಣ ಶಲ್ಕಗಳ ಹೊದಿಕೆಯಿದೆ. ಇವು ಅವ್ಯವಸ್ಥಿತವಾದ 110 ಪಂಕ್ತಿಗಳಲ್ಲಿವೆ. ಬೆನ್ನಿನ, ಗುದದ್ವಾರದ ಮತ್ತು ಬಾಲದ ಈಜುರೆಕ್ಕೆಗಳ ಮೃದು ಭಾಗಗಳ ಮೇಲೂ ತಲೆಯ ಮತ್ತು ಕಿವಿರು ಮುಚ್ಚಳದ ಎಲುಬುಗಳ ಮೇಲೂ ಈ ಶಲ್ಕಗಳು ಹರಡಿವೆ.

ನೈಮೀನಿನ ದೇಹದ ಬಣ್ಣ ಊದಾ, ಹೊಟ್ಟೆ ಮಾತ್ರ ಬಿಳಿ ಬಣ್ಣದ್ದು, ಹೆಚ್ಚು ಕಡಿಮೆ ದುಂಡಾದ ಕಪ್ಪು ಬಣ್ಣದ ಅಥವಾ ಹಸಿರು ಬಣ್ಣದ ಚುಕ್ಕೆಗಳು ಶರೀರದ ಮೇಲೆ ಇರುವುದುಂಟು. ಇವು ಬೆನ್ನಿನುದ್ದಕ್ಕೂ ಅಧಿಕ ಸಂಖ್ಯೆಯಲ್ಲಿವೆ. ಇವುಗಳ ಗಾತ್ರ ಹಾಗೂ ಬಣ್ಣದ ಛಾಯೆಯಲ್ಲಿ ವೈವಿಧ್ಯವುಂಟು. ಬೆನ್ನಿನ ಮೊದಲನೆಯ ಈಜುರೆಕ್ಕೆ ಕಂದು ನೀಲಿ ಬಣ್ಣದ್ದಾಗಿದ್ದು, ಕೆಲವು ಸಣ್ಣ ಚುಕ್ಕೆಗಳಿಂದೊಡಗೂಡಿದೆ. ಅದರೆ ಬೆನ್ನಿನ ಎರಡನೆಯ ಈಜುರೆಕ್ಕೆ ಹಳದಿ ಬಣ್ಣವುಳ್ಳದ್ದಾಗಿ, ಅಂತಸ್ಥ ಭಾಗಗಳ ಮಧ್ಯೆ ತುಸು ಕಂದುಬಣ್ಣದ ವರ್ಣ ವಿನ್ಯಾಸಗಳನ್ನು ಪಡೆದಿದೆ.

ಆಹಾರ ಮೀನಾಗಿ ಇದಕ್ಕೆ ಸಾಧಾರಣವಾಗಿ ಬೇಡಿಕೆಯಿದೆ. ಆದರೆ ಸುಲಭವಾಗಿ ಸಿಹಿ ನೀರಿಗೆ ಹೊಂದಿಕೊಳ್ಳುವುದರಿಂದ ಇದು ಜಲಸಂಗ್ರಹಾಲಯದ ಜನಪ್ರಿಯ ಮೀನು ಎನಿಸಿದೆ. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ದಕ್ಷಿಣ ಕರಾವಳಿಯಲ್ಲಿ ಈ ಮೀನಿಗೆ ಹುಚ್ಚು ಪೈಯೆ ಎಂಬ ಹೆಸರಿದೆ. ***

**ನೊಣ:** ಆರ್ತ್ರಾಪೊಡ ವಂಶದ ಕೀಟ ವರ್ಗದಲ್ಲಿನ ಡಿಪ್ಟಿರ ಗಣದ ಸದಸ್ಯ. ಇದು ಮಸಿಡೆ ಕುಟುಂಬಕ್ಕೆ ಸೇರಿದೆ. ಆಂಗ್ಲಭಾಷೆಯಲ್ಲಿ ಹೌಸ್‌ಫ್ಲೈ ಎನ್ನುವರು. ಡಿಪ್ಟಿರ ಗಣದ ಅನೇಕ ಕೀಟಗಳಿಗೆ ನೊಣ ಎಂದೇ ಹೆಸರಿಸಲಾಗುವುದಾದರೂ, ಮಸ್ಕ ಡೊಮೆಸ್ಟಿಕ ಎಂಬ ವೈಜ್ಞಾನಿಕ ಹೆಸರಿನ ಕೀಟಕ್ಕೆ ಹೆಚ್ಚು ಅನ್ವಯ. ಅದರಿಂದ ಇಲ್ಲಿಯೂ ಈ ನೊಣದ ಗುಣಗಳನ್ನೇ ವಿವರಿಸ`ಲಾಗಿದೆ. ಇದು ವಿಷಮಶೀತಜ್ವರ, ವಾಂತಿಭೇದಿ, ಅತಿಸಾರ, ಕ್ಷಯ, ಆಮಶಂಕೆ ಮುಂತಾದ ರೋಗಗಳ ಹರಡುವಿಕೆಗೆ ಕಾರಣವಾಗಿದೆ. ಕಾರಣ, ಮಾನವನಿಗೆ ಪಿಡುಗೆಂದು ಪರಿಗಣಿಸಬಹುದು. ಇದು ಬಹಳ ಚುರುಕಾಗಿದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾರುತ್ತ, ಆಹಾರದ ಮೇಲೆ, ಚರಂಡಿಗಳು, ಗೊಬ್ಬರದ ಗುಂಡಿ, ಕೊಳಕು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವುವು.




ಇದರ ಉದ್ದ ಸು. ೬ ಮಿಮೀ. ದೇಹದ ಬಣ್ಣ ಕಂದು. ದೇಹವನ್ನು ತಲೆ, ವಕ್ಷ ಮತ್ತು ಉದರ ಭಾಗಗಳಾಗಿ ವಿಂಗಡಿಸಬಹುದು. ತಲೆ ಚಿಕ್ಕದಾಗಿ ಅರ್ಧಚಂದ್ರಾಕಾರದಲ್ಲಿದೆ. ಇದರಲ್ಲಿ ಒಂದು ಜೊತೆ ಸಂಯುಕ್ತಾಕ್ಷಿಗಳಿವೆ. ಒಂದೊಂದು ಕಣ್ಣಿನಲ್ಲಿ ಸು. ೪,೦೦೦ ಅಮ್ಮಟಿಡಿಯಮ್‌ಗಳಿವೆ. ಜೊತೆಗೆ ೩ ಸರಳಾಕ್ಷಿಗಳಿವೆ. ಒಂದು ಜೊತೆ ಸ್ಪರ್ಶಾಂಗಗಳಿವೆ. ವದನಾಂಗಗಳು ಬಹಳ ಚೆನ್ನಾಗಿ ಬೆಳೆದಿದ್ದು, ಅದರಲ್ಲಿ ಸೊಂಡಿಲು ಮತ್ತು ಆಹಾರ ಜಾಡು ಭಾಗಗಳಿವೆ. ಲೇಬ್ರಮ್, ಎಪಿಫ್ಯಾರಿಂಕ್ಸ್ ಮತ್ತು ಹೈಪೊಫ್ಯಾರಿಂಕ್ಸ್‌ಗಳು ಸೇರಿ ಆಹಾರ ಜಾಡು ಆಗಿದೆ. ಇತರ ಕೀಟಗಳ ವದನಾಂಗಗಳಲ್ಲಿ ಕಂಡುಬರುವ ಮ್ಯಾಂಡಿಬಲ್ ನೊಣದ ವದನಾಂಗದಲ್ಲಿ ಇಲ್ಲ. ಬದಲಿಗೆ, ಗರಗಸದ ಹಲ್ಲುಗಳಂತಿರುವ ರಚನೆಗಳಿವೆ. ಈ ಎಲ್ಲಾ ರಚನೆಗಳಿಂದ ನೊಣ ಗಟ್ಟಿ ಆಹಾರ (ಉದಾ: ಸಕ್ಕರೆ ಅಗಳು) ಕರಗಿಸಿ, ದ್ರವರೂಪಕ್ಕೆ ಪರಿವರ್ತಿಸಿ ಹೀರುತ್ತದೆ. ನೊಣಕ್ಕೆ ಮೂರು ಜೊತೆ ಕಾಲುಗಳಿವೆ. ಇವು ವಕ್ಷದ ಖಂಡಗಳಲ್ಲಿವೆ. ನೊಣದ ಅನ್ನನಾಳ ಬಹಳ ಉದ್ದ. ನೊಣಗಳು ದ್ರವರೂಪದ ಆಹಾರವನ್ನು ಸಹ ಸೇವಿಸುತ್ತವೆ. ಆಹಾರ ಸೇವನೆಯ ಕಾಲದಲ್ಲಿ ಸೊಂಡಿಲು, ಲಬೆಲ, ಫ್ಯಾರಿಂಕ್ಸ್ ಮತ್ತು ಆಹಾರ ಜಾಡು ಸಹಾಯ ಮಾಡುತ್ತವೆ. ಕಾಲುಗಳ ಮೇಲೆ ಕೂದಲುಗಳಿವೆ. ಈ ಕೂದಲುಗಳ ಬುಡದಲ್ಲಿ ಒಂದು ಬಗೆಯ ಅಂಟುಪದಾರ್ಥ ಹೊರಬಂದು, ಆಧಾರವಸ್ತುವಿಗೆ ಅಂಟಿಕೊಳ್ಳಲು ಸಹಾಯಕವಾಗುತ್ತದೆ. ಪ್ರತಿಯೊಂದು ಕಾಲಿನ ಟಾರ್ಸಸ್ ತುದಿಯಲ್ಲಿ ವಿಶೇಷ ರೀತಿಯ ಸಂವೇದನಾಂಗಗಳಿವೆ. ಇವಕ್ಕೆ ಹಾಲ್ಟರುಗಳೆಂದು ಹೆಸರು. ಹೆಣ್ಣು ನೊಣದ ಉದರ ಭಾಗದಲ್ಲಿ ೯ ಖಂಡಗಳು, ಗಂಡಿನ ಉದರಲ್ಲಿ ೮ ಖಂಡಗಳಿವೆ. ಹೆಣ್ಣಿನ ಉದರದ ಕೊನೆಯ ೪ ಖಂಡಗಳು ಅಂಡನಿಕ್ಷೇಪಕ ರಚನೆಗಳಾಗಿ ಮಾರ್ಪಟ್ಟಿವೆ. ಗಂಡುಗಳಲ್ಲಿ ಇವು ಜನನೇಂದ್ರಿಯ ಪಾಲಿಗಳಾಗಿವೆ.

ಗಂಡು ಮತ್ತು ಹೆಣ್ಣು ನೊಣಗಳ ಸಂಭೋಗ ನಡೆದ ಒಂದು ವಾರದ ನಂತರ ಹೆಣ್ಣು ೫ ಅಥವಾ ೬ ಬಾರಿ ಸು. ೧೦೦ ರಿಂದ ೨೦೦ ಮೊಟ್ಟೆಗಳನ್ನಿಡುತ್ತದೆ. ಗೊಬ್ಬರ, ಕೊಳೆಯುತ್ತಿರುವ ಹಣ್ಣು ಮತ್ತು ತರಕಾರಿಗಳು ಮೊಟ್ಟೆಯಿಡುವ ತಾಣ. ನೊಣದ ಮೊಟ್ಟೆ ನೀಳವಾಗಿ, ಬೆಳ್ಳಗಿರುತ್ತವೆ. ೮–೨೪ ಗಂಟೆಗಳ ತರುವಾಯ ಮೊಟ್ಟೆಯಿಂದ ಮ್ಯಾಗಟ್ (ಡಿಂಬ) ಹೊರಬರುತ್ತದೆ. ಇದು ಎರಡು ಸಲ ಚರ್ಮವನ್ನು ಕಳಚಿ, ಕೋಶಾವಸ್ಥೆಯನ್ನು ಸೇರುತ್ತದೆ. ಆಗ ಇದರ ಸುತ್ತ ಗಟ್ಟಿಯಾದ ಹೊದಿಕೆ ಬೆಳೆಯುತ್ತದೆ. ನಂತರ ಕೋಶದಿಂದ ಮರಿನೊಣ ಹೊರಬರುತ್ತದೆ.

ಬಯಲಲ್ಲಿ ಮಲಭೋಜನ ಮಾಡಿ, ಬಾಯಿ, ಕಾಲುಗಳಿಗೆ ಮಲವನ್ನು ಮೆತ್ತಿಕೊಂಡು ಬಂದು ಅಡಿಗೆ ಪದಾರ್ಥಗಳ ನಂತರ ಕುಳಿತು ಕೊಳ್ಳುವುದು. ರೋಗಾಣುಮಿಶ್ರಿತ ಲಾಲಾರಸವನ್ನು ವಾಂತಿ ಮಾಡಿ, ತನ್ನ ಕಾಲುಗಳಿಗೆ ಮೆತ್ತಿಕೊಂಡ ಮಲವನ್ನು ನಮ್ಮ ಆಹಾರಕ್ಕೆ ಬಳಿದು ಹಾರಿಹೋಗುವುದು. ಹೀಗೆ ಅಪಾಯಕಾರಿಗಳಾದ ನೊಣಗಳನ್ನು ನಾಶಮಾಡಲು ಅನೇಕ ವಿಧಾನಗಳಿವೆ. ನೊಣ ಮೊಟ್ಟೆಯಿಟ್ಟ ಸ್ಥಳಗಳನ್ನು ಸ್ವಚ್ಛಗೊಳಿಸಿ, ಮೊಟ್ಟೆಗಳನ್ನೆಲ್ಲ ನಾಶಪಡಿಸುವುದು; ಅಡಿಗೆ ಮನೆ, ಬೀದಿ, ಮಾರುಕಟ್ಟೆ ಮತ್ತು ಕೊಠಡಿಗಳನ್ನು ಗುಡಿಸಿ, ಸ್ವಚ್ಛ ಮತ್ತು ಚೊಕ್ಕಟವಾಗಿಡುವುದು; ಗೊಬ್ಬರದ ಗುಂಡಿಗಳನ್ನು ವಾರಕ್ಕೊಮ್ಮೆ ರಾಸಾಯನಿಕ ಕೀಟನಾಶಕಗಳಿಂದ ಸಿಂಪಡಿಸುವುದು; ಮನೆಯಲ್ಲಿ ಆಹಾರ, ಹಣ್ಣು ಮತ್ತು ತರಕಾರಿಗಳನ್ನು ಮುಚ್ಚಿಡುವುದು; ಸಿಹಿ ತಿಂಡಿ, ಹಾಲು, ಹಣ್ಣು ಮತ್ತಿತರ ಭಕ್ಷ್ಯಗಳ ಮೇಲೆ ನೊಣ ಕೂಳಿತುಕೊಳ್ಳದಂತೆ ಮುಚ್ಚಿಡುವುದು; ಸಗಣಿ, ಗೊಬ್ಬರಗಳನ್ನು ಮನೆಯ ಮುಂದೆ ಹಾಕದೆ ಅವನ್ನು ದೂರ ಸಾಗಿಸಿ ಮಣ್ಣು ಮುಚ್ಚುವುದು ಮುಂತಾದುವುಗಳ ಮೂಲಕ ನೊಣದಿಂದ ಹರಡುವ ರೋಗಾಣುಗಳನ್ನು ತಡೆಗಟ್ಟಬಹುದು.

(ಎಂ.ಎನ್.ವಿ.ಐ.)

**ನೊಣಹಿಡುಕ:** ಪ್ಯಾಸೆರಿಫಾರ್ಮಿಸ್ ಗಣದ ಮ್ಯುಸಿಕ್ಯಾಪಿಡೆ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಪಕ್ಷಿಗಳ ಸಾಮಾನ್ಯ ಹೆಸರು (ಫ್ಲೈಕ್ಯಾಚರ್ಸ್). ಹಲವಾರು ತೆರನ ಕೀಟಗಳನ್ನು ತಿಂದು ಬದುಕುವುದರಿಂದ ಈ ಹೆಸರು ಬಂದಿದೆ. ಸುಮಾರು 379 ಪ್ರಭೇದಗಳುಂಟು. ಇವನ್ನು ನಾಲ್ಕು ಉಪಕುಟುಂಬಗಳಿಗೆ ಸೇರಿಸಲಾಗಿದೆ. ಭಾರತದಲ್ಲಿ ಪ್ಯಾರಡೈಸ್ ನೊಣಹಿಡುಕ (*ಟರ್ಪ್ಸಿಪೋನ್ ಪ್ಯಾರಡಿಸಿ*), ಟಿಕಲ್ಸ್ ನೊಣ ಹಿಡುಕ (*ಮ್ಯುಸಿಕ್ಯಾಪ ಟಿಕೆಲಿಯೆ*), ವರ್ಡಿಟರ್ ನೊಣ ಹಿಡುಕ (*ಮ್ಯುಸಿಕ್ಯಾಪ ಥ್ಯಾಲಸಿನ*) ಮತ್ತು ಬಿಳಿಚುಕ್ಕೆಯ ಬೀಸಣಿಗೆ ಬಾಲದ ನೊಣ ಹಿಡುಕ (*ರಿಪಿಡ್ಯೂರ ಅಲ್ಬೊಲ್ಯಾರಿಸ್*) ಎಂಬ ನಾಲ್ಕು ಪ್ರಭೇದಗಳುಂಟು. ಬಹುಪಾಲು ನೊಣ ಹಿಡುಕಗಳು ಸಣ್ಣಗಾತ್ರದ ಹಕ್ಕಿಗಳು. ದೇಹದ ಉದ್ದ 12.5–25 ಸೆಂಮೀ ಇರುವುದುಂಟು. ಭಾರತದ ಪ್ಯಾರಡೈಸ್ ನೊಣ ಹಿಡುಕದ ಗಂಡುಹಕ್ಕಿಯಲ್ಲಿ ದೇಹದ ಮೂರರಷ್ಟು ಉದ್ದದ ಬಾಲವುಂಟು. ಅಗಲ ಹಾಗೂ ಚಪ್ಪಟೆಯಾದ ಕೊಕ್ಕು, ಕೊಕ್ಕಿನ ತುದಿ ನಸು ಬಾಗಿರುವುದು, ಮೂಗಿನ ರಂಧ್ರಗಳ ಬಳಿ ಬಿರುಗೂದಲುಗಳಿರುವುದು ನೊಣ ಹಿಡುಕಗಳ ಲಕ್ಷಣಗಳಲ್ಲಿ ಕೆಲವು. ಶರೀರ ಬಣ್ಣದಲ್ಲೂ ವ್ಯತ್ಯಾಸವುಂಟು. ಕೆಲವು ಪ್ರಭೇದಗಳು ಸಾದಾ ಬಣ್ಣದವಾಗಿದ್ದರೆ ಇನ್ನು ಕೆಲವು ಕಪ್ಪು, ಬಿಳಿ, ನೀಲಿ, ಹಳದಿ, ಕೆಂಪು ಬಣ್ಣಗಳ ವಿವಿಧ ಮಿಶ್ರಣಗಳಿಂದ

ಉಜ್ಜ್ವಲವಾಗಿ, ಆಕರ್ಷಕವಾಗಿ ಕಾಣುವುದುಂಟು. ಕೆಲವಕ್ಕೆ ನೆತ್ತಿಯ ಮೇಲೆ ಶಿಖೆಯೂ ಇದೆ. ಕೆಲವು ಬಗೆಯ ನೊಣ ಹಿಡುಕುಗಳ ಮುಖದ ಮೇಲೆ ಹೊಳೆಯುವ ಮಾಂಸಲ ರಚನೆಗಳಿವೆ (ವ್ಯಾಟಲ್). ಇವು ಹಾಡುವ ಹಕ್ಕಿಗಳಲ್ಲ.



ಪ್ಯಾರಡೈಸ್ ನೊಣಹಿಡುಕ

ಫ್ಯಾನ್‌ಟೈಲ್ ನೊಣಹಿಡುಕ

ಬಹುಪಾಲು ನೊಣ ಹಿಡುಕಗಳು ಹಾವಸೆ, ಎಲೆ, ಜೇಡರ ಬಲೆ ಮುಂತಾದುವನ್ನು ಬಳಸಿ ಗೂಡು ರಚಿಸುವುವು. ಕೆಲವು ಬಗೆಗಳು ಮರಗಳ ರೆಂಬೆ, ಪೊದೆಗಳಲ್ಲಿ ಗೂಡು ಕಟ್ಟುವುದಾದರೆ ಇನ್ನು ಕೆಲವು ಮರಗಳ ಪೊಟರೆ, ನದಿದಂಡೆಗಳು, ಕಲ್ಲಿನ ಬೆಟ್ಟಗಳ ಬಿರುಕುಗಳಲ್ಲಿ ಗೂಡು ನಿರ್ಮಿಸುತ್ತವೆ. ಒಂದು ಸಲಕ್ಕೆ 2–7 ಮೊಟ್ಟೆಗಳನ್ನಿಡುವುವು. ಮೊಟ್ಟೆಗಳು ಬಿಳಿ, ಹಸಿರು ಇಲ್ಲವೆ ಮಾಸಲು ಬಣ್ಣದ್ದಾಗಿರುವುವು. ಮೊಟ್ಟೆಗಳಿಗೆ ಕಾವು ಕೊಡುವ ಕೆಲಸವನ್ನು ಗಂಡು ಹೆಣ್ಣುಗಳೆರಡೂ ಮಾಡುವುವಾದರೂ ಹೆಣ್ಣೇ ಸಾಧಾರಣವಾಗಿ ಈ ಕಾರ್ಯವೆಸಗುತ್ತದೆ. ಕಾವು ಕೊಡುವ ಅವಧಿ 12–14 ದಿನಗಳು.

ನೊಣ ಹಿಡುಕಗಳ ವ್ಯಾಪ್ತಿ ಆಫ್ರಿಕ, ಏಷ್ಯ ಹಾಗೂ ಇಂಡೊ–ಆಸ್ಟ್ರೇಲಿಯ ವಲಯ.

(ಎಂ.ಎನ್.ಎಚ್‌ಇ.)

**ನ್ಯಾಷನಲ್ ಜೀಯೊಗ್ರಾಫಿಕ್:** ೧೮೮೮ರಲ್ಲಿ ಅಮೆರಿಕದ ನ್ಯಾಷನಲ್ ಜೀಯೊಗ್ರಾಫಿಕ್ ಸೊಸೈಟಿಯಿಂದ ವಾಷಿಂಗ್ಟನ್ ಡಿಸಿ ನಗರದಲ್ಲಿ ಅರಂಭವಾದ ಮಾಸಪತ್ರಿಕೆ. ಆ ಸಂಘ ಯಾವುದೇ ಲಾಭದಾಯಕ ಉದ್ದೇಶವನ್ನೂ ಹೊಂದಿಲ್ಲ. ಭೌಗೋಲಿಕ ಸಂಗತಿಗಳ ಅನ್ವೇಷಣೆಯನ್ನು ಪ್ರೋತ್ಸಾಹಿಸುವುದು ಅದರ ಉದ್ದೇಶ. ಇದಕ್ಕಾಗಿಯೇ ಈ ಮಾಸಿಕವನ್ನು ಅದು ತನ್ನ ಕಾರ್ಯಾಲಯದಿಂದ ಹೊರಡಿಸಿತು. ಭೂಮಿ, ಸಮುದ್ರ ಹಾಗೂ ಅಕಾಶ ಇವುಗಳ ಬಗ್ಗೆ ಇನ್ನೂ ಮಾನವ ಜನಾಂಗಕ್ಕೆ ಗೊತ್ತಿರದ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಸಚಿತ್ರ ಲೇಖನಗಳನ್ನು ನ್ಯಾಷನಲ್ ಜೀಯೊಗ್ರಾಫಿಕ್ ಪತ್ರಿಕೆ ಪ್ರಕಟಿಸುತ್ತದೆ. ಇದಕ್ಕಾಗಿ ಸಂಶೋಧನ ಕಾರ್ಯಕ್ಕೆ ಅಪಾರ ಧನಸಹಾಯವನ್ನು ಸೊಸೈಟಿ ನೀಡುತ್ತದೆ. ಒಳ್ಳೆಯ ಲೇಖನ ಹಾಗೂ ಬಣ್ಣದ ಚಿತ್ರಗಳ ಪ್ರಕಟಣೆ ಹಾಗೂ ವಿನ್ಯಾಸದ ದೃಷ್ಟಿಯಿಂದ ಈ ಪತ್ರಿಕೆ ಜಗತ್‌ಪ್ರಸಿದ್ಧವಾಗಿ ಪ್ರಶಂಸೆಗೆ ಪಾತ್ರವಾಗಿದೆ. ಇದರಲ್ಲಿ ಪ್ರಕಟವಾಗುವ ಲೇಖನ ಹಾಗೂ ಚಿತ್ರಗಳಿಗೆ ಹೆಚ್ಚಿನ ಸಂಭಾವನೆ ಕೊಡಲಾಗುತ್ತದೆ. ಪ್ರಕಟವಾಗುವ ಸಾಮಗ್ರಿಯ ಗುಣಮಟ್ಟವೂ ಅದೇ ರೀತಿಯಲ್ಲಿ ಇರಬೇಕೆಂಬುದನ್ನು ಸಂಪಾದಕ ವರ್ಗ ನಿರೀಕ್ಷಿಸುತ್ತದೆ.




ಪತ್ರಿಕೆಯಲ್ಲದೆ ದೂರದರ್ಶನ ಮಾಧ್ಯಮದ ಮೂಲಕವೂ ಭೌಗೋಲಿಕ ಸಂಗತಿಗಳ ಕುರಿತ ಅನ್ವೇಷಣೆಯ ವಿಚಾರಗಳನ್ನು ಪ್ರಚುರ ಪಡಿಸುವುದರಲ್ಲಿ ಸೊಸೈಟಿ ಹೆಸರುವಾಸಿ. ನ್ಯಾಷನಲ್ ಜಿಯಾಗ್ರಾಫಿಕ್ ದೂರದರ್ಶನ ಚಾನಲ್, ವಿಭಿನ್ನ ಪರಿಸರಗಳು, ಜೈವಿಕ ಸಂಶೋಧನೆ ಮುಂತಾದ ವಿಷಯಗಳನ್ನು ಪ್ರಸಾರ ಮಾಡುತ್ತದೆ.

(ಜಿ.ಟಿ.ಎಚ್‌ಇ.)

**ನ್ಯುಮೋನಿಯ:** ಫುಪ್ಪುಸದ ಉರಿಯೂತದೊಂದಿಗೆ ಅದರ ವಾಯುಕುಹರಗಳಲ್ಲಿ ದ್ರವತುಂಬಿಕೊಂಡು ಉಸಿರಾಟದ ಕ್ರಿಯಾಪಾತ್ರಕ್ಕೆ ಧಕ್ಕೆಯುಂಟಾಗಿರುವ ರೋಗಸ್ಥಿತಿ. ಫುಪ್ಪುಸಗಳಲ್ಲಿ ಕಾಣಬರುವ ಕೇವಲ ಉರಿಯೂತ ಸ್ಥಿತಿಗೆ ನ್ಯುಮೊನೈಟಿಸ್ ಎಂದು ಹೆಸರು. ರೋಗಾಣುಗಳ ಸೋಂಕಿನಿಂದ ಇಲ್ಲವೆ ಬೇರೆ ಕಾರಣಗಳಿಂದ ನ್ಯುಮೋನಿಯ ಉಂಟಾಗಬಹುದು. ರೋಗಸ್ಥಿತಿ ಫುಪ್ಪುಸದ ಒಂದು ಹಾಲೆಗೆ ಮೀಸಲಾಗಿರಬಹುದು; ಒಂದೇ ಫುಪ್ಪುಸವನ್ನು ಪೂರ್ತಿ ಆವರಿಸಿರಬಹುದು; ಇಲ್ಲವೆ ಎರಡರಲ್ಲೂ ಕಂಡುಬರಬಹುದು. ಈ ಕೊನೆಯ ಸ್ಥಿತಿಯೇ ಜನಸಾಮಾನ್ಯರ ಭಾಷೆಯಲ್ಲಿ ಡಬ್ಬಲ್ ನ್ಯುಮೋನಿಯ. ಫುಪ್ಪುಸಗಳ ಒಳಗೆ ಇರುವ ಶ್ವಾಸನಾಳದ ಕವಲುಗಳು ಮತ್ತು ಅವುಗಳ ನೆರೆಯಲ್ಲಿರುವ ಫುಪ್ಪುಸಭಾಗ ರೋಗಗ್ರಸ್ತವಾಗಿರುವ ಸ್ಥಿತಿಗೆ ಬ್ರಾಂಕೋನ್ಯುಮೋನಿಯ ಎಂದು ಹೆಸರು. ಪ್ರೌಢಾವಸ್ಥೆಯಲ್ಲಿ ನ್ಯುಮೋನಿಯವೂ ಬಾಲ್ಯ ಮತ್ತು ತಾರುಣ್ಯಾವಸ್ಥೆಗಳಲ್ಲಿ ಬ್ರಾಂಕೋನ್ಯುಮೋನಿಯವೂ ಹೆಚ್ಚು ಸಾಮಾನ್ಯವಾಗಿ ಕಂಡುಬಂದರೂ ಒಂದೇ ವ್ಯಕ್ತಿಯಲ್ಲಿ ಎರಡು ರೋಗಸ್ಥಿತಿಗಳೂ ವ್ಯಕ್ತವಾಗುವುದು ಉಂಟು. ಶ್ವಾಸಮಂಡಲದಲ್ಲಿ ಮೊದಲೇ ಇದ್ದ ರೋಗಾಣುಗಳಿಂದ ಉಂಟಾಗುವ ನ್ಯುಮೋನಿಯಕ್ಕೆ ದ್ವಿತೀಯಕ (ಸೆಕೆಂಡರಿ) ನ್ಯುಮೋನಿಯ ಎಂದು ಹೆಸರು. ಲಕ್ವ, ಗುಂಡಿಗೆ ರೋಗಗಳು, ರಕ್ತಕೊರತೆ, ಸಿಹಿಮೂತ್ರ, ಧಮನಿಪೆಡಸಣೆ (ಆರ್ಟಿರಿಯೊಸ್ಕ್ಲಿರೋಸಿಸ್) ಮುಂತಾದ ದೀರ್ಘಕಾಲಿಕ ಮತ್ತು ಹಾಸಿಗೆ ಹಿಡಿಸುವ ರೋಗಗಳಿಂದ ಹಾಗೂ ಮುಪ್ಪಿನಿಂದ ವ್ಯಕ್ತಿಗಳ ರೋಗನಿರೋಧಕ ಸಾಮರ್ಥ್ಯ ಕುಗ್ಗಿರುವ ಸ್ಥಿತಿಗಳಲ್ಲಿ ಅವರು ನ್ಯುಮೋನಿಯಕ್ಕೆ ಸುಲಭವಾಗಿ ತುತ್ತಾಗುವರು.

ರೋಗಕಾರಣಗಳು ಮತ್ತು ರೋಗಲಕ್ಷಣಗಳು: ನ್ಯುಮೋನಿಯಕ್ಕೆ ಅತ್ಯಂತ ಸಾಮಾನ್ಯ ಕಾರಣ ಡಿಪ್ಲೊಕಾಕಸ್ ನ್ಯುಮೋನಿಯೆ ಎಂಬ ಏಕಾಣುಗಳ ಸೋಂಕು. ನ್ಯುಮೊಕಾಕೈಗಳೆಂದೂ ಹೆಸರು. ಸಾಧಾರಣವಾಗಿ ಅನೇಕರ ಮೂಗು, ಬಾಯಿ, ಗಂಟಲುಗಳಲ್ಲಿ ನಿರುಪದ್ರವಿಗಳಾಗಿ ನೆಲಸಿರುತ್ತವೆ. ನೆಗಡಿ, ಶೀತ, ಅನಾರೋಗ್ಯಗಳಿಂದ ದೇಹದ ರೋಗ ನಿರೋಧಕ ಸಾಮರ್ಥ್ಯ ಕುಗ್ಗಿದಾಗ ಇವು ಫುಪ್ಪುಸಗಳಿಗೆ ಹರಡಿ ನ್ಯುಮೋನಿಯವನ್ನು ಉಂಟುಮಾಡುತ್ತವೆ. ರೋಗದಲ್ಲಿ ನಾಲ್ಕು ಹಂತಗಳನ್ನು ಗುರುತಿಸಬಹುದು: ಫುಪ್ಪುಸದ ಅರಕ್ತತೆ (ಕನ್‌ಜೆಶ್ಚನ್), ಕೆಂಪುಬಣ್ಣದ ಯಕೃತ್ತಿನಂತೆ ಕಾಣುವಿಕೆ (ರೆಡ್‌ಹೆಪಟೈಸೇಷನ್), ಬೂದು ಬಣ್ಣದ ಯಕೃತ್ತಿನಂತೆ ಕಾಣುವಿಕೆ (ಗ್ರೇ ಹೆಪಟೈಸೇಷನ್) ಮತ್ತು ಕೊನೆಯ ಹಂತ. ಕೊನೆಯ ಹಂತ ಹಠಾತ್ ಮಾರಕವಾಗಿ ಪರಿಣಮಿಸಬಹುದು. ಇಲ್ಲವೇ ಅಷ್ಟೇ ಹಠಾತ್ತಾಗಿ ಗುಣಮುಖವಾಗಿ ಪರಿವರ್ತಿತವಾಗಬಹುದು (ರೆಸಲ್ಯೂಷನ್).

ನೆಗಡಿ, ಕೆಮ್ಮು, ಗಂಟಲು ಉರಿಗಳಿಂದ ಪ್ರಾರಂಭವಾಗಿ ನಡುಕ, ಚಳಿಗಳುಂಟಾಗಿ ಸರ್ರನೆ ಜ್ವರವೇರಿ ಕೆಮ್ಮಿದಾಗ ಎದೆನೋಯುವುದೇ ಸಾಮಾನ್ಯವಾಗಿ ನ್ಯುಮೋನಿಯದ ವಿಶಿಷ್ಟವಾದ ಸೂಚಕ. ಒಣಗೆಮ್ಮು, ಬೇಗ ಬೇಗ ಉಸಿರು ಹತ್ತಿಬರುವಿಕೆ (ರ್‍ಯಾಪಿಡ್ ಶ್ಯಾಲ್ಲೊ ಬ್ರೀತಿಂಗ್), ಉಸಿರಾಟ ಕಷ್ಟವಾಗುವುದು (ಡಿಸ್ನಿಯ), ತಳಮಳಿಕೆ, ದೇಹ ವಿಶಿಷ್ಟವಾಗಿ ನೀಲಿಗಟ್ಟಿರುವಿಕೆ–ಇವು ನ್ಯುಮೋನಿಯದ ಮುಂದಿನ ಲಕ್ಷಣಗಳು. ಅನಂತರ ಕೆಮ್ಮಿದಾಗ ಅಂಟುಲೋಳೆಯಂಥ ಕಫ ಬರುವುದಕ್ಕೆ ಪ್ರಾರಂಭವಾಗುವುದು.

ಮೊದಮೊದಲು ವಿಶಿಷ್ಟ ಬಣ್ಣವಿಲ್ಲದಿದ್ದರೂ ಆಮೇಲೆ ಕಫ ತುಕ್ಕು ಬಣ್ಣದ ಛಾಯೆ ತಳೆಯುತ್ತದೆ. ಈ ಲಕ್ಷಣ ಇರುವ ಕಫದಿಂದಲೇ ಅನೇಕ ವೇಳೆ ನ್ಯುಮೋನಿಯವನ್ನು ಸುಲಭವಾಗಿ ಗುರುತಿಸಬಹುದು. ರೋಗಹತ್ತಿದ ಭಾಗದ ಎದೆಯ ಮೇಲೆ ಬೆರಳಿನಿಂದ ಬಡಿದರೆ ಮರದ ತುಂಡಿನ ಮೇಲೆ ಬಡಿದಂತೆ ಶಬ್ದವಾಗುವುದು. ಶ್ರವಣ ನಳಿಕೆಯಲ್ಲಿ ಕೇಳಿದರೆ ಆ ಭಾಗದಿಂದ ಪರಪರೆ ಎಂಬ ಶಬ್ದ ಕೇಳಿಬರುವುದು.

ನ್ಯುಮೋನಿಯ ರೋಗಕ್ಕೆ ನ್ಯೂಮೊಕಾಕಸ್ಸಿನ ಯಾವ ಬಗೆಯ ರೋಗಾಣು ಕಾರಣವಾಗಿದೆ ಎಂಬುದನ್ನು ಪತ್ತೆ ಹಚ್ಚಿ ಅದಕ್ಕೆ ವಿರೋಧವಾದ ಲಸಿಕೆಯನ್ನು ಚುಚ್ಚುಮದ್ದಾಗಿ ಕೊಡುವುದು ಒಂದು ಬಗೆಯ ಚಿಕಿತ್ಸೆ. ಪ್ರತಿಜೈವಿಕ ಔಷಧಗಳನ್ನು ಬಳಸುವುದು ಚಿಕಿತ್ಸೆಯ ಇನ್ನೊಂದು ಭಾಗ.

ಡಿಪ್ಲೊಕಾಕಸ್ ಅಲ್ಲದೆ ಬೇರೆ ರೋಗಾಣುಗಳೂ ನ್ಯುಮೋನಿಯಕ್ಕೆ ಕಾರಣವಾಗಬಹುದು. ಹಿಮೊಲಿಟಿಕ್ ಸ್ಟ್ರೆಪ್ಟೊಕಾಕಸ್ಸಿನಿಂದ ಉಂಟಾದ ನ್ಯುಮೋನಿಯಕ್ಕೆ ಕಾರಣ ಗಂಟಲು ನೋವು: ಇನ್‌ಫ್ಲುಯೆಂಜಾ ವಿಷಾಣುವಿನಿಂದಲೂ ಅಪರೂಪವಾಗಿ ದಡಾರದ ವಿಷಕಣಗಳಿಂದಲೂ ನ್ಯುಮೋನಿಯ ಉದ್ಭವಿಸಬಹುದು. ಇವಲ್ಲದೆ ವರ್ಗೀಕರಿಸಲಾಗದ ಬಗೆಬಗೆಯ ಕಾರಣಗಳಿಂದ ಏಳುವ ನ್ಯುಮೋನಿಯವೂ ಉಂಟು. ಇವುಗಳ ಪೈಕಿ ಅನೇಕವುಗಳಲ್ಲಿ ಫುಪ್ಫುಸದ ರೋಗಗ್ರಸ್ತ ಭಾಗ ಊದಿ ಕೈಬಿಟ್ಟ ಬಲೂನಿನಂತೆ ಕುಗ್ಗಿಹೋಗುತ್ತದೆ. ಇದಕ್ಕೆ ಅಟಿಲೆಕ್ಟೇಸಿಸ್ ಎಂದು ಹೆಸರು. ***

**ನ್ಯೂಕ್ಲಿಯಿಕ್ ಆಮ್ಲಗಳು:** ಎಲ್ಲಾ ಜೀವಿಗಳಲ್ಲಿಯೂ ಇರುವ ಜಟಿಲ ಕಾರ್ಬನಿಕ ರಾಸಾಯನಿಕ ಸಂಯುಕ್ತಗಳು. ಆಮ್ಲೀಯ ಗುಣವಿರುವುದರಿಂದಲೂ ಕಂಡುಹಿಡಿದದ್ದು ಕೋಶಕೇಂದ್ರ ದ್ರವದಿಂದಲೂ ಆದ್ದರಿಂದ ಈ ಹೆಸರು. ಸ್ವಿಸ್ ಜೀವರಸಾಯನ ವಿಜ್ಞಾನಿ ಫ್ರೆಡ್ರಿಕ್ ಮಿಶ್ಚರ್ 1868 ರಲ್ಲಿ ಕೀವಿನ ಜೀವಕೋಶಗಳಲ್ಲಿ ಕಂಡುಹಿಡಿದನು. ನ್ಯೂಕ್ಲೀನ್ ಎಂಬ ಹೆಸರುಕೊಟ್ಟನು. ನ್ಯೂಕ್ಲಿಯಿಕ್ ಆಮ್ಲವೆಂಬ ಹೆಸರು ಕೊಟ್ಟದ್ದು ಆಲ್ಟ್‌ಮನ್ (1899). ಪ್ರಕೃತಿಯಲ್ಲಿ ರೈಬೋಸ್ ನ್ಯೂಕ್ಲಿಯಿಕ್ ಆಮ್ಲ (ಆರ್‌ಎನ್‌ಎ) ಮತ್ತು ಡಿಆಕ್ಸಿರೈಬೋಸ್ ನ್ಯೂಕ್ಲಿಯಿಕ್ ಆಮ್ಲ ಎಂಬ ಎರಡು ಬಗೆಯಿವೆ.

ಪ್ರತ್ಯಾಮ್ಲಗಳು




ರಾಸಾಯನಿಕ ಸಂಯೋಜನೆ: ನ್ಯೂಕ್ಲಿಯಿಕ್ ಆಮ್ಲಗಳು ನ್ಯೂಕ್ಲಿಯೋಟೈಡ್‌ಗಳೆಂಬ ಮೂಲ ಘಟಕಗಳಿಂದಾದ ಪಾಲಿಮರ್‌ಗಳು. ಹಾಗಾಗಿ ನ್ಯೂಕ್ಲಿಯಿಕ್ ಆಮ್ಲಗಳನ್ನು ಪಾಲಿನ್ಯೂಕ್ಲಿಯೊಟೈಡ್‌ಗಳೆನ್ನುವುದೂ ಉಂಟು. ಒಂದು ನೈಟ್ರೊಜನ್ ಪ್ರತ್ಯಾಮ್ಲ (ನೈಟ್ರೊಬೇಸ್), ಒಂದು ಶರ್ಕರ ಅಂಶ ಮತ್ತು ಒಂದು ಫಾಸ್ಫಾರಿಕ್ ಆಮ್ಲ ಸೇರಿ ಒಂದು ನ್ಯೂಕ್ಲಿಯೊಟೈಡ್ ಅಣುವಾಗುತ್ತದೆ. ಪ್ರತ್ಯಾಮ್ಲಗಳು ಎರಡು ಬಗೆಯವು – ಪ್ಯೂರಿನ್ ಮತ್ತು ಪಿರಿಮಿಡಿನ್‌ಗಳು. ಇದನ್ನು ಕಂಡುಹಿಡಿದವನು ಫಿಶರ್ (1880). ಪ್ಯೂರಿನ್‌ಗಳು ದ್ವಿವರ್ತುಲ ಹೆಟರೊಸೈಕ್ಲಿಕ್ ಸಂಯುಕ್ತಗಳು. ಪಿರಿಮಿಡಿನ್‌ಗಳು ಏಕವರ್ತುಲ ಹೆಟರೊಸೈಕ್ಲಿಕ್ ಸಂಯುಕ್ತಗಳು. ಅಡಿನಿನ್ (ಎ) ಮತ್ತು ಗುವಾನಿನ್ (ಜಿ) ಎಂಬ ಪ್ಯೂರಿನ್‌ಗಳೂ ಸೈಟೊಸಿನ್ (ಸಿ) ಮತ್ತು ಥೈಮಿನ್ (ಟಿ) ಎಂಬ ಪಿರಿಮಿಡಿನ್‌ಗಳೂ ಇವೆಯೆಂದು ಮೊದಲು ಹೇಳಿದವನು ಕೊಸೆಲ್ (1884). ಇದಲ್ಲದೆ ಯುರಾಸಿಲ್ (ಯು) ಎಂಬ ಪಿರಿಮಿಡಿನ್ ಕೂಡ ಇದೆ. ಶರ್ಕರದಲ್ಲಿ ಎರಡು ಬಗೆ – ರೈಬೋಸ್ ಮತ್ತು ಡಿಆಕ್ಸಿರೈಬೋಸ್. ಎರಡೂ 5 ಕಾರ್ಬನ್ ಪರಮಾಣುಗಳನ್ನು ಹೊಂದಿದೆ (ಪೆಂಟೋಸ್). ಈ ಎರಡು ಬಗೆಯ ಶರ್ಕರಗಳಿಂದಲೇ ಎರಡು ರೀತಿಯ ನ್ಯೂಕ್ಲಿಯಿಕ್ ಆಮ್ಲಗಳನ್ನು ಗುರುತಿಸಲಾಗುತ್ತದೆ. ಡಿಎನ್‌ಎ ಯಲ್ಲಿ ಡಿಆಕ್ಸಿರೈಬೋಸ್ ಶರ್ಕರವೂ ಆರ್.ಎನ್.ಎ.ಯಲ್ಲಿ ರೈಬೋಸ್ ಶರ್ಕರವೂ ಇವೆ. ನ್ಯೂಕ್ಲಿಯಿಕ್ ಆಮ್ಲಗಳ ಮೂಲ ರಾಸಾಯನಿಕ ಸಂಯೋಜನೆಯನ್ನು ವಿವರವಾಗಿ ಮೊದಲು ಅಭ್ಯಸಿಸಿದವನು ರಷ್ಯದ ಜೀವರಸಾಯನ ವಿಜ್ಞಾನಿ ಲೆವಿನ್ (1920). ಎರಡು ಬಗೆಯ ನ್ಯೂಕ್ಲಿಯಿಕ್ ಆಮ್ಲಗಳಿವೆಯೆಂದೂ ಎರಡು ರೀತಿಯ ಶರ್ಕರಗಳಿವೆಯೆಂದೂ ನ್ಯೂಕ್ಲಿಯಿಕ್ ಆಮ್ಲಗಳಲ್ಲಿ ಫಾಸ್ಫಾರಿಕ್ ಆಮ್ಲವಿದೆಯೆಂದೂ ಹೇಳಿದವನು ಇವನೇ.

**ಶರ್ಕರಗಳು**




ಡಿಎನ್‌ಎ ಆಗಲಿ ಆರ್‌ಎನ್‌ಎ ಆಗಲಿ ನಾಲ್ಕು ಬಗೆಯ ನ್ಯೂಕ್ಲಿಯೊಟೈಡ್‌ಗಳಿಂದಾಗಿರುತ್ತವೆ. ಅವು ಈ ರೀತಿ ಇವೆ:

ರೈಬೋಸ್ ನ್ಯೂಕ್ಲಿಯೊಟೈಡ್‌ಗಳು: ಅಡಿನೋಸಿನ್ ಮಾನೋಫಾಸ್ಫೇಟ್ (ಅಡಿನಿಲಿಕ್ ಆಮ್ಲ), ಗುವಾನೋಸಿನ್ ಮಾನೋಫಾಸ್ಫೇಟ್ (ಗುವಾನಿಲಿಕ್ ಆಮ್ಲ), ಸೈಟಿಡಿನ್ ಮಾನೋಫಾಸ್ಫೇಟ್ (ಸೈಟಿಡಿಲಿಕ್ ಆಮ್ಲ), ಯುರಿಡಿನ್ ಮಾನೋಫಾಸ್ಫೇಟ್ (ಯುರಿಡಿಲಿಕ್ ಆಮ್ಲ). ಡಿಆಕ್ಸಿರೈಬೋಸ್ ನ್ಯೂಕ್ಲಿಯೊಟೈಡ್‌ಗಳು: ಡಿಆಕ್ಸಿರೈಬೋಸ್ ಅಡಿನೋಸಿನ್ ಮಾನೋಫಾಸ್ಫೇಟ್ (ಡಿಆಕ್ಸಿಅಡಿನಿಲಿಕ್ ಆಮ್ಲ), ಡಿಆಕ್ಸಿರೈಬೋಸ್ ಗುವಾನೊಸೀನ್ ಮಾನೋಫಾಸ್ಫೇಟ್ (ಡಿಆಕ್ಸಿಗುವಾನಿಲಿಕ್ ಆಮ್ಲ), ಡಿಆಕ್ಸಿರೈಬೋಸ್ ಸೈಟಿಡಿನ್ ಮಾನೋಫಾಸ್ಫೇಟ್ (ಡಿಆಕ್ಸಿಸೈಟಿಡಿಲಿಕ್ ಆಮ್ಲ), ಡಿಆಕ್ಸಿರೈಬೋಸ್ ಥೈಮಿಡಿನ್ ಮಾನೋಫಾಸ್ಫೇಟ್ (ಡಿಆಕ್ಸಿಥೈಮಿಡಿಲಿಕ್ ಆಮ್ಲ).

ನ್ಯೂಕ್ಲಿಯೊಟೈಡ್‌ಗಳು ಒಂದಕ್ಕೊಂದು ತಮ್ಮ ಶರ್ಕರಗಳ ಹೈಡ್ರಾಕ್ಸಿಲ್(–ಒ.ಹೆಚ್.) ಗುಂಪುಗಳಿಂದ ಫಾಸ್ಫಾರಿಕ್ ಆಮ್ಲಗಳ ಆಮ್ಲೀಯ ಗುಂಪಿಗೆ ($PO_4^-$) ಸೇರಿಕೊಂಡಿವೆ. ಈ ಬಂಧನವನ್ನು ಫಾಸ್ಫೊಡೈಎಸ್ಟರ್ ಬಂಧನವೆನ್ನುತ್ತಾರೆ. ಪ್ರತಿಯೊಂದು ನ್ಯೂಕ್ಲಿಯೊಟೈಡ್‌ನಲ್ಲಿಯೂ ಪ್ರತ್ಯಾಮ್ಲವು ಶರ್ಕರದ ಒಂದನೇಯ (1') ಕಾರ್ಬನ್ ಪರಮಾಣುವಿಗೂ ಫಾಸ್ಫೇಟ್ ಐದನೆಯ (5') ಕಾರ್ಬನ್ ಪರಮಾಣುವಿಗೂ ಬಂಧಿಸಿಕೊಂಡಿವೆ.

ನ್ಯೂಕ್ಲಿಯೊಟೈಡಿನಿಂದ ಫಾಸ್ಫೇಟ್ ಗುಂಪನ್ನು ಪ್ರತ್ಯೇಕಿಸಿದರೆ ನ್ಯೂಕ್ಲಿಯೊಸೈಡ್ ಉಳಿಯುತ್ತದೆ. ಅಂದರೆ ಒಂದು ಪ್ರತ್ಯಾಮ್ಲ ಮತ್ತು ಒಂದು ಶರ್ಕರ ಅಂಶ ಸೇರಿ ನ್ಯೂಕ್ಲೊಯೊಸೈಡ್ ಆಗುತ್ತದೆ. ಆರ್‌ಎನ್‌ಎಯಲ್ಲಿಯ ನ್ಯೂಕ್ಲಿಯೊಸೈಡ್‌ಗಳು ಈ ನಾಲ್ಕು; ಅಡಿನೋಸಿನ್, ಗುವಾನೋಸಿನ್, ಸೈಟಿಡಿನ್ ಮತ್ತು ಯುರಿಡಿನ್. ಡಿಎನ್‌ಎಯಲ್ಲಿ ಡಿಆಕ್ಸಿಅಡಿನೋಸಿನ್, ಡಿಆಕ್ಸಿಗುವಾನೋಸಿನ್, ಡಿಆಕ್ಸಿಸೈಟಿಡಿನ್ ಮತ್ತು ಡಿಆಕ್ಸಿಥೈಮಿಡಿನ್.

ನ್ಯೂಕ್ಲಿಯಿಕ್ ಆಮ್ಲಗಳು ಜೀವಿಗಳ ಎಲ್ಲಾ ಗುಣಲಕ್ಷಣಗಳಿಗೆ ನೇರವಾಗಿಯೋ ಇಲ್ಲ ಅಪ್ರತ್ಯಕ್ಷವಾಗಿಯೋ ಕಾರಣವಾಗಿವೆ. ಬಹಳಷ್ಟು ಜೀವಿಗಳಲ್ಲಿ ಡಿಎನ್‌ಎ ಆನುವಂಶೀಯತೆಗೆ ಕಾರಣವಾಗಿದ್ದರೆ ಕೆಲವು ವೈರಸ್‌ಗಳಲ್ಲಿ (ರಿಟ್ರೋವೈರಸ್‌ಗಳು – ಎಚ್‌ಐವಿ, ಟೊಬಾಕೊ ಮೊಸಾಯಿಕ್ ವೈರಸ್, ಇತ್ಯಾದಿ) ಆರ್‌ಎನ್‌ಎ ಕಾರಣವಾಗಿದೆ. ಡಿಎನ್‌ಎ ಕೋಶಕೇಂದ್ರದಲ್ಲಿ ಮತ್ತು ಅಲ್ಪಪ್ರಮಾಣದಲ್ಲಿ ಪ್ಲಾಸ್ಟಿಡ್ ಹಾಗೂ ಮೈಟೊಕಾಂಡ್ರಿಯದಲ್ಲಿರುತ್ತದೆ. ಆರ್‌ಎನ್‌ಎ ಕೋಶಕೇಂದ್ರದಲ್ಲಿ ಡಿಎನ್‌ಎಯಿಂದ ಸಂಶ್ಲೇಷಣೆ ಹೊಂದಿ ಕೋಶದ್ರವ್ಯಕ್ಕೆ ರವಾನೆಯಾಗುತ್ತದೆ. ಪ್ರೊಟೀನುಗಳ ಸಂಶ್ಲೇಷಣೆಯಲ್ಲಿ ಇದು ಭಾಗವಹಿಸುತ್ತದೆ. (ನೋಡಿ: ಡಿ.ಎನ್.ಎ.; ಆರ್.ಎನ್.ಎ.) (ಸಿ.ಕೆ.)

# ಪ

**ಪಂಗಾಸ್:** ಇದನ್ನು ಬೆಕ್ಕು ಮೀನು ಅಥವಾ ಮೀಸೆಮೀನು ಎನ್ನುವರು. ಇದು ಸಿಂಧೂ, ಬ್ರಹ್ಮಪುತ್ರ, ಗಂಗಾ ಮತ್ತು ಯಮುನಾ ನದಿಗಳಲ್ಲಿ ಜೀವಿಸುತ್ತದೆ. ಕಾವೇರಿ ನದಿಯ ಶಿವನಸಮುದ್ರ ಜಲಪಾತ ಪ್ರದೇಶದಲ್ಲಿ ವಾಸಿಸುತ್ತದೆ. ಆದರೆ, ಜಲಪಾತದ ಮೇಲಕ್ಕಿರುವ ಕಾವೇರಿ ನದಿಯಲ್ಲಿ ಇದು ಕಾಣುವುದಿಲ್ಲ. ಇದರ ತಲೆ ಚಪ್ಪಟೆಯಾಗಿದೆ. ಬಾಯಿಯ ಸಮೀಪ ಎರಡು ಜೊತೆ ಮೀಸೆಗಳಿವೆ. ಬೆನ್ನಿನ ರೆಕ್ಕೆಯ ಸಮೀಪ ಕದಿರು ಮತ್ತು ಮುಳ್ಳು ಇಲ್ಲದ ಚಿಕ್ಕ ರೆಕ್ಕೆ ಇದೆ. ಬಾಲ ಸಂಕುಚಿತವಾಗಿದ್ದು ಬಾಲದ ರೆಕ್ಕೆ ಇದೆ. ಇದು ಮತ್ಸ್ಯಾಹಾರಿ. ಬಸವನ ಹುಳು, ಕೀಟಗಳನ್ನೂ ತಿನ್ನುತ್ತದೆ. ಇದು ಬೆಳವಣಿಗೆಯ ಕಾಲದಲ್ಲಿ 3 ಸೆಂಮೀ ಗಾತ್ರದ ಮೀನು ಮರಿಗಳನ್ನು ಸಹ ತಿನ್ನುತ್ತದೆ. ಮುಂಗಾರಿನಲ್ಲಿ ಸಂತಾನಾಭಿವೃದ್ಧಿ ಮಾಡುತ್ತದೆ. ಕಪ್ಪೆಚಿಪ್ಪು ಮತ್ತು ಬಸವನಹುಳಗಳ ಸಂಖ್ಯೆಯನ್ನು ಕೊಳದಲ್ಲಿ ಮತ್ತು ಜಲಾಶಯಗಳಲ್ಲಿ ಹತೋಟಿಯಲ್ಲಿಡಲು ಈ ಮೀನನ್ನು ಬೆಳೆಸುವರು. ಈ ಮೀನು 1 ಮೀ ಗಿಂತ ಹೆಚ್ಚು ಉದ್ದ ಬೆಳೆಯುತ್ತದೆ. ***

**ಪಕ್ವತೆ:** ಮನುಷ್ಯ ಅಥವಾ ಜೀವಿ ಜನಿಸಿದ ಅನಂತರ, ಲೈಂಗಿಕ ಪ್ರಬುದ್ಧತೆ ಪಡೆದು ಪ್ರಜನನ ಸಾಮರ್ಥ್ಯ ಪಡೆಯುವ ಹಂತ (ಮೆಚುರಿಟಿ). ಕೆಲವು ಪ್ರಾಣಿಗಳಲ್ಲಿ ಜನನದ ಮುನ್ನ ಹಾಗೂ ಅನಂತರದ ಬೆಳವಣಿಗೆ ಪೂರ್ತಿಯಾಗುವಾಗ ಪಕ್ವತೆಯುಂಟಾಗುತ್ತದೆ. ಮನುಷ್ಯನು ಹುಟ್ಟುವ ಮೊದಲು ಮತ್ತು ಹುಟ್ಟಿದ ಅನಂತರವೂ ಬೆಳೆಯುತ್ತಿರುವನು. ಸ್ವಲ್ಪಕಾಲನಂತರ ಈ ಬೆಳವಣಿಗೆಯು ನಿಲ್ಲುವುದು. ಈ ಬೆಳವಣಿಗೆ ಪೂರ್ಣವಾಗಿರುವ ಹಂತಕ್ಕೆ ಪಕ್ವತೆ ಎನ್ನುವರು. ಪಕ್ವತೆ ಹೊಂದಿದ ಮೇಲೆ ಸಾಧಾರಣವಾಗಿ ಬೆಳವಣಿಗೆಯಲ್ಲಿ ಮುಂದೆ ವೃದ್ಧಿ ಇರುವುದಿಲ್ಲ. ನರಗಳ ಮತ್ತು ರಸಗ್ರಂಥಿಗಳಿಗೆ ಸಂಬಂಧಪಟ್ಟ ರಚನೆಗಳು ಹುಟ್ಟಿದ ಮೇಲೆ, ಸುಮಾರು ಹತ್ತು ವರ್ಷಗಳ ಅನಂತರ ಒಂದು ನಿರ್ದಿಷ್ಟ ರೂಪವನ್ನು ಹೊಂದುತ್ತದೆ. ಲೈಂಗಿಕ ಪಕ್ವತೆ 13 ರಿಂದ 19 ವರ್ಷಗಳೊಳಗೆ ಆಗುವುದು. ಆಗ ತಾರುಣ್ಯಾವಸ್ಥೆ ಆರಂಭವಾಗಿ 21 ವರ್ಷಗಳವರೆಗೆ ಮುಂದುವರಿಯುವುದು. ಒಂದು ಹೊಸ ವರ್ತನೆ ಉಂಟಾಗುವ ಮೊದಲು ಅದಕ್ಕೆ ತಕ್ಕಂಥ ದೈಹಿಕ ಮತ್ತು ಮಾನಸಿಕ ಅಭಿವೃದ್ಧಿ ಮತ್ತು ಬೆಳವಣಿಗೆ ಉಂಟಾಗಬೇಕು. ಈ ಅಭಿವೃದ್ಧಿಯೇ ಪಕ್ವತೆ. ಹೊರಗಿನ ವಾತಾವರಣಕ್ಕೆ ಹೊಂದಿಕೊಳ್ಳಲು ಒಳಗಿನ ದೇಹದ ಇತರ ಅಂಗಗಳೊಡನೆ ಸಹಕರಿಸಲು ಉಂಟಾಗುವಂಥ ದೇಹದ ಬೆಳವಣಿಗೆಯ ಸ್ಥಿತಿಗೂ ಪಕ್ವತೆ ಎಂಬ ಪದ ಅನ್ವಯಿಸುತ್ತದೆ.

ಜೀವಕೋಶದಲ್ಲಿರುವ ಜೀವಶಕ್ತಿ ಮೈಟಾಸಿನ್ ಎಂಬ ಪ್ರಕ್ರಿಯೆ ಅದರ ಪಡಿಯಚ್ಚನ್ನು ತಯಾರಿಸಿ ತನ್ನ ಪೀಳಿಗೆಯನ್ನು ಮುಂದುವರಿಸಲು ಪ್ರಯತ್ನಿಸುತ್ತದೆ. ಜೀವಕಣದ ವಿಭಜನೆಗೆ ಮೊದಲು ಅದರ ಪಡಿಯಚ್ಚನ್ನು ಸೃಷ್ಟಿಸುವ ಶಕ್ತಿಯುಳ್ಳ ಒಂದು ಅವಸ್ಥೆಯನ್ನು ಜೀವಕೋಶ ಮುಟ್ಟಬೇಕು. ಆ ಅವಸ್ಥೆಯೇ ಪಕ್ವತೆ, ಈ ತತ್ತ್ವ ಎಲ್ಲ ಪ್ರಾಣಿಗಳಿಗೂ ಅನ್ವಯಿಸುವುದು. 'ಮನುಷ್ಯರಲ್ಲಿ ಈ ತತ್ತ್ವ ದೇಹಕ್ಕೆ ಮಾತ್ರವೇ ಅಲ್ಲದೆ, ಭಾವನಾತ್ಮಕ, ಸಾಮಾಜಿಕ, ನೈತಿಕ, ಆಧ್ಯಾತ್ಮಕ ಮುಂತಾದ ಅಂಶಗಳಿಗೂ ಅನ್ವಯಿಸುತ್ತದೆ.

ಒಬ್ಬ ವ್ಯಕ್ತಿ ಜೀವನವನ್ನು ಏಕಕಣಜೀವಿಯಾಗಿ ಪ್ರಾರಂಭಿಸುತ್ತಾನೆ. ಈ ಏಕಕಣ ವಿಭಾಗ ಮತ್ತು ಕಣ ವಿಂಗಡಣೆ ಎಂಬ ಎರಡು ಕ್ರಿಯೆಗಳಿಂದಾಗಿ ಜೀವಿಯ ವಿಶಿಷ್ಟ ವ್ಯಕ್ತಿತ್ವ ಆರಂಭವಾಗುವ ಹಂತದವರೆಗೆ ಬೆಳೆಯುತ್ತದೆ. ದೇಹದ ಅಂಗಗಳು ಬೆಳೆಯುತ್ತ ಬಂದಂತೆ ಚಟುವಟಿಕೆ ಕಾಣಿಸಿಕೊಳ್ಳುತ್ತದೆ. ಪ್ರಾರಂಭದ ಏಕಕಣ ಜೀವಿಯಲ್ಲಿನ ಆನುವಂಶಿಕವಸ್ತುವಿನ ಮತ್ತು ಫಲಿತ ಕಣಗಳ ನಡುವೆ ಆಗುವ ಮತ್ತು ಹೊರ ಆವರಣದ ಪ್ರಚೋದನೆಗಳ ಪರಸ್ಪರ ಪ್ರತಿಕ್ರಿಯೆಗಳ ಪರಿಣಾಮವಾಗಿ ಹಲವಾರು ವ್ಯತ್ಯಾಸಗಳು ದೇಹದಲ್ಲಿ ಉಂಟಾಗುತ್ತವೆ. ಉದಾ : ಗಾತ್ರ ಎತ್ತರ ಮತ್ತು ತೂಕ ಮುಂತಾದುವುಗಳಲ್ಲಿ ಬೆಳವಣಿಗೆ, ದೇಹಪ್ರಮಾಣದಲ್ಲಿ ವ್ಯತ್ಯಾಸಗಳು, ದೇಹದ ಅಂಗಾಂಗಳ ಜಟಿಲತೆಯಲ್ಲಿ ಬದಲಾವಣೆಗಳು ಮತ್ತು ಹೊಸ ರಚನೆಗಳ ಆರಂಭ ಇವೇ ಮುಂತಾದ ವ್ಯತ್ಯಾಸಗಳು ಉಂಟಾಗುವುವು.

ನವಜಾತ ಶಿಶು ಒಂದು ಹೊಸ ಪ್ರಪಂಚಕ್ಕೆ ಬರುತ್ತದೆ. ಹುಟ್ಟುವ ಮೊದಲು ಅದು ಅನೇಕ ತಿಂಗಳವರೆಗೆ ಒಂದು ನಿಯತವಾದ ಕಾವಿರುವ ದ್ರವವಸ್ತುವಿನ ಮಾಧ್ಯಮದಲ್ಲಿ ಜೀವಿಸುತ್ತಿತ್ತು. ಈ ದ್ರವವಸ್ತುವಿನ ವಾತಾವರಣ ಅದನ್ನು ಹೊರ ಪ್ರಪಂಚದ ಎಲ್ಲ ಪ್ರಚೋದನೆಗಳಿಂದ ರಕ್ಷಿಸುತ್ತಿತ್ತು. ಅದು ತಾಯಿಯಿಂದ ಆಹಾರ ಮತ್ತು ಆಮ್ಲಜನಕವನ್ನೂ ಕೂಡ ಪಡೆಯುತ್ತಿತ್ತು. ಈ ಹೊಸ ಶಿಶು ತಾನು ಬದುಕುವುದಕ್ಕಾಗಿ ರಕ್ತಚಲನೆ, ಉಸಿರಾಡುವಿಕೆ, ಜೀರ್ಣಶಕ್ತಿ ಮತ್ತು ಇನ್ನಿತರ ಜಟಿಲವಾದ ದೈಹಿಕ ಕ್ರಿಯಾಶಕ್ತಿಗಳನ್ನು ಬೆಳೆಸಿಕೊಂಡು, ಒಂದು ಹೊಸ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು ವಿದಿತ. ಆದ್ದರಿಂದ ಹೀಗೆ ಕೆಲಸಮಾಡುವ ಅವಯವಗಳ ಗುಂಪಾದ ಉಸಿರಾಡುವಿಕೆ ಜೀರ್ಣಕ್ರಿಯೆ ಮತ್ತು ರಕ್ತಪರಿಚಲನೆಯ ಅಂಗಗಳನ್ನು ಆಗಲೇ ಪಕ್ವವಾಗಿದೆ ಎನ್ನುತ್ತೇವೆ. ಈ ಅವಯವಗಳ ಪಕ್ವತೆ ಗರ್ಭಧಾರಣವಾದ ಮೇಲೆ, ತಾಯಿಯ ಗರ್ಭಾಶಯದಲ್ಲಿ 220 ದಿನಗಳೊಳಗೆ ಉಂಟಾಗುತ್ತದೆ.

ಮೊದಲನೆಯ ಕೆಲವು ದಿನಗಳಲ್ಲಿ ತಲೆ ಧ್ರುವೀಕರಣ, ತುಟಿಗಳಸ್ಫುರಣ, ಮೊಲೆಯುಣ್ಣುವಿಕೆ ಮುಂತಾದ ಕ್ರಿಯೆಗಳನ್ನು ಒಳಗೊಂಡ ಸಂಕೀರ್ಣ ಪ್ರತಿಕ್ರಿಯೆಗಳು ಉಂಟಾಗುತ್ತವೆ. ಹುಟ್ಟಿದ ಮೇಲೆ ಕೆಲವು ದಿನಗಳಲ್ಲಿಯೆ ಬೆಬಿನ್‌ಸಕೀ ಮತ್ತು ಪ್ಲಾಂಟಾರ್ ಅನೈಚ್ಛಿಕ ಪ್ರತಿಕ್ರಿಯೆಗಳು ಮರೆಯಾಗಿ ಐಚ್ಛಿಕಕ್ರಿಯೆಗಳ ಉದಯವನ್ನು ಸಾರುತ್ತವೆ.

ಮಗು ಹುಟ್ಟುವುದಕ್ಕೆ ಮೊದಲೆ ಸಂವೇದನಾಂಗಗಳ ಪಕ್ವತೆ ಆರಂಭವಾಗುತ್ತದೆ. ಶೀತೋಷ್ಣ ಮತ್ತು ನೋವುಗಳ ಪ್ರಚೋದನೆಗಳಿಗೆ ಪ್ರತಿಕ್ರಿಯೆ ಗರ್ಭದಲ್ಲಿರುವಾಗಲೆ ವ್ಯಕ್ತವಾಗುತ್ತದೆ. ಆದರೆ ನೋವಿನ ಅರಿವು ಸಾಕಷ್ಟು ಚೆನ್ನಾಗಿ ಬೆಳೆದಿರುವುದಿಲ್ಲ. ಹುಟ್ಟಿದ ಕೂಡಲೆ ಅದು ನೆಲೆಗೊಳ್ಳುತ್ತದೆ. ಮೂಸುವ, ರುಚಿ ನೋಡುವ ಮತ್ತು ಕೇಳುವ ಕಾರ್ಯಗಳಿಗೆ ಸಂಬಂಧಪಟ್ಟ ನರಕಣಗಳು, ಹುಟ್ಟಿದ ಅನಂತರ ತಕ್ಕ ಪ್ರಚೋದನೆಗಳಿಗೆ ಪ್ರತಿಕ್ರಿಯೆಯನ್ನು ತೋರಿಸುವ ಘಟ್ಟವನ್ನು ತಲುಪಿರುತ್ತವೆ.

ಮೈಎಲಿನ್ ಷೀತ್ ಎಂಬ ಒಂದು ಬಿಳಿಯ ಮೇದಸ್ಸಿನ ಹೊದಿಕೆಯನ್ನು ನರತಂತುಗಳು ಪಡೆದುಕೊಳ್ಳುತ್ತವೆ. ಈ ಹೊದಿಕೆ ರೂಪುಗೊಳ್ಳುವ ಕಾರ್ಯ ಗರ್ಭದಲ್ಲಿರುವಾಗಲೇ ಆರಂಭವಾಗಿ ವ್ಯಕ್ತಿ ಪಕ್ವವಾಗುವವರೆಗೂ ಮುಂದುವರಿಯುತ್ತದೆ. ಈ ಹೊದಿಕೆಯ ಉತ್ಪಾದನೆ ಮತ್ತು ವ್ಯಕ್ತಿಯ ಪಕ್ವತೆಯ ಸಂಬಂಧ ಪರಸ್ಪರ ಅನ್ಯೋನ್ಯವಾದುದು. ಮಿದುಳಿನಲ್ಲಿ ಐಚ್ಛಿಕ ಕ್ರಿಯಾ ಪ್ರದೇಶ ಸಂವೇದನಾನುಭವ ಪ್ರದೇಶ, ಮತ್ತು ದೃಷ್ಟಿಯ ಅನುಭವದ ಪ್ರದೇಶ ಇವೆಲ್ಲವೂ ಮೊದ ಮೊದಲು ಪಕ್ವವಾಗುವ ಭಾಗಗಳು. ಶ್ರವಣಾನುಭವದ ಪ್ರದೇಶ ಮತ್ತು ಐಚ್ಛಿಕ ಕ್ರಿಯಾಪ್ರದೇಶದ ಮುಂದಿನ ಕ್ರಿಯಾ ಮತ್ತು ಕೊನೆಯದಾಗಿ ಸಂಘಟನಾ ಪ್ರದೇಶಗಳು ಅನಂತರ ಪಕ್ವವಾಗುವುವು.

ಹೊಸ ಶಿಶುವಿಗೆ ನಾನಾಭಾವನೆಗಳನ್ನು ಸ್ಪಷ್ಟವಾಗಿ ತಿಳಿಸಲು ಬರುವುದಿಲ್ಲ. ಅದು ವ್ಯಕ್ತಪಡಿಸುವ ಭಾವನಾಸಮೂಹ ತಾರತಮ್ಯಹೀನವಾಗಿರುವುದು. ಒಟ್ಟಿನಲಿ ಅದನ್ನು ಉದ್ರೇಕ ಎನ್ನಬಹುದು. ಮಿದುಳಿನ ಒಂದು ಭಾಗವಾದ ಹೈಪೋತಾಲಮಸ್ಸಿನ ಪಕ್ವತೆಯಿಂದ ಭಾವಾತ್ಮಕ ನಡವಳಿಕೆಯ ವಿವಿಧ ಚಲನೆಗಳು ಉಂಟಾಗುತ್ತದೆನ್ನುವುದು ನಿಜ. ಹೈಪೋತಾಲಮಸ್ ಕೆಲವು ಭಾವೋದ್ದೀಪಕ ಪ್ರಚೋದನೆಗಳನ್ನು ಪ್ರೇರೇಪಿಸಿದರೂ ಹೊರ ಮಿದುಳು ಅದರ ಕೆಲಸವನ್ನು ತಡೆದು ಅದನ್ನು ಎಲ್ಲೆಯಲ್ಲಿಡುತ್ತದೆ. ಮಾನವನಲ್ಲಿ ಭಾವಗಳನ್ನು ಹತೋಟಿಯಲ್ಲಿಡಲು ಸಾಧ್ಯವಾಗುವುದಕ್ಕೆ ಮಹಾ ಮಸ್ತಿಷ್ಕ ವಿಕಾಸವೇ ಕಾರಣ. ಮಹಾಮಸ್ತಿಷ್ಕದ ಉಪಯೋಗವನ್ನು ಪಡೆಯುವ ಶಿಶು ತನಗೆ ಸಹಜವಾದ ಅಭ್ಯಾಸಗಳನ್ನು ಬದಲಾಯಿಸಿಕೊಂಡು ಕ್ರಮೇಣ ತನ್ನ ಸಮಾಜವರ್ಗ ಮೆಚ್ಚುವ ಭಾವಾಭಿವ್ಯಕ್ತಿಯನ್ನು ಕಲಿಯುತ್ತದೆ. ಅಂದರೆ ಭಾವವಿಕಾಸ ಮತ್ತು ಸಂಯಮಗಳು ಹೊರಮಿದುಳಿನ ಪಕ್ವತೆ ಮತ್ತು ಕಲಿಕೆಗೆ ಅಧೀನವಾಗಿರುವುದೆಂಬುದು ಸ್ಪಷ್ಟ..

ಹತ್ತನೆಯ ವಯಸ್ಸಿನಲ್ಲಿ ಎಲ್ಲ ಅವಯವಗಳೂ ಪಕ್ವವಾಗಿ ಮಾನವನಲ್ಲಿ ತಟ್ಟನೆ ಒಂದು ಹೊಸ ಶಕ್ತಿ ಗೋಚರವಾಗುತ್ತದೆ. ಆಗ ಗಂಡು ಹೆಣ್ಣಿನ ಭೇದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಪ್ರಜನನ ಕಾರ್ಯಗಳು ಆರಂಭವಾಗುವ ಈ ಕಾಲಕ್ಕೆ ಪ್ರಬುದ್ಧತೆ ಎನ್ನಬಹುದು. ಇದು ಲೈಂಗಿಕ ಗ್ರಂಥಿಗಳ, ಹೊರಗಣ ಲೈಂಗಿಕ ಅವಯವಗಳ ಮತ್ತು ನರಮಂಡಲದ ಕೆಲವು ಭಾಗಗಳನ್ನೊಳಗೊಂಡಿರುವ ಜಟಿಲ ಪಕ್ವತೆಯ ಫಲ. ಪ್ರಬುದ್ಧತೆ ಪ್ರಾರಂಭವಾಗುವ ಕಾಲ ಅನಿರ್ದಿಷ್ಟ. ಆದರೂ ಸಾಮಾನ್ಯವಾಗಿ ಇದನ್ನು ಹೆಣ್ಣುಮಕ್ಕಳಲ್ಲಿ 13ನೆಯ ವಯಸ್ಸಿನಲ್ಲೂ ಗಂಡು ಮಕ್ಕಳಲ್ಲಿ 14ನೆಯ ವಯಸ್ಸಿನಲ್ಲೂ ನಿರೀಕ್ಷಿಸಬಹುದು. ಲೈಂಗಿಕ ಗ್ರಂಥಿಗಳ ಪಕ್ವತೆಯಿಂದಲೇ ಎರಡು ಲಿಂಗಗಳಿಗೂ ವಿಲಕ್ಷಣವಾದ ಗೌಣಲೈಂಗಿಕ ಲಕ್ಷಣಗಳು ಉಂಟಾಗುತ್ತವೆನ್ನಬಹುದು.

ಪಕ್ವತೆ ಮತ್ತು ವಾಸ್ತವಿಕತೆಗಳಿಂದ ತಪ್ಪಿಸಿಕೊಳ್ಳುವ ದಾರಿಯನ್ನು ವಿಕಲ್ಪನೆಯಿಂದ ಹುಡುಕುವುದರಲ್ಲಿ ಮನುಷ್ಯನ ಮನಸ್ಸು ಬಹಳ ನಿಸ್ಸೀಮ. ಪಕ್ವತೆಯಿಂದ ತಪ್ಪಸಿಕೊಳ್ಳುವ

ದಾರಿಯೆಂದರೆ ಈ ಪ್ರಪಂಚವನ್ನು ಹಗುರವಾಗಿ, ಮೇಲೆ ಮೇಲೆಯೆ ಮತ್ತು ವಿನೋದ ದೃಷ್ಟಿಯಿಂದ ನೋಡುವ ಲೀಲಾ ಮನೋಧರ್ಮ.

ಏಕಾಂತವಾಸ, ಉನ್ಮತ್ತಾಭಿಮಾನ, ವಿಕ್ಷೇಪ, ರೋಗ ಮತ್ತು ಕುತರ್ಕ ಮುಂತಾದುವು ಪಕ್ವತೆಯಿಂದ ಪಾರಾಗುವ ಇತರ ಸಾಧನಗಳು. ಇವು ಮಕ್ಕಳ ವರ್ತನೆಯ ಮಾದರಿಗಳು ಮತ್ತು ಬಾಲಿಶವಾದ ಮನೋಭಾವಗಳು. ಈ ಅವಸ್ಥೆಯನ್ನು ಮುಂದೆ ಪಕ್ವವಾಗಲಿರುವ ಮನುಷ್ಯನ ಪ್ರತಿಗಮನ ಎನ್ನುತ್ತಾರೆ. ವಿಪರೀತ ಪ್ರತಿಗಮನ ಜಗಳದಲ್ಲಿ ಕೊನೆಗಾಣಬಹುದು. ಆದ್ದರಿಂದಾಗಿ ಒಬ್ಬ ವ್ಯಕ್ತಿ ತನ್ನ ಸಮಾಜದಲ್ಲಿ ತನ್ನನ್ನೂ ಮತ್ತು ತನ್ನ ಪಾತ್ರವನ್ನೂ ಅರಿಯಲು ಬೌದ್ಧಿಕವಾಗಿ ವಿಕಾಸ ಹೊಂದಿರಬೇಕು. ಅವನು ಬಾಲಿಶವಾದ ಭಾವಗಳನ್ನು ವ್ಯಕ್ತಪಡಿಸದೆ ಧೈರ್ಯ ಮತ್ತು ವಿಶ್ವಾಸದಿಂದ ವಾಸ್ತವಿಕತೆಯನ್ನು ಎದುರಿಸಲೂ ತನ್ನನ್ನು ಹತೋಟಿಯಲ್ಲಿಟ್ಟುಕೊಳ್ಳಲೂ ಭಾವನಾತ್ಮಕವಾಗಿ ವಿಕಾಸಗೊಳ್ಳಬೇಕು. ತನ್ನಿಂದ ಭಿನ್ನವಾದ ಮನುಷ್ಯರೊಡನೆ ಹೊಂದಿಕೊಂಡು ಮುಂದುವರಿಯಲು ಸಾಮಾಜಿಕವಾಗಿ ಅರಳಬೇಕು. ಅಲ್ಲದೆ, ಅನಪೇಕ್ಷಿತವಾದುದನ್ನು ಮತ್ತು ಕೆಟ್ಟದ್ದನ್ನು ತೊರೆಯುವುದಕ್ಕೂ ಒಳ್ಳೆಯದನ್ನು ಮಾಡುವುದಕ್ಕೂ ನೈತಿಕ ನಿಲುವು ಏರ್ಪಡುವಂತಾಗಬೇಕು.

ಯಾವಾತ ತನ್ನನ್ನು ಹತೋಟಿಯಲ್ಲಿಟ್ಟುಕೊಂಡು ಸಾಮಾಜಿಕವಾಗಿ ಹೊಂದಿಕೊಂಡು ಹೊಗುತ್ತ ಸಮಾಜದಲ್ಲಿರುವ ಇತರ ಜೀವಿಗಳಿಂದ ಭಿನ್ನವಾದ ತನ್ನ ವ್ಯಕ್ತಿತ್ವವನ್ನು ತೋರಿಸುತ್ತ ಇರುವನೊ ಆತನೆ ಸಂಪೂರ್ಣವಾಗಿ ವಿಕಾಸಗೊಂಡ ಮನುಷ್ಯ. ಪಕ್ವತೆ ಮಾನವನ ಬೆಳೆವಣಿಗೆಯಲ್ಲೆ ಒಂದು ಕಾರ್ಯವಿಧಾನ, ಅಂತಿಮ ಫಲವಲ್ಲ. ಹಂತಹಂತವಾದ ಇಂಥ ಪಕ್ವತೆಯನ್ನು ಎಲ್ಲ ಜೀವಿಗಳಲ್ಲೂ ಕಾಣಬಹುದು. ***

**ಪಕ್ಷಾಘಾತ:** ದೈಹಿಕ ಚಲನೆಯ ಬಲಗುಂದುವಿಕೆ ಇಲ್ಲವೇ ಪೂರ್ಣನಾಶ (ಪೆರಿಸಿಸ್, ಪೆರ್‍ಯಾಲಿಸಿಸ್). ಪಾರ್ಶ್ವವಾಯು, ಅರ್ಧಾಂಗವಾಯು, ಲಕ್ವ, ಜೋಗರಿಕೆ ಇವು ಪರ್ಯಾಯ ಹೆಸರುಗಳು. ನರಮಂಡಲ ಹಾಗೂ ಸ್ನಾಯುಗಳ ಹೊಂದಾಣಿಕೆಯಿಂದ ದೈಹಿಕ ಚಲನೆ ಸಾಧ್ಯವಾಗಿದೆ. ಆದ್ದರಿಂದ ನರಮಂಡಲದ ಅಥವಾ ಸ್ನಾಯುಗಳ ರಚನೆಯಲ್ಲಿ ಇಲ್ಲವೇ ಕ್ರಿಯೆಯಲ್ಲಿ ಏರುಪೇರಾದಾಗ ಚಲನೆ ಬಲಗುಂದಿರುವುದು ಇಲ್ಲವೇ ಪೂರ್ಣವಾಗಿ ಲೋಪವಾಗಿರುವುದು ಸ್ವಾಭಾವಿಕ. ನರಮಂಡಲದಲ್ಲಿ ರೋಗ ಉದ್ಭವಿಸಿ ಐಚ್ಛಿಕ ಚಲನೆಯ ಸ್ವಾಧೀನ ಹಾಗೂ ಆ ಭಾಗಗಳಲ್ಲಿ ಸಾಮಾನ್ಯ ಸಂವೇದನೆಗಳ ಅನುಭವ ತಪ್ಪುವುದು ಸಾಧಾರಣ. ಇಂಥ ಸಂದರ್ಭಗಳಲ್ಲಿ ದೇಹದ ಅದೇ ಭಾಗಗಳ ಅನೈಚ್ಛಿಕ ಚಲನೆಗೆ ಕುಂದಿಲ್ಲದೆ ಇರುವುದೂ ಉಂಟು. ಹಾಗೆಯೇ ಅಲ್ಲಿ ಸ್ಪರ್ಶ, ಶೈತ್ಯೋಷ್ಣತೆ ಮತ್ತು ನೋವುಗಳ ಅನುಭವವೂ ಬದಲಾಗದೇ ಇರಬಹುದು. ಉನ್ಮಾದ ಪರಿಸ್ಥಿತಿಯಲ್ಲಿ (ಹಿಸ್ಟೀರಿಯಾ) ನರಮಂಡಲ ಅಥವಾ ಸ್ನಾಯುವಿನಲ್ಲಿ ರೋಗವೇ ಇರದೆ ಚಲನೆ ಹದ ತಪ್ಪುತ್ತದೆ. ಆದರೆ ಅಪರೂಪ ಸಂದರ್ಭಗಳಲ್ಲಿ, ಉದಾಹರಣೆಗೆ ಡಿಸ್ಸೆಮಿನೇಟೆಡ್ ಸ್ಕಿರೋಸಿಸ್ ಎಂಬ ನರಮಂಡಲದ ರೋಗ ಸ್ಥಿತಿಯಲ್ಲಿ, ರೋಗದ ಪತ್ತೆ ಕಷ್ಟವಾಗಿದ್ದು ಅದು ಉನ್ಮಾದ ಪರಿಸ್ಥಿತಿಯಂತೆಯೇ ಕಂಡುಬರಬಹುದು. ದೇಹದ ಅನುಬಂಧಗಳ (ಕೈಕಾಲುಗಳ) ಪೈಕಿ ಯಾವುದೇ ಅನುಬಂಧದ ಚಲನನಾಶಕ್ಕೆ ಮಾನೋಪ್ಲೀಜಿಯ ಎಂದೂ ಎರಡು ಅನುಬಂಧಗಳ ಚಲನನಾಶಕ್ಕೆ ಡೈಪ್ಲೀಜಿಯ ಎಂದೂ ನಾಲ್ಕು ಅನುಬಂಧಗಳ ಸ್ವಾಧೀನ ತಪ್ಪಿರುವುದಕ್ಕೆ ಕ್ವಾಡ್ರಿಪ್ಲೀಜಿಯ ಎಂದೂ ಹೆಸರುಗಳುಂಟು. ಚಲನನಾಶ ಎರಡು ಕಾಲುಗಳಿಗೆ ಮಾತ್ರ ಸೀಮಿತವಾಗಿದ್ದರೆ ಅದಕ್ಕೆ ಪ್ಯಾರಾಪ್ಲೀಜಿಯ ಎಂದು ಕರೆಯಲಾಗುತ್ತದೆ. ದೇಹದ ಎಡಭಾಗ ಅಥವಾ ಬಲಭಾಗ ಪೂರ್ತಿ ಬಲಗುಂದಿದ್ದರೆ ಅಥವಾ ಅದನ್ನು ಚಲಿಸಲಾಗದಿದ್ದರೆ ಅದಕ್ಕೆ ಹೆಮಿಪೆರಿಸಿಸ್ ಹೆಮಿಪ್ಲೀಜಿಯ ಎನ್ನುತ್ತಾರೆ. ಈ ಸ್ಥಿತಿಯಲ್ಲಿ ಮುಖದ ಸ್ನಾಯುಗಳು ಕೂಡ ರೋಗಗ್ರಸ್ತ ಪಾರ್ಶ್ವದಲ್ಲಿ ನಿಶ್ಚಲವಾಗಿರಬಹುದು. ದೇಹದ ಅರ್ಧದ ಚಲನೆ ನಾಶವಾಗಿದ್ದಾಗ ಸಾಮಾನ್ಯವಾಗಿ ಮಾತು ನಿಂತುಹೋಗಿರುವುದೂ ಉಂಟು. ಆದರೆ ಅನತಿಕಾಲದಲ್ಲೇ ತೊದಲು ಮಾತನ್ನಾದರೂ ಆಡಲು ಸಾಧ್ಯವಾಗುವುದು.

ನರಮಂಡಲದ ನಿರ್ದಿಷ್ಟ ಭಾಗದಲ್ಲಿ ರಕ್ತದ ಕೊರತೆ ಉಂಟಾಗುವುದು ಪಾರ್ಶ್ವವಾಯುವಿಗೆ ಬಹು ಸಾಮಾನ್ಯ ಕಾರಣ. ಅಭಿಧಮನಿಯಲ್ಲಿ ಕಂಡುಬಂದ ಅಡಚಣೆಯಿಂದ ಅಥವಾ ಅಭಿಧಮನಿ ಬಿರಿಯುವುದರಿಂದ ಇಂಥ ಕೊರತೆ ಸಂಭವಿಸುತ್ತದೆ. ಅಭಿಧಮನಿಯಲ್ಲಿ ಅಡಚಣೆಗೆ ಕಾರಣ ರಕ್ತ ಅಲ್ಲೇ ಗಡ್ಡೆ ಕಟ್ಟುವುದು, ಕೊಬ್ಬು ಜಾತಿಯ ಅಂಶಗಳು, ವಾಯುಗುಳ್ಳೆಗಳು, ನಾಳದ ಒಳಪದರ ದಪ್ಪವಾಗುವಿಕೆ ಇತ್ಯಾದಿ. ವ್ಯಕ್ತಿಯಲ್ಲಿ ರಕ್ತದ ಒತ್ತಡ ಅತಿಹೆಚ್ಚಾಗಿರುವಾಗ ಅಭಿಧಮನಿ ಬಿರಿಯುತ್ತದೆ. ಮಿದುಳಿನ ರಕ್ತನಾಳಗಳಲ್ಲಿ ಅಭಿಧಮನಿಯ ಪೆಡಸಣೆ ರೋಗದಿಂದ ಅದರ ಭಿತ್ತಿ ದುರ್ಬಲಗೊಂಡಿರುವುದು. ಇಂಥ ಸಂದರ್ಭಗಳಲ್ಲಿ ತಲೆಗೆ ಏಟು ಬಿದ್ದಾಗ, ಅಪರೂಪವಾಗಿ ತಾನಾಗಿಯೇ ಅಭಿಧಮನಿ ಒಡೆಯುವ ಸಂಭವವಿದೆ. ಹೀಗಾದಾಗ ಮಿದುಳಿನ ನಿರ್ದಿಷ್ಟಭಾಗಕ್ಕೆ ರಕ್ತಪೂರೈಕೆ ತಪ್ಪಿಹೋಗುತ್ತದೆ. ಅಲ್ಲದೇ ಆ ಸ್ಥಳದಲ್ಲಿ ರಕ್ತಸ್ರಾವವಾಗಿ ರಕ್ತ ಅಥವಾ ರಕ್ತಗರಣೆ ಶೇಖರಣೆಗೊಂಡು ನೆರೆಯ ನರಾಂಗಗಳನ್ನು ಅದುಮಿ ನಿಷ್ಕ್ರಿಯಗೊಳಿಸಬಹುದು. ಇಂಥ ಪ್ರಸಂಗಗಳಲ್ಲಿ ಕಂಡುಬರುವ ಲಕ್ಷಣಗಳು ರಕ್ತಸ್ರಾವವಾದ ಸ್ಥಳದ ಮೇಲೆ ಅವಲಂಬಿಸಿರುವುವಾದರೂ ಸಾಮಾನ್ಯವಾಗಿ ಮೊಂಡು ಆಯುಧದಿಂದ ಬಲವಾಗಿ ಹೊಡೆಯಲ್ಪಟ್ಟವನಂತೆ ಇದ್ದಕ್ಕಿದ್ದಂತೆ ಜ್ಞಾನ ತಪ್ಪಿ ಬೀಳುವುದು ಸಾಮಾನ್ಯ. ಆದ್ದರಿಂದ ಇದಕ್ಕೆ ಇಂಗ್ಲಿಷಿನಲ್ಲಿ ಸ್ಟ್ರೋಕ್ ಎಂದು ಹೆಸರಿದೆ. ಇದನ್ನೇ ರೂಢಿಯಲ್ಲಿ ಲಕ್ವ ಹೊಡೆದಿದೆ ಎಂದು ವಿವರಿಸುವುದಾಗಿದೆ. ಇದರಲ್ಲಿ ವ್ಯಕ್ತಿ ನಿಜವಾಗಿ ಪ್ರಜ್ಞೆ ಕಳೆದುಕೊಳ್ಳದೆ ಜೊಂಪು ಹತ್ತಿದವನಂತೆಯೂ ಇರಬಹುದು. ಮಿದುಳಿನ ಬಲಭಾಗದಲ್ಲಿ ಆಘಾತವಾದಾಗ ದೇಹದ ಬಲಭಾಗದ ಸ್ವಾಧೀನ ತಪ್ಪುವುದಲ್ಲದೆ ಮಾತೂ ನಿಂತುಹೋಗುವುದು ಸಾಮಾನ್ಯ. ಸ್ವಾಧೀನ ತಪ್ಪಿದ ಸ್ನಾಯುಗಳು ಅಶಕ್ತವಾಗಿರುತ್ತವೆ ಇಲ್ಲವೇ ಸೆಟೆದುಕೊಂಡಿರುತ್ತವೆ. ನೇರ ಉದ್ರೇಕಕ್ಕೆ ಅವು ಪ್ರತಿಕ್ರಿಯೆ ವ್ಯಕ್ತಪಡಿಸುವುದಿಲ್ಲ. ಮಲಮೂತ್ರಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದೂ ವ್ಯಕ್ತಿಗೆ ಸಾಧ್ಯವಾಗದಿರಬಹುದು. ಕೆಲ ಕಾಲಾನಂತರ ಆಘಾತದ ತೀವ್ರತೆ ಕಡಿಮೆ ಆಗುತ್ತ ಬಂದು ಕೈ ಅರೆ ಮಡಿಸಿಕೊಂಡು ದೇಹದ ಕಡೆ ವಾಲಿರುವುದೂ ಕಾಲು ನೇರವಾಗಿದ್ದು ಚಲಿಸಬಹುದಾಗಿದ್ದರೂ ವಿಶಿಷ್ಟ ನಡಿಗೆ ಇರುವುದೂ ಕಂಡುಬರುತ್ತವೆ. ಸಾಮಾನ್ಯವಾಗಿ ವಯಸ್ಸಾದ ವ್ಯಕ್ತಿಗಳಲ್ಲಿ ಮತ್ತು ಮಧುಮೇಹ ರೋಗದಿಂದ ನರಳುತ್ತಿರುವವರಲ್ಲಿ ಈ ರೀತಿಯ ಪಕ್ಷಘಾತ ಕಂಡು ಬರುವುದುಂಟು.

ಹೆಪ್ಪುಗಟ್ಟಿದ ರಕ್ತದ ತುಣುಕು ರಕ್ತವಾಹಿನಿಯಲ್ಲಿ ತೇಲಿಬಂದು ಮಿದುಳಿನ ಯಾವುದೇ ಸಣ್ಣ ಅಭಿಧಮನಿಯಲ್ಲಿ ಮುಂದೆ ಹೋಗಲಾರದೆ ಸಿಕ್ಕಿಹಾಕಿಕೊಂಡು ಅದರಲ್ಲಿ ರಕ್ತ ಪ್ರವಾಹವನ್ನೇ ಬಂದು ಮಾಡಬಹುದು. ಇಂಥ ಸಂದರ್ಭದಲ್ಲೂ ಲಕ್ವ ಹೊಡೆಯುವ ಸಂಭವವಿರುವುದು ವೇದ್ಯ. ಹೃದ್ರೋಗಿಗಳಲ್ಲಿ ಈ ರೀತಿಯ ಪಕ್ಷಾಘಾತ ಸಾಮಾನ್ಯ. ಅಭಿಧಮನಿಯಲ್ಲಿ ರಕ್ತ ಸಾವಕಾಶವಾಗಿ ಹೆಪ್ಪುಗಟ್ಟುತ್ತ ಹೋಗಿ ಕೊನೆಗೆ ರಕ್ತಪ್ರವಾಹಕ್ಕೆ ಪೂರ್ಣ ಅಡ್ಡಿಮಾಡುವಂಥ ಸಂದರ್ಭಗಳಲ್ಲಿ ಪಕ್ಷಘಾತ ಸಂಭವಿಸಿದರೆ ಅದು ಕ್ರಮೇಣ ಕಂಡುಬರುತ್ತದೆ.

ಮಿದುಳಿನ ಗಡ್ಡೆಗಳಲ್ಲಿ ನರಾಂಶಗಳ ಮೇಲಿನ ಒತ್ತಡದಿಂದಾಗಿ ಪಾರ್ಶ್ವಪಕ್ಷಾಘಾತ ಉಂಟಾಗುತ್ತದೆ. ಮಿದುಳಿನ ನಾಶವಾದ ಭಾಗ ದೇಹದ ಯಾವ ಯಾವ ಅವಯವಗಳ ಚಲನೆಯನ್ನು ನಿರ್ದೇಶಿಸುವುದೋ ಅವು ನಿಶ್ಚಲವಾಗುತ್ತವೆ. ಮಿದುಳು ರಕ್ತನಾಳಗಳ ಒಳಸುತ್ತಳತೆ ಸಣ್ಣಗಾಗುವಿಕೆ ಮತ್ತು ಮಿದುಳಿನ ಮೇಹರೋಗ ಹಾಗೂ ಕ್ಷಯರೋಗ ಇವುಗಳಲ್ಲಿಯೂ ಇಂಥ ಪಕ್ಷಾಘಾತ ಸಂಭವಿಸುವುದು.

ಮಿದುಳು ಬಳ್ಳಿಯ ರೋಗಸ್ಥಿತಿಗಳಲ್ಲಿ (ರಕ್ತಸ್ರಾವ, ಗಡ್ಡೆಯ ಒತ್ತಡ, ಬೆನ್ನು ಮೂಳೆ ಮುರಿತ ಹಾಗೂ ಊನಗಳು, ಸೋಂಕು ಇತ್ಯಾದಿ) ಆಘಾತವಾದ ಜಾಗದ ಕೆಳಗಿನ ಭಾಗ ಸ್ವಾಧೀನ ತಪ್ಪುತ್ತದೆ. ಉದಾಹರಣೆಗೆ ಕುತ್ತಿಗೆಯ ಭಾಗದಲ್ಲಿ ಆಘಾತವಾದರೆ ಕೈಗಳಲ್ಲಿ ಜೋಗರಿಕೆ ಉಂಟಾಗಬಹುದು. ಸೊಂಟ ಭಾಗದಲ್ಲಾದರೆ ಎರಡು ಕಾಲುಗಳೂ ಜೋಗರಿಕೆಗೆ ಒಳಗಾಗುತ್ತವೆ. ಅಲ್ಲದೇ ಮೂತ್ರ ಹಾಗೂ ಮಲವಿಸರ್ಜನೆಯಲ್ಲಿಯೂ ತೊಂದರೆ ಆಗುತ್ತದೆ. ಜೋಗರಿಕೆಗೆ ಒಳಗಾದ ಸ್ನಾಯುಗಳು ಸಡಿಲಗೊಂಡು ಚಲನಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಸಂವೇದನ ಸಾಮರ್ಥ್ಯವೂ ನಾಶವಾಗಬಹುದು. ಕ್ಷಯ, ಮೇಹರೋಗ, ಪೋಲಿಯೊ, ಮೈಯಲೈಟಿಸ್ ಮುಂತಾದ ಸೋಂಕುಗಳಿಂದಲೂ ಮಿದುಳುಬಳ್ಳಿ ರೋಗಗ್ರಸ್ತವಾಗಿ ಈ ರೀತಿಯ ಪಕ್ಷಾಘಾತ ಕಂಡುಬರುತ್ತದೆ.

ಪೋಲಿಯೊಮೈಯಲೈಟಿಸ್ ಕಾಯಿಲೆಯಲ್ಲಿ ಮಿದುಳುಬಳ್ಳಿಯ ಮುಂಗುಂಪಿನ (ಆ್ಯಂಟೀರಿಯರ್ ಹಾರ್ನ್) ನರಕೋಶಗಳು ಅಥವಾ ಮಿದುಳಿನ ಹಿಂದಿನ ಚಾಚುಭಾಗ ವೈರಸುಗಳಿಂದ ನಾಶವಾಗುತ್ತವೆ. ಆಗ ಸಂವಾದೀ ದೇಹಭಾಗಗಳಲ್ಲಿ ಜೋಗರಿಕೆ ಉಂಟಾಗುತ್ತದೆ. ಕೈಕಾಲುಗಳಲ್ಲಿ ನಿಶ್ಚಲತೆ ಕಂಡುಬರುವುದು ಸಾಮಾನ್ಯ. ಚಲನೆ ಕಳೆದುಕೊಂಡ ಸ್ನಾಯುಗಳು ಸವೆಯುತ್ತವೆ. ಹಾನಿ ತೀವ್ರವಾಗಿಲ್ಲದಿದ್ದರೆ ಜೋಗರಿಕೆ ತಾತ್ಕಾಲಿಕವಾಗಿದ್ದು ಒಂದು ಕಾಲು ಅಥವಾ ಕೈ ಮಾತ್ರ ಸ್ವಾಧೀನ ತಪ್ಪಿ ಇತರ ಅಂಗಗಳು ಪೂರ್ಣ ಚೇತರಿಸಿಕೊಳ್ಳುತ್ತವೆ. ಎದೆಗೂಡಿನ ಸ್ನಾಯುಗಳಿಗೆ ಜೋಗರಿಕೆ ಉಂಟಾದರೆ ಉಸಿರಾಟ ನಿಂತುಹೋಗಬಹುದು. ಮಿದುಳಿನ ಚಾಚುಭಾಗದ ಅಂಶಗಳಿಗೆ ಧಕ್ಕೆತಟ್ಟಿದ್ದರೆ ಕಣ್ಣು, ಬಾಯಿ, ಗಂಟಲು, ಧ್ವನಿಸಂಪುಟ, ನಾಲಿಗೆ ಮುಂತಾದವುಗಳ ಸ್ನಾಯುಗಳಿಗೆ ಜೋಗರಿಕೆ ಉಂಟಾಗುತ್ತದೆ. ಇಂಥ ಸಮಯದಲ್ಲಿ ವ್ಯಕ್ತಿ ಪ್ರಜ್ಞಾಹೀನನಾಗಿ ಅಪಾಯ ಸ್ಥಿತಿಯಲ್ಲಿ ಇರುತ್ತಾನೆ.

ಗಂಟಲುಮಾರಿ ರೋಗದಲ್ಲೂ (ಡಿಫ್ತೀರಿಯಾ) ರೋಗಾಣುಗಳಿಂದ ಉತ್ಪಾದಿಸಲ್ಪಡುವ ವಿಷಪದಾರ್ಥ ರಕ್ತದಲ್ಲಿ ಸಂಚರಿಸುತ್ತ ದೇಹದ ಭಾಗಗಳಲ್ಲಿ ಜೋಗರಿಕೆಯನ್ನು ಉಂಟುಮಾಡಬಹುದು. ಮುಖದ ನರ ಈ ವಿಷಕ್ಕೆ ಒಳಗಾಗಿದ್ದರೆ ಮುಖದ ಆ ಭಾಗದಲ್ಲಿ ಜೋಗರಿಕೆ ಕಂಡುಬರುತ್ತದೆ. ಸ್ನಾಯುಗಳು ಬಿಗಿದುಕೊಳ್ಳುವುದರಿಂದ ಮುಖಭಾವ

ಜಡವಾಗುತ್ತದೆ. ವ್ಯಕ್ತಿ ಕಣ್ಣುಮುಚ್ಚಲಾರ. ಜೋಗರಿಕೆಗೆ ಈಡಾದ ತುಟಿಯ ಪಾರ್ಶ್ವದಿಂದ ವ್ಯಕ್ತಿ ಸೇವಿಸಿದ ದ್ರವ ಸೋರುತ್ತದೆ.

ಮಂಡಲದಲ್ಲಿ ಯಾವ ಬದಲಾವಣೆಯೂ ಇಲ್ಲದೆ ಮೂಲತಃ ಸ್ನಾಯುಗಳಲ್ಲೇ ನಶಿಸುವಿಕೆ ಉಂಟಾದಾಗಲೂ ಜೋಗರಿಕೆ ತಲೆದೋರುವುದು ವ್ಯಕ್ತ. ಇದು ಕಂಡು ಬರುವ ವಂಶಪಾರಂಪರ್ಯವಾದ ಫೆಮಿಲಿಯಲ್ ಪೀರಿಯಾಡಿಕ್ ಪೆರ್‌ಲಿಸಿಸ್ ಎಂಬ ರೋಗಕ್ಕಾಗಲಿ ಮೈಯಸ್ತೀನಿಯಾ ಎಂಬ ರೋಗಕ್ಕಾಗಲೀ ಕಾರಣ ಸರಿಯಾಗಿ ತಿಳಿದಿಲ್ಲ. ಜೈವಿಕ ಕ್ರಿಯೆಗಳಲ್ಲಿ ಏರುಪೇರಾದಾಗಲೂ ಜೋಗರಿಕೆ ತಲೆದೋರುತ್ತದೆ. ಅಡ್ರಿನಲ್, ತೈರಾಯ್ಡ್ ಮುಂತಾದ ನಿರ್ನಾಳ ಗ್ರಂಥಿಗಳ ಕಾಯಿಲೆಗಳಲ್ಲಿ ಹೀಗಾಗುವುದು ಸಾಮಾನ್ಯ.

ಕೆಲವು ವಿಷಗಳು ದೇಹದ ಎಲ್ಲ ಭಾಗಗಳಲ್ಲೂ ಸ್ವಾಧೀನನಾಶ ಮಾಡುತ್ತವೆ. ಹಾವಿನ ವಿಷ ಈ ರೀತಿಯದು. ಕ್ಲಾಸ್ಟ್ರಿಡಿಯಮ್ ಬಾಟ್ಯುಲಿನಮ್ ಎಂಬ ಸೂಕ್ಷ್ಮಾಣು ಸರಿಯಾಗಿ ಜೀವಿಶುದ್ಧ ಮಾಡಿರದ ಕಾಯ್ದಿರಿಸಿದ ಆಹಾರದಲ್ಲಿ ಸೇರಿ ವಿಷಪದಾರ್ಥವೊಂದನ್ನು ಸೃಷ್ಟಿಸುವುದರಿಂದ ಅದನ್ನು ಸೇವಿಸಿದ ವ್ಯಕ್ತಿಯ ದೇಹದಲ್ಲಿ ವಿಸ್ತೃತ ಜೋಗರಿಕೆ ಉಂಟಾಗುತ್ತದೆ. ಮದ್ಯದ ಸೇವನೆ ಅತಿಯಾದಾಗ ಬಿ ವಿಟಮಿನ್ನಿನ ಅತೀವ ಕೊರತೆ ಆದಾಗ, ಜೈವಿಕಕ್ರಿಯೆಯ ಏರುಪೇರಾಗುತ್ತದೆ. ಪರಿಣಾಮವಾಗಿ ರಕ್ತದಲ್ಲಿ ವಿಷಪದಾರ್ಥಗಳು ಕಂಡುಬಂದು ವ್ಯಾಪಕವಾಗಿ ನರಗಳ ಉರಿತಕ್ಕೆ ಕಾರಣವಾಗುತ್ತದೆ. ಇದರ ಪರಿಣಾಮ ಕೈಕಾಲುಗಳ ಜೋಗರಿಕೆ.

ಹೀಗೆ ಪಕ್ಷಾಘಾತಕ್ಕೆ ನಾನಾ ಕಾರಣಗಳಿವೆ. ರೋಗದ ಮಾದರಿ ಹಾಗೂ ಲಕ್ಷಣಗಳು ಆಯಾ ಸಂದರ್ಭಕ್ಕೆ ತಕ್ಕಂತೆ ಇರುತ್ತವೆ. ತೀವ್ರತಮ ಜೋಗರಿಕೆ ಪ್ರಾಣಾಪಾಯಕಾರಿ. ಮಿಕ್ಕವಕ್ಕೆ ಕಾರಣ ತಿಳಿದು ಅಗತ್ಯವಾದ ಚಿಕಿತ್ಸಾವಿಧಾನವನ್ನು ಅನುಸರಿಸಬೇಕು. ಸ್ನಾಯುಗಳು ಮತ್ತು ನರಗಳು ಕ್ರಮೇಣ ತಮ್ಮ ಕಾರ್ಯಗಳಲ್ಲಿ ಉದ್ಯುಕ್ತವಾಗುವಂತೆ ಪುನಸ್ಸಂಸ್ಥಾಪನ ಕಾರ್ಯವನ್ನು (ರಿಹ್ಯಾಬಿಲಿಟೇಷನ್) ಕೈಗೊಳ್ಳಬೇಕು. ಇದಕ್ಕಾಗಿ ಪ್ರಕೃತಿ ಚಿಕಿತ್ಸಾಕ್ರಮವನ್ನು (ಫಿಸಿಯೋತೆರಪಿ) ಅನುಸರಿಸತಕ್ಕದ್ದು. ಕೆಲವು ಪ್ರಕರಣಗಳಲ್ಲಿ ಪಕ್ಷಾಘಾತ ಚಿಕಿತ್ಸೆಗೆ ಮಣಿಯುತ್ತದೆ. ರಕ್ತದ ಒತ್ತಡ ಬಹಳ ಏರಿದ್ದು, ರಕ್ತಸ್ರಾವವಾಗದೆ ಪಕ್ಷಾಘಾತವಾಗಿದ್ದರೆ, ರಕ್ತದ ಒತ್ತಡವನ್ನು ಕಡಿಮೆ ಮಾಡಿದ ಒಡನೆಯೇ ಶೀಘ್ರಗುಣ ಕಂಡುಬರುತ್ತದೆ. ಬಹುಶಃ ವೈದ್ಯನಿಗೆ ಕೀರ್ತಿತರುವ ಪಕ್ಷಾಘಾತ ಚಿಕಿತ್ಸೆ ಇದೊಂದೇ ಎಂದು ತೋರುತ್ತದೆ. ಮಿಕ್ಕ ಸಂದರ್ಭಗಳಲ್ಲಿ ಚಿಕಿತ್ಸೆ ಎಷ್ಟೇ ಪರಿಣಾಮಕಾರಿ ಆಗಿದ್ದರೂ ವ್ಯಕ್ತಿಯ ಮೇಲೆ ಜೋಗರಿಕೆಯ ಕುರುಹು ಕಿಂಚಿತ್ತಾದರೂ ಉಳಿದೇ ಇರುವುದು ಸಾಮಾನ್ಯ. ***

**ಪಕ್ಷಿಗಳು:** ಕಶೇರುಕಗಳ ಒಂದು ವರ್ಗ. ಹಕ್ಕಿ ಪರ್ಯಾಯ ಹೆಸರು. ದೇಹರಚನೆ ಆಗಸದಲ್ಲಿ ಹಾರಾಡಲು ಮಾರ್ಪಾಡಾಗಿದೆ. ಶರೀರ ರೆಕ್ಕೆಪುಕ್ಕಗಳಿಂದಾವೃತವಾಗಿದೆ. ಇವು ದ್ವಿಪಾದಿಗಳು. ಪುಕ್ಕ ಅಥವಾ ಗರಿ ಹಕ್ಕಿಗಳ ಮುಖ್ಯ ಗುಣ. ಎಲ್ಲ ಪಕ್ಷಿಗಳ ಶರೀರದ ಸುತ್ತ ಗರಿಗಳು ಆವರಿಸಿರುತ್ತವೆ. ಬೇರೆ ಯಾವ ಜೀವಿಯಲ್ಲಿಯೂ ಗರಿಗಳಿಲ್ಲ. ಗರಿಗಳಿಲ್ಲದ ಹಕ್ಕಿಯೂ ಇಲ್ಲ. ಅಂತೆಯೇ ರೆಕ್ಕೆಗಳೂ ಪಕ್ಷಿಗಳ ಮುಖ್ಯ ಅಂಗಗಳು. ಎಲ್ಲ ಹಕ್ಕಿಗಳಿಗೂ ರೆಕ್ಕೆಗಳಿರುವವು. ಹಕ್ಕಿಗಳು ಹಾರುವಾಗ ರೆಕ್ಕೆಗಳು ಅವುಗಳಿಗೆ ಸಮತೋಲನ ನೀಡುತ್ತವೆ. ಹಕ್ಕಿಗಳ ಹಾರಾಟಕ್ಕೆ ರೆಕ್ಕೆಗಳು ಅಗತ್ಯ ಎಂಬ ಭಾವನೆ ಇದೆಯಾದರೂ, ರೆಕ್ಕೆಗಳಿದ್ದ ಮಾತ್ರಕ್ಕೆ ಅವು ಹಾರುತ್ತವೆ ಎಂದರ್ಥವಲ್ಲ. ರೆಕ್ಕೆಗಳಿದ್ದರೂ ಹಾರಲಾರದ ಪಕ್ಷಿಗಳಿವೆ (ಉದಾ: ಆಸ್ಟ್ರಿಚ್, ಕಿವೀ ಮುಂತಾದುವು). ಹಕ್ಕಿಗಳಲ್ಲದೆ ಬೇರೆ ಕೆಲವು ಜೀವಿಗಳೂ ಹಾರಬಲ್ಲುವು (ಉದಾ: ಕೀಟಗಳು ಹಾಗೂ ಬಾವಲಿಗಳು). ಅವುಗಳಿಗೂ ರೆಕ್ಕೆಗಳು ಇರುತ್ತವಾದರೂ, ಹಕ್ಕಿಯ ರೆಕ್ಕೆಗಳಿಗೂ ಇವುಗಳ ರೆಕ್ಕೆಗಳಿಗೂ ರಚನೆಯಲ್ಲಿ ವ್ಯತ್ಯಾಸಗಳಿವೆ. ರೆಕ್ಕೆ ಗರಿಗಳಿಂದಾಗಿ ಈ ಜೀವಿಗಳು ಪ್ರಾಣಿ ಪ್ರಪಂಚದಲ್ಲಿ ವಿಭಿನ್ನ ಎನಿಸಿಕೊಂಡಿವೆ.

ಬ್ರಾಹ್ಮಿನಿ ಗಿಡುಗ

ಪಕ್ಷಿಗಳು ಬೆನ್ನೆಲುಬುಳ್ಳ ಪ್ರಾಣಿಗಳು. ಅವು ನೆಲದ ಮೇಲೆ ನಡೆದಾಡಬಲ್ಲುವಾದರೂ, ಅದಕ್ಕಿಂತ ಸಮರ್ಥವಾಗಿ ಆಕಾಶದಲ್ಲಿ ಹಾರಾಡಬಲ್ಲುವು. ಅನೇಕ ಪಕ್ಷಿಗಳು ಆಕಾಶದಲ್ಲಿ ಎತ್ತರದಲ್ಲಿ ಗಂಟೆಗೆ 160 ಕಿಮೀ ವೇಗದಲ್ಲಿ ಹಾರಬಲ್ಲುವು. ಪ್ರಾಣಿಪ್ರಪಂಚದಲ್ಲಿ ಇಷ್ಟು ವೇಗವಾಗಿ ಚಲಿಸಬಲ್ಲ ಬೇರ್‍ಯಾವುದೇ ಜೀವಿ ಇಲ್ಲ. ಅಂದರೆ ಎಲ್ಲಾ ಪಕ್ಷಿಗಳು ಇದೇ ವೇಗದಲ್ಲಿ ಹಾರಾಡುತ್ತವೆ ಎಂದಲ್ಲ. ಹಾರಾಟ ಸಾಧ್ಯವಿಲ್ಲದೆ ಸಂಪೂರ್ಣ ನೆಲದ ಮೇಲೆಯೇ ಬದುಕುವ ಪಕ್ಷಿಗಳೂ ಇವೆ (ಉದಾ: ಕೋಳಿ). ನೀರಿನಲ್ಲಿ ಈಜುತ್ತ ಜೀವಿಸುವ ಪಕ್ಷಿಗಳೂ ಇವೆ. ಅದರಿಂದ ಜೀವ ವಿಕಾಸದಲ್ಲಿ ಇವುಗಳಿಗೆ ವಿಶಿಷ್ಟ ಸ್ಥಾನವಿದೆ.


ನವಿಲು

ಆಕಾರ, ರಚನೆ, ಜೀವನವಿಧಾನ, ವರ್ತನೆ ಮುಂತಾದುವೂ ಕೂಡ ಉಳಿದ ಪ್ರಾಣಿಗಳಿಗಿಂತ ಭಿನ್ನ. ಮಾನವನಿಗೆ ಅನೇಕ ವಿಧದಲ್ಲಿ ಉಪಕಾರಿಯಾದ ಪಕ್ಷಿಗಳಿವೆ, ಹಾನಿಯುಂಟುಮಾಡುವ ಪಕ್ಷಿಗಳಿವೆ. ಮಾನವನ ಸಹಯೋಗದೊಡನೆ ಬದುಕುವ ಪಕ್ಷಿಗಳೂ ಇವೆ. ಹೀಗೆ ಪಕ್ಷಿಗಳು ಮಾನವನ ಜೀವನದ ಅವಿಭಾಜ್ಯ ಅಂಗಗಳು.

ಪಕ್ಷಿಗಳ ಹಾರಾಟದ ಪರಿ, ಚಿತ್ತಾಕರ್ಷಕ ವರ್ಣ, ಮಧುರವಾದ ಧ್ವನಿ ಮುಂತಾದುವುಗಳಿಂದಾಗಿ ತುಂಬಾ ಪುರಾತನ ಕಾಲದಿಂದಲೂ ಹಕ್ಕಿಗಳು ಮಾನವನ ಆಸಕ್ತಿ ಕೆರಳಿಸಿವೆ. ವಿಜ್ಞಾನಿಗಳಿಗೆ ಅವುಗಳ ಹಾರಾಟದ ಶಕ್ತಿ, ಬದುಕುವ ಮಾರ್ಗ, ಜೀವನ ವಿಧಾನಗಳು ಕುತೂಹಲ ಹುಟ್ಟಿಸುವ ವಿಷಯಗಳಾದರೆ, ಅವುಗಳ ಬಣ್ಣ, ಇಂಪಾದ ಧ್ವನಿ ಮುಂತಾದುವು ಕವಿಗಳಿಗೆ, ಸಾಹಿತಿಗಳಿಗೆ, ಕಲಾವಿದರಿಗೆ ಆಸಕ್ತಿ ಕೆರಳಿಸುವ ವಿಷಯಗಳು. ಪಕ್ಷಿಗಳ ಬದುಕನ್ನು ಮಾದರಿಯಾಗಿಟ್ಟುಕೊಂಡು ಅನೇಕ ಯಂತ್ರಗಳನ್ನು, ವಿಮಾನಗಳಂತಹ ಸಂಪರ್ಕ ಸಾಧನಗಳನ್ನು ಆವಿಷ್ಕರಿಸಲಾಗಿದೆ. ಅನೇಕ ವೈಜ್ಞಾನಿಕ ಸಿದ್ಧಾಂತಗಳನ್ನು ಪ್ರತಿಪಾದಿಸಲಾಗಿದೆ. ಕವನಗಳು ರಚನೆಯಾಗಿವೆ. ಸಾಹಿತ್ಯಗಳಲ್ಲಿಯಂತೂ ಎಲ್ಲ ಬಗೆಯಲ್ಲಿ ಪಕ್ಷಿಗಳನ್ನು ಉಲ್ಲೇಖಿಸಲಾಗಿದೆ. ಚಿತ್ರಗಳಲ್ಲಿ, ಶಿಲ್ಪಗಳಲ್ಲಿ, ಪಕ್ಷಿಗಳನ್ನು ಬಳಸಿಕೊಳ್ಳಲಾಗಿದೆ. ಪಕ್ಷಿಗಳನ್ನು ಬಳಸಿಕೊಂಡಾಗ ಕವನವಾಗಲಿ, ಸಾಹಿತ್ಯವಾಗಲಿ, ಚಿತ್ರವಾಗಲಿ, ಶಿಲ್ಪವಾಗಲಿ, ಹೆಚ್ಚು ಮೆರುಗನ್ನು ಪಡೆಯುತ್ತದೆ. ಪಕ್ಷಿಗಳನ್ನು ಸಾಹಿತ್ಯ, ಕಲೆಗಳಲ್ಲಿ ತುಂಬ ಹಿಂದಿನಿಂದಲೂ ಉಪಯೋಗಿಸಿ ಕೊಳ್ಳಲಾಗುತ್ತಿತ್ತು ಎಂದು ಪುರಾತನ ಸಾಹಿತ್ಯ ಹಾಗೂ ಕಲೆಗಳ ಅವಲೋಕನದಿಂದ ತಿಳಿದು ಬರುತ್ತದೆ. ಉದಾಹರಣೆಗೆ ಹಿಂದೂಗಳ ಮಹಾಕಾವ್ಯವೆಂದು ಪರಿಗಣಿಸಲಾದ ರಾಮಾಯಣ ಕ್ರೌಂಚ ಪಕ್ಷಿಗಳೆರಡರ ಪ್ರಸಂಗದಿಂದಲೇ ಆರಂಭವಾಗುತ್ತದೆ. ರಾಮಾಯಣದ ಕರ್ತೃ ವಾಲ್ಮೀಕಿಯು ಒಮ್ಮೆ ತನ್ನ ಕುಟೀರದ ಸಮೀಪದ ತಮಸಾನದಿಗೆ ಸ್ನಾನಕ್ಕೆ ಹೋಗಿದ್ದಾಗ ಬೇಡನೊಬ್ಬನು ಪ್ರಣಯದಲ್ಲಿ ತೊಡಗಿದ್ದ ಕ್ರೌಂಚ ಪಕ್ಷಿಗಳೆರಡರಲ್ಲಿ ಗಂಡನ್ನು ಬಾಣದಿಂದ ಕೊಲ್ಲುವನು. ಹೆಣ್ಣು ಗಂಡಿಗಾಗಿ ಆಕ್ರಂದಿಸುತ್ತಿದ್ದುದನ್ನು ಕಂಡು ದುಃಖಿತನಾದ ವಾಲ್ಮೀಕಿಯು ಬೇಡನಿಗೆ ಶಾಪ ಕೊಟ್ಟನು. ಅನಂತರ ಅನ್ಯಾಯವಾಗಿ ಶಾಪಕೊಟ್ಟೆನಲ್ಲ ಎಂದು ಚಿಂತಾಕ್ರಾಂತ ನಾಗಿರುವಾಗ ಬ್ರಹ್ಮನು ಅವನ ಆಶ್ರಮಕ್ಕೆ ಬಂದು ಅವನಿಗೆ ರಾಮಾಯಣವನ್ನು ರಚಿಸುವಂತೆ ಸೂಚಿಸುವನು. ಹೀಗೆ ಪಕ್ಷಿಗಳಿಂದಾಗಿ ರಾಮಾಯಣದ ರಚನೆಯಾಯಿತು.

ಪುರಾಣ, ಪುಣ್ಯಕಥೆ, ಮಹಾಕಾವ್ಯಗಳಲ್ಲಿ ಅನೇಕ ಕಡೆ ಪಕ್ಷಿಗಳನ್ನು ಬಳಸಿ ಕೊಳ್ಳಲಾಗಿದೆ. ಪಕ್ಷಿಗಳ ಹಾರಾಟದ ಶಕ್ತಿ, ಚಾಕಚಕ್ಯತೆ ಮುಂತಾದುವುಗಳನ್ನು ಪರಿಗಣಿಸಿ ಅವುಗಳಿಗೆ ಮುಖ್ಯವಾದ ಸ್ಥಾನ ನೀಡಲಾಗಿದೆ. ಗರುಡ, ವೈನತೇಯ, ಜಟಾಯು ಮುಂತಾದ ಹೆಸರುಗಳು ಪುರಾಣ ಕಥೆಗಳಲ್ಲಿ ಉಲ್ಲೇಖವಾಗಿವೆ. ಪಕ್ಷಿಗಳನ್ನು ಮಾನವೀಕರಿಸಲಾಗಿದೆ, ದೈವೀಕರಿಸಲಾಗಿದೆ, ರಾಕ್ಷಸೀಕರಣವನ್ನೂ ಮಾಡಲಾಗಿದೆ. ದಂತಕಥೆಗಳು ಹಾಗೂ ನೀತಿಕಥೆಗಳಲ್ಲಿ ಕೂಡ ಪಕ್ಷಿಗಳನ್ನು ಸಾಕಷ್ಟು ಬಳಸಿಕೊಳ್ಳಲಾಗಿದೆ. (ಎಸ್.ಎನ್.ಎಚ್)

ಪಕ್ಷಿಗಳು ಬಿಸಿರಕ್ತವುಳ್ಳ ಕಶೇರುಕ ಪ್ರಾಣಿಗಳು. ಸ್ತನಿಗಳೂ ಪಕ್ಷಿಗಳೂ ಸರೀಸೃಪಗಳಿಂದ ಉಗಮಿಸಿದುವು. ಮೊದಲನೆಯ ನೋಟದಲ್ಲಿ ಪಕ್ಷಿಗಳಿಗೂ ಸರೀಸೃಪಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲದಂತೆ ತೋರಿಬಂದರೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ

ಎರಡೂ ಗುಂಪುಗಳ ದೇಹರಚನೆಯಲ್ಲಿ ಅನೇಕ ಹೋಲಿಕೆಗಳನ್ನು ಕಾಣಬಹುದು. ಪಕ್ಷಿವರ್ಗ ಸರೀಸೃಪ ಜಾತಿಯ ಪೂರ್ವಜಗಳಿಂದ ಉದ್ಭವಿಸಿದೆಯೆಂಬುದಕ್ಕೆ ಆಧಾರ ಈ ಎರಡು ಗುಂಪುಗಳ ಅಸ್ಥಿಪಂಜರದ ಹೋಲಿಕೆಯಿಂದ ದೊರೆಯುತ್ತದೆ. ಉದಾ: ತಲೆಬುರುಡೆ ಬೆನ್ನುಮೂಳೆಯೊಂದಿಗೆ ಸೇರಿಕೊಂಡಿರುವ ರೀತಿ, ಸೊಂಟ ಭುಜ ನಡುಕಟ್ಟುಗಳ ರಚನೆ ಮತ್ತು ಕೆಳಕಾಲುಗಳು. ಬೇರೆ ಕಶೇರುಕಗಳ ಅಸ್ಥಿಪಂಜರದಲ್ಲಿ ಕಂಡುಬರದ ಇನ್ನೂ ಅನೇಕ ಹೋಲಿಕೆಗಳನ್ನು ಈ ಎರಡು ಪಂಗಡಗಳಲ್ಲಿ ನೋಡಬಹುದು. ಅಲ್ಲದೆ ಪಕ್ಷಿಯ ರಕ್ತ ಸರೀಸೃಪ ರಕ್ತದಂತಿದೆ. ಅಂದರೆ, ಮಿಕ್ಕೆಲ್ಲ ಕೀಳು ಕಶೇರುಕ ವರ್ಗಗಳಲ್ಲಿರುವಂತೆ ಕೆಂಪು ರಕ್ತಕಣದಲ್ಲಿ ಕೋಶಕೇಂದ್ರ ಉಳಿದು ಕೊಂಡಿದೆ. ಸ್ತನಿಗಳ ರಕ್ತದಲ್ಲಾದರೂ ಕೋಶಕೇಂದ್ರ ಇರದು.

ರೂಪದಲ್ಲೂ ರಚನೆಯಲ್ಲೂ ಸರೀಸೃಪ ಜಾತಿಯ ಮೊಟ್ಟೆಗಳನ್ನು ಬಹಳ ಮಟ್ಟಿಗೆ ಹೋಲುವ ತತ್ತಿಗಳನ್ನು ಹಕ್ಕಿಗಳೂ ಇಡುತ್ತವೆ. ಈ ಎರಡು ಗುಂಪುಗಳ ಭ್ರೂಣಗಳೂ ಒಂದು ಹಂತದವರೆಗೂ ಒಂದೇ ರೀತಿಯ ಬೆಳವಣಿಗೆಯನ್ನು ತೋರುವುವು. ಬಹುತೇಕ



ಬುಲ್‌ಬುಲ್

ಹಕ್ಕಿಗಳಲ್ಲಿ ಕೆಳಕಾಲು ಮತ್ತು ಕಾಲ್ಬೆರಳುಗಳ ಮೇಲೆ ಸರೀಸೃಪಗಳಿಗಿರುವಂಥ ಹುರುಪೆಗಳಿವೆ. ಮರಳು ಗೌಜಲು, ಹದ್ದು, ಗೂಬೆ ಮುಂತಾದ ಪಕ್ಷಿಗಳಲ್ಲಿ ಕಾಲುಗಳ ಮೇಲೆ ಗರಿಗಳಿರುವುದರಿಂದ, ಗರಿಗಳು ಮಾರ್ಪಾಡು ಹೊಂದಿದ ಹುರುಪೆಗಳೆಂದೂ ಒಂದರ ಬದಲು ಇನ್ನೊಂದು ಇರುವುದು ಸಾಧ್ಯವೆಂದೂ ವೇದ್ಯವಾಗುತ್ತದೆ. ಪಕ್ಷಿ ಜಾತಿ ಸರೀಸೃಪ ಮೂಲದಿಂದ ಹುಟ್ಟಿದ್ದೆಂಬುದಕ್ಕೆ ಜುರಾಸಿಕ್ ಯುಗದ ಅಂದರೆ ಕೋಟಿ ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದ ಎರಡು ಪಕ್ಷಿಗಳ ಅವಶೇಷಗಳು ಇನ್ನೂ ಹೆಚ್ಚಿನ ಆಧಾರವನ್ನು ಒದಗಿಸುತ್ತವೆ. ಇವು ಸರೀಸೃಪ ವರ್ಗಕ್ಕೂ ಆಧುನಿಕ ಪಕ್ಷಿಗಳಿಗೂ ನಡುವಣ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತವೆ. ಇವುಗಳಲ್ಲಿ ಕಾಗೆಯ ಗಾತ್ರದ ಆರ್ಕಿಯಾಪ್ಟೆರಿಕ್ಸ್ ಎಂಬುದು ಎರಡು ವಿಶೇಷ ಗುಣಗಳನ್ನು ಪಡೆದಿದೆ. ಈ ಗುಣಗಳ ಪೈಕಿ ಒಂದು ನಿರ್ದಿಷ್ಟವಾಗಿ ಸರೀಸೃಪ ಜಾತಿಯದು. ಇನ್ನೊಂದು ಪಕ್ಷಿ ವರ್ಗದ್ದು. ಇದರ ಮೊಟಕು ಕೊಕ್ಕಿನಲ್ಲಿ ಕುಳಿಯಲ್ಲಿ ಕೂತಿರುವ ಹಲ್ಲುಗಳುಂಟು. ಇವು ಮರ್ಗ್ಯಾನ್ಸರ್ ಮತ್ತು ಇಂದಿನ ಮತ್ಸ್ಯಾಹಾರಿ ಬಾತುಗಳ ಕೊಕ್ಕುಗಳಲ್ಲಿರುವ ಕೊಂಬಿನ ರಚನೆಗಳಂತಿಲ್ಲ. ಬೆನ್ನೆಲುಬುಗಳಿಂದ ಕೂಡಿದ್ದು ಎರಡು ಪಕ್ಕಗಳಲ್ಲೂ ನಿಜವಾದ ಗರಿಗಳ ಕುಚ್ಚುಗಳಿಂದ ಕೂಡಿದೆ. ಆಧುನಿಕ ಹಕ್ಕಿಯಲ್ಲಿ ಬಾಲದ ಎಲುಬುಗಳೆಲ್ಲ ಒಂದಾಗಿ ಕೂಡಿಕೊಂಡು ಬೀಸಣಿಗೆ ಆಕಾರದ ಬಾಲದ ಗರಿಗಳನ್ನು ಹೊರುವ ಪೈಗೋಸ್ಟೈಲ್ ಎಂಬ ಮೂಳೆಯ ಹಲಗೆಯಾಗಿ ಬದಲಾವಣೆ ಹೊಂದಿದೆ. ಆರ್ಕಿಯಾಪ್ಟೆರಿಕ್ಸ್ ರೆಕ್ಕೆ ಮತ್ತು ಕಂಕಾಲದ ಲಕ್ಷಣಗಳು ಅದು ಈಚಿನ ಪಕ್ಷಿಯ ಪೂರ್ವಜ ಎಂಬುದನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ತೋರಿಸುತ್ತವೆ. ವಿಕಾಸಗೊಳ್ಳುತ್ತಿರುವ ಪಕ್ಷಿ ಜಾತಿಯ ಇನ್ನಾವ ಅವಶೇಷಗಳೂ ಆರ್ಕಿಯಾಪ್ಟೆರಿಕ್ಸ್ ಹೊರತು, ಕ್ರಿಟೇಷಿಯ ಯುಗದ ಹಿಂದೆ ಅಥವಾ ಮುಂದೆ ದೊರೆತಿಲ್ಲ. ಹಕ್ಕಿಯ ಮೂಳೆ ಮತ್ತು ಗರಿಗಳ ಸೂಕ್ಷ್ಮ ಮತ್ತು ನಶಿಸುವ ಸ್ವಭಾವವನ್ನು ನೋಡಿದಾಗ ಹಾಗೂ ಪಕ್ಷಿಗಳ ಅವಶೇಷಗಳು ಉಳಿಯಬೇಕಾದರೆ ವಿಶೇಷ ಸನ್ನಿವೇಶವಿರಬೇಕೆಂಬುದನ್ನು ಗಣನೆಗೆ ತೆಗೆದುಕೊಂಡಾಗ ಇದು ಆಶ್ಚರ್ಯವೇನಲ್ಲವೆಂಬುದು ವೇದ್ಯವಾಗುತ್ತದೆ.

ಗರಿಗಳು : ಹಕ್ಕಿಯ ದೇಹದ ಮೇಲೆ ಹೊದಿಕೆಯಂತಿರುವ ಗರಿಗಳಿಂದಾಗಿ ಒಂದೇ ಸಮನಾದ ಉಷ್ಣತೆ ಇರುವಂತಾಗಿದೆ ( ಈ ಉಷ್ಣತೆ ಸ್ತನಿಗಳಿಗಿಂತ ಹೆಚ್ಚು, ಅಂದರೆ ಸುಮಾರು $39^0$ಸೆ. ರಿಂದ $45^0$ಸೆ.). ಗರಿಗಳ ರಚನೆ ಮತ್ತು ಜೋಡಣಾವಿನ್ಯಾಸ ಬೇರೆ ಬೇರೆ ಗುಂಪುಗಳ ಜೀವನ ರೀತಿಯನ್ನು ಪ್ರತಿಬಿಂಬಿಸುತ್ತವೆ. ಬಾತುಗಳು ಮತ್ತಿತರ ನೀರುಹಕ್ಕಿ, ಕ್ಯಾಸೋವರಿಯ ಗರಿಗಳು ಕೂದಲಿನಂತೆ ಇದ್ದು ಎರಡು ತುದಿಗಳಲ್ಲಿಯೂ ಮೊನಚಾಗಿವೆ. ಈ ಹಕ್ಕಿ ಮತ್ತು ಉಷ್ಟ್ರಪಕ್ಷಿ, ಈಮ್ಯೂ, ಪೆಂಗ್ವಿನ್ ಗಳಲ್ಲಿ ದೇಹಾದ್ಯಂತ ಹೆಚ್ಚು ಕಡಿಮೆ ಒಂದೇ ರೀತಿಯ ಗರಿ ಇದೆ; ಮಿಕ್ಕೆಲ್ಲ ಹಕ್ಕಿಗಳಲ್ಲಿ ಗರಿಗಳ ಬೆಳೆವಣಿಗೆ ಮೈಮೇಲಿನ ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತಗೊಂಡಿವೆ. ಈ ಜಾಗಗಳಲ್ಲಿ ಹುಟ್ಟಿದ ಗರಿಗಳು ಅಕ್ಕಪಕ್ಕಗಳಿಗೆ ಪಸರಿಸಿ ಗರಿರಹಿತ ಪ್ರದೇಶಗಳನ್ನು ಮುಚ್ಚುತ್ತವೆ. ಪಕ್ಷಿಗಳ ವರ್ಗೀಕರಣದಲ್ಲಿ ಗರಿಗಳ ಉತ್ಪತ್ತಿ, ಪ್ರದೇಶಗಳ ಅಧ್ಯಯನ ಮುಖ್ಯವಾದದ್ದು. (ನೋಡಿ: ಗರಿಗಳು)

ಹಕ್ಕಿಗಳ ಗರಿಗಳ ಬಣ್ಣ ಮೂರು ರೀತಿಯಲ್ಲಿ ಉತ್ಪತ್ತಿಯಾಗುತ್ತದೆ ; 1. ವರ್ಣಕಗಳಿಂದ, 2.ಭೌತಿಕ ರಚನೆಯಿಂದ, 3. ವರ್ಣ ಮತ್ತು ರಚನೆಕೂಡಿ. ಕಪ್ಪು, ಕೆಂಪು, ಕಂದು, ಹಳದಿ, ಕಿತ್ತಳೆ ಬಣ್ಣಗಳು ವರ್ಣಗಳಿಂದ ಉಂಟಾಗುವಂಥವು. ಈ ವರ್ಣಕಗಳು ಬೆಳಕಿನ ಕೆಲವು ನಿರ್ದಿಷ್ಟ ತರಂಗಗಳನ್ನು ಹೀರಿಕೊಂಡು ಮಿಕ್ಕವನ್ನು ಹೊರ ಸೂಸುವಂಥ ರಾಸಾಯನಿಕ ವಸ್ತುಗಳು. ಇದರಿಂದ ನಮ್ಮ ದೃಷ್ಟಿಗೆ ಬಣ್ಣದ ಅರಿವು ಉಂಟಾಗುತ್ತದೆ. ಹಕ್ಕಿಗಳ ಪುಕ್ಕಗಳಲ್ಲಿರುವ ಸಾಮಾನ್ಯವಾದ ವರ್ಣಕಗಳೆಂದರೆ ಮೆಲಾನಿನ್ ಮತ್ತು ಕ್ಯಾರೋಟಿನ್. ನೀಲಿ ಮತ್ತು ಬಿಳಿ ಬಣ್ಣಗಳು ಎಂದಿಗೂ ವರ್ಣಕಕ್ಕೆ ಸಂಬಂಧಿಸಿದ ಬಣ್ಣಗಳಲ್ಲ. ಹಾಗೆಯೇ (ಆಫ್ರಿಕೆಯ ಕದಳೀಫಲ ಭಕ್ಷಕ ಹಕ್ಕಿಗಳಲ್ಲಿ ಹೊರತು) ಹಸಿರು ಬಣ್ಣ ಕೂಡ ವರ್ಣಕಗಳಿಂದ ಉಂಟಾಗುವಂಥದಲ್ಲ. ಈ ಪಕ್ಷಿಗಳ ಗರಿಗಳಲ್ಲಿ ಟಕೋವರ್ಡಿನ್ ಎಂಬ ವಿಶೇಷ ಹಸಿರು ವರ್ಣಕವಿರುವುದಲ್ಲದೆ ಟ್ಯೂರಾಸಿನ್ ಎಂಬ ವಿಚಿತ್ರ ರೀತಿಯ ಕೆಂಪು ವರ್ಣಕ ಇದೆ; ಇದು ನೀರಿನಲ್ಲಿ ಸುಲಭವಾಗಿ ಕರಗಿಹೋಗುತ್ತದೆ. ಹೀಗಾಗಿ ಪ್ರತಿಸಲ ಹೊಸದಾಗಿ ಪುನರುತ್ಪತ್ತಿಯಾಗುವುದು. ಬೆಳೆಯುತ್ತಿರುವ ಗರಿಯಲ್ಲಿ ಮಾತ್ರ ರಕ್ತಚಲನೆಯ ಮೂಲಕ ವರ್ಣಕ ಪ್ರಭಾವ ಬೀರಬಲ್ಲುದು; ಗರಿ ಪೂರ್ತಿ ಬೆಳೆದ ಮೇಲೆ ಹೊರ ವಾತಾವರಣಕ್ಕೆ ಈಡಾಗುವುದರ ಫಲವಾಗಿ ಅದರ ಬಣ್ಣ ಮಲಿನಗೊಳ್ಳಬಹುದು. ಅಥವಾ ವಿವರ್ಣವಾದ ಅಂಚುಗಳು ತೆರೆದಂತಾಗುವುದರಿಂದ ಕಪ್ಪು ಛಾಯೆ ಹೊಂದಬಹುದು. ಆದರೆ ಇನ್ನೊಂದು ಬಣ್ಣಕ್ಕೆ ಎಂದಿಗೂ ತಿರುಗಲಾರದು.

ಉಷ್ಟ್ರ ಪಕ್ಷಿ (ಆಸ್ಟ್ರಿಚ್)

ಭೌತಿಕ ರಚನೆಯ ಬಣ್ಣಗಳು ಬೆಳಕಿನ ತತ್ವದ ಆಧಾರದ ಮೇಲೆ ನಿಂತಿವೆ; ಗರಿಗಳಲ್ಲಿ ಯಾವ ಬಣ್ಣವೂ ಇರುವುದಿಲ್ಲ. ಆದರೆ ಅವುಗಳ ಮೇಲ್ಮೈ ನುಣುಪಾಗಿರದೆ ಅಸಂಖ್ಯಾತ ಮತ್ತು ಅತ್ಯಂತ ಸೂಕ್ಷ್ಮವಾದ ಉಬ್ಬು ತಗ್ಗುಗಳಿಂದ ಕೂಡಿದೆ. ಇವುಗಳ ಮೇಲೆ ಬೀಳುವ ಬೆಳಕು ರೋಹಿತದ ವಿವಿಧ ವರ್ಣಗಳಾಗಿ ಒಡೆಯುತ್ತದೆ. ಗರಿಯಲ್ಲಿ ವರ್ಣಕವೂ ಇದ್ದು ಜೊತೆಗೆ ಹೇಳಿದಂತೆ ಮೇಲ್ಮೈ ಇಡಕು ದೆಡಕುಗಳಿಂದ ಕೂಡಿದ್ದರೆ, ಗಂಡು ನವಿಲಿನ ಬಾಲದ ಗರಿಗಳಲ್ಲಿ ಕಾಣುವಂಥ ಥಳಥಳನೆ ಮಿರುಗುವ ಹೊಳಪು ಉಂಟಾಗುತ್ತದೆ. ಭಾರತದಲ್ಲಿ ಬಹಳ ಸಾಮಾನ್ಯವಾಗಿರುವ ಊದಾ ಬಣ್ಣದ ಸೂರಕ್ಕಿಯ ಗಂಡು ಹಕ್ಕಿಯಲ್ಲಿ ಬಣ್ಣದ ಈ ಮೂರು ಬಗೆಗಳೂ ಇವೆ. ಲೋಹೀಯವಾಗಿ ಹೊಳೆಯುವ ಇದರ ಗರಿಗುಚ್ಛದ ಭಾಗಗಳಲ್ಲಿ ಹರಳಿನ ರಚನೆಯಂತೆ ಉಬ್ಬುತಗ್ಗುಗಳೊಂದಿಗೆ ವರ್ಣಕಗಳು ಬೆರೆತಿರುವುವು ; ರೆಕ್ಕೆಗಳಲ್ಲಿರುವ ಮಬ್ಬು ಕಪ್ಪು, ಕಂದುಬಣ್ಣ ಮತ್ತು ಎದೆಭಾಗದ ಕೆಂಪು

ಗುಚ್ಛಗಳು ವರ್ಣಕಗಳಿಂದ ಮಾತ್ರ ಉಂಟಾಗಿವೆಯಾದರೆ ಎದೆಯ ಹಳದಿ ಗುಚ್ಛಗಳಿಗೆ ಅವುಗಳ ವಿಶೇಷ ರಚನೆಯೇ ಕಾರಣ.

ಕೊಕ್ಕುಗಳು : ಆಹಾರವನ್ನು ಸೇವಿಸುವುದಕ್ಕೆ ಹೊಂದಿಕೆಯಾಗಿರುವಂತೆ ನೇರವಾಗಿ ಮಾರ್ಪಾಟಾಗಿರುವ ಆಕಾರ, ಗಾತ್ರಗಳ ವೈವಿಧ್ಯದಿಂದ ಕೂಡಿರುವ ಕೊಕ್ಕುಗಳನ್ನು ಪಕ್ಷಿವರ್ಗದಲ್ಲಿ ಕಾಣಬಹುದು. ಉಗುರು, ಕಾಲಿನ ಮೇಲಿರುವ ಗೊಂಡೆಗಳು ಮತ್ತು ಕೆಳಕಾಲಿನ ಹುರುಪೆಗಳಂತಿರುವ ಕೊಂಬಿನ ಹೊದಿಕೆ ಕೊಕ್ಕಿನ ಎಲುಬಿನ ಮೇಲೂ ಉಂಟು. ಇದು ತುದಿಯಲ್ಲಿ ಸವೆಯುತ್ತ ಬಂದಂತೆ ಬುಡದಿಂದ ಬೆಳೆಯುತ್ತಲೇ ಇರುತ್ತದೆ. ಕೆಲವು ಹಕ್ಕಿಗಳಲ್ಲಿ ಕೊಕ್ಕಿನ ಮೇಲೆ ಇರುವ ಹೊಳೆಯುವ ಬಣ್ಣದ ಹೊದಿಕೆ ಸಂತಾನೋತ್ಪತ್ತಿ ಕಾಲದ ತರುವಾಯ ಕಳಚಿ ಹೋಗುತ್ತದೆ. (ನೋಡಿ : ಕೊಕ್ಕು).



ಬಿಳಿ ಕೊರಳಿನ ಮೀಂಚುಳ್ಳಿ

ರೆಕ್ಕೆಗಳು: ಪಕ್ಷಿಯ ಮುಂಗಾಲಿನ (ರೆಕ್ಕೆಯ)ಎಲುಬುಗಳು ಮನುಷ್ಯನ ಮುಂಗೈಯ ಎಲುಬುಗಳಂತೆಯೇ ಇವೆಯಾದರೂ ಮೊಣಕೈ ಮತ್ತು ಹಸ್ತದ ಮೂಳೆಗಳು ಬಹಳ ಮಟ್ಟಿಗೆ ಒಟ್ಟಿಗೆ ಕೂಡಿಕೊಂಡು ಬಲವನ್ನೂ ಗಡಸುತನವನ್ನೂ ಒದಗಿಸಿವೆ. ತೋಳಿಗೆ ಮತ್ತು ಕೈಗೆ ಅಂಟಿಕೊಂಡಿರುವ ಗರಿಗಳು ಪಕ್ಷಿಯ ಹಾರಾಟದಲ್ಲಿ ನೆರವಾಗುತ್ತವೆ. ಇಂದಿನ ಜೀವಂತ ಪಕ್ಷಿಗಳಲ್ಲಿ ಅತ್ಯಂತ ದೊಡ್ಡ ಪಕ್ಷಿಯೆಂದರೆ ದಕ್ಷಿಣಧ್ರುವ ಸಮುದ್ರದ

ಆಲ್ಬಟ್ರಾಸ್ ; ಇದರ ಪಸರಿಸಿದ ರೆಕ್ಕೆಗಳ ಹರವು 335 ಸೆಂಮೀ ಇರುವುದುಂಟು. ಇದರ ತೂಕ 25 ಕಿಗ್ರಾಂ. ಅತ್ಯಂತ ಕಿರಿದಾದ ಹಕ್ಕಿ ಪಶ್ಚಿಮಾರ್ಧಗೋಳದ ಚಿಕ್ಕ ಝೇಂಕಾರ ಪಕ್ಷಿ. ಇದರ ರೆಕ್ಕೆಯ ಹರವು ಸುಮಾರು 85 ಮೀಮೀ. ತೂಕ ಕೇವಲ 2 ಗ್ರಾಂ. ಹಕ್ಕಿಗಳ ಹಾರಾಟದ ವೇಗ ಸಹಜವಾಗಿಯೆ ಅವುಗಳ ಪ್ರಭೇದ ಮತ್ತು ಹಾರುವಾಗಿನ ಹವಾಗುಣಗಳನ್ನು ಅವಲಂಬಿಸುತ್ತದೆ. ಮಧ್ಯಮ ಗಾತ್ರದ ಹಕ್ಕಿಗಳು ಗಂಟೆಗೆ ಸುಮಾರು 50–60 ಕಿಮೀ ಹಾರಬಲ್ಲವು. ವಿಶೇಷ ಸಂದರ್ಭಗಳಲ್ಲಿ ಮತ್ತು ಕಡಿಮೆ ದೂರ ಮಾತ್ರ ಇದಕ್ಕೂ ಹೆಚ್ಚಿನ ವೇಗದಲ್ಲಿ ಪಕ್ಷಿಗಳು ಹಾರಬಲ್ಲವು. ಉದಾಹರಣೆಗೆ, ಗಿಡುಗ ತನ್ನ ಬೇಟೆಯ ಮೇಲೆ ಎರಗುವಾಗ ಗಂಟೆಗೆ 160 ಕಿಮೀ ಗೂ ಹೆಚ್ಚು ವೇಗವಾಗಿ ಹಾರಬಲ್ಲದು. ಸಣ್ಣ ಹಕ್ಕಿಗಳು ಸ್ವಲ್ಪ ಮಂದಗಾಮಿಗಳು. ಅಂದರೆ ಗಂಟೆಗೆ 30–40 ಕಿಮೀ ವೇಗದಲ್ಲಿ ಹಾರುತ್ತವೆ.

ಪಕ್ಷಿಗಳ ರೆಕ್ಕೆಗಳು ಅನೇಕ ವಿನ್ಯಾಸಗಳಿಂದ ಕೂಡಿರುವುದರಿಂದ ಅನೇಕ ತರಹ ಹಾರಾಟಗಳನ್ನು ನೋಡಬಹುದು. ಅದರ ಬಾಲವೂ ಸಹ ಅದರ ಹಾರಾಟಕ್ಕನುಗುಣವಾಗಿ ಮಾರ್ಪಾಟಾಗಿದೆ. ಹದ್ದು, ರಣಹದ್ದುಗಳಲ್ಲಿ ಬಾಲವು ಚಿಕ್ಕದಾಗಿ ಗುಂಪಾಗಿವೆ. ಬಿಳಿ ಕೋಗಿಲೆ (ಟ್ರೀಪೈ), ಕಾಜಾಣ ಮುಂತಾದವುಗಳಲ್ಲಿ ಉದ್ದವಾದ ಬಾಲವಿದೆ. ಕವಲು ತೋಕೆಗಳಲ್ಲಿ ಬಾಲವು ಎರಡು ಭಾಗವಾಗಿದೆ. ಮುಖ್ಯವಾಗಿ ಮೂರು ತರಹದ ಹಾರಾಟವನ್ನು ಗುರುತಿಸಬಹುದು.

1. ರೆಕ್ಕೆಯ ಬಡಿತದಿಂದ ಆಗುವ ಹಾರಾಟ: ಇದು ಸಾಮಾನ್ಯವಾಗಿ ಅನೇಕ ತರಹ ಪಕ್ಷಿಗಳಲ್ಲಿ ಕಂಡು ಬರುತ್ತದೆ. ರೆಕ್ಕೆಗಳನ್ನು ಮೇಲಕ್ಕೂ ಕೆಳಕ್ಕೂ ಬಡಿದು ಮುಂದೆ ಸಾಗುತ್ತದೆ. ರೆಕ್ಕೆಗಳನ್ನು ಮೇಲಕ್ಕೆತ್ತುವಾಗ ಸ್ವಲ್ಪ ಬಾಗಿರುವುದರಿಂದ ಒತ್ತಡ ಆದಷ್ಟು ಕಡಿಮೆಯಾಗಿ, ರೆಕ್ಕೆಗಳು ಕೆಳಕ್ಕೆ ಬಡಿಯುವಾಗ ನೀಳವಾಗಿ ಚಾಚಲ್ಪಟ್ಟಿರುವುದರಿಂದ ಹಕ್ಕಿಗಳು ಮೇಲೇರಲೂ ಹಾಗೂ ಮುಂದೆ ಹೋಗಲೂ ಸಹಾಯವಾಗುತ್ತದೆ. ರೆಕ್ಕೆಗಳ ಬಡಿತವು ಪಕ್ಷಿಯ ಗಾತ್ರ ಹಾಗೂ ಅವುಗಳ ವೇಗವನ್ನವಲಂಬಿಸಿದೆ. ಗುಬ್ಬಚ್ಚಿಯು ಪ್ರತಿ ಸೆಕೆಂಡಿಗೆ 15 ಸಲ, ಪೆಲಿಕನ್ ಸೆಕೆಂಡಿಗೆ 1–2 ಸಲ ಮಾತ್ರ ಬಡಿಯುತ್ತವೆ. ಸಣ್ಣ ಗುಂಡಾಗಿರುವ ರೆಕ್ಕೆಗಳ ಪಕ್ಷಿಗಳು ಹೆಚ್ಚು ಹಾರಾಡುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ.

2. ತೇಲುವಿಕೆ : ಇಂತಹ ಚಲನೆಯನ್ನು ಗಾಳಿಯ ವೇಗವನ್ನನುಸರಿಸಿ ಹಾರುವ ಪಕ್ಷಿಗಳಲ್ಲಿ ನೋಡಬಹುದು. ಪಕ್ಷಿಗಳು ಒಂದು ಎತ್ತರ ಪ್ರದೇಶದಿಂದ ಹಾರದಿದ್ದರೂ ಹಾರುವ ಮುನ್ನ ಕೆಲವು ಸಲ ರೆಕ್ಕೆಯನ್ನು ಬಡಿಯ ಬೇಕಾಗುತ್ತದೆ. ಆಗಾಗ ರೆಕ್ಕೆಯನ್ನು ಬಡಿಯದಿದ್ದರೆ ದೂರ ಚಲಿಸಿದ ಹಾಗೆ ಎತ್ತರ ಕಡಿಮೆಯಾಗುತ್ತಾ ಹೋಗುತ್ತದೆ. ಸಮುದ್ರ ಗಲ್ ಗಳು ಇದಕ್ಕೆ ಉತ್ತಮ ನಿದರ್ಶನ. ಸಮುದ್ರದ ಮಧ್ಯದಲ್ಲಿ ಹಡಗಿನ ಸುತ್ತ ಇವುಗಳು ಈ ರೀತಿಯಲ್ಲಿ ಹಾರಾಡುತ್ತವೆ.

3. ಆಕಾಶದಲ್ಲಿ ತೇಲುವಿಕೆ (ಸೋರಿಂಗ್): ಹಾರಾಟಗಳಲ್ಲಿ ಅತ್ಯಂತ ರಮಣೀಯವಾದದ್ದು. ಪಕ್ಷಿಗಳು ಬಿಸಿಗಾಳಿಯ ಪ್ರವಾಹವನ್ನನುಸರಿಸಿ ಗಾಳಿಯಲ್ಲಿ ತೇಲುತ್ತವೆ. ತಮ್ಮ ಹರಡಿದ ರೆಕ್ಕೆ ಮತ್ತು ಬಾಲವನ್ನು ವಿವಿಧ ರೀತಿಯಲ್ಲಿ ಉಪಯೋಗಿಸಿ ಗಾಳಿಯಲ್ಲಿ ತೇಲುತ್ತವೆ. ಹದ್ದು, ರಣಹದ್ದು, ಬೆಳ್ಳಕ್ಕಿ ಮುಂತಾದವುಗಳು ಈ ರೀತಿಯ ತೇಲುವಿಕೆಗೆ ಉತ್ತಮ ಉದಾಹರಣೆಗಳು.

ಇದಲ್ಲದೆ ಈ ಮೂರು ಮುಖ್ಯ ವಿಧಗಳ ಸಂಯೋಗದಿಂದ ಇತರ ಪಕ್ಷಿಗಳು ಅನೇಕ ವಿಧದಲ್ಲಿ ಹಾರಾಡುತ್ತವೆ. ಮರಕುಟಿಗವು ಕೆಲವು ಕ್ಷಣ ರೆಕ್ಕೆ ಬಡಿದು, ಕೆಲವು ಕ್ಷಣ ನಿಲ್ಲಿಸಿ ಮತ್ತೆ ಬಡಿತವನ್ನು ಪ್ರಾರಂಭಿಸುತ್ತವೆ. ಚುಕ್ಕಿಗಳಿರುವ ಮೀಂಚುಳ್ಳಿ, ಕರಿರೆಕ್ಕೆಗಳಿರುವ ಗಿಡುಗಗಳು ಒಂದೇ ಸಮನೆ ರೆಕ್ಕೆ ಬಡಿಯುತ್ತಾ ಒಂದೇ ಸ್ಥಳದಲ್ಲಿ ಚಲಿಸದೇ ಹಾಗೆಯೇ ನಿಲ್ಲಲು ಸಮರ್ಥವಾಗಿವೆ. ಈ ರೀತಿಯ ಹಾರಾಟದಿಂದ ಇವುಗಳು ತಮ್ಮ ಬೇಟೆಯನ್ನನುಸರಿಸುತ್ತವೆ. ಝೇಂಕಾರ ಪಕ್ಷಿಗಳು ಸೆಕೆಂಡಿಗೆ 50–60 ಸಲ ಈ ರೀತಿಯಲ್ಲಿ ರೆಕ್ಕೆ ಬಡಿಯುತ್ತಾ ನಿಲ್ಲಲು ಸಮರ್ಥವಾಗಿವೆ.

ಜ್ಞಾನೇಂದ್ರಿಯಗಳು: ಹಕ್ಕಿಯ ಮಿದುಳು ಗಾತ್ರದಲ್ಲಿ ಚಿಕ್ಕದು. ಆದರೂ ರಚನೆ ಮತ್ತು ಕ್ರಿಯೆಯಲ್ಲಿ ಬೇರೆ ಕಶೇರುಕಗಳ ಮಿದುಳಿನಂತೆಯೇ ಇದೆ. ಜ್ಞಾನೇಂದ್ರಿಯಗಳಲ್ಲಿ ಕಣ್ಣು ಮತ್ತು ಕಿವಿ ಚುರುಕಾಗಿದ್ದರೂ ಘ್ರಾಣೇಂದ್ರಿಯ ಅಷ್ಟು ಚುರುಕಲ್ಲ. ದೃಷ್ಟಿಗೆ ಸಂಬಂಧಿಸಿದ ಮಿದುಳಿನ ಹಾಲೆಗಳು ದೊಡ್ಡ ಗಾತ್ರದವಾಗಿವೆ. ಹಕ್ಕಿಗಳ ಕಣ್ಣು ಜಟಿಲವಾದ, ಸಮರ್ಥವಾದ ಮತ್ತು ಅತ್ಯಂತ ಸೂಕ್ಷ್ಮವಾದ ಅಂಗವಾಗಿದ್ದು ಆಕಾಶದಲ್ಲಿ ವೇಗವಾಗಿ ಹಾರುವಾಗ ಬೇಕಾದ ದೃಷ್ಟಿಪಟುತ್ವ ಹೊಂದಿದೆ ಮತ್ತು ದೂರದ ವಸ್ತುವಿನಿಂದ ಸಮೀಪದ ವಸ್ತುವಿನ ಮೇಲೆ ತಕ್ಷಣದಲ್ಲಿ ನಾಭೀಕರಿಸಬಲ್ಲ ಸಾಮರ್ಥ್ಯ ಪಡೆದಿದೆ. ಬಹುಪಾಲು ಹಕ್ಕಿಗಳಲ್ಲಿ ಕಣ್ಣುಗಳು ತಲೆಯ ಪಾರ್ಶ್ವಗಳಲ್ಲಿವೆ. ಒಂದೊಂದಕ್ಕೂ ಸ್ವತಂತ್ರವಾಗಿ ಕೆಲಸ ಮಾಡಬಲ್ಲ ಸಾಮರ್ಥ್ಯವಿರುವುದರಿಂದ ಒಕ್ಕಣ್ಣು ನೋಟ ಉಂಟು. ಆದರೆ ಗೂಬೆಗಳಲ್ಲಿ ಎರಡು ಕಣ್ಣುಗಳೂ ಮುಂಭಾಗದಲ್ಲಿರುವುದರಿಂದ ಮನುಷ್ಯನಂತೆಯೇ ಇವುಗಳಲ್ಲಿ ಇಕ್ಕಣ್ಣು ನೋಟವಿದೆ.

ಕಿವಿ

ಹೊರಕಿವಿಗಳಿಲ್ಲ. ಕಣ್ಣುಗಳ ಹಿಂಭಾಗದಲ್ಲಿ ಸ್ಥಿತವಾಗಿರುವ ಶ್ರವಣೇಂದ್ರಿಯ ರಂಧ್ರಗಳು ದೊಡ್ಡವಾಗಿದ್ದರೂ ಕಿವಿ ಹೊದಿಕೆಗಳೆಂಬ ವಿಶೇಷ ಗರಿಗುಚ್ಛದಿಂದ ಆವೃತವಾಗಿವೆ. ಪಕ್ಷಿಗಳ ಶ್ರವಣ ಸಾಮರ್ಥ್ಯ ಬಲು ಚುರುಕಾಗಿದೆ. ಉದಾಹರಣೆಗೆ, ಥ್ರಷ್ ಹಕ್ಕಿ ಭೂಮಿಯೊಳಗೆ ಹುದುಗಿರುವ ಹುಳುಗಳ ಚಲನೆಯನ್ನು ಪತ್ತೆ ಹಚ್ಚಬಲ್ಲದು. ಪೂರ್ತಿ ಕತ್ತಲಿರುವ ಗುಹೆಗಳಲ್ಲಿ ವಾಸಿಸುವ ದಕ್ಷಿಣ ಅಮೆರಿಕದ ತೈಲ ಪಕ್ಷಿಗಳು (ಆಯಿಲ್ ಬರ್ಡ್ಸ್–ಸ್ವಿಯಟಾರ್ನಿಸ್) ಹಾರಾಡುವಾಗ ಗೋಡೆಗಳಿಗಾಗಲಿ ಪರಸ್ಪರವಾಗಲೀ ಡಿಕ್ಕಿ ಹೊಡೆಯವು. ಇದಕ್ಕೆ ಕಾರಣ ಹಾರಾಟದಲ್ಲಿ ಇವು ಮಾಡುವ ಅಲ್ಪ ಶಬ್ದಗಳ ಪ್ರತಿಧ್ವನಿಯ ಗ್ರಹಣ ಸಾಮರ್ಥ್ಯ.

ಪಕ್ಷಿಗಳಲ್ಲಿ ಸೌಂದರ್ಯ ಜ್ಞಾನ ಚೆನ್ನಾಗಿ ರೂಪುಗೊಂಡಿದೆಯೆಂಬುದಕ್ಕೆ ಕೆಲವು ಹಕ್ಕಿಗಳ ಉಜ್ವಲ ಹೊಳಪು ಬಣ್ಣಗಳೂ (ನವಿಲು, ಜೀವಂಜೀವ, ಸ್ವರ್ಗಪಕ್ಷಿ), ಬೇರೆ ಕೆಲವು ಪಕ್ಷಿಗಳ ಸುಶ್ರಾವ್ಯ ಸಂಗೀತವೂ (ಬುಲ್ಬುಲ್, ಕೋಗಿಲೆ, ಶಾಮ) ಉತ್ತಮ ಉದಾಹರಣೆಗಳೆನ್ನಬಹುದು. ಈ ವಿಷಯದಲ್ಲಿ ತನಗಾಗಿ ಪ್ರದರ್ಶಿತವಾದ ರೂಪ, ಸಂಗೀತಗಳನ್ನು ಹೆಣ್ಣು ಹಕ್ಕಿ ಗ್ರಹಿಸಿ ಅದರಿಂದ ಆಕರ್ಷಿತವಾಗಬಲ್ಲದೆಂದು ಹೇಳಬಹುದು. ಹೆಣ್ಣು ಹಕ್ಕಿಗೆ ಆಹ್ವಾನವಾಗಿರುವುದಲ್ಲದೆ ಪಕ್ಷಿಗಾನ ಇನ್ನೊಂದು ಮುಖ್ಯ ಜೀವನ ಸಂಬಂಧದ ಉದ್ದೇಶ ಹೊಂದಿದೆ. ಅದೇನೆಂದರೆ ಒಂದು ಗಂಡು ಹಕ್ಕಿ ಬೇರೆ ಗಂಡುಗಳಿಗೆ ಆ ಪ್ರದೇಶದ ಸ್ವಾಮ್ಯವನ್ನು ತಾನಾಗಲೇ ಪಡೆದಿರುವೆನೆಂದು ಪ್ರಚುರಪಡಿಸುವುದಲ್ಲದೆ ಅವು ತನ್ನ ಹಕ್ಕನ್ನು ಉಲ್ಲಂಘಿಸದಂತೆ ಬೆದರಿಕೆ ಮತ್ತು ಎಚ್ಚರಿಕೆ ನೀಡುವುದು.

ಸಂತಾನೋತ್ಪತ್ತಿ : ಸಾಧಾರಣವಾಗಿ ಪಕ್ಷಿಗಳು ತಮ್ಮ ಗಾತ್ರಕ್ಕೆ ಅನುಗುಣವಾದ ತತ್ತಿಗಳನ್ನಿಡುತ್ತವೆ. ಆದರೆ ಪ್ಲೋವರ್ ಮತ್ತು ಇತರ ನೀರು ಹಕ್ಕಿಗಳ ಮೊಟ್ಟೆಗಳು

ನಿರೀಕ್ಷಿಸಬಹುದಾದುದಕ್ಕಿಂತ ದೊಡ್ಡವು. ತನಗಿಂತ ಸಣ್ಣ ಹಕ್ಕಿಗಳ ಗೂಡುಗಳಲ್ಲಿ ಮೊಟ್ಟೆಯಿಡುವ ಕೋಗಿಲೆಯ ಮೊಟ್ಟೆ ಸಣ್ಣದು. ಮೊಟ್ಟೆಗಳು ಗುಂಡಗೆ (ಗೂಬೆಗಳು) ಇಲ್ಲವೆ ಅಂಡಾಕಾರ (ನತ್ತಿಂಗ, ಗೌಜಲು ಹಕ್ಕಿ), ದೀರ್ಘ ವೃತ್ತ (ಸ್ವಿಫ್ಟ್) ಇಲ್ಲವೆ ಬುಗುರಿಯಾಕಾರ (ಪ್ಲೋವರ್, ಪ್ರಪಾತಗಳ ಮೇಲೆ ಗೂಡುಕಟ್ಟುವ ಸಮುದ್ರದ ಪಕ್ಕಿಗಳು) ಮುಂತಾಗಿ ಭಿನ್ನವಾಗಿರುತ್ತವೆ. ಬಿಲಗಳಲ್ಲಿಟ್ಟಾಗ ಮರೆ ದೊರೆಯುವುದರಿಂದ ಮೊಟ್ಟೆಗಳು ಬಿಳಿ ಬಣ್ಣದವಾಗಿರುವುವು. ಮಿಕ್ಕ ಸನ್ನಿವೇಶಗಳಲ್ಲಿ ಸಾಧಾರಣವಾಗಿ ಮೊಟ್ಟೆಗಳ ಬಣ್ಣ ಸುತ್ತು ಮುತ್ತಲಿನ ಬಣ್ಣದೊಡನೆ ಬೆರೆತುಹೋಗುವಂಥದ್ದು. ತೆರೆದ ಗೂಡುಗಳೊಳಗೆ ಇಡಲ್ಪಟ್ಟಾಗ ಸುಲಭವಾಗಿ ಕಾಣದಿರುವಂತೆ ಬೇರೆ ಬೇರೆ ತರಹ ಗುರುತುಗಳಿಂದ ಕೂಡಿರುವುವು. ಹಕ್ಕಿಗಳ ಗೂಡುಗಳು (ನೋಡಿ : ಗೂಡುಗಳು) ಕೂಡ ರಚನೆ ಮತ್ತು ಸಾಮಗ್ರಿಗಳಲ್ಲಿ ಹೆಚ್ಚಿನ ವೈವಿಧ್ಯದಿಂದ ಕೂಡಿವೆ. ಸರಳ ರೀತಿಯಲ್ಲಿ ನೆಲ ತೋಡಿ ರಚಿಸಿದ ಗೂಡು (ಉದಾ:ಪ್ಲೋವರ್), ಮರಗಳಲ್ಲಿ ಕಡ್ಡಿಗಳ ಹಾಸಿಗೆಯಂತಿರುವ ಗೂಡು (ಉದಾ: ಕಾಗೆ) ಹಿಡಿದು ದಟ್ಟವಾಗಿ ನೇಯ್ದು ರಚಿಸಿದ ಗೀಜಗನ ಹಕ್ಕಿಗೂಡು, ಪ್ರಪಾತದ ಸ್ವಾಲೋ ಹಕ್ಕಿಯ ಸಾಮೂಹಿಕ ಮಣ್ಣು ಗೂಡುಗಳವರೆಗೆ ವ್ಯತ್ಯಾಸವನ್ನು ಕಾಣಬಹುದು. ಒಂದು ಸಲಕ್ಕೆ ಇಡುವ ಮೊಟ್ಟೆಗಳ ಸಂಖ್ಯೆ ಒಂದರಿಂದ ಹಿಡಿದು (ಉದಾ: ಹಿಂಸ್ರ ಪಕ್ಷಿಗಳು) ಹತ್ತಕ್ಕಿಂತ ಹೆಚ್ಚಿನವರೆಗೆ (ಬಾತು ಮುಂತಾದ ಪಕ್ಷಿಗಳು) ವ್ಯತ್ಯಾಸವಾಗಬಹುದು. ಮೇಲೆ ಕೂಡುವ ತಾಯಿ ಅಥವಾ ತಂದೆ ಹಕ್ಕಿಯ ಮೈಕಾವಿನ ಸಹಾಯದಿಂದ ಇವು ಒಡೆಯುವುವು. ಈ ರೀತಿ ಮೊಟ್ಟೆಯೊಡೆದು ಮರಿ ಹೊರಗೆ ಬರಲು 11–12 ದಿನ (ಗುಬ್ಬಚ್ಚಿ) ಗಳಿಂದ 60 ದಿನ (ಈಮ್ಯೂ) ಗಳವರೆಗೆ ಬೇಕಾಗುತ್ತದೆ. ನ್ಯೂಜಿಲೆಂಡಿನ ಕಿವಿ ಹಕ್ಕಿಯ ಮೊಟ್ಟೆಯೊಡೆದು ಮರಿ ಹೊರಬರಲು 75 ದಿನ ಬೇಕಾಗುತ್ತದೆಂದು ಹೇಳಲಾಗಿದೆ. ಆಸ್ಟ್ರೇಲಿಯಾದ ಮೆಗಪೋಡ್ ಹಕ್ಕಿಗಳು ಮರಳು ಮತ್ತು ಕೊಳೆಯುತ್ತಿರುವ ಎಲೆ ರಾಶಿಗಳಲ್ಲಿ ಮೊಟ್ಟೆಗಳನ್ನು ಹುದುಗಿಸಿ ಇಡುವುವು. ಇಲ್ಲಿ ಶಾಖದಿಂದ ಮೊಟ್ಟೆಗಳು ಒಡೆಯುವುವು.

ಗೂಬೆ

ಕೆಲವು ಬಗೆಯ ಹಕ್ಕಿಗಳಲ್ಲಿ ಮೊಟ್ಟೆಯೊಡೆದು ಹೊರಬರುವ ಮರಿಗಳು ಕುರುಡಾಗಿದ್ದು ಪುಕ್ಕಗಳಿಲ್ಲದೆ ಅಸಹಾಯ ಸ್ಥಿತಿಯಲ್ಲಿರುವುವು. ಪುಕ್ಕಗಳು ಹುಟ್ಟಿಕೊಂಡು ಅವು ಗೂಡನ್ನು ಬಿಟ್ಟು ಹೋಗುವಷ್ಟು ಶಕ್ತಿಗಳಿಸುವವರೆಗೂ ತಂದೆ ತಾಯಿ ಹಕ್ಕಿಗಳೇ ಉಣಿಸನ್ನು ಕೊಟ್ಟು ಪೋಷಿಸುತ್ತವೆ. ಇನ್ನು ಕೆಲವು ಪ್ರಭೇದಗಳಲ್ಲಿ, ಉದಾಹರಣೆಗೆ, ಕೋಳಿ ಮತ್ತು ಅದೇ ಗುಂಪಿನ ಬೇರೆ ಹಕ್ಕಿಗಳಲ್ಲಿ, ಮರಿಗಳು ಹುಟ್ಟುವಾಗ ಮೃದುವಾದ ಪುಕ್ಕಗಳಿಂದ ಕೂಡಿದ್ದು ಹುಟ್ಟಿದ ಕೂಡಲೇ ತಾಯಿ ಹಕ್ಕಿಯ ಹಿಂದೆ ಓಡಾಡಿ, ತಮ್ಮ ಆಹಾರ ಒದಗಿಸಿಕೊಳ್ಳುವಷ್ಟು ತ್ರಾಣವುಳ್ಳವಾಗಿರುವುವು.

ಸಂತಾನಾಭಿವೃದ್ಧಿ ಸಮಯದಲ್ಲಿ ಪಕ್ಷಿಗಳು ಸುಂದರವಾಗಿ ಹಾಡುವುದು ಮತ್ತು ಪ್ರಣಯ ಕೇಳಿಯನ್ನು ನಡೆಸುವುದು ಸರ್ವೇ ಸಾಮಾನ್ಯ. ವಸಂತ ಬರುತ್ತಿರುವ ಹಾಗೆ ಹಕ್ಕಿಗಳು ಹೆಚ್ಚು ಚಟುವಟಿಕೆಯಿಂದ ಕೂಡಿರುತ್ತವೆ. ಈ ಕಾಲದಲ್ಲಿ ಗಂಡು ಹಕ್ಕಿಗಳು ಹೆಚ್ಚು ಚುರುಕು. ಮ್ಯಾಗ್‌ಪೈ ರಾಬಿನ್ ಏಪ್ರಿಲ್‌ನಲ್ಲೇ ಎತ್ತರವಾದ ಗಿಡಮರಗಳ ಮೇಲೆ ಕುಳಿತು ಹಾಡುವುದನ್ನು ಪ್ರಾರಂಭಿಸುತ್ತದೆ. ಈ ಸಮಯದಲ್ಲಿ ಪಕ್ಷಿಗಳ ಅಭಿನಯ ರಮಣೀಯ. ಕೆಲವು ಪಕ್ಷಿಗಳು ಈ ವಿಶೇಷ ಸಂದರ್ಭಕ್ಕಾಗಿಯೇ ವಿಶೇಷ ವರ್ಣರಂಜಿತ ಗರಿಗಳನ್ನು ಹೊಂದಿರುತ್ತವೆ. ಮಧುರವಾಗಿ ಹಾಡುತ್ತವೆ. ಒಂದು ಪ್ರದೇಶದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸುತ್ತವೆ. ಇತರ ಯಾವುದಾದರೂ ಗಂಡು ಹಕ್ಕಿ ಅಲ್ಲಿಗೆ ಬಂದರೆ ಅದರ ಮೇಲೆ ಆಕ್ರಮಣ ಮಾಡುತ್ತವೆ. ಅನೇಕ ಸಲ ಅಧಿಕಾರ ಸ್ಥಾಪಿಸುವ ಹಕ್ಕಿಯ ಕೂಗೇ ಇತರ ಗಂಡು ಹಕ್ಕಿಗಳನ್ನು ದೂರವಿಡುತ್ತದೆ. ಈ ರೀತಿಯ ಅಧಿಕಾರ ಸ್ಥಾಪನೆಯನ್ನು ಹೆಚ್ಚಾಗಿ ವ್ಯಾಗ್‌ಟೇಲ್, ಲಾರ್ಕ್ ಮತ್ತು ಟಿಟ್ಸಗಳಲ್ಲಿ ನೋಡಬಹುದು. ಈ ಜಾತಿಯ ಪಕ್ಷಿಗಳು ಚಳಿಗಾಲದಲ್ಲಿ ಗುಂಪಾಗಿ ಜೀವನ ನಡೆಸುತ್ತವೆ. ವಸಂತ ಬರುತ್ತಿರುವ ಹಾಗೆ ಬೇರೆ ಬೇರೆಯಾಗಿ ಸಂತಾನೋತ್ಪತ್ತಿಗಾಗಿ ಹೊರಡುತ್ತವೆ. ಒಂದು ಒಳ್ಳೆಯ ಜಾಗ ಸಿಕ್ಕಿದಾಗ ಅಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುತ್ತವೆ. ಈ ರೀತಿಯ ಸಾಮ್ರಾಜ್ಯವು 1–2 ಎಕರೆಗಳಷ್ಟಿರಬಹುದು. ಮರಗಳ ಸಂದು, ಪೊಟರೆಗಳಲ್ಲಿ ಗೂಡು ಕಟ್ಟುವ ಕೆಲವು ಜಾತಿಯ ಪಕ್ಷಿಗಳು ಮೊದಲು ಗೂಡು ನಿರ್ಮಿಸಲು ಸ್ಥಳವನ್ನು ಹುಡುಕಿ, ಅನಂತರ ಅದರ ಸುತ್ತ ತನ್ನ ಅಧಿಕಾರವನ್ನು ಸ್ಥಾಪಿಸುತ್ತವೆ. ಕಾಕ್‌ರೆನ್ ಎಂಬ ಪಕ್ಷಿಯು ತನ್ನ ಸಾಮ್ರಾಜ್ಯದೊಳಗೆ 10–20 ಗೂಡುಗಳನ್ನು ನಿರ್ಮಿಸುತ್ತದೆ. ವುಡ್‌ಕಾಕ್ ಎಂಬ ಪಕ್ಷಿಯು ಒಂದು ಜಾಗದಲ್ಲಿ ತಮ್ಮ ಅಧಿಕಾರ ಸ್ಥಾಪನೆ ಮಾಡಿದ ಅನಂತರ, ಬೆಳಗಿನ ಜಾವ ಮತ್ತು ಸಂಜೆಯಲ್ಲಿ 10–12 ಸಾರಿ ತನ್ನ ಜಾಗದ ಸುತ್ತ 8 ರ ಆಕಾರದಲ್ಲಿ ನಿಧಾನವಾಗಿ ಹಾರಾಡುತ್ತಾ ತನ್ನ ಜಾತಿಯ ಯಾವುದೇ ಪಕ್ಷಿಯಿದ್ದರೂ ಅದನ್ನು ಓಡಿಸುತ್ತದೆ.

ಗಂಡು ಹಕ್ಕಿ ಹೀಗೆ ಕೆಲವು ದಿನಗಳ ಸತತ ಪ್ರಯತ್ನದಿಂದ ತನ್ನ ಪ್ರಿಯತಮೆಯನ್ನು ಸ್ವೀಕರಿಸಲು ಸಿದ್ಧವಾಗುತ್ತದೆ. ಗಂಡಿನ ಹಾಡೂ ಸಹ ಹೆಚ್ಚುತ್ತಾ ಹೋಗುತ್ತದೆ. ಸಾಮಾನ್ಯವಾಗಿ ಅವುಗಳು ಬೆಳಿಗ್ಗೆ ಮತ್ತು ಸಂಜೆ ಹೆಚ್ಚಾಗಿ ಹಾಡುತ್ತವೆ. ಅದರ ಹಾಡಿನಿಂದ ಆಕರ್ಷಣೆ ಹೊಂದಿ ಯಾವುದಾದರೊಂದು ಹೆಣ್ಣು ಅದರ ಪ್ರಿಯತಮೆಯಾಗಲು ಬರುತ್ತದೆ. ಹೆಣ್ಣು ಬರೀ ಪ್ರಣಯ ಕೂಗನ್ನು ಮೆಚ್ಚಿದರೆ ಸಾಲದು. ಪ್ರಣಯ ಕೇಳಿಯನ್ನು ನಡೆಸಿಯೇ ಹೆಣ್ಣನ್ನು ಗೆಲ್ಲಬೇಕು. ಅನೇಕ ಪಕ್ಷಿಗಳಲ್ಲಿ ಗಂಡು, ಹೆಣ್ಣುಗಳೆರಡೂ ಪ್ರಣಯ ಕೇಳಿಯಲ್ಲಿ ಭಾಗವಹಿಸುತ್ತವೆ. ಎರಡೂ ತಮ್ಮ ಪುಕ್ಕಗಳನ್ನು ಹರಡಿ ಹೆಚ್ಚು ಅಂದವಾಗಿ ಕಾಣಿಸುತ್ತವೆ.

ಕೆಲವು ಜಾತಿಯ ಪಕ್ಷಿಗಳಲ್ಲಿ ಗಂಡು ಹಕ್ಕಿಯೇ ಹೆಚ್ಚು ವರ್ಣರಂಜಿತವಾಗಿರುತ್ತದೆ (ನವಿಲು). ಇಂತಹವುಗಳಲ್ಲಿ ಗಂಡು ಹಕ್ಕಿಗಳು ಮಾತ್ರ ತಮ್ಮ ವರ್ಣರಂಜಿತ ಉಡುಪನ್ನು ಹರಡಿ ನಾಟ್ಯವಾಡುತ್ತವೆ. ಈ ಜಾತಿಗಳಲ್ಲಿ ಹೆಣ್ಣೇ ಗಂಡನ್ನು ಮೆಚ್ಚಿ ಬರಬೇಕು. ತನ್ನ ಪ್ರಯತ್ನದಲ್ಲಿ ಗೆದ್ದ ಗಂಡು ಹೆಣ್ಣಿಗೆ ಪ್ರೀತಿಯಿಂದ ಒಳ್ಳೆಯ ತಿನಿಸನ್ನು ಒದಗಿಸಬಹುದು. ಎಲ್ಲಾ ಪಕ್ಷಿಗಳಲ್ಲಿ ನಾಟ್ಯ ಒಂದೇ ತೆರನಾಗಿರುವುದಿಲ್ಲ.

ಗೀಜಗಗಳಲ್ಲಿ ಗಂಡು ಗೂಡನ್ನು ಕಟ್ಟಿ ಹೆಣ್ಣಿಗೆ ಅದನ್ನು ಪರೀಕ್ಷಿಸಲು ಬಿಡುತ್ತದೆ. ಹೆಣ್ಣು ಇಷ್ಟಪಟ್ಟರೆ ಗಂಡನ್ನು ತನ್ನ ಪ್ರಿಯಕರನಾಗಿ ಒಪ್ಪುತ್ತದೆ. ಇಲ್ಲದಿದ್ದರೆ ಬೇರೊಂದು ಗಂಡಿನ ಕೆಲಸವನ್ನು ಪರೀಕ್ಷಿಸಲು ತೆರಳುತ್ತದೆ.

ಅತಿ ಶೀತ ಪ್ರದೇಶಗಳಲ್ಲಿ ವಸಂತ ಕಾಲದಲ್ಲಿ ಮಾತ್ರ ಪಕ್ಷಿಗಳು ಹೆಚ್ಚು ಚಟುವಟಿಕೆಯಿಂದ ಕೂಡಿ ತಮ್ಮ ಸಂತಾನವನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತವೆ. ಈ ಕಾಲದಲ್ಲಿ ಪಕ್ಷಿಗಳಿಗೆ ಹುಳು ಹುಪ್ಪಟೆಗಳು ಹೆಚ್ಚು ಸಿಗುವುದೇ ಇದಕ್ಕೆ ಕಾರಣ. ಆದರೆ ಭಾರತದಲ್ಲಿ ಹಿಮಾಲಯದ ಕೆಲವು ಜಾಗಗಳನ್ನು ಬಿಟ್ಟರೆ ಬೇರೆ ಕಡೆಗಳಲ್ಲಿ ತೀವ್ರ ಶೀತವಿಲ್ಲ. ವರುಷದ ಎಲ್ಲಾ ಕಾಲಗಳಲ್ಲಿಯೂ ಆಹಾರ ದೊರಕುವುದರಿಂದ ಯಾವ ಕಾಲದಲ್ಲಿಯಾದರೂ ಸಂತಾನಾಭಿವೃದ್ಧಿ ಮಾಡಬಹುದು. ಆದರೆ ಅನೇಕ ಪಕ್ಷಿಗಳು ವರ್ಷದ ಮೊದಲ ಅರ್ಧಭಾಗದಲ್ಲಿಯೇ ಹೆಚ್ಚಾಗಿ ಸಂತಾನೋತ್ಪತ್ತಿಯನ್ನು ಮಾಡುತ್ತವೆ.

ಅನೇಕ ಪಕ್ಷಿಗಳಲ್ಲಿ (ನವಿಲು) ಗೂಡು ಕಟ್ಟುವುದಾಗಲಿ ಕುಟುಂಬ ರಕ್ಷಣೆಯಾಗಲಿ ಗಂಡಿನ ಹೊಣೆಯಲ್ಲ. ಅದು ಸ್ವತಂತ್ರ ಪ್ರಾಣಿ. ಈ ಕಾರಣದಿಂದ ಬಹುಪತ್ನಿತ್ವವನ್ನು ಹೊಂದಿರುತ್ತದೆ. ಕೆಲವು ಪಕ್ಷಿಗಳಲ್ಲಿ (ಇಂಡಿಯನ್ ರಾಬಿನ್) ಗಂಡು ಹೆಣ್ಣು ಎರಡೂ ಕುಟುಂಬಾಭಿವೃದ್ಧಿಗೆ ಶ್ರಮಿಸುತ್ತವೆ. ಇನ್ನು ಕೆಲವು ಪಕ್ಷಿಗಳಲ್ಲಿ (ಬಸ್ಟರ್ಡ್, ಕ್ವೇಯ್ಲ್ಸ್, ಜಕಾನ) ಸಂಭೋಗವಾದ ಅನಂತರ ಹೆಣ್ಣು ಗೂಡಿನಲ್ಲಿ ಮೊಟ್ಟೆಯನ್ನು ಇಟ್ಟೊಡನೆಯೇ ಗಂಡಿನ ವಶಕ್ಕೊಪ್ಪಿಸಿ ಇನ್ನೊಂದು ಗಂಡನ್ನು ಹುಡುಕಲು ಹೊರಡುತ್ತದೆ. ಇಂತಹವುಗಳಲ್ಲಿ ಕುಟುಂಬ ರಕ್ಷಣೆ ಗಂಡಿನ ಹೊಣೆ.

ಮಂಗಟ್ಟೆ (ಹಾರನ್ ಬಿಲ್) ಪಕ್ಷಿಗಳಲ್ಲಿ ಹೆಣ್ಣು ಪೊಟರೆಯೊಳಗೇ ಇರುತ್ತದೆ. ಗಂಡು ಆಹಾರ ಕೊಡುವುದಕ್ಕಾಗಿ ಸಣ್ಣ ರಂಧ್ರವನ್ನು ಬಿಟ್ಟು ಮಿಕ್ಕೆಲ್ಲಾ ಜಾಗವನ್ನು ಮಣ್ಣು ಮತ್ತು ಹಿಕ್ಕೆಯ ಮಿಶ್ರಣದಿಂದ ಮುಚ್ಚುತ್ತದೆ. ಹೆಣ್ಣು ಮೊಟ್ಟೆಯಿಟ್ಟು ಕಾವು ಕೊಡುತ್ತಿರುತ್ತದೆ. ಗಂಡು ಹೆಣ್ಣಿಗೆ ಆಹಾರ ಸಂಪಾದಿಸಿ, ಪೋಷಿಸಿ ತಾನು ಸರಿಯಾದ ಆಹಾರವಿಲ್ಲದೇ ಕೃಶವಾಗುತ್ತದೆ.

ಪಕ್ಷಿಗಳಲ್ಲಿ ವಲಸೆ: ಋತುಮಾನಕ್ಕನುಗುಣವಾಗಿ ಒಂದು ಜಾಗದಿಂದ ಹೊರಟು ಮತ್ತೊಂದು ಜಾಗದಲ್ಲಿ ತಂಗಿ ಮತ್ತೆ ಬಂದ ದಾರಿಯಲ್ಲಿಯೇ ತಮ್ಮ ಮೊದಲ ಜಾಗವನ್ನು ಸೇರುವುದೇ ವಲಸೆ. ಬಹುಶ: ಉಷ್ಣತೆ ಹೆಚ್ಚಿದ ಹಾಗೆ ಶೀತವಲಯದ ಕಡೆ ತಲುಪಿ ಅಲ್ಲಿ ಆಹಾರ ಸೌಲಭ್ಯ ಕಡಿಮೆಯಾದಾಗ ಪುನ: ಉಷ್ಣ ವಾತಾವರಣಕ್ಕೆ ಹಿಂದಿರುಗಿ ಬರಬಹುದು. ( ನೋಡಿ:ಪಕ್ಷಿಗಳ ವಲಸೆ)

ಪಕ್ಷಿ ವರ್ಗದ ಸಂಖ್ಯಾಬಲ: ಬಿಸಿರಕ್ತವಿರುವಿಕೆ ಮತ್ತು ಹಾರುವ ಸಾಮರ್ಥ್ಯ ಈ ಕಾರಣಗಳಿಂದ ಮಿಕ್ಕಿತರ ಪ್ರಾಣಿಗಳಿಗಿಂತ ಪಕ್ಷಿವರ್ಗ ಭೂಮಿಯ ಮೇಲೆ ಹೆಚ್ಚು ಭೌಗೋಳಿಕ ವಿಸ್ತರಣೆ ಹೊಂದಲೂ ಮತ್ತು ಮಹಾಸಾಗರಗಳಂಥ ತಡೆಗಳನ್ನೂ ದಾಟಿ ದೂರದ ಪ್ರದೇಶಗಳಲ್ಲೂ ಒಂಟೊಂಟಿಯಾದ ದ್ವೀಪಗಳಲ್ಲೂ ನೆಲೆಸಲು ಸಾಧ್ಯವಾಗಿದೆ. ಅಲ್ಲದೆ ಸಹಿಸಲಸಾಧ್ಯವಾದ ಹವಾಮಾನದ ಪರಿಸ್ಥಿತಿಯಿಂದ ಸಕಾಲದಲ್ಲಿ ತಪ್ಪಿಸಿಕೊಂಡು ಅನುಕೂಲವಾದ ಹವಾಗುಣಗಳಿರುವ ಭೂಮಿಯ ಬೇರೆ ಭಾಗಗಳಿಗೆ ವಲಸೆ ಹೋಗಲೂ ಸಾಧ್ಯವಾಗಿದೆ.

ಈಗ ಭೂಮಿಯಲ್ಲಿ ಜೀವಿಸುತ್ತಿರುವ ಪಕ್ಷಿ ಪ್ರಭೇದಗಳ ಒಟ್ಟು ಸಂಖ್ಯೆ ಸುಮಾರು 1,800 ಎಂದು ಅಂದಾಜು ಮಾಡಲಾಗಿದೆ. ಇವುಗಳಲ್ಲಿ ಸುಮಾರು 29,000 ಉಪ ಪ್ರಭೇದಗಳು ಅಥವಾ ಭೌಗೋಳಿಕ ಕುಲಗಳುಂಟು. ಭಾರತ ಮತ್ತು ಪಾಕಿಸ್ಥಾನಗಳಲ್ಲಿ

ಸುಮಾರು ಅರ್ಧದಷ್ಟು ಪ್ಯಾಸರಿಫಾರ್ಮಿಸ್ ಅಥವಾ ತರುವಿರಮಿಗಳು (ಪರ್ಚಿಂಗ್ ಬರ್ಡ್ಸ್)ಎಂಬ ಒಂದೇ ಗುಂಪಿಗೆ ಸೇರಿವೆ; ಉದಾಹರಣೆ; ಗುಬ್ಬಚ್ಚಿ, ಕಾಗೆ, ಮೈನ, ಬುಲ್ ಬುಲ್ ಮತ್ತಿತರ ಸಣ್ಣ ಮತ್ತು ಮಧ್ಯಮ ಗಾತ್ರದ ಹಕ್ಕಿಗಳು.

ಪ್ರಪಂಚದ ಹಕ್ಕಿ ಸಮುದಾಯವನ್ನು 27–28 ವರ್ಗಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ 21 ವರ್ಗಗಳ 82 ಕುಟುಂಬ ಮತ್ತು 12 ಉಪ ಕುಟುಂಬಗಳಿಗೆ ಸೇರಿದ ಹಕ್ಕಿಗಳು ಭಾರತದಲ್ಲಿವೆ.

ಕಾಜಾಣ (ಡ್ರಾಂಗೊ)

ಭಾರತದಲ್ಲಿರುವ ಸುಮಾರು 350 ಪ್ರಭೇದ, ಉಪಪ್ರಭೇದಗಳೇ ವಲಸೆಗಾರ ಪಕ್ಷಿಗಳಾಗಿರುವುದರಿಂದ ನಮ್ಮ ದೇಶದಲ್ಲಿ ಚಳಿಗಾಲದಲ್ಲಿ ಮಾತ್ರ ಅಂದರೆ ಅಕ್ಟೋಬರಿನಿಂದ ಮಾರ್ಚಿನವರೆಗಿನ ಅವಧಿಯಲ್ಲಿ ಕಂಡು ಬರುತ್ತವೆ. ಕಾಡುಬಾತು, ವರಟೆ, ಕರಾವಳಿಯ ಮತ್ತು ನೀರಲ್ಲಿ ನಡೆದಾಡುವ ಹಕ್ಕಿಗಳು ಮತ್ತು ಫಿಂಚ್, ಟಿಟ್ಟಿಭ, ಪಿಪಿಟ್, ಕುಂಡೆಕುಸುಕ (ವ್ಯಾಗ್‌ಟೇಲ್) ಮತ್ತು ವಾರ್ಬ್ಲರ್ ಮುಂತಾದ ಅನೇಕಾನೇಕ ಸಣ್ಣ ಹಿಂಡುಗಾರ ಪಕ್ಷಿಗಳೂ ಈ ಗುಂಪಿಗೆ ಸೇರಿವೆ.

ಭೌಗೋಳಿಕ ಹಂಚಿಕೆ: ಭೂಮಿಯ ನಿರ್ದಿಷ್ಟ ಪ್ರದೇಶಗಳಿಗೆ ಮಿತಿಗೊಂಡ ವೈಶಿಷ್ಟ್ಯ ಪಡೆದಿರುವ ಪಕ್ಷಿವರ್ಗದ ಕೆಲವು ಕುಟುಂಬಗಳ ಹಂಚಿಕೆಯ ಆಧಾರದ ಮೇಲೆ ವಿಜ್ಞಾನಿಗಳು ಭೂಮಿಯನ್ನು ಈ ಕೆಳಗೆ ಕಂಡಂತೆ ಆರು ಭೌಗೋಳಿಕ ವಲಯಗಳಾಗಿ ವಿಂಗಡಿಸಿದ್ದಾರೆ. ಇಂಥ ಹಂಚಿಕೆಗೆ ಹವಾಗುಣ, ಭೌಗೋಳಿಕ ಮತ್ತು ಪರಿಸರಕ್ಕೆ ಸಂಬಂಧಪಟ್ಟ ಕಾರಣಗಳೇ ಮೂಲವಾಗಿವೆ.

1) ನಿಯಾರ್ಕ್‌ಟಿಕ್ ವಲಯ: ಉತ್ತರ ಅಮೇರಿಕದ ಬಹುಭಾಗ ಈ ವಲಯದಲ್ಲಿ ಸೇರಿಕೊಂಡಿದೆ. ಇಲ್ಲಿನ ಪಕ್ಷಿ ವರ್ಗ ಕುಟುಂಬಗಳು; ಮಿಲಿಯಾಗ್ರಿಡೆ (ಟರ್ಕಿ ಕೋಳಿಗಳು), ಕೆಥಾರ್ಟಿಡೆ (ಹೊಸ ಪ್ರಪಂಚದ ರಣ ಹದ್ದುಗಳು).

2) ಪೇಲಿಯಾರ್ಕ್‌ಟಿಕ್ ವಲಯ: ಯೂರೋಪ್, ವಾಯುವ್ಯ ಆಫ್ರಿಕ, ಕರ್ಕಾಟಕ ಸಂಕ್ರಾಂತಿ ವೃತ್ತದ ಉತ್ತರಕ್ಕಿರುವ ಏಷ್ಯದ ಭಾಗಗಳು ಮತ್ತು ಹಿಮಾಲಯದ ಉತ್ತರ ಪ್ರದೇಶಗಳನ್ನೊಳಗೊಂಡಿದೆ. ಬೇರೆ ಕೆಲವು ವಿಭಾಗಗಳಲ್ಲಿರುವ ಅನೇಕ ಕುಟುಂಬಗಳಿದ್ದಾಗ್ಯೂ ಪ್ರೂನೆಲ್ಲಿಡೆ (ಆಕ್ಸೆಂಟಾರ್) ಎಂಬ ಕುಟುಂಬ ಹಕ್ಕಿಗಳು ಇಲ್ಲಿಗೆ ಮಾತ್ರ ಸೀಮಿತಗೊಂಡಿವೆ.

ಈ ಎರಡು ವಲಯಗಳೂ ಅಕ್ಕಪಕ್ಕದಲ್ಲೇ ಇರುವುದರಿಂದ ಇವುಗಳ ಪಕ್ಷಿ ಸಮುದಾಯದಲ್ಲಿ ಬಹಳ ನಿಕಟ ಸಂಬಂಧ ಉಂಟು. ಇವೆರಡೂ ಒಟ್ಟು ಗೂಡಿ ಉತ್ತರಾರ್ಧಗೋಳದ ಹೆಚ್ಚು ಭಾಗವನ್ನು ಆವರಿಸಿವೆ. ಇವೆರಡನ್ನೂ ಒಟ್ಟಿಗೆ ಕೂಡಿಸಿ ಹೋಲಾರ್ಕ್‌ಟಿಕ್ ವಲಯವೆಂದು ಕರೆಯುವುದುಂಟು.

3) ನಿಯೋಟ್ರಾಪಿಕಲ್ ವಲಯ: ಮಧ್ಯ ಮತ್ತು ದಕ್ಷಿಣ ಅಮೇರಿಕ; ಟ್ರಾಕಿಲಿಡೆ–ಝೇಂಕಾರ ಹಕ್ಕಿಗಳು ಮುಂತಾದ ಅನೇಕ ವಿಜಾತೀಯ ಕುಟುಂಬಗಳ ಹಕ್ಕಿಗಳನ್ನು ಇಲ್ಲಿ ಕಾಣಬಹುದು.

4) ಇಥಿಯೋಪಿಯನ್ ವಲಯ: ಏಷ್ಯ, ಉತ್ತರ ಆಫ್ರಿಕ (ವಾಯುವ್ಯದ ತುದಿಯನ್ನು ಬಿಟ್ಟು), ಮಡಗಾಸ್ಕರ್ ಮತ್ತು ಅರೇಬಿಯ; ಇಲ್ಲಿಗೆ ಸೀಮಿತವಾಗಿರುವ ಕುಟುಂಬಗಳು : ಸ್ಟ್ರುತ್ರಿಯಾನಿಡೆ (ಉಷ್ಟ್ರಪಕ್ಷಿಗಳು) ಇತ್ಯಾದಿ.

5) ಪೌರಸ್ತ್ಯ (ಓರಿಯಂಟಲ್) ವಲಯ: ಮುಖ್ಯವಾಗಿ ಹಿಮಾಲಯದ ದಕ್ಷಿಣ ಭಾಗ, ಫಿಲಿಪೀನ್ಸ್ ಮತ್ತು ಈಸ್ಟ್ ಇಂಡೀಸ್ ದ್ವೀಪಸ್ತೋಮದ ಬಹುಭಾಗ. ಈ ವಿಭಾಗದ ವಿಶೇಷ ಕುಟುಂಬಗಳು ಇಥಿಯೋಪಿಯನ್ ಮತ್ತು ಪೇಲಿಯಾರ್ಕ್‌ಟಿಕ್ ವಲಯಗಳಲ್ಲೂ ಉಂಟು. ಅಲ್ಲದೆ ಯೂರಿಲೇಮಿಡೆ (ಅಗಲ ಕೊಕ್ಕಿನ ಹಕ್ಕಿಗಳು) ಮತ್ತು ಫಿಲ್ಲಾರ್ನಿಡೆ (ಕ್ಲೋರೋಪ್ಸ್ ಹಕ್ಕಿಗಳು) ಈ ವಿಭಾಗಕ್ಕೆ ಸೀಮಿತಗೊಂಡಿವೆ. ಈ ವಲಯವನ್ನು ಮೂರು ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ.

ಅ) ಇಂಡಿಯನ್: ಹಿಮಾಲಯ ದಕ್ಷಿಣಕ್ಕಿರುವ ಭಾರತ ಭಾಗ ಮತ್ತು ಶ್ರೀಲಂಕಾ

ಇ) ಇಂಡೋ ಚೀನ: ನೇಪಾಳದ ಪೂರ್ವಭಾಗ, ಭಾರತದ ವಾಯುವ್ಯ ಭಾಗ ಮತ್ತು ಪೂರ್ವ ಚೀನ, ಗಂಗಾ ಮುಖಜ ಪ್ರದೇಶದ ಪೂರ್ವಭಾಗ, ಆಗ್ನೇಯ ಏಷ್ಯದ ಭೂಭಾಗಗಳು (ಮಲಯ ಪರ್ಯಾಯ ದ್ವೀಪ ಹೊರತು) ಮತ್ತು ಫಾರ್ಮೋಸ, ಹೈನಾನ್ ಮತ್ತು ಅಂಡಮಾನ್ ದ್ವೀಪಗಳು.

ಈ) ಇಂಡೋ–ಮಲಯ ಅಥವಾ ಮಲೇಷಿಯ: ಮಲಯ ಪರ್ಯಾಯ ದ್ವೀಪ ಮತ್ತು ಉಷ್ಣವಲಯದೊಳಗಿರುವ ಅಂದರೆ ಭೂಮಧ್ಯರೇಖೆಯ ಎರಡು ಕಡೆಗಳಲ್ಲೂ 10 ಡಿಗ್ರಿಗಳಷ್ಟು ಪ್ರದೇಶದಲ್ಲಿರುವ (ಬೇವರ್ ರೇಖೆ ಎಂಬುದರ ಪೂರ್ವಕ್ಕಿರುವ) ದ್ವೀಪಗಳು.

6) ಆಸ್ಟ್ರೇಲಿಯನ್ ವಲಯ: ಆಸ್ಟ್ರೇಲಿಯ, ನ್ಯೂಗಿನಿ ಮತ್ತು ವೇಬರ್ ರೇಖೆ ಎನ್ನುವುದರ ಪೂರ್ವ ಭಾಗದ ಈಸ್ಟ್ ಇಂಡೀಸ್ ದ್ವೀಪಗಳು. ಇಲ್ಲಿ ಅನೇಕ ವಿಶೇಷ ಕುಟುಂಬಗಳು ಉಂಟು. ಉದಾಹರಣೆಗೆ, ಕ್ಯಾಸುವರ್‍ಯಿಡೆ (ಕ್ಯಾಸೋವರಿ), ಡ್ರೋಮೈಡೆ (ಈಮ್ಯು), ಪ್ಯಾರಡಿಸೈಡೆ (ಸ್ವರ್ಗದ ಪಕ್ಷಿಗಳು), ಮೆನ್ಯೂರಡೆ (ಕಿನ್ನರಿ ಹಕ್ಕಿಗಳು), ಮೆಲಿಫೇಗಿಡೇ (ಮಧುಭಕ್ಷಗಳು) ಮುಂತಾದವು.

ಪೌರಸ್ತ್ಯ ವಲಯದಂತೆಯೇ ಬೇರೆ ವಲಯಗಳನ್ನೂ ಪರಿಸರೀಯ ಕಾರಣಗಳ ಆಧಾರದ ಮೇಲೆ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. (ಎಚ್.ಸಿ.ಎಸ್.)

ಪಕ್ಷಿಗಳ ಉಪಯೋಗ: ರೂಪ, ಸೌಂದರ್ಯ, ಧ್ವನಿಮಾಧುರ್ಯ ಮುಂತಾದುವುಗಳಿಂದ ಪಕ್ಷಿಗಳು, ಮಾನವನಿಗೆ ಆನಂದ, ಸ್ಫೂರ್ತಿ, ಉನ್ಮಾದ, ಪ್ರಫುಲ್ಲತೆ ಮುಂತಾದುವುಗಳನ್ನು ನೀಡುತ್ತವೆ. ಸೌಂದರ್ಯದ ಗಣಿಗಳಂತಿರುವ ಕೆಲವು ಹಕ್ಕಿಗಳು ಮನಸ್ಸಿಗೆ ಮುದ ನೀಡುತ್ತವೆ. ಅನೇಕ ಪಕ್ಷಿಗಳು ಕಲಾವಿದರಿಗೆ ಕಲಾ ಸೃಷ್ಟಿಗೆ ಸ್ಫೂರ್ತಿ ನೀಡಿವೆ, ನೀಡುತ್ತಿವೆ. ಇದಲ್ಲದೆ ಪಕ್ಷಿಗಳಿಂದ ಮಾನವನಿಗೆ ಅನೇಕ ಉಪಯೋಗಗಳಿವೆ. ಕೋಳಿ ಬಾತುಕೋಳಿಗಳಂಥ ಪಕ್ಷಿಗಳಿಂದ ಮಾಂಸ ಮೊಟ್ಟೆ ದೊರೆಯುತ್ತದೆ. ಮಾಂಸ ಮೊಟ್ಟೆಗಳಿಗಾಗಿ ಕೋಳಿಸಾಕಣೆ ಹಾಗೂ ಇನ್ನಿತರ ಪಕ್ಷಿಗಳ ಸಾಕಣೆ ಉದ್ಯಮದ ಮಾದರಿಯಲ್ಲಿ ನಡೆಯುತ್ತಿದೆ. ಮಾಂಸ ಮೊಟ್ಟೆಗಳು ಉತ್ತಮ ಆಹಾರಗಳು. ಕೀಟ, ಇಲಿ ಹೆಗ್ಗಣಗಳಂಥ ಪ್ರಾಣಿಗಳನ್ನು ಕೆಲವು ಪಕ್ಷಿಗಳು ತಿನ್ನುತ್ತವೆ. ಈ ಪಕ್ಷಿಗಳಿಂದ ರೈತ ಬೆಳೆದ ಬೆಳೆಗಳಿಗೆ, ಈ ಕ್ಷುದ್ರಪ್ರಾಣಿಗಳ ಕಾಟದಿಂದ ಸಹಜವಾಗಿ ರಕ್ಷಣೆ ದೊರೆಯುತ್ತದೆ. ಪರಿಸರ ಸಮತೋಲನದಲ್ಲಿ ಪಕ್ಷಿಗಳ ಕೊಡುಗೆ ಅಪಾರ. ಇಂಥ ಕೆಲವು ಉಪಯೋಗಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಆಹಾರ ಸರಪಣಿಯಲ್ಲಿ ಜೀವಿಗಳ ಪಾತ್ರವನ್ನು ಪರಿಗಣಿಸಿ ಅವನ್ನು ಉತ್ಪಾದಕರು, ಪ್ರಥಮ– ದ್ವಿತೀಯ– ಅಥವಾ ತೃತೀಯ ಹಂತದ ಗ್ರಾಹಕರು, ವಿಘಟಕರು ಎಂಬುದಾಗಿ ವಿಂಗಡಿಸಲಾಗುತ್ತದೆ. ಪಕ್ಷಿಗಳಲ್ಲಿ ಆಹಾರ ಉತ್ಪಾದಕರನ್ನು ಹೊರತುಪಡಿಸಿ ಉಳಿದ ಎಲ್ಲ ಹಂತದ ಪ್ರಭೇದಗಳಿವೆ. ಗುಬ್ಬಚ್ಚಿ, ಪಾರಿವಾಳ, ಗಿಳಿಗಳಂಥ ಪಕ್ಷಿಗಳು ಕಾಳುಗಳನ್ನು ತಿನ್ನುತ್ತವೆ. ಇವು ಸಸ್ಯಾಹಾರಿಗಳು. ಮಿಡತೆ, ನೊಣ, ಜೇನುನೊಣಗಳನ್ನು ತಿನ್ನುವ ಕೀಟಭಕ್ಷಕ ಪಕ್ಷಿಗಳು ಪ್ರಾಥಮಿಕ ಹಂತದ ಭಕ್ಷಕರು. ಮೀನು, ಹಲ್ಲಿ, ಹಾವು, ಹಾವುರಾಣಿಗಳಂಥ ಮಾಂಸಾಹಾರಿ ಪ್ರಾಣಿಗಳನ್ನು ತಿಂದು ಬದುಕುವ ಪಕ್ಷಿಗಳಿವೆ. ಗಿಡುಗ, ಬಕ, ಬಾತು ಮುಂತಾದುವು ಈ ಗುಂಪಿಗೆ ಸೇರುತ್ತವೆ. ಕಾಗೆ, ಗಿಡುಗ, ರಣಹದ್ದುಗಳು ಜಾಡಮಾಲಿಗಳ ಗುಂಪಿಗೆ ಸೇರುತ್ತವೆ.

ಆಹಾರ ಸರಪಣಿಯಲ್ಲಿ ಭಾಗವಹಿಸುವ ಜೀವಿಗಳು ಪರಸ್ಪರ ಒಂದನ್ನೊಂದು ಹಾಗೂ ಪರಿಸರ ವ್ಯೂಹದಲ್ಲಿರುವ ನಿರ್ಜೀವ ವಸ್ತುಗಳನ್ನು ಕೂಡಾ ಅವಲಂಬಿಸಿರುತ್ತವೆ. ಈ ಅವಲಂಬನೆಯಲ್ಲಿ ಸಂಕೀರ್ಣತೆಯಿದೆ, ಸೌಹಾರ್ದತೆಯಿದೆ, ಸಾಮರಸ್ಯವಿದೆ, ಸಮತೋಲನವಿದೆ. ಜೀವಪರಿಸರದಲ್ಲಿ ಜೈವಿಕ ಅಥವಾ ಅಜೈವಿಕ ವಸ್ತುಗಳಲ್ಲಿ ನ್ಯೂನತೆಯುಂಟಾದಾಗ ಪರಿಸರದಲ್ಲಿ ಅಸಮತೋಲನವುಂಟಾಗುತ್ತದೆ. ಜೀವಿಗಳ ವೈಪರಿತ್ಯಗಳಿಂದಾಗುವ ಪ್ರಭಾವಗಳು ಹಲವು. ಒಂದು ಜೀವಸಂಕುಲದ ಸಂಖ್ಯೆ ಮಿತಿಮೀರಿ ಬೆಳೆದರೆ, ಅಥವಾ ಒಂದು ಜೀವಿ ಪರಿಸರದಿಂದ ಇದ್ದಕ್ಕಿದ್ದಂತೆ ವಿನಾಶವಾದರೆ, ಮಾರಕ ಸಾಂಕ್ರಾಮಿಕ ರೋಗಗಳನ್ನು ಹರಡಿದರೆ, ಪರಿಸರ ವ್ಯೂಹದಲ್ಲಿ ಅನೇಕ ಏರುಪೇರುಗಳಾಗುತ್ತವೆ. ಪ್ರಾಕೃತಿಕ ಸಮತೋಲನದಲ್ಲಿ ವ್ಯತ್ಯಾಸವುಂಟಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಪರಿಸರ ವ್ಯವಸ್ಥೆಯ ಮೇಲೆ ಆಗುವ ಪರಿಣಾಮಗಳು ಊಹೆಗೆ ನಿಲುಕಲಾರವು.

ಪರಿಸರದ ಸಮತೋಲನವನ್ನು ಕಾಪಾಡುವುದರಲ್ಲಿ ಪಕ್ಷಿಗಳ ಕೊಡುಗೆ ಅಪಾರ. ಭೂಮಿಯ ಮೇಲೆ ಇರುವ ಅನೇಕ ಕೀಟಗಳು ಹಾನಿಕಾರಕವಾಗಿದ್ದು, ಬೆಳೆಗಳನ್ನು ಹಾಳುಮಾಡುತ್ತವೆ ಇಲ್ಲವೆ ರೋಗ ಹರಡುತ್ತವೆ. ಅನೇಕ ಪಕ್ಷಿಗಳು ಈ ಕೀಟಗಳನ್ನು ತಿಂದು ಅವುಗಳ ಸಂಖ್ಯೆಯನ್ನು ನಿಯಂತ್ರಣದಲ್ಲಿರಿಸುತ್ತವೆ. ಕೆಲವು ಪಕ್ಷಿಗಳು, ಇಲಿ ಹೆಗ್ಗಣಗಳಂಥ ಹಾನಿಕಾರಕ ದಂಶಕಗಳನ್ನು, ಓತಿ, ಹಾವುಗಳಂಥ ಸರೀಸೃಪಗಳನ್ನು ತಿನ್ನುತ್ತವೆ. ಪಕ್ಷಿಗಳಿಂದ ಸಹಜವಾಗಿ ಇಂಥ ಕ್ಷುದ್ರ ಜೀವಿಗಳ ನಿಯಂತ್ರಣವಾಗುತ್ತದೆ. ಎಷ್ಟೋ ಪಕ್ಷಿಗಳು ತಾವೇ ಬೇರೆ ಪ್ರಾಣಿಗಳಿಗೆ ಆಹಾರವಾಗಿ ಆಹಾರ ಸರಪಣಿಯಲ್ಲಿ ಭಾಗವಹಿಸುತ್ತವೆ. ಈ ಪಕ್ಷಿಗಳ ಸಂಖ್ಯೆ ಕಡಿಮೆಯಾದರೂ ಕೂಡ ಪರಿಸರದ ಅಸಮತೋಲನವುಂಟಾಗುತ್ತದೆ.

ನಿಸರ್ಗದಲ್ಲಿ ಅವುಗಳ ಉಪಯೋಗಗಳು ಹಲವು. ನಿಸರ್ಗದಲ್ಲಿ ಪರಿಸರ ಸಮತೋಲನ ಕಾಯ್ದುಕೊಳ್ಳುವುದು ಅವುಗಳಲ್ಲಿ ಮುಖ್ಯವಾದುದು. ಜೊತೆಗೆ ಇನ್ನೂ ಹಲವಾರು ಉಪಯುಕ್ತವಾದ ನೈಸರ್ಗಿಕ ಕ್ರಿಯೆಗಳಲ್ಲಿ ಅವು ಭಾಗವಹಿಸುತ್ತವೆ. ಅವುಗಳಲ್ಲಿ ಸಸ್ಯಗಳ ಬೀಜ ಪ್ರಸಾರವೂ ಒಂದು.

ಸಸ್ಯಗಳು ಚಲನೆಯಿಲ್ಲದ ಜೀವಿಗಳು. ಅನೇಕ ಸಸ್ಯಗಳು ಬೀಜಗಳ ಮೂಲಕ ಪುನರುತ್ಪಾದನೆ ಮಾಡುತ್ತವೆ. ಗಿಡ ಅಥವಾ ಮರದ ಬೀಜಗಳು ನೆಲಕ್ಕೆ ಬಿದ್ದು ಮೊಳಕೆಯೊಡೆದು ಸಸ್ಯಗಳು ಬೆಳೆಯುತ್ತವೆ. ಚಲನೆಯಿಲ್ಲದ ಸಸ್ಯಗಳಲ್ಲಿ ಬೀಜಗಳು ಒಂದೇ ಕಡೆ ಬಿದ್ದು ಅನೇಕ ಸಸ್ಯಗಳು ಒಂದೇ ಕಡೆ ಬೆಳೆಯುವ ಸಾಧ್ಯತೆಗಳು ಹೆಚ್ಚು. ಆಗ ಭೂಮಿಯೊಳಗಿನ ಸಾರ ಸಾಲದೆ ಸಸ್ಯಗಳ ಬೆಳವಣಿಗೆ ಕುಂಠಿತವಾಗುತ್ತದೆ. ಬೀಜಗಳು ವಿಶಾಲವಾಗಿ ಹರಡುವಂತಿದ್ದರೆ ಅವುಗಳ ಬೆಳವಣಿಗೆ ಸಮರ್ಪಕವಾಗಿ ಆಗುತ್ತದೆ. ಅನೇಕ ಸಸ್ಯಾಹಾರೀ ಪಕ್ಷಿಗಳು ಹಣ್ಣುಹಂಪಲಗಳನ್ನು ತಿನ್ನುತ್ತವೆ. ಹಣ್ಣಿನ ಹೊರಭಾಗದ ತಿರುಳು ಜೀರ್ಣವಾಗುತ್ತದೆ. ಅದರೊಳಗಿನ ಬೀಜಗಳು ಪಕ್ಷಿ ಮಲವಿಸರ್ಜನೆ ಮಾಡುವಾಗ ಹೊರಬಿದ್ದು ನೆಲವನ್ನು ಸೇರುತ್ತವೆ. ಪಕ್ಷಿಗಳು ಪ್ರತಿದಿನವೂ ಬಹು ದೂರ ಪ್ರಯಾಣಿಸುವುದರಿಂದ ಬೀಜಗಳು ಬಹುದೂರ ಹರಡುತ್ತವೆ.

ಕೆಲವು ಪಕ್ಷಿಗಳು ಪರಾಗ ಸ್ಪರ್ಶ ಕ್ರಿಯೆಯಲ್ಲಿಯೂ ಭಾಗವಹಿಸುತ್ತವೆ. ಸಸ್ಯಗಳು ಹೂ ಬಿಡುತ್ತವೆ. ಪ್ರಾಣಿಗಳಲ್ಲಿ ಗಂಡು–ಹೆಣ್ಣುಗಳಿರುವಂತೆ ಸಸ್ಯಗಳಲ್ಲಿ ಲಿಂಗ ವ್ಯತ್ಯಾಸವಿಲ್ಲವಾದರೂ, ಹೂಗಳಲ್ಲಿ, ಗಂಡು ಹಾಗೂ ಹೆಣ್ಣು ಹೂಗಳಿರುತ್ತವೆ ಅಥವಾ ಒಂದೇ ಹೂವಿನಲ್ಲಿ ಪುರುಷಾಂಗವಾದ ಪುಂಕೇಸರ ಹಾಗೂ ಸ್ತ್ರೀಅಂಗ ಅಂಡಾಶಯಗಳು ಬೆಳೆಯುತ್ತವೆ. ಪ್ರಾಣಿಗಳ ವೀರ್ಯದಂತೆ ಪುಂಕೇಸರಗಳಲ್ಲಿ ಪರಾಗ ರೇಣುಗಳೂ ಅಂಡಾಶಯದಲ್ಲಿ ಅಂಡಾಣುಗಳೂ ಬೆಳೆಯುತ್ತವೆ. ಸಸ್ಯಗಳ ಪ್ರಜನನವಾಗುವಾಗ ಪರಾಗರೇಣುಗಳು ಅಂಡಾಶಯದ ಮೇಲೆ ಬಿದ್ದು ಅದರೊಳಗಿನ ಅಂಡಾಣುಗಳನ್ನು ನಿಷೇಚನಗೊಳಿಸುತ್ತವೆ. ಪರಾಗರೇಣುಗಳು ಅನೇಕ ವಿಧದಲ್ಲಿ ಅಂಡಾಶಯವನ್ನು ತಲುಪುತ್ತವೆ. ಈ ಕ್ರಿಯೆಯನ್ನು ಪರಾಗ ಸ್ಪರ್ಶ ಎನ್ನುತ್ತಾರೆ. ನಿಷೇಚನಗೊಂಡ ಅಂಡಾಣುಗಳಿಂದ ಹಣ್ಣು ಬೀಜಗಳು ಬೆಳೆಯುತ್ತವೆ. ಬೀಜಗಳಿಂದ ಸಸ್ಯಗಳ ಮುಂದಿನ ಪೀಳಿಗೆ ಬೆಳೆಯುತ್ತದೆ.

ಒಂದು ಹೂವಿನ ಪುಂಕೇಸರಗಳಲ್ಲಿ ಬೆಳೆಯುವ ಪರಾಗಗಳಿಂದ ಅದೇ ಹೂವಿನ ಅಥವಾ ಅದೇ ಗಿಡದ ಅಂಡಾಣುಗಳು ನಿಷೇಚನವಾಗುವಿಕೆ ಅಂತರ್‌ಸಂಕರ. ಹೀಗೆ ಒಂದೇ ಸಸ್ಯದ ಹೂಗಳ ನಡುವಿನ ಪರಾಗಸ್ಪರ್ಶವನ್ನು ಸ್ವಯಂಪರಾಗಸ್ಪರ್ಶ ಎಂದು ಹೆಸರು. ಒಂದು ಸಸ್ಯದ ಪರಾಗವು ಇನ್ನೊಂದು ಸಸ್ಯದ ಅಂಡಾಣುಗಳನ್ನು ನಿಷೇಚನಗೊಳಿಸುವಿಕೆಯನ್ನು ಬಾಹ್ಯಸಂಕರ ಎನ್ನುವರು. ಇದಕ್ಕೆ ಪರಕೀಯ ಪರಾಗಸ್ಪರ್ಶ ಎಂದು ಹೆಸರು. ಸಸ್ಯಗಳಲ್ಲಿ ಸದಾ ಅಂತರ್‌ಸಂಕರವಾಗುತ್ತಿದ್ದರೆ ಮುಂದೆ ಆ ತಳಿ ತನ್ನ ಆನುವಂಶೀಯ ಸತ್ವ ಕಳೆದುಕೊಳ್ಳುತ್ತದೆ, ಬಲಹೀನವಾಗುತ್ತದೆ. ವೈವಿಧ್ಯತೆಯನ್ನು ಕಳೆದುಕೊಳ್ಳುತ್ತದೆ. ವೈವಿಧ್ಯತೆ ಕಳೆದುಕೊಂಡ ಸಸ್ಯ ವಿಕಾಸದ ದೃಷ್ಟಿಯಿಂದ ಅನುಪಯುಕ್ತವಾಗುತ್ತದೆ. ಮುಂದೆ ಆ ಸಸ್ಯ ಸಂಪೂರ್ಣ ವಿನಾಶವಾಗುವ ಸಾಧ್ಯತೆಗಳಿವೆ.

ನಿಸರ್ಗದಲ್ಲಿ ಪರಾಗಸ್ಪರ್ಶವು ಹಲವು ವಿಧಾನಗಳಲ್ಲಿ ನಡೆಯುತ್ತದೆ. ಅನೇಕ ಜೀವಿಗಳು ತಮಗೆ ಅರಿವಿಲ್ಲದಂತೆ ಈ ಪರಾಗ ಸ್ಪರ್ಶ ಕ್ರಿಯೆಯಲ್ಲಿ ಭಾಗವಹಿಸುತ್ತವೆ. ಹೂವಿನಲ್ಲಿರುವ ಮಕರಂದ ಹೀರಲು ಹೋದಾಗ ಅವುಗಳ ಮೈಮೇಲೆ ಪರಾಗರೇಣುಗಳು ಅಂಟಿಕೊಳ್ಳುತ್ತವೆ. ಅದೇ ಪ್ರಾಣಿ ಇನ್ನೊಂದು ಹೂವಿಗೆ ಭೇಟಿಯಿತ್ತಾಗ ಅದರ ಮೈಮೇಲಿನ ಪರಾಗರೇಣುಗಳು ಈ ಹೂವಿನ ಅಂಡಾಶಯಕ್ಕೆ ಅಂಟುತ್ತವೆ. ಆಗ ಅದರಲ್ಲಿ ಪರಾಗಸ್ಪರ್ಶವಾಗುತ್ತದೆ. ಝೇಂಕಾರದ ಹಕ್ಕಿಯಂಥ (ಹಮ್ಮಿಂಗ್ ಬರ್ಡ್) ಕೆಲವು ಪಕ್ಷಿಗಳು ಹೂವಿನ ಮಕರಂದವನ್ನು ತಿಂದು ಬದುಕುತ್ತವೆ. ಅವು ಮಧುವನ್ನು ಕುಡಿಯಲು ಹೂಗಳನ್ನು ಸಮೀಪಿಸಿದಾಗ ಪರಾಗವನ್ನು ಹೊತ್ತು ಸಾಗಿಸುತ್ತವೆ. ಹೀಗೆ ಪರಕೀಯ ಪರಾಗಸ್ಪರ್ಶದ ಮೂಲಕ ಸಸ್ಯಪ್ರಪಂಚದಲ್ಲಿ ವೈವಿಧ್ಯತೆಯನ್ನು ಹೆಚ್ಚಿಸುವುದರೊಂದಿಗೆ ಸಸ್ಯಗಳಲ್ಲಿ ಆನುವಂಶೀಯ ಸತ್ವವನ್ನು ಹೆಚ್ಚಿಸುತ್ತವೆ.

ರೈತನ ಬೆಳೆಗಳಿಗೆ ಕೀಟಗಳಿಂದಲೂ ಸಾಕಷ್ಟು ಹಾನಿಯಾಗುತ್ತದೆ. ಮಿಡತೆಗಳು, ಪತಂಗಗಳು, ಅವುಗಳ ಲಾರ್ವಗಳು, ಬೆಳೆಗಳನ್ನು ತಿಂದು ಹಾಳು ಮಾಡುತ್ತವೆ. ಕಾಂಡ ಕೊರೆಯುವ ಕೀಟಗಳು, ಬೇರು ಚಿಗುರುಗಳನ್ನು ತಿನ್ನುವ ಕೀಟಗಳಿವೆ. ಸಂಗ್ರಹಿಸಿಟ್ಟ ಧಾನ್ಯಗಳನ್ನು ತಿಂದು ಹಾಳುಮಾಡುವ ಎಷ್ಟೋ ಕೀಟಗಳಿವೆ. ರೈತ ಬೆಳೆದ ಬೆಳೆಯ ಶೇಕಡ 10–15 ರಷ್ಟು ಕೀಟಗಳಿಂದ ನಾಶವಾಗುತ್ತದೆ ಎಂದು ಅಂದಾಜಿದೆ. ಅನೇಕ ಪಕ್ಷಿಗಳಿಗೆ ಇಂಥ ಕೀಟಗಳೇ ಆಹಾರ. ಕೀಟಗಳನ್ನು ತಿಂದು ನೈಸರ್ಗಿಕವಾಗಿಯೇ ಅವುಗಳನ್ನು ನಿಯಂತ್ರಣದಲ್ಲಿರಿಸುತ್ತವೆ.

ಇಲಿ, ಹೆಗ್ಗಣ, ಮೊಲ ಮುಂತಾದ ದಂಶಕ ಪ್ರಾಣಿಗಳು ಗುದಾಮುಗಳಲ್ಲಿ ಸಂಗ್ರಹಿಸಿಟ್ಟ ಧಾನ್ಯಗಳನ್ನು ತಿನ್ನುತ್ತವೆ. ಈ ಪ್ರಾಣಿಗಳಿಂದಲೂ ರೈತನಿಗೆ ಅಪಾರ ಹಾನಿಯಾಗುತ್ತದೆ. ಗೂಬೆ, ಗಿಡುಗ, ಹದ್ದುಗಳಂಥ ಪ್ರಾಣಿಗಳಿಗೆ ದಂಶಕಗಳು ಆಹಾರ. ಈ ಪಕ್ಷಿಗಳಿಂದ ದಂಶಕಗಳ ನಿಯಂತ್ರಣವಾಗುತ್ತದೆ. ರೈತನಿಗೆ ಸಂಭವಿಸುವ ಹಾನಿಯ ಪ್ರಮಾಣ ಕಡಿಮೆಯಾಗುತ್ತದೆ.

ಕೀಟ ಹಾಗೂ ದಂಶಕಗಳನ್ನು ನಿಯಂತ್ರಿಸಿಕೊಂಡು ಬೆಳೆಯನ್ನು ರಕ್ಷಿಸಿಕೊಳ್ಳಲು ರೈತ ಕೀಟನಾಶಕಗಳನ್ನು ಹಾಗೂ ಪಾಷಾಣಗಳನ್ನು ಉಪಯೋಗಿಸಬೇಕಾಗುತ್ತದೆ. ಈ ವಸ್ತುಗಳು ಕೀಟ ಹಾಗೂ ಇನ್ನಿತರ ಹಾನಿಕಾರಕ ಜೀವಿಗಳನ್ನು ನಾಶಪಡಿಸುತ್ತವೆ. ಆದರೆ ಜೊತೆಗೆ ನಿಸರ್ಗದ ಉಪಯುಕ್ತ ಜೀವಿಗಳ ಹಾಗೂ ಮನುಷ್ಯನ ಮೇಲೂ ಪರಿಣಾಮವುಂಟು ಮಾಡುತ್ತವೆ. ಪರಿಸರದ ಸಮತೋಲನ ತಪ್ಪುತ್ತದೆ. ಇಂಥ ಮಾರಕ ವಸ್ತುಗಳ ಬಳಕೆಯನ್ನು ಕಡಿಮೆ ಮಾಡುವುದು ಒಳಿತು. ಪಕ್ಷಿ ಸಂಕುಲ ಪರಿಪೂರ್ಣವಾಗಿದ್ದರೆ ಇಂಥ ಮಾರಕ ವಸ್ತುಗಳನ್ನು ಉಪಯೋಗಿಸುವ ಪ್ರಮೇಯವಿರುವುದಿಲ್ಲ.

ಪಕ್ಷಿಗಳಿಂದ ಇನ್ನೂ ಅನೇಕ ಉಪಯೋಗಗಳಿವೆ. ಕೆಲವು ಪಕ್ಷಿಗಳ ಗರಿ ಪುಕ್ಕಗಳು ತುಂಬಾ ಮೃದುವಾಗಿರುತ್ತವೆ. ಇವುಗಳನ್ನು ಹಾಸಿಗೆ, ದಿಂಬುಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಮನೆಗಳಲ್ಲಿ ಕುಳಿತುಕೊಳ್ಳಲು ಉಪಯೋಗಿಸುವ ಕುರ್ಚಿ, ಸೋಫಾ, ಪಲ್ಲಂಗಗಳ ಮೇಲಿನ ಮೆತ್ತನೆಯ ಗಾದಿಯಲ್ಲಿಯೂ ಹಕ್ಕಿಗಳ ಗರಿಗಳನ್ನು ಬಳಸಲಾಗುತ್ತದೆ. ಹಂಸ, ಬಕ, ಬಾತು, ನೀರುಕೋಳಿ ಮುಂತಾದ ಜಲಪಕ್ಷಿಗಳ ಗರಿಗಳು ನವುರಾಗಿ, ಮೃದುವಾಗಿರುವುದರಿಂದ ಇವುಗಳನ್ನೇ ಹೆಚ್ಚು ಬಳಸುತ್ತಾರೆ. ಇವುಗಳಲ್ಲಿ ಹಂಸಗಳ ಗರಿಗಳಿಗೇ ಹೆಚ್ಚು ಬೇಡಿಕೆಯಿದೆ. ಹಕ್ಕಿಗಳ ಗರಿಗಳ ಪೈಕಿ ಕೆಳಭಾಗದ ಗರಿಗಳಲ್ಲಿ ನಡುವಿನ ಗರಿಕಾಂಡ ಚಿಕ್ಕದಾಗಿರುವುದರಿಂದ ಅದು ಹೆಚ್ಚು ಉಪಯುಕ್ತ. ಗರಿಗಳನ್ನು ಬಟ್ಟೆಯ ಚೀಲಗಳಲ್ಲಿ ತುಂಬಿದಾಗ ಮೆತ್ತಗೆ ನುಣುಪಾಗಿರುತ್ತವೆ. ಹತ್ತಿ, ಕೆಲವು ಸಸ್ಯಗಳ ನಾರುಗಳು, ಕೃತಕವಾಗಿ ತಯಾರಿಸಿದ ಸ್ಪಂಜು ಮುಂತಾದುವುಗಳಿಂದಲೂ ಇಂಥ ಸಾಮಗ್ರಿಗಳನ್ನು ತಯಾರಿಸಬಹುದು. ಆದರೆ ಗರಿಗಳಷ್ಟು ಮೃದುವಾಗಿರುವುದಿಲ್ಲ, ನೈಸರ್ಗಿಕವಾಗಿರುವುದಿಲ್ಲ, ಮೆತ್ತಗಿರುವುದೂ ಇಲ್ಲ. ಜೊತೆಗೆ ಗರಿಗಳ ಲಭ್ಯತೆ ಕಡಿಮೆಯಿರುವುದರಿಂದ ಗರಿಗಳಿಂದ ತಯಾರಾದ ಇಂಥ ವಸ್ತುಗಳಿಗೆ ಬೆಲೆ ಹೆಚ್ಚು. ಇವುಗಳ ಬಾಳಿಕೆಯೂ ಹೆಚ್ಚು. ಗರಿಗಳಿಂದ ತಯಾರಾದ ಹಾಸಿಗೆ, ದಿಂಬು, ಸೋಫಾಗಳನ್ನು ಬಳಸುವುದು ಶ್ರೀಮಂತಿಕೆಯ ಲಕ್ಷಣವೆಂದೂ ಭಾವಿಸಲಾಗುತ್ತದೆ. ಗರಿ ಹಾಗೂ ಮಾಂಸಗಳಿಗೆಂದೇ ಅನೇಕ ಕಡೆಗಳಲ್ಲಿ ಈ ಪಕ್ಷಿಗಳನ್ನು ಸಾಕುತ್ತಾರೆ.

ಪಕ್ಷಿಗಳಲ್ಲಿ ಮಲ ಮೂತ್ರಗಳು ಪ್ರತ್ಯೇಕವಾಗಿ ವಿಸರ್ಜನೆಯಾಗುವುದಿಲ್ಲ. ಮಲಮೂತ್ರಗಳೆರಡೂ ಒಟ್ಟಾಗಿ ಸೇರಿ ಒಂದೇ ದ್ವಾರದ ಮುಖಾಂತರ ವಿಸರ್ಜನೆಯಾಗುತ್ತವೆ. ಪಚನವಾಗದೆ ಉಳಿದ ಪದಾರ್ಥಗಳು, ಹಾಗೂ ಮೂತ್ರಗಳೆರಡೂ ಒಟ್ಟಿಗೆ ಕೂಡಿ ಹೊರಬರುತ್ತದೆ. ವಿಸರ್ಜಕವು ಸಾಮಾನ್ಯವಾಗಿ ಘನರೂಪದಲ್ಲಿ ಅಥವಾ ತೇವ ಮಿಶ್ರಿತ ಅರೆಘನ ರೂಪದಲ್ಲಿರುತ್ತದೆ. ಇದನ್ನು ಹಿಕ್ಕೆ ಎನ್ನುವರು. ಅದರಲ್ಲಿ ಯೂರಿಕ್ ಆಮ್ಲವೆಂಬ ಘಟಕವಿರುತ್ತದೆ. ಇದು ಉತ್ತಮ ರಸ ಗೊಬ್ಬರವಾಗಬಲ್ಲುದು. ಕೆಲವು ಕಡಲ ಪಕ್ಷಿಗಳು ಗುಂಪಾಗಿ ವಾಸಿಸುತ್ತವೆ. ಲಕ್ಷಾಂತರ ಹಕ್ಕಿಗಳು ಹಗಲಿನಲ್ಲಿ ವಿವಿಧೆಡೆಗಳಲ್ಲಿ ಆಹಾರಕ್ಕಾಗಿ ಹಾರಾಡುತ್ತಿದ್ದರೂ ರಾತ್ರಿಯಾದೊಡನೆ ಒಂದೆಡೆ ಸೇರುತ್ತವೆ. ಆ ಸ್ಥಳದಲ್ಲಿ ಅವುಗಳ ಹಿಕ್ಕೆ ಸಂಗ್ರಹವಾಗುತ್ತದೆ. ಅದು ಗೊಬ್ಬರವಾಗಿ ಉಪಯೋಗವಾಗುತ್ತದೆ. ಅದರಿಂದ ಇಂಥ ಸ್ಥಳಗಳು ನೈಸರ್ಗಿಕ ಗೊಬ್ಬರದ ತಾಣಗಳಾಗಿವೆ. ಪೆರು ದೇಶದ ಸಮುದ್ರ ತೀರದ ಆಚೆಗಿರುವ ಕೆಲವು ದ್ವೀಪಗಳಲ್ಲಿ ದಪ್ಪ ದಪ್ಪ ಪದರಗಳಲ್ಲಿ ಸಂಗ್ರಹವಾದ ಮತ್ಸ್ಯಭಕ್ಷಕ ಸಮುದ್ರ ಪಕ್ಷಿಗಳ ವಿಸರ್ಜಕಕ್ಕೆ ಗ್ವಾನೊ ಎಂಬ ಹೆಸರಿದೆ. ಪೆರು ಹಾಗೂ ಚಿಲಿ ದೇಶಗಳಲ್ಲಿ ಈ ಗೊಬ್ಬರವನ್ನು ತೆಗೆಯುವುದು ಭಾರೀ ಉದ್ಯಮವಾಗಿದ್ದು ಆ ದೇಶಗಳಿಗೆ ಸಾಕಷ್ಟು ಲಾಭ ಬರುತ್ತಿದೆ.

ಮೂಲತಃ ಮಾನವ ಮಿಶ್ರಾಹಾರಿ. ಸಸ್ಯ ಹಾಗೂ ಮಾಂಸ ಎರಡನ್ನೂ ಸೇವಿಸುತ್ತಾನೆ. ಕೆಲವರು ಕೇವಲ ಸಸ್ಯಾಹಾರಿಗಳಾಗಿ ಪರಿವರ್ತನೆಯಾಗಿದ್ದರೂ ಇಂದೂ ಅನೇಕ ಮಾಂಸಾಹಾರಿಗಳಿರುವರು. ಬೇರೆ ಜೀವಿಗಳಿಗೆ ಆಹಾರವಾಗುವಂತೆ ಅನೇಕ ಪಕ್ಷಿಗಳು ಮನುಷ್ಯನಿಗೂ ಆಹಾರವಾಗುತ್ತವೆ. ಅದರಿಂದ ಮಾನವ ಬಹಳ ಹಿಂದಿನಿಂದಲೂ ಪಕ್ಷಿಗಳನ್ನು ಬೇಟೆಯಾಡುತ್ತಿದ್ದ. ಹಿಂದೆ, ನೆಲದ ಮೇಲೆ ಹಾಗು ನೀರಿನ ತಾಣಗಳಲ್ಲಿ ವಾಸಿಸುತ್ತಿದ್ದ ಪಕ್ಷಿಗಳನ್ನು ಬೇಟೆಯಾಡಲಾಗುತ್ತಿತ್ತು. ಶರೀರದಲ್ಲಿ ಹೆಚ್ಚು ಮಾಂಸ ತುಂಬಿರುವ ಬಕ, ಬಾತು, ಹಂಸ, ಟರ್ಕಿ ಮುಂತಾದ ಪಕ್ಷಿಗಳನ್ನು ಮಾತ್ರ ಹಿಡಿಯಲಾಗುತ್ತಿತ್ತು. ಅನಂತರ ಬಿಲ್ಲು ಬಾಣಗಳಿಂದ ಪಕ್ಷಿಗಳನ್ನು ಬೇಟೆಯಾಡುವ ಪದ್ಧತಿ ಬಳಕೆಗೆ ಬಂತು. ಕೆಲವೊಮ್ಮೆ ಉರುಳು ಅಥವಾ ಪಾಶಗಳಿಂದ ಹಕ್ಕಿ ಹಿಡಿಯುವ ಪ್ರಯತ್ನವೂ ನಡೆಯಿತು. ಆದರೆ ಈ ವಿಧಾನದಲ್ಲಿ ಹೆಚ್ಚು ಸಮಯ ವ್ಯರ್ಥವಾಗುತ್ತಿತ್ತು. ಅದರಿಂದ ಬಲೆಗಳನ್ನು ಆವಿಷ್ಕರಿಸಲಾಯಿತು. ಹಕ್ಕಿಗಳು ಹಾರಾಡುವ ಪ್ರದೇಶಗಳಲ್ಲಿ ಬಲೆ ಬೀಸಿ ಅವುಗಳನ್ನು

ಹಿಡಿಯುವ ಪರಿಪಾಠ ಆರಂಭವಾಯಿತು. ಪಾರಿವಾಳ, ಬಾತು ಮುಂತಾದುವುಗಳನ್ನು ಬಲೆ ಬೀಸಿ ಹಿಡಿಯಲಾಗುತ್ತಿತ್ತು. ಬಂದೂಕುಗಳಂಥ ಉಪಕರಣಗಳ ಆವಿಷ್ಕಾರವಾದಾಗ ಪಕ್ಷಿಗಳ ಬೇಟೆ ಇನ್ನಷ್ಟು ಸುಲಭವಾಯಿತು. ಮಾಂಸ ತುಪ್ಪುಳಗಳಿಂದ ಕೂಡಿದ ಅತ್ಯಂತ ಚುರುಕಾದ ಪಕ್ಷಿಗಳನ್ನೂ ಕೂಡ ಸುಲಭವಾಗಿ ಬೇಟೆಯಾಡುವುದು ಸಾಧ್ಯವಾಯಿತು. ಆಹಾರಕ್ಕೆಂದು ಮಾತ್ರ ಬೇಟೆಯಾಡುತ್ತಿದ್ದ ಮಾನವ ಮನರಂಜನೆಗಾಗಿ ಕೂಡ ಬೇಟೆಯಾಡಲಾರಂಭಿಸಿದ. ಹೀಗೆ ಆರಂಭವಾದ ಪಕ್ಷಿಗಳ ಬೇಟೆ ಅನೇಕ ಶತಮಾನಗಳಿಂದ ಅವ್ಯಾಹತವಾಗಿ ಮುಂದುವರಿದಿದೆ. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅನ್ವಯ ಈಗ ಪಕ್ಷಿಗಳ ಬೇಟೆಯಾಡುವುದು ನಿಷಿದ್ಧ. ಆದರೂ ಅಲ್ಲಲ್ಲಿ ಪಕ್ಷಿಗಳ ಬೇಟೆ ಇನ್ನೂ ನಿರಂತರವಾಗಿ ಸಾಗಿದೆ.

ಪಕ್ಷಿಗಳು ಮಾನವನಿಗಷ್ಟೇ ಆಹಾರವಲ್ಲ. ಬೇರೆ ಜೀವಿಗಳಿಗೂ ಕೂಡ ಆಹಾರವಾಗುತ್ತವೆ. ಅದರಿಂದ ಅವು ಆಹಾರ ಸರಪಣಿಯಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಪರಿಸರ ಸಮತೋಲನದಲ್ಲಿ ಇವುಗಳ ಪಾತ್ರ ಬಹು ಮುಖ್ಯವಾದುದು. ಬೇರೆ ಜೀವಿಗಳನ್ನು ತಿಂದು ಪರಿಸರ ನಿಯಂತ್ರಣ ಮಾಡುವುದರೊಡನೆ ಅನೇಕ ಪಕ್ಷಿಗಳು ಬೇರೆ ಪ್ರಾಣಿ-ಪಕ್ಷಿಗಳಿಗೆ ಆಹಾರವಾಗುತ್ತವೆ. ಅನೇಕ ಸರೀಸೃಪಗಳು, ಸ್ತನಿಗಳು ಪಕ್ಷಿಗಳನ್ನು ತಿನ್ನುತ್ತವೆ. ಗಿಡುಗ, ಹದ್ದು, ರಣಹದ್ದುಗಳಗಳಂಥ ಪಕ್ಷಿಗಳು ಬೇರೆ ಜಾತಿಯ ಪಕ್ಷಿಗಳನ್ನು ಹಿಡಿದು ತಿನ್ನುತ್ತವೆ.

ಪಕ್ಷಿಗಳ ಮಾಂಸ ತುಂಬ ರುಚಿಕರ ಹಾಗು ಪುಷ್ಟಿಕರ. ಬೇರೆ ಎಲ್ಲ ಬಗೆಯ ಮಾಂಸಗಳಿಗಿಂತ ಉತ್ಕೃಷ್ಟವಾದುದು. ಅವುಗಳ ಮೊಟ್ಟೆಗಳು ಕೂಡ ಮಾನವನಿಗೆ ಹಾಗೂ ಇತರ ಪ್ರಾಣಿಗಳಿಗೆ ಉತ್ತಮ ಆಹಾರವಾಗಬಲ್ಲುದು. ಮಾನವ ಅತ್ಯಂತ ಪ್ರಾಚೀನ ಕಾಲದಿಂದಲೂ ಪಕ್ಷಿಗಳ ಮೊಟ್ಟೆಗಳನ್ನು ಅರಸಿ ಹಿಡಿದು ತಿನ್ನುತ್ತಿದ್ದರು. ಅರಣ್ಯಗಳಲ್ಲಿ, ಗುಹೆಗಳಲ್ಲಿ ವಾಸಿಸುತ್ತಿದ್ದ ವಿವಿಧ ಮಾನವ ಜನಾಂಗಗಳು ಗಡ್ಡೆಗೆಣಸುಗಳನ್ನು, ಪಶು ಪಕ್ಷಿಗಳ ಮಾಂಸವನ್ನು ತಿನ್ನುವುದರೊಂದಿಗೆ ಮೊಟ್ಟೆಗಳನ್ನು ಕೂಡ ತಿನ್ನುತ್ತಿದ್ದ. ಅನೇಕ ಪಕ್ಷಿಗಳ ಗೂಡುಗಳು ಕೈಗೆಟುಕುತ್ತಿರಲಿಲ್ಲವಾದ್ದರಿಂದ ನೆಲದ ಮೇಲೆ ಗೂಡು ಕಟ್ಟಿ ಮೊಟ್ಟೆಯಿಡುತ್ತಿದ್ದ ಪಕ್ಷಿಗಳ ಮೊಟ್ಟೆಗಳೇ ಹೆಚ್ಚು ಉಪಯೋಗವಾಗುತ್ತಿದ್ದುವು.

ಮೊಟ್ಟೆಗಳು ಮಾನವನಿಗಷ್ಟೇ ಅಲ್ಲದೆ ಇನ್ನೂ ಅನೇಕ ಜೀವಿಗಳಿಗೆ ಆಹಾರವಾಗುತ್ತದೆ. ಹಾವುಗಳು, ಮೊಸಳೆಗಳು ಹಾಗೂ ಇನ್ನಿತರ ಸರೀಸೃಪಗಳು ಹಕ್ಕಿಗಳ ಮೊಟ್ಟೆಗಳನ್ನು ತಿನ್ನುವವು. ಮಾಂಸಾಹಾರಿ ಸ್ತನಿಗಳು ಕೂಡ ಪಕ್ಷಿಗಳ ಮೊಟ್ಟೆಗಳನ್ನು ತಿನ್ನುತ್ತವೆ. ಪಕ್ಷಿಗಳ ಮೊಟ್ಟೆಗಳಲ್ಲಿ ಜೀವಿಗಳ ಬೆಳವಣಿಗೆಗೆ ಅಗತ್ಯವಾದ ಎಲ್ಲ ಪೌಷ್ಟಿಕ ವಸ್ತುಗಳು, ಖನಿಜಾಂಶಗಳು, ಜೀವಸತ್ವಗಳೂ ಇರುತ್ತವೆ. ಹೀಗೆ ಮಾಂಸ ಹಾಗೂ ಮೊಟ್ಟೆ ಎರಡನ್ನೂ ನೀಡುವ ಪಕ್ಷಿಗಳು ಜೀವ ಪ್ರಪಂಚದ ಆಹಾರ ಸರಪಣಿಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತವೆ.

ಹಲವು ಪಕ್ಷಿಗಳು ಕಳೆ ನಿರ್ಮೂಲನೆಯಲ್ಲಿ ರೈತನಿಗೆ ಸಹಾಯ ಮಾಡುತ್ತವೆ. ಸಾಮಾನ್ಯವಾಗಿ ಈ ಪಕ್ಷಿಗಳು ಬೀಜಗಳನ್ನು ತಿನ್ನುತ್ತವೆ. ಕಳೆಯ ಸಸ್ಯಗಳ ಬೀಜಗಳು ಈ ಪಕ್ಷಿಗಳ ಆಹಾರ. ಅವು ತಿಂದ ಬೀಜಗಳು ಅವುಗಳ ಹೊಟ್ಟೆಯಲ್ಲಿ ಜೀರ್ಣವಾಗುತ್ತವೆ. ಉತ್ತರ ಅಮೇರಿಕಾದಲ್ಲಿ ವಾಸಿಸುವ ಬಾಬ್‌ವೈಟ್ ಕ್ವಯಿಲ್ ಎಂಬ ಪಕ್ಷಿ ಇದಕ್ಕೆ ಉತ್ತಮ ಉದಾಹರಣೆ. ಒಂದು ಬಾಬ್‌ವೈಟ್ ಕ್ವಯಿಲ್ ಪಕ್ಷಿಯು ಪ್ರತಿದಿನ ಹೊಲಗಳಿಂದ ಹದಿನೈದು ಸಾವಿರ ಬೀಜಗಳನ್ನು ಆಯ್ದು ತಿನ್ನುತ್ತದೆ!

ಅನೇಕರು ಪಕ್ಷಿಗಳನ್ನು ಸಾಕುತ್ತಾರೆ. ಕೋಳಿ, ಹಂಸ, ಬಾತು ಮುಂತಾದುವುಗಳನ್ನು ಆಹಾರಕ್ಕಾಗಿ ಸಾಕಲಾಗುತ್ತದೆ. ಇದಲ್ಲದೆ ಕೆಲವು ಪಕ್ಷಿಗಳನ್ನು ಅಂದಕ್ಕಾಗಿ, ಇನ್ನು ಕೆಲವು ಪಕ್ಷಿಗಳನ್ನು ಹವ್ಯಾಸಕ್ಕಾಗಿ ಅಥವಾ ಮನರಂಜನೆಗೆ ಸಾಕುತ್ತಾರೆ. ಪಕ್ಷಿಗಳನ್ನು ಸಾಕುವ ಪದ್ಧತಿ ತುಂಬಾ ಪುರಾತನವಾದುದು. ಇದು ಬಹುಶಃ ಮಾನವನ ಸಂಸ್ಕೃತಿಯ ಬೆಳವಣಿಗೆಯ ಜೊತೆಗೇ ಸಾಗಿ ಬಂದಿರಬೇಕು. ಏಕೆಂದರೆ ಸುಮಾರು ಐದು ಸಾವಿರ ವರ್ಷಗಳ ಹಿಂದಿನಿಂದಲೂ ಪಕ್ಷಿಗಳನ್ನು ಸಾಕಲಾಗುತ್ತಿತ್ತು ಎಂಬುದಕ್ಕೆ ದಾಖಲೆಗಳು ದೊರೆಯುತ್ತವೆ. ಪುರಾಣಗಳಲ್ಲಿ ಮಹಾಕಥೆಗಳಲ್ಲಿ ಗಿಳಿ, ಪಾರಿವಾಳ, ಹಂಸ, ಬಾತು ಮುಂತಾದ ಪಕ್ಷಿಗಳನ್ನು ಸಾಕುತ್ತಿದ್ದ ಬಗ್ಗೆ ಉಲ್ಲೇಖಗಳಿವೆ ಎಂದು ಹಿಂದೆಯೇ ಹೇಳಿದೆ. ಅಂದು ಈ ಪಕ್ಷಿಗಳನ್ನು ಸಂದೇಶ ರವಾನೆಗೆ ಬಳಸಿಕೊಳ್ಳಲಾಗುತ್ತಿತ್ತು. ಪ್ರೇಮಿಗಳು ಪ್ರೇಮಪತ್ರಗಳನ್ನು ವಿನಿಮಯ ಮಾಡಿಕೊಳ್ಳಲು ಪಾರಿವಾಳಗಳಂಥ ಪಕ್ಷಿಗಳನ್ನು ಬಳಸುತ್ತಿದ್ದರು. ಭಾರತದಲ್ಲಿ ಸುಮಾರು ನಾಲ್ಕೂವರೆ ಸಾವಿರ ವರ್ಷಗಳ ಹಿಂದೆಯೇ ಪಾರಿವಾಳಗಳನ್ನು ಸಾಕಲಾಗುತ್ತಿತ್ತು ಎಂದು ದಾಖಲೆಗಳು ತಿಳಿಸುತ್ತವೆ.

ಮೊದಲು ಗಿಳಿ, ಪಾರಿವಾಳ, ಹಂಸ ಮುಂತಾದುವುಗಳ ಸಾಕುವಿಕೆ ಆರಂಭವಾದರೂ, ಮುಂದೆ ಕೋಳಿ ಸಾಕಾಣಿಕೆ ಕೂಡ ಆರಂಭವಾಯಿತು. ಜೊತೆಗೆ ಹೆಚ್ಚು ಮಾಂಸ ದೊರೆಯುವಂತಹ ಇತರ ದೊಡ್ಡ ಪಕ್ಷಿಗಳನ್ನು ಸಾಕುವ ಪ್ರವೃತ್ತಿಯೂ ಶುರುವಾಯಿತು. ಗಿಳಿ, ಪಾರಿವಾಳಗಳಂಥ ಪುಟ್ಟ ಹಕ್ಕಿಗಳನ್ನು ಅಂದಕ್ಕಾಗಿ ಹವ್ಯಾಸಕ್ಕಾಗಿ ಮನರಂಜನೆಗಾಗಿ ಸಾಕಿದರೆ ದೊಡ್ಡ ಪಕ್ಷಿಗಳನ್ನು ಆಹಾರಕ್ಕಾಗಿ ಸಾಕಲಾರಂಭವಾಯಿತು. ಗಿಳಿ, ಪಾರಿವಾಳ, ಹಂಸ, ಪಂಚರಂಗಿ, ಪ್ರಣಯ ಪಕ್ಷಿ, ಕನೇರಿ ಹಕ್ಕಿ, ಬೆಟ್ಟದ ಹಕ್ಕಿ, ಫಿಂಚ್ ಪಕ್ಷಿ ಹೀಗೆ ನಾನಾ ಬಗೆಯ ಹಕ್ಕಿಗಳನ್ನು ಇಂದು ಸಾಕಲಾಗುತ್ತದೆ. ಇವುಗಳಲ್ಲಿ ಗಿಳಿ ಹಾಗೂ ಪ್ರಣಯ ಪಕ್ಷಿಗಳಿಗೆ ಮಾನವನ ಶಬ್ದವನ್ನು ಅನುಕರಿಸುವ ಶಕ್ತಿ ಹಾಗೂ ಕಲಿಕೆಯ ಶಕ್ತಿ ಹೆಚ್ಚಾಗಿರುವುದು. ರಾಮ, ಬಾ, ಹೋಗು, ಮುಂತಾದ ಎರಡು ಅಕ್ಷರಗಳ ಪದಗಳನ್ನು ಇವು ಸುಲಭವಾಗಿ ಉಚ್ಚರಿಸಬಲ್ಲುವು. ವಿವಿಧ ಬಗೆಯಲ್ಲಿ ಶಿಳ್ಳೆಹಾಕಬಲ್ಲುವು. ಸಂಗೀತಮಯ ಹಾಡುಗಳನ್ನು ಹಾಡಬಲ್ಲುವು. ಅದರಿಂದ ಈ ಎರಡು ಜಾತಿಯ ಹಕ್ಕಿಗಳ ಸಾಕುವಿಕೆ ಹೆಚ್ಚು ಪ್ರಚಲಿತವಾಗಿದೆ.

ಪಕ್ಷಿಗಳನ್ನು ವೈಜ್ಞಾನಿಕವಾಗಿ ಸಾಕಿ ಸಂಕರಗೊಳಿಸಿ ಮಾರುವ ಪ್ರಕ್ರಿಯೆಯೂ ನಡೆಯುತ್ತಿದೆ. ಹಕ್ಕಿಗಳನ್ನು ಪಂಜರದಲ್ಲಿಟ್ಟು ಸಾಕಿ ಸಲಹಿ, ಸಂಕರ ಗೊಳಿಸಿ ಅವು ಮೊಟ್ಟೆಯಿಟ್ಟನಂತರ ಕಾವು ಕೊಡಿಸಿ ಮರಿಮಾಡಿ ಮರಿಗಳನ್ನು ಬೆಳೆಸಿ ಅಂಗಡಿಗಳಲ್ಲಿಟ್ಟು ಸಾರ್ವಜನಿಕವಾಗಿ ಮಾರಾಟ ಮಾಡಲಾಗುತ್ತದೆ. ಹೀಗೆ ಮಾರಾಟವಾಗುವ ಹಕ್ಕಿಗಳು ಅವುಗಳ ಮೂಲ ತಳಿಗಳ ಗುಣಗಳನ್ನು ಕಳೆದುಕೊಂಡು ವಿಭಿನ್ನವಾಗಿರುತ್ತವೆ. ಕೆಲವೊಮ್ಮೆ ಆಕರ್ಷಕವಾಗಿಯೂ ಗೋಚರಿಸುತ್ತವೆ. ಉದಾಹರಣೆಗೆ ಪ್ರಣಯ ಪಕ್ಷಿಗಳ ಮೂಲ ಬಣ್ಣ ಹಸಿರು. ಇಂದು ಹಳದಿ, ಕೆಂಪು, ನೀಲಿ, ಬಿಳಿ ಹೀಗೆ ಹಲವಾರು ಬಗೆಯ ಪ್ರಣಯ ಪಕ್ಷಿಗಳು ದೊರೆಯುತ್ತವೆ.

1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅನ್ವಯ ಪಕ್ಷಿಗಳನ್ನು ಹಿಡಿದು ಬಂಧನದಲ್ಲಿರಿಸಿ ಮಾರಾಟ ಮಾಡುವುದು ನಿಷಿದ್ಧ. ಪ್ರಾಣಿಸಂಗ್ರಹಾಲಯ ಹಾಗೂ ಸರ್ಕಾರ ಸ್ಥಾಪಿಸುವ ಪಕ್ಷಿಸಂಗ್ರಹಾಲಯಗಳ ಹೊರತು ಅನಧಿಕೃತವಾಗಿ ಪಕ್ಷಿಗಳನ್ನು ಪಂಜರದಲ್ಲಿಟ್ಟು ಸಾಕುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಗುತ್ತದೆ.

ಹಾನಿಕಾರಕ ಪಕ್ಷಿಗಳು: ಪಕ್ಷಿಗಳಿಂದ ನಮಗೆ ಹಾನಿಯೂ ಉಂಟು. ಕಾಳು, ಧಾನ್ಯಗಳನ್ನು, ಹಣ್ಣು, ತರಕಾರಿಗಳನ್ನು ತಿಂದು ಬದುಕುವ ಪಕ್ಷಿಗಳಿವೆ. ರೈತ ಬೆಳೆಯುವ ಬೆಳೆಗಳ ನಡುವೆ ಕಳೆಗಳು ಹುಟ್ಟಿ ಅವುಗಳಿಂದ ಬೆಳೆಗಳಿಗೆ ಸಾಕಷ್ಟು ಹಾನಿಯಾಗುತ್ತದೆ. ಅಂದರೆ ಪಕ್ಷಿಗಳೆಲ್ಲವೂ ಮಾನವನಿಗೆ ಉಪಯುಕ್ತವಾಗುತ್ತವೆ ಎಂದಲ್ಲ. ಹಲವು ಪ್ರಾಣಿಗಳು ರೈತ ಬೆಳೆದ ಫಸಲುಗಳನ್ನು ಹಾಳು ಮಾಡುತ್ತವೆ. ಇವುಗಳಲ್ಲಿ ಹುಳುಗಳು, ಕೀಟಗಳು, ಮೃದ್ವಂಗಿಗಳು, ಕೆಲವು ಸಸ್ಯಾಹಾರಿ ಪ್ರಾಣಿಗಳು, ಇಲಿ-ಹೆಗ್ಗಣಗಳಂಥ ದಂಶಕಗಳು ಮುಖ್ಯವಾದುವು. ಹೀಗೆಯೇ ಕೆಲವು ಹಾನಿಕಾರಕ ಪಕ್ಷಿಗಳೂ ಇವೆ. ಗುಬ್ಬಚ್ಚಿ, ಪಾರಿವಾಳ, ಮುಂತಾದುವು ರೈತ ಬೆಳೆದ ಕಾಳುಗಳನ್ನು ತಿನ್ನುತ್ತವೆ. ಮೈನಾ, ಬಾಬ್ಲರ್ ಮುಂತಾದ ಹಕ್ಕಿಗಳು ಗುಂಪಾಗಿ ಧಾವಿಸಿ ಒಣಗಿಸಲು ಹಾಕಿದ ಕಾಳುಗಳನ್ನು ಧಾನ್ಯಗಳನ್ನು ತಿಂದು ರೈತನಿಗೆ ಅಪಾರ ಹಾನಿಮಾಡುತ್ತವೆ. ಕಾಗೆ ಮೂಲತಃ ಮಾಂಸಾಹಾರೀ ಪಕ್ಷಿಯಾಗಿದ್ದರೂ ಕೂಡ ಆಹಾರ ಪದಾರ್ಥಗಳನ್ನು, ಧವಸ-ಧಾನ್ಯಗಳನ್ನು, ಹಣ್ಣುಹಂಪಲುಗಳನ್ನು ತಿಂದು ಹಾಳುಮಾಡುತ್ತವೆ. ಆಫ್ರಿಕಾದ ಕ್ವಯಿಲಾ ಹಾಗೂ ಅಮೆರಿಕಾದ ಕೃಷ್ಣಪಕ್ಷಿಗಳು ಸಹಸ್ರಾರು ಸಂಖ್ಯೆಯಲ್ಲಿ ಹೊಲಗದ್ದೆಗಳಿಗೆ ಧಾಳಿಯಿಟ್ಟು ಬೆಳೆಯನ್ನು ಹಾಳು ಮಾಡುತ್ತವೆ.

ಮೈನಾ ಜಾತಿಗೆ ಸೇರಿದ ಸ್ಟಾರ್‌ಲಿಂಗ್ ಎಂಬ ಇನ್ನೊಂದು ಉಪದ್ರವಕಾರಿ ಪಕ್ಷಿಯಿದೆ. ನಗರಗಳಲ್ಲಿ ಗುಂಪಾಗಿ ವಾಸಿಸುವ ಈ ಜಾತಿಯ ಅನೇಕ ಹಕ್ಕಿಗಳು ಒಂದುಗೂಡಿ ಕಿರಿಚುತ್ತ ಗದ್ದಲವೆಬ್ಬಿಸುತ್ತವೆ, ಸಾರ್ವಜನಿಕ ಕಿರಿಕಿರಿಯುಂಟು ಮಾಡುತ್ತವೆ. ಜೊತೆಗೆ ಇವುಗಳ ವಿಸರ್ಜಕಗಳು ಒಟ್ಟಿಗೇ ಬಿದ್ದು ಅಸಹ್ಯ ಹುಟ್ಟಿಸುತ್ತವೆ. ಕಟ್ಟಡಗಳು ಹಾಗೂ ಮರಮುಟ್ಟುಗಳ ಕೆಳಗೆ ವಿಸರ್ಜಕಗಳಿಂದ ಹೊಲಸುಮಾಡುತ್ತವೆ. ಕೆಲವೆಡೆಗಳಲ್ಲಿ ಪಾರಿವಾಳಗಳೂ ಹೀಗೆ ಉಪದ್ರವ ನೀಡುತ್ತವೆ. ಈ ವಿಸರ್ಜಕಗಳ ಮೇಲೆ ಹಿಸ್ಟೊಪ್ಲಾಸ್ಮ ಕ್ಯಾಪ್ಸುಲೇಟಮ್ ಎಂಬ ಬೂಷ್ಟು ಬೆಳೆಯುತ್ತದೆ. ಈ ಬೂಷ್ಟಿನ ಸ್ಪೋರು ಅಥವಾ ಬೀಜಕಗಳು ಗಾಳಿಯಲ್ಲಿ ಹರಡುತ್ತವೆ. ಕೆಲವರಿಗೆ ಇಂಥ ಬೀಜಕಗಳಿಂದ ಅಲರ್ಜಿಯುಂಟಾಗುತ್ತದೆ. ಶ್ವಾಸಕೋಶಗಳಿಗೆ ಬೀಜಕಗಳು ಸಾಗಿದಾಗ ಮೊದಲು ಮಂದಗತಿಯಲ್ಲಿರುವ ಸೋಂಕು, ಕೆಲವು ವೇಳೆ ಇಡೀ ದೇಹದಲ್ಲೆಲ್ಲ ಹರಡಬಹುದು. ಸೋಂಕು ಅತಿಯಾದಾಗ ಸಾವೂ ಕೂಡ ಸಂಭವಿಸಬಹುದು. (ಎಸ್.ಎನ್.ಎಚ್)

ಪಕ್ಷಿಗಳ ವಿಕಾಸ: ಪಕ್ಷಿಗಳು ಸರೀಸೃಪಗಳಿಂದ ಉದಯವಾದುವು. ನೂರೈವತ್ತು ಮಿಲಿಯ ವರ್ಷಗಳಿಗಿಂತ ಹಿಂದಿನ ಭೂಪದರಗಳಲ್ಲಿ ಪಕ್ಷಿಗಳ ಪಳೆಯುಳಿಕೆಗಳು ದೊರಕಿವೆ. ಅಂದು ಭೂಮಿಯ ಮೇಲೆ ಬದುಕಿದ್ದ ಸರೀಸೃಪಗಳಾದ ಪೆಡಂಭೂತ ಅಥವಾ ಡೈನೊಸಾರ್‌ಗಳಲ್ಲಿ ಕೆಲವು ನೆಲವನ್ನು ಬಿಟ್ಟು ಆಕಾಶಕ್ಕೇರಿದುವು. ಅವೇ ಪಕ್ಷಿಗಳ

ಪೂರ್ವಜರು. ಅವುಗಳ ಸಂತತಿಗಳು ಆಗಸದಲ್ಲಿ ಹಾರಾಡಲು ಪರಿಪಕ್ವಗೊಂಡು ಪಕ್ಷಿಗಳಾಗಿ ಮಾರ್ಪಾಡಾದುವು.

ಜೀವಿಯು ಆಕಾಶದಲ್ಲಿ ಹಾರಾಡಲು ಅನೇಕ ಶಾರೀರಿಕ ಮಾರ್ಪಾಡುಗಳಾಗಬೇಕು. ಗಾಳಿಯಲ್ಲಿ ತೇಲುವುದಕ್ಕೆ ಶರೀರದ ತೂಕ ಕಡಿಮೆಯಿರಬೇಕು, ಹಾರಾಡುತ್ತಿರುವಾಗ ಗಾಳಿಯನ್ನು ಹಿಂದಕ್ಕೆ ತಳ್ಳಿ ವೇಗವನ್ನು ಪಡೆಯುವುದಕ್ಕೆ ಅಗತ್ಯವಾದ ಅಂಗಗಳಿರಬೇಕು. ಹಾರಾಡುತ್ತಿರುವಾಗ ದಿಕ್ಕನ್ನು ಬದಲಿಸಲು ಅನುಕೂಲವಾಗುವಂತೆ ಚುಕ್ಕಾಣಿಯಿರಬೇಕು. ಕಡಿಮೆ ಒತ್ತಡವಿರುವ ಪ್ರದೇಶಗಳಲ್ಲಿ, ಶರೀರ ಅದನ್ನು ತಡೆದುಕೊಳ್ಳುವಂತಿರಬೇಕು. ಆಮ್ಲಜನಕದ ಸರಬರಾಜು ಕಡಿಮೆಯಿದ್ದರೂ ಉಸಿರಾಟ ಸರಾಗವಾಗಿ ನಡೆಯಬೇಕು. ಆಗಸದಲ್ಲಿ ಹಾರಾಡುತ್ತಿದ್ದರೂ ವಿಶ್ರಾಂತಿಗಾಗಿ ನೆಲದ ಅಥವಾ ಮರಗಳ ಮೇಲೆ ಕೂರಲು, ಆಹಾರ ಹಿಡಿಯಲು ಪಾದಗಳೂ ಬೆಳೆದಿರಬೇಕು. ಪಕ್ಷಿಗಳು ವಿಕಾಸವಾಗುವಾಗ ಇಂಥ ಎಲ್ಲ ಬದಲಾವಣೆಗಳಾದುವು. ಅದರಿಂದ ಅವುಗಳನ್ನು ಕಶೇರುಕಗಳಲ್ಲೆಲ್ಲಾ ಶಾರೀರಿಕವಾಗಿ ಅತಿ ಹೆಚ್ಚು ಮಾರ್ಪಾಡಾಗಿ ಬೆಳವಣಿಗೆಯಾದ ಜೀವಿಗಳೆಂದು ಭಾವಿಸಬಹುದು.

ಜೀವಿ ವಿಕಾಸವಾದ ಬಗೆಯನ್ನು ಭೂಗರ್ಭದಲ್ಲಿ ದೊರೆಯುವ ಆ ಗುಂಪಿನ ಪಳೆಯುಳಿಕೆಗಳ ಮೂಲಕ, ಆ ಜೀವಿಯ ಬೆಳವಣಿಗೆಯ ಹಂತಗಳನ್ನು ಪರಿಶೀಲಿಸುವುದರ ಮೂಲಕ, ಎರಡು ಗುಂಪಿನ ಜೀವಿಗಳ ನಡುವಿನ ಹೋಲಿಕೆಯ ಮೂಲಕ, ರಾಸಾಯನಿಕ ಕಣಗಳ ಸಾಮ್ಯಗಳ ಮೂಲಕ ಕಂಡು ಹಿಡಿಯುವರು. ಪಕ್ಷಿಗಳ ವಿಕಾಸ 150 ದಶಲಕ್ಷ ವರ್ಷಗಳಿಗೂ ಹಿಂದೆ ಆರಂಭವಾಯಿತು ಎಂದು ಈ ದಾಖಲೆಗಳು ತಿಳಿಸುತ್ತವೆ. ಪಕ್ಷಿಗಳು ಹಾಗೂ ಸ್ತನಿಗಳು ಒಟ್ಟಿಗೆ ಸರೀಸೃಪಗಳಿಂದ ಉಗಮವಾದುವು ಎಂದು ನಂಬಲಾಗುತ್ತಿದೆ. ಭೂಗರ್ಭದಲ್ಲಿ ಸ್ತನಿಗಳ ಅನೇಕ ಪಳೆಯುಳಿಕೆಗಳು ಇಂದು ದೊರಕಿವೆ. ಅವಕ್ಕೆ ಹೋಲಿಸಿದರೆ ಪಕ್ಷಿಗಳ ಪಳೆಯುಳಿಕೆಗಳು ಕಡಿಮೆ. ಅದರಿಂದ ಪಕ್ಷಿಗಳ ವಿಕಾಸದ ಬಗ್ಗೆ ಹೆಚ್ಚು ಮಾಹಿತಿಗಳು ಲಭ್ಯವಾಗಿಲ್ಲ.

ಈಗ ದೊರಕುತ್ತಿರುವ ದಾಖಲೆಗಳ ಪ್ರಕಾರ, ಜುರಾಸಿಕ್ ಅವಧಿಯಲ್ಲಿ ಬದುಕಿದ್ದ ಸರೀಸೃಪಗಳ ಮೂಲದಿಂದ ಪಕ್ಷಿಗಳು ಉದಯವಾದುವು. ಆಂದು ಬದುಕಿದ್ದ ಸರೀಸೃಪಗಳು ಚತುಷ್ಪಾದಿಗಳು. ದೈತ್ಯ ಶರೀರದ ಪೆಡಂಭೂತಗಳು. ಈ ಸರೀಸೃಪಗಳಿಂದ ಪಕ್ಷಿಗಳ ವಿಕಾಸವಾಗುವುದಕ್ಕೆ ಹಲವು ಮಾರ್ಪಾಡುಗಳಾಗಬೇಕಿತ್ತು. ನಾಲ್ಕು ಕಾಲುಗಳಲ್ಲಿ ಮುಂಗಾಲುಗಳು ರೆಕ್ಕೆಗಳಾಗಬೇಕಿತ್ತು, ದ್ವಿಪಾದಿಗಳಾಗಿ ಹಿಂಗಾಲುಗಳು ನೆಲದ ಮೇಲೆ ನಡೆಯಲು ಅನುಕೂಲ ವಾಗುವಂತಿರಬೇಕಿತ್ತು. ಶರೀರದ ತುಂಬ ಆವರಿಸಿದ್ದ ಹೊರಪುಗಳು ಗರಿಗಳಾಗಿ ಮಾರ್ಪಾಡಾಗ ಬೇಕಿತ್ತು. ಗಡಸು ಎಲುಬುಗಳು ಮೃದುವಾಗಬೇಕಿತ್ತು. ಬಲವಾಗಬೇಕಿತ್ತು. ದವಡೆಗಳ ಬದಲಾಗಿ ಕೊಕ್ಕು ಬೆಳೆಯಬೇಕಿತ್ತು. ಸರೀಸೃಪಗಳ ಹಾಗೂ ಪಕ್ಷಿಗಳ ನಡುವೆ ಆದ ಮಾರ್ಪಾಡುಗಳ ವಿವಿಧ ಹಂತಗಳನ್ನು ಹೊಂದಿರುವ ಪಳೆಯುಳಿಕೆಗಳು ದೊರಕಿದರೆ ಅವುಗಳ ವಿಕಾಸದ ವಿಧಾನವನ್ನು ಸುಲಭವಾಗಿ ತಿಳಿದುಕೊಳ್ಳ ಬಹುದಿತ್ತು. ಆದರೆ ಪಕ್ಷಿಗಳ ಕೆಲವೇ ಪಳೆಯುಳಿಕೆಗಳು ದೊರಕಿರುವುದರಿಂದ ಅವುಗಳ ವಿಕಾಸವನ್ನು ಕುರಿತು ಊಹಿಸುವುದು ಕಠಿಣ.

ಜುರಾಸಿಕ್ ಅವಧಿಯಲ್ಲಿ ಬದುಕಿದ್ದ ಸರೀಸೃಪಗಳ ಮುಂಗಾಲುಗಳು ಚಿಕ್ಕದಾಗಿದ್ದು, ಅವು ಸುಲಭವಾಗಿ ದ್ವಿಪಾದಿ ಸ್ಥಿತಿಗೆ ಮಾರ್ಪಾಡಾಗುವಂತಿದ್ದುವು. ಹಿಂಗಾಲುಗಳು ಬಲವಾಗಿ ಬೆಳೆದು ಪಕ್ಷಿಗಳ ಕಾಲುಗಳಾಗಿ ಮಾರ್ಪಾಡಾಗುವಂತಿದ್ದುವು. ಮುಂಗಾಲುಗಳು ರೆಕ್ಕೆಗಳಾಗುವ ಎಲ್ಲ ಸಂಭವಗಳಿದ್ದುವು. ಹೊರಪುಗಳು ಪುಕ್ಕಗಳಾಗಿ ಮಾರ್ಪಾಡಾಗುವ ಸಾಧ್ಯತೆಗಳಿದ್ದುವು. ಈಗ ಪಳೆಯುಳಿಕೆಗಳಾಗಿದ್ದು ಅಂದು ಬದುಕಿದ್ದ ಆರ್ಕಿಯೊಸಾರಿಯ ಎಂಬ ಗುಂಪಿನಲ್ಲಿ ಅವು ಪಕ್ಷಿಗಳಾಗಿ ಬದಲಾವಣೆಯಾಗಲು ಅಗತ್ಯವಾದ ಎಲ್ಲ ಗುಣಗಳಿದ್ದವು. ಅದರಿಂದ ಈ ಗುಂಪಿನಿಂದ ಪಕ್ಷಿಗಳು ಉದಯವಾಗಿರಬಹುದು ಅಥವಾ ಪಕ್ಷಿಗಳು ಹಾಗೂ ಆರ್ಕಿಯೊಸಾರಿಯಗಳು ಒಂದೇ ಮೂಲದಿಂದ ಉದ್ಭವವಾಗಿರಬಹುದೆಂದು ಅಂದಾಜುಮಾಡಲಾಗಿದೆ.

ಮಧ್ಯ ಪ್ರಾಗ್‌ಯುಗವನ್ನು (ಮೀಸೊಜೋಯಿಕ್ ಅವಧಿ) ಸರೀಸೃಪಗಳ ಯುಗವೆಂದೇ ಕರೆಯಲಾಗುತ್ತದೆ. ಈ ಯುಗವು ಆರಂಭವಾಗುತ್ತಿದ್ದಂತೆ ಸರೀಸೃಪಗಳ ಸಂಖ್ಯೆ ಹೆಚ್ಚತೊಡಗಿತು. ಇಡೀ ಭೂಭಾಗವನ್ನೆಲ್ಲಾ ಅವು ಆವರಿಸಿದುವು. ಅವುಗಳ ಸಂಖ್ಯೆ ಹೆಚ್ಚಿದಾಗ ಜೀವನ ನಿರ್ವಹಣೆಗೆ ಅವುಗಳ ನಡುವೆಯೇ ಸ್ಪರ್ಧೆ ಏರ್ಪಟ್ಟಿತು. ಸ್ಪರ್ಧೆಯನ್ನು ತಪ್ಪಿಸಿಕೊಂಡು ಬದುಕುಳಿಯಲು, ಕೆಲವು ಪ್ರಭೇದಗಳು ನೀರಿನೆಡೆಗೆ ಧಾವಿಸಿದುವು. ಇನ್ನು ಕೆಲವು ಮರಗಳನ್ನೇರಿದುವು. ಮರವನ್ನೇರಿದ ಸರೀಸೃಪಗಳು ಮುಂದೆ ಪಕ್ಷಿಗಳ ವಿಕಾಸಕ್ಕೆ ಎಡೆಮಾಡಿಕೊಟ್ಟಿರಬೇಕು ಎಂದು ಊಹಿಸಲಾಗಿದೆ.

ಭೂತಳದಲ್ಲಿ ಇಂದು ದೊರೆಯುತ್ತಿರುವ ಪಕ್ಷಿಗಳ ಪಳೆಯುಳಿಕೆಗಳ ಸಂಖ್ಯೆ ತುಂಬಾ ಕಡಿಮೆ. ಏಕೆಂದರೆ ಪಕ್ಷಿಗಳು ಆಕಾಶದಲ್ಲಿ ಜೀವಿಸುವ ಪ್ರಾಣಿಗಳಾದ್ದರಿಂದ ಅವು ನೆಲದಲ್ಲಿ ಹೂತು ಪಳೆಯುಳಿಕೆಗಳಾಗುವ ಸಾಧ್ಯತೆ ಕಡಿಮೆ. ಎರಡನೆಯದಾಗಿ ಅವು ಸತ್ತಾಗ ಅವುಗಳನ್ನು ಬೇರೆ ಪ್ರಾಣಿಗಳು ತಿನ್ನುತ್ತವೆ. ಅವುಗಳ ಎಲುಬುಗಳು ಬಲವಾಗಿದ್ದರೂ ನಡುವೆ ಗಾಳಿಪದರಗಳಿಂದ ಕೂಡಿರುವುದರಿಂದ ಹೆಚ್ಚು ಬಾಳಿಕೆಬರುವುದಿಲ್ಲ. ಆದರೂ ಮಧ್ಯಪ್ರಾಗ್‌ಯುಗದ ಜುರಾಸಿಕ್ ಅವಧಿಯ ಅಂತ್ಯದಲ್ಲಿ ಬದುಕಿರಬಹುದಾದ ಪಕ್ಷಿಯೊಂದರ ಪಳೆಯುಳಿಕೆ ದೊರಕಿದೆ. ಈ ಪಳೆಯುಳಿಕೆಗೆ ಆರ್ಕಿಯೊಪ್ಟೆರಿಕ್ಸ್ ಎಂದು ಹೆಸರಿಸಲಾಗಿದೆ.

ಆರ್ಕಿಯೊಪ್ಟೆರಿಕ್ಸ್ ಬಹುಶಃ ನೂರನಲವತ್ತು ದಶಲಕ್ಷ ವರ್ಷಗಳ ಹಿಂದೆ ಬದುಕಿದ್ದಿರಬೇಕು. ಆರ್ಕಿಯೊಪ್ಟೆರಿಕ್ಸ್‌ನ ಪಳೆಯುಳಿಕೆಗಳಲ್ಲಿ ಮೊದಲನೆಯದು ಕ್ರಿಶ 1800ರ ಸುಮಾರಿಗೆ ದೊರಕಿತು. ಅದಾದನಂತರ ಮತ್ತೆ ಆರು ಪಳಯುಳಿಕೆಗಳು ದಕ್ಷಿಣ ಜರ್ಮನಿಯ ಸುಣ್ಣದ ಕಲ್ಲುಗಳ ವಿವಿಧ ಸ್ತರಗಳಲ್ಲಿ ದೊರಕಿದುವು. ಏಳು ಪಳೆಯುಳಿಕೆಗಳ ಪೈಕಿ 6 ರಲ್ಲಿ, ಕೇವಲ ಕೆಲವು ಬಿಡಿ ಮೂಳೆಗಳು ಮಾತ್ರ ಇದ್ದುವು. ಒಂದು ಪಳಯುಳಿಕೆಯಲ್ಲಿ ಮಾತ್ರ ಮೂಳೆಗಳು ಗರಿಗಳು ಪೂರ್ಣವಾಗಿದ್ದುವು.

ಮುಂದೆ 1988ರಲ್ಲಿ ಪುನಃ ದಕ್ಷಿಣ ಜರ್ಮನಿಯ ಬವೇರಿಯ ಎಂಬ ಪ್ರದೇಶದಲ್ಲಿ ಆರ್ಕಿಯೊಪ್ಟೆರಿಕ್ಸ್‌ನ ಮತ್ತೊಂದು ಪಳೆಯುಳಿಕೆ ದೊರೆಯಿತು. ಈ ಪಳೆಯುಳಿಕೆಯನ್ನು ಗಮನಿಸಿದರೆ ಅದು ಈಗಿನ ಕಾಗೆಗಿಂತ ಸ್ವಲ್ಪ ದೊಡ್ಡದಾಗಿದ್ದು, ಡೊಂಬಕಾಗೆಯಂತಿತ್ತು ಎಂದು ಊಹಿಸಬಹುದು. ಅರೆಬರೆ ಬೆಳೆದ ಗರಿಗಳಿದ್ದು ಹೊರಪುಗಳು ಇನ್ನೂ ನಿಚ್ಚಳವಾಗಿದ್ದರಿಂದ ಅದನ್ನು ಪುಟ್ಟ ಡೈನೊಸಾರ್‌ನ ಪಳೆಯುಳಿಕೆ ಎಂದು ಭಾವಿಸಲಾಗಿದೆ. ಈ ಪಳೆಯುಳಿಕೆಯ ಅಧ್ಯಯನದಿಂದ ಆರ್ಕಿಯೊಪ್ಟೆರಿಕ್ಸ್ ಸರೀಸೃಪ ಹಾಗೂ ಪಕ್ಷಿಗಳ ನಡುವಿನ ಸೇತುವೆಯಂತಿತ್ತು ಎಂದು ಅರಿವಾಗುತ್ತದೆ.

ಬವೇರಿಯದಲ್ಲಿ ದೊರಕಿದ ಪಕ್ಷಿಯ ಪಳೆಯುಳಿಕೆಯಾದ ಆರ್ಕಿಯೊಪ್ಟೆರಿಕ್ಸ್‌ನಲ್ಲಿರುವ ಸರೀಸೃಪ ಗುಣಗಳು ಹೀಗಿವೆ. ತಲೆಬುರುಡೆಯ ಮುಂಭಾಗ ಕೊಕ್ಕಿನಂತೆ ಮಾರ್ಪಾಡಾಗಿದ್ದರೂ ಮೇಲಿನ ಹಾಗೂ ಕೆಳಗಿನ ದವಡೆಗಳಲ್ಲಿ ಸರೀಸೃಪಗಳಂತೆ ಹಲ್ಲುಗಳಿದ್ದುವು. ಬೆನ್ನು ಮೂಳೆಯ ಕಶೇರುಮಣಿಗಳ ನಡುವೆ ಸಂದು ಸರಳವಾಗಿತ್ತು. ಕಶೇರುಮಣಿಗಳ ಸಂಖ್ಯೆ ಕೂಡ ಹೆಚ್ಚಾಗಿತ್ತು. ಪಕ್ಷಿಗಳಲ್ಲಿ ಬಾಲವಿರುವುದಿಲ್ಲ. ಆದರೆ ಆರ್ಕಿಯೊಪ್ಟೆರಿಕ್ಸ್‌ನಲ್ಲಿ ಉದ್ದವಾದ ಬಾಲವಿದ್ದು ಅದರಲ್ಲಿ ಇಪ್ಪತ್ತು ಕಶೇರುಮಣಿಗಳಿದ್ದುವು. ಬೆರಳುಗಳ ತುದಿಗೆ ಸರೀಸೃಪಗಳಲ್ಲಿ ಕಂಡುಬರುವಂತೆ ಬಲವಾದ ಉಗುರುಗಳಿದ್ದುವು. ತಲೆಬುರುಡೆಯ ಮೂಳೆಗಳು ಸರೀಸೃಪಗಳನ್ನು ಹೋಲುತ್ತಿದ್ದುವು. ಮಿದುಳು ಕೂಡಾ ಸರೀಸೃಪಗಳ ಮಿದುಳನ್ನು ಹೋಲುತ್ತಿತ್ತು.

ಆರ್ಕಿಯೊಪ್ಟೆರಿಕ್ಸ್‌ನ ಪಕ್ಷಿಗಳ ಗುಣಗಳಲ್ಲಿ ಮುಖ್ಯವಾದುವು ಹೀಗಿವೆ: ತಲೆಬುರುಡೆಯ ಮುಂಭಾಗದ ಮೂಳೆ ಪ್ರಿಮ್ಯಾಕ್ಸಿಲಾದ ಮುಂಭಾಗ ಕೊಕ್ಕು ಬೆಳೆದಿತ್ತು. ತಲೆಬುರುಡೆಯ ಮೂಳೆಗಳು ಸರೀಸೃಪಗಳಂತಿದ್ದರೂ, ಒಟ್ಟಾರೆ ರಚನೆ ಪಕ್ಷಿಗಳ ಬುರುಡೆಯನ್ನು ಹೋಲುತ್ತಿತ್ತು. ಬೆನ್ನೆಲುಬಿನಲ್ಲಿ, ಸೊಂಟದ ಭಾಗದ ಕೆಲವು ಕಶೇರುಮಣಿಗಳು ಒಂದುಗೂಡಿದ್ದುವು. ಮುಂಗಾಲಿನ ಮೂಳೆಗಳು ಪಕ್ಷಿಗಳ ರೆಕ್ಕೆಯ ಮೂಳೆಗಳನ್ನು ಹೋಲುತ್ತಿದ್ದುವು. ಹಿಂಗಾಲಿನಲ್ಲಿ ಬೆರಳಿನ ಮೂಳೆಗಳು ಪಕ್ಷಿಗಳ ಬೆರಳಿನಂತಿದ್ದುವು. ಶರೀರವಿಡೀ ಪುಕ್ಕಗಳು ಆವರಿಸಿದ್ದುವು. ಈ ಗರಿಗಳು ಸರೀಸೃಪಗಳ ಹೊರಪುಗಳಿಂದ ಬೆಳವಣಿಗೆಯಾಗಿದ್ದರೂ ಸಂಪೂರ್ಣವಾಗಿ ಬೆಳೆದಿದ್ದು ಆಧುನಿಕ ಪಕ್ಷಿಗಳ ಗರಿಗಳನ್ನು ಹೋಲುತ್ತಿದ್ದುವು. ಶರೀರದ ವಿವಿಧ ಭಾಗಗಳಲ್ಲಿ ಅವುಗಳ ಹಂಚಿಕೆಯೂ ಕೂಡ ಆಧುನಿಕ ಪಕ್ಷಿಗಳನ್ನು ಹೋಲುತ್ತಿದ್ದುವು. ಎದೆಯ ಮೂಳೆಯು ಪಕ್ಷಿಗಳ ಮೂಳೆಯನ್ನು ಹೋಲುತ್ತಿತ್ತು.

ಆರ್ಕಿಯೊಪ್ಟೆರಿಕ್ಸ್ ದೊಡ್ಡ ಕಾಗೆಯ ಗಾತ್ರವಿದ್ದಿರಬಹುದು. ಬಹುಶಃ ಈ ಪಕ್ಷಿ ಮರಗಳ ಮೇಲೆ ವಾಸಿಸುತ್ತಿದ್ದಿರಬೇಕು. ಆಧುನಿಕ ಪಕ್ಷಿಗಳಷ್ಟು ಸಮರ್ಥವಾಗಿ ಹಾಗೂ ವೇಗವಾಗಿ ಹಾರುವ ಶಕ್ತಿ ಇರಲಿಕ್ಕಿಲ್ಲ. ಕೇವಲ ಮರದಿಂದ ಮರಕ್ಕೆ ಅಥವಾ ಮರದಿಂದ ನೆಲಕ್ಕೆ ಜಾರಿಳಿಯುತ್ತಿದ್ದಿರಬಹುದು.

ಆರ್ಕಿಯೊಪ್ಟೆರಿಕ್ಸ್‌ನ ಅನಂತರ ಆರ್ಕಿಯೊರ್ನಿಸ್ ಎಂಬ ಇನ್ನೊಂದು ಪಳೆಯುಳಿಕೆ ದೊರಕಿತು. ಆರ್ಕಿಯೊರ್ನಿಸ್ ಕೂಡಾ ಜುರಾಸಿಕ್ ಅವಧಿಯ ಅಂತ್ಯದ ಸಮಯದಲ್ಲಿತ್ತು. ಈ ಪ್ರಭೇದವೂ ಕೂಡ ಆರ್ಕಿಯೊಪ್ಟೆರಿಕ್ಸ್‌ನಂತೆಯೆ ಇತ್ತು. ಈ ಪಕ್ಷಿಯಲ್ಲಿ ಗರಿ ಪುಕ್ಕಗಳು ಇನ್ನಷ್ಟು ಬೆಳೆದಿದ್ದುವು. ಭೂಗರ್ಭದಲ್ಲಿ ಇಂದು ಈ ಎರಡು ಪಳೆಯುಳಿಕೆಗಳ ಹೊರತಾಗಿ ಬೇರೆ ಯಾವುದೇ ಪಳೆಯುಳಿಕೆಗಳು ಸಿಗುತ್ತಿಲ್ಲ. ಬಹುಶಃ ಈ ಎರಡೂ ಪ್ರಭೇದಗಳು ಮಧ್ಯಪ್ರಾಗ್‌ಯುಗದ ಕ್ರಿಟೇಸಿಯಸ್ ಅವಧಿಯಲ್ಲಿಯೇ ವಿನಾಶವಾಗಿದ್ದಿರಬೇಕು. ಆರ್ಕಿಯೊಪ್ಟೆರಿಕ್ಸ್ ಹಾಗೂ ಆರ್ಕಿಯೊರ್ನಿಸ್ ಗಳೆರಡು ಸುಮಾರು 140 ದಶಲಕ್ಷ ವರ್ಷಗಳ ಹಿಂದಿನ ಪಳೆಯುಳಿಕೆಗಳು.

ಮುಂದೆ ದೊರೆತ ಪಕ್ಷಿಗಳ ಪಳೆಯುಳಿಕೆಗಳು ಸುಮಾರು ತೊಂಬತ್ತು ದಶಲಕ್ಷ ವರ್ಷಗಳಷ್ಟು ಹಳೆಯವು. ಈ ಪಳೆಯುಳಿಕೆಗಳಿಗೆ ಹೆಸ್ಪರೊಮಿಸ್ ಮತ್ತು ಇಕ್ತಿಯೊರ್ನಿಸ್

ಎಂದು ಹೆಸರಿಡಲಾಗಿದೆ. ಇವು ಮಧ್ಯ ಅಮೆರಿಕಾದ ಪಶ್ಚಿಮ ಭಾಗಗಳಲ್ಲಿ ದೊರಕಿವೆ. ಅಂದಿನ ಕಾಲದಲ್ಲಿ ಆ ಭಾಗದಲ್ಲಿ ಸಮುದ್ರವಿದ್ದು, ಅಲ್ಲಲ್ಲಿ ದ್ವೀಪಗಳಿದ್ದುವು. ಬಹುಶಃ ಈ ಎರಡೂ ಪ್ರಭೇದಗಳು ಜಲಪಕ್ಷಿಗಳಾಗಿದ್ದಿರಬೇಕು. ಅವು ಮೀನುಗಳನ್ನು ತಿಂದು ಬದುಕುವ ಪಕ್ಷಿಗಳಾಗಿದ್ದಿರಬೇಕು. ಆರ್ಕಿಯೊಪ್ಟೆರಿಕ್ಸನಂತೆಯೇ ಇವುಗಳ ಬಾಯಿಯಲ್ಲಿಯೂ ಹಲ್ಲುಗಳಿದ್ದುವು. ಉಳಿದೆಲ್ಲ ಗುಣಗಳಲ್ಲಿಯೂ ಅವು ಇಂದಿನ ಪಕ್ಷಿಗಳನ್ನೇ ಹೋಲುತ್ತಿದ್ದುವು. ಇವುಗಳಲ್ಲಿ ಹೆಸ್ಪರೊಮಿಸ್ ಇಂದಿನ ಮುಳುಗು ಹಕ್ಕಿ ಅಥವಾ ಗ್ರೀಬ್ ಎಂಬ ಪಕ್ಷಿಯಂತಿತ್ತು. ಅದಕ್ಕೆ ಹಾರಾಟದ ಸಾಮರ್ಥ್ಯವಿರಲಿಲ್ಲ. ಆದರೆ ನೀರಿನಲ್ಲಿ ವೇಗವಾಗಿ ಈಜುತ್ತಿತ್ತು. ಇಕ್ಥಿಯೊರ್ನಿಸ್‌ಗೆ ಹಾರಾಡುವ ಶಕ್ತಿಯೂ ಇತ್ತು. ಅದು ಗಲ್ ಎಂಬ ಇಂದಿನ ಹೊಳಪು ಕೊಕ್ಕಿನ ಕಡಲಹಕ್ಕಿಯಂತಿತ್ತು.

ಇವುಗಳ ಅನಂತರದ ಪಳೆಯುಳಿಕೆಗಳು ಸುಮಾರು 65 ದಶಲಕ್ಷ ವರ್ಷಗಳಷ್ಟು ಹಳೆಯವು. ಇವುಗಳಿಗಾಗಲೇ ಹಲ್ಲುಗಳು ಮಾಯವಾಗಿದ್ದವು. ಇವೂ ಕೂಡ ಜಲಪಕ್ಷಿಗಳು. ಇವು ಇಂದು ಬದುಕಿರುವ ಬಾತುಕೋಳಿ, ಫ್ಲೆಮಿಂಗೊ, ಪಲಿಕನ್ ಮುಂತಾದುವನ್ನು ಹೋಲುತ್ತಿದ್ದುವು. ಮುಂದಿನ ಸುಮಾರು ಅರವತ್ತೈದು ದಶಲಕ್ಷ ವರ್ಷಗಳಲ್ಲಿ, ಈ ಪಕ್ಷಿಗಳಿಂದ ಎಲ್ಲ ನವ್ಯ ಪಕ್ಷಿಗಳೂ ಉದಯವಾದವು. ಕಳೆದ ಎರಡು ದಶಲಕ್ಷ ವರ್ಷಗಳ ಹಿಂದೆ ಪ್ಲೀಸ್ಟೊಸೀನ ಅವಧಿ ಪ್ರಾರಂಭವಾಯಿತು. ಈ ಅವಧಿಯಲ್ಲಿ ಭೂಮಿಯ ಮೇಲೆ ಹಿಮಯುಗವು ಪ್ರಾರಂಭ ವಾಯಿತು. ಭೂಮಿಯಾದ್ಯಂತ ಅನೇಕ ವರ್ಷಗಳವರೆಗೆ ಹಿಮಪಾತವಾಗುತ್ತಿತ್ತು. ಒಮ್ಮೆ ಹಿಮ ಆವರಿಸಿದರೆ ಅದು ಕರಗಿ ಯಥಾಸ್ಥಿತಿಗೆ ಮರಳಲು ನೂರಾರು ವರ್ಷಗಳೇ ತಗುಲುತ್ತಿದ್ದುವು. ಈ ಹಂತದಲ್ಲಿ ಕನಿಷ್ಠ ನಾಲ್ಕು ಬಾರಿಯಾದರೂ ಹೀಗೆ ಹಿಮದ ವಾತಾವರಣ ಸೃಷ್ಟಿಯಾಗಿತ್ತು ಎಂಬುದಕ್ಕೆ ಪುರಾವೆಗಳಿವೆ. ಉತ್ತರ ಅಮೇರಿಕ ಹಾಗೂ ಯುರೋಪ್ ಗಳಲ್ಲಿ ಹೆಚ್ಚು ಹಿಮ ಆವರಿಸಿತ್ತು ಎಂದು ಕುರುಹು ದೊರೆಯುತ್ತದೆ. ಈ ವಾತಾವರಣವು ಯಾವುದೇ ಜೀವಿಯ ವಿಕಾಸಕ್ಕೆ ಪ್ರತಿಕೂಲವಾಗಿತ್ತು. ಕಳೆದ ಹತ್ತು ಸಹಸ್ರ ವರ್ಷಗಳವರೆಗೆ ಈ ಹಿಮಯುಗ ಮುಂದುವರಿದಿತ್ತು. ಅದರಿಂದ ಇಂದು ಬದುಕಿರುವ ಎಲ್ಲಾ ಪಕ್ಷಿಗಳು ಇತ್ತೀಚಿನ ಹತ್ತು ಸಹಸ್ರ ವರ್ಷಗಳಿಂದೀಚೆಗೆ ಉಗಮವಾದುವು ಎಂದು ಭಾವಿಸಲಾಗಿದೆ.

ಮರಕುಟಿಗ

ಪುರಾತನ ಕಾಲದ ಪಕ್ಷಿಗಳ ಕೆಲವೇ ಪಳೆಯುಳಿಕೆಗಳು ದೊರೆತಿದ್ದರೂ 140 ದಶಲಕ್ಷ ವರ್ಷಗಳಿಂದ ಎಷ್ಟೊ ಪಕ್ಷಿಗಳು ಉದಯವಾದವು, ಅವುಗಳಲ್ಲಿ ಅನೇಕ ಪ್ರಭೇದಗಳು ಪ್ಲೀಸ್ಟೊಸೀನ್ ಅವಧಿಗೆ ಮುಂಚೆಯೇ ನಶಿಸಿಹೋದವು ಎಂದು ನಂಬಲಾಗುತ್ತಿದೆ. ಮುಂದೆ ಹಿಮಯುಗ ಪ್ರಾರಂಭವಾದಾಗ, ಹಿಮಪಾತ ಹಾಗೂ ಹಿಮದ ಕರಗುವಿಕೆಯ ನಡುವೆ ವಾತಾವರಣದಲ್ಲಿ ಅಪಾರ ಬದಲಾವಣೆಗಳಾಗುತ್ತಿದ್ದವು. ಅದರಿಂದ ಇನ್ನುಳಿದ ಕೆಲವು ಪ್ರಭೇದಗಳು ವಿನಾಶವಾಗಿರಬೇಕು.

ಲಕ್ಷಾಂತರ ವರ್ಷಗಳ ಪಕ್ಷಿಗಳ ಇತಿಹಾಸವನ್ನು ಪರಿಗಣಿಸಿದರೆ ಹಿಂದೆ ನಶಿಸಿ ಹೋದ ಪಕ್ಷಿಗಳ ಸಂಖ್ಯೆಗಿಂತ ಇಂದು ನಾಶವಾಗುತ್ತಿರುವ ಪಕ್ಷಿಗಳ ಸಂಖ್ಯೆಯೇ ಹೆಚ್ಚು ಎಂದೆನಿಸುತ್ತದೆ. ನಿಸರ್ಗದಲ್ಲಿ ಮಾನವನ ಹಸ್ತಕ್ಷೇಪವೇ ಇದಕ್ಕೆ ಕಾರಣ. ಇತ್ತೀಚೆಗೆ ವಿನಾಶವಾದ ಡೋಡೊ ಎಂಬ ಪಕ್ಷಿ ಇದಕ್ಕೆ ಉದಾಹರಣೆ. ಇದು ಪಾರಿವಾಳದಂತಿರುವ ಸ್ವಲ್ಪ ದೊಡ್ಡ ಹಾರಾಟರಹಿತ ಪಕ್ಷಿ. ಸುಮಾರು ನಾಲ್ಕು ನೂರು ವರ್ಷಗಳ ಹಿಂದೆ ಮಾರಿಷಸ್‌ನ ಭಾಗಗಳಲ್ಲಿ ತಿನ್ನುವುದಕ್ಕಾಗಿ ಗಣನೀಯ ಪ್ರಮಾಣದಲ್ಲಿ ಈ ಪಕ್ಷಿಗಳನ್ನು ಕೊಲ್ಲಲಾಗುತ್ತಿತ್ತು. ಜೊತೆಗೆ ಇನ್ನೂರು ವರ್ಷಗಳ ಹಿಂದೆ ಆಫ್ರಿಕ, ದಕ್ಷಿಣ ಅಮೇರಿಕ ಹಾಗೂ ಏಷ್ಯಾದ ಅನೇಕ ಕಡೆಗಳಲ್ಲಿ ಕಾಡುಗಳನ್ನು ಕಡಿಯಲಾಯಿತು. ಅವುಗಳಿಗೆ ನೈಸರ್ಗಿಕ ಪರಿಸರವಿಲ್ಲದೆ ಅವು ವಿನಾಶದ ಹಾದಿ ಹಿಡಿದುವು. ಕಳೆದ ಶತಮಾನದ ಅಂತ್ಯದ ವೇಳೆಗೆ ಎಲ್ಲ ಡೋಡೊ ಹಕ್ಕಿಗಳೂ ಇಲ್ಲವಾದುವು. ಪರಿಸರ ನಾಶ ಇನ್ನೂ ಮುಂದುವರಿದರೆ ಡೋಡೊದಂಥ ಇನ್ನೂ ಅನೇಕ ಪಕ್ಷಿಗಳೂ, ಇತರ ಪ್ರಾಣಿಗಳೂ ವಿನಾಶವಾದಾವು. (ಎಸ್.ಎನ್.ಎಚ್)

**ಪಕ್ಷಿಧಾಮಗಳು:** ವಲಸೆಗಾರ ಪಕ್ಷಿಗಳು ಪ್ರತಿವರ್ಷ ಭೇಟಿನೀಡುವ ನಿಶ್ಚಿತ ಪ್ರದೇಶಗಳು. ಅವುಗಳ ಸಂರಕ್ಷಣೆ ಹಾಗೂ ಅಧ್ಯಯನಗಳಿಗೆಂದು ಈ ಪ್ರದೇಶಗಳನ್ನು ಪಕ್ಷಿಧಾಮಗಳೆಂದು (ಬರ್ಡ ಸ್ಯಾಂಕ್ಚುಅರೀಸ್) ಘೋಷಿಸಿ ಮೀಸಲಿರಿಸಲಾಗಿದೆ. ಭಾರತದ 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರ ಇವು ಸಂರಕ್ಷಿತ ಪ್ರದೇಶಗಳು. ಭಾರತ ಭೌಗೋಳಿಕವಾಗಿ ವಿಭಿನ್ನ ಪ್ರಾಕೃತಿಕ ಲಕ್ಷಣಗಳನ್ನು ಒಳಗೊಂಡಿದೆ. ಉತ್ತರ ಗೋಲಾರ್ಧದ ಉಷ್ಣವಲಯ ಹಾಗೂ ಸಮಶೀತೋಷ್ಣವಲಯದಲ್ಲಿ ಹರಡಿರುವುದರಿಂದ, ಇಡೀ ದೇಶದ ಹವಾಮಾನವೂ ವೈವಿಧ್ಯಮಯವಾದುದು. ದೇಶದಾದ್ಯಂತ ಅನೇಕ ಬಗೆಯ ಕಾಡುಗಳಿವೆ, ಪರ್ವತಗಳಿವೆ, ನದಿಗಳಿವೆ, ಸರೋವರಗಳಿವೆ. ಪಶ್ಚಿಮದಲ್ಲಿ ಮರುಭೂಮಿ ಕೂಡ ಇದೆ. ವಿಶ್ವದಲ್ಲಿರುವ ಜೀವ ವೈವಿಧ್ಯದ ಏಳು ಬಿಸಿ ಚುಕ್ಕೆ (ಹಾಟ ಸ್ಪಾಟ್ಸ) ಗಳಲ್ಲಿ ಎರಡು ಭಾರತದಲ್ಲಿವೆ. ಸಸ್ಯ ಪ್ರಾಣಿಗಳೆರಡನ್ನೂ ಒಳಗೊಂಡಂತೆ ಜೀವ ವೈವಿಧ್ಯದ ವಿಷಯದಲ್ಲಿ ಇದು ಶ್ರೀಮಂತ ರಾಷ್ಟ್ರ. ವೈವಿಧ್ಯಮಯ ವನ್ಯಜೀವಿ ಹಾಗೂ ಪಕ್ಷಿಸಂಕುಲಗಳನ್ನೊಳಗೊಂಡಿದೆ. ಪ್ರಪಂಚದಾದ್ಯಂತ ಇಂದು 8650 ಪಕ್ಷಿ ಪ್ರಭೇದಗಳಿವೆ ಎಂದು ಅಂದಾಜಿದೆ. ಉಪಪ್ರಭೇದಗಳೂ ಸೇರಿ 33000 ವಿಧಗಳಿವೆ. ಇವುಗಳ ಪೈಕಿ 1200 ಪ್ರಭೇದಗಳು ಭಾರತದಲ್ಲಿಯೇ ಇವೆ. 300 ಪ್ರಭೇದಗಳು ಚಳಿಗಾಲದಲ್ಲಿ ಇಲ್ಲಿಗೆ ವಲಸೆ ಬರುತ್ತವೆ. ಅನೇಕ ನಿವಾಸೀ ಪಕ್ಷಿಗಳ ಜೊತೆಗೆ ಭೂಮಂಡಲದ ವಿವಿಧೆಡೆಗಳಿಂದ ಪ್ರತಿವರ್ಷ ಹಲವು ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ. ಗರಿ, ಮಾಂಸ, ಉಗುರು ಮುಂತಾದ ಪಕ್ಷಿಗಳ ಭಾಗಗಳಿಗಾಗಿ ಹಾಗೂ ಹವ್ಯಾಸಕ್ಕಾಗಿ ಪಕ್ಷಿಗಳನ್ನು ಬೇಟೆಯಾಡಲಾಗುತ್ತದೆ. ಇದರೊಂದಿಗೆ ಪರಿಸರ ನಾಶ, ಮಲಿನತೆ, ಮುಂತಾದುವುಗಳಿಂದಲೂ ಈ ಪಕ್ಷಿಗಳ ಅಸ್ತಿತ್ವಕ್ಕೆ ಧಕ್ಕೆಯುಂಟಾಗುತ್ತಿದೆ. ಇದನ್ನು ಪರಿಗಣಿಸಿ ಅವುಗಳ ಸಂರಕ್ಷಣೆಗೆಂದು ಅವು ಪ್ರತಿವರ್ಷ ಭೇಟಿನೀಡುವ ಕೆಲವು ಪ್ರದೇಶಗಳನ್ನು ಪಕ್ಷಿಧಾಮಗಳೆಂದು ಘೋಷಿಸಲಾಗಿದೆ. ಭರತಪುರ, ರಂಗನತಿಟ್ಟು ಮುಂತಾದುವು ಅವುಗಳಲ್ಲಿ ಮುಖ್ಯವಾದುವು.

ಭಾರತದಲ್ಲೆಲ್ಲಾ ಪ್ರಸಿದ್ಧಿ ಪಡೆದ ಪಕ್ಷಿಧಾಮ ಭರತಪುರ. ರಾಜಸ್ಥಾನದಲ್ಲಿರುವ ಈ ಪಕ್ಷಿಧಾಮದ ವಿಸ್ತೀರ್ಣ 29 ಚಕಿಮೀ. ವಿಶಾಲವಾದ ಸರೋವರ ಹಾಗೂ ಸುತ್ತ ಇರುವ ಜವುಗು ಭೂಮಿಯಲ್ಲಿರುವ ಚಲಚರಗಳು ಅನೇಕ ಪಕ್ಷಿಗಳಿಗೆ ಆಹಾರವಾಗುತ್ತವೆ. ಅದರಿಂದ ಪ್ರತಿವರ್ಷ ಅನೇಕ ಪಕ್ಷಿಗಳು ಈ ಪ್ರದೇಶಕ್ಕೆ ವಲಸೆ ಬರುತ್ತವೆ. ಸೈಬಿರಿಯದ ಕೊಕ್ಕರೆ, ಸ್ಟೋರ್ಕ್, ವಿವಿಧ ಬಗೆಯ ಟರ್ನ್‌ಗಳು ಇಲ್ಲಿನ ಮುಖ್ಯ ಪಕ್ಷಿಗಳು. ಅಲ್ಲದೆ ಕಡವೆಗಳು, ಚೀತಲ್, ಮುನುಗು ಬೆಕ್ಕು ಮುಂತಾದ ವನ್ಯ ಪ್ರಾಣಿಗಳೂ ಇಲ್ಲಿ ಕಾಣಸಿಗುತ್ತವೆ.

ಭಾರತದ ಮುಖ್ಯ ರಾಜ್ಯಗಳಲ್ಲೊಂದಾದ ಕರ್ನಾಟಕವೂ ಕೂಡ ಜೀವವೈವಿಧ್ಯದ ವಿಷಯದಲ್ಲಿ ಶ್ರೀಮಂತವಾಗಿದೆ. ಭೌಗೋಳಿಕವಾಗಿ ಪಶ್ಚಿಮ ಭಾಗದಾದ್ಯಂತ ಹರಡಿರುವ ಕರಾವಳಿ ತೀರ ಪ್ರದೇಶ, ಎತ್ತರದ ಪರ್ವತಶ್ರೇಣಿಗಳಿಂದ ಕೂಡಿದ ವಿಶ್ವದ ಬಿಸಿ ಚುಕ್ಕೆಗಳಲ್ಲಿ ಒಂದಾದ ಪಶ್ಚಿಮ ಘಟ್ಟಗಳು, ಒಳನಾಡ ಶುಷ್ಕ ಹಾಗೂ ಅರೆಶುಷ್ಕ ಮೈದಾನಗಳು, ಒಳನಾಡುಗಳಿಂದಾವೃತವಾಗಿದೆ. ಅನೇಕ ಚಿಕ್ಕ ದೊಡ್ಡ ನದಿಗಳು, ಕೆರೆ ಕೊಳ ಸರೋವರಗಳಿವೆ. ಮೈದಾನ, ಹುಲ್ಲುಗಾವಲು, ಕುರುಚಲು ಕಾಡುಗಳಾದಿಯಾಗಿ ನಿತ್ಯಹರಿದ್ವರ್ಣ ಕಾಡುಗಳೆಲ್ಲ ಇವೆ. ಮೂರು ವಿಭಿನ್ನ ಋತುಮಾನಗಳನ್ನೊಳಗೊಂಡ ಹವಾಮಾನ ಪರಿಸ್ಥಿತಿಯಿದ್ದರೂ ಕೂಡ ಪ್ರಾಕೃತಿಕ ಅಥವಾ ನೈಸರ್ಗಿಕ ಆಪತ್ತುಗಳು ಕಡಿಮೆ. ಅದರಿಂದ ಇನ್ನೆಲ್ಲೂ ಕಂಡುಬರದಷ್ಟು ವೈವಿಧ್ಯಮಯವಾದ ವನ್ಯಜೀವಿಗಳು ನಮ್ಮಲ್ಲಿವೆ. ಅದೇರೀತಿ ಪಕ್ಷಿ ಸಂಕುಲವೂ ವೈವಿಧ್ಯಮಯವಾದುದು. ಕರ್ನಾಟಕದ ಪಕ್ಷಿಧಾಮಗಳಲ್ಲಿ ರಂಗನತಿಟ್ಟು, ಆದಿ ಚುಂಚನಗಿರಿ, ಅತ್ತಿವೇರಿ, ಗುಡವಿ, ಘಟಪ್ರಭಾ, ಕೊಕ್ಕರೆ ಬೆಳ್ಳೂರು ಮುಂತಾದುವು ಮುಖ್ಯವಾದುವು.

ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಶ್ರೀರಂಗ ಪಟ್ಟಣ ತಾಲೂಕಿಗೆ ಸೇರುವ ರಂಗನತಿಟ್ಟು ಭಾರತದ ಪ್ರಮುಖ ಪಕ್ಷಿಧಾಮಗಳಲ್ಲಿ ಒಂದು. ಭಾರತದ ಸುಪ್ರಸಿದ್ಧ ಪ್ರವಾಸೀ ತಾಣವಾದ ಮೈಸೂರು ನಗರದ ವಾಯವ್ಯಕ್ಕೆ 18 ಕಿಮೀ ಹಾಗೂ ಐತಿಹಾಸಿಕ ಪಟ್ಟಣವಾದ ಶ್ರೀರಂಗಪಟ್ಟಣದಿಂದ ಕೇವಲ 3 ಕಿಮೀ ದೂರದಲ್ಲಿದೆ. ಇದು ಕಾವೇರಿ ನದಿಯ ಒಂದು ಚಿಕ್ಕ ದ್ವೀಪ ಸಮೂಹ. ತಿಟ್ಟು ಎಂದರೆ ದಿನ್ನೆ ಅಥವಾ ತೆವರು ಎಂದರ್ಥ. ಶ್ರೀರಂಗ ಪಟ್ಟಣದ ಅಧಿದೈವ ಶ್ರೀ ರಂಗನಾಥ ಸ್ವಾಮಿಯ ಗೌರವಾರ್ಥ ಪಕ್ಷಿಧಾಮಕ್ಕೆ ರಂಗನ ತಿಟ್ಟು ಎಂದು ಹೆಸರು ಬಂದಿದೆ. ಇಡೀ ದ್ವೀಪ ಸಮೂಹದ ವಿಸ್ತೀರ್ಣ ಸುಮಾರು ಅರವತ್ತೇಳು ಹೆಕ್ಟೇರುಗಳು ಮಾತ್ರ. ಕಾವೇರಿ ನದಿ ಇಬ್ಭಾಗವಾಗಿ ಸುಮಾರು ಒಂದು ಕಿಮೀ ದೂರ ಹರಿದು ಮತ್ತೆ ಕೂಡಿಕೊಳ್ಳುತ್ತದೆ. ಹಿಂದಿನ ಮೈಸೂರು ರಾಜ್ಯದ ದೊರೆಯಾಗಿದ್ದ ಕಂಠೀರವ ನರಸರಾಜ ಒಡೆಯರ್ ಅವರ ಆಳ್ವಿಕೆಯ ಕಾಲದಲ್ಲಿ ಸುಮಾರು 1645–48ರ ಅವಧಿಯ ನಡುವೆ ಕಾವೇರಿ ನದಿಗೆ ಒಂದು ಅಡ್ಡಗಟ್ಟೆ (ಒಡ್ಡು) ನಿರ್ಮಿಸಲಾಗಿ ಉಂಟಾದ ಜಲಾಶಯದ ನಡುವೆ ಸಣ್ಣ ಸಣ್ಣ ಕಿರುದ್ವೀಪಗಳು ಏರ್ಪಟ್ಟಿವೆ. ಈ ನದಿ ಸುತ್ತಿನ ಮಧ್ಯದಲ್ಲಿರುವ ಸುಮಾರು ಅರ್ಧ ಕಿಲೊಮೀಟರ್ ಅಗಲವಿರುವ ಸುಣ್ಣಕಲ್ಲಿನ ಭೂಮಿಯೇ ಇಲ್ಲಿನ ಮುಖ್ಯ ದ್ವೀಪ. ಈ ದ್ವೀಪದೊಳಗೆ ಮರಗಳು ವಿರಳವಾಗಿ ಬೆಳೆದಿವೆ. ಜನವಸತಿ ಇಲ್ಲದ ಈ ಪ್ರದೇಶದ ಸುತ್ತಲೂ ಗದ್ದೆ ಬಯಲುಗಳು

ಇದ್ದು ನದಿಯ ಎರಡೂ ದಂಡೆಗಳಲ್ಲಿ ಸದಾ ಹಸುರಾಗಿರುವ ವಿವಿಧ ಮರಗಿಡಗಳು ಬೆಳೆದಿವೆ.

ಈ ಪಕ್ಷಿಧಾಮದಲ್ಲಿನ ಪಕ್ಷಿಗಳಿಗೆ ಪ್ರಕೃತಿದತ್ತವಾದ ರಕ್ಷಣೆ ಮತ್ತು ಆಹಾರ ಎರಡೂ ಲಭ್ಯವಿರುವುದರಿಂದ ಪ್ರಪಂಚದ ನಾನಾ ಭಾಗಗಳಿಂದ ಪಕ್ಷಿಗಳು ವಲಸೆ ಬರುತ್ತವೆ. ಪಕ್ಷಿಗಳ ಆಗಮನ, ಗೂಡು ಕಟುವಿಕೆ ಮರಿ ಮಾಡುವಿಕೆ ಇತ್ಯಾದಿಗಳನ್ನು ಗಮನಿಸಿದ ಭಾರತದ ಸುಪ್ರಸಿದ್ಧ ಪಕ್ಷಿವಿಜ್ಞಾನಿ ಡಾ.ಸಲೀಂ ಅಲಿ (1896–1987) ಅವರ ಶಿಫಾರಸ್ಸಿನ ಮೇರೆಗೆ ಈ ಸ್ಥಳ ಪಕ್ಷಿಧಾಮದ ಪಟ್ಟ ಪಡೆಯಿತು(1940). ಜುಲೈ–ಅಕ್ಟೋಬರ ತಿಂಗಳುಗಳ ಅವಧಿಯಲ್ಲಿ ಪಕ್ಷಿ ಸಂಕುಲ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಇದು ಪಕ್ಷಿಗಳು ಮರಿ ಮಾಡುವ ಕಾಲ. ಈ ಪಕ್ಷಿ ಧಾಮದಲ್ಲಿ ಗೊರವಂಕ, ಗಿಳಿ, ಚಮಚಮುಖಿ, ಬುಲ್ ಬುಲ್, ಕಾಜಾಣ, ಗಿಡುಗ, ಸೂರಕ್ಕಿ, ಚಂಬುಕುಟಿಗ, ಮೀಂಚುಳ್ಳಿ, ಗರುಡ, ನೀರುಕಾಗೆ, ಕಳ್ಳಿ ಪೀರ, ದೇವನಹಕ್ಕಿ, ಕೌಜುಗ, ಜಂಗಲ್ ಬಾಬ್ಲರ್, ರಾಬಿನ್, ನೊಣಹಿಡುಕ, ಫ್ಲವರ್ ಪೆಕರ್, ಕಪ್ಪು ಮತ್ತು ಬಿಳಿ ಐಬಿಸ್, ಕ್ರಾಸ್ ಬಿಲ್, ಬಿಳಿಯ ಕತ್ತಿನ ಕ್ರೇನ್, ಬಣ್ಣದ ಕೊಕ್ಕರೆ ಮುಂತಾದ ವಿವಿಧ ಜಾತಿಯ, ಗಾತ್ರದ ಮತ್ತು ಬಣ್ಣಗಳ ಪಕ್ಷಿಗಳನ್ನು ಕಾಣಬಹುದು. ನದಿನೀರಿನ ಒಳಗೆ ಇರುವ ಮೊಸಳೆಗಳು ಆಗೊಮ್ಮೆ ಈಗೊಮ್ಮೆ ಬಂಡೆಗಳ ಮೇಲೆ ಬಂದು ಬಿಸಿಲು ಕಾಸುತ್ತಿರುವ ದೃಶ್ಯವೂ ಸಾಮಾನ್ಯ.

ಇಲ್ಲಿ ವಲಸೆ ಬರುವ ಪಕ್ಷಿಗಳ ಪೈಕಿ ಕೆಲವು ಜಾತಿಯ ವರಟೆಗಳು, ಸಿಹಿನೀರಿನ ಟೀಲ್ಸ್ ಎಂಬ ಜಾತಿಯ ಬಾತು ಮುಖ್ಯ. ಇವು ಮೊಟ್ಟೆಯಿಟ್ಟು ಮರಿಮಾಡುವ ಸ್ಥಳಗಳಾದ ಯುರೋಪ್ ಮತ್ತು ಸೈಬಿರಿಯಗಳಲ್ಲಿ ಶೀತಕಾಲದಲ್ಲಿ ನದಿ, ಸರೋವರಗಳ ನೀರು ಹೆಪ್ಪುಗಟ್ಟುತ್ತದೆ. ಇದರಿಂದ ಪಕ್ಷಿಗಳು ಆಹಾರಾನ್ವೇಷಣೆಗೆ ಸಾವಿರಾರು ಕಿಲೊಮೀಟರ್ ದೂರವನ್ನು ಕ್ರಮಿಸಿ ರಂಗನತಿಟ್ಟಿಗೆ ಬಂದು ನೆಲಸುತ್ತವೆ. ಉತ್ತರ ಭಾರತದಿಂದ ಅಪರೂಪಕ್ಕೆ ವಲಸೆ ಬರುವ ಪಕ್ಷಿಗಳಲ್ಲಿ ಪ್ರಮುಖವಾದುದು ಫ್ಲೆಮಿಂಗೋ. ಈ ಹಕ್ಕಿಗಳ ತೌರು ಗುಜರಾತಿನ ಕಛ್ ಪ್ರದೇಶ. ಆಫ್ಘಾನಿಸ್ಥಾನದ ಉದ್ದನೆಯ ಬಾಲದ ಹಕ್ಕಿಯೂ ಇಲ್ಲಿಗೆ ವಲಸೆ ಬರುವುದುಂಟು. ಪರ್ವತಗಳಲ್ಲಿ ವಾಸಿಸುವ ನೀಲಗೃಧ್ರಗಳೂ ಹಿಮಾಲಯದಿಂದ ರಂಗನತಿಟ್ಟಿಗೆ ಆಗೊಮ್ಮೆ ಈಗೊಮ್ಮೆ ವಲಸೆ ಬರುತ್ತವೆ.

ರಂಗನತಿಟ್ಟು ಒಂದು ಪಕ್ಷಿ ಸಂರಕ್ಷಣಾ ಕೇಂದ್ರವಾಗಿದ್ದು ಕರ್ನಾಟಕ ರಾಜ್ಯದ ಅರಣ್ಯ ಇಲಾಖೆಯ ಮೇಲ್ವಿಚಾರಣೆಗೆ ಒಳಪಟ್ಟಿದೆ. ಇಲ್ಲಿ ಪಕ್ಷಿ ಬೇಟೆ ನಿಷಿದ್ಧ. ಪಕ್ಷಿವೀಕ್ಷಣೆಗೆಂದು ಬರುವ ಪ್ರವಾಸಿಗಳಿಗೆ ದೋಣಿವಿಹಾರದ ಮೂಲಕ ದ್ವೀಪಗಳ ಬಳಿಗೆ ಹೋಗಿ ಪಕ್ಷಿವೀಕ್ಷಣೆ ಮಾಡಲು ಅವಕಾಶವಿದೆ. ರಂಗನತಿಟ್ಟು ಪಕ್ಷಿಧಾಮಕ್ಕೆ ಉತ್ತಮ ರಸ್ತೆ ಸೌಲಭ್ಯವಿರುವುದರಿಂದ ಪ್ರವಾಸಿಗರಿಗೂ ಪಕ್ಷಿ ಛಾಯಾಚಿತ್ರ ಗ್ರಾಹಕರಿಗೂ ಇದೊಂದು ಆಕರ್ಷಕ ತಾಣವಾಗಿದೆ.

ಆದಿ ಚುಂಚನಗಿರಿ ಕರ್ನಾಟಕದ ನವಿಲುಗಳಿಗೆಂದೇ ಮೀಸಲಾದ ಮತ್ತೊಂದು ಪಕ್ಷಿಧಾಮ. ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ಹರಡಿರುವ 0.84 ಚಕಿಮೀ ವಿಸ್ತಾರದ ಈ ಪ್ರದೇಶವನ್ನು 1981ರಲ್ಲಿ ಪಕ್ಷಿಧಾಮವೆಂದು ಘೋಷಿಸಲಾಗಿದೆ. ವಾರ್ಷಿಕವಾಗಿ ಸರಾಸರಿ 700 ಮಿಮಿ ಮಳೆಯಾಗುತ್ತದೆ, 14 ರಿಂದ 38 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿರುತ್ತದೆ. ಬೆಂಗಳೂರಿನಿಂದ ನಾಗಮಂಗಲಕ್ಕೆ ಬಂದು ನೆಲ್ಲಿಗೆರೆಯ ಮೂಲಕ ಆದಿ ಚುಂಚನಗಿರಿ ಕ್ಷೇತ್ರಕ್ಕೆ ಭೇಟಿ ನೀಡಬಹುದು. ಚುಂಚನಗಿರಿ ದೇವಾಲಯದ ಪಶ್ಚಿಮಕ್ಕೆ ಪಕ್ಷಿಧಾಮವಿದೆ. ಮೈಸೂರಿನಿಂದ ಪಾಂಡವಪುರದ ಮೂಲಕವೂ ಚುಂಚನಗಿರಿಗೆ ಹೋಗಬಹುದು. ಕುರುಚಲು ಕಾಡಿನಿಂದಾವೃತವಾದ ಪಕ್ಷಿಧಾಮದಲ್ಲಿ ಅಕೇಶಿಯ, ಯೂಫೋರ್ಬಿಯ, ಕಳ್ಳಿ, ಆಲ ಮುಂತಾದ ಸಸ್ಯಗಳು ನೈಸರ್ಗಿಕವಾಗಿ ಬೆಳೆದಿದ್ದು ಯೂಕಲಿಪ್ಟಸ್ ಹಾಗೂ ಅಕೇಶಿಯವನ್ನು ಕೃತಕವಾಗಿಯೂ ಬೆಳೆಸಲಾಗಿದೆ. ನವಿಲು ಮಾತ್ರವಲ್ಲದೆ ಪಕ್ಷಿಧಾಮದಲ್ಲಿ ಬೊನೆಟ್ ಕೋತಿ, ಬಾವಲಿ, ಕಾಡು ಬೆಕ್ಕು, ಮುಂಗುಸಿ, ಮೊಲ ಮುಂತಾದ ಸ್ತನಿಗಳಿವೆ. ವೈವಿಧ್ಯಮಯ ಚಿಟ್ಟೆ ಪತಂಗಗಳು ಪಕ್ಷಿಧಾಮದ ತುಂಬೆಲ್ಲ ಹರಡಿವೆ. ಅಪರೂಪದ ಹಳದಿ ಕತ್ತಿನ ಬುಲ್ ಬುಲ್ ಅಗಾಗ್ಗೆ ಕಂಡುಬರುವುದುಂಟು. ಸಮೀಪದಲ್ಲಿ ದೇವಸ್ಥಾನವಿರುವುದರಿಂದ ಇಲ್ಲಿ ವಾಸಿಸುವ ನವಿಲುಗಳಿಗೆ ನೈಸರ್ಗಿಕವಾಗಿಯೇ ರಕ್ಷಣೆ ಸಿಗುತ್ತದೆ. ನವಿಲು ರಾಷ್ಟ್ರೀಯ ಪಕ್ಷಿಯಾದುದರಿಂದ ಕರ್ನಾಟಕದ ಅರಣ್ಯ ಇಲಾಖೆ ಕೂಡ ಇವುಗಳ ಸಂರಕ್ಷಣೆಯ ಬಗ್ಗೆ ಸಾಕಷ್ಟು ಗಮನ ಹರಿಸಿದೆ.

ಅತ್ತಿವೇರಿ ಪಕ್ಷಿಧಾಮ ಉತ್ತರ ಕನ್ನಡ ಜಿಲ್ಲೆ ಹಾಗೂ ಧಾರವಾಡ ಜಿಲ್ಲೆಗಳ 2.23 ಚಕಿಮೀ ವಿಸ್ತೀರ್ಣಕ್ಕೆ ಹರಡಿದೆ. ಅತ್ತಿವೇರಿ ಹಳ್ಳಿಯ ಸಮೀಪ ತಾಯವ್ವನಹಳ್ಳ ಎಂಬ ಚಿಕ್ಕ ಹೊಳೆಗೆ ಅಡ್ಡಗಟ್ಟೆಯೊಂದನ್ನು ನಿರ್ಮಿಸಿದಾಗ ಉಂಟಾದ ಜಲಾಶಯದ ಸುತ್ತ ಕಟ್ಟೆ ನಿರ್ಮಾಣದ ಅನಂತರ ವಿವಿಧ ಬಗೆಯ ಜಲ ಪಕ್ಷಿಗಳು ಇಲ್ಲಿಗೆ ಭೇಟಿ ನೀಡುತ್ತಿವೆ. ಆದರಿಂದ ಈ ಪ್ರದೇಶವನ್ನು 17ನೇ ಅಗಸ್ಟ 2000 ರಂದು ಪಕ್ಷಿಧಾಮವೆಂದು ಘೋಷಿಸಲಾಗಿದೆ. ವಾರ್ಷಿಕವಾಗಿ 1500 ಮಿಮಿ ಮಳೆ ಬೀಳುವ ಈ ಪ್ರದೇಶದಲ್ಲಿ ಉಷ್ಣಾಂಶ 10 ರಿಂದ 35 ಡಿಗ್ರಿವರೆಗೆ ಇರುತ್ತದೆ. 1.01 ಚಕಿಮೀ ವಿಸ್ತೀರ್ಣವನ್ನು ಜಲಾಶಯ ಆವರಿಸಿದೆ. ಉಳಿದ ಭಾಗವನ್ನು ಒಣ ಪರ್ಣಪಾತಿ ಹಾಗೂ ಕುರುಚಲು ಅರಣ್ಯಗಳಿಂದ ಕೂಡಿದೆ. ಸುತ್ತ ಮುತ್ತ ಇರುವ ಹೊಲ ಗದ್ದೆಗಳು ಅನೇಕ ಜಲಪಕ್ಷಿಗಳಿಗೆ ಆಹಾರ ಒದಗಿಸುತ್ತವೆ.

ಬೆಂಗಳೂರಿನಿಂದ ಪುಣೆ ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ 300 ಕಿಮೀ ದೂರದಲ್ಲಿರುವ ಬಂಕಾಪುರವನ್ನು ತಲುಪಿ ಅಲ್ಲಿಂದ 20 ಕಿಮಿ ದೂರದ ಮುಂಡಗೋಡಿನ ಮೂಲಕ ಅತ್ತಿವೇರಿಯನ್ನು ತಲುಪಬಹುದು. ಹುಬ್ಬಳ್ಳಿಯಿಂದ ತಡಸದ ಮೂಲಕ ಸಾಗಿದರೆ ಅತ್ತಿವೇರಿಗೆ 43 ಕಿಮೀ ದೂರವಿದೆ. ಶಿರ್ಶಿಯಿಂದ ತಡಸವನ್ನು ತಲುಪಿ ಅತ್ತಿವೇರಿಗೆ ಪ್ರಯಾಣಿಸಬಹುದು.

ಪಕ್ಷಿಧಾಮದಲ್ಲಿ ತೇಗ, ಮತ್ತಿ, ಸಾಗುವಾನಿ, ಬೂರಲು, ಮುಂತಾದ ಅನೇಕ ವೃಕ್ಷಗಳಿವೆ. ಬಿಳಿ ಐಬಿಸ್ ಅಥವಾ ಬೂಸಾ ಹಕ್ಕಿ, ನೀರು ಕಾಗೆ, ಸ್ಪೂನ್ ಬಿಲ್, ಬೆಳ್ಳಕ್ಕಿ, ಹಸುಬೆಳ್ಳಕ್ಕಿ, ಮೀಂಚುಳ್ಳಿ, ಕರಿ ಬಿಳಿ ಮೀಂಚುಳ್ಳಿ, ಬಿಳಿ ಎದೆಯ ಮೀಂಚುಳ್ಳಿ, ಕಂದು ಹಾರ್ನ ಬಿಲ್, ಸ್ವಾಲೊ ಹಕ್ಕಿ ಮುಂತಾದುವು ಮುಖ್ಯವಾದುವು.

ಘಟಪ್ರಭಾ, ಉತ್ತರ ಕರ್ನಾಟಕದ ಮತ್ತೊಂದು ಸುಂದರ ಪಕ್ಷಿಧಾಮ. ಬೆಳಗಾವಿ ಜಿಲ್ಲೆಯ ಗೊಕಾಕದ ಸಮೀಪ ಘಟಪ್ರಭಾ ನದಿಗೆ ಅಡ್ಡವಾಗಿ ನಿರ್ಮಿಸಿದ ಅಣೆಕಟ್ಟೆಯ ಸುತ್ತ ಮುತ್ತಲ ಪ್ರದೇಶವನ್ನು 1974 ರಲ್ಲಿ ವನ್ಯಜೀವಿಧಾಮ ಎಂದು ಘೋಷಿಸಲಾಯಿತು. ಆದರೆ ಪಕ್ಷಿಗಳೇ ಹೆಚ್ಚು ಕಂಡು ಬರುವ ಈ ಪ್ರದೇಶವನ್ನು ಇಂದು ಪಕ್ಷಿಧಾಮ ಎಂದು ಪರಿಗಣಿಸಲಾಗಿದೆ. ಅಣೆಕಟ್ಟೆಯ ಹಿಂಭಾಗದ ಜಲಾಶಯವನ್ನೂ ಒಳಗೊಂಡಂತೆ 29.78 ಚಕಿಮೀ ವಿಸ್ತೀರ್ಣವುಳ್ಳ ಈ ಪ್ರದೇಶದಲ್ಲಿ, ಇಪ್ಪತ್ತು ನಡುಗಡ್ಡೆಗಳಿವೆ. ಪಕ್ಷಿಧಾಮದ ಸುತ್ತ ಇರುವ ಹೊಲಗದ್ದೆಗಳಲ್ಲಿ ದೊರೆಯುವ ಕೀಟಗಳು, ಹುಳುಗಳು ಪಕ್ಷಿಗಳ ಮುಖ್ಯ ಆಹಾರ. ಈ ದ್ವೀಪಗಳಲ್ಲಿ ಅಕೇಶಿಯ, ಆರ್ಟೋಕಾರ್ಪಸ್, ಮತ್ತಿ, ಬೂರುಗ, ಬಿದಿರು ಮುಂತಾದ ಸಸ್ಯಗಳಿವೆ. ಈ ಸಸ್ಯಗಳು ಹಕ್ಕಿಗಳು ಗೂಡು ಕಟ್ಟಲು ಪ್ರಶಸ್ತವಾದ ಸ್ಥಳಗಳು.

ಬೆಳಗಾವಿಯಿಂದ 82 ಕಿಮೀ ದೂರದ ಗೋಕಾಕವನ್ನು ತಲುಪಿದರೆ ಮುಂದೆ ಕೇವಲ ಅರ್ಧ ಕಿಮೀ ದೂರದಲ್ಲಿ ಪಕ್ಷಿಧಾಮವಿದೆ. ಧಾರವಾಡದಿಂದ ಮನೋಲಿಯ ಮೂಲಕವೂ (95 ಕಿಮೀ) ಗೋಕಾಕವನ್ನು ತಲುಪಬಹುದು. ಬೆಂಗಳೂರಿನಿಂದ ಮಿರಜ್‌ಗೆ ಸಾಗುವ ರೈಲು ಮಾರ್ಗವೂ ಪಕ್ಷಿಧಾಮದ ಸಮೀಪವೇ ಹಾದು ಹೋಗುತ್ತದೆ. ಗೋಕಾಕರೋಡ್ ರೈಲುನಿಲ್ದಾಣದಿಂದ ಪಕ್ಷಿಧಾಮಕ್ಕೆ ಎರಡು ಕಿಮೀ ದೂರವಿದೆ.

ಈ ಪಕ್ಷಿಧಾಮಕ್ಕೆ ಯುರೋಪಿಯನ್ ಬಿಳಿ ಸ್ಟೊರ್ಕ್, ಡೆಮ್ವಾಸೆಲ್ ಕೊಕ್ಕರೆ ಮುಂತಾದ ಅನೇಕ ವಲಸೆಗಾರ ಪಕ್ಷಿಗಳು ಭೇಟಿ ನೀಡುತ್ತವೆ. ನೀರುಕಾಗೆ, ತೆರೆದ ಕೊಕ್ಕಿನ ಸ್ಟೊರ್ಕ್, ಹಸು ಬೆಳ್ಳಕ್ಕಿ, ದೈತ್ಯ ಬೆಳ್ಳಕ್ಕಿ, ಸ್ಪೂನ್ ಬಿಲ್, ಬಿಳಿ ಕೊಕ್ಕರೆ, ಕ್ರೌಂಚ, ಹಾವು ಹಕ್ಕಿ, ಹೆರನ್, ಮೀಂಚುಳ್ಳಿ, ಟಿಟ್ಟಿಭ ಮುಂತಾದ ಪಕ್ಷಿಗಳೂ ಇವೆ. ನವಿಲು, ನರಿ, ತೋಳ, ಮುಂಗುಸಿ, ಕಾಡು ಹಂದಿ, ಮೊಲಗಳೂ ಕೂಡ ಇಲ್ಲಿ ವಾಸಿಸುತ್ತವೆ.

ಗುಡವಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿರುವ ಈ ಪಕ್ಷಿಧಾಮ ಮಲೆನಾಡಿನ ಪಕ್ಷಿಧಾಮಗಳಲ್ಲಿ ಮುಖ್ಯವಾದುದು. ಸಮುದ್ರ ಮಟ್ಟದಿಂದ 560ಮೀ ಎತ್ತರವಿರುವ ಈ ಪ್ರದೇಶದಲ್ಲಿ 15 ರಿಂದ 38 ಡಿಗ್ರಿ ಉಷ್ಣಾಂಶವಿದ್ದು ಪ್ರತಿವರ್ಷ 1000 ಮಿಮೀ ಮಳೆಯಾಗುತ್ತದೆ. 0.74 ಚಕಿಮೀ ವಿಸ್ತೀರ್ಣದ ಪಕ್ಷಿಧಾಮದ ನಡುವೆ ವಿಶಾಲವಾದ ಕೆರೆಯಿದೆ. ಪಕ್ಷಿಧಾಮದ ಪಶ್ಚಿಮೋತ್ತರ ಭಾಗದಲ್ಲಿ ಕೃಷಿಭೂಮಿಯಿದ್ದು ಉಳಿದ ಭಾಗದಲ್ಲಿ ತೇವಮಿಶ್ರಿತ ಕುರುಚಲು ಕಾಡುಗಳಿವೆ. ಮತ್ತಿ, ಹೊನ್ನೆ, ಬೀಟೆ, ಅರಳಿ, ಆಲ, ಮುತ್ತುಗ, ಶ್ರೀಗಂಧ, ನೆಲ್ಲಿ ಮುಂತಾದ ಗಿಡಮರಗಳಿವೆ.

ನೈಸರ್ಗಿಕವಾಗಿ ಪಕ್ಷಿಧಾಮವು ತುಂಬ ಚಿಕ್ಕದಾದರೂ ಪಕ್ಷಿಸಂಕುಲದ ದೃಷ್ಟಿಯಲ್ಲಿ ಈ ಸ್ಥಳ ಬಹಳ ವೈವಿಧ್ಯಪೂರ್ಣವಾದುದು. ಇಷ್ಟು ಚಿಕ್ಕ ಪ್ರದೇಶದಲ್ಲಿ 191 ಪ್ರಭೇದಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 63 ಪ್ರಭೇದಗಳು ನೀರನ್ನು ಅವಲಂಬಿಸಿರುವಂಥವು. ಜೂನ್ ನಿಂದ ಸೆಪ್ಟಂಬರ್ ವರೆಗೆ ಇವುಗಳ ಸಂತಾನೋತ್ಪತ್ತಿ ನಡೆಯುತ್ತದೆ. ಬಿಳಿ ಕೊಕ್ಕರೆ, ಹಾವು ಹಕ್ಕಿ, ಚಿಕ್ಕ ನೀರುಕಾಗೆ, ಭಾರತದ ಶಾಗ್, ಹಸು ಬೆಳ್ಳಕ್ಕಿ, ಕ್ರೌಂಚ, ಪುಟ್ಟ ಬೆಳ್ಳಕ್ಕಿ, ದೈತ್ಯ ಬೆಳ್ಳಕ್ಕಿ, ಸ್ಪೂನ್ ಬಿಲ್, ನೀಲಿಬಕ, ರಾತ್ರಿಬಕ, ಕೋಳದ ಬಕ, ನಾಮದ ಕೋಳಿ, ಕೆನ್ನೀಲಿ ನೀರುಕೋಳಿ, ಫೆಸೆಂಟ್, ಮರಳುಪೀಪಿವಾದಕ, ಟಿಟಿಕಾಕ, ಮೀಂಚುಳ್ಳಿ, ಟಿಟ್ಟಿಭ ಮುಂತಾದ ಹಲವು ಬಗೆಯ ಹಕ್ಕಿಗಳು ಇಲ್ಲಿ ಕಂಡು ಬರುತ್ತವೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನಲ್ಲಿರುವ ಕೊಕ್ಕರೆ ಬೆಳ್ಳೂರು ಮತ್ತೊಂದು ವಿಶಿಷ್ಟವಾದ ಪಕ್ಷಿಧಾಮ. ಮೈಸೂರು ಬೆಂಗಳೂರು ಹೆದ್ದಾರಿಯ ಬಲಭಾಗದಲ್ಲಿ 12

ಕಿಮೀ ದೂರದಲ್ಲಿರುವ ಬೆಳ್ಳೂರು ಮೈಸೂರಿನಿಂದ 76 ಕಿಮೀ ದೂರದಲ್ಲಿದೆ. ಕೇವಲ ಇನ್ನೂರು ನಾಡ ಹಂಚಿನ ಮನೆಗಳಿರುವ ಬೆಳ್ಳೂರು ಪುಟ್ಟ ಗ್ರಾಮ. ಆರ್ಥಿಕವಾಗಿ ಹಿಂದುಳಿದ ವಿವಿಧ ಜನಾಂಗಗಳು ವಾಸವಾಗಿರುವ ಹಳ್ಳಿಯ ನಡುವೆ ಅತ್ತಿ, ಆಲ, ಅರಳಿ, ಹುಣಿಸೆ, ಅಕೇಶಿಯ, ಬೂರುಗ ಮುಂತಾದ ಮರಗಳಿವೆ. ಗ್ರಾಮ ಚಿಕ್ಕದಾದರೂ ಪ್ರತಿವರ್ಷ ಗ್ರಾಮಕ್ಕೆ ಭೇಟಿನೀಡುವ ಪೇಂಟೆಡ್ ಸ್ಟೋರ್ಕ್‌ಗಳಿಂದಾಗಿ ಈ ಹಳ್ಳಿ ಸುಪ್ರಸಿದ್ಧ. ಪ್ರತಿವರ್ಷ ಜನವರಿ–ಫೆಬ್ರವರಿ ತಿಂಗಳಲ್ಲಿ ಸುಮಾರು 2000 ಪಕ್ಷಿಗಳು ವಲಸೆ ಬಂದು ಇಲ್ಲಿ ಗೂಡು ಕಟ್ಟಿ ಮೊಟ್ಟೆಯಿಟ್ಟು ಜೂನ್ ತಿಂಗಳ ಹೊತ್ತಿಗೆ ಹಿಂತಿರುಗುತ್ತವೆ. ಇವುಗಳೊಂದಿಗೆ ಸುಮಾರು 300 ಪೆಲಿಕನ್‌ಗಳು ಕೂಡ ಇಲ್ಲಿಗೆ ವಲಸೆ ಬರುತ್ತವೆ. ಹಿಂದುಳಿದ ಗ್ರಾಮವಾದರೂ ಪಕ್ಷಿಗಳು ಅದೃಷ್ಟ ತರುವವೆಂಬ ನಂಬಿಕೆಯಿಂದ ಆಬಾಲ–ವೃದ್ಧರಾದಿಯಾಗಿ ಯಾರೂ ಪಕ್ಷಿಗಳಿಗೆ ತೊಂದರೆ ನೀಡುವುದಿಲ್ಲ. ಪಕ್ಷಿಗಳು ಭಯವಿಲ್ಲದೆ ಸ್ವೇಚ್ಛೆಯಿಂದ ಪ್ರಜನನ ನಡೆಸಿ ಹಿಂತಿರುಗುವುವು. (ಎಸ್.ಎನ್.ಎಚ್)

**ಪಕ್ಷಿಗಳ ವಲಸೆ:** ವರ್ಷದ ಒಂದು ನಿರ್ದಿಷ್ಟ ಕಾಲದಲ್ಲಿ ಆಹಾರಾನ್ವೇಷಣೆ ಹಾಗೂ ಸಂತಾನೋತ್ಪತ್ತಿಗಾಗಿ ಹಕ್ಕಿಗಳು ಗುಂಪು ಗುಂಪಾಗಿ ಮತ್ತು ಕ್ರಮಬದ್ಧವಾಗಿ ತಮ್ಮ ವಾಸಸ್ಥಳ ಬದಲಿಸುವ ಪ್ರಕ್ರಿಯೆ. ಪ್ರಾಣಿಗಳ ಜಗತ್ತಿನಲ್ಲಿ ಅತ್ಯಂತ ವಿಸ್ಮಯಕಾರಿ, ಕುತೂಹಲಕಾರಿ ಮತ್ತು ಅತ್ಯಂತ ಗಹನವಾದ ಪ್ರಕ್ರಿಯೆ. ಯಾವುದೇ ಪಾಸ್‌ಪೋರ್ಟ್, ವೀಸಾ ಇಲ್ಲದೆಯೇ ಒಂದು ಉಪಖಂಡದ ರಾಷ್ಟ್ರದಿಂದ ಇನ್ನೊಂದು ಉಪಖಂಡದ ರಾಷ್ಟ್ರಕ್ಕೆ ಹೋಗಿ ಅಲ್ಲಿಯ ನೈಸರ್ಗಿಕ ಸೌಲಭ್ಯಗಳನ್ನು ಪಡೆದು ಸಂತಾನೋತ್ಪತ್ತಿಯನ್ನು ನಡೆಸಿ ಪುನಃ ಸ್ವಸ್ಥಾನಕ್ಕೆ ತೆರಳುವ ವರ್ತನೆ.

ಜೀವ ವಿಜ್ಞಾನಿಗಳು ಪಕ್ಷಿಗಳ ವಲಸೆಯನ್ನು ಬಹುಕಾಲದಿಂದಲೂ ಅಭ್ಯಸಿಸುತ್ತ ಬಂದಿರುವರು. ಆದರೆ 20ನೆ ಶತಮಾನದಲ್ಲಿ ಪಕ್ಷಿಗಳ ವಲಸೆಯನ್ನು ವೈಜ್ಞಾನಿಕವಾಗಿ ಮತ್ತು ಆಳವಾಗಿ ಅಭ್ಯಸಿಸಲಾಗಿದೆ. 1245ರಲ್ಲಿ ರೋಮನ್ ರಾಜನಾದ 2ನೇ ಫ್ರೆಡ್ರಿಕನು ತನ್ನ ಪುಸ್ತಕವಾದ "ಪೆಲಿಕಾನ್ ಪಕ್ಷಿಯ ಕಲೆ"ಯಲ್ಲಿ ಸುಮಾರು 11 ಅಧ್ಯಾಯಗಳಲ್ಲಿ ಪಕ್ಷಿಗಳ ವಲಸೆಯನ್ನು ವಿವರಿಸಿದ್ದಾನೆ. ರೆಡ್ ಇಂಡಿಯನ್ನರು ವಸಂತ ಮಾಸದಲ್ಲಿ ಪಕ್ಷಿಗಳು ಮರಳಿ ಬಂದಾಗ ಒಂದು ವರ್ಷ ಆಯಿತೆಂದು ಗುರುತಿಸುತ್ತಿದ್ದರು. ಒಂದು ಆಧಾರದ ಪ್ರಕಾರ ಪಕ್ಷಿಗಳು ಸತತವಾಗಿ 60 ದಿವಸದವರೆಗೆ ಮೇಲೆ ಹಾರುತ್ತ ಹೋಗಿ ಚಂದ್ರನಲ್ಲಿ ವಾಸ ಮಾಡುವವೆಂದು ಹೇಳಿದ್ದಾರೆ.

ವಲಸೆ ಎಂದರೆ ಸಾಮಾನ್ಯವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುವುದು. ಆದರೆ ವಲಸೆ ವಿಧಾನವನ್ನು ಪಕ್ಷಿಗಳಲ್ಲಿ ಅಭ್ಯಸಿಸಿದಾಗ ಇದು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸ್ಥಳಾಂತರಗೊಂಡು ಪುನಃ ಅದೇ ಸ್ಥಳಕ್ಕೆ ಮರಳುವುದು ಎಂದರ್ಥ. ಪಕ್ಷಿಗಳು ತಮ್ಮ ವಲಸೆಗಾಗಿ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುವುವು. ಇವಕ್ಕೆ ವಲಸೆಯ ಗುಣಲಕ್ಷಣಗಳೆನ್ನುವರು. ಮುಖ್ಯವಾಗಿ ತೂಕವನ್ನು ಹೆಚ್ಚಿಸಿಕೊಳ್ಳುವುದು ಮತ್ತು ವಲಸೆಯ ಅಸಹನತೆ ಅಥವಾ ಮೈಗ್ರೇಟರಿ ರೆಸ್ಟಲೆಸನೆಸ್. ವಲಸೆಯ ಸಮಯ ಸಮೀಪಿಸುತ್ತಿದ್ದಂತೆ ವಲಸೆಯ ಪಕ್ಷಿಗಳು ತಮ್ಮ ತೂಕವನ್ನು ಹೆಚ್ಚಿಸುತ್ತ ಹೋಗುತ್ತವೆ. ಕೆಲಪಕ್ಷಿಗಳು ಶೇ. 20 ರಿಂದ 30 ರಷ್ಟು, ಇನ್ನೂ ಕೆಲವು ಪಕ್ಷಿಗಳು ಶೇ. 50 ರಷ್ಟು ತಮ್ಮ ತೂಕವನ್ನು ಹೆಚ್ಚಿಸಿಕೊಳ್ಳುವುವು. ವಲಸೆಯ ಅವಧಿಯು ಸಮೀಪಿಸಿದಂತೆ ವಲಸೆಯ ಅಸಹನತೆ ತೋರಿಸುತ್ತವೆ. ವಲಸೆಯ ಅಸಹನತೆಯ ಪ್ರಮಾಣವು ಆ ಪಕ್ಷಿಗಳು ಕ್ರಮಿಸಬೇಕಾದ ದೂರವನ್ನು ಅವಲಂಬಿಸಿರುತ್ತದೆ.

ಪಕ್ಷಿಗಳ ವಲಸೆಯನ್ನು ಅಭ್ಯಸಿಸುವ ವಿಧಾನಗಳು ಹಲವು. ಅವುಗಳೆಂದರೆ;

1. ಆಕಾಶದಲ್ಲಿ ಹಾಯ್ದುಹೋಗುವ ಪಕ್ಷಿಗಳನ್ನು ವರ್ಷದುದ್ದಕ್ಕೂ ದುರ್ಬೀನು ಇಲ್ಲವೆ ದೂರದರ್ಶಕಯಂತ್ರದ ಮುಖಾಂತರ ಸತತವಾಗಿ ನೋಡಿ ಅದನ್ನು ನೊಂದಾಯಿಸಿಕೊಳ್ಳುವುದು.

2. ಬೆಳದಿಂಗಳ ರಾತ್ರಿಯಲ್ಲಿ ಹಾಯ್ದು ಹೋಗುವ ಪಕ್ಷಿಗಳ ನೆರಳನ್ನು ನೋಡಿ ಅಭ್ಯಸಿಸುವುದು.

3. ಪಕ್ಷಿಗಳಿಗೆ ಕಾಲುಂಗರಗಳನ್ನು ಹಾಕಿ ಆ ಕಾಲುಂಗರಗಳ ಮೇಲೆ ಸ್ಥಳ, ವರ್ಷವನ್ನು ಬರೆದು ಹಾರಿ ಬಿಟ್ಟು ಅವು ವಲಸೆ ಹೋಗುವ ಸ್ಥಳಗಳನ್ನು ಗುರುತಿಸುವುದು ಮತ್ತು ಯಾವಾಗ ಮರಳಿ ಬರುವವೆಂದು ಅಭ್ಯಸಿಸುವುದು.

4. ಅತೀ ಕಡಿಮೆ ತೂಕದ ರೇಡಿಯೋ ಪ್ರೇಷಕಗಳನ್ನು (ಟ್ರಾನ್ಸ್‌ಮೀಟರ್) ವಲಸೆ ಪಕ್ಷಿಗಳ ಶರೀರದಲ್ಲಿ ಅಳವಡಿಸಿ, ಹಾರಿಬಿಟ್ಟು ಆ ಪಕ್ಷಿಗಳನ್ನು ಚಿಕ್ಕದಾದ ಏರೋಪ್ಲೇನ್ ಅಥವಾ ಟ್ರಕ್ ಅಥವಾ ಮೋಟಾರ್ ಸೈಕಲಿನ ಮುಖಾಂತರ ಬೆನ್ನು ಹತ್ತುವುದು. ಈ ರೀತಿಯಾಗಿ ಹಸಿರು ಗಲ್ಲದ ಥ್ರಷ್ ಎಂಬ ಪಕ್ಷಿಯನ್ನು ಇಲಿನಾಯಿಸ್ ಪಟ್ಟಣದಿಂದ ಹಾರಿಬಿಟ್ಟು ವಿಸ್‌ಕಾನಸಿನ್ ದಕ್ಷಿಣ ಪಟ್ಟಣ ಮುಟ್ಟುವವರೆಗೆ ಚಿಕ್ಕದಾದ ಏರೋಪ್ಲೇನ್ ಮುಖಾಂತರ ಬೆನ್ನು ಹತ್ತಿದಾಗ ಆ ಪಕ್ಷಿಯು ಸುಮಾರು 650 ಕಿಮೀ ಅಂತರವನ್ನು 8 ತಾಸುಗಳಲ್ಲಿ ಕ್ರಮಿಸಿತು ಎಂಬುದು ತಿಳಿಯಿತು.

5. ರೇಡಾರ್ ಮೂಲಕ ಪಕ್ಷಿಗಳ ವಲಸೆಯನ್ನು ಅಭ್ಯಸಿಸಬಹುದು. ಅಲಸ್ಕಾದ ಉತ್ತರ ಸಮುದ್ರದ ತೀರದಲ್ಲಿ ಬಾತುಕೋಳಿ ಮತ್ತು ಗೀಜಗ ಪಕ್ಷಿಗಳನ್ನು, ಉತ್ತರ ಮಹಾಸಾಗರ ಮತ್ತು ಘಾನಾ ಪ್ರಾಂತ್ಯಗಳಲ್ಲಿ ವೇಡರ್ ಮತ್ತು ಟರ್ನ್ ಪಕ್ಷಿಗಳ ವಲಸೆಯನ್ನು ರೇಡಾರ್ ಮೂಲಕ ಅಭ್ಯಸಿಸುತ್ತಿದ್ದಾರೆ.

6. ಪ್ರಯೋಗಾಲಯಗಳಲ್ಲಿ ಪ್ರಯೋಗದ ಬಲೆಗಳಲ್ಲಿ ಇಲ್ಲವೆ ಪ್ಲಾನೇಟೋರಿಯಮ್ ಅಥವಾ ತಾರಾಲಯಗಳಲ್ಲಿ ವಲಸೆಗೆ ಸಿದ್ಧವಾದ ಪಕ್ಷಿಗಳನ್ನು ಬಿಟ್ಟು ಅಭ್ಯಸಿಸುವರು.

ವಲಸೆಯ ಉಗಮದ ಬಗ್ಗೆ ಹಲವು ಬಗೆಯ ವಿವರಣೆಗಳಿವೆ. ಕೆಲವರು ಪಕ್ಷಿಗಳು ಮೊದಲು ಉತ್ತರ ಗೋಲಾರ್ಧದಲ್ಲಿ ಹುಟ್ಟಿದವು ಎಂದು ಹೇಳುತ್ತಾರೆ. ಅಲ್ಲಿನ ಚಳಿಯನ್ನು ತಡೆಯಲಾರದೆ ದಕ್ಷಿಣ ಗೋಲಾರ್ಧಕ್ಕೆ ಬಂದು, ಅಲ್ಲಿ ಚಳಿಗಾಲವನ್ನು ಕಳೆದು ಮತ್ತೆ ಉತ್ತರಕ್ಕೆ ಹೋದವೆಂದು ಇವರ ಅಭಿಪ್ರಾಯ. ಇನ್ನೂ ಕೆಲವರ ಪ್ರಕಾರ ಪಕ್ಷಿಗಳು ದಕ್ಷಿಣ ಗೋಲಾರ್ಧದಲ್ಲಿ ಹುಟ್ಟಿದವು. ಅಲ್ಲಿ ತಮ್ಮ ಜನಸಂಖ್ಯೆ ಮಿತಿಮೀರಿ ಬೆಳೆದಾಗ ಆಹಾರವನ್ನು ಹುಡುಕಲು ಮತ್ತು ಸಂತಾನೋತ್ಪತ್ತಿಗಾಗಿ ಉತ್ತರ ಗೋಲಾರ್ಧದ ವಸಂತ ಇಲ್ಲವೆ ಬೇಸಿಗೆ ಕಾಲಕ್ಕೆ ಹೋಗಿ ಮತ್ತೆ ಪುನಃ ಚಳಿಗಾಲದಲ್ಲಿ ಮರಳುವುವು ಎಂದು ಇವರ ಅಭಿಪ್ರಾಯ. ಆದರೆ ಸ್ಪಷ್ಟವಾದ ವಿವರಣೆ ಇನ್ನೂ ಲಭ್ಯವಿಲ್ಲ.

ವಲಸೆಯಲ್ಲಿ ವಿಧಗಳು: ಮೊದಲನೆಯದಾಗಿ ಲ್ಯಾಟಿಟ್ಯೂಡಿನಲ್ ಮೈಗ್ರೇಷನ್, ಅಂದರೆ ದಕ್ಷಿಣದಿಂದ ಉತ್ತರಕ್ಕೆ ಅಥವಾ ಉತ್ತರದಿಂದ ದಕ್ಷಿಣಕ್ಕೆ ವಲಸೆ. ಉತ್ತರ ಗೋಲಾರ್ಧದ ಪಕ್ಷಿಯಾದ ಟರ್ನ್ ಪಕ್ಷಿಯನ್ನು "ವಲಸೆಯ ವೀರಾಗ್ರಣಿ" ಎಂದು ಕರೆಯುವುದುಂಟು. ಈ ಪಕ್ಷಿಯು ಒಂದು ವರ್ಷದಲ್ಲಿ ಸುಮಾರು 30,000 ಕಿಮೀ. ಪ್ರಯಾಣ ಮಾಡುವುದು. ಇದೇ ರೀತಿಯಾಗಿ ಉತ್ತರದ ಪಕ್ಷಿಗಳಾದ ಸ್ಟಾರ್ಕ್, ಡೆಮೊಸಿಯಲ್ ಕ್ರೇನ್, ಬ್ರಾಹ್ಮಿನಿ ಬಾತುಕೋಳಿಗಳು ನಿಯಮಬದ್ಧವಾಗಿ ಅಕ್ಟೋಬರ್ ತಿಂಗಳಲ್ಲಿ ಭಾರತಕ್ಕೆ ಬರುವುವು. ಇಲ್ಲಿ ಚಳಿಗಾಲವನ್ನು ಕಳೆದು ಪುನಃ ತಮ್ಮ ಸ್ಥಳಕ್ಕೆ ಮರಳುವುವು. ಮಾಸ್ಕೋದಲ್ಲಿ ಕಾಲುಂಗರ ಹಾಕಿದ ಗ್ರೀನ್ ಸ್ಯಾಂಡ್ ಪೈಪರ್ ಕೇರಳದಲ್ಲಿ, ಕಾಲುಂಗುರ ಹಾಕಿದ ರೋಸಿ ಪ್ಯಾಸ್ಟರ್ ಎಂಬ ಹಂಗೇರಿಯ ಪಕ್ಷಿಯನ್ನು ರಾಜಸ್ಥಾನದಲ್ಲಿ ಗುರುತಿಸಲಾಗಿದೆ. ಈ ಪದ್ಧತಿಯ ವಲಸೆಯಲ್ಲಿ ಗೋಲ್ಡನ್ ಪ್ಲೋವರ್ ಎಂಬ ಪಕ್ಷಿಯು ಲೂಪ್ ವಲಸೆ ಅಥವಾ ವಂಕಿಯ ವಲಸೆಯನ್ನು ತೋರಿಸುವುದು. ಅಂದರೆ ಅದು ಕ್ರಮಿಸುವ ಮಾರ್ಗವು ವಂಕಿಯ ಆಕಾರದ್ದಾಗಿದೆ. ಕೆನಡಾದ ಉತ್ತರ ಅಲಸ್ಕಾದಿಂದ ತನ್ನ ವಲಸೆಯನ್ನು ಪ್ರಾರಂಭಿಸಿ ಪೂರ್ವ ಹಡ್‌ಸನ್ ಬೇ, ಲ್ಯಾಬ್ರಡಾರ್ ಸಮುದ್ರ ತೀರ, ನ್ಯೂ ಇಂಗ್ಲೆಂಡ್ ಮುಖಾಂತರ ಅಟ್ಲಾಂಟಿಕ್ ಮಹಾಸಾಗರವನ್ನು ದಾಟಿ ದಕ್ಷಿಣ ಆಫ್ರಿಕಾದ ಒಂದು ಪ್ರದೇಶದಲ್ಲಿ ತನ್ನ ಚಳಿಗಾಲವನ್ನು ಕಳೆಯುವುದು. ಚಳಿಗಾಲವನ್ನು ಕಳೆದ ಮೇಲೆ ಪುನಃ ಅಲಸ್ಕಾಕ್ಕೆ ಹೋಗುವಾಗ ತಾನು ಬಂದ ದಾರಿಯನ್ನು ಬಿಟ್ಟು ಮಧ್ಯ ಇಸ್ತಮಸ್, ಪನಾಮ, ಮಧ್ಯ ಅಮೇರಿಕ, ಮೆಕ್ಸಿಕೊ, ಮಿಸಿಸಿಪಿ ಕಂದರಗಳನ್ನು ದಾಟಿ ಅಲಸ್ಕಾಕ್ಕೆ ಹೋಗುವುದು. ಏಕೆಂದರೆ ಅದು ಬಂದ ದಾರಿಯಲ್ಲಿ ಇನ್ನೂ ಚಳಿಗಾಲವಿದ್ದು ಹಿಮವಿರುತ್ತದೆ. ಆದರೆ ಹೋಗುವ ದಾರಿಯಲ್ಲಿ ಆಗಲೆ ಬೇಸಿಗೆ ಪ್ರಾರಂಭವಾಗಿದ್ದು ತಿನ್ನಲು ಬೆರ್ರಿ ಹಣ್ಣುಗಳೂ ದೊರಕುತ್ತವೆ. ಈ ರೀತಿಯಾಗಿ ಕ್ರಮಿಸುವ ಮಾರ್ಗದ ಕಾರಣ ಇದಕ್ಕೆ "ವಂಕಿ ರೂಪದ" ವಲಸೆ ಎನ್ನಲಾಗುವುದು. ಭಾರತದ ಗೋಲ್ಡನ್ ಓರಿಯೋಲ್, ಮೈನ, ಆಸ್‌ಪ್ರೆ, ಪಿಟ್ಟಾ, ಕೊಂಬು ಇದ್ದ ಕೋಗಿಲೆ ಇವುಗಳು ಚಳಿಗಾಲದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಸಿಲೋನ್ ದೇಶದವರೆಗೆ ಹೋಗುವುವು.

ಎರಡನೆಯದಾಗಿ, ಉದ್ದಳತೆ ಅಥವಾ ಲಾಂಜಿಟ್ಯೂಡಿನಲ್ ವಲಸೆಯಲ್ಲಿ ಪಕ್ಷಿಗಳು ಪೂರ್ವದಿಂದ ಪಶ್ಚಿಮದ ಪ್ರಾಂತ್ಯಗಳಿಗೆ, ಪಶ್ಚಿಮದಿಂದ ಪೂರ್ವ ಪ್ರಾಂತ್ಯಗಳಿಗೆ ವಲಸೆ ಹೋಗುವುವು. ಬಿಳಿಯ ರೆಕ್ಕೆಯ ಸ್ಟಾರ್ಕ್ ಪಕ್ಷಿಯು ಮಧ್ಯ ಕೆನಡಾದಿಂದ ಅಟ್ಲಾಂಟಿಕ್ ಇಲ್ಲವೆ ಪೆಸಿಫಿಕ್ ಸಮುದ್ರ ತೀರಕ್ಕೆ ಹೋಗುವುದು. ಇವನಿಂಗ್ ಗ್ರಾಸ್‌ಬೀಕ್ ಪಕ್ಷಿಯು ಮಿಚಿಗನ್ ಪಟ್ಟಣದಿಂದ ನ್ಯೂ ಇಂಗ್ಲೆಂಡ್‌ಗೆ ವಲಸೆ ಹೋಗುವುದು. ಹಾಫಿಂಚ್ ಪಕ್ಷಿಯು ರಷ್ಯಾದಿಂದ ಕೊರಿಯ ಇಲ್ಲವೆ ಜಪಾನಿಗೆ ವಲಸೆ ಹೋಗುವುದು.

ಆಲ್ಟಿಟ್ಯೂಡಿನಲ್ ಅಥವಾ ಎತ್ತರದಿಂದ ಕೆಳ ಪ್ರದೇಶಗಳಿಗೆ ಇಲ್ಲವೆ ಕೆಳಗಿನಿಂದ ಎತ್ತರ ಪ್ರದೇಶಗಳಿಗೆ ವಲಸೆ ಹೋಗುವುದು ಮೂರನೆಯ ವಿಧ. ಕೆಲವು ಪಕ್ಷಿಗಳು ಪರ್ವತ ಗುಡ್ಡಗಳಿಂದ ಕೆಳಗಿನ ಕಂದರಕ್ಕೆ ಇಲ್ಲವೇ ಕೆಳಗಿನಿಂದ ಮೇಲಿನ ಪ್ರದೇಶಗಳಿಗೆ ವಲಸೆ ಹೋಗುವುವು.

ಕ್ಯಾಲಿಫೋರ್ನಿಯ ಪರ್ವತದ ಕ್ವೆಯಿಲ್ ಪಕ್ಷಿಯು ಸುಮಾರು 3000 ಮೀ ಪ್ರದೇಶದಿಂದ 1500 ಮೀ ಪ್ರದೇಶಕ್ಕೆ ವಲಸೆ ಹೋಗುವುದು. ಬ್ಲೂ ಗ್ರೌಸ್ ಪಕ್ಷಿಯು ತನ್ನ ಚಳಿಗಾಲವನ್ನು

ಫಿರಪಾಯಿನ್ ಅಡವಿಯಲ್ಲಿ ಕಳೆಯುವುದು. ಇದು ಈ ಪಕ್ಷಿಯ ಮೂಲ ವಾಸಸ್ಥಳಕ್ಕಿಂತ ಎತ್ತರದಲ್ಲಿದೆ.

ಪಕ್ಷಿಗಳು ಯಾವ ಸಮಯದಲ್ಲಿ ತಮ್ಮ ವಲಸೆಯ ಮಾರ್ಗವನ್ನು ಕ್ರಮಿಸುವುವು ಎಂಬುದನ್ನು ಆಧರಿಸಿ ವಿವಿಧ ಪ್ರಕಾರದ ವಲಸೆ ಪಕ್ಷಿಗಳನ್ನು ಗುರುತಿಸಲಾಗಿದೆ. ಚಿಕ್ಕ ಪಕ್ಷಿಗಳಾದ ಥ್ರಷಸ್, ವಾರ್ಬ್‌ಲರ್, ಗುಬ್ಬಿಯ ಜಾತಿಯ ಬೇರೆ ಪಕ್ಷಿಗಳು ರಾತ್ರಿಯಲ್ಲಿ ವಲಸೆಯ ಪ್ರಯಾಣವನ್ನು ಮಾಡುವುವು. ಈ ಪಕ್ಷಿಗಳು ಹಗಲಿನಲ್ಲಿ ತಮ್ಮ ಆಹಾರವನ್ನು ಸೇವಿಸಿ ವಿಶ್ರಾಂತಿಯನ್ನು ಪಡೆಯುವುವು. ದೊಡ್ಡ ಪಕ್ಷಿಗಳಾದ ಹದ್ದು ಮತ್ತು ಅದರ ಜಾತಿಯ ಪಕ್ಷಿಗಳು, ಸ್ಟಾರ್ಕ್, ಹೆರಾನ್, ರಾಬಿನ್ ಮತ್ತು ಪೆಲಿಕಾನ್ ಹಗಲಿನಲ್ಲಿ ವಲಸೆಯ ಪ್ರಯಾಣವನ್ನು ನಡೆಸುವುವು. ಲೂನ್, ಬಾತುಕೋಳಿ, ಗೀಸ್, ಆಕ್ ಪಕ್ಷಿಗಳು ರಾತ್ರಿ ಅಥವಾ ಹಗಲಿನಲ್ಲಿ ವಲಸೆಯ ಪ್ರಯಾಣವನ್ನು ಮಾಡುವುವು. ಪಶ್ಚಿಮ ಸ್ಕ್ಯಾಂಡಿನೇವಿಯಾದ ಹದ್ದು ಮಿಲ್ವಸ್ ಮಿಲ್ವಸ್ ಪಕ್ಷಿಯು 35 ವರ್ಷಗಳ ಹಿಂದೆ ವಲಸೆ ಹೋಗುತ್ತಿತ್ತು. ಆದರೆ ಈಗ ಅದಕ್ಕೆ ಚಳಿಗಾಲದಲ್ಲಿಯೂ ಸಾಕಷ್ಟು ಆಹಾರ ಸಿಗುತ್ತಿರುವುದರಿಂದ ತನ್ನ ವಲಸೆಯನ್ನು ಮೊಟಕುಗೊಳಿಸಿದೆ. ಸಾಮಾನ್ಯವಾಗಿ ವಲಸೆ ಹೋಗುವ ಪಕ್ಷಿಗಳು ಚಿಕ್ಕದಾದ ಚುಂಚು, ಕಾಲು, ಬಾಲ ಮತ್ತು ಉದ್ದವಾದ ರೆಕ್ಕೆಗಳನ್ನು ಹೊಂದಿರುತ್ತವೆ. ಶೇ. 50 ರಷ್ಟು ವಲಸೆ ಪಕ್ಷಿಗಳು ನೆಲದಿಂದ 150 ಮೀ ಕೆಳಗೆ ಮತ್ತು ಇನ್ನುಳಿದ ಕೆಲ ಪಕ್ಷಿಗಳು 1500 ಮೀ ಮೇಲ್ಪಟ್ಟು ಅಂದರೆ 6000 ಮೀ ಗಳವರೆಗೆ ಮೇಲ್ಪಟ್ಟು ಹಾರುತ್ತ ತಮ್ಮ ವಲಸೆ ಮಾರ್ಗವನ್ನು ಕ್ರಮಿಸುವುವು. ರೇಡಾರ್ ಯಂತ್ರದಿಂದ ವಲಸೆ ಪಕ್ಷಿಗಳ ವೇಗವನ್ನು ಅಭ್ಯಸಿಸಲಾಗಿದೆ. ಚಾಫಿಂಚ್ ಪಕ್ಷಿಯು ಪ್ರತಿ ಗಂಟೆಗೆ 44 ಕಿಮೀ ಕ್ರಮಿಸುವುದು ಎಂದು ಕಂಡುಬಂದಿದೆ. ವಲಸೆಗೆ ಸಿದ್ಧವಾದ ಪಕ್ಷಿಗಳು ಉತ್ತಮ ಹವಾಮಾನದಲ್ಲಿ ಮಾತ್ರ ತಮ್ಮ ಪ್ರಯಾಣವನ್ನು ಕೈಗೊಳ್ಳುವುವು. ಮೋಡಗಳು, ಬಿರುಗಾಳಿ, ಎದುರುಗಾಳಿ ಮತ್ತು ಮಂಜು ಇದ್ದಾಗ ವಲಸೆಯನ್ನು ಕೈಗೊಳ್ಳುವುದಿಲ್ಲ. 1952ನೇ ಇಸವಿಯಲ್ಲಿ ಸ್ವೀಡನ್ ದೇಶದ ವಲಸೆ ಪಕ್ಷಿಗಳು ಹವಾಮಾನದ ವೈಪರೀತ್ಯದಿಂದಾಗಿ ತಮ್ಮ ಪ್ರಯಾಣವನ್ನು 10 ದಿನ ಮುಂದೆ ಹಾಕಿದವು. ಮ್ಯಾಕ್ಸ್‌ಶಿಯರ್ ವಾಟರ್ ಎಂಬ ಪಕ್ಷಿಯನ್ನು ಅದರ ಸಂತಾನೋತ್ಪತ್ತಿ ಸ್ಥಳದಿಂದ 5100 ಕಿಮೀ ದೂರ ವಿಮಾನದ ಮೂಲಕ ಸ್ಥಳಾಂತರಿಸಲಾಗಿ ಅದು ಕೇವಲ 12½ ದಿವಸಗಳಲ್ಲಿ ಮರಳಿ ತನ್ನ ಸ್ಥಳಕ್ಕೆ ಬಂದಿತು. ಲೇಸನ್ ಆಲ್ಬಟ್ರಾಸ್ ವಲಸೆ ಪಕ್ಷಿಯನ್ನು 6640 ಕಿಮೀ ಸ್ಥಳಾಂತರಿಸಲಾಯಿತು. ಅದು 32 ದಿವಸಗಳಲ್ಲಿ ಪುನಃ ತನ್ನ ಸ್ಥಳಕ್ಕೆ ಬಂದಿತು. ಈ ರೀತಿಯ ವಿಶೇಷ ಗುಣವು ಅನೇಕ ಪಕ್ಷಿಗಳಲ್ಲಿ ಇದೆ. ತಮ್ಮ ಸ್ವಸ್ಥಳವನ್ನು ಗುರುತಿಸಿ ಮರಳಿ ಹೇಗೆ ವಾಪಾಸಾಗುವುವು ಎಂಬುದು ಬಹಳ ಗಹನವಾದ ವಿಷಯ. ವಲಸೆ ಪಕ್ಷಿಗಳು ಸೂರ್ಯನನ್ನು, ನಕ್ಷತ್ರಗಳನ್ನು ಅಥವಾ ಸೂರ್ಯನು ಅಸ್ತಂಗತವಾಗುವಾಗ ಕಾಣುವ ಕೆಂಪಾದ ಪ್ರಕಾಶವನ್ನು ಅಥವಾ ಭೂಮಿಯ ಅಯಸ್ಕಾಂತ ಗುಣಧರ್ಮವನ್ನು ತಮ್ಮ ಮೂಲಸ್ಥಾನಕ್ಕೆ ಬರಲು ಅಥವಾ ವಲಸೆ ಸ್ಥಳಕ್ಕೆ ಹೋಗಲು ಉಪಯೋಗಿಸಿಕೊಳ್ಳುವುವು ಎಂದು ನಂಬಲಾಗಿದೆ. ಜರ್ಮನಿಯ ಕ್ರಮರ್ ಎಂಬ ವಿಜ್ಞಾನಿಯು 1950ರಲ್ಲಿ ಸ್ಟಾರ್‌ಲಿಂಗ್ ಪಕ್ಷಿಗಳು ಸೂರ್ಯನನ್ನು ತಮ್ಮ ದಿಕ್ಸೂಚಿಯನ್ನಾಗಿ ಉಪಯೋಗಿಸುವುವು ಎಂದು ಕಂಡು ಹಿಡಿದ. ಈ ಪಕ್ಷಿಗಳು ತಮ್ಮ ಅಂತರ್ ಜೈವಿಕ ಗಡಿಯಾರದಿಂದ ಸೂರ್ಯನ ಸ್ಥಳವನ್ನು ಕಂಡುಹಿಡಿದು ತಮ್ಮ ದಿಕ್ಕನ್ನು ಹುಡುಕಿಕೊಳ್ಳುವುವು. ಹೋಮಿಂಗ್ ಪಾರಿವಾಳ, ಬಿಳಿ ಗಂಟಲಿನ ಗುಬ್ಬಿ, ಬಾರ್ಡ್ ವಾರ್ಬ್‌ಲರ್ ಇನ್ನೂ ಅನೇಕ ಪಕ್ಷಿಗಳು ಸೂರ್ಯನನ್ನು ದಿಕ್ಸೂಚಿಯನ್ನಾಗಿ ಉಪಯೋಗಿಸುವುವು. ರಾತ್ರಿ ವಲಸೆ ಹೋಗುವ ಪಕ್ಷಿಗಳಾದ ಬ್ಲ್ಯಾಕ್ ಕ್ಯಾಪ್ಸ್, ಗಾರ್ಡನ್ ವಾರ್ಬ್‌ಲರ್, ಲೇಸರ್ ವೈಟ್ ಥ್ರೋಟ್ ಪಕ್ಷಿಗಳು ನಕ್ಷತ್ರಗಳನ್ನು ಗುರುತಿಸಿ ತಮ್ಮ ದಿಕ್ಕನ್ನು ಕಂಡುಕೊಳ್ಳುವುವು. ರಾತ್ರಿ ವಲಸೆ ಮಾಡುವ ಪಕ್ಷಿಗಳನ್ನು ತಾರಾಲಯದಲ್ಲಿ ಅವು ಗುರುತಿಸುವ ನಕ್ಷತ್ರಗಳ ಚಿತ್ರಗಳನ್ನು ತೋರಿಸಿದಾಗ ಆ ದಿಕ್ಕಿನತ್ತ ಹಾರಿದ ಪುರಾವೆಯುಂಟು. ನಕ್ಷತ್ರಗಳ ದಿಕ್ಕುಗಳನ್ನು ಬದಲಿಸಿದಾಗ ಬದಲಿಸಿದ ದಿಕ್ಕಿಗೆ ಹಾರಿದವು.

ಹಗಲಿನಲ್ಲಿ ಅಥವಾ ರಾತ್ರಿಯಲ್ಲಿ ಮೋಡಗಳು ಇದ್ದಾಗಲೂ ಪಕ್ಷಿಗಳು ತಮ್ಮ ವಲಸೆಯ ದಿಕ್ಕನ್ನು ಸರಿಯಾಗಿ ಗುರುತಿಸಬಲ್ಲವು. ಈ ಸಮಯದಲ್ಲಿ ವಲಸೆ ಪಕ್ಷಿಗಳು ಭೂಮಿಯ ಉತ್ತರ ಮತ್ತು ದಕ್ಷಿಣ ಅಯಸ್ಕಾಂತದ ಗುಣಧರ್ಮವನ್ನು ಗುರುತಿಸಿ ತಮ್ಮ ದಿಕ್ಕನ್ನು ಕಂಡುಕೊಳ್ಳುವುವೆಂದು ಸಿದ್ಧವಾಗಿದೆ. ಕೆಲಪಕ್ಷಿಗಳ ಶರೀರದಲ್ಲಿ ಮ್ಯಾಗ್ನೆಟಿಕ್ ಅಥವಾ ಅಯಸ್ಕಾಂತದ ಕಣಗಳು ಇದ್ದು, ಈ ಮುಖಾಂತರ ಭೂಮಿಯ ದಕ್ಷಿಣೋತ್ತರ ಅಯಸ್ಕಾಂತವನ್ನು ಗುರುತಿಸುವುವೆಂದು ತಿಳಿದು ಬಂದಿದೆ. ಕೆಲವು ವಲಸೆ ಪಕ್ಷಿಗಳು ತಾವು ವಲಸೆ ಹೋಗುವ ದಾರಿಯ ಭೂಮಿಯ ವಿವಿಧ ಗುಣಗಳಾದ ಹಳ್ಳಗಳು, ನದಿಗಳು, ಗುಡ್ಡಗಳು ಮತ್ತು ಅರಣ್ಯಗಳು ಇವುಗಳನ್ನು ನೆನಪಿನಲ್ಲಿಟ್ಟುಕೊಂಡು ಅವುಗಳನ್ನು ಗುರುತಿಸುತ್ತ ದಿಕ್ಕನ್ನು ಕಂಡುಕೊಳ್ಳುವುವೆಂದು ನಂಬಲಾಗಿದೆ.

ವಲಸೆಗೆ ಪ್ರಚೋದನೆ: ಅಂತರ್ ಜೈವಿಕ ಗಡಿಯಾರದ ಸೂಚನೆ ಮತ್ತು ನಿರ್ನಾಳ ಗ್ರಂಥಿಗಳ ನಿಯಂತ್ರಣ ಪಕ್ಷಿಗಳ ವಲಸೆಗೆ ಮೂಲ ಪ್ರಚೋದನೆ. ವಲಸೆ ಹೋಗುವ ಪಕ್ಷಿಗಳು ತಮ್ಮ ಜೈವಿಕ ಒಳಗಡಿಯಾರದಿಂದ ಹವಾಮಾನವನ್ನು ಗುರುತಿಸಿ ಮೆದುಳಿನ ಹೈಪೊಥಾಲಮಸ್ ಅಲ್ಲಿಂದ ಮುಂದೆ ಪಿಟ್ಯೂಟರಿ ಗ್ರಂಥಿಗೆ, ಅಲ್ಲಿಂದ ಮುಂದೆ ಅಂಡಾಶಯ ಮತ್ತು ವೃಷಣಗಳು ಸ್ರವಿಸುವ ಹಾರ್ಮೋನುಗಳ ಪ್ರಚೋದನೆಯ ಮುಖಾಂತರ ತಮ್ಮ ತೂಕವನ್ನು ಮತ್ತು ವಲಸೆಯ ಅಸಹನತೆಯ ಗುಣವನ್ನು ಹೊಂದುವುವು. ತೂಕ ಮತ್ತು ವಲಸೆಯ ಅಸಹನತೆಯ ಗುಣಗಳು ಒಂದು ಹಂತ ತಲುಪಿದಾಗ ವಲಸೆ ಪಕ್ಷಿಗಳು ತಾವಗಿಯೇ ಸರಿಯಾದ ಸಮಯದಲ್ಲಿ ವಲಸೆಯನ್ನು ಪ್ರಾರಂಭಿಸುವುವು. ವಲಸೆಯ ಜಾಗವನ್ನು ಮುಟ್ಟಿದ ಅನಂತರ ತೂಕ ಕಡಿಮೆಯಾಗುವುದು. ವಲಸೆಯ ಅಸಹನತೆಯೂ ನಿಲ್ಲುವುದು. ವಲಸೆ ಹೋದ ಸ್ಥಳದಲ್ಲಿ ನಿರ್ದಿಷ್ಟ ಅವಧಿ ಕಳೆದ ಅನಂತರ ಪುನಃ ಮರುಪ್ರಯಾಣ ಮಾಡುವ ಮುನ್ನ ತೂಕವನ್ನು ಹೆಚ್ಚಿಸಿಕೊಳ್ಳುವುವು ಮತ್ತು ವಲಸೆಯ ಅಸಹನತೆಯನ್ನು ಹೊಂದುವುವು. ಕನಿಷ್ಠ 20 ಪ್ರಭೇದದ ಪಕ್ಷಿಗಳಲ್ಲಿ ವಲಸೆಯ ಇಂತಹ ಒಳ ಕಾರ್ಯಕ್ರಮವಿದೆಯೆಂದು ಸಿದ್ಧವಾಗಿದೆ. ಸಿಲ್ವಿಯಾ ಬೋರಿನ್ ಎಂಬ ವಾರ್ಬ್‌ಲರ್ ಪಕ್ಷಿಯನ್ನು ಅದರ ಜನನದಿಂದಲೇ ಪ್ರಯೋಗಾಲಯದಲ್ಲಿ ಬೆಳೆಸಲಾಯಿತು. ಈ ಪಕ್ಷಿಗಳನ್ನು ಪ್ರತಿದಿವಸ 10 ತಾಸು ಬೆಳಕು 14 ತಾಸು ಕತ್ತಲು, $20^0$–$21^0$ ಸೆ ತಾಪಮಾನ, 60% ಆರ್ದ್ರತೆ ಮತ್ತು ಉತ್ತಮ ಆಹಾರ ತಿನ್ನಿಸಿ 10 ವರ್ಷಗಳವರೆಗೆ ಪ್ರಯೋಗಾಲಯದಲ್ಲಿಟ್ಟು ಅಭ್ಯಸಿಸಲಾಯಿತು. ಪ್ರಯೋಗಾಲಯದಲ್ಲಿ ಹವಾಮಾನದ ಯಾವುದೇ ಬದಲಾವಣೆ ಇಲ್ಲದಿದ್ದರೂ ಕೂಡ 10 ವರ್ಷಗಳವರೆಗೆ ಈ ಪಕ್ಷಿಗಳು ವಲಸೆಯ ಎಲ್ಲ ಗುಣಧರ್ಮವನ್ನು ಪ್ರತಿವರ್ಷವೂ ನಿಯಮ ಬದ್ಧವಾಗಿ ತೋರಿಸಿದವು. ಇದರಿಂದ ವಲಸೆಯ ಗುಣವು ಜನನದಿಂದಲೇ ಬಂದಿರುವುದೆಂದು ಸ್ಪಷ್ಟವಾಗುತ್ತದೆ.

ವಲಸೆಗೆ ಹೋಗುವ ಪಕ್ಷಿಗಳಾದ ವಾರ್ಬ್‌ಲರ್, ಶ್ರೈಕ್ಸ್ ಮತ್ತು ಸ್ಟಾರ್‌ಲಿಂಗ್ ಎಂಬ ಪಕ್ಷಿಗಳನ್ನು ಗೋಲಾಕಾರದ ಕೃತಕ ಬಲೆಗಳಲ್ಲಿ ಇಡಲಾಗಿ ಅವು ತಾವು ವಲಸೆ ಕೈಗೊಳ್ಳುವ ದಿಕ್ಕಿನ ಕಿಟಕಿಯಿಂದಲೇ ಹಾರಿದವು. ಇದು ಆ ಪಕ್ಷಿಗಳಲ್ಲಿಯ ತಮ್ಮ ವಲಸೆಯ ದಿಕ್ಕನ್ನು ಕಂಡುಕೊಳ್ಳುವ ಅಗಾಧ ಶಕ್ತಿಯನ್ನು ತೋರಿಸುತ್ತದೆ. ಈಗ ವಲಸೆಯ ಗುಣಧರ್ಮವು ಆನುವಂಶೀಯತೆಯಿಂದಲೇ ಮುಂದಿನ ಪೀಳಿಗೆಗೆ ಹೋಗುವುದೆಂದು ಕಂಡುಬಂದಿದೆ. ವಲಸೆ ಹೋಗಲಾರದ ಕೇಪ್ ವೆರಡೆ ದ್ವೀಪದ ಬ್ಲ್ಯಾಕ್ ಕ್ಯಾಪ್ ಪಕ್ಷಿಗಳನ್ನು ವಲಸೆ ಹೋಗುವಂತ ಜರ್ಮನಿಯ ಬ್ಲ್ಯಾಕ್ ಕ್ಯಾಪ್ ಪಕ್ಷಿಗಳ ಕೂಡ ಸಂಕರ ಮಾಡಿದಾಗ 35 ಹೈಬ್ರಿಡ್ ಪಕ್ಷಿಗಳು ಹುಟ್ಟಿದವು. ಅವುಗಳಲ್ಲಿ ಶೇ. 37 ರಷ್ಟು ಪಕ್ಷಿಗಳು ವಲಸೆಯ ಅಸಹನತೆ ಗುಣವನ್ನು ತೋರಿದವು. 35 ರಲ್ಲಿ 7 ಪಕ್ಷಿಗಳು ಸರಿಯಾದ ದಿಕ್ಕಿನಲ್ಲಿ ಹಾರಿದವು. ಇದರಿಂದ ವಲಸೆಯ ಗುಣಧರ್ಮವು ವಲಸೆಯ ಪಕ್ಷಿಗಳಲ್ಲಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಆನುವಂಶಿಕವಾಗಿ ಹೋಗುವುದು ಎಂಬುದು ಸಿದ್ಧವಾಗಿದೆ. ಇದೆಲ್ಲವನ್ನು ಅಭ್ಯಸಿಸಿ ಬರ್ತ್‌ಹೋಲ್ಡ್ ಎಂಬ ವಿಜ್ಞಾನಿಯು 1990 ರಲ್ಲಿ ಈ ಕೆಳಗಿನಂತೆ ವಲಸೆಯ ವಿಧಾನವನ್ನು ಸಾದರಪಡಿಸಿದ್ದಾನೆ.

ವಲಸೆ ಹೋಗುವ ಪಕ್ಷಿಯು ತನಗೆ ಅನುಭವ ಇರದಿದ್ದರೂ ಕೂಡ ತನ್ನ ಜೈವಿಕ ಒಳಗಡಿಯಾರದ ಮೂಲಕ ಸರಿಯಾದ ಸಮಯಕ್ಕೆ ತೂಕವನ್ನು ಹೆಚ್ಚಿಸಿಕೊಂಡು ವಲಸೆಯ ಅಸಹನತೆಯನ್ನು ಹೊಂದಿ ವಲಸೆಯ ಮಾರ್ಗವನ್ನು ಕಂಡುಕೊಳ್ಳುವುದು. ವಲಸೆ ಹೋದ ಸ್ಥಳದಲ್ಲಿ ನಿರ್ದಿಷ್ಟ ಸಮಯವನ್ನು ಕಳೆದ ಅನಂತರ ಪುನಃ ತೂಕವನ್ನು ಹೆಚ್ಚಿಸಿಕೊಂಡು, ವಲಸೆಯ ಅಸಹನತೆಯನ್ನು ಹೊಂದಿ ಮರುಪ್ರಯಾಣ ಮಾಡುವುವು. ವಲಸೆಯಿಂದ ಪಕ್ಷಿಗಳಿಗೆ ತಮ್ಮದೆ ಆದ ಹವಾಮಾನ, ಆಹಾರದ ಲಭ್ಯತೆ ಮತ್ತು ಇನ್ನೂ ಅನೇಕ ಲಾಭಗಳು ಇರುವುದರಿಂದ ವಲಸೆಯನ್ನು ಮಾಡುತ್ತವೆ. ವಲಸೆಯ ಮುಖಾಂತರ ಒಂದು ಪ್ರಭೇದದಿಂದ ಮತ್ತೊಂದು ಪ್ರಭೇದ ಉದ್ಭವಿಸುವ ಸಂದರ್ಭಗಳು ಉಂಟು. ಉದಾ: ಉತ್ತರ ಗೋಲಾರ್ಧದ ಟರ್ನ್ ಪಕ್ಷಿಯಾದ ಸ್ಟರ್ನ ಪೆರಾಡೆಸಿಯ ಎಂಬ ಪಕ್ಷಿಯು ದಕ್ಷಿಣ ಗೋಲಾರ್ಧಕ್ಕೆ ಬರುತ್ತದೆ. ಈ ಕ್ರಿಯೆಯು ಅನೇಕ ವರ್ಷಗಳಿಂದ ನಡೆದುಬಂದಿದೆ. ಈ ಜಾತಿಯ ಕೆಲವು ಪಕ್ಷಿಗಳು ಮರಳಿ ಹೋದಾಗ ಉತ್ತರ ಗೋಲಾರ್ಧದ ಸ್ಟರ್ನ ವಿಟೇಟ್ ಎಂಬ ಪಕ್ಷಿಯಲ್ಲಿ ರೂಪಾಂತರಗೊಂಡವು. (ಆರ್.ಡಿ.ಕೆ.)

**ಪಕ್ಷಿವಿಜ್ಞಾನ:** ಪಕ್ಷಿಗಳ ವೈಜ್ಞಾನಿಕ ಅಧ್ಯಯನ (ಆರ್ನಿಥಾಲಜಿ). ಪುರಾತನ ಕಾಲದಿಂದಲೂ ಪಕ್ಷಿಗಳು ಮಾನವನ ಗಮನ ಸೆಳೆದ ಪ್ರಾಣಿಗಳು. ಆದರೆ ಪುರಾತನ ಸಾಹಿತ್ಯದಲ್ಲಿರುವ ಪಕ್ಷಿಗಳ ಬಗೆಗಿನ ವಿವರಣೆಯು ವೈಜ್ಞಾನಿಕವಾದದ್ದೇನೂ ಆಗಿರಲಿಲ್ಲ. ಮೂಲತಃ ಅದು ಮಾನವನ ಸಾಮಾನ್ಯ ವೀಕ್ಷಣೆಯಿಂದ ಬಂದ ಜ್ಞಾನ ಮತ್ತು ಜನಪದ ಸಾಹಿತ್ಯದ ಮಾಹಿತಿಯನ್ನವಲಂಬಿಸಿತ್ತು. ಪಕ್ಷಿಗಳ ವಲಸೆಯ ಬಗ್ಗೆ ಹೋಮರ್‌ನ ಗ್ರಂಥ, ಓಲ್ಡ್ ಟೆಸ್ಟಮೆಂಟ್, ಸಂಸ್ಕೃತದ ಹಲವು ಗ್ರಂಥಗಳಲ್ಲಿ ಉಲ್ಲೇಖವಿದೆ. ಅರಿಸ್ಟಾಟಲ್

ವಲಸೆಯ ನಿಖರವಾದ ಕಾಲವನ್ನು ದಾಖಲಿಸಿರುವನಲ್ಲದೆ ವಲಸೆಗೆ ಕಾರಣಗಳನ್ನು ಕೊಟ್ಟ ಮೊದಲ ವ್ಯಕ್ತಿ. ವೈಜ್ಞಾನಿಕ ಅಧ್ಯಯನ ಪ್ರಾರಂಭವಾದದ್ದು ಮಧ್ಯಯುಗದಲ್ಲಿ. ಗಿಡುಗ ಸಾಕಣೆ (ಫಾಲ್ಕನ್ರಿ) ಆರಂಭವಾದದ್ದೇ ಆಗ. 18ನೇ ಶತಮಾನದ ಮಧ್ಯಭಾಗದಿಂದ 19ನೇ ಶತಮಾನದ ಅಂತ್ಯದವರೆಗೆ ಈ ವಿಜ್ಞಾನ ಸಾಕಷ್ಟು ಬೆಳೆಯಿತು. ಹೊಸ ಹೊಸ ಪ್ರಭೇದಗಳ ಆವಿಷ್ಕಾರ ಮತ್ತು ಅವುಗಳ ವರ್ಗೀಕರಣ ನಡೆದದ್ದು ಆಗಲೇ. ವೈಜ್ಞಾನಿಕ ಅನ್ವೇಷಣಾ ಯಾತ್ರೆಗಳು ಪ್ರಾರಂಭವಾದದ್ದೂ ಇದೇ ಸಮಯದಲ್ಲಿ. ಅನ್ವೇಷಣಾ ಯಾತ್ರಿಗಳು ಸಮಶೀತೋಷ್ಣ ವಲಯಗಳಲ್ಲಿನ ಹಲವು ಪಕ್ಷಿ ಪ್ರಭೇದಗಳನ್ನು ಸಂಗ್ರಹಿಸಿ ತಮ್ಮ ಮೂಲಸ್ಥಳಕ್ಕೆ ತಂದು ಸಾಕುವ ಪ್ರಯತ್ನ ಮಾಡಿದ್ದು ಪಕ್ಷಿವಿಜ್ಞಾನದ ಬೆಳವಣಿಗೆಯಲ್ಲಿ ಒಂದು ಪ್ರಮುಖ ಹಂತ. 19ನೇಯ ಶತಮಾನ ಉತ್ತರಾರ್ಧದಲ್ಲಿ ಪಕ್ಷಿಗಳನ್ನು ವರ್ಗೀಕರಿಸುವುದಕ್ಕೊಸ್ಕರ ಅವುಗಳ ಅಂಗರಚನೆಯ ಅಧ್ಯಯನ ನಡಯಿತು. 20ನೇ ಶತಮಾನ ಪ್ರಾರಂಭವಾದ ಸ್ವಲ್ಪ ಸಮಯದೊಳಗೆ ಸಾಕಷ್ಟು ಪಕ್ಷಿಪ್ರಭೇದಗಳ ಅಧ್ಯಯನ ನಡೆದಿದ್ದು ಅವುಗಳ ವೈಶಿಷ್ಟ್ಯತೆ ಮತ್ತು ಇತರ ಮಾಹಿತಿಗಳು ಮಾನವನಿಗಾಗಲೇ ತಿಳಿದಿದ್ದವು. 1960 ಮತ್ತು 1970ರ ದಶಕಗಳಲ್ಲಿ ಪಕ್ಷಿಗಳಲ್ಲಿನ ಕ್ರಿಯಾ ಹೊಂದಾಣಿಕೆಗಳ (ಫಂಕ್ಷನಲ್ ಅಡಾಪ್ಟೇಷನ್) ಅಧ್ಯಯನಕ್ಕೆ ಪ್ರಾಶಸ್ತ್ಯ ದೊರೆಯಿತು.

20ನೆಯ ಶತಮಾನದ ಉತ್ತರಾರ್ಧದಲ್ಲಿ ಪಕ್ಷಿಗಳ ವಲಸೆಯ ಬಗ್ಗೆ ಸಾಕಷ್ಟು ಅಧ್ಯಯನ ನಡೆಯಿತು. ಗುಸ್ತಾವ್ ಕ್ರೇಮರ್ (೧೯೫೦), ಗ್ರಿಫಿನ್ (೧೯೫೫), ಮುಂತಾದವರು ಪ್ರತಿ ವರ್ಷವೂ ಒಂದು ಪಕ್ಷಿಯು ತಾನು ಕ್ರಮಿಸುವ ನಿರ್ದಿಷ್ಟ ದಾರಿಯನ್ನು ಪ್ರತಿವಲಸೆಯಲ್ಲಿ ಕ್ರಮಿಸುವುದಕ್ಕೂ ಪುನಃ ತನ್ನ ಮೂಲ ವಾಸಸ್ಥಾನಕ್ಕೆ ಹಿಂತಿರುಗುವುದಕ್ಕೂ ಕಾರಣಗಳನ್ನು ವಿವರಿಸುವ ಪ್ರಯತ್ನವನ್ನು ಮಾಡಿದರು. ರಾಯಲ್ ಏರ್ ಫೋರ್ಸ್‌ನ ಕರ್ನಲ್ ಮೈನರ್ಟ್ಜ್‌ಹೇಗನ್ ವಿವಿಧ ಪಕ್ಷಿಗಳ ವಲಸೆಯ ವೇಗವನ್ನು ಪ್ರಥಮ ಬಾರಿಗೆ ದಾಖಲಿಸಿದನು.

ಪಕ್ಷಿಗಳ ಬಗ್ಗೆ ತಿಳಿದಿದ್ದ ಇಲ್ಲಿಯವರೆಗಿನ ಬಹುತೇಕ ಮಾಹಿತಿಯೆಲ್ಲಾ ದುರ್ಬೀನಿನ ಸಹಾಯದಿಂದ ಮಾಡಿದ ಸಾಮಾನ್ಯ ವೀಕ್ಷಣೆಯಿಂದಾದದ್ದು. ಆದರೆ ಪಕ್ಷಿವಿಜ್ಞಾನ ಬೆಳೆದಂತೆಲ್ಲಾ ನೂತನ ಉಪಕರಣಗಳ ಬಳಕೆ ಸಾಮಾನ್ಯವಾಯಿತು. ಕಾಲಿಗೆ ಉಂಗುರವನ್ನು (ರಿಂಗಿಂಗ್) ಹಾಕುವ ಪದ್ಧತಿ ೧೯ನೇ ಶತಮಾನದ ಆದಿಯಲ್ಲಿಯೇ ಇತ್ತು. ಬೇರೆ ಬೇರೆ ದೇಶಗಳಲ್ಲಿ ಸಾವಿರಾರು ಪಕ್ಷಿಗಳ ಕಾಲಿಗೆ ಈ ಉಂಗುರಗಳನ್ನು ತೊಡಿಸಿ ಅವುಗಳ ವಲಸೆ ಮತ್ತು ಸರಾಸರಿ ಆಯಸ್ಸಿನ ಬಗ್ಗೆ ಮಾಹಿತಿಯನ್ನು ಪಡೆಯುವುದು ಸುಲಭವಾಯಿತು. ವಲಸೆಯ ಅಧ್ಯಯನದಲ್ಲಿ ರೇಡಿಯೊ ಟ್ರಾನ್ಸ್‌ಮಿಟರ್ (ಟೆಲಿಮೀಟರ್)ನ ಬಳಕೆಯೂ ಚಾಲನೆಗೆ ಬಂತು. ಇದಲ್ಲದೆ ದೇಹದ ಮೇಲೆ ವಿವಿಧ ಬಣ್ಣಗಳ ಗುರುತು ಹಾಕುವುದು, ಪ್ಲಾಸ್ಟಿಕ್ ಟ್ಯಾಗ್ ಕಟ್ಟುವುದು, ಇತ್ಯಾದಿ ತಂತ್ರಗಳ ಬಳಕೆಯೂ ರೂಢಿಯಲ್ಲಿ ಬಂದಿತು.

ವಿಜ್ಞಾನಿಗಳೇ ಅಲ್ಲದೆ ಪಕ್ಷಿಗಳ ಅಧ್ಯಯನದ ಪ್ರವೃತ್ತಿ ಇರುವವರೂ ಪಕ್ಷಿಗಳ ಬಗ್ಗೆ ಗಣನೀಯ ಮಾಹಿತಿಯನ್ನು ನೀಡಿರುವುದು ಪಕ್ಷಿವಿಜ್ಞಾನದ ವೈಶಿಷ್ಟ್ಯ. ವರ್ಗೀಕರಣಕ್ಕಾಗಲಿ ಅಂಗರಚನಾ ವಿಜ್ಞಾನಕ್ಕಾಗಲಿ ವಿಜ್ಞಾನಿಯು ಮಾಹಿತಿಯನ್ನು ನೀಡಿದರೆ ಪಕ್ಷಿಗಳ ವರ್ತನೆ, ಪರಿಸರದೊಂದಿಗೆ ಅವುಗಳ ಪ್ರತಿವರ್ತನೆ, ಪಕ್ಷಿ ವಿತರಣೆ, ವಲಸೆ ಮುಂತಾದವುಗಳ ಬಗ್ಗೆ ಮಾಹಿತಿ ದೊರಕಿದ್ದು ವಿಜ್ಞಾನಿಗಳಲ್ಲದ ಆದರೆ ಪಕ್ಷಿ ಅಧ್ಯಯನದ ಪ್ರವೃತ್ತಿಯಿರುವವರಿಂದ. ಪಕ್ಷಿಗಳ ಅಧ್ಯಯನ ನಡೆಸುವಂತಹ ಇಂತಹವರನ್ನು ಪಕ್ಷಿ ವಿಜ್ಞಾನಿಗಳೆನ್ನುವರು (ಆರ್ನಿಥಾಲಜಿಸ್ಟ್). ಸಲೀಂ ಅಲಿ ಇಂತಹ ಒಬ್ಬ ಪ್ರಖ್ಯಾತ ಭಾರತೀಯ ಪಕ್ಷಿ ವಿಜ್ಞಾನಿ.

(ನೋಡಿ: ಪಕ್ಷಿಗಳು; ಪಕ್ಷಿಗಳ ವಲಸೆ; ಗಿಡುಗ ಸಾಕಣೆ, ಅಲಿ, ಸಲೀಂ)

(ಎಚ್.ಪಿ.ಜಿ)

**ಪಕ್ಷಿ ವೀಕ್ಷಣೆ:** ನಿಸರ್ಗದಲ್ಲಿ ಪಕ್ಷಿಗಳ ಅಂದ–ಚೆಂದ, ಚಲನವಲನ, ಚಟುವಟಿಕೆಗಳನ್ನು ನೋಡಿ ಆನಂದಿಸುವ, ವೈಜ್ಞಾನಿಕವಾಗಿ ದಾಖಲಿಸುವ ಪ್ರವೃತ್ತಿ ಅಥವಾ ಹವ್ಯಾಸ. ನಾಗರೀಕ ಮಾನವರಾದ ನಾವು ಎಷ್ಟೋ ಹವ್ಯಾಸಗಳನ್ನು ಬೆಳೆಸಿ ಕೊಳ್ಳುತ್ತೇವೆ. ಕೆಲವು ಉತ್ತಮ ಹವ್ಯಾಸಗಳು, ಕೆಲವು ಕೆಟ್ಟ ಹವ್ಯಾಸಗಳು. ಅನೇಕರು ಕೆಟ್ಟ ಹವ್ಯಾಸಗಳನ್ನು ಬೆಳೆಸಿಕೊಂಡು ಮಾನಸಿಕ ಹಾಗೂ ದೈಹಿಕ ಆರೋಗ್ಯ ಹಾಳು ಮಾಡಿಕೊಳ್ಳುವರು. ಕೆಲವರು ಉತ್ತಮ ಹವ್ಯಾಸಗಳನ್ನು ಅಳವಡಿಸಿಕೊಂಡು ಮನಸ್ಸು ದೇಹ ಎರಡರ ಆರೋಗ್ಯವನ್ನೂ ಉತ್ತಮವಾಗಿಟ್ಟುಕೊಂಡಿರುವರು. ಆಟೋಟ, ಓದು, ಸಂಗೀತ ಕೇಳುವುದು, ಉತ್ತಮವಾದ ನಾಟಕ ಸಿನಿಮಾ ಮುಂತಾದ ಮನರಂಜನೆ ಮಾಧ್ಯಮಗಳನ್ನು ನೋಡುವುದು ಮುಂತಾದುವನ್ನು ಹವ್ಯಾಸವಾಗಿಟ್ಟು ಕೊಂಡವರಿದ್ದಾರೆ. ಬೆಂಕಿ ಪೆಟ್ಟಿಗೆ, ಅಂಚೆ ಚೀಟಿ, ನಾಣ್ಯ, ಹಳೆಯ ವಸ್ತು, ಪುಸ್ತಕ ಪುರಾತನ ಕಾಲದ ವಸ್ತುಗಳು ಮುಂತಾದುವುಗಳ ಸಂಗ್ರಹ ಮಾಡುವವರಿದ್ದಾರೆ. ಇವೆಲ್ಲವೂ ಉತ್ತಮ ಹವ್ಯಾಸಗಳು. ಇವುಗಳಲ್ಲಿ ಕೆಲವು ಮನೆಯಲ್ಲಿಯೇ ಕುಳಿತು ಅಥವಾ ಹೆಚ್ಚು ದೂರ ಹೋಗದೆ ಮಾಡಬಹುದಾದ ಹವ್ಯಾಸಗಳು. ಆಟೋಟಗಳಂಥ ಕೆಲವು ಹವ್ಯಾಸಗಳು ಮನೆಯ ಹೊರಭಾಗದಲ್ಲಿ ಕೈಗೊಳ್ಳಬಹುದಾದ ಹವ್ಯಾಸಗಳು. ಮನೆಯಿಂದ ಹೊರಹೋಗಿ ನಿಸರ್ಗದ ಮಡಿಲಲ್ಲಿ ಕುಳಿತು ಇನ್ನೊಬ್ಬರಿಗೆ ತೊಂದರೆಯಾಗದಂತೆ ನಿಸರ್ಗ ಸೌಂದರ್ಯವನ್ನು ನೋಡಿ ಆನಂದ ಪಡುವ ಹಲವು ಹವ್ಯಾಸಗಳಿವೆ. ಪಕ್ಷಿ ವೀಕ್ಷಣೆ ಇಂಥ ಹವ್ಯಾಸಗಳಲ್ಲಿ ಒಂದು. ಹಳ್ಳಿ ಅಥವಾ ನಗರಗಳ ಗೌಜು ಗದ್ದಲಗಳಿಂದ ದೂರ ಹೋಗಿ ಸಚ್ಛಂದ ವಾತಾವರಣದಲ್ಲಿ ಕುಳಿತು ವರ್ಣರಂಜಿತ ಪಕ್ಷಿಗಳನ್ನು ನೋಡುತ್ತ, ಅವುಗಳ ಕಲರವವನ್ನು ಕೇಳುತ್ತ ಆನಂದಿಸುವುದು ಒಂದು ಉತ್ತಮ ಹವ್ಯಾಸ.

ಪಕ್ಷಿಗಳು ಅಂದವಾದ ಪ್ರಾಣಿಗಳು. ಅವುಗಳ ಕೂಗು, ಕಲರವ ವೈವಿಧ್ಯಮಯ. ಅವುಗಳ ಶಬ್ದ, ಸಂಗೀತ ಮನೋರಂಜಕ ಹಾಗೂ ಉಲ್ಲಾಸದಾಯಕ. ಅವು ಗೂಡು ಕಟ್ಟುವ ವಿಧಾನ, ಗಂಡುಹೆಣ್ಣುಗಳ ನಡುವೆ ನಡೆಯುವ ಪ್ರಣಯಕ್ರಿಯೆ, ಮೊಟ್ಟೆಯಿಡುವಿಕೆ, ಮರಿಗಳನ್ನು ಸಾಕುವಿಕೆ, ಬೇಟೆಯಾಡುವಿಕೆ ಅಥವಾ ಆಹಾರ ಸಂಗ್ರಹಣೆ ಹೀಗೆ ಪ್ರತಿಯೊಂದು ವಿಷಯವೂ ಕುತೂಹಲಕರವಾದುದು. ನಿಸರ್ಗಕ್ಕೆ ಅವುಗಳ ಕೊಡುಗೆಯೂ ಅಪಾರವಾದುದು. ಆಹಾರಕ್ಕಾಗಿ, ಮನರಂಜನೆಗಾಗಿ, ನಾವು ಹಕ್ಕಿಗಳನ್ನು ಬಳಸಿ ಕೊಳ್ಳುತ್ತೇವೆ. ಹಿಂದೆ ಅಂಚೆ ರವಾನೆಗಾಗಿ ಕೂಡ ಪಾರಿವಾಳಗಳಂಥ ಹಕ್ಕಿಗಳನ್ನು ಬಳಸಿಕೊಳ್ಳುತ್ತಿದ್ದರು ಎಂದು ಇತಿಹಾಸದಲ್ಲಿ ಓದಿದ್ದೇವೆ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಹಕ್ಕಿಗಳು ನಮಗೆ ಅನೇಕ ಬಗೆಯಲ್ಲಿ ಉಪಯೋಗವಾಗುತ್ತವೆ ಎಂದು ಈಗಾಗಲೇ ತಿಳಿದುಕೊಂಡಿದ್ದೇವೆ. ನಿಸರ್ಗದಲ್ಲಿ ರೈತನ ಬೆಳೆಗಳನ್ನು ಹಾಳು ಮಾಡುವ ಕೀಟಗಳ ಅಥವಾ ಇಲಿ ಹೆಗ್ಗಣಗಳಂಥ ಕ್ಷುದ್ರ ಪ್ರಾಣಿಗಳ ಸಂಖ್ಯೆ ಹೆಚ್ಚಿದಾಗ ಅವುಗಳನ್ನು ನಿಯಂತ್ರಣದಲ್ಲಿಟ್ಟು ನಿಸರ್ಗದಲ್ಲಿ ಸಮತೋಲನವನ್ನು ಕಾಪಾಡುವ ಪಕ್ಷಿಗಳಿವೆ. ದನಕರುಗಳ ವನ್ಯಜೀವಿಗಳ ಶರೀರದ ಮೇಲೆ ಪರಾವಲಂಬಿ ಜೀವನ ಸಾಗಿಸುವ ಅನೇಕ ಜೀವಿಗಳನ್ನು ತಿಂದು ಸಹಜೀವನ ನಡೆಸುವ ಪಕ್ಷಿಗಳಿವೆ. ಸತ್ತ ಪ್ರಾಣಿಗಳನ್ನು ತಿಂದು ಪರಿಸರದ ನೈರ್ಮಲ್ಯವನ್ನು ಕಾಪಾಡುವ ಪಕ್ಷಿಗಳಿವೆ. ಪಕ್ಷಿ ವೀಕ್ಷಣೆ ಮಾಡುವಾಗ ಇಂಥ ಎಲ್ಲ ಚಟುವಟಿಕೆಗಳನ್ನು ಗಮನಿಸಬಹುದು.

ಪಕ್ಷಿ ವೀಕ್ಷಣೆ ಅತ್ಯಂತ ರೋಮಾಂಚಕಾರೀ ವೈಜ್ಞಾನಿಕ ಹವ್ಯಾಸ. ಮಾನಸಿಕ ಸಂತೋಷದೊಡನೆ, ಪಕ್ಷಿಗಳ ಚಟುವಟಿಕೆಗಳನ್ನು ವೀಕ್ಷಿಸುವಾಗ ಅನೇಕ ವೈಜ್ಞಾನಿಕ ಮಾಹಿತಿಗಳನ್ನು ಸಂಗ್ರಹಿಸಬಹುದು. ಪಕ್ಷಿಗಳ ಕುರಿತು ಇಂದು ನಮಗೆ ಲಭ್ಯವಿರುವ ಎಷ್ಟೋ ಮಾಹಿತಿಗಳು ಪದವೀಧರ ವಿಜ್ಞಾನಿಗಳು ಅಥವಾ ಸಂಶೋಧಕರಿಂದ ದೊರೆತದ್ದಲ್ಲ. ಹವ್ಯಾಸೀ ಪಕ್ಷಿ ವೀಕ್ಷಕರು ಅನೇಕ ವೈಜ್ಞಾನಿಕ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಪಕ್ಷಿ ವಿಜ್ಞಾನಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಹಳ್ಳಿಗಾಡಿನಲ್ಲಿ ವಾಸಿಸುತ್ತಿರುವ ಅನೇಕ ನಿರಕ್ಷರಕುಕ್ಷಿಗಳೂ ಕೂಡ ಪ್ರಾಣಿ ಪಕ್ಷಿಗಳ ಕುರಿತು ಮಾಹಿತಿ ಹೊಂದಿರುತ್ತಾರೆ. ಪಶುಪಕ್ಷಿಗಳ ಚಲನವಲನಗಳನ್ನು ಗಮನಿಸಿಯೇ ಅನೇಕ ನೈಸರ್ಗಿಕ ಬದಲಾವಣೆಗಳನ್ನು ಗುರುತಿಸುವಷ್ಟು ಪರಿಣಿತಿ ಪಡೆದಿರುತ್ತಾರೆ.

ಪಕ್ಷಿ ವೀಕ್ಷಣೆಗೆಂದು ಕಾಡುಮೇಡುಗಳಲ್ಲಿ ಅಲೆಯುತ್ತಿರುವಾಗ ದೇಹಕ್ಕೆ ವ್ಯಾಯಾಮ ದೊರೆಯುತ್ತದೆ, ಮನಸ್ಸಿಗೆ ಉಲ್ಲಾಸ ದೊರೆಯುತ್ತದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗುತ್ತದೆ. ಹೀಗೆ ವ್ಯಕ್ತಿಯ ಆರೋಗ್ಯದ ದೃಷ್ಟಿಯಿಂದಲೂ ಇದೊಂದು ಉತ್ತಮ ಹವ್ಯಾಸ ಎನಿಸಿಕೊಳ್ಳುತ್ತದೆ.

ಕೆಲವರು ಹವ್ಯಾಸಕ್ಕಾಗಿ ಆರಂಭಿಸಿದ ಅಧ್ಯಯನಗಳಿಂದ ಇಂದು ಪಕ್ಷಿಗಳ ಕುರಿತ ಅಪಾರ ಮಾಹಿತಿ ಲಭ್ಯವಿದೆ. ಹೊಸ ಹೊಸ ವಿಷಯಗಳು ಇನ್ನೂ ಬೆಳಕಿಗೆ ಬರುತ್ತಿವೆ. ಪಕ್ಷಿವಿಜ್ಞಾನ (ಆರ್ನಿಥಾಲಜಿ) ಇಂದು ಬೃಹದ್ಶಾಸ್ತ್ರದಲ್ಲಿ ಬೆಳೆದಿರುವುದಕ್ಕೂ ಕೆಲವು ಹವ್ಯಾಸಿಗಳೇ ಕಾರಣ. ವಿಶ್ವವಿಖ್ಯಾತ ಪಕ್ಷಿ ವಿಜ್ಞಾನಿ ಡಾ. ಸಲಿಂ ಅಲಿಯವರು (1896–1987) ಮುಂಬಯಿಯ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿ ಕ್ಯುರೇಟರ್ ಆಗಿ ಸೇರಿ ಹವ್ಯಾಸಕ್ಕೆಂದು ಅವರು ಪಕ್ಷಿವೀಕ್ಷಣೆ ಆರಂಭಿಸಿದರು. ದೇಶದ ಮೂಲೆ ಮೂಲೆಗಳಲ್ಲಿ ಸಂಚರಿಸಿದರು. ಪಕ್ಷಿಗಳನ್ನು ನೋಡಿ ಅವುಗಳ ಚಲನವಲನ, ಜೀವನಕ್ರಿಯೆ ಮುಂತಾದ ಹಲವು ವಿಷಯಗಳನ್ನು ಕುರಿತ ಮಾಹಿತಿ ಸಂಗ್ರಹಿಸಿದರು. ಸಂಗ್ರಹಿಸಿದ ಮಾಹಿತಿಗಳನ್ನು ಪುಸ್ತಕದ ರೂಪದಲ್ಲಿ ದಾಖಲಿಸಿದರು. ಹವ್ಯಾಸಕ್ಕೆಂದು ಪ್ರಾರಂಭಿಸಿದ ಅಧ್ಯಯನಗಳಿಂದ ಅವರು ಪಕ್ಷಿಗಳ ಜೀವನ ಕುರಿತ ಅನೇಕ ಮಾಹಿತಿಗಳನ್ನು ಕಲೆಹಾಕಿ ವಿಶ್ವ ಮಾನ್ಯತೆ ಪಡೆದರು. ಡಾ. ಸಲೀಂ ಅಲಿಯವರು ಇಂದು ನಮ್ಮೊಡನೆ ಇಲ್ಲ. ಆದರೂ ಸಲೀಂ ಅಲಿ ಅಂದರೆ ಭಾರತದ ಪಕ್ಷಿವಿಜ್ಞಾನ, ಭಾರತದ ಪಕ್ಷಿವಿಜ್ಞಾನ ಎಂದರೆ ಸಲೀಂ ಅಲಿ ಎಂದು ಭಾವಿಸಲಾಗುತ್ತಿದೆ.

ಪ್ರಪಂಚದಾದ್ಯಂತ ಇಂದು 8650 ಪಕ್ಷಿ ಪ್ರಭೇದಗಳಿವೆ ಎಂದು ಅಂದಾಜಿದೆ. ಉಪಪ್ರಭೇದಗಳೂ ಸೇರಿ 33000 ವಿಧಗಳಿವೆ. ಇವುಗಳ ಪೈಕಿ 1200 ಪ್ರಭೇದಗಳು ಭಾರತದಲ್ಲಿಯೇ ಇವೆ. 300 ಪ್ರಭೇದಗಳು ಚಳಿಗಾಲದಲ್ಲಿ ಇಲ್ಲಿಗೆ ವಲಸೆ ಬರುತ್ತವೆ.

ಈ ಪಕ್ಷಿಗಳನ್ನು ನಾವು ಮೂರು ಬಗೆಯಲ್ಲಿ ವಿಂಗಡಿಸಬಹುದು. 1. ನಾವು ದಿನನಿತ್ಯ ಕಾಣುವ ಕಾಗೆ, ಕಾಜಾಣ, ಗಿಳಿ, ಗುಬ್ಬಚ್ಚಿಯಂತಹ ಸದಾ ಒಂದೆಡೆ ನೆಲೆ ನಿಂತ ಹಕ್ಕಿಗಳು, (ರೆಸಿಡೆಂಟ ಪಕ್ಷಿಗಳು), 2. ಸಂತಾನ ವೃದ್ಧಿಗಾಗಿ ನಿರ್ದಿಷ್ಟ ಕಾಲದಲ್ಲಿ ಸಮೀಪದ ಪ್ರದೇಶಗಳಿಗೆ ಆಂತರಿಕವಾಗಿ ವಲಸೆ ಹೋಗುವ ಓರಿಯೋಲ್, ನೊಣಹಿಡುಕ, ಪಿಟ್ಟ ಮುಂತಾದ ಪಕ್ಷಿಗಳು (ಶಾರ್ಟ ಡಿಸ್ಟನ್ಸ್ ಮೈಗ್ರೇಟರಿ ಪಕ್ಷಿಗಳು), ಹಾಗೂ 3. ದೂರ ಪ್ರದೇಶಗಳಿಂದ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಸ್ಥಳಗಳಿಗೆ ವಲಸೆ ಬರುವ ಹೆಜ್ಜಾರ್ಲೆ, ಐಬಿಸ್, ಟರ್ನ್ ಮುಂತಾದ ಪಕ್ಷಿಗಳು (ಲಾಂಗ್ ಡಿಸ್ಟನ್ಸ್ ಮೈಗ್ರೇಟರಿ ಪಕ್ಷಿಗಳು) ಇತ್ಯಾದಿ. ಈ ಎಲ್ಲ ಬಗೆಯ ಪಕ್ಷಿಗಳನ್ನೂ ವೀಕ್ಷಣೆಗೆ ಒಳಪಡಿಸಬಹುದು. ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸಬಹುದು.

ಪಕ್ಷಿವೀಕ್ಷಣೆಯನ್ನು ಯಾರು ಮಾಡಬಹುದು? ಈ ಹವ್ಯಾಸಕ್ಕೆ ಕನಿಷ್ಠ ಅರ್ಹತೆಗಳೇನು? ಹವ್ಯಾಸಿಯ ಗುಣಲಕ್ಷಣಗಳೇನು ಮುಂತಾದ ಪ್ರಶ್ನೆಗಳು ಎದುರಾಗುತ್ತವೆ. ವಾಸ್ತವಿಕವಾಗಿ ಈ ಹವ್ಯಾಸಕ್ಕೆ ವಯೋಮಿತಿಯಿಲ್ಲ, ಲಿಂಗಭೇದವಿಲ್ಲ. ಎಂಟು ಹತ್ತು ವರ್ಷಗಳ ಮಕ್ಕಳಾದಿಯಾಗಿ ಅರವತ್ತು ಎಪ್ಪತ್ತು ವರ್ಷದ ಮುದುಕರೂ ಪಕ್ಷಿವೀಕ್ಷಣೆ ಮಾಡಬಹುದು. ಶಾರೀರಿಕ ಸಾಮರ್ಥ್ಯ ಮಾತ್ರ ಇರಬೇಕು. ಹೆಣ್ಣಾದರೂ ಸರಿ, ಗಂಡಾದರೂ ಸರಿ. ವಿವಿಧ ಪ್ರದೇಶಗಳಿಗೆ ಸಂಚರಿಸಬಲ್ಲ ಶಕ್ತಿಯುಳ್ಳ ಯಾರಾದರೂ ಈ ಹವ್ಯಾಸವನ್ನು ಬೆಳೆಸಿಕೊಳ್ಳಬಹುದು. ಈ ಹವ್ಯಾಸ ಬೆಳೆಸಿಕೊಳ್ಳುವವರಿಗೆ ನಿರ್ದಿಷ್ಟ ಅಥವಾ ಕನಿಷ್ಠ ವಿದ್ಯಾರ್ಹತೆ ಇರಬೇಕೆಂಬ ನಿಯಮವೂ ಇಲ್ಲ. ಕಡಿಮೆ ವಿದ್ಯಾರ್ಹತೆಯಿರುವವರೂ ಅಥವಾ ಯಾವುದೇ ವಿದ್ಯಾರ್ಹತೆಯಿಲ್ಲದವರೂ ಕೂಡ ಪಕ್ಷಿವೀಕ್ಷಣೆ ಮಾಡಬಹುದು. ವಿದ್ಯಾಭ್ಯಾಸವನ್ನೇ ಮಾಡದ ಎಷ್ಟೋ ಮಂದಿ ಹಳ್ಳಿಗಾಡಿನ ಜನ ಪಶು ಪಕ್ಷಿಗಳ ಬಗ್ಗೆ ಸಾಕಷ್ಟು ಮಾಹಿತಿ ಹೊಂದಿರುತ್ತಾರೆ. ಆದರೆ ಇಂಥ ವ್ಯಕ್ತಿಗಳು ದೊರೆತ ಮಾಹಿತಿಯನ್ನು ದಾಖಲಿಸಲಾರರು.

ಪಕ್ಷಿಗಳನ್ನು ಹೇಗೆ ವೀಕ್ಷಣೆ ಮಾಡಬೇಕೆನ್ನುವುದು ವೀಕ್ಷಣೆ ನಡೆಸುವವರ ಆಸಕ್ತಿಯನ್ನವಲಂಬಿಸಿದೆ. ಕೆಲವರಿಗೆ ಹಕ್ಕಿಯ ಇಂಚರ ಖುಷಿ ನೀಡಿದರೆ ಕೆಲವರಿಗೆ ಅವುಗಳ ವರ್ಣರಂಜಿತ ಬಣ್ಣ ಇಷ್ಟವಾಗಬಹುದು. ಛಾಯಾಗ್ರಾಹಕರಾದರೆ ಪಕ್ಷಿಗಳ ವಿವಿಧ ಚಟುವಟಿಕೆಗಳನ್ನು ಚಿತ್ರದಲ್ಲಿ ಸೆರೆಹಿಡಿಯಬಹುದು. ಆಹಾರ ಸಂಗ್ರಹಿಸುವುದು, ಗೂಡುಗಳಿಗೆ ಅಗತ್ಯವಾದ ವಸ್ತುಗಳನ್ನು ಸಂಗ್ರಹಿಸುವುದು, ಗೂಡು ಕಟ್ಟುವುದು, ಗೂಡಿನ ವಿನ್ಯಾಸ, ಮೊಟ್ಟೆಯಿಡುವುದು, ಕಾವು ಕೊಡುವುದು, ಮರಿಗಳು ಮೊಟ್ಟೆಯಿಂದ ಹೊರಬರುವುದು, ಮರಿಗಳಿಗೆ ಆಹಾರ ನೀಡುವುದು, ಮರಿಗಳ ಬೆಳವಣಿಗೆ, ಮುಂತಾದ ಹಲವು ಚಟುವಟಿಕೆಗಳನ್ನು ಪ್ರತ್ಯೇಕವಾಗಿ ಅಥವಾ ಸಮಗ್ರವಾಗಿ ಪರಿಶೀಲಿಸಬಹುದು. ವಿಡಿಯೋ ಗ್ರಾಹಕರಾದರಂತೂ ತೀರಿತು. ಅವರ ವೀಕ್ಷಣೆಗೆ, ಛಾಯಾ ಚಿತ್ರಣಕ್ಕೆ ಕೊನೆಯೇ ಇಲ್ಲ. ಇವೆಲ್ಲ ಚಟುವಟಿಕೆಗಳನ್ನು ನಿರಂತರವಾಗಿ ಚಿತ್ರಿಸಬಹುದು. ಇನ್ನು ಕೆಲವು ಪರಿಚಿತ ಅಥವಾ ಅಪರಿಚಿತ ಪಕ್ಷಿಗಳ ನಡವಳಿಕೆಗಳನ್ನು ವೀಕ್ಷಿಸಿ ದಾಖಲಿಸಿ ಈ ಮಾಹಿತಿಗಳನ್ನು ಪಕ್ಷಿವಿಜ್ಞಾನದ ವೈಜ್ಞಾನಿಕ ನಿಯತಕಾಲಿಕೆಗಳಿಗೆ ಮಾಹಿತಿ ನೀಡಬಹುದು. ಇಂತಹ ಮಾಹಿತಿಗಳೇ ಮಹತ್ವದ ಸಂಶೋಧನೆಗಳೆನಿಸಿಕೊಳ್ಳಬಹುದು. ಹೊಸ ಸಿದ್ಧಾಂತಗಳ ಪ್ರತಿಪಾದನೆಗೆ ಅವಕಾಶ ಮಾಡಿ ಕೊಡಬಹುದು. ಹೀಗೆ ಪಕ್ಷಿ ವೀಕ್ಷಣಾ ವಿಧಾನದಲ್ಲೂ ವೈವಿಧ್ಯತೆಯಿದೆ.

ಪಕ್ಷಿ ವೀಕ್ಷಣೆಗೆ ಅಗತ್ಯವಾದ ವಸ್ತುಗಳು: ಪಕ್ಷಿಗಳ ಬಗ್ಗೆ ವಿಶೇಷ ಅಧ್ಯಯನ ನಡೆಸುವ ಸಲುವಾಗಿ ವೀಕ್ಷಣೆ ಮಾಡುವವರಿಗೆ ಕೆಲವು ವಸ್ತುಗಳು ಅಗತ್ಯ. ಅವು ಕೆಳಗಿನಂತಿವೆ.

1. ಆಕರ ಗ್ರಂಥಗಳು: ಪಕ್ಷಿ ವೀಕ್ಷಣೆಗೆ ಅವುಗಳನ್ನು ಗುರುತಿಸಲು ಪಕ್ಷಿಗಳ ವರ್ಣ ಚಿತ್ರಗಳಿರುವ ಒಂದೆರಡು ಪುಸ್ತಕಗಳಿರಬೇಕು. ಕ್ಷೇತ್ರ ಮಾರ್ಗದರ್ಶಿ (ಫೀಲ್ಡ್ ಗೈಡ್) ಗ್ರಂಥಗಳಿದ್ದರೆ ಉತ್ತಮ. ಆಯಾ ಭೂಪ್ರದೇಶದ ನಕ್ಷೆಗಳ ಜೊತೆಗೆ ಅಲ್ಲಿನ ಪಕ್ಷಿಗಳ ಬಗ್ಗೆ ಪೂರ್ಣ ವಿವರಗಳಿರುವ ಪುಸ್ತಕಗಳು ಅಗತ್ಯ. ಡಾ. ಸಲೀಂ ಅಲಿಯವರ 'ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್' ಅಥವಾ ಡಾ. ಸಲೀಂ ಅಲಿ ಹಾಗೂ ಡಾ. ಎಸ್.ಡಿ ರಿಪ್ಲೀ ಅವರು ಪ್ರಕಟಿಸಿದ ಹತ್ತು ಸಂಪುಟಗಳ 'ಹ್ಯಾಂಡ್ ಬುಕ್ ಆಫ್ ದಿ ಬರ್ಡ್ಸ್ ಆಫ್ ಇಂಡಿಯಾ ಅಂಡ್ ಪಾಕಿಸ್ಥಾನ್' ಮುಖ್ಯವಾದುವು. 'ಎನ್‌ಸೈಕ್ಲೋಪೀಡಿಯ ಆಫ್ ಎನಿಮಲ್ಸ್' ಗಳಂಥ ತುಂಬ ದಪ್ಪವಿರುವ ಪುಸ್ತಕಗಳನ್ನು ತೆಗೆದು ಕೊಂಡೊಯ್ಯುವುದು ಕಷ್ಟಕರ. ಅದರಿಂದ ಭಾರವಿಲ್ಲದ ತೆಳುವಾದ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

2. ದುರ್ಬೀನು ಅಥವಾ ಬೈನಾಕುಲರ್: ದುರ್ಬೀನು ಇಲ್ಲದೆ ಪಕ್ಷಿಗಳನ್ನು ವೀಕ್ಷಿಸುವುದು ಅಸಾಧ್ಯ. ಮಕ್ಕಳಾಟಿಕೆಯ ದುರ್ಬೀನುಗಳು ಇದಕ್ಕೆ ಪ್ರಯೋಜನವಿಲ್ಲ. 8 ಘಿ 30 ಸಾಮರ್ಥ್ಯದ ದುರ್ಬೀನಿದ್ದರೆ ಉಪಯುಕ್ತ. ದುರ್ಬೀನಿನಿಂದ ಅತಿ ದೂರದಲ್ಲಿರುವ ಚಿಕ್ಕ ಹಕ್ಕಿಗಳನ್ನೂ ಸೂಕ್ಷ್ಮವಾಗಿ ಅವಲೋಕಿಸಬಹುದು. ಸ್ವಲ್ಪ ದುಬಾರಿ ಎನಿಸಿದರೂ ಇದು ಅಗತ್ಯ. ದುರ್ಬೀನಿನ ದರದಲ್ಲಿಯೂ ಸಾಕಷ್ಟು ವ್ಯತ್ಯಾಸಗಳಿವೆ. ಮೂರು ನೂರು ರೂಪಾಯಿಗಳಿಂದ ಮೂವತ್ತು ನಲವತ್ತು ಸಾವಿರ ಬೆಲೆಬಾಳುವ ದುರ್ಬೀನುಗಳಿವೆ. ಸುಮಾರು ಮೂರು ಸಾವಿರದಿಂದ ಐದು ಸಾವಿರ ವೆಚ್ಚ ಮಾಡಿದರೆ ಉತ್ತಮವಾದ ದುರ್ಬೀನು ದೊರೆಯುತ್ತದೆ.

3. ಪೆನ್ಸಿಲ್ ಮತ್ತು ಪುಸ್ತಕ: ಪಕ್ಷಿಯನ್ನು ಕಂಡಾಗ ಅದರ ಬಗ್ಗೆ ಸಾಧ್ಯವಾದಷ್ಟು ಸೂಕ್ಷ್ಮ ಮಾಹಿತಿಗಳನ್ನು ಗಮನಿಸಿ ಪುಸ್ತಕದಲ್ಲಿ ದಾಖಲಿಸ ಬೇಕಾಗುತ್ತದೆ. ಈ ದಾಖಲೆಗಳು ಮಾನಸಿಕ ತೃಪ್ತಿಗಿಂತ ವೈಜ್ಞಾನಿಕ ತಿಳುವಳಿಕೆ ನೀಡಬಲ್ಲುವು. ಅದರಿಂದ ವೀಕ್ಷಣೆಗೆ ಹೊರಡುವಾಗ ಒಂದು ಚಿಕ್ಕ ಡೈರಿ ಅಥವಾ ನೋಟ್‌ಬುಕ್ ಹಾಗೂ ಪೆನ್ಸಿಲ್ ಅಥವಾ ಬಾಲ್ ಪಾಯಿಂಟ್ ಪೆನ್ ಒಯ್ಯುವುದು ಅಗತ್ಯ. ಪೆನ್ಸಿಲ್ ಬದಲಿಗೆ ಪೆನ್ನು ಕೊಂಡೊಯ್ಯಬಹುದಾದರೂ, ಮಳೆಗಾಲವಾದರೆ ನೀರಿನಿಂದ ಕಾಗದ ತೋಯ್ದು ಪೆನ್ನಿನ ಮಸಿ ಅಳಿಸಿ ದಾಖಲೆಗಳು ನಾಶವಾಗಬಹುದು.

4. ಕ್ಯಾಮರಾ: ಪಕ್ಷಿಯ ಅಪರೂಪದ ವರ್ತನೆಯನ್ನು ಅಥವಾ ಪಕ್ಷಿಯನ್ನು ಪುಸ್ತಕದಲ್ಲಿ ದಾಖಲಿಸಿದರೆ ವೀಕ್ಷಕನೊಬ್ಬ ಮಾತ್ರ ಸಂತೋಷಿಸಬಹುದು. ಕ್ಯಾಮರಾದ ಮೂಲಕ ಛಾಯಾಚಿತ್ರದಲ್ಲಿ ದಾಖಲಿಸಿದರೆ ಇತರರಿಗೂ ತೋರಿಸಿ ಅವರನ್ನೂ ಸಂತೋಷ ಪಡಿಸಬಹುದು. ನಾವೂ ಸಂತೋಷ ಪಡಬಹುದು. ಪಕ್ಷಿ ಪ್ರೇಮಿಗಳೆಲ್ಲರೂ ಕ್ಯಾಮರಾ ಇಟ್ಟುಕೊಳ್ಳುವುದು ಕಷ್ಟ. ಆದರೂ ಸಾಧಾರಣ ಎಸ್.ಎಲ್.ಆರ್. ಕ್ಯಾಮರಾ ಹಾಗೂ 200 ಎಂ.ಎಂ ದೂರಗ್ರಾಹಿ ಮಸೂರ (ಜೂಮ್ ಲೆನ್ಸ್) ದಿಂದ ದೂರದಲ್ಲಿರುವ ಹಕ್ಕಿಯ ಛಾಯಾಚಿತ್ರವನ್ನು ಸುಲಭವಾಗಿ ತೆಗೆಯಬಹುದು. ಹತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡಿದರೆ ಇಷ್ಟು ಸಾಮರ್ಥ್ಯದ ಕ್ಯಾಮರಾ ದೊರೆಯುತ್ತದೆ. ಛಾಯಾಚಿತ್ರ ಗ್ರಹಣದಲ್ಲಿ ಸ್ವಲ್ಪ ಅನುಭವವಿರಬೇಕು. ಇತ್ತೀಚೆಗೆ ಡಿಜಿಟಲ್ ಕ್ಯಾಮರಾಗಳೂ ಬಂದಿವೆ. ಡಿಜಿಟಲ್ ಕ್ಯಾಮರಾಗಳಿಂದ, ಛಾಯಾಗ್ರಹಣದ ಬಗ್ಗೆ ಪೂರ್ವಾನುಭವವಿಲ್ಲದವರು ಕೂಡ ಸುಲಭವಾಗಿ ಚಿತ್ರ ಸೆರೆಹಿಡಿಯಬಹುದು. 4x–6x ದೂರಗ್ರಾಹೀ ಶಕ್ತಿಯುಳ್ಳ 4.0 ಮೆಗಾಪಿಕ್ಸೆಲ್ ಕ್ಯಾಮರಾಕ್ಕೆ ಎಂಟು ಸಾವಿರ ರೂಗಳಾಗುತ್ತವೆ. ದಿನೇ ದಿನೇ ಇವುಗಳ ಬೆಲೆಯೂ ಕಡಿಮೆಯಾಗುತ್ತಿದೆ. ಇನ್ನೂ ಶಕ್ತಿಶಾಲೀ ಕ್ಯಾಮರಾಗಳೂ ಇವೆ. ಡಿಜಿಟಲ್ ಕ್ಯಾಮರಾಗಳಿಗೆ ಫಿಲಂನ ಅಗತ್ಯವಿಲ್ಲವಾದ್ದರಿಂದ ಚಿತ್ರ ತೆಗೆದ ಅನಂತರದ ಖರ್ಚುಗಳೂ ಕಡಿಮೆ.

5. ಮರಸು: ಮಾನವನ ಉಪಸ್ಥಿತಿಯಲ್ಲಿ ಅನೇಕ ಪಕ್ಷಿಗಳು ಗೂಡು ಕಟ್ಟುವಿಕೆ, ಆಹಾರ ಕ್ರಮ, ಪ್ರಣಯ ಕ್ರೀಡೆ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುವುದಿಲ್ಲ. ಅದರಿಂದ ಮರೆಯಲ್ಲಿ ಕುಳಿತು ಪಕ್ಷಿ ವೀಕ್ಷಣೆ ಮಾಡುವುದು ಒಳಿತು. ಕೃತಕವಾಗಿ ಕೂಡ ಮರೆಯನ್ನು ತಯಾರಿಸಿಕೊಳ್ಳಬಹುದು. ಪರಿಸರದ ಬಣ್ಣವನ್ನು ಹೋಲುವ ಬಟ್ಟೆ ಹಾಗೂ ಅಲ್ಯೂಮಿನಿಯಂ ಫ್ರೇಂಗಳಿಂದ ಇಂತಹ ಮರೆಗಳನ್ನು ನಿರ್ಮಿಸಬಹುದು. ಫ್ರೇಂಗಳನ್ನು ಕೂಡಿಸಿ ಪುಟ್ಟ ಮನೆಯಂತೆ ಗುಡಾರ ರಚಿಸಿ ಅದರ ಮೇಲೆ ಬಟ್ಟೆ ಹೊದಿಸಿದರೆ ಮರಸು ತಯಾರಾದಂತೆ. ನಡುವೆ ವೀಕ್ಷಣೆಗೆ ಅಗತ್ಯವಾದ ಕಿಂಡಿಗಳನ್ನು ನಿರ್ಮಿಸಿ ಕೊಂಡಿರಬೇಕು. ಇಂಥ ಸರಳ ಮರಸುಗಳನ್ನು ಸುಲಭವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಬಹುದು.

6. ಪಕ್ಷಿಗಳ ಕೂಗು ವೈವಿಧ್ಯಮಯವಾಗಿರುತ್ತದೆ. ವಿವಿಧ ಪ್ರಭೇದಗಳ ಕೂಗು ಭಿನ್ನವಾಗಿರುತ್ತವೆ. ಸಾಮಾನ್ಯ ಕೂಗು ಅಥವಾ ಇಂಚರ, ಪ್ರಣಯ ಕಾಲದ ಪ್ರಣಯ ಸಂಗೀತಗಳಲ್ಲಿ ವ್ಯತ್ಯಾಸವಿರುತ್ತದೆ. ಇಂತಹ ಕೂಗು, ಇಂಚರಗಳನ್ನು ಅಕ್ಷರಗಳ ರೂಪದಲ್ಲಿ ಚಿಕ್, ಚಿಕ್ ಎಂದೋ ಚಿಂವ್, ಚಿಂವ್ ಎಂದೋ ದಾಖಲಿಸಬಹುದು. ಇದರೊಂದಿಗೆ ಸಾಧಾರಣ ಟೇಪ್ ರೆಕಾರ್ಡರ್ ಇದ್ದರೆ ಅದರಲ್ಲಿಯೂ ದಾಖಲಿಸಿಕೊಳ್ಳಬಹುದು. ಕೈಯಲ್ಲಿಯೇ ಹಿಡಿದು ತೆಗೆದುಕೊಂಡು ಹೋಗಬಹುದಾದ ಕಡಿಮೆ ವೆಚ್ಚದ ಟೇಪ್ ರೆಕಾರ್ಡರ್‌ಗಳು ಈಗ ಲಭ್ಯವಿವೆ. ಈ ದಾಖಲೆಗಳು ಪಕ್ಷಿಗಳ ಸಂಪರ್ಕ ವಿಧಾನದ ಬಗ್ಗೆ ಉಪಯುಕ್ತ ಮಾಹಿತಿ ನೀಡಬಹುದು.

8. ಪಕ್ಷಿ ವೀಕ್ಷಣೆಗೆ ಚಿಕ್ಕ ವಿಡಿಯೋ ಕ್ಯಾಮರಾ ಇದ್ದರೆ ಇನ್ನೂ ಉತ್ತಮ. ಆದರೆ ಇದು ತುಂಬಾ ಅಗತ್ಯದ ವಸ್ತುವಲ್ಲ. ಇಲ್ಲವಾದರೂ ವೀಕ್ಷಣೆಗೆ ತೊಂದರೆಯಾಗಲಾರದು. ವಿಡಿಯೊ ಕ್ಯಾಮರಾ ಇದ್ದರೆ ಚಟುವಟಿಕೆಗಳನ್ನು ನಿರಂತರವಾಗಿ ಚಿತ್ರೀಕರಿಸಬಹುದು ಅಷ್ಟೆ. ವಿಡಿಯೊ ಕ್ಯಾಮರಾ ಬೆಲೆ ಕೂಡಾ ಅನೇಕರಿಗೆ ಹೊರೆಯಾಗುವ ಸಂಭವವಿದೆ. ಸಾಧಾರಣ ವಿಡಿಯೋ ಕ್ಯಾಮರಾ ಕನಿಷ್ಠ ಹದಿನೈದು ಸಾವಿರ ಬೆಲೆಬಾಳುತ್ತದೆ. ಡಿಜಿಟಲ್ ವಿಡಿಯೋ ಕ್ಯಾಮರಾಗಳೂ ಇಂದು ಲಭ್ಯವಿವೆ. ಹದಿನೈದು ಸಾವಿರ ರೂಪಾಯಿಗಳಿಂದ ಒಂದೂವರೆ ಲಕ್ಷ ರೂಪಾಯಿಗಳ ವಿಡಿಯೋ ಕ್ಯಾಮರಾಗಳೂ ಇವೆ.

ಪಕ್ಷಿ ವೀಕ್ಷಣೆಗೆ ಅಗತ್ಯವಾದ ಮತ್ತೊಂದು ಮುಖ್ಯ ಗುಣ ತಾಳ್ಮೆ, ಶಾಂತಚಿತ್ತತೆ. ಪಕ್ಷಿ ಕಣ್ಣಿಗೆ ಬಿದ್ದೊಡನೆ ಭಾವುಕರಾಗದೆ, ಗಲಿಬಿಲಿಗೊಳ್ಳದೆ, ನಿಧಾನವಾಗಿ, ನಿಶ್ಶಬ್ದದಿಂದ

ದುರ್ಬೀನಿನಲ್ಲಿ ವೀಕ್ಷಿಸಿ ಪುಸ್ತಕದಲ್ಲಿ ಮಾಹಿತಿಯನ್ನು ಸಂಗ್ರಹಿಸಬೇಕು. ಒಮ್ಮೊಮ್ಮೆ ದೀರ್ಘಕಾಲದ ವರೆಗೆ ಕಾದರೂ ಪಕ್ಷಿಗಳ ಸುಳಿವಿಲ್ಲದೆ ಹೋಗಬಹುದು. ಅದರಿಂದ ಬೇಸರಿಸಬಾರದು. ಬೇಸರದಿಂದ ಮನೆಗೆ ಹಿಂತಿರುಗುವ ವೇಳೆಯಲ್ಲಿ ಅತ್ಯಾಕರ್ಷಕ ಪಕ್ಷಿ ದೊರಕಬಹುದು. ಕೆಲವೊಮ್ಮೆ ಕ್ಷಣಮಾತ್ರದಲ್ಲಿ ಪಕ್ಷಿಗಳು ಗೋಚರಿಸಬಹುದು. ಪಕ್ಷಿ ಕಣ್ಣಿಗೆ ಬೀಳದಿದ್ದರೂ ಕಾಯುವಾಗ ತಾಳ್ಮೆಯಿರಬೇಕು. ಪಕ್ಷಿ ವೀಕ್ಷಣೆಗೆ ಸಿಕ್ಕಿದರೆ ಹಿಗ್ಗದೆ ಸಿಗದಿದ್ದರೆ ಕುಗ್ಗದೆ, ಹವ್ಯಾಸವನ್ನು ಮುಂದುವರಿಸುವುದು ಪಕ್ಷಿವೀಕ್ಷಕರ ಮುಖ್ಯ ಗುಣ.

ಪಕ್ಷಿ ವೀಕ್ಷಣೆಯಲ್ಲಿ ಏನನ್ನು ಗಮನಿಸಬೇಕು ಎಂಬುದು ವೀಕ್ಷಕನಿಗೆ ತಿಳಿದಿರಬೇಕು. ಪಕ್ಷಿ ವೀಕ್ಷಣೆಯಲ್ಲಿ ಮೊದಲು ಗಮನಿಸಬೇಕಾದ್ದು, ಪ್ರಭೇದ. ಬಣ್ಣ, ಶರೀರ ರಚನೆ, ಗಾತ್ರ, ಹಾರಾಟದ ರೀತಿ, ನಡೆದಾಡುವ ರೀತಿ, ಕೂಗು ಅಥವಾ ಇಂಚರ, ವಾಸಸ್ಥಳ, ಕೆಲವು ವೇಳೆ ಗೂಡಿನ ಸ್ವರೂಪಗಳ ಮೂಲಕ ಪಕ್ಷಿಯ ಪ್ರಭೇದವನ್ನು ಗುರುತಿಸಬಹುದು. ವೀಕ್ಷಣೆ ಪ್ರಾರಂಭಿಸುವ ಮೊದಲು, ಪಕ್ಷಿಯ ಶರೀರದ ವಿವಿಧ ಭಾಗಗಳ ಹೆಸರುಗಳನ್ನು ತಿಳಿದಿರಬೇಕು. ದುರ್ಬೀನಿನ ಮೂಲಕ ವಿವಿಧ ಭಾಗಗಳನ್ನು ಅವಲೋಕಿಸಿ ಪಕ್ಷಿಗಳ ಗಾತ್ರ, ಮೈಮಾಟ, ಬಣ್ಣ ಮುಂತಾದ ಅಂಶಗಳನ್ನು ಕೂಲಂಕಷವಾಗಿ ನೋಡಿ ದಾಖಲು ಮಾಡಿಕೊಳ್ಳಬೇಕು. ಕ್ಷೇತ್ರ ಮಾರ್ಗದರ್ಶಿ ಅಥವಾ ಇನ್ನಾವುದೇ ಮುಖ್ಯ ಆಕರ ಗ್ರಂಥವನ್ನು ತೆರೆದು ಚಿತ್ರಗಳೊಡನೆ ತಾಳೆ ಹಾಕಿ ಪಕ್ಷಿ ಪ್ರಭೇದವನ್ನು ಗುರುತಿಸಬೇಕು.

ಬೆಳಗಿನ ಅಥವಾ ಸಂಜೆಯ ವೇಳೆ ಪಕ್ಷಿಗಳ ಚಟುವಟಿಕೆ ಹೆಚ್ಚಾಗಿರುವುದರಿಂದ, ಮುಂಜಾನೆ ಆರರಿಂದ ಹತ್ತು ಘಂಟೆಯ ಮೊದಲು ಅಥವಾ ಸಂಜೆ ನಾಲ್ಕರಿಂದ ಏಳು ಘಂಟೆಯ ವರೆಗೆ ಪಕ್ಷಿ ವೀಕ್ಷಣೆಗೆ ಸೂಕ್ತ ಸಮಯ. ನಿಶಾಚರಿ ಪಕ್ಷಿಗಳನ್ನು ರಾತ್ರಿಯಲ್ಲಿಯೇ ವೀಕ್ಷಿಸಬೇಕು. ಪಕ್ಷಿಗಳು ತಮ್ಮ ಜೀವನಕ್ಕೆ ಸೂಕ್ತವಾದ ವಾಸಸ್ಥಳಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವುದರಿಂದ ಕೆಲಪ್ರದೇಶಗಳಲ್ಲಿ ಕೆಲವೇ ಜಾತಿಯ ಪಕ್ಷಿಗಳನ್ನು ಕಾಣಲು ಸಾಧ್ಯ. ಕೆಲವು ಜಾತಿಯ ಪಕ್ಷಿಗಳು ಮನೆಯ ಹತ್ತಿರವೇ ವಾಸಿಸಿದರೆ ಇನ್ನು ಕೆಲವು ಗುಡ್ಡ ಬೆಟ್ಟಗಳಲ್ಲಿ, ಕಾಡುಮೇಡುಗಳಲ್ಲಿ, ಜೌಗು ಪ್ರದೇಶಗಳಲ್ಲಿ, ಬಯಲಿನಲ್ಲಿ, ಕೆರೆ-ಸರೋವರಗಳ ತೀರದಲ್ಲಿ ವಾಸಿಸುತ್ತವೆ. ಅದರಿಂದ ಪಕ್ಷಿ ವೀಕ್ಷಣೆಯನ್ನು ಹೊಸದಾಗಿ ಆರಂಭಿಸುವವರು ಮೊದಲು ಮನೆಯ ಅಕ್ಕಪಕ್ಕದಲ್ಲಿರುವ ಪಕ್ಷಿಗಳ ಬಗ್ಗೆ ತಿಳಿದುಕೊಳ್ಳಬೇಕು. ಅನಂತರ ದೂರ ಪ್ರದೇಶಗಳಿಗೆ ವೀಕ್ಷಣೆಗೆ ಹೋಗಬಹುದು. ವಲಸೆಗಾರ ಪಕ್ಷಿಗಳ ವೀಕ್ಷಣೆಗೆ, ಅವು ವಲಸೆ ಬರುವ ಸಾಧ್ಯತೆಗಳಿರುವ ಪ್ರದೇಶಗಳಲ್ಲಿ ಕುಳಿತು ವೀಕ್ಷಿಸಬೇಕು.

ಪಕ್ಷಿ ವೀಕ್ಷಣೆ ಪ್ರಾರಂಭಿಸುವಾಗ ದಾಖಲೆಗೆಂದು ಮೀಸಲಾದ ಪುಸ್ತಕದಲ್ಲಿ ಸ್ಥಳ (ಊರಿನ ಹೆಸರು), ದಿನಾಂಕ, ಸಮಯ ಮುಂತಾದುವುಗಳನ್ನು ದಾಖಲಿಸಿಕೊಳ್ಳಬೇಕು. ಪಕ್ಷಿ ವೀಕ್ಷಣಾ ಸಮಯದಲ್ಲಿ ಹವಾಮಾನ ಸ್ಥಿತಿಯನ್ನು ಸಂಕ್ಷಿಪ್ತವಾಗಿ ದಾಖಲಿಸಬೇಕು. ನಂತರ ಹವಾಮಾನಕ್ಕೆ ತಕ್ಕಂತೆ ಪಕ್ಷಿಗಳಲ್ಲಾಗುವ ನಡವಳಿಕೆಗಳ ವ್ಯತ್ಯಾಸ ಹಾಗೂ ಸಂಬಂಧಗಳನ್ನು ತಿಳಿದುಕೊಳ್ಳಲು ಉಪಯುಕ್ತವಾಗುತ್ತವೆ.

ಪಕ್ಷಿಯನ್ನು ಕಂಡಾಗ, ಅದು ಇರುವ ಸ್ಥಳದ ಬಗ್ಗೆ, ಆವಾಸ, ಪರಿಸರದ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಬೇಕು. ಪಕ್ಷಿಯ ವಾಸಸ್ಥಳ ಬಯಲೋ, ಅರಣ್ಯವೋ, ತಪ್ಪಲೋ, ಕುರುಚಲು ಕಾಡೋ, ಜೌಗು ಪ್ರದೇಶವೋ ಎಂಬುದನ್ನು, ಸುತ್ತಮುತ್ತಲಿನ ಪರಿಸರದಲ್ಲಿರುವ ಗಿಡಮರಗಳ ಪಟ್ಟಿಯನ್ನೂ ಮಾಡಿಕೊಳ್ಳಬೇಕು. ಸಾಧ್ಯವಿದ್ದರೆ ಪಕ್ಷಿಗಳ ವಿವಿಧ ಭಂಗಿಗಳನ್ನು ಚಿತ್ರಿಸಿಕೊಳ್ಳಬೇಕು. ವಿವಿಧ ಕೋನಗಳಿಂದ ಇಂಥ ಭಂಗಿಗಳನ್ನು ಚಿತ್ರಿಸಿಕೊಳ್ಳುವುದು ಉತ್ತಮ.

ಪಕ್ಷಿಗಳ ಚಲನೆ, ಚಟುವಟಿಕೆಗಳ ಬಗ್ಗೆ ದಾಖಲಿಸಿಕೊಳ್ಳಬೇಕು. ಚಟುವಟಿಕೆಗಳನ್ನು ದಾಖಲಿಸುವಾಗ ಒಂದೊಂದು ಹಂತವನ್ನೂ ಸೂಕ್ಷ್ಮವಾಗಿ ಗಮನಿಸಬೇಕು. ಉದಾಹರಣೆಗೆ ಹಾರಾಟದ ಬಗ್ಗೆ ವಿವರಣೆ ಮಾಡುವಾಗ ಹಾರಾಟದ ಆರಂಭ, ಮೇಲೆ ಏರುವ ವಿಧಾನ, ಮಧ್ಯಮ ಅವಧಿ, ಗಾಳಿವಿಹಾರ, ಇಳಿಯುವಿಕೆ ಮುಂತಾದ ಎಲ್ಲ ವಿವರಗಳನ್ನು ಗುರುತಿಸಿಕೊಳ್ಳಬೇಕು. ಗೂಡು ನಿರ್ಮಾಣ, ಆಹಾರ ಸಂಗ್ರಹಣೆ, ಗಂಡು ಹೆಣ್ಣುಗಳ ನಡುವಿನ ವರ್ತನೆಗಳು, ವ್ಯವಹಾರಗಳು, ಮೊಟ್ಟೆಗಳಿದ್ದರೆ ಅವುಗಳ ಗಾತ್ರ, ಬಣ್ಣ, ಕಾವುಕೊಡುವಿಕೆ, ಮರಿಗಳ ರಕ್ಷಣೆ, ಮರಿಗಳಿಗೆ ಗುಟುಕು ನೀಡುವ ವಿಧಾನ, ಮರಿಗಳಿಗೆ ಹಾರಾಟವನ್ನು ಕಲಿಸುವ ರೀತಿ ಹೀಗೆ ಅನೇಕ ಮಾಹಿತಿಗಳನ್ನು ಕಲೆಹಾಕಬಹುದು. ಜೊತೆಗೆ ಆ ಪರಿಸರದಲ್ಲಿ ವಾಸಿಸುವ ಇನ್ನಿತರ ಜೀವಿಗಳೊಂದಿಗಿನ ಸಂಬಂಧಗಳನ್ನೂ ಗುರುತು ಹಾಕಿಕೊಳ್ಳಬಹುದು. ಈ ಪಕ್ಷಿಗಳಲ್ಲಿ ಯಾವುದಾದರೂ ವಿಚಿತ್ರ ನಡವಳಿಕೆಗಳು ಕಂಡರೆ ಅವುಗಳನ್ನೂ ದಾಖಲಿಸಿ ಕೊಳ್ಳಬಹುದು.

ಪಕ್ಷಿ ವೀಕ್ಷಣೆಯಲ್ಲಿ ತುಂಬಾ ಖುಷಿ ಕೊಡುವ ಭಾಗ ಅವುಗಳ ಇಂಚರವನ್ನು ಆಲಿಸುವುದು. ಪಕ್ಷಿಗಳ ಕೂಗು ಎಷ್ಟು ವೈವಿಧ್ಯಮಯ ಎಂದು ಈಗಾಗಲೇ ಅರಿತಿದ್ದೇವೆ. ಅವುಗಳ ವಿಶಿಷ್ಟ ಕೂಗಿನಿಂದಲೇ ಕೆಲವು ಪ್ರಭೇದಗಳನ್ನು ಗುರುತಿಸಬಹುದು. ಸ್ವಲ್ಪ ಪ್ರಯತ್ನಿಸಿದರೆ ಅವುಗಳ ಕೂಗನ್ನು ಅನುಕರಿಸುವುದೂ ಸಾಧ್ಯ. ಈ ಕೂಗುಗಳನ್ನು ಅಕ್ಷರಗಳ ಮಾದರಿಯಲ್ಲಿಯೂ ದಾಖಲಿಸಬಹುದು. ಉದಾಹರಣೆಗೆ ಕೆಂಭೂತ ಗೂ ಗೂ ಎಂದರೆ ಕೋಗಿಲೆಯು ಕುಹೂ, ಕುಹೂ ಎನ್ನುವುದು. ಕಾಗೆಯ ಕೂಗನ್ನು ಕಾ, ಕಾ ಎಂದು ಸುಲಭದಲ್ಲಿ ದಾಖಲಿಸಬಹುದು. ಟಿಟ್ಟಿಭದ ಕೂಗು 'ಡಿಡ್ ಯೂ ಡೂ ಇಟ್' ಎಂದಂತೆ ಕೇಳಿಸುವುದು. ಟೇಪ್ ರೆಕಾರ್ಡರ್ ನಲ್ಲಿ ಇವುಗಳನ್ನು ದಾಖಲಿಸಿದರೆ ಅದೊಂದು ಮಹತ್ವದ ದಾಖಲೆಯಾಗಬಹುದು.

ಪಕ್ಷಿಯ ಅಪರಿಚಿತ ನಡವಳಿಕೆಯನ್ನು ಕಂಡರೆ ಅದನ್ನು ಜಾಗರೂಕತೆಯಿಂದ ದಾಖಲಿಸಿಕೊಳ್ಳಬೇಕು. ದಾಖಲಿಸಿಕೊಂಡ ಮಾಹಿತಿಯನ್ನು ಬರೆದು ಪಕ್ಷಿ ಶಾಸ್ತ್ರದ ಅಥವಾ ಪ್ರಾಣಿವಿಜ್ಞಾನದ ಕೆಲವು ಪತ್ರಿಕೆಗಳಿಗೆ ಕಳಿಸಿದರೆ ಪ್ರಕಟವಾಗಿ ಉತ್ತಮ ವೈಜ್ಞಾನಿಕ ಮಾಹಿತಿಯಾಗಬಹುದು. (ಎಸ್.ಎನ್.ಎಚ್)

**ಪಚನ:** ನಾವು ಸೇವಿಸಿದ ಆಹಾರದಲ್ಲಿರುವ ಪೋಷಕಗಳು ರಕ್ತಗತವಾಗಬಲ್ಲ ಘಟಕಗಳಾಗಿ ಜೀರ್ಣನಾಳದಲ್ಲಿ ಮಾರ್ಪಾಡಾಗುವ ಕ್ರಿಯೆ. ಅರಗುವಿಕೆ ಮತ್ತು ಜೀರ್ಣವಾಗುವಿಕೆ ಪರ್ಯಾಯ ನಾಮಗಳು. ಆಹಾರದಲ್ಲಿರುವ ಇಂಥ ಅಂಶಗಳು ಮುಖ್ಯವಾಗಿ ಸಸಾರಜನಕ (ಪ್ರೋಟೀನ್), ಶರ್ಕರ (ಕಾರ್ಬೋಹೈಡ್ರೇಟ್), ಮೇದಸ್ಸು (ಲೈಪಿಡ್). ಇವು ಸಾಮಾನ್ಯವಾಗಿ ಕರುಳಿನ ಒಳಪೊರೆಯ ಮೂಲಕ ತೂರಿ ರಕ್ತಗತವಾಗಲಾರದಷ್ಟು ದೊಡ್ಡ ಹಾಗೂ ಜಟಿಲ ರಚನೆಯ ಬೃಹದಣುಗಳಿಂದಾದಂಥವು. ಪಚನಕ್ರಿಯೆಯಲ್ಲಿ ಆಹಾರದ ಘನಘಟಕಗಳು ಜೀರ್ಣನಾಳದ ಉದ್ದಕ್ಕು ಇರುವ ಸ್ನಾಯುಗಳ ಸಂಕೋಚನದಿಂದ ಆಹಾರದಲ್ಲಿರುವ ಇಲ್ಲವೆ ಜೀರ್ಣನಾಳದಲ್ಲಿರುವ ದ್ರವದೊಡನೆ ಯಾಂತ್ರಿಕವಾಗಿ (ಮೆಕ್ಯಾನಿಕಲಿ) ಒರೆಯಲ್ಪಟ್ಟು ಹಾಗೂ ಕಿವುಚಲ್ಪಟ್ಟು ಹಾಲಿನಂಥ ದ್ರವ ರೂಪ ತಳೆಯುತ್ತವೆ. ಈ ರೀತಿಯ ಯಾಂತ್ರಿಕ ಪಚನ ಮುಖ್ಯವಾಗಿ ಬಾಯಿ ಹಾಗೂ ಜಠರದಲ್ಲಿ ಜರುಗುತ್ತದೆ. ಜೀರ್ಣನಾಳದ ಉದ್ದಕ್ಕೂ ಇರುವ ಅತಿಸೂಕ್ಷ್ಮಗ್ರಂಥಿಗಳಿಂದಲು ಜೀರ್ಣನಾಳಕ್ಕೆ ಹೊಂದಿಕೊಂಡಿರುವ ದೊಡ್ಡ ಗ್ರಂಥಿಗಳಿಂದಲು ಜೀರ್ಣರಸಗಳು ಉತ್ಪತ್ತಿ ಆಗುತ್ತವೆ. ಇವುಗಳಲ್ಲಿರುವ ಕಿಣ್ವಗಳ ಸಹಾಯದಿಂದ ಯಾಂತ್ರಿಕ ಪಚನವಾಗುತ್ತಿರುವ ಕಾಲದಲ್ಲೆ ರಾಸಾಯನಿಕ ಪಚನವೂ ಪ್ರಾರಂಭವಾಗುತ್ತದೆ. ಯಾವುದೇ ಕಿಣ್ವ ನಿರ್ದಿಷ್ಟ ಗುಂಪಿಗೆ ಸೇರಿದ ಮತ್ತು ನಿರ್ದಿಷ್ಟ ರಾಸಾಯನಿಕ ರಚನೆ ಇರುವ ವಸ್ತುವೊಂದನ್ನು ಮಾತ್ರ ವಿಭಜನೆ ಮಾಡಬಲ್ಲದಾದರೂ ಒಟ್ಟಿನಲ್ಲಿ ಎಲ್ಲ ಕಿಣ್ವಗಳೂ ಸೇರಿ ಆಹಾರವನ್ನು ರಾಸಾಯನಿಕವಾಗಿ ಮತ್ತು ಪೂರ್ಣವಾಗಿ ಪಚನಮಾಡುತ್ತವೆ. ಸಸಾರಜನಕ ಹಾಗು ಶರ್ಕರವಸ್ತುಗಳು ಸರಳರಚನೆಯ ಹಾಗೂ ನೀರಿನಲ್ಲಿ ವಿಲೀನವಾಗುವ ರಾಸಾಯನಿಕಗಳಿಗಾಗಿ ವಿಭಜನೆಗೊಳ್ಳುತ್ತವೆ. ಮೇದಸ್ಸಿನಿಂದ ಅದರ ಆಮ್ಲಘಟಕಗಳು ಬೇರ್ಪಟ್ಟು 0.001 ಮಿಮೀ ಗಿಂತಲೂ ಸಣ್ಣಕಣಗಳಾಗಿ ರೂಪಾಂತರಗೊಂಡು ವಿಶೇಷ ವಿಧಾನದಿಂದ ನೀರಿನಲ್ಲಿ ವಿಲೀನವಾಗಿ ಕಲಿಲದ್ರಾವಣ (ಕಲಾಯ್ಡಲ್ ಸಲ್ಯೂಷನ್) ಫಲಿಸುತ್ತದೆ. ಆಹಾರಾಂಶಗಳು ಈ ರೀತಿ ಮಾರ್ಪಟ್ಟ ಮೇಲೆ ಜೀವಸತ್ವಗಳು ಪಚನದ ಅವಶ್ಯಕತೆ ಇಲ್ಲದೆ ರಕ್ತಗತವಾಗುತ್ತವೆ. ಆಹಾರದಲ್ಲಿ ಇರಬಹುದಾದ ಮಿಕ್ಕ ಘಟಕಗಳು ನಾರು, ಸಿಪ್ಪೆ, ಕೊಬ್ಬಿನಂಥ ರಾಸಾಯನಿಕ ರಚನೆಯುಳ್ಳ ಹೊರಕವಚ, ಸಸ್ಯಕಣ ಭಿತ್ತಿಯ ಸೆಲ್ಯುಲೋಸ್, ಇತ್ಯಾದಿ ನಮಗೆ ಅನುಪಯುಕ್ತವಾದ್ದರಿಂದ ರಾಸಾಯನಿಕ ವಿಭಜನೆಗೊಳ್ಳುವುದೂ ಇಲ್ಲ, ರಕ್ತಗತವಾಗುವುದೂ ಇಲ್ಲ. ಇವನ್ನು ಉಳಿಸಿಕೊಂಡಿರುವ ದ್ರಾವಣ ಜೀರ್ಣನಾಳದ ಕೊನೆಯಲ್ಲಿ ಕ್ರಮಿಸುತ್ತಿದ್ದಂತೆ ಕ್ರಮೇಣ ಘನೀಭವಿಸುತ್ತ ಮಲರೂಪವನ್ನು ತಳೆದು ಅಂತಿಮವಾಗಿ ವಿಸರ್ಜಿತವಾಗುತ್ತದೆ. ಹೀಗೆ ಪಚನದ ಕಾರ್ಯಾಚರಣೆ ಯಾಂತ್ರಿಕವಾಗಿ ಮತ್ತು ರಾಸಾಯನಿಕವಾಗಿ ಜರಗುವ ಒಂದು ಜಟಿಲ ಕ್ರಿಯೆಯಾಗಿದ್ದು, ಅದನ್ನು ತಿಳಿಯಲು ಜೀರ್ಣನಾಳದ ರಚನೆ, ಸಂಬಂಧಿಸಿದ ಗ್ರಂಥಿಗಳು ಹಾಗೂ ಅವುಗಳ ಸ್ರವಿಕೆಗಳನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ.

1. ಜೀರ್ಣನಾಳದ ಸಾಮಾನ್ಯ ರಚನಾ ವಿನ್ಯಾಸ : ಜೀರ್ಣನಾಳ ಬಾಯಿಯಿಂದ ಪ್ರಾರಂಭವಾಗಿ ಮಲದ್ವಾರದಲ್ಲಿ ಕೊನೆ ಆಗುತ್ತದೆ. ಮನುಷ್ಯರಲ್ಲಿ ಅದರ ಉದ್ದ ಸುಮಾರು 9 ಮೀ. ವಾಸ್ತವವಾಗಿ ಅದು ಅವಿಚ್ಛಿನ್ನವಾದ ನಾಳವಾಗಿದ್ದರೂ ಪ್ರತ್ಯೇಕ ಅಂಗಗಳೇ ಎಂದು ವಿವರಿಸಬಹುದಾದ ವಿವಿಧ ಭಾಗಗಳನ್ನು ಅದರಲ್ಲಿ ಗುರುತಿಸಬಹುದು. ಗಂಟಲಿನಿಂದ ಪ್ರಾರಂಭವಾಗಿ ಎದೆಯಲ್ಲಿ ಕೆಳಕ್ಕೆ ಇಳಿಯುವ ಸುಮಾರು 20 ಸೆಂಮೀ ಉದ್ದದ ಮತ್ತು 2-2.5 ಸೆಂಮೀ ವ್ಯಾಸದ ನಾಳಭಾಗವೇ ಅನ್ನನಾಳ. ಇದು ವಪೆಯನ್ನು ತೂರಿ ಉದರವನ್ನು ಪ್ರವೇಶಿಸಿದೊಡನೆಯೆ ವಿಶಿಷ್ಟ ಆಕಾರದ ಚೀಲದಂತೆ ಮಾರ್ಪಡುತ್ತದೆ. ಇದೇ ಜಠರ ಅಥವಾ ಅನ್ನಾಶಯ. ಆಹಾರ ಸ್ವಲ್ಪಕಾಲ ಇದರಲ್ಲಿ ತಂಗಬೇಕಾಗಿರುವುದರಿಂದ ಇದರ ಉದ್ದ 10-25 ಸೆಂಮೀ ಮತ್ತು ಅಗಲ 7-15 ಸೆಂಮೀ ಇವೆ. ಜಠರದಿಂದ ಮುಂದಕ್ಕೆ ಇರುವ ಮತ್ತು ಪುನಃ ನಾಳಾಕಾರ ತಾಳಿರುವ ಭಾಗ ಸಣ್ಣಕರುಳು. ಸುಮಾರು 6.5 ಮೀ

ಉದ್ದ ಹಾಗೂ 2.5–5 ಸೆಂಮೀ ವ್ಯಾಸವಿರುವ ಇದನ್ನು ಮೂರು ಭಾಗಗಳಾಗಿ ವಿವರಿಸುವುದಿದೆ. ಮೊದಲನೆಯದು ಮುಂಗರುಳು (ಡುಯೋಡೀನಮ್). ಸುಮಾರು 25 ಸೆಂಮೀ ಉದ್ದವಾಗಿ ಉದರದ ಮಧ್ಯದ ಲಂಬಗೆರೆಯ ಬಲಭಾಗದಲ್ಲಿ ಬೆನ್ನಿಗೆ ಅಂಟಿಕೊಂಡಿರುವ C ಆಕಾರವುಳ್ಳ ಭಾಗವಿದು. ಸಣ್ಣ ಕರುಳಿನ ಮಿಕ್ಕಭಾಗ ಮೇಲುನೋಟಕ್ಕೆ ಗಜಿಬಿಜಿ ಆಗಿರುವಂತೆ ಆದರೆ ಗಂಟಾಗದಂತೆ ಸುತ್ತಿಕೊಂಡು ಉದರದ ಬಿಡುಭಾಗವನ್ನೆಲ್ಲ ಆಕ್ರಮಿಸಿದೆ. ಸಣ್ಣಕರುಳಿನ ಮುಂದೆ ಇರುವ ಭಾಗಕ್ಕೆ ದೊಡ್ಡಕರುಳು ಎಂದು ಹೆಸರು. ಸಣ್ಣ ಕರುಳಿಗೆ ಲಂಬವಾಗಿ ಸೇರಿಕೊಂಡಂತಿರುವ ಈ ಜೀರ್ಣನಾಳ ಭಾಗದ ವ್ಯಾಸ 4.5 ಸೆಂಮೀ ಇರುವುದರಿಂದ ಇದಕ್ಕೆ ದೊಡ್ಡಕರುಳು ಎಂಬ ಹೆಸರುಂಟು. ಇದರ ಉದ್ದ ಸುಮಾರು 1.5 ಮೀ ನಷ್ಟಿದೆ. ದೊಡ್ಡಕರುಳು ಉದರದ ಬಲಕೆಳಮೂಲೆಯಿಂದ ತೆರಪಿಲ್ಲದ ಕೊನೆಯಂತೆ (ಬ್ಲೈಂಡ್ ಎಂಡ್) ಪ್ರಾರಂಭವಾಗಿ ನೇರವಾಗಿ ಮೇಲಿನ ಮೂಲೆಯವರೆಗೆ ಏರಿ ಅಲ್ಲಿಂದ ಉದರದ ಎಡಮೇಲಿನ ಮೂಲೆಯವರಿಗೆ ಅಡ್ಡದಿಶೆಯಲ್ಲಿ ಮುಂದುವರಿದಿದೆ. ಅಲ್ಲಿಂದ ಕೆಳಮೂಲೆಯವರಿಗೆ ನೇರವಾಗಿ ಇಳಿದು ಪುನಃ ಓರೆದಿಕ್ಕಿನಲ್ಲಿ ಮೇಲೇರುತ್ತ ಉದರದ ಮಧ್ಯ ಗೆರೆಯನ್ನು ಸೇರಿ ಅಂತಿಮವಾಗಿ ಈ ನೇರದಲ್ಲೆ ಇಳಿದು ಮಲದ್ವಾರದಲ್ಲಿ ಕೊನೆಗೊಳ್ಳುತ್ತದೆ; ಅಂದರೆ ಹೆಚ್ಚು ಕಡಿಮೆ ಉದರವನ್ನು ಸುತ್ತುವರಿದ ಎಲ್ಲೆಯಂತಿದೆ.

ಜೀರ್ಣನಾಳದ ಭಿತ್ತಿ ಉದ್ದಕ್ಕೂ ನಾಲ್ಕು ಪದರಗಳಿಂದ ರಚಿತವಾಗಿದೆ. ಅತ್ಯಂತ ಹೊರಗಿನ ಪದರ ಬಲು ತೆಳುವಾದ ಪೊರೆ. ಜಾರಿಕೆ ಲಕ್ಷಣ ಉಳ್ಳದ್ರವದಿಂದ ಇದು ತೊಯ್ದಂತೆ ಇರುತ್ತದೆ. ಉದರದಲ್ಲಿ ಸಣ್ಣ ಕರುಳು ಸುರುಳಿ ಸುರುಳಿಯಾಗಿ ಸುತ್ತಿಕೊಂಡು ಇತರ ಅಂಗಗಳ ಮೇಲೆ ಪೇರಿಕೊಂಡಿದ್ದರು ಈ ಸುರುಳಿಗಳೊಡನೆ ಮತ್ತು ಅಂಗಗಳೊಡನೆ ತಿಕ್ಕಾಡುತ್ತಿದ್ದರು ಯಾವುದೇ ಉಜ್ಜುಗಾಯ ಆಗದಂತೆ ಜಾರಿಕೆಯ ಹೊರಪದರ ಕರುಳನ್ನು ರಕ್ಷಿಸುತ್ತದೆ. ಈ ಪದರದ ಒಳಗಿರುವ ಪದರ ಅನೈಚ್ಛಿಕ ಸ್ನಾಯುವಿನಿಂದಾದದ್ದು. ಜೀರ್ಣನಾಳದಲ್ಲಿ ವಿವಿಧ ಚಲನೆಗಳನ್ನು ಉಂಟುಮಾಡುವುದು ಈ ಸ್ನಾಯುಪದರದ ಕ್ರಿಯೆ. ಇದು ಉದ್ದಕ್ಕೂ ಸಾಮಾನ್ಯವಾಗಿ ಎರಡು ವರಿಸೆಗಳಾಗಿ ವ್ಯವಸ್ಥಿತವಾಗಿದೆ. ಹೊರವರಿಸೆ ತೆಳು. ಅದರಲ್ಲಿ ಸ್ನಾಯುತಂತುಗಳು ಜೀರ್ಣನಾಳದ ಲಂಬಾಕ್ಷದ ದಿಶೆಯಲ್ಲಿವೆ. ಆದ್ದರಿಂದ ಜೀರ್ಣನಾಳದ ಒಂದು ಘಟಕಾಂಗದಲ್ಲಿ ಇವು ಸಂಕೋಚಿಸಿದಾಗ ಮತ್ತು ವ್ಯಾಕೋಚಿಸಿದಾಗ ಜೀರ್ಣನಾಳದ ಆ ಭಾಗ ಗಿಡ್ಡವಾಗುತ್ತದೆ ಇಲ್ಲವೆ ಉದ್ದವಾಗುತ್ತದೆ. ಇದರ ಒಳಗಿನ ಸ್ನಾಯು ವರಿಸೆಯಲ್ಲಿ ಸ್ನಾಯುತಂತುಗಳು ಜೀರ್ಣನಾಳವನ್ನು ಸುತ್ತುವರಿದಂತೆ ಇವೆ. ಆದ್ದರಿಂದ ಇವು ಸಂಕೋಚಿಸಿದಾಗ ಮತ್ತು ವ್ಯಾಕೋಚಿಸಿದಾಗ ಜೀರ್ಣನಾಳದ ವ್ಯಾಸ ಕಿರಿದಾಗುತ್ತದೆ ಇಲ್ಲವೆ ದೊಡ್ಡದಾಗುತ್ತದೆ. ಜೀರ್ಣನಾಳದ ಚಲನೆಯಿಂದ ನಾಳದ ಒಳಗೆ ಜೀರ್ಣವಾಗುತ್ತಿರುವ ವಸ್ತು ಮುಂದು ಮುಂದಕ್ಕೆ ದೂಡಲ್ಪಡುತ್ತದೆ. ಜಠರ ಮತ್ತು ಸಣ್ಣಕರುಳಿನ ಸಂಧಿಸ್ಥಾನದಲ್ಲಿ, ಸಣ್ಣಕರುಳು ಮತ್ತು ದೊಡ್ಡಕರುಳಿನ ಸಂಧಿಸ್ಥಾನದಲ್ಲಿ ಮತ್ತು ಗುದನಾಳದ (ರೆಕ್ಟಮ್) ಅಂತ್ಯದಲ್ಲಿ ನಾಳಭಾಗವನ್ನು ಸುತ್ತುವರಿದಂತಿರುವ ಒಳ ಸ್ನಾಯುವರಿಸೆ ಜೀರ್ಣನಾಳದ ಬೇರೆಡೆಗಳಿಗಿಂತ ದಪ್ಪವಾಗಿರುವುದಲ್ಲದೆ ಸಾಮಾನ್ಯವಾಗಿ ಸಂಕೋಚಿಸಿದಂತೆಯೆ ಇರುವುದರಿಂದ ಜೀರ್ಣನಾಳದ ಆ ಸ್ಥಳಗಳಲ್ಲಿ ಉಂಗುರವಿರುವಂತೆ ಕಾಣಿಸುತ್ತದೆ. ಆದ್ದರಿಂದ ಈ ಸ್ನಾಯುಭಾಗ ಉಂಗುರ ಸ್ನಾಯುವೆಂದೇ (ಸ್ಫಿಂಕ್ಟರ್) ಹೆಸರಾಗಿದೆ. ಉಂಗುರಸ್ನಾಯು ಸಂಕೋಚಿಸಿದ್ದಾಗ ಅದರ ಆಚೀಚೆ ಕಡೆಯ ಜೀರ್ಣನಾಳ ಭಾಗಗಳ ನೇರಂತರ್ಯ (ಕಂಟಿನ್ಯೂಯಿಟಿ) ತಪ್ಪಿಹೋಗಿರುತ್ತದೆ. ಆದ್ದರಿಂದ ಜೀರ್ಣವಾದ ಆಹಾರ ಒಂದು ಅಂಗದಿಂದ ಇನ್ನೊಂದು ಅಂಗಕ್ಕೆ ಸಾಗಲು ಸಾಧ್ಯವಾಗುವುದಿಲ್ಲ. ಉಂಗುರಸ್ನಾಯು ವ್ಯಾಕೋಚಿಸಿದಾಗ ಮಾತ್ರ ಒಂದು ಭಾಗದಲ್ಲಿರುವ ವಸ್ತು ಇನ್ನೊಂದು ಭಾಗಕ್ಕೆ ಹರಿದು ಬರಬಹುದು. ಜಠರದ ಸ್ನಾಯು ಚಲನೆಯಿಂದ ಘನರೂಪದ ಆಹಾರ ವಸ್ತು ಅರೆಯಲ್ಪಟ್ಟು ಹಾಲಿನಂತೆ ಮಂದವಾದ ದ್ರವವಾಗವುದು ಒಂದು ವಿಶೇಷ.

ಸ್ನಾಯುಪದರದ ಒಳಗೆ ಬಂಧನಾಂಗಾಂಶದಿಂದ ರಚಿತವಾದ ಪದರ ಉಂಟು. ನರತಂತುಗಳು, ಧಮನಿಗಳು, ದುಗ್ಧರಸನಾಳಗಳು ಹಾಗೂ ದುಗ್ಧರಸಗ್ರಂಥಿಗಳಿಗೆ ಈ ಪದರ ಆಸರೆಯನ್ನು ಒದಗಿಸುತ್ತದೆ. ಅಲ್ಲದೆ ಜೀರ್ಣನಾಳದ ನಾಲ್ಕನೆಯ ಪೊರೆಯಾದ ಲೋಳೆಪೊರೆಯನ್ನು ಸ್ನಾಯುಪದರಕ್ಕೆ ಬಂಧಿಸಿದೆ.



ಜೀರ್ಣನಾಳದ ಲೋಳೆಪೊರೆ ನಾಳದ ಒಳಹೊದ್ದಿಕೆ ಎನ್ನುವುದು ಸ್ಪಷ್ಟ. ಹೆಸರೆ ಹೇಳುವಂತೆ ಲೋಳೆಯಂತಹ ದ್ರವದಿಂದ ತೇವವಾಗಿರುವುದು ಲೋಳೆಪೊರೆಯ ವಿಶಿಷ್ಟ ಲಕ್ಷಣ. ಇದರ ಮೇಲ್ಮೈಯನ್ನು ರಚಿಸುವ ಎಲ್ಲ ಕೋಶಗಳು ಇಲ್ಲವೇ, ಅವುಗಳಲ್ಲಿ ವಿಶಿಷ್ಟವಾದ ಕೆಲವು ಕೋಶಗಳು, ಲೋಳೆಯಂಥ ದ್ರವವನ್ನು ಅಲ್ಪವಾಗಿ ಆದರೆ ನಿರಂತರವಾಗಿ ಸ್ರವಿಸುತ್ತಿದ್ದು ಅದು ಈ ಮೇಲ್ಮೈಯನ್ನು ಯಾವಾಗಲು ಒದ್ದೆಯಾಗಿ ಇಟ್ಟಿರುತ್ತದೆ. ಆದರೆ ಜೀರ್ಣನಾಳದ ಲೋಳೆಪೊರೆಯಲ್ಲಿ ಈ ಲಕ್ಷಣದ ಜೊತಗೆ ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾದ ಮತ್ತು ವಿವಿಧ ರಚನೆಯ (ಸಾಮಾನ್ಯವಾಗಿ ಪ್ರಣಾಳದಂತಿರುವ) ಅಸಂಖ್ಯಾತ ಗ್ರಂಥಿಗಳು ಇರುವುದು ವೈಶಿಷ್ಟ್ಯ. ಇವು ಜೀರ್ಣನಾಳದ ಒಂದೊಂದು ಅಂಗದಲ್ಲು ಅದರ ವಿಶಿಷ್ಟ ಜೀರ್ಣರಸವನ್ನು ಸ್ರವಿಸುತ್ತವೆ. ಇನ್ನು ಮುಂಗರುಳಿನ ಮತ್ತು ಅನ್ನನಾಳದಭಿತ್ತಿಯ ಬಂಧನಾಂಗಾಂಶಪದರದಲ್ಲಿ ಸೂಕ್ಷ್ಮವಾದ ಗ್ರಂಥಿಗಳಿವೆ. ಎಲ್ಲ ಜೀರ್ಣ ರಸಗಳ ಕ್ರಿಯೆಯೂ ವಿವಿಧ ಆಹಾರಾಂಶಗಳ ಬೃಹದಣುಗಳನ್ನು ಛಿದ್ರಿಸಿ ಸುಲಭ ರಚನೆಯ ರಾಸಾಯನಿಕಗಳಾಗಿ ಮಾರ್ಪಡಿಸುವುದೇ ಆಗಿದೆ. ಸಣ್ಣಕರುಳಿನ ಲೋಳೆ ಪೊರೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲೋಳೆಪೊರೆ ಗ್ರಂಥಿಗಳಿವೆ, ಜೊತಗೆ ಇವುಗಳಲ್ಲಿ ಇವುಗಳಷ್ಟೆ ಸೂಕ್ಷ್ಮಾಕಾರದ ಆದರೆ ಒಳಗೆ ಜೊಳ್ಳಿಲ್ಲದ ಅಸಂಖ್ಯಾತ ಹೊರಚಾಚುಗಳು ಕೂಡ ಇವೆ. ವಿಲ್ಲಸ್ (ಬಹುವಚನ ವಿಲ್ಲೈ) ಎಂಬ ಈ ಚಾಚುವಿನ ಕ್ರಿಯೆ ಪಚನಫಲವಾದ ಉಪಯುಕ್ತ ಆಹಾರಾಂಶಗಳನ್ನು ದ್ರಾವಣರೂಪದಲ್ಲಿ ಹೀರಿಕೊಳ್ಳುವುದು. ವಿಲ್ಲೈನ ಒಳಗೆ ರಕ್ತನಾಳ ಹಾಗೂ ದುಗ್ಧರಸನಾಳ ಹುದುಗಿದ್ದು ಹೀರಲ್ಪಟ್ಟ ಆಹಾರಾಂಶ ಅವುಗಳ ಮೂಲಕ ಅಂತಿಮವಾಗಿ ರಕ್ತಗತವಾಗುತ್ತದೆ.

2. ಜೀರ್ಣನಾಳಕ್ಕೆ ಸಂಬಂಧಿಸಿದ ಗ್ರಂಥಿಗಳು : ಜೀರ್ಣರಸಗಳನ್ನು ನಾಳ ಭಿತ್ತಿಯಲ್ಲಿರುವ ಗ್ರಂಥಿಗಳು ಅಲ್ಲದೆ ಜೀರ್ಣನಾಳದಿಂದ ದೂರವಾಗಿರುವ ಲಾಲಾ ಗ್ರಂಥಿಗಳು, ಮೇದೋಜೀರಕಾಂಗ ಹಾಗೂ ಯಕೃತ್ತು ಕೂಡ ಸ್ರವಿಸುತ್ತವೆ. ಇವುಗಳಿಂದ ಉತ್ಪತ್ತಿ ಆದ ರಸಗಳು ಆಯಾಗ್ರಂಥಿಯ ನಾಳದ ಮೂಲಕ ಜೀರ್ಣನಾಳಕ್ಕೆ ಹರಿದು ಬಂದು ಆಹಾರ ಪಚನದಲ್ಲಿ ಭಾಗವಹಿಸುತ್ತವೆ. ಎಡ ಬಲ ಎರಡು ಕಡೆಯೂ ಸೇರಿ ಒಟ್ಟು ಆರು ಲಾಲಾಗ್ರಂಥಿಗಳು ಇವೆ. ದವಡೆಗಳ ನೆರೆಯಲ್ಲಿ ಉಪಸ್ಥಿತವಾಗಿರುವ ಇವು ತಾವು ಸ್ರವಿಸುವ ಲಾಲಾರಸ ಅಥವಾ ಜೊಲ್ಲನ್ನು ನಾಳಗಳ ಮೂಲಕ ಬಾಯೊಳಕ್ಕೆ ಸುರಿಸುತ್ತವೆ. ಮೇದೋಜೀರಕಾಂಗ ಜಠರದ ಹಿಂದೆ ಬೆನ್ನಿಗೆ ಅಂಟಿಕೊಂಡಿರುವ ತೆಳುವಾದ ಗ್ರಂಥಿ. ಇದು ಸ್ರವಿಸುವ ಮೇದೋಜೀರಕರಸ ಗ್ರಂಥಿನಾಳದ ಮೂಲಕ ಮುಂಗರುಳಿಗೆ ಬಂದು ಸೇರುತ್ತದೆ. ಯಕೃತ್ತು ಉದರದ ಬಲ ಹಾಗೂ ಮೇಲು ಭಾಗವನ್ನು ಆಕ್ರಮಿಸಿಕೊಂಡಿರುವ ಅಂಗ. ಇದು ಜೀರ್ಣಾಂಗಗಳಲ್ಲೆಲ್ಲ ಬಲು ದೊಡ್ಡದು. ನಿರಂತರವಾಗಿ ಇದು ಪಿತ್ತರಸವನ್ನು ಸ್ರವಿಸುತ್ತಿರುವುದು. ಪಿತ್ತರಸ ಸಾಮಾನ್ಯವಾಗಿ ಕೋಶದಲ್ಲಿ ಜಲಾಂಶ ಹೀರಿಕೆ ಕ್ರಮದಿಂದ ಸಾಂದ್ರೀಕರಿಸಲ್ಪಟ್ಟು ಅಲ್ಲಿಯೆ ಶೇಖರವಾಗಿರುತ್ತದೆ. ಈ ಕೋಶ ಸಂಕೋಚಿಸಿ ಪಿತ್ತರಸವನ್ನು ಪಿತ್ತನಾಳದ ಮೂಲಕ ಮುಂಗರುಳಿಗೆ ಸುರಿಸುತ್ತದೆ.

3. ಜೀರ್ಣಾಂಗಗಳ ಕ್ರಿಯಾನಿಯಂತ್ರಣ : ಜೀರ್ಣನಾಳದಲ್ಲಿ ಆಹಾರ ಬಾಯಿಯಿಂದ ಮಲದ್ವಾರದವರೆಗು ಕ್ಲುಪ್ತವಾಗಿ ಸಾಗಿಸಲ್ಪಡಬೇಕು. ಒಂದೊಂದು ಭಾಗದಲ್ಲು ಅವಶ್ಯವಿದ್ದಷ್ಟು ಕಾಲ ಆಹಾರ ತಂಗಿ ಅಥವಾ ಸಾಗುತ್ತಿದ್ದು ಜೀರ್ಣವಾಗಬೇಕು. ಜೀರ್ಣಕ್ರಿಯೆ ಪೂರ್ಣವಾದಂತೆಲ್ಲ ಬಿಡಗಡೆ ಆದ ವಸ್ತುಗಳಲ್ಲಿ ಉಪಯುಕ್ತ ಘಟಕಗಳು ರಕ್ತಗತವಾಗಬೇಕು. ಕೊನೆಗೆ ಉಳಿಯುವ ಶೇಷ ವ್ಯವಸ್ಥಿತವಾಗಿ ವಿಸರ್ಜಿತವಾಗಬೇಕು. ಇವೆಲ್ಲ ಸಾಧ್ಯವಾಗಲು ಸ್ನಾಯುಗಳ ಚಟುವಟಿಕೆ ಮತ್ತು ಗ್ರಂಥಿಗಳಿಂದ ರಸಸ್ರಾವ ಯುಕ್ತ ಕಾಲದಲ್ಲಿ ಮಾತ್ರ ಅಗತ್ಯವಿದ್ದಷ್ಟು ಪ್ರಮಾಣದಲ್ಲಿ ಜರಗುವಂತೆ ಕಟ್ಟುನಿಟ್ಟಾಗಿ ನಿಯಂತ್ರಿಸಲ್ಪಡಬೇಕು. ಈ ರೀತಿ ಆಯಾ ಕಾಲದಲ್ಲಿ ಆಯಾ ಕ್ರಿಯೆ ಜರುಗಲು, 'ಈಗ ಹೀಗಾಗಿದೆ' ಎನ್ನುವ ಮಾಹಿತಿ ಒಂದು ಸ್ಥಳದಲ್ಲಿ ಉದ್ಭವಿಸಿ ಮುಂದಿನ ಕ್ರಿಯೆ ಕಂಡುಬರುವ ಸ್ಥಳಕ್ಕೆ ರವಾನೆ ಆಗಿ ಅಲ್ಲಿ ತಕ್ಕ ಕ್ರಿಯೆ ವ್ಯಕ್ತವಾಗುವಂತೆ ಇರಬೇಕು. ಸಂದೇಶ ಹೀಗೆ ಒಯ್ಯಲ್ಪಡುವುದಕ್ಕೆ ಎರಡು ಕ್ರಮಗಳಿವೆ. ಮೊದಲನೆಯದು ನರಗಳ ಮೂಲಕ ಸಾಗುವುದು. ಇದು ಅನೈಚ್ಛಿಕ ಕ್ರಿಯೆ (ರಿಫ್ಲೆಕ್ಸ್ ಆ್ಯಕ್ಷನ್). ಎರಡನೆಯದು ಹಾರ್ಮೋನುಗಳಿಂದ ಏರ್ಪಡುವುದು. ಆಹಾರ ಜೀರ್ಣನಾಳದಲ್ಲಿ ಸಾಗುತ್ತಿರುವಾಗ ನಾಳದ ಹಿಗ್ಗುವಿಕೆ, ಜೀರ್ಣವಾಗುತ್ತಿರುವ ಆಹಾರ ಪದಾರ್ಥದ ಘನ ಅಥವಾ ದ್ರವ ಸ್ವಭಾವ ಮತ್ತು ಅದರ ರಾಸಾಯನಿಕ ಘಟಕಗಳಿಂದ ಸ್ಥಳೀಯ ನರಗಳು ಹಾಗೂ ಲೋಳೆಪೊರೆಯ ಕೋಶಗಳು ಪ್ರಚೋದಿಸಲ್ಪಡುತ್ತವೆ. ನರಗಳ ಪ್ರಚೋದನೆಯ ಫಲವಾಗಿ ಅನೈಚ್ಛಿಕ ಕ್ರಿಯಾವಿಧಾನದಿಂದ ಮುಂದೆ ಕ್ರಿಯಾಶೀಲವಾಗಬೇಕಾದ ಜೀರ್ಣಾಂಗಗಳು ತಕ್ಕ ಕ್ರಿಯೆಗೆ ಸಿದ್ಧವಾಗುತ್ತವೆ. ಪ್ರಚೋದಿಸಲ್ಪಟ್ಟ ಲೋಳೆ ಪೊರೆಯ ಕೋಶಗಳಿಂದ ಹಾರ್ಮೋನುಗಳು ಉತ್ಪತ್ತಿ ಆಗಿ ಅಲ್ಲಿಯೆ ರಕ್ತಗತವಾಗುತ್ತವೆ. ರಕ್ತ ಪರಿಚಲನೆಯ ಮೂಲಕ ಇವು ದೇಹದ ಎಲ್ಲ ಕಡೆಗು ಒಯ್ಯಲ್ಪಡುತ್ತವೆ. ಆದರೆ ಯಾವುದೆ ಒಂದು ಹಾರ್ಮೋನಿನಿಂದ ನಿರ್ದಿಷ್ಟ ಜೀರ್ಣಾಂಗ ಮಾತ್ರ ಪ್ರಭಾವಿತವಾಗಬಹುದಾಗಿದೆ. ಇತರ ಜೀರ್ಣಾಂಗಗಳಾಗಲಿ ದೇಹದ ಬೇರೆ ಅಂಗಗಳಾಗಲಿ ಯಾವ ಪ್ರತಿಕ್ರಿಯೆಯನ್ನೂ ತೋರಿಸುವುದಿಲ್ಲ. ಆದ್ದರಿಂದ ಯುಕ್ತಕಾಲದಲ್ಲಿ ಹಾರ್ಮೋನ್ ಉತ್ಪತ್ತಿ ಆಗಿ ಮುಂದೆ ಕ್ರಿಯಾಶೀಲವಾಗಬೇಕಾದ ಜೀರ್ಣಾಂಗ ಮಾತ್ರ ಯುಕ್ತವಾಗಿ ಪ್ರಚೋದನೆಗೆ ಒಳಗಾಗುತ್ತದೆ. ಹೀಗೆ ನಿಯಂತ್ರಿತ ಪ್ರಚೋದನೆಯಿಂದ ವಿವಿಧ ಜೀರ್ಣಾಂಗಗಳ ಕಾರ್ಯಗಳಲ್ಲಿ ಸಂಯೋಜನೆಯಾಗಿ ಜೀರ್ಣಕ್ರಿಯೆ, ರಕ್ತಗತವಾಗುವಿಕೆ ಮತ್ತು ಅಂತಿಮವಾಗಿ ಮಲವಿಸರ್ಜನೆಗಳೆಲ್ಲವೂ ನಿರ್ದಿಷ್ಟ ರೀತಿಯಲ್ಲಿ ಜರಗುತ್ತವೆ.

4. ಜೀರ್ಣಾಂಗಗಳಲ್ಲಿ ಜರುಗುವ ಕ್ರಿಯೆಗಳ ವಿವರ: ಆಹಾರ ಪಚನಕ್ರಮ ನಾವು ಆಹಾರವನ್ನು ಬಾಯಿಗೆ ಹಾಕಿಕೊಂಡ ಕೂಡಲೇ ಪ್ರಾರಂಭವಾಗಿ ಸಣ್ಣ ಕರುಳಿನ ಮೊದಲ ಭಾಗ ಮತ್ತು ಎರಡನೆಯ ಭಾಗಗಳಲ್ಲಿ ಅಂತ್ಯವಾಗುತ್ತದೆ. ಪಚನ ಎರಡು ರೀತಿಯದು; ಯಾಂತ್ರಿಕ ಮತ್ತು ರಾಸಾಯನಿಕ. ಯಾಂತ್ರಿಕಪಚನ ಸ್ನಾಯುಕ್ರಿಯೆಯಿಂದ ಆಗುತ್ತದೆ. ರಾಸಾಯನಿಕ ಪಚನ ಜೀರ್ಣನಾಳದ ವಿವಿಧ ಸ್ಥಳಗಳಲ್ಲಿ ಕಂಡುಬರುವ ಜೀರ್ಣರಸಗಳ ಕ್ರಿಯೆಯಫಲ. ಯಾಂತ್ರಿಕ ಪಚನದಲ್ಲಿ ಆಹಾರದ ಘನರೂಪಕ ಘಟಕಗಳು ಚೆನ್ನಾಗಿ ಅರೆಯಲ್ಪಟ್ಟು ಅರೆ ಸಣ್ಣ ಕಣಗಳಾಗುತ್ತವೆ ಮತ್ತು ಸ್ಥಳೀಯವಾಗಿ ಲಭ್ಯವಿರುವ ದ್ರವದೊಡನೆ (ಅದು ಆಹಾರದಲ್ಲಿ ಇರುವ ದ್ರವಾಂಶವಾಗಿರಬಹುದು ಇಲ್ಲವೆ ಸ್ರವಿಸಲ್ಪಟ್ಟ ಜೀರ್ಣರಸವಾಗಿರಬಹುದು). ಮಿಶ್ರವಾಗಿ ಸೇವಿಸಿದ ಆಹಾರ ಹೇಗೇ ಇದ್ದರೂ ಅಂತಿಮವಾಗಿ ದ್ರವರೂಪ ತಳೆಯುತ್ತದೆ. ಪಚನದ ಪ್ರಾರಂಭ ಹಂತದಲ್ಲಿ, ಅಂದರೆ ಬಾಯಿಯಲ್ಲಿ, ಪ್ರಧಾನವಾಗಿ ಯಾಂತ್ರಿಕ ವಿಧಾನಕಂಡುಬರುತ್ತದೆ. ಇಲ್ಲಿ ರಾಸಾಯನಿಕ ವಿಧಾನದಿಂದ ಪಚನ ಕ್ರಿಯೆಜರುಗಿದರೂ ಅದು ಪ್ರಮುಖವಲ್ಲ. ಇಲ್ಲಿ ಯಾಂತ್ರಿಕತೆ ಏನಿದ್ದರೂ ಅದು ಆಗಲೇ ದ್ರವವಾಗಿ ಮಾರ್ಪಟ್ಟಿರುವ ಆಹಾರವಸ್ತುವನ್ನು ಜೀರ್ಣನಾಳದಲ್ಲಿ ಮುನ್ನೂಕುವುದರಲ್ಲಿ ಮತ್ತು ಪಚನಕ್ರಿಯೆಯಿಂದ ಬೇರ್ಪಟ್ಟಿರುವ ಅಗತ್ಯ ವಸ್ತುಗಳನ್ನು ರಕ್ತಗತವಾಗಿಸುವುದರಲ್ಲಿ ಮುಗಿಯುತ್ತದೆ. ಮಧ್ಯ ಹಂತದಲ್ಲಿ ಅಂದರೆ ಜಠರದಲ್ಲಿ ಯಾಂತ್ರಿಕ ಮತ್ತು ರಾಸಾಯನಿಕ ಪಚನಗಳೆರಡು ಸಮವಾಗಿಯೆ ಪ್ರಮುಖವಾಗಿವೆ. ಪಚನದ ಪ್ರಾರಂಭಘಟ್ಟದ ನಿಯಂತ್ರಣ ನರಮಂಡಲದಿಂದ ಏರ್ಪಟ್ಟಿದೆ. ಹಾರ್ಮೋನ್ ನಿಯಂತ್ರಣ ಅತ್ಯಲ್ಪ. ಚಟುವಟಿಕೆ ತಕ್ಕಮಟ್ಟಿಗೆ ಐಚ್ಛಿಕ ಹತೋಟಿಗೆ ಒಳಪಟ್ಟಿರುವುದುಂಟು. ಪಚನದ ಕೊನೆಯ ಘಟ್ಟದ ನಿಯಂತ್ರಣ ಪ್ರಧಾನವಾಗಿ ಹಾರ್ಮೋನುಗಳಿಂದ ಏರ್ಪಟ್ಟಿದೆ. ಇಲ್ಲಿ ನರನಿಯಂತ್ರಣ ಅಲ್ಪ. ನಿಯಂತ್ರಣಗಳೆರಡೂ ಪೂರ್ಣವಾಗಿ ಅನೈಚ್ಛಿಕ. ಪಚನದ ಮಧ್ಯ ಘಟ್ಟದ ಕ್ರಿಯಾನಿಯಂತ್ರಣ ಪೂರ್ಣವಾಗಿ ಅನೈಚ್ಛಿಕ. ಇಲ್ಲಿ ನರಮಂಡಲ ಮತ್ತು ಹಾರ್ಮೋನುಗಳು ಎರಡೂ ಸಮವಾಗಿ ನಿಯಂತ್ರಣದಲ್ಲಿ ಭಾಗವಹಿಸುತ್ತವೆ. ಪಚನಕ್ರಿಯೆಯಲ್ಲಿ ಯಾಂತ್ರಿಕ ವಿಧಾನ, ರಾಸಾಯನಿಕ ವಿಧಾನವೆಂದು ಎರಡು ವಿಧಾನಗಳನ್ನು ವಿವರಿಸಿದ್ದರೂ ಮುಖ್ಯವಾದದ್ದು ರಾಸಾಯನಿಕ ಪಚನವೆ. ಇದು ಸುಸೂತ್ರವಾಗಿ ಜರುಗಲು ಅನುವಾಗುವುದು ಯಾಂತ್ರಿಕ ವಿಧಾನ. ನಾವು ಸೇವಿಸಿದ ಆಹಾರದ ಘನವಸ್ತುಗಳು ಸೇವಿಸಿದ ರೂಪದಲ್ಲೇ ಇದ್ದರೆ ಜೀರ್ಣರಸಗಳು ಅವುಗಳ ಘಟಕಗಳನ್ನು ರಾಸಾಯನಿಕವಾಗಿ ವಿಭಜಿಸಿ ಸರಳಗೊಳಿಸಲು ಬಲುಕಾಲ ಬೇಕಾಗುತ್ತದೆ. ಅದೇ ಘನವಸ್ತುಗಳು ಯಾಂತ್ರಿಕವಾಗಿ ಅರೆಯಲ್ಪಟ್ಟು ಜೀರ್ಣರಸಗಳೊಡನೆ ಸೇರಿ ಹಾಲಿನಂಥ ಕಲಿಲ ದ್ರವವಾಗಿ ಮಾರ್ಪಟ್ಟಾಗ ರಾಸಾಯನಿಕ ಪಚನ ಶ್ರೀಘ್ರವಾಗಿ ಮತ್ತು ಸುಲಭವಾಗಿ ಜರುಗಬಲ್ಲದು.

ಆಹಾರವನ್ನು ಬಾಯಿಯಲ್ಲಿ ಹಾಕಿಕೊಂಡ ಕೂಡಲೆ ಅದು ತೀರ ಶುಷ್ಕವಾದುದು ಬಹಳ ಗಟ್ಟಿಯಾದುದು, ಮೃದುವಾದುದು, ದ್ರವಯುಕ್ತವಾದುದು ಯಾವುದೇ ಆಗಿದ್ದರೂ ಅಗಿಯಲು ತೊಡಗುತ್ತೇವೆ. ಆಗ ಅದರ ಘನ ಘಟಕಗಳು ಯಾಂತ್ರಿಕವಾಗಿ ನುರಿಕೆಗೊಂಡು ದ್ರವಘಟಕಗಳೊಡನೆ ಬೆರೆತು ಅಥವಾ ಜೊಲ್ಲಿನೊಡನೆ ಸುಲಭವಾಗಿ ನುಂಗಬಲ್ಲ ತುತ್ತಾಗುತ್ತದೆ. ಜೊಲ್ಲಿನಲ್ಲಿ ಲೋಳೆ ಇರುವುದರಿಂದ ಇದು ಸಾಧ್ಯವಾಗಿದೆ. ಅಗಿದು ತುತ್ತಾಗಿ ಮಾರ್ಪಡಿಸುವುದು ಮಾನವರಲ್ಲಿ ಪೂರ್ಣವಾಗಿ ಐಚ್ಛಿಕ ಕ್ರಿಯೆ. ಘನ ಪದಾರ್ಥ ದೊಡ್ಡದಾಗಿಲ್ಲದೆ ತಕ್ಕಷ್ಟು ದ್ರವವೊ ಜೊಲ್ಲೊ ಜೊತೆಗಿದ್ದರೆ ಅದನ್ನು ಅಗಿಯದೆ ನುಂಗಬಹುದೆಂಬುದು ಆತುರದಲ್ಲಿ ತಿನ್ನುವವರಿಗೆಲ್ಲರಿಗು ಗೊತ್ತು. ಅಗಿಯುವುದು ಒಂದೇ ಪಚನಕ್ರಿಯೆಯಲ್ಲಿಯ ಐಚ್ಛಿಕ ಕ್ರಿಯೆ. ಬಾಯಿಯಲ್ಲಿರುವ ಆಹಾರದ ರುಚಿ ಅಲ್ಲಿಯ ನರಗಳ ಮೂಲಕ ಗ್ರಹಿಕೆ ಆಗುವುದರಿಂದ ದವಡೆಗಳ ನೆರೆಯಲ್ಲಿರುವ ಲಾಲಾಗ್ರಂಥಿಗಳು ಪ್ರಚೋದನೆಗೊಂಡು ವಿಪುಲವಾಗಿ ಜೊಲ್ಲನ್ನು ಸುರಿಸುತ್ತವೆ. ರುಚಿಯ ಅನುಭವ ಜಾಗ್ರತೆ ಮನಸ್ಸಿಗೆ ಹತ್ತದಂತಿದ್ದರೂ (ಉದಾಹರಣೆಗೆ ಎಳೆ ಮಕ್ಕಳಲ್ಲಿ) ಈ ನಿಯಂತ್ರಣ ಕಾರ್ಯಗತವಾಗುವುದು ತಿಳಿದಿದೆ. ವಾಸ್ತವವಾಗಿ ಆಹಾರವನ್ನು ಬಾಯಿಯಲ್ಲಿ ಹಾಕಿಕೊಳ್ಳವುದಕ್ಕು ಮೊದಲೆ ಈ ಗ್ರಂಥಿಗಳು ಪ್ರಚೋದಿತವಾಗುವುವು. ಆದರೆ ಇದು ಶೈಶವಾವಸ್ಥೆಯ ಬಳಿಕವೆ ಕಂಡುಬರುವ ವೈಶಿಷ್ಟ್ಯ. ಆಹಾರ ಸೇವನೆಯ ನಿರೀಕ್ಷೆ, ಆಹಾರದ ಪರಿಮಳ, ನೋಟ ಇತ್ಯಾದಿಗಳಿಂದ ಬಾಯಿಯಲ್ಲಿ ನೀರೂಡುವುದು ಎಲ್ಲರಿಗೂ ತಿಳಿದ

ವಿಷಯ. ಲಾಲಾಗ್ರಂಥಿಗಳಿಂದ ಸ್ರಾವನಿಯಂತ್ರಣ ಅನುಭವದಿಂದ ಕೈಗೂಡಿಸಿಕೊಂಡಿರುವ ಸಂಗತಿ. ಯಾವ ರೀತಿಯ ನಿಯಂತ್ರಣವಾಗಿರಲಿ ಈ ಅಧಿಕ ಜೊಲ್ಲಿನ ಉತ್ಪತ್ತಿಯ ಮೇಲೆ ಐಚ್ಛಿಕಹತೋಟಿ ಇಲ್ಲ. ಜೊಲ್ಲಿನಲ್ಲಿ ಟಯಲಿನ್ ಅಥವಾ ಅಮೈಲೇಸ್ ಎಂಬ ಕಿಣ್ವ ಉಂಟು. ಇದು ಆಹಾರದಲ್ಲಿ ಇರಬಹುದಾದ ಪಿಷ್ಟಾಂಶದ ಮೇಲೆ ವರ್ತಿಸಿ ಪಿಷ್ಟದ ಜಟಿಲ ರಚನೆಯ ಬೃಹದಣುಗಳನ್ನು ರಾಸಾಯನಿಕವಾಗಿ ವಿಭಜಿಸಿ ತಕ್ಕಮಟ್ಟಿನ ಸರಳ ರಚನೆಯ ಮಾಲ್ಟೋಸ್ ಎಂಬ ಸಕ್ಕರೆಯಾಗಿ ಪರಿವರ್ತಿಸುತ್ತದೆ. ಆದರೆ ಇದಕ್ಕೆ ತಕ್ಕಷ್ಟು ಕಾಲಾವಕಾಶವಿಲ್ಲದೆ ಬಾಯಿಯಲ್ಲಿ ಈ ರೀತಿಯ ರಾಸಾಯನಿಕ ಪಚನವಾಗುವುದು ಬಹಳ ಕಡಿಮೆ.

ಮುಂದಿನ ಜೀರ್ಣಕ್ರಿಯೆ ಜರಗುವುದು ಜಠರದಲ್ಲಿ. ಸ್ವತಃ ಜಠರರಸದಿಂದ ಪಚನ ಪ್ರಾರಂಭವಾಗುವುದಕ್ಕೆ ಮೊದಲು 10–20 ನಿಮಿಷಗಳು ಬಹುಶಃ ಅಲ್ಲಿ ಅಮೈಲೇಸ್ ಕ್ರಿಯೆ ಮುಂದುವರಿಯುತ್ತದೆ. ಆದರೂ ಇದರಿಂದ ಪಚನವಾಗುವ ಪಿಷ್ಟದ ಪ್ರಮಾಣ ಕಡಿಮೆಯೆ. ಆಹಾರ ಜಠರದಲ್ಲಿ ತಂಗಿ ಕೆಲವು ನಿಮಿಷಗಳಾದ ಬಳಿಕ ಅಲ್ಲಿ ಉದ್ಭವಿಸುವ ನರಪ್ರಚೋದನೆಯಿಂದ ಜಠರದಲ್ಲಿ ಯಾಂತ್ರಿಕ ಪಚನ ಪ್ರಾರಂಭವಾಗುತ್ತದೆ. ಆಹಾರದಿಂದ ಜಠರಭಿತ್ತಿ ಹಿಗ್ಗಿಸಲ್ಪಟ್ಟಿರುವುದೆ ನರ ಪ್ರಚೋದನೆ ಉದ್ಭವಿಸುವುದಕ್ಕೆ ಕಾರಣ. ಪ್ರಚೋದನೆಯ ಫಲವಾಗಿ ಜಠರದ ಸ್ನಾಯುಗಳು ಪದೇಪದೇ ಸಂಕೋಚಿಸಿ ವ್ಯಾಕೋಚಿಸುವುದಕ್ಕೆ ಪ್ರಾರಂಭಿಸುತ್ತವೆ. ಈ ಸಂಕೋಚನ ವ್ಯಾಕೋಚನಗಳು ಜಠರದ ಉನ್ನತ ಭಾಗದಲ್ಲಿ ಪ್ರಾರಂಭಿಸುತ್ತ ನೀರಿನ ಅಲೆ ಮುಂದುವರಿಯುವಂತೆ ಜಠರಭಿತ್ತಿಯಲ್ಲಿ ಅಂತ್ಯಮುಖವಾಗಿ ಮುಂದುವರಿಯುತ್ತವೆ. ಪಕ್ಕದಿಂದ ವೀಕ್ಷಿಸಿದರೆ ಅಲೆಯಂಥ ಈ ಚಲನೆ ಹಾವಿನ ಚಲನೆಯಂತೆ ಕಾಣುವುದರಿಂದ ಇದಕ್ಕೆ ಸರ್ಪಗತಿ ಚಲನೆ (ಪೆರಿಸ್ಟಾಲ್‌ಸಿಸ್) ಎಂಬ ಹೆಸರುಂಟು. ಜಠರದಲ್ಲಿ ತುಂಬಿರುವ ಆಹಾರವಸ್ತು ಈ ತೆರನಾದ ಚಲನೆಯಿಂದ ಜಠರದ ಅಂತ್ಯದ ಕಡೆಗೆ ತಳ್ಳಲ್ಪಡುತ್ತದೆ. ಆದರೆ ಇಲ್ಲಿ ಜಠರ ಮತ್ತು ಸಣ್ಣ ಕರುಳಿಗೆ ನಡುವೆ ಇದ್ದು ಸಾಮಾನ್ಯವಾಗಿ ಸಂಕೋಚಿತ ಸ್ಥಿತಿಯಲ್ಲಿ ಇರುವ ಉಂಗುರ ಸ್ನಾಯು ಆಹಾರ ಕರುಳಿಗೆ ಪ್ರವೇಶಿಸದಂತೆ ತಡೆದುಬಿಡುತ್ತದೆ. ಹೀಗಾಗಿ ಮುನ್ನುಗ್ಗುತಿರುವ ಆಹಾರವಸ್ತು ದಾರಿಯಿಲ್ಲದೆ ಚಿರುಕಿಸಿದಂತೆ ವಾಪಸಾಗುತ್ತದೆ. ಅದೇ ವೇಳೆ ಆಹಾರಕಣಗಳು ಕಿವುಚಿದಂತಾಗಿ ಅಲ್ಲಿಯೇ ಉಪಸ್ಥಿತವಿರುವ ದ್ರವಘಟಕಗಳೊಡನೆ ಮಿಶ್ರವಾಗುತ್ತವೆ. ಪುನಃ ಪುನಃ ದ್ರವದೊಡನೆ ಈ ರೀತಿ ಮಿಶ್ರಿತವಾಗಿ ಅರೆಯಲ್ಪಡುತ್ತಲೆ ಇದ್ದು ಆಹಾರಪದಾರ್ಥ ದೃಶ್ಯಕಣಗಳಿಂದ ಮಂದವಾದ ಹಾಲಿನಂಥ ಕಲಿಲದ್ರಾವಣವಾಗಿ ಮಾರ್ಪಡುತ್ತದೆ. ಇಷ್ಟರ ಮಟ್ಟಿಗೆ ಮಾರ್ಪಟ್ಟ ಮೇಲೆಯೆ ಉಂಗುರಸ್ನಾಯು ಸಡಿಲವಾಗಿ ಮುಂದಿನ ಸರ್ಪಗತಿ ಚಲನೆ ಉಂಟಾದಾಗ ಈ ದ್ರಾವಣ ಕರುಳಿನೊಳಕ್ಕೆ ಪ್ರವೇಶಿಸುವುದು. ಆಗಲೂ ಅದರ ಸ್ವಭಾವ ಹದವಾಗಿಲ್ಲದಿದ್ದರೆ (ಮುಂಗರುಳಿನ ನರಗಳಿಂದ ಈ ಮಾಹಿತಿ ಲಭಿಸುತ್ತದೆ) ಉಂಗುರಸ್ನಾಯು ಪುನಃ ಸಂಕೋಚಿಸಿ ಆಹಾರದ ಕರುಳಿನ ಪ್ರವೇಶಕ್ಕೆ ತಡೆಹಾಕಿಬಿಡುತ್ತದೆ. ಸರಿಯಾದ ಹದಕ್ಕೆ ಬಂದ ದ್ರಾವಣ ಮಾತ್ರ ಈ ರೀತಿ ನಿಯಂತ್ರಿತವಾಗಿ ಕರುಳಿನೊಳಕ್ಕೆ ಪ್ರವೇಶ ಮಾಡುತ್ತಿರುವ ಕಾರಣ ಜಠರದಲ್ಲಿ ತಂಗಿದ್ದ ವಸ್ತುವೆಲ್ಲವೂ ಕರುಳಿಗೆ ಪ್ರವೇಶ ಮಾಡಲು ಸುಮಾರು ಐದರಿಂದ ಆರು ಗಂಟೆಗಳು ಬೇಕಾಗುತ್ತವೆ.

ಜಠರದಲ್ಲಿ ಯಾಂತ್ರಿಕ ರೀತಿಯ ಈ ಪಚನಕ್ರಿಯೆ ಜರಗುತ್ತಿರುವಂತೆಯೇ ಜಠರರಸದ ಉತ್ಪತ್ತಿಯೂ ಆಗುತ್ತಿದ್ದು ಸಹಕಾಲದಲ್ಲಿಯೇ ಅಲ್ಲಿ ರಾಸಾಯನಿಕ ಪಚನವೂ ಜರಗುತ್ತದೆ. ಆಹಾರ ಜಠರದಲ್ಲಿ ಶೇಖರವಾಗುತ್ತ ಅದನ್ನು ಹಿಗ್ಗಿಸುವುದರಿಂದ ಅಲ್ಲಿ ನರಪ್ರಚೋದನೆ ಆಗಿ ಅನೈಚ್ಛಿಕ ಪ್ರತಿಕ್ರಿಯಾವಿಧಾನದಿಂದ ಜಠರದ ಲೋಳೆಪೊರೆಯಲ್ಲಿರುವ ಗ್ರಂಥಿಗಳು ಜಠರರಸವನ್ನು ಸ್ರವಿಸಲು ಪ್ರಾರಂಭಿಸುತ್ತವೆ. ಜಠರಕ್ಕೆ ಆಹಾರ ಪ್ರವೇಶ ಮಾಡದೆ ಅದು ಬಾಯಿಯಲ್ಲಿ ಉಳಿದಿದ್ದರೂ ಅಥವಾ ಪ್ರತಿತುತ್ತನ್ನೂ ವ್ಯಕ್ತಿ ಉಗುಳಿಬಿಡುತ್ತಿದ್ದರೂ ಸ್ವಲ್ಪವಾಗಿಯಾದರೂ ಜಠರರಸ ಉತ್ಪತ್ತಿ ಆಗುವುದು ನಿಜ. ಆಹಾರದ ರುಚಿ, ಪರಿಮಳ, ನೋಟಗಳು ನರಗಳ ಮೂಲಕ ಜಠರರಸವನ್ನು ಉತ್ಪಾದಿಸಬಲ್ಲವು. ಹೀಗೆ ವಿವಿಧ ರೀತಿಗಳಲ್ಲಿ ನರಪ್ರಚೋದನೆ ಒದಗಿ ಅದರಿಂದ ನಿಯಂತ್ರಿತವಾದ ಜಠರಸ್ರಾವ ಆಹಾರ ಸೇವಿಸಿದ ಮೇಲೆ ಸುಮಾರು ಒಂದು ಗಂಟೆಯ ಕಾಲ ಕಂಡು ಬರುತ್ತದೆ. ಸ್ರವಿಸಲ್ಪಟ್ಟ ಜಠರರಸ ರಾಸಾಯನಿಕ ಪಚನವನ್ನು ಪ್ರಾರಂಭಿಸಿ ಆಹಾರದ ಜಟಿಲ ರಚನೆಯ ಘಟಕಗಳನ್ನು ಛಿದ್ರಿಸಿ ಇನ್ನೂ ಸರಳ ರಚನೆಯ ಘಟಕಗಳಾಗಿ ಮಾರ್ಪಡಿಸುತ್ತದೆ. ಬಹುಶಃ ಈ ಘಟಕಗಳು ಇಲ್ಲವೆ ಸ್ವಯಂ ಆಹಾರ ವಸ್ತುವೆ ಜಠರದ ಲೋಳೆಪೊರೆಯ ಕೋಶಗಳ ಮೇಲೆ ಪ್ರಭಾವ ಬೀರಿ ಅವುಗಳಲ್ಲಿ ಗ್ಯಾಸ್ಟ್ರಿನ್ ಎಂಬ ಹಾರ್ಮೋನ್ ಉತ್ಪತ್ತಿ ಆಗುವಂತೆ ಮಾಡುತ್ತವೆ. ಇದು ಜಠರದಲ್ಲಿ ರಕ್ತಗತವಾಗಿ ಹೃದಯಕ್ಕೆ ಬಂದು ಸೇರಿ ರಕ್ತಪರಿಚಲನೆಯ ಮೂಲಕ ದೇಹದ ಎಲ್ಲೆಡೆಗು ಸಾಗುತ್ತದೆ. ಆದರೆ ಇದಕ್ಕೆ ಜಠರದ ಲೋಳೆಪೊರೆಯಲ್ಲಿರುವ ಸೂಕ್ಷ್ಮ ಗ್ರಂಥಿಗಳ ವಿನಃ ದೇಹದ ಬೇರೆ ಭಾಗ ಯಾವುದೂ ಪ್ರತಿಕ್ರಿಯೆ ತೋರಿಸುವುದಿಲ್ಲ. ಜಠರ ಗ್ರಂಥಿಗಳು ಮಾತ್ರ ತೀವ್ರವಾಗಿ ಉದ್ರೇಕಿಸಲ್ಪಟ್ಟು ರಸವನ್ನು ಹೇರಳವಾಗಿ ಸ್ರವಿಸುತ್ತವೆ. ಹೀಗಾಗಿ ಜಠರದಲ್ಲಿ ಜೀರ್ಣಕ್ರಿಯೆ ನಡೆಯುತ್ತಿರುವಷ್ಟು ಕಾಲವೂ ಜಠರರಸ ಉತ್ಪಾದನೆ ಆಗುತ್ತಿರುವಂತೆ ಹಾರ್ಮೋನಿನಿಂದ ನಿಯಂತ್ರಿತವಾಗಿದೆ. ಗ್ಯಾಸ್ಟ್ರಿನ್ ಅಲ್ಲದೆ ಎಂಟೆರೋಗ್ಯಾಸ್ಟ್ರೋನ್ ಎಂಬ ಹಾರ್ಮೋನೂ ಜಠರದ ಲೋಳೆಪೊರೆಯಿಂದ ಉತ್ಪತ್ತಿ ಆಗುವುದು ತಿಳಿದಿದೆ. ಆಹಾರದಲ್ಲಿ ಮೇದಸ್ಸಿನ ಅಂಶ ಹೆಚ್ಚಾಗಿದ್ದಾಗ ಈ ಹಾರ್ಮೋನಿನ ಉತ್ಪತ್ತಿ ಪ್ರಚೋದಿತವಾಗುತ್ತದೆಂದು ತಿಳಿದಿದೆ. ಎಂಟೆರೋಗ್ಯಾಸ್ಟ್ರೋನ್ ಕೂಡ ಜಠರದ ಮೇಲೆ ಮಾತ್ರವೆ ಪ್ರಭಾವ ಉಳ್ಳದ್ದಾಗಿದೆ. ಎಂಟೆರೋಗ್ಯಾಸ್ಟ್ರೋನಿನಿಂದ ಜಠರರಸದ ಉತ್ಪತ್ತಿ, ಅದರಲ್ಲೂ ಹೈಡ್ರೋಕ್ಲೋರಿಕ್ ಆಮ್ಲಘಟಕದ ಉತ್ಪತ್ತಿ, ತಗ್ಗುವುದು ತಿಳಿದಿದೆ. ಅಲ್ಲದೆ ಇದು ಜಠರದ ಸ್ನಾಯುಗಳ ಚಟುವಟಿಕೆಯನ್ನು ತಗ್ಗಿಸುತ್ತದೆ. ಆದ್ದರಿಂದಲೆ ಮೇದಸ್ಸಿನ ಅಂಶ ಹೆಚ್ಚಾಗಿರುವ ಆಹಾರ ಮಾಮೂಲಿಗಿಂತ ಹೆಚ್ಚು ಕಾಲ ಜಠರದಲ್ಲಿ ತಂಗುತ್ತದೆ. ಇದರ ಫಲವಾಗಿ ಅಂಥ ಆಹಾರ ಸೇವನೆಯಿಂದ ಬಹುಕಾಲ ಹೊಟ್ಟೆ ಭರ್ತಿ ಆಗಿರುವಂತೆ ಅನುಭವ ಆಗುತ್ತದಲ್ಲದೆ ಪುನಃ ಹೊಟ್ಟೆ ಹಸಿವಾಗುವುದೂ ತಡವಾಗಿ ಕಂಡು ಬರುತ್ತದೆ.

ಜಠರದಲ್ಲಿ ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಪೆಪ್ಸಿನ್ ಎಂಬ ಕಿಣ್ವ ಪ್ರಧಾನ ಘಟಕಗಳೆರಡೂ ಒಟ್ಟಾಗಿ ಆಹಾರದ ಸಸಾರಜನಕದ ಅಂಶದ ಮೇಲೆ ವರ್ತಿಸಿ ಅದರ ಬಹು ಜಟಿಲವಾದ ಬೃಹದಣುಗಳನ್ನು ವಿಭಜಿಸಿ ಸ್ವಲ್ಪ ಸಣ್ಣದಾದ ಅಣುಗಳಾಗಿ ಮಾಡುತ್ತವೆ. ಪ್ರಧಾನವಾಗಿ ಹಾಲು ಆಹಾರವಾಗಿರುವ ಮಕ್ಕಳಲ್ಲಿ ಕುಡಿದಹಾಲು ಜಠರದಲ್ಲಿ ಗರಣೆ ಕಟ್ಟಿ ಮೊಸರಾಗುತ್ತದೆ. ಇದರಿಂದ ಅದು ಕರುಳಿಗೆ ಕೂಡಲೆ ಸಾಗಿಹೋಗದೆ ತಕ್ಕಷ್ಟು ಕಾಲ ಜಠರದಲ್ಲಿ ತಂಗಿರುವಂತಾಗಿ ಅಲ್ಲಿಯ ಪಚನಲಾಭ ಹಾಲಿಗೆ ದೊರೆಯುವಂತಾಗಿದೆ. ಹಾಲನ್ನು ಗರಣೆ ಕಟ್ಟಿಸುವ ಕಾರ್ಯ ಆ ವಯಸ್ಸಿನ ವ್ಯಕ್ತಿಯ ಜಠರರಸದಲ್ಲಿರುವ ರೆನ್ನಿನ್ ಎಂಬ ಇನ್ನೊಂದು ಕಿಣ್ವದ ಕ್ರಿಯೆ ಎಂದು ಹೇಳಲಾಗಿದೆ. ರೆನ್ನಿನ್ ಇಲ್ಲದಿದ್ದರೂ ಪೆಪ್ಸಿನ್ನೇ ಹಾಲನ್ನು ಮೊಸರು ಮಾಡುತ್ತದೆ ಎಂದೂ ಅಭಿಪ್ರಾಯವಿದೆ.

ಇಲ್ಲಿಯ ತನಕ ಜರುಗಿರುವ ರಾಸಾಯನಿಕಕ್ರಿಯೆ ಭಾಗಶಃ ಮಾತ್ರ. ಏಕೆಂದರೆ ಬಾಯಿಯಲ್ಲಿ ಪಿಷ್ಟದ ರಾಸಾಯನಿಕ ಪಚನಪ್ರಾರಂಭವಾದರೂ ಕಾಲಾವಕಾಶವಿಲ್ಲದೆ ಪೂರ್ಣವಾಗುವುದಿಲ್ಲ. ಸಸಾರಜನಕ, ಮೇದಸ್ಸು ಹಾಗೂ ಸಕ್ಕರೆ ಘಟಕಗಳು ಹಾಗೆಯೇ ಉಳಿದುಕೊಂಡಿರುತ್ತವೆ. ಜಠರದಲ್ಲಿ ಸಸಾರಜನಕ ಘಟಕ ಮಾತ್ರ ಸ್ವಲ್ಪಮಟ್ಟಿಗೆ ಪಚನವಾಗುತ್ತದೆ. ಕಬ್ಬಿನ ಸಕ್ಕರೆಯೂ ಬಹುಶಃ ಭಾಗಶಃ ಪಚನವಾಗಿರಬಹುದು. ಆದರೆ ಪಿಷ್ಟ ಮತ್ತು ಮೇದಸ್ಸು ರೂಪಕ ಘಟಕಗಳು ಹಾಗೆಯೇ ಇರುತ್ತವೆ. ಅಂದರೆ ಆಹಾರ ಯಾಂತ್ರಿಕವಾಗಿ ಪೂರ್ಣ ಮತ್ತು ರಾಸಾಯನಿಕವಾಗಿ ಭಾಗಶಃ ಮಾತ್ರ ಪಚನವಾಗಿದ್ದು ಹಾಲಿನಂತೆ ಕಾಣುವ ದ್ರವರೂಪ ತಾಳಿರುತ್ತದೆ. ಇಂಥ ಆಹಾರವಸ್ತು ಮುಂದೆ ಕರುಳನ್ನು ಪ್ರವೇಶಿಸುತ್ತದೆ.

ಭಾಗಶಃ ರಾಸಾಯನಿಕ ಪಚನಗೊಂಡ ಆಹಾರವಸ್ತು ಸಣ್ಣ ಕರುಳಿನಲ್ಲಿ ಪೂರ್ಣವಾಗಿ ಪಚನವಾಗುತ್ತದೆ. ಸಣ್ಣ ಕರುಳಿನ ಲೋಳೆಪೊರೆಯಿಂದ ಉತ್ಪತ್ತಿ ಆಗುವ ಕರುಳುರಸ, ಮೇದೋಜೀರಕಾಂಗದಿಂದ ಉತ್ಪತ್ತಿ ಆಗಿ ನಾಳದ ಮೂಲಕ ಕರುಳಿನೊಳಕ್ಕೆ ಹರಿದು ಬರುವ ಮೇದೋಜೀರಕ ರಸ ಮತ್ತು ಪಿತ್ತಕೋಶದಲ್ಲಿ ಶೇಖರವಾಗಿದ್ದು ಪ್ರಸಕ್ತ ಕಾಲದಲ್ಲಿ ಪಿತ್ತರಸನಾಳದ ಮೂಲಕ ಕರುಳಿನೊಳಕ್ಕೆ ಹರಿದು ಬರುವ ಪಿತ್ತರಸ – ಈ ಮೂರು ಜೀರ್ಣರಸಗಳ ಮಿಶ್ರಣ ಆಹಾರ ರಾಸಾಯನಿಕವಾಗಿ ಪೂರ್ಣ ಪಚನಗೊಳ್ಳುವುದಕ್ಕೆ ಕಾರಣ. ಇವುಗಳ ಪೈಕಿ ಅತಿ ಪ್ರಬಲವಾದದ್ದೆಂದರೆ ಮೇದೋಜೀರಕರಸ. ಇದರಲ್ಲಿ ಸಸಾರಜನಕ, ಪಿಷ್ಟ ಮತ್ತು ಮೇದಸ್ಸುಗಳೆಲ್ಲವನ್ನೂ ಜೀರ್ಣಿಸುವ, ಅಂದರೆ ರಾಸಾಯನಿಕವಾಗಿ ವಿಭಜಿಸುವ, ಕಿಣ್ವಗಳು ಅನೇಕ ಇವೆ. ಜಠರರಸದಿಂದ ಭಾಗಶಃ ಪಚನಗೊಂಡ ಸಸಾರಜನಕ ವಸ್ತುಗಳ ವಿಭಜನೆ ಮುಂದುವರಿದು ಅವು ಪಾಲಿಪೆಪ್ಟೈಡುಗಳೆಂಬ ರಾಸಾಯನಿಕಗಳಾಗಿ ಮಾರ್ಪಡುತ್ತವೆ. ಆಹಾರದಲ್ಲಿರುವ ಸಸಾರಜನಕಗಳ ಬೃಹದಣುಗಳಿಗೆ ಹೋಲಿಸಿದರೆ ಪಾಲಿಪೆಪ್ಟೈಡುಗಳ ಅಣುಗಳು ಬಲು ಚಿಕ್ಕವು. ಸಸಾರಜನಕ ವಸ್ತುಗಳು ಪಾಲಿಪೆಪ್ಟೈಡುಗಳಾಗುವ ಪರಿವರ್ತನೆಯಲ್ಲಿ ಮೇದೋಜೀರಕ ರಸದ ಕೈಮೋಟ್ರಿಪ್ಸಿನ್ ಮತ್ತು ಟ್ರಿಪ್ಸಿನ್ ಎಂಬ ಕಿಣ್ವಗಳು ಭಾಗವಹಿಸುತ್ತವೆ. ಜೊಲ್ಲಿನಿಂದ ಭಾಗಶಃ ಪಚನಗೊಂಡಿರಬಹುದಾದ ಪಿಷ್ಟ ಪೂರ್ಣವಾಗಿ ಮೇದೋಜೀರಕರಸದ ಅಮೈಲೇಸ್ ಎಂಬ ಕಿಣ್ವದಿಂದ ವಿಭಜಿಸಲ್ಪಟ್ಟು ಮಾಲ್ಟೋಸ್ ಆಗಿ ಪರಿವರ್ತಿತವಾಗುತ್ತದೆ. ಇವೆರಡು ಪಚನಗಳಿಗಿಂತ ಮುಖ್ಯವಾಗಿ ಮೇದೋಜೀರಕರಸ ಅದರ ಹೆಸರೇ ಹೇಳುವಂತೆ ಮೇದಸ್ಸನ್ನು ಜೀರ್ಣಿಸುತ್ತದೆ. ಬಾಯಿಯಲ್ಲಾಗಲಿ ಜಠರದಲ್ಲಾಗಲಿ ಜೀರ್ಣವೇ ಆಗಲಾರದ ಮೇದಸ್ಸು ಈ ರಸದಲ್ಲಿರುವ ಲೈಪೇಸ್ ಎಂಬ ಕಿಣ್ವದಿಂದ ಗ್ಲಿಸರಿನ್ ಮತ್ತು ವಿವಿಧ ಮೇದೋಆಮ್ಲಗಳಾಗಿ ವಿಭಜಿಸಲ್ಪಡುತ್ತದೆ. ಜಠರರಸದಲ್ಲೂ ಲೈಪೇಸ್ ಇದೆ ಎಂದು ಹೇಳಲಾದರೂ ಆ ರಸದ ಅತ್ಯಾಮ್ಲತೆಯಿಂದಾಗಿ ಲೈಪೇಸ್ ಕ್ರಿಯಾಶೀಲವಾಗಲು ಸಾಧ್ಯವಾಗದ್ದರಿಂದ ಮೇದಸ್ಸಿನ

ಅಂಶ ಜಠರದಲ್ಲಿ ಸ್ವಲ್ಪವೂ ಪಚನವಾಗದೆ ಕರುಳಿಗೆ ಬರುತ್ತದೆ. ಮೇದಸ್ಸಿನ ಪಚನಕ್ಕೆ ಕಾರಣವಾದ ಕಿಣ್ವ ಮೇದೋಜೀರಕ ರಸದ ಲೈಪೇಸ್ ಒಂದೇ ಎಂದು ಧಾರಾಳವಾಗಿ ಹೇಳಬಹುದು. ಮೇದೋಜೀರಕರಸದಲ್ಲಿ ಇರುವ ಈ ವಿವಿಧ ಕಿಣ್ವಗಳು ಗ್ರಂಥಿಯಿಂದ ಸ್ರವಿಸಲ್ಪಟ್ಟ ರೂಪದಲ್ಲಿ ಜಡವಾಗಿದ್ದು ಆಹಾರದ ಯಾವ ಘಟಕವನ್ನೂ (ಪ್ರಮುಖವಾಗಿ ಸಸಾರಜನಿಕ ಘಟಕವನ್ನು ಈ ಸಂದರ್ಭದಲ್ಲಿ ಗಣನೆಗೆ ತೆಗೆದುಕೊಳ್ಳುವುದು ವಾಡಿಕೆ) ರಾಸಾಯನಿಕ ವಿಭಜನೆ ಮಾಡಲಾರದಂತಿರುತ್ತದೆ. ಆದರೆ ಈ ರಸ ಕರುಳು ರಸದೊಡನೆ ಮಿಶ್ರವಾದಾಗ ಕರುಳು ರಸದಲ್ಲಿರುವ ಎಂಟೆರೋ ಕೈನೇಸ್ ಎಂಬ ಕಿಣ್ವ ಮೇದೋಜೀರಕರಸದ ಕಿಣ್ವಗಳನ್ನು ಚುರುಕುಗೊಳಿಸಿ ಪಚನ ಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುತ್ತದೆ. ಅಂದರೆ ಮೇದೋಜೀರಕರಸದ ಪ್ರಾಬಲ್ಯ ಅದು ಕರುಳು ರಸದೊಡನೆ ಮಿಶ್ರವಾದ ಮೇಲೆಯೇ ವ್ಯಕ್ತವಾಗತಕ್ಕದ್ದಾಗಿದೆ.

ಮೇದೋಜೀರಕರಸದ ಸಫಲ ಕ್ರಿಯೆಗೆ ಕರುಳುರಸ ಎಷ್ಟು ಅಗತ್ಯವೊ ಅಷ್ಟೆ ಅಗತ್ಯವಾದ್ದು ಪಿತ್ತರಸ ಕೂಡ. ಮೇದಸ್ಸಿನ ಬೃಹದಣುಗಳು ತಕ್ಕಮಟ್ಟಿಗೆ ದೊಡ್ಡವು ಮತ್ತು ನೀರಿನಲ್ಲಿ ಲೀನವಾಗದವು. ಜಠರದಲ್ಲಿ ದ್ರವವಾಗಿ ರೂಪಾಂತರಿಸಲ್ಪಟ್ಟು ಕರುಳಿಗೆ ಧಾವಿಸುವ ಆಹಾರವಸ್ತುವಿನಲ್ಲಿ ಮೇದಸ್ಸಿನ ಘಟಕಗಳು ಬಲು ಸಣ್ಣ ಬಿಂದುಗಳಾಗಿ ತೇಲುತ್ತಿರುವುದನ್ನು ಕಾಣಬಹುದು. ಇಂಥ ಕಣಗಳನ್ನು ಲೈಪೇಸ್ ಸುಲಭವಾಗಿ ರಾಸಾಯನಿಕ ವಿಭಜನೆಗೊಳಿಸಲಾರದು. ಇಂಥ ವಿಭಜಿತ ಕಣಗಳು 0.0005 – 0.001 ಮಿಮೀ ನಷ್ಟು ಗಾತ್ರದ ಅತಿ ಸಣ್ಣ ತುಂತುರುಗಳ ರೂಪದಲ್ಲಿ ಇರುವುದು ಅವಶ್ಯಕ. ಮೇದಸ್ಸು ಇಂಥ ಅತಿ ಸೂಕ್ಷ್ಮರೂಪದ ತುಂತುರುಗಳಾಗುವಂತೆ ಪಿತ್ತರಸದ ಲವಣಗಳು ಮಾಡಬಲ್ಲವು. ಆದ್ದರಿಂದ ಪಿತ್ತರಸ ಲೈಪೇಸಿನ ಕ್ರಿಯೆಗೆ ಅವಶ್ಯಕ. ಲೈಪೇಸಿನ ಕ್ರಿಯೆಯಿಂದ ಬಿಡುಗಡೆ ಆದ ಮೇದೋಆಮ್ಲಗಳು ಸಾಬೂನುಗಳಾಗಿ (ಸೋಪ್ಸ್) ಪರಿವರ್ತಿತವಾಗುತ್ತವೆ. ಇವು ಮೇದಸ್ಸನ್ನು ಲೈಪೇಸಿನ ಕ್ರಿಯೆಗೆ ತಕ್ಕಷ್ಟು ಸಣ್ಣವಾದ ತುಂತುರುಗಳಾಗಿ ಮಾಡುತ್ತವೆ. ಅಲ್ಲದೆ ಭಾಗಶಃ ರಾಸಾಯನಿಕ ವಿಭಜನೆಗೊಂಡ ಮೇದಸ್ಸಿನ ಬೃಹದಣು ಪಿತ್ತರಸ ಲವಣಗಳೊಡನೆ ಸೇರಿ ಸಂಯುಕ್ತ ರಾಸಾಯನಿಕವಾಗಿ ಅದೂ ಮೇದಸ್ಸಿನ ಕಣಗಳನ್ನು ಅತ್ಯಂತ ಕಿರಿಹನಿಗಳಾಗಿ ಮಾಡುತ್ತದೆ. ಅಂದರೆ ಲೈಪೇಸಿನಿಂದ ಮೇದಸ್ಸಿನ ಹನಿಗಳ ರಾಸಾಯನಿಕ ವಿಭಜನೆ ಆಗುವುದರಿಂದ ದೊರೆಯುವ ವಸ್ತುಗಳೆ ಮೇದಸ್ಸಿನ ಕಣಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಕಿರು ಹನಿಗಳಾಗಿ ಛಿದ್ರಿಸುತ್ತವೆ. ಮೇದಸ್ಸಿನ ಮೇಲೆ ಲೈಪೇಸ್ ವರ್ತಿಸಿ ಮೇದೋಆಮ್ಲ ಮತ್ತು ಗ್ಲಿಸರಿನನ್ನು ಬಿಡುಗಡೆ ಮಾಡಿದರೆ ಮೇದಸ್ಸಿನ ಪಚನ ಸಿದ್ಧಿಸಿತು ಎಂದು ಹೇಳುವಂತಿಲ್ಲ. ಏಕೆಂದರೆ ಮೇದೋಆಮ್ಲಗಳು ಮೇದಸ್ಸಿಗಿಂತ ಎಲ್ಲೊ ಸ್ವಲ್ಪಮಟ್ಟಿಗೆ ಸರಳವಾಗಿಸಲ್ಪಟ್ಟ ಬೃಹದಣುಗಳಿಂದಾದವು. ಅಲ್ಲದೆ ಇವು ಮೇದಸ್ಸಿನಂತೆಯೇ ನೀರಿನಲ್ಲಿ ವಿಲೀನವಾಗಲಾರದ ರಾಸಾಯನಿಕಗಳು. ನೀರಿನಲ್ಲಿ ವಿಲೀನಿವಾಗುವಂತಾದರೆ ಅವು ರಕ್ತಗತವಾಗಬಲ್ಲವು. ಆ ಘಟ್ಟ ತಲುಪಿದರೆ ಪಚನ ಪೂರ್ಣವಾದಂತೆ. ಪಿತ್ತರಸ ಲವಣಗಳು ಮೇದೋಆಮ್ಲಗಳನ್ನು ನೀರಿನಲ್ಲಿ ವಿಲೀನವಾಗುವಂತೆ ಮಾಡುತ್ತವೆ. ಮೇದಸ್ಸು ಪೂರ್ಣಪಚನವಾಗುವಂತೆ ಪಿತ್ತರಸ ಹೀಗೆ ವಿವಿಧ ರೀತಿಗಳಲ್ಲಿ ಅಗತ್ಯವಾಗಿವೆ. ಪಚನ ಕ್ರಿಯೆಯಲ್ಲಿ ಪಿತ್ತರಸದ ಪಾತ್ರ ಇದರ ಹೊರತಾಗಿ ಬೇರೆ ಏನೂ ಇರುವುದಿಲ್ಲ.

ಆಹಾರದ ಸಸಾರಜನಕ, ಪಿಷ್ಟ ಮತ್ತು ಮೇದಸ್ಸು ಘಟಕಗಳು ಜೊಲ್ಲು, ಜಠರ ರಸ, ಮೇದೋಜೀರಕರಸ ಮತ್ತು ಪಿತ್ತರಸಗಳಿಂದ ಮೇಲೆ ವಿವರಿಸಿರುವ ಘಟ್ಟದವರೆಗೆ ಪಚನವಾದ ಬಳಿಕ ಕರುಳು ರಸದಲ್ಲಿರುವ ಕಿಣ್ವಗಳು ಪಚನಕಾರ್ಯವನ್ನು ಮುಂದುವರಿಸಿ ಮುಗಿಸುತ್ತವೆ. ಮೇದೋಜೀರಕರಸದಲ್ಲಿಯಂತೆಯೆ ಕರುಳುರಸದಲ್ಲಿ ಕೂಡ ಆಹಾರದ ಮೂರು ಪ್ರಮುಖ ಘಟಕಗಳ ಮೇಲೆಯು ವರ್ತಿಸುವ ವಿವಿಧ ಕಿಣ್ವಗಳು ಇವೆ. ಸಸಾರಜನಕಘಟಕದಿಂದ ಈಗಾಗಲೆ ಭಾಗಶಃ ಪಚನದಿಂದ ಬಿಡುಗಡೆ ಹೊಂದಿರುವ ಪಾಲಿಪೆಪ್ಟೈಡುಗಳ ಮೇಲೆ ಹಲವುಕಿಣ್ವಗಳು ವರ್ತಿಸಿ ಅವನ್ನೆಲ್ಲ ಸರಳ ರಚನೆಯ ಹಾಗೂ ನೀರಿನಲ್ಲಿ ವಿಲೀನವಾಗುವ ಅಮೈನೋ ಆಮ್ಲಗಳಾಗಿ ಪೂರ್ಣವಾಗಿ ವಿಭಜಿಸುತ್ತವೆ. ಪಿಷ್ಟದ ಪಚನದಿಂದ ಲಭಿಸುವ ಮಾಲ್ಟೋಸ್ ಸಕ್ಕರೆಯನ್ನು ಕರುಳು ರಸದ ಮಾಲ್ಟೇಸ್ ಎಂಬ ಕಿಣ್ವ ವಿಭಜಿಸಿ ಇನ್ನೂ ಸರಳವಾದ ಗ್ಲೂಕೋಸ್ ಸಕ್ಕರೆಯನ್ನಾಗಿಸುತ್ತದೆ. ಜಠರದಲ್ಲಿ ಕಬ್ಬಿನ ಸಕ್ಕರೆ ಅಲ್ಪಸ್ವಲ್ಪ ವಿಭಜಿಸಲ್ಪಟ್ಟು ಗ್ಲೂಕೋಸ್ ಮತ್ತು ಫ್ರಕ್ಟೋಸ್ ಎಂಬ ಸರಳ ಸಕ್ಕರೆಗಳಾಗುತ್ತವೆಂಬ ಸಂಗತಿಯನ್ನು ಮೇಲೆ ಹೇಳಿದೆ. ಉಳಿದ ಕಬ್ಬಿನ ಸಕ್ಕರೆ ಕರುಳು ರಸದ ಸುಕ್ರೇಸ್ ಅಥವಾ ಇನ್ವರ್ಟೇಸ್ ಎಂಬ ಕಿಣ್ವದಿಂದ ಪೂರ್ಣವಾಗಿ ವಿಭಜಿತವಾಗಿ ಗ್ಲೂಕೋಸ್ ಮತ್ತು ಫ್ರಕ್ಟೋಸಾಗಿ ಪರಿವರ್ತಿತವಾಗುತ್ತದೆ. ಸೇವಿಸಿದ ಹಾಲಿನಲ್ಲಿರುವ ಲ್ಯಾಕ್ಟೋಸ್ ಎಂಬ ಸಕ್ಕರೆ ಇತರ ಜೀರ್ಣರಸಗಳ ದಾಳಿಗೆ ಮಣಿಯದೆ ಕರುಳು ರಸದಲ್ಲಿರುವ ಲ್ಯಾಕ್ಟೇಸ್ ಎಂಬ ಕಿಣ್ವದಿಂದ ವಿಭಜನೆಗೊಂಡು ಗ್ಲೂಕೋಸ್ ಮತ್ತು ಗ್ಯಾಲಾಕ್ಟೋಸ್ ಎಂಬ ಸರಳ ರಚನೆಯ ಇನ್ನೊಂದು ಸಕ್ಕರೆಯಾಗಿ ಪರಿವರ್ತಿತವಾಗುತ್ತದೆ. ಕರುಳುರಸದಲ್ಲಿ ಸ್ವಲ್ಪ ಲೈಪೇಸ್ ಇದ್ದರೂ ಮೇದಸ್ಸಿನ ಅಂಶ ಮೇದೋಜೀರಕರಸ ಮತ್ತು ಪಿತ್ತರಸಗಳಿಂದ ಈಗಾಗಲೆ ಪೂರ್ಣವಾಗಿ ಪಚನವಾಗಿರುವುದರಿಂದ ಅದಕ್ಕೆ ವಿಶೇಷ ಪ್ರಾಮುಖ್ಯವೇನೂ ಇಲ್ಲ. ಈ ಪಚನಗಳಷ್ಟೇ ಅಲ್ಲದೆ ಆಹಾರದಲ್ಲಿ ಇರಬಹುದಾದ ಜೀವರಸದ (ಪ್ರೋಟೋಪ್ಲಾಸ್ಮ್) ಘಟಕಗಳಾದ ಮತ್ತು ಬಹು ಜಟಿಲ ರಚನೆಯ ರಾಸಾಯನಿಕಗಳಾದ ನ್ಯೂಕ್ಲಿಯಿಕ ಆಮ್ಲಗಳನ್ನು ನ್ಯೂಕ್ಲಿಯೇಸ್ ಎಂಬ ಕಿಣ್ವಗಳು ಪೂರ್ಣವಾಗಿ ವಿಭಜಿಸಿ ಸರಳರಚನೆಯ ರಾಸಾಯನಿಕಗಳಾಗಿ ಮಾರ್ಪಡಿಸುತ್ತವೆ.

ಹೀಗೆ ಕರುಳಿನಲ್ಲಿರುವ ಜೀರ್ಣರಸಮಿಶ್ರಣದಿಂದ ರಾಸಾಯನಿಕ ಪಚನ ಪೂರ್ಣಗೊಳ್ಳುತ್ತದೆ. ಬಾಯಿಯಲ್ಲಿ ಮತ್ತು ಜಠರದಲ್ಲಿ ಯಾಂತ್ರಿಕವಾಗಿ ಹಾಗೂ ಭಾಗಶಃ ರಾಸಾಯನಿಕವಾಗಿ ಪಚನವಾಗಿದ್ದರೆ ಕರುಳಿನಲ್ಲಿ ಪೂರ್ಣ ಪಚನ ಸಿದ್ಧಿಸುವುದು ಸುಲಭ. ಈ ಪೂರ್ಣಪಚನ ಆಗದೆ ಇದ್ದರೆ ಕರುಳಿನಲ್ಲಿ ಸ್ವಲ್ಪಮಟ್ಟಿಗೆ ಪಚನವಾಗುತ್ತದೆ. ದ್ರವೀಕರಿಸಲ್ಪಟ್ಟ ಆಹಾರಪದಾರ್ಥ ಜಠರದಿಂದ ಕರುಳಿಗೆ ಹರಿದುಬಂದಾಗ ಕರುಳಿನ ಲೋಳೆಪೊರೆಯಲ್ಲಿರುವ ಅಸಂಖ್ಯಾತ ಸೂಕ್ಷ್ಮರೂಪಕ ಗ್ರಂಥಿಗಳಿಂದ ಕರುಳುರಸ ಸ್ರವಿಸಲ್ಪಡುತ್ತದೆ. ಭಾಗಶಃ ಜೀರ್ಣಗೊಂಡಿರುವ ಆಹಾರ ಘಟಕಗಳೆ ಈ ಸ್ರಾವಕ್ಕೆ ಕಾರಣ. ಇವು ಮುಂಗರುಳಿನ ಕೋಶಗಳನ್ನು ಪ್ರಚೋದಿಸುವುದರಿಂದ ಹಾರ್ಮೋನುಗಳು ಉತ್ಪತ್ತಿ ಆಗಿ ಅಲ್ಲೆ ರಕ್ತಗತವಾಗಿ ರಕ್ತಪರಿಚಲನೆಯಿಂದ ದೇಹದ ಎಲ್ಲೆಡೆಗು ಒಯ್ಯಲ್ಪಡುತ್ತವೆ. ಕರುಳು ಗ್ರಂಥಿಗಳ ಹೊರತಾಗಿ ಮಿಕ್ಕೆಡೆ ಏನೂ ಪ್ರಭಾವವಿಲ್ಲದ ಇವು ಕರುಳು ರಸ ಉತ್ಪತ್ತಿ ಆಗುವಂತೆ ಪ್ರಚೋದಿಸುತ್ತವೆ. ಅಂದರೆ ಆಹಾರ ಕರುಳಿಗೆ ಬಂದಾಗ ಮತ್ತು ಕರುಳಿನಲ್ಲಿ ಇರುವಾಗ ಕರುಳುರಸ ಉತ್ಪತ್ತಿ ಆಗುತ್ತಿರುವಂತೆ ಏರ್ಪಟ್ಟಿರುವ ಕ್ರಮ ಇದು. ಕರುಳುರಸ ಸ್ರಾವದಲ್ಲಿ ಈ ರೀತಿಯ ಹಾರ್ಮೋನ್ ನಿಯಂತ್ರಣವೆ ಮುಖ್ಯ. ನರ ನಿಯಂತ್ರಣದಿಂದ ಕರುಳುರಸ ಉತ್ಪಾದಿತವಾಗುವುದು ಬಹುಶಃ ಅತ್ಯಲ್ಪ.

ಕರುಳಿಗೆ ಬಂದು ಸೇರುವ ಆಹಾರವಸ್ತುವಿನಲ್ಲಿ ಇರುವ ಮೇದಸ್ಸಿನ ಘಟಕಗಳು ಮುಂಗರುಳಿನ ಲೋಳೆಪೊರೆಯ ಕೋಶಗಳನ್ನು ಪ್ರಚೋದಿಸುವುದರಿಂದ ಕೋಲಿಸಿಸ್ಟೋಕೈನಿನ್ ಎಂಬ ಹಾರ್ಮೋನು ಉತ್ಪಾದಿತವಾಗುತ್ತದೆ. ಇದು ಪಿತ್ತಕೋಶ ಮತ್ತು ಮೇದೋಜೀರಕ ಗ್ರಂಥಿಯ ಮೇಲೆ ಪ್ರಭಾವುಳ್ಳ ಹಾರ್ಮೋನ್. ರಕ್ತಪರಿಚಲನಾಕ್ರಮದಿಂದ ಈ ಹಾರ್ಮೋನ್ ಪಿತ್ತಕೋಶವನ್ನು ತಲುಪಿದಾಗ ಪಿತ್ತಕೋಶ ಸಂಕೋಚಿಸುತ್ತದೆ. ಅದರಲ್ಲಿ ಸಾಂದ್ರೀಕರಿಸಲ್ಪಟ್ಟು ಶೇಖರವಾಗಿರುವ ಪಿತ್ತರಸ ನಾಳದ ಮೂಲಕ ಹರಿದು ಬಂದು ಮುಂಗರುಳನ್ನು ಸೇರುತ್ತದೆ. ಮೇದಸ್ಸು ಪಚನವಾಗಲು ಅಗತ್ಯವಾದ ಪಿತ್ತರಸ ಮೇದಸ್ಸು ಕರುಳಿನಲ್ಲಿ ಇದ್ದ ಕಾಲದಲ್ಲಿ ಮಾತ್ರ ಕರುಳಿಗೆ ಬಂದು ಸೇರುವ ಇಂಥ ನಿಯಂತ್ರಣವನ್ನು ಬಿಟ್ಟು ಕರುಳಿನಲ್ಲಿ ಪಿತ್ತರಸದ ಹಾಜರಿಗೆ ಬೇರೆ ಅಂದರೆ ನರಗಳ ಮೂಲಕ ನಿಯಂತ್ರಣ ಅಗಣ್ಯ.

ಕೊಲಿಡಸಿಸ್ಟೋಕೈನಿನ್ ಮೇದೋಜೀರಕ ಗ್ರಂಥಿಯು ಸ್ರವಿಸುವಂತೆ ಪ್ರಚೋದಿಸುವದರಿಂದ ಮೇದೋಜೀರಕ ರಸವು ಸಣ್ಣ ಕರುಳನ್ನು ಸೇರಿ ಮೇದಸ್ಸಿನ ಜೀರ್ಣ ಕ್ರಿಯೆಗೆ ಸಹಾಯವಾಗುತ್ತದೆ.

ಜೀರ್ಣರಸಮಿಶ್ರಣದಿಂದ ಆಹಾರ ಘಟಕಗಳ ಪಚನವಾಗಿ ಕರುಳಿನಲ್ಲಿ ಬಿಡುಗಡೆ ಆಗುತ್ತಿರುವ ಪೋಷಕಗಳು ಆಗಾಗಲೇ ಕರುಳಿನ ರಕ್ತನಾಳಗಳಿಂದ ಹೀರಲ್ಪಟ್ಟು ರಕ್ತವಾಗುತ್ತವೆ. ಪಚನ ಹಾಗೂ ರಕ್ತಗತವಾಗುವಿಕೆ ಎರಡೂ ಜೋಡಿಯಾಗಿಯೆ ಸಣ್ಣಕರುಳಿನ ಉದ್ದಕ್ಕೂ ಜರಗುವುದು. ಇದಕ್ಕಾಗಿ ಸಣ್ಣ ಕರುಳಿನಲ್ಲಿರುವ ಆಹಾರ ಮತ್ತು ಜೀರ್ಣರಸಗಳ ಮಿಶ್ರಣದ್ರವ ಕರುಳಿನ ಆದಿಯಿಂದ ಅಂತ್ಯದವರೆಗೂ ವ್ಯವಸ್ಥಿತ ರೀತಿಯಲ್ಲಿ ಸಾಗುತ್ತದೆ. ಸುಮಾರು 6.5 ಮೀ ದೂರವನ್ನು ಕ್ರಮಿಸಲು ಹೆಚ್ಚು ಕಡಿಮೆ ಎರಡು ಗಂಟೆಗಳು ಬೇಕಾಗುತ್ತವೆ. ಸಾಗಣೆಗೆ ಮುಖ್ಯ ಕಾರಣ ಸಣ್ಣ ಕರುಳಿನಲ್ಲಿ ಕಾಣಬರುವ ಸರ್ಪಗತಿ ಚಲನೆ. ಸಣ್ಣ ಕರುಳಿನಲ್ಲಿ ಉದ್ದಕ್ಕೂ ಎಲ್ಲಿಯಾದರೂ ಪ್ರಾರಂಭವಾಗಬಹುದಾದ ಈ ಚಲನೆ ಒಂದೊಂದು ಸಲವೂ ಸುಮಾರು 10–20 ಸೆಂಮೀ ನಷ್ಟು ದೂರ ಕರುಳಿನ ಒಳಗಿರುವ ವಸ್ತುವನ್ನು ಸಾಗಿಸಬಲ್ಲದು. ಕರುಳಿನಲ್ಲಿ ಸರ್ಪಗತಿಚಲನೆ ಯಾವಾಗಲೂ ಆದಿಯಿಂದ ಅಂತ್ಯಮುಖವಾಗಿಯೆ ಸಾಗುತ್ತದೆ. ಈ ಚಲನೆ ತಲೆಕೆಳಗಾಗಿ ಆದಿಮುಖವಾಗಿ ಸಾಗದಂತಿರುವುದು ಸಣ್ಣಕರುಳಿನ ಸ್ನಾಯುಗಳ ಚಟುವಟಿಕೆ ನಿಯಂತ್ರಣ ವೈಶಿಷ್ಟ್ಯ. ಜೀರ್ಣನಾಳದುದ್ದಕ್ಕೂ ಅದರ ಎರಡೂ ಸ್ನಾಯುಪದರಗಳ ನಡುವೆ ನರಕೋಶಗಳ ಹಾಗೂ ಅವುಗಳ ಚಾಚುಗಳ ವಿಶಿಷ್ಟ ನರಜಾಲ ಉಂಟು. ಇದೇ ಮೇಲೆ ಹೇಳಿದಂತೆ ವ್ಯವಸ್ಥಿತ ರೀತಿಯಲ್ಲಿ ಸರ್ಪಗತಿಚಲನೆ ಉಂಟಾಗುವಂತೆ ನಿಯಂತ್ರಿಸುವುದಾಗಿದೆ. ಜೀರ್ಣನಾಳದ ಉದ್ದಕ್ಕೂ ಯಾವುದೇ ಭಾಗ ಆಹಾರ ವಸ್ತುವಿನಿಂದ ಹಿಗ್ಗಿಸಲ್ಪಟ್ಟಾಗಲೂ ಆ ಸ್ಥಳದಲ್ಲಿ ನರ ಪ್ರಚೋದನೆ ಉದ್ಭವಿಸುವುದು ಸಹಜ. ಈ ಪ್ರಚೋದನೆ ಮೇಲೆ ಹೇಳಿರುವ ನರಜಾಲದಲ್ಲಿ ಹಿಂದಕ್ಕೂ ಮುಂದಕ್ಕೂ ಪಸರಿಸುತ್ತದೆ. ಮುಂದೆ ಪಸರಿಸಿದ

ಫಲವಾಗಿ ಅಲ್ಲಿಯ ಸ್ನಾಯುಗಳು ವ್ಯಾಕೋಚಿಸಿ ಜೀರ್ಣನಾಳದ ಆ ಭಾಗ ಸಡಿಲಗೊಂಡು ಸುಲಭವಾಗಿ ಹಿಗ್ಗುವಂತಾಗುವುದು. ಹಿಂದಕ್ಕೆ ಪಸರಿಸಿದ ಫಲವಾಗಿ ಅಲ್ಲಿಯ ಸ್ನಾಯುಗಳು ಸಂಕೋಚಿಸಿ ಮತ್ತು ಜೀರ್ಣನಾಳದ ಆ ಭಾಗದ ವ್ಯಾಸಕಿರಿದಾಗಿ ಒಳಗಿರುವ ವಸ್ತುವಿನ ಮೇಲೆ ಒತ್ತಡ ಉಂಟಾಗುವುದು. ಇದರಿಂದ ಆ ವಸ್ತು ಮುಂಚೆಯೇ ಸುಲಭವಾಗಿ ಹಿಗ್ಗುವಂತೆ ಮಾಡಲ್ಪಟ್ಟಿರುವ ಮುಂದಿನ ಭಾಗಕ್ಕೆ ನೂಕಲ್ಪಡುತ್ತದೆ. ನೈಸರ್ಗಿಕವಾಗಿ ಹೀಗೆ ಏರ್ಪಟ್ಟಿರುವ ನಿಯಂತ್ರಣದಿಂದ ಜೀರ್ಣನಾಳದಲ್ಲಿ ಆಹಾರ ಮುಂದಕ್ಕೆ ಸಾಗುತ್ತಿರುವುದೆ ಹೊರತು ಹಿಮ್ಮೊಗವಾಗಿ ಸಾಗುವಂತಿಲ್ಲ. ಸರ್ಪಗತಿಚಲನೆ ಸಣ್ಣ ಕರುಳಿನಲ್ಲಿ ಕಂಡುಬರುವಷ್ಟು ವ್ಯವಸ್ಥಿತ ರೀತಿಯಲ್ಲಿ ಮತ್ತೆಲ್ಲೂ ಕಂಡುಬರುವುದಿಲ್ಲ.

ಸರ್ಪಗತಿಚಲನೆಯ ಜೊತೆಗೆ ಸಣ್ಣಕರುಳಿನಲ್ಲಿ ಇನ್ನೆರಡು ರೀತಿಯ ಚಲನೆಗಳೂ ಕಂಡುಬರುತ್ತವೆ. ಒಂದು ರೀತಿಯ ಚಲನೆಯಲ್ಲಿ, ಕರುಳಿನೊಳಗೆ ಆಹಾರ ತುಂಬಿರುವ ಒಂದು ಭಾಗದಲ್ಲಿ, ಕ್ಲುಪ್ತಸ್ಥಳಗಳಲ್ಲಿ ಉಂಗುರದಂಥ ಸಂಪೀಡನಗಳು ಏಕಕಾಲದಲ್ಲಿ ಕಂಡುಬರುತ್ತವೆ. ಇದರಿಂದ ಆಹಾರವಸ್ತು ಅಷ್ಟೆ ಖಂಡಗಳಾಗಿ ವಿಭಾಗಿಸಲ್ಪಡುತ್ತದೆ. ಮರುಗಳಿಗೆಯಲ್ಲೆ ಪ್ರತಿಯೊಂದು ಖಂಡದ ಮಧ್ಯದಲ್ಲಿ ಸಂಪೀಡನೆಗಳು ಉಂಟಾಗಿ ಮೊದಲಿನ ಸಂಪೀಡನ ಸ್ಥಳಗಳು ವ್ಯಾಕೋಚಿಸುತ್ತವೆ. ಇದರಿಂದ ಒಳವಸ್ತುವಿನ ಪ್ರತಿಖಂಡವೂ ಇಬ್ಭಾಗವಾಗಿ ಕೂಡಲೆ ಒಂದು ಖಂಡದ ಅರ್ಧ, ಪಕ್ಕದ ಖಂಡದ ಅರ್ಧದೊಡನೆ ಸೇರಿ ಹೊಸ ಖಂಡವಾಗುತ್ತದೆ. ಇಂಥ ಹೊಸ ಖಂಡಗಳ ಮಧ್ಯೆ ಪುನಃ ಸಂಪೀಡನಗಳು ಉಂಟಾಗಿ ಮುಂಚಿನ ಸಂಪೀಡನ ಸ್ಥಳಗಳು ವ್ಯಾಕೋಚಿಸುತ್ತವೆ. ಹೀಗೆ ಪದೇ ಪದೇ ಆಗುತ್ತಿರುವುದರಿಂದ ಕರುಳಿನ ಭಾಗದಲ್ಲಿರುವ ವಸ್ತು ಚೆನ್ನಾಗಿ ಮಿಲನವಾಗುತ್ತದೆ. ಇದು ಖಂಡಕಾರಕ ಚಲನೆ (ಸೆಗ್‌ಮೆಂಟೇಷನ್ ಮೂವ್‌ಮೆಂಟ್). ಇನ್ನೊಂದು ರೀತಿಯ ಚಲನೆಯಲ್ಲಿ ಕರುಳಿನ ಒಂದು ಗೊಳಸು (ಲೂಪ್) ಆ ಭಾಗದ ಸ್ನಾಯುಗಳ ವ್ಯಾಕೋಚನದಿಂದ ಲಂಬಿಸಿ ಪುನಃ ಸ್ನಾಯುಗಳ ಸಂಕೋಚನದಿಂದ ಗಿಡ್ಡವಾಗುತ್ತದೆ. ತತ್ಫಲವಾಗಿ ಆ ಗೊಳಸು ಲೋಲಕದಂತೆ ತೂಗಾಡುತ್ತದೆ ಮತ್ತು ಅದರ ಒಳಗಿರುವ ವಸ್ತುಗಳು ಚೆನ್ನಾಗಿ ಮಿಶ್ರಿತವಾಗುತ್ತವೆ. ಇದು ಲೋಲಕ ಚಲನೆ (ಪೆನ್‌ಡ್ಯುಲರ್ ಮೂವ್‌ಮೆಂಟ್). ಮೇಲಿನ ಎರಡು ಚಲನಗಳಿಂದಲು ಕರುಳಿನ ಒಳಗಿರುವ ವಸ್ತು ಮುಂದಕ್ಕೆ ಸಾಗುವುದಿಲ್ಲ. ಬದಲು ಒಂದು ನಿರ್ದಿಷ್ಟ ಭಾಗದಲ್ಲಿರುವ ವಸ್ತು ಚೆನ್ನಾಗಿ ಮಿಶ್ರಿತವಾಗುತ್ತದೆ. ಇದರಿಂದ ಜೀರ್ಣರಸಗಳು ಆಹಾರವನ್ನು ಪಚನಮಾಡುವ ಕ್ರಿಯೆ ಚೆನ್ನಾಗಿ ಸಿದ್ಧಿಸುವಂತಿದೆ.

ಕರುಳಿನಲ್ಲಿ ರಾಸಾಯನಿಕ ಪಚನಕ್ರಮದಿಂದ ಬಿಡುಗಡೆ ಆದ ಅಮೈನೋ ಆಮ್ಲಗಳು, ಸರಳ ಸಕ್ಕರೆಗಳು, ಮೇದೋಆಮ್ಲಗಳು ಇತ್ಯಾದಿ ಪೋಷಕಗಳನ್ನು ಕರುಳಿನ ವಿಲ್ಲೈಗಳು ದ್ರಾವಣರೂಪದಲ್ಲಿ ಹೀರಿಕೊಂಡು ರಕ್ತಗತವಾಗಿಸುತ್ತವೆ. ಅತಿ ಸೂಕ್ಷ್ಮಾಕಾರದ ಬೆರಳುಗಳಂತಿರುವ ಈ ವಿಲ್ಲೈಗಳು ಪದೇಪದೇ ಲಂಬಿಸುತ್ತ ಗಿಡ್ಡವಾಗುತ್ತ ಪಿಚಕಾರಿಯ ಅಡುಬೆಣೆಯಂತೆ (ಪಿಸ್ಟನ್) ವರ್ತಿಸಿ ಪೋಷಕಗಳನ್ನು ಹೀರಿಕೊಂಡು ತಮ್ಮೊಳಗಿರುವ ರಕ್ತನಾಳಗಳೊಳಕ್ಕೆ ನೂಕುತ್ತವೆ. ವಿಲ್ಲೈಗಳ ಈ ಚಲನೆಯನ್ನು ನಿಯಂತ್ರಿಸುವುದು ವಿಲ್ಲಿಕೈನಿನ್ ಎಂಬ ಹಾರ್ಮೋನ್. ಜೀರ್ಣನಾಳಗಳ ಮೇಲೆ ವರ್ತಿಸುವ ಅನೇಕ ಹಾರ್ಮೋನುಗಳಂತೆ ಇದು ಸಹ ಮುಂಗರುಳಿನ ಲೋಳೆಪೊರೆಯ ಕೋಶಗಳಲ್ಲಿ ಉತ್ಪತ್ತಿ ಆಗುತ್ತದೆ. ಪಚನಕ್ರಿಯೆಯಿಂದ ಮುಕ್ತಗೊಳಿಸಲ್ಪಟ್ಟ ಪೋಷಕಗಳೆ ಈ ಕೋಶಗಳನ್ನು ಪ್ರಚೋದಿಸಿ ವಿಲ್ಲಿಕೈನಿನ್ನು ಉತ್ಪಾದಿಸುವುದರಿಂದ ಅವುಗಳ ಹೀರಿಕೆ ಹಾಗೂ ರಕ್ತಗತವಾಗುವಿಕೆ ಸಿದ್ಧಿಸಿದೆ. ವಿಲ್ಲೈಗಳ ಚಲನೆ ಇಲ್ಲದಿದ್ದರು ಈ ಪೋಷಕಗಳು ಅವುಗಳಿಂದ ಹೀರಲ್ಪಡುವುದು ರಕ್ತಗತವಾಗುವುದು ಉಂಟು.

ಸಣ್ಣ ಕರುಳಿನಲ್ಲಿ ಸಾಗುತ್ತಿರುವ ಆಹಾರವಸ್ತು ಕರುಳಿನ ಅಂತ್ಯಭಾಗಕ್ಕೆ ತಲುಪುವಷ್ಟರಲ್ಲಿ ಅದರಲ್ಲಿರುವ ಪೋಷಕಗಳೆಲ್ಲ ದ್ರಾವಣರೂಪದಲ್ಲಿ ಹೀರಲ್ಪಡುವುದರಿಂದ ಆ ಭಾಗದಲ್ಲಿ ಉಳಿದಿರುವುದು ಸುಮಾರು 0.5 ಲೀ ನಷ್ಟು ಪಚನವಾಗದ ವಸ್ತುಗಳ ದ್ರಾವಣ ಮಾತ್ರ, ಸಣ್ಣ ಕರುಳಿನ ಅಂತ್ಯಭಾಗದ ಸರ್ಪಗತಿ ಚಲನೆಯಿಂದ ಇದು ದೊಡ್ಡಕರುಳಿಗೆ ಸಾಗುತ್ತದೆ. ಸಣ್ಣ ಕರುಳಿಗೂ ದೊಡ್ಡ ಕರುಳಿಗೂ ನಡುವೆ ಇರುವ ಉಂಗುರಸ್ನಾಯುವಿನ ಕ್ರಿಯೆಯಿಂದಾಗಿ ವಸ್ತು ಸಣ್ಣ ಕರುಳಿನಿಂದ ದೊಡ್ಡಕರುಳಿಗೆ ಸಾಗುತ್ತದೆಯೆ ವಿನಃ ವಿಪರ್ಯಾಯವಾಗಿ ಅಲ್ಲ. ದೊಡ್ಡಕರುಳಿನಲ್ಲಿ ಸರ್ಪಗತಿಚಲನೆ ಕಂಡುಬಂದರೂ ಅದು ಸಣ್ಣಕರುಳಿನಲ್ಲಿಯಂತಿಲ್ಲ. ದೊಡ್ಡಕರುಳಿನಲ್ಲಿ ಒಂದು ಸರ್ಪಗತಿ ಅಲೆಗು ಇನ್ನೊಂದಕ್ಕು ನಡುವೆ ಸುಮಾರು ಎರಡು ಮೂರು ಗಂಟೆಗಳ ಅವಧಿ ಇರಬಹುದು. ಆದರೆ ಒಂದೊಂದು ಸಲ ಏರ್ಪಟ್ಟ ಚಲನೆಯೂ 30–60 ಸೆಂಮೀ ಗಳಷ್ಟು ದೂರ ಪಸರಿಸಿ ಒಳಗಿರುವ ವಸ್ತುವನ್ನು ಒಮ್ಮೆಗೇ ಅಷ್ಟು ದೂರ ಸಾಗಿಸುತ್ತದೆ. ಸಾಮಾನ್ಯವಾಗಿ ಆಹಾರ ಶೇಷ ದೊಡ್ಡಕರುಳನ್ನು ತಲುಪುವುದು ಆ ಆಹಾರವನ್ನು ಸೇವಿಸಿದ ಆರರಿಂದ ಎಂಟುಗಂಟೆಗಳ ತರುವಾಯ. ಈ ವೇಳೆಯಲ್ಲಿ ಇನ್ನೊಂದು ಸಲ ಆಹಾರ ಸೇವಿಸುವುದು ಸಾಮಾನ್ಯ. ಇದು ಜಠರವನ್ನು ಹೊಕ್ಕು ಅದನ್ನು ಹಿಗ್ಗಿಸುವುದರಿಂದ ನರಪ್ರಚೋದನೆ ಉಂಟಾಗಿ, ಅನೈಚ್ಛಿಕ ಪ್ರತಿಕ್ರಿಯಾಕ್ರಮದ ಮೂಲಕ ದೊಡ್ಡಕರುಳಿನ ಸ್ನಾಯುಗಳಿಗೆ ಪ್ರಚೋದನೆ ಒದಗಿ ಅಲ್ಲಿ ಸರ್ಪಗತಿ ಚಲನೆ ಪ್ರಾರಂಭವಾಗುತ್ತದೆ. ಮುಂದೆ ಕೆಲವು ಗಂಟೆಗಳ ತರುವಾಯ ಇನ್ನೊಂದು ಸಲ ಆಹಾರ ಸೇವಿಸಿದಾಗ ಇದೇ ಕ್ರಮದಲ್ಲಿ ವಸ್ತು ದೊಡ್ಡಕರುಳಿನಲ್ಲಿ ಇನ್ನೂ ಅಷ್ಟು ದೂರ ಸಾಗುತ್ತದೆ. ಹೀಗೆ ನಿಧಾನವಾಗಿ ಸಾಗುತ್ತಿರುವಾಗ ಅದರ ದ್ರವಾಂಶ ಹೀರಲ್ಪಟ್ಟು ಅದು ಘನೀಭವಿಸುತ್ತ ಗಟ್ಟಿಯಾದ ಮಲವಸ್ತುವಾಗಿ ಪರಿಣಮಿಸಿ ದೊಡ್ಡಕರುಳಿನ ಅಂತ್ಯಭಾಗವಾದ ಮಲಕೋಶದಲ್ಲೊ ಅದರ ನೆಲೆಯಲ್ಲೊ ಶೇಖರಿಸಿರುತ್ತದೆ. ಮುಂದಿನ ಸರ್ಪಗತಿ ಚಲನೆಯ ಕಾಲ ಅನುಕೂಲವಾಗಿದ್ದರೆ ಮಲದ್ವಾರದ ಉಂಗುರಸ್ನಾಯು ಐಚ್ಛಿಕವಾಗಿ ಸಡಿಲಗೊಳಿಸಲ್ಪಟ್ಟು ಮಲವಿಸರ್ಜನೆಯಾಗುತ್ತದೆ.

***

**ಪರತಂತ್ರ ಕೀಟಗಳು:** ಕೀಟ ವರ್ಗದಲ್ಲಿ ಬಹು ಸಂಖ್ಯೆಯ ಕೀಟಗಳು ಪರತಂತ್ರ ಜೀವಿಗಳು(ಪ್ಯಾರಾಸೈಟ್). ಬಹುಪಾಲು ಗಾತ್ರದಲ್ಲಿ ಚಿಕ್ಕದಾಗಿರುವ ಕಾರಣ, ಅವುಗಳ ಆಶ್ರಯ ಜೀವಿಯ ಅರಿವಿಗೆ ಬರುವುದಿಲ್ಲ. ಒಂದು ದಶಲಕ್ಷ ಕೀಟಗಳಲ್ಲಿ ಅರ್ಧಭಾಗಕ್ಕೂ ಹೆಚ್ಚಿನವು ಪರೋಪಜೀವಿಗಳು. ಅವುಗಳಲ್ಲಿ ಪರತಂತ್ರ ಕೀಟಗಳು ಹೈಮೆನಾಪ್ಟರ ಮತ್ತು ಡಿಪ್ಟರ ಗಣಗಳಲ್ಲಿ ಹೆಚ್ಚಾಗಿವೆ.

ಡಿಪ್ಟರ ಗಣದ ಬಾಂಬಿಲಿಡೆ, ಪೈಪೆಂಕ್ಯುಲಿಡೆ, ಕೊನೋಪಿಡೆ, ಪಿರ್ಗೊಟಿಡೆ, ಅಗ್ರೊಮೈಜಿಡೆ, ಸಾರ್ಕೊಫಜಿಡೆ, ಮತ್ತು ಟ್ಯಾಕಿನಿಡೆ ಕುಟುಂಬಗಳಲ್ಲಿ ಪರತಂತ್ರ ಕೀಟಗಳಿವೆ.

ಹೈಮೆನಾಪ್ಟರ ಗಣದ ಬ್ರಾಕೊನಿಡೆ, ಇಕ್ನೂಮಾನಿಡೆ, ಚಾಲಿಡಿಡೆ, ಪ್ಲಾಟಿಗ್ಯಾಸ್ಟ್ರಿಡೆ, ಬೆಥಿಲಿಡೆ, ಸ್ಕೊಲಿಡೆ, ಮತ್ತು ಟಿಫಿಯಿಡೆ ಕುಟುಂಬಗಳಲ್ಲಿ ಪರತಂತ್ರ ಜೀವಿಗಳಿವೆ.

ಪರತಂತ್ರ ಕೀಟಗಳ ಜೀವನ ಹಲವು ರೀತಿಯಲ್ಲಿ ವೈವಿಧ್ಯಮಯವಾಗಿದೆ. ಗಂಡು ಹೆಣ್ಣು ಹೆಚ್ಚಾಗಿ ಸಸ್ಯಗಳ ಮೇಲೆ ಆಸರೆ ಪಡೆದಿವೆ. ಅವುಗಳ ಆಹಾರ ಹಣ್ಣು, ಹೂವುಗಳ ಮಧು, ಜೇನು, ಜಿಡ್ಡು ಪದಾರ್ಥ. ಆದರೆ ಅವುಗಳ ಸಂತಾನೋತ್ಪತ್ತಿ ಬೇರೆ ಕೀಟ ಅಥವಾ ಬೇರೆ ಪ್ರಾಣಿಗಳ ಮೇಲೆ. ಪರತಂತ್ರ ಹೆಣ್ಣುಕೀಟ ತನ್ನ ಮೊಟ್ಟೆಯನ್ನು ಬೇರೆ ಕೀಟ ಅಥವ ಪ್ರಾಣಿಗಳ ಮೇಲೆ ಅಥವಾ ಒಳಗಡೆ ಇಡುತ್ತದೆ. ಕೆಲವು ಪರತಂತ್ರ ಕೀಟಗಳು ಬೇರೆ ಕೀಟಗಳ ಮೊಟ್ಟೆಯೊಳಗೆ ಮೊಟ್ಟೆಗಳನ್ನಿಡುತ್ತವೆ. ಈ ಮೊಟ್ಟೆಗಳು ಒಡೆದು ಮರಿಗಳಾದನಂತರ ಆಶ್ರಯ ಮೊಟ್ಟೆಯನ್ನೇ ತಿಂದು ಹೊರಗೆ ಬರುತ್ತವೆ. ಇಂತಹ ಪರತಂತ್ರ ಕೀಟಗಳನ್ನು ಉಪದ್ರವಕಾರಿ ಕೀಟಗಳ ಹತೋಟಿ ಮಾಡಲು ಕೃಷಿಕರು ಬಳಸುತ್ತಾರೆ. ಕೆಲವು ಕ್ಯಾಟರ್‌ಪಿಲ್ಲರ್ ಮತ್ತು ಕೋಶಗಳ ಮೇಲೆ ವೃದ್ಧಿಯಾಗುತ್ತವೆ. ಇವು ತೆಂಗಿನ ಗರಿ ತಿನ್ನುವ ಹುಳದಮೇಲೆ ವಾಸಿಸುತ್ತವೆ. ಹಲವಾರು ಕಾಂಡ ಕೊರೆಯುವ ಹುಳುಗಳು ಪರತಂತ್ರ ಕೀಟಗಳ ಆಶ್ರಯ ಪಡೆಯುತ್ತವೆ. ಶಲ್ಕ, ಹೇನು, ಜಾಸಿಡ್ ಮುಂತಾದ ರಸ ಹೀರುವ ಉಪದ್ರವ ಕೀಟಗಳನ್ನು ಪರತಂತ್ರ ಕೀಟಗಳಿಂದ ಹತೋಟಿಮಾಡಲಾಗುತ್ತದೆ.

ಸಾರ್‌ಕೊಫೆಜಿಡೆ ಮಾಂಸಾಹಾರಿ ಕೀಟಗಳು ಕೆಲವು ದೊಡ್ಡ ಪ್ರಾಣಿಗಳ ಮೇಲೆ ವಂಶವೃದ್ಧಿಮಾಡುತ್ತವೆ. ಇದೇ ಕೀಟಗಳು ಮೃದ್ವಂಗಿಗಳು, ಎರೆಹುಳಗಳ ಮೇಲೆ ಜೀವಿಸುತ್ತವೆ.

(ಜಿ.ಕೆ.ವಿ.)

**ಪರಿಸರವ್ಯೂಹ:** ಜೀವ ಪರಿಸರ ವ್ಯವಸ್ಥೆ ಒಂದು ನಿರ್ದಿಷ್ಟ ಪ್ರದೇಶದಲ್ಲಿನ ಗಾಳಿ, ನೀರು, ಭೂಮಿ ಜೊತೆ ಸಸ್ಯ, ಪ್ರಾಣಿ, ಸೂಕ್ಷ್ಮಜೀವಿಗಳು ಸಂಘಟಿತ ಮತ್ತು ವ್ಯೂಹಾತ್ಮಕ ರೀತಿಯಲ್ಲಿ ಕಾರ್ಯ ನಿರ್ವಹಿಸುವಿಕೆ. ಆಂಗ್ಲ ಭಾಷೆಯಲ್ಲಿ ಇಕೋಸಿಸ್ಟಮ್ ಎನ್ನುವರು. ಈ ಶಬ್ದವನ್ನು ಬ್ರಿಟಿಷ್ ವಿಜ್ಞಾನಿ ಎ.ಜಿ ಟಾನ್ಸ್ಲೆ 1935 ರಲ್ಲಿ ಪ್ರಥಮವಾಗಿ ಬಳಸಿದ.

ಪರಿಸರ ವ್ಯೂಹದಲ್ಲಿ ನೀರು ಮತ್ತು ಭೂಮಿ ಮೇಲಿರುವ ಜೀವರಾಶಿಗಳ ವೈವಿಧ್ಯತೆ, ಸಂಬಂಧ, ಅವುಗಳ ಕಾರ್ಯ ವಿಧಾನ, ಕಾರ್ಯದಕ್ಷತೆ ಪರಿಸರ ವ್ಯವಸ್ಥೆಯ ಸಮತೋಲನವನ್ನು ಕಾಪಾಡುವುದರಲ್ಲಿ ಸಹಾಯಕವಾಗಿದೆ. ಒಂದು ನಿಶ್ಚಿತ ಪ್ರದೇಶದಲ್ಲಿ ಈ ಜೀವರಾಶಿಗಳು ಹೇಗೆ ವಿಕಾಸಗೊಂಡುವು ಎನ್ನುವುದು ತಿಳಿಯುತ್ತದೆ. ಜೀವರಾಶಿಗಳ ಸ್ವಾವಲಂಬನೆ ಮತ್ತು ಪರಾವಲಂಬನೆ, ಆಹಾರ ಪದ್ಧತಿ, ಪರಿಸರದಲ್ಲಿ ಅವುಗಳ ಪಾತ್ರವನ್ನು ಪರಿಸರವ್ಯೂಹ ಬಿಂಬಿಸುತ್ತದೆ. ಪರಿಸರದಲ್ಲಿ ಆಗುವ ಅನೇಕ ಬದಲಾವಣೆಯನ್ನು ಈ ಜೀವರಾಶಿಗಳು ಹೇಗೆ ನಿಭಾಯಿಸುತ್ತವೆ ಮತ್ತು ಪರಿಸರ ಸಮತೋಲನದೆಡೆ ಹೇಗೆ ಕಾರ್ಯ ನಿರ್ವಹಿಸುತ್ತವೆ ಎನ್ನುವುದು ಪರಿಸರವ್ಯೂಹದ ಪ್ರಮುಖ ವಿಚಾರ. ಪರಿಸರವ್ಯೂಹವು ಮಾನವನ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮೇಲೆ ಪರಿಣಾಮವನ್ನೂ ಉಂಟು

ಮಾಡುತ್ತದೆ. ಪರಿಸರವ್ಯೂಹದಲ್ಲಿ, ಜೀವರಾಶಿಗಳ ರಚನೆಯ ಜೊತೆಯಲ್ಲಿ ಅವುಗಳ ನಡುವೆ ಆಹಾರ ಪದ್ಧತಿ ಹೇಗಿರುತ್ತದೆ ಎಂಬುದನ್ನೂ ಸಹ ಅಭ್ಯಸಿಸಲಾಗುವುದು.

ಪರಿಸರವ್ಯೂಹದಲ್ಲಿ ಭೌತಿಕ ಪರಿಸರದ ಅಂಶಗಳ ನಡುವೆ ಉಂಟಾಗುವ ಪ್ರಕ್ರಿಯೆಗಳನ್ನು ಜೈವಿಕ (ಬಯೋಟಿಕ್) ಮತ್ತು ಅಜೈವಿಕ (ಅಬಯೋಟಿಕ್) ಘಟಕಗಳೆಂದು ವಿಭಾಗಿಸಲಾಗಿದೆ. ಸಸ್ಯ, ಅವುಗಳ ಉದುರಿದ ಎಲೆ, ಪ್ರಾಣಿ ಮತ್ತು ಅವುಗಳ ಉತ್ಪತ್ತಿಯು ಜೈವಿಕ ಅಂಶಗಳಾಗಿವೆ. ಪರಿಸರವ್ಯೂಹದಲ್ಲಿ ಸಸ್ಯಗಳು ದ್ಯುತಿಸಂಶ್ಲೇಷಣೆಯ ಮುಖೇನ ಆಮ್ಲಜನಕವನ್ನು ವಾಯುಮಂಡಲಕ್ಕೆ ನೀಡುತ್ತವೆ. ವಾಯು ಮಂಡಲದಲ್ಲಿಯ ಆಮ್ಲಜನಕದ ಪ್ರಮಾಣ ಸಸ್ಯಗಳ ಮೇಲೆ ಅವಲಂಬಿತವಾಗಿದೆ. ಸಸ್ಯಗಳು ತಯಾರಿಸುವ ಆಹಾರದ ಮೇಲೆ ಅನೇಕ ಪ್ರಾಣಿಗಳು, ಸೂಕ್ಷ್ಮ ಜೀವಿಗಳು ಅವಲಂಬಿತವಾಗಿವೆ.

ಜೀವಿಗಳ ನಡುವೆ ಸಕಾರಾತ್ಮಕ ಹಾಗೂ ನಕಾರಾತ್ಮಕ ಸಂಬಂಧಗಳನ್ನು ಪರಿಸರವ್ಯೂಹ ಬಿಂಬಿಸುತ್ತದೆ. ಸಕಾರಾತ್ಮಕದಲ್ಲಿ ಒಂದು ಜೀವಿ ಇನ್ನೊಂದು ಜೀವಿಗೆ ಅಪಾಯವಾಗದಂತೆ ಅಥವಾ ಪರಿಣಾಮ ಬೀರದಂತೆ ಉಪಯೋಗ ಪಡೆಯುವುದು ಅಥವಾ ಎರಡು ಜೀವಿಗಳು ಪರಸ್ಪರ ಉಪಯೋಗ ಪಡೆಯುವುದು. ಒಂದು ಜೀವಿ ಇನ್ನೊಂದು ಜೀವಿಗೆ ತೊಂದರೆ ಆಗುವ ರೀತಿಯಲ್ಲಿ ಆಹಾರವನ್ನು ಅಥವಾ ಆಶ್ರಯವನ್ನು ಪಡೆಯುವುದು ನಕಾರಾತ್ಮಕ ಸಂಬಂಧ.

ಪರಿಸರವ್ಯೂಹ ಜೈವಿಕ ಘಟಕಗಳಲ್ಲಿ 3 ಗುಂಪುಗಳಿವೆ. ಉತ್ಪಾದಕರು, ಅನುಭೋಗಿಗಳು ಮತ್ತು ವಿಘಟಕಗಳು.

ಪರಿಸರವ್ಯೂಹದ ಅಜೈವಿಕ ಘಟಕಗಳಾದ ಗಾಳಿ, ಮಣ್ಣು, ನೀರು ಮತ್ತು ಮೂಲಭೂತ ವಸ್ತುಗಳನ್ನೊಳಗೊಂಡಿವೆ. ನೀರು, ನೈಟ್ರೋಜನ್, ಸಲ್ಫರ್, ಕಾರ್ಬನ್, ಮುಂತಾದುವುಗಳು ಅಜೈವಿಕ ಪರಿಸರವ್ಯೂಹಕ್ಕೆ ಕಾಲ ಕಾಲಕ್ಕೆ ಮರು ಸೇರ್ಪಡೆಯಾಗುತ್ತಿರುತ್ತವೆ. ಪರಿಸರವ್ಯೂಹದ ಕಾರ್ಯದಲ್ಲಿ ಸಸ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಅವು ಸೂರ್ಯ ಮಂಡಲದ ಬೆಳಕಿನ ಕಿರಣಗಳನ್ನು ಭೂಮಂಡಲದ ನೀರನ್ನು, ವಾಯುಮಂಡಲದ ಇಂಗಾಲದ ಡೈ ಆಕ್ಸೈಡ್‌ನ್ನು ಹೀರಿಕೊಂಡು ಪತ್ರ ಹರಿತ್ತಿನ ಸಹಾಯದಿಂದ ದ್ಯುತಿ ಸಂಶ್ಲೇಷಣೆಯಿಂದ ಆಹಾರ ತಯಾರಿಸುತ್ತವೆ. ಇದರಿಂದ ಬೆಳಕಿನ ಶಕ್ತಿಯನ್ನು ಆಹಾರ ಮುಖೇನ ರಾಸಾಯನಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತವೆ. ಹೀಗೆ ಸಸ್ಯಗಳು ಅಜೈವಿಕ ವಸ್ತುಗಳಿಂದ ಆಹಾರ ಉತ್ಪಾದಿಸಿ, ಪರಿಸರವ್ಯೂಹದಲ್ಲಿನ ಇತರೆ ಜೀವಿಗಳಿಗೆ ಒದಗಿಸುತ್ತವೆ. ಉತ್ಪಾದಿಸುವ ಸಾಮರ್ಥ್ಯವುಳ್ಳ ಸಸ್ಯಗಳಿಗೆ ಉತ್ಪಾದಕಗಳು (ಪ್ರೊಡ್ಯೂಸರ್ಸ್) ಅನ್ನುತ್ತಾರೆ. ಉತ್ಪಾದಕಗಳು ಪ್ರೋಟೀನ್, ಕಾರ್ಬೋಹೈಡ್ರೇಟ್ಸ್ ಮುಂತಾದುವುಗಳನ್ನು ತಯಾರಿಸಿ ಅನುಭೋಗಿಗಳಿಗೆ ಕೊಡುತ್ತವೆ.

ಅನುಭೋಗಿಗಳು (ಕನ್‌ಸ್ಯೂಮರ್ಸ್) ಪರಾವಲಂಬಿ ಜೀವಿಗಳಾಗಿದ್ದು, ಆಹಾರಕ್ಕಾಗಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಉತ್ಪಾದಕ ಜೀವಿಗಳನ್ನು ಅವಲಂಬಿಸಿವೆ. ಅವುಗಳಿಗೆ ತಮ್ಮ ಆಹಾರವನ್ನು ತಾವೇ ಉತ್ಪಾದಿಸಿಕೊಳ್ಳುವ ಸಾಮರ್ಥ್ಯ ಇಲ್ಲ.

ಅನುಭೋಗಿಗಳು ಆಹಾರ ತೆಗೆದುಕೊಳ್ಳುವ ರೀತಿಯನ್ನು ಅನುಸರಿಸಿ, 4 ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. (1) ಸಸ್ಯಾಹಾರಿ (2) ಮಾಂಸಹಾರಿ (3) ಸರ್ವಾಹಾರಿ (4) ಪೂತಿಹಾರಿ. ಉತ್ಪಾದಕಗಳನ್ನು ನೇರವಾಗಿ ಅವಲಂಬಿಸಿರುವ ಅನುಭೋಗಿಗಳಿಗೆ ಪ್ರಾಥಮಿಕ ಅನುಭೋಗಿಗಳು ಎನ್ನುತ್ತಾರೆ. ಇವು ಅಪ್ಪಟ ಸಸ್ಯಾಹಾರಿಗಳು (ಉದಾ: ಮೊಲ, ಕೀಟ, ಆನೆ ಇತ್ಯಾದಿ). ಪ್ರಾಥಮಿಕ ಉತ್ಪಾದಕಗಳನ್ನು ದ್ವಿತೀಯ ಅನುಭೋಗಿಗಳು ತಿನ್ನುತ್ತವೆ. ಇವು ಮಾಂಸಾಹಾರಿಗಳು (ಉದಾ: ಹಾವು, ದೊಡ್ಡ ಮೀನುಗಳು, ಇತ್ಯಾದಿ). ದ್ವಿತೀಯ ಅನುಭೋಗಿಗಳನ್ನು ತೃತೀಯ ಅನುಭೋಗಿಗಳು ತಿನ್ನುತ್ತವೆ (ಉದಾ: ಸಿಂಹ, ಹುಲಿ, ಹದ್ದು, ಇತ್ಯಾದಿ). ಹೀಗೆ ಭೌತಿಕ ಪರಿಸರದಿಂದ ದೊರೆಯುವ ಪದಾರ್ಥಗಳು ಆಹಾರ ಶಕ್ತಿಯ ಮೂಲಕ ಅಚಕ್ರೀಯ ರೂಪದಲ್ಲಿ ಹರಿಯುತ್ತದೆ. ಈ ಶಕ್ತಿಯು ಜೀವಸತ್ವವಾಗಿದ್ದು ಇದರ ಹೊರತಾಗಿ ಯಾವ ಜೀವಿಯೂ ಅಥವಾ ಜೀವ ಪರಿಸರ ವ್ಯವಸ್ಥೆಯೂ ಅಸ್ತಿತ್ವದಲ್ಲಿರುವುದಿಲ್ಲ. ಈ ಶಕ್ತಿಯು ಮೂಲತ: ಸಿಗುವುದು ಸೌರಶಕ್ತಿಯಿಂದ.

ಯಾವುದೇ ಒಂದು ಪರಿಸರವ್ಯೂಹದಲ್ಲಿ ಈ ಶಕ್ತಿಯು ಒಂದೇ ದಿಕ್ಕಿನಲ್ಲಿ ಅಚಕ್ರೀಯ ರೂಪದಲ್ಲಿ ಚಲಿಸುತ್ತದೆ. ಈ ರೀತಿ ಶಕ್ತಿಯು ಒಂದು ಜೀವಿಯಿಂದ ಇನ್ನೊಂದು ಜೀವಿಗೆ ಚಲಿಸುವಾಗ ಭಾಗಶ: ಶಕ್ತಿಯು ಉಸಿರಾಟದ ಅಥವಾ ಶಾಖದ ರೂಪದಲ್ಲಿ ಪರಿಸರಕ್ಕೆ ಚದುರಿ ಹೋಗುತ್ತದೆ. ಒಂದು ಜೀವಿಯಿಂದ ಒಂದು ಬಾರಿ ಉಪಯೋಗಿಸಲ್ಪಟ್ಟ ಶಕ್ತಿಯು ಮತ್ತೆ ಬಳಕೆಗೆ ಬರುವುದಿಲ್ಲ. ಕಾಲ ಕ್ರಮೇಣ ಉತ್ಪಾದಕಗಳು ಮತ್ತು ಅನುಭೋಗಿಗಳು ಸತ್ತಾಗ, ಅವುಗಳ ದೇಹವನ್ನು ವಿಘಟಿಸುವ ಬ್ಯಾಕ್ಟೀರಿಯಾಗಳು (ಸೂಕ್ಷ್ಮಜೀವಿಗಳು) ಅದನ್ನು ಸಣ್ಣ ಸಣ್ಣ ಕಣಗಳನ್ನಾಗಿ ಮಾಡಿ ಭೂಮಿಯಲ್ಲಿ ಸೇರ್ಪಡೆಯಾಗುವಂತೆ ಮಾಡುತ್ತವೆ. ಭೂಮಿಗೆ ಸೇರ್ಪಡೆಯಾದಂಥ ರಸ ಮತ್ತು ಫಲವತ್ತತೆಗಳನ್ನು ಹಸಿರು ಸಸ್ಯಗಳು ಅಥವಾ ಉತ್ಪಾದಕಗಳು ಆಹಾರವನ್ನಾಗಿ ಉಪಯೋಗಿಸಿ, ತಮ್ಮ ಕ್ರಿಯೆಯನ್ನು ಎಂದಿನಂತೆ ಮುಂದುವರಿಸುತ್ತವೆ. ಹೀಗೆ ಪರಿಸರವ್ಯೂಹದ ಕಾರ್ಯ ನಡೆಯುತ್ತಿರುತ್ತದೆ.

ಪರಿಸರ ವ್ಯೂಹದ ಬಗೆಗಳು: ಜೀವಿಗಳ ವಾಸಸ್ಥಾನ ಮತ್ತು ಅದರ ಗುಣಗಳನ್ನು ಆಧರಿಸಿ ವಿವಿಧ ಬಗೆಯ ಪರಿಸರ ವ್ಯೂಹಗಳನ್ನು ಕಾಣಬಹುದು.

1) ಶುದ್ಧ ನೀರಿನ ಪರಿಸರ ವ್ಯೂಹ : ಉದಾ: ಕೊಳ, ಸರೋವರ, ನದಿ.

2) ಕಡಲಿನ ಪರಿಸರ ವ್ಯೂಹ : ಉದಾ: ಸಮುದ್ರ, ಸಾಗರ.

3) ಭೌಗೋಳಿಕ ಪರಿಸರ ವ್ಯೂಹ : ಉದಾ: ಅರಣ್ಯ, ಹುಲ್ಲುಗಾವಲು, ಮರುಭೂಮಿ.

4) ನಗರ ಪರಿಸರ ವ್ಯೂಹ : ಉದಾ: ಮಾನವ ನಿರ್ಮಿತ ಪಟ್ಟಣ (ಅರ್ಬನ್ ಇಕೋಸಿಸ್ಟಂ).

ಎಲ್ಲಾ ಪರಿಸರ ವ್ಯೂಹಗಳನ್ನು ಪ್ರಮುಖವಾಗಿ ಪ್ರಾಕೃತಿಕ (ನ್ಯಾಚುರಲ್) ಮತ್ತು ಕೃತಕ ಪರಿಸರವ್ಯೂಹಗಳೆಂದು ವಿಂಗಡಿಸಬಹುದು.

ಪರಿಸರ ವ್ಯೂಹದಲ್ಲಿ ಶಕ್ತಿ ಹರಿವಿನ ಚಿತ್ರಣ:




ಪ್ರಕೃತಿಯ ಜೀವ ವ್ಯವಸ್ಥೆಯು ಅಥವಾ ಪರಿಸರವ್ಯೂಹವು ಸ್ವಯಂತನವನ್ನು ಹೊಂದಿರುವ ಪರಿಸರ ವ್ಯೂಹವಾಗಿದ್ದು, ಇದರ ಮೇಲೆ ಮಾನವನ ಮಧ್ಯ ಪ್ರವೇಶ ಮತ್ತು ದುರುಪಯೋಗ ಸಾಧ್ಯವಿರುತ್ತದೆ. ಉದಾ: ನದಿ, ಹಳ್ಳ, ಸಾಗರ, ಮರುಭೂಮಿ, ಹರಿದ್ವರ್ಣ ಕಾಡು, ಹುಲ್ಲುಗಾವಲು, ಇತ್ಯಾದಿ. ಕೃತಕ ಪರಿಸರವ್ಯೂಹ ಮಾನವ ನಿರ್ಮಿತವಾಗಿದ್ದು. ಕೃಷಿಭೂಮಿ, ಅಕ್ವೇರಿಯಂ, ನಗರ ಪಟ್ಟಣ, ತೇಗದ ತೋಟಗಳು (ಟೀಕ್ ಪ್ಲಾಂಟೇಷನ್ಸ್) ಇದಕ್ಕೆ ಉದಾಹರಣೆ.

ಸೂಕ್ಷ್ಮ ಪರಿಸರವ್ಯೂಹವು ಸಹ ಪರಿಸರದಲ್ಲಿದೆ. ನಿಶ್ಚಿತ ಪರಿಸರವ್ಯೂಹದಲ್ಲಿನ ಒಂದು ಸಣ್ಣ ಭಾಗದ ಜೀವ ವ್ಯವಸ್ಥೆಯನ್ನು ಸೂಕ್ಷ್ಮಪರಿಸರವ್ಯೂಹ (ಮೈಕ್ರೋಇಕೋಸಿಸ್ಟಂ) ಎನ್ನುವರು. ಉದಾ: ಅರಣ್ಯದಲ್ಲಿನ ಬಂಡೆಗಳ ಮೇಲಿರುವ ಜೀವವ್ಯವಸ್ಥೆ. (ಎ.ಜಿ.ಡಿ.)

**ಪರೋಪಜೀವನ:** ನೆಲೆ ಮತ್ತು ಆಹಾರಕ್ಕಾಗಿ ಒಂದು ಜೀವಿ ಅಥವಾ ಜೀವಿಗಳ ಗುಂಪು ಇನ್ನೊಂದು ಜೀವಿ ಅಥವಾ ಜೀವಿಗಳ ಗುಂಪನ್ನು ಅವಲಂಬಿಸಿ ನಿಕಟ ದೈಹಿಕ ಹಾಗೂ ಜೈವಿಕ ಸಹವಾಸವನ್ನು ಪಡೆದಿರುವ ಸ್ಥಿತಿ (ಪ್ಯಾರಸೈಟಿಸಮ್). ಪರಾವಲಂಬಿಜೀವನ, ಪರಿಪಿಂಡಿತ್ವ ಪರ್ಯಾಯ ನಾಮಗಳು. ಜೀವಿಗಳು ತಮ್ಮ ಜೀವನ ನಿರ್ವಹಣೆಗಾಗಿ ಆಹಾರವನ್ನು ದೊರಕಿಸಿಕೊಳ್ಳಬೇಕಷ್ಟೆ. ಹಾಗೆ ದೊರಕಿಸಿಕೊಳ್ಳಲು ನಾಲ್ಕು ಮಾರ್ಗಗಳು ಲಭ್ಯವಿವೆ : ಸಸ್ಯ ಮಾರ್ಗ, ಪ್ರಾಣಿ ಮಾರ್ಗ, ಬೂಷ್ಟು ಅಣಬೆ ಮಾರ್ಗ ಮತ್ತು ಪರೋಪಜೀವನ ಮಾರ್ಗ. ಸಸ್ಯಗಳು ಸ್ಥಿರಜೀವಿಗಳು. ತಮ್ಮ ನೆಲೆಯಲ್ಲಿ ದೊರೆಯುವ ನೀರು, ಇಂಗಾಲ ಡೈಆಕ್ಸೈಡ್, ಲವಣಗಳು ಮುಂತಾದ ಸರಳ ರಚನೆಯ ರಾಸಾಯನಿಕಗಳಿಂದ ಮತ್ತು ಸೂರ್ಯರಶ್ಮಿ ಶಕ್ತಿಯ ಬಳಕೆಯಿಂದ ಜಟಿಲ ರಚನೆಯ ರಾಸಾಯನಿಕಗಳನ್ನು ಸಂಶ್ಲೇಷಿಸಿಕೊಳ್ಳುತ್ತವೆ. ಇಂಥ ಸಂಶ್ಲೇಷಗಳು ಅಧಿಕ ಸಂಖ್ಯೆಯಲ್ಲಿವೆ.

ವೈವಿಧ್ಯಪೂರ್ಣವಾಗಿಯೂ ಇವೆ. ಪ್ರೋಟೀನ್, ಶರ್ಕರಗಳು, ಮೇದಸ್ಸು, ಜೀವಸತ್ವಗಳು ಮುಂತಾದ ಬಗೆಬಗೆಯ ರಾಸಾಯನಿಕ ಗುಂಪುಗಳಿಗೆ ಸೇರಿದ ವಸ್ತುಗಳು ಉತ್ಪಾದನೆ ಆಗುತ್ತವೆ. ಇವು ಸಸ್ಯಗಳ ಆಹಾರ ಆಗಿರುವುವಲ್ಲದೆ ಹೆಚ್ಚುವರಿ ವಸ್ತುಗಳು ಬೇರು. ಕಾಂಡ, ಎಲೆ, ಫಲ (ಹೂವು, ಕಾಯಿ, ಹಣ್ಣು, ಬೀಜ ಇತ್ಯಾದಿ) ಮುಂತಾದ ವಿವಿಧ ಭಾಗಗಳಲ್ಲಿ ಸಂಗ್ರಹವಾಗಿಯೂ ಇರುತ್ತವೆ. ಸಸ್ಯಾಹಾರಿ ಪ್ರಾಣಿಗಳು ಸಸ್ಯಗಳನ್ನು ಅಹಾರವಾಗಿ ಕಬಳಿಸಿ ಅವುಗಳಲ್ಲಿರುವ ಮೇಲೆ ಹೇಳಿದ ರಾಸಾಯನಿಕ ವಸ್ತುಗಳನ್ನು ಪಚನ ಹಾಗೂ ಉಪಾಪಚಯ (ಮೆಟಬಾಲಿಸಮ್) ಕ್ರಿಯೆಗಳಿಂದ ಬೇಕಾದಂತೆ ಮಾರ್ಪಡಿಸಿಕೊಂಡು ತಮ್ಮ ಜೈವಿಕ ಕ್ರಿಯೆಗಳಿಗಾಗಿ ಬಳಸಿಕೊಂಡು ಬೆಳೆಯುತ್ತವೆ. ಮಾಂಸಾಹಾರಿ ಪ್ರಾಣಿಗಳು ಸಸ್ಯಾಹಾರಿ ಪ್ರಾಣಿಗಳನ್ನು ತಿಂದು ತಮ್ಮ ಆಹಾರ ಅಗತ್ಯವನ್ನು ಪೂರೈಸಿಕೊಳ್ಳುತ್ತವೆ. ಹೀಗೆ ಈ ಎರಡು ಬಗೆಯ ಪ್ರಾಣಿಗಳಿಗೂ ಪ್ರೋಟೀನ್ ಇತ್ಯಾದಿ ವಸ್ತುಗಳು ತಯಾರಾಗಿ ಸಿದ್ಧವಾಗಿಯೇ ಇರುವ ಸಸ್ಯ ಅಥವಾ ಪ್ರಾಣಿಗಳನ್ನು ಆಹಾರವೆಂದು ಗಣಿಸಿ ಅದರ ಸಂಪಾದನೆಗಾಗಿ ಅಲ್ಲಲ್ಲಿ ಅರಸುತ್ತ ಅಲೆಯುವುದು ಅವುಗಳ ವೈಶಿಷ್ಟ್ಯ. ಸತ್ತಿರುವ ಅಥವಾ ಸಾಯುತ್ತಿರುವ ಜೀವಿಗಳು ಅಥವಾ ಅವುಗಳ ಉತ್ಪನ್ನಗಳಿಂದ ಆಹಾರ ಪಡೆಯುವುದು ಅಣಬೆ ಬೂಷ್ಟುಗಳ ರೀತಿ. ಒಂದು ಜೀವಿಯ ಒಳಗೆ ಅಥವಾ ಮೇಲೆ ನೆಲೆಸಿ ತಾವಿದ್ದ ಕಡೆಯೇ ತಮ್ಮ ಆತಿಥೇಯ ತಯಾರಿಸುವ ಆಹಾರವನ್ನು ಪಡೆಯುವುದು ಪರಾವಲಂಬಿ ಜೀವಿಗಳ ವೈಯಕ್ತಿಕತೆ.

ಅಂದರೆ ಸಸ್ಯಗಳನ್ನು ಬಿಟ್ಟರೆ ಮಿಕ್ಕ ಜೀವಿಗಳೆಲ್ಲವೂ ತಮ್ಮ ಆಹಾರಕ್ಕಾಗಿ ಸಸ್ಯಗಳನ್ನೋ ಪ್ರಾಣಿಗಳನ್ನೋ ಅವುಗಳ ಅವಶೇಷಗಳನ್ನೋ ಅವಲಂಬಿಸಿಕೊಂಡಿರುವುದೇ ಸಾಮಾನ್ಯ ಪರಿಸ್ಥಿತಿ. ಪ್ರಾಣಿಗಳು ಓಡಾಡಿಕೊಂಡು ಏನೂ ಅಡಚಣೆ ಇಲ್ಲದೆ ದೊರೆಯುವ ಆಹಾರವನ್ನು ಸೇವಿಸುವುದೂ, ಅಡಚಣೆ ಪ್ರತಿಭಟನೆಗಳು ಏನಾದರೂ ತೋರಿಬಂದರೆ ಉಪಾಯ ಬಲುಮೆಗಳಿಂದ ಅವನ್ನು ನಿವಾರಿಸಿಕೊಂಡು ಆಹಾರ ದೊರಕಿಸಿಕೊಳ್ಳುವುದೂ ಸಾಧಾರಣ ರೀತಿ. ಎರಡು ಪ್ರತ್ಯೇಕ ಗುಂಪುಗಳಿಗೆ ಸೇರಿದ ಜೀವಿಗಳು ಒಂದರೊಡನೆ ಇನ್ನೊಂದು ನಿಕಟ ಸಂಬಂಧ ಹೊಂದಿದ್ದು (ಪ್ರಧಾನವಾಗಿ ಪ್ರತ್ಯಕ್ಷ ಅಥವಾ ಪರೋಕ್ಷ ಆಹಾರ ಸಂಪಾದನೆಗಾಗಿಯೇ) ಒಂದುಗೂಡಿ, ಒಂದಕ್ಕೊಂದು ಪರಸ್ಪರ ಸಹಾಯಕವಾಗಿ ಬಾಳುವುದೂ ಇದೆ. ತಮ್ಮ ನೆಲೆಗಾಗಿ ಮಾತ್ರ ಇನ್ನೊಂದು ಪ್ರಾಣಿ ಅಥವಾ ಸಸ್ಯವನ್ನು ಆಕ್ರಮಿಸಿಕೊಂಡು ಆಹಾರಸಂಪಾದನೆಗೆ ಸ್ವಾವಲಂಬಿಗಳಾಗಿರುವುದೂ ಉಂಟು. ಅನೇಕ ಸಂದರ್ಭಗಳಲ್ಲಿ ಇವನ್ನೂ ಒಂದು ರೀತಿಯ (ಬಾಹ್ಯ) ಪರೋಪಜೀವಿಗಳೆಂದೇ ಗಣಿಸುವುದೂ ಇದೆ. ಒಟ್ಟಿನಲ್ಲಿ ಒಂದು ಜೀವಿ ಇನ್ನೊಂದನ್ನು ಅವಲಂಬಿಸಿಕೊಂಡಿರುವ ವಿಧಾನಗಳನ್ನು ಇಂಥಿಂಥವೇ ಸರಿ ಎಂದು ನಿರ್ದಿಷ್ಟವಾಗಿ ವಿಂಗಡಿಸುವುದು ಕಷ್ಟ. ಪರೋಪಜೀವಿ ಏಕಾಕಿಯಾಗಿ ಇಲ್ಲವೆ ಗುಂಪಾಗಿ ಒಂದು ಆತಿಥೇಯ ಜೀವಿಯನ್ನು ಅವಲಂಬಿಸಿಕೊಂಡಿರುವುದು ಸಾಮಾನ್ಯ. ಒಂದೇ ಪರೋಪಜೀವಿ ಅನೇಕ ಆತಿಥೇಯ ಜೀವಿಗಳನ್ನು ಆಕ್ರಮಿಸುವುದು. ಸಸ್ಯಗಳಲ್ಲಿ ಈ ಬಗೆಗಳು ಸ್ಪಷ್ಟವಾಗಿ ವ್ಯಕ್ತವಾಗಿದೆ. ಬಂದಳಿಕೆ ಮತ್ತು ಗಂಧದಮರ ಇವನ್ನು ಉದಾಹರಣೆಗಳಾಗಿ ಈ ಬಗ್ಗೆ ಉಲ್ಲೇಖಿಸಬಹುದು. ಆದರೆ ಸಸ್ಯಜೀವನದಲ್ಲಿ ಪರಾವಲಂಬನೆ ಅಪರೂಪವಾದದ್ದು. ಪ್ರಾಣಿಗಳಲ್ಲಿ ಪರಾವಲಂಬನೆ ಹೆಚ್ಚು ಸಾಮಾನ್ಯವಾಗಿದ್ದರೂ ಆತಿಥೇಯ ಮತ್ತು ಪರೋಪಜೀವಿಗಳ ಸಂಬಂಧ ಸ್ಪಷ್ಟವಾಗಿಲ್ಲ. ಒಂದು ಪರೋಪಜೀವಿ ಅಥವಾ ಗುಂಪು ದೈಹಿಕ ಬೆಳವಣಿಗೆಯ ಪೂರ್ಣತೆಗಾಗಿ ಮತ್ತು ಇತರ ನೈಸರ್ಗಿಕ ಅಗತ್ಯಕ್ಕಾಗಿ ಎರಡು ಆತಿಥೇಯ ಪ್ರಾಣಿಗಳನ್ನು ಅವಲಂಬಿಸಿರುವುದೂ ಅಹಾರಕ್ಕಾಗಿ ಅನೇಕ ಆತಿಥೇಯ ಪ್ರಾಣಿಗಳನ್ನು ಅವಲಂಬಿಸಿರುವುದೂ ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ. ಪ್ರಕೃತದಲ್ಲಿ ಪರೋಪಜೀವನವೆಂದರೆ ಒಂದು ಪ್ರಾಣಿ ವ್ಯಕ್ತಿಯ ದೇಹದ ಒಳಗೆ ಇದ್ದು ಆತನ ರಕ್ತವನ್ನೊ ಕರುಳಿನಲ್ಲಿ ಪಚನಗೊಂಡಿರುವ ಆಹಾರವನ್ನೂ ದುಗ್ಧರಸವನ್ನೊ ಆಹಾರವಾಗಿ ಬಳಸುವ ಜೀವನವನ್ನು ವಿವರಿಸವುದಾಗಿದೆ.

ಪರೋಪಜೀವನ ನಡೆಸುವ ಪ್ರಾಣಿ ಆಹಾರ ಸಂಪಾದನೆಗೆ ಓಡಾಡುವುದೂ ಹೊಡೆದಾಡುವುದೂ ಅವಶ್ಯವಿಲ್ಲ. ಆದ್ದರಿಂದ ಚಲನಾಂಗಗಳ ಅಗತ್ಯ ಬಳಕೆಗಳು ಕಡಿಮೆ ಆಗುತ್ತ ಎಷ್ಟೋ ಪರೋಪಜೀವಿಗಳಲ್ಲಿ ಅವುಗಳ ಸುಳಿವೂ ಇಲ್ಲವಾಗಿರುತ್ತದೆ. ಒಂದು ಸ್ಥಳದಲ್ಲಿ ನೆಲೆಯಾಗಿ ನಿಂತು ಆಹಾರವನ್ನು ಹೀರಿಕೊಳ್ಳುವ ವಿಧಾನವನ್ನು ಈ ಪ್ರಾಣಿಗಳು ಸಾಮಾನ್ಯವಾಗಿ ರೂಢಿಸಿಕೊಂಡಿರುತ್ತವೆ. ಆದ್ದರಿಂದ ರಕ್ತ ಮತ್ತಿತರ ಆತಿಥೇಯ ದೇಹದ್ರವಗಳು ತಮ್ಮನ್ನು ಕೊಚ್ಚಿಕೊಂಡು ಹೋಗದಂತೆ ಇವು ತಮ್ಮ ಬಾಯಿಯ ನೆರೆಯಲ್ಲಿಯೇ ಚೂಷಕವನ್ನೊ ಕೊಕ್ಕೆಯನ್ನೋ ಹೊಂದಿದ್ದು ಅವುಗಳಿಂದ ನೆಲೆಗೆ ಗಟ್ಟಿಯಾಗಿ ಕಚ್ಚಿಕೊಂಡಿರುತ್ತವೆ. ಇವುಗಳಿಗೆ ಪಚನವಾದ ಆಹಾರವೇ ದೊರೆಯುವುದರಿಂದ ಈ ಸ್ಥಿತಿಯಲ್ಲಿ ಪಚಕಾಂಗಗಳು ಅನವಶ್ಯವಾಗಿದ್ದ ಪರೋಪಜೀವಿಗಳ ಜೀರ್ಣಾಂಗಗಳು ಹೆಚ್ಚು ಕಡಿಮೆ ಮಾಯವಾಗಿರುತ್ತವೆ.

ಜೀವನಧಾರಣೆ ಮತ್ತು ಪ್ರಜನನ ಕ್ರಿಯೆ ಇವೆರಡೇ ಜೀವಿಯ ಪ್ರಧಾನ ಜೈವಿಕ ಕ್ರಿಯೆಗಳಾಗಿರುವುದು ಸರಿಯಷ್ಟೆ. ಜೀವನಧಾರಣೆಗೆ ಆಹಾರ, ಆಹಾರಸಂಪಾದನೆಗೆ ಶಕ್ತಿ, ಶಕ್ತಿಯ ಉತ್ಪಾದನೆಗೆ ಆಮ್ಲಜನಕದ ಪೂರೈಕೆ, ಪ್ರಾಸಗಿಂಕವಾಗಿ ಉದ್ಭವಿಸಿದ ಅನುಪಯುಕ್ತ ವಸ್ತುಗಳ ವಿಸರ್ಜನೆ ಇವು ಒಂದಕ್ಕೊಂದು ಸೇರಿಕೊಂಡಿರುವ ಜೈವಿಕ ಕ್ರಿಯಾಸರಪಣಿಯ ಕೊಂಡಿಗಳು. ಇವನ್ನು ಬೆಸೆಯುವುದು ರಕ್ತಪರಿಚಲನೆ. ಸಮಗ್ರ ಜೀವನಕ್ರಮ ಸುಸಂಘಟಿತವಾಗಿರುವಂತೆ ಮಾಡುವುದು ನರಮಂಡಲ. ಪರಾವಲಂಬಿ ಜೀವನದಲ್ಲಿ ಯಾವಾಗ ಆಹಾರಕ್ಕೆ ಕಷ್ಟ ಪಡಬೇಕಾಗಿಯೇ ಇರುವುದಿಲ್ಲವೋ ಆಗ ಈ ಕೊಂಡಿಗಳ ಅಗತ್ಯವು ಕಡಿಮೆ. ಹೀಗಾಗಿ ಪರೋಪಜೀವನ ಕ್ರಮದಲ್ಲಿ ಶ್ವಾಸಾಂಗಗಳು, ವಿಸರ್ಜನಾಂಗಗಳು, ರಕ್ತ, ರಕ್ತಪರಿಚಲನೆ, ಹೃದಯ ಇವುಗಳ ಬಳಕೆ ಕಡಿಮೆ ಆಗುತ್ತ ಬಂದು ಅವೂ ಹೆಚ್ಚು ಕಡಿಮೆ ನಿರ್ನಾಮವಾಗುವುದು ಇದೆ. ಇವುಗಳ ಕ್ರಿಯೆಗಳನ್ನೆಲ್ಲ ಸಕ್ರಮವಾಗಿ ಸಂಘಟಿಸಬೇಕಾಗಿರುವ ಅಗತ್ಯವೂ ಇಲ್ಲದೆ ನರಮಂಡಲ ಕೂಡ ತೀರ ಸರಳವಾಗಿದೆ.

ಇನ್ನು ಪ್ರಜನನ ಕ್ರಿಯೆಯ ವಿಚಾರ. ಪರೋಪಜೀವನ ಕ್ರಮದಲ್ಲಿ ಇದೇ ಒಂದು ವಿಶೇಷ. ಜೀವಿ ಸಂತಾನವನ್ನು ಪಡೆಯುವುದಲ್ಲದೆ ಸಂತಾನವೂ ಸುಲಭವಾಗಿ ತನ್ನ ಜೀವನವನ್ನು ಮುಂದುವರಿಸಿ ಮರು ಸಂತಾನ ಪಡೆಯುತ್ತ ಹೋಗಬೇಕಾದುದು ಜೀವನದ ನೈಸರ್ಗಿಕತೆಯ ಕ್ರಮ. ಅಂದರೆ ಪರೋಪಜೀವನದಲ್ಲಿ ಅಂಥ ಜೀವಿಯು ಸಂತಾನವನ್ನು ಪಡೆದಾಗ ಸಂತಾನಕ್ಕೂ ಅದರ ವಿಶಿಷ್ಟವಾದ ಪರೋಪಜೀವನ ಲಭಿಸಬೇಕಾದ್ದು ಅವಶ್ಯಕ. ಸಂತಾನವೂ ಜನ್ಮದಾತ ವ್ಯಕ್ತಿ ಇದ್ದ ಕಡೆಯೇ ಇರಬಹುದಾದರೂ ಆಹಾರಕ್ಕೆ ಈ ಪೀಳಿಗೆಗಳಲ್ಲಿ ಪರಸ್ಪರ ಪೈಪೋಟಿ ನಡೆಸಬೇಕಾಗಿ ಬರಬಹುದು. ಅಂಥ ಸಂದರ್ಭಗಳು ವಿರಳ. ಆದ್ದರಿಂದ ಸಂತಾನವನ್ನು ಆತಿಥೇಯ ದೇಹವನ್ನು ಹೊಗುವಂತೆ ಏರ್ಪಡಬೇಕು. ಹೊರಹಾಕಲ್ಪಟ್ಟ ಸಂತಾನಕ್ಕೆ ವಿಶಾಲ ಪ್ರಪಂಚದಲ್ಲಿ ವಿಶಿಷ್ಟ ಆತಿಥೇಯ ದೊರಕುವುದು ದುರ್ಲಭ. ಅದು ಆಕಸ್ಮಿಕ ಘಟನೆಯಾಗಿಯೇ ಪರಿಣಮಿಸಬಹುದು. ಈ ಸವಾಲನ್ನು ಎದುರಿಸಲು ಮಾತೃಜೀವಿಯಿಂದ ಅಸಂಖ್ಯಾತ ಸಂತಾನೋತ್ಪತ್ತಿ ಆಗುತ್ತದೆ. ಈ ಸಂತಾನಗಳ ಪೈಕಿ ಒಂದೆರಡಕ್ಕಾದರೂ ತಕ್ಕ ಆತಿಥೇಯ ಪ್ರಾಣಿ ದೊರೆತು ಸಂತತಿ ಮುಂದುವರಿಯುವುದು ಸಾಧ್ಯವಾಗುತ್ತದೆ. ಇಂಥ ಅಸಂಖ್ಯಾತ ಸಂತಾನೋತ್ಪತ್ತಿಗಾಗಿ ಅನೇಕ ಪರೋಪಜೀವಿಗಳಲ್ಲಿ ಪ್ರಜನನಾಂಗಗಳೇ ಪ್ರಧಾನ ಅಂಗಗಳಾಗಿದ್ದು ಮಿಕ್ಕವು ಭಾಗಶಃ ಅಥವಾ ಪೂರ್ಣವಾಗಿ ಲುಪ್ತವಾಗಿ ಇರುತ್ತವೆ. ಜೀವನವನ್ನು ಪ್ರಾರಂಭಿಸುವ ಪರೋಪಜೀವಿಗೆ ಅಗತ್ಯ ಆತಿಥೇಯ ದೊರೆಯುವ ಆಕಸ್ಮಿಕವನ್ನು ಸ್ವಲ್ಪಮಟ್ಟಿಗೆ ಸುಲಭಗೊಳಿಸಲು ಎರಡು ಆತಿಥೇಯಗಳನ್ನು ಅವಲಂಬಿಸುವ ಮಾರ್ಗವೂ ವಿಕಸಿಸಿದೆ.

ಪರೋಪಜೀವನ ಕ್ರಮದಿಂದ ಪರೋಪಜೀವಿಗೆ ಅನೇಕ ಸೌಲಭ್ಯ ಕಷ್ಟಗಳು ಒದಗುವುದೂ ಕಷ್ಟಗಳು ಪರಿಹಾರವಾಗುವುದೂ ಮೇಲೆ ಹೇಳಿದ ವಿಷಯಗಳಿಂದ ಸ್ಪಷ್ಟವಾಗುತ್ತದೆ. ಪರೋಪಜೀವನ ಕ್ರಮದಿಂದ ಆತಿಥೇಯ ಜೀವಿಯಲ್ಲೂ ವಿವಿಧ ಪರಿಣಾಮಗಳು ಕಂಡುಬರುವುದುಂಟು ಯಾವ ಪರಿಣಾಮವು ಇಲ್ಲದೇ ಇರಬಹುದು; ಆತಿಥೇಯ ವ್ಯಕ್ತಿ ಕಷ್ಟಬಿದ್ದು ತನ್ನ ಹಾಗೂ ತನ್ನನ್ನು ಅವಲಂಬಿಸಿರುವುದು ಪ್ರಾಣಿಯ ಅಗತ್ಯಗಳನ್ನು ಪೂರೈಸಿಕೊಳ್ಳವಂತಿರಬಹುದು ; ಇಲ್ಲವೆ ಪರೋಪಜೀವಿ ಆತಿಥೇಯ ವ್ಯಕ್ತಿಗೆ ತೊಂದರೆಯನ್ನೇ ಉಂಟುಮಾಡಬಹುದು. ತೊಂದರೆ ಆದರೂ ಶೀಘ್ರವಾಗಿ ಮರಣವನ್ನು ಉಂಟುಮಾಡುವ ತೊಂದರೆ ಸಾಮಾನ್ಯವಾಗಿ ಕಂಡುಬರುವುದಿಲ್ಲ. ಏಕೆಂದರೆ ಹಾಗೆ ಆತಿಥೇಯ ಪ್ರಾಣಿಯ ಜೀವ ಹೋಗುವುದು ಪರೋಪಜೀವಿಯ ಜೀವನಕ್ಕೇ ಕುತ್ತು. ಆತಿಥೇಯ ಪ್ರಾಣಿ ಸಾಯುವುದರಿಂದಲೇ ಪರೋಪಜೀವಿಯ ಸಂತಾನ ಪ್ರಸಾರವಾಗಬೇಕಾದ ಸಂದರ್ಭದಲ್ಲಿ ಪರೋಪಜೀವನ ಆತಿಥೇಯ ವ್ಯಕ್ತಿಗೆ ಶೀಘ್ರ ಮಾರಕವಾಗುವುದು ಸಹಜವೇ.

ಸಸ್ಯಗಳ ಪರತಂತ್ರ ಜೀವಿಗಳು: ಪ್ರಾಣಿಗಳಿಗೆ ಹಾನಿಮಾಡುವಂತೆ ಪರತಂತ್ರ ಜೀವಿಗಳು ಸಸ್ಯಗಳಿಗೂ ಹಾನಿಮಾಡುತ್ತವೆ. ಅವುಗಳ ಸಂಖ್ಯೆ ಸಸ್ಯಗಳಲ್ಲೇ ಹೆಚ್ಚು ಇವುಗಳಲ್ಲಿ ಶಿಲೀಂಧ್ರ ಮುಖ್ಯವಾದುವು. ಉದಾ : ಸಸ್ಯಗಳಲ್ಲಿ ಡಚ್ ಎಲ್ಮ್ ರೋಗ ತರುವ ಶಿಲೀಂಧ್ರವನ್ನು ಜೀರುಂಡೆಗಳು (ಬೀತಲ್) ಹರಡುತ್ತವೆ. ಈ ಶಿಲೀಂಧ್ರದಿಂದಾಗಿ ನೀರಿನ ಹರಿವು ಕಡಿಮೆಯಾಗಿ ಮರಗಳು ಸತ್ತು ಹೋಗುತ್ತವೆ. ವೈರಸ್ಸು ಬ್ಯಾಕ್ಟೀರಿಯಾಗಳು ಕೂಡ ಸಸ್ಯಗಳ ಪ್ರಮುಖ ಪರತಂತ್ರ ಜೀವಿಗಳು. ಇವು ಸಸ್ಯರೋಗಗಳನ್ನುಂಟು ಮಾಡಿ ಅವುಗಳ ಸಾವಿಗೆ ಕಾರಣವಾಗುತ್ತವೆ. ಬೇರುಗಳಲ್ಲಿ ಕಂಡುಬರುವ ದುಂಡು ಹುಳುಗಳು ಟೊಮ್ಯಾಟೊ, ಆಲೂಗಡ್ಡೆ ಹಾಗು ಹಿಪ್ಪುನೇರಳೆ ಬೆಳೆಗಳನ್ನು ನಾಶಮಾಡುತ್ತವೆ.

ಕೆಲವು ಮರ ಅಥವಾ ಸಸ್ಯಗಳಿಗೆ ಬೇರೆ ಸಸ್ಯಗಳೇ ಪರತಂತ್ರ ಜೀವಿಗಳು. ಈ ಪರತಂತ್ರ ಸಸ್ಯಗಳು ಆಸರೆ ಸಸ್ಯಗಳಿಗೆ ಅಂಟಿಕೊಂಡು ನೀರು ಮತ್ತು ಆಹಾರ

ಹಾಗೂ ಪೋಷಕಾಂಶಗಳಿಗೆ ಪ್ರತಿಸ್ಪರ್ಧೆ ನೀಡುತ್ತವೆ. ಕಬ್ಬು ಬೆಳೆಯಲ್ಲಿ ಕಂಡುಬರುವ ಪರತಂತ್ರ ಸಸ್ಯವು ಕಬ್ಬಿನ ಬೇರುಗಳಿಗೆ ಅಂಟಿಕೊಂಡು ನೀರು, ಖನಿಜಗಳು ಹಾಗೂ ಇತರ ಪೋಷಕಾಂಶಗಳನ್ನು ಹೀರಿ ಆಸರೆ ಸಸ್ಯವನ್ನೇ ಕೊಲ್ಲುತ್ತವೆ. ಇನ್ನು ಕೆಲವು ಆಸರೆ ಸಸ್ಯಗಳ ರೆಂಬೆಗಳಿಗೆ ಅಂಟಿಕೊಂಡು ನೀರು ಹಾಗೂ ಪೋಷಕಾಂಶಗಳನ್ನು ಹೀರುತ್ತವೆ. ಪರತಂತ್ರ ಸಸ್ಯಗಳ ಬೀಜ/ಹಣ್ಣುಗಳನ್ನು ಪಕ್ಷಿಗಳು ತಿಂದು ಅವುಗಳ ಹಿಕ್ಕೆಗಳ ಮೂಲಕ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡುತ್ತವೆ.

ಅರೆ ಪರತಂತ್ರ ಸಸ್ಯಗಳು ತಮ್ಮ ಸ್ವಂತ ಆಹಾರವನ್ನು ಪತ್ರಹರಿತ್ತಿನ ಮೂಲಕ ಉತ್ಪತ್ತಿ ಮಾಡಬಲ್ಲವು. ಆದರೆ ನೀರು ಮತ್ತು ಇತರ ಖನಿಜಗಳನ್ನು ಆಸರೆ ಸಸ್ಯಗಳಿಂದ ಪಡೆಯುತ್ತವೆ. ನಿಜಪರತಂತ್ರ ಸಸ್ಯ ಅಥವಾ ಪೂರ್ತಿ ಪರತಂತ್ರ ಸಸ್ಯಗಳಲ್ಲಿ ಇರುವುದಿಲ್ಲವಾದ್ದರಿಂದ ಆಹಾರವನ್ನು ಉತ್ಪಾದನೆ ಮಾಡುವ ಸಾಮರ್ಥ್ಯವೂ ಇಲ್ಲ. ಇವು ಎಲ್ಲಾ ಪೋಷಕಾಂಶಗಳಿಗಾಗಿ ಆಸರೆ ಸಸ್ಯಗಳನ್ನೇ ಅವಲಂಬಿಸಿರುತ್ತವೆ.

ಪರತಂತ್ರ ಜೀವಿಗಳು ಪರತಂತ್ರ ಜೀವನಕ್ಕೆ ತಮ್ಮದೇ ಶಾರೀರಿಕ, ಭೌತರಾಸಾಯನಿಕ ಮಾರ್ಪಾಡುಗಳನ್ನು ಮಾಡಿಕೊಂಡಿವೆ. ಪ್ರಸಾರ, ಪ್ರಜನನ ಮುಂತಾದ ಮುಖ್ಯ ಜೈವಿಕ ಕ್ರಿಯೆಗಳಿಗೆ ಈ ಮಾರ್ಪಾಡುಗಳು ಅಗತ್ಯ. ಪರತಂತ್ರ ಜೀವಿಯ ಬದುಕಿನ ಸಾಫಲ್ಯ ಪಡೆಯಬೇಕಾದರೆ ಆಸರೆ ಜೀವಿ ಸಾಯಬಹುದು. ವಿಕಾಸದ ದೃಷ್ಟಿಯಲ್ಲಿ ಇದು ಶ್ರೇಯಸ್ಕರವಲ್ಲ. ಪರತಂತ್ರ ಜೀವಿಯೂ ಬದುಕಿ ಆಸರೆಯೂ ಬದುಕುಳಿದರೆ ಪರಾವಲಂಬಿಯ ಪೀಳಿಗೆ ಮುಂದುವರಿಯುತ್ತದೆ, ಇಲ್ಲವಾದರೆ ಕಾಲಕ್ರಮೇಣ ಎರಡೂ ವಿನಾಶವಾಗುತ್ತವೆ. (ಎಸ್.ಬಿ.ಎ.)

**ಪರೋಪಜೀವಿಜನ್ಯ ರೋಗಗಳು:** ವೈರಸ್, ರಿಕೆಟ್ಸಿಯ, ಏಕಾಣುಜೀವಿಗಳು, ಬೂಷ್ಟು (ಫಂಗಸ್), ನಾನಾಬಗೆಯ ಹುಳುಗಳು ಮುಂತಾದ ಪರೋಪಜೀವಿಗಳಿಂದ (ಪ್ಯಾರಸೈಟ್ಸ್) ಉಂಟಾಗುವ ರೋಗಗಳ ವ್ಯಾಪಕ ಹೆಸರು. ಪ್ರಚಲಿತ ಮಾನ್ಯತೆ ಪ್ರಕಾರ ಪ್ರಾಣಿವರ್ಗದ ಪರೋಪಜೀವಿಗಳ ದೆಸೆಯಿಂದ ತಗಲುವ ರೋಗಗಳಿಗೆ ಮಾತ್ರ ಈ ಹೆಸರಿದೆ ಎಂದೇ ಬೂಷ್ಟಿನಿಂದ ಬರುವ ರೋಗಗಳನ್ನು ಈ ಗುಂಪಿಗೆ ಸೇರಿಸುವುದಿಲ್ಲ.

ಪರೋಪಜೀವಿಗಳಲ್ಲಿ ಮುಖ್ಯವಾಗಿ ಎರಡು ಬಗೆಗಳಿವೆ. 1. ಬಾಹ್ಯ ಪರೋಪಜೀವಿ: ಆತಿಥೇಯ ಜೀವಿಯ ಮೈಮೇಲೆ ಅಥವಾ ಚರ್ಮದಲ್ಲಿ ಇರುವುದು. ಉದಾಹರಣೆಗೆ, ಕಜ್ಜಿ ಉಂಟುಮಾಡುವ ಜೀವಿ.

2. ಆಂತರಿಕ ಪರೋಪಜೀವಿ : ಆತಿಥೇಯ ಜೀವಿಯ ದೇಹದ ಒಳಗಡೆ ಅಂದರೆ ರಕ್ತ, ಅಂಗಾಂಶ, ಜೀರ್ಣಾಂಗವ್ಯೂಹ, ಪಿತ್ತಕೋಶ, ಶ್ವಾಸಕೋಶ, ಮೂತ್ರ ಕೋಶ ಅಥವಾ ಇನ್ನಿತರ ಅಂಗಾಂಗಗಳಲ್ಲಿ ಜೀವಿಸುತ್ತದೆ.

ಪರೋಪಜೀವಿಗಳು ಸಹಜೀವಿಗಳಾಗಿದ್ದು ಆತಿಥೇಯ ಜೀವಿಯಲ್ಲಿ ಹೆಚ್ಚಾಗಿರುವ ದ್ರವ ಮತ್ತು ಗಟ್ಟಿ ಪದಾರ್ಥಗಳನ್ನು ತಿಂದು ಜೀವಿಸುತ್ತ ಅವುಗಳಿಗೆ ಹಾನಿಯುಂಟುಮಾಡದಂತಿರಬಹುದು ಇಲ್ಲವೇ ರೋಗಕಾರಕ ಪರೋಪಜೀವಿಗಳಾಗಿದ್ದು ಅದಕ್ಕೆ ಹಾನಿ ಉಂಟುಮಾಡಿ ಜೀವಿಸುವಂತಿರಬಹುದು. ಪರೋಪಜೀವಿಯಾಗಿ ಇರಬೇಕಾದ ಸನ್ನಿವೇಶ ಒದಗಿದಾಗ ಪರೋಪಜೀವನಕ್ಕೆ ಹೊಂದಿಕೊಳ್ಳುವ ಪ್ರಾಣಿಗೆ ಐಚ್ಛಿಕ ಪರೋಪಜೀವಿ (ಫ್ಯಾಕಲ್ಟೇಟಿವ್ ಪ್ಯಾರಾಸೈಟ್) ಎಂದು ಹೆಸರು. ತನ್ನ ಬದುಕು ಇಡೀ ಅಥವಾ ಅದರ ಒಂದು ಭಾಗ ಆತಿಥೇಯ ಜೀವಿಯ ಆಸರೆಯಲ್ಲಿ ಕಳೆಯಬೇಕಾದ ಅಗತ್ಯವಿರುವ ಪ್ರಾಣಿಗೆ ಹಂಗಿನ ಪರೋಪಜೀವಿ (ಆಬ್ಲಿಗೇಟರಿ ಪ್ಯಾರಾಸೈಟ್) ಎಂದು ಹೆಸರು. ಅಕಸ್ಮಾತ್ತಾಗಿ ಆತಿಥೇಯ ಜೀವಿಯ ಆಸರೆ ಪಡೆದು ವೃದ್ಧಿಹೊಂದುವ ಪ್ರಾಣಿಗೆ ಪ್ರಾಸಂಗಿಕ ಪರೋಪಜೀವಿ (ಇನ್ಸಿಡೆಂಟಲ್ ಪ್ಯಾರಸೈಟ್) ಎಂದು ಹೆಸರು. ಪರೋಪಜೀವಿಗಳು ಅವಲಂಬಿಸುವ ಆತಿಥೇಯಗಳಲ್ಲಿ ಮೂರು ಬಗೆಗಳನ್ನು ಗಮನಿಸಬಹುದು; ಪರೋಪಜೀವಿಯ ಹರೆಯ ಮತ್ತು ಲೈಗಿಂಕ ಜೀವನವನ್ನು ಧರಿಸುವ ಆತಿಥೇಯ ನಿಯತಾಥಿತೇಯ. ವ್ಯಕ್ತಿಯಲ್ಲಿ ರೋಗವನ್ನು ಉಂಟುಮಾಡುವ ಬಹಳ ಪರೋಪಜೀವಿಗಳಿಗೆ ಆತನೇ ನಿಯತಾಥಿತೇಯ. (ಡೆಫಿನಿಟಿವ್). ಪರೋಪಜೀವಿಯ ಭ್ರೂಣಾವಸ್ಥೆಯ ಸ್ವಲ್ಪ ಭಾಗವನ್ನು ಕಳೆಯುವ ಆತಿಥೇಯಕ್ಕೆ ಮಧ್ಯವರ್ತಿ (ಇಂಟರ್‌ಮಿಡಿಯೆಟ್) ಆತಿಥೇಯ ಎಂದು ಹೆಸರು. ಕೆಲವು ಸಲ ಪರೋಪಜೀವಿಯ ಈ ಹಂತದ ಬೆಳವಣಿಗೆಗೆ ಎರಡು ಮಧ್ಯವರ್ತಿ ಆತಿಥೇಯಗಳು ಅಗತ್ಯವಾಗುತ್ತವೆ. ಇವುಗಳಿಗೆ ಮೊದಲನೆಯ ಮತ್ತು ಎರಡನೆಯ ಮಧ್ಯವರ್ತಿ ಆತಿಥೇಯಗಳೆಂದು ಹೆಸರು. ಈ ಮಧ್ಯವರ್ತಿಗಳಲ್ಲಿ ಪರೋಪಜೀವಿಗಳ ಬೆಳವಣಿಗೆ ಮಾತ್ರ ಕಂಡು ಬರುತ್ತದೆ. ಅವುಗಳ ಲೈಂಗಿಕ ಚಟುವಟಿಕೆ ಇನ್ನೂ ಪ್ರಾರಂಭವಾಗಿರುವುದಿಲ್ಲ. ಪರೋಪಜೀವಿಗೆ ಆಶ್ರಯ ಕೊಟ್ಟಿದ್ದರಿಂದ ಸ್ವತಃ ಬಾಧಿತವಾಗದೆ ಬೇರೆ ಪ್ರಾಣಿಗಳಿಗೆ ಸೋಂಕು ಹರಡುವುದಕ್ಕೆ ಕಾರಣವಾಗುವ ಪ್ರಾಣಿಗೆ ಆಶ್ರಯಾತಿಥೇಯ (ರಿಸರ್ವಾಯಿರ್ ಹೋಸ್ಟ್) ಎಂದು ಹೆಸರು.

ರೋಗಕಾರಕ ಪರೋಪಜೀವಿಗಳು ಆತಿಥೇಯಗಳ ದೇಹವನ್ನು ಹೊಕ್ಕ ಮಾತ್ರದಿಂದಲೇ ರೋಗವನ್ನು ಉಂಟುಮಾಡಿಯೇ ಮಾಡುತ್ತವೆಂದು ಹೇಳುವ ಹಾಗಿಲ್ಲ. ರೋಗಕಾರಕತೆ ಪರೋಪಜೀವಿಯ ಪ್ರಾಬಲ್ಯ ಪ್ರಮಾಣ ಮತ್ತು ಭಾವೀ ರೋಗಿಯ ರೋಗಾರ್ಹತೆಗಳನ್ನು ಅವಲಂಬಿಸಿದೆ. ಒಬ್ಬ ವ್ಯಕ್ತಿಯಲ್ಲಿ ಒಂದು ಪರೋಪಜೀವಿ ಯಾವ ರೋಗಲಕ್ಷಣವನ್ನೂ ಉಂಟುಮಾಡದಿರಬಹುದು. ಆದರೆ ಅದೇ ಪರೋಪಜೀವಿ ಬೇರೊಬ್ಬ ವ್ಯಕ್ತಿಯಲ್ಲಿ ತೀವ್ರ ರೋಗಕ್ಕೆ ಕಾರಣವಾಗಬಹುದು. ಸಾಮಾನ್ಯವಾಗಿ ಪರೋಪಜೀವಿಗಳು ವರ್ಣ ಅಥವಾ ವಯಸ್ಸಿನ ಭೇದವನ್ನು ನೋಡುವುದಿಲ್ಲ. ಆದರೆ ಇದಕ್ಕೆ ಕೆಲವು ಅಪವಾದಗಳಿವೆ. ಯಾವ ಭೌಗೋಳಿಕ ಭಾಗದಲ್ಲಿ ಪರೋಪಜೀವಿ ವಿಶೇಷವಾಗಿರುತ್ತದೆಯೋ ಅಲ್ಲಿಯ ಜನ ಅವುಗಳಿಗೆ ಹೊಂದಿಕೊಂಡಿರುತ್ತಾರೆ. ಆದರೆ ಅಲ್ಲಿಗೆ ಬರುವ ಹೊಸಬರನ್ನು ಅವು ಕಾಡುತ್ತವೆ. ನೀಗ್ರೋಗಳಲ್ಲಿ ಪ್ಲಾಸ್ಮೋಡಿಯಮ್ ವೈವಾಕ್ಸಿನಿಂದ ತಲೆದೋರುವ ಮಲೇರಿಯ ರೋಗ ಕಡಿಮೆ. ಆದರೆ ಕಾಕೇಶಿಯನ್ನರಲ್ಲಿ ಅದೇ ಪ್ಲಾಸ್ಮೋಡಿಯಮ್ ತೀವ್ರ ರೋಗಕಾರಕ. ಕೆಲವು ಪರೋಪಜೀವಿಗಳು ಮಕ್ಕಳನ್ನು ಮಾತ್ರ ಬಾಧಿಸುತ್ತವೆ.

ಪರೋಪಜೀವಿಗಳಿಂದ ಉಂಟಾಗುವ ಹಾನಿಗಳು : ಪರೋಪಜೀವಿಗಳು ತಮ್ಮ ಆತಿಥೇಯಗಳಲ್ಲಿ ಉಂಟುಮಾಡುವ ಹಾನಿಗಳು ಬಗೆ ಬಗೆಯವು.

ಗಾಸಿಯಿಂದ ಉಂಟಾಗುವ ಹಾನಿ : ಕೆಲವು ಪರೋಪಜೀವಿಗಳು ತಮ್ಮ ಆತಿಥೇಯಗಳ ಕೋಶಗಳನ್ನು ಮತ್ತು ಅಂಗಾಂಶಗಳನ್ನು ಅವುಗಳ ಸ್ವಾಭಾವಿಕ ನೆಲೆಗಳಿಂದ ಬೇರ್ಪಡಿಸಿ ನಾಶಮಾಡುತ್ತವೆ. ಉದಾಹರಣೆಗೆ, ಲಾಡಿಹುಳು, ಕೊಕ್ಕೆ ಹುಳು. ಇವು ಸಣ್ಣ ಕರುಳಿನ ಲೋಳೆಪೊರೆಗೆ ಈ ರೀತಿ ಗಾಸಿ ಮಾಡುತ್ತವೆ. ಪರೋಪಜೀವಿಯ ಮೊಟ್ಟೆಗಳಿಂದಲೂ ಭ್ರೂಣಾವಸ್ಥೆ ಅಥವಾ ಬಲಿತ ಸ್ಥಿತಿಯಲ್ಲಿ ಈ ಜೀವಿಗಳ ಅಂಗಾಂಶಗಳಲ್ಲಿ ಸಂಚರಿಸುವುದರಿಂದಲೂ ಸಪೂರ ಅಥವಾ ತೋರ ಗಾಯಗಳಾಗಬಹುದು.

ಜೀರ್ಣವಾಗುವಿಕೆಯಿಂದ ಆಗುವ ಹಾನಿ : ಪರೋಪಜೀವಿಗಳು ಸ್ರವಿಸುವ ಕಿಣ್ವದಿಂದ ಆತಿಥೇಯ ಕೋಶಗಳು ಮತ್ತು ಅಂಗಾಂಶಗಳು ಜೀರ್ಣವಾಗಬಹುದು. ಎಂಟಮೀಬ ಹಿಸ್ಟೊಲಿಟಿಕ ಎಂಬ ಏಕಕೋಶ ಜೀವಿಯಿಂದ ಕರುಳಿನಲ್ಲಿ ಈ ತರಹದ ಹಾನಿ ಆಗಬಹುದು. ರಕ್ತದ ಚಪ್ಪಟೆಕ್ರಿಮಿಚರ್ಮದಿಂದ ಚರ್ಮದ ರಕ್ತನಾಳಗಳಿಗೆ ಹೋಗುವಾಗ ಈ ತರಹದ ಹಾನಿ ಸಾಧ್ಯ.

ಅಡಚಣೆಯಿಂದ ಆಗುವ ಹಾನಿ : ಜಂತುಹುಳುಗಳ ಗುಂಪಿನಿಂದಾಗಲಿ ಸುತ್ತುಗಟ್ಟಿದ ಲಾಡಿಹುಳುವಿನಿಂದಾಗಲಿ ಕರುಳಿನಲ್ಲಿ ಅಡಚಣೆ ತಲೆದೋರಬಹುದು. ಕೆಲವು ಪರೋಪಜೀವಿಗಳು ಮೂತ್ರನಾಳ ಮತ್ತು ಸಣ್ಣ ಶ್ವಾಸನಾಳಗಳಲ್ಲಿ ಅಡಚಣೆ ಮಾಡಬಹುದು.

ಆಹಾರವಸ್ತುಗಳ ಹಾನಿ : ಬಹುತೇಕ ಪರೋಪಜೀವಿಗಳು ವ್ಯಕ್ತಿಯ ದೇಹದಲ್ಲಿ ವಾಸಿಸುತ್ತ ಅವನು ತಿಂದ ಮತ್ತು ಅರ್ಧ ಜೀರ್ಣವಾದ ತಿನಿಸನ್ನು ತಿನ್ನುತ್ತವೆ ಮತ್ತು ಅಂಗಾಂಶಗಳಿಂದ ಪೋಷಕಗಳನ್ನು ಹೀರುತ್ತವೆ. ಕೊಕ್ಕೆಹುಳು ಕರುಳಿನಲ್ಲಿ ವಾಸಿಸುತ್ತ ಕರುಳಿನಲ್ಲಿ ರಕ್ತನಾಳಗಳಿಂದ ರಕ್ತವನ್ನು ಹೀರಿ ಜೀವಿಸುತ್ತದೆ. ಇದರಿಂದ ವ್ಯಕ್ತಿಗೆ ರಕ್ತಹೀನತೆ ಉಂಟಾಗುತ್ತದೆ. ಲಾಡಿಹುಳುಗಳು ವ್ಯಕ್ತಿ ತಿಂದ ತಿನಿಸನ್ನು ಬಳಸಿಕೊಂಡು ಅವನಲ್ಲಿ ಆಹಾರದ ಕೊರತೆಗೆ ಕಾರಣವಾಗುತ್ತವೆ.

ವಿಷವೇರಿಕೆಯಿಂದ ಹಾನಿ: ಪರೋಪಜೀವಿಗಳು ಸ್ರವಿಸುವ ರಸ ಮತ್ತು ಅವುಗಳ ಮಲ ಆತಿಥೇಯದ ಅಂಗಾಂಶಕ್ಕೆ ಕೆರಳಿಕೆ ಉಂಟುಮಾಡಬಹುದು ಇಲ್ಲವೇ ಅದರ ದೇಹಕ್ಕೆ ವಿಷಪ್ರಾಯವಾಗಿ ಜೀವವಿಷದ ರೋಗಲಕ್ಷಣಗಳನ್ನು ಪ್ರಕಟಿಸಬಹುದು.

ಒಗ್ಗದಿರುವಿಕೆಯಿಂದಾಗುವ ಹಾನಿ : ಪರೋಪಜೀವಿಗಳ ಕಾಯದ ಪ್ರೋಟೀನ್ ಮತ್ತು ಇತರ ಬಾಹ್ಯ ವಸ್ತುಗಳಿಂದ ಆತಿಥೇಯಗಳಲ್ಲಿ ಒಗ್ಗದಿಕೆ (ಅಲರ್ಜಿ) ಕಂಡುಬರಬಹುದು. ಉದಾಹರಣೆಗೆ, ಕೊಕ್ಕೆ ಹುಳುವಿನ ಮರಿಯ ಸೋಂಕಿನಿಂದಾಗುವ ಮಣ್ಣುಳ (ಕ್ರೀಪಿಂಗ್ ಇರಪ್ಷನ್) ರೋಗ, ಆನೆಕಾಲುಕಾರಕ ಫೈಲೇರಿಯ ಕ್ರಿಮಿ, ನಾರುಹುಣ್ಣುಕಾರಕ ಹುಳು ಮತ್ತು ಜಂತುಹುಳುವಿನ ಭ್ರೂಣಗಳಿಂದಾಗುವ ಇಯೊಸಿನೊಫಿಲಿಯ ಹಾಗೂ ದಮ್ಮು ಇತ್ಯಾದಿ. ಮುಖದ ಬಾವು, ವಾಂತಿ, ಭೇದಿ, ಮೇಲುಸಿರು, ದದ್ದು, ಸೊಕ್ಕೆ (ಷಾಕ್) ಇವು ಕೂಡ ಕೆಲವು ವೇಳೆ ಉಂಟಾಗಬಹುದು. ನೀರ್ಬೊಕ್ಕೆಗೆ (ಹೈಡಟಿಡ್) ಆಘಾತವಾಗಿ ಅದು ಒಡೆದು ಅದರ ದ್ರವ ದೇಹವನ್ನು ಸೇರಿದಾಗ (ಅನಫೈಲಾಕ್ಸಿಸ್) ಉಂಟಾಗಬಹುದು.

ವೆಗ್ಗಳಿಕೆಯಿಂದ ಆಗುವ ಹಾನಿ: ಆನೆಕಾಲು ಮತ್ತು ಶಿಷ್ಟೋಸೋಮ ರೋಗಗಳಲ್ಲಿ ಆತಿಥೇಯದ ಅಂಗಾಂಶಗಳ ವೆಗ್ಗಳಿಕೆಯುಂಟಾಗಿ (ಪ್ರೊಲಿಫರೇಷನ್) ಅಂಗಾಂಗಗಳ ಮತ್ತು ಅಂಗಾಂಶಗಳ ಸ್ವಾಭಾವಿಕವಾದ ಕಾರ್ಯಕ್ಕೆ ಅಡಚಣೆ ಉಂಟಾಗುತ್ತದೆ.

ಈ ಮೇಲೆ ಹೇಳಿದ ಹಾನಿಗಳ ಜೊತೆಗೆ ಪರೋಪಜೀವಿಯಿಂದಾಗುವ ಹಾನಿಯ ಪರಿಣಾಮವಾಗಿ ಏಕಾಣುಜೀವಿಗಳು ಮತ್ತು ಇತರ ರೋಗಕಾರಕಗಳು ಆತಿಥೇಯದ

ದೇಹವನ್ನು ಪ್ರವೇಶಿಸಲು ಅನುಕೂಲವಾಗಿ ಪರೋಪಜೀವಿಜನ್ಯ ರೋಗದ ಜೊತೆ ಮತ್ತೊಂದು ರೋಗವೂ ಉಂಟಾಗಬಹುದು.

ಸೋಂಕಿನ ಮೂಲ ಮತ್ತು ಸೋಂಕು ಹತ್ತುವ ದಾರಿ : ರೋಗಕಾರಕ ಪರೋಪಜೀವಿ ವ್ಯಕ್ತಿಯ ಶರೀರವನ್ನು ಅನೇಕ ರೀತಿಗಳಲ್ಲಿ ಪ್ರವೇಶಿಸಬಹುದು.

(1) ಎಂಟಮೀಬದ ಬೀಜಾಣುಗಳು (ಸಿಸ್ಟ್ಸ್), ಜಂತುಹುಳುವಿನ ಮೊಟ್ಟೆಗಳು, ನಾರುಹುಣ್ಣು ಹುಳುವಿನ ಮಧ್ಯವರ್ತಿ ಆತಿಥೇಯ ಸೈಕ್ಲಾಪ್ಸ್ ಇವು ಕುಡಿಯುವ ನೀರಿನ ಮೂಲಕ ಅಥವಾ ತಿನ್ನುವ ತಿನಿಸಿನ ಮೂಲಕ ದೇಹವನ್ನು ಪ್ರವೇಶಿಸಬಹುದು.

(2) ಸೋಂಕಿನ ಪರೋಪಜೀವಿಗಳು ಮಧ್ಯವರ್ತಿ ಆತಿಥೇಯುಗಳ ಮಾಂಸಖಂಡದಲ್ಲಿದ್ದು ಆ ಮಾಂಸವನ್ನು ವ್ಯಕ್ತಿ ತನ್ನ ಆಹಾರವಾಗಿ ಬಳಸಿದಾಗ ಸೋಂಕು ಹತ್ತಬಹುದು.

(3) ಚರ್ಮದ ಮೂಲಕ ಅಥವಾ ಲೋಳೆಪೊರೆಯ ಮೂಲಕ ಪರೋಪಜೀವಿ ವ್ಯಕ್ತಿಯ ದೇಹವನ್ನು ಪ್ರವೇಶಿಸಬಹುದು. ಉದಾಹರಣೆಗೆ, ಕೊಕ್ಕೆಹುಳುವಿನ ಕೀಟಕಗಳು ಹಸಿ ಮಣ್ಣಿನಲ್ಲಿದ್ದು ವ್ಯಕ್ತಿ ಬರಿ ಕಾಲಿನಲ್ಲಿ ನಡೆದಾಗ ಚರ್ಮದ ಮೂಲಕ ಆತನ ಶರೀರವನ್ನು ಪ್ರವೇಶಿಸಬಹುದು. ಶಿಷ್ಟೋಸೋಮ ಸೋಂಕನ್ನು ಉಂಟು ಮಾಡುವ ಲೇಪಗಳು ನೀರಿನಲ್ಲಿದ್ದು ಚರ್ಮದ ಮೂಲಕ ವ್ಯಕ್ತಿಯ ದೇಹವನ್ನು ಪ್ರವೇಶಿಸಬಹುದು.

(4) ಸೋಂಕು ಹತ್ತಿದ ಆತಿಥೇಯರಿಂದ ಇನ್ನೊಂದು ಆತಿಥೇಯಕ್ಕೆ ಸೋಂಕು ಹತ್ತಬಹುದು. ವ್ಯಕ್ತಿಯನ್ನು ಜೀವಿ ಕಚ್ಚಿ ಆತನ ನೆತ್ತರನ್ನು ಹೀರುವಾಗ ಸೋಂಕು ಹತ್ತಿದ ಸಂಧಿಪದಿ ಪರೋಪಜೀವಿಗಳನ್ನು ಅದು ನೇರವಾಗಿ ರಕ್ತಕ್ಕೆ ಇಲ್ಲವೇ ಚರ್ಮದ ಪದರಗಳಿಗೆ ಬಿಡಬಹುದು. ಉದಾಹರಣೆಗೆ, ಪ್ಲಾಸ್‌ಮೋಡಿಯಮ್ (ಮಲೇರಿಯಕಾರಕ) ಅನಾಫಿಲಿಸ್ ಸೊಳ್ಳೆಗಳಿಂದಲೂ ನಿದ್ರಾರೋಗಕಾರಕ ಟ್ರಿಪಾನೋಸೋಮ ಗ್ಲಾಸೈನಾ ಎಂಬ ಟ್ಸೆಟ್ಸೆ ನೊಣಗಳಿಂದಲೂ ಕಾಳಮಾರಿ ಜ್ವರ (ಕಾಲಾ ಅಜಾರ್) ಮರಳು ನೊಣಗಳಿಂದಲೂ ಹರಡಬಹುದು.

ಪ್ರಯೋಗಶಾಲೆಯಲ್ಲಿ ರೋಗನಿದಾನ : ರಕ್ತದ ಸವರಿನ ಪರೀಕ್ಷೆ (ಬ್ಲಡ್ ಫಿಲ್ಮ್) ಮಲೇರಿಯ, ಕಾಳಮಾರಿಜ್ವರ, ನಿದ್ರಾರೋಗ ಇವನ್ನು ಈ ಪರೀಕ್ಷೆಯಿಂದ ಪತ್ತೆಮಾಡಬಹುದು. ಮಲೇರಿಯದಲ್ಲಿ ಪರೋಪಜೀವಿಗಳು ಕೆಂಪು ರಕ್ತಕಣಗಳಲ್ಲಿರುತ್ತವೆ. ಕಾಳಮಾರಿಜ್ವರದಲ್ಲಿ ಮಾನೊಸೈಟ್ ಎಂಬ ಬಿಳಿಯ ರಕ್ತಕಣಗಳಲ್ಲಿ ಲೀಷ್ಮಾನಿಯಾ ಡೋನೋವನಿ ರೂಪಗಳಿರುತ್ತವೆ. ನಿದ್ರಾ ರೋಗದಲ್ಲಾದರೂ ಟ್ರಿಪನೋಸೋಮಗಳು ರಕ್ತರಸದಲ್ಲಿರುತ್ತವೆ. ಸೂಕ್ಷ್ಮದರ್ಶಕ ಪರೀಕ್ಷೆ ಮಾಡಿದಾಗ ಮಲದಲ್ಲಿ ಪರೋಪಜೀವಿಯ ಮೊಟ್ಟೆಗಳೂ ಮರಿಗಳೂ ಅಗಾಧ ಪ್ರಮಾಣದಲ್ಲಿ ಕಾಣಬರುತ್ತವೆ. ಕೆಲವು ವೇಳೆ ಬೆಳೆದ ಪರೋಪಜೀವಿಗಳು ಅಥವಾ ಅವುಗಳ ಭಾಗಗಳು ಬರಿ ಕಣ್ಣಿಗೇ ಗೋಚರಿಸುವಂತೆ ಮಲದಲ್ಲಿ ಇರುತ್ತವೆ.

ಮೂತ್ರಪರೀಕ್ಷೆ : ಶಿಷ್ಟೋಸೋಮ ಸೋಂಕಿನಲ್ಲಿ ಅದರ ಮೊಟ್ಟೆಗಳು ಮೂತ್ರದಲ್ಲಿ ಕಾಣಿಸಬಹುದು. ವುಚೆರೇರಿಯ ಬ್ಯಾನ್‌ಕ್ರಾಫ್ಟಿಯಿಂದ ಉಂಟಾಗುವ ದುಗ್ಧರಸ ಮೂತ್ರರೋಗದಲ್ಲಿ (ಕೈಲ್ಯೂರಿಯ) ಅಸಂಖ್ಯಾತ ಮತ್ತು ಅತಿಸೂಕ್ಷ್ಮ ಕ್ರಿಮಿಗಳು ಮೂತ್ರದಲ್ಲಿ ಕಾಣಬರಬಹುದು.

ಕಫ ಪರೀಕ್ಷೆ; ಕಫ ಪರೀಕ್ಷೆ ಈ ಮುಂದಿನ ಸಂದರ್ಭಗಳಲ್ಲಿ ಕಾಯಿಲೆಯನ್ನು ಕಂಡುಹಿಡಿಯಲು ಸಹಾಯ ಮಾಡುತ್ತದೆ :

(1) ಪರೋಪಜೀವಿಯ ವಾಸಸ್ಥಾನ ಉಸಿರಾಟದ ದಾರಿಯೇ ಆಗಿದ್ದರೆ (ಉದಾಹರಣೆಗೆ, ಪ್ಯಾರಗೋನಿಮಿಯಾಸಿಸ್ ರೋಗದಲ್ಲಿ) ಪ್ಯಾ. ವೆಸ್ಟರ್‌ಮಾನಿ ಮೊಟ್ಟೆಗಳು ಕಫದಲ್ಲಿ ಕಾಣಬರಬಹುದು.

(2) ಶ್ವಾಸಕೋಶದಲ್ಲಿ ಅಮೀಬದ ಕುರು ಆದಾಗ ಅದರ ಪಾಲಜೀಕಣಗಳು (ಟ್ರೋಫೋಸೈಟ್) ಕಫದಲ್ಲಿ ಕಾಣಿಸಿಕೊಳ್ಳಬಹುದು.

(3) ಹೈಡ್ಯಾಟಿಡ್ ಕೋಶ ಒಡೆದಾಗ ಎಕೈನೊಕಾಕಸ್ ಗ್ರಾನ್ಯುಲೋಸಸ್ ಎಂಬ ಲಾಡಿಹುಳುವಿನ ಕೊಕ್ಕೆ ಕೊಂಡಿಗಳು ಕಫದಲ್ಲಿ ಕಾಣಬರಬಹುದು.

ಜೀವುಂಡಿಗೆ ಪರೀಕ್ಷೆ : ಜೀವುಂಡಿಗೆ ಪರೀಕ್ಷೆಯ ಮೂಲಕ ಕೆಲವು ಪರೋಪಜೀವಿಜನ್ಯ ರೋಗಗಳನ್ನು ಪತ್ತೆಹಚ್ಚಬಹುದು.

(1) ಗುಲ್ಮದ ಜೀವುಂಡಿಗೆ ಪರೀಕ್ಷೆ ಕಾಳಮಾರಿ ಜ್ವರವನ್ನು ಕಂಡುಹಿಡಿಯಲು ಸಹಾಯ ಮಾಡುತ್ತದೆ.

(2) ಕಾಳಮಾರಿ ಜ್ವರ ಮತ್ತು ನಿದ್ರಾರೋಗಗಳನ್ನು ಪತ್ತೆಮಾಡಲು ಎದೆ ಎಲುಬಿನ ಜೀವುಂಡಿಗೆ ಪರೀಕ್ಷೆ ಸಹಾಯಮಾಡುತ್ತದೆ.

(3) ಕಾಳಮಾರಿ ಜ್ವರ, ಮೂಡಲಹುಣ್ಣು (ಓರಿಯಂಟಲ್ ಸೋರ್), ಎಸ್ಮಾಂಡಿಯಾ ಮತ್ತು ಆಂಕೊಸರ್ಕಿಯಾಸಿಸ್ ರೋಗಗಳನ್ನು ಕಂಡುಹಿಡಿಯಲು ಚರ್ಮದ ಜೀವುಂಡಿಗೆ ಪರೀಕ್ಷೆ ಸಹಾಯಮಾಡುತ್ತದೆ.

(4) ನಿದ್ರಾರೋಗ, ಫೈಲೇರಿಯಾ ಮತ್ತು ಕಾಳಮಾರಿ ರೋಗಗಳ ಪತ್ತೆಯಲ್ಲಿ ದುಗ್ಧರಸ ಗ್ರಂಥಿಗಳ ಜೀವುಂಡಿಗೆ ಪರೀಕ್ಷೆ ಸಹಾಯವಾಗುತ್ತದೆ.

(5) ಸಿಸ್ಟಿಸರ್‌ಕೋಸಿಸ್ ಮತ್ತು ಟ್ರೈಕಿನೆಲ್ಲಾ ಕಾಯಿಲೆಗಳಲ್ಲಿ ಮಾಂಸಖಂಡದ ಜೀವುಂಡಿಗೆ ಪರೀಕ್ಷೆ ಸಹಾಯ ಮಾಡುತ್ತದೆ.

(6) ಶಿಷ್ಟೋಸೋಮಿಯ ಸೋಂಕನ್ನು ಪತ್ತೆಹಚ್ಚಲು ಯಕೃತ್ತಿನ ಜೀವುಂಡಿಗೆ ಪರೀಕ್ಷೆ ಮತ್ತು ನೆಟ್ಟಗರುಳಿನ ಜೀವುಂಡಿಗೆ ಪರೀಕ್ಷೆ ಸಹಾಯವಾಗುತ್ತವೆ.

ಇತರ ನಿದಾನ ವಿಧಾನಗಳು : (1) ಪರೋಪಜೀವಿಜನ್ಯ ರೋಗಗಳಲ್ಲಿ ರಕ್ತದಲ್ಲಿರುವ ಜೀವಕಣಗಳು ಮಾರ್ಪಾಡು ಹೊಂದಬಹುದು. ಹುಳುಗಳ ಸೋಂಕು ಹತ್ತಿದಾಗ ಇಯೊಸಿನೊಫಿಲ್ಲುಗಳು ಜಾಸ್ತಿಯಾಗಬಹುದು. ಅಮೀಬ ಕುರುವಿನ ಕಾಯಿಲೆಯಲ್ಲಿ ಬಿಳಿಯ ರಕ್ತಕಣಗಳು ಜಾಸ್ತಿಯಾಗಬಹುದು. ಮಲೇರಿಯ ಮತ್ತು ಕೊಕ್ಕೆಹುಳುಗಳ ಕಾಯಿಲೆಯಲ್ಲಿ ಕೆಂಪು ರಕ್ತಕಣಗಳು ಕಮ್ಮಿ ಆಗಬಹುದು.

(2) ಕೆಲವು ಸಂದರ್ಭಗಳಲ್ಲಿ ಜೀವರಾಸಾಯನಿಕ ಬದಲಾವಣೆಗಳಾಗಬಹುದು.

(3) ರಸಿಕೆಯ ಪರೀಕ್ಷೆಯಿಂದಲೂ ಕೆಲವು ಪರೋಪಜೀವಿಜನ್ಯ ರೋಗಗಳನ್ನು ಪತ್ತೆಹಚ್ಚಬಹುದು. ಚರ್ಮಕ್ಕೆ ಚುಚ್ಚುಮದ್ದನ್ನು ಇಳಿಸಿ ಅದರಿಂದಾಗುವ ಪರಿಣಾಮದಿಂದ ಕಾಯಿಲೆಯನ್ನು ಕಂಡುಹಿಡಿಯಬಹುದು. ಉದಾಹರಣೆಗೆ, ಹೈಡ್ಯಾಟಿಡ್ ಕಾಯಿಲೆಯನ್ನು ಕ್ಯಾಸೋನಿ ಪರೀಕ್ಷೆಯಿಂದ ಪತ್ತೆಹಚ್ಚಬಹುದು.

ಏಕಕೋಶಿಕ ಪರೋಪಜೀವಿ (ಪ್ರೋಟೋಜೋವಾ) : ಈ ಗುಂಪಿನಲ್ಲಿ ಎರಡು ಪ್ರಭೇದಗಳಿವೆ (ಅ) ಒಂದೇ ಆತಿಥೇಯದಲ್ಲಿ ಜೀವನವನ್ನು ಪೂರ್ಣಮಾಡುವ ಎಂಟಮೀಬಾ ಇತ್ಯಾದಿ. (ಬ) ಆತಿಥೆಯಗಳಲ್ಲಿ ಜೀವನಕ್ರಮವನ್ನು ಪೂರ್ಣಗೊಳಿಸುವ ಪ್ಲಾಸ್ಮೊಡಿಯಂ, ಲೀಷ್ಮಾನಿಯ ಇತ್ಯಾದಿ. ಏಕಕೋಶಿಕಗಳ ನಾಲ್ಕು ಪಂಗಡಗಳಿಗೂ ಸೇರಿದ ಅನೇಕ ಜೀವಿಗಳು ಪರೋಪಜೀವಿಗಳಾಗಿವೆ. ರೈಜೊಪೋಡಾ (ಬುಡಗಾಲಿಗಳು) ಪಂಗಡದಲ್ಲಿ ವ್ಯಕ್ತಿಯ ದೇಹದ ಪರೋಪಜೀವಿಗಳು ಮುಖ್ಯವಾಗಿ ಎಂಟಮೀಬಾ ಹಿಸ್ಟೊಲಿಟಿಕಾ, ಎಂ.ಕೋಲಿ, ಎಂ. ಜಿಂಜಿವಾಲಿಸ್ ಮತ್ತು ಡೈಎಂಟಮೀಬಾ ಫ್ರಜಿಲಿಸ್.

ಕಶಾಂಗಧಾರಿ ಪಂಗಡದಲ್ಲಿ (ಫ್ಲಾಜೆಲ್ಲೇಟ್) ಲೀಷ್ಮಾನಿಯ ಡೋನೋವಾನಿ ಮತ್ತಿತರ ಪ್ರಭೇದಗಳು ಮಾನವ ಮತ್ತು ಚತುಷ್ಪಾದಿಗಳಲ್ಲಿ ಪರೋಪಜೀವಿಗಳಾಗಿವೆ. ಇವು ಆತಿಥೇಯದ ರಕ್ತ ಮತ್ತು ಅಂಗಾಂಶಗಳಲ್ಲಿರುತ್ತವೆ. ಒಂದೇ ಕಶಾಂಗವುಳ್ಳವು. ಬಲಿತ ಜೀವಿ ಉದ್ದುದ್ದವಾಗಿ ಸೀಳಿ ಎರಡಾಗುವ ಮೂಲಕ ಪ್ರಜನನ ಕ್ರಿಯೆ ಸಾಗಿ ಸಂಖ್ಯಾವೃದ್ಧಿ ಆಗುತ್ತದೆ.

ಸಿಲಿಯೊಫೋರ (ಲೋಮಾಂಗಿ) : ಈ ಪಂಗಡಕ್ಕೆ ಸೇರಿದ ಪರೋಪಜೀವಿ ಬ್ಯಾಲನ್‌ಟಿಡಿಯಮ್ ಕೊಲೈ ದೊಡ್ಡ ಕರುಳಿನಲ್ಲಿ ವಾಸಿಸುತ್ತದೆ. ಸಂತಾನೋತ್ಪತ್ತಿ ದ್ವಿವಿಭಜನದ (ಬೈನರಿ ಫಿಷನ್) ಮೂಲಕ ನಡೆಯುತ್ತದೆ.

ಸ್ಪೊರೋಜೋವಾ ಪಂಗಡದ ಪರೋಪಜೀವಿಗಳಲ್ಲಿ ಮಲೇರಿಯ ಕಾಯಿಲೆಯನ್ನು ಉಂಟುಮಾಡುವ ಪ್ಲಾಸ್ಮೋಡಿಯಮ್ ಪ್ರಭೇದಗಳು ಮುಖ್ಯವಾದವು.

ಹುಳುಗಳು (ಕ್ರಿಮಿಗಳು) : ಮನುಷ್ಯನನ್ನು ಅವಲಂಬಿಸಿರುವ ಕ್ರಿಮಿ ಪರೋಪಜೀವಿಗಳಲ್ಲಿ ಚಪ್ಪಟೆ ಹುಳುಗಳು ಮತ್ತು ದುಂಡು ಹುಳುಗಳು ಪ್ರಮುಖವಾದುವು. ಮನುಷ್ಯನನ್ನು ಆಶ್ರಯಿಸುವ ಮುಖ್ಯ ಚಪ್ಪಟೆ ಕ್ರಿಮಿಗಳು ಈ ಕೆಳಗಿನವು : (1) ಟ್ರೆಮಟೋಡಾ ವರ್ಗಕ್ಕೆ ಸೇರಿದ ಶಿಸ್ಟೋಸೋಮಾ ಪ್ರಭೇದಗಳು. ಇವು ಶಿಷ್ಟೋಸೋಮಿಯಾಸಿಸ್ ಎಂಬ ರೋಗಸ್ಥಿತಿಯನ್ನು ಉಂಟುಮಾಡುತ್ತವೆ. ಇದೇ ವರ್ಗದ ಫ್ಯಾಸಿಯೋಲಾ ಹೆಪ್ಯಾಟಿಕಾ ಫ್ಯಾಸಿಯೊಲಿಯಾಸಿಸ್ ಎಂಬ ರೋಗವನ್ನೂ ಫ್ಯಾಸಿಯೊಲಾ ಪಿಸ್‌ಬಸ್ಕಿ ಎಂಬ ಕ್ರಿಮಿ ಫ್ಯಾಸಿಯೊಲಾಪ್ಸಿಯಾಸಿಸ್ ಎಂಬ ರೋಗವನ್ನೂ ಉಂಟುಮಾಡುತ್ತವೆ.

(2) ಸೆಸ್ಟೋಡ ವರ್ಗಕ್ಕೆ ಸೇರಿದ ಪರೋಪ ಜೀವಿಗಳು ಟೀನಿಯಾ ಸೋಲಿಯಮ್, ಟೀನಿಯಾ ಸ್ಯಾಜಿನೇಟ, ಹೈಮೆನೋಪಿಸ್ ನಾನ ಮತ್ತು ಎಕೈನೊಕಾಕಸ್.

ಪರೋಪಜೀವಿ ದುಂಡು ಹುಳುಗಳ ಪೈಕಿ ಮಾನವನನ್ನು ಅವಲಂಬಿಸಿರುವಂಥವು ಈ ಮುಂದಿನವು; ಟ್ರೈಕ್ಯೂರಿಯಸ್ ಟ್ರೈಕಿಯೂರ, ಟ್ರೈಕಿನೆಲ್ಲಾ ಸ್ಪೈರಾಲಿಸ್, ಎಂಟರೋಬಿಯಸ್ ವರ್ಮಿಕ್ಯುಲಾರಿಸ್ (ಸೂಜಿ ಕ್ರಿಮಿ), ಆಸ್ಕ್ಯಾರಿಸ್ ಲುಂಬ್ರಿಕಾಯ್ಡಿಸ್ (ಜಂತುಹುಳು), ನೆಕೇಟರ್ ಅಮೆರಿಕಾನಸ್, ಆಂಕೈಲೊಸ್ಟೋಮ ಡ್ಯುಯೊಡಿನೇಲ್, ಡ್ರಾಕುನ್‌ಕ್ಯುಲಸ್ ಮೆಡಿನೆನ್‌ಸಿಸ್ (ನಾರು ಹುಣ್ಣುಹುಳು), ವುಚೆರೇರಿಯ ಬ್ಯಾನ್‌ಕ್ರಾಫ್ಟಿ (ಆನೆಕಾಲು ರೋಗದ ಹುಳು) ಮತ್ತು ಬ್ರೂಗಿಯ ಮಲೇರಿಯ.

ಮಾನವನ ಹಲವು ಮುಖ್ಯ ಪರೋಪಜೀವಿಜನ್ಯ ರೋಗಗಳ ಸ್ಥೂಲ ವಿವರಣೆ:

ಅಮೀಬಿಯಾಸಿಸ್ : ಎಂಟಮೀಬಾ ಹಿಸ್ಟೊಲಿಟಿಕಾದಿಂದ ಉಂಟಾಗುತ್ತದೆ. ಇದು ಆಮಶಂಕೆಗೆ ಇಲ್ಲವೇ ಯಕೃತ್ತಿನಲ್ಲಿ ಕುರುವಿಗೆ ಕಾರಣವಾಗಿದೆ. (ನೋಡಿ: ಎಂಟಮೀಬ)

ಮಲೇರಿಯ : ಮಲೆನಾಡು ಜ್ವರ ಮತ್ತು ಚಳಿಜ್ವರ ಎಂಬ ಹೆಸರುಗಳು ಇವೆ. ಉಷ್ಣವಲಯಗಳಲ್ಲಿ ಕಂಡುಬರುವ ಕಾಯಿಲೆಗಳ ಪೈಕಿ ಬಹಳ ಮುಖ್ಯವಾದದ್ದು. ಅನಾಫಿಲೀಸ್ ಸೊಳ್ಳೆ ಇದ್ದು, ಸೊಳ್ಳೆಯಲ್ಲಿ ಪರೋಪಜೀವಿ ವೃದ್ಧಿಹೊಂದಲು ಅನುಕೂಲವಾದ ಉಷ್ಣತೆ ಮತ್ತು ತೇವ ಇದ್ದಲ್ಲಿ ಹಾವಳಿ ಜಾಸ್ತಿ. ಮಲೇರಿಯದಲ್ಲಿ ನಾಲ್ಕು ಬಗೆಗಳಿವೆ : ಪ್ಲಾಸ್ಮೋಡಿಯಮ್ ವೈವಾಕ್ಸ್‌ನಿಂದ ಉಂಟಾಗುವ ಬಿನೈನ್ ಟರ್ಷಿಯನ್ ಮಲೇರಿಯ, ಪ್ಲಾಸ್ಮೋಡಿಯಮ್ ಮಲೇರಿಯೇದಿಂದ ಉಂಟಾಗುವ ಕ್ವಾರ್ಟನ್ ಮಲೇರಿಯ, ಪ್ಲಾಸ್ಮೋಡಿಯಮ್ ಫಾಲ್ಸಿಫಾರಮ್ಮನಿಂದ ಉಂಟಾಗುವ ಮ್ಯಾಲಿಗ್ನೆಂಟ್ ಟರ್ಷಿಯನ್ ಮಲೇರಿಯ ಮತ್ತು ಪ್ಲಾಸ್ಮೋಡಿಯಮ್ ಓವೇಲ್‌ನಿಂದ ಉಂಟಾಗುವ ಬಿನೈನ್ ಟರ್ಷಿಯನ್ ಮಲೇರಿಯ. ಭಾರತದಲ್ಲಿ ಮತ್ತು ಆಗ್ನೇಯ ಏಷ್ಯದಲ್ಲಿ ಪ್ಲಾ. ವೈವಾಕ್ಸಿನಿಂದ ಮಲೇರಿಯ ಜಾಸ್ತಿ. ಪ್ಲಾ. ಮಲೇರಿಯೇ ಮತ್ತು ಪ್ಲಾ. ಓವೇಲುಗಳು ಅಷ್ಟು ಜಾಸ್ತಿಯಾಗಿ ಕಂಡುಬರುವುದಿಲ್ಲ. ಆಫ್ರಿಕದಲ್ಲಿ ಪ್ಲಾ. ಫಾಲ್ಸಿಫಾರಮನಿಂದ ಉಂಟಾಗುವ ಮಲೇರಿಯ ಕಾಯಿಲೆ ಜಾಸ್ತಿ. ಪ್ಲಾ. ಮಲೇರಿಯೇದಲ್ಲಿ ಮೂರು ದಿವಸಗಳಿಗೊಮ್ಮೆ ಜ್ವರ ಕಾಣಿಸಿಕೊಂಡರೆ ಉಳಿದವಲ್ಲಿ ಅದು ಎರಡು ದಿವಸಗಳಿಗೊಮ್ಮೆ ಕಾಣಿಸಿಕೊಳ್ಳುತ್ತದೆ.

ಮಲೇರಿಯ ಕ್ರಿಮಿಯ ಜೀವನ ವೃತ್ತಾಂತ : ಮಲೇರಿಯ ರೋಗದ ಒಂದು ಹಂತದಲ್ಲಿ ಪ್ಲಾಸ್ಮೋಡಿಯಮ್ಮಿನ ಲೈಂಗಿಕ ವರ್ಗಗಳು ರಕ್ತದಲ್ಲಿರುತ್ತವೆ. ಅನಾಫಿಲೀಸ್ ಹೆಣ್ಣುಸೊಳ್ಳೆ ಮನುಷ್ಯನ ರಕ್ತವನ್ನು ಹೀರಿದಾಗ ಇವು ಅದರ ಹೊಟ್ಟೆಯನ್ನು ಹೊಕ್ಕು ಅಲ್ಲಿ ಗಂಡು ಹೆಣ್ಣು ಕೂಟ ಜೀವಕಣಗಳು (ಗ್ಯಾಮಿಟೋಸೈಟುಗಳು) ಮಿಲನಹೊಂದಿ ಭ್ರೂಣಾಣುವಾಗುತ್ತವೆ. ಇವು ಚಲಿಸುತ್ತ ಚರ್ಮದ ಆವರಣದ ಪೊರೆಯ ಮೂಲಕ ಒಳಹೊಕ್ಕು ಕೋಶಾವರಣವನ್ನು ಪಡೆದು ಚೀಲದಂತಾಗುತ್ತವೆ. ಒಂದು ವಾರದಿಂದ ಮೂರು ವಾರಗಳ ಮೇಲೆ ಈ ಚೀಲದಿಂದ ಸೋಂಕಿನ ಅಣುಗಳು (ಸ್ಪೋರೋಜೋಯಿಟ್ಸ್) ಬಿಡುಗಡೆ ಹೊಂದಿ ಸೊಳ್ಳೆಯ ಲಾಲಾರಸ ಗ್ರಂಥಿಗಳನ್ನು ಸೇರುತ್ತವೆ. ಈ ಸೊಳ್ಳೆಗಳು ಮನುಷ್ಯನನ್ನು ಕಚ್ಚಿದಾಗ ಅದರ ಜೊಲ್ಲಿನೊಡನೆ ಆತನ ರಕ್ತವನ್ನು ಸೇರುತ್ತವೆ. ಅಲ್ಲಿಂದ ಯಕೃತ್ತಿನ ಜೀವಕಣಗಳನ್ನು ಸೇರಿ ವೃದ್ಧಿ ಹೊಂದುತ್ತವೆ. ಆರೂವರೆ ದಿವಸಗಳಿಂದ (ಪ್ಲಾ. ಫಾಲ್ಸಿಫಾರಮ್) ಎಂಟೂವರೆ ದಿವಸಗಳ (ಪ್ಲಾ.ವೈವಾಕ್ಸ್) ಮೇಲೆ ಬಹುಸಂಖ್ಯೆಯಲ್ಲಿ ಮೀರೋಜ್ಞಾಯಿಟುಗಳು (ತುಂಡು ಅಣುಜೀವಿ) ಬಿಡುಗಡೆ ಹೊಂದಿ ರಕ್ತವನ್ನು ಸೇರುತ್ತವೆ. ಕೆಂಪು ರಕ್ತಕಣದಲ್ಲಿ ಮೊದಲು ಉಂಗುರುದಂತೆಯೂ ಆಮೇಲೆ ಸ್ಕೈಸಾಂಟುಗಳಾಗಿಯೂ (ಸೀಳು ಜನಿಕ) ಪರಿವರ್ತನೆಗೊಂಡು ಕೆಂಪುಕಣದ ವಿಭಜನೆಯಿಂದ ಹೊಸವರ್ಗದ ಮೀರೊಜ್ಞಾಯಿಟ್ಸುಗಳಾಗಿ ರಕ್ತಕಣಗಳು ಒಡೆದಾಗ ರಕ್ತವನ್ನು ಸೇರುತ್ತವೆ. ಈ ಅಲೈಂಗಿಕ ವೃದ್ಧಿ ಮೂರರ ಚಳಿಯಲ್ಲಿ 48 ಗಂಟೆಗೆ ಒಂದು ಬಾರಿಯೂ ನಾಲ್ಕರ ಚಳಿಯಲ್ಲಿ 72 ಗಂಟೆಗೆ ಒಂದು ಬಾರಿಯೂ ಆಗುತ್ತದೆ. ಇದರಿಂದ ದಿವಸ ಬಿಟ್ಟು ದಿವಸ ಬರುವ ಚಳಿ ಜ್ವರ ಮತ್ತು ನಾಲ್ಕರ ಚಳಿಜ್ವರ ಉಂಟಾಗುತ್ತವೆ. ಮೀರೊಜಾಯಿಟ್ಸುಗಳು ಹೊಸ ರಕ್ತಕಣವನ್ನು ಸೇರುತ್ತವೆ. ಈ ತರಹ ಸ್ಕೈಸಾಗನಿ (ಸೀಳುಜನನ) ಚಕ್ರವಾದ ಬಳಿಕ ಕೆಲವು ಮೀರೊಜ್ಞಾಯಿಟ್ಸುಗಳು ಪುಂಸ್ತ್ರೀ ಕೂಟಜೀವಕಣಗಳಾಗಿ ಪರಿವರ್ತನೆ ಹೊಂದುತ್ತವೆ. ಚಳಿ ಮತ್ತು ಜ್ವರ ಈ ರೋಗದ ಮುಖ್ಯ ಲಕ್ಷಣಗಳು. ಶುರುವಿನಲ್ಲಿ ಜ್ವರ, ತಲೆನೋವು, ಇರುಸು ಮುರುಸು ಮತ್ತು ವಾಂತಿ ಉಂಟಾಗುತ್ತವೆ. ಒಂದು ವಾರದಲ್ಲಿಯೇ ದಿವಸ ಬಿಟ್ಟು ದಿವಸ ಬರುವ ಜ್ವರ ಅಥವಾ ಮೂರು ದಿವಸಗಳಿಗೊಂದು ಸಾರಿ ಬರುವ ಜ್ವರ ಉಂಟಾಗುತ್ತದೆ. ಕೆಲವು ರೋಗಿಗಳಲ್ಲಿ ಈ ತರಹದ ವಾಯಿದೆ ಜ್ವರವಿರುವುದಿಲ್ಲ. ಇವರಲ್ಲಿ ಕ್ರಿಮಿಯ ಎರಡು ತರಹ ತಳಿಗಳು ಇರಬಹುದು.



ಲೀಷ್ಮಾನಿಯ

ಮಲೇರಿಯ ಜ್ವರದಲ್ಲಿ ಸಾಮಾನ್ಯವಾಗಿ ಕೆಲವು ಹಂತಗಳು ಇರುತ್ತವೆ. ಚಳಿ ಹಂತ, ಜ್ವರದ ಹಂತ ಮತ್ತು ಬೆವರು ಹಂತ. ಸಾಮಾನ್ಯವಾಗಿ ಮಲೇರಿಯ ಜ್ವರದಲ್ಲಿ ಮೊದಲು ಚಳಿ ಉಂಟಾಗುತ್ತದೆ. ಹಲ್ಲು ಕಡಿಯುವಷ್ಟು ಕೊರೆತ, ನಾಲ್ಕಾರು ಕಂಬಳಿ ಹೊದ್ದು ಕೊಂಡರೂ ಚಳಿ ಹೋಗದು. ರೋಗಿ ಚಳಿಯಿಂದ ನಡುಗುತ್ತಿರುತ್ತಾನೆ. ಕೆಲವು ನಿಮಿಷ ಅಥವಾ ಗಂಟೆಗಳಾದ ಮೇಲೆ ಬಿಸಿಯ ಹಂತ ಶುರುವಾಗುತ್ತದೆ. ಈ ಹಂತದಲ್ಲಿ ರೋಗಿಗೆ ತಲೆನೋವು, ವಾಂತಿ ಮತ್ತು ತೀವ್ರವಾದ ಜ್ವರ ($103^0$ ಫ್ಯಾ. ನಿಂದ $105^0$ಫ್ಯಾ.) ಬರುತ್ತದೆ. ಚರ್ಮ ಬಿಸಿಯಾಗಿ ಒಣಗಿದ ಹಾಗಾಗುತ್ತದೆ. ಮುಂದಿನ ಹಂತದಲ್ಲಿ ಮೈಯೆಲ್ಲ ಚೆನ್ನಾಗಿ ಬೆವರಿ ಜ್ವರ ಕಮ್ಮಿಯಾಗುತ್ತದೆ. ರೋಗಿಗೆ ಜ್ವರವಿಲ್ಲದೆ ಹುಷಾರಾಗಿದ್ದ ಹಾಗೆ ಕಂಡುಬರುತ್ತದೆ. ಆದರೆ ಎರಡು ಮೂರು ದಿವಸಗಳಲ್ಲಿ ಪುನಃ ಬರುತ್ತದೆ. ಈ ತರಹ ಎರಡು ಮೂರು ಸಲ ಜ್ವರ ಬಂದ ಮೇಲೆ ಗುಲ್ಮ ದೊಡ್ಡದಾಗುತ್ತದೆ. ಚಿಕಿತ್ಸೆ ಇಲ್ಲದೆ ಹಾಗೆಯೇ ಬಿಟ್ಟರೆ ರಕ್ತಕಣಗಳ ನಾಶದಿಂದ ರಕ್ತಹೀನತೆ ಉಂಟಾಗಿ ಅಶಕ್ತತೆ ಉಂಟಾಗುತ್ತದೆ. ರಕ್ತವನ್ನು ಗಾಜಿನ ಹಲಗೆಯ (ಸ್ಲೈಡ್) ಮೇಲೆ ಸವರಿ ಬಣ್ಣ ಕಟ್ಟಿ ಸೂಕ್ಷ್ಮದರ್ಶಕದಿಂದ ನೋಡಿದಾಗ ಮಲೇರಿಯ ಕ್ರಿಮಿಗಳು ಕಾಣಿಸುತ್ತವೆ. ಅವು ಯಾವ ತಳಿಗೆ ಸೇರಿದವೆಂದು ಹೇಳಬಹುದು.

ವಿಷಮ ಮೂಗುಡುವಿನ ಮಲೇರಿಯ ಅತಿ ಅಪಾಯಕಾರಿ. ಇದರಿಂದ ಮಿದುಳಿನ ಮಲೇರಿಯ ಮತ್ತು ರಕ್ತಮೂತ್ರ ಜ್ವರ ಉಂಟಾಗಬಹುದು. ಮಿದುಳಿನ ಮಲೇರಿಯದಲ್ಲಿ ಪ್ಲಾ. ಫಾಲ್ಸಿಪಾರಮ್ಮನ್ನು ಒಳಗೊಂಡ ಕೆಂಪು ರಕ್ತಕಣಗಳು ಲೋಮನಾಳಗಳ ಗೋಡೆಗೆ ಅತುಕೊಂಡು ರಕ್ತಚಲನೆಯನ್ನು ತಡೆಗಟ್ಟುತ್ತವೆ. ಇದರಿಂದ ತಲೆದೋರುವ ಆಮ್ಲಜನಕ ಕೊರತೆಯಿಂದ ಮಿದುಳಿನ ಕೆಲಸಕ್ಕೆ ಅಡಚಣೆ ಆಗುತ್ತದೆ. ತೀವ್ರ ಜ್ವರ, ತೂಕಡಿಕೆಯಿಂದ ಕೂಡಿದ ಸೆಳವು, ಅರೆಜೋಗರಿಕೆ ಮುಂತಾದವು ಉಂಟಾಗಬಹುದು. ಚಿಕಿತ್ಸೆಯನ್ನು ಬೇಗ ಶುರುಮಾಡದಿದ್ದರೆ ಸಾವು ಸಂಭವಿಸಬಹುದು.

ರಕ್ತಮೂತ್ರ ಜ್ವರ : ಮಲೇರಿಯ ರೋಗಕ್ಕೆ ಕ್ವಿನೈನನ್ನು ಅಕ್ರಮವಾಗಿ ಮತ್ತು ಕಮ್ಮಿಗುಟ್ಟಿಯಲ್ಲಿ (ಡೋಸ್) ಕೊಟ್ಟಾಗ ಈ ತೊಡಕು ಉಂಟಾಗಬಹುದು. ಚಳಿಯಿಂದ ಶುರುವಾಗಿ ಜ್ವರ, ತಲೆನೋವು, ವಾಂತಿ ಮತ್ತು ಬಿಕ್ಕಲು ಉಂಟಾಗುತ್ತವೆ. ಈ ರೋಗದಲ್ಲಿ ಕೆಂಪು ರಕ್ತಕಣಗಳು ಹೆಚ್ಚಾಗಿ ನಾಶವಾಗುತ್ತವೆ. ಇದರಿಂದ ಮೂತ್ರದಲ್ಲಿ ಹೀಮೊಗ್ಲೋಬಿನ್ ಸೇರಿಕೊಂಡು ಹೋಗುತ್ತದೆ. 24 ಗಂಟೆಗಳಲ್ಲಿ ಅರಿಶಿನ ಕಾಮಾಲೆ ಉಂಟಾಗುತ್ತದೆ. ಮೂತ್ರ ಕಪ್ಪುಮಿಶ್ರಿತ ಕೆಂಪಾಗಿರುತ್ತದೆ. ಹೀಮೋಗ್ಲೋಬಿನ್ ಮೂತ್ರಜನಕಾಂಗದ ನಾಳಗಳಲ್ಲಿ ಸೇರಿಕೊಂಡು ಮೂತ್ರದ ಉತ್ಪತ್ತಿಯನ್ನು ನಿಲ್ಲಿಸುತ್ತದೆ. ಮೂತ್ರ ನಿಲುಗಡೆಯಾಗಿ ರೋಗಿ ಸಾಯಬಹುದು.



ಬಾಲನ್‌ಟಿಡಿಯಮ್

ಲೀಷ್ಮಾನಿಯಾಸಿಸ್ : ಲೀಷ್ಮಾನಿಯಾ ಎಂಬ ಜಾತಿಗೆ ಸೇರಿದ ಕ್ರಿಮಿಯಿಂದ ಕಾಯಿಲೆ ಉಂಟಾಗುವ ಈ ರೋಗ ಮನುಷ್ಯನಿಗೆ ಮರಳುನೊಣಗಳಿಂದ ಹರಡುತ್ತದೆ. ಲೀಷ್ಮಾನಿಯಾದ ಕಶಾಂಗಿ (ಫ್ಲಾಜೆಲ್ಲೇಟ್) ರೂಪಗಳು ಮರಳು ನೊಣದಲ್ಲಿ ಇರುತ್ತವೆ.

ಮನುಷ್ಯನಲ್ಲಿ ನವುರುಜಾಲ ಲೋಳೆಪೊರೆಗಂತಿಯ ಕೋಶದೊಳಗೆ (ರೆಟಿಕ್ಯುಲೊ ಎನ್‌ಡೋತೀಲಿಯಲ್ ಸೆಲ್) ಅಂಡಾಕಾರದಲ್ಲಿರುತ್ತವೆ. ಇವಕ್ಕೆ ಲೀಷ್ಮಾನ್ ಡೋನೋವನ್ ಬಾಡೀಸ್ ಎಂದು ಹೆಸರು. ಲೀಷ್ಮಾನಿಯಾಸಿಸ್‌ನಲ್ಲಿ ಆಂತರಿಕಾಂಗಗಳ ಲೀಷ್ಮಾನಿಯಾಸಿಸ್ ಮತ್ತು ಚರ್ಮದ ಲೀಷ್ಮಾನಿಯಾಸಿಸ್ ಎಂಬ ಎರಡು ಬಗೆ ರೋಗಗಳಿವೆ.



ಜಿಯಾರ್ಡಿಯ

ಕಾಲ ಅಜಾರ್ (ಕಾಳಮಾರಿ ಜ್ವರ) : ಇದು ಭಾರತ, ಪಾಕಿಸ್ತಾನ, ಇಥಿಯೋಪಿಯ, ಪೂರ್ವ ಮತ್ತು ಪಶ್ಚಿಮ ಆಫ್ರಿಕ, ಏಷ್ಯ ಮೈನರ್, ಚೀನ ಮತ್ತು ಅಮೆರಿಕ ದೇಶಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಕಂಡುಬರುವ ಕಾಯಿಲೆಯಲ್ಲಿ ಮನುಷ್ಯನೇ ಮುಖ್ಯ ಆತಿಥೇಯ. (ನೋಡಿ: ಕಾಳಮಾರಿ)

ಹುಣ್ಣು : ಲೀಷ್ಮಾನಿಯಾ ಟ್ರಾಪಿಕಾ ಎಂಬ ಕ್ರಿಮಿಯಿಂದ ಈ ಕಾಯಿಲೆ ಉಂಟಾಗುತ್ತದೆ ಇದು ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ಕಂಡು ಬರುತ್ತದೆ. ಇದರ ಪಕ್ವಾವಧಿ ಎರಡು ವಾರಗಳಿಂದ ಐದು ವರ್ಷಗಳ ತನಕವೂ ಇರಬಹುದು. ಒಂದು ಅಥವಾ ಅನೇಕ ಕಡಿತವುಳ್ಳ ಸಣ್ಣ ಮಿಟ್ಟಿದದ್ದುಗಳು ಚರ್ಮದ ಮೇಲೆ ಉಂಟಾಗಿ ಅವು ಗಾತ್ರದಲ್ಲಿ ದೊಡ್ಡದಾಗುತ್ತವೆ. ಮೇಕಲಗಳ ಮೇಲೆ ಸಿಪ್ಪೆಗಟ್ಟುತ್ತದೆ. ಚಿಕಿತ್ಸೆ ಮಾಡದಿದ್ದರೆ,

ಇವು ದುಂಡಗಿನ ಹುಣ್ಣುಗಳಾಗಿ ಮಾರ್ಪಾಡು ಹೊಂದುತ್ತವೆ. ಇವುಗಳ ವ್ಯಾಸ 10 ಸೆಂಮೀ ನಷ್ಟಿರಬಹುದು. ಇವುಗಳಿಂದ ಕೀವುರಕ್ತ ಮಿಶ್ರಣ ಹೊಂದಿದ ರಸ ಸುರಿಯಬಹುದು. ಇವು ಒಣಗಿ ಸಿಪ್ಪೆಗಟ್ಟಬಹುದು. ನೋವು ಜಾಸ್ತಿ ಭಾಸವಾಗದು. ಸಾಮಾನ್ಯ ದೈಹಿಕ ಲಕ್ಷಣಗಳು ಕಂಡುಬರುವುದು. ಹುಣ್ಣಿನ ತುದಿಗೆ ಸೂಜಿಹಾಕಿ ಅದರಲ್ಲಿ ಬರುವ ರಸವನ್ನು ಪರೀಕ್ಷಿಸಿದಾಗ ಲೀಷ್ಮನ್ ಡೋನೊವಾನ್ ರೂಪಗಳು ಕಾಣಿಸಬಹುದು.

ಟ್ರೈಪನೋಸೋಮಿಯಾಸಿಸ್ (ನಿದ್ರಾರೋಗ): (ನೋಡಿ: ಟ್ರೈಪ್ಯಾನೋಸೋಮಿಯಾಸಿಸ್)

ಬಾಲನ್‌ಟಿಡಿಯಾಸಿಸ್ : ಬಾಲನ್‌ಟಿಡಿಯಮ್ ಕೊಲೈ ಎಂಬ ದೊಡ್ಡ ಶಿಲಕೆಧಾರಿಯಾದ ಪರೋಪಜೀವಿಯಿಂದ ಬರುವ ರೋಗ. ಇದರ ಸೋಂಕು ಪ್ರಪಂಚವ್ಯಾಪ್ತಿ ಉಳ್ಳದ್ದು. ಬ್ಯಾ. ಕೋಲೈ ಸಾಮಾನ್ಯವಾಗಿ ಹಂದಿಗಳಲ್ಲಿ ಮತ್ತು ಅಪರೂಪಕ್ಕೆ ಮನುಷ್ಯರಲ್ಲಿ ಕಾಣಿಸುತ್ತದೆ. ರೋಗ ಲಕ್ಷಣಗಳಲ್ಲಿ ಅಮೀಬ ಆಮಶಂಕೆಯನ್ನು ಹೋಲುತ್ತದೆ. ವಾಸ ಕರುಳಿನಲ್ಲಿ. ದೊಡ್ಡ ಕರುಳಿನಲ್ಲಿ ಆಮೀಬಗಳು ಹುಣ್ಣುಗಳನ್ನು ಉಂಟುಮಾಡಬಹುದು. ಈ ರೋಗದಲ್ಲಿ ಏನೂ ರೋಗ ಚಿಹ್ನೆಗಳಿಲ್ಲದಿರಬಹುದು ಅಥವಾ ರಕ್ತ, ಆಮುಗಳಿಂದ ಕೂಡಿದ ಭೇದಿ ಅನೇಕ ಸಲ ಉಂಟಾಗಬಹುದು. ಮಲವನ್ನು ಸೂಕ್ಷ್ಮದರ್ಶಕದಿಂದ ನೋಡಿದಾಗ ಪರೋಪ ಜೀವಿಗಳು ಕಾಣಿಸಬಹುದು.

ಜಿಯಾರ್ಡಿಯಾಸಿಸ್ : 12–18 ಮೈ. ಗಳಷ್ಟು ಉದ್ದವಿರುವ ಕಶಾಂಗಿಯಾದ ಜಿಯಾರ್ಡಿಯಾ ಇಂಟಸ್ಟೈನಾಲಿಸ್ ಎಂಬ ಏಕಾಣುಜೀವಿಯಿಂದ ಉಂಟಾಗುವ ಕಾಯಿಲೆ. ಈ ಸೋಂಕು ಪ್ರಪಂಚವ್ಯಾಪಿಯಾಗಿದ್ದರೂ ಉಷ್ಣವಲಯದಲ್ಲಿ ಜಾಸ್ತಿ. ಯಾವ ರೋಗಚಿಹ್ನೆಗಳೂ ಇಲ್ಲದಿರಬಹುದು. ತೀವ್ರರೂಪದ ಅತಿಭೇದಿ ಉಂಟಾಗಬಹುದು. ಮಲ ತೆಳ್ಳಗೂ ಬೆಳ್ಳಗೂ ಇರುತ್ತದೆ. ಸೋಂಕು ಜಾಸ್ತಿಯಿದ್ದಾಗ ಆಹಾರ ರಕ್ತಗತವಾಗುವುದಕ್ಕೆ ಧಕ್ಕೆಯಾಗಬಹುದು. ಪರಪಿಂಡಿಗಳನ್ನೂ ಅವುಗಳಲ್ಲಿನ ಜಿಟ್ಟೆಗಳನ್ನೂ ಮಲದಲ್ಲಿ ನೋಡುವುದರ ಮೂಲಕ ಕಾಯಿಲೆಯನ್ನು ಕಂಡುಹಿಡಿಯಬಹುದು.

ಚಪ್ಪಟೆ ಕ್ರಿಮಿಗಳ ರೋಗಗಳು: ಶಿಸ್ಟೊಸೋಮಿಯಾಸಿಸ್ (ಬಸವನ ಹುಳು ಜ್ವರ): ಚಪ್ಪಟೆಕ್ರಿಮಿಯ ಜಾತಿಗೆ ಸೇರಿದ ಶಿಸ್ಟೊಸೋಮ ಎಂಬ ಜಾತಿಯ ಪರೋಪ ಜೀವಿಯಿಂದ ಉಂಟಾಗುವ ರೋಗ. ಈ ಜಾತಿಯ ಮೂರು ಬಗೆ ಕ್ರಿಮಿಗಳು ರೋಗಕಾರಕಗಳು. ಶಿಸ್ಟೊಸೋಮ ಹೆಮಟೋಬಿಯಮ್ ಮಧ್ಯ ಮತ್ತು ಉತ್ತರ ಆಫ್ರಿಕ ಭಾಗಗಳಲ್ಲಿಯೂ ಶಿಸ್ಟೊಸೋಮ ಮ್ಯಾನ್‌ಸೋನಿ ಆಫ್ರಿಕ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಅಮೆರಿಕ ದೇಶಗಳಲ್ಲಿಯೂ ಶಿಸ್ಟೊಸೋಮ ಜಪಾನಿಕಮ್ ದೂರ ಪ್ರಾಚ್ಯದೇಶಗಳಲ್ಲಿಯೂ ಕಂಡುಬರುತ್ತವೆ. ಶಿಸ್ಟೊಸೋಮ ಹೆಮಟೋಬಿಯಮ್ ತಳಿಗೆ ಸೇರಿದ ಬಲಿತ ಕ್ರಿಮಿ ಯಕೃತ್ತಿನ ಪೋರ್ಟಲ್ ಅಭಿಧಮನಿಗಳಲ್ಲೂ ಮೂತ್ರಕೋಶದ, ಗರ್ಭಕೋಶದ ಮತ್ತು ಗುದನಾಳದ ರಕ್ತನಾಳಗಳಲ್ಲಿಯೂ ವಾಸಿಸುತ್ತದೆ. ಹಿಂತುದಿಯಲ್ಲಿ ಮುಳ್ಳಿರುವ ಮೊಟ್ಟೆ ಇಡುತ್ತದೆ. ಇವು ಮೂತ್ರದಲ್ಲಿ ಹೊರಬೀಳುತ್ತವೆ. ಶಿಸ್ಟೊಸೋಮ ಮ್ಯಾನ್‌ಸೋನಿ ಪಕ್ಕದಲ್ಲಿ ಮುಳ್ಳಿರುವ ಮೊಟ್ಟೆ ಇಡುತ್ತದೆ. ಈ ಮೊಟ್ಟೆಗಳಿಂದ ಉಂಟಾಗುವ ಉರಿ ಉದ್ರೇಕವೇ ಪ್ರಾರಂಭದ ರೋಗಚಿಹ್ನೆ. ಮೊಟ್ಟೆ ನೀರನ್ನು ತಲಪಿದಾಗ ಒಡೆದು ಮರಿಯಾಗುತ್ತದೆ. ಇದು (ಮಿರಾಸಿಡಿಯಮ್) ಚೆನ್ನಾಗಿ ಈಜುತ್ತ ಮಧ್ಯಸ್ಥ ಆತಿಥೇಯವಾದ ಸಿಹಿನೀರಿನ ಬಸವನಹುಳುವಿನ ಶರೀರವನ್ನು ಪ್ರವೇಶಿಸುತ್ತದೆ. ಅಲ್ಲಿ ಇದು ಸ್ಪೋರೊಸಿಸ್ಟ್ ಆಗಿ ಮಾರ್ಪಡುತ್ತದೆ. ಸ್ಪೋರೊಸಿಸ್ಟಿನಲ್ಲಿ ಎರಡನೆಯ ಸಂತತಿಯ ಸ್ಪೋರೊಸಿಸ್ಟುಗಳು ಉದ್ಭವಿಸಿ ಇವುಗಳಿಂದ ದ್ವಿಕಾಂಡ ಬಾಲವುಳ್ಳ ಸರ್ಕೇರಿಯಾ ಎಂಬ ಹೆಸರಿನ ಮರಿ ಉತ್ಪತ್ತಿಯಾಗುತ್ತವೆ. ಸರ್ಕೇರಿಯಾಗಳು ಸ್ಪೋರೊಸಿಸ್ಟುಗಳಿಂದ ಬಿಡುಗಡೆ ಹೊಂದಿ ಬಸವನ ಹುಳುವಿನಿಂದ ಹೊರಗೆ ಬಂದು ನೀರಿನಲ್ಲಿ ಈಜಾಡುತ್ತಿರುತ್ತವೆ. ಸುಮಾರು 48 ಗಂಟೆಗಳ ಕಾಲ ಇವು ನೀರಿನಲ್ಲಿ ಜೀವಿಸಿರಬಹುದು. ಈ ಅವಧಿಯಲ್ಲಿ ಚರ್ಮದ ಮೂಲಕ ಅಥವಾ ಬಾಯಿಯ ಲೋಳೆಪೊರೆಯ ಮೂಲಕ ಮನುಷ್ಯನ ಶರೀರವನ್ನು ಸೇರುತ್ತವೆ. ರಕ್ತಪರಿಚಲನೆಯ ಮೂಲಕವೂ ಮತ್ತು ಫುಪ್ಫುಸಗಳ ಮೂಲಕ ಯಕೃತ್ತನ್ನು ಸೇರಿ ಸುಮಾರು ಎರಡು ತಿಂಗಳಲ್ಲಿ ಗಂಡು ಹೆಣ್ಣು ಜೋಡಿಯಾಗಿ ಹೆಣ್ಣುಹುಳು ಮುಳ್ಳಿರುವ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ.



ಶಿಸ್ಟೊಸೋಮ

ಮೂರು ತಿಂಗಳುಗಳಲ್ಲಿ ಪಕ್ವಾವಸ್ಥೆ ತಲಪಿದ ಶಿಸ್ಟೊಸೋಮ ಹೆಮಟೋಬಿಯಮಿನಿಂದ ಉಂಟಾಗುವ ರೋಗದಲ್ಲಿ ರಕ್ತಮೂತ್ರ, ಅತಿಮೂತ್ರ, ಮೂತ್ರ ವಿಸರ್ಜನೆ ವೇಳೆ ವೇದನೆ ಮುಂತಾದವು ತಲೆದೋರುತ್ತವೆ. ಈ ಲಕ್ಷಣಗಳು ಬಲು ದಿನಗಳ ತನಕವೂ ಇರಬಹುದು. ಶಿಸ್ಟೊಸೋಮ ಮ್ಯಾನ್‌ಸೋನಿ ಸೋಂಕಿನಲ್ಲಿ ಪಕ್ವಾವಸ್ಥೆ (ಎರಡು ತಿಂಗಳು) ಆದ ಬಳಿಕ ಕೆಮ್ಮು, ತಲೆನೋವು, ಚಳಿಜ್ವರ, ಹೊಟ್ಟೆನೋವು ಉಂಟಾಗಬಹುದು. ಗುಲ್ಮವೂ ಯಕೃತ್ತೂ ದೊಡ್ಡದಾಗಿ ರಕ್ತ ಮತ್ತು ಆಮಿನಿಂದ ಕೂಡಿದ ಭೇದಿ ತಲೆದೋರಬಹುದು. ಚರ್ಮದ ಮೇಲೆ ಗುಳ್ಳೆಗಳು ಮತ್ತು ತುರುಚಿಕೆ ದದ್ದು ಉಂಟಾಗಬಹುದು. ರಕ್ತದಲ್ಲಿ ಇಯೊಸಿನೊಫಿಲ್‌ಗಳು ಜಾಸ್ತಿಯಾಗಬಹುದು. ಸಿರ್ರೋಸಿಸ್ (ಯಕೃತ್ತಿನ ರೋಗ) ಮತ್ತು ಜಲೋದರ ಉಂಟಾಗಬಹುದು. ಶಿಸ್ಟೊಸೋಮ ಜಪಾನಿಕಮಿನಿಂದ ಉಂಟಾಗುವ ರೋಗದಲ್ಲಿ ರೋಗಲಕ್ಷಣಗಳು ಶಿಸ್ಟೊಸೋಮ ಮ್ಯಾನ್‌ಸೋನಿ ಕಾಯಿಲೆಯನ್ನು ಹೋಲುತ್ತವೆ. ಇದರ ಜೊತೆಗೆ ನರಮಂಡಲರೋಗ ಲಕ್ಷಣಗಳು, ಸೆಳವುರೋಗ, ಅರೆಜೋಗರಿಕೆ, ಕ್ರೇನಿಯಲ್ ನರಗಳ ದೌರ್ಬಲ್ಯ ಅಥವಾ ಮಯಕ ಉಂಟಾಗಬಹುದು. ಮೊಟ್ಟೆಗಳನ್ನು ಮೂತ್ರಕೋಶದಲ್ಲಿ ಅಥವಾ ಮಲದಲ್ಲಿ ಗುರುತಿಸಿ ರೋಗವನ್ನು ಪತ್ತೆ ಹಚ್ಚಬಹುದು.

ಕ್ಲೋನಾರ್‌ಕಿಯಾಸಿಸ್ : ಕ್ಲೊನಾರ್‌ಕಿಸ್ ಸೈನೆನ್‌ಸಿಸ್ ಎಂಬ ಚಪ್ಪಟೆ ಹುಳು ಜಾತಿಗೆ ಸೇರಿದ ಹುಳುವಿನಿಂದ ಬರುವ ರೋಗ. ಪಿತ್ತನಾಳಗಳಲ್ಲಿ ಈ ಹುಳುವಿನ ವಾಸ. ಚಪ್ಪಟೆಯಾಗಿ 4 ಸೆಂಮೀ ಉದ್ದವಿದ್ದು ಬಹಳಷ್ಟು ಮೊಟ್ಟೆ ಇಡುತ್ತದೆ. ಮಲದಲ್ಲಿ ವಿಸರ್ಜಿಸಲ್ಪಡುವ ಮೊಟ್ಟೆಗಳು ಬಸವನ ಹುಳುವಿನ ಶರೀರವನ್ನು ಸೇರಿ ಸರ್ಕೇರಿಯ ಎಂಬ ಮರಿಗಳಾಗಿ ಮಾರ್ಪಾಡುಗೊಂಡು ಅವುಗಳಿಂದ ಬಿಡುಗಡೆಯಾಗಿ ನೀರನ್ನು ತಲಪಿ ಮೀನಿನ ದೇಹವನ್ನು ಪ್ರವೇಶಿಸುತ್ತವೆ. ಚೆನ್ನಾಗಿ ಬೇಯಿಸದ ಮೀನನ್ನು ತಿಂದಾಗ ಮನುಷ್ಯನಿಗೆ ಸೋಂಕು ಉಂಟಾಗುತ್ತದೆ. ಈ ಕಾಯಿಲೆ ಮುಖ್ಯವಾಗಿ ಚೀನ, ಕೊರಿಯ, ಟೈವಾನ್ ಮತ್ತು ಜಪಾನ್ ದೇಶಗಳಲ್ಲಿ ಕಂಡುಬರುತ್ತದೆ. ಅನೇಕ ಸಲ ಯಾವ ರೋಗಚಿಹ್ನೆಗಳೂ ಇರುವುದಿಲ್ಲ. ಹೊಟ್ಟೆ ನೋವು, ಆಗಾಗ್ಗೆ ಬರುವ ಜ್ವರ ಮತ್ತು ಕಾಮಾಲೆ ಉಂಟಾಗಬಹುದು.

ಪ್ಯಾರಗೋನಿಮಿಯಾಸಿಸ್ : ಚಪ್ಪಟೆಹುಳುವಿನ ಜಾತಿಗೆ ಸೇರಿದ ಪ್ಯಾರಗೋನಿಮಸ್ ಎಂಬ ಕ್ರಿಮಿಯಿಂದ ಉಂಟಾಗುವ ರೋಗ. ಸಾಮಾನ್ಯವಾಗಿ ಪ್ಯಾ. ವೆಸ್ಟರ್‌ಮಾನಿಯಿಂದ ಈ ರೋಗ ಉಂಟಾಗುತ್ತದೆ. ದೊಡ್ಡಹುಳು ಫುಪ್ಫುಸಗಳಲ್ಲಿ ಜಿಟ್ಟೆಯ ರೂಪದಲ್ಲಿ ವಾಸಿಸುತ್ತದೆ. ಜಿಟ್ಟೆಗಳು ಒಡೆದಾಗ ಮೊಟ್ಟೆಗಳು ಕಫದಲ್ಲೂ ಕಫವನ್ನು ನುಂಗಿದರೆ ಮಲದಲ್ಲೂ ವಿಸರ್ಜಿಸಲ್ಪಡುತ್ತವೆ. ಮೊಟ್ಟೆಯೊಡೆದು ಮರಿಗಳಾಗಿ ನೀರನ್ನು ಸೇರಿ ಮೊದಲನೆಯ ಮಧ್ಯಸ್ಥ ಆತಿಥೇಯವಾದ ಬಸವನ ಹುಳವಿನ ಶರೀರವನ್ನು ಸೇರುತ್ತವೆ. ಇದರ ಶರೀರದಿಂದ ಹೊರಬಂದ ಮರಿಗಳು ಏಡಿ ಮತ್ತು ಕ್ರೇ ಮೀನುಗಳ ಶರೀರವನ್ನು ಸೇರುತ್ತವೆ. ಚೆನ್ನಾಗಿ ಬೇಯಿಸದೆ ಈ ಪ್ರಾಣಿಗಳ ಮಾಂಸ ತಿಂದಾಗ ಮನುಷ್ಯನಿಗೆ ಸೋಂಕು ಉಂಟಾಗುತ್ತದೆ.

ಈ ರೋಗ ಸಾಮಾನ್ಯವಾಗಿ ದಕ್ಷಿಣ ಅಮೆರಿಕ, ಅತಿಪೂರ್ವ ಪ್ರಾಚ್ಯ ಸೋಮಾಲಿಯ ಮತ್ತು ಭಾರತ ದೇಶಗಳಲ್ಲಿ ಕಂಡುಬರುತ್ತದೆ. ಶುರುವಿಗೆ ಜ್ವರ, ಕೆಮ್ಮು ಮತ್ತು ರಕ್ತ ಮಿಶ್ರಿತ ಕಫ ಇರುತ್ತವೆ. ಅಪರೂಪವಾಗಿ ಎದೆನೋವು ಉಂಟಾಗಿ ಕೆಮ್ಮಿದಾಗ ರಕ್ತ ಬೀಳುವುದುಂಟು. ರೋಗಲಕ್ಷಣಗಳು ಫುಪ್ಫುಸದ ಉರಿತ ಮತ್ತು ಕ್ಷಯರೋಗದ ಲಕ್ಷಣಗಳನ್ನು ಹೋಲಬಹುದು. ಪರೋಪಜೀವಿ ಹೊಟ್ಟೆಯಲ್ಲಿ ಇದ್ದಾಗ ಭೇದಿ ಮತ್ತು ಯಕೃತ್ತು ಉರಿತದ ಚಿಹ್ನೆಗಳು ಉಂಟಾಗಬಹುದು. ನರಮಂಡಲದ ರೋಗಚಿಹ್ನೆಗಳೂ ಉಂಟಾಗಬಹುದು. ಬಲಿತ ಹುಳುಗಳು 20 ವರ್ಷಗಳ ತನಕ ಜೀವಿಸಬಲ್ಲವು.


ಫ್ಯಾಸಿಯೋಲಾ

ಫ್ಯಾಸಿಯೋಲಿಯಾಸಿಸ್ : ಫ್ಯಾಸಿಯೋಲಾ ಹೆಪಾಟಿಕಾದಿಂದ ಉಂಟಾಗುತ್ತದೆ. ಇದು ಸಾಮಾನ್ಯವಾಗಿ ಕುರಿಯನ್ನು ಆಶ್ರಯಿಸುತ್ತದೆ. ಅಪರೂಪವಾಗಿ ಮನುಷ್ಯನಿಗೆ ಇದರ ಸೋಂಕು ತಾಗುತ್ತದೆ. ಬಲಿತ ಹುಳುಗಳು ಪಿತ್ತನಾಳಗಳಲ್ಲಿ ವಾಸಿಸುತ್ತವೆ. ಎಲೆಯಾಕಾರ. ಉದ್ದ 3 ಸೆಂಮೀ. ಮೊಟ್ಟೆಗಳು ಕುರಿಯ ಮಲದಲ್ಲಿ ವಿಸರ್ಜಿಸಲ್ಪಡುತ್ತವೆ. ನೀರಿನಲ್ಲಿ ಮೊಟ್ಟೆಗಳಿಂದ ಮಿರಾಸಿಡಿಯಮ್ ಎಂಬ ಘಟ್ಟದ ಮರಿ ಬಿಡುಗಡೆಗೊಂಡು ಲಿಮ್ನೆಯಾ ಎಂಬ ಬಸವನ ಹುಳುವಿನ ಶರೀರವನ್ನು ಪ್ರವೇಶಿಸುತ್ತದೆ. ಅದರಿಂದ ಸರ್ಕೇರಿಯಾ ಘಟ್ಟದ ಮರಿಗಳು ಹುಟ್ಟಿ ಬಿಡುಗಡೆಗೊಂಡು ನೀರಿನಲ್ಲಿ ಈಜಾಡುತ್ತಿರುತ್ತವೆ.

ಇವುಗಳಿಗೆ ನೀರಿನಲ್ಲಿ ಬೆಳೆಯುವ ಸಸ್ಯಗಳ ಆಸರೆ ದೊರೆತಲ್ಲಿ ಕೋಶಾವರಣ ಹೊಂದಿ ಮೆಟಸರ್ಕೇರಿಯಾಗಳಾಗಿ ರೂಪಾಂತರ ಹೊಂದುತ್ತವೆ. ಮನುಷ್ಯ ಕುರಿ ಮತ್ತು ದನ ಮುಂತಾದ ಪ್ರಾಣಿಗಳು ಮೆಟಸರ್ಕೇರಿಯಾಗಳನ್ನು ಅಕಸ್ಮಾತ್ ನುಂಗಿದಾಗ ಅವು ಮುಂಗರುಳನ್ನು ತಲಪಿ ಅಲ್ಲಿ ಕೋಶಾವರಣದಿಂದ ಬಿಡುಗಡೆ ಹೊಂದುತ್ತವೆ. ಮೆಟಸರ್ಕೇರಿಯಾಗಳು ಕರುಳಿನ ಗೋಡೆಯನ್ನು ಭೇದಿಸಿಕೊಂಡು ಪೆರಿಟೋನಿಯಮ್ ಕೋಶ ಮತ್ತು ಯಕೃತ್ತನ್ನು ಸೇರಿ ಪಿತ್ತನಾಳಗಳಲ್ಲಿ ವೃದ್ಧಿಹೊಂದುತ್ತವೆ. ಮನುಷ್ಯನ ಸೋಂಕು ಸಾಮಾನ್ಯವಾಗಿ ಉತ್ತರ ಆಫ್ರಿಕ, ಅಪರೂಪವಾಗಿ ಬ್ರಿಟಿಷ್ ದೇಶಗಳಲ್ಲಿ ಕಂಡುಬರುತ್ತದೆ. ಸಣ್ಣ ಜ್ವರ, ಯಕೃತ್ತು ದೊಡ್ಡದಾಗುವುದು ಮತ್ತು ರಕ್ತದಲ್ಲಿ ಇಯೊಸಿನೋಫಿಲ್ ಬಿಳಿಯ ರಕ್ತಕಣಗಳ ಸಂಖ್ಯೆ ಜಾಸ್ತಿಯಾಗುವುದು ಉಂಟಾಗಬಹುದು. ಹೊಟ್ಟೆ ನೋವು, ಭೇದಿ ಮತ್ತು ಜೀವಿವಿಷರಕ್ತದ ಚಿಹ್ನೆಗಳು ತಲೆದೋರಬಹುದು.

ಫ್ಯಾಸಿಯೋಲಾಪ್ಸಿಯಾಸಿಸ್ : ಈ ರೋಗವನ್ನು ಉಂಟುಮಾಡುವ ಫ್ಯಾಸಿಯೋಲಾಪ್ಸಿಸ್ ಬಸ್ಕಿ ಮನುಷ್ಯನಿಗೆ ಸೋಂಕು ಉಂಟುಮಾಡುವ ಚಪ್ಪಟೆ ಕ್ರಿಮಿಗಳಲ್ಲೆಲ್ಲ ದೊಡ್ಡದು. ಬಲಿತಹುಳು ಮನುಷ್ಯ, ಹಂದಿ, ಅಪರೂಪಕ್ಕೆ ನಾಯಿಯ ಕರುಳಲ್ಲಿ ವಾಸಿಸುತ್ತದೆ. ಮೊಟ್ಟೆಗಳು ಮಲದಲ್ಲಿ ಹೊರಬೀಳುತ್ತವೆ. ನೀರಿನಲ್ಲಿ ಮಿರಾಸಿಡಿಯಮುಗಳು ಬಿಡುಗಡೆ ಹೊಂದಿ ಸೆಗ್‌ಮೆಂಟೈನಾ ತಳಿಗೆ ಸೇರಿದ ಬಸವನಹುಳುವಿನ ಶರೀರವನ್ನು ಪ್ರವೇಶಿಸಿ ಅದರಿಂದ ಸರ್ಕೇರಿಯಾಗಳು ಬಿಡುಗಡೆಗೊಂಡು ನೀರಿನಲ್ಲಿ ಈಜುತ್ತ ಅಲ್ಲಿ ಸಸ್ಯಗಳ ಆಸರೆ ಸಿಕ್ಕಿದಾಗ ಕೋಶಾವರಣ ಹೊಂದುತ್ತವೆ. ಈ ಮೆಟಸರ್ಕೇರಿಯಾಗಳನ್ನು ಮನುಷ್ಯ ಅಕಸ್ಮಾತ್ ನುಂಗಿದಾಗ ಸೋಂಕು ಉಂಟಾಗುತ್ತದೆ. ಈ ರೋಗ ಮಧ್ಯ ಮತ್ತು ದಕ್ಷಿಣ ಚೀನಾದಲ್ಲಿ ಕಂಡು ಬರುತ್ತದೆ. ಮೊದಲಿಗೆ ಮೇಲು ಹೊಟ್ಟೆನೋವು ತಲೆದೋರಿ ಸ್ವಲ್ಪ ದಿವಸದ ಮೇಲೆ ಜೀರ್ಣವಾಗದ ಆಹಾರ ಸಹಿತವಾದ ಭೇದಿ ಮತ್ತು ಕೈಕಾಲುಗಳ ಊತ ಕಂಡುಬರುಬಹುದು.

ಸೆಸ್ಟಾಯ್ಡಿಯ : ಇವು ಲಾಡಿ ಹುಳುಗಳು. ಪ್ಲಾಟಿಹೆಲ್ಮಿಂತಿಸ್ ಜಾತಿಗೆ ಮತ್ತು ಸೆಸ್ಟೊಡ ವರ್ಗಕ್ಕೆ ಸೇರಿವೆ. (ನೋಡಿ: ಲಾಡಿಹುಳು)

ಹೈಡಾಟಿಡ್ ರೋಗ : ಟೀನಿಯ ಎಕೈನೊಕಾಕಸ್ ಎಂಬ ಲಾಡಿಹುಳುವಿನ ಜಿಟ್ಟೆ (ಕೋಶ) ಹಂತದ ಸೋಂಕಿನಿಂದ ಬರುವ ರೋಗ. ಈ ಲಾಡಿ ಹುಳುಗಳು ಬಲುಚಿಕ್ಕವು ಉದ್ದ 0.5 ಸೆಂಮೀ. ನಾಯಿ ಕರುಳಿನಲ್ಲಿ ಇದರ ವಾಸ. ಮಧ್ಯಸ್ಥ ಆತಿಥೇಯಗಳಿಂದ ಕುರಿ, ದನ, ಕುದುರೆ–ಅಪರೂಪಕ್ಕೆ ಮನುಷ್ಯ ಇದರ ಮೊಟ್ಟೆಗಳನ್ನು ನುಂಗುವುದರಿಂದ ಸೋಂಕು ಉಂಟಾಗುತ್ತದೆ. ಮೊಟ್ಟೆಗಳು ಮುಂಗರುಳಿನಲ್ಲಿ ಒಡೆದು ಭ್ರೂಣಗಳು ಹೊರಬೀಳುತ್ತವೆ. ಇವು ಕರುಳಿನ ಗೋಡೆಯನ್ನು ಭೇದಿಸಿ ರಕ್ತವನ್ನು ಸೇರಿ ರಕ್ತಪರಿಚಲನೆಯ ಮೂಲಕ ಅನೇಕ ಅಂಗಾಂಗಳನ್ನು ಸೇರುತ್ತವೆ. ಅಲ್ಲಿ ಜಿಟ್ಟೆಗಳಾಗಿ ಮಾರ್ಪಾಡು ಹೊಂದುತ್ತವೆ. ಹೈಡಾಟಿಡ್ ಕಾಯಿಲೆ ಆಸ್ಟ್ರೇಲಿಯ, ಐಸಲೆಂಡ್, ದಕ್ಷಿಣ ಅಮೆರಿಕ ಮತ್ತು ಮಧ್ಯ ಪ್ರಾಚ್ಯವಲಯಗಳಲ್ಲಿ ಕಂಡುಬರುತ್ತದೆ. ಹೈಡಾಟಿಡ್ ಕೋಶಗಳು ಸಾಮಾನ್ಯವಾಗಿ ಯಕೃತ್ತು ಮತ್ತು ಘುಪ್ಪುಸಗಳಲ್ಲಿ ಕಾಣಿಸಿಕೊಳ್ಳುತ್ತವೆ. ಮಿದುಳು ಮತ್ತು ಕಣ್ಣುಗಳಲ್ಲಿಯೂ ಇವು ಉಂಟಾಗಬಹುದು. ಯಕೃತ್ತಿನಲ್ಲಿ ಕೋಶಗಳು ಬಹಳ ದೊಡ್ಡವಾಗಿ ಏನೂ ರೋಗ ಲಕ್ಷಣಗಳಿಲ್ಲದಿರಬಹುದು. ಯಕೃತ್ತಿನ ಅಥವಾ ಹೊಟ್ಟೆ ನೋವು ಉಂಟಾಗಬಹುದು. ಪಿತ್ತರಸನಾಳಗಳ ಮೇಲಿನ ಒತ್ತಡದಿಂದ ಕಾಮಾಲೆ ಬರಬಹುದು. ಘುಪ್ಪುಸಗಳಲ್ಲಿರುವ ಹೈಡಾಟಿಡ್ ಕೋಶ ದೊಡ್ಡದಾದಾಗ ಕೆಮ್ಮು ಮತ್ತು ಕೆಮ್ಮಿನಲ್ಲಿ ರಕ್ತ ತಲೆದೋರಬಹುದು. ಬಹಳ ದಿವಸದ ಮೇಲೆ ಜಿಟ್ಟೆಗಳಲ್ಲಿ ಸುಣ್ಣಗಟ್ಟಬಹುದು. ಕ್ಯಾಸೋನಿ ಪರೀಕ್ಷೆಯಿಂದ ಈ ರೋಗವನ್ನು ಪತ್ತೆ ಮಾಡಬಹುದು.



ಹೈಮೆನೊಲೆಪಿಸ್‌ನ ಸ್ಕಾಲೆಕ್ಸ್

ಹೈಮೆನೊಲೆಪಿಸ್ ನಾನ (ಗುಜ್ಜಾರಿ ಲಾಡಿಹುಳು) : ಮನುಷ್ಯನ ಕರುಳಿನ ಲಾಡಿಹುಳುಗಳಲ್ಲೆಲ್ಲ ಅತ್ಯಂತ ಚಿಕ್ಕದು. ಇದರ ಸೋಂಕು ಉಷ್ಣವಲಯಗಳಲ್ಲಿ ಕಂಡುಬರುತ್ತದೆ. ಮೊಟ್ಟೆಗಳನ್ನು ಅಕಸ್ಮಾತ್ ನುಂಗಿದರೆ ಅವು ಮುಂಗರುಳಿನಲ್ಲಿ ಒಡೆದು ಲೋಮಗಳ ತಡಕೆಗಳನ್ನು ಪ್ರವೇಶಿಸಿ ಸಿಸ್ಟಿಸರ್ಕಾಯಿಡ್ ಮರಿಹುಳುವಾಗಿ ರೂಪಾಂತರ ಹೊಂದುತ್ತವೆ. ಪುನಃ ಕರುಳಿನ ನಾಳಕ್ಕೆ ಬಂದು ಎರಡು ವಾರಗಳಲ್ಲಿ ಬಲಿತ ಹುಳುಗಳಾಗುತ್ತವೆ. ಅತಿಭೇದಿ, ನಿದ್ರಾರಾಹಿತ್ಯ, ಮೂಗು ಮತ್ತು ಗುದದ್ವಾರದ ನವೆ, ದದ್ದು, ಹೊಟ್ಟೆನೊವು ಇತ್ಯಾದಿ ಉಂಟಾಗಬಹುದು.

ಡೈಫಿಲ್ಲೊಬಾಥ್ರಿಯಲೇಟಮ್ : ಯೂರೋಪ್, ಏಷ್ಯ, ಆಫ್ರಿಕ, ಅಮೆರಿಕ ದೇಶಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಕಂಡುಬಂದಿಲ್ಲ. ಹುಳುವಿನ ಉದ್ದ 3–10 ಮೀ. ಪ್ರೊಗ್ಲಾಟಿಡುಗಳ ಸಂಖ್ಯೆ 4,000ದವರೆಗೂ ಇರಬಹುದು. ಮನುಷ್ಯ, ನಾಯಿ ಮತ್ತು ಬೆಕ್ಕು ನಿರ್ದಿಷ್ಟ ಆತಿಥೇಯಗಳು. ಸೈಕ್ಲೋಪ್ಸ್ ಮೊದಲನೆಯ ಮಧ್ಯವರ್ತಿ ಆತಿಥೇಯ. ಎರಡನೆಯದು ಸಿಹಿನೀರಿನ ಮೀನು. ನಿರ್ದಿಷ್ಟ ಆತಿಥೇಯದ ಮಲದಲ್ಲಿ ಮೊಟ್ಟೆಗಳು ವಿಸರ್ಜಿಸಲ್ಪಡುತ್ತವೆ. ಇವು ನೀರನ್ನು ಸೇರಿದಾಗ ಒಡೆದು ಭ್ರೂಣ ಹೊರಬಿದ್ದು ನೀರಿನಲ್ಲಿ ಈಜಾಡುತ್ತಿರುತ್ತವೆ. 12 ಗಂಟೆಯೊಳಗೆ ಸೈಕ್ಲೊಪ್ಸಿನಿಂದ ನುಂಗಲ್ಪಟ್ಟಲ್ಲಿ ಅದರ ದೇಹಾವಕಾಶದೊಳಗೆ ನುಸುಳಿ ಪ್ರೊಸರ್ಕಾಯಿಡ್ ಹಂತದ ಮರಿಹುಳುವಾಗಿ ಮಾರ್ಪಾಡು ಹೊಂದುತ್ತವೆ. ಸೋಂಕು ಉಂಟಾದ ಸೈಕ್ಲೋಪ್ಸನ್ನು ಸಿಹಿನೀರಿನ ಮೀನು ನುಂಗಿದರೆ ಅದರ ಮಾಂಸಖಂಡಗಳಿಗೋ ಸಂಯೋಜಕ ಅಂಗಾಂಶಗಳಿಗೋ ಹೋಗಿ ಪ್ಲೀರೊಸರ್ಕಾಯಿಡ್ ಹಂತದ ಮರಿಹುಳುವಾಗುತ್ತವೆ. ಸೋಂಕುಮುಟ್ಟಿದ ಮೀನನ್ನು ತಿನ್ನುವುದರಿಂದ ಮನುಷ್ಯನಿಗೆ ತಾಗುತ್ತದೆ. ಅವನ ಮುಂಗರುಳಿನಲ್ಲಿ ಪರೋಪಜೀವಿ ನೆಲಸಿ 3–4 ವಾರಗಳಲ್ಲಿ ಬಲಿತು ಮೊಟ್ಟೆ ಉತ್ಪನ್ನ ಮಾಡಲು ಶುರುಮಾಡುತ್ತವೆ. ಭೇದಿ, ಎದೆ ಉರಿ, ಹೊಟ್ಟೆ ಭಾರ ಮತ್ತು ವಾಂತಿ ಈ ರೋಗದ ಮುಖ್ಯ ಲಕ್ಷಣಗಳು. ಮೆಗಲೊಬ್ಲಾಸ್ಟಿಕ್ ಅನಿಮಿಯ ಉಂಟಾಗಬಹುದು.

ದುಂಡು ಹುಳುಗಳ ರೋಗಗಳು: ಎಂಟಿರೋಬಿಯಾಸಿಸ್ : ಎಂಟಿರೋಬಿಯಾಸ್ ವರ್ಮಿಕ್ಯುಲಾರಿಸ್ (ದಾರದ ಹುಳು, ಸೂಜಿಹುಳು) ಎಂಬ ಹುಳುವಿನಿಂದ ಬರುವ ರೋಗ. ದಾರದ ಹುಳುಗಳು ಮಕ್ಕಳಲ್ಲಿ ಸರ್ವೇಸಾಧಾರಣವಾಗಿ ಕಂಡುಬರುತ್ತವೆ. ಅವು 0.8–1 ಸೆಂಮೀ. ಉದ್ದ ಮತ್ತು 0.5 ಮಿಮೀ ಗಿಂತಲೂ ಕಡಿಮೆ ವ್ಯಾಸವಿದ್ದು ಹತ್ತಿಯ ದಾರದ ಹಾಗೆ ಕಾಣಿಸುತ್ತವೆ. ಹೆಣ್ಣುಹುಳು ಗಂಡುಹುಳುವಿಗಿಂತ ದೊಡ್ಡದು. ಹೆಣ್ಣು ಮತ್ತು ಗಂಡುಹುಳುಗಳು ದೊಡ್ಡಕರುಳು ಅದರಲ್ಲೂ ಹೆಚ್ಚಾಗಿ ಮೂಗರುಳಿನಲ್ಲಿ ಮತ್ತು ನೆಟ್ಟಗರುಳಿನಲ್ಲಿ ವಾಸಿಸುತ್ತವೆ. ಗುದನಾಳದ ಮೂಲಕ ಗುದದ್ವಾರದ ಹೊರಗೆ ಬಂದು ಬಹಳ ನವೆಯನ್ನು ಉಂಟುಮಾಡುತ್ತವೆ. ಕರುಳಿನಲ್ಲಿ ಗಂಡುಹೆಣ್ಣುಗಳು ಮಿಲನ ಹೊಂದಿ ಮೊಟ್ಟೆಗಳು ಮಲದಲ್ಲಿ ಹೊರಬೀಳುತ್ತವೆ. ರೋಗಿ ನವೆಯಿಂದಾಗಿ ಗುದದ್ವಾರವನ್ನು ಕೆರೆದುಕೊಂಡಾಗ ಮೊಟ್ಟೆಗಳು ಅವನ ಉಗುರು ಸಂದಿಗಳಲ್ಲಿ ಸೇರಿ ಕೊಳ್ಳುತ್ತವೆ. ಆಹಾರದ ಮೂಲಕವಾಗಿಯಾಗಲಿ ಬೆರಳನ್ನು ಚೀಪಿದಾಗ ಆಗಲಿ ಅವು ಮನುಷ್ಯನ ಕರುಳನ್ನು ಸೇರುತ್ತವೆ. ಮೊಟ್ಟೆಯಿಂದ ಹೊಸಪೀಳಿಗೆಯ ಹುಳುಗಳು ಕರುಳಿನಲ್ಲಿ ಬೆಳೆಯುತ್ತವೆ. ರೋಗಿಗೆ ಅವುಗಳಿಂದ ಏನೂ ತೊಂದರೆಯಿಲ್ಲದಿರಬಹುದು. ಅವು ಮೊದಲು ಮಲದಲ್ಲಿ ಕಾಣಿಸಿಕೊಳ್ಳಬಹುದು. ಗುದದ್ವಾರದಲ್ಲಿ ನವೆ ಉಂಟಾಗಿ ಕೆರೆದುಕೊಂಡಾಗ ಇಸುಬಿನಂತಾಗಿ ಗಾಯವಾಗಬಹುದು. ಬಹಳ ಅಪರೂಪವಾಗಿ ಅಪೆಂಡಿಸೈಟಿಸ್ ರೋಗಕ್ಕೆ ಕಾರಣವಾಗಬಹುದು. ಮಲದಲ್ಲಿ ಕಾಣಬರುವುದರಿಂದ ಮತ್ತು ಗುದದ್ವಾರದಿಂದ ತೆಗೆದುಕೊಂಡ ಲೇಪವನ್ನು ಸೂಕ್ಷ್ಮದರ್ಶಕ ಯಂತ್ರದಿಂದ ನೋಡುವುದರಿಂದ ಅವುಗಳ ಮೊಟ್ಟೆಗಳು ಕಾಣಿಸಬಹುದು.

ಆಸ್ಕಾರಿಯಾಸಿಸ್ : (ನೋಡಿ: ಜಂತುಹುಳ)

ಟ್ರೈಕ್ಯೂರಿಸ್ ಟ್ರೈಕಿಯೂರ (ಚಾವಟಿಹುಳು) : ಚಾವಟಿಕ್ರಿಮಿ ಪ್ರಪಂಚವ್ಯಾಪಿ. ಉಷ್ಣವಲಯದಲ್ಲಿ ಇದರ ಹಾವಳಿ ಜಾಸ್ತಿ. ಇದು ದೊಡ್ಡ ಕರುಳಿನ ಮುಂಗರಳು (ಸೀಕಮ್) ಮತ್ತು ಅಪೆಂಡಿಕ್ಸ್ ಭಾಗಗಳಲ್ಲಿ ಇರುತ್ತದೆ. ಹುಳುವಿನ ಉದ್ದ 30–45 ಮಿಮೀ. ಮೊಟ್ಟೆಗಳನ್ನು ನುಂಗಿದಾಗ ಅವು ಮುಂಗರುಳಿನಲ್ಲಿ ಒಡೆಯುತ್ತವೆ. ಮರಿಹುಳುಗಳು ಸುಮಾರು 90 ದಿವಸಗಳಲ್ಲಿ ಬಲಿತು ಹೊಸಜೀವನ ಚಕ್ರವನ್ನು ಆರಂಭಿಸುವುವು. ಲಘು ಸೋಂಕಿನಲ್ಲಿ ಏನೂ ಲಕ್ಷಣಗಳಿಲ್ಲದಿರಬಹುದು. ಕ್ರಿಮಿಗಳು ಜಾಸ್ತಿ ಇದ್ದಾಗ ರಕ್ತಸ್ರಾವವಾಗಬಹುದು. ಸುರುಳ್ಗರುಳು (ವಾಲ್‌ವ್ಯೂಲಸ್) ಮತ್ತು ಗುದನಾಳ ಸ್ಥಳ ಬಿಟ್ಟು ಜಾರಿ ಬೀಳಬಹುದು.

ಟ್ರೈಕಿನಿಯಾಸಿಸ್ (ಟ್ರೈಕಿನೋಸಿಸ್): ಟ್ರೈಕಿನೆಲ್ಲಾ ಸ್ಪೈರಾಲಿಸ್ ಎಂಬ ಹುಳುವಿನಿಂದ ಬರುವ ರೋಗ. ಯೂರೋಪ್ ಮತ್ತು ಅಮೆರಿಕ ಖಂಡಗಳಲ್ಲಿ ಹೆಚ್ಚು ಕಂಡುಬರುತ್ತದೆ. ಹಂದಿ ಮಾಂಸ ತಿನ್ನುವವರಲ್ಲಿ ಜಾಸ್ತಿ. ಬಲು ಚಿಕ್ಕ ದುಂಡು ಹುಳು. ಗಂಡು 1.5 ಮಿಮೀ ಹೆಣ್ಣು 2 ಮಿಮೀ ಉದ್ದ ಇರುತ್ತವೆ. ಹುಳು ಹಂದಿ ಕರುಳಿನಲ್ಲಿ ವಾಸಿಸುತ್ತದೆ. ಗಂಡು ಹೆಣ್ಣು ಕಲೆತ ಮೇಲೆ ಗಂಡು ಹುಳು ಸಾಯುತ್ತದೆ. ಹುಟ್ಟಿದ ಮರಿಹುಳುಗಳು ಅಭಿಧಮನಿಗಳ ಮೂಲಕ ಹೃದಯವನ್ನು ಸೇರಿ ಅಲ್ಲಿಂದ ಘುಪ್ಪುಸ ಮತ್ತು ಯಕೃತ್ತಿನ ಲೋಮನಾಳಗಳ ಮೂಲಕ ರಕ್ತಪರಿಚಲನೆಯನ್ನು ತಲಪಿ ದೇಹದ ಅನೇಕ ಅಂಗಾಂಗಗಳನ್ನು ತಲಪುತ್ತವೆ. ಮಾಂಸಖಂಡಗಳಲ್ಲಿ ವೃದ್ಧಿ ಹೊಂದಿ 0.5 ಮಿಮೀ ಇರುವ ಚಿಕ್ಕ ಜಿಟ್ಟೆಗಳಾಗಿ ಮಾರ್ಪಾಡಾಗುತ್ತವೆ. ಚೆನ್ನಾಗಿ ಬೇಯಿಸದೆ ಇರುವ ಹಂದಿಯ ಮಾಂಸವನ್ನು ಮನುಷ್ಯ ತಿಂದಾಗ ಹುಳು ಮನುಷ್ಯನ ಸಣ್ಣ ಕರುಳನ್ನು ಸೇರಿ ವೃದ್ಧಿ ಹೊಂದುತ್ತದೆ. ಸ್ವಲ್ಪ ದಿವಸಗಳಲ್ಲಿ

ಭ್ರೂಣಗಳು ರಕ್ತಪರಿಚಲನೆಯ ಮೂಲಕ ದೇಹದಲ್ಲೆಲ್ಲ ಹಬ್ಬುತ್ತವೆ. ಸೋಂಕು ಹತ್ತಿದ ಪ್ರಾಣಿಯ ಮಾಂಸವನ್ನು ಚೆನ್ನಾಗಿ ಬೇಯಿಸದೆ ತಿನ್ನುವುದರಿಂದ ಮನುಷ್ಯನಿಗೆ ಸೋಂಕು ತಾಗುತ್ತದೆ. ಮಾಂಸದಲ್ಲಿರುವ ಕೋಶಾವಸ್ಥೆಯ ಮರಿಹುಳುಗಳು ಮನುಷ್ಯನ ಕರುಳಿನಲ್ಲಿ ಬಿಡುಗಡೆ ಹೊಂದುತ್ತವೆ. ಮಾಂಸವನ್ನು ತಿಂದ ಸ್ವಲ್ಪ ಹೊತ್ತಿಗೆ ವಾಕರಿಕೆ ಶುರುವಾಗಿ ಎರಡು ಮೂರು ದಿವಸಗಳಿರುತ್ತದೆ. ಒಂದು ವಾರದ ಮೇಲೆ ಮರಿಹುಳುಗಳು ವಲಸೆ ಹೋಗುತ್ತಿರುವಾಗ ಜ್ವರ, ಸ್ನಾಯು ನೋವು, ಸ್ನಾಯುಗಳ ಊತದಿಂದಾಗಿ ಮಾತು, ಉಸಿರಾಟ ಮತ್ತು ಜಗಿತಗಳಿಗೆ ಅಡಚಣೆ ಉಂಟಾಗಬಹುದು. ಕಣ್ಣಾಲಿಗಳು ಊದಿಕೊಳ್ಳಬಹುದು. ಉಗುರಿನ ಅಡಿಯಲ್ಲಿ ರಕ್ತಸ್ರಾವವುಂಟಾಗಬಹುದು. ಸ್ನಾಯುವಿನ ಜೀವುಂಡಿಗೆಯ ಪರೀಕ್ಷೆಯಿಂದ ಜಿಟ್ಟಿಗಳನ್ನು ಕಾಣಬಹುದು. ರಕ್ತದಲ್ಲಿ ಶ್ವೇತಕಣಗಳು ಜಾಸ್ತಿಯಾಗಬಹುದು. ಈ ಹಂತ ನಿಧಾನವಾಗಿ ಅಂದರೆ ಕೆಲವು ವಾರಗಳಲ್ಲಿ ತಹಬಂದಿಗೆ ಬರುತ್ತವೆ. ಸ್ನಾಯುಗಳಲ್ಲಿರುವ ಮರಿಹುಳುಗಳು ಆಗ ಸತ್ತು ಸುಣ್ಣದ ಲವಣಗಳು ಸೇರಿ ಗಡುಸಾಗಿ ಬಿಡುವುವು. ಅಪರೂಪವಾಗಿ ಹೃದಯದ ಸ್ನಾಯುವಿನಲ್ಲಿ ಉಂಟಾಗುವ ಗಾಸಿಗಳಿಂದ ಹೃದಯಕ್ರಿಯೆ ನಿಂತು ಸಾವು ಸಂಭವಿಸುವುದುಂಟು.

ಆಂಕೈಲೊಸ್ಟೋಮಿಯಾಸಿಸ್ : (ನೋಡಿ: ಕೊಕ್ಕೆಹುಳು, ಕೊಕ್ಕೆಹುಳು ರೋಗ)

ಸ್ಟ್ರಾಂಗೈಲಾಯ್ಡಿಯಾಸಿಸ್ : ಸ್ಟ್ರಾಂಗೈಲಾಯಿಡಿಸ್ ಸ್ಟರ್‌ಕೊರಾಲಿಸ್ ಎಂಬ ಕ್ರಿಮಿಯಿಂದ ಬರುವ ರೋಗ. ಉಷ್ಣವಲಯದಲ್ಲಿ ಹೆಚ್ಚು. ಮೊಟ್ಟೆಗಳು ಮಲದಲ್ಲಿ ಹೊರಬಿದ್ದು ಕೆಲವು ದಿವಸಗಳಲ್ಲಿ ರಾಬ್‌ಡೈಟಿಫಾರಮ್ ಮರಿಗಳಾಗುತ್ತವೆ. ಇವು ಮನುಷ್ಯನ ಚರ್ಮವನ್ನು ಭೇದಿಸಿ ರಕ್ತಪರಿಚಲನೆಯನ್ನು ಸೇರಿ ಫುಪ್ಫುಸಕ್ಕೆ ಹೋಗಿ ಅಲ್ಲಿಂದ ಜೀರ್ಣಾಂಗಗಳನ್ನು ಸೇರಿ ವೃದ್ಧಿ ಹೊಂದುತ್ತವೆ. ಚರ್ಮದ ಆ ಭಾಗದಲ್ಲಿ ನವೆ ಉಂಟಾಗುವುದು, ದದ್ದು, ಮತ್ತು ಆಮುರಕ್ತದಿಂದೊಡಗೂಡಿದ ಭೇದಿಯೂ ಫುಪ್ಫುಸದ ಉರಿತವೂ ತಲೆದೋರಬಹುದು.

ವುಚೆರೇರಿಯ ಫೈಲಾರಿಯಾಸಿಸ್ (ಆನೆಕಾಲು ರೋಗ): ವುಚೆರೇರಿಯಾ ಬಾನ್‌ಕ್ರಾಫ್ಟಿ ಎಂಬ ಕ್ರಿಮಿಯಿಂದ ಬರುವ ರೋಗ. ಬೇರೆ ಬೇರೆ ಜಾತಿಗೆ ಸೇರಿದ, ಅದರಲ್ಲೂ ಸಾಮಾನ್ಯವಾಗಿ ಕ್ಯೂಲೆಕ್ಸ್ ಫಾಟಿಗಾನ್ಸ್ ಹೆಣ್ಣುಸೊಳ್ಳೆಯಿಂದ ಮನುಷ್ಯನಿಗೆ ವರ್ಗಾಯಿಸಲ್ಪಡುತ್ತದೆ. (ನೋಡಿ: ಫೈಲೇರಿಯ)

ಲೋವಾಸಿಸ್ : ಲೋವಾ ಲೋವಾ ಎಂಬ ಫೈಲೇರಿಯ ಹುಳುವಿನಿಂದ ಬರುವ ರೋಗ. ಆಫ್ರಿಕ ದೇಶದಲ್ಲಿ ಕಂಡುಬರುತ್ತದೆ. ಸೋಂಕು ಕ್ರೈಸಾಪ್ಸ್ ಎಂಬ ನೊಣದಿಂದ ಹರಡುತ್ತದೆ. ಪಕ್ವಾವಧಿ ಮೂರು ತಿಂಗಳಿಂದ ಒಂದು ವರ್ಷ. ಅಡಿಚರ್ಮದಲ್ಲಿ ಒಗ್ಗದಿಕೆಯ ಉರಿತದ ಗಡ್ಡೆಗಳನ್ನು ಉಂಟುಮಾಡುತ್ತದೆ. ಇದಕ್ಕೆ ಕಲಬಾರ್ ಗಡ್ಡೆ ಎಂದು ಹೆಸರು. ಸಾಮಾನ್ಯವಾಗಿ ಈ ಗಡ್ಡೆಗಳು ಕೈ ಅಥವಾ ಕಾಲುಗಳಲ್ಲಿರುತ್ತವೆ. ಗಾತ್ರ ಕೆಲವು ಸೆಂಮೀ ಗಳಷ್ಟು ಇರಬಹುದು. ಸಾಮಾನ್ಯವಾಗಿ ಕೆಲವು ದಿವಸಗಳಲ್ಲಿ ಕಣ್ಮರೆಯಾಗುವುದಾದರೂ ಕೆಲವು ಸಲ ಎರಡು ಮೂರು ವಾರಗಳಿರುವುದುಂಟು. ಈ ತರಹದ ಒಂದಾದ ಮೇಲೊಂದು ಗಡ್ಡೆಗಳು ಆಗಾಗ್ಗೆ ಕಾಣಿಸಬಹುದು. ದದ್ದುಗಳುಂಟಾಗಬಹುದು. ಕೆಲವು ಸಲ ಹುಳು ಕಣ್ಣಿನ ಮುಂದಿನ ಕೋಣೆಯಲ್ಲಿ ಸಂಚರಿಸಬಹುದು. ಇದರಿಂದ ಕೆರಳಿಕೆ ಉಂಟಾಗಿ ಕಣ್ಗುಳಿಯ ಹಿಂದಿನ ಊತಕಗಳಲ್ಲಿ ಹುಳು ಸಂಚರಿಸುವಾಗ ತೀವ್ರವಾದ ಅರೆ ತಲೆ ನೋವು ಉಂಟಾಗಬಹುದು. ಅಪರೂಪವಾಗಿ ಎನ್‌ಸೆಫಲೈಟಿಸ್ ಕೂಡ ಬರಬಹುದು.

ಆಂಕೊಸರ್ಕಿಯಾಸಿಸ್ : ಆಂಕೋಸರ್ವಾ ವಾಲ್‌ವ್ಯುಲಸಿನಿಂದ ಬರುವ ರೋಗ. ಆಫ್ರಿಕ, ದಕ್ಷಿಣ ಅರೇಬಿಯ ಮತ್ತು ದಕ್ಷಿಣ ಮೆಕ್ಸಿಕೋದಲ್ಲಿ ಕಂಡುಬರುತ್ತದೆ. ಸಿಮಿಲಿನಮ್ ಎಂಬ ನೊಣದಿಂದ ಹರಡುತ್ತದೆ. ಅಡಿಚರ್ಮದಲ್ಲಿ ಕಂಕೋಶದ ಗಡ್ಡೆಗಳು ಉಂಟಾಗುತ್ತವೆ. ಇವು ಸಾಮಾನ್ಯವಾಗಿ ಮೊಣಕೈ, ಮಂಡಿ, ಎದೆ ಮತ್ತು ಕೀಲುಗಳಲ್ಲಿರುತ್ತವೆ. ಅನೇಕ ತರಹದ ಚರ್ಮದ ಉರಿತ ಕಂಡುಬರುತ್ತದೆ. ಕಣ್ಣ ಜಾಲದ ಉರಿತ ಉಂಟಾಗಿ ಅಂಧತೆ ತಲೆದೋರಬಹುದು.

ರೋಗಕಾರಕ ಬಾಹ್ಯ ಪರೋಪಜೀವಿಗಳು ಮಾನವರಲ್ಲಿ ಬಲು ವಿರಳ. ಕಜ್ಜಿ, ತುರಿ ಮುಂತಾದವನ್ನು ಉಂಟು ಮಾಡುವ ಕ್ರಿಮಿ ಮತ್ತು ತಲೆಹೇನು ಇವನ್ನು ಉದಾಹರಿಸಬಹುದು. ಸಾಮಾನ್ಯವಾಗಿ ದನ ಮತ್ತು ನಾಯಿಗಳನ್ನು ಅವಲಂಬಿಸಿರುವ ಹೊರ ಪರೋಪಜೀವಿಗಳಾದ ಉಣ್ಣೀಗಳು (ಟಿಕ್ಸ್) ಅಪರೂಪವಾಗಿ ಮಾನವರ ಮೈಮೇಲೆ ಕಚ್ಚಿಕೊಂಡಿರುವ ಪರೋಪಜೀವಿಗಳಾಗಿರಬಹುದು. ಇದೆ ರೀತಿ ಇಲಿ, ಹೆಗ್ಗಣಗಳ ಬಾಹ್ಯ ಪರೋಪಜೀವಿಯಾದ ಚಿಗಟ (ಫ್ಲೀ). ಆದರೆ ಇದು ಮಾನವ ದೇಹದ ಮೇಲೆಯೇ ಕಚ್ಚಿಕೊಂಡಾಗಲಿ ಓಡಾಡಿಕೊಂಡಾಗಲಿ ಇರುವುದು ತೀರ ಅಪರೂಪ. ತಿಗಣೆ, ಸೊಳ್ಳೆಗಳಂತೆ ಯಾವಾಗಲೋ ಬಂದು ಯಥಾಶಕ್ತಿ ಮಾನವನ ರಕ್ತವನ್ನು ಹೀರಿ ಹೊರಟು ಹೋಗುವುದೇ ಸಾಮಾನ್ಯ. ಹೇನುಗಳು ತಲೆಯಲ್ಲಿ ಅಲ್ಲದೆ ಬಾಹ್ಯ ಜನನೇಂದ್ರಿಯಗಳ ನೆರೆಯಲ್ಲಿರುವ ರೋಮಗಳಲ್ಲೂ ಕೊಳಕು ಬಟ್ಟೆಗಳಲ್ಲೂ ಇರುವುದುಂಟು. ಕೂದಲು, ರೋಮಗಳ ಹಾಗೂ ಬಟ್ಟೆಗಳ ಶುಚಿತ್ವಕ್ಕೆ ಗಮನ ಕೊಡದಿರುವವರಲ್ಲಿ ಹೇನುಗಳು ಸೇರುವುದು ಸಾಮಾನ್ಯ. ಇವು ಒಟ್ಟಾಗಿ ಒಂದೇ ಸ್ಥಳದಿಂದ ರಕ್ತಹೀರುವಾಗ ವ್ರಣ ಉಂಟಾಗಿ ಕೆರೆತ, ನೋವುಗಳಿಂದ ಬಾಧೆಯಾಗಬಹುದು. ಕಜ್ಜಿ ಮತ್ತು ತುರಿಯನ್ನು ಉಂಟುಮಾಡುವ ಕ್ರಿಮಿ ಸಾರ್ಕಾಪ್ಟಿಸ್ ಜಾತಿಗೆ ಸೇರಿದ ಸಂದಿಪದಿ. ಇದು ಬೆರಳುಗಳ ನಡುವೆ ಜಾಲ ಚರ್ಮದಲ್ಲಿ ಸಣ್ಣ ಡೊಗರು ಮಾಡಿಕೊಂಡು ವಾಸಿಸುತ್ತದೆ. ಅಲ್ಲಿ ವ್ರಣ ಉಂಟಾಗಬಹುದು. ಕೆರೆತದಿಂದ ಇವುಗಳ ಪರಿಣಾಮ ಮೈಮೇಲೆಲ್ಲ ಆಗಿ ಕಜ್ಜಿ ತುರಿಗಳು ಕಂಡುಬರುವುದು ಸಾಮಾನ್ಯ.

***

**ಪರ್ಮಿಯನ್:** ಭೂವಿಜ್ಞಾನ ಕಾಲಮಾಪನದಲ್ಲಿ ಪೇಲಿಯೊಜೋಯಿಕ್ (ಪ್ರಾಚೀನ ಜೀವ) ಕಲ್ಪದ ಕೊನೆಯ ಯುಗದ ಹಾಗೂ ಆ ಅವಧಿಯಲ್ಲಿ ರೂಪುಗೊಂಡ ಶಿಲಾಸ್ತೋಮಗಳ ಹೆಸರು. ಇಂಗ್ಲೆಂಡಿನಲ್ಲಿ ಕಲ್ಲಿದ್ದಲ ಸ್ತರಗಳ ಮೇಲೆ ಸಂಚಯನಗೊಂಡಿರುವ ನಿಕ್ಷೇಪದ ಬಣ್ಣ ಕೆಂಪು. ಇದರಲ್ಲಿ ಮರಳುಶಿಲೆಯೇ ಹೆಚ್ಚು. ಬಣ್ಣ ಮತ್ತು ಶಿಲಾಸಂಯೋಜನಗಳಲ್ಲಿ ಈ ಶಿಲೆಗಳು ಕಾರ್ಬಾನಿಫೆರಸ್ ಸ್ತೋಮಗಳ ಕೆಳಗಿರುವ ಹಳೆ ಕೆಂಪು ಮರಳು ಶಿಲಾವರ್ಗವನ್ನು ಹೋಲುತ್ತವೆ. ಆದ್ದರಿಂದ ಬಹಳ ಕಾಲದತನಕ ಇವನ್ನು ಕೂಡ ಹಳೆಕೆಂಪು ಮರಳುಶಿಲಾವರ್ಗಕ್ಕೆ ಸೇರಿದವೆಂದು ಭಾವಿಸಲಾಗಿತ್ತು. ಕಾರ್ಬಾನಿಫೆರಸ್ ಸ್ತೋಮಗಳು ನಿಕ್ಷೇಪಗೊಂಡಿರದ ಎಡೆಗಳಲ್ಲಿ ಈ ಶಿಲೆಗಳು ನೇರವಾಗಿ ಹಳೆ ಕೆಂಪು ಮರಳು ಶಿಲೆಗಳ ಮೇಲೆ ಸಂಚಯನಗೊಂಡಿವೆ. ಅಲ್ಲಿ ಇವನ್ನು ಇವುಗಳಲ್ಲಿರುವ ಪಳೆಯುಳಿಕೆಗಳಿಂದ ಮಾತ್ರ ಗುರ್ತಿಸಬಹುದು. ಕಾರ್ಬಾನಿಫೆರಸ್ ಸ್ತೋಮಗಳ ಮೇಲೆ ನಿಕ್ಷೇಪಗೊಂಡಿರುವಂಥವುಗಳಿಗೆ ಹೊಸ ಕೆಂಪು ಮರಳು ಶಿಲಾವರ್ಗ ಎಂದು ಹೆಸರು. ಇದನ್ನು ಪಳೆಯುಳಿಕೆಗಳ ಆಧಾರದ ಮೇಲೆ ಎರಡು ಸ್ತೋಮಗಳಾಗಿ ವಿಭಾಗಿಸಲಾಗಿದೆ. ಕೆಳಸ್ತೋಮ ಪ್ರಾಚೀನ ಜೀವಕಲ್ಪದ ಕೊನೆಯ ಭಾಗವನ್ನು ಮೇಲಿನಸ್ತೋಮ ಮಧ್ಯಜೀವಿಕಲ್ಪದ ಆದಿಭಾಗವನ್ನು ಪ್ರತಿನಿಧಿಸುತ್ತವೆ.

ಜರ್ಮನಿ ಹೊಸ ಕೆಂಪು ಮರಳು ಶಿಲಾವರ್ಗದಲ್ಲಿ ಬೆಲೆಬಾಳುವ ಅನೇಕ ನಿಕ್ಷೇಪಗಳಿವೆ. ಎಚ್.ಬಿ ಗೈನಿಟ್ಸ್ ಈ ಶಿಲಾವರ್ಗದಲ್ಲಿ ಐದು ಸ್ಪಷ್ಟ ಭಾಗಗಳನ್ನು ಗುರುತಿಸಿದ್ದಾನೆ (1861). ಅವುಗಳ ಪೈಕಿ ಕೆಳಗಿನ ಎರಡು ಭಾಗಗಳಲ್ಲಿ ಪ್ರಾಗ್ಜೀವ ಕಲ್ಪದ ಪರ್ಮಿಯನ್ ಪಳೆಯುಳಿಕೆಗಳೂ ಮೇಲಣ ಮೂರು ಭಾಗಗಳಲ್ಲಿ ಮಧ್ಯ ಜೀವಿಕಲ್ಪದ ಟ್ರಯಾಸಿಕ್ ಫಾಸಿಲುಗಳೂ ಇವೆ. ಪರ್ಮಿಯನ್ ಸ್ತೋಮ ಎರಡು ಸ್ಪಷ್ಟಭಾಗಗಳಿಂದ ಕೂಡಿರುವ ಪ್ರಯುಕ್ತ ಮಕಾವ್ ಅದನ್ನು ಡ್ಯಾಸ್ (ಇಮ್ಮಡಿ ಶಿಲಾವರ್ಗ) ಎಂದು ಕರೆದಿದ್ದಾನೆ. ಅದೇ ಕಾರಣದಿಂದ ಉಳಿದ ಹೊಸ ಕೆಂಪುಮರಳು ಶಿಲಾವರ್ಗವನ್ನು ಜಿನಿವೆ ಎಂಬಾತ ಟ್ರಯಾಸಾ (ಮುಮ್ಮಡಿ) ಎಂದು ಕರೆದಿದ್ದಾನೆ.

ಡ್ಯಾಸ್ ಸ್ತೋಮದ ಕೆಳಭಾಗಕ್ಕೆ ರೊತ್ಲಿಜಂಡೆ ಎಂದೂ ಮೇಲುಭಾಗಕ್ಕೆ ಜೆಕ್ಸ್ ಟೀನ್ ಎಂದೂ ಹೆಸರು. ಕೆಳಭಾಗ ಪರಸ್ಪರ ಸಂಪರ್ಕವಿಲ್ಲದ ಆದರೆ ಸಮುದ್ರ ಸಂಪರ್ಕವುಳ್ಳ ಉಪ್ಪು ನೀರಿನ ಸರೋವರಗಳಲ್ಲಿ ಸಂಚಯನಗೊಂಡ ನಿಕ್ಷೇಪ. ಇದರಲ್ಲಿ ಮರಳು ಶಿಲೆಯೇ ಪ್ರಧಾನವಾದದ್ದು. ಈ ಶಿಲೆಯಲ್ಲಿ ಪ್ರಾಣಿ ಮತ್ತು ಸಸ್ಯಾವಶೇಷಗಳು ಹೇರಳವಾಗಿವೆ. ಅವುಗಳಲ್ಲಿ ಅರ್ಕಿಗೊಸಾರಸ್ ಎಂಬ ದ್ವಿಚರಪ್ರಾಣಿ, ಈಸ್ತೇರಿಯ ಎಂಬ ಸಂದಿಪದಿ ಮತ್ತು ವಾಲ್ಜಿಯ ಎಂಬ ಕೋನಿಫೆರ ಮುಖ್ಯವಾದವು. ಮೇಲುಭಾಗ ಜೇಡುಶಿಲೆಯಿಂದ ಆರಂಭವಾಗುತ್ತದೆ. ಇದರಲ್ಲಿ ಜರ್ಮನಿಯ ಪ್ರಸಿದ್ಧ ತಾಮ್ರದ ಅದರು ಉಂಟು. ಆದ್ದರಿಂದ ಇದಕ್ಕೆ ಕ್ಯೂಪರ್‌ಸ್ಕೀಫರ್ ಎಂಬ ಹೆಸರು ಬಂದಿದೆ. ಇದರ ಮೇಲ್ಗಡೆ ಸುಣ್ಣಶಿಲೆ ಇದೆ. ಇದಕ್ಕೆ ಜೆಕ್‌ಸ್ಟೀನ್ ಎಂದು ಹೆಸರು. ಪರ್ಮಿಯನ್ ಕಾಲದ ಸಾಗರವಾಸಿ ಅಕಶೇರುಕಗಳ ಅವಶೇಷಗಳ ಬೀಡು ಇದೇ. ಉಪ್ಪುನೀರಿನ ಸರೋವರಗಳ ಬತ್ತುವಿಕೆಯಿಂದ ಸುಣ್ಣಶಿಲೆಯ ಮೇಲೆ ಜಿಪ್ಸಮ್, ಅನ್ಹೈಡ್ರೈಟ್ ಮತ್ತು ಡಾಲೊಮೈಟುಗಳ ನಿಕ್ಷೇಪವಾಗಿದೆ. ಈ ಬತ್ತುವಿಕೆಯಿಂದ ಸರೋವರಗಳಲ್ಲಿದ್ದ ಜೀವಿಗಳೆಲ್ಲ ನಿರ್ನಾಮವಾಗಿವೆ.

ಮರ್ಚಿಸನ್ ಮತ್ತು ಸೆಡ್ಜ್‌ವಿಕ್ ಎಂಬವರು ಬ್ರಿಟಿಷ್ ದ್ವೀಪಗಳ ಪರ್ಮಿಯನ್ ಸ್ತೋಮದ ಪರಿಶೋಧನೆಯ ಬಳಿಕ ಈ ಸ್ತೋಮ ಮತ್ತೆಲ್ಲಿಯಾದರೂ ಉತ್ಕೃಷ್ಟ ರೀತಿಯಲ್ಲಿ ನಿಕ್ಷೇಪಗೊಂಡಿದೆಯೇ ಎಂದು ಹುಡುಕಲಾರಂಭಿಸಿದರು. ಎಲ್ಲ ಕಡೆಗಳಲ್ಲಿಯೂ ಅವು ಅತಿಯಾಗಿ ಕಲಕಲ್ಪಟ್ಟಿದ್ದುವು. ಆದರೆ ರಷ್ಯದಲ್ಲಿಯ ಸ್ತೋಮಗಳು ಉತ್ತಮ ಸ್ಥಿತಿಯಲ್ಲಿವೆ ಎಂದು ತಿಳಿದುಬಂದಿತು. ರಷ್ಯದ ಝಾರನ ಆಹ್ವಾನದ ಮೇಲೆ ಮರ್ಚಿಸನ್ ಆ ದೇಶದ ಕಾಂಟ್ ಕೈಸರ್‌ಲಿಂಗ್ ಮತ್ತು ತನ್ನ ಸಹಪಾಠಿ ಫ್ರಾನ್ಸಿನ ವರ್ನಿಯಲ್ ಒಡಗೂಡಿ ಆ ಸ್ತೋಮವನ್ನು ಪರಿಶೋಧಿಸಿದ. ರಷ್ಯದಲ್ಲಿ ಕಲ್ಲಿದ್ದಲ ಸ್ತರಗಳ ಮೇಲೆ ನಿಕ್ಷೇಪಗೊಂಡಿರುವ ಶಿಲೆಗಳು ಇಂಗ್ಲೆಂಡ್ ಮತ್ತು ಜರ್ಮನಿಯಲ್ಲಿನವುಗಳಿಗಿಂತ ಬೇರೆ. ಅವು ಕೆಂಪು ಮರಳುಶಿಲೆಗಳು. ಹೇರಳವಾದ ಪಳೆಯುಳಿಕೆಗಳಿಂದ ಕೂಡಿದ ಸಾಗರ ನಿಕ್ಷೇಪಗಳು.

ಅವನ್ನು ಮೊದಲು ಪರ್ಮ್ ಪ್ರಾಂತದಲ್ಲಿ ಪರಿಶೋಧಿಸಿದ್ದರಿಂದ ಅವುಗಳಿಗೆ ಪರ್ಮಿಯನ್ ಸ್ತೋಮ ಎಂಬ ಹೆಸರು ಕೊಡಲಾಯಿತು. ಈ ಸ್ತೋಮ ಯೂರೋಪ್ ಖಂಡದ ಪರ್ಮಿಯನ್ ಸ್ತೋಮಗಳಿಗೆ ಮಾದರಿ ಎನಿಸಿದೆ. ಆ ಸ್ತೋಮದ ವಿಭಜನೆ ಹೀಗಿದೆ:

ಮೇಲುಭಾಗ ಅಥವಾ ತುರಂಗಿಯನ್

ಪರ್ಮಿಯನ್ ಸ್ತೋಮ

ಮಧ್ಯಭಾಗ ಅಥವಾ ಪಂಜಾಬಿಯನ್

ಕೆಳಭಾಗ ಅಥವಾ ಆರ್ಟಿನ್ಸಿಕಿಯನ್

ಆರ್ಟಿನ್ಸಿಕಿಯನ್ ಶ್ರೇಣಿ ಸಾಗರದಡಿ ನಿಕ್ಷೇಪಗೊಂಡ ಮರಳುಶಿಲೆ ಅಥವಾ ಸುಣ್ಣ ಶಿಲೆಗಳಿಂದ ಕೂಡಿದೆ. ಅವುಗಳಲ್ಲಿ ವಿವಿಧ ವರ್ಗಕ್ಕೆ ಸೇರಿದ ಪ್ರಾಣಿಗಳ ಮತ್ತು ಸಸ್ಯಗಳ ಅವಶೇಷಗಳು ಹೇರಳವಾಗಿವೆ. ಸ್ವಾರಸ್ಯಕರ ಅಂಶವೆಂದರೆ ಪ್ರೊಡಕ್ಟಸ್ ಮತ್ತು ನಿಯೊಸ್ಕ್ವಾಜರ‍್ಯೆನಗಳು ಮೆಡ್ಲಿಕಾಟಿಯ ಮತ್ತು ಪಾಪಿನೊಸೆರಾಸ್ ಎಂಬ ಅಮ್ಮೊನೈಟುಗಳ ಜೊತೆಯಲ್ಲಿವೆ. ಇವುಗಳ ಮಧ್ಯದಲ್ಲಿರುವ ಕಲ್ಲಿದ್ದಲು ಸ್ತರದಲ್ಲಿ ಪರ್ಮಿಯನ್ ಕಾಲದ ಸಸ್ಯಾವಶೇಷಗಳಿವೆ. ಪಂಜಾಬಿಯನ್ ಶ್ರೇಣಿ ಜಿಪ್ಸಮ್ ಮತ್ತು ಅನ್ಹೈಡ್ರೈಟ್ ನಿಕ್ಷೇಪಗಳಿಂದ ಕೂಡಿದೆ. ತುರಂಗಿಯನ್ ಶ್ರೇಣಿಯಲ್ಲಿ ಮಾರಲ್ ಮತ್ತು ಕೆಂಪು ಮರಳು ಶಿಲೆಗಳು ಮೊದಲಾದ ಭೂನಿಕ್ಷೇಪಗಳು ಜಾಸ್ತಿ. ಇವುಗಳಲ್ಲಿ ಆಫ್ರಿಕಾದ ಪೆರಿಯಸಾರಸ್, ಸ್ಕಾಟ್ಲೆಂಡಿನ ಗಾರ್ಡೊನಿಯ ಮತ್ತು ದ್ವಿನಿಯ ಎಂಬ ಲ್ಯಾಬಿರಿಂತೊಡಾಂಟ್ ಜಾತಿಯ ದ್ವಿಚರಪ್ರಾಣಿಗಳ ಅವಶೇಷಗಳಿವೆ. ಲೆಪಿಡೊಡೆಂಡ್ರಾನ್, ಕಾಲಿಪ್ಟರಿಸ್ ಎಂಬ ಸಸ್ಯಗಳು ಗೊಂಡ್ವಾನ ಖಂಡದ ಸಸ್ಯಗಳಾದ ಗ್ಲಾಸಾಪ್ಟರಿಸ್, ಗಂಗಮಾಪ್ಟರಿಸ್ ಮತ್ತು ಟೇನಿಯಾಪ್ಟರಿಸುಗಳೊಡನೆ ಇವೆ.

ಪರ್ಮಿಯನ್ ಸ್ತೋಮದ ಪ್ರತ್ಯೇಕತೆಯ ಅವಶ್ಯಕತೆ : ಎಚ್.ಬಿ.ವುಡ್‌ವರ್ಡ್, ಜಿ.ಜಿ. ಗೋಲ್ಡ್‌ಚೈಲ್ಡ್ ಮತ್ತು ಜೂಕ್ಸ್ ಎಂಬವರು ಪರ್ಮಿಯನ್ ಎಂಬ ಒಂದು ಬೇರೆ ಹೆಸರಿನ ಸ್ತೋಮವೇ ಇರಬೇಕಾಗಿಲ್ಲ ಎಂದಿದ್ದಾರೆ. ಈ ಸ್ತೋಮವನ್ನು ನಿರ್ಮಿಸಲು ಪಳೆಯುಳಿಕೆಗಳನ್ನು ಆಧಾರವಾಗಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ಅವರ ಅಭಿಪ್ರಾಯ. ಕೋನಿಬೇರ್ ಮತ್ತು ಫಿಲಿಪ್ಸ್ ಎಂಬವರು ಇಡೀ ಕೆಂಪು ಮರಳು ಶಿಲಾವರ್ಗ ಚುಕ್ಕೆಗಳಿಂದ ಕೂಡಿರುವ ಪ್ರಯುಕ್ತ ಅದನ್ನು ಪಾಯ್ಕಿಲಿಟಿಕ್ ಸ್ತೋಮ ಎಂದು ಕರೆಯುವುದು ಯುಕ್ತ ಎಂದಿರುವರು. ವುಡ್‌ವರ್ಡ್ ಮತ್ತು ಇತರರು ಇದನ್ನು ಒಪ್ಪಿದ್ದಾರೆ. ಸಿ.ಆರ್.ಕೆ ಯೆಸ್ ಎಂಬಾತ ಪರ್ಮಿಯನ್ ಶಿಲೆಗಳು ಕಾರ್ಬಾನಿಫೆರಸ್ ಸಾಗರಗಳ ಆಳವಿಲ್ಲದ ಪ್ರದೇಶಗಳಲ್ಲಿ ಸಂಚಯನಗೊಂಡ ನಿಕ್ಷೇಪ ಎಂದಿರುವನು. ನಾಯ್ಕಿನ್ಸ್ಕಿ, ಯಕೊವೆಲೆವ್ ಮತ್ತು ಸೆರ್ಲಾಕ್ ಎಂಬವರ ಅಭಿಪ್ರಾಯವಾದರೂ ಇದೇ.

ಪರ್ಮಿಯನ್ ಸ್ತೋಮವನ್ನು ಪರ್ವತಗಳ ಅವತರಣಿಕೆ, ಶಿಲಾಪೇರಿಕೆಯ ಕ್ರಮ ಮತ್ತು ಪಳೆಯುಳಿಕೆಗಳ ಆಧಾರಗಳ ಮೇಲೆ ನಿರ್ಮಿಸಲಾಗಿದೆ. ಈ ಕಾಲದಲ್ಲಿ ಪ್ರಾಚೀನ ಜೀವಿಕಲ್ಪದ ನಿಕ್ಷೇಪ ಪ್ರದೇಶಗಳೆಲ್ಲ ಮೇಲೊಗೆಯಲ್ಪಟ್ಟು ಪರ್ವತಪ್ರದೇಶಗಳಾದುವು. ಏಷ್ಯ, ಯೂರೋಪ್ ಖಂಡಗಳಲ್ಲಿ ಹರ್ಸಿನಿಯನ್, ವಾರ್ಸಿಕನ್, ಆರ್ಮೋರಿಕನ್ ಮತ್ತು ಯೂರಲ್ ಪರ್ವತಗಳು ಉದಯಿಸಿದುವು. ಹೀಗೆ ಭೂ ಜಲಗಳ ಪ್ರಮಾಣದಲ್ಲಿ ಅಸ್ತವ್ಯಸ್ತವಾದ್ದರಿಂದ ಜಲಪರಿಚಲನೆಯ ನಿಯಮಕ್ಕೆ ಧಕ್ಕೆಯುಂಟಾಯಿತು. ಇದು ವಾಯುಗುಣದ ತೀವ್ರತೆಗಳಿಗೆ ಎಡೆಕೊಟ್ಟಿತು. ಉತ್ತರಾರ್ಧದಲ್ಲಿ ಅತಿ ಉಷ್ಣವಾಯುಗುಣವಿದ್ದರೆ ಗೊಂಡ್ವಾನ ಖಂಡ ನೀರ್ಗಲ್ಲು ನದಿಗಳಿಂದ ಮುಚ್ಚಲ್ಪಟ್ಟಿದ್ದಿತು. ಈ ಎರಡು ಬಗೆಯ ತೀವ್ರ ವಾಯುಗುಣವೂ ಜೀವರಾಶಿಯ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡಿವೆ.

ಪರ್ಮಿಯನ್ ಸ್ತೋಮಗಳಲ್ಲಿ ಸಾಗರದ ಆಳನಿಕ್ಷೇಪಗಳೇ ಅಲ್ಲದೆ ನೀರ್ಗಲ್ಲು ನಿಕ್ಷೇಪಗಳು, ಸರೋವರ ನಿಕ್ಷೇಪಗಳು, ಸಮುದ್ರಸಂಪರ್ಕ ಹೊಂದಿದ ಉಪ್ಪುನೀರಿನ ಸರೋವರದ ನಿಕ್ಷೇಪದ ಬಹುಮುಖ ನಿಕ್ಷೇಪಗಳಿವೆ. ಅಲ್ಲದೆ ಅವುಗಳಲ್ಲಿ ಜಿಪ್ಸಮ್ ಉಪ್ಪು ಮತ್ತು ರಂಜಕ ನಿಕ್ಷೇಪಗಳೂ ಉಂಟು. ಈ ಶಿಲೆಗಳಲ್ಲಿರುವ ಪ್ರಾಣಿಗಳು ಬಲುಮಟ್ಟಿಗೆ ಗುಜ್ಜಾರಿಗಳು. ದೀರ್ಘಾವಧಿಯ ಅನೇಕ ಪ್ರಾಣಿವರ್ಗ ಮತ್ತು ವಂಶಗಳು ಕೊನೆಯ ಬಾರಿಗೆ ಪ್ರತಿನಿಧಿಸಲ್ಪಟ್ಟಿವೆ. ಕೊನೆಯ ಟ್ರೈಲೊಬೈಟ್ ಪಿಲಿಪ್ಸಿಯ ಉತ್ತರ ಅಮೆರಿಕದ ಪರ್ಮಿಯನ್ ಸ್ತೋಮದಲ್ಲಿದೆ. ಇದೇ ಕಾಲದಲ್ಲಿ ಕೊನೆಯ ಸಿಸ್ಟಿಯನ್ ಗತವಂಶಿಯಾಯಿತು. ಬಹುಕಾಲದಿಂದಲೂ ಪ್ರತಿನಿಧಿಸಲ್ಪಟ್ಟಿದ್ದ ಪ್ರೊಡಕ್ಟಿಡೆ, ಆರ್ಕಿಡೆ ಮತ್ತು ಪೆಂಟಮೀರಿಡೆ ಎಂಬ ಬ್ರೇಕಿಯೊಪೊಡಗಳು ಕೊನೆಯ ಬಾರಿಗೆ ಪ್ರತಿನಿಧಿಸಲ್ಪಟ್ಟಿವೆ. ಮಧ್ಯಜೀವಿಕಲ್ಪದಲ್ಲಿ ಪ್ರಭಾವಸ್ಥಾನ ಹೊಂದಿದ್ದ ಪ್ರಾಣಿಗಳ ಉದಯವೂ ಆಯಿತು. ಮೆಡ್ಲಿಕಾಟಿಯ ಮತ್ತು ಪಾಪಿನೊಸೆರಾಸ್ ಎಂಬ ಅಮ್ಮೊನೈಟುಗಳೂ ಅಕ್ಯಾಂತಾಪ್ಟೆರಿಜಿಯನ್ ಎಂಬ ಮತ್ಸ್ಯವೂ ಎಲ್ಲಕ್ಕಿಂತ ಹೆಚ್ಚಾಗಿ ತೀರೊಮಾರ್ಫ ಎಂಬ ಸರೀಸೃಪವೂ ಈ ಕಾಲದಲ್ಲಿ ಮೊದಲಬಾರಿಗೆ ಕಾಣಿಸಿಕೊಂಡುವು. ಇದೇ ಕಾಲದ ಲ್ಯಾಬ್ರಿಂತೊಡಾಂಟ್ ದ್ವಿಚರಪ್ರಾಣಿಗಳು ಅತಿಗಾತ್ರ ಉಳ್ಳವಾಗಿಯೂ ಕೆಲವು ದಿಶೆಗಳಲ್ಲಿ ಪ್ರಾವೀಣ್ಯ ಗಳಿಸಿದವಾಗಿಯೂ (ಆರ್ಕಿಗೊಸಾರಸ್) ಇದ್ದುವು.

ಪರ್ಮಿಯನ್ ಕಾಲದಲ್ಲಿ ಪ್ರೊಡಕ್ಟಸ್, ಸ್ಪಿರಿಫೆರ ಮೊದಲಾದ ಬ್ರೇಕಿಯೊಪೋಡುಗಳು ಮತ್ತು ಫೆನಸ್ಟೆಲ್ಲಾ ಮೊದಲಾದ ಬ್ರಯೊಜೋವಗಳು ಹೇರಳವಾಗಿದ್ದುವು. ನಿಯೊಸ್ಕ್ವಾಗಿರ‍್ಯೆನ ಮತ್ತು ವರ್ಬಿಕಿನ ಎಂಬ ಫೊರಮಿನಿಫೆಗಳಿಂದಾದ ಸುಣ್ಣಶಿಲೆಯೂ ಈ ಸ್ತೋಮದ ವೈಶಿಷ್ಟ್ಯ. ಆರ್ಕೋಸೆರಾಸ್ ಮತ್ತು ಗೋನಿಯಟೈಟಿಸ್ ಅಧಿಕ ಸಂಖ್ಯೆಯಲ್ಲಿದ್ದುವು. ಯೂರಿಡೆಸ್ಮ ಈ ಕಾಲದ ಒಂದು ಅಲ್ಪಾಯು ಪಳೆಯುಳಿಕೆ.

ಉತ್ತರ ಅಮೆರಿಕ : ಪರ್ಮಿಯನ್ ಸ್ತೋಮ ಉತ್ತರ ಅಮೆರಿಕ ಖಂಡದ ಪೂರ್ವ ಮತ್ತು ಮಧ್ಯಭಾಗಗಳಲ್ಲಿ ಪೆನ್ಸಿಲ್ವೇನಿಯನ್ ಸ್ತೋಮದ ಮೇಲೆ ಅನುರೂಪದಿಂದ ನಿಕ್ಷೇಪಗೊಂಡಿದೆ. ಆದ್ದರಿಂದ ಅದರ ಕೆಳ ಎಲ್ಲೆಯನ್ನು ಕರಾರುವಕ್ಕಾಗಿ ಎಳೆಯುವುದು ಅಸಾಧ್ಯ. ಆದರೆ ಮಾದರಿ ಪ್ರದೇಶಗಳಾದ ಪಶ್ಚಿಮ ಟೆಕ್ಸಾಸ್ ಮತ್ತು ಮೆಕ್ಸಿಕೊದಲ್ಲಿ ಕೆಳ ಎಲ್ಲೆ ಸ್ಪಷ್ಟವಾಗಿದೆ. ಪರಿಚಯದ ಉದ್ದೇಶಕ್ಕಾಗಿ ಪರ್ಮಿಯನ್ ಸ್ತೋಮವನ್ನು ಈ ಮುಂದಿನ ಭೌಗೋಳಿಕ ಪ್ರದೇಶಗಳಾಗಿ ವಿಂಗಡಿಸಬಹುದು :

1 ಪಶ್ಚಿಮ ಟೆಕ್ಸಾಸ್ ಮತ್ತು ನ್ಯೂಮೆಕ್ಸಿಕೊ ಪ್ರದೇಶ

2 ಮಧ್ಯ ಮತ್ತು ನೈರುತ್ಯ ಖಂಡ ಪ್ರದೇಶ

3 ಪೂರ್ವ ಪ್ರದೇಶದ ಡಂಕಾರ್ಡ್ ಶಿಲಾಶ್ರೇಣಿ

4 ಪಶ್ಚಿಮ ಪ್ರಾಂತಗಳು

1 ಪಶ್ಚಿಮ ಟೆಕ್ಸಾಸ್ ಮತ್ತು ನ್ಯೂಮೆಕ್ಸಿಕೊ ಪ್ರದೇಶ : ಉತ್ತರ ಅಮೆರಿಕದ ಮಧ್ಯಭಾಗದಲ್ಲಿ ಸಾಗರಗಳು ಹಿಂಜರಿದರೂ ಈ ಪ್ರದೇಶ ಪರ್ಮಿಯನ್ ಯುಗದ ಬಹುಕಾಲದವರೆಗೆ ಸಾಗರಾಕ್ರಮಣಕ್ಕೆ ಒಳಗಾಗಿತ್ತು. ಆದ್ದರಿಂದ ಇಲ್ಲಿ 4265 ಮೀಟರುಗಳಷ್ಟು ನಿಕ್ಷೇಪವಾಗಿದೆ. ಇದನ್ನು ನಾಲ್ಕು ಶಿಲಾಶ್ರೇಣಿಗಳಾಗಿ ವಿಭಜಿಸಲಾಗಿದೆ :

4 ಒಕೂವ ಶ್ರೇಣಿ

3 ಗೌಡಲುಪೆ ಶ್ರೇಣಿ

2 ಲಿಯನಾರ್ಡೊ ಶ್ರೇಣಿ

1 ಉಲ್ಫ್‌ಕ್ಯಾಂಪ್ ಶ್ರೇಣಿ

ಉಲ್ಫ್‌ಕ್ಯಾಂಪ್ ಶ್ರೇಣಿ ತೀರದ ಉಪ್ಪು ಮತ್ತು ಜಿಪ್ಸಮ್ ನಿಕ್ಷೇಪಗಳಿಂದಲೂ ಆಳಪ್ರದೇಶದ ಸುಣ್ಣಶಿಲೆಗಳಿಂದಲೂ ಅವೆರಡರ ಮಧ್ಯೆ ತೆಳುಸುಣ್ಣ ಪದರುಗಳಿಂದಲೂ ಪ್ರತಿನಿಧಿಸಲ್ಪಟ್ಟಿದೆ. ಈ ಮೂರು ಬಗೆಯ ನಿಕ್ಷೇಪಗಳು ಪರಸ್ಪರ ಹೆಣೆದುಕೊಂಡಿವೆ. ಇಲ್ಲಿಯ ಶಿಲೆಗಳಲ್ಲಿ ಪಳೆಯುಳಿಕೆಗಳು ಹೇರಳವಾಗಿವೆ (ಸ್ಪಾಂಜ್, ಆಲ್ಗಿ, ಬ್ರಯೊಜೋವ ಮತ್ತು ಹವಳಗಳು). ಸೂಡೊಸ್ಕ್ವಾಗಿರ‍್ಯೆನ ಇದರ ವಿಶಿಷ್ಟ ಪಳೆಯುಳಿಕೆ.

ಗೌಡಲುಪೆ ಪ್ರದೇಶದಲ್ಲಿ ಲಿಯನಾರ್ಡೊ ಶ್ರೇಣಿ ಸಂಪೂರ್ಣವಾಗಿ ಸಾಗರಜನಿತವಾದುದು. ಅದು ಕೆಲವು ಕಡೆ ಜೇಡುಗಳಿಂದಲೂ ಮತ್ತೆ ಕೆಲವು ಕಡೆ ಸುಣ್ಣಶಿಲೆಗಳಿಂದಲೂ ಕೂಡಿದೆ. ಗೌಡಲುಪೆ ಶ್ರೇಣಿ ದಿಲ್ವಾರ ಪ್ರದೇಶದಲ್ಲಿ ಚೆನ್ನಾಗಿ ರೂಪುಗೊಂಡಿದೆ. ಅದರಲ್ಲಿ ತೀರ, ಮಧ್ಯ ಮತ್ತು ಆಳ ನಿಕ್ಷೇಪಗಳಿವೆ. ಒಕೂವ ಶ್ರೇಣಿ ಉಪ್ಪು, ಅನ್ಹೈಡ್ರೈಟ್ ಮತ್ತು ರಂಜಕ ನಿಕ್ಷೇಪಗಳಿಗೆ ಹೆಸರಾಗಿದೆ. ಈ ನಿಕ್ಷೇಪಗಳ ದಪ್ಪ ಸುಮಾರು 1,220 ಮೀಟರುಗಳು. ಇವುಗಳ ಮೇಲೆ ಭೂ ನಿಕ್ಷೇಪ ನಡೆದಿದೆ.

ಖಂಡಮಧ್ಯ ಪ್ರದೇಶ : ಉಲ್ಫ್‌ಕ್ಯಾಂಪಿಯನ್ ಶ್ರೇಣಿ ನಿಕ್ಷೇಪವಾಗುತ್ತಿದ್ದಾಗ ಓಕ್ಲಹಾಮದಿಂದ ನೆಬ್ರಾಸ್ಕದವರೆಗಿನ ಪ್ರದೇಶ ತೆಟ್ಟೆ ಸಮುದ್ರದಿಂದ ಆಕ್ರಮಿಸಲ್ಪಟ್ಟಿತು. ಅಲ್ಲಿ ಸುಣ್ಣಶಿಲೆ, ಜೇಡುಶಿಲೆ ಮತ್ತು ಕೆಂಪುಶಿಲಾಪದರಗಳು ಪುನರಾವರ್ತಿಯನ್ನು ಅನೇಕ ಬಾರಿ ಕಾಣಬಹುದು. ಇದರಿಂದ ಸಾಗರದ ನಿರ್ಗಮನ ಮತ್ತು ಆಕ್ರಮಣಗಳು ಪದೇ ಪದೇ ನಡೆದಿವೆ ಎಂದು ಅರ್ಥವಾಗುತ್ತದೆ. ಲಿಯೊನಾರ್ಡೊ ಮತ್ತು ಗೌಡಲುಪೆ ಕಾಲಗಳಲ್ಲಿ ಭೂನಿಕ್ಷೇಪ ನಡೆದಿದೆ. ಇವುಗಳಲ್ಲಿ ಸರೀಸೃಪಗಳ ಮತ್ತು ದ್ವಿಚರಪ್ರಾಣಿಗಳ ಅವಶೇಷಗಳಿವೆ. ಈ ನಿಕ್ಷೇಪಗಳ ಮಧ್ಯೆ ತೆಳುವಾದ ಸಾಗರನಿಕ್ಷೇಪಗಳೂ ಉಂಟು. ಲಿಯನಾರ್ಡೊ ಶಿಲೆಗಳ ಮೇಲೆ ಬ್ಲೆನಿ ಎಂಬ ಹೆಸರಿನ ಜಿಪ್ಸಮ್ ನಿಕ್ಷೇಪವಿದೆ.

ಡಂಕಾರ್ಡ್ ಶಿಲಾಶ್ರೇಣಿ : ಅಪಲೇಚಿಯನ್ ನಿಕ್ಷೇಪಪ್ರದೇಶದಲ್ಲಿ ಪೆನ್ಸಿಲ್ವೇನಿಯನ್ ಸ್ತೋಮಗಳ ಮೇಲೆ ಮರಳುಶಿಲೆಗಳೂ ಮರಳು ಮಿಶ್ರ ಜೇಡುಶಿಲೆಗಳೂ ಅನುರೂಪದಿಂದ ನಿಕ್ಷೇಪಗೊಂಡಿವೆ. ಇವುಗಳಲ್ಲಿ ಸುಣ್ಣಶಿಲೆ ಮತ್ತು ಕಲ್ಲಿದ್ದಲು ಪದರಗಳಿವೆ. ಇವೇ ಡಂಕಾರ್ಡ್ ಶಿಲಾಶ್ರೇಣಿಗಳು. ಇವು ಭೂನಿಕ್ಷೇಪಗಳು. ಇವುಗಳ ಬಣ್ಣ ಕೆಂಪು. ಇವುಗಳಲ್ಲಿ ಲಿಂಗ್ಯುಲ ಮತ್ತು ಷಾರ್ಕ್ ಮೀನುಗಳ ಫಲಕಗಳಿರುವುದರಿಂದ ಈ ಸ್ಥಳ ಸ್ವಲ್ಪಕಾಲ ಸಮುದ್ರ ಸಂಪರ್ಕ ಹೊಂದಿದ್ದಿರಬೇಕೆಂದು ಹೇಳಬಹುದು.

ಪಶ್ಚಿಮಪ್ರಾಂತಗಳು : ಒರೆಗಾನ್, ವಾಷಿಂಗಟನ್ ಮತ್ತು ಬ್ರಿಟಿಷ್ ಕೊಲಂಬಿಯಾದ ಕೆಲವು ಭಾಗಗಳಲ್ಲಿ ಪೆಸಿಫಿಕ್ ಸಾಗರದಿಂದ ಆಕ್ರಮಣ ನಡೆದಿದೆ. ಆ ನಿಕ್ಷೇಪಗಳಲ್ಲಿ

ಏಷ್ಯಖಂಡದ ಪಳೆಯುಳಿಕೆಗಳು ಇವೆ. ಇವು ಉತ್ತರ ಅಮೆರಿಕ ಖಂಡದ ಮತ್ತಾವ ಭಾಗಗಳಲ್ಲೂ ಇಲ್ಲ.

ಇಂಡಿಯ : ಪರ್ಮಿಯನ್ ಸ್ತೋಮಗಳು ಸಾಲ್ಟ್‌ರೇಂಜ್, ಕಾಶ್ಮೀರ ಮತ್ತು ಸ್ಪಿಟಿ ಪ್ರದೇಶಗಳಲ್ಲಿ ಉತ್ತಮ ರೀತಿಯಲ್ಲಿ ರೂಪುಗೊಂಡಿವೆ. ಸ್ಪಿಟಿಯಲ್ಲಿ ಕಾರ್ಬಾನಿಫೆರಸ್ ಅಂತ್ಯಕಾಲದ ನೀರ್ಗಲ್ಲುನದಿ ನಿಕ್ಷೇಪವಾದ ಗುಂಡುಶಿಲೆಯ ಮೇಲೆ ಸುಣ್ಣ ಮಿಶ್ರ ಮರಳು ಶಿಲೆಯೂ ಅದರ ಮೇಲೆ ಇಂಗಾಲ ಮತ್ತು ಮರಳಿನ ಅಂಶಗಳಿಂದ ಕೂಡಿದ ಕಪ್ಪು ಅಥವಾ ಕಂದುಬಣ್ಣದ ಜೇಡುಶಿಲೆಯೂ ಇವೆ. ಜೇಡುಶಿಲೆ 30–60 ಮೀಟರ್ ದಪ್ಪ ಇದೆ. ಇದರಲ್ಲಿ ಹೇರಳವಾದ ಪ್ರೊಡಕ್ಟಸ್ ಅವಶೇಷಗಳಿವೆ. ಈ ಶಿಲಾವಲಯ ಕಾಶ್ಮೀರ, ಸ್ಪಿಟಿ, ಕುಮಾಂವ್, ನೇಪಾಳ ಮುಂತಾದ ಅನೇಕ ಕಡೆ ರೂಪುಗೊಂಡು ಪರ್ಮಿಯನ್ ಯುಗದ ವಿಶಿಷ್ಟ ಜೀವರಾಶಿಯ ಆಕರವಾಗಿದೆ. ತುದಿಯಿಂದ 9ಮೀಟರ್ ಕೆಳಗೆ ಸೆಫಲೊಪಾಡ್ ಪಳೆಯುಳಿಕೆಗಳನ್ನು ಒಳಗೊಂಡಿರುವ 30 ಸೆಂಮೀ ದಪ್ಪದ ಪದರವಿದೆ. ಈ ಸ್ತೋಮದಲ್ಲಿ ಪ್ರೊಡಕ್ಟಸ್, ಸ್ಪಿರಿಫೆರ ಮೊದಲಾದ ಬ್ರೇಕಿಯೋಪೊಡಗಳೂ ಸೈಕ್ಲೋಬಸ್, ಹಯಡೋನಿ ಮೊದಲಾದ ಸೆಫಲೋಪೊಡಗಳೂ ಇವೆ.

ಹರ್ಸಿನಿಯನ್ ಪ್ರಳಯ ಕಾಶ್ಮೀರ ಪ್ರದೇಶವನ್ನು ಭೂಮಟ್ಟಕ್ಕೆ ತಂದು ಅದನ್ನು ಜ್ವಾಲಾಮುಖಿಗಳ ಕಾರ್ಯಚಟುವಟಿಕೆಯ ಕೇಂದ್ರವಾಗಿ ಪರಿವರ್ತಿಸಿತು. ಈ ಕಾರ್ಯ ಮೊದಲು ಆಸ್ಫೋಟನ ರೀತಿಯದಾಗಿತ್ತು. ಅಲ್ಲಿ ಶಿಲಾಚೂರುಗಳು ಮೇಲೊಗೆಯಲ್ಪಟ್ಟು ರಾಶಿರಾಶಿಯಾಗಿ ಬಿದ್ದಿವೆ. ಇವುಗಳಿಗೆ ಆಗ್ಲಾಮರೇಟಿಕ್ ಸ್ಲೇಟುಗಳೆನ್ನುವರು. ಅನಂತರ ಶಿಲಾರಸ ಉಗುಳುವಿಕೆ ಪ್ರಾರಂಭವಾಗಿ ಪರ್ಮಿಯನ್ ಯುಗದ ಆದಿಯಲ್ಲಿ ತೀವ್ರಗತಿ ಮುಟ್ಟಿದ ತರುವಾಯ ಕ್ರಮೇಣ ಇಳಿಮುಖವಾಯಿತು. ಈ ಜ್ವಾಲಾಮುಖಿ ಶಿಲೆಗಳಿಗೆ ಪಂಜಾಲ್‌ಟ್ರಾಪ್ ಎಂದು ಕರೆಯುತ್ತಾರೆ. ಜ್ವಾಲಾಮುಖಿಜ ಶಿಲಾಪದರಗಳಲ್ಲಿ ಕೆಲವೆಡೆ ಸಸ್ಯಾವಶೇಷಗಳಿಂದ ಕೂಡಿದ ಜಲಶಿಲೆಗಳಿವೆ. ಇವುಗಳಲ್ಲಿರುವ ಸಸ್ಯಗಳಲ್ಲಿ ಗ್ಲಾಸಾಪ್ಟರಿಸ್ ಇಂಡಿಕ ಮತ್ತು ಗಂಗಮಾಪ್ಟರಿಸ್ ಕಾಶ್ಮೀರೆನ್ಸಿಸ್ ಮುಖ್ಯವಾದವು. ಈ ಶಿಲೆಗಳಿಗೆ ಗಂಗಮಾಪ್ಟರಿಸ್ ಪದರಗಳು ಎಂದು ಹೆಸರು. ಒಂದು ಕಡೆ ಜ್ವಾಲಾಮುಖಿ ಕಾರ್ಯಾಚರಣೆ ಆಗುತ್ತಿದ್ದರೆ ಮತ್ತೊಂದು ಕಡೆ ಸಮುದ್ರಾಕ್ರಮಣವಾಯಿತು. ಆದ್ದರಿಂದ ಜ್ವಾಲಾಮುಖಿಜ ಶಿಲೆಗಳನ್ನು ಮತ್ತು ಸಾಗರನಿಕ್ಷೇಪಗಳನ್ನು ಅಕ್ಕಪಕ್ಕದಲ್ಲಿ ಕಾಣುವೆವು. ಸಾಗರಜನಿತ ಶಿಲೆಗಳಿಗೆ ಝಿವಾನ್ ಪದರಗಳೆಂದು ಹೆಸರು. ಝಿವಾನ್ ಮತ್ತು ಬಾರುಸ್ ಎಂಬ ಸ್ಥಳಗಳಲ್ಲಿ ಪ್ರೋಟೊರೆಟಿಪೊರ ಆಮ್ಪ ಎಂಬ ಬ್ರಯಜೋವ, ಪರ್ಮಿಯನ್ ಯುಗದ ವಿಶಿಷ್ಟ ಬ್ರೇಕಿಯೋಪೋಡಗಳು ಮತ್ತು ಹವಳಗಳ ಗುಂಪಿಗೆ ಸೇರಿದ ಪ್ರಾಣಿಗಳ ಅವಶೇಷಗಳು ಇರುವ ಜಲಶಿಲೆಗಳಿವೆ. ಈ ಪ್ರಾಣಿವರ್ಗ ಸಾಲ್ಟ್‌ರೇಂಜ್ ಪ್ರದೇಶದ ಪ್ರೊಡಕ್ಟಸ್ ಸುಣ್ಣಶಿಲಾಸಮುದಾಯದ ಮೇಲುಭಾಗದ ಪ್ರಾಣಿವರ್ಗವನ್ನು ಹೋಲುತ್ತದೆ.

ಸಾಲ್ಟ್‌ರೇಂಜ್ ಪ್ರದೇಶದಲ್ಲಿ ಕಾರ್ಬಾನಿಫೆರಸ್ ಯುಗದ ಆಲೀವ್ ಶಿಲಾವರ್ಗ ಮತ್ತು ಚುಕ್ಕೆಮರಳು ಶಿಲಾವರ್ಗದ ಮೇಲೆ ಪರ್ಮಿಯನ್ ಸ್ತೋಮ ಅನುರೂಪದಿಂದ ನಿಕ್ಷೇಪಗೊಂಡಿವೆ. ಇದು ಭಾರತದ ಭೂಇತಿಹಾಸದಲ್ಲಿ ಮುಖ್ಯವಾದ ನಿಕ್ಷೇಪ. ಭಾರತದ ಭೂವಿಜ್ಞಾನಿಗಳಿಗೆ ಫಾಸಿಲ್‌ಭರಿತ ಶಿಲಾವರ್ಗಗಳಲ್ಲಿ ಮೊದಲು ಗೋಚರವಾದುದು ಇದೇ ಆದ್ದರಿಂದ ಇದು ಹೆಚ್ಚು ಪರಿಶೋಧಿಸಲ್ಪಟ್ಟಿದೆ. ಸಾಲ್ಟ್ ರೇಂಜಿನ ಪಶ್ಚಿಮ ಮತ್ತು ಮಧ್ಯಭಾಗಗಳಲ್ಲಿ ಉತ್ತಮವಾಗಿ ರೂಪುಗೊಂಡು ಪೂರ್ವಕ್ಕೆ ಬಂದ ಹಾಗೆಲ್ಲ ತೆಳುವಾಗುತ್ತದೆ. ಇದು ಪ್ರಪಂಚದ ಪರ್ಮಿಯನ್ ಯುಗದ ಸಾಗರ ನಿಕ್ಷೇಪಗಳಲ್ಲೆಲ್ಲ ಅತ್ಯಂತ ಉತ್ತಮ ರೀತಿಯಲ್ಲಿ ರೂಪುಗೊಂಡು ಹೆಸರುವಾಸಿಯಾಗಿದೆ. ಈ ಶಿಲಾಸಮುದಾಯ ಮುಖ್ಯವಾಗಿ ಸುಣ್ಣಶಿಲೆಯಿಂದ ಕೂಡಿ ಹೇರಳವಾದ ಫಾಸಿಲುಗಳಲ್ಲಿಯೂ ದೊರೆಯುವುದರಿಂದ ಇದಕ್ಕೆ ಪ್ರೊಡಕ್ಟಸ್ ಸುಣ್ಣಶಿಲೆ ಎಂದು ಹೆಸರಾಗಿದೆ. ಈ ಶಿಲಾಸ್ತೋಮವನ್ನು ಮೂರು ಭಾಗಗಳಾಗಿ ವಿಂಗಡಿಸಿದೆ. ಪುನಃ ಕೆಳಭಾಗವನ್ನು ಅಂಬ್ ಮತ್ತು ಕಟ್ಟ ಎಂಬ ಎರಡು ಭಾಗಗಳಾಗಿಯೂ ಮಧ್ಯಭಾಗವನ್ನು ವಿರ್ಗಲ್ ಮತ್ತು ಕಲಬಾಗ್ ಎಂಬ ಎರಡು ಭಾಗಗಳಾಗಿಯೂ ಮೇಲ್ಭಾಗವನ್ನು ಕುಂದಘಾಟ್, ಜಬ್ಬಿ ಮತ್ತು ಚಿದ್ರು ಎಂಬ ಮೂರು ಭಾಗಗಳಾಗಿಯೂ ವಿಂಗಡಿಸಲಾಗಿದೆ. (ಡಿ.ಆರ್.)

**ಪಶ್ಚಿಮ ಘಟ್ಟಗಳು:** ದಕ್ಷಿಣ ಭಾರತದ ಪಶ್ಚಿಮ ಕರಾವಳಿಗೆ ಸಮೀಪದಲ್ಲಿ, ತಪತಿ ನದಿಯ ಬಳಿಯಿಂದ ಕನ್ಯಾಕುಮಾರಿಯ ವರೆಗೆ ಸುಮಾರು 1,300 ಕಿಮೀ ದೂರ ಹಬ್ಬಿರುವ ಪರ್ವತಶ್ರೇಣಿ. ಸಹ್ಯಾದ್ರಿ ಎಂದೂ ಇದಕ್ಕೆ ಹೆಸರಿದೆ. ದಕ್ಷಿಣದ ಪಾಲಘಾಟ್ ತೆರಪಿನ ವಿನಾ ಅವಿಚ್ಛಿನ್ನವಾಗಿ ಸಾಗಿರುವ ಈ ಘಟ್ಟಗಳು ಮಹಾರಾಷ್ಟ್ರ, ಗೋವ, ಕರ್ನಾಟಕ, ತಮಿಳು ನಾಡು ಹಾಗೂ ಕೇರಳ ಭಾಗಗಳಲ್ಲಿ ಹರಡಿವೆ. ಜೀವವೈವಿಧ್ಯದ ದೃಷ್ಟಿಯಲ್ಲಿ ಬಹು ಮುಖ್ಯವಾದುದು. ಜಗತ್ತಿನಾದ್ಯಂತ ಜೀವ ವೈವಿಧ್ಯದ ಏಳು ಮುಖ್ಯ ಪ್ರದೇಶಗಳನ್ನು ಗುರುತಿಸಲಾಗಿದೆ. ಅವುಗಳಿಗೆ ಜೀವ ವೈವಿಧ್ಯದ ಬಿಸಿಚುಕ್ಕೆ ಎಂದು ಹೆಸರು. ಭಾರತದಲ್ಲಿ ಇಂಥ ಎರಡು ಬಿಸಿಚುಕ್ಕೆಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಪಶ್ಚಿಮ ಘಟ್ಟವೂ ಒಂದು.

ಪಶ್ಚಿಮ ಘಟ್ಟಗಳು ಮಹಾರಾಷ್ಟ್ರ ರಾಜ್ಯದ ಉತ್ತರ ತುದಿಯಲ್ಲಿ ತಪತಿ ನದಿ ಕಣಿವೆಯ ಕುಂದೈಬಾರಿ ಬಳಿ (ಉ.ಅ $21^0 6'$ ಮತ್ತು ಪೂ. ರೇ. $74^0 11'$) ಪ್ರಾರಂಭವಾಗಿ ಸಮುದ್ರಮಟ್ಟಕ್ಕೆ ಸರಾಸರಿ 1,220 ಮೀ ಎತ್ತರದೊಳಗೆ ಸಾಗಿವೆ. ಸಮುದ್ರಕ್ಕೂ ಘಟ್ಟಗಳಿಗೂ ಅಂತರ 32 ರಿಂದ 104 ಕಿಮೀ. ಪ್ರಾರಂಭದ ಸ್ಥಳದಿಂದ ತ್ರಿಯಂಬಕ್ ಕಣಿವೆಯ ವರೆಗೆ ಘಟ್ಟಗಳ ಹರವು 160 ಕಿಮೀ. ಆ ಭಾಗದಲ್ಲಿ ಪಶ್ಚಿಮದಿಂದ ದಕ್ಷಿಣಕ್ಕೆ ದಟ್ಟವಾದ ಅರಣ್ಯದಿಂದ ಕೂಡಿದ ಪೀಂತ್, ಮಖಾಡ ಮತ್ತು ಜವಹಾರ್ ಬೆಟ್ಟಗಳಿವೆ. ಪಶ್ಚಿಮದ ಕಡೆ ಆಳವಾದ ಕಮರಿಗಳಿವೆ. ಇಲ್ಲಿಯ ಬೆಟ್ಟಗಳು ಕೊಂಕಣದ ಇಳುಕಲು ಭೂಮಿಗೂ ದಖನ್‌ಗೂ ನಡುವೆ ಗೋಡೆಗಳಂತಿವೆ. ಇಲ್ಲಿಂದ ಮುಂದಕ್ಕೆ ಘಟ್ಟಗಳು ಮಾಲ್ಸೆಜ್ ಕಣಿವೆಯ ವರೆಗೆ 64 ಕಿಮೀ ದೂರ ದಕ್ಷಿಣದಿಂದ ಆಗ್ನೇಯಕ್ಕೂ ಅಲ್ಲಿಂದ ಖಂಡಾಲ ಹಾಗೂ ವಾಗ್ಜೈವರೆಗೆ 96 ಕಿಮೀ ದೂರ ನೈಋತ್ಯದ ಕಡೆಗೂ ಸಾಗಿ. ಮಹಾರಾಷ್ಟ್ರದ ಗಡಿಯನ್ನು ದಾಟುವವರೆಗೆ ಪುನಃ ಆಗ್ನೇಯದ ಕಡೆ ಹಬ್ಬಿವೆ.

ಪಶ್ಚಿಮ ಘಟ್ಟಗಳ ಉದ್ದಕ್ಕೂ ಪೂರ್ವ ಭಾಗಕ್ಕೆ ಹಲವು ಚಾಚುಗಳು ಹಾಗೂ ಉಪಶ್ರೇಣಿಗಳು ಹರಡಿವೆ. ಮಹಾರಾಷ್ಟ್ರದಲ್ಲಿ ಪೂರ್ವದ ಕಡೆ ಹಬ್ಬಿರುವ ಉಪಶ್ರೇಣಿಗಳು ಗೋದಾವರಿ, ಭೀಮಾ ಮತ್ತು ಕೃಷ್ಣಾ ನದಿಗಳ ಕಣಿವೆಗಳನ್ನು ವಿಭಜಿಸಿವೆ. ತಪತಿ ಮತ್ತು ಗೋದಾವರಿ ಕಣಿವೆಗಳ ನಡುವೆ ಸಾತ್‌ಮಾಲಾ ಶ್ರೇಣಿಯಿದೆ. ಹರಿಶ್ಚಂದ್ರಗಢದ ಬಳಿ ಆಗ್ನೇಯಕ್ಕೆ ಹಬ್ಬಿರುವ ಬೆಟ್ಟಗಳ ನಡುವೆ ಗೋದಾವರಿ ಹಾಗೂ ಭೀಮಾ ನದಿಗಳ ಜಲಾನಯನ ಭೂಮಿಯೂ ಅಹಮದ್‌ನಗರ ಭಾಗದ ಸಮತಲ ಭೂಮಿಯೂ ಇವೆ. ಕಮೊಲಗಢದವರೆಗೆ ಪೂರ್ವಕ್ಕೂ ಅಲ್ಲಿಂದ ದಕ್ಷಿಣಕ್ಕೂ ಸಾಗಿ, ಆತ್‌ಪಾಡಿ ಮತ್ತು ಜಾತ್‌ಗಳ ಮೂಲಕ ಭೀಮಾ ಮತ್ತು ಕೃಷ್ಣಾ ನದಿಗಳ ನಡುವಣ ಜಲಾನಯನ ಪ್ರದೇಶದ ವರೆಗೆ ಮಹಾದೇವೋ ಬೆಟ್ಟಸಾಲು ಹಬ್ಬಿದೆ.

ಮಹಾರಾಷ್ಟ್ರದ ಕಡೆ ಪಶ್ಚಿಮ ಘಟ್ಟಗಳಲ್ಲಿ ಮೂರನೆ ಭೂಯುಗದ ಶಿಲಾಪದರಗಳು, ಅಗ್ನಿಶಿಲೆ, ಪುಡಿಗಟ್ಟುವ ಕೆಂಪು ಜೇಡುಶಿಲೆ, ಬೆಣಚು ಹಾಗೂ ಮರಳುಗಲ್ಲು ಇವೆ. ಗಿರಿಗಳ ಚಪ್ಪಟೆಯ ತುದಿಗಳಲ್ಲಿ ಗೋಡೆಗಳಂತಿರುವ ಜಂಬುಮಣ್ಣಿನಪದರುಗಳು ಇಲ್ಲವೇ ಅಗ್ನಿಶಿಲೆಗಳು ಇವೆ. ತಪ್ಪಲುಗಳು ತೇಗ, ಕರಿಯಮರ ಹಾಗೂ ಬಿದಿರಿನ ದಟ್ಟಡವಿಗಳಿಂದ ಕೂಡಿವೆ.

ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಹೆಚ್ಚು ಕಣಿವೆ ಮಾರ್ಗಗಳಿರುವುದು ಮಹಾರಾಷ್ಟ್ರದಲ್ಲಿ. ಈ ಕಣಿವೆ ದಾರಿಗಳನ್ನು ರಕ್ಷಿಸಲು ಕಟ್ಟಿದ, ಹಾಗೂ ಮರಾಠದ ಇತಿಹಾಸದಲ್ಲಿ ಪ್ರಸಿದ್ಧವಾದ ಅನೇಕ ಗಿರಿದುರ್ಗಗಳಿವೆ. ಇಲ್ಲಿಯ ಮುಖ್ಯವಾದ ಕಣಿವೆ ದಾರಿಗಳು ಇವು : 1 ಬ್ರೋಚ್ ಮತ್ತು ದಖನ್ ನಡುವಣ ಕುಂದೈಬಾರಿ ಕಣಿವೆ ಮಾರ್ಗ. ಇದು ಪ್ರಾಚೀನ ವಾಣಿಜ್ಯ ಮಾರ್ಗ. 2 ಬಾಬುಲ್ನಾ ಕಣಿವೆ ಮಾರ್ಗ, ಇದರ ರಕ್ಷಣೆಗಾಗಿ ಕಟ್ಟಿದ ದುರ್ಗಗಳು ಸಾಲ್‌ಹರ್ ಮತ್ತು ಮುಲ್‌ಹರ್ 3 ಗೋದಾವರಿಯ ಉಗಮಸ್ಥಾನದ ಬಳಿಯ ತ್ರಿಯಂಬಕ್ ಕಣಿವೆ ಮಾರ್ಗ. 4 ಮುಂಬಯಿ–ಆಗ್ರ ರಸ್ತೆ ಹಾಗೂ ಪಶ್ಚಿಮ ಭಾರತದ ರೈಲುಮಾರ್ಗ ಸಾಗಿರುವ ಥಾಲ್ ಕಣಿವೆಮಾರ್ಗ, 5 ನಾಸಿಕ್ ಮತ್ತು ಕಲ್ಯಾಣ್ ನಡುವಣ ಹಳೆಯ ಪಿಂಪ್ರಿ ಘಾಟ್ ಮಾರ್ಗ, ಈ ಮಾರ್ಗವನ್ನು ರಕ್ಷಿಸಲು ಕಟ್ಟಿದ ಕೋಟೆಗಳು ಆಲಂಗ್ ಮತ್ತು ಕೂಲಂಗ್, 6 ಹರಿಶ್ಚಂದ್ರಗಢ (1,370 ಮೀ). 7 ಜುನ್ನಾರ್ ಮತ್ತು ಕೊಂಕಣದ ನಡುವಣ ನಾನಾ ಕಣಿವೆ ಮಾರ್ಗ. 8 ಶಿವನೇರುದುರ್ಗ. 9 ಭೀಮಾ ನದಿಯ ಉಗಮಸ್ಥಳಕ್ಕೆ ಸಮೀಪದಲ್ಲಿರುವ ಭೀಮಶಂಕರ್ ದುರ್ಗ. 10 ಚಕನ್ ಕೋಟೆ. 11 ಮುಂಬಯಿ–ಪುಣೆ ರಸ್ತೆ ಹಾಗೂ ಪಶ್ಚಿಮ ಭಾರತದ ರೈಲುಮಾರ್ಗ ದಖನ್ ಕಡೆಗೆ ಸಾಗುವ ಭೋರ್ ಅಥವಾ ಖಂಡಾಲ. 12 ವಾಗೀ ಘಾಟ್. 13 ಪುಣೆಯ ದಕ್ಷಿಣದ ಬೆಟ್ಟ ಚಾಚುಗಳಲ್ಲಿ ಸಿಂಹಗಢ ಹಾಗೂ ಪುರಂದರಗಢ ಕೋಟೆಗಳು. 14 ಕೊಂಕಣ ಭಾಗದ ರಾಜಗಢ ಮತ್ತು ಪಾರ್ ಘಾಟ್. ಇಲ್ಲಿ ಪ್ರತಾಪಗಢ ಕೋಟೆಯಿದೆ. 15 ಕೃಷ್ಣ ನದಿಯ ಉಗಮಸ್ಥಳದಲ್ಲಿರುವ ಬಲೇಶ್ವರ ಗಿರಿಧಾಮ (1,438 ಮೀ.) 16 ಸಾತಾರಾ ಕೋಟೆ. 17 ಪ್ರಾಚೀನ ನಗರವಾದ ಕರಾಡ್ ಕಡೆ ಹೋಗುವ ಕುಂಬರ್ಲಿ ಘಾಟ್. 18 ರತ್ನಗಿರಿಯಿಂದ ಕೊಲ್ಹಾಪುರಕ್ಕೆ ಹೋಗುವ ಅಂಬಾ ಕಣಿವೆ. 19 ವಿಶಾಲಗಢ ಹಾಗೂ ಪನ್ಹಾಲ ದುರ್ಗಗಳು. 20 ದೇವಗಢಕ್ಕೂ ಬೆಳಗಾಂವಿ ಜಿಲ್ಲೆಯ ನಿಪ್ಪಾಣಿಗೂ ನಡುವಣ ಫೋಂಡಾ ಕಣಿವೆಮಾರ್ಗ. 21 ವೆಂಗೂರ್ಲ ಹಾಗೂ ಬೆಳಗಾಂ ನಡುವಣ ಅಂಬೋಲಿ ಮತ್ತು ರಾಮ್ ಕಣಿವೆಗಳು.

ಗೋವೆಯ ಪಶ್ಚಿಮಕ್ಕೆ ಇರುವ ಸಮುದ್ರವನ್ನು ಬಿಟ್ಟರೆ ಉಳಿದ ಮೂರು ಕಡೆಗಳಲ್ಲಿ ಪಶ್ಚಿಮ ಘಟ್ಟಗಳು ಸುತ್ತುವರಿದಿವೆ. ಮರ್ಮಗೋವದಿಂದ ಧಾರಾವಾಡಕ್ಕೆ ಹೋಗುವ ರೈಲುಮಾರ್ಗ ಕ್ಯಾಸಲ್‌ರಾಕ್ ಅಂಚಿನಲ್ಲಿ ಸಾಗಿದೆ. ಮಹಾರಾಷ್ಟ್ರದಿಂದ ಗೋವೆಯ

ವರೆಗೆ ಅನೇಕ ಕಣಿವೆ ಮಾರ್ಗಗಳಿದ್ದರೂ ಕರ್ನಾಟಕದಲ್ಲಿ ಕಾರವಾರ ಹಾಗೂ ಧಾರವಾಡಗಳ ನಡುವಣ ಅರಬೈಲು ಕಣಿವೆ, ಕುಮಟಾ–ಹುಬ್ಬಳ್ಳಿ ನಡುವಣ ದೇವಿಮನೆ ಕಣಿವೆ, ಶಿವಮೊಗ್ಗ ಜಿಲ್ಲೆಯಲ್ಲಿ ಕೊಡಚಾದ್ರಿಯ ಉತ್ತರಕ್ಕೆ ಕೊಲ್ಲೂರು ಘಾಟ್, ಹೈದರ್ (ಹೊಸಂಗಡಿ) ಘಾಟ್ ಹಾಗೂ ಆಗುಂಬೆ ಘಾಟ್, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಛೂಂದ್ ಘಾಟ್, ಹಾಸನ ಜಿಲ್ಲೆಯಲ್ಲಿ ಹಾಸನಕ್ಕೂ ಮಂಗಳೂರಿಗೂ ಸಂಪರ್ಕ ಕಲ್ಪಿಸುವ ಮಂಜರಾಬಾದ್ ಘಾಟ್ ಹಾಗೂ ಬಿಸಲೆ ಘಾಟ್–ಇವೆಲ್ಲವೂ ಪಶ್ಚಿಮ ಘಟ್ಟಗಳ ಪೂರ್ವದ ಸ್ಥಳಗಳಿಗೂ ಪಶ್ಚಿಮದ ಕರಾವಳಿ ಸ್ಥಳಗಳಿಗೂ ಸಂಬಂಧ ಕಲ್ಪಿಸುತ್ತವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಾಗರ ತಾಲ್ಲೂಕಿನ ಪಶ್ಚಿಮದ ಗೋವರ್ಧನ ಗಿರಿಯಿಂದ ದೇವರಕೊಂಡದ ವರೆಗೆ ಪಶ್ಚಿಮ ಘಟ್ಟಗಳ ಸಾಲು ಸಮುದ್ರದಂಚಿಗೆ 16 ಕಿಮೀ ಅಂತರದಲ್ಲಿದೆ. ಅಲ್ಲಿಂದ ಆಗ್ನೇಯದ ಕಡೆಗೆ ಸಾಗಿ ಚಿಕ್ಕಮಗಳೂರು ಜಿಲ್ಲೆಯ ನೈಋತ್ಯದಲ್ಲಿ ಕುದುರೆಮುಖದ ಕಡೆ ಹಬ್ಬಿದೆ. ಈ ಭಾಗ ಕೃಷ್ಣಾ ಹಾಗೂ ಕಾವೇರಿ ನದಿಗಳ ಉಪನದಿಗಳ ಹರಿವಿನ ಪ್ರದೇಶ. ಅಲ್ಲಿಂದ ಮುಂದಕ್ಕೆ ಘಟ್ಟಗಳ ಸಾಲು ಕೊಡಗಿನ ಕಡೆ ಮುಂದುವರಿದು ಸಮುದ್ರದಂಚಿಗೆ 72 ಕಿಮೀ ದೂರದಲ್ಲಿದೆ. ಇಲ್ಲೂ ಪ್ರಧಾನ ಶ್ರೇಣಿಯಿಂದ ಉಪಶ್ರೇಣಿಗಳು ಪೂರ್ವಕ್ಕೆ ಹರಡಿಕೊಂಡಿವೆ. ಶಿವಮೊಗ್ಗ ಜಿಲ್ಲೆಯ ಕವಲೆದುರ್ಗದಲ್ಲಿ ಶರಾವತಿ ಉದ್ಭವಿಸಿ, ಹರಿದ್ರಾ ನದಿಯೊಂದಿಗೆ ಕೂಡಿ, ಜೋಗದಲ್ಲಿ ಧುಮುಕಿ, ಪಶ್ಚಿಮ ಘಟ್ಟಗಳನ್ನು ಹಾದು ಹೊನ್ನಾವರದ ಬಳಿ ಸಮುದ್ರಕ್ಕೆ ಬೀಳುತ್ತದೆ. ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳ ಕವಲುಗಳು ಕೊಡಚಾದ್ರಿ (1,343 ಮೀ), ಗೋವರ್ಧನಗಿರಿ ಮತ್ತು ಚಂದ್ರಗುತ್ತಿ (852 ಮೀ), ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮದ ಅಂಚಿನಲ್ಲಿ ಪಶ್ಚಿಮ ಘಟ್ಟಗಳು ಬಹಳ ಎತ್ತರವಾಗಿವೆ. ಅಲ್ಲಿಯ ಪ್ರಧಾನ ಬೆಟ್ಟಗಳು ಮೆತ್ರಿ (ಮೇರುತಿ) ಗುಡ್ಡ (1,661 ಮೀ), ವರಾಹ ಪರ್ವತ (1,457 ಮೀ) ಮುಳ್ಳಯ್ಯನಗಿರಿ (1,938 ಮೀ), ಕಲ್ಲತ್ತಗಿರಿ (1,876 ಮೀ), ಮತ್ತು ಕುದುರೆಮುಖ (1,894 ಮೀ), ಶೃಂಗಗಿರಿಯ ತಪ್ಪಲಿನಲ್ಲಿ ಶೃಂಗೇರಿ ಕ್ಷೇತ್ರವಿದೆ. ಹಾಸನ ಜಿಲ್ಲೆಯ ಮಂಜರಾಬಾದ್ ತಾಲ್ಲೂಕು ಪಶ್ಚಿಮ ಘಟ್ಟಗಳ ಅಂಚಿನಲ್ಲಿದೆ. ಮಂಜರಾಬಾದ್ ಘಾಟ್ ರಸ್ತೆ ಹಾಸನ ಮತ್ತು ಕೊಡಗು, ಮಂಗಳೂರು ಮೊದಲಾದ ಸ್ಥಳಗಳಿಗೆ ಸಂಪರ್ಕ ಕಲ್ಪಿಸಿದೆ. 1979ರಲ್ಲಿ ಹೊಸದಾಗಿ ತೆರೆದ ಹಾಸನ–ಮಂಗಳೂರು ರೈಲುಮಾರ್ಗ ಇದೇ ಘಾಟ್ ಮೂಲಕ ಸಾಗಿದೆ. ಕೊಡಗಿನ ಉತ್ತರದಲ್ಲಿರುವ ಪುಷ್ಪಗಿರಿ ಅಥವಾ ಸುಬ್ರಮಣ್ಯ ಸಮುದ್ರಮಟ್ಟಕ್ಕೆ 1,715 ಮೀ ಎತ್ತರದಲ್ಲಿದೆ. ಮೈಸೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಪಶ್ಚಿಮ ಘಟ್ಟಗಳು ದಕ್ಷಿಣದ ತಮಿಳು ನಾಡು ಹಾಗೂ ಕೇರಳ ರಾಜ್ಯಗಳ ಕಡೆಗೆ ಮುಂದುವರಿಯುತ್ತವೆ.

ಕೊಡಗನ್ನು ಬಿಟ್ಟ ಕೂಡಲೆ ಘಟ್ಟಗಳ ಸಾಲುಗಳು ಪೂರ್ವಭಾಗದಿಂದ ಹಬ್ಬಿದ ಪೂರ್ವ ಘಟ್ಟಗಳೊಂದಿಗೆ ಸೇರುತ್ತವೆ. ಅವು ಸಂಧಿಸುವ ಕಡೆ ಎತ್ತರಕ್ಕೆ ನಿಂತಿರುವ ಬೆಟ್ಟಗಳು ನೀಲಮಲೆ ಅಥವಾ ನೀಲಗಿರಿ. ಈ ಬೆಟ್ಟಗಳಲ್ಲಿ ತಮಿಳು ನಾಡಿನ ಗಿರಿಧಾಮವಾದ ಉದಕಮಂಡಲ (2,133 ಮೀ), ಕೂನೂರು (2,133 ಮೀ), ವೆಲಿಂಗ್‌ಡನ್, ಕೋತಗಿರಿ, ದೊಡ್ಡಬೆಟ್ಟ (2,660 ಮೀ), ಮಕುರ್ತಿ (2,438 ಮೀ) ಮುಖ್ಯವಾದುವು. ನೀಲಗಿರಿಯ ದಕ್ಷಿಣದಲ್ಲಿ ಕೇರಳಕ್ಕೂ ತಮಿಳು ನಾಡಿನ ಕೊಯಮತ್ತೂರಿಗೂ ನಡುವೆ ಪಾಲಘಾಟ್ ತೆರಪು ಇದೆ. ಇದು ಪಶ್ಚಿಮ ಘಟ್ಟಗಳನ್ನು ಅಡ್ಡಲಾಗಿ ಕತ್ತರಿಸಿದಂತೆ ಇದೆ. ಈ ತೆರಪಿನ ಅಗಲ 27 ಕಿಮೀ. ಕಣಿವೆ ದಾರಿಗಳನ್ನು ಬಿಟ್ಟರೆ ಇಡೀ ಪಶ್ಚಿಮ ಘಟ್ಟಗಳ ಶ್ರೇಣಿ ವಿಭಜಿತವಾದಂತೆ ದಾರಿ ಬಿಟ್ಟಿರುವುದು ಇದೊಂದೇ ಕಡೆ. ಪಾಲಘಾಟ್ ತೆರಪು ಸಮುದ್ರಮಟ್ಟಕ್ಕೆ 305 ಮೀ ಎತ್ತರದಲ್ಲಿದೆ. ಇದರ ಮೂಲಕ ದಕ್ಷಿಣ ರೈಲುಮಾರ್ಗ ಸಾಗಿದೆ. ಈ ತೆರಪಿನಿಂದ ಪಶ್ಚಿಮ ಘಟ್ಟಗಳ ಪೂರ್ವಕ್ಕೂ ಕರಾವಳಿಗೂ ಸಂಪರ್ಕ ಉಂಟಾಗಿದೆ.

ಪಾಲಘಾಟ್ ತೆರಪಿನ ಅನಂತರ ಪಶ್ಚಿಮ ಘಟ್ಟಗಳು ಹಠಾತ್ತನೆ ಬಹಳ ಎತ್ತರವಾಗಿ ದಕ್ಷಿಣಕ್ಕೆ ಮುಂದುವರಿದಿವೆ. ಅವಕ್ಕೆ ಈ ಭಾಗದಲ್ಲಿ ಆನೈಮಲೈ ಅಥವಾ ಆನೆಬೆಟ್ಟ ಎಂಬ ಹೆಸರುಂಟು. ಇಲ್ಲಿ ಪಶ್ಚಿಮ ಘಟ್ಟಗಳ ಶಾಖೆಗಳು ಪೂರ್ವಕ್ಕೂ ಪಶ್ಚಿಮಕ್ಕೂ ವ್ಯಾಪಿಸಿವೆ. ಪಶ್ಚಿಮಕ್ಕೆ ವ್ಯಾಪಿಸಿರುವ ಬೆಟ್ಟ ನೆಲ್ಲಿಯಂಪತ್ತಿ ; ಪೂರ್ವಕ್ಕೆ ವ್ಯಾಪಿಸಿರುವುದು ಪಳನಿಮಲೈ. ಪಳನಿ ಬೆಟ್ಟಗಳಲ್ಲಿ ಕೊಡೈಕ್ಯಾನಾಲ್ ಗಿರಿಧಾಮವಿದೆ. ಮುಂದೆ ಕೇರಳದ ಕಡೆಗೆ ದಕ್ಷಿಣಕ್ಕೆ ಹಬ್ಬಿರುವ ಪಶ್ಚಿಮ ಘಟ್ಟಗಳು ಕನ್ಯಾಕುಮಾರಿ ಬಳಿ ಭಾರತದ ದಕ್ಷಿಣ ತುದಿಯಲ್ಲಿ ಮುಕ್ತಾಯಗೊಳ್ಳುತ್ತವೆ.

ಪಾಲಘಾಟ್ ತೆರಪಿನ ಮಾರ್ಗವಲ್ಲದೆ ಕೇರಳದ ಕ್ವಿಲಾನ್‌ನಿಂದ ತಮಿಳು ನಾಡಿನ ತಿನ್ನವೆಲ್ಲಿ ವರೆಗೆ ಹಾಕಿರುವ ರೈಲು ಮತ್ತು ರಸ್ತೆಮಾರ್ಗಗಳು ಭಾರತ ಪರ್ಯಾಯ ದ್ವೀಪದ ಪಶ್ಚಿಮ ಹಾಗೂ ಪೂರ್ವ ತೀರಗಳಿಗೆ ಸಂಪರ್ಕ ಕಲ್ಪಿಸಿವೆ. ಕಣ್ಣನ್ನೂರು ಹಾಗೂ ತೆಲ್ಲಿಚೇರಿಯಿಂದ ಕರ್ನಾಟಕದ ಬಯಲು ಸೀಮೆಗೆ ಪೆರುಂಬಾಡಿ ಮತ್ತು ಪೆರಿಯಕಣಿವೆ ಮಾರ್ಗಗಳಿವೆ. ಕೋಜಿಕೋಡಿ ನಿಂದ ನೀಲಗಿರಿಗೆ ವೈಯತ್ತಿರಿ–ಗೂಡಲೂರು ಘಾಟ್ ಮಾರ್ಗವಿದೆ.

ಪಶ್ಚಿಮ ಘಟ್ಟಗಳಲ್ಲಿ ಮನಮೋಹಕ ನೈಸರ್ಗಿಕ ದೃಶ್ಯಗಳಿವೆ. ಕರ್ನಾಟಕದ ಆಗುಂಬೆ ಘಾಟಿನ ಸೂರ್ಯಾಸ್ತದ ನೋಟ ಸುಂದರವಾದ್ದು, ಜೂನ್–ಸೆಪ್ಟೆಂಬರ್ ನಡುವೆ ಮುಂಗಾರು ಮಳೆ, ಕೇರಳ, ನೀಲಗಿರಿ, ಚಿಕ್ಕಮಗಳೂರು, ಶಿವಮೊಗ್ಗ ಪ್ರದೇಶಗಳ ದಟ್ಟಡವಿಗಳ ಭಾಗಗಳಲ್ಲಿ ಹೆಚ್ಚು ಮಳೆಯಾಗುತ್ತದೆ. ಆಗುಂಬೆಯಲ್ಲಿ ಅತ್ಯಂತ ಹೆಚ್ಚು ಮಳೆಯಾಗುತ್ತದೆ. ಪಶ್ಚಿಮಘಟ್ಟಗಳ ಉದ್ದಕ್ಕೂ ನಿತ್ಯ ಹಸುರಿನ ಕಾಡುಗಳಿವೆ. ದಟ್ಟಡವಿಗಳ ಬಿದಿರು, ತೇಗ ಹೊನ್ನೆ, ಶ್ರೀಗಂಧ ಮೊದಲಾದ ಮರಗಳಿವೆ. ಚಿಕ್ಕಮಂಗಳೂರು ಜಿಲ್ಲೆಯಿಂದ ಕೇರಳದವರೆಗೆ ಕಾಫಿ, ಚಹ, ಏಲಕ್ಕಿ, ಬಾಳೆ, ಮೆಣಸು, ಗೋಡಂಬಿ ಬೆಳೆಗಳಾಗುತ್ತವೆ. ಇಲ್ಲಿಯ ವನ್ಯಮೃಗಗಳು ಕಾಡುಕೋಣ, ಹುಲಿ, ಆನೆ, ಜಿಂಕೆ, ಡೊಂಕು ಕೊಂಬಿನ ನೀಲಗಿರಿ ಕಾಡುಕುರಿ.

ವನ್ಯಜೀವವಿಜ್ಞಾನಿಗಳು ಗುರುತಿಸುವ ಎಲ್ಲ ಐದು ಬಗೆಯ ಪರಿಸರ ವ್ಯೂಹವನ್ನು ಪಶ್ಚಿಮ ಘಟ್ಟಗಳಲ್ಲಿ ಕಾಣಬಹುದು. ನಿತ್ಯಹಸುರಿನ ಕಾಡುಗಳು ಒಂದೆಡೆಯಾದರೆ, ತೇವಪೂರಿತ ಪರ್ಣಪಾತಿ ಕಾಡುಗಳು, ಒಣ ಪರ್ಣಪಾತಿ ಕಾಡುಗಳು, ಕುರುಚಲು ಕಾಡುಗಳು, ಹುಲ್ಲುಗಾವಲು ಅಥವಾ ಶೊಲಾಗಳು ಇವೆ.

ಪಶ್ಚಿಮ ಘಟ್ಟಗಳು ಸುಲಭವಾಗಿ ದಾಟಲಾಗದ ಗೋಡೆಗಳಂತಿರುವುದರಿಂದ ಪಶ್ಚಿಮ ಕರಾವಳಿಯೊಂದಿಗೆ ಪೂರ್ವಭಾಗದ ಮೇಲೆ ಹಾಗೂ ಬಯಲುಸೀಮೆಗಳ ಕರಾವಳಿಯ ಸಂಪರ್ಕವಿಲ್ಲದ ಅಲ್ಲಿಯ ಜನರು ಪ್ರಾಚೀನ ಹೀಗಾಗಿ ತಮ್ಮವೇ ಸಂಸ್ಕೃತಿ ಭಾಷೆ ಹಾಗೂ ಆಚಾರಗಳನ್ನು ಬೆಳಸಿಕೊಂಡರು ಹೀಗಾಗಿ ಮಹಾರಾಷ್ಟ್ರ, ಕೊಂಕಣ, ತುಳು, ಮಲೆಯಾಳ ಹಾಗೂ ಕೊಡಗಿನ ಜನರ ಭಾಷೆಗಳೂ ನಡೆನುಡಿಗಳು ವೈಶಿಷ್ಟ್ಯಪೂರ್ಣವಾಗಿವೆ. ಅಳಿಯಸಂತಾನ ಪದ್ಧತಿ ತುಳುನಾಡಿನಿಂದ ದಕ್ಷಿಣದ ಕೇರಳದ ವರೆಗೆ ಹಬ್ಬಿತು. ನೀಲಗಿರಿಯಲ್ಲಿ ತೋಡರು ಕುರುಂಬರು, ಆನೈಮಲೈ ಅರಣ್ಯಗಳಲ್ಲಿ ಕಾಡರು, ಕರ್ನಾಟಕದ ಭಾಗದಲ್ಲಿ ಲಂಬಾಣಿ ಮೊದಲಾದ ಆದಿವಾಸಿಗಳು ವಾಸಿಸುತ್ತಾರೆ.

ಜೀವ ವೈವಿಧ್ಯದ ಬಿಸಿಚುಕ್ಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು ಅನೇಕ ವಿಶಿಷ್ಟ ಪ್ರಭೇದಗಳನ್ನು ಹೊಂದಿದೆ. ತೇಗ, ಮತ್ತಿ, ಹೊನ್ನೆ, ಸಾಗುವಾನಿ, ಬೀಟೆ, ಶ್ರೀಗಂಧ ಹೀಗೆ ಅನೇಕ ಬೆಲೆಬಾಳುವ ಮರಮುಟ್ಟುಗಳಿವೆ. ಉಪಉತ್ಪನ್ನಗಳನ್ನು ನೀಡುವಂತಹ ಶೀಗೆ, ಅಂಟುವಾಳ, ರಬ್ಬರ ಹಾಗೂ ಉರುವಲ ಸಸ್ಯಗಳು ಕಾಡಿನ ತುಂಬ ಇವೆ. ಪ್ರಾಣಿ ಪ್ರಪಂಚವೂ ಇಷ್ಟೇ ವೈವಿಧ್ಯಮಯವಾದುದು. ಇಡೀ ಪ್ರಾಣಿಸಾಮ್ರಾಜ್ಯದ ಎಲ್ಲ ವರ್ಗಗಳ ಒಂದಿಲ್ಲೊಂದು ಸದಸ್ಯಗಳು ಇಲ್ಲಿವೆ. ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ಜೀವ ಪ್ರಪಂಚ ಇಂದು ವಿವಿಧ ಯೋಜನೆಗಳಿಂದ, ಬೆಳೆವಣಿಗೆಗಳಿಂದ, ಕಾಡುಗಳ ಹಾಗೂ ಪರಿಸರ ನಾಶದಿಂದ, ವಿನಾಶದ ಹಾದಿ ತುಳಿಯ ತೊಡಗಿವೆ. ಸಿಂಹಬಾಲದ ಕೋತಿ–ಸಿಂಗಳೀಕ ಇಂಥ ಜೀವಿಗಳಲ್ಲೊಂದು. ಕೃಷ್ಣ ಮೃಗ, ನೀಲಗಿರಿ ತಹರ್, ಕಾಡು ಆಡು ಹೀಗೆ ಅನೇಕ ಸ್ತನಿಗಳು ವಿನಾಶದತ್ತ ಸಾಗಿವೆ. ಒಮ್ಮೆ ಬಹುಸಂಖ್ಯೆಯಲ್ಲಿದ್ದ ಹೆಬ್ಬಾವು, ಕಾಳಿಂಗ ಸರ್ಪಗಳಿಂದು ಅಪರೂಪವಾಗಿವೆ. ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರಿನಲ್ಲಿ ಮಾತ್ರ ಕಾಣಸಿಗುವ ಉಭಯಜೀವಿ ಇಕ್ತಿಯೊಫಿಸ್ ಇಂದು ವಿನಾಶದತ್ತ ಸಾಗಿದೆ. ಹಾಗೆಯೇ ಮಂಡೂಕ ಪ್ರಪಂಚದ ವಿಶಿಷ್ಟ ಜೀವಿ ಮರಿಹಾಕುವ ಕಪ್ಪೆ ಕೂಡ ಇಂದು ವಿರಳವಾಗುತ್ತಿದೆ. ***

**ಪಳೆಯುಳಿಕೆಗಳು:** ಹಿಂದೊಮ್ಮೆ ಜೀವಂತವಾಗಿದ್ದ ಪ್ರಾಣಿ ಅಥವಾ ಸಸ್ಯಗಳ ಗಡಸು ಭಾಗಗಳು ಅಥವಾ ಅವುಗಳ ಗುರುತುಗಳು ರಾಸಾಯನಿಕ ಅಥವಾ ಇತರ ಮಾರ್ಪಾಡುಗಳಿಗೆ ಒಳಗಾಗಿ ಆಯಾ ಪ್ರಾಣಿ, ಸಸ್ಯ ಅಥವ ಮಾನವನ ಅವಶೇಷವೆಂದು ಗುರುತಿಸಬಹುದಾದ ವಸ್ತುಗಳು (ಫಾಸಿಲ್ಸ್). ಜೀವ ಅವಶೇಷ, ಜೀವ್ಯವಶೇಷಗಳು ಪರ್ಯಾಯ ಪದಗಳು. ಫಾಸಿಲ್ ಪದ ಲ್ಯಾಟಿನ್ ಭಾಷೆಯಿಂದ ಬಂದದ್ದು. ಜೀವ ಅವಶೇಷಗಳ ಅಧ್ಯಯನ ಹಾಗೂ ಅವುಗಳ ಉಪಯುಕ್ತತೆಗಳನ್ನು ವಿವರಿಸುವ ವಿಜ್ಞಾನವೇ ಪ್ರಾಗ್ಜೀವ ವಿಜ್ಞಾನ. ಆಂಗ್ಲ ಭಾಷೆಯಲ್ಲಿ ಪೇಲಿಯಂಟಾಲಜಿ ಎನ್ನುವರು. ಪಳೆಯುಳಿಕೆಗಳು ಶಿಲೆಯಲ್ಲಿ, ಹಿಮ ಅಥವಾ ಅರಗಿನಲ್ಲಿ ಸಿಲುಕಿಕೊಂಡು ಅವಶೇಷವಾಗಿರಬಹುದು. ಪಳೆಯುಳಿಕೆಗಳು ಹಿಂದಿನ ಜೀವಿಗಳ ದಾಖಲೆಯನ್ನೊದಗಿಸುತ್ತವೆ. ಈ ದಾಖಲೆ ಬಹಳ ಅಪೂರ್ವವಾದುದು. ಭೂಕಾಲದ ಯಾವುದಾದರೊಂದು ಯುಗವೇ ಆದರೂ ಅಸಂಖ್ಯಾತ ಜೀವರಾಶಿಯಿಂದ ತುಂಬಿ ತುಳುಕುತ್ತಿತ್ತು. ಈ ಜೀವರಾಶಿಯ ಎಲ್ಲೊ ಅಲ್ಪಭಾಗ ಮಾತ್ರ ಪಳೆಯುಳಿಕೆಗಳಾಗಿ ದೊರೆಯಬಹುದು. ಇವು ಜೀವ ಅವಶೇಷಗಳಾಗಿ ಸಂರಕ್ಷಿತವಾದ ಮೇಲೂ ಭೂಸವೆತ ಮತ್ತು ಕೊರೆತಗಳಿಂದಾಗಿ ಬೇರೊಂದು ಸ್ಥಳಕ್ಕೆ ವರ್ಗಾವಣೆಯಾಗಿರಬಹುದು, ಇಲ್ಲವೆ ಸಂಪೂರ್ಣವಾಗಿ ನಶಿಸಿಹೋಗಿರಬಹುದು.

ಪಳೆಯುಳಿಕೆಗಳನ್ನು ಪ್ರೇತಗಳೆಂದೋ, ಚಿತ್ರಿತ ಶಿಲೆಗಳೆಂದೋ ನಿಸರ್ಗದ ಕ್ರೀಡೆ ಎಂದೋ ಅಥವಾ ಅಮಾನುಷ ಸೃಷ್ಟಿ ಎಂದೋ ನೋಡುತ್ತಿದ್ದ ಕಾಲವೂ ಇತ್ತು. ಅದರಲ್ಲೂ ಪ್ರಳಯ ವಾದದ ಬೆಂಬಲಿಗನಾದ ಕ್ಯೂವಿಯೇ (1769–1832) ಮತ್ತು ಅವನ ಅನುಯಾಯಿಗಳು ಇಂಥ ಕಲ್ಪನೆಯನ್ನಿಟ್ಟುಕೊಂಡಿದ್ದರು. ಆದರೆ ಹಟನ್ನನ ಅನಂತರ ಬಂದವರು ಅದೊಂದು ತಪ್ಪು ಕಲ್ಪನೆಯೆಂದು ಪಳೆಯುಳಿಕೆಗಳು ಇಂದು ಮುಂದೆ ಎಂದೆಂದೂ ಆಗುತ್ತಿರುವ ವಿದ್ಯಮಾನವೆಂದು ಏಕಪ್ರಕಾರತಾ ವಾದದಿಂದ ಸ್ಪಷ್ಟಪಡಿಸಿದರು. ಪ್ರಾಣಿ ಅಥವಾ ಸಸ್ಯ ಪಳೆಯುಳಿಕೆಯಾಗಲು ಎರಡು ಅಂಶಗಳು ಬಹುಮುಖ್ಯ. 1. ಜೀವಿಗಳ ದೇಹ ಗಡಸು ಅಥವಾ ಕಠಿಣ ಭಾಗಗಳನ್ನು ಪಡೆದಿರಬೇಕು. ಉದಾ: ಚಿಪ್ಪು, ಮೂಳೆ ಅಥವಾ ಕೊಂಬಿನಂಥ ವಸ್ತು. 2. ಪ್ರಾಣಿ ಅಥವಾ ಸಸ್ಯಗಳು ಗತಿಸಿದ ಮೇಲೆ ಅವನ್ನು ಕೊಳೆಯುವುದಕ್ಕಾಗಲಿ ಹುಳುಗಳು ತಿನ್ನುವುದಕ್ಕಾಗಲಿ ಬಿಡದೆ ಇಡೀ ಶರೀರ ಮಡ್ಡಿಯಿಂದ ಆವೃತಗೊಂಡು ಹೂತು ಸಮಾಧಿಯಾಗುವಂಥ ಅವಕಾಶವಿರಬೇಕು. ಇವು ಇಂದಿಗೂ ನಡೆಯುತ್ತಿರುವ ಪ್ರಾಕೃತಿಕ ಕ್ರಿಯೆಗಳು. ಭೂಸವೆತ, ಕೊರೆತ, ಸಂಚಯನಕಾರ್ಯ, ಭೂಕುಸಿತ, ಸಾಂಕ್ರಾಮಿಕ ರೋಗಗಳ ಹಾವಳಿ, ಭೂಕಂಪನ, ಪ್ರವಾಹಗಳು, ಅಗ್ನಿಪರ್ವತ, ನೀರ್ಗಲ್ಲ ನದಿಗಳೇ ಅಲ್ಲದೆ ಭೂರಾಸಾಯನಿಕ ಕಾರ್ಯಗಳು, ಸಿಕತೀಕರಣ, ಇಂಗಾಲೀಕರಣ ಸುಣ್ಣೀಕರಣ, ಖನಿಜಪೂರಕಗಳು, ಜಲಶಿಲಾ ಸಮುದಾಯಗಳಾಗುವಿಕೆ ಮೊದಲಾದ ಪ್ರಾಕೃತಿಕ ಚಟುವಟಿಕೆಗಳು ಕೋಟ್ಯಂತರ ವರ್ಷಗಳಿಂದಲೂ ಇಂದಿನ ತನಕ, ಅದರ ಪರಿಣಾಮ, ವ್ಯಾಪ್ತಿ ಮತ್ತು ತೀಕ್ಷ್ಣತೆಗಳು ಹೆಚ್ಚುಕಡಿಮೆಯಾಗಿದ್ದರೂ, ಸತತವಾಗಿ ನಡೆಯುತ್ತಿರುವ ಭೂ ಚಟುವಟಿಕೆಗಳು. ಈ ತತ್ತ್ವವನ್ನು ಹಟನ್, ಪ್ಲೇಫೇರ್ ಮುಂತಾದವರು ಪ್ರತಿಪಾದಿಸಿದ್ದಾರೆ. ಭೂವಿಜ್ಞಾನದ ಸರ್ವತೋಮುಖ ಅಭಿವೃದ್ಧಿಯನ್ನೂ ಅದರ ಬುನಾದಿಯನ್ನೂ ಈ ತತ್ವ ನವೀಕರಿಸಿತು.

ಪ್ರಾಣಿ ಅಥವಾ ಸಸ್ಯ ಪಳೆಯುಳಿಕೆಯಾಗಿ ಮಾರ್ಪಡಲು ಪ್ರಕೃತಿಯಲ್ಲಿ ಹಲವಾರು ವಿಧಾನಗಳಿವೆ. ಎಲ್ಲಕ್ಕಿಂತಲೂ ಅತಿಸರಳ ಹಾಗೂ ಸಾಮಾನ್ಯ ವಿಧಾನವೆಂದರೆ, ಸಾಗರ ತಳದಲ್ಲಿಯ ಸಂಚಯನ ರೀತಿ ಹಾಗೂ ಅದರಿಂದಾಗುವ ಅವಶೇಷೀಕರಣ ವಿಧಾನ. ಹಿಂದಿನ ಸಾಗರಗಳು ಇಂದಿನಂತೆ ಸೀಮಿತವಾಗಿರದೆ, ಹೆಚ್ಚು ವಿಶಾಲವಾಗಿದ್ದುವು. ಪ್ರಾಚೀನ ಕಾಲದಲ್ಲಿ ವಾಯುಗುಣ ಹೆಚ್ಚು ವೈಪರೀತ್ಯದಿಂದ ಕೂಡಿರಲಿಲ್ಲ. ಇಂದಿನಷ್ಟು ವೈವಿಧ್ಯಪೂರ್ಣವೂ ಆಗಿರಲಿಲ್ಲ. ಆದರೆ, ಭೂಇತಿಹಾಸದ ಪ್ರಾಚೀನ ಕಾಲದಿಂದ ವರ್ತಮಾನಕ್ಕೆ ಬಂದಂತೆಲ್ಲ ಸಾಗರಗಳು ಹಿಂದೆ ಸರಿದು ಸಿಹಿನೀರಿನ ಅಥವ ಹಿಮನದಿಯ ಹಾಗೂ ಅಗ್ನಿಪರ್ವತಗಳ ಸವೆತ ಸಂಚಯನ ಕಾರ್ಯಗಳು ವೃದ್ಧಿಯಾಗಿ ಅವುಗಳ ಪ್ರಭಾವವನ್ನು ಅವಶೇಷಗಳಲ್ಲಿ ಗಮನಾರ್ಹವಾಗಿ ಕಾಣಬಹುದು.

ಅವಶೇಷೀಕರಣದಲ್ಲಿ ಹಲವಾರು ವಿಧ : ಪ್ರಾಣಿ ಅಥವಾ ಸಸ್ಯ, ಸಂಪೂರ್ಣವಾಗಿ ಸಂರಕ್ಷಿತವಾಗಿರಬಹುದು, ಸಿಕತೀಕರಣ ಹೊಂದಿರಬಹುದು, ಮುದ್ರಿತ ರೂಪದಲ್ಲಿರಬಹುದು ಅಥವಾ ಅಚ್ಚೊತ್ತಿರಬಹುದು, ಪಾದದ ಗುರುತುಗಳು ಮಾತ್ರ ಇರಬಹುದು, ಇಂಗಾಲೀಕರಣವಾಗಿರಬಹುದು, ಸುಣ್ಣೀಕರಣವಾಗಿರಬಹುದು.

ಶಾಶ್ವತವಾಗಿ ಹಿಮದಿಂದ ಕೂಡಿರುವ ಸೈಬೀರಿಯ ಮತ್ತು ಅಲಾಸ್ಕಗಳ ಭೂಮಿಯಲ್ಲಿ ಜೂಲು ಆನೆಗಳು (ಮ್ಯಾಮತ್) ಹುದುಗಿಕೊಂಡಿವೆ. ಈ ಜೂಲು ಆನೆಗಳು ಹಿಂದೊಮ್ಮೆ 60 ಸಾವಿರ ವರ್ಷಗಳ ಹಿಂದೆ (ಪ್ಲಿಯೊಸೀನ್ ಯುಗದಲ್ಲಿ) ನದಿಯ ದಡದಲ್ಲಿ ಹುಲ್ಲನ್ನು ಹುಡುಕುತ್ತಾ ಮುಂದೆ ಮುಂದೆ ಸಾಗಿ ನದಿ ದಂಡೆಯ ತುದಿಯವರೆಗೂ ನಡೆದಿರಬೇಕು. ಕೊನೆಗೆ ಅವುಗಳ ದೇಹದ ಭಾರದಿಂದ ಹಿಮನದಿಯ ದಡ ಕುಸಿದಿರಬೇಕು. ನದಿಯ ಬುರುಜಿಗೆ ಆಕಸ್ಮಿಕವಾಗಿ ಸಿಲುಕಿಕೊಂಡ ಆನೆ, ತಾನು ತಿನ್ನಲೆಂದು ಕಬಳಿಸಿದ ಹುಲ್ಲಿನ ಉಂಡೆಯನ್ನು ದವಡೆಯಲ್ಲಿ ಇಟ್ಟುಕೊಂಡೇ ಇದ್ದು ಉಸಿರುಗಟ್ಟಿ, ಒದ್ದಾಡಿ, ಕೊನೆಯುಸಿರೆಳೆದಿರಬೇಕು. ಇಂಥ ಜೂಲು ಆನೆಗಳ ರೋಮ, ಮಾಂಸಖಂಡ, ಹೆಪ್ಪುಗಟ್ಟಿದ ರಕ್ತಗಳನ್ನೂ ಅದರ ದುರ್ನಾತವನ್ನೂ ಒಳಗೊಂಡಿರುವ ಪಳೆಯುಳಿಕೆಗಳನ್ನು ಇಂದಿಗೂ ಸೈಬೀರಿಯ, ಅಲಾಸ್ಕ ಹಿಮನದಿ ಪ್ರದೇಶಗಳಲ್ಲಿ ಕಾಣಬಹುದು.

ಸಿಕತೀಕರಣ : ಸಂಚಯನದಲ್ಲಿ ಹೆಚ್ಚು ಸಿಕತವಿದ್ದು ಮತ್ತು ಕಾಲಾವಕಾಶಗಳಿದ್ದಲ್ಲಿ ಪ್ರಾಣಿ ಅಥವಾ ಸಸ್ಯಗಳ ಜೀವಕಣಗಳು ನಶಿಸಿದಂತೆಲ್ಲ ಆ ಸ್ಥಳಕ್ಕೆ ಬದಲು ಸರಿಯಾದ ಆಕಾರ ಮತ್ತು ರಚನೆಗಳನ್ನು ಅನುಸರಿಸಿ ಸಿಕತದ ಕಣಗಳು ಒಂದಾದ ಮೇಲೊಂದರಂತೆ ಆಕ್ರಮಿಸಿ ಪ್ರಾಣಿ ಮತ್ತು ಸಸ್ಯಗಳೇ ಶಿಲೆಯಾಗಿ ಪರಿವರ್ತಿತವಾಗುವುವು. ಈ ಪ್ರಕ್ರಿಯೆಗೆ ರಾಸಾಯನಿಕ ಕ್ರಿಯೆಗಳು ಸಹಾಯವೀಯುತ್ತವೆ. ಉದಾಹರಣೆಗೆ ಶಿಲೆಯಾಗಿ ಬದಲಾದ ಮರವೊಂದರ ಸೂಕ್ಷ್ಮತೆಳುಪೊರೆಯನ್ನೂ ಜೀವಂತ ಮರವೊಂದರ ತೆಳುಪೊರೆಯನ್ನೂ ಸೂಕ್ಷ್ಮದರ್ಶಕದಲ್ಲಿ ಒಟ್ಟಿಗೆ ಪರೀಕ್ಷಿಸಿದಾಗ ಜೀವಂತ ಮರದ ಜೀವ ಕಣಗಳಲ್ಲಿಯ ಜೀವರಸವನ್ನು ಬಿಟ್ಟರೆ ಎರಡೂ ಒಂದೇ ಎಂದು ಹೇಳುವಷ್ಟರ ಮಟ್ಟಿನ ಹೋಲಿಕೆಯನ್ನು ಕಾಣಬಹುದು. ಸಿಕತೀಕರಣ ಹೊಂದಿದ ಮೂಳೆಯ ಪಳೆಯುಳಿಕೆಗೂ ಜೀವಂತ ಪ್ರಾಣಿಯಿಂದ ತೆಗೆದ ಮೂಳೆಯ ತೆಳುಪೊರೆಗೂ ಯಾವ ರಚನಾ ವ್ಯತ್ಯಾಸ ಇರುವುದಿಲ್ಲ. ಸಿಕತೀಕರಣದಲ್ಲಿ ಕೆಲವೊಮ್ಮೆ ಅತಿಸೂಕ್ಷ್ಮ ವಿವರವನ್ನೂ ಕಾಣಬಹುದು. ಉದಾಹರಣೆಗೆ ಭಾರತದಲ್ಲಿ ಜುರಾಸಿಕ್ ಯುಗಕ್ಕೆ ಸೇರಿದ ರಾಜಮಹಲ್ ಅಂತರಟ್ರಾಪ್ ಪದರದ ಚರ್ಟ್ ಶಿಲೆಯಿಂದ ವಿಷ್ಣು ಮಿತ್ರೆಯವರು (1969) ಕ್ರೋಮೋಸೋಮ್ ಅವಶೇಷವನ್ನು ಪ್ರಕಟಿಸಿದರು. ಹಾಗೆಯೇ ಬೀರ್‌ಬಲ್ ಸಹಾನಿಯವರು 1957ರಲ್ಲಿ ಚೇಂದ್ವಾರದ ಅಂತರಟ್ರಾಪ್ ಚರ್ಟ್‌ನಿಂದ ಫರ್ನ್‌ಜಾತಿಗೆ ಸೇರಿದ ಅಝೋಲ ಇಂಟರ್ ಟ್ರೇಪಿಯ ಎಂಬ ಸೂಕ್ಷ್ಮಗಾತ್ರದ ಗಿಡದ ಪಳೆಯುಳಿಕೆಯನ್ನು ವಿವರಿಸಿದರು. ಇದು ಇಂದಿಗೂ ಪ್ರಪಂಚದ ಅತ್ಯಂತ ಶ್ರೇಷ್ಠ ದರ್ಜೆಯ ಪಳೆಯುಳಿಕೆಯೆನಿಸಿದೆ. ಕರ್ನಾಟಕದ ಗುರುಮಿಟ್ಕಲ್‌ನ ಟ್ರಾಪ್ ಚರ್ಟ್ ಶಿಲೆಯಿಂದ ಕ್ಯಾರೊಫೈಟ್ ಸಸ್ಯದ (ಸೀಗಡಿ ಸತ್ತೆ) ಗಂಡು ಮತ್ತು ಹೆಣ್ಣು ಜನನೇಂದ್ರಿಯಗಳುಳ್ಳ ಪಳೆಯುಳಿಕೆ ಪತ್ತೆಯಾಗಿದೆ.



ವಿವಿಧ ಕ್ರಿಯೆಗಳಿಂದಾದ ಪಳೆಯುಳಿಕೆಗಳು.

ಮುದ್ರಿತ ಅಥವ ಅಚ್ಚೊತ್ತಿರಬಹುದಾದ ಪಳೆಯುಳಿಕೆಗಳು : ಇವು ಹೇರಳವಾಗಿ ದೊರೆಯುತ್ತವೆ. ಮೀನಿನ ಮೈಫಲಕಗಳು ಶಿಲೆಯ ಮೇಲೆ ಅಚ್ಚೊತ್ತಿರುತ್ತವೆ. ಅಮೆರಿಕದ ಕೊಲರ್‍ಯಾಡೋ ಜೇಡುಶಿಲೆಯ ಮೇಲೆ ಆಲಿಗೊಸೀನ್ ಕಾಲದ (35 ಕೋಟಿವರ್ಷ ಹಿಂದಿನ) ಚಿಟ್ಟೆಯ ಇಡೀ ಶರೀರ, ರೆಕ್ಕೆ, ಮೀಸೆ ಹಾಗೂ ರೆಕ್ಕೆಯಲ್ಲಿರುವ ನರಬಳ್ಳಿಯೊಂದಿಗೆ ಮುದ್ರಿತವಾಗಿದೆ. ಈ ಚಿಟ್ಟೆ ಪಳೆಯುಳಿಕೆಯ ಹೆಸರು ಪೋಡ್ರಿಯಾಸ್ ಪೆರ್ಸಿಪೋನ್ ಎಂದು. ಕೆಲವು ಉದರಪಾದಿಗಳ, ಬಾಹುಪಾದಿಗಳ ಮತ್ತು ಅಮೊನೈಟ್ ಮುಂತಾದ ಪ್ರಾಣಿಗಳ ಹೊರ ಮತ್ತು ಒಳ ಅಚ್ಚುಗಳೂ ದೊರೆತಿವೆ.

ಪಾದದ ಗುರುತುಗಳು : ದೈತ್ಯೋರಗಗಳು ಜುರಾಸಿಕ್ ಮತ್ತು ಕ್ರಿಟೇಷಿಯಸ್ ಕಾಲದಲ್ಲಿ ಹೇರಳವಾಗಿದ್ದವು. ಇವು ಹಸಿಮಣ್ಣಿನ ಜಲಾನಯನ ಪ್ರದೇಶಗಳಲ್ಲೊ, ಹಸಿ ಜೇಡು, ಶಿಲೆ ಹಾಗೂ ಮರಳು ಪದರಗಳ ಮೇಲೂ ಓಡಾಡಿದಾಗ ಇವುಗಳ ದೇಹದ ಪೂರ್ಣ ಭಾರ (ಅಂದರೆ 60–100 ಟನ್‌ಗಳಷ್ಟು) ಪಾದಗಳ ಮೇಲೆ ಬಿದ್ದು ತತ್ಫಲವಾಗಿ ಉಂಟಾದ ಗುರುತುಗಳು ದೈತ್ಯಾಕಾರದ ಬೋಗುಣಿಗಳಂತೆ ಈಗಲೂ ಪರ್ಬಿಕ್ ಸುಣ್ಣಶಿಲೆಗಳಲ್ಲೂ ಸಸೆಕ್ಸ್, ಮಾಂಟಾನಾ ಹಾಗೂ ಟೆಕ್ಸಾಸ್‌ಗಳಲ್ಲೂ ದೊರೆತಿವೆ.

ಇಂಗಾಲೀಕರಣ : ಕೆಲವು ಪ್ರಾಣಿಗಳು ಹಾಗೂ ಬಹುಪಾಲು ಸಸ್ಯಗಳು ಇಂಗಾಲೀಕರಣಕ್ಕೆ ಒಳಗಾಗಿ ತಮ್ಮ ರಚನೆಯನ್ನು ಹಾಗೂ ರೂಪವನ್ನು ಪಳೆಯುಳಿಕೆಗಳಲ್ಲಿ ಉಳಿಸಿಕೊಂಡಿವೆ. ಉದಾಹರಣೆಗೆ ಗೊಂಡ್ವಾನ ಶಿಲೆಗಳ (300 ಕೋಟಿ ವರ್ಷ) ಕಲ್ಲಿದ್ದಲಿನಲ್ಲಿ ದೊರೆಯುವ ಪುಷ್ಪ ಪರಾಗ ಮತ್ತು ಮರಗಳ ದಿಮ್ಮಿಗಳು ಹಾಗೂ ಅರೆಬೆಂದ ಪೀಟ್ ಇದ್ದಿಲುಗಳು ಈ ವರ್ಗಕ್ಕೆ ಸೇರಿದ ಪಳೆಯುಳಿಕೆಗಳು.

ಸುಣ್ಣೀಕರಣ : ಕೆಲವು ಪ್ರಾಣಿಗಳು ಮತ್ತು ಸಸ್ಯಗಳು ನೀರಿನಲ್ಲಿರುವ ಸುಣ್ಣಾಂಶವನ್ನು ಹೀರಿಕೊಂಡು ಹೊರಕಂಕಾಲವನ್ನು ಕಟ್ಟಿಕೊಳ್ಳುತ್ತವೆ. ಸಮುದ್ರವಾಸಿ ಸಿಂಪಿಗಳು, ಹವಳಗಳು, ಶೈವಲಗಳು ಯಥೇಚ್ಛವಾಗಿ ದೊರೆಯುವ ಸುಣ್ಣಾಂಶವನ್ನು ತಮ್ಮ ದೇಹದಲ್ಲಿ ಅಳವಡಿಸಿಕೊಂಡು, ಗತಿಸಿದ ಮೇಲೆ ಸುಣ್ಣ ಶಿಲೆಗಳಾಗುತ್ತವೆ. ಇಂಥ ಶಿಲಾಸ್ತೋಮಗಳು ಅರಿಯೊಲೂರಿನ ತಿರುಚಿನಾಪಳ್ಳಿ ಶಿಲಾಸ್ತೋಮದಲ್ಲಿ ಇವೆ. ಇದೇ ಕಾಲದ (ಕ್ರಿಟೇಷಿಯಸ್) ಕಲ್ಲಗುಡಿ ಸುಣ್ಣಶಿಲೆ ಸಿಮೆಂಟ್ ಕಾರ್ಖಾನೆಗೆ ಅವಶ್ಯವಾಗಿ ತಯಾರಿಕೆಗೆ ಬೇಕಾಗಿರುವ ಮೂಲವಸ್ತು ಎನಿಸಿದೆ. ಈ ಶಿಲೆ ಹವಳ ಮತ್ತು ಕೆಂಪು ಶೈವಲಗಳಿಂದಲೇ ಆದದ್ದು.

ಪಳೆಯುಳಿಕೆಗಳು ಮೇಲೆ ವಿವರಿಸಿದ ಹಲವಾರು ಸಂರಕ್ಷಣಾವಿಧಾನಗಳಿಂದ ಅಲ್ಲದೆ ಅರಗು ಮತ್ತು ರಾಳಗಳಲ್ಲೂ ಪೂರ್ಣ ಸಂರಕ್ಷಿತವಾಗಿರಬಹುದು. ಉದಾಹರಣೆಗೆ ಬಾಲ್ಟಿಕ್ ಪ್ರದೇಶದಲ್ಲಿ ದೊರೆಯುವ ಅರಗಿನಲ್ಲಿ ಅಣಬೆ (ಆಗ್ಯಾರಿಕಸ್ ಮೆಲನೋಟಸ್) ಹಾಗೂ ಸೊಳ್ಳೆಗಳು (ಇಗನೋಟಿಯಮ್ ಮೈನ್ಯೂಟಮ್) ಸಂರಕ್ಷಿತವಾಗಿ ಉಳಿದಿವೆ. ಇವು ಆಲಿಗೋಸಿನ್ ಯುಗದವು ಎಂದು ನಿರ್ಧರಿಸಲಾಗಿದೆ.

ಪಳೆಯುಳಿಕೆಗಳನ್ನು ವರ್ಗೀಕರಿಸಿ ವಿವರಿಸುವಲ್ಲಿ ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನಗಳಲ್ಲಿ ಬಳಸುವ ದ್ವಿನಾಮಕ ಪದ್ಧತಿಯನ್ನೇ ಬಳಸಲಾಗುತ್ತದೆ. ಪಳೆಯುಳಿಕೆಗಳನ್ನು ಅನ್ವರ್ಥವಾಗಿ ವರ್ಗೀಕರಿಸಿದೆ. ಇವುಗಳಲ್ಲಿ ಮುಖ್ಯವಾದವು ಸೂಚಿ ಪಳೆಯುಳಿಕೆ, ವಲಯ ಪಳೆಯುಳಿಕೆ, ಸಂಶ್ಲೇಷಕ ಪಳೆಯುಳಿಕೆ, ಗತವಂಶಿ ಪಳೆಯುಳಿಕೆ, ಜೀವಂತ ಪಳೆಯುಳಿಕೆ, ಅಜ್ಞಾತ ಪಳೆಯುಳಿಕೆ, ದೊಡ್ಡ ಪಳೆಯುಳಿಕೆ, ಸೂಕ್ಷ್ಮ ಪಳೆಯುಳಿಕೆ, ಮಿಥ್ಯಾಪಳೆಯುಳಿಕೆ, ಚಿರಸ್ಥಾಯಿ ಪಳೆಯುಳಿಕೆ ಇತ್ಯಾದಿ.



ಸೂಕ್ಷ್ಮ ಪಳೆಯುಳಿಕೆಗಳು
A. ಟೆರಾಪೋಡ್, B. ಡೈಆಟಮ್, C. ಕಾಕೊಲಿಥೊಫೊರಿಡ್,
D. ಆಸ್ಟ್ರಕೋಡ, E. ಸ್ಪಿಕ್ಯೂಲು (ಸ್ಪಂಜು ಪ್ರಾಣಿಯ)

ಪ್ರಪಂಚದ ಪಳೆಯುಳಿಕೆಗಳನ್ನೆಲ್ಲ ಗುರುತಿಸಿ, ಭೂವಿಜ್ಞಾನಿಗಳು ಭೂ ಇತಿಹಾಸದ ಕೋಷ್ಟಕವನ್ನು ರಚಿಸಿದ್ದಾರೆ. ಇದರ ಮೂಲಭೂತ ತತ್ತ್ವವನ್ನು ಬ್ರಿಟಿಷ್ ಭೂವಿಜ್ಞಾನಿ ವಿಲಿಯಮ್ ಸ್ಮಿತ್ (1769–1839) ಪ್ರತಿಪಾದಿಸಿದ. ಆ ತತ್ತ್ವವೇ ಪ್ರಾಣಿವರ್ಗಗಳ ಕ್ರಮಾನುಗತ ಪರಂಪರತೆಯ ನಿಯಮ. ಈ ನಿಯಮದ ಪ್ರಕಾರ, ಯಾವುದಾದರೊಂದು ಜಲಜಶಿಲಾ ಪೇರಿಕೆಯಲ್ಲಿ ಕೆಳಪದರಗಳಲ್ಲಿಯ ಪಳೆಯುಳಿಕೆಗಳು ಎಂದಿಗೂ ಮೇಲ್ಪದರದ ಪಳೆಯುಳಿಕೆಗಳಿಗಿಂತ ಪುರಾತನವಾದವಾಗಲಿ ಹೆಚ್ಚು ವಿಕಸಿತವಾದವಾಗಲಿ ಅಲ್ಲ. ಈ ನಿಯಮವನ್ನಾಧರಿಸಿ ಪ್ರಪಂಚದ ಜಲಶಿಲಾ ಪೇರಿಕೆಯಲ್ಲಿಯ ಪಳೆಯುಳಿಕೆಗಳನ್ನು ಗುರುತಿಸಿ ಅವುಗಳ ವಯೋಮಿತಿ ಮತ್ತು ನಿರ್ದಿಷ್ಟ ಕಾಲಗಳನ್ನು ಸೂಚಿಸಲಾಗಿದೆ. ಆದುದರಿಂದ ಪಳೆಯುಳಿಕೆಗಳು ಭೂ ಇತಿಹಾಸ ನಿರ್ಧಾರಕ್ಕೆ ಉಪಯುಕ್ತವಾಗಿವೆ. ಅವುಗಳಲ್ಲೂ ಸೂಚಿ ಪಳೆಯುಳಿಕೆಗಳು, ಕೆಲವೇ ಯುಗದಲ್ಲಿ ಮಾತ್ರವಿದ್ದು ನಿರ್ದಿಷ್ಟ ಕಾಲವನ್ನು ಸೂಚಿಸುತ್ತವೆ. ಉದಾಹರಣೆಗೆ ಗೋನಿಯಟೈಟಿಸ್ (ಅಮೊನೈಟ್) ಕೆಳಗಣ ಕಾರ್ಬಾನಿಫೆರಸ್ ಯುಗಕ್ಕೆ ಸೀಮಿತವಾದುದು. ಸೆರಾಟೈಟಿಸ್, ಟ್ರಿಯಾಸಿಕ್ ಯುಗಕ್ಕೆ, ನಮ್ಮುಲೈಟಿಸ್ ಇಯೋಸೀನ್ ಕಾಲಕ್ಕೆ ಸೀಮಿತವಾಗಿವೆ. ಪಳೆಯುಳಿಕೆಗಳಿಂದ ಕಾಲನಿರ್ಣಯ ಹೇಗೋ ಹಾಗೆಯೇ ಕಲ್ಲೆಣ್ಣೆಯ (ಪೆಟ್ರೋಲಿಯಂ) ಅನ್ವೇಷಣೆಯೂ ಸುಗಮ. ಅಲ್ಲದೆ ಕೆಲವು ಖನಿಜಗಳ ಅನ್ವೇಷಣೆಯನ್ನೂ ಮಾಡಬಹುದು. ವಿಕಾಸ ತತ್ತ್ವಕ್ಕೆ ಪಳೆಯುಳಿಕೆಗಳೇ ಮೂಲ. ಹಿಂದಿನ ವಾಯುಮಂಡಲವನ್ನು ತಿಳಿಯಲು ಸಹ ಇವು ಮುಖ್ಯ. ಗತ ಭೂವಿವರಣೆ, ಗತವಾಯುಗುಣ ಮತ್ತು ಖಂಡಗಳ ಅಲೆತದ ಅಧ್ಯಯನದಲ್ಲಿ ಪಳೆಯುಳಿಕೆಗಳು ಪ್ರಧಾನ ಪಾತ್ರವಹಿಸಿವೆ. ಪಳೆಯುಳಿಕೆಗಳ ಸಂಗ್ರಹಣೆಗೆ ಅವನ್ನು ಸಂಸ್ಕರಿಸಿ ಸಂಗ್ರಹಾಲಯದಲ್ಲಿ ಇಡುವುದಕ್ಕೆ, ತಾಂತ್ರಿಕ ಜ್ಞಾನದ ಅವಶ್ಯಕತೆ ಇದೆ. ಪಾಶ್ಚಾತ್ಯ ದೇಶಗಳ ಪ್ರತಿ ನಗರದಲ್ಲಿ ಪಳೆಯುಳಿಕೆಗಳ ಸಂಗ್ರಹವೂ ಸ್ಥಳೀಯ ಹಾಗೂ ಪ್ರಪಂಚದ ವಿವಿಧ ಭಾಗಗಳಿಂದ ತರಿಸಿಕೊಂಡ ಅವಶೇಷಗಳ ಪಟ್ಟಿಯೂ ಇದ್ದು ಪಳೆಯುಳಿಕೆಗಳನ್ನು ಅವು ಹಿಂದೆ ಬದುಕಿದ್ದಾಗ ಯಾವ ಸ್ಥಿತಿಯಲ್ಲಿದ್ದುವೋ ಅಂತಹದೇ ವಾತಾವರಣವನ್ನು ಕಲ್ಪಿಸಿ ಪ್ರದರ್ಶಿಸುವ ಕ್ರಮವನ್ನು ಕಾಣಬಹುದು. ಇತ್ತೀಚೆಗೆ ಭಾರತದಲ್ಲೂ ಭಾರತೀಯ ಭೂವೈಜ್ಞಾನಿಕ ಸರ್ವೆ (ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ) ಪಳೆಯುಳಿಕೆಗಳ ಬೃಹತ್ ಸಂಗ್ರಹಣೆಯನ್ನು ಕೈಗೊಂಡಿರುವುದಲ್ಲದೆ ಪಳೆಯುಳಿಕೆಗಳು ದೊರೆಯುವ ಆಯಾ ಸ್ಥಳಗಳಲ್ಲಿ ಭೂವೈಜ್ಞಾನಿಕ ಉದ್ಯಾನಗಳನ್ನು ನಿರ್ಮಿಸಿದೆ. ಇವುಗಳ ವಿವರಣೆಯನ್ನು ನೀಡಲು ನುರಿತ ತಾಂತ್ರಿಕ ವರ್ಗಇದೆ. ಇಂಥ ರಾಷ್ಟ್ರೀಯ ಶಿಲೋದ್ಯಾನಗಳನ್ನು ಅರಿಯಲೂರು (ತಿರುಚಿನಾಪಳ್ಳಿ, ತಮಿಳುನಾಡು), ತಿರುವೇಕ್ಕೆರೈ (ಪಾಂಡಿಚೆರಿ), ಚಂಡೀಘಡ, ತಿರುಪತಿ ಬೆಟ್ಟ(ಆಂಧ್ರ), ಮರಡಹಳ್ಳಿ (ಚಿತ್ರದುರ್ಗ–ಕರ್ನಾಟಕ) ಮುಂತಾದ ಕಡೆಗಳಲ್ಲಿ ಕಾಣಬಹುದು. ಅರಿಯಲೂರಿನ ಹತ್ತಿರವಿರುವ ಸಾತನೂರು ರಾಷ್ಟ್ರೀಯ ಶಿಲೋದ್ಯಾನದಲ್ಲಿ ಸು. 40 ಕೋಟಿ ವರ್ಷಗಳ ಹಿಂದೆ ಜೀವಂತವಾಗಿದ್ದ 16 ಮೀ ಉದ್ದ, 3 ಮೀ ವ್ಯಾಸವುಳ್ಳ ಹೆಮ್ಮರದ ಇಡೀ ಕಾಂಡ ಶಿಲಾರೂಪದ ಪಳೆಯುಳಿಕೆ ಇದೆ. ಪಾಂಡಿಚೆರಿಗೆ ಸಮೀಪದಲ್ಲಿರುವ ತಿರುವೇಕ್ಕೆರೈಯಲ್ಲಿ ಇಂಥ ಶಿಲೆಗಳ ಕಾಡನ್ನೇ ನೋಡಬಹುದು. ಅರಿಯಲೂರಿನ ಸುತ್ತಮುತ್ತಲ ಕುನ್ನಮ್, ಪೆಲಂಸೆ, ಕಾರೈ ಮುಂತಾದ ಹಳ್ಳಿಗಳಲ್ಲಿ ಸಾಗರವಾಸಿ ಸಿಂಪಿಗಳ, ಮೃದ್ವಂಗಿಗಳ, ಅಮೋನೈಟ್‌ಗಳ ಅಸಂಖ್ಯಾತ ಪಳೆಯುಳಿಕೆಗಳನ್ನು ಇಂದಿಗೂ ಶೇಖರಿಸಬಹುದು. 60 ಕೋಟಿ ವರ್ಷಗಳ ಹಿಂದಿನ ಬಂಡಿಗಾಲಿ ಗಾತ್ರದ ಅಮೋನೈಟ್‌ಗಳನ್ನು (ಸಾಲಿಗ್ರಾಮ) ಪೆಲಂಸೆ ಎಂಬಲ್ಲಿ ನೋಡಬಹುದು. ಅರಿಯಲೂರಿಗೆ 16 ಕಿಮೀ ದೂರದಲ್ಲಿರುವ ಕಾರೈಯಲ್ಲಿ ಗೊಂಡ್ವಾನ ಯುಗಕ್ಕೆ ಸೇರಿದ 300 ಕೋಟಿ ವರ್ಷ ಹಿಂದಿನ ಪ್ಟಿಲೋಫಿಲ್ಲಮ್ ಸಸ್ಯದ ಪಳೆಯುಳಿಕೆ ಇದೆ. ಚಂಡೀಘಡದ ಹತ್ತಿರವಿರುವ ಪಿಂಜೋರ್‌ನಲ್ಲಿ 70 ಸಾವಿರ ವರ್ಷ ಹಿಂದಿನ ಆಮೆಗಳ ಪಳೆಯುಳಿಕೆ ಹಾಗೂ ಆನೆ, ಜಿರಾಫೆ ಮತ್ತು ಆದಿಮಾನವನ ತಲೆಬುರುಡೆ ಮತ್ತು ಮೂಳೆ ಅವಶೇಷಗಳನ್ನು ನೋಡಬಹುದು. ಹೈದರಾಬಾದಿನ ಸಮೀಪದ ಅದಿಲಾಬಾದಿನಲ್ಲಿರುವ ಬೃಹತ್ ಪೆಡಂಭೂತ ಅಥವಾ ದೈತ್ಯೋರಗದ ಅವಶೇಷವಂತೂ ವಿಸ್ಮಯಕಾರಿಯಾಗಿದೆ. ಸು. 20 ಮೀ ಉದ್ದದ ಈ ಉರಗ ಪಳೆಯುಳಿಕೆಯಾಗಿ ಕಲ್ಲಾಗಿ ಮಲಗಿದೆ. ಇದರ ಮೂಳೆಗಳನ್ನು ಎರಡು ಲಾರಿಗಳಲ್ಲಿ ತುಂಬಬಹುದು ಎಂದರೆ ಇದರ ಗಾತ್ರವನ್ನು ಊಹಿಸಬಹುದು.

ಕರ್ನಾಟಕದಲ್ಲೂ ಪಳೆಯುಳಿಕೆಗಳಿಗೇನೂ ಕೊರತೆಯಿಲ್ಲ. ಜಗತ್ತಿನ ಅತಿ ಪುರಾತನ ಪ್ರಸ್ಥಭೂಮಿಯಲ್ಲಿ ಕರ್ನಾಟಕವೂ ಒಂದು. ಆಶ್ಚರ್ಯವೆಂದರೆ, ಇಂಥ ಅತ್ಯಂತ ಹಳೆಯ ಶಿಲೆಗಳಲ್ಲೂ (3200 ಕೋಟಿ ವರ್ಷ ವಯಸ್ಸಿನ) ಅವಶೇಷಗಳಿವೆ. ಮೈಸೂರು ಜಿಲ್ಲೆಯ ಸರಗೂರಿನ ಶಿಲೆಗಳಲ್ಲಿ ದೊರೆಯುವ ಜೈವಿಕ ರಚನೆಗಳ ಹಾಗೂ ಶೈವಲಗಳ ಆಧಾರದ ಮೇಲೆ ಈ ಶಿಲೆಗಳ ವಯಸ್ಸು 3400 ಕೋಟಿ ವರ್ಷಗಳೆಂದೂ, ಇವು ದಕ್ಷಿಣ ಆಫ್ರಿಕದ ಅನ್ವರ್‌ವಾಕ್ ಸಮುದಾಯವನ್ನು ಹೋಲುವುದೆಂದೂ ಗೊತ್ತುಪಡಿಸಲಾಗಿದೆ. ಅಂತೆಯೇ ಬಿಜಾಪುರ ಜಿಲ್ಲೆಯ ಕಲಾದಗಿಯ ಶಿಲಾಸ್ತೋಮದಲ್ಲಿ ಸ್ಟ್ರೋಮ್ಯಾಟೊಲೈಟ್ ಶೈವಲಗಳನ್ನು ಪತ್ತೆಹಚ್ಚಲಾಗಿದೆ. ಗುಲ್ಬರ್ಗ ಹಾಗೂ ಯಾದಗಿರಿಗೆ ಸಮೀಪದಲ್ಲಿರುವ

ಗುರುಮಿಟ್ಕಲ್‌ನ ಅಂತರ ಟ್ರಾಪ್ ಶಿಲಾಪದರಗಳಿಂದ ಅತ್ಯಂತ ಉತ್ಕೃಷ್ಟವಾದ ಸೂಕ್ಷ್ಮಗಾತ್ರದ ಸಿಕತೀಕರಣ ಹೊಂದಿದ ಸಸ್ಯ ಹಾಗೂ ಪ್ರಾಣಿಗಳ ಪಳೆಯುಳಿಕೆಗಳ ಪತ್ತೆಯಾಗಿದೆ. ಪ್ರಪಂಚದಲ್ಲಿ ಮೊತ್ತಮೊದಲ ಬಾರಿಗೆ ಸೀಗಡಿ ಸತ್ತೆಯ (ಕ್ಯಾರೋಫೈಟ್) ಸಸ್ಯಗಳ ಗಂಡು ಮತ್ತು ಹೆಣ್ಣು ಜನನೇಂದ್ರಿಯ ಭಾಗಗಳನ್ನೊಳಗೊಂಡ ಕ್ಯಾರ ಗುರುಮಟ್ಕ ಎಂಬ ಹೊಸಜಾತಿಯನ್ನು ಹಾಗೂ ಇದೇ ಪ್ರಕಾರಕ್ಕೆ ಸೇರಿದ ನೈಟೆಲ ಎಂಬ ಸಸ್ಯಜಾತಿಯ ಅತಿವಿರಳ ಪಳೆಯುಳಿಕೆಗಳನ್ನೂ ಗುರುಮಿಟ್ಕಲಿನ ಚೆರ್ಟ್‌ಶಿಲೆಗಳಲ್ಲಿ ಗುರುತಿಸಲಾಗಿದೆ. ಮಂಗಳೂರು ಬಂದರು ಪ್ರದೇಶದ ಕೆಲವು ಶಿಲೆಗಳಲ್ಲಿ ಫೊರ್ಯಾಮಿನಿಫೆರ ಮತ್ತು ಆಸ್ಟ್ರೊಕೋಡಗಳಂಥ ಸೂಕ್ಷ್ಮಾವಶೇಷಗಳು ದೊರೆತಿವೆ. (ಟಿ.ವಿ.ಎಸ್.ಎಚ್.)

**ಪಳೆಯುಳಿಕೆ ವಿಜ್ಞಾನ:** ಸಾವಿರಾರು ವರ್ಷ ಹಿಂದೆ ಜೀವಿಸಿದ್ದ ಸಸ್ಯ ಮತ್ತು ಪ್ರಾಣಿಗಳ ಅವಶೇಷಗಳ ಬಗೆಗಿನ ವೈಜ್ಞಾನಿಕ ಅಧ್ಯಯನ. ಈ ಅವಶೇಷಗಳೇ ಪಳೆಯುಳಿಕೆಗಳು. ಪಳೆಯುಳಿಕೆಗಳು ಜೀವಿಗಳ ದೇಹದ ಒಂದು ಭಾಗ, ಅಥವಾ ಜೀವಿಗಳ ದೇಹ, ಮಣ್ಣಿನಲ್ಲಿ ಆ ದೇಹದ ಅಚ್ಚು, ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಸ್ತುಗಳಾಗಿರಬಹುದು. ಜೀವವಿಜ್ಞಾನವನ್ನು ಪ್ರಾಣಿವಿಜ್ಞಾನ ಮತ್ತು ಸಸ್ಯವಿಜ್ಞಾನ ಎಂದು ವಿಭಾಗಿಸಿದಂತೆಯೇ ಪಳೆಯುಳಿಕೆ ವಿಜ್ಞಾನವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳಲ್ಲಿ ಮುಖ್ಯವಾದುವು ಪ್ರಾಣಿ ಪಳೆಯುಳಿಕೆ ವಿಜ್ಞಾನ, ಸಸ್ಯ ಪಳೆಯುಳಿಕೆ ವಿಜ್ಞಾನ, ಸೂಕ್ಷ್ಮ ಜೀವಾಣು ಪಳೆಯುಳಿಕೆ ವಿಜ್ಞಾನ, ಕಶೇರುಕ ಪಳೆಯುಳಿಕೆ ವಿಜ್ಞಾನ, ಅಕಶೇರುಕ ಪಳೆಯುಳಿಕೆ ವಿಜ್ಞಾನ ಮುಂತಾದುವು. ಹೆಸರೇ ಸೂಚಿಸುವಂತೆ ಆಯಾ ವಿಭಾಗಗಳು 60 ಕೋಟಿ ವರ್ಷ ಹಿಂದೆ ಜೀವಿಸಿದ್ದ ಪ್ರಾಣಿ, ಸಸ್ಯ ಹಾಗೂ ಸೂಕ್ಷ್ಮಾಣುಗಳ ಅಧ್ಯಯನ.

ಪಳೆಯುಳಿಕೆಯ ಉದಯ: ರಹಸ್ಯ ಭೇದನೆ ಮನುಷ್ಯನ ಹುಟ್ಟುಗುಣ. ವೈಜ್ಞಾನಿಕ ಆವಿಷ್ಕಾರ, ಜ್ಞಾನದ ವಿಸ್ತರಣೆ ಹಾಗು ಮನುಜ ಸಹಜ ಕುತೂಹಲದ ಪರಿಣಾಮವೇ ಪಳೆಯುಳಿಕೆ ವಿಜ್ಞಾನದ ಉದಯ. ಪಳೆಯುಳಿಕೆ ಅಧ್ಯಯನ ಕೆಲವರಿಗೆ ಹವ್ಯಾಸವೆನಿಸಿದರೆ ಮತ್ತೆ ಕೆಲವರಿಗೆ ಜ್ಞಾನಾರ್ಜನೆ. ಪಳೆಯುಳಿಕೆಗಳು ಅನೇಕ ಖನಿಜ ಸಂಪತ್ತಿನ ಆಗರವಾಗಿ ಭೂಸಂಪತ್ತನ್ನು ಹೆಚ್ಚಿಸಿದೆ.

ಪಳೆಯುಳಿಕಾಧ್ಯಯನದ ವಿಧಾನಗಳು: ಅಧ್ಯಯನ ಪೂರ್ವಸಿದ್ಧತೆ: ಪಳೆಯುಳಿಕಾಧ್ಯಯನ ಸಂಶೋಧಕರ ಆಸಕ್ತಿಗನುಗುಣವಾಗಿದೆ. ಅಧ್ಯಯನದ ಆರಂಭದಲ್ಲಿ ಸಂಶೋಧಕರು ಆಯಾ ವಿಷಯಕ್ಕೆ ಸಂಬಂಧಿಸಿದಂತೆ ದೊರಕುವ ಮಾಹಿತಿಯನ್ನು ಎಲ್ಲಾ ಮೂಲಗಳಿಂದಲೂ ಸಂಗ್ರಹಿಸಬೇಕು. ಅದು ಕೆಲವು ಬಾರಿ ರೈತಾಪಿ ಅವಿದ್ಯಾವಂತ ನೀಡುವ ಮಾಹಿತಿಯಾದರೂ ಚಿಂತೆಯಿಲ್ಲ. ಇಲ್ಲಿ ವಿಷಯ ಸಂಗ್ರಹಣೆ ಮುಖ್ಯ.

ಪಳೆಯುಳಿಕೆಗಳ ಸಂಗ್ರಹಣೆ ಮತ್ತು ಸಂಸ್ಕರಣೆ: ಪಳೆಯುಳಿಕೆ ಸಮಾಧಿ ಹೊಂದಿರುವ ಮಣ್ಣಿನ ಪದರದಿಂದ ಹೊರಗೆ ಕಾಣಿಸಿದಲ್ಲಿ ಆ ಪ್ರದೇಶವನ್ನು ನಿಖರವಾಗಿ ಗುರುತು ಮಾಡಬೇಕು. ಅನಂತರ ಆ ಪ್ರದೇಶದ ಭೌಗೋಳಿಕಾ ಲಕ್ಷಣಕ್ಕೆ ಅನುಗುಣವಾಗಿ ಸೂಕ್ತ ಸಲಕರಣೆಗಳನ್ನು ಉಪಯೋಗಿಸಿ ಮಣ್ಣು, ಕಲ್ಲು, ಮರಳಿಗೆ ಹೊಂದಿಕೊಂಡಂತಿರುವ ಪಳೆಯುಳಿಕೆಗಳನ್ನು ಹೊರ ತೆಗೆದು ಅನಂತರ ಉಳಿ, ಸೂಜಿ ಮುಂತಾದ ವಸ್ತುಗಳಿಂದ ಜೀವ್ಯವಶೇಷಗಳ ಸುತ್ತ ಇರುವ ಮಾತೃಕೆಯನ್ನು ಬೇರ್ಪಡಿಸಬೇಕು. ಈ ರೀತಿ ಸಂಗ್ರಹಣೆಯಾದ ಪಳೆಯುಳಿಕೆಗಳನ್ನು ಪ್ರಯೋಗಾಲಯಕ್ಕೆ ಸಾಗಿಸಬೇಕು. ಪಳೆಯುಳಿಕೆಗಳ ನೈಜ ಬಣ್ಣವನ್ನು ಪುನಃ ಪಡೆಯಬೇಕಾದರೆ ಅವುಗಳನ್ನು ಮೊದಲು ನೀರಿನಿಂದ ತೊಳೆದು ಉಳಿದಿರುವ ಮಣ್ಣು, ಮರಳು ಮುಂತಾದವುಗಳನ್ನು ಹೋಗಲಾಡಿಸಬೇಕು. ಕೆಲವು ಬಾರಿ ದುರ್ಬಲ ಹೈಡ್ರೊಕ್ಲೋರಿಕ್ ಆಮ್ಲದ ಬಳಕೆಯಿಂದ ಅವುಗಳ ನೈಜತೆಯನ್ನು ಮರಳಿ ಪಡೆಯಬಹುದು.

ಪಳೆಯುಳಿಕೆಗಳ ಗಾತ್ರ ಸಣ್ಣದಾಗಿದ್ದರೆ (ಉದಾ: ಫೊರಮಿನಿಫೆರಾ, ರೇಡಿಯೋಲೇರಿಯಾ, ಆಸ್ಟ್ರಕಾಯಿಡ್ ಮುಂತಾದುವು) ಸಂಸ್ಕರಣ ವಿಧಾನ ಬೇರೆ. ಈ ಜೀವಿಗಳು ವಾಸಿಸುವ ಕಲ್ಲುಗಳನ್ನು ಪುಡಿಮಾಡಿ ಗಾಜಿನ ಪಾತ್ರೆಯಲ್ಲಿ ನೀರಿನೊಂದಿಗೆ ಮಿಶ್ರಮಾಡಿ ಸೂಕ್ಷ್ಮವಾಗಿ ಕಲಕಬೇಕು ಅನಂತರ ನೀರನ್ನು ಶೋಧಿಸಿ ತೆಗೆದು ಉಳಿದ ಕಲ್ಲು ಮಣ್ಣಿನ ಚೂರುಗಳನ್ನು ಒಣಗಿಸಿ ಮಸೂರದ ಸಹಾಯದಿಂದ ಅವುಗಳನ್ನು ಬೇರ್ಪಡಿಸಬೇಕು. ಈ ಬೇರ್ಪಡಿಗೆ ಸೂಕ್ಷ್ಮ ಬ್ರಶ್‌ಗಳನ್ನು ಬಳಸಬೇಕಾಗುತ್ತದೆ.

ಪಳೆಯುಳಿಕೆಗಳು ದೊರೆತ ಸ್ಥಳದಲ್ಲಿಯೇ ಅದಕ್ಕೆ ಸಂಬಂಧಿಸಿದಂತಹ ದಾಖಲೆಗಳನ್ನು ಸಂಗ್ರಹಿಸಿ ಶೇಖರಿಸಿಡಬೇಕು. ದಿನಾಂಕ, ಪ್ರದೇಶದ ಹೆಸರು, ಸಂಗ್ರಹಿಸಿದವರ ಬಗ್ಗೆ ಸಂಪೂರ್ಣ ಮಾಹಿತಿ, ಸಂಗ್ರಹಾಲಯದ ಬಗ್ಗೆ ವಿವರಣೆ ಮುಂತಾದವುಗಳ ಜೊತೆಯಲ್ಲಿ ಅವುಗಳ ಛಾಯಾಚಿತ್ರ ಹಾಗೂ ವಿಡಿಯೋ ಚಿತ್ರೀಕರಣವನ್ನು ಮಾಡಬಹುದು.

ಪಳೆಯುಳಿಕಾ ವಿಜ್ಞಾನದ ಪ್ರಾಮುಖ್ಯತೆ: ಪ್ರಾಚೀನ ಕಾಲದಲ್ಲಿ ಪಳೆಯುಳಿಕೆಗಳನ್ನು ಭೂವಿಜ್ಞಾನಿಗಳು ಶಿಲೆಗಳ ಕಾಲಸೂಚಿಯಾಗಿ ಉಪಯೋಗಿಸುತ್ತಿದ್ದರು. ಹೀಗೆ ಶಿಲೆಗಳ ವಯೋನಿರ್ಧಾರಕ್ಕೆ ಮೊದಲಬಾರಿಗೆ ಅವನ್ನು ಉಪಯೋಗಿಸಿದವ ವಿಲಿಯಮ್ ಸ್ಮಿತ್. ವಾಸ್ತವವಾಗಿ ಶಿಲಾಸ್ತೋಮದ ಪ್ರತಿಯೊಂದು ಪದರ ಅಥವಾ ಪದರ ಗುಂಪನ್ನು ಅದರಲ್ಲಿರುವ ಪಳೆಯುಳಿಕೆಗಳಿಂದ ಗುರುತಿಸಬಹುದೆಂದು ಮನಗಂಡ. ಅಲ್ಲದೇ ಸಮಕಾಲೀನ ಶಿಲೆಗಳನ್ನು ಗುರುತಿಸುವುದಕ್ಕೂ ಅವನ್ನು ಉಪಯೋಗಿಸಬಹುದೆಂದು ಅರಿತ. ತತ್ಪರಿಣಾಮವಾಗಿ ವಿಲಿಯಮ್ ಸ್ಮಿತ್ 1800 ರ ಸುಮಾರಿಗೆ ಜೀವ ಪರಂಪರೆಯ ಕ್ರಮವನ್ನು ರೂಪಿಸಲು ಶಕ್ತನಾದ. ಈ ಕ್ರಮನಿಯಮ ಬಲು ಬೇಗನೆ ಮನ್ನಣೆ ಗಳಿಸಿತು, ಅಲ್ಲದೆ ಪ್ರಾದೇಶಿಕ ಶಿಲಾಸ್ತೋಮಗಳ ವಿವರಗಳನ್ನು ಕ್ರೋಡೀಕರಿಸಿ ಅವುಗಳ ಆಧಾರದ ಮೇಲೆ ಭೂ ಇತಿಹಾಸದ ಶಿಲಾಸ್ತಂಭವನ್ನು ರಚಿಸಲು ಸಾಧ್ಯವಾಯಿತು. ಇದಾದ 50 ವರ್ಷಗಳೊಳಗಾಗಿ ಪ್ರಪಂಚದ ನಾನಾ ಭಾಗಗಳಲ್ಲಿ ಶಿಲಾಸ್ತೋಮಗಳನ್ನು ಗುರುತಿಸಲಾಯಿತು.

ಭೂಕಾಲದ ಪ್ರತಿಭಾಗದಲ್ಲಿ ಬೇರೆ ಬೇರೆ ವಿಧಗಳ ಸಸ್ಯ ಪ್ರಾಣಿಗಳು ಇದ್ದುವೆಂಬ ಆಧಾರದ ಮೇಲೆ ಜೀವ ಪರಂಪರೆಯ ಕ್ರಮನಿಯಮ ರೂಪಿತವಾಗಿದೆ. ಭೂಕಾಲದ ಶಿಲಾಸ್ತೋಮಗಳನ್ನು ಒಂದರ ಮೇಲೊಂದು ವಯೋಮಾನಕ್ಕನುಗುಣವಾಗಿ ಸೇರಿಸಿದರೆ ತಳದ ಸ್ತೋಮದಲ್ಲಿ ಸರಳವಾದ ಅವ್ಯವಸ್ಥೆಯ ಮತ್ತು ಪ್ರಾವೀಣ್ಯವಿಲ್ಲದ ಜೀವಾವಶೇಷಗಳಿರುತ್ತವೆ. ಪ್ರತಿಯೊಂದು ಸ್ತೋಮದ ಜೀವಾವಶೇಷಗಳು ಕೆಳಸ್ತೋಮದ ಅವಶೇಷಗಳಿಗಿಂತ ಹೆಚ್ಚು ವಿಕಾಸಮಟ್ಟದವಾಗಿಯೂ ಮೇಲಣಸ್ತೋಮದ ಜೀವಾವಶೇಷಗಳಿಗಿಂತ ಕಡಿಮೆ ವಿಕಾಸ ಮಟ್ಟದವಾಗಿಯೂ, ಭಿನ್ನವಾಗಿಯೂ ಇರುತ್ತವೆ. ಜೀವವಿಕಾಸ ವಿಶ್ವವ್ಯಾಪಿಯಾಗಿರುವುದರಿಂದ ಸಮಕಾಲೀನ ಶಿಲೆಗಳಲ್ಲೆಲ್ಲಾ ಒಂದೇ ರೀತಿಯ ಜೀವಾವಶೇಷಗಳಿರುತ್ತವೆ. ಈ ಆಧಾರದ ಮೇಲೆ ಜೀವವಿಜ್ಞಾನಿಗಳು ಸಸ್ಯ ಮತ್ತು ಪ್ರಾಣಿ ಗುಂಪುಗಳು ಒಂದಾದ ಮೇಲೊಂದರಂತೆ ಕ್ರಮವಾಗಿ ಉದ್ಭವಿಸಿವೆಯೆಂದೂ ಪ್ರತಿಯೊಂದು ಭೂಕಾಲವೂ ತನ್ನದೇ ಆದ ವಿಶಿಷ್ಟ ಜೀವರಾಶಿಯನ್ನು ಹೊಂದಿತ್ತೆಂದು ಆ ಜೀವರಾಶಿಯ ಸಹಾಯದಿಂದ ಭೂಕಾಲವನ್ನು ಗುರುತಿಸಬಹುದೆಂದು ಈ ನಿಯಮ ಹೇಳುತ್ತದೆ.

ಇನ್ನೊಂದು ನಿಯಮದ ಪ್ರಕಾರ ಜೀವಪರಂಪರೆಯ ಕ್ರಮ ಎಲ್ಲೂ ತಿರುಗುಮುರುಗಾಗಿಲ್ಲ, ಒಂದೇ ಪ್ರದೇಶದಲ್ಲಿ ಇಡೀ ಜೀವಪರಂಪರೆ ಪ್ರತಿನಿಧಿತವಾಗಿಲ್ಲದೆ ಇರಬಹುದು, ಶಿಲಾಸ್ತೋಮಗಳು ಕಲಕಿರದಿದ್ದರೆ ಪ್ರತಿನಿಧಿಸಲ್ಪಟ್ಟಿರುವ ಭಾಗಗಳು ಆಯಾ ಸ್ಥಾನದಲ್ಲೇ ಇರುತ್ತವೆ. ಒಂದು ಜೀವಿಗುಂಪು, ಜಾತಿ ಅಥವಾ ಪ್ರಕಾರ ಗತವಂಶಿಯಾದರೆ ಪುನಃ ಕಾಣಿಸಿಕೊಳ್ಳಲಾರದು. ಅದು ಗತವಂಶಿಯಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಕಾಣಿಸಿಕೊಂಡರೆ ಅದು ಗತವಂಶಿಯಲ್ಲವೆಂದೂ ಸ್ವಪ್ರಾಂತ್ಯದಲ್ಲಿನ ಸನ್ನಿವೇಶ ಬದಲಾವಣೆಯ ಕಾರಣ ಅದಕ್ಕೆ ಸರಿಹೊಂದುವ ಸನ್ನಿವೇಶವಿರುವ ಪ್ರದೇಶಗಳಿಗೆ ವಲಸೆ ಹೋಗಿದೆಯೆಂದೂ ಅರ್ಥ. ಅದೇ ಪ್ರದೇಶದಲ್ಲಿ ಪುನಃ ಕಾಣಿಸಿಕೊಂಡರೆ ಸ್ವಪ್ರಾಂತ್ಯದಲ್ಲಿ ಅನುಕೂಲ ಸನ್ನಿವೇಶ ಪುನಃ ಉಂಟಾಗಿದ್ದರಿಂದ ವಾಪಸ್ಸು ಬಂದಿದೆ ಎಂದರ್ಥ. ಬೇರೆ ಬೇರೆ ಭೂಭಾಗಗಳ ಸಂಪರ್ಕವಿಲ್ಲದ ಪ್ರದೇಶಗಳಲ್ಲಿ ಸನ್ನಿವೇಶ ಬದಲಾವಣೆಯೇ ಆಗದಿದ್ದರೆ ಬೇರೆಯ ಕಡೆಯ ಜೀವವರ್ಗಗಳು ನಿರ್ನಾಮವಾದರೂ ಆ ಪ್ರದೇಶಗಳಲ್ಲಿ ಅವೇ ಮುಂದುವರೆಯುತ್ತವೆ. ಈ ಪ್ರದೇಶಗಳು ಹಳೆಯ ಪಳೆಯುಳಿಕೆಯ ಜೀವಿಗಳಿಗೆ ಆಶ್ರಯಸ್ಥಾನಗಳಾಗುತ್ತವೆ. ದೊಡ್ಡ ದ್ವೀಪಗಳು ಇಂತಹ ಆಶ್ರಯಸ್ಥಾನಗಳಾಗಲು ಸಾಧ್ಯ. ಉದಾ: ಕಾಂಗರೂ ಮುಂತಾದ ಮಾರ್ಸೂಪಿಯಲ್ ಪ್ರಾಣಿಗಳ ಆಶ್ರಯಸ್ಥಾನ ಆಸ್ಟ್ರೇಲಿಯ. ಮಧ್ಯಜೀವ ಕಲ್ಪದಲ್ಲಿ ಹೇರಳವಾಗಿದ್ದ ಜಿಂಕೆ ಮತ್ತು ಮೆಟಸೀಕ್ವಿಯ ಎಂಬ ಸಸ್ಯಕ್ಕೆ ಚೀನಾ ಆಶ್ರಯಸ್ಥಾನ. ಡಿವೋನಿಯನ್ ಯುಗದಲ್ಲಿ ವಾಯುಸೇವಿಸುವ ಮತ್ಸ್ಯದ ಸಂಬಂಧಿ ಮತ್ತು ಕ್ರಿಟೇಷಿಯಸ್ ಯುಗದ ಅಂತ್ಯದಲ್ಲಿ ಗತವಂಶಿಯಾಯಿತೆಂದು ತಿಳಿಸಲಾಗಿದ್ದ ಲ್ಯಾಟಿಮೇರಿಯಾ ಆಫ್ರಿಕಾಖಂಡದ ತೀರದಲ್ಲಿ ಇನ್ನೂ ಜೀವಿಸಿರುವುದನ್ನು ಇತ್ತೀಚೆಗೆ ಪತ್ತೆಹಚ್ಚಲಾಯಿತು. ಈ ಜೀವಪರಂಪರೆಯ ಕ್ರಮನಿಯಮವನ್ನು ಆಧುನಿಕ ಜೀವಕಲ್ಪದ ಶಿಲಾಸ್ತೋಮಗಳಿಗೆ ಅನ್ವಯಿಸಲು ಸಾಧ್ಯವಾಗಿಲ್ಲ. ಈ ಶಿಲಾಶ್ರೇಣಿಗಳಲ್ಲಿ ಸದ್ಯ ಜೀವಿಸಿರುವ ಪ್ರಾಣಿಗಳು ಎಷ್ಟು ಪ್ರಮಾಣದಲ್ಲಿ ಪ್ರಾತಿನಿಧಿತವಾಗಿದೆ ಎಂಬ ಅಂಶವನ್ನು ಸರ್ ಚಾರ್ಲ್ಸ್ ಲಯಲ್ ವಿಭಜನೆಗೆ ಆಧಾರವಾಗಿಟ್ಟುಕೊಂಡಿದ್ದಾನೆ. ಪ್ರಾಣಿ ವಿಜ್ಞಾನಿಗಳು ಕಶೇರುಕಗಳ ಅವಶೇಷಗಳನ್ನು ಹಾಲಿ ಜೀವಿಸುತ್ತಿರುವ ಪ್ರಾಣಿಗಳ ಅಸ್ಥಿಗಳನ್ನು ಅಧ್ಯಯನ ಮಾಡುವ ರೀತಿಯಲ್ಲಿಯೇ ಮಾಡಲು ಪ್ರಾರಂಭಿಸಿದರು. ಈ ಅನ್ವೇಷಣೆಯಲ್ಲಿ ಫ್ರಾನ್ಸಿನ ಕುವಿಯರ್ ಪ್ರಮುಖ. ಇವನು ಸರೀಸೃಪಗಳು ಮತ್ತು ಸ್ತನಿಗಳ ಎಲುಬುಗಳು ಮತ್ತು ಹಲ್ಲುಗಳ ನಿಖರ ವರ್ಣನೆ ಮಾಡಿ ಆ ಪ್ರಾಣಿಗಳ ಪೂರ್ಣ ಅಸ್ಥಿಪಂಜರಗಳನ್ನು ರೂಪಿಸಿ

ವ್ಯವಸ್ಥಿತ ಕ್ರಮದಲ್ಲಿ ಅವುಗಳ ಸ್ಥಾನವನ್ನು ನಿರ್ಧರಿಸಿ, ಜೀವಿಗಳ ಅಂಗೋಪಾಂಗಗಳ ಸರಿದೂಗುವಿಕೆಯ ನಿಯಮವನ್ನು ರೂಪಿಸಿದ. ಈ ನಿಯಮ ಜೀವಿಯ ಪ್ರತಿಯೊಂದು ಅಂಗ ಅದರ ರೂಪು ಆಕಾರಾದಿ ಲಕ್ಷಣಗಳು ಇತರ ಅಂಗಗಳಿಗೆ ಸಂಬಂಧ ಹೊಂದಿದೆ ಎಂದು ಸಾರುತ್ತದೆ. ಆದರೆ ಬೆರಾನ್ ಜಾರ್ಜಿಸ್ ಕುವಿಯರ್ ಪ್ರಳಯವಾದಿಯಾಗಿದ್ದ. ಜೀವಿಗುಂಪು ಆಯಾ ಜೀವಕಲ್ಪದ ಆದಿಯಲ್ಲಿ ಪ್ರತ್ಯೇಕವಾಗಿ ಸೃಷ್ಟಿಸಲ್ಪಟ್ಟು ಆಯಾ ಜೀವಕಲ್ಪದ ಅಂತ್ಯದಲ್ಲಿ ನಡೆದ ಭೂ ಚಲನೆಯ ಪರಿಣಾಮವಾಗಿ ನಾಶವಾಗಿದೆ ಎಂದು ಅರ್ಥವಾಗುತ್ತದೆ.

ಪ್ರಾಚೀನ ಜೀವವಿಜ್ಞಾನ ಸಂಶೋಧನೆ ಮುಂದುವರಿದಂತೆಲ್ಲ ಅನೇಕ ಪ್ರಾಣಿ ಗುಂಪುಗಳು ಭೂಕಾಲದಲ್ಲಿ ನಿಧಾನವಾಗಿ ಮತ್ತು ಅಖಂಡವಾಗಿ ಬದಲಾಗಿರುವುದು ಸ್ಪಷ್ಟವಾಯಿತು. ಆದಿಮ ಪ್ರಾಣಿಗಳು ಸಂಖ್ಯೆಯಲ್ಲಿ ಕ್ರಮೇಣ ಹೆಚ್ಚುತ್ತವೆ, ಅನಂತರ ಅವನತಿಮಾರ್ಗದಲ್ಲಿ ಸಾಗಿ ಗತವಂಶಿಗಳಾಗುತ್ತವೆ. ಭೂ ಇತಿಹಾಸದ ಶಿಲಾಸ್ತಂಭ ವೀಕ್ಷಣೆ ಜೀವಿಗಳು ಕ್ರಮೇಣ ಆದಿಮ ಅವಸ್ಥೆಯಿಂದ ವಿಕಾಸದ ಉನ್ನತ ಮಟ್ಟ ಏರುವುದನ್ನು ದೃಢೀಕರಿಸುತ್ತದೆ. ಇದು ಮನುಷ್ಯನ ಭ್ರೂಣಾವಸ್ಥೆಯ ವಿಕಾಸದಿಂದ ಸ್ಪಷ್ಟವಾಗಿದೆ. ಪಳೆಯುಳಿಕೆಗಳು ಪ್ರಾಚೀನ ಕಾಲದ ಭೂವಿವರಣೆಯನ್ನು ರಚಿಸಲು ಸಹಾಯಕವಾಗಿದೆ. ಈ ಆಧಾರದ ಮೇಲೆ ಜೀವಿಗಳ ಜೀವಾವಧಿಯನ್ನು ನಿರ್ಜೀವ ಕಲ್ಪ, ಆದಿಜೀವಕಲ್ಪ, ಪ್ರಾಚೀನ ಜೀವಕಲ್ಪ, ಮಧ್ಯಜೀವಕಲ್ಪ ಮತ್ತು ನವಜೀವಕಲ್ಪ ಎಂದು ಐದು ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ.

ಪಳೆಯುಳಿಕೆಗಳು ಜಲನೆಲಗಳ ಹಂಚಿಕೆ, ಹವಾಗುಣ, ವಾತಾವರಣ, ಮುಂತಾದ ವಿಷಯಗಳ ಬಗ್ಗೆಯೂ ಬೆಳಕು ಬೀರುತ್ತವೆ. ವರ್ತಮಾನ ಕಾಲದಲ್ಲಿ ಕೆಲವು ಪ್ರಾಣಿ ಗುಂಪುಗಳು ಕಡಲುಗಳಲ್ಲಿ ಮಾತ್ರ ವಾಸಿಸುತ್ತವೆ. ಉದಾ: ಕಂಟಕ ಚರ್ಮಿಗಳು ಹವಳಗಳು ಬಹುಪಾದಿಗಳು ಮತ್ತು ಕುಟುಕು ಕಣವಂತಗಳು. ಮೃದ್ವಂಗಿಗಳಲ್ಲಿ ಸ್ಕಾಫೊಪೋಡ ಮತ್ತು ಶಿರಪಾದಿಗಳು ಸಾಗರವಾಸಿಗಳು. ಆದರೆ ಕಪ್ಪೆಚಿಪ್ಪು ಮತ್ತು ಉದರಪಾದಿಗಳಲ್ಲಿ ಕೆಲವು ಸಾಗರವಾಸಿಗಳು, ಕೆಲವು ಸಿಹಿನೀರು ಜಲಾಶಯಗಳಲ್ಲಿ ವಾಸಿಸುವಂತಹವು. ಪ್ರಾಚೀನ ಕಾಲದಲ್ಲಿಯೂ ಈ ಗುಂಪುಗಳು ಇದೇ ಸನ್ನಿವೇಶಗಳಲ್ಲಿ ವಾಸಿಸುತ್ತಿದ್ದುವೆಂದು ಕಲ್ಪಿಸಿಕೊಂಡರೆ, ಇವುಗಳ ಅವಶೇಷವಿರುವ ಶಿಲೆಗಳು ಸಾಗರದಲ್ಲಿ ಸಂಚಯಿಸಿದವೋ, ನೆಲದಲ್ಲಿ ಸಂಚಯಿಸಿದವೋ ಎಂದು ತಿಳಿಯಲು ಸಾಧ್ಯವಾಗುವುದು. ಇದೇ ರೀತಿ ಹವಳ ದಿಬ್ಬಗಳು ಸಾಮಾನ್ಯವಾಗಿ ಉಷ್ಣವಲಯ ಪ್ರದೇಶದ ಸಾಗರ ತೀರಗಳಲ್ಲಿರುತ್ತವೆ. ಹೆಲಿಯೋಲೈಟಿಸ್ ಎಂಬ ಮತ್ಸ್ಯ ನಿರ್ದಿಷ್ಟ ಉಷ್ಣಾತಾಮಿತಿಗಳಿಂದ ಕೂಡಿದ ಸಾಗರ ಪ್ರದೇಶಗಳಲ್ಲಿ ವಾಸಿಸುತ್ತದೆ. ಹೀಗೆ ಜೀವ್ಯವಶೇಷಗಳ ಅಧ್ಯಯನದಿಂದ ಪ್ರತಿಯೊಂದು ಯುಗದ ನೆಲಜಲಗಳ ಹಂಚಿಕೆ, ಹವಾಗುಣ ಮುಂತಾದ ವಿವರಗಳನ್ನು ತಿಳಿದು ಆಯಾ ಯುಗದ ಪ್ರಾಚೀನ ಭೂ ವಿವರಣೆಯನ್ನು ರೂಪಿಸಬಹುದು.

ಪಳೆಯುಳಿಕೆಗಳುಂಟಾಗಲು ಇರಬೇಕಾದ ಅವಶ್ಯಕತೆಗಳು: ದೇಹದಲ್ಲಿ ಕೊಳೆತು ಜೀರ್ಣವಾಗಿ ಹೋಗುವುದಕ್ಕಿಂತ ಮುಂಚೆಯೇ ಮಣ್ಣಿನಿಂದ ಹೂತಿರಬೇಕು. ಅಂಗಾಂಗಗಳು ದೇಹದಿಂದ ಬೇರ್ಪಡದೆ ದೇಹಕ್ಕೆ ಹೊಂದಿಕೊಂಡಿದ್ದು ಸಾಕಷ್ಟು ಕಾಲ ಶಿಥಿಲವಾಗದೆ ಸ್ಥಿರವಾಗಿರಬಲ್ಲ ರಾಸಾಯನಿಕ ಸಂಯೋಜನೆಯಿಂದ ಕೂಡಿರಬೇಕು.

ಪಳೆಯುಳಿಕೆಗಳು ನಾನಾ ವಿಧಾನಗಳಿಂದ ರೂಪುಗೊಳ್ಳುತ್ತವೆ. ಸಮುದ್ರದಲ್ಲಿ ವಾಸಿಸುವ ಪ್ರಾಣಿಗಳ ಅಸ್ಥಿಗಳು ಅವುಗಳ ಮರಣಾನಂತರ ಸಮುದ್ರದ ತಳ ಸೇರುತ್ತವೆ. ಸಮುದ್ರದ ನೀರಿನಲ್ಲಿ ಹೆಚ್ಚಿನ ಉಪ್ಪಿನಂಶವಿರುವುದರಿಂದ ಅವು ಸಹಜ ಸ್ಥಿತಿಯಲ್ಲಿರುತ್ತವೆ. ನದಿ, ಝರಿ ಮುಂತಾದ ಸಿಹಿ ನೀರಿನಲ್ಲಿ ವಾಸಿಸುವ ಪ್ರಾಣಿಗಳ ಅಸ್ಥಿಗಳು ನೀರಿನೊಡನೆ ಸಾಗಿ ವೇಗ ಕಡಿಮೆಯಾದಾಗ ಲವಣಗಳೊಂದಿಗೆ ಬೆರೆತು ಸಹಜ ಸ್ಥಿತಿಯಲ್ಲಿಯೆ ಇರುವುವು. ತೀರ ಪ್ರದೇಶದ ಸಾಗರದ ತಳ ಆಗಾಗ್ಗೆ ಕುಸಿಯುತ್ತಿರುವುದರಿಂದ ಆ ಪ್ರದೇಶಗಳು ಜೀವಾವಶೇಷಗಳ ರಕ್ಷಣೆಗೆ ಅತ್ಯಂತ ಪ್ರಶಸ್ತ ಕ್ಷೇತ್ರಗಳು. ಹವಳ ದಿಬ್ಬಗಳಲ್ಲಿ ವಾಸಿಸುವ ಜೀವಿಗಳ ಅವಶೇಷಗಳು ಉತ್ತಮ ಸ್ಥಿತಿಯಲ್ಲಿರುವುವು. ಜೌಗು ಪ್ರದೇಶದ ಭೂಮಿ ಸಾಕಷ್ಟು ಅಸ್ಥಿರವಾದುದಾದರೆ ಅಲ್ಲಿ ದಟ್ಟ ಕಾಡು ಬೆಳೆದು ಕುಸಿದು, ಆ ಪ್ರದೇಶದಲ್ಲಿ ಸಮಾಧಿ ಹೊಂದಿ ಕಲ್ಲಿದ್ದಲು ಸ್ತರಗಳಾಗಿರುವುವು. ಅವುಗಳೊಂದಿಗೆ ಆಯಾ ಕಾಲದಲ್ಲಿ ವಾಸಿಸುತ್ತಿದ್ದ ಜೀವಿಗಳು ಪಳೆಯುಳಿಕೆಗಳಾಗುತ್ತವೆ.

ಗುಹೆಗಳಲ್ಲಿ ವಾಸಿಸುವ ಪ್ರಾಣಿಗಳು ಮಣ್ಣಿನಿಂದಾವೃತವಾಗಿ ಅಥವಾ ಮರಳು ದಿಬ್ಬಗಳಲ್ಲಿ ಹೂತು, ಕೆಲವು ಜಿಪ್ಸಮ್ ಅಥವಾ ಸುಣ್ಣದ ಕಲ್ಲಿನ ಗುಹೆಗಳಲ್ಲಿ ಅಥವಾ ಬಿಸಿ ನೀರಿನ ಬುಗ್ಗೆಗಳಿರುವ ಪ್ರದೇಶದಲ್ಲಿ ಸತ್ತಪ್ರಾಣಿ ಹಾಗೂ ಸಸ್ಯಗಳು ಈ ಲವಣದಿಂದ ಆವೃತಗೊಂಡು, ಬಿಲಗಳಲ್ಲಿ ವಾಸಿಸುವ ಹುಳು ಮತ್ತು ಮೃದ್ವಂಗಿಗಳು ಬಿಲದೊಳಗೆ ನೈಜ ರೀತಿಯಲ್ಲಿ ರಕ್ಷಿತವಾಗುತ್ತದೆ.

ಆದರೆ ನೆಲದ ಮೇಲೆ ವಾಸಿಸುವ ಸಸ್ಯ ಹಾಗೂ ಪ್ರಾಣಿಗಳ ರಕ್ಷಣೆಗೆ ಇರುವ ಅವಕಾಶ ಬಲು ಕಡಿಮೆ. ಮರಣಾನಂತರ ಜೀವಿಗಳ ದೇಹ ಕೊಳೆತು ಜೀರ್ಣಗೊಂಡು ಮಣ್ಣಿನೊಡನೆ ಬೆರೆತು ಹೋಗುವುದು.

ಪಳೆಯುಳಿಕೆಗಳ ರಕ್ಷಣೆಯಲ್ಲಿ ಅವುಗಳ ಅಸ್ಥಿ ಮತ್ತು ಅವನ್ನು ಮುಚ್ಚಿದ ಸಂಚಯನಗಳ ಸಂಯೋಜನೆ ಮುಖ್ಯ ಪಾತ್ರ ವಹಿಸುತ್ತದೆ. ಸಂಯೋಜನಾವಸ್ತು ಜೇಡಿ ಮಣ್ಣು, ಕಲ್ಲೆಣ್ಣೆಗಳಿಂದ ಕೂಡಿದ್ದರೆ ಪ್ರಾಣಿಗಳು, ಮೃದುಅವಯವಗಳೂ ಸುರಕ್ಷಿತವಾಗಿರುವುವು. ಬ್ರಿಟಿಷ್ ಕೊಲಂಬಿಯಾದ ಕೇಂಬ್ರಿಯನ್ ಮಧ್ಯಕಾಲದ ಅವಶೇಷ ಉತ್ತಮ ಉದಾಹರಣೆ. ಹುಳುಗಳ ಮೃದು ಅಂಗಗಳೂ ಇಲ್ಲಿ ಸುರಕ್ಷಿತವಾಗಿವೆ. ಆದರೆ ಅಂತರ್ಜಲದಲ್ಲಿ ಆಮ್ಲದ ಪ್ರಮಾಣ ಹೆಚ್ಚಾಗಿದ್ದರೆ ಅದು ಜೀವಿಗಳ ಅಂಗಾಂಗಗಳನ್ನು ಕರಗಿಸುವುದರಿಂದ ಮರಳು ಹಾಗೂ ಮಣ್ಣಿನಲ್ಲಿ ಅಚ್ಚಿನ ಕುರುಹು ಮಾತ್ರ ಉಳಿಯುತ್ತದೆ. ಅಂತರ್ಜಲದಲ್ಲಿ ಆಮ್ಲದ ಪ್ರಮಾಣ ಕಡಿಮೆಯಿದ್ದು ಸುಣ್ಣವಸ್ತುವಿದ್ದರೆ ಅಥವಾ ಅಸ್ಥಿ ಸುಣ್ಣದಲ್ಲಿ ಸಮಾಧಿಯಾಗಿದ್ದರೆ ಅದು ಹಾಗೆಯೇ ಉಳಿಯುತ್ತದೆ. ಅಪರೂಪಕ್ಕೆ ಅಸ್ಥಿಯು ಸುಣ್ಣ, ಓಪಾಲ್ ಅಥವಾ ಸ್ವರ್ಣಮಕ್ಷಿಕ ಕಣ ವಿನಿಮಯದಿಂದ ಖನಿಜೀಕರಣಗೊಳ್ಳಬಹುದು. ಖನಿಜೀಕರಣದಲ್ಲಿ ಮುಖ್ಯವಾಗಿ ಸಿಲಿಕಾ,



ಪ್ರಾಗ್ಜೀವಿ ವಿಜ್ಞಾನಿಗಳು ಪುನರ್ ರಚಿಸಿರುವ ಡಿಪ್ಲೊಡಾಕಸ್‌ನ ಅಸ್ಥಿಪಂಜರ

ಕಬ್ಬಿಣದ ಆಕ್ಸೈಡ್, ಕಬ್ಬಿಣದ ಸಲ್ಫೈಡ್, ಸೆಲ್ಲೋಫೇನ್, ಮುಂತಾದುವು ಮುಖ್ಯ ಪಾತ್ರ ವಹಿಸುತ್ತವೆ.

ಕೆಲವೊಮ್ಮೆ ಎಲೆಗಳ ಮತ್ತು ಮೃದು ದೇಹದ ಪ್ರಾಣಿಗಳು ಮಣ್ಣಿನಲ್ಲಿ ಮತ್ತು ಮರಳಿನಲ್ಲಿ ಸೇರಿಕೊಂಡು ಮಣ್ಣಿನ ಮೇಲ್ಪದರದ ಒತ್ತಡದಿಂದಾಗಿ ಪಳೆಯುಳಿಕೆಯಾಗಿವೆ. ಉದಾ: ಬ್ರಯೋಫೋವಾ.

ವಿಶಿಷ್ಟ ರೀತಿಯ ಪಳೆಯುಳಿಕೆಗಳಾದ ಕೋಪ್ರೊಲೈಟ್‌ಗಳು ಪ್ರಾಣಿಗಳ ವಿಸರ್ಜಕಗಳು. ಇವುಗಳ ಸಂರಕ್ಷಣೆಯಿಂದ ಪ್ರಾಚೀನ ಕಾಲದ ಪ್ರಾಣಿಗಳ ಆಹಾರ ನಿಯಮವನ್ನು ತಿಳಿಯಬಹುದು. ಇದೇ ರೀತಿ ಸಸ್ಯಗಳಲ್ಲಿ ಕಂಡುಬರುವ ಗೋಂದಿನಲ್ಲಿ ಕೆಲವು ಸಣ್ಣಗಾತ್ರದ ಕೀಟಗಳು ಸಿಲುಕಿ ಸಾವನ್ನಪ್ಪಿ ಪಳೆಯುಳಿಕೆಗಳಾಗಿವೆ. ಜ್ವಾಲಾಮುಖಿಗಳೊಳಗೆ ಸಿಲುಕಿದ ಪ್ರಾಣಿ ದೇಹದಿಂದ ನೀರು ಸಂಪೂರ್ಣ ಆವಿಯಾಗಿ ಅವು ಸಹಜ ಸ್ಥಿತಿಯಲ್ಲಿ ರಕ್ಷಣೆಯಾಗಿವೆ. ಧ್ರುವ ಪ್ರದೇಶಗಳಲ್ಲಿ ಕೆಲವೊಂದು ಜೀವಿಗಳು ಮರಣದ ನಂತರ ಹಿಮದಲ್ಲಿ ಮುಚ್ಚಿ ಪಳೆಯುಳಿಕೆಗಳಾಗಿವೆ. ಉದಾ: ಇಂದು ಸೈಬೀರಿಯಾ ಮತ್ತು ಅಲಾಸ್ಕಗಳಲ್ಲಿ ದೊರೆತಿರುವ ಉದ್ದ ಕೂದಲಿನ ಮ್ಯಾಮತ್ ಶೀತಲೀಕರಣದಿಂದಾಗಿ ಸಹಜ ಸ್ಥಿತಿಯಲ್ಲಿ ದೊರೆತಿವೆ.

ಸುಮಾರು 200 ಕೋಟಿ ವರ್ಷ ಹಿಂದೆ ಭೂಮಿಯ ಮೇಲೆ ಆಮ್ಲಜನಕ ರಹಿತ ವಾತಾವರಣವಿದ್ದು ಅನಂತರ 100 ಕೋಟಿ ವರ್ಷಗಳಲ್ಲಿ ಅದು ಆಮ್ಲಜನಕ ಭರಿತವಾಯಿತು. ಆದಿಯಲ್ಲಿ ನಡೆಯಿತೆನ್ನಲಾದ ನಿರ್ಜೀವ ದ್ಯುತಿ ಸಂಶ್ಲೇಷಣೆಯ ವಿಧಾನದ ನಿಖರ ವಿವರಣೆಗಳ, ಆದಿಜೀವಿಗಳ ಬಾಹ್ಯರೂಪ ರೇಖೆ ಮತ್ತು ಅವುಗಳಲ್ಲಿ ಆದ ವಿಕಾಸಗಳ ಅರಿವಿಗೆ ಪಳೆಯುಳಿಕೆ ವಿಜ್ಞಾನ ತನ್ನ ಕೊಡುಗೆಯನ್ನಿತ್ತಿದೆ.

(ಎಸ್.ಎಸ್.ಎಮ್.)

**ಪಾಂಡ:** ಕಾರ್ನಿವೊರ ಗಣದ ಪ್ರೋಸಯಾನಿಡೆ ಕುಟುಂಬಕ್ಕೆ ಸೇರಿದ ಚತುಷ್ಪಾದಿ ಸ್ತನಿ. ರಕೂನ್, ಕೋಟಿಮುಂಡಿ, ಕಿಂಕಜೂ ಮುಂತಾದ ಪ್ರಾಣಿಗಳಿಗೆ ಹತ್ತಿರ ಸಂಬಂಧಿ. ಇದರಲ್ಲಿ ವಾಸ್ತವವಾಗಿ ಎರಡು ಬಗೆಗಳುಂಟು. ಚೀನದ ಯುನಾನ್ ಪ್ರದೇಶ, ಉತ್ತರ ಬರ್ಮ, ಸಿಕ್ಕಿಮ್ ಹಾಗೂ ನೇಪಾಳಗಳಲ್ಲಿ ವಾಸಿಸುವ ಕಿರು ಪಾಂಡ (ಲೆಸ್ಸರ್ ಪಾಂಡ ಮತ್ತು ರೆಡ್ ಪಾಂಡ) ಒಂದು ಬಗೆಯಾದರೆ ಚೀನಾದ ಸೆಕ್ವಾನ್, ಸೈಕಾಂಗ್, ಷೆನಾಷಾನ್, ಕ್ಯಾನ್ಸೂ ಪ್ರಾಂತ್ಯಗಳಲ್ಲೂ ಟಿಬೆಟ್ಟಿನ ಕೆಲವು ಪ್ರದೇಶಗಳಲ್ಲೂ ಕಾಣದೊರೆಯುವ ದೈತ್ಯ ಪಾಂಡ (ಜಯೆಂಟ್ ಪಾಂಡ, ರೆನ್ಸನ್ ಪಾಂಡ) ಇನ್ನೊಂದು ಬಗೆ. ಇವಕ್ಕೆ ಅನುಕ್ರಮವಾಗಿ ಐಲ್ಯೂರಸ್ ಫಲ್ಗೆನ್ಸ್ ಮತ್ತು ಐಲ್ಯೂರೊಪೊಡ ಮೆಲನೋಲ್ಯೂಕ ಎಂಬ ವೈಜ್ಞಾನಿಕ ಹೆಸರುಗಳುಂಟು.

ಕಿರುಪಾಂಡ ಸಣ್ಣ ಗಾತ್ರದ ಪ್ರಾಣಿ. ದೇಹದ ಉದ್ದ 51–65 ಸೆಂಮೀ. ತೂಕ 3–4.5 ಕಿಗ್ರಾಂ 28–45 ಸೆಂಮೀ ಉದ್ದದ ಬಾಲವುಂಟು. ದೇಹದ ಮೇಲೆ ಉದ್ದನೆಯ ಹಾಗೂ ಮೃದುವಾದ ತುಪ್ಪಳ ಇದೆ. ಬಾಲ ಪೊದೆಯಂತಿದೆ. ದೇಹದ ಬಣ್ಣ ಚೆಸ್ಟ್‌ನಟ್ ಕಂದು. ಬಾಲದ ಮೇಲೆ ಮಸಕುಮಸಕಾಗಿ ಕಾಣುವ ಪಟ್ಟೆಗಳುಂಟು. ಕಣ್ಣುಗಳ ಕೆಳಗೆ ಕೆನ್ನೆಯನ್ನೂ ಸೇರಿಕೊಂಡಂತೆ ಕರಿಯ ಬಣ್ಣದ ಮಚ್ಚೆಗಳಿವೆ. ಮುಸುಡು, ಕಿವಿಯ ಅಂಚು, ಕೆನ್ನೆಗಳು ಸ್ವಲ್ಪ ಭಾಗ ಬಿಳಿ. ತಲೆ ಹೆಚ್ಚು ಕಡಿಮೆ ದುಂಡಾಗಿದೆ. ಕಿವಿಗಳು ದೊಡ್ಡವು, ಚೂಪು ತುದಿಯುಳ್ಳವು. ಅಂಗಾಲುಗಳ ಮೇಲೆ ಕೂದಲುಗಳಿವೆ.

ಇದು ಹೆಚ್ಚು ಕಡಿಮೆ ನಿಶಾಚರಿ. ಸಾಮಾನ್ಯವಾಗಿ ಹಗಲಿನಲ್ಲಿ ಮರಗಳನ್ನು ಹತ್ತಿ ನಿದ್ರಿಸುತ್ತದೆ. ಮಲಗಿರುವಾಗ ಬೆಕ್ಕಿನಂತೆ, ನಾಯಿಯಂತೆ ಸುರುಳಿ ಸುತ್ತಿರುವುದುಂಟು. ಕೆಲವೊಮ್ಮೆ ಮುಂಗಾಲುಗಳ ನಡುವೆ ಎದೆಯ ಮೇಲೆ ಬಾಗಿರುವಂತೆ ತಲೆಯನ್ನಿಟ್ಟುಕೊಂಡು ನಿದ್ರಿಸುವುದೂ ಇದೆ.

ಕಿರು ಪಾಂಡ ಸಾಧು ಸ್ವಭಾವದ ಪ್ರಾಣಿ. ಸುಲಭವಾಗಿ ಪಳಗಿಸಬಹುದು. ಆಗಾಗ ಸಿಳ್ಳೆ ಹಾಕಿದಂತೆ ಕೂಗುತ್ತ ಓಡಾಡಿಕೊಂಡು ಇರುತ್ತದೆ. ಕೆಣಕಿದಾಗ ಹಿಂಗಾಲುಗಳ ಮೇಲೆ ನಿಂತು ಬುಸುಗುಟ್ಟುತ್ತದೆ. ಆಗ ಗುದದಿಂದ ಒಂದು ತೆರನ ಕಟುವಾಸನೆಯನ್ನು ಹೊರಸೂಸುವುದು.

ಬಿದಿರು ಕಳಿಲೆ, ಕಂದ ಮೂಲಾದಿಗಳು, ಹಣ್ಣುಗಳು ಇದರ ಪ್ರಧಾನ ಆಹಾರ. ಕೆಲವೊಮ್ಮೆ ಮೊಟ್ಟೆಗಳನ್ನೂ ದಂಶಕಗಳನ್ನೂ ಹಕ್ಕಿಗಳನ್ನೂ ತಿನ್ನುವುದುಂಟು.

ಕಿರು ಪಾಂಡಗಳು ಸಾಮಾನ್ಯವಾಗಿ ಜೊತೆ ಜೊತೆಯಾಗಿಯೋ ಇಲ್ಲವೆ ಸಣ್ಣ ಗುಂಪುಗಳಲ್ಲಿಯೋ ಇರುವುವು. ಮರಿಗಳನ್ನು ಈಯುವ ಕಾಲ ವಸಂತ. ಒಂದು ಸೂಲಿಗೆ ಒಂದು ಇಲ್ಲವೇ ಎರಡು ಮರಿಗಳು ಹುಟ್ಟುವುವು. ಮರದ ಪೊಟರೆಗಳೋ ಬಂಡೆಗಳ ಸಂದುಗಳೋ – ಇವೇ ಮರಿಗಳನ್ನು ಹಾಕುವ ತಾಣಗಳು. ಮರಿಗಳಿಗೆ ವಯಸ್ಕ ಪಾಂಡಗಳ ಗಾಢ ಬಣ್ಣ ಇರದು. ಹುಟ್ಟಿದ 21–30 ದಿವಸಗಳವರೆಗೆ ಮರಿಗಳಿಗೆ ದೃಷ್ಟಿ ಸಾಮರ್ಥ್ಯ ಇರುವುದಿಲ್ಲ. ಸುಮಾರು ಒಂದು ವರ್ಷ ವಯಸ್ಸಾಗುವವರೆಗೆ ಮರಿಗಳು ತಾಯೊಡನೆಯೇ ಇದ್ದು ಅನಂತರ ಬೇರೆ ಹೋಗುವುವು.

ದೈತ್ಯ ಪಾಂಡದ ಗಾತ್ರ ಹಿರಿದು. ವಯಸ್ಕ ಪ್ರಾಣಿಗಳು 1.2–1.5 ಮೀ ಉದ್ದ ಇರುವುವು : 75–160 ಕಿಗ್ರಾಂ ತೂಗುವುವು. ಮೈಮೇಲೆ ಉಣ್ಣೆಯಂಥ ಮಂದ ತುಪ್ಪಳ ಉಂಟು. ದೇಹದ ಬಣ್ಣ ಬಿಳಿ. ಕಿವಿ, ಕಾಲುಗಳು, ಭುಜದ ಅಡ್ಡಪಟ್ಟಿ ಹಾಗೂ ಕಣ್ಣುಗಳ ಸುತ್ತಣ ಭಾಗಗಳು ಕಪ್ಪು ಬಣ್ಣದವು. ದೈತ್ಯ ಪಾಂಡವನ್ನು ಕರಡಿಯ ಸಂಬಂಧಿ ಎನ್ನುವುದಿದೆಯಾದರೂ ಇದು ನಿಜಕ್ಕೂ ರಕೂನ್ ಪ್ರಾಣಿಯ ನಿಕಟ ಸಂಬಂಧಿ.

ಸಾಮಾನ್ಯವಾಗಿ ಒಂಟಿಯಾಗಿರುವ ಪ್ರಾಣಿ. ಸಂತಾನವೃದ್ಧಿ ಶ್ರಾಯದಲ್ಲಿ ಮಾತ್ರ ಜೊತೆಗೂಡಿ ವಾಸಿಸುತ್ತದೆ. ಇದರ ಪ್ರಧಾನ ಅಹಾರ ಬಿದಿರು ಕಳಿಲೆ ಹಾಗೂ ಬೇರು. ಇನ್ನಿತರ ಗಿಡಗೆಂಟೆಗಳನ್ನೂ ಅಗೊಮ್ಮೆ ಈಗೊಮ್ಮೆ ಮೀನು, ದಂಶಕ, ಇತ್ಯಾದಿ ಪ್ರಾಣಿಗಳನ್ನೂ ಸೇವಿಸುವುದುಂಟು. ಸಂತಾನವೃದ್ಧಿ ಶ್ರಾಯ ವಸಂತ. ಒಂದು ಸೂಲಿಗೆ 1–2 ಮರಿಗಳು ಹುಟ್ಟುವುವು. 4–10 ವರ್ಷಗಳ ಅನಂತರ ಲೈಂಗಿಕ ಪ್ರಬುದ್ಧತೆ ಬರುವುದು.

ದೈತ್ಯ ಪಾಂಡವನ್ನು ಸುಲಭವಾಗಿ ಸಾಕಬಹುದು. (ವಿ.ಸಿ)

**ಪಾರಿವಾಳ:** ಕೊಲಂಬಿಫಾರ್ಮಿಸ್ ಗಣದ ಕೊಲಂಬಿಡೆ ಕುಟುಂಬಕ್ಕೆ ಸೇರಿದ ಪಕ್ಷಿ (ಪಿಜನ್). ಉಷ್ಣ ಮತ್ತು ಸಮಶೀತೋಷ್ಣ ವಲಯಗಳಲ್ಲಿ ವಾಸಿಸುತ್ತದೆ. ಇದರಲ್ಲಿ ಬೆಳವಗಳನ್ನೊಳಗೊಂಡಂತೆ ಸುಮಾರು ಇನ್ನೂರತೊಂಭತ್ತು ಪ್ರಭೇದಗಳಿವೆ. ಬೆಳವಗಳು ಸಾಧಾರಣವಾಗಿ ಪಾರಿವಾಳಕ್ಕಿಂತ ಸಣ್ಣ ಗಾತ್ರದವು. ಆದರೆ ಇವನ್ನು ವೈಜ್ಞಾನಿಕ ವರ್ಗೀಕರಣದಿಂದಾಗಲೀ ನಿಗದಿಯಾದ ಗಾತ್ರದಿಂದಾಗಲೀ ಪಾರಿವಾಳಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಪಾರಿವಾಳಗಳು ಶಾಂತ ಸ್ವಭಾವದ, ದುಂಡು ದೇಹದ, ಗಿಡ್ಡ ಕತ್ತಿನ, ಸಣ್ಣ ತಲೆಯ, ಚಿಕ್ಕ ಕೊಕ್ಕಿನ ಪಕ್ಷಿಗಳು. ಕೊಕ್ಕು ಮತ್ತು ಮುಂದಲೆಯ ನಡುವೆ ಜೀನಿನಾಕಾರದ ಚರ್ಮದ ಪದರ ಉಂಟು. ಇವುಗಳ ಪುಕ್ಕಗಳನ್ನು ಸುಲಭವಾಗಿ ಕೀಳಬಹುದು. ಇವು ವೇಗವಾಗಿ ಹಾರಬಲ್ಲವು.




ಹೆಣ್ಣು ಗಂಡುಗಳು ಜೊತೆಗೂಡಿ ವಾಸಿಸುತ್ತವೆ. ಸಂಗಾತಿ ಸತ್ತುಹೋದರೆ ಮಾತ್ರ ಮತ್ತೊಂದು ಸಂಗಾತಿಯನ್ನು ಆರಿಸಿಕೊಳ್ಳುವ ವಿಚಿತ್ರ ಲಕ್ಷಣ ಇವಕ್ಕಿದೆ. ಹುಲ್ಲು ಮತ್ತು ಕಡ್ಡಿಗಳಿಂದ ನೆಲದ ಮೇಲೆ, ಮರದ ಕೊಂಬೆ ಅಥವಾ ಪೊಟರೆ, ಮನೆ ಮಾಡು ಮತ್ತು

ಪ್ರಪಾತದ ಬದುಗಳಲ್ಲಿ ಗೂಡು ಕಟ್ಟಿ ಒಂದು ಅಥವಾ ಎರಡು (ಅಪೂರ್ವವಾಗಿ ಮೂರು) ಬಿಳಿಯ ಮೊಟ್ಟೆಗಳನ್ನಿಟ್ಟು ಎರಡು ಅಥವಾ ಎರಡೂವರೆ ವಾರಗಳವರೆಗೆ ಗಂಡು ಹಗಲಿನಲ್ಲೂ ಹೆಣ್ಣು ರಾತ್ರಿಯಲ್ಲೂ ಅವುಗಳಿಗೆ ಕಾವು ಕೊಡುತ್ತವೆ. ಮೊಟ್ಟೆಗಳೊಡೆದು ಹೊರಬರುವ ಮರಿಗಳು ಕುರುಡಾಗಿದ್ದು ಕೇವಲ ಕೆಲವೇ ಪುಕ್ಕಗಳನ್ನು ಹೊಂದಿರುತ್ತವೆ. ಅನಂತರ ಮರಿಗಳಿಗೆ 12–18 ದಿನಗಳವರೆಗೆ ತಂದೆ ತಾಯಿಗಳ ಆರೈಕೆ ಅಗತ್ಯ. ಮರಿಗಳಿಗೆ 7–10 ದಿವಸಗಳವರೆಗೆ ಗಂಡು ಹೆಣ್ಣುಗಳೆರಡೂ ಎರೆ ಚೀಲದಲ್ಲಿ ಉತ್ಪನ್ನವಾದ ಹಾಲನ್ನು ನೀಡುತ್ತವೆ. ಮರಿಗಳು ತಂದೆತಾಯಿಗಳ ಬಾಯಿಯ ಮೂಲಕ ಎರೆಚೀಲಕ್ಕೆ ತಮ್ಮ ಕೊಕ್ಕನ್ನು ಚಾಚಿ ಮೊದಲು ಹಾಲನ್ನು ಅನಂತರ ಅಲ್ಲಿರುವ ಕಾಳುಗಳನ್ನು ತಿಂದು ಬೆಳೆಯುತ್ತವೆ. ಪ್ರಾಯಕ್ಕೆ ಬಂದ ಪಕ್ಷಿಗಳು ವರ್ಷಕ್ಕೆ ಎರಡು ಮೂರು ಬಾರಿ ಗೂಡು ಕಟ್ಟಿ ಮೊಟ್ಟೆ ಇಡುತ್ತವೆ. ಪಾರಿವಾಳಗಳು ತಮ್ಮ ಮೊದಲ ವರ್ಷದಲ್ಲೇ ಮೊಟ್ಟೆ ಇಡಲು ಪ್ರಾರಂಭಿಸುತ್ತವೆ. ಸಾಧಾರಣವಾಗಿ ಗಂಡು ಹಕ್ಕಿಗಳು ಹೆಣ್ಣಿಗಿಂತ ಸ್ವಲ್ಪ ದೊಡ್ಡವು. ಗಂಡಿನ ತಲೆಯ ಮೇಲೆ ಅಥವಾ ದೇಹದ ಮುಂಭಾಗದಲ್ಲಿ ಬಣ್ಣದ ಪಟ್ಟಿಗಳುಂಟು.

ನ್ಯೂಗಿನಿಯಲ್ಲಿ ಕಂಡುಬರುವ ಶಿಖೆಯ ಪಾರಿವಾಳಗಳು ಅತ್ಯಂತ ದೊಡ್ಡ ಗಾತ್ರದವು. ಇವುಗಳ ಉದ್ದ 60–90 ಸೆಂಮೀ. ತಲೆಯ ಮೇಲೆ ನೀಲಿ ಮತ್ತು ಬೂದು ಬಣ್ಣದ ಹಲವು ಗರಿಗಳುಂಟು.

ಉಷ್ಣವಲಯದಲ್ಲಿ ವಾಸಿಸುವ ಪಾರಿವಾಳಗಳು ಉಜ್ವಲ ವರ್ಣದವು. ಆದರೆ ಸುಪರಿಚಿತವಾದ ಕೊಲುಂಬ ಲೀವಿಯ ಪ್ರಭೇದಕ್ಕೆ ಸೇರಿದ ಕಾಡು ಪಾರಿವಾಳಗಳ ಬಣ್ಣ ಮಾಸಲು. ಯೂರೋಪ್ ಮತ್ತು ಏಷ್ಯಾಗಳಲ್ಲಿ ಕಂಡುಬರುವ ಈ ಪಾರಿವಾಳಗಳ ಸಾಕಣೆ ಕ್ರಿ.ಪೂ. 2000ದಿಂದಲೂ ನಡೆದು ಬಂದಿದೆಯೆನ್ನಲಾಗಿದೆ. ಸಾಕು ಪಾರಿವಾಳಗಳ ಅಂದವಾದ ಬಣ್ಣದ ತಳಿಗಳು, ಜೂಜಾಟದ ತಳಿಗಳು ಮತ್ತು ದೊಡ್ಡ ಗಾತ್ರದ ಆಹಾರದ ತಳಿಗಳು ಇವುಗಳಿಂದ ಪಡೆದಂಥವು. ಹೀಗೆ ಪಡೆದ ತಳಿಗಳ ಸಂಖ್ಯೆ ಸುಮಾರು 200ಕ್ಕೂ ಹೆಚ್ಚು.

ಸುದ್ದಿ ಒಯ್ಯಲು ಪಾರಿವಾಳಗಳನ್ನು ಅನಾದಿ ಕಾಲದಿಂದಲೂ ಬಳಸಲಾಗಿದೆ. ಪುರಾಣಗಳಲ್ಲಿ ಮತ್ತು ಅನೇಕ ದಂತ ಕತೆಗಳಲ್ಲಿ ಇವುಗಳ ಉಲ್ಲೇಖ ಉಂಟು. ಬಾಗ್ದಾದಿನ ಸುಲ್ತಾನ ಕ್ರಿ.ಶ. 1150ರಲ್ಲಿ ಪಾರಿವಾಳದ ಟಪಾಲನ್ನು ಸ್ಥಾಪಿಸಿದನೆನ್ನಲಾಗಿದೆ. ಯುದ್ಧಗಳಲ್ಲಿ ತುರ್ತು ಸುದ್ದಿಗಳನ್ನು ಒಯ್ಯಲು ಇಪ್ಪತ್ತನೆಯ ಶತಮಾನದಲ್ಲಿಯೂ ಪಾರಿವಾಳಗಳನ್ನು ಬಳಸಲಾಗಿದೆ.

ಉತ್ತರ ಅಮೆರಿಕದ ಪ್ರಯಾಣಿಕ ಪಾರಿವಾಳ ಕೇವಲ ಒಂದು ಶತಮಾನದ ಹಿಂದೆ ಪ್ರಪಂಚದಲ್ಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಪಕ್ಷಿ ಪ್ರಭೇದವಾಗಿತ್ತು. ಮಾನವ ಆಹಾರಕ್ಕಾಗಿ ದುರಾಸೆಯಿಂದ ಬೇಟೆಯಾಡಿದ ಕಾರಣ ನಿರ್ನಾಮವಾಗಿದೆ. ಈ ಪ್ರಭೇದದ ಕೊನೆಯ ಪಕ್ಷಿ ಸಿನ್‌ಸಿನಾಟಿ ಪ್ರಾಣಿ ಸಂಗ್ರಹಾಲಯದಲ್ಲಿ 1914ರಲ್ಲಿ ಅಸು ನೀಗಿತು. ***

**ಪಾರೊಪೊಡ:** ಆರ್ತ್ರಾಪೊಡ ವಂಶದ ಮಿರಿಯಾಪೊಡ ವರ್ಗದಲ್ಲಿನ ಪ್ರೋಗೋನಿಯೆಟ ಉಪವರ್ಗದಲ್ಲಿರುವ ಗಣ. ಇದರಲ್ಲಿರುವ ಪ್ರಾಣಿಗಳು ಗಾತ್ರದಲ್ಲಿ ಅತ್ಯಂತ ಚಿಕ್ಕವು. ಇವುಗಳ ಉದ್ದ 2 ಮಿಮೀ ಗಿಂತ ಕಡಿಮೆ. ಕೊಳೆಯುತ್ತಿರುವ ಸಸ್ಯ ಮತ್ತು ಪ್ರಾಣಿಗಳನ್ನು ಸೇವಿಸಿ ಜೀವಿಸುತ್ತವೆ. ಇವುಗಳ ದೇಹದ ತಲೆ ಭಾಗದಲ್ಲಿ ಐದು ಖಂಡಗಳು, ಎದೆ ಮತ್ತು ಉದರ ಭಾಗದಲ್ಲಿ 12 ಖಂಡಗಳಿವೆ. 2–10 ನೆಯ ಖಂಡಗಳಲ್ಲಿ ಮಾತ್ರ ಕಾಲುಗಳಿವೆ. ತಲೆಯ ಭಾಗದಲ್ಲಿನ ಮೊದಲನೆಯ ಮ್ಯಾಕ್ಸಿಲ ಕೂಡಿಕೊಂಡು ಗ್ನಾತೊಕ್ಕೈಲೇರಿಯಮ್ ಆಗಿ ರೂಪುಗೊಂಡಿದೆ. ಆಂಟೆನ್ನಾಗಳು ಕವಲೊಡೆದಿವೆ. ವದನಾಂಗಗಳಲ್ಲಿ ಸರಳವಾದ ಮತ್ತು ವಿಭಾಗವಾಗದಿರುವ ಮ್ಯಾಂಡಿಬಲ್‌ಗಳಿವೆ. ಇವುಗಳಲ್ಲಿ ಕಣ್ಣುಗಳಾಗಲೀ, ಹೃದಯವಾಗಲೀ, ಉಸಿರಾಟದ ಅಂಗಗಳಾಗಲಿ ಇಲ್ಲ. ಇವು ಚರ್ಮದ ಮೂಲಕ ಉಸಿರಾಡುವವು. ಈ ಜೀವಿಗಳ ಜನನೇಂದ್ರಿಯಗಳು ದೇಹದ ಮುಂತುದಿಯ ಬಳಿ ಹೊರತೆರೆಯುವುವು. ಈ ಗಣದಲ್ಲಿ ಪಾರೋಪಿಡೆ ಮತ್ತು ಯೂರಿಪಾರೊಪಿಡೆ ಕುಟುಂಬಗಳಿವೆ. ಉದಾ: ಪಾರೊಪಸ್ ಹಕ್ಸ್ಲಿಯೈ, ಯೂರಿಪಾರೊಪಸ್ ಸ್ಪೈನೋಸಸ್. (ಎಂ.ಎನ್.ವಿಐ.)

**ಪಾಲಿಕೀಟ:** ಅನೆಲಿಡ ವಿಭಾಗದ ಕೀಟಪೊಡವರ್ಗದ ಗಣ. ಇದರಲ್ಲಿರುವ ಪ್ರಾಣಿಗಳು ಸಾಗರವಾಸಿಗಳು. ಈ ಪ್ರಾಣಿಗಳ ದೇಹದಲ್ಲಿ ತಲೆಭಾಗ ಸ್ಪಷ್ಟವಾಗಿ ರೂಪುಗೊಂಡಿದೆ. ತಲೆಯಲ್ಲಿ ಆಂಟೆನಾ (ಕುಡಿಮೀಸೆ) ಇದೆ. ದೇಹ ಖಂಡಗಳಾಗಿ ವಿಭಾಗವಾಗಿದೆ. ದೇಹದಲ್ಲಿ ಕ್ಲೈಟೆಲಮ್ ಭಾಗ ಇಲ್ಲ. ಪಾಲಿಕೀಟ ಗುಂಪಿನ ಪ್ರಾಣಿಗಳು ಕಿವಿರಿನಿಂದ ಉಸಿರಾಡುತ್ತವೆ. ದೇಹದ ಪ್ರತಿ ಖಂಡಗಳ ಎರಡು ಪಕ್ಕಗಳಲ್ಲಿರುವ ಪಾದ (ಪಾರಪೋಡಿಯ) ಗಳಲ್ಲಿ ಬಿರುಗೂದಲುಗಳಿವೆ. ಬಿರುಗೂದಲುಗಳು ಕೈಟಿನ್‌ನಿಂದ ರಚಿತವಾಗಿವೆ. ಪ್ರತಿ ಖಂಡದಲ್ಲಿ ಒಂದು ಜೊತೆ ನೆಫ್ರಿಡಿಯ ವಿಸರ್ಜನಾಂಗಗಳಿವೆ.

ಪಾಲಿಕೀಟ ಗುಂಪಿನ ಪ್ರಾಣಿಗಳು ಭಿನ್ನಲಿಂಗಿಗಳು. ಅಂಡಾಣುಗಳ ನಿಷೇಚನ ಹೆಣ್ಣಿನ ದೇಹದ ಹೊರಭಾಗದಲ್ಲಿ ನಡೆಯುತ್ತದೆ. ಸ್ವತಂತ್ರ ಜೀವನ ನಡೆಸುವ



ನೀರಿಸ್

ಟ್ರೋಕೋಫೋರ್ ಡಿಂಬ ಮೊಟ್ಟೆಯಿಂದ ಹೊರ ಬಂದು, ಕೆಲವು ದಿನ ನೀರಿನಲ್ಲಿ ವಾಸಿಸಿ, ಕೊನೆಗೆ ಸಾಗರದ ತಳ ಸೇರಿ, ರೂಪಪರಿವರ್ತನೆ ಹೊಂದಿ, ಮರಿಯಾಗಿ ರೂಪುಗೊಳ್ಳುತ್ತದೆ. ಉದಾ: ನೀರೀಸ್, ಸಿಲ್ಲಿಸ್, ಸಬೆಲ ಮುಂತಾದವು. (ಎಂ.ಎನ್.ವಿ.ಐ.)

**ಪಾರ್ಕಿನ್‌ಸನ್ನನ ಕಾಯಿಲೆ:** ನಡುಹರೆಯದವರಲ್ಲಿ ಕಾಣಿಸಿಕೊಳ್ಳುವ, ಸೆಕೆಂಡಿಗೆ 3 ರಿಂದ 8 ರವರೆಗಿನ ತೀವ್ರ ನಡುಕದಿಂದ ಒಡಗೂಡಿರುವ ವ್ಯಾಧಿ. ಪಾರ್ಕಿನ್ಸೋನಿಸಮ್ ಎಂದು ಹೇಳುವುದು ವಾಡಿಕೆ. ಇಂಗ್ಲೆಂಡಿನ ವೈದ್ಯ ಜೇಮ್ಸ್ ಪಾರ್ಕಿನ್‌ಸನ್ (1755–1824) ಇದನ್ನು ಮೊದಲಿಗೆ ಗುರುತಿಸಿ ವಿವರಿಸಿದನಾದ್ದರಿಂದ ಈ ಹೆಸರು. ಗಂಡಸರನ್ನು ಹೆಚ್ಚಾಗಿ ಪೀಡಿಸುವ ವ್ಯಾಧಿ ಇದು.

ಪಾರ್ಕಿನ್‌ಸನ್ನನ ಕಾಯಿಲೆ ಪ್ರಾರಂಭದಲ್ಲಿ ಅಗೋಚರವಾಗಿದ್ದು ಸ್ವಲ್ಪ ಸ್ವಲ್ಪವಾಗಿ ಮುಂದುವರಿಯುವುದು. ದೇಹದ ಸಂಯೋಜಿತ ಚಲನೆಗಳ ಮತ್ತು ಗಡಸುತನದ ನಾಶ ರೋಗದ ಪ್ರಾರಂಭ ಲಕ್ಷಣಗಳು. ಮಿದುಳಿನ ಬುಡದಲ್ಲಿರುವ ನರಗಂಟುಗಳು ಕ್ಷಯಿಸುವುದೇ ಇದರ ಕಾರಣ. 50–60 ವಯಸ್ಸಿನವರಲ್ಲಿ ರೋಗ ದೇಹದ ಅದಿರಾಟದಿಂದ ಕಾಣಿಸಿಕೊಳ್ಳುತ್ತದೆ. ಬೆರಳುಗಳ ಚಲನೆ ಗುಳಿಗೆಯನ್ನು ಉಂಡೆ ಮಾಡುವ ರೀತಿಯಲ್ಲಿರುವುದು. ದೇಹದ ಅದಿರಾಟ ಕೈ ಅಥವಾ ಕಾಲಿನಲ್ಲಿ ಪ್ರಾರಂಭವಾಗಿ ಇತರ ಭಾಗಗಳಿಗೂ ನಿಧಾನವಾಗಿ ಹಬ್ಬುವುದು. ಅನಂತರ ಶರೀರದಲ್ಲಿ ಒಂದು ರೀತಿಯ ಗಡಸುತನ ಏರ್ಪಟ್ಟು ನಿಲುವು ಮತ್ತು ನಡಿಗೆಗಳಲ್ಲಿ ಗಮನಾರ್ಹ ಬದಲಾವಣೆ ಆಗುವುದು; ನಿಶ್ಚಲವಾಗಿರುವಾಗ ಒರಟು ನಿಲುವು ಮತ್ತು ಮುಖದಲ್ಲಿ ಮುಸುಕು ಧರಿಸಿದಂಥ ಲಕ್ಷಣಗಳು ಎದ್ದು ಕಾಣುವುವು. ದೇಹದ ಬಗ್ಗಿದ ನಿಲವು, ಕಾಲೆಳೆದುಕೊಂಡು ಹತ್ತಿರ ಹತ್ತಿರ ಹೆಜ್ಜೆ ಹಾಕುವಿಕೆ, ನಿಧಾನದ ನಡಿಗೆ, ನಡೆಯುವಾಗ ಕೈಗಳು ದೇಹದ ಮುಂದೆ ಜೋತು ಬಿದ್ದಿರುವುದು, ಸಣ್ಣ ಅಕ್ಷರಗಳ ಬರವಣಿಗೆ, ಕೈಯಿಂದ ಮಾಡುವ ಕಾರ್ಯಗಳು ಒಂದೊಂದಾಗಿ ಕಡಿಮೆಯಾಗುವಿಕೆ, ಇತ್ಯಾದಿ ಈ ರೋಗದ ಮುಖ್ಯ ಲಕ್ಷಣಗಳು. ಆದರೆ ಬುದ್ಧಿಶಕ್ತಿ ಮತ್ತು ಜ್ಞಾನೇಂದ್ರಿಯಗಳು ಅಳಿಯದಂತೆ ಜೋಪಾನವಾಗಿರುವಂತೆ ಕಾಣುವುವು.

***

**ಪಾಸ್ತರ್, ಲೂಯಿ (೧೮೨೨–೧೮೯೫):** ಫ್ರಾನ್ಸಿನ ಸೂಕ್ಷ್ಮಾಣುಜೀವಿ ವಿಜ್ಞಾನಿ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ವೈದ್ಯಕೀಯಕ್ಕೆ ಸಂಬಂಧಿಸಿದಂತೆ ಅದ್ಭುತ ಪ್ರಾಯೋಗಿಕ ವ್ಯಾಸಂಗಗಳನ್ನು ಇತಿಹಾಸ ಪ್ರವರ್ತಕ ಫಲಿತಾಂಶಗಳನ್ನು ಪಡೆದು ಸಾರ್ವಜನಿಕ ಆರೋಗ್ಯ ಪಾಲನೆಗೆ ಹಿರಿಯ ಕೊಡುಗೆಗಳನ್ನು ನೀಡಿದ ಮಹಾ ಪ್ರತಿಭಾಶಾಲಿ

ಅನ್ವೇಷಕ. ಮೂಲತಃ ರಸಾಯನವಿಜ್ಞಾನ, ಮಾದಕ ಪಾನೀಯ ಬೀರಿನ ಕಂಪು ಮತ್ತು ರುಚಿ ರಕ್ಷಣೆ, ರೇಷ್ಮೆ ಹುಳುಗಳಿಗೆ ಅಂಟಿ ಮಾರಕವಾಗಿ ಪರಿಣಮಿಸುತ್ತಿದ್ದ ಸೋಂಕು

ಮುಂತಾದವನ್ನು ಕುರಿತು ತೀವ್ರ ಸಂಶೋಧನೆ ಹಾಗೂ ಅಧ್ಯಯನ ಮಾಡಿದ ಪಾಸ್ತರ್ ಮುಂದೆ ಪ್ರೌಢ ವೈದ್ಯಕೀಯ ಆವಿಷ್ಕಾರಗಳನ್ನು ಮಾಡಲು ವಿಶೇಷ ಅರ್ಹತೆ ಗಳಿಸಿದ.

ಲೂಯಿ ಪಾಸ್ತರ್ ೧೮೨೨ ಡಿಸೆಂಬರ್ ೨೭ ರಂದು ಫ್ರಾನ್ಸಿನ ಜ್ಯೂರ ಪ್ರದೇಶಕ್ಕೆ ಸೇರಿದ ಡೋಲಿ ಎಂಬಲ್ಲಿ ಜನಿಸಿದ. ಇವನ ತಂದೆ ಜೀನ್ ಜೋಸೆಫ್ ಪಾಸ್ತರ್, ನೆಪೋಲಿಯನ್ನನ ಸೈನ್ಯದಲ್ಲಿ ಸಾರ್ಜೆಂಟ್–ಮೇಜರ್ ಆಗಿದ್ದ. ನೆಪೋಲಿಯನ್ನನ ಪತನಾನಂತರ ವಂಶಪರಂಪರೆಯಾಗಿ ನಡೆದು ಬಂದಿದ್ದ ಚರ್ಮ ಹದ ಮಾಡುವ ಉದ್ಯಮಕ್ಕೆ ಇಳಿದ. ಲೂಯಿಯ ಜನನವಾದ ಸ್ವಲ್ಪ ಕಾಲದಲ್ಲಿ ಸಂಸಾರ ಹತ್ತಿರದ ಆರ್ಬಾಯ್ ಎಂಬಲ್ಲಿಗೆ ಹೋಗಿ ನೆಲೆಸಿತು. ಅಲ್ಲೆ ಲೂಯಿಯ ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸ ನಡೆಯಿತು. ಈತ ಪ್ರತಿಭಾನ್ವಿತ ವಿದ್ಯಾರ್ಥಿ ಎಂದು ಶಾಲೆಯ ಮುಖ್ಯೋಪಾಧ್ಯಾಯನಿಗೆ ಮನದಟ್ಟಾಗಿದ್ದುದರಿಂದ ಪ್ಯಾರಿಸ್ಸಿನ ಇಕೋಲಿ ನಾರ್ಮೇಲಿಗೆ ಸೇರಿಕೊಳ್ಳಲು ತಯಾರಾಗುವಂತೆ ಶಿಕ್ಷಣ ಪಡೆಯಬೇಕೆಂದೂ ಅದಕ್ಕಾಗಿ ಇವನನ್ನು ಪ್ಯಾರಿಸ್ಸಿಗೆ ಕಳುಹಿಸಬೇಕೆಂದೂ ಆತ ಆಗ್ರಹ ಮಾಡಿದ. ಅದರಂತೆ ಲೂಯಿಯನ್ನು ದೂರದ ಪ್ಯಾರಿಸ್ಸಿಗೆ ಕಳುಹಿಸಲಾಯಿತು (೧೮೩೮). ಆದರೆ ಮನೆ ಗೀಳು ಹಿಡಿದು ವ್ಯಾಸಂಗ ಮುಂದುವರಿಸಲಾಗದೆ ಅವನು ಶೀಘ್ರದಲ್ಲಿ ಆರ್ಬಾಯಿಗೆ ವಾಪಸಾದ. ಅನಂತರ ಹತ್ತಿರದ ಪರಿಚಿತ ಬೆಸಾನ್‌ಕಾನಿನ ರಾಯಲ್ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಿ ೧೮೪೦ ಮತ್ತು ೧೮೪೨ ರಲ್ಲಿ ಪದವಿಗಳನ್ನು ಪಡೆದ. ಇಕೋಲಿ ನಾರ್ಮೆಲೀಗೆ ಸೇರುವ ಉದ್ದೇಶದಿಂದ ಪುನಃ ಪ್ಯಾರಿಸ್ಸಿಗೆ ತೆರಳಿ (೧೮೪೩) ಆಯ್ಕೆಗಾಗಿ ನಡೆದ ಪರೀಕ್ಷೆಯನ್ನು ತೆಗೆದುಕೊಂಡು ಉತ್ತೀರ್ಣರಾದ ವಿದ್ಯಾರ್ಥಿಗಳ ಪೈಕಿ ನಾಲ್ಕನೆಯ ಸ್ಥಾನ ಗಳಿಸಿದ. ಪ್ಯಾರಿಸ್ಸಿನಲ್ಲಿ ಆಗ ಪ್ರಸಿದ್ಧ ವಿಜ್ಞಾನಿಗಳಾಗಿದ್ದ ಡ್ಯೂಮಾಸ್, ಬಲಾರ್ಡ್ ಮುಂತಾದವರ ಸಂಪರ್ಕ ಹೊಂದಿ ವ್ಯಾಸಂಗ ಮುಂದುವರಿಸಿ ಡಾಕ್ಟೊರೇಟ್ ಪದವಿ ಪಡೆದ (೧೮೪೭).

ರೆಸಿಮಿಕ್ ಟಾರ್ಟಾರಿಕ್ ಆಮ್ಲವನ್ನು ಕುರಿತ ಸಂಶೋಧನೆಯಲ್ಲಿ ಪಾಸ್ತರ್ ಉದ್ಯುಕ್ತನಾದ (೧೮೪೮). ಟಾರ್ಟಾರಿಕ್ ಆಮ್ಲ ಸಾಮಾನ್ಯವಾದ ಹಾಗೂ ರೆಸಿಮಿಕ್ ಎಂಬ ವಿಶೇಷವಾದ ಎರಡು ರೂಪಗಳಲ್ಲಿ ಇರುವುದು ತಿಳಿದಿತ್ತು. ಟಾರ್ಟಾರಿಕ್ ಆಮ್ಲ ಮತ್ತು ಅದರ ಉತ್ಪನ್ನಗಳ ಜಲೀಯ ದ್ರಾವಣಗಳು ಧ್ರುವೀಕೃತ ಬೆಳಕಿನ ತಲವನ್ನು ಬಲಕ್ಕೆ ತಿರುಗಿಸುವುವೆಂದೂ (ದಕ್ಷಿಣಾವರ್ತಕಗಳು ಅಥವಾ ಬಲಮುರಿಗಳೆಂದೂ) ರೆಸಿಮಿಕ್ ಆಮ್ಲ ಮತ್ತು ಅದರ ಉತ್ಪನ್ನಗಳಿಗೆ ಈ ಗುಣ ಇಲ್ಲವೆಂದೂ ೧೮೪೪ ರಲ್ಲಿ ಮಿಟ್ಸರ್‌ಲಿಕ್ ಎಂಬಾತ ತಿಳಿಯಪಡಿಸಿದ. ರೆಸಿಮಿಕ್ ಆಮ್ಲಜನ್ಯ ಲವಣಗಳ ಸ್ಫಟಿಕಗಳು ಎರಡು ಬಗೆಯವಾಗಿರುವುವೆಂದು ಪಾಸ್ತರ್ ಮೊತ್ತಮೊದಲಿಗೆ ಕಂಡುಕೊಂಡು ಸೂಕ್ಷ್ಮದರ್ಶಕದ ಸಹಾಯದಿಂದ ಈ ಎರಡು ಬಗೆಯ ಸ್ಫಟಿಕಗಳನ್ನೂ ಬೇರ್ಪಡಿಸಿದ. ಅನಂತರ ಅವುಗಳಿಂದ ಟಾರ್ಟಾರಿಕ್ ಆಮ್ಲವನ್ನು ತಯಾರಿಸಿ ಒಂದೊಂದರಿಂದ ತಯಾರಿಸಿದ ಆಮ್ಲವೂ ಒಂದೊಂದು ಬಗೆಯದೆಂದು ತೋರಿಸಿದ. ಒಂದು ಬಗೆಯದು ಪೂರ್ವಪರಿಚಿತ ಟಾರ್ಟಾರಿಕ್ ಆಮ್ಲದ ಸಾಮಾನ್ಯ ರೂಪ. ಇನ್ನೊಂದು ಧ್ರುವೀಕೃತ ಬೆಳಕಿನ ತಲವನ್ನು ಬಲಗಡೆಗೆ ಬದಲಾಗಿ ಸಮಪ್ರಾಬಲ್ಯದಿಂದ ಎಡಗಡೆಗೆ ತಿರುಗಿಸಬಲ್ಲ ಲಕ್ಷಣವಿದ್ದ ಆದರೆ ಆತನಕ ತಿಳಿದಿರದಿದ್ದ ಹೊಸ ಆಮ್ಲ. ಇವೆರಡೂ ಸಮಪ್ರಮಾಣದಲ್ಲಿ ಮಿಲನವಾಗಿ ರೆಸಿಮಿಕ್ ಆಮ್ಲವಾಗುತ್ತದೆ ಎಂದು ಪಾಸ್ತರ್ ವಿಶದೀಕರಿಸಿದ. ಫ್ರಾನ್ಸಿನ ಅತ್ಯುನ್ನತ ರಸಾಯನ ವಿಜ್ಞಾನಿಗಳ ತನಿಖೆಗೆ ಈ ಆವಿಷ್ಕಾರ ಒಳಗಾಗಿ ಇದು ಸತ್ಯವೆಂದು ಸ್ಥಿರಪಟ್ಟಿತು; ಪಾಸ್ತರ್ ಬಲು ಮೇಲ್ಮಟ್ಟದ ವಿಜ್ಞಾನಿಯೆಂದು ಪ್ರಸಿದ್ಧನಾದ (ಮುಂದೆ ಟಾರ್ಟಾರಿಕ್ ಆಮ್ಲದ ನಾಲ್ಕನೆಯ ರೂಪ ಮಿಸೋಟಾರ್ಟಾರಿಕ್ ಆಮ್ಲವನ್ನೂ ಅವನೇ ಆವಿಷ್ಕರಿಸಿದ.). ಈ ವ್ಯಾಸಂಗಗಳನ್ನು ಆತ ಮುಂದೆ ವರ್ಗವಾಗಿ ಹೋದ ಡಿಜಾನ್ ಹಾಗೂ ಸ್ಟ್ರ್ಯಾಸ್‌ಬರ್ಗಿನಲ್ಲಿಯೂ ಮುಂದುವರಿಸಿ ಮುಕ್ತಾಯ ಮಾಡಿದ್ದು ಆತನ ಸಾಧನೆಯ ಪ್ರತೀಕ.

೧೮೫೪ ರಲ್ಲಿ ಲಿಲ್ಲೆ ಎಂಬಲ್ಲಿ ಹೊಸದಾಗಿ ಪ್ರಾರಂಭವಾದ ಕಾಲೇಜಿನ ಮುಖ್ಯಸ್ಥನಾಗಿ ಪಾಸ್ತರ್ ವರ್ಗಮಾಡಲ್ಪಟ್ಟ. ಅಲ್ಲಿ ಅವನು ಬೀರನ್ನು ಕುರಿತು ಅಧ್ಯಯನ ಕೈಗೊಳ್ಳುವ ಅವಕಾಶ ಒದಗಿತು. ಬೀರ್ ನಿರ್ಮಾಪಕ ಸಂಸ್ಥೆಗಳು ಅಲ್ಲಿ ಹಲವಿದ್ದು ಫ್ರಾನ್ಸ್ ದೇಶದ ಬೀರಿನ ರುಚಿಗೆ ಹಾಗೂ ಪ್ರಸಿದ್ಧಿಗೆ ಕಾರಣವಾಗಿದ್ದವು. ಆದರೆ ಶೀಶೆಗಳಲ್ಲಿ ಮೊಹರು ಮಾಡಿದಂತೆಯೇ ಅದರ ರುಚಿ ಹಾಗೂ ಕಂಪು ಕೆಟ್ಟು ಹೋಗುತ್ತಿದ್ದು ಗಿರಾಕಿಗಳು ತಪ್ಪಿ ಹೋಗುವ ಸಂಭವ ಬಂದಿತ್ತು. ಬೀರ್ ತಯಾರಿಕೆಯಲ್ಲಿ ಬಳಸುತ್ತಿದ್ದ ಯೀಸ್ಟ್ ಎಂಬ ಹುದುಗುಕಾರಕ ವಸ್ತುವನ್ನು ಪಾಸ್ತರ್ ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿ ಅದರಲ್ಲಿ ಸಾಮಾನ್ಯ ಹಾಗೂ ವಿಶೇಷ ರೂಪಗಳು ಇರುವುದನ್ನೂ, ವಿಶೇಷ ರೂಪದ ಯೀಸ್ಟಿನಿಂದ ತಯಾರಾದ ಬೀರ್ ಕಾಲಕ್ರಮದಲ್ಲಿ ಕೆಟ್ಟುಹೋಗುವುದನ್ನೂ ಗಮನಿಸಿದ. ೧೮೫೭ ರಲ್ಲಿ ಪಾಸ್ತರ್ ಇಕೋಲಿ ನಾರ್ಮೆಲ್ಲಿನಲ್ಲಿ ಪ್ರಾಧ್ಯಾಪಕನಾಗಿ ವರ್ಗವಾದ ಮೇಲೂ ಈ ಬಗ್ಗೆ ಅನ್ವೇಷಣೆ ಮಾಡುತ್ತಿದ್ದು ಹುದುಗುಕಾರಕ ವಸ್ತು ಹಾಗೂ ಹುಳಿ ಬರಿಸುವ ವಸ್ತು ವಾಸ್ತವವಾಗಿ ಸೂಕ್ಷ್ಮಕ್ರಿಮಿಗಳೆಂದೂ ವಾತಾವರಣದಲ್ಲಿ ಅವು ಸಾಮಾನ್ಯವಾಗಿ ಇರುವುವೆಂದು, ಜನ ವಾಸವಾಗಿರದ ಮತ್ತು ಸ್ವಚ್ಛ ವಾತಾವರಣವುಳ್ಳ ಪರ್ವತಾಗ್ರದ ಮೇಲಿನ ವಾಯುವಿನಲ್ಲಿ ಇರುವುದಿಲ್ಲವೆಂದೂ, ಅಲ್ಲಿ ಪದಾರ್ಥ ತಾನಾಗಿಯೇ ಹುದುಗೇಳುವುದಾಗಲೀ, ಹುಳಿ ಬಂದು ಕೆಟ್ಟು ಹೋಗುವುದಾಗಲೀ ಬೇಗ ಕಂಡುಬರುವುದಿಲ್ಲವೆಂದೂ ವಿಶದೀಕರಿಸಿದ. ಇಂಥ ಕ್ರಿಮಿಗಳು ನಾನಾ ಬಗೆಯವು ; ಹುದುಗೇಳುವಾಗ ಬಗೆಬಗೆಯ ಕ್ರಿಮಿಗಳಿಂದ ಅನುರೂಪ ರಾಸಾಯನಿಕ ಕ್ರಿಯೆಗಳು ಜರುಗಿ ಅಂತ್ಯಪರಿಣಾಮಗಳು ಬದಲಾಗುತ್ತವೆ ಎಂದು ತೋರಿಸಿದ. ಅಪೇಕ್ಷಿತ ಪರಿಣಾಮ ಕಂಡುಬಂದ ಬಳಿಕ ವಸ್ತುವನ್ನು ೫೫° ಸೆ –೭೦° ಸೆ ಯಷ್ಟು ಉಷ್ಣತೆಗೆ ಒಡ್ಡಿದರೆ ಈ ಕ್ರಿಮಿಗಳು ಸತ್ತು ಹೋಗಿ ಮುಂದೆ ಯಾವುದೇ ರೀತಿಯ ಅನಪೇಕ್ಷಿತ ಪರಿಣಾಮ ಕಂಡುಬರುವುದಿಲ್ಲವೆಂದೂ ಬೀರ್ ತಯಾರಿಸಿ ಶೀಶೆಗೆ ಹಾಕಿ ಮೊಹರು ಮಾಡಿದ ಮೇಲೆ ಅದನ್ನು ಈ ರೀತಿ ಸಂಸ್ಕರಿಸಿರುವುದರಿಂದ ಬೀರಿನ ರುಚಿ ಮತ್ತು ಕಂಪು ಕೆಡುವುದಿಲ್ಲವೆಂದೂ ತೋರಿಸಿ, ಹೆಚ್ಚು ಕಡಿಮೆ ನಾಶವಾಗಿಯೇ ಹೋಗಿದ್ದ ಫ್ರಾನ್ಸಿನ ಬೀರ್ ಕೈಗಾರಿಕೆಯ ಪುನರುತ್ಥಾನಕ್ಕೆ ಕಾರಣನಾದ.

ಇದೇ ವ್ಯಾಸಂಗದಿಂದ ವಿಶದವಾದ ಇನ್ನೊಂದು ಮುಖ್ಯ ವಿಷಯವೆಂದರೆ ಕ್ರಿಮಿಗಳು ತಾವಾಗಿಯೇ ನಿರ್ಜೀವ ವಸ್ತುಗಳಿಂದ ಉದ್ಭವಿಸಲಾರವು ಎಂಬುದು. ನಿರ್ಜೀವ ವಸ್ತುಗಳಿಂದ ಜೀವಿಗಳು ಉತ್ಪತ್ತಿಯಾಗಬಲ್ಲವು ಎಂದು ಆಗ ನಂಬಿಕೆ ಇತ್ತು. ಮಾಂಸವನ್ನಾಗಲಿ ಮಾಂಸಸಾರವನ್ನಾಗಲಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದರೆ ಜೀವಂತ ಸೂಕ್ಷ್ಮಾಣುಗಳು ಯಾವುವೂ ಕಾಣಬರದಿದ್ದರೂ ಕೆಲಕಾಲಾನಂತರ ಅವೇ ವಸ್ತುಗಳನ್ನು ಪುನಃ ಪರೀಕ್ಷಿಸಿದರೆ ಸೂಕ್ಷ್ಮಾಣುಗಳು ಅವುಗಳಲ್ಲಿ ಉದ್ಭವಿಸಿರುವುದು ತಿಳಿಯುತ್ತದೆ. ಮಾಂಸ ಅಥವಾ ಅದರ ಸಾರವಿರುವ ಪಾತ್ರೆಯ ಬಾಯಿಯನ್ನು ಬಿಗಿಯಾಗಿ ಮುಚ್ಚಿಟ್ಟಿದ್ದರೂ ಹೀಗಾಗುವುದು ನಿಶ್ಚಯ ಎಂಬುದನ್ನು ಕೆಲವರು ಪ್ರಾಯೋಗಿಕವಾಗಿ ಸಾಧಿಸಿಯೂ ಇದ್ದರು. ಅವರ ಪ್ರಯೋಗಗಳು ಹೇಗೆ ದೋಷಪೂರ್ಣವಾಗಿದ್ದುವು, ಆ ದೋಷಗಳನ್ನು ಸರಿಪಡಿಸಿದರೆ ಅವು ಹೇಗೆ ನಿಷ್ಫಲವಾಗುವುವು ಎಂಬುದನ್ನು ಪಾಸ್ತರ್ ತೋರಿಸಿ ಜೀವಂತ ವಸ್ತುಗಳ ವೃದ್ಧಿಗೆ ಮೂಲವಾಗಿ ಜೀವಂತ ವಸ್ತುಗಳು ಇದ್ದೇ ಇರಬೇಕು ಎಂದು ತೋರಿಸಿದ.

೧೮೬೫ ರಲ್ಲಿ ಸರ್ಕಾರದ ಮತ್ತು ಅವನ ಗುರು ಡ್ಯೂಮಾಸನ ಅಪೇಕ್ಷೆಯಂತೆ ಪಾಸ್ತರ್ ರೇಷ್ಮೆ ಹುಳುಗಳ ವಿಚಾರವಾಗಿ ವ್ಯಾಸಂಗ ಕೈಗೊಂಡ. ಹಲವು ವರ್ಷಗಳಿಂದ ಫ್ರಾನ್ಸಿನಲ್ಲಿ ರೇಷ್ಮೆ ಹುಳುಗಳಿಗೆ ಏನೋ ರೋಗ ಬಂದು ಅವು ಗೂಡು ಕಟ್ಟುವುದಕ್ಕೆ ಮೊದಲೇ ಸತ್ತುಹೋಗುತ್ತಿದ್ದುದು ರೇಷ್ಮೆ ತಯಾರಕರಿಗೆ ದಿಗ್ಭ್ರಮೆಯಾಗಿತ್ತು. ಕೆಲವೇ ವರ್ಷಗಳ ಹಿಂದೆ ಫ್ರಾನ್ಸಿನ ಬೀರ್ ಕೈಗಾರಿಕೆ ಸ್ಥಗಿತಗೊಂಡಿತೇನೋ ಎಂದು ಹೆದರಿದ್ದಂತೆಯೇ ಈಗ ಫ್ರಾನ್ಸಿನ ರೇಷ್ಮೆ ತಯಾರಿಕೆಗೆ ಕೊನೆಗಾಲ ಬಂತು ಎನ್ನುವಂತಾಗಿತ್ತು. ಪಾಸ್ತರ್ ರೇಷ್ಮೆಹುಳುಗಳನ್ನು ಅರೆದು ಸಾರವನ್ನು ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿ ರೇಷ್ಮೆ ಹುಳುಗಳ ರೋಗ ಹಾಗೂ ಮರಣಕ್ಕೆ ಕಾರಣವಾದ ಕ್ರಿಮಿಗಳು ಇರುವುದನ್ನು ತೋರಿಸಿದ. ಮೊಟ್ಟೆ ಇಟ್ಟ ಮೇಲೆ ಆ ಚಿಟ್ಟೆಗಳನ್ನು ಅರೆದು ಪರೀಕ್ಷಿಸಿ ಸೋಂಕು ಇದ್ದ ಚಿಟ್ಟೆಗಳ ಮೊಟ್ಟೆಗಳನ್ನು ನಾಶ ಮಾಡುತ್ತ ಸೋಂಕುಳ್ಳ ರೇಷ್ಮೆ ಹುಳುಗಳ ಸಂತತಿಯನ್ನು ನಿರ್ಮೂಲ ಮಾಡುವ ವಿಧಾನವನ್ನು ತೋರಿಸಿಕೊಟ್ಟ. ರೇಷ್ಮೆ ಹುಳುಗಳಿಗೆ ತಗಲುವುದು ಪೆಬ್ರೈನ್ ಎಂಬ ಸೋಂಕು ಒಂದೇ ಅಲ್ಲ. ಫ್ಲಾಚೆರಿ ಎಂಬ ಇನ್ನೊಂದು ಸೋಂಕಿನಿಂದಲೂ ಅವು ನಾಶವಾಗುವುವು ಎಂಬುದಾಗಿ ವಿಶದೀಕರಿಸಿ ಆ ಸೋಂಕಿನಿಂದಲೂ ಬಿಡುಗಡೆ ಆದ ಸಂತತಿಯನ್ನು ವೃದ್ಧಿ ಮಾಡುವುದೇ ತಕ್ಕ ಮಾರ್ಗ ಎಂದು ತೋರಿಸಿದ.

ನಿರಂತರವಾಗಿ ಪ್ರಯೋಗ ಮತ್ತು ತೀವ್ರ ಚಿಂತನೆಗಳಲ್ಲಿ ಉದ್ಯುಕ್ತನಾಗಿದ್ದ ಪಾಸ್ತರನ ಆರೋಗ್ಯ ೧೮೬೮ ರಲ್ಲಿ ಹದಗೆಟ್ಟಿತು. ಅವನು ಪಾರ್ಶ್ವವಾಯುಗ್ರಸ್ತನಾದ. ಆದರೆ ಶೀಘ್ರದಲ್ಲಿ ತಕ್ಕಷ್ಟು ಚೇತರಿಸಿಕೊಂಡು ಪುನಃ ವ್ಯಾಸಂಗಗಳನ್ನು ಮುಂದುವರಿಸಿದ. ಅಂದು ಅವನ ಆಸಕ್ತ ಕ್ಷೇತ್ರ ಕುರಿಗಳಿಗೆ ಮಾರಿಯಾಗಿ ಬರುತ್ತಿದ್ದ ನೆರಡಿ ರೋಗದ ಅಧ್ಯಯನ. ನೆರಡಿ ರೋಗ ಕುರಿಗಳಿಗೆ ವ್ಯಾಪಕ ಮಾರಕವಾಗಿದ್ದಂತೆಯೇ ಕೋಳಿಗಳಿಗೆ ಕೋಳಿಕಾಲರಾ ಎಂಬ ವ್ಯಾಧಿ ಮಾರಕವಾಗಿತ್ತು. ಇದರ ಕಾರಕ ಕ್ರಿಮಿಯನ್ನು ಪ್ರತ್ಯೇಕಿಸಿ ಅದನ್ನು ಪ್ರಯೋಗಾಲಯದಲ್ಲಿ ಮತ್ತೆ ಮತ್ತೆ ಕೃಷಿ ಮಾಡಿ ದುರ್ಬಲ ಕ್ರಿಮಿಯಾಗಿ ಮಾರ್ಪಡಿಸುವ ವಿಧಾನವನ್ನು ಪಾಸ್ತರ್ ಆವಿಷ್ಕರಿಸಿದ. ಈ ದುರ್ಬಲ ಕ್ರಿಮಿಯನ್ನು ಚುಚ್ಚುಮದ್ದಾಗಿ ಕೋಳಿಮರಿಗಳ ದೇಹದ ಒಳಹೊಗಿಸಿದರೆ ಮುಂದೆ ಇವು ಕಾಲರಾ ವ್ಯಾಧಿಯಿಂದ ಮೃತವಾಗುವುದಿಲ್ಲ ಎಂದೂ ತೋರಿಸಿದ. ಇದೇ ರೀತಿ ನೆರಡಿ ರೋಗಕಾರಕ ಸೂಕ್ಷ್ಮಾಣುವನ್ನು ದುರ್ಬಲೀಕರಿಸಿ ಇದನ್ನು ಆರೋಗ್ಯವಾಗಿದ್ದ ಕುರಿಗಳಿಗೆ ಚುಚ್ಚುಮದ್ದಾಗಿ ಕೊಟ್ಟು ಮುಂದೆ ಇವು ನೆರಡಿ ರೋಗಕ್ಕೆ ತುತ್ತಾಗದಂತೆ ರಕ್ಷಣೆ ಒದಗಿಸಬಹುದೆಂದೂ ತೋರಿಸಿದ. ವಿಜ್ಞಾನಿಗಳಿಗೂ ಜನಸಾಮಾನ್ಯರಿಗೂ ಈ ವಿಧಾನ ಮನದಟ್ಟಾಗುವಂತೆ ಈತ ೧೮೮೧ ರಲ್ಲಿ ಮೆಲುನ್ ನಗರದಲ್ಲಿ ನಡೆಸಿದ ಪ್ರಯೋಗ ಲೋಕವಿಖ್ಯಾತವಾಯಿತು.

ಕೊನೆಯದಾಗಿ ಮತ್ತು ವೈದ್ಯಕೀಯ ಗಣನೆಯಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಪಾಸ್ತರನ ವ್ಯಾಸಂಗ ವಿಷಯವಾಗಿ ಇದ್ದುದು ಹುಚ್ಚುನಾಯಿಕಡಿತದಿಂದ ಉಂಟಾಗುವ ರೇಬೀಸ್ ಅಥವಾ ಹೈಡ್ರೊಫೋಬಿಯ ಎಂಬ ಮಾರಕರೋಗ. ಹುಚ್ಚುನಾಯಿ ಕಚ್ಚುವುದರಿಂದಲೇ ಈ ರೋಗ ಹರಡುವುದಾದ್ದರಿಂದ ರೋಗಾಣು ಇಂಥ ನಾಯಿಯ ಜೊಲ್ಲಿನಲ್ಲಿ ಇರಬೇಕೆಂದು ಪಾಸ್ತರ್ ತರ್ಕಿಸಿದ. ಪ್ರಾರಂಭದಲ್ಲಿ ಆತ ಈ ಕ್ರಿಮಿಯನ್ನು ಹುಚ್ಚುನಾಯಿಯ ಜೊಲ್ಲಿನಲ್ಲಿದ್ದ ಅನೇಕ ಬಗೆಯ ಸೂಕ್ಷ್ಮಾಣುಗಳಿಂದ ಪ್ರತ್ಯೇಕಿಸಬೇಕೆಂದು ಪ್ರಯತ್ನಿಸಿ ವಿಫಲನಾದ (ಈ ರೋಗಾಣು ಸೂಕ್ಷ್ಮದರ್ಶಕದಲ್ಲೂ ಕಾಣದಷ್ಟು ಸೂಕ್ಷ್ಮವಾದುದೆಂದು ಇಂದು ತಿಳಿದಿರುವುದರಿಂದ ಪಾಸ್ತರ್ ವಿಫಲನಾದುದು ಆಶ್ಚರ್ಯವಲ್ಲ). ಅನಂತರ ರೋಗ ಪ್ರಧಾನವಾಗಿ ನರಮಂಡಲಕ್ಕೆ ಸಂಬಂಧಪಟ್ಟಿರುವುದು ಮನದಟ್ಟಾಗಿ ನರಮಂಡಲದಿಂದ ರೋಗಾಣುಗಳನ್ನು ಪಡೆಯಲು ಪ್ರಯತ್ನಿಸಿದ. ರೋಗಾಣು ಪತ್ತೆ ಆಗದಿದ್ದರೂ ರೋಗಗ್ರಸ್ತ ನಾಯಿಯ ಮಿದುಳಿನ ಅಥವಾ ಮಿದುಳುಬಳ್ಳಿಯ ಸಾರವನ್ನು ಚುಚ್ಚು ಮದ್ದಾಗಿ ಕೊಟ್ಟು ಆರೋಗ್ಯವಂತ ಪ್ರಾಣಿಗಳಲ್ಲಿ ರೋಗವನ್ನು ಉಂಟುಮಾಡಬಹುದೆಂದು ತೋರಿಸಿದ. ರೋಗಾಣು ಇಂಥದೇ ಎಂದು ಪತ್ತೆ ಆಗದಿದ್ದುದರಿಂದ ಅದನ್ನು ಪ್ರಯೋಗಾಲಯದಲ್ಲಿ ಕೃಷಿ ಮಾಡಲು ಸಾಧ್ಯವಾಗದೆ, ದುರ್ಬಲೀಕರಿಸುವುದಕ್ಕೂ ಆಗದೇ ರೋಗರಕ್ಷಣೆಗಾಗಿ ಕೋಳಿಕಾಲರಾ, ನೆರಡಿ ಮುಂತಾದ ರೋಗಗಳಲ್ಲಿ ಅನುಸರಿಸಿದ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗವನ್ನು ಅನುಸರಿಸಬೇಕಾಯಿತು. ಮೊಲದಲ್ಲಿ ರೋಗವನ್ನು ಉಂಟುಮಾಡಿ ಅದರ ಮಿದುಳುಬಳ್ಳಿಯನ್ನು ಕೆಲವು ದಿವಸಗಳ ಕಾಲ ಒಣಗಿಸಿದಾಗ ಅದರ ಸಾರದ ರೋಗಕಾರಕ ಸಾಮರ್ಥ್ಯ ಕ್ರಮೇಣ ಕುಂದುವುದೆಂದು ಹದಿನಾಲ್ಕು ದಿವಸಗಳ ಮೇಲ್ಪಟ್ಟು ಒಣಗಿಸಿದರೆ ಅದು ಪೂರ್ಣವಾಗಿ ನಾಶವಾಗುವುದೆಂದೂ ತಿಳಿಯಿತು. ಹದಿಮೂರು ದಿವಸಗಳು ಒಣಗಿಸಿದ ಮಿದುಳುಬಳ್ಳಿಯ ಸಾರವನ್ನು ಚುಚ್ಚುಮದ್ದಾಗಿ ಕೊಟ್ಟರೆ ಅದು ರೋಗರಕ್ಷಣೆಯನ್ನು ಒದಗಿಸಲಾರದು. ಆದರೆ ಒಂದೆರಡು ದಿವಸಗಳು ಒಣಗಿಸಿದ ಮಿದುಳುಬಳ್ಳಿಯ ಸಾರವನ್ನೂ ಕೊಟ್ಟರೆ ತೀವ್ರರೋಗವೇ ಕಂಡು ಬಂದು ಪ್ರಾಣಿ ಸತ್ತು ಹೋಗುವುದು ಎಂದು ತಿಳಿಯಿತು. ಇದರ ಬದಲು ಹದಿನಾಲ್ಕು ದಿವಸಗಳು ಒಣಗಿಸಿದ ಮಿದುಳುಬಳ್ಳಿಯ ಸಾರದಿಂದ ಪ್ರಾರಂಭಿಸಿ ಹದಿಮೂರು ದಿವಸ, ಹನ್ನೆರಡು ದಿವಸ ಇತ್ಯಾದಿ ಕಾಲ ಒಣಗಿಸಿದ ಬಳ್ಳಿಯ ಸಾರವನ್ನು ದಿನದಿನವೂ ಕ್ರಮವಾಗಿ ಕೊಡುತ್ತಾ ಬಂದರೆ ಅನಂತರ ಒಣಗಿಸದ ಸಾಕ್ಷಾತ್ ರೋಗಗ್ರಸ್ತ ಪ್ರಾಣಿಯ ಮಿದುಳಿನ ಸಾರವನ್ನು ಕೊಟ್ಟರೂ ರೋಗ ಬರದು ಎಂದು ಮೊಲಗಳಲ್ಲಿ ಪದೇ ಪದೇ ಪ್ರಯೋಗ ಮಾಡಿ ಪಾಸ್ತರ್ ದೃಢಪಡಿಸಿಕೊಂಡ. ಆದರೆ ಇದು ಮನುಷ್ಯರಲ್ಲೂ ಉಪಯೋಗವಾಗಬಹುದಾದ ಕ್ರಮವೇ? ಗೊತ್ತುಮಾಡಿಕೊಳ್ಳುವುದು ಹೇಗೆ? ಎಂದು ತಿಳಿಯದೆ ಹಲವು ತಿಂಗಳುಗಳು ಕೈಕಟ್ಟಿ ಕುಳಿತುಕೊಳ್ಳಬೇಕಾಯಿತು.

ಒಂದು ದಿನ (೬ ಜುಲೈ ೧೮೮೫) ಜೋಸೆಫ್ ಮೀಸ್ಟರ್ ಎಂಬ ಹುಡುಗನಿಗೆ ಹುಚ್ಚುನಾಯಿ ಕಡಿದು ತೀವ್ರ ಗಾಯಗಳಾಗಿದ್ದು, ಆತನ ತಾಯಿ ಪಾಸ್ತರ್ ಹತ್ತಿರ ಬಂದು ಹೇಗಾದರೂ ಮಾಡಿ ಆತನನ್ನು ಬದುಕಿಸಿಕೊಡಬೇಕೆಂದು ಕೇಳಿಕೊಂಡಳು. ಹುಚ್ಚುನಾಯಿ ಕಡಿತಕ್ಕೆ ಆಗಿನ ಕಾಲದಲ್ಲಿ ರೂಢಿಯಲ್ಲಿದ್ದ ಚಿಕಿತ್ಸಾ ಕ್ರಮವೆಂದರೆ ನಾಯಿ ಕಡಿದ ಅರ್ಧ ಗಂಟೆಯೊಳಗೆ ಕೆಂಪಗೆ ಕಾಯಿಸಿದ ಕಬ್ಬಿಣದಿಂದ ಕಡಿದ ಗಾಯದ ಮೇಲೆಯೇ ಬರೆ ಹಾಕುವುದು. ಇಂಥ ಭೀಕರ ಕ್ರಮಕ್ಕೆ ತಾಯಿಯ ಮನಸ್ಸು ಒಪ್ಪದೆ, ಪಾಸ್ತರನ ವ್ಯಾಸಂಗ ವಿಷಯವನ್ನು ಕೇಳಿ ಅವನಲ್ಲಿಗೆ ಬಂದಿದ್ದಳು. ಬಲುದಿನಗಳಿಂದ ನಿರೀಕ್ಷಿಸುತ್ತಿದ್ದ ಅವಕಾಶ ಒದಗಿಬಂದು ಪಾಸ್ತರ್ ಆ ಹುಡುಗನಿಗೆ ತಾನು ಸಿದ್ಧಪಡಿಸಿ ಇಟ್ಟುಕೊಂಡಿದ್ದ ಹದಿನಾಲ್ಕು ದಿವಸಗಳು ಒಣಗಿಸಿದ, ಹದಿಮೂರು ದಿವಸಗಳು ಒಣಗಿಸಿದ, ಇತ್ಯಾದಿ, ಮಿದುಳು ಬಳ್ಳಿ ಸಾರವನ್ನು ಪ್ರತಿದಿನ ಚುಚ್ಚುಮದ್ದಾಗಿ ಕೊಡುತ್ತಾ ಬಂದ. ಹುಡುಗ ಸಾಯದೆ ಬದುಕಿಕೊಂಡದ್ದು ಪಾಸ್ತರನ ಆವಿಷ್ಕಾರಕ್ಕೆ ದೊರಕಿದ ಅತ್ಯದ್ಭುತ ವಿಜಯ. ಸ್ವಲ್ಪ ಕಾಲ ಮುಂದೆ ಇದೇ ರೀತಿ ಚಿಕಿತ್ಸೆಯಿಂದ ಪಾಸ್ತರ್ ಜ್ಯೂಪಿಲ್ಲೆ ಎಂಬ ಇನ್ನೊಬ್ಬ ಹುಡುಗನನ್ನು ಹುಚ್ಚುನಾಯಿ ಕಡಿತದ ಪರಿಣಾಮದಿಂದ ರಕ್ಷಿಸಿದ. ಈ ವ್ಯಕ್ತಿ ಮುಂದೆ ಜೀವನ ಪರ್ಯಂತ ಪಾಸ್ತರನನ್ನು ನೆರಳಿನಂತೆ ಅನುಸರಿಸುತ್ತಿದ್ದು ಅವನ ಸೇವಾನಿರತನಾಗಿದ್ದ.

ಹುಚ್ಚುನಾಯಿ ಕಡಿತದಿಂದ ಉಂಟಾಗುವ ರೋಗದ ವಿರುದ್ಧ ರಕ್ಷಣೆಯ ಈ ಕ್ರಮದಿಂದ ಮಾನವಕೋಟಿಗೆ ಅಪಾರ ಲಾಭವಾಯಿತು. ಪ್ರಪಂಚದಲ್ಲೆಲ್ಲಾ ಈ ಕ್ರಮದ ಉಪಯುಕ್ತತೆ ಮನದಟ್ಟಾಗಿ ಇದನ್ನು ಎಲ್ಲೆಲ್ಲೂ ಅನುಸರಿಸಲು ತಕ್ಕಷ್ಟು ಮಿದುಳುಬಳ್ಳಿ ಸಾರವನ್ನು ತಯಾರಿಸುವ ಅನುಕೂಲತೆ ಲಭಿಸುವಂತೆ ನಿಧಿಯನ್ನು ನಾನಾಕಡೆಗಳಿಂದ ಸಂಗ್ರಹಿಸಲಾಯಿತು. ಇಪ್ಪತ್ತೈದು ಲಕ್ಷ ಫ್ರಾಂಕುಗಳ ಮೌಲ್ಯದ ಈ ನಿಧಿಯಿಂದ ಪ್ಯಾರಿಸ್‌ನಲ್ಲಿ ಭವ್ಯಸೌಧವನ್ನು ಕಟ್ಟಿ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಪಾಸ್ತರ್ ಇನ್‌ಸ್ಟಿಟ್ಯೂಟ್ ಎಂದು ಹೆಸರಿಡಲಾಯಿತು. 1888 ರಲ್ಲಿ ಪೂರ್ಣಗೊಳಿಸಿದ ಈ ಸಂಸ್ಥೆಗೆ ಪಾಸ್ತರನನ್ನೇ ಮೊದಲ ನಿರ್ದೇಶಕನಾಗಿ ನೇಮಿಸಿ ಗೌರವಿಸಲಾಯಿತು. ಇಲ್ಲಿ ಪಾಸ್ತರ್ ಪ್ರಯೋಗಗಳನ್ನು ಮುಂದುವರಿಸುತ್ತಾ 1895 ಸೆಪ್ಟಂಬರ್ 28 ರಂದು ನಿಧನನಾದ.

ಒಂದೇ ವ್ಯಕ್ತಿಯಲ್ಲಿ ಸಾಮಾನ್ಯವಾಗಿ ಕಂಡುಬರದ ಅನೇಕ ರೀತಿಯ ಸಾಮರ್ಥ್ಯ ಸ್ವಭಾವಗಳು ಪಾಸ್ತರನಲ್ಲಿ ಕೇಂದ್ರೀಕೃತವಾಗಿದ್ದುದೇ ಆತನ ಘನ ಸಾಧನೆಗಳಿಗೆ ಕಾರಣ. ವೈಜ್ಞಾನಿಕ ಸಂಶೋಧನೆಗಳಲ್ಲಿ ಸಂಪೂರ್ಣ ಮಗ್ನನಾಗಿರುವಷ್ಟು ಆಸಕ್ತಿ ಇದ್ದುದರಿಂದಲೇ ಅವನಿಗೆ ಪಾರ್ಶ್ವವಾಯು ತಗುಲಿದ್ದೂ ಅಲ್ಲದೆ ವಾಸಿಯಾಗಿದ್ದು ಕೂಡ ಎಂದು ಭಾವಿಸಬಹುದು. ಪ್ರಯೋಗಗಳ ವಿಷಯವಾಗಿ ಮನಸ್ಸಿಗೆ ಅಪೂರ್ವ ಯೋಜನೆಗಳು ಹೊಳೆಯುತ್ತಿದ್ದುದೂ ಅವನ್ನು ಕಾರ್ಯಗತ ಮಾಡುವ ವಿಧಾನಗಳ ಆವಿಷ್ಕಾರಗಳನ್ನು ಮಾಡುತ್ತಿದ್ದುದೂ ಪಾಸ್ತರನ ಹಿರಿಮೆ. ಕೈಗಾರಿಕೆಗಳಿಗೆ ಅಥವಾ ವಿಶಿಷ್ಟವಾದ ರೋಗಗಳಿಗೆ ಸಂಬಂಧಪಟ್ಟಂತೆ ಪ್ರಯೋಗಗಳನ್ನು ಕೈಗೊಂಡರೂ ಅವೇ ಪ್ರಯೋಗಗಳು ಆಯಾ ಸಂದರ್ಭಗಳಿಗೆ ಮಾತ್ರ ಸೀಮಿತವಾಗಿರದೇ ವ್ಯಾಪಕ ತತ್ತ್ವವೊಂದನ್ನು ವಿಶದೀಕರಿಸುವಂಥವಾಗಿದ್ದವು. ಸಾಮಾನ್ಯವಾಗಿ ಒಂಟಿಯಾಗಿಯೇ ಪ್ರಯೋಗ ನಿರತನಾಗಿದ್ದರೂ ಅವಶ್ಯವಾದಾಗ ಜನರ ಜೊತೆ ಸಂಪರ್ಕ ಬೆಳೆಸುವುದಕ್ಕಾಗಲೀ ವಾದಮಾಡಿ ತನ್ನ ನಿಲುವನ್ನು ದೃಢೀಕರಿಸುವುದಕ್ಕಾಗಲಿ ಇವನೆಂದೂ ಹಿಂದೇಟು ಹೊಡೆದವನಲ್ಲ. ತಂದೆಯಲ್ಲಿ ಪರಮ ಭಕ್ತಿ ವಿಶ್ವಾಸಗಳಿದ್ದವನು. ತಾನು ವಿಖ್ಯಾತ ವಿಜ್ಞಾನಿಯಾಗಿ ಯಶಸ್ಸಿನ ಪಾವಟಿಗೆಗಳನ್ನು ಏರುತ್ತಿದ್ದ ಒಂದೊಂದು ಹಂತದಲ್ಲೂ ತಂದೆಯ ಆಶೀರ್ವಾದ ಪಡೆಯುತ್ತಿದ್ದ. ತಂಗಿಯರ ವಿಷಯದಲ್ಲೂ ಅಷ್ಟೇ ವಿಶ್ವಾಸ. ತನ್ನ ಸಂಸಾರದಲ್ಲಿ ಹೆಂಡತಿ ಮಕ್ಕಳೊಡನೆ ಆನಂದದಿಂದ ಕಾಲ ಕಳೆದವ. ಪ್ರೀತಿಯ ಮಗಳು ಮೃತಳಾದಾಗ ದಿಕ್ಕು ತೋರದಂತಾಗಿದ್ದರೂ ಶೀಘ್ರದಲ್ಲಿ ಚೇತರಿಸಿಕೊಂಡು ತನ್ನ ತಂದೆಗೂ ತನ್ನ ಹೆಂಡತಿಗೂ ಸಮಾಧಾನ ಹೇಳುತ್ತ ಮಾಮೂಲಿನಂತೆ ವ್ಯಾಸಂಗಗಳಲ್ಲಿ ನಿರತನಾಗುವಷ್ಟು ಸ್ಥೈರ್ಯವಂತನಾಗಿದ್ದ. ವಿಜ್ಞಾನಿಯಾಗಿ ಪಾಸ್ತರ್ ಎಷ್ಟು ದೊಡ್ಡವನೊ ಕರುಣಾರ್ದ್ರ ಹೃದಯಿಯಾಗಿಯೂ ಅಷ್ಟೇ ದೊಡ್ಡವನು. ***

**ಪಾಸ್ತರೀಕರಣ:** ಪಾನೀಯ ಅಥವಾ ದ್ರವಾಹಾರ ಪದಾರ್ಥದ ರುಚಿಯನ್ನು ಕೆಡಿಸದಂತೆ ಅದನ್ನು ಕ್ಲುಪ್ತಕಾಲ ಮಂದ ಉಷ್ಣಸಂಸ್ಕರಣ ಕ್ರಿಯೆಗೆ ಒಳಪಡಿಸಿ ಅದರಲ್ಲಿರುವ ರೋಗಕಾರಕ ಹಾಗೂ ರುಚಿಗೆಡಿಸುವ ಅನೇಕ ಜೀವಾಣುಗಳನ್ನು ಸಾಯಿಸಿ ಪದಾರ್ಥದ ಉಪಯೋಗಾವಧಿಯನ್ನು ವೃದ್ಧಿಗೊಳಿಸುವ ವಿಧಾನ (ಪಾಶ್ಚುರೈಸೇಷನ್). ಪಾನೀಯ ಹಾಗೂ ದ್ರವಾಹಾರಗಳನ್ನು ಈ ವಿಧಾನದಿಂದ ಸಂರಕ್ಷಿಸುವ ಕ್ರಮವನ್ನು ಲೂಯಿ ಪಾಸ್ತರ್ 1860ರಲ್ಲಿ ಮೊದಲು ಜಾರಿಗೆ ತಂದನಾದ್ದರಿಂದ ಇದಕ್ಕೆ ಪಾಶ್ಚುರೈಸೇಷನ್ (ಪಾಸ್ತರೀಕರಣ) ಎಂದು ಹೆಸರಿಡಲಾಯಿತು. ಅನೈಚ್ಛಿಕವಾಗಿ ಹುದುಗೆಬ್ಬಿಸಿ, ಹುಳಿ ಬರಿಸಿ ರುಚಿಗೆಡಿಸುವ ಇಲ್ಲವೇ ಅನಾರೋಗ್ಯಕ್ಕೆ ಕಾರಣವಾಗಬಹುದಾದ ಏಕಾಣುಗಳ ನಿರ್ಮೂಲನವೇ ಪಾಸ್ತರೀಕರಣದ ಉದ್ದೇಶ.

ವೈನ್, ಬೀರ್ ಮುಂತಾದ ಮಾದಕ ಪಾನೀಯಗಳನ್ನು $57.2^0$ ಸೆ ಉಷ್ಣತೆಯ ಮಟ್ಟಕ್ಕೆ ಕೆಲವೇ ನಿಮಿಷಗಳ ಕಾಲ ಕಾಸಿ ಶೀಘ್ರವಾಗಿ ಆರಿಸಿ ಸ್ವಚ್ಛವಾದ ಶೀಶೆಗಳಲ್ಲಿ ತುಂಬಿ ಮೊಹರು ಮಾಡಿಟ್ಟರೆ, ಅವು ಅನಂತರ ಅತಿರೇಕವಾಗಿ ಹುದುಗೆದ್ದು ಹುಳಿಯಾಗಿ ಕೆಟ್ಟು ಹೋಗುವುದನ್ನು ಚಿರಕಾಲ ತಪ್ಪಿಸಬಹುದೆಂದು ಪ್ರಯೋಗದ ಮೂಲಕ ಪಾಸ್ತರ್ ತೋರಿಸಿದ. ಇದರಿಂದ ಫ್ರಾನ್ಸಿನಲ್ಲಿ ಮಾದಕ ಪಾನೀಯಗಳ ಕೈಗಾರಿಕೆಗಳು ದೃಢ ತಳಹದಿಯ ಮೇಲೆ ನಿಲ್ಲುವಂತಾಯಿತು. ಹಾಲನ್ನು ಹೀಗೆ ಸಂಸ್ಕರಿಸಿ ವಿಷಾಣುರಹಿತವನ್ನಾಗಿ ಮಾಡುವುದಕ್ಕೆ ಪಾಸ್ತರ್ ವಿಧಿಸಿದ ಕ್ರಮ ಹೀಗಿದೆ: ದೇಹೋಷ್ಣತೆಗೂ ($37.5^0$ಸೆ) ನೀರು ಕುದಿಯುವ ಉಷ್ಣತೆಗೂ ($100^0$ಸೆ) ಸುಮಾರು ಮಧ್ಯಮಟ್ಟಕ್ಕೆ ($65^0$–$70^0$ಸೆ) ಹಾಲನ್ನು ಕಾಯಿಸಿ ಸುಮಾರು ಅರ್ಧ ಗಂಟೆ ಅದೇ ಉಷ್ಣತೆಯಲ್ಲಿ ಇಟ್ಟಿದ್ದು ಅನಂತರ ಚಟ್ಟನೆ ಸುಮಾರು $15^0$ ಸೆ ಮಟ್ಟಕ್ಕೆ ಆರಿಸಿ ಕೂಡಲೇ ಸ್ವಚ್ಛವಾದ ಶೀಶೆಗೆ ತುಂಬಿ ಮುಚ್ಚಿ ಮೊಹರು ಮಾಡತಕ್ಕದ್ದು. ಹೀಗೆ ಸಂಸ್ಕರಿಸಿದ್ದರಿಂದ ಹಾಲಿನ ರುಚಿ, ಬಣ್ಣ, ರೂಪ ಮತ್ತು ಪೋಷಕಗಳು ಕೆಡವು. ಆದರೆ ಸಿ ಜೀವಸತ್ವ ಮಾತ್ರ ಸ್ವಲ್ಪಮಟ್ಟಿಗೆ ನಾಶವಾಗುತ್ತದೆ. $60^0$ಸೆ. ಉಷ್ಣತೆಯಲ್ಲಿ 20 ನಿಮಿಷಗಳ ಕಾಲ ಇಟ್ಟಿದ್ದರೆ ಹಾಲಿನಲ್ಲಿ ಇರಬಹುದಾದ ಅನೇಕ ವಿಷಾಣುಗಳು (ಕ್ಷಯ, ವಿಷಮ ಜ್ವರ, ಆಮಶಂಕೆ, ಗಂಟಲುಮಾರಿ– ಡಿಫ್ತೀರಿಯ, ಕೆಂಜ್ವರ– ಸ್ಕಾರ್ಲೆಟ್ ಫೀವರ್, ಗಂಟಲ ಉರಿಯೂತ, ಬಾಯಿ ಪಾದರೋಗ ಮುಂತಾದವುಗಳ ಕಾರಕಗಳು) ನಾಶವಾಗುತ್ತವೆ. ಸಾಮಾನ್ಯವಾಗಿ ಬೀಜಕಣವಾಗದ (ನಾನ್ ಸ್ಪೋರ್ ಬೇರಿಂಗ್) ವಿಷಾಣುಗಳೆಲ್ಲ ಹಾಲನ್ನು ಪಾಸ್ತರೀಕರಿಸಿದಾಗ ಸತ್ತು ಹೋಗುತ್ತವೆನ್ನಬಹುದು. ಆದರೆ ಎಲ್ಲ ಬಗೆಯ ಏಕಾಣುಗಳೂ ನಾಶವಾಗುವುದಿಲ್ಲ. ಏಕಾಣುಗಳ ಬೀಜಕಣಗಳಂತೂ (ಸ್ಪೋರ್ಸ್) ಉಳಿದೇ ಇರುತ್ತವೆ. ಪಾತ್ರೆಯ ಬಾಯಿಯನ್ನು ತೆರೆದೇ ಇಟ್ಟಿದ್ದರೆ ಪಾಸ್ತರೀಕರಣದ ಹಾಲು ಹಸಿಹಾಲಿನಷ್ಟು ಬೇಗ ಹುಳಿಯಾಗದು. ಈ

ಹಾಲಿನ ಮೊಸರು ಮೆದುವಾಗಿರುವುದಲ್ಲದೆ ಚೆನ್ನಾಗಿ ಅರಗುವಂತೆಯೂ ಇರುವುದು. ಇಲ್ಲಿ ಗಮನಿಸಬೇಕಾದ ವಿಷಯ ಹಾಲನ್ನು ಉಕ್ಕು ಬರುವಷ್ಟು ಕಾಸದೇ ಇರುವುದು. ಮಿತಿಮೀರಿ ಕಾಸಿದರೆ ಬೆಣ್ಣೆ ಸುಲಭವಾಗಿ ದೊರೆಯದಂತಾಗುತ್ತದೆ.

ಪಾಸ್ತರೀಕರಣದ ಲಾಭ ದೊರೆಯಬೇಕಾದರೆ ನಿರ್ದಿಷ್ಟ ಕಾಲ, ನಿರ್ದಿಷ್ಟ ಉಷ್ಣತೆಗೆ ಒಳಪಡಿಸಿದ ಹಾಲನ್ನು ಚಟ್ಟನೆ ಆರಿಸಿ, ಶುಭ್ರಗೊಳಿಸಿದ ಶೀಶೆಗೆ ತುಂಬಿ ಮೊಹರು ಮಾಡುವುದು ಅಗತ್ಯ. ಹಾಗೆಯೇ ಮೊಹರು ಒಡೆದ ಅನತಿ ಕಾಲದಲ್ಲಿ ಹಾಲನ್ನೆಲ್ಲ ಬಳಸಿಬಿಡಬೇಕಾದುದೂ ಅಗತ್ಯ. ಏಕೆಂದರೆ, ಪಾಸ್ತರೀಕರಣದಿಂದ ಲ್ಯಾಕ್ಟೋಬ್ಯಾಸಿಲ್ಲಸ್ ಎಂಬ ಬ್ಯಾಕ್ಟೀರಿಯಾಗಳು ಕೂಡ ನಾಶವಾಗಿಬಿಟ್ಟಿರುತ್ತವೆ. ಈ ಬ್ಯಾಕ್ಟೀರಿಯಾಗಳಿಗೆ ವಿಷಜನಕ ಬ್ಯಾಕ್ಟೀರಿಯಾಗಳ ವೃದ್ಧಿಯನ್ನು ತಡೆಯುವ ಸ್ವಭಾವ ಉಂಟು. ಪಾಸ್ತರೀಕರಿಸಿದ ಹಾಲನ್ನು ಅನತಿ ಕಾಲದಲ್ಲಿ ಬಳಸದೆ ಪಾತ್ರೆಯ ಬಾಯಿಯನ್ನು ಹಲವು ಗಂಟೆಗಳ ಕಾಲ ತೆರೆದಿಟ್ಟಿದ್ದರೆ ವಿಷಜನಕ ಬ್ಯಾಕ್ಟೀರಿಯಾಗಳು ಅದರಲ್ಲಿ ವೃದ್ಧಿಗೊಂಡು ಅಂಥ ಹಾಲು ಪಾಸ್ತರೀಕರಿಸಿದ ಹಾಲಿಗಿಂತಲೂ ಅಪಾಯಕಾರಿಯಾಗಿರುತ್ತದೆ.

ಹಾಲಿನಲ್ಲಿರುವ ರೋಗಾಣುಗಳನ್ನು ಸಾಯಿಸಲು ಉಷ್ಣತೆಯ ಮಟ್ಟ ಮತ್ತು ಅವಧಿಗಳು ಮುಖ್ಯ. ಕಾಯಿದೆ ಪ್ರಕಾರ ಹಾಲನ್ನು ನಿರ್ದಿಷ್ಟ ಉಷ್ಣತೆಯಲ್ಲಿ ನಿರ್ದಿಷ್ಟ ಕಾಲದತನಕ ಕಾಯಿಸಿ ಅನಂತರ ಚಟ್ಟನೆ ಆರಿಸಿ ಶುಭ್ರ ಶೀಶೆಯೊಳಗೆ ಹಾಕಿ ಮೊಹರು ಮಾಡಿದ್ದಕ್ಕೆ ಮಾತ್ರ ಪಾಸ್ತರೀಕರಿಸಿದ ಹಾಲು ಎನ್ನಬೇಕು. ಪಾಸ್ತರೀಕರಣ ಕ್ರಮಬದ್ಧವಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸಲು ನಿರ್ದಿಷ್ಟ ಪ್ರಯೋಗವನ್ನು ವಿಧಿಸಲಾಗಿದೆ. ಇದರಲ್ಲಿ ಸಾಮಾನ್ಯವಾಗಿ ಹಸಿ ಹಾಲಿನಲ್ಲಿರುವ ಫಾಸ್ಫಟೇಸ್ ಎಂಬ ಕಿಣ್ವ ಪಾಸ್ತರೀಕರಿಸಿದ್ದೆಂದು ಹೇಳಲಾದ ಹಾಲಿನಲ್ಲಿ ಇದೆಯೋ ಇಲ್ಲವೋ ಎಂದು ಪರೀಕ್ಷಿಸಲಾಗುತ್ತದೆ. ಪಾಸ್ತರೀಕರಣ ಕ್ರಮಬದ್ಧವಾಗಿದ್ದರೆ ಆ ಹಾಲಿನಲ್ಲಿ ಫಾಸ್ಫಟೇಸ್ ಸ್ವಲ್ಪವೂ ಇರುವುದಿಲ್ಲ. ಏಕೆಂದರೆ $60^0$ಸೆ ಉಷ್ಣತೆಗೆ ಅರ್ಧ ಗಂಟೆ ಕಾಲ ಒಡ್ಡಿದ್ದೇ ಆದರೆ ಫಾಸ್ಫಟೇಸ್ ಕಿಣ್ವ ಪೂರ್ಣವಾಗಿ ನಾಶವಾಗುತ್ತದೆ.

ಪಾಸ್ತರೀಕರಣ ಪದವನ್ನು ಕೆಲವು ಗಟ್ಟಿ ಆಹಾರ ಪದಾರ್ಥಗಳ ಸಂಸ್ಕರಣೆಗೂ ಬಳಸುವುದುಂಟು. ಆದರೆ ಇಲ್ಲಿ ಉಷ್ಣತೆಯ ಮಟ್ಟ ಇಂತಿಷ್ಟೇ ಎಂದು ಖಚಿತವಾಗಿ ಹೇಳುವುದು ಕಠಿಣ. ಕಾರಣ ಒಂದೊಂದು ಆಹಾರದ ಭೌತ ಸ್ವರೂಪ ಒಂದೊಂದು ವಿಧವಾಗಿರುವುದು.

ಪಾಸ್ತರೀಕರಣ ವಿಧಾನಗಳೆಂದು ಬಳಕೆಯಲ್ಲಿರುವವು ಏಳು. 1. ಚುರುಕಿನ ವಿಧಾನ: ಸುಮಾರು $70^0$ ಸೆ ಉಷ್ಣತೆಗೆ ಏರಿಸಿ ಸರಕ್ಕನೆ ನೀರ್ಗಲ್ಲಿನ ತಂಪಿಗೆ ಇಳಿಸುವುದು; ಆವಿಯಿಂದ ಕಾದ ಕೊಳವೆಯ ಮೇಲೆ ಬಿದ್ದ ಹಾಲು ಕೂಡಲೆ ನೀರ್ಗಲ್ಲು ತಂಪಿನ ತಟ್ಟೆಯ ಮೇಲೆ ಬೀಳುವುದು. ಆದರೆ ಹೊತ್ತೂ ಕಾವೂ ಇಲ್ಲಿ ನಿರ್ಧಾರವಿಲ್ಲ. ಆದ್ದರಿಂದ ಈ ವಿಧಾನ ಒಳ್ಳೆಯದಲ್ಲ ಮತ್ತು ವಿಶ್ವಾಸಾರ್ಹವಾದುದಲ್ಲ.

2. ಏರು ಕಾವು ತುಸುಹೊತ್ತಿನ ವಿಧಾನ : ವಿದ್ಯುತ್ತಿನಿಂದ ಕಾದ ಸುರುಳಿಯ ಮೂಲಕ ಹಾಲನ್ನು ಸುಲಭವಾಗಿ ಹರಿಸಿ ಪಾಶ್ಚುರೀಕರಿಸುವುದು.

3. ಇಳಿಗಾವಿನಲ್ಲಿ ಹಿಡಿದಿರುವ ವಿಧಾನ : ಏರಿದ ಕಾವಿಗೇರಿಸಿ ಒಂದೆಡೆ ಅರೆತಾಸಿನ ಹೊತ್ತು ಪಾತ್ರೆಯಲ್ಲಿ ಹಿಡಿದಿಟ್ಟಿರುವುದು. ಇದು ಬಲು ಖಚಿತವಾದ ಸಾಮಾನ್ಯ ಬಳಕೆಯ ವಿಧಾನ.

4. ಒಂದೇ ಸಮನೆ ಹರಿಸುವ ವಿಧಾನ : ಹಾಲನ್ನು ಮೊದಲು ಸುಮಾರು $60^0$ ಸೆ ಉಷ್ಣತೆಗೆ ಏರಿಸಿ ಅದೇ ಉಷ್ಣತೆಯಲ್ಲಿ ಕೊಳವೆಗಳ ಮೂಲಕ ಅರೆತಾಸು ಹರಿಯುವಂತೆ ಮಾಡುವುದು.

5 ಹಾಲಿನ ಶೀಶೆಯಲ್ಲಿ ಪಾಸ್ತರೀಕರಿಸುವ ವಿಧಾನ : ಶೀಶೆಗಳಿಗೆ ಚೆನ್ನಾಗಿ ಬಿರಡೆ ಹಾಕಿರಬೇಕು. ಆಮೇಲೆ ಸರಕ್ಕನೆ ತಂಪು ಮಾಡಬೇಕು. ಪಾಸ್ತರೀಕರಿಸಿದ ಮೇಲೆ ಬಳಸುವುದರೊಳಗಾಗಿ ಸೋಂಕು ತಾಕದಿರುವುದೇ ಇದರ ಹೆಚ್ಚಿನ ಅನುಕೂಲ.

6. ಆವಿಪಾತ್ರೆಗಳಲ್ಲಿ ಹಾಲಿನ ಶೀಶೆಗಳನ್ನು ಕುದಿಸುವ ವಿಧಾನ.

7. ವಿಕಿರಣ ಪಾಸ್ತರೀಕರಣ ವಿಧಾನ : ದ್ರವ ಇಲ್ಲವೇ ಗಟ್ಟಿ ಆಹಾರ ವಸ್ತುಗಳನ್ನು ಕೆಡದಂತಿರಲು ವಿಕಿರಣತೆಯ ಬಳಕೆ ಇದು. ಆಹಾರದ ಗುಣ ಏನೇನೂ ಬದಲಾಗದೆಯೆ ಅದನ್ನು ಕೆಡಿಸುವ ಬಹುಪಾಲು ರೋಗಾಣುಗಳನ್ನು ಸಾಯಿಸುವಷ್ಟು ಮಾತ್ರ ವಿಕಿರಣತೆಗೆ ಒಡ್ಡುವುದು.

ಮೇಲಿನವೆಲ್ಲವನ್ನೂ ಪಾಸ್ತರೀಕರಣ ವಿಧಾನಗಳು ಎಂದಿದ್ದರೂ ಶಾಸ್ತ್ರೀಯವಾಗಿ 1, 2 ಮತ್ತು 7ನೆಯ ವಿಧಾನಗಳನ್ನು ಪಾಸ್ತರೀಕರಣವೆಂದು ಗಣಿಸುವಂತಿಲ್ಲ. ***

**ಪಿಕಲಕ್ಕಿ:** ಪ್ಯಾಸರಿಫಾರ್ಮಿಸ್ ಗಣದ ಟರ್ಡಿಡೆ ಕುಟುಂಬಕ್ಕೆ ಸೇರಿದ ಪಕ್ಷಿ (ನೈಟಿಂಗೇಲ್). ಮಧುರವಾದ ಕಂಠಕ್ಕೆ ಹೆಸರಾಗಿದೆ. ಲ್ಯುಸೀನಿಯ ಮೆಗಾರಿಂಕೊಸ್ ಇದರ ಶಾಸ್ತ್ರೀಯ ಹೆಸರು. ಉತ್ತರ ಆಫ್ರಿಕ, ನೈರುತ್ಯ ಸೈಬೀರಿಯ ಮತ್ತು ಮಧ್ಯ ಏಷ್ಯದಲ್ಲಿ ಕಂಡುಬರುತ್ತದೆ. ಇದರ ಉದ್ದ ಸುಮಾರು 16 ಸೆಂಮೀ. ದೇಹದ ಬಣ್ಣ ಕಂದು. ನೀರಿನ ಹತ್ತಿರದಲ್ಲಿ ಬೆಳೆಯುವ ಪೊದೆಗಳಲ್ಲಿ ವಾಸಿಸುತ್ತದೆ. ಹುಳುಗಳು

ಮತ್ತು ಸಂಧಿಪದಿಗಳು ಇದರ ಪ್ರಮುಖ ಆಹಾರ. ಒಣಗಿದ ಎಲೆಗಳಿಂದ ಹೆಣ್ಣು ಹಕ್ಕಿ ಗೂಡು ಕಟ್ಟಿ 4–6 ಕಂದು ಬಣ್ಣದ ಮೊಟ್ಟೆಗಳನ್ನಿಡುತ್ತದೆ. ಕೆಲವೊಮ್ಮೆ ಮೊಟ್ಟೆಗಳ ಮೇಲೆ ಚುಕ್ಕೆಗಳಿರುವುದುಂಟು. ಮರಿಗಳ ಪಾಲನೆಯಲ್ಲಿ ಗಂಡು ಹಕ್ಕಿಯೂ ಪಾಲುಗೊಳ್ಳುತ್ತದೆ. ***

**ಪಿಕಳಾರ ಹಕ್ಕಿ:** ಪ್ಯಾಸರಿಫಾರ್ಮಿಸ್ ಗಣದ ಪಿಕ್ನೊನೋಟಿಡೆ ಕುಟುಂಬಕ್ಕೆ ಸೇರಿದ ಮೈನಾ ಗಾತ್ರದ ಹಕ್ಕಿ. ಪಿಕಳಾರಗಳು ಸಾಮಾನ್ಯವಾಗಿ ಮಾನವನ ವಾಸಸ್ಥಳ, ಉದ್ಯಾನ, ಕಾಡು ಮತ್ತು ತೋಟಗಳಲ್ಲಿ ಕಂಡುಬರುತ್ತವೆ. ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ. ಇವು ಭಾರತ, ಬಾಂಗ್ಲಾ ಮತ್ತು ಸಿಲೋನ್ ನಲ್ಲಿ ಕಂಡು ಬರುತ್ತವೆ. ಅರೇಬಿಯ ಮತ್ತು ಪರ್ಷಿಯದ ಸಾಹಿತ್ಯದಲ್ಲಿ ಇವುಗಳನ್ನು ಬುಲ್‌ಬುಲ್ ಎಂದು ಕರೆಯಲಾಗಿದೆ. ವರ್ಣ ವ್ಯತ್ಯಾಸಗಳನ್ನಾಧರಿಸಿ 5 ಪ್ರಭೇದಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯವಾಗಿ ಗಲಾಟೆಗಾರ ಹಕ್ಕಿಗಳು. ವೈರಿ ಪ್ರಾಣಿಗಳ ಸೂಚನೆ ದೊರೆತ ತಕ್ಷಣ ಕಿರುಚಿ ಸಪ್ಪಳ ಮಾಡುತ್ತವೆ. ಕೀಟ, ಚಿಕ್ಕ ಹಣ್ಣುಗಳು ಮತ್ತು ಕಾಳುಗಳು ಇವುಗಳ ಆಹಾರ. ಫೆಬ್ರವರಿಯಿಂದ ಆಗಸ್ಟ್ ವರೆಗಿನ ಕಾಲದಲ್ಲಿ ಪೊದೆಗಳಲ್ಲಿ ಬಟ್ಟಲಾಕಾರದ ಹುಲ್ಲಿನ ಗೂಡು ನಿರ್ಮಿಸಿ 2–3 ಮೊಟ್ಟೆಯಿಟ್ಟು ಮರಿ ಮಾಡುತ್ತವೆ.

ಕೆಮ್ಮೀಸೆ ಪಿಕಳಾರ (ಪಿಕ್ನೊನೋಟಸ್ ಜಕೋಸ) ಮತ್ತು ಕೆಂಪು ಪೃಷ್ಠದ ಪಿಕಳಾರ (ಪಿಕ್ನೊನೋಟಸ್ ಕೇಫರ್) ಎರಡು ಮುಖ್ಯ ಪ್ರಭೇದಗಳು. ಕೆಮ್ಮೀಸೆ ಪಿಕಳಾರ ತಲೆಯ ಮೇಲೆ ಕಪ್ಪು ಜುಟ್ಟು ಹೊಂದಿದ್ದು ಕಪ್ಪಾದ ರೆಕ್ಕೆ ಮತ್ತು ಬೆನ್ನು, ಬಿಳಿ ಬಣ್ಣದ ಕುತ್ತಿಗೆ ಮತ್ತು ಎದೆಯನ್ನು ಹೊಂದಿದೆ. ಎದೆಯ ಮೇಲೆ ಕಪ್ಪು ಪಟ್ಟಿಯಿದ್ದು ಜೋಡಿ ಇಲ್ಲವೆ ಗುಂಪುಗಳಲ್ಲಿ ವಾಸಿಸುತ್ತದೆ. ರಕ್ಷಣೆ ದೊರೆತರೆ ಮಾನವನ ವಾಸಸ್ಥಳಗಳ ಸಮೀಪ ಕಂಡು ಬರುತ್ತದೆ. ಕೆಂಪು ಪೃಷ್ಠದ ಪಿಕಳಾರ ಮೈನಾ ಗಾತ್ರದ ಹಕ್ಕಿ. ದೇಹ ಹೊಗೆಸೊಪ್ಪು ಬಣ್ಣದ್ದು. ತಲೆಯ ಮೇಲೆ ಕಪ್ಪು ಜುಟ್ಟು, ಎದೆ ಮತ್ತು ಬೆನ್ನ ಮೇಲೆ ಮೀನಿನ ಹುರುಪೆಗಳ ಹಾಗೆ ಇರುವ ರೆಕ್ಕೆಗಳನ್ನು ಹೊಂದಿದೆ. ಬಾಲದ ಕೆಳಗೆ ಕೆಂಪು ಬಣ್ಣ ಎದ್ದು ಕಾಣುತ್ತದೆ.

ಉಳಿದ ಪ್ರಭೇದಗಳಾದ ಕರಿ ಪಿಕಳಾರ (ಹಿಪ್ಸಿಪಿಟೆಸ್ ಮಡಗಾಸ್ಕರಿಯೆನ್ಸಿಸ್), ಫಿಂಚ್ ಕೊಕ್ಕಿನ ಬುಲ್ ಬುಲ್ (ಸ್ಪಿಜಿಕ್ಸಾಸ್), ಬಿಳಿ ಕತ್ತಿನ ಬುಲ್ ಬುಲ್ (ಕ್ರಿನಿಜರ್ ಫ್ಲೇವಿಯೊಲಸ್) ಗಳು ಮಾನವರ ನಿವಾಸಗಳಿಂದ ದೂರವಿದ್ದು ಭಾರತ, ಸಿಲೋನ್ ಮತ್ತು ಬರ್ಮ ದೇಶಗಳಲ್ಲಿ ಕಂಡು ಬರುತ್ತವೆ. ಇವುಗಳು ಪಾಕಿಸ್ತಾನದಲ್ಲಿ ಕಂಡು ಬಂದಿಲ್ಲ. ಕೆಮ್ಮೀಸೆ ಪಿಕಳಾರದಂತೆ ಜುಟ್ಟು ಎದ್ದು ಕಾಣುವುದಿಲ್ಲ. (ಬಿ.ಬಿ.ಎಚ್.)

**ಪಿಕ್ನೊಗೋನಿಡ:** ಆರ್ಥ್ರಾಪೊಡ ವಂಶದ ಅರ್ಯಾಕ್ನಿಡ ವರ್ಗದಲ್ಲಿನ ಗಣ. ಪ್ಯಾಂಟೊಪೊಡ, ಪೋಡಸೋಮೇಟ ಇದರ ಪರ್ಯಾಯ ನಾಮಗಳು. ಇವು ಕಡಲ ವಾಸಿಗಳು. ಇವಕ್ಕೆ ಕಡಲ ಜೇಡಗಳೆಂದು ಹೆಸರು. ಎಲ್ಲ ಸಾಗರಗಳಲ್ಲಿ ಮತ್ತು ಕಡಲುಗಳಲ್ಲಿ ವಾಸಿಸುತ್ತವೆ. ಆದರೆ, ಧ್ರುವ ಪ್ರದೇಶಗಳಲ್ಲಿ ಹೆಚ್ಚಾಗಿವೆ. ಇವುಗಳ ದೇಹ ರಚನೆ ಜೇಡಗಳ ದೇಹ ರಚನೆಯಂತೆ ಇದೆ. ಇವುಗಳ ಮೊದಲ ಜೊತೆ ಉಪಾಂಗಗಳು ಕೆಲಿಸೆರಿಗಳನ್ನು ಹೋಲುತ್ತವೆ. ಈ ಹೋಲಿಕೆಯನ್ನು ಬಿಟ್ಟರೆ, ಪಿಕ್ನೊಗೋನಿಡಗಳು ಸಂಧಿಪದಿ ವಂಶದ

ಇತರ ವರ್ಗಗಳಲ್ಲಿರುವ ಪ್ರಾಣಿಗಳಿಂದ ವಿಭಿನ್ನವಾಗಿವೆ. ದೇಹ ಚಿಕ್ಕದು. ಕಾಲುಗಳು ಉದ್ದವಾಗಿದ್ದು, ಒಂದು ಜೊತೆ ಹೆಚ್ಚು ಕಾಲುಗಳಿವೆ. ಕಾಲುಗಳಲ್ಲಿ ಪಟೆಲ ಖಂಡವಿದೆ. ಹೆಚ್ಚಿನ ಜೊತೆ ಕಾಲುಗಳು ಗಂಡು ಜೇಡಗಳಲ್ಲಿದ್ದು, ಅವು ಮೊಟ್ಟೆಗಳನ್ನು ಹೊರಲು ಸಹಾಯಕ. ಇವಕ್ಕೆ ಓವಿಜೆರ ಎಂದು ಹೆಸರು. ಆದರೆ, ನ್ಯೂಜಿಲೆಂಡ್ ಪ್ರದೇಶದಲ್ಲಿ ವಾಸಿಸುವ ಪ್ರಭೇದಗಳಲ್ಲಿ ಓವಿಜೆರ್ ಇಲ್ಲ. ಇವು ಹೆಣ್ಣು ಜೇಡಗಳಲ್ಲಿ ಇಲ್ಲ. ಪಿಕ್ನೊಗೋನಿಡ ಗಣದ ಪ್ರಾಣಿಗಳಲ್ಲಿ ಏಳು ಜೊತೆ ಉಪಾಂಗಗಳಿವೆ. ಮೊದಲನೆ ಜೊತೆ ಉಪಾಂಗಗಳು ಚಿಕ್ಕದಾಗಿದ್ದು, ಕೀಲೇಟ್ ಮಾದರಿಯವು. ಪ್ರೌಢ ಪ್ರಾಣಿಗಳಲ್ಲಿ ಇವು ಇರುವುದಿಲ್ಲ. ಮುಂದಿನ ಎರಡು ಜೊತೆ ಉಪಾಂಗಗಳು ಸೂಕ್ಷ್ಮ ಗಾತ್ರದವು. ಅನೇಕ ವೇಳೆ ಪ್ರೌಢ ಹೆಣ್ಣು ಜೇಡಗಳಲ್ಲಿ ಇವು ಕಾಣುವುದಿಲ್ಲ. ಎರಡನೆಯ ಜೊತೆ ಉಪಾಂಗಗಳು ಗಂಡುಗಳಲ್ಲಿ ಇಲ್ಲ. ಮೂರನೆಯ ಜೊತೆ ಉಪಾಂಗಗಳೇ ಗಂಡು ಪ್ರಾಣಿಗಳಲ್ಲಿ ಮೊಟ್ಟೆಗಳನ್ನು ಹೊರಲು ಉಪಯುಕ್ತವಾಗಿವೆ. ಕೊನೆಯ ನಾಲ್ಕು ಜೊತೆ ಉಪಾಂಗಗಳು ಎಲ್ಲ ಪ್ರಾಣಿಗಳಲ್ಲಿ ಇದ್ದು, ನಡಿಗೆಯ ಅಂಗಗಳಾಗಿ ವರ್ತಿಸುತ್ತವೆ. ಕಡಲ ಜೇಡಗಳು ಸಾಮಾನ್ಯವಾಗಿ ಭಿನ್ನ ಲಿಂಗಿಗಳು. ಆದರೆ, ಬ್ರೆಜಿಲ್ ದೇಶದಲ್ಲಿ ಉಭಯ ಲಿಂಗಿ ಪ್ರಭೇದಗಳಿವೆ. ಬಹುಪಾಲು ಪ್ರಭೇದಗಳಲ್ಲಿ 4 ಜೊತೆ ಕಾಲುಗಳಿವೆಯಾದರೂ ಧ್ರುವ ಪ್ರದೇಶಗಳಲ್ಲಿ ಮತ್ತು ಕ್ಯಾರಿಬಿಯನ್ ವಲಯದಲ್ಲಿ ಇರುವ ಪ್ರಭೇದಗಳಲ್ಲಿ 5 ಜೊತೆ ಕಾಲುಗಳಿವೆ. ದಕ್ಷಿಣ ಧ್ರುವ ಪ್ರದೇಶದಲ್ಲಿ 6 ಜೊತೆ ಕಾಲುಗಳುಳ್ಳ ಒಂದು ಪ್ರಭೇದವಿದೆ.

ಪಿಕ್ನೊಗೋನಿಡ ಗುಂಪಿನ ಪ್ರಾಣಿಗಳ ದೇಹದಲ್ಲಿ 3 ಭಾಗಗಳಿವೆ. ಅಡಕವಾದ ತಲೆ, ಸ್ಪಷ್ಟವಾದ ಖಂಡ ವಿಂಗಡಣೆ ತೋರುವ (3–5 ಖಂಡಗಳ) ವಕ್ಷಭಾಗ ಮತ್ತು ಸಣ್ಣದಾದ ಬೆರಳಿನಾಕಾರದ ಉದರ ಭಾಗವಿದೆ. ವಕ್ಷ ಭಾಗದ ಮೇಲೆ ಫಲಕವೊಂದಿದೆ. ಇದೇ ಹೊರ ಕಂಕಾಲ. ಗುದ, ಉದರದ ಪಶ್ಚತುದಿಯಲ್ಲಿದೆ. ಆಹಾರವನ್ನು ಹೀರಲು ಅನುಕೂಲವಾಗುವಂತೆ ರೂಪಿತವಾಗಿರುವ ಸೊಂಡಿಲು ಎಂದು ಕರೆಯುವ ವಿಶಿಷ್ಟ ಉಪಾಂಗದ ತುದಿಯಲ್ಲಿ ಬಾಯಿ ಇದೆ. ಸೊಂಡಿಲು ತ್ರಿಕೋನಾಕಾರದ್ದಾಗಿದ್ದು ಅನೇಕ ವೇಳೆ ದೇಹಕ್ಕಿಂತಲೂ ದೊಡ್ಡ ಗಾತ್ರದ್ದಾಗಿದೆ. ತಲೆ ಭಾಗದಲ್ಲಿ ಮೂರು ಜೊತೆ ಉಪಾಂಗಗಳಿವೆ. ಮೊದಲನೆಯ ಜೊತೆಯೇ ಕೆಲಿಸೆರಿ. ಇದರ ತುದಿಯಲ್ಲಿ ಇಕ್ಕಳದ ಕೀಲೇಟ್ ರಚನೆ ಇರಬಹುದು. ಅಥವಾ ಇಲ್ಲದಿರಬಹುದು. ಎರಡನೆಯ ಜೊತೆಯೇ ಸಂವೇದಕ ಪ್ಯಾಲ್ಪಿಗಳು. ಇವು ಸೊಂಡಿಲಿನ ಇಕ್ಕೆಡೆಗಳಲ್ಲಿ ಸ್ಥಿತವಾಗಿದ್ದು ಅದಕ್ಕೆ ಆಧಾರವಾಗಿವೆ. ಓವಿಜೆರ ಕಾಲುಗಳು ದೇಹದ ತಳಭಾಗದಿಂದ ಮೂಡಿವೆ. ಶಿರ ಭಾಗದಲ್ಲಿನ ಗುಬುಟುಗಳ ತುದಿಯಲ್ಲಿ 4 ಸರಳ ಕಣ್ಣುಗಳಿವೆ. ಈ ಗುಂಪಿನ ಕಡಲತಡಿಯ ಪ್ರಾಣಿಗಳ ಜೀರ್ಣಾಂಗ ಮತ್ತು ಪ್ರಜನನಾಂಗಗಳು ಕವಲೊಡೆದು ಕಾಲುಗಳೊಳಕ್ಕೂ ಚಾಚಿಕೊಂಡಿವೆ. ಜನನ ರಂಧ್ರಗಳು ಸಾಮಾನ್ಯವಾಗಿ ದೇಹದ ತಳ ಭಾಗದಲ್ಲಿದ್ದು, ಕೊನೆಯ ಜೊತೆ ಕಾಲುಗಳ 2 ನೆಯ ಖಂಡದ ಬಳಿ ಹೊರಕ್ಕೆ ತೆರೆಯುತ್ತವೆ. ಕೆಲವೊಮ್ಮೆ ಇತರ ಕಾಲುಗಳ ಬುಡದಲ್ಲಿಯೂ ತೆರೆಯಬಹುದು. ಜೀವನ ಚಕ್ರದಲ್ಲಿ ಲಾರ್ವ ಹಂತವಿದೆ. ಲಾರ್ವ ಸ್ಥಿತಿಯ ಪ್ರಥಮ ಹಂತಗಳಲ್ಲಿ ದೇಹದಲ್ಲಿ ಖಂಡ ವಿಂಗಡಣೆ ಕಾಣುವುದಿಲ್ಲ. ಆಗ ಕೇವಲ 3 ಜೊತೆ ಉಪಾಂಗಗಳಿರುತ್ತವೆ.

ಲಾರ್ವಗಳು ಹೈಡ್ರಾಯಿಡ್ ಅಥವಾ ಪಾಲಿಪ್‌ಗಳಿಗೆ ಅಂಟಿಕೊಂಡು ಅವುಗಳ ಕೋಶ ದ್ರವ್ಯದಲ್ಲಿ ಗಂಡುಗಳಾಗುತ್ತವೆ. ಅಥವಾ ಮೆಡುಸಾಗಳ ದೇಹದೊಳಕ್ಕೆ ಅತಿಕ್ರಮಿಸಿ ಬೆಳೆಯುತ್ತವೆ. ಜಪಾನಿನ ಒಂದು ಪ್ರಭೇದದ ಲಾರ್ವಗಳು ಕ್ಲಾಮ್‌ಗಳ ಮ್ಯಾಂಟಲ್ ಕುಹರದಲ್ಲಿ ಸೇರಿ ಪರತಂತ್ರ ಜೀವಿಗಳಾಗಿ ವಾಸಿಸುತ್ತವೆ. (ಎಚ್.ಎಚ್.ಎಸ್.)

**ಪಿಟ್ಟ ಹಕ್ಕಿ:** ಪಕ್ಷಿಗಳ ವರ್ಗದ ಪ್ಯಾಸರಿಫಾರ್ಮಿಸ್ ಗಣದ ಪಿಟ್ಟಿಡೆ ಕುಟುಂಬಕ್ಕೆ ಸೇರಿದ ಸುಂದರ ಹಾಗೂ ವರ್ಣರಂಜಿತ ಹಕ್ಕಿ. ಪಿಟ್ಟ ಇದರ ಶಾಸ್ತ್ರೀಯ ಹೆಸರು. ಇದರಲ್ಲಿ ಸುಮಾರು 23 ಪ್ರಭೇದಗಳಿವೆ. ಪ್ರಾಚೀನ ಜಗತ್ತಿಗೆ ಸೀಮಿತವಾಗಿರುವ ಇವು ಭಾರತ ಮತ್ತು ಉತ್ತರ ಚೀನಾದಿಂದ ಆಸ್ಟ್ರೇಲಿಯ, ನ್ಯೂಗಿನಿಗಳವರೆಗೆ ಹರಡಿದಂತೆ ವ್ಯಾಪಿಸಿವೆ. ಆಫ್ರಿಕದಲ್ಲಿ ಎರಡು ಪ್ರಭೇದಗಳು ಮಾತ್ರ ಕಾಣದೊರೆಯುತ್ತವೆ. ಬಹುಪಾಲು ಪಕ್ಷಿಗಳು ಬೋರ್ನಿಯೊ ಮತ್ತು ಸುಮಾತ್ರ ಪ್ರದೇಶಗಳಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಪಿಟ್ಟ ಬ್ರ್ಯಾಕಿಯೂರ ಎಂಬ ಪ್ರಭೇದ ಉಂಟು.

15–30 ಸೆಂಮೀ ಉದ್ದದ ಗುಂಡು ಮೈಯಿನ ಹಕ್ಕಿಗಳಿವು. ಬಲಯುತವಾದ ನಸುಬಗ್ಗಿದ ಕೊಕ್ಕು, ಮೋಟು ಕತ್ತು, ಮೊಟ್ಟ ರೆಕ್ಕೆಗಳು, ನೀಳವಾದ ದೃಢ ಕಾಲುಗಳು, ಹಸುರು, ನೀಲಿ, ಕೆಂಪು, ಕಪ್ಪು, ಬಿಳಿ ಮುಂತಾದ ಹಲವು ಬಣ್ಣಗಳ ಪುಕ್ಕಗಳು, ಬಲು ಮೋಟಾದ ಬಾಲ–ಇವು ಪಿಟ್ಟ ಹಕ್ಕಿಗಳ ಪ್ರಧಾನ ಲಕ್ಷಣಗಳು. ಹೆಣ್ಣು ಗಂಡುಗಳೆರಡೂ ನೋಡಲು ಒಂದೇ ತೆರನಾಗಿವೆಯಾದರೂ ಹೆಣ್ಣಿನ ಬಣ್ಣ ಗಂಡಿನದರಷ್ಟು ಉಜ್ವಲವಲ್ಲ. ಪಿಟ್ಟ ಹಕ್ಕಿಗಳು ಒಂಟೊಂಟಿಯಾಗಿ ನೆಲದ ಮೇಲೆ ಹಾಗೂ ಕುರುಚಲು ಗಿಡಗಳ ನಡುವೆ ವಾಸಿಸುತ್ತವೆ. ಸ್ಥಾನಿಕವಾಗಿರಬಹುದು ಅಥವಾ ಸ್ಥಳೀಯವಾಗಿ ವಲಸೆ ಹೋಗಬಹುದು. ಇವು ಹೆಚ್ಚಾಗಿ ನೆಲದ ಮೇಲೆಯೇ ಕಾಲ ಕಳೆಯುವುವು. ಕೀಟಗಳೇ ಪ್ರಧಾನ ಆಹಾರ. ನೆಲದ ಮೇಲೆ ಕುಪ್ಪಳಿಸುತ್ತ, ತರಗಲೆಗಳನ್ನು, ಹಸಿಮಣ್ಣನ್ನು ಕೆದಕಿ, ಕೀಟಗಳು ಮತ್ತು ಹುಳು ಹುಪ್ಪಟೆಗಳನ್ನು ಹಿಡಿದು ತಿನ್ನುತ್ತವೆ. ಆಸ್ಟ್ರೇಲಿಯಾದಲ್ಲಿ ಕಾಣಸಿಗುವ ನಾಯ್ಸಿ ಪಿಟ್ಟ ಎಂಬುದು ಬಸವನ ಹುಳುಗಳನ್ನು ತಿನ್ನುತ್ತದೆ. ಪಿಟ್ಟ ಹಕ್ಕಿಗಳು ಕಡ್ಡಿ, ಹುಲ್ಲು, ಬೇರುಗಳಿಂದ ನೆಲದ ಮೇಲೆ, ಪೊದೆಗಳ ನಡುವೆ ಅಥವಾ ಮರದ ಕವಲುಗಳಲ್ಲಿ ಗೋಳದ ಆಕಾರದ ಗೂಡುಗಳನ್ನು ಕಟ್ಟಿ 4–6 ಬಿಳಿಯ ಬಣ್ಣದ ಮೊಟ್ಟೆಗಳನ್ನಿಡುತ್ತವೆ. ಗಂಡು ಹೆಣ್ಣುಗಳೆರಡೂ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿ ಮಾಡುವುವು.

ಭಾರತದ ಪಿಟ್ಟ ಹಕ್ಕಿ ಮೈನಾ ಹಕ್ಕಿಯ ಗಾತ್ರದ್ದು. ಕಂದು, ಕಪ್ಪು, ಬಿಳಿ, ನೀಲಿ, ಹಸುರು ಬಣ್ಣಗಳ ಗರಿಗಳಿಂದ ತುಂಬ ಚೆಲುವಾಗಿ ಕಾಣುತ್ತದೆ. ಬಾಲದ ಬುಡ ಕೆಂಪು ಬಣ್ಣದ್ದು. ಇದು ಮೊಟ್ಟೆ ಇಡುವ ಕಾಲ ಮೇ–ಆಗಸ್ಟ್. (ಎಚ್.ಎಚ್.ಎಸ್.)

**ಪಿಟ್ಯುಟರಿ ಗ್ರಂಥಿ:** ಮಿದುಳ ತಳಭಾಗಕ್ಕೆ ಅಂಟಿಕೊಂಡಿರುವ ಬಟಾಣಿಕಾಳಿಗಿಂತ (ಮನುಷ್ಯರಲ್ಲಿ) ಸ್ವಲ್ಪ ಹೆಚ್ಚು ದೊಡ್ಡದಾದ ಅಂತಃಸ್ರಾವಕ ಗ್ರಂಥಿ. ಗಾತ್ರ ಸುಮಾರು 10 ಮಿಮೀ ಉದ್ದ, 13 ಮಿಮೀ ಅಗಲ. ತೂಕ ಅರ್ಧಗ್ರಾಮ್. ಕಪಾಲದ ಸ್ಪಿನಾಯಿಡ್ ಮೂಳೆಯ ತೊಟ್ಟಿಲಲ್ಲಿ ಯಾವುದೇ ಪೆಟ್ಟಿಗೆ ಒಳಗಾಗದಂತೆ ಈ ಸಂಕೀರ್ಣ ಗ್ರಂಥಿ ಭದ್ರವಾಗಿ ಅಡಕವಾಗಿದೆ. ಇದು ಸ್ರವಿಸುವ ಹಾರ್ಮೋನುಗಳು ದೈಹಿಕ ಬೆಳವಣಿಗೆಯಲ್ಲಿ ಬಲು ಮುಖ್ಯ ಪಾತ್ರವಹಿಸುತ್ತವೆಯಲ್ಲದೆ ವಿವಿಧ ಅಂತಃಸ್ರಾವ ಗ್ರಂಥಿಗಳ ಕಾರ್ಯ ನಿಯಂತ್ರಿಸುತ್ತವೆ.

ಪಿಟ್ಯುಟರಿ ಗ್ರಂಥಿ ಮಿದುಳಿನಿಂದ ಮೂಗಿಗೆ ಲೋಳೆಯಂಥ ಒಸರಿಕೆಯನ್ನು ಕೊಂಡೊಯ್ಯುತ್ತದೆಂಬ ಭಾವನೆ ಬಲು ಕಾಲದಿಂದ ಇದ್ದುದರಿಂದ ಈ ಹೆಸರು (ಪಿಟ್ಯುಟ್ ಎಂದರೆ ಲೋಳೆ). ಇದು ನಿಜವಲ್ಲ. ಈ ಗ್ರಂಥಿಯನ್ನು ಮುಂಬದಿಯ ಮತ್ತು ಹಿಂಬದಿಯ ಹಾಲೆಗಳೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಇವುಗಳ ಉಗಮ, ರಚನೆ ಮತ್ತು ಕಾರ್ಯ ಬೇರೆ ಬೇರೆ. ಇವು ಭಿನ್ನಮೂಲಗಳಿಂದ ಉದ್ಭವಿಸಿ ಒಂದೆಡೆ ಸೇರಿವೆ. ಹಿಂಬದಿಯ ಹಾಲೆ ನರತಂತುಗಳ ತುದಿಯ ಗಂಟಿನಂತಿದೆ. ಇದು ಹೈಪೊಥಲಾಮಸ್ಸಿನಿಂದ ಉಗಮಿಸುತ್ತದೆ. ಇದರ ಮುಂದಿರುವ ಮುಂಬದಿಯ ಹಾಲೆ ಪಿಟ್ಯುಟರಿ ಗ್ರಂಥಿಯ ಹೆಚ್ಚು ಭಾಗವನ್ನು ಆಕ್ರಮಿಸಿಕೊಂಡಿದ್ದು ಅಂತಃ ಸ್ರಾವಕ ಗ್ರಂಥಿಯ ಸಾಮಾನ್ಯ ರಚನೆಯನ್ನು ಪಡೆದಿದೆ. ಇದರಲ್ಲಿ ಸಾಲು ಸಾಲಾಗಿ ಹರಡಿಕೊಂಡಿರುವ ಕೋಶಗಳ ಮಧ್ಯದಲ್ಲಿ ರಕ್ತನಾಳಗಳ ವ್ಯವಸ್ಥೆ ಉಂಟು. ಎರಡು ಬಗೆಯ ಕೋಶಗಳಿವೆ. ಕೆಲವು ವರ್ಣದ್ವೇಷಿಗಳು (ಕ್ರೊಮೋಫೋಬ್ಸ್) ಇನ್ನು ಕೆಲವು ವರ್ಣಮೋಹಿಗಳು (ಕ್ರೊಮೋಫಿಲ್ಸ್). ಹರಳುಕಣಗಳಿಲ್ಲದ ವರ್ಣದ್ವೇಷಿ ಕಣಗಳು ಯಾವ ಹಾರ್ಮೋನನ್ನು ಸ್ರವಿಸುವುದಿಲ್ಲ. ಬಹುಶಃ ವರ್ಣಮೋಹಿ ಕಣಗಳ ಉಗಮ ಅವುಗಳಿಂದ ಆಗುತ್ತಿರಬೇಕೆಂದು ತಿಳಿಯಲಾಗಿದೆ. ಹರಳು ಕಣಗಳನ್ನು ಹೊಂದಿದ ವರ್ಣಮೋಹಿ ಕಣಗಳು ಆಮ್ಲ ಮತ್ತು ಪ್ರತ್ಯಾಮ್ಲ ವರ್ಣಗಳಿಂದ ಲೇಪನ ಪಡೆಯುವುದನ್ನು ಆಧರಿಸಿ ಅವನ್ನು ಮತ್ತೆ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ಗ್ರಂಥಿಯ ರಸಸ್ರಾವ ನೇರವಾಗಿ ರಕ್ತ ಪ್ರವಾಹಕ್ಕೆ ಬಿಡುಗಡೆಯಾಗುತ್ತದೆ.

ಗ್ರಂಥಿಯ ಮುಂಬದಿಯ ಮತ್ತು ಹಿಂಬದಿಯ ಹಾಲೆಗಳು ಅನುಕ್ರಮವಾಗಿ ರಕ್ತದ ಮೂಲಕ ಮತ್ತು ನರತಂತುಗಳ ಮೂಲಕ ಹೈಪೊಥಲಾಮಸ್ಸಿನೊಡನೆ ಸಂಪರ್ಕ ಪಡೆದಿದ್ದು ಅದರ ಅಧೀನವರ್ತಿಯಾಗಿ ಕಾರ್ಯ ನಿರ್ವಹಿಸುತ್ತವೆ. ಹೈಪೊಥಲಮಸ್ ಕಾಲಕಾಲಕ್ಕೆ ಸ್ರವಿಸುವ ಹಾರ್ಮೋನಗಳು ರಕ್ತದ ಮೂಲಕ ಮುಂದಣ ಹಾಲೆಗೆ ತಲುಪಿ ಅಲ್ಲಿ ರಸಸ್ರಾವಕ್ಕೆ ಕಾರಣವಾಗುತ್ತವೆ. ಈ ಗ್ರಂಥಿಯನ್ನು ಹೈಪೊಥಲಾಮಸ್ಸಿನ ಸಂಪರ್ಕ ತಪ್ಪಿಸಿ ಬೇರೆ ಕಡೆ

ಕಸಿ ಮಾಡಿದಲ್ಲಿ ರಸಸ್ರಾವನ ಪರಿಣಾಮಕಾರಿಯಾಗಿ ಕುಗ್ಗುತ್ತದೆ. ಗ್ರಂಥಿಯ ಮುಂದಣ ಹಾಲೆಗೆ ವಿಪುಲ ರಕ್ತಪೂರೈಕೆ ಇದ್ದು ರಕ್ತನಾಳಗಳ ಜಾಲವೇ ಹರಡಿದೆ. ಹೈಪೊಥಲಾಮಸ್ ಪಿಟ್ಯುಟರಿಯ ಹಾದಿಯಲ್ಲಿ ಈ ರಕ್ತನಾಳಗಳ ಹಂದರ ಉಂಟು. ಇದರ ಮೂಲಕವೆ ಹೈಪೊಥಲಾಮಸ್ಸಿಗೆ ಮುಂದಣ ಹಾಲೆಯ ಸಂಪರ್ಕ ಒದಗಿರುವುದಾಗಿದೆ. ಈ ರಕ್ತನಾಳಗಳಲ್ಲಿಯ ರಕ್ತಪರಿಚಲನೆಗೇನಾದರೂ ಭಂಗ ಉಂಟಾದಲ್ಲಿ ಪಿಟ್ಯುಟರಿಯ ಮುಂದಿನ ಹಾಲೆ ತನ್ನ ಕಾರ್ಯಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ.

ಮುಂದಣ ಹಾಲೆಯು ಸ್ರವಿಸುವ ಹಾರ್ಮೋನುಗಳ ಪೈಕಿ ಆರನ್ನು ಮುಖ್ಯವೆಂದು ಪರಿಗಣಿಸಲಾಗಿದೆ. ಬೆಳವಣಿಗೆಯನ್ನು ಉತ್ತೇಜಿಸುವ ಹಾರ್ಮೋನ್, ಪ್ರಜನನಾಂಗಗಳ ಕಾರ್ಯವನ್ನು ಪ್ರಚೋದಿಸುವ ಎರಡು ಹಾರ್ಮೋನುಗಳು, ಹಾಲಿನಸ್ರಾವದ ಉತ್ತೇಜಕ ಪ್ರೊಲ್ಯಾಕ್ಟಿನ್, ಥೈರಾಯಿಡ್ ಗ್ರಂಥಿಯನ್ನೂ ಹಾಗು ಅಡ್ರಿನಲ್ ತೊಗಟೆಯನ್ನೂ ಉತ್ತೇಜಿಸುವ ಹಾರ್ಮೋನುಗಳು. ಈ ಎಲ್ಲ ಹಾರ್ಮೋನುಗಳ ಬಿಡುಗಡೆಗೆ ಬೇಕಾದ ಪ್ರಚೋದನೆ ಹೈಪೊಥಲಾಮಸ್ಸಿನಿಂದ ಅದು ಸ್ರವಿಸುವ ಹಾರ್ಮೊನಗಳ ಮೂಲಕ ದೊರೆಯುತ್ತದೆ.

ಬೆಳವಣಿಗೆಯ ಹಾರ್ಮೋನ್: ಆ್ಯಸಿಡೋಫಿಲ್ ಕೋಶಗಳ ವಿಪುಲ ಬೆಳವಣಿಗೆ ಅಥವಾ ಅದರ ಗಂತಿಯ ಫಲವಾಗಿ ತೋರಿಬರುವ ಮಿತಿಮೀರಿದ ದೈಹಿಕ ಬೆಳವಣಿಗೆಯಿಂದಾಗಿ ಈ ಹಾರ್ಮೋನ್ ಬೆಳವಣಿಗೆಗೆ ಸಂಬಂಧ ಹೊಂದಿರುವುದನ್ನು ತೋರಿಸುತ್ತದೆ. ಈ ಗ್ರಂಥಿಯನ್ನು ಎಳೆತನದಲ್ಲಿ ಕತ್ತರಿಸಿ ತೆಗೆದದ್ದಾದರೆ ಅಸ್ಥಿಪಂಜರ ಮತ್ತು ಆಂತರಿಕಾಂಗಗಳ ಬೆಳವಣಿಗೆಗೆ ನಿಲುಗಡೆ ಆಗುತ್ತದೆ. ಈ ಹಾರ್ಮೋನ್ ಬೆಳವಣಿಗೆಯನ್ನು ಹೆಚ್ಚಿಸುತ್ತದೆ. ಇದು ಮೂಳೆಯ ಅಂತ್ಯ ಭಾಗ ಮತ್ತು ನಡುವಿನ ಭಂಗಗಳ ಸಂಧಿಸ್ಥಾನದಿಂದ ಚಟುವಟಿಕೆಯನ್ನು ಮುಂದುವರಿಸಿ ದೇಹದ ಎತ್ತರವನ್ನು ವೃದ್ಧಿಸುತ್ತದೆ. ಅಲ್ಲದೆ ವಿಸ್ತೃತವಾಗಿ ದೇಹಭಾಗಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಇದು ಅಮೈನೋ ಆಮ್ಲಗಳಿಂದ ಪ್ರೊಟೀನ್ ಸಿದ್ಧತೆಯನ್ನು ವರ್ಧಿಸುತ್ತದೆ. ಥೈರಾಕ್ಸಿನ್ ಮತ್ತು ಇನ್ಸುಲಿನ್ ಹಾರ್ಮೋನುಗಳಿಗೆ ಪೂರಕವಾಗಿ ಕಾರ್ಯಮಾಡಿ, ಉಪಾಪಚಯ ಕ್ರಿಯೆಯಲ್ಲಿ ಪಾತ್ರ ವಹಿಸುತ್ತದೆ. ದೇಹದ ಬೆಳವಣಿಗೆ, ಎತ್ತರ, ಗಾತ್ರ ನಿರ್ಧರಿಸುವಲ್ಲಿ ಇದರದು ನಿರ್ಣಾಯಕ ಪಾತ್ರ. ಈ ಹಾರ್ಮೋನಿನ ಕೊರತೆಯಿಂದ ಕುಬ್ಜತೆ ಉಂಟಾಗುತ್ತದೆ. ಹಾಗೂ ಅತಿಯಾದ ಸ್ರವಿಕೆಯಿಂದ ದೈತ್ಯ ಬೆಳವಣಿಗೆಯಾಗುವುದು.

ಪ್ರಜನನಾಂಗಗಳ ಪ್ರಚೋದಕ ಹಾರ್ಮೋನುಗಳು : ಮುಂದಣ ಪಿಟ್ಯುಟರಿ ಸ್ರಾವದ ಕೊರತೆ ಆದಾಗ ಇಲ್ಲವೆ ಆ ಗ್ರಂಥಿಯನ್ನು ಕತ್ತರಿಸಿ ತೆಗೆದಾಗ ಲೈಂಗಿಕ ಗ್ರಂಥಿಗಳು ಸೊರಗಿ ಹೋಗುತ್ತವೆ ಮತ್ತು ಲೈಂಗಿಕ ಚಟುವಟಿಕೆ ಕುಗ್ಗಿ ಹೋಗುತ್ತದೆ. ಪಿಟ್ಯುಟರಿ ಸ್ರವಿಸುವ ಎರಡು ಮುಖ್ಯ ಹಾರ್ಮೋನುಗಳು ಬೀಜಕಣಗಳ ತಯಾರಿಕೆಯನ್ನು ಹಾಗು ಲೈಂಗಿಕ ಹಾರ್ಮೋನುಗಳ ಸ್ರಾವವನ್ನು ನಿಯಂತ್ರಿಸುತ್ತವೆ. ಇವುಗಳಿಗೆ ಹೆಣ್ಣು–ಗಂಡು ಎರಡರಲ್ಲೂ ಸಮ ಪ್ರಭಾವ ಉಂಟು. ಅಂಡಾಶಯದ ಮೇಲೆ ಬೀರುವ ಪ್ರಭಾವದಿಂದಾಗಿ ಒಂದು ಹಾರ್ಮೋನನ್ನು ಕೋಶಿಕೋತ್ತೇಜಕ ಹಾರ್ಮೋನೆಂದು (ಎಫ್‌ಎಸ್‌ಎಚ್) ಕರೆಯಲಾಗಿದೆ. ವ್ಯಕ್ತಿ ಯೌವನದಲ್ಲಿ ಕಾಲಿರಿಸಿದ ಬಳಿಕ ಇದು ಲೈಂಗಿಕ ಗ್ರಂಥಿಗಳ ಕಾರ್ಯವನ್ನು ಉತ್ತೇಜಿಸುತ್ತದೆ. ಸ್ತ್ರೀಯರಲ್ಲಿ ಗ್ರಾಫಿಯನ್ ಕೋಶಿಕೆಯನ್ನು ಬೆಳೆಸಿ, ಫಲವತ್ತತೆಯ ಕಾಲಾದ್ಯಂತ, ತಿಂಗಳಿಗೊಂದರಂತೆ ಅಂಡವನ್ನು ವಿಸರ್ಜಿಸುವಲ್ಲಿ ಸಹಾಯಕವಾಗಿದೆ. ಅದೇ ರೀತಿ ಪುರುಷರಲ್ಲಿ ವೀರ್ಯಾಣುಗಳ ಉತ್ಪತ್ತಿಯನ್ನು ನಿಯಂತ್ರಿಸುತ್ತದೆ. ಮತ್ತೊಂದು ಹಾರ್ಮೋನಾದ ಲ್ಯುಟಿನಯಿಸಿಂಗ್ ಹಾರ್ಮೋನ್ (ಎಲ್‌ಎಚ್) ಸ್ತ್ರೀಯಲ್ಲಿ ಪೀತಕೋಶಗ್ರಂಥಿಯನ್ನೂ (ಕಾರ್ಪಸ್ ಲ್ಯೂಟಿಯಮ್) ಪುರುಷರಲ್ಲಿ ವೃಷಣಗಳೊಗಿರುವ ಲಿಡಿಗ್ ಕೋಶಗಳ ಬೆಳವಣಿಗೆ ಹಾಗು ಕಾರ್ಯಗಳನ್ನು ಪ್ರಚೋದಿಸುತ್ತದೆ. ವೃಷಣದಲ್ಲಿ ಟೆಸ್ಟೊಸ್ಟಿರೋನ್ ಹಾಗು ಅಂಡಾಶಯದಲ್ಲಿ ಎಸ್ಟ್ರೊಜನ್ ಹಾಗು ಪ್ರೊಜೆಸ್ಟೊರನ್‌ಗಳ ತಯಾರಿಕೆ ಇದರ ಹತೋಟಿಯಲ್ಲಿದೆ.

ಪ್ರೊಲಾಕ್ಟಿನ್: ಇದು ಸ್ತನಗಳಲ್ಲಿ ಕ್ಷೀರೋತ್ಪತ್ತಿಯನ್ನು ಪ್ರಚೋದಿಸುವುದರಿಂದ, ಈ ಗ್ರಂಥಿಗೆ ಏನಾದರೂ ಊನವಾದರೆ ಸ್ತನಗಳು ಹಾಲು ಸ್ರವಿಸವು. ಸ್ತ್ರೀ ಮೈನೆರೆಯುವ ಮೊದಲು ಸ್ತನಗಳ ಮೇಲೆ ಈ ಹಾರ್ಮೋನಿನ ಪ್ರಭಾವವೇನೂ ಇಲ್ಲ. ಆಕೆ ಯೌವನದಲ್ಲಿ ಕಾಲಿರಿಸಿದ ತರುವಾಯ ಎಸ್ಟ್ರೊಜನ್–ಪ್ರೊಜೆಸ್ಟಿರಾನುಗಳು ಸ್ತನಗಳ ಬೆಳವಣಿಗೆಯನ್ನು ಪ್ರಚೋದಿಸಿದ ಬಳಿಕ ಪ್ರೊಲ್ಯಾಕ್ಟಿನ್ ಕೂಡ ಪ್ರಭಾವ ಬೀರಬಹುದಾದರೂ ಸಾಮಾನ್ಯವಾಗಿ ಹೆರಿಗೆಯ ತರುವಾಯ ಹಾಲೂಡಿಕೆಗೆ ಇದು ಕಾರಣವಾಗುತ್ತದೆ. ಸ್ತನ್ಯಪಾನ ಇದರ ತಯಾರಿಕೆಗೆ ಮತ್ತಷ್ಟು ಚಾಲನೆಯನ್ನು ನೀಡುತ್ತದೆ.

ಥೈರಾಯಿಡ್ ಗ್ರಂಥಿಯ ಪ್ರಚೋದಕ : ಪಿಟ್ಯುಟರಿ ಗ್ರಂಥಿಯನ್ನು ತೆಗೆದುಹಾಕಿದಲ್ಲಿ ಥೈರಾಯಿಡ್ ಗ್ರಂಥಿ ಸೊರಗಿ ಹೋಗುತ್ತದೆ. ಪಿಟ್ಯುಟರಿ ಸ್ರವಿಸುವ ಹಾರ್ಮೋನಿನ (ಟಿಎಸ್‌ಎಚ್) ಪ್ರಭಾವದಿಂದಾಗಿ ಥೈರಾಯಿಡ್ ಗ್ರಂಥಿಯ ಕೋಶಗಳು ವಿಪುಲ ಬೆಳವಣಿಗೆಯನ್ನು ತೋರಿಸಿ ತನ್ಮೂಲಕ ಥೈರಾಕ್ಸಿನ್ ಸ್ರವಿಸಿ ಚಯಾಪಚಯ ಕ್ರಿಯೆಯನ್ನು ವೇಗಗೊಳಿಸುತ್ತವೆ. ರಕ್ತದಲ್ಲಿ ಥೈರಾಯಿಡ್ ಗ್ರಂಥಿಯ ಹಾರ್ಮೋನಿನ ಮೊತ್ತ ಕುಗ್ಗಿದಲ್ಲಿ ಪಿಟ್ಯುಟರಿಯ ಪ್ರಚೋದಕ ಹಾರ್ಮೋನಿನ ಮೊತ್ತ ಹೆಚ್ಚುವರಿಗೊಳ್ಳುತ್ತದೆ. ಥೈರಾಯಿಡ್ ಗ್ರಂಥಿಯ ಹಾರ್ಮೋನ್ ವಿಪುಲವಾಗಿದ್ದರೆ ಪಿಟ್ಯುಟರಿ ಉತ್ತೇಜಕ ಹಾರ್ಮೋನ್ ಇಳಿಯುತ್ತದೆ. ಇಂಥ ಪರಸ್ಪರ ನಿಯಂತ್ರಣ ನಿಯಮ ಅಡ್ರಿನಲ್ ಮತ್ತು ಪ್ರಜನನಾಂಗಗಳ ಹಾರ್ಮೋನುಗಳಿಗೂ ಅನ್ವಯಿಸುತ್ತದೆ. (ನೋಡಿ: ಥೈರಾಯಿಡ್)

ಅಡ್ರಿನಲ್ ಗ್ರಂಥಿಯ ತೊಗಟೆಯ ಪ್ರಚೋದಕ: ಇದು ಅಡ್ರಿನಲ್ ಗ್ರಂಥಿಯ ತೊಗಟೆ ಕೋಶಗಳ ವಿಪುಲ ಬೆಳವಣಿಗೆಗೆ ಕಾರಣವಾಗಿ ಕಾರ್ಟಿಕೊಸ್ಟಿರಾಯಿಡ್‌ಗಳ ಸ್ರವಿಕೆಗೆ ಕಾರಣವಾಗಿದೆ. ಬದುಕಿನ ಎಲ್ಲ ಚಟುವಟಿಕೆಗಳಿಗೆ ಇದು ಸಹಾಯಕವಾಗಿ ಯಾವುದೇ ಒತ್ತಡದ ಪರಿಸ್ಥಿತಿಯನ್ನೂ ಪರಿಣಾಮಕಾರಿಯಾಗಿ ಎದುರಿಸಬಲ್ಲದು. (ನೋಡಿ: ಅಡ್ರಿನಲ್ ಗ್ರಂಥಿ)

ಹಿಂಬದಿಯ ಪಿಟ್ಯುಟರಿ: ಹೈಪೊಥಲಾಮಸ್ ಸ್ರವಿಸುವ ಎರಡು ಹಾರ್ಮೋನುಗಳೂ (ಆಕ್ಸಿಟೋಸಿನ್ ಹಾಗು ವಾಸೊಪ್ರೆಸಿನ್) ನರತಂತುಗಳ ಮೂಲಕ ಸಾಗಿಬಂದು ಹಿಂಬದಿಯ ಹಾಲೆಯಲ್ಲಿ ಸಂಗ್ರಹಿಸಿ ಕಾಲಕಾಲಕ್ಕೆ ಬಿಡುಗಡೆ ಹೊಂದುತ್ತವೆ. ಹಿಂಬದಿಯ ಹಾಲೆ, ಹಾರ್ಮೋನ್ ಉತ್ಪಾದನೆಯಲ್ಲಿ ಭಾಗವಹಿಸದೆ ಕೇವಲ ಸಂಗ್ರಹಕೋಶವಾಗಿ ಮಾತ್ರ ಕಾರ್ಯ ಮಾಡುತ್ತದೆ. ನರತಂತುಗಳ ಸಂಗ್ರಹದ ಈ ಹಾಲೆ ರಕ್ತನಾಳಕ್ಕೆ ಸಮೀಪ ಸಂಪರ್ಕವನ್ನು ಹೊಂದಿದೆ.

ಆಕ್ಸಿಟೋಸಿನ್ : ಈ ಹಾರ್ಮೋನ್ ಹೆರಿಗೆಯ ಕಾಲದಲ್ಲಿ ಗರ್ಭಕೋಶದ ಸಂಕೋಚನವನ್ನು ಉತ್ತೇಜಿಸಿ, ಜನನ ಕ್ರಿಯೆಗೆ ಸಹಾಯಕ. ಹಾಲೂಡಿಕೆಯ ಕಾಲದಲ್ಲಿ ಸ್ತನಾಗ್ರದಿಂದ ಹಾಲು ಹೊಮ್ಮಲು ಇದರ ಉತ್ತೇಜನ ಅವಶ್ಯಕ.

ವಾಸೊಪ್ರೆಸಿನ್ (ಎಡಿಎಚ್): ಇದು ಮೂತ್ರಜನಕಾಂಗ ಹೊರಹಾಕುವ ಮೂತ್ರದಲ್ಲಿಯ ನೀರಿನ ಪ್ರಮಾಣ ನಿಯಂತ್ರಿಸಿ, ದೇಹದಲ್ಲಿ ನೀರಿನ ಸಮತೋಲನವನ್ನು ಕಾಯ್ದಿರಿಸುತ್ತದೆ. ಮೂತ್ರಪಿಂಡದೊಳಗಿನ ಅಂತ್ಯ ಸುರಳಿ ನಾಳ ಮತ್ತು ಸಂಗ್ರಹನಾಳದ ಮೇಲೆ ಇದರ ಪ್ರಭಾವವಿದೆ. ಇದರಿಂದಾಗಿ ಶೋಧಿಸಲ್ಪಟ್ಟ ವಿಪುಲ ಮೊತ್ತದ ದ್ರವ ಒಳಹೀರಲ್ಪಟ್ಟು, ಒಂದೂವರೆ ಲೀಟರಿನಷ್ಟು ಮೂತ್ರವನ್ನು ಮಾತ್ರ ಹೊರಹಾಕುತ್ತದೆ. ದೇಹದಲ್ಲಿ ನೀರಿಳಿಕೆಯಾದ ಪಕ್ಷ ಈ ಹಾರ್ಮೋನಿನ ಸ್ರಾವ ಹೆಚ್ಚುತ್ತದೆ. ಆಗ ಹಿಂದಣ ಹಾಲೆಯಲ್ಲಿಯ ಹಾರ್ಮೋನ್ ಕರಗಿ ಹೋಗುತ್ತದೆ. ಅನಂತರ ಒಂದೆರಡು ದಿವಸಗಳಲ್ಲಿ ನೀರಿನ ಸಮತೋಲನ ಉಂಟಾದ ಬಳಿಕ ಮತ್ತೆ ಅದು ಸಂಗ್ರಹಿಸಲ್ಪಡುತ್ತದೆ. ಈ ಹಾರ್ಮೋನಿನ ಅಭಾವ ಉಂಟಾದಲ್ಲಿ ವಿಪುಲ ಮೊತ್ತದಲ್ಲಿ ಮೂತ್ರ ವಿಸರ್ಜನೆ ಪರಿಣಮಿಸುತ್ತದೆ. ಈ ಹಾರ್ಮೋನಿನ ಕೊರತೆಯಿಂದ ಡಯಬಿಟಿಸ್ ಇನ್ಸಿಪಿಡಿಯಸ್ ಎಂಬ ರೋಗ ಉಂಟಾಗುತ್ತದೆ.

ಪಿಟ್ಯುಟರಿ ಗ್ರಂಥಿಯ ರೋಗಗಳು : ಪಿಟ್ಯುಟರಿ ಗಾಯಗಳು ಅಪರೂಪ. ಈ ಗ್ರಂಥಿಯಲ್ಲಿ ಅಥವಾ ಇದರ ಪರಿಸರದಲ್ಲಿ ಅಕಾರಣ ಬೆಳವಣಿಗೆ (ಗಂತಿ) ಉಂಟಾದಾಗ ಪಿಟ್ಯುಟರಿ ಕಾರ್ಯ ವ್ಯತ್ಯಯಗೊಳ್ಳುತ್ತದೆ. ಗಂತಿಗಳು ಮುಂದಣ ಹಾಲೆಯಲ್ಲಿ ಗೋಚರಿಸುತ್ತವೆಯೆ ವಿನಃ ಹಿಂದಿನ ಹಾಲೆಯಲ್ಲಲ್ಲ. ಹಿಂದಣ ಹಾಲೆ ನಾಶ ಹೊಂದಬಹುದಲ್ಲದೆ ಅದರ ಸಂಪರ್ಕನರಗಳು ಭಂಗಗೊಳ್ಳಬಹುದು. ಬೆಳೆದ ಗಂತಿಗಳ ಗಾತ್ರ ಮತ್ತು ಇವನ್ನು ಅವಲಂಬಿಸಿ ಬೇರೆ ಬೇರೆ ದೈಹಿಕ ಪರಿಣಾಮಗಳು ಗೋಚರಿಸುತ್ತವೆ. ಕಣ್ಣನರದ ಮೇಲೆ ಒತ್ತಿ ದೃಷ್ಟಿಯನ್ನು ಕುಂದಿಸಬಹುದು, ಕಪಾಲದ ಮೂಳೆಯನ್ನು ತೆಳುವಾಗಿಸಬಹುದು. ಮುಂದಣ ಹಾಲೆ ಎಳೆತನದಲ್ಲಿ ಮೂಳೆಯ ತುದಿಗಳು ಕೂಡಿಕೊಳ್ಳುವ ಮುನ್ನ ವಿಪುಲವಾಗಿ ಬೆಳವಣಿಗೆಯ ಹಾರ್ಮೋನನ್ನು ಹೊರಹಾಕಿ ರಾಕ್ಷಸ ಬೆಳವಣಿಗೆಯನ್ನು ಉಂಟುಮಾಡಬಹುದು. ಉದ್ದ ಮೂಳೆಗಳು ಮಿತಿಮೀರಿ ಬೆಳೆದು ವ್ಯಕ್ತಿ ಬಲು ಎತ್ತರವಾಗಿ ಬೆಳೆಯುತ್ತಾನೆ. ಕೈಕಾಲುಗಳು ನೀಳವಾಗಿರುತ್ತವೆ. ಮಾನಸಿಕ ಬೆಳವಣಿಗೆ ನಿಧಾನಗೊಳ್ಳುತ್ತದೆ. ಈ ಹಾರ್ಮೋನ್ ವಯಸ್ಕರಲ್ಲಿ ಹೆಚ್ಚು ಮೊತ್ತದಲ್ಲಿ ಸ್ರವಿಸಲ್ಪಟ್ಟರೆ, ಮೂಳೆಗಳು ಗಾತ್ರದಲ್ಲಿ ದೊಡ್ಡವಾಗುತ್ತವೆ. ಉದ್ದದ ಹೆಚ್ಚಳ ಆಗ ಉಂಟಾಗುವುದಿಲ್ಲ. ಆಂತರಿಕಾಂಗಗಳು ದೊಡ್ಡವಾಗಿ ಬೆಳೆಯುತ್ತವೆ. ಕೆಳದವಡೆ ಅಗಲವಾಗುತ್ತದೆ. ತುಟಿ, ಮೂಗು, ಕಿವಿ ದೊಡ್ಡವಾಗುತ್ತವೆ. ಮುಖದ ಚರ್ಮ ದಪ್ಪಗಾಗುತ್ತದೆ. ಹಲ್ಲುಗಳು ಬೇರ್ಪಡುತ್ತವೆ. ಕೈಕಾಲ ಮೇಲಿನ ಚರ್ಮ ದಪ್ಪಗಾಗಿ ಆ ಅಂಗಗಳು ಗಾತ್ರದಲ್ಲಿ ದೊಡ್ಡವಾಗುತ್ತವೆ. ಧ್ವನಿ ಒರಟಾಗುತ್ತದೆ. ಸ್ತ್ರೀಯರಲ್ಲಿ ಮುಟ್ಟು ನಿಲುಗಡೆಯಾಗುತ್ತದೆ. ಈ ತೆರನಾದ ಬೆಳವಣಿಗೆ ಆಮ್ಲದೊಲವಿನ ಕೋಶಗಳ ಗಂತಿಯಿಂದ ಉದ್ಭವಿಸುತ್ತದೆ. ಪ್ರತ್ಯಾಮ್ಲದೊಲವಿನ ಕೋಶಗಳ ಗಂತಿಯಿಂದ ಕುಶಿಂಗ್ ಲಕ್ಷಣಕೂಟ ಗೋಚರಿಸುತ್ತದೆ. ಅಡ್ರಿನಲ್ ಗ್ರಂಥಿಯ ತೊಗಟೆಯ ಸ್ರಾವ ಹೆಚ್ಚಿ ಮುಂಡ ಮತ್ತು ಕತ್ತಿನ ಭಾಗದಲ್ಲಿ ವಿಪುಲವಾಗಿ ಕೊಬ್ಬು ಸಂಗ್ರಹವಾಗುತ್ತದೆ;

ಚರ್ಮದಲ್ಲಿ ಕೆನ್ನೀಲಿ ಗೆರೆಗಳು ಗೋಚರಿಸುತ್ತವೆ. ರಕ್ತದ ಒತ್ತಡ ಹೆಚ್ಚುತ್ತದೆ. ಮೂಳೆ ಅಭದ್ರಗೊಳ್ಳುತ್ತದೆ. ಮಧುಮೇಹ ಗೋಚರಿಸಬಹುದು. ಮುಂದಣ ಹಾಲೆಯ ಸ್ರಾವ ಇಳಿಮುಖವಾದಲ್ಲಿ ದೈಹಿಕ ಬೆಳವಣಿಗೆ ಮತ್ತ ಚಯಾಪಚಯ ಕ್ರಿಯೆ ಕುಗ್ಗುತ್ತವೆ. ಬೆಳವಣಿಗೆಯ ಹಾರ್ಮೋನಿನ ಅಭಾವದಿಂದ ವ್ಯಕ್ತಿ ಕುಳ್ಳನಾಗುತ್ತಾನೆ; ಲೈಂಗಿಕ ಹಾರ್ಮೋನುಗಳ ಅಭಾವ ಜೊತೆಯಲ್ಲಿದ್ದರೆ ಲೈಂಗಿಕ ಗ್ರಂಥಿಯ ಬೆಳವಣಿಗೆ ಕುಗ್ಗುತ್ತದೆ.

ಮುಂದಣ ಹಾಲೆ ಸಂಪೂರ್ಣನಾಶ ಹೊಂದಿದಲ್ಲಿ ಸುಸ್ತು, ಲೈಂಗಿಕ ಕಾರ್ಯದ ನಿಲುಗಡೆ, ತೈರಾಯಿಡ್ ಗ್ರಂಥಿ ಮತ್ತು ಅಡ್ರಿನಲ್ ಗ್ರಂಥಿಯ ರಸಸ್ರಾವದ ಕೊರತೆ ಗೋಚರಿಸುತ್ತವೆ. ಸೈಮಂಡನ ರೋಗವೆಂದು ಕರೆಯುವ ಈ ಸ್ಥಿತಿ ಬಾಣಂತಿತನದ ನಂಜಿನಿಂದ ತಲೆದೋರಬಹುದಾಗಿದೆ. ಅದರಿಂದಾಗಿ ಹಾಲೂಡಿಕೆ ನಿಲುಗಡೆಯಾಗುತ್ತದೆ; ಮುಟ್ಟು ಪ್ರಾರಂಭವಾಗುವುದಿಲ್ಲ. ಲೈಂಗಿಕ ಇಚ್ಛೆ ಕಡಿಮೆ ಆಗುತ್ತದೆ. ಲೈಂಗಿಕ ಲಕ್ಷಣಗಳು ಸೊರಗುತ್ತವೆ. ಗಂಡಸರಲ್ಲಿ ಷಂಡತನವುಂಟಾಗುತ್ತದೆ. ವ್ಯಕ್ತಿ ಬಿಳಿಚಿಕೊಳ್ಳುತ್ತಾನೆ. ರಕ್ತದ ಒತ್ತಡ ಇಳಿಯುತ್ತದೆ. ಹೈಪೊಥಲಾಮಸ್ ರೋಗದಿಂದ ದೇಹ ಬೊಜ್ಜಿನಿಂದ ಕೂಡಿ ಸ್ಥೂಲವಾಗುತ್ತದೆ. ಲೈಂಗಿಕ ಗ್ರಂಥಿಗಳ ಬೆಳವಣಿಗೆ ಕುಗ್ಗುತ್ತದೆ (ಫ್ರಾಲಿಕನ ಲಕ್ಷಣಕೂಟ). ಹಿಂದಣ ಹಾಲೆ ಮತ್ತು ಹೈಪೊಥಲಾಮಸ್ ಸಂಪರ್ಕ ಭಂಗವಾದಲ್ಲಿ ವ್ಯಕ್ತಿಯಲ್ಲಿ ಬಹುಮೂತ್ರ ನಿರೋಧಕ ಹಾರ್ಮೋನಿನ ಅಭಾವ ಉಂಟಾಗುತ್ತದೆ. ಆಗ ವ್ಯಕ್ತಿ ಡಯಾಬಿಟಿಸ್ ಇನ್‌ಸಿಪಿಡಿಸ್ ಎಂಬ ರೋಗಕ್ಕೆ ತುತ್ತಾಗುವುದಿದೆ. ಪದೇ ಪದೇ ಮೂತ್ರ ವಿಸರ್ಜನೆ ಮಾಡಬೇಕಾಗುತ್ತದೆ. ಮೂತ್ರದ ಸಾಪೇಕ್ಷ ಸಾಂದ್ರತೆ ತುಂಬ ಕೆಳಕ್ಕಿಳಿಯುತ್ತದೆ, ಹೆಚ್ಚು ಬಾಯಾರಿಕೆಯಿಂದ ಪದೇ ಪದೇ ನೀರು ಕುಡಿಯಬೇಕಾಗುತ್ತದೆ. ಚರ್ಮ, ನಾಲಿಗೆ ಒಣಗುತ್ತವೆ, ಜೊಲ್ಲು, ಬೆವರು ಕಡಿಮೆಯಾಗುತ್ತವೆ.

ಉಭಯವಾಸಿಗಳು ಹಾಗು ಸರೀಸೃಪಗಳಲ್ಲಿ ಹಿಂಬದಿ ಹಾಗೂ ಮುಂಬದಿ ಪಿಟ್ಯೂಟರಿಗಳ ಮಧ್ಯದಲ್ಲಿ ಮಧ್ಯ ಪಿಟ್ಯೂಟರಿ ಇರುತ್ತದೆ (ಇಂಟರ್‌ಮಿಡಿಯೇಟ್ ಪಿಟ್ಯೂಟರಿ) ಇದರಲ್ಲಿರುವ ಕೋಶಗಳ ಸ್ರವಿಕೆಯಿಂದ (ಮೆಲನೊಫೊರಸ್ಟಿಮುಲೇಡಿಂಗ್ ಹಾರ್ಮೋನ್) ಆ ಜೀವಿಗಳು ತಮ್ಮಿಚ್ಛೆಯಂತೆ, ಸುತ್ತಲ ವಾತಾವರಣಕ್ಕೆ ತಕ್ಕಂತೆ, ತಮ್ಮ ಹೊರಮೈ ಬಣ್ಣವನ್ನು ಬದಲಾಯಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ಇತರ ಗುಂಪುಗಳಲ್ಲಿ, ಸ್ಪಷ್ಟವಾಗಿ ಈ ಭಾಗ ಇರದಿದ್ದರೂ, ಎಮ್‌ಎಸ್‌ಎಚ್ ಸ್ರವಿಸುವ ಕೋಶಗಳು, ಮುಂದಿನ ಪಿಟ್ಯುಟರಿಯಲ್ಲಿರುತ್ತವೆ. ***

**ಪಿತೃರಕ್ಷಣೆ:** ಕೆಲವು ಪ್ರಾಣಿಗಳು ತಮ್ಮ ಮೊಟ್ಟೆ ಅಥವಾ ಮರಿಗಳನ್ನು ಸಂರಕ್ಷಿಸಿ ಜೋಪಾನ ಮಾಡುವ ಪ್ರಕ್ರಿಯೆ. ಹೆಣ್ಣು, ಗಂಡು ಅಥವಾ ಎರಡೂ ತಮ್ಮ ಸಂತಾನವನ್ನು ರಕ್ಷಿಸುವ ಕೆಲಸ ಮಾಡುತ್ತವೆ. ಎಳೆಯ ಪೀಳಿಗೆಗೆ ಅನುಕೂಲಕರವಾದ ವಾತಾವರಣವನ್ನು ಹೊಂದಿಸಿಕೊಟ್ಟು, ಮರೆಯಲ್ಲಿಟ್ಟು, ಆಹಾರ ಒದಗಿಸಿ ಮತ್ತು ಶತ್ರುಗಳಿಂದ ಕಾಪಾಡುತ್ತವೆ. ಸಾಮಾನ್ಯವಾಗಿ ಕಡಿಮೆ ಸಂಖ್ಯೆಯಲ್ಲಿ ಮೊಟ್ಟೆ ಅಥವಾ ಮರಿ ಮಾಡುವ ಜಾತಿಗಳಲ್ಲಿ ಪಿತೃರಕ್ಷಣೆ ಹೆಚ್ಚಾಗಿ ಕಾಣಬರುತ್ತದೆ.

ಮೀನುಗಳು: ಮೀನುಗಳಲ್ಲಿ ಸುಮಾರು 28% ಕುಟುಂಬಗಳಲ್ಲಿ (ಫ್ಯಾಮಿಲಿ) ಪಿತೃರಕ್ಷಣೆ ಕಾಣಬರುತ್ತದೆ. ಗೂಡು ಕಟ್ಟುವುದು, ಮೊಟ್ಟೆಗಳನ್ನು ಹೂತಿಡುವುದು, ಶತ್ರುಗಳನ್ನು ಓಡಿಸುವುದು, ಗಾಳಿ ಬೀಸುವುದು, ಮೊಟ್ಟೆಮರಿಗಳನ್ನು ಶುಚಿಗೊಳಿಸುವುದು, ಮೊಟ್ಟೆಗಳನ್ನು ಹೊತ್ತು ತಿರುಗುವುದು ಅಥವಾ ಬಾಯಿಯಲ್ಲಿಟ್ಟುಕೊಳ್ಳುವುದು, ಈ ರೀತಿ ವಿವಿಧ ರೀತಿಯಲ್ಲಿ ತಮ್ಮ ಸಂತಾನವನ್ನು ಕಾಪಾಡುತ್ತವೆ.

ಸಿಹಿನೀರಿನ ಮೀನುಗಳಾದ ಆಸ್ಟ್ರೋನೀಮಸ್ ಮತ್ತು ಓಫಿಯೋಸಿಫಾಲಸ್ ಸ್ಟ್ರಯೇಟಸ್‌ಗಳಲ್ಲಿ ಹೆಣ್ಣೂ ಗಂಡು ಎರಡೂ ಸೇರಿ ಸಸ್ಯಗಳಿಂದ ಗೂಡು ಕಟ್ಟಿ ಮೊಟ್ಟೆ ಇಟ್ಟು ಕಾಯುತ್ತವೆ. ಎಟ್ರೋಪಸ್ ಸೂರತೆನ್ಸಿಸ್ ಮೊಟ್ಟೆಗಳನ್ನು ನೀರಿನಲ್ಲಿ ಮುಳುಗಿರುವ ಸಸ್ಯಗಳಿಗೆ ಅಂಟಿಸುತ್ತದೆ. ಮೊಟ್ಟೆ ಒಡೆದು ಹೊರಬರುವ ಡಿಂಬಗಳನ್ನು ಕುಳಿಗಳಲ್ಲಿರಿಸಿ ಹೆಣ್ಣು ಕಾಯುತ್ತದೆ. ಮರಿಗಳು ಸ್ವಾವಲಂಬಿಗಳಾಗುವವರೆಗು ಗಂಡು, ಹೆಣ್ಣು ಎರಡೂ ಮರಿಗಳನ್ನು ಕಾಪಾಡುತ್ತವೆ. ಗಂಡು ಗೋಬಿಯಸ್ ಖಾಲಿ ಕಪ್ಪೆಚಿಪ್ಪುಗಳಲ್ಲಿ ಮೊಟ್ಟೆ ಇರಿಸಿ ರಕ್ಷಿಸುತ್ತದೆ. ಗಂಡು ಏರಿಯಸ್ ತನ್ನ ಬಾಯಿಯಲ್ಲಿ ದೊಡ್ಡ ತತ್ತಿಗಳನ್ನಿರಿಸಿಕೊಂಡು ಮರಿಗಳಾಗುವವರೆಗೆ ಆಹಾರ ಸೇವಿಸದೆ ಕಾಪಾಡುತ್ತದೆ. ಮಿಸ್ಟಸ್ ಅಯೇರ್ ಎನ್ನುವ ದೊಡ್ಡ ಬೆಕ್ಕು ಮೀಸೆ ಮೀನು (ಕ್ಯಾಟ್ ಫಿಷ್) ವೃತ್ತಾಕಾರದ ಹಳ್ಳವನ್ನು ಮರಳಲ್ಲಿ ಮಾಡಿ ತತ್ತಿ ಇಡುತ್ತದೆ. ಅನಂತರ ಗಂಡು ಅವುಗಳನ್ನು ತನ್ನ ಹೊಟ್ಟೆಗೆ ಅಂಟಿಸಿಕೊಂಡು ಮರಿ ಹೊರಬರುವವರೆಗು ಕಾಯುತ್ತದೆ. ಮರಿಗಳಿಗೆ ತನ್ನ ಹೊಟ್ಟೆಯ ಅಡಿಯಿಂದ ಬರುವ ಹಾಲಿನಂತಹ ಸ್ರಾವವನ್ನು ಉಣಿಸುತ್ತದೆ.

ಕುದುರೆ ಮೀನು (ಹಿಪ್ಪೊಕ್ಯಾಂಪಸ್) ಮತ್ತು ಕೊಳವೆ ಮೀನುಗಳು ಆಶ್ಚರ್ಯಕರವಾಗಿ ಪಿತೃರಕ್ಷಣೆ ಮಾಡುತ್ತವೆ. ಇವುಗಳಲ್ಲಿ ಗಂಡುಮೀನು ತನ್ನ ಹೊಟ್ಟೆಯ ತಳಭಾಗದಲ್ಲಿ ಒಂದು ಚೀಲವನ್ನು ಬೆಳೆಸಿಕೊಳ್ಳುತ್ತದೆ. ಹೆಣ್ಣು ಇದರೊಳಗೆ ಮೊಟ್ಟೆಗಳನ್ನು ಇಡುತ್ತದೆ. ಕುದುರೆ ಮೀನಿನಲ್ಲಿ ಈ ಚೀಲದ ಒಳಗೆ ಬೆಳೆಯುವ ರಕ್ತನಾಳಗಳು ಮರಿಗಳಿಗೆ ಪೋಷಣೆ ಒದಗಿಸುತ್ತವೆ. ಮರಿಗಳು ಹೊರಬರುವ ಸಮಯದಲ್ಲಿ ತಂದೆ ತನ್ನ ಬಾಲವನ್ನು ಒಂದು ಸಮುದ್ರ ಸಸ್ಯಕ್ಕೆ ಸುತ್ತಿಕೊಂಡು, ಹಿಂದುಮುಂದಾಗಿ ಮೈಯನ್ನು ಬಾಗಿಸುತ್ತದೆ. ಇದರಿಂದ ಚೀಲದ ಮಾಂಸಪೇಶಿಗಳು ಸಂಕುಚಿತಗೊಂಡು, ಮರಿಗಳು ಹೊರಬರುತ್ತವೆ. ಕೊಳವೆ ಮೀನಿನಲ್ಲಿ ಚೀಲ ಇಬ್ಭಾಗವಾಗಿ ತೆರೆದುಕೊಂಡು ಮರಿಗಳು ಈಚೆ ಬರುತ್ತವೆ.

ಕುರ್ಟಸ್ ಎಂಬ ಆಸ್ಟ್ರೇಲಿಯದ ಮೀನು ಜಾತಿಯಲ್ಲಿ ಗಂಡು ಮೀನು ಮೊಟ್ಟೆಗಳನ್ನು ತನ್ನ ಹಣೆಯಮೇಲೆ ಇಟ್ಟುಕೊಂಡು ರಕ್ಷಿಸುತ್ತದೆ. ತಲೆಯ ಮೇಲೆ ಕೊಂಡಿಯಂತಹ ರಚನೆಯಾಗಿ, ಇದರಿಂದ ಸಸ್ಯಗಳಿಗೆ ಅಂಟಿರುವ ಮೊಟ್ಟೆಗಳನ್ನು ಬಿಡಿಸಿ ಹಣೆಯ ಮೇಲೆ ಅಂಟುದಾರಗಳಿಂದ ಅಂಟಿಸಿಕೊಳ್ಳುತ್ತದೆ. ಗಂಡು ಗೌರಾಮಿ ಮೀನು ಮತ್ತು ಸಯಾಮೀಸ್ ಜಗಳಗಂಟ ಮೀನುಗಳು ನೊರೆಯಾದ ಗುಳ್ಳೆಗಳಿಂದ ಗೂಡು ನಿರ್ಮಿಸುತ್ತವೆ. ಇದೇ ರೀತಿ ಮ್ಯಾಕ್ರೋಪೋಡಸ್ ಅಥವಾ ಚೀನಾದೇಶದ ಗಂಡು ಪ್ಯಾರಡೈಸ್ ಮೀನು ಕೂಡ ಗೂಡು ಕಟ್ಟಿ ಮೊಟ್ಟೆ ಇರಿಸಿ, ಕಾಪಾಡುತ್ತದೆ. ಗಂಡು ಸ್ಟಿಕಲ್‌ಬ್ಯಾಕ್ ಸಮುದ್ರ ಸಸ್ಯಗಳಿಂದ ಕೊಳವೆಯಾಕಾರದಲ್ಲಿ ಗೂಡು ಕಟ್ಟುತ್ತದೆ. ತನ್ನ ಮೂತ್ರಕೋಶಗಳಿಂದ ಅಂಟಾದ ದ್ರವವನ್ನು ಸ್ರವಿಸಿ ಸಸ್ಯಗಳನ್ನು ಕೂಡಿಸುತ್ತದೆ. ಗೂಡಿನ ಒಳಗೂ ಹೊರಗೂ ಹಲವು ಬಾರಿ ಓಡಾಡಿ ಕೊಳವೆಗೆ ಆಕಾರ ಬರಿಸುತ್ತದೆ. ಹೆಣ್ಣು ತತ್ತಿ ಇರಿಸಿದ ಮೇಲೆ, ಗಂಡು ಸುಮಾರು ಒಂದು ತಿಂಗಳು ಕಾವಲುಗಾರನ ಕೆಲಸ ನಿರ್ವಹಿಸಿ ಯಾವುದೇ ಬೇರೆ ಮೀನು ಹತ್ತಿರ ಬರದಂತೆ ನೋಡಿಕೊಳ್ಳುತ್ತದೆ. ಅಮೆಝಾನ್ ಶಕ್ತಿ ಮೀನುಗಳಲ್ಲಿ ಗಂಡುಹೆಣ್ಣು ಎರಡೂ ಮರಿಗಳನ್ನು ಕಾಪಾಡುತ್ತವೆ. ಗಂಡಿನ ಮೈಮೇಲೆ ಚರ್ಮದಲ್ಲಿ ಒಸರುವ ವಿಶಿಷ್ಟ ಪೌಷ್ಟಿಕ (ನ್ಯೂಟ್ರಿಷಸ್) ದ್ರವವನ್ನು ತಿಂದು ಮರಿಗಳು ಬೆಳೆಯುತ್ತವೆ.

ದ್ವಿಚರಿಗಳು (ಆಂಫಿಬಿಯಾ) ಅನ್ಯೂರಾ ಉಪವರ್ಗದಲ್ಲಿ ಬರುವ ಹಲವು ಜಾತಿಯ ಕಪ್ಪೆಗಳು ಪಿತೃ ರಕ್ಷಣೆ ಮಾಡುತ್ತವೆ. ಅಲೈಟಿಸ್ ಎನ್ನುವ ಯೂರೋಪಿನ ಸೂಲಗಿತ್ತಿಕಪ್ಪೆ ಜಾತಿಯ ಗಂಡು ಕಪ್ಪೆ ಮೊಟ್ಟೆಗಳ ಸರಮಾಲೆಯನ್ನು ತನ್ನ ಕಾಲುಗಳ ಸುತ್ತ ಸುತ್ತಿಕೊಂಡು ಓಡಾಡುತ್ತದೆ. ಅನಂತರ ಒಂದು ಹಳ್ಳದಲ್ಲಿ ಮೊಟ್ಟೆಗಳನ್ನು ಹೂತಿಟ್ಟು, ಆಗಾಗ ನೀರಿನ ಹತ್ತಿರ ಹೋಗಿ ಒದ್ದೆಯಾಗಿರುವಂತೆ ನೋಡಿಕೊಳ್ಳುತ್ತದೆ. ಮೊಟ್ಟೆ ಒಡೆದು ಮರಿ ಬರುವ ಸಮಯದಲ್ಲಿ, ನೀರಿಗೆ ಹೋಗಿ, ನೀರಿನಲ್ಲಿ ಗೊದಮೊಟ್ಟೆಗಳು ಆಚೆ ಬರುವಂತೆ ನೋಡಿಕೊಳ್ಳುತ್ತದೆ. ಮುಂದಿನ ಬೆಳವಣಿಗೆ ನೀರಿನಲ್ಲಿಯೇ ಸಾಗುತ್ತದೆ. ರೈನೋಡರ್ಮ ಡಾರ್ವಿನಿ ಚಿಲಿ ದೇಶದ ಕಪ್ಪೆ, ಇದರಲ್ಲಿ

ಅಲೈಟಿಸ್

ಗಂಡು ತನ್ನ ಧ್ವನಿ ಚೀಲದಲ್ಲಿ (ವೋಕಲ್ ಪೌಚಸ್) ಮೊಟ್ಟೆಗಳನ್ನು ಇಟ್ಟುಕೊಂಡು ಕಾಪಾಡುತ್ತದೆ. ಸೊಂಟದವರೆಗು ಒಳಗೆ ವಿಸ್ತರಿಸಿರುವ ಈ ಚೀಲಗಳಲ್ಲಿ ಭ್ರೂಣಗಳು ಪೂರ್ತಿ ಬೆಳೆದು ಮರಿಗಳು ಹೊರಬರುತ್ತವೆ. ಪೈಪ ಪೈಪ ಎನ್ನುವ ಕಪ್ಪೆಯಲ್ಲಿ ಹೆಣ್ಣಿನ ಬೆನ್ನು ಮರಿಗಳಿಗೆ ಬೆಳೆಯುವ ಅಂಗಳವಾಗಿ ಮಾರ್ಪಡುತ್ತದೆ. ಸಂತಾನೋತ್ಪತ್ತಿ ಸಮಯದಲ್ಲಿ ಹೆಣ್ಣುಕಪ್ಪೆಯ ಬೆನ್ನಿನ ಚರ್ಮ ದಪ್ಪವಾಗಿ ಮತ್ತು ಸ್ಪಂಜಿನ ಹಾಗೆ ಮೃದುವಾಗಿ ಮಾರ್ಪಾಡುತ್ತದೆ. ಗಂಡು ವೀರ್ಯಭರಿತ ತತ್ತಿಗಳನ್ನು ಈ ಮೃದು ಚರ್ಮದ ಮೇಲೆ ಒತ್ತುತ್ತದೆ. ಮೊಟ್ಟೆಗಳು ಚರ್ಮದಲ್ಲಿ ಕೆಳಗಿಳಿದು ಹೂತು, ಅವುಗಳ ಮೇಲೆ ಮುಚ್ಚಳದ ಹಾಗೆ ಒಂದು ಪದರ ಉಂಟಾಗುತ್ತದೆ. ಪ್ರತಿಯೊಂದು ಮೊಟ್ಟೆಗೂ ಬೇರೆಯಾದ ಒಂದು ಕೋಶವಿದ್ದು, ಇಲ್ಲಿ ಮುಂದಿನ ಬೆಳವಣಿಗೆ

ಸಾಗುತ್ತದೆ. ಹೈಲಾ ಗೋಯೇಲ್ಡಿ ಎನ್ನುವ ಕಪ್ಪೆಯಲ್ಲಿ ಹೆಣ್ಣು ತನ್ನ ಬೆನ್ನ ಮೇಲೆ ಒಂದು ಚಿಕ್ಕ ಚೀಲದಲ್ಲಿ (ಬ್ರೂಡ್ ಪೌಚ್) ಮೊಟ್ಟೆಗಳನ್ನಿಟ್ಟು ಕಾಪಾಡುತ್ತದೆ. ಪೂರ್ತಿ ಬೆಳೆವಣಿಗೆ ಈ ಚೀಲದಲ್ಲಿ ಆಗಿ, ಬಾಲವಿರುವ ಮರಿ ಹೊರಗೆ ಬರುತ್ತದೆ. ಸೋಟೋಟ್ರೆಯ, ದಕ್ಷಿಣ ಅಮೇರಿಕಾದ ಜೋಗುಳದ ಕಪ್ಪೆಯಲ್ಲಿ ಹೆಣ್ಣಿಗೆ ಬೆನ್ನ ಮೇಲೊಂದು ಹಿಂದೆ ತೆರೆದುಕೊಳ್ಳುವ ಚೀಲವಿದೆ. ಇದರಲ್ಲಿ ಮರಿಗಳು ಬೆಳೆಯುತ್ತವೆ. ಒಂದು ಪ್ರಭೇದದಲ್ಲಿ ಈ ಚೀಲಕ್ಕೆ ಸುಣ್ಣವಿರುವ ತಟ್ಟೆಗಳ ರಕ್ಷಣೆ ಇದೆ. ಇನ್ನು ಕೆಲವು ಕಪ್ಪೆಗಳು ತಮ್ಮ ಮೈಮೇಲೆ ಅಥವಾ ಒಳಗೆ ಇಟ್ಟುಕೊಂಡು ಮರಿಗಳನ್ನು ಬೆಳೆಸದೆ ಬೇರೆ ವಿಧಾನಗಳಿಂದ ಪಿತೃರಕ್ಷಣೆ ಮಾಡುತ್ತವೆ. ಆಫ್ರಿಕಾ ದೇಶದ ಗಂಡು ಗೂಳಿ ಕಪ್ಪೆ ಪಿಕ್ಸಿಸಿಫಾಲಸ್ ಆಡ್‌ಸ್ಪರ್ಸಸ್ ಮೊಟ್ಟೆಗಳನ್ನು ಕಾಯುತ್ತದೆ. ಅನಂತರ ಮರಿಗಳು ತಂದೆ ಹೋದ ಕಡೆಯಲ್ಲೆಲ್ಲ ಹಿಂಬಾಲಿಸುತ್ತವೆ. ಮರಿಗಳಿಗೆ ಈಜಲು ಚಿಕ್ಕ ಗುಂಡಿಗಳನ್ನು ಗಂಡು ತೋಡುತ್ತದೆ. ದಕ್ಷಿಣ ಅಮೇರಿಕದ ಲೆಪ್ಟಿಡೆಕ್ಟಿಲಸ್, ಜಾತಿಯ ಹೆಣ್ಣುಕಪ್ಪೆ ಬೇರೆ ಯಾವುದಾದರೂ ಪ್ರಾಣಿ ಹತ್ತಿರ ಬಂದರೆ ಆಕ್ರಮಣ ನಡೆಸಿ ಮರಿಗಳನ್ನು ಸಂರಕ್ಷಿಸುವುದು. ದಕ್ಷಿಣ ಅಮೇರಿಕದ ವಿಷದ ಕಪ್ಪೆಗಳು ನೆಲದಲ್ಲಿ ಮೊಟ್ಟೆಯಿಡುತ್ತವೆ. ಗಂಡು ಅಥವಾ ಹೆಣ್ಣು ಮೊಟ್ಟೆಯೊಡೆಯುವವರೆಗೆ ಕಾದು, ಅನಂತರ ಅವನ್ನು ತಮ್ಮ ಮೈಗೆ ಅಂಟಿಸಿಕೊಳ್ಳುತ್ತವೆ. ಪನಾಮಾದ ಕೋಲೊಸೀಥಸ್ ಇಂಗ್ವಿನಾಲಿಸ್ ಪ್ರಭೇದದ ಹೆಣ್ಣು ಕಪ್ಪೆ ಗೊದಮೊಟ್ಟೆಗಳನ್ನು ಒಂದು ವಾರ ಕಾಲ ಹೊತ್ತು ತಿರುಗುತ್ತದೆ. ಇನ್ನೊಂದು ಪ್ರಭೇದದ ವಿಷಕಪ್ಪೆ ಡೆಂಡ್ರೋಬೇಟಸ್ ಪ್ಯುಮಿಲಿಯೊನಲ್ಲಿ ಹೆಣ್ಣು ಗೊದಮೊಟ್ಟೆಗಳನ್ನು ನೀರಿನಲ್ಲಿ ಬಿಟ್ಟು, ಆಗಾಗ ಬಂದು ತತ್ತಿಗಳನ್ನು ಮರಿಗಳಿಗೆ ತಿನ್ನಲು ಹಾಕುತ್ತದೆ. ಆಸ್ಟ್ರೇಲಿಯಾದ ರ್‍ಥಿಯೋಬ್ಯಾಕ್ಟಸ್ ಸೈಲಸ್ ಹೆಣ್ಣು ಕಪ್ಪೆ ಮೊಟ್ಟೆ ಅಥವಾ ಆಗತಾನೆ ಹೊರಬಂದ ಮರಿಗಳನ್ನು ನುಂಗಿ ತನ್ನ ಹೊಟ್ಟೆಯಲ್ಲಿಟ್ಟುಕೊಳ್ಳುತ್ತದೆ. ಪೂರ್ತಿ ಬೆಳವಣಿಗೆ ಆದಮೇಲೆಯೆ ಅವು ಹೊರಕ್ಕೆ ಬರುವವು. ಇದಕ್ಕಾಗಿ ವಿಶೇಷ ದೈಹಿಕ ಮತ್ತು ಆಂತರಿಕ ಬದಲಾವಣೆಗಳು ಅದರ ಹೊಟ್ಟೆಯಲ್ಲಾಗುತ್ತವೆ. ಅಂದರೆ ಹೊಟ್ಟೆಯ ಮುಂಭಾಗದ ಹಿಗ್ಗುವಿಕೆ, ಮಾಂಸಪೇಶಿಗಳು ಸಂಯೋಜಕ ಅಂಗಾಂಶದಿಂದ (ಕನೆಕ್ಟಿವ್ ಟಿಶ್ಯು) ಪ್ರತ್ಯೇಕವಾಗುವಿಕೆ ಮತ್ತು ಹೈಡ್ರೋಕ್ಲೋರಿಕ್ ಆಮ್ಲದ ಸ್ರಾವ ನಿಲ್ಲುವಿಕೆ ಇತ್ಯಾದಿಗಳು ಈ ಬದಲಾವಣೆಗಳು ಗೊದಮೊಟ್ಟೆಗಳು ಸ್ರವಿಸುವ ಪ್ರೋಸ್ಟಗ್ಲಾಂಡಿನ್‌ನಿಂದ ಎಂದು ತರ್ಕಿಸಲಾಗಿದೆ. ಸಲಮ್ಯಾಂಡರ್‌ನಲ್ಲಿ ಡೆಸ್ಮೋಗ್ನಾತಸ್ ಎನ್ನುವ ಪ್ರಭೇದದಲ್ಲಿ ಹೆಣ್ಣು ಮೊಟ್ಟೆಗಳನ್ನು ನೆಲದಲ್ಲಿ ಕುಳಿ ತೋಡಿ ಕಲ್ಲುಗಳಡಿಯಲ್ಲಿ ಇಟ್ಟು ಮರಿಯಾಗುವವರೆಗು ಕಾಯುತ್ತದೆ. ಏಪೋಡ ವರ್ಗದ ದ್ವಿಚರಿಯಾದ ಹೆಣ್ಣು ಇತ್ತಲುಮಂಡಲ (ಇಕ್ತಿಯೋಫಿಸ್) ಮೊಟ್ಟೆಗಳ ಸುತ್ತ ಸುರುಳಿ ಸುತ್ತಿಕೊಂಡು, ಮರಿಗಳಾಗುವವರೆಗೂ ಕಾಪಾಡುತ್ತದೆ.

ಸರೀಸೃಪಗಳು: ಈ ವರ್ಗದಲ್ಲಿ ಪಿತೃ ರಕ್ಷಣೆ ಅಷ್ಟಾಗಿ ಕಂಡುಬರುವುದಿಲ್ಲ. ಮೊಟ್ಟೆ ಇಟ್ಟಮೇಲೆ ಅವುಗಳನ್ನು ಗಮನಿಸುವುದಿಲ್ಲ. ಅಪರೂಪವಾಗಿ ಕೆಲವು ಜಾತಿಯ ಹಲ್ಲಿ ಮತ್ತು ಹಾವುಗಳು ತಮ್ಮ ಪೀಳಿಗೆಯನ್ನು ರಕ್ಷಿಸುತ್ತವೆ.

ಹೆಣ್ಣು ಆಮೆ ಮರಳು ಅಥವಾ ಮಣ್ಣನ್ನು ತೋಡಿ ಮೊಟ್ಟೆಯಿಟ್ಟು ಅದನ್ನು ಮತ್ತೆ ಮುಚ್ಚುತ್ತದೆ. ಮೊಸಳೆಗಳು ಗೂಡು ಕಟ್ಟಿ, ಮೊಟ್ಟೆಯಿಟ್ಟು, ಹೆಣ್ಣು ಕಾವಲು ಕಾಯುತ್ತದೆ. ಮೊಟ್ಟೆ ಒಡೆಯುವ ಸಮಯ ಬಂದಾಗ, ಒಳಗಿನಿಂದ ಮರಿ ಕೂಗುತ್ತದೆ. ಆಗ ಹೆಣ್ಣು ಅಲ್ಲಿಗೆ ಬಂದು ಮೊಟ್ಟೆಯನ್ನು ನೀರಿಗೆ ಒಯ್ಯುತ್ತದೆ. ಹೆಣ್ಣು ಹೆಬ್ಬಾವು ಮೊಟ್ಟೆಗಳಿಗೆ ಕಾವಲಾಗಿರುತ್ತದೆ. ಅವುಗಳ ಸುತ್ತ ಬಿಗಿಯಾಗಿ ಸುತ್ತಿಕೊಂಡಿರುತ್ತದೆ. ಕೆಲವು ಪ್ರಭೇದಗಳಲ್ಲಿ ಹೆಣ್ಣಿನ ದೇಹದ ಮಾಸಖಂಡಗಳ ಹಿಗ್ಗುವಿಕೆಯಿಂದ ಉಂಟಾಗುವ ಶಾಖ ಮೊಟ್ಟೆಗಳನ್ನು $30^0$ ಸೆ ವರೆಗು ಬಿಸಿಯಾಗಿಡುತ್ತದೆ. ಹೆಣ್ಣು ಕೃಷ್ಣಸರ್ಪ ತರಗೆಲೆಗಳನ್ನು ಒಟ್ಟುಮಾಡಿ ಗೂಡು ಕಟ್ಟಿ ಅದರಲ್ಲಿ ಮೊಟ್ಟೆಗಳನ್ನಿರಿಸಿ ಶಾಖ ಬರುವಂತೆ ಮಾಡುವುದು. ಯಾರೂ ಹತ್ತಿರ ಬರದಂತೆ, ಆಕ್ರಮಣಕಾರಿ ಪ್ರವೃತ್ತಿಯನ್ನು ತೋರಿ ಮೊಟ್ಟೆಗಳನ್ನು ರಕ್ಷಿಸುವುದು. ಇಗ್ವಾನಗಳು ಮೊಟ್ಟೆಗಳ ಹತ್ತಿರ ಇದ್ದು ಕಾಪಾಡುತ್ತವೆ.

ಪಕ್ಷಿಗಳು: ಪಿತೃರಕ್ಷಣೆ ಪಕ್ಷಿಗಳಲ್ಲಿ ಉನ್ನತ ಮಟ್ಟದಲ್ಲಿ ವಿಕಾಸ ಹೊಂದಿದೆ. ಸಾಧಾರಣವಾಗಿ ಎಲ್ಲ ಪಕ್ಷಿಗಳೂ ಗೂಡು ಕಟ್ಟಿ, ಮೊಟ್ಟೆಯಿಟ್ಟು ಶ್ರದ್ಧೆಯಿಂದ ಮರಿಗಳನ್ನು ಬೆಳೆಸುತ್ತವೆ. ಗೂಡು ಕಟ್ಟುವುದು ಪಕ್ಷಿಗಳ ಜೀವನದ ಒಂದು ಮುಖ್ಯ ಪ್ರಕ್ರಿಯೆ. ಚಳಿ, ಗಾಳಿ, ಮಳೆ, ಬಿಸಿಲು ಮತ್ತು ಶತ್ರುಗಳಿಂದ ಮೊಟ್ಟೆ, ಹಾಗು ಮರಿಗಳಿಗೆ ರಕ್ಷಣೆ ನೀಡುತ್ತವೆ. ಗೂಡು ಬಹಳ ಸಾಮಾನ್ಯವಾದ ರೀತಿಯದಾಗಿರಬಹುದು ಅಥವಾ ಮರದ ಪೊಟರೆ, ನೆಲದಲ್ಲಿ ಕುಳಿ, ಇಲ್ಲವೆ ಕಲ್ಲುಬಂಡೆಗಳ ನಡುವೆ ಇರಬಹುದು. ಸಮೂಹ ಗೂಡುಕಟ್ಟುವಿಕೆ ಪೆಂಗ್ವಿನ್‌ನಲ್ಲಿ ಕಾಣಬರುತ್ತದೆ. ಗುಬ್ಬಚ್ಚಿ ಜಾತಿಯ ಪಕ್ಷಿಗಳು ಬಟ್ಟಲಿನಾಕಾರದ ಗೂಡು ಕಟ್ಟುವುವು. ಸ್ವಿಫ್ಟಗಳು ಬಾಯಿಯಲ್ಲಿ ಒಸರುವ ಅಂಟು ಪದಾರ್ಥದಿಂದ ಗೂಡನ್ನು ಸಿದ್ಧಪಡಿಸುವುವು. ಜಕಾನ ನೀರಿನಲ್ಲಿ ತೇಲುವ ಗೂಡು ಕಟ್ಟುವುವು. ಬವಲ್ ಪಕ್ಷಿ ತುಂಬಾ ಶ್ರಮವಹಿಸಿ ಗೂಡನ್ನು ಅಲಂಕರಿಸಿ ಹೆಣ್ಣನ್ನು ಆಹ್ವಾನಿಸುವುದು. ಸಾಮಾನ್ಯವಾಗಿ ಗೂಡುಗಳು ನೆಲದಿಂದ 6–8 ಅಡಿ ಮೇಲಿರುತ್ತವೆ. ಅಥವಾ ಎತ್ತರದ ಮರದ ಮೇಲೆ ಕಟ್ಟಬಹುದು. ಮಿಂಚುಳ್ಳಿ ನದಿದಡದ ಹತ್ತಿರ ಸಣ್ಣ ಬಿಲಗಳನ್ನು ತೋಡಿ ಗೂಡು ಮಾಡುತ್ತದೆ. ದರ್ಜಿ ಹಕ್ಕಿ ಗಿಡಗಳ ನಾರಿನಿಂದ ಎಲೆಗಳನ್ನು ಹೊಲಿದು ಗೂಡನ್ನು ಸಿದ್ಧಪಡಿಸುವುದು. ದೊಡ್ಡದಾದ ಹಸಿರು ಎಲೆಗಳ ಅಂಚಿನಲ್ಲಿ ಮೊದಲು ಕೊಕ್ಕಿನಿಂದ ಕುಕ್ಕಿ ಚಿಕ್ಕದಾದ ರಂಧ್ರಗಳನ್ನು ಮಾಡಿ, ಅನಂತರ ನಾರಿನಿಂದ ಈ ರಂಧ್ರಗಳನ್ನು ಜೋಡಿಸಿ ಬಟ್ಟಲಿನಂತೆ ಹೊಲಿದು ಸಿದ್ಧಮಾಡುತ್ತದೆ. ಬಾಯ ಪಕ್ಷಿಯ ಗೂಡು ನೇತಾಡುತ್ತಿರುವುದು. ಇದರಿಂದ ಗೂಡಿಗೆ ಕೋತಿ ಮತ್ತು ಹಾವಿನಿಂದ ರಕ್ಷಣೆ ಸಿಗುವುದು. ಪಕ್ಷಿಗಳ ಧ್ವನಿ ಗೂಡು ಕಾಯುವಿಕೆಗೆ, ಮರಿಗಳನ್ನು ಪಾಲಿಸುವುದರಲ್ಲಿ, ಶತ್ರುಗಳನ್ನು ಓಡಿಸುವುದರಲ್ಲಿ ಬಹಳ ಸಹಾಯಕ. ಟಿಟ್ಟಿಭ ಡಿಡ್‌ಹಿ ಡು ಇಟ್ ಅಂತ ಜೋರಾಗಿ ಕೀರಲು ದನಿಯಲ್ಲಿ ಕೂಗಿ ಮೊಟ್ಟೆ, ಮರಿಗಳನ್ನು ಜೋಪಾನಮಾಡುವುವು.

ಮೊಟ್ಟೆಗಳಿಗೆ ಕಾವು ಕೊಡುವುದು ಪಕ್ಷಿಗಳಲ್ಲಿ ಸರ್ವೇ ಸಾಮಾನ್ಯ. ಇದರಲ್ಲಿ ಗಂಡು ಅಥವಾ ಹೆಣ್ಣು, ಇಲ್ಲವೆ ಎರಡೂ ಪಾತ್ರ ವಹಿಸುತ್ತವೆ. ಕೆಲವು ಪಕ್ಷಿಗಳು (ಆಸ್ಟ್ರೇಲಿಯದ ಮೆಗಪೋಡ್) ಮತ್ತು ಈಜಿಪ್ಟಿನ ಪ್ಲೋವರ್ ಮೊಟ್ಟೆಗಳನ್ನು ಮಣ್ಣಿನಲ್ಲಿ ಹೂತು ಹಾಕುತ್ತವೆ. ಸೂರ್ಯ ಮತ್ತು ಮಣ್ಣಿನಲ್ಲಿರುವ ಕೊಳೆಯುವ ಸಸ್ಯ ಪದಾರ್ಥಗಳು ಶಾಖ ಒದಗಿಸುತ್ತವೆ. ಇನ್ನು ಕೆಲವು ತಮ್ಮ ಮೈ ತಳಭಾಗದಲ್ಲಿ ಅಲ್ಲಲ್ಲಿ ಪುಕ್ಕ ಉದುರಿಸಿ ಬರೀ ಚರ್ಮದ ತೇಪೆ (ಪಟ್ಟಿ, ಬ್ರೂಡ್ ಪೌಚ್) ಗಳನ್ನು ಮಾಡಿಕೊಳ್ಳುತ್ತವೆ. ಇಲ್ಲಿ ಸೂಕ್ಷ್ಮ ರಕ್ತನಾಳಗಳು ವೃದ್ಧಿಯಾಗಿ, ಇವು ಮೊಟ್ಟೆಗಳಿಗೆ ತಾಕಿದಾಗ ಶಾಖವನ್ನು ಸುಸೂತ್ರವಾಗಿ ಮೊಟ್ಟೆಗೆ ವರ್ಗಾಯಿಸುತ್ತವೆ. ಈ ನಡೆವಳಿಕೆಗೆ ಪಿಟ್ಯುಟರಿ ಗ್ರಂಥಿ ಒಸರುವ ಪ್ರೋಲ್ಯಾಕ್ಟಿನ್ ಕಾರಣ. ಗೂಡಿನಲ್ಲಿ ಮೊಟ್ಟೆಯನ್ನು ತಂದೆ ತಾಯಿ ಪಕ್ಷಿಗಳು ಆಗಾಗ್ಗೆ ತಿರುಗಿಸುತ್ತಿರುವುದರಿಂದ ಎಲ್ಲಾ ಕಡೆಗೂ ಒಂದೇ ಸಮನಾಗಿ ಶಾಖ ಭ್ರೂಣಕ್ಕೆ ತಗಲುತ್ತಿರುತ್ತದೆ. ಗಂಡು ಎಂಪರರ್ ಪೆಂಗ್ವಿನ್ ತನ್ನ ಕಾಲಿನ ಮೇಲೆ ಮೊಟ್ಟೆಯನ್ನಿಟ್ಟುಕೊಂಡು, ಅದನ್ನು ಚರ್ಮ ಮತ್ತು ಹೊಟ್ಟೆಯ ರೆಕ್ಕೆಗಳಿಂದ ಮುಚ್ಚಿ ಶಾಖ ನೀಡುತ್ತದೆ. ಸುಮಾರು ಎರಡು ತಿಂಗಳ ಕಾಲ ಹೀಗೆ ನಿಂತು ಮರಿ ಆಚೆ ಬಂದ ಮೇಲೆಯೇ ಗಂಡಿಗೆ ವಿಶ್ರಾಂತಿ.

ಮರಿಯನ್ನು ಕಾಲುಗಳ ಮಧ್ಯೆ ರಕ್ಷಿಸುತ್ತಿರುವ ಎಂಪರರ್ ಪೆಂಗ್ವಿನ್

ಸ್ತನಿಗಳು: ಪಿತೃರಕ್ಷಣೆ ಸ್ತನಿಗಳಲ್ಲಿ ಅತ್ಯುನ್ನತ ಮಟ್ಟ ತಲುಪಿದೆ. ತಾಯಿ ಮರಿಯನ್ನು ಬಹಳ ಜೋಪಾನ ಮಾಡುತ್ತದೆ. ಹುಟ್ಟುವ ಮರಿ ಒಂದು ಅಥವಾ ಕೆಲವೇ ಆದ್ದರಿಂದ ಬಹಳ ಕಾಳಜಿಯಿಂದ ನೋಡಿಕೊಳ್ಳುತ್ತದೆ. ತಾಯಿ ಮರಿಗೆ ಹಾಲೂಡಿಸುತ್ತದೆ. ಹಾಲಿನಲ್ಲಿ ಬೇಕಾದ ಎಲ್ಲಾ ಪೌಷ್ಟಿಕಾಂಶಗಳೂ ಇರುತ್ತವೆ. ಗಂಡು ಕೂಡ ಹೆಣ್ಣಿಗೆ ಮರಿ ಸಾಕಣೆಯಲ್ಲಿ ಸಹಾಯ ಮಾಡಬಹುದು. ಗುಂಪುಗೂಡಿ ವಾಸಿಸುವ ಸ್ತನಿಗಳಲ್ಲಿ ಇಡೀ ಗುಂಪು ಮರಿಗಳನ್ನು ಜೋಪಾನ ಮಾಡುತ್ತವೆ.

ಆನೆಗಳು ಇದಕ್ಕೆ ಸೂಕ್ತ ಉದಾಹರಣೆ. ಬೆಕ್ಕಿನಂತಹ ಮಾಂಸಾಹಾರಿಗಳು ಮರಿಗಳನ್ನು ಬಹಳ ಜೋಪಾನವಾಗಿ ಮರಿಯ ಕತ್ತಿನ ಮೇಲ್ಭಾಗವನ್ನು ಹಿಡಿದು ಸ್ಥಳಾಂತರಿಸುತ್ತವೆ. ಕೋತಿ ಮರಿ ಅಮ್ಮನನ್ನು ಬಿಗಿಯಾಗಿ ಜೋತು ಬಿದ್ದು ಹಿಡಿದುಕೊಂಡು ಅಮ್ಮನ ಮೇಲೆ ಸವಾರಿ ಮಾಡುತ್ತದೆ. ಬಾವಲಿ ಮರಿಗಳು ಅಮ್ಮನ ಸ್ತನವನ್ನೋ, ಕೂದಲನ್ನೋ ಗಟ್ಟಿಯಾಗಿ ಹಿಡಿದು ಸವಾರಿಮಾಡುತ್ತವೆ. ಮಾಂಸಾಹಾರಿಗಳು ಮರಿಗಳಿಗೆ ಬೇಟೆ ಕಲಿಸುತ್ತವೆ. ಡಾಲ್ಫಿನ್ ಮರಿ ಹುಟ್ಟಿದ ಕೂಡಲೆ, ಅಮ್ಮ ಅದಕ್ಕೆ ನೀರಿನ ಮೇಲಕ್ಕೆ ತಳ್ಳಿ ಗಾಳಿ ಸೇವಿಸಿ ಉಸಿರಾಡಲು ಸಹಾಯ ಮಾಡುತ್ತದೆ.



ತನ್ನ ಮರಿಯೊಂದಿಗೆ ಬಾವಲಿ

ಕಾಂಗರೂ ಮತ್ತು ಅದರ ಸಂಬಂಧಿಗಳು (ಚೀಲವಿರುವ ಸ್ತನಿಗಳು) ಮರಿಗಳನ್ನು ಚೀಲದಲ್ಲಿ ಬೆಳೆಸುತ್ತವೆ. ಹುಟ್ಟಿದಾಗ ಅಸಹಾಯಕ ಸ್ಥಿತಿಯಲ್ಲಿರುವ ಪುಟ್ಟ ಮರಿ, ತಾಯಿಯ ಸ್ತನಕ್ಕೆ ಜೋತು ಬಿದ್ದು ಚೀಲದಲ್ಲೇ ಬೆಳೆಯುತ್ತದೆ. ಅನಂತರವೂ ಹೆದರಿದಾಗ ಚೀಲದಲ್ಲಿ ಸೇರಿ ಆಶ್ರಯ ಪಡೆಯುತ್ತದೆ. (ಎಸ್.ಎಸ್.)

**ಪಿತೃರಹಿತ ಪ್ರಜನನ:** ಗರ್ಭಾಂಕುರಗೊಳ್ಳದ ಅಂಡವೊಂದು ಪ್ರಬುದ್ಧಸ್ಥಿತಿಯವರೆಗೆ ಬೆಳೆದು ಹೊಸ ಜೀವವಾಗುವ ಪ್ರಕ್ರಿಯೆ (ಪಾರ್ಥೆನೋಜೆನೆಸಿಸ್). ಎಲ್ಲ ಬಗೆಯ ಸಸ್ಯ ಮತ್ತು ಪ್ರಾಣಿಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿ ಬಹುಸಾಮಾನ್ಯವಾದ ಕ್ರಿಯೆ. ಇದರಲ್ಲಿ ಸಾಧಾರಣವಾಗಿ ಒಂದು ಅಂಡಾಣು ರೇತ್ರಾಣುವಿನಿಂದ ಗರ್ಭಾಂಕುರಗೊಂಡ ಅನಂತರ ಹೊಸ ಜೀವಿಯಾಗಿ ವೃದ್ಧಿಸಲಾರಂಭಿಸುತ್ತದೆ. ಸಾಧಾರಣ ನಿಯಮದಂತೆ ಮಾತೃರಹಿತ ಪ್ರಜನನದಲ್ಲಿ ವೃದ್ಧಿ ಹೊಂದುವ ಗ್ಯಾಮೀಟು ಅಂಡವೇ ಆಗಿರುತ್ತದೆ. ಗಂಡು ಪಿತೃರಹಿತ ಪ್ರಜನನ ಅಪರೂಪವಾಗಿ ಕೆಲವು ಬಗೆಯ ಆಲ್ಗೆಗಳಲ್ಲಿ ಕಂಡುಬರುತ್ತದೆ. ಇಲ್ಲಿ ಗಂಡು ಗ್ಯಾಮೀಟು ಹೆಣ್ಣು ಗ್ಯಾಮೀಟಗಿಂತ ಸ್ವಲ್ಪ ಭಿನ್ನವಾಗಿರುವಂತೆ ಕಂಡುಬರುತ್ತದೆ. ಪಿತೃರಹಿತ ಪ್ರಜನನದ ವಿಧಾನದಲ್ಲಿ ಪಡೆದ ಸಂತಾನಕ್ಕೆ ಪಾರ್ಥೆನೋಗೋನ್ ಎಂದು ಹೆಸರು. ಈ ಬಗೆಯ ಪ್ರಜನನ ಕೆಲವು ಬಗೆಯ ಕೀಟಗಳಲ್ಲಿ, ವಲ್ಕವಂತ ಪ್ರಾಣಿಗಳಲ್ಲಿ ಮತ್ತು ಹುಳುಗಳಲ್ಲಿ ಪ್ರಧಾನವಾಗಿ ಕಾಣಬರುತ್ತದೆ. ಹೆಚ್ಚು ಪರಿಚಿತ ಉದಾ: ಎಫಿಡ್‌ಗಳಲ್ಲಿ ಪಿತೃರಹಿತ ಪ್ರಜನನದ ರೀತಿಯಲ್ಲಿ ಪಡೆದಂಥ ಅನೇಕ ಪೀಳಿಗೆಗಳಲ್ಲಿ ಹೆಣ್ಣು ಎಫಿಡ್‌ಗಳು ದ್ವಿಲಿಂಗತನದಿಂದ ಪಡೆದಂಥ ಪೀಳಿಗೆಯನ್ನು ಮೀರಿಸುತ್ತವೆ. ಕೊನೆಗೆ ಗಂಡು ಎಫಿಡ್‌ಗಳು ಪಿತೃರಹಿತ ಪ್ರಜನನದ ರೀತಿಯಲ್ಲಿ ಉತ್ಪತ್ತಿಯಾಗಿ ದ್ವಿಲಿಂಗ ರೀತಿಯ ಪ್ರಜನನ ಮತ್ತೆ ಕಾಣಿಸಿಕೊಳ್ಳುತ್ತದೆ. ಪಿತೃರಹಿತ ಪ್ರಜನನ ಸಾಧಾರಣ ಬಗೆಯ ಲೈಂಗಿಕ ರೀತಿಯ ಪ್ರಜನನದ ರೂಪಾಂತರ ಮಾತ್ರ. ಇದು ಅಲೈಂಗಿಕ ರೀತಿಯ ಪ್ರಜನನ ಅಲ್ಲ.

ಪಿತೃರಹಿತ ಪ್ರಜನನ ನಿಮ್ನ ರೀತಿಯದ್ದೇನಲ್ಲ. ಇದು ಆಕಸ್ಮಿಕವಾದ ಬದಲಾವಣೆಯಿಂದ ಅಂದರೆ ಉತ್ಪರಿವರ್ತನೆಯಿಂದ (ಮ್ಯೂಟೇಷನ್) ಲೈಂಗಿಕ ಜೀವಪ್ರಭೇದದಲ್ಲಿ ಕಾಣಿಸಿಕೊಂಡಂಥದ್ದು. ಒಂದೇ ಹೆಜ್ಜೆಯಲ್ಲಿ ನಡೆದಿರುವಂಥ ಈ ರೂಪಾಂತರವನ್ನು ಕೆಲವು ಬಗೆಯ ಕೃತಕವಾದ ಪಿತೃರಹಿತ ಪ್ರಜನನಕ್ಕೆ ಕಾರಣವಾದ ಕ್ರಿಯೆಗಳಿಂದ ತೋರ್ಪಡಿಸಲಾಗಿದೆ. ಪಿತೃರಹಿತ ಪ್ರಜನನವನ್ನು ಉಂಟುಮಾಡುವ ನೈಸರ್ಗಿಕ ಕಾರಕಗಳು ಯಾವುದೆಂದು ತಿಳಿದುಬಂದಿಲ್ಲ. ಬಹುಶಃ ಇವು ಅನೇಕ ಬಗೆಯವಾಗಿರಬಹುದು ಹಾಗೂ ವಿಭಿನ್ನ ರೀತಿಯವಾಗಿರಬಹುದು. ಇದನ್ನು ಬೆಳಕು, ಉಷ್ಣತೆ, ಪುಷ್ಟಿಕರ ಆಹಾರ, ಸಸ್ಯ ತಳೀಕರಣ ಹಾಗೂ ಹಲವಾರು ಬಗೆಯ ಕೃತಕ ಸಾಧನಗಳಿಂದ ಪರೀಕ್ಷಿಸಬಹುದಾಗಿದೆ. ಅಂಡಗಳಲ್ಲಿ ಕ್ಯಾಲ್ಸಿಯಮ್ಮಿನ ಪಾತ್ರದ ವಿಷಯವಂತೂ ಹೆಚ್ಚು ಗಮನಾರ್ಹ.

ಸ್ವಾಭಾವಿಕ ಪಿತೃರಹಿತ ಪ್ರಜನನ : ಈ ಕ್ರಿಯೆಯನ್ನು ತೋರುವ ಪ್ರಾಣಿಗಳಲ್ಲಿ ವಿಶೇಷವಾಗಿ ಎಫಿಡ್, ಪರಾವಲಂಬಿ ಕಣಜಗಳು ಹಾಗೂ ಸಸ್ಯಕೀಟಗಳು ಮುಂತಾದುವಲ್ಲಿ ಗಂಡುಪ್ರಾಣಿಗಳು ಇರುವುದಿಲ್ಲ. ಕಶೇರುಕ ಮತ್ತು ಎಕಿನೊಡರ್ಮೇಟ ಗುಂಪಿನ ಪ್ರಾಣಿಗಳ ಹೊರತು ಮಿಕ್ಕೆಲ್ಲ ಪ್ರಮುಖ ಗುಂಪುಗಳ ಜೀವಿಗಳಲ್ಲಿ ಈ ಕ್ರಿಯೆಯನ್ನು ಅಪರೂಪವಾಗಿ ಕಾಣಬಹುದು. ಕೆಲವು ತೆರನ ಎಫಿಡ್ ಹಾಗೂ ನೀರಿನ ಚಿಗಟ ಮತ್ತು ರೋಟಿಫೆರ್‌ಗಳಲ್ಲಿ ಪಿತೃರಹಿತ ಪ್ರಜನನ ಲೈಂಗಿಕ ಪ್ರಜನನಕ್ಕೆ ಪರ್ಯಾಯವಾಗಿದೆ. ಜೇನುನೊಣಗಳಲ್ಲಿ ಮತ್ತು ಕೆಲವು ಬಗೆಯ ಸಸ್ಯ ಕೀಟಗಳಲ್ಲಿ ಯಾವುದೇ ಅಂಡಕ್ಕೆ ಪಿತೃರಹಿತ ಪ್ರಜನನದ ರೀತಿಯಲ್ಲಿ ವೃದ್ಧಿಹೊಂದುವ ಸಾಮರ್ಥ್ಯ ಇದ್ದರೂ ಗರ್ಭಾಂಕುರಗೊಂಡ ಅಂಡಗಳು ಹೆಣ್ಣು ಜೀವಿಗಳಾಗಿಯೂ ಗರ್ಭಾಂಕುರವಾಗದ ಅಂಡಗಳು ಗಂಡು ಜೀವಿಗಳಾಗಿಯೂ ವರ್ಧಿಸುವುವು.

ಅನೇಕ ರೋಟಿಫೆರಗಳಲ್ಲಿ, ಎಫಿಡ್ ಹಾಗೂ ನೀರಿನ ಚಿಗಟಗಳಲ್ಲಿ ಗರ್ಭಾಂಕುರಗೊಂಡ ಅಂಡಗಳು ಹೆಣ್ಣು ಜೀವಿಗಳಾಗಿ ವೃದ್ಧಿಹೊಂದುವುವಲ್ಲದೆ, ಬೇರೊಂದು ಪರಿಸ್ಥಿತಿಯಲ್ಲಿ ಪಿತೃರಹಿತ ಪ್ರಜನನದ ರೀತಿಯಲ್ಲೂ ವೃದ್ಧಿ ಹೊಂದುತ್ತವೆ. ರೋಟಿಫೆರ್‌ಗಳಲ್ಲಿ ಯಾವುದೇ ಅನುಕ್ರಮಣಿಕ ಪೀಳಿಗೆಯಲ್ಲಿ ಪಿತೃರಹಿತ ಜನಿತ ಹೆಣ್ಣುಗಳು ಹಾಗೂ ಲೈಂಗಿಕ ಜನಿತ ಹೆಣ್ಣುಗಳು ಕಾಣಬರಬಹುದು. ಪಿತೃರಹಿತ ಜನಿತ ಹೆಣ್ಣುಗಳು ದೊಡ್ಡದಾದ ಅಂಡಗಳನ್ನು ಉತ್ಪಾದಿಸುವುದಿಲ್ಲ. ಅವು ಗರ್ಭಾಂಕುರಗೊಳ್ಳದಿದ್ದು, ಮುಂದೆ ಪಿತೃರಹಿತ ಜನಿತ ಅಥವಾ ಲೈಂಗಿಕ ಜನಿತ ಹೆಣ್ಣು ಜೀವಿಗಳನ್ನು ಈಯಬಹುದು. ಲೈಂಗಿಕ ಜನಿತ ಹೆಣ್ಣುಗಳು ಸಣ್ಣದಾದ ಅಂಡಗಳನ್ನು ಉತ್ಪಾದಿಸುವುವಲ್ಲದೆ, ಗರ್ಭಾಂಕುರಗೊಳ್ಳದೆ ವೃದ್ಧಿಯಾಗಬಹುದಾಗಿದ್ದು ಗಂಡು ಜೀವಿಗಳಿಗೆ ಜನ್ಮ ಕೊಡಬಹುದು. ಗರ್ಭಾಂಕುರಗೊಂಡರೆ ಹೆಣ್ಣು ಜೀವಿಗಳಿಗೆ ಜನ್ಮ ಕೊಡಬಹುದು.

ಕೆಲವು ಮಾದರಿ ಎಫಿಡ್‌ಗಳಲ್ಲಿ ಪಿತೃರಹಿತವಾಗಿ ಜನಿಸುವ ಹಲವಾರು ಪೀಳಿಗೆಗಳು ಗರ್ಭಾಂಕುರಗೊಂಡ ಅಂಡಗಳ ಮಾರ್ಗವನ್ನು ಅನುಸರಿಸಿ, ವಸಂತಕಾಲದಲ್ಲಿ ಅಂಡಗಳು ಒಡೆಯಬಹುದು. ವಸಂತ ಹಾಗೂ ಬೇಸಗೆಯ ಕಾಲದಲ್ಲಿ ರೆಕ್ಕೆಗಳನ್ನು ಪಡೆದಿರುವಂಥ ಇಲ್ಲವೇ ಪಡೆಯದಿರುವಂಥ ಹೆಣ್ಣುಗಳು ಅಥವಾ ಎರಡು ಬಗೆಯವೂ ಉತ್ಪತ್ತಿಯಾಗಬಹುದು. ಮಾಗಿ ಕಾಲ ಹತ್ತಿರ ಬರುತ್ತಿದ್ದಂತೆ ಲೈಂಗಿಕ ಜೀವಿಗಳು ಗಂಡು ಹಾಗೂ ಅಂಡಗಳನ್ನು ಈಯುವಂಥ ಹೆಣ್ಣುಗಳು–ಕಾಣಿಸಿಕೊಳ್ಳುತ್ತವೆ. ಅನಂತರ ಗಂಡು ಹೆಣ್ಣುಗಳು ಕೂಡುತ್ತವೆ. ಗರ್ಭಾಂಕುರಗೊಂಡ ಅಂಡ ವಸಂತದಲ್ಲಿ ಒಡೆದು ಹೊಸ ಜೀವಿಗಳಿಗೆ ಜನ್ಮವೀಯುತ್ತವೆ. ಈ ರೀತಿಯ ಪ್ರಜನನ ಚಕ್ರ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ.

ನೀರಿನ ಚಿಗಟಗಳ ಪ್ರಜನನ ಚಕ್ರ ಒಂದು ದೃಷ್ಟಿಯಲ್ಲಿ ಹೆಣ್ಣು ಬದಲಾಗುವಂಥದು. ಕೆಲವು ಜೀವ ಪ್ರಭೇದಗಳಲ್ಲಿ ಯಾವುದೇ ಮಾತೃರಹಿತ ಪ್ರಜನನದ ರೀತಿಯಲ್ಲಿ ಹೆಣ್ಣು ಅಥವಾ ಗಂಡು ಸಂತಾನವನ್ನು ಕೊಡಬಹುದು. ಅಥವಾ ನಿಷೇಚನಕ್ಕೆ ಒಳಗಾಗಬೇಕಾದ ಅಂಡಗಳು, ಕ್ರಿಯೆಯ ಅನಂತರ ಹೆಣ್ಣು ಜೀವಿಗಳಿಗೆ ಜನ್ಮವೀಯಬಹುದು.

ಕ್ರೊಮೋಸೋಮುಗಳ ಸಂಖ್ಯೆ : ಪಿತೃರಹಿತ ಪ್ರಜನನಕ್ಕೂ ಸಹಜ ಪ್ರಜನನಕ್ಕೂ ಇರುವ ಪ್ರಮುಖ ವ್ಯತ್ಯಾಸ ವೃದ್ಧಿಹೊಂದುತ್ತಿರುವ ಅಂಡದಲ್ಲಿರುವ ಕ್ರೊಮೋಸೋಮಿನ ಸಂಖ್ಯೆಗೆ ಸಂಬಂಧಿಸಿದೆ. ಉಚ್ಚರೀತಿಯ ಅನೇಕ ಪ್ರಾಣಿಗಳಲ್ಲಿ ದೈಹಿಕ ಜೀವಕೋಶಗಳಲ್ಲಿ ಕ್ರೊಮೋಸೋಮುಗಳ ಸಂಖ್ಯೆ ದ್ವಿಗುಣಿತ (ಡಿಪ್ಲಾಯಿಡ್) ರೀತಿಯದ್ದಾಗಿರುತ್ತದೆ. ಸಂತಾನೋತ್ಪಾದಕ ಜೀವಕೋಶಗಳ ಪೈಕಿ ಒಂದರಲ್ಲಿ ಎರಡು ವಿಭಜನೆಗಳಾಗಿ, ಅವುಗಳಲ್ಲಿ ಸಮಜಾತ ಕ್ರೊಮೋಸೋಮುಗಳು ಬೇರ್ಪಡುತ್ತವೆ. ಈ ಬಗೆಯ ನ್ಯೂನೀಕರಣ ವಿಭಜನ ಕ್ರಿಯೆಯ (ಮಿಯಾಸಿಸ್) ಕಾರಣದಿಂದ ಪ್ರಬುದ್ಧ ಲೈಂಗಿಕಕೋಶಗಳಲ್ಲಿ ದೈಹಿಕ ಕೋಶದ ಅರ್ಧ ಭಾಗದಷ್ಟು ಸಂಖ್ಯೆಯಲ್ಲಿ ಕ್ರೊಮೋಸೋಮುಗಳಿರುವುವು. ಕೆಲವು ಏಕಗುಣಿತ (ಹ್ಯಾಪ್ಲಾಯಿಡ್) ಅಂಡಗಳು ಪಿತೃರಹಿತ ರೀತಿಯಲ್ಲಿ ವೃದ್ಧಿ ಹೊಂದಬಹುದು. ಸಾಮಾನ್ಯವಾಗಿ ಒಮ್ಮೊಮ್ಮೆ ಪಿತೃರಹಿತ ಜನಿತ ಅಂಡಗಳು ಎರಡು ವಿಭಜನೆಗಳಲ್ಲಿ ನ್ಯೂನೀಕರಣ ಆಗುವಂಥದ್ದನ್ನು ಬಿಟ್ಟು ಕ್ರೊಮೋಸೋಮುಗಳ ಸಂಖ್ಯೆ ದ್ವಿಗುಣಿತ ಸ್ಥಿತಿಯಲ್ಲೇ ಇರಬಹುದು. ಜೇನುನೊಣದಲ್ಲಿ ಗರ್ಭಾಂಕುರಗೊಂಡ ಅಂಡಗಳು ದ್ವಿಗುಣಿತವಾಗಿರುವುವಲ್ಲದೆ ಅವುಗಳಿಂದ ಹುಟ್ಟುವಂಥ ಹೆಣ್ಣು ನೊಣಗಳೂ ದ್ವಿಗುಣಿತ ಕ್ರೊಮೋಸೋಮಿನ ಸಂಖ್ಯೆಯನ್ನೇ ಪಡೆದಿರುತ್ತವೆ. ಆದರೆ, ಪ್ರಬುದ್ಧ ಗರ್ಭಾಂಕುರಗೊಳ್ಳುವಂಥ ಅಂಡಗಳು ಏಕಗುಣಿತವಾಗಿರುತ್ತವೆ. ಈ ಏಕಗುಣಿತ ಅಂಡಗಳು ಗರ್ಭಾಂಕುರಗೊಳ್ಳದೆಯೇ ಇದ್ದಲ್ಲಿ ಪಿತೃರಹಿತ ಜನನದ ರೀತಿಯಲ್ಲಿ ವೃದ್ಧಿ ಹೊಂದುವುದರ ಮೂಲಕ, ಏಕಗುಣಿತ ಕ್ರೊಮೋಸೋಮ್ ಸಂಖ್ಯೆಯನ್ನುಳ್ಳ ಗಂಡು ನೊಣಗಳಿಗೆ ಜನ್ಮವೀಯುವುವು. ಇಂಥ ಗಂಡು ನೊಣಗಳ ರೇತ್ರಾಣುಗಳಲ್ಲಿ ಏಕಗುಣಿತ ಕ್ರೊಮೋಸೋಮ್ ಸಂಖ್ಯೆಯೇ ಇರುವುದರಿಂದ ಲೈಂಗಿಕ ಕೋಶಗಳಲ್ಲಿ ಕ್ರೊಮೋಸೋಮುಗಳ ಯಾವುದೇ ಬಗೆಯ ನ್ಯೂನೀಕರಣ ಇರುವುದಿಲ್ಲ. ಈ ಗಂಡುಕೋಶಗಳು ಗ್ಯಾಮೀಟ್ ಮತ್ತು ಅಂಡಗಳಂತೆಯೇ ಏಕಗುಣಿತ ರೀತಿಯವಾಗಿರುತ್ತವೆ.

ಎಫಿಡ್‌ಗಳಲ್ಲಿ ಪಿತೃರಹಿತ ಜನಿತ ಹೆಣ್ಣು ಲೈಂಗಿಕ ಹೆಣ್ಣುಗಳೆರಡು ದ್ವಿಗುಣಿತ ಸಂಖ್ಯೆಯ ಕ್ರೊಮೋಸೋಮುಗಳನ್ನು ಪಡೆದಿವೆ. ಹೆಣ್ಣಿನ ಅಂಡಗಳಲ್ಲಿ ಎರಡು ರೀತಿಯ ವಿಭಜನೆ ಕಾಣಬಹುದಾಗಿದ್ದು, ಏಕಗುಣಿತ ಸ್ಥಿತಿಯಲ್ಲಿರುತ್ತವೆ. ಆದರೆ ಪಿತೃರಹಿತ ಜನಿತ ಹೆಣ್ಣುಗಳಲ್ಲಿ ನ್ಯೂನೀಕರಣ ವಿಭಜನೆ ಹೆಚ್ಚು ಅಧಃಸ್ಥಿತವಾಗಿದ್ದು, ಅಂಡಗಳು ದ್ವಿಗುಣಿತ ಸಂಖ್ಯೆಯ

ಕ್ರೊಮೋಸೋಮುಗಳನ್ನು ಪಡೆದಿರುವುವು. ಈ ಅಂಡಗಳು ದ್ವಿಗುಣಿತ ಕ್ರೊಮೋಸೋಮು ಸಂಖ್ಯೆಯುಳ್ಳ ಹೆಣ್ಣು ಜೀವಿಗಳಿಗೆ ಜನ್ಮವೀಯುವುವು. ಗಂಡು ಜೀವಿಗಳಾಗಿ ವೃದ್ಧಿ ಹೊಂದುವಂಥ ಪಿತೃಸಹಿತ ಜನಿತ ಅಂಡಗಳು ವಿಭಜನೆಯ ಸಮಯದಲ್ಲಿ ಒಂದು ಸಂಪೂರ್ಣ ಕ್ರೊಮೋಸೋಮನ್ನು ಬಿಟ್ಟು ಬಿಡುವುದರ ಕಾರಣ, ಗಂಡು ಜೀವಿಗಳ ದ್ವಿಗುಣಿತ ಕ್ರೊಮೋಸೋಮಿನ ಸಂಖ್ಯೆಯಲ್ಲಿ ಒಂದು ಕ್ರೊಮೋಸೋಮು ಕಡಿಮೆ ಇರುತ್ತದೆ. ಗಂಡು ಲೈಂಗಿಕ ಕೋಶದಲ್ಲಿ ಅಸಮ ವಿಭಜನೆ ನಡೆದು ಒಂದು ಕೋಶ ಸಂಪೂರ್ಣ ಏಕಗುಣಿತ ಕ್ರೊಮೋಸೋಮಿನ ಗುಂಪನ್ನು ಪಡೆದು, ಮತ್ತೊಂದು ಕೋಶ ಒಂದು ಕ್ರೋಮೋಸೋಮನ್ನು ಕಡಿಮೆ ಪಡೆಯುತ್ತದೆ. ಮೊದಲು ಹೇಳಿರುವಂತೆ ಜೀವಕೋಶ ರೇತ್ರಾಣುವನ್ನು ಉತ್ಪಾದಿಸುವುದರ ಕಾರಣ ಗಂಡು ಲೈಂಗಿಕ ಕೋಶ ಏಕಗುಣಿತ ಸಂಖ್ಯೆಯನ್ನು ಪಡೆದಿರುತ್ತದೆ.

ನೀರಿನ ಚಿಗಟಗಳಲ್ಲಿ ಹೆಣ್ಣು ಮತ್ತು ಗಂಡುಗಳು ಖಂಡಿತವಾಗಿ ದ್ವಿಗುಣಿತ ಕ್ರೊಮೋಸೋಮ್ ಸಂಖ್ಯೆಯವಾಗಿರುವುವು. ಪಿತೃ ರಹಿತ ಜನಿತ ಅಂಡಗಳು ಒಂದು ಬಾರಿಯ ವಿಭಜನೆಯಿಂದ ಪ್ರಬುದ್ಧ ಸ್ಥಿತಿಗೆ ಬಂದು ದ್ವಿಗುಣಿತವಾಗಿರುತ್ತವೆ. ಲೈಂಗಿಕ ಅಂಡಗಳು ರೇತ್ರಾಣುಗಳು ಎರಡು ಬಾರಿ ವಿಭಜನೆಯಿಂದ ಉತ್ಪತ್ತಿಯಾಗುವುವು. ಅವು ಏಕಗುಣಿತವಾದ ಕ್ರೊಮೋಸೋಮು ಸಂಖ್ಯೆಯನ್ನು ಪಡೆದಿರುತ್ತವೆ.

ದ್ವಿಗುಣಿತ ಕ್ರೊಮೋಸೋಮ್ ಸಂಖ್ಯೆಯನ್ನು ಮರಳಿ ಪಡೆಯುವುದು ; ನ್ಯೂನೀಕರಣ ವಿಭಜನೆಯ ಅನಂತರವೂ ವಾಹಿಗಳಲ್ಲಿ ಸಾಧಾರಣವಾದ ಅಥವಾ ದ್ವಿಗುಣಿತ ಕ್ರೊಮೋಸೋಮಿನ ಸಂಖ್ಯೆ ಪಿತೃರಹಿತ ಜನಿತ ಸಂತಾನದಲ್ಲಿ ಉಳಿಯುವಂತಿದ್ದು, ನ್ಯೂನೀಕರಣ ವಿಭಜನ ಕ್ರಿಯೆಯ ಕೊನೆಯಲ್ಲಿ ಕ್ರೊಮೋಸೋಮುಗಳು ದ್ವಿಪ್ರತಿಗೊಳ್ಳುತ್ತವೆ.

ತಳೀಕರಣ ಹಾಗೂ ವಿಕಾಸದ ಸಂಬಂಧ ; ಒಮ್ಮೊಮ್ಮೆ ಕೆಲವು ಪ್ರಭೇದಗಳಲ್ಲಿ ಅಡ್ಡಹಾಯ್ಕೆಯಿಂಟಾಗಿ ಪಿತೃರಹಿತ ಪ್ರಜನನದ ರೀತಿಯ ವೃದ್ಧಿ ಕಂಡುಬರುತ್ತದೆ. ಇಂಥ ಮಿಶ್ರ ತಳಿ ಪ್ರಭೇದಗಳಲ್ಲಿರುವ ಕ್ರೊಮೋಸೋಮುಗಳು ಸಮಜಾತವಾಗಿರುವುದಿಲ್ಲ. ಈ ರೀತಿಯಲ್ಲಿ ಅಸಮತೆ ಪ್ರಬುದ್ಧ ಸ್ಥಿತಿಯನ್ನು ಕೂಡಿಕೊಳ್ಳದಿರುವುದನ್ನು ಸೂಚಿಸುವುದಲ್ಲದೆ, ಸಾಮಾನ್ಯವಾಗಿ ಪಿತೃರಹಿತ ಪ್ರಜನನಕ್ಕೆ ದಾರಿ ಮಾಡುತ್ತದೆ ಎಂದು ಹೇಳಲಾಗುವುದಿಲ್ಲ. ದ್ವಿಗುಣಿತ ಕ್ರೊಮೋಸೋಮುಳ್ಳ ಪಿತೃರಹಿತ ಜನಿತ ಸಂತಾನ ಸ್ಪಷ್ಟವಾಗಿ ಇಂಥ ಒಂದು ನ್ಯೂನತೆಯನ್ನು ಸರಿಪಡಿಸಲು ಅನುವಾಗುತ್ತದೆ. ಪಿತೃರಹಿತ ಪ್ರಜನನದ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುವಂಥ ಜೀವಿಗಳಲ್ಲಿ ವಿಕಾಸ ನಿರ್ಬಂಧಗೊಂಡಿರುತ್ತದೆ. ಏಕೆಂದರೆ ಕ್ರೊಮೋಸೋಮುಗಳು ಇಲ್ಲದಿರುವಲ್ಲಿ ಗುಣಗಳ ಮರುಸಂಯೋಗತೆ ಕಂಡು ಬರುವುದಿಲ್ಲ. ಪಿತೃರಹಿತ ಪ್ರಜನನದ ಹಾದಿಯಲ್ಲಿ ಆಯ್ಕೆಯ ಅಸಾಮರ್ಥ್ಯತೆ ಬದಲಾವಣೆ ಬಹಳ ಅಪರೂಪವೆಂದು ಇದು ತೋರಿಸುತ್ತದೆ. ಒಂದು ವೇಳೆ ಅಡ್ಡಹಾಯಿಕೆ ಕಂಡುಬಂದು ಗುಣಗಳ ಮರುಸಂಯೋಗತೆ ಸಾಧ್ಯವಾದಲ್ಲಿ ವಿಕಾಸ ಕ್ರಿಯೆ ನಿಧಾನವಾಗಿ ನಡೆಯುತ್ತದೆ. ಪಿತೃರಹಿತ ಜನಿತ ಅಥವಾ ಲೈಂಗಿಕ ರೀತಿಯ ಸಂತಾನೋತ್ಪತ್ತಿ ಪರ್ಯಾಯವಾಗಿ ನಡೆಯುವಂಥ ಪ್ರಭೇದದಲ್ಲಿ ಪಿತೃರಹಿತ ಸಂತಾನ ವಿಕಾಸದ ದೃಷ್ಟಿಯಿಂದ ಗಮನಾರ್ಹವಾಗಬಹುದು.

ಕೃತಕ ಪಿತೃರಹಿತ ಪ್ರಜನನ ; ಸಾಗರದಲ್ಲಿ ಜೀವಿಸುವ ಅಕಶೇರುಕ ಪ್ರಾಣಿಗಳನ್ನು, ಮುಖ್ಯವಾಗಿ ಎಕಿನೋಡರ್ಮೆಟ, ಮೃದ್ವಂಗಿಗಳು ಹಾಗೂ ಹುಳುಗಳನ್ನು ಕೃತಕ ಪಿತೃರಹಿತ ಜನನ ಪ್ರಯೋಗಗಳಿಗೆ ಉಪಯೋಗಿಸಲಾಗಿದೆ. ಹೀಗೆ ಪ್ರಯೋಗಕ್ಕೆ ಒಳಗಾಗಿರುವ ಈ ಪ್ರಾಣಿಗಳು ಅತ್ಯಧಿಕವಾಗಿ ಅಂಡಗಳನ್ನು ಉತ್ಪತ್ತಿ ಮಾಡಿದಾಗ, ಅವನ್ನು ನೇರವಾಗಿ ಸಾಗರದ ನೀರಿನಲ್ಲಿ ಹಾಕಿ ಅವುಗಳ ಪ್ರಾಥಮಿಕ ಹಂತಗಳನ್ನು ಅಭ್ಯಸಿಸಲಾಗಿದೆ. ಹಾಗೆಯೇ ಮೀನು, ಕಪ್ಪೆಯ ಹಾಗೂ ಸ್ತನಿಗಳ ಅಂಡಗಳನ್ನು ಬೆಳೆಸಲು ಪ್ರಯತ್ನಿಸಲಾಗಿದೆ. ಪ್ರಯೋಗಗಳಲ್ಲಿ ಕೆಲವು ವಿಧದ ಪ್ರೇರಕ ವಸ್ತುಗಳು ಹೆಚ್ಚು ಫಲ ಕೊಟ್ಟಿವೆ ಎನ್ನುವುದು ಒಂದು ಕುತೂಹಲಕಾರಿಯಾದ ವಿಷಯವೇ ಸರಿ. ಒಂದೇ ಪ್ರಭೇದದ ಅಂಡಗಳು ಯಾವುದಾದರೊಂದು ಬಗೆಯ ಪ್ರೇರಕ ವಸ್ತುವಿನಿಂದ ಚೋದನೆಗೊಳ್ಳಬಹುದು. ಕಡಲ ಡುಬ್ಬೆಯಲ್ಲಿ ಪ್ರೇರಣೆ ಫಲಕಾರಿಯಾಗಬೇಕಾದರೆ, ಅಧಿಕ ಆಮ್ಲತೆ ಹಾಗೂ ಅಧಿಕ ಕ್ಷಾರತೆ, ಲವಣದ ನ್ಯೂಟ್ರಲ್ ದ್ರಾವಣ, ಅತಿಪರಾಸರಿ ಅಥವಾ ಮಿತಪರಾಸರಿ ಸಮುದ್ರದ ನೀರು ಇವುಗಳ ಆಶ್ರಯಕ್ಕೆ ಅಂಡಗಳು ಬರುವಂತೆ ಮಾಡಿ. ಕೆಲವು ಬಗೆಯ ಕ್ಷಾರ ವಸ್ತುಗಳು, ಕೊಬ್ಬು ಮಿಶ್ರಿತ ದ್ರಾವಣ, ಸೂಕ್ಷ್ಮವಾದ ಸೂಜಿಮೊನೆಯಿಂದ ಚುಚ್ಚುವುದು, ಉಷ್ಣತೆ, ಶೀತ, ಅತಿನೇರಿಳೆ ವಿಕರಣ ಹಾಗೂ ರೇಡಿಯಮ್ ವಿಕರಣಕ್ಕೆ ಅಂಡಗಳನ್ನು ಒಳಗಾಗಿಸಬಹುದು. ಈ ಎಲ್ಲ ಬಗೆಯ ಪ್ರೇರಕಗಳು ಸಮಾನ ಪ್ರಮಾಣದಲ್ಲಿ ಪ್ರಭಾವವನ್ನು ಬೀರದಿದ್ದರೂ, ಕೆಲವು ಪ್ರೇರಕಗಳು ಒಂದೇ ಬಗೆಯ ಫಲಿತಾಂಶವನ್ನು ಕೊಟ್ಟಿವೆ. ವ್ಯತ್ಯಾಸವೇನಾದರು ಕಂಡುಬಂದಲ್ಲಿ ಅದು ಒಂದು ಪ್ರೇರಕ ವಸ್ತುವಿನೊಂದಿಗೆ ಅಂಡಗಳನ್ನು ಒಳಗಾಗಿಸುವಾಗ ಆಗಬಹುದಾದ ಪ್ರತಿಕ್ರಿಯೆಗೆ ಸಂಬಂಧಿಸಿರಬಹುದು.

ಕಡಲು ಡುಬ್ಬೆಯ ಅಂಡಗಳಿಗೆ ಸಂಬಂಧಿಸಿದಂತೆ ಲೋಬ್ಸ್ ಎಂಬಾತ ನಡೆಸಿದ ಪ್ರಯೋಗದಲ್ಲಿ ಅಂಡಗಳನ್ನು ಅತಿಪರಾಸರ ದ್ರಾವಣಕ್ಕೆ ಒಳಪಡಿಸಲಾಗಿತ್ತು. ಕಾಲಕ್ರಮದಲ್ಲಿ ಆತ ಎರಡು ತೆರನ ಪ್ರೇರಕ ಕ್ರಿಯೆಯನ್ನು ಕಂಡುಹಿಡಿದನಲ್ಲದೆ ಈ ವಿಧಾನದಿಂದ ಸಾಧಾರಣವಾದ ರೀತಿಯಲ್ಲಿ ವೃದ್ಧಿ ಹೊಂದುವಂಥ ಸಾಧ್ಯತೆ ಹೆಚ್ಚುವಂತೆ ಆತ ಮಾಡಿದ.

ಪ್ರಬುದ್ಧ ಪ್ರಾಣಿಗಳು ಮತ್ತು ಸಾಧಾರಣ ಬಗೆಯ ಭ್ರೂಣದ ಉತ್ಪಾದನೆ : ಸರಿಯಾದ ರೀತಿಯ ಕೃತಕ ಪ್ರೇರಣೆಯಿಂದ ವೃದ್ಧಿ ಹೊಂದುವಂತ ಅಂಡಗಳು ಗಾತ್ರದಲ್ಲಿ ಸಾಧಾರಣ ಗರ್ಭಾಂಕುರತೆಯಿಂದ ಪಡೆಯುವ ಅಂಡಗಳಷ್ಟೆ ಇರುತ್ತವೆ. ಸಾಮಾನ್ಯವಾಗಿ ಅಂಡಗಳನ್ನು ಡಿಂಬ ಸ್ಥಿತಿಯವರೆಗೆ ಮಾತ್ರ ಬೆಳೆಸಿದರೂ ಹಲವಾರು ಬಗೆಯ ಕಡಲುಡುಬ್ಬೆ ಹಾಗೂ ನಕ್ಷತ್ರ ಮೀನುಗಳನ್ನು ಪ್ರಬುದ್ಧ ಸ್ಥಿತಿಯವರೆಗೂ ವೃದ್ಧಿಸಲಾಗಿದೆ. ಸುವ್ಯವಸ್ಥಿತವಾಗಿ ಸರಿಯಾದ ಲಾರ್ವಗಳನ್ನು ಉತ್ಪತ್ತಿ ಮಾಡಲು ಸಾಧ್ಯವಿದೆ ಎಂದಾಗ ಪ್ರಬುದ್ಧ ಸ್ಥಿತಿಯ ಜೀವಿಗಳನ್ನು ಸೂಕ್ಷ್ಮವಾದ ಬೆಳೆವಣಿಗೆ ವಿಧಾನದಿಂದ ಪಡೆಯಬಹುದು.

ಕ್ರೊಮೋಸೋಮುಗಳ ಸಂಖ್ಯೆ : ಅಂಡದಲ್ಲಿರುವ ನ್ಯೂಕ್ಲಿಯಸಿನ ನ್ಯೂನೀಕರಣ ವಿಭಜನೆಯ ತರುವಾಯ ಕ್ರೊಮೋಸೋಮುಗಳ ಸಂಖ್ಯೆ ಏಕಗುಣಿತವಾಗುತ್ತದೆ. ರೇತ್ರಾಣುವಿನ ನ್ಯೂಕ್ಲಿಯಸಿನಲ್ಲಿಯೂ ಇದೇ ರೀತಿಯ ಬದಲಾವಣೆ ಕಂಡುಬರುತ್ತದೆ. ಅಂಡದ ನ್ಯೂಕ್ಲಿಯಸ್ ಹಾಗೂ ರೇತ್ರಾಣುವಿನ ನ್ಯೂಕ್ಲಿಯಸ್‌ನ ಕುಡಿಕೆಯಿಂದಾಗುವ ಸಾಧಾರಣ ರೀತಿಯ ಗರ್ಭಾಂಕುರತೆಯ ತರುವಾಯ ಕ್ರೊಮೋಸೋಮ್ ಸಂಖ್ಯೆ ದ್ವಿಗುಣಿತವಾಗುತ್ತದೆ. ಕೃತಕವಾದ ಪಿತೃರಹಿತ ಸಂತಾನದಲ್ಲಿ ಏಕಗುಣಿತ ಜೀವಗಳಾಗಿ ವೃದ್ಧಿಸುವುದೆಂದು ಭಾವಿಸಬಹುದು. ಆದರೆ ಕೋಶವಿಜ್ಞಾನದ ಸಂಶೋಧನೆಗಳು ದ್ವಿಗುಣಿತ ಭ್ರೂಣಗಳು ಕಾಣಿಸಿಕೊಳ್ಳಬಹುದು ಎಂಬ ಅಂಶವನ್ನು ತೋರಿಸಿವೆ. ಅದರಲ್ಲಿಯೂ ಪ್ರಬುದ್ಧ ಸ್ಥಿತಿಗೆ ಬರುವ ಹಂತದಲ್ಲಿರುವ ಜೀವಿಗಳಾದರೋ ಸಾಮಾನ್ಯವಾಗಿ ಭ್ರೂಣಾವಸ್ಥೆಯಲ್ಲೇ ಸಾಯುತ್ತವೆ.

ಲಿಂಗಭೇದ : ಕೃತಕ ಪ್ರೇರಣೆಯ ಸಹಾಯದಿಂದ ಪಡೆದಂಥ ಜೀವಿಗಳ ಕ್ರೊಮೋಸೋಮುಗಳ ನಡತೆಯನ್ನು ಅನುಸರಿಸುತ್ತದೆ. ಗಂಡುತನ ಅಥವಾ ಹೆಣ್ಣುತನ ಲೈಂಗಿಕ ಕ್ರೊಮೋಸೋಮುಗಳ ಹಾಗೂ ಆಟೋಸೋಮುಗಳ ಗುಂಪಿನ ಪ್ರಮಾಣವನ್ನು ಅನುಸರಿಸಿ ನಿರ್ಧಾರಗೊಳ್ಳುತ್ತದೆ. ತದ್ರೂಪಿ ಸೃಷ್ಟಿ (ಕ್ಲೋನಿಂಗ್) ತಂತ್ರಜ್ಞಾನವನ್ನು ಹೆಚ್ಚು, ಕಡಿಮೆ ಪಿತೃರಹಿತ ಪ್ರಜನನವೆನ್ನಬಹುದು. ***

**ಪಿತ್ತ (ಬೈಲ್):** ಯಕೃತ್ತಿನಲ್ಲಿ (ಲಿವರ್) ಉತ್ಪತ್ತಿಯಾಗಿ ಸಣ್ಣ ಕರುಳಿಗೆ ಹರಿದು ಬರುವ, ಆಹಾರದಲ್ಲಿರುವ ಮೇದಸ್ಸು ಪಚನವಾಗಲು ಸಹಾಯ ಮಾಡುವ ಸ್ರವಿಕೆ. ದಿನಕ್ಕೆ ಸುಮಾರು ಒಂದೂವರೆ ಲೀ. ಪಿತ್ತದ ಉತ್ಪಾದನೆಯಾದರೂ, ಅದು ಸಣ್ಣಕರುಳಿಗೆ ಬಂದು ಸೇರುವುದು ವ್ಯಕ್ತಿ ತಿಂದ ಆಹಾರ ಸಣ್ಣ ಕರುಳಿಗೆ ಬಂದಾಗ ಮಾತ್ರ. ಮಿಕ್ಕ ವೇಳೆ ಉತ್ಪತ್ತಿಯಾಗುವ ಸ್ರಾವ ಪಿತ್ತಕೋಶದಲ್ಲಿ ಅಡಕವಾಗಿರುತ್ತದೆ. ಪಿತ್ತಕೋಶ ಅದರ ನೀರಿನ ಭಾಗವನ್ನು ಸ್ವಲ್ಪಮಟ್ಟಿಗೆ ಹೀರಿ ಸಾರವನ್ನು ಹೆಚ್ಚಿಸುತ್ತದೆ. ಸಾರ ವರ್ಧಿತ ಪಿತ್ತ ಅದರ ಮೂಲರಸದ ಹತ್ತರಷ್ಟು ಸಾಮರ್ಥ್ಯಯುತವಾಗಿರುತ್ತದೆ. ಆಹಾರ, ಅದರಲ್ಲೂ ಮೇದಸ್ಸು ಹೆಚ್ಚಾಗಿ ಇರುವ ಆಹಾರ, ಸಣ್ಣ ಕರುಳಿಗೆ ತಲುಪಿದಾಗ ಅದರ ಮೊದಲನೆಯ ಭಾಗದಲ್ಲಿ ಕೋಲೆಸಿಸ್ಟೋಕೈನಿನ್ ಎಂಬ ಹಾರ್ಮೋನ್ ಉತ್ಪತ್ತಿಯಾಗಿ ರಕ್ತಗತವಾಗುತ್ತದೆ. ಇದು ರಕ್ತಪರಿಚಲನೆಯಿಂದ ದೇಹದಲ್ಲೆಲ್ಲ ವ್ಯಾಪಿಸಿ ಪಿತ್ತಕೋಶಕ್ಕೆ ಒಯ್ಯಲ್ಪಟ್ಟಾಗ ಇದು ಕೂಡಲೆ ಸಂಕುಚಿಸುತ್ತದೆ ಮತ್ತು ತನ್ನಲ್ಲಿರುವ ಪಿತ್ತವನ್ನು ಕರುಳಿನೊಳಕ್ಕೆ ತಳ್ಳುತ್ತದೆ. ಹೀಗಾಗಿ ಬೇಕಾದಾಗ ಮಾತ್ರ ಪಿತ್ತ ಕರುಳಿಗೆ ಸೇರುತ್ತದೆ.

ಕರುಳಿನಲ್ಲಿ ಪಿತ್ತ ಮುಖ್ಯವಾಗಿ ಮೇದಸ್ಸನ್ನು ಪ್ರನಿಲಂಬನ (ಇಮಲ್ಸಿಫೈ) ಅಂದರೆ ತುಂತುರುಗಳಾಗಿ ಛಿದ್ರಿಸುತ್ತದೆ. ಈ ತುಂತುರುಗಳು ಹಾಗೆಯೆ ರಕ್ತಗತವಾಗಬಹುದು ಮತ್ತು ಮೇದೋಜೀರಕ ರಸದಿಂದ ಚೆನ್ನಾಗಿ ಜೀರ್ಣಿಸಲ್ಪಡಬಹುದು. ಆದರೆ ಹೀಗೆ ಜೀರ್ಣಿಸಲ್ಪಟ್ಟರೂ ಅದು ರಕ್ತಗತವಾಗುವುದಕ್ಕೆ ಕೂಡ ಪಿತ್ತ ಅವಶ್ಯ. ಕರುಳಿನಲ್ಲಿ ಒಂದು ವಸ್ತು ರಕ್ತಗತವಾಗಬೇಕಾದರೆ ಸಾಧಾರಣವಾಗಿ ಅದು ನೀರಿನಲ್ಲಿ ವಿಲೀನವಾಗುವಂತಿರಬೇಕು. ಜೀರ್ಣಿಸಲ್ಪಟ್ಟ ಮೇದಸ್ಸು ಸ್ವಾಭಾವಿಕವಾಗಿ ನೀರಿನಲ್ಲಿ ವಿಲೀನವಾಗದು. ಆದರೆ ಜೊತೆಯಲ್ಲಿ ಪಿತ್ತವಿದ್ದರೆ ಅದು ಪ್ರನಿಲಂಬನವಾಗುತ್ತದೆ. ಪಿತ್ತಕ್ಕೆ ಹೀಗೆ ನೀರಿನಲ್ಲಿ ವಿಲೀನಿಸದಿರುವ ಪದಾರ್ಥವನ್ನು ಪ್ರನಿಲಂಬನ ಮಾಡುವ ವಿಶೇಷ ಗುಣವಿರುವುದರಿಂದ ಜೀರ್ಣವಾದ ಮೇದಸ್ಸು ರಕ್ತಗತವಾಗಲು ಅದು ಸಹಾಯ ಮಾಡುತ್ತದೆ. ಕೆಲವು ರೋಗಗಳಲ್ಲಿ ಪಿತ್ತ ಕರುಳಿಗೆ ಬಾರದೆ ನಿಂತುಹೋಗಬಹುದು. ಹೀಗಾದಾಗ ಪಿತ್ತ ರಕ್ತಗತವಾಗಿ ದೇಹವೆಲ್ಲ

ವ್ಯಾಪಿಸಿ ಕಾಮಾಲೆ ರೋಗ ಬರುತ್ತದೆ. ಅಲ್ಲದೆ ಮೇದಸ್ಸು ಕರುಳಿನಲ್ಲಿ ಸರಿಯಾಗಿ ಜೀರ್ಣಿಸಲ್ಪಡದೆ, ಪ್ರನಿಲಂಬನವಾಗದೆ ಮಲದೊಡನೆ ವಿಸರ್ಜಿಸಲ್ಪಡುತ್ತದೆ. ಸಾಧಾರಣವಾಗಿ ಮೇದಸ್ಸಿನಲ್ಲೆ ಇದ್ದು ಅದರೊಡನೆ ರಕ್ತಗತವಾಗುವ ಎ, ಡಿ, ಇ, ಮತ್ತು ಕೆ ಜೀವಸತ್ತ್ವಗಳೂ ಹೀಗೆಯೇ ದೇಹಕ್ಕೆ ಒದಗದೆ ಜೀವಸತ್ತ್ವ ನ್ಯೂನತಾ ಚಿಹ್ನೆಗಳು ತಲೆದೋರುತ್ತವೆ.

ಪಿತ್ತದಲ್ಲಿ ಮೇದಸ್ಸು ರಕ್ತಗತವಾಗಲು ಸಹಾಯ ಮಾಡುವ ವಸ್ತುಗಳು ಕೋಲಿಕ್ ಆಮ್ಲ ಮತ್ತು ಅದರ ಲವಣಗಳು. ಪಿತ್ತದ ಬಣ್ಣ ಅದರಲ್ಲಿರುವ ಬಿಲಿರೂಬಿನ್ ಮತ್ತು ಬಿಲಿವರ್ಡಿನ್ ಎಂಬ ವಸ್ತುಗಳಿಂದ ಬರುತ್ತದೆ. ಇವುಗಳಿಗೆ ಕೆಂಪು ರಕ್ತಕಣಗಣಲ್ಲಿರುವ ಕೆಂಪು ಬಣ್ಣದ ಹೀಮೊಗ್ಲಾಬಿನ್ ಎಂಬ ಪದಾರ್ಥವೇ ಮೂಲ. ಕೆಂಪು ರಕ್ತಕಣಗಳು ನಾಶವಾದಾಗ ಹೀಮೊಗ್ಲಾಬಿನ್ ಹೊರಕ್ಕೆ ಬಂದು ದೇಹದಲ್ಲಿ ನಾನಾ ಕಡೆಗಳಲ್ಲಿರುವ ಫ್ಯಾಗೊಸೈಟುಗಳಿಂದ ಜೀರ್ಣಿಸಲ್ಪಟ್ಟು ಬಣ್ಣದ ಭಾಗವೇ ಬೇರೆ ಆಗುತ್ತದೆ. ಹಿಮೋಗ್ಲಾಬಿನ್ನಿನ ಈ ಬಣ್ಣದ ಭಾಗ ಪುನಃ ರಕ್ತಕ್ಕೆ ಸೇರಿ ಪರಿಚಲನೆಯಿಂದ ಯಕೃತ್ತನ್ನು ಸೇರಿದಾಗ ಅದು ಈ ಬಣ್ಣದ ಅಂಶವನ್ನು ಹೀರಿ ಪಿತ್ತರೂಪದಲ್ಲಿ ವಿಸರ್ಜಿಸಲ್ಪಡುತ್ತದೆ. ಈ ಲವಣಗಳು ಮತ್ತು ಬಣ್ಣದ ಜೊತೆಗೆ ಪಿತ್ತದಲ್ಲಿ ಕೊಲೆಸ್ಟಿರಾಲ್ ಎಂಬ ವಿಸರ್ಜನ ವಸ್ತು ಇರುತ್ತದೆ. ದೇಹದಲ್ಲಿ ಜಾಸ್ತಿ ಕೊಲೆಸ್ಟಿರಾಲ್ ಇದ್ದಾಗ ಪಿತ್ತದಲ್ಲಿ ಅದರ ವಿಸರ್ಜನೆಯೂ ಹೆಚ್ಚು. ಇಂಥ ಸಂದರ್ಭದಲ್ಲಿ ಪಿತ್ತ ಕರುಳಿಗೆ ಸರಿಯಾಗಿ ಹರಿಯದೆ ತಡೆ ಉಂಟಾದರೆ, ಬ್ಯಾಕ್ಟೀರಿಯ ಸೋಂಕು ಉಂಟಾದರೆ ಅಥವಾ ಇನ್ನೇನಾದರೂ ಅವ್ಯಕ್ತ ಕಾರಣಗಳಿದ್ದರೆ ಪಿತ್ತದಲ್ಲಿರುವ ಕೊಲೆಸ್ಟಿರಾಲ್ ಘನೀಭವಿಸಿ ಕಲ್ಲುಗಳ ಹಾಗೆ ಮಾರ್ಪಟ್ಟು ಪಿತ್ತ ಪ್ರವಹಿಸುವ ನಾಳಗಳಲ್ಲಿ ಸಿಕ್ಕಿಹಾಕಿಕೊಂಡು ಉದರಶೂಲೆ ಉಂಟಾಗಬಹುದು.

ಪಿತ್ತದಿಂದ ಸಣ್ಣ ಕರುಳಿನಲ್ಲಿ ವಿಷಕ್ರಿಮಿಗಳ ಉತ್ಪಾದನೆ ಮತ್ತು ಸೋಂಕು ತಪ್ಪುತ್ತದೆ ಎಂಬ ನಂಬಿಕೆಯುಂಟು. ಈ ರಸ ಮಲವಿಸರ್ಜನೆಗೆ ಸಹಕಾರಿ. ಇದು ಆಗಿಂದಾಗ ಜಠರದೊಳಕ್ಕೆ ನುಗ್ಗಿ ಅಲ್ಲಿಯ ಆಮ್ಲವನ್ನು ಕಡಿಮೆಮಾಡಿ ಜಠರ ವ್ರಣವನ್ನು ತಪ್ಪಿಸುತ್ತದೆ.

***

**ಪಿತ್ತಕೋಶ:** ಯಕೃತ್ತಿನ (ಪಿತ್ತಜನಕಾಂಗ, ಲಿವರ್) ಸ್ರಾವವಾದ ಪಿತ್ತ (ಬೈಲ್) ಸಂಗ್ರಹವಾಗುವ ಚೀಲ (ಗಾಲ್ ಬ್ಲ್ಯಾಡರ್). ಇದು ಯಕೃತ್ತಿನ ಬಲಹಾಲೆಯ ಕೆಳಭಾಗದಲ್ಲಿದೆ. ಆಕಾರ ಶಂಖದಂತೆ. ಯಕೃತ್ತಿನಲ್ಲಿ ಉತ್ಪನ್ನವಾಗುವ ಪಿತ್ತ ಅದರ ಎರಡೂ ಹಾಲೆಗಳಿಂದ ಪ್ರತ್ಯೇಕ ನಳಿಗೆಗಳ ಮೂಲಕ ಹರಿದು, ಇವೆರಡೂ ಸಂಗಮಿಸಿ, ಯಕೃತ್ ಪ್ರಣಾಲಿ (ಕಾಮನ್ ಹೆಪಟಿಕ್ ಡಕ್ಟ್) ಆಗಿ ಪಿತ್ತಕೋಶ ಸೇರುತ್ತದೆ. ಅಲ್ಲಿ ಸಂಗ್ರಹವಾಗುವ ಪಿತ್ತ ಪಚನ ಕ್ರಿಯೆಯ ಅವಶ್ಯಕತೆಯಂತೆ, ಪಿತ್ತನಾಳ (ಬೈಲಡಕ್ಟ್)ದ ಮೂಲಕ ಸಣ್ಣಕರುಳನ್ನು ಸೇರುತ್ತದೆ. ಪಿತ್ತಕೋಶದ ಉದ್ದ 7–10 ಸೆಂಮೀ ಮೊಂಡಾದ ಅದರ ತುದಿಯ ಕಡೆ ಅಗಲ ಸುಮಾರು 3 ಸೆಂಮೀ. ಇದರಲ್ಲಿ ಸುಮಾರು 30–50 ಘನ ಸೆಂಮೀ. ಪಿತ್ತರಸ ಸಂಗ್ರಹವಾಗುತ್ತದೆ. ಪಿತ್ತಕೋಶದ ಮೇಲಿನ ಹೊರಮೈ ಯಕೃತ್ತಿನ ಬಲಹಾಲೆಯ ಕೆಳಗಡೆ ಇರುವ ಕೂಪದಲ್ಲಿ ಬಂಧಿತವಾಗಿದೆ. ಮೊಂಡಾದ ತುದಿ ಯಕೃತ್ತಿನ ಕೆಳಗಿನ ಅಂಚಿನಿಂದ ಮುಂದಕ್ಕೆ ಸ್ವಲ್ಪಮಟ್ಟಿಗೆ ಚಾಚಿಕೊಂಡು ಉದರ ಫಲಕವನ್ನು (ಆಬ್ಡೊಮಿನಲ್ ವಾಲ್) ಸ್ಪರ್ಶಿಸುತ್ತದೆ. ಅದರ ಕೆಳಗಿನ ಹೊರಮೈ ಮುಂಭಾಗದಲ್ಲಿ ತಿರ್ಯಕ್ ಸ್ಥೂಲಾಂತ್ರಕ್ಕೂ (ಟ್ರಾನ್ಸ್‌ವರ್ಸ್ ಕೊಲಾನ) ಹಿಂಭಾಗದಲ್ಲಿ ಡುಯೋಡಿನಮ್ಮಿಗೂ ಬಂಧಿತವಾಗಿದೆ. ಪಿತ್ತಕೋಶ ನಳಿಗೆಯ ಮೂಲಕ ಪಿತ್ತ, ಪಿತ್ತಕೋಶವನ್ನು ಸೇರಿ ನೀರಿನಂಶವನ್ನು ಬಲುಮಟ್ಟಿಗೆ ಕಳೆದುಕೊಂಡು ಮಂದವಾಗುತ್ತದೆ. ಜೀರ್ಣಕಾಲದಲ್ಲಿ ಪಿತ್ತಕೋಶ ಸಂಕುಚಿಸುತ್ತದೆ. ಆಗ ಪಿತ್ತವು ಪಿತ್ತನಾಳಕ್ಕೆ ಹರಿದು ಡುಯೋಡಿನಮ್ಮನ್ನು ಸೇರುತ್ತದೆ.

ಕೆಲವು ಪ್ರಾಣಿಗಳಿಗೆ (ಕುದುರೆ) ಪಿತ್ತಕೋಶ ಇರುವುದಿಲ್ಲ. ಒಮ್ಮೊಮ್ಮೆ ಮನುಷ್ಯನ ಪಿತ್ತಕೋಶದಲ್ಲಿ ಪಿತ್ತಶೋಷಣೆಯಿಂದ ಪಿತ್ತಾಶ್ಮಗಳು (ಗಾಲ್ ಸ್ಟೋನ್ಸ್) ಉಂಟಾಗಬಹುದು. ಆಗ ಶಸ್ತ್ರಚಿಕಿತ್ಸೆಯ ಮೂಲಕ ಪಿತ್ತಕೋಶವನ್ನು ತೆಗೆದುಹಾಕಬೇಕಾಗಬಹುದು. ***

**ಪಿತ್ತವರ್ಣಕಗಳು:** ಯಕೃತ್ತಿನ ಸ್ರವಿಕೆ, ಪಿತ್ತದ ಘಟಕಗಳಾಗಿದ್ದು ಅದರ ವಿಶಿಷ್ಟ ಬಣ್ಣಕ್ಕೆ ಕಾರಣವಾದ ವಸ್ತುಗಳು (ಬೈಲ್ ಪಿಗ್‌ಮೆಂಟ್ಸ್). ಇವು ಬಿಲಿರೂಬಿನ್, ಬಿಲಿವರ್ಡಿನ್ ಮುಂತಾದ ರಾಸಾಯನಿಕಗಳು. ಪಿತ್ತವರ್ಣಕಗಳ ಬಗೆಗಿನ ತಿಳಿವಳಿಕೆ ಹೆಚ್ಚುಕಡಿಮೆ ಇತ್ತೀಚಿನದೆಂದು ಹೇಳಬಹುದು. ಆದರೆ ಕಾಮಾಲೆ ಇರುವವರ ದೇಹದಲ್ಲಿ ಪಿತ್ತವರ್ಣಕಗಳು ಹೆಚ್ಚು ಮೊತ್ತದಲ್ಲಿ ಇರುವುವೆಂದು ವೈದ್ಯಕೀಯವಾಗಿ ಪುರಾತನ ಕಾಲದಿಂದಲೂ ಅಂಗೀಕೃತವಾಗಿದೆ.

ಪಿತ್ತವರ್ಣಕಗಳು ಯಕೃತ್ತಿನಲ್ಲಿ ಮಾತ್ರ ಉತ್ಪತ್ತಿಯಾಗುವುವೆಂದು ಮೊದಲು ನಂಬಲಾಗಿತ್ತು. ನಿಜಕ್ಕೂ ಅವು ಯಕೃತ್ತಿಗಿಂತಲೂ ಹೆಚ್ಚಾಗಿ ದೇಹದ ನಾನಾ ಭಾಗಗಳ ರೆಟಿಕ್ಯುಲೋಎಂಡೊತೀಲಿಯಲ್ ಕೋಶಗಳಲ್ಲಿ ಉತ್ಪತ್ತಿಯಾಗಿ ರಕ್ತಕ್ಕೆ ಸೇರಿ ಅನಂತರ ಪಿತ್ತದ ಮೂಲಕ ವಿಸರ್ಜಿತವಾಗಿ ದೇಹದಿಂದ ಹೊರಕ್ಕೆ ಸಾಗುತ್ತವೆ.

ಪಿತ್ತವರ್ಣಕಗಳು ರಕ್ತದ ಹಿಮೋಗ್ಲಾಬಿನ್ ವರ್ಣಕದ ಅವನತಿಯಿಂದ ಲಭಿಸುತ್ತವೆ. ರೆಟಿಕ್ಯುಲೋಎಂಡೊತೀಲಿಯಮ್ ಕೋಶಗಳಲ್ಲಿ ಕೆಂಪು ರಕ್ತ ಕಣಗಳ ಆಯುಃ ಪ್ರಮಾಣದ ಕೊನೆಯಲ್ಲಿ ಆಗುವ ಅಪಕ್ಷಯದಿಂದ ಹೀಮೊಗ್ಲಾಬಿನ್ ಬಿಡುಗಡೆ ಆಗುವುದು. ಇದು ಆ ಕೋಶಗಳಲ್ಲಿ ಬಿಲಿರೂಬಿನ್ ಇತ್ಯಾದಿಯಾಗಿ ಪರಿವರ್ತಿತವಾಗಿ ರಕ್ತಗತವಾಗುತ್ತದೆ. ಯಕೃತ್ತಿನ ಕೋಶಗಳು ರಕ್ತದಿಂದ ಬಿಲಿರೂಬಿನ್ ಮುಂತಾದ ವರ್ಣಕಗಳನ್ನು ತೆಗೆದು ಅವನ್ನು ಪಿತ್ತದ ಜೊತೆಯಲ್ಲಿ ನಾಳಗಳ ಮೂಲಕ ಪಿತ್ತಕೋಶಕ್ಕೆ ಹೊರಸೂಸುವುವು. ಅಲ್ಲಿ ನೀರು ಮತ್ತು ಲವಣಗಳು ಹೀರಲ್ಪಟ್ಟು ಪಿತ್ತರಸ ಸಾಂದ್ರೀಕೃತವಾಗಿ ಆಗಾಗ್ಗೆ ಕರುಳಿನ ಆದಿಭಾಗವಾದ ಡುಯೊಡಿನಮ್ಮಿಗೆ ತಳ್ಳಲ್ಪಡುವುದು.

ಮಾನವ ಪಿತ್ತದ ಪ್ರಮುಖ ವರ್ಣಕ ಬಿಲಿರೂಬಿನ್. ರಕ್ತದ ಹಿಮೋಗ್ಲಾಬಿನ್ನಿನಲ್ಲಿರುವ ಹಿಮ್ಯಾಟಿನ್ ಎಂಬ ಘಟಕದ ಅಪಕ್ಷಯದಿಂದ ಉಂಟಾಗುವ ಇದು ಹಳೆಯ ರಕ್ತ ಸ್ರಾವದ ಭಾಗಗಳಲ್ಲಿ ಹೆಮಾಟಾಯ್ಡಿನ್ ಎಂಬುದಾಗಿ ಸ್ವತಂತ್ರವಾಗಿಯೂ ರಕ್ತ ಮತ್ತು ಪಿತ್ತ ರಸಗಳಲ್ಲಿ ವಿಲೀನಿಸುವ ಸ್ವಭಾವವುಳ್ಳ ಸೋಡಿಯಮ್ ಲವಣವಾಗಿಯೂ ಇವು ಪಿತ್ತಾಂಶಗಳಲ್ಲಿ ವಿಲೀನಿಸದೆ ಇರುವ ಸ್ವಭಾವವುಳ್ಳ ಕ್ಯಾಲ್ಷಿಯಮ್, ಮ್ಯಾಗ್ನಿಸಿಯಮ್ ಲವಣವಾಗಿಯೂ ಇರುತ್ತದೆ. ಇದನ್ನು ಮೊದಲಿಗೆ ಪಿತ್ತಾಂಶಗಳಿಂದ ಬೇರ್ಪಡಿಸಲಾಯಿತು.

ಬಿಲಿವರ್ಡಿನ್ ಎನ್ನುವ ಹಚ್ಚಹಸಿರು ಬಣ್ಣದ ಪಿತ್ತವರ್ಣಕ ಕೆಲವು ಪ್ರಾಣಿಗಳ ಪಿತ್ತದಲ್ಲಿಯೂ ನಾಯಿಗಳ ಜರಾಯುವಿನಲ್ಲಿಯೂ ಕೆಲವು ಜಾತಿಯ ಪಕ್ಷಿಗಳ ಮೊಟ್ಟೆಗಳ ಹೊದಿಕೆಯಲ್ಲಿಯೂ ಕಂಡುಬರುತ್ತದೆ. ಬಣ್ಣವಿಲ್ಲದ ಸ್ಫಟಿಕ ಮಿಶ್ರಣವಾದ ಮಿಸೋಬಿಲಿರೂಬಿನ್, ಕಿತ್ತಳೆ ಬಣ್ಣದ ಸ್ಫಟಿಕ ವರ್ಣಕವಾದ ಯೂರೋಬಿಲಿನ್ ಮತ್ತು ಮಲದಲ್ಲಿರುವ ಸ್ಟರ್ಕೊಬಿಲಿನ್ ಇವು ಕರುಳಿನಲ್ಲಿ ಪಿತ್ತವರ್ಣಕಗಳು ಏಕಾಣುಗಳಿಂದ ಅವನತಿ ಹೊಂದುವುದರಿಂದ ಲಭಿಸುತ್ತವೆ. ಮಲಮೂತ್ರಗಳಲ್ಲಿ ಇವುಗಳ ಇರುವಿಕೆ ಅಥವಾ ಇಲ್ಲದಿರುವಿಕೆಯಿಂದ ಪಿತ್ತದ ರೋಗವಿಜ್ಞಾನ ವೈವಿಧ್ಯವನ್ನು ಗೊತ್ತುಮಾಡಬಹುದು. ಮಗು ಹುಟ್ಟಿದ ಹೊಸದರಲ್ಲಿ ಬಿಲಿರೂಬಿನ್ ವರ್ಣಕ ಮಲದೊಂದಿಗೆ ಬದಲಾವಣೆ ಇಲ್ಲದೆ ಹೊರದೂಡಲ್ಪಡುವುದು. ಆದರೆ ಮುಂದಿನ ಕೆಲವು ವಾರಗಳಲ್ಲಿಯೇ, ಕರುಳಿನಲ್ಲಿ ವೃದ್ಧಿಸುವ ಏಕಾಣುಗಳ ಮೈದೋರುವಿಕೆಯಿಂದಾಗಿ ಮಿಕ್ಕ ವರ್ಣಕಗಳಿಗಿಂತ ಬಿಲಿರೂಬಿನ್ ಕಡಿಮೆ ಮೊತ್ತದಲ್ಲಿ ಕಂಡುಬರುವುದು.

ರಕ್ತದ್ರವದಲ್ಲಿ ಬಿಲಿರೂಬಿನ್ ಹೆಚ್ಚಳ ಮತ್ತು ದೇಹದ ನಾನಾ ಭಾಗಗಳಲ್ಲಿ ಕಾಣಿಸಿಕೊಳ್ಳುವ ಹಳದಿ ಬಣ್ಣದ ವಿಶೇಷತೆಗೆ ಕಾಮಾಲೆ ಎಂದು ಹೆಸರು. ರಕ್ತದಲ್ಲಿ ಬಿಲಿರೂಬಿನ್ ಹೆಚ್ಚುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ರಕ್ತದಲ್ಲಿರುವ ಹಿಮೋಗ್ಲಾಬಿನ್ ಹೆಚ್ಚು ಮೊತ್ತದಲ್ಲಿ ಅಪಕ್ಷಯವಾಗುವುದು. ಎರಡನೆಯದು ಯಕೃತ್ತಿನ ಒಳಗೂ ಹೊರಗೂ ಪಿತ್ತ ಹರಿಯುವ ನಾಳಗಳಲ್ಲಿ ಅಡಚಣೆಗಳು ಒದಗುವುದು. ರಕ್ತಾಪಕ್ಷಯದ ಕಾರಣವಿಲ್ಲದೆಯೆ ವಂಶಪಾರಂಪರ್ಯವಾಗಿ ಇರುವ ಕಾಮಾಲೆಯ ನಿದರ್ಶನಗಳೂ ವರದಿಯಾಗಿವೆ. ರಕ್ತದ ಗರಣೆಗಟ್ಟುವ ಗುಣ ಪಿತ್ತವರ್ಣಕದಿಂದ ನಿಧಾನವಾಗುತ್ತದೆ. ಇದು ಬಹುಶಃ ವರ್ಣಕ ರಕ್ತದಲ್ಲಿ ಸುಣ್ಣದ ಲವಣಗಳನ್ನು ಧೃತಿಗೊಳಿಸುವುದರಿಂದ ಇರಬಹುದು. ಕೆಲವರಲ್ಲಿ ಬಿಲಿರೂಬಿನ್ ಉತ್ಪತ್ತಿಯಾಗುವುದಿಲ್ಲ. ಅಥವಾ ಆದರೂ ಕರುಳಿನಲ್ಲಿ ಲ್ಯೂಕೊಯೂರೊಬಿಲಿನ್ ಆಗಿ ಪರಿವರ್ತಿತವಾಗುವುದು. ಈ ಕಾಯಿಲೆಯವರ ಮಲದಲ್ಲಿ ಕಾಣಬಹುದಾದ ವಿಚಿತ್ರ ಬಿಳುಪು ಬಣ್ಣ ಇದರಿಂದ ಇರಬಹುದು. ***

**ಪಿತ್ತಾಮ್ಲಗಳು (ಬೈಲ್ ಆಸಿಡ್ಸ್):** ಮೇದಸ್ಸಿನ ಪಚನ ಹಾಗೂ ರಕ್ತಗತವಾಗುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವ ಪಿತ್ತರಸದ ಘಟಕಗಳು. ಮಾನವದೇಹದಲ್ಲಿರುವ ಅತಿ ಮುಖ್ಯ ಪಿತ್ತಾಮ್ಲಗಳೆಂದರೆ ಕೋಲಿಕ್ ಆಮ್ಲ ಮತ್ತು ಡೆಸಾಕ್ಸಿಕೋಲಿಕ್ ಆಮ್ಲ. ಅತ್ಯಲ್ಪ ಮೊತ್ತದಲ್ಲಿ ಇತರ ಕೆಲವು ಆಮ್ಲಗಳು ಇರುತ್ತವೆ. ಗ್ಲೈಸೀನ್ ಮತ್ತು ಟಾರೀನ್ ಎಂಬ ಅಮೈನೋ ಆಮ್ಲಗಳ ಸಂಗಡ ಪಿತ್ತಾಮ್ಲಗಳು ಯಕೃತ್ತಿನಲ್ಲಿ ಸಂಯೋಜನೆಗೊಂಡು ಪಿತ್ತದಲ್ಲಿ ಅವುಗಳ ಸೋಡಿಯಮ್ ಲವಣಗಳಾಗಿ ಕಾಣಬರುತ್ತವೆ. ಹೀಗೆ ಸಂಯೋಜಿತವಾದವೆ ಪಿತ್ತಾಮ್ಲಗಳು. ಈ ಆಮ್ಲಗಳು ಕೊಲಾನಿಕ್ ಆಮ್ಲದ ಉತ್ಪನ್ನಗಳು. ಇವು ಲೈಂಗಿಕ ಹಾರ್ಮೋನಗಳಿಗೆ, ಅಡ್ರೀನಲ್ ಗ್ರಂಥಿಯ ತೊಗಟೆಯ ಹಾರ್ಮೋನಿಗೆ, ಡಿ ಜೀವಸತ್ವ ಮತ್ತು ಕೊಲೆಸ್ಟಿರಾಲುಗಳಿಗೆ ರಾಸಾಯನಿಕವಾಗಿ ಸಂಬಂಧಿಸಿವೆ. ಪಿತ್ತನಾಳಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ರೋಗಲಕ್ಷಣಗಳ ಚಿಕಿತ್ಸೆಗೆ ಪಿತ್ತಾಮ್ಲಗಳನ್ನು ಉಪಯೋಗಿಸುತ್ತಾರೆ. ಯಕೃತ್ತಿನಲ್ಲಿ ಹೆಚ್ಚು ಮೊತ್ತದಲ್ಲಿ ಪಿತ್ತ ಉತ್ಪತ್ತಿಯಾಗುವಂತೆಯೂ ಪಿತ್ತಕೋಶದಲ್ಲಿ ಶೇಖರವಾಗಿರುವ ಪಿತ್ತವನ್ನು ಹೊರದೂಡುವಂತೆಯೂ ಪ್ರಚೋದಿಸುವುದರಿಂದ ಈ ಆಮ್ಲಗಳು ಯಕೃತ್ತಿಗೆ ಚೇತನಪ್ರದವಾಗಿವೆ. ಇವು ಪಿತ್ತದಲ್ಲಿ ಕ್ಷಾರಕಗುಣಗಳನ್ನು ಉಂಟುಮಾಡುವುವಲ್ಲದೆ ಲೈಪೇಸನ್ನು (ಮೇದಸ್ಸನ್ನು ಒಡೆಯುವ ಒಂದು ವಿಧವಾದ ಕಿಣ್ವ) ಚುರುಕುಗೊಳಿಸುತ್ತವೆ ಕೂಡ. ಇವುಗಳಿಗೆ ಮೇಲ್ಮೈಯ ಬಿಗಿತವನ್ನು ಕಡಿಮೆ ಮಾಡುವ ಸ್ವಭಾವ ಇರುವುದರಿಂದ ಇವು

ಆಹಾರದಲ್ಲಿರುವ ಮೇದಸ್ಸನ್ನು ಪ್ರನಿಲಂಬನವಾಗಿ (ಇಮಲ್ಸನ್) ಪರಿವರ್ತಿಸಿ ಅದರ ಮೇಲೆ ಲೈಪೇಸ್ ಕಾರ್ಯವೆಸಗಲು ಸುಲಭಗೊಳಿಸುತ್ತವೆ. ಮೇದಸ್ಸನ್ನು ಜೀರ್ಣಿಸುವ ಕಾರ್ಯವನ್ನಲ್ಲದೆ ಎ, ಡಿ, ಇ ಮತ್ತು ಕೆ ಜೀವಸತ್ವಗಳು ಮತ್ತು ಕೆರೋಟಿನ್ ಸಾಕಷ್ಟು ಮೊತ್ತದಲ್ಲಿ ಲೀನಗೊಳಿಸಲು ಕೂಡ ಪಿತ್ತಾಮ್ಲಗಳು ಅವಶ್ಯಕವಾಗಿವೆ. ಪಿತ್ತದ ಸಾನ್ನಿಧ್ಯದಲ್ಲಿ ಕೊಲೆಸ್ಟಿರಾಲ್ ಸಹ ನೀರಿನಲ್ಲಿ ಲೀನಗೊಳ್ಳುವುದು. ಸಣ್ಣ ಕರುಳಿನ ಸಾಮಾನ್ಯ ಸರ್ಪಗತಿ ಚಲನೆಯನ್ನು (ಪೆರಿಸ್ಟಾಲ್ಟಿಕ್ ಆ್ಯಕ್ಟಿವಿಟಿ) ಕಾಪಾಡಲು ಪಿತ್ತಾಮ್ಲಗಳು ಸಹಕಾರಿಯೆಂದು ನಂಬಲಾಗಿದೆ ಮತ್ತು ಕೆಲವು ಬಗೆಯ ಅಣುಜೀವಿಗಳ ಅಧಿಕ ಮೊತ್ತದ ಉತ್ಪತ್ತಿಯನ್ನು ಈ ಆಮ್ಲಗಳು ತಡೆಯುತ್ತವೆ. ಪಿತ್ತಾಮ್ಲಗಳು ಕರುಳಿನಲ್ಲಿ ಹೆಚ್ಚು ಮೊತ್ತದಲ್ಲಿ ಹೀರಲ್ಪಡುತ್ತವೆ. ಕರುಳು ಯಕೃತ್ತುಗಳ ಪಿತ್ತದ ಸಂಚಲನೆ ಸರಿಯಾಗಿದ್ದಲ್ಲಿ ಈ ಆಮ್ಲಗಳ ಸಂಶ್ಲೇಷಣೆ ಸ್ವಲ್ಪ ಮಟ್ಟಿಗೆ ಇದ್ದರೆ ಸಾಕು. ಪಿತ್ತದ ನಂಜಿಗೆ ಕಾರಣ ಮುಖ್ಯವಾಗಿ ಅದರಲ್ಲಿಯ ಪಿತ್ತದ ಲವಣಗಳು. ***

**ಪಿತ್ತಾಶ್ಮ:** ಪಿತ್ತಕೋಶದಲ್ಲಿ ಕಲ್ಲಿನಂತೆ ರೂಪುಗೊಳ್ಳುವ ಘನಾಕೃತಿ (ಗಾಲ್ ಸ್ಟೋನ್). ಇದರಲ್ಲಿ ಮೂರು ಬಗೆಗಳಿವೆ. ಶುದ್ಧ ಕೊಲೆಸ್ಟಿರಾಲ್ ಅಶ್ಮಗಳು, ಶುದ್ಧ ಪಿತ್ತಾರುಣವರ್ಣದ ಅಶ್ಮಗಳು, ಎರಡೂ ಮಿಶ್ರವಾಗಿರುವ ಅಶ್ಮಗಳು. ಪಿತ್ತಾಶ್ಮಗಳಲ್ಲಿ ಕೊಲೆಸ್ಟಿರಾಲ್ ಮತ್ತು ಪಿತ್ತಾರುಣ ಕ್ಯಾಲ್ಸಿಯಮ್ ಬೆರೆತಿವೆ. ರೋಗಸ್ಥಿತಿಯಲ್ಲಿ ಸಾಮಾನ್ಯವಾಗಿ ಕಂಡುಬರುವುವು ಮೂರನೆಯ ಬಗೆಯವು (ಮಿಶ್ರಾಶ್ಮ). ಅನೇಕ ವೇಳೆ ಮಿಶ್ರಾಶ್ಮ ಒಂದಕ್ಕಿಂತ ಹೆಚ್ಚಾಗಿರುತ್ತದೆ. ಇದು ಸಾಂಕ್ರಾಮಿಕದ ಪರಿಣಾಮ. ಕೊಲೆಸ್ಟಿರಾಲ್ ಕಲ್ಲು ಅನೇಕ ವೇಳೆ ಉಪಾಪಚಯ ಕ್ರಿಯಾಜನ್ಯವಾಗಿ ರಕ್ತದ ಕೊಲೆಸ್ಟಿರಾಲಿನ ಆಧಿಕ್ಯದೊಡನೆ ಸಂಬಂಧ ಹೊಂದಿದೆ. ಪಿತ್ತವರ್ಣಕಗಳು ಹೆಚ್ಚಾಗಿ ಹೊರಸೂಸುವುದರ ಪರಿಣಾಮವಾಗಿ ಬಣ್ಣದ ಕಲ್ಲು ಜನಿಸುತ್ತದೆ. ಕೊಲೆಸ್ಟಿರಾಲ್ ವಿಧದ ಒಂಟಿಕಲ್ಲು ಸಾಮಾನ್ಯವಾಗಿ ಬೊಜ್ಜಿನ ಮನುಷ್ಯರಲ್ಲಿ, ಅದರಲ್ಲೂ ಹಲವು ಮಕ್ಕಳ ತಾಯಿಯಾದ ಸ್ತ್ರೀಯಲ್ಲಿ, ತಲೆದೋರುತ್ತದೆ. ಸಾಂಕ್ರಾಮಿಕಕ್ಕೆ ಈಡಾಗಿ ಪಿತ್ತಕೋಶದಲ್ಲಿ ಬ್ಯಾಕ್ಟೀರಿಯ ವಾಸಿಸುತ್ತ ಇದ್ದರೆ ಮಿಶ್ರ ಮಾದರಿಯ ಹಲವು ಪಿತ್ತಾಶ್ಮಗಳು ರೂಪುಗೊಳ್ಳುತ್ತವೆ. ಈ ತೆರದ ಪಿತ್ತಾಶ್ಮಗಳನ್ನು ಅವುಗಳೊಳಗೆ ಜೀವಿಸುವ ಜೀವಾಣುಗಳ ಸ್ಮಾರಕಗಳೆಂದು ಹೇಳಬಹುದು. ***

**ಪಿನ್ನಿಪೀಡಿಯ:** ಮ್ಯಾಮೇಲಿಯ ವರ್ಗಕ್ಕೆ ಸೇರಿದ ಒಂದು ಕಶೇರುಕ ಗಣ. ಜಲಚರ ಮಾಂಸಾಹಾರಿ ಪ್ರಾಣಿಗಳಾದ ಸೀಲ್, ಸಿಲಯನ್, ವಾಲ್‌ರಸ್ ಮುಂತಾದ ಸುಮಾರು 20 ಜಾತಿಯ ಸ್ತನಿಗಳು ಇದಕ್ಕೆ ಸೇರಿವೆ. ಇವು ಪ್ರಪಂಚದ ಬಹುಪಾಲು ಕಡಲತೀರ ಪ್ರದೇಶಗಳಲ್ಲಿ ವಾಸಿಸುವುವು. ಧ್ರುವ ಪ್ರದೇಶಗಳಲ್ಲಿ ಸಮ ಶೀತೋಷ್ಣ ವಲಯದ ಕಡಲುಗಳಲ್ಲಿ ಇವು ಅಧಿಕ ಸಂಖ್ಯೆಯಲ್ಲಿವೆ. ಪ್ರಪಂಚದಾದ್ಯಂತ ಇವುಗಳ ಸಂಖ್ಯೆ 15 ದಶಲಕ್ಷಕ್ಕೂ ಹೆಚ್ಚಾಗಿರಬಹುದೆಂದು ಅಂದಾಜಿದೆ.

ದೇಹ ಟಾರ್ಪೆಡೋ ಆಕಾರದಲ್ಲಿರುವುದು. ನಾಲ್ಕು ಕಾಲುಗಳು ದೋಣಿಯ ಹುಟ್ಟಿನಂತೆ ಮಾರ್ಪಾಟಾಗಿರುವುದು, ಎಲ್ಲ ಕಾಲ್ಬೆರಳುಗಳನ್ನು ಒಂದುಗೂಡಿಸುವಂತೆ ಹರಡಿರುವ ಬಲೆ–ಇವು ಪಿನ್ನಿಪೀಡಿಯ ಗುಂಪಿನ ಪ್ರಾಣಿಗಳನ್ನು ಜಲಜೀವನಕ್ಕೆ ಬಲು ಸೊಗಸಾಗಿ ಹೊಂದಿಸಿವೆ. ಇವುಗಳ ತಲೆ ಚಪ್ಪಟೆಯಾಗಿದೆ. ಮುಖ ಬಲು ಮೊಂಡಾಗಿದೆ. ಕಿವಿಯ ಹಾಲೆಗಳು ತುಂಬ ಚಿಕ್ಕವಾಗಿರಬಹುದು ಅಥವಾ ಇಲ್ಲವೆ ಇಲ್ಲ. ಮೂಗಿನ ಹೊಳ್ಳೆಗಳು ಉದ್ದ ಬಿರುಕಿನಂತಿವೆ. ಕಣ್ಣುಗಳು ದಪ್ಪನೆಯ ಮೇದಸ್ಸಿನ ಮೆತ್ತೆಯೊಳಗೆ ಹುದುಗಿವೆ. ಕಣ್ಣಿನ ಪಾಪೆ ತುಂಬಾ ಹಿಗ್ಗಲಿಸುವಂತಿದೆ. ಕತ್ತು ದಪ್ಪ, ಸ್ನಾಯು ಪುಷ್ಟ ಆದರೂ ಸರಾಗವಾಗಿ ಬಾಗಬಲ್ಲುದು.

ಪಿನ್ನಿಪೀಡಿಯ ಗಣದ ಉದ್ದ 140 ಸೆಂಮೀ ನಿಂದ 650 ಸೆಂಮೀ.ವರೆಗೆ ವ್ಯತ್ಯಾಸವಾಗುತ್ತದೆ. ತೂಕದಲ್ಲಿ ಭಿನ್ನತೆಯುಂಟು. 90 ಕಿಗ್ರಾಂ ತೂಗುವ ಉಂಗುರ ಸೀಲ್‌ಗಳು (ಪ್ಯೂಸ ಹಿಸ್ಪಿಡ) ಈ ಗುಂಪಿನ ಕುಬ್ಜರೆನಿಸಿದರೆ, ಆನೆ ಸೀಲ್‌ಗಳು, 3.5 ಮೆಟ್ರಿಕ್ ಟನ್ ಭಾರದ ದೈತ್ಯರೆನಿಸಿವೆ. ಸಾಮಾನ್ಯವಾಗಿ ಗಂಡುಗಳೆ ಹೆಣ್ಣುಗಳಿಗಿಂತ ಭಾರ. ಆದರೆ, ಫೋಸಿಡೇ ಕುಟುಂಬದ ಸದಸ್ಯಗಳಲ್ಲಿ ಗಂಡು ಪ್ರಾಣಿಗಳು ಹೆಣ್ಣುಗಳಷ್ಟೆ ಅಥವಾ ಅವಕ್ಕಿಂತ ಕಡಿಮೆ ಗಾತ್ರದವಾಗಿವೆ. ಈ ಗಣದ ಪ್ರಾಣಿಗಳ ಮೈಮೇಲೆ ದಟ್ಟವಾದ ಕೂದಲುಂಟು. ತುಪ್ಪುಳಸೀಲ್‌ಗಳಾದ ಕ್ಯಾಲೊರೈನಸ್ ಮತ್ತು ಆರ್ಕ್ಟೊಸಿಫ್ಯಾಲಸ್‌ಗಳಲ್ಲಿ ನಯವಾದ ಮೋಟು ಕೂದಲು ಮತ್ತು ಒರಟಾದ ಉದ್ದ ಕೂದಲುಗಳು ಉಂಟು. ಫೋಸಿಡೇ ಕುಟುಂಬದ ಆನೆಸೀಲ್‌ಗಳ ಮರಿಗಳು ಹುಟ್ಟಿದಾಗ ಅವುಗಳ ಮೈಮೇಲೆ ತುಂಬಾ ದಟ್ಟವಾದ, ನಯವಾದ, ಉಣ್ಣೆಯಂಥ ಕೂದಲಿನ ಹೊದಿಕೆ ಇರುತ್ತದೆ. ಹುಟ್ಟಿದ ಕೆಲವು ಗಂಟೆಗಳ ಇಲ್ಲವೆ ಕೆಲವು ವಾರಗಳ ತರುವಾಯ ಈ ಕೂದಲು ಉದುರಿ ಹೋಗಿ ಹೊಸ ಕೂದಲು ಬರುತ್ತದೆ. ಈ ಗುಂಪಿನ ಪ್ರಾಣಿಗಳ ದೇಹದಲ್ಲಿ ಎಪಿಡರ್ಮಿಸ್ ಮತ್ತು ಸ್ನಾಯುಗಳ ನಡುವಣ ಜಾಗದಲ್ಲಿ ಕೊಬ್ಬಿನ (ಬ್ಲಬರ್) ಮಂದಪದರವುಂಟು. ಇದರಿಂದ ಪ್ರಾಣಿಗಳಿಗೆ ಕಡು ಚಳಿಯ ವಿರುದ್ಧ ರಕ್ಷಣೆ, ನೀರಿನಲ್ಲಿ ಸುಲಭವಾಗಿ ತೇಲುವ ಸಾಮರ್ಥ್ಯ ಒದಗುವುದಲ್ಲದೆ ಈ ಕೊಬ್ಬು ಶಕ್ತಿಯ ಆಗರವೂ ಆಗಿ ವರ್ತಿಸುತ್ತದೆ. ಇವುಗಳಲ್ಲಿ ಜನನೇಂದ್ರಿಯಗಳು, ಮೊಲೆಯ ತೊಟ್ಟುಗಳು ಹೆಚ್ಚಿನ ಸಮಯ ದೇಹದೊಳಗೆ ಹುದುಗಿದಂತಿರುತ್ತವೆ.

ಪಿನ್ನಿಪೀಡಿಯ ಗಣದ ಪ್ರಾಣಿಗಳು ನೆಲದ ಮೇಲೆ ಎಷ್ಟು ಒಡ್ಡೊಡ್ಡಾಗಿ ನಡೆದಾಡುತ್ತವೆಯೊ, ನೀರಿನಲ್ಲಿ ಅಷ್ಟೆ ಚುರುಕಾಗಿ ಈಜಬಲ್ಲವು. ಈ ಗುಂಪಿನ ಓಟರೈಯಿಡೇ ಹಾಗೂ ಓಡೊಬೆನಿಡೇ ಕುಟುಂಬದವು ಮುಂಗಾಲಿನ ಸಹಾಯದಿಂದ ಈಜುತ್ತವಾದರೆ, ಫೋಸಿಡೇ ಕುಟುಂಬದವು ಈಜುವುದಕ್ಕೆ ಹಿಂಗಾಲನ್ನೇ ಅವಲಂಬಿಸಿವೆ. ಇವು ನೀರಿನಲ್ಲಿ 20 ನಿಮಿಷಗಳ ಕಾಲ ಮುಳುಗಿರಬಲ್ಲವು. ಕೆಲವು ಪ್ರಭೇದಗಳು ತಮ್ಮ ಕಾರ್ಯ ಚಟುವಟಿಕೆಯನ್ನು ನೆಲದ ಮೇಲೆ ತೋರುವವಾದರೆ, ಇನ್ನು ಕೆಲವು ನೀರಿನಲ್ಲೆ ಕಳೆಯುವುವು. ಉದಾಹರಣೆಗೆ, ಉತ್ತರ ಧ್ರುವದ ತುಪ್ಪುಳಸೀಲ್ (ಕ್ಯಾಲೊರೈನಸ್) ವರ್ಷದಲ್ಲಿ 9 ತಿಂಗಳು ಸಮುದ್ರದಲ್ಲೆ ಇರುತ್ತದೆ. ಇವುಗಳ ಆಹಾರ ಬಹುವಾಗಿ ಮೀನು ಮತ್ತಿತರ ಕಡಲ ಪ್ರಾಣಿಗಳು. 100 ಕಿಗ್ರಾಂ ತೂಕದ ಪ್ರಾಣಿಯೊಂದು ದಿನಕ್ಕೆ 6 ಕಿಗ್ರಾಂ ನಷ್ಟು ಆಹಾರವನ್ನು ಸೇವಿಸುತ್ತವೆ. ಪಿನ್ನಿಪೀಡಿಯದ ಪ್ರಾಣಿಗಳು ದೊಡ್ಡದೊಡ್ಡ ಗುಂಪುಗಳಲ್ಲಿ ವಾಸಿಸುವುವು. ಓಟರೈಯಿಡೇ ಹಾಗೂ ಓಡೊಬೆನಿಡೇ ಕುಟುಂಬದ ಸೀಲ್‌ಗಳಲ್ಲಿ ಬಹುಪತ್ನಿತ್ವ ಕಂಡುಬರುತ್ತದೆ. ಆದರೆ, ಫೋಸಿಡೇ ಕುಟುಂಬದವು ಏಕ ಪತ್ನಿತ್ವವನ್ನು ಪ್ರದರ್ಶಿಸುತ್ತವೆ. ಮರಿಗಳನ್ನು ಇಡುವುದು ಬಂಡೆಗಳ ಮೇಲೆ ಇಲ್ಲವೆ ಮಂಜುಗಡ್ಡೆಯ ಮೇಲೆ. ಗರ್ಭಾವಧಿಯ ಕಾಲ 8–12 ತಿಂಗಳು. ಒಂದು ಸೂಲಿಗೆ ಒಂದೇ ಒಂದು ಮರಿ ಹುಟ್ಟುತ್ತದೆ. ಅಪೂರ್ವವಾಗಿ ಅವಳಿಗಳು ಹುಟ್ಟುವುದುಂಟು. ಕೆಲವು ಪ್ರಭೇದಗಳಲ್ಲಿ ಆಗತಾನೆ ಹುಟ್ಟಿದ ಮರಿಗಳು ಈಜಬಲ್ಲವು. ಉಳಿದವುಗಳಲ್ಲಿ ಹಲವು ವಾರಗಳ ಅನಂತರ ಮಾತ್ರ ಅವು ನೀರಿಗಿಳಿಯಬಲ್ಲವು. ಮರಿಗಳ ಬೆಳವಣಿಗೆ ಬಲು ತೀವ್ರಗತಿಯದು. ತಾಯಿಯ ಹಾಲಿನಲ್ಲಿ ಶೇಕಡ 50 ಭಾಗ ಕೊಬ್ಬು ಇದ್ದು ಅದು ಬಲು ಪುಷ್ಟಿದಾಯಕವಾಗಿರುವುದೆ ಇದಕ್ಕೆ ಕಾರಣವಿರಬಹುದು. ಈ ಪ್ರಾಣಿಗಳಿಗೆ ಲೈಂಗಿಕ ಪ್ರಬುದ್ಧತೆ ಬರುವುದು ಅವು 2–5 ವರ್ಷ ವಯಸ್ಸಿನವಾದಾಗ. ಇವುಗಳ ಆಯಸ್ಸು 40 ವರ್ಷಗಳು. ಪಿನ್ನಿಪೀಡಿಯ ಪ್ರಾಣಿಗಳ ಸಹಜ ವೈರಿಗಳೆಂದರೆ ಶಾರ್ಕುಗಳು, ಕೊಲೆಗಡುಕ ತಿಮಿಂಗಿಲಗಳು, ವಾಲ್ರಸುಗಳು ಹಾಗೂ ಧ್ರುವ ಕರಡಿಗಳು.

ದಕ್ಷಿಣ ಅಮೆರಿಕದ ಪೆರು ಮುಂತಾದೆಡೆಗಳಲ್ಲಿ ಪಿನ್ನಿಪೀಡಿಯ ಗುಂಪಿನ ಪ್ರಾಣಿಗಳನ್ನು ತುಪ್ಪಳ, ತೈಲ, ಆಹಾರ ಮತ್ತು ಗೊಬ್ಬರಗಳಿಗಾಗಿ ಬೇಟೆಯಾಡುವುದಿದೆ. ***

**ಪಿರೋಕೋರಿಡೆ:** ಕೀಟ ವರ್ಗದ, ಹೆಮಿಪ್ಟಿರ ಗಣದ, ಹೆಟರಾಪ್ಟಿರ ಉಪಗಣದ ಕುಟುಂಬ. ಈ ಕುಟುಂಬದ ಕೀಟಗಳನ್ನು ಸಸ್ಯತಿಗಣೆಗಳೆನ್ನುವರು. ಇವು ಹತ್ತಿ ಗಿಡಗಳಲ್ಲಿ ವಾಸ ಮಾಡುತ್ತವೆ. ಇವು ಅತಿ ಚಿಕ್ಕವು. ಇವುಗಳ ಗಾತ್ರ 9–11 ಮಿಮೀ. ದೇಹದಲ್ಲಿ ತಲೆ, ವಕ್ಷ (ಎದೆ) ಹಾಗೂ ಉದರ ಭಾಗಗಳಿವೆ. ತಲೆ ಮೇಲ್ಮುಖವಾಗಿ ಬಾಗಿದೆ. 4 ಖಂಡಗಳ ಎರಡು ಆಂಟೆನಗಳು, ಸೂಕ್ಷ್ಮ ಗಾತ್ರದ ಕಣ್ಣುಗಳಿವೆ. ವಕ್ಷದಲ್ಲಿ 3 ಜೊತೆ ಕಾಲು, 2 ಜೊತೆ ರೆಕ್ಕೆಗಳಿವೆ. ರೆಕ್ಕೆಗಳು ಅರ್ಧ ಮಂದ ಹಾಗೂ ಅರ್ಧ ತೆಳುವಾಗಿದ್ದು, ದ್ವಿರೂಪವನ್ನು ತೋರುವವು. ಈ ತಿಗಣೆಗಳು ಹತ್ತಿ ಹರಳೆಯ ಬಿಳಿ ಬಣ್ಣವನ್ನು ಕೆಂಪು ಬಣ್ಣಕ್ಕೆ ಬದಲಾಯಿಸುವ ಲಕ್ಷಣವನ್ನು ಪ್ರದರ್ಶಿಸುವವು. ಆದಕಾರಣ, ವೆಸ್ಟ್ ಇಂಡೀಸ್‌ನಲ್ಲಿ ಇವನ್ನು ಹತ್ತಿಗೆ ಬಣ್ಣ ಕೊಡುವ ತಿಗಣೆಗಳೆಂದು ಕರೆಯುತ್ತಾರೆ. ಇವು ತಾವಾಗಿ ಹತ್ತಿಯ ಬಣ್ಣವನ್ನು ಕೆಡಿಸುವುದಿಲ್ಲ. ಇವು ನಿಯಾಟೊಸ್ಪೋರ ಬೂಸ್ಟನ್ನು ಶರೀರದ ಮೂಲಕ ಹತ್ತಿ ಹರಳೆಗೆ ಸಾಗಿಸುವುವು. ಹತ್ತಿಯ ಬಣ್ಣ ಈ ಬೂಸ್ಟಿನ ಪ್ರಭಾವದಿಂದ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಈ ತಿಗಣೆಗಳ ಶರೀರದಿಂದ ಒಂದು ರೀತಿಯ ದುರ್ವಾಸನೆ ಹೊರಸೂಸುತ್ತದೆ. ಆದ್ದರಿಂದ ಇವನ್ನು ದುರ್ವಾಸನೆ ತಿಗಣೆಗಳೆಂದು ಕರೆಯುವರು. ಪಿರೋಕೋರಿಸ್ ಮತ್ತು ಡಿಸ್‌ಡರ್‌ಕಸ್ ಕೀಟಗಳು ಈ ಗುಂಪಿನಲ್ಲಿವೆ. (ಕೆ.ಪಿ.ಆರ್.)

**ಪಿಲ್‌ಚಾರ್ಡ್:** ಕ್ಲೂಪಿಯಿಡೆ ಕುಟುಂಬದ ಕಡಲ ಮೀನು. ಇದು ಹೆರಿಂಗ್ ಮೀನಿನ ಹತ್ತಿರ ಸಂಬಂಧಿ. ಇದರ ವೈಜ್ಞಾನಿಕ ಹೆಸರು ಸಾರ್ಡಿನ ಪಿಲ್‌ಚರ್ಡಸ್. ಪಶ್ಚಿಮ ಮತ್ತು ನೈರುತ್ಯ ಯೂರೋಪ್, ಉತ್ತರ ಆಫ್ರಿಕ, ದಕ್ಷಿಣ ಐರ್ಲೆಂಡ್, ಉತ್ತರ ಸಮುದ್ರದ ದಕ್ಷಿಣ ಭಾಗ. ಮೆಡಿಟರೇನಿಯನ್ ಉತ್ತರ ಭಾಗದ ಪ್ರದೇಶಗಳ ಕರಾವಳಿಗಳಲ್ಲಿ ವಾಸಿಸುತ್ತದೆ. ಇದರಲ್ಲಿ ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ಎಂಬ 2 ಉಪಪ್ರಭೇದಗಳಿವೆ. ಪ್ರೌಢ ಮೀನಿನ ದೇಹದ ಉದ್ದ 30 ಸೆಂಮೀ. ಮರಿಗಳು 13–16 ಸೆಂಮೀ ಉದ್ದ ಇರುತ್ತವೆ. ಈ ಹಂತದಲ್ಲಿ ಇವನ್ನು ಸಾರ್ಡಿನ್‌ಗಳೆಂದು ಕರೆಯುವರು. ಪಿಲ್‌ಚಾರ್ಡ್ ಮೊಟ್ಟೆ ಇಡುವುದು ಬೇಸಗೆಯಲ್ಲಿ. ಇದರ ಮೊಟ್ಟೆಗಳು ನೀರಿನ ಮೇಲೆ ತೇಲುತ್ತವೆ. ಪಿಲ್‌ಚಾರ್ಡ್‌ಗಳು

ಮುಖ್ಯವಾಗಿ ಪ್ರಾಣಿ ಪ್ಲಾಂಕ್ಟಾನುಗಳನ್ನು ಭಕ್ಷಿಸುವವು. ಎಳೆಯ ಮೀನುಗಳು. ಕೋಪಿಪಾಡ್, ಸಸ್ಯ ಪ್ಲಾಂಕ್ಟಾನಗಳನ್ನು ತಿನ್ನುತ್ತವೆ. ಪಿಲ್‌ಚಾರ್ಡ್ ಒಳ್ಳೆಯ ಆಹಾರ ಮೀನು.



ಜಾಗತಿಕ ಮತ್ಸ್ಯೋದ್ಯಮದಲ್ಲಿ ಈ ಮೀನಿನ ಉದ್ಯಮ ಪ್ರಧಾನವಾಗಿದೆ. ಪಿಲ್‌ಚಾರ್ಡ್ ಮೀನಿನ ಉತ್ಪನ್ನ 4,99,000 ರಿಂದ 6,03,000 ಟನ್ನುಗಳಿಗಿಂತ ಅಧಿಕ. ಈ ಪ್ರಭೇದವನ್ನು ಪೋರ್ಚುಗಲ್, ಮೊರಾಕೊ, ಸ್ಪೇನ್ ಮತ್ತು ಯುಗೋಸ್ಲಾವಿಯಾ ದೇಶಗಳಲ್ಲಿ ಸಾರ್ಡಿನ್ ಎಣ್ಣೆ ತಯಾರಿಕೆಗೆ ಬಳಸುತ್ತಾರೆ. ಇದಲ್ಲದೆ, ಈ ಮೀನನ್ನು ಒಣಗಿಸಿ, ಉಪ್ಪು ಬೆರೆಸಿ, ಹೊಗೆ ಕೊಟ್ಟು ಡಬ್ಬಗಳಲ್ಲಿ ತುಂಬಿ ಮಾರಾಟ ಮಾಡುತ್ತಾರೆ. ಸಾರ್ಡಿನ ಮೀನಿನ ಪುಡಿ ತಯಾರಿಸುವುದಕ್ಕು ಉಪಯೋಗಿಸುತ್ತಾರೆ. ಈ ಮೀನುಗಳನ್ನು ಉಪ್ಪು ಹಾಕಿ ಹದ ಮಾಡಿದ ಅನಂತರ ದೊಡ್ಡ ಮೆದೆಗಳಾಗಿ ಇಡುತ್ತಾರೆ. 4 ವಾರಗಳಲ್ಲಿ ಬಹಳ ಉಪಯುಕ್ತವಾದ ಎಣ್ಣೆ ಒಸರುತ್ತದೆ. ಬಳಿಕ ಈ ಮೀನುಗಳನ್ನು ತೊಳೆದು ಡಬ್ಬಿಗಳಲ್ಲಿ ತುಂಬಿಸಿ ರಫ್ತು ಮಾಡುವರು. (ಎಂ.ಎ.ಡಿ.ಎಚ್.)

**ಪುನರುತ್ಪತ್ತಿ:** ಜೀವಿಗಳು ಕಾರಣಾಂತರದಿಂದ ಕಳೆದುಕೊಂಡ ಅಂಗಗಳನ್ನು ಮತ್ತೆ ಬೆಳೆಸಿಕೊಳ್ಳುವ ಕ್ರಿಯೆ (ರೀಜನರೇಷನ್). ಎಲ್ಲ ಜೀವಿಗಳಲ್ಲಿ ಈ ಸಾಮರ್ಥ್ಯ ಇದೆ. ಆದರೆ, ಇದರ ಪ್ರಮಾಣ ಪ್ರಭೇದಗಳಿಗನುಗುಣವಾಗಿ ಭಿನ್ನವಾಗಿದೆ. ಕೆಲವು ಜೀವಿಗಳಲ್ಲಿ ಈ ಸಾಮರ್ಥ್ಯ ಕೆಲವು ಕೋಶಗಳಿಗೆ ಸೀಮಿತವಾದರೆ, ಇನ್ನು ಕೆಲವು ಜೀವಿಗಳು ಇಡೀ ದೇಹವನ್ನು ಪುನರುತ್ಪತ್ತಿ ಮಾಡಬಲ್ಲವು. ಇನ್ನು ಕೆಲವು ಜೀವಿಗಳಲ್ಲಿ ದೇಹದ ಒಂದು ಅಂಗವನ್ನು ಪಡೆದುಕೊಳ್ಳುವ ಮಟ್ಟಿಗೆ ಮಾತ್ರ ಈ ಸಾಮರ್ಥ್ಯ ಸೀಮಿತ. ಪುನರುತ್ಪತ್ತಿ ಕ್ರಿಯೆ ಜೀವಿಗಳ ಬೆಳವಣಿಗೆ ಹಾಗೂ ಪರಿವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸಿಹಿ ನೀರಿನಲ್ಲಿ ಬೆಳೆಯುವ ಹೈಡ್ರಾ ಪ್ರಾಣಿಯಲ್ಲಿ ಈ ಕ್ರಿಯೆಯ ಪರಾಕಾಷ್ಠೆಯನ್ನು ಕಾಣಬಹುದು. ಅಬ್ರಹಾಮ್ ಟ್ರೆಂಬ್ಲೆ ಹೈಡ್ರಾದಲ್ಲಿ ಪುನರುತ್ಪತ್ತಿ ಕ್ರಿಯೆಯನ್ನು 1740ರಲ್ಲಿ ಪ್ರಥಮ ಬಾರಿಗೆ ಗುರುತಿಸಿದ. ಹೈಡ್ರಾವನ್ನು ಇಬ್ಭಾಗ ಮಾಡಿದರೆ ಎರಡು ಭಾಗಗಳೂ ಪರಿಪೂರ್ಣ ಜೀವಿಗಳಾಗಿ ಬೆಳೆಯುವುದಲ್ಲದೆ ಜೀವಿಯ ಒಂದೊಂದು ತುಣುಕೂ ಇಡೀ ಜೀವಿಯನ್ನು ಪುನರುತ್ಪತ್ತಿ ಮಾಡಬಲ್ಲುದು ಎಂದು ಆತ ಸ್ಥಿರೀಕರಿಸಿದ. ಹೀಗೆ ವರ್ಧಿಸಿದ ಇವುಗಳಿಗೆ ಪ್ರಜನನ ಕ್ರಿಯೆಯು ಸೇರಿದಂತೆ ಬದುಕಿನ ಎಲ್ಲ ಕ್ರಿಯೆಗಳನ್ನು ನಿರ್ವಹಿಸುವ ಸಾಮರ್ಥ್ಯವಿತ್ತು.

ಟ್ರೆಂಬ್ಲೆಯ ಮೂಲ ಪರಿಶೋಧನೆಗಳಿಂದ ಪ್ರೇರಿತಗೊಂಡು, ಎಲ್ಲ ಬಗೆಯ ಜೀವಿಗಳಲ್ಲಿ ಈ ಕ್ರಿಯೆಯ ಬಗ್ಗೆ ಆಳವಾದ ಪರಿಶೋಧನೆಗಳು ಸಂಶೋಧನೆಗಳು ಸತತವಾಗಿ ನಡೆಯುತ್ತಿವೆ. ಏಕಾಣು ಜೀವಿಗಳಲ್ಲಿ ಪುನರುತ್ಪತ್ತಿ ಸಾಮರ್ಥ್ಯವನ್ನು ಕಾಣಬಹುದು. ಸ್ಪಂಜ್ ಪ್ರಾಣಿಯನ್ನು ಕತ್ತರಿಸಿದರೆ ಇದರ ಪ್ರತಿಯೊಂದು ಭಾಗ ಇಡೀ ಜೀವಿಯಾಗಿ ಬೆಳೆಯುತ್ತದೆ. ಪ್ಲನೇರಿಯಗಳಲ್ಲಿ ಪುನರುತ್ಪತ್ತಿ ಸಾಮರ್ಥ್ಯ ಪ್ರಬಲವಾಗಿದೆ. ಲಿನಿಯಸ್ ಚಪ್ಪಟೆ ಹುಳುವನ್ನು ಚಿಕ್ಕ ಭಾಗಗಳಾಗಿ ಕತ್ತರಿಸಿದರೆ ಪ್ರತಿಯೊಂದು ಭಾಗವೂ ಇಡೀ ಜೀವಿಯಾಗಿ ರೂಪುಗೊಳ್ಳುತ್ತದೆ. ಎರೆಹುಳುವನ್ನು 2 ಭಾಗ ಮಾಡಿದರೆ ಒಂದೊಂದು ತುಂಡು ಉಳಿದ ಭಾಗವನ್ನು ಬೆಳೆಸಿಕೊಂಡು 2 ಪೂರ್ಣ ಜೀವಿಗಳಾಗಿ ಬೆಳೆಯುತ್ತದೆ. ಬಸವನ ಹುಳುವಿನ ತಲೆಯನ್ನು ತುಂಡರಿಸಿದರೆ ತಲೆ ಮತ್ತೆ ಬೆಳೆಯುತ್ತದೆ. ಕೀಟ, ಜೇಡ, ಚೇಳು ಮುಂತಾದ ಸಂಧಿಪದಿಗಳಿಗೆ ರೂಪಾಂತರದಲ್ಲಿ ತಮ್ಮ ಪಾದ ಮತ್ತು ಸ್ಪರ್ಶಾಂಗಗಳನ್ನು ಪುನರುತ್ಪತ್ತಿ ಮಾಡಿಕೊಳ್ಳುವ ಸಾಮರ್ಥ್ಯ ಇದೆ. ಆದರೆ, ಈ ಸಾಮರ್ಥ್ಯ ಅತ್ಯಂತ ದುರ್ಬಲ.

ಕಶೇರುಕಗಳ ಪೈಕಿ ಯೂರೋಡೀಲ್ ಗುಂಪಿನ ಪ್ರಾಣಿಗಳಿಗೆ ಪುನರುತ್ಪತ್ತಿ ಸಾಮರ್ಥ್ಯ ಹೆಚ್ಚು. ಟ್ರೈಟನ್ ತನ್ನ ಕಾಲುಗಳು, ಬಾಲ, ದವಡೆ ಮತು ಕಣ್ಣುಗಳನ್ನು ಪುನರುತ್ಪತ್ತಿ ಮಾಡಿಕೊಳ್ಳಬಲ್ಲದು. ಒಂದೇ ಅಂಗ ಪದೇಪದೇ ಪುನರುತ್ಪತ್ತಿಯಾಗುವುದೂ ಸಾಧ್ಯ. ಮೂರು ತಿಂಗಳೊಳಗೆ ಇದರ ಕಾಲುಗಳು, ಬಾಲ 6 ಬಾರಿ ಪುನರುತ್ಪತ್ತಿಯಾದವೆಂದು ವಿಜ್ಞಾನಿ ಸ್ಪಲಾಂಜನೀ ವರದಿಸಿದ್ದಾನೆ. ಕಪ್ಪೆಗಳಲ್ಲಿ ಪುನರುತ್ಪತ್ತಿ ಸಾಮರ್ಥ್ಯ ಬಹಳ ಕಡಿಮೆ. ಕಪ್ಪೆಯ ಕಾಲು ಕತ್ತರಿಸಿದರೆ, ಗಾಯ ವಾಸಿಯಾಗುವುದೇ ಹೊರತು ಕಾಲು ಮತ್ತೆ ಬೆಳೆಯಲಾರದು. ಆದರೆ, ಗೊದಮಟ್ಟೆಯ ಕಾಲು ಕತ್ತರಿಸಿದರೆ ಅದು ಮತ್ತೆ ಬೆಳೆಯುತ್ತದೆ. ದಕ್ಷಿಣ ಆಫ್ರಿಕದಲ್ಲಿ ವಾಸಿಸುವ ಜಿನೊಪಸ್ ಕಪ್ಪೆಯಲ್ಲಿ ಪೂರ್ಣ ಬೆಳೆದ ಮೇಲೂ ತನ್ನ ಪಾದಗಳನ್ನು ಪುನರುತ್ಪತ್ತಿ ಮಾಡಿಕೊಳ್ಳುವ ಸಾಮರ್ಥ್ಯ ಉಳಿದಿರುತ್ತದೆ. ಮೀನುಗಳು ತಮ್ಮ ಈಜು ರೆಕ್ಕೆಗಳನ್ನು, ಹಲ್ಲಿ ತನ್ನ ಬಾಲವನ್ನು, ಪಕ್ಷಿಗಳು ತಮ್ಮ ಕೊಕ್ಕುಗಳನ್ನು ಪುನರುತ್ಪತ್ತಿ ಮಾಡಿಕೊಳ್ಳಬಲ್ಲುವು. ಸ್ತನಿಗಳು ತಮ್ಮ ಬಾಹ್ಯಾಂಗಗಳನ್ನು ಪುನರುತ್ಪತ್ತಿ ಮಾಡಿಕೊಳ್ಳಲಾರವು.

ಸ್ವಯಂಛೇದ (ಆಟೊಟೊಮಿ) ಪುನರುತ್ಪತ್ತಿಯ ಒಂದು ಅಂಶ. ಹಲವಾರು ಪ್ರಾಣಿಗಳು ತಮ್ಮ ತೋಳು, ಬಾಲ ಅಥವಾ ಇತರೆ ಅವಯವಗಳನ್ನು ತಾವಾಗಿಯೇ ಕಳೆದುಕೊಳ್ಳುವುದಕ್ಕೆ ಸ್ವಯಂಛೇದ ಎಂದು ಹೆಸರು. ಕಠಿಣ ಚರ್ಮಿಗಳು, ಕಂಟಕ ಚರ್ಮಿಗಳು ಮತ್ತು ಹಲ್ಲಿಗಳಲ್ಲಿ ಇದು ಸಾಮಾನ್ಯ. ಬ್ರಿಟಲ್‌ಸ್ಟಾರ್ ಪ್ರಾಣಿಯ ತೋಳನ್ನು ಹಿಡಿದರೆ ತೋಳು ತಾನಾಗಿಯೇ ಕಳಚಿ ಬೀಳುತ್ತದೆ. ಸಮುದ್ರ ಸೌತೆಯನ್ನು ಹಿಂಸಿಸಿದರೆ ಅದು ತನ್ನ ಜೀರ್ಣಾಂಗಗಳ ಸಮೇತ ಎಲ್ಲ ಒಳ ಅಂಗಗಳನ್ನು ಹೊರದಬ್ಬುತ್ತದೆ. ನಂತರ ಈ ಎಲ್ಲ ಅಂಗಗಳು ಪುನರುತ್ಪತ್ತಿಯಾಗುತ್ತವೆ. ಏಡಿಯ ಕಾಲಿಗೆ ಗಾಯವಾದರೆ ಕಾಲು ತಾನಾಗಿಯೇ ಕಳಚಿ ಬೀಳುತ್ತದೆ. ಸ್ವಯಂಛೇದ ನರ ಪ್ರಚೋದನೆಯ ಫಲವಾಗಿ ಉಂಟಾಗುವ ಪ್ರತಿಕ್ರಿಯೆ. ಪ್ರಾಣಿಯ ಒಂದು ರಕ್ಷಣಾತಂತ್ರ ಮಾತ್ರವಲ್ಲದೆ ಇದು ಪುನರುತ್ಪತ್ತಿಗೆ ಸಹಾಯಕಾರಿ. ಉದಾ: ಏಡಿಯಲ್ಲಿ ಮಿಕ್ಕ ಭಾಗಗಳಿಗಿಂತ ಸ್ವಯಂಛೇದಗೊಳ್ಳುವ ವಲಯಗಳಲ್ಲಿ ಪುನರುತ್ಪತ್ತಿ ಹೆಚ್ಚು ಪರಿಣಾಮಕಾರಿ.

ಮೇಲ್ಮಟ್ಟದ ಕಶೇರುಕಗಳಲ್ಲಿ ಒಳ ಅಂಗಗಳು ಕೊಂಚ ಮಟ್ಟಿಗೆ ಪುನರುತ್ಪತ್ತಿಯಾಗಬಲ್ಲವು. ನಾಯಿ ಮತ್ತು ಮೊಲಗಳಲ್ಲಿ ಯಕೃತ್ತಿನ ಮುಕ್ಕಾಲು ಭಾಗದಷ್ಟನ್ನು ತೆಗೆದುಹಾಕಿದರೆ ಕೆಲವು ವಾರಗಳ ಅನಂತರ ಉಳಿದ ಭಾಗ ಗಣನೀಯವಾಗಿ ದೊಡ್ಡದಾಗುತ್ತದೆ. ಲಾಲಾಗ್ರಂಥಿಗಳ ಪುನರುತ್ಪತ್ತಿ ಸಾಮರ್ಥ್ಯ ಹೆಚ್ಚು. ಪುನರುತ್ಪತ್ತಿಯಾದ ಅಂಗಾಂಶ ಮೊದಲಿನಂತೆಯೇ ಕೆಲಸ ನಿರ್ವಹಿಸಬಲ್ಲದು. ಮೇದೋಜೀರಕ ಗ್ರಂಥಿ, ವೃಷಣ, ಮೂತ್ರಪಿಂಡ ಮತ್ತು ಗುಲ್ಮಗಳಿಗೆ ಈ ಸಾಮರ್ಥ್ಯ ಹೆಚ್ಚು. ಮನುಷ್ಯನ ಸಯಾಟಿಕ್ ನರ ದಿನವೊಂದಕ್ಕೆ 1.2 ಮಿಮೀ ಪ್ರಮಾಣದಲ್ಲಿ ಬೆಳೆಯುತ್ತದೆ. ಪುನರುತ್ಪತ್ತಿಯ ಜೊತೆಗೆ ಅಭಿವೃದ್ಧಿಯೂ ಕೂಡಿರುತ್ತದೆ. ಪ್ರಾಣಿಯ ಒಂದು ವೃಷಣವನ್ನು ತೆಗೆದುಹಾಕಿದರೆ ಮತ್ತೊಂದು ಹಿಗ್ಗುತ್ತದೆ.

ಉಗುರು, ಕೂದಲು, ಚರ್ಮ, ರಕ್ತಕಣಗಳು, ಕರುಳು ಮತ್ತು ಗರ್ಭಕೋಶದ ಅನುಲೇಪನ ಅಂಗಾಂಶ ಕಾಲಕಾಲಕ್ಕೆ ನವೀಕರಣಗೊಳ್ಳುವುವು. ಇದಕ್ಕೆ ಶಾರೀರಿಕ ಪುನರುತ್ಪತ್ತಿ ಎಂದು ಹೆಸರು. ಸಾರಂಗದ ಕೊಂಬುಗಳು ಉದುರಿ ವರ್ಷಕ್ಕೊಮ್ಮೆ ಹೊಸ ಕೊಂಬುಗಳು ಮೂಡುತ್ತವೆ. ಪ್ರತಿದಿನ ಹಳೆಯ ಕೆಂಪು ರಕ್ತ ಕಣಗಳು ನಾಶವಾಗಿ ಹೊಸ ಕೆಂಪು ರಕ್ತಕಣಗಳು ವೃದ್ಧಿಯಾಗುತ್ತವೆ. ಪುನರುತ್ಪತ್ತಿ ಮೇಲ್ಮಟ್ಟದ ಜೀವಿಗಳಿಗಿಂತ ಕೆಳಮಟ್ಟದ ಜೀವಿಗಳಲ್ಲಿ ಹೆಚ್ಚು.

ಗಾಯಗೊಂಡ ಸ್ಥಳದಲ್ಲಿ ಅಪ್ರಬುದ್ಧ ಜೀವಕೋಶಗಳ ಒಂದು ಮೊಗ್ಗು ಮೂಡಿ (ಬ್ಲಾಸ್ಟಿಮ), ಒಂದು ಜೀವಿ ಅಥವಾ ಒಂದು ಅಂಗವಾಗಿ ಪುನರುತ್ಪತ್ತಿಯಾಗುತ್ತದೆ. ಪುನರುತ್ಪತ್ತಿ ಎನ್ನುವುದು ಬೆಳವಣಿಗೆ ಮತ್ತು ಅಭಿವೃದ್ಧಿ ಮಿಳಿತವಾದ ಒಂದು ರೀತಿಯ ಪುನರ್‌ನವೀಕರಣ. ಪೂರ್ಣವಾಗಿ ಬೆಳೆದ ಜೀವಿಗಳಲ್ಲಿ ಬೆಳವಣಿಗೆಯ ತಡೆಯನ್ನು ದೇಹದ ವಿವಿಧ ಅಂಗಗಳ ಸಮತೋಲ ಎಂದು ಭಾವಿಸುವುದಾದರೆ, ಕತ್ತರಿಸುವಿಕೆ ಈ ಸಮತೋಲನವನ್ನು ಕದಡಿ ಮರುಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತದೆ. ಅನೇಕ ವೇಳೆ ಪುನರುತ್ಪತ್ತಿಯಾದ ಅಂಗ ಮುಂಚಿನ ಅಂಗಕ್ಕಿಂತ ವಿಭಿನ್ನವಾಗಿರುವುದು. ಕೆಲವೊಮ್ಮೆ ಹೊಸ ಅಂಗವಾಗಿ ಬೆಳೆಯುವ ಜೀವಕೋಶಗಳು ದೇಹದ ಬೇರೆ ಭಾಗಗಳಿಂದ ಮೂಡುತ್ತವೆ. ಹೊಸ ಸ್ನಾಯು ಮೊದಲಿದ್ದ ಸ್ನಾಯುವಿನಿಂದಾಗಲಿ, ಹೊಸ ಮೂಳೆ ಹಳೆಯ ಮೂಳೆಯಿಂದಾಗಲಿ ಹುಟ್ಟುವುದಿಲ್ಲ. ಟ್ರೈಟನಿನ ಕಣ್ಣಿನ ಮಸೂರವನ್ನು ತೆಗೆದರೆ ಪಾಪೆಯ ಜೀವಕೋಶಗಳಿಂದ ಹೊಸ ಮಸೂರ ಬೆಳೆಯುತ್ತದೆ. ಅಂಗಛೇದ ದೊಡ್ಡದಾದಂತೆಲ್ಲ ಕಳಚಿದ ಭಾಗದ ಪುನರುತ್ಪತ್ತಿಯ ವೇಗ ಹೆಚ್ಚು. ಉದಾ: ಒಂದು ಎರೆ ಹುಳದಲ್ಲಿ ಬಾಲವನ್ನು ಚಿಕ್ಕದಾಗಿ ಕತ್ತರಿಸಿ ಎರಡನೆಯ ಎರೆಹುಳದಲ್ಲಿ ಬಾಲವನ್ನು ದೊಡ್ಡದಾಗಿ ಕತ್ತರಿಸಿದರೆ, ಎರಡನೆಯ ಎರೆಹುಳದ ಬಾಲ ಶೀಘ್ರಗತಿಯಲ್ಲಿ ಪುನರುತ್ಪತ್ತಿಯಾಗುತ್ತದೆ. ಮೇಲ್ಮಟ್ಟದ ಪ್ರಾಣಿಗಳಲ್ಲಿ ಗಾಯ ದೊಡ್ಡದಾದಂತೆಲ್ಲ ವಾಸಿಯಾಗುವ ಗತಿ ಶೀಘ್ರ. ಪುನರುತ್ಪತ್ತಿಯಲ್ಲಿ ನರಮಂಡಲ ಪ್ರಮುಖ ಪಾತ್ರ ವಹಿಸುತ್ತದೆ. ಕಶೇರುಕಗಳಲ್ಲಿ ಥೈರಾಯ್ಡ್ ಮತ್ತು ಪಿಟ್ಯುಟರಿ ಗ್ರಂಥಿಗಳಿಂದ ಉತ್ಪತ್ತಿಯಾದ ಪ್ರಚೋದಕ ಬೆಳವಣಿಗೆಗೆ ಸಹಕಾರಿಯಾಗಿರುವಂತೆ, ಪುನರುತ್ಪತ್ತಿಗೂ ಸಹಾಯಕಾರಿ. ಗ್ಯಾನೆಟ್ ಎಂಬಾತ ವಿವಿಧ ಮಟ್ಟದ ಪುನರುತ್ಪತ್ತಿ ಸಾಮರ್ಥ್ಯವುಳ್ಳ ವಲಯಗಳನ್ನು ಗುರುತಿಸಿದ. ಆತನ ದೃಷ್ಟಿಯಲ್ಲಿ ಟ್ರೈಟನ್ನಿನ ದೇಹ ಅದೃಶ್ಯ ಸೀಮಾರೇಖೆಗಳುಳ್ಳ ವಲಯಗಳಿಂದ ಕೂಡಿದೆ.

ಯಾವುದಾದರೊಂದು ವಲಯವನ್ನು ತೆಗೆದುಹಾಕಿದರೆ ಮಿಕ್ಕ ವಲಯಗಳಿಂದ ಆ ಭಾಗ ಹುಟ್ಟಲಾರದು. ಹೀಗಾಗಿ ಪ್ರಾಣಿ ತಾನು ಕಳೆದುಕೊಂಡ ಅಂಗವನ್ನು ಮತ್ತೆ ಪಡೆಯಲಾರದು. ಒಂದು ವಲಯವನ್ನು ಮತ್ತೊಂದು ವಲಯಕ್ಕೆ ಸ್ಥಳಾಂತರಿಸಿದರೂ ಅದು ತನ್ನ ಮೊದಲಿನ ಗುಣವನ್ನೇ ಉಳಿಸಿಕೊಂಡಿರುತ್ತದೆ. ಉದಾ: ಕಾಲಿನ ವಲಯವನ್ನು ಬಾಲಕ್ಕೆ ಕಸಿ ಮಾಡಿದರೆ, ಬಾಲದ ಮೇಲೆ ಒಂದು ಸಣ್ಣ ಕಾಲು ಬೆಳೆಯುತ್ತದೆ. ಹಾಗೆಯೇ ಬಾಲದ ವಲಯವನ್ನು ಕಾಲಿಗೆ ಕಸಿ ಮಾಡಿದರೆ ಕಾಲಿನ ಮೇಲೆ ಒಂದು ಸಣ್ಣ ಬಾಲ ಬೆಳೆಯುತ್ತದೆ. ಪ್ರತಿಯೊಂದು ವಲಯದ ನಿರ್ದಿಷ್ಟ ಗುಣವನ್ನು ಅಲ್ಲಿರುವ ಸಂಯೋಜಕ ಜೀವಕೋಶಗಳು ನಿರ್ಧರಿಸುತ್ತವೆ. ವಲಯಗಳು ಸ್ವತಂತ್ರವಾಗಿ ವಿಕಾಸಗೊಳ್ಳುತ್ತವೆ. ಹೀಗಾಗಿ, ಗೊದಮೊಟ್ಟೆಯಲ್ಲಿ ಕಾಲಿನ ವಲಯ ಪರಿವೃದ್ಧಿ ಸಮಯದಲ್ಲಿ ತನ್ನ ಪುನರುತ್ಪತ್ತಿ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಆದರೆ, ಅದೇ ಸಮಯದಲ್ಲಿ ಬಾಲದ ವಲಯದ ಪುನರುತ್ಪತ್ತಿ ಸಾಮರ್ಥ್ಯ ಇನ್ನೂ ಉಳಿದಿರುತ್ತದೆ.

ಕೆಲವು ಪ್ರಾಣಿಗಳಲ್ಲಿ ಪ್ರಮುಖವಾಗಿ ಪ್ಲನೇರಿಯಗಳಲ್ಲಿ ನಿಯೋಬ್ಲಾಸ್ಟುಗಳೆಂಬ ಪುನರುತ್ಪತ್ತಿ ಜೀವಕೋಶಗಳು ದೇಹದ ಎಲ್ಲ ಭಾಗಗಳಲ್ಲಿ ಹುಟ್ಟುತ್ತವೆ. ಈ ಅಂಶವನ್ನು ವಿಜ್ಞಾನಿ ಫ್ರಾಂಕೋಯಿಸ್ ಡುಬಾಯ್ ತನ್ನ ಪರಿಶೋಧನೆಗಳಿಂದ ಸಾದರಪಡಿಸಿದ. ಚಪ್ಪಟೆ ಹುಳದ ತಲೆಯನ್ನು ಕತ್ತರಿಸಿದರೆ ಪುನರುತ್ಪತ್ತಿ ತತ್‌ಕ್ಷಣ ಪ್ರಾರಂಭವಾಗಿ ಕೆಲವೇ ದಿನಗಳಲ್ಲಿ ಹೊಸ ತಲೆ ಹುಟ್ಟುತ್ತದೆ. ಆದರೆ, ಕತ್ತರಿಸುವ ಮೊದಲು ಪ್ರಾಣಿಯ ಮುಂಭಾಗವನ್ನು ಕಿರಣಗಳ ಪ್ರಭಾವಕ್ಕೆ ಒಳಪಡಿಸಿದರೆ, ಪುನರುತ್ಪತ್ತಿ ಒಂದು ತಿಂಗಳಿಗೂ ಹೆಚ್ಚು ಕಾಲ ಮುಂದೂಡಲ್ಪಡುತ್ತದೆ. ಕಿರಣಗಳ ಪ್ರಭಾವಕ್ಕೆ ಒಳಗಾದ ಜೀವಕೋಶಗಳು ಮುಂಭಾಗಕ್ಕೆ ಸರಿದು ಪುನರುತ್ಪತ್ತಿ ಸಾಮರ್ಥ್ಯವನ್ನು ಕಳೆದುಕೊಳ್ಳುವುದೇ ಇದಕ್ಕೆ ಕಾರಣ. ದೇಹದ ಹಿಂಬದಿಯಲ್ಲಿರುವ ಜೀವಕೋಶಗಳು ಮುಂಭಾಗಕ್ಕೆ ಸರಿದು ಹೊಸತಲೆಯನ್ನು ಪುನರುತ್ಪತ್ತಿ ಮಾಡಲು ಸಾಕಷ್ಟು ಸಮಯ ಬೇಕು. ಇಂಥ ಸಂಚಾರಿ ಜೀವಕೋಶಗಳಿಂದ ತಲೆಯ ಪುನರುತ್ಪತ್ತಿಯಾಗುತ್ತದೆ. ಇದನ್ನು ಸಂಚಾರಿ ದುರಸ್ತಿ ಎನ್ನಬಹುದು. ಪಾಲಿಸಿಲಸ್ ನೈಗ್ರ ಚಪ್ಪಟೆ ಹುಳದಲ್ಲಿ ಕಣ್ಣಂಚಿನ ಒಂದು ಭಾಗವನ್ನು ಕತ್ತರಿಸಿದರೆ ಕಣ್ಣುಗಳು ಮತ್ತೆ ಬೆಳೆಯುತ್ತವೆ. ಆದರೆ, ಮಿದುಳನ್ನು ತೆಗೆದುಹಾಕಿದರೆ ಕಣ್ಣುಗಳು ಮತ್ತೆ ಬೆಳೆಯಲಾರವು. ಅಂದರೆ ಮಿದುಳಿಗೆ ಕಣ್ಣುಗಳ ಪುನರುತ್ಪತ್ತಿಯನ್ನು ನಿಯಂತ್ರಿಸುವ ಸಾಮರ್ಥ್ಯ ಇದೆ.

ಪುನರುತ್ಪತ್ತಿಯಾದ ಅಂಗ ಅನೇಕ ವೇಳೆ ಮೊದಲಿನ ಅಂಗಕ್ಕಿಂತ ವಿಭಿನ್ನವಾಗಿರುವುದು. ನಳ್ಳಿ ಮತ್ತು ಸೀಗಡಿಗಳಲ್ಲಿ ಕಣ್ಣಿನ ತೊಟ್ಟನ್ನು ಬುಡದಲ್ಲಿ ಕತ್ತರಿಸಿದರೆ ಕಣ್ಣಿಗೆ ಬದಲಾಗಿ ಆಂಟೆನ ಮಾತ್ರ ಬೆಳೆಯುತ್ತದೆ. ಕತ್ತರಿಸಿದಾಗ ಕಣ್ಣಿನ ನರ ಗಂಟು ಉಳಿದಿದ್ದರೆ ಮಾತ್ರ ಕಣ್ಣಿನ ಪುನರುತ್ಪತ್ತಿ ಸಾಧ್ಯ. ಈ ಕ್ರಿಯೆಯನ್ನು ಮೊದಲ ಬಾರಿಗೆ ಗಮನಿಸಿದ್ದು ವಿಜ್ಞಾನಿ ಹರ್ಬಸ್ಟ್. ಪಾಸ್‌ಮಿಡ್ ಗುಂಪಿನ ಕೆಲವು ಕೀಟಗಳಲ್ಲಿ ಆಂಟೆನವನ್ನು ಬುಡದಲ್ಲಿ ಕತ್ತರಿಸಿದರೆ ಒಂದು ಸಣ್ಣ ಕಾಲು ಬೆಳೆಯುತ್ತದೆ. ಆದರೆ ತುದಿಯಲ್ಲಿ ಕತ್ತರಿಸಿದರೆ ಮಾತ್ರ ಆಂಟೆನ ಮತ್ತೆ ಬೆಳೆಯುತ್ತದೆ. ಟ್ರೈಟನ್ನಿನಲ್ಲಿ ಪುನರುತ್ಪತ್ತಿಯಾದ ಕಾಲುಗಳಲ್ಲಿ ಅನೇಕ ವೇಳೆ ಹೆಚ್ಚು ಬೆರಳುಗಳಿರುತ್ತವೆ. ಹಲ್ಲಿಯ ಬಾಲವನ್ನು ಕತ್ತರಿಸಿದಾಗ ಕೆಲವು ವೇಳೆ 2 ಅಥವಾ 3 ಬಾಲಗಳು ಪುನರುತ್ಪತ್ತಿಯಾಗುವುವು. ಎರೆಹುಳದಲ್ಲಿ ದೊಡ್ಡ, ದೊಡ್ಡ ಭಾಗಗಳನ್ನು ಕತ್ತರಿಸುತ್ತ ಹೋದಂತೆ, ಪುನರುತ್ಪತ್ತಿಯ ಕ್ರಮಬದ್ಧತೆ ಕೆಡುತ್ತದೆ. ಕತ್ತರಿಸಿ ಹೋದ ದೊಡ್ಡ ಭಾಗಕ್ಕೆ ಬದಲಾಗಿ ಉಳಿದ ಚಿಕ್ಕ ತುಂಡು ದ್ವಿಗುಣಗೊಂಡು ಸಂಕೀರ್ಣ ದೈತ್ಯವಾಗುವುದು. ಆದರೆ, ಇದು ಜೀವಂತ ಉಳಿಯುವುದಿಲ್ಲ. ಎರೆಹುಳದ ಮುಂಭಾಗದ ಒಂದು ತುದಿಯನ್ನು ಕತ್ತರಿಸಿದರೆ, ಈ ಚಿಕ್ಕ ಮುಂತುದಿ ಮಿಕ್ಕ ಭಾಗವನ್ನು ಪುನರುತ್ಪತ್ತಿ ಮಾಡಿಕೊಳ್ಳುವುದಕ್ಕೆ ಬದಲು ವಿರುದ್ಧ ದಿಕ್ಕಿಗೆ ತಿರುಗಿದ ಇನ್ನೊಂದು ತಲೆಯನ್ನು ಬೆಳೆಸಿಕೊಳ್ಳುತ್ತದೆ. ಹಾಗೆಯೇ ಹುಳದ ಹಿಂತುದಿಯನ್ನು ಕತ್ತರಿಸಿದರೆ ಈ ಸಣ್ಣ ಭಾಗದಲ್ಲಿ ಎರಡನೆಯ ಬಾಲ ಬೆಳೆಯುತ್ತದೆ. ಪ್ರೊಸಿರೋಡಿಸ್ ಲೋಬೇಟವನ್ನು ಕಣ್ಣುಗಳ ಹಿಂಭಾಗದಲ್ಲಿ ಕತ್ತರಿಸಿದರೆ ಮತ್ತೊಂದು ತಲೆ ಬೆಳೆಯುತ್ತದೆ. ಆದರೆ, ಇದೇ ಜೀವಿಯ ದೇಹವನ್ನು ಇನ್ನೂ ಹಿಂಭಾಗಕ್ಕೆ ಕತ್ತರಿಸುತ್ತ ಹೋದಂತೆ ಅಕ್ರಮ ಬೆಳವಣಿಗೆಗಳು ಕಮ್ಮಿಯಾಗುತ್ತ ಹೋಗಿ ಒಂದು ಘಟ್ಟದಲ್ಲಿ ಸಂಪೂರ್ಣವಾಗಿ ಮರೆಯಾಗುತ್ತವೆ. ಕತ್ತರಿಸುವಿಕೆ ಬಾಲದ ಹತ್ತಿರಕ್ಕೆ ಬಂದಂತೆಲ್ಲ ಪುನರುತ್ಪತ್ತಿ ಕ್ರಮಬದ್ಧವಾಗಿರುತ್ತದೆ. ಹಿಂತುದಿಯನ್ನು ಕತ್ತರಿಸಿದಾಗ ಬಾಲ ಕ್ರಮಬದ್ಧವಾಗಿ ಪುನರುತ್ಪತ್ತಿಯಾಗುತ್ತದೆ.

ದೇಹದ ಎಲ್ಲ ಭಾಗಗಳಿಗೂ ಒಂದೇ ರೀತಿಯ ಪುನರುತ್ಪತ್ತಿ ಸಾಮರ್ಥ್ಯ ಇರುವುದಿಲ್ಲ. ಕೆಲವು ವೇಳೆ ತದ್ವಿರುದ್ಧ ಅಂಗಗಳು ಬೆಳೆದರು, ಸಾಮಾನ್ಯವಾಗಿ ಮುಂತುದಿ ಹಾಗೂ ಹಿಂತುದಿಗಳು ಅನುಕ್ರಮವಾಗಿ ತಲೆ ಮತ್ತು ಬಾಲವನ್ನು ಪುನರುತ್ಪತ್ತಿ ಮಾಡಿಕೊಳ್ಳಬಲ್ಲವು. ಇಷ್ಟಾದರೂ ಜೀವಿಯ ಮೊದಲನೇ ಸಮಗ್ರತೆಯನ್ನು ಉಳಿಸುವುದು ಪುನರುತ್ಪತ್ತಿಗೆ ಸಾಧ್ಯವಿಲ್ಲ. (ಎ.ಎಸ್.ಸಿ.)

**ಪುನುಗು ಬೆಕ್ಕು:** ಕಾರ್ನಿವೊರ ಗಣದ ವೈವರಿಡೆ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಸ್ತನಿ (ಸಿವೆಟ್). ವಾಸ್ತವವಾಗಿ ಈ ಹೆಸರು ಭಾರತದಲ್ಲಿ ಕಾಣದೊರೆಯುವ ವೈವರ ಜಿಬೆತ, ವೈವರಿಕ್ಯುಲ ಇಂಡಿಕ, ಫಿಲಿಪೀನ್ಸ್‌ನಲ್ಲಿಯ ವೈವರ ಟಾಂಗಲೂಂಗ ಹಾಗೂ ಆಫ್ರಿಕದ ಸಿವೆಟಿಕ್ಟಸ್ ಸಿವೆಟ್ ಎಂಬ ಪ್ರಭೇದಳಿಗೆ ಅನ್ವಯವಾಗುತ್ತದೆ. ಇವುಗಳ ಪ್ರಜನನಾಂಗಗಳ ಬಳಿ ಸುಗಂಧ ವಸ್ತು ಸ್ರವಿಸುವ ಗ್ರಂಥಿಗಳಿವೆ. ಈ ವಸ್ತು ಪುನುಗು; ಗುದದ್ವಾರದ ಬಳಿ ಇರುವ ಸಂಚಿಯೊಂದಕ್ಕೆ ಸುರಿದು ಸಂಗ್ರಹಗೊಳ್ಳುತ್ತದೆ. ಆರಂಭದಲ್ಲಿ ಜಿಗುಟಾದ ದ್ರವದಂತಿದ್ದು ಹಳದಿ ಬಣ್ಣಕ್ಕಿರುವ ಇದು ಸ್ವಲ್ಪ ಸಮಯದಲ್ಲಿ ಸುಗಂಧಾಂಜನದ ಸಾಂದ್ರತೆಯನ್ನು ಪಡೆದು ಕಪ್ಪು ಬಣ್ಣವನ್ನು ತಳೆಯುತ್ತದೆ. ಇದಕ್ಕೆ ಬಹು ಕಟುವಾದ ಕಸ್ತೂರಿ ವಾಸನೆ ಇದೆ. ಇದರ ಅನುಭವವಿಲ್ಲದವರಿಗೆ ಹಿಡಿಸದೇ ಇರಬಹುದು. ಇದರೊಂದಿಗೆ ಸಮಪ್ರಮಾಣದಲ್ಲಿ ನೀರು ಬೆರೆಸಿ ಇತರ ಸುಗಂಧಗಳೊಡನೆ ಸೇರಿಸಿದಾಗ ಉತ್ತಮವಾದ, ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಪುಷ್ಪಸದೃಶವಾದ ಸುವಾಸನೆಯನ್ನು ಕೊಡುತ್ತದೆ.



ಭಾರತದಲ್ಲಿ ಕಾಣಸಿಗುವ ಪುನುಗು ಬೆಕ್ಕು, ವೈವರ ಜಿಬೆತ ಸುಮಾರು 80 ಸೆಂಮೀ ಉದ್ದದ ಪ್ರಾಣಿ. ಸು. 7–11 ಕಿಗ್ರಾಂ ತೂಗುತ್ತದೆ. ಉದ್ದ ಮೂತಿ, ಮೋಟು ಕಾಲುಗಳು, ಕಪ್ಪು ಮಿಶ್ರಿತ ಬೂದು ಬಣ್ಣ, ಬೆನ್ನಿನ ಉದ್ದಕ್ಕೂ ಕತ್ತಿನಿಂದ ಬಾಲದವರೆಗೂ ಹಬ್ಬಿರುವ ಕಪ್ಪು ಕೂದಲಿನ ಏಣು, ಎದೆ ಹಾಗೂ ಭುಜಗಳ ಮೇಲಿನ ಕಪ್ಪು ಪಟ್ಟೆಗಳು– ಇವು ಇದರ ಪ್ರಧಾನ ಲಕ್ಷಣಗಳು. ಬಾಲ ಸುಮಾರು 45 ಸೆಂಮೀ ಉದ್ದಕ್ಕಿದೆ. ಬಾಲದ ಮೇಲೆ ಅಡ್ಡ ಪಟ್ಟೆಗಳುಂಟು. ಇದು ಸಾಧಾರಣವಾಗಿ ಒಂಟಿ ಜೀವಿ. ನಿಶಾಚರಿ; ಹಗಲೆಲ್ಲ ಪೊದೆಗಳಲ್ಲಿ ಅಡಗಿದ್ದು ರಾತ್ರಿಯ ವೇಳೆ ಆಹಾರಾನ್ವೇಷಣೆಯಲ್ಲಿ ತೊಡಗುತ್ತದೆ. ಸಣ್ಣ ಪುಟ್ಟ ಸ್ತನಿಗಳು, ಹಕ್ಕಿಗಳು, ಕಪ್ಪೆಗಳು, ಹಾವು, ಕೀಟಗಳು, ಹಣ್ಣು, ಬೇರುಗಳು ಇದರ ಮೆಚ್ಚಿನ ಆಹಾರ. ಕೆಲವೊಮ್ಮೆ ಮೀನು, ಏಡಿ ಮುಂತಾದವನ್ನು ತಿನ್ನುವುದುಂಟು. ಸಂತಾನೋತ್ಪತ್ತಿಯ ಶ್ರಾಯ ಮೇ–ಜೂನ್ ತಿಂಗಳು. ಒಂದು ಸಲಕ್ಕೆ 3–4 ಮರಿಗಳು ಹುಟ್ಟುವುವು. ಬಿಲಗಳಲ್ಲಿ ಇಲ್ಲವೇ ದಟ್ಟ ಪೊದೆಗಳಲ್ಲಿ ಮರಿಗಳನ್ನು ಈಯುವುದು.

ಭಾರತದಲ್ಲಿ ಸಿಕ್ಕುವ ಇನ್ನೊಂದು ಪುನುಗು ಬೆಕ್ಕು ವೈವರಿಕ್ಯುಲ ಇಂಡಿಕ. ಹೆಚ್ಚು ಕಡಿಮೆ ವೈವರದಂತೆಯೇ ಇದೆ. ಆದರೆ, ಇದರಲ್ಲಿ ಬೆನ್ನಗುಂಟ ಏಣು ಇಲ್ಲ. ದೇಹದ ಎರಡೂ ಕಡೆ ಉದ್ದುದ್ದನೆಯ ಪಟ್ಟೆಗಳಿವೆ. ಇದು ಹೆಚ್ಚು ಕಡಿಮೆ ಭಾರತಾದ್ಯಂತ ಕಾಣದೊರೆಯುತ್ತದೆ. ಮಯನ್ಮಾರ್, ಶ್ರೀಲಂಕಾ, ಮಲೇಷ್ಯಗಳಲ್ಲೂ ಉಂಟು.

ಆಫ್ರಿಕದ ಪುನುಗು ಬೆಕ್ಕು ಸಿವೆಟಿಕ್ಟಸ್ ಸಿವೆಟ್ ಎಂಬುದು 67–80 ಸೆಂಮೀ ಉದ್ದ ಇದೆ. ಇದರ ಮೈ ಬಣ್ಣ ಕಪ್ಪು. ಅಲ್ಲಲ್ಲಿ ಹಳದಿ ಬಿಳಿ ಬಣ್ಣದ ಮಚ್ಚೆಗಳು, ಪಟ್ಟೆಗಳು ಇವೆ. ಇದೂ ಕೂಡ ನಿಶಾಚರಿ. ಒಂಟಿಯಾಗಿ ಇಲ್ಲವೇ ಜೋಡಿಗಳಲ್ಲಿ ವಾಸಿಸುತ್ತದೆ.

ಈ ಎಲ್ಲ ಪ್ರಭೇದಗಳನ್ನು ಸಾಕಬಹುದಾಗಿದ್ದು ಅವುಗಳಿಂದ ತಿಂಗಳಿಗೊಮ್ಮೆ ಇಲ್ಲವೇ ವಾರಕ್ಕೊಮ್ಮೆ ಪುನುಗನ್ನು ಪಡೆಯುವುದಿದೆ. ಪುನುಗು ಬೆಕ್ಕನ್ನು ಸಣ್ಣ ಪಂಜರಗಳಲ್ಲಿಟ್ಟು ಕೊಂಬಿನ ಚಮಚಗಳಿಂದ ಪುನುಗನ್ನು ಬಗೆದು ತೆಗೆಯಲಾಗುತ್ತದೆ. ಇವನ್ನು ಪೀಡಿಸಿ ರೊಚ್ಚಿಗೆಬ್ಬಿಸಿದರೆ ಹೆಚ್ಚು ಪುನುಗು ವಸರುತ್ತದೆ. ಒಂದು ಬೆಕ್ಕಿನಿಂದ ವಾರಕ್ಕೆ 30 ಗ್ರಾಂ ಪುನುಗನ್ನು ಪಡೆಯಬಹುದು.

ಪುನುಗನ್ನು ಕಾಮೋತ್ತೇಜಕವಾಗಿ ಹಾಗೂ ತಂಬಾಕಿನ ಸುವಾಸನೆ ಕಟ್ಟುವ ಸಲುವಾಗಿ ಬಳಸುವುದಿತ್ತು. ಆದರೆ, ಇತ್ತೀಚೆಗೆ ಇದನ್ನು ಕೊನ್ನಾರಿಗೆಡ್ಡೆ ಮತ್ತಿತರ ನೈಸರ್ಗಿಕ ರಾಳ (ರೆಸಿನ್) ದೊಂದಿಗೆ ಮಿಶ್ರ ಮಾಡಿ ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ.

***

**ಪುರುವೆ:** ಗ್ರೂಯಿಫಾರ್ಮಿಸ್ ವರ್ಗದ ರ‍್ಯಾಲಿಡೆ ಕುಟುಂಬಕ್ಕೆ ಸೇರಿದ ಪಕ್ಷಿ (ಕೂಟ್). ಇದರ ವೈಜ್ಞಾನಿಕ ಹೆಸರು ಫ್ಯೂಲಿಕ. ಇದರಲ್ಲಿ ಸುಮಾರು 16 ಪ್ರಭೇದಗಳು ಉಂಟು. ಭಾರತದಲ್ಲಿ ಫ್ಯೂಲಿಕ ಅಟ್ರ ಎಂಬ ಪ್ರಭೇದ ಕಾಣದೊರೆಯುತ್ತದೆ. ಉತ್ತರ ಅಮೆರಿಕ, ಜಪಾನ್, ಯುರೋಪ್, ಆಫ್ರಿಕ ಹಾಗೂ ದಕ್ಷಿಣ ಅಮೆರಿಕಗಳಲ್ಲಿ ಇತರ ಪ್ರಭೇದಗಳುಂಟು.

ಪುರುವೆಗಳ ಅತಿ ಮುಖ್ಯ ಲಕ್ಷಣವೆಂದರೆ ಕಾಲ್ಬೆರಳುಗಳ ಅಂಚಿನ ಪೊರೆ ಅಗಲವಾಗಿ ಹರಡಿ ಒಂದು ಬಗೆಯ ಪಟ್ಟಿಯಂತಾಗಿರುವುದು. ಭಾರತದಲ್ಲಿ ಸಿಗುವ ಪುರುವೆ ಕೋಳಿಯಷ್ಟು ಗಾತ್ರದ ಹಕ್ಕಿ. ಮೈಬಣ್ಣ ಬೂದುಮಿಶ್ರಿತ ಕಪ್ಪು. ಈಜುವಾಗ ದೂರದಿಂದ ಬಾತುಕೋಳಿಯಂತೆಯೇ ಕಾಣುತ್ತದೆ. ಬಾಲ ಇಲ್ಲವೇ ಇಲ್ಲವೇನೊ ಎನ್ನುವಷ್ಟರ ಮಟ್ಟಿಗೆ ಮೋಟಾಗಿದೆ. ಕೊಕ್ಕು ದಂತದ ಬಣ್ಣಕ್ಕಿದೆ. ಹಣೆಯ ಮೇಲೆ ಬಿಳಿಯ ಫಲಕವೊಂದಿದೆ. ಹೆಣ್ಣು ಗಂಡುಗಳೆರಡೂ ಒಂದೇ ತೆರನಾಗಿವೆ.

ಪುರುವೆಗಳು ಜೊಂಡು ತುಂಬಿದ ಕೆರೆ ಕೊಳಗಳಲ್ಲಿ ವಾಸಿಸುವುವು. ಸಾಮಾನ್ಯವಾಗಿ ಗುಂಪು ಗುಂಪಾಗಿ ಇರುವುವು. ಹುಲ್ಲು, ಬತ್ತ ಮುಂತಾದ ಸಸ್ಯಗಳ ಎಳೆಯ ಕುಡಿಗಳು, ನೀರಿನಲ್ಲಿಯ ಕಳೆಗಿಡಗಳು, ಕೀಟ ಹಾಗೂ ಮೃದ್ವಂಗಿಗಳು ಇವುಗಳ ಪ್ರಧಾನ ಆಹಾರ. ತುಂಬ ಚೆನ್ನಾಗಿ ಈಜಬಲ್ಲ ಇವು ಹಗಲೆಲ್ಲ ಜೋರಾಗಿ ಕಹಳೆ ಧ್ವನಿಗೈಯುತ್ತ ಆಹಾರಾನ್ವೇಷಣೆಯಲ್ಲಿ ತೊಡಗಿರುವುವು. ಹೆದರಿದಾಗ ನೀರಿನ ಹಾಳೆಯ ಮೇಲೆ ಅರ್ಧ ಓಡುತ್ತ ಅರ್ಧ ಹಾರುತ್ತ ಚಲಿಸುತ್ತವೆ.

ಇವು ಗೂಡುಕಟ್ಟುವ ಕಾಲ ಭಾರತದಲ್ಲಿ ಜುಲೈ–ಆಗಸ್ಟ್. ಕೆರೆಯಂಚಿನ ಜೊಂಡುಗಳನ್ನು ಸೇರಿಸಿ ಗೂಡು ರಚಿಸಿ 6–10 ಮೊಟ್ಟೆಗಳನ್ನಿಡುತ್ತವೆ. ಪುರುವೆ ಭಾರತದಲ್ಲಿ ಸ್ಥಳೀಯ ಪಕ್ಷಿಯೂ ಹೌದು. ಅಂತೆಯೇ ಚಳಿಗಾಲದಲ್ಲಿ ಮಧ್ಯ ಹಾಗೂ ಪಶ್ಚಿಮ ಏಷ್ಯದ ದೇಶಗಳಿಂದ ವಲಸೆ ಬರುವ ಹಕ್ಕಿಯೂ ಹೌದು.

ಪುರುವೆಯ ಮಾಂಸ ರುಚಿಯಾಗಿರುತ್ತದೆ ಎನ್ನಲಾಗಿದೆ. ಆದ್ದರಿಂದ ಇದನ್ನು ಬೇಟೆಯಾಡುವುದಿದೆ. (ವಿ.ಕೆ.ವಿ.)

**ಪೆಂಗ್ವಿನ್:** ಹಾರಲು ಬಾರದ ಒಂದು ವಿಚಿತ್ರ ಪಕ್ಷಿಜಾತಿ. ಪಕ್ಷಿಗಳ ವರ್ಗದ ನೀಯಾರ್ನಿತೀಸ್ ಉಪವರ್ಗಕ್ಕೂ ಇಂಪೆನೀಸ್ ಅಥವಾ ಸ್ಫೆನಿಸಿಫಾರ್ಮಿಸ್ ಅಧಿಗಣಕ್ಕೂ ಸ್ಫೆನಿಸೀಡೆ ಕುಟುಂಬಕ್ಕೂ ಸೇರಿದೆ. ಇದರಲ್ಲಿ ಸುಮಾರು 6 ಜಾತಿ ಹಾಗೂ 15 ಪ್ರಭೇದಗಳನ್ನು ಗುರುತಿಸಲಾಗಿದೆ. ಸ್ಫೆನಿಸ್ಕಸ್, ಯುಡಿಪ್ಟಿಸ್ ಕ್ರೆಸ್ಟೇಟಸ್ (ರಾಕ್‌ಹಾಪರ್ ಪೆಂಗ್ವಿನ್) ಮತ್ತು ಎಪ್ಟೆನೊಡೈಟಿಸ್ ಫಾರ್ಸ್ಟೆರಿ (ಎಂಪರರ್ ಪೆಂಗ್ವಿನ್) ಇವುಗಳಲ್ಲಿ ಕೆಲವು. ದಕ್ಷಿಣಾರ್ಧಗೋಳಕ್ಕೆ ಸೀಮಿತವಾಗಿರುವ ಇವು ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣ ಅಮೆರಿಕ ಖಂಡಗಳ ದಕ್ಷಿಣ ಕರಾವಳಿಯಲ್ಲೂ ನ್ಯೂಜಿಲೆಂಡಿನಲ್ಲೂ ದಕ್ಷಿಣ ಧ್ರುವ ಪ್ರದೇಶದ ಸಮುದ್ರ ತೀರಗಳಲ್ಲೂ ಅಲ್ಲಿನ ಸಾಗರಗಳ ಫಾಕ್‌ಲೆಂಡ್, ದಕ್ಷಿಣ ಆರ್ಕ್‌ನೀಸ್, ದಕ್ಷಿಣ ಶೆಟ್‌ಲೆಂಡ್ ಮತ್ತಿತರ ಸಣ್ಣಪುಟ್ಟ ದ್ವೀಪಗಳಲ್ಲೂ ವಾಸಿಸುವುವು.

ಎಂಪರರ್ ಪೆಂಗ್ವಿನ್

ಪೆಂಗ್ವಿನುಗಳ ಗುಂಪು ಬಹು ಪ್ರಾಚೀನವಾದ ಹಾಗೂ ವಿಕಾಸದ ದೃಷ್ಟಿಯಿಂದ ಬಹು ಹಿಂದುಳಿದ ಗುಂಪು. ಉಳಿದ ತೆರನ ಪಕ್ಷಿಗಳೊಂದಿಗೆ ಇವುಗಳ ಸಂಬಂಧ ಯಾವ ಬಗೆಯದು ಎಂಬುದು ಇಂದಿಗೂ ವಿವಾದಾತ್ಮಕವಾಗಿದೆ. ಸಾಗರೋತ್ತರ ಜೀವನಕ್ಕೆ ಇವು ತುಂಬ ಚೆನ್ನಾಗಿ ಹೊಂದಿಕೊಂಡಿವೆ. ಹಾರುವ ಹಕ್ಕಿಗಳಲ್ಲಿರುವಂತೆ ಇವುಗಳಲ್ಲೂ ಬಲವಾದ ತಳಪಟ್ಟಿಯಿರುವ (ಕೀಲ್ ಬೋನ್) ಎದೆಮೂಳೆಯಿದೆಯಾದರೂ ರೆಕ್ಕೆಯ ಹಾರುಗರಿಗಳೇ ಇಲ್ಲದಿರುವುದು ಬಲು ವಿಚಿತ್ರ ಸಂಗತಿ. ಭ್ರೂಣಾವಸ್ಥೆಯ ಒಂದು ಹಂತದಲ್ಲಿ ಮಾತ್ರ ರೆಕ್ಕೆ ಗರಿಗಳು ಕಾಣಿಸಿಕೊಂಡು ಬಲುಬೇಗ ಉದುರಿಬಿಡುವುವು. ಇದರಿಂದ ಪೆಂಗ್ವಿನುಗಳು ಹಾರುವ ಸಾಮರ್ಥ್ಯವಿದ್ದ ಪೂರ್ವಜಗಳಿಂದ ಉಗಮಿಸಿರಬಹುದೆನ್ನಲಾಗಿದೆ. ಅಂತೆಯೇ ಪೆಂಗ್ವಿನುಗಳಲ್ಲಿ ನಮ್ಯಶೀಲ ಮೊಳಕೈ ಕೀಲು ಇಲ್ಲ. ಮೊಂಡು ರೆಕ್ಕೆ ತುಂಬ ಗಡುಸಾಗಿದ್ದು ಭುಜದ ಬಳಿ ಮಾತ್ರ ಚಲಿಸುತ್ತದೆ. ಕೊಕ್ಕು ಕೂಡ ವಿಚಿತ್ರವಾಗಿಯೇ ಇದೆ. ಬೇರೆ ಹಕ್ಕಿಗಳ ಕೊಕ್ಕು ಏಕಫಲಕದಿಂದ ರಚಿತವಾಗಿದೆಯಾದರೆ ಇವುಗಳಲ್ಲಿ ಹಲವಾರು ಕೊಂಬಿನ ರಚನೆಗಳಿಂದ ಇದು ರೂಪಿತವಾಗಿದೆ. ಈ ಲಕ್ಷಣ ಪೆಂಗ್ವಿನ್‌ಗಳಿಗೂ ಆಲ್ಬಟ್ರಾಸ್ ಹಕ್ಕಿಗಳಿಗೂ ಇರಬಹುದಾದ ದೂರ ಸಂಬಂಧವನ್ನು ಸೂಚಿಸುತ್ತದೆ. ಪೆಂಗ್ವಿನುಗಳಿಗೂ ಮುಳುಗುಹಕ್ಕಿ, ನೀರು ಕಾಗೆ (ಕಾರ್ಮೊರಾಂಟ್) ಮತ್ತು ಪೆಲಿಕನುಗಳಿಗೂ ಸಂಬಂಧ ಇದೆ.

ಎಲ್ಲ ಬಗೆಯ ಪೆಂಗ್ವಿನುಗಳಲ್ಲೂ ಕಾಣಬರುವ ಸಾಮಾನ್ಯ ಲಕ್ಷಣಗಳು ಇಂತಿವೆ ; ದೇಹದ ಎತ್ತರ 30–90 ಸೆಂಮೀ ವರೆಗೆ ವ್ಯತ್ಯಾಸವಾಗುತ್ತದೆ. ತೂಕ 2–4 ಕಿಗ್ರಾಂ ಮನುಷ್ಯರಂತೆ ಎರಡು ಕಾಲುಗಳ ಮೇಲೆ ನಿಂತು ತಮ್ಮ ಎರಡೇ ಮೋಟು ರೆಕ್ಕೆಗಳನ್ನು ಕೈಯಂತೆ ಕೆಳಕ್ಕೆ ಚಾಚಿಕೊಂಡಿರುವುವು. ದೇಹದ ಮೇಲೆಲ್ಲ ದಪ್ಪ ತುಪ್ಪಳಿನಂಥ ಗರಿಹೊದಿಕೆಯುಂಟು. ನೀರಲ್ಲಿ ಈಜುವಾಗ ತಮ್ಮ ರೆಕ್ಕೆಗಳನ್ನು ಬಲವಾದ ಹುಟ್ಟುಗಳಂತೆ ಬಳಸುವುವು. ಮುಂಗಾಲುಗಳು ದಪ್ಪವಾಗಿವೆ. ಪಾದ ಜಾಲಪಾದ ರೀತಿಯದು. ಈಜುವಾಗ ಪಾದಗಳು ಚುಕ್ಕಾಣಿಯಂತೆ ವರ್ತಿಸುವುವು. ದೇಹದ ಆಕಾರ ನೀರಲ್ಲಿ ಈಜಲು ಅನುಕೂಲವಾಗುವಂತೆ ಕದಿರಿನಾಕಾರದಲ್ಲಿದೆ. ಗಂಟೆಗೆ ಸುಮಾರು 36 ಕಿಮೀ ವೇಗದಲ್ಲಿ ಈಜಬಲ್ಲವು.

ದೇಹದ ಮೇಲ್ಭಾಗದಲ್ಲಿ ಪುಕ್ಕಗಳು ಬಹಳ ಒತ್ತಾಗಿ ಜೋಡಣೆಗೊಂಡಿವೆ; ಒಂದು ಚದರ ಸೆಂಮೀ.ಗೆ ಸುಮಾರು 46 ಪುಕ್ಕಗಳಿರುವುದುಂಟು. ತಮ್ಮ ಮರಿಗಳನ್ನು ಸಾಕಿ ಸಲಹಿದ ನಂತರ ಪುಕ್ಕಗಳನ್ನು ಕಳೆದುಕೊಂಡು ಹೊಸ ಪುಕ್ಕಗಳನ್ನು ಬೆಳೆಸಿಕೊಳ್ಳುತ್ತವೆ. ಈ ರೀತಿ ಪೂರ್ಣವಾಗಿ ಪುಕ್ಕ ಕಳೆದುಕೊಳ್ಳುವುದಕ್ಕೆ ಸುಮಾರು 2 ರಿಂದ 6 ವಾರಗಳ ಕಾಲ ಬೇಕಾಗಬಹುದು. ಈ ಅವಧಿಯಲ್ಲಿ ಪಕ್ಷಿ ನೆಲದ ಮೇಲೆ ಒಂದೇ ಸ್ಥಳದಲ್ಲಿ ನಿಂತಿರುತ್ತದೆ ಮತ್ತು ಉಪವಾಸವಿರುತ್ತದೆ. ಪುಕ್ಕ ಕಳೆಯುವಿಕೆ ಪ್ರಾರಂಭವಾಗುವಾಗ ಗಂಡು ಹಕ್ಕಿಯ ತೂಕ ಸುಮಾರು 7.8 ಕಿಗ್ರಾಂ ಇರುತ್ತದೆ. ಪುಕ್ಕ ಕಳೆದ ಅನಂತರ ತೂಕ ಸುಮಾರು 4.5 ಕಿಗ್ರಾಂ ಇರುತ್ತದೆ. ಇದೇ ರೀತಿ ಹೆಣ್ಣಿನ ದೇಹದ ತೂಕ ಪ್ರಾರಂಭದಲ್ಲಿ 7.5 ಕಿಗ್ರಾಂ ಇದ್ದು ಅನಂತರ 4 ಕಿಗ್ರಾಂಗೆ ಇಳಿಯುತ್ತದೆ.

ಪೆಂಗ್ವಿನುಗಳ ಚರ್ಮದ ಕೆಳಭಾಗದಲ್ಲಿ ಬಹಳ ಮಂದವಾದ ಹಾಗೂ ಅನೇಕ ಪದರಗಳುಳ್ಳ ಕೊಬ್ಬಿದೆ. ಶರೀರದ ಉಷ್ಣತೆಯನ್ನು ಕಾಪಾಡಲು ಇದು ಸಹಾಯಕ. ಶ್ವಾಸನಾಳ ಎರಡು ಅಸಮ ಭಾಗಗಳಾಗಿ ಸೀಳಿರುವುದರಿಂದ ಇವು ಕೂಗಾಡುವಾಗ ಒಂದೇ ಸಮಯದಲ್ಲಿ ಎರಡು ಶ್ರುತಿಗಳು ಹೊರಡುತ್ತವೆ.

ಉಪವಾಸವಿರುವುದರಲ್ಲಿ ವಿಶ್ವದಾಖಲೆ ಸ್ಥಾಪಿಸಿರುವ ಪಕ್ಷಿಯೆಂದರೆ ಎಂಪರರ್ ಪೆಂಗ್ವಿನ್. ಇದು ಧ್ರುವ ಪ್ರದೇಶದ ಸಹಿಸಲಸಾಧ್ಯವಾದ ಹಿಮಚಳಿಯಲ್ಲಿ ಸುಮಾರು 60 ದಿನಗಳ ತನಕ ಉಪವಾಸವಿರುವುದುಂಟು. ಇದೇ ರೀತಿ ಹೊಟ್ಟೆಬಾಕತನಕ್ಕೂ ಪೆಂಗ್ವಿನುಗಳು ಹೆಸರುವಾಸಿಯಾಗಿವೆ. ಅಡಿಲೈ ಪೆಂಗ್ವಿನುಗಳು ಹೊಟ್ಟೆ ತುಂಬ ಉಂಬುವ ತನಕ ಮೀನು, ಸೀಗಡಿ, ಸೆಪಿಯ ಪ್ರಾಣಿಗಳನ್ನು ನುಂಗಿ ಅನಂತರ ಎಲ್ಲವನ್ನು ಕಕ್ಕಿ ಪುನಃ ಬೇಸರವಾದರೆ ಆಹಾರವನ್ನು ತೆಗೆದುಕೊಳ್ಳುತ್ತವೆ. ಇನ್ನೊಂದು ವಿಚಿತ್ರ ಲಕ್ಷಣ ಥಟಕ್ಕನೆ ಸಮುದ್ರದ ನೀರನ್ನು ಕುಡಿಯುವುದನ್ನು ನಿಲ್ಲಿಸಿ ಸಿಹಿನೀರು ಅಥವಾ ಮಂಜನ್ನು ತಿನ್ನಲು ಪ್ರಾರಂಭಿಸುವುದು.

ಪೆಂಗ್ವಿನುಗಳು ಧ್ರುವ ಪ್ರದೇಶದಲ್ಲಿ ಅತಿ ಕಡಿಮೆ ಉಷ್ಣತೆಯಲ್ಲಿ (ಅಂದರೆ – $62^0$ ಸೆ.) ಸಂತಾನ ವೃದ್ಧಿ ಮಾಡುತ್ತವೆ. ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಪೆಂಗ್ವಿನುಗಳು ಹೆಣ್ಣಿಗಾಗಿ ಬಡಿದಾಡುತ್ತವೆ. ಪ್ರಣಯಾಚರಣೆಯ ಕಾಳಗ ಅತಿ ಉತ್ಸಾಹದಿಂದ ನಡೆಯುತ್ತದೆ. ಹೆಣ್ಣು ಈ ತಮಾಷೆ ನೋಡುತ್ತ ಸುಮ್ಮನೆ ನಿಂತಿರುತ್ತದೆ.

ಗೂಡು ಕಟ್ಟುವಾಗ ಅಡಿಲೈ ಪೆಂಗ್ವಿನುಗಳು ಕಲ್ಲುಗಳನ್ನು ಮತ್ತು ಗೂಡು ಕಟ್ಟಲು ಉಪಯೋಗಿಸುವ ವಸ್ತುಗಳನ್ನು ಇತರ ಹಕ್ಕಿಗಳ ಗೂಡುಗಳಿಂದ ಕದಿಯುತ್ತಿರುತ್ತವೆ. ಧ್ರುವ ಪ್ರದೇಶದಲ್ಲಿ ಗೂಡು ಕಟ್ಟಲು ಬೇಕಾಗುವ ವಸ್ತುಗಳಿಗೆ ಬರಗಾಲವಿರುವುದರಿಂದ ಪೆಂಗ್ವಿನುಗಳು ತಮ್ಮ ತಮ್ಮ ಸಣ್ಣ ಗೂಡುಗಳನ್ನು ರಕ್ಷಿಸಿಕೊಳ್ಳಲು ಬಹಳ ಬಿರುಸಾಗಿ ಕಾದಾಡುತ್ತವೆ. ಎಂಪರರ್ ಪೆಂಗ್ವಿನ್ ಮಾತ್ರ ಗೂಡು ಕಟ್ಟುವುದಿಲ್ಲ.

ಹೆಣ್ಣು ಎಂಪರರ್ ಪೆಂಗ್ವಿನ್ ಒಂದೇ ಒಂದು ಮೊಟ್ಟೆಯಿಟ್ಟು ಕೂಡಲೇ ಅದನ್ನು ಗಂಡಿಗೆ ವರ್ಗಾಯಿಸುತ್ತದೆ. ಗಂಡು ನೆಟ್ಟಗೆ ನಿಂತಿರುವ ಭಂಗಿಯಲ್ಲಿಯೇ ಮೊಟ್ಟೆಯನ್ನು ತನ್ನ ಜಾಲಪಾದಗಳ ಮೇಲಿಟ್ಟುಕೊಂಡು ಪಾದಗಳ ನಡುವಿನ ಸಡಿಲವಾದ ಚರ್ಮದಿಂದ ಒಂದು ಚೀಲವನ್ನು ನಿರ್ಮಿಸಿ ಅದರಿಂದ ಮೊಟ್ಟೆಯನ್ನು ಮುಚ್ಚಿ ಸುಮಾರು 62 ರಿಂದ 64 ದಿನಗಳ ತನಕ ಆಹಾರವಿಲ್ಲದೆ, ಮೊಟ್ಟೆಗೆ ಕಾವು ಕೊಟ್ಟು ಮರಿ ಮಾಡುತ್ತದೆ. ಧ್ರುವ ಪ್ರದೇಶದ ಚಳಿಗಾಲದ ಉಷ್ಣತೆ – 62$^0$ಸೆ. ಗಿಂತ ಕಡಿಮೆಯಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮೊಟ್ಟೆಗೆ ಕಾವು ಕೊಡಬೇಕಾದರೆ ರಾತ್ರಿ ಹಗಲು ತಡೆಯಿಲ್ಲದೆ ಒಂದೇ ಸಮನಾಗಿ ಸುಮಾರು 28$^0$ ಸೆ. ಉಷ್ಣತೆಯನ್ನು ಸುಮಾರು 8 ಅಥವಾ 9 ವಾರಗಳ ತನಕ ಒದಗಿಸುತ್ತಿರಬೇಕು. ಈ ಅವಧಿಯಲ್ಲಿ ಗಂಡು ತನ್ನ ದೇಹದ ಕೊಬ್ಬನ್ನು ಉಪಯೋಗಿಸಿಕೊಳ್ಳುತ್ತದೆ. ಇದರಿಂದಾಗಿ ಮೊಟ್ಟೆಯಿಂದ ಮರಿ ಹೊರಬರುವ ಕಾಲಕ್ಕೆ ಗಂಡಿನ ತೂಕ ಸಾಕಷ್ಟು ಅಂದರೆ ಶೇಕಡ 25 ರಿಂದ 40 ರವರೆಗೆ ಕಡಿಮೆಯಾಗಿರುತ್ತದೆ.

ಮರಿಗಳು ಮೊಟ್ಟೆಯೊಡೆದು ಬಂದ ಅನಂತರ ಅವುಗಳನ್ನು ಸಾಕಿ ಸಲಹಲು ಸಹ ಪೆಂಗ್ವಿನ್‌ಗಳು ಹೊಡೆದಾಡುತ್ತವೆ. ಇದರಿಂದ ಕೆಲವು ಸಾರಿ ಮರಿಗಳಿಗೆ ಹಾನಿಯಾಗುವುದುಂಟು. ಮರಿಗಳು ಮೊದಲಲ್ಲಿ ಕುರುಡಾಗಿರುತ್ತವೆ. ಸ್ವಲ್ಪ ಬೆಳೆದು ಅಡ್ಡಾಡಲು ಪ್ರಾರಂಭಿಸಿದ ಕೂಡಲೇ ಅವುಗಳನ್ನು ಶಿಶುವಿಹಾರದಲ್ಲಿ ಮಕ್ಕಳನ್ನು ಒಂದುಗೂಡಿಸುವ ಹಾಗೆ ಒಂದು ಕಡೆ ಗುಂಪು ಕೂಡಿಸಿ ಅವುಗಳ ಸುತ್ತಲೂ ದೊಡ್ಡ ಪಕ್ಷಿಗಳೆಲ್ಲವೂ ಹಿಮದ ಬೇಲಿಯಂತೆ ನಿಂತು ಕಾವಲು ಕಾಯುತ್ತಿರುತ್ತವೆ. ಗಂಡು ಮತ್ತು ಹೆಣ್ಣು ಪೆಂಗ್ವಿನ್‌ಗಳು ತಮ್ಮಲ್ಲಿ ಅರ್ಧ ಜೀರ್ಣವಾದ ಆಹಾರವನ್ನು ಹೊರ ಕಕ್ಕಿ ಅದನ್ನು ಮರಿಗಳಿಗೆ ಆಹಾರವಾಗಿ ಕೊಟ್ಟು ಸಾಕುತ್ತವೆ.

ಸುಮಾರು 65,000,000 ವರ್ಷಗಳ ಹಿಂದಿನ ಪೆಂಗ್ವಿನ್ ಅವಶೇಷಗಳು ನ್ಯೂಜಿಲೆಂಡಿನಲ್ಲಿ ದೊರಕಿರುವುದರಿಂದ ಇವು ಬಹಳ ಹಳೆಯ ಕಾಲದ ಪಕ್ಷಿಗಳೆಂದು ತಿಳಿಯಲಾಗಿದೆ. (ಕೆ.ಪಿ.ಆರ್.)

**ಪೆಂಟಸ್ಟೋಮಿಡ:** ಸಂಧಿಪದಿ ವಂಶದ ಒಂದು ಉಪವರ್ಗ. ಲೆಂಗ್ವಾಟ್ಯುಲಿಡ ಇದರ ಪರ್ಯಾಯ ನಾಮ. ಇದರಲ್ಲಿ ಪರೋಪಜೀವಿಗಳಿವೆ. ಇವು ನಾಯಿ, ನರಿ, ಮೊಸಳೆ, ಹಾವಿನಂತಹ ಮಾಂಸಾಹಾರಿ ಕಶೇರುಕಗಳ ಫುಪ್ಫುಸ, ನಾಸಿಕ ದ್ವಾರಗಳಲ್ಲಿ ಪರೋಪಜೀವಿಗಳಾಗಿ ಬದುಕುವುವು. ಮಾನವನಲ್ಲಿ ಇವು ಪರೋಪಜೀವಿಗಳಾಗಿರುವುದು ಬಹಳ ವಿರಳ.

ಈ ಗುಂಪಿನ ಪ್ರಾಣಿಗಳು ನೋಡಲು ಹುಳುಗಳಂತೆ ಕಾಣುವುವು. ಇವುಗಳ ದೇಹ ಕೊಳವೆಯಂತಿದ್ದು ತುಂಬ ಮೃದುವಾಗಿದೆ. ದೇಹದ ಮೇಲೆ ವರ್ತುಲಾಕಾರದ ತೋಡುಗಳಿವೆ. ಆದರೆ, ಖಂಡವಿಭಜನೆಯಿಲ್ಲ. ಒಂದು ಜೊತೆ ಕೊಕ್ಕೆಗಳ ಸಹಾಯದಿಂದ ಇತರ ವಸ್ತುಗಳಿಗೆ, ಆಸರೆಗೆ ಕಚ್ಚಿಕೊಳ್ಳುತ್ತದೆ. ಜೀರ್ಣನಾಳ ಉದ್ದವಾದ ಮತ್ತು ನೇರವಾದ ಕೊಳವೆಯಂತಿದೆ. ರಕ್ತ ಪರಿಚಲನಾಂಗಗಳಾಗಲೀ, ಉಸಿರಾಟದ ಅಂಗಗಳಾಗಲೀ, ಶುದ್ಧೀಕರಣಾಂಗಗಳಾಗಲಿ ಇಲ್ಲ. ನರಮಂಡಲ ಬಹಳ ಸರಳವಾಗಿದೆ. ಅನ್ನನಾಳದ ಅಧೋಭಾಗದಲ್ಲಿ ನರಕಣಗಳ ಮುಡಿ ಇದೆ. ಇದರಿಂದ ಸಣ್ಣ ನರತಂತುಗಳು ಹೊರಟು ಜೀವಿಯ ದೇಹದ ಎಲ್ಲ ಭಾಗಗಳಿಗೂ ಹರಡಿವೆ. ಜ್ಞಾನೇಂದ್ರಿಯಗಳು ಇಲ್ಲ.

ಈ ಗುಂಪಿನ ಕೆಲವು ಪ್ರಾಣಿಗಳ ಜೀವನಚಕ್ರ ಒಂದೇ ಪೋಷಕ ಜೀವಿಯಲ್ಲಿ ಮುಗಿಯುತ್ತದೆ. ಕೆಲವು ಜೀವಿಗಳ ಜೀವನ ಚಕ್ರದ ಒಂದು ಹಂತ ಮಾಂಸಾಹಾರಿ ಆತಿಥೇಯ ಜೀವಿಗಳಲ್ಲಿ, ಇನ್ನೊಂದು ಹಂತ ಮೊಲ, ಮೇಕೆ, ಕುದುರೆ ಮುಂತಾದ ಸಸ್ಯಾಹಾರಿ ಆತಿಥೇಯಗಳಲ್ಲಿ ನಡೆಯುವುದು.

ಈ ಪ್ರಾಣಿಗಳ ನಿಷೇಚಿತ ಅಂಡಗಳು ಆತಿಥೇಯ ಪ್ರಾಣಿಯ ದೇಹದಿಂದ ಹೊರಬಂದು, ಹುಲ್ಲು ಅಥವಾ ಇತರ ಸಸ್ಯ ಮೇವಿನಲ್ಲಿ ಮಿಶ್ರಿತವಾಗುವುವು. ಸಸ್ಯಾಹಾರಿ ಪೋಷಕ ಜೀವಿ ಇದನ್ನು ತಿಂದರೆ, ಅದರ ದೇಹದೊಳಗೆ ಸೇರಿಕೊಂಡು ಡಿಂಬಗಳಾಗಿ ಬೆಳೆದು, ಪಿತ್ತಜನಕಾಂಗ ಅಥವಾ ಇತರ ಅವಯವಗಳನ್ನು ಭೇದಿಸಿ ಒಳಹೊಕ್ಕು ತಮ್ಮ ಸುತ್ತ ಕೋಶವೊಂದನ್ನು ಸ್ರವಿಸಿ ಹುದುಗಿರುತ್ತವೆ. ಈ ಸಸ್ಯಾಹಾರಿಯನ್ನು ಯಾವುದಾದರೂ ಮಾಂಸಹಾರಿ ಪ್ರಾಣಿ ತಿಂದಾಗ ಅವುಗಳ ದೇಹವನ್ನು ಹೊಕ್ಕ ಈ ಕೋಶಜೀವಿಗಳು ಕೋಶದಿಂದ ಬಿಡುಗಡೆಯಾಗಿ ರೂಪಪರಿವರ್ತನೆಗೊಂಡು, ಬೆಳೆದು ಪ್ರೌಢಜೀವಿಗಳಾಗುವುವು. ಪೆಂಟೊಸ್ಟೊಮಿಡದಲ್ಲಿ ಸೆಫಲೋಬೇನಿಡ ಮತ್ತು ಫೋರೊಸಿಫ್ಯಾಲಿಡ ಎಂಬ ಎರಡು ಗಣಗಳಿವೆ.

ಉದಾ: ದಕ್ಷಿಣ ಅಮೆರಿಕದ ಹಾವುಗಳ ಪರಾವಲಂಬಿಯಾಗಿರುವ ಸೆಫಲೊಬೀನ ಹಾಗೂ ಟರ್ನ್ ಮತ್ತು ಗಲ್ ಹಕ್ಕಿಗಳಲ್ಲಿ ಜೀವಿಸುವ ರೈಗ್‌ಹಾರ್ಡಿಯ. ಎರಡನೆಯ ಗಣದಲ್ಲಿ ಲಿಂಗ್ವಾಟ್ಯುಲ, ಸೈಲೀಕಿಯ, ಪೋರೊಸಿಫ್ಯಾಲಸ್ ಹಾಗೂ ರೇಲೀಟಿಲ ಪ್ರಾಣಿಗಳಿವೆ. ಇವುಗಳಲ್ಲಿ ಮೊದಲನೆಯದು ಪ್ರೌಢಾವಸ್ಥೆಯನ್ನು ಮಾಂಸಹಾರಿಗಳಲ್ಲಿ, ಡಿಂಬಾವಸ್ಥೆಯನ್ನು ಸಸ್ಯಹಾರಿಗಳಲ್ಲಿ ಕಳೆಯುತ್ತದೆ. ಉಳಿದವು ಹಲ್ಲಿ, ಹಾವು, ಆಮೆ, ಮೊಸಳೆ, ಕಪ್ಪೆ ಮುಂತಾದವುಗಳಲ್ಲಿ ವಾಸಿಸುವುವು. (ಪಿ.ಎನ್.ಆರ್.)

**ಪೆಕರಿ:** ಆರ್ಟಿಯೊಡ್ಯಾಕ್ಟೈಲ ಗಣದ ಟಯಾಸೂಯಿಡೆ ಕುಟುಂಬಕ್ಕೆ ಸೇರಿದ ಸ್ತನಿ. ನೋಡಲು ಹಂದಿಯಂತೆಯೇ ಕಾಣುತ್ತದೆ. ಹಂದಿಗೆ ಹತ್ತಿರ ಸಂಬಂಧಿ. ಇದರಲ್ಲಿ ಎರಡು ಬಗೆಗಳಿವೆ: 1) ಉತ್ತರ ಅಮೆರಿಕದ ಟೆಕ್ಸಾಸ್, ನ್ಯೂ ಮೆಕ್ಸಿಕೊ, ಆರಿಜೋನಗಳಿಂದ ತೊಡಗಿ ದಕ್ಷಿಣದಲ್ಲಿ ಪಟಗೋನಿಯವರೆಗಿನ ಪ್ರದೇಶದಲ್ಲಿ ಕಾಣಬರುವ ಕಾಲರ್ಡ್ ಪೆಕರಿ (ಟಯಾಸು ಟಜಾಕು) ಮತ್ತು 2) ದಕ್ಷಿಣ ಮೆಕ್ಸಿಕೊದಿಂದ ಪರಗ್ವೆವರೆಗೆ ವಿಸ್ತರಿಸುವ ಪ್ರದೇಶದಲ್ಲಿ ವಾಸಿಸುವ ಬಿಳಿತುಟಿಯ ಪೆಕರಿ (ಟಯಾಸು ಪೆಕರಿ). ಮೊದಲನೆಯದು ಮರುಭೂಮಿ ಮತ್ತು ಶುಷ್ಕ ಬಗೆಯ ಕಾಡುಗಳಲ್ಲಿ ವಾಸಿಸುತ್ತದಾದರೆ ಎರಡನೆಯದು ತೇವಪೂರಿತ ಉಷ್ಣವಲಯ ಕಾಡುಗಳಲ್ಲಿ ಜೀವಿಸುತ್ತದೆ.



ಪೆಕರಿ ಸುಮಾರು 1 ಮೀ ಉದ್ದದ ಪ್ರಾಣಿ. ಎತ್ತರ ಸುಮಾರು ಅರ್ಧ ಮೀ ತೂಕ 16–30 ಕಿಗ್ರಾಂ. 15–35 ಮಿಮೀ ಉದ್ದದ ಬಾಲ ಉಂಟು. ಬಿಳಿ ತುಟಿಯ ಪೆಕರಿ ಕಾಲರ್ಡ್ ಪೆಕರಿಗಿಂತ ಕೊಂಚ ದೊಡ್ಡ ಗಾತ್ರದ್ದು. ದೇಹದ ಬಣ್ಣ ಬಿಳಿ ತುಟಿಯ ಪೆಕರಿಯಲ್ಲಿ ಕಗ್ಗಂದು (ತುಟಿಯ ಆಚೀಚೆ ಬಿಳಿ ಬಣ್ಣದ ಮಚ್ಚೆಯುಂಟು). ಕಾಲರ್ಡ್ ಪೆಕರಿ ಗಾಢ ಬೂದಿ ಬಣ್ಣಕ್ಕಿದೆ. ಇದರ ಕತ್ತಿನಲ್ಲಿ ಬಿಳಿಯ ಪಟ್ಟೆಯುಂಟು. ಪೆಕರಿಗಳ ಮುಂಗಾಲಿನಲ್ಲಿ 4 ಬೆರಳುಗಳೂ ಹಿಂಗಾಲಿನಲ್ಲಿ 3 ಬೆರಳುಗಳೂ ಉಂಟು. ಕಾಲುಗಳ ಮೂರನೆಯ ಮತ್ತು ನಾಲ್ಕನೆಯ ಮೂಳೆಗಳು ಪರಸ್ಪರ ಕೂಡಿಕೊಂಡಿವೆ. ಹಂದಿಗಳಲ್ಲಾದರೋ ಈ ಮೂಳೆಗಳು ಬೇರೆ ಬೇರೆಯಾಗಿವೆ. ಮುಸುಡು ಹಂದಿಗಳದರಂತೆಯೇ ಉದ್ದವಾಗಿದ್ದು ಮೃದ್ವಸ್ಥಿಯಿಂದ ರಚಿತವಾಗಿದೆ. ಅಂತೆಯೇ ಚಲಿಸಬಲ್ಲದು. ಮೇಲ್ದವಡೆಯಲ್ಲಿರುವ ಕೋರೆ ಹಲ್ಲುಗಳು ಕೆಳಮುಖವಾಗಿ ಹೊರಚಾಚಿಕೊಂಡಿವೆ. ಬಾಲದಿಂದ ಕೊಂಚ ದೂರದಲ್ಲಿ ಬೆನ್ನ ಮೇಲೆ ಸುಗಂಧ ಗ್ರಂಥಿಯೊಂದು ಉಂಟು. ಉದ್ರೇಕಿತವಾದಾಗ ಬೆನ್ನು ಮತ್ತು ಕತ್ತಿನ ಮೇಲಿನ ಕೂದಲುಗಳು ನಿಮಿರಿ ನಿಲ್ಲುವುವಲ್ಲದೆ, ಈ ಗ್ರಂಥಿ ಕಟು ವಾಸನೆ ಹೊರಸೂಸುವುದು.

ಕಾಲರ್ಡ್ ಪೆಕರಿಗಳು 5–15 ಪ್ರಾಣಿಗಳನ್ನೊಳಗೊಂಡ ಸಣ್ಣ ಗುಂಪುಗಳಲ್ಲಿ ವಾಸಿಸುವುವಾದರೆ, ಬಿಳಿ ತುಟಿಯ ಬಗೆಯವು 50–100 ಕ್ಕೂ ಹೆಚ್ಚಿನ ಸಂಖ್ಯೆಯ ಗುಂಪುಗಳಲ್ಲಿರುವುವು. ಗುಂಪಿಗೆ ನಿರ್ದಿಷ್ಟ ನಾಯಕನಿಲ್ಲ. ತಮ್ಮ ಪಾಡಿಗೆ ತಮ್ಮನ್ನು ಬಿಟ್ಟರೆ ಪೆಕರಿಗಳು ಮನುಷ್ಯನ ತಂಟೆಗೆ ಬರುವುದಿಲ್ಲ. ಆದರೆ, ಗುಂಪಿನ ಯಾವುದೇ ಪ್ರಾಣಿಯನ್ನು ಘಾಸಿಗೊಳಿಸಿದರೆ ಇಲ್ಲವೇ ಬೆನ್ನಟ್ಟಿದರೆ ಇಡೀ ಗುಂಪೇ ಶತ್ರುವಿನ ಮೇಲೆರಗುವ ಪ್ರವೃತ್ತಿಯನ್ನು ತೋರುವುವು. ತಮ್ಮ ಸಹಜ ಶತ್ರುಗಳಾದ ನಾಯಿ, ಕಯೋಟ್‌ಗಳೊಂದಿಗೆ ಬಲು ಉಗ್ರವಾಗಿ ಕಾದಾಡಿ ಅವನ್ನು ಹಿಮ್ಮೆಟ್ಟಿಸುವುವು.

ರಾತ್ರಿಯ ವೇಳೆ ಇಲ್ಲವೇ ತಂಪು ಹೊತ್ತಿನಲ್ಲಿ ತಮ್ಮ ಪ್ರಧಾನ ಆಹಾರವಾದ ಹಣ್ಣು, ಗೆಡ್ಡೆಗೆಣಸು, ಕಂದಪ್ರಕಂದಗಳನ್ನು ಅರಸುತ್ತ ಓಡಾಡುವುವು. ಹಗಲಿನಲ್ಲಿ ಪೊದೆ ಇಲ್ಲವೇ ಕಲ್ಲು ಪೊಟರೆಗಳ ನಡುವೆ ವಿಶ್ರಮಿಸುವುವು. ಹಾಗಾಗಿ ಮರಿ ಕೀಟಗಳನ್ನು ತಿನ್ನುವುದುಂಟು.

ವರ್ಷದ ಯಾವುದೇ ಕಾಲದಲ್ಲಿ ಮರಿ ಹಾಕಬಹುದು. ಗರ್ಭಧಾರಣೆಯ ಅವಧಿ 142–148 ದಿವಸಗಳು. ಸಾಮಾನ್ಯವಾಗಿ ಒಂದು ಸೂಲಿಗೆ 2 ಮರಿಗಳು ಹುಟ್ಟುತ್ತವೆ. ಹುಟ್ಟಿದ ಮರಿಗಳು ಕೆಲವೇ ಗಂಟೆಗಳಲ್ಲಿ ಓಡಾಡಬಲ್ಲವು. 6–8 ವಾರಗಳ ಕಾಲ ತಾಯ ಹಾಲು ಕುಡಿದು ಬೆಳೆಯುವ ಮರಿಗಳು 2–3 ತಿಂಗಳ ಅನಂತರ ಬೇರೆ ಹೋಗಬಹುದು. ಪೆಕರಿ ಸಾಮಾನ್ಯವಾಗಿ 20 ವರ್ಷ ಬದುಕುತ್ತದೆ. ಇವುಗಳನ್ನು ಮಾಂಸಕ್ಕಾಗಿ, ಚರ್ಮಕ್ಕಾಗಿ ಬೇಟೆಯಾಡುವುದಿದೆ.

***

**ಪೆಟ್ಟಿಗೆ ಆಮೆ:** ಕೀಲೋನಿಯ ಗಣದ, ಟೆಸ್ಟುಡಿಸಿಡೆ ಕುಟುಂಬದ ಸದಸ್ಯ. ಇದು ನೆಲವಾಸಿ ಆಮೆ. ಇದನ್ನು ಆಂಗ್ಲಭಾಷೆಯಲ್ಲಿ ಬಾಕ್ಸ್ ಟಾರ್ಟಾಯಿಸ್ ಎನ್ನುವರು. ಇದರ ಚಿಪ್ಪು ಮುಚ್ಚಿದ ಪೆಟ್ಟಿಗೆಯನ್ನು ಹೋಲುವುದರಿಂದ ಈ ಹೆಸರು. ಈ ಆಮೆ ಮುಖ್ಯವಾಗಿ ಉತ್ತರ ಅಮೆರಿಕದ ನಿವಾಸಿ. ಸಂಯುಕ್ತ ಸಂಸ್ಥಾನದ ಪೂರ್ವ ಭಾಗಗಳಲ್ಲಿ ಸಿಸ್ಟುಡೊ ಕ್ಯಾರಲೈನ ಪ್ರಭೇದವೂ, ಪಶ್ಚಿಮದಲ್ಲಿ ಸಿಸ್ಟುಡೊ ಅರ್ನೆಟ ಪ್ರಭೇದವೂ ವಾಸಿಸುತ್ತವೆ. ಪೆಟ್ಟಿಗೆ ಆಮೆಗಳು ನೆಲವಾಸಿಗಳಾದ್ದರಿಂದ ಬೆರಳುಗಳು ಪ್ರತ್ಯೇಕವಾಗಿದ್ದು, ಜಾಲಪಾದಗಳಿಲ್ಲ. ಪೂರ್ವಭಾಗದಲ್ಲಿರುವ ಪ್ರಭೇದದ ಹಿಂಗಾಲಿನಲ್ಲಿ 4 ನಖಗಳು, ಪಶ್ಚಿಮ ಭಾಗದ ಪ್ರಭೇದದ ಹಿಂಗಾಲಿನಲ್ಲಿ 2 ಅಥವಾ 4 ನಖಗಳಿವೆ. ಕ್ಯಾರಪೇಸ್ 10–15 ಸೆಂಮೀ ಉದ್ದವಿದೆ. ತಲೆಬುರುಡೆಯಲ್ಲಿ ಟೆಂಪೊರಲ್ ಕುಳಿಯಾಗಲ್ ಕುಳಿಯಾಗಲೀ ಮೂಳೆಗಳ ಕಮಾನಾಗಲೀ, ಕ್ವಾಡ್ರೇಟ್ ಮತ್ತು ಕ್ವಾಡ್ರೇಟೋಜೂಗಲ್ ಮೂಳೆಗಳಾಗಲೀ ಇಲ್ಲ. ದವಡೆಗಳಲ್ಲಿ ಹಲ್ಲುಗಳಿಲ್ಲ. ದವಡೆಯ ಅಂಚು ಚೂಪಾಗಿದೆ. ಪೆಟ್ಟಿಗೆ ಆಮೆ ಮಿಶ್ರಾಹಾರಿ. ಬೆಳೆಗಳಿಗೆ ಹಾನಿಕರವಾದ ಕೀಟಗಳನ್ನು ಭಕ್ಷಿಸಿ ಮಾನವನಿಗೆ ಸಹಾಯಕವಾಗಿದೆ. ಇದು 50 ರಿಂದ 100 ವರ್ಷಗಳ ದೀರ್ಘಕಾಲ ಜೀವಿಸುತ್ತದೆ. ತೀಕ್ಷ್ಣಚಳಿಯಲ್ಲಿ ಶೀತನಿದ್ರಾವಸ್ಥೆ ತಲುಪುವುದು.



ಪೌರ್ವಾತ್ಯ ಪೆಟ್ಟಿಗೆ ಆಮೆ

ಇದರ ಸಂತಾನೋತ್ಪತ್ತಿ ವಸಂತ ಋತುವಿನಲ್ಲಿ ನಡೆಯುತ್ತದೆ. ಹೆಣ್ಣಾಮೆ ನೆಲದಲ್ಲಿ ಗುಳಿಯನ್ನು ತೋಡಿ 3–6 ಮೊಟ್ಟೆಗಳನ್ನಿಟ್ಟು, ಮಣ್ಣಿನಿಂದ ಮುಚ್ಚುತ್ತದೆ. ಸೂರ್ಯನ ಶಾಖದಿಂದ ಮೊಟ್ಟೆಗಳೊಡೆದು ಮರಿಗಳು ಹೊರಬರುತ್ತವೆ. ಮರಿಗಳು ಸಣ್ಣ ಸಣ್ಣ ಕೀಟಗಳು, ಲಾರ್ವೆ ಎಳೆ ಹಸಿರು ಸಸ್ಯ ಮುಂತಾದವನ್ನು ತಿಂದು, ಪ್ರೌಢ ಜೀವಿಯಾಗುತ್ತದೆ.
***

**ಪೆಡಿಕ್ಯೂಲಿಡೆ:** ಆರ್ತ್ರಾಪೊಡ ವಂಶದ ಇನ್ಸೆಕ್ಟ ವರ್ಗದ ಕುಟುಂಬ. ಇದಕ್ಕೆ ಸೇರಿದ ಕೀಟಗಳಿಗೆ ಹೇನುಗಳೆಂದು ಹೆಸರು. ಇವು ಸ್ತನಿಗಳ ಶರೀರದ ಮೇಲೆ ಬಾಹ್ಯ ಪರೋಪಜೀವಿಗಳಾಗಿ ವಾಸಿಸುತ್ತವೆ. ಅತಿಥೇಯ ಜೀವಿಗಳ ದೇಹದಿಂದ ರಕ್ತ ಹೀರಿ, ಬದುಕುತ್ತವೆ.

ಹೇನಿನ ದೇಹ ಚಿಕ್ಕದು. ತಲೆ, ಎದೆ ಹಾಗೂ ಉದರ ಭಾಗಗಳಿವೆ. ತಲೆ ಚಿಕ್ಕದು. ಕಣ್ಣುಗಳು ಅತಿ ಸೂಕ್ಷ್ಮ ಗಾತ್ರದವು. ಬಾಯಿ ಉಪಾಂಗಗಳಾದ ಕೆಳತುಟಿ, ದವಡೆ ಹಾಗೂ ಮ್ಯಾಕ್ಸಿಲಗಳು ಪೋಷಕ ಜೀವಿಯ ದೇಹವನ್ನು ಚುಚ್ಚಿ, ರಕ್ತ ಹೀರಲು ಮಾರ್ಪಾಟಾಗಿವೆ. ರಕ್ತ ಹೀರದಿದ್ದಾಗ, ಈ ಉಪಾಂಗ ಗಂಟಲೊಳಗಿನ ಚೀಲದಲ್ಲಿ ಹುದುಗಿರುತ್ತವೆ. ಎದೆಯಲ್ಲಿ 6 ಕಾಲುಗಳಿವೆ. ಪ್ರಭೇದಗಳಲ್ಲಿ ಭಿನ್ನವಾಗಿದೆ. ಇದು ಆಯಾ ಪೋಷಕ ಜೀವಿಗಳ ಕೂದಲುಗಳ ಸುತ್ತಳತೆಗೆ ಸರಿಹೊಂದುವಂತೆ ರೂಪುಗೊಂಡಿದೆ. ಹೇನು ಭದ್ರವಾಗಿ ರೋಮಗಳಿಗೆ ಅಂಟಿಕೊಳ್ಳಲು ಇದು ಸಹಾಯಕ. ಹೇನಿಗೆ ರೆಕ್ಕೆಗಳಿಲ್ಲ. ಉದರ ಭಾಗ ಸ್ವಲ್ಪ ನೀಳವಾಗಿದ್ದು, 10 ಖಂಡಗಳನ್ನು ಒಳಗೊಂಡಿದೆ.

ಹೇನು ಏಕಲಿಂಗ ಪ್ರಾಣಿ. ಸಂಭೋಗಾನಂತರ ಹೆಣ್ಣು ಹೇನು ಪೋಷಕ ಜೀವಿಯ ಕೂದಲಿಗೆ ಅಂಟಿಕೊಂಡಿರುವಂತೆಯೇ ಪ್ರತಿ ದಿನ 8–12 ರಂತೆ 300 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳು ಬೆಳೆದು ಮರಿ ಹೇನುಗಳಾಗುತ್ತವೆ. ಮರಿಗಳಿಗೆ ನಿಂಫ್ (ಸೀರು) ಎಂದು ಹೆಸರು. ಇವು ಬೆಳೆದಂತೆ, ಮೂರು ಬಾರಿ ಪೊರೆ ಕಳಚಿ, ಪ್ರೌಢ ಹೇನುಗಳಾಗುವುವು. ಅನಂತರ, 1–3 ದಿವಸಗಳಲ್ಲಿ ಸಂತಾನದಲ್ಲಿ ತೊಡಗುವುವು.

ಹೇನುಗಳಲ್ಲಿ 6 ಜಾತಿಗಳು, ಸು. 45 ಪ್ರಭೇದಗಳಿವೆ. ಮಾನವ ಶರೀರದಲ್ಲಿ 2 ಜಾತಿಯ ಹೇನುಗಳು ವಾಸಿಸುತ್ತವೆ. ಪೆಡಿಕ್ಯೂಲಸ್ ಮತ್ತು ಥೀರಸ್. ಪೆಡಿಕ್ಯೂಲಸ್ ಜಾತಿಯಲ್ಲಿ ಪೆ. ಕೆಪಿಟಸ್ ಮತ್ತು ಪೆ. ಕಾರ್‌ಪೊರಸ್ ಎಂಬ 2 ಪ್ರಭೇದಗಳಿವೆ. ಪೆ. ಕೆಪಿಟಸ್ ಮಾನವನ ತಲೆಗೂದಲಿನಲ್ಲಿ ವಾಸಿಸುತ್ತದೆ. ಪೆ. ಕಾರ್‌ಪೊರಸ್ ಮಾನವನ ಶರೀರದ ಮೇಲೆ ವಾಸಿಸುತ್ತದೆ. ಥೀರಸ್ ಪ್ಯೂಬಸ್ ಮಾನವನ ಹೊಟ್ಟೆಯ ಕೆಳಭಾಗದ ಪ್ಯೂಬಿಕ್ ಭಾಗದಲ್ಲಿರುವ ರೋಮಗಳಲ್ಲಿ ವಾಸಿಸುವ ಹೇನು. ಇದು ನೋಡಲು ಏಡಿಯಂತಿರುವುದರಿಂದ ಏಡಿ ಹೇನು ಎಂಬ ಹೆಸರಿದೆ.

ಹೇನುಗಳು ಮಾನವನಲ್ಲಿ ಟೈಫಸ್ ಜ್ವರ ಮತ್ತು ಮರುಕಳಿಸುವ ಜ್ವರಗಳನ್ನು ಉಂಟುಮಾಡುತ್ತವೆ. ರೋಗಕ್ರಿಮಿಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತವೆ. ಕೋತಿಗಳಲ್ಲಿ ಪೆಡಿಸಿನಸ್ ಜಾತಿಗೆ ಸೇರಿದ ಹೇನುಗಳಿವೆ. ಸೀಲ್ ಪ್ರಾಣಿಗಳನ್ನು ಎಕೈನೊತೀರಿಯಸ್ ಜಾತಿಯ ಹೇನುಗಳು ಪೀಡಿಸುತ್ತವೆ. ಆನೆಗಳ ದೇಹದ ಮೇಲೆ ಹಿಮಟೊಮೈಜಸ್ ಎಲೆಫೆಂಟಸ್ ಹೇನುಗಳು ವಾಸಿಸುತ್ತವೆ. ಹಸು ಮತ್ತು ಕುದುರೆಗಳ ಹೊರಕಿವಿಗಳಲ್ಲಿ ಹಿಮಟೋಪೈನಸ್ ಟ್ಯುಬರ್‌ಕ್ಯುಲೀಟಸ್ ಹೇನುಗಳಿವೆ. ಇವೆಲ್ಲ ಪೀಡೆಕಾರಕಗಳಾಗಿ, ಈ ಪ್ರಾಣಿಗಳಿಗೆ ಅನೇಕ ರೀತಿಯ ರೋಗಗಳನ್ನು ಉಂಟುಮಾಡುತ್ತವೆ.
(ಕೆ.ಪಿ.ಆರ್.)

**ಪೆಡಿಪ್ಯಾಲ್ಪಿ:** ಆರ್ತ್ರಾಪೊಡ ವಂಶದ ಅರ್‍ಯಾಕ್ನಾಯ್ಡಿಯ ವರ್ಗದ ಗಣ. ಇದಕ್ಕೆ ಸೇರಿದ ಕೀಟಗಳಿಗೆ ಚಾಟಿಚೇಳುಗಳೆಂದು (ವ್ಹಿಪ್ ಸ್ಕಾರ್ಪಿಯನ್ಸ್) ಹೆಸರು. ಇವು ಪ್ರಧಾನವಾಗಿ ಉಷ್ಣವಲಯದಲ್ಲಿ ವಾಸಿಸುವ ಕೀಟಗಳು. ಯೂರೋಪ್, ಅಮೆರಿಕಗಳಲ್ಲಿ ಈ ಗುಂಪಿನ ಕೆಲವು ಪ್ರಭೇದಗಳಿವೆ. ಇವುಗಳ ಉದ್ದ 1–12 ಸೆಂಮೀ. ನೋಡಲು ಚೇಳಿನಂತೆ ಇವೆ. ಆದರೆ ಬಾಲ ಉದ್ದನೆಯ ಚಾಟಿಯಂತಿರುತ್ತದೆ. ಬಾಲದ ತುದಿಯಲ್ಲಿ ಕುಟುಕು ಕೊಂಡಿಯಿಲ್ಲ. ಇವು ನಿಶಾಚರಿಗಳು. ಹಗಲಿನಲ್ಲಿ ದಿಮ್ಮಿಗಳ ಕೆಳಗೆ, ಮರಳಿನಲ್ಲಿ ಹುದುಗಿಕೊಂಡಿರುತ್ತವೆ. ಇವುಗಳ ಆಹಾರ ಬೇರೆ ಜಾತಿಯ ಸಣ್ಣ ಕೀಟಗಳು. ಇವುಗಳಲ್ಲಿ ಕೆಲವು ಪ್ರಭೇದದ ಜೀವಿಗಳು ಉದ್ರೇಕಗೊಂಡಾಗ ವಿನಿಗರ್ ವಾಸನೆ ಹೋಲುವ ದ್ರವ ಹೊರಸೂಸುವುವು. ಉದಾ: ತೆಲಿಫೋನಸ್ ಮತ್ತು ಫ್ರೈನಿಕಸ್.
***

**ಪೆಡಿಸಲ್ಲೇರಿಯ:** ಎಕೈನೊಡರ್ಮೇಟ ವಂಶದ ಆಸ್ಟೆರಾಯ್ಡಿಯ ಮತ್ತು ಎಕೈನಾಯ್ಡಿಯ ವರ್ಗಕ್ಕೆ ಸೇರಿದ ಪ್ರಾಣಿಗಳಲ್ಲಿ ಕಾಣುವ ವಿಶೇಷ ರಚನೆಗಳು. ಇವು ಇಕ್ಕಳದಂತೆ ಕಾರ್ಯನಿರ್ವಹಿಸಲು ಮಾರ್ಪಾಟಾಗಿರುವ ಮುಳ್ಳುಗಳು. ಈ ವರ್ಗಗಳ ಪ್ರಾಣಿಗಳ ದೇಹದ ಮೇಲಿರುವ ಮುಳ್ಳುಗಳ ಮಧ್ಯೆ ಅಲ್ಲಲ್ಲಿ ಇರುತ್ತವೆ.

ಆಸ್ಟೆರಾಯ್ಡಿಯ ವರ್ಗದ ಪ್ರಾಣಿಗಳಲ್ಲಿ ಊರ್ಧ್ವಭಾಗದಲ್ಲಿ ಮಾತ್ರ ಇವೆ. ಪ್ರತಿ ಪೆಡಿಸಲ್ಲೇರಿಯದಲ್ಲಿ ಒಂದು ಉದ್ದನೆಯ ತೊಟ್ಟು ಮತ್ತು ತೊಟ್ಟಿನ ತುದಿಯಲ್ಲಿ 3 ಅಲಗು ಅಥವಾ ದವಡೆಗಳಿವೆ. ತೊಟ್ಟಿನ ಒಳಭಾಗದಲ್ಲಿ ಸಣ್ಣ ಆಧಾರ ದಂಡವಿದೆ. ದವಡೆಗಳಿಗೆ ಕೆಲವು ಸ್ನಾಯುಗಳ ಸಂಪರ್ಕವಿದ್ದು, ಇದರಿಂದ ಚಲನೆಗೆ ಅನುಕೂಲವಾಗಿದೆ.

ಪೆಡಿಸಲ್ಲೇರಿಯಗಳಲ್ಲಿ ಜೆಮ್ಮಿಫಾರಂ ಅಥವಾ ಗ್ಲಾಬಿಫೆರಸ್, ಟ್ರೈಡೆಂಟೇಟ್, ಟ್ರೈಪೋಲಿಯೇಟ್ ಮತ್ತು ಓಫಿಯೊಸಿಫ್ಯಾಲಸ್ ಎಂಬ ನಾಲ್ಕು ಬಗೆ. ಮೊದಲನೆಯದರಲ್ಲಿ ಪೆಡಿಸಲ್ಲೇರಿಯ ತೊಟ್ಟಿನ ಒಳಗಿನ ಆಧಾರದಂಡ ತೊಟ್ಟಿನ ತುದಿಯವರೆಗೆ ಚಾಚಿದೆ ಹಾಗೂ ಇದರ ಅಲಗುಗಳು ಉದ್ದವಾಗಿ ಮತ್ತು ಚೂಪಾಗಿವೆ. ತುದಿಯಲ್ಲಿ ಬಾಗಿವೆ. ಪ್ರತಿ ಅಲಗಿನಲ್ಲಿ ಒಂದು ಜೊತೆ ವಿಷಗ್ರಂಥಿಗಳಿವೆ. ಉಳಿದ 3 ತೆರನ ಪೆಡಿಸಲ್ಲೇರಿಯಗಳಲ್ಲಿ ಆಧಾರದಂಡ ತೊಟ್ಟಿನ ಬುಡಭಾಗದಲ್ಲಿ ಮಾತ್ರ ಇದೆ. ಟ್ರೈಡೆಂಟೇಟ್ ಬಗೆಯಲ್ಲಿ ಅಲಗುಗಳು ತ್ರಿಕೋಣಾಕಾರದವು. ಟ್ರೈಫೋಲಿಯೇಟ್ ಬಗೆಯಲ್ಲಿ ಎಲೆಯ ಆಕಾರದವು. ಓಫಿಯೊಸಿಫ್ಯಾಲಸ್ ಬಗೆಯಲ್ಲಿ ಅಗಲವಾಗಿವೆ.

ಜೆಮ್ಮಿಫಾರಮ್ ಪೆಡಿಸಲ್ಲೇರಿಯಗಳು ಪೆರಿಸ್ಟೋಮ್ ಬಿಟ್ಟು, ಚಿಪ್ಪಿನ ಉಳಿದೆಡೆಗಳಲ್ಲೆಲ್ಲ ಕಾಣುತ್ತವೆ. ಇತರ ಪ್ರಾಣಿಗಳನ್ನು ಕೊಲ್ಲಲು ಇವು ಬಳಕೆಯಾಗುತ್ತವೆ. ಟ್ರೈಡೆಂಟೇಟ್ ಹಾಗೂ ಓಫಿಯೊಸಿಫ್ಯಾಲಸ್ ಬಗೆಗಳು ಎರೆಪ್ರಾಣಿಗಳನ್ನು ಸೆರೆಹಿಡಿಯಲು ಸಹಾಯಕವಾಗಿವೆ. ಆದರೆ, ಟ್ರೈಪೋಲಿಯೇಟ್ ಬಗೆಯದು ಪ್ರಾಣಿಯ ದೇಹದ ಮೇಲೆ ಉಳಿಯಬಹುದಾದ ಪರವಸ್ತುಗಳನ್ನು ತೆಗೆದುಹಾಕಿ ಪ್ರಾಣಿಯ ದೇಹವನ್ನು ಶುಚಿಯಾಗಿಡಲು ನೆರವಾಗುತ್ತದೆ.
***

**ಪೆನ್ನಾಟ್ಯುಲೇಸಿಯ:** ಸೀಲೆಂಟರೇಟ ವಂಶದ ಆಂತೋಜೋವ ವರ್ಗ, ಆಲ್‌ಸಯೊನೇರಿಯ ಉಪವರ್ಗದಲ್ಲಿನ ಗಣ. ಇದರಲ್ಲಿ ಸು. 13 ಕುಟುಂಬಗಳು ಮತ್ತು 31 ಜಾತಿಯ ಕುಟುಕು ಕಣವಂತಗಳಿವೆ. ಇವೆಲ್ಲವೂ ಸಮುದ್ರವಾಸಿಗಳು. ಮುಖ್ಯವಾಗಿ ಸುಖೋಷ್ಣತೆ ಮತ್ತು ಮೆದುವಾದ ತಳವಿರುವ ಸಮುದ್ರ ತೀರಗಳಲ್ಲಿ ವಾಸಿಸುತ್ತವೆ. ಇವು ಮೃದುವಾದ ಸಮೂಹ ಜೀವಿಗಳು. ದೇಹದ ಉದ್ದ 5–60 ಸೆಂಮೀ. ಕೆಲವು 1 ಮೀ ಉದ್ದವಿರುತ್ತವೆ. ದೇಹದ ಬಣ್ಣ ಹಳದಿ, ಕಿತ್ತಳೆ, ಕೆಂಪು ಅಥವಾ ಬೂದು. ಲಿಪೊಕ್ರೋಮ್ ವರ್ಣದ್ರವ್ಯವೇ ದೇಹದ ಬಣ್ಣಕ್ಕೆ ಕಾರಣ.

ಈ ಗುಂಪಿನ ಪ್ರಾಣಿಗಳ ದೇಹದಲ್ಲಿ ತೊಟ್ಟು (ಪೀಡಂಕಲ್) ಮತ್ತು ರೇಕಿಸ್ 2 ಮುಖ್ಯ ಭಾಗಗಳಿವೆ. ತೊಟ್ಟು ಮರಳು ಅಥವಾ ಕೆಸರಿನಲ್ಲಿ ಹುದುಗಿರುತ್ತವೆ. ರೇಕಿಸ್

ಎಂಬುದು ಪ್ರಥಮ ಪಾಲಿಪ್ ಅಥವಾ ಅಕ್ಷೀಯ ಪಾಲಿಪ್. ಇದರ ಅಕ್ಕಪಕ್ಕಗಳಿಂದ ಹಲವಾರು ದ್ವಿತೀಯಕ ಪಾಲಿಪ್‌ಗಳು ಹುಟ್ಟುತ್ತವೆ. ಇವುಗಳಿಂದಾಗಿ ಇಡೀ ದೇಹ ಒಂದು ತೆರನ ಗರಿಲೇಖನಿಯಂತೆ ಗೋಚರಿಸುತ್ತದೆ. ಕಾರಣ, ಪೆನ್ನಾಟ್ಯುಲೇಸಿಯ ಗಣದ ಪ್ರಾಣಿಗಳನ್ನು ಕಡಲ ಲೇಖನಿಗಳೆಂದು ಕರೆಯುವರು.

ಈ ಪ್ರಾಣಿಗಳಲ್ಲಿ 2 ತರಹದ ಜ಼ೂಆಯಿಡಗಳಿವೆ. ಆಟೊಜ಼ೂಆಯಿಡ್ ಹಾಗೂ ಸೈಫೊನೊಜ಼ೂಆಯಿಡ್. ಮೊದಲನೆಯವು ಸಂತಾನಾಂಗಗಳು. ಪೆನ್ನಾಟ್ಯುಲ, ಕ್ಯಾವರ್‌ನ್ಯುಲೇರಿಯ, ಟೀರಾಯ್ಡಿಸ್, ವಿರ್‌ಗ್ಯುಲೇರಿಯ, ರೆನಿಲ, ಚುನೆಲ, ಅಂಬೆಲ್ಯುಲ. ಇವು ಭಾರತದ ಕರಾವಳಿ ಪ್ರದೇಶಗಳಲ್ಲಿ ವಾಸಿಸುತ್ತವೆ. ***

**ಪೆಪ್ಸಿನ್:** ಜಠರರಸದಲ್ಲಿರುವ ಒಂದು ಕಿಣ್ವ. ಜಠರವನ್ನು ಸೇರುವ ಮಾಂಸ, ಮೊಟ್ಟೆ, ಹಾಲು, ಬೇಳೆಗಳಂಥ ಸಸಾರಜನಕಯುತ ಆಹಾರ ಪದಾರ್ಥಗಳನ್ನು ಜೀರ್ಣಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅತ್ಯಲ್ಪ ಗಾತ್ರದ ಪೆಪ್ಸಿನ್ ಕೂಡ ಅದರ ಎಷ್ಟೋ ಪಟ್ಟು ಅಧಿಕ ಗಾತ್ರದ ಆಹಾರ ಪದಾರ್ಥಗಳಲ್ಲಿ ಜೀವರಾಸಾಯನಿಕ ಕ್ರಿಯೆಗಳನ್ನು ತ್ವರೆಗೊಳಿಸುವುದು. ಜೀವಂತ ಪ್ರಾಣಿಗಳಲ್ಲಿ ಮಾತ್ರ ಉತ್ಪತ್ತಿಯಾಗುವ ಕಿಣ್ವವಿದು. ಕೃತಕವಾಗಿ ಇದನ್ನು ತಯಾರಿಸುವುದು ಸಾಧ್ಯವಿಲ್ಲ. ಶುದ್ಧ ವಸ್ತು ಹೇರಳವಾಗಿ ಸಸಾರಜನಕ ರೂಪದಲ್ಲಿ ಸಿಗುತ್ತದೆ. ಪ್ರಾರಂಭದಲ್ಲಿ ಜಠರದ ಒಳಪೊರೆಯಲ್ಲಿ ಜಡವಾದ ಕಿಣ್ವಜನಕ ಇರುತ್ತದೆ. ಅದು ಸ್ರವಿಸಲ್ಪಟ್ಟು ಜಠರದಲ್ಲಿ ಸುರಿದು ಅಲ್ಲಿಯ ಹೈಡ್ರೊಕ್ಲೋರಿಕ್ ಆಮ್ಲದ ಜೊತೆ ಸೇರಿದ ಕೂಡಲೆ ಕ್ರಿಯಾಶಾಲಿ ಕಿಣ್ವ ಆಗುವುದು. ಜಠರದಲ್ಲಿ ಸ್ವಾಭಾವಿಕವಾಗಿರುವ ಅತಿಯಾದ ಆಮ್ಲತೆಯಲ್ಲಿ ಇದರ ಜೀರ್ಣಕ್ರಿಯೆ ಬಲು ಹೆಚ್ಚು. ಸಸಾರಜನಕಗಳಲ್ಲಿ ಜೋಡಣೆ ಆಗಿರುವ ಕೆಲವು ಅಮೈನೋ ಆಮ್ಲಗಳನ್ನು ಒಡೆದು ಬೇರ್ಪಡಿಸುತ್ತದೆ. ಸು. 30 ಗ್ರಾಂ ಕಿಣ್ವ ನಮ್ಮ ಮೈಬಿಸಿಯಷ್ಟು ಉಷ್ಣತೆಯಲ್ಲಿರುವ ಸುಮಾರು ಒಂಬತ್ತು ಲಕ್ಷ ಲೀಟರ್ ಹಾಲನ್ನು ಮೊಸರುಗಟ್ಟಿಸಬಲ್ಲದು. ಕಿಣ್ವವು ಸಸಾರಜನಕವೇ ಆದರೂ ಅದು ತನ್ನನ್ನು ತಾನೇ ಜೀರ್ಣಿಸದು.

ಇತರ ಸಸಾರಜನಕಗಳಂತೆ ಇದರ ಅಣುತೂಕವೂ ಹಿರಿಯದೇ, 35,000. ಇದರ ತಯಾರಿಕೆ ಸಾಮಾನ್ಯವಾಗಿ ಹಂದಿ ಜಠರದಿಂದ. ಒಂದು ಹಂದಿಯಲ್ಲಿ ಸರಾಸರಿ 1 ಗ್ರಾ. ನಷ್ಟು ಸಿಗುತ್ತದೆ. ಚರ್ಮ ಹದಮಾಡುವ ಮುನ್ನ, ಚಕ್ಕಳದಿಂದ ಕೂದಲು ಮುಂತಾದ ಅನಪೇಕ್ಷಿತ ಮೇಲ್ಭಾಗಗಳನ್ನು ತೆಗೆದುಹಾಕಲು ಇದು ಬಳಕೆಯಲ್ಲಿದೆ. ಜೆಲಟಿನನ್ನೂ ಕೂಡ ಇದು ವಿಲೀನಿಸಬಲ್ಲದು. ಏಕಾಣುಜೀವಿಗಳಂಥ ರೋಗಾಣುಗಳನ್ನು ಪ್ರಯೋಗಾಲಯದಲ್ಲಿ ಕೃತಕವಾಗಿ ಬೆಳೆಸಲು ಬೇಕಾದ ಪೆಪ್ಟೋನನ್ನು (ಅರೆಜೀರ್ಣಿಸಿದ ಸಸಾರಜನಕ) ತಯಾರಿಸಲೂ ಉಪಯುಕ್ತ. ***

**ಪೆರಿಪೇಟಸ್:** ಸಂದಿಪದಿ ವಂಶದ ಆನಿಕೊಫೊರ ವರ್ಗದ ಸದಸ್ಯ. ಇದು ಹುಳುವಿನಂತಿರುವ ಪ್ರಾಣಿ. ಇದನ್ನು ಸಂದಿಪದಿ ಮತ್ತು ವಲಯವಂತಗಳ ನಡುವಿನ ಕೊಂಡಿ ಎಂದು ಪರಿಗಣಿಸಲಾಗಿದೆ. ಇದರಲ್ಲಿ ಸು. 10 ಉಪಜಾತಿಗಳು, 70 ಪ್ರಭೇದಗಳಿವೆ. ಇವು ಪ್ರಪಂಚದ ಉಷ್ಣ ಪ್ರದೇಶದ ವಿಭಿನ್ನ ದೇಶಗಳಲ್ಲಿ ವಾಸಿಸುತ್ತವೆ. ಉದಾ: ಪೆರಿಪೇಟಸ್ ಎಂಬುದು ಅಮೆರಿಕದ ಉಷ್ಣ ವಲಯದಲ್ಲಿದೆ. ಚಿಲಿಯಲ್ಲಿ ಮೆಟಪೆರಿಪೇಟಸ್; ನ್ಯೂಗಿನಿ, ಸೆರಾಮ್ ದ್ವೀಪಗಳಲ್ಲಿ ಪ್ಯಾರಾಪೆರಿಪೇಟಸ್; ಕಾಂಗೋದಲ್ಲಿ ಮೀಸೊಪೆರಿಪೇಟಸ್; ಸುಮಾತ್ರ ಮಲಯಗಳಲ್ಲಿ ಇಯೊಪೆರಿಪೇಟಸ್; ಆಸ್ಟ್ರೇಲಿಯ, ತಾಸ್ಮೇನಿಯ, ನ್ಯೂಜಿಲೆಂಡುಗಳಲ್ಲಿ ಪೆರಿಪೇಟಾಯ್ಡಿಸ್; ಟಿಬೆಟ್ ಹಾಗೂ ಭಾರತದ ಈಶಾನ್ಯ ಭಾಗಗಳಲ್ಲಿ ಟೆಫ್ಲೊಪೆರಿಪೇಟಸ್; ನಾಟಾಲ್ ಹಾಗೂ ಕೇಪ್ ಕಾಲೊನಿಗಳಲ್ಲಿ ಪೆರಿಪೇಟಸ್ ಮತ್ತು ಆಪಿಸ್ತೊಪೇಟಸ್ ಹಾಗೂ ಅಮೆರಿಕದ ಪೆಸಿಫಿಕ್ ಪ್ರದೇಶದ ಜಲಾನಯನ ಕ್ಷೇತ್ರಗಳಲ್ಲಿ ಓರೊಪೆರಿಪೇಟಸ್ ಎಂಬ ಪ್ರಭೇದಗಳಿವೆ.



ಇದರ ವಾಸ ಕಲ್ಲು ಪೊಟರೆ, ಮರಗಳ ತೊಗಟೆಯ ಕೆಳಗೆ, ತೇವಪೂರಿತ ಮತ್ತು ಕತ್ತಲೆಯಿಂದ ಕೂಡಿದ ತಾಣಗಳಲ್ಲಿ. ಹಗಲಿನಲ್ಲಿ ಬಾಹ್ಯ ಲೋಕಕ್ಕೆ ಕಾಣಿಸಿಕೊಳ್ಳದೆ, ರಾತ್ರಿ ಮಾತ್ರ ಚಟುವಟಿಕೆಯಿಂದ ಅಲೆದಾಡುತ್ತವೆ. ನೋಡಲು ರೋಮರಹಿತ ಕಂಬಳಿಹುಳುವಿನಂತೆ ಇದೆ. ದೇಹದ ಉದ್ದ 2–4 ಸೆಂಮೀ. ಬಣ್ಣ ವಿವಿಧ ಬಗೆಯದು. ಆದರೆ, ದೇಹದ ತಳಭಾಗ ಮಾತ್ರ ನಸುಗೆಂಪು. ಚರ್ಮ ವೆಲ್ವೆಟ್ಟಿನಂತಿದೆ. ದೇಹದ ಹೊರಭಾಗದಲ್ಲಿ ಯಾವುದೇ ರೀತಿಯ ಖಂಡ ವಿಂಗಡಣೆ ಕಾಣದು. ಆದರೆ, ಕಾಲುಗಳ ಸಂಖ್ಯೆಯನ್ನವಲಂಬಿಸಿ (ದೇಹದ ಒಂದು ಖಂಡಕ್ಕೆ ಒಂದು ಜೊತೆ ಕಾಲುಗಳ ಲೆಕ್ಕದಲ್ಲಿ) ಖಂಡಗಳ ಸಂಖ್ಯೆಯನ್ನು ಗುರುತಿಸಿದ್ದಾರೆ. ಕಾಲುಗಳ ಸಂಖ್ಯೆ 4–40. ತಲೆಗೂ ದೇಹದ ಉಳಿದ ಭಾಗಕ್ಕೂ ಗಾತ್ರದಲ್ಲಿ ವ್ಯತ್ಯಾಸ ಇಲ್ಲ. ತಲೆಯಲ್ಲಿ 3 ಉಪಾಂಗಗಳಿವೆ. ಒಂದು ಜೊತೆ ಆಂಟೆನ (ಕುಡಿಮೀಸೆ), ದವಡೆಗಳು ಹಾಗೂ ಒಂದು ಜೊತೆ ಪ್ಯಾಪಿಲೀಗಳು, ಒಂದು ಜೊತೆ ಕಣ್ಣುಗಳು, ಮತ್ತು ಬಾಯಿ ಇದೆ. ಕಾಲುಗಳು ಮಾಂಸಲವಾಗಿವೆ. ಒಂದೊಂದರ ತುದಿಯಲ್ಲಿ 2 ಕೊಕ್ಕೆಗಳಿವೆ. ದೇಹದ ಹಿಂತುದಿಯಲ್ಲಿ ಗುದದ್ವಾರ ಮತ್ತು ಕೊನೆಯ ಜೋಡಿ ಕಾಲುಗಳ ನಡುವೆ ಪ್ರಜನನ ದ್ವಾರವಿದೆ. ಪ್ರತಿಯೊಂದು ಕಾಲಿನ ಬುಡದಲ್ಲಿ ದೇಹದ ಕಲ್ಮಶವನ್ನು ಹೊರಹಾಕಲು ಅನುಕೂಲವಾಗುವಂತೆ ಒಂದೊಂದು ನೆಫ್ರೀಡಿಯ ರಂಧ್ರವಿದೆ. ಪ್ಯಾಪಿಲೀಗಳು, ಆಂಟೆನಗಳು ಸ್ಪರ್ಶ ಸಂವೇದಿಗಳು. ಪೆರಿಪೇಟಸನ್ನು ಪೀಡಿಸಿದರೆ ಅದರ ಬಾಯಲ್ಲಿರುವ ಗ್ರಂಥಿಗಳಿಂದ ಒಂದು ತೆರನ ಲೋಳೆ ಹೊರಚಿಮ್ಮುತ್ತದೆ. ಈ ಲೋಳೆ ಪೆರಿಪೇಟಸಿನ ದೇಹವನ್ನು ಅಂಟಿಕೊಳ್ಳುವುದು. ಆಹಾರ ಜೀವಿಗಳಾದ, ಗೆದ್ದಲು, ಮರಹೇನು, ಕ್ರಿಮಿಕೀಟಗಳನ್ನು ಸೆರೆಹಿಡಿಯಲು ಪೆರಿಪೇಟಸ್ ಈ ಲೋಳೆಯನ್ನು ಬಳಸುತ್ತದೆ.

ಪೆರಿಪೇಟಸಿನ ಜೀರ್ಣಾಂಗ ವ್ಯವಸ್ಥೆ ಸರಳ ರೀತಿಯದು. ಸ್ನಾಯುಪುಷ್ಟ, ಗಂಟಲ ಕುಹರ, ಚಿಕ್ಕ ಅನ್ನನಾಳ, ಉದ್ದನೆಯ ಚೀಲದಂತಿರುವ ಜಠರ, ಚಿಕ್ಕ ಕರುಳು ಜೀರ್ಣಾಂಗದ ಪ್ರಧಾನ ಘಟಕಗಳು. ಬಾಯ ಅಂಗಳದಲ್ಲಿರುವ ನೆಫ್ರೀಡಿಯಗಳು ಲಾಲಾಗ್ರಂಥಿಗಳಾಗಿ ಮಾರ್ಪಟ್ಟಿವೆ. ಹೃದಯ ಉದ್ದನೆಯ ಕೊಳವೆಯಂತಿದೆ. ಇದೊಂದೇ ಏಕೈಕ ರಕ್ತನಾಳ. ಪೆರಿಪೇಟಸಿನ ಉಸಿರಾಟದ ಅಂಗಗಳೆಂದರೆ ಟ್ರೇಕಿಯಗಳು. ನರಮಂಡಲ ದೇಹದ ಮೇಲ್ಭಾಗದಲ್ಲಿರುವ ಮಿದುಳನ್ನು ತಳಭಾಗದಲ್ಲಿರುವ ಒಂದು ಜೊತೆ ನರತಂತುಗಳನ್ನು ಒಳಗೊಂಡಿದೆ.

ಪೆರಿಪೇಟಸ್‌ನಲ್ಲಿ ಲಿಂಗ ಭೇದ ಇದೆ. ಹೆಣ್ಣು ವರ್ಷಕ್ಕೆ 30–40 ಮರಿಗಳಿಗೆ ಜೀವ ನೀಡುತ್ತದೆ. ಗಾತ್ರ ಮತ್ತು ದೇಹದ ಬಣ್ಣಗಳಿಂದ ಮರಿಗಳು ಪ್ರೌಢ ಹುಳುವಿಗು ವ್ಯತ್ಯಾಸವಿದೆ.

ಪೆರಿಪೇಟಸ್‌ನಲ್ಲಿ ಜೋಡಿ ನೆಫ್ರೀಡಿಯಗಳು, ಪ್ರಜನನಾಂಗಗಳಲ್ಲಿ ಶಿಲಕಗಳು, ದೇಹದ ಭಿತ್ತಿಯಲ್ಲಿ ತೆಳು ಕ್ಯೂಟಿಕಲ್ ಹಾಗೂ ವರ್ತುಲ ಮತ್ತು ಲಂಬ ಸ್ನಾಯುಗಳು, ಸರಳ ರೀತಿಯ ಕಣ್ಣುಗಳ ಇವು ವಲಯವಂತ ಪ್ರಾಣಿಗಳ (ಅನೆಲಿಡ) ಲಕ್ಷಣಗಳು. ಹೀಮೋಸೀಲ್ (ದೇಹಾಂತರಾವಕಾಶ), ಟ್ರೇಕಿಯ, ಬಾಯಿ ಉಪಾಂಗಗಳು, ದವಡೆಗಳಾಗಿ ಮಾರ್ಪಟ್ಟಿರುವ ಗುಣಗಳು ಸಂಧಿಪದಿಗಳ (ಆರ್ತ್ರಾಪೊಡ) ಲಕ್ಷಣಗಳು. ಈ ಕಾರಣ ಪೆರಿಪೇಟಸ್ ಈ ಎರಡು ವಂಶಗಳ ಕೊಂಡಿಯಾಗಿದೆ. ಆದರೆ, ಇದಕ್ಕೇ ಪ್ರತ್ಯೇಕವಾದ ವಿಶೇಷ ಲಕ್ಷಣಗಳಿವೆ. ಉದಾ: ಒಂದೇ ಒಂದು ಜೊತೆ ದವಡೆಗಳು, ಖಂಡಗಳಿಗನುಗುಣವಾಗಿ ಜೋಡಣೆಯಾಗಿರದ ಟ್ರೇಕಿಯ ದ್ವಾರಗಳು, ತಲೆಯ ಹಿಂಬದಿಯ ಖಂಡಗಳ ಸರಳತೆ ಹಾಗೂ ಏಕರೂಪತೆಯಂತಹ ವಿಭಿನ್ನ ಗುಣಲಕ್ಷಣಗಳಿಂದ ಪೆರಿಪೇಟಸ್‌ನ್ನು ಪುರಾತನ ರೀತಿಯ ಸಂಧಿಪದಿಯಿಂದ, ಸಂಧಿಪದಿ ಗುಂಪಿನ ಮುಖ್ಯ ಕಾಂಡದಿಂದ ಬಹಳ ಹಿಂದೆಯೇ ಕವಲೊಡೆದಿರುವ ಗುಂಪನ್ನು ಇದು ಪ್ರತಿನಿಧಿಸುತ್ತದೆಂದು ಜೀವಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. (ಪಿ.ಎ.ಆರ್.)

**ಪೆರಿಯಾರ್ ಅಭಯಾರಣ್ಯ:** ಕೇರಳ ಮತ್ತು ತಮಿಳುನಾಡುಗಳ ಗಡಿ ಪ್ರದೇಶದಲ್ಲಿ ಕೇರಳದ ಭಾಗದಲ್ಲಿರುವ ಪ್ರಸಿದ್ಧ ಅಭಯಾರಣ್ಯ. ಪೆರಿಯಾರ್ ನದಿಗೆ 1895 ರಲ್ಲಿ ಕಟ್ಟಿದ ಆಣೆಕಟ್ಟಿನ ಫಲವಾಗಿ ಉಂಟಾದ ಪೆರಿಯಾರ್ ಸರೋವರದ ಸುತ್ತಮುತ್ತಲ ಸುಮಾರು 673 ಚಕಿಮೀ. ವಿಸ್ತೀರ್ಣದ ಪ್ರದೇಶವೇ ಈ ಅಭಯಾರಣ್ಯ. ಅಭಯಾರಣ್ಯದ ಪ್ರದೇಶ ವೃಕ್ಷಾಚ್ಛಾದಿತ ಬೆಟ್ಟಗುಡ್ಡಗಳನ್ನೂ ಕಣಿವೆಗಳನ್ನೂ ವಿಸ್ತಾರವಾದ ಹುಲ್ಲುಗಾವಲನ್ನೂ ಒಳಗೊಂಡಿದ್ದು ತುಂಬ ಸುಂದರವಾದ ವಿಹಾರ ಸ್ಥಳವಾಗಿದೆ.

ಸರೋವರದ ಬಾಹುಗಳು ಬೆಟ್ಟಗುಡ್ಡಗಳ ನಡುವೆ ಅಲ್ಲಲ್ಲಿ ಪಸರಿಸಿಕೊಂಡು ಚೆಲುವಾದ ಜಲಮಾರ್ಗಗಳನ್ನೂ ನೀರಚಾಚುಗಳನ್ನೂ ದ್ವೀಪಗಳನ್ನೂ ನಿರ್ಮಿಸಿರುವುದರಿಂದ ಸರೋವರ ಜಲ ವಿಹಾರಕ್ಕೆ ಸೊಗಸಾಗಿದೆ. ಇಲ್ಲಿಯ ಸುತ್ತಲ ಅರಣ್ಯದ ಪ್ರಮುಖ ವನ್ಯಪ್ರಾಣಿಗಳು ಹುಲಿ ಮತ್ತು ಆನೆ. ಇಲ್ಲಿ ಸುಮಾರು 700 ಆನೆಗಳಿವೆಯೆಂದು ಅಂದಾಜು (1980). ಇನ್ನಿತರ ವನ್ಯಪ್ರಾಣಿಗಳು ಕಾಡುಹಂದಿ, ಕಾಡುಕೋಣ, ಕಡವೆ. ಸಣ್ಣಗಾತ್ರದ ಪ್ರಾಣಿಗಳಲ್ಲಿ ಮುಖ್ಯವಾದವು ನೀರು ನಾಯಿ ಹಾಗೂ ಸಿಂಬಬಾಲದ ಮುಸುವ. ಇಲ್ಲಿಯ ಪಕ್ಷಿ ಸಂಕುಲವೂ ಸಂಪದ್ಭರಿತವಾಗಿದೆ. ಸುಮಾರು 200 ಕ್ಕೂ ಹೆಚ್ಚು ತೆರನ

ಹಕ್ಕಿಗಳಿವೆಯೆನ್ನಲಾಗಿದೆ. ಮಿಂಚುಳ್ಳಿ, ನೀರು ಕಾಗೆ (ಕಾರ್ಮೊರಾಂಟ್), ಕಾಡುಮೈನ, ಮಲಬಾರ್ ಹಾರ್ನ್‌ಬಿಲ್, ಪೈಡ್ ಹಾರ್ನ್‌ಬಿಲ್, ಮೀನು ತಿನ್ನುವ ಗೂಬೆ, ಹಾವಕ್ಕಿ (ಸ್ನೇಕ್‌ಬರ್ಡ್) ಮುಂತಾದುವು ಇಲ್ಲಿಯ ಮುಖ್ಯ ಪಕ್ಷಿಗಳು.

ಇಲ್ಲಿಯ ವನ್ಯಪ್ರಾಣಿಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ದೋಣಿ ಸೌಲಭ್ಯವಿದೆ. ಪ್ರವಾಸಿಗರಿಗೆ ವಸತಿ ಸೌಕರ್ಯವೂ ಉಂಟು. ತೆಕ್ಕಾಡಿಯಲ್ಲಿ ಅರಣ್ಯ ನಿವಾಸ್ ಹೋಟೆಲೂ ಹತ್ತಿರದ ಎಡಪಾಲಯಮಿನಲ್ಲಿ ಪ್ರವಾಸಿ ಮಂದಿರವೂ ತಣ್ಣಿಕುಡಿ ಮತ್ತು ಮುಲಕುಡಿಗಳಲ್ಲಿ ವಿಶ್ರಾಂತಿ ಗೃಹಗಳೂ ಇವೆ. ***

**ಪೆರಿವಿಂಕಲ್:** ಗ್ಯಾಸ್ಟ್ರಾಪೊಡ ವರ್ಗದ ಪ್ರೋಸೋಬ್ರ್ಯಾಂಕಿಯ ಗಣದ ಲಿಟೋರೈನಿಡೆ ಕುಟುಂಬಕ್ಕೆ ಸೇರಿದ ಮೃದ್ವಂಗಿ. ಲಿಟೋರೈನ ಇದರ ವೈಜ್ಞಾನಿಕ ಹೆಸರು. ಇದರಲ್ಲಿ ಸುಮಾರು 80 ಪ್ರಭೇದಗಳುಂಟು. ಇವುಗಳ ಪೈಕಿ ಅತ್ಯಂತ ಮುಖ್ಯವಾದದ್ದು ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ $43^0$ ಉತ್ತರ ಅಕ್ಷಾಂಶದಿಂದ ಮೇಲಿನ ವಲಯದಲ್ಲಿ ಸಿಕ್ಕುವ ಲಿಟೋರಿಯ. ಇದರ ಉದ್ದ ಸುಮಾರು 2.5 ಸೆಂಮೀ. ಕಿವಿರುಗಳ ಎಳೆಗಳು ಚರ್ಮದ ಹೊರಮಡಿಕೆಯ ಅವಕಾಶದುದ್ದ ಚಾಚಿಕೊಂಡಿರುವುದೂ ಹೊರಪದರ ರಕ್ತನಾಳಗಳಂತೆ ಕವಲೊಡೆದು ಘುಪ್ಪುಸವಾಗಿ ಮಾರ್ಪಾಟ್ಟಿರುವುದೂ ಈ ಪ್ರಾಣಿಗಳ ವೈಶಿಷ್ಟ್ಯ.

ಪೆರಿವಿಂಕಲುಗಳು ಸಸ್ಯಾಹಾರಿಗಳೂ ಹೌದು. ಮಾಂಸಾಹಾರಿಗಳು ಹೌದು. ಇವು ಸಮುದ್ರದಲ್ಲಿ ಸಿಗುವ ಪಾಚಿ, ಸಣ್ಣ ಮೃದ್ವಂಗಿಗಳು ಮತ್ತು ವಲ್ಕವಂತ ಪ್ರಾಣಿಗಳನ್ನು ತಿಂದು ಜೀವಿಸುತ್ತವೆ. ಮೊಟ್ಟೆಗಳನ್ನು ಒಂಟಿಯಾಗಿ ಇಲ್ಲವೇ ಗುಂಪು ಗುಂಪಾಗಿ ಇಡುತ್ತವೆ. ಲಿಟೋರೈನ ರೂಡಿಸ್ ಮತ್ತು ಲಿಟೋರೈನ ಸೆರಿಟಾಯ್ಡಿಸ್ ಎಂಬುವು ಮಾತ್ರ ಮೊಟ್ಟೆಗಳನ್ನಿಡದೆ ಮರಿಯನ್ನು ಈಯುತ್ತವೆ. ಆದ್ದರಿಂದ ಇವುಗಳಲ್ಲಿ ಈಜಾಡುವ ಮರಿಹುಳುವಿನ ಅವಸ್ಥೆಗಳು ಕಾಣಬರುವುದಿಲ್ಲ. (ಕೆ.ಎಂ.ವಿ.)

**ಪೆರಿಸೊಡ್ಯಾಕ್ಟಿಲ:** ಒಂಟಿಗೊರಸುಳ್ಳ ಸಸ್ಯಾಹಾರಿ ಸ್ತನಿಗಳನ್ನು ಒಳಗೊಂಡಿರುವ ಗಣ. ಈ ಗಣದ ಪ್ರಾಣಿಗಳಿಗೆ ಬೆಸಸಂಖ್ಯೆಯ ಬೆರಳುಗಳುಳ್ಳ ಪ್ರಾಣಿಗಳೆಂಬ ಹೆಸರೂ ಉಂಟು. ಕುದುರೆ, ಕತ್ತೆ, ಜೀಬ್ರ, ಟೇಪರ್ ಮತ್ತು ಖಡ್ಗ ಮೃಗಗಳು ಈ ಗಣದ ಮುಖ್ಯ ಪ್ರತಿನಿಧಿಗಳು. ಮಧ್ಯ ಮತ್ತು ದಕ್ಷಿಣ ಏಷ್ಯ, ಸುಮಾತ್ರ, ಜಾವ, ಬೋರ್ನಿಯೊ, ಸಹರಾವನ್ನುಳಿದು ಆಫ್ರಿಕದ ಇತರ ಪ್ರದೇಶಗಳು, ದಕ್ಷಿಣ ಮೆಕ್ಸಿಕೊದಿಂದ ಉತ್ತರ ಅರ್ಜೆಂಟೀನ ಇಲ್ಲೆಲ್ಲ ಈ ಪ್ರಾಣಿಗಳು ಕಂಡುಬರುವುವು. ಪಶ್ಚಿಮ ಗೋಳಾರ್ಧದ ಏಕೈಕ ಮೂಲವಾಸಿ ಒಂಟಿಗೊರಸಿ ಸ್ತನಿ ಎಂದರೆ ಟಾಪಿರ್ ಮಾತ್ರ. ಇದು ಆರ್ದ್ರಪೂರಿತ ದಟ್ಟ ಕಾಡುಗಳಲ್ಲಿ ವಾಸಿಸುತ್ತದೆ. ಕುದುರೆ ಹಾಗೂ ಖಡ್ಗಮೃಗಗಳು ಹುಲ್ಲುಗಾವಲುಗಳಲ್ಲೋ ಕುರುಚಲು ಕಾಡುಗಳಲ್ಲೋ ವಾಸಿಸುವುವು.

ಪೆರಿಸೊಡ್ಯಾಕ್ಟಿಲ ಗುಂಪಿನ ಪ್ರಾಣಿಗಳು ಮಧ್ಯಮ ಇಲ್ಲವೇ ದೊಡ್ಡ ಗಾತ್ರದವು. ನಿಧಾನವಾಗಿ ನಡೆದಾಡುವುದಕ್ಕಿಂತ ಓಡಲು ಅನುಕೂಲವಾಗುವಂತೆ ಇವುಗಳ ಕಾಲುಗಳೂ ಮಾರ್ಪಾಟಾಗಿವೆ. ಇವುಗಳ ದೇಹದ ಭಾರ ಕಾಲುಗಳ ಮಧ್ಯ ಬೆರಳುಗಳ ಮೇಲೆ ಬೀಳುವುದಲ್ಲದೆ ಕಾಲಿನ ಪ್ರಧಾನ ಅಕ್ಷ ಮೂರನೆಯ ಬೆರಳಿನ ಮೂಲಕ ಸಾಗುತ್ತದೆ. ಹಿಂಗಾಲು ಮುಂಗಾಲುಗಳೆರಡರಲ್ಲೂ ಮಧ್ಯದ (ಮೂರನೆಯ) ಬೆರಳೇ ಅತ್ಯಂತ ಉದ್ದವಾಗಿರುವುದು. ಕುದುರೆಗಳಲ್ಲಿ ಪ್ರತಿಯೊಂದು ಕಾಲಿನ ಮೂರನೆಯ ಬೆರಳು ಮಾತ್ರ ಕಾರ್ಯಶೀಲವಾಗಿದೆಯಾದರೆ ಟೇಪರುಗಳ ಹಿಂಗಾಲುಗಳಲ್ಲಿ ಮೂರು ಬೆರಳುಗಳೂ (ಎರಡನೆಯ, ಮೂರನೆಯ ಹಾಗೂ ನಾಲ್ಕನೆಯ ಬೆರಳುಗಳೂ) ಮುಂಗಾಲುಗಳಲ್ಲಿ ನಾಲ್ಕು ಬೆರಳುಗಳೂ (2, 3, 4, ಮತ್ತು 5 ನೆಯ ಬೆರಳುಗಳೂ) ಇವೆ. ಖಡ್ಗ ಮೃಗಗಳಲ್ಲಾದರೋ ಎಲ್ಲ ನಾಲ್ಕು ಕಾಲುಗಳಲ್ಲೂ ತಲಾ ಮೂರು ಬೆರಳುಗಳಿವೆ. ಎಲ್ಲವುಗಳಲ್ಲೂ ಮೊದಲನೆಯ ಬೆರಳು ಇಲ್ಲವೇ ಇಲ್ಲ. ಪಳೆಯುಳಿಕೆ ರೂಪದಲ್ಲಿ ಪರಿಚಿತವಾಗಿರುವ ಕೆಲವು ಪುರಾತನ ಪ್ರಾಣಿಗಳಲ್ಲಿ ಈ ಬೆರಳು ಅವಶೇಷ ರೂಪದಲ್ಲಿ ಇದೆ. ಕಾಲಿನ ಮಧ್ಯದ ಬೆರಳುಗಳು ಚಪ್ಪಟೆಯಾಗಿಯೂ ಮುಮ್ಮೂಲೆಯಾಕಾರದವೂ ಆಗಿದ್ದು ಸುತ್ತ ಕೊಂಬಿನ ಕವಚವನ್ನು ಗೊರಸಿನಲ್ಲಿ ಕಾಣಬಹುದು. ಪೆರಿಸೊಡ್ಯಾಕ್ಟಿಲ ಪ್ರಾಣಿಗಳು ನಡೆದಾಡುವಾಗ ಬರಿಯ ಗೊರಸನ್ನು ನೆಲಕ್ಕೆ ಊರುವುವೇ ವಿನಾ ಅಂಗಾಲನ್ನಾಗಲೀ ಹಿಮ್ಮಡಿಯನ್ನಾಗಲೀ ನೆಲಕ್ಕೆ ಸೋಕಿಸುವುದೇ ಇಲ್ಲ.

ಇವುಗಳ ಚರ್ಮ ಸಾಮಾನ್ಯವಾಗಿ ಮಂದವಾಗಿದೆ. ಮೈಮೇಲೆ ದಟ್ಟವಾಗಿಯೊ ವಿರಳವಾಗಿಯೊ ಕೂದಲುಗಳಿವೆ. ಇವುಗಳ ದಂತಸೂತ್ರ 0–3/0–3, 0–1/0–1, 3–4/3–4, 3/3.

ಹಿಂದೆ ಜೀವಿಸಿದ್ದ ಪ್ರಾಣಿಗಳಲ್ಲಿ ಒರೆ ಹಲ್ಲುಗಳು ದಾಡೆಗಳಂತೆ ಇದ್ದವು. ಆದರೆ, ಈಗ ಜೀವಿಸಿರುವವುಗಳಲ್ಲಿ ಹೀಗಿಲ್ಲ. ಅಲ್ಲದೆ, ಇವುಗಳಲ್ಲಿ ಕೊಂಬೂ (ಕೋಡು) ಇಲ್ಲ. ಈ ಗಣದ ಸದಸ್ಯರು ಸಸ್ಯಾಹಾರಿಗಳು. ಆಹಾರ ಸೇವನೆಯ ಕ್ರಮದಲ್ಲಿ ಹುಲ್ಲನ್ನು ಮೇಯುವ ಮತ್ತು ಚಿಗುರನ್ನು ಮೆಲ್ಲುವ ಎರಡೂ ಲಕ್ಷಣಗಳನ್ನು ತೋರುವುವು.

ಹುಟ್ಟಿದ 4–6 ವರ್ಷಗಳಲ್ಲಿ ಮರಿಗಳು ಪ್ರೌಢಾವಸ್ಥೆಗೆ ಬರುವುವು. ಇವುಗಳ ಆಯಸ್ಸು 20–40 ವರ್ಷಗಳು.

ಕತ್ತೆ ಕುದುರೆಗಳನ್ನು ಬಿಟ್ಟರೆ ಉಳಿದ ಪ್ರಭೇದಗಳ ಸಂದಣಿ ತುಂಬಾ ಕಡಿಮೆ. ಕುದುರೆಗಳಾದರೋ, ಮಾನವನಿಂದ ಸಾಕಣೆಗೊಂಡು, ದನಗಳಂತೆಯೇ ಮಾನವನ ಆರ್ಥಿಕ ದೃಷ್ಟಿಯಿಂದ ಬಲು ಪ್ರಮುಖವೆನಿಸಿವೆ. ಭೂವೈಜ್ಞಾನಿಕವಾಗಿ ಈ ಗಣದ ಪ್ರಾಣಿಗಳ ವಿಸ್ತಾರ ಇಯೋಸೀನಿನಿಂದ ಇತ್ತೀಚಿನ ತನಕ ಉಂಟು. ಹಿಂದೊಮ್ಮೆ ಅತ್ಯಧಿಕ ಸಂಖ್ಯೆಯಲ್ಲಿದ್ದ ಕುಟುಂಬಗಳಲ್ಲಿ 9 ಇಂದು ಗತವಂಶಿಗಳಾಗಿವೆ. ಈಕ್ವಿಡೀ ಕುಟುಂಬಕ್ಕೆ ಸೇರಿದ ಕುದುರೆ, ಕತ್ತೆ, ಜೀಬ್ರಾ; ಟೇಪಿರಿಡೇ ಕುಟುಂಬಕ್ಕೆ ಸೇರಿದ ಟೇಪರ್‌ಗಳು ಹಾಗೂ ರೈನೊಸಿರಾಟಿಡೇ ಕುಟುಂಬಕ್ಕೆ ಸೇರಿದ ಖಡ್ಗ ಮೃಗಗಳು. ಈಗ ಜೀವಂತವಾಗಿರುವ ಪ್ರಭೇದಗಳು.

***

**ಪೆರೂಟ್ಸ್, ಮ್ಯಾಕ್ಸ್ ಫರ್ಡಿನೆಂಡ್:** (೧೯೧೪–೨೦೦೨) ಹೀಮೊಗ್ಲಾಬಿನ್ ಅಣು ರಚನಾ ವಿನ್ಯಾಸವನ್ನು ವಿಶ್ಲೇಷಿಸಿದ್ದಕ್ಕಾಗಿ ೧೯೬೨ರಲ್ಲಿ ನೊಬೆಲ್ ಪಾರಿತೋಷಿಕ ವಿಜೇತ. ಆಸ್ಟ್ರಿಯನ್–ಬ್ರಿಟಿಷ್ ಜೀವರಸಾಯನ ವಿಜ್ಞಾನಿ. ವಿಯನ್ನಾದಲ್ಲಿ ಜನನ (೧೯–೫–೧೯೧೪). ೧೯೩೨ ರಲ್ಲಿ ವಿಯನ್ನಾ ವಿಶ್ವವಿದ್ಯಾಲಯ ಸೇರಿ ಅಕಾರ್ಬನಿಕ ರಸಾಯನವಿಜ್ಞಾನ ವಿಶ್ಲೇಷಣ ಪದ್ಧತಿಯ ಅಧ್ಯಯನ ಮಾಡುತ್ತಿದ್ದಂತೆ ಈತನ ಕುತೂಹಲ ಕಾರ್ಬನಿಕ ರಸಾಯನವಿಜ್ಞಾನದತ್ತ ವಾಲಿತು. ಅದರಲ್ಲೂ ಫಾನ್‌ವೆಸ್ಲಿ ಎಂಬಾತನ ಜೀವರಸಾಯನ ವಿಜ್ಞಾನ ಪಾಠಗಳು ಈತನಿಗೆ ಅತಿ ಪ್ರಿಯವಾದುವು. ಆ ಪಾಠಗಳಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಎಫ್.ಜಿ.ಹಾಫ್‌ಕಿನ್ಸ್ ಎಂಬಾತನ ಪ್ರಯೋಗಗಳನ್ನು ವಿವರಿಸುತ್ತಿದ್ದುದರಿಂದ ಸಹಜವಾಗಿ ಪೆರೂಟ್ಸ್ ತನ್ನ ಸಂಶೋಧನ ಮಹಾಪ್ರಬಂಧ ಸಿದ್ಧಪಡಿಸಲು ಕೇಂಬ್ರಜ್ಜೇ ಸರಿಯಾದ ಸ್ಥಳವೆಂದು ನಿರ್ಧರಿಸಿ, ಕ್ಯಾವೆಂಡಿಷ್ ಪ್ರಯೋಗ ಶಾಲೆಯಲ್ಲಿ ಜೆ ಡಿ. ಬರ್ನಾಲ್ ಬಳಿ ಸಂಶೋಧನೆಗೆ ಸೇರಿದ (೧೯೩೬).

ಹಿಟ್ಲರ್ ಕೈಗೊಂಡ ಆಸ್ಟ್ರಿಯ ಮತ್ತು ಚೆಕೊಸ್ಲೊವಾಕಿಯ ದಂಡಯಾತ್ರೆಯ ಫಲವಾಗಿ ಪೆರೂಟ್ಸನ ತಂದೆಯ ವಂಶಪಾರಂಪರ್ಯ ಬಟ್ಟೆ ವ್ಯಾಪಾರ ಕುಸಿದು ಆತ ನಿರಾಶ್ರಿತನಾದ. ಹೀಗಾಗಿ ಪೆರೂಟ್ಸ್ ಸರ್ ಲಾರೆನ್ಸ್ ಬ್ರಾಗನ ಪ್ರಯೋಗ ಸಹಾಯಕನಾಗಿ ಸೇರಿ (೧೯೩೯) ಹಣ ಸಂಪಾದನೆ ಮಾಡಬೇಕಾಯಿತು. ರಾಕ್‌ಫೆಲ್ಲರ್ ದತ್ತಿಯ ಧನಸಹಾಯವೂ ಒದಗಿಬಂತು. ಹೊಸತಾಗಿ ವ್ಯವಸ್ಥೆ ಮಾಡಿದ ವೈದ್ಯಕೀಯ ಸಂಶೋಧನ ಮಂಡಲದ ಅಣುಜೀವ ಶಾಸ್ತ್ರ ಘಟಕದ ಮುಖ್ಯಸ್ಥನಾಗಿ ನೇಮಿಸಲಾಯಿತು (೧೯೪೭). ಅಲ್ಲಿ ಈತನ ಏಕಮಾತ್ರ ಸಂಗಾತಿ ಆಗಿದ್ದವ ಮುಂದೊಂದು ದಿನ ಈತನ ಜೊತೆಯಲ್ಲೇ ನೊಬೆಲ್ ಪಾರಿತೋಷಿಕ ಪಡೆದ ಪ್ರಖ್ಯಾತ ಅಣುಜೀವ ವಿಜ್ಞಾನಿ ಜೇ.ಸಿ. ಕೆಂಡ್ರೂ. ಮುಂದೆ ೧೯೪೨ರಲ್ಲಿ ಪೆರೂಟ್ಸ್ ಈ ಘಟಕದ ಅಧ್ಯಕ್ಷನಾಗುವ ತನಕವೂ ಸರ್ ಲಾರೆನ್ಸ್ ಬ್ರಾಗ್‌ನೊಡನೆ ಸಹಯೋಗ ಮುಂದುವರಿದಿತ್ತು.

ರಕ್ತದಲ್ಲಿರುವ ಹೀಮೊಗ್ಲಾಬಿನ್ ಎಂಬ ಅತ್ಯಂತ ಪ್ರಮುಖಾಂಶದ ರಚನೆಯ ಬಗೆಗೆ ಪೆರೂಟ್ಸನ ಸಂಶೋಧನೆ ಪ್ರಾರಂಭವಾಯಿತು. ಈ ಕಾರ್ಯಕ್ಕೆ ಮೂವರು ಪ್ರಾಧ್ಯಾಪಕರಿಂದ ಸ್ಫೂರ್ತಿಯೊದಗಿತ್ತು. ನೊಬೆಲ್ ಪ್ರಶಸ್ತಿ ವಿಜೇತ ಎಫ್.ಜಿ. ಹಾಫ್‌ಕಿನ್ಸ್ ಅಂಗಾಂಶಗಳಲ್ಲಿಯ ರಾಸಾಯನಿಕ ಕ್ರಿಯಾ ವೇಗವರ್ಧಕಗಳಾದ ಕಿಣ್ವಗಳ ಪಾತ್ರದ ಕಡೆಗೆ ಆಗಿನ ಸಂಶೋಧಕರ ಗಮನವನ್ನು ಸೆಳೆದಿದ್ದ. ಅಂದು ತಿಳಿದಿದ್ದ ಕೆಲವು ಕಿಣ್ವಗಳೆಲ್ಲವೂ ಪ್ರೋಟೀನುಗಳೇ. ಕಬ್ಬಿಣ ಪ್ರೋಟೀನಿನೊಡನೆ ಸಂಯೋಗವಾದಾಗ ಉಂಟಾಗುವ ರಾಸಾಯನಿಕ ಆಕರ್ಷಣೆ, ಮತ್ತು ವೇಗವರ್ಧನೆಯಲ್ಲಿ ಆಗುವ ವ್ಯತ್ಯಾಸ ಇವನ್ನು ಡೇವಿಡ್ ಕೀಲಿನ್ ಪತ್ತೆ ಮಾಡಿದ್ದ. ಉಚ್ಛ್ವಾಸ ನಿಶ್ವಾಸ ಕ್ರಿಯಾ ವೇಗವರ್ಧಕ ಕಿಣ್ವಗಳನ್ನು ಆವಿಷ್ಕರಿಸಿದವನು ಇವನೇ. ಪೆರೂಟ್ಸನ ಗುರು ಜೆ. ಡಿ. ಬರ್ನಾಲ್ ಆಗಲೇ ಕ್ಷ–ಕಿರಣ ವಿವರ್ತನೆಯಿಂದ ಸ್ಫಟಿಕ ವಿನ್ಯಾಸ ಶೋಧನೆಯಲ್ಲಿ ತೊಡಗಿದ್ದ. ಪ್ರೋಟೀನುಗಳು ಹೆಚ್ಚು ದೊಡ್ಡ ಅಣುಗಳಾಗಿದ್ದರೂ ಅವುಗಳಿಗೆ ನಿರ್ದಿಷ್ಟ ರಚನೆ ಇದೆ ಎಂಬ ಸಂಗತಿಯನ್ನು ಹಾಫ್‌ಕಿನ್ಸ್ ಮತ್ತು ಬರ್ನಾಲ್ ತೋರಿಸಿದ್ದರು. ಆ ಕಾಲದಲ್ಲಿ ಇದೊಂದು ಆಶ್ಚರ್ಯಕರ ಶೋಧವಾಗಿತ್ತು. ಅಂದು ನ್ಯೂಕ್ಲಿಯರ್ ಆಮ್ಲಗಳ ಪ್ರಾಮುಖ್ಯ ತಿಳಿದಿರಲಿಲ್ಲ. ಹೀಗಾಗಿ ಜೀವಿಗಳ ರಹಸ್ಯ ಪ್ರೋಟೀನುಗಳಲ್ಲಿ ಅಡಕವಾಗಿರಬಹುದೆಂದು ಭಾವಿಸಲಾಗಿತ್ತು. ಪ್ರೋಟೀನುಗಳ ರಚನೆ ಕ್ಷ–ಕಿರಣ ವಿವರ್ತನೆಯ ವಿಧಾನದಿಂದ ಮಾತ್ರ ತಿಳಿಯಬಹುದೆಂಬುದೂ ಗೊತ್ತಾಗಿತ್ತು. ಆಗ ತಿಳಿದಿದ್ದ ಸುಮಾರು ಹನ್ನೆರಡು ಪ್ರೋಟೀನುಗಳ ಪೈಕಿ ಹೀಮೊಗ್ಲಾಬಿನ್ ಸುಲಭವಾಗಿ ದೊರೆಯಬಲ್ಲುದೂ ಸುಲಭವಾಗಿ ಸ್ಫಟೀಕರಿಸಬಲ್ಲುದೂ ಆಗಿತ್ತು. ಅಲ್ಲದೆ, ಎಲ್ಲಕ್ಕೂ ಮಿಗಿಲಾಗಿ ಅದು ಶರೀರಶಾಸ್ತ್ರದಲ್ಲಿ ಅತ್ಯಂತ ಹೆಚ್ಚು ಮಹತ್ತ್ವವುಳ್ಳದ್ದೂ ಆಗಿತ್ತು. ಹೀಗಾಗಿ ಅದನ್ನೇ

ರಚನಾ ವಿಶ್ಲೇಷಣೆಗೆ ಆಯಲಾಯಿತು. ಆದರೆ, ಆ ಕಾಲದಲ್ಲಿ ಎಕ್ಸ್–ಕಿರಣ ವಿಧಾನದಿಂದ ಶೋಧಿಸಿದ್ದ ಅತ್ಯಂತ ದೊಡ್ಡ ಅಣು ವಿನ್ಯಾಸ ಎಂದರೆ ೫೮ ಪರಮಾಣುಗಳುಳ್ಳ ತ್ಯಾಲೊಸೈನಿನ್ ಎಂಬ ರಂಗುಗಾರಕ ವಸ್ತುವಿನದು. ಹೀಗಾಗಿ ಸಹಸ್ರಾರು ಪರಮಾಣುಗಳುಳ್ಳ ಹೀಮೊಗ್ಲಾಬಿನ್ ಸ್ಪಟಿಕ ವಿಶ್ಲೇಷಣೆ ಅತ್ಯಂತ ಜಟಿಲವಾಗಿ ಅಂದು ಕಂಡಿದ್ದರೆ ಆಶ್ಚರ್ಯವೇನಿಲ್ಲ.

ಅಣು ರಚನಾ ವಿಶ್ಲೇಷಣೆಯನ್ನು ಪೆರೂಟ್ಸ್ ಪ್ರಾರಂಭಿಸಿದಾಗ ಆತನಿಗೆ ಈ ಕಾರ್ಯಕ್ಕೆ ಇದ್ದ ಮಿತಿಗಳಿಂದ ಕ್ಷ–ಕಿರಣ ವಿವರ್ತನ ಚಿತ್ರಗಳನ್ನು ಅರ್ಥವಿಸುವುದು ಅತಿ ನಿಧಾನವಾಯಿತು. ಆದರೆ, ೧೯೫೦ರಿಂದ ಮುಂದೆ ಹೀಮೊಗ್ಲಾಬಿನ್ ಅಣುವಿನೊಳಕ್ಕೆ ಪಾದರಸದಂಥ ಭಾರ ಪರಮಾಣುಗಳನ್ನು ಜೋಡಿಸಿದಾಗ ಬಂದ ವಿವರ್ತನ ಚಿತ್ರಗಳು ಈ ಕೆಲಸವನ್ನು ತ್ವರೆಗೊಳಿಸಿದುವು. ಇದೇ ಕಾಲಕ್ಕೆ ಜಾನ್ ಸಿ. ಕೆಂಡ್ರೂ, ಅದೇ ಪ್ರಯೋಗಶಾಲೆಯಲ್ಲಿ ಸ್ನಾಯುಕೋಶಗಳಲ್ಲಿ ಇರುವ ಮಯೊಗ್ಲಾಬಿನ್ ಎಂಬ ಪ್ರೋಟೀನಿನ ಮೂರು ಆಯಾಮಗಳ ರಚನೆಯನ್ನು ಶೋಧಿಸಲು ತೊಡಗಿದ. ಕಶೇರುಕ ಮತ್ತು ಅಕಶೇರುಕ ಪ್ರಾಣಿಗಳಲ್ಲಿರುವ ಈ ಮಯೊಗ್ಲಾಬಿನ್ ಹೀಮೊಗ್ಲಾಬಿನ್ನಿಗಿಂತ ಸರಳವಾದ ಅಣು. ಅದು ಹೀಮೊಗ್ಲಾಬಿನ್ನಿನ ನಾಲ್ಕು ಸರಗಳಲ್ಲಿ ಒಂದರಷ್ಟು ಮಾತ್ರ ಉದ್ದವಾಗಿರುತ್ತದೆ. ಅದರಲ್ಲಿ ಒಂದೇ ಒಂದು ಕಬ್ಬಿಣದ ಪರಮಾಣು ಮಾತ್ರ ಇರುವುದು. ಈ ರಚನಾ ವಿಶ್ಲೇಷಣೆಯಲ್ಲಿ ಕೆಂಡ್ರೂ ಕ್ಷ–ಕಿರಣ ವಿವರ್ತನ ಚಿತ್ರಗಳನ್ನು ಅರ್ಥವಿಸಲು ಆಗ ತಾನೇ ಒದಗುತ್ತಿದ್ದ ವಿಶೇಷ ವೇಗದ ಗಣಕಗಳನ್ನು ಉಪಯೋಗಿಸಿದ. ಭಾರ ಪರಮಾಣು ಜೋಡಣೆ ಮತ್ತು ಗಣಕದ ಉಪಯೋಗ ಈ ಎರಡು ಕಾರಣಗಳಿಂದ ಮಯೊಗ್ಲಾಬಿನ್ ವಿಶ್ಲೇಷಣೆಗೆ ಹೆಚ್ಚು ಸಹಾಯವಾಗಿ ಅದರ ೬° ಪೃಥಕ್ಕರಣೆಯ ಮೂರು ಆಯಾಮಗಳ ರಚನೆಯ ಶೋಧವಾಯಿತು. ಇಂಥ ರಚನೆಯಲ್ಲಿ ಪಾಲಿಪೆಪ್ಟೈಡ್ ಸರ ವಿಚಿತ್ರವಾಗಿ ಮಡಿಚಿಕೊಂಡು ಮೊದಲಬಾರಿ ನೋಡುವವರಿಗೆ ಯಾವ ಅಭಿಪ್ರಾಯವನ್ನು ಉಂಟು ಮಾಡಲೂ ಸಾಧ್ಯವಾಗದೆ ನಿರಾಶೆ ಆಗುತ್ತಿತ್ತು. ಆದರೆ, ಮುಂದಿನ ಎರಡು ವರ್ಷಗಳಲ್ಲಿ ಪೆರೂಟ್ಸ್ ಹೀಮೊಗ್ಲಾಬಿನ್ನಿನ ಮೂರು ಆಯಾಮಗಳ ರಚನೆಯನ್ನು ೬° ಗೆ ಪೃಥಕ್ಕರಿಸಿದಾಗ ಅಲ್ಲಿ ಕಂಡದ್ದು ಹೀಮೊಗ್ಲಾಬಿನ್ನಿನ $\alpha$ ಮತ್ತು $\beta$ ಪಾಲಿಪೆಪ್ಟೈಡ್ ಸರಗಳು. ಮಯೊಗ್ಲಾಬಿನ್ ಪಾಲಿಪೆಪ್ಟೈಡ್ ಸರದಂತೆಯೇ ಹೊಂದಿದ್ದ ಆಕಾರ. ಮಯೊಗ್ಲಾಬಿನ್ನಿನ ಸರ ಮತ್ತು ಹೀಮೊಗ್ಲಾಬಿನ್ನಿನ $\alpha$ ಮತ್ತು $\beta$ ಸರಗಳು ಬಹಳ ಹೋಲುತ್ತವೆ. ವಾಸ್ತವವಾಗಿ ಎಲ್ಲ ಕಶೇರುಕ ಪ್ರಾಣಿಗಳ ಮಯೊ ಮತ್ತು ಹೀಮೊಗ್ಲಾಬಿನ್ನುಗಳು ಈ ಮಾದರಿಯವು. ಮೊದಲು ಮಯೊಗ್ಲಾಬಿನ್ನಿನಲ್ಲಿ ಗೋಚರವಾಗಿದ್ದ ಈ ಜಟಿಲ ಪಾಲಿಪೆಪ್ಟೈಡ್ ಸರದ ಮಡಿಕೆಯ ರಚನೆ ಆಮ್ಲಜನಕದ ಸಾಗಣೆಗೆ ನಿಸರ್ಗವೇ ವಿನ್ಯಾಸ ಮಾಡಿದ ಮೂಲಭೂತ ರಚನೆ. ಇಂಥ ವಿನ್ಯಾಸದಲ್ಲಿ ಆಮ್ಲಜನಕವನ್ನು ಸಾಗಣೆ ಮಾಡುವ ಕಾರ್ಯಕ್ಕೆ ಅನುಕೂಲವಾದ ಪರಿಸ್ಥಿತಿಯಲ್ಲಿ ಹೀಮನ್ನು (ಕಬ್ಬಿಣಯುಕ್ತ ಸಂಯುಕ್ತ) ಇರಿಸಿದೆ. ೧೯೬೦ರ ಸುಮಾರಿಗೆ ಕೆಂಡ್ರೂ ಮಯೊಗ್ಲಾಬಿನ್ನಿನ ಮೂರು ಆಯಾಮಗಳ ರಚನೆಯನ್ನು ೨.೮ $A^0$ ಗೆ ಪೃಥಕ್ಕರಿಸಿದ. ಹಾಗೆಯೇ ೧೯೬೮ರ ಸುಮಾರಿಗೆ ಪೆರೂಟ್ಸ್ ಕುದುರೆಯ ಹೀಮೊಗ್ಲಾಬಿನ್ ರಚನೆಯನ್ನು ೨.೮ $A^0$ ಗೆ ಪೃಥಕ್ಕರಿಸಿದಾಗ ಬಂದ ಎಲೆಕ್ಟ್ರಾನ್ ಸಾಂದ್ರತಾ ಚಿತ್ರಗಳು ಎಲ್ಲ ಅಮೈನೊ ಆಮ್ಲಗಳನ್ನೂ ಪಕ್ಕದ ಸರಗಳನ್ನೂ ಅಲ್ಲದೆ ಕೆಲವು ಹೀಮ್‌ಪುಂಜದ ವಿಶೇಷಗಳನ್ನೂ ತೋರಿಸಿದುವು. ಮಾನವ ಹೀಮೊಗ್ಲಾಬಿನ್ ಕೂಡ ಈಗ ಸ್ಥೂಲವಾಗಿ ಪೃಥಕ್ಕರಿಸಲ್ಪಟ್ಟಿದೆ. ಪೆರೂಟ್ಸನ ಹೀಮೊಗ್ಲಾಬಿನ್ ವಿಶ್ಲೇಷಣೆಗೆ ೧೯೬೨ ರ ನೊಬೆಲ್ ಪಾರಿತೋಷಕ ದೊರೆಯಿತು. ಈತನ ಇತರ ಸಂಶೋಧನೆಗಳು ಹೀಮೊಗ್ಲಾಬಿನ್ನಿನ ಅಂಗಾಂಶಗಳ ಬಗೆಗಿನ ವೈಪರೀತ್ಯಗಳು ಮತ್ತು ಕಾಲಾನುಕ್ರಮದ ಮಾರ್ಪಾಡುಗಳನ್ನೊಳಗೊಂಡಿವೆ. ಆಮ್ಲಜನಕದ ಬಂಧನ ಮತ್ತು ಬಿಡುಗಡೆ ಆಗುವಾಗಿನ ಹೀಮೊಗ್ಲಾಬಿನ್ ಅಣುವಿನ ರಚನಾ ವಿನ್ಯಾಸದ ವ್ಯತ್ಯಾಸಗಳೂ ಈತನ ಸಂಶೋಧನೆಯಲ್ಲಿ ಸೇರಿವೆ.

***

**ಪೆಲಿಕನ್:** ಪೆಲಿಕಾನಿಫಾರ್ಮಿಸ್ ಗಣದ ಪೆಲಿಕಾನಿಡೆ ಕುಟುಂಬಕ್ಕೆ ಸೇರಿದ ಪಕ್ಷಿ. ಇದರ ವೈಜ್ಞಾನಿಕ ಹೆಸರು ಪೆಲಿಕಾನಸ್. ಇದರಲ್ಲಿ 6 ಜೀವಂತ ಪ್ರಭೇದಗಳುಂಟು. ಇವುಗಳ ಪೈಕಿ ನಾಲ್ಕು ಪ್ರಭೇದಗಳು ದಕ್ಷಿಣ ಯೂರೋಪ್, ಆಫ್ರಿಕ, ದಕ್ಷಿಣ ಏಷ್ಯ, ಆಸ್ಟ್ರೇಲಿಯಗಳಲ್ಲಿ ಕಂಡುಬರುವುದಾದರೆ ಉಳಿದವೆರಡು ಉತ್ತರ ಹಾಗೂ ದಕ್ಷಿಣ ಅಮೆರಿಕಗಳಲ್ಲಿ ವಾಸಿಸುವುವು. ಇದಲ್ಲದೆ, ಫಾಸಿಲ್ ರೂಪದಲ್ಲಿ (ಆಲಿಗೋಸೀನ್ ನಿಕ್ಷೇಪಗಳಲ್ಲಿ) 10 ಪ್ರಭೇದಗಳು ಪರಿಚಿತವಾಗಿವೆ. ಫಾಸಿಲ್ ರೂಪದವೂ ಜೀವಂತ ಪೆಲಿಕನ್ ಪ್ರಭೇದಗಳೂ ದೇಹರಚನೆಯಲ್ಲಿ ಒಂದೇ ತೆರನಾಗಿವೆಯಾಗಿ ಎಲ್ಲ ಪ್ರಭೇದಗಳನ್ನೂ ಪೆಲಿಕಾನಸ್ ಜಾತಿಗೇ ಸೇರಿಸಲಾಗಿದೆ. ಇಂದು ಕಾಣುವ ಪ್ರಭೇದಗಳ ಅವಶೇಷಗಳು ಪ್ಲೀಸ್ಟೋಸೀನ್ ನಿಕ್ಷೇಪಗಳಲ್ಲೂ ಸಿಕ್ಕಿವೆ ಎಂಬ ಅಂಶ ಕುತೂಹಲಕಾರಿ. ಪೆಲಿಕನ್ ಹಕ್ಕಿಗಳು ಆಲಿಗೋಸೀನ್ ಅವಧಿಯಿಂದ ತೊಡಗಿ ಇಂದಿನ ತನಕವೂ ಬದಲಾಗದೆ ಉಳಿದುಬಂದಿವೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಪೆಲಿಕನ್ ದೊಡ್ಡ ಗಾತ್ರದ ಹಕ್ಕಿ. ಅಮೆರಿಕದಲ್ಲಿ ಕಾಣದೊರೆಯುವ ಹಲವು ಬಿಳಿ ಪೆಲಿಕನ್ ಹಕ್ಕಿಯ ರೆಕ್ಕೆ ಮೂರು ಮೀ.ಗೂ ಹೆಚ್ಚು ಇದೆಯಾದರೆ ಕಂದು ಪೆಲಿಕನ್ನಿನ ರೆಕ್ಕೆಗಳು ಎರಡು ಮೀ. ಅಗಲಕ್ಕೆ ಹರಡಬಲ್ಲವು. ದೇಹದ ಬಣ್ಣ ಕಂದು ಇಲ್ಲವೆ ಬಿಳಿ. ರೆಕ್ಕೆಯಂಚುಗಳು ಕಪ್ಪು. ದೇಹದ ಮೇಲೆ ನಸುಗೆಂಪು ಅಥವಾ ಬೂದು ಬಣ್ಣದ ಕಲೆಗಳಿರುವುದುಂಟು. ಪೆಲಿಕನ್ ಹಕ್ಕಿಯ ಅತ್ಯಂತ ಮುಖ್ಯ ಹಾಗೂ ವಿಚಿತ್ರ ಲಕ್ಷಣವೆಂದರೆ ಇದರ ಉದ್ದ ಕೊಕ್ಕಿನ ತಳಭಾಗಕ್ಕೂ ಕೊರಳಿಗೂ ಸೇರಿದಂತೆ ಅಂಟಿಕೊಂಡಿರುವ ಬೃಹದ್ ಗಾತ್ರದ ಚೀಲ (ಗೂಲಾರ್ ಪೌಚ್). ಇದು ಸುಮಾರು 4.5 ಲೀ ನೀರನ್ನು ಹಿಡಿಯುವಷ್ಟು (ಹಕ್ಕಿಯ ಜಠರದ 3–4 ಪಟ್ಟು ಹೆಚ್ಚು) ದೊಡ್ಡದಾಗಿದೆ. ಹಕ್ಕಿ ಇದನ್ನು ತನ್ನ ಆಹಾರವಾದ ಮೀನನ್ನು ಹಿಡಿಯುವ ಬಲೆಯಾಗಿ ಬಳಸುತ್ತದೆ. ಬಹುಶಃ ದೇಹವನ್ನು ತಂಪಾಗಿರಿಸುವ ವಿಶೇಷ ಸಾಧನವಾಗಿಯೂ ಇದು ಉಪಯುಕ್ತ.

ಪೆಲಿಕನ್ ನೀರಹಕ್ಕಿ. ಅಮೆರಿಕದಲ್ಲಿ ಕಾಣಸಿಗುವ ಕಂದು ಪೆಲಿಕನ್ ದಕ್ಷಿಣ ಅಟ್ಲಾಂಟಿಕ್ ಹಾಗೂ ಪೆಸಿಫಿಕ್ ಸಾಗರಗಳ ಕರಾವಳಿ ಪ್ರದೇಶಗಳಲ್ಲಿ ವಾಸಿಸುತ್ತದೆ. ಉಳಿದ ಪ್ರಭೇದಗಳು ದೊಡ್ಡ ಕೆರೆಗಳ ಬಳಿ, ಸರೋವರಗಳ ಬಳಿ ವಾಸಿಸುತ್ತವೆ. ನೀರಲ್ಲಿ ಈಜಲು ಸಹಾಯಕವಾಗುವಂತೆ ಕಾಲುಗಳ ಬೆರಳುಗಳೆಲ್ಲ ಚರ್ಮದ ಪಟಲದಿಂದ ಒಂದುಗೂಡಿವೆ.

ರೆಕ್ಕೆಗಳ ವಿಸ್ತಾರ ಹರವಿನೊಂದಿಗೆ ಪೆಲಿಕನ್ ಹಕ್ಕಿಗಳ ಎಲುಬುಗಳಲ್ಲೂ ಚರ್ಮದಡಿಯಲ್ಲೂ ವಾಯುಕೋಶಗಳ ಜಾಲವೇ ಇದ್ದು ದೇಹವನ್ನು ಹಗುರಗೊಳಿಸುವಲ್ಲಿ ಸಹಾಯಕವಾಗಿವೆ. ಆದರೂ, ಪೆಲಿಕನ್ ಹಾರಲು ಪರಿಶ್ರಮಿಸುವಾಗ ಕಷ್ಟಪಡುತ್ತದೆ. ಗಾಳಿ ಅನುಕೂಲವಾಗಿದ್ದರೆ ಸರಿ, ಇಲ್ಲದಿದ್ದರೆ ನೀರ ಹಾಳೆಯ ಗುಂಟ– ಸೊಟ್ಟ ಸೊಟ್ಟವಾಗಿ ಅರ್ಧ ಹಾರಿದಂತೆ ಅರ್ಧ ಎಳೆದಂತೆ ಕೊಂಚ ದೂರ ಸಾಗಿ ಅನಂತರ ಗಾಳಿಗೇರುತ್ತದೆ. ಹೀಗೆ ಒಮ್ಮೆ ಏರಿದ ತರುವಾಯ ತುಂಬ ಬಲಯುತವಾಗಿ, ಗಂಭೀರ ಗತಿಯಲ್ಲಿ ಹಾರತೊಡಗುವುದು. ಹಾರುವಾಗ ನೂರಾರು ಪೆಲಿಕನುಗಳು V– ಆಕಾರದ ಸಾಲಿನಲ್ಲೂ ಹಾರದ ಆಕಾರದಲ್ಲೂ ಒಂದರ ಹಿಂದೆ ನಿರ್ದಿಷ್ಟ ಅಂತರದಲ್ಲಿ ಒಂದೇ ಲಯದಲ್ಲಿ ರೆಕ್ಕೆಗಳನ್ನು ಬಡಿಯುತ್ತ ಸಾಗುವುವು.

ಪೆಲಿಕನ್ ಸಂಘಜೀವಿ. ನೂರಾರು ಹಕ್ಕಿಗಳು ಒಂದೇ ಪ್ರದೇಶದ ಮರ, ಪೊದೆ ಇಲ್ಲವೇ ನೆಲದ ಮೇಲೆ ಕಸ, ಕಡ್ಡಿ ಸೇರಿಸಿ ಗೂಡು ಕಟ್ಟುತ್ತವೆ. ಮೀನು ಹಿಡಿಯುವಾಗಲೂ ಗುಂಪು ಗುಂಪಾಗಿಯೇ ಇರುತ್ತವೆ. ಹಲವಾರು ಹಕ್ಕಿಗಳು ಅರ್ಧ ಚಂದ್ರಾಕೃತಿಯಲ್ಲಿ ಸಾಲುಗಟ್ಟಿ ನೀರ ಮೇಲೆ ಈಜುತ್ತ ಮೀನುಗಳನ್ನು ಕೊಳದ ಅಂಚಿನೆಡೆಗೆ ಅಟ್ಟುತ್ತವೆ. ಅನಂತರ ಒಮ್ಮೆಲೆ ಪ್ರತಿಯೊಂದು ಹಕ್ಕಿಯೂ ಮೀನುಗಳ ಮೇಲೆ ಎರಗಿ ಕೊಕ್ಕಿನ ಚೀಲದಲ್ಲಿ ಸೆರೆ ಹಿಡಿಯುತ್ತದೆ.

ಪೆಲಿಕನುಗಳು 1–4 ಮೊಟ್ಟೆಗಳನ್ನಿಡುತ್ತವೆ. ಗಂಡು ಹೆಣ್ಣುಗಳೆರಡೂ 4–5 ವಾರಗಳ ಕಾಲ ಕಾವು ಕೊಟ್ಟು ಮರಿ ಮಾಡುತ್ತವೆ. ಹುಟ್ಟಿದಾಗ ಬಲು ಅಸಹಾಯಕ ಸ್ಥಿತಿಯಲ್ಲಿರುವ ಮರಿಗಳು 2 ತಿಂಗಳ ತರುವಾಯ ಹಾರುವ ತಾಕತ್ತು ಗಳಿಸುತ್ತವೆ. ಮೂರು ವರ್ಷಗಳಲ್ಲಿ ಸಂಪೂರ್ಣ ಪ್ರೌಢ ಸ್ಥಿತಿಗೆ ಬರುತ್ತವೆ. ಇವುಗಳ ಆಯಸ್ಸು ಸುಮಾರು 30 ವರ್ಷಗಳೆನ್ನಲಾಗಿದೆ.

ಪೆಲಿಕನ್ನುಗಳಿಗೆ ದೊಡ್ಡ ಮೊತ್ತದಲ್ಲಿ ಆಹಾರ ಬೇಕು. ಒಂದು ವಯಸ್ಕ ಹಕ್ಕಿ ದಿನವೊಂದಕ್ಕೆ 2 ಕಿಗ್ರಾಂ ಆಹಾರ ಸೇವಿಸುವುದು.

ಭಾರತದಲ್ಲಿ ಕಾಣಸಿಗುವ ಪೆಲಿಕನ್ ಪ್ರಭೇದ ಪೆಲಿಕಾನಸ್ ಫಿಲಿಪೆನ್ಸಿಸ್ ಎಂಬುದು. ಕರ್ನಾಟಕದಲ್ಲಿ ಇದುವರೆಗೆ ಪತ್ತೆ ಹಚ್ಚಲಾಗಿರುವ ಇದರ ಆವಾಸ ಸ್ಥಾನ ಮದ್ದೂರಿನ ಬಳಿಯ ಕೊಕ್ಕರೆ ಬೆಳ್ಳೂರು. (ಎಂ.ಎನ್.ಎ.ಐ.)

**ಪೆಲಿಕೊಸಾರಿಯ:** ಪರ್ಮಿಯನ್ ಯುಗದ ಆದಿ ಸರೀಸೃಪಗಳ ಒಂದು ಗಣ. ಸರೀಸೃಪಗಳನ್ನು ಅವುಗಳ ತಲೆ ಬುರುಡೆಯಲ್ಲಿರುವ ಕಪೋಲ ರಂಧ್ರಗಳ ಆಧಾರದ ಮೇಲೆ ನಿರಂಧ್ರಿಗಳು (ಅನಾಪ್ಸಿಡ), ಏಕರಂಧ್ರಿಗಳು (ಸೈನಾಪ್ಸಿಡ) ಮತ್ತು ದ್ವಿರಂಧ್ರಿಗಳು (ಡಯಾಪ್ಸಿಡ) ಎಂಬ ಮೂರು ಪ್ರಮುಖ ಉಪವರ್ಗಗಳಾಗಿ ವಿಭಜಿಸಲಾಗಿದೆ. ಏಕರಂಧ್ರಿಗಳು ಕಾರ್ಬಾನಿಫೆರಸ್ ಉತ್ತರಾರ್ಧದಲ್ಲಿ ಮೊದಲು ಕಾಣಿಸಿಕೊಂಡವು. ಇವುಗಳಲ್ಲಿ ಸ್ತನಿ ಲಕ್ಷಣಗಳಿದ್ದುದರಿಂದ ಸ್ತನಿಗಳು ಸರೀಸೃಪಗಳಿಂದ ಉದ್ಭವಿಸಿದುವೆಂದು ಹೇಳಬಹುದು. ಏಕರಂಧ್ರ ಸರೀಸೃಪಗಳ ಅವಶೇಷಗಳು ಉತ್ತರ ಅಮೆರಿಕದ ಕ್ಯಾನ್ಸಸ್, ಓಕ್ಲಹಾಮ ಮತ್ತು ನ್ಯೂಮೆಕ್ಸಿಕೊ ಪ್ರಾಂತಗಳ ಕಾರ್ಬಾನಿಫೆರಸ್ ಅಂತ್ಯ ಮತ್ತು ಪರ್ಮಿಯನ್ ಆದಿಕಾಲಗಳ ಶಿಲೆಗಳಲ್ಲಿ ದೊರೆತಿವೆ. ಉಳಿದ ಕಡೆಗಳಲ್ಲಿ ಈ ಅವಶೇಷಗಳಿರುವುದು ಅಪೂರ್ವ. ಇವೆಲ್ಲ ಮೂಲಜಾತಿಗಳ ಅವಶೇಷಗಳು. ವಿಕಾಸ ಹೊಂದಿದ ಏಕರಂಧ್ರಿ ಸರೀಸೃಪಗಳ ಅವಶೇಷಗಳು ಆಫ್ರಿಕದ ಕೆರೂ ನಿಕ್ಷೇಪಗಳಲ್ಲಿ ಹೇರಳವಾಗಿವೆ; ಉಳಿದ ಕಡೆಗಳಲ್ಲಿ ಬಲು ವಿರಳ. ಆದ್ದರಿಂದ ಏಕರಂಧ್ರಿಗಳನ್ನು ಎರಡು ಶಾಖೆಗಳಾಗಿ ವಿಭಾಗಿಸಿದೆ; ಮೂಲ ಜಾತಿಗಳನ್ನು ಒಳಗೊಂಡ ತೀರೋಮಾರ್ಫ ಅಥವಾ ಪೆಲಿಕೊಸಾರಿಯನ್ ಸರೀಸೃಪಗಳು ಮತ್ತು ವಿಕಾಸಗೊಂಡ ಜಾತಿಗಳಿಂದ ಕೂಡಿದ ತೀರಾಪ್ಸಿಡ ಸರೀಸೃಪಗಳು.

ಪೆಲಿಕೊಸಾರಿಯನ್ ಸರೀಸೃಪಗಳು : ಈ ಶಾಖೆಯ ಪ್ರಾಣಿಗಳಲ್ಲಿ ಅಂತರಕಪೋಲ ಎಲುಬೊಂದನ್ನು ಬಿಟ್ಟು ಲ್ಯಾಬಿರಿಂತೊಡಾಂಟ್ ದ್ವಿಚರ ಪ್ರಾಣಿಗಳ ತಲೆ ಬುರುಡೆಯಲ್ಲಿರುವ ಎಲುಬುಗಳೆಲ್ಲ ಇವೆ. ಪೀನಿಯಲ್ ರಂಧ್ರ ಸಹ ಉಂಟು. ಬೆನ್ನೆಲುಬಿನಲ್ಲಿ ದೊಡ್ಡ ಎಲುಬುಗಳು ಪ್ರಮುಖವಾಗಿ ಕಂಡರೂ ಚಿಕ್ಕ ಎಲುಬುಗಳೂ ಉಳಿದಿವೆ. ಕಾಲುಗಳು ನಿರಂಧ್ರಿ ಸರೀಸೃಪಗಳ ಕಾಲುಗಳನ್ನು ಹೋಲುತ್ತವೆ. ಆದರೆ, ಸ್ವಲ್ಪ ತೆಳು ಅಷ್ಟೆ. ಪೆಲಿಕೋಸಾರಿಯಗಳು ಕ್ಯಾಪ್ಟೋರೈನೊಮಾರ್ಫ ಎಂಬ ನಿರಂಧ್ರಿ ಸರೀಸೃಪವನ್ನು ಬಲುವಾಗಿ ಹೋಲುವುದರಿಂದ ಇವನ್ನು ಕ್ಯಾಪ್ಟೋರೈನೊಮಾರ್ಫ ಸಂತತಿ ಎಂದು ನಂಬಲಾಗಿದೆ. ಓಫಿಯಾಕೊಡಾನ್ ಎಂಬುದು ಮಾದರಿ ಪೆಲಿಕೊಸಾರಿಯ. ಇದರಿಂದ ವಿಕಾಸ ಎರಡು ಶಾಖೆಗಳಾಗಿ ಮುಂದುವರಿದಿದೆ. ಒಂದು ಶಾಖೆಯ ಸರೀಸೃಪಗಳು ಮಾಂಸಾಹಾರಿಗಳು–ಸ್ಪೆನಕೊಡಾಂಟ ; ಮತ್ತೊಂದು ಶಾಖೆಯವು ಸಸ್ಯಾಹಾರಿಗಳು–ಎಡಪೊಸಾರುಗಳು.

ಸ್ಪೆನಕೊಡಾಂಟಗಳು ಓಪಿಯಾಕೊಡಾಂಟಗಳನ್ನು ಹೋಲುತ್ತವೆ ; ಆದರೆ, ಹೆಚ್ಚು ವಿಕಾಸ ಹೊಂದಿದವು. ತಲೆ ಬುರುಡೆ ದೊಡ್ಡದು ಮತ್ತು ಎತ್ತರವಾಗಿದೆ. ಅದರ ಅಂಚು ಹಿಂಭಾಗದಲ್ಲಿ ದವಡೆಗಳ ಕಡೆಗೆ ಮುಮ್ಮೊಗವಾಗಿ ಬಾಗಿದೆ. ಇವುಗಳಲ್ಲಿ ಎರಡು ಮುಖ್ಯ ವಿಕಾಸ ಲಕ್ಷಣಗಳನ್ನು ಕಾಣಬಹುದು. ಹಲ್ಲುಗಳು ಮುಂಭಾಗದ ದೊಡ್ಡ ಬಾಚಿ ಹಲ್ಲುಗಳು, ಭರ್ಜಿಯಾಕಾರದ ಹಲ್ಲುಗಳು ಮತ್ತು ಚಿಕ್ಕ ದವಡೆ ಹಲ್ಲುಗಳಾಗಿ ವ್ಯತ್ಯಾಸಗೊಂಡಿವೆ. ಕುತ್ತಿಗೆಯಿಂದ ಸೊಂಟದವರೆಗೆ ಬೆನ್ನೆಲುಬುಗಳ ಮುಳ್ಳುಗಳು ಎತ್ತರವಾಗಿ ಬೆಳೆದು ಚರ್ಮದ ಹೊದಿಕೆಯಿಂದ ಕೂಡಿ ಬೆನ್ನಿನ ಉದ್ದಕ್ಕೂ ನೌಕಾಪಟ ಅಥವಾ ಎಲುಬು ಪಟವಾಗಿದೆ. ಇದರ ಕಾರ್ಯವೇನಿದ್ದಿರಬಹುದೆಂದು ನಿರ್ಧರಿಸುವುದು ಕಷ್ಟ. ಆದರೆ, ಇಷ್ಟು ದೊಡ್ಡ ಅಂಗವನ್ನು ಹೊಂದಲು ಪ್ರಾಣಿಯ ಶಕ್ತಿ ಎಷ್ಟು ವ್ಯಯವಾಗುವುದೆಂಬುದನ್ನು ಯೋಚಿಸಿದರೆ ಇದು ಅತ್ಯವಶ್ಯವಾಗಿದ್ದಿರಲೇಬೇಕೆಂದು ಹೇಳಬೇಕಾಗುತ್ತದೆ. ಸ್ಪೆನಕೊಡಾನ್ ಮತ್ತು ಡಿಮೆಟ್ರೊಡಾನುಗಳು ಈ ಶಾಖೆಯ ಮಾದರಿ ಪ್ರಾಣಿಗಳು.

ಎಡಪೊಸಾರುಗಳು ಸಸ್ಯಾಹಾರಿಗಳು. ಆದ್ದರಿಂದ ಇವುಗಳ ಹಲ್ಲುಗಳಲ್ಲಿ ವೈವಿಧ್ಯ ಇಲ್ಲ. ಆದರೆ, ಆಹಾರವನ್ನು ಅಗಿಯಲು ಸಾಮಾನ್ಯ ಹಲ್ಲುಗಳ ಜೊತೆಗೆ ದಂತ ಫಲಕಗಳಿದ್ದುವು. ಎಲುಬು ಪಟಗಳೂ ಇದ್ದುವು. ಇವುಗಳ ಶರೀರ ದಪ್ಪ ಹಾಗೂ ಪೀಪಾಯಿ ಆಕಾರ. ಕಾಟಿಲೊರಿಂಕಸ್ ಎಂಬುದು ಪೆಲಿಕೊಸಾರುಗಳಲ್ಲೇ ಬಹು ದೊಡ್ಡದು. (ಡಿ.ಆರ್.)

**ಪೈಕ್ ಮೀನು:** ಎಸಾಸಿಡೆ ಕುಟುಂಬಕ್ಕೆ ಸೇರಿದ ಸಿಹಿನೀರು ಮೀನು. ಟ್ರೌಟ್, ಸಾಲ್ಮನ್, ಪಿಕರೆಲ್ ಮತ್ತು ಮಡ್‌ಮಿನೋ ಮೀನುಗಳ ಸಂಬಂಧಿ. ಇವುಗಳಂತೆಯೇ ಇದು ಕೂಡ ಖಾದ್ಯಯೋಗ್ಯವೆಂದು ಪ್ರಸಿದ್ಧವಾಗಿದೆ. ಉತ್ತರ ಗೋಳಾರ್ಧದ ಸಿಹಿನೀರು ಕೆರೆ, ಕೊಳ, ಸರೋವರಗಳಲ್ಲೂ ನದಿಗಳಲ್ಲೂ ಕಾಣಬರುತ್ತದೆ. ಇದರ ವೈಜ್ಞಾನಿಕ ಹೆಸರು ಈಸಾಕ್ಸ್. ಇದರಲ್ಲಿ ಅನೇಕ ಪ್ರಭೇದಗಳುಂಟು. ಇವುಗಳ ಪೈಕಿ ಈ.ಲೂಸಿಯಸ್ ಅತ್ಯಂತ ಪ್ರಮುಖವಾದ್ದು. ಇದು ಯೂರೋಪ್ ಖಂಡದಲ್ಲಿ ಸ್ಪೇನ್, ಪೋರ್ಚುಗಲ್, ದಕ್ಷಿಣ ಇಟಲಿಗಳನ್ನು ಬಿಟ್ಟು ಉಳಿದ ಪ್ರದೇಶದಲ್ಲೂ ಸೈಬೀರಿಯ ಹಾಗೂ ಉತ್ತರ ಅಮೆರಿಕಗಳಲ್ಲೂ ಕಾಣಬರುತ್ತದೆ. ಇದಕ್ಕೆ ಚೌತ್ತರೇಯ ಪೈಕ್ ಎಂಬ ಹೆಸರುಂಟು. ರಷ್ಯದ ಸೈಬೀರಿಯದ ಅಮೂರ್ ಮತ್ತು ಸಖಾಲಿನ್ ಪ್ರದೇಶಗಳಲ್ಲಿ ಈ.ರೈಶೆರ್ಟ್ (ಅಮೂರ್ ಪೈಕ್) ಎಂಬ ಪ್ರಭೇದ ಸಿಗುತ್ತದೆ. ಅಮೆರಿಕದಲ್ಲಿ ದೊರೆಯುವ ಇನ್ನಿತರ ಪೈಕ್ ಮೀನುಗಳೆಂದರೆ ಅಲ್ಲಿಯ ಮಹಾಸರೋವರಗಳ ಬಳಿ ಇರುವ ಮುಸ್ಕೆಲಂಗೆ (ಈ.ಮುಸ್ಕಿನಾಂಗಿ), ನ್ಯೂ ಇಂಗ್ಲೆಂಡ್ ಪ್ರದೇಶದಲ್ಲಿ ಸಿಕ್ಕುವ ಚೇನ್ ಪಿಕರೆಲ್ (ಈ.ನೈಜರ್), ಅಯೋವ, ಒಹಾಯೊ, ಟೆಕ್ಸಾಸುಗಳಲ್ಲಿಯ ಈ.ವರ್ಮಿಕ್ಯುಲೇಟಸ್ (ಗ್ರಾಸ್ ಪಿಕರೆಲ್) ಹಾಗೂ ಅಟ್ಲಾಂಟಿಕ್ ಕರಾವಳಿ ಪ್ರದೇಶದಲ್ಲಿಯ ಈ.ಅಮೆರಿಕಾನಸ್ (ಪಿಕರೆಲ್).



ಎಲ್ಲ ಪೈಕ್ ಮೀನುಗಳೂ ಬಲಿಷ್ಠ ಮೀನುಗಳು. ದೇಹದ ಉದ್ದ 130 ಸೆಂಮೀ ಗಿಂತ ಹೆಚ್ಚಾಗಿರುವುದುಂಟು. ತೂಕ 25–60 ಕಿಗ್ರಾಂ. ಸಾಮಾನ್ಯವಾಗಿ ಗಂಡಿಗಿಂತ ಹೆಣ್ಣು ಮೀನೇ ಗಾತ್ರದಲ್ಲಿ ದೊಡ್ಡದು. ಮೈಬಣ್ಣ ಸಾಮಾನ್ಯವಾಗಿ ಆಲಿವ್ ಹಸುರು. ಪಾರ್ಶ್ವಗಳಲ್ಲಿ ನಸುಹಳದಿ ಬಣ್ಣದ ಮಚ್ಚೆಗಳಿರುವುವು. ಉದರಭಾಗ ಬಿಳಿ ಇಲ್ಲವೆ ಹಳದಿ. ಮೂತಿ ಉದ್ದವಾಗಿದೆ. ತಲೆಬುರುಡೆಯಲ್ಲಿ ಮೀಸೊಕೋರಕಾಯಿಡ್, ಆರ್ಬಿಟೊಸ್ಫಿನಾಯಿಡ್ ಮತ್ತು ಮೀಸೆತ್ಮಾಯಿಡ್ ಮೂಳೆಗಳು ಇಲ್ಲ. ದವಡೆಗಳಲ್ಲಿ ಚೂಪಾದ ಅಸಂಖ್ಯ ಹಲ್ಲುಗಳುಂಟು. ಬೆನ್ನು ಭಾಗದ ಹಾಗೂ ಗುದದ ಈಜುರೆಕ್ಕೆಗಳು ದೇಹದ ಹಿಂಬದಿಯಲ್ಲಿ ಬಾಲಕ್ಕೆ ಹತ್ತಿರವಾಗಿ ಇವೆ.

ಪೈಕ್ ಮೀನು ಮಾಂಸಾಹಾರಿ. ಹೊಟ್ಟೆಬಾಕತನಕ್ಕೆ ಹೆಸರಾಗಿದೆ. ಇನ್ನಿತರ ಬಗೆಯ ಮೀನುಗಳು (ಕೆಲವೊಮ್ಮೆ ಬೇರೆ ಪೈಕ್ ಮೀನುಗಳು ಸಹ), ಕಪ್ಪೆ, ಹಾವು, ಕಠಿಣಚರ್ಮಿಗಳು, ಹುಳುಗಳು, ಕೀಟಗಳು, ಕ್ರೇ ಮೀನುಗಳು, ಪಕ್ಷಿಗಳು (ಬಾತು ಮುಂತಾದವು), ಸಣ್ಣಮಟ್ಟ ಸ್ತನಿಗಳು ಇದರ ಪ್ರಧಾನ ಆಹಾರ. ಸಾಮಾನ್ಯವಾಗಿ ಜೊಂಡು ಬೆಳೆದಿರುವಂಥ ಕೆರೆಯ ಅಂಚುಗಳಲ್ಲಿ ಹೊಂಚುಹಾಕಿ ಕಾದಿದ್ದು ಎರೆಪ್ರಾಣಿ ಹತ್ತಿರ ಸುಳಿದಾಗ ಅದರ ಮೇಲೆ ರಭಸದಿಂದ ಎರಗಿ ಹಿಡಿದು ಕಬಳಿಸುತ್ತದೆ. ಕೆಲವೊಮ್ಮೆ ಎರೆಗಳನ್ನು ಬೆನ್ನಟ್ಟಿ ಹೋಗಿ ಹಿಡಿಯುವುದೂ ಉಂಟು.

ಪೈಕ್ ಮೀನು ಮೊಟ್ಟೆಯಿಡುವ ಶ್ರಾಯ ಮಾರ್ಚಿ–ಮೇ ತಿಂಗಳುಗಳು. ನೀರಿನಲ್ಲಿ ಬೆಳೆಯುವ ಗಿಡಗಳಿಗೆ ಮೊಟ್ಟೆಗಳನ್ನು ಅಂಟಿಸಿ ಇಡುವುದು. ಹೆಣ್ಣು ಪೈಕ್ ಮೀನು ಒಂದೇ ಸಲಕ್ಕೆ 100,000 ದಿಂದ 1,000,000 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳನ್ನು ಹಗಲಿನಲ್ಲೇ ಇಡುವುದು. ಸುತ್ತಣ ಉಷ್ಣತೆಯನ್ನು ಅವಲಂಬಿಸಿ 1–4 ವಾರಗಳಲ್ಲಿ ಮೊಟ್ಟೆಯೊಡೆದು ಮರಿಗಳು ಹೊರಬರುವುವು. ಮರಿಗಳು ವಯಸ್ಕಗಳಂತಲ್ಲದೆ ಬರಿಯ ಸಸ್ಯಾಹಾರವನ್ನೇ ಸೇವಿಸುವುವು. 3–4 ಸೆಂಮೀ ಗಾತ್ರಕ್ಕೆ ಬೆಳೆದಾಗ ಮೀನು ತಿನ್ನಲು ಆರಂಭಿಸುವುವು.

ಪೈಕ್ ಮೀನು ಖಾದ್ಯಯೋಗ್ಯವಾಗಿದೆಯಾದರೂ ಶೋಕಿಗಾಗಿ ಇದನ್ನು ಬೇಟೆ ಮಾಡುವುದೇ ಹೆಚ್ಚು. (ಎಂ.ಎ.ಡಿ.ಎಚ್.)

**ಪೈಕ:** ಲ್ಯಾಗೋಮಾರ್ಫ ಗಣದ ಓಕೊಟಾನಿಡೆ ಕುಟುಂಬಕ್ಕೆ ಸೇರಿದ ಸ್ತನಿ. ಮೊಲ, ಕುಂದಿಲಿಗಳ ಹತ್ತಿರ ಸಂಬಂಧಿ. ಓಕೊಟೋನ ವೈಜ್ಞಾನಿಕ ಹೆಸರು. ಇದರ 12 ಪ್ರಭೇದಗಳು ಏಷ್ಯದಲ್ಲಿಯೂ 2 ಪ್ರಭೇದಗಳು ಉತ್ತರ ಅಮೆರಿಕದಲ್ಲಿಯೂ ಕಾಣಸಿಗುವುವು. ರಷ್ಯ, ಕೊರಿಯ, ಇರಾನ್, ಆಫ್ಘಾನಿಸ್ತಾನ, ತುರ್ಕಿ, ಮಂಗೋಲಿಯ, ಟಿಬೆಟುಗಳಲ್ಲಿ ಈ

ಪ್ರಾಣಿ ಉಂಟು. ಭಾರತದಲ್ಲಿ ಇಲ್ಲ. ಓ.ಪ್ರಿನ್ಸಿಪ್ ಪ್ರಭೇದ ಅಮೆರಿಕದ ಊಟಾ ಪ್ರಾಂತ್ಯದ ರೌಕಿ ಪರ್ವತ ಶ್ರೇಣಿ, ನ್ಯೂ ಮೆಕ್ಸಿಕೋ ಹಾಗೂ ಕ್ಯಾಲಿಫೋರ್ನಿಯದ ಸಿಯೆರ ನಿವೇಡಗಳಲ್ಲೂ ಓ.ಕಾಲರಿಸ್ ಪ್ರಭೇದ ನೈರುತ್ಯ ಅಲಾಸ್ಕ ಹಾಗೂ ಯೂಕಾನುಗಳಲ್ಲೂ ಇವೆ.

ಪೈಕ ಸು. 125–300 ಸೆಂಮೀ ಉದ್ದದ ಪ್ರಾಣಿ. ತೂಕ 125–400 ಗ್ರಾಂ. ಬಾಲ ಇಲ್ಲ. ದೇಹದ ಮೇಲೆ ದಟ್ಟ, ಉದ್ದ ಮತ್ತು ಮೃದು ತುಪ್ಪಳು ಉಂಟು. ಬಣ್ಣ ಬೂದು ಮಿಶ್ರಿತ ಕಂದು. ಕೆಲವು ಪ್ರಭೇದಗಳಲ್ಲಿ ಬೇಸಗೆ ಹಾಗೂ ಚಳಿಗಾಲಗಳಲ್ಲಿ ಬಣ್ಣ ಬದಲಾಗುವುದುಂಟು. ತಲೆ ಮೋಟು. ಕಿವಿಗಳು ಗುಂಡು. ಮೂಗಿನ ಹೊಳ್ಳೆಗಳು ಮುಚ್ಚಿಕೊಳ್ಳುವಂತಿವೆ. ಕಾಲುಗಳು ಮೊಟಕು.

ಬಂಡೆ ಬಿರುಕುಗಳಲ್ಲಿ ಇವುಗಳ ವಾಸ. ತಮ್ಮ ಮೆಚ್ಚಿನ ಆಹಾರವಾದ ಹುಲ್ಲು, ಗಿಡಗೆಂಟೆ, ಜೊಂಡು ಮುಂತಾದ ಸಸ್ಯಪದಾರ್ಥಗಳನ್ನು ತಿನ್ನುತ್ತ ಮುಂಜಾನೆ ಹಾಗೂ ಸಾಯಂಕಾಲಗಳಲ್ಲಿ ಚಟುವಟಿಕೆಯಿಂದ ಓಡಾಡುವುವು. ಇವುಗಳಲ್ಲಿ ಕೆಲವು ವಿಚಿತ್ರ ಲಕ್ಷಣಗಳನ್ನು ಕಾಣಬಹುದು. ಉದಾಹರಣೆಗೆ, ತಾವು ತಿನ್ನಬಹುದಾದಕ್ಕಿಂತ ಹೆಚ್ಚಿನ ಮೊತ್ತದಲ್ಲಿ ಹುಲ್ಲು ಮುಂತಾದವನ್ನು ಸಂಗ್ರಹಿಸಿ ಬಿಸಿಲಿನಲ್ಲಿ ಒಣಗಿಸಿ ಒಣಮೇವನ್ನಾಗಿ ಪರಿವರ್ತಿಸುವುವು. ಚಳಿಗಾಲದಲ್ಲಿ ಆಹಾರ ಪೂರೈಕೆಗೆ ಕೊರತೆಯುಂಟಾದಾಗ ಈ ಮೇವನ್ನು ತಿನ್ನುತ್ತವೆ. ಇವು ರಾತ್ರಿ ವೇಳೆ ಹಾಕುವ ಹಿಕ್ಕೆ ಕಪ್ಪು ಬಣ್ಣದ್ದೂ ಸ್ನಿಗ್ಧವೂ ಆಗಿದ್ದು ಇದರ ಸುತ್ತ ಜಲ್ಲಿಯಂಥ ಪೊರೆ ಇರುವುದು. ಈ ಹಿಕ್ಕೆಯನ್ನು ಇವು ತಿನ್ನುತ್ತವೆ. ಹಿಕ್ಕೆಯಲ್ಲಿರಬಹುದಾದ ಜೀವಸತ್ತ್ವ ದೇಹಕ್ಕೆ ನಷ್ಟವಾಗಿ ಹೋಗದಂತೆ ನಿಸರ್ಗ ವಿಧಿಸಿರುವ ನಿಯಮ ಇದಾಗಿರಬಹುದು.

ಪೈಕ ವರ್ಷಕ್ಕೆ 2–3 ಬಾರಿ ಮರಿ ಹಾಕುತ್ತದೆ. ಒಂದು ಸಲಕ್ಕೆ 3–4 ಮರಿಗಳು ಹುಟ್ಟುತ್ತವೆ. ಮರಿಗಳು ದೊಡ್ಡವಾಗಿ ಸ್ವತಂತ್ರ ಜೀವನ ನಡೆಸಲು 6–8 ವಾರ ಬೇಕು. ಪೈಕದ ಆಯಸ್ಸು 1–3 ವರ್ಷ. ***

**ಪೈಥಾನೋಮಾರ್ಫ:** ಮೇಲಿನ ಕ್ರಿಟೇಷಿಯಸ್ ಕಾಲದಲ್ಲಿ ಜೀವಿಸಿದ್ದು ಈಗ ನಾಶವಾಗಿರುವ ಮಾಂಸಾಹಾರಿ ಸಾಗರವಾಸಿ ಸರೀಸೃಪಗಳ ಗುಂಪು. ಪ್ರಾಣಿಗಳನ್ನು ಹಿಂದಿನ ಮಾಂಸಾಹಾರಿ ಉಡಗಳಿಗೆ (ವೆರಾನಿಡೆ ಕುಟುಂಬದ ಪ್ರಾಣಿಗಳು) ಹೋಲಿಸಬಹುದು. ಇವುಗಳ ದೇಹ ಬಲು ದೊಡ್ಡದಾಗಿಯೂ ಉದ್ದವಾಗಿಯೂ ಇತ್ತು; ದೇಹದ ಉದ್ದ 24–27 ಮೀ ಇತ್ತೆನ್ನಲಾಗಿದೆ. ಇಂದಿನ ಉಡದ ತಲೆಯಂತೆಯೇ ಇರುವ ತಲೆ ಇದಕ್ಕೂ ಇತ್ತು. ಕೋಪ್ ಎಂಬ ಜೀವವಿಜ್ಞಾನಿಯ ಅಭಿಪ್ರಾಯದಲ್ಲಿ ಹಾವುಗಳನ್ನು ಹೋಲುವುವು. ಹಾವಿನಂಥ ದೇಹವುಳ್ಳ ಇವುಗಳಲ್ಲಿ ಚೆನ್ನಾಗಿ ಬೆಳೆದಿರುವ ಜಾಲಪಾದಗಳಿದ್ದುವು. ಉದಾಹರಣೆಗೆ, ಮೋಸಸಾರಸ್ ಎಂಬುದು ಯೂರೋಪ್ ಹಾಗೂ ಉತ್ತರ ಅಮೆರಿಕಗಳಲ್ಲಿ 90–70 ಮಿಲಿಯನ್ ವರ್ಷಗಳ ಹಿಂದೆ ಜೀವಿಸಿದ್ದ ಪ್ರಾಣಿ. ಸುಮಾರು 10 ಮೀ ಉದ್ದ ಇದ್ದ ಇದಕ್ಕೆ ಬಲವಾದ ದೇಹ, ಭಾರಿ ದವಡೆಗಳು, ಹರಿತವಾದ ಹಲ್ಲುಗಳಿದ್ದುವು. ತನ್ನ ಬಲಯುತವಾದ ಜಾಲಪಾದಗಳಿಂದ ಈಜುತ್ತಿತ್ತು. ಇದರ ನಾಸಿಕ ರಂಧ್ರಗಳು ನೆತ್ತಿಯ ಮೇಲಿದ್ದುವು. ಮಾಂಸಾಹಾರಿಯಾಗಿದ್ದ ಇದು ಇತರ ಸಾಗರವಾಸಿಗಳಿಗೆ ಕಂಟಕಪ್ರಾಯವಾಗಿತ್ತು ಎನ್ನಲಾಗಿದೆ. (ಕೆ.ಎಂ.ವಿ.)

**ಪೊರೆ ಬಿಡುವಿಕೆ:** ದೇಹದ ಹೊರಚರ್ಮವನ್ನು ಆಗಾಗ ಕಳಚಿ ಹೊಸ ಚರ್ಮವನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆ (ಮೌಲ್ಟಿಂಗ್ : ಎಕ್‌ಡೈಸಿಸ್). ಕಠಿಣಚರ್ಮಿಗಳ ಗುಂಪಿನ ಪ್ರಾಣಿಗಳು, ಸಂಧಿಪದಿಗಳು, ಕೀಟಗಳು ಹಾಗೂ ಹಾವುಗಳಲ್ಲಿ ಇದನ್ನು ಸಾಮಾನ್ಯವಾಗಿ ಕಾಣಬಹುದು.

ಈ ಪ್ರಾಣಿಗಳಲ್ಲಿ ಸಾಮಾನ್ಯವಾಗಿ ದೇಹದ ಹೊರಭಾಗ ಪೊರೆಯಿಂದ ಆವೃತವಾಗಿರುವುದು. ಇದನ್ನು ದೇಹದ ಹೊರಪದರ ಸ್ರವಿಸುತ್ತದೆ. ಪೊರೆಯಲ್ಲಿ ಎರಡು ಪದರಗಳುಂಟು. ಹೊರಪೊರೆ ತೆಳುವಾಗಿಯೂ ಒಳಪೊರೆ ದಪ್ಪವಾಗಿಯೂ ಇವೆ. ಪೊರೆ ಕೈಟಿನ್ ಎಂಬ ಸಸಾರಜನಕ ಪದಾರ್ಥದಿಂದ ರಚಿತವಾಗಿದೆ. ಇದು ನಿರ್ಜೀವ ಪದರ. ಒಳಗಿನ ದೇಹ ಬೆಳೆದಂತೆ ಇದು ಹಿಗ್ಗಲಾರದು. ಆದ್ದರಿಂದ ಈ ಪ್ರಾಣಿಗಳು ಗಾತ್ರದಲ್ಲಿ ಹಿರಿದಾದಾಗ ಈ ಪೊರೆಯನ್ನು ಕಳಚಿ ಹೊಸ ದೊಡ್ಡಪೊರೆಯನ್ನು ಬೆಳೆಸಿಕೊಳ್ಳುತ್ತವೆ. ಹಳೆಯ ಪೊರೆಯನ್ನು ಕಳಚುವುದಕ್ಕೆ ಮೊದಲು ಹೊಸದೊಂದು ಪೊರೆ ರೂಪುಗೊಳ್ಳುತ್ತದೆ. (ಪೊರೆಯೇ ಇವುಗಳ ದೇಹಕ್ಕೆ ಅವಶ್ಯಕವಾದ ರಕ್ಷಣೆ.) ಒಂದು ಪೊರೆಯನ್ನು ಕಳಚಿ ಹಾಕಿದಾಗ ಸೂರ್ಯನ ಕಿರಣ ಹಾಗೂ ಪ್ರಕೃತಿಯ ಇತರ ವಿಕೋಪ ವಾತಾವರಣಗಳಿಗೆ ದೇಹವನ್ನು ಒಡ್ಡದಂತೆ ಮೊದಲೇ ಹೊಸದೊಂದು ಪೊರೆಯನ್ನು ಬೆಳೆಸಿಕೊಂಡು ಹಳೆಯ ಪೊರೆಯನ್ನು ಕಳಚಿಬಿಡುತ್ತದೆ. ಕೆಲವು ಸಂಧಿಪದಿಗಳು ಹೀಗೆ ಕಳಚಿದ ಪೊರೆಯನ್ನು ಕರಗಿಸಿ ಹೊಸ ಪೊರೆಯನ್ನು ಸ್ರವಿಸಲು ಉಪಯೋಗಿಸುತ್ತವೆ. ಪೊರೆ ಬಿಡುವಾಗ ಹೊರಪೊರೆ ಕಳಚಿಹೋಗಿ ಒಳಪೊರೆಯೇ ಆಗ ಹೊರಪೊರೆಯಾಗುತ್ತದೆ ಮತ್ತು ಸಾಮಾನ್ಯವಾಗಿ ಹೊರಪೊರೆ ಬೆನ್ನಿನ ನಡುಭಾಗದಲ್ಲೇ ಸೀಳುತ್ತದೆ. ಅನಂತರ ಅದರಿಂದ ಪ್ರಾಣಿ ಹೊರಬರುತ್ತದೆ.

ಕೀಟಗಳ ಲಾರ್ವಗಳಲ್ಲಿ ಬೆಳವಣಿಗೆಯ ದರ ಹೆಚ್ಚು. ಆದ್ದರಿಂದಲೇ ಇವುಗಳಲ್ಲಿ ಪೊರೆ ಬಿಡುವಿಕೆ ಹೆಚ್ಚು ಸ್ಪಷ್ಟ. ಚಿಟ್ಟೆಗಳ ಕಂಬಳಿಹುಳುಗಳು, ಕೊಂಡಲಿಗಳು, ಜಿರಲೆಯ ಅಪ್ಸರೆಗಳು, ರೇಷ್ಮೆ ಹುಳುಗಳಲ್ಲಿ ಪೊರೆ ಬಿಡುವ ಕಾಲವನ್ನು ಜ್ವರ ಬಂದ ಕಾಲ ಎಂದು ಕರೆಯುತ್ತಾರೆ. ಇವುಗಳು ನಿರ್ದಿಷ್ಟ ಸಲ ಪೊರೆ ಬಿಟ್ಟು ಪ್ರಬುದ್ಧ ಕೀಟಗಳಾಗಿ ಬೆಳೆಯುತ್ತವೆ. ಉದಾಹರಣೆಗೆ, ಜಿರಲೆಗಳ ಮರಿಗಳು [ಅಪ್ಸರೆ] ಲಿಂಗ ಪ್ರೌಢತನವನ್ನು ಗಳಿಸುವ ಕಾಲಕ್ಕೆ ಐದು ಸಾರಿ ಪೊರೆ ಬಿಡುತ್ತವೆ. ಕೊನೆಯ ಸಾರಿ ಪೊರೆ ಬಿಟ್ಟಾಗಲೇ ಪೂರ್ಣವಾಗಿ ಬೆಳೆದ, ರೆಕ್ಕೆಗಳುಳ್ಳ ಲಿಂಗಪ್ರೌಢ ಜಿರಲೆಗಳಾಗಿ ಹೊರಬರುತ್ತವೆ. ಒಂದು ಸಾರಿ ಪೊರೆ ಬಿಡುವುದಕ್ಕೂ ಇನ್ನೊಂದು ಸಾರಿ ಪೊರೆ ಬಿಡುವುದಕ್ಕೂ ಇರುವ ಅಂತರಕ್ಕೆ ಇನ್‌ಸ್ಟಾರ್ (ಅಂತರಿಕೆ) ಎಂದು ಹೆಸರು. ಒಂದು ಕೀಟದ ಬೆಳವಣಿಗೆಯಲ್ಲಿ ನಿರ್ದಿಷ್ಟವಾದ ಇನ್‌ಸ್ಟಾರ್‌ಗಳಿರುತ್ತವೆ.

ಕೀಟಗಳ ಮರಿಗಳ ಪೊರೆಬಿಡುವ ಕ್ರಿಯೆ ಕೆಲವು ಹಾರ್ಮೋನುಗಳ ನಿಯಂತ್ರಣಕ್ಕೆ ಒಳಪಟ್ಟಿದೆ. ಮಿದುಳಿನ ಬಳಿ ಇರುವ ವಿಶೇಷ ತೆರನ ಸ್ರವಿಕೆಯ ಕೋಶಗಳು ಹಾರ್ಮೋನುಗಳನ್ನು ಉತ್ಪತ್ತಿ ಮಾಡುತ್ತವೆ. ಈ ಹಾರ್ಮೋನುಗಳು ಎದೆಯ ಭಾಗದ ಮೊದಲನೆಯ ಖಂಡದಲ್ಲಿರುವ ಪ್ರೋಥೊರ್ಯಾಸಿಕ್ ಗ್ರಂಥಿಯನ್ನು ನಿಯಂತ್ರಿಸುತ್ತವೆ. ಈ ಗ್ರಂಥಿ ಎಕ್‌ಡೈಸೋನ್ ಎಂಬ ಹಾರ್ಮೋನನ್ನು ಉತ್ಪತ್ತಿ ಮಾಡುತ್ತದೆ. ಪ್ರೋಥೊರ್ಯಾಸಿಕ್ ಗ್ರಂಥಿಗಳ ಕಷಾಯ ಅಥವಾ ಎಕ್‌ಡೈಸೋನ್‌ಗಳನ್ನು ಕೃತಕವಾಗಿ ಕೀಟಗಳಿಗೆ ಕೊಟ್ಟಾಗ ಪೊರೆ ಬಿಡುವಿಕೆ ತ್ವರೆಯಿಂದ ನಡೆದು ರೂಪಪರಿವರ್ತನೆಯಾಗುತ್ತದೆ. ಬೆಳವಣಿಗೆಯ ಮೂಲಾವಸ್ಥೆಯಲ್ಲಿ ಈ ಹಾರ್ಮೋನನ್ನು ಕೊಟ್ಟರೆ ಬೆಳವಣಿಗೆ ನಿಂತು ಪೊರೆಬಿಡುವಿಕೆಯು ಹೆಚ್ಚಾಗಿ ರೂಪಪರಿವರ್ತನೆ ನಡೆದು ಸಣ್ಣ ಗಾತ್ರದ ಕೀಟಗಳಾಗುತ್ತವೆ. ಈ ಹಾರ್ಮೋನಿನಿಂದ ಪೊರೆಬಿಡುವಿಕೆಯ ಕ್ರಿಯೆ ನಡೆಯುತ್ತದೆಯೇ ವಿನಾ ಪ್ರಾಣಿಯ ಬೆಳವಣಿಗೆ ಆಗಲಾರದು. ಆದರೆ ಮೂಲತಃ ಪೊರೆ ಬಿಡುವಿಕೆಯ ಕಾರಣ ದೇಹ ಬೆಳೆದು ಹೊರಪೊರೆ ಹಿಗ್ಗದೇ ಹೋದುದರ ದೆಸೆಯಿಂದಾಗಿ ಹೊರಪೊರೆಯನ್ನು ಕಳಚಬೇಕಾಗುತ್ತದೆ. ಅಂದರೆ ಈ ಕ್ರಿಯೆ ಎಕ್‌ಡೈಸೋನ್ ಎಂಬ ಹಾರ್ಮೋನಿನ ಅಂಕೆಗೆ ಒಳಪಟ್ಟಿದೆ. ಪ್ರೋಥೊರ್ಯಾಸಿಕ್ ಗ್ರಂಥಿಯನ್ನು ತೆಗೆದುಹಾಕಿದರೆ ಪೊರೆಬಿಡುವ ಕ್ರಿಯೆಯೇ ನಿಂತು ಹೋಗುತ್ತದೆ.

ಪೊರೆಬಿಡುವಿಕೆಯನ್ನು ಹಾವುಗಳಲ್ಲೂ ಕಾಣಬಹುದು. ಅವು ಕಣ್ಣು, ನಾಲಿಗೆಗಳನ್ನಾವರಿಸಿರುವ ಪದರವನ್ನೊಳಗೊಂಡಂತೆ ದೇಹದ ಪೂರ್ಣ ಹೊರಚರ್ಮವನ್ನು ಕಳಚುವುವು. ಸಾಮಾನ್ಯವಾಗಿ ಹಾವುಗಳು ವರ್ಷಕ್ಕೆ ಮೂರು ಸಾರಿ ಪೊರೆ ಬಿಡುತ್ತವೆ. ಆದರೆ, ನಾಗರಹಾವುಗಳು ತಿಂಗಳಿಗೊಂದಾವರ್ತಿ ಪೊರೆ ಬಿಡುತ್ತವೆ. ಗಾಯಗಳಿಂದ ಪೊರೆ ಬಿಡುವ ಸಂಭವ ಹೆಚ್ಚಾಗುತ್ತದೆ. ಇವುಗಳಲ್ಲಿ ಪೊರೆ ಬಿಡುವಾಗ ಚರ್ಮ ದೇಹದ ಮುಂಭಾಗದಲ್ಲಿ ಬಿರಿಯುತ್ತ ಹೋಗಿ ಅನಂತರ ಹಿಂಭಾಗಕ್ಕೆ ಹರಡುತ್ತದೆ.

ಸಾಮಾನ್ಯವಾಗಿ ಪೊರೆಬಿಡುವ ಕಾಲ ಬಂದಾಗ ಪ್ರಾಣಿಗಳು ಜಡವಾಗುತ್ತವೆ. ಅವುಗಳ ಜೀವನ ಚಟುವಟಿಕೆಗಳೆಲ್ಲ ಕಡಿಮೆ ಆಗುತ್ತವೆ. ಆಹಾರ ಸೇವನೆಯನ್ನು ತ್ಯಜಿಸುತ್ತವೆ. ಈ ರೀತಿಯ ಜಡತೆಯನ್ನು ರೇಷ್ಮೆಹುಳುಗಳಲ್ಲಿ ಕಾಣಬಹುದು. ಪೊರೆ ಬಿಡುವ ಕಾಲದಲ್ಲಿ ಹಾವುಗಳ ಮೈಬಣ್ಣದ ಹೊಳಪು ಕಡಿಮೆಯಾಗುತ್ತದೆ. ಚಟುವಟಿಕೆ ಸಹ ಮಂದವಾಗುತ್ತದೆ. ಆಗ ಅವಕ್ಕೆ ಕಣ್ಣು ಕಾಣುವುದಿಲ್ಲ. ಆದ್ದರಿಂದ ಪೊರೆ ಬಿಡುವ ಸಮಯದಲ್ಲಿ ಸುರಕ್ಷಿತ ಸ್ಥಳಗಳನ್ನು ಹುಡುಕಿಕೊಳ್ಳುತ್ತವೆ. ***

**ಪೋಲಿಯೊಮೈಯಲೈಟಿಸ್:** ಕೇಂದ್ರನರಮಂಡಲದ ನರಕಣಗಳನ್ನು ವಿಶಿಷ್ಟ ಪ್ರರೂಪದ ವೈರಸುಗಳು ಆಕ್ರಮಿಸಿದಾಗ ಉಂಟಾಗುವ ಸಾಂಸರ್ಗಿಕ ರೋಗ. ವಾಡಿಕೆಯಲ್ಲಿ

ಪೋಲಿಯೊ, ಮಕ್ಕಳ ಪಾರ್ಶ್ವ ವಾಯು, ಹೇನ್‌ಮೇಡಿನ್ ರೋಗ ಪರ್ಯಾಯ ನಾಮಗಳು. ರೋಗಾಣುಗಳು ಮಿದುಳುಬಳ್ಳಿಯ ಮುಂಭಾಗದಲ್ಲಿರುವ ಕ್ರಿಯಾತ್ಮಕ ನರಕಣಗಳಿಗೂ ಇವಕ್ಕೆ ಅನುಗುಣವಾಗಿ ಕಶೇರುರಜ್ಜುವಿನಲ್ಲಿರುವ ಕ್ರಿಯಾತ್ಮಕ ನರಕಣಗಳಿಗೂ ಸ್ವಭಾವತಃ ಧಕ್ಕೆ ಉಂಟುಮಾಡುತ್ತವೆ. ಕಶೇರುರಜ್ಜುವಿನ ನರಕಣಗಳು ಧಕ್ಕೆಗೆ ಈಡಾದಾಗಿನ ಸ್ಥಿತಿಗೆ ಪೋಲಿಯೊಎನ್‌ಸೆಫಲೈಟಿಸ್ ಎಂದು ಹೆಸರು.

ಕ್ರಿ.ಪೂ. 1600 ರಷ್ಟು ಹಿಂದೆಯೇ ಈ ರೋಗದ ವಿಚಾರ ಈಜಿಪ್ಟಿನವರಿಗೆ ಗೊತ್ತಿತ್ತು. ಪಾಶ್ಚಾತ್ಯ ವೈದ್ಯರ ಪೈಕಿ ಅಂಡರ್‌ವುಡ್ ಎಂಬ ಆಂಗ್ಲ ವೈದ್ಯನೇ ಈ ರೋಗದ ವಿಚಾರವಾಗಿ ಮೊದಲು ಪ್ರತಿಪಾದಿಸಿದ (ಕ್ರಿ. ಶ. 1784). ಸುಮಾರು ನೂರು ವರ್ಷಗಳ ಬಳಿಕ, 1887 ರಲ್ಲಿ ಹೇನ್ ಎಂಬಾತ ಈ ವಿಚಾರವನ್ನು ವೈದ್ಯಕೀಯವಾಗಿ ಸ್ಥಿರಪಡಿಸಿದ. 1890 ರಲ್ಲಿ ಇದರ ಸಾಂಕ್ರಾಮಿಕ ಲಕ್ಷಣಗಳ ಬಗ್ಗೆ ಮೇಡಿನ್ ಒಂದು ಪ್ರಕಟಣೆ ಹೊರಡಿಸಿದ. ಲ್ಯಾಂಡ್‌ಸ್ಟೀನರ್ ಮತ್ತು ಪಾಪೆ ಎಂಬವರು 1909 ರಲ್ಲಿ ಪ್ರಯೋಗಾರ್ಥವಾಗಿ ಈ ರೋಗವನ್ನು ಕೋತಿಗಳಿಗೆ ವರ್ಗಾಯಿಸುವುದರಲ್ಲಿ ಯಶಸ್ವಿಯಾದರು. ಎಂಡರ್ಸ್, ವೆಲ್ಲರ್ ಮತ್ತು ರಾಬಿನ್ಸ್ (1949) ಎಂಬುವರು ಈ ಜೀವಿಗಳನ್ನು ಅಂಗಸತ್ತ್ವದಲ್ಲಿ ಕೃಷಿ ಮಾಡಿ ಬೆಳೆಸಿದರು.

ಅಭಿವೃದ್ಧಿಶೀಲ ದೇಶಗಳ ಮಕ್ಕಳಲ್ಲಿಯೂ ಶಿಶುಗಳಲ್ಲಿಯೂ ಪೋಲಿಯೊ ಸರ್ವೇಸಾಮಾನ್ಯ ರೋಗ. ರೋಗದ ತೀವ್ರತೆ ಮತ್ತು ಮರಣ ಸಂಖ್ಯೆ ವಯಸ್ಸಾದವರಲ್ಲಿ ಹೆಚ್ಚು. ಅಲ್ಲದೆ, ಬೇಸಗೆಯ ಅಂತ್ಯ ಮತ್ತು ಚಳಿಗಾಲದ ಆದಿಯಲ್ಲಿ ಇದರ ಹೊಡೆತ ಹೆಚ್ಚು. ರೋಗಾಣುಗಳು ದೇಹವನ್ನು ಪ್ರವೇಶಿಸಿದ ಬಳಿಕ ಸಂಪೂರ್ಣ ಚಿಹ್ನೆಗಳೊಂದಿಗೆ ರೋಗ ಕಾಣಿಸಿಕೊಳ್ಳಲು 7–14 ದಿವಸಗಳು ಬೇಕು. ರೋಗಾಣುಗಳು ಅತ್ಯಂತ ಸೂಕ್ಷ್ಮವಾದವು, ಇವುಗಳಲ್ಲಿ ಬ್ರೂನ್‌ಹಿಲ್ಡೆ, ಲಾನ್‌ಸಿಂಗ್ ಮತ್ತು ಲಿಯಾನ್ ಎಂಬ ಮೂರು ಬಗೆಗಳಿವೆ. ಇವು ದೇಹ ಪ್ರವೇಶಿಸಲು ಜೀರ್ಣಾಂಗಗಳು, ಗಂಟಲು ಮತ್ತು ಟಾನ್‌ಸಿಲುಗಳ ಅಡಿ ನೈಸರ್ಗಿಕ ಹೆಬ್ಬಾಗಿಲುಗಳಿದ್ದಂತೆ. ಮೂಗಿನ ಲೋಳೆಪೊರೆಯಲ್ಲಿ ಹರಡಿಕೊಂಡಿರುವ ಪ್ರಾಣ ನರದ ಕವಲುಗಳ ಮೂಲಕ ಇವು ಮಿದುಳನ್ನು ಪ್ರವೇಶಿಸುತ್ತವೆ ಎಂಬ ಹಳೆಯ ವಾದ ಆಧಾರರಹಿತವಾದುದು. ಬಹುಶಃ ಜೀರ್ಣಾಂಗಗಳನ್ನು ಪೂರೈಸುವ ನರತಂತುಗಳ ಮೂಲಕ ಇವು ನರಮಂಡಲವನ್ನು ಪ್ರವೇಶಿಸಬಹುದು. ಟಾನ್‌ಸಿಲುಗಳ ಮೇಲೆ ನಡೆಯುವ ಯಾವುದೇ ಶಸ್ತ್ರಕ್ರಿಯೆ ರೋಗಾಣುಗಳ ಪ್ರವೇಶಕ್ಕೆ ಅನುಕೂಲವಾಗುವುದಲ್ಲದೆ ಅಂಥ ಸಂದರ್ಭದಲ್ಲಿ ಕಶೇರುರಜ್ಜು ಸೋಂಕಿಗೆ ಒಳಗಾಗುವ ಸಂಭವ ಜಾಸ್ತಿ. ಇವು ನರಗಳ ತಿರುಳುಧಾರೆಗಳಲ್ಲಿ (ಆ್ಯಕ್ಸನ್) ಪ್ರವಹಿಸಿ ನರಕಣಗಳನ್ನು ಹೊಕ್ಕು ಅಲ್ಲಿ ವೃದ್ಧಿಹೊಂದುತ್ತ ಇವನ್ನು ನಾಶ ಮಾಡಬಹುದು. ಇಲ್ಲವೇ ತಾವೇ ನಾಶವಾಗಬಹುದು. ಕೆಲವು ಕಾಲ ನರಕಣಗಳಲ್ಲಿ ಅಜ್ಞಾತವಾಗಿದ್ದು, ಸಂದರ್ಭ ಒದಗಿದಾಗ ಅಂದರೆ, ಅತೀವ ದೈಹಿಕ ಶ್ರಮ, ಶಸ್ತ್ರಚಿಕಿತ್ಸೆ ಮುಂತಾದ ಸಂದರ್ಭಗಳಲ್ಲಿ ಪುನಶ್ಚೇತನಗೊಂಡು ವೃದ್ಧಿಹೊಂದುವುದೂ ಉಂಟು. ರೋಗಿಯ ಮಲದಿಂದ ಮಿಶ್ರಿತವಾಗಿರುವ ಕೊಳಗಳಲ್ಲಿ ವ್ಯಕ್ತಿ ಈಜುವಾಗ ಆತನ ಬಾಯಿ ಮೂಲಕ ನೀರು ಒಳಹೊಕ್ಕು ಕ್ರಿಮಿಗಳು ಜೀರ್ಣಾಂಗಗಳನ್ನು ಪ್ರವೇಶಿಸುತ್ತವೆ. ಒಂದು ಸಲ ರೋಗ ಬಂದು ವಾಸಿ ಆಗಿ ರೋಗ ವಿರುದ್ಧ ರಕ್ಷಣೆ ಉಂಟಾಗಿದ್ದರೂ ಎರಡನೆಯ ಸಲ ಬೇರೆ ವಿಭೇದದ (ಸ್ಟ್ರೈನ್) ರೋಗಾಣುಗಳು ಪ್ರವೇಶಿಸಿದರೆ ರೋಗ ಪುನಃ ಉಂಟಾಗುತ್ತದೆ.

ಪೋಲಿಯೊ ರೋಗವನ್ನು ಕೋತಿಗಳಿಗೆ ಬರುವಂತೆ ಮಾಡಬಹುದಾದರೂ ನೈಸರ್ಗಿಕವಾಗಿ ಇದು ಮಾನವನಿಗೆ ಮಾತ್ರ ಬರುವುದಾಗಿದೆ. ಕ್ರಿಮಿಗಳನ್ನು ಪ್ರಾರಂಭಿಕ ಘಟ್ಟಗಳಲ್ಲಿ ಗಂಟಲಿನಿಂದಲೂ ತರುವಾಯ ಮಲದಿಂದಲೂ ಬೇರ್ಪಡಿಸಬಹುದು. ಕೊಚ್ಚೆ ನೀರು ಮತ್ತು ನೊಣಗಳಲ್ಲಿ ಸಹ ಈ ಕ್ರಿಮಿಗಳನ್ನು ಪತ್ತೆ ಹಚ್ಚಬಹುದು. ಇವು ಮಾನವ ದೇಹ ಸಂಪರ್ಕವಿಲ್ಲದೆ ಇನ್ನೂರು ದಿವಸಗಳ ತನಕವೂ ಬದುಕಬಲ್ಲವು. ನರಕಣಗಳನ್ನು ಕ್ರಿಮಿಗಳು ಅತಿಕ್ರಮಿಸಿದಾಗ ಪ್ರತಿಕ್ರಿಯೆಯಾಗಿ ನರಕಣಗಳು ಕ್ಷಯಿಸುತ್ತವೆ.

ರೋಗ ಲಕ್ಷಣಗಳು : ಪೋಲಿಯೊಮೈಯಲೈಟಿಸ್ ರೋಗ ಎರಡು ಹಂತಗಳಲ್ಲಿ ಘಟಿಸುತ್ತದೆ. ಪೂರ್ವಾರ್ಧ ಘಟಕಕ್ಕೆ ಲಕ್ವಾತೀತ ಪೋಲಿಯೊ ಎಂದು ಹೆಸರು. ಈ ಘಟ್ಟದಲ್ಲಿ ಅಂದರೆ ಸಾಂಕ್ರಾಮಿಕ ವ್ಯಾಧಿ ಕಾಲದಲ್ಲಿ ಕೆಲವರಲ್ಲಿ ಯಾವ ರೀತಿಯ ಲಕ್ವದ ಲಕ್ಷಣಗಳೂ ಇರುವುದಿಲ್ಲ. ಕೇವಲ ಜ್ವರ, ಕೈಕಾಲುನೋವು, ತಲೆನೋವು, ಪ್ರತಿಸ್ಪಂದನ ನೋವು ಮತ್ತು ಗಂಟಲುಬೇನೆ, ಶೀತ ಇವುಗಳಿಂದ ರೋಗ ಪ್ರಾರಂಭವಾಗಿ ರೋಗಿಗಳು ಉಬ್ಬಳಿಕೆ, ವಾಕರಿಕೆ ಮತ್ತು ಅತಿಸಾರಗಳಿಂದ ನರಳುತ್ತಾರೆ. ಈ ಪರಿಸ್ಥಿತಿ ಕೆಲವು ದಿವಸಗಳ ಪರ್ಯಂತ ಮಾತ್ರ ಇರುತ್ತದೆ. ತಲೆನೋವು, ಬೆನ್ನು ಉರಿ ಮತ್ತು ಮಾಂಸಖಂಡಗಳ ಪ್ರತಿಸ್ಪಂದನ ನೋವು ಇವು ಮುಖ್ಯ ಚಿಹ್ನೆಗಳು. ಸ್ನಾಯುಗಳು ಬಿರುಸಾಗಿದ್ದು ಕತ್ತು ಮತ್ತು ಬೆನ್ನನ್ನು ಬಗ್ಗಿಸುವುದು ದುಸ್ಸಾಧ್ಯವಾಗುತ್ತದೆ. ರೋಗಿ ಕುಳಿತುಕೊಳ್ಳುವಾಗ ಬೆನ್ನೆಲುಬಿನ ಕಾಠಿಣ್ಯದಿಂದಾಗಿ ಒತ್ತಾಸೆಗೋಸ್ಕರ ಹಿಂಬದಿಗೆ ಕೈಗಳನ್ನು ಚಾಚಿ ತ್ರಿಪಾದ ಭಂಗಿಯಲ್ಲಿ ಕುಳಿತುಕೊಳ್ಳುತ್ತಾನೆ. ಈ ಘಟ್ಟ ಉತ್ತರಾರ್ಧಕ್ಕೆ ಹೋಗದೆ, ಅಂದರೆ ಲಕ್ವ ಹೊಡೆಯದೆ, ಅಲ್ಲಿಗೇ ನಿಂತರೂ ನಿಲ್ಲಬಹುದು ಅಥವಾ ಮುಂದಿನ ಘಟ್ಟಕ್ಕೆ ಹೋಗಲೂಬಹುದು. ಇದು ಉಗ್ರರೂಪ ತಾಳಿ ಪ್ರಸರಿಸಲೂಬಹುದು. ಇಲ್ಲವೆ ಕೇಂದ್ರೀಕೃತವಾಗಿ ಲಘುವಾಗಿಯಾದರೂ ಇರಬಹುದು. ಸಾಮಾನ್ಯವಾಗಿ ಲಕ್ವ ಎರಡರಿಂದ ಮೂರು ದಿವಸಗಳಲ್ಲಿ ತನ್ನ ಗರಿಷ್ಠ ಮಟ್ಟವನ್ನು ಮುಟ್ಟುತ್ತದೆ. ಆದರೆ, ಕೆಲವು ವೇಳೆ ಕೆಲವು ದಿವಸಗಳನ್ನೇ ತೆಗೆದುಕೊಳ್ಳಬಹುದು. ಅದು ಕೈಕಾಲುಗಳಿಂದ ಮೇಲೇರಿ ಕಶೇರುರಜ್ಜುವನ್ನು ತಲಪಿ ಪ್ರಾಣಾಂತಿಕವಾಗಬಹುದು. ಮಿದುಳುಬಳ್ಳಿ ಅಥವಾ ಕಶೇರುರಜ್ಜು ಕಾಯಿಲೆಗೆ ಈಡಾಗಬಹುದು. ಇವುಗಳಿಗೆ ಅನುಕ್ರಮವಾಗಿ ಬೆನ್ನು ಹುರಿಯ (ಸ್ಪೈನಲ್) ಪೋಲಿಯೊ ಮತ್ತು ಕಶೇರುರಜ್ಜುವಿನ (ಬಲ್ಬಾರ್) ಪೋಲಿಯೊ ಎಂದು ಹೆಸರು.

ಬೆನ್ನು ಹುರಿಯ (ಸ್ಪೈನಲ್) ಪೋಲಿಯೊ : ಇಲ್ಲಿ ಕೈಕಾಲುಗಳು ಮತ್ತು ಮುಂಡದ (ಪ್ರಮುಖವಾಗಿ ಕಾಲಿನ) ಐಚ್ಛಿಕ ಸ್ನಾಯುಗಳು ಲಕ್ವಕ್ಕೆ ಒಳಗಾಗುವುದರಿಂದ ಸ್ನಾಯುತಂತುಗಳು ಅದೃಢಗೊಳ್ಳುತ್ತವೆ. ಹೊಟ್ಟೆ ಮತ್ತು ಎದೆಯ ಸ್ನಾಯುಗಳೂ ಹೊಡೆತಕ್ಕೆ ಈಡಾಗಬಹುದು. ಇದು ಸುಧಾರಿಸುವುದಾದರೆ ಕೆಲವು ವಾರಗಳಲ್ಲಿ ಸ್ವಸ್ಥಿತಿಗೆ ಬರುತ್ತದೆ. ಪಕ್ಷವಾಯು ಹಿಡಿದ ಸ್ನಾಯುಗಳು ಕ್ಷಯಿಸಿ ಸಡಿಲಗೊಂಡು ಕೈಕಾಲುಗಳಿಗೆ ವಕ್ರತೆ ಉಂಟುಮಾಡುತ್ತವೆ. ಪ್ರಾರಂಭಿಕ ಘಟ್ಟದಲ್ಲಿ ಮೂತ್ರವಿಸರ್ಜನೆಗೂ ತಡೆ ಉಂಟಾಗಬಹುದು. ವಪೆ ಮತ್ತು ಪಕ್ಕೆಲುಬುಗಳ ಮಾಂಸಖಂಡಗಳು ವ್ಯಾಧಿಗ್ರಸ್ತವಾಗುವುದರಿಂದ ಉಸಿರಾಟದಲ್ಲಿ ಏರುಪೇರಾಗುತ್ತದೆ. ಶೀಘ್ರತರ ಉಸಿರಾಟ, ಮುಖ ಮತ್ತು ಕೈ ನೀಲಿಗಟ್ಟುವುದು (ಸಯನೋಸಿಸ್) ಇವು ಉಸಿರಾಟದ ಅಂಗಗಳು ರೋಗ ಪ್ರಕ್ರಿಯೆಗೆ ತುತ್ತಾಗಿರುವುದನ್ನು ಸೂಚಿಸುತ್ತವೆ.

ಕಶೇರುರಜ್ಜುವಿನ (ಬಲ್ಬಾರ್) ಪೋಲಿಯೊ : ಇಲ್ಲಿ ಕಶೇರುರಜ್ಜುವಿನ ಮೂಲ ಮತ್ತು ಅದರಲ್ಲಿರುವ ಮಿದುಳಿನಿಂದ ಹೊರಡತಕ್ಕ ನರಗಳ ಕಣಗಳು ರೋಗಕ್ಕೆ ಒಳಗಾಗುತ್ತವೆ. ಗಂಟಲು, ಧ್ವನಿಪೆಟ್ಟಿಗೆ ಇವು ಬೇನೆಗೆ ಒಳಗಾದಲ್ಲಿ ಕುಗ್ಗಿದ ಸ್ವರ, ಜೊತೆಗೆ ತೊದಲು ನುಡಿ ಸಂಭವಿಸುತ್ತವೆ. ಮಿದುಳಿನಿಂದ ಹೊರಡುವ ಐದನೆಯ ಮತ್ತು ಏಳನೆಯ ನರಗಳು ವಿರಳವಾಗಿ ಈಡಾಗುವುದುಂಟು. ಕಣ್ಣುಗುಡ್ಡೆಗಳ ಓಲಾಟವೂ ಸಂಭವಿಸಬಹುದು.

ರೋಗದ ಅಂತ್ಯ ಮತ್ತು ಜಟಿಲತೆಗಳು : ಮೊದಲ ಬಾರಿ ಘಟಿಸುವಾಗ ರೋಗದ ಪರಿಣಾಮ ತೀವ್ರವಾಗಿಯೂ ವಿಸ್ತಾರವಾಗಿಯೂ ಇರುತ್ತದೆ. ಗುಣಮುಖವಾಗುವುದಾದರೆ ಸಾಮಾನ್ಯವಾಗಿ ಕೆಲವು ದಿವಸಗಳಲ್ಲಿ ತೊಡಗಿ ಕೆಲವು ತಿಂಗಳುಗಳಲ್ಲಿ ಪೂರ್ಣ ಗುಣ ಹೊಂದುತ್ತದೆ. ಆದರೆ, ವಪೆ ಮತ್ತು ಪಕ್ಕೆಲುಬುಗಳ ಮಾಂಸಖಂಡಗಳು ರೋಗಕ್ಕೆ ಈಡಾದವರಲ್ಲಿ ಪುನಶ್ಚೇತನ ಬಹಳ ಕಷ್ಟ. ಕೃತಕ ಉಸಿರಾಟ ಸಹಾಯಕವಾಗಬಲ್ಲುದಾದರೂ ಅಂಗಾಂಗಗಳು ಇತರ ರೋಗಗಳಿಗೆ ಈಡಾಗುವ ಸಾಧ್ಯತೆ ಹೆಚ್ಚು. ಬಲ್ಬಾರ್ ಪೋಲಿಯೊದಲ್ಲಿ ನ್ಯೂಮೋನಿಯಾ ರೋಗ ತಗಲಬಹುದು.

ಚಿಕಿತ್ಸೆ ಮತ್ತು ನಿವಾರಣೆ : ಈ ಮುಂದಿನ ಆರು ಕ್ರಮಗಳನ್ನು ಅನುಸರಿಸುವುದಿದೆ.

1. ಯಾವುದೇ ರೀತಿಯ ದೈಹಿಕ ವ್ಯಾಯಾಮವನ್ನು ಮಾಡದಂತೆ ನೋಡಿಕೊಳ್ಳುವುದರ ಮೂಲಕ ರೋಗಿಗೆ ಸಂಪೂರ್ಣ ವಿಶ್ರಾಂತಿ ಕೊಡಬೇಕು. ಆತನ ಮಲಮೂತ್ರಗಳಲ್ಲಿ ರೋಗಾಣುಗಳಿರುವುದರಿಂದ ಕನಿಷ್ಠ ಮೂರು ವಾರಗಳ ತನಕ ಆತನನ್ನು ಪ್ರತ್ಯೇಕಿಸಿಡಬೇಕು ಮತ್ತು ಆತನ ಮಲಮೂತ್ರಗಳು ಇತರರಿಗೆ ಸಂಪರ್ಕಿಸದ ರೀತಿಯಲ್ಲಿ ಅವನ್ನು ನಾಶಪಡಿಸಬೇಕು.

2. ಸ್ನಾಯುಗಳ ನೋವು ಮತ್ತು ತಲೆನೋವುಗಳಿಗೆ ಔಷಧಿಗಳ ಮೂಲಕ ಚಿಕಿತ್ಸೆ ಮಾಡಬೇಕು.

3. ಅಂಗವಿನ್ಯಾಸ ಚಿಕಿತ್ಸೆ : ಸಂಪೂರ್ಣ ವಿಶ್ರಾಂತಿ ಕೊಟ್ಟು ವಕ್ರತೆಗಳು ಉಂಟಾಗದಂತೆ ಸರಿಯಾದ ಸ್ಥಿತಿಯಲ್ಲಿ ಅಂಗಗಳನ್ನು ಇಡಬೇಕು.

4. ದೈಹಿಕ ಚಿಕಿತ್ಸೆ : ಇದನ್ನು ಜ್ವರ, ಸ್ನಾಯುಗಳ ನೋವು ಮತ್ತು ಪ್ರತಿಸ್ಪಂದನ ನೋವು ಕಡಿಮೆಯಾದ ಅನಂತರ ಪ್ರಾರಂಭಿಸಬೇಕು. ಕೀಲುಗಳ ವಕ್ರತೆ ಉಂಟಾಗದಂತಿರಲು ಮೊದಲು ಅನಿರ್ದೇಶಿತ ಚಲನೆಗಳನ್ನು ಅನಂತರ ನಿರ್ದೇಶಿತ ಚಲನೆಗಳನ್ನೂ ಕೊಡಬೇಕು. ಇವಾದ ಬಳಿಕ ಪುನಶ್ಚೇತನದ ವ್ಯಾಯಾಮಗಳನ್ನು ಕೊಡುವುದಲ್ಲದೆ ನಿತ್ರಾಣಗೊಂಡ ಸ್ನಾಯುಗಳಿಗೆ ವಿದ್ಯುತ್ ಚಿಕಿತ್ಸೆಯನ್ನೂ ಕೊಡಬೇಕು.

5. ಬಲ್ಬಾರ್ ಪೋಲಿಯೊದಲ್ಲಿ ರೈಲ್ಸ್ ಕೊಳವೆ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಪೌಷ್ಟಿಕಾಹಾರವನ್ನು ಕೊಡಬೇಕು. ರೋಗಿಯ ಕಾಲಿನ ಕಡೆ ಮಂಚವನ್ನು ಎತ್ತರಿಸುವುದರಿಂದ ಮತ್ತು ಆತನನ್ನು ಮಗ್ಗುಲಲ್ಲಿ ಮಲಗಿಸುವುದರಿಂದ ಆತ ಸ್ರವಿಸುವ ದ್ರವಗಳು ಹೊರಹೋಗುವಂತೆ ಮಾಡಬಹುದು. ಉಸಿರಾಡಲು ತೊಂದರೆ ಉಂಟಾದಲ್ಲಿ ಶ್ವಾಸನಾಳ ಛೇದನ ಮಾಡಿ ಕೃತಕವಾಗಿ ಉಸಿರಾಡಲು ಅವಕಾಶ ಒದಗಿಸಬೇಕು.

6. ಪಾಪೆ ಮತ್ತು ಪಕ್ಕೆಲುಬುಗಳ ಮಾಂಸಖಂಡಗಳು ಕ್ಷೀಣಗೊಂಡಿದ್ದಲ್ಲಿ ಕೃತಕ ಉಸಿರಾಟ ಸಾಧನಗಳನ್ನು ಉಪಯೋಗಿಸಬೇಕು.

ಮುಂಜಾಗರೂಕತೆಯ ಕ್ರಮಗಳು : ವ್ಯಾಧಿ ಸಾಂಕ್ರಾಮಿಕವಾಗಿರುವ ಕಾಲದಲ್ಲಿ ಆರೋಗ್ಯವಾಗಿಯೇ ಇರುವ ರೋಗವಾಹಕರು ಮತ್ತು ಲಕ್ವಾತೀತ ಪೋಲಿಯೊ ರೋಗಿಗಳು ರೋಗ ಹರಡಲು ಕಾರಣರಾಗುವುದರಿಂದ ರೋಗವನ್ನು ತಡೆಗಟ್ಟುವ ಸಂಭವ ಕಡಿಮೆ ಮತ್ತು ಕಷ್ಟ. ರೋಗ ಅಂಟಿದವರೊಡನೆ ಕನಿಷ್ಠ ಮೂರು ವಾರಗಳ ಕಾಲ ಸಂಸರ್ಗ ನಿಷೇಧವನ್ನು ವಿಧಿಸಬೇಕು. ನೊಣಗಳ ನಿರ್ಮೂಲನಾ ಕ್ರಮವನ್ನು ಕೈಗೊಳ್ಳಬೇಕು. ಸಾಂಕ್ರಾಮಿಕ ವ್ಯಾಧಿ ಕಾಲದಲ್ಲಿ ಎಲ್ಲ ವಿಧವಾದ ಸಣ್ಣ ಶಸ್ತ್ರಕ್ರಿಯೆಗಳನ್ನೂ ಚುಚ್ಚು ಮದ್ದು ಹಾಕುವುದನ್ನೂ ಮುಂದೂಡಬೇಕು.

ಕೃತಕವಾಗಿ ರೋಗ ನಿರೋಧಕ ಸಾಮರ್ಥ್ಯವನ್ನು (ಅಬಾಧಿತತ್ವ) ಉಂಟುಮಾಡಲು ಎರಡು ವಿಧಗಳಿವೆ: ಚುಚ್ಚು ಮದ್ದಾಗಿ ಸಾಲ್ಕ್ ಮತ್ತು ಬಾಯಿ ಮೂಲಕ ತೆಗೆದುಕೊಳ್ಳಬಹುದಾದ ಸಾಬಿನ್ ಲಸಿಕೆ. ಇವನ್ನು ಮಗುವಿಗೆ 5–6 ತಿಂಗಳುಗಳು ತುಂಬಿದ ಬಳಿಕ ಕೊಡಿಸಬೇಕು. ಸಾಲ್ಕ್ ಲಸಿಕೆಯಲ್ಲಿ ಮೂರು ಪಂಗಡಗಳೂ ಸೇರಿದ ನಿರ್ಜೀವ ಕ್ರಿಮಿಗಳನ್ನು ಉಪಯೋಗಿಸುತ್ತಾರೆ. ತಿಂಗಳ ಅವಧಿಯಲ್ಲಿ ಎರಡು ಚುಚ್ಚುಮದ್ದುಗಳನ್ನೂ ಆರರಿಂದ ಒಂಬತ್ತು ತಿಂಗಳುಗಳ ಒಳಗೆ ಮೂರನೆಯದನ್ನೂ ಕೊಡಬೇಕು. ಆದರೆ, ಈಗ ಬಾಯಿ ಮೂಲಕ ತೆಗೆದುಕೊಳ್ಳಬಹುದಾದ ಅತಿ ಸುಲಭ ರೀತಿಯ ಸಾಬಿನ್ ಲಸಿಕೆ ಮಾತ್ರ ರೂಪದಲ್ಲಿ ದೊರೆಯುತ್ತದೆ. ಇದರಲ್ಲಿ ಎಲ್ಲ ಪಂಗಡಗಳಿಗೂ ಸೇರಿದ ತೀವ್ರತೆ ಕಡಿಮೆಯುಳ್ಳ ಜೀವಿಗಳಿರುತ್ತವೆ. ಇದನ್ನು ಮೂರು ಬಾರಿ – ತಿಂಗಳ ಅವಧಿಯಲ್ಲಿ ಎರಡು ಮತ್ತು ಆರರಿಂದ ಒಂಬತ್ತನೆಯ ತಿಂಗಳೊಳಗೆ ಮೂರು – ಹೀಗೆ ಕೊಡಿಸತಕ್ಕದ್ದು. ಇದು ಸಾಂಕ್ರಾಮಿಕ ವ್ಯಾಧಿಕಾಲದಲ್ಲಿ ಅತ್ಯಂತ ಪ್ರಯೋಜನಕಾರಿಯಾದುದು. ಈ ಮಾತ್ರೆಗಳು ಉಪಯೋಗಿಸಲು ಅಂತೆಯೇ ತಯಾರಿಸಲು ಕೂಡ ಸುಲಭ. ಇವುಗಳಿಂದ ಉಂಟಾಗುವ ಅಬಾಧಿತತ್ವ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದು ಸತ್ವದಲ್ಲಿ ಸ್ವಾಭಾವಿಕ ರೋಗ ನಿರೋಧಕ ಸಾಮರ್ಥ್ಯವನ್ನು ಹೋಲುತ್ತದೆ. (ಎಚ್.ಕೆ.ಪಿ.)

**ಪ್ಯಾಕಿಡರ್ಮೇಟ:** ಖಡ್ಗಮೃಗ, ಆನೆ, ನೀರಾನೆ, ಹಂದಿ, ಹೈರ್‍ಯಾಕ್ಸ್ ಮೊದಲಾದ ಗೊರಸುಳ್ಳ, ಮೆಲುಕು ಹಾಕದ, ದಪ್ಪ ಚರ್ಮವುಳ್ಳ ಸ್ತನಿಗಳನ್ನು ಒಳಗೊಳ್ಳುವಂತೆ ರೂಪಿಸಲಾಗಿದ್ದ ಗುಂಪಿನ ಹೆಸರು. ಇವೆಲ್ಲ ಪ್ರಾಣಿಗಳಲ್ಲಿ ದಪ್ಪ ಚರ್ಮ ವಿನಾ ಇನ್ನಾವುದೇ ರಚನಾ ಸಾದೃಶ್ಯ ಕಂಡುಬರುವುದಿಲ್ಲ. ಆದ್ದರಿಂದ ಇಂದು ಈ ಹೆಸರು ಬಳಕೆಯಲ್ಲಿಲ್ಲ. (ಎ.ಎಸ್.ಸಿ.)

**ಪ್ಯಾರಜೋವ:** ಪ್ರಾಣಿಸಾಮ್ರಾಜ್ಯಕ್ಕೆ ಸೇರಿದ ಒಂದು ಉಪಸಾಮ್ರಾಜ್ಯ. ಕೆಲವೊಮ್ಮೆ ಇದನ್ನು ಮೆಟಜೋವ (ಬಹುಕೋಶ ಜೀವಿಗಳು) ಉಪಸಾಮ್ರಾಜ್ಯದ ಒಂದು ಕವಲು ಎಂದು ಪರಿಗಣಿಸುವುದುಂಟು. ಇದು ಪೋರಿಫರ (ಸ್ಪಾಂಜಿಯೋರಿಯ ಅಥವಾ ಸ್ಪಾಂಜಿಯಾ) ವಿಭಾಗವನ್ನು ಒಳಗೊಂಡಿದೆ. ಈ ಉಪಸಾಮ್ರಾಜ್ಯಕ್ಕೆ ಸೇರಿದ ಪ್ರಾಣಿಗಳ ಸಾಮಾನ್ಯ ಹೆಸರು ಸ್ಪಂಜುಗಳು. ಈ ಗುಂಪಿನಲ್ಲಿ ಪ್ಲಿಯೋಸ್ಪಾಂಜಿಯಾ (ಆಕ್ತಿಯೋಸಯಾತ), ಕ್ಯಾಲ್ಕೇರಿಯಾ, ಹೆಕ್ಸ್ಯಾಕ್ಟಿನೆಲಿಡ ಮತ್ತು ಡಮೋಸ್ಪಾಂಜಿಯೆ ಎಂಬ ನಾಲ್ಕು ವರ್ಗಗಳೂ ಇವೆಲ್ಲಕ್ಕೂ ಸೇರಿದಂತೆ ಒಟ್ಟು 8 ಗಣಗಳೂ ಸುಮಾರು 30 ಕುಟುಂಬಗಳೂ 5,000 ಕ್ಕೂ ಹೆಚ್ಚಿನ ಸಂಖ್ಯೆಯ ಪ್ರಭೇದಗಳೂ ಉಂಟು. ಮೊದಲನೆಯ ವರ್ಗಕ್ಕೆ ಸೇರಿದ ಸ್ಪಂಜುಗಳು ಗತಾವಂಶಿಗಳಾದರೆ ಉಳಿದುವು ಇಂದು ಜೀವಂತ ಕಾಣದೊರೆಯುತ್ತವೆ. ಎಲ್ಲ ಪ್ರಭೇದಗಳೂ ಜಲಜೀವಿಗಳೇ. ಸ್ಪಾಂಜಿಲಿಡೆ ಎಂಬ ಕುಟುಂಬದ ಸದಸ್ಯಗಳು ಸಿಹಿನೀರಿನಲ್ಲಿ ಜೀವಿಸುವುದಾದರೆ ಉಳಿದ ಎಲ್ಲ ಪ್ರಭೇದಗಳು ಕಡಲ ವಾಸಿಗಳು.

ಮೇಲೆ ಹೇಳಿದಂತೆ ಪ್ಯಾರಜೋವ ಮೆಟಜೋವದ ಒಂದು ಪ್ರಮುಖ ಗುಂಪು. ಅಂತೆಯೇ ಇದರ ಸದಸ್ಯಗಳು ಬಹುಕೋಶ ಜೀವಿಗಳೇ. ಆದರೆ, ಒಂದು ಮುಖ್ಯ ವ್ಯತ್ಯಾಸ : ಮೆಟಜೋವದ ಉಳಿದೆಲ್ಲ ಗುಂಪುಗಳಲ್ಲಿ ಜೀವಕೋಶಗಳು ಬಹುಸಂಖ್ಯೆಯಲ್ಲಿರುವುದು ಮಾತ್ರವಲ್ಲ. ಅವು ವಿಭೇದನೆಗೊಂಡು ಅಂಗಾಂಶಗಳಾಗಿ (ಊತಕಗಳು) ಕೂಡ ವ್ಯವಸ್ಥೆಗೊಂಡಿವೆ. ಪ್ಯಾರಜೋವ 'ಗಳಲ್ಲಾದರೂ ಕೋಶಗಳು ಸಡಿಲವಾಗಿ ಗುಂಪುಗೊಂಡಿವೆಯೇ ವಿನಾ ಅಂಗಾಂಶಗಳಾಗಿ ರೂಪುಗೊಂಡಿಲ್ಲ. ಆದ್ದರಿಂದ ಪ್ಯಾರಜೋವ ಗುಂಪನ್ನು ಮೆಟಜೋದ ಅತಿ ಹಿಂದುಳಿದ ಗುಂಪೆಂದೂ ಅದರ ಸದಸ್ಯಗಳ ದೇಹ ಕೋಶ ಹಂತದಲ್ಲೇ ಉಳಿದುಬಿಟ್ಟಿದೆಯೆಂದು ಹೇಳಲಾಗುತ್ತದೆ. ಅದ್ದರಿಂದಲೇ ಮೆಟಜೋವದ ಮಿಕ್ಕ ಗುಂಪುಗಳನ್ನು ಯೂಮೆಟಜೋವ ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ಪ್ಯಾರಜೋವದ ಪ್ರಾಣಿಗಳು ಸ್ಥಾವರ ಜೀವಿಗಳು. ನೀರಿನಲ್ಲಿರುವ ಕಲ್ಲುಬಂಡೆ ಮುಂತಾದ ಆಧಾರಗಳಿಗೆ ಅಂಟಿಕೊಂಡು ಬೆಳೆಯುತ್ತವೆ. ಆಕಾರದಲ್ಲಿ ವಿವಿಧ ರೂಪದುವು, ದೇಹದಲ್ಲಿ ಅಂಗಾಂಶಗಳಾಗಲಿ, ಅಂಗರಚನೆಗಳಾಗಲಿ ಇಲ್ಲ. ಬಾಯಿ ಸಹ ಇಲ್ಲದಿರುವುದು ಇವುಗಳ ಒಂದು ವಿಚಿತ್ರ ಲಕ್ಷಣ.

ದೇಹದ ತುಂಬ ಸಹಸ್ರಾರು ಸೂಕ್ಷ್ಮರಂಧ್ರಗಳು ಉಂಟು. ಇವಕ್ಕೆ ಆಸ್ಟಿಯ ಎಂದು ಹೆಸರು. ಬಾಹ್ಯರಂಧ್ರಗಳ ಮೂಲಕ ನೀರನ್ನು ಹೀರಿ ದೇಹದಲ್ಲಿನ ಕಾಲುವೆಗಳ ಮೂಲಕ ದೇಹಾಂತರದಲ್ಲಿನ ಅವಕಾಶಕ್ಕೆ ಹಾಯಿಸುವುದು (ದೇಹಾಂತರದಲ್ಲಿನ ಅವಕಾಶಕ್ಕೆ ಸ್ಪಂಗೋಸೀಲ್ ಎಂದು ಹೆಸರು). ಇಲ್ಲಿಂದ ನೀರನ್ನು ತ್ಯಾಜ್ಯರಂಧ್ರಗಳ ಮೂಲಕ ಹೊರಹಾಕುವುದು. ತ್ಯಾಜ್ಯರಂಧ್ರಗಳೇ ಆಸಿಕ್ಯೂಲ್ಸ್. ದೇಹದಲ್ಲಿನ ನಾಳಗಳ ವೈಖರಿ ಒಂದೊಂದು ಗುಂಪಿನಲ್ಲಿ ಒಂದೊಂದು ರೀತಿಯಲ್ಲಿದ್ದು ಸರಳ ರೂಪದಿಂದ ಹಿಡಿದು ಕ್ಲಿಷ್ಟರೂಪದ ನಾಳಗಳನ್ನು ಕಾಣಬಹುದು.

ದೇಹದ ಗೋಡೆಯಲ್ಲಿ ಆಸರಕ್ಕೆ ಸಹಾಯಕವಾಗುವಂಥ ಮೊನಚಾದ ರಚನೆಗಳನ್ನು ಕಾಣಬಹುದು. ಇವಕ್ಕೆ ಸ್ಪಿಕ್ಯೂಲುಗಳೆಂದು ಹೆಸರು. ಇವುಗಳಲ್ಲಿ ಎರಡು ವಿಧ. ಕೆಲವು ಕ್ಯಾಲ್ಸಿಯಂನಿಂದ ರೂಪುಗೊಂಡಿವೆಯಾದರೆ ಇನ್ನು ಕೆಲವು ಸಿಲಿಕದಿಂದ ರಚಿತವಾಗಿವೆ. ಇನ್ನು ಕೆಲವು ಜಾತಿಯ ಸ್ಪಂಜುಗಳಲ್ಲಿ ಇವೆರಡೂ ಇಲ್ಲದೆ ನಾರಿನಂತೆ ಇರುವ ಸ್ಪಂಜಿನ ಫೈಬರ್ ಇದೆ. ಅಲ್ಲದೆ ದೇಹದ ಗೋಡೆಯಲ್ಲಿ ವಿವಿಧ ಬಗೆಯ ಜೀವಕೋಶಗಳು ಸ್ವತಂತ್ರವಾಗಿ ವಿವಿಧ ಕಾರ್ಯಗಳಲ್ಲಿ ಪಾಲುಗೊಳ್ಳುತ್ತವೆ. ನಾಳಗಳಲ್ಲಿ ಅಥವಾ ನಾಳಗಳಲ್ಲಿನ ಅವಕಾಶಗಳಲ್ಲಿ ವಿಶಿಷ್ಟವಾದ ಕಶಾಂಗಗಳುಳ್ಳ ಪಟ್ಟಿಕೋಶಗಳು ಅಥವಾ ಕೊಯನೋಫ್ಲಾಜಿಲೇಟ್ ಕೋಶಗಳು ಇವೆ. ಇವು ಈ ಗುಂಪಿಗೆ ಮಾತ್ರ ಸೀಮಿತವಾಗಿವೆ ಎಂಬುದು ಮುಖ್ಯ ವಿಷಯ. ದೇಹದ ಗೋಡೆಯಲ್ಲಿ ಹೊರಪದರ ಹಾಗೂ ಒಳಪದರಗಳುಂಟು. ನಾಳಗಳು ಇವೆರಡು ಪದರಗಳಿಗೆ ಮಾತ್ರ ಸೀಮಿತವಾಗಿವೆ. ಇನ್ನುಳಿದ ಭಾಗದಲ್ಲಿ ವಿವಿಧ ಜೀವಕೋಶಗಳು ಮತ್ತು ಸ್ಪಿಕ್ಯೂಲುಗಳು ಇವೆ. ಆದರೂ ಈ ಪದರಗಳು ದ್ವಿಪದರ ಜೀವಿಗಳಲ್ಲಿರುವಂತೆ ಅಲ್ಲ ಎಂದು ತಜ್ಞರ ಅಭಿಪ್ರಾಯ. ಇದಕ್ಕೆ ಕಾರಣ ಜೀವಿಯಲ್ಲಿರುವ ಪ್ರತಿಯೊಂದು ಜೀವಕೋಶವೂ ಸ್ವಯಾರ್ಜಿತವಾಗಿ (ಏಕಕಣಜೀವಿಯಂತೆ) ಜೀವಿಸುವುದು.

ಪ್ಯಾರಜೋವದ ಪ್ರಾಣಿಗಳಲ್ಲಿ ಬಾಯಿ ಇಲ್ಲ. ಸೇವಿಸಿದ ಆಹಾರವನ್ನು ಜೀರ್ಣಸಿಕೊಳ್ಳಲು ಜೀರ್ಣಾಂಗಗಳಿಲ್ಲ. ಆದರೂ ದೇಹದ ಹೊರಭಾಗದಲ್ಲಿರುವ ರಂಧ್ರಗಳ ಮೂಲಕ ನೀರನ್ನು ಹೀರುವಾಗ ಅದರ ಜೊತೆಗೆ ಹಾದು ಬರುವ ಸೂಕ್ಷ್ಮಜೀವಿಗಳನ್ನು ನಾಳದಲ್ಲಿರುವ ಜೀವಕೋಶಗಳು ಕಬಳಿಸಿ, ಪ್ರತಿ ಕೋಶದ ಅಂತರ್ಗತದಲ್ಲಿ ಜೀರ್ಣಿಸಿಕೊಳ್ಳುವುವು. ನಾಳಗಳಲ್ಲಿನ ಪಟ್ಟಿಕೋಶಗಳು ತಮ್ಮ ಶಿಲಿಕೆಯನ್ನು ಬಡಿಯುವುದರಿಂದ ನೀರು ಇಡೀ ದೇಹದಲ್ಲಿ ಹರಿಯುತ್ತದೆ. ಈ ಬಗೆಯ ಜೀರ್ಣಶಕ್ತಿಯನ್ನು ಅಂತರ್‌ಗತ ಪಚನಶಕ್ತಿ ಎನ್ನಬಹುದು.

ಸ್ಪಂಜು ಪ್ರಾಣಿಗಳಲ್ಲಿ ನರಗಳಾಗಲೀ, ನರತಂತುಗಳಾಗಲೀ, ನರಕೋಶಗಳಾಗಲೀ ಇಲ್ಲದಿರುವುದು ಒಂದು ಮುಖ್ಯ ಅಂಶ. ಆದರೂ ಹಲವಾರು ಬಗೆಯ ಸಂವೇದನೆಗಳಿಗೆ ಇವು ಪ್ರತಿಕ್ರಿಯೆ ತೋರುವುವು.

ಇವುಗಳಲ್ಲಿ ಸಂತಾನೋತ್ಪತ್ತಿ ಅಂಗಗಳಿಲ್ಲ. ಆದರೂ ವಿವಿಧ ರೂಪದ ಜೀವಕೋಶಗಳ ಪೈಕಿ ಕೆಲವು ಕೋಶಗಳು ಮಾರ್ಪಾಟಾಗಿ ಸಂತಾನೋತ್ಪತ್ತಿಯ ಕೋಶಗಳಾಗಿ ಪರಿವರ್ತನೆಯಾಗಿ ಲೈಂಗಿಕ ಅಣುಗಳಾಗುವುವು. ಇವೆರಡೂ ಬಗೆಯ ಕೋಶಗಳು ಒಂದೇ ಸ್ಪಂಜು ದೇಹದಿಂದ ಬರಬಹುದು ಅಥವಾ ಬೇರೆ ಬೇರೆ ಜೀವಿಗಳಿಂದ ಬರಬಹುದು. ಇವುಗಳಲ್ಲಿ ಸಂತಾನೋತ್ಪತ್ತಿ ಲಿಂಗರೀತಿಯಿಂದಲೇ ಅಲ್ಲದೆ ಅಲಿಂಗ ಅಥವಾ ನಿರ್ಲಿಂಗ ರೀತಿಯಿಂದಲೂ ಸಾಧ್ಯ. ನಿರ್ಲಿಂಗ ರೀತಿಯ ಪ್ರಜನನ ಮೊಗ್ಗೆಯೊಡೆಯುವಿಕೆಯಿಂದಲೂ ಅಂಕುರಾಗ್ರಗಳ ಮೂಲಕವೂ ಆಗುಬಹುದು. ನಿರ್ಲಿಂಗ ಪ್ರಜನನದಲ್ಲಿ ಜೆಮೂಲ್ ಎಂಬ ವಿಶಿಷ್ಟ ಕಾಯಗಳನ್ನೂ ನಿರ್ಮಿಸುತ್ತವೆ.

ಇವುಗಳ ಜೀವನಚರಿತ್ರೆಯಲ್ಲಿ ಅಂದರೆ ಲಿಂಗರೀತಿಯಿಂದ ಯುಗ್ಮವಾಗಿ ಬೆಳೆಯುವ ಹಂತದಲ್ಲಿ ಮರಿ (ಲಾರ್ವ) ರೂಪವನ್ನು ತಾಳಿ ಅನಂತರದ ಬದಲಾವಣೆಗಳು ನಡೆದು ವಯಸ್ಕ ಜೀವಿಗಳಾಗಿ ಬೆಳೆಯುವುವು. ಸ್ಪಂಜುಗಳಲ್ಲಿ ಕೆಲವು ಮಾತ್ರ ಸಿಹಿನೀರಿನಲ್ಲಿ ಸಿಗುವುವು. ಗಾತ್ರದಲ್ಲಿ ಇವು ಸೂಕ್ಷ್ಮವಾಗಿರಬಹುದು ಅಥವಾ ಬಂಡೆಗಳಂತೆ ವಿವಿಧ ವಿನ್ಯಾಸಗಳನ್ನು ಹೊಂದಿರಬಹುದು.

ಇವು ಸಮುದ್ರದಲ್ಲಿ ಕೆಲವು ದಂಡೆಗೆ ಹತ್ತಿರ ಜೀವಿಸಿದರೆ ಕೆಲವು ತೀರದಿಂದ ಮೂರು ಮೈಲಿ ದೂರದಲ್ಲಿ ಜೀವಿಸುತ್ತವೆ. ಆಳ ಸಮುದ್ರದಲ್ಲಿ ವಾಸಿಸುವ ಸ್ಪಂಜುಗಳೂ ಇವೆ. ಕೆಲವು ಸಿಹಿನೀರಿನಲ್ಲಿ ವಾಸಿಸುವುವು.

ಮೇಲೆ ತಿಳಿಸಿದ ಲಕ್ಷಣಗಳ ಅಧ್ಯಯನ ಮಾತ್ರವಲ್ಲದೆ ಈ ಗುಂಪಿನ ಸ್ಥಾನಮಾನಗಳ ವಿಶ್ಲೇಷಣೆಯೂ ಮುಖ್ಯ. ಈ ಗುಂಪಿನ ಜೀವಿಗಳು ಸಮುದ್ರವಾಸಿಗಳು, ಬಾಹ್ಯ ರಂಧ್ರಗಳನ್ನು, ಕಾಲುವೆಗಳನ್ನು, ತಾಜ್ಯರಂಧ್ರಗಳನ್ನು, ದೇಹದ ಆಸರೆಗೆ ಸ್ಪಿಕ್ಯೂಲುಗಳನ್ನು ವಿವಿಧ ರೂಪದ ಜೀವಕೋಶಗಳನ್ನು ಅನೇಕ ಜೈವಿಕ ಕಾರ್ಯಕ್ಕೆ ಬಳಸಿಕೊಳ್ಳುವುವು. ಯಾವುದೇ ಅಂಗಾಂಗಗಳು ಇಲ್ಲದಿರುವುದರಿಂದಲೂ, ಅದ್ಭುತ ಸಂತಾನಶಕ್ತಿ ಇರುವುದರಿಂದಲೂ, ಇಡೀ ಪ್ರಾಣಿಜಗತ್ತಿನಲ್ಲಿ ಇವಕ್ಕೆ ವಿಶಿಷ್ಟ ಸ್ಥಾನವುಂಟು.

ನಿಜಕ್ಕೂ ಇವು ಏಕಕಣಜೀವಿಗಳಿಗಿಂತ ಉತ್ತಮಮಟ್ಟವನ್ನು ತಲಪಿವೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇವು ದ್ವಿಪದರ ಕುಟುಕುಕಣವಂತ ಜೀವಿಗಳಿಗಿಂತ ಹಿಂದುಳಿದುವು ಎಂದರೆ ತಪ್ಪಾಗದು. ಇದಕ್ಕೆ ಕಾರಣ ಇವು ಬಹುಕಣ ಜೀವಿಗಳಾಗಿದ್ದರೂ ದೇಹದ ಪ್ರತಿಯೊಂದು ಜೀವಕೋಶ ಇನ್ನೊಂದು ಜೀವಕೋಶದ ಅಧೀನದಲ್ಲಿಲ್ಲದಿರುವುದು. ಈ ಕಾರಣಕ್ಕಾಗಿಯೇ ಹಕ್ಸಲೀ ಇವು ಏಕಕಣಜೀವಿಗಳೂ ಅಲ್ಲ. ಬಹುಕಣಜೀವಿಗಳೂ ಅಲ್ಲ. ಇವೆರಡರ ಮಧ್ಯೆ ಇರಬೇಕಾದ ಜೀವಿಗಳೆಂದು ಅಭಿಪ್ರಾಯ ಪಡುತ್ತಾನೆ.

ಇವುಗಳಲ್ಲಿ ಕಾಣಬರುವ ಸ್ಪಿಕ್ಯೂಲ್, ಪಟ್ಟಿಕೋಶಗಳು ಮತ್ತು ಕಾಲುವೆಗಳು ಮತ್ತು ಇವುಗಳ ವೈವಿಧ್ಯ. ಈ ಗುಂಪಿಗೆ ಮಾತ್ರ ಸೀಮಿತವಾಗಿರುವುದರಿಂದ ಇವನ್ನು ಬೇರೆ ಗುಂಪಿಗೆ ಸೇರಿಸಲಾಗದು.

ಇವುಗಳ ಉದ್ಭವ ಯಾವಾಗ ಆಗಿರಬಹುದೆಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಕಾರಣ ಪಳೆಯುಳಿಕೆಗಳ ಆಧಾರವಿಲ್ಲದಿರುವುದು. ಆದರೂ ಇವು ಏಕಕಣಜೀವಿಗಳಿಂದ ಗತಕಾಲದಲ್ಲಿ ವಿಕಾಸ ಹೊಂದಿರಬಹುದೆಂಬ ವಾದಕ್ಕೆ ಪುಷ್ಟಿ ಸಿಕ್ಕಿದೆ. ಅಲ್ಲದೆ ಇವು ತಮ್ಮ ತಮ್ಮಲ್ಲಿಯೇ ವಿವಿಧ ರೀತಿಯಲ್ಲಿ ಮಾರ್ಪಾಟಾಗಿ ಹಲವಾರು ಬಗೆಯ ಸ್ಪಂಜುಗಳಾಗಿ ರೂಪುಗೊಂಡಿವೆ ಎಂಬುದು ಕೆಲವರ ಅಭಿಪ್ರಾಯವಾಗಿದೆ. ಮುಂದೆಯೂ ಇವು ವಿಕಾಸಗೊಳ್ಳುವ ಸೂಚನೆಯನ್ನು ತೋರಿಸುತ್ತಿಲ್ಲ ಎಂದೂ ವಾದಿಸುತ್ತಾರೆ. (ಜಿ.ಎಂ.ಬಿ.)

**ಪ್ಯಾರಮೀಸಿಯಮ್:** ಪ್ರೋಟೊಜೋವ ವಂಶದ ಹಾಲೊಟ್ರೈಕ ಗಣದಲ್ಲಿನ ಟ್ರೈಕೋಸ್ಟೊಮೇಟ ಉಪಗಣದ ಸದಸ್ಯ. ಇದು ಏಕಕೋಶ ಜೀವಿ. ಇದರಲ್ಲಿ ಸು. 10 ಪ್ರಭೇದಗಳಿವೆ. ಸಿಹಿನೀರಿನ ಕೊಳಚೆ ಗುಂಡಿಗಳಲ್ಲಿ ಇವುಗಳ ವಾಸ. ತುಂಬ ಚಿಕ್ಕಗಾತ್ರದ ಪ್ರಾಣಿಗಳಿವು. ಪ್ಯಾರಮೀಸಿಯಮ್ ಕಾಡೇಟಮ್ ಉದ್ದ ಸು. 0.25 ಮಿಮೀ. ಇದು ಚಪ್ಪಲಿಯಾಕಾರದ ಸೂಕ್ಷ್ಮ ಜೀವಿ. ಕಾರಣ, ಆಂಗ್ಲ ಭಾಷೆಯಲ್ಲಿ ಸ್ಲಿಪ್ಪರ್ ಅನಿಮಾಲಿಕ್ಯೂಲ್ ಎನ್ನುವರು.



ಪಾರಮಿಶಿಯಂ

ಇದರ ದೇಹದ ಒಂದು ತುದಿ ಇನ್ನೊಂದಕ್ಕಿಂತ ಕೊಂಚ ಮೊಂಡಾಗಿದೆ. ಮೊಂಡು ತುದಿಗೆ ಅಗ್ರಭಾಗ ಅಥವಾ ಮುಂತುದಿ (ಆಂಟೀರಿಯರ್ ಎಂಡ್) ಎಂದೂ, ಚೂಪುತುದಿಗೆ ಪಶ್ಚ ಭಾಗ ಅಥವಾ ಹಿಂತುದಿ (ಪೋಸ್ಟೀರಿಯರ್ ಎಂಡ್) ಎಂದೂ ಹೆಸರು. ದೇಹದ ಒಂದು ಪಾರ್ಶ್ವ ಇನ್ನೊಂದಕ್ಕಿಂತ ಹೆಚ್ಚು ಚಪ್ಪಟೆಯಾಗಿದೆ. ಇದೇ ದೇಹದ ಅಂಕೀಯ (ವೆಂಟ್ರಲ್) ಭಾಗ. ದೇಹದ ಸುತ್ತ ಪೆಲಿಕಲ್ ಪೊರೆ ಇದೆ. ಇದರ ಮೇಲೆ ಲಂಬಾಕ್ಷೀಯ ಸಾಲುಗಳಲ್ಲಿ ಜೋಡಣೆಗೊಂಡಿರುವ ಸಾವಿರಾರು ಷಟ್ಭುಜಾಕಾರದ ಕುಳಿಗಳಿವೆ. ಒಂದೊಂದು ಕುಳಿಯಲ್ಲೂ ಒಂದೊಂದು ಸೂಕ್ಷ್ಮ ಶಿಲಕೆ (ಸಿಲಿಯಮ್) ಇರುವುದರಿಂದ ಇಡೀ ದೇಹ, ಸಾವಿರಾರು ಶಿಲಕೆಗಳಿಂದ ಆವೃತವಾಗಿದೆ.

ಪ್ಯಾರಮೀಸಿಯಮಿನ ಅಂಕೀಯ ಭಾಗದಲ್ಲಿ ಅಗ್ರ ಭಾಗದಿಂದ ಪಾರ್ಶ್ವಭಾಗಕ್ಕೆ ಅಡ್ಡಲಾಗಿ ಚಾಚಿರುವ ಒಂದು ತೋಡು ಇದೆ. ಇದಕ್ಕೆ ಅಂಕೀಯ ತೋಡು ಎಂದು ಹೆಸರು. ಪೆಲಿಕಲ್ ಪೊರೆಯ ತಳಭಾಗದಲ್ಲಿ ಪ್ಲಾಸ್ಮ ಪೊರೆ ಇದೆ. ಪೆಲಿಕಲ್ಲಿನಿಂದ ಆವೃತವಾಗಿರುವ ಕೋಶದ್ರವ್ಯದ ಹೊರಗಿನ ಭಾಗಕ್ಕೆ ಕಾರ್ಟೆಕ್ಸ್ ಎಂದು, ಒಳಗಿನ ಭಾಗಕ್ಕೆ ಮೆಡುಲ ಎಂದೂ ಹೆಸರು. ದೇಹದ ಒಂದು ಕಡೆ ಸೂಕ್ಷ್ಮ ರಂಧ್ರವಿದೆ. ಇದೇ ಗುದದ್ವಾರ. ಟ್ರೈಕೋಸಿಸ್ಟ್ (ರೋಮಕೋಶ) ಗಳು ಪೆಲಿಕಲ್‌ನಲ್ಲಿ ಹುದುಗಿದ್ದು, ಜಿಲೆಟಿನ್ ವಸ್ತುವಿನಿಂದ ರೂಪುಗೊಂಡಿವೆ. ಜೀವಿಯನ್ನು ಕೆರಳಿಸಿದರೆ ಟ್ರೈಕೊಸಿಸ್ಟ್‌ಗಳಿಂದ ಜಿಲೆಟಿನ್ ಹೊರಬಂದು ನೀರಿನಲ್ಲಿ ಗಟ್ಟಿಯಾಗಿ ಬಂಧಕ ಜಾಲವನ್ನು ರಚಿಸಿ ರಕ್ಷಣಾಸಾಧನಗಳಾಗಿ ವರ್ತಿಸುವುವು.

ಪ್ಯಾರಮೀಸಿಯಮಿನ ದೇಹದಲ್ಲಿ 10–20 ಸೆಕೆಂಡು ಅಂತರದಲ್ಲಿ ಪರ್ಯಾಯವಾಗಿ ಸಂಕುಚನಗೊಳ್ಳುವ 2 ಸಂಕುಂಚನ ವ್ಯಾಕ್ಯೂಲುಗಳಿವೆ. ದೇಹದ ಮುಂದಿನ ಅರ್ಧಭಾಗದ ಮಧ್ಯದಲ್ಲಿ ಒಂದು, ಹಿಂದಿನ ಅರ್ಧಭಾಗದಲ್ಲಿ ಮತ್ತೊಂದು ಹೀಗೆ ವ್ಯಾಕ್ಯೂಲಿನ ಸುತ್ತ ಕಿರಣಗಳೋಪಾದಿಯಲ್ಲಿ ಚಾಚಿರುವ 6–11 ನಾಲೆಗಳಿವೆ. ದೇಹದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾದ ನೀರನ್ನು ಈ ನಾಲೆಗಳು ಸಂಗ್ರಹಿಸಿ, ಸಂಕುಂಚನ ವ್ಯಾಕ್ಯೂಲಿಗೆ ತುಂಬುತ್ತದೆ. ಹೀಗೆ ಸಂಗ್ರಹವಾದ ನೀರು ಸಂಕುಂಚನ ವ್ಯಾಕ್ಯೂಲುಗಳನ್ನು ದೊಡ್ಡದಾಗಿ ಮಾಡುವುದು. ಸಂಕುಂಚನ ವ್ಯಾಕ್ಯೂಲುಗಳು ಗರಿಷ್ಠ ಪ್ರಮಾಣದಲ್ಲಿ ಸಂಗ್ರಹಿಸಿದ ಅನಂತರ ಸಂಕುಚಿಸಿ ನೀರನ್ನು ಹೊರಗೆಡಹುತ್ತವೆ. ಪ್ಯಾರಮೀಸಿಯಮಿನ ಆಹಾರ ಬ್ಯಾಕ್ಟೀರಿಯ, ಡಯಾಟಮ್, ಈಸ್ಟ್ , ಇತರ ಸಣ್ಣಪುಟ್ಟ ಪ್ರೊಟೋಜೋವ ಪ್ರಾಣಿಗಳು ಮತ್ತು ಸಾವಯವ ವಸ್ತುಗಳು.

ಮೆಡುಲದಲ್ಲಿರುವ ಜೀವರಸ ಯಾವಾಗಲೂ ಚಲಿಸುತ್ತಿರುತ್ತದೆ. ಜೀವರಸದಲ್ಲಿ ಎರಡು ಬಗೆಯ ನ್ಯೂಕ್ಲಿಯಸ್‌ಗಳಿವೆ. ಒಂದು ಗಾತ್ರದಲ್ಲಿ ದೊಡ್ಡದು. ಇದಕ್ಕೆ ಸ್ಥೂಲ ನ್ಯೂಕ್ಲಿಯಸ್ ಎಂದು ಹೆಸರು. ಮತ್ತೊಂದು ಇದರ ಪಕ್ಕದಲ್ಲಿದೆ. ಇದು ಗಾತ್ರದಲ್ಲಿ ಚಿಕ್ಕದು. ಇದರ ಹೆಸರು ಸೂಕ್ಷ್ಮ ನ್ಯೂಕ್ಲಿಯಸ್. ಸೂಕ್ಷ್ಮ ನ್ಯೂಕ್ಲಿಯಸ್ ಸಂತಾನೋತ್ಪತ್ತಿಯ ಕ್ರಿಯೆಗೆ ಸಹಕಾರಿಯಾದರೆ, ಸ್ಥೂಲ ನ್ಯೂಕ್ಲಿಯಸ್ ಪ್ಯಾರಮೀಸಿಯಮಿನ ಚಯಾಪಚಯ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.

ಪ್ಯಾರಮೀಸಿಯಮ್ ಅಲೈಂಗಿಕ ರೀತಿಯಲ್ಲಿಯೂ ಸಂತಾನೋತ್ಪತ್ತಿ ಮಾಡುತ್ತದೆ. ಅಲ್ಲದೆ ಲೈಂಗಿಕ ರೀತಿಯ ಅನುಬದ್ಧ (ಕಾಂಜುಗೇಷನ್) ಸಂಯೋಗ, ಸ್ವಯುಗ್ಮನ



ಪ್ಯಾರಮೀಸಿಯಂನಲ್ಲಿ ಪ್ರಜನನ (ಕಾಂಜುಗೇಶನ್ ವಿಧಾನ)

(ಆಟೊಗೆಮಿ), ಅಂತಃಮಿಶ್ರಣ (ಎಂಡೊಮಿಕ್ಸಿಸ್) ಮೊದಲಾದ ಬಗೆಗಳಲ್ಲಿ ತನ್ನ ನ್ಯೂಕ್ಲಿಯಸ್‌ಗಳನ್ನು ಪುನರ್ರಚಿಸಿಕೊಳ್ಳುತ್ತ ಸಂತಾನೋತ್ಪತ್ತಿ ನಡೆಸುತ್ತದೆ.

ಪ್ಯಾರಮೀಸಿಯಮಿನ ಸಂತಾನೋತ್ಪತ್ತಿಯಲ್ಲಿ ಅನುಬದ್ಧ ಸಂಯೋಗ ಬಹುಮುಖ್ಯವಾದದ್ದು. ಜೀವನಚಕ್ರದ ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಎರಡು ಪ್ಯಾರಮೀಸಿಯಮುಗಳು ಜೋಡಿಯಾಗಿ ಸೇರುತ್ತವೆ. ಈ ಸಮಯದಲ್ಲಿ ತಮ್ಮ ತಮ್ಮ ಸೂಕ್ಷ್ಮ ನ್ಯೂಕ್ಲಿಯಸ್‌ಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಬೇರೆಯಾಗುತ್ತವೆ. ನಂತರ ಇವುಗಳಿಗೆ ನವಚೈತನ್ಯ ಬರುತ್ತದೆ. ಈ ಬಗೆಯ ಸಂಯೋಗಕ್ಕೆ ಅನುಬದ್ಧ ಸಂಯೋಗ ಎಂದು ಹೆಸರು. ಇದರಲ್ಲಿ ಸಂಬಂಧ ಬೆಳೆಸುವ ಪ್ರಾಣಿಗಳಿಗೆ ಅನುಬದ್ಧ ಸಂಯೋಗಿಗಳೆಂದು ಕರೆಯಲಾಗುತ್ತದೆ. ಇಂಥ ಸಂಯೋಗ ಕ್ರಿಯೆ ಈ ಜೀವಿಯ ವೈಶಿಷ್ಟ್ಯ. (ಎಂ.ಎನ್.ವಿ.ಐ.)

**ಪ್ಯಾರಾಥೈರಾಯ್ಡ್ ಗ್ರಂಥಿಗಳು:** ಗಂಟಲಿನಲ್ಲಿ ಶ್ವಾಸನಾಳದ ಪ್ರಾರಂಭ ಭಾಗವನ್ನು ಹೊದ್ದುಕೊಂಡಿರುವ, ಥೈರಾಯ್ಡ್ ಗ್ರಂಥಿಯ ಹಿಂಭಾಗಕ್ಕೆ ಅಂಟಿಕೊಂಡು ಅಕ್ಕಿಕಾಳಿನ ಆಕಾರಕ್ಕಿರುವ ನಾಲ್ಕು ಅಂತಃಸ್ರಾವಗ್ರಂಥಿಗಳು. ಆಂಫಿಯಾಕ್ಸಿಸ್‌ನಲ್ಲಿ ಮೊತ್ತಮೊದಲಾಗಿ ಗುರುತಿಸಲ್ಪಡುವಂತಿದ್ದು, ಕಶೇರುಕಗಳಲ್ಲಿ ವಿಕಾಸವಾಗಿರುವ ಈ ಗ್ರಂಥಿಗಳು ಸ್ತನಿಗಳಲ್ಲಿ ಅವು ಜೀವಂತವಾಗಿರುವುದಕ್ಕೆ ಅತ್ಯಗತ್ಯವಾಗಿರುವಷ್ಟು ಮಾತ್ರ ಕ್ರಿಯಾತ್ಮಕ ಅಭಿವೃದ್ಧಿ ಪಡೆದಿವೆ. ಇವು ಸ್ರವಿಸುವ ಪ್ಯಾರಾಥಾರ್ಮೋನ್ ಎಂಬ (ಪ್ರೋಟೀನ್ ಗುಂಪಿಗೆ ಸೇರಿದ) ಹಾರ್ಮೋನ್, ರಕ್ತದಲ್ಲಿಯ ಕ್ಯಾಲ್ಸಿಯಮ್ ಅಯಾನಿನ ಮಟ್ಟವನ್ನು ನಿಯಂತ್ರಿಸುತ್ತದೆ.

ಪ್ಯಾರಾಥಾರ್ಮೋನಿನ ಅಭಾವದಿಂದ (ಪ್ಯಾರಾಥೈರಾಯ್ಡ್ ಗ್ರಂಥಿಗಳ ಕ್ರಿಯೆಯ ಕೊರತೆಯಿಂದ) ರಕ್ತದಲ್ಲಿ ಕ್ಯಾಲ್ಸಿಯಮ್ ಅಯಾನಿನ ಮಟ್ಟ ಬಹಳ ತಗ್ಗುತ್ತದೆ. ತತ್ಫಲವಾಗಿ ಸ್ನಾಯು ಹಾಗೂ ನರಗಳು ಬಲು ಸುಲಭವಾಗಿ ಉದ್ರೇಕಗೊಂಡು ದೇಹದ ನಾನಾ ಭಾಗಗಳಲ್ಲಿ ಅನೈಚ್ಛಿಕವಾಗಿ ಸೆಟೆದುಕೊಳ್ಳುತ್ತವೆ. ಇದರಿಂದ ಶಕ್ತಿಗುಂದಿ ಇಲ್ಲವೆ ಉಸಿರು ನಿಂತುಹೋಗಿ ಮರಣ ಸಂಭವಿಸುವ ಸ್ಥಿತಿಗೆ ಟೆಟನಿ ಎಂದು ಕರೆಯಲಾಗಿದೆ. ಕ್ಯಾಲ್ಸಿಯಮ್ ಗ್ಲೂಕೋನೇಟನ್ನು ಚುಚ್ಚುಮದ್ದಾಗಿ ಅಭಿಧಮನಿಯ ಮೂಲಕ ಆಗಾಗ ಕೊಡುವುದು ತಾತ್ಕಾಲಿಕ ಕ್ರಮ. ಪ್ಯಾರಾಥಾರ್ಮೋನನ್ನು ಪದೇ ಪದೇ ಚುಚ್ಚುಮದ್ದಾಗಿ ಕೊಡುವುದು ಅಥವಾ ಒಗ್ಗುವ ಪ್ಯಾರಾಥೈರಾಯ್ಡ್ ಗ್ರಂಥಿಯನ್ನು ನಾಟಿ ಹಾಕುವುದು ಇತರ ಉಪಾಯಗಳು.

ಹತ್ತೊಂಬತ್ತನೆಯ ಮಧ್ಯದಶಕಗಳಲ್ಲಿ ಥೈರಾಯ್ಡ್ ಗ್ರಂಥಿಯ ಪ್ರಾರಂಭಿಕ ಪ್ರಾಯೋಗಿಕ ವ್ಯಾಸಂಗಗಳು ಜರುಗುತ್ತಿದ್ದಾಗ, ಈ ಗ್ರಂಥಿಯನ್ನು ತೆಗೆದುಹಾಕಿಬಿಟ್ಟರೆ ಪ್ರಾಣಿ ಜೀವಂತವಿರದು ಎಂಬ ಭಾವನೆ ಇತ್ತು. ವಾಸ್ತವವಾಗಿ ಪ್ರಯೋಗದಲ್ಲಿ ಪ್ರಾಣಿ ಸತ್ತುಹೋಗುತ್ತಿದ್ದುದು ಥೈರಾಯ್ಡ್ ಗ್ರಂಥಿಯ ನಿರ್ಮೂಲನದಿಂದ ಅಲ್ಲ. ಆ ತನಕ ಗೊತ್ತೇ ಇರದಿದ್ದ ಪ್ಯಾರಾಥೈರಾಯ್ಡ್ ಗ್ರಂಥಿಗಳೂ ಇಂಥ ಪ್ರಯೋಗದಲ್ಲಿ ನಿರ್ಮೂಲನಗೊಳ್ಳುತ್ತಿದ್ದುದರಿಂದ, ಈ ವಿಷಯ ಮುಂದೆ 10–20 ವರ್ಷಗಳಲ್ಲಿ ಮನದಟ್ಟು ಆಯಿತು. ಪ್ಯಾರಾಥೈರಾಯ್ಡ್ ಗ್ರಂಥಿಗಳು ಉಳಿದಿರುವಂತೆ ಎಚ್ಚರಿಕೆ ತೆಗೆದುಕೊಂಡು ಥೈರಾಯ್ಡ್ ನಿರ್ಮೂಲನ ಪ್ರಯೋಗವನ್ನು ಮಾಡಿದಾಗ ಪ್ರಾಣಿಗಳು ಜೀವಸಹಿತ ಇರುತ್ತಿದ್ದುವಲ್ಲದೆ ಅವುಗಳಲ್ಲಿ ಕೇವಲ ಥೈರಾಯ್ಡ್ ಗ್ರಂಥಿಯ ಕೊರತೆಯಿಂದ ಉದ್ಭವಿಸುವ ಲಕ್ಷಣಗಳು ಮಾತ್ರ ಕಂಡುಬರುತ್ತಿದ್ದುವು. ಆದರೆ ಥೈರಾಯ್ಡನ್ನು ಉಳಿಸಿ ಪ್ಯಾರಾಥೈರಾಯ್ಡುಗಳನ್ನು ನಿರ್ಮೂಲನಗೊಳಿಸಿದರೆ ನಾಲ್ಕಾರುದಿನಗಳಲ್ಲಿ ಅಥವಾ ಇನ್ನೂ ಮುಂಚೆಯೇ ಪ್ರಾಣಿ ಅಸು ನೀಗುತ್ತಿತ್ತು. ಪ್ಯಾರಾಥೈರಾಯ್ಡ್ ಗ್ರಂಥಿಗಳನ್ನು ತೆಗೆದುಹಾಕಿದಾಗ ರಕ್ತದಲ್ಲಿ ಕ್ಯಾಲ್ಸಿಯಮ್ಮಿನ ಮಟ್ಟ ಕಡಿಮೆ ಆಗುತ್ತದೆ (< 10 ಮಿಗ್ರಾಂ. %) ಎಂದು 1908 ರಲ್ಲಿ ತೋರಿಸಲಾಯಿತು: ಮತ್ತು ಕ್ಯಾಲ್ಸಿಯಮ್ ಲವಣಗಳನ್ನು ಚುಚ್ಚುಮದ್ದಿನ ರೀತಿ ಪ್ರಯೋಗಿಸಿದಾಗ ಪ್ಯಾರಾಥೈರಾಯ್ಡ್ ನಿರ್ಮೂಲನದಿಂದ ಉಂಟಾಗಿದ್ದ ಎಲ್ಲ ತೊಂದರೆಗಳೂ ಮಾಯವಾಗುತ್ತವೆ ಎಂದೂ ವಿಶದಪಟ್ಟಿತು. ಪ್ಯಾರಾಥೈರಾಯ್ಡ್ ಗ್ರಂಥಿಯ ಸಾರದಿಂದ ಕಚ್ಚಾ ಹಾರ್ಮೋನನ್ನು ಪ್ರತ್ಯೇಕಿಸಿ ಅದಕ್ಕೆ ಪ್ಯಾರಾಥಾರ್ಮೋನ್ ಎಂದು ಹೆಸರಿಡಲಾಯಿತು (1925).

ಇತರ ಪ್ರಾಣಿಗಳಲ್ಲಿ ಪ್ಯಾರಾಥೈರಾಯ್ಡ್ ಗ್ರಂಥಿಗಳು 2–8 ಇರಬಹುದಾದರೂ ಮನುಷ್ಯರಲ್ಲಿ ಸಾಮಾನ್ಯವಾಗಿ 4 ಇರುತ್ತವೆ. ಅಪರೂಪವಾಗಿ ಥೈರಾಯ್ಡ್ ಗ್ರಂಥಿಯ ಒಳಗೆ ಒಂದೆರಡು ಪ್ಯಾರಾಥೈರಾಯ್ಡ್ ಗ್ರಂಥಿಗಳು ಹುದುಗಿರಬಹುದು. ಹಾಗೆಯೇ ಥೈಮಸ್‌ಗ್ರಂಥಿಯ ಒಳಗೆ ಹುದುಗಿರುವುದೂ ಉಂಟು. ಕಾರಣ, ಭ್ರೂಣಾವಸ್ಥೆಯಲ್ಲಿ ಇವೆಲ್ಲವೂ ಸಂಬಂಧಿತ ಆಕರಗಳಿಂದ ವಿಕಾಸವಾದವು. ಇದೇ ಕಾರಣದಿಂದ ಕೆಲವುವೇಳೆ ಪ್ಯಾರಾಥೈರಾಯ್ಡ್ ಕೋಶಗಳು ಥೈರಾಯ್ಡ್ ಕೋಶಗಳಂತೆಯೇ ಕಲಾಯ್ಡ್ ಎಂಬ ಮಂದ ದ್ರವದಿಂದ ಕೂಡಿದ ಗೂಡುಗಳಂತೆ (ಫಾಲಿಕಲ್ಸ್) ಅಳವಡಿಕೆಗೊಂಡಿರಬಹುದಾದರೂ ಸಾಧಾರಣವಾಗಿ ಅವು ಪರಸ್ಪರ ಹೆಣೆದುಕೊಂಡಿರುವ ಡೊಂಕುಡೊಂಕಾದ ಸಣ್ಣರಕ್ತನಾಳಗಳನ್ನು ಆವರಿಸಿಕೊಂಡು ಡೊಂಕುಕಡ್ಡಿಗಳಂತೆ ಅಳವಡಿಕೆಗೊಂಡಿರುತ್ತವೆ. ಪ್ಯಾರಾಥೈರಾಯ್ಡ್ ಗ್ರಂಥಿಯಲ್ಲಿ ಎರಡು ಬಗೆಯ ಕೋಶಗಳುಂಟು. ಪ್ರಧಾನವಾಗಿರುವವು, ಪ್ಯಾರಾಥಾರ್ಮೋನನ್ನು ಉತ್ಪಾದಿಸಿ ನೆರೆಯಲ್ಲಿ ಇರುವ ರಕ್ತನಾಳಗಳಿಗೆ ಸ್ರವಿಸುವ ತಿಳಿಯಾದ ಕೋಶಗಳು (ಚೀಫ್‌ಸೆಲ್ಸ್) ಹಾಗು ಅಲ್ಪಸಂಖ್ಯೆಯಲ್ಲಿರುವ ದಟ್ಟಕೋಶಗಳು (ಡಾರ್ಕ್‌ಸೆಲ್ಸ್). ಇವೆರಡೂ, ಒಂದೇ ತೆರನಾದ ಕೋಶಗಳ ಎರಡು ಭಿನ್ನ ಕಾರ್ಯಸ್ಥಿತಿ (ಫಂಕ್ಷನಲ್ ಸ್ಟೇಟ್ಸ್) ಗಳೆಂದು ಭಾವಿಸಲಾಗಿದೆ.

ರಕ್ತದಲ್ಲಿ ಕ್ಯಾಲ್ಸಿಯಮ್ಮಿನ ಮಟ್ಟದ ನಿಯಂತ್ರಣ ಈ ಗ್ರಂಥಿಗಳ ಒಂದು ಪ್ರಮುಖ ಕಾರ್ಯ. ಕಾರಣಾಂತರದಿಂದ ರಕ್ತದ ಕ್ಯಾಲ್ಸಿಯಮ್ಮಿನ ಮಟ್ಟ ಕಡಿಮೆ ಆದಾಗ, ಪ್ಯಾರಾಥೈರಾಯ್ಡ್ ಗ್ರಂಥಿಗಳು ರಕ್ತದ ಕ್ಯಾಲ್ಸಿಯಮ್ ಮಟ್ಟ ಹೆಚ್ಚಾಗುವಂತೆ ಮಾಡುತ್ತವೆ. ಹಾಗೆಯೇ ಕಾರಣಾಂತರದಿಂದ ರಕ್ತದಲ್ಲಿ ಕ್ಯಾಲ್ಸಿಯಮ್ಮಿನ ಮಟ್ಟ ಹೆಚ್ಚಾದರೆ ಪ್ಯಾರಾಥೈರಾಯ್ಡುಗಳ ಕ್ರಿಯೆ ಮಂದವಾಗಿ, ರಕ್ತದಲ್ಲಿಯ ಹೆಚ್ಚುವರಿ ಕ್ಯಾಲ್ಸಿಯಮ್ ಇಳಿಮುಖವಾಗುತ್ತದೆ. ರಕ್ತದಲ್ಲಿಯ ಕ್ಯಾಲ್ಸಿಯಮ್ ಮಟ್ಟದಿಂದಲೇ ಪ್ಯಾರಾಥೈರಾಯ್ಡ್ ಗ್ರಂಥಿಗಳ ಚಟುವಟಿಕೆ ನಿಯಂತ್ರಿತವಾಗಿ ಅದರ ಪರಿಣಾಮವಾಗಿ ರಕ್ತದಲ್ಲಿ ಕ್ಯಾಲ್ಸಿಯಮ್ಮಿನ ಮಟ್ಟ ನಿಯಂತ್ರಿತವಾಗುವುದು ಕೌತುಕವಾದ ನೈಸರ್ಗಿಕ ಸ್ವಯಂ ನಿಯಂತ್ರಣ ಕ್ರಮಗಳಲ್ಲಿ (ಆಟೋರೆಗ್ಯುಲೇಶನ್) ಒಂದು. ರಕ್ತದಲ್ಲಿ ಕೊರತೆ ಬಿದ್ದ ಕ್ಯಾಲ್ಸಿಯಮ್ಮಿನ ಮಟ್ಟವನ್ನು ಏರಿಸಲು ಪ್ಯಾರಾಥಾರ್ಮೋನ್ ಮೂಳೆಗಳ ಮೇಲೆ ಪ್ರಭಾವ ಬೀರಿ ಅವುಗಳ ಕ್ಯಾಲ್ಸಿಯಮ್ ಲವಣ ರಕ್ತಗತವಾಗುವಂತೆ ಮಾಡುತ್ತದೆ ಹಾಗೂ ಮೂತ್ರಪಿಂಡಗಳ ಮೇಲಿನ ಪ್ರಭಾವದಿಂದ ಕ್ಯಾಲ್ಸಿಯಮ್ ಅನ್ನು ರಕ್ತದಲ್ಲಿ ಉಳಿಸಿಕೊಳ್ಳವದು. ರಕ್ತದ ಕ್ಯಾಲ್ಸಿಯಮ್ಮಿನ ಹೆಚ್ಚುವರಿ ಮಟ್ಟವನ್ನು ಕಡಿಮೆ ಮಾಡಲು ಪ್ಯಾರಾಥಾರ್ಮೋನ್ ಕಡಿಮೆ ಆಗಿ ಮೂತ್ರಪಿಂಡಗಳ ಮೇಲೆ ಪ್ರಭಾವ ಕಡಿಮೆಯಾಗಿ ಮೂತ್ರದಲ್ಲಿ ಇನಾರ್ಗ್ಯಾನಿಕ್ ಫಾಸ್ಫೇಟುಗಳು ಕಡಿಮೆ ವಿಸರ್ಜಿತವಾಗುತ್ತವೆ. ತತ್ಫಲವಾಗಿ ರಕ್ತದಲ್ಲಿ ಫಾಸ್ಫೇಟುಗಳ ಮಟ್ಟ ಹೆಚ್ಚಾಗುತ್ತದೆ. ರಕ್ತದ ಫಾಸ್ಫೇಟ್ ಮಟ್ಟಕ್ಕೂ ಕ್ಯಾಲ್ಸಿಯಮ್ ಮಟ್ಟಕ್ಕೂ ಪರಸ್ಪರ ವ್ಯತಿರಿಕ್ತ ಸಂಬಂಧ ಇರುವುದರಿಂದ ಆ ಕೂಡಲೆ ರಕ್ತದಲ್ಲಿ ಕ್ಯಾಲ್ಸಿಯಮ್ಮಿನ ಮಟ್ಟ ತಗ್ಗುತ್ತದೆ. ಬಹುಶಃ ಕ್ಯಾಲ್ಸಿಯಮ್ ಹೆಚ್ಚು ವಿಸರ್ಜಿತವಾಗುತ್ತದೆ ಮತ್ತು ಅದು ಮೂಳೆ ಸೇರಿ ಮೂಳೆಗಳಲ್ಲಿ ಶೇಖರಣೆಯಾಗುತ್ತದೆ.

ಪ್ಯಾರಾಥೈರಾಯ್ಡ್ ರೋಗಗಳಿಂದ, ಪ್ಯಾರಾಥಾರ್ಮೋನ್ ಕಡಿಮೆ ಉತ್ಪಾದನೆಯಿಂದ (ಹೈಪೊಪ್ಯಾರಾಥೈರಾಯ್ಡಿಸಮ್) ಟೆಟನಿ ಹಾಗೂ ಕೆಲವು ಕಾಲ ವ್ಯಕ್ತಿಯಲ್ಲಿ ಚಿತ್ತಗೆಡಿಕೆ (ಡಿಮೆನ್‌ಷಿಯ) ಉಂಟಾಗುವುದೂ ಇದೆ. ಪ್ಯಾರಾಥಾರ್ಮೋನಿನ ಹೆಚ್ಚು ಉತ್ಪಾದನೆಯಿಂದ (ಹೈಪರ್‌ಪ್ಯಾರಾಯ್ಡಿಸಮ್) ರಕ್ತದಲ್ಲಿ ಕ್ಯಾಲ್ಸಿಯಮ್ಮಿನ ಮಟ್ಟ ಏರಿದಾಗ ಮನೋದ್ರೇಕ (ಇರಿಟಬಿಲಿಟಿ), ಮತ್ತು ಮಾನಸಿಕ ವಿಕಲ್ಪಗಳು (ಮೆಂಟಲ್ ಡಿಸ್ಟರ್ಬೆನ್ಸಸ್) ಉಂಟಾಗುವುವಲ್ಲದೆ ಮೂತ್ರಪಿಂಡ, ಮೂತ್ರನಾಳ, ಮೂತ್ರಕೋಶ ಇವುಗಳಲ್ಲಿ ಕಲ್ಲುಗಳು ಉತ್ಪತ್ತಿಯಾಗಿ ಬೆಳೆಯುವಂತೆಯೂ ಆಗುತ್ತವೆ. ಕಣ್ಣುಗಳಲ್ಲಿ ಅಕಾಲಿಕ ಪೊರೆ (ಕ್ಯಾಟರಾಕ್ಟ್) ಉಂಟಾಗಬಹುದು. ಭೇದಿ ನಿಶ್ಯಕ್ತಿಗಳಿಂದ ಬಿದ್ದೇಳುವುದೂ ಅಕಾಲದಲ್ಲಿ ಮೂಳೆಗಳು ಸುಲಭವಾಗಿ ಮುರಿದುಹೋಗುವುದೂ ಉಂಟು. ಹೆಚ್ಚು ಉತ್ಪಾದನೆ ಮಾಡುತ್ತಿರುವ ಪ್ಯಾರಾಥೈರಾಯ್ಡ್ ಗ್ರಂಥಿಗಳನ್ನು ಶಸ್ತ್ರಕ್ರಿಯೆಯಿಂದ ಅವಶ್ಯವಿದ್ದಷ್ಟು ಮಾತ್ರ ತೆಗೆದುಹಾಕಬೇಕಾದುದು ಯುಕ್ತ ಚಿಕಿತ್ಸೆ.

ಕ್ಯಾಲ್ಸಿಟೋನಿನ್: ಥೈರಾಯ್ಡ್‌ಗ್ರಂಥಿಯಲ್ಲಿಯ C ಕೋಶಗಳಿಂದ ಉತ್ಪತ್ತಿಯಾಗುವ ಹಾರ್ಮೋನ್. ಈ ಕೋಶಗಳು ಪಾರಾಥೈರಾಯ್ಡ್ ಗ್ರಂಥಿಗಳಲ್ಲೂ ಇರುತ್ತವೆಯೆಂದು ತಿಳಿದುಬಂದಿದೆ. ಪಾರಾಥಾರ್ಮೋನಕ್ಕೆ ಎದುರಾಳಿಯಂತೆ ಕೆಲಸ ನಿರ್ವಹಿಸುವ ಕ್ಯಾಲ್ಸಿಟೋನಿನ್ ಕ್ರಿಯೆಯಿಂದ ರಕ್ತದೊಳಗಿನ ಹಾಗೂ ಮೂಳೆಗಳೊಳಗಿನ ಕ್ಯಾಲ್ಸಿಯಂ ಪ್ರಮಾಣ ಸಮಪ್ರಮಾಣದಲ್ಲಿಡಲು ಸಹಕಾರಿಯಾಗಿದೆ. ಕ್ಯಾಲ್ಸಿಟೋನಿನ್‌ನ ಪ್ರಮುಖ ಕ್ರಿಯೆಯೆಂದರೆ, ಮೂಳೆಗಳಿಂದ ಕ್ಯಾಲ್ಸಿಯಂ ಕರಗಿಹೋಗುವುದನ್ನು ತಡೆಯುವುದು ಮತ್ತು ಮೂತ್ರಪಿಂಡಗಳಿಂದ ಕ್ಯಾಲ್ಸಿಯಂ ಹೀರಿಕೆಯನ್ನು ಕಡಿಮೆಗೊಳಿಸುವುದು. ವೃದ್ಧರಲ್ಲಿ ಕಂಡುಬರುವ ಪೊಳ್ಳು ಮೂಳೆಯ ಚಿಕಿತ್ಸೆಗೆ ಕ್ಯಾಲ್ಸಿಟೋನಿನ್ ಬಳಸುವುದುಂಟು.

***

**ಪ್ಯಾಲಿಯೊಸ್ಪಾಂಡೈಲಸ್:** ಡಿವೋನಿಯನ್ ಕಾಲದಲ್ಲಿ ಜೀವಿಸಿದ್ದ ಒಂದು ತೆರನ ಮೀನು. ಈಗ ಪಳೆಯುಳಿಕೆ ರೂಪದಲ್ಲಿ ಮಾತ್ರ ಪರಿಚಿತ. ಅಸ್ಥಿರಜ್ಜುಗಳುಳ್ಳ ಮೀನುಗಳ ಅಂದರೆ ಕಾಂಡ್ರಿಕ್ತಿಯೀಸ್ ವರ್ಗಕ್ಕೆ ಸೇರಿದ ಇದು ಸ್ಕಾಟ್‌ಲೆಂಡಿನ ಡಿವೋನಿಯನ್ ಸ್ತರಗಳಲ್ಲಿ ಕಾಣಸಿಕ್ಕಿದೆ. ಆಕಾರದಲ್ಲಿ ಇತರ ಪ್ರಾಚೀನ ಪಳೆಯುಳಿಕೆ ಮೀನುಗಳ ಮಾದರಿಗಿಂತ ಇದು ಭಿನ್ನವಾಗಿದೆ. ಇದರ ದೇಹದಲ್ಲಿ ಯಾವುದೇ ರೀತಿಯ ಚರ್ಮೀಯ ಕವಚವಿಲ್ಲ. ಬದಲು ಚಿಕ್ಕ ಚಿಕ್ಕ ಎಲುಬಿನಂಥ ಫಲಕಗಳುಂಟು. ಇದರ ನಡುಕಟ್ಟು ಸಿಕ್ಕಿಲ್ಲವಾದರೂ ಅದಕ್ಕೆ ಸಂಬಂಧಿಸಿದ ಎಲುಬಿನ ಚೂರುಗಳು ಸಿಕ್ಕಿರುವುದರಿಂದ ಈ ಮೀನಿಗೆ ಈಜು ರೆಕ್ಕೆಗಳಿದ್ದವೆಂದು ಹೇಳಬಹುದು. ಇದಕ್ಕೆ ಚೆನ್ನಾಗಿ ರೂಪಗೊಂಡ ಬಾಲದ ಈಜುರೆಕ್ಕೆಯೂ ಇತ್ತು.

ಬೆನ್ನು ಮೂಳೆಯ ಬಹುಭಾಗ ಅಸ್ಥಿರಜ್ಜಿನಿಂದ ರಚಿತವಾಗಿತ್ತಾದ್ದರಿಂದ ಇದರ ಅವಶೇಷಗಳು ಸಿಕ್ಕಿಲ್ಲ. ಮಿದುಳು ಕವಚದ ಮುಂಭಾಗದಲ್ಲಿ ಕೆಲವು ಪ್ರಕ್ಷೇಪಣಗಳಿದ್ದು

ಇವು ಮೂತಿಯ ಜೊತೆಗೆ ಸೇರಿಕೊಂಡಿವೆ. ಇದೇ ನಾಸಿಕದ ಭಾಗ ಎನ್ನಲಾಗಿದೆ. ತಲೆಬುರುಡೆಯ ತಳಭಾಗದಲ್ಲಿ ಕೆಲವು ಜೋಡಿ ಎಲುಬುಗಳಿದ್ದವು. ಈ ಎಲುಬುಗಳಿಗೆ ಸಮಾನವಾದ ಭಾಗಗಳನ್ನು ಈಗಿನ ಮೀನುಗಳಲ್ಲಿ ಹುಡುಕುವುದು ಅಸಾಧ್ಯವಾದರೂ ಬಹುಶಃ ಇವು ದವಡೆಯ ಮತ್ತು ಕಿವಿರು ಕಮಾನುಗಳ ಮಾರ್ಪಾಡು ಎಂದು ಹೇಳಬಹುದು.

ಬೇರೆ ಜಾತಿಯ ಮೀನುಗಳಿಗೂ ಪ್ಯಾಲಿಯೊಸ್ಪಾಂಡೈಲಸಿಗೂ ಇರಬಹುದಾದ ಸಂಬಂಧದ ಬಗ್ಗೆ ಸಾಕಷ್ಟು ವಿವಾದವಿದೆ. ಇದು ಬೇರಾವುದೋ ಪ್ರಾಣಿಯ ಲಾರ್ವ ಎಂಬ ವಾದವೂ ಇದೆ. ಆದರೆ, ಯಾವುದೇ ಭ್ರೂಣದಲ್ಲೋ ಬೆಳವಣಿಗೆಯ ಅಷ್ಟು ಪ್ರಾಚೀನ ಹಂತದಲ್ಲೋ ಬೆನ್ನುಮೂಳೆ ಇದೆ ಎನ್ನುವ ವಿಚಾರ ಕಲ್ಪನಾತೀತ. ಇನ್ನೊಂದು ವಾದದ ಪ್ರಕಾರ ಇದು ದವಡೆರಹಿತ ಮೀನುಗಳ ಗುಂಪಿಗೆ ಸೇರಿದೆ. ಆದರೆ, ತಲೆಬುರುಡೆಯ ಕೆಳಭಾಗದ ಮೂಳೆಗಳು ಮತ್ತು ನಡುಕಟ್ಟುಗಳು ಈ ವಾದದ ವಿರೋಧಕ್ಕೆ ಸಾಕಷ್ಟು ಪುಷ್ಟಿಯೀಯುವುವು. ಪ್ಲಾಕೋಡರ್ಮ್ ಗುಂಪಿಗೆ ಸೇರುವ ಈ ಪ್ರಾಣಿ ವಿಕಾಸದ ಕೊನೆಯ ಹಂತದಲ್ಲಿ ತನ್ನ ಹೊರಕವಚವನ್ನು ಪೂರ್ತಿ ಕಳೆದುಕೊಂಡಿರಬೇಕು ಎಂಬ ವಾದ ಮನ್ನಣೆಗಳಿಸಿದೆ. (ಎಸ್.ಎನ್.ಎಚ್.)

**ಪ್ಯಾಸೆರಿಫಾರ್ಮೀಸ್:** ಪಕ್ಷಿಗಳ ವರ್ಗದ 27 ಗಣಗಳ ಪೈಕಿ ಒಂದು. ಇದು ಸುಮಾರು 5,100 ಪ್ರಭೇದಗಳನ್ನು ಒಳಗೊಂಡಿದ್ದು ಪಕ್ಷಿವರ್ಗದ ಗಣಗಳಲ್ಲೆಲ್ಲ ಅತ್ಯಂತ ದೊಡ್ಡದು ಎನಿಸಿಕೊಂಡಿದೆ. ಎಲ್ಲಾ ಪಕ್ಷಿತಜ್ಞರೂ ಸಾಮಾನ್ಯವಾಗಿ ಒಪ್ಪಿರುವಂತೆ ಪಕ್ಷಿಗಳ ವರ್ಗದಲ್ಲಿ ಒಟ್ಟು 8,600 ಪಕ್ಷಿ ಪ್ರಭೇದಗಳುಂಟು. ಆದ್ದರಿಂದ ಪ್ಯಾಸೆರಿಫಾರ್ಮೀಸ್ ಗಣದಲ್ಲಿ ಪಕ್ಷಿಗಳ ಒಟ್ಟು ಸಂಖ್ಯೆಯ ಐದನೆಯ ಮೂರು ಅಂಶದಷ್ಟು ಪ್ರಭೇದಗಳಿವೆ ಎಂದಾಯಿತು. ಇಷ್ಟೇ ಅಲ್ಲ, ಉಳಿದ 26 ಗಣಗಳ ಸದಸ್ಯಗಳಿಗೆ ಹೋಲಿಸಿದರೆ ಈ ಗಣದ ಹಕ್ಕಿಗಳು ತುಂಬ ವೈವಿಧ್ಯಮಯವೂ ದೈಹಿಕ ರಚನೆಯಲ್ಲಿ ಮುಂದುವರಿದಂಥವೂ ಆಗಿವೆ.

ಈ ಗಣದ ಹಕ್ಕಿಗಳ ಅತ್ಯಂತ ಪ್ರಧಾನ ಲಕ್ಷಣ ಇವು ಹಾರಿ ಬಂದು ಮರಗಿಡಗಳ ರೆಂಬೆಗಳ ಮೇಲೆ ಕೂರಲು ತುಂಬ ಅನುಕೂಲವಾಗಿರುವಂಥ ಕಾಲುಗಳು; ಕಾಲುಗಳಲ್ಲಿ ಮುಂದಕ್ಕೆ ಚಾಚಿರುವ ಮೂರು ಮತ್ತು ಹಿಂದಕ್ಕೆ ಚಾಚಿರುವ ಒಂದು – ಹೀಗೆ ಒಟ್ಟು ನಾಲ್ಕು ಬೆರಳುಗಳಿವೆ. ಹಿಂದಿನ ಬೆರಳು ಉಳಿದವಕ್ಕಿಂತ ಹೆಚ್ಚು ಬಲಯುತವಾದ್ದೂ ಚೆನ್ನಾಗಿ ರೂಪುಗೊಂಡಿರುವಂಥದೂ ಆಗಿದೆಯಲ್ಲದೆ ಇದನ್ನು ಮುಂದಕ್ಕೆ ಬಾಗಿಸುವುದಕ್ಕೆ ಆಗದು. ಈ ಹಕ್ಕಿಗಳ ಉಳಿದ ವಿಶಿಷ್ಟ ಲಕ್ಷಣಗಳೆಂದರೆ ಇವುಗಳ ಬಾಯಂಗುಳದ ಎಲುಬುಗಳ ರಚನೆ, ಕತ್ತಿನ ಕಶೇರುಗಳ ಸಂಖ್ಯೆ 14 ಕ್ಕೆ ಇಳಿದಿರುವುದು (ಯೂರಿಲೇಮಿಡೆ ಕುಟುಂಬಕ್ಕೆ ಸೇರಿದ ಬ್ರಾಡ್‌ಬಿಲ್ ಹಕ್ಕಿಗಳಲ್ಲಿ ಮಾತ್ರ ಈ ಸಂಖ್ಯೆ 15 ಇದೆ.) ಹಾಗೂ ಇವುಗಳ ಮರಿಗಳು ಹುಟ್ಟಿದಾಗ ರೆಕ್ಕೆಪುಕ್ಕಗಳಿಂದ ಆವೃತವಾಗದೆ ತುಂಬ ಅಸಹಾಯಕ ಸ್ಥಿತಿಯಲ್ಲಿರುವುದು. ಎಂದೇ ಈ ಹಕ್ಕಿಗಳು ತಮ್ಮ ಮರಿಗಳನ್ನು ತುಂಬ ಜತನದಿಂದ ಪೋಷಿಸುವುವು.

ಪ್ಯಾಸೆರಿಫಾರ್ಮೀಸ್ ಗಣದ ಹಕ್ಕಿಗಳು ಅಂಟಾರ್ಕ್ಟಿಕವನ್ನುಳಿದು ಎಲ್ಲ ಭೂಪ್ರದೇಶಗಳಲ್ಲೂ ಕಾಣಸಿಗುವುವು. ಇವು ಸಣ್ಣ ಗಾತ್ರದವು. ಇಲ್ಲವೆ ಮಧ್ಯಮ ಗಾತ್ರದವು. ಆಸ್ಟ್ರೇಲಿಯದಲ್ಲಿ ಕಾಣಬರುವ ಲೈರ್ ಹಕ್ಕಿಗಳು ಹಾಗೂ ಉತ್ತರಾರ್ಧಗೋಳದಲ್ಲಿ ಮಾತ್ರ ಕಂಡುಬರುವ ರೇವನ್ ಹಕ್ಕಿಗಳೇ (ಕಾಗೆಗಳ ದಾಯಾದಿ – ಇದರ ಉದ್ದ ಸುಮಾರು 65 ಸೆಂಮೀ.) ಈ ಗಣದ ಹಕ್ಕಿಗಳಲ್ಲೆಲ್ಲ ಅತ್ಯಂತ ದೊಡ್ಡ ಗಾತ್ರದವು.

ಈ ಗಣದ ಹಕ್ಕಿಗಳ ಪೂರ್ವೇತಿಹಾಸ ಮತ್ತು ಉಳಿದ ಭೂವಾಸಿ ಹಕ್ಕಿಗಳೊಂದಿಗೆ ಇವುಗಳ ಸಂಬಂಧಗಳು ಇಂದಿಗೂ ಬಗೆಹರಿಯದಿರುವ ವಿಚಾರಗಳು. ಬಹುಶಃ ಟರ್ಷಿಯರಿ ಕಾಲದಲ್ಲೊ ಅದಕ್ಕಿಂತ ಮುಂಚೆಯೊ ಇವು ಹಲವಾರು ಪೂರ್ವಜ ಮೂಲಗಳಿಂದ ಉದ್ಭವಿಸಿದುವು. ಟರ್ಷಿಯರಿ ಹಾಗೂ ಅನಂತರದ ಅವಧಿಗಳಲ್ಲಿ ಬೇರಾವುದೇ ಹಕ್ಕಿ ಗುಂಪಿಗಿಂತ ಅತ್ಯಂತ ಶೀಘ್ರ ಗತಿಯಲ್ಲಿ ಮತ್ತು ಯಶಸ್ವಿಯಾಗಿ ಇವು ವಿಕಸಿಸಿದುವು. ಬೇರೆ ಗುಂಪುಗಳಿಗೆ ಹೋಲಿಸಿದರೆ ಇವುಗಳ ಉದ್ಭವ ತೀರಾ ಇತ್ತೀಚಿನದಾದ್ದರಿಂದ ಈ ಗಣದ ವಿವಿಧ ಕುಟುಂಬಗಳ ನಡುವಣ ವ್ಯತ್ಯಾಸ ರೇಖೆಗಳು ಖಚಿತವಾಗಿಲ್ಲ. ಆದ್ದರಿಂದ ಈ ಗಣವನ್ನು ಕೆಲವರು 50 ಕುಟುಂಬಗಳಾಗಿ ವಿಭಾಗಿಸಿದರೆ ಇನ್ನು ಕೆಲವರು 70 ಕುಟುಂಬಗಳನ್ನಾಗಿ ವಿಂಗಡಿಸುವುದುಂಟು.

ಜರ್ಮನಿಯ ಅಂಗರಚನಾ ವಿಜ್ಞಾನಿ ಮ್ಯೂಲರ್ ಎಂಬಾತ ಈ ಹಕ್ಕಿಗಳ ಧ್ವನಿಪೆಟ್ಟಿಗೆಗೆ (ಸಿರಿಂಕ್ಸ್) ಸಂಬಂಧಿಸಿದ ಸ್ನಾಯುಗಳ ಸಂಖ್ಯೆಯನ್ನು ಆಧರಿಸಿ ಪ್ಯಾಸೆರಿಫಾರ್ಮೀಸ್ ಗಣವನ್ನು ಯೂರಿಲೇಮಿ, ಟಿರಾನಿ, ಮೆನ್ಯೂರಿ ಮತ್ತು ಪ್ಯಾಸೆರೀಸ್ ಎಂಬ ನಾಲ್ಕು ಉಪಗಣಗಳನ್ನಾಗಿ ವಿಂಗಡಿಸಿದ. ಮೊದಲ ಮೂರು ಉಪಗಣಗಳ ಹಕ್ಕಿಗಳ ಧ್ವನಿಪೆಟ್ಟಿಗೆಯಲ್ಲಿ 4 ಜೊತೆ ಅಥವಾ ಕಡಿಮೆ ಸ್ನಾಯುಗಳಿವೆಯಾದರೆ ಪ್ಯಾಸೆರೀಸ್ ಉಪಗಣದವುಗಳಲ್ಲಿ 5–8 ಜೊತೆ ಸ್ನಾಯುಗಳಿವೆ. ಇದರಿಂದಾಗಿಯೇ ಈ ಉಪಗಣದ ಹಕ್ಕಿಗಳಿಗೆ ಸ್ವನಗೈಯುವ ಸಾಮರ್ಥ್ಯ ಲಭಿಸಿದ್ದು ಇವು ಹಾಡು ಹಕ್ಕಿಗಳೆಂದು ಹೆಸರಾಗಿವೆ. ಪ್ರಭೇದಗಳ ಸಂಖ್ಯೆಯಲ್ಲೂ ಈ ಉಪಗಣ ದೊಡ್ಡದು. ಇದರಲ್ಲಿ 40 ಕ್ಕೂ ಹೆಚ್ಚು ಕುಟುಂಬಗಳುಂಟು. ಈ ಉಪಗಣದ ಒಟ್ಟು ಪ್ರಭೇದಗಳ ಸಂಖ್ಯೆ 4,000 ಕ್ಕೂ ಅಧಿಕ. ಅಂದರೆ ಒಟ್ಟು ಪಕ್ಷಿ ಪ್ರಭೇದಗಳ ಸಂಖ್ಯೆಯ ಅರ್ಧದಷ್ಟು.

ಈ ಗಣದ ಮುಖ್ಯ ಉದಾಹರಣೆಗಳು ಪಿಟ್ಟ, ಕೋಟಿಂಗ, ನೊಣ ಹಿಡುಕಗಳು, ಲೈರ್ ಹಕ್ಕಿಗಳು, ಸೂರಕ್ಕಿಗಳು, ಲಾರ್ಕ್, ಸ್ವಾಲೊ, ಕಾಜಾಣ, ಕಾಗೆ, ಕುಂಜಹಕ್ಕಿಗಳು, ಸಗ್ಗವಕ್ಕಿ, ನಟ್‌ಹ್ಯಾಚ್, ಬ್ಯಾಬ್ಲರ್, ಬುಲ್‌ಬುಲ್, ರೆನ್, ರಾಬಿನ್, ಗುಬ್ಬಿ, ಗೊರವಂಕ, ವಾರ್ಬ್ಲರ್, ಫಿಂಚ್ ಹಕ್ಕಿಗಳು, ಗೀಜಗ, ಇತ್ಯಾದಿ. (ಎನ್.ಎಂ;)

**ಪ್ಯೂಪ:** ಪೂರ್ಣರೂಪಾಂತರ ಹೊಂದುವ ಕೀಟಗಳ ಜೀವನಚರಿತ್ರೆಯ ಒಂದು ಹಂತ. ಇದನ್ನು ಕೋಶಾವಸ್ಥೆ ಎನ್ನುವರು. ಈ ಹಂತದಲ್ಲಿ ಕೀಟ ಚಟುವಟಿಕೆಯಿಂದಿರುವುದಿಲ್ಲ. ಆದರೆ, ದೇಹದ ಒಳಗೆ ಮಹತ್ವದ ಜೀವರಸಾಯನಿಕ ಕ್ರಿಯೆಗಳಾಗುತ್ತವೆ. ಲಾರ್ವ ಅಂಗಗಳು ಕರಗಿ, ಹೊಸ ಪ್ರಬುದ್ಧಾವಸ್ಥೆಯ ಅಂಗಗಳು ಬೆಳೆಯುತ್ತವೆ. ದೇಹ ಮಾರ್ಪಾಟಾಗುತ್ತದೆ.

ಇವುಗಳ ಆಕಾರದಲ್ಲಿ ತುಂಬ ವ್ಯತ್ಯಾಸವಿದೆ.

1. ಪ್ರಿಮಿಟಿವ್: ಪ್ಯೂಪ ಲೈಬೀರ ಸರಳವಾದ ದೇಹ, ಹೊದಿಕೆ ಇಲ್ಲ. ಉಪಾಂಗಗಳು ಕಾಣಿಸುತ್ತಿದ್ದು, ಪೌಢ ಕೀಟವನ್ನೇ ಹೋಲುತ್ತದೆ. ಕೆಲವು ಕುಟುಂಬದ ಕೀಟಗಳಲ್ಲಿ, ಕೊನೆಯ ಪೊರೆ ಬಿಡುವುದಕ್ಕೆ ಮುಂಚೆ ಇವು ಚುರುಕಾಗುವುವು. ಉದಾ: ನ್ಯೂರಾಪ್ಟಿರ, ಮೀಕಾಪ್ಟಿರ, ಟ್ರೈಕಾಪ್ಟಿರ, ಕೋಲಿಯಾಪ್ಟಿರ, ಡಿಪ್ಟಿರ, ಲೆಪಿಡಾಪ್ಟಿರ, ಹೈಮಿನಾಪ್ಟಿರ ಗಣದ ಕೀಟಗಳು.

2. ಜಟಿಲ: ಅಪೂರ್ಣ ಕೋಶ. ಕೋಶದ ಹೊಟ್ಟೆ ಚಲಿಸುವುದು. ಉಪಾಂಗಗಳು ಬೇರೆ ಬೇರೆ ಒರೆಗಳಲ್ಲಿರುತ್ತವೆ. ಉದಾ: ಸೊಳ್ಳೆಗಳ ಕೋಶ, ಟಂಬ್ಲರ್ ಮಶಕಗಳು, ಕೆಲವು ಡಿಪ್ಟಿರ, ಲೆಪಿಡಾಪ್ಟಿರ ಮತ್ತು ಕೋಲಿಯಾಪ್ಟಿರ ಗಣದ ಕೀಟಗಳು.

ಅ. ಪ್ಯೂಪ ಅಬ್ಟೆಕ್ಟ: ಉಪಾಂಗಗಳೆಲ್ಲ ಒಟ್ಟು ಸೇರಿರುತ್ತವೆ ಅಥವಾ ಕೋಶದ ಶರೀರಕ್ಕೆ ಒತ್ತಿಕೊಂಡಿರುತ್ತವೆ. ಇವುಗಳ ಮೇಲೆ ಚರ್ಮದ ಪೊರೆ ಇದೆ. ಚಲನೆ ಇಲ್ಲ. ಒಂದು ತುದಿಯಲ್ಲಿ ಕ್ರಿಮಾಸ್ಟರ್ ಎಂಬ ಮುಳ್ಳಿದೆ. ಉದಾ. ಲೆಪಿಡಾಪ್ಟಿರ ಗಣದ ಕೀಟಗಳು.

ಆ: ಪ್ಯೂಪ ಕೊಆರ್ಕ್ಟೇಟ: ಕೊನೆಯ ಚರ್ಮದ ಪೊರೆಯಲ್ಲಿ ಪ್ರಾಯದ ಕೀಟ ಅಡಗಿದ್ದು ಹೊರಕ್ಕೆ ಬರುತ್ತದೆ. (ಎಂ.ಪಿ)

**ಪ್ಯೂಮ:** ಕಾರ್ನಿವೋರ ಗಣದ ಫೆಲಿಡೆ ಕುಟುಂಬಕ್ಕೆ ಸೇರಿದ ಸ್ತನಿ. ಅಮೆರಿಕದ ಸಿಂಹ, ಜಿಂಕೆಹುಲಿ, ಮೆಕ್ಸಿಕನ್ ಸಿಂಹ, ದೊಡ್ಡ ಸುಂದರ ಬೆಕ್ಕು, ಕೂಗರ್, ಬೆಟ್ಟದ ಸಿಂಹ, ಸಿಲ್ವರ್ ಲಯನ್, ಕಿಂಗ್ ಕ್ಯಾಟ್, ಕ್ಯಾಟ್ ಮೌಂಟ್, ಕುಂದುಹುಲಿ, ಬೆಟ್ಟದ ದೆವ್ವ ಎಂದೆಲ್ಲ ಕರೆಯಲ್ಪಡುವ ಬೆಕ್ಕಿನ ಜಾತಿಯ ಮಾಂಸಾಹಾರಿ ಪ್ರಾಣಿ. ಫೆಲಿಸ್ ಕನ್‌ಕಲರ್ ವೈಜ್ಞಾನಿಕ ನಾಮ. ಪ್ಯೂಮ ಎನ್ನುವ ಹೆಸರನ್ನು ಮೊದಲು ಉಪಯೋಗಿಸಿದ್ದು ಇನ್‌ಕಾಸ್ ಜನಾಂಗದವರು. ಪ್ಯೂಮವನ್ನು ಬ್ರಿಟಿಷ್ ಕೊಲಂಬಿಯ, ಪಶ್ಚಿಮ ಕೆನಡ, ದಕ್ಷಿಣ ಅಮೆರಿಕದ ದಕ್ಷಿಣ ಭಾಗ (ಪಟಗೋನಿಯ)ಗಳಲ್ಲಿ ಕಾಣಬಹುದು. ಬೆಟ್ಟ, ಮರುಭೂಮಿ, ಬಯಲು ಮತ್ತು ಕಾಡು ಇದರ ವಾಸಸ್ಥಳಗಳು. ಸಾಮಾನ್ಯವಾಗಿ ಹೆಚ್ಚು ಮನುಷ್ಯರು ಇಲ್ಲದ ಸ್ಥಳಗಳಲ್ಲಿ ಏಕಾಂಗಿಯಾಗಿ ಜೀವನ ನಡೆಸುತ್ತದೆ. ಮೈಬಣ್ಣ ಬಿಳಿ ಛಾಯೆಯ ಮಾಸಲು ಹಳದಿ ಅಥವಾ ಹಳದಿ, ಕಡುಗೆಂಪು ಮತ್ತು ಕಂದು. ಕಿವಿ ಮತ್ತು ಬಾಲದ ತುದಿ ಕಡು ಬಣ್ಣದಿಂದಿರುತ್ತದೆ. ಆದರೆ ಹೊಟ್ಟೆ ಮತ್ತು ಹಿಂಭಾಗ ಬಿಳಿಯಾಗಿರುತ್ತದೆ. ಕುತ್ತಿಗೆ ಮೇಲೆ ಉದ್ದ ಕೂದಲು ಇರುವುದಿಲ್ಲ. ಪ್ರಾಯದ ಪ್ಯೂಮದ ತೂಕ 35–100 ಕಿಗ್ರಾಂ. ದೊಡ್ಡ ಗಂಡು ಪ್ರಾಣಿಯ ಉದ್ದ 2.75 ಮೀ. ಇದರಲ್ಲಿ ಮೂರನೆ ಒಂದು ಭಾಗ ಬಾಲ; ಭುಜಭಾಗದಲ್ಲಿ ಎತ್ತರ 60–75 ಸೆಂಮೀ. ಹೆಣ್ಣು ಗಂಡಿಗಿಂತ ಚಿಕ್ಕದು. ಗಂಡು ಮತ್ತು ಹೆಣ್ಣು ಪ್ಯೂಮಗಳೆರಡು ಕಿರುಚುತ್ತವೆ. ಆದರೆ ಪದೇ ಪದೇ ಅಲ್ಲ. ಧ್ವನಿ ಸಾಕಿದ ಬೆಕ್ಕಿನ ರೀತಿಯೇ ಇರುತ್ತದೆ. ಆದರೆ, ಇನ್ನೂ ಗಟ್ಟಿಯಾಗಿರುತ್ತದೆ. ಸಂಗಾತಿಯೊಂದಿಗೆ ಜೊತೆಗೂಡಲು ಇಚ್ಛಿಸಿದಾಗ ಕರ್ಕಶವಾಗಿ ಕಿರುಚುತ್ತದೆ.

ಈ ಪ್ರಾಣಿ ಅಸಾಧಾರಣವಾದ ಧಾರಣಶಕ್ತಿ (ಸ್ಟ್ಯಾಮಿನ) ಮತ್ತು ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದೆ. ಒಂದು ನೆಗೆತದಲ್ಲಿ 6–12 ಮೀ ಗಳಷ್ಟು ಉದ್ದ ಮತ್ತು 4.5 ಮೀ ಗಳಷ್ಟು ಎತ್ತರ ನೆಗೆಯಬಲ್ಲದು. 18 ಮೀ ಗಳಷ್ಟು ಎತ್ತರದಿಂದ ನೆಲಕ್ಕೆ ಜಿಗಿಯುತ್ತದೆ.

ಬೇಟೆಯಾಡುವಾಗ 20–25 ಕಿಮೀ ಗಳವರೆಗೆ ಆಹಾರ ಹುಡುಕಿಕೊಂಡು ಹೋಗುತ್ತದೆ. ಇದರ ಮುಖ್ಯ ಆಹಾರ ಜಿಂಕೆ (ಉತ್ತರ ಅಮೆರಿಕಾ), ಜೊತೆಗೆ ಸಣ್ಣ ಸ್ತನಿಗಳು. ಕೆಲವು ಸಮಯ ಕುರಿ, ಮೇಕೆ, ಕುದುರೆ, ಹಸುಗಳನ್ನು ಕೂಡ ತಿನ್ನುತ್ತದೆ. ಕುದುರೆಮರಿ ಇದಕ್ಕೆ



ಬಲು ಪ್ರಿಯ. ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವಾಗ ಏಕಾಏಕಿ ಅವುಗಳ ಮೇಲೆ ಜೋರಾಗಿ ನೆಗೆದು, ಸಾಮಾನ್ಯವಾಗಿ ಕುತ್ತಿಗೆಯನ್ನು ಕಚ್ಚಿ ಸಾಯಿಸುತ್ತದೆ. ಅನೇಕ ಸಲ ಅದರ ಜಿಗಿಯುವ ರಭಸ, ಬೇಟೆಯಾಡಿದ ಪ್ರಾಣಿಯನ್ನು ನೆಲದ ಮೇಲೆ 6 ಮೀ ಗಳಷ್ಟು ದೂರ ತೆಗೆದುಕೊಂಡು ಹೋಗುತ್ತದೆ. ತನ್ನ ದೇಹದ ತೂಕದ ಮೂರರಷ್ಟು ತೂಕವಿರುವ ಸತ್ತ ಪ್ರಾಣಿಯನ್ನು ಹಿಮದ ಮೇಲೆ ಎಳೆದುಕೊಂಡು ಹೋಗಬಲ್ಲದು ಅಥವಾ ಸಾಯಿಸಿದ ಪ್ರಾಣಿಯನ್ನು ತನ್ನ ಭುಜದ ಮೇಲೆ ಹಾಕಿಕೊಂಡು ಹೋಗಬಲ್ಲದು. ವರ್ಷದಲ್ಲಿ ಯಾವಾಗಬೇಕಾದರೂ ಸಂತಾನೋತ್ಪತ್ತಿಯಾಗಬಹುದು. ಸಾಮಾನ್ಯವಾಗಿ ಪ್ರತಿ ವರ್ಷ ಮರಿ ಹಾಕುತ್ತವೆ. 90 ದಿನಗಳ ಗರ್ಭಾವಸ್ಥೆ ನಂತರ ಒಂದರಿಂದ ಐದು ಮರಿಗಳನ್ನು ಹಾಕುತ್ತವೆ. ಹುಟ್ಟಿದಾಗ ಮರಿ ಪ್ಯೂಮಗಳು ಕುರುಡಾಗಿರುತ್ತವೆ. ಚುಕ್ಕೆ ಇರುವ ತುಪ್ಪಳು ಮತ್ತು ಸುರುಳಿ ಸುತ್ತಿಕೊಂಡಿರುವ ಬಾಲ ಇರುತ್ತದೆ. ಮರಿಗಳು ಈ ಹಂತದಲ್ಲಿ ಆಟದಲ್ಲಿ ನಿರತವಾಗಿರುತ್ತವೆ. ಎರಡು ತಿಂಗಳುಗಳಲ್ಲಿ ಹೆಣ್ಣು ಪ್ರಾಣಿಗಳು ಬೇಟೆಗೆ ಹೊರಟಾಗ, ಅವನ್ನು ಹಿಂಬಾಲಿಸುತ್ತವೆ. ಲೈಂಗಿಕ ಪರಿಪಕ್ವತೆಗೆ ಎರಡರಿಂದ ಮೂರು ವರ್ಷಗಳು ಬೇಕು. ಇದರ ಜೀವಿತಾವಧಿ 18 ವರ್ಷಗಳು. (ಎಸ್.ಆರ್.ಎಸ್.)

**ಪ್ರಕಾಶಾವಧಿ ಪ್ರಭಾವ:** ಬೆಳಕು ಮತ್ತು ಕತ್ತಲೆಯ ದೈನಿಕ, ಶ್ರಾಯಿಕ ಅಥವಾ ವಾರ್ಷಿಕ ಅವಧಿಯ ಬದಲಾವಣೆಗಳಿಗೆ ಯಾವುದೇ ಜೀವಿ ತೋರುವ ಕ್ರಿಯಾಪೂರ್ಣ ಅಥವಾ ವರ್ತನಾ ಪ್ರತಿಸ್ಪಂದನ (ಫೋಟೋಪೀರಿಯಾಡಿಸಮ್); ಪ್ರಕಾಶಾವಧಿ ಪ್ರಭಾವದ ಸಾಮಾನ್ಯ ಉದಾಹರಣೆಗಳೆಂದರೆ ಸಸ್ಯಗಳ ಹೂಬಿಡುವಿಕೆ, ಪ್ರಾಣಿಗಳ ಸಂಭೋಗ, ಹಕ್ಕಿಗಳ ವಲಸೆ. ಇಂಥ ಕ್ರಿಯೆಗಳು ಆನುವಂಶಿಕವಾಗಿ ನಿರ್ಧರಿತವಾಗಿದ್ದರೂ ಉಷ್ಣತೆ, ಆಹಾರ ಪೋಷಣೆ ಹಾಗೂ ಪರಿಸರದ ಇತರ ಅಂಶಗಳೂ ಇವುಗಳ ಮೇಲೆ ಪ್ರಭಾವ ಬೀರುತ್ತವೆ.

ಪ್ರಕಾಶಾವಧಿ ಪ್ರಭಾವ ವಿದ್ಯಮಾನ ಮೊದಲು ಗಮನಕ್ಕೆ ಬಂದದ್ದು ೧೯೨೦ರಲ್ಲಿ. ಕೆಲವು ಸಸ್ಯಗಳಲ್ಲಿ ಹೂ ಬಿಡುವಿಕೆಯನ್ನು ಬೆಳಕಿನ ದೈನಿಕ ಅವಧಿ ನಿಯಂತ್ರಿಸುತ್ತದೆ ಎನ್ನುವುದು ಪ್ರಯೋಗದ ಮೂಲಕ ಸ್ಪಷ್ಟವಾಯಿತು. ಹೂ ಬಿಡುವಿಕೆಗೆ ಅನುಕೂಲವಾದ ಹಗಲಿನ ಅವಧಿಯ ಆಧಾರದ ಮೇಲೆ ಮೂರು ಬಗೆಯ ಸಸ್ಯಗಳಿವೆ ಎಂದು ಪತ್ತೆ ಹಚ್ಚಲಾಗಿದೆ. ಕಿರು ಹಗಲ ಸಸ್ಯಗಳು ಹಗಲಿನ ಅವಧಿ ಉದ್ದವಾದರೆ ಹೂ ಬಿಡುವುದಿಲ್ಲ. ನೀಳ ಹಗಲ ಸಸ್ಯಗಳು ಹಗಲಿನ ಅವಧಿ ನಿರ್ದಿಷ್ಟವಾದುದಕ್ಕಿಂತ ಉದ್ದವಾಗದಿದ್ದರೆ ಹೂ ಬಿಡುವುದಿಲ್ಲ. ಅನಿರ್ದಿಷ್ಟ ಸಸ್ಯಗಳು ಹಗಲಿನ ಅವಧಿ ಎಂತೇ ಇರಲಿ ಹೂ ಬಿಡುತ್ತವೆ. ಆವಧಿಕ ಹಗಲಿನ ಉದ್ದ ಸಸ್ಯದಿಂದ ಸಸ್ಯಕ್ಕೆ ಪ್ರಭೇದದಿಂದ ಪ್ರಭೇದಕ್ಕೆ ಭಿನ್ನವಾಗುತ್ತವೆ.

ಪ್ರಾಣಿಗಳಲ್ಲಿಯ ಅತ್ಯಂತ ಸ್ಪಷ್ಟ ಗೋಚರ ಚಟುವಟಿಕೆಗಳು ವರ್ಷದ ಕೆಲವು ಋತುಗಳನ್ನು ಅನುಸರಿಸುತ್ತವೆ. ಹಕ್ಕಿಗಳ ವಲಸೆ, ಪ್ರಜನನ. ರೆಕ್ಕೆ ಪುಕ್ಕಗಳಲ್ಲಿನ ಬದಲಾವಣೆ ಇತ್ಯಾದಿ ಚಟುವಟಿಕೆಗಳು ಪ್ರತಿವರ್ಷ ನಿರ್ದಿಷ್ಟ ಕಾಲದಲ್ಲಿ ಅತ್ಯಂತ ನಿಯತವಾಗಿ ನಡೆಯುತ್ತವೆ. ಪ್ರಾಣಿಗಳನ್ನು ಸೆರೆ ಹಿಡಿದು ಹಗಲಿನ ಉದ್ದದಲ್ಲಿ ಕೃತಕವಾಗಿ ಏರಿಳಿತಗಳನ್ನು ಮಾಡಿದರೆ ವಲಸೆ, ಸಂತಾನೋತ್ಪತ್ತಿ ಮತ್ತಿತರ ಚಟುವಟಿಕೆಗಳು ಯಾವುದೇ ಋತುವಿನಲ್ಲಿಯೂ ನಡೆಯುವಂತೆ ಮಾಡಬಹುದು.

ಸಾಮಾನ್ಯವಾಗಿ ಬೇಸಗೆಯಲ್ಲಿ ಹಕ್ಕಿಗಳು ಉತ್ತರಾಭಿಮುಖವಾಗಿ ವಲಸೆ ಹೋಗುವ ಮುನ್ನ ಅವುಗಳಲ್ಲಿ ಕೆಲವು ದೈಹಿಕ ಬದಲಾವಣೆಗಳಾಗುತ್ತವೆ. ಜನನಾಂಗಗಳ ಉತ್ತೇಜಿತ ಚಟುವಟಿಕೆ, ದೇಹದಲ್ಲಿ ಕೊಬ್ಬು ಸಂಗ್ರಹ ಇತ್ಯಾದಿ. ಹಗಲಿನ ಅವಧಿಯನ್ನು ಕೃತಕವಾಗಿ ಹೆಚ್ಚಿಸುವುದರ ಮೂಲಕ ಪ್ರಾಯೋಗಿಕವಾಗಿ ಈ ಬದಲಾವಣೆಗಳನ್ನು ಉಂಟು ಮಾಡಿದರೆ ಹಕ್ಕಿಗಳು ಚಳಿಗಾಲದಲ್ಲಿಯೇ ವಲಸೆ ಹೊರಟುಬಿಡುತ್ತವೆ. ದೈಹಿಕ ಬದಲಾವಣೆಗಳ ಪ್ರಮಾಣ ದಿನವೂ ಪಡೆಯುವ ಬೆಳಕಿನ ಪ್ರಮಾಣವನ್ನು ಅವಲಂಬಿಸಿದೆ ಎಂಬುದು ಸ್ಪಷ್ಟ. ದಿನಕ್ಕೆ ೯ ಗಂಟೆಗಳ ಬೆಳಕಿದ್ದರೂ ಸಾಕು.

ಬಹುಪಾಲು ಪಕ್ಷಿ, ಸ್ತನಿ ಹಾಗೂ ಇತರ ಕಶೇರುಕಗಳಲ್ಲಿ ಸಂಭೋಗ ಕ್ರಿಯೆ ಋತುವಿಗೆ ನಿಯತವಾದದ್ದು. ಪ್ರಾಯೋಗಿಕವಾಗಿ ಹಗಲಿನ ಅವಧಿಯನ್ನು ನಿಯಂತ್ರಣಗೊಳಿಸುವುದರಿಂದ ಯಾವುದೇ ಋತುವಿನಲ್ಲಿ ಪ್ರಜನನ ಚಟುವಟಿಕೆಯನ್ನು ಉಂಟುಮಾಡಬಹುದು. ಪ್ರಾಣಿಗಳ ಕಣ್ಣನ್ನು ಅಥವಾ ಕಣ್ಣಿನ ಸಮೀಪದ ಮಿದುಳು ಭಾಗವನ್ನು ಬೆಳಕು ಪ್ರಚೋದಿಸುತ್ತದೆ. ಈ ಪ್ರಚೋದನೆಯಿಂದ ವಿಶೇಷ ಹಾರ್ಮೋನುಗಳ ಮಿದುಳಿನಿಂದ ಪ್ರವಹಿಸಿ ಪಿಟ್ಯುಟರಿ ಗ್ರಂಥಿಯನ್ನು ತಲುಪಿ, ಪ್ರಜನನಾಂಗಗಳನ್ನು ನಿಯಂತ್ರಿಸುವ ಹಾರ್ಮೋನುಗಳನ್ನು ಅದು ಸ್ರವಿಸುವಂತೆ ಮಾಡುವುವು. ಸಾಮಾನ್ಯವಾಗಿ ಮಳೆಗಾಲದಲ್ಲಿ ಸಂಭೋಗಿಸುವ ಜಿಂಕೆ, ಕುರಿ, ಮೇಕೆ ಮೊದಲಾದ ಪ್ರಾಣಗಳಿಗೆ ಕಡಿಮೆಯಾಗುತ್ತಿರುವ ಹಗಲ ಅವಧಿ ಪರಿಣಾಮಕಾರಿ. ಬೇಸಿಗೆಯಲ್ಲಿ ಸಂಭೋಗಿಸುವ ಪ್ರಾಣಗಳಿಗೆ ದೀರ್ಘ ಹಗಲ ಅವಧಿ ಪರಿಣಾಮಕಾರಿ. ದಕ್ಷಿಣಾರ್ಧಗೋಳದ ಪ್ರಾಣಿಗಳನ್ನು, ಉತ್ತರಾರ್ಧಗೋಳಕ್ಕೆ ಒಯ್ದರೆ ಅವುಗಳ ಸಂಭೋಗದ ಶ್ರಾಯಗಳಲ್ಲಿ ಬದಲಾವಣೆಗಳುಂಟಾಗುತ್ತವೆ.

ಎದ್ದು ಕಾಣುವ ಶ್ರಾಯಿಕ ಬದಲಾವಣೆ ಎಂದರೆ ಕೆಲವು ಬಗೆಯ ಸ್ತನಿ ಹಾಗೂ ಹಕ್ಕಿಗಳಲ್ಲಿ ತುಪ್ಪಳ ಹಾಗೂ ರೆಕ್ಕೆಪುಕ್ಕಗಳಲ್ಲಿನ ಬದಲಾವಣೆ. ಮಳೆಗಾಲದಲ್ಲಿ ಬೆಳ್ಳಗಿರುವ ಪ್ರಾಣಿಗಳು ವಸಂತ ಹಾಗೂ ಬೇಸಗೆ ಕಾಲದಲ್ಲಿ ಕಂದು ವರ್ಣಕ್ಕೆ ತಿರುಗುತ್ತವೆ. ಬೆಳಕಿನ ಪ್ರಾಯೋಗಿಕ ನಿಯಂತ್ರಣದಿಂದ ಯಾವುದೇ ಕಾಲದಲ್ಲಿ ಈ ಪರಿವರ್ತನೆಯನ್ನು ಉಂಟುಮಾಡಬಹುದು.

ಹಕ್ಕಿಗಳಲ್ಲಿ ವಾರ್ಷಿಕ ಪುಕ್ಕ ಉದುರುವಿಕೆ, ಕುರಿಗಳಲ್ಲಿ ತುಪ್ಪಳ ಬೆಳ್‌ವಣಿಗೆ ಮತ್ತು ಮಿಂಕ್ ಹಾಗೂ ಫೆರೆಟ್ ಪ್ರಾಣಿಗಳಲ್ಲಿ ಚಳಿಗಾಲದ ಹೊರ ಚರ್ಮದ ಬೆಳ್‌ವಣಿಗೆ ಮೊದಲಾದುವುಗಳ ಮೇಲೆ ಕೂಡ ಹಗಲಿನ ಅವಧಿ ಪ್ರಭಾವ ಬೀರುತ್ತದೆ.

ಕೆಲವು ಜಾತಿಯ ಏಫಿಡ್ (ಗಿಡಹೇನು) ಗಳಲ್ಲಿ ರೆಕ್ಕೆ ಇರುವ ಪ್ರಾಣಿಗಳು ಹುಟ್ಟುವುದು ಸಾಮಾನ್ಯವಾಗಿ ಶರತ್ಕಾಲದಲ್ಲಿ. ಅಂದರೆ ಇದಕ್ಕೆ ೧೨ ರಿಂದ ೧೪ ಗಂಟೆಗಳ ವರೆಗಿನ ಸತತ ಕತ್ತಲೆಯ ಅವಧಿ ಅಗತ್ಯವಾಗಿ ಬೇಕಾಗುತ್ತದೆ. ಇನ್ನು ಕೆಲವು ಕೀಟಗಳಲ್ಲಿ ಲೈಂಗಿಕ ರೀತಿಯ ಪ್ರಜನನ ಕ್ರಿಯೆಯಲ್ಲಿ ತೊಡಗುವ ಕೀಟಗಳ ಉತ್ಪತ್ತಿ ಸಾಮಾನ್ಯವಾಗಿ ಶರತ್ಕಾಲದಲ್ಲಿ ಆಗುತ್ತವೆ. ಹಗಲಿನ ಅವಧಿಯನ್ನು ಕಡಿಮೆ ಮಾಡುವುದರ ಮೂಲಕ ಈ ಬಗೆಯ ಕೀಟಗಳನ್ನು ಯಾವುದೇ ಕಾಲದಲ್ಲಿ ಪಡೆಯಬಹುದು.

ಪ್ರಕಾಶಾವಧಿ ಪ್ರಭಾವದ ಜ್ಞಾನವನ್ನು ಬಳಸಿಕೊಂಡು ತಾಂತ್ರಿಕವಾಗಿ ಲಾಭ ಪಡೆಯುತ್ತಿರುವುದು ಕೋಳಿ ಸಾಕಣೆ ಕ್ಷೇತ್ರದಲ್ಲಿ. ಏಕೆಂದರೆ ಹಗಲಿನ ಬೆಳಕಿನ ಅವಧಿ ಕೋಳಿಯ ದೇಹತೂಕ, ಮೊಟ್ಟೆ ಇಡುವಿಕೆ ಹಾಗೂ ವೀರ್ಯೋತ್ಪತ್ತಿಯ ಮೇಲೆ ಪರಿಣಾಮ ಬೀರುತ್ತದೆ. ***

**ಪ್ರಜನನ:** ಇದು ಜೀವಿಗಳ ಪ್ರಾಥಮಿಕ ಗುಣ (ರಿಪ್ರೊಡಕ್ಷನ್). ಪ್ರಜನನದಿಂದ ಪ್ರಾಣಿಗಳು, ಸಸ್ಯಗಳು ಹಾಗೂ ಇತರ ಜೀವಾಣುಗಳು ಭೂಮಿಯ ಮೇಲೆ ಇನ್ನೂ ಅಸ್ತಿತ್ವದಲ್ಲಿವೆ. ಜೀವಿಗಳು ನಿರ್ಜೀವಿಗಳಿಗಿಂತ ಭಿನ್ನವಾಗಿರುವುದಕ್ಕೆ ಪ್ರಜನನ ಕಾರಣ. ನಿರ್ಜೀವಿಗಳಲ್ಲಿ ಪ್ರಜನನ ಕ್ರಿಯೆ ಇಲ್ಲ. ಪ್ರಜನನ ಕ್ರಿಯೆಯಿಂದ ಉದ್ಭವವಾಗುವ ಸಂತಾನಗಳು ಜನಿಸುವಾಗ ಚಿಕ್ಕವಾಗಿದ್ದರೂ, ನಂತರ ಬೆಳೆದು ಪ್ರೌಢ ಜೀವಿಯಾಗಿ ಪಿತೃಗಳ ಆಕಾರವನ್ನೇ ತಳೆಯುತ್ತವೆ.

ಪ್ರಾಣಿಗಳಲ್ಲಿ ಪ್ರಜನನ: ವೈರಸ್ಸು, ಬ್ಯಾಕ್ಟೀರಿಯ ಮತ್ತು ಏಕಕೋಶಜೀವಿಗಳಲ್ಲಿ ಬೆಳ್‌ವಣಿಗೆಯು ಕೇವಲ ಕೋಶಗಳಿಗೆ ಸೀಮಿತ. ಕೋಶಗಳು ಬೆಳೆದ ನಂತರ ವಿಭಾಗವಾಗುತ್ತವೆ. ಇಂಥ ಜೀವಿಗಳಲ್ಲಿ ಕೋಶವಿಭಜನೆಯೇ ಪ್ರಜನನ. ಈ ಪ್ರಾಣಿಗಳ ವಿಭಜನೆಯಲ್ಲಿ ವಿವಿಧ ಬಗೆಗಳಿವೆ. ಕೆಲವು ಏಕಕೋಶ ಜೀವಿಗಳು ಬಹುಕೋಶ ಜೀವಿಗಳಷ್ಟೇ ಜಟಿಲವಾದ ಜೀವನಚಕ್ರವನ್ನು ಪಡೆದಿವೆ. ಇಂಥ ಜೀವಿಗಳಲ್ಲಿ ಜೀವನಚಕ್ರದ ಮಧ್ಯೆ ಲಾರ್ವ ಅಥವಾ ಡಿಂಬ ಹಂತ ಇರುತ್ತದೆ. ಲಾರ್ವ ಪ್ರೌಢ ಜೀವಿಗಿಂತ ಸಂಪೂರ್ಣ ಭಿನ್ನವಾಗಿದ್ದು, ರೂಪಾಂತರಗೊಂಡ ನಂತರ ಪ್ರೌಢ ಅವಸ್ಥೆಯನ್ನು ತಲುಪುತ್ತದೆ.

ಸಾಮಾನ್ಯ ಜೀವನಚಕ್ರವನ್ನು ಹೊಂದಿರುವ ಪ್ರಾಣಿಗಳಲ್ಲಿ ಗಂಡು ಮತ್ತು ಹೆಣ್ಣು ಲಿಂಗಗಳಿವೆ. ಇವು ನಿರ್ದಿಷ್ಟ ವಯೋಮಾನವನ್ನು ತಲಪಿದಾಗ ಪ್ರಬುದ್ಧವಾಗುತ್ತವೆ. ಹೀಗೆ ಪ್ರಬುದ್ಧತೆಯನ್ನು ಪಡೆದಾಗ ಮಾತ್ರ ಇವು ಪ್ರಜನನವನ್ನು ಆರಂಭಿಸುತ್ತವೆ. ಕೆಲವು ಪ್ರಾಣಿಗಳಲ್ಲಿ ಲಿಂಗಭೇದವಿದೆ. ಅಂದರೆ, ಯಾವುದೇ ಪ್ರಾಣಿ ಗಂಡಾಗಿರಬಹುದು ಅಥವಾ

ಹೆಣ್ಣಾಗಿರಬಹುದು. ಇವಕ್ಕೆ ಏಕಲಿಂಗಿಗಳೆಂದು (ಯೂನಿಸೆಕ್ಸುಯಲ್) ಹೆಸರು. ಕೆಲವು ಪ್ರಾಣಿಗಳಲ್ಲಿ ಎರಡು ಲಿಂಗಗಳು ಒಂದೇ ಪ್ರಾಣಿಯಲ್ಲೇ ಇರುತ್ತವೆ. ಇವು ದ್ವಿಲಿಂಗಿಗಳು



ಬ್ಯಾಕ್ಟೀರಿಯದಲ್ಲಿ ದ್ವಿವಿದಳನ

(ಬೈಸೆಕ್ಸುಯಲ್). ಈ ಎರಡೂ ಗುಂಪುಗಳಲ್ಲಿ ಪ್ರಜನನಾಂಗಗಳ ಮುಖ್ಯ ಭಾಗ ವೃಷಣ ಮತ್ತು ಅಂಡಾಶಯ. ಇವನ್ನು ಪ್ರಜನನ ಗ್ರಂಥಿಗಳು ಎನ್ನುವರು. ವೃಷಣದಿಂದ ವೀರ್ಯಾಣು ಮತ್ತು ಅಂಡಾಶಯದಿಂದ ಅಂಡಾಣುಗಳು ಉತ್ಪತ್ತಿಯಾಗುತ್ತವೆ. ವೀರ್ಯಾಣು ಮತ್ತು ಅಂಡಾಣುಗಳ ಮೂಲಕ ಪಿತೃಗಳಿಂದ ಅವುಗಳ ಸಂತಾನಕ್ಕೆ ಆನುವಂಶೀಯ ಗುಣಗಳು ಬರುತ್ತವೆ. ವೀರ್ಯಾಣು ಮತ್ತು ಅಂಡಾಣುಗಳು ಸಂಯೋಗಗೊಂಡು (ನಿಷೇಚಿತಗೊಂಡು) ಯುಗ್ಮಜ (ಜೈಗೋಟ್) ಉದ್ಭವಿಸುತ್ತದೆ. ಇದು ವೇಗವಾಗಿ ಹಲವು ಮಾರ್ಪಾಡುಗಳನ್ನು ಹೊಂದುತ್ತ, ಹಲವು ಬಾರಿ ವಿಭಾಗವಾಗಿ ಕೊನೆಗೆ ಕೋಶಗಳು ಟೊಳ್ಳು ಚೆಂಡಿನಂತಾಗುತ್ತವೆ. ಈ ಹಂತಕ್ಕೆ ಬ್ಲಾಸ್ಟುಲ ಎಂದು ಹೆಸರು. ಈ ಬೆಳವಣಿಗೆ ತಾಯಿಯ ಗರ್ಭಾಶಯದಲ್ಲಿ ಅಥವಾ ತಾಯಿಯ ಶರೀರದ ಹೊರಗೆ ನಡೆಯಬಹುದು. ತಾಯಿಯ ಶರೀರದೊಳಗೆ ನಡೆಯುವ ಬೆಳವಣಿಗೆಯಲ್ಲಿ ಬ್ಲಾಸ್ಟುಲ ಗರ್ಭಾಶಯಕ್ಕೆ (ಯೂಟೆರಸ್) ಬರುತ್ತದೆ. ಮುಂದಿನ ಬೆಳವಣಿಗೆ ಗರ್ಭಾಶಯದಲ್ಲಿ ನಡೆಯುತ್ತದೆ. ಸ್ತನಿಗಳಲ್ಲಿ ಜರುಗುವ ಈ ಹಂತಕ್ಕೆ ಗರ್ಭಧಾರಣೆ (ಇಂಪ್ಲಾಂಟೇಷನ್) ಎಂದು ಹೆಸರು. ಮುಂದಿನ ಹಂತ ಗ್ಯಾಸ್ಟ್ರುಲೀಕರಣ, ಈ ಹಂತದಲ್ಲಿ ಒಂದು ಪದರದ ಬ್ಲಾಸ್ಟುಲ, ಎರಡು ಪದರಗಳುಳ್ಳ ಕೋಶಗಳ ಚೆಂಡಿನಂತಾಗುತ್ತದೆ. ನಂತರ ೩ ಪದರಗಳು ರೂಪುಗೊಳ್ಳುವುವು. ಈ ಹಂತದೊಡನೆ ಗ್ಯಾಸ್ಟ್ರುಲೀಕರಣ ಮುಕ್ತಾಯವಾಗುತ್ತದೆ. ನಂತರ ವಿವಿಧ ಅಂಗಾಂಶಗಳು, ಪ್ರಜೀವಿ (ಪ್ರಿಮಿಟಿವ್) ಅಂಗಗಳು, ಅಂಗವ್ಯೂಹಗಳು ರೂಪುಗೊಳ್ಳುತ್ತವೆ. ಸಂಪೂರ್ಣ ಬೆಳವಣಿಗೆ ಹೊಂದಿದ ತರುವಾಯ, ತಾಯಿಯ ಗರ್ಭದಿಂದ ಹೊರಬೀಳುತ್ತದೆ. ಮೊಟ್ಟೆಯಿಡುವ ಪ್ರಾಣಿಗಳಲ್ಲಿ ಈ ಎಲ್ಲ ಬೆಳವಣಿಗೆ ಮೊಟ್ಟೆಯ ಕವಚಗಳ ಒಳಭಾಗದಲ್ಲಿ ನಡೆದು ಮರಿ ಹೊರಬರುತ್ತದೆ. ರೂಪಾಂತರವನ್ನು ತೋರುವ ಪ್ರಾಣಿಗಳಲ್ಲಿ ಪಿತೃಗಳಿಗಿಂತ ಸಂಪೂರ್ಣ ಬೇರೆಯಾಗಿರುವ ಲಾರ್ವ ಹೊರಬರುತ್ತದೆ. ನೇರವಾಗಿ ಮರಿ ಹಾಕುವ ಪ್ರಾಣಿಗಳಲ್ಲಿ ಪ್ರಸವವಾಗುತ್ತದೆ. ಈ ಮರಿ ಬಾಲ್ಯ, ತಾರುಣ್ಯ, ಪ್ರೌಢಾವಸ್ಥೆ ಹಾಗೂ ಮುಪ್ಪು ಇವೆಲ್ಲ ಹಂತಗಳನ್ನು ಪೂರೈಸಿ ಸಾವಿಗೀಡಾಗುತ್ತದೆ. ಆದರೆ, ಈ ಮಧ್ಯೆ ಪ್ರಜನನ ಕ್ರಿಯೆಯಿಂದ ಈ ಪ್ರಾಣಿ ತನ್ನ ಅನೇಕ ನಕಲುಗಳನ್ನು ಭೂಮಿಯ ಮೇಲೆ ಬಿಟ್ಟು ಹೋಗಿರುತ್ತದೆ.

ಪ್ರೊಟೊಥೀರಿಯ ಗುಂಪನ್ನುಳಿದು ಎಲ್ಲ ಸ್ತನಿಗಳು, ಮಾನವ ಹಾಗೂ ಇನ್ನು ಕೆಲವು ಪ್ರಾಣಿಗಳಲ್ಲಿ ನಿಷೇಚಿತ ಮೊಟ್ಟೆ ಹಾಗೂ ಮರಿಗಳು ಸಂಪೂರ್ಣವಾಗಿ ಬೆಳೆಯುವವರೆಗೂ ತಾಯ ಗರ್ಭದಲ್ಲಿಯೇ ಇರುತ್ತವೆ. ಭ್ರೂಣಾವಸ್ಥೆಯ ಮರಿಗಳಿಗೆ ತಾಯಿಯ ದೇಹದಿಂದಲೇ ಆಹಾರ ಮತ್ತು ಆಕ್ಸಿಜನ್, ಇತರೆ ಪೋಷಕಾಂಶಗಳ ಪೂರೈಕೆಯಾಗುತ್ತದೆ. ಬಾಹ್ಯ ಭ್ರೂಣಪೊರೆ (ಎಕ್ಸ್‌ಟ್ರಾ ಎಂಬ್ರಿಯಾನಿಕ್ ಮೆಂಬ್ರೇನ್) ಮತ್ತು ಜರಾಯುಗಳು (ಪ್ಲಸೆಂಟ) ಆಹಾರ ಪೂರೈಕೆ ಮಾಡುವುದರೊಂದಿಗೆ ಭ್ರೂಣಕ್ಕೆ ಹೊರ ಒತ್ತಡಗಳಿಂದ ಸಂರಕ್ಷಣೆಯನ್ನು ನೀಡುತ್ತವೆ. ಜರಾಯುಗಳು ಕೆಲವು ಬಗೆಯ ಹಾರ್ಮೋನನ್ನೂ ಸಂಶ್ಲೇಷಿಸುತ್ತವೆ.

ತಾಯಿಯ ಗರ್ಭದಿಂದ ಮರಿ ಹೊರಬಂದ ನಂತರ ಕೆಲವು ಪ್ರಭೇದಗಳಲ್ಲಿ ಪಿತೃಗಳಿಂದ ಪೋಷಣೆ ನಡೆಯುತ್ತದೆ. ಇದಕ್ಕಾಗಿ ಕೆಲವು ಪ್ರಾಣಿಗಳಲ್ಲಿ ಸಂತಾನ ಸಂಚಿಗಳು (ಬ್ರೂಡ್ ಪೌಚಸ್) ರಚಿತವಾಗಿರುತ್ತವೆ. ಕೆಲವು ಮೀನುಗಳಲ್ಲಿ (ಉದಾ : ಕಡಲ ಕುದುರೆ), ಕಠಿಣ ಚರ್ಮಿಗಳಲ್ಲಿ, ಕಂಟಕ ಚರ್ಮಿಗಳಲ್ಲಿ ಹಾಗೂ ಮಾರ್ಸ್ಯೂಪಿಯೇಲಿಯಗಳಲ್ಲಿ ಇಂಥ ಸಂತಾನ ಸಂಚಿಗಳಿವೆ. ಕೆಲವು ಪ್ರಾಣಿಗಳಲ್ಲಿ ಪಿತೃ ರಕ್ಷಣಾ ಕ್ರಿಯೆ ಬಹಳ ವಿಸ್ತಾರವಾಗಿದ್ದು, ಮೊಲೆ (ಹಾಲುಣಿಸುವುದು) ಕುಡಿಸುವುದು, ಗುಂಪು ಜೀವನದಂತಹ ಚಟುವಟಿಕೆಗಳಿವೆ. ಮರಿ ಸಂಪೂರ್ಣ ಸ್ವತಂತ್ರ ಜೀವನ ನಡೆಸಲು ಸಿದ್ಧವಾಗುವ ತನಕ ಈ ರಕ್ಷಣೆ ಮುಂದುವರಿಯುತ್ತದೆ. ಮೊಟ್ಟೆ ಇಡುವ ಪ್ರಾಣಿಗಳಲ್ಲಿ ಮೊಟ್ಟೆಗಳ ರಕ್ಷಣೆ ಗೂಡುಗಳನ್ನು ಕಟ್ಟುವುದರ ಮೂಲಕ ಬೆಳೆಯುವ ಮರಿಗಳಿಗೆ ಪೋಷಣೆ ನಡೆಯುತ್ತದೆ.

ಕೆಳಹಂತದ ಅಕಶೇರುಕಗಳ ಹಲವು ಪ್ರಭೇಧಗಳಲ್ಲಿ ಜೀವನಚಕ್ರದ ಮಧ್ಯೆ ನಿರ್ಲಿಂಗ ಪ್ರಜನನ ನಡೆಯುತ್ತದೆ. ಕೆಲವು ಏಕಕೋಶ ಜೀವಿಗಳಲ್ಲಿ, ಸ್ಪಂಜು ಪ್ರಾಣಿಗಳಲ್ಲಿ, ಕುಟುಕು ಕಣವಂತಗಳಲ್ಲಿ ಸಂಖ್ಯಾಭಿವೃದ್ಧಿಗೆ ನಿರ್ಲಿಂಗ ಪ್ರಜನನ ಪ್ರಮುಖ ಪಾತ್ರವಹಿಸಿದೆ. ಲೈಂಗಿಕ ಪ್ರಜನನ ವೈವಿಧ್ಯವನ್ನು ಉಂಟುಮಾಡಲು ಮಾತ್ರ ಸಹಾಯಕವಾಗಿದೆ. ಕೆಲವು ಪ್ರಭೇದಗಳಲ್ಲಿ ನಿರ್ಲಿಂಗ ಪ್ರಜನನ ಮತ್ತು ಲೈಂಗಿಕ ಪ್ರಜನನ ಎರಡೂ ಇದ್ದು, ಒಂದು ಪೀಳಿಗೆ ಲಿಂಗ ರೀತಿಯಲ್ಲಿ, ಇನ್ನೊಂದು ಪೀಳಿಗೆ ನಿರ್ಲಿಂಗ ರೀತಿಯಲ್ಲೂ ಪ್ರಜನನವನ್ನು ನಡೆಸುವುವು. ಹೀಗೆ ಪೀಳಿಗೆಗಳ ಪರ್ಯಾಯ (ಆಲ್ಟರ್ನೇಷನ್ ಆಫ್ ಜನರೇಷನ್ಸ್), ಈ ಪ್ರಾಣಿಗಳಲ್ಲಿ ಸಾಮಾನ್ಯ.

ಅಕಶೇರುಕಗಳಲ್ಲಿ ಮತ್ತು ಕಶೇರುಕಗಳ ಕೆಲವು ಗುಂಪುಗಳಲ್ಲಿ ಹಾಗೂ ಉಭಯವಾಸಿಗಳ ಜೀವನ ಚಕ್ರದಲ್ಲಿ ಲಾರ್ವ ಹಂತವಿದೆ. ಮೊಟ್ಟೆ ಮತ್ತು ಪ್ರೌಢ ಜೀವಿಯ ಮಧ್ಯದ ಹಂತದಲ್ಲಿ ಸ್ವತಂತ್ರ ಜೀವನ ನಡೆಸುವ ಜೀವಿಯೇ ಲಾರ್ವ. ಲಾರ್ವ ಹಂತವನ್ನು ಪ್ರದರ್ಶಿಸುವ ಪ್ರಾಣಿಗಳಲ್ಲಿ ಮರಿಗಳಿಗೆ ಪಿತೃಗಳಿಂದ ದೊರೆಯುವ ರಕ್ಷಣೆ ಅತಿ ಕಡಿಮೆ ಅಥವಾ ಇಲ್ಲ. ಈ ಪ್ರಾಣಿಗಳು ಅಸಂಖ್ಯಾತ ಯುಗ್ಮಜಗಳನ್ನು ಉತ್ಪತ್ತಿ ಮಾಡಿ ಅವನ್ನು ಪರಿಸರಕ್ಕೆ ಬಿಡುತ್ತವೆ. ಇವು ಲಾರ್ವಗಳಾಗಿ ರೂಪುಗೊಂಡು, ಸಾಕಷ್ಟು ತಿಂದು, ಬೆಳೆದು ನಂತರ ಪ್ರೌಢಾವಸ್ಥೆಗೆ ರೂಪಾಂತರಗೊಳ್ಳುವುವು. ಲಾರ್ವಗಳು ಜಲವಾಸಿ ಜೀವಿಗಳಲ್ಲಿ ಕಂಡುಬರುವುದಾದರೂ, ಭೂವಾಸಿ ಕೀಟಗಳಲ್ಲೂ ಇವೆ. ಕೆಲವು ಭೂವಾಸಿ ಪ್ರಭೇದಗಳ ಲಾರ್ವಗಳು ಜಲವಾಸಿಗಳಾಗಿವೆ. ಸಂಧಿಪದಿಗಳ ದೇಹದ ಸುತ್ತ ಗಟ್ಟಿಯಾದ ಹೊರಕವಚ ಅಥವಾ ಬಾಹ್ಯ ಕಂಕಾಲ ಇದೆ. ಇದು ಕಳಚಿಬಿದ್ದು ಮುಂದಿನ ಬೆಳವಣಿಗೆಗೆ ಅವಕಾಶವನ್ನು ಉಂಟುಮಾಡಿಕೊಡುತ್ತದೆ. ಲಾರ್ವದ ಪ್ರತಿ ಹಂತದ ಮಧ್ಯೆ ಒಂದು ಪೊರೆಯುರ್ಚು (ಮೋಲ್ಟಿಂಗ್) ಇದೆ. ಆದರೆ, ಕೀಟಗಳಲ್ಲಿ ವಿಭಿನ್ನವಾಗಿದೆ. ಚಟುವಟಿಕೆಯಿಂದ ಕೂಡಿದ ಲಾರ್ವಗಳು ಮೊಟ್ಟೆಯಿಂದ ಹೊರಬಂದನಂತರ ಜಡ ಪ್ಯೂಪ ಹಂತ ತಲುಪಿ, ಅನಂತರ ರೆಕ್ಕೆಗಳನ್ನೂ, ಹಾರಾಡುವ ಸಾಮರ್ಥ್ಯವನ್ನೂ ಪಡೆದಿರುವ ಪ್ರೌಢ ಕೀಟಗಳಾಗಿ ರೂಪುಗೊಳ್ಳುವುವು.

ಪರತಂತ್ರ ಜೀವನ ನಡೆಸುವ ಕೆಲವು ಚಪ್ಪಟೆ ಹುಳುಗಳಲ್ಲಿ ಹಲವಾರು ಲಾರ್ವ ಹಂತಗಳಿವೆ. ಪ್ರತಿ ಹಂತದಲ್ಲೂ ಲಾರ್ವಕ್ಕೆ ವಿಶಿಷ್ಟ ಆತಿಥೇಯ ಜೀವಿ ಇರುತ್ತದೆ. ಕೆಲವು ಲಾರ್ವಗಳಂತೂ ನಿರ್ಲಿಂಗ ರೀತಿಯ ಪುನರುತ್ಪತ್ತಿ ಮಾಡುತ್ತವೆ. ಈ ವಿದ್ಯಮಾನಕ್ಕೆ ಬಾಲ್ಯಪ್ರಜನನ (ಪೀಡೋಜೆನೆಸಿಸ್) ಎಂದು ಹೆಸರು. ಚಪ್ಪಟೆ ಹುಳುಗಳ ಕೆಲವು ಪ್ರಭೇದಗಳಲ್ಲಿ ಬಾಲ್ಯ ಪ್ರಜನನಕ್ಕೆ ಪ್ರೌಢ ಪ್ರಜನನದಷ್ಟೆ ಮಹತ್ತ್ವವಿದೆ. ಲಾರ್ವದ ಎಷ್ಟೇ ಹಂತಗಳಿರಲಿ ಜೀವನ ಚಕ್ರ ಮಾತ್ರ ಪ್ರೌಢ ಜೀವಿಯಿಂದ ಮೊಟ್ಟೆ, ಮೊಟ್ಟೆಯಿಂದ ಲಾರ್ವ, ಲಾರ್ವದಿಂದ ಪ್ರೌಢ ಜೀವಿಯ ಜಾಡಿನಲ್ಲಿಯೇ ನಡೆಯುತ್ತದೆ.

ಹಲವು ಪ್ರಾಣಿಗಳಲ್ಲಿ ಎರಡೂ ಲಿಂಗಗಳು ಒಂದೇ ಜೀವಿಯಲ್ಲಿರುತ್ತವೆ. ಇವು ದ್ವಿಲಿಂಗಿಗಳು. ಚಪ್ಪಟೆ ಹುಳುಗಳಲ್ಲಿ, ಮೃದ್ವಂಗಿಗಳಲ್ಲಿ ಹಾಗೂ ವಲಯವಂತಗಳಲ್ಲಿ ದ್ವಿಲಿಂಗಿಗಳು ಸಾಮಾನ್ಯ. ಕಶೇರುಕಗಳಲ್ಲಿ ದ್ವಿಲಿಂಗಿಗಳು ಕಡಿಮೆ. ಪ್ರತಿ ಪ್ರಾಣಿಯಲ್ಲಿ ನಿಷ್ಕ್ರಿಯ ಲಿಂಗಾಂಗಗಳು ಇದ್ದು, ಯಾವುದೇ ಲಿಂಗಾಂಗ, ಚಟುವಟಿಕೆ ರಹಿತವಾದರೆ, ಅಪಭ್ರಷ್ಟಗೊಂಡರೆ ಇನ್ನೊಂದು ಲಿಂಗಾಂಗ ಪ್ರಬಲವಾಗಿ ಬೆಳೆದು ಆ ಜೀವಿಯ ಲಿಂಗಬದಲಾವಣೆಯಾಗುವ ಸಾಧ್ಯತೆ ಇದೆ. ಇತ್ತೀಚಿನ ದಿನಗಳಲ್ಲಿ ಮಾನವ ಕೂಡ ಲಿಂಗ ಬದಲಾವಣೆಯಾದ ಅಥವಾ ಕೃತಕವಾಗಿ ಬದಲಾವಣೆ ಮಾಡಿಸಿಕೊಂಡ ಘಟನೆಗಳು ಸಾಕಷ್ಟಿವೆ.

ದ್ವಿಲಿಂಗಿಗಳು ವೀರ್ಯಾಣು ಹಾಗೂ ಅಂಡಾಣುಗಳೆರಡನ್ನೂ ಉತ್ಪತ್ತಿ ಮಾಡುತ್ತವೆ. ಆದರೆ, ಇವುಗಳಲ್ಲಿ ಸ್ವಯಂ ನಿಷೇಚನೆ ನಡೆಯದು. ವೀರ್ಯಾಣು ಅಥವಾ ಅಂಡಾಣುಗಳು ಪ್ರಬುದ್ಧವಾಗುವ ಕಾಲ ವಿಭಿನ್ನವಾಗಿರುವುದರಿಂದ ಅಥವಾ ದೇಹದಲ್ಲಿ ಲಿಂಗಾಂಗಗಳ ಸ್ಥಳಾಂತರದಿಂದ ಸಾಮಾನ್ಯವಾಗಿ ಅನ್ಯ ನಿಷೇಚನೆಯಾಗುವುದೇ ಹೆಚ್ಚು. ಬಹಳ ಪ್ರಭೇದಗಳಲ್ಲಿ ಮೊದಲು ವೀರ್ಯಾಣಗಳೂ ನಂತರ ಅಂಡಾಣುಗಳೂ ಉತ್ಪತ್ತಿಯಾಗುತ್ತವೆ. ಉದಾ: ಎರೆಹುಳು.

ನಿರ್ಲಿಂಗ ಪ್ರಜನನ : ನಿರ್ಲಿಂಗ ಪ್ರಜನನದಲ್ಲಿ ಜನನಗ್ರಂಥಿಗಳು ರೂಪುಗೊಂಡಿರುವುದಿಲ್ಲ ಅಥವಾ ಜನನ ಗ್ರಂಥಿಗಳು ಪಾಲ್ಗೊಳ್ಳುವುದಿಲ್ಲ. ವೀರ್ಯಾಣು ಮತ್ತು ಅಂಡಾಣುಗಳ ಸಂಯೋಗವಾಗುವುದಿಲ್ಲ. ನಿಷೇಚನವಿಲ್ಲದೆ ಹಾಗೂ ಸಂಖ್ಯಾಕ್ಷೀಣ ವಿಭಜನೆಯಿಲ್ಲದೆ

(ಮಿಯಾಸಿಸ್) ನೇರವಾಗಿ ಕೋಶವಿಭಜನೆ ನಡೆದು ಪುನರುತ್ಪತ್ತಿಯಾಗುತ್ತದೆ. ಕೆಲವು ಏಕಕೋಶ ಜೀವಿಗಳಲ್ಲಿ ನಿರ್ಲಿಂಗ ಪ್ರಜನನವೇ ಪ್ರಮುಖ ಸಾಧನೆ. ಕೆಲವು ಜೀವಿಗಳಲ್ಲಿ ನಿರ್ಲಿಂಗ ಹಾಗೂ ಲಿಂಗ ಪ್ರಜನನ ಎರಡೂ ಇವೆ. ಕೆಲವು ಪ್ರಭೇದಗಳಲ್ಲಿ ನಿರ್ಲಿಂಗ ಹಾಗೂ ಲೈಂಗಿಕ ಪೀಳಿಗೆಗಳ ಪರ್ಯಾಯ ಇದೆ. ಉದಾ: ಎಲ್ಫಿಡಿಯಮ್ ಹಾಗೂ ಮಲೇರಿಯ ರೋಗ ಕಾರುವ ಪ್ಲಾಸ್ಮೋಡಿಯಮ್.

ಏಕಕೋಶ ಜೀವಿಗಳಲ್ಲಿ ನಿರ್ಲಿಂಗ ಪ್ರಜನನ ಕೇವಲ ಕೋಶ ವಿಭಜನೆಗೆ ಮಾತ್ರ ಸೀಮಿತ. ವಿಭಜನೆಯಿಂದ ರೂಪುಗೊಳ್ಳುವ ಮರಿಕೋಶಗಳು ಮರಿ ಪ್ರಾಣಿಗಳಾಗುತ್ತವೆ. ಆಯಾ ಜೀವಿಗಳ ರಚನೆ, ಆಕಾರ ಹಾಗೂ ಅವಶ್ಯಕತೆಗಳಿಗನುಸಾರವಾಗಿ ಕೋಶ ವಿಭಜನೆಯಲ್ಲಿ ಮಾರ್ಪಾಡುಗಳಾಗುತ್ತವೆ. ಕೆಲವು ಪ್ರಭೇದಗಳು ವಿಭಜನೆಗೆ ಮೊದಲು ದೇಹದ ಸುತ್ತ ಗಟ್ಟಿ ಹೊರ ಕವಚವನ್ನು ರಚಿಸಿಕೊಳ್ಳುತ್ತವೆ. ಕವಚ ರಚನೆಯ ಹಂತಕ್ಕೆ ಸಿಸ್ಟ್ ಎಂದು ಹೆಸರು. ಕೆಲವು ಪ್ರಾಣಿಗಳಲ್ಲಿ ಹೊರಕವಚ ರೂಪುಗೊಳ್ಳುವುದು ವಿಭಜನೆಯಾದ ನಂತರ. ಕವಚದೊಳಗಿನ ಕೋಶಿಕೆ ಹಲವಾರು ಸಲ ವಿಭಜನೆಗೊಳಗಾಗಿ ನೂರಾರು ಮರಿಕೋಶಗಳು ಹುಟ್ಟಿ ಕವಚವನ್ನು ಭೇದಿಸಿ ಹೊರಬರುತ್ತವೆ. ಪ್ರತಿ ಮರಿ ಕೋಶ ಪ್ರಬುದ್ಧಕೋಶವಾಗಿ ಬೆಳೆಯುತ್ತದೆ. ಸಿಸ್ಟುಗಳ ಮೂಲಕ ಜೀವಿಯು ಸಂಖ್ಯಾವೃದ್ಧಿಯಾಗುವುದಲ್ಲದೆ ವಾತಾವರಣದ ವೈಪರೀತ್ಯಗಳನ್ನು ತಡೆದುಕೊಳ್ಳಲು ಅನುಕೂಲವಾಗುತ್ತದೆ.

ಬಹುಕೋಶ ಜೀವಿಗಳಲ್ಲಿ ಹಲವಾರು ರೀತಿಯ ನಿರ್ಲಿಂಗ ಪ್ರಜನನವಿದೆ. ಚಲನರಹಿತ ಗುಂಪುಗಳಾದ ಸ್ಪಂಜುಪ್ರಾಣಿಗಳಲ್ಲಿ, ಕುಟುಕುಕಣವಂತಗಳಲ್ಲಿ, ಬ್ರಯೊಜೋವಗಳಲ್ಲಿ, ಕಡಲು ಕಾರಂಜಿಗಳಲ್ಲಿ, ಟೊಂಗೆಗಳು ಅಥವಾ ಅಂಕುರಗಳು ಉದಯಿಸುತ್ತವೆ. ಈ ಟೊಂಗೆ ಅಥವಾ ಅಂಕುರಗಳನ್ನು ಉತ್ಪಾದಿಸುವ ಕೋಶಗಳು ದೇಹದ ಎಲ್ಲ ಭಾಗಗಳಲ್ಲಿ ಹರಡಿಕೊಂಡಿವೆ. ಪ್ರಾಣಿ ದೇಹದ ಯಾವುದೇ ಭಾಗದ ಕೆಲವು ಕೋಶಗಳು ಮಾರ್ಪಾಟಾಗಿ ಟೊಂಗೆ ಅಥವಾ ಅಂಕುರಗಳಾಗುತ್ತವೆ. ಈ ಟೊಂಗೆಗಳು ಅಥವಾ ಅಂಕುರಗಳು ಪಿತೃ ಪ್ರಾಣಿಯಿಂದ ಬೇರ್ಪಟ್ಟು ನಂತರ ಸಂಪೂರ್ಣ ಪ್ರೌಢ ಜೀವಿಯಾಗಿ ಬೆಳೆಯುತ್ತವೆ.

ಚಪ್ಪಟೆ ಹುಳುಗಳಲ್ಲಿ ಮತ್ತು ವಲಯವಂತಗಳಲ್ಲಿ ದೇಹದ ಅಡ್ಡ ವಿಭಜನೆಯ ಮೂಲಕ ನಿರ್ಲಿಂಗ ಪ್ರಜನನ ನಡೆಯುತ್ತದೆ. ಕೆಲವು ಜೀವವಿಜ್ಞಾನಿಗಳ ಪ್ರಕಾರ ಇದು ಪ್ರಜನನವಲ್ಲ. ಕತ್ತರಿಸಿಹೋದ ಭಾಗಗಳ ಪುನರ್ ನಿರ್ಮಾಣ ಮಾತ್ರ. ಆದರೆ, ಈ ಕ್ರಿಯೆಯಿಂದ ಪ್ರಾಣಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುವುದರಿಂದ ಇದನ್ನು ಪ್ರಜನನ ಎಂದು ಕೆಲವು ತಜ್ಞರು ಪರಿಗಣಿಸುತ್ತಾರೆ. ಸರೀಸೃಪಗಳಲ್ಲಿ ಕತ್ತರಿಸಲ್ಪಟ್ಟ ಭಾಗಗಳಷ್ಟೇ ಪುನರುತ್ಪಾದನೆಗೊಳ್ಳುವುವು. ಒಂದು ಪ್ರಾಣಿಯಿಂದ ಕತ್ತರಿಸಲ್ಪಟ್ಟ ಭಾಗಗಳು ಪ್ರಬುದ್ಧ ಜೀವಿಗಳಾಗಿ ಬೆಳೆಯುವುದಿಲ್ಲ. ಈ ಕತ್ತರಿಸುವ ಪ್ರಕ್ರಿಯೆಯನ್ನು ಪ್ರಜನನ ಕ್ರಿಯೆ ಎಂದು ಹೇಳಲು ಸಾಧ್ಯವಿಲ್ಲ. ತುಂಡಾದ ಭಾಗಗಳ ಹಿಂಭಾಗದಲ್ಲಿ ಹೊಸ ಕೋಶಗಳು ರೂಪುಗೊಂಡು ವಿಭೇದನಾ ಪೂರ್ವ ಸ್ಥಿತಿಯಲ್ಲಿರುವುವು. ಇದಕ್ಕೆ 'ಬ್ಲಾಸ್ಟೀಮ' ಎಂದು ಹೆಸರು. ಬ್ಲಾಸ್ಟೀಮ ಕೋಶಗಳು ವಿಭೇದನೆಗೊಂಡು ಕಳೆದುಹೋದ ಭಾಗಗಳು ಪುನರ್‌ರಚಿತವಾಗುತ್ತವೆ.

ಕೆಲವು ಬಹುಕೋಶ ಜೀವಿಗಳಲ್ಲಿ ನಿರ್ಲಿಂಗ ಪ್ರಜನನ ವಾತಾವರಣದ ವೈಪರೀತ್ಯದಿಂದ ರಕ್ಷಿಸಿಕೊಳ್ಳುವ ಸಾಧನವಾಗಿದೆ.

ಉದಾ: ಸ್ಪಂಜು ಪ್ರಾಣಿಗಳ ಜೆಮ್ಯೂಲುಗಳು ಮತ್ತು ಸ್ಟ್ಯಾಟೋಬ್ಲಾಸ್ಟುಗಳಲ್ಲಿ ಗಡುಸಾದ ಹೊರ ಕವಚವಿದ್ದು, ಇದು ಒಳಗಿರುವ ಕೆಲವು ಪ್ರಜನನ ಕೋಶಗಳನ್ನು ವಾತಾವರಣದ ವೈಪರೀತ್ಯದಿಂದ ರಕ್ಷಿಸುತ್ತದೆ. ಈ ಕೋಶಗಳು ಶರೀರದ ವಿವಿಧ ಭಾಗಗಳಿಂದ ಬರುವ ರಕ್ಷಣಾಕೋಶಗಳು. ಇವು ಕೆಲವು ಆಹಾರ ಸಂಗ್ರಾಹಕ ಜಮ್ಯೂಲ್ ಕೋಶಗಳೊಂದಿಗೆ ಕೂಡಿಕೊಂಡು ತಮ್ಮ ಸುತ್ತ ಕವಚವನ್ನು ರಚಿಸಿಕೊಳ್ಳುತ್ತವೆ. ಎರಡು ಪದರಗಳುಳ್ಳ ಈ ಕವಚಗಳ ಮಧ್ಯೆ ಕೆಲವು ಸ್ಪಿಕ್ಯೂಲುಗಳೆಂಬ ವಿಶೇಷ ರಚನೆಗಳಿವೆ. ವಾತಾವರಣದಲ್ಲಿ ಸುಸ್ಥಿತಿಯುಂಟಾದಾಗ ಕವಚ ಧ್ವಂಸಗೊಂಡು ಪ್ರಜನನ ಕೋಶಗಳು ಹೊರಬಂದು ಸ್ಪಂಜುಪ್ರಾಣಿಯಾಗಿ ಬೆಳೆಯುತ್ತದೆ.




ಪ್ರಜನನ ಎರಡು ರೀತಿಯದು. 1. ನಿರ್ಲಿಂಗ ರೀತಿಯ ಪ್ರಜನನ (ಕೋಶಗಳ ನೇರ ವಿಭಜನೆ ಅಥವಾ ಮೈಟೋಸಿಸ್). 2. ಲೈಂಗಿಕ ಪ್ರಜನನ (ಸಂಖ್ಯಾಕ್ಷೀಣ ವಿಭಜನೆ ಅಥವಾ ಮಿಯಾಸಿಸ್ ಹಾಗೂ ಸಂಖ್ಯಾಕ್ಷೀಣ ವಿಭಜನೆಯಿಂದ ಉದ್ಭವಿಸಿದ ಮರಿಕೋಶ ಅಥವಾ ಲಿಂಗಾಣುಗಳ ಸಮ್ಮಿಲನ) ಜೊತೆಗೆ ಬೆಳವಣಿಗೆ ಹಾಗೂ ವಿಭೇದನೆಗಳು ಸೇರಿ ಪ್ರಜನನ ಕ್ರಿಯೆ ಪೂರ್ತಿಯಾಗುತ್ತದೆ.

ನೇರ ವಿಭಜನೆಯಲ್ಲಿ ಕ್ರೊಮೋಸೋಮುಗಳು ಮರಿಕೋಶಗಳಿಗೆ ಸಮವಾಗಿ ಹಂಚಲ್ಪಡುತ್ತವೆ. ವಿಭಜನೆಯ ಮೊದಲು ಡಿಎನ್‌ಎ (ಡೀಆಕ್ಸಿರೈಬೋಸ್ ನ್ಯೂಕ್ಲಿಕ್ ಆಮ್ಲ) ಸಂಶ್ಲೇಷಣೆ ನಡೆಯುವುದರಿಂದ ಆನುವಂಶೀಯ ವಸ್ತುವಿನ ಪ್ರಮಾಣ ಮತ್ತು ಕ್ರೊಮೋಸೋಮುಗಳ ಸಂಖ್ಯೆಗಳಲ್ಲಿ ಪಿತೃಕೋಶ ಮತ್ತು ಮರಿಕೋಶಗಳಲ್ಲಿ ವ್ಯತ್ಯಾಸವಿರದು. ಇದು ನಿರ್ಲಿಂಗ ಪ್ರಜನನದ ಎಲ್ಲ ಬಗೆಗಳಲ್ಲಿ ಕಂಡುಬರುವ ಮೂಲ ಸ್ಥಿತಿ.

ಸಂಖ್ಯಾಕ್ಷೀಣ ವಿಭಜನೆ ಜರಾಯುಕೋಶಗಳಲ್ಲಿ ನಡೆಯುತ್ತದೆ. ಈ ಕ್ರಿಯೆಯ ಮೂಲಕ ಲಿಂಗಾಣುಜನಕ ಕೋಶಗಳಿಂದ ಲಿಂಗಾಣುಗಳು ಉದ್ಭವವಾಗುತ್ತವೆ. ಇದಕ್ಕೆ ಲಿಂಗಾಣುಜನನ ಎಂದು ಹೆಸರು. ಗಂಡು ಪ್ರಾಣಿಗಳಲ್ಲಿ ವೀರ್ಯಾಣುಗಳೂ, ಹೆಣ್ಣು ಜೀವಿಗಳಲ್ಲಿ ಅಂಡಾಣುಗಳೂ ರೂಪುಗೊಳ್ಳುವುವು. ಸಂಖ್ಯಾಕ್ಷೀಣ ವಿಭಜನೆಯ ಆರಂಭದಲ್ಲಿ ಸಮರೂಪ ಕ್ರೊಮೋಸೋಮುಗಳು ಪರಸ್ಪರ ಆಕರ್ಷಿತವಾಗಿ ಜೊತೆಗೂಡುತ್ತವೆ. ಆಗ ಕ್ರೊಮೋಸೋಮುಗಳ ಕೆಲವು ಭಾಗಗಳಲ್ಲಿ ಪರಸ್ಪರ ವಿನಿಮಯವಾಗುವುದರಿಂದ ಆನುವಂಶೀಯ ವಸ್ತುಗಳ ಪುನರ್‌ಸಂಯೋಜನೆ ನಡೆಯುತ್ತದೆ. ನಂತರ ಕ್ರೊಮೋಸೋಮುಗಳು ಬೇರೆಯಾಗಿ ಕೋಶ ವಿಭಜನೆಯಾಗುತ್ತದೆ. ಹೀಗೆ ಉದ್ಭವಿಸಿದ ಕೋಶಗಳು, ಪಿತೃಗಳು ಕ್ರೊಮೋಸೋಮ್ ಸಂಖ್ಯೆಯ ಅರ್ಧದಷ್ಟನ್ನು ಮಾತ್ರ ಪಡೆದಿರುತ್ತವೆ. ಸಂಖ್ಯಾಕ್ಷೀಣ ವಿಭಜನೆಯ ಎರಡನೆಯ ಹಂತ ನೇರ ವಿಭಜನೆಯಾಗಿದ್ದು ಇದರಲ್ಲಿ ಕ್ರೊಮೋಸೋಮುಗಳ ಸಂಖ್ಯೆ ಬದಲಾಗದು. ಸಂಖ್ಯಾಕ್ಷೀಣ ವಿಭಜನೆಯಿಂದ ೪ ಮರಿಕೋಶಗಳು ರೂಪುಗೊಳ್ಳುವುವು. ಈ ಕೋಶಗಳ ಕ್ರೊಮೋಸೋಮ್ ಸಂಖ್ಯೆ ಪಿತೃಗಳ ಕ್ರೊಮೋಸೋಮ್ ಸಂಖ್ಯೆಯ ಅರ್ಧದಷ್ಟಿರುತ್ತದೆ. ವೀರ್ಯಾಣುಜನಕ ಕೋಶಗಳಿಂದ ೪ ಮರಿಕೋಶಗಳು ರೂಪುಗೊಳ್ಳುತ್ತವೆ. ಒಂದು ಅಂಡಾಣುಜನಕ ಕೋಶದಿಂದ ಒಂದೇ ಅಂಡಾಣುಕೋಶ ಮಾತ್ರ ರೂಪುಗೊಳ್ಳುತ್ತದೆ. ಉಳಿದ ೩ ಕೋಶಗಳು ಧ್ರುವಕಾಯಗಳಾಗಿ (ಪೋಲಾರ್ ಬಾಡೀಸ್) ಕಾಲಕ್ರಮೇಣ ನಶಿಸಿಹೋಗುತ್ತವೆ. ಸಂಖ್ಯಾಕ್ಷೀಣ ವಿಭಜನೆ ಜನನಗ್ರಂಥಿಯಲ್ಲಿಯೇ ನಡೆಯುತ್ತದೆ. ಅಂಡಾಣುಕೋಶಗಳು ಅಂಡಾಣುಗಳಾಗಿ ಪರಿವರ್ತನೆಗೊಳ್ಳುವಾಗ ಮಹತ್ವದ ಬದಲಾವಣೆಗಳೇನೂ ಆಗುವುದಿಲ್ಲ. ಆದರೆ, ವೀರ್ಯಾಣು ಕೋಶಗಳು ವೀರ್ಯಾಣುಗಳಾಗಿ ಪರಿವರ್ತನೆಗೊಳ್ಳುವಾಗ ಅವುಗಳ ಆಕಾರದಲ್ಲಿ ಮಹತ್ವದ ಬದಲಾವಣೆಗಳಾಗುತ್ತವೆ.

ಸಂಪೂರ್ಣ ಬೆಳೆದ ಹಾಗೂ ನಿಷೇಚನಕ್ಕೆ ಸಿದ್ಧವಾಗಿರುವ ಮೊಟ್ಟೆಗಳು ಗೋಳಾಕಾರದವಾಗಿದ್ದು, ಏಕಗುಣಿತ (ಹ್ಯಾಪ್ಲಾಯಿಡ್) ಕ್ರೊಮೋಸೋಮುಗಳನ್ನು ಪಡೆದಿರುತ್ತವೆ. ವೀರ್ಯಾಣುಗಳ ತಲೆಯ ಭಾಗದಲ್ಲಿ ನ್ಯೂಕ್ಲಿಯಸ್ ಇರುತ್ತದೆ. ಅಂಡಾಣುವಿನಲ್ಲಿ ನ್ಯೂಕ್ಲಿಯಸ್ ಜೊತೆಗೆ ಸಾಕಷ್ಟು ಕೋಶದ್ರವ್ಯ ಇರುತ್ತದೆ. ವೀರ್ಯಾಣುವಿನಲ್ಲಿಯ ಕೋಶದ್ರವ್ಯದ ಪ್ರಮಾಣ ಕಡಿಮೆ. ವೀರ್ಯಾಣುವಿನ ಕಂಠಭಾಗದಲ್ಲಿ ಮಾರ್ಪಾಟು ಹೊಂದಿದ ಮೈಟೊಕಾಂಡ್ರಿಯಾಗಳು ಇರುತ್ತವೆ.

ಸಾಮಾನ್ಯವಾಗಿ ಅಂಡಾಣುಗಳು ಕಡಿಮೆ ಸಂಖ್ಯೆಯಲ್ಲಿ, ವೀರ್ಯಾಣುಗಳು ಹೆಚ್ಚಿನ ಸಂಖ್ಯೆಯಲ್ಲಿ ರೂಪುಗೊಳ್ಳುವುವು. ಆದರೆ, ನಿಷೇಚನ ಕ್ರಿಯೆಯಲ್ಲಿ ಒಂದು ವೀರ್ಯಾಣು, ಒಂದೇ ಅಂಡಾಣುವನ್ನು ಮಾತ್ರ ಪ್ರವೇಶಿಸಬಲ್ಲದು. ಉಳಿದೆಲ್ಲ ವೀರ್ಯಾಣುಗಳು ನಶಿಸಿಹೋಗುತ್ತವೆ. ಬಹುಸಂಖ್ಯೆಯ ಅಂಡಾಣುಗಳನ್ನು ಉತ್ಪಾದಿಸುವ ಪ್ರಭೇದಗಳಲ್ಲಿ ವೀರ್ಯಾಣುಗಳ ಸಂಖ್ಯೆ ಅಂಡಾಣುಗಳ ಸಂಖ್ಯೆಗಿಂತ ಸಹಸ್ರ ಪಟ್ಟು ಹೆಚ್ಚು. ಅಂಡಾಣು ಮತ್ತು ವೀರ್ಯಾಣುಗಳ ಸಂಯೋಗ ಕ್ರಿಯೆಗೆ ನಿಷೇಚನ (ಫರ್ಟಲೈಸೇಷನ್) ಎಂದು ಹೆಸರು. ನಿಷೇಚನ ಕ್ರಿಯೆಯಲ್ಲಿ ಭಾಗವಹಿಸುವ ವೀರ್ಯಾಣು ಅಂಡಾಣುವನ್ನು ಪ್ರವೇಶಿಸಿದಾಗ ಅಂಡಾಣುವಿನ ಕೋಶದ್ರವ್ಯದಲ್ಲಿ ಅದರ ಬಾಲ ಕಳಚಿಹೋಗಿ ನ್ಯೂಕ್ಲಿಯಸ್ ಇರುವ ತಲೆ ಮಾತ್ರ ಅಂಡಾಣುವಿನ ನ್ಯೂಕ್ಲಿಯಸ್ಸನ್ನು ಪ್ರವೇಶಿಸಿ ಅದರೊಂದಿಗೆ ಲೀನವಾಗುತ್ತದೆ. ಹೀಗೆ ನಿಷೇಚನಗೊಂಡ ಅಂಡಾಣುವಿಗೆ ಯುಗ್ಮಜ (ಜೈಗೋಟ್) ಅಥವಾ ನಿಷೇಚಿತ ಮೊಟ್ಟೆ (ಫರ್ಟಿಲೈಸ್ಡ್ ಎಗ್) ಎಂದು ಹೆಸರು. ಅಂಡಾಣುಗಳು ಅರ್ಧಸಂಖ್ಯೆಯಲ್ಲಿ ಹಾಗೂ ವೀರ್ಯಾಣುಗಳು ಅರ್ಧಸಂಖ್ಯೆಯಲ್ಲಿ ಕ್ರೊಮೋಸೋಮುಗಳನ್ನು ಸೇರಿಸಿ ಯುಗ್ಮಜದಲ್ಲಿ ಪಿತೃಗಳಲ್ಲಿರುವಷ್ಟೆ ಕ್ರೊಮೋಸೋಮುಗಳಾಗುತ್ತವೆ. ಈ ಯುಗ್ಮಜದಿಂದ ಬೆಳೆಯುವ ಮರಿಗಳಲ್ಲಿ ಪಿತೃಗಳಷ್ಟೆ ಕ್ರೊಮೋಸೋಮುಗಳಿರುತ್ತವೆ. ಯುಗ್ಮಜ ಬೆಳೆದು ಪ್ರಬುದ್ಧ ಜೀವಿಯಾಗುವತನಕ ನಡೆಯುವ

ಕೋಶ ವಿಭಜನೆಗಳು ಕೇವಲ ನೇರ ವಿಭಜನೆಗಳು. ಕೋಶಗಳ ವಿಭಜನೆಯೊಂದಿಗೆ ಕೋಶಗಳ ವಿಭೇದನೆ ನಡೆಯುತ್ತದೆ.




ವೀರ್ಯಾಣು ಜನನ. ಪ್ರತಿಯೊಂದು ಪ್ರೈಮರಿ ಸ್ಪರ್ಮಟೊಸೈಟು ನಾಲ್ಕು ಸ್ಪರ್ಮಟಿಡ್‌ಗಳಿಗೆ ಜನ್ಮವೀಯುತ್ತದೆ. ಇವು ಮಾರ್ಪಾಡಾಗಿ ಕ್ರಿಯಾಶೀಲ ವೀರ್ಯಾಣುಗಳಾಗುತ್ತದೆ.

ಕ್ರೊಮೋಸೋಮ್ ಆನುವಂಶೀಯ ವಸ್ತು, ಲೈಂಗಿಕ ಕೋಶಗಳ ಆವಿಷ್ಕಾರವು ಜೀವವಿಜ್ಞಾನದ ಮಹತ್ವದ ಸಂಶೋಧನೆ. ಈ ಸಂಶೋಧನೆಗಳ ತರುವಾಯ 19 ನೆ ಶತಮಾನದ ಅಂತ್ಯಭಾಗದಲ್ಲಿ ಆಗಸ್ಟ್ ವೈಸ್‌ಮಾನ್ ಜರಾಯುದ್ರವ್ಯ ಅಥವಾ ಜರ್ಮ್‌ಪ್ಲಾಸಮ್ ಸಿದ್ಧಾಂತವನ್ನು ಪ್ರತಿಪಾದಿಸಿದ. ಈ ಸಿದ್ಧಾಂತದ ಪ್ರಕಾರ ಜೀವಿಯಲ್ಲಿ ಕಾಯ (ಸೋಮ) ಮತ್ತು ಲಿಂಗ (ಸೆಕ್ಸ್) ಎಂಬ ಎರಡು ಪ್ರಮುಖ ಭಾಗಗಳಿದ್ದು, ಕಾಯಭಾಗ ಜೀವಿಯ ಎಲ್ಲ ಕಾರ್ಯವನ್ನೂ ಜರುಗಿಸುತ್ತದೆ. ಕಾಯಭಾಗಕ್ಕೆ ಹೋಲಿಸಿದರೆ ಲಿಂಗಭಾಗ ಅತಿ ಚಿಕ್ಕದಾಗಿದ್ದು, ಇದು ಕಾಯಭಾಗದ ಮೇಲೆ ಪರಾವಲಂಬಿಯಾಗಿದೆ. ಆದರೆ, ಜೀವಿಯ ಪುನರುತ್ಪತ್ತಿಯಲ್ಲಿ ಲಿಂಗ ಭಾಗದ್ದೇ ಮಹತ್ವದ ಸ್ಥಾನ. ಲಿಂಗ ಭಾಗದ ಕೋಶಗಳು ವಿಭಾಗಗೊಂಡು ಲಿಂಗಾಣುಗಳಾಗಿ ಮಾರ್ಪಟ್ಟು ಇನ್ನೊಂದು ವಿಧದ ಲಿಂಗಾಣುವಿನೊಂದಿಗೆ ಸಂಯೋಗ ಹೊಂದಿ ಸಂಪೂರ್ಣ ಬೆಳೆದು ಪ್ರಬುದ್ಧ ಜೀವಿಯ ನಿರ್ಮಾಣವಾಗುತ್ತದೆ. ಅಂದರೆ, ಒಂದು ತಳಿಯಿಂದ ಇನ್ನೊಂದು ತಳಿಗೆ ಗುಣಲಕ್ಷಣಗಳನ್ನು ಕೊಂಡೊಯ್ಯುವ ಸಾಧನಗಳೇ ಈ ಲಿಂಗಾಣುಗಳು. ಕಾಯಭಾಗ ಬಾಲ್ಯ, ತಾರುಣ್ಯ, ಮುಪ್ಪು ಎಂಬ ಹಂತಗಳನ್ನು ಪೂರೈಸಿ ಕೊನೆಯಲ್ಲಿ ಸತ್ತು ಹೋಗುತ್ತದೆ. ಆದರೆ, ಲಿಂಗ ಭಾಗ ಒಮ್ಮೆ ವಿಭೇದನೆಗೊಳಗಾಗಿ ಪ್ರಬುದ್ಧ ಸ್ಥಿತಿಗೆ ಬಂದ ತರುವಾಯ ಜೀವಿತದ ಬಹುಕಾಲ ಕೆಲಸ ಮಾಡಿ (ಪ್ರಜನನ ಕ್ರಿಯೆ ನಡೆಸಿ) ಅನೇಕ ನಕಲುಗಳನ್ನು ತಯಾರಿಸುತ್ತದೆ. ಕಾರಣ, ಲಿಂಗಕೋಶಗಳು ಚಿರಂಜೀವಿಗಳು. ಲಿಂಗ ಮತ್ತು ಕಾಯ ಎಂಬ ವಿಭೇದೀಕರಣ ಏಕಕೋಶಜೀವಿಗಳಲ್ಲಿ ಕಂಡುಬರುವುದಾಗಿ ಕೆಲವು ಸಮೂಹ ಜೀವಿಗಳಲ್ಲಿ ಈ ವಿಭೇದೀಕರಣ ಎದ್ದು ಕಾಣುತ್ತದೆ. ಇನ್ನುಳಿದ ಬ್ಯಾಕ್ಟೀರಿಯಗಳಲ್ಲಿ, ವೈರಸ್ಸುಗಳಲ್ಲಿ ಇಡೀ ಜೀವಿಯೇ ಪ್ರಜನನವನ್ನು ಮಾಡಬಲ್ಲದು. ಈ ಕಾರಣಗಳಿಂದ ಲಿಂಗ ಭಾಗ ಹಾಗೂ ಕಾಯ ಭಾಗಗಳಲ್ಲಿ ಯಾವುದು ಮೊದಲು ಅಸ್ತಿತ್ವಕ್ಕೆ ಬಂತು ಎಂಬುದು ವಿವಾದಾತ್ಮಕ ವಿಷಯ. ಎಂದೊ ಉದಯವಾದ ಲಿಂಗ ಮತ್ತು ಕಾಯಗಳು ಇಂದು ಗರಿಷ್ಠ ಮಟ್ಟದ ಪ್ರಾಣಿಗಳಲ್ಲಿ ಸಂಪೂರ್ಣ ವಿಭೇದನೆ ಹೊಂದಿ ಸಂಪೂರ್ಣ ಪ್ರಶೋಭಿತವಾಗಿವೆ.




ಊಗೋನಿಯಂನಿಂದ ಅಂಡಾಣು ಜನನ. ಇಲ್ಲಿ ಬೆಳೆವಣಿಗೆಗೆ ಪ್ರಧಾನ ಪಾತ್ರವಿದೆ. ಧೃವೀಯ ಕಾಯಗಳು ನಿಷ್ಕ್ರಿಯ ಅಂಶಗಳು

ವೈರಸ್ಸುಗಳಲ್ಲಿ ಪ್ರಜನನ ಸ್ವತಂತ್ರವಾಗಿ ನಡೆಯುವುದಿಲ್ಲ. ಪ್ರಜನನ ಕ್ರಿಯೆಗೆ ವೈರಸ್ಸು ಬ್ಯಾಕ್ಟೀರಿಯ ಅಥವಾ ಬೇರೆ ಜೀವಿಯ ಕೋಶವನ್ನು ಅವಲಂಬಿಸಿದೆ. ಪ್ರಜನನದಲ್ಲಿ ತೊಡಗುವ ಮುನ್ನಾ ವೈರಸ್ ತನ್ನ ಆತಿಥೇಯ ಕೋಶಕ್ಕೆ ಮೊದಲು ಬಾಲದ ತಂತುಗಳಿಂದ ಅಂಟಿಕೊಳ್ಳುತ್ತದೆ. ಕಿಣ್ವವೊಂದರ ಸಹಾಯದಿಂದ ಆತಿಥೇಯ ಕೋಶದ ಭಿತ್ತಿಯನ್ನು ಅಂಟಿಕೊಂಡಿದ್ದ ಸ್ಥಳದಲ್ಲಿ ಕರಗಿ ತನ್ನ ಆನುವಂಶೀಯ ವಸ್ತು ಅಥವಾ ಕ್ರೊಮೋಸೋಮನ್ನು ಆತಿಥೇಯ ಕೋಶದೊಳಕ್ಕೆ ತಳ್ಳುತ್ತದೆ. ಅಲ್ಲಿ ವೃದ್ಧಿ ಹೊಂದುತ್ತದೆ. ಅಗ ಆತಿಥೇಯ ಕೋಶದ ಕ್ರೊಮೋಸೋಮುಗಳು ತಮ್ಮ ಕ್ರಿಯೆಯನ್ನು ಬಿಟ್ಟು ವೈರಸ್ ಕಾಯದ ಪ್ರೊಟೀನುಗಳನ್ನು ಸಂಶ್ಲೇಷಿಸತೊಡಗುತ್ತವೆ. ಹೀಗೆ ವೈರಸ್ಸಿನ ಕ್ರೊಮೋಸೋಮ್ ಆತಿಥೇಯ ಕೋಶದ ಮೇಲೆ ತನ್ನ ಪ್ರಭುತ್ವ ಬೀರುತ್ತದೆ. ವೃದ್ಧಿಗೊಂಡ ವೈರಸ್ಸಿನ ಕ್ರೊಮೋಸೋಮುಗಳು ಆತಿಥೇಯ ಕೋಶ ತಯಾರಿಸಿದ ಪ್ರೊಟೀನುಗಳಿಂದಾವೃತ್ತಗೊಂಡ ಹೊಸ ವೈರಸ್ಸುಗಳು ರೂಪ ತಳೆಯುವುವು. ನಂತರ ಆತಿಥೇಯ ಕೋಶದ ಕೋಶಭಿತ್ತಿಯನ್ನು ಛಿದ್ರಗೊಳಿಸಿ ಮರಿ ವೈರಸ್ಸುಗಳು ಹೊರಬರುತ್ತವೆ.

ಬ್ಯಾಕ್ಟೀರಿಯಗಳಲ್ಲಿ ನಿರ್ಲಿಂಗ ರೀತಿಯ ಹಾಗೂ ಲೈಂಗಿಕ ರೀತಿಯ ಪ್ರಜನನವಿದೆ. ನಿರ್ಲಿಂಗ ಪ್ರಜನನ ಕೇವಲ ಡಿಎನ್‌ಎ ಸಂಶ್ಲೇಷಣೆ ಹಾಗೂ ಕೋಶ ವಿಭಜನೆಗೆ ಮಾತ್ರ ಸೀಮಿತ. ಬ್ಯಾಕ್ಟೀರಿಯ ನೇರವಾಗಿ ವಿಭಜನೆಗೆ ಒಳಗಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಎರಡು ಬ್ಯಾಕ್ಟೀರಿಯ ಕೋಶಗಳು ಒಂದಕ್ಕೊಂದು ಸೇರಿ ಕ್ರೊಮೋಸೋಮುಗಳನ್ನು ಬದಲಾಯಿಸಿಕೊಳ್ಳುತ್ತವೆ. ನಂತರ ಎರಡು ಬ್ಯಾಕ್ಟೀರಿಯ ಕೋಶಗಳು ಬೇರ್ಪಟ್ಟು ಬೇರೆ ಬೇರೆಯಾಗಿ ಜೀವಿಸುವುವು. ನಿರ್ಲಿಂಗ ರೀತಿಯ ಪ್ರಜನನದಲ್ಲಿ ಬ್ಯಾಕ್ಟೀರಿಯಗಳ

ಸಂಖ್ಯೆ ಹೆಚ್ಚುತ್ತದೆ. ಲೈಂಗಿಕ ಪ್ರಜನನ ಕ್ರಿಯೆಯಲ್ಲಿ ಕೇವಲ ಕ್ರೊಮೋಸೋಮುಗಳ ಅದಲು ಬದಲು ನಡೆಯುತ್ತದೆ. ಆದ್ದರಿಂದ, ಬ್ಯಾಕ್ಟೀರಿಯಗಳ ಲೈಂಗಿಕ ಪ್ರಜನನ ಕೇವಲ ಕ್ರೊಮೋಸೋಮುಗಳ ಸಂಯೋಜನೆಯ ಮಾಧ್ಯಮ ಮಾತ್ರ. ಸಿಲಿಯೇಟ ಗುಂಪಿನ ಕೆಲವು ಏಕಕೋಶ ಜೀವಿಗಳಲ್ಲಿ ಈ ರೀತಿಯ ಪ್ರಜನನವಿದೆ. ಉದಾ: ಪ್ಯಾರಮೀಶಿಯಂ.

ಲೈಂಗಿಕ ಪ್ರಜನನವನ್ನು ತೋರುವ ಏಕಕೋಶ ಜೀವಿಗಳಲ್ಲಿ ನಿರ್ದಿಷ್ಟ ಪ್ರಜನನಾಂಗಗಳಿಲ್ಲ. ಎಲ್ಲ ಏಕಕೋಶ ಜೀವಿಗಳಲ್ಲಿ ಇಡೀ ಕೋಶವೇ ಪ್ರಜನನ ಕ್ರಿಯೆಯಲ್ಲಿ ಭಾಗವಹಿಸುತ್ತದೆ. ಕೋಶದ ವಿಭಜನೆಯಿಂದ ಹಲವಾರು ಲಿಂಗಾಣುಗಳು ಜನಿಸುತ್ತವೆ. ಉದಾ: ಪ್ಯಾರಮೀಸಿಯಮ್‌ನಲ್ಲಿ ಇಡೀ ಕೋಶವೇ ಲಿಂಗಾಣುವಾಗಿ ಪರಿವರ್ತನೆಗೊಳ್ಳುತ್ತದೆ. ಹೊರನೋಟಕ್ಕೆ ಏಕಕೋಶ ಜೀವಿಗಳಲ್ಲಿ ಲಿಂಗ ವಿಭೇದನೆಯಾಗಿರದಿದ್ದರೂ, ಆಂತರಿಕವಾಗಿ, ಭೌತಿಕವಾಗಿ ಲಿಂಗವಿಭೇದನೆಯನ್ನು ಗುರುತಿಸಬಹುದು. ಉದಾ: ಪ್ಯಾರಮೀಸಿಯಮಿನಲ್ಲಿ '+' ಮತ್ತು '–' ಎಂಬ ಎರಡು ಬಗೆಗಳಿವೆ. '+' ಬಗೆ ಯಾವಾಗಲೂ '–' ಬಗೆಯೊಂದಿಗೆ ಮಾತ್ರ ಲೈಂಗಿಕವಾಗಿ ಸಂಯೋಗವಾಗುತ್ತದೆ. ಎರಡು '+' ಬಗೆಗಳ ಮಧ್ಯೆ ಅಥವಾ ಎರಡು '–' ಬಗೆಗಳ ಮಧ್ಯೆ ಎಂದಿಗೂ ಸಂಯೋಗ ನಡೆಯದು. ಬ್ಯಾಕ್ಟೀರಿಯಗಳಲ್ಲಿ ಈ ರೀತಿಯ ಲಿಂಗವಿಭೇದನೆ ಇದೆ. ಸಂಖ್ಯಾಕ್ಷೀಣ ವಿಭಜನೆ ಯುಗ್ಮಜದ ಪ್ರಥಮ ವಿಭಜನೆಯಲ್ಲಿ ಮತ್ತು ಲಿಂಗಾಣುಗಳ ಉತ್ಪಾದನೆಯಲ್ಲಿ ನಡೆಯುತ್ತದೆ.

ಏಕಕೋಶ ಜೀವಿಗಳ ಲಿಂಗಾಣುಗಳಲ್ಲಿ ಮೂರು ಬಗೆಗಳಿವೆ. ಕೆಲವು ಪ್ರಭೇದಗಳಲ್ಲಿ ಗಂಡು (+) ಮತ್ತು ಹೆಣ್ಣು (–) ಲಿಂಗಾಣುಗಳೆರಡೂ ಆಕಾರ ಮತ್ತು ರಚನೆಯಲ್ಲಿ ಒಂದೇ ತೆರನಾಗಿವೆ. ಇವಕ್ಕೆ ಸಮಲಿಂಗಾಣು (ಐಸೊಗ್ಯಾಮೀಟ್ಸ್)ಗಳೆನ್ನುವರು. ಕೆಲವು ಪ್ರಭೇದಗಳಲ್ಲಿ ಚಲನಾಂಗಗಳನ್ನು ಪಡೆದ ಹಾಗೂ ಚಲನ ಸಾಮರ್ಥ್ಯವಿರುವ ಚಿಕ್ಕಗಾತ್ರದ ಗಂಡುಲಿಂಗಾಣುಗಳಿವೆ. ಇವು ಅಸಮಲಿಂಗಾಣುಗಳು ಅಥವಾ ಭಿನ್ನ ಲಿಂಗಾಣುಗಳು (ಅನೈಸೊಗ್ಯಾಮೀಟ್ಸ್). ಇನ್ನು ಕೆಲವು ಪ್ರಭೇದಗಳಲ್ಲಿ ಲಿಂಗಾಣುಗಳು ಎರಡು ಬಗೆಯ ಆಕಾರ, ರೂಪ ಹಾಗೂ ಗಾತ್ರಗಳಲ್ಲಿ ವ್ಯತ್ಯಾಸವನ್ನು ತೋರುವುವು. ಚಲನಾಂಗಗಳಿರುವ ಹಾಗೂ ಚಲನಶೀಲವಾಗಿರುವ ಚಿಕ್ಕ ಗಾತ್ರದವನ್ನು ಗಂಡು ಲಿಂಗಾಣುಗಳೆಂದು, ದೊಡ್ಡ ಗಾತ್ರದ ಚಲನಾಂಗರಹಿತ ಚಲನಶೀಲವಲ್ಲದವನ್ನು ಹೆಣ್ಣು ಲಿಂಗಾಣುಗಳೆಂದು ನಿರ್ದೇಶಿಸಲಾಗಿದೆ. ಇವನ್ನು ಊಗ್ಯಾಮೀಟುಗಳೆಂದು ಕರೆಯುವರು. ಫ್ಲಾಜೆಲೇಟ ಗುಂಪಿನ ಪ್ರಭೇದಗಳಲ್ಲಿ ಈ ರೀತಿಯ ಲಿಂಗಾಣುಭೇದವನ್ನು ಹೆಚ್ಚು ನಿಖರವಾಗಿ ಕಾಣಬಹುದು.

ಲಿಂಗಾಣುಗಳ ಪರಸ್ಪರ ಆಕರ್ಷಣೆಗೆ ಏಕಕೋಶ ಜೀವಿಗಳು ಹಾರ್ಮೋನುಗಳಂಥ ವಸ್ತುಗಳನ್ನು ಸಂಶ್ಲೇಷಿಸುತ್ತವೆ. ಇವಕ್ಕೆ ಟರ್ಮೋನುಗಳು ಎಂದು ಹೆಸರು. ಪುರುಷ ಲಿಂಗಾಣುಗಳು ಆಂಡ್ರೋಟರ್ಮೋನುಗಳನ್ನೂ, ಸ್ತ್ರೀಲಿಂಗಾಣುಗಳು ಗೈನೊಟರ್ಮೋನುಗಳನ್ನು ಪಡೆದಿವೆ.

ಏಕಕೋಶಜೀವಿಗಳನ್ನು ಪ್ರಜೀವಿಗಳು ಅಥವಾ ಆದಿಮ ಜೀವಿಗಳೆಂದು ಪರಿಗಣಿಸಿದ್ದರೂ ಉಳಿದೆಲ್ಲ ಪ್ರಾಣಿಗಳಂತೆ ಇವುಗಳಲ್ಲೂ ಪ್ರಜನನ ವಿಭಿನ್ನ ಮತ್ತು ವಿಶಿಷ್ಟವಾಗಿದೆ.

ಅಕಶೇರುಕಗಳಲ್ಲಿ ಪ್ರಜನನ : ಲೈಂಗಿಕ ಪ್ರಜನನ ಕ್ರಿಯೆಗೆ ಬೇಕಾದ ಲಿಂಗಾಣುಗಳು ವಿಶೇಷ ಅಂಗಗಳಿಂದ ಉತ್ಪತ್ತಿಯಾಗುತ್ತವೆ. ಈ ಅಂಗಗಳೇ ಜನನಗ್ರಂಥಿಗಳು (ಗೊನ್ಯಾಡ್ಸ್). ಆದರೆ, ಲೈಂಗಿಕ ಪ್ರಜನನ ಕ್ರಿಯೆಗೆ ಪ್ರಜನನ ಗ್ರಂಥಿಗಳು ಅತ್ಯಾವಶ್ಯಕವಲ್ಲ. ಅಂಗ ಅಥವಾ ಅಂಗಾಂಶ ಇಲ್ಲದೇ ಕೆಲವು ಕೋಶಗಳು ವಿಭಜನೆಯ ಮೂಲಕ ನೇರವಾಗಿ ಲಿಂಗಾಣುಗಳಾಗಿ ಮಾರ್ಪಡಾಗುತ್ತವೆ. ಸಂಭೋಗ ಕ್ರಿಯೆಯಿಲ್ಲದೆಯೇ ನೇರವಾಗಿ ವೀರ್ಯಾಣು, ಅಂಡಾಣುಗಳ ಸಂಯೋಗದಿಂದ ರೂಪುಗೊಳ್ಳುವ ಯುಗ್ಮಜಗಳು ಪ್ರಬುದ್ಧ ಜೀವಿಗಳಾಗಿ ಬೆಳೆಯಬಲ್ಲವು. ಕೆಲವು ಅಕಶೇರುಕಗಳಲ್ಲಿ ಈ ರೀತಿಯ ಪ್ರಜನನವಿದೆ. ಆದರೆ, ಬಹುತೇಕ ಅಕಶೇರುಕಗಳಲ್ಲಿ ಮತ್ತು ಕಶೇರುಕಗಳಲ್ಲಿ ನಿರ್ದಿಷ್ಟ ಜನನ ಗ್ರಂಥಿ ಹಾಗೂ ಪ್ರಜನನಾಂಗಗಳಿವೆ. ಆಯಾ ಜೀವಿಯ ಆವಶ್ಯಕತೆಗನುಸಾರವಾಗಿ ಈ ಅಂಗಗಳು ಮಾರ್ಪಾಡುಗೊಂಡು ಸಾಕಷ್ಟು ವೈವಿಧ್ಯಮಯವಾಗಿವೆ. ಕೆಳ ಹಂತದ ಕೆಲವು ಅಕಶೇರುಕಗಳಲ್ಲಿ ಪ್ರಜನನ ಗ್ರಂಥಿಗಳು ತಾತ್ಕಾಲಿಕ ಅಂಗಗಳಾಗಿದ್ದು ಅವಶ್ಯಕತೆಯಿದ್ದಾಗ ಮಾತ್ರ ದೇಹದ ಕೆಲವು ಕೋಶಗಳು ಅಥವಾ ಅಂಗಾಂಶಗಳು ಪ್ರಜನನ ಗ್ರಂಥಿಗಳಾಗಿ ಪರಿವರ್ತನೆಗೊಳ್ಳುತ್ತವೆ. ದ್ವಿಲಿಂಗಿಗಳಲ್ಲಿ ಹೆಣ್ಣು ಮತ್ತು ಗಂಡು ಜನನಗ್ರಂಥಿಗಳೆರಡೂ ಒಂದೇ ಜೀವಿಯಲ್ಲಿರುತ್ತವೆ. ಕೆಲವು ಕುಟುಕು ಕಣವಂತಗಳಲ್ಲಿ, ಚಪ್ಪಟೆಹುಳುಗಳಲ್ಲಿ, ದುಂಡು ಹುಳುಗಳಲ್ಲಿ ಹಾಗೂ ವಲಯವಂತಗಳಲ್ಲಿ ಈ ರೀತಿಯ ದ್ವಿಲಿಂಗ ಸ್ಥಿತಿಯನ್ನು ಕಾಣಬಹುದು.

ಸ್ಪಂಜುಪ್ರಾಣಿಗಳು ಕೋಶಿಕೆಗಳ ಹಂತದಲ್ಲಿಯೇ ನಿರ್ಲಿಂಗ ರೀತಿಯಲ್ಲಿ ಪ್ರಜನನ ನಡೆಸುವುವು. ವೀರ್ಯಾಣು ಮತ್ತು ಅಂಡಾಣುಗಳ ಉತ್ಪತ್ತಿ ಇವುಗಳಲ್ಲಿದೆ. ಕೆಲವು ಸ್ಪಂಜು ಪ್ರಾಣಿಗಳು ದ್ವಿಲಿಂಗಿಗಳು. ಇನ್ನು ಕೆಲವು ಏಕಲಿಂಗಿಗಳು. ಈ ಎರಡು ವಿಧಗಳಲ್ಲಿ ಇವುಗಳ ಚರ್ಮದಲ್ಲಿರುವ ಅಮೀಬ ರೀತಿಯ ಕೋಶಗಳಿಂದ ಅಂಡಾಣುಗಳು ಮತ್ತು ವೀರ್ಯಾಣುಗಳು ಉತ್ಪತ್ತಿಯಾಗುತ್ತವೆ. ಈ ಕೋಶಗಳನ್ನು ಪ್ರಜನನ ಗ್ರಂಥಿಗಳೆನ್ನುವುದಿಲ್ಲ. ಏಕೆಂದರೆ, ಇವು ಪ್ರಜನನಕ್ಕೆ ಮಾತ್ರ ಮೀಸಲಾಗಿರದೆ ಬೇರೆ ಕಾರ್ಯವನ್ನೂ ಮಾಡುತ್ತವೆ. ವೀರ್ಯಾಣುಗಳಿಗೆ ಕಶ ಇದ್ದು ಇವು ನಾಳಗಳ ಮೂಲಕ ಹೊರಬರುತ್ತವೆ. ನೀರಿನಲ್ಲಿ ಈಜುತ್ತ ಇವು ಇನ್ನೊಂದು ಸ್ಪಂಜು ಪ್ರಾಣಿಯ ಕಾಲುವೆಗಳ ವ್ಯೂಹವನ್ನು ಹೊಕ್ಕಾಗ, ಕಾಲುವೆಗಳ ಒಳಭಾಗದಲ್ಲಿರುವ ಕುತ್ತಿಗೆ ಹಾಗೂ ಕಶಯುಕ್ತ ಕೋಶಗಳು ವೀರ್ಯಾಣುವನ್ನು ನುಂಗುತ್ತವೆ. ನಂತರ ಈ ಕೋಶಗಳು ತಮ್ಮ ಕುತ್ತಿಗೆಯನ್ನೂ, ಕಶಾಂಗವನ್ನೂ, ಕಳೆದುಕೊಂಡು ವೀರ್ಯಾಣುಗಳನ್ನು ಹೊತ್ತುಕೊಂಡು ಶರೀರದ ಒಳಭಾಗಕ್ಕೆ ಚಲಿಸುತ್ತವೆ. ಅಲ್ಲಿ ಅಂಡಾಣುಗಳು ತಮ್ಮ ಬೆಳವಣಿಗೆಯನ್ನು ಪೂರ್ಣಗೊಳಿಸಿಕೊಂಡಿರುತ್ತವೆ. ವೀರ್ಯಾಣುವನ್ನು ಸಾಗಿಸುವ ಕೋಶಗಳು ಅಂಡಾಣುಗಳೊಡನೆ ಸಂಯೋಗಗೊಳ್ಳುತ್ತವೆ. ನಂತರ ಅಂಡಾಣು ಮತ್ತು ವೀರ್ಯಾಣುಗಳ ನ್ಯೂಕ್ಲಿಯಸ್‌ಗಳು ಕೂಡಿಕೊಂಡು ಯುಗ್ಮಜವಾಗುತ್ತದೆ. ಇದು ಬೆಳೆದು, ಶಿಲಕೆಗಳನ್ನು ಪಡೆದಿರುವ ಪ್ಯಾರಂಕೈಮುಲ ಲಾರ್ವವಾಗುತ್ತದೆ. ಇದು ಸ್ವತಂತ್ರವಾಗಿ ಈಜಿಕೊಂಡಿದ್ದು, ನಂತರ ಸ್ಪಂಜು ಪ್ರಾಣಿಯಾಗಿ ಬೆಳೆಯುತ್ತದೆ.

ಕುಟುಕು ಕಣವಂತಗಳು, ಸ್ಪಂಜು ಪ್ರಾಣಿಗಳಂತೆ ಕೋಶಗಳ ಹಂತದಲ್ಲಿಯೇ ಇವೆ. ಆದರೆ, ಇವುಗಳಲ್ಲಿ ತಾತ್ಕಾಲಿಕ ಪ್ರಜನನ ಗ್ರಂಥಿಗಳು ಕೆಲವು ಶ್ರಾಯಗಳಲ್ಲಿ ಮೂಡುವುವು. ಹೈಡ್ರೋಜೋವ ಗುಂಪಿನ ಪ್ರಾಣಿಗಳಲ್ಲಿ ಲಿಂಗಾಣುಗಳು ಹೊರಚರ್ಮದ ಕೆಲವು ಕೋಶಗಳ ಗುಂಪುಗಳಿಂದ ಉದ್ಭವಿಸುತ್ತವೆ. ಈ ಗುಂಪಿನಲ್ಲಿ ಏಕಲಿಂಗಿಗಳು ಮತ್ತು ದ್ವಿಲಿಂಗಿಗಳಿವೆ. ಸ್ಕೈಪೋಜೋವ ಮತ್ತು ಆಂತೊಜೋವ ಅಥವಾ ಹವಳ ಪ್ರಾಣಿಗಳಲ್ಲಿ ಲಿಂಗಾಣುಗಳು ಅಂತರ ಚರ್ಮದಲ್ಲಿ ರೂಪುಗೊಳ್ಳುತ್ತವೆ. ಹೈಡ್ರೋಜೋವ ಗುಂಪಿನ ಕೆಲವು ಪ್ರಭೇದಗಳು ಬೇಸಿಗೆಯಲ್ಲಿ ನಿರ್ಲಿಂಗ ರೀತಿಯಲ್ಲಿ, ಚಳಿಗಾಲದಲ್ಲಿ ಲೈಂಗಿಕ ರೀತಿಯಲ್ಲಿ ಪ್ರಜನನ ನಡೆಸುತ್ತವೆ. ಚಳಿಗಾಲ ಪ್ರಾರಂಭವಾದ ಕೂಡಲೆ ಇವುಗಳಲ್ಲಿ ವೃಷಣ ಮತ್ತು ಅಂಡಾಶಯಗಳ ಬೆಳವಣಿಗೆಯಾಗುತ್ತದೆ. ಸಮೂಹ ಜೀವಿ ಹೈಡ್ರೋಜೋವಗಳಲ್ಲಿ ಪಾಲಿಪುಗಳು ನಿರ್ಲಿಂಗ ರೀತಿಯಲ್ಲಿ ಪ್ರಜನನವನ್ನು ಮಾಡಿ ಮೆಡುಸಗಳನ್ನು ಉತ್ಪತ್ತಿ ಮಾಡುತ್ತವೆ. ಮೆಡುಸಗಳಲ್ಲಿ ಜನನಗ್ರಂಥಿಗಳಿದ್ದು ಅವು ಲೈಂಗಿಕ




ಅರೀಲಿದಲ್ಲಿ ಪ್ರಜನನ

ರೀತಿಯಲ್ಲಿ ಪ್ರಜನನವನ್ನು ಮಾಡುತ್ತವೆ. ಕುಟುಕು ಕಣವಂತಗಳಲ್ಲಿ ಲಿಂಗಾಣುಗಳು ನೇರವಾಗಿ ಹೊರತೆರೆದಿರುವುದರಿಂದ ನಾಳಗಳು ಇರುವುದಿಲ್ಲ. ಬಹುತೇಕ ಕುಟುಕುಕಣವಂತಗಳು ಜಲವಾಸಿಗಳು. ಇವುಗಳ ವೀರ್ಯಾಣುಗಳು, ಚಲನಾಂಗಗಳನ್ನೂ ಮತ್ತು ಚಲನ ಸಾಮರ್ಥ್ಯವನ್ನು ಪಡೆದಿವೆ. ಅಂಡಾಣುಗಳು ಅಚಲವಾಗಿದ್ದು, ಪಿತೃ ದೇಹಕ್ಕೆ ಅಂಟಿಕೊಂಡಿರುತ್ತವೆ. ಯುಗ್ಮಜಗಳು ಬೆಳೆದು 'ಪ್ಲಾನುಲ' ಲಾರ್ವ ಉತ್ಪತ್ತಿಯಾಗುತ್ತದೆ. ಕೆಲವು ಪ್ರಭೇದಗಳಲ್ಲಿ ವೀರ್ಯಾಣು ಮತ್ತು ಅಂಡಾಣುಗಳು

ನೇರವಾಗಿ ನೀರಿನಲ್ಲಿ ಬಿಡುತ್ತವೆ. 'ಪ್ಲಾನುಲ' ಬೆಳೆದು ಪಾಲಿಪ್ ಆಗುತ್ತದೆ. ಕೆಲವು ಪ್ರಭೇದಗಳಲ್ಲಿ ನಿರ್ಲಿಂಗ ಮತ್ತು ಲೈಂಗಿಕ ಸಂತತಿಗಳ ಪರ್ಯಾಯವನ್ನು ಕಾಣಬಹುದು.

ಕುಟುಕು ಕಣವಂತಗಳು ಮತ್ತು ಸ್ಪಂಜು ಪ್ರಾಣಿಗಳಿಗಿಂತ, ಚಪ್ಪಟೆ ಹುಳುಗಳಲ್ಲಿ ಪ್ರಜನನ ವಿಭಿನ್ನವಾಗಿದೆ. ಇವುಗಳಲ್ಲಿ ಪ್ರಜನನಾಂಗ ವ್ಯೂಹಗಳಿವೆ. ಪ್ರಜನನ ಗ್ರಂಥಿಗಳು ದೇಹದಲ್ಲಿ ಸ್ಥಿತವಾಗಿರುವುದರಿಂದ ಲಿಂಗಾಣುಗಳನ್ನು ಹೊರಹಾಕಲು ಅವಶ್ಯಕವಾದ ನಾಳಗಳಿಲ್ಲ. ಏಸೀಲಗಳಲ್ಲಿ ಮಾತ್ರ ಈ ರೀತಿಯ ಪ್ರಜನನಾಂಗಗಳಿಲ್ಲ. ಈ ಉಪವರ್ಗದ ಪ್ರಾಣಿಗಳಲ್ಲಿ ಪ್ರಜನನ ಗ್ರಂಥಿಗಳು ಸ್ಪಂಜು ಪ್ರಾಣಿ ಮತ್ತು ಕುಟುಕು ಕಣವಂತಗಳಲ್ಲಿರುವಂತೆ ತಾತ್ಕಾಲಿಕ ಅಂಗಗಳಾಗಿದ್ದು, ನಿರ್ದಿಷ್ಟ ನಾಳಗಳು ಮಾತ್ರ ಇಲ್ಲವಾಗಿವೆ. ಈ ಪ್ರಾಣಿಗಳಲ್ಲಿ ಲಿಂಗಾಣುಗಳು ಅಮೀಬದಂಥ ಕೋಶಗಳಿಂದ ಮಾರ್ಪಾಟಾಗಿ, ಜರಾಯು ಕೋಶಗಳಿಂದ ಉದ್ಭವಿಸುತ್ತವೆ. ಬಹಳಷ್ಟು ಚಪ್ಪಟೆ ಹುಳುಗಳು ಏಕಲಿಂಗಿಗಳು. ಈ ಪ್ರಾಣಿಗಳಲ್ಲಿ ಒಂದು ಅಥವಾ ಎರಡು ಅಂಡಾಶಯ ಅಥವಾ ವೃಷಣಗಳು ಇರುತ್ತವೆ. ಅಂಡಾಶಯದಿಂದ ಅಂಡಾಣುಗಳು ಹೊರಕ್ಕೆ ಬರಲು ನಾಳಗಳಿದ್ದು ಇವಕ್ಕೆ ಅಂಡಾಣುವಾಹಕ ನಾಳಗಳೆಂದು ಹೆಸರು. ಕೆಲವು ಪ್ರಭೇದಗಳ ಅಂಡಾಣುವಾಹಕ ನಾಳಗಳಲ್ಲಿ ಹೊರಸಂಚಿಯೊಂದು ಇದೆ. ಇದನ್ನು ವೀರ್ಯಾಣುಧಾರಕ ಅಥವಾ ವೀರ್ಯಪಾತ್ರ ಎನ್ನುವರು. ಸಂಭೋಗಕಾಲದಲ್ಲಿ ಹೆಣ್ಣಿನ ಅಂಡಾಣುವಾಹಕ ನಾಳವನ್ನು ಪ್ರವೇಶಿಸುವ ವೀರ್ಯಾಣುಗಳು ವೀರ್ಯಪಾತ್ರ ಅಥವಾ ವೀರ್ಯಾಣುಧಾರಕಗಳಲ್ಲಿ ಸಂಗ್ರಹಗೊಳ್ಳುತ್ತವೆ. ಹಲವು ಪ್ರಭೇದಗಳಲ್ಲಿ ಅಂಡಾಣುವಾಹಕ ನಾಳದ ಜೊತೆ ಯೋಕ್ ಗ್ರಂಥಿ ನಾಳಗಳೂ ಸೇರಿಕೊಂಡಿವೆ. ಯೋಕ್ ಗ್ರಂಥಿಗಳಿಂದ ಸ್ರವಿಸಿದ ಯೋಕ್‌ನಿಂದ ನಿಷೇಚಿತ ಮೊಟ್ಟೆಗಳಿಗೆ ಆಹಾರ ಪೂರೈಕೆಯಾಗುತ್ತದೆ. ಕೆಲವು ಪ್ರಭೇದಗಳಲ್ಲಿ ಮಾರ್ಪಾಟಾದ ಯೋಕ್ ಗ್ರಂಥಿಗಳು ತಮ್ಮ ಸ್ರಾವದಿಂದ ನಿಷೇಚಿತ ಮೊಟ್ಟೆಗಳ ಹೊರಕವಚವನ್ನು ನಿರ್ಮಿಸುತ್ತವೆ. ನಿಷೇಚಿತ ಮೊಟ್ಟೆಗಳು ಹೊರಬರುವಾಗ ಅವುಗಳ ಮುಂದಿನ ಬೆಳವಣಿಗೆ ಪೂರ್ಣಗೊಳ್ಳುವವರೆಗೂ ಲಾರ್ವ ಅಥವಾ ಮರಿಗಳು ಹೊರಬಂದು ಅವು ಸ್ವತಃ ಆಹಾರ ಸಂಗ್ರಹ ಮಾಡಲು ಶಕ್ತವಾಗುವತನಕ ಅವಶ್ಯವಿರುವ ಆಹಾರ ಶೇಖರಣೆಯಾಗಿರುವುದಲ್ಲದೆ ಮೊಟ್ಟೆಗೆ ಆಯಾ ಪ್ರಭೇದ ಅವುಗಳ ಬೆಳವಣಿಗೆ ಹಾಗೂ ಜೀವನ ಕ್ರಮವನ್ನನುಸರಿಸಿ ವಿವಿಧ ಹೊರಕವಚ ರೂಪಿತವಾಗಿದೆ. ಗಂಡು ಚಪ್ಪಟೆ ಹುಳುಗಳ ಪ್ರಜನನ ಗ್ರಂಥಿ ವೃಷಣ. ಒಂದೇ ಪ್ರಾಣಿಯಲ್ಲಿ ಹಲವಾರು ವೃಷಣಗಳಿವೆ. ಪ್ರತಿ ವೃಷಣದಿಂದ ಹಲವಾರು ವೀರ್ಯಾಣುಗಳು ಉತ್ಪತ್ತಿಯಾಗಿ, ವೀರ್ಯಾಣುವಾಹಕ ನಾಳಗಳ ಮೂಲಕ ಸಾಗಿ, ಹಲವಾರು ವೀರ್ಯಾಣು ವಾಹಕಗಳು ಕೂಡಿ ರಚಿಸಿರುವ ವೀರ್ಯಾಣು ನಾಳದ ಮೂಲಕ ಹೊರಬರುವುವು. ವೀರ್ಯಾಣು ನಾಳದ ಒಂದು ತುದಿ ಸ್ಖಲನನಾಳವಾಗಿ ಮಾರ್ಪಾಟಾಗಿದೆ. ಅಲ್ಲದೆ, ವೀರ್ಯಾಣು ವಾಹಕಗಳು ಅಲ್ಲಲ್ಲಿ ಊದಿಕೊಂಡಿದ್ದು, ವೀರ್ಯಪಾತ್ರಗಳಾಗಿವೆ. ಈ ಭಾಗಗಳಲ್ಲಿ ವೀರ್ಯಾಣುಗಳು ಸಂಗ್ರಹಗೊಳ್ಳುತ್ತವೆ. ಕೆಲವು ಪ್ರಭೇದಗಳಲ್ಲಿ ವೀರ್ಯಾಣುನಾಳ ವೀರ್ಯಾಣು ಕೋಶಿಕೆ (ಸೆಮಿನಲ್ ವೆಸಿಕಲ್) ಆಗಿ ಮಾರ್ಪಟ್ಟಿವೆ. ವೀರ್ಯಾಣು ಕೋಶಿಕೆ ಅಥವಾ ವೀರ್ಯಾಣು ಪಾತ್ರದಲ್ಲಿ ಪ್ರಾಸ್ಟೇಟ್ ಗ್ರಂಥಿ ಅಥವಾ ಕೋಶಗಳು ಇದ್ದು, ಇವುಗಳ ಸ್ರಾವಕಗಳು ವೀರ್ಯದ್ರವವನ್ನು ಸ್ರವಿಸುತ್ತವೆ. ಕೆಲವು ಪ್ರಭೇದಗಳಲ್ಲಿ ಶಿಶ್ನವೂ ಇದ್ದು, ಸಂಭೋಗ ನಡೆಯುವಾಗ ವೀರ್ಯಾಣುಗಳನ್ನು ಸ್ತ್ರೀ ಜನನಾಂಗಗಳಿಗೆ ಸೇರಿಸುತ್ತದೆ. ಚಪ್ಪಟೆ ಹುಳುಗಳಲ್ಲಿ ಅಂತರ್ ನಿಷೇಚನವಿದೆ. ನಾಳಗಳುಳ್ಳ ಗಂಡು ಹುಳುಗಳು ವೀರ್ಯಾಣುವನ್ನು



ಲಾಡಿಹುಳುವಿನಲ್ಲಿ ಪ್ರಜನನ

ಹೆಣ್ಣಿನ ಜನನಾಂಗಗಳಿಗೆ ಸ್ಖಲನನಾಳ ಅಥವಾ ಶಿಶ್ನದ ಮೂಲಕ ಸೇರಿಸುತ್ತವೆ. ಕೆಲವು ಪ್ರಭೇದಗಳಲ್ಲಿ ಸ್ವಯಂ ನಿಷೇಚನವೂ ಬಹಳಷ್ಟು ಪ್ರಭೇದಗಳಲ್ಲಿ ಅನ್ಯ ನಿಷೇಚನವೂ ನಡೆಯುತ್ತವೆ. ಪರಾವಲಂಬಿ ಹುಳುಗಳಲ್ಲಿ ಸ್ವಯಂ ನಿಷೇಚನ ಸಾಮಾನ್ಯ. ಯುಗ್ಮಜ ಬೆಳೆದು ಲಾರ್ವವಾಗಿ ಮಾರ್ಪಡುತ್ತದೆ. ಚಪ್ಪಟೆ ಹುಳುಗಳ ಲಾರ್ವಗಳಲ್ಲಿ ಹಲವಾರು ವಿಧ. ಕೆಲವು ಪರಾವಲಂಬಿ ಹುಳುಗಳ ಲಾರ್ವಗಳಲ್ಲಿ ಬೆಳವಣಿಗೆಯ ಹಂತಗಳಿವೆ. ಕೆಲವು ಪ್ರಭೇದಗಳಲ್ಲಿ ಲಾರ್ವಗಳೂ ಪ್ರಜನನದಲ್ಲಿ ತೊಡಗುತ್ತವೆ. ಒಂದೇ ಬಾರಿಗೆ ಲಕ್ಷಾಂತರ ಮೊಟ್ಟೆಗಳು ನಿಷೇಚನೆಗೊಳ್ಳುವುದರ ಜೊತೆಗೆ ಲಾರ್ವಗಳಿಗೆ ಪ್ರಜನನ ಸಾಮರ್ಥ್ಯ ಇರುವುದರಿಂದ ಇವುಗಳ ಪರಾವಲಂಬಿ ಜೀವನ ಯಶಸ್ವಿಯಾಗಲು ಅನುಕೂಲವಾಗಿದೆ.

ದುಂಡು ಹುಳುಗಳು ಸಾಮಾನ್ಯವಾಗಿ ಏಕಲಿಂಗಿಗಳು. ಗಂಡು ಮತ್ತು ಹೆಣ್ಣುಗಳು ಹೊರನೋಟಕ್ಕೆ ವಿವಿಧ ತೆರನಾಗಿದ್ದು, ಇವುಗಳಲ್ಲಿ ಲೈಂಗಿಕ ರೂಪತೆ ಸ್ಪಷ್ಟವಾಗಿದೆ. ಗಂಡುಹುಳುಗಳು ಹೆಣ್ಣಿಗಿಂತ ಚಿಕ್ಕ ಗಾತ್ರದವು. ಇವುಗಳ ಪ್ರಜನನಾಂಗಗಳು ಸರಳ ಮಾದರಿಯವು. ವೃಷಣ ಅಥವಾ ಅಂಡಾಶಯ ಕೊಳವೆಯ ಆಕಾರದಲ್ಲಿದ್ದು ಉದ್ದವಾಗಿ ಸುತ್ತಿಕೊಂಡಿರುವ ನಾಳಗಳ ತುದಿಯಲ್ಲಿದೆ. ಗಂಡು ಪ್ರಾಣಿಯಲ್ಲಿ ಈ ನಾಳಗಳನ್ನು ವೀರ್ಯಾಣುವಾಹಕವೆಂದು ಹೆಣ್ಣಿನಲ್ಲಿ ಅಂಡಾಣುವಾಹಕವೆಂದು ಕರೆಯಲಾಗುವುದು. ಹೆಣ್ಣಿನಲ್ಲಿ ಅಂಡಾಣು ವಾಹಕದ ಆದಿ ಭಾಗ ಗರ್ಭಾಶಯವಾಗಿ ಮಾರ್ಪಾಟಾಗಿದೆ. ಗರ್ಭಾಶಯದಲ್ಲಿ ನಿಷೇಚಿತ ಮೊಟ್ಟೆಗಳ ಸಂಗ್ರಹವಿದೆ. ಕೆಲವು ಪ್ರಭೇದಗಳು ಮೊಟ್ಟೆಗಳನ್ನಿಡುತ್ತವೆ. ಕೆಲವು ಪ್ರಭೇದಗಳಲ್ಲಿ ಬೆಳವಣಿಗೆ ಗರ್ಭಾಶಯದಲ್ಲಿಯೇ ನಡೆದು ಲಾರ್ವ ಹೊರಬರುತ್ತದೆ. ಸಂಭೋಗವಾಗುವಾಗ ವೀರ್ಯಾಣುಗಳು ಗಂಡಿನ ಜನನಾಂಗಗಳ ಮೂಲಕ ಹೆಣ್ಣಿನ ಜನನಾಂಗವನ್ನು ಸೇರುತ್ತವೆ. ಪ್ರತಿ ದುಂಡುಹುಳು ಒಂದು ಬಾರಿಗೆ ಲಕ್ಷಾಂತರ ಮೊಟ್ಟೆಗಳನ್ನು ಉತ್ಪಾದಿಸುತ್ತದೆ. ಕೆಲವು ದುಂಡುಹುಳುಗಳ ಪ್ರಭೇದಗಳಲ್ಲಿ ವೀರ್ಯಾಣು ಅಮೀಬ ಆಕಾರದಲ್ಲಿದೆ. ಸಂಭೋಗ ಕಾಲದಲ್ಲಿ ಗಂಡು ಹೆಣ್ಣು ಹುಳುವನ್ನು ಸೂಚ್ಯಂಗಗಳಿಂದ ಭದ್ರವಾಗಿ ಹಿಡಿದು ತನ್ನ ಸ್ಖಲನ ನಾಳವನ್ನು ಹೆಣ್ಣಿನ ಜನನಾಂಗದೊಳಗೆ ತೂರುತ್ತದೆ. ಕೆಲವು ದುಂಡುಹುಳುಗಳಲ್ಲಿ ಅಲ್ಪಾವಧಿಯ ಲಾರ್ವ ಹಂತವಿದೆ.

ಕೆಲವು ದುಂಡುಹುಳುಗಳಲ್ಲಿ ಲಿಂಗ ಬದಲಾವಣೆ ಇದೆ. ಸ್ವತಂತ್ರ ಜೀವನ ನಡೆಸುವ ಹುಳುಗಳಲ್ಲಿ ಲಿಂಗ ಬದಲಾವಣೆ ಸಾಮಾನ್ಯ. ಕೆಲವು ಪ್ರದೇಶದಲ್ಲಿ ವಾಸಿಸುವ ನಿರ್ದಿಷ್ಟ ಲಿಂಗದ ಪ್ರಾಣಿಗಳು ಹೆಚ್ಚು ಸಂಖ್ಯೆಯಲ್ಲಿರುವಾಗ, ಅವುಗಳಲ್ಲಿ ಕೆಲವು ತಮ್ಮ ಲಿಂಗಗಳನ್ನು ಬದಲಾಯಿಸಿಕೊಳ್ಳುತ್ತವೆ. ಲಿಂಗ ಬದಲಾವಣೆಯಿಂದ ಕೆಲವು ಸಂದರ್ಭಗಳಲ್ಲಿ ಅಂತರಲಿಂಗಿಗಳೂ ಹುಟ್ಟಿಕೊಳ್ಳುತ್ತವೆ.ಬಿ

ವಲಯವಂತಗಳಲ್ಲಿ ಚೆನ್ನಾಗಿ ಬೆಳೆದ ದೇಹಾವಕಾಶವಿದೆ. ಈ ಅವಕಾಶ ಭಿತ್ತಿಗಳಲ್ಲಿ ಜನನಗ್ರಂಥಿಗಳಿವೆ. ಕೆಲವು ವಲಯ ವಂತಗಳಲ್ಲಿ ಜನನ ಗ್ರಂಥಿಗಳು ಹಲವಾರು ಉಂಗುರಗಳಲ್ಲಿವೆ. ಪಾಲಿಕೀಟಗಳಲ್ಲಿ ಇದು ಸಾಮಾನ್ಯ. ಉಳಿದ ವಲಯ ವಂತಗಳಲ್ಲಿ ಜನನ ಗ್ರಂಥಿಗಳು ಒಂದೆರಡು ನಿರ್ದಿಷ್ಟ ಉಂಗುರಗಳಲ್ಲಿ ಮಾತ್ರ ಇರುತ್ತವೆ. ಪಾಲಿಕೀಟಗಳು ಏಕಲಿಂಗಿಗಳು. ವೃಷಣ ಮತ್ತು ಅಂಡಾಶಯಗಳು ಎಲ್ಲ ಉಂಗುರಗಳಲ್ಲಿರದಿದ್ದರೂ ವೀರ್ಯಾಣು ಮತ್ತು ಅಂಡಾಣುಗಳು ದೇಹಾವಕಾಶದ ಎಲ್ಲ ಭಾಗಗಳಲ್ಲೂ ತುಂಬಿಕೊಂಡಿವೆ. ಪಾಲಿಕೀಟಗಳಲ್ಲಿ ನಿಷೇಚನ ದೇಹದ ಹೊರಗೆ ನಡೆಯುತ್ತದೆ. ಕೆಲವು ಪ್ರಭೇದಗಳಲ್ಲಿ ಪ್ರಜನನ ಚಾಂದ್ರಮಾನ ಋತು ಚಕ್ರಗಳನ್ನು ಅವಲಂಬಿಸಿದೆ. ಸಂತಾನವೃದ್ಧಿ ಕಾಲದಲ್ಲಿ ಇವುಗಳ ದೇಹದ ಮುಂಭಾಗ ಏಟೋಕ್ ಮತ್ತು ಹಿಂಭಾಗ ಎಪಿಟೋಕ್ ಎರಡು ಭಾಗಗಳಾಗಿ ರೂಪುಗೊಳ್ಳುತ್ತದೆ. ಜನನ ಗ್ರಂಥಿಗಳು ಹಿಂಭಾಗದ ಎಪಿಟೋಪುಗಳಲ್ಲಿ ಬೆಳೆಯುತ್ತವೆ. ಒಂದು ನಿರ್ದಿಷ್ಟ ಭಾಗದಲ್ಲಿ (ಪೀಸ್) ಎಪಿಟೋಕ್ ಭಾಗ ಏಟೋಕ್ ಭಾಗದಿಂದ ಬೇರ್ಪಟ್ಟು, ನೀರಿನಲ್ಲಿ ಈಜುತ್ತಿರುತ್ತವೆ. ಹೆಣ್ಣು ಎಪಿಟೋಕ್ ಗಂಡು ಎಪಿಟೋಕ್‌ನ್ನು ವೀರ್ಯಾಣುಗಳ ಬಿಡುಗಡೆಗೆ ಪ್ರಚೋದಿಸುತ್ತದೆ. ವೀರ್ಯಾಣುಗಳು ಹೊರಬಂದ ನಂತರ ಅಂಡಾಣುಗಳು ನೀರಿನಲ್ಲಿ ಬಿಡುಗಡೆಯಾಗುವುವು. ದೇಹದ ಹೊರಗೆ ನಿಷೇಚನೆ



ಹೆಟಿರೊ ನೀರಿಸ್

ನಡೆದು ಯುಗ್ಮಜಗಳು, ಶಿಲಿಕಾಂಗಗಳ ವಲಯಗಳನ್ನು ಹೊಂದಿರುವ 'ಟ್ರೋಖೊಫೋರ್' ಲಾರ್ವ ಬೆಳೆಯುತ್ತದೆ. ಈ ಲಾರ್ವ ರೂಪ ಪರಿವರ್ತನೆಯಾಗಿ ಪ್ರಬುದ್ಧ ಜೀವಿಯಾಗುತ್ತದೆ.

ಎರೆ ಹುಳುಗಳು ದ್ವಿಲಿಂಗಿಗಳು. ಇವುಗಳಲ್ಲಿ ಜನನ ಗ್ರಂಥಿಗಳು ನಿರ್ದಿಷ್ಟ ಉಂಗುರಗಳಲ್ಲಿ ಮಾತ್ರ ಇವೆ. ವೀರ್ಯಾಣುಗಳು ವೀರ್ಯಾಣು ಕೋಶಗಳಲ್ಲಿಯೂ, ಅಂಡಾಣುಗಳು ಅಂಡಾಣು ಕೋಶಗಳಲ್ಲಿ ಸಂಗ್ರಹವಾಗಿವೆ. ಎರಡು ಅಥವಾ ಮೂರು ಜೊತೆ ವೃಷಣ ಮತ್ತು ಅಂಡಾಶಯಗಳಿದ್ದು ಅವುಗಳಿಂದ ನಾಳಗಳು ಹೊರಡುತ್ತವೆ. ಈ ನಾಳಗಳ ಮೂಲಕ ವೀರ್ಯಾಣುಗಳು, ವೀರ್ಯಾಣುಧಾರಕಗಳನ್ನು ಸೇರುತ್ತವೆ. ಜಿಗಣೆಗಳು ಏಕಲಿಂಗಿಗಳಾಗಿದ್ದು ಒಂದು ಜೊತೆ ಅಂಡಕೋಶ ಅಥವಾ ಕೆಲವು ಜೊತೆ ವೃಷಣಗಳನ್ನು ಪಡೆದಿವೆ. ನಾಳಗಳು ಎರೆಹುಳುಗಳ ನಾಳಗಳಂತೆಯೇ ಇವೆ.


ಟ್ರೋಕೋಫೋರ್ ಲಾರ್ವ

ಎರೆಹುಳುಗಳಲ್ಲಿ ಕೆಲವು ಉಂಗುರಗಳು ಪರಸ್ಪರ ಸೇರಿಕೊಂಡು ಗ್ರಂಥಿಗಳಿಂದ ಕೂಡಿದ 'ಕ್ಲೈಟೆಲ್ಲಮ್' ಆಗಿ ಮಾರ್ಪಟ್ಟಿವೆ. ಸಂಭೋಗ ಕಾಲದಲ್ಲಿ ಲೋಳೆಯಂಥ ವಸ್ತು ಇದರಿಂದ ಸ್ರವಿಸುತ್ತದೆ. ಎರಡು ಎರೆಹುಳುಗಳು ಒಂದಕ್ಕೊಂದು ಅಂಟಿಕೊಳ್ಳಲು ಇದು ಸಹಾಯಕ. ವೀರ್ಯಾಣುಗಳು ಒಂದರಿಂದ ಇನ್ನೊಂದು ಹುಳುವನ್ನು ಸೇರಿ ವೀರ್ಯಾಣುಧಾರಕದಲ್ಲಿ ಸಂಗ್ರಹವಾಗುತ್ತವೆ. ನಂತರ ಕ್ಲೈಟೆಲ್ಲಮಿನಿಂದ ಗಟ್ಟಿಯಾದ ವಸ್ತು ಸ್ರವಿಸಿ ಮೊಟ್ಟೆಗಳ ಗೂಡಾಗಿ ಪರಿವರ್ತನೆಗೊಳ್ಳುತ್ತದೆ. ಹುಳುವಿನ ವಿಶಿಷ್ಟ ಚಲನೆಯಿಂದ ಈ ಗೂಡು ದೇಹದ ಮುಂಭಾಗಕ್ಕೆ ಚಲಿಸುತ್ತದೆ. ಆಗ ಇದು ವೀರ್ಯಾಣುಧಾರಕವನ್ನು ದಾಟುವಾಗ ವೀರ್ಯಾಣುಗಳಿಂದ ಮೊಟ್ಟೆಗಳು ನಿಷೇಚನೆಗೊಳ್ಳುತ್ತವೆ. ನಂತರ ಗೂಡು ಎರೆಹುಳುವಿನಿಂದ ಬೇರ್ಪಡುವುದು. ಗೂಡುಗಳ ಎರಡೂ ತುದಿಗಳು ಮುಚ್ಚಿಕೊಂಡು ಮೊಟ್ಟೆಗಳ ಮುಂದಿನ ಬೆಳವಣಿಗೆ ಈ ಗೂಡಿನ ಒಳಗೆ ನಡೆಯುತ್ತದೆ. ಹಲವು ಜಿಗಣೆಗಳಲ್ಲಿ ಈ ಗೂಡನ್ನು ಕಾಣಬಹುದು. ಜಿಗಣೆ ಜಾತಿಯ ಇನ್ನು ಕೆಲವು ಪ್ರಭೇದಗಳು ಶಿಶ್ನಗಳಿಂದ ವೀರ್ಯಾಣುಗಳನ್ನು ನೇರವಾಗಿ ಹೆಣ್ಣಿನ ಜನನಾಂಗದೊಳಕ್ಕೆ ಸೇರಿಸುತ್ತವೆ. ಯುಗ್ಮಜ ಬೆಳೆದು ಮರಿ ಜಿಗಣೆ ಹುಳುವಾಗಿ ಹೊರಬರುತ್ತದೆ. ಲಾರ್ವ ಹಂತ ಈ ಜೀವಿಗಳ ಜೀವನ ಚಕ್ರದಲಿಲ್ಲ.

ಮೃದ್ವಂಗಿಗಳು ವಿಕಾಸದ ದೃಷ್ಟಿಯಿಂದ ವಲಯವಂತುಗಳಿಗೆ ಸಮೀಪ ಸಂಬಂಧಿಗಳು. ಈ ಪ್ರಾಣಿಗಳಲ್ಲಿ ದೇಹಾವಕಾಶ ಪೆರಿಕಾರ್ಡಿಯಮ್, ಜನನಗ್ರಂಥಿ ಮತ್ತು ಶೋಧಕ ಅವಕಾಶಗಳಿಗೆ ಮಾತ್ರ ಸೀಮಿತವಾಗಿದೆ. ಮೃದ್ವಂಗಿಗಳಲ್ಲಿ ಲಿಂಗಾಣು ಸಾಗಣೆ ನಾಳಗಳಿವೆ. ಉದರ ಪಾದಿಗಳಲ್ಲಿ ಒಂದು ಜನನಗ್ರಂಥಿ ಇದೆ. ದ್ವಿಲಿಂಗಿಗಳಲ್ಲಿ ಅಂಡಾಣು ಮತ್ತು ವೀರ್ಯಾಣುಗಳು ಒಂದೇ ನಾಳದ ಮೂಲಕ ಹೊರಸಾಗುತ್ತವೆ. ಈ ನಾಳದ ತುದಿಯಲ್ಲಿ ಸಂಭೋಗಾಂಗ ಇದೆ. ಇಚ್ಚಿಪ್ಪು ಪ್ರಾಣಿಗಳಲ್ಲಿ ಅಥವಾ ಪೆಲಿಸಿಪಾಡುಗಳಲ್ಲಿ ಏಕಲಿಂಗಿ, ದ್ವಿಲಿಂಗಿಗಳೆರಡೂ ಇವೆ. ಇವುಗಳಲ್ಲಿ ಎರಡು ಜನನ ಗ್ರಂಥಿಗಳಿವೆ. ಇವುಗಳ ನಾಳಗಳು ವಿಸರ್ಜನಾಂಗಗಳ ನಾಳಗಳೊಂದಿಗೆ ಜೊತೆಗೂಡಿವೆ. ಶಿರಪಾದಿಗಳು ಸಾಮಾನ್ಯವಾಗಿ ಏಕಲಿಂಗಿಗಳು. ಇವುಗಳಲ್ಲಿ ಒಂದು ವೃಷಣ ಅಥವಾ ಅಂಡಾಶಯವಿದ್ದು, ವೀರ್ಯಾಣು ಅಥವಾ ಅಂಡಾಣುಗಳು ಪೆರಿಕಾರ್ಡಿಯಮ್ ಅವಕಾಶದ ಮೂಲಕ ಹಾದು ಲಿಂಗನಾಳಗಳ ಮೂಲಕ ಹೊರಬೀಳುತ್ತವೆ. ಇವುಗಳ ಅಂಡಾಣುವಾಹಕ ನಾಳಗಳಲ್ಲಿ ಕವಚಗಳನ್ನು ಸ್ರವಿಸುವ ಗ್ರಂಥಿಗಳಿವೆ. ಗಂಡು ಶಿರಪಾದಿಗಳಲ್ಲಿ ವೀರ್ಯಾಣು ಕೋಶಿಕೆಗಳಿದ್ದು, ಅದರಲ್ಲಿ ವೀರ್ಯಾಣು ಸಂಪುಟ ರೂಪುಗೊಂಡು ವೀರ್ಯಾಣುಗಳನ್ನು ಸಂಗ್ರಹಿಸುತ್ತದೆ. ಸಂಭೋಗಕಾಲದಲ್ಲಿ ಈ ಸಂಪುಟಗಳು ಹೆಣ್ಣಿನ ಜನನಾಂಗಗಳಿಗೆ ವರ್ಗಾವಣೆಯಾಗಿ ನಿಷೇಚನೆಯ ಸಮಯದಲ್ಲಿ ವೀರ್ಯಾಣುಗಳನ್ನು ಹೊರಹಾಕುತ್ತವೆ.

ಕೆಲವು ಉದರಪಾದಿಗಳಲ್ಲಿ ವಿಭಿನ್ನ ಗಾತ್ರದ ವೀರ್ಯಾಣುಗಳು ಉತ್ಪತ್ತಿಯಾಗುತ್ತವೆ. ದೊಡ್ಡ ಗಾತ್ರದ ವೀರ್ಯಾಣುಗಳು ಚಿಕ್ಕ ಗಾತ್ರದವನ್ನು ಅಂಡಾಣುವಾಹಕ ನಾಳಗಳ ಮೂಲಕ ಅಂಡಾಣುಗಳಿಗೆ ತಲಪಿಸುತ್ತವೆ. ದೊಡ್ಡ ವೀರ್ಯಾಣುಗಳ ನ್ಯೂಕ್ಲಿಯಸುಗಳು ಅಪಭ್ರಂಶವಾಗಿವೆ. ಶಿರಪಾದಿಗಳಲ್ಲಿ ವೀರ್ಯಾಣು ಸಾಗಣೆ ಕಾರ್ಯಕ್ಕೆ ತಕ್ಕಂಥ ಕೆಲವು ಬಾಹುಗಳಿವೆ. ಬಸವನ ಹುಳುಗಳ ಕೆಲವು ಪ್ರಭೇದಗಳಲ್ಲಿ ಸಂಭೋಗಕ್ಕೆ ಮುಂಚೆ ಹೆಣ್ಣಿನ ದೇಹದ ಒಳಕುಹರದಲ್ಲಿ ಸುಣ್ಣದ ಒಂದು ಕಣೆ (ಡಾರ್ಟ್) ರಚಿತವಾಗುತ್ತದೆ. ಒಂದು ವೇಳೆ ಬಸವನಹುಳು ಸಂಭೋಗಕ್ಕೆ ಸಿದ್ಧವಾಗಿದ್ದರೂ ಈ ಕಣೆ ರೂಪುಗೊಳ್ಳದಿದ್ದರೆ ಸಂಭೋಗ ನಡೆಯುವುದಿಲ್ಲ.

ದುಂಡುಹುಳುಗಳಲ್ಲಿರುವಂತೆ ಮೃದ್ವಂಗಿಗಳಲ್ಲೂ ಲಿಂಗ ಬದಲಾವಣೆ ಇದೆ. ಕೆಲವು ಪ್ರಭೇದಗಳಲ್ಲಿ ಅಂಡಾಶಯ ಮತ್ತು ವೃಷಣ ಇದೆ. ಇವುಗಳಲ್ಲಿ ಆವಶ್ಯಕತೆಗೆ ಅನುಸಾರವಾಗಿ ವೀರ್ಯಾಣು ಅಥವಾ ಅಂಡಾಣುಗಳ ಉತ್ಪತ್ತಿಯಾಗುತ್ತದೆ. ಕೆಲವು ಏಕಲಿಂಗಿ ಮೃದ್ವಂಗಿಗಳಲ್ಲಿ ಒಂದೇ ರೀತಿಯ ಜನನ ಗ್ರಂಥಿಗಳಿದ್ದು, ಇನ್ನೊಂದು ತರಹದ ಜನನಗ್ರಂಥಿಗಳು ಅಪೂರ್ಣಾವಸ್ಥೆಯಲ್ಲಿರುತ್ತವೆ. ಒಂದು ಲಿಂಗದ ಜನನಗ್ರಂಥಿ ನಶಿಸಿಹೋದರೆ ಅಥವಾ ಯಾವುದೇ ಕಾರಣದಿಂದ ಅಪಭ್ರಂಶಗೊಂಡರೆ ಇನ್ನೊಂದು ಲಿಂಗದ ಜನನಗ್ರಂಥಿಗಳು ಕೆಲಸ ಮಾಡುತ್ತವೆ. ಮುತ್ತಿನ ಚಿಪ್ಪು ಪ್ರಾಣಿಗಳಲ್ಲಿ ವಾತಾವರಣದ ಉಷ್ಣತೆ ಅಥವಾ ಪರಿಸರದಲ್ಲಿರುವ ಆಹಾರಗಳಿಂದ ಲಿಂಗ ನಿರ್ಧಾರವಾಗುತ್ತದೆ. ಉದರ ಪಾದಿಗಳ ಒಂದು ಪ್ರಭೇದದಲ್ಲಿ ಸಮೂಹ ಜೀವನ ಕ್ರಮವಿದ್ದು, ಜೀವಿಗಳು ಒಂದರ ಮೇಲೊಂದು ಪೇರಿಸಿಟ್ಟ ನಾಣ್ಯಗಳಂತೆ ಜೀವಿಸುವುವು. ಈ ಸಮೂಹದ ಕೆಳಭಾಗದಲ್ಲಿರುವ ಮೃದ್ವಂಗಿಗಳು ಹೆಣ್ಣುಗಳಾಗಿ, ಮಧ್ಯೆ ಇರುವ ಪ್ರಾಣಿಗಳು ಅಂತರ ಲಿಂಗಿಗಳಾಗಿ ಮೇಲ್ಭಾಗದಲ್ಲಿರುವಂಥವು ಗಂಡುಗಳಾಗಿರುತ್ತವೆ. ಹೆಚ್ಚು ಜೀವಿಗಳ ಸಮೂಹ ಸೇರಿದಾಗ, ಮೇಲ್ಭಾಗದ ಕೆಲವು ಗಂಡುಗಳು ಅಂತರಲಿಂಗಿಗಳಾಗಿ, ಕೆಳಭಾಗದಲ್ಲಿರುವ ಅಂತರಲಿಂಗಿಗಳು ಹೆಣ್ಣಾಗಿ ಪರಿವರ್ತನೆ ಹೊಂದುತ್ತವೆ. ಇಂಥ ಪ್ರಾಣಿಗಳಲ್ಲಿ ಸ್ತ್ರೀತತ್ವ ಅಥವಾ ಪುರುಷತ್ವ ಪರಿಸರವನ್ನು ಅವಲಂಬಿಸಿದೆ.



ಗಂಡು ಬೊನಿಲಿಯ ಹೆಣ್ಣು ಬೊನಿಲಿಯ

ಸಂಧಿಪದಿಗಳಲ್ಲಿ ಅಸಂಖ್ಯಾತ ಪ್ರಭೇದಗಳಿವೆ. ಇವುಗಳ ಜನನಾಂಗಗಳಲ್ಲಿಯೂ ಅಪಾರ ವೈವಿಧ್ಯವಿದೆ. ಸಂಧಿಪದಿಗಳಲ್ಲಿ ಹೆಚ್ಚಿನವು ಏಕಲಿಂಗಿಗಳು. ಕೆಲವು ಸಂಧಿಪದಿಗಳಲ್ಲಿ ಅನಿಷೇಕ ಜನನ ಕ್ರಮವಿದೆ. ಮೂಲರಚನೆಯಲ್ಲಿ ಸಂಧಿಪದಿಗಳ ಪ್ರಜನನಾಂಗಗಳು ಉಳಿದ ಕಶೇರುಕಗಳನ್ನು ಹೋಲುತ್ತವಾದರೂ ಪರಿಸರ, ಜೀವನಕ್ರಮ ಹಾಗೂ ಸಂಭೋಗ ರೀತಿಗಳನ್ನು ಅವಲಂಬಿಸಿ ಪ್ರಜನನಾಂಗಗಳ ರಚನೆಯಲ್ಲಿ ಸಾಕಷ್ಟು ಮಾರ್ಪಾಟುಗಳಿವೆ.

ಕಠಿಣ ಚರ್ಮಿಗಳು ಸಾಮಾನ್ಯವಾಗಿ ಏಕಲಿಂಗಿಗಳು. ಇವುಗಳಲ್ಲಿ ಜನನ ಗ್ರಂಥಿಗಳು ಜೊತೆಯಾಗಿವೆ. ಗ್ರಂಥಿಗಳ ಕೆಳಭಾಗದಲ್ಲಿ ಲಿಂಗಾಣುಧಾರಕಗಳಿದ್ದು, ಇವುಗಳ ಮೂಲಕ ಲಿಂಗಾಣುಗಳು ಹರಿದುಹೋಗುತ್ತವೆ. ಹೆಣ್ಣುಗಳಲ್ಲಿ ಅಂಡಾಣುವಾಹಕ ನಾಳಗಳ ತುದಿಯಲ್ಲಿ ಹೊರಸಂಚಿಯಂತಿರುವ ಚಿಕ್ಕ ವೀರ್ಯ ಪಾತ್ರವಿದೆ. ಸಂಭೋಗ ಕಾಲದಲ್ಲಿ ಗಂಡುಪ್ರಾಣಿ ಹೆಣ್ಣನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳಲು ಅವಶ್ಯವಾದ ಅನುಬಂಧಗಳಿವೆ. ಕೆಲವು

ಪ್ರಭೇದಗಳಲ್ಲಿ ಅನಿಷೇಕ ಜನನವಿದೆ. ನೀರು ಚಿಗಟಗಳಲ್ಲಿ ಒಂದು ಜೊತೆ ಜನನ ಗ್ರಂಥಿಗಳಿವೆ. ಕೆಲವು ಕಠಿಣ ಚರ್ಮಿಗಳಲ್ಲಿ ಅಂಡಾಣುವಾಹಕ ನಾಳದ ತುದಿ ಭಾಗ ಅಂಡಾಣು ಕೋಶ ಆಗಿದ್ದು, ಅಂಡಾಣುಗಳು ಇಲ್ಲಿ ಸಂಗ್ರಹವಾಗುತ್ತವೆ. ವೀರ್ಯಾಣುಗಳು ವೀರ್ಯಾಣುಧಾರಕದಲ್ಲಿ ಸಂಗ್ರಹವಾಗುತ್ತವೆ. ಸಂಭೋಗ ಕಾಲದಲ್ಲಿ ಇಡೀ ವೀರ್ಯಾಣುಧಾರಕ ಹೆಣ್ಣಿನ ಜನನಾಂಗವನ್ನು ಸೇರುತ್ತದೆ. ಪರಾವಲಂಬಿ ಕೋಪಿಪಾಡ್‌ಗಳಲ್ಲಿ ಲೈಂಗಿಕ ದ್ವಿರೂಪತೆ ಹೆಚ್ಚು ಸ್ಪಷ್ಟ. ಕೆಲವು ಪ್ರಭೇದಗಳಲ್ಲಿ ಹೆಣ್ಣನ್ನು ಕೋಪಿಪಾಡ್ ಪ್ರಾಣಿ ಎಂದು ಗುರುತಿಸುವುದೇ ಕಷ್ಟವಾಗುತ್ತದೆ. ಕೇವಲ ಅವುಗಳ ಅಂಡಾಣುಧಾರಕವನ್ನು ಅವಲಂಬಿಸಿ ಗುರುತಿಸಬಹುದು. ಕೆಲವು ಪ್ರಭೇದಗಳಲ್ಲಿ ಗಂಡು ಸ್ವತಂತ್ರ ಜೀವಿಯಾದರೆ ಹೆಣ್ಣು ಪರತಂತ್ರ ಜೀವನ ನಡೆಸುತ್ತದೆ. ಬಾರ್ನಕಲ್‌ಗಳು ಉಳಿದ ಕಠಿಣ ಚರ್ಮಿಗಳಿಗಿಂತ ಭಿನ್ನ. ದ್ವಿಲಿಂಗತ್ವ ಇವುಗಳಲ್ಲಿ ಸಾಮಾನ್ಯ. ಇದು ಅವುಗಳ ಸ್ಥಾವರ ಜೀವನಕ್ಕೆ ಅನುಕೂಲವಾದ ಹೊಂದಾಣಿಕೆ ಎಂದು ಹೇಳಬಹುದು. ದ್ವಿಲಿಂಗತ್ವವಿದ್ದರೂ ಇವುಗಳಲ್ಲಿ ಅನ್ಯನಿಷೇಚನೆ ಇದೆ. ಅಂಡಾಶಯ ಶರೀರದ ತಳದಲ್ಲಿದ್ದು, ಅಂಡಾಣುಧಾರಕ ಮಧ್ಯದ ಅನುಬಂಧಗಳ ಮೊದಲನೆಯ ಜೊತೆಯಲ್ಲಿ ಸ್ಥಿತವಾಗಿದೆ. ಗಂಡು ಬಾರ್ನಕಲುಗಳಲ್ಲಿ ವೃಷಣದಿಂದ ಹೊರಟ ನಾಳಗಳು ವೀರ್ಯಾಣು ಕೋಶಗಳನ್ನು ಸೇರುತ್ತವೆ. ವೀರ್ಯಾಣು ಕೋಶದಿಂದ ಉದ್ಭವಾದ ವೀರ್ಯಾಣುನಾಳ ಶಿಶ್ನದ ಮೂಲಕ ವೀರ್ಯಾಣುಗಳನ್ನು ಪಕ್ಕದ ಇನ್ನೊಂದು ಬಾರ್ನಕಲ್‌ನ ಮ್ಯಾಂಟಲ್ ಕುಹರಕ್ಕೆ ಸಾಗಿಸುತ್ತದೆ. ಅಂಡಾಣುವಾಹಕ ನಾಳದ ತುದಿಯಲ್ಲಿ ಅಂಡಾಣು ಕೋಶಕವಿದ್ದು ಅದರಲ್ಲಿ ಅಂಡಾಣುಗಳು ನಿಷೇಚನಾ ಪೂರ್ವ ಬೆಳವಣಿಗೆಗೆ ಒಳಗಾಗುತ್ತವೆ. ಕೆಲವು ಏಕಲಿಂಗಿ ಬಾರ್ನಕಲ್‌ಗಳಲ್ಲಿ ಗಂಡುಗಳು ಕುಬ್ಜವಾಗಿದ್ದು, ಹೆಣ್ಣಿನ ದೇಹದಲ್ಲಿ ಸೇರಿಕೊಂಡು ಪರತಂತ್ರ ಜೀವನವನ್ನು ನಡೆಸುತ್ತವೆ. ಇವುಗಳಲ್ಲಿ ವೃಷಣದ ಹೊರತು ಉಳಿದೆಲ್ಲ ಅಂಗಗಳು ಕ್ಷೀಣಿಸಿವೆ. ಕೆಲವು ದ್ವಿಲಿಂಗ ಪ್ರಭೇದಗಳಲ್ಲಿ ಗಂಡುಗಳು ಸಹಾಯಕ ವೀರ್ಯಾಣುಗಳನ್ನು ಉತ್ಪಾದಿಸುತ್ತವೆ. ಉಭಯಪಾದಿ ಹಾಗೂ ಸಮಪಾದಿಗಳಲ್ಲಿ ಸಂತಾನಕೋಣೆಗಳಿವೆ. ಪರಾವಲಂಬಿ ಸಮಪಾದಿಗಳಲ್ಲಿ ವಿಸ್ಮಯಕಾರಕ ಲೈಂಗಿಕತೆ ಕಂಡುಬರುತ್ತದೆ. ಇವುಗಳ ಲಾರ್ವಗಳು ಹಲವು ಬಾರಿ ಪೊರೆ ಕಳಚಿ ನಂತರ ಆತಿಥೇಯ ಕಠಿಣ ಚರ್ಮಿಯ ಕವಚಕ್ಕೆ ಅಂಟಿಕೊಳ್ಳುತ್ತವೆ. ಮೊದಲು ಅಂಟಿಕೊಳ್ಳುವ ಲಾರ್ವ ಗಾತ್ರದಲ್ಲಿ ಬೆಳೆದು ಹೆಣ್ಣು ಪ್ರಜನನಾಂಗಗಳನ್ನು ರೂಪಿಸಿಕೊಳ್ಳುತ್ತದೆ. ನಂತರ ಅಂಟಿಕೊಳ್ಳುವ ಎಲ್ಲ ಲಾರ್ವಗಳು ಗಂಡುಗಳಾಗಿ ಬೆಳೆಯುತ್ತವೆ. ಹೆಣ್ಣು ಸಮಪಾದಿಯನ್ನು ಆತಿಥೇಯದಿಂದ ಬೇರ್ಪಡಿಸಿದರೆ ಇನ್ನೊಂದು ಗಂಡು ಹೆಣ್ಣಾಗಿ ಪರಿವರ್ತನೆ ಹೊಂದುತ್ತದೆ. ಏಡಿಗಳಲ್ಲಿ ಹಾಗೂ ಲಾಬ್‌ಸ್ಟರ್‌ಗಳ ಕೆಲವು ಪ್ರಭೇದಗಳ ಹೆಣ್ಣುಗಳಲ್ಲಿ ವೀರ್ಯಾಣು ಪಾತ್ರೆ ದೇಹದ ಹೊರಗೂ ಇನ್ನು ಕೆಲವು ಪ್ರಭೇದಗಳಲ್ಲಿ ದೇಹದ ಒಳಭಾಗದಲ್ಲಿ ಇದೆ. ಗಂಡು ಏಡಿಗಳಲ್ಲಿ ವೀರ್ಯಾಣುಗಳನ್ನು ಸಾಗಿಸಲು ಯುಕ್ತ ಅನುಬಂಧಗಳು ಅಥವಾ ವೀರ್ಯಾಣುಧಾರಕವಿದೆ. ಎರಡನೆಯ ವಿಧದ ಪ್ರಭೇದಗಳಲ್ಲಿ ವೀರ್ಯಾಣುಧಾರಕಗಳು ನೇರವಾಗಿ ಹೆಣ್ಣಿಗೆ ಅಂಟಿಕೊಳ್ಳುತ್ತವೆ. ಏಡಿಗಳಲ್ಲಿ ಲಿಂಗ ಬದಲಾವಣೆ ಸಾಮಾನ್ಯ. ಕೆಲವು ಬಾರ್ನಕಲ್‌ಗಳು ಏಡಿಗಳ ಮೇಲೆ ಪರಾವಲಂಬಿ ಜೀವನ ನಡೆಸುತ್ತವೆ. ಇವು ಏಡಿಯ ದೇಹವನ್ನು ಪ್ರವೇಶಿಸುವಾಗ ಏಡಿಯ ಲಿಂಗ ಬದಲಾವಣೆಯಾಗುತ್ತದೆ. ಹೆಣ್ಣು ಗಂಡಾಗಿ ಪರಿವರ್ತನೆಗೊಳ್ಳುವುದು. ಈ ತೆರನ ಲಿಂಗ ಬದಲಾವಣೆಗೆ ಪರಾವಲಂಬಿಯ ಅಂಗಾಂಗಗಳು ಮತ್ತು ಕೆಲವು ಹಾರ್ಮೋನುಗಳು ಕಾರಣ.

ಕೀಟಗಳಲ್ಲಿ ದ್ವಿಲಿಂಗಿಗಳು ಕಡಿಮೆ. ಕೀಟಗಳ ಅಂಡಾಶಯಗಳಲ್ಲಿ ಹಲವಾರು ಅಂಡಾಶಯ ಸಂಚಿಗಳಿವೆ. ಸಂಚಿಗಳ ಮುಂಭಾಗದಲ್ಲಿ ಅಂಡಾಣು ಜನನ ಕೋಶಗಳು ಉತ್ಪತ್ತಿಯಾಗುತ್ತವೆ. ಅವು ಅಂಡಾಶಯ ಸಂಚಿಗಳ ಇನ್ನೊಂದು ತುದಿಯನ್ನು ತಲಪುವ ಹೊತ್ತಿಗೆ ಅಂಡಾಣು ನಿಷೇಚನೆಗೆ ಸಿದ್ಧವಾಗಿರುತ್ತದೆ. ಅಂಡಾಶಯದ ಹಿಂಭಾಗದಲ್ಲಿ ಅಂಡಾಣುವಾಹಕ ನಾಳವಿದ್ದು ಅದು ಪ್ರಜನನ ಕೋಣೆ ಅಥವಾ ಯೋನಿಯಲ್ಲಿ ಹೊರಬರುತ್ತದೆ. ಯೋನಿಯಲ್ಲಿ ಹಲವಾರು ಗ್ರಂಥಿಗಳಿದ್ದು, ಅದರ ಜೊತೆ ಒಂದು ವೀರ್ಯಾಣು ಪಾತ್ರೆ ಇರುತ್ತದೆ. ಕೆಲವು ಗ್ರಂಥಿಗಳ ಸ್ರಾವಕಗಳಿಂದ ಮೊಟ್ಟೆಗಳ ಸುತ್ತ ಭದ್ರವಾದ ಕವಚವೊಂದು ನಿರ್ಮಿತವಾಗುತ್ತದೆ. ಉದರ ಭಾಗದ 8 ಮತ್ತು 9 ನೆಯ ಖಂಡಗಳು ಸಂಭೋಗಕ್ಕೆ ಮತ್ತು ಮೊಟ್ಟೆಗಳನ್ನು ಇಡುವುದಕ್ಕೆ ತಕ್ಕಂತೆ ಮಾರ್ಪಾಟಾಗಿವೆ. ಒಂದು ಜೊತೆ ವೃಷಣಗಳ ಹಲವಾರು ವೀರ್ಯಾಣು ನಳಿಕೆಗಳನ್ನು ಪಡೆದಿವೆ. ವೀರ್ಯಾಣು ಬೆಳೆದಂತೆ, ಅದರ ಸುತ್ತ ಭದ್ರ ಕವಚ ರಚನೆಯಾಗುತ್ತದೆ. ನಂತರ ವೀರ್ಯಾಣುಗಳು ವೀರ್ಯಾಣುಕೋಶಕವನ್ನು ಸೇರುತ್ತವೆ. ವೀರ್ಯಾಣು ವಾಹಕ ನಾಳಗಳ ಹಿಂಭಾಗ ಸ್ಖಲನನಾಳಗಳಾಗಿ ಪರಿವರ್ತನೆಗೊಂಡು, ಅವುಗಳ ತುದಿಯಲ್ಲಿ ಸಂಭೋಗಕ್ಕೆ ಅವಶ್ಯಕವಾದ ಅಂಗವಿದೆ. ಸ್ಖಲನನಾಳಗಳ ಜೊತೆಗೆ ಎರಡು ಸಹಾಯಕ ಗ್ರಂಥಿಗಳಿವೆ. ಇವು ವೀರ್ಯ ಅಥವಾ ವೀರ್ಯಾಣುಧಾರಕದ ರಚನೆಗೆ ಸಹಾಯಕ. ಉದರ ಭಾಗದ 9 ಮತ್ತು 10ನೆ ಖಂಡಗಳು ವೀರ್ಯಾಣು ಸಾಗಣೆಗೆ ಹಾಗೂ ಸಂಭೋಗ ಕ್ರಿಯೆಗೆ ಸಹಾಯಕವಾಗುವಂತೆ ಮಾರ್ಪಾಟಾಗಿವೆ.

ಜೇಡಗಳಲ್ಲಿ ಮತ್ತು ಚೇಳುಗಳಲ್ಲಿ ಜನನಗ್ರಂಥಿಗಳು ನಾಳದಂಡ ಚೀಲಗಳಾಗಿವೆ. ಹೆಣ್ಣು ಚೇಳು ಮತ್ತು ಜೇಡಗಳಲ್ಲಿ ವೀರ್ಯಾಣುಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಅವಶ್ಯಕವಾದ ಅಂಗಗಳಿವೆ. ಗಂಡುಗಳ ಪ್ರಜನನಾಂಗಗಳ ತುದಿಯಲ್ಲಿ ಅನೇಕ ಗ್ರಂಥಿಗಳಿದ್ದು, ಅವು ವೀರ್ಯಾಣುಧಾರಕಗಳ ರೂಪಣೆಗೆ ಸಹಾಯ ಮಾಡುತ್ತವೆ.

ಸಂಧಿಪದಿಗಳಲ್ಲಿ ವೀರ್ಯಾಣು ಸಾಗಣೆ ಹಲವಾರು ರೀತಿಯಲ್ಲಿ ನಡೆಯುತ್ತದೆ. ಸಂಭೋಗಕ್ಕೆ ಮೊದಲು ಅತ್ಯಂತ ವಿಸ್ತೃತ ಹಾಗೂ ವಿಸ್ಮಯಕಾರಕ ಪ್ರಣಯಾಚರಣೆ ನಡೆಯುತ್ತದೆ. ಕೆಲವು ಪ್ರಭೇದಗಳ ಚೇಳುಗಳು ವೀರ್ಯಾಣುಧಾರಕವನ್ನು ದೇಹದಿಂದ ಹೊರಹಾಕಿದಾಗ ಅವು ನೆಲಕ್ಕೆ ಭದ್ರವಾಗಿ ಅಂಟಿಕೊಳ್ಳುತ್ತವೆ. ಹೆಣ್ಣು ಚೇಳು ಆಗ ವಿಶಿಷ್ಟ ರೀತಿಯ ಪ್ರಣಯ ನೃತ್ಯವಾಡುತ್ತ ವೀರ್ಯಾಣುಧಾರಕಗಳ ಮೇಲೆ ತನ್ನ ಹಿಂಭಾಗವನ್ನು ಬಲವಾಗಿ ಒತ್ತುತ್ತದೆ. ಆಗ ವೀರ್ಯಾಣುಧಾರಕ ಹೆಣ್ಣಿನ ಜನನಾಂಗವನ್ನು ಸೇರುತ್ತದೆ. ಜೇಡಗಳ ಪೆಡಿಪ್ಯಾಲ್ಪಿಯಲ್ಲಿ ಸುರುಳಿಯಾಕಾರದ ಗುಳ್ಳೆಯೊಂದಿದೆ. ಈ ಪೆಡಿಪಾಲ್ಪನ್ನು ಗಂಡು ತನ್ನ ಲಿಂಗಾಣುಧಾರಕದಲ್ಲಿ ಅದ್ದಿ ನಂತರ ಅದನ್ನು ಹೆಣ್ಣಿನ ಲಿಂಗಾಣುಧಾರಕದಲ್ಲಿ ಸೇರಿಸುವುದರಿಂದ ವೀರ್ಯಾಣುಗಳು ವೀರ್ಯಪಾತ್ರೆಯನ್ನು ಸೇರುತ್ತವೆ. ಹೆಣ್ಣು ರೇಷ್ಮೆಯಂಥ ನವುರಾದ ಎಳೆಗಳಿಂದ ಗೂಡನ್ನು ನಿರ್ಮಿಸಿ ಅದರಲ್ಲಿ ಅಂಡಾಣು ಮತ್ತು ವೀರ್ಯಾಣುಗಳನ್ನು ಸೇರಿಸಿ ಗೂಡನ್ನು ಕಲ್ಲು ಅಥವಾ ಎಲೆಗಳ ಮೇಲೆ ಅಂಟಿಸುತ್ತದೆ. ನಿಷೇಚಿತ ಮೊಟ್ಟೆಗಳ ಮುಂದಿನ ಬೆಳವಣಿಗೆ ಗೂಡಿನೊಳಗೆ ನಡೆಯುತ್ತದೆ. ಬಹಳಷ್ಟು ಸಂಧಿಪದಿಗಳಲ್ಲಿ ಲಾರ್ವ ಹಂತವಿದ್ದು ನಿಜವಾದ ರೂಪಪರಿವರ್ತನೆ ಇದೆ.

ಕಂಟಕಚರ್ಮಿಗಳಲ್ಲಿ ಜನನಗ್ರಂಥಿಗಳು, ಬಾಹುಗಳಿಂದ ನೇರವಾಗಿ ಸಮುದ್ರದ ನೀರಿನಲ್ಲಿ ತೂಗಾಡುತ್ತಿರುತ್ತವೆ. ಬಹುತೇಕ ಪ್ರಭೇದದ ಕಂಟಕ ಚರ್ಮಿಗಳು ಏಕಲಿಂಗಿಗಳು. ಇವುಗಳಲ್ಲಿ ಸಂತಾನ ಶಕ್ತಿ ಚೆನ್ನಾಗಿ ಅಭಿವೃದ್ಧಿಗೊಂಡಿವೆ. ಒಂದು ಹೆಣ್ಣು ನಕ್ಷತ್ರಮೀನು ಸಂತಾನ ಕಾಲದಲ್ಲಿ, ಗಂಟೆಗೆ ೧.೨೫ ದಶಲಕ್ಷ ಮೊಟ್ಟೆಗಳನ್ನಿಡುತ್ತದೆ. ಗಂಡು ನಕ್ಷತ್ರ ಮೀನು ಇದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವೀರ್ಯಾಣುಗಳನ್ನು ಉತ್ಪಾದಿಸುತ್ತದೆ. ಅಕಾರ್ನ್ ಹುಳುಗಳು ಲೈಂಗಿಕ ರೀತಿಯಲ್ಲಿ ಮಾತ್ರ ಪ್ರಜನನವನ್ನು ನಡೆಸುತ್ತವೆ. ವೀರ್ಯಾಣು ಅಥವಾ ಅಂಡಾಣುಗಳು ನೇರವಾಗಿ ಚಿಕ್ಕ ನಾಳಗಳ ಮೂಲಕ ಹೊರಬರುತ್ತವೆ. 2000 ದಿಂದ 3000 ಮೊಟ್ಟೆಗಳು ಅಂಟುದ್ರವದಿಂದ ಗುಂಪಾಗಿ ಕೂಡಿಕೊಂಡಿದ್ದು ಗುಂಪಾಗಿಯೇ ಹೊರಬೀಳುತ್ತವೆ.




ನಕ್ಷತ್ರ ಮೀನಿನ ಪ್ರಜನನಾಂಗ

ಕಂಟಕಚರ್ಮಿಗಳಲ್ಲಿ ಶಿಲಿಕಾಂಗಗಳ ವಲಯವನ್ನು ಹೊಂದಿರುವ ಲಾರ್ವ ಹಂತವಿದೆ. ಕೆಲವು ವರ್ಗಗಳಲ್ಲಿ ಲಾರ್ವದ ಒಂದೇ ಹಂತವೂ ಕೆಲವು ಪ್ರಭೇದಗಳಲ್ಲಿ ೪ ಅಥವಾ ೫ ಲಾರ್ವ ಹಂತಗಳಿವೆ. ಲಾರ್ವ ಕೆಲವು ದಿನಗಳ ಕಾಲ ನೀರಿನಲ್ಲಿ ತೇಲುತ್ತಾ, ಪ್ರೌಢಾವಸ್ಥೆ ಸೇರುತ್ತವೆ.

ಪ್ರೋಟೋಕಾರ್ಡೇಟುಗಳಲ್ಲಿ ಪ್ರಜನನ: ಇವುಗಳಲ್ಲಿ ಜನನ ಗ್ರಂಥಿಗಳು ದೇಹಾವಕಾಶದ ಭಿತ್ತಿಯಲ್ಲಿ ಬೆಳೆಯುತ್ತವೆ. ಲಿಂಗಾಣುಗಳು ದೇಹಾವಕಾಶದಲ್ಲಿ ಬಿಡುಗಡೆಯಾಗಿ ಅಲ್ಲಿಂದ ಸದಾ ಪರಿಚಲಿಸುತ್ತಿರುವ ನೀರಿನ ಮೂಲಕ ಸಮುದ್ರ ಸೇರುತ್ತವೆ. ಸಮುದ್ರ ನೀರಿನಲ್ಲಿ ನಿಷೇಚನೆ ನಡೆಯುತ್ತದೆ. ಯೂರೋಕಾರ್ಡೇಟುಗಳು ದ್ವಿಲಿಂಗಿಗಳು. ಇವುಗಳಲ್ಲಿ ಒಂದು ಅಂಡಾಶಯ ಮತ್ತು ಒಂದು ವೃಷಣ ಒಂದರ ಪಕ್ಕದಲ್ಲಿ ಇನ್ನೊಂದರಂತೆ ಇವೆ.

ಅಂಡಾಶಯದಲ್ಲಿ ಕೂಪ ಕೋಶಗಳಿಂದ ಕೂಡಿದ ಎರಡು ಪದರಗಳಿವೆ. ಮೊಟ್ಟೆ ಹೊರ ಬಂದ ನಂತರ ಕೋಶಗಳಲ್ಲಿ ವಾಯು ತುಂಬುವುದರಿಂದ ಮೊಟ್ಟೆಗಳು ತೇಲುವುದಕ್ಕೆ ಸಹಾಯವಾಗಿತ್ತದ್. ಯೂರೊಕಾರ್ಡೇಟುಗಳಲ್ಲಿ ಚಲನಶೀಲ ಲಾರ್ವವಿದ್ದು ಅಪಭ್ರಂಶ ರೂಪಾಂತರವನ್ನು ತೋರುತ್ತದೆ. ಹೆಮಿಕಾರ್ಡೇಟುಗಳಲ್ಲಿ ಲಾರ್ವಗಳು ಶಿಲಾಕಾಂಗಗಳ ವಲಯವನ್ನು ಹೊಂದಿದ್ದು ಕಂಟಕ ಚರ್ಮಿಗಳ ಅಥವಾ ವಲಯವಂತಗಳ ಲಾರ್ವಗಳಂತೆ ಕಾಣುತ್ತವೆ. ಈ ಲಾರ್ವಗಳಿಗೆ 'ಟಾರ್ನೇರಿಯ' ಎಂದು ಹೆಸರು. ಪ್ರಜೀವಿ ಕಶೇರುಕಗಳ ಜೀವನವು ಅಕಶೇರುಕಗಳ ಜೀವನಕ್ರಮದಂತೆ ತೋರುತ್ತದೆ.

ಕಶೇರುಕಗಳಲ್ಲಿ ಪ್ರಜನನ : ಪ್ರಜನನಾಂಗ ಜನನಗ್ರಂಥಿ, ಅದಕ್ಕೆ ಸಂಬಂಧಿಸಿದ ನಾಳಗಳಿಂದ ಹಾಗೂ ಗ್ರಂಥಿಗಳಿಂದ ಕೂಡಿದೆ. ಕೆಲವು ಕಶೇರುಕಗಳಲ್ಲಿ ವೀರ್ಯಾಣು ಸಾಗಣೆಗೆ ಅವಶ್ಯಕವಾದ ಅಂಗಗಳಿವೆ. ಜನನಗ್ರಂಥಿ ವೀರ್ಯಾಣುಗಳನ್ನು ಉತ್ಪಾದಿಸುತ್ತದೆ ಮತ್ತು ಪ್ರಜನನಕ್ಕೆ ಅವಶ್ಯಕವಾದ ಹಾರ್ಮೋನುಗಳನ್ನೂ ಸಂಶ್ಲೇಷಿಸುತ್ತದೆ. ಲಿಂಗಾಣುನಾಳಗಳು ವೀರ್ಯಾಣುಗಳನ್ನು ಸಾಗಿಸುವುದರ ಜೊತೆಗೆ ಅವಶ್ಯಕವಿರುವ ಸ್ರಾವಗಳನ್ನು ಸ್ರವಿಸುತ್ತವೆ. ಈ ನಾಳಗಳ ತುದಿಯಲ್ಲಿ ಕ್ಲೋಯಕಗಳಿದ್ದು ಪ್ರಜನನ ನಾಳಗಳೂ ಮತ್ತು ವಿಸರ್ಜನಾಂಗ ನಾಳಗಳೂ ಕ್ಲೋಯಕದಲ್ಲಿ ಒಟ್ಟಾಗಿ ತೆರೆಯುತ್ತವೆ. ಲ್ಯಾಂಪ್ರೇಗಳಲ್ಲಿ ಕ್ಲೋಯಕ ಚಿಕ್ಕದಾಗಿದೆ. ಕೆಲವು ಪ್ರಭೇದಗಳಲ್ಲಿ ಇದು ಇರುವುದಿಲ್ಲ. ಕೆಲವು ಟೆಲಿಯಾಸ್ಟ್ ಮೀನುಗಳಲ್ಲಿ ಪಚನಾಂಗ, ವಿಸರ್ಜನಾಂಗ ಮತ್ತು ಪ್ರಜನನಾಂಗಗಳ ನಾಳಗಳು ಬೇರೆಬೇರೆಯಾಗಿ ಹೊರಹೊರಡುತ್ತವೆ. ಕೆಲವು ಅಕಶೇರುಕಗಳಲ್ಲಿ ಪಚನಾಂಗಗಳ ನಾಳಗಳು ಗುದದ್ವಾರದ ಮೂಲಕ ಹೊರತೆರೆಯುತ್ತವೆ. ವಿಸರ್ಜನಾಂಗ ಮತ್ತು ಪ್ರಜನನಾಂಗಗಳ ನಾಳಗಳು ಕೂಡ ಅದೇ ಗುದದ್ವಾರದ ಮೂಲಕ ಇನ್ನೊಂದು ಕಡೆ ಹೊರಬರುತ್ತವೆ. ಹಕ್ಕಿಗಳ ಕ್ಲೋಯಕದ ಮುಂಭಾಗದಲ್ಲಿ ವಿಸರ್ಜನಾಂಗ, ಪ್ರಜನನಾಂಗ ಕೋಣೆ, ಪಚನಾಂಗ ಕೋಣೆ ಮತ್ತು ತುದಿ ಕೋಣೆ ಎಂದು ಮೂರು ವಿಭಾಗಗಳಿವೆ. ಮಾನೊಟ್ರೀಮುಗಳಲ್ಲಿ ಮೂತ್ರ ಪ್ರಜನನ ಕುಹರ ಇದ್ದು, ಮೂತ್ರ ಮತ್ತು ಲಿಂಗಾಣುಗಳೂ, ಪಚನಾಂಗ ನಾಳಗಂದ ಪಚನವಾಗದ ಆಹಾರವೂ ಬಂದು ತಲುಪುತ್ತದೆ. ಹೊರಬರುವಾಗ ಇವು ಬೇರೆಬೇರೆಯಾಗಿಯೇ ಹೊರಬೀಳುತ್ತವೆ.

ಜನನ ಗ್ರಂಥಿಗಳು ದೇಹಾವಕಾಶದ ಅನುಲೇಪಕಗಳಿಂದ ರೂಪುಗೊಳ್ಳುತ್ತವೆ. ಮೊದಲು ಜನನಗ್ರಂಥಿಯ ದಿಂಡು ದೇಹಾವಕಾಶದಿಂದ ಹೊರಹೊಮ್ಮುತ್ತದೆ. ಅದು ಭ್ರೂಣಾವಸ್ಥೆಯ ಮೂತ್ರಪಿಂಡದೊಂದಿಗೆ ಹೊಂದಿಕೊಂಡಿದೆ. ಜನನಗ್ರಂಥಿಯ ದಿಂಡನ್ನು ಆವರಿಸಿರುವ ಜರಾಯು ಅನುಲೇಪಕಗಳು ಪ್ರಾಥಮಿಕ ಲಿಂಗರಜ್ಜುಗಳನ್ನು ರೂಪಿಸಿ, ರಜ್ಜುಗಳು ಜನನಗ್ರಂಥಿಯ ಬ್ಲಾಸ್ಟೀಮದಲ್ಲಿ ವೃಷಣದ ಒಳಭಾಗವಾದ ತಿರುಳನ್ನು ರಚಿಸುವುವು. ದ್ವಿತೀಯಕ ರಜ್ಜುಗಳು ತೊಗಟೆಯನ್ನು ರೂಪಿಸುತ್ತವೆ. ವೃಷಣಗಳು ಬೆಳೆಯಲು ತಿರುಳು, ಅಂಡಾಶಯ ಬೆಳೆಯಲು ತೊಗಟೆಯೂ ವಿಭೇದನೆಗೆ ಒಳಗಾಗುವುದು. ಜನನಗ್ರಂಥಿಯ ದಿಂಡಿನ ವಿಭೇದನೆಯನ್ನು ಅವಲಂಬಿಸಿ ಜನನ ಗ್ರಂಥಿಯ ಗಾತ್ರ ನಿರ್ಧಾರವಾಗುತ್ತದೆ.

ಕೆಲವು ಕಶೇರುಕಗಳಲ್ಲಿ ಒಂದು ಜನನ ಗ್ರಂಥಿ ಇರುತ್ತದೆ. ಇದು ಹೆಣ್ಣುಗಳಲ್ಲಿ ಸಾಮಾನ್ಯ. ಚಕ್ರಾಸ್ಯಗಳಲ್ಲಿ (ಸೈಕ್ಲೊಸ್ಟೋಮ್) ಮಾತ್ರ ಎರಡೂ ಲಿಂಗಗಳಲ್ಲಿ ಒಂದೇ ಜನನಗ್ರಂಥಿ ಇರುತ್ತದೆ. ಹೆಣ್ಣು ಪಕ್ಷಿಗಳಲ್ಲಿ ಒಂದೇ ಜನನಗ್ರಂಥಿ ಇದೆ. ಆದರೆ, ಗಂಡು ಪಕ್ಷಿಗಳಲ್ಲಿ ಒಂದು ಜೊತೆ ವೃಷಣಗಳಿವೆ. ಸರೀಸೃಪಗಳಲ್ಲಿ ಮತ್ತು ಸ್ತನಿಗಳಲ್ಲಿ ಮಾತ್ರ ಜನನಗ್ರಂಥಿಗಳು ಜೋಡಿಯಾಗಿದ್ದು, ಬಲಭಾಗದಲ್ಲಿ ಒಂದು ಮತ್ತು ಎಡಭಾಗದಲ್ಲಿ ಇನ್ನೊಂದು ಇರುತ್ತದೆ.

ಉಭಯವಾಸಿಗಳಾದ ಅನ್ಯುರ, ಸರೀಸೃಪಗಳು, ಪಕ್ಷಿಗಳು ಮತ್ತು ಸ್ತನಿಗಳಲ್ಲಿ ಹಾಗೂ ಕೆಲವು ಮೂಳೆ ಮೀನುಗಳಲ್ಲಿ ಶೇ. 90 ಭಾಗ ವೃಷಣ ವೀರ್ಯಾಣುಜನಕ ನಳಿಕೆಗಳನ್ನು ಪಡೆದಿದೆ. ವೀರ್ಯಾಣು ನಳಿಕೆ ಸುರುಳಿಯಾಕಾರದಲ್ಲಿದ್ದು, ವೀರ್ಯಾಣುಜನಕ ಕೋಶಗಳನ್ನು ಒಳಗೊಂಡಿದೆ. ನಳಿಕೆಗಳ ಸುತ್ತು ಟ್ಯೂನಿಕಾ ಆಲ್‌ಬಜಿನಿಯ ಎಂಬ ಬೀಜಕೋಶವಿದೆ. ನಳಿಕೆಗಳ ಗೋಡೆಗಳಲ್ಲಿ ಬಹುಪದರವುಳ್ಳ ಜರಾಯು ಅನುಲೇಪಕವಿದೆ. ವೀರ್ಯಾಣುಜನಕ ಕೋಶಗಳೂ ಬೆಳೆಯುತ್ತಿರುವ ವೀರ್ಯಾಣುಗಳಿಗೆ ಆಹಾರವನ್ನು ಒದಗಿಸುವ ಸರ್ಟೋಲಿ ಕೋಶಗಳೂ ಇವುಗಳಲ್ಲಿವೆ. ವೀರ್ಯಾಣುಜನಕ ನಳಿಕೆಗಳ ಆಕಾರ, ಉದ್ದ, ಗಾತ್ರ ಹಾಗೂ ರಚನೆಗಳು ವಿವಿಧ ಪ್ರಭೇದಗಳಲ್ಲಿ ವಿಭಿನ್ನವಾಗಿವೆ. ಕಪ್ಪೆಗಳಲ್ಲಿ ವೀರ್ಯಾಣು ನಳಿಕೆಯ ಜನಕ ನಳಿಕೆ ತುದಿ ಮುಚ್ಚಿಕೊಂಡಿದೆ. ಆದರೆ, ಸರೀಸೃಪ, ಪಕ್ಷಿ ಹಾಗೂ ಸ್ತನಿಗಳಲ್ಲಿ ಇವುಗಳ ತುದಿ ತೆರೆದಿದೆ. ನಳಿಕೆಗಳ ಸಾಮಾನ್ಯ ಉದ್ದ 30 ಸೆಂಮೀ. ಕೆಲವು ಸ್ತನಿಗಳಲ್ಲಿ ಈ ನಳಿಕೆಗಳು ಗುಂಪಾಗಿದ್ದು, ತೆಳುವಾದ ಪೊರೆಗಳಿಂದ ಬೇರ್ಪಟ್ಟಿವೆ. ಹೀಗಾಗಿ ಅಸಂಖ್ಯಾತ ನಳಿಕೆಗಳನ್ನು ಜೋಡಿಸಿ ಕಟ್ಟಿದಂತೆ ಕಾಣುತ್ತದೆ. ಇದರಿಂದ ಹೆಚ್ಚು ವೀರ್ಯಾಣುಗಳನ್ನು ಉತ್ಪತ್ತಿ ಮಾಡಲು ಅನುಕೂಲ. ಸಂಪೂರ್ಣವಾಗಿ ಬೆಳೆದ ನಳಿಕೆಗಳಲ್ಲಿ ವೀರ್ಯಾಣು ಬೆಳೆವಣಿಗೆಯ ಎಲ್ಲ ಹಂತಗಳನ್ನು ಕಾಣಬಹುದು. ನಳಿಕೆಯ ಮಧ್ಯ ಭಾಗದಲ್ಲಿ ಸಹಸ್ರಾರು ವೀರ್ಯಾಣುಗಳ ಬಾಲಗಳನ್ನು ನೋಡಬಹುದು. ಸ್ತನಿಗಳಲ್ಲಿ ಮಾತ್ರ ಒಂದು ನಳಿಕೆಯಲ್ಲಿ ವೀರ್ಯಾಣು ಬೆಳೆವಣಿಗೆಯ ಒಂದೇ ಹಂತವನ್ನು ಕಾಣಬಹುದು.

ಚಕ್ರಾಸ್ಯಗಳಲ್ಲಿ ಹಾಗೂ ಬಾಲವಿರುವ ಉಭಯಜೀವಿಗಳಲ್ಲಿ ಜರಾಯು ಅನುಲೇಪಕ ಭಿನ್ನ ರೀತಿಯಲ್ಲಿ ವ್ಯವಸ್ಥಿತವಾಗಿದೆ. ವೀರ್ಯಾಣುಜನಕ ನಳಿಕೆಯ ಬದಲು ಅವುಗಳಲ್ಲಿ ವೀರ್ಯಾಣುಜನಕ ಕವಚಗಳಿವೆ. ವೀರ್ಯಾಣುಜನಕ ಕೋಶಗಳು ಜರಾಯು ಅನುಲೇಪಕದಿಂದ ವೃಷಣದ ಹೊರ ಆವರಣದಲ್ಲಿರುವ ಈ ಕವಚಗಳಿಗೆ ಚಲಿಸಿ, ಅಸಂಖ್ಯಾತ ಸಂಖ್ಯೆಯಲ್ಲಿ ವೃದ್ಧಿಯಾಗಿ ವೀರ್ಯಾಣುಗಳಾಗಿ ಪರಿವರ್ತನೆಗೊಳ್ಳುತ್ತವೆ. ವೀರ್ಯಾಣುಗಳ ಸಂಖ್ಯೆ ವೃದ್ಧಿಯಾದಂತೆ, ಈ ಕವಚಗಳು ಬಿಳಿಯ ಬಣ್ಣಕ್ಕೆ ತಿರುಗಿ ಊದಿಕೊಳ್ಳುತ್ತವೆ. ವೃಷಣವೂ ಊದಿಕೊಳ್ಳುತ್ತದೆ. ಎಲ್ಲ ವೀರ್ಯಾಣುಗಳು ಬೆಳೆದ ನಂತರ ಅವು ಕವಚವನ್ನು ನಾಶ ಮಾಡಿ ಹೊರಬರುತ್ತವೆ. ಚಕ್ರಾಸ್ಯಗಳಲ್ಲಿ ಹಾಗೂ ಕೆಲವು ಮೂಳೆ ಮೀನುಗಳಲ್ಲಿ ವೀರ್ಯಾಣುಗಳು ಸಿಲೋಮಿನಲ್ಲಿ ಬಿಡುಗಡೆಯಾಗುತ್ತವೆ.

ವೃಷಣದಲ್ಲಿ ವೀರ್ಯಾಣು ನಳಿಕೆಗಳು ಅಥವಾ ವೀರ್ಯಾಣು ಜನಕ ಕವಚಗಳ ಮಧ್ಯೆ ಅಂಗಾಂಶ ಬಿಂದು, ರಕ್ತನಾಳಗಳು ಹಾಗೂ ನರಗಳಿವೆ. ಇವುಗಳಿಗೆ ವೃಷಣಗಳ ಸ್ಟ್ರೋಮ ಎಂದು ಹೆಸರು. ಲೀಡಿಗ್ ಕೋಶಗಳು ಬಹಳಷ್ಟು ಕಶೇರುಕಗಳಲ್ಲಿವೆ. ವಿಭೇದನಗೊಳ್ಳದ ಅಂಗಾಂಶ ಬಂಧಗಳಿವು. ಆಂಡ್ರೋಜನ್ ಹಾರ್ಮೋನನ್ನು ಸಂಶ್ಲೇಷಿಸುವುದು ಇವುಗಳ ಕಾರ್ಯ. ಲೀಡಿಗ್ ಕೋಶಗಳನ್ನು ಆವರಿಸಿರುವ ರಕ್ತನಾಳಗಳ ಮೂಲಕ 'ಆಂಡ್ರೋಜನ್' ಹಾರ್ಮೋನ್ ಜರಾಯು ಅನುಲೇಪಕ ಮತ್ತು ಇತರ ಅಂಗಗಳಿಗೆ ಸಾಗುತ್ತದೆ.

ಕೆಲವು ಸ್ತನಿಗಳ ಹೊರತಾಗಿ ಉಳಿದೆಲ್ಲ ಕಶೇರುಕಗಳಲ್ಲಿಯೂ ವೃಷಣಗಳು ಶರೀರದ ಒಳಗೆ ಹುದುಗಿವೆ. ಮಾರ್ಸ್ಯೂಪಿಯಲ್‌ಗಳು, ಗೊರಸುಳ್ಳ ಪ್ರಾಣಿಗಳು, ಮಾಂಸಾಹಾರಿ ಸ್ತನಿಗಳು ಹಾಗೂ ಪ್ರೈಮೇಟುಗಳಲ್ಲಿ ವೃಷಣ ಒಂದು ವಿಶೇಷ ಚೀಲದಲ್ಲಿದ್ದು ದೇಹದ ಹೊರಭಾಗದಲ್ಲಿರುತ್ತದೆ. ಕೆಲವು ಸ್ತನಿಗಳಲ್ಲಿ ವೃಷಣವನ್ನು ಹೊತ್ತ ಈ ಚೀಲ ದೇಹದ ಹೊರಭಾಗದಲ್ಲಿ ತೂಗಾಡುತ್ತಿರುತ್ತದೆ. ವೃಷಣ ಕೋಶದಲ್ಲಿ ಎರಡು ಚೀಲಗಳಿವೆ. ಇವೆರಡು ಒಂದಕ್ಕೊಂದು ಹೊಂದಿಕೊಂಡಿದ್ದು, ಜಠರಭಾಗದ ಅವಕಾಶಕ್ಕೆ ತೊಡೆಯ ಸಂಧಿಯಲ್ಲಿರುವ ಕಾಲುವೆಗಳ ಮೂಲಕ ಪೆರಿಟೋನಿಯಮಿಗೆ ಸೇರಿಕೊಂಡಿವೆ. ವೃಷಣಗಳಿಗೆ ವೀರ್ಯಾಣು ನಾಳ, ರಕ್ತನಾಳ ಮತ್ತು ನರಗಳ ಪೂರೈಕೆ ಇದೆ. ಇವಕ್ಕೆ ವೀರ್ಯಾಣು ರಜ್ಜು ಎಂದು ಹೆಸರು. ಉಷ್ಣ ನಿಯಂತ್ರಣ ಮಾಡಲು ಈ ಪ್ರಾಣಿಗಳು ಅನುಸರಿಸಿರುವ ಒಂದು ಮಾರ್ಗ ವೃಷಣ ಚೀಲದ ಬೆಳೆವಣಿಗೆ. ಹೃದಯದಿಂದ ಬರುವ ಬಿಸಿ ರಕ್ತ, ಪಕ್ಕದ ನಾಳಗಳ ಮೂಲಕ ವೃಷಣದಿಂದ ಹೃದಯದ ಕಡೆಗೆ ಹಾಯುವ ರಕ್ತದಿಂದ ತಂಪಾಗಿ ನಂತರ ವೃಷಣವನ್ನು ಸೇರುತ್ತದೆ. ಚಳಿಗಾಲದಲ್ಲಿ ಒಂದು ಜೊತೆ ಮಾಂಸಖಂಡಗಳು



ಗಂಡು ಇಲಿಯ ಪ್ರಜನನ ವ್ಯೂಹ

ವೃಷಣವನ್ನು ದೇಹದ ಕಡೆ ಎಳೆಯುವುದರಿಂದ ದೇಹದ ಉಷ್ಣತೆ ವಾತಾವರಣದ ಉಷ್ಣತೆಗಿಂತ ಹೆಚ್ಚಾಗುವುದು. ವಾತಾವರಣದ ಕಡಿಮೆ ಉಷ್ಣತೆಯಾಗಲಿ, ದೇಹದ ಹೆಚ್ಚಿನ ಉಷ್ಣತೆಯಾಗಲಿ, ವೃಷಣದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ. ಪಕ್ಷಿಗಳಲ್ಲಿ ವೃಷಣಗಳು ವಾಯುಚೀಲಗಳ ಹತ್ತಿರ ಇರುವುದರಿಂದ ವಾಯುಚೀಲಗಳು ಉಷ್ಣತೆಯನ್ನು ನಿಯಂತ್ರಿಸುತ್ತವೆ.

ವೃಷಣದಿಂದ ನಾಳಗಳು ರೀಟಿ ವೃಷಣಗಳೆಂಬ ಹಲವಾರು ನಳಿಕೆಗಳ ಗುಂಪುಗಳಿಂದ ಪ್ರಾರಂಭವಾಗುತ್ತವೆ. ಈ ನಳಿಕೆಗಳು ಪ್ರತಿ ವೀರ್ಯಾಣುಜನಕ ನಳಿಕೆಯಿಂದ ವೀರ್ಯಾಣುಗಳನ್ನು ಸಂಗ್ರಹಿಸಿ, ವೀರ್ಯಾಣುವಾಹಕ ನಾಳಗಳಿಗೆ ಕೊಂಡೊಯ್ಯುತ್ತವೆ. ವೀರ್ಯಾಣುವಾಹಕ ನಾಳಗಳು ಗಾತ್ರದಲ್ಲಿ ರೀಟಿಗಳಿಗಿಂತ ದೊಡ್ಡದಾಗಿದ್ದು ಸಂಖ್ಯೆಯಲ್ಲಿ ಕಡಿಮೆ ಇರುತ್ತವೆ. ಮಾರ್ಪಾಟುಗೊಂಡ ಮೂತ್ರಪಿಂಡಗಳ ನಾಳಗಳಾದ ವೀರ್ಯಾಣುವಾಹಕ ನಾಳಗಳು ವೃಷಣವನ್ನು ಮೂತ್ರಪಿಂಡಕ್ಕೆ ಸೇರಿಸುತ್ತವೆ.

ಕೆಲವು ಪ್ರಭೇದಗಳಲ್ಲಿ ಮೂತ್ರ ಮತ್ತು ವೀರ್ಯ ಒಂದೇ ನಾಳದ ಮುಖಾಂತರ ಹರಿದು ಕ್ಲೋಯಕವನ್ನು ಸೇರುತ್ತವೆ. ಪ್ರಾಥಮಿಕವಾಗಿ ಈ ವ್ಯವಸ್ಥೆ ಇದ್ದರೂ ಕೆಲವು ಕಶೇರುಕಗಳಲ್ಲಿ ವೀರ್ಯನಾಳ ಹಾಗೂ ಮೂತ್ರನಾಳಗಳು ಬೇರೆಯಾಗಿರುವ ಅಥವಾ ಬೇರೆಯಾಗುತ್ತಿರುವ ಹಂತಗಳನ್ನು ಕಾಣಬಹುದು. ಕೆಲವು ಶಾರ್ಕ್ ಮೀನುಗಳಲ್ಲಿ ಹಾಗೂ ಉಭಯವಾಸಿಗಳ ಪ್ರಬುದ್ಧ ಜೀವಿಗಳಲ್ಲಿ ಭ್ರೂಣದ ಮೂತ್ರನಾಳ ವೀರ್ಯಾಣುಗಳನ್ನು ಸಾಗಿಸುವ ನಾಳವಾಗಿ ಮಾರ್ಪಟ್ಟಿದೆ. ಆದರೆ, ಕೆಲವು ಪ್ರಜೀವಿ ಮೀನುಗಳ ಪ್ರಬುದ್ಧ ಜೀವಿಗಳಲ್ಲಿ ಭ್ರೂಣದ ಮೂತ್ರನಾಳಗಳು ಮೂತ್ರವನ್ನು ಸಾಗಿಸುತ್ತಿದ್ದು, ಪ್ರಬುದ್ಧ ಜೀವಿಯಲ್ಲಿ ವೀರ್ಯಾಣು ಸಾಗಣೆಗೆ ಹೊಸನಾಳಗಳು ರೂಪುಗೊಳ್ಳುವುವು. ಈ ಎರಡೂ ರೀತಿಯ ನಾಳಗಳನ್ನು ಮೀನು ಹಾಗೂ ಪಕ್ಷಿಗಳಲ್ಲಿ ಕಾಣಬಹುದು. ಸರೀಸೃಪ ಮತ್ತು ಪಕ್ಷಿಗಳಲ್ಲಿ ವೀರ್ಯಾಣು ಮತ್ತು ಮೂತ್ರನಾಳಗಳು ಬೇರೆ ಬೇರೆಯಾಗಿ ಕ್ಲೋಯಕದಲ್ಲಿ ತೆರೆದಿವೆ. ಸ್ತನಿಗಳಲ್ಲಿ ಮೂತ್ರ ವಿಸರ್ಜನ ನಾಳವಿದೆ. ಸರೀಸೃಪಗಳಲ್ಲಿ, ಪಕ್ಷಿಗಳಲ್ಲಿ ಹಾಗೂ ಸ್ತನಿಗಳಲ್ಲಿ ತಾತ್ಕಾಲಿಕವಾಗಿ ವೀರ್ಯಾಣುಗಳನ್ನು ಸಂಗ್ರಹಿಸಲು ಎಪಿಡೈಡಿಮಿಸ್ ಎಂಬ ಅಂಗ ಸಹಾಯ ಮಾಡುತ್ತದೆ. ಸ್ತನಿಗಳಲ್ಲಿ ಎಪಿಡೈಡಿಮಿಸ್‌ನ ಮುಂಭಾಗ, ತಲೆ, ಶರೀರ ಮತ್ತು ಬಾಲ ಮೂರು ಭಾಗಗಳಾಗಿದ್ದು, ವೃಷಣವನ್ನು ಸುತ್ತಿಕೊಂಡಿರುತ್ತವೆ. ಹಿಂಭಾಗ ಸ್ವಲ್ಪ ನೇರವಾಗಿದ್ದು ವೀರ್ಯಾಣುನಾಳವಾಗಿ ಪರಿವರ್ತನೆಗೊಂಡಿದೆ. ಎಪಿಡೈಡಿಮಿಸ್‌ನ ಕೆಲವು ಸ್ರಾವಗಳು, ವೀರ್ಯಾಣುಗಳು ಹೆಚ್ಚು ಕಾಲ ಬದುಕಿರುವಂತೆ ಮಾಡುತ್ತವೆ.

ಎಲ್ಲ ಕಶೇರುಕಗಳಲ್ಲಿ ವೀರ್ಯಾಣುನಾಳಗಳು ಒಳಭಾಗದಲ್ಲಿ ಕೆಲವೆಡೆ ಶಿಲಿಕಾಂಗ ಹಾಗೂ ಸ್ರಾವಕೋಶಗಳನ್ನು ಪಡೆದಿರುವ ಅನುಲೇಪಕದಿಂದ ಕೂಡಿವೆ. ಒಂದು ಭಾಗ ಸ್ವಲ್ಪ ಹಿಗ್ಗಿದ್ದು, ವೀರ್ಯಾಣು ಸಂಗ್ರಹಕ್ಕೆ ಅಥವಾ ವೀರ್ಯ ದ್ರವವನ್ನು ಸ್ರವಿಸಲು ಮಾರ್ಪಟ್ಟಿದೆ. ಉದಾ: ಪಕ್ಷಿಗಳಲ್ಲಿರುವ ವೀರ್ಯಾಣು ಗಾಮ್ಯುಲಸ್ ಅಂಗ ವೀರ್ಯಸಂಗ್ರಹಕ್ಕೆ ತಕ್ಕಂತೆ ಮಾರ್ಪಾಡಾದ ಒಂದು ಅಂಗ. ಕೆಲವು ಸ್ತನಿಗಳಲ್ಲಿ ಮಾರ್ಪಾಡಾದ ವೀರ್ಯಾಣು ನಾಳವನ್ನು ಆಂಪುಲ ಎಂದು ಕರೆಯುವರು. ಅಲ್ಲಿ ವೀರ್ಯದ್ರವ ಸ್ರವಿಸುವುದಲ್ಲದೆ ವೀರ್ಯಾಣುವಿನ ಸಂಗ್ರಹ ಆಗುತ್ತದೆ. ಕ್ಲೋಯಕದ ಸುತ್ತ ಇರುವ ಗ್ರಂಥಿಗಳಿಂದ ಅಥವಾ ಸ್ರಾವಕ ಕೋಶಗಳಿಂದ ಫೀರೊಮೋನ್ ಲೈಂಗಿಕ ವಾಸನೆಯನ್ನು ಬೀರುವ ವಸ್ತುಗಳು ಉತ್ಪತ್ತಿಯಾಗುವುವು.

ಸಹಾಯಕ ಗ್ರಂಥಿಗಳು : ಸ್ತನಿಗಳಲ್ಲಿ ಮುಖ್ಯವಾದ ಲೈಂಗಿಕ ಗ್ರಂಥಿಗಳೆಂದರೆ ಪ್ರಾಸ್ಟೇಟ್, ಬಲ್ಬೊಯುರೆತ್ರಲ್, ಆಂಪುಲ್ಲರಿ ಗ್ರಂಥಿಗಳು, ವೀರ್ಯಾಣು ಕೋಶಿಕೆಗಳು, ವೀರ್ಯನಾಳದ ಅಥವಾ ಮೂತ್ರ ವಿಸರ್ಜನನಾಳದ ಹೊರಬೆಳವಣಿಗೆಗಳು. ದಂಶಕಗಳಲ್ಲಿ, ಮೊಲಗಳಲ್ಲಿ ಬಾವಲಿಗಳಲ್ಲಿ ಹಾಗೂ ಪ್ರೈಮೇಟುಗಳಲ್ಲಿ ಈ ಗ್ರಂಥಿಗಳಿವೆ. ಕೆಲವು ಸ್ತನಿಗಳಲ್ಲಿ ಆಂಪುಲ್ಲರಿ ಗ್ರಂಥಿ ಮತ್ತು ವೀರ್ಯಾಣು ಕೋಶಿಕಗಳಿಲ್ಲ. ತಿಮಿಂಗಿಲಗಳಲ್ಲಿ, ಕೆಲವು ಮಾಂಸಾಹಾರಿ ಸ್ತನಿಗಳಲ್ಲಿ ಪ್ರಾಸ್ಟೇಟ್ ಮಾತ್ರ ಇದೆ. ಪ್ರಾಸ್ಟೇಟ್ ಗ್ರಂಥಿ ಸಾಮಾನ್ಯವಾಗಿ ಸ್ತನಿಗಳಲ್ಲಿ ಮಾತ್ರ ಇದ್ದು ಇದರ ಸ್ರಾವ ಹಲವು ನಾಳಗಳ ಮೂಲಕ ಹರಿದು ಮೂತ್ರ ವಿಸರ್ಜನಾ ನಾಳವನ್ನು ಸೇರುತ್ತದೆ. ಕೆಲವು ಸ್ತನಿಗಳಲ್ಲಿ ಪ್ರಾಸ್ಟೇಟ್ ವಿವಿಧ ರೀತಿಯಲ್ಲಿ ಮಾರ್ಪಾಡಾಗಿದೆ. ಇನ್ನು ಕೆಲವದರಲ್ಲಿ ಪ್ರಾಸ್ಟೇಟಿಗೆ ಹೊಂದಿಕೊಂಡಂತೆ ಮತ್ತೊಂದು ಗ್ರಂಥಿ ಇದೆ. ಇದರ ಸ್ರಾವಕ್ಕೆ ಹೆಪ್ಪುಗಟ್ಟಿಸುವ ಗುಣ ಇದೆ. ಹೆಣ್ಣಿನ ಜನನಾಂಗವನ್ನು ಸೇರಿದ ವೀರ್ಯದ ಸ್ವಲ್ಪ ಭಾಗ ಅಲ್ಲಿ ಹೆಪ್ಪುಗಟ್ಟುತ್ತದೆ. ಇದಕ್ಕೆ ಯೋನಿಬಿರಡೆ ಎಂದು ಹೆಸರು. ಹೆಣ್ಣು ಪುನಃ ಸಂಭೋಗಕ್ಕೆ ಒಳಗಾಗುವುದನ್ನು ಇದು ತಡೆಯುತ್ತದೆ. ಬಲ್ಬೊಯುರೆತ್ರಲ್ ಅಥವಾ ಕೌಪರ್ ಗ್ರಂಥಿ ಶಿಶ್ನದ ಹತ್ತಿರ ಮೂತ್ರ ವಿಸರ್ಜನ ನಾಳದಿಂದ ಮೂಡುತ್ತದೆ. ಒಂದು ಜೊತೆ ಕೌಪರ್ ಗ್ರಂಥಿಗಳಿದ್ದು ಅವುಗಳ ಗಾತ್ರ ಹಾಗೂ ಸಂಖ್ಯೆ ವಿವಿಧ ಪ್ರಭೇದಗಳಲ್ಲಿ ಬೇರೆಯಾಗಿದೆ. ಆಂಪುಲ್ಲರಿ ಗ್ರಂಥಿ ವೀರ್ಯನಾಳದಿಂದ ಮೂತ್ರ ವಿಸರ್ಜನನಾಳದ ಹತ್ತಿರ ಉದ್ಭವಿಸುತ್ತದೆ. ವೀರ್ಯಾಣು ಕೋಶಿಕೆಗಳು ಜೊತೆಯಾಗಿದ್ದು, ಉದ್ದವಾದ ಸುರುಳಿಯಂತಿವೆ. ಕೆಲವು ಸ್ತನಿಗಳಲ್ಲಿ ಇವು ಪ್ರಬಲವಾಗಿವೆ. ಆದರೆ, ಕೆಲವು ಪ್ರಭೇದಗಳಲ್ಲಿ ಇವು ಇಲ್ಲ. ಕೆಲವು ಪ್ರಭೇದಗಳಲ್ಲಿ ಮೂಲಾಂಕುರ ಸ್ಥಿತಿಯಲ್ಲಿರುತ್ತವೆ. ಈ ಗ್ರಂಥಿಗಳು ವೀರ್ಯದ್ರವ ಹಾಗೂ ವೀರ್ಯಾಣುಗಳಿಗೆ ನಿಷೇಚನೆಯ ತನಕ ಬದುಕಿರಲು ಅವಶ್ಯಕವಾದ ವಸ್ತುಗಳನ್ನು ಸ್ರವಿಸುತ್ತವೆ.

ಸ್ತ್ರೀ ಜನನಾಂಗಗಳು: ಅಂಡಾಶಯಗಳು ದೇಹಾವಕಾಶದಲ್ಲಿ ಸ್ಥಿತವಾಗಿದ್ದು, ಮೀಸೆಂಟರಿಯಿಂದ ಅವಕಾಶದ ಒಳಭಾಗಕ್ಕೆ ಅಂಟಿಕೊಂಡಿರುತ್ತವೆ. ಮೀಸೆಂಟರಿಗಳ ಮೂಲಕ ಅಂಡಾಶಯಕ್ಕೆ ರಕ್ತನಾಳಗಳು ಹಾಗೂ ನರಗಳು ಹಾಯುತ್ತವೆ. ಹ್ಯಾಗ್ ಮೀನುಗಳಲ್ಲಿ ಅಂಡಾಶಯದ ಮುಂಭಾಗದ ಅರ್ಧ ಮಾತ್ರ ಕೆಲಸ ಮಾಡುತ್ತದೆ. ಹಿಂಭಾಗದ ಅರ್ಧ ಅಂಕುರಾವಸ್ಥೆಯಲ್ಲಿರುವ ವೃಷಣ. ಪ್ರಜೀವಿ ಕಶೇರುಕಗಳಲ್ಲಿ ಅಂಡಾಶಯಗಳು ಉದ್ದವಾಗಿವೆ.

ಅಂಡಾಶಯದ ರಚನೆ ಅಂಡಾಶಯದ ನೆಲೆ, ಅಂಡಾಣುಗಳ ಬೆಳವಣಿಗೆಯ ಹಂತ, ಮೊಟ್ಟೆಯ ಗಾತ್ರ ಹಾಗೂ ಮೊಟ್ಟೆಯಲ್ಲಿರುವ ವರ್ಣಕದ ಆಧಾರದ ಮೇಲೆ ಅವಲಂಬಿಸಿದೆ. ಋತುಮಾನಕ್ಕೆ ಅನುಗುಣವಾಗಿ ಪ್ರಜನನದಲ್ಲಿ ತೊಡಗುವ ಪ್ರಾಣಿಗಳಲ್ಲಿ ಅಂಡಾಶಯದ ರಚನೆ ವರ್ಷದ ವಿವಿಧ ಋತುಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಸಾಮಾನ್ಯವಾಗಿ ಎಲ್ಲ ಕಶೇರುಕಗಳಲ್ಲಿ ಅಪ್ರಬುದ್ಧ ವಯಸ್ಸಿನ ಮತ್ತು ಮುಪ್ಪಿನ ಅಂಡಾಶಯಗಳ ರಚನೆಯಲ್ಲಿ ವ್ಯತ್ಯಾಸಗಳಿವೆ.

ಸಾಮಾನ್ಯವಾಗಿ ಕಶೇರುಕದ ಅಂಡಾಶಯ ಜರಾಯು ಅನುಲೇಪಕದಿಂದ ಆವೃತವಾಗಿದ್ದು ಈ ಅನುಲೇಪಕ ಪೆರಿಟೋನಿಯಮಿಗೆ ಸೇರಿಕೊಂಡಿದೆ. ಪ್ರಬುದ್ಧ ಜೀವಿಗಳಲ್ಲಿ ಬೆಳೆಯುತ್ತಿರುವ ಮೊಟ್ಟೆಗಳು ಜರಾಯು ಅನುಲೇಪಕವನ್ನು ಬಿಟ್ಟು ಅಂಡಾಶಯದ ಮಧ್ಯೆ ಸೇರಿಕೊಳ್ಳುತ್ತವೆ. ಪ್ರತಿ ಋತುವಿನಲ್ಲಿ ಅಸಂಖ್ಯಾತ ಮೊಟ್ಟೆಗಳನ್ನು ಉತ್ಪಾದಿಸುವ ಪ್ರಾಣಿಗಳಲ್ಲಿ ಮಾತ್ರ ಜರಾಯು ಅನುಲೇಪಕ ಸದಾ ಮೊಟ್ಟೆಗಳನ್ನು ಉತ್ಪತ್ತಿ ಮಾಡುತ್ತಿರುತ್ತದೆ. ಇನ್ನುಳಿದ ಪ್ರಾಣಿಗಳಲ್ಲಿ ಜರಾಯು ಅನುಲೇಪಕದ ಒಳಭಾಗಕ್ಕೆ ಒಂದು ಅಂಗಾಂಶ ಹಾಗೂ ಟ್ಯೂನಿಕ ಅಲ್‌ಬುಜೀನಿಯ ಇದ್ದು, ವೃಷಣಕ್ಕೆ ಹೋಲಿಸಿದರೆ ಇವು ತುಂಬ ತೆಳುವಾಗಿರುತ್ತವೆ.

ಕಶೇರುಕ ಅಂಡಾಶಯದಲ್ಲಿ ತೊಗಟೆ ಮತ್ತು ತಿರುಳುಗಳಿರುತ್ತವೆ. ತೊಗಟೆ, ಟ್ಯೂನಿಕ ಅಲ್‌ಬುಜೀನಿಯದ ಒಳಭಾಗದಲ್ಲಿದೆ. ಭವಿಷ್ಯದಲ್ಲಿ ಮೊಟ್ಟೆಯಾಗುವ ಕೋಶಗಳು, ಕೆಲವು ಸಂದರ್ಭಗಳಲ್ಲಿ ಬೆಳವಣಿಗೆ ಹೊಂದುತ್ತಿರುವ ಅಂಡಾಣುಗಳನ್ನು ಹೊಂದಿದ ಅಂಡಾಶಯ ಕೂಪದಲ್ಲಿರುತ್ತವೆ. ತೊಗಟೆಯ ಗಾತ್ರ ಶ್ರಾಯ ಅಥವಾ ಪ್ರಜನನ ಚಕ್ರದ ಸ್ಥಿತಿಗಳನ್ನು ಅವಲಂಬಿಸಿದೆ. ಸ್ತನಿಗಳಲ್ಲಿ ಇವುಗಳೊಂದಿಗೆ ಅಂತರಾಲೀಯ ಕೋಶಗಳಿದ್ದು ಕೆಲವು ಪ್ರದೇಶಗಳಲ್ಲಿ ಕೋಶಗಳು ಗ್ರಂಥಿ ಕೋಶಗಳಂತೆ ಕೆಲಸ ಮಾಡುತ್ತವೆ. ತೊಗಟೆಯ ವಿವಿಧ ಭಾಗಗಳು, ನರ, ರಕ್ತನಾಳ ಹಾಗೂ ಬಂಧ ಅಂಗಾಂಶಗಳ ಗುಂಪಿನಿಂದ ಆವೃತವಾಗಿದೆ. ಇದಕ್ಕೆ ಸ್ಟ್ರೋಮ ಎಂದು ಹೆಸರು. ತೊಗಟೆಯ ಒಳಭಾಗದಲ್ಲಿ ತಿರುಳು ಹಾಗೂ ರಕ್ತನಾಳಗಳು, ನರಗಳು ಹಾಗೂ ಬಂಧ ಅಂಗಾಂಶಗಳಿವೆ.

ಸ್ತನಿಗಳಲ್ಲಿ ತಿರುಳು ಭಿನ್ನವಾಗಿದೆ. ತೊಗಟೆಯಿಂದ ಸಂಪೂರ್ಣ ಆವೃತವಾಗಿರುವ ಇದರ ಒಂದು ಭಾಗದಲ್ಲಿ ಚಿಕ್ಕ ಹೈಲಸ್ ಇದ್ದು, ಅದರ ಮೂಲಕ ರಕ್ತನಾಳಗಳೂ, ನರಗಳೂ ಅಂಡಾಶಯವನ್ನು ಸೇರುತ್ತವೆ. ಹೈಲಸಿನ ಹತ್ತಿರ ಕುರುಡು ನಳಿಕೆಗಳ ಚಿಕ್ಕ ಗುಂಪು ಇದೆ. ಇದೇ ರೀಟೀ ಅಂಡಾಶಯ. ಪಕ್ಷಿಗಳ ಬಲ ಅಂಡಾಶಯದಲ್ಲಿ ಕೇವಲ ತಿರುಳಿನ ಅಂಗಾಂಶಗಳು ಮಾತ್ರ ಇವೆ. ಅಂಡಾಶಯ ಟೊಳ್ಳಾಗಿ, ಚೀಲದಂಥ ಕಾಲುವೆಗಳಿಂದ ಮುಚ್ಚಿಕೊಂಡಿರುತ್ತದೆ.

ಮರಿಗಳಿಗೆ ಜನ್ಮನೀಡುವ ಮೀನುಗಳ ಅಂಡಾಶಯದಲ್ಲಿ ಒಂದು ಶಾಶ್ವತ ಅವಕಾಶವಿದ್ದು, ಅಂಡಾಶಯ ಬೆಳವಣಿಗೆಯಾಗುವಾಗ ಈ ಅವಕಾಶ ರೂಪುಗೊಳ್ಳುತ್ತದೆ. ಇದರ ಸುತ್ತ ಜರಾಯು ಅನುಲೇಪಕದ ಮಡಿಕೆಗಳಿವೆ. ಇವು ಅವಕಾಶದ ಮಧ್ಯೆ ಚಾಚಿಕೊಂಡಿರುವುದರಿಂದ ಸಾಕಷ್ಟು ಮೊಟ್ಟೆಗಳು ಬೆಳೆಯಲು ಅವಕಾಶವಾಗುತ್ತದೆ.

ಅಂಡಾಣು ಕೂಪದಲ್ಲಿ ಅಂಡಾಣು ಜನಕ ಕೋಶಗಳು, ಅಪ್ರಬುದ್ಧ ಮೊಟ್ಟೆ, ದಾಯಿಕೋಶಗಳು ಇವೆ. ಕೂಪದ ಸುತ್ತ ಒಂದು, ಎರಡು ಅಥವಾ ಕೆಲವು ಪದರಗಳ ಅನುಲೇಪಕಗಳಿದ್ದು ಇವಕ್ಕೆ 'ಕೂಪಾನುಲೇಪಕ' ಎಂದು ಹೆಸರು. ಇದು ಜರಾಯು ಅನುಲೇಪಕದ ಕೋಶಗಳಿಂದ ಬೆಳೆಯುತ್ತದೆ.

ಸ್ತನಿಗಳಲ್ಲಿ ಅಂಡಾಣುಕೂಪಗಳು ದ್ರವವನ್ನು ತುಂಬಿರುವ ಅವಕಾಶವನ್ನು ರೂಪಿಸುತ್ತವೆ. ಇದಕ್ಕೆ 'ಆ್ಯಂಟ್ರಮ್' ಎಂದು ಹೆಸರು. ಕೆಲವು ಹಾರ್ಮೋನುಗಳ ಪ್ರಭಾವದಿಂದ ಆ್ಯಂಟ್ರಮ್‌ನ

ಕೂಪಗಳು ಬೆಳೆದು 'ಗ್ರಾಫ್ ಕೂಪ' ಉದ್ಭವಿಸುತ್ತದೆ. ಈ ಸಂದರ್ಭದಲ್ಲಿ ಬೆಳೆಯುತ್ತಿರುವ ಮೊಟ್ಟೆ ಆಂಟ್ರಮ್ ಅವಕಾಶದ ದ್ರವದಲ್ಲಿ ಮುಳುಗಿದ್ದು, ಹಲವು ಕೋಶಗಳ ಒಂದು ಗುಂಪಿನಿಂದ ಆವೃತವಾಗಿರುತ್ತದೆ. ಎಲ್ಲ ಕಶೇರುಕಗಳಲ್ಲಿ ಅಂಡಾಣುಜನಕ ಕೋಶಗಳು ಪಕ್ವವಾಗಲು ಪ್ರಾರಂಭಿಸಿದ ನಂತರ ಅವು ಯಾವ ಹಂತದಲ್ಲಿಯಾದರೂ ಅಪಭ್ರಂಶಗೊಳ್ಳಬಹುದು. ಇದರಿಂದ ಕೊನೆಯಲ್ಲಿ ಸಂಪೂರ್ಣ ಪಕ್ವವಾಗುವ ಅಂಡಾಣುಗಳ ಸಂಖ್ಯೆ ಕಡಿಮೆಯಾಗುತ್ತದೆ. ಕೆಲವು ಸ್ತನಿಗಳಲ್ಲಿ ಸಹಸ್ರಾರು ಅಂಡಾಣು ಕೋಶಗಳು ಪಕ್ವವಾಗಲು ಪ್ರಾರಂಭಿಸಿದರೂ, ಕೊನೆಯಲ್ಲಿ ಕೆಲವೇ ಕೆಲವು ಅಂಡಾಣುಗಳು ಮಾತ್ರ ನಿಷೇಚನದಲ್ಲಿ ಭಾಗವಹಿಸುತ್ತವೆ. ಮನುಷ್ಯ, ಮತ್ತು ಗೊರಸುಳ್ಳ ಪ್ರಾಣಿ, ಆನೆಗಳಲ್ಲಿ ಒಂದೇ ಒಂದು ಅಂಡಾಣು ನಿಷೇಚನೆಗೆ ತಯಾರಾಗುತ್ತದೆ. ಸ್ತನಿಗಳ ಮೊಟ್ಟೆಗಳಲ್ಲಿ ಭಂಡಾರ ಕಡಿಮೆಯಿರುವುದರಿಂದ ಹಾಗೂ ಮೊಟ್ಟೆಗಳ ಬೆಳವಣಿಗೆ ತಾಯಿಯ ಗರ್ಭದಲ್ಲಿಯೇ ನಡೆಯುವುದರಿಂದ ಮೊಟ್ಟೆ ಪಕ್ವವಾದಾಗ ಗಾತ್ರದಲ್ಲಿ ಚಿಕ್ಕದಿರುತ್ತದೆ.

ಕಶೇರುಕಗಳಲ್ಲಿ ಮೊಟ್ಟೆ ಮೊದಲು ಸೀಲೋಮಿನಲ್ಲಿ ಅಥವಾ ಅದರಿಂದ ಮಾರ್ಪಾಡು ಹೊಂದಿದ ಸ್ಥಳಗಳಲ್ಲಿ ಬಿಡುಗಡೆಯಾಗಿ ಅಲ್ಲಿಂದ ನಾಳಗಳನ್ನು ಪ್ರವೇಶಿಸುತ್ತದೆ. ಶಾರ್ಕ್ ಮೀನು, ಸರೀಸೃಪ ಹಾಗೂ ಪಕ್ಷಿಗಳಲ್ಲಿ ಅಂಡಾಣು ಸಾಗಣೆಯಾಗುವಾಗ ವಾಹಕ ನಾಳದ ಲಾಳಿಕೆಯಾಕಾರದ ಬಾಯಿಯ ಭಾಗ ನಿಧಾನವಾಗಿ ಅಲ್ಲಾಡುತ್ತದೆ. ಕೆಲವು ಪ್ರಭೇದಗಳಲ್ಲಿ ಅಂಡಾಣು ವಾಹಕ ನಾಳದ ಬಾಯಿಯಲ್ಲಿರುವ ಕೋಶಗಳು ಶಿಲಿಕಾಂಗಗಳ ಚಲನೆಯಿಂದ ವಾಹಕ ನಾಳವನ್ನು ಪ್ರವೇಶಿಸುತ್ತವೆ. ಅಂಡಾಣು ಪಕ್ವವಾದ ನಂತರ ಅಂಡಾಶಯ ಕುಗ್ಗುತ್ತದೆ. ಅನಂತರ ಅದರ ರೂಪದಲ್ಲಿ ಗಣನೀಯ ಬದಲಾವಣೆಗಳಾಗುತ್ತವೆ. ಒಳತೀಕದ (ತೊಗಟೆಯ) ರಕ್ತನಾಳಗಳು ಕೂಪವನ್ನು ಪ್ರವೇಶಿಸುತ್ತವೆ. ಕಣಕ ಕೋಶಗಳು ವಿಭಜಿಸಿ ಗಾತ್ರದಲ್ಲಿ ಹಿಗ್ಗಿ ಕುಸಿದಿರುವ ಆಂಟ್ರಮಿನ ಅವಕಾಶವನ್ನು ಸಂಪೂರ್ಣ ನಾಶ ಮಾಡುತ್ತವೆ. ಇವನ್ನು ಲ್ಯೂಟೀಯಿನ್ ಕೋಶಗಳು ಎನ್ನುತ್ತಾರೆ. ಒಳತೀಕದ ಕೋಶಗಳು ಕಣಕ ಕೋಶದಂತೆ ಬದಲಾವಣೆ ಹೊಂದುತ್ತವೆ. ಸ್ತನಿಗಳಲ್ಲಿ ಇದರ ಪರಿಣಾಮ ಕಾರ್ಪಸ್ ಲ್ಯೂಟಿಯ ಎಂಬ ಪದರದ ಉದಯ. ಇದು ಪ್ರಾಜೆಸ್ಟಿರಾನ್ ಎಂಬ ಹಾರ್ಮೋನನ್ನು ಸಂಶ್ಲೇಷಿಸುತ್ತದೆ. ಗರ್ಭವನ್ನು ಕಾಯ್ದುಕೊಳ್ಳಲು ಈ ಹಾರ್ಮೋನು ಅವಶ್ಯಕ. ಪಕ್ಷಿಗಳಲ್ಲಿ ಕೂಪಗಳು ಕುಗ್ಗುತ್ತವೆ. ಆದರೆ, ಕಾರ್ಪಸ್ ಲ್ಯೂಟಿಯದ ಬೆಳೆಯುವುದಿಲ್ಲ.

ಹೆಣ್ಣು ಜನನಾಂಗದ ನಾಳಗಳು ಜೊತೆಯಾಗಿದ್ದು ಇವುಗಳ ಮುಂಭಾಗದಲ್ಲಿ ಲಾಳಿಕೆ ಆಕಾರದ ಬಾಯಿ ಇದೆ. ಇವುಕ್ಲೋಯಕದಲ್ಲಿ ಹೊರ ತೆರೆಯುತ್ತವೆ. ಈ ನಾಳಗಳು ಮೊಟ್ಟೆಯ ಬೆಳವಣಿಗೆಯ ಅವಶ್ಯಕತೆಗಳಿಗೆ ಅನುಸಾರವಾಗಿ ಆಹಾರ, ಉಸಿರಾಟ, ರಕ್ಷಣೆ, ಸಂಗ್ರಹ ಇತ್ಯಾದಿಗಳಿಗೆ ಅಗತ್ಯವಾದ ಸ್ರಾವಗಳನ್ನು ಸ್ರವಿಸುವುದಕ್ಕೆ ಮಾರ್ಪಾಟಾಗಿವೆ. ಅಂತರ್ ನಿಷೇಚನ ತೋರುವ ಪ್ರಭೇದಗಳಲ್ಲಿ ಸಂಭೋಗದ ತರುವಾಯ, ವೀರ್ಯಾಣುಗಳು ನಿಷೇಚನವಾಗುವ ತನಕ ಬೇಕಾದ ವಸ್ತುಗಳನ್ನು ಈ ನಾಳಗಳು ಸ್ರವಿಸುತ್ತವೆ. ಕೆಲವು ಚಕ್ರಾಸ್ಯಗಳಲ್ಲಿ ಹಾಗೂ ಪ್ರಜೀವಿ ಕಶೇರುಕಗಳಲ್ಲಿ ನಾಳಗಳಿಲ್ಲ. ಲಿಂಗಾಣುಗಳು ಉದರ ಅವಕಾಶದ ಮೂಲಕ ಹೊರಹೋಗುತ್ತವೆ. ಇನ್ನು ಕೆಲವು ಕಶೇರುಕಗಳಲ್ಲಿ ಒಂದೇ ಒಂದು ನಾಳವಿರುತ್ತದೆ. ಕೆಲವು ಪ್ರಭೇದಗಳಲ್ಲಿ ಎರಡು ನಾಳಗಳಿದ್ದು ಹಿಂಭಾಗದಲ್ಲಿ ಕೂಡಿಕೊಂಡಿರುತ್ತವೆ.

ಫುಪ್ಫುಸ ಮೀನುಗಳಲ್ಲಿ ಮತ್ತು ಉಭಯ ಜೀವಿಗಳಲ್ಲಿ ನಾಳಗಳು ಉದ್ದವಾಗಿದ್ದು ಸುರುಳಿಯಾಗಿವೆ. ಸಂತಾನವೃದ್ಧಿಯ ಶ್ರಾಯದಲ್ಲಿ ಅವುಗಳ ಗಾತ್ರ ಹಿಗ್ಗುತ್ತದೆ. ಕಪ್ಪೆಗಳಲ್ಲಿ ಅಂಡಾಣು ವಾಹಕನಾಳದ ಹಿಂಭಾಗ ದೊಡ್ಡದಾಗಿದ್ದು ಅಂಡಾಣುಚೀಲವಾಗಿ ಮಾರ್ಪಟ್ಟಿದೆ. ಮೊಟ್ಟೆ ಪಕ್ವವಾಗುವ ತನಕ ಇಲ್ಲಿ ಸಂಗ್ರಹವಾಗುತ್ತದೆ. ಕೆಲವು ಗುಂಪುಗಳಲ್ಲಿ ಈ ನಾಳಗಳಿಗೆ ಹೊಂದಿಕೊಂಡಂತೆ ಕವಚಗ್ರಂಥಿ ಇದ್ದು ಅದು ಎರಡು ರೀತಿಯ ಸ್ರಾವಗಳನ್ನು ಸ್ರವಿಸುತ್ತದೆ. ಮೊದಲನೆಯದು ಆಲ್ಬುಮೆನ್ ಪ್ರೊಟೀನ್. ಇದು ಬೆಳೆಯುತ್ತಿರುವ ಮೊಟ್ಟೆಗೆ ಆಹಾರ. ಎರಡನೆಯದು ಮೊಟ್ಟೆ ಇಡುವ ಪ್ರಾಣಿಗಳಲ್ಲಿ ಗಟ್ಟಿಯಾದ ಕವಚವನ್ನು ಮತ್ತು ಮರಿ ಮಾಡುವ ಪ್ರಭೇದಗಳಲ್ಲಿ ಮೊಟ್ಟೆಗಳ ಸುತ್ತ ತೆಳುವಾದ ಪೊರೆಯನ್ನು ನಿರ್ಮಿಸುತ್ತದೆ. ಪಕ್ಷಿಗಳಲ್ಲಿ ಅಂಡಾಣು ವಾಹಕನಾಳದ ಲಾಳಿಕೆಯಂಥ ಬಾಯಿಯಲ್ಲಿ ಮೊಟ್ಟೆಯ ಚಲಾಜವನ್ನು ಹಾಗೂ ನಾಳದ ಉಳಿದ ಭಾಗಗಳಲ್ಲಿ ಆಲ್ಬುಮೆನ್‌ನ್ನು ಸ್ರವಿಸುತ್ತವೆ. ಎಲ್ಲ ಸ್ತನಿಗಳಲ್ಲಿ ನಿಷೇಚನ ಅಂಡಾಣು ವಾಹಕನಾಳದಲ್ಲಿಯೇ ನಡೆಯುತ್ತದೆ. ಇದನ್ನು ಫೆಲೋಪಿಯನ್ ನಾಳ ಎಂದು ಕರೆಯಲಾಗುತ್ತದೆ. ಮಾರ್ಸ್ಯೂಪಿಯೇಲಿಯೇ ಮತ್ತು ಪ್ರೊಟೊಥೀರಿಯಗಳ ಹೊರತು ಇನ್ನೆಲ್ಲ ಸ್ತನಿಗಳಲ್ಲಿ ಜನನಾಂಗ ಜನನ ಗ್ರಂಥಿಯಿಂದ ಹೊರಡುವ ಫೆಲೋಪಿಯನ್ ನಾಳ ಅಥವಾ ಅಂಡಾಣು ವಾಹಕನಾಳ, ಒಂದು ಗರ್ಭಾಶಯ, ಗರ್ಭಾಶಯದ ಎರಡು ಕೊಂಬುಗಳು ಮತ್ತು ಒಂದು ಯೋನಿಯನ್ನು ಹೊಂದಿದೆ. ಫೆಲೋಪಿಯನ್ ನಾಳದಲ್ಲಿ ಚಿಕ್ಕ ಚೀಲ ಅಥವಾ ವಿಸ್ತೃತ ನಾಳಾಗ್ರ ಇದೆ. ಗರ್ಭಧಾರಣೆ ಗರ್ಭಾಶಯದ ಕೊಂಬುಗಳಲ್ಲಿ ನಡೆಯುತ್ತದೆ. ಬೆಳೆಯುತ್ತಿರುವ ಭ್ರೂಣಗಳು ಸಮಾಂತರದಲ್ಲಿರುವುದರಿಂದ ಅವಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ಕೆಲವು ಪ್ರಭೇದಗಳಲ್ಲಿ ಕೊಂಬು ಮೂಲಾಂಕುರ ಸ್ಥಿತಿಯಲ್ಲಿರುತ್ತದೆ. ಕೆಲವು ಪ್ರಭೇದಗಳಲ್ಲಿ ಎರಡೂ ಕೊಂಬುಗಳು ಗರ್ಭಾಶಯದ ಒಂದೇ ಕೋಣೆಯಲ್ಲಿ ತೆರೆದಿರುತ್ತವೆ. ಇನ್ನು ಕೆಲವು ಪ್ರಭೇದಗಳಲ್ಲಿ ಕೊಂಬುಗಳು ಇರುವುದೇ ಇಲ್ಲ. ಗರ್ಭಾಶಯದ ಕೊನೆಯ ಭಾಗ ಸ್ವಲ್ಪ ಸ್ವಲ್ಪವಾಗಿ ಗಾತ್ರದಲ್ಲಿ ಕಡಿಮೆಯಾಗುತ್ತ ತ್ರಿಕೋಣಾಕಾರಕ್ಕೆ ತಿರುಗಿ ಯೋನಿಯಲ್ಲಿ ತೆರೆದಿರುತ್ತದೆ. ಯೋನಿಯ ಮುಂಭಾಗದ ಬಾಯಿಯಲ್ಲಿ ಒದ್ದೆಯಾದ ಮಾಂಸಖಂಡಗಳ ಮಡಿಕೆಗಳಿರುತ್ತವೆ. ಯೋನಿ ಮೂತ್ರ ವಿಸರ್ಜನಾ – ಪ್ರಜನನಾಂಗ ಕುಹರದಲ್ಲಿ ಕೊನೆಗೊಂಡು ಯೋನಿದ್ವಾರದ ಮೂಲಕ ಹೊರತೆಗೆಯುತ್ತದೆ. ಕೆಲವು ಅಪ್ರಬುದ್ಧ ಜೀವಿಗಳಲ್ಲಿ ಯೋನಿಯ ದ್ವಾರ ಹೈಮನ್ ಎಂಬ ತೆಳುವಾದ ಪೊರೆಯಿಂದ ಮುಚ್ಚಿಕೊಂಡಿರುತ್ತದೆ. (ಎಸ್.ಎನ್.ಎಚ್.)

ಮನುಷ್ಯರಲ್ಲಿ ಪ್ರಜನನ: ಮನುಷ್ಯರಲ್ಲಿ ಪ್ರಜನನ ಲೈಂಗಿಕ ವಿಧಾನದಿಂದ ಜರುಗುತ್ತದೆ. ಗಂಡು ಹೆಣ್ಣುಗಳ ನಡುವೆ ಅನೇಕ ದೈಹಿಕ ವ್ಯತ್ಯಾಸಗಳಿವೆ. ಲಿಂಗಭೇದ ಸ್ಪಷ್ಟ. ಲೈಂಗಿಕ ವ್ಯತ್ಯಾಸಗಳಲ್ಲಿ ಕೆಲವು ಭ್ರೂಣದ ಬೆಳವಣಿಗೆ ಕಾಲದಲ್ಲಿ ದೇಹದ ಒಳ ಹಾಗೂ ಹೊರ ಲಕ್ಷಣಗಳಾಗಿ ಮೂಡಿ, ಹುಟ್ಟು ವ್ಯತ್ಯಾಸಗಳಾಗಿ ವ್ಯಕ್ತವಾಗುತ್ತವೆ. ಇವು ಪ್ರಾಥಮಿಕ ಲೈಂಗಿಕ ಲಕ್ಷಣಗಳು. ಮಿಕ್ಕವು ವ್ಯಕ್ತಿ ಪ್ರಾಯಕ್ಕೆ ಬಂದು, ಸಂತಾನೋತ್ಪಾದಕ ಸಾಮರ್ಥ್ಯ ಗಳಿಸುವ ವೇಳೆಯಲ್ಲಿ ವ್ಯಕ್ತವಾಗುವಂಥವು. ಬೆಳವಣಿಗೆ ಹಠಾತ್ತನೆ ಹೆಚ್ಚಿ, ಕಿಶೋರಾವಸ್ಥೆ ಕಳೆದು, ಯೌವನ ಪ್ರಾಪ್ತವಾಗುವ ಮತ್ತು ಯುವಕ ಯುವತಿಯರ ನಡುವೆ ಸ್ಪಷ್ಟವಾದ ವ್ಯತ್ಯಾಸಗಳು ಕಂಡುಬರುವ ಈ ವಿದ್ಯಮಾನಕ್ಕೆ ಪ್ರಬುದ್ಧತೆ (ಪ್ಯೂಬರ್ಟಿ) ಎಂದು ಹೆಸರು. ಇದರ ಅವಧಿ ಒಂದೆರಡು ವರ್ಷಗಳು. ಈ ಅವಧಿಯಲ್ಲಿ ಕಾಣುವ ವಿಶೇಷ ಲಕ್ಷಣಗಳಿಗೆ ಆನುಷಂಗಿಕ ಲೈಂಗಿಕ ಲಕ್ಷಣಗಳೆಂದು ಹೆಸರು.

ಯುವಕ ಪ್ರಬುದ್ಧನಾದ ಬಳಿಕ ಆತನ ಪ್ರಧಾನ ಪ್ರಜನನಾಂಗಗಳಾದ ಎರಡು ವೃಷಣಗಳಿಂದಲು ವೀರ್ಯಾಣು ಕೋಶಗಳು ಉತ್ಪತ್ತಿಯಾಗುತ್ತವೆ. ಇವು 40–45 ವರ್ಷಗಳ ತನಕ ನಿರಂತರವಾಗಿ ಉತ್ಪತ್ತಿಯಾಗುತ್ತವೆ. ಹಾಗೆಯೇ ಯುವತಿಯ ಪ್ರಧಾನ ಜನನಾಂಗಗಳಾದ ಎರಡು ಅಂಡಾಶಯಗಳಲ್ಲಿ, ಒಂದರಿಂದ ಹೆಚ್ಚು ಕಡಿಮೆ ಕ್ಲುಪ್ತವಾಗಿ ನಾಲ್ಕು ವಾರಗಳಿಗೆ ಒಮ್ಮೆ, ಒಂದು ಅಂಡಾಣು ಉತ್ಪತ್ತಿಯಾಗುತ್ತದೆ. ಇದು 45–50 ವರ್ಷ ವಯಸ್ಸಾಗುವ ತನಕ ಉತ್ಪತ್ತಿಯಾಗುತ್ತದೆ. ಸಂಭೋಗಕ್ರಿಯೆಯಿಂದ ಪುರುಷನ ವೀರ್ಯಾಣುಗಳು ಸ್ತ್ರೀಯ ಪ್ರಜನನ ಮಾರ್ಗವನ್ನು ಸೇರಿ ಮುಂದೆ ಅಂಡಾಣುವನ್ನು ಸಂಧಿಸುತ್ತವೆ. ಒಂದು ವೀರ್ಯಾಣು ಮಾತ್ರ ಅಂಡಾಣುವನ್ನು ಸೇರುತ್ತದೆ. ಇದನ್ನು ನಿಷೇಚನ ಕ್ರಿಯೆ (ಫರ್ಟಿಲೈಸೇಷನ್) ಎನ್ನುವರು. ಅಂಡಾಣು ವೀರ್ಯಾಣು ಸಂಯೋಗದಿಂದ ಫಲಿಸುವುದು ಯುಗ್ಮಜ ಅಥವಾ ಭ್ರೂಣಾಣು. ತಾಯಿಯ ಪ್ರಜನನಾಂಗಗಳ ಪೈಕಿ ಒಂದಾದ ಗರ್ಭಾಶಯದಲ್ಲಿ ಇದು ಸು. 40 ವಾರಗಳ ಕಾಲ ಬೆಳೆದು ಶಿಶುವಾಗಿ ರೂಪಗೊಂಡು ಅನಂತರ ಜನಿಸುತ್ತದೆ.

ಗರ್ಭಾಶಯದಲ್ಲಿ ಭ್ರೂಣ ಬೆಳೆಯುತ್ತಿರುವಾಗ ಮತ್ತು ಸಾಮಾನ್ಯವಾಗಿ ನವಜಾತ ಶಿಶುವಿಗೆ ತಾಯಿ ಹಾಲುಣಿಸುತ್ತಿರುವಾಗ ಸ್ತ್ರೀಯಲ್ಲಿ ಅಂಡಾಣುವಿನ ತಯಾರಿ ಸ್ಥಗಿತವಾಗಿರುತ್ತದೆ. ಆದ್ದರಿಂದ ಈ ಕಾಲಾವಧಿಯಲ್ಲಿ ಪುನಃ ಗರ್ಭ ತಾಳುವ ಪ್ರಸಂಗ ಕಡಿಮೆ. ಸಾಮಾನ್ಯವಾಗಿ ವ್ಯಕ್ತಿಯ ಒಂದು ಗರ್ಭಾವಸ್ಥೆಗೂ, ಇನ್ನೊಂದಕ್ಕೂ ನಡುವೆ 12–18 ತಿಂಗಳುಗಳ ಅವಧಿ ಇರುತ್ತದೆ. ಸಂತಾನ ನಿರೋಧ, ಮುಂತಾದ ಕೃತಕ ಪರಿಸ್ಥಿತಿಗಳಲ್ಲಿ, ಕೇವಲ ಒಂದೋ, ಎರಡೋ ಮಕ್ಕಳನ್ನು ಪಡೆಯುವರು. ಒಂದು ಗರ್ಭಾವಸ್ಥೆಗೂ, ಇನ್ನೊಂದಕ್ಕೂ ನಡುವೆ ಕನಿಷ್ಠ ಅವಧಿಗಿಂತ ಹೆಚ್ಚು ಕಾಲ ಇರಬಹುದಾದ ಇಂಥ ಸಂದರ್ಭಗಳಲ್ಲಿ ಪ್ರತಿ ನಾಲ್ಕು ವಾರಗಳಿಗೆ ಒಂದು ಅಂಡಾಣು ಉತ್ಪತ್ತಿಯಾಗುವುದು.

ಪ್ರಬುದ್ಧತೆಯ ತರುವಾಯ, ಯಾವುದೇ ಕಾಲದಲ್ಲಿ ಉತ್ಪತ್ತಿಯಾಗುವ ಅಂಡಾಣುವಿನ ನಿಷೇಚನೆ ಆಗದಿದ್ದಲ್ಲಿ, ಅದು ೨–೩ ದಿವಸಗಳಲ್ಲಿ ನಾಶವಾಗುತ್ತದೆ. ಜೊತೆಗೆ ಸ್ತ್ರೀಯ ಪ್ರಜನನ ಮಾರ್ಗದಿಂದ ೩–೪ ದಿವಸಗಳ ತನಕ ರಕ್ತಸ್ರಾವವಾಗುತ್ತದೆ. ಇದಕ್ಕೆ ರಜಸ್ರಾವ ಅಥವಾ ಋತುಸ್ರಾವ ಎಂದು ಹೆಸರು. ಸಾಮಾನ್ಯ ಭಾಷೆಯಲ್ಲಿ ಹೊರಗಾಗುವುದು ಅಥವಾ ಮುಟ್ಟಾಗುವುದು ಎನ್ನುವರು. ರಜಸ್ರಾವ ಮನುಷ್ಯ, ಗೊರಿಲ್ಲ ಮತ್ತು ಚಿಂಪಾಂಜಿ ಮುಂತಾದ ವಾನರಗಳಲ್ಲಿ ಮಾತ್ರ ಕಂಡುಬರುವ ವಿದ್ಯಮಾನ. ಅಂಡಾಶಯದಲ್ಲಿ ಅಂಡಾಣುವಿನ ಉತ್ಪತ್ತಿಯಾಗುತ್ತಿರುವಾಗ ಇದು ಕಂಡುಬರುತ್ತದೆ. ಸ್ತ್ರೀಗೆ 45 ರಿಂದ 50 ವರ್ಷ ವಯಸ್ಸಾದಾಗ, ಪ್ರತಿ ೨೮–೩೦ ದಿನಗಳಿಗೊಮ್ಮೆ ಋತುಸ್ರಾವವಾಗುವುದು ನಿಲ್ಲುತ್ತದೆ. ಅಂದರೆ, ಅಂಡಾಣುವಿನ ಉತ್ಪಾದನೆ ನಿಂತು ಹೋಗುತ್ತದೆ, ಸಂತಾನೋತ್ಪಾದನೆಯ ಸಾಮರ್ಥ್ಯ ಮುಗಿಯುತ್ತದೆ. ಆದರೆ, ವಯಸ್ಕ ಪುರುಷರಲ್ಲಿ ವೀರ್ಯಾಣುಗಳ ಉತ್ಪಾದನೆ ಯಾವಾಗ ನಿಂತು ಹೋಗುತ್ತದೆ ಎಂಬುದು ಖಚಿತವಾಗಿ ಹೇಳುವುದು ಕಷ್ಟ. ಸಾಮಾನ್ಯವಾಗಿ ಪುರುಷನಿಗೆ 55 ರಿಂದ 70 ವರ್ಷ ವಯಸ್ಸಿನಲ್ಲಿ ಗೊತ್ತಾದ ರೀತಿಯಲ್ಲಿ, ಕ್ರಮೇಣ ವೀರ್ಯಾಣು ಉತ್ಪಾದನೆ ಕಡಿಮೆ ಆಗುತ್ತದೆ. ಕೊನೆಗೆ ಸ್ಥಗಿತವಾಗಿ ಆತನಲ್ಲಿ

ಸಂತಾನೋತ್ಪಾದನಾ ಸಾಮರ್ಥ್ಯ ನಶಿಸುತ್ತದೆ. ಮುಂದೆ ಸ್ತ್ರೀ–ಪುರುಷರು ಒಂದೆರಡು ದಶಕಗಳಕಾಲ ಜೀವಿಸುತ್ತಾರೆ. ಇಂಥ ಸಂತಾನಾತೀತ ದೀರ್ಘಜೀವನ ಮನುಷ್ಯರ ವೈಶಿಷ್ಟ್ಯ.

ಪುರುಷರಲ್ಲಿ ಪ್ರಜನನಾಂಗಗಳ ವಿನ್ಯಾಸ ಮತ್ತು ಕ್ರಿಯಾವಿಧಾನ : ಪುರುಷನಲ್ಲಿ ಪ್ರಜನನಾಂಗಗಳನ್ನು ಪ್ರಧಾನ ಮತ್ತು ಅನುಷಂಗಿಕ ಅಂಗಗಳೆಂದು ಗುರುತಿಸಿದ್ದಾರೆ. ಹುಟ್ಟಿದಂದಿನಿಂದ ಪ್ರಬುದ್ಧತೆಯತನಕ ಈ ಎಲ್ಲ ಅಂಗಗಳೂ ರಚನಾತ್ಮಕವಾಗಿ ಮಾತ್ರ ಕಂಡುಬರುತ್ತವೆ. ಅದರೆ, ಸಂತಾನೋತ್ಪಾದನೆಯ ಕಾಲದಲ್ಲಿ ಇವು ಬೆಳೆದು, ಬಲಿತು ಕಾರ್ಯೋನ್ಮುಖವಾಗುತ್ತವೆ. ಇವುಗಳಲ್ಲಿ ಕಿಬ್ಬೊಟ್ಟೆ ಕೆಳಗಿನ ಪ್ರದೇಶದಲ್ಲಿರುವ ಶಿಶ್ನ ಮತ್ತು ಎರಡು ವೃಷಣಗಳು ಹೊರಗೆ ಕಾಣುತ್ತವೆ. ವೃಷಣಗಳು ಆಯಾ ವೃಷಣಕೋಶಗಳ ಒಳಗೆ ಉಪಸ್ಥಿತವಾಗಿವೆ. ಪ್ರಬುದ್ಧತೆಯ ತರುವಾಯ ಈ ಪ್ರದೇಶದಲ್ಲಿ ಒರಟು ಕೂದಲು ಬೆಳೆದಿರುತ್ತದೆ. ರೋಮಗಳು ವೃಷಣಕೋಶದ ಮೇಲೆ, ಕಿಬ್ಬೊಟ್ಟೆಯ ಮೇಲೆ ಕಂಡುಬರುತ್ತವೆ. ರೋಮಯುಕ್ತ ಪ್ರದೇಶಕ್ಕೆ ನೇರವಾದ ಮೇಲಂಚು ಇಲ್ಲದಿರುವುದು ಪುರುಷರ ವೈಶಿಷ್ಟ್ಯ. ವೃಷಣದಿಂದ ಹೊರಡುವ ವೃಷಣ ನಾಳಗಳು ದೇಹದ ಒಳಹೊಕ್ಕು ಮೂತ್ರಕೋಶ ಹಾಗೂ ಮೂತ್ರ ನಾಳಗಳ ನೆಲೆಯನ್ನು ತಲುಪುತ್ತವೆ. ಅಲ್ಲಿಯೇ ಆಯಾ ಕಡೆಯ ವೀರ್ಯಕೋಶಗಳು (ಸೆಮಿನಲ್ ವೆಸೈಕಲ್ಸ್) ಇದ್ದು, ಅವುಗಳ ನಾಳಗಳು ವೃಷಣ ನಾಳಗಳೊಡನೆ ಜಂಟಿಯಾಗಿ ಆಯಾಕಡೆಯ ಸ್ಖಲನನಾಳ (ಇಜ್ಯಾಕ್ಯುಲೇಟರಿ ಡಕ್ಟ್) ಆಗುತ್ತದೆ. ಮೂತ್ರಕೋಶದ ನೆಲೆಯಲ್ಲಿ ಶುಕ್ಲಗ್ರಂಥಿ (ಪ್ರಾಸ್ಟೇಟ್) ಇದೆ. ಮೂತ್ರನಾಳದ ಪ್ರಾರಂಭ ಭಾಗ ಶುಕ್ಲಗ್ರಂಥಿಯ ಒಳಗೇ ಹುದುಗಿ ಸಾಗುತ್ತದೆ. ಈ ಭಾಗಕ್ಕೆ ಸ್ಖಲನನಾಳಗಳೂ, ಶುಕ್ಲಗ್ರಂಥಿಯ ನಾಳಗಳೂ ತೆರೆದುಕೊಳ್ಳುತ್ತವೆ. ಮೂತ್ರನಾಳ ಶಿಶ್ನದ ಮೂಲಕ ಮುಂದೆ ಸಾಗಿ ಶಿಶ್ನಾಗ್ರದಲ್ಲಿ ಹೊರಗೆ ತೆರೆದುಕೊಳ್ಳುತ್ತದೆ. ವೀರ್ಯಕೋಶಗಳು ಮತ್ತು ಶುಕ್ಲಗ್ರಂಥಿ ಪುರುಷರ ಮುಖ್ಯ ಅನುಷಂಗಿಕ ಹಾಗೂ ಒಳ ಪ್ರಜನನಾಂಗಗಳು. ಪ್ರಬುದ್ಧತೆಯ ತರುವಾಯ ವೃಷಣಗಳು ವೀರ್ಯಾಣುಗಳನ್ನು (ಸ್ಪರ್ಮ್ಸ್) ಉತ್ಪಾದಿಸಲು ಪ್ರಾರಂಭಿಸುತ್ತವೆ. ಶುಕ್ಲಗ್ರಂಥಿಯೂ ವೀರ್ಯಕೋಶಗಳೂ ಅವುಗಳ ವಿಶಿಷ್ಟ ರಸಗಳನ್ನು ಸ್ರವಿಸುವ ಸಾಮರ್ಥ್ಯ ಪಡೆಯುತ್ತವೆ. ವೃಷಣದಲ್ಲಿ 8–10 ಹಾಲೆಗಳಿದ್ದು, ಪ್ರತಿ ಹಾಲೆಯನ್ನೂ 2–3 ಅಡ್ಡಾದಿಡ್ಡಿ ಸುರುಳಿಸುತ್ತಿಕೊಂಡ (ಕನ್‌ಟಾರ್ಟೆಡ್) ಸೂಕ್ಷ್ಮನಾಳಗಳು ಅಕ್ರಮಿಸಿಕೊಂಡಿರುತ್ತವೆ. ಇವು ವೀರ್ಯಾಣೋತ್ಪಾದಕ ನಾಳಗಳು (ಸೆಮಿನಿಫೆರೆಸ್ ಟ್ಯೂಬ್ಯೂಲ್ಸ್). ಈ ನಾಳಗಳ ನಡುವೆ ಇರುವ ಬಂಧನಾಂಗಾಂಶದಲ್ಲಿ ಅಲ್ಲಲ್ಲಿ ಹಲವಾರು ಕೋಶಗಳು ಗುಂಪುಗುಂಪಾಗಿ ಇರುತ್ತವೆ. ಇವಕ್ಕೆ ಲೀಡಿಗ್ ಕೋಶಗಳೆಂದು ಹೆಸರು.

ವೀರ್ಯಾಣೋತ್ಪಾದಕ ನಾಳಗಳ ಭಿತ್ತಿ 3–4 ಕೋಶಪದರಗಳಿಂದಾಗಿದೆ. ಈ ಎಲ್ಲ ಪದರಗಳ ಗಾತ್ರಕ್ಕೂ ಸಮ ಉದ್ದವಾಗಿರುವ ಕೋಶಗಳು ಅಲ್ಲಲ್ಲಿ ಇದ್ದು ಅವನ್ನು ಆಧರಿಸಿಯೇ ವೀರ್ಯಾಣೋತ್ಪಾದಕ ನಾಳಕೋಶಗಳು ಅಳವಡಿಕೆಗೊಂಡಿವೆ. ಈ ಆಧಾರ ಕೋಶಗಳಿಗೆ ಸರ್ಟೋಲಿ ಕೋಶಗಳೆಂದು ಹೆಸರು. ಸರ್ಟೊಲಿ ಕೋಶದ ಬುಡದ ಹತ್ತಿರ ಇರುವ ವೀರ್ಯಾಣೋತ್ಪಾದಕ ಕೋಶಗಳು ವಿಭಜನೆಗೊಳ್ಳುತ್ತ ಮರಿಕೋಶಗಳು ಒಳಕ್ಕೆ ತಳ್ಳಲ್ಪಡುತ್ತ ಕೊನೆಗೆ ನಾಳಾವಕಾಶದಲ್ಲಿ (ಲೂಮೆನ್) ಬಿಡುಗಡೆಯಾಗುವ ವೇಳೆಗೆ ಅವು ವೀರ್ಯಾಣುಗಳಾಗಿರುತ್ತವೆ. ಈ ವಿಭಜನೆಯ ಹಂತಗಳಲ್ಲಿ ಮನುಷ್ಯ ಸಹಜವಾದ ಕ್ರೊಮೋಸೋಮುಗಳ ಸಂಖ್ಯೆ ಅರ್ಧವಾಗುವುದಲ್ಲದೆ ಎರಡು ಬಗೆಯ ವೀರ್ಯಾಣುಗಳ ಉತ್ಪತ್ತಿ ಆಗುತ್ತದೆ. ವೀರ್ಯಾಣು ಮಾತೃಕೋಶದಲ್ಲಿ 44 ಆಟೋಸೋಮುಗಳು, X ಮತ್ತು Y ಎಂಬ ಎರಡು ಲೈಂಗಿಕ ಕ್ರೊಮೋಸೋಮುಗಳು ಸೇರಿ ಒಟ್ಟು 46 ಕ್ರೊಮೋಸೋಮುಗಳಿರುತ್ತವೆ. ವೀರ್ಯಾಣುವಿನಲ್ಲಿ 22 ಆಟೋಸೋಮುಗಳು ಮತ್ತು X ಅಥವಾ 22 ಆಟೋಸೋಮಗಳು ಮತ್ತು Y ಕ್ರೊಮೋಸೋಮ್ ಇರುವಂತೆ ವಿಭಜನೆ ಆಗುತ್ತದೆ. ಉತ್ಪಾದನಾ ಬಾಹುಳ್ಯದ ಒತ್ತಡದಿಂದಾಗಿ ವೀರ್ಯಾಣುಗಳು ಮುಂದೆ ಸಾಗಿ ವೃಷಣ ನಾಳಗಳನ್ನು ತಲುಪುತ್ತವೆ. ಈ ನಾಳದ ಮೊದಲ ಭಾಗಕ್ಕೆ ಎಪಿಡೈಡಮಿಸ್ ಎಂದು ಹೆಸರು. ಇದು 4–6 ಮೀಟರುಗಳಷ್ಟು ಉದ್ದವಾಗಿದ್ದು ಗಜಿಬಿಜಿಯಾಗಿ ಗಂಟುಕಟ್ಟಿಕೊಂಡಿರುವ ಮತ್ತು ವೃಷಣದ ಮೇಲೆ ಹೇರಿಕೊಂಡಂತಿರುವ ತೆಳುವಾದ ನಾಳ. ವೀರ್ಯಕೋಶಗಳಲ್ಲಿ ವೀರ್ಯಾಣುಗಳು ಶೇಖರವಾಗುವುದಿಲ್ಲ. ಎಪಿಡೈಡಮಿಸ್ಸಿನಲ್ಲಿ ವೀರ್ಯಾಣುಗಳು ಶೇಖರವಾಗಿ, ಸ್ಖಲನ ಕಾಲದ ತನಕ ತಂಗಿರುತ್ತವೆ. ಇದು ವಿಶಿಷ್ಟ ರಸವನ್ನು ಸ್ರವಿಸುವ ಗ್ರಂಥಿ. ವೀರ್ಯಾಣುಗಳು ಕೆಲಕಾಲ ಎಪಿಡೈಡಮಿಸ್‌ನಲ್ಲಿ ತಂಗದೇ ಇದ್ದರೆ ಅವಕ್ಕೆ ನಿಷೇಚನ ಸಾಮರ್ಥ್ಯ ಇರುವುದಿಲ್ಲ. ಹಾಗೆಯೇ ಅವು ಬಹುಕಾಲ (ಒಂದೆ'ರಡು ವರ್ಷ) ಶೇಖರಣೆ ಆಗಿದ್ದರೂ ನಿಷೇಚನ ಸಾಮರ್ಥ್ಯ ನಾಶವಾಗಿರುತ್ತದೆ. ವೃಷಣದಲ್ಲಿ ವೀರ್ಯಾಣುಗಳ ಉತ್ಪಾದನೆಯಾಗಲು ಅದರೊಳಗಿನ ಉಷ್ಣತೆ, ದೇಹೋಷ್ಣತೆಗಿಂತ ಕಡಿಮೆ ಇರಬೇಕು. ಇದಕ್ಕಾಗಿಯೇ ವೃಷಣಗಳು ದೇಹದ ಒಳಅಂಗಗಳಾಗಿರದೇ ದೇಹದ ಹೊರಗೆ ವೃಷಣಕೋಶಗಳಲ್ಲಿ ಉಪಸ್ಥಿತವಾಗಿವೆ. ವೃಷಣ ಕೋಶದ ಒಳಗೆ ಉಷ್ಣತೆ ಯಾವಾಗಲೂ ಕಡಿಮೆ ಇರುವಂತೆ ಏರ್ಪಾಡಿದೆ. ಉಷ್ಣತೆ ಹೆಚ್ಚಾಗಿದ್ದು ವೀರ್ಯಾಣೋತ್ಪಾದನೆಗೆ ಅಡ್ಡಿ ಆಗಬಹುದಾದ ಸಂದರ್ಭಗಳಲ್ಲಿ ವೃಷಣ ಕೋಶ ಸಡಿಲವಾಗಿ ಇಳಿಬಿದ್ದು ಉಷ್ಣವನ್ನು ಕಳೆದುಕೊಳ್ಳುತ್ತದೆ. ವೃಷಣಕೋಶ ಭೀತಿಯಲ್ಲಿ ಅಡಗಿರುವ ಸ್ನಾಯು ವ್ಯಾಕೋಚಿಸುವುದರಿಂದ ಇದು ಸಾಧ್ಯವಾಗುತ್ತದೆ. ಈ ವ್ಯಾಕೋಚನೆ ನಿರಿಚ್ಛಾಕ್ರಿಯೆ.

ಭ್ರೂಣಾವಸ್ಥೆಯಲ್ಲಿ ವೃಷಣಗಳು ಉದರದ ಒಳಗೆ ಇದ್ದು ಜನನಕಾಲದಲ್ಲಿ ತೊಡೆ ಸಂಧಿಯಲ್ಲಿಯ ಇಂಗ್ವೈನಲ್ ಮಾರ್ಗವಾಗಿ ಇಳಿದು ವೃಷಣ ಕೋಶವನ್ನು ತಲುಪುತ್ತವೆ. ಹುಟ್ಟಿದ ಮೇಲೆ ಶೀಘ್ರವಾಗಿಯೇ ಇಳಿದು ಬಂದು ಹೊರಅಂಗಗಳಾಗಿ ಉಪಸ್ಥಿತವಾಗುತ್ತವೆ. ಕಾರಣಾಂತರಗಳಿಂದ ವೃಷಣಗಳು ಉದರದ ಒಳಗೆ ಇದ್ದರೆ, ಅಂಥ ವ್ಯಕ್ತಿಯಲ್ಲಿ ವೀರ್ಯಾಣುಗಳ ಉತ್ಪಾದನೆ ಆಗುವುದಿಲ್ಲ. ಹಾರ್ಮೋನ್ ಚಿಕಿತ್ಸೆ ಮತ್ತು ಶಸ್ತ್ರಕ್ರಿಯೆಗಳಿಂದ ವೃಷಣಗಳನ್ನು ವೃಷಣಕೋಶದಲ್ಲಿ ನೆಲೆಸುವಂತೆ ಮಾಡುತ್ತವೆ. ಆಗ ಅವುಗಳಲ್ಲಿ ವೀರ್ಯಾಣೋತ್ಪಾದನೆ ಸಾಧ್ಯವಾಗಬಹುದು.

ಸಾಮಾನ್ಯವಾಗಿ ಲೈಂಗಿಕ ಕಾರಣಗಳಿಂದ ಪುರುಷರಲ್ಲಿ ಶಿಶ್ನ ಉದ್ರೇಕಗೊಂಡು ನಿಮಿರಿ ಗಡುಸಾಗುತ್ತದೆ ಮತ್ತು ಸಂಭೋಗಾನುಕೂಲತೆ ಪಡೆಯುತ್ತದೆ. ಉದ್ರೇಕ ಮುಂದುವರಿದು ವೀರ್ಯಸ್ಖಲನ ಆಗಬಹುದು. ಕಾರಣಾಂತರಗಳಿಂದ ಶಿಶ್ನ ನಿಮಿರಲು ಸಾಧ್ಯವಾಗದಿದ್ದರೆ ಸಂಭೋಗವೂ ಸಾಧ್ಯವಿಲ್ಲ. ಸ್ಖಲನವೂ ಆಗುವುದಿಲ್ಲ. ವೀರ್ಯಸ್ಖಲನ ಕಾಲದಲ್ಲಿ ವೀರ್ಯಕೋಶರಸವೂ ಶುಕ್ಲಗ್ರಂಥಿ ರಸವೂ ಸ್ರವಿಸಲ್ಪಟ್ಟು, ಸ್ಖಲನನಾಳ ಮೂತ್ರನಾಳಗಳ ಮೂಲಕ ಮುಂದುವರಿಯುತ್ತಿರುವ ವೀರ್ಯಾಣುಗಳೊಡನೆ ಕೂಡಿ ವೀರ್ಯ (ಸೆಮೆನ್) ನಿಮಿರಿದ ಶಿಶ್ನದ ದ್ವಾರದ ಮೂಲಕ ಚಿಮ್ಮಿ ಹೊರಬರುತ್ತದೆ.

ವೀರ್ಯ ಬೆಳ್ಳಗೆ ಗಟ್ಟಿಯಾದ ಗಂಜಿಯಂತಿರುವ ದ್ರವ. ಸ್ಖಲನವಾದಾಗ 3–4 ಮಿಲೀ ನಷ್ಟು ವೀರ್ಯ ಹೊರಬರುತ್ತದೆ. ಪ್ರತಿ ಮಿಲೀ ವೀರ್ಯದಲ್ಲಿ ಕೋಟ್ಯಂತರ ವೀರ್ಯಾಣುಗಳು ಇದ್ದರೂ, ವೀರ್ಯದ ಘನ ಗಾತ್ರಕ್ಕೆ (ವಾಲ್ಯೂಮ್) ಪ್ರಧಾನವಾಗಿ ಶುಕ್ಲಗ್ರಂಥಿಯ ಮತ್ತು ವೀರ್ಯಕೋಶಗಳ ಸ್ರಾವಗಳೇ ಕಾರಣ. ಇವು ಪ್ರತ್ಯಾಮ್ಲೀಯ ಗುಣ ಉಳ್ಳವು. ಇವುಗಳಲ್ಲಿ ಫ್ರಕ್ಟೋಸ್ ಎಂಬ ಸಕ್ಕರೆ ಇದೆ. ವೀರ್ಯದಲ್ಲಿ ವೀರ್ಯಾಣುಗಳು ಸಾಮರ್ಥ್ಯ ಸಹಿತವಾಗಿ ಬದುಕಿ ಉಳಿದಿರುವುದಕ್ಕೆ ಈ ಎರಡು ಅಂಶಗಳು ಅಗತ್ಯ. ಆದರೂ ವೀರ್ಯಾಣುಗಳು ದೇಹದ ಹೊರಗೆ ಹೆಚ್ಚು ಕಾಲ ಬದುಕಿರಲಾರವು. ಇವು ಕೆಲವೇ ಗಂಟೆಗಳಲ್ಲಿ ಸತ್ತು ಹೋಗುತ್ತವೆ. ನೈಸರ್ಗಿಕ ಸಂಭೋಗ ಅಥವಾ ಕೃತಕ ನಿಷೇಚನ ಕ್ರಿಯೆಯಿಂದ ಅಥವಾ ಪ್ರಾಯೋಗಿಕ ಕಾರಣಗಳಿಗಾಗಿ ಪಿಚಕಾರಿಯಿಂದ ವೀರ್ಯವನ್ನು ಸಂತಾನೋತ್ಪಾದನಾವಧಿಯಲ್ಲಿರುವ ಸ್ತ್ರೀಯ ಪ್ರಜನನ ಮಾರ್ಗದಲ್ಲಿಟ್ಟರೆ, ಅದರಲ್ಲಿಯ ವೀರ್ಯಾಣುಗಳು ಒಂದೆರಡು ದಿನಗಳ ಕಾಲ (ಬಹುಶಃ ಇನ್ನೂ ಸ್ವಲ್ಪ ಹೆಚ್ಚು ಕಾಲ) ಬದುಕಿರುತ್ತವೆ. ಆದರೆ, ಅವುಗಳ ನಿಷೇಚನ ಸಾಮರ್ಥ್ಯ, ಇಂಥ ಅನುಕೂಲ ಸಂದರ್ಭಗಳಲ್ಲಿ 12–24 ಗಂಟೆಗಳಿಗಿಂತ ಹೆಚ್ಚು ಇರುವುದಿಲ್ಲ. ವೀರ್ಯದಲ್ಲಿ ವೀರ್ಯಾಣುಗಳ ಸಂಖ್ಯೆ ಪ್ರತಿ ಮಿಮೀ ನಲ್ಲಿ ಅನೇಕ ಕೋಟಿಗಳಿರುವ ಬದಲು ಸು. ಅರ್ಧ ಕೋಟಿಯಷ್ಟು ಇದ್ದರೂ, ಅಂಥ ವೀರ್ಯದಿಂದ ನಿಷೇಚನ ಸಾಧ್ಯವಿಲ್ಲ. ಅಲ್ಪ ವೀರ್ಯಾಣುಗಳಿರುವ ಇಂಥ ವೀರ್ಯವನ್ನು ಉತ್ಪಾದಿಸುವವರು ಬರಡಾಗಿರುತ್ತಾರೆ.

ವೀರ್ಯಾಣು ದೇಹದ ಅತಿ ಸಣ್ಣ ಕೋಶಗಳ ಪೈಕಿ ಒಂದು. ಸಾಮಾನ್ಯವಾಗಿ ಇತರ ಪ್ರಾಣಿಗಳ ವೀರ್ಯಾಣುಗಳಂತೆಯೇ ಮನುಷ್ಯನದು ಗೊದಮೊಟ್ಟೆ (ಟ್ಯಾಡ್‌ಪೋಲ್) ಆಕಾರದಲ್ಲಿದೆ. ಇದು ತಲೆ 0.004 ಮಿಮೀ (ಸು. 4 ಮೈಮೀ) ವ್ಯಾಸದ್ದು, ತಲೆಯ ನಾಲ್ಕರಷ್ಟು ಉದ್ದದ ಬಾಲ, ಇವೆರಡನ್ನೂ ಕೂಡಿಸುವ ಕಂಠವಿದೆ. ಸ್ಖಲನವಾದ ತರುಣದಲ್ಲಿ ವೀರ್ಯಾಣುಗಳು ವೀರ್ಯದಲ್ಲಿ ತಮ್ಮ ಬಾಲವನ್ನು ಅತಿ ಚಟುವಟಿಕೆಯಿಂದ ಬಡಿಯುತ್ತ ಚಲಿಸುತ್ತವೆ. ವೀರ್ಯಾಣುವಿನ ತಲೆಯಲ್ಲಿ ಕೋಶಕೇಂದ್ರ (ನ್ಯೂಕ್ಲಿಯಸ್) ಇದೆ. ಕೆಲವು ವೀರ್ಯಾಣುಗಳಲ್ಲಿ ದೈತ್ಯಾಕಾರ, ಕುಬ್ಜಾಕಾರ, ಎರಡು ಬಾಲದಂತಹ ಅಸಹಜತೆಗಳಿರುತ್ತವೆ. ಈ ವೀರ್ಯಾಣುಗಳಿಗೆ ನಿಷೇಚನ ಸಾಮರ್ಥ್ಯ ಇರುವುದಿಲ್ಲ. ಮಂದ ಚಟುವಟಿಕೆಯ ವೀರ್ಯಾಣುಗಳು ಅಷ್ಟೆ. ಅಂಥ ಅಸಹಜ ವೀರ್ಯಾಣುಗಳು ಗಣನೀಯ ಪ್ರಮಾಣದಲ್ಲಿದ್ದರೆ (ಶೇ.20), ಆ ವೀರ್ಯವನ್ನು ಉತ್ಪತ್ತಿ ಮಾಡುವ ಪುರುಷ ಬರಡು.

ಸ್ತ್ರೀಯ ಪ್ರಜನಾಂಗಗಳ ವಿನ್ಯಾಸ ಮತ್ತು ಕ್ರಿಯಾ ವಿಧಾನ : ಸ್ತ್ರೀಯಲ್ಲಿ ಪ್ರಜನನಾಂಗಗಳು ಉದರದ ಒಳಗೂ ಮತ್ತು ಹೊರಗೂ ಇವೆ. ಪ್ರಧಾನ ಅಂಗಗಳಲ್ಲದೆ ಅನುಷಂಗಿಕ ಅಂಗಗಳಿವೆ. ಅಂಡಾಶಯಗಳು (ಓವರಿ) ಪ್ರಧಾನವಾಗಿದ್ದು, ಆಂತರಿಕ ಅಂಗಗಳಾಗಿವೆ. ಇವು ಕಿಬ್ಬೊಟ್ಟೆಯಿಂದ ಮೇಲೆ ಎಡ ಮತ್ತು ಬಲ ಭಾಗಗಳಲ್ಲಿ ಇರುತ್ತವೆ. ಇವುಗಳ ಸನಿಹದಲ್ಲಿ ಟೋಪಿಯಂತೆ, ಇವನ್ನು ಭಾಗಶಃ ಸುತ್ತುವರಿದ ಲಾಳಿಕೆ ಅಂಡನಾಳಗಳು (ಓವಿಡಕ್ಟ್, ಫ್ಯಾಲ್ಲೊಪಿಯನ್ ಟ್ಯೂಬ್) ಇವೆ. ಎರಡು ಅಂಡನಾಳಗಳು ಕಿಬ್ಬೊಟ್ಟೆಯಲ್ಲಿ

ಮೂತ್ರಾಶಯದ ಹಿಂದೆ ಇರುವ ಇನ್ನೊಂದು ಪ್ರಧಾನ ಆಂತರಿಕ ಪ್ರಜನನಾಂಗವಾದ ಗರ್ಭಾಶಯ ಅಥವಾ ಗರ್ಭಕೋಶಕ್ಕೆ (ಯೂಟೆರಸ್) ಬಂದು ಸೇರುತ್ತವೆ. ಗರ್ಭಾಶಯ ಯೋನಿಯೊಳಕ್ಕೆ ತೆರೆದುಕೊಳ್ಳುತ್ತದೆ. ಯೋನಿ (ವಜೈನ) ಕೆಳಮುಖವಾಗಿ ಮತ್ತು ಮುಮ್ಮುಖವಾಗಿ ಮುಂದುವರೆದು ಭಗದ ಸೀಳಿನಲ್ಲಿ (ಪ್ಯೂಡೆಂಡಲ್ ಕ್ಲೆಫ್ಟ್) ತೆರೆದುಕೊಳ್ಳುತ್ತದೆ. ಯೋನಿಯೊಳಕ್ಕೆ ಬಾರ್ಥೊಲಿನ್ ಗ್ರಂಥಿಗಳ ನಾಳಗಳು ತೆರೆದುಕೊಳ್ಳುವುದರಿಂದ ಸಂಭೋಗ ಕಾಲದಲ್ಲಿ ಅ ಗ್ರಂಥಿಗಳ ಸ್ರಾವ ಯೋನಿಯೊಳಕ್ಕೆ ಸುರಿಯುವುದು. ಕನ್ಯಾವಸ್ಥೆಯಲ್ಲಿ ಯೋನಿದ್ವಾರ ಒಂದು ರಂಧ್ರಯುಕ್ತ ತೆಳುಪೊರೆಯಿಂದ ಮುಚ್ಚಿರುತ್ತದೆ. ಇದಕ್ಕೆ ಕನ್ಯಾಪೊರೆ (ಹೈಮೆನ್) ಎಂದು ಹೆಸರು. ಪ್ರಥಮ ಸಂಭೋಗದಲ್ಲಿ ಇದು ಹರಿದು ಹೋಗುವುದು ಸಾಮಾನ್ಯ ಪರಿಸ್ಥಿತಿ. ಯೋನಿದ್ವಾರಕ್ಕೆ ಸ್ವಲ್ಪ ಮೇಲೆ ಮೂತ್ರ ದ್ವಾರ ಬೇರೆಯಾಗಿ ಇದೆ. ಇದಕ್ಕೂ ಸ್ವಲ್ಪ ಮೇಲೆ ಭಗದ ಸೀಳಿನಲ್ಲಿ ಹುದುಗಿದಂತೆ ಭಗಾಂಕುರ (ಕ್ಲೈಟೊರಿಸ್) ಇದೆ. ಇದು ಸ್ತ್ರೀಯಲ್ಲಿ ಪುರುಷ ಶಿಶ್ನಕ್ಕೆ ಸದೃಶವಾದ ಅಂಗ. ಸು. 3 ಮಿಮೀನಷ್ಟು ಸಣ್ಣದಾಗಿರುವ ಭಗಾಂಕುರ ಸಂಭೋಗ ಸಂಬಂಧವಾದ ಭಾವನೆ, ಘರ್ಷಣೆಗಳಿಂದ ನಿಮಿರಿ, ಸು. 6 ಮಿಮೀನಷ್ಟು ಉದ್ದ ಆಗಬಹುದು. ಭಗಾಂಕುರದ ಮೇಲೆ ಕಮಾನಿನಂತಿರುವ ಮಡಿಕೆ ಮೂತ್ರದ್ವಾರ' ಯೋನಿದ್ವಾರಗಳ ಇಕ್ಕೆಲಗಳಲ್ಲಿ ಪಸರಿಸಿ ಇನ್ನೂ ಕೆಳಗೆ ನೆರೆಪ್ರಾಂತ್ಯದಲ್ಲಿ ಬೆರೆತುಹೋಗುತ್ತದೆ. ಇಕ್ಕೆಲದಲ್ಲೂ ಇರುವ ಈ ಮಡಿಕೆಗಳಿಗೆ ಕಿರಿಭ ಗೋಷ್ಠಗಳು (ಲೇಬಿಯ ಮೈನೋರ) ಎಂದೂ, ಭಗದ ಸೀಳಿನ ಎರಡು ತುಟಿಗಳಿಗೆ ಹಿರಿಭಗೋಷ್ಠಗಳು (ಲೇಬಿಯ ಮೇಜೋರ) ಎಂದೂ ಹೆಸರು. ಭಗ (ಮಾನ್ಸ್ ವೆನೆರಿಸ್) ಕಿಬ್ಬೊಟ್ಟೆಯಿಂದ ಕೆಳಗೆ ಮೆತ್ತಗಿರುವ ಉಬ್ಬಿದ ಭಾಗ ಪ್ರಬುದ್ಧತೆಯ ಸಮಯದಲ್ಲಿ ಭಗದ ಮೇಲೆ ಕೂದಲು ಬೆಳೆಯುತ್ತದೆ. ಕೂದಲಿರುವ ಪ್ರದೇಶದ ಮೇಲೆ ಅಂಚು ಗೆರೆ ಹಾಕಿದಂತೆ ನೇರವಾಗಿರುವುದು ಸ್ತ್ರೀಯ ವೈಶಿಷ್ಟ್ಯ.

ಅಂಡಾಶಯ ಬಾದಾಮಿ ಗಾತ್ರದ ಅಂಗ. ಇದರ ತಿರುಳಿನ ಹೊರಗಿರುವ ವಲಯದಲ್ಲಿ (ಕಾರ್ಟೆಕ್ಸ್) ಸಹಸ್ರಾರು ಕೋಶಗಳೂ, ಸಾಸಿವೆ ಕಾಳು ಅಥವಾ ಜೋಳದ ಕಾಳಿನ ಗಾತ್ರದ ಕೋಶ ಸಮೂಹಗಳು (ಪ್ರೈಮರಿ ಫಾಲಿಕಲ್ಸ್) ಇವೆ. ಕೋಶ ಸಮೂಹದ ನಡು ಮಧ್ಯದಲ್ಲಿರುವ ದೊಡ್ಡ ಕೋಶವೇ ಮುಂದೆ ಅಂಡಾಣುವಾಗಿ (ಓವಮ್) ಮಾರ್ಪಾಡಾಗುವ ಮಾತೃಕೋಶ. ಪ್ರಬುದ್ಧತೆಯ ಕಾಲದಿಂದ ಮುಂದಕ್ಕೆ ಪ್ರತಿ ೪ ವಾರಗಳು ಒಂದು ಕೋಶಸಮೂಹ ವೃದ್ಧಿಗೊಂಡು ಗೋಲಿ ಗಾತ್ರವಾಗಿ ಹೊರಕ್ಕೆ ಉಬ್ಬಿಕೊಳ್ಳುತ್ತದೆ. ಇದು ಪಕ್ವ ಕೋಶಸಮೂಹ (ಮೆಚ್ಯೂರ್ ಫಾಲಿಕಲ್). ಅಂಡಾಣು ಮಾತೃಕೋಶವನ್ನು ಸುತ್ತುವರಿದಿರುವ ಕೋಶಗಳ ಸಂಖ್ಯಾಭಿವೃದ್ಧಿಯಾಗುವುದು ಈ ಕೋಶಗಳ ನಡುವೆ ಒಂದು ಅವಕಾಶ ಕಂಡುಬಂದು, ಅದು ದ್ರವದಿಂದ ತುಂಬಿಕೊಂಡು ಹಿಗ್ಗುತ್ತ ಹೋಗುವುದು ಪ್ರಾಥಮಿಕ ಕೋಶ ಸಮೂಹದ ಗಾತ್ರ ವೃದ್ಧಿಗೆ ಕಾರಣ. ಇದೇ ಕಾಲದಲ್ಲಿ ಮಾತೃಕೋಶವು ಪಕ್ವವಾಗಿ, ಅಂಡಾಣುವಾಗಿ ಮಾರ್ಪಡುತ್ತದೆ. ಹೀಗಾಗುವಾಗ ವಾಸ್ತವವಾಗಿ ಮಾತೃಕೋಶ ಎರಡು ವಿಭಜನೆಗಳನ್ನು ತೋರಿದರೂ ಒಂದು ಕೋಶ ಮಾತ್ರ ಉಳಿದುಕೊಂಡು ಮಿಕ್ಕವು ನಾಶವಾಗುತ್ತವೆ. ಅಲ್ಲದೆ ಕ್ರೊಮೋಸೋಮುಗಳ ಸಂಖ್ಯೆಯೂ ಅರ್ಧವಾಗುತ್ತದೆ. ಮಾತೃಕೋಶದಲ್ಲಿ 46 ಕ್ರೊಮೋಸೋಮುಗಳಿವೆ. 22 ಜೊತೆ ಆಟೋಸೋಮುಗಳು ಮತ್ತು ಒಂದು ಜೊತೆ X ಕ್ರೊಮೋಸೋಮುಗಳು. ವಿಭಜನೆ ಆದಾಗ ಕೋಶದಲ್ಲಿ ಕ್ರೊಮೋಸೋಮಿನ ಸಂಖ್ಯೆ 22+X. ಅಂದರೆ, ಒಟ್ಟು 23 ಕ್ರೊಮೋಸೋಮುಗಳು. ವಿಭಜನೆಯ ಪರಿಣಾಮ ಯಾವಾಗಲೂ ಒಂದೇ ಬಗೆಯ ಅಂಡಾಣುಗಳು: 22+X ಕ್ರೊಮೋಸೋಮುಗಳಿರುತ್ತವೆ. ಅಂಡಾಶಯದಲ್ಲಿ ಪ್ರಾಥಮಿಕ ಕೋಶಸಮೂಹವಾಗಲು ಎರಡು ವಾರಗಳು ಬೇಕು. ಅಂತ್ಯದಲ್ಲಿ ಕೋಶಸಮೂಹದ ದ್ರವದ ಒತ್ತಡ ಮಿತಿಮೀರಿ ಕೋಶಸಮೂಹ ಛಿದ್ರವಾಗುತ್ತದೆ. ಅಂಡಾಣು ಮತ್ತು ಅದನ್ನು ಸುತ್ತುವರಿದ ಕೆಲವು ಕೋಶಗಳು ಉದರದಲ್ಲಿ ಬಿಡುಗಡೆಯಾಗುತ್ತವೆ. ಇದಕ್ಕೆ ಅಂಡಾಣು ಬಿಡುಗಡೆ (ಓವ್ಯೂಲೇಷನ್) ಎಂದು ಹೆಸರು. ನೆರೆಯಲ್ಲೇ ಇರುವ ಅಂಡಾಣು ಅಂಡನಾಳದೊಳಕ್ಕೆ ಹೀರಲ್ಪಟ್ಟು ಅದನ್ನು ಪ್ರವೇಶಿಸುತ್ತದೆ. ಅಂಡನಾಳದ ಒಳಪದರದ ಕೋಶಗಳು ಅತಿ ಸೂಕ್ಷ್ಮವಾದ ರೋಮಗಳನ್ನು (ಸಿಲಿಯ) ಪಡೆದಿವೆ. ಅವುಗಳ ತ್ವರಿತ ಚಲನೆಯಿಂದ ಸನಿಹದಲ್ಲಿರುವ ಅಂಡಾಣು ಹೀರಲ್ಪಟ್ಟು ನಾಳ ಪ್ರವೇಶಿಸುವುದು. ಅದೇ ಚಲನೆ ಅಂಡಾಣುವನ್ನು ನಿಧಾನವಾಗಿ ಮುಂದಕ್ಕೆ ತಳ್ಳುತ್ತ, ಗರ್ಭಕೋಶದ ಎಡೆಗೆ ಒಯ್ಯುತ್ತದೆ. ದೇಹದ ಅತ್ಯಂತ ದೊಡ್ಡಗಾತ್ರದ ಕೋಶಗಳ ಪೈಕಿ ಅಂಡಾಣು ಒಂದು. ಇದರ ವ್ಯಾಸ 0.1 ಮಿಮೀ. ಅಂಡಾಣುವಿಗೆ ಸ್ವತಃ ಚಲನಸಾಮರ್ಥ್ಯವಿಲ್ಲ. ಇದರ ಜೀವದ್ರವದಲ್ಲಿ (ಸೈಟೊಪ್ಲಾಸ್ಮ) ಪೋಷಕಗಳು ಅತಿ ಸಮೃದ್ಧವಾಗಿವೆ. ಬಿಡುಗಡೆ ಆದ ಮೇಲೆ ಅಂಡಾಣು 2–3 ದಿವಸ ಮಾತ್ರ ಬದುಕಿದ್ದು, ನಂತರ ನಶಿಸುತ್ತದೆ. ಬಿಡುಗಡೆ ಆಗುವ ವೇಳೆಗೆ ಹಲವಾರು ಗಂಟೆಗಳ ಆಸುಪಾಸಿನಲ್ಲಿ ಸಂಭೋಗ ಕ್ರಿಯೆ ಜರುಗಿದರೆ, ವೀರ್ಯ ಸ್ತ್ರೀಯ ಪ್ರಜನನ ಮಾರ್ಗದಲ್ಲಿ ಸೇರುವ ಸಂಭವವಿದೆ. ವೀರ್ಯಾಣುಗಳು ತಮ್ಮ ಚಲನೆಯಿಂದ ಗರ್ಭಾಶಯ ಅಂಡನಾಳಗಳನ್ನು ಪ್ರವೇಶಿಸುತ್ತವೆ. ಆದ್ದರಿಂದ, ಈ ಸಂದರ್ಭದಲ್ಲಿ ಅಂಡಾಣು ವೀರ್ಯಾಣುಗಳು ಸಂಧಿಸುವುದಕ್ಕೆ ಅವಕಾಶವಿದೆ. ಆಗ ಸಾವಿರಾರು ವೀರ್ಯಾಣುಗಳು ಅಂಡಾಣುವನ್ನು ಸುತ್ತುವರಿಯುತ್ತವೆ. ಯಾವುದಾದರು ಒಂದು ವೀರ್ಯಾಣು ಅಂಡಾಣುವನ್ನು ಹೊಕ್ಕು ಮಿಲನವಾಗಿ ನಿಷೇಚನ ಕ್ರಿಯೆ ಜರುಗುತ್ತದೆ. ಮಿಕ್ಕ ವೀರ್ಯಾಣುಗಳು ಈ ಪ್ರಯತ್ನದಲ್ಲಿ ನಾಶವಾಗಿ ಹೋಗುತ್ತವೆ. ಹೀಗೆ ಸಾವಿರಾರು ವೀರ್ಯಾಣುಗಳು ನಾಶವಾಗುವುದು ವಾಸ್ತವವಾಗಿ ನಿಷೇಚನ ಕ್ರಿಯೆಗೆ ಅಗತ್ಯ. ಅಂಡಾಣುವನ್ನು ಸುತ್ತುವರೆದ ವೀರ್ಯಾಣುಗಳು ಅಲ್ಪಸಂಖ್ಯೆಯಲ್ಲಿದ್ದರೆ ನಿಷೇಚನ ಕ್ರಿಯೆ ಫಲಪ್ರದವಾಗುವುದಿಲ್ಲ.

ಅಂಡಾಣು ಬಿಡುಗಡೆ ಆದ ಮೇಲೆ ಛಿದ್ರವಾಗಿದ್ದ ಪಕ್ವ ಕೋಶ ಸಮೂಹ ಪುನಃ ಒಗ್ಗೂಡಿ ಇಡಿ ಆಗುತ್ತದೆ. ಅಲ್ಲದೇ ಕೆಲವು ಮಾರ್ಪಾಡುಗಳನ್ನು ಒಂದೆರಡು ದಿವಸಗಳಲ್ಲಿ ತೋರಿ ಪೀತಕೋಶ ಸಮೂಹ (ಕಾರ್ಪಸ್ ಲೂಟಿಯಮ್) ಆಗುತ್ತದೆ. ಪೀತಕೋಶ ಸಮೂಹದ ಜೀವಾವಧಿ ಈ ಮುಂಚೆ ತಾನೇ ಬಿಡುಗಡೆ ಆಗಿದ್ದ ಅಂಡಾಣುವಿನ ನಿಷೇಚನ ಆಗಿದೆಯೋ ಇಲ್ಲವೋ ಎನ್ನುವುದನ್ನು ಅವಲಂಬಿಸಿದೆ. ಆಗಿರದಿದ್ದರೆ (ಇದೇ ಹೆಚ್ಚು ಸಾಮಾನ್ಯವಾಗಿರುವ ಸಂದರ್ಭ) ಪೀತಕೋಶ ಸಮೂಹ ಸು. ೨ ವಾರಗಳು ಮಾತ್ರ ಕಾರ್ಯೋನ್ಮುಖವಾಗಿದ್ದು, ನಂತರ ನಾರು ಗಟ್ಟಿಗೊಂಡು ನಶಿಸಿಹೋಗುತ್ತದೆ. ನಿಷೇಚನೆ ಆದರೆ ಅದು ಇನ್ನೂ ಸು. ೧೦ ವಾರಗಳ ಕಾಲ ಕಾರ್ಯೋನ್ಮುಖವಾಗಿ ಮುಂದುವರಿದು ನಂತರ ನಶಿಸಿಹೋಗುತ್ತದೆ. ನಿಷೇಚನೆ ಆದ ಬಳಿಕ ಗರ್ಭಾಂಕುರಾರ್ಪಣ (ಕನ್ಸೆಪ್ಷನ್) ಆಗುತ್ತದೆ. ನಿಷೇಚನೆ ಆಗದೆ ಪೀತಕೋಶ ಸಮೂಹ ೨ ವಾರಾನಂತರ ಅವನತಿ ಹೊಂದಿದರೆ, ಅಂಡಾಶಯದಲ್ಲಿ ಇನ್ನೊಂದು ಪ್ರಾಥಮಿಕ ಕೋಶ ವೃದ್ಧಿ ಆಗತೊಡಗುತ್ತದೆ. ಇದು ಹಿಂದಿನ ಅಂಡಾಶಯದಲ್ಲಿ ಆಗಬಹುದು. ಪ್ರಾರಂಭವಾದ ಪ್ರಾಥಮಿಕ ಕೋಶ ಸಮೂಹ ವೃದ್ಧಿ ಪುನಃ ೨ ವಾರಗಳು ಮುಂದುವರಿದು ಅಂತ್ಯದಲ್ಲಿ, ಅದರಲ್ಲಿಯ ಅಂಡಾಣು ಬಿಡುಗಡೆ ಆಗುತ್ತದೆ. ಪುನಃ ಛಿದ್ರಿತ ಕೋಶ ಸಮೂಹ ಪೀತಕೋಶ ಸಮೂಹವಾಗಿ ರೂಪುಗೊಳ್ಳುತ್ತದೆ. ಹೀಗೆ ಅಂಡಾಶಯದಲ್ಲಿ ೪ ವಾರಗಳಿಗೆ ಒಮ್ಮೆ ಕ್ಲುಪ್ತವಾದ ಕಾರ್ಯಕ್ರಮ ಚಕ್ರಾಕಾರವಾಗಿ ಮುಂದುವರಿಯುತ್ತಲೇ ಇರುತ್ತದೆ.

ಬಾಲಿಕೆ ಪ್ರಬುದ್ಧಳಾಗುವ ವೇಳೆ ಮೊತ್ತಮೊದಲಾಗಿ ಅಂಡಾಶಯದಲ್ಲಿ ಅಂಡಾಣು ಬಿಡುಗಡೆ ಆದಾಗ ಅದರ ನಿಷೇಚನೆಯಾಗುವ ಸಂಭವ ಹೆಚ್ಚು ಕಡಿಮೆ ಇಲ್ಲವೇ ಇಲ್ಲ ಎನ್ನುವುದು ವ್ಯಕ್ತ. ಏಕೆಂದರೆ ಅದೇ ವೇಳೆ, ಬಾಲಿಕೆ ಸಂಭೋಗಕ್ಕೆ ಒಳಪಟ್ಟಿರುವುದೂ, ಅವಳ ಪ್ರಜನನ ಮಾರ್ಗದಲ್ಲಿ ವೀರ್ಯವಿರುವುದೂ, ನಿರೀಕ್ಷೆಗೆ ಮೀರಿದ ಸಂದರ್ಭ. ಆದ್ದರಿಂದ, ಮೊತ್ತಮೊದಲ ಅಂಡಾಣುವಿನ ನಿಷೇಚನೆ ಆಗದೇ ಅದು ನಶಿಸುವುದು. ಮೊತ್ತಮೊದಲ ಪೀತಕೋಶ ಸಮೂಹ ೨ ವಾರಗಳ ಕಾಲ ಮಾತ್ರ ಕಾರ್ಯೋನ್ಮುಖವಾಗಿದ್ದು, ಕೊನೆಗೆ ಅವನತಿ ಹೊಂದುವುದೂ ನಿಶ್ಚಯ. ಮೊತ್ತ ಮೊದಲ ಪೀತಕೋಶ ಸಮೂಹದ ಅವನತಿ ಕಂಡುಬಂದ ಕೂಡಲೇ ಬಾಲಿಕೆಯ ಯೋನಿ ಮಾರ್ಗದಿಂದ ಲೋಳೆಯುಕ್ತ ರಕ್ತಸ್ರಾವವಾಗತೊಡಗುತ್ತದೆ. ಮೂರರಿಂದ ನಾಲ್ಕು ದಿವಸಗಳ ತನಕ ರಕ್ತಸ್ರಾವವಾಗಿ ನಿಂತು ಹೋಗುತ್ತದೆ. ಇದೇ ಪ್ರಥಮ 'ರಜಸ್ರಾವ' ಅಥವಾ 'ಋತುಸ್ರಾವ'. ಮೊತ್ತಮೊದಲ ರಜಸ್ರಾವಕ್ಕೆ ರಜೋದರ್ಶನ (ಮೆನಾರ್ಕಿ) ಎಂದು ಹೆಸರು. ಸಾಮಾನ್ಯ ಭಾಷೆಯಲ್ಲಿ ಇದಕ್ಕೆ ಮೈನೆರೆಯುವುದು ಎನ್ನುತ್ತಾರೆ. ಮುಂದೆ ಯಾವುದೋ ಅಂಡಾಣುವಿನ ನಿಷೇಚನೆ ಆಗುವ ತನಕ ಒಂದೊಂದು ಅಂಡಾಣು ಬಿಡುಗಡೆ ಆದಾಗಲೂ ಹಾಗೆ ಬಿಡುಗಡೆ ಆದ ೨ ವಾರಗಳ ಬಳಿಕ ರಜಸ್ರಾವವಾಗುತ್ತದೆ. ರಜಸ್ರಾವ ೪ ವಾರಗಳಿಗೊಮ್ಮೆ ಕಂಡುಬರುವ ವಿದ್ಯಮಾನ ಮತ್ತು ಆ ಮುಂದೆ ಬಿಡುಗಡೆಗೊಂಡಿದ್ದ ಅಂಡಾಣುವಿನ ನಿಷೇಚನೆ ಆಗದೆ ಅದೇ ಸಮಯದಲ್ಲಿ ರೂಪುಗೊಂಡಿದ್ದ ಪೀತಕೋಶ ಸಮೂಹದ ಅವನತಿ ಆದುದ್ದರ ಸೂಚನೆ.

ಅಂಡಾಣು ಬಿಡುಗಡೆ ಆಗದೆ ಅದರ ನಿಷೇಚನೆಯ ಪ್ರಶ್ನೆಯೇ ಉದ್ಭವಿಸದಿದ್ದಾಗ ಅಂದರೆ ಪೀತಕೋಶ ಸಮೂಹದ ಮೈದೋರುವಿಕೆಯಾಗಲಿ, ಕ್ಷೀಣಿಸುವಿಕೆಯಾಗಲಿ ಕಂಡುಬರುವ ಪ್ರಮೇಯವೇ ಇಲ್ಲದಿದ್ದಾಗ ರಜಸ್ರಾವವೂ ಆಗುವುದಿಲ್ಲ. ಆದ್ದರಿಂದಲೇ ಅಂಡಾಣು ತಯಾರಿಕೆ ಆಗುವುದಿಲ್ಲವೆಂದು ಹೇಳಿರುವ ಗರ್ಭಸ್ಥ ಅವಧಿ, ನವಜಾತ ಶಿಶುವಿಗೆ ಎದೆ ಹಾಲು ಉಣಿಸುತ್ತಿರುವ ಅವಧಿ ಮತ್ತು ವಯಸ್ಸು ಮೀರಿದ ಅವಧಿ ಸಂತಾನೋತ್ಪಾದನಾ ಸಾಮರ್ಥ್ಯ ಸ್ಥಗಿತವಾಗಿರುವ ಕಾಲಗಳು. ಈ ಕಾಲಗಳಲ್ಲಿ ಮುಟ್ಟು ನಿಂತು ಹೋಗಿರುತ್ತದೆ. ಮಿಕ್ಕ ಕಾಲದಲ್ಲಿ ಮೈನೆರೆದಾಗ ರಜಸ್ರಾವ ಪ್ರಸಂಗ ಕ್ಲುಪ್ತವಾಗಿ ೪ ವಾರಗಳಿಗೊಮ್ಮೆ ಮರುಕಳುಸುತ್ತಲೇ ಇರುತ್ತದೆ. ಅಂತಿಮವಾಗಿ ವಯಸ್ಕ ಸ್ತ್ರೀಯಲ್ಲಿ ಅಂಡಾಣು ತಯಾರಿಕೆ ಮತ್ತು ಬಿಡುಗಡೆ ನಿಲ್ಲುವ ತನಕವೂ ರಜಸ್ರಾವ ಪ್ರಸಂಗಗಳು ಕಂಡುಬರುವುದರಿಂದ ಮತ್ತು ಅನಂತರ ಅವು ಸಹ ಸ್ಥಗಿತವಾಗುವುದರಿಂದ ಸ್ತ್ರೀಯಲ್ಲಿ ಬಾಲ್ಯದಿಂದ ವೃದ್ಧಾಪ್ಯದ ತನಕ ಅಂಡಾಣು ತಯಾರಿಕೆ ಅರ್ಥಾತ್ ಸಂತಾನೋತ್ಪಾದನ

ಸಾಮರ್ಥ್ಯ ಇರುವ ಕಾಲದ ಅವಧಿ ಸ್ಪಷ್ಟವಾಗಿ ಗೋಚರಕ್ಕೆ ಬರುತ್ತದೆ. ಪುರುಷರಲ್ಲಿ ಇದು ನಿಶ್ಚಿತವಾಗಿಲ್ಲ.

ಗರ್ಭಕೋಶ ಮತ್ತು ರಜಸ್ರಾವ : ವಾಸ್ತವವಾಗಿ ಗರ್ಭಾಶಯದಿಂದ ರಜಸ್ರಾವವಾಗುತ್ತದೆ. ಬಾಲಿಕೆಯಲ್ಲಿ ಗರ್ಭಾಶಯ ಒಂದು ಸಣ್ಣ ಬುಗರಿಯಂತೆ ಇರುತ್ತದೆ. ಇದರ ಗರಿಷ್ಠ ವ್ಯಾಸ 35 ಮಿಮೀ. ಕಿರಿದಾದ ಇದರ ಬುಡಭಾಗಕ್ಕೆ ಗರ್ಭಕೋಶಕಂಠ (ಸರ್ವಿಕ್ಸ್) ಎಂದು ಹೆಸರು. ಇದು ಯೋನಿಯೊಳಕ್ಕೆ ಚಾಚಿಕೊಂಡಿರುತ್ತದೆ. ಕಂಠದ ದ್ವಾರ ಸು. 3 ಮಿಮೀ ವ್ಯಾಸವಿರುವ ನಾಳವಾಗಿದ್ದು ಯೋನಿಯೊಳಕ್ಕೆ ತೆರೆದುಕೊಳ್ಳುತ್ತದೆ. ಗರ್ಭಾಶಯದ ಭಿತ್ತಿ ದಪ್ಪವಾಗಿದ್ದು ಎದುರುಬದಿರಾಗಿ ಸಂಪರ್ಕಗೊಂಡಿರುವುದು. ಅದರ ಒಳಗಡೆ ಅವಕಾಶ ಬಲು ಕಡಿಮೆ. ಭಿತ್ತಿ ಮುಖ್ಯವಾಗಿ ಸ್ನಾಯುವಿನಿಂದಲೂ, ಒಳಗಡೆ ಲೋಳೆಪೊರೆಯಿಂದಲೂ ಕೂಡಿದೆ. ಭಿತ್ತಿಯ ಈ ಎರಡೂ ಭಾಗಗಳಲ್ಲೂ ದೊಡ್ಡ ಮತ್ತು ಸಣ್ಣ ಧಮನಿಗಳಿವೆ. ಲೋಳೆಪೊರೆಯಲ್ಲಿ ಸಣ್ಣ ನಳಿಕೆಯಾಕಾರದ ಗ್ರಂಥಿಗಳಿವೆ. ಆದರೆ, ಇವು ಇನ್ನೂ ಸ್ರವನ ಸಾಮರ್ಥ್ಯ ಪಡೆದಿರುವುದಿಲ್ಲ. ಪ್ರಬುದ್ಧತೆಯ ವೇಳೆಯಲ್ಲಿ ಗರ್ಭಕೋಶ ಸ್ವಲ್ಪ ದೊಡ್ಡದಾಗುತ್ತದೆ. ಅದರ ಒಳಪೊರೆಯ ಗಾತ್ರವೂ ಹೆಚ್ಚಿ ಅಲ್ಲಿಯ ಗ್ರಂಥಿಗಳು ಸ್ರವನ ಸಾಮರ್ಥ್ಯ ಪಡೆಯುತ್ತವೆ. ರಜಸ್ರಾವವಾಗುವುದಕ್ಕೆ ೨–೩ ದಿವಸಗಳಿಗೆ ಮುಂಚೆ ಈ ಪೊರೆಯಲ್ಲಿ ಧಮನಿಗಳು ಹಿಗ್ಗಿ ಅಲ್ಲಿ ರಕ್ತ ಪ್ರವಾಹ ಹೆಚ್ಚಾಗುತ್ತದೆ. ಗ್ರಂಥಿಗಳು ವಕ್ರವಾಗಿ ತಿರುಚಿಕೊಳ್ಳುವುವಲ್ಲದೆ ಲೋಳೆಯುಕ್ತ ದ್ರವವನ್ನೂ ಸ್ರವಿಸುತ್ತವೆ. ವಾಸ್ತವವಾಗಿ ಇಂಥ ರಜಸ್ರಾವ ಪೂರ್ವ ಬದಲಾವಣೆಗಳು ಅಂಡಾಶಯದಲ್ಲಿ ಪೀತಕೋಶ ಸಮೂಹ ಊರ್ಜಿತಗೊಂಡಾಗ ಪ್ರಾರಂಭವಾಗಿ ಅದು ಕಾರ್ಯೋನ್ಮುಖವಾಗಿರುವತನಕ ಮುಂದುವರಿಯುತ್ತದೆ. ತತ್ಫಲವಾಗಿ ಗರ್ಭಾಶಯದ ಒಳಪದರ ಮೃದುವಾಗಿ, ರಕ್ತಭರಿತವಾಗಿ, ದಪ್ಪವಾಗಿ ಆರ್ದ್ರವಾಗಿರುತ್ತದೆ. ಪೀತಕೋಶ ಸಮೂಹ ಅವನತಿಗೊಂಡಾಗ ಗರ್ಭಕೋಶದ ಒಳಪೊರೆಯು ನಶಿಸಿ, ಅಲ್ಲಿಯ ಧಮನಿಗಳು ಛಿದ್ರಿಸಿ ರಕ್ತಸ್ರಾವವಾಗುವುದಕ್ಕೆ ಪ್ರಾರಂಭಿಸುತ್ತದೆ. ಅಂದರೆ ರಜಸ್ರಾವ ಪೂರ್ವ ಸ್ಥಿತಿಯ ಅವನತಿಯೇ ರಜಸ್ರಾವಕ್ಕೆ ಕಾರಣ ಎನ್ನುವುದು ವ್ಯಕ್ತ.

ರಜಸ್ರಾವದಲ್ಲಿ ರಕ್ತ ದಡದಡನೆ ಹರಿದು ಹೋಗುವುದಿಲ್ಲ. ಆದರೆ, ನಿಧಾನವಾಗಿ ಜಿನುಗುತ್ತಾ, ೩–೪ ದಿವಸಗಳ ಪರ್ಯಂತ ಸ್ರಾವ ಆಗುತ್ತದೆ. ಈ ಕಾಲದಲ್ಲಿ ಆಗುವ ಒಟ್ಟು ಸ್ರಾವ 100–120 ಮಿಲೀ. ರಜಸ್ರಾವದಲ್ಲಿ ರಕ್ತದೊಡನೆ ಗರ್ಭಾಶಯದ ಒಳಪೊರೆ ನಶಿಸಿದ್ದರಿಂದ ಫಲಿಸಿದ ಲೋಳೆಯುಕ್ತ ದ್ರವ ಸೇರಿರುತ್ತದೆ. ರಜಸ್ರಾವದ ಪ್ರಾರಂಭ ದಿವಸದಿಂದಲೇ ಲೆಕ್ಕ ಮಾಡಿದರೆ ಮುಂದಿನ ರಜಸ್ರಾವ ಪ್ರಾರಂಭವಾಗುವುದು ೪ ವಾರಗಳ ಬಳಿಕ. ಅದಾದ ಮುಂದಿನ ೪ ವಾರಗಳ ತರುವಾಯ ಪುನಃ ರಜಸ್ರಾವ. ಹೀಗೆ ಇದು ೪ ವಾರಗಳಿಗೆ ಒಮ್ಮೆ ತಿರುಗಿ ಕಾಣುವ ಚಕ್ರೀಯ ವ್ಯಾಪಾರ. ಹೆಚ್ಚು ಕಡಿಮೆ ಚಾಂದ್ರಮಾಸಕ್ಕೆ ಒಮ್ಮೆ ಕಂಡುಬರುವ ಈ ಋತುಚಕ್ರಕ್ಕೆ ಮಾಸಿಕ ಚಕ್ರವೆಂದೇ ಹೆಸರು. ಆದರೆ, ಋತುಚಕ್ರ ಕೆಲವರಲ್ಲಿ 35 ದಿವಸಗಳಷ್ಟು ದೀರ್ಘಾವಧಿಯದ್ದಾಗಿರುವುದು. ಇನ್ನೂ ಕೆಲವರಲ್ಲಿ ಇದು 20 ದಿವಸಗಳಷ್ಟು ಹ್ರಸ್ವಾವಧಿಯದೇ ಆಗಿದೆ. ಕೆಲವರಲ್ಲಿ ರಜಸ್ರಾವ 7 – 8 ದಿವಸಗಳ ಕಾಲ ಆಗುತ್ತಿರಬಹುದು. ಇನ್ನೂ ಕೆಲವರಲ್ಲಿ 2 ದಿವಸಗಳಲ್ಲೇ ನಿಂತು ಹೋಗಬಹುದು. ಹಾಗೆಯೇ ಸ್ರಾವ ಪ್ರಮಾಣ ಕೆಲವರಲ್ಲಿ 60 ಮಿಲೀ ಕಡಿಮೆ ಇದ್ದರೆ, ಇನ್ನೂ ಕೆಲವರಲ್ಲಿ 180–200 ಮಿಲೀಯಷ್ಟು ಅತಿಯಾಗಿರುತ್ತದೆ. ಇವೆಲ್ಲ ಆರೋಗ್ಯ ಪರಿಮಿತಿಯಲ್ಲಿ ಕಂಡುಬರುವ ವೈಯುಕ್ತಿಕ ವ್ಯತ್ಯಾಸಗಳು. ಹೀಗೆಯೇ ಋತುಸ್ರಾವ ಪ್ರಾರಂಭವಾಗುವುದು, ಆರೋಗ್ಯ ಮಿತಿಯಲ್ಲಿ ಒಂದೆರಡು ದಿವಸ ಹಿಂದು ಮುಂದಾಗಬಹುದು. ಭಯ, ಆತಂಕ, ದೋಷಯುಕ್ತ ಲೈಂಗಿಕ ನಡೆವಳಿಕೆಯಿಂದ ಒದಗಿದ ಅನಿಶ್ಚಿತತೆಗಳು, ಅಪರಿಚಿತ ಸ್ಥಳದಲ್ಲಿ ಇಲ್ಲವೇ ಅಪರಿಚಿತ ಜನರೊಡನೆ ಇರುವಿಕೆ ಇತ್ಯಾದಿಗಳಿಂದ ರಜಸ್ರಾವ ನಿರೀಕ್ಷಿತ ಕಾಲಕ್ಕಿಂತ ಅನೇಕ ವಾರಗಳೇ ತಡವಾಗಬಹುದು.

ರಜಸ್ರಾವದ ಪ್ರಾರಂಭ ಖಚಿತವಾಗಿ ಗುರುತಿಸಬಹುದಾದ ಸಂಜ್ಞೆಯಾದ್ದರಿಂದ, ಗರ್ಭಾವಸ್ಥೆಯನ್ನು ಒಳಗೊಂಡಂತೆ ಸ್ತ್ರೀ ಪ್ರಜನನಾಂಗಗಳ ಕಾರ್ಯಕ್ರಮಗಳನ್ನು ಆ ದಿವಸದಿಂದ ಗಣಿಸುವುದಿದೆ. ಅಲ್ಲಿಂದ 3–4 ದಿವಸಗಳ ತನಕ ರಜಸ್ರಾವವಾಗುತ್ತದೆ. 5–6 ನೆ ದಿವಸಗಳಲ್ಲಿ ಗರ್ಭಾಶಯದ ಒಳಪೊರೆಯ ದುರಸ್ತಿ ಆಗುತ್ತದೆ. 14 ನೆ ದಿವಸದ ತನಕ ಹಾಗೆಯೇ ಇದ್ದು, 15 ನೆ ದಿವಸದಿಂದ 28 ನೆ ದಿವಸದ ತನಕ ಗರ್ಭಕೋಶದ ಒಳಪೊರೆಯಲ್ಲಿ ರಜಸ್ರಾವ ಪೂರ್ವಸಿದ್ಧತೆ ಅಂದರೆ ಧಮನಿಗಳ ಮತ್ತು ಗ್ರಂಥಿಗಳ ಬೆಳೆವಣಿಗೆ ಚಟುವಟಿಕೆಗಳಿಂದ ಮೃದುವಾಗಿ, ದಪ್ಪವಾಗುವುದು ಕಂಡುಬರುತ್ತದೆ. ಇಷ್ಟರಲ್ಲಿ ಗರ್ಭಾಂಕುರಾರ್ಪಣವಾಗಿರದೇ ಇದ್ದರೆ ಮುಂದಿನ ರಜಸ್ರಾವ ಪ್ರಾರಂಭವಾಗುತ್ತದೆ. ಅದು ಆ ಚಕ್ರದ ಮೊದಲ ದಿವಸ. ರಜೋಚಕ್ರವನ್ನು ಅಂಡಾಶಯದ ಕಾರ್ಯಕ್ರಮಕ್ಕೆ ಅನ್ವಯಿಸಿದರೆ, ರಜಸ್ರಾವದ ಮೊದಲ ದಿವಸದಿಂದ 14 ನೆ ದಿವಸದ ತನಕ ಅಂಡಾಶಯದಲ್ಲಿ ಕೋಶ ಸಮೂಹ ವೃದ್ಧಿಗೊಳ್ಳುತ್ತ ಅದರಲ್ಲಿ ಪಕ್ವವಾಗುವ ಅಂಡಾಣು ತಯಾರಾಗುತ್ತದೆ. 14–15 ದಿವಸಗಳ ನಡುವೆ ಯಾವಾಗಲೋ ಅಂಡಾಣುವಿನ ಬಿಡುಗಡೆ ಆಗುತ್ತದೆ. 15–17 ದಿವಸಗಳ ನಡುವೆ ಪೀತಕೋಶ ಸಮೂಹ ಊರ್ಜಿತಗೊಳ್ಳುತ್ತದೆ. ಮುಂದೆ ಅದು ಕಾರ್ಯೋನ್ಮುಖವಾಗಿ 28 ನೆ ದಿವಸದ ತನಕ ಮುಂದುವರಿಯುತ್ತದೆ. ನಂತರ ಅದರ ಅವನತಿಯಾಗಿ ಮುಂದಿನ ಕೋಶ ಸಮೂಹ ವೃದ್ಧಿ ಮತ್ತು ಅಂಡಾಣು ತಯಾರಿಕೆ. ಅಂದರೆ, ಮುಂದಿನ ಅಂಡಾಶಯಚಕ್ರ ಪ್ರಾರಂಭವಾಗುತ್ತದೆ. ಇವೆರಡು ಚಕ್ರಗಳನ್ನು ಹೋಲಿಸಿ ನೋಡಿದಾಗ ವ್ಯಕ್ತವಾಗುವ ವಿಷಯಗಳಿವು. ಅಂಡಾಣು ಬಿಡುಗಡೆ ಆಗಿ ಪೀತಕೋಶ ಸಮೂಹ ಕಾರ್ಯೋನ್ಮುಖವಾಗಿರುವ ೨ ವಾರಗಳ ಕಾಲ ಗರ್ಭಾಶಯದಲ್ಲಿ ಒಳಪೊರೆಯ ವೃದ್ಧಿ, ರಕ್ತತುಂಬಿಕೆ ಮತ್ತ ಗ್ರಂಥಿಗಳಿಂದ ಸ್ರವನ (ಅಂದರೆ ರಜಸ್ರಾವ ಪೂರ್ವ ಸಿದ್ಧತೆ) ಕಂಡುಬರುತ್ತವೆ. ಪೀತಕೋಶದ ಅವನತಿ ಆದ ಕೂಡಲೇ ಗರ್ಭಾಶಯದ ಒಳಪೊರೆಯ ಅವನತಿಯಾಗಿ (ಅಂದರೆ ರಜಸ್ರಾವ ಪೂರ್ವಾಸಿದ್ಧತೆ ವಿಫಲಗೊಂಡು) ರಜಸ್ರಾವವಾಗುತ್ತದೆ. ಮುಂದಿನ ಅಂಡಾಶಯ ಕೋಶ ಸಮೂಹದ ವೃದ್ಧಿ ಆಗುವಾಗ ಗರ್ಭಾಶಯದಲ್ಲಿ ರಜಸ್ರಾವೋತ್ತರ ಒಳಪೊರೆಯ ದುರಸ್ತಿ ಆಗಿ ಅದು ವಿಶ್ರಾಂತ ಸ್ಥಿತಿಯಲ್ಲಿರುತ್ತದೆ. ಹೀಗೆ ಅಂಡಾಶಯ ಚಕ್ರಕ್ಕೂ, ಗರ್ಭಾಶಯ ಚಕ್ರಕ್ಕೂ ನಿಕಟ ಹಾಗೂ ವ್ಯವಸ್ಥಿತ ಸಂಬಂಧವಿದೆ. ಕೋಶ ಸಮೂಹ ಅಂಡಾಶಯದಲ್ಲಿ ೨ ವಾರ ಪರ್ಯಂತ ವೃದ್ಧಿಯಾಗಿ ಅಂಡಾಣು ಪಕ್ವವಾಗಿ ಬಿಡುಗಡೆಯಾಗುತ್ತದೆ. ಮುಂದೆ ಎರಡು ವಾರಗಳಲ್ಲಿ ಪೀತಕೋಶ ಸಮೂಹದ ಸೃಷ್ಟಿ ಆಗಿ ಅದು ಕಾರ್ಯೋನ್ಮುಖವಾಗಿರುತ್ತದೆ. ಗರ್ಭಾಶಯದಲ್ಲೂ ಹೀಗೆಯೇ ೨ ವಾರ ರಜಸ್ರಾವ ಪೂರ್ವಸಿದ್ಧತೆ ಮತ್ತು ಅಂತ್ಯದಲ್ಲಿ ರಜಸ್ರಾವ ಪ್ರಾರಂಭ, ಮುಂದಿನ ೨ ವಾರಗಳಲ್ಲಿ ರಜಸ್ರಾವ, ನಂತರ ಒಳಪೊರೆಯ ದುರಸ್ತಿ ಮತ್ತು ವಿಶ್ರಾಂತಿ.

ಅಂಡಾಶಯದ ಕಾರ್ಯಕ್ರಮಕ್ಕೂ ಗರ್ಭಾಶಯದ ವಿದ್ಯಮಾನಕ್ಕೂ ಇರುವ ನಿಕಟ ಸಂಬಂಧ ಇನ್ನೂ ಮೂರು ಪ್ರಸಂಗಗಳಲ್ಲಿ ವ್ಯಕ್ತವಾಗುತ್ತದೆ. ಮೊದಲನೆಯದು ಸ್ತ್ರೀ ಗರ್ಭಸ್ಥೆಯಾಗಿರುವುದು. ಎರಡನೆಯದು ಆಕೆ ಹಡೆದು ಮಗುವಿಗೆ ಹಾಲುಡಿಸುತ್ತಿರುವುದು. ಮೂರನೆಯದು ಆಕೆಯಲ್ಲಿ ಸಂತಾನಭರಣ ಸಾಮರ್ಥ್ಯ ಕೊನೆಗೊಂಡಿತೆಂದು ವ್ಯಕ್ತಪಡಿಸುವ ರಜೋಬಂಧ (ಮುಟ್ಟುನಿಲ್ಲುವಿಕೆ, ಮೆನೊಪಾಸ್). ಈ ಮೂರೂ ಪ್ರಸಂಗಗಳಲ್ಲಿ ಅಂಡಾಶಯದಲ್ಲಿ ಅಂಡಾಣು ತಯಾರಿಕೆ ಸ್ಥಗಿತವಾಗಿರುತ್ತದೆ. ಮತ್ತು ಅದೇ ಮೂರು ಪ್ರಸಂಗಗಳಲ್ಲಿ ರಜೋಚಕ್ರವೂ ಸ್ಥಗಿತವಾಗಿರುತ್ತದೆ. ಅಂಡಾಶಯಚಕ್ರ ರಜೋಚಕ್ರ ೨ ಉಪಸ್ಥಿತವಿರುವಾಗ ಅಂಡಾಣು ತಯಾರಿಕೆ ಮತ್ತು ಬಿಡುಗಡೆ ಆಗಿ ೨ ವಾರಗಳು ಕಳೆದ ಮೇಲೆಯೇ (ಅದಕ್ಕೆ ಮೊದಲೇ ಅಲ್ಲ), ಅದು ಅಂಡಾಣುವಿನ ನಿಷೇಚನವಾಗದಿದ್ದಾಗ ಮಾತ್ರ, ರಜಸ್ರಾವವಾಗುತ್ತದೆ ಎಂಬ ವಿಷಯವನ್ನು ನೆನಪಿನಲ್ಲಿಟ್ಟುಕೊಂಡರೆ ಅಂಡಾಶಯಚಕ್ರ ಪ್ರಾಥಮಿಕ, ಅದನ್ನು ಅನುಸರಿಸಿ ಋತುಚಕ್ರ ಏರ್ಪಟ್ಟಿದೆ ಎಂಬುದು ವ್ಯಕ್ತವಾಗುತ್ತದೆ.

ಪ್ರಬುದ್ಧತೆ ಮತ್ತು ಅನುಷಂಗಿಕ ಲೈಂಗಿಕ ಲಕ್ಷಣಗಳು : ಬಾಲಿಕೆ ಹನ್ನೆರಡರಿಂದ ಹದಿನಾಲ್ಕನೆಯ ವಯೋಮಿತಿಯಲ್ಲಿ ಮೈನೆರೆಯುವುದು ಸಾಮಾನ್ಯ. ಹತ್ತನೆಯ ವಯಸ್ಸಿಗೆ ಮೊದಲು ಹದಿನೇಳನೆಯ ವಯಸ್ಸಿನ ತರುವಾಯ ಮೈನೆರೆಯುವುದು ರೋಗಸೂಚಕ. ಮೈನೆರೆಯುವುದಕ್ಕೆ ಹಲವಾರು ವಾರಗಳಷ್ಟು ಮುಂಚೆ ಬಾಲಿಕೆಯ ಭಗದಮೇಲೆ ರೋಮಗಳು ಕಂಡುಬರಲು ಪ್ರಾರಂಭವಾಗುತ್ತವೆ. ಶೀಘ್ರದಲ್ಲೇ ಕಂಕುಳಲ್ಲಿ ಕೂದಲು ಬೆಳೆಯುತ್ತದೆ. ಮೈನೆರೆದಾಗ ಮತ್ತು ಅಲ್ಲಿಂದ ಕ್ಲುಪ್ತ ಅಂತರದಲ್ಲಿ ರಜಸ್ರಾವ ಆಗುತ್ತದೆ. ಹಲವು ತಿಂಗಳ ಪರ್ಯಂತ ದೇಹ ಶೀಘ್ರವಾಗಿ ಬೆಳೆದು ಆಕೆಯ ಮೈಕೈ ತುಂಬಿಕೊಳ್ಳುತ್ತವೆ. ಒಳ ಮತ್ತು ಹೊರ ಪ್ರಜನನಾಂಗಗಳು ದೊಡ್ಡವಾಗುತ್ತವೆ. ಭುಜಗಳ ಅಂತರಕ್ಕಿಂತ ಶ್ರೋಣಿಭಾಗ ಹಿರಿದಾಗಿ ಬೆಳೆಯುತ್ತದೆ. ಮೊಳಕೈ ಬೆಳೆವಣಿಗೆ ಸ್ವಲ್ಪ ವ್ಯತ್ಯಾಸವಾಗಿ ಕೆಳಕೈಗಳು ದೇಹಪಶ್ವವನ್ನು ಬಿಟ್ಟು ಸ್ವಲ್ಪ ಹೊರಚಾಚಿರುವಂತೆ ವಿಸ್ತರಿಸುತ್ತವೆ. ತೊಡೆ ಭಾಗಗಳು ಮೊಳಕಾಲಿನೆಡೆ ಒಂದನ್ನೊಂದು ಸಂಧಿಸುವಷ್ಟು ಓರೆ ಆಗುತ್ತವೆ. ತಲೆಕೂದಲು ಸಮೃದ್ಧಿಯಾಗಿ ಬೆಳೆದು ಹಣೆಯ ಮೇಲೆ ತಲೆ ಕೂದಲಿನ ರೇಖೆ ಬಿಲ್ಲಿನಂತೆ ಕಮಾನಾಗಿರುತ್ತದೆ. ಮುಖ ಮೈಗಳ ಚರ್ಮ ಕೋಮಲವಾಗಿ ರೋಮರಹಿತವಾಗಿರುತ್ತದೆ. ಸ್ತನಗಳು ವೃದ್ಧಿ ಆಗುವುದಲ್ಲದೆ ಅವುಗಳಲ್ಲಿ ಹಾಲು ಸ್ರವಿಸುವ ಗ್ರಂಥಿ ಭಾಗಗಳು ಹಾಲನ್ನು ಒಯ್ಯುವ ನಾಳಭಾಗಗಳು ಮೂಡುತ್ತವೆ. ಧ್ವನಿ ಆ ಮೊದಲು ಇದ್ದಂತೆಯೇ ತಾರದಲ್ಲಿ ನಿಂತು ಇನ್ನೂ ಮಾರ್ದನಗೊಳ್ಳುತ್ತದೆ. ಮಾನಸಿಕವಾಗಿ ಭೀರುಸ್ವಭಾವ, ದಯೆ, ನಾಚಿಕೆ ಮುಂತಾದ ಪ್ರವೃತ್ತಿಗಳು ಮೂಡುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಅಂಡಾಶಯಗಳಲ್ಲಿ ಅಂಡಾಣುಕೋಶ ಸಮೂಹ, ಪೀತಕೋಶಸಮೂಹ ಕಂಡುಬಂದು ಅವುಗಳ ಚಕ್ರೀಯ ಕಾರ್ಯಕ್ರಮಗಳ ವ್ಯವಸ್ಥೆಗೊಳ್ಳುತ್ತವೆ. ಇವುಗಳೆಲ್ಲ ಸ್ತ್ರೀಯಲ್ಲಿ ವಿಶಿಷ್ಟವಾಗಿ ಕಾಣುವ ಆನುಷಂಗಿಕ ಲೈಂಗಿಕ ಲಕ್ಷಣಗಳು. ಇವುಗಳಿಂದ ಮುಖ್ಯವಾಗಿ ಆಕೆ ಸಂತಾನವನ್ನು ಧರಿಸಿ, ಭರಿಸಿ, ಪ್ರಸವಿಸಿ, ಮಗುವಿಗೆ ಹಾಲುಕೊಟ್ಟು ಪೋಷಿಸುವ ಅನುಕೂಲತೆಗಳನ್ನು ಪಡೆಯುವುದಾಗಿದೆ.

ಸಂತಾನಧಾರಣೆ ಆದಾಗ ಅಂಡಾಶಯ ಮತ್ತು ಗರ್ಭಾಶಯದಲ್ಲಿ ಕಾಲಚಕ್ರಗಳು ಸ್ಥಗಿತವಾಗಿ ಸಂತಾನ ಗರ್ಭಕೋಶದಲ್ಲಿ ಬೆಳೆಯುತ್ತದೆ. ಅನುಗುಣವಾಗಿ ಗರ್ಭಕೋಶ ಬೆಳೆದು ದೊಡ್ಡದಾಗುತ್ತದೆ. ನಲವತ್ತು ವಾರಗಳ ಬಳಿಕ ಗರ್ಭಕೋಶ ಸಂಕೋಚಿಸಿ ಸಂತಾನವನ್ನು ಹೊರದೂಡುವುದೇ ಪ್ರಸವ. ಇದೇ ವೇಳೆ ಸ್ತನಗಳಲ್ಲಿ ಯುಕ್ತ ಮಾರ್ಪಾಡುಗಳು ಕಂಡುಬರುತ್ತವೆ.

ಬಾಲಿಕೆಯರಿಗಿಂತ ಬಾಲಕರು ಒಂದೆರಡು ವರ್ಷ ತಡವಾಗಿ ಪ್ರಬುದ್ಧರಾಗುತ್ತಾರೆ. 14–16 ವರ್ಷ ವಯಸ್ಸಿನಲ್ಲಿ ಪ್ರಬುದ್ಧರಾಗುವುದು ಸಾಮಾನ್ಯ. ಈ ಕಾಲದಲ್ಲಿ ಒಂದೊಂದಾಗಿ ಕಂಡು ಬರಲು ಪ್ರಾರಂಭವಾಗುವ ವಯಸ್ಕಲಕ್ಷಣಗಳು ಪೂರ್ಣವಾಗುವತನಕ ಒಂದೆರಡು ವರ್ಷಗಳೇ ಕಳೆಯಬಹುದು. ವೃಷಣಗಳೂ, ಶಿಶ್ನವೂ ಸ್ವಲ್ಪ ದೊಡ್ಡದಾಗಿ ಬೆಳೆಯುತ್ತವೆ. ವೃಷಣದಲ್ಲಿ ವೀರ್ಯಾಣೋತ್ಪಾದಕ ನಾಳಗಳ ನಡುವೆ ಉಪಸ್ಥಿತವಾಗಿರುವ ಲೀಡಿಗಿನ ಕೋಶಗಳ ಗುಂಪುಗಳು ಸ್ರವನ ಸಾಮರ್ಥ್ಯ ಪಡೆಯುತ್ತವೆ. ವೃಷಣಕೋಶ ಮತ್ತು ಶಿಶ್ನದ ಬುಡದಲ್ಲಿ ದೇಹದ ಮೇಲೆ ಒರಟು ರೋಮಗಳು ಬೆಳೆಯುತ್ತವೆ. ಎದೆಯಮೇಲೆ, ಉದರದಲ್ಲಿ ಕೂದಲು ಶಿಶ್ನ ಇರುವಲ್ಲಿವರೆಗೂ ಬೆಳೆಯುತ್ತದೆ. ಅದ್ದರಿಂದ, ಪುರುಷನ ಭಗ ಪ್ರದೇಶದ ರೋಮಗಳಿರುವ ಪ್ರದೇಶ ಹೆಂಗಸಿನಲ್ಲಿಯಂತೆ ನೇರರೆಗೆಯಲ್ಲಿ ಮಿತಿಗೊಂಡಿಲ್ಲ ಬೆನ್ನಿನ ಮೇಲೂ ಸಣ್ಣ ರೋಮಗಳು ಬೆಳೆಯುತ್ತವೆ. ಮುಖದ ಮೇಲೆ ಕೂದಲು ಮೂಡಿ, ಗಡ್ಡ–ಮೀಸೆಗಳು ಕಾಣಿಸಿಕೊಳ್ಳುತ್ತವೆ. ಕಂಕುಳಲ್ಲಿಯು ಕೂದಲು ಬೆಳೆಯುತ್ತದೆ. ಉಬ್ಬು ಮತ್ತು ತಲೆ ಕೂದಲು ಸ್ವಲ್ಪ ಮಟ್ಟಿಗೆ ಒರಟಾಗಿರುವುದಲ್ಲದೆ ಹಣೆಯ ಎಡಬಲಪಾರ್ಶ್ವಗಳಲ್ಲಿ ತಲೆಕೂದಲಿನ ರೇಖೆ ಹಿಂದಕ್ಕೆ ಸರಿಯುವುದರಿಂದ ಬಾಲ್ಯದಲ್ಲಿ ಬಿಲ್ಲಿನಂತಿದ್ದ ರೋಮರೇಖೆ ಅಂಕುಡೊಂಕಾಗುತ್ತದೆ. ಧ್ವನಿ ಒಡೆದು ಗೊಗ್ಗರವಾಗುತ್ತದೆ. ಸ್ತನಗಳು ಬಾಲ್ಯಾವಸ್ಥೆಯಲ್ಲೆ ಮುಂದುವರಿದು ಕ್ರಿಯಾರಹಿತವಾಗಿರುತ್ತವೆ. ದೇಹ ಬೆಳೆದು ದೃಢವಾಗುತ್ತದೆ. ಶ್ರೋಣಿಗಿಂತ ಭುಜಭಾಗ ಅಗಲವಾಗಿ ಬೆಳೆಯುತ್ತದೆ. ಕೈಕಾಲುಗಳ ಮೂಳೆಗಳು ಉದ್ದವಾಗಿ ದಪ್ಪವಾಗಿ ಬೆಳೆದು, ಬಾಲ್ಯಾವಸ್ಥೆಯಲ್ಲಿಯಂತೆ ನೆಟ್ಟಗೆ ಇರುತ್ತವೆ. ಮುಖ್ಯವಾಗಿ ವೃಷಣಗಳಲ್ಲಿ ವೀರ್ಯಾಣುಗಳ ಉತ್ಪತ್ತಿ ಶುಕ್ಲಗ್ರಂಥಿ ವೀರ್ಯಕೋಶಗಳಲ್ಲಿ ಸ್ರವನಸಾಮರ್ಥ್ಯವೂ ಕಂಡುಬರುತ್ತವೆ. ವೀರ್ಯೋತ್ಪತ್ತಿ ಆಗಿ ಸಂಭೋಗದಿಂದ ಸ್ತ್ರೀಯ ಯೋನಿಯೊಳಗೆ ವೀರ್ಯ ಸ್ಖಲನ ಮಾಡುವ ಅನುಕೂಲ ಮತ್ತು ಸಾಮರ್ಥ್ಯ ಒದಗುತ್ತವೆ. ಇವುಗಳಿಂದಾಗಿ ಪುರುಷ ಸಂತಾನ ಪಡೆಯುವ ಮತ್ತು ಸಂತಾನಭಾರ ಹೊರುವ ಯೋಗ್ಯತೆ ಗಳಿಸುತ್ತಾನೆ.

ಸಂಭೋಗ : ಸಂಭೋಗ ಕ್ರಿಯೆಯಿಂದ ವೀರ್ಯ ಯೋನಿಯೊಳಗೆ ಸ್ಖಲನವಾಗುತ್ತದೆ. ಹಾಗಾಗುವುದರಿಂದ ಪ್ರಜನನ ಕ್ರಿಯೆ ಸಿದ್ಧಿಸುವಂತಾಗುತ್ತದೆ. ದೈಹಿಕ ಕ್ರಿಯಾ ದೃಷ್ಟಿಯಿಂದ ಸಂಭೋಗದ ಉಪಯೋಗ ಇಷ್ಟೇ. ಆದರೆ, ಮನುಷ್ಯರಲ್ಲಿ ಸಂಭೋಗ ಮಾನಸಿಕವಾಗಿ ಅತಿ ಹರ್ಷದಾಯಕ ಕ್ರಿಯೆಯಾಗಿ ಪರಿಣಮಿಸಿದೆ. ಸಂಭೋಗಿಸುತ್ತಿರುವಾಗ ಸಾಮಾನ್ಯವಾಗಿ ಎಲ್ಲ ಪುರುಷರಲ್ಲೂ ಮಾನಸಿಕವಾಗಿ ಸುಖಾನುಭವ ಹೆಚ್ಚಾಗುತ್ತ, ವೀರ್ಯ ಸ್ಖಲನವಾದಾಗ ಆನಂದ ಪರಮಾವಧಿಗೆ ಮುಟ್ಟಿ ಶರೀರದಲ್ಲೆಲ್ಲ ವಿಚಿತ್ರ ರೀತಿಯ ಒಂದು ಕಂಪನಾನುಭವವಾಗುತ್ತದೆ. ಇದಕ್ಕೆ ತೃಪ್ತಿ ಕಂಪನ ಅಥವಾ ಸುರತಸುಖ (ಆರ್ಗ್ಯಾಸ್ಮ್) ಎಂದು ಹೆಸರು. ಸುರತ ಸುಖ ಸ್ತ್ರೀಯರಲ್ಲೂ ಇದೆ. ಅದರೆ, ಅನೇಕ ಸ್ತ್ರೀಯರಲ್ಲಿ ಇದು ಅಪರೂಪದ ಅನುಭವ.

ಸಂಭೋಗಕ್ಕೂ, ವೀರ್ಯಸ್ಖಲನಕ್ಕೂ ಶಿಶ್ನ ನಿಮಿರಿದ ಸ್ಥಿತಿಯಲ್ಲಿ ಇರಬೇಕು. ಪ್ರಾರಂಭದಲ್ಲಿ ಮಾನಸಿಕ ಉದ್ರೇಕದಿಂದಾಗಿ ಶಿಶ್ನ ನಿಮಿರುವುದಾದರೂ ಯೋನಿ ಪ್ರವೇಶಾನಂತರ ಯೋನಿ ಭಿತ್ತಿಯೊಡನೆ ಆಗುವ ಘರ್ಷಣೆಯಿಂದ ಒದಗುವ ಉದ್ರೇಕದಿಂದ ನಿಮಿರಿಕೆ ಮುಂದುವರಿಯುತ್ತದೆ. ಘರ್ಷಣೆ ಅಹಿತವಾಗಿರದೆ ಸಲೀಸಾಗಿರುವಂತೆ ಸಂಭೋಗ ಕಾಲದಲ್ಲಿ ಯೋನಿಯೊಳಕ್ಕೆ ಬಾರ್ಥೊಲಿನ್ ಗ್ರಂಥಿಗಳ ಸ್ರಾವ ಸೇರಿ ಸ್ನೇಹನಾದಂತೆ (ಲ್ಯೂಬ್ರಿಕೆಂಟ್) ವರ್ತಿಸುತ್ತದೆ. ಯೋನಿಯೊಳಗೆ ಶಿಶ್ನದ ಚಲನದಿಂದ ಉದ್ರೇಕ ಹೆಚ್ಚಾಗುತ್ತ ಕೊನೆಗೆ ವೀರ್ಯ ಸ್ಖಲನವಾಗುತ್ತದೆ. ಇದೇ ವೇಳೆಗೆ ಸ್ತ್ರೀಯಲ್ಲಿ ತೃಪ್ತಿಕಂಪನ ಉಂಟಾದರೆ ಭಗಾಂಕುರ ನಿಮಿರಿರುತ್ತದೆ ಮತ್ತು ಗರ್ಭಾಶಯ ತ್ವರಿತಗತಿಯಿಂದ ಸಂಕುಚಿಸಿ ವ್ಯಾಕೋಚಿಸುವುದರಿಂದ ಯೋನಿಯೊಳಗಿನಿಂದ ವೀರ್ಯ ಗರ್ಭಕೋಶದ ಒಳಕ್ಕೆ ಹೀರಲ್ಪಡುವುದು. ಏಕೆಂದರೆ ಸ್ತ್ರೀಯಲ್ಲಿ ತೃಪ್ತಿ ಕಂಪನ ಕಂಡುಬರದ ಸಂಭೋಗದಲ್ಲಿ ವೀರ್ಯಾಣುಗಳು ಗರ್ಭಕೋಶದಲ್ಲಿ ಕಾಣಿಸಿಕೊಳ್ಳಬೇಕಾದರೆ ಸಂಭೋಗಾನಂತರ ಒಂದು ಗಂಟೆಯಾದರೂ ಬೇಕಾಗುತ್ತದೆ. ಆದರೆ, ತೃಪ್ತಿ ಕಂಪನ ಕಂಡುಬಂದ ಸಂಭೋಗದಲ್ಲಿ ಕೇವಲ 2–3 ನಿಮಿಷಗಳಲ್ಲಿ ವೀರ್ಯಾಣುಗಳು ಗರ್ಭಕೋಶದಲ್ಲಿರುತ್ತವೆ.

ನಿಷೇಚನ : ಅಂಡಾಣು ವೀರ್ಯಾಣುಗಳ ಮಿಲನವೇ ನಿಷೇಚನ. ಸಾಮಾನ್ಯವಾಗಿ ಇದಾಗುವುದು ಅಂಡನಾಳದಲ್ಲಿ, ತಪ್ಪಿದರೆ ಗರ್ಭಾಶಯದಲ್ಲಿ. ಅಂಡಾಣು ಬಿಡುಗಡೆ ಆದಾಗ ಅಪರೂಪವಾಗಿ ಉದರದಲ್ಲಿ ನಿಷೇಚನೆ ಆಗಬಹುದು. ಅಂಡಾಣು ಪಕ್ವವಾಗಿದ್ದು, ಬಿಡುಗಡೆ ಆಗದೆ ಅಂಡಾಶಯದಲ್ಲೇ ಇದ್ದಾಗ ನಿಷೇಚನೆ ಆಗುವುದು ಇನ್ನೂ ಅಪರೂಪ. ನಿಷೇಚನೆಯ ವೇಳೆ ಸಹಸ್ರಾರು ವೀರ್ಯಾಣುಗಳು ಅಂಡಾಣುವನ್ನು ಮುತ್ತುತ್ತವೆ ಮತ್ತು ಅದರ ಕೋಶಭಿತ್ತಿಯನ್ನು ಕೊರೆಯುವ ಪ್ರಯತ್ನದಲ್ಲಿ ಹಲವಾರು ನಾಶ ಆಗುತ್ತವೆ. ಇವುಗಳ ನಾಶದಿಂದ ಹಯಲ್ಯುರೋನಿಡೇಸ್ ಎಂಬ ಕಿಣ್ವದ ಬಿಡುಗಡೆ ಆಗುವುದು. ಇದು ಅಂಡಾಣು ಭಿತ್ತಿಯ ಮೇಲೆ ಪ್ರವರ್ತಿಸಿ ಅದನ್ನು ಮಿದುವಾಗಿ ಮಾಡುತ್ತದೆ. ಅನೇಕ ಸಹಸ್ರ ವೀರ್ಯಾಣುಗಳು ತಮ್ಮ ಪ್ರಯತ್ನದಲ್ಲಿ ಮೃತವಾದ ಮೇಲೆಯೇ ಯಾವುದೋ ವೀರ್ಯಣು ಅಂಡಾಣು ಭಿತ್ತಿಯನ್ನು ಕೊರೆದು ಅದರೊಳಗೆ ಪ್ರವೇಶಿಸುವುದು. ಹೀಗೆ ಪ್ರವೇಶಿಸಿದ ಕೂಡಲೇ ಭಿತ್ತಿ ಪುನಃ ಗಡುಸಾಗಿ ಬೇರೆ ವೀರ್ಯಾಣುವಿನ ಪ್ರವೇಶ ಸಾಧ್ಯವಿಲ್ಲವಾಗುತ್ತದೆ. ಉಳಿದವು ನಾಶವಾಗಿ ಇನ್ನೂ ಹೆಚ್ಚು ಹಯಲ್ಯುರೋನಿಡೇಸಿನ ಬಿಡುಗಡೆ ಆದರೂ, ಇದರಿಂದ ಭಿತ್ತಿಯ ಮೇಲೆ ಪರಿಣಾಮವೇನು ಆಗದು.

ಅಂಡಾಣುವನ್ನು ಕೊರೆದು ವೀರ್ಯಾಣುವಿನ ತಲೆ ಒಳಹೊಕ್ಕಾಗ ಇದರ ಬಾಲ ಹೊರಗೇ ಉಳಿದು ನಂತರ ಬಿದ್ದು ಹೋಗುತ್ತದೆ. ವೀರ್ಯಾಣು ಶಿರದ ಭಿತ್ತಿ ನಾಶವಾಗಿ ಅಣುಕೇಂದ್ರ ಅಂಡಾಣುವಿನ ಅಣುಕೇಂದ್ರದೊಡನೆ ಮಿಲನವಾಗುತ್ತದೆ. ಅಂಡಾಣುವಿನ 22+X ಕ್ರೊಮೋಸೋಮುಗಳೊಡನೆ ವೀರ್ಯಾಣುವಿನ 22+X ಅಥವಾ 22+Y ಕ್ರೊಮೋಸೋಮುಗಳು ಜೊತೆಗೊಂಡು 22ಜೊತೆ+XX ಅಥವಾ 22ಜೊತೆ+XY ಕ್ರೊಮೊಸೋಮುಗಳು ರೂಪುಗೊಳ್ಳುತ್ತವೆ. ಹೀಗೆ ಕ್ರೊಮೋಸೋಮುಗಳ ಜೊತೆಯಾಗಿರುವ ಈ ನಿಷೇಚಿತ ಅಂಡಾಣುವೇ ಯುಗ್ಮಜ. ನಿಷೇಚನೆಯಿಂದ ಕ್ರೊಮೋಸೋಮುಗಳ ಜೊತೆ ಅಥವಾ ಯುಗ್ಮಜಗಳಾಗುವುದೂ. ಹಾಗಾಗುವುದರಿಂದ ಯುಗ್ಮಜದಲ್ಲಿ ತಂದೆತಾಯಿ ಇಬ್ಬರ ವೈಯಕ್ತಿಕ ಲಕ್ಷಣಗಳು ಉಪಸ್ಥಿತವಾಗುತ್ತದೆ. ಭ್ರೂಣದ ಮುಂದು ಹುಟ್ಟುವ ಮಗುವಿನ ಲಿಂಗ ನಿರ್ಧಾರವಾಗುವುದೂ ಸಾಧ್ಯವಾಗುತ್ತವೆ. 22 ಜೊತೆ ಕ್ರೊಮೋಸೋಮುಗಳೊಡನೆ XY ಜೊತೆ ಇದ್ದರೆ ಗಂಡು, XX ಇದ್ದರೆ ಹೆಣ್ಣು. ಮಗುವಾಗಿ ಜನಿಸುವುದು.

ಯುಗ್ಮಜ ಕೆಲವೇ ಗಂಟೆಗಳ ಕಾಲದಲ್ಲಿ ವಿಭಜನೆಗೊಳ್ಳತೊಡಗಿ ಶೀಘ್ರದಲ್ಲೇ ಭ್ರೂಣವಾಗಿ ರೂಪುಗೊಳ್ಳುತ್ತದೆ. ನಿಷೇಚನೆ ಆಗದಿದ್ದರೆ ಅಂಡಾಣುವಾಗಲಿ ವೀರ್ಯಾಣುವಾಗಲಿ ವಿಭಜನೆಗೊಳ್ಳಲಾರದು. ಅದು ಜೀವಂತವಾಗಿ ಒಂದೆರಡು ದಿವಸ ಉಳಿಯುವುದೂ ಕೂಡ ಅನುಮಾನ. ಒಟ್ಟಿನಲ್ಲಿ ನಿಷೇಚನದಿಂದ ಇನ್ನೊಂದು ವ್ಯಕ್ತಿಯ ಸೃಷ್ಟಿ ಆಗುವುದಲ್ಲದೆ ಅದರ ದೈಹಿಕ ಲಕ್ಷಣಗಳು ಮತ್ತು ಲಿಂಗ ಕೂಡ ನಿರ್ಧರಿಸಲ್ಪಡುತ್ತವೆ. ಈ ಲಕ್ಷಣಗಳು, ಅವು ನೈಸರ್ಗಿಕ ಆರೋಗ್ಯ ಲಕ್ಷಣಗಳೇ ಆಗಿರಲಿ, ರೋಗಲಕ್ಷಣಗಳೇ ಆಗಿರಲಿ, ಆನುವಂಶಿಕ ಭ್ರೂಣ ಬೆಳೆದು ಮಗು ಹುಟ್ಟಿ, ಮುಂದೆ ಆ ವ್ಯಕ್ತಿ ಸಂತಾನ ಪಡೆಯುವಾಗ ಅದಕ್ಕೆ ಕೂಡ ಲಕ್ಷಣಗಳು ವರ್ಗವಾಗುವುದು ಖಚಿತ. ಅದ್ದರಿಂದ ಹಲವಾರು ರೋಗಗಳು ಆನುವಂಶಿಕವಾಗಿರುವುದು ಆಶ್ಚರ್ಯವಲ್ಲ. ಭ್ರೂಣದ ಬೆಳವಣಿಗೆ ಕಾಲದಲ್ಲಿ ಮತ್ತು ಶಿಶುವಿನ ಜನನವಾಗಿ ಬೆಳೆಯುವ ಕಾಲದಲ್ಲಿ ಆರ್ಜಿತವಾದ ಲಕ್ಷಣಗಳು ಮುಂದಿನ ಪೀಳಿಗೆಗೆ ಹೀಗೆ ವರ್ಗವಾಗುವುದಿಲ್ಲ.

ಅಂಡಾಣು ಅಥವಾ ವೀರ್ಯಾಣು ಒಂದೊಂದರಲ್ಲಿ 23 (22+X ಅಥವಾ 22+Y) ಕ್ರೊಮೋಸೋಮುಗಳು ಇರುವುವು. ಅಪೂರ್ವವಾಗಿ ಈ ಅಣುಗಳು ತಮ್ಮ ಮಾತೃಕೋಶ ವಿಭಜನೆಯಿಂದ ಉದ್ಭವಿಸುವಾಗ ವಿಭಜನಾ ಕ್ರಮದಲ್ಲಿ ಏರುಪೇರುಗಳಾಗಿ ಒಂದೊಂದರಲ್ಲಿ ಇರುವ ಕ್ರೊಮೋಸೋಮುಗಳ ಸಂಖ್ಯೆ 23 ಕ್ಕಿಂತ ಬೇರಾಗುವ ಸಾಧ್ಯತೆಗಳಿವೆ. ಮಾತೃಕೋಶದ ಒಟ್ಟು 23 ಜೊತೆ ಕ್ರೊಮೋಸೋಮುಗಳು ಎರಡು ಭಾಗವಾಗುವಾಗ ಒಂದು ಮರಿಕೋಶಕ್ಕೆ 22 ಇನ್ನೊಂದಕ್ಕೆ 24 ರಂತೆ ಹಂಚಿಕೆ ಆಗುವುದರಿಂದ ಮೇಲೆ ಹೇಳಿರುವ ಸ್ಥಿತಿ ಒದಗುತ್ತದೆ.

ಈ ರೀತಿ ಆದಾಗ 22 + XX ಅಥವಾ 22 ಕ್ರೊಮೋಸೋಮುಗಳಿರುವ ಅಂಡಾಣುಗಳು 22 + XY ಅಥವಾ 22 ಕ್ರೊಮೋಸೋಮುಗಳಿರುವ ವೀರ್ಯಾಣುಗಳು ತಯಾರಾಗುತ್ತವೆ. ಇಂಥ ಅಪೂರ್ವ ಅಂಡಾಣುಗಳ ಮತ್ತು ವೀರ್ಯಾಣುಗಳ ಮಿಲನದಿಂದ ಫಲಿಸುವ ಯುಗ್ಮಜಗಳಲ್ಲಿ 22 ಜೊತೆ+X. 22 ಜೊತೆ +XXX, 22 ಜೊತೆ +Y, 22 ಜೊತೆ +XXY ಮುಂತಾದ ರೀತಿಯಲ್ಲಿ ಕ್ರೊಮೋಸೋಮುಗಳಿರುತ್ತವೆ. 22 ಜೊತೆ +Y ಇರುವ ಯುಗ್ಮಜ ಕೂಡಲೇ ಮೃತಿಹೊಂದುತ್ತದೆಂದು ತಿಳಿದಿದೆ. ಇಲ್ಲಿ ಹೇಳಿರುವ 22 ಆಟೋಸೋಮುಗಳ ವಿಷಯದಲ್ಲೂ X ಮತ್ತು Y ಕ್ರೊಮೋಸೋಮುಗಳಲ್ಲಿಯಂತೆಯೇ ಅಂಡಾಣು ವೀರ್ಯಣುಗಳ ಮಾತೃಕೋಶ ವಿಭಜನೆಯಲ್ಲಿ ಏರುಪೇರುಗಳು ಉಂಟಾಗಬಹುದು. ಅಂಥ ಪ್ರಸಂಗಗಳಲ್ಲಿ ಅಂಡಾಣು ಅಥವಾ ವೀರ್ಯಾಣುಗಳಲ್ಲಿ 21 ಆಟೋಸೋಮುಗಳು ಅಥವಾ 23 ಆಟೋಸೋಮುಗಳು ಇರುತ್ತವೆ.

ಇಂಥ ವಿಚಿತ್ರ ಅಂಡಾಣುಗಳು ಮತ್ತು ವೀರ್ಯಾಣುಗಳು ನಿಷೇಚನದಲ್ಲಿ ಪಾತ್ರ ವಹಿಸಿದಾಗ ಯುಗ್ಮಜದ ಆಟೋಸೋಮುಗಳಲ್ಲಿ ವ್ಯತ್ಯಾಸ ಕಂಡುಬರುವುದು.

ಅಗಾಧ ವಿಕಿರಣಕ್ಕೆ (ಇರ್‍ರೇಡಿಯೇಶನ್) ಈಡಾಗುವುದರಿಂದ ಮತ್ತು ಇದರ ಪ್ರಚಂಡ ಪ್ರಭಾವಗಳಿಂದ ಅಂಡಾಶಯ ಮತ್ತು ವೃಷಣಗಳ ಮಾತೃಕೋಶಗಳ ಕ್ರೊಮೋಸೋಮುಗಳಲ್ಲಿಯ ಜೀನ್‌ಗಳಲ್ಲಿ ವ್ಯತ್ಯಾಸವಾಗುವುದು. ಅಂಥ ಮಾತೃಕೋಶಗಳಿಂದ ಉತ್ಪತ್ತಿಯಾದ ಅಂಡಾಣು, ವೀರ್ಯಾಣುಗಳಲ್ಲಿ ಈ ವ್ಯತ್ಯಾಸ ಕಂಡುಬಂದು, ಅವು ರೋಗಿಷ್ಠ ಕೋಶಗಳಾಗಿರುತ್ತವೆ. ಹಾಗಿದ್ದರೂ, ನಿಷೇಚನೆಯಲ್ಲಿ ಅವು ಭಾಗವಹಿಸಬಲ್ಲವು. ಇಂಥ ಎಲ್ಲ ಬಗೆಯ ವಿಚಿತ್ರ ಲೈಂಗಿಕ ಕೋಶಗಳ ನಿಷೇಚನೆಯಿಂದ ಹುಟ್ಟುವ ಮಕ್ಕಳು ಆರೋಗ್ಯವಂತವಾಗಿರದೆ, ಆಜನ್ಮವಾಗಿ ವಿಶಿಷ್ಟ ದೈಹಿಕ, ಮಾನಸಿಕ, ಹಾಗೂ ಲೈಂಗಿಕ ನ್ಯೂನತೆ, ವಿಕಲತೆಗಳನ್ನೂ ವಿಚಿತ್ರ ರೋಗಗಳನ್ನೂ ಪಡೆಯುತ್ತವೆ. ಈ ಮಕ್ಕಳಲ್ಲಿ ಅನೇಕರು ದೊಡ್ಡವರಾಗಿ ಸಂತಾನ ಪ್ರಾಪ್ತಿಯ ವಯಸ್ಸಿಗಿಂತಲೂ ಹೆಚ್ಚು ಕಾಲ ಬದುಕಿರಬಲ್ಲರಲ್ಲದೆ, ಸಂತಾನವನ್ನೂ ಪಡೆಯಬಲ್ಲವರಾಗಿರುತ್ತಾರೆ. ಇವರಿಗೆ ಜನಿಸುವ ಮಕ್ಕಳಲ್ಲಿ ಜನ್ಮದಾತರಿಗಿರುವ ನ್ಯೂನತೆ ಅಥವಾ ರೋಗಗಳು ಆನುವಂಶಿಕವಾಗಿಯೇ ಕಂಡುಬರುತ್ತವೆ.

ವೀರ್ಯದಲ್ಲಿ X ಕ್ರೊಮೋಸೋಮ್ ಇರುವ ವೀರ್ಯಾಣುಗಳು Y ಕ್ರೋಮೋಸೋಮ್ ಇರುವ ವೀರ್ಯಾಣುಗಳು ಸಮವಾಗಿರುವುದು ವ್ಯಕ್ತ ವಿಷಯ. Y ಕ್ರೊಮೋಸೋಮ್ X ಕ್ರೊಮೋಸೋಮಿಗಿಂತ ಬಲು ಸಣ್ಣದು. ಆದ್ದರಿಂದ Y ಕ್ರೊಮೋಸೋಮಿನ ವೀರ್ಯಾಣು X ಕ್ರೊಮೋಸೋಮಿನ ವೀರ್ಯಾಣುವಿಗಿಂತ ಹಗುರ ಮತ್ತು ಬಹುಶಃ ಅದೇ ಕಾರಣದಿಂದ ಹೆಚ್ಚು ಚಟುವಟಿಕೆಯಿಂದಿದೆ. ಸಂಭೋಗಾನಂತರ ವೀರ್ಯಾಣುಗಳು ತಮ್ಮ ಚಲನೆಯಿಂದ ನಿಧಾನವಾಗಿ ಅಂಡನಾಳದ ಒಳಕ್ಕೆ ಪ್ರವೇಶಿಸುತ್ತವೆ. ಹಾಗೆ ಪ್ರವೇಶಿಸಿದವುಗಳಲ್ಲಿ Y ಕ್ರೊಮೋಸೋಮುಗಳಿರುವ ವೀರ್ಯಾಣುಗಳೇ ಹೆಚ್ಚು ಎಂಬುದು ವ್ಯಕ್ತ. ಪರಿಸ್ಥಿತಿ ಹೀಗಿರುವಾಗ ನಿಷೇಚನೆಯಲ್ಲಿ X ಕ್ರೊಮೋಸೋಮ್ ಇರುವ ವೀರ್ಯಾಣುಗಳಿಗಿಂತ Y ಕ್ರೊಮೋಸೋಮ್ ಇರುವವೇ ಹೆಚ್ಚು ಸಂದರ್ಭಗಳಲ್ಲಿ ವಿಜಯಿಗಳಾಗುವುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ, ಭ್ರೂಣಗಳು ಹೆಣ್ಣಾಗಿರುವುದಕ್ಕಿಂತ ಗಂಡಾಗಿರುವ ಸಂಭಾವ್ಯತೆಯೇ ಜಾಸ್ತಿ. ಸಾಧಾರಣವಾಗಿ ಪ್ರತಿ 100 ಹೆಣ್ಣು ಭ್ರೂಣಗಳಿಗೆ 130 ಗಂಡು ಭ್ರೂಣಗಳಿರುತ್ತವೆ. ಹೆಣ್ಣು ಶಿಶುಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಗಂಡು ಶಿಶುಗಳು ಹುಟ್ಟಿದರೂ ಸ್ವಭಾವತಃ ಹೆಣ್ಣಿಗಿಂತ ಗಂಡು ದುರ್ಬಲವಾಗಿರುವುದರಿಂದ ಶೈಶವ ಮತ್ತು ಬಾಲ್ಯ ಅವಸ್ಥೆಗಳಲ್ಲಿ ಮೃತವಾಗುವ ಗಂಡುಗಳ ಸಂಖ್ಯೆ ಜಾಸ್ತಿ. ನಿಸರ್ಗದ ಈ ವಿಚಿತ್ರ ವ್ಯಾಪಾರದಿಂದಾಗಿ ಸಮಾಜದಲ್ಲಿ ಯುವಕ ಯುವತಿಯರು ಹೆಚ್ಚು ಕಡಿಮೆ ಸಮಸಂಖ್ಯೆಯಲ್ಲಿರುತ್ತಾರೆ.

ಗರ್ಭಾವಸ್ಥೆ : ಅಂಡಾಣುವಿನ ನಿಷೇಚನೆಯಾದರೆ ಗರ್ಭಾಂಕುರಾರ್ಪಣ (ಕನ್ಸೆಪ್ಷನ್) ಆಗುತ್ತದೆ. ಏಕೆಂದರೆ ಸಾಧಾರಣವಾಗಿ ಯುಗ್ಮಜದಲ್ಲಿ ತಾನು ಬೆಳೆದು ಜೀವವಾಹಿನಿಯನ್ನು ಮುಂದುವರಿಸುವ ಸಾಮರ್ಥ್ಯ ಅಂತರ್ಗತವಾಗಿರುತ್ತದೆ. ಅಂಡನಾಳದಲ್ಲಿ ಗರ್ಭಾಂಕುರಾರ್ಪಣವಾಗುವುದೇ ಸಾಮಾನ್ಯ. ಮುಂದಿನ ಒಂದೆರಡು ದಿವಸಗಳಲ್ಲಿ ಯುಗ್ಮಜ ಗರ್ಭಾಶಯದ ಒಳಕ್ಕೆ ದೂಡಲ್ಪಟ್ಟು ಅಲ್ಲಿ ನಾಟಿಕೊಂಡು ಬೆಳೆಯಲು ಪ್ರಾರಂಭಿಸುತ್ತದೆ. ಇದೊಂದೇ ನೈಸರ್ಗಿಕ ಗರ್ಭಾವಸ್ಥೆ. ಅಪೂರ್ವವಾಗಿ ಯುಗ್ಮಜ ಅಂಡನಾಳದಲ್ಲಿ ನಿಂತು ಅಲ್ಲಿಯೇ ಬೆಳೆಯುವುದು. ಇದಕ್ಕೆ ಅಂಡನಾಳ ಗರ್ಭಾವಸ್ಥೆ (ಟ್ಯೂಬಲ್ ಪ್ರೆಗ್ನೆನ್ಸಿ) ಎಂದು ಹೆಸರು. ಹೀಗಲ್ಲದೆ ನಿಷೇಚನೆ ಉದರದಲ್ಲಿ ಆಗಿ ಭ್ರೂಣ ಅಲ್ಲಿಯೇ ನಾಟಿಕೊಂಡು ಬೆಳೆಯುವ ಸ್ಥಿತಿ ಇದೆ. ಇದು ಉದರಗರ್ಭಾವಸ್ಥೆ (ಅಬ್ಡಾಮಿನಲ್ ಪ್ರೆಗ್ನೆನ್ಸಿ). ಅಂಡಾಶಯದಲ್ಲಿ ಇನ್ನೂ ಇರುವ ಬಲಿತ ಅಂಡಾಣುವಿನ ನಿಷೇಚನೆ ಆಗಿ ಯುಗ್ಮಜ ಅಲ್ಲಿಯೇ ನಿಂತು ಬೆಳೆದರೆ ಅದು ಅಂಡಾಶಯ ಗರ್ಭಾವಸ್ಥೆ (ಓವೇರಿಯನ್ ಪ್ರೆಗ್ನೆನ್ಸಿ). ಇವೆಲ್ಲವು ಅನೈಸರ್ಗಿಕ ಗರ್ಭಾವಸ್ಥೆಗಳು. ಸಾಮಾನ್ಯವಾಗಿ ಇವು ಪೂರ್ಣಾವಧಿ ಉಳಿಯದೆ ಗರ್ಭಪಾತದಲ್ಲಿ ಪರ್ಯಾವಸನಗೊಳ್ಳುತ್ತವೆ. ಇಂಥ ಸಂದರ್ಭದಲ್ಲಿ ಗರ್ಭಿಣಿಯ ಜೀವಕ್ಕೆ ಅಪಾಯ ಒದಗುವ ಸಂಭವವಿರುತ್ತದೆ. ತೀರಾ ಅಪೂರ್ವವಾಗಿ ಇಂಥ ಗರ್ಭಾವಸ್ಥೆಗಳು ಪೂರ್ಣಾವಧಿ ಉಳಿದು ಅದೃಷ್ಟವಶಾತ್ ಸಕಾಲದಲ್ಲಿ ಪತ್ತೆಯಾಗಿ, ಯುಕ್ತ ಶಸ್ತ್ರಕ್ರಿಯೆಯಿಂದ ಪ್ರಸವವಾಗಿ, ಮಗು ತಾಯಿ ಸುರಕ್ಷಿತವಾಗಿ ಉಳಿಯುವ ಸಂದರ್ಭಗಳಿವೆ. ಗರ್ಭಕೋಶದಲ್ಲಿ ಏನಾದರು ಪರವಸ್ತು ಇದ್ದರೆ, ಯುಗ್ಮಜ ಗರ್ಭಕೋಶ ಭಿತ್ತಿಯಲ್ಲಿ ನಾಟ ನೆಲೆ ನಿಲ್ಲಲಾರದು. ಆದ್ದರಿಂದ, ಅಂಥ ಸಂದರ್ಭದಲ್ಲಿ ಗರ್ಭದಾರಣೆ ಆಗುವುದಿಲ್ಲ. ಈ ಸಂಗತಿಯನ್ನು ತಿಳಿದು ವಂಕಿಯನ್ನು (ಲೂಪ್) ಗರ್ಭಕೋಶದ ಒಳಗೆ ಹುದುಗಿಸಿಟ್ಟು ಸಂತಾನ ನಿರೋಧವನ್ನು ಸಾಧಿಸಬಹುದು.

ಗರ್ಭಾವಸ್ಥೆಯ ವೇಳೆ ಗರ್ಭಿಣಿಯರಲ್ಲಿ ಅನೇಕ ಮಾರ್ಪಾಡುಗಳು ಕಂಡುಬರುತ್ತವೆ. ಗರ್ಭಸ್ಥಿತಿಯ ವಿಚಾರದಲ್ಲಿ ಐದು ವಿಷಯಗಳನ್ನು ಗಮನಿಸಬೇಕು.

1. ಗರ್ಭಕಾಲದಲ್ಲಿ ಅಂಡಾಣು ತಯಾರಿಕೆ ಮತ್ತು ಋತುಚಕ್ರ ಸ್ಥಗಿತವಾಗುವುದು ವಾಸ್ತವವಾಗಿ ಗರ್ಭಾಂಕುರಾರ್ಪಣ ಆಗಿದೆ ಎನ್ನುವುದರ ಮೊದಲ ಸೂಚನೆ. ಆಗ ನಿರೀಕ್ಷಿತ ರಜಸ್ರಾವ ಆಗುವುದಿಲ್ಲ, ಮತ್ತು ಮುಂದಕ್ಕೂ ಋತುಚಕ್ರ ಸ್ಥಗಿತವಾಗಿರುವುದು. ಆದ್ದರಿಂದ, ಗರ್ಭಕಾಲದ ಘಟನೆಗಳನ್ನು ಗರ್ಭಾಂಕುರಾರ್ಪಣಕ್ಕೆ ಅದೇ ಹಿಂದೆ ಆದ ರಜಸ್ರಾವದ ಮೊದಲ ದಿವಸದಿಂದ ಲೆಕ್ಕ ಹಾಕಿ ಎಣಿಸುವುದು ರೂಢಿ. ಪೂರ್ಣ ಗರ್ಭಕಾಲದಲ್ಲಿ ಅ ದಿವಸದಿಂದ 40 ವಾರಗಳು. ಅಂತ್ಯದಲ್ಲಿ ೪–೬ ದಿವಸಗಳು ಮಾತ್ರ ಹಿಂದೆ–ಮುಂದೆ ಪ್ರಸವವಾಗುತ್ತದೆ. ಇದು ಸಾಮಾನ್ಯ.

2. ನಿಷೇಚನವಾದ ವೇಳೆಯಿಂದ ಮುಂದೆ 10 ವಾರಗಳ ಪರ್ಯಂತ ಪೀತಕೋಶ ಸಮೂಹ ಕಾರ್ಯೋನ್ಮುಖವಾಗಿ ಮುಂದುವರಿದು ಅನಂತರ ಅವನತಿಗೊಳ್ಳುತ್ತದೆ.

3. ಬೆಳೆಯುತ್ತಿರುವ ಭ್ರೂಣವನ್ನು ತಾಯಿಯ ಗರ್ಭಕೋಶ ಭಿತ್ತಿಯನ್ನು ಸೇರಿಸುವ ಹೊಕ್ಕೂಲ ಬಳ್ಳಿ ಮತ್ತು ಜರಾಯು (ಪ್ಲೆಸೆಂಟ) ಮೈದಳೆದು ಜರಾಯು ಪೀತಕೋಶ ಕಾರ್ಯವನ್ನು ವಹಿಸಿಕೊಳ್ಳುತ್ತದೆ.

4. ಸ್ತನಗಳು ವೃದ್ಧಿಸಿ ಅವುಗಳಲ್ಲಿ ಹಾಲು ಸ್ರವಿಸಲು ಪೂರ್ವಭಾವಿ ಸಿದ್ಧತೆ ಆಗುತ್ತದೆ.

5. ಗರ್ಭಾಶಯದಲ್ಲಿ ಭ್ರೂಣ ಸಹಜವಾಗಿ ಬೆಳೆಯದೆ ನಾನಾ ಕಾರಣಗಳಿಂದ ವ್ಯತ್ಯಾಸಗಳು ಉಂಟಾಗಿ ಹುಟ್ಟುವ ಮಗುವಿನಲ್ಲಿ ದೈಹಿಕ, ಮಾನಸಿಕ ಮತ್ತು ಲೈಂಗಿಕ ನ್ಯೂನತೆ ಮತ್ತು ವಿಕಲತೆಗಳು (ಡಿಫೆಕ್ಟ್ಸ್ ಅಂಡ್ ಡಿಫಾರ್ಮಿಟೀಸ್) ಕಾಣುತ್ತದೆ. ಗರ್ಭಿಣಿಗೆ ರೂಬೆಲ್ಲ ರೋಗ ತಗುಲಿದರೆ ಆಕೆ ಥಾಲಿಡೊಮೈಡ್ ಮತ್ತು ತತ್ಸಮಾನ ಔಷಧಗಳನ್ನು ಸೇವಿಸಿದ್ದರೆ, ಅಗಾಧ ವಿಕಿರಣಕ್ಕೆ ಈಡಾಗಿದ್ದರೆ, ಗರ್ಭಾಶಯದಲ್ಲಿ ಬೆಳೆಯುತ್ತಿರುವ ಶಿಶುವಿನಲ್ಲಿ ನ್ಯೂನತೆ ವಿಕಲತೆಗಳು ಉಂಟಾಗಬಹುದು. ಗರ್ಭಸ್ಥ ಶಿಶುವಿನ ಅಥವಾ ತಾಯಿಯ ಹಾರ್ಮೋನುಗಳ ಏರುಪೇರುಗಳಿಂದ ಹುಟ್ಟುವ ಮಗುವಿನಲ್ಲಿ ಲೈಂಗಿಕ ವೈಚಿತ್ರ್ಯಗಳು ಕಂಡುಬರುವುದು. ನಿಷೇಚನೆ ಆದಾಗ ಮುಂದೆ ಹುಟ್ಟುವ ಮಗು ಗಂಡೋ ಹೆಣ್ಣೋ ಎಂಬುದು ನಿರ್ಧಾರವಾಗಿ ಹೋಗುತ್ತದೆ. ಸಾಧಾರಣವಾಗಿ ಈ ನಿರ್ಧಾರದಂತೆಯೇ ಭ್ರೂಣದೇಹದಲ್ಲಿ ಪ್ರಜನನಾಂಗಗಳು ಮೂಡಿ ವೃದ್ಧಿಯಾಗುತ್ತವೆ. ಆದರೆ ಪ್ರಾರಂಭದಲ್ಲಿ, ಭ್ರೂಣದಲ್ಲಿಯ ಅಂಡಾಶಯ ಮತ್ತು ವೃಷಣ ಎರಡಕ್ಕೂ ಸಮಾನವಾದ ಒಂದೇ ರಚನೆ ಇರುವುದು. ಈ ಅವ್ಯಕ್ತ ಅಂಗ ಅನಂತರ ನಿಷೇಚನ ಸಮಯದಲ್ಲಿಯ ನಿರ್ಧಾರದಂತೆ ವೃಷಣವಾಗಿ ಅಥವ ಅಂಡಾಶಯವಾಗಿ ವಿಕಸನಗೊಳ್ಳುತ್ತದೆ. ಅಂಡಾಶಯವಾಗಿ ವಿಕಸನಗೊಂಡ ಭ್ರೂಣದಲ್ಲಿ ಅಂಡನಾಳ ಗರ್ಭಕೋಶಗಳು ಸೀಳುಭಾಗವುಳ್ಳ ಬಾಹ್ಯ ಜನನಾಂಗಗಳು ಮೂಡಿ ವೃದ್ಧಿ ಆಗುತ್ತವೆ. ವೃಷಣವಾಗಿ ವಿಕಾಸನವಾದರೆ, ಈ ಭ್ರೂಣ ವೃಷಣ ಹಾರ್ಮೋನನ್ನು ಸ್ರವಿಸುತ್ತದೆ. ಹಾರ್ಮೋನಿನ ಪ್ರಭಾವದಿಂದ ಗರ್ಭಕೋಶ ಭಾಗದ ಸೀಳು ರಚನೆ ಆಗುವುದು ನಿಂತು, ವೃಷಣ ಕೋಶಗಳ ಮತ್ತು ಶಿಶ್ನದ ರಚನೆ ಆಗುತ್ತದೆ. ಕಾರಣಾಂತರದಿಂದ ಭ್ರೂಣದ ವೃಷಣ ತತ್ಸಂಬಂಧವಾದ ಹಾರ್ಮೋನನ್ನು ಸ್ರವಿಸದಿದ್ದರೆ, ಆ ಭ್ರೂಣದಲ್ಲಿ ಸ್ತ್ರೀಯ ಬಾಹ್ಯ ಜನನಾಂಗಗಳು, ಗರ್ಭಕೋಶಗಳು ಮೂಡುತ್ತವೆ. ಹೀಗೆ ಹುಟ್ಟಿದ ಮಗು ಉಭಯಲಿಂಗಿ (ಹರ್ಮಫ್ರೊಡೈಟ್) ಆಗಿರುತ್ತದೆ. ಇದು ಒಂದು ರೀತಿಯ ಅರ್ಧನಾರಿ–ವೃಷಣ ಮತ್ತು ಸೀಳುಭಗವಿರುವ ವ್ಯಕ್ತಿ. ಇದೇ ರೀತಿ ನಿಷೇಚನ ಸಮಯದಲ್ಲಿಯ ನಿರ್ಧಾರದಂತೆ ಭ್ರೂಣದಲ್ಲಿ ಅಂಡಾಶಯ ವಿಕಸಿಸುತ್ತಿರುವ ವೇಳೆ ಭ್ರೂಣ ಪುರುಷ ಹಾರ್ಮೋನಿನ (ಟೆಸ್ಟೊಸ್ಟಿರೋನ್) ಪ್ರಭಾವಕ್ಕೆ ಈಡಾದರೆ ಮೂಡುವ ಬಾಹ್ಯ ಜನನಾಂಗಗಳು ಪುರುಷರ ಜನನಾಂಗಗಳು ಆಗಿದ್ದು ಹುಟ್ಟುವ ಇಂಥ ಉಭಯಲಿಂಗಿಯ ಉದರದಲ್ಲಿ ಅಂಡಾಶಯಗಳು ಹೊರಗೆ ಸಣ್ಣ ಶಿಶ್ನದಂತೆ ಕಾಣುವ ಭಗಾಂಕುರವು ಅದರ ಮೂಲಕ ಸಾಗುವ ಮೂತ್ರನಾಳ ಹಾಗೂ ಅದರ ದ್ವಾರವು ಕಂಡುಬರುತ್ತವೆ. ಇದೊಂದು ತೆರನಾದ ಅರ್ಧಪುರುಷ. ಹೀಗೆ ಪ್ರಭಾವಿಸುವ ಟೆಸ್ಟೊಸ್ಟಿರೋನ್ ಭ್ರೂಣದಲ್ಲೇ ಉತ್ಪತ್ತಿ ಆಗಿರಬಹುದು. ಆದರೆ, ಸಾಮಾನ್ಯವಾಗಿ ತಾಯಿಯ ರಕ್ತದಿಂದ ವರ್ಗವಾಗಿ ಭ್ರೂಣ ದೇಹಕ್ಕೆ ಒದಗುವುದಾಗಿದೆ. ಗರ್ಭಿಣಿಯ ದೇಹಕ್ಕೆ ಟೆಸ್ಟೊಸ್ಟೀರೋನನ್ನು ಚಿಕಿತ್ಸಾಕ್ರಮವಾಗಿ ಅಥವಾ ಬೇರಾವ ಕಾರಣಕ್ಕಾಗಿ ಚುಚ್ಚುಮದ್ದಾಗಿ ಕೊಟ್ಟಿದ್ದರೆ, ಹೀಗೆ ಉಭಯಲಿಂಗಿ ಹುಟ್ಟುವ ಅಪಾಯವಿದೆ.

ನಿಷೇಚನೆ ಆದ ಬಳಿಕ ಗರ್ಭಾಶಯದಲ್ಲಿ ನಾಟಿಕೊಂಡ ಯುಗ್ಮಜ ವಿಭಜನೆ, ಬೆಳವಣಿಗೆ, ವಿಕಸನ ಕ್ರಮಗಳಿಂದ ಒಂದು ಶಿಶುವಾಗುವುದು ಸಹಜ. ಆದರೆ, ಅಪರೂಪವಾಗಿ ಯುಗ್ಮಜದ ಮೊದಲ ವಿಭಜನೆಯಲ್ಲಿ ಫಲಿಸಿದ 2 ಕೋಶಗಳು ಸ್ವತಂತ್ರವಾಗಿ ವಿಭಜಿಸಿ ಬೆಳೆಯುತ್ತ ಬೇರೆ ಬೇರೆ ಶಿಶುಗಳಾಗಿಯೇ ಗರ್ಭಕೋಶದಲ್ಲಿ ಇರಬಹುದು. ಇದು ಅವಳಿ ಗರ್ಭದ ಒಂದು ಕ್ರಮ. ಎರಡು ಶಿಶುಗಳು ಇಂಥ ಸಂದರ್ಭದಲ್ಲಿ ಒಂದೇ ಲಿಂಗದವಾಗಿರುವುದು, ಒಂದೇ ರೀತಿಯ ಆನುವಂಶಿಕ ಗುಣಗಳನ್ನು ಪಡೆದಿರುವುದು ಸತ್ಯ. ಆದ್ದರಿಂದ ಇವನ್ನು ಅಭಿನ್ನ ಅವಳಿಗಳು (ಐಡೆಂಟಿಕಲ್ ಟ್ವಿನ್ಸ್, ಯೂನಿಓವ್ಯುಲರ್

ಟ್ವಿನ್ಸ್) ಎಂದು ಕರೆಯುತ್ತಾರೆ. ತೀರ ಅಪರೂಪದ ಸಂದರ್ಭಗಳಲ್ಲಿ ಇಂಥ ಅವಳಿ ಮಕ್ಕಳು ಬೇರೆ ಬೇರೆ ಆಗಿರದೆ ಮುಂಡಭಾಗದಲ್ಲಿ ಅಲ್ಪವಾಗಿಯೇ ಅಧಿಕವಾಗಿಯೇ ಜಂಟಿಯಾಗಿರುವುದು ಉಂಟು. ಇವಕ್ಕೆ ಕೂಡುಮೈ ಅವಳಿಗಳು (ಸೈಯಮೀಸ್ ಟ್ವಿನ್ಸ್) ಎಂದು ಹೆಸರು. ಅವಳಿ ಗರ್ಭಸ್ಥಿತಿಗೆ ಇನ್ನೊಂದು ಕಾರಣವಿದೆ. ಅಂಡಾಶಯದಲ್ಲಿ ಪ್ರತಿ ಸಾರಿ ಒಂದೇ ಅಂಡಾಣು ಬಿಡುಗಡೆ ಆಗುವುದು ಸಹಜ ನಿಯಮ. ಕಾರಣಾಂತರದಿಂದ ಅಪರೂಪವಾಗಿ ಎರಡು ಅಂಡಾಣುಗಳು ಬಿಡುಗಡೆ ಆಗಬಹುದು. ಒಂದೇ ಅಂಡಾಶಯದಿಂದ ಎರಡು ಇಲ್ಲವೇ ಅಂಡಾಶಯಗಳಿಂದಲು ಒಂದೊಂದು ಬಿಡುಗಡೆಯಾಗಿ (ಸಹಜವಾಗಿಯೇ ಒಂದೇ ಅಂಡನಾಳದ ಇಲ್ಲವೇ ಎರಡು ಅಂಡನಾಳಗಳ ಮಾರ್ಗವಾಗಿ) ಗರ್ಭಕೋಶದೆಡೆಗೆ ಗಮಿಸುತ್ತವೆ. ಎರಡೂ ನಿಷೇಚನೆಗೊಂಡು ಗರ್ಭಾಶಯದ ಬೇರೆ ಬೇರೆ ಸ್ಥಳಗಳಲ್ಲಿ ನಾಟಿಕೊಂಡು ಬೇರೆ ಬೇರೆ ಶಿಶುಗಳಾಗಿ ವರ್ಧಿಸುತ್ತವೆ. ನಿಷೇಚನೆ ಬೇರೆ ಬೇರೆ ಬಗೆಯ ವೀರ್ಯಾಣುಗಳಿಂದ ಆಗಬಹುದಾದ ಸಾಧ್ಯತೆ ಇರುವುದರಿಂದ ಫಲಿಸುವ ಭ್ರೂಣಾಣುಗಳು, ಅರ್ಥಾತ್ ಶಿಶುಗಳು ಬೇರೆ ಬೇರೆ ಲಿಂಗಗಳನ್ನು ಆನುವಂಶಿಕ ಲಕ್ಷಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಪ್ರದರ್ಶಿಸುವ ಸಂಭಾವ್ಯತೆ ಉಂಟು. ಅಂದರೆ, ಈ ಅವಳಿಗಳು ಭಿನ್ನ ಅವಳಿಗಳಾಗಿರುತ್ತವೆ. ಎರಡು ಅಂಡಾಣುಗಳ ಬದಲು ಮೂರು ಅಂಡಾಣುಗಳ ಬಿಡುಗಡೆ ಆದರೆ ತ್ರಿವಳಿಗಳು ಹುಟ್ಟುವ ಸಾಧ್ಯತೆ ಇದೆ. (ನೋಡಿ: ಅವಳಿಗಳು)

ಗರ್ಭಸ್ಥಕಾಲದಲ್ಲಿ ಶಿಶುವಿನ ಲಿಂಗ ನಿರ್ಧಾರವಾಗುವುದನ್ನೂ ಅದರಂತೆಯೇ ಗಂಡಾಗಿಯೇ ಹೆಣ್ಣಾಗಿಯೇ ವಿಕಸನವಾಗುವುದನ್ನೂ ಅದರಲ್ಲಿ ಏರುಪೇರುಗಳಾಗುವುದನ್ನೂ ವಿವರಿಸಿದೆ. ಹುಟ್ಟಲಿರುವ ಮಗು ಗಂಡೊ, ಹೆಣ್ಣೊ ಎಂದು ಅದು ಹುಟ್ಟುವ ತನಕ ಕಾದು ನೋಡಬೇಕಾಗಿಲ್ಲ. ಗರ್ಭ ಕಾಲದಲ್ಲಿ ಗರ್ಭಾಶಯದಿಂದ ಭ್ರೂಣಾವೃತ ದ್ರವವನ್ನು (ಆಮ್ನಿಯಾಟಿಕ್ ಫ್ಲೂಯಿಡ್) ಸೂಜಿಮದ್ದಿನ ರೀತಿಯಲ್ಲಿ ತೆಗೆದು ಅದರಲ್ಲಿ ತೇಲಾಡುತ್ತಿರುವ ಕೋಶಗಳನ್ನು ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿ ಗರ್ಭಸ್ಥ ಶಿಶುವಿನ ಲಿಂಗ ನಿರ್ಧಾರ ಮಾಡಬಹುದು. ಸ್ತ್ರೀ ಕೋಶಗಳಲ್ಲೆಲ್ಲ 22 ಜೊತೆ+XX ಕ್ರೊಮೋಸೋಮುಗಳೂ ಪುರುಷ ಕೋಶಗಳಲ್ಲೆಲ್ಲ 22 ಜೊತೆ+XY ಕ್ರೋಮೋಸೋಮುಗಳೂ ಇರುವುವು. ಸ್ತ್ರೀ ಕೋಶಗಳಲ್ಲಿ ಎರಡು X ಕ್ರೊಮೋಸೋಮುಗಳಿರುವುದರಿಂದ ಅವು ಅಣುಕೇಂದ್ರದ (ನ್ಯೂಕ್ಲಿಯಸ್) ಭಿತ್ತಿಯಲ್ಲಿ ಒಂದು ಚುಕ್ಕೆಯನ್ನಿಟ್ಟಂತೆ ವ್ಯಕ್ತವಾಗುತ್ತವೆ ಎಂಬುದನ್ನು 1950 ರ ದಶಕದಲ್ಲಿ ವಿಜ್ಞಾನಿಗಳು ಪತ್ತೆಮಾಡಿದರು. ಈ ಚುಕ್ಕೆಗೆ ಲೈಂಗಿಕ ವರ್ಣಕಾಯ (ಸೆಕ್ಸ್ ಕ್ರೊಮಾಟಿನ್) ಎಂದು ಹೆಸರು. ಸ್ತ್ರೀ ದೇಹದ ಎಲ್ಲ ಕೋಶಗಳಲ್ಲಿಯೂ ಲೈಂಗಿಕ ವರ್ಣಕಾಯ ವ್ಯಕ್ತವಾಗಬೇಕಾಗಿದ್ದರೂ ಕೆನ್ನೆಯ ಒಳಪೊರೆ ಕೋಶಗಳಲ್ಲಿ ಅದು ಸುಲಭವಾಗಿ ಪತ್ತೆಯಾಗುತ್ತದೆ. ಪುರುಷ ಕೋಶಗಳಲ್ಲಿ ಹೀಗೆ ಎರಡು X ಕ್ರೊಮೋಸೋಮುಗಳಿಲ್ಲದೆ ಒಂದೇ ಇರುವುದರಿಂದ ಅವುಗಳಲ್ಲಿ ಲೈಂಗಿಕ ವರ್ಣಕಾಯ ಕಾಣಿಸುವುದಿಲ್ಲ. ಅಂದರೆ ಸ್ತ್ರೀಯರು ಲೈಂಗಿಕ ವರ್ಣಕಾಯಯುಕ್ತರು (ಸೆಕ್ಸ್ ಕ್ರೊಮಾಟಿನ್ ಪಾಸಿಟಿವ್), ಪುರುಷರು ಲೈಂಗಿಕವರ್ಣಕಾಯ ಲುಪ್ತರು (ಸೆಕ್ಸ್ ಕ್ರೊಮಾಟಿನ್ ನೆಗೆಟಿವ್). ಗರ್ಭಸ್ಥ ಸ್ಥಿತಿಯಲ್ಲಿ ಭ್ರೂಣದ ದೇಹದಿಂದ ಕೋಶಗಳು ಹೊರಬಿದ್ದು ಭ್ರೂಣಾವೃತದ್ರವದಲ್ಲಿ ತೇಲಾಡುತ್ತಿರುವ ಸಂಗತಿ ಹಲವು ದಶಕಗಳಿಂದ ತಿಳಿದಿದೆ. ಈ ಕೋಶಗಳನ್ನು ಪರೀಕ್ಷಿಸಿ ಭ್ರೂಣದ ಲಿಂಗವನ್ನು ಪತ್ತೆ ಮಾಡಬಹುದು.

ಪ್ರಸವ : ಗರ್ಭಾವಸ್ಥೆ 40 ವಾರಗಳಲ್ಲಿ ಕೊನೆಗೊಳ್ಳುತ್ತದೆ. ಆಗ ಶಿಶು ಜನನ ಪ್ರಸವ ಕ್ರಮದಿಂದ ಆಗುತ್ತದೆ. ಜರಾಯು ಗರ್ಭಕೋಶ ಭಿತ್ತಿಯಿಂದ ಬಿಡಿಸಿ ಬೇರ್ಪಡುವುದೆ ಇದಕ್ಕೆ ಮುಖ್ಯ ಕಾರಣ. 40 ವಾರಗಳ ಆಚೀಚಿನ ಕೆಲವು ದಿವಸಗಳಲ್ಲಿ ಪ್ರಸವವಾಗುವುದು ನೈಸರ್ಗಿಕ ಮತ್ತು ಸಾಮಾನ್ಯ. ಕಾರಣಾಂತರಗಳಿಂದ ಆತುರ ಅಥವ ವಿಳಂಬ ಪ್ರಸವ ಆಗಬಹುದು. ಗರ್ಭಾವಸ್ಥೆಯ 28 ವಾರಗಳು ಕಳೆಯುವ ಮುಂಚೆಯೇ ಗರ್ಭಸ್ಥ ಭ್ರೂಣ (ಎಂಬ್ರಯೊ) ಅಥವ ಶಿಶು (ಫೀಟಸ್) ಹೊರಬಂದರೆ ಅದನ್ನು ಅನುಕ್ರಮವಾಗಿ ಗರ್ಭಪಾತ (ಅಬಾರ್ಶನ್) ಅಥವ ಮೈಯಿಳಿಯುವುದು (ಮಿಸ್ ಕ್ಯಾರೇಜ್) ಎನ್ನುತ್ತಾರೆ. 28 ನೆ ವಾರ ಕಳೆದ ಬಳಿಕ, ಹುಟ್ಟುವ ಶಿಶು ಮಾತ್ರ ಜೀವಂತವಾಗಿ ಮುಂದುವರಿದು ಬೆಳೆಯುವ ಸಾಮರ್ಥ್ಯ ಪಡೆದಿರುತ್ತದೆ. ಸ್ವಾಭಾವಿಕವಾಗಿಯೇ 28–30 ವಾರಗಳ ತರುವಾಯ ಹುಟ್ಟುವ ಮಗುವು ದುರ್ಬಲವಾಗಿರುತ್ತದೆ. ಅಂಥ ಎಳೆ ಮಗುವಿನ ಸಂರಕ್ಷಣೆಯಲ್ಲಿ ವಿಶೇಷ ಎಚ್ಚರಿಕೆ ವಹಿಸಬೇಕಾಗುತ್ತದೆ. 40 ವಾರಗಳ ತರುವಾಯ ಹುಟ್ಟುವ ಮಗು ಸ್ವಾಭಾವಿಕವಾಗಿಯೇ ಹೆಚ್ಚು ಬೆಳೆದು ಬಲಿತಿರುವುದು. ಅಂಥ ಮಗುವಿನ ಪ್ರಸವ ಕಷ್ಟವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಉದರ ಶಸ್ತ್ರಕ್ರಿಯೆಯಿಂದ ಪ್ರಸವವನ್ನು ಜರುಗಿಸಬೇಕಾಗುತ್ತದೆ. ಅವಳಿ ತ್ರಿವಳಿ ಮತ್ತು ಬಹುವಳಿ ಮಕ್ಕಳ ಜನನದಲ್ಲಿ ಒಂದು ಮಗು ಹುಟ್ಟಿದ ಒಂದೆರಡು ಅಥವಾ ಹೆಚ್ಚು ಗಂಟೆಗಳ ಬಳಿಕ ಮುಂದಿನ ಮಗು ಜನಿಸುವುದು. ಇಲ್ಲಿ ಪ್ರಸವ ತೊಡಕಾಗಿದ್ದು, ತಾಯಿ ಅಥವಾ ಮಗುವಿನ ಜೀವಕ್ಕೆ ಅಪಾಯ ಒದಗುವಂತಿದ್ದರೆ ಶಸ್ತ್ರಕ್ರಿಯೆಯಿಂದ ಪ್ರಸವ ಮಾಡಿಸಬೇಕಾಗುತ್ತದೆ.

ಗರ್ಭಾವಸ್ಥೆಯಲ್ಲಿ ಗರ್ಭಕೋಶ ಅಗಾಧವಾಗಿ ಬೆಳೆದು (ಸು. 30 ಸೆಂಮೀ) ಗರ್ಭಸ್ಥ ಶಿಶುವಿಗೆ ಪೋಷಕ ಹಾಗೂ ಸಂರಕ್ಷಕ ಕವಚವಾಗಿರುತ್ತದೆ. ಪ್ರಸವಾನಂತರ ಗರ್ಭಕೋಶ ಸು. 10–12 ಸೆಂಮೀನಷ್ಟು ಗಾತ್ರಕ್ಕೆ ಕುಗ್ಗುತ್ತದೆ. ಪ್ರಸವಾರಂಭದಲ್ಲಿ ಬಿಡಿಸಿ ಬೇರ್ಪಟ್ಟಿರುವ ಜರಾಯು ಶಿಶುಜನನವಾದ 10–20 ನಿಮಿಷಗಳ ಬಳಿಕ ಹೊರ ಬರುತ್ತದೆ. ಅಲ್ಲಿಯ ತನಕವು ಗರ್ಭಾಶಯದಿಂದ ರಕ್ತಸ್ರಾವವಾಗುತ್ತಿರುತ್ತದೆ. ಜರಾಯುವಿನ ಪ್ರಸವ ಕೂಡ ಆದ ತರುವಾಯ ಗರ್ಭಾಶಯ ಇನ್ನೂ ಕುಗ್ಗಿ ರಕ್ತಸ್ರಾವ ನಿಲ್ಲುತ್ತದೆ. ಆದರೂ, ಅದು ಗರ್ಭಾವಸ್ಥೆಯ ಪೂರ್ವಗಾತ್ರಕ್ಕೆ ಕುಗ್ಗಿರುವುದಿಲ್ಲ. ಹಾಗೆ ಕುಗ್ಗುವುದಕ್ಕೆ ಇನ್ನೂ ಕೆಲವು ವಾರಗಳೇ ಬೇಕಾಗುತ್ತದೆ. ಅಲ್ಲಿಯ ತನಕ ಅಲ್ಪಸ್ವಲ್ಪ ರಕ್ತಮಿಶ್ರದ್ರವ ಯೋನಿಯ ಮೂಲಕ ವಿಸರ್ಜಿತವಾಗುತ್ತಿರುತ್ತದೆ. ಈ ದ್ರವಕ್ಕೆ ಪ್ರಸವೋತ್ತರ ಸ್ರಾವ (ಲೋಕಿಯ) ಎಂದು ಹೆಸರು. ಹಲವಾರು ವಾರಗಳ ಬಳಿಕ, ಗರ್ಭಾಶಯ ಕುಗ್ಗಿದ ಮೇಲೆ, ಈ ಸ್ರಾವ ನಿಲ್ಲುತ್ತದೆ. ಒಂದು ಸಲ ಗರ್ಭಸ್ಥವಾದ ಗರ್ಭಾಶಯ ಎಷ್ಟೇ ಕುಗ್ಗಿದರು ಕನ್ಯಾವಸ್ಥೆಯಲ್ಲಿಯ ಗಾತ್ರಕ್ಕಿಂತ ಕೊಂಚ ದೊಡ್ಡದಾಗಿ ಉಳಿದಿರುತ್ತದೆ.

ಹಾಲೂಡಿಸುವಿಕೆ : ಮನುಷ್ಯರಲ್ಲಿ ನವಜಾತ ಶಿಶು ಆಹಾರ ಪೂರೈಕೆಯ ವಿಷಯದಲ್ಲಿ ತೀರಾ ನಿಸ್ಸಹಾಯಕ. ಆದರೆ, ಮಗು ಹುಟ್ಟಿದ ಕೂಡಲೇ ತಾಯಿ ಅದಕ್ಕೆ ಹಾಲೂಡಲು ಸಮರ್ಥಳಾಗಿರುವುದಿಲ್ಲ. ಗರ್ಭಾವಸ್ಥೆಯ ವೇಳೆ ಅಕೆಯ ಸ್ತನಗಳಲ್ಲಿ ಹಾಲನ್ನು ಸ್ರವಿಸಲು ಪೂರ್ವಸಿದ್ಧತೆಗಳಿರುತ್ತವೆ ಮತ್ತು ಪ್ರತ್ಯಕ್ಷವಾಗಿ ಅವು ಸ್ರವಿಸಲಾರವು. ಆ ಸಾಮರ್ಥ್ಯ ಬರಬೇಕಾದರೆ ಪ್ರಸವಾನಂತರ 12–24 ಗಂಟೆಗಳು ಕಳೆಯಬೇಕು. ಹುಟ್ಟಿದ 2–4 ಗಂಟೆಗಳ ಮೇಲೆ ಗ್ಲೂಕೋಸ್ ನೀರು, ಜೇನು ಕದಡಿದ ನೀರು, ಆಗಾಗ್ಗೆ ಒಂದೆರಡು ತೊಟ್ಟು ಕೊಡುತ್ತ ತಾಯಿಗೆ ಹಾಲು ಬರುವ ತನಕ ನೋಡಿಕೊಂಡಿರಬೇಕು. ಪ್ರಸವಾನಂತರ 8–10 ಗಂಟೆಗಳಾದ ಮೇಲೆ ತಾಯಿಯ ಸ್ತನದಲ್ಲಿ ಹಾಲು ಬರದೇ ಇದ್ದರೂ ಮಗುವಿಗೆ ಮೊಲೆಯುಡಿಸಬೇಕು. ಬಾಯಿಗೆ ಸ್ತನಾಗ್ರದಂತೆ ಏನು ಸಿಕ್ಕಿದರೂ ಅದನ್ನು ಚೀಪುವ ಚಾಪಲ್ಯ ಮಗುವಿಗೆ ಹುಟ್ಟಿದಾಗಿನಿಂದಲೇ ಇರುತ್ತದೆ. ಹಾಲು ಇನ್ನು ಬಂದಿಲ್ಲದೇ ಇದ್ದರೂ, ಮೊಲೆಯುಡಿಸುವುದರಿಂದ ಸ್ತನದಲ್ಲಿ ಹಾಲು ತುಂಬ ತುಂಬಿಕೊಂಡ ಹಾಲು ಸ್ತನಾಗ್ರದಿಂದ ತಾನಾಗಿಯೇ ಹೊರಸೂಸಲು ಸಹಾಯಕವಾಗುತ್ತದೆ. ಮಗು ಚೀಪಿ ಹಾಲನ್ನು ಸೆಳೆದುಕೊಳ್ಳುವ ಶ್ರಮ ಇದರಿಂದ ಬಲುಮಟ್ಟಿಗೆ ಕಡಿಮೆ ಆಗುತ್ತದೆ. ಅಲ್ಲದೆ, ತಾಯಿಯಲ್ಲಿ ಪ್ರಸವಾನಂತರ ಸಹಜ ಗಾತ್ರಕ್ಕೆ ಇನ್ನೂ ಕುಗ್ಗದೆ ಇರುವ ಗರ್ಭಾಶಯ ಕುಗ್ಗುವುದಕ್ಕೂ ಮೊಲೆಯುಡಿಸುವುದು ಸಹಕಾರಿ. ಮಗುವಿಗೆ ಮೊಲೆಯುಡಿಸುತ್ತಲೇ ಇದ್ದರೆ ಸ್ತನದಲ್ಲಿ ಹಾಲು ಸ್ರಾವವಾಗುತ್ತಲೆ ಇರುತ್ತದೆ. ಮೊಲೆಯುಡಿಸುವುದನ್ನು ಕಡಿಮೆ ಮಾಡಿದರೆ ಸ್ತನದಲ್ಲಿ ಹಾಲಿನ ಸ್ರಾವ ನಿಂತೇ ಹೋಗುತ್ತದೆ. ಸಾಮಾನ್ಯವಾಗಿ 6–8 ತಿಂಗಳು ಅಥವಾ ಒಂದು ವರ್ಷ ಕಾಲ ಹೀಗೆ ಹಾಲು ಸ್ರವಿಸಲ್ಪಡುವುದು. ಅನಂತರ ಮೊಲೆಯುಡಿಸುತ್ತಿದ್ದರೂ ಅದು ಕ್ರಮೇಣ ಕಡಿಮೆಯಾಗಿ ಕೊನೆಗೆ ನಿಂತು ಹೋಗುತ್ತದೆ. ಸಹಜವಾಗಿಯೇ ಮಗು ಮೊಲೆ ಕುಡಿಯುವುದನ್ನೂ ಬಿಡುತ್ತದೆ. ಇಷ್ಟು ಹೊತ್ತಿಗೆ ಅದಕ್ಕೆ ಹುಯ್ಯು ಹಾಲು ಕೊಡಲು ಪ್ರಾರಂಭಿಸುವುದರಿಂದ ಮೊಲೆಯೂಡಿಸುವ ಅಭ್ಯಾಸ ತಪ್ಪಲು ಕಷ್ಟವಾಗುವುದಿಲ್ಲ.

ಮಗುವಿಗೆ ಮೊಲೆಯೂಡಿಸುತ್ತಿರುವಷ್ಟು ಕಾಲ ಅಂಡಾಶಯದಲ್ಲಿ ಅಂಡಾಣು ತಯಾರಿ ಸ್ಥಗಿತವಾಗಿರುತ್ತದೆ. ರಜಸ್ರಾವವೂ ಅಷ್ಟೆ. ಹಾಲೂಡಿಸುವುದನ್ನು ನಿಲ್ಲಿಸಿದ ಮೇಲೆ ಅರ್ಥಾತ್ ಸ್ತನದ ಕಾರ್ಯಕ್ರಮ ಸ್ಥಗಿತವಾದ ಮೇಲೆ ಸಾಮಾನ್ಯವಾಗಿ ಪ್ರಸವಾನಂತರ ಪುನಃ ಅಂಡಾಣು ತಯಾರಿ ಮತ್ತು ರಜಸ್ರಾವ ಪ್ರಾರಂಭವಾಗಿ ಇನ್ನೊಂದು ಗರ್ಭಾವಸ್ಥೆಯ ತನಕ ಚಕ್ರೀಯವಾಗಿ ಮುಂದುವರಿಯುತ್ತವೆ. ಚಕ್ರ ಪುನರಾರಂಭ ಅನಂತರ ತಯಾರಾದ ಮೊದಲ ಅಂಡಾಣುವೇ ನಿಷೇಚನೆಗೊಂಡರೆ ರಜಸ್ರಾವವಾಗದೆ ಮುಂದಿನ ಗರ್ಭಾವಸ್ಥೆ ಪ್ರಾರಂಭವಾಗುತ್ತದೆ. ಈ ಗರ್ಭಾವಸ್ಥೆಯ ಖಚಿತ ಗುರುತು ಸಿಕ್ಕುವುದಿಲ್ಲವಾಗಿ ಇದರ ಕಾಲಗಣನೆಯನ್ನು ಬೇರೆ ರೀತಿಯಿಂದ ಸ್ಥೂಲವಾಗಿ ಮಾತ್ರ ಮಾಡಬಹುದಾಗಿದೆ. ಕೆಲವರಲ್ಲಿ ನೈಸರ್ಗಿಕವಾಗಿ ಪ್ರಸವಾನಂತರ 2–3 ತಿಂಗಳಲ್ಲೇ ಅಂಡಾಣು ತಯಾರಾಗಬಹುದು. ಇಂಥವರಲ್ಲಿ ರಜಸ್ರಾವವೇ ಆಗದೆ ಮುಂದಿನ ಗರ್ಭಾವಸ್ಥೆ ಪ್ರಾರಂಭವಾಗಬಹುದಾದ್ದರಿಂದ ಪ್ರಸವಾ ನಂತರ ವರ್ಷ ಕಳೆಯುವಷ್ಟರಲ್ಲಿ ಇನ್ನೊಂದು ಪ್ರಸವವೇ ಆಗುವ ಸಂಭವವಿದೆ. ಪ್ರಸವಾನಂತರ ಮಾಸಿಕ ಚಕ್ರ ಪುನರಾರಂಭನಂತರ ಅಥವ ಪುನಃ ಗರ್ಭಾವಸ್ಥೆ ಕಂಡುಬಂದಮೇಲೆ ಸ್ತನದಲ್ಲಿ ಹಾಲಿನ ಸ್ರವನ ಕಡಿಮೆ ಆಗುತ್ತ ಶೀಘ್ರದಲ್ಲಿ ನಿಂತು ಹೋಗುವುದು. ಸ್ತನ ಹಾಗೂ ಅಂಡಾಶಯ ಗರ್ಭಕೋಶಗಳ ಕಾರ್ಯಕ್ರಮಗಳು ಈ ರೀತಿ ಒಂದಕ್ಕೊಂದು ಅವಲಂಬಿಸಿವೆ.

ಪ್ರಜನನ ಕ್ರಿಯೆಯ ನಿಯಂತ್ರಣ : ಪಿಟ್ಯೂಯಿಟರಿ ಗ್ರಂಥಿ ಹಾಗೂ ಅಂಡಾಶಯ ಅಥವಾ ವೃಷಣ ಇವುಗಳಿಂದ ಸ್ರವಿಸುವ ಹಾರ್ಮೋನುಗಳಿಂದ ಪ್ರಜನನ ಕ್ರಿಯೆಯಲ್ಲಿ ವಿವಿಧ ಅಂಗಗಳು ವಿವಿಧ ಘಟ್ಟಗಳಲ್ಲಿ ಪರಸ್ಪರ ಪ್ರಭಾವ ಬೀರುವುದೂ ಅವುಗಳ ಕಾರ್ಯಕ್ರಮಗಳು ವ್ಯವಸ್ಥಿತ ರೀತಿಯಲ್ಲಿ ನಿಯಂತ್ರಣಕ್ಕೆ ಒಳಪಟ್ಟಿರುವುದೂ ಸಾಧ್ಯವಾಗಿದೆ. ವೀರ್ಯಾಣು ಮತ್ತು ಅಂಡಾಣು ಉತ್ಪನ್ನವಾಗುವಾಗಲೇ ಹಾರ್ಮೋನುಗಳ ಸ್ರಾವವೂ ಕಂಡುಬರುತ್ತದೆ. ಅಂದರೆ, ವೃಷಣ ಮತ್ತು ಅಂಡಾಶಯದ ಎರಡು ಕ್ರಿಯೆಗಳೂ ಸಮಕಾಲಿಕ ಮತ್ತು ಎರಡು ಪಿಟ್ಯೂಯಿಟರಿ ಗ್ರಂಥಿಯ ಆದೇಶದಂತೆ ಜರುಗತಕ್ಕವು.

ಪಿಟ್ಯೂಯಿಟರಿ ಗ್ರಂಥಿ ಮಿದುಳಿನ ತಳದಲ್ಲಿರುವ ಅತಿ ಸಣ್ಣದಾದ, ಅತಿ ಮುಖ್ಯವಾದ ಅಂಗ. ಇದು ಹಾರ್ಮೋನುಗಳ ಮೂಲಕ ವೃಷಣ ಮತ್ತು ಅಂಡಾಶಯಗಳಿಗೆ ಆದೇಶಗಳನ್ನು ಕಳಿಸುತ್ತದೆ. ಈ ಗ್ರಂಥಿ ಸ್ರವಿಸುವ ಹಾರ್ಮೋನುಗಳ ಪೈಕಿ ೪ ಹಾರ್ಮೋನುಗಳು ನೇರವಾಗಿ ಇಲ್ಲಿವೆ. ಇವು ಪರೋಕ್ಷವಾಗಿ ಪ್ರಜನನ ಕ್ರಿಯೆಯಲ್ಲಿ ಭಾಗವಹಿಸುತ್ತವೆ. ಫಾಲಿಕೂಲರ್ ಸ್ಟಿಮ್ಯುಲೇಟಿಂಗ್ ಹಾರ್ಮೋನ್ (ಎಫ್‌ಎಸ್‌ಎಚ್), ಲ್ಯೂಟೆನೈಸಿಂಗ್ ಹಾರ್ಮೋನ್ (ಎಲ್‌ಎಚ್) ಅಥವಾ ಇಂಟರ್‌ಸ್ಟಿಷಿಯಲ್ ಸೆಲ್ ಸ್ಟಿಮುಲೇಟಿಂಗ್ ಹಾರ್ಮೋನ್ (ಐಸಿಎಸ್‌ಎಚ್) ಮತ್ತು ಲ್ಯೂಟೋಟ್ರೋಪಿಕ್ ಹಾರ್ಮೋನ್ (ಎಲ್‌ಟಿಎಚ್) ಅಥವಾ ಪ್ರೊಲ್ಯಾಕ್ಟಿನ್. ಈ ಮೂರು ಹಾರ್ಮೋನುಗಳು ಪಿಟ್ಯೂಯಿಟರಿ ಗ್ರಂಥಿಯ ಮುಂದಿನ ಹಾಲೆಯಿಂದ ಸ್ರವಿಸುತ್ತವೆ. ಆಕ್ಸಿಟೋಸಿನ್ ಹಾರ್ಮೋನ್ ಪಿಟ್ಯೂಯಿಟರಿಯ ಹಿಂದಿನ ಹಾಲೆಯಿಂದ ಸ್ರಾವವಾಗುತ್ತದೆ. ಈ ಹಾರ್ಮೋನುಗಳು ಬಾಲ್ಯದಲ್ಲಿ ಕಡಿಮೆ ಮಟ್ಟದಲ್ಲಿ ಸ್ರವಿಸುತ್ತವೆ. ಪ್ರಬುದ್ಧತೆಯ ವಯಸ್ಸು ಬರುವ ಹೊತ್ತಿಗೆ ಮತ್ತು ಅಲ್ಲಿಂದ ಮುಂದೆ ಕ್ರಿಯಾತ್ಮಕ ಮಟ್ಟಕ್ಕೆ ಏರುತ್ತವೆ. ಎಫ್‌ಎಸ್‌ಎಚ್ ಮತ್ತು ಎಲ್‌ಎಚ್‌ಗಳು ಅಂಡಾಶಯ ಮತ್ತು ವೃಷಣಗಳ ಮೇಲೆ ಎಲ್‌ಎಚ್ ಅಂಡಾಶಯ ಮತ್ತು ಸ್ತನಗಳ ಮೇಲೆ, ಆಕ್ಸಿಟೋಸಿನ್ ಸ್ತನ ಮತ್ತು ಗರ್ಭಕೋಶದ ಮೇಲೆ ಪ್ರತ್ಯಕ್ಷ ಪ್ರಭಾವ ಬೀರುತ್ತವೆ. ಅಂಡಾಶಯ ಮತ್ತು ವೃಷಣಗಳಲ್ಲಿ ಅಂಡಾಣು, ವೀರ್ಯಾಣು ಉತ್ಪಾದನೆ ಆಗುವುದರ ಜೊತೆಗೆ ಅದೇ ಕಾಲದಲ್ಲಿ ಹಾರ್ಮೋನುಗಳು ಸ್ರವಿಸುತ್ತವೆ. ಅಂಡಾಶಯದ ಅಂಡಾಣುಕೋಶ ಸಮೂಹ ವೃದ್ಧಿಯಾಗುತ್ತಿರುವಾಗ ಎಸ್ಟ್ರೋಜೆನ್ ಎಂಬುದೂ ಪೀತಕೋಶ ಸಮೂಹದಿಂದ ಪ್ರೊಜೆಸ್ಟಿರೋನ್ ಎಂಬುದೂ ಸ್ರವಿಸುತ್ತವೆ. ವೃಷಣದಲ್ಲಿ ಲೀಡಿಗಿನ ಕೋಶ ಗುಂಪುಗಳಿಂದ ಟೆಸ್ಟೊಸ್ಟಿರೋನ್ ಎಂಬ ಹಾರ್ಮೋನ್ ಸ್ರವಿಸುತ್ತದೆ. ದೇಹದ ಲೈಂಗಿಕ ಬೆಳವಣಿಗೆ, ಆನುಷಂಗಿಕ ಲೈಂಗಿಕ ಲಕ್ಷಣಗಳ ಗೋಚರ, ರಜಸ್ರಾವ, ಗರ್ಭಾವಸ್ಥೆ, ಪ್ರಸವ ಮುಂತಾದುವು ಎಸ್ಟ್ರೋಜೆನ್, ಪ್ರೊಜೆಸ್ಟಿರೋನ್ ಮತ್ತು ಟೆಸ್ಟೋಸ್ಟಿರೋನುಗಳ ಪ್ರಭಾವದ ಫಲಗಳು. ಅಂಡಾಶಯ ಮತ್ತು ವೃಷಣಗಳ ಹಾರ್ಮೋನುಗಳು ಪಿಟ್ಯುಟರಿಯ ಪ್ರತ್ಯಕ್ಷ ಪ್ರಭಾವದ ಫಲಗಳಾದ್ದರಿಂದ ಸ್ವತಃ ಅವುಗಳ ಪ್ರಭಾವ ಫಲ ಪಿಟ್ಯೂಟರಿಯ ಪರೋಕ್ಷ ಫಲವೆಂದು ಭಾವಿಸಬಹುದು. ಎಸ್ಟ್ರೋಜೆನ್, ಪ್ರೊಜೆಸ್ಟಿರೋನುಗಳು ಪಿಟ್ಯೂಟರಿಯ ಮೇಲೆ ಹಿಮ್ಮುಖವಾದ ಶಾಮಕ ಪ್ರಭಾವ (ನೆಗೆಟಿವ್ ಫೀಡ್‌ಬ್ಯಾಕ್) ಕೂಡ ಹೊಂದಿವೆ. ಪಿಟ್ಯೂಟರಿಯಲ್ಲೇ ಒಂದು ಹಾರ್ಮೋನಿನ ಸ್ರಾವ ಹೆಚ್ಚಿತೆಂದರೆ ಇನ್ನೊಂದರ ತಡೆ ಆಗುವುದು ಅಥವಾ ಒಂದರ ತಡೆ ಆದರೆ ಇನ್ನೊಂದರ ಸ್ರಾವ ಹೆಚ್ಚುವುದು ಕಂಡುಬರುತ್ತವೆ.

ಬಾಲಿಕೆಯಲ್ಲಿ ಅಂಡಾಶಯ ಇನ್ನು ಎಳೆಯದಾಗಿದ್ದು, ಪ್ರಾಥಮಿಕ ಕೋಶಗಳನ್ನು ಮಾತ್ರ ಒಳಗೊಂಡಿರುತ್ತದೆ. ಆಕೆಗೆ 10–14 ವರ್ಷ ವಯಸ್ಸಾಗುವ ಹೊತ್ತಿಗೆ ಅಂಡಾಶಯ ಬಲಿಯುತ್ತದೆ. ಅದೇ ವೇಳೆ ಹೆಚ್ಚಾಗಿ ಸ್ರವಿಸುವ ಪಿಟ್ಯೂಟರಿ ಹಾರ್ಮೋನುಗಳಿಂದ ಪ್ರಭಾವಗೊಳ್ಳುವ ಸೂಕ್ಷ್ಮತೆಯನ್ನೂ ಪಡೆಯುತ್ತದೆ. ತತ್ಪರಿಣಾಮವಾಗಿ ಈ ನಡುವೆ ಎಂದೋ ಒಂದು ದಿನ ಎಫ್‌ಎಸ್‌ಎಚ್ ಪ್ರಭಾವ ಕಂಡುಬರುತ್ತದೆ. ಇದರ ಫಲವಾಗಿ ಅಂಡಾಶಯದ ಕೋಶ ಸಮೂಹ ವೃದ್ಧಿಗೊಂಡು ಪಕ್ವ ಕೋಶ ಸಮೂಹವಾಗುವುದು. ಹಾಗಾಗುವಾಗ ಅಂಡಾಣುವಿನ ತಯಾರಿ ಆಗುವುದಲ್ಲದೆ ಎಸ್ಟ್ರೋಜೆನ್ ಹೆಚ್ಚು ಹೆಚ್ಚಾಗಿ ಸ್ರವಿಸುತ್ತದೆ. ಎಸ್ಟ್ರೋಜೆನ್ ಪಿಟ್ಯೂಟರಿಯ ಮೇಲೆ ಹಿಮ್ಮುಖವಾಗಿ ವರ್ತಿಸುವುದರಿಂದ ಅಲ್ಲಿ ಎಫ್‌ಎಸ್‌ಎಚ್ ಸ್ರಾವ ಕಡಿಮೆಯಾಗುತ್ತದೆ, ಮತ್ತು ಎಲ್‌ಎಚ್ ಸ್ರಾವ ಹೆಚ್ಚಾಗುತ್ತದೆ. ಎರಡು ವಾರಗಳ ಕಾಲ ಹೀಗೆ ಮುಂದುವರಿದಾಗ ಎಫ್‌ಎಸ್‌ಎಚ್ ಮತ್ತು ಎಲ್‌ಎಚ್‌ಗಳ ಪರಸ್ಪರ ಪ್ರಮಾಣ ಒಂದು ವಿಶಿಷ್ಟ ಮಟ್ಟ ಮುಟ್ಟುವುದರಿಂದ ಪಕ್ವ ಕೋಶ ಸಮೂಹ ಛಿದ್ರಗೊಂಡು ಅಂಡಾಣುವಿನ ಬಿಡುಗಡೆ ಆಗುತ್ತದೆ. ಇದರಿಂದಾಗಿ ಎಸ್ಟ್ರೋಜೆನ್ನಿನ ಸ್ರಾವ ದಿಢೀರನೆ ಕಡಿಮೆಯಾಗುತ್ತದೆ. ಈ ಸ್ಥಿತಿ ಪಿಟ್ಯೂಯಿಟರಿಯನ್ನು ಪ್ರಭಾವಿಸಿ ಅಲ್ಲಿ ಎಫ್‌ಎಸ್‌ಎಚ್ ಸ್ರಾವ ನಿಂತ ಹೋಗಿ ಎಲ್‌ಎಚ್ ಮಾತ್ರ ಸ್ರವಿಸುವಂತಾಗುತ್ತದೆ. ಎಲ್‌ಎಚ್ ಸ್ರಾವ ಅಂಡಾಶಯದ ಮೇಲೆ ವರ್ತಿಸಿ ಛಿದ್ರಕೋಶ ಸಮೂಹ ಒಗ್ಗೂಡಿ ಪೀತಕೋಶ ಸಮೂಹ ಆಗುವಂತೆ ಮಾಡುತ್ತದೆ. ಹೀಗೆ ಎಲ್‌ಎಚ್ ಪ್ರಭಾವದಿಂದ ಪೀತಕೋಶ ಸಮೂಹ ಉಪಸ್ಥಿತವಾದ ಮೇಲೆ ಪಿಟ್ಯೂಯಿಟರಿಯಿಂದ ಉದ್ದಕ್ಕೂ ಸ್ರಾವವಾಗುತ್ತಲೇ ಇದ್ದು ಏನೂ ಪ್ರಭಾವ ಬೀರದೇ ಇದ್ದ ಎಲ್‌ಟಿಎಚ್ ಈಗ ಪೀತಕೋಶ ಸಮೂಹವನ್ನು ಪ್ರಭಾವಿಸಿ ಅದು ಪ್ರೊಜೆಸ್ಟಿರೋನನ್ನು ಸ್ರವಿಸುವಂತೆ ಮಾಡುತ್ತದೆ. ಪ್ರೊಜೆಸ್ಟಿರೋನ್ ಪಿಟ್ಯೂಟರಿಯ ಮೇಲೆ ಹಿಮ್ಮುಖ ಪ್ರಭಾವ ಹೊಂದಿರುವುದರಿಂದ ಅದರ ಸ್ರಾವ ಹೆಚ್ಚು ಆಗುತ್ತ, ಎಲ್‌ಎಚ್ ಸ್ರಾವ ಕಡಿಮೆ ಆಗುತ್ತ, ಎರಡು ವಾರ ಕೊನೆಗೆ ಎಲ್‌ಎಚ್ ಸ್ರಾವ ನಿಂತುಹೋಗುತ್ತದೆ. ಇದರ ಪರಿಣಾಮವಾಗಿ ಪೀತಕೋಶ ಸಮೂಹದ ಊರ್ಜಿತಕ್ಕೇ ಏಟು ಬಿದ್ದು ಅದು ಅವನತಿ ಹೊಂದುತ್ತದೆ ಮತ್ತು ತತ್ಫಲವಾಗಿ ಪ್ರೊಜೆಸ್ಟಿರೋನಿನ ಸ್ರಾವ ತಕ್ಷಣ ನಿಂತು ಹೋಗುತ್ತದೆ. ಎಲ್‌ಎಚ್ ಸ್ರಾವ ನಿಂತಿಂತೆದ್ದರೆ ಎಫ್‌ಎಸ್‌ಎಚ್ ಸ್ರಾವ ಪುನಃ ಪ್ರಾರಂಭವಾಗುತ್ತದೆ. ತತ್ಫಲವಾಗಿ ಅಂಡಾಶಯದಲ್ಲಿ ಪುನಃ ಕೋಶ ಸಮೂಹ ವೃದ್ಧಿಯೂ ಈಸ್ಟ್ರೋಜೆನ್ನಿನ ಸ್ರಾವವೂ ಎರಡು ವಾರಗಳ ಕಾಲ ಕಂಡುಬರುತ್ತವೆ. ಹೀಗೆ ಎರಡು ವಾರಗಳೂ ಪಿಟ್ಯೂಟರಿಯಲ್ಲಿ ಎಫ್‌ಎಸ್‌ಎಚ್ ಮತ್ತು ಅಂಡಾಶಯದಲ್ಲಿ ಪ್ರೋಜೆಸ್ಟಿರೋನ್ ಪುನಃ ಪಿಟ್ಯೂಟರಿಯಲ್ಲಿ ಎಫ್‌ಎಸ್‌ಎಚ್ ಮತ್ತು ಅಂಡಾಶಯದಲ್ಲಿ ಎಸ್ಟ್ರೋಜೆನ್ ನಂತರ ಎರಡು ವಾರಗಳು ಪಿಟ್ಯೂಟರಿಯಲ್ಲಿ ಎಲ್‌ಎಚ್ ಮತ್ತು ಅಂಡಾಶಯದಲ್ಲಿ ಪ್ರೋಜೆಸ್ಟಿರೋನ್ ಪುನಃ ಪಿಟ್ಯೂಟರಿಯಲ್ಲಿ ಎಫ್‌ಎಸ್‌ಎಚ್ ಮತ್ತು ಅಂಡಾಶಯದಲ್ಲಿ ಎಸ್ಟ್ರೋಜೆನ್ ಇತ್ಯಾದಿ ಕ್ಲುಪ್ತವಾಗಿ ಸ್ರವಿಸುವುದು ಕಂಡುಬರುತ್ತದೆ.

ಪ್ರಬುದ್ಧಳಾಗಲಿರುವ ಬಾಲಿಕೆಯ ಗರ್ಭಾಶಯದ ಬೆಳವಣಿಗೆಯನ್ನು ಎಸ್ಟ್ರೋಜೆನ್, ಮುಂದೆ ಪ್ರೋಜೆಸ್ಟಿರೋನ್ ಉಂಟು ಮಾಡುತ್ತವೆ. ಅನಂತರ ಪ್ರೊಜೆಸ್ಟಿರೋನ್ ಗರ್ಭಾಶಯದ ಒಳಪದರದ ಮೇಲೆ ವರ್ತಿಸಿ ಅಲ್ಲಿ ರಕ್ತದುಂಬಿಕೆ ಮತ್ತು ಗ್ರಂಥಿಗಳ ಬೆಳವಣಿಗೆ ಹಾಗೂ ಸ್ರಾವ (ರಜಸ್ರಾವ ಪೂರ್ವ ಸಿದ್ಧತೆ) ಆಗುವಂತೆ ಮಾಡುತ್ತದೆ. ಆದರೆ, ಎರಡು ವಾರಗಳು ಬಳಿಕ ಪ್ರೊಜೆಸ್ಟಿರೋನಿನ ಸ್ರಾವ ತಕ್ಷಣ ನಿಂತು ಹೋಗುವುದರಿಂದ (ಪರೋಕ್ಷ ಕಾರಣ – ಪಿಟ್ಯೂಟರಿಯಲ್ಲಿ ಎಲ್‌ಎಚ್ ಸ್ರಾವ ನಿಂತು ಹೋಗುವುದು) ಗರ್ಭಾಶಯದಲ್ಲಿ ಒಳಪದರದ ವಿಶೇಷ ಸ್ಥಿತಿಗೆ ಧಕ್ಕೆ ಆಗಿ, ಅದು ಅವನತಿ ಹೊಂದುತ್ತದೆ ಮತ್ತು ರಜಸ್ರಾವ ಕಂಡುಬರುತ್ತದೆ. ಆದ್ದರಿಂದಲೇ, ಒಳಪದರದ ಈ ವಿಶೇಷ ಸ್ಥಿತಿಗೆ ರಜಸ್ರಾವ ಪೂರ್ವ ಸ್ಥಿತಿ ಎಂದು ಹೆಸರು. ಪ್ರೊಜೆಸ್ಟಿರೋನ್ ಸ್ರಾವ ಮತ್ತು ಎಲ್‌ಎಚ್ ಸ್ರಾವ ನಿಂತುಹೋದ ಮೇಲೆ ಪಿಟ್ಯೂಟರಿಯಲ್ಲಿ ಎಫ್‌ಎಸ್‌ಎಚ್ ಸ್ರಾವ ಪ್ರಾರಂಭವಾಗಿ ಅಂಡಾಶಯದಲ್ಲಿ ಇನ್ನೊಂದು ಅಂಡಾಣು ತಯಾರಿಕೆ ಮತ್ತು ಇನ್ನೆರಡು ವಾರಗಳು ಈಸ್ಟ್ರೋಜೆನ್ನಿನ ಸ್ರಾವ ಕಂಡು ಬರುತ್ತದೆ. ಅಂದರೆ, ನಾಲ್ಕು ವಾರಗಳ ಚಕ್ರದ ಕೊನೆಯಲ್ಲಿ ಪಿಟ್ಯೂಟರಿಯಲ್ಲಿ ಎಲ್‌ಎಚ್ ಸ್ರಾವ ನಿಂತು ತತ್ಫಲವಾಗಿ ಅಂಡಾಶಯದಲ್ಲಿ ಪ್ರೊಜೆಸ್ಟಿರೋನ್ ಸ್ರಾವ ನಿಂತುಹೋಗುವುದರಿಂದ ರಜಸ್ರಾವವಾಗಿ ಈ ಅವಧಿಯ ಅಂತ್ಯವನ್ನು ಇನ್ನೊಂದು ಅವಧಿಯ ಪ್ರಾರಂಭವನ್ನೂ ಸೂಚಿಸುತ್ತದೆ. ಪ್ರಬುದ್ಧತೆಯ ಕಾಲದಲ್ಲಿ ಮೊದಲ ಸಲ ಅಂಡಾಶಯ ಹಾರ್ಮೋನುಗಳ ೪ ವಾರಗಳು ಈ ಚಕ್ರೀಯ ಪ್ರಭಾವ ಮೇಲಿಂದ ಮೇಲೆ ಕಾಣುತ್ತದೆ. ಮೇಲಿಂದ ಮೇಲೆ ಹೀಗೆ ಸ್ರವಿಸಲ್ಪಡುವ ಎಸ್ಟ್ರೋಜೆನ್ ಮತ್ತು ಪ್ರೋಜೆಸ್ಟೀರೋನುಗಳು ಸ್ತ್ರೀಯರ ದೇಹದ ಅನೇಕ ಭಾಗಗಳ ಮೇಲೆ ವರ್ತಿಸುವುದರಿಂದ ಆಕೆಯಲ್ಲಿ ಆನುಷಂಗಿಕ ಲೈಂಗಿಕ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಪ್ರೊಜೆಸ್ಟೀರೋನಿನ ಪ್ರಭಾವ ಕಂಡುಬರಲು ಈಸ್ಟ್ರೋಜೆನ್ನಿನ ಪ್ರಭಾವ ಪೂರ್ವಭಾವಿಯಾಗಿ ಕಂಡುಬಂದಿರುವುದು ಅಗತ್ಯ.

ಅಂಡಾಣುವಿನಲ್ಲಿ ನಿಷೇಚನೆ ಆದಾಗ ಊರ್ಜಿತಗೊಂಡಿದ್ದ ಪೀತಕೋಶ ಸಮೂಹ ಮಾಮೂಲಾಗಿ ೨ ವಾರಗಳ ಬಳಿಕ ಅವನತಿ ಹೊಂದಬೇಕಾಗುವುದು. ಪಿಟ್ಯೂಟರಿಯಲ್ಲಿ ಎಲ್‌ಎಚ್ ಸ್ರಾವ ನಿಂತು ಹೋಗದೇ ಮುಂದುವರಿಯುವುದೇ ಇದಕ್ಕೆ ಕಾರಣ. ನಿಷೇಚನೆಯಿಂದ ಪಿಟ್ಯೂಟರಿಯ ಬದಲಾವಣೆಯಾಗಿರುವುದು ನಿಜ. ಆದರೆ, ಹೇಗೆ ಈ ಬದಲಾವಣೆ ಏರ್ಪಟ್ಟಿತು. ಅಂತು ಅಂತ್ಯದಲ್ಲಿ ಇದರ ಪರಿಣಾಮವಾಗಿ ಪ್ರೊಜೆಸ್ಟಿರೋನಿನ ಸ್ರಾವ ಮುಂದುವರಿಯುತ್ತದೆ. ಅರ್ಥಾತ್ ಗರ್ಭಕೋಶದ ಒಳಪೊರೆಯ ರಜಸ್ರಾವ ಪೂರ್ವಸ್ಥಿತಿ ಅವನತಿ ಹೊಂದದೆ ಮುಂದುವರಿಯುತ್ತದೆ. ಅಂದರೆ, ಆಗಬೇಕಾಗಿದ್ದ ರಜಸ್ರಾವ ಆಗದೆ ಹೋಗುತ್ತದೆ. ಅಂಡಾಣುವಿನ ನಿಷೇಚನೆ ಆದ ಬಳಿಕ ಯಗ್ಮಜ ಗರ್ಭಾಶಯವನ್ನು ಹೊಕ್ಕು ಅಲ್ಲಿ ನಾಟಿಕೊಂಡು ಭ್ರೂಣವಾಗಿ ಬೆಳೆಯಲು ಪ್ರಾರಂಭಿಸುವುದು. ಯುಗ್ಮಜ ನಾಟಿಕೊಳ್ಳಲು, ಸುಲಭವಾಗಲಿ ಮತ್ತು ಅನಂತರ ಅದಕ್ಕೆ ಸಾಕಷ್ಟು ರಕ್ಷಣೆ ಒದಗಲಿ ಎಂದೇ ಗರ್ಭಾಶಯದ ಒಳಪದರದ ರಜಸ್ರಾವ ಪೂರ್ವಸ್ಥಿತಿ ಮುಂದುವರಿದದ್ದು. ರಜಸ್ರಾವ ಪೂರ್ವಸ್ಥಿತಿ ಗರ್ಭಾವಸ್ಥೆಯ ಸಿದ್ಧತೆಯೇ ಸರಿ ಎಂಬುದು ವಿಶದವಾಗುತ್ತದೆ. ಪೀತಕೋಶ ಸಮೂಹ ಮುಂದುವರಿಯುವುದರಿಂದ ಗರ್ಭಾಶಯದಲ್ಲಿ ಯುಗ್ಮಜ ನಾಟಿಕೊಂಡು ಬೆಳೆಯಲು ಪ್ರಾರಂಭಿಸಿದ ಮೇಲೆ ಅದರ ಒಳಪೊರೆಯ ವಿಶೇಷ ಸ್ಥಿತಿ ಮುಂದುವರಿಯುತ್ತದೆ. ಇದು ಪ್ರೊಜೆಸ್ಟಿರೋನ್ ಪ್ರಭಾವದಿಂದ ಎನ್ನುವುದು ವ್ಯಕ್ತ. ಆದರೆ, ಪೀತಕೋಶ ಸಮೂಹ ಮುಂದುವರಿಯುವುದು ಇನ್ನೂ ಸು. 10 ವಾರಗಳು ಮಾತ್ರ. ಆಮೇಲೆ ಅದು ಅವನತಿ ಹೊಂದಿದಾಗಲೂ ಪ್ರೊಜೆಸ್ಟಿರೋನ್ ಪ್ರಭಾವ ನಿಂತುಹೋಗಿರುವುದಿಲ್ಲ ಎಂಬುದನ್ನು ಗರ್ಭಾವಸ್ಥೆ ಮುಂದುವರಿಯುವುದರಿಂದ ಗ್ರಹಿಸಬಹುದು. ಹಾಗಿದ್ದರೆ, ಈ ಪ್ರೊಜೆಸ್ಟಿರೋನ್ ಎಲ್ಲಿಂದ ಬಂತು ಎಂಬ ಪ್ರಶ್ನೆ ಏಳುತ್ತದೆ. ಗರ್ಭಾವಸ್ಥೆಯ ಈ ಕಾಲದಲ್ಲಿ ಜರಾಯುವಿನ ರಚನೆ ಆಗಿ ಅದು ಪೀತಕೋಶ

ಸಮೂಹದ ಕಾರ್ಯವನ್ನು ವಹಿಸುತ್ತದೆ. ಇದರ ಅರ್ಥ ಜರಾಯುವಿನಿಂದ ಪ್ರೊಜೆಸ್ಟಿರೋನ್ ಸ್ರವಿಸಲ್ಪಡುತ್ತದೆ. ಆದ್ದರಿಂದಲೇ, ಜರಾಯು ಉಪಸ್ಥಿತವಾದ ಮೇಲೆ ಪ್ರಾಯೋಗಿಕವಾಗಿ ಅಂಡಾಶಯವನ್ನು ತೆಗೆದುಹಾಕಿದರೂ, ಅಂದರೆ ಪ್ರೊಜೆಸ್ಟಿರೋನಿನ ಆಕರವಾದ ಪೀತಕೋಶ ಸಮೂಹವನ್ನೇ ತೆಗೆದುಹಾಕಿದರೂ ಗರ್ಭಪಾತವಾಗುವುದಿಲ್ಲ. ಆದರೆ, ಗರ್ಭಾವಸ್ಥೆಯ ಮೊದಲ ತಿಂಗಳಲ್ಲಿ ಇನ್ನೂ ಸರಿಯಾಗಿ ರಚಿತವಾಗಿರದ ಜರಾಯು ಪ್ರೊಜೆಸ್ಟಿರೋನನ್ನು ಸ್ರವಿಸುತ್ತಿರುವುದಿಲ್ಲ. ಆದ್ದರಿಂದಲೇ, ಆಗ ಅಂಡಾಶಯವನ್ನು ತೆಗೆದುಹಾಕಿದರೆ ಗರ್ಭಪಾತವಾಗುವುದು ಖಂಡಿತ.

ಜರಾಯುವಿನಿಂದ ಪ್ರೊಜೆಸ್ಟಿರೋನ್ ಒದಗುತ್ತಿರುವುದರಿಂದ ಗರ್ಭಾವಸ್ಥೆ ಮುಂದುವರಿಯುವುದಕ್ಕೆ ಅಡ್ಡಿ ಇಲ್ಲ. ಆದರೆ, ಇದೇ ಪ್ರೊಜೆಸ್ಟಿರೋನಿನ ಆಧಿಕ್ಯ ಪಿಟ್ಯೂಟರಿಯ ಮೇಲೆ ಶಾಮಕ ಪ್ರಭಾವವನ್ನು ಬೀರುವುದರಿಂದ ಅದರಿಂದ ಎಫ್‌ಎಸ್‌ಎಚ್ ಆಗಲಿ ಎಲ್‌ಎಚ್ ಆಗಲಿ ಸ್ರವಿಸುವುದಿಲ್ಲ. ಆದ್ದರಿಂದಲೇ ಗರ್ಭಾವಸ್ಥೆಯ ಕಾಲದಲ್ಲಿ ಅಂಡಾಶಯ ಚಕ್ರವಾಗಲಿ ಋತುಚಕ್ರವಾಗಲಿ ಕಂಡುಬರುವುದಿಲ್ಲ. ಪ್ರೊಜೆಸ್ಟಿರೋನ್ ಗರ್ಭಿಣಿಯ ಸ್ತನಗಳ ಮೇಲೆ ಪ್ರಭಾವಿಸಿ ಅವುಗಳಲ್ಲಿ ಗ್ರಂಥಿಭಾಗಗಳು ಮೂಡುವಂತೆ ಮಾಡಿ ಹಾಲನ್ನು ಸ್ರವಿಸಬಲ್ಲ ಪೂರ್ವ ಸಿದ್ಧತೆಯನ್ನು ಉಂಟುಮಾಡುತ್ತದೆ. ಹೀಗೆ ಗರ್ಭಾವಸ್ಥೆಯ 40 ವಾರಗಳು ಕಳೆಯುತ್ತವೆ. ಕೊನೆಯಲ್ಲಿ ಏನೂ ಅವ್ಯಕ್ತ ಕಾರಣಗಳಿಂದ ಜರಾಯು ಗರ್ಭಕೋಶ ಭಿತ್ತಿಯಿಂದ ಬೇರ್ಪಡುವುದಕ್ಕೆ ಅರ್ಥಾತ್ ಅದರ ಕ್ರಿಯೆ ನಷ್ಟವಾಗುವುದಕ್ಕೆ ಪ್ರಾರಂಭವಾಗುತ್ತದೆ. ಅಂದರೆ, ಪ್ರೊಜೆಸ್ಟಿರೋನಿನ ಸ್ರಾವ ನಿಂತುಹೋಗುತ್ತದೆ. ಪರಿಣಾಮವಾಗಿ ಗರ್ಭಾವಸ್ಥೆ ಮುಂದುವರಿಯಲಾಗದೆ ಕೊನೆಗೊಳ್ಳುತ್ತದೆ. ಅಂದರೆ, ಪ್ರಸವವಾಗುತ್ತದೆ. ಪ್ರೊಜೆಸ್ಟಿರೋನಿನ ಗೈರುಹಾಜರಿಯಲ್ಲಿ ಆ ತನಕ ಅಡಗಿದ್ದ ಗರ್ಭಕೋಶದ ಸಂಕೋಚನಾಸಾಮರ್ಥ್ಯ ಪುನಃ ಕಂಡುಬರುತ್ತದೆ. ಜೊತೆಗೆ ಗರ್ಭಕೋಶ ಪ್ರೊಜೆಸ್ಟಿರೋನಿನ ರಕ್ಷಣೆಯನ್ನು ಕಳೆದುಕೊಂಡ ಮೇಲೆ ಆಕ್ಸಿಟೋಸಿನ್ ಗರ್ಭಕೋಶದ ಮೇಲೆ ವರ್ತಿಸಬಲ್ಲದಾಗಿ ಅದು ಗರ್ಭಕೋಶ ಬಲವಾಗಿ ಸಂಕೋಚಿಸಿ ಗರ್ಭಸ್ಥ ಶಿಶುವನ್ನು ಹೊರದೂಡುವಂತೆ ಮಾಡುತ್ತದೆ.

ಪೂರ್ವಸಿದ್ಧತೆಗೊಂಡಿರುವ ಸ್ತನದ ಮೇಲೆ ಪಿಟ್ಯೂಟರಿಯ ಪ್ರೊಲ್ಯಾಕ್ಟಿನ್ ವರ್ತಿಸಿ ಅದು ಹಾಲನ್ನು ಸ್ರವಿಸುವಂತೆ ಮಾಡಬಲ್ಲದು. ಆದರೆ, ಇದು ಪ್ರೊಜೆಸ್ಟಿರೋನಿನ ಪ್ರಭಾವ ಇಲ್ಲದಿದ್ದಾಗ ಮಾತ್ರ. ಆದ್ದರಿಂದಲೇ ಸ್ತನದಲ್ಲಿ ಹಾಲು ಉತ್ಪತ್ತಿ ಆಗುವುದು ಪ್ರಸವಾನಂತರವೇ. ಪ್ರೊಜೆಸ್ಟಿರೋನಿನ ಅಭಾವ ಪರಿಸ್ಥಿತಿಯಲ್ಲಿ ಪ್ರಸವಾನಂತರ ಈ ರೀತಿ ಹಾಲು ಸ್ರವಿಸಬಲ್ಲ ಸ್ತನದ ಮೇಲೆ ಆಕ್ಸಿಟೋಸಿನ್ ಸಹ ವರ್ತಿಸಬಲ್ಲದು. ಹಾಗೆ ವರ್ತಿಸುವುದರಿಂದ ಸ್ತನಗಳಿಂದ ಹಾಲುಹೊರಬರಲು (ಕೆಲವು ಸಮಯ ಚಿಮ್ಮಿ) ಸಾಧ್ಯವಾಗುತ್ತದೆ.

ಮಗುವಿಗೆ ಮೊಲೆಯೂಡುವುದರಿಂದ ಅಲ್ಲಿ ನರಪ್ರಚೋದನೆ ಆಗಿ ಅದು ಪಿಟ್ಯೂಟರಿಯ ಹಿಂದಿನ ಹಾಲೆಯನ್ನು ಉದ್ರೇಕಿಸುತ್ತದೆ. ತತ್ಫಲವಾಗಿ ಹೆಚ್ಚು ಆಕ್ಸಿಟೋಸಿನ್ ಸ್ರವಿಸಲ್ಪಡುತ್ತದೆ. ಇದು ಸ್ತನಗಳಿಂದ ಹಾಲು ಹೊರಬರುವುದಕ್ಕೆ ಅಂದರೆ ಮಗುವಿಗೆ ಹಾಲೂಡುವುದು ಸುಲಭವಾಗುವುದಕ್ಕೆ ಸಹಾಯಕ. ಅಲ್ಲದೆ ಇದೇ ಆಕ್ಸಿಟೋಸಿನ್ ಪ್ರಸವೋತ್ತರ ಗರ್ಭಾಶಯದ ಮೇಲೆ ವರ್ತಿಸಿ ಅದರ ಸಂಕೋಚನ ಪೂರ್ಣವಾಗುವಂತೆ ಗರ್ಭೋತ್ತರ ಸ್ರಾವ ಕಡಿಮೆ ಆಗುವಂತೆಯೂ ಮಾಡುತ್ತದೆ.

ಮಗುವಿಗೆ ಮೊಲೆಯೂಡುವುದರಿಂದ ಪಿಟ್ಯೂಯಿಟರಿಯಲ್ಲಿ ಪ್ರೊಲ್ಯಾಕ್ಟಿನ್ನಿನ ಸ್ರಾವ ಹೆಚ್ಚಾಗುತ್ತದೆ. ಆದ್ದರಿಂದಲೇ ಹಾಲೂಡುತ್ತಿರುವ ತನಕ ಸ್ತನದಲ್ಲಿ ಹಾಲಿನ ಉತ್ಪತ್ತಿಯೂ ಆಗುತ್ತಿರುತ್ತದೆ. ಪ್ರೊಲ್ಯಾಕ್ಟಿನ್ ಪಿಟ್ಯೂಯಿಟರಿಯಲ್ಲಿ ಅಧಿಕವಾಗಿ ಸ್ರವಿಸುವುದರಿಂದ ಎಫ್‌ಎಸ್‌ಎಚ್ ಆಗಲಿ ಎಲ್‌ಎಚ್ ಆಗಲಿ ಸ್ರವಿಸುವುದಿಲ್ಲ. ಆದ್ದರಿಂದಲೇ ಅಂಡಾಶಯ ಗರ್ಭಾಶಯಗಳ ಚಕ್ರೀಯ ಕಾರ್ಯಕ್ರಮ ಹಾಲೂಡಿಸುತ್ತಿರುವ ತನಕವೂ ಸ್ಥಗಿತವಾಗಿರುತ್ತದೆ.

ವಯಸ್ಸಾದಂತೆ ಪಿಟ್ಯೂಯಿಟರಿಯ ಪ್ರಭಾವ ಅಂಡಾಶಯದ ಮೇಲೆ ಕಡಿಮೆ ಆಗಿ ನಿಂತು ಹೋಗುತ್ತದೆ. ಆದ್ದರಿಂದ ಅಂಡಾಶಯದಲ್ಲಿ ಎಸ್ಟ್ರೊಜೆನ್ ಮತ್ತು ಪ್ರೊಜೆಸ್ಟಿರೋನುಗಳು ಸ್ರವಿಸುವುದಿಲ್ಲ. ತತ್ಫಲವಾಗಿ ರಜೋಬಂಧವಾಗುತ್ತದಲ್ಲದೆ ಸಂತಾನೋತ್ಪಾದನೆಯ ಸಾಮರ್ಥ್ಯವೂ ನಿಲ್ಲುತ್ತದೆ. ಆದರೆ, ಪಿಟ್ಯೂಯಿಟರಿಯಲ್ಲಿ ಎಫ್‌ಎಸ್‌ಎಚ್ ಮತ್ತು ಎಲ್‌ಎಚ್‌ಗಳ ಸ್ರಾವ ಇನ್ನೂ ಕೆಲಕಾಲ ಮುಂದುವರಿಯುತ್ತದೆ. ಈ ಹಾರ್ಮೋನುಗಳು ದೇಹದಲ್ಲಿ ಅನುಪಯುಕ್ತವಾಗಿ ಪರಿಚಲಿಸುತ್ತಿರುವುದರಿಂದ ಮುಟ್ಟು ನಿಂತ ಮೇಲೆ ಅನೇಕರಿಗೆ ಏರಿದ ರಕ್ತದ ಒತ್ತಡ, ಮುಖದ ಹಠಾತ್ ಆರಕ್ತತೆ, ಹಠಾತ್ ಬೆವರುವಿಕೆ ಸುಸ್ತು ಮುಂತಾದ ಅಹಿತ ಸ್ಥಿತಿಗಳು ಕಂಡುಬರುತ್ತವೆ.

ಗಂಡಸರ ಪ್ರಜನನ ಕ್ರಿಯೆಯಲ್ಲಿ ಹಾರ್ಮೋನುಗಳ ಪಾತ್ರ ಹೆಂಗಸರಲ್ಲಿಯಷ್ಟು ತೊಡಕಿನ ವ್ಯವಸ್ಥೆಯಲ್ಲ. ಗಂಡಸರಲ್ಲಿ ಪಿಟ್ಯೂಯಿಟರಿಯ ಎಫ್‌ಎಸ್‌ಎಚ್ ಮತ್ತು ಎಲ್‌ಎಚ್‌ಗಳು ಮಾತ್ರ ಕಾರ್ಯಾಚರಣೆಯುಳ್ಳವು. ಪ್ರೋಲ್ಯಾಕ್ಟಿನ್ ಮತ್ತು ಆಕ್ಸಿಟೋಸಿನ್ನುಗಳು ಅನುಪಯುಕ್ತ ಎಫ್‌ಎಸ್‌ಎಚ್ ಪ್ರಬುದ್ಧತೆಯ ಕಾಲದಿಂದ ವೃಷಣಗಳ ಮೇಲೆ ವರ್ತಿಸಿ ವೀರ್ಯಾಣುಗಳ ತಯಾರಿಕೆಗೆ ಕಾರಣವಾಗಿವೆ. ಹೆಂಗಸರಲ್ಲಿಯಂತೆ ಎರಡು ವಾರ ಬಿಟ್ಟು ಎರಡು ವಾರ ಸ್ರವಿಸದೆ ನಿರಂತರವಾಗಿ ಸ್ರವಿಸುತ್ತವೆ. ಎಫ್‌ಎಲ್‌ಎಚ್‌ನ ಪ್ರಭಾವದಿಂದ ವೃಷಣ ಕೋಶ ಯಾವ ಹಾರ್ಮೋನನ್ನೂ ಸ್ರವಿಸುವುದಿಲ್ಲ. ಎಲ್‌ಎಚ್ ವೃಷಣದ ಲೀಡಿಗ್ ಕೋಶಗಳ ಮೇಲೆ ವರ್ತಿಸುತ್ತದೆ, ಮತ್ತು ಅವು ಟೆಸ್ಟೊಸ್ಟಿರೋನ್ ಎಂಬ ಹಾರ್ಮೋನನ್ನು ಸ್ರವಿಸುವಂತೆ ಮಾಡುತ್ತವೆ. ಟೆಸ್ಟೋಸ್ಟಿರೋನ್ ಪುರುಷರಲ್ಲಿ ಎಲ್ಲ ಆನುಷಂಗಿಕ ಲೈಂಗಿಕ ರಕ್ಷಣೆಗಳಿಗೂ ಕಾರಣ.

ಪಿಟ್ಯೂಯಿಟರಿ ಗ್ರಂಥಿ ಮಿದುಳಿನ ಹೈಪೊತೆಲಮಸ್ ಭಾಗದಿಂದ ನರ ಮತ್ತು ಹಾರ್ಮೋನುಗಳ ಮೂಲಕ ಪ್ರಭಾವಿತವಾಗುತ್ತದೆ, ಮತ್ತು ಅನುಗುಣವಾಗಿ ತನ್ನ ಹಾರ್ಮೋನುಗಳನ್ನು ಉತ್ಪಾದಿಸುತ್ತದೆ. ಹೈಪೊತೆಲಮಸ್ ದೇಹದ ವಿವಿಧ ಜ್ಞಾನೇಂದ್ರಿಯಗಳಿಂದ ಮಾಹಿತಿಗಳನ್ನು ಪಡೆದು ಅವಕ್ಕೆ ತಕ್ಕಂತೆ ಪಿಟ್ಯೂಯಿಟರಿಯನ್ನು ಪ್ರಭಾವಿಸಬಹುದು. ಆದ್ದರಿಂದಲೇ ಪರಿಸರದ ಅನೇಕ ಆಗುಹೋಗುಗಳಿಂದ ಪ್ರಜನನಕ್ರಿಯೆಯಲ್ಲಿ ವ್ಯತ್ಯಾಸಗಳು ಕಂಡುಬರುವುದು.

ಪ್ರಜನನ ಕ್ರಿಯೆಯ ಐಚ್ಛಿಕ ನಿಯಂತ್ರಣ : ಎಸ್ಟ್ರೋಜನ್, ಪ್ರೊಜೆಸ್ಟಿರೋನುಗಳು ಪಿಟ್ಯೂಯಿಟರಿಯ ಮೇಲೆ ಹಿಮ್ಮುಖ ಹಾಗೂ ಶಾಮಕ ಪ್ರಭಾವವನ್ನು ಹೊಂದಿವೆ. ಪಿಟ್ಯೂಯಿಟರಿ ಕಾರ್ಯಾಚರಣೆಯನ್ನು ಹೀಗೆ ಶಮನ ಮಾಡಿ ಅದರಲ್ಲಿ ಎಫ್‌ಎಸ್‌ಎಚ್ ಮತ್ತು ಎಲ್‌ಎಚ್‌ಗಳ ಸ್ರಾವ ಆಗದಂತೆ ಮಾಡಿದರೆ ಅಂಡಾಶಯ ಚಕ್ರವನ್ನು ನಿಲ್ಲಿಸಬಹುದು. ಹಾಗೆಯೇ ಋತುಚಕ್ರವನ್ನೂ ನಿಲ್ಲಿಸಬಹುದು. ಎಸ್ಟ್ರೊಜೆನ್ ಪ್ರೊಜೆಸ್ಟಿರೋನುಗಳನ್ನು ಸೇವಿಸಿಕೊಂಡು ಇಚ್ಛೆ ಬಂದಷ್ಟು ಕಾಲ ಈ ಚಕ್ರಗಳನ್ನು ಸ್ಥಗಿತಗೊಳಿಸಿಕೊಂಡಿರಬಹುದು. ಅಂದರೆ, ಗರ್ಭ ತಾಳುವ ಪ್ರಮೇಯವನ್ನು ಇಚ್ಛೆ ಬಂದಷ್ಟು ಕಾಲ ನಿಲ್ಲಿಸಬಹುದು. ಋತುಸ್ರಾವವನ್ನು ಇಚ್ಛೆ ಬಂದಷ್ಟು ಕಾಲ ಮುಂದೂಡಬಹುದು. ಜನ ಈ ಸೌಕರ್ಯವನ್ನು ಸು. 1950 ರಿಂದ ಬಳಸಿಕೊಂಡು ಪ್ರಜನನ ಕ್ರಿಯೆಯನ್ನು ಕೃತಕವಾಗಿ ನಿಯಂತ್ರಿಸಿಕೊಳ್ಳುವುದು ರೂಢಿಗೆ ಬಂದಿದೆ. ಮುಖ್ಯವಾಗಿ ಸಂತಾನ ನಿಯಂತ್ರಣಕ್ಕಾಗಿ ಈ ಕ್ರಮವನ್ನು ಅನುಸರಿಸುತ್ತಾರೆ.

ಅಂಡಾಣು ಬಿಡುಗಡೆ ಆದ 12–24 ಗಂಟೆಗಳ ಹಿಂದುಮುಂದಿನಲ್ಲಿ ವಿಸರ್ಜಿಸಲ್ಪಟ್ಟ ವೀರ್ಯಾಣುಗಳನ್ನು ಅದು ಸಂಧಿಸಿದರೆ ನಿಷೇಚನೆ ಸಂಭವವಿದೆ. ಆ ಅವಧಿಯಲ್ಲಿ ಸಂಭೋಗವಾಗದಿದ್ದರೆ ನಿಷೇಚನೆ ಆಗುವುದಿಲ್ಲ. ಆದರೆ, ಅಂಡಾಣು ಬಿಡುಗಡೆ ಆಗುವುದು ಯಾವಾಗ ಎಂದು ಪತ್ತೆ ಹಚ್ಚುವುದು ಕಷ್ಟ.. ಅಂಡಾಣು ಬಿಡುಗಡೆ ಆದ ಎರಡು ವಾರಗಳ ತರುವಾಯ ಋತುಸ್ರಾವವಾಗುವುದು. ಆದರೆ, ಮುಂದಿನ ಋತುಸ್ರಾವ ನಿರೀಕ್ಷೆ ಇರುವ ದಿನಕ್ಕೆ 14 ದಿವಸಗಳ ಹಿಂದೆ ಅಂಡಾಣುವಿನ ಬಿಡುಗಡೆ ಆಗುವುದು ಖಚಿತ. ಆದ್ದರಿಂದ, ಆ ದಿವಸವನ್ನು ಲೆಕ್ಕ ಹಾಕಿ ತಿಳಿದು ಅದರ ಆಚೀಚೆಗೆ ನಾಲ್ಕು ದಿವಸಗಳಲ್ಲಿ ಅಂಡಾಣು ಬಿಡುಗಡೆ ಆಗುತ್ತದೆಂದು ನಿರೀಕ್ಷಿಸಬಹುದು. ಆ ಎಂಟು ದಿವಸಗಳ ಕಾಲ ಸಂಭೋಗವನ್ನು ವರ್ಜಿಸಿದರೆ ಗರ್ಭ ತಾಳುವ ಸಂಭವ ಕಡಿಮೆ. ಆ ಅವಧಿ ಬಿಟ್ಟು ರಜೋಚಕ್ರದ ಮಿಕ್ಕ ದಿವಸಗಳಲ್ಲಿ ಸಂಭೋಗಿಸಿದರೂ ಗರ್ಭಸ್ಥಿತಿ ಉಂಟಾಗಲಾರದು ಎಂಬ ನಂಬಿಕೆಯಿಂದ ಆ ದಿವಸಗಳನ್ನು ರಕ್ಷಾಕಾಲ (ಸೇಫ್ ಪೀರಿಯಡ್) ಎನ್ನಲಾಗಿದೆ. ಆದರೆ, ಮುಂದಿನ ಋತುಸ್ರಾವ ಇಂಥದೇ ದಿವಸ ಪ್ರಾರಂಭವಾಗುತ್ತದೆ ಎಂದು ಕರಾರುವಾಕ್ಕಾಗಿ ಹೇಳಲಾಗುವುದಿಲ್ಲ. ಋತುಚಕ್ರ ಕ್ರಮಬದ್ಧವಾಗಿರುವವರಲ್ಲಿ ಕೂಡ ಮಾಮೂಲು ಅವಧಿ ಮುಗಿದಾಗ ಋತುಸ್ರಾವ ಕಟ್ಟುನಿಟ್ಟಾಗಿ ಇಂಥದೇ ದಿನ ಪ್ರಾರಂಭವಾಗುತ್ತದೆ ಎಂದು ಹೇಳಲಾಗದು. ಒಂದೆರಡು ದಿವಸ ಹಿಂದುಮುಂದಾಗಬಹುದು. ಆದ್ದರಿಂದ, ಲೆಕ್ಕ ತಲೆಕೆಳಗಾಗಿ ರಕ್ಷಾಕಾಲ ಸಂಭೋಗದಿಂದಲೂ ಗರ್ಭಾವಸ್ಥೆ ಉಂಟಾಗಿರುವ ಸಂದರ್ಭಗಳು ಅನೇಕ ಇವೆ.

ರಕ್ಷಾಕಾಲವನ್ನು ಪತ್ತೆ ಮಾಡಲು ಇನ್ನೊಂದು ಕ್ರಮವಿದೆ. ರಜಸ್ರಾವ ನಿಂತ ಬಳಿಕ ಪ್ರತಿದಿನವೂ ಬೆಳಗ್ಗೆ ಹಾಸಿಗೆ ಬಿಟ್ಟೇಳುವುದಕ್ಕೆ ಮುನ್ನ ದೇಹೋಷ್ಣತೆಯನ್ನು ಗುರುತಿಸುತ್ತಾ ಬಂದರೆ ಅದು ಯಾವುದೋ ಒಂದು ವಿಶಿಷ್ಟ ಮಟ್ಟಕ್ಕಿರುತ್ತದೆ. ಇದು ವೈಯುಕ್ತಿಕವಾಗಿದ್ದು, ಅಂಡಾಣು ಬಿಡುಗಡೆ ಆದ ಮೇಲೆ ದೇಹೋಷ್ಣತೆ ಸು. $0.5^0$ ಸೆ ನಷ್ಟು ಏರಿ ಮುಂದೆ ರಜಸ್ರಾವವಾಗುವ ತನಕ ಪ್ರತಿದಿನವು ಅದೇ ಏರುಮಟ್ಟದಲ್ಲಿರುತ್ತದೆ. ಆದ್ದರಿಂದ, ಹೀಗೆ ದೇಹೋಷ್ಣತೆ ಏರಿದ 3–4 ದಿವಸಗಳ ಕಾಲ ಸಂಭೋಗ ಮಾಡದಿದ್ದರೆ ಗರ್ಭ ತಾಳುವುದಿಲ್ಲ ಎಂದು ತರ್ಕಿಸಿ ಆ ರೀತಿ ಅನುಸರಿಸುವುದು ಇದೆ. ಆದರೆ, ಆ ಅವಧಿಯಲ್ಲಿ ಕಾರಣಾಂತರದಿಂದ ಸ್ತ್ರೀ ಜ್ವರಪೀಡಿತಳಾಗಿದ್ದರೆ ಈ ಕ್ರಮವನ್ನು ಅನುಸರಿಸಲು ಅಸಾಧ್ಯ. ಬೇರೆ ಸಂದರ್ಭಗಳಲ್ಲಿ ಈ ಕ್ರಮ ಗರ್ಭನಿರೋಧಕವಾಗಿರುವುದು ಅನುಮಾನ. ಏಕೆಂದರೆ ದೇಹೋಷ್ಣತೆ ಏರಿದ ದಿನದ ಹಿಂದಿನ ರಾತ್ರಿ ಸಂಭೋಗಿಸಿದ್ದರೆ ಗರ್ಭತಾಳುವ ಸಂಭವ ಇದ್ದೇ ಇದೆ. ಆದರೆ, ಈ ಕ್ರಮ ಮೇಲಿನ ಕ್ರಮಕ್ಕಿಂತ ಉತ್ತಮ. ಎರಡು ಕ್ರಮಗಳನ್ನು ಜೋಡಿಸಿ ರಕ್ಷಾಕಾಲವನ್ನು ನಿರ್ಧರಿಸುವುದು ಯುಕ್ತ. ***

**ಪ್ರಜನನಾಂಗಗಳು:** ಜೀವಿಗಳು ಪುನರುತ್ಪತ್ತಿಯಾಗಿ ಅವುಗಳ ಸಂಖ್ಯೆ ವೃದ್ಧಿಯಾಗುವ ಕ್ರಿಯೆಗಳಲ್ಲಿ ಬಳಸುವ ಅಂಗಗಳು. ಈ ಕ್ರಿಯೆಯಲ್ಲಿ ಎರಡು ರೀತಿಯ ಲಿಂಗಗಳಿವೆ. ಲೈಂಗಿಕ ಪ್ರಜನನ ನಡೆಸುವ ಜೀವಿಗಳಲ್ಲಿ ಗಂಡು ಹಾಗು ಹೆಣ್ಣುಗಳೆಂಬ ಎರಡು ಲಿಂಗಗಳಿವೆ. ಈ ಎರಡು ಲಿಂಗಗಳು ಒಂದೇ ಜೀವಿಯಲ್ಲಿರಬಹುದು (ದ್ವಿಲಿಂಗಿ) ಅಥವಾ ಬೇರೆ ಬೇರೆ ಜೀವಿಯಲ್ಲಿರಬಹುದು (ಏಕಲಿಂಗಿ). ಹೆಣ್ಣಿನ ಲಿಂಗಾಂಗಗಳು ಅಂಡಾಶಯ (ಓವರಿ), ಜನನ ನಾಳಗಳು (ಓವಿಡಕ್ಟ್), ಗರ್ಭಾಶಯ (ಯುಟೆರಸ್) ಇತ್ಯಾದಿ. ವೃಷಣ, ಜನನ ನಾಳಗಳು ಮತ್ತು ಜನನಾಂಗ (ಶಿಶ್ನ) ಗಳು ಗಂಡಿನ ಲಿಂಗಾಂಗಗಳು.

ಲೈಂಗಿಕ ಪ್ರಜನನದಲ್ಲಿ ಪ್ರಜನನಾಂಗಗಳಿಗೆ ಮಹತ್ವದ ಪಾತ್ರವಿದೆ. ಅವುಗಳ ಕೋಶಗಳು ಸಂಖ್ಯಾಕ್ಷೀಣ ವಿಭಜನೆಯ (ಮಿಯೊಸಿಸ್) ಮೂಲಕ ಲಿಂಗಾಣುಗಳನ್ನು ಉತ್ಪಾದಿಸುತ್ತವೆ. ಈ ಲಿಂಗಾಣುಗಳಲ್ಲಿ ತಂದೆ ಹಾಗೂ ತಾಯಿಯ ಗುಣಗಳನ್ನು ಹೊಂದಿದ ವರ್ಣತಂತುಗಳಿರುವುದರಿಂದ ಅವು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಗುಣಗಳನ್ನು ಹೊತ್ತೊಯ್ಯುವ ವಾಹಕಗಳಂತೆ ಕೆಲಸ ಮಾಡುತ್ತವೆ.

ಸೂಕ್ಷ್ಮವಾದ ಏಕಕೋಶಜೀವಿಗಳಲ್ಲಿ, ಕೆಲವು ಬ್ಯಾಕ್ಟೀರಿಯಾಗಳಲ್ಲಿ ನಿರ್ಲಿಂಗ ಪ್ರಜನನದ ಜೊತೆಗೆ ಲೈಂಗಿಕ ಪ್ರಜನನವು ಕಂಡು ಬರುತ್ತದೆ. ಈ ಸಂದರ್ಭದಲ್ಲಿ ಇಡೀ ಕೋಶವೇ ಪ್ರಜನನ ಕ್ರಿಯೆಯಲ್ಲಿ ಭಾಗವಹಿಸುತ್ತದೆ (ಏಕಕೋಶಜೀವಿಗಳಲ್ಲಿ ಬೆಳವಣಿಗೆಯ ಅನಂತರ ಕೋಶ ವಿಭಜನೆಯಾಗುವುದೇ ಪ್ರಜನನ). ಇನ್ನು ಕೆಲವು ಏಕಕೋಶಜೀವಿಗಳಲ್ಲಿ ಸಮಲಿಂಗಾಣುಗಳು (ಐಸೋಗ್ಯಾಮೀಟ್ಸ್), ಹಾಗೂ ಅಸಮಲಿಂಗಾಣು (ಅನೈಸೋಗ್ಯಾಮೀಟ್ಸ್) ಗಳು ಉದ್ಭವಿಸುತ್ತವೆ. ಈ ಲಿಂಗಾಣುಗಳು ಹಾರ್ಮೋನ್‌ಗಳೆಂಬ ಲಿಂಗಾಕರ್ಷಕ ವಸ್ತುಗಳನ್ನು ಸ್ರವಿಸುತ್ತವೆ. ಕೆಳಸ್ತರದ ಬಹುಕೋಶ ಜೀವಿಗಳಲ್ಲಿ ಅನೇಕ ವಿಧದ ನಿರ್ಲಿಂಗ ಪ್ರಜನನದ (ಜೆಮ್ಯೂಲ್‌ಗಳಿಂದ, ಮೊಳಕೆಯಿಂದ –ಬಡಿಂಗ್– ಅನಿಷೇಕ ಜನನ) ಜೊತೆಯಲ್ಲಿ ಲೈಂಗಿಕ ಪ್ರಜನನವು ನಡೆಯುತ್ತದೆ. ಸ್ಪಂಜು ಪ್ರಾಣಿಗಳಲ್ಲಿ ವಿಶೇಷ ಪ್ರಜನನಾಂಗಗಳಿಲ್ಲ. ಆದರೆ, ದೇಹದ ಪದರದಲ್ಲಿರುವ ಕೆಲವು ಕೋಶಗಳು ಮಾರ್ಪಾಡಾಗಿ ಲಿಂಗಾಣುಗಳಾಗುತ್ತವೆ. ಅವುಗಳ ದೇಹದ ಕಾಲುವೆ ವ್ಯೂಹದ ಮೂಲಕ ವೀರ್ಯಾಣುಗಳು ಒಂದು ಸ್ಪಂಜಿನ ದೇಹದಿಂದ ಇನ್ನೊಂದರ ದೇಹ ಸೇರಿ, ಅಲ್ಲಿ ಪೂರ್ಣ ಬೆಳವಣಿಗೆ ಹೊಂದಿದ ಅಂಡಾಣುವಿನ ಜೊತೆ ಸಂಯೋಗ ಹೊಂದಿ ಯುಗ್ಮಕೋಶ (ಜೈಗೋಟ್) ವಾಗುತ್ತದೆ. ನಿಶ್ಚಲ ಜಲಚರಿಗಳಾದ ಸ್ಪಂಜುಗಳ ಜೀವನ ಚಕ್ರದಲ್ಲಿ ಲಾರ್ವ (ಡಿಂಬ) ಚಲಿಸುವುದರಿಂದ ಈ ಪ್ರಾಣಿಗಳಿಗೆ ಹೊಸ ಪರಿಸರವನ್ನು ಹುಡುಕಿಕೊಳ್ಳಲು ಸಹಾಯ ಮಾಡುತ್ತವೆ. ಕುಟುಕು ಕಣವಂತಗಳಲ್ಲಿ ಋತುಮಾನಕ್ಕನುಗುಣವಾಗಿ ತಾತ್ಕಾಲಿಕ ಜನನ ಗ್ರಂಥಿಗಳ ಬೆಳವಣಿಗೆಯಾಗುತ್ತದೆ. ಅಂಡಾಶಯ ಹಾಗೂ ವೃಷಣಗಳೆರಡೂ ದೇಹ ಹೊರ ಪದರದಲ್ಲಿ ಮಾರ್ಪಾಡಾದ ಕೆಲವು ಕೋಶಗಳಿಂದಾಗುತ್ತವೆ. ಲಿಂಗಾಣುಗಳು ಒಂದೇ ಸಮಯದಲ್ಲಿ ಬೆಳೆಯದ ಕಾರಣ ಇವುಗಳಲ್ಲಿ ಅಡ್ಡ ನಿಷೇಚನೆ (ಕ್ರಾಸ್ ಫರ್ಟಿಲೈಷನ್) ಕಂಡು ಬರುತ್ತದೆ. ಈ ಪ್ರಾಣಿಗಳಲ್ಲಿ ನಿರ್ಲಿಂಗ ಸಂತತಿ ಹಾಗೂ ಲೈಂಗಿಕ ಸಂತತಿಗಳೆರಡೂ ಇದ್ದು, ಇವುಗಳ ಪ್ರಜನನ ಒಂದಾದ ನಂತರ ಮತ್ತೊಂದರಂತೆ ನಡೆದಾಗ ಮಾತ್ರ ಅದರ ಜೀವನ ಚಕ್ರ ಪೂರ್ತಿಯಾಗುವುದು. ಇದನ್ನು ಸಂತತಿ ಪರಸ್ಪರತೆ ಎನ್ನುತ್ತಾರೆ. ಕೆಲವು ಚಪ್ಪಟೆ ಹುಳುಗಳಲ್ಲಿ ಪ್ರಜನನಾಂಗಗಳು ತಾತ್ಕಾಲಿಕವಾಗಿ ಉದ್ಭವವಾಗಿ ಲಿಂಗಾಣುಗಳನ್ನು ಉತ್ಪಾದಿಸುತ್ತವೆ. ಇನ್ನುಳಿದುವುಗಳಲ್ಲಿ ಅಂಡಾಶಯ ಹಾಗು ವೃಷಣಗಳು ಸರಿಯಾಗಿ ಬೆಳೆದು, ಅಂಡಾಶಯದಿಂದ ಅಂಡಾಣುಗಳು ಹೊರಬರಲು ಅಂಡಾಣುವಾಹಕ ನಾಳಗಳಿವೆ. ಸಂಭೋಗವಾದಾಗ ಅಂಡಾಣುವಾಹಕ ನಾಳವನ್ನು ಸೇರಿದ ವೀರ್ಯಾಣುಗಳು ಸಂಗ್ರಹವಾಗಲು ವೀರ್ಯಾಣು ಧಾರಕವಿದೆ. ಪ್ರಜನನಾಂಗಗಳೊಡನೆ ಯೋಕ್ ಗ್ರಂಥಿಗಳು, ವೈಟೆಲಿನ್ ಗ್ರಂಥಿಗಳು ಮತ್ತು ಕವಚ ಗ್ರಂಥಿಗಳು ಇದ್ದು, ಅವು ನಿಷೇಚನೆಗೊಂಡ ಮೊಟ್ಟೆಯ ಹೊರ ಕವಚವನ್ನು ಸ್ರವಿಸುತ್ತವೆ. ಗಂಡು ಲಿಂಗಾಂಗಗಳಲ್ಲಿ ಹಲವು ವೃಷಣಗಳಿದ್ದು, ಪ್ರತಿಯೊಂದರಿಂದ ಹೊರಟ ವೀರ್ಯಾಣು ವಾಹಕ ನಾಳಗಳೆಲ್ಲ ಒಟ್ಟು ಸೇರಿ ಆಗುವುದೇ ವೀರ್ಯನಾಳ. ಈ ನಾಳದ ದಾರಿಯಲ್ಲಿ ಪ್ರಾಸ್ಟೇಟ್ ಎಂಬ ಗ್ರಂಥಿಗಳಿದ್ದು, ಅವು ವೀರ್ಯ ದ್ರವವನ್ನು ಸ್ರವಿಸುತ್ತವೆ. ಕೆಲವು ಪ್ರಭೇದಗಳಲ್ಲಿ ಸ್ಖಲನನಾಳದ ತುದಿಯಲ್ಲಿ ಸಂಭೋಗಕ್ಕೆ ಅಗತ್ಯವಾದ ಶಿಶ್ನವಿದೆ. ದುಂಡು ಹುಳುಗಳು ಏಕಲಿಂಗಿಗಳು. ಅವುಗಳಲ್ಲಿ ಲೈಂಗಿಕ ದ್ವಿರೂಪತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಇವುಗಳ ಜನನಾಂಗಗಳು ಸರಳವಾಗಿ ಉದ್ದವಾದ ಕೊಳವೆಯ ಆಕಾರದಲ್ಲಿವೆ. ಜನನ ಗ್ರಂಥಿಗಳಿಂದ ಹೊರಟ ಲಿಂಗಾಣುವಾಹಕ ನಾಳಗಳು ಉದ್ದವಾಗಿ ಸುರುಳಿಯಾಗಿವೆ. ಅಂಡಾಣುವಾಹಕ ನಾಳದ ಆದಿಭಾಗವು ಗರ್ಭಾಶಯವಾಗಿ ಮಾರ್ಪಾಡಾಗಿ, ಅಲ್ಲಿ ನಿಷೇಚನೆಗೊಂಡ ಅಂಡಾಣುಗಳು ಸಂಗ್ರಹವಾಗಿರುತ್ತವೆ. ಪರಾವಲಂಬಿ ಜೀವನಕ್ಕೆ ಹೊಂದಾಣಿಕೆಯಾಗಿ ಪ್ರತಿ ಹೆಣ್ಣು ದುಂಡು ಹುಳುವು ಒಂದು ಬಾರಿಗೆ ಲಕ್ಷಾಂತರ ಮೊಟ್ಟೆಗಳನ್ನು ಇಡುತ್ತವೆ. ಚಪ್ಪಟೆ ಹುಳುಗಳ ಜೀವನ ಚಕ್ರ ಸಂಕೀರ್ಣವಾಗಿದ್ದು, ಒಂದಕ್ಕಿಂತ ಹೆಚ್ಚು ಡಿಂಬಗಳಿರಬಹುದು. ವಲಯ ವಂತಗಳಲ್ಲಿ, ಪಾಲಿಕೀಟ ಎಂಬ ವರ್ಗವನ್ನು ಹೊರತು ಪಡಿಸಿ, ಬೇರೆಲ್ಲವು ದ್ವಿಲಿಂಗಿಗಳು. ಇವುಗಳಲ್ಲಿ ಲಿಂಗಾಣುಗಳು ಇಡೀ ಶರೀರವನ್ನು ಆವರಿಸಿಕೊಂಡಿದ್ದು, ಶರೀರವನ್ನು ಛಿದ್ರಗೊಳಿಸಿ ಬಿಡುಗಡೆಯಾಗುತ್ತವೆ. ಹಲವು ಪ್ರಭೇದಗಳಲ್ಲಿ ಗಮನಾರ್ಹ ಮಾರ್ಪಾಡುಗಳಾಗುತ್ತವೆ. ಅವುಗಳ ಪ್ರಜನನ ಚಟುವಟಿಕೆ ಚಂದ್ರಮಾನ ಚಕ್ರಗಳನ್ನು ಅವಲಂಬಿಸಿವೆ. ನೀರೀಸ್ ಎಂಬ ಪ್ರಾಣಿಯಲ್ಲಿ ತಲೆಯೇ ಇಲ್ಲದ ದೇಹದ ಅರ್ಧಭಾಗವನ್ನು ಮಾತ್ರ ಹೊಂದಿದ ಗಂಡು ಹಾಗೂ ಹೆಣ್ಣುಗಳು ತಮ್ಮ ಪ್ರಣಯವನ್ನು ಪೂರೈಸುತ್ತವೆ. ಎರೆಹುಳುಗಳು ಹಾಗು ಜಿಗಣೆಗಳು ದ್ವಿಲಿಂಗಿಗಳು ಮತ್ತು ಸಂಭೋಗದಲ್ಲಿ ತೊಡಗಿದ ಜೋಡಿ ಈ ಸಮಯದಲ್ಲಿ ಪರಸ್ಪರ ವೀರ್ಯಾಣು ವಿನಿಮಯ ಮಾಡಿಕೊಳ್ಳುತ್ತವೆ. ಅವುಗಳ ಪ್ರಜನನಾಂಗ ದ್ವಾರಗಳು ಇದಕ್ಕೆ ಹೊಂದುವಂತೆ ಇವೆ.

ವಲಯವಂತಗಳಿಗೆ ಸಮೀಪ ಸಂಬಂಧಿಗಳಾದ ಮೃದ್ವಂಗಿಗಳ ಶರೀರವು ಮೃದುವಾಗಿದ್ದು, ಹೆಚ್ಚಿನವುಗಳಲ್ಲಿ ದೇಹದ ಸುತ್ತ ಅಥವಾ ಒಳಗೆ ಶಂಖ ಅಥವಾ ಚಿಪ್ಪು ಇರುತ್ತದೆ. ಉದರಪಾದಿಗಳು (ಗಾಸ್ಟ್ರೊಪೋಡ್ಸ್) ಸಾಮಾನ್ಯವಾಗಿ ದ್ವಿಲಿಂಗಿಗಳು ಮತ್ತು ಶಿರಪಾದಿಗಳು ಏಕಲಿಂಗಿಗಳು. ವೀರ್ಯಾಣುಗಳು ಒಂದು ಕವಚದಲ್ಲಿ ಸಂಗ್ರಹವಾಗಿದ್ದು ಸಂಭೋಗವಾದಾಗ ಈ ಕವಚಗಳು ಹೆಣ್ಣಿನ ಜನನಾಂಗಗಳಿಗೆ ವರ್ಗಾವಣೆಯಾಗುತ್ತವೆ.

ಸಂಧಿಪದಿಗಳ ಪ್ರಜನನಾಂಗಗಳಲ್ಲಿ ಅಸಂಖ್ಯಾತ ವೈವಿಧ್ಯತೆ ಇದೆ. ಅವು ಹೆಚ್ಚಾಗಿ ಏಕಲಿಂಗಿಗಳು ಮತ್ತು ಲೈಂಗಿಕ ರೀತಿಯಿಂದ ಪ್ರಜನನ ನಡೆಸುತ್ತವೆ. ಇವುಗಳಲ್ಲಿ ಜನನ ಗ್ರಂಥಿಗಳು ಜೊತೆಯಾಗಿವೆ. ವೀರ್ಯಾಣುಗಳು ವೀರ್ಯಾಣುಧಾರದ ರೂಪದಲ್ಲಿ ಹೆಣ್ಣಿನ ಜನನಾಂಗವನ್ನು ಸೇರುತ್ತದೆ. ಕೆಲವು ಪರಾವಲಂಬಿ ಸಂಧಿಪದಿಗಳಲ್ಲಿ ದ್ವಿಲಿಂಗತೆ ಕಂಡುಬರುವುದು. ಅವುಗಳಲ್ಲಿಯ ಬಾಹ್ಯ ನಿಷೇಚನದ ಮೂಲಕ ಪ್ರಜನನ, ನಿಶ್ಚಲ ಜೀವನಕ್ಕೆ ಪ್ರಕೃತಿ ಮಾಡಿಕೊಂಡ ಮಾರ್ಪಾಟು. ಸ್ಯಾಕ್ಯುಲೈನಾ ಎಂಬ ಪರಾವಲಂಬಿ ಜೀವಿ ಏಡಿಯ ಶರೀರವನ್ನು ಹೊಕ್ಕು ಎಲ್ಲಾ ಭಾಗಕ್ಕೂ ಆವರಿಸಿಕೊಳ್ಳುತ್ತದೆ. ಇದರ ಪರಿಣಾಮ ಏಡಿಯ ಲಿಂಗ ಬದಲಾವಣೆಯಲ್ಲಿ ಪರ್ಯವಸಾನಗೊಳ್ಳುತ್ತದೆ. ಹೆಣ್ಣು ಏಡಿ ಗಂಡಾಗುತ್ತದೆ. ಸೃಷ್ಟಿಯಲ್ಲಿ ಅತ್ಯಂತ ಸಫಲ ಜೀವಿಗಳೆನಿಸಿಕೊಂಡ ಕೀಟಗಳಲ್ಲಿ ಅಂಡಾಶಯವು ಕೆಲವು ಸಂಚಿಗಳಾಗಿ ವಿಂಗಡವಾಗಿದೆ. ಮುಂಭಾಗದ ತುದಿಯಲ್ಲಿ ಉತ್ಪತ್ತಿಯಾದ ಅಂಡಾಣು ಜನಕ ಕೋಶಗಳು ಮತ್ತೊಂದು ತುದಿಯನ್ನು ತಲುಪುವ ವೇಳೆಗೆ ಅಂಡಾಣು ನಿಷೇಚನೆಗೆ ಸಿದ್ಧವಾಗಿರುತ್ತದೆ. ಅಂಡಾಶಯದ ಹಿಂಭಾಗದಲ್ಲಿರುವ ಪ್ರಜನನ ಕೋಣೆಗೆ ಹೊಂದಿಕೊಂಡಂತೆ ವೀರ್ಯಾಣು ಪಾತ್ರೆ ಹಾಗೂ ಮೊಟ್ಟೆಯನ್ನು ರಕ್ಷಿಸುವ ಕವಚವನ್ನು ಸ್ರವಿಸುವ ಗ್ರಂಥಿಗಳಿವೆ. ದೇಹದ ರಚನೆ ಸಂಭೋಗಕ್ಕೆ ಹಾಗೂ ಮೊಟ್ಟೆ ಇಡಲು ಅನುಕೂಲವಾಗಿದೆ. ಗಂಡು ಕೀಟಗಳಲ್ಲಿ ಒಂದು ಜೊತೆ ವೃಷಣ, ವೀರ್ಯಾಣು ನಾಳಗಳು, ವೀರ್ಯಾಣು ಕೋಶಗಳು ಹಾಗೂ ಸ್ಖಲನ ನಾಳಗಳಿದ್ದು, ವೀರ್ಯಾಣು ಸಾಗಾಣಿಕೆ ಹಾಗೂ ಸಂಭೋಗಕ್ಕೆ ಅಗತ್ಯವಾದ ಮಾರ್ಪಾಟುಗಳಿವೆ. ಜೇಡ ಹಾಗೂ ಚೇಳುಗಳಲ್ಲಿ ನಾಳರೂಪದ ಪ್ರಜನನಾಂಗಗಳಿವೆ. ಸಂಧಿಪದಿಗಳಲ್ಲಿ ವಿಸ್ತೃತ ಹಾಗೂ ವಿಸ್ಮಯಕಾರವಾದ ಪ್ರಣಯದ ಅನಂತರ ಸಂಭೋಗ ನಡೆಯುವುದು ಸಾಮಾನ್ಯ. ಹಾಗೇ ಅನಿಷೇಕ ಜನನವೂ ಕಂಡುಬರುತ್ತದೆ. ಪ್ರಜನನ ಕಾರ್ಯದಲ್ಲಿನ ಈ ವೈವಿಧ್ಯತೆ ಕೀಟಗಳ ಸಫಲತೆಗೆ ಒಂದು ಮುಖ್ಯ ಕಾರಣ. ಸಮುದ್ರವಾಸಿಗಳಾದ ಕಂಟಕಚರ್ಮಿಗಳಲ್ಲಿ ಕೆಲವು ನಿಧಾನವಾಗಿ ತೆವಳಬಲ್ಲುವು ಮತ್ತು ಕೆಲವು ನಿಶ್ಚಲ ಜೀವಿಗಳು. ಇವು ಸಾಮಾನ್ಯವಾಗಿ ಏಕಲಿಂಗಿಗಳಾದರೂ ಹೊರಗಿನಿಂದ ಗುರುತಿಸಲು ಆಗುವುದಿಲ್ಲ. ಸರಳವಾದ ಜನನೇಂದ್ರಿಯಗಳು ದೇಹದ ಐದು ಬಾಹುಗಳಿಂದ ಹೊರಟು ನೀರಿನಲ್ಲಿ ನೇತಾಡುತ್ತಿರುತ್ತವೆ. ಅಂಡಾಶಯ ಮತ್ತು ವೃಷಣದಿಂದ ಉತ್ಪತ್ತಿಯಾದ ಲಿಂಗಾಣುಗಳು ನಾಳಗಳ ಮೂಲಕ ಹೊರಬೀಳುತ್ತವೆ. ಒಂದು ಹೆಣ್ಣು ನಕ್ಷತ್ರ ಮೀನು ಒಂದು ಘಂಟೆಗೆ ಒಂದೂಕಾಲು ದಶಲಕ್ಷ ಮೊಟ್ಟೆಗಳನ್ನಿಡಬಲ್ಲದು. ಅಂಡಾಣು ವೀರ್ಯಾಣುಗಳ ಮಿಲನದಿಂದ ಉಂಟಾದ ಯುಗ್ಮಕೋಶ ಬೆಳವಣಿಗೆ ಹೊಂದಿ ಈಜಬಲ್ಲ ಡಿಂಬಗಳು ಉದ್ಭವಿಸುತ್ತವೆ.

ಅತ್ಯಂತ ಕನಿಷ್ಠ ಸ್ತರದ ಕಶೇರುಕಗಳಲ್ಲಿ (ಪ್ರೊಟೊಕಾರ್ಡೆಟ್ಸ್) ಪ್ರಜನನ ವಿಧಾನ ಅಕಶೇರುಕಗಳನ್ನು ಹೋಲುತ್ತದೆ. ಜನನೇಂದ್ರಿಯಗಳು ಶರೀರದ ಒಳಭಾಗದ ಅವಕಾಶ (ಸಿಲೋಮ್)ದಲ್ಲಿ ಬೆಳೆಯುತ್ತವೆ. ಲಿಂಗಾಣುಗಳು ಮೊದಲು ಈ ಅವಕಾಶದ ಕೋಣೆಯಲ್ಲಿ ತುಂಬಿಕೊಂಡು ಅನಂತರ ಶರೀರದೊಳಗೆ ಯಾವಾಗಲೂ ಚಲಿಸುವ ನೀರಿನ ಮೂಲಕ ಸಮುದ್ರ ಸೇರುತ್ತವೆ. ನಿಷೇಚನೆ ಮತ್ತು ಮುಂದಿನ ಬೆಳವಣಿಗೆ ನಡೆಯುವುದು ಸಮುದ್ರದಲ್ಲಿ. ಶರೀರದ ವಿಕಸನ ಮತ್ತು ವೈವಿಧ್ಯದ ಜೊತೆಗೆ ಕಶೇರುಕಗಳ ಪ್ರಜನನ ವಿಧಾನ, ಅಂಗ ರಚನೆಯಲ್ಲಿ ಬೆಳವಣಿಗೆ ಕಂಡು ಬರುತ್ತದೆ. ಕಶೇರುಕಗಳೆಲ್ಲವು ಏಕಲಿಂಗಿಗಳು. ಇವುಗಳಲ್ಲಿ

ಪ್ರಜನನಾಂಗಗಳಿಗೆ ಸಂಬಂಧಿಸಿದ ನಾಳಗಳಿವೆ. ಜನನ ಗ್ರಂಥಿಗಳು ಲಿಂಗಾಣುಗಳ ಜೊತೆಗೆ ಹಾರ್ಮೋನುಗಳನ್ನು ಸ್ರವಿಸುತ್ತವೆ. ಈ ಹಾರ್ಮೋನುಗಳು ಪ್ರಜನನ ಕ್ರಿಯೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಹೀಗಾಗಿ ಜನನಗ್ರಂಥಿಗಳ ಕಾರ್ಯ ದ್ವಿಮುಖ. ಸಾಮಾನ್ಯವಾಗಿ ಎಲ್ಲ ಕಶೇರುಕಗಳಲ್ಲಿ ಒಂದೊಂದು ಜೊತೆ ವೃಷಣ ಅಥವಾ ಅಂಡಾಶಯ ಇರುತ್ತವೆ. ಕೆಲವು ಸ್ತನಿಗಳ ಹೊರತಾಗಿ ಉಳಿದೆಲ್ಲವುಗಳಲ್ಲಿ ವೃಷಣ ದೇಹದ ಒಳಗೆ ಇರುತ್ತದೆ. ಆದರೆ ಹೆಚ್ಚಿನ ಸ್ತನಿಗಳಲ್ಲಿ ದೇಹದ ಹೊರಭಾಗದಲ್ಲಿ ಹಿಂಗಾಲಿನ ನಡುವೆ ಜೋತಾಡುವ ವೃಷಣಕೋಶದಲ್ಲಿ ಇರುತ್ತವೆ. ವೃಷಣಗಳ ಉಷ್ಣತೆ ವೀರ್ಯಾಣು ಉತ್ಪಾದನೆಯನ್ನು ನಿರ್ಧರಿಸುವುದರಿಂದ ಪ್ರಕೃತಿ ಅನುಸರಿಸಿದ ಮಾರ್ಗ ಇದು. ವೃಷಣದ ತಿರುಳಿನಲ್ಲಿ ಹಲವಾರು ವೀರ್ಯಾಣು ಜನಕ ನಾಳಗಳಿರುತ್ತವೆ. ಈ ನಾಳಗಳಲ್ಲಿ ಉತ್ಪಾದನೆಯಾದ ವೀರ್ಯಾಣುಗಳು ವೀರ್ಯಾಣುವಾಹಕ ನಾಳಗಳ ಮೂಲಕ ಹೊರಬರುತ್ತವೆ. ಕೆಲವು ಕಶೇರುಕ ಪ್ರಭೇದಗಳಲ್ಲಿ ಮೂತ್ರ ಹಾಗೂ ವೀರ್ಯ ಹೊರಬರುವುದು ಒಂದೇ ನಾಳದ ಮುಖಾಂತರ (ಉದಾ: ಮೀನುಗಳು ಹಾಗೂ ಉಭಯ ಜೀವಿಗಳು). ವೀರ್ಯಾಣುವಾಹಕ ನಾಳದ ಉದ್ದಕ್ಕೂ ಸಂಶ್ಲೇಷವಾಗುವ ಕೆಲವು ಸ್ರಾವಕಗಳು ವೀರ್ಯಾಣುಗಳಿಗೆ ಆಹಾರ ಒದಗಿಸಿ, ಅವುಗಳ ವಯೋಮಾನ ವೃದ್ಧಿಸುತ್ತದೆ. ನಾಳದ ತುದಿಯ ಕೆಲವು ಗ್ರಂಥಿಗಳು ಲೈಂಗಿಕ ಆಕರ್ಷಣೆಗೆ ಬೇಕಾದ ಫಿರೋಮೋನುಗಳನ್ನು ಸ್ರವಿಸುತ್ತವೆ. ಗಂಡು ಸ್ತನಿಗಳಲ್ಲಿ ಹಾಗೂ ಕೆಲವು ಸರೀಸೃಪಗಳಲ್ಲಿ ವೀರ್ಯ ಹಾಗೂ ವಿಸರ್ಜನ ನಾಳಗಳ ತುದಿ ಸಂಭೋಗಾಂಗವಾಗಿ (ಶಿಶ್ನ) ಮಾರ್ಪಾಡಾಗಿದೆ.







ಕಶೇರುಕಗಳ ಅಂಡಾಶಯಗಳು ಶರೀರದ ಒಳಭಾಗದಲ್ಲಿ ಜೋತಾಡುತ್ತಿರುತ್ತವೆ. ಕೆಲವು ಮೀನುಗಳಲ್ಲಿ ಇದರ ಮುಂದಿನ ಅರ್ಧಭಾಗ ಮಾತ್ರ ಕ್ರಿಯಾಶೀಲವಾಗಿದ್ದು, ಹಿಂದಿನ ಅರ್ಧಭಾಗ ಅಂಕುರಾವಸ್ಥೆಯಲ್ಲಿರುವ ವೃಷಣ. ಮುಂದಿನ ಭಾಗದ ಅಂಡಾಶಯ ಯಾವುದೇ ಕಾರಣಕ್ಕೆ ನಾಶವಾದರೆ ಆ ಮೀನು ಗಂಡಾಗಿ ಪರಿವರ್ತನೆಗೊಳ್ಳುತ್ತದೆ. ಋತುಮಾನವನ್ನವಲಂಬಿಸಿ ಪ್ರಜನನ ಮಾಡುವ ಕಶೇರುಕಗಳಲ್ಲಿ ಋತುಗಳಿಗನುಗುಣವಾಗಿ ಅಂಡಾಶಯದ ರಚನೆ ಬದಲಾಗುತ್ತದೆ. ಅಂಡಾಶಯ ತೊಗಟೆ ಹಾಗು ತಿರುಳು ಎಂಬ ಎರಡು ಭಾಗಗಳನ್ನು ಹೊಂದಿದೆ. ಇದರಲ್ಲಿ ಬೆಳವಣಿಗೆಯ ವಿವಿಧ ಹಂತದಲ್ಲಿರುವ ಅಂಡಾಣುಗಳು, ಅಂಡಾಣುಜನಕ ಕೋಶಗಳು ಇರುತ್ತವೆ. ಒಳಗಿನ ಸ್ಟ್ರೋಮಾದಲ್ಲಿ (ತಿರುಳು) ಲೈಂಗಿಕ ಕೋಶಗಳಿರುವುದಿಲ್ಲ. ಅಂಡಾಶಯ ಟೊಳ್ಳಾಗಿ ಚೀಲದಂತಿರಬಹುದು ಅಥವಾ ತಿರುಳಿನಿಂದ ತುಂಬಿರಬಹುದು. ಪ್ರತಿಯೊಂದು ಋತು ಚಕ್ರದಲ್ಲಿ ಹಲವಾರು ಅಂಡಾಣುಕೂಪಗಳು ಕಂಡು ಬರುತ್ತವೆ. ಸ್ತನಿಗಳ ಅಂಡಾಣು ಕೂಪಗಳು (ಒವೇರಿಯನ್ ಫಾಲಿಕಲ್ಸ್) ದ್ರವದಿಂದ ತುಂಬಿದ ದೊಡ್ಡ ಅವಕಾಶವೊಂದನ್ನು (ಆಂಟ್ರಮ್) ಹೊಂದಿರುತ್ತವೆ. ಬೆಳೆಯುತ್ತಿರುವ ಮೊಟ್ಟೆ ಈ ದ್ರವದಲ್ಲಿ ಮುಳುಗಿದ್ದು, ಹಲವು ಕೋಶಗಳಿಂದಾವೃತವಾಗಿರುತ್ತದೆ. ಆರಂಭದಲ್ಲಿ ಹಲವಾರು ಅಂಡಾಣುಕೂಪಗಳು ಈ ರೀತಿ ಬೆಳೆಯಲು ಆರಂಭಿಸಿದರೂ ಅವು ಯಾವ ಹಂತದಲ್ಲಿಯಾದರು ಅಪಭ್ರಂಶಗೊಳ್ಳಬಹುದಾದ್ದರಿಂದ ಸಂಪೂರ್ಣ ಪಕ್ವವಾಗುವ ಅಂಡಾಣುಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಇರುತ್ತದೆ. ಮಾನವ, ಆನೆ, ಗೊರಸು ಪ್ರಾಣಿಗಳಂತಹ ಸ್ತನಿಗಳಲ್ಲಿ ಸಾಮಾನ್ಯವಾಗಿ ಕೇವಲ ಒಂದೇ ಒಂದು ಅಂಡಾಣು ನಿಷೇಚನೆಗೆ ತಯಾರಾಗಿ ಪಕ್ವವಾಗುತ್ತದೆ. ಅಂಡಾಣುವಾಹಕ ನಾಳಗಳ ಬಾಯಿಯಲ್ಲಿರುವ ಶಿಲಕಾಂಗಗಳ ಚಲನೆ ಹಾಗೂ ನಾಳದ ಮಾಂಸಗಳ ಆಕುಂಚನದಿಂದ




Fig. 584. Aplysia : Reproductive organs [*After Eales, L.M.B. Memoirs*] A, Dissected from dorsal side ; B, Dissected from ventral side. The organs of the accessory genital mass are well separated and the internal division of the large hermaphrodite duct indicated.




ಶ್ರಿಂಪ್ – ಸಂತಾನಾಂಗ ವ್ಯೂಹ

ನಾಳವನ್ನು ಪ್ರವೇಶಿಸುತ್ತವೆ. ಮೊಟ್ಟೆಯಿಡುವ ಪ್ರಭೇದಗಳಲ್ಲಿ ನಿಷೇಚನೆ ನಂತರ ಆಹಾರಾಂಶ ಮುಂತಾದ ವಸ್ತುಗಳು ಅಂಡಾಣುವಿನ ಸುತ್ತಲು ಶೇಖರಿಸಲ್ಪಡುತ್ತವೆ. ಮರಿ ಮಾಡುವ ಜೀವಿಗಳಲ್ಲಿ ಗರ್ಭಾಶಯ (ಯುಟೆರಸ್) ಚೆನ್ನಾಗಿ ಬೆಳೆದಿರುತ್ತದೆ. ಅಂಡಾಣುವಾಹಕ ನಾಳದ ಹಿಂದಿನ ತುದಿಯಲ್ಲಿ ನಿಷೇಚನೆಗೊಂಡ ಮೊಟ್ಟೆ ಯುಗ್ಮವಾಗಿ ಗರ್ಭಾಶಯ ಸೇರಿ, ನೆಲೆಯೂರಿ (ಇಂಪ್ಲಾಂಟ್) ಅದರ ಸುತ್ತ ಭ್ರೂಣ ಪದರಗಳನ್ನು ಬೆಳೆಸಿಕೊಂಡು ಭ್ರೂಣವಾಗಿ ಬೆಳೆಯುತ್ತದೆ. ಕಶೇರುಕಗಳ ಪ್ರಜನನ ಕ್ರಿಯೆಯಲ್ಲಿ ನೆತ್ತಿ ಗ್ರಂಥಿ (ಪಿಟ್ಯುಟರಿ) ಯ ಅಂತಃ ಸ್ರಾವಕಗಳ ಪಾತ್ರ ಮಹತ್ವದ್ದಾಗಿದೆ.

ಗಂಡು ಹಾಗೂ ಹೆಣ್ಣು ಜನನೇಂದ್ರಿಯಗಳೆರಡು ಉಭಯ ಪಾತ್ರ ನಿರ್ವಹಿಸುತ್ತವೆ. ಲಿಂಗಾಣುಗಳ ತಯಾರಿಕೆಯ ಜೊತೆಗೆ ಅವು ಕೆಲವು ಅಂತಃಸ್ರಾವಕ (ಹಾರ್ಮೋನ್)




ಚೀಳು (ಹೆಣ್ಣು) ಸಂತಾನೋತ್ಪತ್ತಿ ವ್ಯೂಹ




ಲಾಡಿಹುಳಿನ ಜನನಾಂಗ

ಗಳನ್ನು ಉತ್ಪಾದಿಸುತ್ತವೆ. ಈ ಸ್ರಾವಗಳು ಲೈಂಗಿಕ ಕಾರ್ಯಕ್ಕೆ ಅಗತ್ಯವಾದ ನಾಳಗಳ ರಚನೆ, ಕಾರ್ಯಶೀಲತೆ ಹಾಗೂ ಅನುಷಂಗಿಕ ಲೈಂಗಿಕ ಗುಣಧರ್ಮಗಳಿಗೂ ಉತ್ತೇಜನಕಾರಿಯಾಗಿರುತ್ತವೆ.

ಮಾನವ ಏಕಲಿಂಗಿ ಹಾಗೂ ಇದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಸ್ತ್ರೀ ಹಾಗೂ ಪುರುಷರಿಗೆ ನಿರ್ದಿಷ್ಟ ಲಿಂಗಾಧಾರಿತವಾದ ಗುಣಗಳಿವೆ. ಭ್ರೂಣವು ತಾಯಿಯ ಗರ್ಭದಲ್ಲಿ ಬೆಳೆಯುತ್ತದೆ. ಸ್ತ್ರೀಯ ಋತುಚಕ್ರದ (28 ದಿನಗಳು) ಮಧ್ಯ ಸಮಯದಲ್ಲಿ ನಿಷೇಚನೆಯಾದರೆ ಭ್ರೂಣ ಗರ್ಭಾಶಯದಲ್ಲಿ ತಳವೂರಿ ಬೆಳೆಯುತ್ತದೆ. ನಿಷೇಚನೆಯಾಗದಿದ್ದರೆ ಮತ್ತೊಂದು ಋತುಚಕ್ರ ಪ್ರಾರಂಭವಾಗುತ್ತದೆ. (ಟಿ.ಆರ್.ಎಸ್.)

**ಪ್ರಣಯ:** ಸಂಭೋಗಕ್ಕೆ ಮತ್ತು ಸಂತಾನೋತ್ಪತ್ತಿಗೆ ಪೂರ್ವಸಿದ್ಧತೆಯಾಗಿ ಪ್ರಾಣಿಗಳು ಪ್ರದರ್ಶಿಸುವ, ಇಂದ್ರಿಯಗಳಿಗೆ ಗೋಚರವಾಗುವ ವಿಶೇಷ ರೀತಿಯ ಶ್ರೇಣೀಯ ಸಂಕೇತಗಳು, ಸನ್ನೆಗಳು ಅಥವಾ ವರ್ತನೆಗಳು. ಕೆಲವಲ್ಲಿ ಸರಳವಾಗಿದ್ದರೆ ಇನ್ನು ಕೆಲವಲ್ಲಿ ತುಂಬಾ ಸಂಕೀರ್ಣವಾಗಿರುತ್ತದೆ. ಇನ್ನೂ ಕೆಲವಲ್ಲಿ ಸಂಕೀರ್ಣ ರಾಸಾಯನಿಕಗಳಿಂದಲೋ ಶ್ರವಣ ಪ್ರಚೋದನೆಗಳಿಂದಲೋ ನಡೆಯುವ ಕ್ರಿಯೆಯಾಗಿರುತ್ತದೆ. ಪ್ರಣಯದ ಮೂಲ ಉದ್ದೇಶ ಸಂತಾನೋತ್ಪತ್ತಿ. ಅಂದರೆ ಇತರ ಉಪಯೋಗಗಳಿಲ್ಲವೆಂದಲ್ಲ. ಜೀವನ ಸಂಘರ್ಷದಿಂದ ಉದ್ಭವಿಸುವ ಹೆದರಿಕೆಯೋ ಆಕ್ರಮಣಕಾರಿ ಪ್ರವೃತ್ತಿಯೋ ಮುಂತಾದ ಘರ್ಷಣೀಯ ಮನೋಸ್ಥಿತಿಯನ್ನು ಉಪಶಮನ ಮಾಡುವುದರಲ್ಲೂ ಸಹಾಯಕಾರಿ. ಪ್ರಣಯಾಚರಣೆ ಸಂಗಾತಿಗಳಲ್ಲಿ ಸಂಭೋಗಕ್ಕೆ ತೊಡಗಬೇಕೆನ್ನುವ ಆಸೆಯನ್ನು ಹುಟ್ಟಿಸುವುದು. ಸಂಭೋಗಕ್ಕೆ ಪ್ರಬಲವಾದ ಪ್ರಚೋದನೆಯನ್ನು ನೀಡುವುದು. ಅಷ್ಟೇ ಅಲ್ಲದೆ ಸಂಗಾತಿಗಳಲ್ಲಿ ಒಂದನ್ನೊಂದು ಪ್ರಬಲವಾದ ಸಹಕರ್ಮಿಗಳೆಂದು ಗುರುತಿಸಲೂ ಸಹಾಯಕವಾಗುವುದು. ಸಂಕೀರ್ಣವಾದ ಪ್ರಣಯ ರೂಢಿಗಳು ಪ್ರಾಯಶಃ ಸಾಮಾನ್ಯ ವರ್ತನೆಗಳಾದ ಸ್ವಚ್ಛತೆ, ಆಹಾರ ಉಣಿಸುವುದು, ಗೂಡು ಕಟ್ಟುವುದು ಮುಂತಾದವುಗಳಿಂದ ವಿಕಸಿಸಿರಬಹುದು. ಅನೇಕ ಸಂದರ್ಭಗಳಲ್ಲಿ ಇಂತಹ ಮೂಲ ಚಟುವಟಿಕೆಗಳು ಗುರುತಿಸಲು ಅಸಾಧ್ಯವಾಗುವಷ್ಟರ ಮಟ್ಟಿಗೆ ರೂಢಿಯಾಗಿರುತ್ತದೆ.

ಪ್ರಣಯಾಚರಣೆಯಲ್ಲಿ ಸಾಕಷ್ಟು ಭಿನ್ನತೆಯುಂಟು. ಕೆಲವಲ್ಲಿ ಇದು ಬೆದರಿಕೆಯ ರೀತಿಯದಾಗಿರಬಹುದು. ಗಂಡು ಒಂದು ಪ್ರದೇಶವನ್ನು ಆಕ್ರಮಿಸಿಕೊಂಡು ಬೇರೆ ಪ್ರಾಣಿಗಳನ್ನು ಓಡಿಸುತ್ತದೆ. ಹೆಣ್ಣು ಶರಣಾಗುವ ತನಕ ಅದರ ಮೇಲೆ ಆಕ್ರಮಣ ಮಾಡುತ್ತದೆ. ಉದಾಹರಣೆಗೆ, ಗಂಡು ಸಯಾಮಿಸ್ ಕಾದಾಡುವ ಮೀನು ಲೋಳೆಯಿಂದ ಆವೃತವಾದ, ಅಂಟಿಕೊಂಡಿರುವ ಗಾಳಿಯ ಬುದ್ಬುದ (ಬಬಲ್ಸ್)ಗಳಿಂದ ಕೂಡಿದ, ತೆಪ್ಪದ ರೀತಿಯ ತೇಲುಗೂಡನ್ನು ರಚಿಸುತ್ತದೆ. ದೇಹದ ಬಣ್ಣ ದಟ್ಟವಾಗಿ, ಆಸನದ ಈಜುರೆಕ್ಕೆಗಳು ಆಕರ್ಷಕ ಬಣ್ಣವನ್ನು ಪಡೆಯುತ್ತವೆ. ಬೇರೆ ಯಾವುದೇ ಗಂಡು ಮೀನನ್ನು ಗೂಡಿನೊಳಕ್ಕೆ ಬಿಡುವುದಿಲ್ಲ. ಅದರೊಡನೆ ಕಾದಾಡಿ ಹೊರ ಅಟ್ಟುತ್ತದೆ ಇಲ್ಲವೇ ಸಾಯಿಸುತ್ತದೆ. ಬುದ್ಬುದ ಗೂಡು (ಬಬಲ್ ನೆಸ್ಟ್) ಮತ್ತು ದೇಹ ಹಾಗೂ ಈಜುರೆಕ್ಕೆಯ ಬಣ್ಣ ಹೆಣ್ಣನ್ನು ಆಕರ್ಷಿಸುತ್ತದೆ. ಗಂಡು ಹೆಣ್ಣಿನ ಮುಂದೆ ಪ್ರದರ್ಶನ ಮಾಡುತ್ತದೆ. ಹೆಣ್ಣು ಸ್ಪಂದಿಸದಿದ್ದರೆ, ಅದಕ್ಕೆ ಢಿಕ್ಕಿ ಹೊಡೆದು ಸ್ಪಂದಿಸುವ ತನಕ ಅದನ್ನು ಕಚ್ಚುತ್ತದೆ. ಅನಂತರ ಹೆಣ್ಣು ಮೀನನ್ನು ಸುತ್ತಿಕೊಂಡು ಅದನ್ನು ತಲೆಕೆಳಗಾಗಿ ಮಾಡುತ್ತದೆ. ಗಂಡು ವೀರ್ಯವನ್ನೂ ಹೆಣ್ಣು ತತ್ತಿಗಳನ್ನೂ ಹೊರಹಾಕುತ್ತವೆ.

ಕೆಲವಲ್ಲಿ ಬೆದರಿಕೆಗೆ ಪ್ರತಿಕ್ರಿಯೆಯೂ ಕಂಡುಬಂದು ಈ ಪ್ರತಿಕ್ರಿಯೆ ಬೆದರಿಕೆಯ ವರ್ತನೆಯನ್ನು ತಟಸ್ಥಗೊಳಿಸುತ್ತದೆ. ರಾಬಿನ್, ರೂಕ್, ಕ್ರಾಸ್‌ಬಿಲ್‌ಗಳಂತಹ ಪಕ್ಷಿಗಳಲ್ಲಿ ಹೆಣ್ಣು ಬೇಡುವ ಭಂಗಿಯಲ್ಲಿ ನಿಲ್ಲುತ್ತದೆ. ಇದು ಗಂಡು ಹಕ್ಕಿಗಳಲ್ಲಿ ಪೋಷಕ ಒಲವನ್ನು ಮೂಡಿಸಿ ಅವುಗಳಲ್ಲಿ ಆಕ್ರಮಣಕಾರಿ ವರ್ತನೆ ಕಡಿಮೆಯಾಗುತ್ತದೆ. ಗೂಬೆಗಳಲ್ಲಿ ಚಿಕ್ಕ ಮತ್ತು ಕಡಿಮೆ ಬಲಶಾಲಿಗಳಾದ ಹೆಣ್ಣುಗಳು ದೊಡ್ಡ ಹಾಗು ಪ್ರಬಲವಾದ ಗಂಡುಗಳಿಗೆ ಆಹಾರವನ್ನು ಉಡುಗೊರೆಯಾಗಿ ಕೊಡುವ ಮುಖಾಂತರ ಆಕ್ರಮಣದಿಂದ ತಪ್ಪಿಸಿಕೊಳ್ಳುತ್ತವೆ.

ಕೆಲವು ಜೇಡ ಮತ್ತು ಮ್ಯಾಂಟಿಸ್‌ಗಳಲ್ಲಿ ಹೆಣ್ಣು ಗಂಡನ್ನು ತಿನ್ನುವ ಅಪಾಯವಿರುತ್ತದೆ. ಗಂಡಿನಲ್ಲಿ ಇದರಿಂದ ತಪ್ಪಿಸಿಕೊಳ್ಳಲು ಪರ್ಯಾಯವಾದ ವರ್ತನೆಯಿರುತ್ತದೆ. ಪೈಸಾರ ಮಿರಾಬಿಲಿಸ್ ಎಂಬ ಜೇಡ ಪ್ರಭೇದದಲ್ಲಿ ಗಂಡು ಪ್ರಣಯಕಾಲದಲ್ಲಿ ಹೆಣ್ಣುಜೇಡಕ್ಕೆ ರೇಷ್ಮೆಯಲ್ಲಿ ಸುತ್ತಿದ ನೊಣವನ್ನು ಉಡುಗೊರೆಯಾಗಿ ನೀಡುತ್ತದೆ. ಕ್ರಿಸ್ಪಕಸ್ ಕ್ರಿಸ್ಪೆಟಸ್ ಪ್ರಭೇದದ ಮ್ಯಾಂಟಿಸ್‌ನಲ್ಲಿ ಗಂಡು ಹೆಣ್ಣಿನ ಒಂದು ಕಾಲನ್ನು ಭದ್ರವಾಗಿ ಹಿಡಿದುಕೊಂಡು ಅದನ್ನು ರೇಷ್ಮೆಯಿಂದ ನೆಲಕ್ಕೆ ಅಂಟಿಸುತ್ತದೆ. ಹೆಣ್ಣು ಬಿಡಿಸಿಕೊಳ್ಳಲು ಒದ್ದಾಡುತ್ತದೆ. ಸೆರೆಯಿಂದ ಬಿಡಿಸಲು ಗಂಡನ್ನು ಪ್ರಾರ್ಥಿಸುತ್ತದೆ. ಗಂಡು ಇದಕ್ಕೆ ಸ್ಪಂದಿಸದಿದ್ದಾಗ ಹೆಣ್ಣು ಅದರ ತಲೆಯನ್ನು ಕಚ್ಚುತ್ತದೆ.

ಬಹಳಷ್ಟು ಪ್ರಾಣಿಗಳಲ್ಲಿ ಪ್ರಣಯಾಚರಣೆಯ ಸಮಯದಲ್ಲಿ ಫಿರಮೋನ್‌ಗಳೆಂಬ ರಾಸಾಯನಿಕಗಳನ್ನು ಹೆಣ್ಣು ಉತ್ಪತ್ತಿಮಾಡುತ್ತದೆ. ಇವು ಗಂಡುಗಳನ್ನು ಆಕರ್ಷಿಸುತ್ತದೆ. ಪತಂಗ, ಕೆಲವು ಚಿಟ್ಟೆಗಳು (ಮೊನಾರ್ಕ್ ಚಿಟ್ಟೆ), ಅನೇಕ ಸ್ತನಿಗಳಲ್ಲಿ ಇದು ಪ್ರಣಯಾಚರಣೆಗೆ ಪ್ರಬಲ ಪ್ರಚೋದಕ. ಪೇಂಟೆಡ್ ಸಮುದ್ರ ಆಮೆಗಳಲ್ಲಿ ಪ್ರಣಯ ಸ್ಪರ್ಶದಿಂದಾಗುತ್ತದೆ. ಕಪ್ಪೆಗಳಲ್ಲಿ ವಸಂತಕಾಲದ ರಾತ್ರಿ ವೇಳೆಯಲ್ಲಿ ಪ್ರಣಯ

ಸಂಗೀತ (ಕ್ರೋಕಿಂಗ್) ಕಾಣಬಹುದು. ಪಕ್ಷಿಗಳಲ್ಲಿ ವಿವಿಧ ಬಗೆಯ ನೃತ್ಯ ಪ್ರಣಯಾಚರಣೆಯ ಪ್ರಮುಖ ಅಂಗವಾಗಿರುತ್ತದೆ.

ಪಕ್ಷಿಗಳಲ್ಲಿ ವಾಸನೆಯನ್ನು ಗ್ರಹಿಸುವ ಶಕ್ತಿ ಬಹಳ ಕಡಿಮೆ. ಆದ್ದರಿಂದ ಹಾಡು ಮತ್ತು ಕಣ್ಣಿಗೆ ಕಾಣುವ ಸನ್ನೆಗಳನ್ನು ಉಪಯೋಗಿಸುತ್ತವೆ. ಬೇರೆಲ್ಲ ಪ್ರಾಣಿಗಳಿಗಿಂತ ಇವುಗಳಲ್ಲಿ ಪ್ರಣಯಾಚರಣೆ ಹೆಚ್ಚು ವಿಕಾಸವಾಗಿದ್ದು ಅದ್ಭುತವಾಗಿದೆ. ವಿಶೇಷವಾದ ಅಲಂಕಾರಿಕ ಹಾಗೂ ಆಕರ್ಷಣೀಯ ಪುಕ್ಕಗಳಿಲ್ಲದಿರುವಂತಹವೂ ಸಂತಾನೋತ್ಪತ್ತಿಯ ಸಮಯದಲ್ಲಿ ಬೇರೆ ಕಾಲಕ್ಕೆ ಹೋಲಿಸಿದರೆ ಹೆಚ್ಚು ಆಕರ್ಷಣೀಯವಾಗಿರುತ್ತವೆ. ಸುಶ್ರಾವ್ಯವಾಗಿ ಹಾಡುವುದನ್ನೂ ಈ ಸಮಯದಲ್ಲಿ ಪ್ರದರ್ಶಿಸುತ್ತವೆ. ಆಸ್ಟ್ರೇಲಿಯ ಮತ್ತು ನ್ಯೂಗಿನಿಯ ಕುಂಜಪಕ್ಷಿಗಳಲ್ಲಿ (ಬೋವರ್ ಬರ್ಡ್) ಪ್ರಣಯಾಚರಣೆ ಬಹು ಸ್ವಾರಸ್ಯ. ಗಂಡು ತುಂಬಾ ವಿಸ್ತಾರವಾದ ಬೋವರ್ಸ್ ಅಥವಾ ಆರ್‌ಬರ್ಸ್ ಎಂಬ ಗೂಡುಗಳನ್ನು ನಿರ್ಮಿಸುತ್ತದೆ. ಇದರಲ್ಲಿ ಚಿಪ್ಪುಗಳು, ಎಲುಬುಗಳು, ಮಣ್ಣಿನ ಪಾತ್ರೆಯ ತುಂಡುಗಳು, ಲೋಹ, ಇತರ ಹಕ್ಕಿಗಳ ಪುಕ್ಕಗಳು, ಹೂವು, ಗಾಜಿನ ಚೂರು ಇತ್ಯಾದಿಗಳಿಂದ ಗೂಡುಗಳಲ್ಲಿ ಉದ್ಯಾನವನವನ್ನು ಸೃಷ್ಟಿಸುತ್ತದೆ. ಇವೇ ಪ್ರಣಯಾಚರಣೆಯ ಜಾಗ. ಈ ಬೋವರ್ಸ್ ಮತ್ತು ಉದ್ಯಾನವನಗಳು ಅತ್ಯಂತ ಸುಂದರವಾಗಿದ್ದು ಹೆಣ್ಣುಗಳನ್ನು ಆಕರ್ಷಿಸಲು ಸಹಕರಿಸುತ್ತವೆ.

ಫ್ರಿಗೇಟ್ ಪಕ್ಷಿಗಳಲ್ಲಿ ಪ್ರಣಯಕಾಲದಲ್ಲಿ ಗಂಡು ಪಕ್ಷಿಗಳ ಬಣ್ಣದಲ್ಲಿ ಬಹಳಷ್ಟು ಬದಲಾವಣೆಯಾಗುತ್ತದೆ. ಅವುಗಳ ಕಿತ್ತಳೆ ಬಣ್ಣದ ಗಂಟಲು ಚೀಲ ಕಡುಗೆಂಪು ಬಣ್ಣಕ್ಕೆ ತಿರುಗುತ್ತದೆ. ಚೀಲ ಬಲೂನ್ ರೀತಿ ಉಬ್ಬಿರುತ್ತದೆ. ತಲೆ ಗಿಡ್ಡವಾಗಿರುತ್ತದೆ. ಹಾಗಾಗಿ ಕಡುಗೆಂಪು ಚೀಲ ಹೆಣ್ಣಿಗೆ ಆಕರ್ಷಣೀಯವಾಗಿ ಕಾಣುತ್ತದೆ.

ನವಿಲುಗಳಲ್ಲಿ ಗಂಡು ಸುತ್ತಲಿರುವ 4–5 ಹೆಣ್ಣುಗಳನ್ನು ಆಕರ್ಷಿಸಲು ನೇರಳೆ ಬಣ್ಣದ ತನ್ನ ಅಧೋಭಾಗವನ್ನು ಪ್ರದರ್ಶಿಸುತ್ತದೆ. ಇಳಿಬಿದ್ದ ಬಾಲವನ್ನು ನೆಟ್ಟಗೆ ಮಾಡಿ ಬೀಸಣಿಗೆಯ ತರಹ ಹರಡುತ್ತದೆ. ಇದರ ಜೊತೆಗೆ ಗಟ್ಟಿಯಾದ ಧ್ವನಿಕರೆಗಳನ್ನೂ ಮಾಡುತ್ತದೆ. ಈ ಪ್ರಣಯ ಪ್ರದರ್ಶನದಲ್ಲಿ ಅನೇಕ ಬಾರಿ ಗಂಡು ಹಕ್ಕಿಗಳು ಬೀಸಣಿಗೆಯನ್ನು ನೆಟ್ಟಗೆ ಮಾಡಿ, ಅಲೆ ಅಲೆಯಾಗಿ ತಿರುಗಿ ನೃತ್ಯ ಮಾಡುತ್ತದೆ. ಹೆಣ್ಣು ಹಕ್ಕಿ ಸಮೀಪಿಸಿದಾಗ ತಕ್ಷಣ ಹಿಂಭಾಗವನ್ನು ಅದರ ಕಡೆ ಮಾಡಿ ನಿಲ್ಲುತ್ತದೆ. ಹೆಣ್ಣು ಅದರ ಗಮನ ಸೆಳೆಯಲು ಮತ್ತೆ ಅದರ ಮುಂದೆ ಓಡುತ್ತದೆ. ಈ ವರ್ತನೆ ಅನೇಕ ಬಾರಿ ನಡೆಯುತ್ತದೆ.

ಸಾಮಾನ್ಯ ಟರ್ನ್‌ನಲ್ಲಿ ಸಂತಾನೋತ್ಪತ್ತಿಯ ಸಮಯದಲ್ಲಿ ಗಂಡಿನ ಪುಕ್ಕಗಳು, ಗಲ್ಲ, ಎದೆ ಮತ್ತು ಉದರ ಭಾಗ ನಸುಬೂದು ಬಣ್ಣಕ್ಕೆ ತಿರುಗುತ್ತದೆ. ಕೊಕ್ಕು ಕುಂಕುಮ ವರ್ಣವಾಗಿ ತುದಿ ಕಪ್ಪಾಗಿರುತ್ತದೆ. ಪ್ರಣಯ ಪ್ರದರ್ಶನದಲ್ಲಿ ಅದ್ಭುತವಾದ ದೊಂಬರಾಟ ಮತ್ತು ಸಾಂಕೇತಿಕವಾಗಿ ಗಂಡು ಪಕ್ಷಿ ತನ್ನ ಸಂಗಾತಿಗೆ ಆಹಾರ ಕೊಡುವುದನ್ನು ನೋಡಬಹುದು.

ತ್ರಿ ಸ್ಪೈನ್‌ಡ್ ಸ್ಟಿಕಲ್‌ಬ್ಯಾಕ್ ಮೀನು ವಸಂತ ಋತುವಿನಲ್ಲಿ ಸಿಹಿನೀರಿಗೆ ಮೊಟ್ಟೆಯಿಡಲು ವಲಸೆಹೋಗುತ್ತದೆ. ಪ್ರಣಯಕಾಲದಲ್ಲಿ ಗಂಡು ಚೆರಿಕೆಂಪು ಗಂಟಲು, ನೀಲಿ ಮಿಶ್ರಿತ ಹಸಿರು ಹಿಂಭಾಗ ಮತ್ತು ನೀಲಿಯಿಂದ ದಟ್ಟವಾದ ಹಸಿರು ಬಣ್ಣವಿರುವ ಕಣ್ಪೊರೆ ಮುಂತಾದ ಆಕರ್ಷಕ ಬಣ್ಣಗಳನ್ನು ಪ್ರದರ್ಶಿಸುತ್ತದೆ. ಸೂಕ್ತವಾದ ಸ್ಥಳವನ್ನು ಹುಡುಕಿ ಆಯ್ದ ಜಾಗದಲ್ಲಿ ಗೂಡನ್ನು ನಿರ್ಮಿಸುತ್ತದೆ. ಅನಂತರ ಹೆಣ್ಣು ತನ್ನ ಪ್ರದರ್ಶನವನ್ನು ಪ್ರಾರಂಭಿಸುತ್ತದೆ. ಗಂಡು ಒಂದೆರಡು ಹೆಣ್ಣುಗಳನ್ನು ಗೂಡಿನೊಳಗೆ ಬರಲು ಅವಕಾಶ ನೀಡುತ್ತದೆ. ದಪ್ಪ ಹೊಟ್ಟೆಯ ಹೆಣ್ಣಿನ ವಿಶಿಷ್ಟ ಚಲನೆ ಗಂಡಿನಲ್ಲಿ ಅಂಕುಡೊಂಕಾಗಿ ನೃತ್ಯ ಮಾಡುವಂತೆ ಪ್ರಚೋದಿಸುತ್ತದೆ. ಕೆಂಪು ಉದರದ ಗಂಡಿನ ನೃತ್ಯ ಹೆಣ್ಣು ನೇರವಾಗಿ ಗಂಡಿನ ಕಡೆ ಈಜುವಂತೆ ಮಾಡುತ್ತದೆ. ಗಂಡು ತಿರುಗಿಕೊಂಡು ಗೂಡಿನೊಳಕ್ಕೆ ಹೋಗುತ್ತದೆ. ಹೆಣ್ಣು ಅದನ್ನು ಅನುಸರಿಸುತ್ತದೆ. ಗಂಡು ಉತ್ತೇಜನಗೊಂಡು ತನ್ನ ತಲೆಯನ್ನು ಗೂಡಿನ ಪ್ರವೇಶದ್ವಾರಕ್ಕೆ ಅಂಟಿಸಿಕೊಳ್ಳುತ್ತದೆ. ಈ ಚಲನೆ ಹೆಣ್ಣನ್ನು ಗೂಡಿನೊಳಕ್ಕೆ ಹೋಗಲು ಪ್ರಚೋದಿಸುತ್ತದೆ. ಗಂಡು ಹೆಣ್ಣಿನ ದೇಹಕ್ಕೆ ತನ್ನ ಮೂತಿಯಿಂದ ತಟ್ಟುತ್ತದೆ (ಸ್ನೌಟ್ ಜ್ಯಾಬ್ಸ್). ಹೆಣ್ಣು ಮೊಟ್ಟೆಯಿಡಲು ಇದೇ ಕಾರಣ. ಈ ಎಲ್ಲಾ ಚಟುವಟಿಕೆಗಳೂ ದೃಷ್ಟಿಯ ಪ್ರಚೋದನೆಯಿಂದಲೇ ಆಗುತ್ತದೆ.

ಸಾಮಾನ್ಯ ಡ್ರಾಗೋನೆಟ್ ಎಂಬ ಮೀನು ಮೊಟ್ಟೆ ಇಡುವ ಸಮಯದಲ್ಲಿ ತೀರವನ್ನು ಪ್ರವೇಶಿಸುತ್ತದೆ. ಈ ಕಾಲದಲ್ಲಿ ಗಂಡಿನ (ಶಿಮ್ಮರ್) ಬಣ್ಣ ಬಹಳ ಆಕರ್ಷಣೀಯವಾಗಿರುತ್ತದೆ. ಮೊಟ್ಟೆಯಿಡುವ ಮೊದಲು ಆಕರ್ಷಕವಾದ ಪ್ರಣಯಾಚರಣೆ ಇರುತ್ತದೆ. ಗಂಡು ಅತಿ ಸಂಭ್ರಮದಿಂದ ಪಕ್ಕನೆ ಹಾರುತ್ತದೆ ಮತ್ತು ಹೆಣ್ಣಿನ ಸುತ್ತ ಈಜುತ್ತದೆ. ಅದರ ಈಜುರೆಕ್ಕೆಗಳ ಬಣ್ಣ ದಟ್ಟವಾಗಿದ್ದು ಹರಡಿಕೊಂಡಿರುತ್ತದೆ. ಈ ಪ್ರದರ್ಶನ ಅಂತಿಮವಾಗಿ ಹೆಣ್ಣನ್ನು ಸಂಭೋಗಕ್ಕೆ ಪ್ರಚೋದಿಸುತ್ತದೆ.



ಗಂಡು (ಬಲಗಡೆಯದು) ಗುಂಪಿನ ಇತರ ಮೀನುಗಳನ್ನು ಹೆದರಿಸುತ್ತದೆ.





ಗಂಡು ಅಂಕುಡೊಂಕಾಗಿ ಗೂಡಿನ ಕಡೆ ಈಜುತ್ತದೆ. ಹೆಣ್ಣು ಹಿಂಬಾಲಿಸುತ್ತದೆ.



ಗಂಡು ಹೆಣ್ಣನ್ನು ಗೂಡಿನೊಳಕ್ಕೆ ಹೋಗಲು ಪ್ರೇರೇಪಿಸುತ್ತದೆ.



ಗಂಡು ಹೆಣ್ಣಿನ ಬಾಲವನ್ನು ಮೂತಿಯಿಂದ ತಟ್ಟುತ್ತದೆ.



ಗಂಡು ಹೆಣ್ಣನ್ನು ಕಚ್ಚುತ್ತದೆ. ಹೆಣ್ಣು ಮೊಟ್ಟೆಯಿಟ್ಟು ಹೊರಹೋದ ಅನಂತರ ಗಂಡು ಮೊಟ್ಟೆಯನ್ನು ನಿಷೇಚಿಸುತ್ತದೆ.

ಆಧುನಿಕ ಡಾರ್ವಿನ್ ತತ್ವ (ನಿಯೊಡಾರ್ವಿನಿಸಮ್) ದಂತೆ ಪ್ರಣಯ ಪ್ರತ್ಯೇಕಿತ ಪ್ರಕ್ರಿಯೆಯಾಗಿ (ಐಸೋಲೇಟಿಂಗ್ ಮೆಕಾನಿಸಮ್) ಬಹಳ ಪ್ರಾಮುಖ್ಯತೆಯನ್ನು ಪಡೆದಿದ್ದು ವಿಸ್ತಾರವಾದ ಪ್ರಣಯ ರೂಢಿಯನ್ನು ಪ್ರಬಲವಾಗಿಸಲು, ಮರಿಗಳನ್ನು ಬೆಳೆಸಲು ಹಾಗೂ ಅಡ್ಡತಳೀಕರಣವನ್ನು ತಡೆಗಟ್ಟಲು ಸಹಾಯಕವಾಗಿದೆ. (ಎಸ್.ಆರ್.ಎಸ್.)

**ಪ್ರತಿಜೈವಿಕಗಳು:** ಅಣಬೆ, ಯೀಸ್ಟ್, ಬ್ಯಾಕ್ಟೀರಿಯ (ಸೂಕ್ಷ್ಮಾಣು) ಜೀವಿಗಳು ತಮ್ಮ ಬೆಳೆವಣಿಗೆ ಕಾಲದಲ್ಲಿ ಸ್ರವಿಸುವ ಮಾರಕ ರಾಸಾಯನಿಕ (ಆ್ಯಂಟಿಬಯೊಟಿಕ್ಸ್). ಅನ್ಯ ಸೂಕ್ಷ್ಮಾಣುಗಳ ಬೆಳೆವಣಿಗೆ ಮತ್ತು ಜೀವನ ಕ್ರಮಗಳಿಗೆ ಅಡ್ಡಿ ಉಂಟು ಮಾಡಿ, ಮಾರಕವಾಗಿವೆ. ಇವುಗಳ ಬಳಕೆಯಿಂದ ಸಸ್ಯ, ಪ್ರಾಣಿ ಮತ್ತು ಮನುಷ್ಯರಿಗೆ ತಗುಲಬಹುದಾದಂಥ ಅನೇಕ ವಿಷಾಣು ಸೋಂಕು ರೋಗಗಳನ್ನು ಗುಣಪಡಿಸಬಹುದು. ಸೂಕ್ಷ್ಮಾಣುಗಳು ಮಾನವರಲ್ಲಿ ಹಾಗೂ ಪ್ರಾಣಿಗಳಲ್ಲಿ ರೋಗವನ್ನು ಉಂಟುಮಾಡಬಲ್ಲವೆಂದು ಲೂಯಿ ಪಾಸ್ತರ್ (1822–95) ತೋರಿಸಿದ. ಅನಂತರ, ಈ ಸೂಕ್ಷ್ಮಾಣುಗಳನ್ನು ಇನ್ನೊಂದು ವರ್ಗದ ಸೂಕ್ಷ್ಮಾಣುಗಳನ್ನು ನಾಶಗೊಳಿಸುವ ಬಗ್ಗೆ ಸಂಶೋಧನೆ ನಡೆಯಿತು. ಜೀವಂತ ಬ್ಯಾಕ್ಟೀರಿಯಗಳ ಕದಡಿಗೆ ಪೆನಿಸಿಲಿಯಮ್ ಗ್ಲಾಕಮ್ ಎಂಬ ಬೂಷ್ಟಿನ ತುಣುಕೊಂದನ್ನು ಹಾಕಿದರೆ ಅದರು ಸುತ್ತ ಬ್ಯಾಕ್ಟೀರಿಯಗಳು ಗರಣಿ ಕಟ್ಟಿಕೊಂಡು ತಳಸೇರಿ ದ್ರವಸ್ವಚ್ಛವಾಗುವುದೆಂದು ಇಂಗ್ಲೆಂಡಿನ ಜಾನ್ ಟಿನ್‌ಡಾಲ್ 1875ರಲ್ಲಿ ತೋರಿಸಿದ್ದ. ನೆರಡಿ ರೋಗಾಣುಗಳು ವಾಯುವಿನಲ್ಲಿರುವ ಇತರ ಸೂಕ್ಷ್ಮಾಣುಗಳ ನಡುವೆ ಇದ್ದು ಬೆಳೆಯಲಾರವೆಂದು 1877ರಲ್ಲಿ ಲೂಯಿ ಪಾಸ್ತರ್ ಗಮನಿಸಿದ್ದ. ವಿಜ್ಞಾನಿ ವೈಲಿಮಿನ್ (1889) ತನ್ನ ನೆರೆಯಲ್ಲಿರುವ ಜೀವಿಯನ್ನು ನಾಶಮಾಡಬಲ್ಲ ಜೀವಿಯನ್ನು ಜೀವಿವಿರೋಧಿ (ಆಂಟಿಬೈಯೋಟ್) ಎಂದು ಹೆಸರಿಸಿದ. ಸೂಕ್ಷ್ಮಾಣುಗಳ ಪರಸ್ಪರ ನಿರೋಧ ಗುಣಕ್ಕೆ ಜೀವಿನಿರೋಧಕಗುಣ ಎಂದು ಮಾರ್ಷಲ್ (1889) ಹೆಸರಿಸಿದ. ಗ್ರೀಕ್ ಭಾಷೆಯಲ್ಲಿ ಆ್ಯಂಟಿಬೈಯೊಸ್ ಎಂದರೆ ಅನ್ಯಜೀವಿನಿರೋಧತ್ವ. ಆದ್ದರಿಂದ ಈ ಹೆಸರನ್ನು ಉಪಯೋಗಿಸಲಾಯಿತು. ಇದು ಸಹಜೀವಿತ್ವಕ್ಕೆ (ಸಿಂಬಿಯೋಸಿಸ್) ವ್ಯತಿರಿಕ್ತ. 1996ರಲ್ಲಿ ಬೂಷ್ಟಿನಿಂದ ಮೈಕೊಫೀನಾಲಿಕ್ ಆಮ್ಲವನ್ನು ಪ್ರತ್ಯೇಕಿಸಲಾಯಿತು. ತತ್ತಿಯ ಬಿಳಿಯ ಭಾಗ, ಕಣ್ಣೀರಿನಲ್ಲಿ ಲೈಸೊಸೈಮ್ ಸೂಕ್ಷ್ಮಾಣು ನಿರೋಧಕವಸ್ತು ಇರುವುದೆಂಬುದನ್ನು ಫ್ಲೆಮಿಂಗ್ (1922) (ಅನಂತರ ಸರ್ ಅಲೆಗ್ಸಾಂಡರ್, 1881–1955) ತೋರಿಸಿದನು. ಆದರೆ, ಇದಕ್ಕೆ ರೋಗಾಣುಗಳ ಮೇಲೆ ಪ್ರಬಲಕ್ರಿಯೆ ಇರುವುದಿಲ್ಲವಾದ್ದರಿಂದ ಅಷ್ಟು ಉಪಯುಕ್ತವಾಗಿಲ್ಲ. ಆದ್ದರಿಂದ, ರೋಗಾಣುಗಳ ಮೇಲೆ ಪ್ರಬಲವಾಗಿ ವರ್ತಿಸಿ, ಅವನ್ನು ಶಕ್ತಿಗುಂದಿಸಿ, ದೇಹದ ಭಕ್ಷಕ ಜೀವಾಣುಗಳಿಗೆ (ಫೇಗೊಸೈಟ್ಸ್) ತುತ್ತಾಗುವಂತೆ ಮಾಡಬಲ್ಲ ಔಷಧ ವಸ್ತುವಿನ ಪತ್ತೆಗೆ ಫ್ಲೆಮಿಂಗ್ ಪ್ರಯೋಗಗಳನ್ನು ಮುಂದುವರಿಸಿದ. ಲಂಡನ್ನಿನ ಸೇಂಟ್ ಮೇರಿ ಆಸ್ಪತ್ರೆಯ ಪ್ರಯೋಗಶಾಲೆಯಲ್ಲಿ ಸ್ಟಾಫಿಲೋಕಾಕಸ್ ಬೆಳೆಸಲು ಗಾಜಿನ ತಟ್ಟೆಯಲ್ಲಿ ಅನುಕೂಲವಾಗುವ ಆಹಾರವನ್ನಿಟ್ಟು, ಅದರಲ್ಲಿ ರೋಗಕಾರಕ ಸೂಕ್ಷ್ಮಾಣುಗಳನ್ನು ಬಿತ್ತಿ ಬೆಳೆಸಲು 1928 ಸೆಪ್ಟೆಂಬರ್ ತಿಂಗಳಲ್ಲಿ ಪ್ರಯೋಗ ಕೈಗೊಂಡ. ಒಂದು ಸಲ ಪೆನಿಸಿಲಿಯಮ್ ಎಂಬ ಬೂಷ್ಟು ಅಕಸ್ಮಾತ್ ಆ ತಟ್ಟೆಯಲ್ಲಿ ಬೆಳೆದು, ಅದರ ಸುತ್ತ ಸ್ಟಾಫೀಲೋಕಾಕಸ್ಸುಗಳು ನಾಶವಾಗಿದ್ದುದೂ ಕಂಡುಬಂತು. ಆಶ್ಚರ್ಯಕರವಾದ ಈ ಕ್ರಿಯೆ ಪೆನಿಸಿಲಿಯಮ್ ಬೂಷ್ಟು ತನ್ನ ಸುತ್ತ ಸ್ರವಿಸಿದ್ದ ರಾಸಾಯನಿಕದಿಂದ ಉಂಟಾದುದೆಂದು ಅನಂತರ ತಿಳಿಯಿತು. ಫ್ಲೆಮಿಂಗ್ ಅದಕ್ಕೆ ಪೆನಿಸಿಲಿನ್ ಎಂದು ಹೆಸರಿಟ್ಟ. ಸಾರವತ್ತಾದ ಮಣ್ಣಿನಲ್ಲಿ ದೊರಕುವ ಬ್ಯಾಸಿಲ್ಲಸ್ ಬ್ರೆವಿಸ್ ಎಂಬ ನಿರುಪದ್ರವಿ ಸೂಕ್ಷ್ಮಾಣುವಿನಿಂದ 1930ರಲ್ಲಿ ಅಮೆರಿಕದ ರಾಕ್‌ಫೆಲ್ಲರ್ ಇನ್‌ಸ್ಟಿಟ್ಯೂಟಿನಲ್ಲಿ ರೀನೆ ಡುಬಾಯ್ ಎಂಬ ವಿಜ್ಞಾನಿ ಟ್ರೈರೊಥ್ರೈಸಿನ್ ಜೀವಿನಿರೋಧಕ ವಸ್ತುವನ್ನು ಪ್ರಥಮವಾಗಿ ಬೇರ್ಪಡಿಸಿದ. ಆದರೆ ಇದು ರೋಗಾಣುಗಳಿಗೆ ಮಾರಕವಾಗುವುದರ ಜೊತೆಗೆ ರೋಗಿಗೂ ವಿಷವಾಗಿ ವರ್ತಿಸುವುದರಿಂದ ಇದರ ದೇಹಾಂತರ ಉಪಯೋಗವನ್ನು ಕೈಬಿಟ್ಟು, ಕೀತ ಗಾಯಗಳಿಗೆ ಸವರುವ ಔಷಧವಾಗಿ ಮಾತ್ರ ಬಳಸಲು ಸೂಚಿಸಿದ. 1938ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಹೆರಾಲ್ಡ್ ಫ್ಲೋರಿ ಮತ್ತು ಆರ್ನ್ಸ್ಟ್ ಚೆಯ್ನ್ ಎಂಬವರು ಫ್ಲೆಮಿಂಗ್ ಶೋಧಿತ ಪೆನಿಸಿಲಿನ್ ಮೇಲೆ ಪುನಃ ಸಂಶೋಧನೆ ಕೈಗೊಂಡರು. 1940ರಲ್ಲಿ ಪೆನಿಸಿಲಿನ್ನನ್ನು ತಕ್ಕಮಟ್ಟಿಗೆ ಶುದ್ಧವಸ್ತುವಾಗಿ ಬೇರ್ಪಡಿಸಿದರು. ಸ್ಟಾಫಿಲೋಕಾಕಸ್ ಸೋಂಕಿನಿಂದ ಉಂಟಾಗುವ ಬೆನ್ನುಫಣಿ (ಕಾರ್ಬಂಕಲ್), ಕೀವು ತುಂಬಿದ ಬಾವುಗಳು, ಹೃದಯದ ಒಳಪದರ ರೋಗಗಳು (ಎಂಡೋ ಕಾರ್ಡೈಟಿಸ್), ಸ್ಟ್ರೆಪ್ಟೊಕಾಕಸ್ ಸೋಂಕಿನಿಂದ ಉಂಟಾದ ಕೆಲವು ರೋಗಗಳು, ನೆರಡಿ ರೋಗ, ಗೊನೇರಿಯ, ಸಿಫಿಲಿಸ್ ಮುಂತಾದವುಗಳ ಚಿಕಿತ್ಸೆಯಲ್ಲಿ ಉಪಯುಕ್ತವೆಂದು ತಿಳಿಯಿತು. ಆದರೆ, ಅಮಶಂಕೆ, ಟೈಫಾಯಿಡ್, ಸಾಮಾನ್ಯ ಮೂತ್ರ ಮಾರ್ಗರೋಗಗಳು, ಕ್ಷಯ ರೋಗಕ್ಕೆ ಕಾರಣವಾದ ವಿಷಾಣುಗಳು ಉದಾ: ಗ್ರಾಮ್ ಋಣ ವಿಷಾಣುಗಳು ಮೇಲೆ ಪ್ರಭಾವ ಹೊಂದಿಲ್ಲವೆಂದು ತಿಳಿಯಿತು. 1941ರಲ್ಲಿ ಈ ವಿಜ್ಞಾನಿಗಳು ಪೆನಿಸಿಲಿನ್ನಿನ ಬೇರ್ಪಡಿಕೆ, ನಿರೋಧಕ ಸಾಮರ್ಥ್ಯ, ವಿಷಗುಣ, ರಾಸಾಯನಿಕ ಸ್ವಭಾವ, ಕ್ರಿಯಾವಿಧಾನ, ಚಿಕಿತ್ಸಾಕ್ರಮ ಎಲ್ಲ ವ್ಯಾಸಂಗ ಫಲಿತಾಂಶಗಳನ್ನೂ ಕ್ರೋಢೀಕರಿಸಿ ಪ್ರಕಟಿಸಿದರು. 1942ರಲ್ಲಿ ವಾಕ್ಸ್‌ಮನ್ನನು ಸೂಕ್ಷ್ಮಾಣು ಜನಿತ ಹಾಗೂ ಅನ್ಯಸೂಕ್ಷ್ಮಾಣು ವಿರುದ್ಧ ಗುಣವುಳ್ಳ ಎಲ್ಲ ರಾಸಾಯನಿಕಗಳಿಗೂ ಆ್ಯಂಟಿಬಯೊಟಿಕ್ಸ್ (ಪ್ರತಿಜೈವಿಕಗಳು) ಎಂದು ನಿರ್ದಿಷ್ಟವಾಗಿ ಹೆಸರನ್ನಿಟ್ಟ. ಅಂದಿನಿಂದ ಈ ವಸ್ತುಗಳಿಗೆ ಈ ಹೆಸರು ಪ್ರಚಲಿತವಾಗಿದೆ.

***

**ಪ್ರತಿರೂಪಗಳು, ಆನುವಂಶಿಕ:** ಜೈವಿಕ ಆನುವಂಶಿಕತೆಯ ನಿಯಮವನ್ನು ಅಭ್ಯಸಿಸಲು ನಿರ್ಮಿಸಲಾಗುವ ಭಾವನ್ಮಾತ್ಮಕ ಮಾದರಿಗಳು (ಜೆನೆಟಿಕ್ ಮೋಡೆಲ್ಸ್). ಜೈವಿಕ ಆನುವಂಶಿಕತೆಯನ್ನು ಅರಿಯಲೋಸುಗ ಪರಸ್ಪರ ಸಂಬಂಧವಿರುವ ಜೀವಿಗಳ ಹೋಲಿಕೆ ಮತ್ತು ವ್ಯತ್ಯಾಸಗಳಿಗೆ ಕಾರಣವನ್ನು ತಳಿವಿಜ್ಞಾನದಲ್ಲಿ ಶೋಧಿಸಲಾಗುತ್ತದೆ. ಸಮಷ್ಟಿ ಸಾಕಷ್ಟು ದೊಡ್ಡದಿರಬಹುದಾದರೂ ಅದರಲ್ಲಿರುವ ಜೀವಿಗಳ ಸಂಖ್ಯೆ ಯಾವಾಗಲೂ ಸಾಂತ. ಬೇರೆ ಬೇರೆ ತಳಿಗಳ ಬಟಾಣಿ ಗಿಡಗಳನ್ನು ಸಂಕರಿಸುವಾತ ಮುಂದಿನ ಪೀಳಿಗೆಯಲ್ಲಿ ಹಳದಿ, ಹಸರು ಬೀಜ ನೀಡುವ ಗಿಡಗಳನ್ನು ೩:೧ ನಿಷ್ಪತ್ತಿಯಲ್ಲಿ ನಿರೀಕ್ಷಿಸಬಹುದು. ಆದರೆ ಅನುಷ್ಠಾನದಲ್ಲಿ ಇದೂ ಎಂದೂ ನಿಖರವಾಗಿ ೩:೧ ಇರಲಾರದು; ಸಂಕರಗಳ ಸಂಖ್ಯೆ ಏರಿದಂತೆ ಈ ನಿಷ್ಪತ್ತಿ ೩:೧ಕ್ಕೆ ಅಭಿಸರಿಸುತ್ತದೆ. ಹೀಗಾಗಿ ಬೃಹತ್ ಗಾತ್ರದ ಸಮಷ್ಟಿಯ ಪ್ರಜನನ ನಡತೆಯ ಪ್ರತಿರೂಪವೊಂದನ್ನು ರಚಿಸುವುದು ಸಾಧ್ಯ. ಅನಂತ ಸಮಷ್ಟಿ ಕಾಲ್ಪನಿಕ. ಆದರೆ ಸಂಭವತಾವಿತರಣೆ ಸಿದ್ಧಾಂತದ ಪರಿಚಿತಸೂತ್ರಗಳ ನೆರವಿನಿಂದ ಅನಂತ ಸಮಷ್ಟಿಯನ್ನು ವಿವರಿಸಲು ಸಾಧ್ಯವಿರುವುದರಿಂದ ಈ ಪರಿಕಲ್ಪನೆ ತುಂಬ ಸಹಾಯಕ. ಅನಂತ ಸಮಷ್ಟಿಯ ಪ್ರತಿರೂಪಗಳು ಎರಡು ತರಹದವು:

೧. ಸಮಷ್ಟಿಯ ರಚನೆಯನ್ನು ಅದರ ಬೆಳೆವಣಿಗೆಯ ನಿರ್ದಿಷ್ಟ ಹಂತಗಳಲ್ಲಿ ಮಾತ್ರ ವಿವರಿಸುವ ನಿರ್ಧಾರಾತ್ಮಕ ಪ್ರತಿರೂಪಗಳು. ಹಂತಗಳ ನಡುವೆ ಏನಾಗುವುದೆಂಬುದು ಇಲ್ಲಿ ಗೌಣ. ಇಂಥ ಪ್ರತಿರೂಪಗಳು ವಿರತ (ಡಿಸ್‌ಕ್ರೀಟ್), ಇವು ಸಾಮಾನ್ಯವಾಗಿ ಪೀಳಿಗೆಯನ್ನು ಎರಡು ಅನುಕ್ರಮ ಹಂತಗಳ ನಡುವಿನ ನೆಗೆತ ಕಾಲವೆಂದು ಪರಿಗಣಿಸುತ್ತವೆ.

೨. ಕಾಲದೊಂದಿಗೆ ಸಮಷ್ಟಿಯಲ್ಲಿ ಆಗುವ ಅವಿರತ ಬದಲಾವಣೆಯನ್ನು ನಿರ್ಲಕ್ಷಿಸದ ಯಾದೃಚ್ಛಿಕ ಪ್ರತಿರೂಪಗಳು. ಇವು ಕಾಲವನ್ನು ಪ್ರತಿನಿಧಿಸುವ ಹೊಸತೊಂದು ಚರದ ಅವಿಚ್ಛಿನ್ನ ಉತ್ಪನ್ನಗಳು.

ಯಾದೃಚ್ಛಿಕ ಪ್ರತಿರೂಪಗಳನ್ನು ರಚಿಸುವುದು ಅನೇಕವೇಳೆ ಕ್ಲಿಷ್ಟ; ಬದಲಾಗಿ ಪೀಳಿಗೆ ನೆಗೆತವನ್ನು ಬಳಸಿಕೊಳ್ಳುವ ನಿರ್ಧಾರಾತ್ಮಕ ಪ್ರತಿರೂಪಗಳು ವಸ್ತುಸ್ಥಿತಿಗೆ ತೃಪ್ತಿಕರವಾಗಿ ಸನ್ನಿಹಿತವಾಗಿರುತ್ತವೆ. ಸಿದ್ಧಾಂತ ಮತ್ತು ಅನುಭವಗಳನ್ನು ಮೇಳೈಸಿ ವಿಜ್ಞಾನಿ ಯಾವುದೇ ವಿದ್ಯಮಾನವನ್ನು ಅರ್ಥವಿಸಲು ಪ್ರತಿರೂಪವನ್ನು ರಚಿಸುತ್ತಾನೆ. ಆನುವಂಶಿಕತೆಯ ಘಟಕದ ಪ್ರತಿರೂಪವಾಗಿ ಜೀನ್ ಇರುವುದು ವೈಜ್ಞಾನಿಕ ಪ್ರತಿರೂಪಕ್ಕೆ ನಿದರ್ಶನ. ಜೀವಿಗಳಲ್ಲಿ ಆನುವಂಶಿಕತೆಯ ಮಾಹಿತಿ ನ್ಯೂಕ್ಲಿಯಸ್ಸಿನಲ್ಲಿರುವ ಕ್ರೊಮೋಸೋಮುಗಳಲ್ಲಿರುತ್ತದೆ. ಪ್ರತಿಯೊಂದು ಪ್ರಭೇದಕ್ಕೂ ವಿಭಿನ್ನ ಕ್ರೊಮೋಸೋಮುಗಳ ವಿಶಿಷ್ಟ (ಅಥವಾ ಮೀಸಲು) ಸಂಖ್ಯೆಯಿದೆ. ಉದಾಹರಣೆಗೆ ಮಾನವನಲ್ಲಿ ಇದು ೨೩ ಜೊತೆ. ಈ ವಿಭಿನ್ನ ಕ್ರೊಮೋಸೋಮುಗಳ ಗಣಕ್ಕೆ ಜೀನೋಮ್ ಎಂದು ಹೆಸರು. ತನ್ನ ಕೋಶದಲ್ಲಿ ಎರಡು ಜೀನೋಮ್ ಪಡೆದಿರುವ ಜೀವಿಗೆ ದ್ವಿಗುಣಿ ಎಂದು ಹೆಸರು. ಹೆಚ್ಚಿನ ಜೀವಿಗಳು ಇಂಥವು. ಜೀನ್‌ಗಳಿರುವುದು ಕ್ರೊಮೋಸೋಮಿನಲ್ಲಿ. ಪ್ರತಿಯೊಂದು ಜೀವಿಗೂ ಇಲ್ಲಿ ಸ್ಥಾನ ನಿರ್ದಿಷ್ಟ. ಜೀನ್ ತೋರ್ಪಡಿಸುವ ರೂಪಾಂತರಗಳಿಗೆ ಅಲೀಲ್ ಎಂದು ಹೆಸರು. ದ್ವಿಗುಣಿಗಳಲ್ಲಿ ಒಂದೇ ಸ್ಥಾನದಲ್ಲಿ ಎರಡು ಅಲೀಲುಗಳು ಮಾತ್ರ ಏಕಕಾಲದಲ್ಲಿ ಇರಲು ಸಾಧ್ಯ. ಜೀವಿಗಳ ಆನುವಂಶಿಕ ರಚನೆಯ ಸಂಘಟನೆಗೆ ಜೀನೋಟೈಪ್ ಎಂದು ಹೆಸರು. ಒಂದು ದ್ವಿಗುಣಿಯಲ್ಲಿ ಸ್ಥಾನ *A* ಯಲ್ಲಿರುವ ಅಲೀಲುಗಳನ್ನು *A,a* ಸೂಚಿಸಿದರೆ, ಸಾಧ್ಯವುಳ್ಳ ಜೀನೋಟೈಪುಗಳು *AA, Aa* ಮತ್ತು *aa.* ನಿರ್ದಿಷ್ಟ ಸ್ಥಾನದಲ್ಲಿ, ಎರಡೂ ಸಮಜಾತ ಕ್ರೊಮೋಸೋಮುಗಳಲ್ಲಿ ಒಂದೇ ತೆರನ ಅಲೀಲುಗಳನ್ನು ಪಡೆದಿರುವ ವ್ಯಕ್ತಿಗೆ ಸಮಜಾತಯುಗ್ಮಜ ಎಂದೂ ಉಳಿದವರಿಗೆ ಅಸಮಜಾತಯುಗ್ಮಜ ಎಂದೂ ಹೆಸರು. ಹೀಗಾಗಿ *AA* ಯಾ *aa* ಸಮಜಾತ ಯುಗ್ಮಜಗಳು: *Aa* ಅಸಮಜಾತ ಯುಗ್ಮಜ. ಮಿಯೋಸಿಸಿನಿಂದಾಗಿ ಯುಗ್ಮಕಗಳ (ಗ್ಯಾಮೀಟ್ಸ್) ರಚನೆಯಾಗುವ ಸಂದರ್ಭದಲ್ಲಿ ಸಮಜಾತ ಕ್ರೊಮೋಸೋಮುಗಳು ಬೇರೆ ಬೇರೆ ಯುಗ್ಮಕಗಳಾಗುತ್ತವೆ. (ಮೆಂಡಲನ ಮೊದಲ ನಿಯಮ). ಗರ್ಭಾದಾನದ ಕಾಲದಲ್ಲಿ ಇವು ಜೊತೆಗೂಡಿ ಹೊಸ ಜೀನೋಟೈಪ್ ದೊರೆಯುತ್ತದೆ. *AA, aa* ಬೆರೆತಾಗ ಫಲಿತ *AA, aa* ಇಲ್ಲವೆ *Aa* ದೊರೆಯಬಹುದು. ಪರಿಸರದ ಪ್ರಭಾವವೂ ಸೇರಿದಂತೆ ಜೀನೋಟೈಪಿನ ಒಟ್ಟು ಭೌತಸ್ವರೂಪ ಫೀನೋಟೈಪ್.

ಅಸಮಜಾತಯುಗ್ಮಜ ತನ್ನಲ್ಲಿರುವ ಎರಡು ಅಲೀಲುಗಳ ಪೈಕಿ ಒಂದರ ಸ್ವಭಾವವನ್ನು ಮಾತ್ರ ಪ್ರದರ್ಶಿಸುತ್ತದೆ. ಇದಕ್ಕೆ ಪ್ರಾಬಲ್ಯ (ಡಾಮಿನೆನ್ಸ್) ಎನ್ನುತ್ತಾರೆ. ನಿದರ್ಶನ: ಹಳದಿ ಬಟಾಣಿ ಬೀಜ (*AA*) ಹಸಿರು ಬೀಜ *(aa)* ಸಂಕರಿಸಿದಾಗ ದೊರೆಯುವ *Aa*

ಹಳದಿ. ಅಂದರೆ ಅಲೀಲ್ *A* ಗೆ *a*ಯ ಮೇಲೆ ಪ್ರಾಬಲ್ಯವಿದೆ. ಅಥವಾ ಜೀನ್ *A* ತನ್ನ ಸಂಗಡ *a* ಇದ್ದರೆ ಅದು ತನ್ನ ಸ್ವಭಾವ ತೋರ್ಪಡಿಸದಂತೆ ಮಾಡುತ್ತದೆ. ಹೀಗಾಗಿ ಜೀನೋಟೈಪ್ *AA*, *Aa* ಒಂದೇ ಫೀನೋಟೈಪ್ ನೀಡುತ್ತವೆ; ಚುಟುಕಾಗಿ ಇದನ್ನು *A*- ಎಂದು ಬರೆಯುತ್ತಾರೆ. ಇದು *AA*, *Aa* ಅಥವಾ *aA* ಯನ್ನು ಸೂಚಿಸುತ್ತದೆ. ಆನುವಂಶಿಕ ಪ್ರತಿರೂಪದ ಒಂದು ನಿದರ್ಶನವನ್ನು ಈಗ ಗಮನಿಸೋಣ.

ಸ್ಥಾನ *A*ಯಲ್ಲಿ *A*,*a* ಅನುಕ್ರಮವಾಗಿ ಪ್ರಬಲ ಮತ್ತು ಅಪ್ರಬಲ (ರಿಸೆಸಿವ್) ಅಲೀಲುಗಳಾಗಿರಲಿ. ಅಸಮಜಾತ ಯುಗ್ಮಜ *Aa* ಗಳು ಯುಗ್ಮಕಗಳನ್ನು ಸರಿಸಂಖ್ಯೆಗಳಲ್ಲಿ ಉತ್ಪತ್ತಿಸುತ್ತವೆಂದು ಭಾವಿಸೋಣ. ಆಗ ಸಂಭಾವ್ಯತೆ {*A*}= ಸಂಭಾವ್ಯತೆ {*a*}=1/2. *AA*, *Aa* ಗಳನ್ನು ಬೆರೆಸಿದರೆ ಯುಗ್ಮಕಗಳು ಪರಸ್ಪರ ಸ್ವತಂತ್ರವಾಗಿ ಯುಗ್ಮಜಗಳಾಗುವುದರಿಂದ

ಸಂ {*AA*} =ಸಂ{*A*}. ಸಂ{*A*}= 1/2 .1/2 =1/4

ಸಂ {*Aa*}ಸಂ {*A*}. ಸಂ {*a*}+ಸಂ{*a*}. ಸಂ{A} =2. ½.1/2, =1/2

ಸಂ {*aa*} =ಸಂ {*a*}. ಸಂ {*a*} = 1/2. 1/2=1/4

ಹೀಗಾಗಿ ಜೀನೋಟೈಪ್ ಮತ್ತು ಫೀನೊಟೈಪ್ ವಿತರಣೆಗಳು ಕೆಳಗಿನಂತಿವೆ.:

ಜೀನೋಟೈಪ್

| | | |
|---|---|---|
| *AA* | *Aa* | *Aa* |
| ¼ | ½ | ¼ |

ಫೀನೊಟೈಪ್

| | |
|---|---|
| A– | aa |
| ¾ | ¼ |

ಪರ್ಯಾಯವಾಗಿ, ಯಗ್ಮಕ *a* ಯು *A*ಗಿಂತ ಕಡಿಮೆ ಶಕ್ತವಾಗಿದ್ದು *a* : *A* = α:1 (0 < α < 1) ಆಗಿರಲಿ. ಆಗ ಸಂ {α} = α/2 ಸಂ {A} = 1 - α/೨ = $\frac{1}{2}$ (2–α) ಮತ್ತು *Aa*,*Aa*, ಗಳನ್ನು ಬೆರೆಸುವಾಗ ಸಂಭಾವ್ಯತಾ ವಿತರಣೆಗಳು

| ಜೀನೋಟೈಪ್ | | | ಫೀನೋಟೈಪ್ | |
|---|---|---|---|---|
| **AA** | **Aa** | **aa** | **A–** | **aa** |
| $1/4(2-\alpha)^2$ | $\frac{2\alpha}{4}(2-\alpha)$ | $1/4\alpha^2$ | $1/4(2-\alpha)\ (2+\alpha)$ | $1/4\alpha^2$ |

ಆನುವಂಶಿಕ ನಡತೆಯುಳ್ಳ ಸಂತಾನೋತ್ಪತ್ತಿ ಕ್ರಮವನ್ನು ಅರಿತು ಅರ್ಥವಿಸಲು ಪ್ರತಿರೂಪಗಳ ನೆರವನ್ನು ಮೇಲಿನ ಉದಾಹರಣೆ ನಿದರ್ಶಿಸುತ್ತದೆ (ಎಸ್.ಟಿ.)

**ಪ್ರಭೇದ:** ಲೈಂಗಿಕ ರೀತಿಯ ಪ್ರಜನನ ತೋರುವ ಮತ್ತು ಅನ್ಯ ನಿಷೇಚನದಲ್ಲಿ ತೊಡಗುವ ಪ್ರಾಣಿಗಳಲ್ಲಿಯ ಹಾಗೂ ಸಸ್ಯಗಳಲ್ಲಿಯ ವಾಸ್ತವವಾಗಿ ಪರಸ್ಪರ ಅಡ್ಡತಳೀಕರಣಗೊಳ್ಳುವ ಇಲ್ಲವೆ ಒಂದರೊಡನೊಂದು ಅಡ್ಡತಳೀಕರಣಗೊಳ್ಳುವ ಸಾಮರ್ಥ್ಯವುಳ್ಳ ಸಂದಣಿ ಅಥವಾ ಸಂದಣಿಗಳ ಗುಂಪು (ಸ್ಪೀಷೀಸ್). ಅಂದರೆ ಯಾವುದೇ ಜೀವಿಸಂದಣಿಯ ಸದಸ್ಯಗಳು ತಮ್ಮ ಆನುವಂಶಿಕ ವಸ್ತುವನ್ನು (ಜೀನ್‌ಗಳನ್ನು) ಮುಕ್ತರೀತಿಯಲ್ಲಿ ಪರಸ್ಪರ ವಿನಿಮಯ ಮಾಡಿಕೊಳ್ಳಬಲ್ಲವಾದರೆ ಮತ್ತು ವಿಭಿನ್ನ ಸಂದಣಿಯ ಸದಸ್ಯಗಳೊಂದಿಗೆ ಈ ರೀತಿ ಜೀನ್ ವಿನಿಮಯ ಮಾಡಿಕೊಳ್ಳಲಾರವಾದರೆ, ಇಂಥ ಜೀವಿಗಳನ್ನು ವಿಭಿನ್ನ ಪ್ರಭೇದಗಳೆಂದು ಕರೆಯಬಹುದು. ಕಳೆದ ಮೂರು ನಾಲ್ಕು ದಶಕಗಳಲ್ಲಿ ಬೆಳೆದುಬಂದಿರುವ ಜೀವಿಸಂದಣಿ ತಳಿವಿಜ್ಞಾನದ (ಪಾಪ್ಯುಲೇಶನ್ ಜೆನೆಟಿಕ್ಸ್) ಅಧ್ಯಯನಗಳಿಂದ ಈ ಪರಿಕಲ್ಪನೆ ರೂಪು ತಳೆದಿದೆ. ನಿಸರ್ಗದಲ್ಲಿ ಕಾಣದೊರೆಯುವ ಲೈಂಗಿಕರೀತಿಯ ಪ್ರಜನನ ನಡೆಸುವ ಮತ್ತು ಅನ್ಯ ನಿಷೇಚನದಲ್ಲಿ ತೊಡಗುವ ಜೀವಿಗಳು, ಅತ್ಯಂತ ಸಂಕೀರ್ಣರೀತಿಯ ಸಂದಣಿಗಳನ್ನು ರೂಪಿಸಿಕೊಂಡಿರುವುವು. ಇಂಥ ಸಂದಣಿಗಳ ಸದಸ್ಯಗಳು ತಮ್ಮ ತಮ್ಮೊಳಗೇ ಸಂಭೋಗ ಕ್ರಿಯೆಯಲ್ಲಿ ತೊಡಗುವುದರಿಂದ ಎಲ್ಲ ಸದಸ್ಯಗಳಿಗೂ ಲಭ್ಯವಾಗುವಂಥ ಜೀನ್ ಭಂಡಾರಗಳನ್ನೇ ನಿರ್ಮಿಸುವುವಲ್ಲದೆ ಮೆಂಡಲೀಯ ಮರುಸಂಯೋಜನಾ ಪ್ರಕ್ರಿಯೆಯ ಮೂಲಕ ಆಯಾ ಪ್ರಭೇದದ ಮುಂದಿನ ವಿಕಾಸಕ್ಕೂ ಅವಕಾಶ ಕಲ್ಪಿಸಿಕೊಳ್ಳುವುವು. ಇದರಿಂದಾಗಿ ಈ ಸಂದಣಿಗಳ ಸದಸ್ಯ ಗುಂಪುಗಳ ನಡುವೆ ಗಮನಾರ್ಹವಾದ ವೈವಿಧ್ಯವಿರುತ್ತದಾದರೂ ಅವುಗಳ ಬಾಹ್ಯರೂಪ, ಸ್ವಭಾವ, ವೈವಿಧ್ಯಗಳ ವಿತರಣೆ ಮುಂತಾದ ಗುಣಲಕ್ಷಣಗಳಲ್ಲಿ ಬೇರೆ ಸಂದಣಿಯ ಜೀವಿಗಳೊಂದಿಗೆ (ಅಂದರೆ ಬೇರೆ ಪ್ರಭೇದಗಳೊಂದಿಗೆ) ವ್ಯತ್ಯಾಸಗಳನ್ನು ತೋರಿಸುತ್ತಿದ್ದು, ಸಂಭೋಗಕ್ರಿಯೆಯನ್ನು ನಡೆಸಲಾರವು. ವಿಭಿನ್ನ ಪ್ರಭೇದಗಳು ಒಟ್ಟೊಟ್ಟಿಗೇ, ಒಂದೇ ಪರಿಸರದಲ್ಲಿ ಜೀವಿಸುತ್ತಿರಬಹುದಾದರೂ ಅವುಗಳ ನಡುವೆ ಜೀನ್ ವಿನಿಮಯ ನಡೆಯದು. ಈ ಸ್ಥಿತಿಗೆ, ಇವುಗಳಲ್ಲಿ ಪ್ರಜನನ ಪ್ರತ್ಯೇಕತಾ ಕ್ರಿಯಾವಿನ್ಯಾಸಗಳಿರುವುದೇ ಕಾರಣ. ಸಂಭೋಗದಲ್ಲಿ ತೊಡಗಲು ಅಸಮರ್ಥತೆ, ಅಕಸ್ಮಾತ್ ಅಡ್ಡಹಾಯ್ಕೆ ನಡೆದಾಗ ಹುಟ್ಟಬಹುದಾದ ಸಂತತಿಗಳಿಗೆ ಜೀವನ ನಿರ್ವಹಣಾ ಸಾಮರ್ಥ್ಯವಿಲ್ಲದಿರುವುದು, ಅಡ್ಡತಳಿಗಳು ಬಂಜೆಗಳಾಗಿರುವುದು–ಇವು ಪ್ರಜನನ ಪ್ರತ್ಯೇಕತೆಯ ಕೆಲವು ಕ್ರಿಯಾವಿನ್ಯಾಸಗಳು. ಅಂತೆಯೇ ಭೌಗೋಳಿಕ ತಡೆಗಳೂ ಕೂಡ ಅಂತರತಳೀಕರಣಕ್ಕೆ ನಿರ್ಬಂಧ ಒಡ್ಡುವುವು. ಈ ರೀತಿ ಪರಸ್ಪರ ಅಂತರತಳೀಕರಣ ಆಗದಿರುವುದರಿಂದ ವಿಭಿನ್ನ ಪ್ರಭೇದಗಳ ಗುಣಲಕ್ಷಣಗಳ ವಿಶೇಷತೆ ಉಳಿದುಬರುತ್ತದೆ. ಕೆಲವೊಮ್ಮೆ ಅಪರೂಪವಾಗಿ ಇಷ್ಟೆಲ್ಲ ತಡೆಗಳಿದ್ದರೂ ಒಂದು ಪ್ರದೇಶದ ವಿವಿಧ ಸಂದಣಿಗಳ ಅಥವಾ ಗುಂಪುಗಳ ನಡುವೆ ಅಂತರತಳೀಕರಣ ನಡೆಯಬಹುದು. ಆಗ ಬೇರೆ ಬೇರೆ ಸಂದಣಿಗಳ ನಡುವಣ ಮಧ್ಯವರ್ತಿ ಗುಣಲಕ್ಷಣಗಳನ್ನು ಪಡೆದಿರುವಂಥ ಜೀವಿಗಳು ಕಾಣಿಸಿಕೊಳ್ಳಬಹುದು. ಇಂಥ ಜೀವಿಗಳನ್ನು ಒಂದೇ ಪ್ರಭೇಧದ ಉಪಪ್ರಭೇದಗಳೆಂದೋ, ವಿಭಿನ್ನ ಪರಿಸರ ಮಾದರಿಗಳೆಂದೋ ನಿರ್ದೇಶಿಸಲಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಪ್ರಭೇದವನ್ನು (ಅದು ಎಷ್ಟೋ ಸಂದಣಿ ಅಥವಾ ಗುಂಪುಗಳನ್ನು ಒಳಗೊಂಡಿರಲಿ) ವಿಕಾಸದ ಒಂದು ಏಕವನ್ನಾಗಿ ಪರಿಗಣಿಸಲಾಗಿದೆ. ಇಂಥ ಪ್ರಭೇದ ಬೇರೆ ಪ್ರಭೇದಗಳಿಂದ ತನ್ನ ಮುಂದಿನ ವಿಕಾಸದ ಮೇಲೆ ಪ್ರಭಾವ ಬೀರುವಷ್ಟು ಮೊತ್ತದಲ್ಲಿ ಆನುವಂಶಿಕ ವಸ್ತುವನ್ನು ಪಡೆಯದು. ಆದ್ದರಿಂದಲೆ ಪ್ರಭೇದಕ್ಕೆ ವರ್ಗೀಕರಣ ವ್ಯವಸ್ಥೆಯ ಅರ್ಥಪೂರ್ಣ ಮೂಲ ಘಟಕ ಎಂಬ ಮಹತ್ವ ಉಂಟು.

ಆದರೆ ಎಲ್ಲ ಜೀವಿಗಳಿಗೂ ಲೈಂಗಿಕ ರೀತಿಯ ಪ್ರಜನನದಲ್ಲಿ ತೊಡಗುವ ಇಲ್ಲವೆ ಅನ್ಯನಿಷೇಚನ ನಡೆಸುವ ಸಾಮರ್ಥ್ಯ ಇರುವುದಿಲ್ಲ. ಅಥವಾ ಜೀವಿಗಳ ನಡುವೆ ಜೀನ್ ವಿನಿಮಯ ನಡೆಯಬಲ್ಲುದೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಸಾಧ್ಯವಾಗದೇ ಇರಬಹುದು. ಇಂಥ ಸಂದರ್ಭಗಳಲ್ಲಿ ಪ್ರಭೇದದ ವ್ಯಾಖ್ಯೆ ಸುಲಭವಲ್ಲ. ಆಗ ಜೀವಿವರ್ಗೀಕರಣ ವಿಜ್ಞಾನದ ವಿಧಾನವನ್ನು ಬಳಸಿ ಪ್ರಭೇದ ಎಂದರೇನು ಎಂಬುದಕ್ಕೆ ವಿವರಣೆ ಕೊಡಲಾಗುತ್ತದೆ. ಈ ವಿಧಾನದಲ್ಲಿ ಜೀವಿಗಳ ಬಾಹ್ಯರೂಪದ ಹಾಗೂ ಶಾರೀರಿಕ ವ್ಯತ್ಯಾಸ ಹೋಲಿಕೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಈ ಅರ್ಥದಲ್ಲಿ ಪ್ರಭೇದವೆಂದರೆ, ಕೆಲವೊಂದು ವಿಶಿಷ್ಟ ಗುಣಲಕ್ಷಣಗಳನ್ನು ಸಮಾನವಾಗಿ ಉಳ್ಳಂಥ ಜೀವಿಗಳ ಗುಂಪು. ಪ್ರಭೇದದ ಈ ವ್ಯಾಖ್ಯೆಗೆ ಯಾವುದೇ ತೆರನ ನಿರ್ದಿಷ್ಟ ವೈಕಾಸಿಕ ಅರ್ಥವನ್ನು ಆರೋಪಿಸಲಾಗುವುದಿಲ್ಲವಾದರೂ ಯಾವ ಜೀವಿಗಳ ವರ್ಗಸ್ತರವನ್ನು ಪ್ರಾಯೋಗಿಕವಾಗಿಯಾಗಲೀ ಬೇರಾವುದೇ ವಿಧಾನದಿಂದಾಗಲೀ ನಿರ್ಧರಿಸುವುದು ಕಷ್ಟವೆನಿಸಿದಾಗ ಈ ಎರಡನೆಯ ವ್ಯಾಖ್ಯೆಯನ್ನೇ ಬಳಸಲಾಗುತ್ತದೆ. ***

**ಪ್ರಭೇದೋದ್ಭವ:** ಅಸ್ತಿತ್ವದಲ್ಲಿರುವ ಪ್ರಭೇದವೊಂದರಿಂದ ಹೊಸ ಪ್ರಭೇದ ಉದ್ಭವಿಸುವ ಪ್ರಕ್ರಿಯೆ (ಆರಿಜಿನ್ ಆಫ್ ಸ್ಪೀಶೀಸ್). ಜೀವವಿಕಾಸದಲ್ಲಿ ಪ್ರಭೇದೋದ್ಭವ ಬಹು ಪ್ರಮುಖವಾದ ವಿಷಯ. ಬ್ರಿಟಿಷ್ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ೧೮೫೯ರಲ್ಲಿ ನೈಸರ್ಗಿಕ ಆಯ್ಕೆಯಿಂದ ಪ್ರಭೇದೋದ್ಭವ ಎಂಬ ಪುಸ್ತಕವನ್ನು ಪ್ರಕಟಿಸಿದ. ಹೊಸ ಹೊಸ ಪ್ರಭೇದಗಳು ಆಗಾಗ ಉದ್ಭವಿಸುತ್ತಿರುತ್ತವೆ, ನಶಿಸಿಹೋಗುತ್ತಿರುತ್ತವೆ ಎಂದು ಈ ಪುಸ್ತಕದಲ್ಲಿ ಹೇಳಲಾಗಿದೆ. ಪ್ರಭೇದೋದ್ಭವಕ್ಕೆ ಈ ಕೆಳಗಿನ ಕಾರಣಗಳನ್ನು ಡಾರ್ವಿನ್ ಕೊಟ್ಟಿದ್ದಾನೆ.

೧. ಅತಿ ಉತ್ಪಾದನೆ: ಯಾವುದೇ ಜೀವಿ ವಾಸ್ತವವಾಗಿ ಸಂತತಿಯನ್ನು ಉತ್ಪಾದಿಸುವಾಗ ಬದುಕುಳಿಯುವ ಸಂಖ್ಯೆಗಿಂತ ಹೆಚ್ಚು ಸಂತತಿಯನ್ನು ಉತ್ಪಾದಿಸುತ್ತದೆ. ಉದಾಹರಣೆಗೆ ಒಂದು ಮೀನು ವರ್ಷಕ್ಕೆ ೪೦,೦೦೦ಕ್ಕಿಂತ ಹೆಚ್ಚು ಮೊಟ್ಟೆಗಳನ್ನಿಡುತ್ತದೆ. ಅವುಗಳಲ್ಲಿ ಕೆಲವು ಮೊಟ್ಟೆಗಳು ಯಾಂತ್ರಿಕವಾಗಿ ನಶಿಸಿ ಹೋದರೆ ಇನ್ನು ಕೆಲವು ಇತರ ಪ್ರಾಣಿಗಳಿಗೆ ಆಹಾರವಾಗುತ್ತವೆ. ಉಳಿಯುವುವು ಕೇವಲ ಕೆಲವೇ. ಜಂತುಹುಳು ದಿನಕ್ಕೆ ಲಕ್ಷಾಂತರ ಮೊಟ್ಟೆಗಳನ್ನಿಡುತ್ತದೆ. ಆದರೆ ಇವುಗಳಲ್ಲಿ ಕೇವಲ ಕೆಲವು ಮಾತ್ರ ಆತಿಥೇಯಗಳನ್ನು ಸೇರಬಹುದು. ಎಲ್ಲ ಮೊಟ್ಟೆಗಳೂ ಒಡೆದು ಮರಿಗಳಾಗಿ ಬೆಳೆದಿದ್ದರೆ, ಇಡೀ ಭೂಮಂಡಲ ಕೇವಲ ಒಂದೇ ಪ್ರಭೇದವನ್ನು ಒಳಗೊಂಡಿರಬೇಕಿತ್ತು. ಹೀಗೆಯೇ ಅನೇಕ ಉದಾಹರಣೆಗಳನ್ನು ಕೊಡಬಹುದು. ಒಂದು ಹೆಣ್ಣು ಆನೆಯ ಆಯಸ್ಸು ೧೦೦ ವರ್ಷ ಎಂದಿಟ್ಟುಕೊಂಡರೆ, ಅದು ತನ್ನ ೩೦ ರಿಂದ ೭೦ನೆಯ ವರ್ಷದವರೆಗೆ ಮರಿಹಾಕುತ್ತದೆ. ಅಂದರೆ ಅದು ೪೦ ವರ್ಷ ಕಾಲ ಮರಿಹಾಕಬಲ್ಲುದು. ಒಮ್ಮೆ ಗರ್ಭಧರಿಸಿ ಮರಿಹಾಕಲು ಆನೆಗಳಿಗೆ ೧೮ ತಿಂಗಳು ಬೇಕಾಗುತ್ತದೆ. ಅಥವಾ ಎರಡು ವರ್ಷಗಳಿಗೊಂದರಂತೆ ೪೦ ವರ್ಷಗಳಲ್ಲಿ ಸುಮಾರು ೨೦ ಮರಿ ಆನೆಗಳು ಹುಟ್ಟುತ್ತವೆ ಎಂದಾಯಿತು. ಒಂದು ಹೆಣ್ಣು

ಮತ್ತು ಒಂದು ಗಂಡು ಪ್ರಬುದ್ಧ ಆನೆಗಳಿಂದ ಆನೆಯ ಪ್ರಭೇದ ಪ್ರಾರಂಭವಾಯಿತು ಎಂದಿಟ್ಟುಕೊಳ್ಳೋಣ. ೩೦ ವರ್ಷಗಳಲ್ಲಿ ೧೫ + ೨ = ೧೭ ಆನೆಗಳು ಇರಬೇಕು. ೩೦ನೆಯ ವರ್ಷದಿಂದ ಮರಿ ಆನೆಗಳೂ ಪ್ರಜನನಕ್ರಿಯೆಯಲ್ಲಿ ತೊಡಗುವುದರಿಂದ ೬೦ನೆಯ ವರ್ಷದ ಹೊತ್ತಿಗೆ ಸುಮಾರು ೧೨೫ ಆನೆಗಳಿರುವಂತಾಗುತ್ತದೆ. ಈ ರೀತಿ ಇವುಗಳ ಸಂಖ್ಯೆ ವೃದ್ಧಿಯಾಗುತ್ತ ಹೋದರೆ ೭೫೦ ವರ್ಷಗಳಲ್ಲಿ ಹುಟ್ಟುವ ಆನೆಗಳನ್ನೆಲ್ಲ ಸಾಲಾಗಿ ನಿಲ್ಲಿಸಿದರೆ ಭೂಮಿಗೂ ಸೂರ್ಯನಿಗೂ ಮಧ್ಯೆ ಆನೆಗಳ ಸೇತುವೆಯನ್ನೇ ನಿರ್ಮಿಸಬಹುದು. ಆದರೆ ವಾಸ್ತವವಾಗಿ ಆನೆಗಳ ಸಂಖ್ಯೆ ಹೀಗೆ ದ್ವಿಗುಣವಾಗುವುದಿಲ್ಲ ಎನ್ನುವ ಸಂಗತಿ ಬೇರೆ.

೨. ಬದುಕುಳಿಯುವಿಕೆಯ ಹೋರಾಟ ಮತ್ತು ಸ್ಪರ್ಧೆ: ಅತಿ ಉತ್ಪಾದನೆಯಿಂದ ಒಂದೇ ಪ್ರಭೇದದ ಪ್ರಾಣಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತದೆ. ಆದರೆ ಇವು ವಾಸಿಸುವ ಪರಿಸರದಲ್ಲಿ ಸ್ಥಳಾವಕಾಶದ ಅಥವಾ ಆಹಾರದ ಹೆಚ್ಚಳವಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಒಂದೇ ಪ್ರಭೇದದ ಜೀವಿಗಳಲ್ಲಿ ಆಹಾರ ಮತ್ತು ಸ್ಥಳಾವಕಾಶಕ್ಕಾಗಿ ತೀವ್ರಸ್ಪರ್ಧೆ ಪ್ರಾರಂಭವಾಗುತ್ತದೆ. ಈ ಸ್ಪರ್ಧೆಗೆ ಬದುಕಿನ ಹೋರಾಟ ಎಂದು ಹೆಸರು. ಇದು ಎಷ್ಟು ತೀವ್ರ ಎಂದರೆ ಕೆಲವು ಪ್ರಭೇದಗಳಲ್ಲಿ ಬಲಯುತ ಪ್ರಾಣಿ ಬಲಹೀನವಾದವನ್ನು ಕೊಲ್ಲುವುದಕ್ಕೂ ಹಿಂದೆಗೆಯುವುದಿಲ್ಲ. ವಿಕಾಸದ ಆದಿಯಿಂದ ಈ ತೆರನ ಹೋರಾಟ ಮತ್ತು ಸ್ಪರ್ಧೆ ವಿವಿಧ ಹಂತಗಳಲ್ಲಿ ನಡೆಯುತ್ತಲೇ ಬಂದಿದೆ. ಎರಡು ಗುಂಪುಗಳ ನಡುವೆ, ಎರಡು ಪ್ರಭೇದಗಳ ನಡುವೆ, ಒಂದೇ ಪ್ರಭೇದದ ಎರಡು ಜೀವಿಗಳ ನಡುವೆ ಈ ಹೋರಾಟ ನಡೆಯುತ್ತಿದೆ.

೩. ವೈವಿಧ್ಯ: ಡಾರ್ವಿನ್ನನ ಪ್ರಕಾರ ವಿವಿಧ ಪ್ರಭೇದಗಳನ್ನು ಅವುಗಳಲ್ಲಿರುವ ವ್ಯತ್ಯಾಸ ಇಲ್ಲವೇ ಭಿನ್ನತೆಗಳಿಂದ ಗುರುತಿಸಬಹುದು. ಹಾಗೆಯೇ ಒಂದೇ ಪ್ರಭೇದದ ಜೀವಿಗಳಲ್ಲಿ ಕೂಡ ಸ್ವಲ್ಪಮಟ್ಟಿನ ವ್ಯತ್ಯಾಸವುಂಟು. ಇದೇ ವೈವಿಧ್ಯ. ಇದು ಆನುವಂಶೀಯ ಗುಣ. ಹಾಗೂ ಜೀವಿಗಳ ಸಾಮಾನ್ಯ ನಿಯಮ. ಉದಾಹರಣೆಗೆ ಶಾಲೆಯ ಒಂದು ತರಗತಿಯ ಮಕ್ಕಳ ಸರಾಸರಿ ಎತ್ತರವನ್ನು ತೆಗೆದುಕೊಂಡರೆ ನೂರರಲ್ಲಿ ಒಂದೋ ಎರಡೋ ಮಕ್ಕಳು ಮಾತ್ರ ಸರಾಸರಿ ಎತ್ತರದವರು. ಉಳಿದವರ ಎತ್ತರ ವಿಭಿನ್ನ.

೪. ಬದುಕುವ ಅರ್ಹತೆ: ಬದುಕಿನ ಹೋರಾಟದಲ್ಲಿ ಅತ್ಯುತ್ತಮ ವೈವಿಧ್ಯವನ್ನು ಪಡೆದಿರುವ ಜೀವಿಗಳು ಮಾತ್ರ ಉಳಿಯುತ್ತವೆ. ಉಳಿದವು ಅಳಿಯುತ್ತವೆ. ವೈವಿಧ್ಯದ ತರತಮಗಳನ್ನು ನಿಸರ್ಗ ನಿರ್ಧರಿಸುತ್ತದೆ. ಉತ್ತಮ ವೈವಿಧ್ಯವನ್ನು ತೋರುವ ಜೀವಿಗಳು ಬದಲಾಗುವ ಪರಿಸರಕ್ಕೆ ಸುಲಭವಾಗಿ ಹೊಂದಿಕೊಳ್ಳುವುದೇ ಇದಕ್ಕೆ ಕಾರಣ. ಈ ಹೊಂದಾಣಿಕೆಗಳನ್ನು ತೋರುವ ಜೀವಿ ಉಳಿದ ಜೀವಿಗಳ ಮೇಲೆ ವಿಕ್ರಮವನ್ನು ಸಾಧಿಸುತ್ತದೆ. ಇಂಥ ಜೀವಿಗಳಿಗೆ ನಿಸರ್ಗದ ಆಯ್ಕೆಯಲ್ಲಿ ಬದುಕುವ ಅರ್ಹತೆಯನ್ನು ಪಡೆದವು ಎಂದು ಹೆಸರು. ಹೀಗೆ ನಿಸರ್ಗದ ಆಯ್ಕೆ ಭೂಮಿಯ ಮೇಲೆ ನಿರಂತರವಾಗಿ ನಡೆಯುತ್ತ ಬಂದಿದೆ. ಇದರ ಫಲವಾಗಿ ಹಲವಾರು ಹೊಸ ಪ್ರಭೇದಗಳು ಹುಟ್ಟಿಕೊಂಡವು; ಇವುಗಳಲ್ಲಿ ಕೆಲವು ವಿಕಸಿಸಿದುವು, ಇನ್ನು ಕೆಲವು ಪ್ರಭೇದಗಳು ನಶಿಸಿ ಹೋದುವು. ಭೂಮಿಯ ಇತಿಹಾಸದ ಒಂದು ಕಾಲದಲ್ಲಿ ಅತ್ಯಂತ ವಿಕಸಿತಗೊಂಡ ಪ್ರಭೇದಗಳು ಇನ್ನೊಂದು ಕಾಲದಲ್ಲಿ ನಶಿಸಿ ಹೋದುವು. ಹಲವಾರು ಹೊಸ ಮಾರ್ಪಡುಗಳೊಂದಿಗೆ ಹೊಸ ಪ್ರಭೇದಗಳಾಗಿ ಮಾರ್ಪಟ್ಟವು. ಇದು ಡಾರ್ವಿನ್ನನ ಪ್ರಭೇದೋದ್ಭವ ಪುಸ್ತಕದ ಸಾರಾಂಶ.

ಡಾರ್ವಿನ್ನನಿಗಿಂತ ಮುಂಚೆಯೇ ವಿಕಾಸ ಮತ್ತು ಪ್ರಭೇದೋದ್ಭವಕ್ಕೆ ಹಲವರು ಹಲವಾರು ಕಾರಣಗಳನ್ನು ಕೊಟ್ಟಿದ್ದರು. ಇವುಗಳಲ್ಲಿ ಲಮಾರ್ಕನ ಸಿದ್ಧಾಂತವೂ ಡಾರ್ವಿನ್ನನ ಸಿದ್ಧಾಂತದಂತೆಯೇ ಸ್ವಲ್ಪ ಮಹತ್ತ್ವ ಪಡೆದಿದೆ. ಲಮಾರ್ಕನ ಪ್ರಕಾರ ಯಾವುದೇ ಜೀವಿಯ ಒಂದು ಅಂಗ ನಿರಂತರವಾಗಿ ಬಳಕೆಯಾದಾಗ ಅದು ಬಲವಾಗಿ ಬೆಳೆದು ಆ ಜೀವಿಯ ಅನಂತರದ ಸಂತತಿಗಳಿಗೆ ಆನುವಂಶೀಯವಾಗಿ ಮುಂದುವರಿಯುತ್ತದೆ. ಇದಕ್ಕೆ ಲಮಾರ್ಕ್ ಜಿರಾಫೆಯ ಕತ್ತನ್ನು ಉದಾಹರಿಸಿದ್ದಾನೆ. ಜಿರಾಫೆಯ ಪೂರ್ವಜಗಳಿಗೆ ಚಿಕ್ಕ ಕತ್ತು ಇತ್ತು ಮತ್ತು ಅವು ಹುಲ್ಲನ್ನು ಮೇಯುತ್ತಿದ್ದುವು. ಕಾಲಕ್ರಮೇಣ ಹುಲ್ಲು ಸುಲಭವಾಗಿ ಸಿಕ್ಕದೆ ಹೋದಾಗ ಅವು ಮರದ ಮೇಲಿನ ಎಲೆಗಳನ್ನು ತಿನ್ನತೊಡಗಿದವು. ನಿರಂತರವಾಗಿ ಕತ್ತನ್ನು ಮೇಲಕ್ಕೆತ್ತಿ ಎಲೆಗಳನ್ನು ತಿನ್ನುತ್ತಿದ್ದರಿಂದ ಜಿರಾಫೆಯ ಕತ್ತು ಉದ್ದವಾಗುತ್ತ ಹೋಗಿ ಎತ್ತರದಲ್ಲಿದ್ದ ಎಲೆಗಳನ್ನು ತಿನ್ನಲು ಸಹಾಯಕವಾಯಿತು. ಕ್ರಮೇಣ ಈ ಉದ್ದ ಕತ್ತು ಜಿರಾಫೆಯ ಸಂತಾನಗಳಲ್ಲಿ ಆನುವಂಶೀಯವಾಯಿತು.

ಜಿರಾಫೆಯ ಕತ್ತು ಉದ್ದವಾಗಿರುವುದಕ್ಕೆ ಡಾರ್ವಿನ್ನನ ಸಿದ್ಧಾಂತದ ಪ್ರಕಾರವೂ ವಿವರಣೆ ಕೊಡಬಹುದು. ಪ್ರಾಚೀನ ಕಾಲದಲ್ಲಿ ಜಿರಾಫೆಗಳು ಹುಲ್ಲನ್ನು ಮೇಯುತ್ತಿದ್ದು ಅವುಗಳ ಕತ್ತು ಚಿಕ್ಕದಾಗಿತ್ತು, ಜಿರಾಫೆಯ ಕತ್ತಿನ ಉದ್ದ ಆನುವಂಶೀಯವಾಗಿ ಬರುವ ಗುಣ. ಆದ್ದರಿಂದ ಅವುಗಳಲ್ಲಿ ವೈವಿಧ್ಯವೂ ಇತ್ತು. ನೆಲದಮೇಲೆ ಸಾಕಷ್ಟು ಹುಲ್ಲು ದೊರೆಯದಿದ್ದಾಗ ಜಿರಾಫೆಗಳು ತಮ್ಮ ಆಹಾರದಲ್ಲಿ ಬದಲಾವಣೆಯನ್ನು ಮಾಡಿಕೊಂಡು ಮರದ ಮೇಲಿನ ಎಲೆಗಳನ್ನು ತಿನ್ನಲಾರಂಭಿಸಿದುವು. ಉದ್ದ ಕತ್ತನ್ನು ಪಡೆದಿದ್ದ ಜಿರಾಫೆಗಳು ಹೆಚ್ಚು ಎತ್ತರದಲ್ಲಿರುವ ಎಲೆಗಳನ್ನು ತಿನ್ನಲು ಶಕ್ತವಾದವು. ಅದರಿಂದ ಉದ್ದ ಕತ್ತಿನ ಜಿರಾಫೆಗಳು ಬದುಕುವ ಅರ್ಹತೆಯನ್ನು ಪಡೆದು ನಿಸರ್ಗದ ಆಯ್ಕೆಯಲ್ಲಿ ಜಯಗಳಿಸಿದವು. ಉಳಿದವು ನಶಿಸಿ ಹೋದುವು.

೧೯ನೆಯ ಶತಮಾನದ ಅಂತ್ಯದಲ್ಲಿ ಡಾರ್ವಿನ್ನನ ಸಿದ್ಧಾಂತಕ್ಕೆ ಹೆಚ್ಚು ಪುರಸ್ಕಾರ ದೊರೆಯಿತು. ಆದರೆ ೨೦ನೆಯ ಶತಮಾನದ ಪ್ರಾರಂಭದಲ್ಲಿ ಮೆಂಡಲನ ನಿಯಮಗಳ ಪುನರ್‌ಶೋಧನೆಯಾದ ಅನಂತರ ೧೯೩೦ ವರೆಗೆ ತಳಿವಿಜ್ಞಾನದಲ್ಲಿ ಅನೇಕ ಮೂಲಭೂತ ಸಂಶೋಧನೆಗಳು ನಡೆದು ೧೯೩೦ರ ಅನಂತರ ವಿಕಾಸವಾದಕ್ಕೆ ತಳಿವಿಜ್ಞಾನದ ಅಡಿಗಲ್ಲು ದೊರೆತು ಡಾರ್ವಿನ್ ಸಿದ್ಧಾಂತ ಮಾರ್ಪಾಟುಗೊಂಡು ನವಡಾರ್ವಿನ್‌ವಾದ ಎಂಬ ಹೆಸರಿನಿಂದ ಪ್ರಸಿದ್ಧಿ ಗಳಿಸಿತು.

ನವಡಾರ್ವಿನ್‌ವಾದದ ಪ್ರಕಾರ ಪ್ರಭೇದೋದ್ಭವಕ್ಕೆ ಮೂಲ ಕಾರಣ ಪ್ರಜನನ ಪ್ರತ್ಯೇಕತೆ; ಒಂದು ಪ್ರಭೇದದ ಒಂದೇ ಜೀವಿಯನ್ನಾಗಲೀ ಒಂದು ಸಂಪೂರ್ಣ ಪ್ರಭೇದವನ್ನಾಗಲೀ ನವಡಾರ್ವಿನ್‌ವಾದದ ಪ್ರತಿಪಾದಕರು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಒಂದು ನಿರ್ದಿಷ್ಟ ಕಾಲಮಾನದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವ ಒಂದು ಪ್ರಭೇದದ ಅನೇಕ ಜೀವಿಗಳನ್ನು ಒಟ್ಟಿಗೆ ಗಣನೆಗೆ ತೆಗೆದುಕೊಳ್ಳುತ್ತಾರೆ. ಅವುಗಳನ್ನೆಲ್ಲ ಒಂದುಗೂಡಿಸಿ ಅವನ್ನು ಒಂದು ಮೆಂಡಲನ ಜನಸಂಖ್ಯೆ ಎಂದು ಹೆಸರಿಸುತ್ತಾರೆ. ಒಂದು ಮೆಂಡಲನ ಜನಸಂಖ್ಯೆ ಎಂದರೆ ನಿರ್ದಿಷ್ಟ ಭೂಭಾಗವೊಂದರಲ್ಲಿ ಸ್ವತಂತ್ರ ಲೈಂಗಿಕತೆಯನ್ನು ಪಡೆದಿರುವ ಮತ್ತು ಜೀನ್‌ಗಳ ಅದಲು ಬದಲು ಮಾಡಿಕೊಳ್ಳಲು ಸಾಧ್ಯವಿರುವ ಪ್ರಾಣಿಗಳ ಗುಂಪು. ಇಂಥ ಗುಂಪಿನಿಂದ ಆನುವಂಶೀಯತೆಯಲ್ಲಿ ವೈವಿಧ್ಯ ಉಂಟಾದಾಗ ಯಾವುದೋ ಒಂದು ಹಂತದಲ್ಲಿ ಪ್ರಜನನ ಪ್ರತ್ಯೇಕತೆಯುಂಟಾಗಿ ಈ ಎರಡು ಗುಂಪುಗಳು ಜನಿಸಿ ಬೇರೆ ಬೇರೆ ಪ್ರಭೇದಗಳು ಎನಿಸಿಕೊಳ್ಳುತ್ತವೆ ಎಂಬುದು ನವಡಾರ್ವಿನ್‌ವಾದದ ತಿರುಳು. ಪ್ರಭೇದವನ್ನು ಪ್ರಜನನ ಪ್ರತ್ಯೇಕತೆ ಮತ್ತು ನವಡಾರ್ವಿನ್‌ವಾದದ ದೃಷ್ಟಿಯಲ್ಲಿ ಅವಲೋಕಿಸಿದರೆ ಕೆಳಗಿನ ಅಂಶಗಳು ಕಂಡುಬರುತ್ತವೆ. ಪ್ರಭೇದಗಳ ಅವಶ್ಯಕತೆ: ಜೀವಿಗಳು ಬೇರೆ ಬೇರೆ ಆಹಾರವನ್ನು ಸೇವಿಸಿ ವಿವಿಧ ಪರಿಸರಗಳಲ್ಲಿ ಜೀವಿಸಬಲ್ಲವು. ಇಂದು ನಾವು ವೈವಿಧ್ಯಮಯ ಸಸ್ಯಗಳನ್ನೂ ಪ್ರಾಣಿಗಳನ್ನೂ ಭೂಮಿಯ ಬೇರೆ ಬೇರೆ ಭಾಗಗಳಲ್ಲಿ ಕಾಣುತ್ತಿದ್ದರೂ, ಜೀವ ಒಂದು ನೇರ ವಿಕಾಸದ ಹಾದಿಯಲ್ಲಿಯೇ ಬಂದಿದೆ. ಏಕೆಂದರೆ ಜೀವದ ಉಗಮ ಒಮ್ಮೆ ಮಾತ್ರ ಆಗಿದ್ದು ತದನಂತರ ವಿವಿಧ ಪ್ರಭೇದಗಳು, ಗುಂಪುಗಳು, ಕುಟುಂಬಗಳು, ಉಪವರ್ಗಗಳು, ವರ್ಗಗಳು, ಇತ್ಯಾದಿ ರೂಪುಗೊಂಡವು. ಆದರೆ ವಿಕಾಸ ನಿಧಾನವಾಗಿ ನಡೆಯುತ್ತದೆ. ಜೀವದ ಉಗಮವಾದ ತರುವಾಯದ ಎಲ್ಲ ಪ್ರಭೇದಗಳೂ ಇಂದು ಕಂಡುಬರಬೇಕಿತ್ತು. ಆದರೆ ಈ ವಿಕಾಸದ ಹೆದ್ದಾರಿಯಲ್ಲಿ ಸಾಗಲಾರದೆ ಎಷ್ಟೋ ಪ್ರಭೇದಗಳು ಅಳಿದು ಹೋಗಿ ಪಳೆಯುಳಿಕೆಗಳಾದುವು. ಇವುಗಳಲ್ಲಿ ಕೆಲವೇ ಕೆಲವು ಇಂದು ಸಿಕ್ಕಿವೆ. ಇನ್ನುಳಿದವು ಅಧ್ಯಯನಕ್ಕೆ ಸಿಗದೇ ಹೋಗಿವೆ. ಹೀಗೆ ಜೀವಪ್ರಪಂಚ ಮೂಲಭೂತವಾಗಿ ವಿಚ್ಛಿನ್ನವಾಗಿದೆ.

ಮೆಂಡಲನ ಪ್ರತ್ಯೇಕತೆ ಮತ್ತು ಪುನರ್‌ಸಂಯೋಜನೆಗಳು ಅಸಂಖ್ಯಾತ ಜೀನ್ ಸಂಕೀರ್ಣಗಳನ್ನು ನಿರ್ಮಿಸುತ್ತವೆ. ನೈಸರ್ಗಿಕ ಆಯ್ಕೆಯಲ್ಲಿ ಹಲವಾರು ಜೀನ್ ಸಂಕೀರ್ಣಗಳು ಅಚೇತನ ಅಥವಾ ಜಡಚೇತನವಾಗಿದ್ದು ಇಂಥವು ಅಳಿದು ಹೋದವು. ಅಂದರೆ ಈಗ ಇರುವ ಜೀವಿಗಳೆಲ್ಲ ಬದುಕಲು ಸಮರ್ಥ ಅಥವಾ ಯೋಗ್ಯ ಎಂದು ಅರ್ಥವಲ್ಲ. ನೈಸರ್ಗಿಕ ಆಯ್ಕೆ ಪೂರ್ವಯೋಜಿತವಲ್ಲ. ಯಾವ ಜೀನ್ ಮಾದರಿಗಳು ವಿಕಾಸದಲ್ಲಿ ಗೆಲುವನ್ನು ಸಾಧಿಸಿದವೋ ಅವು ವಾಸ್ತವದಲ್ಲಿ ಬದುಕುಳಿಯಲು ಯೋಗ್ಯವಾದವು. ಮುಂದೊಮ್ಮೆ ಇವೂ ಯೋಗ್ಯವಲ್ಲವೆನಿಸಿಕೊಳ್ಳಬಹುದು. ಯೋಗ್ಯವಲ್ಲ ಎಂದರೆ ಯೋಗ್ಯ ಜೀನ್ ಮಾದರಿಗಳನ್ನು ಪರಿಣಾಮಕಾರಿಯಾಗಿ ಪ್ರಜನನ ನಡೆಸಲಾರವು ಎಂದರ್ಥ. ಅಂದರೆ ಭೇದಾತ್ಮಕ ಪ್ರಜನನ ಎಂಬುದು ವಿಕಾಸದ ಬಹು ಮುಖ್ಯ ಅಂಶ ಎಂದು ಹೇಳಬಹುದು. ಭೂಮಿಯ ಮೇಲೆ ಒಂದೇ ರೀತಿಯ ಪರಿಸರವಿದೆ ಎಂದೂ ಜೀವಿಗಳೆಲ್ಲ ಒಂದೇ ರೀತಿಯ ಆಹಾರವನ್ನು ಉಪಯೋಗಿಸಿಕೊಂಡು ಬದುಕಿವೆ ಎಂದೂ ಕಲ್ಪಿಸಿಕೊಂಡರೆ, ಭೂಮಿಯ ಮೇಲೆಲ್ಲ ಒಂದೇ ಒಂದು ಪ್ರಭೇದವಿದ್ದರೂ ಸಾಕಾಗುತ್ತದೆ. ಬಹುಶಃ ಮೊತ್ತ ಮೊದಲು ಜೀವಿ ಉದ್ಭವಿಸಿದಾಗ ಈ ರೀತಿಯ ಪರಿಸರ ಇದ್ದಿರಬೇಕು. ಅನಂತರ ಪರಿಸರ ಬದಲಾಗುತ್ತ ಬಂದಂತೆ ಜೀವಿಗಳು ಹೊಸ ಹೊಸ ಪರಿಸರಗಳಿಗೆ ವಲಸೆ ಹೋಗಲು ಪ್ರಾರಂಭಿಸಿ ಹೊಸ ಪರಿಸರಗಳಿಗೆ ತಕ್ಕ ಜೀನ್‌ಪ್ರರೂಪಗಳನ್ನು ರೂಪಿಸಿಕೊಂಡಿರಬೇಕು.

ಪ್ರಜನನ ಜೀವಿಗಳ ಪ್ರಮುಖ ಲಕ್ಷಣ: ಜೀವಿಗಳು ಅನೇಕ ವಿಧದಲ್ಲಿ ಪ್ರಜನನವನ್ನು ತೋರುವುವು. ಹೆಚ್ಚಿನಂಶ ಜೀವಿಗಳು ಲೈಂಗಿಕ ರೀತಿಯ ಪ್ರಜನನದಲ್ಲಿ ತೊಡಗಿದರೆ

ಇನ್ನು ಕೆಲವು ಜೀವಿಗಳು ನಿರ್ಲಿಂಗರೀತಿಯ ಪ್ರಜನನವನ್ನು ತೋರುವುವು. ಕೆಲವೇ ಕೆಲವು ಪ್ರಾಣಿಗಳಲ್ಲಿ ಅನಿಷೇಚನ ಪ್ರಜನನ ಇದೆಯಾದರೂ ಇಂಥವುಗಳ ಸಂಖ್ಯೆ ಗೌಣ. ಲೈಂಗಿಕ ಪ್ರಜನನದಲ್ಲಿ ಕೂಡ ಅನೇಕ ವಿಧಗಳಿವೆಯಾದರೂ ಲಿಂಗಾಣುಗಳ ಉತ್ಪತ್ತಿ ಮತ್ತು ಅವುಗಳ ಸಂಯೋಗಗಳು ಎಲ್ಲ ವಿಧಗಳಲ್ಲೂ ಒಂದೇ ಆಗಿವೆ. ಪಿತೃವಿನಿಂದ ಮತ್ತು ಮಾತೃವಿನಿಂದ ಸಮವಾಗಿ ಆನುವಂಶೀಯ ವಸ್ತುಗಳು ಮುಂದಿನ ಪೀಳಿಗೆಗೆ ವರ್ಗಾವಣೆಯಾಗುವುವು. ಪ್ರಭೇದ ಮತ್ತು ಪ್ರಭೇದೋದ್ಭವ ಇವೆರಡೂ ಜೀವಿಗಳ ಪ್ರಜನನ ಶಕ್ತಿಯನ್ನೇ ಅವಲಂಬಿಸಿರುತ್ತವೆ. ಲೈಂಗಿಕ ರೀತಿಯಲ್ಲಿ ಪ್ರಜನನ ನಡೆಸುವ ಜೀವಿಗಳಲ್ಲಿ ವಿಕಾಸ ಹೆಚ್ಚು ಪರಿಣಾಮ ಬೀರುತ್ತದೆ.

ಪ್ರಭೇದ: ಪ್ರಭೇದ ಎಂದರೆ ಸಾಮಾನ್ಯ ಅರ್ಥದಲ್ಲಿ ಜೀವಿಗಳು ಹೊಂದಾಣಿಕೆಗಳನ್ನು ಪಡೆದು ಅವನ್ನು ಪೂರ್ತಿಯಾಗಿಯೊ ಸ್ವಲ್ಪವಾಗಿಯೊ ಉಳಿಸಿಕೊಳ್ಳುವವು. ಇದು ಒಂದು ಅನಾವಶ್ಯಕ ವ್ಯಾಖ್ಯೆ ಎಂದು ಕೆಲವರ ಅಭಿಪ್ರಾಯ. ಪ್ರಭೇದಕ್ಕೆ ಇನ್ನೊಂದು ವಾಖ್ಯೆ ಎಂದರೆ ಲೈಂಗಿಕ ಪುನರುತ್ಪತ್ತಿ ಮಾಡುವ ಜೀವಿಗಳ ಸಂದಣಿ ಇಂತಹ ಇನ್ನೊಂದು ಸಂದಣಿಯೊಂದಿಗೆ ಲೈಂಗಿಕತೆಯಲ್ಲಿ ಅಥವಾ ಪ್ರಜನನದಲ್ಲಿ ಪ್ರತ್ಯೇಕಗೊಳ್ಳುವುದು. ಹೀಗೆ ಪ್ರತ್ಯೇಕತೆಯನ್ನು ತೋರುವ ಸಂದಣಿಗಳೆರಡು ಹೊಸ ಪ್ರಭೇದಗಳೆನಿಸಿಕೊಳ್ಳುತ್ತವೆ. ಪ್ರಭೇದ ಮುಚ್ಚಿದ ಆನುವಂಶಿಕ ವ್ಯೂಹ ಎಂದು ಹೇಳುವುದುಂಟು.

ಒಂದು ಪ್ರಭೇದದಿಂದ ಉದ್ಭವಿಸುವ ಎರಡು ಪ್ರಭೇದಗಳ ಮಧ್ಯೆ ಅಥವಾ ಪ್ರಭೇದವೊಂದರ ವಿವಿಧ ಸಂದಣಿಗಳ ಮಧ್ಯೆ ಲೈಂಗಿಕ ಅಥವಾ ಪ್ರಜನನ ಪ್ರತ್ಯೇಕತೆ ಉಂಟಾಗುವುದಕ್ಕೆ ಹಲವು ಕಾರಣಗಳಿವೆ. ಇವಕ್ಕೆ ಪ್ರತ್ಯೇಕತಾ ಕ್ರಿಯಾವಿನ್ಯಾಸಗಳು ಎಂದು ಹೆಸರು. ಜೀನ್‌ಗಳ ಅದಲು ಬದಲಿಗೆ ತಡೆಮಾಡುವ ಯಾವುದೇ ಆನುವಂಶೀಯ ಸ್ಥಿತಿಗೂ ಇದೇ ಹೆಸರುಂಟು. ಈ ಕ್ರಿಯಾವಿನ್ಯಾಸದಲ್ಲಿ ಸಂಭೋಗಪೂರ್ವ ಅಥವಾ ಯುಗ್ಮಪೂರ್ವ ಮತ್ತು ಸಂಭೋಗೋತ್ತರ ಅಥವಾ ಯುಗ್ಮೋತ್ತರ ಎಂಬ ಎರಡು ವಿಧಗಳನ್ನು ಗುರುತಿಸಬಹುದು. ಇವುಗಳಲ್ಲಿ ಸಂಭೋಗಪೂರ್ವ ಪ್ರತ್ಯೇಕತೆ ಸಂಕರಣವನ್ನು ತಡೆಹಿಡಿಯುತ್ತದೆ. ಸಂಭೋಗೋತ್ತರ ಪ್ರತ್ಯೇಕತೆಯಾದರೋ ಫಲವಂತತೆ ಮತ್ತು ಚೇತನಗಳನ್ನು ಕಡಿಮೆ ಮಾಡುತ್ತದೆ. ಆದರೆ ಎರಡೂ ಕ್ರಿಯೆಗಳ ಪರಿಣಾಮವೂ ಒಂದೇ ಆಗಿದ್ದು ಇವು ಎರಡು ಜೀವಿಗಳ ಮಧ್ಯೆ ಜೀನ್‌ಗಳ ಅದಲುಬದಲನ್ನು ತಡೆಹಿಡಿಯುತ್ತವೆ. ಕೆಲವು ತೆರನ ಪ್ರತ್ಯೇಕತಾ ಕ್ರಿಯಾವಿನ್ಯಾಸಗಳು ಈ ಮುಂದಿನಂತಿವೆ.

೧. ಸಂಭೋಗಪೂರ್ವ ಪ್ರತ್ಯೇಕತೆ: ಪರಿಸರ ಅಥವಾ ನೆಲೆಯ ಪ್ರತ್ಯೇಕತೆ. ಯಾವುದೋ ಒಂದು ತೆರನ ಪ್ರಭೇದ ಒಂದು ಭೂಭಾಗದ ಎರಡು ಅಥವಾ ಹೆಚ್ಚು ನೆಲೆಗಳಲ್ಲಿ ವಾಸಿಸುವಿಕೆಯ ಪರಿಣಾಮ. ನೆಲೆಗಳ ಪ್ರತ್ಯೇಕತೆ ಸ್ವಸಂಬಂಧಿ ಜೀವಿಗಳಲ್ಲಿ ಪ್ರಜನನ ಪ್ರತ್ಯೇಕತೆಯನ್ನು ಉಂಟುಮಾಡುವಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಉದಾಹರಣೆಗೆ, ಅನಾಫಿಲೀಸ್ ಸೊಳ್ಳೆ ಕಂಡುಬರುವ ಎಲ್ಲ ಸ್ಥಳಗಳಲ್ಲೂ ಮಲೇರಿಯ ಇರಬೇಕು ಎಂದಿಲ್ಲ. ಏಕೆಂದರೆ ಅನಾಫಿಲೀಸ್‌ನ ಕೆಲವು ಪ್ರಭೇದಗಳಿಂದ ಮಾತ್ರ ಮಲೇರಿಯ ಪ್ರಸಾರವಾಗಬಲ್ಲದು. ಯೂರೋಪ್ ಮತ್ತು ಪಶ್ಚಿಮ ಏಷ್ಯದಲ್ಲಿ ಹೊರನೋಟಕ್ಕೆ ಒಂದೇ ರೀತಿಯಾಗಿ ಕಂಡರೂ ವಾಸ್ತವವಾಗಿ ವಿಭಿನ್ನವಾಗಿರುವ ಆರು ಪ್ರಭೇದಗಳನ್ನು ಪತ್ತೆಹಚ್ಚಲಾಗಿದೆ. ಈ ಪ್ರಭೇದಗಳು ತಮ್ಮ ಕ್ರೊಮೋಸೋಮ್ ಸಂಖ್ಯೆಯಲ್ಲಿ, ಜೀನ್ ಸರಣಿಯಲ್ಲಿ, ಪ್ರಣಯಾಚರಣೆಯ ರೀತಿಯಲ್ಲಿ ಮತ್ತು ಬಹುಮುಖ್ಯವಾಗಿ ತಮ್ಮ ನೆಲೆಯಲ್ಲಿ ಪರಸ್ಪರ ಬೇರೆಯಾಗಿರುವುದು ಕಂಡುಬಂತು. ಇವುಗಳ ಪೈಕಿ ಕೆಲವು ಮಾತ್ರ ಮಲೇರಿಯವನ್ನು ಹರಡುತ್ತವೆ ಎಂಬುದನ್ನೂ ಸಿದ್ಧಪಡಿಸಲಾಯಿತು. ೧೯೩೦ಕ್ಕಿಂತ ಮೊದಲು ಒಂದೇ ಪ್ರಭೇದವೆಂದು ಭಾವಿಸಲಾಗಿದ್ದ ಅನಾಫಿಲೀಸ್ ಆರು ಪ್ರಭೇದಗಳ ಒಂದು ಗುಂಪು ಎಂದು ತಿಳಿಯಿತು. ಹೀಗೆ ನೆಲೆಯ ಪ್ರತ್ಯೇಕತೆಯಿಂದ ಹಿಂದೆ ಒಂದೇ ಆಗಿದ್ದ ಪ್ರಭೇದ ಕಾಲಾನುಕ್ರಮದಲ್ಲಿ ಆರು ಪ್ರಭೇದಗಳ ಗುಂಪಾಗಿ ಪರಿವರ್ತನೆಯಾಗಿರಬೇಕು.

೨. ಶ್ರಾಯಿಕ ಅಥವಾ ಐಹಿಕ ಪ್ರತ್ಯೇಕತೆ: ಇದು ಸಸ್ಯಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಪ್ರಭೇದಗಳು ಬೇರೆ ಬೇರೆ ಕಾಲಗಳಲ್ಲಿ ಫಲ ಧರಿಸುತ್ತವೆ. ಶ್ರಾಯಿಕ ಪ್ರತ್ಯೇಕತೆಗೆ ಪೈನಸ್ ರೇಡಿಯೇಟ ಮತ್ತು ಪೈನಸ್ ಮ್ಯೂರಿಕೇಟ ಉತ್ತಮ ಉದಾಹರಣೆಗಳು. ಇವೆರಡು ಪ್ರಭೇದಗಳು ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ಒಟ್ಟಿಗೇ ಬೆಳೆಯುತ್ತವಾದರೂ ಪೈನಸ್ ರೇಡಿಯೇಟ ಪ್ರಭೇದ ಫೆಬ್ರುವರಿಯಲ್ಲೂ ಪೈನಸ್ ಮ್ಯೂರಿಕೇಟ ಏಪ್ರಿಲ್ ತಿಂಗಳಲ್ಲೂ ಪರಾಗವನ್ನು ಉತ್ಪಾದಿಸುತ್ತವೆ. ಇವು ಬೇರೆ ಬೇರೆ ಕಾಲದಲ್ಲಿ ಫಲ ಬಿಡುವುದರಿಂದ ಈ ಎರಡೂ ಪ್ರಭೇದಗಳಲ್ಲಿ ಜೀನ್ ಅದಲು ಬದಲು ಆಗದು. ಸಂಕರಗಳೆಂದು ಹೇಳಲಾಗುವ ಕೆಲವು ಅಂತರವರ್ತಿಗಳು ಇದ್ದು ಇವು ಎರಡು ಪ್ರಭೇದಗಳ ಮಿಶ್ರಗುಣಗಳನ್ನು ಪಡೆದಿವೆಯಾದರೂ ಇವುಗಳ ಸಂಖ್ಯೆ ಬಲು ಕಡಿಮೆ. ಅಲ್ಲದೆ ಈ ಸಂಕರಗಳು ಚೇತನಹೀನವಾಗಿದ್ದು ಹೆಚ್ಚು ಉತ್ಪಾದನಾಶೀಲವಾಗಿಲ್ಲ.

3. ಲೈಂಗಿಕ ಅಥವಾ ಶೀಲಸ್ವಭಾವ ಪ್ರತ್ಯೇಕತೆ: ಎರಡು ಪ್ರಭೇದಗಳ ಅಥವಾ ಒಂದೇ ಪ್ರಭೇದದ ಎರಡು ಗುಂಪುಗಳ ಹೆಣ್ಣು ಗಂಡುಗಳ ಮಧ್ಯೆ ಲೈಂಗಿಕ ಸಂಬಂಧ ಇಲ್ಲವಾಗುವುದು ಅಥವಾ ಕಡಿಮೆಯಾಗುವುದು. ಲೈಂಗಿಕ ಪ್ರತ್ಯೇಕತೆ ಸಾಂಗತ್ಯ ಪ್ರಭೇದಗಳನ್ನು ಬೇರ್ಪಡಿಸುವ ಪ್ರಬಲ ಕಾರಕ. ಹೆಣ್ಣುಗಂಡುಗಳು ಜೊತೆಗೂಡಿ ಸಂಕೀರ್ಣ ಪ್ರಣಯಾಚರಣೆ ಮತ್ತು ಸಂಭೋಗ ನಡೆದು ಅಂಡಾಣು ವೀರ್ಯಾಣುಗಳ ಸಂಯೋಗವಾಗಿ ಸಂತಾನ ವೃದ್ಧಿಯಾಗಬೇಕು. ಈ ಹಂತಗಳಲ್ಲಿ ಎಲ್ಲಿಯಾದರೂ ವ್ಯತ್ಯಾಸವಾದರೆ ಅದು ಪ್ರತ್ಯೇಕತೆಯಾಗುತ್ತದೆ. ಲೈಂಗಿಕ ಪ್ರತ್ಯೇಕತೆ ಹೆಣ್ಣು ಮತ್ತು ಗಂಡುಗಳ ಸಂಭೋಗಕ್ಕೆ ತಡೆ ಹಾಕುತ್ತದೆ. ಲೈಂಗಿಕ ಪ್ರತ್ಯೇಕತೆಯನ್ನು ಡ್ರೊಸಾಫಿಲ ನೊಣಗಳಲ್ಲಿ ಸುಲಭವಾಗಿ ಕಾಣಬಹುದು. ಎರಡು ಪ್ರಭೇದದ ಹೆಣ್ಣುಗಳ ಜೊತೆ ಯಾವುದಾದರೂ ಒಂದು ಪ್ರಭೇದದ ಗಂಡುಗಳನ್ನು ನಿರ್ದಿಷ್ಟ ಸಂಖ್ಯೆಯಲ್ಲಿ ಕೂಡಿಸಿ ಒಂದೆರಡು ದಿನ ಬಿಟ್ಟು ಅನಂತರ ಹೆಣ್ಣುಗಳ ವೀರ್ಯಾಣು ಸಂಪುಟಗಳನ್ನು ಛೇದಿಸಿ ನೋಡಿದಲ್ಲಿ ಅದರಲ್ಲಿ ವೀರ್ಯಾಣುಗಳಿಲ್ಲದಿದ್ದರೆ ಪ್ರತ್ಯೇಕತೆ ಇದೆಯೆಂದೂ ವೀರ್ಯಾಣುಗಳಿದ್ದರೆ ಪ್ರತ್ಯೇಕತೆ ಇಲ್ಲವೆಂದೂ ತೀರ್ಮಾನಿಸಬಹುದು. ಇದೇ ಪ್ರಕಾರ ಪ್ರಯೋಗವೊಂದರಲ್ಲಿ ಡ್ರೊಸಾಫಿಲ ಪರ್‌ಸಿಮಿಲಿಸ್ ಮತ್ತು ಡ್ರೊಸಾಫಿಲ ಸೂಡೊಅಬ್ಸ್ಕ್ಯೂರ ಪ್ರಭೇದಗಳ ಹೆಣ್ಣುಗಳನ್ನು ಡ್ರೊಸಾಫಿಲ ಪರ್‌ಸಿಮಿಲಿಸ್‌ಗಳೊಂದಿಗೆ ಕೂಡಿಸಿದಾಗ ಡ್ರೊಸಾಫಿಲ ಪರ್‌ಸಿಮಿಲಿಸ್ ಪ್ರಭೇದದ 178 ಹೆಣ್ಣುಗಳಲ್ಲಿ 79.2% ರಷ್ಟು, ಡ್ರೊಸಾಫಿಲ ಸೂಡೊಅಬ್ಸ್ಕ್ಯೂರದ 173 ಹೆಣ್ಣುಗಳಲ್ಲಿ 22.5%ರಷ್ಟು ಹೆಣ್ಣುಗಳೂ ಸಂಭೋಗಕ್ಕೊಳಗಾಗಿದ್ದವು. ಅಂದರೆ ಈ ಎರಡೂ ಪ್ರಭೇದಗಳ ಮಧ್ಯೆ ಲೈಂಗಿಕ ಪ್ರತ್ಯೇಕತೆಯಿದ್ದು ಒಂದು ಪ್ರಭೇದದ ಗಂಡು ಯಾವಾಗಲೂ ಅದೇ ಪ್ರಭೇದದ ಹೆಣ್ಣನ್ನು ಮೆಚ್ಚುತ್ತದೆ ಎಂದಾಯಿತು. ಆಯ್ಕೆ ರಹಿತ ಸ್ಥಿತಿಯಲ್ಲಿ ಅಂದರೆ ಒಂದು ಪ್ರಭೇದದ ಹೆಣ್ಣನ್ನು ಇನ್ನೊಂದು ಪ್ರಭೇದದ ಗಂಡಿನೊಂದಿಗೆ ಕೂಡಿಸಿದಾಗ ಹೆಚ್ಚು ಹೆಣ್ಣುಗಳು ಸಂಭೋಗವಾಗುವ ಸಾಧ್ಯತೆ ಇದೆ.

೪. ಯಾಂತ್ರಿಕ ಪ್ರತ್ಯೇಕತೆ: ಸಸ್ಯಗಳಲ್ಲಿ ಪರಾಗಸ್ಪರ್ಶದ ತಡೆಯಿಂದ ಮತ್ತು ಪ್ರಾಣಿಗಳಲ್ಲಿ ಜನನಾಂಗಗಳ ವ್ಯತ್ಯಾಸದಿಂದ ಉಂಟಾಗುವ ಲೈಂಗಿಕ ತಡೆ. ಪ್ರಾಣಿಗಳಲ್ಲಿ ಸಂಭೋಗವಾಗುವಾಗ ಹೆಣ್ಣು ಗಂಡುಗಳ ಜನನಾಂಗಗಳು ಒಂದಕ್ಕೊಂದು ಸಂಪೂರ್ಣ ಕೂಡಿಕೊಳ್ಳುತ್ತವೆ. ಕೆಲವೇ ಕೆಲವು ಪ್ರಾಣಿಗಳಲ್ಲಿ ಮಾತ್ರ ಜನನಾಂಗಗಳ ಆಕಾರ, ಗಾತ್ರಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಾದರೂ ಲೈಂಗಿಕ ಸಂಪರ್ಕ ನಡೆಯುತ್ತದೆ. ಇಂಥ ಪ್ರಭೇದಗಳು ಅತಿ ಹತ್ತಿರದ ಸಂಬಂಧಿಗಳಾಗಿರಬೇಕು. ಇಲ್ಲವಾದರೆ ಲೈಂಗಿಕ ಸಂಪರ್ಕ ಅಸಾಧ್ಯ. ಲಿಂಗವ್ಯತ್ಯಾಸದಿಂದ ಪ್ರಜನನ ಪ್ರತ್ಯೇಕತೆಯಾಗುವುದಕ್ಕೆ ಅನೇಕ ಉದಾಹರಣೆಗಳಿವೆ. ಚಿರತೆ ಮತ್ತು ಹುಲಿಗಳು ಒಂದೇ ಗುಂಪಿಗೆ ಸೇರುವ ಪ್ರಾಣಿಗಳಾದರೂ ಇವುಗಳಲ್ಲಿ ಲೈಂಗಿಕ ಸಂಪರ್ಕ ಅಸಾಧ್ಯ.

ಸಸ್ಯಗಳಲ್ಲಿ ಪರಾಗಸ್ಪರ್ಶಮಾಡುವ ವಿಧಾನ ಬೇರೆಯಾದಾಗ, ಅಥವಾ ಒಂದೇ ಪ್ರಭೇದದ ಸಸ್ಯಗುಂಪುಗಳು ಬೇರೆ ಬೇರೆ ವಿಧಾನಗಳಿಂದ ಪರಾಗಸ್ಪರ್ಶಹೊಂದುವಂತೆ ಮಾರ್ಪಾಡಾದಾಗ ಪ್ರಜನನ ಪ್ರತ್ಯೇಕತೆ ಉಂಟಾಗುತ್ತದೆ. ಈ ಕ್ರಿಯೆಯಲ್ಲಿ ಹೂವಿನ ಹಾಗೂ ಕೀಟಗಳ ಮಾರ್ಪಾಡೂ ಮುಖ್ಯ.

೫. ಲಿಂಗಾಣು ಪ್ರತ್ಯೇಕತೆ: ವೀರ್ಯಾಣು ಮತ್ತು ಅಂಡಾಣುಗಳಲ್ಲಿ ಪರಸ್ಪರ ಆಕರ್ಷಣೆಯಿಲ್ಲದಿರುವಿಕೆ ಅಥವಾ ವೀರ್ಯಾಣು ಇಲ್ಲವೆ ಪರಾಗ ಸ್ತ್ರೀ ಲಿಂಗನಾಳಗಳಲ್ಲಿ ನಶಿಸಿಹೋಗುವುದು. ಇದು ಜಲವಾಸಿ ಸಸ್ಯ ಮತ್ತು ಪ್ರಾಣಿಗಳಲ್ಲಿ ಹೆಚ್ಚು ಮುಖ್ಯ. ಏಕೆಂದರೆ ಇಲ್ಲಿ ಲಿಂಗಾಣುಗಳು ನೀರಿನಲ್ಲಿ ಸ್ವತಂತ್ರವಾಗಿ ಬಿಡುಗಡೆಯಾಗುವುವು. ಒಂದೇ ಪ್ರಭೇದದ ಲಿಂಗಾಣುಗಳ (ಅಂಡಾಣು ಮತ್ತು ವೀರ್ಯಾಣು) ಮಧ್ಯೆ ಆಕರ್ಷಣೆ ಇದೆಯಾಗಿ ಅವು ಒಂದುಗೂಡಲು ಸಾಧ್ಯವಾಗುತ್ತದೆ. ಪ್ರಭೇದಗಳ ಮಧ್ಯೆ ಈ ಆಕರ್ಷಣೆ ಕಡಿಮೆಯಾದರೆ ಪ್ರಭೇದಗಳ ಪ್ರತ್ಯೇಕತೆ ಅಥವಾ ಲಿಂಗಾಣು ಪ್ರತ್ಯೇಕತೆ ಕಾಣಬರುತ್ತದೆ.

ಭೂಚರಿಗಳಲ್ಲಿ ಸಂಭೋಗಕ್ರಿಯೆಯ ತರುವಾಯ ಸ್ತ್ರೀಲಿಂಗನಾಳದಲ್ಲಿ ವೀರ್ಯಾಣು ಚಲಿಸಿ ಅಂಡಾಣುವನ್ನು ತಲುಪುತ್ತದೆ ಹೀಗೆ ಚಲಿಸುತ್ತಿರುವ ವೀರ್ಯಾಣು ಹೆಣ್ಣಿನ ಜನನಾಂಗದಲ್ಲಿ ಗರ್ಭಧಾರಣೆಯಾಗುತ್ತದೆ. ಈ ಧಾರಣಾಶಕ್ತಿ ಇಲ್ಲವಾದಾಗ ಪ್ರಭೇದಗಳ ಮಧ್ಯೆ ಲಿಂಗಾಣು ಪ್ರತ್ಯೇಕತೆ ಉಂಟಾಗುತ್ತದೆ.

೬. ಭೌಗೋಳಿಕ ಪ್ರತ್ಯೇಕತೆ: ಇದರಲ್ಲಿ ಎರಡು ವಿಧ. ಸಮುದ್ರ, ಬೆಟ್ಟಗುಡ್ಡ, ಪರ್ವತಗಳು ಪ್ರಜನನಕ್ಕೆ ತಡೆಯೊಡ್ಡಬಹುದು. ಏಕೆಂದರೆ ಕೆಲವು ಪ್ರಾಣಿಗಳು ಅಥವಾ ಸಸ್ಯಗಳು ನೆಲೆತಪ್ಪಿದಾಗ ಬದುಕಲಾರವು. ಅದರಿಂದ ಒಂದು ನೆಲೆಗೂ ಇನ್ನೊಂದು ನೆಲೆಗೂ ಮಧ್ಯೆ ತಡೆಯಿರುವಾಗ ಇಂಥ ಪ್ರಾಣಿಗಳು ಚಲಿಸಲಾರವು. ಮಧ್ಯೆ ತಡೆಯಿರುವಾಗ ಒಂದೇ ಪ್ರಭೇದದ ಎರಡು ಸಂದಣಿಗಳ ನಡುವೆ ಲೈಂಗಿಕ ಕ್ರಿಯೆ ಸಾಧ್ಯವಾಗುವುದಿಲ್ಲ. ಇಂಥವಕ್ಕೆ ಅಸಾಂಗತ್ಯ ಪ್ರಭೇದಗಳು ಎಂದು ಹೆಸರು.

ಹೊರನೋಟಕ್ಕೆ ಒಂದೇ ತೆರನಾಗಿರುವ ಆದರೆ ಆನುವಂಶೀಯತೆಯಲ್ಲಿ ಬೇರೆಯಾಗಿರುವ ಎರಡು ಪ್ರಭೇದಗಳು ಒಂದೇ ಭೂಭಾಗದಲ್ಲಿ ವಾಸಿಸುತ್ತಿದ್ದರೂ ಅವುಗಳಲ್ಲಿ ಲೈಂಗಿಕ ಕ್ರಿಯೆಯಾಗಲೀ ಜೀನುಗಳ ಅದಲುಬದಲಾಗಲೀ ನಡೆಯುವುದಿಲ್ಲ. ಇಂಥ ಪ್ರಭೇದಗಳನ್ನು ಸಾಂಗತ್ಯ ಪ್ರಭೇದಗಳು ಎನ್ನುತ್ತಾರೆ.

II ಸಂಭೋಗೋತ್ತರ ಪ್ರತ್ಯೇಕತೆ: ೧. ಸಂಕರಗಳ ಅಚೇತನ: ಸಂಕರಗಳು ಲೈಂಗಿಕ ಪರಿಪಕ್ವತೆಗೆ ಬರುವ ಮುಂಚೆಯೇ ವಿಸರ್ಜನೆಯಾಗುವಿಕೆ. ಈ ವಿಸರ್ಜನೆ ನಿಷೇಚನಗೊಂಡ ಯುಗ್ಮಜ ಪಕ್ವತೆಗೆ ಬರುವ ಮೊದಲು ಯಾವ ಹಂತದಲ್ಲಾದರೂ ನಡೆಯಬಹುದು. ಚಿರತೆ ಕಪ್ಪೆಗಳ ಪ್ರಭೇದವಾದ ರಾನ ಪಿಪಿಯನ್ಸ್ ಮತ್ತು ಅದಕ್ಕೆ ಹತ್ತಿರದ ಪ್ರಭೇದಗಳಲ್ಲಿ ಲೈಂಗಿಕ ಕ್ರಿಯೆ ನಡೆದು ಸಂಕರಗಳು ಉದ್ಭವಿಸುತ್ತವೆ. ಆದರೆ ಈ ಸಂಕರಗಳು ಪಕ್ವವಾಗುವ ಮೊದಲೇ ಯಾವುದೋ ಹಂತದಲ್ಲಿ ಸಾಯುತ್ತವೆ.

೨. ಸಂಕರಗಳ ಬಂಜೆತನ: ಸಂಕರಗಳಲ್ಲಿ ಲಿಂಗಾಣುಗಳು ಉತ್ಪತ್ತಿಯಾಗದೇ ಇರುವುದು. ಕುದುರೆ ಮತ್ತು ಕತ್ತೆಗಳ ಸಂಕರಗಳು ಎಂದು ಹೇಳಲಾಗುವ ಹೇಸರಗತ್ತೆಗಳು (ಮ್ಯೂಲ್ಸ್) ಬಂಜೆ ಪ್ರಾಣಿಗಳು. ಇವು ಸಂತಾನವೃದ್ಧಿ ಮಾಡಲಾರವು. ಕೆಲವು ಪ್ರಭೇದಗಳ ಸಂಕರಗಳಲ್ಲಿ ಸಂಪೂರ್ಣ ಬಂಜೆತನ ಇದೆಯಾದರೆ, ಇನ್ನುಳಿದವುಗಳಲ್ಲಿ ಅಪೂರ್ಣ ಬಂಜೆತನ ಇದ್ದು ಹೆಣ್ಣು ಅಥವಾ ಗಂಡು ಮಾತ್ರ ಲಿಂಗಾಣುಗಳನ್ನು ಉತ್ಪಾದಿಸಲಾರವು ಅಥವಾ ಲಿಂಗಾಣುಗಳು ಅಸಮಸಂಖ್ಯೆಯ ಕ್ರೊಮೋಸೋಮುಗಳನ್ನು ಪಡೆದಿದ್ದು ಅವು ಕ್ರಿಯಾಹೀನವಾಗಿರುವುವು.

೩. ಸಂಕರಗಳ ಕುಸಿತ: ಮೊದಲನೆಯ ಅಥವಾ ಎರಡನೆಯ ಪೀಳಿಗೆಗಳಲ್ಲಿ ಸಂಕರಗಳು ಕುಸಿತಗೊಳ್ಳುತ್ತವೆ. ಅಂದರೆ ಸಂಕರಗಳು ಫಲವಂತವಾಗಿದ್ದರೂ ಮೊದಲನೆಯ ಅಥವಾ ಎರಡನೆಯ ಪೀಳಿಗೆಗಳನ್ನು ಹಿಂಸಂಕರಣಗೊಳಿಸಿದಾಗ ಅವುಗಳ ಸಂತತಿಯಲ್ಲಿ ಬಂಜೆತನ ಕಂಡುಬರುತ್ತದೆ.

ಒಂದು ಸಂಕರದಲ್ಲಿ ಜೀನ್‌ಗಳ ಅದಲು ಬದಲಿಗೆ ಎಲ್ಲಾ ಪ್ರತ್ಯೇಕತಾ ಕ್ರಿಯಾವಿನ್ಯಾಸಗಳೂ ಸೇರಿ ತಡೆಯುಂಟು ಮಾಡುವುದಿಲ್ಲ. ಒಂದು ಅಥವಾ ಎರಡು ವಿಧಗಳು ಮಾತ್ರ ಒಮ್ಮೆಗೆ ಕೆಲಸ ಮಾಡುತ್ತವೆ. ಪ್ರತ್ಯೇಕತಾ ಕ್ರಿಯಾವಿನ್ಯಾಸಗಳು ವಿಭಿನ್ನವಾದರೂ ವಿಕಾಸದ ದೃಷ್ಟಿಯಲ್ಲಿ ಅವುಗಳ ಪರಿಣಾಮ ಒಂದೇ. ಅಂದರೆ ಜೀನ್‌ಗಳ ಅದಲು ಬದಲಿಗೆ ತಡೆಹಾಕಿ ಒಂದು ಪ್ರಭೇದವನ್ನು ಇನ್ನೊಂದರಿಂದ ಬೇರ್ಪಡಿಸುವುದು.

ವಿಕಾಸ ಯಾದೃಚ್ಛಿಕ: ನಿರ್ದಿಷ್ಟ ಗುರಿಯೆಂಬುದು ಅದಕ್ಕಿಲ್ಲ. ಕೃತಕವಾಗಿ ಎರಡು ಪ್ರಭೇದಗಳ ಸಂಕರಗಳನ್ನು ಪಡೆಯುವುದು ಆಶ್ಚರ್ಯಕರವಲ್ಲ. ಆದರೆ ನಿಸರ್ಗದಲ್ಲಿ ಇಂಥ ಸಂಕರಗಳು ಅತಿ ಕಡಿಮೆ. ಇಲ್ಲವೇ ಇಲ್ಲವೆಂದರೂ ತಪ್ಪಾಗದು. ಇಷ್ಟಾದರೂ ಕೆಲವು ಸಂದರ್ಭಗಳಲ್ಲಿ ನೈಸರ್ಗಿಕ ಸಂಕರಗಳು ಉತ್ಕೃಷ್ಟತೆಯನ್ನು ಪಡೆದಿದ್ದು ಲಾಭದಾಯಕವಾಗಿವೆ. ಒಂದೇ ಪ್ರಭೇದದ ವಿವಿಧ ಜೀನ್‌ಪ್ರರೂಪಗಳ ಸಂಕರಗಳು ವಿಕಾಸದ ದೃಷ್ಟಿಯಲ್ಲಿ ಉತ್ಕೃಷ್ಟವಿರಬಹುದು. ಇವು ವಿಕಾಸಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಸಹಾಯ ಮಾಡುತ್ತವೆ.

ಪ್ರಜನನ ಪ್ರತ್ಯೇಕತೆಯ ಉದ್ಭವ ಮತ್ತು ಬೆಳೆವಣಿಗೆಯ ಬಗ್ಗೆ ಎರಡು ವಾದಗಳಿವೆ. ಒಂದು ವಾದದ ಪ್ರಕಾರ ಇದು ಆನುವಂಶೀಯ ಅಪಸರಣದ ಉಪೋತ್ಪತ್ತಿ. ಪ್ರತಿ ಸಂದಣಿ ಆನುವಂಶೀಯವಾಗಿ ಹೆಚ್ಚು ಹೆಚ್ಚು ಅಸಮತೆಯನ್ನು ಪಡೆದಿರುತ್ತದೆ. ಈ ಅಸಮತೆ ಗಣನೀಯವಾದಾಗ ಅವು ಪ್ರಭೇದಗಳಾಗಿ ಬೇರ್ಪಟ್ಟು ಪ್ರಜನನ ಪ್ರತ್ಯೇಕತೆಯನ್ನು ಪ್ರದರ್ಶಿಸುವುವು. ಇನ್ನೊಂದು ವಾದದ ಪ್ರಕಾರ ಪ್ರಜನನ ಪ್ರತ್ಯೇಕತೆ ನೈಸರ್ಗಿಕ ಆಯ್ಕೆಯಿಂದ ಉಂಟಾದ್ದು. ನೈಸರ್ಗಿಕ ಆಯ್ಕೆಯ ಪ್ರಕಾರ ಯಾವ ಪ್ರಭೇದ ಅಥವಾ ಗುಂಪು ಹೆಚ್ಚು ಸಂತಾನವನ್ನು ಪಡೆಯುವುದೋ ಅದು ಬದುಕಲು ಯೋಗ್ಯವಾದ್ದು. ಎರಡು ಪ್ರಭೇದಗಳ ಸಂಕರಗಳು ಯೋಗ್ಯವಿಹೀನವಾಗಿದ್ದು ಅವು ತಮ್ಮ ಪಿತೃಗಳಷ್ಟು ಪರಿಣಾಮಕಾರಿಯಾಗಿ ಸಾಕಷ್ಟು ಸಂಖ್ಯೆಯಲ್ಲಿ ಸಂತಾನ ವೃದ್ಧಿ ಮಾಡಲಾರವು. ಅಂದರೆ ಸಂಕರಗಳಿಗಿಂತ ಶುದ್ಧತಳಿಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಹೀಗಾಗಿ ಪಿತೃಪ್ರಭೇದಗಳ ಸಂತಾನ ಸಂಕರಗಳ ಸಂತಾನಗಳಿಗಿಂತ ಹೆಚ್ಚಾಗುತ್ತ ಹೋಗುತ್ತವೆ. ಪಿತೃ ಪ್ರಭೇದಗಳು ತಮ್ಮ ಪ್ರಭೇದಗಳೊಂದಿಗೆ ಕೂಡುವ ಸಂಭವ ಹೆಚ್ಚಾಗುತ್ತ ಹೋಗುತ್ತದೆ. ಹಾಗೆಯೇ ಸಂಕರಗಳ ಸಂಖ್ಯೆ ಕಡಿಮೆಯಾಗುತ್ತ ಹೋಗುತ್ತದೆ.

ಈ ಎರಡು ವಾದಗಳಲ್ಲಿ ಯಾವುದು ತಥ್ಯ ಎಂದು ಹೇಳುವುದು ಕಠಿಣ. ಆದರೆ ಪ್ರಭೇದೋದ್ಭವ, ಪ್ರಜನನ ಪ್ರತ್ಯೇಕತೆ ಮತ್ತು ಜೀನ್‌ಗಳ ಅದಲುಬದಲು–ಇವು ಒಂದಕ್ಕೊಂದು ಜೊತೆಗೂಡಿದ್ದು ಪ್ರಭೇದೋದ್ಭವದಲ್ಲಿ ಕೊನೆಯ ಎರಡು ಕಾರಕಗಳು ಬಹುಮುಖ್ಯ ಪಾತ್ರವಹಿಸುತ್ತವೆ. (ಎಸ್.ಎನ್.ಎಚ್.)

**ಪ್ರಯಾನ್‌ಗಳು:** ಸೋಂಕಿನಿಂದ ರೋಗವುಂಟುಮಾಡುವ ಅಮೈನೊಆಮ್ಲ ಸರಣಿ ಅಥವಾ ಪ್ರೋಟೀನ್. 1982 ರಲ್ಲಿ ಸ್ಟಾನ್ಲಿ ಬಿ ಪ್ರೂಸಿನರ್ ಎಂಬಾತ ಮೊಟ್ಟ ಮೊದಲಿಗೆ ಈ ಪದವನ್ನು ಬಳಸಿದ. ಪ್ರೋಟೀನ್‌ಯುಕ್ತ (ಪ್ರೊಟಿನೇಶಿಯಸ್) ಹಾಗೂ ಸೋಂಕುಕಾರಕ (ಇನ್‌ಫೆಕ್ಷುಯಸ್) ಎಂಬ ಪದಗಳ ಮೊದಲ ಮೂರು ಹಾಗು ಎರಡಕ್ಷರಗಳ ಮರು ಜೋಡಣೆಯಿಂದ ಪ್ರೈಯಾನ್ ಪದವನ್ನು ವ್ಯುತ್ಪತ್ತಿ ಮಾಡಲಾಗಿದೆ. ವೈರಸ್ಸು, ಬ್ಯಾಕ್ಟೀರಿಯಗಳಂತೆ ಕೋಶಗಳ ಕ್ರಿಯೆಯನ್ನು ತಡೆದು ವಿವಿಧ ಜೀವಿಗಳಲ್ಲಿ ರೋಗವುಂಟುಮಾಡುತ್ತವೆ. 1986ರಲ್ಲಿ ಇಂಗ್ಲೆಂಡಿನ ಲಕ್ಷಾಂತರ ಹಸುಗಳಿಗೆ ಸೋಂಕುತಗುಲಿ ಹೈನು ಉದ್ಯಮದಲ್ಲಿ ಬಿರುಗಾಳಿ ಎಬ್ಬಿಸಿದ "ಹುಚ್ಚು ಹಸುವಿನ ರೋಗ" (ಮ್ಯಾಡ್ ಕೌ ಡಿಸೀಸ್) ಒಂದು ಉದಾಹರಣೆ.

ಪ್ರಯಾನ್‌ಗಳು ಮನುಷ್ಯರಲ್ಲಿ ಕುರು, ಕ್ರ್ಯೂಝ್‌ಫೆಲ್ಡ್ – ಜೇಕಬ್ ಖಾಯಿಲೆ, ಗೆರ್‌ಸ್ಟ್‌ಮ್ಯಾನ್–ಸ್ಟ್ರಾಸ್ಲರ್ – ಶೀಂಕರ್ ರೋಗ ಕೂಟ ಮುಂತಾದ ಖಾಯಿಲೆಯನ್ನುಂಟುಮಾಡುತ್ತವೆ. ಪ್ರಾಣಿಗಳಲ್ಲಿ ಸ್ಕ್ರೇಪಿ, ಸ್ಪಾಂಜಿಫಾರ್ಮ್ ಎನ್‌ಸೆಫಲೊಪತಿ, ಕ್ರೊನಿಕ್ ವೇಸ್ಟಿಂಗ್ ಖಾಯಿಲೆಗಳನ್ನುಂಟುಮಾಡುತ್ತವೆ.

ಪ್ರಯಾನ್‌ಗಳ ಶೋಧ, ಜೀನ್‌ಗಳುಳ್ಳ ಜೀವಿಮಾತ್ರ ರೋಗಕಾರಕ ನಂಬಿಕೆಯನ್ನು ಹುಸಿಗೊಳಿಸಿತು. ಕೋಶದ ಬಹುತೇಕ ಕೆಲಸಗಳಿಗೆ ಪ್ರೋಟೀನ್‌ಗಳು ಅತ್ಯಗತ್ಯ. ಅಮೈನೊ ಆಮ್ಲಗಳ ಸರಣಿಯಿಂದಾದ ಪ್ರೋಟೀನ್‌ಗಳು, ಕಿಣ್ವಗಳಾಗಿ, ಚೋದಕಗಳಾಗಿ ಮತ್ತು ಗ್ರಾಹಿಗಳಾಗಿ ವರ್ತಿಸುತ್ತವೆ. ಕೋಶದ ಸಮಗ್ರತೆಯನ್ನು ಕಾಪಾಡುವಲ್ಲಿ ಪ್ರೋಟೀನ್‌ಗಳ ಪಾತ್ರಹಿರಿದು. ಅಮೈನೊ ಆಮ್ಲಗಳ ಸರಣಿಯ ನಿರ್ದಿಷ್ಟ ಮಡಿಕೆಯಿಂದ ಮಾತ್ರವೇ ಪ್ರೋಟೀನ್ ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯ. ಅಮೈನೊ ಆಮ್ಲದ ಸರಣಿ ಸರಿಯಾಗಿ ಮಡಿಕೆಯಾಗದೆ ದೋಷಪೂರಿತ ಪ್ರೋಟೀನ್ ತಯಾರಾಗುವುದೇ ಪ್ರಯಾನ್‌ನ ಉತ್ಪತ್ತಿಯ ಮೂಲ.

ಪ್ರಯಾನ್‌ಗಳ ನೈಜಸ್ವರೂಪದ ಬಗ್ಗೆ ವಾದವಿವಾದಗಳಿವೆ. ಕೇವಲ ಒಂದು ಪ್ರೋಟೀನ್ ಹೇಗೆ ರೋಗವುಂಟು ಮಾಡಬಹುದು? ಅವುಗಳ ಜೊತೆಯಲ್ಲಿ ನ್ಯೂಕ್ಲಿಯಕ್ ಆಮ್ಲಗಳೂ ಸೇರಿರಬಹುದೆ? ಈ ಪ್ರೋಟೀನ್ ಹೇಗೆ ವೃದ್ಧಿಯಾಗಬಲ್ಲುದು? ಮುಂತಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವಿಲ್ಲದಿರುವುದು ಈ ವಾದಗಳಿಗೆ ಕಾರಣ.

ಅನೇಕ ವೈರಸ್‌ಗಳಂತೆ ಪ್ರಯಾನ್‌ಗಳೂ ಸಹ ಯಾವುದೇ ಹಾನಿಯುಂಟುಮಾಡದೆ ವರ್ಷಗಟ್ಟಲೆ ನಿಷ್ಕ್ರಿಯವಾಗಿದ್ದು, ಅನಂತರ ಕ್ರಿಯಾಶೀಲಗೊಂಡು ತಮ್ಮದೇ ಪ್ರತಿಗಳನ್ನು ತಯಾರು ಮಾಡುವುದರ ಮೂಲಕ ರೋಗವನ್ನುಂಟುಮಾಡುತ್ತವೆ. ಇತ್ತೀಚಿನ ಸಂಶೋಧನೆಗಳು ಅವುಗಳ ತಯಾರಿಕೆಯ ವಿಧಾನವನ್ನು ತಿಳಿಸಿವೆ. ಸಾಮಾನ್ಯವಾಗಿ ಕೋಶಗಳಲ್ಲಿ ಅವುಗಳಿಗೆ ಅಗತ್ಯವಾದ ಪ್ರೋಟೀನ್‌ಗಳ ಸಂಶ್ಲೇಷಣೆಯಾಗುತ್ತದೆ. ಪಿಆರ್‌ಪಿಯೂ ಇಂಥ ಪ್ರೋಟೀನ್‌ಗಳಲ್ಲೊಂದು. ಸಂಶ್ಲೇಷಣೆಯ ಅನಂತರ ಮಡಿಕೆಯಾಗಿ ಜೈವಿಕಕ್ರಿಯೆಯಲ್ಲಿ ಭಾಗವಹಿಸುತ್ತದೆ. ರೋಗ ಪೀಡಿತ ಪ್ರಾಣಿಗಳಲ್ಲಿ ಪಿಆರ್‌ಪಿ ಅಸಹಜ ಸಂರೂಪ ಪಡೆಯುವುದು. ಕೆಲವು ಜೀವಿಗಳಲ್ಲಿ ಪಿಆರ್‌ಪಿಯ ಅಮೈನೊ ಆಮ್ಲದ ಸರಣಿಯಲ್ಲೇ ವಿಕೃತಿಯಾಗುವುದು. ಅಸಹಜ ಪಿಆರ್‌ಪಿ ಅಚ್ಚಿನಂತೆ ವರ್ತಿಸುತ್ತದೆ ಮತ್ತು ಸಹಜ ಪಿಆರ್‌ಪಿಗಳನ್ನು ಅಸಹಜ ರೂಪ ತಾಳುವುದಕ್ಕೆ ಪ್ರೇರೇಪಿಸುತ್ತದೆ.

ಮಾನವನನ್ನೂ ಒಳಗೊಂಡಂತೆ ಕೆಲವು ಸ್ತನಿಗಳಲ್ಲಿ ಪಿಆರ್‌ಪಿ ಜೀನ್ ಅನ್ನು ಗುರ್ತಿಸಲಾಗಿದೆ. ಮಾನವನ 20ನೆಯ ವರ್ಣತಂತುವಿನಲ್ಲಿ ಪಿಆರ್‌ಪಿ ಜೀನ್ ಇದ್ದು, ಅನೇಕ ನರಸಂಬಂಧೀ ಖಾಯಿಲೆಗಳುಂಟು ಮಾಡಬಹುದೆಂದು ಭಾವಿಸಲಾಗಿದೆ. ಮಾನವ ಜೀವಕೋಶಗಳಲ್ಲಿ ಪಿಆರ್‌ಪಿ 33–35 ಎಂಬ ಪ್ರೋಟೀನ್ ತಯಾರಾಗುತ್ತದೆ. ರೋಗಪೀಡಿತ ಕೋಶಗಳಲ್ಲಿ ತಯಾರಾಗುವ ಪಿಆರ್‌ಪಿ 33–35 ಕೆಲವು ಬದಲಾವಣೆಗಳ ಅನಂತರ ರೋಗಕಾರಕ ಪಿಆರ್‌ಪಿ 27–30 ರೂಪ ಪಡೆಯುತ್ತದೆ. ಪಿಆರ್‌ಪಿ 33–35 ಮತ್ತು ಪಿಆರ್‌ಪಿ 27–30ಗಳ ನಡುವೆ ಒಂದು ಅಮೈನೊ ಆಮ್ಲದ ವ್ಯತ್ಯಾಸವಿದೆ. ಎಲೆಕ್ಟ್ರೊ ಫೊರೆಸಿಸ್ ತಂತ್ರದಿಂದ ಕೋಶಗಳಲ್ಲಿ ಪ್ರಯಾನ್‌ಗಳನ್ನು ಗುರುತಿಸಬಹುದು.

(ಎಸ್.ಪಿ.ವಿ.)

**ಪ್ರಯಾಪ್ಯುಲಿಡ:** ಹುಳುಗಳಂತೆ ಕಾಣುವ ಸಾಗರವಾಸಿ ಪ್ರಾಣಿಗಳನ್ನು ಒಳಗೊಂಡಿರುವ ವಿಭಾಗ. ಇದೊಂದು ವಿಶಿಷ್ಟ ಗುಂಪು. ಇದಕ್ಕೆ ಸೇರಿದ ಪ್ರಾಣಿಗಳು ತಮ್ಮ ಗುಣ ಲಕ್ಷಣಗಳಲ್ಲಿ ಅಸ್ಕೆಲ್ಮಿಂತೀಸ್ ವಿಭಾಗದ ಕೈನೊರಿಂಕಿಡೆ ಗುಂಪಿನ ಪ್ರಾಣಿಗಳನ್ನು ಹೋಲುತ್ತವೆ. ಇನ್ನು ಕೆಲವು ಗುಣಲಕ್ಷಣಗಳಲ್ಲಿ ಅನೆಲಿಡದ ಪ್ರಾಣಿಗಳನ್ನೂ ಹೋಲುತ್ತವೆ. ಈ ಹಿಂದೆ ಇವನ್ನು ಎಕೈನೊಡರ್ಮೇಟ ವಿಭಾಗಗಳ ವರ್ಗವೆಂದೂ ಬಗೆಯಲಾಗಿತ್ತು. ಆದರೆ ಈ ಗುಂಪನ್ನು ಕುರಿತು ಹೆಚ್ಚು ಅಧ್ಯಯನ ನಡೆಯುತ್ತ ಬಂದಂತೆ ಇವುಗಳ ವಿಶಿಷ್ಟತೆ ಹೆಚ್ಚು ಸ್ಪಷ್ಟವಾಗತೊಡಗಿ ಈಗ ಇದನ್ನು ಪ್ರತ್ಯೇಕ ವಿಭಾಗವೆಂದು ಪರಿಗಣಿಸಲಾಗಿದೆ.

ಇದರಲ್ಲಿ ಪ್ರಯಾಪ್ಯುಲಸ್ ಮತ್ತು ಹ್ಯಾಲಿಕ್ರಿಪ್ಟಸ್ ಎಂಬ ಎರಡು ಜಾತಿಗಳಿವೆ. ಪ್ರಯಾಪ್ಯುಲಸ್ ಜಾತಿಯಲ್ಲಿ ನಾಲ್ಕು ಪ್ರಭೇದಗಳಿದ್ದರೆ ಹ್ಯಾಲಿಕ್ರಿಪ್ಟಸ್‌ನಲ್ಲಿ ಒಂದೇ ಒಂದು ಪ್ರಭೇದವಿದೆ.

ಈ ಪ್ರಾಣಿಗಳ ಸರಾಸರಿ ಉದ್ದ ಸುಮಾರು ೫ ಸೆಂಮೀ. ಆದರೆ ಕೆಲವೊಮ್ಮೆ ೧೫ ಸೆಂಮೀ ಉದ್ದ ಇರುವುದೂ ಉಂಟು. ಇವು ಗಾತ್ರದಲ್ಲಿ ಚಿಕ್ಕವು. ಕೊಳವೆಯಾಕಾರದಲ್ಲಿವೆ. ದೇಹದಲ್ಲಿ ಖಂಡ ವಿಂಗಡಣೆ ಇಲ್ಲ. ಪ್ರಯಾಪ್ಯುಲಸ್ ಪ್ರಾಣಿಯ ದೇಹದಲ್ಲಿ ಸೊಂಡಿಲು (ಪ್ರೊಬಾಸಿಸ್), ಮಧ್ಯಭಾಗ (ಟ್ರಂಕ್) ಮತ್ತು ಬಾಲದ ಅನುಬಂಧ (ಕಾಡಲ್ ಅಪೆಂಡೇಜ್) ಎಂಬ ಮೂರು ಭಾಗಗಳನ್ನು ಗುರುತಿಸಬಹುದು. ಬಾಲದ ಅನುಬಂಧದಲ್ಲಿ ಉಪಾಂಗಗಳಿವೆ. ಆದರೆ ಹ್ಯಾಲಿಕ್ರಿಪ್ಟಸ್ ಪ್ರಾಣಿಯ ಬಾಲದ ಅನುಬಂಧದಲ್ಲಿ ಯಾವ ತೆರನ ಉಪಾಂಗಗಳೂ ಇಲ್ಲ. ಎರಡಲ್ಲೂ ದೇಹದ ಹೊರಭಾಗ ಬಲವಾದ ಸ್ನಾಯುಗಳಿಂದ ಕೂಡಿದೆ. ದೇಹದ ಹೊರಭಾಗದಲ್ಲಿ ಗಂಟುಗಳಿವೆ. ಸೊಂಡಿಲಿನ ಮೇಲೆ ಸಾಲುಸಾಲಾಗಿ ಜೋಡಣೆಗೊಂಡ ಮುಳ್ಳುಗಳ ಸಮೂಹ ಇದೆ. ಸೊಂಡಿಲಿನ ಮುಂಭಾಗವೇ ಬಾಯಿ, ಬಾಯಿಯ ಸುತ್ತ ಹರಿತವಾದ ಅನೇಕ ಹಲ್ಲುಗಳುಂಟು. ಈ ಗುಂಪಿನ ಪ್ರಾಣಿಗಳ ಫ್ಯಾರಿಂಕ್ಸ್ ರಚನೆ ವಿಶಿಷ್ಟವಾದ್ದು. ಪ್ರಾಣಿಯ ಇಷ್ಟಕ್ಕೆ ಅನುಗುಣವಾಗಿ ಇದು ಹಿಂದಕ್ಕೂ ಮುಂದಕ್ಕೂ ಚಲಿಸುತ್ತದೆ. ಅಲ್ಲದೆ ಫ್ಯಾರಿಂಕ್ಸಿನಲ್ಲೂ ಹಲ್ಲುಗಳುಂಟು. ದೇಹದ ಮಧ್ಯಭಾಗದ ಒಳಗೆ ಹರಡಿಕೊಂಡಂತೆ ಇರುವ ಪ್ರತಿಕರ್ಷಕ ಸ್ನಾಯುಗಳು ಫ್ಯಾರಿಂಕ್ಸನ್ನು ನಿಯಂತ್ರಿಸುವುವು. ಫ್ಯಾರಿಂಕ್ಸ್‌ನಂತೆ ಸೊಂಡಿಲು ಕೂಡ ಹಿಂದಕ್ಕೆ ಅಥವಾ ಮುಂದಕ್ಕೆ ಚಾಚುವ ಸಾಮರ್ಥ್ಯ ಪಡೆದಿದೆ. ಈ ಗುಣ ಲಾರ್ವ ಹಂತದಲ್ಲೇ ಗೋಚರಿಸುತ್ತದೆ. ಪ್ರಯಾಪ್ಯುಲಿಡದ ಲಾರ್ವ ರ್‍ಯಾಟಿಫರ್ ಲಾರ್ವವನ್ನು ಹೋಲುತ್ತದೆ. (ಎಂ.ಎನ್.ವಿ.ಐ.)



ಪ್ರಯಾಪ್ಯುಲಸ್

**ಪ್ರವೃತ್ತಿ:** ಪ್ರಾಣಿಗಳು ಪರಿಸರಾತ್ಮಕ ಪ್ರಚೋದನೆಗಳಿಗೆ, ಆನುವಂಶಿಕವಾಗಿ ಸಾಗಿಬರುವ ಹಾಗು ಯಾವ ಪೂರ್ವಾಭ್ಯಾಸವಿಲ್ಲದೆ, ವ್ಯಕ್ತಪಡಿಸುವ ಜಟಿಲ ಹಾಗೂ ನಿರ್ದಿಷ್ಟ ಪ್ರತಿಕ್ರಿಯೆ (ಇನ್‌ಸ್ಟಿಂಕ್ಟ್). ಇದು ಸಾಮಾನ್ಯವಾಗಿ ವ್ಯತ್ಯಸ್ತವಾಗದು; ಅಂತೆಯೇ ವಿವೇಚನೆಯನ್ನು ಒಳಗೊಳ್ಳದು. ದೈಹಿಕ ಉದ್ವೇಗಗಳನ್ನು ನಿವಾರಿಸಿಕೊಳ್ಳುವುದೆ ಇದರ ಮುಖ್ಯ ಗುರಿ. ಇದನ್ನು ಪ್ರಾಣಿಗಳ ಸಹಜ ಒಲವು, ಹಠಾತ್‌ಪ್ರೇರಣೆ ಅಥವಾ ಸಾಮರ್ಥ್ಯ ಎಂದು ವಿವರಿಸಬಹುದು. ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರಲ್ಲಿ ಪ್ರಾಣಿಗಳು ಪ್ರವೃತಿಯ ಆಧಾರದ ಮೇಲು ಮನುಷ್ಯ ಬುದ್ಧಿಶಕ್ತಿಯ ಆಧಾರದ ಮೇಲು ತಂತಮ್ಮ ಜೀವನವನ್ನು ನಡೆಸಿಕೊಂಡು ಹೋಗುವುರೆಂಬ ಅಭಿಪ್ರಾಯವಿತ್ತು. ತತ್ತ್ವಜ್ಞಾನಿ ಡೇಕಾರ್ಟ್ ಪ್ರಾಣಿವರ್ಗದ ವರ್ತನೆ ಕೇವಲ ನರಮಂಡಲ ಮತ್ತು ಸ್ರಾವಗಳ ಆಧಾರದ ಮೇಲೆ ನಡೆಯುವುದೆಂದೂ ಮನುಷ್ಯರ ವರ್ತನೆಯಲ್ಲಿ ವಿವೇಚನಾಶಕ್ತಿ ಇರುವುದೆಂದೂ ಅಭಿಪ್ರಾಯಪಟ್ಟ. ಆದರೆ 19ನೆಯ ಶತಮಾನದ ಮಧ್ಯಭಾಗದಲ್ಲಿ ಡಾರ್ವಿನ್ ಮಹಾಶಯ ಪ್ರಾಣಿವರ್ಗಕ್ಕೂ ಮನುಷ್ಯರಿಗು ಅಷ್ಟೇನು ಅಂತರವಿಲ್ಲವೆಂಬ ಅಭಿಪ್ರಾಯ ಹೊರಗೆಡಹಿದ.

ಕ್ರಿಮಿಕೀಟಗಳು ಯಾವ ಕಲಿಕೆಯು ಇಲ್ಲದೆ ಸ್ವಭಾವ ಸಿದ್ಧವಾದ ಪ್ರವೃತಿಯ ಆಧಾರದ ಮೇಲೆಯೇ ಅತಿ ತೊಡಕಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವುವು. ತಾಯಿ ಕಣಜ ಗೂಡನ್ನು ಕಟ್ಟಿ ಮೊಟ್ಟೆಯನ್ನು ಇಡುವುದಲ್ಲದೆ ಮುಂದೆ ಬರುವ ಮರಿಗೆ ಅಗತ್ಯವಾದ ಆಹಾರವನ್ನು ಸಹ ಗೂಡಿನೊಳಗೆ ಒದಗಿಸಿಕೊಟ್ಟು ಹೊರಟು ಹೋಗುವುದು. ಮೊಟ್ಟೆ ಕಾಲಕ್ರಮೇಣ ಒಡೆದು ಮರಿಯಾದಾಗ ತಾಯಿ ಒದಗಿಸಿ ಇಟ್ಟ ಆಹಾರವನ್ನು ಸ್ವೀಕರಿಸಿ ಗೂಡಿನಿಂದ ಹೊರಗೆ ಬರುವುದು. ಮುಂದೆ ಅದೂ ಸಹ ತನ್ನ ತಾಯಿಯ ಹಾಗೆ ಮುಂದಿನ ಪೀಳಿಗೆಯ ಅನುಕೂಲಕ್ಕಾಗಿ ಗೂಡನ್ನು ಕಟ್ಟುವುದು. ಜೇಡ ತನ್ನಷ್ಟಕ್ಕೆ ತಾನೆ ಗೂಡನ್ನು ಕಟ್ಟಿ ಆಹಾರವನ್ನು ಶೇಖರಿಸುವುದು. ಇದೇ ವಿಧವಾಗಿ ಬೇರೆ ಬೇರೆ ಜಾತಿಯ ಪಕ್ಷಿಗಳು ತಮಗೆ ಸಹಜವಾದ ನಿರ್ದಿಷ್ಟ ವಿಧದಲ್ಲಿ ತಮ್ಮ ಗೂಡುಗಳನ್ನು ನಿರ್ಮಿಸವುವು. ಕ್ರಿಮಿಕೀಟಗಳಲ್ಲಿ, ಪಕ್ಷಿಗಳಲ್ಲಿ ಇಂಥ ವರ್ತನೆ ಸ್ವಭಾವ ಸಿದ್ಧವಾದದ್ದು. ಇದು ಕಲಿಕೆಯಿಂದ ಉಂಟಾಗುವಂಥದಲ್ಲ. ಇದೇ ರೀತಿ ಮನುಷ್ಯರಲ್ಲೂ ಸಹ ಸ್ವಭಾವಸಿದ್ಧವಾದ ವರ್ತನೆ ಇದೆ ಎಂದು ಕಳೆದ ಶತಮಾನದ ಅಂತ್ಯದ ಹಾಗೂ ಈ ಶತಮಾನದ ಆರಂಭದಲ್ಲಿ ಮನಶ್ಶಾಸ್ತ್ರಜ್ಞರು ನಂಬಿದ್ದರು.

ಹುಟ್ಟಿದ ಮಗು ತನ್ನ ಕೈಗೆ ಒಂದು ಸಣ್ಣ ಕೋಲು ತಾಕಿದರೆ ಅದನ್ನು ಹಿಡಿದು ಕೊಳ್ಳುವುದು; ಅದರ ಬಾಯಲ್ಲಿ ತಾಯಿಯ ಮೊಲೆಯನ್ನೆ ಆಗಲಿ ಅಥವಾ ಬೆರಳನ್ನೆ ಆಗಲಿ ಇಟ್ಟರೆ ಅದನ್ನು ಹೀರುವುದು. ಆದರೆ ಈ ತೆರನ ವರ್ತನೆಗಳು ಪರಾವರ್ತನೆಗಳು (ರಿಫ್ಲೆಕ್ಸ್ ಆ್ಯಕ್ಷನ್). ಇವು ದೇಹದ ಒಂದು ಭಾಗವನ್ನು ಒಳಗೊಂಡಿದ್ದು ಪ್ರಚೋದನೆಯಾದ ತತ್‌ಕ್ಷಣವೆ ಉಂಟಾಗುವುದಲ್ಲದೆ ಯಾವಾಗಲೂ ಒಂದೆ ತೆರನಾಗಿರುವುದು. ಪ್ರಚೋದನೆಯ ಪ್ರಮಾಣವನ್ನನುಸರಿಸಿ ಇವುಗಳ ಪ್ರಮಾಣವೂ ವ್ಯತ್ಯಾಸವಾಗುತ್ತದೆ. ಇದರಿಂದಾಗಿ ವ್ಯಾಟ್‌ಸನ್ ಮುಂತಾದ ವರ್ತನಾವಾದಿಗಳು (ಬಿಹೇವಿಯರಿಸ್ಟ್ಸ್) ಪ್ರಾಣಿವರ್ಗದಲ್ಲಿಯು ಮಾನವನಲ್ಲಿಯು ಸ್ವಭಾವಸಿದ್ಧ ಅಂಶಗಳು ಕೇವಲ ಈ ಪರಾವರ್ತನೆಗಳೇ ಎಂದು ವಾದಿಸಿದರು. ಅನೇಕ ಪರಾವರ್ತನೆಗಳು ಜೊತೆಗೂಡಿದರೆ ಪ್ರಾಣಿವರ್ಗದ ಮತ್ತು ಮನುಷ್ಯರ ತೊಡಕಾದ ಆದರೆ ಕ್ರಮಬದ್ಧವಾದ ವರ್ತನೆ ಉಂಟಾಗುವುದೆಂದು ವಾದಿಸಿದರು.

ಆದರೆ ಮ್ಯಾಕ್‌ಡೂಗಲ್ ಮುಂತಾದವರು ಪ್ರಾಣಿಗವರ್ಗದಲ್ಲಿಯೂ, ಮನುಷ್ಯರಲ್ಲಿಯೂ ಕೆಲವು ಖಚಿತ ಪ್ರವೃತ್ತಿಗಳಿರುವುದೆಂದು ವಾದಿಸಿದರು. ದಾಹ, ಹಸಿವು, ಕಾಮೋದ್ರೇಕ ಮುಂತಾದ ನೈಸರ್ಗಿಕ ವರ್ತನೆಗಳು; ಗುಂಪಿನಲ್ಲಿ ವಾಸಮಾಡುವುದು, ಆತ್ಮಪ್ರತಿಷ್ಠೆ, ವಿಧೇಯತೆ, ಪ್ರಾರ್ಥನಾವರ್ತನೆ ಮುಂತಾದ ಸಾಮಾಜಿಕ ವರ್ತನೆಗಳು ಎಲ್ಲ ಪ್ರಾಣಿಗಳಲ್ಲಿ ಹಾಗು ಮಾನವರಲ್ಲಿ ಸ್ವಭಾವತಃ ಇವೆಯೆಂಬುದು ಇವರ ವಾದ. ಅಲ್ಲದೆ ಮಾನವನ ಪ್ರತಿಯೊಂದು ಮನೋವ್ಯಾಪಾರವೂ, ವರ್ತನೆಯೂ ಪ್ರವೃತ್ತಿಯನ್ನು ಅವಲಂಬಿಸಿದೆ ಎಂದು ಅಭಿಪ್ರಾಯಪಟ್ಟರು.

ಈ ಅಭಿಪ್ರಾಯಗಳಿಗೆ ವಿರುದ್ಧವಾಗಿ ಬರ್ನಾರ್ಡ್ ಮುಂತಾದ ಸಮಾಜ ಶಾಸ್ತ್ರಜ್ಞರೂ, ಮನಶ್ಶಾಸ್ತ್ರಜ್ಞರೂ, ಮಾನವ ವರ್ತನೆ ಸ್ವಭಾವ ಸಿದ್ಧವಾದ ವರ್ತನೆಯಲ್ಲ, ಬರಿಯ ಅಭ್ಯಸ್ಥವರ್ತನೆ ಎಂದು ವಾದಿಸಿದರು. ಮನುಷ್ಯನ ವರ್ತನೆ ಅವನು ಯಾವ ಗುಂಪಿಗೆ ಸೇರಿರುವನೋ ಆ ಗುಂಪಿನ ಕಟ್ಟುನಿಟ್ಟುಗಳ ಪ್ರಕಾರ ಉಂಟಾಗುವುವೆಂಬುದು ಇವರ ಅಭಿಪ್ರಾಯ; ಕೇವಲ ಪರಾರ್ತನೆಗಳು ಮಾತ್ರ ಸ್ವಭಾಸಿದ್ಧವೆಂದೂ ಮಾನವನ ತೊಡಕಾದ ವರ್ತನೆ ಕಲಿಕೆಯನ್ನು ಅಧರಿಸಿದೆಯೆಂದೂ ಇವರು ವಾದಿಸಿದ್ದರು.

ಮೇಲಿನ ಮೂರು ವಾದಗಳಲ್ಲೂ ಕೊಂಚ ಸತ್ಯಾಂಶ ಇದೆ. ಆದರೆ ಮನುಷ್ಯ ವರ್ತನೆಯಲ್ಲಿ ಯಾವ ಆಂಶ ಕಲಿಕೆಯಿಂದ ಬಂದುದು ಯಾವುದು ಅಲ್ಲ ಎಂಬುದನ್ನು ನಿರ್ಣಯಿಸುವುದು ಬಹಳ ಕಷ್ಟ. ಉದಾಹರಣೆಗೆ ಮಗು ನಡೆಯುವುದು. ನಡೆಯುವ ವರ್ತನೆ ಸಹಜ ವರ್ತನೆಯೆ. ಈ ಪ್ರಶ್ನೆಗೆ ಉತ್ತರ ಕೊಡುವುದು ಅಸಾಧ್ಯ ಏಕೆಂದರೆ ನಡೆಯಲಾರಂಭಿಸಿದ ಮಗುವಿನ ವರ್ತನೆಯನ್ನು ಪರೀಕ್ಷಿಸಿದರೆ ಅದು ಎಷ್ಟೋ ಸಲ ಎದ್ದು ಬಿದ್ದು ನಡೆಯುವುದನ್ನು ಕಲಿಯುವುದು ಎಂಬ ವಿಚಾರ ವಿಶದವಾಗುವುದು. ಅಲ್ಲದೆ ತಾಯಿತಂದೆಗಳು ಅದಕ್ಕೆ ನಡಿಗೆಯನ್ನು ಕಲಿಸಿಕೊಡುವರು. ತಾಯಿ ಒಂದು ಕಡೆ ಕೂತು ಚಪ್ಪಾಳೆ ಹಾಕಿ ಮಗು ತನ್ನ ಹತ್ತಿರಕ್ಕೆ ನಡೆದು ಬರುವ ಹಾಗೆ ಪ್ರೋತ್ಸಾಹಿಸುವಳು. ಇದೇ ರೀತಿ ಊಟ ಮಾಡುವುದನ್ನು ಕಲಿಯುವುದರಲ್ಲಿ ಸ್ವಾಭಾವಿಕ ಅಂಶ ಮತ್ತು ಅಭ್ಯಸ್ಥ ಅಂಶಗಳೆರಡೂ ಉಂಟು. ಇದರಿಂದಾಗಿ ಮಾನವನ ಸಹಜ ಗುಣಗಳಾವುವು ಎಂಬುದನ್ನು ಹೇಳುವುದು ಆಸಾಧ್ಯ. ಬಹಶಃ ಇದಕ್ಕೆ ಕಾರಣ ಮಾನವನ ದೀರ್ಘ ಬಾಲ್ಯಾವಸ್ಥೆ. ಬೆಳೆಯುತ್ತ ಮಗು ತನ್ನ ಸಹಜ ವರ್ತನೆಯನ್ನು ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಬದಲಾಯಿಸುವುದು. ಅಲ್ಲದೆ ಕುಟುಂಬ ಮತ್ತು ಸಮಾಜಗಳು ಕೂಡ ಮಗುವಿನ ವರ್ತನೆಗೆ ಕ್ರಮಬದ್ಧತೆಯನ್ನು ಕೊಡುವುದು.

ಮಾನವ ವರ್ತನೆ ಪ್ರೇರಣೆಯನ್ನು (ಮೋಟಿವ್) ಒಳಗೊಂಡಿದೆಯೆಂದು ಅನೇಕ ಮನಶ್ಶಾಸ್ತ್ರಜ್ಞರ ಇತ್ತೀಚಿನ ಅಭಿಪ್ರಾಯ.

ಒಂದು ಪ್ರಾಣಿಯ ಅಥವಾ ಮನುಷ್ಯನ ವರ್ತನೆಯನ್ನು ಅವಲೋಕಿಸಿದರೆ ವರ್ತನೆಯಲ್ಲಿ ಒಂದು ತೆರನ ಕ್ರಮಬದ್ಧತೆ ಇರುವುದೆಂಬುದು ವ್ಯಕ್ತವಾಗುತ್ತದೆ. ವರ್ತನೆಗೆ ಒಂದು ಆರಂಭ ಮತ್ತು ಒಂದು ಗುರಿ ಇರುವುದು. ತನ್ನ ವರ್ತನೆಯ ಮೂಲಕ ಗುರಿಯನ್ನು ಸಾಧಿಸುವುದೆಂಬುದನ್ನು ನಾವು ಕಾಣಬಹುದು. ಈ ಆಧಾರದ ಮೇಲೆ ಒಂದು ವರ್ತನೆಯ ಗುರಿ ಯಾವುದು ಎಂಬುದನ್ನು ಊಹಿಸಬಹುದು.

ಪ್ರೇರಣೆ ಪ್ರತ್ಯಕ್ಷ ಅಂಶವಲ್ಲ. ವರ್ತನೆ ಮಾತ್ರ ಪ್ರತ್ಯಕ್ಷ ಅಂಶ. ಒಂದು ಪ್ರಾಣಿಯ ಈ ವಿಧವಾದ ಪ್ರವೃತ್ತಿ ಇರಬಹುದೆಂದು ಅದರ ವರ್ತನೆಯನ್ನು ಪರೀಕ್ಷಿಸಿ ಅದರ ಆಧಾರದ ಮೇಲೆ ಊಹಿಸಬಹುದು. ಪ್ರತ್ಯಕ್ಷವಾಗಿ ಗೋಚರಿಸುವುದು ಅನೇಕ ಅಂಶಗಳನ್ನು ಒಳಗೊಂಡ ಒಂದು ಕ್ರಮಬದ್ಧವರ್ತನೆ. ಈ ವರ್ತನೆ ನಿರ್ದಿಷ್ಟ ಗುರಿಯನ್ನು ಸಾಧಿಸುವವರೆಗೂ ಮುಂದುವರಿಯುವುದು. ಪ್ರಾಣಿಯೆ ಆಗಲಿ, ಮನುಷ್ಯನೆ ಆಗಲಿ ಆ ಗುರಿಯನ್ನು ಸಾಧಿಸುವುದಕ್ಕೆ ಆಗದೆ ಹೋದರೆ ವರ್ತನೆ ಬದಲುಗೊಳ್ಳುತ್ತದೆ. ಅದ್ದರಿಂದ ವರ್ತನೆಯಲ್ಲಿ ಈ ಎರಡು ಅಂಶಗಳನ್ನು ಪ್ರತ್ಯಕ್ಷವಾಗಿ ಕಾಣಬಹುದು. ಮೊದಲನೆಯದು ಕ್ರಮಬದ್ಧ

ಚಲನೆ, ಎರಡನೆಯದು ಗುರಿ ಸಾಧನೆಯಾದ ಅನಂತರ ಪ್ರಾಣಿ ಅಥವಾ ಮನುಷ್ಯನಲ್ಲಿ ಚಲನೆ ನಿಲ್ಲುತ್ತದೆ. ಅಂದರೆ ಗುರಿ ಪ್ರಾಣಿಯ ಚಲನೆಗೆ ಒಂದು ನಿರ್ದೇಶವನ್ನು ಕೊಡುವುದು. ಉದಾಹರಣೆಗೆ, ಮಗುವಿಗೆ ಹಸಿವಾದರೆ ಅಥವಾ ನೋವು ಉಂಟಾದರೆ ಅದು ತನ್ನ ಕೈಕಾಲುಗಳನ್ನಾಡಿಸುವುದು ಇಲ್ಲವೆ ಅಳುವುದು. ತಾಯಿ ಆಹಾರವನ್ನೊದಗಿಸಿದರೆ ಅಥವಾ ಹಾಸಿಗೆಯನ್ನು ಸರಿಪಡಿಸಿದರೆ ಅಥವಾ ಹೊಟ್ಟೆಯನ್ನು ನೀವಿದರೆ ಮಗು ಸುಮ್ಮನಿರುವುದು ಅಥವಾ ಮಲಗುವುದು. ಇದೇ ರೀತಿ ಕ್ರಿಮಿಕೀಟಗಳೂ, ಇಲಿ, ಬೆಕ್ಕು, ನಾಯಿ ಮುಂತಾದ ಪ್ರಾಣಿಗಳೂ ವರ್ತಿಸುವುವು.

ಪ್ರವೃತ್ತಿ ನಮ್ಮ ಪ್ರತ್ಯಕ್ಷಾನುಭವಕ್ಕೆ ನಿಲುಕುವ ಪದಾರ್ಥವಲ್ಲ. ವರ್ತನೆಯ ವೀಕ್ಷಣೆಯ ಆಧಾರದ ಮೇಲೆ ಒಂದು ಜೀವಿ ಯಾವ ಪ್ರೇರಣೆಗೆ ಒಳಪಟ್ಟಿರುವುದೆಂದು ನಾವು ಊಹಿಸಬಹುದು.

ಮನುಷ್ಯರಲ್ಲಿ ಪ್ರವೃತ್ತಿ ಕೇವಲ ಸ್ವಾಭಾವಿಕ ರೂಪವನ್ನು ತಾಳುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿ ಒಂದು ಗುಂಪಿನಲ್ಲಿ (ಸಾಮಾಜಿಕ ಚೌಕಟ್ಟಿನಲ್ಲಿ) ಬೆಳೆದಿರುವ ಕಾರಣ ಗುರಿಯನ್ನು ಸಾಧಿಸುವ ವರ್ತನೆ ಆ ಸಮಾಜದ ಕಟ್ಟುನಿಟ್ಟುಗಳನ್ನು ಒಳಗೊಂಡಿರುವುದು. ಆತ್ಮಪ್ರತಿಷ್ಠೆಯನ್ನು ಸಾಧಿಸಲು ಒಂದೊಂದು ಸಮಾಜದಲ್ಲಿ ಒಂದೊಂದು ಮಾರ್ಗವನ್ನು ಹಿಡಿಯುವರು. ಇಲ್ಲಿ ಮುಖ್ಯವಾಗಿ ತಿಳಿಯಬೇಕಾದ ಅಂಶವೆಂದರೆ ಪ್ರವೃತ್ತಿ ವರ್ತನೆಯ ಮೂಲಾಧಾರ ಎಂಬುದು.

***

**ಪ್ರಾಕೃತಿಕ ಆಯ್ಕೆ:** ಜೀನ್‌ಗಳ ಮರುಸಂಯೋಗ ಅಥವಾ ಮ್ಯುಟೇಷನ್ ಫಲವಾಗಿ ಉದ್ಭವಿಸುವ ಗುಣಲಕ್ಷಣಗಳ ಪೈಕಿ ಬೇಕಾದುವನ್ನು ಉಳಿಸಿಕೊಂಡು ಅವು ವಂಶಪಾರಂಪರ್ಯವಾಗಿ ಪ್ರವಹಿಸುವಂತೆ ಮಾಡುವುದರೊಂದಿಗೆ ಬೇಡವಾದುವನ್ನು ತೊಡೆದು ಹಾಕುತ್ತ, ಜೀವಿಗಳು ಪರಿಸರದ ವಿವಿಧ ಪರಿಸ್ಥಿತಿಗಳಿಗೆ ಹೊಂದಿಕೊಂಡು ಬದುಕಿ ಉಳಿಯುವಂತೆ ಮಾಡುವ ನೈಸರ್ಗಿಕ ಪ್ರಕ್ರಿಯೆ (ನ್ಯಾಚುರಲ್ ಸೆಲೆಕ್ಷನ್). ಈ ರೀತಿ ಯೋಗ್ಯತೆಯುಳ್ಳ ಜೀವಿಗಳ ಉಳಿಯುವಿಕೆ ಎಂಬ ತತ್ತ್ವಕ್ಕನುಸಾರವಾಗಿ ಪ್ರಕೃತಿಯಲ್ಲಿ ಜೀವಿಗಳ ಆಯ್ಕೆ ಆಗುತ್ತದೆ ಎಂಬುದನ್ನು ಚಾರ್ಲ್ಸ್ ಡಾರ್ವಿನ್ (1809–1882) ಪ್ರತಿಪಾದಿಸಿದ (1859). ಈತನ ಜೀವವಿಕಾಸ ಸಿದ್ಧಾಂತ ಅಥವಾ ಪ್ರಾಕೃತಿಕ ಆಯ್ಕೆ ಸಿದ್ಧಾಂತ ಎಷ್ಟು ಚಿರಪರಿಚಿತ ಎಂದರೆ ಇದಕ್ಕೆ ಲೋಕರೂಢಿಯಲ್ಲಿ ಡಾರ್ವಿನಿಸಮ್ ಎಂದೇ ಹೆಸರು. ಆದರೆ ಇದನ್ನು ಡಾರ್ವಿನಿಸಮ್ ಎಂದು ನಿರ್ದೇಶಿಸುವುದು ತಪ್ಪಾಗುತ್ತದೆ. ಏಕೆಂದರೆ, ಡಾರ್ವಿನ್ನನಿಗೂ ಹಿಂದೆ ಗ್ರೀಕ್ ತತ್ತ್ವಜ್ಞಾನಿಗಳು ಈ ವಿಚಾರದಲ್ಲಿ ಆಲೋಚನೆ ನಡೆಸಿ ಕೆಲವು ವಿಷಯಗಳನ್ನು ಬೆಳಕಿಗೆ ತಂದಿದ್ದರು. ಹೀಗಿದ್ದರೂ ಇತರರಿಗಿಂತ ಡಾರ್ವಿನ್ನನ ಹೆಸರು ಪ್ರಾಕೃತಿಕ ಆಯ್ಕೆಯ ಸಿದ್ಧಾಂತದೊಡನೆ ಹಾಸುಹೊಕ್ಕಾಗಿದೆ. ಏಕೆಂದರೆ, ಡಾರ್ವಿನ್ನನು ಈ ವಿಚಾರದಲ್ಲಿ ಗಹನವಾಗಿಯೂ, ವಿಸ್ತಾರವಾಗಿಯೂ ಅಧ್ಯಯನ ನಡೆಸಿದ ಈ ಸಿದ್ಧಾಂತವನ್ನು ಈತನಿಗಿಂತ ಹೆಚ್ಚು ವಿಮರ್ಶಾತ್ಮಕವಾಗಿ ತಿಳಿಸಿದವರು ಯಾರೂ ಇಲ್ಲ.

ಡಾರ್ವಿನ್ನನ ಸಿದ್ಧಾಂತಗಳು ಕೆಳಗೆ ತಿಳಿಸಿದ ಸೂತ್ರಗಳ ಮೇಲೆ ಆಧಾರಿತವಾಗಿವೆ.

1. ವಿಪುಲ ಉತ್ಪಾದನೆ: ಜೀವರಾಶಿಗಳಲ್ಲಿ ಅಗತ್ಯ ಪರಿಮಾಣವನ್ನು ಮೀರಿ, ಧಾರಾಳ ಪರಿಮಾಣದಲ್ಲಿ ಸಂತಾನೋತ್ಪತ್ತಿ ಆಗುತ್ತದೆ ಎಂಬ ವಿಷಯವನ್ನು ಎಲ್ಲ ಜೀವವಿಜ್ಞಾನಿಗಳೂ ಒಪ್ಪಿಕೊಂಡಿದ್ದಾರೆ. ಉತ್ಪತ್ತಿಯಾದ ಜೀವ ರಾಶಿಗಳಲ್ಲಿ ಉಳಿಯುವುವೆಷ್ಟೋ ಅಳಿಯುವುವೆಷ್ಟೊ. ಸೀತಾಳಗೆಡ್ಡೆಯ ಒಂದು ಹೂ 1,000,000 ಕ್ಕೂ ಹೆಚ್ಚು ಬೀಜಗಳನ್ನು, ಒಂದು ಅಮರ್‍ಯಾಂತಸ್ ಗಿಡ 2,000,000 ಕ್ಕೂ ಹೆಚ್ಚು ಬೀಜಗಳನ್ನು ಉತ್ಪಾದಿಸುತ್ತವೆ. ಒಂದು ನಾಯಿಕೊಡೆ ಸುಮಾರು 2,000,000,000 ಬೀಜಗಳನ್ನು ಗಾಳಿಯಲ್ಲಿ ತೂರಿ ಬಿಡುತ್ತದೆ. ಪ್ರಪಂಚದಲ್ಲಿ ಲಭ್ಯವಿರುವ ಆಹಾರ ಮತ್ತು ವಸತಿಗೆ ಒಂದು ಮಿತಿಯುಂಟಷ್ಟೆ. ಉದ್ಭವವಾಗುವ ಕೋಟ್ಯಂತರ ಜೀವಿಗಳಿಗೆಲ್ಲ ಆಹಾರ ಮತ್ತು ವಸತಿ ಸಿಗುವುದು ಅಸಾಧ್ಯ. ಹೀಗಾಗಿ ಬಹುಪಾಲು ಜೀವಿಗಳು ವಸತಿ ಮತ್ತು ಆಹಾರ ಸಿಗದೆ ಅಳಿಯುತ್ತವೆ. ಉಳಿವ ಅಲ್ಪಸಂಖ್ಯೆಯ ಜೀವಿಗಳು ಮಾತ್ರ ಬದುಕಿ ಜೀವನ ನಿರ್ವಹಿಸುವುವು.

2. ಪೈಪೋಟಿ: ನಿಯಮಿತ ಮೊತ್ತದಲ್ಲಿ ಮಾತ್ರ ಆಹಾರ ಮತ್ತು ವಸತಿ ದೊರಕುವುದರಿಂದ ಹುಟ್ಟುವ ಜೀವಿಗಳ ನಡುವೆ ಆಹಾರ ಮತ್ತು ವಸತಿ ದೊರಕಿಸಿಕೊಳ್ಳಲು ಸ್ಪರ್ಧೆ ನಡೆಯುತ್ತದೆ. ಸ್ಪರ್ಧೆಗಳು ಪ್ರಭೇದಗಳ ನಡುವೆ ಮಾತ್ರವಲ್ಲದೆ ಒಂದೇ ಪ್ರಭೇದದ ವಿವಿಧ ಜೀವಿಗಳಲ್ಲೂ ನಡೆಯುತ್ತದೆ. ಇಲ್ಲೂ ಬಹಳಷ್ಟು ಸಂಖ್ಯೆಯ ಜೀವಿಗಳು ಸೋತು ಅಳಿಯುತ್ತವೆ ಮತ್ತು ಅಲ್ಪ ಸಂಖ್ಯೆಯ ಜೀವಿಗಳು ಗೆದ್ದು ಉಳಿಯುತ್ತವೆ. ಈ ಪೈಪೋಟಿ ಜೀವಿಸಂಖ್ಯೆಯ ಸ್ಫೋಟವನ್ನು ತಡೆಹಿಡಿಯುವ ಒಂದು ನೈಸರ್ಗಿಕ ನಿಯಂತ್ರಣೋಪಾಯ. ಪ್ರಪಂಚದಲ್ಲಿ ಜೀವಿಪ್ರಭೇದಗಳು ಯಾವ ಯಾವ ಪ್ರಮಾಣದಲ್ಲಿರಬೇಕೆಂಬುದನ್ನು ನಿಸರ್ಗ ಗೊತ್ತುಪಡಿಸಿದೆ. ಯಾವುದೇ ಒಂದು ಜೀವಿ ಅಥವಾ ಜೀವಿಪ್ರಭೇದ ಉಳಿದವಕ್ಕಿಂತ ಪ್ರತ್ಯೇಕವಾಗಿ ನಿಸರ್ಗ ನಿರ್ಧರಿಸಿದ ಪ್ರಮಾಣದ ಮೇರೆ ಮೀರಿ ಸಂತಾನಾಭಿವೃದ್ಧಿ ನಡೆಸದಂತೆ ನಿಯಂತ್ರಿಸುವ ಸಾಧನವೇ ಪೈಪೋಟಿ. ಎಲ್ಲಿಯವರೆಗೆ ನಿಸರ್ಗವನ್ನು ಕೆರಳಿಸುವ ಒಂದು ಪ್ರತಿಶಕ್ತಿ ಅಥವಾ ಕಾರಣಾಂಶ ಉದ್ಭವವಾಗುವುದಿಲ್ಲವೊ ಅಲ್ಲಿಯವರೆಗೆ ಜೀವಿಸಂಖ್ಯೆಯ ಮೊತ್ತ ಸಂರಕ್ಷಿತವಾಗಿರುತ್ತದೆ.

3. ವೈವಿಧ್ಯ: ಒಂದು ಜೀವಜಾತಿಯ ವೈಯಕ್ತಿಕ ಜೀವಿಗಳಲ್ಲಿ ಸಮಾನ ಗುಣರೂಪಗಳಿರದೆ ವಿವಿಧ ತೆರನ ಮತ್ತು ವಿವಿಧ ಪರಿಮಾಣ ವ್ಯತ್ಯಾಸಗಳು ಇರುವುವು ಎಂಬ ವಿಷಯ ಜೀವವಿಜ್ಞಾನದಲ್ಲಿ ಹಿಂದಿನಿಂದಲೂ ತಿಳಿದು ಬಂದದ್ದೇ. ಡಾರ್ವಿನ್ನನ ಪ್ರಕಾರ ಒಂದು ನಿಖರವಾದ ಪರಿಸರದಲ್ಲಿ ಜೀವಪ್ರಭೇದದ ಕೆಲವು ಜೀವಿಗಳಲ್ಲಿ ಬದಲಾಗುವ ಪರಿಸರಕ್ಕೆ ಹೊಂದಿಕೊಳ್ಳುವಂಥ ಯೋಗ್ಯತಾಗುಣಗಳಿರುವುವು. ಇನ್ನುಳಿದ ಜೀವಿಗಳಲ್ಲಾದರೂ ಇಂಥ ಯೋಗ್ಯತಾಗುಣಗಳಿರುವುದಿಲ್ಲ. ಬದಲಾಗುವ ಪರಿಸರಕ್ಕೆ ಹೊಂದಿಕೊಳ್ಳುವ ಅನುಕೂಲ ಗುಣಗಳಿರುವ ಜೀವಿಗಳು ಅಸ್ತಿತ್ವಕ್ಕಾಗಿ ನಡೆಯುವ ಸ್ಪರ್ಧೆಯಲ್ಲಿ ಗೆದ್ದು ಉಳಿಯುತ್ತವೆ. ಹೊಂದಿಕೊಳ್ಳಲಾರದಂಥ ಗುಣಗಳನ್ನು ಪಡೆದಿರತಕ್ಕ ಜೀವಿಗಳು ಅಳಿಯುತ್ತವೆ ಎಂದೂ ಡಾರ್ವಿನ್ ತಿಳಿಸಿದ. ಅನುಕೂಲಕರ ಗುಣಮಾರ್ಪಾಟುಗಳನ್ನು ಪಡೆದಿರುವ ಜೀವಿಗಳು ತಮ್ಮ ಈ ಗುಣಗಳನ್ನು ಮುಂದಿನ ಪೀಳಿಗೆಗೆ ರವಾನಿಸುತ್ತವೆ. ಹೀಗೆ ಉದ್ಭವವಾದ ಸಂತಾನದಲ್ಲಿ ಬದಲಿಸಿದ ಪರಿಸರಕ್ಕೆ ಹೊಂದಿಕೊಳ್ಳತಕ್ಕ ಗುಣಲಕ್ಷಣಗಳ ಮಾರ್ಪಾಟು ನಡೆಯುತ್ತಲೇ ಇರುತ್ತದೆ. ಮತ್ತೆ ಮತ್ತೆ ಅಸ್ತಿತ್ವಕ್ಕಾಗಿ ಹೋರಾಟ ನಡೆದು ಕೆಲವು ಜೀವಿಗಳು ಉಳಿಯುತ್ತವೆ, ಕೆಲವು ಅಳಿಯುತ್ತವೆ. ಈ ಹೋರಾಟದಲ್ಲಿ ಸಫಲವಾಗುವಂಥ ಜೀವಿಗಳು ಮಾರ್ಪಾಟಾದ ಪರಿಸರಕ್ಕೆ ಹೊಂದಿಕೊಳ್ಳುವಂಥ ತಮ್ಮ ಯೋಗ್ಯ ಗುಣಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುತ್ತವೆ. ಈ ತೆರನ ವರ್ಗಾವಣೆ ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುತ್ತ ಹೋಗುತ್ತದೆ. ಡಾರ್ವಿನ್ನನ್ನು ಇದನ್ನು "ಯೋಗ್ಯತಾಗುಣವುಳ್ಳದ್ದರ ಉಳಿಯುವಿಕೆ" ಎಂದು ಹೆಸರಿಸಿ ಇದು ಆಯ್ಕೆಯ ಒಂದು ವಿಧಾನ ಎಂದು ತಿಳಿಸಿದ. ಇದು ಡಾರ್ವಿನ್ನನ ಪ್ರಾಕೃತಿಕ ಆಯ್ಕೆ ಸಿದ್ಧಾಂತ ಎಂದು ಪ್ರಸಿದ್ಧವಾಗಿದೆ. ವಂಶ ಪಾರಂಪರ್ಯವಾಗಿ ನಡೆಯುವ ಈ ಪ್ರಾಕೃತಿಕ ಆಯ್ಕೆಯ ಕಾರ್ಯ ಬಲು ನಿಧಾನ ಗತಿಯದು. ಆದರೆ ಗುಣ ನವೀನತೆ ವಂಶದಿಂದ ವಂಶಕ್ಕೆ ಪರಿಷ್ಕಾರ ಹೊಂದುತ್ತ, ಬದಲಾಗುತ್ತ ಹೋಗುವ ಪರಿಸರಕ್ಕೆ ತಕ್ಕಂತೆ ಜೀವಿ ಹೊಂದಿಕೊಳ್ಳಲು ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಪರಿಪ್ಲುತವಾಗುತ್ತ ಜೀವಿಸುವ ಯೋಗ್ಯತೆಯನ್ನು ಹೆಚ್ಚಿನ ಮೊತ್ತದಲ್ಲಿ ಪಡೆಯುತ್ತ ಹೋಗುತ್ತದೆ. ಗುಣಪರಿಷ್ಕರಣ ಒಂದು ವಂಶಾನುಗತ ಕಾರ್ಯ. ನಿಸರ್ಗದ ಈ ಕುಲುಮೆಯಲ್ಲಿ ಜೀವಿಗಳು ಗುಣಪರಿಷ್ಕಾರ ಹೊಂದಿ ಕಾಲಾನುಕ್ರಮದಲ್ಲಿ ತಮ್ಮ ಹಿಂದಿನ ಪೀಳಿಗೆಯಲ್ಲಿ ಇಲ್ಲದಿದ್ದಂಥ ನವೀನಗುಣಗಳನ್ನು ಪಡೆದು ಹೊಸಮಾದರಿಯ ಜೀವಿಗಳಾಗಿ ಅವತರಿಸುತ್ತವೆ ಎಂಬುದು ಡಾರ್ವಿನ್ನನ ಸಿದ್ಧಾಂತ.

ಡಾರ್ವಿನ್ನನ ಜೀವವಿಕಾಸ ಸಿದ್ಧಾಂತ ಎಬ್ಬಿಸಿದಷ್ಟು ಕೋಲಾಹಲವನ್ನು ಇನ್ನಾವ ಸಿದ್ಧಾಂತವೂ ಉಂಟುಮಾಡಲಿಲ್ಲ. ಡಾರ್ವಿನ್ನನ ಸಿದ್ಧಾಂತವನ್ನು ಅನೇಕ ಜೀವವಿಜ್ಞಾನಿಗಳು ಪೂರ್ತಿಯಾಗಿ ಮತ್ತೆ ಕೆಲವರು ಭಾಗಶಃ ಮಾತ್ರ ಒಪ್ಪಿಕೊಂಡಿದ್ದಾರೆ. ಡಾರ್ವಿನ್ನನ ಮೂಲಪ್ರತಿಪಾದನೆಗಳು ಅಂದರೆ ವಿಪುಲ ಉತ್ಪಾದನೆ, ಪೈಪೋಟಿ, ವೈವಿಧ್ಯ, ಯೋಗ್ಯತೆ ಉಳ್ಳಜೀವಿಯ ಉಳಿಯುವಿಕೆ ಎಂಬವು ಖಂಡಿತ ಒಪ್ಪಿಕೊಳ್ಳುವಂಥ ವಿಚಾರಗಳೆ. ಆದರೆ ಡಾರ್ವಿನ್ನನ ಪ್ರತಿಪಾದನೆಯ ಬಹು ವಿವಾದಾತ್ಮಕ ಅಂಶಗಳೆಂದರೆ ವಿನೂತನಗುಣಗಳು ವಂಶಪಾರಂಪರ್ಯವಾಗಿ ಮುಂದಿನ ಪೀಳಿಗೆಗಳಿಗೆ ರವಾನೆಯಾಗುವುದು ಮತ್ತು ಪ್ರಾಕೃತಿಕ ಆಯ್ಕೆಯಿಂದ ಉದ್ಭವವಾಗುವ ಜೀವಿಗಳ ಮಾರ್ಪಾಟು. ತನ್ನ ಪ್ರತಿಪಾದನೆಯ ದುರ್ಬಲತೆಯನ್ನು ಡಾರ್ವಿನ್ನನೇ ಗಮನಿಸಿದ್ದ. ಅಂದರೆ ಪ್ರಾಕೃತಿಕ ಆಯ್ಕೆ ಜೀವವಿಕಾಸಕಾರ್ಯದ ಒಂದು ಅಂಶವೇ ಹೊರತು, ಅದರಿಂದಲೇ ಜೀವವಿಕಾಸ ನಡೆಯುವುದಿಲ್ಲ ಎಂಬ ವಿಚಾರ ಡಾರ್ವಿನ್ನನ ಪ್ರತಿಪಾದನೆಯ ಬಗ್ಗೆ ಇರುವ ಇನ್ನೊಂದು ಟೀಕೆ. ಅಂದರೆ ಒಗ್ಗದಿರುವ ಗುಣಗಳ ಬಗ್ಗೆ ಜೀವಿಗಳು ಪರಿಸರಕ್ಕೆ ಹೊಂದಿಕೊಳ್ಳಲು ಪ್ರಾಕೃತಿಕ ಆಯ್ಕೆಯಲ್ಲಿ ತಮ್ಮ ರಚನೆಯಲ್ಲಿ ಅನೇಕ ಮಾರ್ಪಾಡುಗಳನ್ನು ಅಳವಡಿಸಿಕೊಳ್ಳುತ್ತವೆ. ಪರಿಸರಕ್ಕೆ ಯಶಸ್ವಿ ಹೊಂದಾಣಿಕೆಯೆಂದರೆ ಜೀವಿ ತನ್ನ ಸುತ್ತಲಿರುವ ಜಟಿಲ ಪರಿಸ್ಥಿತಿಯನ್ನು ಎದುರಿಸಿ ಜೀವಿಸಲು ಗುಣಶಕ್ತಿ ಪಡೆಯುವುದು. ಈ ಅಮೂಲ್ಯ ಯೋಗ್ಯಗುಣಗಳ ಜೊತೆಯಲ್ಲಿ ಅನೇಕ ಜೀವಿಗಳು ಗಣನೀಯವಲ್ಲದ ಮತ್ತು ಪರಿಸ್ಥಿತಿಗೆ ಹೊಂದಿಕೊಳ್ಳಲು ಯಾವ ಪ್ರಯೋಜನವೂ ಇಲ್ಲದ ಕೆಲವು ಗುಣಗಳನ್ನು ಪಡೆದಿರುವುವು. ಅನುಪಯುಕ್ತ ಗುಣಗಳು ಜೀವಿಗಳ ಅಳಿವು ಮತ್ತು ಉಳಿವುಗಳಿಗೆ, ಪರಿಸರಕ್ಕೆ ಹೊಂದಿಕೊಳ್ಳುವುದಕ್ಕೆ ಯಾವ ಒತ್ತಾಸೆಯನ್ನೂ ಕೊಡಲಾರವಾದ್ದರಿಂದ ಸಸ್ಯಗಳಲ್ಲೇ ಆಗಲಿ, ಪ್ರಾಣಿಗಳಲ್ಲೇ ಆಗಲಿ ಜೀವಪ್ರಭೇದಗಳನ್ನು ಅವುಗಳ ಗುಣ ಲಕ್ಷಣ ಆಧಾರದ ಮೇಲೆ ವಿಂಗಡಿಸುವುದು ಅಮುಖ್ಯ ಮತ್ತು ನಿರರ್ಥಕ. ಡಾರ್ವಿನ್ನನ ಜೀವವಿಕಾಸವಾದ ಯೋಗ್ಯಗುಣಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ; ಯೋಗ್ಯವಲ್ಲದ ಗುಣಗಳಿಗೆ ಯಾವ ಪ್ರಾಮುಖ್ಯವನ್ನು

ಕೊಟ್ಟಿಲ್ಲ. ಜೀವಿಪ್ರಭೇದಗಳಲ್ಲಿ ಅನೇಕ ಸಲ ಯೋಗ್ಯವಲ್ಲದ ಗುಣಗಳೇ ಪ್ರಧಾನ ವ್ಯತ್ಯಾಸ ಅಂಶಗಳಾಗಿರುತ್ತವೆ.

ಡಾರ್ವಿನ್ನನ ವಾದದ ಬಗ್ಗೆ ಇರುವ ಇನ್ನೂ ಒಂದು ಟೀಕೆಯೆಂದರೆ ಆತ ಪಿತ್ರಾರ್ಜಿತ ಮತ್ತು ಅಪಿತ್ರಾರ್ಜಿತ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ಮತ್ತು ಎಲ್ಲ ಗುಣವ್ಯತ್ಯಾಸಗಳು ಪಿತ್ರಾರ್ಜಿತವೆಂದು ತಿಳಿದದ್ದು. ಸರ್ವೇಸಾಮಾನ್ಯವಾಗಿ ಲೈಂಗಿಕಕೋಶದ ಕೋಶರಸ ಅಥವಾ ಕ್ರೊಮ್ಯಾಟಿನ್ ನಿಯಂತ್ರಣ ಮಾರ್ಪಾಟುಗಳು ಮಾತ್ರ ಅನುವಂಶಿಕವಾಗಿ ಸಾಗುತ್ತವೆ. ಬೇರೆ ಮಾರ್ಪಾಟುಗಳಲ್ಲಿ ಪರಿಸರದ ಪರಿಣಾಮದಿಂದ ಉಂಟಾದ ದೈಹಿಕ ಕೋಶಗಳನ್ನು ಸಂಬಂಧಿಸಿದ ವ್ಯತ್ಯಾಸಗಳೇ ಹೊರತು ಆನುವಂಶಿಕವಾಗಿ ಸಾಗಿ ಬಂದಂಥವಲ್ಲ. ದೈಹಿಕ ಕೋಶಗಳು ಪರಿಸರದ ಪರಿಸ್ಥಿತಿಯಿಂದ ಗುಣವ್ಯತ್ಯಾಸ ಹೊಂದುತ್ತವಷ್ಟೆ. ಹೀಗೆ ವ್ಯತ್ಯಾಸಗೊಂಡ ಗುಣಗಳು ಆನುವಂಶಿಕವಾಗಿ ಹರಿಯುವುದಿಲ್ಲ.

ಹೀಗೆ ಡಾರ್ವಿನ್ನನ ಪ್ರಾಕೃತಿಕ ಆಯ್ಕೆ ಸಿದ್ಧಾಂತದಲ್ಲಿ ಕೆಲವು ದೋಷಗಳಿದ್ದರೂ, ಜೀವವಿಜ್ಞಾನದಲ್ಲಿ ಇದು ಒಂದು ಕ್ರಾಂತಿಕಾರಕ ಪ್ರತಿಪಾದನೆ ಎಂಬುದರಲ್ಲಿ ಸಂಶಯವಿಲ್ಲ.

(ಎಚ್.ಪಿ.ಜಿ.; ಎ.ಎಸ್.ಸಿ.)

**ಪ್ರಾಣಿಗಳಲ್ಲಿ ವರ್ತನೆ:** ಸುತ್ತಣ ಪರಿಸರದ ವಿಭಿನ್ನ ಪ್ರಚೋದಕಗಳಿಗೆ, ದೇಹದ ಆಂತರಿಕ ಅಗತ್ಯಗಳಿಗೆ ಇಲ್ಲವೆ ಇವೆರಡೂ ಕಾರಕಗಳ ಒಟ್ಟು ಪ್ರಚೋದನೆಗೆ ಯಾವುದೇ ಪ್ರಾಣಿ ವ್ಯಕ್ತಪಡಿಸುವ ಪ್ರಕ್ರಿಯೆ (ಆ್ಯನಿಮಲ್ ಬಿಹೇವಿಯರ್). ಪ್ರಾಣಿಗಳು ವಿವಿಧ ಪರಿಸರಗಳಲ್ಲಿ ಸನ್ನಿವೇಶಗಳಲ್ಲಿ ವಿವಿಧ ರೀತಿಯಲ್ಲಿ ವರ್ತಿಸುತ್ತವೆ. ಪರಿಸರ ಬದಲಾದಂತೆ ಪ್ರಾಣಿ ವರ್ತನೆ ಸಹ ಬದಲಾಗುತ್ತದೆ. ಈ ರೀತಿಯ ವರ್ತನಾ ವ್ಯತ್ಯಾಸದಲ್ಲಿ ಪ್ರಾಣಿಗಳ ನರಮಂಡಲ ಬಹುಮುಖ್ಯ ಪಾತ್ರ ವಹಿಸುತ್ತದೆ. ಆದರೆ ಈಗ ಸಿದ್ಧವಾಗಿರುವ ವಿಷಯವೆಂದರೆ, ಪ್ರಾಣಿಗಳಲ್ಲಿ ಮನುಷ್ಯನಿಗಿರುವಷ್ಟು ವಿಚಾರ ಶಕ್ತಿ ಇಲ್ಲ. ಮನುಷ್ಯನಲ್ಲಿ ವಿಚಾರ ಶಕ್ತಿ ವಿಕಾಸದ ಪರಮಾವಧಿಯನ್ನು ಮುಟ್ಟಿದೆ ಎನ್ನುವುದಾದರೆ ಪ್ರಾಣಿಗಳ ವಿಚಾರಶಕ್ತಿ ಅತ್ಯಂತ ಕೆಳಸ್ತರದ್ದು.

ಪ್ರಾಣಿಗಳ ವರ್ತನೆ ಹೆಚ್ಚಾಗಿ ಸ್ವಭಾವಬದ್ಧ. ಉದಾಹರಣೆಗೆ ಇರುವೆ, ಜೇನ್ನೊಣ ಮತ್ತು ಕಣಜಗಳಂಥ ಸಾಮಾಜಿಕ ಕೀಟಗಳ ಸ್ವಭಾವ ಅಚ್ಚರಿ ಮೂಡಿಸುವಷ್ಟು ವಿಶಿಷ್ಟವಾಗಿದೆ. ಇವು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ವರ್ತಿಸುವುದೇ ಒಂದು ಸೋಜಿಗ. ಹಾಗೆಯೇ ಗೋಸುಂಬೆ ನೆಲದ ಮೇಲೆ, ಮರದ ಕೊಂಬೆಯ ಮೇಲೆ ಬೇರೆ ಬೇರೆ ಬಣ್ಣ ಬರುವಂತೆ ತನ್ನ ದೇಹವನ್ನು ಮಾರ್ಪಡಿಸಿಕೊಳ್ಳುವುದು ಇನ್ನೂ ಸೋಜಿಗ. ಇಂಥ ಉದಾಹರಣೆಗಳು ನೂರಾರು.

ಬಲು ಹಿಂದಿನಿಂದ ವಿಚಾರವಂತರು ಮತ್ತು ವಿಜ್ಞಾನಿಗಳು ಪ್ರಾಣಿವರ್ತನೆಯ ಬಗ್ಗೆ ಅಧ್ಯಯನಗಳನ್ನು ನಡೆಸುತ್ತ ಬಂದಿದ್ದಾರೆ. ಬಹಳ ಹಿಂದೆಯೇ ಗ್ರೀಕ್ ವಿಚಾರವಂತರು ಪ್ರಾಣಿಗಳಿಗೆ ಆತ್ಮವಿದೆಯೇ? ಅವು ಸತ್ತಮೇಲೂ ಅವುಗಳ ಆತ್ಮ ಅಳಿಯದ ಹಾಗೆಯೇ ಮುಂದುವರಿಯುತ್ತದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯುವ ಪ್ರಯತ್ನ ನಡೆಸಿದ್ದರು.

17ನೆಯ ಶತಮಾನದ ಅನಂತರ ಮನೋವಿಜ್ಞಾನಿಗಳು ಮತ್ತು ಪ್ರಾಣಿ ವಿಜ್ಞಾನಿಗಳು ಅತ್ಯಂತ ವ್ಯಾಪಕ ಸಂಶೋಧನೆಗಳನ್ನು ನಡೆಸಿ ಪ್ರಾಣಿವರ್ತನೆಯ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಲು ಯತ್ನಿಸಿದ್ದಾರೆ. ಈ ಸಂಶೋಧನೆಗಳು ಸ್ಥೂಲವಾಗಿ ಎರಡು ಬಗೆಯವು: ಮೊದಲನೆಯದು, ಪ್ರಾಣಿಗಳ ಜೊತೆಯಲ್ಲೇ ವಾಸಿಸುತ್ತ, ನಿಸರ್ಗದಲ್ಲಿ ಅವು ಹೇಗೆ ವರ್ತಿಸುತ್ತವೆ, ಈ ವರ್ತನೆಗೆ ಪ್ರಚೋದಕ ಅಂಶಗಳಾವುವು ಎನ್ನುವುದನ್ನು ಪತ್ತೆ ಹಚ್ಚುವುದು. ಎರಡನೆಯದು: ಪ್ರಾಣಿಗಳನ್ನು ಪ್ರಯೋಗಶಾಲೆಯಲ್ಲಿಟ್ಟು ಅವು ಹೇಗೆ ವರ್ತಿಸುತ್ತವೆ, ವಿವಿಧ ಪ್ರಯೋಗಗಳಿಗೆ ಅವು ಪ್ರತಿಕ್ರಿಯೆಯನ್ನು ಹೇಗೆ ವ್ಯಕ್ತಪಡಿಸುತ್ತವೆ ಎನ್ನುವುದನ್ನು ತಿಳಿದುಕೊಳ್ಳುವುದು.

ಪ್ರಾಣಿಗಳ ಸಹಚರಿಯಾಗಿ ಅವುಗಳ ವರ್ತನೆಯನ್ನು ಅಭ್ಯಸಿಸುವುದು ಕಷ್ಟದ ಕೆಲಸ. ಇದು ಸಾಹಸದ ಕೆಲಸವೂ ಹೌದು. ಹೆನ್ರಿ ಫೇಬರ್ (1823–1915) ಎಂಬಾತ ಜೇನ್ನೊಣ ಹಾಗೂ ಕಣಜಗಳ ವರ್ತನೆಯನ್ನು ತನ್ನ ತೋಟದಲ್ಲೇ ಸುಮಾರು 40 ವರ್ಷಗಳ ಕಾಲ ಅಭ್ಯಸಿಸಿದ. ಇಂಥ ಪ್ರಯೋಗಗಳಲ್ಲಿ ವಿಜ್ಞಾನಿ ತಾನು ಆ ಪ್ರಾಣಿಗಳ ಪೈಕಿ ಒಂದು ಎಂಬುದನ್ನು ಪ್ರಾಣಿಗಳಿಗೆ ಮನವರಿಕೆ ಮಾಡಿ ಕೊಡಬೇಕಾಗುತ್ತದೆ. ಆದರೆ ಕೆಲವು ಪ್ರಾಣಿಗಳ ವರ್ತನೆಯ ವಿಷಯದಲ್ಲಿ ಇಂಥ ಪ್ರಯೋಗ ಅಸಾಧ್ಯ. ತೋಳ ಕಿರುಚುವುದು, ಗೊರಿಲ್ಲ ತನ್ನ ಎದೆ ಬಡಿದುಕೊಳ್ಳುವುದು, ಮೊಟ್ಟೆಯೊಡೆದು ಹೊರಬರುವ ತನ್ನ ಮರಿಗಳನ್ನು ತಾಯಿ ಮೊಸಳೆ ಬಾಯಲ್ಲಿ ಕಚ್ಚಿಕೊಂಡು ಸುರಕ್ಷಿತ ಸ್ಥಳಕ್ಕೆ ಹೋಗಿ ನೀರಿಗೆ ಬಿಡುವುದು ಮುಂತಾದ ವರ್ತನೆಗಳ ಕಾರಣವನ್ನು ಅಭ್ಯಸಿಸುವುದು ಇಂದಿಗೂ ಒಂದು ಸಮಸ್ಯೆಯೇ. ಇಂಥದೇ ಸಮಸ್ಯೆ ಬಾವಲಿಯಂಥ ಹಾರುವ ಪ್ರಾಣಿಗಳಲ್ಲೂ ಎದುರಾಗುತ್ತದೆ. ಸ್ತನಿವರ್ಗಕ್ಕೆ ಸೇರಿದ ಈ ಪ್ರಾಣಿಯ ಒಂದು ಪ್ರಭೇದ ಆಹಾರಕ್ಕಾಗಿ ಕೆಲವು ಪ್ರಾಣಿಗಳನ್ನು ಬೇಟೆಯಾಡುತ್ತದೆ. ಸಿಕ್ಕ ಆಹಾರವನ್ನು ತನ್ನ ಮೊನಚಾದ ಹಲ್ಲಿನಿಂದ ಕತ್ತರಿಸಿ ಬೆಕ್ಕು ಹಾಲನ್ನು ಹೀರುವಂತೆ ಎರೆಗಳ ರಕ್ತವನ್ನು ಹೀರುತ್ತದೆ. ಅವಕಾಶ ಸಿಕ್ಕರೆ ಮನುಷ್ಯನ ರಕ್ತವನ್ನು ಸಹ ಬಾವಲಿ ಹೀರುವುದುಂಟು. ಇದು ರಕ್ತವನ್ನೇ ಏಕೆ ಆಹಾರವಾಗಿ ತೆಗೆದುಕೊಳ್ಳುತ್ತದೆ? ಇಷ್ಟಾದರೂ ಇದರ ಮೂತ್ರಪಿಂಡ ಸರಿಯಾಗಿಯೇ ಇದೆಯಲ್ಲ ಎಂಬ ಪ್ರಶ್ನೆಗಳಿಗೆ ವಿವರಣೆ ಇಲ್ಲ.

ಕೇವಲ ಸತತವಾಗಿ ಗಮನಿಸುವುದರಿಂದ ಹಲವಾರು ಪ್ರಾಣಿವರ್ತನೆಗಳನ್ನು ಅರಿಯುವುದು ಸಾಧ್ಯವಾಗಿದೆ. ಅನೇಕ ಪ್ರಾಣಿಗಳು ಚಾಕಚಕ್ಯತೆಯಿಂದ ವರ್ತಿಸುತ್ತವೆ. ಉದಾಹರಣೆಗೆ ಚಿಂಪಾಂಜಿ. ಇದು ಹುಲ್ಲಿನ ಕಡ್ಡಿಯನ್ನೋ ಸಣ್ಣ ಕೊಂಬೆಯನ್ನೋ, ಗೆದ್ದಲಿನ ಗೂಡಿನೊಳಕ್ಕೆ ಚಾಚುತ್ತದೆ. ಗೆದ್ದಲು ಕಡ್ಡಿಯನ್ನು ಹಿಡಿದಾಗ ಚಿಂಪಾಂಜಿ ಅದನ್ನು ಎಳೆದುಕೊಂಡು, ಚೀಪಿಕೊಂಡು ಗೆದ್ದಲನ್ನು ತಿನ್ನುತ್ತದೆ. ಉಪಕರಣಗಳನ್ನು ಬಳಸುವ ಪ್ರಾಣಿಗಳ ಉದಾಹರಣೆಗಳು ಅನೇಕ. ಆನೆ ತನ್ನ ಸೊಂಡಿಲಿನಲ್ಲಿ ಕಡ್ಡಿಯನ್ನು ಸಿಕ್ಕಿಸಿಕೊಂಡು ಕೆರೆದುಕೊಳ್ಳುವುದು. ಖಡ್ಗಮೃಗ ಯಾವಾಗಲೂ ಕೆಸರಿನಲ್ಲಿರಲು ಇಚ್ಛಿಸುವುದು, ಇರುವೆಗಳು ಶಿಸ್ತಿನ ಸಿಪಾಯಿಗಳಂತೆ ಸಾಗಿ ಆಹಾರವನ್ನು ಶೇಖರಿಸುವುದು, ಕುರಿಗಳು ಮಂದೆ ಮಂದೆಯಾಗಿ ಮೇಯುವುದು ಇಂಥ ವರ್ತನೆಗಳಿಗೆ ನಿದರ್ಶನಗಳು.

ಕೆಲವು ವಿಜ್ಞಾನಿಗಳ ಪ್ರಕಾರ ಪ್ರಾಣಿವರ್ತನೆ ವಿಕಾಸಗೊಳ್ಳುತ್ತ ಸಾಗಿದೆ. ಆದರೆ ಈ ವಾದಕ್ಕೆ ಪುಷ್ಟಿ ದೊರಕಿಲ್ಲ. ಕೇವಲ ಕೆಲವು ಅಪ್ರತ್ಯಕ್ಷ ಚಿಹ್ನೆಗಳ ಮೂಲಕ ವರ್ತನೆ ವಿಕಾಸದ ಹಾದಿಯನ್ನು ಅನುಸರಿಸಿದೆ ಎಂದು ಹೇಳಲಾಗುತ್ತದೆ. ಪ್ರಾಣಿಯ ಆಕಾರ, ದೇಹದ ಬಣ್ಣ, ಪರಿಸರದ ಒತ್ತಡ ಮುಂತಾದವು ಪ್ರಾಣಿ ವರ್ತನೆಯ ಪ್ರೇರಕಗಳು ಎಂಬುದನ್ನು ಸಾಬೀತು ಮಾಡುವ ಯತ್ನಗಳು ನಡೆದಿವೆ. ಆದರೆ ಯಾವ ನಿರ್ದಿಷ್ಟ ಕಾರಣದಿಂದಾಗಿ ಪ್ರಾಣಿಗಳು ನಿರ್ದಿಷ್ಟ ರೀತಿಯಲ್ಲಿ ವರ್ತಿಸುತ್ತವೆ? ತಮ್ಮ ವರ್ತನೆಯ ಬಗ್ಗೆ ಅವಕ್ಕೆ ಅರಿವಿದೆಯೇ ಎಂಬುದನ್ನು ತಿಳಿಯಲಾಗಿಲ್ಲ. ಪ್ರಾಣಿಯ ಅರಿವಿಗೆ ಬಾರದ ವರ್ತನೆಗೆ ಒಂದು ಉದಾಹರಣೆ: ಒಂದು ಜಾತಿಯ ಕಂಬಳಿಹುಳು ಮರದ ಕೊಂಬೆಯ ಕೆಳಗೆ ತೂಗುಬಿದ್ದಿರುವಾಗ ಮೇಲಿಂದ ಬೀಳುವ ಬೆಳಕಿನಿಂದಾಗಿ ಕೊಂಬೆಯ ಹಾಗೂ ಹುಳುವಿನ ಮೈಬಣ್ಣ ಒಂದೇ ರೀತಿಯಾಗಿ ಕಾಣುವುದು. ಇದರಿಂದ ಕಂಬಳಿಹುಳು ಇರುವುದು ಗೊತ್ತೇ ಆಗುವುದಿಲ್ಲ; ಆದರೆ ಅದು ಕೊಂಬೆಯ ಮೇಲೆ ಹತ್ತಿ ಬಂದಾಗ ಅದರ ಬಣ್ಣ ಎದ್ದುಕಾಣುತ್ತದೆ. ಕೊಂಬೆಯ ಕೆಳಗೆ ಇರುವುದರಿಂದ ಶತ್ರುಗಳಿಂದ ರಕ್ಷಣೆ ಪಡೆಯಬಹುದು ಎಂಬ ಅರಿವು ಆ ಹುಳುವಿಗೆ ಇದೆ ಎಂದು ಹೇಳಲಾಗುವುದಿಲ್ಲ, ಆದರೆ ಸಹಜ ವರ್ತನೆಯಿಂದಾಗಿ ಅದು ಕೊಂಬೆಯ ಕೆಳಗೆ ಬಂದು ಸೇರುತ್ತದೆ. ಇದಕ್ಕೆ ಭಿನ್ನವಾಗಿ ಕೆಲವು ಪ್ರಾಣಿಗಳು ತಮ್ಮ ನಿರ್ದಿಷ್ಟ ವರ್ತನೆಯ ಮೂಲಕ ಶತ್ರುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತವೆ. ಉದಾಹರಣೆಗೆ, ಕೆಂಪು ಚಿಟ್ಟೆಗಳು ಒಣಗಿದ ಎಲೆಗಳಂತೆ, ಕೆಲವು ಕೀಟಗಳು ಹಸುರು ಹುಲ್ಲಿನಂತೆ, ಕೆಲವು ಮೀನುಗಳು ನೀರೊಳಗೆ ಬೆಳೆಯುವ ಸಸ್ಯಗಳ ಎಲೆಗಳಂತೆ ಕಾಣುತ್ತಿದ್ದು ಶತ್ರುಗಳಿಂದ ರಕ್ಷಿಸಿಕೊಳ್ಳುತ್ತವೆ.

ಪ್ರಾಯೋಗಿಕವಾಗಿ ಪ್ರಾಣಿಗಳ ವರ್ತನೆಯನ್ನು ಅಭ್ಯಸಿಸಿ, ಇಂಥ ವರ್ತನೆಗಳ ಹಿಂದೆ ಇರುವ ಪ್ರೇರಣೆಗಳನ್ನು ಪತ್ತೆ ಮಾಡುವ ಕಾರ್ಯವಂತೂ ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಪ್ರಯೋಗಶಾಲೆಯಲ್ಲಿ ಪ್ರಾಣಿಗಳನ್ನು ಸಂಗ್ರಹಿಸಿ ಅವುಗಳ ಮೇಲೆ ನಾನಾ ಪ್ರಯೋಗಗಳನ್ನು ನಡೆಸಿ ಅವುಗಳ ವರ್ತನೆಯನ್ನು ಬೆಳಕಿಗೆ ತರುವುದು ಈ ಅಧ್ಯಯನಗಳ ಮುಖ್ಯ ಉದ್ದೇಶ. ಆದರೆ ಇಲ್ಲಿ ಎದುರಾಗುವ ದೊಡ್ಡ ಮಿತಿಯೆಂದರೆ ಪ್ರಯೋಗಾಲಯದಲ್ಲಿ ಪ್ರಾಣಿಗಳು ನಿಸರ್ಗದಲ್ಲಿರುವಂತೆಯೇ ವರ್ತಿಸುತ್ತವೆ ಎಂದು ಖಚಿತವಾಗಿ ಹೇಳಬರುವುದಿಲ್ಲ. ಆದರೂ ಪ್ರಯೋಗಾಲಯದಲ್ಲಿ ಪ್ರಾಣಿಗಳ ವರ್ತನೆಯನ್ನು ಅಭ್ಯಸಿಸುವುದು ಕೆಲವು ಕಾರಣಗಳಿಂದ ಅನಿವಾರ್ಯ. ಕೆಲವು ವಿಷಯಗಳನ್ನು ಕುರಿತಂತೆ (ಉದಾಹರಣೆಗೆ ಆಹಾರಕ್ಕಾಗಿ, ಲೈಂಗಿಕ ಕ್ರಿಯೆಗಾಗಿ, ಶತ್ರುಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ) ಪ್ರಾಣಿಗಳು ನಿರ್ದಿಷ್ಟ ರೀತಿಯಲ್ಲಿ ವರ್ತಿಸುತ್ತವೆ ಎಂಬ ಅಂಶ ಇಂಥ ಪ್ರಯೋಗಗಳಿಂದ ಸ್ಥಿರಪಟ್ಟಿದೆ.

ಉದಾಹರಣೆಗೆ, ರಷ್ಯದ ವಿಜ್ಞಾನಿ ಐ. ಆರ್. ಪ್ಯಾವಲೋವ್ ನಾಯಿಗಳ ಮೇಲೆ ನಡೆಸಿದ ಪ್ರಯೋಗದ ಫಲಿತಾಂಶಗಳು ಕುತೂಹಲಕಾರಿಯಾಗಿವೆ. ಆತ ನಾಯಿಗಳಿಗೆ ಆಹಾರ ಕೊಡುವ ವೇಳೆಯಲ್ಲಿ ಮಾತ್ರವೆ ಗಂಟೆ ಬಾರಿಸಿ ಆಹಾರವನ್ನು ಅವುಗಳ ಎದುರು ಇಡುತ್ತಿದ್ದ. ಗಂಟೆ ಬಾರಿಸಿದ ಒಡನೆ ನಾಯಿ ಜೊಲ್ಲು ಸುರಿಸುವುದು ಸರ್ವೇಸಾಮಾನ್ಯವಾಯಿತು. ಆಹಾರವಿಲ್ಲದಿದ್ದಾಗಲೂ ಗಂಟೆ ಬಾರಿಸಿದಾಕ್ಷಣ ನಾಯಿ ಜೊಲ್ಲು ಸುರಿಸುತ್ತಿತ್ತು. ಅನಂತರ ಈ ವರ್ತನೆಯ ವೇಳೆ ನಾಯಿಯ ದೇಹದ ಒಳಗೆ ನಡೆಯಬಹುದಾದ ಪ್ರತಿಕ್ರಿಯೆಯನ್ನು ಕುರಿತು ಸಂಶೋಧನೆ ನಡೆಸಿದಾಗ ಪಿಟ್ಯುಟರಿ ಗ್ರಂಥಿಯೇ ಈ ವರ್ತನೆಗೆ ಕಾರಣ ಎಂಬುದು ಪತ್ತೆಯಾಯಿತು. ಇಂಥ ನೂರಾರು

ಪ್ರಯೋಗಗಳು ನಡೆದಿವೆ. ಆದರೆ ಒಂದು ಪ್ರಾಣಿ ವರ್ತಿಸಿದಂತೆ ಮತ್ತೊಂದು ಪ್ರಾಣಿ ವರ್ತಿಸುವುದಿಲ್ಲವಾದ್ದರಿಂದ ಯಾವುದೇ ವರ್ತನೆಯನ್ನು ಕುರಿತಂತೆ ಯಾವ ಒಂದು ಕಾರಣದ ಸಾರ್ವತ್ರೀಕರಣವೂ ಸಾಧ್ಯವಾಗಿಲ್ಲ. ಆದರೂ, ಪ್ರಾಣಿವರ್ತನೆಗೆ ಅದರ ದೇಹದಲ್ಲಿರುವ ಮುಖ್ಯ ಸೂಕ್ಷ್ಮಾಂಗಗಳು, ನರಗಳು ಮತ್ತು ಸ್ನಾಯುಗಳು ಇವುಗಳ ಕ್ರಿಯೆಯೇ ಕಾರಣ ಎಂಬುದು ಸಾಮಾನ್ಯವಾದ ಅಭಿಪ್ರಾಯ. ಪ್ರಾಣಿಗಳ ಅಂತರ್ಗತ ಹಾಗೂ ಸುವ್ಯವಸ್ಥಿತ ಸ್ವಾನುಭವ ಸ್ವಲ್ಪವೂ ವ್ಯತ್ಯಾಸಗೊಳ್ಳದೆ, ಅವುಗಳ ಮಸ್ತಿಷ್ಕದ ಸಂಘಟನೆಯ ರೂಪದಲ್ಲಿ ಅವುಗಳ ವರ್ತನೆ ಭೌತಿಕ ಕ್ರಿಯೆಗೆ ಸಂಬಂಧಿಸಿದುದು ಎನ್ನುವ ಅಭಿಪ್ರಾಯದ ಬಗ್ಗೆ ಸಹ ಹೆಚ್ಚು ಕಡಿಮೆ ಸರ್ವಾನುಮತವಿದೆ.

ಪ್ರಾಣಿಗಳ ವರ್ತನೆಯನ್ನು ಅನುಸರಿಸಿ ಅವನ್ನು ಕೆಲವು ವರ್ಗಗಳಾಗಿ ವಿಂಗಡಿಸಬಹುದೇ ಎಂಬುದನ್ನು ಸಹ ಮನೋವಿಜ್ಞಾನಿಗಳು ಪರಿಶೀಲಿಸಿದ್ದಾರೆ. ಆದರೆ ಈ ದಿಶೆಯಲ್ಲಿ ಅನೇಕ ವಿರೋಧಾಭಾಸ ಇರುವುದು ವ್ಯಕ್ತವಾಗಿದೆ. ಏಕೆಂದರೆ ಒಂದೇ ಗುಂಪಿಗೆ ಸೇರಿದ ಪ್ರಾಣಿಗಳಲ್ಲಿ ವರ್ತನೆ ಒಂದೇ ರೀತಿಯದಾಗಿಲ್ಲ. ಅಲ್ಲದೆ, ಪ್ರಯೋಗಶಾಲೆಯಲ್ಲಿ ನಿರ್ದಿಷ್ಟ ಪ್ರಯೋಗಗಳ ಮೂಲಕ ಮಾತ್ರ ಪ್ರಾಣಿವರ್ತನೆಯನ್ನು ಗಮನಿಸುವುದರಿಂದ ಅದರ ಸಾರ್ವತ್ರೀಕರಣ ಸಾಧ್ಯವಿಲ್ಲ.

ಪ್ರಾಣಿವರ್ತನೆಗೆ ಬಹುಶಃ ಕಲಿಕೆಯೇ ಕಾರಣವೆಂಬುದು ಪ್ರಾಯೋಗಿಕ ಅಧ್ಯಯನಗಳ ಮೂಲಕ ಸ್ಥಿರಪಟ್ಟಿರುವ ಮತ್ತೊಂದು ಅಂಶ. ಪ್ರಾಣಿಗಳ ವ್ಯಕ್ತಿತ್ವದಲ್ಲಿ ಕಲಿಕೆ ಅಧಿಕವಾಗಿದ್ದು ಇದರ ಅಭಿವ್ಯಕ್ತಿಗೆ ಅನುಕೂಲವಾದ ಸನ್ನಿವೇಶ ದೊರೆತಾಗ ಅವುಗಳ ವರ್ತನೆಯ ಮೂಲಕ ಪ್ರಕಟಗೊಳ್ಳುತ್ತದೆ. ಕಲಿಕೆಯ ಬಗ್ಗೆ ಅಸಂಖ್ಯಾತ ಪ್ರಯೋಗಗಳು ನಡೆದಿವೆ. ಕೆಲವು ಪ್ರಯೋಗಗಳು ಕಲಿಕೆಯ ಪ್ರತಿಕ್ರಿಯೆಯಲ್ಲಾಗುವ ಶಾರೀರಿಕ ಅಥವಾ ನರಮಂಡಲದ ಬದಲಾವಣೆಗೆ ಸಂಬಂಧಿಸಿವೆ. ಮತ್ತೆ ಕೆಲವು ಪರಿಸರದಲ್ಲಿ ಉಂಟಾಗುವ ವ್ಯತ್ಯಾಸದಿಂದ ಪ್ರಾಣಿಗಳು ಹೇಗೆ ಕಲಿಯುತ್ತವೆ ಎನ್ನುವುದಕ್ಕೆ ಸಂಬಂಧವಿದೆ. ಪ್ರಾಣಿಗಳ ಜ್ಞಾನೇಂದ್ರಿಯಗಳಿಂದ ಉಂಟಾಗುವ ಅನುಭವಗಳಿಗೂ ಪ್ರತಿಕ್ರಿಯೆಯನ್ನು ತೋರಿಸುವುದಕ್ಕಾಗಿ ಉಂಟಾಗುವ ಶಾರೀರಿಕ ಆವೇಗಕ್ಕೂ ಸಂಬಂಧಿಸಿದೆ ಎಂಬ ಅಂಶ ಇಂಥ ಪ್ರಯೋಗಗಳಿಂದ ಸ್ಥಿರಪಟ್ಟಿದೆ. ಇದೇ ರೀತಿ ಸರ್ವಸಮ್ಮತವಾದ ಇನ್ನೊಂದು ಸಿದ್ಧಾಂತವೆಂದರೆ ಪ್ರಾಣಿವರ್ತನೆಗೂ ಪ್ರೇರಣೆಗೂ ಇರುವ ಸಂಬಂಧ. ಪ್ರೇರಣೆ ದೊರೆತಾಗಲೆಲ್ಲ ಪ್ರಾಣಿಗಳು ನಿರ್ದಿಷ್ಟ ರೀತಿಯಲ್ಲಿ ವರ್ತಿಸುತ್ತವೆಂಬುದು ಕೂಡ ಸ್ಥಿರಪಟ್ಟಿದೆ.

ಪ್ರಾಣಿಗಳ ವರ್ತನೆ ಹೊರಗಿನ ಪರಿಸರದಿಂದ ಬದಲಾಗುವಂತೆಯೇ, ಪ್ರೇರಣೆ ಮತ್ತು ರಾಸಾಯನಿಕಗಳ ಬಳಕೆಯಿಂದಲೂ ಬದಲಾಗುತ್ತದೆ. ರಾಸಾಯನಿಕಗಳ ಪರಿಮಾಣ, ಅದನ್ನು ಪ್ರಾಣಿಗಳ ದೇಹಕ್ಕೆ ಸೇರಿಸುವ ಕಾಲ ಮತ್ತು ಸೇರಿಸುವ ರೀತಿಯನ್ನು ಅನುಸರಿಸಿ ಪ್ರಾಣಿಗಳ ವರ್ತನೆಯಲ್ಲಿ ವ್ಯತ್ಯಾಸಗಳುಂಟಾಗುವುದು ಕಂಡುಬಂದಿದೆ.

ಪ್ರಾಣಿಗಳ ಲೈಂಗಿಕ ವರ್ತನೆಯನ್ನು ಕುರಿತು ಸಹ ಅನೇಕ ಪ್ರಯೋಗಗಳು ನಡೆದಿವೆ. ರಾಸಾಯನಿಕಗಳ ಮೂಲಕ ಅವುಗಳ ವರ್ತನೆಯನ್ನು ಅಭ್ಯಸಿಸಲಾಗಿದೆ. ಆದರೆ ಇಂಥ ಪ್ರಯೋಗಗಳಿಂದ ಪ್ರಾಣಿಗಳು ಸ್ವಾಭಾವಿಕ ಪರಿಸರದಲ್ಲಿ ನಡೆಸುವ ಲೈಂಗಿಕ ವರ್ತನೆಯ ಬಗ್ಗೆ ಅರಿಯುವುದು ಸಾಧ್ಯವಾಗಿಲ್ಲವೆಂಬುದು ಸ್ಪಷ್ಟ.

ಮೇಲಿನ ವಿವರಣೆಗಳಿಂದ ಅನೇಕ ಅಂಶಗಳು ಸ್ಪಷ್ಟವಾಗುತ್ತವೆ. ಪ್ರಾಣಿವರ್ತನೆಯನ್ನು ಕುರಿತು ನಡೆದಿರುವ ಇದುವರೆಗಿನ ಸಂಶೋಧನೆಗಳು ಹೊಸ ಸಂಶೋಧನೆಗಳಿಗೆ ವಿಶಾಲ ತಳಹದಿಯನ್ನು ಹಾಕಿವೆಯಾದರೂ ಈ ವಿಚಾರದ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳುವುದಕ್ಕೆ ಸಾಧ್ಯವಾಗಿಲ್ಲ. ಬೇರೆ ಬೇರೆ ವಿಜ್ಞಾನಿಗಳು ಬೇರೆ ಬೇರೆ ತೀರ್ಮಾನಗಳಿಗೆ ಈ ಬಗ್ಗೆ ಬಂದಿದ್ದಾರೆ. ಜೀವವಿಜ್ಞಾನ, ಮನೋವಿಜ್ಞಾನ, ಪರಿಸರ ವಿಜ್ಞಾನಗಳು ಪ್ರಾಣಿವರ್ತನೆಯ ಬಗ್ಗೆ ವ್ಯಾಪಕ ಸಂಶೋಧನೆಗೆ ಎಡೆಮಾಡಿ ಕೊಟ್ಟಿವೆ. ಪ್ರಾಣಿವರ್ತನೆ ಸ್ವಭಾವಜನ್ಯವಾದದ್ದೇ, ವಿಕಾಸಸ್ವರೂಪದ್ದೇ ಎನ್ನುವುದು ಖಚಿತವಾಗಿಲ್ಲ. ವಿಕಾಸಯುತವಾದದ್ದೆಂದು ಅಭಿಪ್ರಾಯ ಪಡುವ ವಿಜ್ಞಾನಿಗಳು, ಪ್ರಾಣಿವಿಕಾಸಕ್ಕೆ ವರ್ತನ ವಿಕಾಸವನ್ನು ಸಂಬಂಧಿಸುತ್ತಾರೆ. ಅತ್ಯಂತ ಹೆಚ್ಚಿನ ನರಮಂಡಲವನ್ನು ಪಡೆದಿರುವ ಪ್ರಾಣಿಗಳಲ್ಲಿ ನಿರ್ದಿಷ್ಟ ಸ್ವರೂಪದ ವರ್ತನೆಗಳು ವ್ಯಕ್ತವಾಗುತ್ತವೆ ಎಂಬ ಸಿದ್ಧಾಂತ ಸಹ ಬೆಳಕಿಗೆ ಬಂದಿದೆ. ಹಾಗೆಯೆ ಕಡಿಮೆ ನರಮಂಡಲಗಳಿರುವ ಪ್ರಾಣಿಗಳಲ್ಲಿ ವರ್ತನೆ ಸರಳ ರೂಪದ್ದಾಗಿದೆ ಎಂಬ ಸಿದ್ಧಾಂತ ಸಹ ಪ್ರಚಲಿತವಾಗಿದೆ.

ಪ್ರಾಯೋಗಿಕ ಸಿದ್ಧಾಂತಗಳಿಗೆ ಮಿತಿ ಹೆಚ್ಚು, ಎಂದೇ ಅವನ್ನು ಆಧಾರವಾಗಿಟ್ಟುಕೊಂಡು ಪ್ರಾಣಿಗಳ ವರ್ತನೆಯನ್ನು ಅರಿತುಕೊಳ್ಳುವುದು ಪೂರ್ಣವಾಗಿ ಸಾಧ್ಯವಾಗಿಲ್ಲ. ಹಾಗೆಯೇ ಅನೇಕ ಕ್ರೂರ ಜಂತುಗಳು ಮತ್ತು ಪ್ರಾಣಿಗಳು ಪ್ರಯೋಗಕ್ಕೆ ಲಭ್ಯವಲ್ಲದ್ದರಿಂದ ಅವುಗಳೊಡನೆ ಪ್ರಯೋಗ ಸಾಧ್ಯವಾಗಿಲ್ಲ. ಇಂಥ ಸಂದರ್ಭಗಳಲ್ಲಿ ಕೇವಲ ಅವುಗಳ ನಡತೆಯನ್ನು ಅನೇಕ ಬಾರಿ ಗಮನಿಸುವುದರ ಮೂಲಕ, ಅವುಗಳ ವರ್ತನೆಯನ್ನು ಅರಿತುಕೊಳ್ಳಬಹುದು ಅಷ್ಟೇ. ಪ್ರಾಣಿಗಳಂತೆಯೇ ವರ್ತಿಸುತ್ತ, ಅವುಗಳೊಡನೆ ಸಹಜೀವನ ನಡೆಸಿ ಅವುಗಳ ವರ್ತನೆಯ ಬಗ್ಗೆ ಬೆಳಕು ಚೆಲ್ಲುವ ಯತ್ನಗಳು ನಡೆದಿದ್ದರೂ ಅವುಗಳಿಂದ ಸಾಧಿತವಾಗಿರುವುದು ಅಲ್ಪ. ಏಕೆಂದರೆ ಎಲ್ಲ ಪ್ರಾಣಿಗಳು ಮಾನವರನ್ನು ಸಹಚರರನ್ನಾಗಿ ಸ್ವೀಕರಿಸುವುದಿಲ್ಲ.

ಮೇಲಿನ ಮಿತಿಗಳಿದ್ದರೂ ಪ್ರಾಣಿ ವರ್ತನೆಯ ಬಗ್ಗೆ ಸಂಶೋಧನೆಗಳು ಬಹಳ ಮುಂದುವರಿದಿವೆ ಎಂಬುದನ್ನು ಒಪ್ಪಿಕೊಳ್ಳಬಹುದಾದರೂ ಪ್ರಾಣಿ ಪ್ರಪಂಚ ಅತ್ಯಂತ ನಿಗೂಢವಾದ್ದರಿಂದ ಮತ್ತು ಸಂಖ್ಯೆಯ ದೃಷ್ಟಿಯಿಂದ ಪ್ರಾಣಿಗಳು ಅಗಣಿತವಾಗಿರುವುದರಿಂದ ಈ ಕ್ಷೇತ್ರದಲ್ಲಿ ಇದುವರೆಗೆ ದೊರೆತಿರುವ ಫಲಿತಾಂಶಗಳು ಗೌಣವೆಂದೇ ಹೇಳಬಹುದು.

(ಎಂ.ಎನ್.ವಿ.ಐ.)

**ಪ್ರಾಣಿಗಳಲ್ಲಿ ಚಲನೆ:** ಜೀವಮಾನದ ಸ್ವಲ್ಪಭಾಗ ಇಲ್ಲವೆ ಪೂರ್ತ ಸ್ಥಾವರ ಜೀವಿಗಳಾಗಿ ಬಾಳುವ ಕೆಲವು ಅಪವಾದಗಳನ್ನುಳಿದು ಎಲ್ಲ ಪ್ರಾಣಿಗಳಲ್ಲೂ ಕಾಣಬರುವ ಅತ್ಯಂತ ಪ್ರಮುಖ ಲಕ್ಷಣ ಚಲನೆ. ಆಹಾರ, ವಾಸಿಸಲು ಸುರಕ್ಷಿತ ತಾಣ ಮತ್ತು ಸಂಗಾತಿಗಳು ಇವನ್ನು ಅರಸಿ ಹೋಗಲು, ವೈರಿಗಳಿಂದ ತಪ್ಪಿಸಿಕೊಳ್ಳಲು ಮತ್ತು ಒಂದೇ ನೆಲೆಯಲ್ಲಿ ಅತಿ ಸಾಂದ್ರತೆಯುಂಟಾಗದಂತೆ ಬೇರೆ ಬೇರೆ ನೆಲೆಗಳಿಗೆ ಪಸರಿಸಲು ಚಲನೆ ಅತ್ಯಾವಶ್ಯಕ.

ಚಲನೆಯನ್ನು ಸಾಧಿಸಲು ಬಳಕೆಯಾಗುವ ಸಂಯಂತ್ರಗಳು ಸಕ್ರಿಯ ಬಗೆಯವು. ಇವಕ್ಕೆ ಶಕ್ತಿಯ ಯುಕ್ತ ಬಳಕೆ ಅಗತ್ಯ. ದೇಹದ ಸ್ನಾಯುಗಳಲ್ಲಿಯ ಇಲ್ಲವೆ ಶಿಲಕೆ ಅಥವಾ ಲೋಮಗಳಲ್ಲಿಯ ಸೂಕ್ಷ್ಮ ತಂತುಗಳ ಸಂಕೋಚನದಿಂದ ಚಲನೆ ನಡೆಯುತ್ತದೆ. ಎಂದೇ ಈ ವಿದ್ಯಮಾನಕ್ಕೆ ಶಕ್ತಿಯ ಪೂರೈಕೆ ಆಗಲೇಬೇಕು. ಸ್ನಾಯುಕೋಶಗಳು ಕೆಲವೊಮ್ಮೆ ಬಿಡಿ ಬಿಡಿಯಾಗಿರುತ್ತವಾದರೂ ಸಾಮಾನ್ಯವಾಗಿ ಇವು ಪಟ್ಟಿಗಳ ರೂಪದಲ್ಲೊ ಕೂರ್ಚಗಳ ರೂಪದಲ್ಲೊ ಒಟ್ಟುಗೂಡಿರುವುವು. ಸ್ನಾಯುಗಳ ಸಂಕೋಚನ ವ್ಯಾಕೋಚನಗಳ ಫಲವಾಗಿ ಚಲನೆ ನಡೆಯುತ್ತದಷ್ಟೆ. ಇದಕ್ಕೆ ಅಗತ್ಯವಾದ ಬಲ ಒದಗುವುದು ದೃಢವಾದ ಕಂಕಾಲದಿಂದ ಇಲ್ಲವೆ ದ್ರವಬಲದಿಂದ ಅಥವಾ ನೋಟೊಕಾರ್ಡ್, ಕೊಲಾಜಿನ್ ತಂತು ಮುಂತಾದವುಗಳ ಸ್ಥಿತಿಸ್ಥಾಪಕ ಸಾಮರ್ಥ್ಯದಿಂದ. ಅಲ್ಲದೆ ಚಲನೆಯ ರೀತಿಗೆ, ಪ್ರಾಣಿ ಜೀವಿಸುವ ಪರಿಸರಕ್ಕೆ ಅನುಗುಣವಾಗಿ ಪ್ರಾಣಿಯ ದೇಹವಿನ್ಯಾಸ ರೂಪುಗೊಂಡಿರುವುದನ್ನು ಕಾಣಬಹುದು.

ಜಲಜೀವಿಗಳಲ್ಲಿ ಚಲನೆ : ಪ್ರೋಟೊಜ಼ೋವ ಗುಂಪಿನ ಬಹುಪಾಲು ಪ್ರಾಣಿಗಳು ಲೋಮಾಂಗ, ಕಶಾಂಗ ಇಲ್ಲವೇ ಮಿಥ್ಯಪಾದಗಳ ನೆರವಿನಿಂದ ಚಲಿಸುತ್ತವೆ. ಕಶಾಂಗಗಳ ಬುಡದಿಂದ ತುದಿಗೆ ಇಲ್ಲವೇ ವಿರುದ್ಧ ದಿಕ್ಕಿನಲ್ಲಿ ಪ್ರವಹಿಸುವ ಸಂಕೋಚನಾಮಿಡಿತ ಚಲನೆಗೆ ಪ್ರೇರಕವಾಗುತ್ತದೆ. ಲೋಮಾಂಗಗಳು ಬಳಸುವ ಹುಟ್ಟುಗೋಲಿನಂತೆ ಕಾರ್ಯ ನಿರ್ವಹಿಸುವುವು. ನರವಾಹಕ ಮಂಡಲ ಲೋಮಾಂಗಗಳ ಬಡಿತವನ್ನು ಸಮನ್ವಯಗೊಳಿಸುತ್ತದೆ. ಕೆಲವು ಪ್ರೋಟೊಜ಼ೋವಗಳು ಕೈ ಬೆರಳನ್ನು ಹೋಲುವ ಮಿಥ್ಯಪಾದಗಳ ನೆರವಿನಿಂದ ಚಲಿಸುತ್ತವೆ. ಉದಾಹರಣೆಗೆ ಅಮೀಬ, ಟ್ರಿಪ್ಯಾನೊಸೋಮದಂಥ ಜೀವಿಗಳು ದೇಹದ ಮೇಲಿರುವ ನೀಳಪಟಲದ ಏರಿಳಿತದಿಂದ ನಿಧಾನವಾಗಿ ಮುನ್ನಡೆಯುವುವು.

ಪ್ರೋಟೋಜೋವಗಳಲ್ಲಿ ಚಲನಾಂಗಗಳು

ಚಪ್ಪಟೆಹುಳುಗಳು ಹಾಗೂ ಮೃದ್ವಂಗಿಗಳು, ದೇಹದ ಕೆಳಭಾಗದಲ್ಲಿರುವ ಲೋಮಾಂಗಗಳ ಚಟುವಟಿಕೆಯಿಂದ ನೀರಿನಡಿಯಲ್ಲಿ ಚಲಿಸುತ್ತವೆ. ಚೆನ್ನಾಗಿ ಬೆಳೆದಿರುವ

ಕಾಲುಗಳುಳ್ಳ ಏಡಿಗಳು ನೀರಿನಡಿಯಲ್ಲಿ ನಡೆಯಬಲ್ಲವು. ಜಿಗಣೆಗಳ ದೇಹದ ಎರಡು ತುದಿಗಳಲ್ಲಿ ಒಂದೊಂದು ಹೀರುಬಟ್ಟಲು ಇವೆ. ಹಿಂಭಾಗದ ಹೀರುಬಟ್ಟಲಿನ ನೆರವಿನಿಂದ ಪ್ರಾಣಿ ದೃಢವಾಗಿ ನೆಲಕ್ಕಂಟಿ, ದೇಹದ ಉಳಿದ ಭಾಗವನ್ನು ಸಡಿಲಗೊಳಿಸಿ ಮುಂತುದಿಯ ಹೀರುಬಟ್ಟಲಿನಿಂದ ಅಂಟಿಕೊಳ್ಳುತ್ತದೆ. ಅನಂತರ ಹಿಂಭಾಗದ ಹೀರುಬಟ್ಟಲು ಸಡಿಲಗೊಂಡು ದೇಹವನ್ನು ಮುಂತುದಿಯ ದಿಕ್ಕಿನಲ್ಲಿ ಕುಗ್ಗಿಸುವುದರಿಂದ ತೆವಳಿ ಸಾಗುವಂತಾಗುತ್ತದೆ. ಬಸವನಹುಳು ಮತ್ತು ಕೈಟಾನ್‌ಗಳು ತಡೆಯಿಲ್ಲದೆ ಜಾರಿ ಮುನ್ನಡೆಯಬಲ್ಲವು. ಎರೆಹುಳು ವರ್ತುಲ ಮತ್ತು ಲಂಬಸ್ಥ ಸ್ನಾಯುಗಳ ಪರ್ಯಾಯ ಸಂಕೋಚನಾಮಿಡಿತದಿಂದ ತೆವಳುತ್ತದೆ. ನಕ್ಷತ್ರಮೀನು ತನ್ನ ತೋಳಲ್ಲಿರುವ ಕೊಳವೆಪಾದಗಳ ಸಮನ್ವಯ ಚಲನೆಯಿಂದ ಸಂಚರಿಸುತ್ತದೆ. ಸೀಲೆಂಟರೇಟುಗಳಲ್ಲಿ ಮೆಡ್ಯೂಸದ ಅಂಚಿನಲ್ಲಿರುವ ಅಗಲವಾದ ಸ್ನಾಯು ಪಟ್ಟಿ ಕುಗ್ಗಿದಾಗ, ಮೆಡ್ಯೂಸ ಸಂಕೋಚಿಸಿ ನೀರು ಹೊರಚಿಮ್ಮಿ ಪ್ರಾಣಿ ಮೇಲ್ಮುಖವಾಗಿ ಚಲಿಸುತ್ತದೆ. ಸ್ಕ್ಯಾಲಪ್‌ಗಳಲ್ಲಿ ಎರಡೂ ಚಿಪ್ಪುಗಳ ರಭಸ ಘರ್ಷಣೆಯಿಂದ ನೀರು ಚಿಮ್ಮಿ ಪ್ರಾಣಿ ಮುನ್ನುಗ್ಗುತ್ತದೆ. ಅನೇಕ ಅಕಶೇರುಕಗಳು ದೇಹದಲ್ಲಿ ಉಂಟಾಗುವ ಪರ್ಯಾಯ ಸಂಕೋಚನ ವ್ಯಾಕೋಚನೆಗಳಿಂದ ನೀರಿನಲ್ಲಿ ಈಜುತ್ತವೆ. ಈಲ್‌ನಂಥ ನೀಳ ಮೀನುಗಳಲ್ಲಿ, ತಲೆಯಿಂದ ಬಾಲದವರೆಗೆ ಅಲೆ ಅಲೆಯಾಗಿ ಪ್ರವಹಿಸುವ ಸ್ನಾಯು ಸಂಕೋಚನಾ ಕಂಪನ ಈಜಲು ಸಹಾಯಕವಾಗಿದೆ. ಕದಿರಿನಾಕಾರದ ಮೀನುಗಳಲ್ಲಿ ದೇಹದ ಹಿಂಭಾಗ ಮಾತ್ರ ಬಳುಕುತ್ತಿದ್ದು, ಸ್ನಾಯು ಸಂಕೋಚನದಿಂದ ಅವು ಈಜುತ್ತವೆ. ಸಾಮಾನ್ಯವಾಗಿ ಅನೇಕ ಮೀನುಗಳು ಈಜಲು ಬಳಸುವ ತಂತ್ರ ಇದು. ತಿಮಿಂಗಿಲಗಳ ಚಪ್ಪಟೆಯಾದ ಬಾಲ ಮೇಲಕ್ಕೂ ಕೆಳಕ್ಕೂ ಆಡುವುದರಿಂದ ಶರೀರದ ಮುನ್ನಡೆ ಸಾಧ್ಯ. ಈಜುರೆಕ್ಕೆಗಳು ಮೀನಿನ ಚಲನೆಗೆ ದೃಢತೆಗಳನ್ನು ಒದಗಿಸುವುದರ ಜೊತೆಗೆ, ಸ್ಥಿರವಾದ ಹಾದಿಯಲ್ಲಿ ಹೋಗಲು ಮತ್ತು ದಿಕ್ಕನ್ನು ಬದಲಿಸಲು ಸಹಕರಿಸುತ್ತವೆ. ಮೇಲ್ಭಾಗದ ಈಜುರೆಕ್ಕೆ ಮೀನು ತಿರುವು ಮುರುವಾಗದಂತೆಯೂ ಭುಜದ ಈಜುರೆಕ್ಕೆ ಮೀನು ಮುಳುಗದಂತೆಯೂ ತಡೆಯುತ್ತವೆ. ಮೊಸಳೆ ಮುಂತಾದವುಗಳಲ್ಲಿ ಸ್ನಾಯುಭರಿತ ನೀಳಬಾಲಗಳ ತರಂಗಿತ ಚಲನೆಯಿಂದ ದೇಹ ಮುಂದೂಡಲ್ಪಡುತ್ತದೆ. ಕಡಲ ಪೆಂಗ್ವಿನುಗಳು ರೆಕ್ಕೆಗಳ ನೆರವಿನಿಂದ ಈಜುತ್ತವೆ. ಬಹುತೇಕ ಜಲಚರಿ ಸ್ತನಿಗಳು, ಹಿಂಗಾಲು ಮತ್ತು ಬಾಲವನ್ನು ಈಜಲು ಉಪಯೋಗಿಸುತ್ತವೆ.



ಮೀನು (ಈಜುರೆಕ್ಕೆ)

ಬಿಲವಾಸಿ ಅಕಶೇರುಕಗಳು ದ್ರವಬಲಸಮತಾಸ್ಥಿತಿಯ ಅಸ್ಥಿಪಂಜರ ಮತ್ತು ವರ್ತುಲ ಹಾಗೂ ಲಂಬಸ್ಥ ಸ್ನಾಯುಗಳ ನೆರವಿನಿಂದ ದೇಹ ಕುಗ್ಗಿಸಿ, ಕಿರಿದಾದ ಕಿಂಡಿಯಂಥ ಸ್ಥಳಗಳಲ್ಲಿ ನುಸುಳಿ ಚಲಿಸುವುವು.

ನೆಲದ ಮೇಲೆ ನಡಿಗೆ : ಅನೇಕ ಸಂಧಿಪದಿಗಳು ಮತ್ತು ಕಶೇರುಕಗಳು ನೆಲದ ಮೇಲೆ ಪಾದವನ್ನು ಊರಿ ನಡೆಯಬಲ್ಲುವು ಇಲ್ಲವೆ ಓಡಬಲ್ಲವು. ಪಾದಗಳು ಪ್ರಾಣಿಗೆ ಆಸರೆಯನ್ನೂ ಮುನ್ನಡೆಗೆ ಚಾಲನೆಯನ್ನು ಕೊಡುತ್ತವೆ. (ನಡಿಗೆಯ ಮೊದಲನೆಯ ಹಂತದಲ್ಲಿ ಮುಂದಣ ಪಾದವನ್ನು ನೆಲಕ್ಕೂರಿ ಹಿಂದಣ ಪಾದವನ್ನು ಮೇಲೆತ್ತುವಾಗ, ದೇಹ ಕಾಲಿನ ಆಧಾರದ ಮೇಲೆ ಮುಂಚಾಚುತ್ತದೆ. ಎರಡನೆಯ ಹಂತದಲ್ಲಿ ಮುಂದಣ ಪಾದವನ್ನು ಮೇಲಕ್ಕೆತ್ತಿ ಹಿಂದಣ ಪಾದವನ್ನು ನೆಲಕ್ಕೂರುವುದರಿಂದ ನಡಿಗೆ ಸಾಧ್ಯ). ಓಡಬಲ್ಲ ಕಶೇರುಕಗಳಲ್ಲಿ ಓಟ ಸುಗಮವಾಗಲು ಸ್ನಾಯುಭರಿತ ತೊಡೆಗಳು ಹಾಗೂ ತೆಳುವಾದ ಮೊಣಕಾಲುಗಳಿವೆ. ಉಷ್ಟ್ರಪಕ್ಷಿಯಂಥ ಓಡುವ ಪಕ್ಷಿಗಳಲ್ಲಿ ಆಸರೆಯನ್ನು ಹೆಚ್ಚಿಸಲು ಪಾದಗಳು ಅಗಲವಾಗಿವೆ ಹಾಗೂ ದೇಹದ ಅಕ್ಷ ಭೂಮಿಗೆ ಲಂಬಸ್ಥ ಸ್ಥಿತಿಯಲ್ಲಿರುವುದರಿಂದ ಪಾದಗಳು ದೇಹಕ್ಕೆ ಆಸರೆಯನ್ನೊದಗಿಸುತ್ತವೆ. ಕುಪ್ಪಳಿಸಿ ಓಡಾಡುವ ಕಾಂಗರೂಗಳಲ್ಲಿ ಕಪ್ಪೆಗಳಲ್ಲಿ ಹಾಗೂ ಮೊಲಗಳಲ್ಲಿ ಹಿಂಗಾಲು ಉದ್ದವಾಗಿಯೂ ದೃಢವಾಗಿಯೂ ಇದೆ.

ವೃಕ್ಷವಾಸಿ ಪ್ರಾಣಿಗಳಿಗೆ ಆಸರೆಯನ್ನು ಬಲವಾಗಿ ಹಿಡಿಯುವ ಮತ್ತು ದೇಹವನ್ನು ಆಸರೆಗೆ ಸನಿಹದಲ್ಲಿ ಚಾಚುವ ಸಾಮರ್ಥ್ಯವಿರಬೇಕು. ಮರವನ್ನೇರುವ ಕಪ್ಪೆಗಳಿಗೆ ನೀಳವಾದ ದೇಹವಿದೆಯಲ್ಲದೆ ಮೊನಚಾದ ಕಾಲುಗಳೂ ಪಾದಗಳೂ ಇವೆ. ಜೊತೆಗೆ ಬೆರಳಿನ ತುದಿಯಲ್ಲಿ ಅಂಟುಬಿಲ್ಲೆಗಳಿವೆ. ಹಲ್ಲಿಗಳಲ್ಲಿ ಬೆರಳುಗಳು ಅಗಲವಾಗಿದೆ. ಅಲ್ಲದೆ ಪಾದಗಳ ತಳಭಾಗದಲ್ಲಿ ಒಂದು ಅಥವಾ ಎರಡು ಸಾಲು ನೀಳಪೊರೆಗಳು ಆಸರೆಯನ್ನೊದಗಿಸುತ್ತವೆ. ಮರ ಏರುವ ಹಾವುಗಳಲ್ಲಿ ಸುರುಳಿ ಬಾಲ ಇಲ್ಲವೆ ಅತಿ ಉದ್ದನೆಯ ದೇಹ ಮರವೇರಲು ಸಹಕಾರಿ. ಮರ ಕುಟುಕದಂಥ ಪಕ್ಷಿಗಳಲ್ಲಿ ಶಕ್ತಿಯುತವಾದ ಉಗುರುಳ್ಳ ಪಾದಗಳು ಮರ ಏರಲು ನೆರವು ನೀಡುತ್ತವೆ. ಚಿಂಪಾಂಜಿಯಂಥ ಪ್ರಾಣಿಗಳಲ್ಲಿ ಉದ್ದ ತೋಳುಗಳು ಹಾಗೂ ಸರಾಗ ಚಲನೆಯ ಭುಜಕಟ್ಟು ಮರದಿಂದ ಮರಕ್ಕೆ ಜಿಗಿಯಲು ಸಹಾಯಕ.



ಶತಪದಿ

ಅಂತರಿಕ್ಷಯಾನ ; ಕೀಟಗಳು, ಪಕ್ಷಿಗಳು ಮತ್ತು ಬಾವಲಿಗಳು ಸಹಜವಾಗಿ ಹಾರಾಡಬಲ್ಲವು. ಹಾರಾಟಕ್ಕೆ ನೆರವಾಗಲು ಈ ಪ್ರಾಣಿಗಳ ದೇಹದ ಎರಡು ಪಾರ್ಶ್ವಗಳಲ್ಲಿ ರೆಕ್ಕೆಗಳಿವೆ. ರೆಕ್ಕೆಗಳನ್ನು ವರ್ತುಲಾಕಾರ ಇಲ್ಲವೆ ೮–ಆಕಾರದಲ್ಲಿ ಬಡಿಯುವುದರಿಂದ ವಾಯುವಿನಲ್ಲಿ ತೇಲಲು ಮೇಲೇರಲು ಸಾಧ್ಯ. ರೆಕ್ಕೆಗಳು ವೇಗವನ್ನು ನಿಯಂತ್ರಿಸಲು ಕೂಡ ಬಳಕೆಯಾಗುತ್ತವೆ. ವಾಯುವಿನಲ್ಲಿ ತೇಲಲು ಸಹಾಯಕವಾಗುವಂತೆ ಇವುಗಳ ದೇಹ ಹಗುರವಾಗಿಯೂ ಶಕ್ತಿಯುತವಾಗಿಯೂ ಇದೆ. ಹವೆಯ ಶೀತೋಷ್ಣಗಳ ಬಾಧೆಯನ್ನು ತಡೆಯಲು ಗರಿ ಮತ್ತು ತುಪ್ಪಟಗಳ ಕವಚವಿದೆ.

ಪಕ್ಷಿ ಮತ್ತು ಕೀಟಗಳಲ್ಲಿ ಚಲನೆಗೆ
ಹಾರಾಟದ ರೆಕ್ಕೆಗಳು

ಅನೇಕ ಪ್ರಾಣಿಗಳಿಗೆ ಚಲನೆ ಅತ್ಯಾವಶ್ಯಕ. ವೈರಿಗಳಿಂದ ಪಾರಾಗಲು ಹಾಗೂ ದೂರ ಪ್ರದೇಶಕ್ಕೆ ಪಯಣಿಸಲು ಇದು ಬೇಕೇ ಬೇಕು. ಅನೇಕ ಪಕ್ಷಿಗಳು ಕೆಲವು ಋತುಗಳಲ್ಲಿ ಸಾವಿರಾರು ಕಿಲೋಮೀಟರ್ ವಲಸೆ ಹೋಗುತ್ತವೆ. ಧ್ರುವವಲಯದ ಟರ್ನ್ ಗರಿ ಮೂಡಿದ ಪ್ರಥಮ ವರ್ಷದಲ್ಲೇ ೧೭,೬೦೦ ಕಿಮೀ ನಷ್ಟು ದೂರ ಚಲಿಸುತ್ತದೆ. ಟೂನ ಎಂಬ ಮೀನು ಗಂಟೆಗೆ ಸುಮಾರು ೫೦ ಕಿಮೀ ಚಲಿಸಿದರೆ, ಆಫ್ರಿಕದ ಎರಳೆ ಸುಮಾರು ೧೦೦ ಕಿಮೀ ವೇಗದಲ್ಲಿ ಚಲಿಸಬಲ್ಲದು, ಗಿಡುಗ ಸಾಳ್ವಗಳು ಪ್ರಾಣಿಲೋಕದ ವಿಮಾನಗಳೆನಿಸಿಕೊಂಡಿವೆ. ನೆಲದ ಮೇಲೆ ವೇಗವಾಗಿ ಚಲಿಸಬಲ್ಲ ಪ್ರಾಣಿಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಬೇಟೆ ಚಿರತೆ. ವಿಭಿನ್ನ ಪರಿಸರಕ್ಕೆ ಹೊಂದಿಕೊಂಡು ಸುಗಮವಾಗಿ ಬಾಳಲು ಪ್ರಾಣಿಗಳಿಗೆ ಚಲನೆ ಒಂದು ಅವಶ್ಯ ಸಾಧನವಾಗಿದೆ. (ಎ.ಎಸ್.ಸಿ.)

**ಪ್ರಾಣಿಗಳಲ್ಲಿ ಬಹುರೂಪತೆ:** ಒಂದೇ ಜಾತಿಗೆ ಸೇರಿದ ಜೀವಿಗಳು ವಿವಿಧ ರೂಪಗಳಲ್ಲಿರುವಿಕೆ. ಈ ಪದವನ್ನು ಒಂದೇ ಜಾತಿಯ ಜೀವಿಗಳಲ್ಲಿ ಸಾಮಾನ್ಯವಾಗಿ ಕಾಣಬರುವ ವ್ಯತ್ಯಾಸಗಳಿಗೆ ಅಥವಾ ಗಂಡು ಮತ್ತು ಹೆಣ್ಣು ಜೀವಿಗಳಲ್ಲಿರಬಹುದಾದ ವ್ಯತ್ಯಾಸಗಳಿಗೆ ಬಳಸಲಾಗದು. ಕುಟುಕುಕಣವಂತಗಳ ಕೆಲವು ಜೀವಿಗಳು ವೈವಿಧ್ಯಮಯ ಬಹುರೂಪತೆಯನ್ನು ಪ್ರದರ್ಶಿಸುವುದರಿಂದ ಅಂಥ ಜೀವಿಗಳಿಗೆ ಮಾತ್ರ ಈ ಪದಯುಕ್ತವಾಗಿದೆ.

ಕುಟುಕುಕಣವಂತ ವಂಶದಲ್ಲಿ ಹೈಡ್ರೊಜೋವ, ಸ್ಕೈಫೊಜೋವ ಮತ್ತು ಆಂಥೊಜೋವ ಎಂಬ ಮೂರು ವರ್ಗಗಳಿವೆ. ಹೈಡ್ರೊಜೋವ ವರ್ಗದ ಹೈಡ್ರಾಯ್ಡಿಯ, ಮಿಲಿಪಾರಿನ, ಸ್ಟೈಲಾಸ್ಟರಿನ, ಟ್ರ್ಯಾಕಿಲಿನ ಮತ್ತು ಸೈಫನಾಫೊರ ಎಂಬ ಐದು ಗಣಗಳಲ್ಲಿ ಹೈಡ್ರಾಯ್ಡಿಯ ಗಣದ ಕೆಲವು ಪ್ರಾಣಿಗಳಲ್ಲಿ ಮತ್ತು ಸೈಫನಾಫೊರದ ಎಲ್ಲ ಜೀವಿಗಳಲ್ಲಿ ಬಹುರೂಪತೆಯನ್ನು ಕಾಣಬಹುದು.

ರೂಪಾಲಂಕಾರದ ಮಾದರಿ ಒಂದು ಜಾತಿಯಲ್ಲಿ ಒಂದೇ ಆಗಿದ್ದರೆ ಈ ಸ್ಥಿತಿಗೆ ಏಕರೂಪತೆ ಎಂದು ಹೆಸರು (ಮಾನೊಮಾರ್ಫಿಕ್). ಹೈಡ್ರಾಯ್ಡಿಯ ಗಣದ ಒಬೀಲಿಯ ಎಂಬ ಸಂಯುಕ್ತಜೀವಿ ಅನೇಕ ಕವಲೊಡೆದ ಶಾಖೆಗಳನ್ನು ಮತ್ತು ಅವುಗಳ ತುದಿಯಲ್ಲಿ ಭಕ್ಷಕಾಂಗಗಳನ್ನು (ಪಾಲಿಪ್) ಮತ್ತು ಕೆಲವು ಕವಲುಗಳ ತುದಿಯಲ್ಲಿ ನಿರ್ಲಿಂಗ ಸಂತಾನಾಂಗಗಳನ್ನು ಪಡೆದಿರುವುದೇ ಅಲ್ಲದೆ, ಭಕ್ಷಕಾಂಗಗಳು ಆಹಾರವನ್ನು ಹಿಡಿಯಲು, ಜೀರ್ಣಿಸಿಕೊಳ್ಳಲು ಸಹಾಯಕವಾಗಿವೆಯಾದರೆ ನಿರ್ಲಿಂಗ ಸಂತಾನಾಂಗಗಳು ಕೇವಲ ಸಂತಾನ ಕ್ರಿಯೆಯಲ್ಲಿ ಮಾತ್ರ ಸಹಕಾರಿಗಳು (ಇವೇ ಬ್ಲಾಸ್ಟೊಸ್ಟೈಲ್ಸ್). ಈ ರೀತಿಯ ಸಂಯುಕ್ತ ಜೀವಿಗೆ ದ್ವಿರೂಪಜೀವಿ (ಡೈಮಾರ್ಫಿಕ್) ಎಂದು ಹೆಸರು. ಸೈಫನಾಫೊರ ಗಣದ ಎಲ್ಲ ಜೀವಿಗಳೂ ಬಹುರೂಪಿಗಳು. ಪ್ರಾಣಿಕಲ್ಪ (ಜೂಆಯಿಡ್)ಗಳಿರುವ ಸಂಯುಕ್ತ ಜೀವಿಗಳಿವು. ಬಹುರೂಪತೆಯ (ಪಾಲಿಮಾರ್ಫಿಸಂ) ಸಂಯುಕ್ತತೆಯಲ್ಲಿ ಭಕ್ಷಕ ಪ್ರಾಣಿಕಲ್ಪ (ಗ್ಯಾಸ್ಟ್ರೊಜೋಆಯಿಡ್), ಸಂರಕ್ಷಣಾ ಪ್ರಾಣಿಕಲ್ಪ (ಡ್ಯಾಕ್ಟಿಲೊಜೋಆಯಿಡ್), ತೇಲು ಪ್ರಾಣೀಕಲ್ಪ (ನೂಮೊಟೊಫೊರ್), ಸಂತಾನ ಪ್ರಾಣಿಕಲ್ಪ (ಸೊಮೊಜೋಆಯಿಡ್), ಮುಂತಾದ ಜೈವಿಕ ಪ್ರಾಣಿಕಲ್ಪಗಳಿವೆ. ಈ ಅಂಗಾಂಗಗಳು ತಮ್ಮ ತಮ್ಮ ಜೈವಿಕ ಕ್ರಿಯೆಯಲ್ಲಿ ಸಮರ್ಥವಾಗಿವೆ ಎಂದು ಕೆಲವರು ವಾದಿಸಿದರೆ ಇನ್ನು ಕೆಲವರು ಪ್ರತಿಯೊಂದು ಪ್ರಾಣಿಕಲ್ಪವೂ ಒಂದು ಪ್ರತ್ಯೇಕ ಜೀವಿ, ಇವು ಸಂಯುಕ್ತ ಜೀವನ ನಡೆಸುವುದರಿಂದ ನೆರವಿಗಳಾಗಿ ಜೈವಿಕ ಕ್ರಿಯೆಯಲ್ಲಿ ಒಂದೊಂದು ರೀತಿಯ ಪರಾಕಾಷ್ಠೆಯನ್ನು ಹೊಂದಿವೆ ಎಂದು ವಾದಿಸುವರು.




ಫೈಸಲಿಯ

ಬಹುರೂಪತೆಯ ಉಗಮದ ಬಗ್ಗೆ ಅನೇಕ ಸಿದ್ಧಾಂತಗಳಿವೆ. ಮುಖ್ಯವಾದವು ಬಹು ಅಂಗರೂಪತಾ ಸಿದ್ಧಾಂತ ಮತ್ತು ಬಹುರೂಪ ನೆರವಿ ಜೀವಿಗಳ ಸಂಯುಕ್ತ ಸಿದ್ಧಾಂತ ಅವುಗಳಲ್ಲಿ ಮುಖ್ಯವಾದುವು.

ಎಸ್ಕೋಲ್ಪ್ಸ್, ಹಕ್ಸ್‌ಲೀ, ಮೆಟ್ಚನಿಕಾಫ್ ಮುಂತಾದವರು ಮಂಡಿಸಿದ ಬಹುಅಂಗರೂಪತೆಯ ಸಿದ್ಧಾಂತದ ಪ್ರಕಾರ "ಸೈಫನಾಫೊರ ಗಣಕ್ಕೆ ಸೇರಿದ ಪ್ರತಿಯೊಂದು ಜೀವಿಯೂ ಅಸಾಧಾರಣ ಪರಾಕಾಷ್ಠೆಯನ್ನು ಸಾಧಿಸಿವೆ. ಈ ಸಂಯುಕ್ತತೆಯಲ್ಲಿ ವಿವಿಧ ಜೈವಿಕ ಕ್ರಿಯೆಯನ್ನು ನಡೆಸುವ ಪ್ರಾಣಿಕಲ್ಪಗಳೇ ದೇಹದ ಅಂಗೋಪಾಂಗಗಳು. ಈ ಅಂಗೋಪಾಂಗಗಳು ಮೆಡ್ಯೂಸದಿಂದ ಹೊಮ್ಮಿದ್ದು ಇವುಗಳಲ್ಲಿ ಗಂಟೆಯಾಕಾರದ ಮೆಡ್ಯೂಸದ ಬಾಯಿಹಿಡಿ, ಅಂಚಿನಲ್ಲಿಯ ಕೋಡುಗಳು, ಗಂಟೆಯಾಕಾರದ ಹೊರಮೈ ಮತ್ತು ಪ್ರಜನನಾಂಗಳಿವೆ. ಅಗೋಚರ ಕಾರಣಕ್ಕಾಗಿ ಮೊಗ್ಗೆಯೊಡೆದು ಅವುಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಜೈವಿಕ ಕ್ರಿಯೆಯ ಪರಾಕಾಷ್ಠೆಯನ್ನು ಪಡೆದಿವೆ. ಇದೇ ಮಾದರಿಯ ಅಂಗಾಂಗಗಳ ಹೆಚ್ಚಳ ಸಸ್ಯ ಪ್ರಪಂಚದಲ್ಲಿದೆ. ಆದ್ದರಿಂದ ಬಹುರೂಪಿ ಸಂಯುಕ್ತ ಜೀವಿಗಳಲ್ಲಿಯ ವಿವಿಧ ಪ್ರಾಣಿಕಲ್ಪಗಳು ವಿವಿಧ ಅಂಗಾಂಗಗಳು".

ಬಹುರೂಪಿ ಸಂಯುಕ್ತ ಜೀವಿಗಳಲ್ಲಿಯ ವಿವಿಧ ಪ್ರಾಣಿಕಲ್ಪಗಳು ವಿವಿಧ ನೆರವಿಜೀವಿಗಳು ಮಾತ್ರ, ಆದರೆ ಅಂಗಾಂಗಗಳಲ್ಲ, ಎಂದು ಪ್ರತಿಪಾದಿಸುವ ಬಹುರೂಪಿ ನೆರವಿಜೀವಿಗಳ ಸಂಯುಕ್ತ ಸಿದ್ಧಾಂತವನ್ನು ವೊಗಾಟ್, ಲ್ಯೂಕಾರ್ಟ್, ಗೀಗೆನ್ ಬಾವರ್, ಕ್ಲಾಸ್, ಚೂನ್ ಮುಂತಾದವರು ಪ್ರತಿಪಾದಿಸಿದ್ದಾರೆ. ಪ್ರಾಣಿಕಲ್ಪಗಳು ವಿವಿಧ ನೆರವಿ ಜೀವಿಗಳ ರಚನಾವೈವಿಧ್ಯವನ್ನು ಸೂಚಿಸುವುವು. ಆದರೆ ಮೂಲದ ಐಕ್ಯವನ್ನು ಈ ನೆರವಿಜೀವಿಗಳು ಕಳೆದುಕೊಂಡಿರುವುದರಿಂದ ಸ್ವತಂತ್ರವಾಗಿ ಬಾಳಲಾರದೆ ಸಂಯುಕ್ತತೆಯಲ್ಲಿ ನೆರವಿಗಳಾಗಿ ಸಂಘಟಿತವಾಗಿವೆ ಎನ್ನುತ್ತದೆ ಈ ವಾದ. ನೆರವಿಜೀವಿಗಳು ಮೂಲರಚನೆಯ ಪಾಲಿಪ್ ಅಥವಾ ಮೆಡ್ಯೂಸದಿಂದ ಮಾರ್ಪಾಟಾಗಿ ಈ ಸ್ಥಿತಿಗೆ ಬಂದಿವೆ.

ಮೂರನೆಯ ಗುಂಪಿನವರ ಪ್ರಕಾರ ನೆರವಿಜೀವಿಗಳು ಮೂಲತಃ ಹೊಮ್ಮಿರುವುದು ಗಂಟೆಯಾಕಾರದ ಮೆಡ್ಯೂಸದಿಂದ ಮಾತ್ರ. ಮೆಡ್ಯೂಸ ಮೊಗ್ಗೊಡೆದು ಅನಂತರದಲ್ಲಿ ಈ ಮೊಗ್ಗೆಗಳು ಅವಶ್ಯಕ್ಕೆ ತಕ್ಕಂತೆ ಮರುಮೊಗ್ಗೆಯೊಡೆದು ಜೈವಿಕ ಕ್ರಿಯೆಯ ಪ್ರಮಾಣಕ್ಕೆ ತಕ್ಕಂತೆ ಅಂಗಾಂಗಳನ್ನು ಹೆಚ್ಚಿಸಿಕೊಂಡಿರಬೇಕು ಎಂದು ಬೆಲ್‌ಫೂರ್ ಮತ್ತು ಹೆಕೆಲ್ ಮುಂತಾದವರು ಅಭಿಪ್ರಾಯ ಪಡುತ್ತಾರೆ.

ಮೋಸರ್ ಮುಂತಾದವರು ಹಕ್ಸ್‌ಲೀಯವರ ಬಹು ಅಂಗರೂಪತೆ ಸಿದ್ಧಾಂತವನ್ನೇ ಒಪ್ಪಿಕೊಂಡು ಅದನ್ನು ಸ್ವಲ್ಪ ಮಾರ್ಪಾಡುಮಾಡಿರುವರು. ಇವರ ಪ್ರಕಾರ ಬಹುರೂಪಿ ಸಂಯುಕ್ತಜೀವಿಯಲ್ಲಿರುವ ಪ್ರಾಣಿಕಲ್ಪಗಳು ಇಡೀ ಕುಟುಕುಕಣವಂತ ವಂಶದ ಕನಿಷ್ಠ ರೂಪದ ರಚನೆಗಳು. ಇವು ಸ್ವತಂತ್ರ ಜೀವಿಗಳಾಗಿ ಬಾಳಲಾಗದೆ ಸಂಯುಕ್ತ ನೆರವಿ ಜೀವಿಗಳಾಗಿ ಸಂಘಟಿತವಾಗಿವೆ.

ಆದರೂ ಇತ್ತೀಚಿನ ಶೋಧನೆಗಳ ಪ್ರಕಾರ ಈ ಸಂಯುಕ್ತ ಜೀವಿಯ ಭಕ್ಷಕ, ರಕ್ಷಕ, ಲಿಂಗ ಪ್ರಾಣಿಕಲ್ಪ ಮುಂತಾದವು ಪಾಲಿಪ್‌ನಿಂದಲೂ, ತೇಲು, ಈಜು, ಕವಚ ಪ್ರಾಣಿಕಲ್ಪ ಮುಂತಾದವು ಮೆಡ್ಯೂಸದಿಂದಲೂ ಹೊಮ್ಮಿವೆ ಎಂದು ನಂಬಲಾಗಿದೆ.

ಈ ವೈವಿಧ್ಯವನ್ನು ಕೌಲ್ಪನಿಕ ಮಾದರಿಯಲ್ಲಿ ಮನಗಾಣಬಹುದು. ಈ ವಿವಿಧ ಪ್ರಾಣಿಕಲ್ಪಗಳೂ ಮತ್ತು ಅವುಗಳ ಕಾರ್ಯವಿಧಾನ ಮುಂದಿನಂತಿದೆ;

1 ತೇಲುಕಲ್ಪಗಳು (ಫ್ಲೋಟ್ಸ್ – ನಿಮಟೋಫೋರ್ಸ್) : ತಲೆಕೆಳಗಾದ ಮೆಡ್ಯೂಸವನ್ನು ಹೋಲುವುವು. ಗಾಳಿ ತುಂಬಬಹುದಾದ ಚೀಲಗಳಾಗಿ ಮಾರ್ಪಾಡಾಗಿರುವುದರಿಂದ ಈಜು ಬುರುಡೆಯಂತೆ ಕಡಲಿನಲ್ಲಿ ಮುಳುಗದೆ ತೇಲಲು ಸಹಾಯಕವಾಗಿವೆ. ವಿವಿಧ ಪ್ರಭೇದಗಳಲ್ಲಿ ಇವುಗಳ ರಚನಾವಿನ್ಯಾಸದಲ್ಲಿ ವ್ಯತ್ಯಾಸವಿದೆ.

2 ತೇಲುಕಲ್ಪಗಳು (ನೆಕ್ಟೋಕೇಲಿಕ್ಸ್ ಅಥವಾ ನೆಕ್ಟೊಫೋರ್ಸ್) : ಮೆಡ್ಯೂಸವನ್ನು ಹೋಲುವುವು. ಬಾಯಿ, ಬಾಯಿಹಿಡಿ, ವರ್ತುಲನಳಿಕೆ, ನೇರಳಿಕೆ, ತೋಡುಗಳು ಮತ್ತು ಸ್ಪರ್ಶಾಂಗಗಳು ಅಲ್ಲದೆ ಸ್ನಾಯು ಕಟ್ಟುಗಳಿವೆ. ಸ್ನಾಯುಗಳಿರುವುದರಿಂದ ಇವಕ್ಕೆ ಅಸಾಧಾರಣ ಮಿಡಿಯುವ ಸಾಮರ್ಥ್ಯ ಇದೆ. ನೀರಿನಲ್ಲಿ ಈಜಲು ಇವು ಸಹಾಯಕ.

3 ಲಿಂಗಕಲ್ಪಗಳು (ಗೋನೋಫೋರ್ಸ್) : ಇವೂ ಕೂಡ ಮೆಡ್ಯೂಸವನ್ನು ಹೋಲುವುವು. ಆದರೆ ಬಾಯಿಯಾಗಲೀ ತೋಡುಗಳಾಗಲೀ ಸ್ಪರ್ಶಾಂಗಗಳಾಗಲೀ ಇಲ್ಲ. ಇವು ಕಳಚಿಕೊಂಡು ಹಲವಾರು ದಿನ ಸ್ವತಂತ್ರವಾಗಿ ತೇಲುತ್ತವೆ. ಇವುಗಳಲ್ಲಿ ಬೀಜಾಶಯ ಮತ್ತು ಅಂಡಾಶಯಗಳಿದ್ದು ಲಿಂಗ ರೀತಿ ಸಂತಾನ ನಡೆಯುತ್ತದೆ.

4 ಕವಚಕಲ್ಪಗಳು (ಹೈಡ್ರೊಫಿಲಿಯ ಅಥವಾ ಫಿಲ್ಲೊಜೂಆಯಿಡ್ಸ್) : ಮೆಡ್ಯೂಸವನ್ನಾಗಲಿ ಪಾಲಿಪನ್ನಾಗಲಿ ಹೋಲದಿರುವುದರಿಂದ ಪ್ರಾಯಶಃ ಇವೆರಡರ ನಡುವಣ ಸ್ಥಿತಿಯಿರಬಹುದು. ರಚನೆಯಲ್ಲಿ ಎಲೆಗಳನ್ನು ಹೋಲುವ ಇವು ಸಂಯುಕ್ತಜೀವಿಯ ವಿವಿಧ ಕಲ್ಪಗಳ ಸುತ್ತ ಕವಚದಂತೆ ಆವೃತವಾಗಿದ್ದು ಜೀವಿಗೆ ರಕ್ಷಣೆ ಕೊಡುವುವು.

5. ಭಕ್ಷಕ ಕಲ್ಪಗಳು (ಸೈಫನ್, ಗ್ಯಾಸ್ಟ್ರೊಜೂಆಯಿಡ್ಸ್): ಇವು ಪಾಲಿಪ್‌ಗಳನ್ನು ಹೋಲುವುವು. ಇವುಗಳಲ್ಲಿ ಇಳಿಗೊಳವೆ ಮಾದರಿಯ ಸಂಚಿ, ಒಂದು ತುದಿಯಲ್ಲಿ ಬಾಯಿ, ಬುಡದಲ್ಲಿ ಚಾವಟಿಯಂಥ ಒಂದು ಕೋಡು ಇವೆ. ಕುಟುಕುಕಣಗಳಿವೆ. ಆಹಾರವನ್ನು ಹಿಡಿದು ಜೀರ್ಣಿಸಿ ಶರೀರಕ್ಕೆ ಒದಗಿಸುತ್ತವೆ.

6 ರಕ್ಷಣಾಕಲ್ಪಗಳು (ಪಾಲಿಪಾನ್ಸ್) : ಭಕ್ಷಕ ರಚನೆಯನ್ನು ಹೋಲುತ್ತವಾದರೂ ಬಾಯಿಯಿಲ್ಲ. ಭಕ್ಷಕ ಹಾಗೂ ಲಿಂಗಕಲ್ಪಗಳ ಸುತ್ತ ಇದ್ದು, ಹಿಡಿದ ಬೇಟೆಯನ್ನು ಸ್ಥಗಿತಗೊಳಿಸುವುವು ಹಾಗೂ ರಕ್ಷಣೆ ನೀಡುವುವು.

7 ನಿರ್ಲಿಂಗ ಪ್ರಾಣಿಕಲ್ಪಗಳು (ಗೋನೊಜೂಆಯಿಡ್ಸ್, ಗೋನ್ಯಾಂಡ್ರಿಯ) : ಭಕ್ಷಕ ಕಲ್ಪವನ್ನು ಹೋಲುವುವು. ಬಾಯಿ ಸಹ ಉಂಟು. ಆದರೆ ಕೋಡುಗಳಿಲ್ಲ. ಇವುಗಳಲ್ಲಿ ದ್ರಾಕ್ಷಿಗೊಂಚಲಿನಂಥ ಲಿಂಗಕಾಯಗಳಿದ್ದು ಮೊಗ್ಗೆಯೊಡೆಯುವಿಕೆಯ ಮೂಲಕ ನಿರ್ಲಿಂಗ ರೀತಿ ಸಂತಾನೋತ್ಪತ್ತಿ ಮಾಡುವುವು.

8 ನೆರವಿಗುಚ್ಛ (ಕಾರ್ಮೀಡಿಯಮ್) : ನೆರವಿಜೀವಿಗಳ ವಿವಿಧ ಪ್ರಾಣಿಕಲ್ಪಗಳು ಒಂದೇಕಡೆ ಗುಚ್ಛನಂತೆ ಕಾಂಡದುದ್ದಕ್ಕೂ ಇರುವುದನ್ನು ಕಾಣಬಹುದು. ಕೆಲವೊಮ್ಮೆ ಇಂಥ ಗುಚ್ಛಗಳು ಕಳಚಿ ಸ್ವತಂತ್ರ ಜೀವನದಲ್ಲಿ ತೊಡಗುವುವು. (ಜಿ.ಎಂ.ಬಿ.)

**ಪ್ರಾಣಿಗಳಲ್ಲಿ ವರ್ಣವಿನ್ಯಾಸ:** ಜೊತೆಯಲ್ಲಿ ವಾಸಿಸುವ ಪ್ರಾಣಿಗಳೊಡನೆ ಅಥವಾ ನಿಸರ್ಗದೊಂದಿಗೆ ಆಹಾರಕ್ಕಾಗಿ, ಆಶ್ರಯಕ್ಕಾಗಿ, ಸಂಗಾತಿಗಾಗಿ ನಡೆಯುವ ಸ್ಪರ್ಧೆಯಲ್ಲಿ

ತನಗಿಂತ ಬಲಶಾಲಿಗಳಾದ ಶತ್ರುಗಳನ್ನು ಎದುರಿಸಲು ಪ್ರಾಣಿಗಳು ಮಾಡಿಕೊಂಡ ಹೊಂದಾಣಿಕೆ. ಪರಿಸರದೊಂದಿಗೆ ಸ್ಥಿರತೆಯನ್ನು ಸಾಧಿಸಲು ಇದು ನೆರವಾಗುತ್ತದೆ. ಶತ್ರುಗಳಿಂದ ತಪ್ಪಿಸಿಕೊಳ್ಳಲು ಕೆಲವು ಪ್ರಾಣಿಗಳು ತಮ್ಮ ಪರಿಸರದ ಹಿನ್ನೆಲೆಯಲ್ಲಿ ಅಡಗಿ ಅದಕ್ಕೆ ಅನುಗುಣವಾದ ವರ್ಣವೈವಿಧ್ಯವನ್ನು ಬೆಳೆಸಿಕೊಳ್ಳುತ್ತವಾದರೆ ಇನ್ನು ಕೆಲವಲ್ಲಿ ಎದ್ದು ಕಾಣುವ ವರ್ಣವೈವಿಧ್ಯ ಕಾಣದೊರೆಯುತ್ತದೆ. ಇವೆಲ್ಲಕ್ಕೂ ಕಾರಣಗಳುಂಟು.

ಪ್ರಾಣಿಗಳ ವರ್ಣವಿನ್ಯಾಸ (ಕಲರೇಷನ್) ಡಾರ್ವಿನ್ನನ ಕಾಲದಿಂದಲೂ ವಿಕಾಸತಜ್ಞರ ಆಸಕ್ತಿಯನ್ನು ಕೆರಳಿಸಿದೆ. ತಾವು ವಾಸಿಸುವ ಪರಿಸರದ ಹಿನ್ನೆಲೆಯಲ್ಲಿ ತಮ್ಮ ದೇಹದ ವರ್ಣವೈವಿಧ್ಯದಿಂದ ಶತ್ರುಗಳ ಕಣ್ಣಿಗೆ ಬೀಳದಂತೆ ಮರೆಮಾಚಿಕೊಳ್ಳುತ್ತವೆ ಎಂಬುದು ಎಷ್ಟರಮಟ್ಟಿಗೆ ವೈಜ್ಞಾನಿಕ ದೃಷ್ಟಿಯಿಂದ ಸರಿ. ಅಥವಾ ಇದು ಕೇವಲ ಆಕಸ್ಮಿಕವೆ? ಉದಾಹರಣೆಗೆ, ತನ್ನ ಹಿನ್ನೆಲೆಗೆ ಅನುಗುಣವಾಗಿ ಬಣ್ಣವನ್ನು ಬದಲಾಯಿಸಿಕೊಳ್ಳುವ ಚಪ್ಪಟೆಮೀನನ್ನು ನೋಡಿದರೆ ಇದು ಆಕಸ್ಮಿಕ ಮತ್ತು ಕಾಲ್ಪನಿಕ ಎಂದು ತರ್ಕಿಸುವುದು ಸಾಧ್ಯವಿಲ್ಲ. ವಾಸ್ತವವಾಗಿ ಅನೇಕ ಪ್ರಾಣಿಗಳ ದೃಷ್ಟಿ ನಮ್ಮದಕ್ಕಿಂತ ತುಂಬ ಭಿನ್ನವಾಗಿದೆ. ಪ್ರಾಣಿಗಳ ಬಣ್ಣಕ್ಕೆ ಒಂದು ಉದ್ದೇಶ ಇದೆ ಎನ್ನುವುದಾದರೆ ಮತ್ತು ರಕ್ಷಣೆಯನ್ನು ಒದಗಿಸಿಕೊಡುವುದೇ ಈ ಉದ್ದೇಶ ಎನ್ನುವುದನ್ನು ಒಪ್ಪಿಕೊಳ್ಳುವುದಾದರೆ, ವಿಕಾಸ ಅದನ್ನು ಹೇಗೆ ಉಂಟುಮಾಡಿತು ಎಂಬ ಪ್ರಶ್ನೆ ಮೂಡುತ್ತದೆ. ಇದಕ್ಕೆ ಉತ್ತರ ಅಷ್ಟು ಸುಲಭಸಾಧ್ಯವಲ್ಲ.

ಹಿನ್ನೆಲೆಯನ್ನನುಸರಿಸಿ ಪ್ರಾಣಿಗಳು ಬಣ್ಣ ಬದಲಾಯಿಸುವ ವಿಷಯ ಅತಿ ಹಿಂದಿನಿಂದಲೂ ತಿಳಿದಿತ್ತು. ಗೋಸುಂಬೆ ಬಣ್ಣ ಬದಲಾಯಿಸುವುದನ್ನು ವಿಜ್ಞಾನದ ಪಿತಾಮಹನೆಂದು ಹೆಸರಾದ ಅರಿಸ್ಟಾಟಲ್ ಕರಾರುವಾಕ್ಕಾಗಿ ವಿವರಿಸಿದ್ದಾನೆ. ಆದರೆ ಈ ಬಣ್ಣ ಬದಲಾಗುವ ಪ್ರಕ್ರಿಯೆ ಮತ್ತು ಅದು ಒಳಗೊಳ್ಳಬಹುದಾದ ಶಾರೀರಿಕ ಕ್ರಿಯಾವಿಧಾನಗಳ ಬಗೆಗೆ ಆಸಕ್ತಿಮೂಡಿ ಸಂಶೋಧನೆ ಆರಂಭವಾದುದು ಕೇವಲ ಇತ್ತೀಚೆಗೆ. ೧೮೧೯ರಲ್ಲಿ ಸ್ಯಾಮ್ ಗಿಯೊವ್ಯಾನಿ ಎಂಬಾತ ಶಿರಪಾದಿಗಳಲ್ಲಿ ವರ್ಣಕ ಕೋಶಗಳನ್ನು ಮತ್ತು ಅವುಗಳ ವರ್ತನೆಯನ್ನು ವೀಕ್ಷಿಸಿ ಅವಕ್ಕೆ ಕ್ರೊಮ್ಯಾಟೊಫೋರುಗಳೆಂಬ ಹೆಸರು ಕೊಟ್ಟ. ಅನಂತರ ೧೮೩೪ರಲ್ಲಿ ಮಿಲನೆ ಮತ್ತು ಎಡ್ವರ್ಡ್ಸ್ ಎಂಬವರು ಸರೀಸೃಪಗಳಲ್ಲಿ ಇವನ್ನು ಅಭ್ಯಸಿಸಿ ವಿವರಿಸಿದರು. ೧೮೫೨ರಲ್ಲಿ ಬ್ರೂಕ್ ಎಂಬಾತ ಆಫ್ರಿಕ ಗೋಸುಂಬೆಯಲ್ಲಿ ಬಣ್ಣ ಬದಲಾವಣೆ ಎಂಬ ಏಕವಿಷಯಕ ಗ್ರಂಥದಲ್ಲಿ ಮೊದಲಬಾರಿಗೆ ಈ ವಿಷಯವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ. ಅದರಲ್ಲಿ ಆತ ಕ್ರೊಮ್ಯಾಟೊಫೋರುಗಳ ಪ್ರತಿಕ್ರಿಯೆಯನ್ನು ವಿಶದವಾಗಿ ಚರ್ಚಿಸಿ ವರ್ಣವೈವಿಧ್ಯದ ಅಭ್ಯಾಸಕ್ಕೆ ಅಡಿಪಾಯ ಹಾಕಿದ್ದಾನೆ. ಅವುಗಳ ವರ್ತನೆಯನ್ನು ಪರಿಸರ ಮತ್ತು ಪ್ರಾಣಿಯ ನರಮಂಡಲಗಳು ನಿಯಂತ್ರಿಸುತ್ತವೆ ಎಂಬ ಭಾವನೆ ಬಹಳ ಕಾಲ ಪ್ರಚಲಿತವಾಗಿತ್ತು. ಆದರೆ ಕ್ರೊಮ್ಯಾಟೊಫೋರುಗಳ ಪ್ರತಿಕ್ರಿಯೆಯನ್ನು ಹಾರ್ಮೋನುಗಳು ನಿಯಂತ್ರಿಸುತ್ತವೆ ಎಂಬ ವಿಷಯ ೧೮೯೮ರಲ್ಲಿ ತಿಳಿಯಿತು. ಅಲ್ಲಿಂದೀಚೆಗೆ ಕಠಿಣಚರ್ಮಿಗಳಲ್ಲಿ ಈ ವಿದ್ಯಮಾನದ ಸಾದ್ಯಂತ ಅಭ್ಯಾಸ ನಡೆದು ವಿವರಣೆ ದೊರೆತಿದೆ.

ಪ್ರಾಣಿಗಳಲ್ಲಿ ಬಣ್ಣದ ಉತ್ಪಾದನೆಯಲ್ಲಿ ಎರಡು ವಿಧಾನಗಳುಂಟು: ೧. ರಾಸಾಯನಿಕ, ೨. ಭೌತಿಕ.

ರಾಸಾಯನಿಕ ವಿಧಾನ : ಯಾವುದೇ ಪ್ರಾಣಿಯ ಬಣ್ಣಕ್ಕೆ ಕಾರಣವಾಗುವ ವಸ್ತು ಅದರ ದೇಹದ ಎಲ್ಲ ಭಾಗಗಳಲ್ಲೂ ಕಂಡುಬರುತ್ತದೆ. ವರ್ಣಕಗಳು ಜೀವಕೋಶಗಳಲ್ಲಿ ಸ್ಥಿತವಾಗಿದ್ದು ರಾಸಾಯನಿಕ ಬಣ್ಣವನ್ನು ಉಂಟುಮಾಡುತ್ತವೆ. ಉದಾಹರಣೆಗೆ, ಕಶೇರುಕಗಳ ಕೆಂಪುರಕ್ತಕಣಗಳಲ್ಲಿರುವ ಕಬ್ಬಿಣವನ್ನೊಳಗೊಂಡ ಹೀಮೊಗ್ಲಾಬಿನ್ ಎಂಬುದು ರಕ್ತಕ್ಕೆ ಕೆಂಪು ಬಣ್ಣವನ್ನೂ ಅಷ್ಟಪಾದಿ ಮುಂತಾದ ಅಕಶೇರುಕಗಳಲ್ಲಿರುವ ಹೀಮೊಸೈಯಾನಿನ್ ಎಂಬ ವರ್ಣಕ ನೀಲಿ ಬಣ್ಣವನ್ನೂ ಕೊಡುತ್ತವೆ. ಆದರೆ ಆಯಾ ಪ್ರಾಣಿಗೆ ಈ ವರ್ಣಕಗಳು ಆಮ್ಲಜನಕವನ್ನು ಹೊತ್ತು ಸಾಗಿಸಲು ಸೀಮಿತವಾದ ಶ್ವಾಸಕ್ರಿಯೆಗೆ ಸಂಬಂಧಿಸಿದವಾಗಿದ್ದು ಬೇರೆ ಯಾವ ಕಾರ್ಯಕ್ಕೂ ಮುಖ್ಯವಲ್ಲ.

ವರ್ಣಕ ದೇಹದ ಹೊರಬಾಗದಲ್ಲಿದ್ದು ಜೀವಿಗೆ ಉಪಯುಕ್ತವಾಗುವ ಬಣ್ಣವನ್ನು ಉಂಟುಮಾಡುವುದು. ಇಂಥ ವರ್ಣಕಗಳೇ ಕ್ರೊಮ್ಯಾಟೊಫೋರುಗಳು. ಇವುಗಳಲ್ಲಿ ಎರಡು ವಿಧ : ಸರಳ ವರ್ಣಕ ಮತ್ತು ಪರಿವರ್ತನಾ ವರ್ಣಕ. ಸರಳ ವರ್ಣಕಗಳು ಪ್ರಾಣಿಯಲ್ಲಿ ಶಾಶ್ವತ ಬಣ್ಣವನ್ನು ಉತ್ಪತ್ತಿಮಾಡುತ್ತವೆ. ಆದರೆ ಪರಿವರ್ತನಾ ವರ್ಣಕ ಗೋಸುಂಬೆ ಅಥವಾ ಕಠಿಣಚರ್ಮಿಗಳಂಥ ಪ್ರಾಣಿಗಳಲ್ಲಿ ಚರ್ಮದ ಮೇಲೆ ಹಾದುಹೋಗುವ ವರ್ಣಪ್ರವಾಹಕ್ಕೆ ಕಾರಣವಾಗುತ್ತದೆ. ಪರಿವರ್ತನಾ ವರ್ಣಕಗಳನ್ನೊಳಗೊಂಡ ಜೀವಕೋಶಗಳು ಚರ್ಮದ ಮೇಲ್ಮೈಗೆ ಸಮಾಂತರವಾಗಿ ಸಮತಲದಲ್ಲಿ ಹರಡಿದ ಪ್ರಸರಿತ ತುಂತುಗಳನ್ನೊಳಗೊಂಡಿರುತ್ತವೆ. ತಂತುಗಳು ವಿಸ್ತೃತಗೊಂಡಾಗ ವರ್ಣಕ ಆಳದಲ್ಲಿದ್ದು ಕೇವಲ ಸ್ವಲ್ಪ ಭಾಗ ಮಾತ್ರ ಗೋಚರಿಸುತ್ತದೆ. ಆದರೆ ತಂತುಗಳು ಸಂಕೋಚಿಸಿದಾಗ ವರ್ಣಕ ಕೋಶದ ಮೇಲ್ಮೈಯ ಹೆಚ್ಚು ಭಾಗದಲ್ಲಿ ಹರಡಿ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತದೆ.

ಕಶೇರುಗಳಲ್ಲಿ ಕ್ರೊಮ್ಯಾಟೊಫೋರುಗಳು ನರಶಿಖೆಗಳಿಂದ ಉದ್ಭವಿಸಿ ಅನಂತರ ತಮ್ಮ ಭವಿಷ್ಯದ ನೇಮಿತ ತಾಣಕ್ಕೆ ಚಲಿಸುತ್ತವೆ. ಕ್ರೊಮ್ಯಾಟೊಫೋರ್ ಪದವನ್ನು ವರ್ಣಕಗಳೆಲ್ಲಕ್ಕೂ ಉಭಯ ಸಾಮಾನ್ಯವಾಗಿ ಬಳಸಿದರೂ ಕೆಂಪು, ಹಳದಿ ಅಥವಾ ಬೂದು-ಕಪ್ಪು ವರ್ಣಕಗಳನ್ನುಳ್ಳ ವರ್ಣಕೋಶಗಳನ್ನು ಅನುಕ್ರಮವಾಗಿ ಎರಿತ್ರೊಫೋರ್, ಕ್ಸಾಂತೋಫೋರ್ ಮತ್ತು ಮೆಲನೊಫೋರುಗಳೆಂದು ಕರೆಯುವುದು ವಾಡಿಕೆ.

ಅವುಗಳಲ್ಲಿರುವ ಬಣ್ಣವಸ್ತುವನ್ನನುಸರಿಸಿ ಕ್ರೊಮ್ಯಾಟೊಫೋರುಗಳನ್ನು ಮೆಲನೊಫೋರ್, ಲಿಪೊಫೋರ್ ಮತ್ತು ಗುವಾನೊಫೋರುಗಳೆಂದು ವರ್ಗೀಕರಿಸಬಹುದು.

೧. ಮೆಲನೊಫೋರುಗಳು : ದಟ್ಟ ಬೂದು ಅಥವಾ ಕಪ್ಪು ಬಣ್ಣವನ್ನೊಳಗೊಂಡಿರುತ್ತವೆ. ಇವು ಕೆಲವು ಪ್ರಾಣಿಗಳಲ್ಲಿ ಸಣ್ಣಗಾತ್ರದವಾಗಿದ್ದರೆ ಇನ್ನು ಕೆಲವು ಪ್ರಾಣಿಗಳಲ್ಲಿ ದೊಡ್ಡಗಾತ್ರದವಾಗಿರುವುವು. ಇವಕ್ಕೆ ಅನುಕ್ರಮವಾಗಿ ಮೈಕ್ರೊಮೆಲನೊಫೋರುಗಳು ಮತ್ತು ಮ್ಯಾಕ್ರೊಮೆಲನೊಫೋರುಗಳೆಂದು ಹೆಸರು.

೨. ಲಿಪೊಫೋರುಗಳು : ಆಲ್ಕೊಹಾಲಿನಲ್ಲಿ ಕರಗುವ ಇವು ಕೆಂಪು ಅಥವಾ ಹಳದಿ ವರ್ಣಕಗಳನ್ನೊಳಗೊಂಡಿವೆ.

೩. ಗುವಾನೊಫೋರುಗಳು : ಗುವಾನಿನ್ ಅಥವಾ ಗುವಾನಿನ್ ಹೋಲುವ ವಸ್ತುಗಳನ್ನೊಳಗೊಂಡಿವೆ.

ಕ್ರೊಮ್ಯಾಟೊಫೋರುಗಳು ಯಾವುದಾದರೂ ಒಂದೇ ಒಂದು ರೀತಿಯ ವರ್ಣಕವನ್ನು ಒಳಗೊಂಡಿದ್ದರೆ ಇಂಥವನ್ನು ಏಕವರ್ಣಕ (ಮಾನೊಕ್ರೊಮ್ಯಾಟಿಕ್) ಕ್ರೊಮ್ಯಾಟೊಫೋರುಗಳೆಂದು ಕರೆಯಲಾಗುತ್ತದೆ. ಇನ್ನು ಕೆಲವು ಬಗೆಗಳಲ್ಲಿ ಒಂದಕ್ಕಿಂತ ಹೆಚ್ಚು ವಿಧದ ವರ್ಣಕಗಳಿದ್ದು ಅವುಗಳ ಸಂಯೋಗದಿಂದ ಏಕವರ್ಣ ಫಲಿತಾಂಶ ಉಂಟಾಗಬಹುದು. ಇಂಥವು ಬಹುವರ್ಣಕ (ಪಾಲಿಕ್ರೊಮ್ಯಾಟಿಕ್) ಮೆಲನೊಫೋರುಗಳು. ಇವನ್ನು ಪುನಃ ದ್ವಿವರ್ಣಕ (ಕಪ್ಪು ಮತ್ತು ಕೆಂಪು), ತ್ರಿವರ್ಣಕ (ಕಪ್ಪು, ಕೆಂಪು ಮತ್ತು ಹಳದಿ), ಚತುರ್ವರ್ಣಕ (ಕೆಂಪು, ಕಪ್ಪು, ಹಳದಿ ಮತ್ತು ಬಿಳುಪು) ಇತ್ಯಾದಿಯಾಗಿ ವಿಂಗಡಿಸಬಹುದು. ಕ್ರ್ಯಾಗ್ನಾನ್ ಎಂಬ ಶ್ರಿಂಪ್ ಪ್ರಾಣಿಯಲ್ಲಿ ನಾಲ್ಕೂ ರೀತಿಯ ಕ್ರೊಮ್ಯಾಟೊಫೋರುಗಳಿವೆ. ಬಹುವರ್ಣಕ ಕ್ರೊಮ್ಯಾಟೊಫೋರುಗಳನ್ನು ಸಾಮಾನ್ಯವಾಗಿ ಕಠಿಣಚರ್ಮಿಗಳು, ಉಭಯಚರಿಗಳು ಮತ್ತು ಮೀನುಗಳಲ್ಲಿ ಕಾಣಬಹುದು.

ಕ್ರೊಮ್ಯಾಟೊಫೋರುಗಳ ಮೂಲಕ ವರ್ಣವ್ಯತ್ಯಾಸಗಳನ್ನು ತೋರುವ ಮುಖ್ಯ ಪ್ರಾಣಿಗುಂಪುಗಳೆಂದರೆ ಶಿರಪಾದಿಗಳು, ಕಠಿಣಚರ್ಮಿಗಳು, ಮೀನುಗಳು, ಉಭಯಚರಿಗಳು ಮತ್ತು ಸರೀಸೃಪಗಳು.

ಭೌತಿಕ ವಿಧಾನ : ಪ್ರಾಣಿಯ ಮೇಲ್ಮೈಯ ವಿಶಿಷ್ಟ ರಚನೆಯಿಂದಾಗಿ ಬಣ್ಣ ಉತ್ಪತ್ತಿಯಾಗುತ್ತದೆ. ಪ್ರಾಣಿಯ ಮೇಲೆ ಬೆಳಕಿನ ಕಿರಣ ಬಿದ್ದಾಗ ಅದು ಅಂತರ್ಗತಾಂಶವಾಗಿ ಹರಡುತ್ತದೆ. ಚಿಟ್ಟೆಗಳ ರೆಕ್ಕೆಯ ಹುರುಪೆಗಳಲ್ಲಿ ಮತ್ತು ಝೇಂಕಾರ ಪಕ್ಷಿಯ ಗರಿಗಳಲ್ಲಿ ಇಂಥ ವಿದ್ಯಮಾನವನ್ನು ನೋಡಬಹುದು. ಉಷ್ಣವಲಯದ ಮಾರ್ಫೊ ಚಿಟ್ಟೆ ನೀಲಿಯಿಂದ ಹಸುರು ಛಾಯೆಗೆ ಮತ್ತು ರತ್ನಕಂಠದ ಝೇಂಕಾರ ಪಕ್ಷಿಯ ಮತ್ತು ಪಾರಿವಾಳ ಹಕ್ಕಿಯ ಕತ್ತು ಕೆಂಪಿನಿಂದ ಹಸುರು ಬಣ್ಣಕ್ಕೆ ತಿರುಗುವುವು. ಇದು ಬಣ್ಣದ ಹರಡುವಿಕೆಗೆ ಉದಾಹರಣೆ.

ಪ್ರಾಣಿಗಳ ವರ್ಣವೈವಿಧ್ಯಕ್ಕೆ ನಿಜವಾಗಿಯೂ ಜೀವವೈಜ್ಞಾನಿಕ ಪ್ರಾಶಸ್ತ್ಯ ಇದೆಯೆ, ಇದ್ದರೆ ಏನು ಎಂಬುದು ವಿಚಾರಾರ್ಹ. ಸ್ಥೂಲವಾಗಿ ಪ್ರಾಣಿಗಳ ಬಣ್ಣವನ್ನು ತಟಸ್ಥ ಬಣ್ಣ ಮತ್ತು ಅಮೂಲ್ಯ ಬಣ್ಣ ಎಂದು ವರ್ಗೀಕರಿಸಬಹುದು.

ತಟಸ್ಥ ಬಣ್ಣ : ಈ ಬಣ್ಣಗಳಿಗೆ ಪ್ರಕೃತಿಯಲ್ಲಿ ಆಯ್ಕೆಯ ಮಹತ್ತ್ವ ಇಲ್ಲ. ಹಿಂದೆ ಬದುಕಿದ್ದ ಪೂರ್ವಜ ಪ್ರಾಣಿಗಳಲ್ಲಿ ಆಗಿನ ಪರಿಸರಕ್ಕೆ ಸಂಬಂಧಿಸಿದಂತೆ ತಟಸ್ಥ ಬಣ್ಣಕ್ಕೆ ಪ್ರಾಶಸ್ತ್ಯ ಇದ್ದಿರಬಹುದು. ಅವು ಯಥಾವತ್ತಾಗಿ ಆನುವಂಶೀಯವಾಗಿ ಬಂದಿರಲೂಬಹುದು. ಕಡಲತಳದಲ್ಲಿ ವಾಸಿಸುವ ಕೆಲವು ಮೀನುಗಳ ಮತ್ತು ಸಾಕು ಕುದುರೆಗಳ ಹೊಳಪು ಬಣ್ಣಗಳು ಇದಕ್ಕೆ ಉದಾಹರಣೆಗಳು.

ಬಣ್ಣವನ್ನು ಪಡೆದಿರಬೇಕಾಗಿದ್ದ ಪ್ರಾಣಿಯ ರೋಮ ಅಥವಾ ಗರಿಗಳಲ್ಲಿ ಇಲ್ಲವೆ ಚರ್ಮ ಮತ್ತು ಕಣ್ಣು ಪಾಪೆಗಳಲ್ಲಿ ಬಣ್ಣ ಇಲ್ಲದಿದ್ದರೆ ಅಂಥ ಸ್ಥಿತಿ ವರ್ಣಹೀನತೆ (ಆಲ್ಬೈನಿಸಮ್) ಎನಿಸಿಕೊಳ್ಳುತ್ತದೆ. ಇಂಥ ಸಂದರ್ಭಗಳಲ್ಲಿ ರೋಮ ಮತ್ತು ಗರಿಗಳು ಬಿಳಿಯ ಬಣ್ಣದವಾಗಿರುತ್ತವೆ. ವರ್ಣಕ ಕಣಗಳನ್ನು ಒಳಗೊಂಡಿರಬೇಕಾದ ಸೂಕ್ಷ್ಮಸಂದುಗಳಲ್ಲಿ ವಾಯು ತುಂಬಿದ್ದು ಅದು ಪೂರ್ಣ ಬೆಳಕನ್ನು ಪ್ರತಿಫಲಿಸುವುದರಿಂದ ಅವು ಬೆಳ್ಳಗಿರುತ್ತವೆ. ಉದಾಹರಣೆಗೆ, ಬಿಳಿಯ ಇಲಿ, ಮೊಲ ಮುಂತಾದವು. ಇವು ಮೆಲಾನಿನ್ ವರ್ಣಕವಿಲ್ಲದ ಸಂಪೂರ್ಣ ಬಿಳಿ ಪ್ರಾಣಿಗಳು. ಕಣ್ಣುಪಾಪೆಯಲ್ಲಿ ವರ್ಣಕವಿಲ್ಲದಿರುವುದರಿಂದ ಕಣ್ಣುಗುಡ್ಡೆಯ ಹಿಂಬದಿಯಲ್ಲಿರುವ ರಕ್ತನಾಳಗಳು

ದೃಷ್ಟಿಗೋಚರವಾಗಿ ಇಂಥ ಪ್ರಾಣಿಗಳ ಕಣ್ಣುಗಳು ಕಡುಕೆಂಪಾಗಿ ಕಾಣಿಸುತ್ತವೆ. ಪಕ್ಷಿಗಳಲ್ಲಿ (ಬಿಳಿಯ ಕಾಗೆ), ಜಿಂಕೆ, ಆನೆ, ಹುಲಿ ಮತ್ತು ಮಾನವರಲ್ಲಿಯೂ ಈ ತೆರನ ವರ್ಣಹೀನತೆ ಕಂಡುಬರುತ್ತದೆ. ವಾಸ್ತವವಾಗಿ ಇಂಥ ಪ್ರಾಣಿಗಳು ಸುಲಭವಾಗಿ ಶತ್ರುಗಳ ದೃಷ್ಟಿಗೆ ಬೀಳುವುದರಿಂದ ಇವು ಸಂದಣಿಯಿಂದ ಕಣ್ಮರೆಯಾಗುತ್ತವೆ.

ಮೆಲನಿಸಮ್ ಎಂಬುದು ವರ್ಣಹೀನತೆಯ ತದ್ವಿರುದ್ಧ ಸ್ಥಿತಿ. ಚರ್ಮದಲ್ಲಿ ವರ್ಣಕ ನಿರುಪಸ್ಥಿತವಾಗಿರುವ ಬದಲು ಕಪ್ಪು ಮೆಲಾನಿನ್ ವರ್ಣಕ ಇರುತ್ತದೆ.

ಅಮೂಲ್ಯ ಬಣ್ಣಗಳು : ಬದುಕಿನ ಹೋರಾಟದಲ್ಲಿ ಆಯ್ಕೆಯ ದೃಷ್ಟಿಯಿಂದ ಅಮೂಲ್ಯವಾದ ಕೆಲವು ಬಣ್ಣಗಳಿವೆ. ಉಪಯುಕ್ತತೆಯ ಆಧಾರದ ಮೇಲೆ ಇವನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ.

೧. ಅನುಕಂಪನ ವರ್ಣ ಅಥವಾ ನಿಗೂಢ ಬಣ್ಣ (ಗುಪ್ತ ಬಣ್ಣಗಳು): ಇದರಲ್ಲಿ ಎರಡು ವಿಧ–(ಅ) ಬೇಟೆಗೆ ಈಡಾಗುವ ಪ್ರಾಣಿಯ ರಕ್ಷಕ ಬಣ್ಣ, (ಬ) ಬೇಟೆಯಾಡುವ ಪ್ರಾಣಿಯ ಕೆಣಕುಬಣ್ಣ.

೨. ಎಚ್ಚರಿಕೆಯ ಬಣ್ಣ

೩. ಜಾತಿಯ ಪ್ರಮಾಣಭೂತ ಬಣ್ಣ

೪. ಅನುಕರಣ ವರ್ಣ

೫. ಸಂಕೇತಸೂಚಕ ಮತ್ತು ಗುರುತಿನ ಬಣ್ಣಗಳು

೬. ಕಂಗೆಡಿಸುವ ಬಣ್ಣ

೭. ಲಿಂಗವರ್ಣಗಳು.

೧. ಅನುಕಂಪನ ವರ್ಣಗಳು : ತಮ್ಮ ಸುತ್ತಲ ಪರಿಸರದ ಹಿನ್ನೆಲೆಯೊಂದಿಗೆ ಪೂರ್ಣವಾಗಿ ಐಕ್ಯವಾಗುವ ವರ್ಣವೈವಿಧ್ಯವನ್ನು ಇವು ಒಳಗೊಂಡಿವೆ. ಶತ್ರುಗಳಿಂದ ತಪ್ಪಿಸಿಕೊಳ್ಳಲು ಇವು ಸಹಾಯಕ. ಇವನ್ನು ರಕ್ಷಕ ತೊಡುಗೆ ಎಂದು ಕರೆಯಬಹುದು. ಇದೇ ರೀತಿ ಪರಿಸರದ ಹಿನ್ನೆಲೆಯಲ್ಲಿ ಅಡಗಿ ಕಾದಿದ್ದು ಆಹಾರ ಜೀವಿಯನ್ನು ಹಿಡಿಯಲು ಕೂಡ ಇದು ನೆರವಾಗಬಹುದು. ಇದೇ ಕೆಣಕು ಬಣ್ಣ. ಧ್ರುವ ಪ್ರದೇಶದಲ್ಲಿ ವಾಸಿಸುವ ಮೊಲ ಮತ್ತು ನರಿಗಳು ಇದಕ್ಕೆ ಉತ್ತಮ ಉದಾಹರಣೆಗಳು. ಇಲ್ಲಿ ಎರಡೂ ಸಂದರ್ಭಗಳಲ್ಲಿ ಬಿಳಿಯ ಬಣ್ಣದ ಕಾಯಪ್ರಾಣಿಗೆ ರಕ್ಷಣೆಯೊದಗಿಸುವುದು. ಅಲ್ಲದೆ ನರಿಯಲ್ಲಿ ಕೆಣಕು ವರ್ಣವೂ ಹೌದು. ಕಪ್ಪೆಯ ಬೆನ್ನುಭಾಗದ ದಟ್ಟ ಹಸುರು ಮತ್ತು ಹೊಟ್ಟೆಯ ಭಾಗದ ತೆಳು ಹಳದಿ ಬಣ್ಣದ ಚರ್ಮ ಪ್ರಾಣಿಯನ್ನು ಶತ್ರುಗಳಿಂದ ರಕ್ಷಿಸುತ್ತದೆ.

ಆಫ್ರಿಕದಲ್ಲಿ ಕಾಣಸಿಗುವ ಸೆಲಿಬಸ್ ಆಕ್ಸಿಡೆಂಟ್ಯಾಲಿಸ್ ಎಂಬ ಕೋತಿಯ ಮೈ ಕಪ್ಪು ಬಣ್ಣದ್ದು. ಅಲ್ಲಲ್ಲಿ ಬಿಳಿಯ ಪಟ್ಟೆಗಳಿವೆ. ಈ ಕೋತಿ ವಾಸಿಸುವ ಪ್ರದೇಶದಲ್ಲಿ ಬೆಳೆಯುವ ಮರದ ಕಾಂಡಗಳು ಮತ್ತು ಕವಲುಗಳು ಕಪ್ಪಾಗಿದ್ದು ಅವುಗಳ ಮೇಲೆ ಕಂದುಬಣ್ಣದ ಕಲ್ಲುಹೂಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಕೋತಿಯ ಕಪ್ಪು ಬಣ್ಣ ಕಾಂಡವನ್ನೂ ಬಿಳಿಯ ಪಟ್ಟೆಗಳು ಕಲ್ಲು ಹೂಗಳನ್ನೂ ಅನುಕರಿಸುವುದರಿಂದ ಇದು ಒಂದು ರೀತಿಯಲ್ಲಿ ರಕ್ಷಕ ವರ್ಣ.

ಇತರ ಪ್ರಭೇದಗಳು ಎರಡು ವಿಧದಲ್ಲಿ ಬಣ್ಣದ ವ್ಯತ್ಯಾಸವನ್ನು ತೋರಬಹುದು: (ಅ) ಸ್ಥಳೀಯ ಬಣ್ಣ ಅಥವಾ (ಬ) ಶ್ರಾಯಕ ಬಣ್ಣ.

(ಅ) ಸ್ಥಳೀಯ ಬಣ್ಣ : ಒಂದೇ ಪ್ರಾಣಿ ಪ್ರಭೇದದಲ್ಲಿ ಸ್ಥಳವನ್ನು ಅನುಸರಿಸಿ ಕಾಣುವ ಬಣ್ಣದ ವ್ಯತ್ಯಾಸಕ್ಕೆ ಈ ಹೆಸರಿದೆ. ಉದಾಹರಣೆಗೆ, ಒಂದೇ ಪ್ರಭೇದಕ್ಕೆ ಸೇರಿದ ಮಿಡತೆಗಳು ವಿವಿಧ ಸ್ಥಳಗಳಲ್ಲಿ ತೋರುವ ಬಣ್ಣದ ವ್ಯತ್ಯಾಸಗಳು.

ಸ್ಫಿಂಕ್ಸ್ ಲಿಂಗುಸ್ಟ್ರಿ ಎಂಬ ಗಿಡುಗ ಪತಂಗ (ಹಾಕ್ ಮಾತ್) ಮರದ ಮೇಲೆ ಇದ್ದಾಗ ಹಸುರು ಬಣ್ಣವನ್ನೂ ನೆಲದ ಮೇಲಿದ್ದಾಗ ಬೂದು ಬಣ್ಣವನ್ನೂ ಪ್ರದರ್ಶಿಸುತ್ತದೆ. ಇದೇ ರೀತಿ ಸನ್ನಿವೇಶಕ್ಕೆ ತಕ್ಕಂತೆ ಲಾರ್ವ ಅವಸ್ಥೆಯಲ್ಲಿ, ಕೋಶಾವಸ್ಥೆಯಲ್ಲಿ ಮತ್ತು ಪ್ರಬುದ್ಧಾವಸ್ಥೆಯಲ್ಲಿ ಬೇರೆ ಬೇರೆ ಬಣ್ಣಗಳನ್ನು ತೋರುವ ನಿದರ್ಶನಗಳುಂಟು. ಹಾವುಮೀನುಗಳು, ಅನೇಕ ತೆರನ ಮೃದ್ವಂಗಿಗಳು ಮತ್ತು ಕಠಿಣಚರ್ಮಿಗಳು ಎಳೆಯ ಅವಸ್ಥೆಯಲ್ಲಿ ವರ್ಣರಹಿತವಾಗಿ, ಪಾರದರ್ಶಕವಾಗಿ, ಪ್ರಬುದ್ಧಾವಸ್ಥೆಯಲ್ಲಿ ಅವುಗಳ ಸುತ್ತ ಬೆಳೆಯುವ ಗಿಡ ಅಥವಾ ಮರಳಿನ ಬಣ್ಣವನ್ನು ತೋರುತ್ತವೆ. ಅತ್ಯುತ್ತಮ ಉದಾಹರಣೆ ಎಂದರೆ ಅಪ್ಲೀಸಿಯಾ ಪಂಕ್ಟೇಟ ಎಂಬ ಕಡಲ ಮೊಲ. ಇಲ್ಲಿ ವಯಸ್ಸಿಗೆ ಅನುಗುಣವಾಗಿ ಬಣ್ಣ ಗುಲಾಬಿ ಕೆಂಪಿನಿಂದ ಪಾಚಿ ಹಸುರಿನವರೆಗೆ ಬದಲಾಗುತ್ತದಲ್ಲದೆ ಪ್ರಾಣಿ ಆಳನೀರಿನಿಂದ ಉತ್ತಲ ನೀರಿಗೆ ವಲಸೆ ಬಂದಂತೆ ಅಲ್ಲಲ್ಲಿಯ ಹಿನ್ನೆಲೆಗೆ ಅನುಸಾರವಾಗಿ ಬದಲಾಗುತ್ತದೆ.

(ಬ) ಶ್ರಾಯಕ ಬಣ್ಣ : ಇಲ್ಲಿ ದೇಹದ ಬಣ್ಣ ಚಳಿಗಾಲದಲ್ಲಿ ಒಂದು ತೆರನಾಗಿದ್ದರೆ ಬೇಸಿಗೆಯಲ್ಲಿ ಇನ್ನೊಂದು ತೆರನಾಗಿರುತ್ತದೆ. ಅನೇಕ ಪಕ್ಷಿಗಳು ಮತ್ತು ಸ್ತನಿಗಳು ಈ ಬಗೆಯ ಶ್ರಾಯಕ ಬದಲಾವಣೆಯನ್ನು ತೋರುತ್ತವೆ. ಉದಾಹರಣೆಗೆ, ಉತ್ತರ ಧ್ರುವದ ನರಿ ಮತ್ತು ಬೆಟ್ಟದ ಮೊಲಗಳು, ಉತ್ತರ ಅಮೆರಿಕದ ಪ್ರೈರೀಗಳಲ್ಲಿ ವಾಸಿಸುವ ಲೀಪಸ್ ಕ್ಯಾಂಪೆಸ್ಟ್ರಿಸ್ ಮತ್ತು ಲೀಪಸ್ ಅಮೆರಿಕಾನಸ್ ಮೊಲಗಳು ಚಳಿಗಾಲದಲ್ಲಿ ಬಿಳಿಯ ಬಣ್ಣ ತಾಳುತ್ತವೆ. ಯೂರೋಪಿನ ಡಾಮ ಜಿಂಕೆ ಮತ್ತು ಜಪಾನಿನ ಸೀಕ ನಿಪ್ಪಾನ್ ಜಿಂಕೆಗಳು ಬೇಸಿಗೆಯಲ್ಲಿ ಬಿಳಿಯ ಚುಕ್ಕೆಗಳ ಬೆಡಗನ್ನು ತೋರುವುವಾದರೆ ಚಳಿಗಾಲದಲ್ಲಿ ಚುಕ್ಕೆಗಳು ಕಣ್ಮರೆಯಾಗಿ ದೇಹ ಒಟ್ಟಾಗಿ ಕಂದು ಅಥವಾ ಬೂದು ಬಣ್ಣ ತಾಳುತ್ತದೆ. ಕೆಲವು ಪ್ರಾಣಿಗಳಲ್ಲಿ ಶ್ರಾಯಕ ಬದಲಾವಣೆಯ ಮಟ್ಟ ಅಕ್ಷಾಂಶ ಮತ್ತು ಹವೆಯನ್ನು ಅನುಸರಿಸಿದೆ.

೨ ಎಚ್ಚರಿಕೆಯ ಬಣ್ಣ : ಶತ್ರುಗಳ ಆಕ್ರಮಣದ ವಿರುದ್ಧ ಸಮರ್ಥ ರೀತಿಯಲ್ಲಿ ರಕ್ಷಿಸಿಕೊಳ್ಳುವುದಕ್ಕೆ ಇದು ಸಂಬಂಧಿಸಿದೆ. ಕೀಟಗಳು, ಉಭಯಚರಿಗಳು ಮತ್ತು ಸರೀಸೃಪಗಳಲ್ಲಿ ಇದನ್ನು ವಿಶೇಷವಾಗಿ ಕಾಣಬಹುದು. ಎಚ್ಚರಿಕೆಯ ಬಣ್ಣ ಸಾಮಾನ್ಯವಾಗಿ ಕೆಂಪು ಅಥವಾ ಹಳದಿಯಾಗಿರುತ್ತದೆ. ಉದಾಹರಣೆ : ಹವಳದ ಹಾವು, ಹುಲಿ ಸಾಲಮ್ಯಾಂಡರ್, ಚಿಟ್ಟೆಗಳು, ಕಂಬಳಿ ಹುಳು ಮುಂತಾದ ವಿಷಜಂತುಗಳು ಅಥವಾ ಖಾದ್ಯಯೋಗ್ಯವಲ್ಲದ ಪ್ರಾಣಿಗಳು. ಇವುಗಳ ಪ್ರಕಾಶಮಾನವಾದ ವರ್ಣವೈವಿಧ್ಯದಿಂದಾಗಿ ಶತ್ರುಗಳು ಇವನ್ನು ಆಕ್ರಮಿಸುವುದಿಲ್ಲ. ಅಲ್ಲದೆ ಇಂಥ ಪ್ರಾಣಿಗಳು ನಿರುಪದ್ರವಿ ಪ್ರಾಣಿಗಳು. ಕೆಲವು ಪ್ರಾಣಿಗಳಿಗೆ ಹೊಟ್ಟೆಯ ಮೇಲೆ ಗಮನಾರ್ಹವಾದ ಬಣ್ಣವಿದ್ದು ಶತ್ರುಗಳು ಆಕ್ರಮಿಸಿದಾಗ ಅಂಗಾತನಾಗಿ ಹೊಟ್ಟೆ ಭಾಗವನ್ನು ಪ್ರದರ್ಶಿಸುವ ಅಭ್ಯಾಸ ಇರುತ್ತದೆ. ಉದಾಹರಣೆಗೆ, ಹಂದಿಮೂತಿ ಹಾವು (ಹೆಟರೊಡಾನ್ ಪ್ಲಾಟಿರೈನಿಸ್) ಶತ್ರು ಹತ್ತಿರಕ್ಕೆ ಬಂದಾಗ ಬಾಯನ್ನು ತೆಗೆದು ಶಬ್ದಮಾಡುತ್ತದೆ. ಇದರಿಂದ ಶತ್ರು ಹೆದರಿ ಓಡಿಹೋಗದಿದ್ದರೆ ಆಗ ಅಂಗಾತ ಮಲಗಿ ಸತ್ತಂತೆ ನಿಶ್ಚಲವಾಗಿ ಬಿದ್ದು ತನ್ನ ಹೊಟ್ಟೆಯ ಮೇಲಿನ ಕಪ್ಪು ಬಣ್ಣವನ್ನು ಪ್ರದರ್ಶಿಸುತ್ತದೆ. ಕೆಲವು ರೀತಿಯ ನೆಲಗಪ್ಪೆಗಳು ಮತ್ತು ಬಾರತದ ಒಂದು ಜೇಡ ಇದೇ ರೀತಿ ಹೊಟ್ಟೆಯನ್ನು ಪ್ರದರ್ಶಿಸುವ ಪ್ರವೃತ್ತಿಯನ್ನು ತೋರುತ್ತವೆ. ಕೆಲವು ಕೀಟಗಳು, ನೆಲಗಪ್ಪೆಗಳು ಮತ್ತು ಹಲ್ಲಿಗಳಂಥ ಪ್ರಾಣಿಗಳು ಶತ್ರುವಿನ ಎದುರಿಗೆ ಚರ್ಮ ನೆರಿಗೆಗಳನ್ನು ನೆಟ್ಟಗೆ ಮಾಡಿ ಎಚ್ಚರಿಕೆಯ ಬಣ್ಣಗಳನ್ನು ಪ್ರದರ್ಶಿಸುತ್ತವೆ. ಕೆಲವು ಮೀನುಗಳು ಈಜು ರೆಕ್ಕೆಗಳನ್ನು ಅಗಲಿಸಿ ಹೆದರಿಸುವ ಭಂಗಿಯನ್ನು ತಾಳಿ ತಮ್ಮನ್ನು ತಿನ್ನಲು ಬರುವ ಮಾಂಸಾಹಾರಿ ಪ್ರಾಣಿಗೆ ತನ್ನ ಈಜುರೆಕ್ಕೆಯಲ್ಲಿರುವ ವಿಷದ ಮುಳ್ಳುಗಳ ಬಗೆಗೆ ಎಚ್ಚರಿಕೆ ನೀಡುತ್ತವೆ. ಎಚ್ಚರಿಕೆಯ ಬಣ್ಣ ಸಾಮಾನ್ಯವಾಗಿ ಮರಳುಗಾಡಿನಲ್ಲಿ ವಾಸಿಸುವ ಪ್ರಾಣಿಗಳಲ್ಲಿ ಕಂಡುಬರುತ್ತದೆ. ಇವು ಹೆಚ್ಚು ಅಪಾಯಕಾರಿಯಾದ ಪ್ರಾಣಿಗಳ ಬಣ್ಣದ ಅನುಕರಣೆಯಾಗಿರಬಹುದು ಇಲ್ಲವೆ ಇಂಥ ಪ್ರಾಣಿಗಳು ಸ್ವತಃ ವಿಷಜಂತುಗಳಾಗಿರಬಹುದು.

೩. ಜಾತಿಯ ಪ್ರಮಾಣಭೂತ ಬಣ್ಣ : ವಿವಿಧ ಪರಿಸ್ಥಿತಿಗಳಲ್ಲಿ ಅಥವಾ ಪ್ರದೇಶಗಳಲ್ಲಿ ವಾಸಿಸುವ ಪ್ರಾಣಿಗಳು ಒಂದೇ ರೀತಿಯ ವಸತಿ ಬಣ್ಣವನ್ನು ಪ್ರದರ್ಶಿಸುವುವು. ಇದರಿಂದಾಗಿ ಇವುಗಳ ಆಕಾರ ಮತ್ತು ಬಣ್ಣದಿಂದ ಇವನ್ನು ಗುರುತಿಸುವುದು ಕಷ್ಟವಾಗುತ್ತದೆ. ಅನೇಕ ಕಡಲು ಹಕ್ಕಿಗಳ ಬೆನ್ನುಭಾಗ ತೆಳುನೀಲಿ ಬಣ್ಣದ್ದೂ ಉದರಭಾಗ ಬಿಳಿಬಣ್ಣದ್ದೂ ಆಗಿರುತ್ತದೆ. ಇದರಿಂದಾಗಿ ಮೇಲಿನಿಂದ ನೋಡಿದಾಗ ನೀಲಿಯ ಬಣ್ಣ ಕಡಲಿನ ಬಣ್ಣದೊಂದಿಗೆ ಮಿಳಿತವಾಗುತ್ತದೆ ಮತ್ತು ಕೆಳಗಿನಿಂದ ನೋಡಿದಾಗ ಬಿಳಿಯ ಬಣ್ಣ ಆಕಾಶದೊಂದಿಗೆ ಮಿಳಿತವಾಗುತ್ತದೆ. ಕಡಲಿನಲ್ಲಿ ತೇಲುಜೀವಿಯಾಗಿ ವಾಸಿಸುವ ಗ್ಲಾಕಸ್ ಎಂಬ ಶಂಭೂಕ ಹೊಟ್ಟೆಯನ್ನು ಮೇಲೆ ಮಾಡಿಕೊಂಡು ತೇಲುತ್ತದೆ. ಇಲ್ಲಿ ಹೊಟ್ಟೆಯ ಭಾಗ ನೀಲಿಯಾಗಿಯೂ ಮತ್ತು ಬೆನ್ನಿನ ಭಾಗ ಬಿಳಿಯಾಗಿಯೂ ಇದೆ. ದೇಹದ ಅಂಗರಚನೆಯ ದೃಷ್ಟಿಯಿಂದ ಈ ಬಣ್ಣಗಳು ತಿರುಗುಮುರುಗಾದಂತೆ ಕಂಡರೂ ವಸತಿ ವರ್ತನೆಯ ದೃಷ್ಟಿಯಿಂದ ಸ್ವಾಭಾವಿಕವಾಗಿವೆ. ಉತ್ತರ ಧ್ರುವ ಪ್ರದೇಶದಲ್ಲಿ ವಾಸಿಸುವ ಪ್ರಾಣಿಗಳು ಸಾಮಾನ್ಯವಾಗಿ ಹಿನ್ನೆಲೆಯನ್ನು ಹೋಲುವ ಬಿಳಿಯ ಬಣ್ಣವನ್ನು ತೋರುತ್ತವೆ. ಇದೇ ರೀತಿ ಕಲ್ಲು ಮತ್ತು ಕಡಲ ಕಳೆಗಳ ನಡುವೆ ವಾಸಿಸುವ ಏಡಿಗಳು, ನಕ್ಷತ್ರ ಮೀನು, ಕಡಲಪೋರ, ಶಂಭೂಕ, ಕಡಲತಾವರೆ, ಕಡಲಹುಳುಗಳೇ ಮುಂತಾದವು ಹಿನ್ನೆಲೆಗೆ ಉಚಿತವಾದ ಬಣ್ಣ ತೊಡುಗೆಯನ್ನು ತೋರುತ್ತವೆ. ಡೋರಿಸ್ ಎಂಬ ಶಂಭೂಕ ತೆಳುಹಳದಿಯ ಬಣ್ಣದ್ದಾಗಿದ್ದು ದೂರಕ್ಕೆ ಹಳದಿಬಣ್ಣದ ಸ್ಪಂಜಿನಂತೆ ಕಾಣುತ್ತದೆ.

೪. ಅನುಕರಣ ಬಣ್ಣ : ಅನೇಕ ತೆರನ ಚಿಟ್ಟೆಗಳು ಮತ್ತು ಪತಂಗಗಳು ತಮ್ಮ ಜೀವಮಾನ ಪರ್ಯಂತ ಮರೆಮಾಚುವ ವರ್ಣವೈವಿಧ್ಯವನ್ನು ತೋರತ್ತವೆ. ಉದಾಹರಣೆಗೆ, ಬ್ರೆಜಿಲ್ ವಾಸಿಯಾದ ಜರಿರೆಕ್ಕೆ ಪತಂಗ ಕ್ಲಿಯೋರ ಲೈಕೆನೇರಿಯ. ಕಲ್ಲುಹೂಗಳ ನಡುವೆ ಬದುಕುವ ಇದರ ಲಾರ್ವ, ಕೋಶಾವಸ್ಥೆ ಮತ್ತು ಪ್ರಬುದ್ಧ ಪತಂಗಗಳೆಲ್ಲವೂ ಕರಾರುವಕ್ಕಾಗಿ ತಮ್ಮ ಹಿನ್ನೆಲೆಯೊಂದಿಗೆ ಮಿಳಿತವಾಗುತ್ತವೆ. ಶ್ರೀಲಂಕಾದಲ್ಲಿ ದೊರೆಯುವ ಕಾಲಿಮ ಎಂಬ ಚಿಟ್ಟೆ ಮತ್ತು ಭಾರತವಾಸಿಯಾದ ಸತ್ತ ಎಲೆಯ ಚಿಟ್ಟೆ ಮರೆಮಾಚುವಿಕೆಗೆ ಉತ್ಕೃಷ್ಟ ಉದಾಹರಣೆಗಳು. ತಮ್ಮ ರೆಕ್ಕೆಗಳನ್ನು ಮಡಿಚಿಕೊಂಡಾಗ ಈ ಚಿಟ್ಟೆಗಳು ಆಕಾರದಲ್ಲೂ ಬಣ್ಣದಲ್ಲೂ ಒಣಗಿದ ಎಲೆಯನ್ನೂ ಅದರ ತೊಟ್ಟನ್ನೂ ಹೋಲುತ್ತವೆ.

ಕೋಸಿನ ಬಿಳಿ ಚಿಟ್ಟೆಯ ಕೋಶಾವಸ್ಥೆಯ ಬಣ್ಣ ಅದು ಅಂಟಿಕೊಂಡಿರುವ ತೊಗಟೆ ಅಥವಾ ಗೋಡೆ ಅಥವಾ ಬೇಲಿಯ ಬಣ್ಣಕ್ಕೆ ಅನುಗುಣವಾಗಿರುತ್ತದೆ.

೫. ಸಂಕೇತ ಸೂಚಕ ಮತ್ತು ಗುರುತಿನ ಬಣ್ಣಗಳು : ಗುಂಪಿನಲ್ಲಿ ವಾಸಿಸುವ ಪ್ರಾಣಿಗಳು ಪರಸ್ಪರ ಸುದ್ದಿವಿನಿಮಯ ಮಾಡಿಕೊಳ್ಳಲು ಕೆಲವು ರೀತಿಯ ಬಣ್ಣದ ಸಂಕೇತಗಳನ್ನು ಬಳಸಿಕೊಳ್ಳುತ್ತವೆ. ಉದಾಹರಣೆಗೆ, ಮೇಯುತ್ತಿರುವ ಜಿಂಕೆಗಳ ಮಂದೆಯೊಂದರಲ್ಲಿ ಯಾವುದಾದರೂ ಒಂದು ಪ್ರಾಣಿಗೆ ಅಪಾಯದ ಸುಳಿವು ಸಿಕ್ಕಿದರೆ ಅದು ತನ್ನ ಬಾಲವನ್ನು ಮೇಲೆತ್ತಿ ತಳಭಾಗದಲ್ಲಿರುವ ಬಣ್ಣವನ್ನು ಪ್ರದರ್ಶಿಸಿ ಮಂದೆಯ ಇತರ ಪ್ರಾಣಿಗಳಿಗೆ ಅಪಾಯದ ಮುನ್ಸೂಚನೆಯನ್ನು ಕೊಡುತ್ತದೆ. ಇದೇ ರೀತಿ ಕೆಲವು ಪಕ್ಷಿಗಳ ರೆಕ್ಕೆಯ ತಳಭಾಗದಲ್ಲಿ ಮತ್ತು ಬಾಲದ ಗರಿಗಳ ಮೇಲೆ ಹೊಳೆಯುವ ಬಣ್ಣದ ಪಟ್ಟೆಗಳಿರುತ್ತವೆ. ಅಪಾಯ ಪರಿಸ್ಥಿತಿಗಳಲ್ಲಿ ಗಾಬರಿಯಿಂದ ಇವು ಮೇಲೆ ಹಾರಿದಾಗ ಈ ಬಣ್ಣದ ಪಟ್ಟೆಗಳು ಇತರ ಪಕ್ಷಿಗಳಿಗೆ ಕಾಣಿಸಿಕೊಂಡು ಅಪಾಯದ ಮುನ್ಸೂಚನೆ ಸಿಗುತ್ತದೆ. ಕೆಲವೊಮ್ಮೆ ಈ ಬಣ್ಣಗಳು ಒಂದೇ ಪ್ರಭೇದಕ್ಕೆ ಸೇರಿದ ಇತರ ಪ್ರಾಣಿಗಳು ಸಂಕೇತಗಳನ್ನು ಅರಿತುಕೊಳ್ಳುವಂತೆಮಾಡುವ ಗುರುತು ಬಣ್ಣವೂ ಆಗಿರಬಹುದು. ಸಾಲ್ವೆಲಿನಸ್ ಫಾಂಟಿನಾಲಿಸ್ ಎಂಬ ಟ್ರೌಟ್ ಮೀನಿನಲ್ಲಿ ಈ ತೆರನ ಗುರುತು ಬಣ್ಣವನ್ನು ಕಾಣಬಹುದು. ಮೀನಿನ ಎರಡೂ ಪಕ್ಕದಲ್ಲಿ ಕಿತ್ತಳೆ ಮತ್ತು ಕೆಂಪು ಬಣ್ಣದ ಚುಕ್ಕೆಗಳಿದ್ದು ಇದರಿಂದ ಮೀನು ವರ್ಣರಂಜಕವಾಗಿದೆ. ನೆರಳಿನ ಪ್ರದೇಶಗಳಲ್ಲಿ ವಾಸಿಸುವ ಇದು ಮೇಲಿನಿಂದ ನೋಡುವ ಶತ್ರುವಿಗೆ ಅಗೋಚರವಾಗಿದ್ದು ಪಕ್ಕದಿಂದ ನೋಡುವ ತನ್ನ ಪ್ರಭೇದದ ಇತರ ಮೀನುಗಳಿಗೆ ಗೋಚರಿಸುತ್ತದೆ. ಈ ರೀತಿಯ ಗುರುತು ಬಣ್ಣಗಳನ್ನು ಚಿಟ್ಟೆ ಮತ್ತು ಪತಂಗಗಳಲ್ಲಿಯೂ ಕಾಣಬಹುದು.

೬. ಕಂಗೆಡಿಸುವ ಬಣ್ಣ : ಕೆಲವು ಬಗೆಯ ಚಿಟ್ಟೆ ಹಾಗೂ ಪತಂಗಗಳಲ್ಲಿ ಈ ತೆರನ ಬಣ್ಣಗಳನ್ನು ಕಾಣಬಹುದು. ಇವು ಹಾರುತ್ತಿರುವಾಗ ಈ ಬಣ್ಣಗಳು ಗಮನ ಸೆಳೆಯುವಂತಿದ್ದು ಹಕ್ಕಿಯಂಥ ಶತ್ರು ಇವನ್ನು ಸುಲಭವಾಗಿ ಅನುಸರಿಸಬಹುದು. ಆದರೆ ಹಠಾತ್ತನೆ ಪತಂಗಗಳು ಯಾವುದಾದರೂ ವಸ್ತುವಿನ ಮೇಲೆ ಕುಳಿತು ತಮ್ಮ ಗಮನ ಸೆಳೆಯುವ ಬಣ್ಣವನ್ನು ಮರೆಮಾಚಿದಾಗ ಶತ್ರುವಿನ ಕಣ್ಣಿಗೆ ಇವು ಕಾಣದಾಗುತ್ತವೆ. ಇದರಿಂದ ಶತ್ರು ತಬ್ಬಿಬ್ಬಾಗುವುದು.

೭. ಲಿಂಗವರ್ಣಗಳು : ಲಿಂಗವರ್ಣ ಲೈಂಗಿಕ ಆಯ್ಕೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಅನೇಕ ಪ್ರಾಣಿಗಳಲ್ಲಿ, ವಿಶೇಷವಾಗಿ ಪಕ್ಷಿಗಳಲ್ಲಿ ಹೆಣ್ಣುಗಳಿಗಿಂತಲೂ ಹೆಚ್ಚಾಗಿ ಗಂಡು ಹೊಳಪು ಬಣ್ಣದ್ದು, ತನ್ನ ಹೊಳಪು ಬಣ್ಣದ ಗರಿಗಳನ್ನು ಪ್ರದರ್ಶಿಸಿ ಹೆಣ್ಣುಹಕ್ಕಿಯನ್ನು ಒಲಿಸಿಕೊಳ್ಳುತ್ತದೆ. ಅಮೆರಿಕದ ಕಾರ್ಡಿನಲ್ ಬಾಸ್ ಹಕ್ಕಿಯಲ್ಲಿ ರಕ್ತವರ್ಣದ ನಿಷೇಚನ ಗರಿಗಳು ಬೆಳೆಯುತ್ತವೆ. ಗಂಡುಹಕ್ಕಿಯನ್ನು ಹೆಣ್ಣುಹಕ್ಕಿ ಗುರುತಿಸಲು ನೆರವಾಗುವುದೇ ಅಲ್ಲದೆ ಪ್ರಣಯಾಚರಣೆಯಲ್ಲಿ ಈ ಬಣ್ಣ ನೆರವಾಗುತ್ತದೆ. ಈ ರೀತಿಯ ವರ್ಣರಂಜಿತ ಗರಿಗಳನ್ನು ಹುಂಜ, ಗಂಡು ಪಾರಿವಾಳ, ಗಂಡು ನವಿಲುಗಳಲ್ಲಿ ಕಾಣಬಹುದು. ಗಂಡುಗಳಿಗೆ ಮಾತ್ರ ಈ ಹೊಳಪು ಬಣ್ಣಗಳಿರಬೇಕು ಎನ್ನುವುದಕ್ಕೆ ಕಾರಣಗಳು ಸ್ಪಷ್ಟವಿಲ್ಲ. ಬಹುಶಃ ಮೊಟ್ಟೆಗಳ ಮೇಲೆ ಕಾವು ಕೂರುವ, ಮರಿಗಳನ್ನು ಪೋಷಿಸುವ ಕೆಲಸ ಹೆಣ್ಣು ಹಕ್ಕಿಯದಾದ್ದರಿಂದ ಅಂಥ ಸಮಯಗಳಲ್ಲಿ ಶತ್ರುಗಳಿಂದ ರಕ್ಷಿಸುವ ದೃಷ್ಟಿಯಿಂದ ಈ ರೀತಿಯ ಮಬ್ಬು ಬಣ್ಣಗಳು ನೆರವಾಗಬಹುದು. ಉಳಿದ ಪ್ರಾಣಿಗಳಲ್ಲೂ ಈ ವಿದ್ಯಮಾನ ಉಂಟು. ಅಷ್ಟಪಾದಿಗಳು ತಮ್ಮ ಹೊಳಪು ಬಣ್ಣಗಳನ್ನು ಪ್ರಣಯ ಮೇಳಕ್ಕೆ ಬಳಸಿಕೊಳ್ಳುತ್ತವೆ. ಅನೇಕ ಗಂಡು ಮೀನುಗಳು, ಗಂಡು ಸಾಲಮ್ಯಾಂಡರುಗಳು ಮತ್ತು ಗಂಡು ಹಲ್ಲಿಗಳಲ್ಲಿ ಹೊಳಪು ಬಣ್ಣಗಳುಂಟು. ಸಂತಾನವೃದ್ಧಿ ಕಾಲದಲ್ಲಿ ಗಂಡು ಓತಿಯ ಕುತ್ತಿಗೆಯ ಸುತ್ತಲ ಹುರುಪೆಗಳು ರಕ್ತವರ್ಣವನ್ನು ತಾಳುತ್ತವೆ. ಅನೇಕ ಆದಿಮ ಜೀವಿಗಳಲ್ಲಿ (ಸ್ಪಂಜುಗಳು, ಕಡಲತಾರೆಗಳು, ಅಂಬಲಿಮೀನುಗಳು) ಪ್ರಣಯಾಚರಣೆ ಇಲ್ಲದಿದ್ದರೂ ಹೊಳಪು ಬಣ್ಣಗಳನ್ನು ಕಾಣಬಹುದು. ಇಂಥ ಬಣ್ಣ ಬಹುತೇಕವಾಗಿ ಶಾರೀರಕ್ರಿಯೆಯ ಉಪೋತ್ಪನ್ನವಾಗಿ ಉದ್ಭವಿಸುತ್ತದೆ. ಇದಕ್ಕೂ ಸಂತಾನವೃದ್ಧಿಕ್ರಿಯೆಗೂ ಯಾವ ರೀತಿಯ ಸಂಬಂಧವೂ ಇಲ್ಲ.

ಪ್ರಾಣಿಗಳಲ್ಲಿ ಬಣ್ಣ ಕಾಣಿಸಿಕೊಳ್ಳುವ ಕಾರಣಗಳು : ಕೆಲವು ಸಂದರ್ಭಗಳಲ್ಲಿ ಪ್ರಕಟಗೊಳ್ಳುವ ಬಣ್ಣ ಜೀವಿಯ ದೇಹದಲ್ಲಿರುವ ರಾಸಾಯನಿಕ ವಸ್ತುವೊಂದನ್ನು ಅವಲಂಬಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಕಬ್ಬಿಣದ ಆಕ್ಸೈಡ್ ಕೆಂಪಾಗಿರುವುದರಿಂದ ಕಶೇರುಕಗಳ ರಕ್ತ ಕೆಂಪಾಗಿರುತ್ತದೆ. ಇದೇ ರೀತಿ ತಾಮ್ರದ ಆಕ್ಸೈಡ್ ನೀಲಹಸುರು ಬಣ್ಣದ್ದಾಗಿರುವುದರಿಂದ ಅಷ್ಟಪಾದಿಯ ರಕ್ತ ಅದೇ ಬಣ್ಣ ತಾಳುತ್ತದೆ. ಕೆಲವು ಸಂದರ್ಭಗಳಲ್ಲಿ ಪ್ರಾಣಿಯ ಒಳಗಿನ ಅಂಗಗಳು ಆಹಾರವನ್ನು ಅನುಸರಿಸಿ ಬೇರೆ ಬೇರೆ ಬಣ್ಣವನ್ನೂ ತೋರಬಹುದು. ಉದಾಹರಣೆಗೆ, ಅಮೆರಿಕದ ಸಂಯುಕ್ತ ಸಂಸ್ಥಾನಗಳ ಮ್ಯಾಸಚೂಸೆಟ್ಸ್ ರಾಜ್ಯದ ಭಾಗದಲ್ಲಿ ವಾಸಿಸುವ ಟ್ರೌಟ್‌ಮೀನಿನ ಮಾಂಸ ಬೆಳ್ಳಗಿರುತ್ತದೆ. ಈ ಪ್ರದೇಶದಲ್ಲಿ ಕಠಿಣಚರ್ಮಿಗಳು ಹೆಚ್ಚಾಗಿ ದೊರಕುವುದಿಲ್ಲ. ಆದರೆ ನಳ್ಳಿಗಳು ಹೆಚ್ಚಾಗಿ ಸಿಕ್ಕುವ ಅಡಿರೋನ್‌ಡ್ಯಾಕ್ಸ್ ಸರೋವರದ ಟ್ರೌಟುಗಳ ಮಾಂಸ ಕಡುಕೆಂಪಾಗಿರುತ್ತದೆ. ಅನೇಕ ವೇಳೆ ಪ್ರಾಣಿಯ ವೈವಿಧ್ಯಕ್ಕೆ ಕಾರಣವಾಗುವ ವರ್ಣಕಗಳು ಪ್ರಾಥಮಿಕವಾಗಿ ತ್ಯಾಜ್ಯ ವಸ್ತುಗಳಾಗಿರಬಹುದು, ಸಂತತ ಉತ್ಪನ್ನಗಳಾಗಿರಬಹುದು ಅಥವಾ ಪ್ರಾಣಿಯ ಉಪಾಪಚಯಕ್ರಿಯೆಯ ಉಪೋತ್ಪನ್ನಗಳಾಗಿರಬಹುದು. ಕಶೇರುಕಗಳಲ್ಲಿ ಮತ್ತು ಸೀಗಡಿ ಮುಂತಾದ ಕೆಲವು ಅಕಶೇರುಕಗಳಲ್ಲಿ ಬಣ್ಣ ತೊಡುಗೆಗೆ ಕಾರಣವಾಗುವ ಕ್ರೊಮ್ಯಾಟೊಫೋರುಗಳು ನರಮಂಡಲದ ನಿಯಂತ್ರಣಕ್ಕೆ ಒಳಪಟ್ಟಿರುವುವು. ನರಮಂಡಲ ಭಾಗದಲ್ಲಿ ಕಂಡು ಬರುವ ನರಸ್ರಾವಕ ಕೋಶಗಳ ಸ್ರಾವಿಕೆಗಳು ಸೀಗಡಿಗಳಲ್ಲಿ ಕ್ರೊಮ್ಯಾಟೊಫೋರುಗಳ ಸಂಕುಚನ ಮತ್ತು ವ್ಯಾಕೋಚನಗಳನ್ನು ನಿಯಂತ್ರಿಸುತ್ತವೆ. ಇದೇ ರೀತಿ ಕಶೇರುಕಗಳಲ್ಲಿ ಕಂಡುಬರುವ ಮೆಲನೊಫೋರುಗಳು ಹಾರ್ಮೋನುಗಳ ನಿಯಂತ್ರಣಕ್ಕೆ ಒಳಪಟ್ಟಿವೆ. ಪಿಟ್ಯುಟರಿ ಗ್ರಂಥಿಯ ಮಧ್ಯಪಾಲಿ ಸ್ರವಿಸುವ ಎಮ್‌ಎಸ್‌ಹೆಚ್ (ಮೆಲನೊಫೋರ್ ಸ್ಟಿಮ್ಯುಲೇಟಿಂಗ್ ಹಾರ್ಮೋನು) ಮೆಲನೊಫೋರುಗಳ ಸಂಕೋಚನವನ್ನು ನಿಯಂತ್ರಿಸುತ್ತದೆ. (ಎಚ್.ಬಿ.ಡಿ.)

**ಪ್ರಾಣಿಗಳಲ್ಲಿ ವಲಸೆ:** ಅನೇಕ ಪ್ರಾಣಿ ಗುಂಪುಗಳಲ್ಲಿ ಕಂಡುಬರುವ ಸಾಮೂಹಿಕ ಸ್ಥಳಾಂತರತೆ (ಮೈಗ್ರೇಷನ್). ಇಡೀ ಪ್ರಾಣಿ ರಾಶಿಯೇ ಒಂದು ಖಂಡದಿಂದ ಇನ್ನೊಂದಕ್ಕೆ ಸಾಗುವುದರಿಂದ ಹಿಡಿದು ಕಾಗೆ, ಗಿಳಿ ಮುಂತಾದ ಹಕ್ಕಿಗಳು ದಿನನಿತ್ಯ ತಮ್ಮ ಗೂಡುಗಳಿಂದ ಆಹಾರಾನ್ವೇಷಣೆಗೆ ಹೋಗಿ ಸಂಜೆ ವಾಪಾಸಾಗುವುದರ ತನಕ ಕಾಣುವ ಎಲ್ಲ ಬಗೆಯ ಸ್ಥಳಾಂತರತೆಯನ್ನು ಈ ಪದದ ಅರ್ಥವ್ಯಾಪ್ತಿಯಲ್ಲಿ ಸೇರಿಸಬಹುದು. ಸಾಗರದ ಅಲೆಗಳಿಗೆ ಅಲ್ಲಿಯ ಅಕಶೇರುಕಗಳು ತೋರುವ ಲಯಬದ್ಧ ಸಂಚಲನ, ಲೆಮ್ಮಿಂಗ್, ಮಿಡತೆ ಮುಂತಾದ ಪ್ರಾಣಿಗಳಲ್ಲಿ ಕಾಣಬರುವ ರಾಶಿ ಚಲನೆಯ ಆವರ್ತಗಳು, ಕಡಲಿನಿಂದ ಭಾರಿಸಂಖ್ಯೆಯಲ್ಲಿ ತಮ್ಮ ಜನನ ತಾಣದಲ್ಲಿ ಮೊಟ್ಟೆಯಿಡಲು ಹಿಂದಿರುಗುವ ಸ್ಯಾಲ್ಮನ್, ಹಾವುಮೀನು ಮುಂತಾದವುಗಳ ಸಾಮೂಹಿಕ ಸಂಚಾರ–ಇವು ಪ್ರಾಣಿಗಳ ವಲಸೆಯ ಕೆಲವು ನಿದರ್ಶನಗಳು. ಈ ತೆರನ ವಲಸೆಯನ್ನು ಚಿಟ್ಟೆ, ಪತಂಗ, ಕೋಡತಿಕೀಟ, ನಗರವಾಸಿ ಮೀನುಗಳು, ನೆಲಗಪ್ಪೆ, ಸ್ಯಾಲಮಾಂಡರು, ಬಾವಲಿ, ಗೊರಸುಪಾದವುಳ್ಳ ಸ್ತನಿಗಳು, ಸೀಲ್, ತಿಮಿಂಗಲ ಮುಂತಾದ ಪ್ರಾಣಿಗಳಲ್ಲೂ ವಿಶೇಷವಾಗಿ ಹಲವಾರು ತೆರನ ಹಕ್ಕಿಗಳಲ್ಲೂ ಕಾಣಬಹುದು.

ವಲಸೆ ಪದದ ನಿಷ್ಕೃಷ್ಟಾರ್ಥದ ಬಗ್ಗೆ ಬಹುವಾದ ಚರ್ಚೆ ನಡೆದಿದೆ. ಮರಿಹಾಕುವ ಸ್ಥಳದಿಂದ ಹಿಡಿದು ಮರಿ ಹಾಕದಿರುವ ಸ್ಥಳವನ್ನು ತಲುಪುವವರೆಗಿನ ಸಂಪೂರ್ಣವಾದ ನಿಯಮಿತ ಚಲನೆಯನ್ನು ವಲಸೆ ಎಂದು ಕರೆದರೆ ಯಾವಾಗಲೂ ಅನುಕೂಲವಾದ ಸನ್ನಿವೇಶವನ್ನುಂಟುಮಾಡುವ, ನಿಯತಕಾಲಿಕವಾಗಿ ಪುನರಾವರ್ತಿಸುವ ಹಾಗೂ ಚಲನೆಯ ದಿಕ್ಕಿನಲ್ಲಿ ವ್ಯತ್ಯಯವಾಗುವ ಬೀಡಿನ ಬದಲಾವಣೆಯೇ ವಲಸೆ ಎಂಬುದು ಎ.ಎಲ್.ಥಾಮ್ಸನ್ ಎಂಬಾತನ ಅಭಿಪ್ರಾಯ. ಡಬ್ಲ್ಯೂ ಹೀಪ್ ಎಂಬಾತನ ಪ್ರಕಾರ ಪ್ರಾಣಿಗಳಲ್ಲಿ ಎರಡು ವಿಧದ ಸಾಮೂಹಿಕ ಸಂಚಲನೆ ಇದೆ. ಇವುಗಳ ಪೈಕಿ ಹಿಂತಿರುಗುವ ಚಲನೆ ಪ್ರಜನನಕ್ರಿಯೆಗೋಸ್ಕರವೆಂದೂ ಇದೆ ವಲಸೆ ಎಂದೂ, ಇನ್ನೊಂದು ತೆರನ ಚಲನೆಯಲ್ಲಿ ಪ್ರಾಣಿಗಳು ಹಿಂತಿರುಗುವುದಿಲ್ಲವೆಂದೂ ಇದು ಸಾಮಾನ್ಯವಾಗಿ ಆಹಾರಾನ್ವೇಷಣಾರ್ಥವೆಂದೂ ವಿವರಣೆ ನೀಡಿದ್ದಾನೆ. ನಿಯತಕಾಲಿಕವಾದ ಬಹುಶಃ ದಿಕ್ಕಿನ ಸಮಾವೇಶವಿಲ್ಲದ, ಪ್ರಾಣಿಯ ಸ್ವಪ್ರಯತ್ನದಿಂದ ಉಂಟಾಗುವ ತನ್ನ ಹಿಂದಿದ್ದ ನೆಲೆಯನ್ನು ಬಿಡುವ ಮತ್ತು ವ್ಯಾಪ್ತಿಯಾದ ಸಂಚಲನೆಯೇ ವಲಸೆ ಎಂದು ಸಿ.ಬಿ.ವಿಲಿಯಮ್ಸ್ ಎಂಬಾತನ ಅಭಿಪ್ರಾಯ. ಮೊದಲ ನೋಟಕ್ಕೆ ಒಂದೇ ದಿಕ್ಕಿನಲ್ಲಿ ಸಾಗುವಂತೆ ಕಾಣುವ ಚಲನೆಯನ್ನೂ ಇದರಲ್ಲಿ ಸೇರಿಸಬಹುದು. ಆದರೆ ಗಾಳಿ ಮತ್ತು ಸಮುದ್ರ ತರಂಗಗಳಿಂದಾಗಿ ಪ್ರಾಣಿಯನ್ನು ಸೆಳೆದುಕೊಂಡು ಹೋಗುವ ಚಲನೆ ಇದಕ್ಕೆ ಹೊರತು. ವಾರ್ಷಿಕವಾಗಿ ಮರಿ ಮಾಡುವ ಕಾಲದಿಂದಾಗಿ ದೀರ್ಘ ಆಯಸ್ಸಿನ ಮತ್ತು ನಿಧಾನಗತಿಯ ಪ್ರಜನನಕ್ರಿಯೆಯುಳ್ಳ ಪ್ರಾಣಿಗಳಲ್ಲೂ ಚಲನೆಗಳು ನಿಗದಿಯಾಗಿದ್ದು, ಒಂದೇ ಪ್ರಾಣಿ ಒಂದೇ ದಿಕ್ಕಿನಲ್ಲಿ ಒಂದಕ್ಕಿಂತ ಹೆಚ್ಚು ಸಲ ಚಲಿಸಬಹುದು. ದೀರ್ಘ ಆಯಸ್ಸಿರುವ ಆದರೆ ಒಂದೇ ಒಂದು ಮರಿ ಹಾಕುವ ಪ್ರಾಣಿ ಪ್ರತಿ ಅಂತರವನ್ನೂ ಒಂದು ಬಾರಿ ಮಾತ್ರ ದಾಟುತ್ತದೆ. ಕಡಿಮೆ ಆಯಸ್ಸಿನ ಹಾಗೂ ಬಹುತ್ವರಿತ ಪ್ರಜನನಕ್ರಿಯೆಯುಳ್ಳ ಪ್ರಾಣಿಗಳು (ಉದಾ:ಕೀಟಗಳು) ವಿಭಿನ್ನ ದಿಕ್ಕುಗಳಲ್ಲಿ ಚಲಿಸುವುದುಂಟು.

ಎಲ್ಲ ಪ್ರಾಣಿಗಳಲ್ಲಿ ಕಂಡು ಬರುವ ವಲಸೆಯ ಬಹುಗಣನೀಯ ಅಂಶವೆಂದರೆ ಅವುಗಳ ನೆಲೆ ನಿರ್ಧರಿಸುವ ಅಸಾಧಾರಣ ಸಾಮರ್ಥ್ಯ. ಇದರಿಂದಾಗಿ ಅವು ಹೆಚ್ಚು ಕಡಿಮೆ ಒಂದೇ ದಿಕ್ಕಿನಲ್ಲಿ ಸಾವಿರಾರು ಕಿಮೀ ದೂರ ಸಾಗುವುದುಂಟು. ಇದರ ಬಗ್ಗೆ ಅನೇಕ ವಿವರಣೆಗಳಿದ್ದರೂ ಯಾವುದಕ್ಕೂ ವಲಸೆಯ ನಿಘೂಡತೆಯನ್ನು ಬಿಡಿಸಲಾಗಿಲ್ಲ. ಕೆಲವು ಮೀನುಗಳು ನದಿಯ ಪ್ರವಾಹಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗುವುವು. ಹಕ್ಕಿಗಳು

ಹಾಗೂ ಕೀಟಗಳು ಗಾಳಿಯಲ್ಲಿ ದಿಕ್ಕನ್ನು ಪತ್ತೆ ಹಚ್ಚುವುವು. ಇವಕ್ಕೆ ವಿವರಣೆ ಇನ್ನೂ ಅಸ್ಪಷ್ಟವಾಗಿಯೇ ಇದೆ.

ಸ್ತನಿಗಳಲ್ಲಿ ವಲಸೆ: ಚಳಿಗಾಲ ಬಂದಾಗ ಜಿಂಕೆಗಳು ಪರ್ವತಶ್ರೇಣಿಗಳಿಂದ ಕೆಳಗಿನ ಬಯಲುಸೀಮೆಯೆಡೆಗೆ ಸಾಗುವವು. ಆಗ ಜಿಂಕೆಗಳನ್ನು ತಿನ್ನುವ ತೋಳ ಮತ್ತಿತರ ಪ್ರಾಣಿಗಳು ಇವನ್ನು ಹಿಂಬಾಲಿಸುತ್ತವೆ. ಅಮೆರಿಕದ ಬಯಲು ಸೀಮೆಯಲ್ಲಿ ವಾಸಿಸುವ ಕಾಡೆಮ್ಮೆಗಳು ದೊಡ್ಡ ಮಂದೆಗಳಲ್ಲಿ ವಸಂತ ಋತುವಿನಲ್ಲಿ ಉತ್ತರಕ್ಕೂ ವರ್ಷ ಋತುವಿನಲ್ಲಿ ದಕ್ಷಿಣಕ್ಕೂ ಚಲಿಸುತ್ತವೆ. ಉತ್ತರ ಅಮೆರಿಕದ ತೀರ ಪ್ರದೇಶದಲ್ಲಿ ತಿಮಿಂಗಲಗಳು ತಮ್ಮ ನಿರ್ದಿಷ್ಟ ಮಾರ್ಗದಲ್ಲಿ ಈಜಿ ಚಲಿಸುವುವು. ಹುಲ್ಲುಗಾವಲಿನ ಇಲಿಗಳ ಸಂಬಂಧಿಗಳಾದ ಲೆಮ್ಮಿಂಗುಗಳ ವಲಸೆ ವಿಚಿತ್ರ ತೆರನಾದುದು. ನಾರ್ವೆ ಮತ್ತು ಸ್ವೀಡನ್ನುಗಳ ಉತ್ತರಭಾಗದ ಪರ್ವತಗಳಲ್ಲಿ ವಾಸಿಸುವ ಇವು ಕಣಿವೆ ಪ್ರದೇಶಗಳಲ್ಲಿ 5 ರಿಂದ 20 ವರ್ಷಗಳಿಗೊಂದು ಬಾರಿ ಕಾಣಿಸಿಕೊಂಡು ಸಸ್ಯಾಹಾರವನ್ನು ಸೇವಿಸುತ್ತ ನೇರವಾಗಿ ಕಡಲ ಕಿನಾರೆಗೆ ಸಾಗಿ ನೀರಿಗೆ ನೆಗೆದು ಮುಳುಗುತ್ತವೆ. ಸಂಖ್ಯೆಯ ಶೀಘ್ರ ಹೆಚ್ಚಳದಿಂದಾಗಿ ಲೆಮ್ಮಿಂಗುಗಳು ಈ ಬಗೆಯ ವಲಸೆ ಹಾಗೂ ಸಾಮೂಹಿಕ ಆತ್ಮಹತ್ಯೆಯಲ್ಲಿ ತೊಡಗುವುವೆಂದು ತೋರುತ್ತದೆ. ಕೆಲವು ವರ್ಷಗಳಲ್ಲಿ ಲೆಮ್ಮಿಂಗುಗಳು ಎಷ್ಟು ಹೆಚ್ಚುತ್ತವೆಯೆಂದರೆ ತಾವು ಇರುವ ಸ್ಥಳದಲ್ಲಿ ದೊರೆಯುವ ಆಹಾರವನ್ನೆಲ್ಲ ಇವು ತಿಂದು ಬಿಡುತ್ತವೆ. ಆಗ ಹೊಸ ವಲಸೆಯನ್ನರಸಿ ತಾವು ಹುಟ್ಟಿದ ಸ್ಥಳವನ್ನು ಬಿಟ್ಟು ಗುಂಪುಗುಂಪಾಗಿ ಸಂಚರಿಸುತ್ತ ಕೊನೆಗೆ ಕಡಲ ನೀರಿಗೆ ಬಂದು ಧುಮುಕುತ್ತವೆ.

ಅಲಾಸ್ಕದ ತುಪ್ಪುಳದ ಸೀಲುಗಳು ಚಳಿಗಾಲವನ್ನು ಉತ್ತರ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಕಳೆದು ವಸಂತದಲ್ಲಿ 3200 ಕಿಮೀ ಉತ್ತರದಲ್ಲಿರುವ ಪ್ರಿಬಿಲಾಫ್ ದ್ವೀಪಗಳಿಗೆ ಹಿಂತಿರುಗುತ್ತವೆ. ಭೂವಾಸಿ ಸ್ತನಿಗಳಲ್ಲಿ ದಕ್ಷಿಣ ಆಫ್ರಿಕಾದ ಸ್ಪ್ರಿಂಗ್‌ಬಾಕ್ ಜಿಂಕೆ ಸಾಮಾನ್ಯವಾಗಿ ಅನಿರ್ದಿಷ್ಟವಾಗಿ ಚಲಿಸುತ್ತದೆ. ಆದರೆ ಆರೆಂಜ್ ನದಿಯ ದಕ್ಷಿಣದಲ್ಲಿರುವ ಬುಷಮನ್ ಲ್ಯಾಂಡಿನಲ್ಲಿ ಪ್ರಸವಿಸುವುದಕ್ಕೋಸ್ಕರ ಪ್ರತಿ ವರ್ಷ ಸಾವಿರಾರು ಸ್ಪ್ರಿಂಗ್‌ಬಾಕ್‌ಗಳು ಸಾಮೂಹಿಕವಾಗಿ ಮರಳುಗಾಡಿನಿಂದ ಪರ್ವತಗಳೆಡೆಗೆ ವಲಸೆ ಹೋಗುತ್ತವೆ. ಬಾವಲಿಗಳು ಗುಹೆಗಳಲ್ಲಿ ಹಾಗೂ ರಕ್ಷಣೆಯಿರುವಂತಹ ತಗ್ಗುಪ್ರದೇಶಗಳಲ್ಲಿ ತಮ್ಮ ಸುಪ್ತಾವಸ್ಥೆಯನ್ನು ಕಳೆದು ಪ್ರತಿ ಶರತ್ಕಾಲದಲ್ಲೂ ದಕ್ಷಿಣ ಸೀಮೆಗಳಿಗೆ ಹೋಗಿ ವಸಂತ ಕಾಲದಲ್ಲಿ ಹಿಂತಿರುಗುತ್ತವೆ. ಜರ್ಮನಿಯ ಡ್ರೆಸಡನ್ ಬಳಿಯ ಒಂದು ಗುಹೆಯಲ್ಲಿ ಚಳಿಗಾಲದಲ್ಲಿ ಗುರುತಿಸಲಾದ ಬಾವಲಿ ಪ್ರಭೇದವೊಂದು ಬೇಸಿಗೆಯಲ್ಲಿ ಸುಮಾರು 750 ಕಿಮೀ ದೂರದಲ್ಲಿಯ ಲಿಥುಯೇನಿಯದಲ್ಲಿ ಕಂಡುಬಂದಿತು.

ಮೀನುಗಳಲ್ಲಿ ವಲಸೆ: ಇದು ಸ್ವಲ್ಪ ಜಟಿಲವಾಗಿದೆಯೆಂದೇ ಹೇಳಬೇಕು. ಆದರೂ ಅದರ ಅಧ್ಯಯನ ಕೆಲವು ಮಹತ್ವಪೂರ್ಣ ಮಾಹಿತಿಗಳನ್ನು ಒದಗಿಸಿದೆ. ಸಾಮಾನ್ಯವಾಗಿ ಮರಿ ಮಾಡುವ ಸ್ಥಳಕ್ಕೆ ಪ್ರವಾಹದ ಎದುರಾಗಿ ಚಟುವಟಿಕೆಯಿಂದ ಈಜುತ್ತ ವಲಸೆ ಹೋಗುವ ಪರಿಪಾಟವನ್ನು ಮೀನುಗಳಲ್ಲಿ ಕಾಣಬಹುದು. ಕೆಲವೊಮ್ಮೆ ಮೊಟ್ಟೆಯಿಡುವ ಸ್ಥಳದಿಂದ ಪ್ರವಾಹದೊಂದಿಗೇ ಸಾಗುವ ನಿಷ್ಕ್ರಿಯ ಚಲನೆಯೂ ಆಗಬಹುದು. ಪ್ಲೇಸ್ ಮತ್ತು ಕಾಡ್ ಮುಂತಾದ ಕೆಲವು ಪ್ರಭೇದಗಳು ಸಂಪೂರ್ಣವಾಗಿ ಉಪ್ಪು ನೀರಿನಲ್ಲಿಯೇ ಚಲಿಸುತ್ತವಾದರೆ ಟ್ರೌಟ್ ಮುಂತಾದ ಪ್ರಭೇದಗಳು ಸಿಹಿನೀರಿನಲ್ಲಿ ಚಲಿಸುವುವು. ಸಾಲ್ಮನ್ನಿನಂತಹ ಮೀನುಗಳು ಸಿಹಿನೀರಿನಲ್ಲಿ ಮೊಟ್ಟೆಯಿಟ್ಟು ಆಹಾರಾನ್ವೇಷಣೆಗಾಗಿ ಉಪ್ಪು ನೀರಿಗೆ ವಲಸೆ ಹೋಗುತ್ತವೆ. ಇಂಥವಕ್ಕೆ ಅನಾಡ್ರೋಮಸ್ ಮೀನುಗಳೆಂದು ಹೆಸರು. ಈಲ್ ಮುಂತಾದ ಮೀನುಗಳು ಉಪ್ಪು ನೀರಿನಲ್ಲಿ ಮೊಟ್ಟೆಯಿಟ್ಟು ತಮ್ಮ ಬಹುಭಾಗ ಜೀವನವನ್ನು ಸಿಹಿನೀರಿನಲ್ಲಿ ಕಳೆಯುತ್ತವೆ. ಇವು ಕೆಟಡ್ರೋಮಸ್ ಬಗೆಯವು. ಸಾಲ್ಮನ್ ಮೀನು ಮೇಲು ಹೊಳೆಯ ದಪ್ಪ ಮರಳಿರುವ ನೀರಿನಲ್ಲಿ ಮೊಟ್ಟೆಯಿಡುತ್ತದೆ. ಎಳೆಯ ಮೀನುಗಳು ಅಲವಿನ್ಸ್ ಫ್ರೈ, ಪಾರ್ ಮತ್ತು ಸ್ಮೋಲ್ಟ್ ಘಟ್ಟಗಳನ್ನು ಹಾಯುತ್ತ ಸಿಹಿನೀರಿನಲ್ಲಿಯೇ ವಾಸಿಸುತ್ತವೆ. ಎರಡು ವರ್ಷಗಳ ತರುವಾಯ ಸಮುದ್ರಕ್ಕೆ ಹೋಗಿ ಅಲ್ಲಿ ಮ್ಯಾಕರೆಲ್ ಮತ್ತು ಹೆರಿಂಗ್ ಮುಂತಾದವನ್ನು ತಿನ್ನುತ್ತ ಶೀಘ್ರವಾಗಿ ಬೆಳೆದು ಅನೇಕ ವರ್ಷಗಳ ತನಕ ಅಲ್ಲಿಯೇ ಜೀವನ ಸಾಗಿಸುತ್ತವೆ. ಪ್ರಾಯಕ್ಕೆ ಬಂದಾಗ ಇವನ್ನು ಗ್ರಿಲ್ಸ್ ಎಂದು ಕರೆಯಲಾಗುವುದು. ಸಂತಾನವೃದ್ಧಿಯ ಕಾಲದಲ್ಲಿ ಗ್ರಿಲ್‌ಗಳು ಹಾಗೂ ಪ್ರೌಢ ಸ್ಯಾಲ್ಮನ್‌ಗಳು ಸಿಹಿ ನೀರಿಗೆ ವಾಪಾಸಾಗುತ್ತವೆ. ನದಿಗಳಲ್ಲಿ ಇವು ಅತೀ ಸ್ವಲ್ಪ ತಿನ್ನುತ್ತವಲ್ಲದೆ ಮೊಟ್ಟೆಯಿಟ್ಟ ಅನಂತರ ಕಡಲಿಗೆ ಹಿಂತಿರುಗಲೂಬಹುದು. ಸ್ಯಾಲ್ಮನುಗಳು ಯಾವ ನದಿಯ ಯಾವ ಸ್ಥಳಗಳ ಮರಿಗಳಾಗಿ ಹುಟ್ಟಿದವೋ ಈ ಮರಿಗಳು ಬೆಳೆದು ಮುಂದೆ ಮರಿ ಮಾಡಲು ಅಲ್ಲಿಗೇ ಹಿಂತಿರುಗುತ್ತವೆ.

ಯೂರೋಪಿನ ಈಲ್ (ಆಂಗ್ವಿಲಾ ಆಂಗ್ವಿಲಾ) ಕೆಟಡ್ರೋಮಸ್ ವಲಸೆಗೆ ಒಂದು ಉದಾಹರಣೆ. ಪ್ರಬುದ್ಧ ಈಲ್‌ಗಳು ನದಿಗಳ ಕೆಳಪ್ರವಾಹದೊಂದಿಗೆ ಸಾಗಿ ಸಮುದ್ರವನ್ನು ಸೇರಿ, ಅಟ್ಲಾಂಟಿಕ್ ಸಾಗರವನ್ನು ದಾಟಿ, ವೆಸ್ಟ್ ಇಂಡೀಸಿನ ಉತ್ತರದ ಆಳ ನೀರಿನಲ್ಲಿ ಮೊಟ್ಟೆಯಿಡುತ್ತವೆ. ಮೊಟ್ಟೆಯಿಟ್ಟ ಮೇಲೆ ಪ್ರೌಢ ಜೀವಿಗಳು ಸಾಯುತ್ತವೆ. ಅನಂತರ ಮೀನಿನ ಮರಿಗಳು ಪ್ರವಾಹಕ್ಕೆ ಎದುರಾಗಿ ನಿಧಾನ ಗತಿಯಲ್ಲಿ ಯೂರೋಪಿನ ತೀರ ಪ್ರದೇಶದಲ್ಲಿ ಸಾಗುತ್ತವೆ. ಈ ಪ್ರಯಾಣ ಸುಮಾರು 3200 ಕಿಮೀ ಇದ್ದು ಇದನ್ನು ಕ್ರಮಿಸಲು ಸುಮಾರು 2–5 ವರ್ಷಗಳು ಬೇಕಾಗುತ್ತವೆ. ಈ ಹಂತದಲ್ಲಿ ಇವು ಚಪ್ಪಟೆಯಾದ ಆಲ್ಲಿನೋಪಾದಿಯ ಲಾರ್ವಾವಸ್ಥೆಯಿಂದ ತೆಳಕವಾಗಿ ದುಂಡಾದ ಎಲ್ವರುಗಳಾಗಿ ಮಾರ್ಪಾಟಾಗಿ ಬಹು ಸಂಖ್ಯೆಯಲ್ಲಿ ನದಿ ಮೇಲ್ಭಾಗಕ್ಕೆ ಹೋಗುತ್ತವೆ. ಇವು ಸಿಹಿನೀರಿನಲ್ಲಿ 5 ರಿಂದ 8 ವರ್ಷಗಳ ತನಕ ಪ್ರೌಢಾವಸ್ಥೆಗೆ ಬರುವವರೆಗೂ ಇರುತ್ತವೆ.

ಸರೀಸೃಪಗಳು ಮತ್ತು ದ್ವಿಚರಿಗಳಲ್ಲಿ ವಲಸೆ: ಇವುಗಳಲ್ಲಿ ವಲಸೆ ಹೆಚ್ಚಾಗಿ ವಿಕಾಸಗೊಂಡಿಲ್ಲ. ಕೆಲವು ಕಡಲಾಮೆಗಳು ಮೊಟ್ಟೆಯಿಡುವ ಕಾಲದಲ್ಲಿ ಮರಳಿನ ತೀರಪ್ರದೇಶಕ್ಕೆ ಹೋಗುತ್ತವೆ. ಆಗತಾನೆ ಹೊರಬಂದ ಮರಿಗಳು ಸಮುದ್ರಕ್ಕೆ ಹಿಂತಿರುಗುತ್ತವೆ. ವೆಸ್ಟ್ ಇಂಡೀಸಿನ ಖಾದ್ಯಯೋಗ್ಯ ಹಸಿರಾಮೆ ತೆರೆದ ತೀರ ಪ್ರದೇಶದ ನೀರಿನಲ್ಲಿ ಸುಮಾರು 80 ಕಿಮೀ ದೂರ ಹೋಗುವುದುಂಟು. ಕೆಲವು ಕಡಲ ಹಾವುಗಳು ಮರಿ ಹಾಕಲೋಸುಗ ಕಾಲಕಾಲಕ್ಕೆ ಕಡಲ ತೀರಕ್ಕೆ ಬರುತ್ತವೆ. ನೆಲಗಪ್ಪೆಗಳು ಸಾಕಷ್ಟು ದೂರಸಾಗಿ ಗೊತ್ತಾದ ಒಂದು ಕೊಳಕ್ಕೆ ಹೋಗಿ ಮೊಟ್ಟೆಯಿಡುವುವು. ಕೆಲವು ತಿಂಗಳ ತರುವಾಯ ಇವು ಮೊದಲಿನ ತಾಣಕ್ಕೇ ಹಿಂತಿರುಗುತ್ತವೆ. ನ್ಯೂಟ್‌ಗಳು ಮತ್ತು ಕಪ್ಪೆಗಳು ಇದೇ ರೀತಿಯ ವಲಸೆಯನ್ನು ತೋರುವುದಾದರೂ ಅವುಗಳ ದೂರವ್ಯಾಪ್ತಿ ಅಷ್ಟು ಗಮನೀಯವಲ್ಲ.

ಅಕಶೇರುಕಗಳಲ್ಲಿ ವಲಸೆ: ಕಠಿಣ ಚರ್ಮಿಗಳು, ಕೆಲವು ನೆಲದ ಏಡಿಗಳು ಮತ್ತು ರಾಬರ್ ಏಡಿಗಳಲ್ಲಿ ಇದು ಸಾಮಾನ್ಯ. ಇವು ಮೊಟ್ಟೆಯಿಡುವ ವೇಳೆ ಒಳನಾಡಿನಿಂದ ಕಡಲಿಗೆ ಸಾಗುತ್ತವೆ. ಇಲ್ಲಿ ಮೊಟ್ಟೆಗಳಿಂದ ಹೊರಬರುವ ಮರಿ ಬೆಳವಣಿಗೆಯ ಎಲ್ಲ ಹಂತಗಳನ್ನೂ ಇಲ್ಲಿಯೇ ಮುಗಿಸಿ ಅನಂತರ ಪ್ರೌಢಜೀವಿಗಳಾಗಿ ಒಳನಾಡಿಗೆ ಹಿಂತಿರುಗುತ್ತವೆ.

ವಲಸೆ ಕೀಟಗಳ ಪೈಕಿ ಮುಖ್ಯವಾದವು ಮಿಡತೆಗಳು. ಇಲ್ಲೂ ಪ್ರಮುಖವಾದವು ಯೂರೋಪ್, ದಕ್ಷಿಣ ಏಷ್ಯ ಮತ್ತು ಉತ್ತರ ಆಫ್ರಿಕದಲ್ಲಿ ಕಾಣದೊರೆಯುತ್ತವೆ. ಉತ್ತರ ಆಫ್ರಿಕ ಮತ್ತು ಏಷ್ಯದ ಕೆಲವು ಭಾಗಗಳಲ್ಲಿ ಮರಳುಗಾಡಿನ ಮಿಡತೆಯುಂಟು. ಇವೆಲ್ಲವೂ ಮೊಟ್ಟೆಯಿಡುವ ಮೊದಲೇ ಪ್ರಬುದ್ಧಾವಸ್ಥೆಯಲ್ಲಿ ದೂರ ಸ್ಥಳಗಳಿಗೆ ವಲಸೆ ಹೋಗುವುವು. ಲೆಪಿಡಾಪ್ಟರ ಗಣದ ಮಿಲ್ಕ್ ವೀಡ್ ಚಿಟ್ಟೆ ವಲಸೆಗೆ ಇನ್ನೊಂದು ಒಳ್ಳೆಯ ಉದಾಹರಣೆ. ಶರತ್ಕಾಲದಲ್ಲಿ ಇದು ದಕ್ಷಿಣ ಕೆನಡ ಮತ್ತು ಉತ್ತರ ಅಮೆರಿಕದ ಕೆಲವು ಭಾಗಗಳಲ್ಲಿ ಗುಂಪು ಸೇರಿ ದಕ್ಷಿಣಾಭಿಮುಖವಾಗಿ ಫ್ಲಾರಿಡ, ಮೆಕ್ಸಿಕೊ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಗಳೆಡೆಗೆ ಹಾರುತ್ತವೆ. ಚಳಿಗಾಲವನ್ನು ಅರ್ಧ ಸುಪ್ತಾವಸ್ಥೆಯಲ್ಲಿ ಕಳೆದು ವಸಂತದಲ್ಲಿ ಒಂದೊಂದಾಗಿ ಉತ್ತರಕ್ಕೆ ಹಿಂತಿರುಗುತ್ತಿರುವಂತೆಯೇ ಮೊಟ್ಟೆಗಳನ್ನೂ ಇಡುತ್ತವೆ. ಪತಂಗಗಳು, ಲೇಡಿ ಬರ್ಡ್ ಬೀಟಲ್‌ಗಳು, ಕೊಡತಿಕೀಟಗಳಲ್ಲಿ ವಿಶೇಷವಾಗಿಯೂ ಇನ್ನಿತರ ಕೀಟ ಗುಂಪುಗಳಲ್ಲಿ ವಿರಳವಾಗಿಯೂ ವಲಸೆ ಕಂಡು ಬರುತ್ತದೆ.

ಪಕ್ಷಿಗಳಲ್ಲಿ ವಲಸೆ: ವಲಸೆಯಲ್ಲಿ ಅತೀ ನಿಪುಣತೆಯನ್ನು ಪಡೆದ ಪ್ರಾಣಿಗಳೆಂದರೆ ಪಕ್ಷಿಗಳು. ಪಕ್ಷಿಗಳಲ್ಲಿ ವಲಸೆಯು ಸ್ಥಳಾಂತರಗೊಂಡ ಸ್ಥಳದಿಂದ ಪುನಃ ಅದೇ ಸ್ಥಳಕ್ಕೆ ಮರಳಿ ಬರುವ ಪ್ರಕ್ರಿಯೆ. ಶರೀರದ ತೂಕವು ಹೆಚ್ಚುತ್ತಾ ಹೋಗುವುದು ಮತ್ತು ವಲಸೆಯ ಅಸಹನತೆಯನ್ನು ತೋರಿಸುವುದು, ಇವೆರಡು ಗುಣಗಳು ವಲಸೆಯ ಪೂರ್ವ ಮುನ್ಸೂಚನೆಗಳು. ಪಕ್ಷಿಗಳಲ್ಲಿ ವಲಸೆಯನ್ನು ಸತತವಾಗಿ ನೋಡುವುದರ ಮೂಲಕ, ಬೆಳದಿಂಗಳಲ್ಲಿ ಅವು ಹಾಯ್ದು ಹೋಗುವ ನೆರಳಿನ ಮೂಲಕ, ಪಕ್ಷಿಗಳಿಗೆ ಗುರುತಿನ ಕಾಲುಂಗುರಗಳನ್ನು ಹಾಕುವ ಮೂಲಕ, ಶರೀರದಲ್ಲಿ ಅತೀ ಚಿಕ್ಕದಾದ ರೇಡಿಯೋ ಟ್ರಾನ್ಸ್‌ಮಿಟರ್‌ಗಳನ್ನು ಅಳವಡಿಸುವುದರ ಮೂಲಕ, ರಾಡಾರ್‌ಗಳ ಮೂಲಕ ಇಲ್ಲವೇ ಪ್ರಯೋಗಾಲಯದಲ್ಲಿನ ಬಲೆಗಳಲ್ಲಿ ವಲಸೆಯ ಪಕ್ಷಿಗಳನ್ನು ಅಭ್ಯಸಿಸುವ ಮೂಲಕ ಪಕ್ಷಿಗಳ ವಲಸೆಯ ಬಗ್ಗೆ ಸಾಕಷ್ಟು ಮಾಹಿತಿ ಸಿಕ್ಕಿದೆ. ಅನೇಕ ಪಕ್ಷಿಗಳು ಪೃಥ್ವಿಯ ಉತ್ತರ ಪ್ರದೇಶಗಳಿಂದ ದಕ್ಷಿಣ ಗೋಳದ ಪ್ರದೇಶಗಳಿಗೆ, ಕೆಲವೊಂದು ದಕ್ಷಿಣ ಗೋಳಾರ್ಧದ ಪ್ರದೇಶಗಳಿಂದ ಉತ್ತರ ಗೋಳಾರ್ಧದ ಪ್ರದೇಶಕ್ಕೆ ವಲಸೆ ಹೋಗುವುವು. ಉತ್ತರ ಧ್ರುವದ ಟರ್ನ್, ಬಿಳಿಯ ಸ್ಟಾರ್ಕ್, ಡೆಮೊಸಿಲ್ ಕ್ರೇನ್, ಬ್ರಾಮಿಣಿ ಬಾತುಕೋಳಿ, ಗುಲಾಬಿ ಗೂಜ್, ಬಂಗಾರದ ಪ್ಲೋವರ್ ಪಕ್ಷಿಗಳು ಉತ್ತರದಿಂದ ದಕ್ಷಿಣಕ್ಕೆ ವಲಸೆ ಹೋಗುವ ಪ್ರಮುಖ ಪಕ್ಷಿಗಳು. ವಿಲ್ಸನ್ ಮತ್ತು ಪೆಟ್ರೆಲ್ ದಕ್ಷಿಣದಿಂದ ಉತ್ತರಕ್ಕೆ ವಲಸೆ ಹೋಗುವುವು. ಭಾರತದಲ್ಲಿ ಗೋಲ್ಡನ್ ಓರಿಯೊಲ್, ಹಸಿರು ತಲೆಯ ಮೈನ, ಪಿಟ್ಟ, ತಲೆಕೊಂಬು ಇರುವ ಕೋಗಿಲೆ ಇವು ಉತ್ತರದಿಂದ ಸಿಲೋನಿನವರೆಗೆ ವಲಸೆ ಹೋಗುವುವು. ಉತ್ತರ ಧ್ರುವದ ಟರ್ನ್ ಪಕ್ಷಿಯು ಒಂದು ವರ್ಷದಲ್ಲಿ ಒಟ್ಟಿಗೆ 36 ಸಾವಿರ ಕಿಮೀ ಮಾರ್ಗವನ್ನು

ಕ್ರಮಿಸುವುದು. ಆದ್ದರಿಂದ ಈ ಪಕ್ಷಿಗೆ ವಲಸೆಯ ವೀರಾಗ್ರಣಿ ಎನ್ನುವರು. ಕೆಲ ಪಕ್ಷಿಗಳು ಪೂರ್ವದಿಂದ ಪಶ್ಚಿಮ ದೇಶಗಳಿಗೆ, ಕೆಲ ಪಕ್ಷಿಗಳು ಪಶ್ಚಿಮ ದೇಶದಿಂದ ಪೂರ್ವದ ದೇಶಗಳಿಗೆ ಹೋಗುವುವು. ಇನ್ನು ಕೆಲ ಪಕ್ಷಿಗಳು ಪರ್ವತ ಶ್ರೇಣಿಯಿಂದ ಕೆಳ ಪ್ರದೇಶಗಳಿಗೆ ವಲಸೆ ಹೋಗುವುದುಂಟು. ಚಿಕ್ಕ ಪಕ್ಷಿಗಳಾದ ಥ್ರಷ್, ವಾರ್ಬ್‌ಲರ್, ಗುಬ್ಬಿಗಳು ರಾತ್ರಿಯಲ್ಲಿ, ಹದ್ದುಗಳು, ಹೆರಾನ್, ರಾಬಿನ್, ಸ್ಟಾರ್ಕ್ ಮತ್ತು ಪೆಲಿಕಾನ್ ಪಕ್ಷಿಗಳು ಹಗಲಿನಲ್ಲಿ ಮತ್ತು ಲೂನ, ಬಾತುಕೋಳಿ, ಗೀಸ್ ಮತ್ತು ಆಕ್ ಪಕ್ಷಿಗಳು ಎರಡೂ ಸಮಯದಲ್ಲಿ ತಮ್ಮ ವಲಸೆ ಮಾರ್ಗವನ್ನು ಕ್ರಮಿಸುವುವು. ಶೇಕಡಾ 50 ಕ್ಕಿಂತ ಹೆಚ್ಚು ಪಕ್ಷಿಗಳು ನೆಲದಿಂದ 1500 ಮೀ ಗಳವರೆಗೆ ಮತ್ತು ಇನ್ನುಳಿದ ವಲಸೆ ಪಕ್ಷಿಗಳು 1500 ಮೀ ಮೇಲ್ಪಟ್ಟು 6000 ಮೀ ಅಡಿಗಳವರೆಗೆ ಮೇಲೆ ಹಾರುತ್ತ ವಲಸೆ ಮಾರ್ಗವನ್ನು ಕ್ರಮಿಸುವುವು. ಮ್ಯಾಕ್ಸ್ ಶೀಯರ್ ವಾಟರ್ ಎಂಬ ಪಕ್ಷಿಯನ್ನು ಅದರ ಸಂತಾನೋತ್ಪತ್ತಿ ಸ್ಥಳದಿಂದ 5100 ಕಿಮೀ ದೂರದಲ್ಲಿ ವಿಮಾನದ ಮೂಲಕ ಸ್ಥಳಾಂತರಿಸಲಾಗಿ ಅದು ಕೇವಲ ಹನ್ನೆರಡೂವರೆ ದಿವಸಗಳಲ್ಲಿ ಮರಳಿ ತನ್ನ ಸ್ಥಳಕ್ಕೆ ಬಂದಿತು. ಪಕ್ಷಿಗಳು ಸೂರ್ಯನನ್ನು, ನಕ್ಷತ್ರಗಳನ್ನು, ಚಂದ್ರನನ್ನು, ಸೂರ್ಯನು ಅಸ್ತಂಗತವಾದಾಗ ಕಾಣುವ ಕೆಂಪಾದ ಪ್ರಕಾಶವನ್ನು, ಭೂಮಿಯ ಅಯಸ್ಕಾಂತ ಗುಣಧರ್ಮವನ್ನು ತಮ್ಮ ವಲಸೆ ಮಾರ್ಗವನ್ನು ಕಂಡುಕೊಳ್ಳಲು ಉಪಯೋಗಿಸಿಕೊಳ್ಳುವುವು ಎಂದು ಪ್ರಯೋಗಗಳಿಂದ ತಿಳಿದು ಬಂದಿದೆ. ಸುಮಾರು 20 ಪಕ್ಷಿಪ್ರಭೇದಗಳಲ್ಲಿ ವಲಸೆಯ ಗುಣಧರ್ಮವು ಆನುವಂಶಿಕವಾಗಿ ಹುಟ್ಟಿನಿಂದಲೇ ಬಂದಿದೆಯೆಂದು ಸಿದ್ಧವಾಗಿದೆ. ಸಿಲ್ವಿಯಾ ಬೊರಿನ್ ಎಂಬ ವಾರ್ಬಲರ್ ಪಕ್ಷಿಗಳನ್ನು ಹುಟ್ಟಿನಿಂದಲೇ ಪ್ರಯೋಗಾಲಯದಲ್ಲಿ ಒಂದೇ ರೀತಿಯಲ್ಲಿ ಉಷ್ಣತೆ, ಬೆಳಕು, ಕತ್ತಲೆಯಲ್ಲಿ ಬೆಳೆಸಿದರು. ಅವು ತಮ್ಮ ಜೈವಿಕ ಒಳಗಡಿಯಾರದ ಮೂಲಕ ಒಂದು ವರ್ಷದಲ್ಲಿ ನಡೆಯುವ ಎಲ್ಲಾ ವಲಸೆ ಗುಣಧರ್ಮಗಳನ್ನು ಪ್ರಯೋಗಾಲಯದಲ್ಲಿ ತೋರಿಸಿದವು. ಇದರಿಂದ ಅನೇಕ ಪಕ್ಷಿಗಳಲ್ಲಿ ವಲಸೆಯು ಹುಟ್ಟಿನಿಂದಲೇ ಬಂದಿದೆ ಎಂದು ಸಿದ್ಧವಾಗಿದೆ. (ನೋಡಿ: ಪಕ್ಷಿಗಳ ವಲಸೆ)

(ಆರ್.ಡಿ.ಕೆ.)

**ಪ್ರಾಣಿಧ್ವನಿವಿಜ್ಞಾನ:** ಪ್ರಾಣಿಗಳ ಧ್ವನಿಯ ವೈಜ್ಞಾನಿಕ ಅಭ್ಯಾಸ. ಇದು ಪ್ರಾಣಿಗಳು ಧ್ವನಿಯ ಮೂಲಕ ಸಂಪರ್ಕಿಸುವ ಮತ್ತು ಧ್ವನಿ ಹೊರಡಿಸುವ ಬಗೆ, ಧ್ವನಿ ಹೊರಡಿಸುವ ಅಂಗಗಳ ರಚನೆ ಮತ್ತು ಕ್ರಿಯೆ, ಧ್ವನಿಯ ಶ್ರವಣ ಮತ್ತು ಪರಿಸರದಲ್ಲಿ ಆಗುವ ಧ್ವನಿಯ ಮಾಲಿನ್ಯವನ್ನು ಒಳಗೊಂಡಿದೆ. ಧ್ವನಿಯು ಉತ್ಪಾದನೆಯಾದ ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಶಬ್ದ ತರಂಗಗಳ ಮೂಲಕ ಹರಡುತ್ತದೆ. ಧ್ವನಿಯ ಗುಣಧರ್ಮಗಳನ್ನು ಶಬ್ದದ ಕಂಪನ ಮತ್ತು ತೀವ್ರತೆಯ ಮುಖಾಂತರ ವಿಶ್ಲೇಷಿಸುವರು. ಧ್ವನಿಯ ಕಂಪನವನ್ನು ಕಿಲೋ ಹರ್ಟ್ಸ್‌ದಲ್ಲಿ ಮತ್ತು ಧ್ವನಿಯ ತೀವ್ರತೆಯನ್ನು ಡೆಸಿಬೆಲ್‌ಗಳಲ್ಲಿ ಅಳೆಯುವರು. ಪ್ರತಿ ಪ್ರಭೇದದ ಪ್ರಾಣಿಯ ಧ್ವನಿಯು ನಿರ್ದಿಷ್ಟವಾದ ಕಂಪನ ಮತ್ತು ತೀವ್ರತೆಯನ್ನು ಹೊಂದಿದೆ. ಇದರಿಂದ ಒಂದು ಪ್ರಭೇದದ ಪ್ರಾಣಿಗಳು ತಮ್ಮ ಪ್ರಭೇದದ ಪ್ರಾಣಿಗಳ ಧ್ವನಿಯನ್ನು ತಿಳಿದುಕೊಳ್ಳುತ್ತವೆ ಮತ್ತು ಅದರ ಅರ್ಥವನ್ನು ವಿಶ್ಲೇಷಿಸುತ್ತವೆ. ಕೀಟ ಧ್ವನಿವಿಜ್ಞಾನವನ್ನು ಆಳವಾಗಿ ಅಭ್ಯಸಿಸಲಾಗಿದೆ. ಉದಾ: ಕ್ರಿಕೆಟ್‌ಗಳ ಧ್ವನಿಶಾಸ್ತ್ರ. ಕೀಟಗಳು ತಮ್ಮದೇ ಆದ ಧ್ವನಿಯನ್ನು ಹೊಂದಿವೆ. ಸಂಜೆ ಅನಂತರ ವಾತಾವರಣದಲ್ಲಿ ಜಿರ್ ಎಂದು ಸಿಕಡಾ ಕೀಟಗಳು ಧ್ವನಿ ಮಾಡುತ್ತವೆ. ಅಡವಿಯಲ್ಲಿ ಕೀಟಗಳ ಧ್ವನಿ ಸಾಮಾನ್ಯ. ಕೇರಳದ ಅರಣ್ಯ ಸೈಲೆಂಟ್ ವ್ಯಾಲಿಯಲ್ಲಿ ಧ್ವನಿ ಮಾಡುವ ಕೀಟಗಳೇ ಇಲ್ಲ ! ಕ್ರಿಕೆಟ್‌ಗಳು ಹೊರಡಿಸುವ ಧ್ವನಿಗಳ ಮೂಲಕ ಅವುಗಳ ಪ್ರಭೇದಗಳನ್ನು ಗುರುತಿಸಬಹುದು.

ಟಿಲಿಯೊಸ್ಟ್ ಮೀನುಗಳು ಧ್ವನಿಗಳಿಂದ ಸಂಪರ್ಕಿಸುತ್ತವೆ. ಡ್ರಮ್ ಮೀನುಗಳು ಸಹ ಸಂಪರ್ಕದ ಕರೆ ಮಾಡುತ್ತವೆ. ಪ್ಲೇನ್ ಮಿಡಶಿಪ್‌ಮ್ಯಾನ್ ಎಂಬ ಗಂಡು ಮೀನು ಕಲ್ಲಿನ ಪೊದರೆಗಳಲ್ಲಿ ಗೂಡನ್ನು ಕಟ್ಟುವುದು. ಗೂಡು ಕಟ್ಟಿದ ಅನಂತರ ಹಂ ಎಂಬ ಪ್ರಚಾರ ಕರೆ ಅಥವಾ ಸಮ್ಮಿಲನ ಕರೆ ಕೊಡುವುದು. ಈ ಕರೆಯನ್ನು ಕೇಳಿಸಿಕೊಂಡ ಹೆಣ್ಣುಮೀನುಗಳು ಸಂತಾನೋತ್ಪತ್ತಿಗೆ ಸಿದ್ಧವಾಗಿ ಆ ಸ್ಥಳಕ್ಕೆ ಬರುತ್ತವೆ. ಈ ಕರೆಯ ಮುಖಾಂತರ ಗಂಡು ಮತ್ತು ಹೆಣ್ಣು ಮೀನುಗಳು ಪ್ರಣಯಾಚರಣೆಯಲ್ಲಿ ತೊಡಗುತ್ತವೆ.

ಕಪ್ಪೆ, ಪಕ್ಷಿ ಮತ್ತು ಸ್ತನಿಗಳಲ್ಲಿ ಸಹ ಧ್ವನಿಯನ್ನು ಆಳವಾಗಿ ಅಧ್ಯಯನ ಮಾಡಲಾಗಿದೆ. ಕಪ್ಪೆಗಳು ಹೊರಡಿಸುವ ಧ್ವನಿಯ ಮುಖಾಂತರ ಬೇರೆ ಬೇರೆ ಪ್ರಭೇದಗಳನ್ನು ವಿಂಗಡಿಸಬಹುದು. ಧ್ವನಿಗಳಿಂದ ಪ್ರಭೇದಗಳ ವಿಂಗಡಣೆ ಕಪ್ಪೆಗಳಲ್ಲಿ ಅತ್ಯಂತ ವೈಜ್ಞಾನಿಕವಾಗಿದೆ. ಗಂಡು ಕಪ್ಪೆಗಳು ವಿಶಿಷ್ಟ ಧ್ವನಿಯಲ್ಲಿ ವಟರುಗುಟ್ಟುತ್ತವೆ. ವಟರುಗುಟ್ಟುವ ಹೆಣ್ಣು ಕಪ್ಪೆಗಳು ವಿರಳ. ಕಪ್ಪೆಗಳು ಮಳೆಗಾಲದಲ್ಲಿ, ಸಂತಾನೋತ್ಪತ್ತಿ ವೇಳೆ ಕರೆಗಳನ್ನು ಕೊಡುವುವು. ಈ ಅವಧಿಯಲ್ಲಿ ಗಂಡು ಕಪ್ಪೆಗಳು ಜವುಗು ಪ್ರದೇಶ, ನೀರಿನ ಹೊಂಡ, ಕೆರೆ ಭಾವಿಗಳಲ್ಲಿ, ಗುಂಪಿನಲ್ಲಿ ಅಥವಾ ಒಂದೊಂದಾಗಿ ವಟರುಗುಟ್ಟುವುದನ್ನು ಕೇಳಬಹುದು. ಕಪ್ಪೆಗಳ ಧ್ವನಿಯ ಕರೆಗಳನ್ನು ಪ್ರಚಾರ ಅಥವಾ ಸಮ್ಮಿಲನ ಕರೆ, ಪ್ರಾಂತೀಯ ಕರೆ, ಬಿಡುಗಡೆ ಕರೆ ಮತ್ತು ಭೀತಿಯ ಕರೆ ಎಂದು ವಿಂಗಡಿಸಲಾಗಿದೆ. ಗಂಡು ಕಪ್ಪೆಗಳು ಪ್ರಚಾರ ಕರೆಯನ್ನು ಕೊಡುತ್ತಾ ಹೋಗುವುವು. ಈ ಕರೆಯನ್ನು ಕೇಳಿದ ಹೆಣ್ಣು ಕಪ್ಪೆ ಆಕರ್ಷಿತಗೊಂಡು ಗಂಡು ಕಪ್ಪೆಯನ್ನು ಹುಡುಕುತ್ತಾ ಹೋಗುವುದು. ಹೆಣ್ಣು ಕಪ್ಪೆ ಗಂಡು ಕಪ್ಪೆಯ ಸಮೀಪ ಹೋದಾಗ ಅದು ಕೂಡಲೆ ಜಿಗಿದು ಹೆಣ್ಣು ಕಪ್ಪೆಯ ಮೇಲೆ ಕುಳಿತು ಮುಂಗಾಲುಗಳಿಂದ ಅದನ್ನು ಹಿಡಿದು ಕೊಳ್ಳುವುದು. ಅನಂತರ ಎರಡು ಕಪ್ಪೆಗಳು ಸೇರಿ ಸಂತಾನೋತ್ಪತ್ತಿಯ ಕ್ರಿಯೆಯಲ್ಲಿ ತೊಡಗುವುವು. ಪ್ರಚಾರ ಕರೆಯನ್ನು ತಾವಿರುವ ಸ್ಥಳವನ್ನು ತಿಳಿಸುವ ಪ್ರಾಂತೀಯ ಕರೆಯಾಗಿ ಕೆಲವು ಕಪ್ಪೆಗಳು ಉಪಯೋಗಿಸುವುವು. ಆದರೆ, ಕೆಲವು ಜಾತಿಯ ಕಪ್ಪೆಗಳು ಪ್ರಾಂತೀಯ ಕರೆಯನ್ನು ಇನ್ನುಳಿದ ಗಂಡು ಕಪ್ಪೆಗಳಿಗೆ ತಿಳಿಸಲು ಬಳಸುವುವು. ಹೋರಿಗಪ್ಪೆ (ರಾನಾ ಟೈಗ್ರೀನಾ) ಪ್ರಚಾರ ಕರೆಯನ್ನು ಎರಡು ರೀತಿಯಲ್ಲಿ ಉಪಯೋಗಿಸುವುದು. ರಾನಾ ಲಿಮ್ನೊಚರಿಸ್ ಕಪ್ಪೆಯು ಪ್ರಚಾರ ಮತ್ತು ಪ್ರಾಂತೀಯ ಕರೆಯನ್ನು ವಿಭಿನ್ನ ರೀತಿಯಲ್ಲಿ ಕೊಡುವುದು. ಗಂಡು ಅಕಸ್ಮಾತ್ ಇನ್ನೊಂದು ಗಂಡು ಕಪ್ಪೆಯನ್ನು ಹಿಡಿದಾಗ, ಕೆಳಗೆ ಸಿಕ್ಕ ಕಪ್ಪೆ ತಾನು ಗಂಡು ಕಪ್ಪೆಯೆಂದು ಹೇಳಲು ಬಿಡುಗಡೆಯ ಕರೆಯನ್ನು ಕೊಡುವುದು. ಉದಾ: ನೆಲಗಪ್ಪೆ, ಹೋರಿಗಪ್ಪೆ. ಕೆಲವೊಂದು ಕಪ್ಪೆಗಳು ಸಂಕಟಕ್ಕೆ ಸಿಲುಕಿಕೊಂಡಾಗ ಅಥವಾ ಅವುಗಳನ್ನು ಪಕ್ಷಿ ಅಥವಾ ಇನ್ನಾವುದೇ ಕಪ್ಪೆ ತಿನ್ನಲು ಹಿಡಿದಾಗ ಭೀತಿಯ ಕರೆಯನ್ನು ಕೊಡುತ್ತವೆ. ಭೀತಿಯ ಕರೆ ತನ್ನನ್ನು ಹಿಡಿದ ಪ್ರಾಣಿಗಳನ್ನು ಹೆದರಿಸಲು, ಅಥವಾ ಪ್ರಭೇದದ ಇನ್ನುಳಿದ ಕಪ್ಪೆಗಳಿಗೆ ಮುನ್ಸೂಚನೆಯಾಗಿ ತೋರಿಸಲು ಉಪಯೋಗವಾಗುತ್ತದೆ.

ಪಕ್ಷಿಗಳು ನಾನಾ ರೀತಿಯ ಹಾಡುಗಳನ್ನು ಹಾಡುವುವು. ಕೆಲವು ಪಕ್ಷಿಗಳು ವರ್ಷದುದ್ದಕ್ಕೂ, ಕೆಲವು ಕೇವಲ ಸಂತಾನೋತ್ಪತ್ತಿ ಸಮಯದಲ್ಲಿ ವಿಶಿಷ್ಟ ಕರೆಗಳನ್ನು ಕೊಡುತ್ತವೆ. ಪಕ್ಷಿಗಳು ತಮ್ಮ ಕೂಗಿನಿಂದ ತಮ್ಮದೇ ಪ್ರಭೇದದ ಪಕ್ಷಿಗಳನ್ನು ಗುರುತಿಸಲು, ಪ್ರಚಾರ ಕರೆಗಳನ್ನಾಗಿ ಉಪಯೋಗಿಸುವುವು. ತಮ್ಮ ಸ್ಥಳ ಅಥವಾ ಪ್ರಾಂತ್ಯವನ್ನು ಸಂರಕ್ಷಿಸಲು ಕರೆಯನ್ನು ಉಪಯೋಗಿಸುತ್ತವೆ. ಪಕ್ಷಿಗಳ ಧ್ವನಿಯನ್ನು ಗಹನವಾಗಿ ಅನೇಕ ಪಕ್ಷಿಗಳಲ್ಲಿ ಅಭ್ಯಸಿಸಲಾಗಿದೆ. ಕಾಗೆಗಳು 22 ತರಹದ ವಿವಿಧ ಬಗೆಯ ಕರೆಗಳನ್ನು, ಗುಬ್ಬಿಗಳು 8–10 ಬಗೆಯ ಕರೆಗಳನ್ನು ಹೊರಡಿಸುತ್ತವೆ. ಕೆಲವು ಪಕ್ಷಿಗಳು ತಮ್ಮ ಗುಂಪಿನ ಇತರ ಸಂಗಾತಿಗಳ ಸಂಪರ್ಕ ಹೊಂದಲು, ತನ್ನ ಕುಟುಂಬದ ಸದಸ್ಯರ ಜೊತೆ ಸಂಪರ್ಕ ಹೊಂದಲು, ಬೇರೆ ಪಕ್ಷಿಗಳನ್ನು ಹೆದರಿಸಲು, ಹಸಿವೆಯನ್ನು ತಿಳಿಸಲು, ಆಹಾರದ ಸ್ಥಳ ತೋರಿಸಲು, ಕರೆಗಳನ್ನು ಕೊಡುತ್ತವೆ. ಕೆಲವು ಪ್ರಭೇದದ ಪಕ್ಷಿಗಳು ಬೇರೆ ಪಕ್ಷಿಗಳ ಕೂಗಿನ ಅನುಕರಣೆ ಮಾಡಬಲ್ಲುವು. ಮಾಕಿಂಗ್ ಪಕ್ಷಿ ಸುತ್ತಲಿನ ಯಂತ್ರಗಳಂತೆ ಸದ್ದು ಮಾಡುತ್ತದೆ. ಯೂರೋಪಿನ ಸ್ಟಾರ್‌ಲಿಂಗ್, ಬೆಕ್ಕು ಪಕ್ಷಿ ಮತ್ತು ಥ್ರಸರ್ ಅನುಕರಣೆ ಮಾಡುವ ಪಕ್ಷಿಗಳು. ಬ್ಲೂಜೆ ಪಕ್ಷಿ ಹದ್ದಿನ ಕರೆಯ ಹಾಗೆ ಕೂಗ ಬಲ್ಲುದು. ಪಕ್ಷಿಗಳಲ್ಲಿ ಹೆಚ್ಚಾಗಿ ಗಂಡು ಪಕ್ಷಿಗಳು ಹಾಡಿ, ಕೂಗುವುವು.

ಸ್ತನಿಗಳಲ್ಲಿ ಅನೇಕ ಪ್ರಾಣಿಗಳು ಧ್ವನಿಯ ಮುಖಾಂತರ ಸಂಪರ್ಕಿಸುವುದು ಸಾಮಾನ್ಯ. ಉದಾ: ಬಾವಲಿಗಳು, ಡಾಲ್ಫಿನ್, ತಿಮಿಂಗಲಗಳು, ಗೋರಿಲ್ಲಾ ಮತ್ತು ಚಿಂಪಾಂಜಿಗಳು. ಕೆಲವು ಸ್ತನಿಗಳು ಮಾನವನ ಕಿವಿಗೆ ಕೇಳಿಸಲಾರದಂತ ಸೂಕ್ಷ್ಮ ಧ್ವನಿಯನ್ನು ಹೊರಡಿಸುತ್ತವೆ. ಈ ಧ್ವನಿಗೆ ಅಲ್ಟ್ರಸೌಂಡ್ ಅಥವಾ ಶ್ರವಣಾತೀತ ಶಬ್ದ ಎಂದು ಹೆಸರು. ಈ ಅಲ್ಟ್ರಾ ಸೌಂಡ್ ವಿಜ್ಞಾನ ಉಪಯೋಗಿಸಿ ಮಾನವ ಶರೀರದ ಅನೇಕ ಅವಯವಗಳ ಬಗ್ಗೆ ಜೀವಿತ ಸ್ಥಿತಿಯಲ್ಲಿ ಅಭ್ಯಸಿಸುವುದು ವೈದ್ಯಕೀಯ ಶಾಸ್ತ್ರದಲ್ಲಿ ಸಾಮಾನ್ಯವಾಗಿದೆ. ಬಾವಲಿಗಳು ಅಲ್ಟ್ರಾ ಸೋನಿಕ್ ಧ್ವನಿ ಹೊರಡಿಸಿ ಕತ್ತಲೆಯಲ್ಲಿ ಯಾವುದೇ ವಸ್ತುಗಳಿಗೆ ತಾಗದೇ ತಮ್ಮ ದಿಕ್ಕನ್ನು ಹುಡುಕಿಕೊಂಡು ಹಾರಾಡುತ್ತವೆ. ಇದಕ್ಕೆ ಎಕೊಲೊಕೇಶನ್ ಎನ್ನುವರು. ಸಮುದ್ರದಲ್ಲಿ ತಿಮಿಂಗಲಗಳು, ಡಾಲ್ಫಿನ್‌ಗಳು ಗುಂಪಾಗಿ ಧ್ವನಿಯನ್ನು ಹೊರಡಿಸುತ್ತವೆ. ಬಾಟಲಿ ಆಕಾರದ ನಾಸಿಕವನ್ನು ಹೊಂದಿರುವ ಡಾಲ್ಫಿನ್ 150 ಕಿಲೋಹರ್ಟ್ಸ್ ಕಂಪನದ ಕ್ಲಿಕ್ ಎಂಬ ಸಪ್ಪಳವನ್ನು ಮಾಡುತ್ತ ಆಹಾರವನ್ನು ತಿನ್ನುತ್ತವೆ. ಡಾಲ್ಫಿನ್‌ಗಳು 4–20 ಕಿಲೋಹರ್ಟ್ಸ್ ಕಂಪನದ ಶಿಳ್ಳೆ ಹೊಡೆಯುವುವು. ಈ ಶಿಳ್ಳೆಗಳಿಂದ ಪ್ರಭೇದದ ಇತರ ಡಾಲ್ಫಿನ್‌ಗಳ ಜೊತೆ ಸಂಪರ್ಕ ಸಾಧಿಸುವುವು. ಗೊರಿಲ್ಲಾ ಮತ್ತು ಚಿಂಪಾಂಜಿಗಳು ವಿಶಿಷ್ಟ ಬಗೆಯ ಕೂಗಿನಿಂದ ಗುಂಪಿನ ಸದಸ್ಯರನ್ನು ಗುರುತಿಸುತ್ತವೆ. ಶತ್ರುಗಳ ತೊಂದರೆ ಎದುರಾದಾಗ ವಿಶಿಷ್ಟ ಕೂಗಿನಿಂದ ಗುಂಪಿನ ಸದಸ್ಯರಿಗೆ ಸಂಜ್ಞೆ ಕರೆ ನೀಡಿ ಜಾಗ್ರತೆಗೊಳಿಸುತ್ತವೆ.

(ಆರ್.ಡಿ.ಕೆ.)

**ಪ್ರಾಣಿಭಾಷೆ:** ಹುಟ್ಟುಗುಣಗಳಿಗೆ ಸಂಬಂಧಿಸಿದಂತೆ ಪ್ರಾಣಿಗಳು ತಮ್ಮ ಹೃದಯದ ಉದ್ವೇಗಗಳನ್ನು ಅಭಿನಯ ಹಾಗೂ ಕೂಗುಗಳಿಂದ ವ್ಯಕ್ತಪಡಿಸುತ್ತವೆ. ಇದನ್ನೇ ಪ್ರಾಣಿಭಾಷೆ ಎನ್ನುವುದು. ಮಾನವನ ಭಾಷೆಗೂ ಇದೇ ಮೂಲವೆಂದು ತಜ್ಞರ ಅಭಿಪ್ರಾಯ. ಪ್ರಾಣಿಭಾಷೆ

ಯಾವಾಗ ಹೇಗೆ ಹುಟ್ಟಿತು ಎಂಬ ಬಗ್ಗೆ ಊಹೆಗಳು ಇವೆಯಷ್ಟೆ. ಖಚಿತವಾಗಿ ಆ ಬಗ್ಗೆ ಏನೂ ಹೇಳಲು ಬಾರದು. ಮೂಲಗಳನ್ನು ಕುರಿತಂತೆ ಎಲ್ಲ ಅನ್ವೇಷಣೆಗಳಲ್ಲೂ ಇದೇ ಸಮಸ್ಯೆ ಕಂಡುಬರುತ್ತದೆ. ಬಹುಶಃ ಪ್ರಣಯದ ಉದ್ವೇಗದಲ್ಲಿ ಒಂದು ಪ್ರಾಣಿ ಇನ್ನೊಂದು ಪ್ರಾಣಿಯನ್ನು ಕೂಗಿ ಕರೆದಾಗ ಪ್ರಾಣಿಭಾಷೆ ಹುಟ್ಟಿರಬೇಕೆಂದು ವಿಜ್ಞಾನಿಗಳ ಅಭಿಪ್ರಾಯ. ಈ ದೃಷ್ಟಿಯಿಂದ ಕಾಡುಮೇಡುಗಳಲ್ಲಿ ವಾಸಿಸುವ ವಿವಿಧ ಬಗೆಯ ಪ್ರಾಣಿಗಳಲ್ಲಿ, ಪಕ್ಷಿಗಳಲ್ಲಿ ಆಯಾ ಪ್ರಭೇದಕ್ಕೆ ವಿಶಿಷ್ಟವಾದ ಭಾಷೆಯನ್ನು ಕಾಣುತ್ತೇವೆ. ಅಪಾಯದ ಎಚ್ಚರಿಕೆ ಕೊಡುವ ಕೂಗುಗಳು, ತಾಯಿ ಮರಿಗಳನ್ನು ಗೂಡಿಗೆ ಕರೆವ ಕೂಗು, ಪ್ರಣಯದಲ್ಲಿ ಪ್ರಾಣಿಗಳು ಉದ್ಗರಿಸುವ ಹಲವು ಬಗೆಯ ಕೂಗುಗಳು, ಮರದಿಂದ ಮರಕ್ಕೆ ಸುದ್ದಿ ಮುಟ್ಟಿಸುವ ನೂರಾರುಬಗೆಯ ಕೂಗುಗಳು ಇವನ್ನೆಲ್ಲ ಗಮನಿಸಿದಲ್ಲಿ ಪ್ರಾಣಿಭಾಷೆ ಮಾನವ ಭಾಷೆಯ ಮೂಲವಿರಬಹುದೆಂಬ ವಾದಕ್ಕೆ ಪುಷ್ಟಿ ದೊರೆಯುತ್ತದೆ. ಪ್ರಾಣಿಗಳ ಕೂಗನ್ನು ಫಕ್ಕನೆ ಕೇಳಿದವರಿಗೆ ಅದರ ಹಿಂದು ಮುಂದು ಗೊತ್ತಾಗದಿರಬಹುದು. ಆದರೆ ನುರಿತ ವಿದ್ವಾಂಸರು ಈ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಆ ಕೂಗುಗಳಿಗೆ ಅರ್ಥ ಕಲ್ಪಿಸಿದ್ದಾರೆ. ಉದಾಹರಣೆಗೆ ಕಾಗೆ. ಅದು ವಿವಿಧ ಸನ್ನಿವೇಶಗಳಲ್ಲಿ ವಿವಿಧ ಉದ್ವೇಗಗಳನ್ನು ಅಭಿವ್ಯಕ್ತಿಸಲು ವಿವಿಧ ರೀತಿಯಲ್ಲಿ ಕೂಗುತ್ತದೆ. ಅಲ್ಲದೆ ಅದು ಪ್ರತಿಯೊಂದು ಉದ್ವೇಗಕ್ಕು ಅದಕ್ಕೆ ಉಚಿತವಾದ ಕೂಗನ್ನು ಅಳವಡಿಸಿಕೊಂಡಿದೆ ಎಂಬ ವಿಷಯ ಸ್ವಲ್ಪಕಾಲ ಕಾಗೆಗಳನ್ನು ವೀಕ್ಷಿಸಿದವರಿಗೆ ಗೋಚರಿಸುತ್ತದೆ. ಹ್ವಿಟ್‍ಮನ್ ಮತ್ತು ಕ್ರೇಗ್ ಎಂಬ ವಿದ್ವಾಂಸರು ಪಾರಿವಾಳಗಳಲ್ಲಿ ಕ್ರಿಯೆಗೂ ಕೂಗಿಗೂ ಇರುವ ವಿಚಿತ್ರ ಸಂಬಂಧಗಳನ್ನು ಗುರುತಿಸಿದ್ದಾರೆ. ಡೂಪಾಂಟ್ ಎಂಬಾತ ಕೋಳಿಗಳು ಹಾಗೂ ಪಾರಿವಾಳಗಳಲ್ಲಿ ಭಿನ್ನ ಅರ್ಥವುಳ್ಳ 12 ಕೂಗುಗಳನ್ನೂ ನಾಯಿಗಳಲ್ಲಿ 18ನ್ನೂ ಕೊಂಬಿರುವ ಪ್ರಾಣಿಗಳಲ್ಲಿ 22ನ್ನೂ ಗುರುತಿಸಿದ್ದಾನೆ. ಕಪಿಗಳು ತಮ್ಮ ಮಾತುಕತೆಗಳಲ್ಲಿ ಕಡೆಯಪಕ್ಷ 20 ವಿಭಿನ್ನ ಶಬ್ದಗಳನ್ನು ಮಾಡುತ್ತವೆಂದು ಗಾರ್ನೆಟ್ ಎಂಬ ವಿದ್ವಾಂಸನ ಅಭಿಪ್ರಾಯ.

ಪ್ರಾಣಿ ಭಾಷೆಯಿಂದಲೆ ಆದಿ ಮಾನವನ ಭಾಷೆ ಉಗಮಿಸಿತೆಂದು ಅನೇಕರ ಅಭಿಪ್ರಾಯ. ಆದಿ ಮಾನವನ ಭಾಷೆಯಲ್ಲಿ ಸುಮಾರು 300 ಪದಗಳಿದ್ದಿರಬಹುದೆಂದು ಅಂದಾಜು.

***

**ಪ್ರಾಣಿವಿಜ್ಞಾನ:** ಪ್ರಾಣಿಗಳ ವೈಜ್ಞಾನಿಕ ಅಧ್ಯಯನ (ಜೂಆಲಜಿ). ಜೀವ ವಿಜ್ಞಾನದ ಒಂದು ವಿಭಾಗವಾದ ಇದರಲ್ಲಿ ಅಡಕಗೊಳ್ಳುವ ಅಂಶಗಳು ಇಂತಿವೆ. ಒಂದೊಂದೇ ಪ್ರಾಣಿಯ ಮತ್ತು ಆದರೆ ಘಟಕ ಅಂಗಗಳ (ಅಣವಿಕ ಹಂತದವರೆಗೆ ಸಹ) ಪರಿಶೀಲನೆ, ಇಡೀ ಪ್ರಾಣಿಸಮುದಾಯದ ಅಧ್ಯಯನ, ಪ್ರಾಣಿಗಳ ಪ್ರಾರಸ್ಪರಿಕ ಸಂಬಂಧ ಹಾಗೂ ಪ್ರಾಣಿ ಮತ್ತು ಸಸ್ಯಗಳು, ಪ್ರಾಣಿ ಮತ್ತು ನಿರ್ಜೀವ ಪರಿಸರಗಳ ಸಂಬಂಧಗಳ ಅಭ್ಯಾಸ. ಈ ಮೇಲಿನ ಅಂಶಗಳ ಅಭ್ಯಾಸದ ಹರವು ತುಂಬ ವಿಶಾಲವಾದ್ದರಿಂದ ಪ್ರಾಣಿವಿಜ್ಞಾನವನ್ನು ಹಲವಾರು ವಿಶೇಷ ವಿಭಾಗಗಳಾಗಿ ವಿಂಗಡಿಸುವುದು ಅನಿವಾರ್ಯವಾಗಿದೆ. ಆದರೂ ಜೀವಂತ ವಸ್ತುಗಳ ಸಮಕಾಲೀನ ಅಧ್ಯಯನದಲ್ಲಿ ಕಂಡುಬರುವ ಪರಿಕಲ್ಪನಾ ಏಕತೆ ಜೀವಿಗಳ ಭಿನ್ನತೆಗಿಂತ ಹೆಚ್ಚಾಗಿ ಅವುಗಳ ರಾಚನಿಕ ಮತ್ತು ಕ್ರಿಯಾತ್ಮಕ ಏಕತೆಗಳ ಮೇಲೆ ಹೆಚ್ಚು ಒತ್ತು ಕೊಟ್ಟಿದೆ. ಈ ಸಂಪುಟವಿಡೀ ಪ್ರಾಣಿ ವಿಜ್ಞಾನವನ್ನು ಕುರಿತದ್ದಾಗಿದ್ದು, ಮೇಲಿನ ಎಲ್ಲ ವಿಷಯಗಳನ್ನೂ ಇಲ್ಲಿ ಪರಿಗಣಿಸಲಾಗಿದೆ.

ಪ್ರಸಕ್ತ ಲೇಖನದಲ್ಲಿ ಪ್ರಾಣಿವಿಜ್ಞಾನದ ಐತಿಹಾಸಿಕ ಹಿನ್ನೆಲೆಯನ್ನೂ ಅದರ ಉಪ ವಿಭಾಗಗಳ ಸ್ಥೂಲಪರಿಚಯವನ್ನೂ ಅಧ್ಯಯನದ ಕಾರ್ಯವಿಧಾನಗಳನ್ನೂ ವಿವರಿಸಲಾಗಿದೆ.

ಐತಿಹಾಸಿಕ ಹಿನ್ನೆಲೆ : ಪ್ರಾಣಿಗಳ ಮತ್ತು ಮಾನವನ ಸಂಬಂಧ ಅವನ ಹುಟ್ಟಿನಷ್ಟೇ ಪ್ರಾಚೀನವಾದದ್ದು. ಏಕೆಂದರೆ ಆದಿಮಾನವನ ಆಹಾರ ಅಂತೆಯೇ ಪ್ರಧಾನ ಶತ್ರುಗಳು ಪ್ರಾಣಿಗಳೇ ಆಗಿದ್ದವು. ನಾಗರಿಕತೆಯ ಮಾನಕದಲ್ಲಿ ಮಾನವ ವಿಕಾಸಕೊಳ್ಳುತ್ತ ಬಂದಂತೆ ಪ್ರಾಣಿಗಳು ತನ್ನಂತೆಯೇ ಜೀವಿಗಳೆಂಬ ಅರಿವು ಅವನಲ್ಲಿ ಮೂಡಿತು. ಅವನ ಜನಪದ ಭಾವನೆಗಳಲ್ಲಿ ಪ್ರಾಣಿಗಳಿಗೂ ಸ್ಥಾನದೊರೆಯ ತೊಡಗಿತು. ಕ್ರಮೇಣ ಅವನು ಪ್ರಾಣಿಗಳ ಸಾಕಣೆಯನ್ನೂ ಕೈಗೊಂಡನಾಗಿ ಅವುಗಳ ಜೀವನಕ್ರಮದ ಬಗ್ಗೆ ವ್ಯವಸ್ಥಿತ ಮತ್ತು ಸಂತುಲಿತ ದೃಷ್ಟಿ ಬೆಳೆಸಿಕೊಂಡ.

ಆದಿಮಾನವನ ಕಾಲದಿಂದ ಹೀಗ ಆರಂಭಗೊಂಡ ಪ್ರಾಣಿಗಳ ಬಗೆಗಿನ ಕುತೂಹಲ ಪ್ರಾಚೀನ ಗ್ರೀಕರ ಕಾಲಕ್ಕೆ ವಿಚಾರಪೂರ್ಣ ಆಧ್ಯಯನವಾಗಿ ರೂಪುಗೊಂಡಿತು. ಗ್ರೀಕ್ ತತ್ತ್ವಜ್ಞಾನಿ ಆರಿಸ್ಟಾಟಲ್ (ಕ್ರಿಪೂ 384–322) ಪ್ರಾಣಿಗಳ ಕುರಿತಾದ ತನ್ನ ಸವಿಸ್ತಾರ ವಿವರಣೆಗಳ ಮೂಲಕ ಅವುಗಳ ವೈಜ್ಞಾನಿಕ ಅಭ್ಯಾಸಕ್ಕೆ ಅಡಿಪಾಯ ಹಾಕಿದ.

ರೋಮ್ ದೇಶದ ಪ್ಲಿನಿ (ಕ್ರಿಶ 23–79) ತನ್ನ ಕಾಲದವರೆಗಿನ ಜ್ಞಾನವನ್ನೆಲ್ಲ ಕುರಿತಂತೆ 37 ಸಂಪುಟಗಳ ಬೃಹತ್ ಸಂಹಿತೆಯೊಂದನ್ನು (ಹಿಸ್ಟೋರಿಯ ನ್ಯಾಚುರ್ಯಾಲಿಸ್) ರಚಿಸಿದ. ಆಕಾಶಕಾಯಗಳಿಂದ ಹಿಡಿದು ಭೂಗೋಳ, ಸಸ್ಯಪ್ರಾಣಿ, ರೋಹಶಿಲೆಗಳವರೆಗಿನ ವಿವಿಧ ವಸ್ತು ವಿಚಾರಗಳನ್ನು ಒಳಗೊಂಡಿದ್ದ ಈ ಸಂಪುಟಗಳು ಪೈಕಿ 7ರಿಂದ 11ನೆಯ ಸಂಪುಟಗಳು ಪ್ರಾಣಿ ವೃತ್ತಾಂತಕ್ಕೆ ಮೀಸಲಾಗಿವೆ. ಮೆಡಿಟರೇನಿಯನ್ ಪ್ರದೇಶದಲ್ಲಿ ಅರಿಸ್ಟಾಟಲ್ ಸಂಪ್ರದಾಯದಲ್ಲೇ ಪ್ರಾಣಿಗಳ ಅಧ್ಯಯನ ಹಲವರು ಶತಕಗಳ ಕಾಲ ಸಾಗಿಬಂತು. ಆದರೆ ಮಧ್ಯಯುಗದ ವೇಳೆಗೆ ಯೂರೊಪಿನಲ್ಲಿ ಪ್ರಾಣಿಗಳನ್ನು ಕುರಿತ ಜ್ಞೇಯ ವಿಷಯದ ಸುತ್ತ ಜನಪದ ನಂಬಿಕೆಗಳು, ಮೂಢಕಲ್ಪನೆಗಳು, ನೀತಿ ವಿಚಾರಗಳು ಮುಂತಾದುವು ಹೆಣೆದುಕೊಂಡು ಪ್ರಾಣಿ ಅಧ್ಯಯನ ಅವೈಜ್ಞಾನಿಕವಾಗತೊಡಗಿತ್ತು. ಕ್ರಮೇಣ ಪ್ರಕೃತಿವಿಜ್ಞಾನಿಗಳು ಹೆಚ್ಚು ವಿಚಾರಪೂರ್ಣವಾಗಿ ಈ ವಿಷಯವನ್ನು ಪರಿಶೀಲಿಸತೊಡಗಿದರು. ಅಂತೆಯೇ ಯೂರೊಪಿನ ಪ್ರಾಣಿಜೀವನವನ್ನು ಪ್ರತ್ಯಕ್ಷವಾಗಿ ಅಧ್ಯಯಿಸಿ ಅದನ್ನು ಪ್ರಾಚೀನ ಗ್ರಂಥಗಳಲ್ಲಿಯ ವಿವರಣೆಗಳೊಂದಿಗೆ ಹೋಲಿಸಿ ನೋಡುವುದರ ಮೂಲಕ ಪ್ರಾಣಿಗಳ ಬಗೆಗಿನ ತಪ್ಪುಕಲ್ಪನೆಗಳನ್ನು ಸೋಸಿ ತೆಗೆಯುವಲ್ಲಿ ವಿಜ್ಞಾನಿಗಳು ನಿರತರಾದರು. 15ನೆಯ ಶತಮಾನದಲ್ಲಿ ಆವಿಷ್ಕಾರಗೊಂಡ ಮುದ್ರಣಯಂತ್ರದ ಬಳಕೆಯಿಂದ ಜ್ಞಾನದ ಪ್ರಸಾರ ಸುಲಭವಾಯಿತು. ಅಲ್ಲದೆ, ಜೀವ ಪ್ರಕ್ರಿಯೆಗಳನ್ನು ಯಾಂತ್ರಿಕ ದೃಷ್ಟಿಕೋನದಿಂದ ನೋಡುವ ಕ್ರಮವೂ (ಕಾರ್ಯ ಕಾಣ ಸಂಬಂಧಗಳನ್ನು ಅವಲಂಬಿಸಿದ ಭೌತ ಪ್ರಕ್ರಿಯೆಗಳನ್ನು ಪ್ರಾಣಿರೂಪಗಳಿಗೂ ಅನ್ವಯಿಸಬಹುದೆಂಬುದು) ಪ್ರಾಣಿಗಳ ಶಾರೀರಕ ಕ್ರಿಯೆಗಳ ವಿಶ್ಲೇಷಣೆಗೆ ಉಪಯುಕ್ತ ವಿಧಾನವೆನಿಸತೊಡಗಿತು. ಉದಾಹರಣೆಗೆ ಬ್ರಿಟಿಷ್ ವೈದ್ಯ ವಿಲಿಯಮ್ ಹಾರ್ವೆ (1578–1657) ರಕ್ತಪರಿಚಲನೆಯನ್ನು ವಿವರಿಸುವಾಗ ತನ್ನ ವಾದದ ಬೆಂಬಲಕ್ಕೆ ಚರದ್ರವಾತ್ಮಕ ವ್ಯವಸ್ಥೆಯ ಕ್ರಿಯಾವಿನ್ಯಾಸಗಳನ್ನು ಬಳಸಿಕೊಂಡ. 18ನೆಯ ಶತಮಾನದ ವೇಳೆಗೆ ಪ್ರಾಣಿವಿಜ್ಞಾನದ ಅಧ್ಯಯನದಲ್ಲಿ ಕ್ಯಾರೊಲಸ್ ಲಿನೀಯಸನ (1707–78) ದ್ವಿನಾಮ ನಾಮಕರಣ ವಿಧಾನ, ಫ್ರೆಂಚ್ ನಿಸರ್ಗವಿಜ್ಞಾನಿ ಜಾರ್ಜ್ ಲೂಯಿ ಲಕ್ಲರ್ಕ್ ಡ ಬಫೋನ (1707–88) ಪ್ರಾಕೃತಿಕ ಇತಿಹಾಸದ ಕೃತಿಗಳು ಹಾಗೂ ಚಾರ್ಜ್ ಕ್ಯೂವಿಯೇನ (1769–1832) ತೌಲನಿಕ ಅಂಗರಚನಾಶಾಸ್ತ್ರದ ಮಹತ್ತರ ಕೊಡುಗೆಗಳು–ಇವು ಅಳವಡಿಕೆಯಾದವು. ಪಚನ, ಉಸಿರಾಟ, ವಿಸರ್ಜನೆ ಮುಂತಾದ ಶಾರೀರಕ್ರಿಯೆಗಳ ಆಧ್ಯಯನವೂ ನಡೆದು ಪ್ರಾಣಿವಿಜ್ಞಾನದ ಕ್ಷೇತ್ರ ವಿಸ್ತಾರವಾಗತೊಡಗಿತು.

1839ರಲ್ಲಿ ಜರ್ಮನ್ ವಿಜ್ಞಾನಿಗಳಾದ ಮಥ್ಯೆಯಾಸ್ ಶ್ಲೈಡೆನ್ ಮತ್ತು ತೀಯೊಡೊರ್ ಶ್ವಾನ್ ಎಂಬುವರು ತಮ್ಮ ಜೀವಕೋಶ ಸಿದ್ಧಾಂತದ ಮೂಲಕ ಎಲ್ಲ ಜೀವಿಗಳ ರಾಚನಿಕ ಘಟಕ ಜೀವಕೋಶ (ಸೆಲ್) ಎಂಬುದನ್ನು ಪ್ರತಿಪಾದಿಸಿದ ಅನಂತರ ಪ್ರಾಣಿವಿಜ್ಞಾನಕ್ಕೆ ಹೊಸ ಆಯಾಮ ದೊರಕಿತು. ಈ ಮಧ್ಯೆ ರಸಾಯನ ವಿಜ್ಞಾನ ಬೆಳೆಯುತ್ತ ಬಂತು ; ಜೀವಂತ ವ್ಯವಸ್ಥೆಗಳ ಅಭ್ಯಾಸಕ್ಕೂ ಇದನ್ನು ಬಳಸತೊಡಗಿದರು. 19ನೆಯ ಶತಮಾನದ ಮಧ್ಯಭಾಗದಲ್ಲಿ ಫ್ರೆಂಚ್ ವೈದ್ಯ ಹಾಗೂ ಶರೀರವಿಜ್ಞಾನಿ ಕ್ಲಾಡ್ ಬರ್ನಾರ್ಡ್ (1813–1878) ಜೀವಕೋಶ ಸಿದ್ಧಾಂತ ಹಾಗೂ ರಸಾಯನಜ್ಞಾನವನ್ನು ಅಳವಡಿಸಿಕೊಂಡು ದೇಹಾಂತರಪರಿಸರದ ಪರಿಕಲ್ಪನೆಯನ್ನು (ಹೋಮೀಯೋಸ್ಟೇಸಿಸ್) ಪ್ರತಿಪಾದಿಸಿದ.

ಜೀವಕೋಶ ಪರಿಕಲ್ಪನೆಯಿಂದ ಪ್ರಭಾವಿತಗೊಂಡ ಜೀವವಿಜ್ಞಾನದ ಹಲವಾರು ಪ್ರಕಾರಗಳ ಪೈಕಿ ಭ್ರೂಣವಿಜ್ಞಾನವೂ ಒಂದು. ನಿಷೇಚಿತ ಅಂಡವೊಂದು ಹೊಸ ಜೀವಿಯಾಗಿ ಪ್ರವರ್ಧಿಸುವ ವಿಧಾನವನ್ನು ನಿರ್ಧರಿಸುವಲ್ಲಿ ಜೀವಕೋಶಗಳ ಪಾತ್ರ ಮುಖ್ಯ ಎಂಬುದು ಭ್ರೂಣಶಾಸ್ತ್ರದ ಅಧ್ಯಯನದಿಂದ ವ್ಯಕ್ತವಾಗುತ್ತದಷ್ಟೆ. ಸ್ತನಿಗಳ ಅಂಡಾಶಯದ ಒಳಗೆ ಇರುವ ಅಂಡವನ್ನು ಮೊತ್ತಮೊದಲಬಾರಿಗೆ ಪರಿಶೀಲಿಸಿದ ಜರ್ಮನ್ ಭ್ರೂಣವಿಜ್ಞಾನಿ ಕಾರ್ಲ್ ಫಾನ್ ಬೇರ್ ಭ್ರೂಣದ ಬೆಳವಣಿಗೆಯ ವಿವಿಧ ಹಂತಗಳನ್ನು ವೈಜ್ಞಾನಿಕವಾಗಿ ವಿವರಿಸಿದ. ಇನ್ನೊಬ್ಬ ಭ್ರೂಣವಿಜ್ಞಾನಿ ಕ್ರಿಶ್ಚಿಯನ್ ಹೈನ್ರಿಕ್ ಪ್ಯಾಂಡರ್ ಮೂಲಧಾರ ಅಂಗಾಂಶ ಪದರಗಳ (ಜರ್ಮ್‍ಟಿಶ್ಯೂ) ಪರಿಕಲ್ಪನೆಯನ್ನು ಒದಗಿಸಿದ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಸೂಕ್ಷ್ಮದರ್ಶಕಗಳ ವಿನ್ಯಾಸದಲ್ಲಿ ಪ್ರಗತಿ ಸಾಧಿಸಲಾಯಿತಲ್ಲದೆ ಹೀಮಟಾಕ್ಸಿಲಿನ್ ಮುಂತಾದ ಅನಿಲಿನ್ ವರ್ಣದ್ರವ್ಯಗಳ ಬಳಕೆಯಿಂದ ಕೋಶಗಳ ಒಳಗಿನ ರಚನೆಯನ್ನು ಹೆಚ್ಚು ಸ್ಪಷ್ಟವಾಗಿ ಅಧ್ಯಯಿಸಲು ಸಾಧ್ಯವಾಯಿತು.

ಈ ವೇಳೆಗೆ ಬ್ರಿಟಿಷ್ ಪ್ರಕೃತಿವಿಜ್ಞಾನಿ ಚಾರ್ಲ್ಸ್ ಡಾರ್ವಿನ್ (1809–82) ಆಳವಾದ ಅಧ್ಯಯನದ ಫಲವಾಗಿ ಈಗ ಸುಪ್ರಸಿದ್ಧವಾಗಿರುವ ವಿಕಾಸ ಸಿದ್ಧಾಂತವನ್ನು (ನೈಸರ್ಗಿಕ ಆಯ್ಕೆಯ ಮೂಲಕ ಜೀವಿಗಳು ನಿರಂತರ ಬದಲಾವಣೆಗೆ ಒಳಗಾಗುವುವು) ಪ್ರತಿಪಾದಿಸಿದ ಇದರಿಂದ ಜೀವವಿಜ್ಞಾನದಲ್ಲಿ ಮಹತ್ತರ ಕ್ರಾಂತಿಯೇ ಉಂಟಾಯಿತು. ಅದುವರೆಗೆ ಇದ್ದ ನಂಬಿಕೆಯನ್ನು–ಎಲ್ಲ ಪ್ರಭೇದಗಳೂ ಒಮ್ಮೆಗೇ ವಿಶೇಷವಾಗಿ ಸೃಷ್ಟಿಯಾಗಿವೆ–ಇದು ಬುಡಮೇಲು ಮಾಡಿತಲ್ಲದೆ ಲಿನೀಯಸನ ಪರಿಕಲ್ಪನೆಯಾದ ಪ್ರಭೇದ ಪ್ರರೂಪವಾದವನ್ನೂ ಸುಳ್ಳು ಮಾಡಿತು. ಅಸ್ಟ್ರಿಯದ ಸನ್ಯಾಸಿ ಗ್ರೆಗರ್ ಮಂಡಲನ (1822–84) ತಳಿವಿಜ್ಞಾನ ಸಿದ್ಧಾಂತಗಳು ಡಾರ್ವಿನ್ನನಿಗೆ ಅಜ್ಞಾತವಾಗಿಯೇ ಉಳಿದುವಾದರೂ ವಿಕಾಸದ ಕಾರ್ಯವಿಧಾನವನ್ನು ಅರ್ಥಮಾಡಿಕೊಳ್ಳಲು ಆನುವಂಶೀಕತೆಯ ತತ್ತ್ವಗಳು ಅತಿಮುಖ್ಯವೆಂಬ ಅಂಶವನ್ನು ಡಾರ್ವಿನ್ ಪರಿಭಾವಿಸಿಕೊಂಡಿದ್ದ.

ಮಂಡಲನ ತತ್ತ್ವಗಳ ಪುನರಾವಿಷ್ಕಾರದ (1900) ತರುವಾಯ ತಳಿವಿಜ್ಞಾನ ತುಂಬ ಮಹತ್ತ್ವದ ಶಾಸ್ತ್ರವಾಗಿ ಬೆಳೆದು ಬಂದು ಇಂದು ಜೀವವಿಜ್ಞಾನದ ಹಲವಾರು ವಿಭಿನ್ನ ಪ್ರಕಾರಗಳ ಅಧ್ಯಯನಕ್ಕೆ ಬಲು ಅಗತ್ಯವೆನಿಸಿದೆ. ಆಧುನಿಕ ಜೀವವಿಜ್ಞಾನದ ಮಹತ್ತರ ಸಾಧನೆಯೆಂದರೆ ಜೀನ್ ಆವಿಷ್ಕಾರ. ಎಲ್ಲ ಜೀವಿಗಳ ಆನುವಂಶಿಕ ನಿಯಂತ್ರಣ ಘಟಕವೇ ಇದು ಎಂಬ ಅಂಶದ ಅರಿವಿನಿಂದಾಗಿ ಜೀನಿಗೆ ವಿಶೇಷಸ್ಥಾನ ಲಭಿಸಿದೆ. ಜೀವಿಗಳು ಮತ್ತು ಅವುಗಳ ಪರಿಸರದ ನಡುವಣ ಅಂತರವ್ಯಾಪಾರಗಳ ಬಗೆಗಿನ ಅಭ್ಯಾಸದ ಫಲವಾಗಿ ಹೆಚ್ಚು ಸ್ಪಷ್ಟ ಚಿತ್ರ ಲಭಿಸಿರುವುದು ಜೀವನವಿಜ್ಞಾನದ ಇನ್ನೊಂದು ಮುಖ್ಯ ಸಾಧನೆ. ಇಂಥ ಪರಿಸರೀಯ ಅಧ್ಯಯನಗಳಿಂದಾಗಿ ಜೀವಿಗಳ ಮೂರು ಪ್ರಧಾನ ಗುಂಪುಗಳ (ಉತ್ಪಾದಕಗಳಾದ ಸಸ್ಯಗಳು, ಅನುಭೋಗಿಗಳಾದ ಪ್ರಾಣಿಗಳು ಹಾಗೂ ಅಪಘಟನಕಾರಿಗಳಾದ ಬ್ಯಾಕ್ಟೀರಿಯಗಳು) ಪರಸ್ಪರಾವಲಂಬನೆಯ ಬಗ್ಗೆ ಹೆಚ್ಚಿನ ಅರಿವು ಮೂಡಿದೆಯಲ್ಲದೆ ಮಾನವ ತನ್ನ ಪರಿಸರವನ್ನು ಹೇಗೆ ನಿಯಂತ್ರಿಸಬಹುದು ಹಾಗೂ ತನ್ಮೂಲಕ ಭೂಮಿಯ ಮೇಲೆ ತನ್ನ ಉಳಿವನ್ನು ಹೀಗೆ ನಿಯಂತ್ರಿಸಬಹುದು ಎಂಬವುಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸಾಧ್ಯವಾಗಿದೆ. ಪ್ರಾಣಿಗಳ ಸ್ವಭಾವ ನಡತೆಯ ಅಧ್ಯಯನವೂ (ಈತಾಲಜಿ) ಪ್ರಾಣಿ ವಿಜ್ಞಾನದ ಮುಖ್ಯ ಪ್ರಕಾರವಾಗಿ ಬೆಳೆದುಬಂದಿದೆ. ಪರಿಸರವಿಜ್ಞಾನ, ಶರೀರ ಕ್ರಿಯಾವಿಜ್ಞಾನ, ತಳಿವಿಜ್ಞಾನ, ಅಭಿವರ್ಧನೆ, ವಿಕಾಸ ಮುಂತಾದುವುಗಳ ಒಟ್ಟು ಗೂಡುವಿಕೆಯ ಫಲವಾಗಿ ಪ್ರಾಣಿಗಳ ನಡತೆಯ ಅರ್ಥಪೂರ್ಣ ಅಧ್ಯಯನ ಸಾಧ್ಯವಾಗಿದ್ದು ಜೀವ ಪ್ರಪಂಚದಲ್ಲಿ ಮಾನವನ ಸ್ಥಾನವನ್ನು ಗೊತ್ತು ಪಡಿಸುವುದೂ ಆತ ತನ್ನ ಪೂರ್ವಜ ಪ್ರಾಣಿಗಳಿಂದ ಹೇಗೆ ವಿಕಾಸಗೊಂಡಿದ್ದಾನೆಂಬ ಬಗ್ಗೆ ಅರಿಯುವುದೂ ಸುಲಭವಾಗಿದೆ.

ಇವೆಲ್ಲವುಗಳ ಫಲವಾಗಿ ಅಭಿಜಾತ ಪ್ರಾಣಿವಿಜ್ಞಾನ (ಕ್ಲಾಸಿಕಲ್ ಜೂಅಲಜಿ) ಇಂದು ಪ್ರಾಣಿಜೀವವಿಜ್ಞಾನವಾಗಿ (ಆ್ಯನಿಮಲ್ ಬಯಾಲಜಿ) ಬದಲಾಗಿದೆ. ಇದರಿಂದ ಅಭಿಜಾತ ಪ್ರಾಣಿವಿಜ್ಞಾನದ ಮೇಲೆ ಎರಡು ರೀತಿಯ ಪರಿಣಾಮಗಳುಂಟಾಗಿವೆ:

ಒಂದನೆಯದಾಗಿ, ವಿಜ್ಞಾನಾಧ್ಯಯನದ ವಿಶಿಷ್ಟ ಪ್ರಕಾರವಾಗಿ ಅಭಿಜಾತ ಪ್ರಾಣಿವಿಜ್ಞಾನಕ್ಕಿದ್ದ ಸ್ಥಾನ ಪಲ್ಲಟವಾಗಿದೆ. ಹಿಂದೆ ಪ್ರಾಣಿವಿಜ್ಞಾನಿಗಳು ಎಂದು ನಿರ್ದೇಶಿಸಲಾಗುತ್ತಿದ್ದ ವಿಜ್ಞಾನಿಗಳನ್ನು ಇಂದು ಸಸ್ಯಗಳ ಬದಲು ಪ್ರಾಣಿಗಳನ್ನು ಆಯ್ದುಕೊಂಡು ಅಧ್ಯಯಿಸುವ ಪ್ರಾಣಿತಳಿವಿಜ್ಞಾನಿಗಳು. ಪ್ರಾಣಿಪರಿಸರವಿಜ್ಞಾನಿಗಳು, ಪ್ರಾಣಿಶರೀರಕ್ರಿಯಾವಿಜ್ಞಾನಿಗಳು, ಭ್ರೂಣವಿಜ್ಞಾನಿಗಳು, ಆನ್ವಯಿಕ ಪ್ರಾಣಿವಿಜ್ಞಾನಿಗಳು ಎಂದೆಲ್ಲ ಕರೆಯಲಾಗುತ್ತಿದೆ. ಇಂಥವರ ಅಧ್ಯಯನಗಳಲ್ಲಿ ಪ್ರಾಣಿಗಳಿಗೆ ಪ್ರಾಯೋಗಿಕ ವಸ್ತುವಾಗಿ ಮಾತ್ರ ಹಿರಿಮೆ; ಇಲ್ಲಿ ಒತ್ತು ಇರುವುದು ಜೀವವಿಜ್ಞಾನದ ಸಾರ್ವತ್ರಿಕ ಸಮಸ್ಯೆಗಳ ಪರಿಹಾರಕ್ಕೇ ವಿನಾ ಆಯ್ದುಕೊಂಡಿರುವ ಪ್ರಾಣಿಗಳಿಗಲ್ಲ.

ಎರಡನೆಯದಾಗಿ ಜೀವವಿಜ್ಞಾನಿಗಳ ಬಗ್ಗೆ ಪರಿಕಲ್ಪನಾತ್ಮಕ ದೃಷ್ಟಿ ಬೆಳೆಸಿಕೊಳ್ಳುವುದರ ಬಗ್ಗೆ ಒಲವು ಹೆಚ್ಚಾಗಿದೆ. 19ನೆಯ ಶತಮಾನದ ಉತ್ತರಾರ್ಧ ಹಾಗೂ 20ನೆಯ ಶತಮಾನದ ಪೂರ್ವಾರ್ಧಗಳಲ್ಲಿ ಮೂಡಿಬಂದ ಪರಿಕಲ್ಪನೆಗಳ ಫಲವಾಗಿ (ಜೀವಕೋಶ ಸಿದ್ಧಾಂತ, ಪ್ರಾಕೃತಿಕ ಆಯ್ಕೆ ಮತ್ತು ವಿಕಾಸ, ಎಲ್ಲ ಜೀವಿಗಳಲ್ಲಿಯ ಆನುವಂಶಿಕ ವಸ್ತುವಿನಲ್ಲಿರುವ ಮೂಲ ಸಾದೃಶ್ಯ, ಪರಿಸರ ವ್ಯವಸ್ಥೆಗಳ ಮೂಲಕ ವಸ್ತು ಮತ್ತು ಶಕ್ತಿಯ ಹರಿವು) ಈ ದೃಷ್ಟಿ ಬೆಳೆದಿದೆ. ಸೂಕ್ಷ್ಮಜೀವಿಗಳು, ಸಸ್ಯಗಳು ಮತ್ತು ಪ್ರಾಣಿಗಳ ಜೀವನವೃತ್ತಾಂತವನ್ನು ಹಿಂದಿನ ಕಾಲದಲ್ಲಿಯಂತೆ ಸೀಮಿತ ಅನುಭವಾತ್ಮಕ ವಿಧಾನಗಳ ಬದಲು ಸೈದ್ಧಾಂತಿಕ ಪ್ರತಿರೂಪಗಳನ್ನು ಬಳಸಿಕೊಂಡು ಅಭ್ಯಸಿಸುವುದು ರೂಢಿಗೆ ಬಂದಿದೆ. ಜೀವವಿಜ್ಞಾನ ಮತ್ತು ರಸಾಯನವಿಜ್ಞಾನಗಳನ್ನು ಮೇಳೈಸಿಕೊಂಡು ಮಾಡುವಂಥ ಅಣವಿಕ ಅಧ್ಯಯನಗಳ ವಿಷಯದಲ್ಲಿ ಈ ದೃಷ್ಟಿ ಸಾಧುವಾದದ್ದು. ಜೀವಂತ ವ್ಯವಸ್ಥೆಗಳ ವಿಶ್ಲೇಷಣೆಗೆ ಭೌತವಿಜ್ಞಾನಗಳ ತಂತ್ರವಿಧಾನಗಳನ್ನೂ ಪರಿಮಾಣಾತ್ಮಕ ಪ್ರಾಧಾನ್ಯವನ್ನೂ ಪರಿಣಾಮಕಾರಿಯಾಗಿ ಬಳಸುವುದು ಸಾಧ್ಯ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಪ್ರಾಣಿವಿಜ್ಞಾನದ ಉಪವಿಭಾಗಗಳ ಪರಿಚಯ; ಮೇಲೆ ಹೇಳಿದಂತೆ ಪ್ರಾಣಿವಿಜ್ಞಾನವನ್ನು ಉಪವಿಭಾಗಗಳಾಗಿ ವಿಂಗಡಿಸದೆ ಇಡಿಯಾಗಿ ಪರಿಗಣಿಸುವುದೇ ಇಂದಿನ ದೃಷ್ಟಿಯಾಗಿದೆಯಾದರೂ ಒಂದು ಅರ್ಥದಲ್ಲಿ ಇದನ್ನು ಹಲವಾರು ಪ್ರಕಾರಗಳಾಗಿ ವಿಭಾಗಿಸುವುದು ಉಪಯುಕ್ತವೆನ್ನಬಹುದು. ಇಂಥ ಉಪವಿಭಾಗಗಳಲ್ಲಿ ಮುಖ್ಯವಾದುವು ಇಂತಿವೆ: ಅಂಗಾಂಶವಿಜ್ಞಾನ, ಬಾಹ್ಯರೂಪ ರಚನಾವಿಜ್ಞಾನ, ಜೀವಕೋಶವಿಜ್ಞಾನ, ಅಣವಿಕ ಜೀವವಿಜ್ಞಾನ, ಭ್ರೂಣವಿಜ್ಞಾನ, ಪರಿಸರವಿಜ್ಞಾನ, ತಳಿವಿಜ್ಞಾನ, ಶರೀರಕ್ರಿಯಾವಿಜ್ಞಾನ, ವರ್ಗೀಕರಣವಿಜ್ಞಾನ, ಪ್ರಾಣಿಸ್ವಭಾವವಿಜ್ಞಾನ, ಅನ್ವಯಿಕ ಪ್ರಾಣಿವಿಜ್ಞಾನ ಇತ್ಯಾದಿ.

ಪ್ರಾಣಿಗಳ ಬಾಹ್ಯರೂಪದ ಹಾಗೂ ಅಂಗಾಂಶಗಳ ಅಧ್ಯಯನವೇ ಬಾಹ್ಯರೂಪ ರಚನಾವಿಜ್ಞಾನ (ಮಾರ್ಫಾಲಜಿ) ಮತ್ತು ಅಂಗಾಂಶವಿಜ್ಞಾನ (ಅನಾಟಮಿ) ಪ್ರಾಣಿಗಳ ವ್ಯವಸ್ಥಿತ ಅಧ್ಯಯನವನ್ನು ಕುರಿತಂತೆ ಲಭ್ಯವಾಗಿರುವ ಮೊದಲ ವಿವರಗಳು ಈ ಎರಡು ಉಪವಿಭಾಗಗಳಲ್ಲಿ ಅಡಕಗೊಂಡಿವೆ. ಅರಿಸ್ಟಾಟಲನೇ ಈ ದಿಸೆಯಲ್ಲಿ ಕೆಲಸ ಮಾಡಿದವರಲ್ಲಿ ಮೊದಲಿಗ. ಆತ ಪ್ರಾಣಿಗಳನ್ನು ಸಂಗ್ರಹಿಸುವುದರಲ್ಲಿಯೂ ಛೇದಿಸಿ ಅಭ್ಯಸಿಸುವಲ್ಲಿಯೂ ಅವಿಶ್ರಾಂತವಾಗಿ ಕೆಲಸ ಮಾಡುತ್ತಿದ್ದ. ವಿವಿಧ ಪ್ರಾಣಿಗಳ ರಾಚನಿಕ ಸಂಕೀರ್ಣತೆಯಲ್ಲಿ ವೈವಿಧ್ಯವನ್ನು ಕಂಡುಕೊಂಡು ಜೀವನ ಕ್ರಮ, ಸ್ವಭಾವ ಮತ್ತು ದೈಹಿಕ ಅಂಗಗಳಲ್ಲಿ ವ್ಯತ್ಯಾಸ ಗಮನಿಸಿದ ಆತ ಪ್ರಾಣಿಗಳನ್ನು ಅತ್ಯಂತ ಸರಳ ರೀತಿಯಿಂದ ಹಿಡಿದು ಅತ್ಯಂತ ಕ್ಲಿಷ್ಟ ರೀತಿಯವರೆಗೆ ಏರುಶ್ರೇಣಿಯಲ್ಲಿ ವ್ಯವಸ್ಥೆಗೊಳಿಸಿದ. ಹೀಗೆ ಅರಿಸ್ಟಾಟಲ್ ಪ್ರಾಣಿಗಳ ವ್ಯವಸ್ಥಿತ ವರ್ಗೀಕರಣಕ್ಕೂ ಅಡಿಪಾಯ ಹಾಕಿದ.

ಅರಿಸ್ಟಾಟಲನ ಅನಂತರದ ದಿನಗಳಲ್ಲಿ ಮೆಡಿಟರೇನಿಯನ್ ಪ್ರದೇಶದ ಅಲೆಕ್ಸಾಂಡ್ರಿಯ ಪ್ರಾಣಿವಿಜ್ಞಾನಾಧ್ಯಯನದ ಕೇಂದ್ರವಾಯಿತು. ಅಂಗಾಂಶವಿಜ್ಞಾನ ಅದರಲ್ಲೂ ಕೇಂದ್ರೀಯ ನರಮಂಡಲದ ಅಭ್ಯಾಸ, ಈ ಅಧ್ಯಯನದ ಮುಖ್ಯ ವಿಷಯವಾಗಿತ್ತು. 2ನೆಯ ಶತಮಾನದಲ್ಲಿ ಅಲೆಕ್ಸಾಂಡ್ರಿಯದಲ್ಲಿ ಅಂಗಾಂಶವಿಜ್ಞಾನವನ್ನು ಅಭ್ಯಸಿಸಿದ ಗ್ರೀಕ್ ವಿಜ್ಞಾನಿ ಗೇಲೆನ (ಸು. ಕ್ರಿ.ಶ. 130–ಸು. 200) ಪ್ರಾಣಿಗಳನ್ನು ಕತ್ತರಿಸಿ ನೋಡಿ ಅಂಗಾಂಶಗಳ ಮತ್ತು ಅಂಗಗಳ ಒಳರಚನೆಯ ಅಭ್ಯಾಸ ನಡೆಸಿದ 16ನೆಯ ಶತಮಾನದ ಅಂಡ್ರಿಯಾಸ್ ವೆಸೇಲಿಯಸ್ಸನ (1514–1564) ವೈದ್ಯಕೀಯ ಅಧ್ಯಯನಗಳು ಗೇಲೆನ್ನನ ಅಧ್ಯಯನಗಳ ಜಾಡಿನಲ್ಲೇ ಇದ್ದುವಾಗಿ ತೌಲನಿಕ ಅಂಗ ರಚನಾವಿಜ್ಞಾನಕ್ಕೆ ಪ್ರಚೋದನೆಯಿತ್ತವು. ಬಹುಕಾಲದವರೆಗೆ ಅಂಗರಚನಾವಿಜ್ಞಾನ ಬರಿಯ ವಿವರಣಾತ್ಮಕ ವಿಷಯವಾಗಿಯೇ ಉಳಿಯಿತಾದರೂ ಬಫೋ ಹಾಗೂ ಕ್ಯೂವಿಯೇ–ಇವರ ಅಭ್ಯಾಸಗಳ ಫಲವಾಗಿ ಅಂಗರಚನೆಗೂ ಅದರ ಕ್ರಿಯೆಗೂ ಇರುವ ಸಂಬಂಧ ಸ್ಪಷ್ಟವಾಗತೊಡಗಿತು.

19ನೆಯ ಶತಮಾನದ ಬ್ರಿಟಿಷ್ ಅಂಗರಚನಾಶಾಸ್ತ್ರಜ್ಞ ರಿಚರ್ಡ್ ಓವೆನ್ ಸಮಜಾತತೆ (ಹೋಮಾಲಜಿ) ಮತ್ತು ಸಮವೃತ್ತಿ (ಅನಾಲಜಿ) ಪರಿಕಲ್ಪನೆಯನ್ನು ಪ್ರತಿಪಾದಿಸಿದ. ಜರ್ಮನಿಯ ತೌಲನಿಕ ಅಂಗರಚನಾಶಾಸ್ತ್ರಜ್ಞ ಕಾರ್ಲ್‌ಗೀಗೆನ್ ಬಾವರನ ಅಭ್ಯಾಸಗಳ ಮೇಲೆ ಆಧರಿತವಾಗಿದ್ದ ಈ ಪರಿಕಲ್ಪನೆಗಳು ಜೀವವೈಕಾಸಿಕ ಬದಲಾವಣೆಗಳ ಪರವಾದ ಮುಖ್ಯ ಪುರಾವೆ ಒದಗಿಸಿದುವು. ಹೀಗೆ ಪ್ರಾಣಿ ವರ್ಗೀಕರಣಕ್ಕೆ ಅಷ್ಟಿಷ್ಟು ಮಾಹಿತಿ ಒದಗಿಸುತ್ತ ಬರಿಯ ವಿವರಣಾತ್ಮಕ ವಿಜ್ಞಾನವಾಗಿದ್ದು ಗೌಣಸ್ಥಾನದಲ್ಲಿದ್ದ ಅಂಗರಚನಾವಿಜ್ಞಾನ 19ನೆಯ ಶತಮಾನದ ವೇಳೆಗೆ ಶರೀರಕ್ರಿಯೆಯೊಂದಿಗೆ ಸಮ್ಮಿಳನಗೊಂಡು ವಿಕಾಸದ ಪರಿಕಲ್ಪನೆಗೆ ಪುರಾವೆ ಪೂರೈಕೆ ಮಾಡುವ ಪ್ರಾಮುಖ್ಯ ಗಳಿಸಿಕೊಂಡಿತು.

ವರ್ಗೀಕರಣ; ವಿಭಿನ್ನತರದ ಜೀವಿಗಳಿಗೆ ಒಂದು ವ್ಯವಸ್ಥಿತ ವರ್ಗೀಕರಣ ಸಂಸ್ಕಾರವನ್ನು ಒದಗಿಸಿದಾತ ಸ್ವೀಡನ್ನಿನ ಸಸ್ಯವಿಜ್ಞಾನಿ ಕ್ಯಾರೊಲಸ್ ಲಿನೀಯಸ್. ಸಮಜಾತತೆಯ ಸಂಬಂಧಗಳ ಆಧಾರದ ಮೇಲೆ ಯಾವುದೋ ಒಂದು ಸಾಮಾನ್ಯ ಪೂರ್ವಜಪ್ರಾಣಿ ಗುಂಪಿನಿಂದ ಎಲ್ಲ ಪ್ರಾಣಿಗಳೂ ವಿಕಸಿಸಿವೆ ಎಂದು ಪ್ರತಿಪಾದಿಸುತ್ತ ಪ್ರಾಣಿ ಪ್ರಭೇದಗಳ ವ್ಯವಸ್ಥೆಯ ನೈಸರ್ಗಿಕ ವಿಧಾನವನ್ನು ರೂಪಿಸುವ ಪ್ರಯತ್ನ ಈತನದು. ಆದರೆ ಪ್ರಭೇದವೆಂದರೆ ಯಾವುದೋ ಒಂದು ವಿಶಿಷ್ಟ ಮಾದರಿ ಎಂದು ಈತ ಬಗೆದದ್ದರಿಂದ ಈತನ ವರ್ಗೀಕರಣ ವ್ಯವಸ್ಥೆ ಒಂದು ಆದರ್ಶೀಕೃತ ಬಾಹ್ಯರೂಪರಚನಾವಿಜ್ಞಾನದ ವಿಧಿನಿರ್ಬಂಧಗಳನ್ನು ಹೆಚ್ಚು ಹೋಲುತ್ತಿತ್ತು.

ಲಿನೀಯಸ್ ಸಾಧಿಸಿದ ಮಹತ್ತರ ಹಾಗೂ ಕ್ರಾಂತಿಕಾರಕ ಪ್ರಗತಿ ವರ್ಗೀಕರಣದ ನಾಮಕರಣ ಕ್ಷೇತ್ರದಲ್ಲಿ. ದ್ವಿಪದನಾಮಕರ ಪದ್ಧತಿಯನ್ನು ಮೊತ್ತಮೊದಲಿಗೆ ಪ್ರತಿಪಾದಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಪ್ರತಿ ಪ್ರಭೇದಕ್ಕೂ ವೈಜ್ಞಾನಿಕವಾಗಿ ಲ್ಯಾಟಿನ್ ಭಾಷೆಯ ಹೆಸರು ಇರತಕ್ಕದ್ದು, ಹೆಸರಿನಲ್ಲಿ ಎರಡು ಪದಗಳು ಜಾತಿ ನಿರ್ದೇಶಕ (ಜೆನರಿಕ್) ಮತ್ತು ಪ್ರಭೇದ ನಿರ್ದೇಶಕ (ಸ್ಪೆಸಿಫಿಕ್) ಇರತಕ್ಕದ್ದು ಎಂಬುದನ್ನು ಈತ ವಿಧಿಸಿದ. ಉದಾಹರಣೆಗೆ ನಾಯಿಯ ವೈಜ್ಞಾನಿಕ ಹೆಸರು ಕೇನಿಸ್ ಫೆಮಿಲಿಯಾರಿಸ್. ಇಲ್ಲಿ ಕೇನಿಸ್ ನಾಯಿಯ ಜಾತಿಯನ್ನೂ ಫೆಮಿಲಿಯಾರಿಸ್ ಪ್ರಭೇದವನ್ನೂ ನಿರ್ದೇಶಿಸುವುದು. ಪ್ರಭೇದ ಮತ್ತು ಜಾತಿ–ಈ ಎರಡು ದರ್ಜೆಗಳ ಜೊತೆಗೆ ಬೇರೆ ವಿಭಾಗೀಯ ದರ್ಜೆಗಳನ್ನೂ (ಗಣ, ವರ್ಗ, ರಾಜ್ಯ) ಈತ ಮಾನ್ಯಮಾಡಿದ್ದ. ಅನಂತರ ಈ ಯಾದಿಗೆ ಕುಟುಂಬ, ವಿಭಾಗಗಳು ಸೇರ್ಪಡೆಯಾದುವು. ಲಿನೀಯಸ್ಸನ ಮಹದ್ಗ್ರಂಥ ಸಿಸ್ಟೆಮ ನೇಚುರೆ ಅವನ ಜೀವಿತಕಾಲದಲ್ಲಿ 12 ಆವೃತ್ತಿಗಳನ್ನೂ ಆತನ ಮರಣಾನಂತರ 13ನೆಯ ಆವೃತ್ತಿಯನ್ನೂ ಕಂಡಿತು. ತರುವಾಯದ ದಿನಗಳಲ್ಲಿ ಲಿನೀಯಸ್ಸನ ವರ್ಗೀಕರಣ ವ್ಯವಸ್ಥೆ ಹಲವಾರು ವಿಧಗಳಲ್ಲಿ ವಿಸ್ತಾರಗೊಂಡು ಬದಲಾಗಿದೆಯಾದರೂ ಆತ ಬಳಸಿದ ಶೈಲಿ ಮತ್ತು ವಿಧಾನಗಳು ಇಂದಿಗೂ ಮಾದರಿಯಾಗಿವೆ.

20ನೆಯ ಶತಕದ ಪ್ರಾರಂಭದಲ್ಲಿ ನವಜಾತ ವರ್ಗೀಕರಣ ವ್ಯವಸ್ಥೆ (ನ್ಯೂಸಿಸ್ಟಮ್ಯಾಟಿಕ್ಸ್) ಜಾರಿಗೆ ಬಂದಿದ್ದು ಇದರ ಪ್ರಕಾರ ಯಾವುದೇ ವರ್ಗೀಕರಣದಲ್ಲಿ ಆಯಾಪ್ರಾಣಿಯ (ಪ್ರಭೇದದ) ವಿಕಾಸೇತಿಹಾಸ ಪ್ರತಿಫಲನಗೊಳ್ಳುವಂತಿರಬೇಕು. ವರ್ಗೀಕರಣದ ಮೂಲ

ಘಟಕವಾದ ಪ್ರಭೇದ (ಸ್ಪೀಶೀಸ್) ವಿಕಾಸದ ಮೂಲ ಘಟಕವೂ ಹೌದು ಎಂಬುದು ಇದರ ಸಾರಾಂಶ. ಅಂದರೆ ಪ್ರಭೇದವೆಂದರೆ ವಾಸ್ತವಿಕವಾಗಿ ಇಲ್ಲವೆ ವಿಭವಾತ್ಮಕವಾಗಿ ಅಂತರಸಂಕರಕ್ಕೆ ಒಳಗಾಗುವ ಸಂದಣಿಯ ಘಟಕ. ಅಂತರಸಂಕರದ ಮೂಲಕ ಒಂದು ಸಂದಣಿ ತನ್ನ ಆನುವಂಶಿಕ ವಸ್ತುವಿನ ಆಕರಸಾಮಗ್ರಿಯನ್ನು ಹಂಚಿಕೊಳ್ಳುತ್ತದೆ. ತನ್ಮೂಲಕ ಆನುವಂಶಿಕ ವಸ್ತುವಿನ ಸಂಗ್ರಹಾಗಾರವನ್ನೇ ನಿರ್ಮಿಸಿಕೊಳ್ಳುತ್ತದೆ.

ಶರೀರಕ್ರಿಯ ವಿಜ್ಞಾನ: ಪ್ರಾಣಿವಿಜ್ಞಾನದ ಮುಖ್ಯಶಾಖೆಗಳಲ್ಲೊಂದಾದ ಇದು ಪ್ರಾಣಿಗಳ ಅಂತೆಯೇ ಮಾನವನ ದೇಹದೊಳಗೆ ನಡೆಯುವ ಉಪಾಪಚಯ ಕ್ರಿಯೆಗಳನ್ನು ಕುರಿತಾಗಿದೆ. 17 ನೆಯ ಶತಮಾನದಿಂದ ಆರಂಭಗೊಂಡ ವಿಭಾಗ ದಿನದಿನಕ್ಕೂ ವಿಸ್ತಾರಗೊಳ್ಳುತ್ತ ಬಂದಿದೆ. ರಕ್ತಪರಿಚಲನೆಯನ್ನು ವಿಲಿಯಮ್ ಹಾರ್ವೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟಂದಿನಿಂದ ಪ್ರಾಣಿಗಳ ಬಗ್ಗೆಯೂ ಪ್ರಯೋಗಗಳು ನಡೆಯುತ್ತ ಬಂದಿದ್ದು ತೌಲನಿಕ ಶರೀರಕ್ರಿಯಾ ವಿಜ್ಞಾನ ರೂಪುತಳೆದಿದೆ. ಈ ಶಾಖೆಯ ಆರಂಭದಲ್ಲಿ ಕಾಣಬರುವ ಮುಖ್ಯ ಮೈಲಿಗಲ್ಲುಗಳೆಂದರೆ ಸ್ವಿಸ್ ಶರೀರಕ್ರಿಯಾ ವಿಜ್ಞಾನಿ ಅಲ್‌ಬ್ರೆಕ್ಟ್ ಫಾನ್ ಹಾಲರ್ ಪ್ರಕಟಿಸಿದ ಎಲೆ ಮೆಂಟ್ಸ್ ಆಫ್ ಹ್ಯೂಮನ್ ಫಿಸಿಯಾಲಜಿ (ಎಲಿಮೆಂಟ ಫಿಸಿಯಾಲಾಜಿಯ ಕಾರ್ಪೊರಿಸ್ ಹ್ಯೂಮನ್ಯೆ) ಎಂಬ ಎಂಟು ಸಂಪುಟಗಳ ಗ್ರಂಥ. 18ನೆಯ ಶತಮಾನದ ಉತ್ತರಾರ್ಧದಲ್ಲಿ ಫ್ರಾನ್ಸಿನ ರಸಾಯನವಿಜ್ಞಾನಿ ಅಂಟಾಯ್ನ್ ಲವಾಸೀಯೇ (1743–94) ಉಸಿರಾಟವನ್ನು ಕುರಿತು ನಡೆಸಿದ ಮಹತ್ತರ ಪ್ರಯೋಗ. ಉಸಿರಾಟ ಒಂದು ಬಗೆಯ ದಹನಕ್ರಿಯೆ ಎಂಬುದು ಇದರಿಂದ ಸ್ಪಷ್ಟವಾಯಿತಲ್ಲದೆ ರಸಾಯನ ವಿಜ್ಞಾನವನ್ನು ಶರೀರಕ್ರಿಯಾವಿಜ್ಞಾನದೊಂದಿಗೆ ಬೆಸೆಯಲು ಸಹಕಾರಿಯಾಯಿತು ಕೂಡ. ದೇಹದ ಅಂತಃಪರಿಸರದ ಸ್ಥಿರತೆಯ ಪರಿಕಲ್ಪನೆಯನ್ನು ಕ್ಲಾಡ್ ಬರ್ನಾರ್ಡ್ (1813–78) ರೂಪಿಸಿದ ಅನಂತರ ಶರೀರಕ್ರಿಯೆಯ ತತ್ತ್ವಗಳಿಗೆ ಹೊಸ ದೃಷ್ಟಿ ಲಭಿಸಿತು. ಜರ್ಮನಿಯ ಪ್ರಾಣಿಶಾಸ್ತ್ರಜ್ಞ ಯೋಹಾನೆಸ್ ಮ್ಯೂಲರ್ ಪ್ರಾಣಿಗಳ ಅಂಗರಚನೆ ಹಾಗೂ ಶರೀರಕ್ರಿಯೆಗಳ ತೌಲನಿಕ ಅಧ್ಯಯನ ನಡೆಸಿದ. ಜಸ್ಟಸ್ ಫಾನ್ ಲೀಬಿಗ್ ಮತ್ತು ಕಾರ್ಲ್ ಲೂಡ್ ವಿಗ್ ಎಂಬುವರು ಶರೀರಕ್ರಿಯೆಗಳ ಸಮಸ್ಯೆಗಳ ಪರಿಹಾರಕ್ಕೆ ಅನುಕ್ರಮವಾಗಿ ರಾಸಾಯನಿಕ ಹಾಗೂ ಭೌತವಿಧಾನಗಳನ್ನು ಅನುಸರಿಸಿದರು. ಇದರಿಂದಾಗಿ ಶರೀರಕ್ರಿಯೆಗಳ ಅಭ್ಯಾಸಕ್ಕೆ ಹೊಸಹೊಸ ನಿಷ್ಕೃಷ್ಟ ತಂತ್ರ ವಿಧಾನಗಳು ಲಭ್ಯವಾದುವು. ಸ್ನಾಯುಗಳ ಚಟುವಟಿಕೆಯನ್ನೂ ರಕ್ತದ ಒತ್ತಡವನ್ನೂ ಕರಾರುವಾಕ್ಕಾಗಿ ಅಳೆಯುವುದು ಮತ್ತು ದೇಹದೊಳಗಿನ ದ್ರವಗಳನ್ನು ರಾಸಾಯನಿಕವಾಗಿ ವಿಶ್ಲೇಷಿಸುವುದು ಇದರಿಂದ ಸಾಧ್ಯವಾಯಿತು.

ಈ ವೇಳೆಗೆ ಪ್ರಾಣಿದೇಹದ ವಿವಿಧ ಅಂಗಸಮೂಹಗಳ–ಪಚನವ್ಯವಸ್ಥೆ, ಸ್ನಾಯುಗಳ, ನರಗಳು, ಪ್ರಜನನ ಕಾರ್ಯಕ್ಕೆ ಸಂಬಂಧಿಸಿದಂಥವು, ಉಸಿರಾಟಕ್ಕೆ ಸಂಬಂಧಿಸಿದಂಥವು, ಕಂಕಾಲ, ಇತ್ಯಾದಿ–ರಾಚನಿಕ ಹಾಗೂ ಕ್ರಿಯಾತ್ಮಕ ಪರಿಚಯ ಆಗಿತ್ತು. ಈ ಅಂಗಸಮೂಹಗಳ ಕಾರ್ಯಶೀಲತೆಯನ್ನು ಕೋಶದ ಹಂತದಲ್ಲಿ ರಸಾಯನಿಕ ವಿಧಾನಗಳಲ್ಲಿ ಅರಿಯುವ ಪ್ರಯತ್ನ ಬೆಳೆಯತೊಡಗಿತು. ಇದರ ಫಲವಾಗಿ ಕೋಶಕ್ರಿಯಾ ವಿಜ್ಞಾನ (ಸೆಲ್ ಫಿಸಿಯಾಲಜಿ), ಶರೀರಕ್ರಿಯಾ ರಸಾಯನ ವಿಜ್ಞಾನ (ಫಿಸಿಯಲಾಜಿಕಲ್ ಕೆಮಿಸ್ಟ್ರಿ) ಮುಂತಾದ ವಿಶೇಷ ಉಪವಿಭಾಗಗಳು ರೂಪುಗೊಂಡಿವೆ. ಇಂಥ ಅಂಗಸಮೂಹಗಳ ಪೈಕಿ ನರಮಂಡಲವನ್ನು ಕುರಿತಂತೆ ವ್ಯಾಪಕವಾದ ಸಂಶೋಧನೆಗಳು ನಡೆದಿದ್ದು ಇದು ಉಳಿದೆಲ್ಲ ಅಂಗಸಮೂಹಗಳಿಗಿಂತ ಅತ್ಯಂತ ಸಂಕೀರ್ಣವಾದದ್ದೆಂದು ಗಮನ ಸೆಳೆದಿದೆ.

ಭ್ರೂಣ ವಿಜ್ಞಾನ ಅಥವಾ ಪರಿವರ್ಧನೆ; ಪ್ರಾಚೀನಕಾಲದಿಂದಲೂ ಜೀವಿಗಳ ಭ್ರೂಣದ ಬೆಳೆವಣಿಗೆ ಮತ್ತು ಅಂಗಗಳ ವಿಭೇದೀಕರಣ ಜೀವವೈಜ್ಞಾನಿಕ ಸಮಸ್ಯೆಗಳಲ್ಲಿ ಪ್ರಮುಖವೆನಿಸಿವೆ. 17ನೆಯ ಶತಮಾನದ ಸುಮಾರಿನಲ್ಲಿ ಪ್ರಚಲಿತವಾಗಿದ್ದ ಭಾವನೆಯೆಂದರೆ ಭ್ರೂಣದ ಬೆಳೆವಣಿಗೆಯನ್ನು ಆರಂಭಿಸುವ ಸೂಕ್ಷ್ಮಗಾತ್ರದ ವಸ್ತುವಿನಲ್ಲಿ ಯಾವುದೇ ಪ್ರೌಢಜೀವಿ ಅತ್ಯಂತ ಕಿರುಗಾತ್ರದ ರೂಪದ ಜೀವಿಯಾಗಿ (ಹೋಮಂಕ್ಯುಲಸ್) ಸ್ಥಿತಿವಾಗಿರುತ್ತದೆ. ಎಂಬುದು ಆದರೆ ಪ್ರೌಢಜೀವಿಯ ಅಂಗಾಂಗಗಳು ರೂಪುಗೊಳ್ಳುವಾಗ ವಿಭೇದೀಕರಣಗೊಳ್ಳದೆ ಸಾಮಗ್ರಿಗಳು ಕಾಲಾನುಕ್ರಮದಲ್ಲಿ ಒಂದು ವ್ಯವಸ್ಥಿತ ರೀತಿಯಲ್ಲಿ ವಿಶೇಷೀಕೃತಗೊಳ್ಳುವುವು ಎಂಬ ವಾದವನ್ನು ಜರ್ಮನ್‌ವೈದ್ಯ ಕ್ಯಾಸ್ಪರ್ ಫ್ರೀಡರಿಕ್ ವೂಲ್ಫ್ (1733–94) ಪ್ರಬಲವಾಗಿ ಪ್ರತಿಪಾದಿಸಿದ (1759). ಅನಂತರ ಫ್ರೆಂಚ್ ವೈದ್ಯ ಮೇರಿ ಫ್ರಾಂಕಾಯ್ ಕ್ಸೇವಿಯರ್ ಬಿಚಾಟ್ ಭ್ರೂಣದ ಪರಿವರ್ಧನೆಯಲ್ಲಿ ವಿಭೇದೀಕರಣಗೊಳ್ಳುವ ಭಾಗಗಳು ಊತಕಗಳೆಂಬ ವಿವಿಧ ಘಟಕಗಳನ್ನು ಪಡೆದಿರುವುವು ಎಂಬುದನ್ನು ವಿಶದಪಡಿಸಿದ (1801). ಭ್ರೂಣದ ಬೆಳೆವಣಿಗೆಯ ಮೊದಲ ಹಂತಗಳಲ್ಲೆಲ್ಲ ಮೂರು ಆತ್ಯಗತ್ಯ ಪದರಗಳು ಇರುವುವು ಎಂಬುದೂ ಇವುಗಳಿಂದ ಊತಕಯುಕ್ತ ವಿಶಿಷ್ಟ ಅಂಗಗಳು ರೂಪುಗೊಳ್ಳುತ್ತವೆ ಎಂಬುದು ಪತ್ತೆಯಾಯಿತು. 1828ರಲ್ಲಿ ಮೊತ್ತಮೊದಲ ಬಾರಿಗೆ ಸ್ತನಿಗಳ ಅಂಡವನ್ನು ಫಾನ್‌ಬೇರ್ ಎಂಬ ಜರ್ಮನ್ ವಿಜ್ಞಾನಿ ಕಂಡುಹಿಡಿದ.

ಭ್ರೂಣದ ಬೆಳೆವಣಿಗೆ, ಅಭಿವರ್ಧನೆ ಮತ್ತು ಅಂಗಾಂಗಗಳ ರೂಪುಗೊಳ್ಳುವಿಕೆಗೆ ಜೀವಕೋಶಿಯ ಸಂಯಂತ್ರಗಳು ಮುಖ್ಯ ಎಂಬ ಅಂಶ 19ನೆಯ ಶತಕದಲ್ಲಿ ಬೆಳಕಿಗೆ ಬಂತು. ಈ ವೇಳೆಗೆ ಆನುವಂಶಿಕತೆಯ ಕ್ರೊಮೋಸೋಮ್ ಸಿದ್ಧಾಂತ ರೂಪುಗೊಳ್ಳುವುದಕ್ಕಿಂತ ಮುಂಚೆಯೇ ಕೋಶದಿಂದ ಕೋಶಕ್ಕೆ ಕ್ರೊಮೋಸೋಮುಗಳು ಆನುವಂಶಿಕವಾಗಿ ಹರಿದು ಸಾಗುವುವು ಎಂಬುದನ್ನು ಜರ್ಮನ್ ವಿಜ್ಞಾನಿ ತೀಯೋಡರ್ ಬೊವೆರಿ ಸ್ಥಿರಪಡಿಸಿದ್ದ (1895). ಅಂದ ಮೇಲೆ ಯುಗ್ಮದಿಂದ (ನಿಷೇಚಿತ ಅಂಡ) ರೂಪುಗೊಳ್ಳುವ ಭ್ರೂಣದ ಎಲ್ಲ ಕೋಶಗಳಲ್ಲಿ ಇರುವ ಕ್ರೊಮೋಸೋಮುಗಳ ಪೈಕಿ ಅರ್ಧದಷ್ಟು ಕ್ರೊಮೋಸೋಮುಗಳು ಪಿತೃಕೋಶದಿಂದಲೂ ಉಳಿದ ಅರ್ಧದಷ್ಟು ಮಾತೃಕೋಶದಿಂದಲೂ ಬರುತ್ತವೆ ಎಂಬುದನ್ನು ಜೀವವಿಜ್ಞಾನಿಗಳು ಅರಿಯುವಂತಾಯಿತು. ಇದರ ಫಲವಾಗಿ ಮೂಡಿದ ಈತನಕ ನಿಗೂಢವಾಗಿದ್ದ ಸಮಸ್ಯೆ ಎಂದರೆ ದೇಹದ ಎಲ್ಲ ಕೋಶಗಳಿಗೂ ಒಂದೇ ತೆರನ ಕ್ರೊಮೋಸೋಮುಗಳು ದತ್ತಿಯಾಗಿ ಬಂದಿದ್ದರೂ ಕೋಶಗಳ ನಡುವಣ ವ್ಯತ್ಯಾಸಗಳಿಗೆ, ಕಾರಣಗಳೇನು, ವಿವಿಧ ಕೋಶಗಳು ಬೇರೆಬೇರೆ ಬಗೆಯ ಅಂಗಗಳಾಗಿ ರೂಪುಗೊಳ್ಳುವುದು ಹೇಗೆ ಎಂಬುದು. ಇತ್ತೀಚಿನ ಸಂಶೋಧನೆಗಳ ಫಲವಾಗಿ, ಇಂಥ ಕೋಶೀಯ ಮತ್ತು ಅಂಗಾಂಶೀಯ ವಿಭೇದೀಕರಣಕ್ಕೆ ಮುಖ್ಯ ಕಾರಣ ಜೀನುಗಳ ವಿಭಿನ್ನ ಚಟುವಟಿಕೆ ಎಂಬುದು ಗೊತ್ತಾಗಿದೆ.

ವಿಕಾಸ: ಪೀಳಿಗೆಯಿಂದ ಪೀಳಿಗೆಗೆ ಬದಲಾಗುತ್ತ ವಿಕಾಸದ ಹಾದಿಯಲ್ಲಿ ಜೀವಿಗಳು ಸಾಗುತ್ತವೆ ಎಂದು ಹೇಳಿದವರ ಪೈಕಿ ಚಾರ್ಲ್ಸ್ ಡಾರ್ವಿನ್ ಮೊದಲನೆಯವನಲ್ಲ. ಆದರೆ ಇಂಥ ಬದಲಾವಣೆಗಳು ಪೀಳಿಗೆಯಿಂದ ಪೀಳಿಗೆಗೆ ಸಂಗ್ರಹಗೊಳ್ಳುವ ಸಂಯಂತ್ರವನ್ನು ಪ್ರತಿಪಾದಿಸಿದ ಕೀರ್ತಿ ಈತನಿಗೆ ಸಲ್ಲಬೇಕು. ಜೀವಿಗಳಲ್ಲಿ ಆನುವಂಶಿಕ ವಿಚರಣೆಗಳು ಸದಾ ಉಂಟಾಗುತ್ತಿರುತ್ತವೆ ಎಂದೂ ಉಳಿವಿಗಾಗಿ ಜೀವಿಗಳು ನಡೆಸುವ ಸ್ಪರ್ಧೆಯಲ್ಲಿ ಬದಲಾದ ಪರಿಸರಕ್ಕೆ ಹೊಂದಿಕೊಳ್ಳುವ ವಿಚರಣೆಗಳನ್ನು ಪಡೆದಿರುವ ಜೀವಿಗಳು ಉಳಿಯುತ್ತವೆ ಎಂದೂ ಈತ ಅಭಿಪ್ರಾಯ ಪಟ್ಟ. ಇಂಥ ವಿಚರಣೆಗಳ ಸತತ ಸಂಗ್ರಹಣೆಯ ಫಲವಾಗಿ ಹೊಸ ಜೀವಿರೂಪಗಳು ಮೈದಳೆಯುವುವು. ಈ ಒಟ್ಟು ಪ್ರಕ್ರಿಯೆಯನ್ನು ಡಾರ್ವಿನ್ ನೈಸರ್ಗಿಕ ಆಯ್ಕೆ ಎಂದು ಕರೆದ.

ಡಾರ್ವಿನ್ನನಿಗಿಂತ ಹಿಂದಿನವರು, ಉದಾಹರಣೆಗೆ ಫ್ರೆಂಚ್ ಜೀವವಿಜ್ಞಾನಿ ಜ್ಯಾನ್ ಬ್ಯಾಪ್ಟಿಸ್ಟ್‌ಲಮಾರ್ಕ್ (1744–1829), ಪ್ರಭೇದಗಳ ವೈವಿಧ್ಯವನ್ನು ಒಪ್ಪಿಕೊಂಡಿದ್ದಕ್ಕಾದರೂ ಇಂಥ ವೈವಿಧ್ಯಕ್ಕೆ ಮೂಲ ಯಾವುದೋ ಒಂದು ಆದರ್ಶೀಕೃತ ಪರಿಪೂರ್ಣಗೊಳಿಸುವ ತತ್ತ್ವ ಎಂಬ ವಾದಕ್ಕೆ ಅಂಟಿಕೊಂಡಿದ್ದರು. ಲಮಾರ್ಕನವಾದ ಕಲ್ಪನಾತ್ಮಕ ರಂಜನೆಯಾಗಿದ್ದರೆ ಡಾರ್ವಿನ್ನನದು ವಸ್ತುನಿಷ್ಠ ವಿಶ್ಲೇಷಣೆಯಾಗಿತ್ತು. ಇದರಿಂದ ಸಹಜವಾಗಿಯೇ ಜೀವವೈಜ್ಞಾನಿಕ ಕ್ಷೇತ್ರದಲ್ಲಿ ಡಾರ್ವಿನ್ನನ ನೈಸರ್ಗಿಕ ಆಯ್ಕೆ ಸಿದ್ಧಾಂತ ಕ್ರಾಂತಿಯನ್ನೇ ಉಂಟುಮಾಡಿತು. ಡಾರ್ವಿನ್ನನ ಸಿದ್ಧಾಂತದ ಪ್ರಭಾವ ಎರಡು ತೆರನಾದುದು. ಒಂದು ಬಾಹ್ಯರೂಪರಚನಾವಿಜ್ಞಾನ, ಭ್ರೂಣವಿಜ್ಞಾನ ಮುಂತಾದ ಜೀವವಿಜ್ಞಾನದ ಹಲವಾರು ಕ್ಷೇತ್ರಗಳ ಗುಣಪುನರ್ವಿಮರ್ಶೆ, ಬ್ರಿಟನ್ನಿನ ಅಂಗ ರಚನಾ ವಿಜ್ಞಾನಿ ಓವನ್ನನ ತೌಲನಿಕ ಅಂಗರಚನಾ ವಿಕಾಸವಾದಕ್ಕೆ ಪುರಾವೆ ಒದಗಿಸುವ ಮಹತ್ತ್ವದ ಆಧಾರಶಿಲೆಯಾಯಿತು. ಹಾಗೆಯೇ ಪಳೆಯುಳಿಕೆಗಳ ಶೋಧ ಮುಂದುವರಿದಂತೆ, ಹೊಸ ಹೊಸ ಗತವಂಶಿ ಜೀವರೂಪಗಳ ಆವಿಷ್ಕಾರ ನಡೆಯುತ್ತ ಬಂದಂತೆ, ಹಾಗೂ ಪಳೆಯುಳಿಕೆಗಳಲ್ಲಿ ಗಮನಿಸಲಾದ ಅನುಕ್ರಮವಾದ ಬದಲಾವಣೆಗಳ ಅರಿವುಂಟಾದಂತೆ ವಿಕಾಸದ ಬಗ್ಗೆ ಹೆಚ್ಚು ಹೆಚ್ಚು ನಂಬಿಕೆ ಮೂಡತೊಡಗಿತು. ಅಂತೆಯೇ ಜರ್ಮನಿಯ ಪ್ರಾಣಿವಿಜ್ಞಾನಿ ಎರ್ನ್‌ಸ್ಟ್ ಹೆಕೆಲ್ ಭ್ರೂಣದ ಬೆಳೆವಣಿಗೆಯ ಹಂತಗಳಲ್ಲಿ ಆ ನಿರ್ದಿಷ್ಟ ಜೀವಿಯ ವಿಕಾಸೇತಿಹಾಸವನ್ನು ಗುರುತಿಸಿ ಪ್ರತಿಯೊಂದು ಪ್ರಾಣಿಯ ಭ್ರೂಣೇತಿಹಾಸ ಅದರ ವಿಕಾಸೇತಿಹಾಸವನ್ನು ವ್ಯಕ್ತ ಪಡಿಸುತ್ತದೆ ಎಂಬ ವಾದವನ್ನು ಮುಂದಿಟ್ಟು ಭ್ರೂಣವಿಜ್ಞಾನವನ್ನು ವಿಕಾಸದ ಬೆಳಕಿನಲ್ಲಿ ಅಧ್ಯಯಿಸುವ ಕಾರ್ಯಕ್ಕೆ ಅಡಿಪಾಯ ಹಾಕಿದ.

ಡಾರ್ವಿನ್ ಸಿದ್ಧಾಂತದ ಇನ್ನೊಂದು ಪ್ರಭಾವ ತಳಿವಿಜ್ಞಾನ. ಮೆಂಡಲೀಯ ಆನುವಂಶಿಕತೆಯ ನಿಯಮಗಳ ವಿಶದೀಕರಣ ಹಾಗೂ ಜೀನ್ ಎಂಬುದು ಆನುವಂಶಿಕತೆಯ ಘಟಕ ಎಂಬ ಪರಿಕಲ್ಪನೆಗಳನ್ನು ಅಧರಿಸಿ ರೂಪುಗೊಂಡುದು. ಇದರಿಂದ ಆನುವಂಶಿಕ ವಿಚರಣೆಗಳು ಹೇಗೆ ಉತ್ಪತ್ತಿಯಾಗುವುವು, ಅವುಗಳ ಸ್ವಭಾವವೇನು ಎಂಬುವುದನ್ನೂ ಇವುಗಳ ಮೇಲೆ ನೈಸರ್ಗಿಕ ಆಯ್ಕೆಯ ಕ್ರಿಯೆ ಯಾವ ತೆರನಾದುದು ಎಂಬುದನ್ನೂ ಹೆಚ್ಚು ಸ್ಪಷ್ಟ ಪಡಿಸಲು ಸಾಧ್ಯವಾಯಿತೆನ್ನಬಹುದು. ನಿಸರ್ಗದಲ್ಲಿ ಕಂಡುಬರುವ ಸಹಜ ಸಂದಣಿಗಳ ಸಂಕರವನ್ನು ಮತ್ತು ಆನುವಂಶಿಕತೆಯನ್ನು ಅರಿಯಲು ಇದು ಒಂದು ಸಾಧನವಾಯಿತು. ಇಂಥ ಅಧ್ಯಯನಗಳ ಫಲವಾಗಿ ಇಂದು ಸಂದಣಿ ತಳಿವಿಜ್ಞಾನ

(ಪಾಪ್ಯುಲೇಷನ್ ಜೆನೆಟಿಕ್ಸ್) ರೂಪುಗೊಂಡಿದೆ. ಹಾಗೆಯೇ ಪ್ರಭೇದೀಕರಣ ಹೇಗೆ ನಡೆಯುತ್ತದೆ ಎಂಭುದನ್ನು ವಿವರಿಸಲು ಸಾಧ್ಯವಾಗಿದೆ.

ತಳಿವಿಜ್ಞಾನ: ಮೆಂಡಲ್ ನಿಷ್ಕೃಷ್ಟವಾಗಿ ವಿಶ್ಲೇಷಿಸಿದ ಕಾಲಕ್ಕೂ (1866) ಮುಂಚೆಯೇ ತಳೀಕರಣ, ಸಂಕರ, ಗುಣಗಳ ಆನುವಂಶಿಕತೆ ಮುಂತಾದ ವಿಚಾರಗಳು ಜಟಿಲ ಸಮಸ್ಯೆಗಳೆನಿಸಿಕೊಂಡಿದ್ದುವು. ಮೆಂಡಲನ ಪೂರ್ವಜ ವಿಜ್ಞಾನಿಗಳು ಪ್ರಾಣಿಗಳ ಗುಣಧರ್ಮಗಳು ರಕ್ತದ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತವೆ ಎಂದೂ, ಈ ಅನುವಂಶಿಕ ಗುಣಗಳಿಗೆ ಕಾರಣ ಹಲವಾರು ತೆರನ ರಸಧಾತುಗಳೆಂದೂ (ಹ್ಯೂಮರ್ಸ್) ಇಲ್ಲವೆ ಕೆಲವು ಅಸ್ಪಷ್ಟ ವಸ್ತುಗಳೆಂದೂ ನಂಬಿದ್ದರು. ಬಟಾಣಿ ಗಿಡದ ಏಳು ಜೊತೆ ಆಯ್ದ ಗುಣಲಕ್ಷಣಗಳನ್ನು ಅವು ಪೀಳಿಗೆಯಿಂದ ಪೀಳಿಗೆಗೆ ಸಾಗಿಹೋಗುವ ವಿಧಾನವನ್ನೂ ಎಚ್ಚರಿಕೆಯಿಂದ ಪ್ರಯೋಗಗಳ ಮೂಲಕ ಅಭ್ಯಾಸ ಮಾಡಿದ ಮೆಂಡಲ್ ಆನುವಂಶಿಕತೆಯ ಹಳೆಯ ಮಾದರಿಗಳನ್ನು ವಿಸ್ಥಾಪಿಸುವಲ್ಲಿ ಸಮರ್ಥನಾದ.

20ನೆಯ ಶತಕದ ಆದಿಯಲ್ಲಿ ತಳಿವಿಜ್ಞಾನ ಮತ್ತಷ್ಟು ಪ್ರಗತಿಹೊಂದಿತು. ಆನುವಂಶಿಕ ಕಾರಕಗಳು ಕ್ರೊಮೋಸೋಮಿನ ಮೇಲೆ ಸ್ಥಿರವಾಗಿರುತ್ತವೆಂದು ಪತ್ತೆ ಹಚ್ಚಲಾಯಿತು. ಈ ಆನುವಂಶಿಕ ಕಾರಕಗಳೇ ಜೀನುಗಳು. ಅಮೆರಿಕದ ತಳಿವಿಜ್ಞಾನಿ ತಾಮಸ್ ಹಂಟ್ ಮಾರ್ಗನ್ ಹೆಣ್ಣುನೊಣ ಡ್ರೊಸಾಫಿಲದ ಮೇಲೆ ನಡೆಸಿದ ವ್ಯಾಪಕ ಸಂಶೋಧನೆಗಳ ಫಲವಾಗಿ ಪ್ರಾಣಿತಳಿವಿಜ್ಞಾನ ಪ್ರಾಮುಖ್ಯಕ್ಕೆ ಬಂತು. ಜೀನ್‌ಗಳು ಕ್ರೊಮೋಸೋಮುಗಳ ಮೇಲೆ ರೇಖೀಯಾಗಿ ಜೋಡಣೆಗೊಂಡಿವೆ. ಕ್ರೊಮೋಸೋಮ್ ಭಾಗಗಳು ಪರಸ್ಪರ ಬದಲುಗೊಳ್ಳುವುವು. ಗುಣಲಕ್ಷಣಗಳನ್ನು ನಿರ್ಧರಿಸುವಲ್ಲಿ ಜೀನ್‌ಗಳು ಅಂತರಕ್ರಿಯೆಗಳಿಗೆ ಒಳಗಾಗುವುವು ಎಂಬ ಮುಖ್ಯ ಪರಿಕಲ್ಪನೆಗಳು ರೂಪುಗೊಂಡದ್ದು ಮಾರ್ಗನ್ನನ ಸಂಶೋಧನೆಗಳಿಂದ. ಮಾರ್ಗನ್ನನ ವಿದ್ಯಾರ್ಥಿ ಹರ್ಮನ್ ಮುಲರ್ ಎಂಬಾತ ಜೀನ್‌ರೂಪದಲ್ಲಿ ಬದಲಾವಣೆಗಳನ್ನು ಉಂಟುಮಾಡುವಂತೆ (ಜೀನ್‌ವ್ಯತ್ಯಯ) ಎಕ್ಸ್‌ಕಿರಣಗಳನ್ನು ಬಳಸಬಹುದೆಂದು ತೋರಿಸಿಕೊಟ್ಟು ವಿವರಣೆಗಳ (ವೈವಿಧ್ಯ–ವೇರಿಯೇಷನ್) ಅಧ್ಯಯನಕ್ಕೆ ಬುನಾದಿ ಹಾಕಿದ.

ಕೋಶೀಯ ಮತ್ತು ಅಣುವಿಕ ಜೀವವಿಜ್ಞಾನ: 19ನೆಯ ಶತಮಾನದ ಆದಿಯಲ್ಲೇ ಜೀವದ ಮೂಲ ಘಟಕ ಜೀವಕೋಶ ಎಂಬುದನ್ನು ಗಮನಿಸಲಾಗಿದ್ದರೂ ಜೀವಕೋಶವನ್ನು ಕುರಿತು ಆತ್ಯಂತ ಮಹತ್ತ್ವದ ಸಂಶೋಧನೆಗಳು ನಡೆದಿರುವುದು 1940ರಿಂದೀಚೆಗೆ. ದೃಕ್ಸೂಕ್ಷ್ಮ ದರ್ಶಕಗಳನ್ನು ಅವಲಂಬಿಸಿದ್ದು ಪ್ರಧಾನವಾಗಿ ವಿವರಣಾತ್ಮಕ ವಿಷಯವಾಗಿದ್ದ ಕೋಶೀಯ ವಿಜ್ಞಾನ, ತರುವಾಯದ ವರ್ಷಗಳಲ್ಲಿ ಸಾಧಿತವಾದ ಹೊಸ ತಂತ್ರಗಳ ನೆರವಿನಿಂದ (ಎಲೆಕ್ಟ್ರಾನ್ ಸೂಕ್ಷ್ಮ ದರ್ಶಕ ಹಾಗೂ ಜೀವರಸಾಯನ ಹೊಸ ತಂತ್ರಗಳ ನೆರವಿನಿಂದ (ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಹಾಗೂ ಜೀವರಸಾಯನ ವಿಜ್ಞಾನದ ಸಲಕರಣೆಗಳು) ಮೂಲಭೂತ ಜೀವಪ್ರಕ್ರಿಯೆಗಳ ಅಣುವಿಕ ಶೋಧನೆಯನ್ನು ಕುರಿತಂಥ ಕ್ರಿಯಾತ್ಮಕ ವಿಚಾರಣೆಯಾಗಿ ಪರಿವರ್ತನೆಗೊಂಡಿದೆ.

ಕೋಶದ ನ್ಯೂಕ್ಲಿಯಸ್, ಕ್ರೊಮೋಸೋಮುಗಳು ಮುಂತಾದ ಅಂಗಕಗಳ ಅಧ್ಯಯನ ಮಾತ್ರವಲ್ಲದೆ ಪ್ರೋಟೀನ್, ನ್ಯೂಕ್ಲಿಯಿಕ್ ಅಮ್ಲಗಳು, ಮೇದಸ್ಸು, ಶರ್ಕರಗಳ ರಾಸಾಯನಿಕ ಹಾಗೂ ಅಣುವಿಕ ಶೋಧನೆಗಳು ಈ ಉಪವಿಭಾಗದ ಪ್ರಮುಖ ಸಾಧನೆಗಳಾಗಿವೆ.

ಪರಿಸರ ವಿಜ್ಞಾನ: ಜೀವಜಗತ್ತಿನ ಮೂರು ಪ್ರಧಾನ ಗುಂಪುಗಳ, ಅಂದರೆ ಉತ್ಪಾದಕಗಳಾದ ಸಸ್ಯಗಳು, ಅನುಭೋಗಿಗಳಾದ ಪ್ರಾಣಿಗಳು ಹಾಗೂ ವಿಘಟನಕಾರಿಗಳಾದ ಬ್ಯಾಕ್ಟೀರಿಯ ಮತ್ತು ಶಿಲೀಂಧ್ರಗಳು–ಇವುಗಳ ಅಂತರವರ್ತನೆಯೂ ಜೀವಿಗಳು ಮತ್ತು ನಿರ್ಜೀವ ವಸ್ತುಗಳ ನಡುವೆ ಕಾಣಬರುವ ವಸ್ತುವಿನಿಮಯವೂ ಸಸ್ಯಪ್ರಾಣಿ ಬ್ಯಾಕ್ಟೀರಿಯಗಳ ಸಹಜ ಸಮೂಹದ ಮೂಲಕ ಶಕ್ತಿ ಮತ್ತು ವಸ್ತುಗಳ ಹರಿವೂ ಪರಿಸರ ವಿಜ್ಞಾನದ ಅಧ್ಯಯನ ವಿಷಯ. ಈ ಮೂರು ಜೀವಿಗಳ ಸಮೂಹಕ್ಕೆ ಒಟ್ಟಾರೆಯಾಗಿ ಪರಿಸರೀಯ ವ್ಯವಸ್ಥೆ (ಈಕೊಸಿಸ್ಟಮ್) ಎಂದು ಹೆಸರು.

ಪ್ರಾಣಿಸ್ವಭಾವ ವಿಜ್ಞಾನ: ಪ್ರಾಣಿಗಳ ನಡತೆ, ಸ್ವಭಾವ ಕುರಿತ ಈ ಅಧ್ಯಯನ ತೀರ ಇತ್ತೀಚಿನದು; 20ನೆಯ ಶತಮಾನದ್ದು. ಇದು ಸಹಜವಾಗಿಯೇ ಪ್ರಾಣಿಗಳಿಗೆ ಮಾತ್ರ ಸೀಮಿತವಾದ ವ್ಯಾವರ್ತಕ ವಿಷಯ. ಪ್ರಾಣಿಗಳ ಗ್ರಹಣ ಸಾಮರ್ಥ್ಯ, ಸಂಯೋಜನೆ, ಸ್ಥಾನನಿರ್ಧರಣ, ಕಲಿಕೆ, ನೆನಪಿನಸಾಮರ್ಥ್ಯ ಮುಂತಾದ ವೈಯುಕ್ತಿಕ ಭೌದ್ಧಿಕ ವಿಷಯಗಳಿಂದ ಹಿಡಿದು ಸಂಪರ್ಕ, ಸಾಮಾಜಿಕ ವರ್ತನೆ ಮುಂತಾದ ಸಮೂಹ ವಿಚಾರಗಳ ವರೆಗೆ ಇದರಲ್ಲಿ ಅಧ್ಯಯಿಸಲಾಗುತ್ತದೆ.

ಇವೆಲ್ಲ ಆಧುನಿಕ ಸಾಧನೆಗಳ ಫಲವಾಗಿ ಪ್ರಾಣಿವಿಜ್ಞಾನ ಇಂದು ಪ್ರಾಣಿ ಜೀವವಿಜ್ಞಾನವಾಗಿದೆ. ಎಲ್ಲ ಜೀವಿಗಳೂ ಒಂದೇ ಎಂಬುದೇ ಇದರ ಮೂಲಾಧಾರ.

ಪ್ರಾಣಿವಿಜ್ಞಾನದ ಸಂಶೋಧನೆಯ ತಂತ್ರಗಳು, ಕಾರ್ಯವಿಧಾನಗಳು: ಪ್ರಾಣಿಗಳ ಸಂಶೋಧನೆಗೆ ಬಳಸಲಾಗುವ ತಂತ್ರಗಳು, ಸಲಕರಣೆಗಳು ವೈವಿಧ್ಯಮಯ. ಸೂಕ್ಷ್ಮದರ್ಶಕಗಳ (ದೃಕ್ಸೂಕ್ಷ್ಮದರ್ಶಕ ಹಾಗೂ ಎಲೆಕ್ಟ್ರಾನ್ ಸೂಕ್ಷ್ಮದರ್ಶಕ) ಬಳಕೆ ಎಲ್ಲರಿಗೂ ತಿಳಿದದ್ದೇ. ಕೋಶೀಯ ವ್ಯವಸ್ಥೆಗಳ ಘಟಕಗಳ ಆಧ್ಯಯನಕ್ಕೆ ಪೃಥಕ್ಕರಣ ಹಾಗೂ ಶುದ್ಧೀಕರಣ ವಿಧಾನಗಳು ಆತ್ಯಗತ್ಯ. ಜೀವರಾಸಾಯನಿಕ ಆಭ್ಯಾಸಗಳಿಗೆ ವಿಶೇಷವಾಗಿ ಬಳಕೆಯಲ್ಲಿರುವ ತಂತ್ರವೆಂದರೆ ವಿಕಿರಣಪಟು ಸಂಯುಕ್ತಗಳ ಬಳಕೆ. ಇದರಿಂದ ಉಪಾಪಚಯ ಪಥಗಳ ಅಭ್ಯಾಸ ಸುಲಭವಾಗಿದೆ. ಕಿಣ್ವ ನಿಯಂತ್ರಕ ಪ್ರತಿಕ್ರಿಯೆಗಳ ದರವನ್ನು ಅಳೆಯಲೂ ಸಂಖ್ಯಾಕಲನಾತ್ಮಕ ರೀತ್ಯ ವಿಶ್ಲೇಷಣೆ ನಡೆಸಲೂ ಪ್ರಾಣಿವಿಜ್ಞಾನದಲ್ಲಿ ಇತ್ತೀಚೆಗೆ ಗಣಕ ಬಳಕೆಯೂ ಆರಂಭವಾಗಿದೆ. ಗಣಕ ಯಂತ್ರಗಳಲ್ಲಿ ಮಾದರಿಗಳನ್ನು ರಚಿಸಿ ತನ್ಮೂಲಕ, ವಿವಿಧ ಜೀವಿಗಳ ರಚನೆ, ಕ್ರಿಯಾವಿಧಾನ ಮುಂತಾದುವುಗಳನ್ನು ವಿವಿಧ ಮಟ್ಟಗಳಲ್ಲಿ ಹಂತಗಳಲ್ಲಿ ಅವುಗಳನ್ನು ಅಧ್ಯಯಿಸುವುದು ಸಾಧ್ಯವಾಗಿದೆ.

ಪ್ರಾಣಿವಿಜ್ಞಾನದಲ್ಲಿ ಇಂದು ಸಾಧಿಸಲಾಗಿರುವ ಪ್ರಗತಿಪರ ಸಾಧನೆಗಳಿಂದಾಗಿ ಉದಾಹರಣೆಗೆ, ಆಯ್ದ ತಳೀಕರಣ, ಪ್ರಾಣಿಪೋಷಣೆಯ ಉತ್ತಮಿಕೆ ಮುಂತಾದುವು ಪ್ರಾಣಿಜನ್ಯ ಆಹಾರೋತ್ಪಾದನೆ (ಮಾಂಸ, ಹಾಲು, ಹೈನು, ಮೀನುಗಾರಿಕೆ) ಧರ್ಮ, ತುಪ್ಪುಳ, ಉಣ್ಣೆ, ಸಾವಯವ ಗೊಬ್ಬರಗಳು ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ. ಈ ಅಧ್ಯಯನಗಳು ಅನ್ವಿಕ ಪ್ರಾಣಿವಿಜ್ಞಾನದ ಪ್ರಕಾರಗಳಾಗಿ ರೂಪುತಳೆದಿವೆ.

***

**ಪ್ರಾಣಿವಿತರಣವಿಜ್ಞಾನ:** ಭೂಮಿಯಲ್ಲಿ ಪ್ರಾಣಿಗಳ ವಿತರಣೆ, ಪರಿಸರದ ಮೇಲೆ ಅವುಗಳ ಪ್ರಭಾವ ಮತ್ತು ಅವುಗಳ ಮೇಲೆ ಪರಿಸರದ ಪ್ರಭಾವದ ವೈಜ್ಞಾನಿಕ ಅಧ್ಯಯನ (ಝೂಜಿಯೊಗ್ರಫಿ). ಪ್ರಾಣಿಗಳ ನೈಸರ್ಗಿಕ ವಿತರಣೆಯನ್ನು ಪರಿಶೀಲಿಸಿದಾಗ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ. ೧. ಎಲ್ಲ ಪ್ರದೇಶಗಳಲ್ಲಿ ನೆಲೆಗೊಂಡಿರುವ ಪ್ರಾಣಿಜಾತಿ ಅತಿ ವಿರಳ. ೨. ಹೆಚ್ಚಿನ ಪ್ರಾಣಿಜಾತಿಗಳು ತೀರ ಸೀಮಿತ ಪ್ರದೇಶಗಳಲ್ಲಿ ನೆಲೆಗೊಂಡಿವೆ.

ಪ್ರಾಣಿ ಸಂಖ್ಯಾ ಸ್ಫೋಟ, ತೀವ್ರಸ್ಪರ್ಧೆ, ಶತ್ರುಭಯ, ರೋಗಗಳು, ಆಹಾರ ಕೊರತೆ ಮತ್ತು ಪ್ರತಿಕೂಲವೆನಿಸುವ ಶ್ರಾಯಿಕ ಹವೆ, ಮುಂತಾದುವುಗಳು ಪ್ರಾಣಿವಿತರಣೆಯನ್ನು ನಿಯಂತ್ರಿಸುವ ಲಕ್ಷಣಗಳು. ಬಾಹ್ಯಕಾರಕಗಳು ಅಥವಾ ಪ್ರತಿಬಂಧಕಗಳು ಸಹ ಈ ಕ್ರಿಯೆಯಲ್ಲಿ ಭಾಗಿಯಾಗಿವೆ. ಅವುಗಳಲ್ಲಿ ಮೂರು ವಿಧ :

೧. ಭೌತ ಪ್ರತಿಬಂಧಕ. ಉದಾ: ಜಲಚರವರ್ಗಕ್ಕೆ ಸೇರಿದ ಪ್ರಾಣಿಗಳಿಗೆ ಭೂಮಿ ಪ್ರತಿಬಂಧಕವಾದರೆ ಭೂಚರವರ್ಗಕ್ಕೆ ಸೇರಿದುವುಗಳಿಗೆ ನೀರು ಪ್ರತಿ ಬಂಧಕ.

೨. ವಾಯುಗುಣಾತ್ಮಕ ಪ್ರತಿಬಂಧಕ. ಉದಾ: ಉಷ್ಣತೆಯ ತೀವ್ರ ಏರಿಳಿತ, ತೇವ, ಮಳೆ, ಹಿಮ, ಆರ್ದ್ರತೆ, ಮಣ್ಣಿನ ತೇವ, ಬಿಸಿಲಿನ ಪ್ರಮಾಣ ಇತ್ಯಾದಿ.

೩. ಜೈವಿಕ ಪ್ರತಿಬಂಧಕ. ಉದಾ: ಅಗತ್ಯ ಪ್ರಮಾಣದ ಆಹಾರ ಕೊರತೆ, ಪ್ರತಿಸ್ಪರ್ಧಿ, ಶತ್ರು ಅಥವಾ ರೋಗಗಳ ಕಾಟ.

ಪ್ರಾಣಿ ವಿತರಣ ವಿಧಾನಗಳು : ಪ್ರಾಣಿವಿತರಣವಿಜ್ಞಾನಕ್ಕೆ ಪರಿಸರವಿಜ್ಞಾನದೊಡನೆ ಗಹನ ಸಂಬಂಧ ಇರುವುದರಿಂದ ಪ್ರತಿಬಂಧಕಗಳನ್ನೂ ಪರಿಸರದ ಸ್ಥಿತಿಗತಿಗಳನ್ನೂ ಅವಲಂಬಿಸಿ ಪ್ರಾಣಿವಿತರಣೆಯ ಅಧ್ಯಯನವನ್ನು ನಡೆಸಲಾಗಿದೆ. ಇದರಲ್ಲಿ ಮೂರು ವಿಧ: ೧. ಭೌಗೋಳಿಕ ವಿತರಣೆ, ೨. ಪಾರಿಸಾರಿಕ ವಿತರಣೆ, ೩. ಭೂವೈಜ್ಞಾನಿಕ ವಿತರಣೆ

೧. ಭೌಗೋಳಿಕ ವಿತರಣೆ : ಅತಿ ಹೆಚ್ಚಿನ ಸಂಖ್ಯೆಯ ಪ್ರಾಣಿವರ್ಗಗಳು ಈ ವಿತರಣೆಯಲ್ಲಿವೆ. ಕಾರಣ, ಇದು ದೊಡ್ಡದಾದ ಹಾಗೂ ಮುಖ್ಯವಾದ ವಿತರಣೆಯೆನಿಸಿದೆ. ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಿದವರಲ್ಲಿ ಸ್ಲೇಟರ್ (೧೮೫೭), ಗುಂಥರ್ (೧೮೫೮), ಆಂಡ್ರೂ ಮರ್ಫಿ (೧೮೬೬), ಹಕ್ಸಲಿ(೧೮೬೮), ಆಲ್ಫ್ರೆಡ್ ರಸೆಲ್ ವ್ಯಾಲೇಸ್(೧೮೭೬), ಹೈಲ್‌ಪ್ರಿನ್ (೧೮೮೭), ಬ್ಲಾನ್‌ಫರ್ಡ್ (೧೮೯೦), ಲೈಡೆಕ್ಕರ್ (೧೮೯೬), ಗಾಡೋ (೧೯೧೩) ಮತ್ತು ಸ್ಮಿತ್ (೧೯೫೮) ಮುಖ್ಯರಾದವರು. ಇವರ ಪೈಕಿ ವ್ಯಾಲೇಸ್‌ನನ್ನು ಪ್ರಾಣಿವಿತರಣವಿಜ್ಞಾನದ ಸ್ಥಾಪಕನೆಂದು ಪರಿಗಣಿಸಲಾಗಿದೆ. ಇವನ ವರ್ಗೀಕರಣ ವಿಧಾನ ಹೆಚ್ಚು ಸಮಂಜಸವಾದುದು. ಅನೇಕ ಪ್ರದೇಶಗಳನ್ನು ಒಟ್ಟಾರೆ ಸೇರಿಸಿ ವರ್ಗೀಕರಿಸುವ ಬದಲು ಪ್ರತ್ಯೇಕ ಪ್ರದೇಶಗಳಿಗೇ ಹೆಚ್ಚಿನ ಪ್ರಾಮುಖ್ಯ ನೀಡಿರುವುದು ಈ ವಿಧಾನದ ವೈಶಿಷ್ಟ್ಯ. ಈತ ಸ್ಲೇಟರನ ವಿಧಾನ ಅನುಸರಿಸಿದ್ದಾನೆ. ಸ್ಲೇಟರ್ ವರ್ಗೀಕರಿಸಿದ್ದ ಇಂಡಿಯಾ ಪ್ರದೇಶವನ್ನು (ಮಧ್ಯ ಪೇಲಿಯೊಟ್ರಾಪಿಕಲ್ ಪ್ರದೇಶ) ವ್ಯಾಲೇಸ್ ಓರಿಯಂಟಲ್ ಪ್ರದೇಶವೆಂದು ಕರೆದು ಉಳಿದೆಲ್ಲ ವರ್ಗೀಕರಣವನ್ನು ಹಾಗೆಯೇ ಇರಿಸಿದ್ದಾನೆ.

ವ್ಯಾಲೇಸ್ ಸೂಚಿಸಿರುವ ಪ್ರಾಣಿ ವಿತರಣ ಪ್ರದೇಶಗಳಲ್ಲಿ ಪೇಲಿಯಾರ್ಕ್‌ಟಿಕ್ ಪ್ರದೇಶ, ಈಥಿಯೋಪಿಯನ್ ಪ್ರದೇಶ, ಓರಿಯಂಟಲ್ ಪ್ರದೇಶ, ಆಸ್ಟ್ರೇಲಿಯನ್ ಪ್ರದೇಶ, ನೀಯಾರ್ಕ್‌ಟಿಕ್ ಪ್ರದೇಶ, ನೀಯೊಟ್ರಾಪಿಕಲ್ ಪ್ರದೇಶಗಳು ಇವೆ.

ಪೇಲಿಯಾರ್ಕ್‌ಟಿಕ್ ಪ್ರದೇಶ : ಈ ಪ್ರದೇಶದ ವಿಸ್ತೀರ್ಣ ಉಳಿದೆಲ್ಲ ಪ್ರದೇಶಗಳಿಗಿಂತ ಜಾಸ್ತಿ. ಇದು ಯೂರೋಪ್ ಮತ್ತು ರಷ್ಯಾ ಭಾಗಗಳನ್ನು ಒಳಗೊಂಡು ಪೆಸಿಫಿಕ್



ತೀರದವರೆಗೂ ದಕ್ಷಿಣದಲ್ಲಿ ಭೂಮಧ್ಯ ಸಮುದ್ರಕ್ಕೆ ಸೇರಿದಂತಿರುವ ಆಫ್ರಿಕ ಮತ್ತು ಉತ್ತರ ಅರೇಬಿಯ ತೀರಪ್ರದೇಶ ಭಾಗಗಳಲ್ಲಿ ಸಮುದ್ರದವರೆಗೂ ಹಬ್ಬಿದೆ. ಈ ಪ್ರದೇಶದ ಪೂರ್ವ, ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಸಮುದ್ರವೂ, ದಕ್ಷಿಣಕ್ಕೆ ಸಹರಾ ಮರುಭೂಮಿ ಮತ್ತು ಹಿಮಾಲಯ ಪರ್ವತವೂ ಇವೆ. ಪೇಲಿಯಾರ್ಕ್‌ಟಿಕ್ ಪ್ರದೇಶವನ್ನು ನಾಲ್ಕು ಉಪಪ್ರದೇಶಗಳಾಗಿ ವಿಂಗಡಿಸಲಾಗಿದೆ.

(i) ಯೂರೋಪ್ ಉ. ಪ್ರ. : ದಕ್ಷಿಣ ಯೂರೋಪಿನಿಂದ ದಕ್ಷಿಣದಲ್ಲಿ ಕಪ್ಪು ಸಮುದ್ರದವರೆಗೆ, ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರ ಮತ್ತು ಯೂರೋಪ್ ಪರ್ವತಗಳ ಗಡಿಗಳಿರುವ ಭಾಗ.

(ii) ಭೂಮಧ್ಯ ಸಮುದ್ರ ಉ. ಪ್ರ. : ದಕ್ಷಿಣ ಯೂರೋಪ್, ಸಹರಾ ಮತ್ತು ಈಜಿಪ್ಟ್ ಸೇರಿದ ಉತ್ತರ ಅಫ್ರಿಕ, ಪೂರ್ವಕ್ಕೆ ಏಷ್ಯ ಮೈನ‌ರ್, ಪರ್ಷಿಯ ಮತ್ತು ಕಾಬೂಲ್ ಹಾಗೂ ಸಿಂಧೂ ಪ್ರದೇಶದ ಮರುಭೂಮಿ.

(iii) ಸೈಬೀರಿಯ ಉ. ಪ್ರ. : ಉತ್ತರ ಮತ್ತು ಮಧ್ಯ ಏಷ್ಯದಿಂದ ಪೂರ್ವದಲ್ಲಿ ಮಂಗೋಲಿಯದ ವಿಶಾಲ ಮರುಭೂಮಿ ಹಾಗೂ ದಕ್ಷಿಣದಲ್ಲಿ ಹಿಮಾಲಯದ ಗಡಿ.

(iv) ಮಂಚೂರಿಯ ಉ. ಪ್ರ: ಜಪಾನ್, ಉತ್ತರ ಚೀನಾ, ಕೊರಿಯ ಮತ್ತು ಮಂಚೂರಿಯ ಈ ಉಪಪ್ರದೇಶಗಳ ಕೆಲವು ಭಾಗಗಳಲ್ಲಿ ಉತ್ತರ ಸಮಶೀತೋಷ್ಣ ವಲಯವಿದೆ. ಪೂರ್ವ ಏಷ್ಯದ ಭಾಗಗಳಲ್ಲಿ (ಚೀನ, ಜಪಾನ್ ದೇಶಗಳನ್ನು ಒಳಗೊಂಡಂತೆ), ಪ್ರತಿ ವರ್ಷ ಎಲೆಗಳು ಉದುರಿಹೋಗುವ ಮರಗಳನ್ನು ಹೊಂದಿರುವ ಪರ್ಣಪಾತಿ ಅರಣ್ಯಗಳಿವೆ (ಡೆಸಿಡ್ಯುವಸ್ ಫಾರೆಸ್ಟ್ಸ್).

ಏಷ್ಯದ ಒಳಪ್ರದೇಶ ಬಂಜರು ಭೂಮಿಯಿಂದ ಕೂಡಿದ್ದು, ನೈರುತ್ಯ ಏಷ್ಯದಿಂದ ಉತ್ತರ ಆಫ್ರಿಕದವರೆಗೆ ವ್ಯಾಪಿಸಿದೆ. ಯೂರೋಪಿನಲ್ಲಿ ಪರ್ಣಪಾತಿ ಅರಣ್ಯ ಅಥವಾ ಮಿಶ್ರ ಅರಣ್ಯಗಳಿವೆ. ಉತ್ತರ ಏಷ್ಯ ಮತ್ತು ಯೂರೋಪಿನ ಮಧ್ಯಭಾಗದಲ್ಲಿ ಹೇರಳವಾಗಿ ಶಂಕುಧಾರಿ (ಕೋನಿಫೆರಸ್) ಅರಣ್ಯಗಳಿವೆ.

ಈ ಪ್ರದೇಶದಲ್ಲಿ ಪ್ರಮುಖವಾಗಿ ಸ್ತನಿಗಳಾದ ಹೆಡ್ಜಹಾಗ್, ಧ್ರುವಕರಡಿ, ಪಾಂಡ, ಕುದುರೆ, ಹಂದಿ, ಒಂಟೆ, ಜಿಂಕೆ, ಮೊಲ, ಅಳಿಲು, ಹಾರುವ ಅಳಿಲು, ಬೀವರ್, ನೆಗೆಯುವ ಇಲಿ, ಬಾವಲಿ ಮತ್ತು ಕೋತಿ, ವಿವಿಧ ಪ್ರಭೇದಗಳಿಗೆ ಸೇರಿರುವ ಪಕ್ಷಿಗಳು, ಸರೀಸೃಪಗಳು, ಉಭಯವಾಸಿಗಳು ಹಾಗೂ ಮೀನುಗಳಿವೆ.

ಈಥಿಯೋಪಿಯನ್ ಪ್ರದೇಶ : ಪ್ರಾಣಿ ವಿತರಣೆಯ ಪ್ರದೇಶಗಳಲ್ಲೆಲ್ಲ ವಿಶಿಷ್ಟವಾದ ಪ್ರದೇಶವಿದು. ಇದರಲ್ಲಿ ಅಟ್ಲಾಸ್ ಪರ್ವತ, ಸಹರಾ ಮರುಭೂಮಿಯ ದಕ್ಷಿಣಕ್ಕಿರುವ ಆಫ್ರಿಕ ಪ್ರದೇಶ ಹಾಗೂ ಅರೇಬಿಯ ದಕ್ಷಿಣ ಭಾಗದ ಮೂಲೆ ಪ್ರದೇಶ ಸೇರಿವೆ. ಮಡಗಾಸ್ಕರ್ ಪ್ರದೇಶವನ್ನು ಇದರಲ್ಲಿ ಸೇರಿಸಬಹುದಾದರೂ ಅದನ್ನು ಪ್ರತ್ಯೇಕವಾಗಿ ಪರಿಗಣಿಸುವುದು ಹೆಚ್ಚು ಸಮರ್ಪಕವೆಂದು ಡಾರ್ಲಿಂಗ್‌ಟನ್ ಹೇಳಿದ್ದಾನೆ. ಈಥಿಯೋಪಿಯನ್ ಪ್ರದೇಶದಲ್ಲಿ ೪ ಉಪಪ್ರದೇಶಗಳಿವೆ.

(i) ಪೂರ್ವ ಆಫ್ರಿಕ ಉ. ಪ್ರ. : ಸಹರಾಕ್ಕೆ ದಕ್ಷಿಣದಲ್ಲಿರುವ ಉಷ್ಣವಲಯದ ಎಲ್ಲ ಭಾಗ, ಈಥಿಯೋಪಿಯ, ಯುಗಾಂಡ, ಕೀನ್ಯ. ಟಾಂಗಾನೀಕ (ಜಾಂಬೆಸಿ ನದಿಯ ತಡಿವರೆಗೆ).

(ii) ಪಶ್ಚಿಮ ಆಫ್ರಿಕ ಉ. ಪ್ರ. : ಸೆನೆಗಾಲ್‌ನಿಂದ ಅಂಗೋಲದವರೆಗೆ ಗೋಲ್ಡ್‌ಕೋಸ್ಟ್ ಮತ್ತು ಕಾಂಗೋವರಗಿನ ಪ್ರದೇಶ.

(iii) ದಕ್ಷಿಣ ಆಫ್ರಿಕ ಉ. ಪ್ರ. : ದಕ್ಷಿಣ ಅಫ್ರಿಕ ಯೂನಿಯನ್, ಮೊಜಾಂಬಿಕ್.

(iv) ಮಲಗ್ಯಾಸಿ ಉ.ಪ್ರ. : ಮಡಗಾಸ್ಕರ್ ಮತ್ತು ಅದರ ಸುತ್ತಮುತ್ತಲಿನ ದ್ವೀಪಗಳು.

ಈಥಿಯೋಪಿಯನ್ ಪ್ರದೇಶ ಮುಖ್ಯವಾಗಿ ಉಷ್ಣವಲಯವನ್ನೊಳಗೊಂಡಿದೆ. ಆಫ್ರಿಕದ ದಕ್ಷಿಣ ತುದಿಪ್ರದೇಶ ಸಮಶೀತೋಷ್ಣವಲಯವಾದ್ದರಿಂದ ಅಲ್ಲಿ ಸಂಕೀರ್ಣವಾದ ಮಿಶ್ರ ಸಸ್ಯ ಸಂಪತ್ತಿದೆ. ದೊಡ್ಡ ನದಿಗಳೂ ನಿತ್ಯ ಹರಿ ದ್ವರ್ಣ ಕಾಡುಗಳಿವೆ. ಈ ಪ್ರದೇಶದಲ್ಲಿ ಪ್ರಮುಖವಾಗಿರುವ ಪ್ರಾಣಿಗಳು: ಗೊರಿಲ, ಚಿಂಪಾಂಜಿ, ಆನೆ, ಘೇಂಡಾ ಮೃಗ, ಸಿಂಹ, ನೀರುಕುದುರೆ, ಹೇಸರಗತ್ತೆ. ಜಿರಾಫೆ, ಕೊಂಬಿನ ಜಿಂಕೆ, ಉಷ್ಟ್ರಪಕ್ಷಿ ಮತ್ತು ಗಿನೀಕೋಳಿ. ಮಡಗಾಸ್ಕರ್ ಪ್ರದೇಶದಲ್ಲಿ ಹಲವಾರು ಲೆಮರ್‌ಗಳನ್ನು ಕಾಣಬಹುದು. ಈಥಿಯೋಪಿಯನ್ ಪ್ರದೇಶದಲ್ಲಿ ಬೇರೆ ಬೇರೆ ಪ್ರಭೇದಗಳಿಗೆ ಸೇರಿದ ಅಸಂಖ್ಯಾತ ಹಕ್ಕಿಗಳಿವೆ. ಕೋಗಿಲೆ, ಮರಕುಟುಕ, ಗೀಜಗ, ಹನಿಗೈಡ್, ಬುಲ್‌ಬುಲ್, ಸೂರ್ಯಪಕ್ಷಿ, ಪ್ರಾಣಿಭಕ್ಷಿಗಳಾದ ಗಿಡುಗ, ರಣಹದ್ದು ಮತ್ತು ಗೂಬೆ ಇವೆ. ಈ ಪ್ರದೇಶಕ್ಕೆ ಸೀಮಿತವಾದ ಪಕ್ಷಿಗಳೆಂದರೆ: ಉಷ್ಟ್ರಪಕ್ಷಿ, ಹ್ಯಾಮರ್‌ಹೆಡ್, ಟಾರ ಕೋಸ್, ಮೌಸ್ ಮತ್ತು ಹೆಲ್ಮೆಟ್ ಶ್ರೈಕ್ ಪಕ್ಷಿ. ಇವುಗಳ ಜೊತೆಗೆ ವಿವಿಧ ಬಗೆಯ ಹಾವು, ಕಪ್ಪೆ, ಮೀನುಗಳು ಇವೆ.

ಓರಿಯಂಟಲ್ ಪ್ರದೇಶ : ಈ ಪ್ರದೇಶದಲ್ಲಿ ಭಾರತ, ಶ್ರೀಲಂಕಾ, ಇಂಡೋಚೀನಾ, ಮಲಯ ಅರ್ಚಿಪೆಲಾಗೋ, ಸುಮಾತ್ರ, ಬೋರ್ನಿಯೊ, ಜಾವ, ಬಾಲಿ, ಸೆಲೆಬೆಸ್ ಮತ್ತು ಫಿಲಿಫೈನ್ ದ್ವೀಪಗಳು ಸೇರಿವೆ. ಇದರ ಉತ್ತರ ಭಾಗದಲ್ಲಿ ಹಿಮಾಲಯ ಪರ್ವತ, ಉಳಿದ ಕಡೆ ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರಗಳಿವೆ. ಈ ಪ್ರದೇಶದ ಉಪಪ್ರದೇಶಗಳು ನಾಲ್ಕು.

(i) ಭಾರತ ಉ. ಪ್ರ. : ಹಿಮಾಲಯ ಪರ್ವತದ ತಪ್ಪಲಿನಿಂದ ಆರಂಭ ಗೊಂಡಿದೆ.

(ii) ಶ್ರೀಲಂಕಾ ಉ. ಪ್ರ. : ದಕ್ಷಿಣ ಭಾರತದ ಕೆಲವು ಭಾಗ ಮತ್ತು ಶ್ರೀಲಂಕಾ.

(iii) ಇಂಡೋಚೀನಾ ಉ. ಪ್ರ. : ದಕ್ಷಿಣ ಚೀನಾ ಮತ್ತು ಬರ್ಮ.

(iv) ಇಂಡೋಮಲಯ ಉ. ಪ್ರ. : ಮಲಕ ಪ್ರಸ್ಥಭೂಮಿ, ಮಲಯ ದ್ವೀಪಗಳು, ಬಾಲಿ, ಬೋರ್ನಿಯೋ, ಫಿಲಿಪೀನ್ಸ್ ದ್ವೀಪಗಳು.

ಈ ಪ್ರದೇಶ ಮುಖ್ಯವಾಗಿ ಉಷ್ಣವಲಯದಿಂದ ಕೂಡಿದೆ. ಇಲ್ಲಿ ವಾಸಿಸುವ ಮುಖ್ಯ ಪ್ರಾಣಿಗಳು ಟಾರ್ಸಿಯರ್, ಮಕಾಕ್, ಗಿಬನ್, ಉರಾಂಗ್ ಉಟಾನ್, ಭಾರತದ ಆನೆ, ಘೇಂಡಾ, ಮೃಗ ಕಾಡುನಾಯಿ, ಕರಡಿ ಮತ್ತು ಕಾಡುಹಂದಿ. ಅಲ್ಲದೆ ಅನೇಕ ವರ್ಣರಂಜಿತ ಪಕ್ಷಿಗಳಿವೆ. ಮರಕುಟುಕ, ಬುಲ್‌ಬುಲ್, ಪಿಟ, ಬ್ಯಾಬ್ಲರ್ ಹೇರಳವಾಗಿವೆ. ಹಲ್ಲಿ, ಹಾವು, ಆಮೆ, ಕಪ್ಪೆ, ಮೀನು ಇಲ್ಲಿ ವಾಸಿಸುತ್ತವೆ. ಓರಿಯಂಟಲ್ ಮತ್ತು ಈಥಿಯೋಪಿಯನ್ ಪ್ರದೇಶಗಳು ಉಷ್ಣವಲಯದವಾದ್ದರಿಂದ ಕೆಲವು ಪ್ರಭೇದಗಳು ಈ ಎರಡೂ ಪ್ರದೇಶಗಳಲ್ಲಿ ಸಾಮಾನ್ಯವಾಗಿವೆ.

ಆಸ್ಟ್ರೇಲಿಯನ್ ಪ್ರದೇಶ : ಆಸ್ಟ್ರೇಲಿಯ, ಟಾಸ್‌ಮೇನಿಯ, ನ್ಯೂಗಿನಿ, ನ್ಯೂಜೀಲೆಂಡ್, ಪೆಸಿಫಿಕ್‌ನ ಓಷೀಯಾನಿಕ್ ಸಣ್ಣ ದ್ವೀಪಗಳು ಈ ಪ್ರದೇಶಕ್ಕೆ ಸೇರಿವೆ. ಓರಿಯಂಟಲ್ ಪ್ರದೇಶದ ಕೆಲವು ಪ್ರಾಣಿವರ್ಗಗಳು ಈ ಪ್ರದೇಶದಲ್ಲಿ ವಾಸಿಸಿದರೂ, ಇದರ ಗಡಿಯನ್ನು ಸ್ಪಷ್ಟವಾಗಿ ಗುರುತಿಸಲು ಕಷ್ಟ. ಆದರೆ, ವ್ಯಾಲೇಸ್ ಈ ಸಮಸ್ಯೆಯನ್ನು ಪರಿಹರಿಸಿದ್ದಾನೆ. ಅವರು ಬೋರ್ನಿಯೊ, ಜಾವ, ಬಾಲಿ ಮುಂತಾದ ದ್ವೀಪಗಳನ್ನು ಓರಿಯಂಟಲ್ ಪ್ರದೇಶಕ್ಕೆ ಸೇರಿಸಿ, ಸೆಲಿಬೆಸ್, ತಿಮೊರ್ ಮತ್ತು ಲೋಬಾಕ್‌ಗಳನ್ನು ಆಸ್ಟ್ರೇಲಿಯ ಪ್ರದೇಶಕ್ಕೆ ಸೇರಿಸಿದ್ದಾನೆ. ಓರಿಯಂಟಲ್ ಮತ್ತು ಆಸ್ಟ್ರೇಲಿಯ ಪ್ರದೇಶಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಭೂಪಟದ ಮೇಲೆ ಎಳೆದ ಉದ್ದಗೆರೆಗೆ ವ್ಯಾಲೇಸ್‌ಗೆರೆ ಎಂದೂ, ಸಮಸ್ಯೆಗೆ ಸಿಕ್ಕಿದ ಕೆಲವು ದ್ವೀಪಗಳಿಗೆ ವ್ಯಾಲೇಸಿಯ ಎಂದೂ ಹೆಸರು. ಈ ಪ್ರದೇಶ ಭಾಗಶಃ ಉಷ್ಣ ವಲಯಕ್ಕೂ ಭಾಗಶಃ ದಕ್ಷಿಣ ಸಮಶೀತೋಷ್ಣವಲಯಕ್ಕೂ ಸೇರಿದೆ. ನ್ಯೂ ಗಿನಿ ಪೂರ್ಣವಾಗಿ ಉಷ್ಣವಲಯದಲ್ಲಿದೆ. ಮಳೆಕಾಡುಗಳಿಂದ ತುಂಬಿದೆ. ಅಲ್ಲದೆ ಹುಲ್ಲುಗಾವಲು ಪ್ರದೇಶಗಳು, ಪರ್ವತಗಳನ್ನು ಆವರಿಸಿದ ಸಸ್ಯವರ್ಗಗಳು ಮತ್ತು ದಕ್ಷಿಣತೀರ ಪ್ರದೇಶದಲ್ಲಿ ನೀಲಗಿರಿ ಮರದ ಕಾಡುಗಳಿವೆ. ಈ ಪ್ರದೇಶದ ಉಪಪ್ರದೇಶಗಳು ನಾಲ್ಕು.

(i) ಆಸ್ಟ್ರೇಲಿಯ–ಮಲಯ ಉ. ಪ್ರ. : ಪಶ್ಚಿಮದಲ್ಲಿ ಸೆಲೆಬೆಸ್ ಮತ್ತು ಲೊಂಬಾಕ್ ದ್ವೀಪಗಳು, ಪೂರ್ವದಲ್ಲಿ ನ್ಯೂಗಿನಿ ಮತ್ತು ಸಾಲೋಮನ್ ದ್ವೀಪಗಳು.

(ii) ಆಸ್ಟ್ರೇಲಿಯ ಉ. ಪ್ರ. : ಆಸ್ಟ್ರೇಲಿಯ ಮತ್ತು ಟಾಸ್ಮೇನಿಯ.

(iii) ಪಾಲಿನೇಷಿಯ ಉ. ಪ್ರ. : ಪೆಸಿಫಿಕ್ ಸಾಗರದ ದ್ವೀಪಗಳು.

(iv) ನ್ಯೂ ಜೀಲೆಂಡ್ ಉ. ಪ್ರ. : ನ್ಯೂಜೀಲೆಂಡ್, ಆಕ್ಲೆಂಡ್ ಮತ್ತು ಫಾದಮ್ ದ್ವೀಪಗಳು.

ಈ ಪ್ರದೇಶದಲ್ಲಿ ಮಾನೊಟ್ರೀಮ್, ಮಾರ್ಸ್ಯೂಪಿಯಲ್, ದಂಶಕವರ್ಗದ ಪ್ರಾಣಿಗಳು (ಇಲಿಗಳನ್ನು ಬಿಟ್ಟು ಬೇರೆ ಜರಾಯು ಸ್ತನಿಗಳಿಲ್ಲ), ಕಾಂಗರೂ, ಎಮು, ಬ್ರಷ್ ಟರ್ಕಿ, ಲೈರ್‌ಹಕ್ಕಿಗಳು, ಪ್ಯಾರಡೈಸ್ ಹಕ್ಕಿಗಳು, ಆಸ್ಟ್ರೇಲಿಯದ ಫುಪ್ಪುಸ ಮೀನು (ಲಂಗ್‌ಫಿಶ್) ಇವೆ. ನ್ಯೂಜೀಲೆಂಡಿನಲ್ಲಿ ಸ್ಫಿನೊಡಾನ್ ಮತ್ತು ಕಿವಿಗಳು ವಾಸಿಸುತ್ತವೆ.

ನೀಯಾರ್ಕ್‌ಟಿಕ್ ಪ್ರದೇಶ : ಇದು ಉತ್ತರ ಅಮೆರಿಕ ಹಾಗೂ ದಕ್ಷಿಣದಲ್ಲಿ ಮಧ್ಯ ಮೆಕ್ಸಿಕೋವರಗೆ ವ್ಯಾಪಿಸಿದೆ. ಪೂರ್ವಕ್ಕೆ ಗ್ರೀನ್‌ಲೆಂಡ್, ಪಶ್ಚಿಮದಲ್ಲಿ ಅಲ್ಯೂಷಿಯನ್ ದ್ವೀಪಗಳಿವೆ. ಮಧ್ಯ ಅಮೆರಿಕದ ಇಕ್ಕಟ್ಟು ಪ್ರದೇಶವನ್ನುಳಿದು ಮಿಕ್ಕೆಲ್ಲ ಭಾಗಗಳನ್ನು ಸಮುದ್ರ ಆವರಿಸಿದೆ. ಉತ್ತರ ಸಮಶೀತೋಷ್ಣವಲಯ ಈ ಪ್ರದೇಶದಲ್ಲಿದೆ. ಉತ್ತರ ಅಮೆರಿಕದ ಪೂರ್ವಭಾಗದಲ್ಲಿ ಪರ್ಣಪಾತಿ ಅಥವಾ ಮಿಶ್ರಕಾಡು ಪ್ರದೇಶವಿದೆ. ಪಶ್ಚಿಮ ಭಾಗದಲ್ಲಿ ವಿಶಾಲವಾದ ಹುಲ್ಲುಗಾವಲುಗಳಿವೆ. ಪಶ್ಚಿಮ ಭಾಗದಿಂದ ಆಚೆಗೆ ಬಂಜರು ಭೂಮಿ ವ್ಯಾಪಿಸಿದೆ. ಈ ಭಾಗದಲ್ಲಿರುವ ಪರ್ವತಗಳಲ್ಲಿ ಮಿಶ್ರ ಅಥವಾ ಶಂಕುಧಾರಿ ಕಾಡುಗಳಿವೆ. ಈ ಪ್ರದೇಶದ ಉಪಪ್ರದೇಶಗಳು ನಾಲ್ಕು :

(i) ಕ್ಯಾಲಿಫೋರ್ನಿಯ ಉ. ಪ್ರ : ಕ್ಯಾಲಿಫೋರ್ನಿಯ ಮತ್ತು ಒರೆಗಾನ್.

(ii) ರಾಕಿ ಪರ್ವತ ಉ. ಪ್ರ. : ರಾಕಿ ಪರ್ವತ ಶ್ರೇಣಿ, ನ್ಯೂ ಮೆಕ್ಸಿಕೊ, ಟೆಕ್ಸಾಸ್.

(iii) ಅಲ್ಲಘೇರಿಯ ಉ. ಪ್ರ. : ಮಿಸಿಸಿಪ್ಪಿ ಕಣಿವೆ, ಅಲೆಘಾನಿ ಪರ್ವತ ಪ್ರದೇಶ, ಅಮೆರಿಕ ಸಂಯುಕ್ತ ಸಂಸ್ಥಾನಗಳ ಪೂರ್ವಭಾಗ.

(iv) ಕೆನಡ ಉ. ಪ್ರ. : ಮಹಾಸರೋವರಗಳಿಂದ ಉತ್ತರ ಧ್ರುವ ಸಾಗರದವರೆಗೆ ಉತ್ತರ ಅಮೆರಿಕದ ಎಲ್ಲ ಉತ್ತರ ಭಾಗಗಳು.

ಈ ಪ್ರದೇಶದಲ್ಲಿ ಪರ್ವತದ ಆಡು, ಕವಲು ಕೊಂಬಿನ ಜಿಂಕೆ, ಕ್ಯಾರಿಬೂ, ಮಸ್ಕ್‌ರ್ಯಾಟ್, ಸ್ಕಂಕ್, ಬ್ಯಾಡ್ಜರ್, ಕರಡಿ, ಬಾವಲಿ, ಮುಂತಾದ ಪ್ರಾಣಿಗಳಿವೆ. ವುಡ್‌ವಾರ್ಬಲರ್, ಕಾರ್ಡಿನಲ್, ಹಮ್ಮಿಂಗ್ ಪಕ್ಷಿಗಳು, ಗೋಲ್ಡನ್ ಬಾಲ್ಡ್ ಹದ್ದು, ಫಾಲ್ಕನ್, ನೈಟ್‌ಜಾರ್, ಸ್ವಾಲೋಸ್, ರೋಡ್‌ರನ್ನರ್, ಪಿಟ್ ಮಾರಿಗನ್, ಗ್ರೌಸಸ್, ಗೂಬೆ ಮುಂತಾದ ಪಕ್ಷಗಳಿವೆ. ನೀಯಾರ್ಕ್ಟಿಕ್ ಪ್ರದೇಶ ಸರೀಸೃಪಗಳ ತವರು. ಇಲ್ಲಿ ಗಾರ್ಟರ್ ಹಾವು ಮತ್ತು ವಿಷಪೂರಿತ ಬುಡಬುಡಿಕೆ ಹಾವುಗಳಿವೆ. ಗೀಲ ಮಾನ್ಸ್‌ಟರ್ ಎಂಬ ಹಲ್ಲಿ ಈ ಪ್ರದೇಶಕ್ಕೇ ಸೀಮಿತವಾಗಿದೆ. ಬಾಲವಿರುವ ದ್ವಿಚರಿಗಳು ಹೇರಳವಾಗಿವೆ. ಗಾರ್‌ಪೈಕ್, ಲಿಪಿಸ್ಪಿಯಸ್, ಎಮಿಯ, ಅಸಿಪೆನ್ಸರ್, ಮುನಿಯೆ ಮತ್ತು ಬಾಸ್ ಪ್ರಭೇದದ ಮೀನುಗಳು ಮತ್ತು ಪರ್ಚ್ ಮೀನುಗಳು ವಾಸವಾಗಿವೆ.

ನೀಯೊಟ್ರಾಪಿಕಲ್ ಪ್ರದೇಶ : ದಕ್ಷಿಣ ಮತ್ತು ಮಧ್ಯ ಅಮೆರಿಕ, ಮೆಕ್ಸಿಕೋದ ಉಷ್ಣವಲಯ ಕೆಳಪ್ರದೇಶಗಳು, ಟ್ರಿನಿಡಾಡ್ ಮತ್ತು ವೆಸ್ಟ್ ಇಂಡೀಸ್ ಇವು ಈ ಪ್ರದೇಶದ ವ್ಯಾಪ್ತಿಯಲ್ಲಿವೆ. ನೀಯೊಟ್ರಾಪಿಕಲ್ ಪ್ರದೇಶ ಉಷ್ಣವಲಯದಲ್ಲಿದೆ. ಆದರೆ, ದಕ್ಷಿಣ ಅಮೆರಿಕದ ದಕ್ಷಿಣ ಭಾಗ ದಕ್ಷಿಣ ಸಮಶೀತೋಷ್ಣವಲಯದವರೆಗೂ ವಿಸ್ತರಿಸಿದೆ. ಪಶ್ಚಿಮದಿಂದ ಪೂರ್ವಕ್ಕೆ ಅಮೆಜಾನ್ ನದಿ ಹರಿಯುತ್ತದೆ. ನಿತ್ಯಹರಿದ್ವರ್ಣಕಾಡು, ಹುಲ್ಲುಗಾವಲು, ಮರುಭೂಮಿ ಮತ್ತು ಉಪಮರುಭೂಮಿ ಈ ಪ್ರದೇಶದಲ್ಲಿವೆ. ಪಶ್ಚಿಮದಲ್ಲಿ ಅಂಡಿ ಪರ್ವತಶ್ರೇಣಿಯುದ್ದಕ್ಕೂ ಕಾಡುಗಳಿವೆ. ಇಲ್ಲಿ ಅನೇಕ ಇಳಿಜಾರು ಪ್ರದೇಶಗಳಿವೆ. ಈ ಪ್ರದೇಶದ ಉಪಪ್ರದೇಶಗಳು ನಾಲ್ಕು.

(i) ಬ್ರಜಿಲ್ ಉ. ಪ್ರ. : ವೆನಜುಲ ತೀರದಿಂದ ಪೆರುಗ್ವೇವರೆಗೆ ಮತ್ತು ಪೂರ್ವ ಪೆರುವರೆಗೆ ಹರಡಿರುವ ಪ್ರದೇಶ.

(ii) ಚಿಲಿ ಉ. ಪ್ರ. : ಚಿಲಿಯ ದಕ್ಷಿಣ ಭಾಗಕ್ಕಿರುವ ಮೈದಾನಗಳು, ಮತ್ತು ಈ ಪ್ರದೇಶದ ಪರ್ವತ ಶ್ರೇಣಿಗಳು.

(iii) ಮೆಕ್ಸಿಕೋ ಉ. ಪ್ರ. : ಮಧ್ಯ ಅಮೆರಿಕ ಮತ್ತು ದಕ್ಷಿಣ ಮೆಕ್ಸಿಕೋ ಭಾಗಗಳು.

(iv) ಆ್ಯಂಟಿಲ್ಲಿಯನ್ ಉ.ಪ್ರ. ವೆಸ್ಟ್ ಇಂಡೀಸ್ ದ್ವೀಪಗಳು.

ಈ ಪ್ರದೇಶದಲ್ಲಿ ಲಾಮಾ, ಅಲ್ಪಾಕ, ಪೆಕರಿ, ಆರ್ಮಡಿಲ್ಲೊ, ಆ್ಯಂಟ್‌ಈಟರ್, ಗಿನಿಹಂದಿ, ರಕ್ತಹೀರುವ ಬಾವಲಿ, ರಿಯಾಸ್, ಟೂಕನ್ಸ್, ಕ್ಯೂರಸ್ಸೋಸ್ ಪ್ರಾಣಿಗಳಿವೆ. ಇವುಗಳ ಜೊತೆಗೆ ಮಾರ್ಮಸೆಟ್, ಜೇಡಕೋತಿ, ಆಟಿಲೀಸ್ ಅರಚುವ ಕೋತಿ, ಜಾಗ್ವಾರ್, ಕಾಡುಬೆಕ್ಕು, ಕರಡಿ, ಟಪೀರ್, ಜಿಂಕೆ, ಒಂಟೆ, ಕ್ಯಾಪಿಬ್ಯಾರ, ಕೇವಿಯ, ಪಕಾಸ್, ಅಗೌಟಿಸ್ ಇವೆ. ಈ ಪ್ರದೇಶದಲ್ಲಿ ಅಸಂಖ್ಯಾತ ಪಕ್ಷಿ ಪ್ರಭೇದಗಳಿವೆ. ವಿವಿಧ ರೀತಿಯ ಪಕ್ಷಿಗಳು ಹರಡಿಕೊಂಡಿರುವುದರಿಂದ ದಕ್ಷಿಣ ಅಮೆರಿಕ ದೇಶವನ್ನು ಪಕ್ಷಿಗಳ ಖಂಡವೆಂದು ಕರೆಯುತ್ತಾರೆ. ಅಮೆರಿಕದ ಉಷ್ಟ್ರಪಕ್ಷಿ (ರೀಯ) ಮತ್ತು ಟಿನಮೂ ಈ ಪ್ರದೇಶಕ್ಕೆ ಸೀಮಿತವಾದವು. ಸು. ೭ ಮೀ ಉದ್ದದ ರೆಕ್ಕೆಗಳನ್ನು ಹೊಂದಿರುವ ಕಾಂಡಾರ್‌ಹದ್ದು ಈ ಪ್ರದೇಶದಲ್ಲಿದೆ. ಕ್ವೆಲ್ ಪಕ್ಷಿಗಳನ್ನು ಬಿಟ್ಟರೆ ಇಲ್ಲಿ ಹಾಡುವ ಹಕ್ಕಿಗಳಿಲ್ಲ. ಕಾಗೆ ಜಾತಿಗೆ ಸೇರಿದ ಪಕ್ಷಿಗಳು ಈ ಪ್ರದೇಶದಲ್ಲಿಲ್ಲ. ಹಾವು, ಹಲ್ಲಿ, ಆಮೆ ಹೇರಳವಾಗಿವೆ. ಅನಕೊಂಡ, ಬೋವ, ಸಂಪೀಡಕ ಹಾವು, ಪಿಟ್‌ವೈಪರ್, ಹರಳು ಹಾವು, ಬುಡಬುಡಿಕೆ ಹಾವು ವಿಪುಲವಾಗಿವೆ. ಬಾಲದ ದ್ವಿಚರಿಗಳಲ್ಲಿ ಈಡಿಪೆಸ್ ಜಾತಿಯ ಪ್ರಾಣಿಗಳು ಮಾತ್ರ ಇವೆ. ಛರಾಸಿನ್, ಜೆಮ್ನಾಟಿಡ್, ಮೀಸೆ ಮೀನು (ಕ್ಯಾಟ್‌ಫಿಶ್) ಇಲ್ಲಿ ವಾಸವಾಗಿವೆ. ಅಮೆಜಾನ್ ನದಿಯಲ್ಲಿ ವಾಸವಾಗಿರುವ ಜಿಮ್ನಾಟಿಡ್ ಮೀನುಗಳಲ್ಲಿ ಈಲ್ ಎಂಬವು ಛರಾಸಿನ್‌ಗಳಲ್ಲಿ ಭಯಂಕರ ಮಾಂಸಾಹಾರಿಗಳಾದ ಪಿರಾನ ಮೀನುಗಳು ವಿಶೇಷವಾಗಿವೆ. ಘುಪ್ಪುಸಮೀನು ಲಿಪಿಡೋಸೈರನ್ ಈ ಪ್ರದೇಶಕ್ಕೆ ಸೀಮಿತವಾಗಿದೆ.

ಪರಿಸರೀಯ ವಿತರಣೆ : ಪ್ರಾಣಿಗಳು ವಾಸಿಸುವ ಪರಿಸರದ ಆಧಾರದ ಮೇಲೆ ಮಾಡಿರುವ ವಿತರಣೆ. ಈ ಬಗೆಯ ವಿತರಣೆ ಹೆಚ್ಚು ವೈಜ್ಞಾನಿಕವಾದುದಲ್ಲವೆಂದು ಕೆಲವು ತಜ್ಞರ ಅಭಿಪ್ರಾಯ. ಜಲಚರ ಮತ್ತು ಭೂಚರ ಪ್ರಾಣಿಗಳ ವಿತರಣೆ ಇಂತಿದೆ.

ಉಪ್ಪುನೀರಿನಲ್ಲಿ ವಾಸಿಸುವ ಪ್ರಾಣಿಗಳ ವಿತರಣೆ : (i) ಪ್ಲಾಂಕ್‌ಟನ್ : ಪ್ರೋಟೊಜೋವ, ಕ್ರಸ್ಟೇಷಿಯಗಳು, ಕೆಲವು ಮೃದ್ವಂಗಿಗಳು, ಇತ್ಯಾದಿ.

(ii) ನೆಕ್‌ಟನ್ : ಸ್ಕ್ವಿಡ್, ಮೀನು, ಸಮುದ್ರಹಾವು, ಸಮುದ್ರಹಕ್ಕಿ, ಸೀಲ್, ತಿಮಿಂಗಿಲ ಇತ್ಯಾದಿ.

(iii) ಬೆನ್‌ಥೋಸ್ : ಕೆಲವು ಹುಳುಗಳು, ಮೃದ್ವಂಗಿ, ಕ್ರಸ್ಟೇಷಿಯ (ವಲ್ಕವಂತ), ಸ್ಪಂಜುಪ್ರಾಣಿ, ಹೈಡ್ರ, ಕಡಲಹೂ (ಅನಿಮೋನ್), ಹವಳಪ್ರಾಣಿ, ಮುಂತಾದವು.

ಕಡಲಿನ ವಿವಿಧ ಆಳಗಳಲ್ಲಿ ಜೀವಿಸುತ್ತಿರುವ ಜಲಚರಗಳ ಪಟ್ಟಿ:

| ಆಳ ಮೀಟರುಗಳಲ್ಲಿ | ಪ್ರಭೇದಗಳ ಸಂಖ್ಯೆ |
|---|---|
| 0– 60 | 4400 |
| 60– 300 | 2050 |
| 300– 600 | 710 |
| 600– 900 | 600 |
| 900–1200 | 500 |
| 1200–1500 | 340 |
| 1500ಕ್ಕಿಂತ ಕೆಳಗೆ | 235 |

ಸಿಹಿ ನೀರಿನಲ್ಲಿ ವಾಸಿಸುವ ಪ್ರಾಣಿಗಳ ವಿತರಣೆ : ಸ್ತನಿ, ಪಕ್ಷಿ, ಉರಗ ಮತ್ತು ಕೀಟ, ದ್ವಿಚರಿಗಳು, ಮೃದ್ವಂಗಿಗಳು, ಕ್ರಸ್ಟೇಷಿಯನ್‌ಗಳು, ಹುಳುಗಳು ಮತ್ತು ಪ್ರೊಟೊಜೋವ ವರ್ಗಕ್ಕೆ ಸೇರಿದ ಕೆಲವು ಪ್ರಾಣಿಗಳು.

ಭೂವೈಜ್ಞಾನಿಕ ವಿತರಣೆ : ಪ್ರಾಚೀನ ಕಾಲದಲ್ಲಿ ಜೀವಿಸಿದ್ದ ಪ್ರಾಣಿಗಳ ಮತ್ತು ಸಸ್ಯಗಳ ಪಳೆಯುಳಿಕೆಗಳು ಭೂವೈಜ್ಞಾನಿಕ ವಿತರಣೆಗೆ ಸಹಕಾರಿ. ಪಳೆಯುಳಿಕೆಗಳು ದೊರೆಯುವ ಸ್ಥಳಗಳ ಆಧಾರದಿಂದ ಪ್ರಾಣಿ ಯಾವ ಪ್ರದೇಶ ಅಥವಾ ವಲಯದಲ್ಲಿ, ಯಾವ ಕಾಲದಲ್ಲಿ ವಾಸವಾಗಿತ್ತು, ಯಾವ ಸಸ್ಯ ಆ ಪ್ರದೇಶದಲ್ಲಿ ಬೆಳೆಯುತ್ತಿತ್ತು ಎಂಬುದನ್ನು ಪತ್ತೆಹಚ್ಚಿ ವಿತರಣೆ ನಡೆಸಬಹುದು.

ಪ್ರಪಂಚದ ಬೇರೆ ಬೇರೆ ಪ್ರದೇಶಗಳು ಅವುಗಳದೇ ಆದ ವಿಶಿಷ್ಟ ಪ್ರಾಣಿ ಸಂಪತ್ತನ್ನೂ, ಸಸ್ಯಸಂಪತ್ತನ್ನೂ ಹೊಂದಿವೆ. ವಿವಿಧ ತಜ್ಞರು ತಮಗೆ ಸರಿಕಂಡ ರೀತಿಯಲ್ಲಿ ಪ್ರಾಣಿಗಳ ವಿತರಣೆಯನ್ನು ನಡೆಸಿ ತಮ್ಮ ಸಫಲತೆಯನ್ನು ಕಂಡುಕೊಂಡಿದ್ದಾರೆ. ಈ ವಿತರಣೆಗಳಿಗೆ ಇತಿಮಿತಿಗಳಿವೆ ಮತ್ತು ಅರೆಕೊರೆಗಳಿವೆ. ಆದರೂ, ಇತ್ತೀಚಿನ ವರ್ಷಗಳಲ್ಲಿ ಪ್ರಾಣಿ ವಿಜ್ಞಾನಿಗಳು, ಪರಿಸರವಿಜ್ಞಾನಿಗಳು, ಭೂಗೋಳ ಮತ್ತು ಭೂವಿಜ್ಞಾನಿಗಳು ಪ್ರಾಣಿವಿತರಣವಿಜ್ಞಾನದತ್ತ ತಮ್ಮ ತೀವ್ರ ಗಮನ ಹರಿಸುತ್ತಿರುವುದು ಗಮನಾರ್ಹ.

(ಎನ್.ವಿ.ಎ.;ಎಚ್.ಎಚ್.ಎಸ್)

**ಪ್ರಾಣಿವಿಷ:** ಕೆಲವೊಂದು ಪ್ರಾಣಿಗಳು ತಮ್ಮಲ್ಲಿಯ ವಿಶಿಷ್ಟ ಗ್ರಂಥಿಗಳಿಂದ ಸ್ರವಿಸುವ ಮತ್ತು ಇತರ ಪ್ರಾಣಿಗಳಿಗೆ ಮಾರಕವಾಗಬಹುದಾದ ವಿಶಿಷ್ಟ ರಾಸಾಯನಿಕ. ವಿಷ (ವೆನಮ್). ಇದರೊಟ್ಟಿಗೆ ಹಲ್ಲು, ಕೊಂಡಿ ಮತ್ತಿತರ ಇರಿಯುವ ಸಾಧನಗಳಿಂದ ಗಾಯವುಂಟುಮಾಡುವ ಅಥವಾ ನಿಶ್ಚೇತಗೊಳಿಸುವ ಸಾಮರ್ಥ್ಯ ಪಡೆದಿರಬಹುದು. ವಿಷವನ್ನು ಸ್ವರಕ್ಷಣೆಗಾಗಿ ಅಥವಾ ಆಹಾರ ಜೀವಿಯನ್ನು ನಿಷ್ಕ್ರಿಯಗೊಳಿಸಲು ಉಪಯೋಗಮಾಡಿಕೊಳ್ಳಬಹುದು. ವಿಷ ಮಾರ್ಪಾಡಾದ ಜೊಲ್ಲುಗ್ರಂಥಿಗಳ ಅಥವಾ ಬಹಿಸ್ರಾವ ಗ್ರಂಥಿಗಳಲ್ಲಿ ಸಿದ್ಧಗೊಂಡು ಸಂಗ್ರಹಿಸಲ್ಪಟ್ಟು, ಪ್ರಾಣಿಗಳು (ಹಾವು, ಕೀಟ, ಚೇಳು, ಜೇಡ, ಮೃದ್ವಂಗಿ, ಹುಳುಗಳು, ಮೀನಿನ ಕೆಲವು ಪ್ರಭೇದಗಳು) ಕಚ್ಚಿದಾಗ ಇಲ್ಲವೆ ಕುಟುಕಿದಾಗ ಹೊರಬರುತ್ತದೆ. ಇನ್ನು ಕೆಲವು ಪ್ರಾಣಿಗಳಲ್ಲಿ (ಕಂಬಳಿಹುಳು) ದೈಹಿಕ ಸಂಪರ್ಕವೇ ವಿಷ ಸೇರಿಕೆಗೆ ಅವಕಾಶ ಮಾಡಿಕೊಡುತ್ತದೆ. ವಿಷವಿರುವಂಥ ಪ್ರಭೇದಗಳು ಪ್ರಾಣಿಸಮುದಾಯದ ಅನೇಕ ಗುಂಪುಗಳಲ್ಲಿವೆ. ವಿಷಗ್ರಂಥಿಗಳು ಬಾಯೊಳಗೆ (ಸರ್ಪ, ಹಲ್ಲಿ), ಬಾಯಿಯ ಹೊರಗೆ (ಜೇಡ), ಬಾಲದ ತುದಿ (ಚೇಳು), ಕಿಬ್ಬದಿ (ಜೇನು, ಕಡಂಜ) ಅಥವಾ ದೇಹದಾದ್ಯಂತ (ಕಂಬಳಿಹುಳು) ಇರಬಹುದು. ವಿಷ ಹೊರಹಾಕುವ ಪ್ರಾಣಿಗಳು ಮಾಂಸಾಹಾರಿಯಾಗಿ (ಸರ್ಪ, ಚೇಳು, ಜೇಡ) ತಮ್ಮ ಆಹಾರದ ಪ್ರಾಣಿಗಳನ್ನು ಜೀವಂತ ಹಿಡಿದು ಇಲ್ಲವೆ ನಿಶ್ಚಲಗೊಳಿಸಿ ಭಕ್ಷಿಸಬಹುದು ಅಥವಾ ಸಸ್ಯಾಹಾರಿಗಳಾಗಿರಬಹುದು. ಜೇನು, ಕಂಬಳಿಹುಳು, ಕೀಟಗಳಲ್ಲಿ (ಜೇನು, ಕಣಜ) ಹೆಣ್ಣುಗಳು ಮಾತ್ರ ವಿಷಪೂರಿತ. ಉಳಿದ ಪ್ರಾಣಿಗಳಲ್ಲಿ ಈ ರೀತಿಯ ಲಿಂಗಭೇದವಿಲ್ಲ.

ಕೆಲವೊಂದು ಪ್ರಾಣಿಗಳ ವಿಷ ಮಾನವದೇಹದ ಮೇಲೆ ತೀವ್ರ ಪ್ರಭಾವ ಬೀರಬಲ್ಲುದು. ಪ್ರಾಚೀನಕಾಲದಿಂದಲೂ ಪ್ರಾಣಿಗಳ ವಿಷದಿಂದಾಗುವ ಸಾವು ನೋವಿನ ಅನುಭವ ಮನುಷ್ಯನಿಗಿದೆ. ಉಷ್ಣವಲಯ ಮತ್ತು ಸಮಶೀತೋಷ್ಣವಲಯದಲ್ಲಿ ವಿಷಪ್ರಾಣಿಗಳು ವಿಪುಲವಾಗಿ ಕಾಣಸಿಕ್ಕುತ್ತವೆ. ಭಾರತ ಮತ್ತು ಏಷ್ಯಾದ ಇತರ ಭಾಗಗಳಲ್ಲಿ ಪ್ರಾಣಿವಿಷದ ಪ್ರಭಾವಕ್ಕೆ ಸಿಲುಕಿ ಅನೇಕರು ಮರಣ ಹೊಂದುತ್ತಾರೆ. ಈ ಪ್ರಾಣಿಗಳು ಹಲ್ಲಿನಿಂದ ಕಚ್ಚಿದಾಗ ಇಲ್ಲವೆ ಕೊಂಡಿಯಿಂದ ಚುಚ್ಚಿದಾಗ ಉಂಟಾಗುವ ಗಾಯದ ಮೂಲಕ ವಿಷ ಚರ್ಮದಡಿ ಸೇರುತ್ತದೆ. ಗ್ರಂಥನಾಳದಿಂದ ಸ್ಖಲನಗೊಂಡ ವಿಷ ಒಂದು ಮಿಲಿ ಲೀಟರಿನಷ್ಟು, ಅದು ವರ್ಣರಹಿತ ಮತ್ತು ಪಾರದರ್ಶಕ. ವಿಷದಲ್ಲಿ ಅನೇಕ ರೀತಿಯ ಪ್ರೋಟೀನ್

ಅಂಶಗಳು, ಸಾವಯವ ವಸ್ತು, ರಂಜಕ ಮತ್ತು ಕಿಣ್ವಗಳಿವೆ. ಹಾವಿನ ವಿಷ ತುಂಬ ಪ್ರಭಾವಶಾಲಿಯಾಗಿದ್ದು ನರಮಂಡಲದ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ವಿಷದ ಪ್ರಭಾವದಿಂದ ಕೆಂಪುರಕ್ತಕಣಗಳಿಂದ ರಕ್ತವರ್ಣ ಹೊರಬರುತ್ತದೆ. ರಕ್ತ ಬಲುಬೇಗ ಹೆಪ್ಪುಗಟ್ಟಬಹುದು ಇಲ್ಲವೆ ಅದನ್ನು ಹೆಪ್ಪುಗಟ್ಟದಂತೆ ಮಾಡಬಹುದು. ಅದು ಸ್ನಾಯುಗಳನ್ನು ಉತ್ತೇಜಿಸುತ್ತದೆಯಲ್ಲದೆ ರಕ್ತೋದ್ರೇಕವನ್ನು ಉಂಟುಮಾಡುತ್ತದೆ.

ಈ ಪ್ರಾಣಿಗಳು ಕಚ್ಚಿದ ಪ್ರದೇಶದಲ್ಲಿ ಉರಿತ, ಚುಮುಚುಮು, ಬಾವು ಗೋಚರಿಸಿ ಅನಂತರ ವಿಸ್ತೃತವಾಗಿ ಹರಡುತ್ತದೆ. ಗಂಟಲ ಉರಿತ, ನಾಲಿಗೆ ಉಬ್ಬು, ಓಕರಿಕೆ, ವಾಂತಿ, ಕಣ್ಣುಕತ್ತಲೆ, ಶಕ್ತಿಹೀನತೆ, ಬೆವರುವುದು, ಜೊಲ್ಲು ಸುರಿಯುವುದು, ಅಸ್ಥಿರತೆ, ಸ್ನಾಯುತತ್ತರಿಕೆ, ಹೊಟ್ಟೆಶೂಲೆ, ಸೆಳವು ತೋರಿಬರುತ್ತವೆ. ದೇಹಾದ್ಯಂತ ರಕ್ತೋದ್ರೇಕ, ರಕ್ತದ ಒತ್ತಡ ಇಳಿಕೆ, ಸ್ಪರ್ಶ ಶಕ್ತಿಯ ವ್ಯತ್ಯಯ, ಮಂಪರು, ಮೂತ್ರದ ಇಳುವರಿ, ಉಸಿರಾಟದ ತೊಂದರೆ ಮುಂತಾದುವು 24–48 ಗಂಟೆಗಳ ಅವಧಿಯಲ್ಲಿ ಗೋಚರಿಸಿ, ಸಾವಿನಲ್ಲಿ ಪರ್ಯವಸಾನಗೊಳ್ಳಬಹುದು.

ವಿಷಪ್ರಾಣಿಗಳ ಸೇರಿಕೆಗೆ ಅವಕಾಶ ಕೊಡದಂತೆ ಮನೆಯ ಸುತ್ತಣ ಪೊಟರೆಗಳನ್ನು ಮುಚ್ಚಬೇಕು. ರಾತ್ರಿಕಾಲದಲ್ಲಿ ಅರಿಯದ ಪ್ರದೇಶದಲ್ಲಿ, ಹುಲ್ಲುಗಾವಲಿನಲ್ಲಿ ಓಡಾಡುವಾಗ ಪಾದರಕ್ಷಣೆ ಮಾಡಿಕೊಳ್ಳಬೇಕು. ಕಚ್ಚಿದ ಭಾಗವನ್ನು ಅಚಲ ಗೊಳಿಸುವುದು ಬಲುಮುಖ್ಯ. ಪ್ರಥಮ ಚಿಕಿತ್ಸೆಯಾಗಿ ಕಚ್ಚಿದ ಪ್ರದೇಶದಿಂದ ವಿಷ ಹೀರಿಕೆಯನ್ನು ತಡೆಯಲು, ಆ ಪ್ರದೇಶದ ಮೇಲ್ಭಾಗದಲ್ಲಿ ರಬ್ಬರ್ ಪಟ್ಟಿಯನ್ನು ಒತ್ತಿ ಕಟ್ಟಬೇಕು. ಕಚ್ಚಿದ ಪ್ರದೇಶದ ಮೇಲೆ ಒದ್ದೆಬಟ್ಟೆಯನ್ನಿರಿಸಬೇಕು. ಬಾವು ಹೆಚ್ಚಾದರೆ, ರಬ್ಬರ್ ಪಟ್ಟಿಯನ್ನು ಇನ್ನೂ ಮೇಲೆ ಕಟ್ಟಬೇಕಾಗುವುದು. ರಕ್ತ, ದುಗ್ಧರಸ ಪರಿಚಲನೆಗೆ ಅಡ್ಡಿ ಒದಗದಂತಾಗಿಸಲು ಅದನ್ನು ಆಗಾಗ್ಗೆ ಸಡಿಲಗೊಳಿಸಬೇಕು. ಕಚ್ಚಿದ ಕೆಲನಿಮಿಷಗಳಲ್ಲಿ, ಹಲ್ಲಿನ ಗಾಯ ಗುರುತಿಸಿ, ಆ ಪ್ರದೇಶದಲ್ಲಿ ಗೀರು ಗಾಯ ಮಾಡಿ ವಿಷ ಹೀರಬೇಕು. ವಿಷದ ವಿರುದ್ಧ ನಿರ್ದಿಷ್ಟ ಎದುರು ಲಸಿಕೆಯನ್ನು ನೀಡುವುದು ಬಹುಮುಖ್ಯ. ಅದರ ಮೂರನೆಯ ಒಂದು ಭಾಗವನ್ನು ಚರ್ಮದಡಿ ಕಚ್ಚಿದ ಪ್ರದೇಶ ಮತ್ತು ಮುಂಡದ ಮಧ್ಯ ಇಲ್ಲವೆ ಕಚ್ಚಿದ ಪ್ರದೇಶದ ಸುತ್ತ ಕೊಟ್ಟು, ಉಳಿದುದನ್ನು ರಕ್ತನಾಳಾಂತರವಾಗಿ ಕೊಡಬೇಕು. ಅಲ್ಲದೆ ರಕ್ತ ಒತ್ತಡ ಕಾಯ್ದಿರಿಕೆ, ಆಕ್ಸಿಜನ್ ನೀಡಿಕೆ ಮತ್ತು ರಕ್ತ ಪೂರಣೆ ಅಗತ್ಯ. ***

**ಪ್ರಾಣಿಸಂಗ್ರಹ:** ವಿವಿಧ ಪ್ರಾಣಿಗಳನ್ನು ಒಂದೆಡೆ ಜೀವಂತವಾಗಿ ಇಲ್ಲವೇ ನಿರ್ಜೀವವಾಗಿ ಕಲೆಹಾಕುವುದು (ಝೂಆಲಾಜಿಕಲ್ ಕಲೆಕ್ಷನ್). ಇದರ ಇತಿಹಾಸ ಬಹಳ ಪ್ರಾಚೀನವಾದ್ದು. ಶಿಲಾಯುಗದ ಮಾನವ ನಾಗರಿಕನಾದಂತೆ ಹಲವಾರು ಪ್ರಾಣಿಗಳನ್ನು ಸಂಗ್ರಹಿಸಿ ಪಳಗಿಸಿ ಅವನ್ನು ಕೃಷಿ ಮತ್ತಿತರ ಕೆಲಸಗಳಿಗೆ ಉಪಯೋಗಿಸಿಕೊಳ್ಳುವುದರೊಂದಿಗೆ ಪ್ರಾಣಿಸಂಗ್ರಹಣೆಯಲ್ಲಿ ಆಸಕ್ತಿಯನ್ನೂ ಬೆಳೆಸಿಕೊಂಡ. ಮುಂದೆ ಸಾಮ್ರಾಜ್ಯಗಳ ಸ್ಥಾಪನೆಯಾದಾಗ ಕೆಲವು ರಾಜ ಮಹಾರಾಜರುಗಳು ಪ್ರಾಣಿ ಸಂಗ್ರಹಣೆ ಮತ್ತು ಸಾಕಣೆ ಒಂದು ಗೌರವವೆಂದು, ಇನ್ನೂ ಕೆಲವರು ಪ್ರತಿಷ್ಠೆಗಾಗಿಯೂ ಈ ಹವ್ಯಾಸವನ್ನು ಮುಂದುವರಿಸಿಕೊಂಡು ಬಂದರು. ಹೀಗೆ ಕೆಲವರಲ್ಲಿ ಪ್ರಾಣಿ ಸಂಗ್ರಹಣೆ ಗೌರವ ಹವ್ಯಾಸವಾಗಿ ಬೆಳೆದರೆ, ಇನ್ನು ಕೆಲವರಲ್ಲಿ ಅಧ್ಯಯನ ಅವಶ್ಯಕತೆಯಾಗಿ ರೂಪುಗೊಂಡಿತು. ಪ್ರಾಣಿಗಳನ್ನು ಜೀವಂತವಾಗಿ ಹಿಡಿದು ರಕ್ಷಿಸುವ ಸಂಘ ಸಂಸ್ಥೆಗಳೂ ಪ್ರಾಣಿ ಸಂಗ್ರಹಾಲಯಗಳೂ ಉದಯವಾದವು.

ಪ್ರಾಣಿಸಂಗ್ರಹಣೆಯಲ್ಲಿ ವಿವಿಧ ಬಗೆಗಳುಂಟು. ಒಂದೇ ಗುಂಪಿನ ಪ್ರಾಣಿಗಳನ್ನು ಸಂಗ್ರಹ ಮಾಡಿರುವುದು ಒಂದು ತೆರನಾದುದು. ಉದಾಹರಣೆಗೆ ಉತ್ತರ ಅಮೆರಿಕದ ಟೆನೆಸ್ಸಿ ಪ್ರಾಂತದ ಲಿಂಡ್ಸ್ಲೇ ಎಂಬಾತ ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಈ ತನಕ ಸುಮಾರು 40,000 ವಿವಿಧ ಜಾತಿಯ ಪತಂಗಗಳನ್ನು ಸಂಗ್ರಹಿಸಿದ್ದಾನೆ. ಒಂದೇ ಕುಟುಂಬದ ಒಂದೇ ಜಾತಿಯ ಪ್ರಾಣಿಗಳನ್ನು ಅಂತೆಯೇ ಒಂದು ವರ್ಗಕ್ಕೆ ಇಲ್ಲವೇ ಒಂದು ಗಣಕ್ಕೆ ಸೇರಿದ ಪ್ರಾಣಿಗಳನ್ನು ಸಂಗ್ರಹಿಸಿರುವುದೂ ಉಂಟು. ಸರ್ಪೋದ್ಯಾನ, ಪಕ್ಷಿಧಾಮ, ಮತ್ಸ್ಯಾಗಾರ ಮುಂತಾದವು ಈ ಬಗೆಯ ಸಂಗ್ರಹಗಳಿಗೆ ಉದಾಹರಣೆಗಳು. ಹಲವಾರು ಗಣ, ಕುಟುಂಬ ಇಲ್ಲವೆ ವರ್ಗಗಳಿಗೆ ಸೇರಿದ ಪ್ರಾಣಿಗಳನ್ನು ಸಂಗ್ರಹಿಸುವುದು ಇನ್ನೊಂದು ತೆರನ ಪ್ರಾಣಿಸಂಗ್ರಹ. ಉದಾಹರಣೆಗೆ ಯಾವುದೇ ಪ್ರಾಣಿಸಂಗ್ರಹಾಲಯ.

ಐತಿಹಾಸಿಕವಾಗಿ ಪ್ರಾಣಿಸಂಗ್ರಹ ಬಹಳ ಹಿಂದೆ ಪ್ರಾರಂಭವಾಯಿತೆಂದು ಎನ್ನಲಾಗಿದೆ. ಆದರೆ ಅಧ್ಯಯನ ದೃಷ್ಟಿಯಿಂದ ಪ್ರಾಣಿಗಳ ಸಂಗ್ರಹ ಪ್ರಾರಂಭವಾದ್ದು ಬಹಳ ಇತ್ತೀಚೆಗೆ, 18ನೆಯ ಶತಮಾನದ ಆದಿಯ ಸುಮಾರಿಗೆ. ಅಂದಿನಿಂದ ಇಂದಿನ ತನಕ ಗತಿಸಿರುವ ಮೂರು ಶತಮಾನಗಳ ಸಂಗ್ರಹಕಾರ್ಯಗಳಲ್ಲಿ ಬೀಗಲ್‌ಯಾನ ಬಲು ಮುಖ್ಯವಾದ್ದು. 1829 ಅಗಸ್ಟ್ 29ರಂದು ಪ್ರಾರಂಭವಾದ ಈ ಯಾನದಲ್ಲಿ ಫೆಸಿಫಿಕ್ ಮಹಾಸಾಗರ ಮತ್ತು ಅದರ ದ್ವೀಪಗಳಲ್ಲಿ ಪ್ರಾಣಿ ಸಂಗ್ರಹಣೆ ಮಾಡಲಾಯಿತು. ಈ ತಂಡದಲ್ಲಿ ಜೀವವಿಜ್ಞಾನಿ ಚಾರ್ಲ್ಸ್ ಡಾರ್ವಿನ್ (1809–82) ಸಹಸ್ರಾರು ಪ್ರಾಣಿಗಳನ್ನೂ ಪಳೆಯುಳಿಕೆಗಳನ್ನೂ ಸಂಗ್ರಹಿಸಿದ. ಸತತ ಎರಡು ವರ್ಷಗಳ ಯಾನಾನಂತರ ಸ್ವದೇಶಕ್ಕೆ ಮರಳಿದ ಡಾರ್ವಿನ್, ನೈಸರ್ಗಿಕ ಆಯ್ಕೆಯಿಂದ ಪ್ರಭೇದೋತ್ಪತ್ತಿ ಎಂಬ ಪುಸ್ತಕವನ್ನು ರಚಿಸಿ ಜೀವವಿಜ್ಞಾನದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದ. ಬೀಗಲ್‌ಯಾನದಂತೆಯೇ ಬೇರೆ ಬೇರೆ ಮಹನೀಯರು ಅಧ್ಯಯನ ದೃಷ್ಟಿಯಿಂದ ಅಥವಾ ಹವ್ಯಾಸದ ದೃಷ್ಟಿಯಿಂದ ಅಂಥ ಯಾನಗಳನ್ನು ಕೈಗೊಂಡಿರುವುದು ಉಂಟು.

ಪ್ರಾಣಿಸಂಗ್ರಹಕ್ಕೆ ಅತ್ಯಾವಶ್ಯಕವಾದ ಉಪಕರಣಗಳೆಂದರೆ ಬಲೆ, ಬೋನು, ಪಾಶ ಇತ್ಯಾದಿ. ಅಂತೆಯೇ ಹಿಡಿದ ಪ್ರಾಣಿಗಳನ್ನು ಜೀವಂತವಾಗಿ ರಕ್ಷಿಸಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಿ ಕಾಪಾಡಲು ಕೆಲವು ಸಲಕರಣೆಗಳು ಬೇಕು. ಹಿಡಿದ ಪ್ರಾಣಿಗಳನ್ನು ಜೀವಂತವಾಗಿ ಬೇರೆಡೆಗೆ ಸಾಗಿಸಲು ಸಾಧ್ಯವಾಗದಾಗ ಅವನ್ನು ಸಾಯಿಸಬೇಕಾಗುತ್ತಾದರೂ ಅವು ಜೀವಂತ ಸ್ಥಿತಿಯಲ್ಲಿ ಇವೆಯೇನೋ ಎಂಬ ಭ್ರಮೆ ಮೂಡುವಂತೆ ಸಂರಕ್ಷಿಸಲು ಕೆಲವು ಸಲಕರಣೆಗಳೂ, ರಾಸಾಯನಿಕ ವಸ್ತುಗಳೂ ಅಗತ್ಯ.

ಪ್ರಾಣಿಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಅಥವಾ ಹಿಡಿದ ಸ್ಥಳದಿಂದ ರಕ್ಷಿಸುವ ಸ್ಥಳಕ್ಕೆ ಕೊಂಡೊಯ್ಯುವಾಗ ವಿಭಿನ್ನ ವಸ್ತುಗಳನ್ನು ಬಳಸಬೇಕಾಗುತ್ತದೆ. ಪ್ರಾಣಿಗಳಿಗೆ ತಕ್ಕ ಆಹಾರ ಮತ್ತು ಪರಿಸರಗಳನ್ನು ಒದಗಿಸುವುದು ಮುಖ್ಯ. ಒಂದೊಂದು ಪ್ರಾಣಿಯ ಆವಶ್ಯಕತೆ ಒಂದೋಂದು ರೀತಿ. ಫಾರ್ಮಲಿನ್ ದ್ರಾವಣ, ಅಸಿಟಿಕ್ ಆಮ್ಲ, ಆಲ್ಕೊಹಾಲ್, ಮೆಗ್ನೀಸಿಯಮ್ ಸಲ್ಫೇಟ್ ಇವು ಮೃತ ಪ್ರಾಣಿ ಸಂಗ್ರಹದಲ್ಲಿ ಬಳಸುವ ಕೆಲವು ರಾಸಾಯನಿಕಗಳು.

ಪ್ರಾಣಿ ಸಂಗ್ರಹಾಲಯಗಳು : ಜೀವಂತ ಮೃಗ, ಪಕ್ಷಿ ಅಥವಾ ಕೆಲವು ಸಾಕುಪ್ರಾಣಿಗಳನ್ನು ಒಂದೆಡೆ ಕೂಡಿಸಿ ಬಂಧಿಸಿಡುವ ತಾಣಗಳೇ ಪ್ರಾಣಿಸಂಗ್ರಹಾಲಯಗಳು. ಕೆಲವು ಪ್ರಾಣಿಸಂಗ್ರಹಾಲಯಗಳಲ್ಲಿ ನಿರ್ಜೀವ ಪ್ರಾಣಿಗಳನ್ನೂ, ಪ್ರಾಣಿ ಮಾದರಿಗಳನ್ನೂ, ಪಳೆಯುಳಿಕೆಗಳನ್ನೂ ಇಡುವುದುಂಟು.

ಪ್ರಾಣಿಸಂಗ್ರಹಾಲಯಗಳ ಇತಿಹಾಸವೂ ಪ್ರಾಚೀನವಾದ್ದೇ. ಕ್ರಿ.ಪೂ. 1150ರಲ್ಲಿ ಚೀನದೇಶದ ರಾಣಿ ತಾಂಕೀ ಎಂಬಾಕೆ ಅಮೃತ ಶಿಲೆಯ ದೊಡ್ಡ ಹರಿಣಮಂದಿರವನ್ನು ಕಟ್ಟಿಸಿದಳೆನ್ನಲಾಗಿದೆ. ಕ್ರಿ.ಪೂ. 1000ದಲ್ಲಿ ಚೀನದ ಲಂಗೆ ಎಂಬಾತ 1500 ಎಕರೆ ವಿಸ್ತಾರವುಳ್ಳ ಪ್ರಾಣಿಸಂಗ್ರಹಾಲಯವೊಂದನ್ನು ನಿರ್ಮಿಸಿದ. ಬ್ಯಾಬಿಲೋನಿಯದ ದೊರೆಗಳೂ ಪ್ರಾಣಿಸಂಗ್ರಹಾಲಯಗಳನ್ನು ಇಟ್ಟುಕೊಂಡಿದ್ದರೆಂಬ ಉಲ್ಲೇಖವಿದೆ. ಅರಿಸ್ಟಾಟಲನ ಕಾಲದ ಅನಂತರ ಅಧ್ಯಯನ ದೃಷ್ಟಿಯಿಂದ ಇವನ್ನು ಪ್ರಾರಂಭಿಸಲಾಯಿತು.

ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಆಧುನಿಕ ರೀತಿಯ ಸಂಗ್ರಹಾಲಯಗಳು ಪ್ರಾರಂಭವಾದುವು. ಮ್ಯಾಡ್ರಿಡ್ಡಿನ ಸುಪ್ರಸಿದ್ಧ ರಾಯಲ್ ಪಾರ್ಕ್ ಕ್ರಿಸ್ತಶಕ 1775ರಲ್ಲಿ ಪ್ರಾರಂಭವಾಯಿತು. ಲಂಡನ್ನಿನ ಜೂಆಲಾಜಿಕಲ್ ಸೊಸೈಟಿಯ ಪ್ರಾಣಿಸಂಗ್ರಹಾಲಯವಾದ ರೀಜೆಂಟ್ ಉದ್ಯಾನವನ್ನು 1825ರಲ್ಲಿ ಪ್ರಾರಂಭಿಸಲಾಯಿತು. 19ನೆಯ ಶತಮಾನದಲ್ಲಿ ಪ್ರಪಂಚದ ಹಲವಾರು ಭಾಗಗಳಲ್ಲಿ ಪ್ರಾಣಿ ಸಂಗ್ರಹಾಲಯಗಳು ಸ್ಥಾಪನೆಗೊಂಡವು. ಸದ್ಯ ಪ್ರಪಂಚದಲ್ಲಿ ಶತಮಾನ ಮೀರಿದ ಸುಮಾರು 40 ಪ್ರಾಣಿ ಸಂಗ್ರಹಾಲಯಗಳಿವೆ. ಒಟ್ಟು ಪ್ರಾಣಿ ಸಂಗ್ರಹಾಲಯಗಳ ಸಂಖ್ಯೆ 1000 ಕ್ಕೂ ಹೆಚ್ಚು.

ಈಚೆಗೆ ಪ್ರಾಣಿ ಸಂಗ್ರಹಾಲಯಗಳಿಗೆ ಇನ್ನೊಂದು ದೃಷ್ಟಿಯಿಂದ ಕೂಡ ಮಹತ್ತ್ವ ಬಂದಿದೆ. ಇವುಗಳ ಕಾರ್ಯ ಕೇವಲ ಪ್ರಾಣಿ ಅಧ್ಯಯನ ಮಾತ್ರವಲ್ಲ, ನಶಿಸುತ್ತಿರುವ ಕೆಲವು ಪ್ರಾಣಿಗಳನ್ನು ರಕ್ಷಿಸುವ ಕಾರ್ಯ ಸಹ ಇವುಗಳ ಕಾರ್ಯವ್ಯಾಪ್ತಿಗೆ ಸೇರಿದೆ. ಕರ್ನಾಟಕದಲ್ಲಿ ಮೈಸೂರಿನ ಚಾಮರಾಜೇಂದ್ರ ಪ್ರಾಣಿಸಂಗ್ರಹಾಲಯ, ವಿಶ್ವವಿಖ್ಯಾತ. ಇಲ್ಲಿ ಆಫ್ರಿಕಾ, ಆಸ್ಟ್ರೇಲಿಯಾ, ದಕ್ಷಿಣ ಅಮೇರಿಕಾ ಖಂಡಗಳ ನಿವಾಸಿಗಳನ್ನೂ ಪೋಷಿಸಲಾಗಿದೆ.

ಪಕ್ಷಿಧಾಮ : ನೈಸರ್ಗಿಕ ಪರಿಸರದಲ್ಲಿಯೇ ಪಕ್ಷಿರಕ್ಷಣೆ ಮಾಡುವ ಸ್ಥಳವಿದು. ನಿರ್ದಿಷ್ಟ ಸ್ಥಳವೊಂದನ್ನು ಅದರಲ್ಲೂ ಹೆಚ್ಚು ಸಂಖ್ಯೆಯಲ್ಲಿ ಪಕ್ಷಿಗಳು ಇರುವ ಸ್ಥಳವನ್ನು ಆಯ್ದು ಕೆಲವು ಕಾನೂನುಗಳ ಮೂಲಕ ಅಲ್ಲಿಯ ಪಕ್ಷಿಗಳನ್ನು ರಕ್ಷಿಸುವುದೇ ಪಕ್ಷಿಧಾಮಗಳ ಕಾರ್ಯ. ಭಾರತದಲ್ಲಿ ಸುಮಾರು 40 ಕ್ಕೂ ಹೆಚ್ಚು ಪಕ್ಷಿಧಾಮಗಳಿವೆ. ಉತ್ತರ ಪ್ರದೇಶದ ಭರತಪುರ, ಕರ್ನಾಟಕದ ರಂಗನತಿಟ್ಟು, ಮಂಡಗದ್ದೆ ಪ್ರಸಿದ್ಧಿ ಪಡೆದ ತಾಣಗಳು.

ಮತ್ಸ್ಯಾಗಾರ (ಅಕ್ವೇರಿಯಮ್) : ಜಲಚರಗಳನ್ನು ಮುಖ್ಯವಾಗಿ ಮೀನುಗಳನ್ನು ಒಂದೆಡೆ ಕಲೆಹಾಕಿ ಇಡುವ ನೀರಿನ ಸಂಪುಟ ಅಥವಾ ತಾಣ. ಇದು ಒಂದು ಚಿಕ್ಕ ಕೊಳ ಅಥವಾ ಕೊಳಗಳ ಗುಂಪಾಗಿದ್ದು ಒಂದು ಪಕ್ಕದಿಂದ ಅದರಲ್ಲಿರುವ ಜಲಚರಗಳನ್ನು ವೀಕ್ಷಿಸುವುದಕ್ಕೆ ಸಾಧ್ಯವಾಗುವಂತಿರುತ್ತದೆ. ಇದರ ಉದ್ದೇಶ ಕೇವಲ ಹವ್ಯಾಸವಾಗಿರಬಹುದು ಅಥವಾ ಸಾರ್ವಜನಿಕ ಮನೋರಂಜನೆ ಇರಬಹುದು.

ಮೀನುಗಳ ಸಂರಕ್ಷಣೆಯಲ್ಲಿ ತೊಡಗಿದವರು ಸುಮೇರಿಯನ್ನರು. ಈಗ್ಗೆ ಸುಮಾರು 4500 ವರ್ಷಗಳಷ್ಟು ಹಿಂದೆಯೇ ಇವರು ಮೀನುಗಳನ್ನು ಸಂಗ್ರಹಿಸಿ ಕೃತಕ ಕೊಳಗಳಲ್ಲಿ ಇಡುತ್ತಿದ್ದರೆಂದು ಹೇಳಲಾಗಿದೆ. ಈಜಿಪ್ಟಿನಲ್ಲೂ ಮೀನು ಸಾಕಣೆ ರೂಢಿಯಲ್ಲಿತ್ತು ಎಂಬುದಕ್ಕೆ ದಾಖಲೆಗಳಿವೆ. ಕ್ರಿ. ಪೂ. 1000ಕ್ಕೂ ಹಿಂದೆ ಚೀನದಲ್ಲಿ ಮತ್ಸ್ಯಸಂಕರ ನಡೆಸುತ್ತಿದ್ದರೆನ್ನಲಾಗದೆ, ಆ ಜನ ಆಹಾರಕ್ಕಾಗಿ ಮೀನು ಸಾಕುತ್ತಿದ್ದರು. ಅಧ್ಯಯನ ದೃಷ್ಟಿಯಿಂದ ಮೀನುಗಳ ಸಂಗ್ರಹ ಆರಂಭವಾದ್ದು ಕ್ರಿ. ಶ. 1850ರ ಅನಂತರ. ಪ್ರಪಂಚದ ಮೊತ್ತಮೊದಲ ಮತ್ಸ್ಯಾಗಾರ ಇಂಗ್ಲೆಂಡಿನ ರೀಜೆಂಟ್ ಉದ್ಯಾನದಲ್ಲಿ ಸ್ಥಾಪಿತವಾಯಿತು (1853). ಈಗ ಪ್ರಪಂಚದ ಬಹುತೇಕ ದೊಡ್ಡ ನಗರ ಎಲ್ಲವುಗಳಲ್ಲೂ ಮತ್ಸ್ಯಾಗಾರಗಳುಂಟು. ಸಾಗರವಾಸಿ ಪ್ರಾಣಿಗಳ ಅತ್ಯಂತ ಭಾರಿ ಸಂಗ್ರಹಾಲಯ ಫ್ಲಾರಿಡದ ಮೇರಿಲ್ಯಾಂಡಿನಲ್ಲಿದೆ.

ಮುಂಬಯಿಯಲ್ಲಿರುವ ತಾರಾಪುರೇವಾಲಾ ಮತ್ಸ್ಯಾಗಾರವೇ ಭಾರತದ ಅತಿದೊಡ್ಡ ಮತ್ಸ್ಯಾಗಾರ. ಇದರಲ್ಲಿ ಸಿಹಿನೀರು ಹಾಗೂ ಸಮುದ್ರವಾಸಿ ಮೀನುಗಳಲ್ಲದೆ ಹಲವು ಕಂಟಕಚರ್ಮಿಗಳನ್ನೂ ಸಂಧಿಪದಿಗಳನ್ನೂ ಸಂಗ್ರಹಿಸಿಡಲಾಗಿದೆ. (ನೋಡಿ: ಮೃಗಾಲಯ)

(ಎಸ್.ಎನ್.ಎಚ್.)

**ಪ್ರಾಣಿ ಸಮಾಜಗಳು:** ಒಂದೇ ಗುಂಪಿನ ಅಥವಾ ಪ್ರಭೇದದ ಹಲವು ಜೀವಿಗಳು ಒಟ್ಟಾಗಿ ವಾಸಮಾಡುವುದು (ಎನಿಮಲ್ ಸೊಸೈಟೀಸ್). ಹೀಗೆ ಒಟ್ಟಾಗಿ ಜೀವಿಸುವಿಕೆಯನ್ನು ಸಂಘ ಜೀವನ ಅಥವಾ ಸಮಾಜ ಜೀವನ ಎನ್ನಲಾಗುತ್ತದೆ. ಪ್ರಾಣಿ ಪ್ರಪಂಚದಲ್ಲಿ ಅನೇಕ ಜೀವಿಗಳು ಗುಂಪಾಗಿ ಜೀವಿಸುತ್ತವೆ. ಆದರೂ ಕೀಟಗಳ ಪೈಕಿ ಕಣಜ, ಜೇನು, ಇರುವೆ ಹಾಗೂ ಗೆದ್ದಲುಗಳನ್ನೂ, ಪ್ರೈಮೇಟು ಹಾಗೂ ಗೊರಸಿಗಳ ಗಣಕ್ಕೆ ಸೇರುವ ಕೆಲವು ಸ್ತನಿಗಳಲ್ಲಿಯೂ ನಿಜವಾದ ಸಮಾಜ ಜೀವನ ಕಾಣಬಹುದು.

ಮಾನವನನ್ನು ಸಮಾಜ ಜೀವಿ ಎನ್ನುತ್ತೇವೆ. ಆದಿ ಮಾನವ ಕಾಡುಮೇಡುಗಳಲ್ಲಿ ಅಲೆಯುತ್ತ ಒಂಟಿಯಾಗಿ ಜೀವನ ಸಾಗಿಸುತ್ತಿದ್ದಾಗ ತಾನು ಬದುಕಲು ಹಾಗೂ ತನ್ನ ಪೀಳಿಗೆಯನ್ನು ಬದುಕುಳಿಸಲು, ಸಮಾಜ ಜೀವನಕ್ಕೆ ಮಾರು ಹೋಗಬೇಕಾಯಿತು. ಗುಂಪಾಗಿ ಬದುಕುವುದನ್ನು, ವೈರಿಗಳನ್ನು, ಪ್ರತಿಕೂಲ ಪರಿಸ್ಥಿತಿಯನ್ನು ಗುಂಪಾಗಿ ಎದುರಿಸುವುದನ್ನು ಕಲಿತ. ಸಮಾಜ ಜೀವನದ ಲಾಭಗಳನ್ನು ಅರಿತುಕೊಂಡು ಸಂಘ ಜೀವನ ಸಾಗಿಸುತ್ತಿದ್ದುದರಿಂದ ಹಾಗೂ ಆತನ ಕೆಲವು ವಿಶಿಷ್ಟ ಗುಣಗಳಿಂದಾಗಿ ಮಾನವ ಪ್ರಭೇದ ಇಂದು ಉಳಿದೆಲ್ಲ ಜೀವಿಗಳ ಮೇಲೆ ಪ್ರಾಬಲ್ಯ ಪಡೆಯುವುದು ಸಾಧ್ಯವಾಯಿತು.

ಈಗಾಗಲೇ ತಿಳಿಸಿದಂತೆ ಸಂಘ ಜೀವನ ಮಾನವನಿಗಷ್ಟೇ ಸೀಮಿತವಾದುದಲ್ಲ. ಮಾನವನಿಗಿಂತ ಮಿಲಿಯಗಟ್ಟಲೆ ವರ್ಷಗಳ ಮೊದಲೇ ವಿಕಾಸಗೊಂಡ ಕೆಲವು ಜೀವಿಗಳೂ ಸಂಘ ಜೀವನವನ್ನು ಅಳವಡಿಸಿಕೊಂಡಿವೆ. ಅಂದರೆ ಸಂಘ ಜೀವನ ಇತ್ತೀಚೆಗೆ ಉದಯವಾದ ಪ್ರಕ್ರಿಯೆಯಲ್ಲ. ಜೀವಿಗಳ ಉಗಮವಾಗುತ್ತಿದ್ದಂತೆಯೇ ಉದಯವಾಯಿತು ಎನ್ನಬಹುದು. ಜೀವ ವಿಕಾಸವಾಗುತ್ತಿದ್ದಂತೆಯೇ ಸಂಘ ಜೀವನವೂ ವಿಕಾಸವಾಯಿತು.

ಅನೇಕ ಜೀವಿಗಳು ಗುಂಪಾಗಿ ವಾಸಿಸುತ್ತವೆ. ಕೆಲವು ಬ್ಯಾಕ್ಟೀರಿಯಗಳು, ಸೂಕ್ಷ್ಮಜೀವಿಗಳು, ಪ್ರೊಟೋಜೋವಗಳು, ಸ್ಪಂಜುಪ್ರಾಣಿಗಳು, ಕುಟುಕುಕಣವಂತಗಳು, ಹವಳಪ್ರಾಣಿಗಳು, ಹುಳುಗಳು ಮೃದ್ವಂಗಿಗಳು ಕಂಟಕಚರ್ಮಿಗಳು, ಮೀನುಗಳು, ಪಕ್ಷಿಗಳು ಗುಂಪಾಗಿ ಬದುಕುತ್ತವೆ. ಸಮುದ್ರದಲ್ಲಿ ನದಿಗಳಲ್ಲಿ ಗುಂಪುಗುಂಪಾಗಿ ಈಜುತ್ತಿರುವ ಮೀನುಗಳು, ಆಕಾಶದಲ್ಲಿ ಗುಂಪಾಗಿ ಹಾರುತ್ತಿರುವ ಪಕ್ಷಿಗಳು, ಕಾಡಿನಲ್ಲಿ ಜೊತೆಗೂಡಿ ಮೇಯುತ್ತಿರುವ ಜಿಂಕೆ ಕಡವೆಗಳು, ಕಾಡೆಮ್ಮೆಗಳು, ಆನೆಗಳು ಮುಂತಾದುವು ಗುಂಪು ಜೀವನಕ್ಕೆ ಉದಾಹರಣೆಗಳು. ಆದರೂ ಇವೆಲ್ಲವನ್ನೂ ಪ್ರಾಣಿ ಸಮಾಜಗಳೆನ್ನುವುದಿಲ್ಲ. ಪ್ರಜನನ ಕ್ರಿಯೆಗೆ ಒಂದೆಡೆ ಸೇರುವ ಅಥವಾ ಒಂದೆಡೆ ಆಹಾರ ಲಭ್ಯವಿರುವಾಗ ಒಟ್ಟಿಗೆ ಸೇರುವ ಇಲ್ಲವೆ, ಪ್ರಶಸ್ತವಾದ ಸ್ಥಳದಲ್ಲಿ ಒಟ್ಟಿಗೇ ಗೂಡು ಕಟ್ಟುವ ಕ್ರಿಯೆಗಳೆಲ್ಲವೂ ಸಮಾಜ ಜೀವನವೆನಿಸಿಕೊಳ್ಳುವುದಿಲ್ಲ. ನೈಜ ಸಮಾಜ ಜೀವಿಗಳಲ್ಲಿ ಕಾಣಬರುವ ಗುಣಗಳು ಕೆಳಗಿನಂತಿವೆ.

1. ಒಂದೇ ಪ್ರಭೇದದ ಅನೇಕ ಜೀವಿಗಳು ಒಟ್ಟಾಗಿ ಜೀವನ ಸಾಗಿಸುವುದು. ಆ ಪ್ರಭೇದದ ಎಲ್ಲಾ ಜೈವಿಕ ಕ್ರಿಯೆಗಳನ್ನು ಅಂದರೆ ಆಹಾರ ಸಂಗ್ರಹ, ಪ್ರಜನನ, ಮೊಟ್ಟೆ–ಮರಿಗಳನ್ನು ಸಾಕುವುದು, ವೈರಿಗಳನ್ನು ಎದುರಿಸುವುದು ಮುಂತಾದ ಎಲ್ಲ ಕಾರ್ಯಗಳನ್ನು ಒಟ್ಟಾಗಿ ಮಾಡುವಿಕೆ. ಆಹಾರವನ್ನು ಹಂಚಿ ತಿನ್ನುವುದು, ಒಂದೆಡೆ ವಿಶ್ರಾಂತಿ ಪಡೆಯುವುದು ಮುಂತಾದುವು ಸಮಾಜ ಜೀವನದ ಮುಖ್ಯ ಲಕ್ಷಣ.

2. ಹೀಗೆ ಒಟ್ಟಾಗಿ ಬದುಕುತ್ತಿರುವಾಗ ಯಾವುದೇ ಕಾರಣದಿಂದ ಗುಂಪಿನ ಸದಸ್ಯರು ಬೇರ್ಪಟ್ಟರೆ ಅವು ಬದುಕುವ ಸಾಧ್ಯತೆ ಕಡಿಮೆ ಇರುವುದು. ಅಂದರೆ ಗುಂಪು ಜೀವನದಿಂದ ಗುಂಪಿನ ಹಾಗೂ ಅದರ ಸದಸ್ಯರ ಬದುಕಿನ ಸಾಧ್ಯತೆ ಹೆಚ್ಚಾಗಿರುವುದು ಅಥವಾ ಭದ್ರತೆ ಹೆಚ್ಚಾಗಿರುವುದು.

3. ಕೆಲವು ಜೀವಿಗಳಲ್ಲಿ ಪ್ರಜನನದ ಸಮಯದಲ್ಲಿ ಅನೇಕ ಗಂಡು ಹೆಣ್ಣುಗಳು ಒಂದುಗೂಡುತ್ತವೆ. ಗುಂಪಾಗಿ ಬದುಕುತ್ತವೆ. ಇದು ಕ್ಷಣಿಕ ಗುಂಪು ಜೀವನ. ಏಕೆಂದರೆ ಅವು ಪ್ರಜನನ ಮುಗಿಸಿದ ನಂತರ ಮೊಟ್ಟೆಯಿಡುವ ತನಕ ಅಥವಾ ಮರಿಗಳು ಜನಿಸುವವರೆಗೆ ಮಾತ್ರ, ಇನ್ನು ಕೆಲವು ಪ್ರಭೇದಗಳಲ್ಲಿ ಮರಿಗಳು ಬೆಳೆದು ಸ್ವತಂತ್ರ ಜೀವನ ನಡೆಸುವ ಶಕ್ತಿಯನ್ನು ಪಡೆಯುವವರೆಗೆ ಒಂದಾಗಿ ಬದುಕುತ್ತವೆ. ಅನಂತರ ಬೇರ್ಪಟ್ಟು ತಮ್ಮ ಪಾಡಿಗೆ ತಾವು ಹೊರಟು ಹೋಗುತ್ತವೆ. ಇಂಥ ಗುಂಪುಗಳು ಸಮಾಜಗಳೆನಿಸಿಕೊಳ್ಳುವುದಿಲ್ಲ.

4. ಒಂದು ಗುಂಪಿನಲ್ಲಿ ಒಂದೇ ಪ್ರಭೇದಕ್ಕೆ ಸೇರಿದ ಅನೇಕ ಜೀವಿಗಳಿದ್ದರೂ ಅವುಗಳಲ್ಲಿಯೇ ವಿವಿಧ ಪಂಗಡಗಳಿದ್ದು ಈ ಪಂಗಡಗಳಲ್ಲಿ ಸಾಮರಸ್ಯವಿದ್ದು (ಕೊಹೆರನ್ಸ್) ಒಂದೊಂದು ಪಂಗಡದ ಜೀವಿಗಳೂ ಗುಂಪಿನ ಒಂದೊಂದು ಕಾರ್ಯವನ್ನು ನಿರ್ವಹಿಸುವುವು. ಇದನ್ನು ಡಿವಿಷನ್ ಆಫ್ ಲೇಬರ್ ಎನ್ನುವರು.

5. ಗುಂಪಿನ ಎಲ್ಲ ಸದಸ್ಯಗಳೂ ಗುಂಪಿನ ಹಿತಕ್ಕಾಗಿ, ರಕ್ಷಣೆಗಾಗಿ ದುಡಿಯುವುದು. ಗುಂಪಿನಲ್ಲಿ ಒಂದು ಪಂಗಡದ ಜೀವಿಗಳು ಇಲ್ಲವಾದರೆ ಉಳಿದ ಪಂಗಡಗಳ ಜೀವಿಗಳ ಬದುಕೂ ದುಸ್ತರವಾಗುತ್ತದೆ. ಒಂದು ಪಂಗಡದ ಗುಂಪು ಮಾತ್ರ ಮುಖ್ಯ ಗುಂಪಿನಿಂದ ಬೇರ್ಪಡೆಯಾದರೆ ಆ ಗುಂಪು ಬದುಕುವ ಸಾಧ್ಯತೆ ಕಡಿಮೆ.

6. ಸದಸ್ಯಗಳಲ್ಲಿ ಗುಂಪಿನ ಸ್ವಾಸ್ಥ್ಯವೇ ವಯಕ್ತಿಕ ಸ್ವಾಸ್ಥ್ಯ ಎನ್ನುವ ಮನೋಭಾವವಿರಬೇಕು. ಪರಸ್ಪರ ಸಹಕಾರ ಮನೋಭಾವ ಸುವ್ಯವಸ್ಥಿತ ವರ್ತನೆಗಳು ಗುಂಪಿನ ಸದಸ್ಯಗಳಲ್ಲಿರಬೇಕು.

7. ಪರಸ್ಪರ ಸಹಕಾರ ಮನೋಭಾವ (ಕೋ–ಆಪರೇಷನ್), ಸುವ್ಯವಸ್ಥಿತ ವರ್ತನೆಗಳು ಗುಂಪಿನ ಸದಸ್ಯಗಳಲ್ಲಿರಬೇಕು.

8. ಗುಂಪಿನ ವಿವಿಧ ಪಂಗಡಗಳ ಸದಸ್ಯಗಳಲ್ಲಿ ವಿವಿಧ ಹಂತಗಳ ಪ್ರಭುತ್ವ ಅಥವಾ ಅಧಿಪತ್ಯವಿರಬೇಕು (ಹೈರಾರ್ಕಿ).



ಕಾಡು ನಾಯಿಗಳ ಸಮಾಜ

9. ಗುಂಪಿನಲ್ಲಿರುವ ವಿವಿಧ ಪಂಗಡಗಳು ವಿವಿಧ ಕ್ರಿಯೆಗೆ ನಿಯೋಜಿತವಾಗಿರುವುವು. ಆಹಾರ ಸಂಗ್ರಹಣೆ, ರಕ್ಷಣೆ, ಪ್ರಜನನ ಹಾಗೂ ಮೊಟ್ಟೆ ಮರಿಗಳ ರಕ್ಷಣೆಗೆ ಪ್ರತ್ಯೇಕ ಪಂಗಡಗಳಿರುವುವು. ಆಯಾಯ ಪಂಗಡದ ಜೀವಿಗಳು ತಮ್ಮ ಕೆಲಸವನ್ನು ನಿರ್ವಂಚನೆಯಿಂದ ಸಿಸ್ಪೃಹತೆಯಿಂದ, ನಿಸ್ವಾರ್ಥ ಮನೋಭಾವದಿಂದ ನಿರ್ವಹಿಸುವಂತಿರಬೇಕು. ಉದಾಹರಣೆಗೆ ಆಹಾರ ಸಂಗ್ರಹಣೆಗೆ ನಿಯೋಜಿತವಾದ ಪಂಗಡವು ತಮಗಷ್ಟೇ ಅಲ್ಲದೆ ಗುಂಪಿನ ಇತರ ಸದಸ್ಯಗಳಿಗೂ ಆಹಾರ ಸಂಗ್ರಹಿಸಬೇಕು. ರಕ್ಷಣೆಗೆ ಮೀಸಲಾದ ಪಂಗಡವು ತಮ್ಮ ಜೀವ ತೆತ್ತಾದರೂ ಗುಂಪಿನ ಇತರ ಸದಸ್ಯಗಳನ್ನು ರಕ್ಷಿಸುವಂತಿರಬೇಕು. ಪ್ರಜನನಕ್ಕೆ ನಿಯೋಜಿತ ಪಂಗಡದ ಕೆಲಸ ಗುಂಪಿನ ಬೆಳೆವಣಿಗೆಗೆ ಅಗತ್ಯವಾದ ರೀತಿಯಲ್ಲಿ ಮೊಟ್ಟೆಗಳನ್ನಿಡುವುದು. ದಾಯಿಗಳು ತಮ್ಮದಲ್ಲದ ಸಂತಾನವನ್ನು ರಕ್ಷಿಸಿ ಬೆಳೆಸಬೇಕು.

10. ಗುಂಪಿನ ವಿವಿಧ ಸದಸ್ಯಗಳ ನಡುವೆ ಅಗತ್ಯವಾದ ಸಂಪರ್ಕ ವಿಧಾನವಿರಬೇಕು (ಕಮ್ಯೂನಿಕೇಷನ್). ಸಾಮಾನ್ಯವಾಗಿ ಗುಂಪು ಜೀವನ ನಡೆಸುವ ಜೀವಿಗಳಲ್ಲಿ ದೃಷ್ಟಿ, ಶ್ರವಣ, ಯಾಂತ್ರಿಕ ಹಾಗೂ ರಾಸಾಯನಿಕ ಸಂಪರ್ಕ ಮಾಧ್ಯಮಗಳು ಬೆಳೆವಣಿಗೆಯಾಗಿರುತ್ತವೆ. ವಿವಿಧ ಪಂಗಡಗಳು ತಮ್ಮ ವಿಶಿಷ್ಟವಾದ ಭಂಗಿ, ಶಬ್ದ, ಸ್ಪರ್ಶ ಅಥವಾ ಅವು ಗ್ರಂಥಿಗಳಿಂದ ಹೊರಡಿಸುವ ಸುಗಂಧ ವಸ್ತುಗಳ ಮೂಲಕ ತಮ್ಮದೇ ಗುಂಪಿನ ಸದಸ್ಯಗಳನ್ನು ಉಳಿದ ಗುಂಪು ಅಥವಾ ಪ್ರಭೇದಗಳಿಂದ ಗುರುತಿಸುತ್ತವೆ.

11. ಗುಂಪಿನ ಸದಸ್ಯಗಳಲ್ಲಿ ಒಗ್ಗಟ್ಟು (ಯೂನಿಟಿ) ಇರಬೇಕು. ಗುಂಪಿನ ಎಲ್ಲ ಪಂಗಡಗಳ ನಡುವೆ ಒಮ್ಮತವಿದ್ದು, ಇಡೀ ಗುಂಪೂ ಒಂದೇ ಎಂಬ ಭಾವವಿರಬೇಕು.

12. ಒಂದು ಗುಂಪಿನಲ್ಲಿ ಕೇವಲ ನಾಲ್ಕೈದು ಸದಸ್ಯಗಳಿರಬಹುದು ಅಥವಾ ಲಕ್ಷಾಂತರ ಸದಸ್ಯಗಳಿರಬಹುದು.

13. ಒಂದು ಪ್ರಭೇದದ ಜೀವಿ ಇನ್ನೊಂದು ಪ್ರಭೇದದ ಜೀವಿಯೊಡನೆ ವಾಸಿಸುತ್ತಿದ್ದರೆ ಅದು ಸಂಘ ಜೀವನವಾಗಲಾರದು.

14. ಹಳೆಯ ಗುಂಪಿನ ಎಲ್ಲಾ ಪಂಗಡಗಳ ಕೆಲವು ಸದಸ್ಯಗಳು ಬೇರ್ಪಟ್ಟು ಹೊಸ ತಾಣದಲ್ಲಿ ನೆಲೆಸಿ ತಮ್ಮ ಗುಂಪು ಕ್ರಿಯೆಯನ್ನು ಆರಂಭಿಸಿದಾಗ ಹೊಸ ಗುಂಪು ಹುಟ್ಟುತ್ತದೆ.

ಪ್ರಾಣಿ ಸಮಾಜಗಳಲ್ಲಿ, ಒಂದೇ ಪ್ರಭೇದದ ಜೀವಿಗಳ ನಡುವೆ ವೈಷಮ್ಯಗಳಾಗಲಿ, ಭಿನ್ನಾಭಿಪ್ರಾಯಗಳಾಗಲಿ, ಕದನಗಳಾಗಲಿ ಇರುವುದಿಲ್ಲ. ಗುಂಪಿನ ಪ್ರಭುತ್ವ ಅಥವಾ ಲೈಂಗಿಕ ಪ್ರಭುತ್ವ ಪಡೆಯಲು ಕದನವೇರ್ಪಟ್ಟರೂ, ಗುಂಪಿನ ಬಲಶಾಲಿ, ಗುಂಪಿನ ನೇತೃತ್ವ ವಹಿಸಿ ಇಡೀ ಗುಂಪಿಗೆ ರಕ್ಷಣೆ ನೀಡುತ್ತದೆ. ಲೈಂಗಿಕ ಪ್ರಭುತ್ವ ಪಡೆದ ಸದಸ್ಯ ಪ್ರಜನನದ ಮೂಲಕ ಬಲಶಾಲೀ ಪೀಳಿಗೆಯನ್ನು ತಯಾರಿಸುತ್ತದೆ. ತನ್ಮೂಲಕ ಗುಂಪಿನ ಎಲ್ಲ ಸದಸ್ಯಗಳ ಆನುವಂಶಿಕ ಗುಣಗಳನ್ನು ಮುಂದಿನ ಪೀಳಿಗೆಗೆ ಸಾಗಿಸುತ್ತದೆ. ಪ್ರಾಣಿಗಳು ಹಸಿವಾದಾಗ ಮಾತ್ರ ತಿನ್ನುತ್ತವೆ. ಬೇರೆ ಜೀವಿಗಳು ಆಕ್ರಮಣ ಮಾಡಿದಾಗ ಅಥವಾ ಬೇರೆ ಜೀವಿಯಿಂದ ತಮ್ಮ ಬದುಕಿಗೆ, ಅಸ್ತಿತ್ವಕ್ಕೆ ಧಕ್ಕೆ ಇದೆಯೆಂದು ಭಾವಿಸಿದಾಗ ಮಾತ್ರ ಪ್ರತಿಭಟಿಸುತ್ತವೆ. ಅಗತ್ಯವಿದ್ದಾಗ ಮಾತ್ರ ಆಹಾರ ಜೀವಿಯನ್ನು ಕೊಲ್ಲುತ್ತವೆ. ಇಲ್ಲವಾದರೆ ಬೇರೆ ಜೀವಿಗಳ ತಂಟೆಗೂ ಹೋಗುವುದಿಲ್ಲ. ಅಗತ್ಯಕ್ಕಿಂತ ಹೆಚ್ಚಾದುದನ್ನು ಕೂಡಿಡುವುದಿಲ್ಲ. ಇವೆಲ್ಲ ಗುಣಗಳಲ್ಲಿ ಪ್ರಾಣಿ ಸಮಾಜಗಳು ಮಾನವ ಸಮಾಜಕ್ಕಿಂತ ಭಿನ್ನ.

ಪ್ರಾಣಿ ಪ್ರಪಂಚದ ಅನೇಕ ಗುಂಪುಗಳಲ್ಲಿ ಸಮಾಜ ಜೀವನವನ್ನು ಕಾಣುತ್ತೇವೆ ಎಂದು ಈಗಾಗಲೇ ತಿಳಿಸಿದೆ. ಕೇವಲ ಆಕಸ್ಮಿಕವಾಗಿ ಒಂದೆಡೆ ಕೂಡಿ ಬದುಕುವ ಜೀವಿಗಳಿಂದ ಹಿಡಿದು, ಒಂದನ್ನೊಂದು ಬಿಟ್ಟಿರಲಾರದ ನಂಟಿನೊಡನೆ ಅಂಟಿಕೊಂಡು ಸಂಘ ಜೀವನ ನಡೆಸುವ ಪ್ರಭೇದಗಳೂ ಇವೆ. ಈ ಪ್ರಭೇದಗಳ ನಡುವಿನ ಸಂಬಂಧಗಳನ್ನು ಪರಿಗಣಿಸಿ ಪ್ರಾಣಿ ಸಮಾಜಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

1. ಒಂಟಿ ಜೀವಿಗಳು: ಇವನ್ನು ಸಾಲಿಟರಿ ಅಥವಾ ಎಸೋಷಿಯಲ್ ಜೀವಿಗಳೆನ್ನುವರು. ಕೇವಲ ಪ್ರಜನನ ಕಾಲದಲ್ಲಿ ಮಾತ್ರ ಗಂಡು ಹೆಣ್ಣುಗಳು ಒಂದಾಗಿ ಮೊಟ್ಟೆ ಅಥವಾ ಮರಿಗಳನ್ನಿಟ್ಟು ಕೂಡಲೇ ಬೇರೆ ಬೇರೆಯಾಗಿ ಬದುಕುವುವು. ಉದಾ: ಚಿಟ್ಟೆ ಪತಂಗಗಳು.

2. ಸಮಾಜ ಜೀವಿಗಳು: ಇವು ಗುಂಪಾಗಿ ಬದುಕುವ ಜೀವಿಗಳು. ಇವುಗಳಲ್ಲೂ ವಿವಿಧ ಜೀವಿಗಳ ನಡುವೆ ಇರುವ ಸಂಬಂಧದ ಪರಿಮಾಣವನ್ನು ಅವಲಂಬಿಸಿ ಅವುಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗುತ್ತದೆ.

ಎ. ಉಪಸಮಾಜ ಜೀವಿಗಳು (ಸಬ್‌ಸೋಷಿಯಲ್): ಗಂಡು ಹೆಣ್ಣುಗಳು ಒಂದುಗೂಡಿ ಪ್ರಜನನದಿಂದ ಮೊಟ್ಟೆ ಅಥವಾ ಮರಿಗಳನ್ನು ಇಟ್ಟು, ಅವು ಬೆಳೆದು ಸ್ವತಂತ್ರ ಜೀವನ ನಡೆಸುವವರೆಗೆ ಜೊತೆಯಾಗಿ ಬದುಕುವ ಜೀವಿಗಳು ಈ ಗುಂಪಿಗೆ ಸೇರುತ್ತವೆ. ಉದಾ: ಅನೇಕ ಪಕ್ಷಿಗಳು, ಬೆಕ್ಕು, ಹುಲಿ ಮುಂತಾದ ಮಾಂಸಾಹಾರಿ ಸ್ತನಿಗಳು.

ಬಿ. ಕೋಮು ಜೀವಿಗಳು (ಕಮ್ಯುನಲ್): ಒಂದೇ ಪಿತೃಮೂಲದ ಜೀವಿಗಳು ಒಂದಾಗಿ ಒಂದೇ ಗುಂಪಿನಲ್ಲಿ ಬದುಕಿ ಆದರೆ ಸಂತತಿಯನ್ನು ಪ್ರತ್ಯೇಕವಾಗಿ ಬೆಳೆಸುವ ಪ್ರಭೇದಗಳು. ಉದಾ: ವಲಸೆ ಹೋಗುವ ಪಕ್ಷಿಗಳು.

ಸಿ. ಅರೆ ಸಮಾಜ ಜೀವಿಗಳು ( ಕ್ವಾಸಿ ಸೋಷಿಯಲ್): ಒಂದೇ ಪಿತೃಮೂಲದ ಜೀವಿಗಳು ಒಂದಾಗಿ ಒಂದೇ ಗುಂಪಿನಲ್ಲಿ ಬದುಕಿ, ಒಂದಾಗಿಯೇ ಸಂತತಿಯನ್ನು ಬೆಳೆಸುವ ಪ್ರಭೇದಗಳು. ಇವು ಒಂದೇ ಗೂಡಿನಲ್ಲಿ ಅಥವಾ ಒಂದೇ ತಾಣದಲ್ಲಿ ತಮ್ಮ ಸಂತಾನಗಳನ್ನು ಬೆಳೆಸುವುವು. ಉದಾ: ಜಿಂಕೆ, ಕಾಡೆಮ್ಮೆ, ಆನೆ, ಸಿಂಹ ಮುಂತಾದುವು.

ಡಿ. ಅಪೂರ್ಣ ಸಮಾಜ ಜೀವಿಗಳು (ಸೆಮಿಸೋಷಿಯಲ್): ಒಂದೇ ಪಿತೃಮೂಲದ ಜೀವಿಗಳು ಒಂದಾಗಿ ಒಂದೇ ಗುಂಪಿನಲ್ಲಿ ಬದುಕಿ ಒಂದಾಗಿ ತಮ್ಮ ಸಂತತಿಯನ್ನು ಬೆಳೆಸುವುದರೊಂದಿಗೆ ಪ್ರಜನನಕ್ಕೆ ಹಾಗೂ ಇನ್ನಿತರ ಕಾರ್ಯಗಳಿಗೆ ಪ್ರತ್ಯೇಕ ಪಂಗಡಗಳನ್ನೇ ಸೃಷ್ಟಿಸಿಕೊಂಡಿರುವ ಪ್ರಭೇದಗಳು. ಕೆಲವು ಪಕ್ಷಿಗಳು ಹಾಗೂ ಅನೇಕ ಕೋತಿಗಳು ಈ ಗುಂಪಿಗೆ ಸೇರುತ್ತವೆ.

**ಮುಸವನ ಸಮಾಜ**

ಇ. ನೈಜ ಸಮಾಜ ಜೀವಿಗಳು (ಯುಸೋಷಿಯಲ್): ಒಂದೇ ಪ್ರಭೇದದ ಹಲವು ಪಿತೃಮೂಲದ ಜೀವಿಗಳು ಒಂದಾಗಿ ಒಂದೇ ಗುಂಪಿನಲ್ಲಿ ಬದುಕಿ ಒಂದಾಗಿ ತಮ್ಮ ಸಂತತಿಯನ್ನು ಬೆಳೆಸುವುದರೊಂದಿಗೆ ಪ್ರಜನನಕ್ಕೆ ಹಾಗೂ ಇನ್ನಿತರ ಕಾರ್ಯಗಳಿಗೆ ಪ್ರತ್ಯೇಕ ಪಂಗಡಗಳನ್ನೇ ಸೃಷ್ಟಿಸಿಕೊಂಡಿರುವ ಪ್ರಭೇದಗಳು. ಉದಾ: ಕೀಟ ಸಮಾಜಗಳು. ಕಣಜ, ಜೇನು, ಇರುವೆ ಮತ್ತು ಗೆದ್ದಲು.

ನೈಜ ಸಮಾಜ ಜೀವನ ನಡೆಸುವ ಪ್ರಭೇದಗಳಲ್ಲಿ ಒಂದು ಜೀವಿಯು ಮಾಡುವ ಎಲ್ಲ ಕೆಲಸಗಳನ್ನು ಇಡೀ ಗುಂಪು ಒಟ್ಟಾರೆಯಾಗಿ ನಿರ್ವಹಿಸುವುದು. ಸಂಘ ಜೀವನದ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡಿರುವ ಎರಡು ವರ್ಗಗಳನ್ನು ಮಾತ್ರ ಪ್ರಾಣಿ ಪ್ರಪಂಚದಲ್ಲಿ ಕಾಣಬಹುದು. ಅಕಶೇರುಕಗಳಲ್ಲಿ ಕೀಟ ವರ್ಗಕ್ಕೆ ಸೇರಿದ ಕೆಲವು ಪ್ರಭೇದಗಳನ್ನು ಹಾಗೂ ಸ್ತನಿ ವರ್ಗದ ಕೆಲವು ಪ್ರಭೇದಗಳನ್ನು ನೈಜ ಸಮಾಜಗಳೆಂದು ಪರಿಗಣಿಸಲಾಗುತ್ತಾದರೂ, ಸ್ತನಿಗಳ ಸಮಾಜ ಜೀವನ ಕೀಟ ಸಮಾಜದ ಸದಸ್ಯಗಳಲ್ಲಿರುವಷ್ಟು ಗಾಢವಾಗಿರುವುದಿಲ್ಲ. ಸ್ತನಿಗಳ ಸಮಾಜ ಇಷ್ಟು ಪ್ರವರ್ಧಮಾನಕ್ಕೂ ಬಂದಿಲ್ಲ. ಗುಂಪಾಗಿ ವಾಸಿಸುತ್ತ, ಆಹಾರ ಹುಡುಕುತ್ತ, ನಿಶ್ಚಿತ ಪ್ರದೇಶಗಳಲ್ಲಿ ಇವು ಜೀವಿಸುತ್ತವೆ. ಗುಂಪಿನ ಅಧಿಪತ್ಯ ಬಲಶಾಲಿ ಗಂಡಿನದು. ಗುಂಪಿನ ರಕ್ಷಣೆ, ಲೈಂಗಿಕತೆಯಲ್ಲೂ ಬಲಶಾಲಿ ಗಂಡಿನದು ಸಿಂಹಪಾಲು. ಸ್ತನಿ ಸಮಾಜದಲ್ಲಿ ಒಂದೇ ಪಿತೃಮೂಲದ ಸಂತತಿಗಳಿಂದ ಕೂಡಿದ ಗುಂಪುಗಳಿವೆ. ಹಲವು ಪಿತೃಮೂಲದ ಸದಸ್ಯಗಳೂ ಇರಬಹುದು. ಪಂಗಡಗಳಾಗಲಿ, ಒಳ ವಿಭೇದನೆಯಾಗಲಿ ಇರುವುದಿಲ್ಲ. ವಿಕಾಸದ ದೃಷ್ಟಿಯಲ್ಲಿ ಇವು ಕೀಟಗಳಿಗಿಂತ ಹಿಂದಿವೆ. ಮೇಲ್ಕಾಣಿಸಿದ ನಾಲ್ಕು ಕೀಟಗುಂಪುಗಳು ಮಾತ್ರ ನೈಜ ಸಮಾಜದ ಎಲ್ಲ ಗುಣಗಳನ್ನೂ ಮೈಗೂಡಿಸಿಕೊಂಡಿದ್ದು ವಿಕಾಸವೂ ಕೂಡ ಇಡೀ ಸಮಾಜದ ಮೇಲೆ ಪ್ರಭಾವ ಬೀರುವುದೇ ವಿನಃ ಒಂದು ಜೀವಿಯ ಮೇಲಲ್ಲ. ಜೀವ ವಿಕಾಸದಲ್ಲಿ ಹೀಗೆ ಇಡೀ ಗುಂಪಿನ ಮೇಲೆ ನಿಸರ್ಗವು ಪ್ರಭಾವ ಬೀರಿ ಬದುಕಲು ತಕ್ಕವುಗಳನ್ನು ಆಯ್ಕೆ ಮಾಡುವಿಕೆಯನ್ನು ಗುಂಪು ಆಯ್ಕೆ (ಗ್ರೂಪ್ ಸೆಲೆಕ್ಷನ್) ಎಂದು

ಹೆಸರಿಸಲಾಗಿದೆ. ಆದ್ದರಿಂದ ಸಮಾಜ ಜೀವನ ನಡೆಸುವ ಕೀಟಗಳು ವಿಕಾಸದ ದೃಷ್ಟಿಯಲ್ಲಿ ಉನ್ನತ ಮಟ್ಟ ತಲುಪಿವೆ ಎಂದು ಭಾವಿಸಲಾಗಿದೆ.

ಶರೀರ ರಚನೆಯಲ್ಲಿ, ಮೆದುಳಿನ ಬೆಳವಣಿಗೆಯಲ್ಲಿ, ಬುದ್ಧಿಯಲ್ಲಿ, ಸ್ಮರಣೆಯಲ್ಲಿ, ತಾರ್ಕಿಕವಾಗಿ ಕೀಟಗಳು ಮಾನವನನ್ನೂ ಸೇರಿದಂತೆ ಉಳಿದ ಕಶೇರುಕಗಳಿಗಿಂತ ತುಂಬಾ ಹಿಂದಿವೆ. ಆದರೆ ಸಂಸಕ್ತಿ ಅಥವಾ ಪರಸ್ಪರ ಆಕರ್ಷಣೆ (ಕೊಹೆಷನ್), ಸಹಕಾರ (ಕೊ–ಅಪರೇಷನ್), ಪಂಗಡ ವಿಭೇದನೆ (ಕ್ಯಾಸ್ಟ ಡಿಫರನ್ಶಿಯೇಷನ್), ನಿಸ್ವಾರ್ಥಪರತೆ (ಅಲ್ಟ್ರೂಯಿಸಂ) ಮುಂತಾದುವುಗಳಲ್ಲಿ ಸಮಾಜ ಜೀವನ ನಡೆಸುವ ಕೀಟಗಳು ಉಳಿದೆಲ್ಲ ಜೀವಿಗಳಿಗಿಂತ ಎಷ್ಟೋ ಮುಂದಿವೆ. ಇವು ಸಮಾಜ ಜೀವನದ ಉತ್ತುಂಗ ಶ್ರೇಣಿಯನ್ನು ತಲುಪಿವೆ ಎಂದು ಹೇಳಬಹುದು.

ಸಾಮಾಜಿಕ ಜೀವನದಿಂದ ಪರಿಸರದಲ್ಲಿ ಅವು ಎದುರಿಸಬೇಕಾದ ಸಮಸ್ಯೆಗಳನ್ನು ಇಡೀ ಗುಂಪು ಒಂದಾಗಿ ಒಂದೇ ಜೀವಿಯಂತೆ ಎದುರಿಸುವಂತೆ ಒಗ್ಗಟ್ಟಾಗಿ ಎದುರಿಸುತ್ತವೆ. ಅದರಿಂದ ಕೆಲವರು ಕೀಟ ಸಮಾಜಗಳನ್ನು ಉನ್ನತ ಜೀವಿ (ಸುಪರ್ ಆರ್ಗಾನಿಸಂ) ಎಂದು ಕರೆಯುತ್ತಾರೆ. ಇವು ಸಾಮಾಜಿಕ ಜೀವನ ನಡೆಸುವ ಗುಣವನ್ನು ಆನುವಂಶೀಯವಾಗಿಯೇ ಪಡೆದಿರುತ್ತವೆ. ಸಮಾಜ ಜೀವನಕ್ಕೆ ಅಗತ್ಯವಾದ ಬಾಹ್ಯ ಮಾರ್ಪಾಡುಗಳೊಂದಿಗೆ ಆಂತರಿಕ ಮಾರ್ಪಾಡುಗಳನ್ನು, ಚಯಾಪಚಯ ಕ್ರಿಯೆಗಳನ್ನೂ ನಿಯಂತ್ರಿಸಿಕೊಂಡಿವೆ.

ಸಮಾಜ ಜೀವನದಿಂದ ಕೀಟಗಳು ಅನೇಕ ಲಾಭ ಗಳಿಸಿಕೊಂಡಿವೆ. ಭೂಮಿಯ ಮೇಲೆ ವಾಸಿಸುವ ಜೀವಿಗಳಲ್ಲೆಲ್ಲ ಪ್ರಬಲವಾದುದು ಕೀಟವರ್ಗ. ಅವುಗಳಲ್ಲೂ ಕೆಲವೇ ಪ್ರಭೇದಗಳು ಹೆಚ್ಚಿನ ಸಂಖ್ಯೆಯಲ್ಲಿ ಬದುಕುತ್ತಿವೆ. ಗುಂಪು ಜೀವನ ಸಾಗಿಸುವ ಕೀಟಗಳು ಸಂಖ್ಯೆಯಲ್ಲಿ ಹಾಗೂ ಜೈವಿಕ ತೂಕದಲ್ಲಿ (ಬಯೊಮಾಸ್) ದೈತ್ಯ ಜೀವಿಗಳಾದ ಆನೆಗಳಿಗಿಂತ ಎಷ್ಟೋ ಪಾಲು ಮಿಗಿಲಾಗಿವೆ. ಕೇವಲ ಕೆಲವೆ ಮಿಗ್ರಾಂ ತೂಕದ ಸಾಮಾಜಿಕ ಕೀಟಗಳಿವೆ. ಹತ್ತು ಹದಿನೈದು ಮಿಗ್ರಾಂ ತೂಕದ ಸಾಮಾಜಿಕ ಕೀಟಗಳೂ ಇವೆ. ಕೇವಲ ನಾಲ್ಕಾರು ಕೀಟಗಳಿರುವ ಗುಂಪುಗಳಿವೆ, ಲಕ್ಷಾಂತರ ಕೀಟಗಳಿರುವ ಗುಂಪುಗಳೂ ಇವೆ. ಉದಾ: ಟೆಟ್ರಾಮೋರಿಯಂ ಸೀಸ್ಪಿಟಂ ಎಂಬ ಪ್ರಭೇದದ ಇರುವೆ ಗುಂಪಿನಲ್ಲಿ ಕೇವಲ 10,000 ಇರುವೆಗಳಿದ್ದು ಒಂದೊಂದು ಇರುವೆಯೂ 6.5 ಗ್ರಾಂ ತೂಕವಿದೆ. ಒಂದು ಗುಂಪು ಭೂಮಿಯ ಒಳಭಾಗದಲ್ಲಿ ಸು. 40 ಚಮೀ ಸ್ಥಳವನ್ನು ಆಕ್ರಮಿಸಿಕೊಂಡಿರುತ್ತದೆ. ಅಮೆರಿಕದ ಪೊಗೊನೊಮಿರ್ಮೆಕ್ಸ ಬಾಡಿಯಸ್ ಎಂಬ ಪ್ರಭೇದದ ಗುಂಪಿನಲ್ಲಿ ಕೇವಲ 5000 ಇರುವೆಗಳಿರುತ್ತವೆ. ಇದಕ್ಕೆ ತದ್ವಿರುದ್ಧವೆಂಬಂತೆ ಆಫ್ರಿಕದ ಅನೊಮ್ಮ ವಿಲ್ವರ್ಟಿ ಎಂಬ ಪ್ರಭೇದದ ಗುಂಪಿನಲ್ಲಿ 22 ದಶಲಕ್ಷ ಇರುವೆಗಳಿರುವುವು. ಇವು ಭೂಮಿಯ ಒಳಭಾಗದಲ್ಲಿ 50,000 ಚಮೀ ಸ್ಥಳವನ್ನು ಆಕ್ರಮಿಸಿಕೊಂಡಿರುವುವು. ಇದೇ ರೀತಿ ಗೆದ್ದಲುಗಳೂ ಕೂಡ. ಆಸ್ಟ್ರೇಲಿಯದ ಮ್ಯಾಕ್ರೊಟರ್ಮಿಸ್ ಎಂಬ ಪ್ರಭೇದವು 25 ಮೀ ಎತ್ತರದ ಹುತ್ತವನ್ನು ನಿರ್ಮಿಸಿದ ದಾಖಲೆಯಿದೆ. ತಳದಲ್ಲಿ ಏಳು ಮೀ ಆಳದವರೆಗೆ ಈ ಪ್ರಭೇದ ಭೂಮಿಯನ್ನು ಕೊರೆಯಬಲ್ಲುದು. (ಎ.ಎಸ್.ಕೆ.ವಿ.ಎಸ್.)

**ಪ್ರಾಣಿಸಾರಕಗಳು:** ಪ್ರಾಣಿಮೂಲ ಕಚ್ಚಾ ಪದಾರ್ಥಗಳೊಳಗೆ ಇರುವ ಮುಖ್ಯವಾದ ಹಾಗೂ ಅತಿಚಟುವಟಿಕೆಯುಳ್ಳ ಅಂಶಗಳನ್ನು ವಿಶಿಷ್ಟ ಕ್ರಮಗಳಿಂದ ಹೊರಕ್ಕೆ ತೆಗೆದು ಮಾಡಿದ ತಯಾರಿಕೆಗಳು. ಈ ಕಚ್ಚಾ ಪದಾರ್ಥಗಳನ್ನು ಸಣ್ಣಗೆ ಮಾಡಿ ನೀರು ಅಥವಾ ಮದ್ಯಸಾರದಲ್ಲಿ ನೆನೆಹಾಕಿ ಆಮೇಲೆ ಆ ಮಿಶ್ರಣವನ್ನು ಶೋಧಿಸಿ ಸಾರಕಗಳನ್ನು ತಯಾರಿಸುವುದಿದೆ. ಸಾರಕಗಳಲ್ಲಿ ಮೂರುಬಗೆಗಳಿವೆ: ೧. ಜಲಾಂಶವಿಲ್ಲದೆ ಒಣಗಿ ಗಟ್ಟಿಯಾಗಿರುವ ಸಾರಕ, ೨. ದ್ರವಸಾರಕ, ೩. ಮೃದು ಸಾರಕ.

ಒಣಗಿದ ಸಾರಕಗಳನ್ನು ಮಾಡುವ ರೀತಿ : ಮೊದಲು ದ್ರವಸಾರಕವನ್ನು ತಯಾರಿಸಿ ಅದನ್ನು ಒತ್ತಡದ ಸಹಾಯದಿಂದ ಲೀನಕಾರಿ ಪದಾರ್ಥವನ್ನು ಇಂಗಿಸಿ ಗಟ್ಟಿಮಾಡಬೇಕು. ಇದನ್ನು ವಿಶೇಷ ಔಷಧ ಚಟುವಟಿಕೆ ಏನೂ ಇಲ್ಲದ ಲ್ಯಾಕ್ಟೋಸ್ ಅಥವಾ ಹಿಟ್ಟು ಪಿಷ್ಟಗಳೊಡನೆ ಮಿಶ್ರಿಸಬೇಕು; ೧ ಮಿಲೀ ದ್ರವ ಸಾರಕದಲ್ಲಿರುವ ಚಟುವಟಿಕೆ ೧ ಗ್ರಾಂ ಒಣಗಿದ ಸಾರಕದ ಚಟುವಟಿಕೆಗೆ ಸಮವಾಗಿರುವಂತೆ ಪ್ರಮಾಣ ನಿಗದಿ ಮಾಡಬೇಕು. ಉದಾಹರಣೆಗೆ, ಥೈರಾಯಿಡ್ ಸಾರಕ, ಗೋರೋಚನ ಮತ್ತು ಪಿಟ್ಯುಟರಿ ಸಾರಕ. ಈ ಗಟ್ಟಿ ಸಾರಕ ಆರ್ದ್ರ ವಸ್ತುವಾಗಿದ್ದರೆ ಆಗ ಸುಣ್ಣದ ಫಾಸ್ಫೇಟ್ ಬೆರೆಸಿ ಪ್ರಮಾಣ ನಿಗದಿ ಮಾಡಬೇಕು. ಇದನ್ನು ಗಾಳಿಯಾಡದ ಧಾರಕಗಳಲ್ಲಿ ಮುಚ್ಚಿಟ್ಟಿರಬೇಕು.

ದ್ರವಸಾರಕಗಳು : ಕಚ್ಚಾವಸ್ತುಗಳನ್ನು ನೀರು ಅಥವಾ ಮದ್ಯಸಾರದೊಡನೆ ಮಿಶ್ರಿಸಿ ಸಾರೀಕರಣ ಮಾಡಿದ ತಯಾರಿಕೆಗಳಿಗೆ ದ್ರವಸಾರಕಗಳೆಂದು ಹೆಸರು. ೧ ಭಾಗ ದ್ರವಸಾರಕದ ಚಟುವಟಿಕೆ ಗೊತ್ತಾದ ೧ ಭಾಗ ತೂಕದ ಗಟ್ಟಿ ಕಚ್ಚಾವಸ್ತುವಿನ ಚಟುವಟಿಕೆಗೆ ಸರಿಸಮವಾಗಿರುವಂತೆ ಮಾಡಿ ಪ್ರಮಾಣ ನಿಗದಿ ಮಾಡಬೇಕು. ಉದಾಹರಣೆ : ಇನ್ಸುಲಿನ್, ಜಠರ ಸಾರಕಗಳು, ಯಕೃತ್ ಸಾರಕಗಳು.

ಮೃದುಸಾರಕವೆಂದರೆ ಲೀನಿಸುವ ದ್ರವವನ್ನು ಆದಷ್ಟು ಇಂಗಿಸಿ ಮೃದುವಾದ ಒಂದು ಮುದ್ದೆಯಾಗುವಂತೆ ಮಾಡಿದ ತಯಾರಿಕೆ. ಇದನ್ನು ಮಾಡುವುದರಿಂದ ಉಂಟಾಗುವ ಅನಾನುಕೂಲತೆಗಳಿವು: (ಅ) ಮುದ್ದೆ ಮಾಡುವಾಗ ಮೃದುತ್ವದಲ್ಲಿ ಅನೇಕ ರೀತಿಗಳಿಂದ ವ್ಯತ್ಯಾಸಗಳಾಗಬಹುದು; (ಬ) ಇವುಗಳ ಪ್ರಮಾಣ ನಿಗದಿ ಮಾಡುವುದು ಕಷ್ಟ; (ಕ) ಇವನ್ನು ತಿಳಿಮಾಡುವ ದ್ರವ ವಸ್ತುವನ್ನು ಪಡೆಯುವುದು ಕಠಿಣ; (ದ) ಈ ಮೃದು ಸಾರಕಗಳನ್ನು ಬಹಳ ದಿನಗಳ ತನಕ ಸಂಗ್ರಹಿಸಿಡುವುದರಿಂದ ಇವು ಗಟ್ಟಿಯಾಗಿ ಮದ್ದು ಮಾಡಿಕೊಡಲು ದುಸ್ತರವಾಗಬಹುದು.

ಪ್ರಾಣಿಸಾರಕಗಳನ್ನು ಬಹಳ ಹಿಂದಿನಿಂದಲೂ ಉಪಯೋಗಿಸುತ್ತಿರುವರು. ಜಠರದ ಮತ್ತು ಯಕೃತ್ ಸಾರಕಗಳನ್ನು ರಕ್ತಕೊರತೆ ಮತ್ತು ದುರ್ಬಲತೆಗೆ ಕೊಡುತ್ತಾರೆ. ಅದೇ ರೀತಿ ಇನ್ಸುಲಿನ್ನನ್ನು ಮಧುಮೇಹದಲ್ಲಿ ಚುಚ್ಚಿ ಶರೀರಕ್ಕೆ ಸೇರಿಸುತ್ತಾರೆ. ಹೈಪೊಥೈರಾಯ್ಡಿಸಮಿನಲ್ಲಿ ಥೈರಾಯಿಡ್ ಸಾರಕವನ್ನು ಉಪಯೋಗಿಸುತ್ತಾರೆ. ಹಾರ್ಮೋನುಗಳನ್ನು ಇವುಗಳ ಕೊರತೆಯಲ್ಲಿ ಉಪಯೋಗಿಸುತ್ತಾರೆ. ಪ್ರಾಣಿಸಾರಕಗಳನ್ನು ಸಾಮಾನ್ಯವಾಗಿ ಹಂದಿ ಮತ್ತು ದನಗಳಿಂದ ತಯಾರಿಸುತ್ತಾರೆ. ಕೆಲವು ವೇಳೆ ಪ್ರಯೋಗಶಾಲೆಯಲ್ಲಿ ಪೂರ್ಣವಾಗಿ ಇಲ್ಲವೆ ಭಾಗಶಃ, ರಾಸಾಯನಿಕವಾಗಿ ಸಂಶ್ಲೇಷಿಸುವುದೂ ಉಂಟು. ಯಕೃತ್ ದ್ರವಸಾರಕವನ್ನು ಮ್ಯಾಕ್ರೊಸೈಟಿಕ್ ರಕ್ತಹೀನತೆಯಲ್ಲಿ ಉಪಯೋಗಿಸುತ್ತಾರೆ. ಇದರಲ್ಲಿ ಸೈನಕೊಬಾಲಮಿನ್, ಫೋಲಿಕ್ ಆಮ್ಲ ಮುಂತಾದ ಜೀವಸತ್ವಗಳಿವೆ. ಬಿ ಗುಂಪಿಗೆ ಸೇರಿದ ಯಕೃತ್ ಸಾರಕದಿಂದ ಅನೇಕ ಅಡ್ಡ ಪರಿಣಾಮಗಳು ಉಂಟಾಗಬಹುದು. ಆದ್ದರಿಂದ ವ್ಯಾಧಿತೀರ್ಮಾನಕ್ಕೆ ಮುಂಚೆ ಇದನ್ನು ಕೊಡಬಾರದು. ಯಕೃತ್ ಸಾರಕವನ್ನು ಗರ್ಭಿಣಿಯರ ರಕ್ತಕೊರತೆಯಲ್ಲಿಯೂ ಕೆಲವುವೇಳೆ ಎಗ್ರ್ಯಾನ್ಯುಲೊಸೈಟೋಸಿಸಿನಲ್ಲಿಯೂ ಉಪಯೋಗಿಸುತ್ತಾರೆ.

ಪಿತ್ತ : ಪ್ರಾಣಿಸಾರಕವಾಗಿ ಪಿತ್ತವನ್ನು ದನಕರುಗಳ ಯಕೃತ್ತಿನಿಂದ ತಯಾರಿಸುತ್ತಾರೆ. ಇದನ್ನು (೧೦೦೦ ಮಿಲೀ) ಮದ್ಯಸಾರದಲ್ಲಿ (೨೫೦ ಮಿಲೀ) ಮಿಶ್ರಿಸಿ ಈ ಮಿಶ್ರಣವನ್ನು ಇಂಗಿಸಿ ಸ್ವಲ್ಪ ಕಾಲಾನಂತರ ಮೇಲಿನ ತಿಳಿಯನ್ನು ತೆಗೆದುಕೊಂಡು ಬತ್ತಿಸಿದರೆ ಉಳಿಯುವ ಗಟ್ಟಿಯಾದ ಸಾರಕವೇ ಪಿತ್ತಸಾರಕ. ಗೋರೋಚನ ಎನ್ನುವುದು ನೈಸರ್ಗಿಕ ಪಿತ್ತಸಾರಕ. ಪಿತ್ತಸಾರಕದಲ್ಲಿ ಸೋಡಿಯಮ್ ಗ್ಲೈಕೊಕೋಲೇಟ್ ಮತ್ತು ಸೋಡಿಯಮ್ ಟಾರೊಕೋಲೇಟ್ ಲವಣಗಳಿರುತ್ತವೆ. ಇವು ಅಂಗಕ್ರಿಯಾತ್ಮಕವಾಗಿಯೂ ಔಷಧಾತ್ಮಕವಾಗಿಯೂ ಕೆಲಸ ಮಾಡುತ್ತವೆ. ಈ ಲವಣಗಳು ಕೋಲಿಕ್ ಆಮ್ಲ ಮತ್ತು ಡೈಹೈಡ್ರೊಕೋಲಿಕ್ ಆಮ್ಲಗಳಿಂದ ಉಂಟಾದವು. ಜೀರ್ಣಾಂಗಗಳಿಂದ ಜಿಡ್ಡು ಮತ್ತು ಜಿಡ್ಡಿನಲ್ಲಿ ಲೀನಿಸುವ ಜೀವಸತ್ವಗಳು ಹೀರಲ್ಪಡುವುದಕ್ಕೆ ಪಿತ್ತ ಅವಶ್ಯಕ. ಪಿತ್ತಕ್ಕೆ ಸೌಮ್ಯ ವಿರೇಚನಗುಣ ಉಂಟು. ಇದರ ಲವಣಗಳನ್ನು ಅಭಿಧಮನಿ ಮೂಲಕ ಹೊಗಿಸಿದರೆ ನರಗಳ ಮತ್ತು ಹೃದಯದ ಚಟುವಟಿಕೆ ತಗ್ಗುತ್ತದೆ. ಈ ಲವಣಗಳು ರಕ್ತನಾಳಗಳ ಕ್ಷಯವನ್ನೂ ಉಂಟು ಮಾಡುತ್ತವೆ. ಸೋಂಕಿನಿಂದ ಯಕೃತ್ ಉರಿಯೂತವಾಗಿದ್ದಾಗ ಇದನ್ನು ಕೊಡುತ್ತಾರೆ. ಕರುಳಿನ ಚಲನೆಯನ್ನು ಹೆಚ್ಚಿಸಲು ಮತ್ತು ಮಲಬದ್ಧತೆ ಹೋಗಲಾಡಿಸಲು ಇದನ್ನು ಮಾತ್ರೆಗಳ ರೂಪದಲ್ಲಿ ಉಪಯೋಗಿಸುತ್ತಾರೆ. ಗರ್ಭಿಣಿಯರಲ್ಲಿ ಅವರ ಕಾಂತಿ ವೃದ್ಧಿಯಾಗಲೂ ಒಳಗೆ ಬೆಳೆಯುವ ಶಿಶು ಸರಿಯಾಗಿ ವೃದ್ಧಿಯಾಗಲೂ ಇದನ್ನು ಉಪಯೋಗಿಸುತ್ತಾರೆ. ಪಿತ್ತವನ್ನು ಬಸ್ತಿರೂಪವಾಗಿಯೂ ಬಿಸಿನೀರಿನಲ್ಲಿ ಬೆರೆಸಿಯೂ ಕೊಡಬಹುದು. ರಕ್ತಪರಿಚಲನೆಯ ಕಾಲವನ್ನು ತಿಳಿಯಲು ಪಿತ್ತದ ಉಪಯೋಗವಿದೆ. ಇದಕ್ಕೆ ೫ ಮಿಲೀ. ಪಿತ್ತರಸವನ್ನು ಅಭಿಧಮನಿ ಮೂಲಕ ಹೊಗಿಸಿದರೆ ಹೀಗೆ ಹೊಗಿಸಿದ ಮುಹೂರ್ತದಿಂದ ಬಾಯಿಯಲ್ಲಿ ಕಹಿರುಚಿ ಬರುವ ತನಕ ರಕ್ತಪರಿಚಲನೆಯ ಕಾಲವೆಂದು ಅರಿಯಬಹುದು. ಸಾಮಾನ್ಯವಾಗಿ ಇದು ೧೦–೧೭ ಸೆಕೆಂಡುಗಳ ತನಕ ಇರುತ್ತದೆ.

ಫ್ರೈಯರನ ಲೇಪ : ಸಾಂಬ್ರಾಣಿಯಿಂದ ಮಾಡಿದ ದ್ರಾವಕದಂಥ ಲೇಪ. ಇದರಲ್ಲಿ ಸಾಂಬ್ರಾಣಿ ೧೦೦ ಗ್ರಾಂ ಸ್ಟೊರ್ಯಾಕ್ಸ್ ೭೫ ಗ್ರಾಂ ಟೊಲು ಲೇಪ ೨೫ ಗ್ರಾಂ ಲೋಳೆಸರದ ಸಾರಕ ೨೦ ಗ್ರಾಂ ಮತ್ತು ಮದ್ಯಸಾರ ೧೦೦೦ ಮಿಲೀ ಇರುತ್ತವೆ. ಮೊದಲು ಸಾಂಬ್ರಾಣಿ, ಸ್ಟೊರ್ಯಾಕ್ಸ್, ಲೋಳೆಸರದ ಸಾರಕಗಳನ್ನು ಚೆನ್ನಾಗಿ ಪುಡಿಮಾಡಿ ೮೦೦ ಮಿಲೀ ಮದ್ಯಸಾರದಲ್ಲಿ ಚೆನ್ನಾಗಿ ಅರೆದು ಅದಕ್ಕೆ ಟೊಲುದ್ರವ ಲೇಪ ಸೇರಿಸಿ ಎರಡು ದಿವಸಗಳ ತನಕ ಮುಚ್ಚಿಟ್ಟಿರಬೇಕು. ಆಮೇಲೆ ಅದನ್ನು ಶೋಧಿಸಿ ಮಿಕ್ಕ ೨೦೦ ಮಿಲೀ ಮದ್ಯಸಾರವನ್ನು ಸೇರಿಸಿ ಒಟ್ಟು ೧೦೦೦ ಮಿಲೀ ಯಷ್ಟು ಮಾಡಬೇಕು. ಇದೇ ಫ್ರೈಯರ್ ಲೇಪ. ಇದರಲ್ಲಿರುವ ಸಾಂಬ್ರಾಣಿಯಲ್ಲಿ ಬೆನ್‌ಜೋಯಿಕ್ ಆಮ್ಲ, ರಾಳ ಮತ್ತು ಬಲುಬೇಗ ಆರಿ ಹೋಗುವ ಆವಿಶೀಲ ಎಣ್ಣೆಗಳು ಇವೆ. ಈ ಲೇಪವನ್ನು ಚರ್ಮಕ್ಕೆ ನಂಜುರೋಧಕವಾಗಿಯೂ ಅದರ ಹೆಚ್ಚುಸಾಂದ್ರತೆಯಲ್ಲಿ ಚರ್ಮದ ಚೋದಕವಾಗಿಯೂ ಉಪಯೋಗಿಸುತ್ತಾರೆ. ಸಾಂಬ್ರಾಣಿಯನ್ನು ಶರೀರದೊಳಗೆ ಸೇವಿಸಿದರೆ ದೇಹೋಷ್ಣತೆ ಕಡಿಮೆಯಾಗುತ್ತದೆ ಮತ್ತು

ವಾಕರಿಕೆ ವಾಂತಿಗಳು ಅದರ ಚೋದಕ ಗುಣದಿಂದ ಉಂಟಾಗುತ್ತವೆ. ಇದು ಕೇಂದ್ರ ನರಮಂಡಲವನ್ನು ಚುರುಕುಗೊಳಿಸುತ್ತದೆ. ಪ್ರಾಯಶಃ ಸಾಂಬ್ರಾಣಿಯಿಂದ ಹಿಪ್ಪೂರಿಕ್ ಆಮ್ಲ ಶರೀರದಲ್ಲಿ ಉತ್ಪತ್ತಿಯಾಗುವುದರಿಂದ ಇವು ತಲೆದೋರುವುದಾಗಿರಬಹುದು. ಫ್ರೈಯರನ ಲೇಪ ನಂಜುರೋಧಕವಾಗಿರುವುದರಿಂದ ಗಾಯಗಳು ಜಾಗ್ರತೆ ಮಾಯಲು ಅದನ್ನು ಗಾಯಗಳಿಗೆ ಲೇಪಿಸುವುದಿದೆ. ಕೊಬ್ಬು ವಾಸನೆ ಬಾರದಂತೆಯೂ ಅದು ಕೆಡದಂತೆಯೂ ಪರಿಪಾಲಿಸಲು ಈ ಲೇಪವನ್ನು ಉಪಯೋಗಿಸುತ್ತಾರೆ. ಇದನ್ನು ಬಿಸಿನೀರಿನೊಡನೆ ಸೇರಿಸಿ, ಆವಿಮಾಡಿ, ಮೂಗಿನ ಮೂಲಕ ಬ್ರಾಂಕೈಟಿಸ್, ಕೆಮ್ಮು, ಧ್ವನಿನಾಳದ ಉರಿತಗಳಲ್ಲಿ ಕಫ ಸೋರಕವಾಗಿ ಉಪಯೋಗಿಸುತ್ತಾರೆ. ಇದು ಬಹಳ ಪ್ರಯೋಜನಕಾರಿಯಾದ ದ್ರಾವಕ. (ಎಸ್.ಕೆ.ಎಚ್.)

**ಪ್ರಾಸ್ಟೇಟ್ ಗ್ರಂಥಿ:** ಗಂಡು ಸ್ತನಿಗಳ ಮೂತ್ರಕೋಶದ ಕೆಳಭಾಗದಲ್ಲಿರುವ ದುಂಡಾದ ಚೆಸ್ಟ್‌ನಟ್ ಹಣ್ಣಿನ ಆಕಾರದ ಗ್ರಂಥಿ. ಈ ಗ್ರಂಥಿ ಸಂಶ್ಲೇಷಿಸುವ ದ್ರವವಸ್ತು ಬೇರೆ ಅನೇಕ ಲೈಂಗಿಕ ಗ್ರಂಥಿಗಳ ಸ್ರಾವಗಳೊಡನೆ ಸೇರಿ ವೀರ್ಯ ದ್ರವವಾಗುತ್ತದೆ. ಪ್ರಾಸ್ಟೇಟ್ ಗ್ರಂಥಿಯು ಮೂತ್ರನಾಳದ ಕಂಠವನ್ನು ಸುತ್ತುವರಿದಿದೆ. ಮೇಲ್ತುದಿಯಲ್ಲಿ ದುಂಡನೆ ಆಕಾರ ಹೊಂದಿರುವ ಇದರ ಕೆಳತುದಿ ಮೊಂಡಾಗಿದ್ದು, ಅದನ್ನು ಅಪೆಕ್ಸ್ ಎನ್ನುತ್ತಾರೆ. ಮಾನವನಲ್ಲಿ ಈ ಗ್ರಂಥಿಯ ಗರಿಷ್ಠ ವ್ಯಾಸ 4 ಸೆಂಮೀ. ವೀರ್ಯ ಕೋಶಿಕೆಯಿಂದ ಹೊರಬರುವ ನಾಳಗಳು ಹಾಗೂ ವೀರ್ಯಾಣುವಾಹಕ ನಾಳಗಳೆರಡೂ ಒಂದಾಗಿ ಪ್ರಾಸ್ಟೇಟ್‌ನ ಮಧ್ಯಭಾಗದಲ್ಲಿ ಹರಿದು ಮೂತ್ರನಾಳದ ಜೊತೆಗೂಡುತ್ತವೆ. ನಂತರ ಮೂತ್ರನಾಳ ಶಿಶ್ನದ ಮೂಲಕ ಸಾಮಾನ್ಯ ಸಂದರ್ಭದಲ್ಲಿ ಮೂತ್ರವನ್ನು, ವೀರ್ಯಸ್ಖಲನದ ಸಮಯದಲ್ಲಿ ವೀರ್ಯವನ್ನು ಹೊರಹಾಕುತ್ತದೆ.

30–40 ಕವಲೊಡೆದ ನಳಿಕೆಗಳ ಸಂಕೀರ್ಣವಾದ ಗ್ರಂಥಿ ಸ್ರವಿಸುವ ದ್ರವಪದಾರ್ಥವೂ ಕೂಡಾ ಈ ನಾಳಗಳ ಸಂಗಮ ಬಿಂದುವಿಗೆ ಬಂದು ಸೇರುತ್ತದೆ. ಪ್ರಾಸ್ಟೇಟ್‌ನ ಸಂಶ್ಲೇಷಣಾ ಘಟಕಗಳ ಒಳಮೈಯಲ್ಲಿ ಮಡಿಕೆಗೊಂಡ ಶ್ಲೇಷ್ಮ (ಮ್ಯೂಕಸ್) ಅನುಲೇಪಕವಿದೆ. ಈ ಮಡಿಕೆಗಳ ಸಲುವಾಗಿ ಪ್ರಾಸ್ಟೇಟ್ ಗ್ರಂಥಿಯ ಶೇಖರಣಾ ಸಾಮರ್ಥ್ಯ ಹೆಚ್ಚಾಗುವುದು. ಈ ಅನುಲೇಪಕದ ಕೆಳಗಿನ ಪದರ ಸ್ಥಿತಿಸ್ಥಾಪಕ ಶಕ್ತಿಯುಳ್ಳ ಗಟ್ಟಿನಾರಿನಂತಹ ಅಂಗಾಂಶದಿಂದ ಬಲೆಯಿಂದಾಗಿದೆ. ಈ ಅಂಗಾಂಶದ ನಡುವಿನಲ್ಲಿರುವ ಸಂಶ್ಲೇಷಣಾ ಘಟಕಗಳ ಮಧ್ಯೆಯ ಅವಕಾಶದಲ್ಲಿ ಅಂತರಾಲೀಯ ಅಂಗಾಂಶ ತುಂಬಿದೆ. ಈ ಎಲ್ಲಾ ಅಂಗಾಂಶಗಳು ಪ್ರಾಸ್ಟೇಟ್ ಗ್ರಂಥಿಗೆ ನಿರ್ದಿಷ್ಟ ಆಕಾರವನ್ನೂ ಸ್ಥಿರವಾದ ರಚನೆಯನ್ನೂ ನೀಡಿವೆ.

ಮಾನವನ ವೀರ್ಯದ್ರವದ ಶೇಕಡಾ ಮೂವತ್ತರಷ್ಟು ಭಾಗ ಪ್ರಾಸ್ಟೇಟ್ ಗ್ರಂಥಿಯ ಸ್ರಾವದಿಂದ ಆಗಿದೆ. ತುಸು ಕ್ಷಾರೀಯವಾದ, ನೀರಿಗಿಂತ ಹೆಚ್ಚು ಸಾಂದ್ರತೆಯ ಈ ದ್ರವದಲ್ಲಿ ಪ್ರೋಟೀನುಗಳನ್ನು ಮುರಿಯುವ ಕಿಣ್ವಗಳಿವೆ. ನಾರಿನ ಅಂಶವನ್ನು ಸಡಿಲಗೊಳಿಸುವ ಫೈಬ್ರೋಲೈಸಿನ್ ಕಿಣ್ವ, ಆಮ್ಲೀಯ ಫಾಸ್ಫಟೇಸ್, ಸಿಟ್ರಿಕ್ ಆಮ್ಲ, ಸೋಡಿಯಂ, ಸತು, ಕ್ಯಾಲ್ಸಿಯಂ ಹಾಗೂ ಪೊಟಾಸಿಯಂ ಈ ದ್ರವದಲ್ಲಿರುವ ಇತರೆ ಘಟಕಗಳು. ಪ್ರಾಸ್ಟೇಟ್ ಗ್ರಂಥಿಯ ಸ್ರಾವ ತನ್ನ ಕ್ಷಾರೀಯತೆಯಿಂದ ಸ್ತ್ರೀಯ ಯೋನಿಯಲ್ಲಿನ ಆಮ್ಲೀಯತೆಯನ್ನು ತಟಸ್ಥಗೊಳಿಸುವ ಮೂಲಕ ನಿಷೇಚನೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

ಪ್ರಾಸ್ಟೇಟ್‌ಗ್ರಂಥಿ ಮಾನವನಲ್ಲಿ ಪ್ರಬುದ್ಧಾವಸ್ಥೆಯ ಹಂತದಲ್ಲಿ ಪೂರ್ಣ ಪ್ರಮಾಣಕ್ಕೆ ಬೆಳೆಯುತ್ತದೆ ಮತ್ತು ಸಾಮಾನ್ಯವಾಗಿ ವ್ಯಕ್ತಿಗೆ 50 ವರ್ಷಗಳು ದಾಟಿದ ನಂತರ ಗಾತ್ರದಲ್ಲಿ ಹಾಗೂ ಸಂಶ್ಲೇಷಣೆಯ ಪ್ರಮಾಣದಲ್ಲಿ ಕುಗ್ಗುತ್ತಾ ಹೋಗುತ್ತದೆ.

ಪ್ರಾಸ್ಟೇಟ್ ಗ್ರಂಥಿಯ ತೊಂದರೆಗಳು: ಇದರ ಬೆಳವಣಿಗೆ ಹಾಗೂ ಸಂಶ್ಲೇಷಣಾಕ್ರಿಯೆ ನೇರವಾಗಿ ವೃಷಣದ ಅಂತಃ ಸ್ರಾವದ ಪ್ರಮಾಣದ ಮೇಲೆ ಆಧರಿಸಿದೆ. ಈ ಹಾರ್ಮೋನುಗಳ ಮಟ್ಟ ಕುಸಿದಾಗ ಪ್ರಾಸ್ಟೇಟ್‌ನ ಗಾತ್ರ ಹಾಗೂ ಕ್ರಿಯಾಶಕ್ತಿ ಕುಗ್ಗುತ್ತದೆ. ಪ್ರಬುದ್ಧತೆಗೆ ಮುನ್ನ ವೃಷಣಹರಣ (ಕ್ಯಾಸ್ಟ್ರೇಷನ್) ಮಾಡಲ್ಪಟ್ಟ ಗಂಡು ಮಕ್ಕಳಲ್ಲಿ ಪ್ರಾಸ್ಟೇಟ್ ಪೂರ್ಣ ಬೆಳವಣಿಗೆ ಹೊಂದುವುದಿಲ್ಲ. ಸು. 60 ವರ್ಷ ದಾಟಿದ ಪುರುಷರಲ್ಲಿ ಈ ಗ್ರಂಥಿಯ ಅಂಗಾಂಶ ಸಂಶ್ಲೇಷಣಾ ಗುಣ ಇಲ್ಲದ ನಾರಿನಂಥ ಅಂಗಾಂಶದಿಂದ ಮರುಪೂರಣಗೊಳ್ಳುತ್ತದೆ.

60 ವರ್ಷ ದಾಟಿದ ಗಂಡಸರಲ್ಲಿ ಸಾಮಾನ್ಯವಾಗಿ ಕಂಡು ಬರುವ ಮತ್ತೊಂದು ತೊಂದರೆ ಪ್ರಾಸ್ಟೇಟ್‌ನ ಹಿಗ್ಗುವಿಕೆ. ಹೆಚ್ಚಿನವರಲ್ಲಿ ಯಾವುದೇ ನೋವಿನ ಸೂಚನೆ ನೀಡದಿದ್ದರೂ ಇದರ ಫಲವಾಗಿ, ಕೆಲವೊಮ್ಮೆ ಸೋಂಕಿನಿಂದ ವ್ಯಕ್ತಿ ತೊಂದರೆಗೊಳಗಾಗಬಹುದು. ಮೂತ್ರ ನಾಳದ ಮೇಲಿನ ಒತ್ತಡದಿಂದ ಮೂತ್ರಕೋಶ ಸಂಪೂರ್ಣ ಬರಿದಾಗದಿರುವಿಕೆ, ನಿಧಾನವಾಗಿ, ಹನಿಹನಿಯಾಗಿ ಮೂತ್ರ ಹೊರಬರುವುದು, ಮೂತ್ರಕೋಶದಲ್ಲಿ ಹೆಚ್ಚು ಸಮಯ ಉಳಿಯುವ ಮೂತ್ರ ಕ್ಯಾಲ್ಸಿಯಂ ನೆಲೆ ನಿಲ್ಲುವಂತೆ ಮಾಡುವಂತಹ ತೊಂದರೆಗಳಿಂದ ವ್ಯಕ್ತಿ ತೊಂದರೆಗೊಳಗಾಗಬಹುದು. ಇದು ನಂತರ ಮೂತ್ರಜನಕಾಂಗದ ತೊಂದರೆಗೂ ದಾರಿ ಮಾಡಬಹುದು.

ಪ್ರಾಸ್ಟೇಟ್ ಕ್ಯಾನ್ಸರ್ ಮತ್ತೊಂದು ಸಾಮಾನ್ಯವಾಗಿ ಕಾಡುವ ಬೇನೆ. ಯಾವುದೇ ಸೂಚನೆ ನೀಡದಿದ್ದರೂ 40 ವರ್ಷ ದಾಟಿದ ಶೇಕಡಾ 25 ಜನರಲ್ಲಿ ಪ್ರಾಸ್ಟೇಟ್‌ನ ಗೆಡ್ಡೆಗಳು ಕಾಣಸಿಗುತ್ತವೆ. ನಿಧಾನವಾಗಿ ಈ ಗಡ್ಡೆಗಳು ಮೂತ್ರಜನಕಾಂಗಕ್ಕೂ ಪ್ರಜನನಾಂಗಗಳಿಗೂ ಹರಡಬಹುದು. ನೂರರಲ್ಲಿ ಎಪ್ಪತ್ತು ಜನರಲ್ಲಿ ಈ ಕ್ಯಾನ್ಸರ್ ಮೂಳೆಗಳಿಗೆ ಹರಡಿರುವ ದಾಖಲೆಯಿದೆ. ಇಂಥ ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆಯಿಂದ ಪ್ರಾಸ್ಟೇಟ್ ಗ್ರಂಥಿಯನ್ನು ತೆಗೆದುಹಾಕಲಾಗುತ್ತದೆ. ಗೊನೊರಿಯ ಎಂಬ ಲೈಂಗಿಕ ಖಾಯಿಲೆಯಿಂದ ಕೂಡಾ ಪ್ರಾಸ್ಟೇಟ್ ಗ್ರಂಥಿ ಸೋಂಕಿಗೊಳಗಾಗಬಹುದು. ಗ್ರಂಥಿಯ ಅಂಗಾಂಶ ಗಾತ್ರದಲ್ಲಿ ಹಿಗ್ಗಿ ಗಟ್ಟಿಯಾಗಿರುತ್ತದೆ. ಇದನ್ನು ಸಾಮಾನ್ಯವಾಗಿ ಜೈವಿಕ ಪ್ರತಿರೋಧಕ ಔಷಧಿಗಳಿಂದ ಗುಣಪಡಿಸಬಹುದಾಗಿದೆ. (ಟಿ.ಆರ್.ಎಸ್.)

**ಪ್ರೈಮೇಟುಗಳು:** ಸ್ತನಿವರ್ಗಕ್ಕೆ ಸೇರಿದ ಒಂದು ಗಣ. ಮಾನವನನ್ನು ಒಳಗೊಂಡಂತೆ ಎಲ್ಲ ಕೋತಿಗಳೂ ಈ ಗಣಕ್ಕೆ ಸೇರುತ್ತವೆ. ಪ್ರಾಣಿ ಪ್ರಪಂಚದಲ್ಲಿ ವ್ಯಕ್ತವಾಗುವ ಕೆಲವೊಂದು ಗುಣಗಳನ್ನು ಗಮನಿಸುವಾಗ ಪ್ರೈಮೇಟ್ ಪದಕ್ಕೆ ಮೊದಲಿನವು ಅಥವಾ ಪೂರ್ಣವಾಗಿ ರೂಪುಗೊಂಡವು, ಮಾನವನಿಗೆ ಹತ್ತಿರವಾದುವು ಎಂಬ ಅರ್ಥಬರುತ್ತದೆ. ಅಂತೆಯೇ ವರ್ಗೀಕರಣ ವಿಜ್ಞಾನದ ಪಿತಾಮಹನೆನಿಸಿಕೊಂಡ ಸ್ವೀಡನ್ನಿನ ಸಸ್ಯವಿಜ್ಞಾನಿ ಕ್ಯರೊಲಸ್ ಲಿನೇಯಸ್ (1701–78) ಮಂಗ, ವಾನರ ಮತ್ತು ಮಾನವ ಇವನ್ನು ಪ್ರೈಮೇಟುಗಣಕ್ಕೆ ಸೇರಿಸಿದ್ದಾನೆ.

ಪ್ರೈಮೇಟುಗಳ ವಿಕಾಸ ಅರಿಯಲು ಅವು ಮರಗಳ ಮೇಲೆ ವಾಸಿಸಲು ಪಡೆದಿದ್ದ ವಿಶೇಷ ಸೌಕರ್ಯ–ಅಂದರೆ ಅವುಗಳ ದೇಹದಲ್ಲಿ ಪ್ರಕಟವಾಗಿದ್ದ ವಿಶಿಷ್ಟ ಹೊಂದಾಣಿಕೆ_ಏನೆಂಬುದನ್ನು ಮೊದಲು ಗಮನಿಸಬೇಕು. ಈ ಗುಣಗಳು ವಿಕಾಸಶ್ರೇಣಿಯಲ್ಲಿ ಇನ್ಸೆಕ್ಟಿವೊರಗಳಿಂದ ತೊಡಗಿ ಪ್ರೈಮೇಟುಗಳವರೆಗೆ ಅನುಸ್ಯೂತವಾಗಿ ಬೆಳೆದು ಅಭಿವರ್ಧಿಸಿವೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.



**ಮುಸವನ ಇಬ್ಬರು ಸ್ನೇಹಿತ ಮಂಗಗಳು**

ಏಷ್ಯಖಂಡದ ಕೆಲವೆಡೆಗಳಲ್ಲಿ ಕಂಡುಬರುವ ಶ್ರೂ ಎಂಬ ಪ್ರಾಣಿಯಲ್ಲಿ ಪ್ರೈಮೇಟುಗಳ ವಿಕಾಸಪಥದ ಮುಖ್ಯ ಹಂತವನ್ನು ಪ್ರಾಣಿವಿಜ್ಞಾನಿಗಳು ಗುರುತಿಸಿದ್ದಾರೆ. ಇದರ ಹಲ್ಲು, ಬೆರಳಿನಲ್ಲಿರುವ ಪಂಜಗಳು, ಮುಖ ಹಾಗೂ ಶರೀರ ಇನ್ಸೆಕ್ಟಿವೊರ ವರ್ಗದ ಪ್ರಾಣಿಗಳವುಗಳಂತೆಯೇ ಇವೆ. ಆದರೆ ಶ್ರೂ ವೃಕ್ಷವಾಸಿ. ಎಂದೇ ಇದಕ್ಕೆ ಹೆಚ್ಚಿನ ಗುಣವೂ ಉಂಟು. ಇದರ ಹಿಂಗಾಲು ಮುಂಗಾಲು ಎರಡರಲ್ಲೂ ಹೆಬ್ಬೆರಳುಗಳು ಉಳಿದ ಬೆರಳುಗಳಿಗೆ ಅಭಿಮುಖವಾಗಿದ್ದು ಅವನ್ನು ಗಟ್ಟಿಯಾಗಿ ಹಿಡಿಯಬಲ್ಲುವು; ಹೀಗಾಗಿ ಇತರ ಪ್ರಾಣಿಗಳಿಗೆ ಇಲ್ಲದ ಗಟ್ಟಿ ಹಿಡಿತ ಎನ್ನುವ ವಿಶಿಷ್ಟಗುಣ ಶ್ರೂಗೆ ಒದಗಿದೆ. ಮರಗಳ ಮೇಲೆ ಸಂಚರಿಸಲು ಈ ಗುಣ ಅನಿವಾರ್ಯ ಅವಶ್ಯಕತೆ, ಶ್ರೂಗಳಲ್ಲಿ ಅಲ್ಲದೆ ಲೀಮರ್ ಮತ್ತು ಟಾರ್ಸಿಯಾಯ್ಡ್ ಕುಟುಂಬದ ಪ್ರಾಣಿಗಳಲ್ಲಿಯೂ ಈ ವಿಶಿಷ್ಟ ಗುಣವನ್ನು ಕಾಣಬಹುದು. ಜೀವ್ಯವಶೇಷಗಳು ಒದಗಿಸುವ ಆಧಾರಗಳನ್ನು ಗಮನಿಸಿ ಪ್ರಾಗ್ಜೀವಿ ವಿಜ್ಞಾನಿಗಳು ಮಧ್ಯ ಕ್ರಿಟೇಷಸ್ ಕಾಲದ ಮುಳ್ಳುಹಂದಿ ರೀತಿಯ ಕೀಟಾಹಾರಿಯೇ ಪ್ರೈಮೇಟುಗಳ ಮೂಲವೆಂದು ಹೇಳುತ್ತಾರೆ. ಇತ್ತೀಚಿನ ಮಾನವ ಆನುವಂಶೀಯ ಯೋಜನೆ ಹಾಗೂ ಡಿಎನ್ಎ ಬೆರಳಚ್ಚು ಅಧ್ಯಯನಗಳೂ ಕೂಡ ಈ ಅಭಿಪ್ರಾಯಕ್ಕೆ ಸಾಕಷ್ಟು ಪುರಾವೆ ಒದಗಿಸಿವೆ.

ಪ್ರಮುಖ ಲಕ್ಷಣಗಳು : ಪ್ರೈಮೇಟುಗಳಲ್ಲಿ ಪ್ರಾಚೀನ ಸ್ತನಿಗಳ ಅನೇಕ ಲಕ್ಷಣಗಳು ಉಳಿದಿವೆ. ಗಾತ್ರದಲ್ಲಿ ಮಾರ್ಮೊಸೆಟ್‌ನಿಂದ (ಇದು ಇಲಿಗಿಂತ ಕಿರಿಗಾತ್ರದ ಪ್ರೈಮೇಟ್)

ದೊಡ್ಡ ಗೊರಿಲ್ಲದ ವರೆಗೆ ವೈವಿಧ್ಯವನ್ನು ಕಾಣಬಹುದು. ಕೆಲವು ಪ್ರೈಮೇಟುಗಳು ವೃಕ್ಷವಾಸಿಗಳಾಗಿದ್ದು ತದನುಗುಣ ದೈಹಿಕ ಲಕ್ಷಣಗಳು ಅವುಗಳಲ್ಲಿ ವಿಶೇಷವಾಗಿ ವಿಕಸಿಸಿವೆ. ಪ್ರೈಮೇಟುಗಳಿಗೆ ವ್ಯಾಪಕವಾಗಿ ಮಿದುಳನ್ನೂ ಕೈಗಳನ್ನೂ ಉಪಯೋಗಿಸಲು ಒದಗಿದ ಅವಕಾಶಗಳು ಮಾನವನ ವಿಕಾಸದ ಹಾದಿಯಲ್ಲಿ ಪ್ರಮುಖ ಪ್ರಚೋದನೆಗಳು. ಇವುಗಳ ಕಂಕಾಲ ಮತ್ತು ಸ್ನಾಯುಸಮೂಹ ಹಾರಲು, ತೂಗಾಡಲು ಮತ್ತು ಮರದ ಕೊಂಬೆಗಳನ್ನು ಹಿಡಿದುಕೊಳ್ಳಲು ಹೆಚ್ಚು ಅನುಕೂಲವಾಗುವಂತೆ ರಚಿತವಾಗಿವೆ. ಕಣ್ಣುಗಳು ಅಸ್ಥಿಗೂಡಿನಲ್ಲಿದು ಮಾಂಸಖಂಡಗಳ ಜೋಡಣೆ ಇದೆಯಾದ್ದರಿಂದ ಕಣ್ಣನ್ನು ಚುರುಕಾಗಿ ಹೊರಳಿಸುವುದು ಸಾಧ್ಯವಾಗಿದೆ. ದೃಷ್ಟಿಗೆ ಸಂಬಂಧಿಸಿದ ಅನುಕಪಾಲ (ಆಕ್ಸಿಪೀಟಲ್) ಮತ್ತು ಲಲಾಟಕ (ಫ್ರಾಂಟಲ್) ಭಾಗಗಳು ವಿಶೇಷವಾಗಿ ಬೆಳೆದಿವೆ. ಮುಂಗಾಲಿನ ಹೆಚ್ಚು ಚಟುವಟಿಕೆಗಾಗಿ ಕೊರಳಿನ ಎಲುಬು (ಗ್ರೀವಾಸ್ಥಿ) ವಿಶೇಷವಾಗಿ ಬೆಳೆದಿದೆ ಮತ್ತು ದೊಡ್ಡದೂ ಆಗಿದೆ. ಕೈಕಾಲುಗಳಲ್ಲಿ ಪಂಚಾಂಗುಲೀಯ ಲಕ್ಷಣ ಉಂಟು. ಕೈಬೆರಳುಗಳಲ್ಲಿ ಹೆಬ್ಬೆರಳುಗಳ ಅಭಿಕರ್ಷಣ ಚಲನೆ ಮುಖ್ಯವಾದುದು. ಮರದ ಕೊಂಬೆಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಈ ಬೆರಳು ಹೆಚ್ಚು ಸಹಾಯಕಾರಿ. ಬೆರಳುಗಳ ಮೇಲೆ ಉಗುರುಗಳಿವೆ. ದವಡೆಹಲ್ಲುಗಳು ಚತುರೇಣುರೂಪಿಗಳಾಗಿವೆ. ಎದೆ ಭಾಗದಲ್ಲಿ ಜೋಡಿ ಸ್ತನಗಳಿವೆ. ಗಂಡು ಪ್ರಾಣಿಗಳಲ್ಲಿ ಜೋಲಾಡುವ ಶಿಶ್ನಪ್ರಚೀಲದೊಳಗೆ ಹುದುಗಿರುವ ವೃಷಣಗಳೂ ಇವೆ. ಸಂತಾನೋತ್ಪತ್ತಿ ಕ್ರಮ ಪ್ರೈಮೇಟು ಲಕ್ಷಣಗಳಲ್ಲಿಯೇ ಬಹಳ ಗಮನೀಯವಾದುದು. ಜರಾಯು ರಚನೆಗಾಗಿ ಮತ್ತು ಭ್ರೂಣದ ಸ್ವಾಗತ ತಯಾರಿಗಾಗಿ ಗರ್ಭಕೋಶದ ಪದರದಲ್ಲಿ ಬದಲಾವಣೆಗಳಾಗಿವೆ. ನಿಗದಿಯಾದ ಕಾಲದಲ್ಲಿ ಈ ಪದರಗಳು ಕಿತ್ತು ಹರಿಯುತ್ತವೆ. ಈ ವಿಶೇಷ ಲಕ್ಷಣದಿಂದಾಗಿ ಹೀಮೊಕೋರಿಯಲ್ ಜರಾಯು ರಚನೆ ಸಾಧ್ಯವಾಯಿತು. ಮರಿಗೆ ಆಹಾರ ಒದಗಿಸುವ ಈ ರಚನೆಯ ಜೊತೆಗೆ ಜನನದ ಅನಂತರ ಮರಿಗಳನ್ನು ಪಾಲಿಸುವ ಒಂದು ಕ್ರಮ ಕೂಡ ಪ್ರೈಮೇಟುಗಳಲ್ಲುಂಟು.

ಇವುಗಳ ವಾಸ ಹೆಚ್ಚಾಗಿ ಉಷ್ಣವಲಯದಲ್ಲಿ. ಭಾರತ, ಆಫ್ರಿಕ, ದಕ್ಷಿಣ ಅಮೆರಿಕ ಮುಂತಾದ ದೇಶಗಳಲ್ಲಿ ಪ್ರೈಮೇಟ್ ಗಣಕ್ಕೆ ಸೇರಿದ ಅನೇಕ ಪ್ರಾಣಿಗಳು ವಾಸಿಸುತ್ತವೆ. ಈಥಿಯೋಪಿಯದಲ್ಲಿ ಕಾಣಸಿಗುವ ಜಿಲಾಡ, ಬಬೂನ್ (ತೀರೊಪಿತೆಕಸ್) 5000 ಮೀ ಎತ್ತರದಲ್ಲಿಯೂ ವರುಂಗಾ ಜ್ವಾಲಾಮುಖಿಯ ಪ್ರದೇಶದಲ್ಲಿ ದೊರೆಯುವ ಪರ್ವತದ ಗೊರಿಲ 4200 ಮೀ ಎತ್ತರದಲ್ಲಿಯೂ ವಾಸಿಸುತ್ತವೆ. ಹಾಲರ್ ಕೋತಿ 2500 ಮೀ ಎತ್ತರದಲ್ಲಿ ಬಾಳುತ್ತದೆ. ರೀಸಸ್ ಮಂಗಗಳು ಹೆಚ್ಚಾಗಿ ಸಮಶೀತೋಷ್ಣವಲಯವಾಸಿಗಳು. ಮೆಕಾಕ ಮಂಗಗಳಿಗೆ ಶೀತ ಪ್ರದೇಶಗಳಲ್ಲಿ ವಾಸಮಾಡಲು ಬೇಕಾದ ಧಾರಣಸಾಮರ್ಥ್ಯ ಉಂಟು. ಹಗಲಿನ ಬೆಳಕು, ಒಣಹವೆ ಮತ್ತು ಹಣ್ಣು ಹಂಪಲುಗಳು ಹೆಚ್ಚಾಗಿ ಬೆಳೆಯುವ ಪ್ರದೇಶವನ್ನು ಪ್ರೈಮೇಟುಗಳು ಇಚ್ಛಿಸುತ್ತವೆ.

ಬೇರು, ಕಾಂಡ ಎಲೆ, ಹೂವು, ಹಣ್ಣು, ಬೀಜ ಇತ್ಯಾದಿ ಸಸ್ಯಾಹಾರವನ್ನೂ ಮೊಟ್ಟೆ, ಕೀಟ, ಹಲ್ಲಿ, ಪಕ್ಷಿ ಮುಂತಾದ ಮಾಂಸಾಹಾರವನ್ನೂ ಭಕ್ಷಿಸುತ್ತವೆಯಾದ್ದರಿಂದ ಪ್ರೈಮೇಟುಗಳ ಹಲ್ಲು ಮತ್ತು ಜೀರ್ಣಾಂಗಗಳು ಮಿಶ್ರಾಹಾರಕ್ಕೆ ತಕ್ಕವಾಗಿವೆ.

ಪ್ರೈಮೇಟುಗಳಲ್ಲಿ ಲಿಂಗಭಿನ್ನತೆ ಸ್ಪಷ್ಟವಾಗಿದೆ. ಸಂಭೋಗ, ಗರ್ಭಾವಸ್ಥೆ ಜನನ ಮತ್ತು ಹಾಲೂಡುವಿಕೆ ಹಂತಗಳಿವೆ. ಗರ್ಭಾವಸ್ಥೆಯ ಅವಧಿ ಇವುಗಳಲ್ಲಿ ಭಿನ್ನವಾಗಿದೆ : ಶ್ರೂಗಳಲ್ಲಿ 41–50 ದಿವಸ, ಲೀಮರ್‌ಗಳಲ್ಲಿ 123–134 ದಿವಸ, ಚಿಂಪಾಂಜಿ, ಗೊರಿಲಗಳಲ್ಲಿ 250–290 ದಿವಸ ಮತ್ತು ಮನುಷ್ಯರಲ್ಲಿ 267 ದಿವಸ, ಪ್ರೈಮೇಟುಗಳಲ್ಲಿ ಶಿಶು ಬೆಳವಣಿಗೆಯ ಹಂತದಲ್ಲಿ ತಾಯಿಯನ್ನು ಅಪ್ಪಿ ಹಿಡಿದಿರುತ್ತದೆ. ಇವುಗಳ ಜೀವನ ವೈವಿಧ್ಯಮಯ. ಆಹಾರಕ್ಕಾಗಿ ಅಲೆದಾಡುವುದು ಸಾಮಾನ್ಯ ಸಂಗತಿ. ಇವುಗಳ ಜೀವನಕ್ರಮ ಆಯುಃ ಪ್ರಮಾಣವನ್ನು ನಿರ್ಧರಿಸುತ್ತದೆ. ಲೀಮರ್ 15 ವರ್ಷ, ಮಂಗ 25–30 ವರ್ಷ, ಚಿಂಪಾಂಜಿ 40 ವರ್ಷ ಮತ್ತು ಮಾನವ 70–75 ವರ್ಷ.

ಪ್ರೈಮೇಟುಗಳಲ್ಲಿ ಪ್ರೊಸಿಮಿಯ ಮತ್ತು ಸಿಮಿಯ ಎಂಬ ಎರಡು ಉಪಗಣಗಳಿವೆ. ಇವಕ್ಕೆ ಸೇರಿದ ಸುಮಾರು 250 ಪ್ರಭೇದಗಳನ್ನು ಸುಮಾರು 60–80 ಜಾತಿಗಳಿಗೂ ಸುಮಾರು 10 ಕುಟುಂಬಗಳಿಗೂ ಸೇರಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ಕುಟುಂಬಗಳ ಹಾಗೂ ಇವಕ್ಕೆ ಸೇರಿದ ಮುಖ್ಯಬಗೆಯ ಪ್ರೈಮೇಟುಗಳ ಸ್ಥೂಲ ವಿವರಣೆಯನ್ನು ಕೊಡಲಾಗಿದೆ.

1 ಟುಪಾಯಿಡೆ : ಇದಕ್ಕೆ ಸೇರಿದ ಪ್ರೈಮೇಟುಗಳನ್ನು ಟ್ರೀ ಶ್ರೂಸ್ ಎಂದು ಕರೆಯಲಾಗುತ್ತದೆ. ಇದರಲ್ಲಿ ಸುಮಾರು 5 ಜಾತಿ ಹಾಗೂ 15 ಪ್ರಭೇದಗಳುಂಟು. ಇವಕ್ಕೂ ಇನ್ಸೆಕ್ಟಿವೊರ ಗಣದ ಎಲಿಫೆಂಟ್ ಶ್ರೂಗಳಿಗೂ, ಮಾರ್ಸುಪಿಯೇಲಿಯ ಗಣದ ಕೆಲವು ಪ್ರಾಣಿಗಳಿಗೂ ರಚನಾ ಸಾದೃಶ್ಯವಿದೆ. ಬಾಹ್ಯರೂಪದಲ್ಲಿ ಇವು ಕೆಲವು ತೆರನ ಅಳಿಲುಗಳನ್ನು ಹೋಲುವುವು. ಅವುಗಳಿಗಿರುವಂತೆಯೇ ಇವಕ್ಕೂ ಉದ್ದ ಮೂತಿ, ಕಿರಿಯಗಲದ ಕಿವಿ, ಬಾಲ, ಬಾಗಿದ ನಖಗಳುಳ್ಳ ಬೆರಳುಗಳು ಉಂಟು. ಅಳಿಲುಗಳಂತೆಯೇ ಇವು ಕೂಡ ವೃಕ್ಷವಾಸಿಗಳು. ಓಡುವುದರಲ್ಲಿ, ಹಣ್ಣು ಕೀಟ ಮುಂತಾದ ಆಹಾರವನ್ನು ಸೇವಿಸುವಲ್ಲಿ ಸಹ ಅಳಿಲುಗಳಿಗೂ ಈ ಕುಟುಂಬದ ಸದಸ್ಯಗಳಿಗೂ ಸಾಮ್ಯ ಉಂಟು. ಕೋಶವನ್ನೂ, ಕೋರೆಹಲ್ಲಿನ ರೀತಿಯ ದೊಡ್ಡ ಬಾಚಿ ಹಲ್ಲುಗಳನ್ನೂ ಇವು ಪಡೆದಿವೆಯಾಗಿ ಇವೆಲ್ಲ ಲಕ್ಷಣಗಳು ಇವು ಪ್ರೈಮೇಟುಗಳೆಂಬ ವಿಚಾರವನ್ನು ಬಲಪಡಿಸುವುವು. ಉದಾಹರಣೆ : ಟುಪಾಯ ಡೆಂಡ್ರೋಗೇಲ್, ಯುರೊಗೇಲ್, ಟೈಲೊಸರ್ಕಸ್ ಇತ್ಯಾದಿ.

2 ಲೀಮರಿಡೆ : ಲೀಮರ್‌ಗಳೆಂದು ಕರೆಯಲಾಗುವ ಸುಮಾರು 6 ಜಾತಿ ಮತ್ತು 16 ಪ್ರಭೇದಗಳು ಈ ಕುಟುಂಬಕ್ಕೆ ಸೇರಿವೆ. ಮಲಗಸೀ (ಮ್ಯಾಡಗ್ಯಾಸ್ಕರ್) ಮತ್ತು ಕಮೊರೋ ದ್ವೀಪಗಳಿಗೆ ಇವು ಸೀಮಿತವಾಗಿವೆ. ಮಧ್ಯಮ ಗಾತ್ರದ ಇಲಿಯಿಂದ ಹಿಡಿದು ಸಣ್ಣ ನಾಯಿಯ ಗಾತ್ರಕ್ಕಿವೆ. ದೇಹ ಸಪುರ. ಮೈಮೇಲೆ ಮೃದು ಉಣ್ಣೆಯಂಥ ತುಪ್ಪಳ ಉಂಟು. ಬಾಲವೂ ತುಪ್ಪಳಿನಿಂದ ಆವೃತವಾಗಿದೆ. ಕೆಲವು ಪ್ರಭೇದಗಳಲ್ಲಿ ಮೂತಿ ಉದ್ದವಾಗಿ ನರಿಯ ಮೂತಿ ಯಂತಿದೆಯಾದರೆ ಇನ್ನು ಕೆಲವಲ್ಲಿ ಮೋಟಾಗಿದೆ. ಕೈರೋಗೇಲಿಯಸ್, ಮೈಕ್ರೊಸೀಬಸ್ ಮತ್ತು ಫಾನೆರ್‌ಗಳಲ್ಲಿ ಕಣ್ಣುಗಳು ದೊಡ್ಡವಾಗಿದ್ದು ಪರಸ್ಪರ ಹತ್ತಿರವಾಗಿವೆಯಾದರೆ ಹ್ಯಾಪಲೀಮರ್, ಲೆಪಿಲೀಮರ್ ಹಾಗೂ ಲೀಮರ್‌ಗಳಲ್ಲಿ ಇವು ಚಿಕ್ಕವು ಮತ್ತು ಪಾರ್ಶ್ವಸ್ಥ. ಮುಂಗಾಲುಗಳಿಗಿಂತ ಹಿಂಗಾಲುಗಳು ಉದ್ದ. ಈ ಗುಂಪಿನ ಪ್ರಾಣಿಗಳು ವೃಕ್ಷವಾಸಿಗಳು. ಬಹುವಾಗಿ ನಿಶಾಚರಿಗಳು.

3 ಇಂಡ್ರೀ : ಇದು ಮೂರು ಜಾತಿಗಳನ್ನೂ (ಅವಾಹಿ, ಪ್ರೋಪಿತಿಕಸ್ ಮತ್ತು ಇಂಡ್ರೀ) ನಾಲ್ಕು ಪ್ರಭೇದಗಳನ್ನೂ ಒಳಗೊಂಡಿದೆ. ಇವು ಕೂಡ ಮಾಡಗ್ಯಾಸ್ಕರಿನ ಕುರುಚಲು ಮತ್ತು ದಟ್ಟಕಾಡುಗಳಿಗೆ ಸೀಮಿತವಾಗಿವೆ. ಅವಾಹಿ ಸಣ್ಣ ಗಾತ್ರದ್ದೂ ಉದ್ದ ಬಾಲವುಳ್ಳದ್ದೂ ಕಂದುಬಣ್ಣದ ಉಣ್ಣೆಯಂಥ ಕೂದಲುಳ್ಳದ್ದೂ ಅದರೆ, ಪ್ರೋಪಿತಿಕಸ್ ಮಧ್ಯಮಗಾತ್ರದ್ದೂ ಉದ್ದ ಬಾಲವುಳ್ಳದ್ದೂ ಬಿಳಿ ಬಣ್ಣದ ಕೂದಲುಳ್ಳದ್ದೂ ಅಗಿದೆ. ಇಂಡ್ರಿಯಾದರೂ ದೊಡ್ಡ ಗಾತ್ರದ ಪ್ರಾಣಿ. ಇದರ ಬಾಲ ಮೋಟು, ಮೈಮೇಲಿನ ತುಪ್ಪಳ ರೇಶ್ಮೆಯಂತಿದೆ. ಇವೆಲ್ಲವುಗಳ ಮೂತಿ ಮೋಟು ; ಹೆಚ್ಚು ಕಡಿಮೆ ಕೋತಿಗಳ ಮೂತಿಯಂತಿದೆ. ಕಣ್ಣುಗಳು ದೊಡ್ಡವು ; ಮುಖದ ಮುಂಭಾಗದಲ್ಲಿ ಸ್ಥಿತವಾಗಿವೆ. ಹೆಬ್ಬೆರಳು ಚಿಕ್ಕದು ; ಉಳಿದ ಬೆರಳುಗಳಿಗೆ ಸ್ವಲ್ಪವಾಗಿ ಎದುರಾಗಿದೆ. ಪಕ್ಕೆಗಳಲ್ಲಿರುವ ಚರ್ಮ ಕೊಂಚ ಹರಡಿಕೊಂಡಿದ್ದು ಪ್ಯಾರಾಶೂಟಿನ ಪಟಲದಂತಿದೆ. ಅಂಗೈ ಮತ್ತು ಅಂಗಾಲುಗಳ ಮೇಲೆ ಮೆತ್ತೆಗಳುಂಟು. ಮುಸುವ ಮತ್ತು ಕೊಲೊಬಸ್ ಕೋತಿಗಳಲ್ಲಿರುವಂತೆ ಇವುಗಳಲ್ಲೂ ಲಾಲಾಗ್ರಂಥಿಗಳು ದೊಡ್ಡವಾಗಿವೆ.

ಅವಾಹಿಗಳು ನಿಶಾಚರಿಗಳು, ಉಳಿದವಾದರೊ ಹಗಲಿನಲ್ಲಿ ಹೆಚ್ಚು ಚಟುವಟಿಕೆಯಿಂದಿರುವುವು. ಎಲ್ಲವೂ ವೃಕ್ಷವಾಸಿಗಳು; ಪೂರ್ಣ ಸಸ್ಯಾಹಾರಿಗಳು. ಎಲೆ, ಮೊಗ್ಗು, ಕಾಯಿ, ತೊಗಟೆ, ಹೂಗಳೇ ಇವುಗಳ ಮುಖ್ಯ ಆಹಾರ. ಈ ಗುಣದಲ್ಲಿ ಇವು ಆಫ್ರಿಕ ಹಾಗೂ ಏಷ್ಯಗಳ ಪರ್ಣಭಕ್ಷಿ ಕೋತಿಗಳನ್ನೂ ಅಮೆರಿಕ ಉಷ್ಣವಲಯದ ಹೌಲರ್ ಕೋತಿಗಳನ್ನೂ ಹೋಲುತ್ತವೆ.

4 ಲೋರಿಸಿಡೆ : ಇದರಲ್ಲಿ 6 ಜಾತಿ ಮತ್ತು 12 ಪ್ರಭೇದಗಳುಂಟು. ಮಧ್ಯ ಮತ್ತು ದಕ್ಷಿಣ ಆಫ್ರಿಕ, ದಕ್ಷಿಣ ಭಾರತ, ಶ್ರೀಲಂಕಾ, ಆಗ್ನೇಯ ಏಷ್ಯ, ಫಿಲಿಪೀನ್ಸುಗಳಲ್ಲಿ ಇವುಗಳ ವಾಸ. ಲೋರಿಸ್ (ಕಾಡುಪಾಪ), ಪೋಟೋ ಮತ್ತು ಗೆಲಾಗೋಗಳು ಈ ಕುಟುಂಬದ ಮುಖ್ಯ ಉದಾಹರಣೆಗಳು. ಸಣ್ಣ ಗಾತ್ರದ ಪ್ರಾಣಿಗಳಿವು. ತಲೆ ಹಾಗೂ ಕಣ್ಣು ಗುಂಡಗಿವೆ. ಕಿವಿಗಳು ಚಿಕ್ಕವು. ಹಿಂಗಾಲು ಮುಂಗಾಲುಗಳು ಹೆಚ್ಚುಕಡಿಮೆ ಸಮಾನ ಉದ್ದದುವು. ಕೈಕಾಲುಗಳ ಹೆಬ್ಬೆರಳುಗಳು ಉಳಿದ ಬೆರಳುಗಳಿಗೆ ಎದುರಾಗಿವೆ. ಕಾಡುಪಾಪ ಹಾಗೂ ಪೋಟೋಗಳ ಕೈಕಾಲುಗಳ ಎರಡನೆಯ ಬೆರಳಿನಲ್ಲಿ ಮೊನೆಯುಗುರು (ಕ್ಲಾ) ಇದೆಯಾದರೆ, ಉಳಿದ ಬೆರಳುಗಳಲ್ಲಿ ಚಪ್ಪಟೆ ಉಗುರುಗಳುಂಟು.

ಇವು ವೃಕ್ಷವಾಸಿಗಳು ಹಾಗೂ ನಿಶಾಚರಿಗಳು. ಉಚ್ಚೆಹೊಯ್ದುಕೊಂಡು ಕೈತೊಳೆದುಕೊಳ್ಳುವ ವಿಲಕ್ಷಣ ಗುಣವನ್ನು ಇವು ತೋರುತ್ತವೆ. ಇವು ಕೀಟಗಳನ್ನೂ ಮಾಂಸವನ್ನೂ ತಿನ್ನುತ್ತವೆ. ಕಾಡುಪಾಪ ಹಾಗೂ ಪೋಟೋಗಳಲ್ಲಿ ಬಾಲ ತುಂಬ ಚಿಕ್ಕದು ಅಥವಾ ಇಲ್ಲವೇ ಇಲ್ಲ. ಗೆಲಾಗೋಗಳ ಬಾಲ ಉದ್ದವಾಗಿದೆ.

5 ಟಾರ್ಸಿಯಿಡೆ : ಟಾರ್ಸಿಯಸ್ ಎಂಬ ಒಂದೇ ಜಾತಿಯನ್ನು ಇದು ಒಳಗೊಂಡಿದೆ. ಸುಮಾತ್ರ, ಬೋರ್ನಿಯೊ, ಫಿಲಿಪೀನ್ಸ್‌ಗಳ ಕುರುಚಲು ಕಾಡುಗಳ ಕೆಳ ಉನ್ನತಿಗಳಲ್ಲಿ ಇದರ ಮೂರು ಪ್ರಭೇದಗಳು ಕಾಣದೊರೆಯುತ್ತವೆ. ಚಿಕ್ಕಗಾತ್ರದ ಪ್ರಾಣಿಗಳಿವು. ಮೈ ಬಣ್ಣ ಬೂದುಮಿಶ್ರಿತ ಕಂದು ಇಲ್ಲವೆ ಗಾಢಕಂದು. ದೇಹದ ಉದ್ದಕ್ಕಿಂತ ಹೆಚ್ಚು ಉದ್ದದ ಬಾಲವುಂಟು. ಬಾಲದ ತುದಿಯಲ್ಲಿ ಮಾತ್ರ ಕೂದಲಿನ ಗುಚ್ಛವಿದೆ. ಮೈಮೇಲೆ ರೇಶ್ಮೆಯಂಥ ಕೂದಲುಂಟು. ಇವುಗಳ ಅತ್ಯಂತ ಪ್ರಧಾನ ಲಕ್ಷಣವೆಂದರೆ ತುಂಬ

ಅಗಲವಾದ ಕಣ್ಣುಗಳು. ಕಣ್ಣಿನ ಗುಡ್ಡೆಯ ವ್ಯಾಸ ಸುಮಾರು 16 ಮಿಮೀ ಇದೆ. ಮುಂಗಾಲುಗಳಿಗಿಂತ ಹಿಂಗಾಲುಗಳು ವಿಪರೀತ ಉದ್ದ. ಎರಡು ಮತ್ತು ಮೂರನೆಯ ಬೆರಳುಗಳ ಉಗುರುಗಳು ಮೊನೆಚಾಗಿವೆ. ಉಳಿದವುಗಳಲ್ಲಿ ಚಪ್ಪಟೆ ಉಗುರುಗಳಿವೆ.

ಇವು ಕೂಡ ವೃಕ್ಷವಾಸಿಗಳು ಹಾಗೂ ನಿಶಾಚರಿಗಳು. ಕೀಟ, ಹಲ್ಲಿ, ಓತಿ ಮುಂತಾದವನ್ನು ತಿಂದು ಇವು ಜೀವಿಸುವುವು. ಟಾರ್ಸಿಯರುಗಳು ತಮ್ಮ ತಲೆಯನ್ನು $360^0$ ಗಳಷ್ಟು ತಿರುಗಿಸಬಲ್ಲವಾದ್ದರಿಂದ ಹೆಚ್ಚಿನ ದೃಗ್ವಿಸ್ತಾರ ಇವಕ್ಕೆ ಲಭಿಸಿದೆ.

6 ಸೆಬಿಡೆ : ನೂತನ ಲೋಕದ (ನ್ಯೂವರ್ಲ್ಡ್) ಕೋತಿಗಳೆಂದು ಕರೆಯಲಾಗುವ ಸುಮಾರು 12 ಜಾತಿಗಳೂ 37 ಪ್ರಭೇದಗಳೂ ಇದಕ್ಕೆ ಸೇರಿವೆ. ಮೆಕ್ಸಿಕೋದ $23^0$ ಉತ್ತರ ಅಕ್ಷಾಂಶದಿಂದ ಹಿಡಿದು ಅರ್ಜಂಟೀನದ $27^0$ ದಕ್ಷಿಣ ಅಕ್ಷಾಂಶದ ವರೆಗಿನ ದಟ್ಟಕಾಡುಗಳಲ್ಲಿ ಇವು ವಾಸಿಸುವುವು. ಇವುಗಳ ಪೈಕಿ ಮುಖ್ಯ ಬಗೆಗಳು ಇಂತಿವೆ : ಟಿಟಿ ಕೋತಿ, ಉಕಾರಿ ಕೋತಿ, ಜೇಡಕೋತಿ, ವುಲಿ ಕೋತಿ, ಮತ್ತು ಗೆಲ್ಡೀ ಮಾರ್ಮೊಸೆಟ್. ಮಧ್ಯಮಗಾತ್ರದ ಕೋತಿಗಳಿವು ; ದೇಹದ ಉದ್ದ ಮಾರ್ಮೊಸೆಟ್ಟಿನಲ್ಲಿ ಸುಮಾರು 200 ಮಿಮೀ ಇದೆಯಾದರೆ ಹೌಲರ್ ಕೋತಿಗಳಲ್ಲಿ 600–900 ಮಿಮೀ ಇದೆ. ಇವೆಲ್ಲಕ್ಕೂ ಉದ್ದಬಾಲ ಉಂಟು. ಹೌಲರ್, ಜೇಡ, ಹಾಗೂ ವುಲಿ ಕೋತಿಗಳಲ್ಲಿ ಬಾಲಕ್ಕೆ ಹಿಡಿದುಕೊಳ್ಳುವ ಸಾಮರ್ಥ್ಯವುಂಟು. ಇದಕ್ಕಾಗಿ ಬಾಲದ ತುದಿ ಮೃದು ಹಾಗೂ ರೋಮರಹಿತವಾಗಿದ್ದು ಸ್ಪರ್ಶಸಂವೇದಿಯಾಗಿದೆ. ಬಾಲವನ್ನು ಇವು ಮೂರನೆಯ ಕೈಯಾಗಿ ಬಳಸುವುವು. ಇವುಗಳ ನಾಸಿಕರಂಧ್ರಗಳು ಪರಸ್ಪರ ದೂರವಾಗಿದ್ದು ಪಾರ್ಶ್ವಗಳೆಡೆಗೆ ಹೊರತೆರೆಯುವುದರಿಂದ ಈ ಕೋತಿಗಳನ್ನು ಪ್ಲಾಟಿ ರೈನ್ ಕೋತಿಗಳೆಂದು ಕರೆಯುವುದಿದೆ. [ಪ್ರಾಚೀನಲೋಕದ ಕೋತಿಗಳ (ಓಲ್ಡ್ ವರ್ಲ್ಡ್ ಮಂಕೀಸ್) ನಾಸಿಕರಂಧ್ರಗಳಾದರೂ ಪರಸ್ಪರ ಹತ್ತಿರವಿದ್ದು ಮೂತಿಯ ಮುಂಭಾಗದೆಡೆಗೆ ಹೊರತೆರೆಯುವುವು. ಆದ್ದರಿಂದ ಈ ಕೋತಿಗಳನ್ನು ಕ್ಯಾಟರೈನ್ ಕೋತಿಗಳು ಎಂದು ಕರೆಯಲಾಗುತ್ತದೆ. ಸೆಬಿಡೀ ಕೋತಿಗಳ ಕಣ್ಣುಗಳು ದೊಡ್ಡವು, ಚೆನ್ನಾಗಿ ರೂಪುಗೊಂಡ ರೆಪ್ಪೆಗಳನ್ನು ಪಡೆದಿವೆ. ಅಯೋಟಸ್ ಎಂಬ ಹೆಸರಿನ ಕೋತಿಯ ವಿನಾ ಉಳಿದುವುಗಳ ಕಣ್ಣಿನ ಕಣ್ಜಾಲದಲ್ಲಿ (ರೆಟೀನ) ಸಲಾಕಿಗಳು (ರಾಡ್ಸ್) ಮತ್ತು ಶಂಕುಗಳು (ಕೋನ್ಸ್) ಇವೆ. ಈ ಲಕ್ಷಣದಲ್ಲಿ ಈ ಕೋತಿಗಳು ಮನುಷ್ಯನನ್ನು ಹೋಲುವುವು. ಅಯೋಟಸ್ ಕೋತಿಯಲ್ಲಿ ಬರಿಯ ಸಲಾಕಿಗಳುಂಟು. ಇವುಗಳಲ್ಲಿ ಕೆನ್ನೆ ಸಂಚಿಗಳಾಗಲೀ ಪೃಷ್ಠಭಾಗದ ಜಡ್ಡುಗಟ್ಟಿದ ಜರ್ಮವಾಗಲೀ (ಕ್ಯಾಲೋಸಿಟೀಸ್) ಇಲ್ಲ. (ಪ್ರಾಚೀನ ಲೋಕದ ಕೋತಿಗಳಲ್ಲಿ ಈ ಅಂಗಗಳುಂಟು) ಕೈಯ ಹೆಬ್ಬೆರಳು ಅಭಿಕರ್ಷಕವಾಗಿಲ್ಲ. ಆದರೆ ಕಾಲಿನ ಹೆಬ್ಬೆರಳು ಅಭಿಕರ್ಷಕ. ಸೆಬಿಡೆ ಕೋತಿಗಳು ವೃಕ್ಷವಾಸಿಗಳು. ತುಂಬ ಚುರುಕಾಗಿ ಮರದಿಂದ ಮರಕ್ಕೆ ಜಿಗಿಯುತ್ತ ನಡೆದಾಡುವುವು.

ಇವು ಸಣ್ಣ ಸಣ್ಣ ಸಮುದಾಯಗಳಲ್ಲಿ ವಾಸಿಸುತ್ತವೆ. ಹೆಚ್ಚಿನ ಬಗೆಗಳು ಸಸ್ಯಾಹಾರಿಗಳು. ಕೆಲವು ಮಾತ್ರ ಕೀಟ ಇತ್ಯಾದಿ ಮಾಂಸಾಹಾರವನ್ನೂ ಸೇವಿಸುವುವು.

7 ಕ್ಯಾಲಿತ್ರಿಸಿಡೆ : ಕ್ಯಾಲಿತ್ರಿಕ್ಸ್ (ಮಾರ್ಮೊಸೆಟ್), ಸೆಬುಯೆಲ (ಪಿಗ್ಮಿ ಮಾರ್ಮೊಸೆಟ್); ಸ್ಯಾಗ್ವಿನಸ್ (ಟ್ಯಾಮರಿನ್) ಮತ್ತು ಲಿಯೊಂಟಿಡಿಯಸ್ (ಸಿಂಹಬಾಲದ ಮಾರ್ಮೊಸೆಟ್) ಎಂಬ ನಾಲ್ಕು ಜಾತಿಗಳು ಈ ಕುಟುಂಬಕ್ಕೆ ಸೇರಿವೆ. ದಕ್ಷಿಣ ಅಮೆರಿಕ ಮತ್ತು ಪನಾಮಗಳ ಉಷ್ಣವಲಯ ಕಾಡುಗಳೇ ಇವುಗಳ ಆವಾಸಸ್ಥಾನ, ಪ್ರೈಮೇಟುಗಳಲ್ಲೆಲ್ಲ ಮಾರ್ಮೊಸೆಟ್ಟುಗಳೇ ಅತ್ಯಂತ ಕಿರಿಗಾತ್ರದವು ; ದೇಹ 130–170 ಮಿಮೀ ಉದ್ದವಿರುತ್ತದೆ. ತೂಕ 70–1000 ಗ್ರಾ. ಮೈಮೇಲಿನ ಕೂದಲು ದಟ್ಟ ಹಾಗೂ ರೇಶ್ಮೆಯಂತೆ ಮೃದು ತಲೆಯ ಮೇಲೆ ಕೂದಲಿನ ಕುಚ್ಚು ಇರುವುದುಂಟು. ಬಾಲಕ್ಕೆ ಹಿಡಿದುಕೊಳ್ಳುವ ಸಾಮರ್ಥ್ಯ ಇಲ್ಲ. ಹೆಬ್ಬೆರಳು ಅಭಿಕರ್ಷಕವಲ್ಲ.

ಇವಕ್ಕೆ ಚುರುಕಾದ ದೃಷ್ಟಿ ಹಾಗೂ ಶ್ರವಣ ಸಾಮರ್ಥ್ಯ ಉಂಟು. ಇವುಗಳ ಚಟುವಟಿಕೆ ಹಗಲಿನಲ್ಲಿ ಹೆಚ್ಚು. ಇವು ಕೂಡ ವೃಕ್ಷವಾಸಿಗಳು. ಎಲ್ಲ ರೀತಿಯ ಆಹಾರವನ್ನು ಇವು ಸೇವಿಸುವುವಾದರೂ ಕೀಟ, ಜೇಡ, ಕಾಯಿಗಳು ಇವುಗಳ ಮೆಚ್ಚಿನ ಆಹಾರ.

8 ಸರ್ಕೊಪಿತಿಸಿಡೆ : ಪ್ರಾಚೀನ ಲೋಕದ ಕೋತಿಗಳೆಂದು ಪ್ರಸಿದ್ಧವಾಗಿರುವ ಬೆಬೂನ್, ಮಂಗ, ಮುಸುವ, ರೀಸಸ್ ಕೋತಿ, ಬಾರ್ಬೆರಿ ವಾನರ, ಮಂಗಾಬೀ, ಮ್ಯಾಂಡ್ರಿಲ್, ಸೊಂಡಿಲು ಕೋತಿ, ಗರೆಜ ಕೋತಿ, ಇತ್ಯಾದಿ ಸುಮಾರು 16 ಜಾತಿಯ 60 ಪ್ರಭೇದಗಳು ಈ ಕುಟುಂಬದ ಸದಸ್ಯಗಳು. ಆಫ್ರಿಕ, ಅರೇಬಿಯ, ದಕ್ಷಿಣ ಏಷ್ಯ, ಇಂಡೋನೇಷ್ಯ ಪ್ರದೇಶ, ಫಿಲಿಪೀನ್ಸ್, ಜಪಾನ್–ಇವು ಈ ಕೋತಿಗಳ ಮುಖ್ಯ ನೆಲೆಗಳು. ದಟ್ಟ ಕಾಡುಗಳಿಂದ ಹಿಡಿದು ಶಿಲಾಮಯ ಬಂಜರುಗಳ ವರೆಗಿನ ಎಲ್ಲ ರೀತಿಯ ಪ್ರದೇಶಗಳಲ್ಲಿ ಇವು ವಾಸಿಸುತ್ತವೆ. ಮಧ್ಯಮ ಗಾತ್ರದ ಕೋತಿಗಳಿವು; ದೇಹದ ಉದ್ದ 325–1100 ಮಿಮೀ. ತೂಕ 50 ಕಿಗ್ರಾ ನಷ್ಟು ಭಾರವಾಗಿರುವುದುಂಟು (ಉದಾ : ಮ್ಯಾಂಡ್ರಿಲ್). ಬಾಲಕ್ಕೆ ಹಿಡಿದುಕೊಳ್ಳುವಲ್ಲಿ ಸಹಾಯಕವಾಗಿದೆ. ಮೈಮೇಲಿನ ಕೂದಲು ಉದ್ದವಾಗಿರಬಹುದು ಇಲ್ಲವೆ ಮೋಟಾಗಿರಬಹುದು. ಕೆಲವಲ್ಲಿ ಜೂಲು, ಗಡ್ಡ, ಶಿಖೆ ಮುಂತಾದ ಅಲಂಕರಣಗಳಿರುತ್ತವೆ. ಮುಖ ಸಾಮಾನ್ಯವಾಗಿ ರೋಮರಹಿತ ಮತ್ತು ಕರಿಯ ಬಣ್ಣದ್ದು. ಮ್ಯಾಂಡ್ರಿಲುಗಳ ಗಂಡುಗಳಲ್ಲಿ ಮಾತ್ರ ಮುಖ ಉಜ್ಜ್ವಲ ಕೆಂಪು, ನೀಲಿ ಮತ್ತು ಊದಾ ಬಣ್ಣಗಳ ಪಟ್ಟೆಗಳಿಂದ ಕೂಡಿದ್ದು ಬಲುವರ್ಣರಂಜಿತವಾಗಿದೆ. ಅಂಗಾಲು ಅಂಗೈಗಳು ರೋಮರಹಿತ. ಕೆಲವು ಪ್ರಭೇದಗಳಲ್ಲಿ ಪೃಷ್ಠದ ಮೇಲೆ ವರ್ಣಮಯ ಜಡ್ಡುಗಂಟು (ಕ್ಯಾಲೋಸಿಟಿ) ಉಂಟು. ಹಿಂದೆ ತಿಳಿಸಿದಂತೆ ಇವು ಕ್ಯಾಟರೈನ್ ಕೋತಿಗಳು.

ಇವಕ್ಕೆ ಚೆನ್ನಾದ ದೃಷ್ಟಿ ಶ್ರವಣ ಹಾಗೂ ಘ್ರಾಣ ಸಾಮರ್ಥ್ಯ ಉಂಟು. ಇವೆಲ್ಲವುಗಳ ಚಟುವಟಿಕೆ ಹಗಲಿಗೆ ಸೀಮಿತವಾಗಿದೆ. ಬೆಬೂನ್‌ಗಳು ನೆಲವಾಸಿಗಳಾದರೆ ಉಳಿದುವು ವೃಕ್ಷವಾಸಿಗಳು. ಇವುಗಳಲ್ಲಿ ಕುಟುಂಬ ಜೀವನ ಬಲುಸಾಮಾನ್ಯ. ಕೆಲವು ಬಗೆಗಳು ದೊಡ್ಡ ಸಮುದಾಯಗಳಲ್ಲಿ ಜೀವಿಸುವುವು. ಮುಸುವ, ಕೊಲೊಬಸ್ ಕೋತಿ ಮತ್ತು ಸೊಂಡಿಲು ಕೋತಿಗಳು ಸಸ್ಯಹಾರಿಗಳಾದರೆ ಉಳಿದುವು (ಮಂಗ, ಮಂಗಾಬಿ, ಗ್ವೆನೋನ್, ಬೆಬೂನ್ ಇತ್ಯಾದಿ) ಸರ್ವಭಕ್ಷಿಗಳು.

ಈ ಕುಟುಂಬದ ಸದಸ್ಯಗಳ ಹೆಣ್ಣುಗಳಲ್ಲಿ 27–52 ದಿವಸಗಳ ಋತುಚಕ್ರ ಉಂಟು. ಗರ್ಭಾವಸ್ಥೆಯ ಅವಧಿ 5–9 ತಿಂಗಳು. ಇವುಗಳ ಆಯಸ್ಸು 20–25 ವರ್ಷಗಳು.

9 ಪಾಂಗಿಡೆ : ಗಿಬನ್, ಒರಾಂಗೂಟಾನ್, ಚಿಂಪಾಂಜಿ ಮತ್ತು ಗೊರಿಲಗಳನ್ನು ಇದು ಒಳಗೊಂಡಿದೆ. ಇವೆಲ್ಲಕ್ಕೂ ವಾನರಗಳೆಂಬ (ಬಾಲವಿಲ್ಲದ ಕಪಿಗಳು, ಏಪ್ಸ್) ಹೆಸರುಂಟು. ಮಾನವನಿಗೆ ಬಲು ಹತ್ತಿರದ ಸಂಬಂಧಿಗಳಿವು. ಆಫ್ರಿಕ– ಆಗ್ನೇಯ, ಏಷ್ಯ, ಸುಮಾತ್ರ, ಜಾವ, ಬೋರ್ನಿಯೋಗಳು ಇವುಗಳ ಪ್ರಧಾನ ಆವಾಸಸ್ಥಾನಗಳು ; ಅಲ್ಲಿಯ ದಟ್ಟ ಕಾಡುಗಳಲ್ಲಿ ಇವು ವಾಸಿಸುವುವು. ಇವುಗಳ ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಬಹುದು.

10 ಹೋಮಿನಿಡೆ : ಮಾನವ (ಹೋಮೊ) ಜಾತಿಯನ್ನು ಮಾತ್ರ ಇದು ಒಳಗೊಂಡಿದೆ.

ಇತರ ಪ್ರಾಣಿಗಳಿಗಿಂತ ಮಂಗಗಳಿಗೆ ಹೆಚ್ಚುಬುದ್ಧಿಶಕ್ತಿ ಇದೆಯೆಂದು ಅವನ್ನು ಕೆಲವು ದೇಶಗಳಲ್ಲಿ ಮುದ್ದು ಪ್ರಾಣಿಗಳಾಗಿ ಸಾಕುವುದುಂಟು. ಸಂಗಾತಿಯಂತೆ ಪ್ರೀತಿಮಾಡುವುದೂ ಉಂಟು. ಮಂಗಗಳು ಮಾನವ ಸದೃಶಪ್ರಕ್ರಿಯೆಗಳನ್ನು ಪ್ರದರ್ಶಿಸುವುದರಿಂದ ಅವನ್ನು ಸಂಶೋಧನೆಗೆ ಮಾನವನ ಬದಲು ಬಳಸುವುದುಂಟು. (ಟಿ.ವಿ.ಎಚ್.)

**ಪ್ರೋಟೀನುಗಳು:** ಅಮೈನೋ ಆಮ್ಲಗಳ ನಡುವೆ ಏರ್ಪಡುವ ಪೆಪ್ಟೈಡ್ ಬಂಧಗಳಿಂದ ರಚಿತವಾಗುವ ಬೃಹದಣುಗಳು. ಇವು ಎಲ್ಲ ಜೀವಿಗಳಲ್ಲಿದ್ದು ನಾನಾ ಬಗೆಯ ಜೈವಿಕ ರಾಸಾಯನಿಕ ಕಾರ್ಯಗಳ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಜೀವನ ನಿರ್ಮಾಣ ಘಟಕಗಳಾಗಿರುವ ವಸ್ತುಗಳ ಪೈಕಿ ಇವುಗಳಿಗೆ ಗಣನೀಯ ಸ್ಥಾನವಿದೆ. ರಾಚನಿಕ ವಸ್ತುಗಳಾದ ಕೂದಲು, ಮೃದ್ವಸ್ಥಿ, ತುಪ್ಪುಟಗಳಿಂದ ಹಿಡಿದು ಕ್ರಿಯಾತ್ಮಕ ವಸ್ತುಗಳಾದ ಕಿಣ್ವಗಳು, ಪ್ರಚೋದಕ ವಸ್ತುಗಳು (ಉದಾ: ಇನ್ಸುಲಿನ್), ಆಕ್ಸಿಜನ್ ಅನಿಲವನ್ನು ಸೆರೆಹಿಡಿದು ದೇಹಕ್ಕೆ ಒದಗಿಸುವ ಹೀಮೊಗ್ಲೋಬಿನ್ ಮತ್ತು ಸೈಟೊಕ್ರೋಮವರೆಗೆ ಕಾರ್ಯಗಳನ್ನು ನಿರ್ವಹಿಸುವ ಇವನ್ನು ಜೀವಿಸೃಷ್ಟಿಯ ಮೂಲವಸ್ತುಗಳೆಂದು ಪರಿಗಣಿಸಲಾಗಿದೆ.

ಪ್ರೊಟೀನ್ ಸಕಲ ಜೀವರಾಶಿಗೆ ಅತ್ಯಾವಶ್ಯಕ ವಸ್ತು. ನಮ್ಮ ದೇಹದ ಮಾಂಸ, ರಕ್ತ, ಮೂಳೆ, ಚರ್ಮ, ಕೂದಲಿನಂತಹ ಅಂಗಾಂಶಗಳು ಇದರಿಂದ ನಿರ್ಮಿತ. ಗ್ರೀಕ್ ಭಾಷೆಯಲ್ಲಿ ಪ್ರೊಟೀನ್ (ಪ್ರೋಟಿಯಸ್) ಎಂದರೆ ಪ್ರಥಮ ಪ್ರಾಶಸ್ತ್ಯ ಎಂದು ಅರ್ಥ. ಮುಲ್ಡರ್ ವಿಜ್ಞಾನಿ (೧೮೩೮) ಈ ವಸ್ತು ಎಲ್ಲ ಜೀವಿಗಳಿಗೂ ಅವಶ್ಯಕವೆಂಬುದನ್ನು ಅರಿತು ಇದಕ್ಕೆ ಪ್ರೊಟೀನ್ ಎಂದು ನಾಮಕರಣಮಾಡಿದ. ಆಹಾರದಿಂದ ಒದಗುವ ಪ್ರೊಟೀನುಗಳು ೨ ಪ್ರಮುಖ ಪಾತ್ರಗಳನ್ನು ವಹಿಸುತ್ತವೆ. ದೇಹದ ಅಂಗೋಪಾಂಗಗಳ ರಚನೆಗೆ ಬೇಕಾಗುವ ಮೂಲ ಸಾಮಗ್ರಿಗಳ ಪೂರೈಕೆ ಮತ್ತು ಅಂಗಾಂಶಗಳು ಸವೆದು ಹೋದಾಗ ಅವುಗಳ ದುರಸ್ತಿಗೆ ಯುಕ್ತ ಸಾಮಗ್ರಿಗಳ ಪೂರೈಕೆ.

ಆಹಾರದಲ್ಲಿರುವ ಪ್ರೊಟೀನುಗಳು ದೇಹದೊಳಗೆ ಜೀರ್ಣವಾದಾಗ, ಅಮೈನೋ ಆಮ್ಲಗಳು ಬೇರ್ಪಡೆಯಾಗಿ ರಕ್ತಗತವಾಗುತ್ತವೆ. ವಿವಿಧ ಕೋಶಗಳು ಇವನ್ನು ಉಪಯೋಗಿಸಿಕೊಂಡು ತಮಗೆ ಆಗತ್ಯವಾದ ಪ್ರೊಟೀನುಗಳನ್ನು ಸಂಶ್ಲೇಷಿಸುತ್ತವೆ. (ನೋಡಿ– ಅಮೈನೋ ಆಮ್ಲಗಳು).

ಪೋಷಕ ಮೌಲ್ಯ: ಪ್ರೊಟೀನಿನ ಪೋಷಕ ಮೌಲ್ಯ ಅದರಲ್ಲಿರುವ ಅಮೈನೋ ಆಮ್ಲಗಳನ್ನು ಅವಲಂಬಿಸಿದೆ. ೧೯೧೪ರಲ್ಲಿ ಆಸ್‌ಬೋರ್ನ್ ಮತ್ತು ಮೆಂಡಲ್ ವಿಜ್ಞಾನಿಗಳು

ಇಲಿಗಳ ಮೇಲೆ ಪ್ರಯೋಗ ನಡೆಸಿ ಆಹಾರದ ಪ್ರೋಟೀನುಗಳಲ್ಲಿ ದೇಹದ ಸಂರಕ್ಷಣೆ ಮತ್ತು ಬೆಳೆವಣಿಗೆಗೆ ಸಹಾಯಕವಾಗುವ ಸಾಮರ್ಥ್ಯದಲ್ಲಿ ವ್ಯತ್ಯಾಸಗಳಿವೆ ಎಂಬುದನ್ನು ದೃಢ ಪಡಿಸಿದರು. ಅನಂತರ ಆಹಾರದಲ್ಲಿರುವ ಪ್ರೋಟೀನುಗಳನ್ನು ಅವುಗಳ ಪೋಷಕ ಮೌಲ್ಯಗಳ ಆಧಾರದ ಮೇಲೆ ಮೂರು ಬಗೆಗಳಾಗಿ ವಿಂಗಡಿಸಲಾಗಿದೆ.

(i) ಸಂಪೂರ್ಣ ಪ್ರೋಟೀನುಗಳು : ಇವು ಜೀವಸಂರಕ್ಷಣೆಗೂ, ದೇಹದ ಬೆಳೆವಣಿಗೆಗೂ ಸಹಾಯಕವಾಗುತ್ತವೆ. ಉದಾ: ಮಾಂಸ, ಮೀನು, ಮೊಟ್ಟೆ, ಹಾಲು ಮತ್ತು ಸಸ್ಯಾಹಾರದಲ್ಲಿರುವ ಕೆಲವು ಪ್ರೋಟೀನುಗಳು (ಉದಾ: ಸೋಯಾಬೀನಿನಲ್ಲಿರುವ ಗ್ಲೈಸಿನಿನ್, ಗೋದಿಯಲ್ಲಿರುವ ಗ್ಲುಟೆನಿನ್ ಮತ್ತು ಮುಸುಕಿನ ಜೋಳದಲ್ಲಿರುವ ಗ್ಲುಟೆಲಿನ್).

(ii) ಭಾಗಶಃ ಸಂಪೂರ್ಣ ಪ್ರೋಟೀನುಗಳು : ಇವು ಜೀವಸಂರಕ್ಷಕವಾಗಿರಬಲ್ಲವೇ ಹೊರತು ದೇಹ ಬೆಳೆವಣಿಗೆಗೆ ಸಹಾಯಕವಲ್ಲ. ಉದಾ: ಗೋದಿಯಲ್ಲಿರುವ ಗ್ಲೈಯಾಡಿನ್, ಜವೆ ಗೋದಿ ಹಾರ್ಡೆಯಿನ್ ಮತ್ತು ಚಿಕ್ಕ ಗೋದಿಯಲ್ಲಿರುವ (ರೈ) ಪ್ರೋಲಮಿನ್.

(iii) ಅಸಂಪೂರ್ಣ ಪ್ರೋಟೀನುಗಳು : ಇವು ಜೀವಸಂರಕ್ಷಣೆಗಾಗಲಿ ದೇಹದ ಬೆಳೆವಣಿಗೆಗಾಗಲಿ ಸಹಾಯಕವಾಗಲಾರವು. ಸಸ್ಯಜನಿತ ಪ್ರೋಟೀನುಗಳ ಪೈಕಿ ಹೆಚ್ಚಿನವು ಈ ವರ್ಗಕ್ಕೆ ಸೇರಿವೆ. ಉದಾ: ಮುಸುಕಿನ ಜೋಳದಲ್ಲಿರುವ ಜೀನ್, ಮತ್ತು ಪ್ರಾಣಿಗಳಲ್ಲಿರುವ ಜಿಲ್ಯಾಟಿನ್.

೧೯೩೮ರಲ್ಲಿ ವಿಜ್ಞಾನಿ ರೋಸ್ ಪ್ರೋಟೀನುಗಳಿಗೆ ಬದಲಾಗಿ ಅಮೈನೋ ಆಮ್ಲಗಳ ಮಿಶ್ರಣವನ್ನು ಆಹಾರವಾಗಿ ಕೊಟ್ಟು ಇಲಿಗಳ ಮೇಲೆ ಮತ್ತು ಮನುಷ್ಯರ ಮೇಲೆ ಪ್ರಯೋಗ ನಡೆಸಿದ. ಇದರ ಫಲವಾಗಿ ಆತ ಈ ಆಮ್ಲಗಳನ್ನು ಪೋಷಣೆಯ ದೃಷ್ಟಿಯಿಂದ ಆಗತ್ಯ ಅಮೈನೋ ಆಮ್ಲಗಳು ಮತ್ತು ಆಗತ್ಯೇತರ ಅಮೈನೋ ಆಮ್ಲಗಳೆಂದು ಎರಡು ಬಗೆಯಾಗಿ ವಿಂಗಡಿಸಿದ. ಅರ್ಜಿನಿನ್, ಹಿಸ್ಟಿಡಿನ್, ಐಸೊಲ್ಯೂಸಿನ್, ಲ್ಯೂಸಿನ್, ಲೈಸಿನ್, ಮೆಥಿಯಾನೀನ್. ಫೀನೈಲ್ ಆಲನಿನ್, ತ್ರಿಯೊನಿನ್, ಟ್ರಿಪ್ಟೋಫೇನ್ ಮತ್ತು ವ್ಯಾಲಿನ್ ಆಗತ್ಯ ಅಮೈನೋ ಆಮ್ಲಗಳು. ಉಳಿದವು ಆಗತ್ಯೇತರ ಅಮೈನೋ ಆಮ್ಲಗಳು. ಇಲಿಗಳ ಬೆಳೆವಣಿಗೆಗೆ ಹತ್ತು ಆಗತ್ಯ ಅಮೈನೋ ಆಮ್ಲಗಳು ಬೇಕು. ಚಿಕ್ಕ ಮಕ್ಕಳ ಬೆಳೆವಣಿಗೆಗೆ ಆರ್ಜಿನಿನ್ ಹೊರತು ಉಳಿದ ಒಂಬತ್ತು ಆಗತ್ಯ ಆಮ್ಲಗಳೂ, ವಯಸ್ಕರ ಸಂರಕ್ಷಣೆಗೆ ಅರ್ಜಿನಿನ್ ಮತ್ತು ಹಿಸ್ಟಿಡೀನ್ ಬಿಟ್ಟು ಉಳಿದ ಎಂಟು ಆಗತ್ಯ ಅಮೈನೋ ಆಮ್ಲಗಳೂ ಬೇಕು. ಆಗತ್ಯೇತರ ಆಮ್ಲಗಳು ನಮ್ಮ ದೇಹಕ್ಕೆ ಬೇಡವೆಂದು ಅರ್ಥವಲ್ಲ. ಇವು ದೇಹದಲ್ಲೇ ಸಂಶ್ಲೇಷಿತವಾಗುವುದರಿಂದ ಇವನ್ನು ಆಹಾರದ ಮೂಲಕ ಒದಗಿಸಬೇಕಾದ ಆಗತ್ಯವಿಲ್ಲ. ಆಗತ್ಯ ಅಮೈನೋ ಆಮ್ಲಗಳು ದೇಹದಲ್ಲಿ ಸಾಕಷ್ಟು ವೇಗದಲ್ಲಿ ಸಂಶ್ಲೇಷಣೆಯಾಗದ್ದರಿಂದ ಇವನ್ನು ಆಹಾರದ ಮೂಲಕವೇ ಪೂರೈಸಬೇಕಾಗುತ್ತದೆ. ಒಟ್ಟಿನಲ್ಲಿ ದೇಹದಲ್ಲಿರುವ ಪ್ರೋಟೀನುಗಳ ರಚನೆಗೆ ಆಗತ್ಯ ಮತ್ತು ಆಗತ್ಯೇತರ ಅಮೈನೋ ಆಮ್ಲಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗಬೇಕು. ಆಹಾರದಲ್ಲಿ ಇವುಗಳ ಅಂಶ ೪:೧ ಇರಲೇಬೇಕು. ಆಹಾರದಿಂದ ಲಭಿಸುವ ಪ್ರೋಟೀನಿನಲ್ಲಿ ಶೇ. ೧೬ ರಷ್ಟು ಸಾರಜನಕವಿದೆಯೆಂದು ಗೊತ್ತಾಗಿದೆ.

ಪ್ರೋಟೀನುಗಳ ಮೌಲ್ಯವನ್ನು ತಿಳಿಯಲು ಅನುಸರಿಸುವ ವಿಧಾನಗಳು ಮೂರು: ೧. ಜೈವಿಕ ಮೌಲ್ಯ. ೨. ಪ್ರೋಟೀನು ದಕ್ಷತಾ ಪ್ರಮಾಣ, ೩. ಪ್ರೋಟೀನ್ ಉಪಯೋಗಾಂಶ.

ಜೈವಿಕ ಮೌಲ್ಯ : ಜೀವ ಸಂರಕ್ಷಣೆಗೂ, ದೇಹದ ಬೆಳೆವಣಿಗೆಗೂ ಲಭ್ಯವಾಗುವ ಪ್ರೋಟೀನಿನ ಶೇಕಡಾಂಶವಿದು. ಇದನ್ನು ನಿರ್ಧರಿಸಲು ೨೮ ದಿವಸಗಳ ವಯಸ್ಸಿನ ಇಲಿಗಳನ್ನು ಪ್ರಯೋಗಕ್ಕೆ ಒಳಪಡಿಸುತ್ತಾರೆ. ಇವನ್ನು ಎರಡು ಗುಂಪುಗಳಾಗಿ ವಿಂಗಡಿಸಿ, ಒಂದು ಗುಂಪಿಗೆ ಪ್ರೋಟೀನ್‌ರಹಿತ ಆಹಾರವನ್ನೂ, ಮತ್ತೊಂದು ಗುಂಪಿಗೆ ಶೇ. ೧೦ ಭಾಗ ಪ್ರೋಟೀನ್‌ಯುಕ್ತ ಆಹಾರವನ್ನೂ ೧೦ ದಿವಸಗಳ ಕಾಲ ಕೊಟ್ಟು ಇಲಿಗಳ ಮೂತ್ರ ಮತ್ತು ಮಲದಲ್ಲಿ ಹೊರಬರುವ ಸಾರಜನಕಾಂಶವನ್ನು ಅಳೆದು ಮುಂದಿನ ಸೂತ್ರಾನುಸಾರ ಜೈವಿಕ ಮೌಲ್ಯವನ್ನು ಗಣಿಸುತ್ತಾರೆ.

$$[\text{ಜೈಮೌ}] = \frac{[\text{ಜೀಸಾ}] - [\text{ಉನಸಾ}]}{[\text{ಜೀಸಾಪ್ರ}]} \times ೧೦೦$$

[ಜೀಸಾ] = [ಸೇಸಾಪ್ರ] – [ಪ್ರೊಸೇಮ + ಪ್ರೊರಮ]

[ಉನಸಾ] = [ಪ್ರೊಸೇಮೂ] – [ಪ್ರೊರಮೂ]

(ಜೈಮೌ=ಜೈವಿಕ ಮೌಲ್ಯ. ಜೀಸಾ=ಜೀರ್ಣವಾದ ಸಾರಜನಕ. ಉನಸಾ= ಉಪಾಪಚಯ ಕ್ರಿಯೆಯಲ್ಲಿ ನಷ್ಟವಾದ ಸಾರಜನಕದ ಪ್ರಮಾಣ. ಜೀಸಾಪ್ರ = ಜೀರ್ಣವಾದ ಸಾರಜನಕದ ಪ್ರಮಾಣ, ಪ್ರೊಸೇಮ=ಪ್ರೋಟೀನ್‌ಯುಕ್ತ ಆಹಾರ ಸೇವಿಸಿದಾಗ ವಿಸರ್ಜಿಸಿದ ಮಲದಲ್ಲಿರುವ ಸಾರಜನಕದ ಪ್ರಮಾಣ, ಪ್ರೊರಮ=ಪ್ರೋಟೀನ್ ರಹಿತ ಆಹಾರ ಸೇವನೆಯಾದಾಗ ವಿಸರ್ಜಿಸಿದ ಮಲದಲ್ಲಿರುವ ಸಾರಜನಕದ ಪ್ರಮಾಣ, ಪ್ರೊಸೇಮೂ=ಪ್ರೋಟೀನ್‌ಯುಕ್ತ ಆಹಾರ ಸೇವನೆಯಾದಾಗ ವಿಸರ್ಜಿಸಿದ ಮೂತ್ರದಲ್ಲಿರುವ ಸಾರಜನಕದ ಪ್ರಮಾಣ. ಪ್ರೊಸಾಮೂ=ಪ್ರೋಟೀನ್‌ರಹಿತ ಆಹಾರ ಸೇವನೆಯಾದಾಗ ವಿಸರ್ಜಿಸಿದ ಮೂತ್ರದಲ್ಲಿರುವ ಸಾರಜನಕದ ಪ್ರಮಾಣ).

ಪ್ರೋಟೀನ್‌ದಕ್ಷತಾ ಪ್ರಮಾಣ : ಇದು ಇಲಿಗಳ ಬೆಳೆವಣಿಗೆಯನ್ನು ಅವಲಂಬಿಸಿದೆ. ಈ ಪ್ರಯೋಗಕ್ಕೆ ೨೧ ದಿವಸಗಳ ವಯಸ್ಸಿನ ಇಲಿಗಳನ್ನು ಉಪಯೋಗಿಸುತ್ತಾರೆ. ಇವುಗಳಿಗೆ ಶೇ. ೧೦ ಭಾಗ ಪ್ರೋಟೀನ್‌ಯುಕ್ತ ಆಹಾರವನ್ನು ೨೮ ದಿವಸಗಳ ಕಾಲ ಕೊಟ್ಟು ಪರೀಕ್ಷಿಸುತ್ತಾರೆ. ಪ್ರತಿನಿತ್ಯ ಇಲಿಗಳು ಸೇವಿಸಿದ ಆಹಾರದ ತೂಕ ಮತ್ತು ಇಲಿಗಳ ತೂಕಮಾಡಿ, ಈ ಕೆಳಗಿನ ಸೂತ್ರದ ಸಹಾಯದಿಂದ ಪ್ರೋಟೀನಿನ ಪ್ರಮಾಣ ಕಂಡು ಹಿಡಿಯುತ್ತಾರೆ.

$$\text{ದಕ್ಷತಾ ಪ್ರಮಾಣ} = \frac{\text{ದೇಹದ ತೂಕದಲ್ಲಿ ಹೆಚ್ಚಳ ಗ್ರಾಂ}}{\text{ಸೇವಿಸಿದ ಪ್ರೋಟೀನಿನ ಪ್ರಮಾಣ}}$$

ನಿವ್ವಳ ಪ್ರೋಟೀನ್ ಉಪಯೋಗಾಂಶ : ದೇಹದಲ್ಲಿ ಎಷ್ಟು ಪ್ರೋಟೀನ್ ಉಪಯೋಗವಾಗುತ್ತದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಈ ಪ್ರಯೋಗಕ್ಕೆ ೨೮ ದಿವಸ ವಯಸ್ಸಿನ ಇಲಿಗಳನ್ನು ಎ ರಡು ತಂಡಗಳಾಗಿ ವಿಂಗಡಿಸುತ್ತಾರೆ. ಒಂದು ತಂಡಕ್ಕೆ ಪ್ರೋಟೀನ್‌ರಹಿತ ಆಹಾರವನ್ನೂ ಮತ್ತೊಂದು ತಂಡಕ್ಕೆ ಶೇ. ೧೦ ಭಾಗ ಪ್ರೋಟೀನ್‌ರಹಿತ ಆಹಾರವನ್ನೂ ೧೦ ದಿವಸಗಳ ಕಾಲ ಕೊಡುತ್ತಾರೆ. ಕೊಟ್ಟ ಆಹಾರದ ಪ್ರಮಾಣವನ್ನು ಅಳೆಯುತ್ತಾರೆ. ೧೦ ದಿವಸಗಳಾದ ಬಳಿಕ ಇಲಿಗಳನ್ನು ಕೊಂದು, ಅವುಗಳ ಶರೀರದಲ್ಲಿರುವ ಸಾರಜನಕದ ಮೊತ್ತ ಕಂಡುಹಿಡಿದು ಈ ಕೆಳಗಿನ ಸೂತ್ರದ ಸಹಾಯದಿಂದ ಪ್ರೋಟೀನಿನ ನಿವ್ವಳ ಉಪಯೋಗಾಂಶ ಗಣಿಸುತ್ತಾರೆ.

[ಪ್ರೊನಿಉ] = [ಜೀಸಅಂ] X [ಜೈಮೌ] ÷೧೦೦

ಪ್ರೊನಿಉ = ಪ್ರೋಟೀನಿನ ಉಪಯೋಗಾಂಶ, ಜೀಸಅಂ = ಜೀರ್ಣವಾಗುವಿಕೆ ಸಹಕಾರಕ ಅಂಶ, ಜೈಮೌ = ಜೈವಿಕ ಮೌಲ್ಯ.

$$[\text{ಜೀಸಅಂ}] = \frac{\{[\text{ಸೇಸಾಅಂ}]-[\text{ಜೀನಸಾಅಂ}]\} \times ೧೦೦}{[\text{ಸೇಸಾಅಂ}]}$$

ಸೇಸಾಅಂ = ಸೇವಿಸಿದ ಸಾರಜನಕ ಅಂಶ, ಜೀನಸಾಅಂ = ಜೀರ್ಣಕ್ರಿಯೆಯಲ್ಲಿ ನಷ್ಟವಾದ ಸಾರಜನಕ ಅಂಶ.

ಹೀಗೆ ಶೋಧಿಸಿ ತಿಳಿದ ಕೆಲವು ಆಹಾರಗಳ ಪ್ರೋಟೀನ್‌ಮೌಲ್ಯವನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

ಆಹಾರದಲ್ಲಿರುವ ಪ್ರೋಟೀನಿನ ಪೋಷಕ ಮೌಲ್ಯ

| ಆಹಾರ | ಪ್ರೋಟೀನಿನ ದಕ್ಷತಾ ಪ್ರಮಾಣ | ಜೈವಿಕ ಮೌಲ್ಯ | ಪ್ರೋಟಿನಿನ ನಿವ್ವಳ ಉಪಯೋಗ |
|---|---|---|---|
| ಮೊಟ್ಟೆ ... | ೪೫ ... | ೯೬ ... | ೯ |
| ಹಾಲು (ಹಸು) ... | ೩ ... | ೯೦ ... | ೫೫ |
| ಮಾಂಸ ... | ೨೮ ... | ೮೦ ... | ೬೭ |
| ಮೀನು ... | ೩ ... | ೮೫ ... | ೮ |
| ಅಕ್ಕಿ ... | ೨ ... | ೮೦ ... | ೫೭ |
| ಗೋದಿ ... | ೧೭ ... | ೬೫ ... | ೪೭ |
| ಕಡಲೇ ಬೇಳೆ ... | ೧೭ ... | ೬೫ ... | ೪೭ |
| ಒಣಗಿದ ಬಟಾಣಿ ... | ೧೬ ... | ೫೭ ... | ೪೫ |

ವಿವಿಧ ಆಹಾರದಲ್ಲಿರುವ ಅಮೈನೋ ಆಮ್ಲಗಳು ಪರಿಮಿತವಾಗಿರುವುದೇ ಅದರ ಪ್ರೋಟೀನ್ ಮೌಲ್ಯ ಬೇರೆ ಆಗಿರುವುದಕ್ಕೆ ಕಾರಣ. ಮಿಶ್ರಾಹಾರವನ್ನು ತೆಗೆದುಕೊಳ್ಳುವುದರಿಂದ ಪ್ರೋಟೀನಿನ ಪೋಷಕ ಮೌಲ್ಯ ಉತ್ತಮವಾಗುತ್ತದೆ. ಏಕೆಂದರೆ, ಒಂದು ಆಹಾರದಲ್ಲಿರುವ ಒಂದೆರಡು ಆಗತ್ಯ ಅಮೈನೋ ಆಮ್ಲಗಳ ಕೊರತೆಯನ್ನು ಮತ್ತೊಂದು ಆಹಾರ ತುಂಬಿಕೊಡುತ್ತದೆ. ಸಸ್ಯಾಹಾರಿಗಳಿಗೆ ಮಿಶ್ರಾಹಾರ ಸೇವನೆಪೂರಕ ಪ್ರಮಾಣವನ್ನು ಉಂಟುಮಾಡುತ್ತದೆ. ಉದಾ: ಧಾನ್ಯಗಳನ್ನು (ಅಕ್ಕಿ, ಗೋದಿ, ಜೋಳ)

ಬೇಳೆಕಾಳುಗಳೊಂದಿಗೆ (ತೊಗರಿ, ಅವರೆ, ಬಟಾಣಿ,) ಮಿಶ್ರಮಾಡಿ ಸೇವಿಸುವುದು. ಧಾನ್ಯಗಳ ಜೊತೆಗೆ ಅಥವಾ ಮಾಂಸಾಹಾರವನ್ನು ಮಿಶ್ರ ಮಾಡಿದರು ಪೂರಕ ಪರಿಣಾಮ ಉಂಟಾಗುತ್ತದೆ. ಸಸ್ಯಾಹಾರಿಗಳು ಯಾವ ಧಾನ್ಯವನ್ನೇ ಆಗಲಿ ಬೇಳೆಕಾಳುಗಳನ್ನೆ ಆಗಲಿ, ಪ್ರತ್ಯೇಕವಾಗಿ ಸೇವಿಸುವುದಕ್ಕಿಂತ ಮಿಶ್ರಮಾಡಿ ಸೇವಿಸಿದರೆ ಅವರಿಗೆ ಉತ್ತಮ ಮಟ್ಟದ ಪ್ರೋಟೀನ್ ಒದಗುತ್ತದೆ.

ದೇಹದಲ್ಲಿ ಪ್ರೋಟೀನಿನ ಪಾತ್ರ : ನಮ್ಮ ದೇಹದಲ್ಲಿ ಸಾವಿರಾರು ಕೋಶಗಳ ರಚನೆಗೆ ಪ್ರೋಟೀನ್ ಮೂಲಭೂತ ವಸ್ತು. ಮಕ್ಕಳ ಬೆಳವಣಿಗೆಗೆ ಇದು ಅವಶ್ಯಕ. ಸಾಕಷ್ಟು ಪ್ರೋಟೀನ್ ದೊರೆಯದಿದ್ದರೆ ಮಕ್ಕಳಲ್ಲಿ ಮಿದುಳಿನ ಕೋಶಗಳು ಸರಿಯಾಗಿ ಬೆಳೆಯದೆ ಬುದ್ಧಿ ಸಾಮರ್ಥ್ಯ ಕಡಿಮೆ ಆಗುವ ಸಾಧ್ಯತೆ ಇದೆ. ರಕ್ತದಲ್ಲಿರುವ ಪ್ರೋಟೀನ್ ಕಣಗಳು ದ್ರವಗಳ ಒತ್ತಡದ ಸಮತೋಲನಕ್ಕೆ ಸಹಕಾರಿಗಳಾಗಿವೆ. ಇದಲ್ಲದೆ ಪ್ರೋಟೀನ್ ಕಣಗಳು ಬಫರ್ ವಸ್ತುಗಳಾಗಿ ಆಮ್ಲ ಮತ್ತು ಪ್ರತ್ಯಾಮ್ಲಗಳ ಸಮತೋಲನಕ್ಕೆ ಸಹಾಯಮಾಡುತ್ತವೆ. ಕೆಲವು ಅಮೈನೋ ಆಮ್ಲಗಳು ಜೀವಸತ್ವಗಳ ತಯಾರಿಕೆಯಲ್ಲಿ ಪಾಲ್ಗೊಳ್ಳುತ್ತವೆ. ಉದಾ: ಟ್ರಿಪ್ಟೊಫೇನ್ ಅಮೈನೋ ಆಮ್ಲ ದೇಹದಲ್ಲಿ ನಯಾಸಿನ್ ಆಗಿ ಪರಿವರ್ತನೆಗೊಳ್ಳುತ್ತದೆ. ಫೋಲಿಕ್ ಆಮ್ಲ ನಿರ್ಮಾಣವಾಗಲು ಗ್ಲುಟಾಮಿಕ್ ಬೇಕಾಗುತ್ತದೆ. ಪ್ರೋಟೀನ್ ಮತ್ತು ದೇಹಕ್ಕೆ ಶಕ್ತಿಯನ್ನು ಸಹ ಒದಗಿಸುತ್ತದೆ. ಒಂದು ಗ್ರಾಂ ಪ್ರೋಟೀನ್ ಸು. ೪ ಕಿಲೋ ಕ್ಯಾಲೋರಿ ಶಕ್ತಿ ಒದಗಿಸುತ್ತದೆ.

ಪ್ರೋಟೀನಿನ ಕೊರತೆಯಿಂದ ಅನೇಕ ರೋಗಗಳು ಉಂಟಾಗುವ ಸಂಭವವಿದೆ. ಪ್ರಮುಖವಾಗಿ ಕಂಡುಬರುವ ರೋಗದ ಲಕ್ಷಣಗಳ ಪೈಕಿ ನಾಲ್ಕನ್ನು ಗುರುತಿಸಲಾಗಿದೆ. ಎಡೀಮಾ, ಪೆಲ್ಲಾಗ್ರ, ಕ್ವಾಷಿಯೊರ್ಕರ್ ಮತ್ತು ಯಕೃತ್ತಿನ ರೋಗ. ಪ್ರೋಟೀನಿನ ಕೊರತೆ ಶಕ್ತಿಯ ಕೊರತೆಯೊಂದಿಗೆ ಸಂಭವಿಸಬಹುದು. ಇದಕ್ಕೆ ಪ್ರೋಟೀನ್ ಕ್ಯಾಲೋರಿ ನ್ಯೂನಪೋಷಣೆ ಎಂದು ಹೆಸರು. ಪ್ರೋಟೀನಿನ ನ್ಯೂನತೆ ಅಧಿಕವಾದಾಗ 'ಕ್ವಾಷಿಯೋರ್ಕರ್' ರೋಗ ಸ್ಥಿತಿ ಉಂಟಾಗುತ್ತದೆ. ಈ ಸ್ಥಿತಿ ಸಾಮಾನ್ಯವಾಗಿ ೧ ರಿಂದ ೫ ವರ್ಷ ಒಳಗಿನ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ಆಗ ಮಗುವಿನ ಬೆಳವಣಿಗೆ ಕುಂಠಿತವಾಗುತ್ತದೆ. ನಿರಾಸಕ್ತಿ, ಮಾನಸಿಕಹಿಂಸೆ, ದೇಹದ ಅಂಗಾಂಶಗಳಲ್ಲಿ ನೀರುತುಂಬಿ ಮುಖ, ಕೈಕಾಲು ದುಂಡಗಾಗುತ್ತವೆ. ಕೂದಲಿನ ಮತ್ತು ಚರ್ಮದ ಹೊಳಪು ಇಲ್ಲವಾಗುತ್ತದೆ. ಪ್ರೋಟೀನ್ ಕ್ಯಾಲೋರಿ ನ್ಯೂನ ಪೋಷಣೆ ಆದಾಗ 'ಮರಾಸ್ಮಸ್' ಎಂಬ ರೋಗ ಸ್ಥಿತಿ ಉಂಟಾಗುತ್ತದೆ. ಸಾಮಾನ್ಯವಾಗಿ ಒಂದು ವರ್ಷದೊಳಗಿನ ಮಕ್ಕಳಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಆ ಮಗುವಿನ ಬೆಳವಣಿಗೆ ಕುಂಠಿತವಾಗಿ ದೇಹ ಕ್ಷೀಣವಾಗುತ್ತದೆ ಮತ್ತು ಚ'ರ್ಮ ಒಣಗಿ ಸುಕ್ಕುಗಟ್ಟಿ ದೇಹಕ್ಕೆ ಅಂಟಿಕೊಂಡಿರುತ್ತದೆ. ಆದರೆ ದೇಹದ ಅಂಗಾಂಶಗಳಲ್ಲಿ ನೀರು ತುಂಬಿರುವುದಿಲ್ಲ. ಈ ಎರಡು ಸ್ಥಿತಿಗಳಲ್ಲಿ ದೈಹಿಕ ಬದಲಾವಣೆಗಳ ಜೊತೆಗೆ ಅನೇಕ ಜೈವಿಕ ಕ್ರಿಯೆಗಳು ಕೂಡ ಅಸಹಜವಾಗಿರುತ್ತವೆ. ಉತ್ತಮ ಪ್ರೋಟೀನನ್ನು ಶಕ್ತಿಯುತ ಆಹಾರವನ್ನು ಉಳಿದೆಲ್ಲ ಪೋಷಕಗಳೊಡನೆ ಸೇವಿಸಿ ಈ ಸ್ಥಿತಿಗಳನ್ನು ನಿವಾರಿಸಬಹುದು. ದೇಹಕ್ಕೆ ಅಗತ್ಯವಾಗಿ ಬೇಕಾಗುವ ಪ್ರೋಟೀನಿನ ಪ್ರಮಾಣವನ್ನು ನಿರ್ಧರಿಸಲು ಸಾರಜನಕ ಸಮತೋಲನ ಮತ್ತು ಇತರ ಪ್ರಯೋಗಗಳು ನಡೆದಿವೆ. ಇವುಗಳ ಆಧಾರದ ಮೇಲೆ ೧೯೭೩ರಲ್ಲಿ ಆಹಾರ ಮತ್ತು ಕೃಷಿ ಸಂಸ್ಥೆ ಮತ್ತು ವಿಶ್ವ ಆರೋಗ್ಯ ಸಂಸ್ಥೆಯವರು ಪ್ರೋಟೀನ್ ಸೇವನೆ ಎಷ್ಟಿರಬೇಕೆಂಬುದನ್ನು ಸೂಚಿಸಲು ಪ್ರೋಟೀನ್ ಸೇವನೆಯ ಸುರಕ್ಷಿತ ಮಟ್ಟ ಸೂಚಿಸುವ ಪಟ್ಟಿ ತಯಾರಿಸಿದ್ದಾರೆ.

ಹಾಲು ಅಥವಾ ಮೊಟ್ಟೆಯ ಪ್ರೋಟೀನ್ ಸೇವನೆಯ ಸುರಕ್ಷಿತ ಮಟ್ಟ

| ವಯಸ್ಸು | ವ್ಯಕ್ತಿಯ ೧ ಕಿಗ್ರಾಂ ತೂಕಕ್ಕೆ ಪ್ರತಿ ದಿನ ಬೇಕಾಗುವ ಪ್ರೋಟೀನಿನ ಪ್ರಮಾಣ (ಗ್ರಾಂ) | |
|---|---|---|
| ತಿಂಗಳು | | |
| < ೩ | ೨.೪ | |
| ೩-೬ | ೧.೮೫ | |
| ೬-೯ | ೧.೬೨ | |
| ೯-೧೨ | ೧.೪೪ | |
| ವರ್ಷ | | |
| ೧ | ೧.೨೭ | |
| ೨ | ೧.೧೯ | |
| ೩ | ೧.೧೨ | |
| ೪ | ೧.೦೭ | |
| ೫ | ೧.೦೧ | |
| ೬ | ೦.೯೮ | |
| ೭ | ೦.೯೨ | |
| ೮ | ೦.೮೭ | |
| ೯ | ೦.೮೫ | |
| | ಗಂಡಸರು | ಹೆಂಗಸರು |
| ೧೦ | ೦.೮೨ | ೦.೮೧ |
| ೧೧ | ೦.೮೧ | ೦.೭೬ |
| ೧೨ | ೦.೭೮ | ೦.೭೪ |
| ೧೩ | ೦.೭೭ | ೦.೬೮ |
| ೧೪ | ೦.೭೨ | ೦.೬೨ |
| ೧೫ | ೦.೬೭ | ೦.೫೯ |
| ೧೬ | ೦.೬೪ | ೦.೫೮ |
| ೧೭ | ೦.೬೧ | ೦.೫೭ |
| ವಯಸ್ಕರು | ೦.೫೭ | ೦.೫೨ |

ಉತ್ತಮ ಪ್ರೋಟೀನ್‌ಗಳಿರುವ ಹಾಲು ಅಥವಾ ಮೊಟ್ಟೆ ಸೇವನೆಯ ಸುರಕ್ಷಿತ ಮಟ್ಟವನ್ನು ಈ ಪಟ್ಟಿಯಲ್ಲಿ ಸೂಚಿಸಿದೆ. ಇತರ ಆಹಾರದಲ್ಲಿ ಪ್ರೋಟೀನುಗಳ ಸೇವನೆಯ ಸುರಕ್ಷಿತ ಮಟ್ಟ ಆ ಪ್ರೋಟೀನುಗಳ ಪೋಷಣೆ ಮೌಲ್ಯಕ್ಕೆ ಅನುಗುಣವಾಗಿರುತ್ತದೆ. ಗರ್ಭಿಣಿ ಮತ್ತು ಮೊಲೆಯೂಡಿಸುವ ಮಹಿಳೆಗೆ ಪ್ರೋಟೀನಿನ ಪ್ರಮಾಣ ಪಟ್ಟಿಯಲ್ಲಿ ಸೂಚಿಸಿರುವುದಕ್ಕಿಂತ ಹೆಚ್ಚಾಗಿರಬೇಕು.

ಪ್ರೋಟೀನ್ ಅಕರಗಳು: ಪ್ರಾಣಿಜನ್ಯ ಆಹಾರಗಳಾದ: ಮೊಟ್ಟೆ, ಮಾಂಸ, ಮೀನು ಮತ್ತು ಹಾಲುಗಳಲ್ಲಿ, ಸಸ್ಯಜನ್ಯ ಆಹಾರಗಳಾದ: ತೊಗರಿ, ಕಡಲೆ, ಹೆಸರು, ಉದ್ದು ಇವುಗಳಲ್ಲಿ ಪ್ರೋಟೀನ್ ಅಧಿಕ ಪ್ರಮಾಣದಲ್ಲಿ ದೊರೆಯುತ್ತದೆ. ಎಣ್ಣೆ ಬೀಜಗಳಾದ: ಕಡಲೆಕಾಯಿ, ಗೋಡಂಬಿ ಮತ್ತು ಬಾದಾಮಿಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿದೆ. ಪೋಷಕ ಮೌಲ್ಯದ ದೃಷ್ಟಿಯಿಂದ ಸಸ್ಯಜನ್ಯ ಆಹಾರಗಳಲ್ಲಿ ಲಭಿಸುವ ಪ್ರೋಟೀನ್ ಪ್ರಾಣಿಜನ್ಯ ಆಹಾರಗಳಲ್ಲಿ ಲಭಿಸುವ ಪ್ರೋಟೀನಿಗಿಂತ ಕಡಿಮೆ. ಮಿಶ್ರಾಹಾರಗಳನ್ನು ಸೇವಿಸುವುದರಿಂದ ಪ್ರೋಟೀನಿನ ಪೋಷಕ, ಮೌಲ್ಯವನ್ನು ವೃದ್ಧಿಗೊಳಿಸಬಹುದು. ನಾವು ಸಾಮಾನ್ಯವಾಗಿ ಸೇವಿಸುವ ಆಹಾರದಲ್ಲಿರುವ ಪ್ರೋಟೀನಿನ ಪ್ರಮಾಣವನ್ನು ಪಟ್ಟಿಯಲ್ಲಿ ಕೊಟ್ಟಿದೆ.

ಮುಖ್ಯ ಆಹಾರಗಳಲ್ಲಿರುವ ಪ್ರೋಟೀನಿನ ಪ್ರಮಾಣ

| ಆಹಾರ | ೧೦೦ ಗ್ರಾಂ ಆಹಾರದಲ್ಲಿರುವ ಪ್ರೋಟೀನ್ (ಗ್ರಾಂ) |
|---|---|
| ಧಾನ್ಯಗಳು (ಅಕ್ಕಿ, ಗೋದಿ/ಇತ್ಯಾದಿ) | ೬-೧೪ |
| ಬೇಳೆಕಾಳುಗಳು (ತೊಗರಿ ಕಡಲೆ/ಉದ್ದು ಇತ್ಯಾದಿ) | ೧೭-೨೪ |
| ಎಣ್ಣೆ ಕಾಳುಗಳು | ೧೭-೪೦ |
| ಹಿಂಡಿ | ೪೫-೫೫ |
| ಮೊಟ್ಟೆ | ೧೩ |
| ಹಾಲು | ೩-೫ |
| ಮೀನು | ೧೭-೨೦ |
| ಮಾಂಸ | ೧೭-೨೨ |

ಪ್ರೋಟೀನಿನ ಬೇರ್ಪಡೆ: ಪ್ರೋಟೀನುಗಳನ್ನು ಶುದ್ಧರೂಪದಲ್ಲಿ ಪಡೆಯಲು ಯಾವುದೇ ಜೀವಿಯನ್ನು ಮೂಲವಸ್ತುವಾಗಿ ಬಳಸಬಹುದು. ಈ ಮೂಲ ವಸ್ತುವಿನ ಪ್ರಕೃತಿಯನ್ನು ಅನುಸರಿಸಿ ಅದಕ್ಕೆ ತಕ್ಕ ಪ್ರಯೋಗವನ್ನು ರೂಪಿಸಬೇಕು. ಉದಾ: ಸಸ್ಯಮೂಲಗಳಿಂದ ದೊರೆಯುವ ಕೋಶಗಳ ಹೊರಹೊದಿಕೆಯನ್ನು ಸುಲಭವಾಗಿ ತೆಗೆಯುವುದು ಸಾಧ್ಯವಿಲ್ಲ. ಆದ್ದರಿಂದ ಗಾಜಿನ ಪುಡಿ ಅಥವಾ ಶುದ್ಧೀಕರಿಸಿದ ಮರಳು ಪುಡಿಯೊಂದಿಗೆ ಸಸ್ಯದ ಅಂಗಾಂಶವನ್ನು ಜಜ್ಜಿ ನೀರಿನಿಂದ ಅಥವಾ ಬಫರ್ ದ್ರಾವಣದಿಂದ ಪ್ರೋಟೀನನ್ನು ಬೇರ್ಪಡಿಸಬೇಕು. ಪ್ರಾಣಿಕೋಶಗಳ ಹೊರಪೊರೆ ಮೃದುವಾಗಿರುವುದರಿಂದ ಅದನ್ನು ಒಂದಿಕೆ ಯಂತ್ರದಲ್ಲಿ (ಬ್ಲೆಂಡರ್) ಕತ್ತರಿಸಿ ಪ್ರೋಟೀನನ್ನು ಬಿಡುಗಡೆ ಮಾಡಬಹುದು.

ಅಂಗಾಂಶದ ಕೊಶಗಳನ್ನು ವಿಭಜಿಸಿ ಪ್ರೋಟೀನುಗಳನ್ನು ಬಿಡುಗಡೆ ಮಾಡಿ, ದ್ರಾವಣದಲ್ಲಿ ವಿಲೀನಮಾಡುವ ಸಂಸ್ಕರಣೆಗೆ ಹೊಮೊಜಿನೈಸೇಶನ್ ಎಂದು ಹೆಸರು. ಪ್ರೊಟೀನುಗಳ ಬೇರ್ಪಡೆಯಲ್ಲಿ ಇದು ಮೊದಲನೆಯ ಹಂತ.

ಹೀಗೆ ಪಡೆದ ದ್ರಾವಣವನ್ನು ಮುಂದೆ ಭ್ರಮಣಯಂತ್ರದಲ್ಲಿ ಅಧಿಕವೇಗದಿಂದ ಆವರ್ತಿಸಿ ವಿಲೀನವಾಗಿರದ ಕೋಶಪೊರೆ, ವಿಭಜನೆಯಾಗಿರುವ ಕಣಗಳು ಮತ್ತು ಅನಪೇಕ್ಷಿತ ವಸ್ತುಗಳನ್ನು ಒತ್ತರಿಸಿ ತಿಳಿ ದ್ರಾವಣವನ್ನು ಬೇರ್ಪಡಿಸಬೇಕು. ಮೇಲಿನ ತಿಳಿಯಲ್ಲಿ ಪ್ರೊಟೀನ್ ಇರುತ್ತದೆ. ಇದನ್ನು ಶುದ್ಧಗೊಳಿಸಬೇಕು. ಈ ಎರಡನೆಯ ಗುಣವನ್ನು ಬಳಸಿ ಪ್ರೊಟೀನುಗಳನ್ನು ದ್ರಾವಣದಿಂದ ಬೇರ್ಪಡಿಸಬಹುದು. ಅಮೊನಿಯಮ್ ಸಲ್ಫೇಟ್ ನೀರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿಲೀನವಾಗುವುದರಿಂದ ಪ್ರಯೋಗಶಾಲೆಯಲ್ಲಿ ಇದನ್ನು ಬಳಸಲಾಗುತ್ತಿದೆ. ಮಿಶ್ರಣದಲ್ಲಿರುವ ಪ್ರೊಟೀನುಗಳು ಅಮೊಲ್ಯ ಸಲ್ಫೇಟಿನ ಒಂದೇ ಸಾರದಲ್ಲಿ ಒತ್ತರಿಸದೆ, ತಮ್ಮ ಗುಣಗಳ ಪ್ರಕಾರ ವಿವಿಧ ಸಾರಗಳಲ್ಲಿ ಒತ್ತರಿಸುತ್ತವೆ. ಉದಾ: ಪ್ರತಿ ಶತ 30 ಪ್ರರ್ಯಾಪ್ತ ದ್ರಾವಣದಲ್ಲಿ ಒಂದು ಪ್ರೊಟೀನ್ ಒತ್ತರಿಸುತ್ತದೆ. ಆದರೆ ಇನ್ನೊಂದು ಪ್ರೊಟೀನ್ ಪ್ರತಿಶತ 50 ಪರ್ಯಾಪ್ತ ದ್ರಾವಣದಲ್ಲಿ ಒತ್ತರಿಸಬಹುದು. ಆದ್ದರಿಂದ ಪ್ರೊಟೀನುಗಳನ್ನು ಶುದ್ಧಮಾಡುವ ಕಾರ್ಯದಲ್ಲಿ ಈ ಹಂತ ಬಹಳ ಮುಖ್ಯವಾದದ್ದು. ಅಪೇಕ್ಷಿತ ಪ್ರೊಟೀನ್ ಒತ್ತರಿಸುವ ಸಾರವನ್ನು ಪ್ರಯೋಗದ ಮೂಲಕ ತಿಳಿದು ಅದನ್ನು ಮಾತ್ರ ಒತ್ತರಿಸಿ ಭ್ರಮಣಯಂತ್ರದಲ್ಲಿ ಬೇರ್ಪಡಿಸಿಕೊಳ್ಳಬಹುದು. ಇದು ಎರಡನೆಯ ಹಂತ.

ಶುದ್ಧೀಕರಣ: ಹೀಗೆ ದೊರೆತ ಪ್ರೊಟೀನ್‌ನ್ನು ಇನ್ನಷ್ಟು ಶುದ್ಧೀಕರಿಸಲು ಕಾರ್ಬಾಕ್ಸಿ ಮೀಥೈಲ್ ಸೆಲ್ಯುಲೊಸ್ ಮತ್ತು ಡೈ ಈಥೈನ್ ಅಮೈನೊ ಈಥೈಲ್ ಸೆಲ್ಯುಲೋಸುಗಳೆಂಬ ಸೆಲ್ಯುಲೋಸ್ ಉತ್ಪನ್ನಗಳನ್ನು ಬಳಸಬೇಕು. ಅಪೇಕ್ಷಿತ ಪ್ರೊಟೀನಿನ ದ್ರಾವಣವನ್ನು ಈ ವಸ್ತುಗಳ ಸ್ತಂಭಗಳ ಮೂಲಕ ಅನುಕೂಲ ಬಫರಿನಿಂದ ಸ್ಥಪನ ಮಾಡಿ (ಎಲ್ಯೂಟ್) ಶುದ್ಧಗೊಳಿಸಬಹುದು. ಪ್ರಯೋಗಶಾಲೆಯಲ್ಲಿ ನಡೆಸುವ ಕ್ರಮದ ಪ್ರಕಾರ ಇವೆರಡು ಅಯಾನ್ ವಿನಿಮಯ ವಸ್ತುಗಳ ಪೈಕಿ ಒಂದನ್ನು ಆಯ್ದು ಸ್ತಂಭ ತಯಾರಿಸಿ ಅನುಕೂಲ ಬಫರ್‌ನಿಂದ ತೊಳೆದು ಸಮಾನ ಸ್ಥಿತಿಗೆ (ಈಕ್ವಿಲಿಬ್ರೇಟ್) ತರಬೇಕು. ಅನಂತರ ಭಾಗಶಃ ಶುದ್ಧಗೊಂಡ ಅಪೇಕ್ಷಿತ ಪ್ರೊಟೀನನ್ನು ಸ್ತಂಭದ ಮೂಲಕ ಹಾಯಿಸಬೇಕು. ಸ್ತಂಭವನ್ನು ಪ್ರೊಟೀನ್ ಹೊಕ್ಕ ಅನಂತರ ಅನುಕೂಲ ಬಫರನ್ನು ಸ್ತಂಭದ ಮೂಲಕ ಹಾಯಿಸಿ ಹೊರಬರುವ ದ್ರಾವಣವನ್ನು ಅಂಶಗಳಂತೆ (ಫ್ರ್ಯಾಕ್ಷನ್ಸ್) ಶೇಖರಿಸಬೇಕು. ಪ್ರತಿ ಅಂಶವನ್ನು ಪ್ರೊಟೀನ್‌ಗಾಗಿ ಪರೀಕ್ಷಿಸಿದಾಗ ಯಾವ ಅಂಶಗಳ ಪ್ರೊಟೀನುಗಳು ಹೊರಬರುತ್ತವೆ ಎಂಬುದು ವ್ಯಕ್ತವಾಗುತ್ತದೆ. ಅಪೇಕ್ಷಿತ ಪ್ರೊಟೀನ್ ಜೈವಿಕ ಕ್ರಿಯಾಶೀಲತೆಯಿರುವ ವಸ್ತುವಾಗಿದ್ದರೆ ಯಾವ ಅಂಶಗಳಲ್ಲಿ ಅದು ಹೊರಬಂದಿದೆಯೆಂಬುದನ್ನು ತಿಳಿಯುವುದು ಸುಲಭ. ಉದಾ: ಕಿಣ್ವಗಳು, ಪ್ರಚೋದಕಗಳು, ಅಶುದ್ಧತೆಗಳು (ಅನಪೇಕ್ಷಿತ ಪ್ರೊಟೀನುಗಳು) ಬೇರೆ ಬೇರೆ ಅಂಶಗಳು ಹೊರಬರುತ್ತವೆ. ಅಂಶ ಸಂಖ್ಯೆಗಳನ್ನು, ಅವುಗಳಲ್ಲಿರುವ ಪ್ರೊಟೀನುಗಳ ಸಾರದ ವಿರುದ್ಧವಾಗಿ, ನಕ್ಷೆಯಲ್ಲಿ ಗುರುತಿಸಿದಾಗ ಹಲವು ಶೃಂಗಗಳು ಕಂಡುಬರುತ್ತದೆ. ಒಂದೇ ಒಂದು ಶೃಂಗವಿದ್ದು, ಅದು ಅಪೇಕ್ಷಿತ ಪ್ರೊಟೀನಾಗಿದ್ದರೆ ಈ ವಿಧಾನಕ್ಕೆ ಅನುಸಾರವಾಗಿ ಅಪೇಕ್ಷಿತ ಪ್ರೊಟೀನ್ ಶುದ್ಧವೆಂದು ಪರಿಗಣಿಸುವರು. ಪ್ರೊಟೀನುಗಳು ಋಣ ಮತ್ತು ಧನ ವಿದ್ಯುದಾವೇಶಗಳನ್ನು ಪಡೆದಿರುತ್ತವೆ. ನಿವ್ವಳ ಆವೇಶಗಳಲ್ಲಿ ಸಾಕಷ್ಟು ವ್ಯತ್ಯಾಸವಿದ್ದರೆ, ಮೇಲಿನೆರೆಡು ಅಯಾನ್ ವಿನಿಮಯಗಳನ್ನು ಬಳಸಿ ಪ್ರೊಟೀನುಗಳನ್ನು ಯಶಸ್ವಿಯಾಗಿ ಶುದ್ಧೀಕರಿಸಬಹುದು. ನಿವ್ವಳ ಆವೇಶ ಬಫರ್ ದ್ರಾವಣದ pH (ರಸಸಾರ)ದಿಂದ ಪ್ರಭಾವಿತವಾಗುವುದಾಗಿ ಎಚ್ಚರಿಕೆಯಿಂದ ಬಫರ್‌ನ್ನು ಆಯಬೇಕು. ಎರಡು ಪ್ರೊಟೀನುಗಳ ನಿವ್ವಳ ಆವೇಶ ಎಲ್ಲ ಬಫರ್‌ಗಳಲ್ಲಿ ಒಂದೇ ಆದರೆ ಈ ವಿಧಾನ ಪ್ರಯೋಜನಕಾರಿಯಾಗುವುದಿಲ್ಲ.

ಸೆಫಾಡೆಕ್ಸ್ ಜೆಲ್ಲುಗಳನ್ನು ಬಳಸಿ ಪ್ರೊಟೀನುಗಳನ್ನು ಶುದ್ಧಗೊಳಿಸುವರು. ನೀಳ ಅಣುಗಳನ್ನು ಪರಸ್ಪರವಾಗಿ ಅಡ್ಡ ಬಂಧಗಳಿಂದ ಬಂಧಿಸಿ 3 ಆಯಾಮಗಳಿರುವ ಘನ ಆಧಾರವಸ್ತುವನ್ನು ಪಡೆಯಬಹುದು. ಇವೇ ಸ್ಪೆಡೆಕ್ಸ್ ಜೆಲ್ಲುಗಳು. ಇವುಗಳಲ್ಲಿ ಸೂಕ್ಷ್ಮ ರಂಧ್ರಗಳಿವೆ. ಇವುಗಳ ಅಗಲವನ್ನು ಪೂರ್ವಭಾವಿಯಾಗಿ ನಿರ್ಧರಿಸಬಹುದು. ಮಿಶ್ರಣವನ್ನು ಸ್ಪೆಡೆಕ್ಸ್ ಸ್ತಂಭದ ಮೂಲಕ ಹಾಯಿಸಿದಾಗ ವಿವಿಧ ಪ್ರೊಟೀನುಗಳ ತಮ್ಮ ಗಾತ್ರಾನುಸಾರ ಪ್ರವೇಶಿಸುತ್ತವೆ. ಯಾವ ರಂಧ್ರವನ್ನು ಪ್ರವೇಶಿಸಲು ಸಾಧ್ಯವಾಗದವು ಹೊರಗೆ ಉಳಿಯುತ್ತವೆ. ಜೆಲ್ಲನ್ನು ಅನಂತರ 0.9 ಮೋಲಾರ್ ಸೋಡಿಯಮ್ ಕ್ಲೋರೈಡ್ ದ್ರಾವಣದಿಂದ ಸ್ಥಾಪಿಸಿದರೆ, ಹೊರಗೆ ಉಳಿಯುವ ಪ್ರೊಟೀನುಗಳು ಮೊತ್ತಮೊದಲಿನ ಅಂಶಗಳಲ್ಲಿ ಜೆಲ್ಲಿನಿಂದ ಹೊರಬರುತ್ತದೆ. ಸ್ಥಪನವನ್ನು ಮುಂದುವರಿಸಿದಾಗ ರಂಧ್ರದ ಒಳಗಿರುವ ಪ್ರೊಟೀನುಗಳು ತಮ್ಮ ಗಾತ್ರಾನುಸಾರ ಹಿಂದೆ ಮುಂದೆ ಹೊರಬರುತ್ತವೆ. ದೊಡ್ಡ ಗಾತ್ರದ ಪ್ರೊಟೀನ್‌ಗಳು ನಿಧಾನವಾಗಿ ಬರುತ್ತವೆ.

ಕ್ರೊಮಟಾಗ್ರಾಫಿ, ವಿಧಾನದಿಂದ ಪ್ರೊಟೀನುಗಳನ್ನು ಒಂದೇ ಹಂತದಲ್ಲಿ ಶುದ್ಧಮಾಡಬಹುದು. ಉದಾ: ಕಿಣ್ವಗಳು, ಲೆಕ್ಟಿನುಗಳು ಅಲ್ಪ ಅಣುತೂಕದ ಕೆಲವು ವಸ್ತುಗಳಿಂದ ಕ್ರಿಯಾಶೀಲತೆಯನ್ನು ಕಳೆದುಕೊಳ್ಳುತ್ತವೆ. ಕಿಣ್ವಗಳು ತಮಗೆ ವಿಶಿಷ್ಟವಾದ ಅಣುಗಳಿಂದಲು, ಲೆಕ್ಟಿನುಗಳು ತಮಗೆ ವಿಶಿಷ್ಟವಾದ ಶರ್ಕರಗಳಿಂದಲು ಪಟುತ್ವವನ್ನು ಕಳೆದುಕೊಳ್ಳುವುದರ ಕಾರಣ ಈ ಪ್ರೊಟೀನುಗಳು ಅಲ್ಪ ಅಣುತೂಕದ ವಸ್ತುಗಳನ್ನು ಬಂಧಿಸುವುದು. ಈ ಗುಣವನ್ನು ಆಧರಿಸಿ ಅವುಗಳ ಶುದ್ಧೀಕರಣ ವಿಧಾನವನ್ನು ರೂಪಿಸಲಾಗಿದೆ. ಅಗರೋಸ್, ಸೆಫರೋಸ್ ಜಡವಸ್ತುಗಳನ್ನು ಆಧಾರ ವಸ್ತುಗಳಾಗಿ ಬಳಸಿ ಪ್ರೊಟೀನುಗಳಿಂದ ಬದ್ಧವಾಗುವ ಅಲ್ಪ ಅಣುತೂಕದ ವಸ್ತುಗಳನ್ನು ಈ ಆಧಾರವಸ್ತುಗಳಿಗೆ ಕೊವೇಲೆಂಟ್ ಬಂಧಗಳ ಮೂಲಕ ಸೇರ್ಪಡಿಸಿ ಸ್ತಂಭವನ್ನು ಸಿದ್ಧಿಪಡಿಸಲಾಗುವುದು. ವಿಶಿಷ್ಟವಾದ ವಸ್ತುಗಳನ್ನು ಒಳಗೊಂಡ ಸ್ತಂಭದ ಮೂಲಕ ಒಂದು ಪ್ರೊಟೀನ್ ಹಾಯ್ದುಹೋಗುವಾಗ, ಸ್ತಂಭದ ಅಲ್ಪಾಣು ತೂಕದ ವಸ್ತುವಿಗೆ ಇದನ್ನು ಲಿಗ್ಯಾಂಡ್ ಎಂದು ಕರೆಯುವರು. ವಾತ್ಸಲ್ಯವನ್ನು ತೋರುವ ಆ ಪ್ರೊಟೀನ್ ಸ್ತಂಭದ ಜಡವಸ್ತುವಿಗೆ ಅಲ್ಪಾಣುತೂಕದ ವಸ್ತುವಿನ ಮುಲಕ ಬದ್ಧವಾಗುತ್ತದೆ. ಇತರ ವಾತ್ಸಲ್ಯರಹಿತ ಪ್ರೊಟೀನುಗಳು ಬದ್ಧವಾಗದೆ ಹೊರಬರುತ್ತದೆ. ಅನಂತರ ಯುಕ್ತ ಸ್ಥಪನ ದ್ರಾವಣವನ್ನು ಬಳಸಿ ಬದ್ಧವಾದ ಪ್ರೊಟೀನನ್ನು ಸ್ಥಳ ಪಲ್ಲಟಿಸಿ ಶೇಖರಿಸಬಹುದು.

ಪ್ರೊಟೀನುಗಳನ್ನು ಅತಿವೇಗ ಭ್ರಮಣ ಯಂತ್ರಗಳ ಸಹಾಯದಿಂದ ಬೇರ್ಪಡಿಸಬಹುದು. ಸಕ್ಕರೆ ಅಥವಾ ಲಿಥಿಯಮ್ ಕ್ಲೋರೈಡ್ ದ್ರಾವಣಗಳನ್ನು ಅತಿವೇಗ ಭ್ರಮಣ ಯಂತ್ರದ ಕೋಶಗಳಲ್ಲಿಟ್ಟು ಹೆಚ್ಚಿನ ವೇಗದಲ್ಲಿ ತಿರುಗಿಸಿದಾಗ, ವಿಲೇಯಿತ ಅಣುಗಳು ಕೋಶದ ಕೆಳಭಾಗಕ್ಕೆ ವಿಧಾನವಾಗಿ ಚಲಿಸುತ್ತವೆ. ಇದರಿಂದ ದ್ರಾವಣದ ಸಾಂದ್ರತೆಯಲ್ಲಿ ವ್ಯತ್ಯಾಸಗಳಾಗಿ, ಸಾಂದ್ರತಾ ಶ್ರೇಣಿ ಏರ್ಪಡುತ್ತದೆ. ಕೋಶದ ಬುಡದಲ್ಲಿ ಸಾಂದ್ರತೆ ಅತ್ಯಧಿಕ, ದ್ರಾವಣದ ಮೇಲ್ಭಾಗದಲ್ಲಿ ಅತಿ ನ್ಯೂನ. ಈ ಪರಿಸ್ಥಿತಿಯಲ್ಲಿ ದ್ರಾವಣದ ಮೇಲ್ಭಾಗದಲ್ಲಿ ಪ್ರೊಟೀನ್ ಮಿಶ್ರಣವನ್ನು ಎಚ್ಚರಿಕೆಯಿಂದ ಇಟ್ಟು ಪುನಃ ಕೋಶವನ್ನು ಅತಿವೇಗದಿಂದ ತಿರುಗಿಸಿದರೆ ಪ್ರೊಟೀನುಗಳು ದ್ರಾವಣದ ಒಳಭಾಗಕ್ಕೆ ಚಲಿಸುತ್ತವೆ ಮತ್ತು ತಮ್ಮ ಗಾತ್ರಾನುಸಾರ ಸಾಂದ್ರತೆಯ ಶ್ರೇಣಿಗೆ ಹೊಂದಿಕೊಂಡು ದ್ರಾವಣಾದ್ಯಂತ ವಿಂಗಡವಾಗುತ್ತವೆ. ಪ್ರಯೋಗವನ್ನು ಎಚ್ಚರಿಕೆಯಿಂದ ನಡೆಸಿ ಪ್ರೊಟೀನುಗಳನ್ನು ಸ್ಪಷ್ಟವಾಗಿ ವಿಂಗಡಿಸಬಹುದು. ಅನಂತರ ಕೋಶದ ಬುಡದಲ್ಲಿ ತೂತು ಕೊರೆದು ಅಪೇಕ್ಷಿತ ಪ್ರೊಟೀನನ್ನು ಒಳಗೊಂಡು ದ್ರಾವಣದ ಭಾಗವನ್ನು ಶೇಖರಿಸಬಹುದು.

ಪ್ರೊಟೀನುಗಳನ್ನು ಅವುಗಳ ನಿವ್ವಳ ಆವೇಶ ಆಧಾರದ ಮೇಲೆ ಎಲೆಕ್ಟ್ರೊಫಾರಿಸಿಸ್ ವಿಧಾನದಿಂದ ಬೇರ್ಪಡಿಸಬಹುದು. ಸ್ಟಾರ್ಚ್, ಆಗರೋಸ್, ಸೆಲ್ಯುಲೋಸ್ ಅಸಿಟೇಟ್ ಮತ್ತು ಆಕ್ರಿಲಮೈಡುಗಳನ್ನು ನಿಷ್ಕ್ರಿಯ ಅಥವಾ ಜಡ ಆಧಾರಗಳಂತೆ ಬಳಸಿ ಯುಕ್ತ ದ್ರಾವಣ ಆಯ್ದು ಪ್ರೊಟೀನುಗಳನ್ನು ವಿಂಗಡಿಸಿ ಶುದ್ಧಮಾಡಬಹುದು.

ಶುದ್ಧತೆಯ ನಿರ್ಧಾರ : ಬೇರ್ಪಡಿಸಿದ ಪ್ರೊಟೀನಿನ ಶುದ್ಧತೆಯನ್ನು ನಿರ್ಧರಿಸಲು. ಆರು ವಿಧಾನಗಳನ್ನು ಅನುಸರಿಸುವರು.

(i) ವಿಲೀನತೆಯ ನಿರ್ಧಾರ: ಪ್ರತಿಯೊಂದು ಪ್ರೊಟೀನಿಗೂ ವಿಶಿಷ್ಟವಾದ ವಿಲೀನತೆ ಇದೆ. ಆದರಿಂದ ಬೇರ್ಪಡಿಸಿದ ಪ್ರೊಟೀನನ್ನು ವಿಲೀನಿಸಿ ಅದರ ದ್ರಾವಣದಲ್ಲಿರುವ ನೈಟ್ರೊಜನ್ ಅಂಶವನ್ನು ನಿರ್ಧರಿಸಬೇಕು. ದ್ರಾವಣದಲ್ಲಿ ಪ್ರೊಟೀನಿನ ಪ್ರಮಾಣ ಹೆಚ್ಚಿದಂತೆ, ಅದಕ್ಕನುಗುಣವಾಗಿ ನೈಟ್ರೊಜನ್ನಿನ ಪ್ರಮಾಣ ಸಹ ಹೆಚ್ಚಬೇಕು. ದ್ರಾವಣ ಪರ್ಯಾಪ್ತ ಸ್ಥಿತಿ ತಲುಪಿದ ಬಳಿಕ ಪ್ರೊಟೀನಿನ ಪ್ರಮಾಣವನ್ನು ದ್ರಾವಣದ ನೈಟ್ರೊಜನ್ ಪ್ರಮಾಣಕ್ಕೆ ಎದುರಾಗಿ ನಕ್ಷೆಯಲ್ಲಿ ಚಿತ್ರಿಸಬಹುದು.

(ii) ಸ್ಥಪನ ವಿಧಾನ: ಪ್ರೊಟೀನಿನ ಶುದ್ಧತೆಯನ್ನು ಕಾರ್ಬಾಕ್ಸಿ ಮೀಥೈಲ್, ಸೆಲ್ಯುಲೋಸ್, ಡೈಮೀಥೈಲ್ ಅಮೈನೋ ಈಥೈಲ್ ಸೆಲ್ಯುಲೋಸ್, ಸೆಫಾಡಕ್ಸ್ ಮತ್ತಿತರ ಸ್ತಂಭಗಳ ಮೂಲಕ ಹಾಯಿಸಿ ಯುಕ್ತ ಬಫರ್ ದ್ರಾವಣಗಳಿಂದ ಸ್ಥಾಪಿಸಿ ನಿರ್ಧರಿಸಬಹುದು.

ಸ್ಥಾಪಿತ ದ್ರಾವಣವನ್ನು ಅಂಶಗಳಂತೆ ಶೇಖರಿಸಿ ಅವುಗಳಲ್ಲಿ ಪ್ರೋಟೀನಿನ ಪ್ರಮಾಣವನ್ನು ಕಂಡುಹಿಡಿದು ಅಂಶಗಳ ಸಂಖ್ಯೆಗೆದುರಾಗಿ ಪ್ರೋಟೀನಿನ ಪ್ರಮಾಣವನ್ನು ನಕ್ಷೆಯಲ್ಲಿ ಗುರುತಿಸಿದಾಗ ಶುದ್ಧ ಪ್ರೋಟೀನಿನ ಸಂದರ್ಭದಲ್ಲಿ ಒಂದು ಶೃಂಗಮಾತ್ರ ದೊರೆಯುತ್ತದೆ. ಮಿಶ್ರವಾದರೆ ಹಲವು ಶೃಂಗಗಳನ್ನು ಕೊಡುತ್ತದೆ.

(iii) ಎಲೆಕ್ಟ್ರೊಫಾರಿಸಿಸ್ ವಿಧಾನ: ಪ್ರೋಟೀನಿನ ಶುದ್ಧತೆಯನ್ನು ಎಲೆಕ್ಟ್ರೊಫಾರಿಸಿಸ್ ವಿಧಾನದಿಂದ ಗುರುತಿಸಬಹುದು. ಸ್ಟಾರ್ಚ್, ಅಗಾರ್, ಪಾಲಿಅಕ್ರಿಲ್‌ಮೈಡುಗಳನ್ನು ಆಧಾರದಂತೆ ಬಳಸಿ ಯುಕ್ತ ಬಫರ್‌ಗಳಲ್ಲಿ ಈ ಪ್ರಯೋಗವನ್ನು ನಡೆಸಿದಾಗ ಶುದ್ಧ ಪ್ರೋಟೀನ್ ಒಂದೇ ಪಟ್ಟಿಯಂತೆ ಚಲಿಸುತ್ತದೆ. ಕೊಮಾಂಷೀನೀಲಿ ಅಥವಾ ಇತರ ವರ್ಣವಸ್ತುಗಳನ್ನು ಬಳಸಿದಾಗ ಈ ಪಟ್ಟಿ ನೀಲಿವರ್ಣವನ್ನು ಕಳೆದು ಎದ್ದು ಕಾಣುತ್ತದೆ. ಪ್ರೋಟೀನ್ ಅಶುದ್ಧವಾಗಿದ್ದರೆ ಒಂದಕ್ಕಿಂತ ಹೆಚ್ಚಿನ ಪಟ್ಟಿಗಳು ಕಂಡುಬರುತ್ತವೆ. ಈಚೆಗೆ ಪಾಲಿ ಅಕ್ರಿಲಮೈಡ್ ಜೊತೆ ಸೋಡಿಯಮ್ ಡೋಡೆಸೈಲ್ ಸಲ್ಫೇಟನ್ನು (ಎಸ್‌ಡಿಎಸ್) ಸೇರಿಸಿ ಪ್ರೋಟೀನನ್ನು ಎಲೆಕ್ಟ್ರೊಫಾರಿಸಿಸ್‌ಗೆ ಗುರಿಮಾಡಿ ಶುದ್ಧತೆಯನ್ನು ಗೊತ್ತುಮಾಡುವ ವಿಧಾನ ಸಾಮಾನ್ಯವಾಗಿದೆ.

(V) ಇಮ್ಯೂನೊ ರಸಾಯನವಿಜ್ಞಾನದ ಆಧಾರ: ಪ್ರೋಟೀನಿನ ಶುದ್ಧತೆಯನ್ನು ಇಮ್ಯೂನೊ ರಸಾಯನವಿಜ್ಞಾನದ ಆಧಾರದ ಮೇಲೆ ನಿರ್ಧರಿಸಬಹುದು. ಶುದ್ಧ ಪ್ರೋಟೀನ್ ಒಂದೇ ಪ್ರತಿಕಾಯವನ್ನು (ಆ್ಯಂಟಿಬಾಡಿ) ಕೊಡುತ್ತದೆ. ಇದು ಅಕ್ಟರ್‌ಲೋನಿ ವಿಧಾನದಲ್ಲಿ ಅಂತೆಯೇ ಇಮ್ಯೂನೊ ಎಲೆಕ್ಟ್ರೊಫಾರಿಸಿಸ್‌ನಲ್ಲಿ ಸಹ ಒಂದೇ ಶೃಂಗ ಕಂಡುಬರುತ್ತದೆ. ಸ್ಪೆಡೆಕ್ಸ್ ಸ್ತಂಭವನ್ನು ಬಳಸಿ ಶುದ್ಧತೆಯನ್ನು ನಿರ್ಧರಿಸಬಹುದು.

(vi) ಜೈವಿಕಪಟುತ್ವ: ಜೈವಿಕಪಟುತ್ವವುಳ್ಳ ಪ್ರೋಟೀನುಗಳ ಶುದ್ಧತೆಯನ್ನು ಅತಿ ಸೂಕ್ಷ್ಮರೀತಿಯಲ್ಲಿ ಶುದ್ಧಗೊಳಿಸುವ ಕ್ರಿಯೆ ಮುಂದುವರಿದಂತೆ, ಒಂದು ಬಗೆಯ ಚಟುವಟಿಕೆ ಭಾಗಶಃ ಕುಂಠಿತವಾದಲ್ಲಿ, ಇತರ ಬಗೆಯ ಚಟುವಟಿಕೆ ಸಾಪೇಕ್ಷ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬರಬಾರದು. ಉದಾ: ಒಂದು ಕಿಣ್ವ ಎ ವಸ್ತುವನ್ನು ಬಿ ವಸ್ತುವಿಗಿಂತ ಹತ್ತು ಪಟ್ಟು ವೇಗವಾಗಿ ಪರಿವರ್ತಿಸುತ್ತದೆಂದು ಭಾವಿಸೋಣ. ಪ್ರೋಟೀನನ್ನು ಪುನಃ ಒತ್ತರಿಸಿದಾಗ ಎ ಸಂದರ್ಭದಲ್ಲಿ ಕ್ರಿಯೆ ನೂರುಪಟ್ಟು ಹೆಚ್ಚಿದರೆ ಎರಡು ಬಗೆಯ ಕಿಣ್ವಗಳು ಎರಡು ರಾಸಾಯನಿಕ ಕ್ರಿಯೆಗಳನ್ನು ನಡೆಸುತ್ತವೆ (ಅಂದರೆ ಎ ಮತ್ತು ಬಿ ಗಳ ಪರಿವರ್ತನೆ) ಇದರಿಂದ ಪ್ರೋಟೀನಿನ ಶುದ್ಧತೆಯನ್ನು ತಿಳಿಯಬಹುದು.

ವೈವಿಧ್ಯ: ಪ್ರೋಟೀನುಗಳು ಬೃಹದಣುಗಳು. ನಿಸರ್ಗಲಭ್ಯ ಪ್ರೋಟೀನುಗಳಲ್ಲಿ 20–21 ಬಗೆಯ ಅಮೈನೋ ಆಮ್ಲಗಳಿವೆ. ಇವುಗಳ ಸಂಘಟನೆ ಮತ್ತು ಇವು ಜೋಡಣೆಯಾಗಿರುವ ರೀತಿಯಿಂದ ಪ್ರೋಟೀನುಗಳಲ್ಲಿ ವೈವಿಧ್ಯ ಏರ್ಪಡುತ್ತದೆ. ಪ್ರೋಟೀನಿನ ರಚನೆಯನ್ನು ಅರಿತು ಅದಕ್ಕೂ ಅದರ ಜೈವಿಕ ಗುಣಗಳಿಗೂ ಇರುವ ಸಂಬಂಧವನ್ನು ಕಂಡುಹಿಡಿಯುವುದು ವಿಜ್ಞಾನಿಗೆ ಒಂದು ಸವಾಲು. ಅನುಕೂಲತೆಯ ದೃಷ್ಟಿಯಿಂದ ಈ ರಚನೆಯನ್ನು ನಾಲ್ಕು ಹಂತಗಳಲ್ಲಿ ಪರಿಗಣಿಸಬಹುದು. ಪ್ರಾಥಮಿಕ ರಚನೆ : ಪ್ರೋಟೀನಿನಲ್ಲಿರುವ ಅಮೈನೋ ಆಮ್ಲಗಳ ಸರಣಿಯ ಅನುಕ್ರಮಕ್ಕೆ ಸಂಬಂಧ ಪಟ್ಟದ್ದು. ಇದನ್ನು ಕೋವೇಲೆಂಟ್ ರಚನೆಯೆಂದು ಕರೆಯುವರು. ದ್ವಿತೀಯಕ ರಚನೆ : ಪ್ರೋಟೀನಿನಲ್ಲಿ ಕಂಡುಬರುವ ಕ್ರಮಬದ್ಧರಚನೆಗಳನ್ನು ಕುರಿತಾದದ್ದು. ಈ ಬಗೆಯ ವ್ಯವಸ್ಥೆಯಲ್ಲಿ ಆಲ್ಫಾ ಕುಂಡಲಿನಿ ಮತ್ತು ಬೀಟಾ ನೆರಿಗೆ ರಚನೆಗಳು ಸೇರಿವೆ. ಕುಂಡಲಿನಿ ರಚನೆ ಒಂದೇ ಬಹುಪೆಪ್ಟೈಡಿಗೆ ಸಂಬಂಧಪಟ್ಟಿದೆ. ನೆರಿಗೆ ರಚನೆಯಲ್ಲಿ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಬಹುಪೆಪ್ಟೈಡುಗಳು ಪಾಲ್ಗೊಳ್ಳುತ್ತದೆ. ಪ್ರೋಟೀನಿನ ಮೂರು ಅಯಾಮ ವ್ಯವಸ್ಥೆ ಮತ್ತು ಅದರ ಒಟ್ಟು ವಿನ್ಯಾಸ ಇವನ್ನು ತೃತೀಯಕ ವ್ಯವಸ್ಥೆಯೆಂದು ಕರೆಯುತ್ತೇವೆ. ಕೆಲವು ಪ್ರೋಟೀನುಗಳಲ್ಲಿ ಉಪಘಟಕಗಳಿದ್ದರೆ ಮೂರು ಅಯಾಮಗಳಲ್ಲಿ ಅವು ಜೋಡಣೆಯಾಗಿರುವ ರೀತಿಯನ್ನು ಚತುರ್ಥಕ ರಚನೆ ಎನ್ನುವರು.

ಪ್ರಾಥಮಿಕ ರಚನೆ: ಪ್ರೋಟೀನೊಂದರ ಅಮೈನೋ ಆಮ್ಲ ಅನುಕ್ರಮವನ್ನು ನಿರ್ಧರಿಸುವ ಮೊದಲು ಅದರ ಅಮೈನೋ ಆಮ್ಲಗಳ ಸಂಘಟನೆಯನ್ನು (ಅಂದರೆ: ವಿವಿಧ ಅಮೈನೋ ಆಮ್ಲಗಳು ಮತ್ತು ಎಷ್ಟು ಪ್ರಮಾಣಗಳಲ್ಲಿವೆ ಎಂಬುದನ್ನು) ತಿಳಿದುಕೊಳ್ಳಬೇಕು. ಇದಕ್ಕಾಗಿ ಪ್ರೋಟೀನನ್ನು ಜಲವಿಚ್ಛೇದನೆಗೆ ಗುರಿಮಾಡಬೇಕು. ಅನಂತರ ಪ್ರತಿಯೊಂದು ಅಮೈನೋ ಆಮ್ಲವನ್ನು ಗುರುತಿಸಿ ಅದರ ಪ್ರಮಾಣವನ್ನು ನಿರ್ಧರಿಸಬೇಕು. ಪ್ರೋಟೀನಿನ ಜಲವಿಚ್ಛೇದನೆಗೆ ಅಮೋನಿಯಂ ಕ್ಲೋರೈಡ್ ಬಳಸುತ್ತಾರೆ. ಪ್ರೋಟೀನನ್ನು ಅಮೋನಿಯಂ ಕ್ಲೋರೈಡ್‌ನೊಂದಿಗೆ ಮಿಶ್ರ ಮಾಡಿ, ಆಕ್ಸಿಜನ್‌ರಹಿತ ನಳಿಕೆಯಲ್ಲಿಟ್ಟು ಮೊಹರುಮಾಡಿ 100° ಸೆ ನಲ್ಲಿ. 20 ಗಂಟೆ ಅಥವಾ ಹೆಚ್ಚು ಕಾಲ ಕಾಸಬೇಕು. ಹೊರಬಂದ ಅಮೈನೋ ಆಮ್ಲಗಳನ್ನು ಅಯಾನ್ ವಿನಿಮಯ ರಾಳ ಸ್ತಂಭದ ಮೂಲಕ ಹಾಯಿಸಿ, ಬೇರ್ಪಡಿಸಿ, ಸ್ವಯಂಚಾಲಿತ ಸಲಕರಣೆಯಿಂದ ಪ್ರತಿಯೊಂದು ಅಮೈನೋ ಅಮ್ಲದ ಪ್ರಮಾಣವನ್ನೂ ನಿರ್ಧರಿಸಬಹುದು. ಸಿಸ್ಟೈನ್ ಮತ್ತು ಸಿಸ್ಟೀನುಗಳನ್ನು ಈ ವಿಧಾನದಿಂದ ನಿಖರವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಎಸ್–ಎಸ್ ಬಂಧಗಳನ್ನು ಮರ್‌ಕ್ಯಾಪ್ಟೊ ಎಥನಾಲಿನಿಂದ ಅಪಕರ್ಷಿಸಿ ರೂಪಿತವಾಗುವ ಎಸ್–ಎಚ್ ಪುಂಜಗಳನ್ನು ಅಯಡೊಅಸಿಟೇಟಿನಿಂದ ಸಂಸ್ಕರಿಸಿ ಜಲವಿಚ್ಛೇದನೆಗೆ ಗುರಿಪಡಿಸಿದರೆ ಎಸ್-ಕಾರ್ಬಾಕ್ಸಿಮೀಥೈಲ್ ಸಿಸ್ಟೀನ್ ದೊರೆಯುತ್ತದೆ. ಆಗ ಇದನ್ನು ನಿರ್ಧರಿಸಬಹುದು. ಅನೇಕ ಪ್ರೋಟೀನುಗಳ ಅಮೈನೋ ಆಮ್ಲ ಸಂಘಟನೆಗಳನ್ನು ಪರಿಶೀಲಿಸಿದಾಗ ಬಲುಮಟ್ಟಿಗೆ ವ್ಯತ್ಯಾಸಗಳನ್ನು ಕಾಣುತ್ತೇವೆ. ಉದಾ: ಇನ್ಸುಲಿನ್ನಿನಲ್ಲಿ ಟ್ರಿಪ್ಟೊಫಾನ್ ಮತ್ತು ಮೆಥಿಯೊನಿನ್‌ಗಳಿಲ್ಲ. ಮಯೊಗ್ಲೋಬಿನ್ನಿನಲ್ಲಿ ಸಿಸ್ಟೀನ್ ಅಥವಾ ಸಿಸ್ಟೈನ್ ಇಲ್ಲ. ಪ್ರೊಟಿನಿನ ಆಮ್ಲ ಸಂಘಟನೆಯನ್ನು 100 ಗ್ರಾಂ ಪ್ರೋಟೀನಿಗೆ ಪ್ರತಿಯೊಂದು ಅಮೈನೋ ಆಮ್ಲದ ಪ್ರಮಾಣ ಎಷ್ಟು ಎಂದು ನೋಡಬಹುದು. ಪ್ರೋಟೀನಿನ ಅಣುತೂಕ ಗೊತ್ತಿದ್ದರೆ ಪ್ರತಿಯೊಂದು ಅಣುವಿನಲ್ಲಿರುವ ಒಂದೊಂದು ಅಮೈನೋ ಆಮ್ಲದ ಅಂಶವನ್ನು ಪೂರ್ಣಸಂಖ್ಯೆಯಾಗಿ ಲೆಕ್ಕಹಾಕಬಹುದು.

ಪ್ರೋಟೀನಿನ ಅಮೈನೋ ಆಮ್ಲ ಅನುಕ್ರಮವನ್ನು ನಿರ್ಧರಿಸುವ ಮುನ್ನ ಅದರಲ್ಲಿರುವ ಪೆಪ್ಟೈಡ್ ಸರಣಿ ಒಂದಕ್ಕಿಂತ ಹೆಚ್ಚು ಉಪಘಟಕಗಳಿವೆಯೇ ಎಂದು ಪರೀಕ್ಷಿಸಬೇಕು. ಇವುಗಳ ಅನುಕ್ರಮ ತದ್ವತ್ತಾಗಿದೆಯೇ ಮತ್ತು ಇವುಗಳ ನಡುವೆ ಡೈಸಲ್ಫೈಡ್ ಬಂಧಗಳಿವೆಯೇ ಎಂದು ತಿಳಿದುಕೊಳ್ಳಬೇಕು. ಪ್ರೋಟೀನಿನ ಅಣುತೂಕ ನಿರ್ಧರಿಸಲು ಅನುಸರಿಸುವ ಅನೇಕ ವಿಧಾನಗಳನ್ನು ಬಳಸಿ ಈ ಪಶ್ನೆಗಳಿಗೆ ಉತ್ತರ ದೊರಕಿಸಿಕೊಳ್ಳಬಹುದು. ಅತಿವೇಗ ಭ್ರಮಣಯಂತ್ರದಲ್ಲಿ ಒತ್ತರಿಕೆ ಸಮತೋಲನ ವಿಶ್ಲೇಷಣೆಯಿಂದ ಪ್ರೋಟೀನಿನ ಅಣುತೂಕ ನಿರ್ಧರಿಸಿ ಅದೇ ವಿಧಾನವನ್ನು ಬಳಸಿ 6M ಗ್ಯಾನಿಡಿನಿಯಮ್ ಹೈಡ್ರೊಕ್ಲೋರೈಡಿನ ಇರುವಿಕೆಯಲ್ಲಿ ಪ್ರೋಟೀನಿನ ಅಣು ತೂಕ ನಿರ್ಧರಿಸಬೇಕು. ಈ ಅಭಿಕಾರಕ ಪ್ರೋಟೀನಿನ ತೃತೀಯಕ ಮತ್ತು ಚತುರ್ಥಕ ರಚನೆಗಳಿಗೆ ಹಾನಿ ಉಂಟುಮಾಡಿ ವಿಕೃತಿಗೊಳಿಸುತ್ತದೆ. ಇವೆರಡು ಪ್ರಯೋಗಗಳಿಂದ ಒಂದೇ ಅಣುತೂಕ ದೊರಕಿದರೆ, ಪ್ರೋಟೀನಿನನಲ್ಲಿ ಒಂದು ಪೆಪ್ಟೈಡ್ ಶ್ರೇಣಿ ಇದೆ ಅಥವಾ ಒಂದಕ್ಕಿಂತ ಹೆಚ್ಚಿನ ಪೆಪ್ಟೈಡುಗಳು ಡೈಸಲ್ಫೈಡ್ ಬಂಧುಗಳ ಮೂಲಕ ಬದ್ಧವಾಗಿವೆ ಎಂದು ತಿಳಿಯಬಹುದು. 6M ಗ್ವಾನಿಡಿಯಮ್ ಹೈಡ್ರೋಕ್ಲೋರೈಡ್ ಮತ್ತು ಮರ್‌ಕ್ಯಾಪ್ಟೋ ಎಥನಾಲಿನ ಇರುವಿಕೆಯಲ್ಲಿ ಮೂರನೆಯ ಅತಿವೇಗ ಭ್ರಮಣ ವಿಶ್ಲೇಷಣೆಯನ್ನು ನಡೆಸಿದಾಗ ಸಹ ಅಣುತೂಕಲ್ಲಿ ವ್ಯತ್ಯಾಸ ಕಂಡುಬರದಿದ್ದರೆ ಪ್ರೊಟಿನಿನಲ್ಲಿ ಒಂದೇ ಪೆಪ್ಟೈಡ್ ಶ್ರೇಣಿ ಇದೆ ಎಂದರ್ಥ. 6M ಗ್ವಾನಿಡಿಯಮ್ ಹೈಡ್ರೋಕ್ಲೋರೈಡಿನ ಇರುವಿಕೆಯಲ್ಲಿ ಅಣುತೂಕ ತಗ್ಗಿ ಗ್ವಾನಿಡಿಯಮ್ ಹೈಡ್ರೋಕ್ಲೋರೈಡ್ ಮರ್‌ಕ್ಯಾಪ್ಟೋ ಎಥನಾಲಿಕ ಇರುವಿಕೆಯಲ್ಲಿ ವ್ಯತ್ಯಾಸಗೊಳ್ಳದಿದ್ದರೆ ಪ್ರೋಟೀನಲ್ಲಿ ಒಂದಕ್ಕಿಂತ ಹೆಚ್ಚು ಉಪಘಟಕಗಳಿರುತ್ತವೆ. ಆದರೆ ಡೈಸಲ್ಫೈಡ್ ಬಂಧಗಳ ಮೂಲಕ ಅವು ಬದ್ಧವಾಗಿಲ್ಲ ಎನ್ನಬಹುದು. ಈ ಸಂದರ್ಭದಲ್ಲಿ ಗ್ವಾನಿಡಿಯಮ್ ಹೈಡ್ರೋಕ್ಲೋರೈಡಿನಲ್ಲಿ ದೊರೆತ ಅಣುತೂಕ ನೈಜ ಪ್ರೋಟೀನಿನ ಅಣುತೂಕದ ಗುಣಿತವಾಗಿರಬೇಕು. ಎರಡು ತದ್ವತ್ ಉಪ ಘಟಕಗಳಿದ್ದರೆ ಅರ್ಧ, ನಾಲ್ಕು ಇದ್ದರೆ ಕಾಲು ಇತ್ಯಾದಿ ವಿವಿಧ ಗಾತ್ರದ ಉಪಘಟಕಗಳಿದ್ದರೆ ಎಸ್‌ಡಿಎಸ್ ಜೆಲ್ ಎಲೆಕ್ಟ್ರೋಫಾರೆಸಿಸ್ಸಿನಿಂದ ಈ ಸಂಗತಿಯನ್ನು ತಿಳಿಯಬಹುದು.

ಪ್ರೋಟೀನಿನ ಅಮೈನೋ ಆಮ್ಲ ಅನುಕ್ರಮವನ್ನು ಕಂಡುಹಿಡಿಯುವ ಪ್ರಥಮ ಕ್ರಮ, ಅಮೈನೋ ಅಂತ್ಯ ಮತ್ತು ಕಾರ್ಬಾಕ್ಸಿ ಅಂತ್ಯದಲ್ಲಿರುವ ಅಮೈನೋ ಆಮ್ಲಗಳ ಪತ್ತೆ. ಅಮೈನೋ ಅಂತ್ಯದಲ್ಲಿ ಅಮೈನೋ ಆಮ್ಲದ ಅಮೈನೋ ಪುಂಜ ಮುಕ್ತವಾಗಿರುವುದರಿಂದ, ಈ ಪುಂಜದೊಂದಿಗೆ ವರ್ತಿಸುವ ರಾಸಾಯನಿಕ ವಸ್ತುಗಳನ್ನು ಬಳಸಬಹುದು. ೧–ಫ್ಲೋರೋ ೨,೪, ಡೈನೈಟ್ರೊಬೆನ್‌ಝೀನ್ (ಸ್ಯಾಂಗರ್ ಅಭೀಕಾರಕ) ಈ ಬಳಗಕ್ಕೆ ಸೇರಿದ ಒಂದು ಅಭಿಕಾರಕ. ಇದು ಅಮೈನೋ ಅಂತ್ಯದ, ಅಮೈನೋ ಆಮ್ಲದ ಅಮೈನೋ ಪುಂಜ. ಲೈಸಿನ್ನಿನ ಪುಂಜಗಳೊಂದಿಗೆ ವರ್ತಿಸಿ, ಹಳದಿ ಬಣ್ಣದ ಉತ್ಪನ್ನವನ್ನು ಕೊಡುತ್ತದೆ. ಇಮಿಡಝೋಲ್, ಫಿನಾಲ್, ಥಯೋಲ್ ಪಾರ್ಶ್ವ ಸರಣಿಗಳೊಂದಿಗೆ ವರ್ತಿಸಿ ನಿರ್ವರ್ಣ ಉತ್ಪನ್ನಗಳನ್ನು ಕೊಡುತ್ತದೆ. ಪ್ರೋಟೀನನ್ನು ಈ ಅಭಿಕಾರಕದೊಂದಿಗೆ ಸೌಮ್ಯಪ್ರತ್ಯಾಮ್ಲೀಯ ಪರಿಸ್ಥಿತಿಯಲ್ಲಿ ಸಂಸ್ಕರಿಸಿ, ಹೆಚ್ಚಿನ ಅಭಿಕಾರವನ್ನು ತೆಗೆದುಹಾಕಿ, ಪ್ರೋಟೀನನ್ನು ಅಮೋನಿಯಂ ಕ್ಲೋರೈಡ್‌ನಲ್ಲಿ ಜಲವಿಚ್ಛೆದನೆಗೆ ಗುರಿಮಾಡಲಾಗುವುದು. ಹಳದಿ ಉತ್ಪನ್ನಗಳನ್ನು

ನೀರಿನೊಂದಿಗೆ ಬೆರೆಯದ ವಿಲೇಯಕಗಳಿಂದ (ಈಥರ್, ಕ್ಲೋರೊಫೌರ್ಮ್) ನಿಷ್ಕಾಸಿಸಿ ಪತ್ರ ಕ್ರೊಮಟೋಗ್ರಫಿಯಿಂದ ಪ್ರತ್ಯೇಕಿಸಬಹುದು.

ಇನ್ನೊಂದು ರಾಸಾಯನಿಕ ವಿಧಾನದಲ್ಲಿ ಸಯನೇಟನ್ನು ಬಳಸಲಾಗುತ್ತದೆ. ಪೆಪ್ಟೈಡನ್ನು ಸಯನೇಟಿನೊಂದಿಗೆ ಸ್ವಲ್ಪಮಟ್ಟಿಗೆ ಪ್ರತ್ಯಾಮ್ಲೀಯವಾಗಿರುವ ಪರಿಸ್ಥಿತಿಯಲ್ಲಿ ಸಂಸ್ಕರಿಸಿದಾಗ ಕಾರ್ಬಮಾಯಿಲ್ ಉತ್ಪನ್ನ ದೊರೆಯುತ್ತದೆ. ಇದನ್ನು ಆಮ್ಲದೊಂದಿಗೆ ೧೦೦° ಸೆ. ಕಾಸಿದಾಗ ಅಂತ್ಯದ ಅಮೈನೋ ಆಮ್ಲ ಚಕ್ರೀಯ ಹೈಡಂಟಾಯಿನ್ ಸಂಯುಕ್ತವಾಗಿ ಪರಿವರ್ತನೆಗೊಳ್ಳುತ್ತದೆ. ಇದನ್ನು ಗುರುತಿಸುವುದು ಸುಲಭ.

ಫೀನೈಲ್ ಐಸೊತಯೊಸಯನೇಟನ್ನು (ಎಡ್‌ಮಾನ್‌ನ ಅಭಿಕಾರಕ) ಬಳಸಿ ಉಳಿದ ಪೆಪ್ಟೈಡ್ ಭಾಗವನ್ನು ವಿಚ್ಛೇದಿಸದೆ, ಅಮೈನೋ ಅಂತ್ಯದ ಅಮೈನೋ ಆಮ್ಲವನ್ನು ಗುರುತಿಸಬಹುದು. ಪೆಪ್ಟೈಡನ್ನು ಎಡ್‌ಮಾನ್‌ನ ಅಭಿಕಾರಕದೊಂದಿಗೆ ಸೌಮ್ಯ ಪ್ರತ್ಯಾಮ್ಲೀಯ ಪರಿಸ್ಥಿತಿಯಲ್ಲಿ ಸಂಸ್ಕರಿಸಿ, ಫೀನೈಲ್ ತಯೊಕಾರ್ಬಮಾಯಲ್ ಪೆಪ್ಟೈಡನ್ನು ಪಡೆದು ಅನಂತರ ಅದನ್ನು ಸೌಮ್ಯ ಆಮ್ಲದೊಂದಿಗೆ ಕೊಠಡಿ ಉಷ್ಣತೆಯಲ್ಲಿ ಸಂಸ್ಕರಿಸಿದಾಗ ಅಮೈನೋ ಅಂತ್ಯ ಅಮೈನೋ ಆಮ್ಲದ ಫೀನೈಲ್ ತಯೋಹೈಡಂಟಾಯಿನ್ ದೊರಕುತ್ತದೆ. ಪ್ರಾರಂಭ ಪೆಪ್ಟೈಡಿಗಿಂತ ಒಂದು ಅಮೈನೋ ಆಮ್ಲ ಕಡಿಮೆ ಇರುವ ಪೆಪ್ಟೈಡ್ ಸಹ ದೊರಕುತ್ತದೆ. ಇದನ್ನು ಮತ್ತೆ ಎಡ್‌ಮಾನನ ಅಭಿಕಾರದಿಂದ ಸಂಸ್ಕರಿಸಿ ನೂತನ ಅಮೈನೋ ಅಂತ್ಯದ ಅಮೈನೋ ಆಮ್ಲವನ್ನು ಗುರುತಿಸಬಹುದು. ಈ ವಿಧಾನವನ್ನು ಅನುಕ್ರಮವಾಗಿ ನಡೆಸಿಕೊಂಡು ಹೋಗುವ ಸ್ವಯಂಚಾಲಿತ ಸಲಕರಣೆಗಳು ಈಗ ಲಭ್ಯ ಇವೆ. ಅನುಕೂಲ ಪರಿಸ್ಥಿತಿಯಲ್ಲಿ ೪೦–೫೦ ಎಡ್‌ಮಾನ್ ವಿಶ್ಲೇಷಣೆಗಳನ್ನು ನಡೆಸಬಹುದು. ಪ್ರತಿ ಹಂತದಲ್ಲಿ ಬಿಡುಗಡೆಯಾಗುವ ಫೀನೈಲ್ ತಯೊಹೈಡಂಟಾಯಿನನ್ನು ಕ್ರೊಮಟಾಗ್ರಫಿ ವಿಧಾನಗಳಿಂದ ಗುರುತಿಸಬಹುದು.

ಡಾನ್ಸೈಲ್ ಕ್ಲೋರೈಡ್, ಅಮೈನೋ ಅಂತ್ಯದ ಅಮೈನೋ ಆಮ್ಲವನ್ನು ಕಂಡುಹಿಡಿಯಲು ಬಳಸುವ ಇನ್ನೊಂದು ಅಭಿಕಾರಕ. ಅಲ್ಪ ಪ್ರಮಾಣದಲ್ಲಿರುವ ಪೆಪ್ಟೈಡನ್ನು ಬಳಸಲು ಅನುಕೂಲ ಮಾಡಿಕೊಡುವ ಇದರ ಡಾನ್ಸೈಲ್ ಪುಂಜ ಹೆಚ್ಚಿನ ಮಟ್ಟದಲ್ಲಿ ಪ್ರತಿದೀಪ್ತಿಯನ್ನು ಫ್ಲೂರೋಸೆನ್ಸ್ ಪ್ರದರ್ಶಿಸುತ್ತದೆ. ಪೆಪ್ಟೈಡನ್ನು ಪ್ರತ್ಯಾಮ್ಲೀಯ ಪರಿಸ್ಥಿತಿಯಲ್ಲಿ ಡಾನ್ಸೈಲ್ ಕ್ಲೋರೈಡಿನೊಂದಿಗೆ ಸಂಸ್ಕರಿಸಿದಾಗ ಅಭಿಕಾರಕ ಅಮೈನೋ ಪುಂಜದೊಂದಿಗೆ ಕೂಡಿಕೆಯಾಗುತ್ತದೆ. ಅನಂತರ ಆಮ್ಲದಿಂದ ಸಂಸ್ಕರಿಸಿ ಡಾನ್ಸೈಲ್ ಅಮೈನೋ ಆಮ್ಲವನ್ನು ಪಡೆದು ಅತ್ಯಲ್ಪ ಪ್ರಮಾಣದಲ್ಲಿ ಗುರುತಿಸಿ ನಿರ್ಧರಿಸಬಹುದು.

ರಾಸಾಯನಿಕ ವಿಧಾನಗಳ ಜೊತೆಗೆ ಕಿಣ್ವಗಳನ್ನು ಬಳಸಿ ಅಮೈನೋ ಅಂತ್ಯದ ಆಮ್ಲಗಳನ್ನು ಗುರುತಿಸಬಹುದು. ಲ್ಯೂಸಿನ್ ಅಮೈನೋ ಪೆಪ್ಟಿಡೇಸ್ ಕಿಣ್ವ ವರ್ತಿಸಲು ಮುಕ್ತ ಅಮೈನೋ ಪುಂಜವಿರಬೇಕು. ಆದ್ದರಿಂದ ಈ ಕಿಣ್ವ ಒಂದು ಪೆಪ್ಟೈಡಿನ ಅಮೈನೋ ಪುಂಜ ಅಂತ್ಯದಿಂದ ಪ್ರಾರಂಭಿಸಿ, ಒಂದಾದ ಅನಂತರ ಇನ್ನೊಂದು ಅಮೈನೋ ಆಮ್ಲವನ್ನು ಬಿಡುಗಡೆ ಮಾಡುತ್ತಾ ಹೋಗುತ್ತದೆ. ಪೆಪ್ಟೈಡಿನಲ್ಲಿ ಎ, ಬಿ, ಸಿ, ಡಿ ಎಂಬ ನಾಲ್ಕು ವಿವಿಧ ಅಮೈನೋ ಆಮ್ಲಗಳು ಅನುಕ್ರಮವಾಗಿದ್ದರೆ ಯಾವುದೇ ಕಾಲಾವಧಿಯಲ್ಲಿ ಎ ಗಿಂತ ಬಿ ಮತ್ತು ಸಿ ಗಿಂತ ಅಧಿಕ ಪ್ರಮಾಣದಲ್ಲಿ ಕಿಣ್ವದಿಂದ ಬಿಡುಗಡೆಯಾಗಬೇಕೆಂದು ನಿರೀಕ್ಷಿಸಬಹುದು. ಆದ್ದರಿಂದ ಅಮೈನೋ ಆಮ್ಲಗಳು ಬಿಡುಗಡೆಯಾಗುವ ದರವ್‌ನ್ನು ನಿರ್ಧರಿಸಿ ಎಬಿಸಿ ಅನುಕ್ರಮವನ್ನು ಊಹಿಸಬಹುದು. ಲ್ಯೂಸಿನ್ ಅಮೈನೋ ಪೆಪ್ಟಿಡೇಸ್ ಅಮೈನೋ ಅಂತ್ಯದ ಲ್ಯೂಸಿನನ್ನು ತ್ವರಿತವಾಗಿ ಬಿಡುಗಡೆ ಮಾಡಿದರು ಇತರ ಅಮೈನೋ ಆಮ್ಲಗಳನ್ನು ಬಿಡುಗಡೆ ಮಾಡುತ್ತದೆ.

ಅನೇಕ ಸಂದರ್ಭಗಳಲ್ಲಿ ಪ್ರೊಟೀನ್ ಅಮೈನೋ ಅಂತ್ಯ, ಅಮೈನೋ ಆಮ್ಲಗಳ ಸಂಖ್ಯೆ, ಅದರ ಪೆಪ್ಟೈಡ್ ಶ್ರೇಣಿಗಳ ಸಂಖ್ಯೆಗೆ ಸಮವಾಗಿರುತ್ತದೆ. ಆದರೂ ಅನೇಕ ಸಂದರ್ಭದಲ್ಲಿ ಪ್ರೊಟೀನುಗಳ ಮುಕ್ತ ಅಮೈನೋ ಪುಂಜಗಳೇ ಇರುವುದಿಲ್ಲ. ಉದಾ: ಸೈಟೊಕ್ರೋಮ್ ಸಿ, ಓವಾಲ್ಬುಮಿನ್ ಮತ್ತು ಹೊಗೆಸೊಪ್ಪಿನ ಚುಕ್ಕೆ ರೋಗದ ವೈರಸ್ಸಿನ ಪ್ರೊಟೀನ್. ಈ ಸಂದರ್ಭಗಳಲ್ಲಿ ಅಂತ್ಯ ಅಮೈನೋ ಪುಂಜ, ಎನ್–ಅಸಿಟೈಲ್ ಪುಂಜದಿಂದ ಮರೆಮಾಚಲ್ಪಟ್ಟಿರುತ್ತದೆ.

ಕಾರ್ಬಾಕ್ಸಿ ಅಂತ್ಯದಲ್ಲಿರುವ ಅಮೈನೋ ಆಮ್ಲಗಳನ್ನು ಗುರುತಿಸಲು ಅನುಸರಿಸುವ ರಾಸಾಯನಿಕ ವಿಧಾನಗಳ ಪೈಕಿ ಒಂದರಲ್ಲಿ ಪ್ರೊಟೀನ್ ಅಥವಾ ಪೆಪ್ಟೈಡನ್ನು ನಿರ್ಜಲ ಪರಿಸ್ಥಿತಿಗಳಲ್ಲಿ ಹೈಡ್ರಜೀನ್‌ನಿಂದ ೧೦೦° ಸೆ ಯಲ್ಲಿ ಕಾಯಿಸಲಾಗುತ್ತದೆ. ಹೈಡ್ರಾಜಿನ್ ವಿಚ್ಛೇದನದಿಂದ ಪೆಪ್ಟೈಡ್ ಬಂಧಗಳು ಕತ್ತರಿಸಿಹೋಗಿ ಕಾರ್ಬಾಕ್ಸಲಿಕ್ ಅಂತ್ಯದಲ್ಲಿರುವ ಅಮೈನೋ ಆಮ್ಲ ಉಳಿದ ಅಮೈನೋ ಆಮ್ಲಗಳ ಅಮೈನೋ ಆಮ್ಲ ಹೈಡ್ರಾಜೈಡುಗಳಾಗಿ ಪರಿವರ್ತಿತವಾಗುತ್ತವೆ. ಮುಕ್ತ ಅಮೈನೋ ಆಮ್ಲವನ್ನು ಕ್ರೊಮೊಟಾಗ್ರಫಿ ವಿಧಾನಗಳಿಂದ ಗುರುತಿಸಬಹುದು. ಕಾರ್ಬಾಕ್ಸಿ ಅಂತ್ಯ ಅಮೈನೋ ಆಮ್ಲವನ್ನು ಗುರುತಿಸಲು ಮೇದೋಜೀರಕದ ಕಿಣ್ವ ಪೆಪ್ಟಿಡೇಸನ್ನು ಬಳಸಬಹುದು. ಕಾರ್ಬಾಕ್ಸಿ ಪೆಪ್ಟಿಡೇಸ್ ಎ ಮುಕ್ತ ಆಲ್ಫಾ–ಕಾರ್ಬಾಕ್ಸಿಲ್ ಪುಂಜವುಳ್ಳ ಅಮೈನೋ ಆಮ್ಲ ಅಂಶವನ್ನು ಮಾತ್ರ ಬಿಡುಗಡೆ ಮಾಡುತ್ತದೆ. ಈ ಸಂದರ್ಭದಲ್ಲಿ ಸಹ ಅಮೈನೋ ಆಮ್ಲಗಳು ಬಿಡುಗಡೆಯಾಗುವ ಪ್ರಮಾಣದ ಆಧಾರದ ಮೇಲೆ ಕಾರ್ಬಾಕ್ಸಿ ಅಂತ್ಯ ಅಮೈನೋ ಆಮ್ಲವನ್ನು ಗುರುತಿಸಬಹುದು. ಕಾರ್ಬಾಕ್ಸಿ ಪೆಪ್ಟಿಡೇಸ್ ಕಾರ್ಬಾಕ್ಸಿ ಅಂತ್ಯದಲ್ಲಿರುವ ಪ್ರೊಟೀನ್ ಅರ್ಜಿನಿನ್ ಅಥವಾ ಲೈಸಿನ್ ಅಮೈನೋ ಆಮ್ಲಗಳನ್ನು ಬಿಡುಗಡೆ ಮಾಡಲಾರದು. ಈ ಕಿಣ್ವಕ್ಕಿಂತ ವಿಭಿನ್ನವಾದ ಕಾರ್ಬಾಕ್ಸಿ ಪೆಪ್ಟಿಡೇಸ್ B ಕಾರ್ಬಾಕ್ಸಿ ಅಂತ್ಯದಲ್ಲಿರುವ ಲೈಸಿನ್ ಅಥವಾ ಅರ್ಜಿನಿನ್ ಅಂಶಗಳನ್ನು ಬಿಡುಗಡೆ ಮಾಡುತ್ತದೆ.

ಅಮೈನೋ ಆಮ್ಲಾನುಕ್ರಮದ ನಿರ್ಧರಣ: ಇಲ್ಲಿ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳಿವು: ೧. ಕಿಣ್ವ ಅಥವಾ ರಾಸಾಯನಿಕ ವಿಧಾನಗಳಿಂದ ಪ್ರೊಟೀನನ್ನು ಭಾಗಶಃ ಜಲವಿಚ್ಛೇದಿಸುವುದು. ೨. ದೊರಕುವ ಪೆಪ್ಟೈಡುಗಳನ್ನು ಪ್ರತ್ಯೇಕಿಸುವುದು. ೩. ಸಣ್ಣ ಸಣ್ಣ ಪೆಪ್ಟೈಡುಗಳ ಅನುಕ್ರಮವನ್ನು ನಿರ್ಧರಿಸುವುದು. ೪. ಅಧಿವ್ಯಾಪಿಸುವ ಪೆಪ್ಟೈಡುಗಳ ಸಹಾಯದಿಂದ ಪೂರ್ಣ ಅನುಕ್ರಮವನ್ನು ನಿರ್ಧರಿಸುವುದು. ಈ ಸಾಮಾನ್ಯ ವಿಧಾನವನ್ನು ಅನುಸರಿಸುವ ಮುನ್ನ ಸಿಸ್ಟೈನ್ ಮತ್ತು ಸಿಸ್ಟೀನ್ ಅಂಶಗಳನ್ನು ಮಾರ್ಪಡಿಸಬೇಕು. ಇಲ್ಲದಿದ್ದರೆ ಅವು ಅನುಕ್ರಮ ವಿಶ್ಲೇಷಣೆಯಲ್ಲಿ ಬಳಸುವ ಅನೇಕ ಅಭಿಕಾರಕಗಳೊಂದಿಗೆ ವರ್ತಿಸುವ ಅಪಾಯವಿದೆ. ಮತ್ತು ಡೈಸಲ್ಫೈಡ್ ಬಂಧದ ವಿನಿಮಯವಾಗುತ್ತದೆ. ಈ ಅಮೈನೋ ಆಮ್ಲಗಳನ್ನು ನಿರ್ಧರಿಸುವುದು ಕಷ್ಟ.

ಪಾಲಿಪೆಪ್ಟೈಡ್ ಅಥವಾ ಪ್ರೊಟೀನನ್ನು ಭಾಗಶಃ ಜಲವಿಚ್ಛೇದಿಸಲು ವಿಶಿಷ್ಟವಾದ ಕಿಣ್ವಗಳನ್ನು ಬಳಸಲಾಗುತ್ತದೆ. ಇವು ಪ್ರೊಟೀನುಗಳ ಸೀಮಿತ ಭೇದನೆಯನ್ನು ಉಂಟುಮಾಡುವುದರ ಜೊತೆಗೆ ದೊಡ್ಡ ಪೆಪ್ಟೈಡುಗಳನ್ನು ಕೂಡ ಬಿಡುಗಡೆ ಮಾಡುತ್ತದೆ. ಪ್ರತಿಯೊಂದು ಪೆಪ್ಟೈಡನ್ನು ಶುದ್ಧರೂಪದಲ್ಲಿ ಕ್ರೊಮಟಾಗ್ರಫಿ ಅಥವಾ ಎಲೆಕ್ಟ್ರೊಫಾರಿಸಿಸ್ ವಿಧಾನದಿಂದ ಪ್ರತ್ಯೇಕಿಸಬೇಕಾದ್ದರಿಂದ ಪೆಪ್ಟೈಡುಗಳು ಸಣ್ಣಗಿದ್ದರೆ ಉತ್ತಮ. ಬಳಸುವ ಕಿಣ್ವಗಳೆಂದರೆ ಟ್ರಿಪ್ಸಿನ್, ಕೈಮೊಟ್ರಿಪ್ಸಿನ್, ಪೆಪ್ಸಿನ್ ಮತ್ತು ಪಪೇನ್. ಟ್ರಿಪ್ಸಿನ್ ಕಿಣ್ವ ಅರ್ಜಿನಿನ್ ಕಾರ್ಬಾಕ್ಸಿ ಪುಂಜಗಳಿಂದ ರಚಿತವಾದ ಪೆಪ್ಟೈಡ್ ಬಂಧಗಳ ಜಲವಿಚ್ಛೇದನೆಯನ್ನು ಮಾತ್ರ ವರ್ಧಿಸುತ್ತದೆ. ಕೈಮೊಟ್ರಿಪಿಸನ್, ಲ್ಯೂಸಿನ್ ಮತ್ತು ಟೈರೊಸಿನ್ನುಗಳ ಕಾರ್ಬಾಕ್ಸಿ ಪುಂಜಗಳು ರಚಿಸುವ ಪೆಪ್ಟೈಡುಗಳ ಭೇದನೆಯನ್ನು ವೇಗವರ್ಧಿಸುತ್ತವೆ. ಸಾಮಾನ್ಯವಾಗಿ ಟ್ರಿಪ್ಸಿನ ಬಳಕೆಯೇ ಹೆಚ್ಚು. ಟ್ರಿಪ್ಸಿನ್ ಪಚನದಿಂದ ದೊರೆತ ಪೆಪ್ಟೈಡುಗಳ ಮುಂದಿನ ಅನುಕ್ರಮ ವಿಶ್ಲೇಷಣೆಗೆ ಉಪಯುಕ್ತವಾಗಿರುತ್ತವೆ. ಎರಡನೆಯ ಪೆಪ್ಟೈಡ ಗಣವನ್ನು ಕೈಮೊಟ್ರಿಪ್ಸಿನ್ ಅಥವಾ ಪೆಪ್ಸಿನ್ನುಗಳಿಂದ ಪಡೆಯಲಾಗುವುದು. ಪಪೇನ್, ತರ್ಮೋಲೈಸಿನ್ ಅಥವಾ ಎಲಾಸ್ಟೇಸುಗಳನ್ನು ಬಳಸುವ ಪದ್ಧತಿ ಇದೆ. ಸಿಸ್ಟಿನ್ ಅಥವಾ ಲೈಸಿನ್ನುಗಳನ್ನು ಮಾರ್ಪಡಿಸಿ ಕಿಣ್ವಗಳ ಭೇದನ ವ್ಯಾಪ್ತಿಯನ್ನು ಹೆಚ್ಚಿಸಿ ಅಥವಾ ಸೀಮಿತಗೊಳಿಸಿ ಅಪೇಕ್ಷಿತ ಪೆಪ್ಟೈಡುಗಳನ್ನು ಪಡೆಯಬಹುದು.

ಪೆಪ್ಟೈಡುಗಳನ್ನು ಬೇರ್ಪಡಿಸಿ ಶುದ್ಧಮಾಡಿದ ಬಳಿಕ ಅವುಗಳ ಅಮೈನೋ ಆಮ್ಲ ಅನುಕ್ರಮವನ್ನು ಕಂಡುಹಿಡಿಯಬೇಕು. ಸಣ್ಣ ಪೆಪ್ಟೈಡುಗಳನ್ನು ಫೀನೈಲ್‌ತಯೋಹೈಡಂಟಾಯಿನ್ ವಿಧಾನದಿಂದ ಅಮೈನೋ ಅಂತ್ಯದಿಂದ ಪ್ರಾರಂಭಿಸಿ ಹಂತ ಹಂತವಾಗಿ ಅನುಕ್ರಮವನ್ನು ನಿರ್ಧರಿಸಬಹುದು. ಅಮೈನೋ ಮತ್ತು ಕಾರ್ಬಾಕ್ಸಿ ಅಂತ್ಯದ ಅಮೈನೋ ಅಮ್ಲಗಳನ್ನು ಕಿಣ್ವಗಳ ಬಳಕೆಯಿಂದ ಗುರುತಿಸಬಹುದು. ದೊಡ್ಡ ಪೆಪ್ಟೈಡುಗಳ ಸಂದರ್ಭದಲ್ಲಿ ಅವನ್ನು ಪುನಃ ಕಿಣ್ವಗಳಿಂದ ಪಚನ ಮಾಡಬೇಕಾಗಬಹುದು. ಟ್ರಿಪ್ಸಿನ್ನಿನಿಂದ ಪಚನವಾಗುವ ಬಂಧಗಳನ್ನು ಕೈಮೊಟ್ರಿಪ್ಸಿನ್, ಪೆಪ್ಸಿನ್, ಪಪೇನ್ ಅಥವಾ ತರ್ಮೊಲೈಸಿನ್ನುಗಳು ಭೇದಿಸುವುದರಿಂದ ಟ್ರಿಪ್ಸಿಕ್ ಪೆಪ್ಟೈಡುಗಳನ್ನು ಈ ಕಿಣ್ವಗಳಿಂದ ವಿಭಜಿಸಿ ಸಣ್ಣ ಸಣ್ಣ ಪೆಪ್ಟೈಡುಗಳನ್ನು ಪಡೆಯಬಹುದು.

ಒಂದು ಪ್ರೊಟೀನಿನ ಅಮೈನೋ ಆಮ್ಲ ಅನುಕ್ರಮವನ್ನು ನಿರ್ಧರಿಸಿದ ಅನಂತರ ಡೈಸಲ್ಫೈಡ್ ಬಂಧಗಳನ್ನು ರಚಿಸುವ ಅರೆಸಿಸ್ಟೀನ್ ಶೇಷಗಳನ್ನು ಗುರುತಿಸಬೇಕು. ಥಯಾಲ್‌ಪುಂಜಗಳಿಲ್ಲದೆ ಡೈಸಲ್ಫೈಡ್ ಬಂಧಗಳನ್ನು ಮಾತ್ರ ಒಳಗೊಂಡಿರುವ ಪ್ರೊಟೀನುಗಳ ಸಂದರ್ಭದಲ್ಲಿ ಸಹಜ ಪ್ರೊಟೀನನ್ನು, ಪ್ರೊಟೀನ್ ವಿಚ್ಛೇದಕ ಕಿಣ್ವಗಳಿಂದ ಪಚನಮಾಡಿ ಸಿಸ್ಟೈನ್‌ಯುತ ಪೆಪ್ಟೈಡುಗಳನ್ನು ಶುದ್ಧರೂಪದಲ್ಲಿ ಪಡೆಯಬಹುದು. ಶುದ್ಧ ಪೆಪ್ಟೈಡನ್ನು ದೊರಕಿಸಿಕೊಂಡ ಬಳಿಕ ಅದನ್ನು ಮರ್ಕಾಪ್ಟೋ ಎಥನಾಲಿನಿಂದ ಅಪಕರ್ಷಿಸಿ, ಅಯಡೊ ಅಸಿಟೇಟಿನಿಂದ ಸಂಸ್ಕರಿಸಿ, ೨ ಪೆಪ್ಟೈಡುಗಳನ್ನು ಬೇರ್ಪಡಿಸಬಹುದು. ಅನಂತರ ಅವುಗಳ ಅನುಕ್ರಮವನ್ನು ನಿರ್ಧರಿಸಬೇಕು. ಅರೆಸಿಸ್ಟೈನುಗಳ ಅಕ್ಕಪಕ್ಕದ ಅಮೈನೋ ಅಮ್ಲಗಳ ಪರಿಚಯ ಈಗಾಗಲೇ ಆಗಿರುವುದರಿಂದ ಡೈಸಲ್ಫೈಡ್ ಬಂಧಗಳನ್ನು ರಚಿಸುವ ಅರೆಸಿಸ್ಟೈನ್ ಅಂಶಗಳನ್ನು ಗುರುತಿಸಬಹುದು. ಥಯಾಲ್ ಪುಂಜಗಳು ಮತ್ತು ಡೈಸಲ್ಫೈಡ್

ಬಂಧ ಎರಡನ್ನು ಒಳಗೊಂಡಿರುವ ಪ್ರೋಟೀನಿನ ಸಂಧರ್ಭದಲ್ಲಿ ಇದನ್ನು ವಿಕೃತಿಗೊಳಿಸುವ ಪರಿಸ್ಥಿತಿಗಳಲ್ಲಿ ೧೪C ಅಯಡೊಅಸಿಟೇಟಿನಿಂದ ಸಂಸ್ಕರಿಸಿದರೆ ಥಯಾಲ್ ಪುಂಜಗಳು ಮಾತ್ರ (ವಿಕಿರಣಪಟು) ಅಂಕಿತವಾಗುತ್ತವೆ. ಅನಂತರ ಮೇಲೆ ವಿವರಿಸಿದ ವಿಧಾನದಿಂದ ಅರೆಸಿಸ್ಟೈನ್ ಶೇಷಗಳನ್ನು ಗುರುತಿಸಬಹುದು.

ಮೇಲೆ ಹೇಳಿದ ವಿಧಾನಗಳಿಂದ ಈಗ ಅನೇಕ ಪ್ರೋಟೀನುಗಳ ಅನುಕ್ರಮವನ್ನು ನಿರ್ಧರಿಸಲಾಗಿದೆ. ಒಂದು ಪ್ರೋಟೀನಿನ ಪೂರ್ಣ ಅನುಕ್ರಮವನ್ನು ಪ್ರಪಥಮವಾಗಿ ಕಂಡು ಹಿಡಿದ ಕೀರ್ತಿ ಎಫ್. ಸ್ಯಾಂಗರ್ ಎಂಬಾತನಿಗೆ ಸಲ್ಲುತ್ತದೆ. ಇನ್ಸುಲಿನ್ನಿನ ಅಮೈನೋ ಅಮ್ಲದ ಅನುಕ್ರಮವನ್ನು ಕಂಡುಹಿಡಿದುದಕ್ಕೋಸ್ಕರ ಇವನಿಗೆ (೧೯೫೮) ನೊಬೆಲ್ ಪಾರಿತೋಷಕ ದೊರೆಯಿತು.

ಪ್ರೋಟೀನುಗಳ ವಿನ್ಯಾಸವನ್ನು ಬಲುಮಟ್ಟಿಗೆ ಕ್ಷ-ಕಿರಣಗಳ ಬಳಕೆಯಿಂದ ಗುರುತಿಸಬಹುದು. ಮಯೊಗ್ಲೋಬಿನ್‌ನ ಹರಳನ್ನು ಈ ವಿಧಾನದಿಂದ ಪರೀಕ್ಷಿಸಿ ಅದರ ವಿನ್ಯಾಸವನ್ನು ೧೯೧೫ರಲ್ಲಿ ಮೊದಲಬಾರಿಗೆ ಕಂಡುಹಿಡಿಯಲಾಯಿತು. ಅನಂತರ ಅನೇಕ ಪ್ರೋಟೀನುಗಳ ವಿನ್ಯಾಸಗಳನ್ನು ನಿರ್ಧರಿಸಲಾಗಿದೆ. ಅಣುವಿನಲ್ಲಿ ಒಂದು ಪರಮಾಣುವಿಗೂ ಇನ್ನೊಂದು ಪರಮಾಣುವಿಗೂ ನಡುವೆ ಇರುವ ಅಂತರವನ್ನು ಕಂಡುಹಿಡಿಯುವ ವಿಧಾನ ಇದೊಂದೇ.

ಪ್ರೋಟೀನುಗಳ ವಿನ್ಯಾಸವನ್ನು ಕ್ಷ-ಕಿರಣಗಳಿಂದ ಗುರುತಿಸುವುದಕ್ಕೂ ಮುಂಚಿತವಾಗಿ ಈ ವಿಧಾನವನ್ನು ಅಮೈನೋ ಅಮ್ಲಗಳ ಮತ್ತು ಪೆಪ್ಟೈಡುಗಳ ವಿಶ್ಲೇಷಣೆಗೆ ಬಳಸಲಾಗಿತ್ತು. ಪೆಪ್ಟೈಡುಗಳಲ್ಲಿ ಸಿ-ಎನ್ ಬಂಧ ದೂರ ಇತರ ಅನೇಕ ಸಂಯುಕ್ತಗಳಲ್ಲಿರುವ ಬಂಧ ದೂರಕ್ಕಿಂತ ಚಿಕ್ಕದಾಗಿದೆ. ಆದ್ದರಿಂದ, ಪೆಪ್ಟೈಡ್ ಬಂಧಕ್ಕೆ ಭಾಗಶಃ ಬಂಧುಗುಣಗಳಿವೆ. ಆದರೆ, ಈ ಬಂಧಕ್ಕೆ ಪಾಲಿಪೆಪ್ಟೈಡ್ ಬೆನ್ನೆಲುಬಿನಲ್ಲಿಯ ಇನ್ನೆರಡು ಬಂಧಗಳಿಗಿರುವ (ಎನ್, ಆಲ್ಫ್ ಮತ್ತು ಸಿ-ಸಿ ಆಲ್ಫಾ) ಭ್ರಮಣ ಸ್ವಾತಂತ್ರ್ಯವಿರುವುದಿಲ್ಲ. ಪೆಪ್ಟೈಡ್ ಬಂಧದ ೬ ಪರಮಾಣುಗಳು ಒಂದೇ ಸಮತಲದಲ್ಲಿದ್ದು ಈ ಬಂಧ ದೃಢಸಮತಲ ವ್ಯವಸ್ಥೆಯಲ್ಲಿದೆ. ಪೆಪ್ಟೈಡ್ ಬಂಧದ ೨ ಪಾರ್ಶ್ವಗಳಲ್ಲಿರುವ ಸಿ-ಆಲ್ಫಾ ಪರಮಾಣುಗಳು ಸಿಸ್ (ಸಮಪಕ್ಷ) ಅಥವಾ ಟ್ರಾನ್ಸ್ (ವಿರುದ್ಧ ಪಕ್ಷ) ಸ್ಥಳಗಳಲ್ಲಿರಬಹುದು. ಪಾರ್ಶ್ವಪುಂಜಗಳು ಭ್ರಮಣಕ್ಕೆ ೩ ಅಯಾಮಗಳಲ್ಲಿ ಆಡಚಣೆ ಒಡ್ಡುವುದರಿಂದ ಸಿಸ್ ವ್ಯವಸ್ಥೆಯಿರುವುದಕ್ಕಿಂತ ಟ್ರಾನ್ಸ್ ವ್ಯವಸ್ಥೆ ಇರಬಹುದಾದ ಸಾಧ್ಯತೆ ಹೆಚ್ಚು.

ಪೆಪ್ಟೈಡ್ ಬಂಧದ ಜ್ಯಾಮಿತೀಯ ಮತ್ತು ಭ್ರಮಣ ಸ್ವಾತಂತ್ರ್ಯದ ದೃಷ್ಟಿಯಿಂದ ಪಾಲಿಪೆಪ್ಟೈಡುಗಳಲ್ಲಿ ಮತ್ತು ಪ್ರೋಟೀನುಗಳಲ್ಲಿ ಬಲಮುರಿ-ಕುಂಡಲಿನಿ ರಚನೆಗಳಿರಬೇಕೆಂದು ತೀರ್ಮಾನಿಸಲಾಗಿದೆ. ಪೆಪ್ಟೈಡಿನ ಸರಣಿಗಳು ಹೀಗೆ ಮಡಚಿಕೊಂಡಾಗ ಕುಂಡಲಿನಿಯ ಒಂದೊಂದು ತಿರುವಿಗೆ ೩.೬ ಅಮೈನೋ ಅಮ್ಲ ಅಂಶಗಳು ಬೇಕಾಗುತ್ತವೆ. ಒಂದೊಂದು ತಿರುವಿನ ಉದ್ದ ೫.೪Å. ಈ ರಚನೆಯನ್ನು ಸಿ = O ಮತ್ತು ಎನ್-ಎಚ್ ಪುಂಜಗಳ ನಡುವೆ ರಚಿತವಾಗುವ ಹೈಡ್ರೋಜನ್ ಬಂಧಗಳನ್ನು ವ್ಯಾಪಕವಾಗಿ ಸ್ಥಿರೀಕರಿಸುತ್ತವೆ. ಕ್ಷ-ಕಿರಣಗಳು ಹೈಡ್ರೋಜನ್ ಬಂಧಗಳನ್ನು ಪತ್ತೆ ಮಾಡಲಾರವು. ಆದರೆ ಸಿ = O ಮತ್ತು ಎನ್-ಎಚ್ ಪುಂಜಗಳ ನಡುವೆ ಇರುವ ಅಂತರವನ್ನು ಈ ವಿಧಾನದಿಂದ ಅಳೆದು ಹೈಡ್ರೋಜನ್ ಬಂಧ ದೂರಕ್ಕೆ ಹೊಲಿಸಿದಾಗ ಇವೆರಡು ಬಲುಮಟ್ಟಿಗೆ ತಾಳೆಯಾಗುತ್ತವೆ. ಬೇರೆ ವಿಧಾನಗಳಿಂದ ಸಹ ಪ್ರೋಟೀನಿನಲ್ಲಿ ಹೈಡೋಜನ್ ಬಂಧಗಳಿವೆ ಎಂದು ತೋರಿಸಲಾಗಿದೆ.

ಕೆಲವು ಪ್ರೋಟೀನುಗಳಲ್ಲಿ ದೀರ್ಘ ಆಲ್ಫಾ-ಕುಂಡಲಿನಿ ಭಾಗಗಳಿದ್ದರೂ ಆಲ್ಫಾ ಕುಂಡಲಿನಿ ಮಾತ್ರ ಪ್ರೋಟೀನಿನ ದ್ವಿತೀಯಕ ರಚನೆಯಲ್ಲಿ ಅಲ್ಪ ಪಾತ್ರವಹಿಸುತ್ತದೆ. ಕೆಲವು ಪ್ರೋಟೀನುಗಳಲ್ಲಿ ನಾಪತ್ತೆಯೇ ಆಗಿರಬಹುದು. ಇಂಥ ಪ್ರೋಟೀನುಗಳಲ್ಲಿ ಯಾದೃಚ್ಛಿಕ ಸುರುಳಿ ರಚನೆ ಪ್ರಮುಖವಾದದ್ದು. ಓಎನ್‌ಡಿ (ಆಪ್ಟಿಕಲ್ ರೊಟೇಟರಿ ಡಿಸ್ಪರ್ಶನ್ - ಪ್ರಕಾಶೀಯ ಆವರ್ತಕ ವರ್ಣವಿಭಜನೆ) ಮತ್ತು ಸಿಡಿ (ಸರ್ಕ್ಯುಲರ್ ಡೈಕ್ರೋಯಿಸಮ್-ವರ್ತುಳೀಯ ದ್ವಿವರ್ಣತೆ) ವಿಧಾನಗಳಿಂದ ಒಂದು ಪ್ರೋಟೀನಿನಲ್ಲಿ ಆಲ್ಫಾ-ಕುಂಡಲಿನಿಯ ಪ್ರಮಾಣವನ್ನು ಸರಿಸುಮಾರಾಗಿ ನಿರ್ಧರಿಸಬಹುದು. ಉಷ್ಣ ಯೂರಿಯಾ ಹಾಗೂ ಹೈಡ್ರೋಜನ್ ಬಂಧವನ್ನು ಮುರಿಯಬಲ್ಲ ಇತರ ರಾಸಾಯನಿಕ ವಸ್ತುಗಳು ಅಲ್ಫಾ-ಕುಂಡಿಲಿನಿಯ ರಚನೆಯನ್ನು ನಷ್ಟಗೊಳಿಸುತ್ತವೆ. ಕೆಲವು ಅಮೈನೋ ಆಮ್ಲಗಳು, ಪ್ರೋಟೀನ್, ಗ್ಲೈಸಿನ್, ಟೈರೊಸೀನ್ ಮತ್ತು ಅಸ್ಪಾರಿಜಿನ್ ಅಲ್ಫಾ-ಕುಂಡಲಿನಿಯನ್ನು ಅಸ್ಥಿರಗೊಳಿಸುವ ಪ್ರವೃತ್ತಿ ಪ್ರದರ್ಶಿಸುತ್ತವೆ. ತದ್ವಿರುದ್ಧವಾಗಿ ಅಲಾನಿನ್, ಲ್ಯೂಸಿನ್, ಹಿಸ್ಟಿಡಿನ್, ಮೆಥಿಯೊನಿನ್, ಗ್ಲುಟಾಮಿನ್, ಟ್ರಿಪ್ಟೊಫಾನ್, ವ್ಯಾಲಿನ್ ಗ್ಲುಟಾಮಿಕ್ ಆಮ್ಲ ಮತ್ತು ಫೀನೈಲ್ ಅಲಾನಿನುಗಳು ಅನುಕ್ರಮದಲ್ಲಿ ಒಂದೆಡೆ ಇದ್ದರೆ ಆಲ್ಫಾ-ಕುಂಡಲಿನಿಯನ್ನು ರಚಿಸುವ ಕಡೆ ಒಲವನ್ನು ತೋರುತ್ತವೆ.

ಕೆರಾಟಿನ್ನಿನ ಕ್ಷ-ಕಿರಣ ವಿಶ್ಲೇಷಣೆಯಿಂದ ಆಲ್ಫಾ-ಕುಂಡಲಿನಿಗಳು ಪ್ರೋಟೀನ್ ರಚನೆಯಲ್ಲಿ ಭಾಗವಹಿಸುತ್ತವೆ ಎಂದು ಸೂಚನೆ ದೊರೆರಿದೆ. ಬೀಟಾ-ಕೆರಾಟಿನ್ನಿನ ಸಂದರ್ಭದಲ್ಲಿ ಬೇರೊಂದು ಬಗೆಯ ರಚನೆಗಳು ಪ್ರೋಟೀನುಗಳ ದ್ವಿತೀಯ ರಚನೆಗೆ ತಮ್ಮ ಕೊಡುಗೆ ನೀಡುತ್ತವೆ. ಇದನ್ನು ಬೀಟಾ ರಚನೆ ಅಥವಾ ನೆರಿಗೆಹಾಳೆ ರಚನೆ ಎನ್ನುತ್ತಾರೆ. ಪ್ರೋಟೀನುಗಳಲ್ಲಿ ಎರಡು ಬಗೆಯ ನೆರಿಗೆಹಾಳೆ ರಚನೆಗಳಿದ್ದು, ಎರಡು ಪೆಪ್ಟೈಡ್ ಬಂಧದ ರಚನೆ ವಿಧಿಸುವ ನಿರ್ಬಂಧಗಳನ್ನು ತೃಪ್ತಿಗೊಳಿಸುತ್ತವೆ. ಯಾವುದೇ ಬೀಟಾ ರಚನೆಯಲ್ಲಿ ಎರಡು ವಿಸ್ತೃತ ಪಾಲಿಪೆಪ್ಟೈಡ್ ಸರಣಿಗಳು ಪರಸ್ಪರ ದಿಕ್ಕುಗಳಲ್ಲಿ ಅಂದರೆ ಅವುಗಳ ಅಮೈನೋ ಅಂತ್ಯ ಮತ್ತು ಕಾರ್ಬಾಕ್ಸಲಿಕ್ ಅಂತ್ಯಗಳಿಗೆ ಸಂಬಂಧಪಟ್ಟಂತೆ ಇರುತ್ತವೆ. ಈ ಬಗೆಯ ವ್ಯವಸ್ಥೆಗೆ ವಿರುದ್ಧ ಸಮಾಂತರ ನೆರಿಗೆ ಹಾಳೆ ರಚನೆ ಎಂದು ಹೆಸರು. ಸಮಾಂತರ ನೆರಿಗೆ ಹಾಳೆ ಇನ್ನೊಂದು ರಚನೆ. ಇದರಲ್ಲಿ ಎರಡು ವಿಸ್ತೃತ ಪೆಪ್ಟೈಡ್ ಸರಣಿಗಳು ಒಂದೇ ದಿಕ್ಕಿನ ಕಡೆ ತಿರುಗಿರುತ್ತವೆ. ಇವೆರಡು ರಚನೆಗಳನ್ನು ಪಕ್ಕದ ಶ್ರೇಣಿಯ ಪೆಪ್ಟೈಡ್ ಬಂಧಗಳ ಪರಮಾಣುಗಳ ನಡುವೆ ಏರ್ಪಡುವ ಅಸಂಖ್ಯಾತ ಹೈಡ್ರೋಜನ್ ಬಂಧಗಳು ಸ್ಥಿರಗೊಳಿಸುತ್ತವೆ. ಸೂಪರ್ ಆಕ್ಸೈಡ್ ಡಿಸ್‌ಮ್ಯುಟೇಸ್ ಮತ್ತು ಫ್ಲೇವಡಾಕ್ಸಿನ್ ಪ್ರೋಟೀನುಗಳಲ್ಲಿ ಈ ಬಗೆಯ ರಚನೆಗಳಿವೆ. ಸಾಧಾರಣವಾಗಿ ಗ್ಲೋಬ್ಯುಲಿನ್‌ಗಳಲ್ಲಿ ನೆರಿಗೆ ಹಾಳೆ ರಚನೆಗಳಿರುವುದಿಲ್ಲ. ತಂತುಗಳಂತೆ ಇರುವ ಪ್ರೋಟೀನುಗಳಲ್ಲಿ (ರೇಷ್ಮೆ, ಕೂದಲಿನ ಕೆರಾಟಿನ್) ಇವು ಮುಖ್ಯ ರಚನೆಗಳು. ಕೆಲವು ಅಮೈನೋ ಆಮ್ಲಗಳು ಗ್ಲುಟಾಮಿಕ್ ಆಮ್ಲ, ಪ್ರೋಟೀನ್, ಹಿಸ್ಟಿಡಿನ್, ಸಿರೀನ್, ಲೈಸಿನ್ ನೆರಿಗೆಹಾಳೆ ರಚನೆಯನ್ನು ಅಸ್ಥಿರಗೊಳಿಸುತ್ತವೆ. ಇನ್ನು ಕೆಲವು (ಮೆಥಿಯೊನಿಯನ್, ಲ್ಯೂಸಿನ್) ಈ ಬಗೆಯ ರಚನೆಗೆ ಉತ್ತೇಜನ ನೀಡುತ್ತವೆ.

ಪ್ರೋಟೀನಿನಲ್ಲಿರುವ ಆಲ್ಫಾ-ಕುಂಡಲಿನಿ, ಬೀಟಾ ರಚನೆಗಳು ಹಾಗೂ ಪಾರ್ಶ್ವಪುಂಜಗಳು ಮತ್ತು ಬೆನ್ನೆಲುಬುಗಳ ನಡುವೆ ಉಂಟಾಗುವ ಪ್ರತಿಕ್ರಿಯೆಗಳು ಪ್ರೋಟೀನಿಗೆ ಅದ್ವಿತೀಯವಾದ ತೃತೀಯಕ ರಚನೆಯನ್ನು ನೀಡುತ್ತವೆ. ಎಸ್-ಎಸ್ ಬಂಧಗಳ ವಿನಾ ಈ ಪ್ರತಿಕ್ರಿಯೆಗಳು ಕೋವೇಲೆಂಟ್ ಬಂಧಗಳಲ್ಲ. ತೃತೀಯಕ ರಚನೆಗೆ ಅಧ್ರುವೀಯ ಪಾರ್ಶ್ವಪುಂಜಗಳು ರಚಿಸುವ ಜಲದ್ವೇಷಿ ಪ್ರದೇಶಗಳು ಅತ್ಯವಶ್ಯ. ಇಂಥ ಪ್ರದೇಶಗಳನ್ನು ರಚಿಸುವ ಪಾರ್ಶ್ವಪುಂಜಗಳು ಪರಸ್ಪರವಾಗಿ ಅನುಕ್ರಮದಲ್ಲಿ ದೂರವಾಗಿರುವ ಸಾಧ್ಯತೆಗಳಿವೆ.

ತೃತೀಯಕ ವಿನ್ಯಾಸವನ್ನು ರಚಿಸುವುದರಲ್ಲಿ ಧ್ರುವೀಯ ಪುಂಜಗಳು ಭಾಗವಹಿಸುತ್ತವೆ. ಗ್ಲೋಬ್ಯುಲರ್ ಪ್ರೋಟೀನುಗಳಲ್ಲಿ ಧ್ರುವೀಯ ಪಾರ್ಶ್ವಪುಂಜಗಳಿರುವ ಅಮೈನೋ ಆಮ್ಲ ಅಂಶಗಳ ಸಂಖ್ಯೆ ಪ್ರತಿಶತ ೨೫-೩೦ರಷ್ಟಿದ್ದರೆ, ಧ್ರುವೀಯ ಪುಂಜಗಳಿರುವಲ್ಲಿ ಪ್ರತಿಶತ ೪೫-೫೦ರಷ್ಟಿರುತ್ತವೆ. ಇತರ ಅಮೈನೋ ಆಮ್ಲಗಳು ಗ್ಲೈಸಿನ್, ಅಲಾನಿನ್ ಪ್ರೋಟೀನಿನ ಒಳಭಾಗದಲ್ಲಿ ಅಥವಾ ಮೇಲ್ಮೈಯಲ್ಲಿರಬಹುದು. ಪ್ರೋಟೀನಿನ ಸಹಜ ಸ್ಥಿತಿಯಲ್ಲಿ ಅಧ್ರುವೀಯ ಪಾರ್ಶ್ವ ಪುಂಜಗಳು ನೀರಿನ ರಚನೆಯನ್ನು ಪಡೆಯುವ ಪ್ರವೃತ್ತಿಯನ್ನು ಹೆಚ್ಚಿನ ಮಟ್ಟಿಗೆ ತೋರುವುದಿಲ್ಲ. ಪ್ರೋಟೀನುಗಳ ಮಡಿಕೆ ಬಿಚ್ಚಿದಾಗ ಈ ಪ್ರವೃತ್ತಿ ಹೆಚ್ಚುತ್ತದೆ. ಆದ್ದರಿಂದ ಉಷ್ಣಚಲನ ಸಿದ್ಧಾಂತದ ಪ್ರಕಾರ ಪ್ರೋಟೀನಿನ ಸಹಜಸ್ಥಿತಿ ಹೆಚ್ಚು ಒಲವಿನ ರಚನೆ. ಆದರೆ ಪ್ರೋಟೀನಿನ ಸಹಜ ತೃತೀಯಕ ರಚನೆ ಇತರ ಸಾಧ್ಯವಾದ ತೃತೀಯಕ ವಿನ್ಯಾಸಗಳೊಂದಿಗೆ ಹಿಮ್ಮುಖವಾಗಬಲ್ಲ ಸಮತೋಲ ಸ್ಥಿತಿಯಲ್ಲಿರುತ್ತದೆ. ಸಮತೋಲಸ್ಥಿತಿ ಜಲಮಾಧ್ಯಮದ pH (ರಸಸಾರ) ಉಷ್ಣತೆ ಮತ್ತು ಘಟನೆಗಳನ್ನು ಅವಲಂಬಿಸಿರುತ್ತದೆ. ಧ್ರುವೀಯ ಪುಂಜಗಳು ನೀರಿನ ಕಡೆಗೆ ತಿರುಗುವ ಪ್ರವೃತ್ತಿಯನ್ನು ತೋರುತ್ತವೆಯಾದರೂ ಪ್ರೋಟೀನಿನ ಅಮೈನೋಆಮ್ಲ ಅನುಕ್ರಮದಲ್ಲಿ ಜಲದ್ವೇಷಿ ಪಾರ್ಶ್ವ ಪುಂಜಗಳ ನಡುವೆ ಅಲ್ಲಲ್ಲಿ ಅಯಾನಿಕ್ ಅಥವಾ ಧ್ರುವೀಯ ಪಾರ್ಶ್ವಪುಂಜಗಳಿರುವ ಅಮೈನೋ ಆಮ್ಲಗಳಿರುತ್ತವೆ. ಪ್ರೋಟೀನ್ ಮಡಚಿಕೊಳ್ಳುವಾಗ ಧ್ರುವೀಯ ಅಂಶಗಳುಳ್ಳ ಪೆಪ್ಟೈಡ್ ಬಂಧಗಳು ಸಹಜ ಪ್ರೋಟೀನಿನ ಒಳಭಾಗಕ್ಕೆ ತಳ್ಳಿಹೋಗುವುದು ಅನಿವಾರ್ಯ. ನೀರಿಗೂ ಅಂಥ ಬಂಧಗಳಿಗೂ ಇರುವ ವಾತ್ಸಲ್ಯವನ್ನು ನಿವಾರಿಸುವುದರಲ್ಲಿ ಪಾರ್ಶ್ವಪುಂಜಗಳ ನಡುವಿನ ಜಲದ್ವೇಷಿ ಪ್ರತಿಕ್ರಿಯೆಗಳು ಮತ್ತು ಹೈಡ್ರೋಜನ್ ಬಂಧಗಳು ಸಹಕರಿಸಬಹುದು.

ಪ್ರೋಟೀನ್ ಅದರ ಸಹಜ ತೃತೀಯಕ ವಿನ್ಯಾಸವನ್ನು ತಳೆಯುವಂತೆ ನೂಕುವ ಬಲ ಧ್ರುವೀಯ ಪಾರ್ಶ್ವಪುಂಜಗಳಿಂದಲು ಒದಗಿಬರುತ್ತದೆ. ಆಸ್ಪಾರ್ಟಿಕ್ ಆಮ್ಲ ಮತ್ತು ಗ್ಲುಟಾಮಿಕ್ ಆಮ್ಲಗಳ ಪಾರ್ಶ್ವ ಕಾರ್ಬಾಕ್ಸಿಲಿಕ್ ಪುಂಜಗಳು (ಬೀಟಾ ಮತ್ತು ಗಾಮಾ), ಆರ್ಜಿನಿನ್ ಮತ್ತು ಲೈಸಿನ್ನಿನ ಪಾರ್ಶ್ವಪುಂಜಗಳ ಪ್ರೋಟೀನಿನ ಮೇಲ್ಮೈ ಪ್ರದೇಶದಲ್ಲಿರುವ ಪ್ರವೃತ್ತಿಯನ್ನು ತೋರಿಸುತ್ತವೆ. ಇವನ್ನು ಹೂತಿಡುವುದು ಸುಲಭ ಸಾಧ್ಯವಲ್ಲ. ನೀರಿನಲ್ಲಿ ವಿಲೀನವಾಗುವ ಗ್ಲೋಬ್ಯುಲಿನ್ನಿನಲ್ಲಿ ಧ್ರುವೀಯ ಮತ್ತು ಅಧ್ರುವೀಯ ಪುಂಜಗಳುಳ್ಳ ಅಮೈನೋ ಆಮ್ಲಗಳು ಅನುಕ್ರಮದಲ್ಲಿ ದೂರ ದೂರ ಇರದೆ ಅಕ್ಕಪಕ್ಕದಲ್ಲಿ ಇರುತ್ತವೆ. ಸ್ಥಿರರಚನೆಗಳನ್ನು ನೀಡಬಲ್ಲ ವಿನ್ಯಾಸಗಳಿಗೆ ಒಂದು ಮಿತಿಯಿರುತ್ತದೆ. ತಾತ್ತ್ವಿಕವಾಗಿ

ಯಾದೃಚ್ಛಿಕ ಅಮೈನೋ ಆಮ್ಲ ಅನುಕ್ರಮದ ಪ್ರೋಟೀನ್, ಗ್ಲಾಬ್ಯುಲಿನ್ ರಚನೆಯನ್ನು ಕೊಡುವ ಸಂಭವ ಕಡಿಮೆ. ಬಹುಶಃ ವಿಕಾಸದ ಅವಧಿಯಲ್ಲಿ ಜಲದ್ವೇಷಿ ಪುಂಜಗಳು ರಚನೆಯ ಒಳಭಾಗದಲ್ಲಿ ಹೈಡ್ರೋಜನ್ ಬಂಧಗಳಿಂದ ಸ್ಥಿರಗೊಂಡು, ಜಲಪ್ರಿಯ ಅಮೈನೋ ಆಮ್ಲಗಳು ರಚನೆಯ ಹೊರಭಾಗದಲ್ಲಿರುವಂತೆ ಸಾಧ್ಯವಾಗುವ ವಿನ್ಯಾಸಗಳನ್ನು ಮಾತ್ರ ಕಾಪಾಡಿಕೊಂಡು ಬಂದಿರಬೇಕು. ಡೈಸಲ್ಫೈಡ್ ಬಂಧಗಳು ತೃತೀಯಕ ವಿನ್ಯಾಸದಲ್ಲಿ ಹೆಚ್ಚಿನ ಪಾತ್ರ ವಹಿಸುವುದಿಲ್ಲ. ಆದರೆ ಅದನ್ನು ಸ್ಥಿರೀಕರಿಸುವುದರಲ್ಲಿ ಸಹಕರಿಸುತ್ತವೆ. ಪ್ರೋಟೀನಿನ ಸಹಜ ತೃತೀಯಕ ರಚನೆ ಉದ್ಭವಿಸುವಂತೆ ಪ್ರೋಟೀನ್ ಮಡಿಸಿಕೊಳ್ಳುವಾಗ ತಯಾಲ್‌ಪುಂಜಗಳು ಸಮೀಪಕ್ಕೆ ಬಂದು ಎಸ್–ಎಸ್ ಬಂಧಗಳನ್ನು ಸ್ವಯಂಪ್ರೇರಿತವಾಗಿ ರಚಿಸುತ್ತವೆ. ಅನೇಕ ಪ್ರೋಟೀನುಗಳ ಸಂದರ್ಭದಲ್ಲಿ (ಉದಾ: ರೈಬೊನ್ಯೂಕ್ಲಿಯೇಸ್ ಕಿಣ್ವ) ಇದನ್ನು ಅನುಮಾನಕ್ಕೆ ಆಸ್ಪದವಿಲ್ಲದಂತೆ ಪ್ರಯೋಗಗಳ ಮೂಲಕ ತೋರಿಸಲಾಗಿದೆ. ರೈಬೊನ್ಯೂಕ್ಲಿಯಸ್‌ನಲ್ಲಿ ನಾಲ್ಕು ಎಸ್–ಎಸ್ ಬಂಧಗಳಿವೆ. ಇವನ್ನು ಅಪಕರ್ಷಿಸಿದಾಗ ಕಿಣ್ವದ ಪಟುತ್ವ ನಾಶವಾಗುತ್ತದೆ. ಆಕ್ಸಿಜನ್ ಅಥವಾ ವಾಯುವಿನಲ್ಲಿ ನಿಧಾನವಾಗಿ ಉತ್ಕರ್ಷಿಸಿದಾಗ ಪಟುತ್ವವನ್ನು ಕಳೆದುಕೊಂಡು ಕಿಣ್ವ ತನ್ನ ಹಿಂದಿನ ಪಟುತ್ವವನ್ನು ಗಳಿಸಿಕೊಳ್ಳುತ್ತದೆ. ನಾಲ್ಕು ತಯಾಲ್ ಪುಂಜಗಳು ತಾತ್ತ್ವಿಕವಾಗಿ ೨೫೬ ಬಗೆಯ ಬಂಧಗಳನ್ನು ರಚಿಸುವ ಸಾಧ್ಯತೆ ಇದ್ದರೂ ಸರಿಯಾದ ನಾಲ್ಕೇ ಬಂಧಗಳು ರೂಪಿತವಾಗುತ್ತವೆ.

ಕಿಣ್ವಗಳ ಸಂದರ್ಭದಲ್ಲಿ ಪ್ರೋಟೀನಿನ ಹೊರಮೈಯಲ್ಲಿ ಧ್ರುವೀಯ ಪುಂಜಗಳಲ್ಲದೆ ಅಲ್ಲಲ್ಲಿ ಅಧ್ರುವೀಯ ಪ್ರದೇಶಗಳು ಇರಬೇಕು. ಏಕೆಂದರೆ ಅವು ಯಾವ ಅಭಿಕಾರಗಳ ಮೇಲೆ ವರ್ತಿಸುತ್ತವೆಯೋ ಅವು ಕಿಣ್ವದೊಂದಿಗೆ ಕ್ಷಣಿಕವಾಗಿಯಾದರು ಸಂಕ್ಲಿಷ್ಟವನ್ನು ರಚಿಸಬೇಕು. ಅಭಿಕಾರದ ಪ್ರಕೃತಿಗೆ ಅನುಸಾರವಾಗಿ ಅವು ಜಲದ್ವೇಷಿ ಪ್ರದೇಶಗಳಿಗೆ ಸೇರಿಕೊಳ್ಳಬಹುದು. ಕೆಲವು ಅಭಿಕಾರಗಳ ಸಂದರ್ಭದಲ್ಲಿ ಕಿಣ್ವದ ಜಲಪ್ರಿಯ ಪುಂಜಗಳು ಈ ಬಗೆಯ ಸಂಪರ್ಕ ರಚಿಸುವುದರಲ್ಲಿ ಪಾತ್ರವಹಿಸುತ್ತವೆ.

ಪ್ರಕೃತಿಯಲ್ಲಿ ಅನೇಕ ಪೊಟೀನುಗಳು ಒಂದಕ್ಕಿಂತ ಹೆಚ್ಚಾದ ಸಂಖ್ಯೆಯಲ್ಲಿ ಉಪಘಟಕಗಳನ್ನು ಪಡೆದಿರುತ್ತವೆ. ಇವುಗಳ ಅಣುತೂಕ ೫೦,೦೦೦ಕ್ಕಿಂತ ಹೆಚ್ಚು. ಉಪಘಟಕಗಳು ಒಂದು ನಿರ್ದಿಷ್ಟ ರೀತಿಯಲ್ಲಿ ವ್ಯವಸ್ಥಿತವಾಗಿದ್ದು, ಪ್ರೋಟೀನಿಗೆ ಚತುರ್ಥಕ ರಚನೆಯನ್ನು ಕೊಡುತ್ತವೆ. ಉಪಘಟಕಗಳಿರುವ ಪ್ರೋಟೀನುಗಳ ಸಂದರ್ಭದಲ್ಲಿ ಚತುರ್ಥಕರಚನೆ ಉಪಘಟಕಗಳ ಅಮೈನೋ ಆಮ್ಲ ಅನುಕ್ರಮದಿಂದ ನಿರ್ಧರಿತವಾಗುವಂತೆ ತೋರುತ್ತದೆ. ಹರಳಿನ ರಚನೆಯ ವಿಶ್ಲೇಷಣೆಯಿಂದಲು ಉಪಘಟಕಗಳು ಒಡೆದು ಪುನಃ ಸೇರಿ ಕಾರ್ಯಕಾರಿಯಾಗಬಲ್ಲ ಪ್ರೋಟೀನನ್ನು ಪುನರುಜ್ಜೀವಿಸುತ್ತವೆ. ಹಿಮೊಗ್ಲೋಬಿನ್ ಇಂಥ ಒಂದು ಪ್ರೋಟೀನಿಗೆ ಉದಾಹರಣೆ. ಅಸಿಟೋನಿನಲ್ಲಿಯ ಆಮ್ಲೀಯ pH (ರಸಸಾರ)ಗಳಲ್ಲಿ ವಿಕೃತ ಗ್ಲೋಬಿನ್ನಿನಿಂದ ಹೀಮ್ ಪುಂಜವನ್ನು ಪ್ರತ್ಯೇಕಿಸಬಹುದು. ಆದರೂ ತಟಸ್ಥ pHನಲ್ಲಿ ಸಹಜ ಹೀಮೊಗ್ಲೋಬಿನ್, ಹೀಮ್ ಪುಂಜ ಮತ್ತು ಗ್ಲೋಬಿನ್ನುಗಳಿಂದ ಪುನಾರಚಿತವಾಗುತ್ತದೆ. ಹೀಮೊಗ್ಲೋಬಿನ್ನಿನಲ್ಲಿ ನಾಲ್ಕು ಪೆಪ್ಟೈಡ್ ಶ್ರೇಣಿಗಳಿದ್ದು ಪ್ರತಿಯೊಂದರಲ್ಲಿಯು ಹೀಮ್ ಪುಂಜ ತನ್ನ ಮೀಸಲು ಸ್ಥಳದಲ್ಲಿರುತ್ತದೆ. ಇಂಥ ಕ್ಲಿಷ್ಟ ಅಣು ಕೂಡ ಪುನಾರಚಿತವಾಗಬಲ್ಲದು ಎಂದ ಮೇಲೆ ದ್ವಿತೀಯಕ, ತೃತೀಯಕ ರಚನೆಗಳಲ್ಲದೆ, ಪೆಪ್ಟೈಡಿನ ಅಮೈನೋ ಅನುಕ್ರಮಗಳು ಸಹ ಚತುರ್ಥಕ ರಚನೆಯಲ್ಲಿ ಪಾಲ್ಗೊಳ್ಳುತ್ತವೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಅನೇಕ ಪ್ರೋಟೀನುಗಳು, ಹಲವು ಕಿಣ್ವಗಳು ಸೇರಿದಂತೆ, ಅನೇಕ ಅಭಿಕಾರಕಗಳಿಂದ ನಿಷ್ಕ್ರಿಯ ಉಪಘಟಕಗಳಾಗಿ ವಿಭಜನೆಯಾಗುತ್ತದೆ. ಹೀಗಾಗಿ ಸಹಜ ಪ್ರೋಟೀನಿನ ಅಣುತೂಕ ಹಲವು ಸಹಸ್ರಗಳಿಂದ ಹಿಡಿದು ದಶಲಕ್ಷದವರೆಗೆ ಇದ್ದರೂ, ಪ್ರಥಮ ಪೆಪ್ಟೈಡುಗಳ ಅಣುತೂಕ ಕಡಿಮೆಯಾಗಿರುತ್ತದೆ. ಹಲವು ಸಣ್ಣ ಸಣ್ಣ ಘಟಕಗಳು ಸೇರಿ ಜೈವಿಕ ಪಟುತ್ವವುಳ್ಳ ಸಮುದಾಯ ಪ್ರೋಟೀನನ್ನು ರಚಿಸಲು ಬಳಕೆಯಾಗುವ ಬಂಧಗಳು, ಪಾಲಿಪೆಪ್ಟೈಡ್ ಮಡಿಕೆಯಾಗಿ ನಿರ್ದಿಷ್ಟ ತೃತೀಯಕ ರಚನೆಯನ್ನು ಸೃಷ್ಟಿಸುವಾಗ ಬಳಕೆಯಾಗುವ ಬಂಧಗಳು ಒಂದೇ ಬಗೆಯವು.

ಅನೇಕ ಉಪಘಟಕಗಳಿರುವ ಬೃಹದಣುಗಳ ಸಂದರ್ಭದಲ್ಲಿ ಪ್ರೋಟೀನಿನ ಚತುರ್ಥಕ ರಚನೆಯನ್ನು ಅರಿಯಲು ಎಲೆಕ್ಟ್ರಾನ್ ಸೂಕ್ಷ್ಮದರ್ಶಕವನ್ನು ಬಳಸಬಹುದು. ಉದಾ: ಈ ವಿಧಾನದಿಂದ ಆಸ್ಪಾರ್ಟೇಟ್ ಟ್ರಾನ್ಸ್‌ಕಾರ್ಬಮೈಲೇಸ್ ಕಿಣ್ವದಲ್ಲಿ ೧೨ ಉಪಘಟಕಗಳಿವೆ ಎಂದು ಪತ್ತೆಮಾಡಲಾಗಿದೆ. ಬೇರೆ ವಿಧಾನಗಳಿಂದ ಈ ೧೨ ಉಪಘಟಕಗಳ ಪೈಕಿ ಒಂದರ ಅಣುತೂಕ ೧೬,೦೦೦ (ಕ) ಮತ್ತು ಉಳಿದ ಆರರ ಅಣುತೂಕ ೩೩,೫೦೦ (ಚ) ಎಂದು ತಿಳಿದುಬಂದಿತು, ಚ ಉಪಘಟಕದ ತ್ರಿರಂಶಿಗಳು (ಟ್ರೈಮರ್ಸ್) ಕಿಣ್ವಪಟುತ್ವವುಳ್ಳವು, ಮತ್ತು ಇವು ಕ ದ್ವಿರಂಶಿಗಳೊಂದಿಗೆ ಸೇರಿ $(ಕ_{೨})_{೩}$ $(ಚ_{೩})_{೨}$ ಉಪಘಟಕ ರಚನೆಯುಳ್ಳ ಬೃಹದಣುವನ್ನು ರಚಿಸುತ್ತವೆ. ಇವೆರಡು ವಿಷಯಗಳ ಆಧಾರದ ಮೇಲೆ ಕಿಣ್ವದ ಚತುರ್ಥಕ ರಚನೆಯ ಮಾದರಿಯೊಂದನ್ನು ಸೂಚಿಸಲಾಗಿದೆ. ಪೈರೂವೇಟ್ ಡೀ ಹೈಡ್ರೋಜಿನೇಸ್ ಸಂಕ್ಲಿಷ್ಟ ಅನೇಕ ಕಿಣ್ವಗಳ ಸಮುದಾಯ. ಇದರ ಹರಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ವಿಶ್ಲೇಷಿಸಿ ಇದರ ಚತುರ್ಥಕ ರಚನೆಯನ್ನು ಊಹಿಸಲಾಗಿದೆ. ಲ್ಯಾಕ್ಟಿಕ್ ಡೀ ಹೈಡ್ರೋಜಿನೇಸ್ ಕಿಣ್ವವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಇದರಲ್ಲಿ ೪ ಉಪಘಟಕಗಳಿವೆ. ಇವು ಎರಡು ಬಗೆಯವು : ಹೃದಯದ ಮಾಂಸಖಂಡದ ವರ್ಗ (ಹ) ಮತ್ತು ಮಾಂಸಖಂಡದ ವರ್ಗ (ಮ). ಹ ವರ್ಗದ ನಾಲ್ಕು ಉಪಘಟಕಗಳು ಸೇರಿ ಶುದ್ಧ ಹ₄ ಕಿಣ್ವವನ್ನು ಮ ವರ್ಗದ ೪ ಸೇರಿ ಮ₄ ಶುದ್ಧ ಕಿಣ್ವವನ್ನೂ ರಚಿಸುತ್ತವೆ. ಹ ಮತ್ತು ಮ ವರ್ಗಗಳೆರಡು ಉಪಘಟಕಗಳನ್ನೊಳಗೊಂಡ ಸಂಕರ ಕಿಣ್ವ ಕೂಡ–$ಹ_{೧}$ $ಮ_{೩}$, $ಹ_{೨}$, $ಮ_{೨}$, $ಹ_{೩}$, $ಮ_{೧}$–ರಚಿತವಾಗುತ್ತವೆ. ಒಟ್ಟು ೫ ಬಗೆಯ ಕಿಣ್ವಗಳಿರುವ ಸಾಧ್ಯತೆಇದೆ. ಇವೆಲ್ಲ ಕಿಣ್ವಗಳ ಕಾರ್ಯ ಒಂದೇ ಆದರು ಹೃದಯ ವರ್ಗದ ಕಿಣ್ವಕ್ಕೂ ಮಾಂಸವರ್ಗದ ಕಿಣ್ವಕ್ಕೂ ಸ್ವಲ್ಪ ವ್ಯತ್ಯಾಸಗಳಿವೆ.

ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ವೈರಸ್ಸಿನ ರಚನೆಯನ್ನು ವಿಶದವಾಗಿ ಪರೀಕ್ಷಿಸಲಾಗಿದೆ. ಹಳದಿ ಚುಕ್ಕೆ ವೈರಸ್ಸಿನ ಮೇಲ್ಮೈಯಲ್ಲಿ ೩೨ ಪ್ರೋಟೀನ್ ಘಟಕಗಳಿವೆ. ಇವುಗಳ ಪೈಕಿ ಹನ್ನೆರಡು ೫ ಪ್ರೋಟೀನ್ ಉಪಘಟಕಗಳನ್ನೊಳಗೊಂಡ ವರ್ತುಲದಂತೆ, ಉಳಿದ ಇಪ್ಪತ್ತು ೬ ಉಪಘಟಕಗಳನ್ನೊಳಗೊಂಡ ವರ್ತುಲದಂತೆಯು ವ್ಯವಸ್ಥಿತವಾಗಿವೆ. ಒಟ್ಟು ೧೮೦ ಉಪಘಟಕಗಳಿದ್ದು, ಪ್ರತಿ ಉಪಘಟಕದ ಅಣುತೂಕ ೨೧,೦೦೦.

ಪ್ರೋಟೀನಿನ ಪತ್ತೆ : ಪ್ರೋಟೀನನ್ನು ಪತ್ತೆಹಚ್ಚಲು ಕೆಲವು ರಾಸಾಯನಿಕ ವಿಧಾನಗಳನ್ನು ಅನುಸರಿಸಬಹುದು. (i) ಮಿಲ್ಲನ ದ್ರಾವಣದೊಂದಿಗೆ ಕಾಯಿಸಿದಾಗ ಬಿಳಿ ಒತ್ತರ ದೊರೆಯುತ್ತದೆ ಮತ್ತು ಕಾಸುವುದನ್ನು ಮುಂದುವರಿಸಿದರೆ ಕೆಂಪುಬಣ್ಣ ಗೋಚರಿಸುತ್ತದೆ. (ii) ಸಾರನೈಟ್ರಿಕ್ ಆಮ್ಲದೊಂದಿಗೆ ಪ್ರೋಟೀನ್ ಬಿಳಿ ಒತ್ತರವನ್ನು ಕೊಡುತ್ತದೆ. ಇದನ್ನು ಕಾಯಿಸಿದಾಗ ಹಳದಿ ಬಣ್ಣ ದೊರೆಯುತ್ತದೆ. (iii) ಪ್ರೋಟೀನ್ ದ್ರಾವಣವನ್ನು ಗ್ಲೈಆಕ್ಸಲಿಕ್ ಆಮ್ಲದೊಂದಿಗೆ ಕಾಯಿಸಿ ಸಲ್ಫ್ಯೂರಿಕ್ ಆಮ್ಲವನ್ನು ಸೇರಿಸಿದಾಗ ಕೆಂಪು ನೇರಿಳೆ ಬಣ್ಣ ಕಂಡುಬರುತ್ತದೆ.

ಪರಿಮಾಣಾತ್ಮಕವಾಗಿ ಪ್ರೋಟೀನನ್ನು ಅಳೆಯಬೇಕಾದ ಸಂದರ್ಭಗಳಲ್ಲಿ ಮೂರು ಮುಖ್ಯ ವಿಧಾನಗಳನ್ನು ಬಳಸಬಹುದು. (i) ಕೇಲ್ಡಾಲ್ ವಿಧಾನ : ಇದರಲ್ಲಿ ಗೊತ್ತಾದ ತೂಕದ ಪ್ರೋಟೀನನ್ನು ಸಾರ ಸಲ್ಫ್ಯೂರಿಕ್ ಆಮ್ಲದಿಂದ ೬–೮ ಗಂಟೆಗಳ ಕಾಲ ಪಚನಮಾಡಿದಾಗ ಅದರಲ್ಲಿಯ ನೈಟ್ರೋಜನ್ ಅಂಶ ಅಮೋನಿಯಮ್ ಸಲ್ಫೇಟಾಗಿ ಪರಿವರ್ತನೆಯಾಗುತ್ತದೆ. ಅನಂತರ ಸಾರ ಸೋಡಿಯಮ್ ಹೈಡ್ರಾಕ್ಸೈಡಿನಿಂದ ಸಂಸ್ಕರಿಸಿ ಆವಿಯಲ್ಲಿ ಕಾಸಿದಾಗ ಇದರೊಂದಿಗೆ ಆಮೋನಿಯಮ್ ಹೊರಬರುತ್ತದೆ. ಇದನ್ನು ಸಾರಯುಕ್ತ ಆಮ್ಲ ಅಥವಾ ಶೇ. ೨ ಬೋರಿಕ್ ಆಮ್ಲದಲ್ಲಿ ಚೂಷಿಸಿ ಸಲ್ಫ್ಯೂರಿಕ್ ಆಮ್ಲದೊಂದಿಗೆ ಅನುಮಾಪನೆ ಮಾಡಿ ಅಮೋನಿಯಮನ್ನು ನಿರ್ಧರಿಸಬಹುದು. ಇದರಿಂದ ನೈಟ್ರೋಜನ್ನಿನ ತೂಕವನ್ನು ಲೆಕ್ಕ ಹಾಕಿ ಫಲಿತವನ್ನು ೬.೨೫ ರಿಂದ ಗುಣಿಸಿದರೆ ಪ್ರೋಟೀನಿನ ತೂಕ ಸರಿಸುಮಾರಾಗಿ ಗೊತ್ತಾಗುತ್ತದೆ.

(ii) ಬೈಯುರೇಟ್ ಅಭಿಕಾರಕ ಪ್ರೋಟೀನ್ ದ್ರಾವಣದೊಂದಿಗೆ ವರ್ತಿಸಿ ನೇರಿಳೆ ಬಣ್ಣವನ್ನು ಕೊಡುತ್ತದೆ. ಈ ಕ್ರಿಯೆಯ ಆಧಾರದ ಮೇಲೆ ಕಲೊರಿಮೀಟರಿನ ಸಹಾಯದಿಂದ ಪ್ರೋಟೀನಿನ ಪ್ರಮಾಣವನ್ನು ಅಳೆಯಬಹುದು.

(iii) ಪ್ರೋಟೀನ್ ಅಲ್ಪಪ್ರಮಾಣದಲ್ಲಿದ್ದಾಗ ಸಹ ಫಾಲಿನ್–ಸಿಯೋಕಾಲ್ಟೂ ಅಭಿಕಾರಕ ಬಳಸಿ ಇದನ್ನು ಅಳೆಯಬಹುದು. ಪ್ರೋಟೀನ್ ದ್ರಾವಣವನ್ನು (೦–೫೦ ಮೈ. ಗ್ರಾಂ) ಪೂರ್ವಭಾವಿಯಾಗಿ ಕಾಪರ್ ಸಲ್ಫೇಟ್ ದ್ರಾವಣದಿಂದ ಸಂಸ್ಕರಿಸಿ ಅನಂತರ ಫಾಲಿನ್–ಸಿಯೋಕಾಲ್ಟೂ ಅಭಿಕಾರಕದಿಂದ ಸಂಸ್ಕರಿಸಿದರೆ ನೀಲಿ ಬಣ್ಣ ದೊರೆಯುತ್ತದೆ. ಇದನ್ನು ಕಲೊರಿಮೀಟರಿನಲ್ಲಿ ಅಳೆದು ಪ್ರೋಟೀನಿನ ಪ್ರಮಾಣವನ್ನು ಅಳೆಯಬಹುದು.

ವರ್ಗೀಕರಣ : ಪ್ರೋಟೀನುಗಳು ರಚನೆಯಲ್ಲಿ ಮತ್ತು ಗುಣಗಳಲ್ಲಿ ಬಲುಮಟ್ಟಿಗೆ ವ್ಯತ್ಯಾಸಗಳನ್ನು ಪ್ರದರ್ಶಿಸುವುದರಿಂದ ಅವನ್ನು ವರ್ಗೀಕರಿಸುವುದು ಸುಲಭವಲ್ಲ. ಸಾಮಾನ್ಯವಾಗಿ ಎರಡು ಬಗೆಯ ಪ್ರೋಟೀನುಗಳನ್ನು ಗುರುತಿಸಿದ್ದಾರೆ. ೧. ತಂತು ರೂಪದಲ್ಲಿರುವ ಮತ್ತು ಗೋಳಾಕಾರದಲ್ಲಿರುವ (ಗ್ಲೋಬ್ಯುಲರ್) ಪ್ರೋಟೀನುಗಳು. ತಂತು ರೂಪದಲ್ಲಿರುವ ಮತ್ತು ಗೋಳಾಕಾರದ ಪ್ರೋಟೀನುಗಳು ಗೋಳ ಅಥವಾ ಅಂಡಾಕಾರಗಳಲ್ಲಿವೆ. ಹೀಮೊಗ್ಲೋಬಿನ್, ಸೈಟೊಕ್ರೋಮ್–ಸಿ, ಕೂದಲು, ಉಣ್ಣೆ, ರೇಷ್ಮೆ ತಂತುರೂಪದ ಪ್ರೋಟೀನಿಗೆ ಉದಾಹರಣೆಗಳು. ಪ್ರೋಟೀನುಗಳನ್ನು ಅವುಗಳಲ್ಲಿರುವ ಸಹಪುಂಜಗಳ ಆಧಾರದ ಮೇಲೆ ವರ್ಗೀಕರಿಸುವರು. ಲೋಹಯುತ ಪ್ರೋಟೀನುಗಳನ್ನು ಲೋಹೀಯ ಪ್ರೋಟೀನುಗಳೆಂದು (ಮೆಟಾಲೊ ಪ್ರೋಟೀನ್), ಶರ್ಕರಾಂಶಯುತವಾದವನ್ನು ಗ್ಲೈಕೊಪ್ರೋಟೀನುಗಳೆಂದು, ತೈಲಯುತವಾದವನ್ನು ತೈಲೀಯ ಪ್ರೋಟೀನುಗಳೆಂದು

(ಲೈಪೊಪ್ರೋಟೀನ್) ವರ್ಗೀಕರಿಸಲಾಗಿದೆ. ಪ್ರೋಟೀನುಗಳ ಪೈಕಿ ಗೋಳಾಕಾರದ ಪ್ರೋಟೀನುಗಳ ಸಂಖ್ಯೆಯೇ ಹೆಚ್ಚು. ಇವುಗಳ ಜಲವಿಲೀನತೆಯನ್ನು ಆಧರಿಸಿ ಇವನ್ನು ಆಲ್ಬುಮಿನ್ನುಗಳು, ಯೂಗ್ಲೋಬ್ಯುಲಿನ್ನುಗಳು ಎಂದು ಮೊದಲಿಗೆ ವಿಂಗಡಿಸಲಾಗಿತ್ತು. ಈಗ ಈ ತಂತುರೂಪದ ಪ್ರೋಟೀನುಗಳಲ್ಲಿ ಸಹ ವೈವಿಧ್ಯವಿದೆ. ಇವು ಒಂದು ಅಸಮತೆಯನ್ನು ತೋರುವ ವಸ್ತುಗಳು. ಆಗಲಕ್ಕಿಂತ ಉದ್ದ ಹೆಚ್ಚು. ತಂತು ಪ್ರೋಟೀನುಗಳು ರಾಚನಿಕ ಪ್ರೋಟೀನುಗಳಂತೆ ಸ್ನಾಯುಗಳಲ್ಲಿ, ಸಂಕೋಚಗೊಳ್ಳುವ ಅಂಗಾಂಶಗಳಲ್ಲಿ, ಕೂದಲಿನ ಮತ್ತು ಚರ್ಮದ ಅವಿಲೀನಶಾಲಿ ಪ್ರೋಟೀನುಗಳಲ್ಲಿ ಕಂಡುಬರುತ್ತದೆ.

ಸ್ವಭಾವ : ಪ್ರೋಟೀನುಗಳು ಅವುಗಳ ಸ್ವಭಾವಾನುಸಾರ ನೀರು, ಲವಣ, ದ್ರಾವಣ ಮತ್ತು ಪ್ರತ್ಯಾಮ್ಲಗಳಲ್ಲಿ ವಿಲೀನವಾಗುತ್ತವೆ. ನಿಜದ್ರಾವಣಗಳಲ್ಲದೆ ಕಲಿಲ ದ್ರಾವಣಗಳು ದೊರಕುತ್ತದೆ. ಪ್ರೋಟೀನುಗಳನ್ನು ನಿಜದ್ರಾವಣದಿಂದ ಲವಣಗಳನ್ನು (ಉದಾ: ಅಮೋನಿಯಮ್ ಸಲ್ಫೇಟ್ ಬಳಸಿ) ಒತ್ತರಿಸಬಹುದು. ಪರ್‌ಕ್ಲೋರಿಕ್ ಆಮ್ಲ, ಟ್ರೈಕೇರ್ ಅಸಿಟಿಕ್ ಆಮ್ಲ, ಫಾಸ್ಫೊ ಟಂಗ್‌ಸ್ಟಿಕ್ ಆಮ್ಲ ಅಭಿಕಾರಕಗಳನ್ನು ಬಳಸಿ ಪ್ರೋಟೀನುಗಳನ್ನು ಒತ್ತರಿಸಬಹುದು. ಪ್ರೋಟೀನಿನ ದ್ರಾವಣವನ್ನು ೧೦೦° ಸೆಂ.ನಲ್ಲಿ ೩ ನಿಮಿಷಗಳ ಕಾಲ ಕುದಿಸಿದರೆ ಅದು ವಿಕೃತಿಗೊಳ್ಳುತ್ತದೆ.

ಪ್ರೋಟೀನುಗಳು ಸಾಮಾನ್ಯವಾಗಿ ೩ ಪ್ರದೇಶಗಳಲ್ಲಿ ಬೆಳಕನ್ನು ಹೀರಿಕೊಳ್ಳುತ್ತವೆ. (i) ೨೫೦ ನಾನೊಮೀ ಮೇಲೆ, ೨೮೦ ನಾನೊಮೀ ಸಮೀಪದಲ್ಲಿ ಪೂರ್ಣವಾಗಿ ಆರೊಮ್ಯಾಟಿಕ್ ಅಂಶವಿರುವುದು ಇದಕ್ಕೆ ಕಾರಣ. (ii) ೨೧೦ ಮತ್ತು ೨೫೦ ನಾನೊಮೀ ನಡುವೆ. ಇದಕ್ಕೆ ಕಾರಣಗಳು ಹಲವು. ಉದಾ: ಆರೊಮ್ಯಾಟಿಕ್ ಪುಂಜಗಳು, ಇತರ ಪುಂಜಗಳು, ಕೆಲವು ಬಗೆಯ ಹೈಡ್ರೊಜನ್ ಬಂಧಗಳು, ವಿನ್ಯಾಸ ಮತ್ತು ಕುಂಡಲನಿಯ ಪ್ರಮಾಣಕ್ಕೆ ಅನುಸಾರವಾಗಿ (iii) ೨೧೦ ನಾನೊಮೀ ಗಿಂತ ಕೆಳಗೆ. ಮುಖ್ಯವಾಗಿ ಪೆಪ್ಟೈಡು ಬಂಧಗಳಿರುವುದು ಇದಕ್ಕೆ ಕಾರಣ.

ಪ್ರೋಟೀನುಗಳ ದ್ರಾವಣಗಳು ಧ್ರುವೀಕೃತ ಬೆಳಕಿನ ದಿಕ್ಕನ್ನು ಬದಲಾಯಿಸುತ್ತವೆ. ಈ ಗುಣ ಭಾಗಶಃ ಪ್ರೋಟೀನುಗಳಲ್ಲಿರುವ ಅಮೈನೋ ಆಮ್ಲಗಳ ಅಂಶದಿಂದಲು ಭಾಗಶಃ ಪ್ರೋಟೀನು ಅಣುವಿನ ರಚನೆಯಲ್ಲಿ ಅಥವಾ ವಿನ್ಯಾಸದಲ್ಲಿ ತಲೆದೋರುವ ಬದಲಾವಣೆಯಿಂದಲು ಪ್ರಕಟವಾಗುತ್ತದೆ. ಪ್ರೋಟೀನುಗಳ ವಿಶಿಷ್ಟ ಭ್ರಮಣೆ ಯಾವಾಗಲು ಋಣ ಮತ್ತು ಗೋಳಾಕಾರದ ಪ್ರೋಟೀನುಗಳ ಸಂದರ್ಭದಲ್ಲಿ ೩೦° ಸೆ ಯಿಂದ ೬೦° ಸೆ ವರೆಗೆ ಇರುತ್ತದೆ. ರಸಸಾರ ಮತ್ತು ಉಷ್ಣತೆಗಳು ಭ್ರಮಣದ ಮೇಲೆ ಪರಿಣಾಮ ಉಂಟುಮಾಡುತ್ತವೆ. ಈ ಬದಲಾವಣೆಗಳು ದ್ವಿತೀಯಕ ಮತ್ತು ತೃತೀಯಕ ರಚನೆಗಳನ್ನು ಅವಲಂಬಿಸಿ ರಚನೆ ಅಥವಾ ವಿನ್ಯಾಸದಲ್ಲಿ ಆಗುವ ಬದಲಾವಣೆಗಳ ಸೂಚಕಗಳೆಂದು ಪರಿಗಣಿಸಬಹುದು.

ಅಣುತೂಕ : ಪ್ರೋಟೀನುಗಳು ಬೃಹದಣುಗಳು. ಇವುಗಳ ಅಣುತೂಕ ಶೋಧಿಸಲು ಆರ್ಗ್ಯಾನಿಕ್ ರಸಾಯನವಿಜ್ಞಾನದ ವಿಧಾನಗಳನ್ನು ಬಳಸಲು ಸಾಧ್ಯವಿಲ್ಲ. ಅಮೈನೋ ಆಮ್ಲಗಳಂತೆ ಪ್ರೋಟೀನುಗಳು ಸಹ ದ್ವಿರಂಶಿಗಳು ಮತ್ತು ವಿದ್ಯುತ್ ಕ್ಷೇತ್ರದಲ್ಲಿ ಮಾಧ್ಯಮದ ರಸಸಾರ ಮತ್ತು ಪ್ರೋಟೀನುಗಳ ಮೇಲಿನ ನಿವ್ವಳ ಆವೇಶಕ್ಕೆ ಅನುಸಾರವಾಗಿ ಚಲಿಸುತ್ತವೆ. ಪ್ರತಿಯೊಂದು, ಒಂದು ರಸಸಾರದಲ್ಲಿ ಮಾತ್ರ ತಟಸ್ಥವಾಗಿರುತ್ತದೆ. ಇಂಥ ರಸಸಾರ ಪ್ರೋಟೀನಿನ ಸಮ ವಿದ್ಯುದ್ಬಿಂದು (ಐಸೊಎಲೆಕ್ಟ್ರಿಕ್ ಪಾಯಿಂಟ್) ಎಂದು ಹೆಸರು.

ದ್ವಿರಂಶಿಗಳಾದ ಪ್ರೋಟೀನುಗಳ ಧನ ಮತ್ತು ಋಣ ಅಯಾನುಗಳನ್ನು ಬಂಧಿಸುತ್ತವೆ. ಅನೇಕ ಪ್ರೋಟೀನುಗಳು ಕೋಆರ್ಡಿನೇಟ್ ಸಂಕ್ಲಿಷ್ಟಗಳನ್ನು ರೂಪಿಸುವುದರ ಮೂಲಕ ಲೋಹಗಳನ್ನು (ತಾಮ್ರ, ಸತುವು, ಕಬ್ಬಿಣ) ಬಂಧಿಸುತ್ತವೆ. ಇವುಗಳಿಗೆ ಲೊಹೀಯ ಪ್ರೋಟೀನುಗಳೆಂದು ಹೆಸರು.

ಪ್ರತಿಯೊಂದು ಪ್ರೋಟೀನಿನ ವಿಲೀನತೆ, ರಸಸಾರ ಮತ್ತು ಮಾಧ್ಯಮದ ಘಟನೆಯನ್ನು ಅವಲಂಬಿಸಿದೆ. ವಿಲೀನತೆ ಬಲುಮಟ್ಟಿಗೆ ಪ್ರಭಾವಿತವಾಗುತ್ತದೆ ಮತ್ತು ವಿದ್ಯುದ್ಬಿಂದು ಕನಿಷ್ಠಮಟ್ಟದಲ್ಲಿರುತ್ತದೆ. ಧನ ಅಥವ ಋಣ ಆವಿಷ್ಟ ಪ್ರೋಟೀನುಗಳ ವಿಲೀನತೆ ಹೆಚ್ಚುತ್ತದೆ. ಪ್ರೋಟೀನಿನ ವಿಲೀನತೆಯನ್ನು ಲವಣಗಳು ತಗ್ಗಿಸಬಹುದು ಅಥವ ಹೆಚ್ಚಿಸಬಹುದು. ಪ್ರೋಟೀನುಗಳ ದ್ರಾವಣದಿಂದ ತಟಸ್ಥ ಲವಣಗಳನ್ನು ಹೆಚ್ಚಿನ ಸಾರದಲ್ಲಿ ಸೇರಿಸಿ ಪ್ರೋಟೀನುಗಳನ್ನು ಒತ್ತರಿಸಬಹುದು. ಸೋಡಿಯಮ್ ಕ್ಲೋರೈಡ್, ಅಮೊನಿಯಮ್ ಸಲ್ಫೇಟ್, ಮೆಗ್ನೀಸಿಯಮ್ ಲವಣಗಳನ್ನು ಹೆಚ್ಚಿಗೆ ಈ ಕಾರ್ಯಕ್ಕಾಗಿ ಬಳಸಲಾಗುತ್ತಿದೆ. ಪ್ರೋಟೀನುಗಳನ್ನು ಅಧ್ರುವೀಯ ವಿಲೇಯಕಗಳನ್ನು ಬಳಸಿ (ಎಥನಾಲ್, ಮೆಥನಾಲ್, ಅಸಿಟೋನ್) ಒತ್ತರಿಸಬಹುದು. ಅನೇಕ ಆರ್ಗ್ಯಾನಿಕ್ ಮತ್ತು ಇನಾರ್ಗ್ಯಾನಿಕ್ ರಾಸಾಯನಿಕ ವಸ್ತುಗಳು (ಉದಾ: ಟ್ರೈಕ್ಲೋರ್ ಅಸೆಟಿಕ್ ಆಮ್ಲ, ಪಿಕ್ರಿಕ್ ಆಮ್ಲ ಮತ್ತು ಫಾಸ್ಫೋಟಂಗ್ಸ್ಟಿಕ್ ಆಮ್ಲ, ಭಾರಲೋಹದ ಅಯಾನುಗಳು) ಪ್ರೋಟೀನುಗಳನ್ನು ಒತ್ತರಿಸುತ್ತದೆ. ಪ್ರೋಟೀನುಗಳ ಅಣುತೂಕವನ್ನು ನಿರ್ಧರಿಸಲು ಅತಿವೇಗ ಭ್ರಮಣಯಂತ್ರವನ್ನು ಬಳಸಬಹುದು. ಇದರ ದ್ರಾವಣವನ್ನು ಭ್ರಮಣ ಯಂತ್ರದ ಕೋಶದಲ್ಲಿಟ್ಟು ಅತಿವೇಗದಲ್ಲಿ ತಿರುಗಿಸಿದಾಗ ಅದು ನಿಧಾನವಾಗಿ ಕೋಶದ ಬುಡದ ಕಡೆಗೆ ಚಲಿಸಿ ಒತ್ತರಿಸುತ್ತದೆ. ಅನಂತರ ಕೋಶದ ದ್ರಾವಣದಲ್ಲಿ ಪ್ರೋಟೀನಿನ ಸಾರ ಮೇಲಿನಿಂದ ಕೆಳಕ್ಕೆ ವ್ಯತ್ಯಾಸವಾಗುತ್ತದೆ. ಈ ವ್ಯತ್ಯಾಸದ ವೇಗವನ್ನು ಪ್ರೋಟೀನಿನ ಎಲ್ಲೆಯನ್ನು ಆಗಾಗ್ಗೆ ಅಳೆಯುವುದರ ಮೂಲಕ, ಒತ್ತರಿಕೆ ನಿಯತಾಂಕವನ್ನು ಗಣಿಸಬಹುದು. ಇದು ಪ್ರೋಟೀನಿನ ಅಣುತೂಕವನ್ನು ಅವಲಂಬಿಸಿದೆ.

ಯಾವುದೇ ಅಣುವಿನ ತೂಕವನ್ನು ಅದರಲ್ಲಿರುವ ಪರಮಾಣು ಘಟನೆಯಿಂದ ಲೆಕ್ಕ ಹಾಕಬಹುದು. ಆದರೆ, ಪ್ರೋಟೀನುಗಳಲ್ಲ ಅನೇಕಾನೇಕ ಇಂಗಾಲ, ಆಕ್ಸಿಜನ್, ಸಾರಜನಕ, ಹೈಡ್ರೊಜನ್ ಪರಮಾಣುಗಳಿರುವುದರಿಂದ ಈ ವಿಧಾನ ಪ್ರಯೋಜನವಾಗದು. ಆದರು, ಕೆಲವು ಪ್ರೋಟೀನುಗಳಲ್ಲಿ ಬೇರೆ ಯಾವುದೊಂದು ಪರಮಾಣು ಅಲ್ಪಪ್ರಮಾಣದಲ್ಲಿದ್ದರೆ, ಅವುಗಳ ಕನಿಷ್ಠ ಅಣುತೂಕವನ್ನು ನಿರ್ಧರಿಸಬಹುದು. ಉದಾ: ಹಿಮೊಗ್ಲೋಬಿನ್ನಿನಲ್ಲಿ ಕಬ್ಬಿಣದ ತೂಕ ಪ್ರತಿ ಶತ ೦.೩೪ರಷ್ಟು. ಆದ್ದರಿಂದ ಹೀಮೊಗ್ಲೋಬಿನ್ನಿನ ಕನಿಷ್ಠ ಅಣುತೂಕವನ್ನು

$$[\text{ಅಣುತೂಕ}]\ \text{ಕನಿಷ್ಠ} = \frac{[\text{ಪರಮಾಣುತೂಕ}] \times ೧೦೦}{[\text{ಪರಮಾಣುವಿನ ಭಾರದ ಮೇಲೆ ಪ್ರತಿಶತ}]}$$

ಎಂಬ ಸಮೀಕರಣದಿಂದ ನಿರ್ಧರಿಸಬಹುದು. ಆದ್ದರಿಂದ,

$$[\text{ಹೆಮೊಗ್ಲೋಬಿನ್ ಅಣುತೂಕ}]\text{ಕನಿಷ್ಠ} = \frac{55.8\times100}{0.34} = 16,700$$

ಹಿಮೊಗ್ಲೋಬಿನ್ನಿನಲ್ಲಿ ನಾಲ್ಕು ಪೆಪ್ಟೈಡ್ ಶ್ರೇಣಿಯಿದ್ದು, ಪ್ರತಿಯೊಂದರಲ್ಲೂ ಕಬ್ಬಿಣದ ಪರಮಾಣುವಿರುವುದರಿಂದ ಅದರ ಒಟ್ಟು ಅಣುತೂಕ ೧೬,೭೦೦ x 4.

ಆಣುವಿಕ ಜರಡಿಯ ಮೂಲಕ ಶೋಧಿಸಿ ಪ್ರೋಟೀನುಗಳ ಅಣುತೂಕವನ್ನು ನಿರ್ಧರಿಸಬಹುದು. ಸೆಫಾಡೆಕ್ಸ್ ಜೆಲ್ಲುಗಳನ್ನು ಬಳಸಿ ಅಣುತೂಕ ರೀತ್ಯ ಮತ್ತು ಆಣುವಿಕ ಗಾತ್ರದ ರೀತ್ಯ ಜೆಲ್ಲುಗಳನ್ನು ಬಳಸಿ ಅಣುತೂಕ ರೀತ್ಯ ಮತ್ತು ಆಣುವಿಕ ಗಾತ್ರದ ರೀತ್ಯ ಪ್ರೋಟೀನುಗಳನ್ನು ವಿಂಗಡಿಸಹುದು. ಸ್ತಂಭವನ್ನು ಸ್ಥಪಿಸಿದಾಗ ನಿರ್ದಿಷ್ಟ ಕಾಲಾಂತರದಲ್ಲಿ ಅಥವಾ ಭಿನ್ನಾಂಕ ದ್ರಾವಣಗಳಲ್ಲಿ ಗೊತ್ತಾದ ಅಣುತೂಕವುಳ್ಳ ಪ್ರೋಟೀನುಗಳನ್ನು ಬಳಸಿ ಸ್ತಂಭವನ್ನು ಶಿಷ್ಟೀಕರಿಸಬಹುದು. ಅನಂತರ ಪ್ರಾಯೋಗಿಕ ಪ್ರೋಟೀನನ್ನು ಸ್ತಂಭದ ಮೂಲಕ ಹಾಯಿಸಿ ಅದು ಹೊರಬರುವ ಭಿನ್ನಾಂಕವನ್ನು ಗುರುತಿಸಿ ಅಣುತೂಕವನ್ನು ನಿರ್ಧರಿಸಬಹುದು.

ಘರ್ಷಣ ಅನುಪಾತ $\frac{f}{f_o} = \frac{10^{-8}(1-\bar{v}e)^{1/3}}{D^2 s\bar{v}}$ ಎಂಬುದರ ಸಹಾಯದಿಂದ ಪ್ರೋಟೀನಿನ ಆಕಾರವನ್ನು ಊಹಿಸಬಹುದು. ಅಡಕವಾದ ಮತ್ತು ಜಲರಹಿತವಾದ ಕಣದ ಆಣುವಿಕ ಘರ್ಷಣ ಗುಣಾಂಕ $f_o$ . ಆಗ $f/f_o$=೧ ಆಗಿದ್ದು ಅಣುವನ್ನು ಜಲರಹಿತಗೋಳವೆನ್ನಬಹುದು. ೧ ಕ್ಕಿಂತ ಹೆಚ್ಚಾದರೆ ಅಣು ಅಸಮವಾಗಿರಬಹುದು, ಜಲಸಿಕ್ತವಾಗಿರಬಹುದು ಅಥವಾ ಎರಡೂ ಆಗಿರಬಹುದು. ಗೋಳಾಕಾರದ ಅನೇಕ ರೈಬೊನ್ಯೂಕ್ಲಿಯೇಸ್, ಇನ್ಸುಲಿನ್, ಪೆಪ್ಸಿನ್ ಮತ್ತು ಕೈಮೊಟ್ರಿಪ್ಸಿನೋಜನ್ ಉದಾಹರಣೆಗಳು. ಅನೇಕ ಪ್ರೋಟೀನುಗಳು ಹೆಚ್ಚಿನ ಮಟ್ಟದ ಅಸಮತೆಯನ್ನು ತೋರುತ್ತದೆ. ಫೈಬ್ರಿನೋಜನ್ ಮತ್ತು ಮಯೋಸಿನ್ ಇಂಥ ಪ್ರೋಟೀನುಗಳಿಗೆ ಉದಾಹರಣೆಗಳು. ಈ ಬಗೆಯ ಆಕಾರವುಳ್ಳ ಪ್ರೋಟೀನುಗಳು ಬೆಳಕನ್ನು ಚೆನ್ನಾಗಿ ಚದರಿಸುತ್ತವೆಯಾಗಿ ಅಣುವಿನ ಆಕಾರ ಮತ್ತು ಅಣುತೂಕಗಳನ್ನು ಬೆಳಕಿನ ಚದರಿಕೆಯನ್ನು ಅಳೆಯುವುದರಿಂದ ನಿರ್ಧರಿಸಬಹುದು.

ಜೈವಿಕ ಸಂಶ್ಲೇಷಣೆ: ಎಲ್ಲ ಜೀವಿಗಳಲ್ಲಿ ಪ್ರೋಟೀನುಗಳು ಸಂಶ್ಲೇಷಿತವಾಗುತ್ತವೆ ಮತ್ತು ಜೀರ್ಣಗೊಳ್ಳುತ್ತವೆ. ಪ್ರಾಣಿಗಳು ಆಹಾರ ರೂಪದಲ್ಲಿ ತೆಗೆದುಕೊಂಡ ಪ್ರೋಟೀನುಗಳು, ಅನ್ನನಾಳದಲ್ಲಿ ಪಚನವಾಗಿ ಅಮೈನೋ ಆಮ್ಲಗಳನ್ನು ಬಿಡುಗಡೆಮಾಡುತ್ತವೆ. ಇವು ರಕ್ತದ ಮೂಲಕ ಯಕೃತ್ತು, ಮೇದೋಜೀರಕಾಂಗ ಅಂಗಗಳಿಗೆ ಒದಗಿಸಲ್ಪಟ್ಟು ಅವುಗಳಲ್ಲಿ ವಿಶಿಷ್ಟವಾದ ಪ್ರೋಟೀನುಗಳಾಗಿ ಮಾರ್ಪಡುತ್ತವೆ. ಪ್ರೋಟೀನ್ ಸಂಶ್ಲೇಷಣೆ ಜೀವಿಯಲ್ಲಿ ನಡೆಯುವ ಒಂದು ಅದ್ಭುತ ಕ್ರಿಯೆ. ಇದನ್ನು ಸಂಶ್ಲೇಷಿಸುವ ಅಂಗಾಂಶಗಳ ಕೋಶಗಳು ಅವಿರತವಾಗಿ ತಪ್ಪಿಗೆ ಅವಕಾಶವಿಲ್ಲದಂತೆ ಸರಿಯಾದ ಅನುಕ್ರಮದಲ್ಲಿ ಆಮ್ಲನೋ ಆಮ್ಲಗಳನ್ನು ಪೆಪ್ಟೈಡ್ ಬಂಧಗಳಲ್ಲಿ ತೊಡಗಿಸಿ ವಿಶಿಷ್ಟವಾದ ಪ್ರೋಟೀನುಗಳನ್ನು

ಉತ್ಪಾದಿಸುತ್ತವೆ. ಜೈವಿಕ ಪಟುತ್ವವುಳ್ಳ ಪ್ರೋಟೀನುಗಳ ಚಟುವಟಿಕೆ ಅಮೈನೋ ಅಮ್ಲಗಳ ಅನುಕ್ರಮದಿಂದಲೇ ಉದ್ಭವವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಕೋಶಗಳು ಪ್ರೋಟೀನುಗಳನ್ನು ಸಂಶ್ಲೇಷಿಸುವ ಬಗ್ಗೆ ಸ್ಥೂಲವಾಗಿ ತಿಳಿಯಲಾಗಿದೆ. ಕೋಶ ರಹಿತ ವ್ಯವಸ್ಥೆಯನ್ನು ಬಳಸಿ ಕೃತಕ ದೂತ ಆರ್‌ಎನ್‌ಎ(ರೈಬೋನ್ಯೂಕ್ಲಿಕ್ ಆಮ್ಲ)ಗಳ ಸಹಾಯದಿಂದ (ಅತಿಅಪರೂಪವಾಗಿ ತಪ್ಪೆಸಗುವಂತೆ) ಕೋಶಗಳು ಪ್ರೋಟೀನುಗಳನ್ನು ತಯಾರಿಸುವ ರಹಸ್ಯವನ್ನು ಭೇದಿಸಲಾಗಿದೆ, ಕೋಶದ ನ್ಯೂಕ್ಲಿಯಸ್, ಮೈಟೊಕಾಂಡ್ರಿಯ ಮತ್ತು ರೈಬೊಸೋಮುಗಳು ಪ್ರೋಟೀನ್ ಉತ್ಪತ್ತಿಯಾಗುವ ಸ್ಥಳಗಳು. ಇವು ಪ್ರೋಟೀನನ್ನು ಸಂಶ್ಲೇಷಿಸುವ ವಿಧಾನಗಳಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆ.

ಸಂಶ್ಲೇಷಣೆಯ ಹಂತಗಳಿವು: (i) ಪ್ರಾಥಮಿಕ ಘಟನೆಯ ಅಮೈನೋ ಆಮ್ಲಗಳ ಅನುಕ್ರಮದ ನಿಯಂತ್ರಣ. (ii) ಅಮೈನೋ ಆಮ್ಲಗಳನ್ನು ಪಟುಗೊಳಿಸುವುದು ಮತ್ತು ಅವನ್ನು ಅವುಗಳ ಸ್ಥಾನದಲ್ಲಿ ಕೂರಿಸುವುದು. (iii) ಪೆಪ್ಟೈಡ್ ಬಂಧದ ರಚನೆ. (iv) ಫಾಸ್ಫೇಟ್, ಹೈಡ್ರಾಕ್ಸಿಪುಂಜಗಳ ಸೇರ್ಪಡೆಯ ಪರಿಣಾಮವಾಗಿ ಪ್ರಾಥಮಿಕ ರಚನೆಯಲ್ಲಾಗುವ ಮಾರ್ಪಾಡುಗಳು. (v) ದ್ವಿತೀಯಕ, ತೃತೀಯಕ ಮತ್ತು ಚತುರ್ಥಕ ಮಟ್ಟದ ಘಟನೆಗಳ ರಚನೆ.

ಜೈವಿಕವ್ಯವಸ್ಥೆಯಲ್ಲಿ ಒಂದು ವಿಶಿಷ್ಟ ಪ್ರೋಟೀನಿನ ಸಂಶ್ಲೇಷಣೆಯಾದ ಬಳಿಕವೇ ಸಹಜ ಪ್ರೋಟೀನಿನಲ್ಲಿ ಕಂಡುಬರುವ ಮಾರ್ಪಾಡುಗಳು ಜರಗುವುವು. ಉದಾ: ಗ್ಲೈಕೊಪ್ರೋಟೀನಿನಲ್ಲಿರುವ ಶರ್ಕರಪುಂಜ, ಪೆಪ್ಟೈಡ್ ಭಾಗ ಸಂಶ್ಲೇಷಿತವಾದ ಅನಂತರ ಅದಕ್ಕೆ ಸೇರ್ಪಡೆಯಾಗುತ್ತದೆ. ಸಲ್ಫೇಟ್ ಪುಂಜಗಳು ಸಹ ಅನಂತರವೇ ಸೇರ್ಪಡೆಯಾಗುವುದಾಗಿದೆ. ಜೈವಿಕ ಸ್ಥಿತಿಯಲ್ಲಿ ಪ್ರೋಟೀನುಗಳ ಸಂಶ್ಲೇಷಣೆ ಕೋಶದ ಬೇಡಿಕೆಗೆ ಅನುಸಾರವಾಗಿ ನಿಯಂತ್ರಿತವಾಗುತ್ತದೆ. ಎಶ್ಚರೀಷಿಯಾ ಕೋಲೈ ಮತ್ತು ಸಾಲ್ಮೊನೆಲ್ಲ ಟೈಫಿಮೂರಿಯಮ್ ಬ್ಯಾಕ್ಟೀರಿಯಾಗಳಲ್ಲಿ ನಡೆಸಿದ ಸಂಶೋಧನೆಯಿಂದ ಕಿಣ್ವ ಸಂಶ್ಲೇಷಣೆಯನ್ನು ಪ್ರೇರೇಪಿಸುವ ಬಗ್ಗೆ, ಅಥವಾ ದಮನಮಾಡುವ ಬಗ್ಗೆ ವರದಿ ಮಾಡಲಾಗಿದೆ. ಈ ಬಗೆಯ ಆಧಾರಗಳಿಂದ ಜಾಕೋಬ್ ಮತ್ತು ಮೋನೋಡ್ ಅವರು ತಮ್ಮ ಸುಪ್ರಸಿದ್ಧ ಓಪೆರಾನ್ ಪ್ರಮೇಯವನ್ನು (ನೋಡಿ. ಓಪೆರಾನ್‌ಸಿದ್ಧಾಂತ) ಮುಂದಿಟ್ಟು ಕೋಶಗಳಲ್ಲಿ ಪ್ರೋಟೀನಿನ ಸಂಶ್ಲೇಷಣೆ ನಿಯಂತ್ರಣವಾಗುವ ರೀತಿಯನ್ನು ವಿವರಿಸಿದರು. ಕೆಂಪುರಕ್ತಕಣದಲ್ಲಿ ಹೀಮೊಗ್ಲೋಬಿನ್ ಸಂಶ್ಲೇಷಣೆ ಸಹ ನಿಯಂತ್ರಿತವಾಗಿರುತ್ತದೆ. ಬ್ಯಾಕ್ಟೀರಿಯಾದಲ್ಲಿ ಪ್ರೋಟೀನಿನ ಸಂಶ್ಲೇಷಣೆಯನ್ನು ಅನೇಕ ಬಗೆಯ ಜೀವಿನಿರೋಧಿಗಳು ತಡೆಗಟ್ಟುತ್ತವೆ. ಇವುಗಳ ಪೈಕಿ ಮುಖ್ಯವಾದವು ಮತ್ತು ಚಿರಪರಿಚಿತವಾದವು ಪ್ಯೂರೊಮೈಸಿನ್, ಕ್ಲೋರೆಂಫೆನಿಕಾಲ್ ಮತ್ತು ಟೆಟ್ರಸೈಕ್ಲಿನ್ನುಗಳು. ಇವು ಪ್ರೋಟೀನ್ ಸಂಶ್ಲೇಷಣೆಯ ವಿವಿಧ ಹಂತಗಳಲ್ಲಿ ಪರಿಣಾಮಕಾರಿಯಾಗಿರುತ್ತವೆ. ಜೀವಿನಿರೋಧಿಗಳಿದ್ದಾಗ ಬ್ಯಾಕ್ಟೀರಿಯಾಗಳಲ್ಲಿ ಪ್ರೋಟೀನ್ ಸಂಶ್ಲೇಷಣೆ ನಿಂತುಹೋಗಿ ಬೆಳೆವಣಿಗೆ ಕುಂಠಿತವಾಗುತ್ತದೆ. ವಂಶಾಭಿವೃದ್ಧಿಯಾಗಲಾರದು. ಆದರೆ ಈ ಜೀವಿರೋಧಿಗಳು ಉನ್ನತವರ್ಗದ ಕೋಶಗಳಲ್ಲಿ ನಡೆಯುವ ಪ್ರೋಟೀನ್ ಸಂಶ್ಲೇಷಣೆಯನ್ನು ಕುಂಠಿತಗೊಳಿಸುವುದಿಲ್ಲ. ಎಂದೇ ಇವನ್ನು ಬ್ಯಾಕ್ಟೀರಿಯಾ ಮತ್ತು ವೈರಸ್ಸುಗಳಿಂದ ಉಂಟಾಗುವ ವಿವಿಧ ಖಾಯಿಲೆಗಳನ್ನು ವಾಸಿಮಾಡಲು ಮಾನವನಲ್ಲಿ ಬಳಸಲಾಗುತ್ತಿದೆ. ಆದರೆ, ಜೀವಿನಿರೋಧಕಗಳನ್ನು ಮಿತಿಯಿಲ್ಲದೆ ಬಳಸಿದರೆ ಬ್ಯಾಕ್ಟೀರಿಯಾಗಳು ಅವನ್ನು ಎದುರಿಸಿ ಅಭಿವರ್ಧಿಸಬಲ್ಲ ನಿರೋಧಕತೆಯನ್ನು ಸಂಪಾದಿಸಿಕೊಳ್ಳುತ್ತವೆ.

ಅನೇಕ ಆನುವಂಶಿಕ ರೋಗಗಳಿಗೆ (ಉದಾ: ಆಲ್ಬಿನಿಸಮ್, ಫೀನೈಲ್ ಕೀಟೋನ್ ಯೂರಿಯ) ಕಿಣ್ವಗಳ ಸಂಶ್ಲೇಷಣೆಯಲ್ಲಿ ಆಗಬಹುದಾದ ಕೊರತೆ ಅಥವಾ ಮಾರ್ಪಾಡು ಕಾರಣ. ಆಲ್ಬಿನಿಸಮ್‌ನಲ್ಲಿ ಟೈರೊಸಿನ್ ಆಮ್ಲ, ಚರ್ಮದ ಕೋಶಗಳಲ್ಲಿಯ ವರ್ಣವಸ್ತುವಾದ ಮೆಲಾನಿನ್ನಿಗೆ ಪರಿವರ್ತನೆ ಆಗುವುದಿಲ್ಲ. ಕಾರಣ, ಕ್ರಿಯೆಯನ್ನು ವರ್ಧಿಸುವ ಕಿಣ್ವದ ಅಭಾವ. ಕಿಣ್ವವನ್ನು ಒದಗಿಸುವ ವಿಧಾನದಿಂದ ಈ ಬಗೆಯ ರೋಗಗಳನ್ನು ಸರಿಪಡಿಸಲು ಈಚೆಗೆ ಪ್ರಯತ್ನಿಸಲಾಗಿದೆ. ಮಾನವನಿಗೆ ಬೇಕಾಗುವ ಇನ್ಸುಲಿನ್ ಮತ್ತು ಇಂಟರ್‌ಫೆರಾನ್ ಪ್ರೋಟೀನುಗಳನ್ನು ಬ್ಯಾಕ್ಟೀರಿಯಾಗಳಲ್ಲಿ ಸಂಶ್ಲೇಷಣೆಯಾಗುವಂತೆ ಅವುಗಳ ಕ್ರೋಮೋಸೋಮುಗಳನ್ನು ಮಾರ್ಪಡಿಸುವ ಸಾಹಸ ೧೯೮೦ರಿಂದಲೂ ನಡೆದಿದೆ. ಈ ಪ್ರಯತ್ನ ಸಾಕಷ್ಟು ಯಶಸ್ವಿಯೂ ಆಗಿದೆ. ಸಿಹಿ ಮೂತ್ರ ರೋಗ, ಕ್ಯಾನ್ಸರ್ ನಂತರ ಮಾರಕ ರೋಗಗಳನ್ನು ತಳಿತಂತ್ರಜ್ಞಾನದಿಂದ ಪಡೆಯುವ ಪ್ರೋಟೀನುಗಳಿಂದ ವಾಸಿಮಾಡುವತ್ತ ವೈದ್ಯರು ದಾಪುಗಾಲು ಹಾಕಿದ್ದಾರೆ. ***

**ಪ್ರೋಟೋಕಾರ್ಡೇಟ:** ಆದಿಕಾರ್ಡೇಟು ಅಥವಾ ನಿಮ್ನ ಕಾರ್ಡೇಟುಗಳನ್ನು ಒಳಗೊಂಡ ಆದಿವಿಭಾಗ. ನೋಟೋಕಾರ್ಡ್ ಎಂಬ ಆಧಾರ ರಚನೆ ಇರುವ ಪ್ರಾಣಿಗಳೇ ಕಾರ್ಡೇಟುಗಳು. ಈ ರಚನೆ ಪ್ರಾಣಿಯ ಜೀವನ ಪರ್ಯಂತ ಇರಬಹುದು ಅಥವಾ ಭ್ರೂಣಾವಸ್ಥೆಯಲ್ಲಿ ಮಾತ್ರ ಕಾಣಿಸಿಕೊಳ್ಳಬಹುದು. ಪ್ರೋಟೋಕಾರ್ಡೇಟಗಳಲ್ಲಿ ಈ ಮುಂದಿನ ಅನೇಕ ಕಾರ್ಡೇಟ್ ಗುಣಲಕ್ಷಗಳನ್ನು ಕಾಣಬಹುದು; 1. ನೋಟೋಕಾರ್ಡ್–ಇದು ದೇಹದ ಊರ್ಧ್ವಭಾಗದಲ್ಲಿ ನರಹುರಿ ಮತ್ತು ಅನ್ನನಾಳಗಳ ಮಧ್ಯದ ಅವಕಾಶದಲ್ಲಿ ಸ್ಥಿತಗೊಂಡಿರುವ ಪೆಡುಸಾದ ನಳಿಕೆಯಂಥ ರಚನೆ. ತಲೆಯಿಂದ ಬಾಲದ ತುದಿಯವರೆಗೂ ಹರಡಿದ್ದು ದೇಹಕ್ಕೆ ಆಧಾರವನ್ನೂ ಪ್ರಾಣಿಗೆ ಆಕಾರವನ್ನೂ ಸ್ನಾಯುಗಳು ಅಂಟಿಕೊಳ್ಳಲು ಮೇಲ್ಮೈಯನ್ನೂ ಒದಗಿಸುವುದು. ಕೆಲವು ಪ್ರೋಟೋಕಾರ್ಡೇಟುಗಳಲ್ಲಿ ಇದು ಲಾರ್ವಾವಸ್ಥೆಯಲ್ಲಿ ಮಾತ್ರ ಇದೆಯಾದರೆ ಇನ್ನು ಕೆಲವಲ್ಲಿ ವಯಸ್ಕಹಂತದಲ್ಲೂ ಉಳಿದಿರುತ್ತದೆ.

೨. ಡಾರ್ಸಲ್ ನಳಿಕೆ ನರಹುರಿ: ತಲೆಯಿಂದ ಬಾಲದ ತುದಿಯವರೆಗೂ ಹಬ್ಬಿರುವ ರಚನೆ. ತಲೆಭಾಗದಲ್ಲಿ ಸ್ವಲ್ಪ ದಪ್ಪವಾಗಿದ್ದು ಮೆದುಳನ್ನು ಹೋಲುತ್ತದೆ. ಆದರೆ ಕೆಲವು ಉಪಗುಂಪುಗಳಲ್ಲಿ ನರಹುರಿಯ ಮುಂಭಾಗ ನರಮುಡಿಯಾಗಿ (ಗ್ಯಾಂಗ್ಲಿಯ) ಉಳಿದು ಮಿಕ್ಕ ಭಾಗ ಕ್ಷೀಣಗೊಂಡಿರುತ್ತದೆ.

೩. ಕಿವಿರು ರಂಧ್ರಗಳು: ಇವು ಫ್ಯಾರಿಂಕ್ಸ್ ಭಿತ್ತಿಯಲ್ಲಿ ಸ್ಥಿತವಾಗಿವೆ. ಸಂಖ್ಯೆಯಲ್ಲಿ ಪ್ರೋಟೋಕಾರ್ಡೇಟುಗಳ ಉಪಗುಂಪುಗಳಲ್ಲಿ ಬೇರೆಬೇರೆಯಾಗಿವೆ. ಬಾಯಿಂದ ಒಳ ಹೊಕ್ಕ ನೀರು ಈ ರಂಧ್ರಗಳ ಮೂಲಕ ಹೊರಬರುವುದರಿಂದ ನೀರಿನಲ್ಲಿರುವ ಅವಶ್ಯಕ ಅನಿಲಗಳು ಕೋಶಗಳಿಗೂ ಅಲ್ಲಿನ ತ್ಯಾಜ್ಯ ಅನಿಲಗಳು ನೀರಿಗೂ ವಿನಿಮಯಗೊಳ್ಳುವುವು.



2. ಆಂಫಿಯಾಕ್ಸಸ್



1. ಬೆಲನೊಗ್ಲಾಸಸ್



3. ಅಸಿಡಿಯ

ಪ್ರೋಟೋಕಾರ್ಡೇಟ ಮತ್ತು ಕಾರ್ಡೇಟುಗಳ ನಡುವಣ ಇತರ ಸಾಮಾನ್ಯ ಲಕ್ಷಣಗಳು ಇಂತಿವೆ; ದ್ವಿಪಾರ್ಶ್ವ ಸಮಮಿತಿ. ಮೂರು ಪ್ರಜನನ ದರ್ಮಗಳು, ದೇಹಾಂತರಾವಕಾಶ, ಮಾರ್ಪಾಟುಗೊಂಡ ಖಂಡವಿಂಗಡಣೆ, ಚೆನ್ನಾಗಿ ರೂಪುಗೊಂಡ ಅಂಗವ್ಯೂಹಗಳು, ತಲೆ ಅಥವಾ ತಲೆಯ ಭಾಗ, ಮುಂಡ ಮತ್ತು ಬಾಲ ಎಂಬ ಮೂರುಭಾಗಗಳಾಗಿ ವಿಂಗಡಗೊಂಡ ದೇಹ, ಸ್ನಾಯುಪುಷ್ಟ ಹೃದಯ ಇಲ್ಲದಿದ್ದರೂ ಮುಖ್ಯ ರಕ್ತನಾಳ ಉಬ್ಬಿ ಹೃದಯದ ರೀತಿಯಲ್ಲಿ ಕೆಲಸ ಮಾಡುವುದು, ಇದಕ್ಕೆ ಹೊಂದಿಕೊಂಡಂಥ ಅಭಿವಾಹಿ ರಕ್ತನಾಳಗಳಿರುವುದು, (ಇದ್ದರೆ) ವಿಶೇಷ ರೀತಿಯವಾಗಿರುವುದು. ಪ್ರೋಟೋಕಾರ್ಡೇಟದ ಸದಸ್ಯಗಳು ಸಾಮಾನ್ಯವಾಗಿ ದ್ವಿಲಿಂಗಿಗಳು. ಪ್ರೋಟೋಕಾರ್ಡೇಟವನ್ನು ಮೂರು ಉಪವಿಭಾಗಗಳನ್ನಾಗಿ ವರ್ಗೀಕರಿಸಲಾಗಿದೆ: ಯೂರೊಕಾರ್ಡೇಟ (ಟ್ಯೂನಿಕೇಟ), ಸೆಫಲೊಕಾರ್ಡೇಟ ಮತ್ತು ಹೆಮಿಕಾರ್ಡೇಟ. ಆದರೆ ಈಗಿನ ಅಧ್ಯಯನಗಳ ಪ್ರಕಾರ ಹೆಮಿಕಾರ್ಡೇಟ ಗುಂಪನ್ನು ಪ್ರೋಟೋಕಾರ್ಡೇಟದಿಂದ ಬೇರೆಮಾಡಿ ಅಕಶೇರುಕ ಗುಂಪುಗಳ ಒಂದು ಪ್ರತ್ಯೇಕ ಉಪವಿಭಾಗವೆಂದು ತೀರ್ಮಾನಿಸಲಾಗಿದೆ.

ಉಪವಿಭಾಗ ೧. ಯೂರೊಕಾರ್ಡೇಟ (ಟ್ಯೂನಿಕೇಟ): ಇವುಗಳ ದೇಹದ ಸುತ್ತ ದಪ್ಪವಾದ, ಪೆಡುಸಾದ ಟ್ಯೂನಿಕ್ ಪದರ ಇರುವುದರಿಂದ ಟ್ಯೂನಿಕೇಟ ಎಂದೂ ಇವನ್ನು ಮಟ್ಟಿದಾಗ ಇವು ನೀರನ್ನು ಚಿಮ್ಮುವುದರಿಂದ ಕಡಲು ಚಿರುಕಿಗಳೆಂದೂ (ಸೀಸ್ಕ್ವಿರ್ಟ್ಸ್) ನೋಟೋಕಾರ್ಡ್ ರಚನೆ ಲಾರ್ವ ಬಾಲಕ್ಕೆ ಸೀಮಿತವಾಗಿರುವದರಿಂದ ಯೂರೊಕಾರ್ಡೇಟ್‌ಗಳೆಂದೂ ಇವಕ್ಕೆ ಹೆಸರು ಕೊಡಲಾಗಿದೆ. ಟ್ಯೂನಿಕ್ ಹೊದಿಕೆ ಸಸ್ಯಗಳಲ್ಲಿ ಕಾಣಬರುವ ಸೆಲ್ಯುಲೋಸ್ ರೀತಿಯ ಟ್ಯೂನಿಸಿನ್ ವಸ್ತುವಿನಿಂದ ರಚಿತವಾಗಿದೆ.

ಇವು ಸಾಮಾನ್ಯವಾಗಿ ಆಕರ್ಷಕ ಬಣ್ಣಗಳಿಂದ ಕೂಡಿದ ಪಾರದರ್ಶಕ ಮೆತು ಜೀವಿಗಳು. ಕೆಲವು ಉಪಗುಂಪಿನವು ಒಂಟಿ ಜೀವಿಗಳಾದರೆ ಮಿಕ್ಕವು ಸಮುದಾಯ ಪ್ರಾಣಿಗಳು. ಕೆಲವು ಪ್ರೌಢಾವಸ್ಥೆಯಲ್ಲಿ ಸ್ಥಾವರ ಜೀವಿಗಳೂ ಲಾರ್ವಾವಸ್ಥೆಯಲ್ಲಿ ಜಂಗಮ ಜೀವಿಗಳೂ ಆಗಿವೆಯಾದರೆ ಮಿಕ್ಕವು ಜೀವಮಾನವಿಡೀ ಜಂಗಮಗಳಾಗಿ ವಾಸಿಸುವುವು.

ಈ ಗುಂಪಿನ ಪ್ರಾಣಿಗಳ ಲಾರ್ವಾವಸ್ಥೆಯಲ್ಲಿ ಅಥವಾ ನಿರಂತರವಾಗಿ ಲಾರ್ವಾವಸ್ಥೆಯಲ್ಲೇ ಇರುವಂಥವುಗಳಲ್ಲಿ ಮಾತ್ರ ಬಾಲದಲ್ಲಿ ನೋಟೊಕಾರ್ಡ್ ಇರುತ್ತದೆ. ಸ್ಥಾವರ ರೂಪದ ಪ್ರೌಢಪ್ರಾಣಿಗಳಲ್ಲಿ ಟೊಳ್ಳು ನರಹುರಿಯ ಬಹುಭಾಗ ಕ್ಷೀಣಗೊಂಡು ಕೊಂಚಮಾತ್ರ ನರಮುಡಿಯಾಗಿ ರೂಪುತಳೆದಿದೆ. ಆದರೆ ಕಿವಿರು ರಂಧ್ರಗಳು ಮಾತ್ರ ಎಲ್ಲ ಹಂತಗಳಲ್ಲೂ ಇರುವುವು. ಹೃದಯ ಉಬ್ಬಿದ ನಳಿಕೆಯಂತಿದ್ದು ಮೊದಲು ಒಂದು ದಿಕ್ಕಿನಲ್ಲಿ ಸಂಕುಚಿಸಿ ಆಮೇಲೆ ಅದರ ವಿರುದ್ಧ ದಿಕ್ಕಿನಲ್ಲಿ ಸಂಕುಚಿಸಿ ಪುನಃ ಮೊದಲ ದಿಕ್ಕಿಗೆ ವಾಪಸಾಗುತ್ತದೆ. ಹೀಗೆ ಹೃದಯದ ಸಂಕೋಚನ ವ್ಯಾಕೋಚನ ಕ್ರಿಯೆ ಪ್ರಾಣಿಗಳಲ್ಲೇ ಅತಿ ವಿಚಿತ್ರ ರೀತಿಯದ್ದಾಗಿದೆ. ರಕ್ತಕಣಗಳಲ್ಲಿ ಹೀಮೊಗ್ಲಾಬಿನ್ ಬದಲು ವೆನೇಡಿಯಮ್ಮಿನ ವಿವಿಧ ಆಮ್ಲಗಳಿರುವುವು. ಯೂರೊಕಾರ್ಡೇಟದ ಸದಸ್ಯಗಳು ದ್ವಿಲಿಂಗಿಗಳು. ಇವುಗಳ ಬೆಳವಣಿಗೆಯಲ್ಲಿ ಕ್ಷಿಪ್ರಕಾಲದ ಲಾರ್ವಗಳು ಕಂಡುಬರುತ್ತವೆ. ಈ ಗುಂಪಿನಲ್ಲಿ ಸುಮಾರು ೨೦೦೦ ಪ್ರಭೇದಗಳುಂಟು. ಎಲ್ಲವೂ ಕಡಲ ಜೀವಿಗಳು. ಇವುಗಳ ಪೈಕಿ ಸುಮಾರು ೧೦೦ ಪ್ರಭೇದಗಳು ಬಯಲುಸಾಗರಗಳಲ್ಲಿ ವಾಸಿಸುವುವು.

ಯೂರೊಕಾರ್ಡೇಟ ಉಪವಿಭಾಗದಲ್ಲಿ ೩ ವರ್ಗಗಳಿವೆ:

೧. ಅಸಿಡಿಯೇಸಿಯ: ಸ್ಥಾವರ ಅಥವಾ ಜಂಗಮ ಜೀವಿಗಳಾದ ಒಂಟಿ ಅಥವಾ ಸಮುದಾಯ ಪ್ರಾಣಿಗಳು. ಇವುಗಳ ಲಾರ್ವಾವಸ್ಥೆಯಲ್ಲಿ ಬಾಲ ಮತ್ತು ನೊಟೋಕಾರ್ಡ್ ಚೆನ್ನಾಗಿ ರೂಪುಗೊಂಡಿವೆ. ಪ್ರೌಢಾವಸ್ಥೆಯಲ್ಲಿ ಇವೆರಡೂ ಮಾಯವಾಗಿ ನರಹುರಿಯ ಸ್ವಲ್ಪಭಾಗ ನರಮುಡಿಯ (ಗ್ಯಾಂಗ್ಲಿಯ) ರೂಪತಳೆಯುವುದು. ಇದೇ ಮಿದುಳು. ಕಿವಿರು ರಂಧ್ರಗಳು ಅನೇಕ; ಬ್ರ್ಯಾಂಕಿಯಲ್ ಚೀಲದಲ್ಲಿ ಜೋಡಣೆಗೊಂಡಿವೆ. ಏಟ್ರಿಯಲ್ ಅವಕಾಶದೊಳಕ್ಕೆ ತೆರೆದುಕೊಳ್ಳುವಂತಿವೆ. ಲಾರ್ವಗಳು ಜಂಗಮರೀತಿಯವು.

ಈ ವರ್ಗದಲ್ಲಿ ಅಸಿಡಿಯ ಸಿಂಪ್ಲಿಸೀಸ್, ಅಸಿಡಿಯ ಕಂಪಾಸಿಟೀ, ಅಸಿಡಿಯ ಲ್ಯೂಸಿಯೇ ಎಂಬ ಮೂರು ಗಣಗಳುಂಟು. ಉದಾ: ಅಸಿಡಿಯ, ಹರ್ಡ್‌ಮೇನಿಯ, ಸಿಯೋನ, ಡಿಸ್ಟೂಮ, ಬೋಟ್ರಿಲಸ್ ಮತ್ತು ಪೈರೊಸೋಮ.

೨. ಥ್ಯಾಲಿಯೇಸಿಯ: ಜಂಗಮರೂಪಿಗಳಾದ ಒಂಟಿ ಅಥವಾ ಸಮುದಾಯ ಜೀವಿಗಳು. ಪ್ರೌಢಾವಸ್ಥೆಯಲ್ಲಿ ಬಾಲ ಇಲ್ಲ. ದೇಹ ಪೀಪಾಯಿ ಆಕಾರದ್ದು. ಚಕ್ರಾಕಾರದ ಪೂರ್ಣ ಅಥವಾ ಅಪೂರ್ಣ ಸ್ನಾಯು ಪಟ್ಟಿಗಳಿಂದ ಆವೃತವಾಗಿದೆ. ದೇಹದ ಮುಂಭಾಗದಲ್ಲಿ ಬಾಯಿಯೂ ಹಿಂಭಾಗದಲ್ಲಿ ಏಟ್ರಿಯಮ್ ತೆರಪೂ ಇವೆ. ಫ್ಯಾರಿಂಕ್ಸಿನಲ್ಲಿ ಎರಡು ದೊಡ್ಡ ಅಥವಾ ಅನೇಕ ಸಣ್ಣ ಸ್ಟಿಗ್ಮಟಗಳುಂಟು. ಇವು ಏಟ್ರಿಯಮ್ ಅವಕಾಶದೊಳಕ್ಕೆ ತೆರೆಯುವುವು. ಈ ಗುಂಪಿನ ಪ್ರಾಣಿಗಳಲ್ಲಿ ಪರ್ಯಾಯ ಸಂತಾನ ಪದ್ಧತಿ ಇದ್ದು ಲೈಂಗಿಕ ಹಾಗೂ ನಿರ್ಲಿಂಗ ಸಂತತಿಗಳು ರೂಪುಗೊಳ್ಳುವುವು. ಲಾರ್ವಾವಸ್ಥೆಯಲ್ಲಿ ಬಾಲವಿರಬಹುದು ಅಥವಾ ಇಲ್ಲದಿರಬಹುದು.

ಈ ವರ್ಗದಲ್ಲಿ ಸೈಕ್ಲೊಮಯೇರಿಯ (ಡೋಲಿಯೋಲಿಡ) ಹಾಗೂ ಹೆಮಿಮಯೇರಿಯ (ಸ್ಯಾಲ್ಪಿಡ) ಎಂಬ ಎರಡು ಗಣಗುಳುಂಟು. ಉದಾ: ಡೋಲಿಯೋಲಿಮ್ ಮತ್ತು ಸ್ಯಾಲ್ಪ.

೩. ಲಾರ್ವೇಸಿಯ (ಅಪೆಂಡಿಕ್ಯುಲೇರಿಯ): ಜಂಗಮ ರೂಪಿಗಳಾದ ಬಾಲವುಳ್ಳ ಪ್ರಾಣಿಗಳು. ಇವಕ್ಕೆ ನಿರಂತರವಾದ ಲಾರ್ವ ರೂಪವಿರುವುದರಿಂದ ಇವಕ್ಕೆ ಲಾರ್ವೇಸಿಯ ಪ್ರಾಣಿಗಳೆಂಬ ಹೆಸರು ಬಂದಿದೆ. ಅಂದರೆ ಇವು ರೂಪಾಂತರ ಹೊಂದದೆ ಅಜೀವ 'ಪರ್ಯಂತ ಲಾರ್ವದ ಲಕ್ಷಣಗಳನ್ನೇ ತೋರುವುವು. ಈ ವಿಚಿತ್ರ ಲಕ್ಷಣಕ್ಕೆ ನಿಯೋಟೊನಿ ಎಂದು ಹೆಸರು. ಇವುಗಳ ದೇಹವನ್ನು ಆವರಿಸಿರುವ ದೊಡ್ಡ ಟೆಸ್ಟ್ ಕವಚ ನಿರಂತರವಾದುದಲ್ಲ. ಅವನ್ನು ಆಗಾಗ್ಗೆ ತ್ಯಜಿಸಿ ಹೊಸ ಕವಚವನ್ನು ಉತ್ಪತ್ತಿಮಾಡಿಕೊಳ್ಳುವುದು. ಇವು ಕೂಡ ದ್ವಿಲಿಂಗಿಗಳು. ಬಾಲದಲ್ಲಿ ನೋಟೊಕಾರ್ಡ್ ಇದೆ. ಮುಂಭಾಗದಲ್ಲಿ ನರಮುಡಿಯುಂಟು. ಉದಾ: ಆಯ್ಕೊಪ್ಲೂರ್, ಅಪೆಂಡಿಕ್ಯುಲೇರಿಯ.

ಉಪ ವಿಭಾಗ ಸೆಫಲೊಕಾರ್ಡೇಟ (ಏಕ್ರೇನಿಯ) : ಸಮುದ್ರವಾಸಿಗಳನ್ನು ಒಳಗೊಂಡ ಗುಂಪು. ಇವುಗಳ ದೇಹ ಸಣ್ಣದು. ಕಂಕಾಲ, ಜೋಡಿ ಈಜು ರೆಕ್ಕೆಗಳು, ಕಣ್ಣು ಮತ್ತು ಶಬ್ದಾಂಗಗಳು ಇಲ್ಲ. ಆದರೆ ನರಮಂಡಲ ಮತ್ತು ರಕ್ತ ಪರಿಚಲನಾ ವ್ಯವಸ್ಥೆಗಳು ಸರಳವಾಗಿದ್ದು ಕಾರ್ಡೇಟ ಮಾದರಿಯನ್ನು ಹೋಲುವುವು. ಮಿದುಳು ಚೆನ್ನಾಗಿ ಬೆಳೆದಿಲ್ಲ. ಬೆನ್ನುಹುರಿಯನರಗಳಲ್ಲಿ ಚೆನ್ನಾಗಿ ಬೆಳೆದ ಡಾರ್ಸಲ್ ಮತ್ತು ವೆಂಟ್ರಲ್ ಬೇರುಗಳಿವೆ. ಲಿಂಗಗಳು ಬೇರೆ ಬೇರೆಯಾಗಿವೆ. ದೇಹಾಂತರಾವಕಾಶ ಎಂಟರೊಸೀಲಿಕ್ ರೀತಿಯದು.

ಈ ಉಪವಿಭಾಗದಲ್ಲಿರುವ ಒಂದೇ ಒಂದು ಕುಟುಂಬವಾದ ಬ್ರ್ಯಾಂಕಿಯೊಸ್ಟೋಮಿಡೆಯಲ್ಲಿ ಬ್ರ್ಯಾಂಕಿಯೊಸ್ಟೋಮ (ಆಂಫಿಯಾಕ್ಸಸ್) ಮತ್ತು ಎಸಿಮೆಟ್ರಿಯಾನ್ ಎಂಬ ಎರಡು ಜಾತಿಗಳಿವೆ. ಬ್ರಾಂಕಿಯೊಸ್ಟೋಮದಲ್ಲಿ ಅಂಗಾಂಗಗಳು ಜೋಡಿ ಸರಣಿಯಲ್ಲಿಯೂ ಮೆಟಪ್ಲೂರ ಮಡಿಕೆಗಳು ಸಮಾಂತರವಾಗಿಯೂ ಎಸಿಮೆಟ್ರಿಯಾನ್ನಲ್ಲಿ ಅವು ಅಸಮಾಂತರವಾಗಿಯೂ ಇವೆ. ಕಾರ್ಡೇಟಗಳ ಒಳರಚನೆಯ ಹೋಲಿಕೆ ಮತ್ತು ಕ್ರಮಬದ್ಧ ಸಂಬಂಧಗಳನ್ನು ತಿಳಿಯಲು ಈ ಉಪವಿಭಾಗ ಬಹು ಮುಖ್ಯವಾದ್ದು.

ಉಪವಿಭಾಗ ಹೆಮಿಕಾರ್ಡೇಟ : ಒಂಟಿ ಅಥವಾ ಸಮುದಾಯ ಜೀವಿಗಳನ್ನು ಒಳಗೊಂಡಿದೆ. ಇದರ ಸದಸ್ಯಗಳು ಹುಳುಗಳಂತೆ ಕಾಣುತ್ತವೆ. ಇವುಗಳ ದೇಹಾಂತರಾವಕಾಶ ಎಂಟರೊಸೀಲಿಕ್ ತೆರನಾದುದು. ದೇಹದಲ್ಲಿ ಸಾಮಾನ್ಯವಾಗಿ ಸೊಂಡಿಲು, ಕತ್ತು ಮತ್ತು ಮುಂಡ ಎಂಬ ಮೂರು ಅಸಮ ಭಾಗಗಳನ್ನು ಗುರುತಿಸಬಹುದು. ಇವುಗಳಿಗೆ ಅನುಸಾರವಾಗಿ ಸೀಲೋಮ್ ಕೂಡ ೩ ಭಾಗಗಳಾಗಿದೆ. ಕತ್ತು ಮತ್ತು ಮುಂಡ ಭಾಗಗಳಲ್ಲಿ ಸಿಲೋಮ್ ಜೋಡಿಯಾಗಿಯೂ ಸೊಂಡಿಲಿನಲ್ಲಿ ಒಂಟಿಯಾಗಿಯೂ ಇದೆ. ಕಿವಿರುರಂಧ್ರಗಳು ಕೆಲವು ಉಪಗುಂಪುಗಳಲ್ಲಿ ಇಲ್ಲವೇ ಇಲ್ಲ. ಇನ್ನು ಕೆಲವಲ್ಲಿ ಜೊತೆಜೊತೆಯಾಗಿರುವುವು. ನೋಟೊಕಾರ್ಡ್ ಮೊಟಕಾಗಿದ್ದು ದೇಹದ ಮುಂಭಾಗಕ್ಕೆ ಸೀಮಿತವಾಗಿದೆ. ಇದಕ್ಕೆ ಬಕಲ್ ಡೈವರ್ಟಿಕ್ಯುಲಮ್ ಎಂದು ಹೆಸರು. ನರಮಂಡಲ ನಿಮ್ನ ಬಗೆಯ ಅಂತರ್‌ಎಪಿಡರ್ಮಲ್ ರೀತಿಯದು. ಮುಂಡದಲ್ಲಿ ಡಾರ್ಸಲ್ ಮತ್ತು ವೆಂಟ್ರಲ್‌ನಾಳಗಳೂ ಸೊಂಡಿಲು ಭಾಗದಲ್ಲಿ ಸಂಕುಚಿತ ಚೀಲವೂ ಇವೆ. ಕತ್ತಿನಭಾಗದಲ್ಲಿ ತಂತು ಉಪಾಂಗಗಳಿರಬಹುದು. ಈ ಉಪವಿಭಾಗದ ವರ್ಗಗಳು ಇಂತಿವೆ :

ವರ್ಗ ೧. ಎಂಟರೊನ್ಯೂಸ್ಟ : ಇವಕ್ಕೆ ಉಕಾರ್ನ್ ಹುಳುಗಳೆಂದು ಹೆಸರು. ಇವು ಒಂಟಿಜೀವಿಗಳು ಉದಾ : ಬೆಲನೊಗ್ಲಾಸಸ್, ಟೈಕೊಡೀರ, ಸ್ಯಾಕೊಗ್ಲಾಸಸ್.

ವರ್ಗ ೨. ಟೀರೊಬ್ರ್ಯಾಂಕಿಯ : ಸಮುದಾಯ ಜೀವಿಗಳು. ಇವು ಗಾತ್ರದಲ್ಲಿ ಸಣ್ಣವು. ಇದರಲ್ಲಿ ರ್‍ಯಾಬ್ಡೊಪ್ಲೂರಿಡ ಮತ್ತು ಸೆಫಲೊಡಿಸ್ಕಿಡ ಎಂಬ ಎರಡು ಗಣಗಳುಂಟು. ಉದಾ : ರ್‍ಯಾಬ್ಡೊಪ್ಲೂರಿಡ ಮತ್ತು ಸೆಫಲೊಡಿಸ್ಕಸ್.

ವರ್ಗ ೩. ಪ್ಲ್ಯಾಂಕಟೊಸ್ಫಿರಾಯ್ಡಿಯ: ಹೆಮಿಕಾರ್ಡೇಟ ಪ್ರಾಣಿಗಳ ನೋಟೊಕಾರ್ಡ್ ನಿಜವಾದ ನೋಟೊಕಾರ್ಡಿನ ಯಾವ ಲಕ್ಷಣಗಳನ್ನೂ ತೋರಿಸುವುದಿಲ್ಲ. ಅಲ್ಲದೆ ಹೆಮಿಕಾರ್ಡೇಟದ ಅಂಗವ್ಯೂಹ ರಚನೆಗಳು ಅಕಶೇರುಕಗಳ ರಚನೆಗಳನ್ನು ಹೋಲುತ್ತವೆ. ಇದರಿಂದಾಗಿ ಈ ಗುಂಪನ್ನು ಪ್ರೋಟೋಕಾರ್ಡೇಟ ಗುಂಪಿನಿಂದ (ಹಾಗೂ ಕಾರ್ಡೇಟ್ ಗುಂಪಿನಿಂದ) ಬೇರ್ಪಡಿಸಿ ಅಕಶೇರುಕಗಳ ಒಂದು ವಿಶಿಷ್ಟ ಗುಂಪೆಂದು ಪರಿಗಣಿಸಲಾಗುತ್ತಿದೆ.

(ಎನ್.ವಿ.ಎ)

**ಪ್ರೋಟೋಜೋವ:** ಪ್ರಾಣಿರಾಜ್ಯದ ಎರಡು ಮುಖ್ಯ ಉಪರಾಜ್ಯಗಳಲ್ಲಿ ಮೊದಲನೆಯದು ಹಾಗೂ ಇದಕ್ಕೆ ಸೇರಿದ ವಿಭಾಗ. ಪ್ರಾಣಿಗಳ ರಾಜ್ಯದ ಒಟ್ಟು 23 ವಿಭಾಗಗಳ ಪೈಕಿ ಇದು ವಿಶಿಷ್ಟವಾದ್ದು. ಏಕೆಂದರೆ ಇದಕ್ಕೆ ಸೇರಿದ ಪ್ರಾಣಿಗಳು ಏಕಕೋಶಜೀವಿಗಳು (ಉಳಿದವುಗಳ ಸದಸ್ಯಗಳು ಬಹು ಕೋಶ ಜೀವಿಗಳು; ಮೆಟಜೋವ ಎಂದು ಹೆಸರು). ಹೀಗಾಗಿ ಪ್ರೊಟೋಝೋವ ಇಡೀ ಪ್ರಾಣಿ ಪ್ರಪಂಚದಲ್ಲಿ ಅತ್ಯಂತ ಕಡಿಮೆ ವಿಕಾಸ ಹೊಂದಿದ ಪ್ರಾಣಿಗಳ ಗುಂಪು ಎನಿಸಿಕೊಂಡಿದೆ. ಆದ್ದರಿಂದಲೇ ಈ ಗುಂಪಿಗೆ ಪ್ರೊಟೋಜೋವ ಎಂದು ಹೆಸರು. ಈ ಹೆಸರು ಗ್ರೀಕ್ ಭಾಷೆಯ ಪದಗಳಾದ ಪ್ರೋಟೋಸ್=ಪ್ರಥಮ, ಜೂವಾನ್=ಪ್ರಾಣಿ ಎಂಬವುಗಳಿಂದ ನಿಷ್ಪತ್ತಿಗೊಂಡಿದೆ. ಈ ಗುಂಪಿನ ಸದಸ್ಯಗಳ ದೇಹ ಒಂದೇ ಒಂದು ಜೀವಕೋಶದಿಂದ ರಚಿತವಾಗಿದೆಯಾದರೂ ಬೇರೆ ಯಾವುದೇ ಕ್ರಿಯೆಗಳಾದ ಚಲನೆ, ಆಹಾರ ಸೇವನೆ, ರಕ್ಷಣೆ, ಸಂತಾನೋತ್ಪತ್ತಿ, ಬೆಳವಣಿಗೆ ಮುಂತಾದವನ್ನು ಸಮರ್ಥವಾಗಿ ನಿಭಾಯಿಸುತ್ತದೆ. ಇದರಿಂದ ರಚನಾತ್ಮಕ ದೃಷ್ಟಿಯಿಂದ ಈ ಏಕಕೋಶ ಬಹುಕೋಶಜೀವಿಗಳ ಒಂದು ಕೋಶಕ್ಕೆ ಸಮ ಎಂದು ತಿಳಿಯಬಹುದಾದರೂ ಕ್ರಿಯಾತ್ಮಕ ದೃಷ್ಟಿಯಿಂದ ಒಂದು ಸಂಪೂರ್ಣ ಜೀವಿಯೇ ಆಗಿದೆ ಎನ್ನಬಹುದು. ಕೆಲವು ಸದಸ್ಯಗಳಲ್ಲಂತೂ ಈ ಒಂದೇ ಕೋಶದಲ್ಲಿ ವಿಭಿನ್ನ ಕಾರ್ಯಗಳಿಗೆ ಮೀಸಲಾದ ವಿಶೇಷೀಕೃತ ಅಂಗಕಗಳು (ಆರ್ಗನೆಲ್ಸ್) ಸಂಕೀರ್ಣಬಗೆಯದ್ದಾಗಿರುವುವು. ಇದರಿಂದಾಗಿ ಪ್ರೊಟೋಝೋವ ಗುಂಪಿನ ಪ್ರಾಣಿಗಳನ್ನು ಕೆಲವರು ಏಕಕೋಶ ಜೀವಿಗಳೆಂದು (ಫಾನ್ ಸೀಬೋಲ್ಡ್, 1845) ಕರೆದರೆ ಇನ್ನು ಕೆಲವರು (ಡೊಬೆಲ್, 1911) ಅಜೀವಕೋಶ ಜೀವಿಗಳು (ಏಸೆಲ್ಯುಲಾರ್) ಎಂದು ಕರೆದಿದ್ದಾರೆ.

ಈ ಗುಂಪಿನಲ್ಲಿ ೩೦,೦೦೦ಕ್ಕೂ ಹೆಚ್ಚು ಬಗೆಯ ಪ್ರಾಣಿಗಳಿವೆ. ಎಲ್ಲವೂ ಅತಿ ಸೂಕ್ಷ್ಮಜೀವಿಗಳು. ಪ್ರಧಾನವಾಗಿ ಜಲವಾಸಿಗಳು. ಕೆಲವು ಸಿಹಿನೀರಿನ ಕೆರೆಕಟ್ಟೆಗಳಲ್ಲೋ

ಚರಂಡಿ ಮುಂತಾದ ಕೊಳಚೆ ನೀರಿನ ತಾಣಗಳಲ್ಲೋ ವಾಸಿಸುವುವು. ತೇವಪೂರಿತ ಮಣ್ಣು, ಕೊಳೆಯುತ್ತಿರುವ ಸಾವಯವ ವಸ್ತುಗಳು ಮುಂತಾದೆಡೆಗಳಲ್ಲೂ ಕೆಲವು ಕಾಣದೊರೆಯುತ್ತವೆ. ಹಲಕೆಲವು ಬಗೆಗಳು ಸ್ವತಂತ್ರವಾದ ಈಜುಜೀವನ ನಡೆಸಿದರೆ ಇನ್ನು ಕೆಲವು ಯಾವುದಾದರೂ ಆಸರೆಗೆ ಅಂಟಿಕೊಂಡು ಸ್ಥಾವರಜೀವಿಗಳಾಗಿ ಬದುಕುವುವು. ಒಂಟೊಂಟಿಯಾಗಿರುವಂಥವು ಕೆಲವಿದ್ದರೆ ನಿವಹಗಳನ್ನು ರೂಪಿಸಿಕೊಂಡು ಸಮೂಹ ಜೀವನ ನಡೆಸುವಂಥವು ಮತ್ತೆ ಕೆಲವು. ಇವುಗಳ ಆಹಾರ ಸೇವನೆಯಲ್ಲೂ ವೈವಿಧ್ಯವುಂಟು. ಬಹುಪಾಲು ಬಗೆಗಳು ತಮ್ಮ ಆಹಾರವನ್ನು ಸಸ್ಯಗಳೋಪಾದಿಯಲ್ಲಿ ತಾವೇ ತಯಾರಿಸಿಕೊಳ್ಳಬಲ್ಲವಾದರೆ (ಹೋಲೊಫೈಟಿಕ್), ಕೆಲವು ಪ್ರಭೇದಗಳು ಇತರ ಸೂಕ್ಷ್ಮಪ್ರಾಣಿಗಳನ್ನು ಕಬಳಿಸಿ ಬದುಕುವುವು (ಹೋಲೊಜ಼ೂಯಿಕ್). ಇನ್ನೂ ಕೆಲವು ಬಗೆಗಳು ಸಸ್ಯ, ಪ್ರಾಣಿಗಳನ್ನು (ಮಾನವನೂ ಸೇರಿದಂತೆ) ಆಶ್ರಯಿಸಿಕೊಂಡಿರುವುವು. ಈ ಆಶ್ರಯ ಕೇವಲ ತಾತ್ಕಾಲಿಕವಾಗಿರಬಹುದು ಇಲ್ಲವೆ ಸಂಪೂರ್ಣ ಪರಾವಲಂಬನೆಯಾಗಿರಬಹುದು. ಅಲ್ಲದೆ ಕೆಲವು ತೆರನ ಬ್ಯಾಕ್ಟೀರಿಯಗಳಿಗೆ ಪ್ರೊಟೋಜೋ಼ವದ ಪ್ರಾಣಿಗಳೇ ಆಶ್ರಯದಾತಗಳಾಗಿರುವುದೂ ಉಂಟು. ಬೇರೆತೆರನ ಪ್ರಾಣಿಗಳಿಗೆ (ಮುಖ್ಯವಾಗಿ ಸಾಗರವಾಸಿ ಜಲಚರಿಗಳಿಗೆ) ಇವು ಆಹಾರವೂ ಹೌದು. ಕೆಲವು ಪ್ರಭೇದಗಳು ಕೊಳಚೆ ಗುಂಡಿಗಳ ನೀರನ್ನು ಶುದ್ಧೀಕರಿಸಿ ಉಪಕಾರಿಗಳೆನಿಸಿಕೊಂಡಿದ್ದರೆ ಇನ್ನುಕೆಲವು ಸಾಕು ಪ್ರಾಣಿಗಳಲ್ಲಿ ಹಾಗೂ ಮಾನವರಲ್ಲಿ ಪರಾವಲಂಬಿಗಳಾಗಿದ್ದುಕೊಂಡು ಹಲವಾರು ತೆರನ ರೋಗಗಳನ್ನು ಉಂಟುಮಾಡುತ್ತವೆ. ಉದಾಹರಣೆಗೆ, ಆಮಶಂಕೆಯನ್ನುಂಟುಮಾಡುವ ಎಂಟಮೀಬ, ಮಲೇರಿಯ ಕಾರಕ ಪ್ಲಾಸ್ಮೋಡಿಯಮ್, ನಿದ್ರಾರೋಗಜನಕ ಟ್ರಿಪ್ಯಾನೊಸೋಮ ಇತ್ಯಾದಿ.

ಪ್ರೊಟೋಜೋ಼ವದ ಕೋಶ ಸಮಮಿತಿ ದ್ವಿಪಾರ್ಶ್ವ ರೀತಿಯದ್ದಾಗಿರಬಹುದು ಇಲ್ಲವೆ ಅರೀಯ ಅಥವಾ ಗೋಲೀಯವಾಗಿರಬಹುದು. ಕೋಶದ ಆಕಾರ ಅಂಡದಂತೆ, ಉದ್ದುದ್ದ ಇಲ್ಲವೆ ಗೋಳದಂತೆ. ಕೋಶದ ಒಳಗೆ ಒಂಟಿ ಅಥವಾ ಹಲವಾರು ಕೋಶಕೇಂದ್ರಗಳುಂಟು. ಸಂಚಲನಾಂಗಗಳು ಮಿಥ್ಯಾಪಾದ, ಲೋಮಾಂಗ ಇಲ್ಲವೆ ಕಶಾಂಗಗಳ ರೂಪದಲ್ಲಿ ಇರುತ್ತವೆ. ಪರಾವಲಂಬಿ ಜೀವಿಗಳಲ್ಲಿ ಚಲನಾಂಗಗಳೇ ಇಲ್ಲ. ಆಹಾರವನ್ನು ಜೀರ್ಣಿಸಲು ಮತ್ತು ಸೂಕ್ಷ್ಮಾಭಿಸರಣವನ್ನು ನಿಯಂತ್ರಿಸಲು ಮೀಸಲಾದ ಆಹಾರಾವಕಾಶ ಮತ್ತು ಸಂಕೋಚನಾವಕಾಶಗಳಿವೆ. ಕೆಲವು ಜೀವಿಗಳಲ್ಲಿ ಕೋಶದ ಸುತ್ತ ಪೆಲಿಕಲ್ ಎಂಬ ಸರಳ ರಕ್ಷಣಾ ಹೊದಿಕೆ ಉಂಟು. ಕೆಲವೊಮ್ಮೆ ಕೋಶ ಬೆತ್ತಲೆಯಾಗಿರಬಹುದು. ಇನ್ನು ಕೆಲವಲ್ಲಿ ಕೋಶ ಸುಂದರ ಅಲಂಕರಣಗಳಿರುವ ಚಿಪ್ಪುಗಳಿಂದ, ಕವಚಗಳಿಂದ ಆವೃತವಾಗಿರುತ್ತದೆ. ಇಂಥ ಅಲಂಕರಣಗಳ ಕವಚ ದೇಹದ ಒಳಗೂ ಇರಬಹುದು.

ಕೋಶದ್ರವ್ಯ ಎಕ್ಟೋಪ್ಲಾಸಮ್ ಎಂಬ ವರ್ಣರಹಿತ ಬಾಹ್ಯಭಾಗವನ್ನು ಎಂಡೊಪ್ಲಾಸಮ್ ಎಂಬ ವರ್ಣಮಯ ಒಳಭಾಗವನ್ನೂ ಒಳಗೊಂಡಿದೆ. ಎಕ್ಟೋಪ್ಲಾಸಮಿನಿಂದ ರೂಪಿತಗೊಂಡಿರುವಂಥ ಸಂಚಲನಾಂಗಗಳಲ್ಲಿ ಮಿಥ್ಯಾಪಾದಗಳು ತಾತ್ಕಾಲಿಕವಾಗಿ ಕಾಣಿಸಿಕೊಳ್ಳುವಂತಾದರೆ, ಲೋಮಾಂಗ ಮತ್ತು ಕಶಾಂಗಗಳು ಶಾಶ್ವತ ಬಗೆಯವು. ಈ ಸಂಚಲನಾಂಗಗಳ ರಚನೆ ಮತ್ತು ನಿಯಂತ್ರಣ ಬಲು ಜಟಿಲರೀತಿಯದು.

ಸಂತಾನೋತ್ಪತ್ತಿಗೆ ಮುಖ್ಯ ಕಾರಣವಾದ ಕೋಶಕೇಂದ್ರ ಸಂಚಿರೂಪ, ದುಂಡು, ಅಂಡಕಾರ, ಉದ್ದನಾದ, ಮಣಿಸರ, ಹುರುಳಿ ಹಾಗೂ ಕವಲೊಡೆದ ಆಕಾರ ತಳೆದು ವಿವಿಧ ಪ್ರಾಣಿಗಳಲ್ಲಿ ಕಾಣಬರುತ್ತದೆ. ಆಕಾರದಲ್ಲಿ ಮಾತ್ರವಲ್ಲದೆ ಸಂಖ್ಯೆಯಲ್ಲಿಯೂ ಕೋಶಕೇಂದ್ರ ವ್ಯತ್ಯಾಸ ತೋರುತ್ತದೆ. ಕೆಲವು ಪ್ರಾಣಿಗಳಲ್ಲಿ ಒಂದು ಕೋಶಕೇಂದ್ರ ಮಾತ್ರ ಕಂಡುಬಂದರೆ, ಇನ್ನು ಕೆಲವು ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚು ಕೋಶಕೇಂದ್ರಗಳಿವೆ. ಎರಡು ಕೋಶಕೇಂದ್ರಗಳಿದ್ದರೆ ಇವುಗಳಲ್ಲಿ ಒಂದು ಚಿಕ್ಕದಾಗಿದ್ದು ಇದನ್ನು ಮೈಕ್ರೊನ್ಯೂಕ್ಲಿಯಸ್ ಎಂದೂ ಇನ್ನೊಂದು ಸ್ವಲ್ಪ ದೊಡ್ಡದಾಗಿದ್ದು ಇದನ್ನು ಮ್ಯಾಕ್ರೊನ್ಯೂಕ್ಲಿಯಸ್ ಎಂದೂ ಹೆಸರಿಸಲಾಗಿದೆ.

ಸಂತಾನೋತ್ಪತ್ತಿಯಲ್ಲಿ ಲಿಂಗರೀತಿ ಮತ್ತು ನಿರ್ಲಿಂಗ ರೀತಿಗಳೆರಡೂ ಕಂಡು ಬರುತ್ತದೆ. ಖಂಡನ ರೀತಿಯಲ್ಲಿ ದ್ವಿಖಂಡನ (ಬೈನರಿ ಫಿಶನ್) ಮತ್ತು ಬಹುಖಂಡನಕ್ರಮಗಳು (ಮಲ್ಟಿಪಲ್‌ಫಿಶನ್) ಉಂಟು. ಲಿಂಗರೀತಿಯಲ್ಲಿ ಎಲ್ಲ ಹಂತದ ಲಿಂಗಾಣುಗಳನ್ನೂ ಕಾಣಬಹುದು. ಕೆಲವು ಪ್ರೊಟೋಜೋ಼ವಗಳು ಲಿಂಗರೀತಿ ಮತ್ತು ನಿರ್ಲಿಂಗ ರೀತಿ ಸಂತಾನೋತ್ಪತ್ತಿ ಎರಡೂ ಇರುವಂಥ ಜೀವನ ಚರಿತ್ರೆಯನ್ನು ಪಡೆದಿವೆ. ಲಿಂಗಾಣುಗಳ ಕೂಡುವಿಕೆಯೇ ಗರ್ಭಾಂಕುರತೆ. ಲಿಂಗಾಣುಗಳು ಸಂಧಿಸಿ ತಮ್ಮ ಕೋಶಕೇಂದ್ರ ಭಾಗಗಳನ್ನು ಮಾತ್ರ ವಿನಿಮಯ ಮಾಡಿಕೊಂಡು ಬೇರ್ಪಡುವ ಅನುಬದ್ಧಸಂಯೋಗ (ಕಾಂಜುಗೇಷನ್) ಎಂಬ ಇನ್ನೊಂದು ವಿಶೇಷ ರೀತಿಯ ಸಂತಾನೋತ್ಪತ್ತಿ ಕ್ರಮವೂ ಉಂಟು. ಅನುಬದ್ಧ ಸಂಯೋಗ ಪ್ಯಾರಮೀಸಿಯಮಿನಲ್ಲಿ ಮಾತ್ರ ಕಂಡುಬರುತ್ತದೆ. ಉಳಿದ ಪ್ರೊಟೋಜೋ಼ವ ಪ್ರಾಣಿಗಳಲ್ಲಿ ಇದರ ಸುಳಿವೇ ಇಲ್ಲ.

ಅಮೀಬದ ಸಂತಾನೋತ್ಪತ್ತಿ ಒಂದು ಕೋಶ ಎರಡಾಗಿ ಸೀಳುವುದರಿಂದ ನಡೆಯುತ್ತ ಮುಂದುವರೆಯುತ್ತದೆ. ಅದಕ್ಕೆ ಕೊನೆಯೇ ಇಲ್ಲ. ಹೀಗೆ ಸಂತಾನೋತ್ಪತ್ತಿ ಯಾವ ಅಡಚಣೆ ಇಲ್ಲದೇ ಸರಾಗವಾಗಿ ಸಾಗುತ್ತ, ಅವುಗಳ ಸಂಖ್ಯೆ ವೃದ್ಧಿಗೊಳ್ಳುತ್ತ ಬರುವುದು.

ಪ್ರೊಟೋಜೋ಼ವ ವಂಶಕ್ಕೆ ಸೇರಿದ ಕೆಲವು ಪ್ರಾಣಿಗಳ ಹೊರಮೈ ಸುಣ್ಣದ ಕವಚದಿಂದ ಆವೃತವಾಗಿದ್ದು, ರಂಧ್ರಮಯವಾಗಿದೆ. ಇನ್ನೂ ಕೆಲವು ಕಿರಣಕಾಯವನ್ನು ಹೊಂದಿರುವ ಪ್ರಾಣಿಗಳಾಗಿವೆ. ಇವೇ ರೇಡಿಯೋಲೇರಿಯಗಳು. ಸಿಲಿಕ ವಸ್ತುವಿನಿಂದ ಇವು ತಮ್ಮ ಕವಚ ನಿರ್ಮಿಸುತ್ತ ಅದರ ಒಳಭಾಗದಲ್ಲಿ ವಾಸಿಸುತ್ತವೆ. ಈ ಕವಚಗಳು ಜೀವಿ ಸತ್ತಮೇಲೆ ನೆಲವನ್ನು ಸೇರಿ ಸಂಗ್ರಹಗೊಳ್ಳುವುವು. ಇಂಥ ಕವಚಗಳು ಗಟ್ಟಿಯಾಗಿರುವುದರಿಂದ ಪಳೆಯುಳಿಕೆಗಳ ರೂಪದಲ್ಲಿ ನಮಗೆ ಸಿಗುವುವು. ಶಾಂತಸಾಗರ, ಹಿಂದೂ ಮಹಾಸಾಗರಗಳೆರಡರಲ್ಲೂ ಸುಮಾರು ಮೂರು ಮಿಲಿಯ ಚದರ ಮೈಲು ವಿಸ್ತೀರ್ಣದಲ್ಲಿ ಇಂಥ ಸಂಗ್ರಹವನ್ನು ಕಾಣಬಹುದು.

ಪ್ರೊಟೋಜೋ಼ವದಲ್ಲಿ ಕಂಡುಬರುವ ವಿವಿಧ ಸಂಚಲನಾಂಗಗಳ ಆಧಾರದ ಮೇಲೆ ಹಾಗೂ ದೇಹದ ಆಕಾರದ ಆಧಾರದ ಮೇಲೆ ಈ ವಂಶವನ್ನು ನಾಲ್ಕುವರ್ಗಗಳಾಗಿ ವಿಂಗಡಿಸಲಾಗಿದೆ.



ಯುಗ್ಲೀನ

ಸ್ಟೆಂಟರ್ (ಆಸರೆಗೆ ಅಂಟಿಕೊಂಡು – ಸಹಜಸ್ಥಿತಿಯಲ್ಲಿ

ಟ್ರಿಪ್ಯಾನೊಸೋಮ(ಘೂರ್ವೋಮ್ಯಾಸ್ಟಿ–ಗಾಹೂರ)

ಎಂಟಮೀಬ ಹಿಸ್ಟೊಲಿಟಿಕ

ಬಲಾಂಟಿಡಿಯಮ್ (ಸಿಲಿಯೇಟ)

ಅಮೀಬ (ಸಾರ್ಕೋಡೈನ). ಖಂಡರೇಖೆಗಳಿಂದ ಬೇರ್ಪಡಿಸಿರುವ ಭಾಗಗಳು (ಎಡ ಮತ್ತು ಬಲ) ಅಮೀಬ ಪ್ರಾಣಿಯ ಆಯಾ ಭಾಗದ ಒಳರಚನೆಯನ್ನು ತೋರುತ್ತವೆ.

ವರ್ಗ ೧. ರೈಜೋ಼ಪೋಡ: ಈ ವರ್ಗಕ್ಕೆ ಸೇರಿದ ಪ್ರಾಣಿಗಳು ಮಿಥ್ಯಾಪಾದಗಳ ಸಹಾಯದಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಮಂದಗಾಮಿಗಳಾಗಿ ತೆವಳುತ್ತವೆ. ಅಷ್ಟೇ ಅಲ್ಲದೆ ತಮ್ಮ ಆಹಾರವನ್ನು ದೊರಕಿಸಿಕೊಳ್ಳುವುದಕ್ಕೂ ಮಿಥ್ಯಾಪಾದಗಳನ್ನೇ ಬಳಸಿಕೊಳ್ಳುತ್ತವೆ. ಇವು ಹೆಚ್ಚಾಗಿ ಸಮುದ್ರವಾಸಿಗಳು. ಕೆಲವು ಪರತಂತ್ರ ಜೀವಿಗಳೂ ಇವೆ.

ಈ ವರ್ಗಕ್ಕೆ ಸೇರಿದ ಫೊರ್‍ಯಾಮಿನಿಫೆರ ಗಣದ ಕೆಲವು ಜೀವಿಗಳ ಮೈಯಲ್ಲಿ ರಂಧ್ರಗಳು ಇರುವುದನ್ನು ಗಮನಿಸಬಹುದು. ಈ ಸೂಕ್ಷ್ಮ ಜೀವಿಯ ಹೊರಮೈ ಒಂದು ಬಗೆಯ ಚಿಪ್ಪಿನದು ; ತೆಳ್ಳಗಿನ ಸುಣ್ಣದ ಕವಚ.

ಅಮೀಬ ಈ ಗುಂಪಿನ ಮುಖ್ಯ ಉದಾಹರಣೆ. ಇದು ಸಿಹಿನೀರಿನಲ್ಲಿ, ಹಳ್ಳಗಳಲ್ಲಿ, ಕೊಚ್ಚೆಗುಂಡಿಗಳಲ್ಲಿ ವಾಸಿಸುತ್ತದೆ. ಸೂಕ್ಷ್ಮದರ್ಶಕದ ಸಹಾಯದಿಂದ ಮಾತ್ರ ನೋಡಬಹುದು. ಮಿಥ್ಯಾಪಾದಗಳ ಸಹಾಯದಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಮಂದಗಾಮಿಯಾಗಿ ತೆವಳುತ್ತದೆ. ಆಹಾರವನ್ನು ದೊರಕಿಸಿಕೊಳ್ಳುವುದೂ ಮಿಥ್ಯಾಪಾದಗಳಿಂದಲೇ. ಇದು ಸ್ವತಂತ್ರ ಜೀವಿ.

ಎಂಟಮೀಬ ಹಿಸ್ಟೊಲಿಟಿಕ ಎಂಬುದು ಇನ್ನೊಂದು ಉದಾಹರಣೆ. ಇದು ರೋಗಕಾರಕ ಪರತಂತ್ರ ಜೀವಿಯಾಗಿ ಮನುಷ್ಯನ ಕರುಳಿನ ಕೋಲನ್ ಭಾಗದಲ್ಲಿ ಸೇರಿಕೊಂಡಿರುತ್ತದೆ. ಉಷ್ಣಪ್ರದೇಶಗಳಲ್ಲಿ ಇದರ ಹಾವಳಿ ಹೆಚ್ಚು. ಅಮೀಬೀಯ ಆಮಶಂಕೆ ಎಂಬ ರೋಗ ಉಂಟಾಗುವುದು ಇದರಿಂದಲೇ. ಮನುಷ್ಯನ ಕರುಳಿನ ಶ್ಲೇಷ್ಮ ಪಟಲದಲ್ಲಿ ವಾಸಿಸುವ ಇದು ಕಿಣ್ವಗಳನ್ನು ಉತ್ಪತ್ತಿ ಮಾಡಿ ಅಲ್ಲಿರುವ ಅನುಲೇಪಕ ಜೀವಕೋಶಗಳನ್ನು ಕರಗಿಸುತ್ತದೆ. ಪರಿಣಾಮವಾಗಿ ಅಲ್ಲಿ ವ್ರಣಗಳಾಗುತ್ತವೆ. ಹೀಗೆ ಅಂಗಾಂಶಗಳನ್ನು ಕರಗಿಸುವ ಈ ಗುಣದಿಂದಾಗಿ ಈ ಪ್ರಭೇದಕ್ಕೆ ಹಿಸ್ಟೊಲಿಟಿಕ ಎಂಬ ಹೆಸರು ಬಳಕೆಗೆ ಬಂದಿದೆ.

ಎಂಟಮೀಬಕ್ಕೆ ನಿರ್ದಿಷ್ಟ ಆಕಾರ ಇಲ್ಲ. ಇದು ಸು. ೦.೦೫–೦.೦೬ ಮಿಮೀ ಗಾತ್ರದ ಪ್ರಾಣಿ. ಕೋಶದ್ರವ್ಯದಲ್ಲಿ ಹೊರಗಿನ ಸ್ಪಷ್ಟವಾದ, ಪಾರದರ್ಶಕವಾದ ಎಕ್ಟೋಪ್ಲಾಸಮ್ ಮತ್ತು ಒಳಗಿನ ಕಣಪೂರಿತ ಎಂಡೋಪ್ಲಾಸಮ್ ಎಂಬ ಎರಡು ಭಾಗಗಳುಂಟು. ದುಂಡಗಿರುವ ಒಂದು ಕೋಶಕೇಂದ್ರ ಎಂಡೋಪ್ಲಾಸಮಿನಲ್ಲಿದ್ದು ಅದರ ಸುತ್ತ ತೆಳುವಾದ ಕೋಶಕೇಂದ್ರ ಪೊರೆಯಿದೆ. ಒಳಗೆ ಮಣಿಯಾಕಾರದ ಕ್ರೊಮ್ಯಾಟಿನ್ ಕಣಗಳಿವೆ. ಎಂಡೊಪ್ಲಾಸಮ್ ಭಾಗದಲ್ಲಿ ಆಹಾರಾವಕಾಶಗಳೂ ಇವೆ. ಇವುಗಳಲ್ಲಿ ಪ್ರಾಣಿ ನುಂಗಿದ ಆಹಾರ ಇರುತ್ತದೆ. ಎಂಟಮೀಬ ಪರತಂತ್ರ ಜೀವಿಯಾದ್ದರಿಂದ ಇದರಲ್ಲಿ ಸಂಕೋಚನಾವಕಾಶಗಳಿಲ್ಲ. ಸಾಮಾನ್ಯವಾಗಿ ಒಂದು ಅಥವಾ ಎರಡು ಮೊಂಡು ಮಿಥ್ಯಾಪಾದಗಳುಂಟು. ಉಸಿರಾಟಕ್ಕೆ ಯಾವ ವಿಶೇಷ ರಚನೆಯೂ ಇಲ್ಲ. ಆದರೆ ವಿಸರಣ ನಿಯಮದ ಅನುಸಾರ ಸುತ್ತಲ ಪರಿಸರದಿಂದ ಆಮ್ಲಜನಕವನ್ನು ಪಡೆದು ಇಂಗಾಲದ ಡೈ ಆಕ್ಸೈಡನ್ನು ವಿಸರ್ಜಿಸುತ್ತದೆ.

ಇದರ ಸಂತಾನೋತ್ಪತ್ತಿ ದ್ವಿಖಂಡನ ರೀತಿಯದು. ಪರಿಸ್ಥಿತಿ ಅನುಕೂಲವಾಗಿದ್ದು ಪ್ರಾಣಿಯೂ ಒಂದು ನಿರ್ದಿಷ್ಟಗಾತ್ರಕ್ಕೆ ಬೆಳೆದಾಗ ದ್ವಿಖಂಡನ ನಡೆಯುತ್ತದೆ. ಮೊದಲು ಕೋಶಕೇಂದ್ರ ವಿಭಾಗವಾಗಿ ದೇಹದ ಕೋಶದ್ರವ್ಯ ಸೀಳಿ ಒಂದೊಂದು ಕೋಶಕೇಂದ್ರವಿರುವ ಎರಡು ಮರಿಗಳಾಗುತ್ತವೆ.

ವರ್ಗ ೨. ಫ್ಲಾಜೆಲ್ಲೇಟ : ಈ ವರ್ಗಕ್ಕೆ ಸೇರಿದ ಪ್ರಾಣಿಗಳ ಸಂಚಲನಾಂಗಗಳು ಕಶಾಗಗಳು. ಪ್ರಾಣಿಗಳು ಸಾಮಾನ್ಯವಾಗಿ ತೀವ್ರಗಾಮಿಗಳು. ಸಮುದ್ರದಲ್ಲಿ, ಹಳ್ಳ ಕೊಳ್ಳಗಳಲ್ಲಿ ಮತ್ತು ನಿಂತನೀರಿನಲ್ಲಿ ವಾಸಿಸುತ್ತವೆ. ಉಷ್ಣವಲಯದ ಪ್ರದೇಶಗಳಲ್ಲಿ ವಾಸಿಸುವ ಮಾನವ ಮತ್ತು ಪ್ರಾಣಿಗಳ ರಕ್ತದಲ್ಲಿ ಅತ್ಯಂತ ಮಾರಕವಾದ ಪರತಂತ್ರಜೀವಿಗಳಾಗಿ ವಾಸಿಸುವ ಜೀವಿಗಳೂ ಈ ಗುಂಪಿಗೆ ಸೇರಿವೆ.

ಉದಾಹರಣೆ : ಯೂಗ್ಲೀನ–ಇದು ಸಿಹಿನೀರಿನಲ್ಲಿ ವಾಸಿಸುವ ಸ್ವತಂತ್ರ ಜೀವಿ. ನೀರು ನಿಂತು ಕೊಳೆಯುತ್ತಿರುವಂಥ ಸ್ಥಳಗಳಲ್ಲಿ ಹೆಚ್ಚಾಗಿ ಕಾಣಬರುತ್ತದೆ. ಇದರ ಗಾತ್ರ ೧ ಮಿಮೀ. ಕೋಶದ್ರವ್ಯ ಎಂಟಮೀಬದಲ್ಲಿಯಂತೆ ಎಕ್ಟೋಪ್ಲಾಸಮ್ ಮತ್ತು ಎಂಡೋಪ್ಲಾಸಮ್ ಎಂದು ವಿಭೇದೀಕೃತವಾಗಿದೆ. ಹೊರಗಿನ ಎಕ್ಟೋಪ್ಲಾಸ್‌ಮಿನ ಸ್ವಲ್ಪ ಭಾಗ ಪೆಲಿಕಲ್ ಆಗಿ ದೇಹವನ್ನು ಆವರಿಸಿದೆ. ಪ್ರಾಣಿಯ ದೇಹದ ಮುಂದಿನ ತುದಿಯಲ್ಲಿ ತಗ್ಗಾದ ಪ್ರದೇಶವಿದ್ದು ಹಿಂದಕ್ಕೆ ನಾಳರೂಪದಲ್ಲಿ ಚಾಚಿದೆ. ಇದೇ ಫ್ಯಾರಿಂಕ್ಸ್ (ಗಂಟಲು). ಇದು ಸ್ವಲ್ಪ ಹಿಂದೆ ಹಿಗ್ಗಿ ಅಗಲವಾದ ಆಶ್ರಯವಾಗಿದೆ. ಗಂಟಲಿನಿಂದ ಉದ್ದವಾದ ಚಾಟಿಯಂತಿರುವ ಕಶಾಂಗವೊಂದು ಚಾಚಿಕೊಂಡಿದೆ. ಕಶಾಂಗಕ್ಕೆ ಸಂಕುಚನ ಸಾಮರ್ಥ್ಯ ಉಂಟು. ಆಶ್ರಯದ ಸನಿಹದಲ್ಲಿಯೇ ಒಂದು ದೊಡ್ಡ ಸಂಕೋಚನಾವಕಾಶವಿದೆ ಹಾಗೂ ಇದರ ಸುತ್ತಲೂ ಕೆಲವು ಚಿಕ್ಕ ಚಿಕ್ಕ ಸಂಕೋಚನಾವಕಾಶಗಳಿವೆ. ಕಶಾಂಗದ ಚಲನೆಯಿಂದಾಗಿ ಯೂಗ್ಲೀನ ಸಂಚರಿಸುತ್ತದೆ.

ಸಸ್ಯಗಳಂತೆ, ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳಬಲ್ಲ ಹೋಲೋಫೈಟಿಕ್ ಕ್ರಮವನ್ನು ಯೂಗ್ಲೀನ ಅನುಸರಿಸುತ್ತದೆ. ಯೂಗ್ಲೀನದಲ್ಲಿ ನಿರ್ಲಿಂಗರೀತಿಯ ದ್ವಿಖಂಡನ ವಿಧಾನದಲ್ಲಿ ಸಂತಾನೋತ್ಪತ್ತಿ ನಡೆಯುತ್ತದೆ. ಈ ವರ್ಗಕ್ಕೆ ಸೇರಿದ ಇನ್ನೊಂದು ಮುಖ್ಯ ಉದಾಹರಣೆ ಟ್ರಿಪ್ಯಾನೊಸೋಮ ಗ್ಯಾಂಬಿಯೆನ್ಸಿ. ಇದು ಪರತಂತ್ರ ಜೀವಿ. ಮನುಷ್ಯನ ರಕ್ತದಲ್ಲಿ ವಾಸಿಸುತ್ತದೆ. ಆಫ್ರಿಕದಲ್ಲಿ ಇದರ ಹಾವಳಿ ಹೆಚ್ಚು. ನಿದ್ರಾವಾತರೋಗ ಅಥವಾ ಗ್ಯಾಂಬಿಯಜ್ವರ ಎಂಬ ರೋಗವನ್ನು ಇದು ಉಂಟುಮಾಡುತ್ತದೆ.

ವರ್ಗ ೩. ಸ್ಪೋರೋಜೋವ: ಈ ವರ್ಗಕ್ಕೆ ಸೇರಿದ ಪ್ರಾಣಿಗಳಲ್ಲಿ ಯಾವುದೇ ವಿಶಿಷ್ಟ ಬಗೆಯ ಚಲನಾಂಗಗಳಿಲ್ಲ. ಇವು ನಿವಹಗಳ ರೂಪದ ಜೀವಿಗಳು. ಬಹುವಾಗಿ ಪರಾವಲಂಬಿಗಳು; ಆತಿಥೇಯಗಳ ದೇಹದಲ್ಲಿ ಸೇರಿಕೊಂಡು, ಸಾಮಾನ್ಯ ದೈಹಿಕ ಕ್ರಿಯೆಗಳಿಗೆ ಅಡ್ಡಿ ಅತಂಕಗಳನ್ನು ಒಡ್ಡುವುದರ ಮೂಲಕ ರೋಗರುಜಿನಗಳನ್ನು ಉಂಟುಮಾಡುತ್ತವೆ. ಉದಾಹರಣೆಗೆ, ಮಲೇರಿಯವನ್ನು ಉಂಟುಮಾಡುವ ಪ್ಲಾಸೋಡಿಯಮ್. ಇದು ಮಾನವನ ಕೆಂಪು ರಕ್ತಕಣಗಳಲ್ಲಿ ಜೀವಿಸುತ್ತದೆ. ತನ್ನ ಜೀವನಚಕ್ರದ ಕೆಲವು ಹಂತಗಳನ್ನು ಮಾನವನ ಕೆಂಪು ರಕ್ತಕಣಗಳಲ್ಲೂ ಉಳಿದ ಹಂತಗಳನ್ನು ಹೆಣ್ಣು ಅನಾಫಿಲಿಸ್ ಸೊಳ್ಳೆಯ ಜೀರ್ಣಾಂಗಗಳಲ್ಲಿಯೂ ಕಳೆಯುತ್ತದೆ.

ವರ್ಗ ೪. ಸಿಲಿಯೇಟ: ಈ ವರ್ಗದ ಪ್ರಾಣಿಗಳ ಚಲನಾಂಗಗಳು ಶಿಲಿಕೆಗಳು. ಕೋಶದೇಹದಲ್ಲಿ ಎರಡು ಅಥವಾ ಹೆಚ್ಚು ಕೋಶಕೇಂದ್ರಗಳುಂಟು. ಶಿಲಿಕೆಗಳು ಪ್ರಾಣಿಯ ದೇಹದ ಮೇಲೆಲ್ಲ ಹರಡಿಕೊಂಡು ಅತಿ ಸೂಕ್ಷ್ಮಗಾತ್ರದ ರೋಮಗಳಂತೆ ಕಾಣುತ್ತವೆ. ಈ ವರ್ಗದ ಪ್ರಾಣಿಗಳು ಕೆರೆ, ಕೊಳ ಹಾಗೂ ಸಮುದ್ರಗಳಲ್ಲಿ ವಾಸಿಸುವುವು. ಈ ವರ್ಗಕ್ಕೆ ಸೇರಿದ ಕೆಲವು ಜೀವಿಗಳು ಪರತಂತ್ರ ಜೀವನವನ್ನು ನಡೆಸುತ್ತವೆ. ಉದಾ : ಓಪಲೈನ. ಇದು ಕಪ್ಪೆಯ ಹೊಟ್ಟೆಯಲ್ಲಿ ವಾಸಿಸುತ್ತದೆ. ಪ್ಯಾರಮೀಸಿಯಮ್ ಇನ್ನೊಂದು ಉದಾಹರಣೆ. ಇದು ಸ್ವತಂತ್ರ ಜೀವಿ. ಇದರ ಕೋಶದ್ರವ್ಯದಲ್ಲಿ ಎಂಡೋಪ್ಲಾಸಮಿನ ನಡುಭಾಗದಲ್ಲಿ ಎರಡು ಕೋಶಕೇಂದ್ರಗಳಿವೆ. ಒಂದು ದೊಡ್ಡ ಗಾತ್ರದ ಹಾಗೂ ಹುರುಳಿಯಾಕಾರದ ಮ್ಯಾಕ್ರೊನ್ಯೂಕ್ಲಿಯಸ್. ಇನ್ನೊಂದು ಗಾತ್ರದಲ್ಲಿ ಚಿಕ್ಕದಾದ ಮೈಕ್ರೊನ್ಯೂಕ್ಲಿಯಸ್. ಮ್ಯಾಕ್ರೊನ್ಯೂಕ್ಲಿಯಸ್ ದೈನಂದಿನ ಚಯಾಪಚಯ ಕ್ರಿಯೆಗಳನ್ನು ನಿಯಂತ್ರಿಸುತ್ತದಾದರೆ ಮೈಕ್ರೊನ್ಯೂಕ್ಲಿಯಸ್ ಸಂತಾನೋತ್ಪತ್ತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಪ್ಯಾರಮೀಸಿಯಮ್ ಚಲಿಸುವುದು ಶಿಲಿಕೆಗಳ ಸಹಾಯದಿಂದ. ಇದರ ಆಹಾರ ಸೇವನೆಯ ಕ್ರಮ ಹೋಲೋಜೋಯಿಕ್ ರೀತಿಯದು. ಇದರಲ್ಲಿ ಲಿಂಗರೀತಿಯ ಮತ್ತು ನಿರ್ಲಿಂಗರೀತಿಯ ಸಂತಾನೋತ್ಪತ್ತಿಗಳೆರಡೂ ಉಂಟು. (ನೋಡಿ–ಪ್ಯಾರಮೀಸಿಯಮ್.) (ಎಂ.ಎನ್.ವಿ.ಐ.)

**ಪ್ರೋಸ್ಟಾಗ್ಲಾಂಡಿನ್ನುಗಳು:** ಕೊಬ್ಬಿನಲ್ಲಿ ವಿಲೀನವಾಗುವ, ಐದು ಪರಮಾಣು ವರ್ತುಲವನ್ನು ಒಳಗೊಂಡಿರುವ ಕೆಲವು ಆಕ್ಸಿಜನ್ ಕ್ರಿಯಾಗುಂಪುಗಳಲ್ಲದೆ ಕನಿಷ್ಠಪಕ್ಷ ಒಂದಾದರೂ ದ್ವಿಬಂಧದಿಂದ ಕೂಡಿರುವ $C_{೨೦}$–ಮೇದೋ ಆಮ್ಲಗಳು. ಇವು ಪ್ರಾಣಿಗಳಲ್ಲಿ ನಯಮಾಂಸಖಂಡಗಳನ್ನು ಪ್ರಚೋದಿಸುವುವು. ಮಾನವನ ವೀರ್ಯದಲ್ಲಿರುವ ಯಾವುದೋ ವಸ್ತು ಗರ್ಭಕೋಶದ ಮಾಂಸಖಂಡದ ಭಿತ್ತಿಯನ್ನು ಪ್ರಚೋದಿಸಬಲ್ಲುದೆಂಬುದೆ ಈ ಪ್ರೋಸ್ಟಾಗ್ಲಾಂಡಿನ್ನುಗಳ ಮಹತ್ತ್ವಪೂರ್ಣ ಕಾರ್ಯಗಳಿಗೆ ಮೊದಲ ಸೂಚನೆಯಾಯಿತು. ಕೊಲಂಬಿಯಾ ವಿಶ್ವವಿದ್ಯಾಲಯದ ವೈದ್ಯಕೀಯ ಮತ್ತು ಶಸ್ತ್ರ ವೈದ್ಯದ ಕಾಲೇಜಿನ ಕುರ್ಜೊಕ್ ಮತ್ತು ಲೀಬ್ ಎಂಬ ಸ್ತ್ರೀರೋಗತಜ್ಞರು ೧೯೩೦ರಲ್ಲಿ ಈ ವೀಕ್ಷಣೆಗಳನ್ನು ಮಾಡಿದರು. ಇದಾದ ಕೆಲವು ವರ್ಷಗಳ ಬಳಿಕ ಇಂಗ್ಲೆಂಡಿನ ಮಾರಿಸ್ ಗೋಲ್ಡ್‌ಬ್ಲಾಟ್ ಮತ್ತು ಸ್ವೀಡನ್ನಿನ ರಾಯಲ್ ಕ್ಯಾರೊಲಿನ್ ಸಂಸ್ಥೆಯ ಉಲ್ಫ್ ಎಸ್. ಫಾನ್ ಯೂಲರ್ ಎಂಬ ವಿಜ್ಞಾನಿಗಳು ವೀರ್ಯದಲ್ಲಿರುವ ಈ ವಸ್ತುವಿನ ಶೋಧದಲ್ಲಿ ತೊಡಗಿದರು. ಮಾನವನ ವೀರ್ಯ ಮತ್ತು ಕುರಿಗಳ ವೀರ್ಯ ಉತ್ಪಾದಿಸುವ ಕೋಶಗಳ ಸಾರವನ್ನು ಉಪಯೋಗಿಸಿ ನಯ ಮಾಂಸಖಂಡಗಳ ಮೇಲೆ ಉಂಟುಮಾಡುವ ಸಂಕೋಚನೆ ಅಥವಾ ಸಡಿಲಿಕೆಗಳನ್ನು ಒಳಗೊಂಡು, ರಕ್ತದ ಒತ್ತಡ ಮುಂತಾದವುಗಳ ಮೇಲೂ ಈ ವಸ್ತು ಆಶ್ಚರ್ಯಕರ ಪರಿಣಾಮಗಳನ್ನು ಉಂಟುಮಾಡುವುದೆಂದು ಅವರು ಪತ್ತೆ ಹಚ್ಚಿದರು. ಇತರ ವಸ್ತುಗಳಿಂದ ಬೇರ್ಪಡಿಸಿ ಮತ್ತು ಶುದ್ಧಿಗೊಳಿಸಿದ ಬಳಿಕ ಈ ಕ್ರಿಯಾವಸ್ತು ಮೇದೋಆಮ್ಲಗಳ ಗುಣಗಳನ್ನು ಹೊಂದಿರುವ, ಹೊಸ ಸಂಯುಕ್ತವೆಂದು ಗೋಲ್ಡ್‌ಬ್ಲಾಟ್ ಮತ್ತು ಫಾನ್ ಯೂಲರ್ ಅವರಿಗೆ ಮನವರಿಕೆಯಾಯಿತು. ಅಲ್ಲದೆ ಇದು ಪ್ರಾಸ್ಟೇಟ್ ಗ್ರಂಥಿಗಳಲ್ಲಿ ಸಂಶ್ಲೇಷಿಸಲ್ಪಡುವುದೆಂದು ತಿಳಿದುಬಂದಿತು. ಹೀಗಾಗಿ ಇದಕ್ಕೆ ಪ್ರೋಸ್ಟಾಗ್ಲಾಂಡಿನ್ ಎಂದು ನಾಮಕರಣ ಮಾಡಲಾಯಿತು. ಪ್ರೋಸ್ಟಾಗ್ಲಾಂಡಿನ್ನುಗಳು ಪ್ರಾಣಿಗಳ ಇತರ ಅನೇಕ ಅಂಗಾಂಶ ಮತ್ತು ಕೋಶಗಳಲ್ಲಿ ಉತ್ಪತ್ತಿಯಾಗುವುವು. ಆದಾಗ್ಯೂ ಈ ಹೆಸರಿನಿಂದಲೇ ಅವನ್ನು ಕರೆಯುವುದು ರೂಢಿಯಾಗಿದೆ. ೧೯೪೭ರಲ್ಲಿ ಐ.ಜಿ.ಪಾರ್ಬೆನ್ ಕಂಪನಿ ಸ್ವೀಡನ್ನಿನ ಲುಂಡ್ ವಿಶ್ವವಿದ್ಯಾಲಯದ ಬರ್ಜ್‌ಸ್ಟ್ರಾಮ್ ಎಂಬ ವಿಜ್ಞಾನಿಯ ಹಿರಿತನದಲ್ಲಿ ಒಂದು ಸಂಶೋಧನೆ ಕೈಗೆತ್ತಿಕೊಂಡಿತು. ಫಾನ್ ಯೂಲರನ ಸೂಚನೆಯಂತೆ ಈತ ಐಸ್‌ಲೆಂಡ್ ಕುರಿಗಳ ಗ್ರಂಥಿಗಳಿಂದ ತಯಾರಿಸಿದ ಸಾಂದ್ರೀಕೃತ ಸಾರದ ಸಂಶೋಧನೆಯಲ್ಲಿ ಉದ್ಯುಕ್ತನಾದ. ಇದರಲ್ಲಿ ಮುಂದುವರಿದು, ೧೯೪೯ರ ವೇಳೆಗೆ, ಬರ್ಜ್‌ಸ್ಟ್ರಾಮ್ ಈ ಕ್ರಿಯಾಶೀಲವಸ್ತು ಅಸಂತೃಪ್ತ ಹೈಡ್ರಾಕ್ಸಿ ಮೇದೋಆಮ್ಲಗಳ ಅಂಶವಾಗಿದೆ ಎಂದು

ತೋರಿಸಿದ. ಅನಂತರ ಬರ್ಜ್‌ಸ್ಟ್ರಾಮ್ ಮತ್ತು ಅವನ ಸಹೋದ್ಯೋಗಿಗಳು ಅಮೆರಿಕದ ಅಪ್‌ಜಾನ್ ಸಂಸ್ಥೆಯ ಧನಸಹಾಯದಿಂದ ಪ್ರೋಸ್ಟಾಗ್ಲಾಂಡಿನ್ನುಗಳ ಬಗ್ಗೆ ಮಹತ್ತ್ವಪೂರ್ಣ ರಾಸಾಯನಿಕ ಮತ್ತು ಜೀವರಾಸಾಯನಿಕ ಸಂಶೋಧನೆಗಳನ್ನು ಕೈಗೊಂಡರು. ಇವುಗಳ ಫಲವಾಗಿ ಪರಸ್ಪರ ಹೋಲುವ ಪ್ರೋಸ್ಟಾಗ್ಲಾಂಡಿನ್ನುಗಳ ರಚನೆ, ಅವುಗಳ ಕಾರ್ಯಶೀಲತೆಯಲ್ಲಿರುವ ಭಿನ್ನತೆ ಮತ್ತು ಉಪಾಪಚಯ ಕ್ರಿಯಾಪಥಗಳನ್ನು ಶೋಧಿಸಿದರು.

ಕ್ರೇಗ್‌ನ ಚಲನಾಪಗಾಮಿ ಹಂಚಿಕೆ ಉಪಕರಣವನ್ನು ಉಪಯೋಗಿಸಿ ಮೊದಲು ಈ ಪ್ರೋಸಾಗ್ಲಾಂಡಿನ್ನುಗಳನ್ನು ಬೇರ್ಪಡಿಸುವುದು ಸಾಧ್ಯವಾಯಿತು. ಅನಂತರ ಇದಕ್ಕೂ ಹೆಚ್ಚು ಉಪಯುಕ್ತವಾದ ಮತ್ತು ಸೂಕ್ಷ್ಮ ವ್ಯವಸ್ಥೆಯಿಂದ ಒಡಗೂಡಿದ ಅನಿಲವರ್ಣಲೇಖ್ಯಾ (ಗ್ಯಾಸ್ ಕ್ರೊಮ್ಯಾಟಾಗ್ರಾಫಿಕ್) ಮತ್ತು ರಾಶಿರೋಹಿತದರ್ಶಕ ವಿಧಾನಗಳನ್ನು ಉಪಯೋಗಿಸಿಕೊಂಡು ಬರ್ಜ್‌ಸ್ಟ್ರಾಮ್ ಮತ್ತು ಅವರ ಸಂಗಡಿಗರು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅಂದರೆ ಮೈ.ಗ್ರಾ. (೧೦$^{-೬}$ ಗಾ.) ಪ್ರಮಾಣದಲ್ಲಿ ಇರುವ ಈ ವಸ್ತುಗಳನ್ನು ಬೇರ್ಪಡಿಸಿ ಶುದ್ಧೀಕರಿಸಿದರು. ಅಲ್ಲದೆ ಈ ವಿಧಾನಗಳಿಂದ ಅವುಗಳ ರಚನಾಸೂತ್ರವನ್ನೂ ಅರಿಯುವುದು ಸಾಧ್ಯವಾಯಿತು. ಈ ರೀತಿಯಾಗಿ ಮೊದಲು ಎರಡು ಪ್ರೋಸ್ಟಾಗ್ಲಾಂಡಿನ್ನುಗಳನ್ನು ಕಂಡುಹಿಡಿದರು. ಇವನ್ನು $GE_{೧}$ ಮತ್ತು $PGF_{1\alpha}$ ಎಂದು ಸೂಚಿಸಿ ಬರೆಯುವುದು ವಾಡಿಕೆ. ಇವು ಅಷ್ಟೊಂದು ಜಟಿಲ ರಚನೆಯಿಂದ ಕೂಡಿರದ ಮೇದೋ ಆಮ್ಲಗಳೆಂದು ಖಚಿತವಾಗಿ ತಿಳಿದುಬಂತು. $PGE_{೧}$ರಲ್ಲಿ ಎರಡು–OH ಮತ್ತು ಒಂದು ಕೀಟೋನ್ ಗುಂಪುಗಳಿವೆ. ಇದನ್ನು ಬೋರೋ ಹೈಡ್ರೈಡ್ ಅಪಕರ್ಷಣಕ್ಕೆ ಒಳಪಡಿಸಿದಾಗ ಮೂರು–OH ಗುಂಪುಗಳಿರುವ ಎರಡು ಬೇರೆ ಸಂಯುಕ್ತಗಳು ಉಂಟಾಗುವುವು. ಇವುಗಳ ಪೈಕಿ ಒಂದು $PGF_{1\alpha}$ವನ್ನು ಹೋಲುತ್ತದೆ. ಇದರಿಂದ ಮೊದಲು ಕಂಡುಹಿಡಿದ ಎರಡು ಪ್ರೋಸ್ಟಾಗ್ಲಾಂಡಿನ್ನುಗಳಿಗಿರುವ ಸಂಬಂಧ ತಿಳಿದಂತಾಯಿತು. ಅನಂತರ ಬೇರೆ ವಿಧಾನ ಉಪಯೋಗಿಸಿ ಇವುಗಳ ರಚನಾವಿನ್ಯಾಸವನ್ನು ಕಂಡು ಹಿಡಿದರು. ಈ ಅಧ್ಯಯನದಿಂದ ಅಪ್‌ಜಾನ್ ಸಂಸ್ಥೆಯ ಜಿ. ಸ್ಲೋಂಪ್ ಎಂಬವರು $PGE_1$ ಅಣುವಿನಲ್ಲಿ ಐದು ಪರಮಾಣುಗಳುಳ್ಳ ಒಂದು ವರ್ತುಲವಿರುವುದನ್ನು ಅದರಲ್ಲಿ ಒಂದು –OH ಮತ್ತು ಒಂದು ಕಾರ್ಬೊನೈಲ್ ಗುಂಪುಗಳಿದ್ದು ಅದರ ಪಾರ್ಶ್ವದಲ್ಲಿ ಎರಡು ಆ್ಯಲಿಫ್ಯಾಟಿಕ್ ಸರಣಿಗಳಿರುವುದನ್ನೂ ತೋರಿಸಿದರು. ಒಂದು ಪಾರ್ಶ್ವ ಸರಣಿಯಲ್ಲಿ ಒಂದು –OH ಗುಂಪು ಮತ್ತು ಒಂದು ದ್ವಿಬಂಧವೂ ಮತ್ತೊಂದು ಪಾರ್ಶ್ವಸರಣಿಯ ಕೊನೆಯಲ್ಲಿ ಒಂದು –COOH ಗುಂಪೂ ಇವೆ.

ಪ್ರಕೃತಿಯಲ್ಲಿ ದೊರೆಯುವ ಇತರ ಪ್ರೋಸ್ಟಾಗ್ಲಾಂಡಿನ್ನುಗಳನ್ನು ಶುದ್ಧರೂಪದಲ್ಲಿ ೧೯೬೬ರ ಹೊತ್ತಿಗೆ ಬೇರ್ಪಡಿಸಿ ಅವುಗಳ ರಚನಾವಿನ್ಯಾಸವನ್ನು ಕಂಡುಹಿಡಿಯಲು ಸಾಧ್ಯವಾಯಿತು.

ಇವನ್ನು E,F,A ಮತ್ತು B ಎಂದು ನಾಲ್ಕು ಮುಖ್ಯ ಶ್ರೇಣಿಗಳಾಗಿ ವಿಂಗಡಿಸಬಹುದು. ಇವುಗಳ ರಚನಾಸೂತ್ರಗಳನ್ನು ಚಿತ್ರದಲ್ಲಿ ಕಾಣಿಸಿದೆ. ವರ್ತುಲದ ಹೊರಗಡೆ ಪಾರ್ಶ್ವಸರಣಿಯಲ್ಲಿರುವ ದ್ವಿಬಂಧದ ಸಂಖ್ಯೆಯನ್ನು ಸೂಚಿಸಲು ೧, ೨,... ($PGE_1$, $PGE_2$, $PGA_1$ ಇತ್ಯಾದಿ– ಮುಂತಾಗಿ ಅವುಗಳ ಸರಳ ಪ್ರತೀಕಗಳ ಮುಂದೆ ಬರೆಯುವುದು ವಾಡಿಕೆ.

ಪ್ರೋಸ್ಟಾಗ್ಲಾಂಡಿನ್ನುಗಳನ್ನು ತಯಾರಿಸುವ ವಿಧಾನ: ಪ್ರೋಸ್ಟಾಗ್ಲಾಂಡಿನ್ನುಗಳು ಪ್ರಾಣಿಗಳ ಕೋಶಗಳಲ್ಲಿ $C_{20}$-ಅಸಂತೃಪ್ತ ಮೇದೋ ಆಮ್ಲಗಳಾದ $\gamma$–ಹೋಮೊಲಿನೊಲೆಯಿಕ್ ಮತ್ತು ಆರ್ಕಿಡೊನಿಕ್ ಆಮ್ಲಗಳಿಂದ ಸಂಶ್ಲೇಷಿಸಲ್ಪಡುತ್ತವೆ ಎಂದು ಬರ್ಜ್‌ಸ್ಟ್ರಾಮ್ ಮತ್ತು ಅಪ್‌ಜಾನ್ ತಂಡದವರು ಮಾಡಿದಮಹತ್ತ್ವದ ಶೋಧ ಇವನ್ನು ತಯಾರಿಸುವುದರಲ್ಲಿ ಮುಖ್ಯಪಾತ್ರ ವಹಿಸಿತು.

$C_{೨೦}$-ಅಸಂತೃಪ್ತ ಮೇದೋ ಆಮ್ಲಗಳನ್ನು ಕುರಿಯ ವೀರ್ಯವನ್ನು ಸ್ರವಿಸುವ ಕೋಶಗಳಲ್ಲಾಗಲಿ ಅವುಗಳಿಂದ ಬೇರ್ಪಡಿಸಿದ ಎನ್‌ಜೈಮುಗಳೊಡನೆ ಸೇರಿಸಿ ಆಗಲಿ ಒಂದು ನಿರ್ದಿಷ್ಟ ಉಷ್ಣತೆಯ ಕಾವುಪೆಟ್ಟಿಗೆಯಲ್ಲಿಟ್ಟು (ಇನ್‌ಕ್ಯುಬೇಟರ್) ಪರಿಪಕ್ವಗೊಳಿಸಿದಾಗ ಪ್ರೋಸ್ಟಾಗ್ಲಾಂಡಿನ್ನುಗಳು ಉತ್ಪತ್ತಿಯಾಗುತ್ತವೆ. ಅಪ್‌ಜಾನ್ ಕಂಪನಿಯವರು ಈ ವಿಧಾನವನ್ನು ಉಪಯೋಗಿಸಿಕೊಂಡು ಪ್ರಪಂಚದ ಎಲ್ಲ ಸಂಶೋಧನಾಪ್ರಯೋಗ ಮಂದಿರಗಳಿಗೆ ಸಂಶೋಧನೆಗೆ ಬೇಕಾಗುವಷ್ಟು ಪ್ರಮಾಣದಲ್ಲಿ ಪ್ರೋಸ್ಟಾಗ್ಲಾಂಡಿನ್ನುಗಳನ್ನು ತಯಾರಿಸಿ ಸರಬರಾಜು ಮಾಡಿದರು. ಇದರಿಂದಾಗಿ ಇವುಗಳ ಮೇಲಿನ ಸಂಶೋಧನೆ ೧೯೬೦ರ ದಶಕದಲ್ಲಿ ಭರದಿಂದ ಸಾಗಲು ಬಹಳಷ್ಟು ಸಾಧ್ಯವಾಯಿತು.

ಪ್ರೋಸ್ಟಾಗ್ಲಾಂಡಿನ್ನುಗಳ ಜೈವಿಕ ಕಾರ್ಯ ಸಾಮರ್ಥ್ಯ ಅವುಗಳ ಅಭಾವ ನೀಗಿಸುವುದರಲ್ಲಿ ತುಂಬ ಫಲಪ್ರದವಾಯಿತು. ಇವು ಅತ್ಯಂತ ಕಡಿಮೆ ಪ್ರಮಾಣದಲ್ಲಿಯೂ (~೧೦$^{-೯}$M) ತಮ್ಮ ಕಾರ್ಯಸಾಮರ್ಥ್ಯವನ್ನು ತೋರಿಸಬಲ್ಲವು. ಉದಾಹರಣೆಗೆ ೫೫ ನ್ಯಾನೊಗ್ರಾಮ್ ಇರುವ ಒಂದು ಲೀಟರ್ ಪ್ರೋಸ್ಟಾಗ್ಲಾಂಡಿನ್ ದ್ರಾವಣ ಗಿನಿಇಲಿಯ ನಯಮಾಂಸಖಂಡದ ಚೂರುಗಳನ್ನು ಸಂಕೋಚಿಸಬಲ್ಲದು. ಅಪ್‌ಜಾನ್ ಕಂಪನಿಯವರು ಪ್ರೋಸ್ಟಾಗ್ಲಾಂಡಿನ್ನುಗಳನ್ನು ಈ ರೀತಿ ತಯಾರಿಸಿ ಪ್ರಯೋಗಾಲಯಗಳಿಗೆ ಸರಬರಾಜು ಮಾಡಿದ ಫಲವಾಗಿ ೧೯೬೦–೭೧ರ ಅವಧಿಯಲ್ಲಿ ೫೦೦ಕ್ಕೂ ಹೆಚ್ಚು ಸಂಶೋಧನ ಲೇಖನಗಳು ಪ್ರಕಟವಾಗಲು ಸಾಧ್ಯವಾಯಿತು. ಪ್ರೋಸ್ಟಾಗ್ಲಾಂಡಿನ್ನುಗಳನ್ನು ಪೂರ್ಣವಾಗಿ ರಾಸಾಯನಿಕ ರೀತಿಯಲ್ಲಿ ಸಂಯೋಜಿಸಿ ತಯಾರಿಸಬೇಕೆಂಬ ಗುರಿ ಈಚೀಚೆಗೆ ಫಲಿಸಿದೆ. ಇವುಗಳಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಇ.ಜೆ.ಕೋರಿ ಮತ್ತು ಸಂಗಡಿಗರ ಹಾಗೂ ಅಪ್‌ಜಾನ್ ತಂಡದವರ ಪೂರ್ಣ ರಾಸಾಯನಿಕ ಸಂಯೋಜನಾ ವಿಧಾನಗಳು ಮುಖ್ಯವಾದವು. ಇವಲ್ಲದೆ ೧೯೬೯ರಲ್ಲಿ ಓಕ್ಲಹೋಮ ವಿಶ್ವವಿದ್ಯಾಲಯದ ಎ.ಜೆ.ವೈನ್ ಹೈಮರ್ ಮತ್ತು ರಾಬರ್ಟ್ ಎಲ್. ಸ್ಪ್ರಾಗ್ಗಿನ್ಸ್ ಎಂಬವರು ಕೊರಾಲ್ ಗುಂಪಿನ ಸಮುದ್ರದ ಚಾವಟಿ ಮೀನುಗಳಲ್ಲಿ ಪ್ರೋಸ್ಟಾಗ್ಲಾಂಡಿನ್ನುಗಳು ದೊರೆಯುವುವೆಂದು ಪತ್ತೆ ಹಚ್ಚಿದರು. ಈ ತರಹದ ಮೀನುಗಳ ಕ್ಯಾರಿಬಿಯನ್ ಸಮುದ್ರ ಮತ್ತು ಫ್ಲಾರಿಡಾದ ಸಮುದ್ರತೀರದ ನೀರಿನಲ್ಲೂ ದೊರೆಯುವುವು. ತಮ್ಮ ದೇಹದ ಶೇಕಡ ೧.೫ರಷ್ಟು ತೂಕ ಪ್ರೋಸ್ಟಾಗ್ಲಾಂಡಿನ್ನುಗಳನ್ನು ತಯಾರಿಸಿ ಶೇಖರಿಸಿಡುವುದು ಈ ಪ್ರಾಣಿಗಳ ವೈಶಿಷ್ಟ್ಯ. ಈ ಮೀನಿನ ಪ್ರೋಸ್ಟಾಗ್ಲಾಂಡಿನ್ $PGA_{೨}$ರ ಐಸೊಮರ್ ಆಗಿರುವುದಲ್ಲದೆ ಅದು ಅಸಿಟೇಟ್ ಮತ್ತು ಎಸ್ಟರ್ ವ್ಯುತ್ಪನ್ನ ರೂಪದಲ್ಲಿ ಇರುವುದು ಕೂಡ ಕಂಡುಬಂದಿದೆ.

ಪ್ರೋಸ್ಟಾಗ್ಲಾಂಡಿನ್ನುಗಳ ನಿರಪೇಕ್ಷ ರಚನಾವಿನ್ಯಾಸವನ್ನು ಯೂನಿಲಿವರ್ ಸಂಸ್ಥೆಯ ವ್ಯಾನ್‌ಡ್ರಾಪ್ ಮತ್ತು ನ್ಯೂಜೆರಲ್ ಅವರು ಮತ್ತು ಕ್ಯಾರೊಲಿನ್‌ಸ್ಕದ ಬರ್ಜ್‌ಸ್ಟ್ರಾಮ್ ಸಂಗಡಿಗರು ತಮ್ಮ ಅತ್ಯಂತ ಜಟಿಲ ಹಾಗೂ ಶ್ರಮದಾಯಕ ಸಂಶೋಧನೆಗಳಿಂದ ಶೋಧಿಸಿದ್ದಾರೆ. ನಿರಪೇಕ್ಷ ರಚನಾವಿನ್ಯಾಸದ ಪರಿಭಾಷೆಯಲ್ಲಿ ಹೇಳುವುದಾದರೆ ಸಮುದ್ರದ ಚಾವಟಿ ಮೀನಿನಲ್ಲಿ ದೊರೆಯುವ ಪ್ರೋಸ್ಟಾಗ್ಲಾಂಡಿನ್ನಿಗೆ ೧೫ [R] ವಿನ್ಯಾಸವಿದ್ದು ಪ್ರಕೃತಿಯಲ್ಲಿ ದೊರೆಯುವ ಉಳಿದೆಲ್ಲ ಪ್ರೋಸ್ಟಾಗ್ಲಾಂಡಿನ್ನುಗಳಿಗೆ 15(S) ವಿನ್ಯಾಸವಿರುವುದು ತಿಳಿದುಬಂದಿದೆ. ಜೈವಿಕ ಮತ್ತು ವೈದ್ಯಕೀಯ ಸಂಶೋಧನೆಗಳಲ್ಲಿ ಹೆಚ್ಚಾಗಿ ಬೇಡಿಕೆಯಲ್ಲಿರುವ ಪ್ರೋಸ್ಟಾಗ್ಲಾಂಡಿನ್ನುಗಳು $PGE_1$, $PGE_2$ ಮತ್ತು $PGF_{2\alpha}$. ಆದರೆ ಸಮುದ್ರದ ಚಾವಟಿ ಮೀನುಗಳಲ್ಲಿ ದೊರೆಯುವ ಪ್ರೋಸ್ಟಾಗ್ಲಾಂಡಿನ್ PGA ಶ್ರೇಣಿಗೆ ಸೇರಿದ್ದು. ಅವುಗಳ C=೧೧ನೆಯ ಪರಮಾಣುವಿಗೆ ಆಕ್ಸಿಜನ್ನಿನ ಪರಮಾಣು ಹೊಂದಿಕೊಂಡಿರುವುದಿಲ್ಲ. ಆದ್ದರಿಂದ ಅವನ್ನು C=೧೧ರಲ್ಲಿ ಆಕ್ಸಿಜನ್ ಇರುವ ಅಣುಗಳಾಗಿ ಪರಿವರ್ತಿಸುವುದಲ್ಲದೆ ಅವುಗಳಲ್ಲಿರುವ ಎಸ್ಟರ್ ಮತ್ತು ಅಸಿಟೇಟ್ ಬಂಧಗಳನ್ನು ಎನ್‌ಜೈಮುಗಳ ಸಹಾಯದಿಂದ ಜಲವಿಶ್ಲೇಷಣೆಗೊಳಪಡಿಸಿ $PGE_2$ ಆಗಿಯೂ ಅನಂತರ ಸೋಡಿಯಮ್ ಬೋರೋಹೈಡ್ರೈಡ್ ಆಪಕರ್ಷಣದಿಂದ $PGF_{2\alpha}$ ಆಗಿಯೂ ಪರಿವರ್ತಿಸುವರು. ಇವಲ್ಲದೆ ಅನಂತರದ ಸಂಶೋಧನೆಗಳಿಂದ ಈ ಮೀನುಗಳ ಕೆಲವು ತಳಿಗಳಿಂದ ದೊರೆಯುವ ಪ್ರೋಸ್ಟಾಗ್ಲಾಂಡಿನ್ ಕೂಡ 1೫[S] ರಚನಾವಿನ್ಯಾಸವನ್ನು ಹೊಂದಿರುವುದು ತಿಳಿದು ಬಂದಿತು. ಆಮೇಲೆ ಇಂಥ ಮೀನಿನ ತಳಿಗಳನ್ನು ಅಭಿವೃದ್ಧಿಪಡಿಸಿ ಬೆಳೆಸಿ ಅವುಗಳಿಂದ ಪ್ರೋಸ್ಟಾಗ್ಲಾಂಡಿನ್ನುಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಯಾರಿಸಲು ಸಾಧ್ಯವಾಯಿತು. ಆದರೂ ಈ ಪ್ರೋಸ್ಟಾಗ್ಲಾಂಡಿನ್ನುಗಳನ್ನು ಹೋಲುವಂಥ ರಾಸಾಯನಿಕ ವಸ್ತುಗಳನ್ನು ಪೂರ್ಣ ರಾಸಾಯನಿಕ ಸಂಯೋಜನೆಯ ವಿಧಾನದಿಂದ ತಯಾರಿಸುವ ಕಾರ್ಯ ಮುಂದುವರಿಯುತ್ತಲೇ ಇದೆ. $PGE_2$ ರ ೧೫–ಮೀಥೈಲ್ ಸದೃಶ ವಸ್ತು $PGE_2$ಕ್ಕಿಂತಲೂ ಹೆಚ್ಚು ಸತ್ತ್ವಶಾಲಿಯಾಗಿರುವುದಲ್ಲದೆ ಅದರ ಕ್ರಿಯಾಶೀಲತೆ ಹೆಚ್ಚು ಉಳಿಯುವುದೆಂದು ಗೊತ್ತಾಗಿದೆ. ಪ್ರೋಸ್ಟಾಗ್ಲಾಂಡಿನ್ನುಗಳನ್ನು ಹೋಲುವಂಥ ನೂರಾರು ಸಂಯುಕ್ತಗಳನ್ನು ಈಗಾಗಲೇ ತಯಾರಿಸಿದ್ದು ಅವುಗಳ ಕ್ರಿಯಾಶೀಲತೆ ಹೆಚ್ಚಿರುವುದು ಕಂಡುಬಂದಿದೆ.

ಪ್ರೋಸ್ಟಾಗ್ಲಾಂಡಿನ್ನುಗಳ ಜೀವಕ್ರಿಯಾಗುಣಗಳು: ಇವು ಪ್ರಾಣಿಗಳಲ್ಲಿ ಅನೇಕ ಬಗೆಯ ಜೈವಿಕ ಕಾರ್ಯಗಳಲ್ಲಿ ಭಾಗವಹಿಸುವುವು. ರಕ್ತದ ಒತ್ತಡದ ಮಾರ್ಪಾಡು, ಮಾಂಸಖಂಡದ ಸಂಕೋಚನೆಯಲ್ಲದೆ ರಕ್ತನಾಳಗಳನ್ನು ವ್ಯಾಕೋಚನಗೊಳಿಸುವುದ'ರಲ್ಲಿಯೂ ಪ್ರೋಸ್ಟಾಗ್ಲಾಂಡಿನ್ನುಗಳು ಭಾಗವಹಿಸುತ್ತವೆ. ಕೆಲವು ಪ್ರೋಸ್ಟಾಗ್ಲಾಂಡಿನ್ನುಗಳು ರಕ್ತನಾಳಗಳನ್ನು ಕುಗ್ಗಿಸುವುದರಲ್ಲಿಯೂ ರಕ್ತವನ್ನು ಹೃದಯದಿಂದ ಹೆಚ್ಚು ಸಾಗಿಸುವಂತೆ ಮಾಡುವುದರಲ್ಲಿಯೂ ರಕ್ತದಲ್ಲಿ ಪ್ರವಹಿಸುತ್ತಿರುವ ಸ್ವತಂತ್ರ ಸ್ಥಿತಿಯಲ್ಲಿರುವ ಮೇದೋಆಮ್ಲಗಳ ಪ್ರಮಾಣವನ್ನು ಕಡಿಮೆ ಮಾಡುವುದರಲ್ಲಿಯೂ ರಕ್ತದ ಪ್ಲೇಟ್‌ಲೆಟ್ ಕಣಗಳ ಒಂದುಗೂಡುವಿಕೆಯನ್ನು ಪ್ರತಿಬಂಧಿಸುವುದರಲ್ಲಿಯೂ ಶ್ವಾಸಕೋಶದ ವಾಯುಪಥದ ಕದಗಳನ್ನು ತೆರೆಯುವುದರಲ್ಲಿಯೂ ಭಾಗವಹಿಸುತ್ತವೆ. ಇದಲ್ಲದೆ ಅಂಡ ವಿಸರ್ಜನೆ ಕ್ರಿಯೆಯ ಮೇಲೆ ಇವುಗಳ ಪ್ರಭಾವವಿದೆ. ಈ ಪ್ರೋಸ್ಟಾಗ್ಲಾಂಡಿನ್ನುಗಳನ್ನು ಅನೇಕ ಬಗೆಯ ಔಷಧಿಗಳ ರೂಪದಲ್ಲಿ ಉಪಯೋಗಿಸುವುದಲ್ಲದೆ ಆ ಬಗ್ಗೆ ನಿರಂತರ ಸಂಶೋಧನೆಗಳೂ ನಡೆಯುತ್ತಿವೆ.

ಪ್ರೋಸ್ಟಾಗ್ಲಾಂಡಿನ್ನುಗಳ ಜೈವಿಕ ಕಾರ್ಯಗಳು ಪ್ರಾಣಿಗಳು ತಮ್ಮ ದೇಹದಲ್ಲಿ ನಡೆಯುವ ಅನೇಕ ಜೈವಿಕ ಕೆಲಸ ಕಾರ್ಯಗಳನ್ನು ನಿಯಂತ್ರಿಸಲು ಉಪಯೋಗಿಸುವ ಹಾರ್ಮೋನುಗಳನ್ನು ಹೋಲುವುದು ಕಂಡುಬಂದಿದೆ. ಗ್ಲೂಕಾಗಾನ್, ಅಡ್ರಿನಲೀನ್, ACTH ಮುಂತಾದ ಅನೇಕ ಹಾರ್ಮೋನುಗಳು ತಮ್ಮ ನಿಯಂತ್ರಣ ಕಾರ್ಯವನ್ನು C-AMP ಎಂಬ ಎರಡನೆಯ ರಾಸಾಯನಿಕ ದೂತದ ಸಹಾಯದಿಂದ ನಡೆಸುವುದು ಈಗ ಸ್ಪಷ್ಟವಾಗಿ ತಿಳಿದುಬಂದಿದೆ. ಇದೇ ರೀತಿ ಪ್ರೋಸ್ಟಾಗ್ಲಾಂಡಿನ್ನುಗಳೂ CAMP ಮುಖಾಂತರವೇ ತಮ್ಮ ಜೈವಿಕ ಕಾರ್ಯಗಳನ್ನು ನಡೆಸುತ್ತವೆ. ಇವು ಕೆಲವು ಸಲ CAMPಯಂತಿಯೇ ಕಾರ್ಯನಿರ್ವಹಿಸುವುದಲ್ಲದೆ CAMP ತಯಾರಿಕೆ ಮಟ್ಟವನ್ನು ಹೆಚ್ಚು ಕಡಿಮೆ ಮಾಡುವುದರ ಮೂಲಕ ಕೂಡ ತಮ್ಮ ಕಾರ್ಯ ನಿರ್ವಹಿಸುತ್ತವೆ. ಇವುಗಳ ವರ್ತನೆ ಹಾರ್ಮೋನ್‌ಗಳಿಗೆ ಹೋಲಿಕೆಯಾಗುತ್ತದೆ. ಏಕೆಂದರೆ, ಇವು ಉತ್ಪತ್ತಿಯಾದ ಸ್ಥಳದಿಂದ ಬೇರೆ ಸ್ಥಳಗಳಿಗೆ ರಕ್ತದ ಮೂಲಕ ಚಲಿಸಿ ತಮ್ಮ ಪರಿಣಾಮವನ್ನು ಬೀರುತ್ತವೆ. ಆದರೆ ಹಾರ್ಮೋನ್‌ಗಳಂತೆ ವಿಶಿಷ್ಟವಾದ ಅಂತಃಸ್ರಾವಕ ಗ್ರಂಥಿಗಳಲ್ಲಿ ಇವುಗಳ ಉತ್ಪತ್ತಿಯಾಗದೇ, ದೇಹದ ಸಾಮಾನ್ಯ ಕೋಶಗಳಲ್ಲಿ ಇವುಗಳ ಉತ್ಪತ್ತಿ ಸಾಧ್ಯ. ಕಾರಣ ಇವುಗಳನ್ನು ಸ್ಥಳೀಯ ಹಾರ್ಮೋನ್‌ಗಳೆಂದು ಕರೆಯಲಾಗಿದೆ.

ಪ್ರೋಸ್ಟಾಗ್ಲಾಂಡಿನ್ನುಗಳ ಮುಖ್ಯ ಉಪಯೋಗಗಳು: ಪ್ರಜನನವಿಜ್ಞಾನದಲ್ಲಿ ಪ್ರೋಸ್ಟಾಗ್ಲಾಂಡಿನ್ನುಗಳ ಪಾತ್ರ ಬಲು ಮುಖ್ಯ. ಗರ್ಭಕೋಶದ ಸ್ನಾಯುಗಳ ಸಂಕೋಚನೆ ಪ್ರಚೋದಿಸುವದರಿಂದ ಪ್ರಸವ ಹೆಚ್ಚು ನೋವಿಲ್ಲದಂತೆ ಸುಲಭವಾಗಿ ಆಗಲು ಪ್ರೋಸ್ಟಾಗ್ಲಾಂಡಿನ್ನುಗಳನ್ನು ಉಪಯೋಗಿಸುತ್ತಾರೆ. ಇವುಗಳಲ್ಲಿ $PGE_2$ ಮುಖ್ಯವಾದುದು. ಸ್ತ್ರೀ ಗರ್ಭಧರಿಸಿದ ಬಳಿಕ ಧಾರಣೆ ಮುಂದುವರಿಯದಂತೆ ತಡೆ ಉಂಟುಮಾಡಿ ಗರ್ಭಸ್ರಾವವನ್ನು ಉಂಟು ಮಾಡಲು ಪ್ರೋಸ್ಟಾಗ್ಲಾಂಡಿನ್ನುಗಳನ್ನು ($PGE_2$ ಮತ್ತು $PGE_{2a}$) ಬಳಸಬಹುದು. ಕೆಲವು ರೀತಿಯ ಗರ್ಭಪಾತಗಳನ್ನು ಉಂಟುಮಾಡಲು ಪ್ರೋಸ್ಟಾಗ್ಲಾಂಡಿನ್ನುಗಳು ಅತ್ಯಂತ ಸರಳ ಮತ್ತು ಸಾಧು ಸಾಧನಗಳು.

ಇವಲ್ಲದೆ ಪ್ರೋಸ್ಟಾಗ್ಲಾಂಡಿಗಳನ್ನು ದಮ್ಮು ಮುಂತಾದ ಶ್ವಾಸಕೋಶದ ಕಾಯಿಲೆಗಳು, ಜಠರ ಮತ್ತು ಕರುಳಿನ ಹುಣ್ಣುಗಳು, ಮೂಗು ಕಟ್ಟುವಿಕೆ ಮುಂತಾದವನ್ನು ಗುಣಪಡಿಸಲು ಪರಿಣಾಮಕಾರೀ ಔಷಧವಾಗಿ ಉಪಯೋಗಿಸಬಹುದು ಎಂದು ತಿಳಿದು ಬಂದಿದೆ. ತಲೆ ಮತ್ತು ಮೈನೋವು, ಜ್ವರ ಮುಂತಾದ ಕಾಯಿಲೆಗಳಲ್ಲಿ ಸರ್ವೇ ಸಾಧಾರಣವಾಗಿ ಬಳಕೆಯಲ್ಲಿರುವ ಆಸ್ಪಿರಿನ್ ಔಷಧ ಪ್ರೋಸ್ಟಾಗ್ಲಾಂಡಿನ ತಯಾರಿಕೆಯ ಪ್ರಮಾಣವನ್ನು ಕುಗ್ಗಿಸುವುದರ ಮೂಲಕ ಈ ರೋಗಗಳಲ್ಲಿ ಉಪಶಮನಕಾರಿ ಔಷಧವಾಗಿ ವರ್ತಿಸುವುದು. ಪ್ರೋಸ್ಟಾಗ್ಲಾಂಡಿನ್ನುಗಳನ್ನು ಸಂಧಿವಾತ, ರಕ್ತದ ಒತ್ತಡ ಮತ್ತು ಕ್ಯಾನ್ಸರ್ ರೋಗಗಳಲ್ಲಿಯೂ ಪರಿಣಾಮಕಾರಿ ಔಷಧಗಳಾಗಿ ಉಪಯೋಗಿಸಲು ಸಧ್ಯದಲ್ಲೆ ಸಾಧ್ಯವಾಗಬಹುದು.

(ಎಂ.ಎಂ.ಎ.)

**ಪ್ಲಾಸ್ಮಿಡ್‌ಗಳು:** ಬ್ಯಾಕ್ಟೀರಿಯದ ಕೋಶದ್ರವ್ಯದಲ್ಲಿ ಕ್ರೋಮೊಸೋಮಿನ ಡಿಎನ್‌ಎಯೊಂದಿಗೆ ಕಂಡುಬರುವ ವರ್ತುಲಾಕಾರದ ಸ್ವತಂತ್ರ ದ್ವಿಪ್ರತೀಕರಣ ಸಾಮರ್ಥ್ಯವನ್ನು ಹೊಂದಿರುವ ಡಿಎನ್‌ಎ ಕಣಗಳು. ಈ ಪದವನ್ನು ಹುಟ್ಟುಹಾಕಿದ್ದು ಜೆ. ಲೆಡರ್‌ಬರ್ಗ್ 1952ರಲ್ಲಿ. ಯೀಸ್ಟ್‌ಗಳಲ್ಲೂ ಪ್ಲಾಸ್ಮಿಡ್‌ಗಳನ್ನು ಕಾಣಬಹುದು.

ಪ್ಲಾಸ್ಮಿಡ್‌ಗಳೂ ಸಹ ಕೆಲವು ಜೀನ್‌ಗಳನ್ನು ಹೊಂದಿದ್ದು ಬ್ಯಾಕ್ಟೀರಿಯದ ಜೀವನಚಕ್ರದಲ್ಲಿ ಬೇಕಾದ' ಕೆಲವು ಬಹುಮುಖ್ಯ ಪ್ರೋಟೀನ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಆದರೆ ಅವುಗಳಿಗೆ ಹೆಚ್ಚಿನ ಮಹತ್ವ ದೊರೆತಿರುವುದು ಬೇರೆಯದೇ ಕಾರಣಕ್ಕೆ. ಬ್ಯಾಕ್ಟೀರಿಯದಿಂದ ಈ ಪ್ಲಾಸ್ಮಿಡ್‌ಗಳನ್ನು ಬೇರ್ಪಡಿಸಿ ಅದರ ಮಧ್ಯದಲ್ಲಿ ನಮಗೆ ಬೇಕಾದ ಜೀನ್‌ಗಳನ್ನು ಸೇರಿಸಬಹುದು. ಹೀಗೆ ತಯಾರಾದ ಪ್ಲಾಸ್ಮಿಡ್ ಅನ್ನು ಮತ್ತೆ ಬ್ಯಾಕ್ಟೀರಿಯಾದಲ್ಲಿ ಸೇರಿಸಿದಾಗ ಇತರ ಜೀನ್‌ಗಳಂತೆ ಪ್ಲಾಸ್ಮಿಡ್‌ನೊಳಗೆ ಸೇರಿಸಿದ ಜೀನ್ ಸಹ ಪ್ರೋಟೀನನ್ನು ಉತ್ಪತ್ತಿಮಾಡುತ್ತದೆ. ಈ ತಂತ್ರಜ್ಞಾನದಿಂದಾಗಿ ನಮಗೆ ಬೇಕಾದ ಹಾರ್ಮೋನುಗಳನ್ನು, ಕಿಣ್ವಗಳನ್ನು ಅಥವಾ ಯಾವುದೇ ಪ್ರೋಟೀನನ್ನು ಪಡೆಯಬಹುದು.

ಪ್ಲಾಸ್ಮಿಡ್‌ಗಳ ಪ್ರಮುಖ ಲಕ್ಷಣಗಳು:

೧. ಎಲ್ಲಾ ಪ್ಲಾಸ್ಮಿಡ್‌ಗಳೂ ವರ್ತುಲಾಕಾರದಲ್ಲಿದ್ದು ಡಿಎನ್‌ಎ ನ್ಯೂಕ್ಲಿಯೊಟೈಡ್‌ಗಳನ್ನು ಹೊಂದಿರುತ್ತವೆ.

೨. ಬ್ಯಾಕ್ಟೀರಿಯದ ಕ್ರೊಮೋಸೋಮಿಗಿಂತ ಗಾತ್ರದಲ್ಲಿ ಚಿಕ್ಕದಾಗಿರುತ್ತವೆ.

೩. ಇವುಗಳು ಸಂಖ್ಯೆ, ಒಂದು ಕೋಶದಲ್ಲಿ ಒಂದರಿಂದ ನೂರರವರೆಗೂ ಇರಬಹುದು.

೪. ಇವು ಸ್ವತಂತ್ರವಾಗಿ ಸ್ವಪ್ರತಿಗಳನ್ನು ತಯಾರಿಸಿಕೊಳ್ಳಲು ಸಮರ್ಥವಾಗಿರುತ್ತವೆ. ಆದರೂ ಬಹುತೇಕ ಸಮಯದಲ್ಲಿ ಕ್ರೊಮೋಸೋಮಿನೊಂದಿಗೆ ತಮ್ಮ ನಕಲನ್ನು ಕೋಶವಿಭಜನೆಯ ಸಮಯದಲ್ಲಿ ತಯಾರಿಸಿಕೊಳ್ಳುತ್ತವೆ.

೫. ಇವೂ ಸಹ ಜೀನ್‌ಗಳನ್ನು ಹೊಂದಿದ್ದು $೧೦^{೬}$ ರಷ್ಟು ನ್ಯೂಕ್ಲಿಯೊಟೈಡ್‌ಗಳನ್ನು ಕಾಣಬಹುದು.

೬. ಬ್ಯಾಕ್ಟೀರಿಯದ ಕೋಶಗಳಲ್ಲಿ ಇವುಗಳ ಕಾರ್ಯ ಬಹಳ ಮುಖ್ಯವಾಗಿದ್ದು ಪ್ರಮುಖ ಪ್ರೋಟೀನ್‌ಗಳನ್ನು ತಯಾರಿಸುತ್ತವೆ.

ಈ ಪ್ಲಾಸ್ಮಿಡ್‌ಗಳನ್ನು ಹಲವು ರೀತಿಯಲ್ಲಿ ವಿಂಗಡಿಸಲಾಗಿದೆ. ಅವುಗಳು ನಕಲನ್ನು ತಯಾರಿಸುವ ಹಂತವನ್ನಾಧರಿಸಿ ಎರಡು ರೀತಿ ವಿಂಗಡಿಸಲಾಗಿದೆ;

೧. ಸ್ಟ್ರಿಂಜೆಂಟ್ ಪ್ಲಾಸ್ಮಿಡ್‌ಗಳು: ಇವುಗಳು ಕ್ರೊಮೋಸೋಮಿನೊಂದಿಗೆ ತಮ್ಮ ನಕಲನ್ನು ತಯಾರಿಸಿಕೊಳ್ಳುತ್ತವೆ.

೨. ರಿಲ್ಯಾಕ್ಸ್‌ಡ್ ಪ್ಲಾಸ್ಮಿಡ್‌ಗಳು: ಇವು ಸ್ವತಂತ್ರವಾಗಿ ಯಾವಾಗಬೇಕಾದರೂ ತಮ್ಮ ನಕಲನ್ನು ತಯಾರಿಸಿಕೊಳ್ಳಬಲ್ಲವು.

ಪ್ಲಾಸ್ಮಿಡ್‌ಗಳನ್ನು ಅವುಗಳ ವರ್ಗಾವಣೆಗೊಳ್ಳುವ ಸಾಮರ್ಥ್ಯದ ಮೇಲೆಯೂ ಕೆಳಕಂಡಂತೆ ವಿಂಗಡಿಸಬಹುದು;

೧. ಸಂಯೋಗಿ ಪ್ಲಾಸ್ಮಿಡ್‌ಗಳು (ಕಾಂಜುಗೇಟಿವ್ ಪ್ಲಾಸ್ಮಿಡ್‌ಗಳು):– ಈ ಪ್ಲಾಸ್ಮಿಡ್‌ಗಳು "ಟ್ರಾ" ಜೀನುಗಳನ್ನು ಹೊಂದಿದ್ದು ಬ್ಯಾಕ್ಟೀರಿಯಗಳ ಸಂಯೋಗ (ಕಾಂಜುಗೇಷನ್)ದ ಸಮಯದಲ್ಲಿ ಒಂದು ಬ್ಯಾಕ್ಟೀರಿಯದಿಂದ ಮತ್ತೊಂದಕ್ಕೆ ವರ್ಗಾಯಿಸಲ್ಪಡುತ್ತವೆ.

೨. ಅಸಂಯೋಗಿ ಪ್ಲಾಸ್ಮಿಡ್‌ಗಳು (ನಾನ್ ಕಾಂಜುಗೇಟಿವ್ ಪ್ಲಾಸ್ಮಿಡ್‌ಗಳು): ಈ ಪ್ಲಾಸ್ಮಿಡ್‌ಗಳು ಸಂಯೋಗವನ್ನು ಆರಂಭಿಸುವ ಸಾಮರ್ಥ್ಯವನ್ನು ಹೊಂದಿರದ ಕಾರಣ ಇವುಗಳ ವರ್ಗಾವಣೆಗೆ ಸಂಯೋಗಿ ಪ್ಲಾಸ್ಮಿಡ್‌ಗಳ ಸಹಾಯ ಅತ್ಯವಶ್ಯಕ.

ಅನೇಕ ವಿಧದ ಪ್ಲಾಸ್ಮಿಡ್‌ಗಳನ್ನು ಕೆಲವೊಮ್ಮೆ ಒಂದೇ ಕೋಶದಲ್ಲಿ ಕಾಣಬಹುದು. ಉದಾಹರಣೆಗೆ, ಎಶ್ಚರೀಷಿಯ ಕೋಲಿ (ಇ.ಕೋಲಿ) ಬ್ಯಾಕ್ಟೀರಿಯಗಳಲ್ಲಿ ಏಳು ವಿವಿಧ ಬಗೆಯ ಪ್ಲಾಸ್ಮಿಡ್‌ಗಳನ್ನು ಒಂದೇ ಕೋಶದಲ್ಲಿ ಗುರುತಿಸಲಾಗಿದೆ. ಆದರೆ ಕೆಲವೊಮ್ಮೆ ಈ ಪ್ಲಾಸ್ಮಿಡ್‌ಗಳ ಮಧ್ಯೆ ಹೊಂದಾಣಿಕೆಯಾಗದ ಕಾರಣ ಕೆಲವೊಂದು ಕೋಶಗಳ ಶ್ರೇಣಿಯಲ್ಲಿ ಅವುಗಳ ಸಂಖ್ಯೆಯಲ್ಲಿ ನಷ್ಟವಾಗಿದೆ. ಈ ಎಲ್ಲಾ ವರ್ಗೀಕರಣಗಳಿಗಿಂತ ಭಿನ್ನವಾದ ಮತ್ತು ಸ್ಪಷ್ಟವಾದ ವರ್ಗೀಕರಣವನ್ನು ಅವುಗಳ ಕಾರ್ಯ ಚಟುವಟಿಕೆಗಳಿಗನುಗುಣವಾಗಿ ಮಾಡಬಹುದು;

೧. ಫಲವತ್ತತೆಯ ಪ್ಲಾಸ್ಮಿಡ್‌ಗಳು (ಫರ್ಟಿಲಿಟಿ ಪ್ಲಾಸ್ಮಿಡ್) ಅಥವಾ 'F' ಪ್ಲಾಸ್ಮಿಡ್‌ಗಳು: ಈ ಪ್ಲಾಸ್ಮಿಡ್ಗಳು 'ಟ್ರಾ' ವಂಶವಾಹಿಗಳನ್ನು ಹೊಂದಿದ್ದು ಸಂಯೋಗ ಹೊಂದುವ ಸಾಮರ್ಥ್ಯವನ್ನು ಹೊಂದಿರುತ್ತವೆ.

2. ನಿರೋಧಕ ಪ್ಲಾಸ್ಮಿಡ್‌ಗಳು (ರೆಸಿಸ್ಟೆನ್ಸ್ ಪ್ಲಾಸ್ಮಿಡ್) ಅಥವಾ 'ಆರ್' ಪ್ಲಾಸ್ಮಿಡ್‌ಗಳು: ವಿಷಪದಾರ್ಥ ಅಥವಾ ಜೀವನಿರೋಧಕಗಳ ವಿರುದ್ಧ ಸೆಣಸುವಲ್ಲಿ ಸಹಕರಿಸುವ ಪ್ರೋಟೀನ್‌ಗಳನ್ನು ತಯಾರಿಸುವ ಕೆಲವು ಜೀನ್‌ಗಳನ್ನು ಹೊಂದಿವೆ.

3. ಕೋಲ್ ಪ್ಲಾಸ್ಮಿಡ್‌ಗಳು: ಇತರ ಬ್ಯಾಕ್ಟೀರಿಯಗಳನ್ನು ಕೊಲ್ಲುವ ಸಾಮರ್ಥ್ಯವುಳ್ಳ ಕೊಲಿಸಿನ್ ಮತ್ತು ಇತರ ಪ್ರೋಟೀನ್‌ಗಳನ್ನು ತಯಾರಿಸುವ ಕೆಲವು ಜೀನ್‌ಗಳನ್ನು ಹೊಂದಿರುತ್ತವೆ.

4. ಡಿಗ್ರೆಟಿವ್ ಪ್ಲಾಸ್ಮಿಡ್‌ಗಳು: ಟಾಲ್ವಿನ್, ಸ್ಯಾಲಿಸಿಲಿಕ್ ಆಮ್ಲಗಳಂತ ಅಸಾಮಾನ್ಯ ಪದಾರ್ಥಗಳ ಪಚನಕ್ರಿಯೆಯಲ್ಲಿ ಸಹಕರಿಸುತ್ತವೆ.

5. ವಿರುಲೆನ್ಸ್ ಪ್ಲಾಸ್ಮಿಡ್‌ಗಳು: ಇವುಗಳು ಬ್ಯಾಕ್ಟೀರಿಯಗಳನ್ನು ರೋಗಕಾರಕಗಳನ್ನಾಗಿಸುತ್ತವೆ.

ಪ್ಲಾಸ್ಮಿಡ್‌ಗಳು ವರ್ತುಲಾಕಾರವಲ್ಲದೆ ನೇರವಾದ ಅಥವಾ ರೇಖೀಯ ಸ್ವರೂಪವನ್ನೂ ಹೊಂದಿರಬಹುದು. ಇಂತಹ ಪ್ಲಾಸ್ಮಿಡ್‌ಗಳನ್ನು ಬೊರೆಲಿಯಾ ಬಲ್ಗ್‌ಡೋಫೆರಿ ಎಂಬ ಸ್ಪೈರೋಕೀಟ್‌ಗಳಲ್ಲಿ ಗುರುತಿಸಲಾಗಿದೆ. ಯಾವುದೇ ರೀತಿಯ ಪ್ಲಾಸ್ಮಿಡ್‌ಗಳೇ ಆಗಲಿ ಸಾಮಾನ್ಯ ಡಿಎನ್‌ಎ ಸ್ವರೂಪವನ್ನು ಹೊಂದಿರುತ್ತವೆ. ಇಲ್ಲೂ ಸಹ ಸಾರಜನಕ ಪ್ರತ್ಯಾಮ್ಲ, ಶರ್ಕರ ಮತ್ತು ಫಾಸ್ಫೇಟ್‌ಗಳ ಸಂಯೋಗದಿಂದುಂಟಾಗುವ ನ್ಯೂಕ್ಲಿಯೊಟೈಡ್‌ಗಳ ಸರಣಿ ಉಂಟು. ಒಂದೇ ವ್ಯತ್ಯಾಸವೆಂದರೆ ಡಿ.ಎನ್.ಎ ಸುರುಳಿಯ ಎರಡು ತುದಿಗಳು ಬೆಸೆದುಕೊಂಡು ಮರ್ತುಲಾಕಾರದ ಪ್ಲಾಸ್ಮಿಡ್‌ಗಳ ಸೃಷ್ಟಿಯಾಗುತ್ತದೆ.

ಪ್ಲಾಸ್ಮಿಡ್‌ಗಳಲ್ಲಿ ಸ್ವಪ್ರತೀಕರಣ: ಸ್ವಪ್ರತೀಕರಣ ಬಹುತೇಕ ಸ್ವತಂತ್ರವಾಗಿರುತ್ತದೆ. ಪ್ರಕ್ರಿಯೆಯ ಪ್ರಾರಂಭ ಪ್ಲಾಸ್ಮಿಡ್‌ಗಳ ಜೀನ್‌ಗಳಿಂದ ನಿಯಂತ್ರಿಸಲ್ಪಟ್ಟರೆ ಅನಂತರದ ವಾಸ್ತವ ನಕಲು ಕ್ರಿಯೆ ಬ್ಯಾಕ್ಟೀರಿಯದ ಕ್ರೋಮೊಸೋಮಿನಲ್ಲಿರುವ ಜೀನ್‌ಗಳಿಂದ ನಿಯಂತ್ರಿಸಲ್ಪಡುತ್ತದೆ. ಈ ಪ್ಲಾಸ್ಮಿಡ್‌ಗಳು ಒಂದು ಬ್ಯಾಕ್ಟೀರಿಯದಿಂದ ಮತ್ತೊಂದಕ್ಕೆ ಸ್ವಯಂಚಲಿಸುವ ಸಾಮರ್ಥ್ಯ ಹೊಂದಿರುತ್ತವೆ. ವರ್ಗಾವಣೆಯು ದಾನಿ ಬ್ಯಾಕ್ಟೀರಿಯ ತಯಾರಿಸುವ ಸಣ್ಣ ಕೂದಲಿನಂಥ ನಳಿಕೆಯ ಮೂಲಕ ಆಗುತ್ತದೆ. ಈ ಕ್ರಿಯೆ 'ಟ್ರಾ' ಜೀನ್‌ನಿಂದ ನಿಯಂತ್ರಿಸಲ್ಪಟ್ಟಿದೆ.

ಎರಡು ರೀತಿಯ ಸ್ವಪ್ರತೀಕರಣ ಪ್ರಕ್ರಿಯೆಗಳನ್ನು ಗುರುತಿಸಲಾಗಿದೆ:

1. ಥೀಟ ಸ್ವಪ್ರತೀಕರಣವನ್ನು ಗ್ರಾಮ್ ಋಣಾತ್ಮಕ ಬ್ಯಾಕ್ಟೀರಿಯದ ಪ್ಲಾಸ್ಮಿಡ್‌ಗಳಾದ ಕೊಲ್ ಇ1, ಆರ್.ಕೆ2 ಮತ್ತು ಎಫ್ ಪ್ಲಾಸ್ಮಿಡ್‌ಗಳಲ್ಲಿ ಕಾಣಬಹುದು.

2. ಉರುಳು ವೃತ್ತ ಸ್ವಪ್ರತೀಕರಣ (ರೋಲಿಂಗ್ ಸರ್ಕಲ್ ಸ್ವಪ್ರತೀಕರಣ): ಈ ರೀತಿಯ ಪ್ರಕ್ರಿಯೆಯನ್ನು ಗ್ರಾಮ್ ಧನಾತ್ಮಕ ಬ್ಯಾಕ್ಟೀರಿಯದ ಪ್ಲಾಸ್ಮಿಡ್‌ಗಳಲ್ಲಿ ಕಾಣಬಹುದು.

ರೇಖೀಯ ಪ್ಲಾಸ್ಮಿಡ್‌ಗಳ ಸ್ವಪ್ರತೀಕರಣದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲವಾದರೂ ಪ್ರೊಟೊಟೀಲೋಮರೇಸ್ ಎಂಬ ಕಿಣ್ವ ಇಂತಹ ಪ್ಲಾಸ್ಮಿಡ್‌ಗಳ ತಯಾರಿಕೆ ಮತ್ತು ನಿರ್ವಹಣೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆಂದು 2001ರಲ್ಲಿ ಕಂಡು ಹಿಡಿಯಲಾಯಿತು. ಇವುಗಳಲ್ಲೂ ಸಹ ಪುನರ್‌ಸಂಯೋಜನೆಯುನ್ನು ಗುರುತಿಸಲಾಗಿದೆ. ಪುನರ್‌ಸಂಯೋಜನೆಯು ಇನ್ನೊಂದು ಬ್ಯಾಕ್ಟೀರಿಯಾದ ಪ್ಲಾಸ್ಮಿಡ್‌ನೊಂದಿಗಿರಬಹುದು ಅಥವಾ ಬ್ಯಾಕ್ಟೀರಿಯದ ಡಿಎನ್ಎ ಯೊಂದಿಗೂ ಇರಬಹುದು. ಪ್ಲಾಸ್ಮಿಡ್‌ಗಳ ಸಂಖ್ಯೆಯೂ ಸಹ ಪ್ರತಿಕೋಶವಿಭಜನೆಯಲ್ಲಿ ನಿಯಂತ್ರಿಸಲ್ಪಡುತ್ತಿರುತ್ತದೆ. ಈ ಗುಣಕ್ಕೆ ಪ್ಲಾಸ್ಮಿಡ್‌ಗಳ ಜೀನ್‌ಗಳೇ ಕಾರಣ. ಏಕಪ್ರತಿ ಪ್ಲಾಸ್ಮಿಡ್‌ಗಳು (ಸಿಂಗಲ್ ಕಾಪಿ ಪ್ಲಾಸ್ಮಿಡ್) ಕೋಶವಿಭಜನೆಯ ಸಮಯದಲ್ಲಿ ಕೆಲವೊಮ್ಮೆ ಯಾವುದಾದರೂ ಒಂದು ವಿಭಜಿತ ಕೋಶದೊಳಗೇ ಸೇರಿಹೋಗುವ ಸಂಭವವಿರುತ್ತದೆ.

ಹೀಗೆ ಪ್ಲಾಸ್ಮಿಡ್‌ಗಳು ಬ್ಯಾಕ್ಟೀರಿಯಗಳ ಸಂಯೋಗದಲ್ಲಿ, ಜೀವನಿರೋಧಕಗಳ ವಿರುದ್ಧ ಸೆಣಸುವಲ್ಲಿ, ಕೆಲವು ವಿಶೇಷ ಪದಾರ್ಥಗಳ ವಿಭಜನೆಯಲ್ಲಿ ಹಾಗೂ ಇನ್ನೂ ಹಲವು ಕಾರ್ಯಗಳಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ಈ ಎಲ್ಲಾ ಕಾರ್ಯಗಳು ಬ್ಯಾಕ್ಟೀರಿಯಗಳ ಜೀವನಚಕ್ರದಲ್ಲಿ ಮುಖ್ಯವಾದದ್ದು. ಇಷ್ಟಲ್ಲದೆ ಪ್ಲಾಸ್ಮಿಡ್‌ಗಳ ಸ್ವಪ್ರತೀಕರಣ ಮತ್ತು ಪ್ರೊಟೀನ್ ಉತ್ಪಾದನ ಸಾಮರ್ಥ್ಯವನ್ನು ತಳಿ ತಂತ್ರಜ್ಞಾನದಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಉದಾಹರಣೆಗೆ, ನಮ್ಮ ದೇಹದಲ್ಲಿ ಶರ್ಕರಗಳ ಪಚನ ಕ್ರಿಯೆಗೆ ಮೇದೋಜೀರಕ ಗ್ರಂಥಿ ಉತ್ಪಾದಿಸುವ ಇನ್ಸುಲಿನ್ ಎಂಬ ಹಾರ್ಮೋನನ್ನು ಕೃತಕವಾಗಿ ಪ್ಲಾಸ್ಮಿಡ್‌ಗಳ ಸಹಾಯದಿಂದ ಉತ್ಪಾದಿಸಲಾಗುತ್ತಿದೆ. ಇನ್ಸುಲಿನ್ ಉತ್ಪಾದನೆಯಲ್ಲಿ ಹಲವು ಹಂತಗಳಿವೆ; ಮೊದಲ ಹಂತದಲ್ಲಿ ಇನ್ಸುಲಿನ್ ಉತ್ಪಾದಿಸುವ ಜೀನನ್ನು ಗುರುತಿಸಿ, ಸೂಕ್ತ ವಿಧಾನದಿಂದ ಅವುಗಳ ನ್ಯೂಕ್ಲಿಯೊಟೈಡ್ ಸರಣಿಯನ್ನು ರೆಸ್ಟ್ರಿಕ್ಷನ್ ಎಂಡೊನ್ಯುಕ್ಲಿಯೇಸ್ ಎಂಬ ಬ್ಯಾಕ್ಟಿರಿಯಾಗಳಲ್ಲೇ ದೊರೆಯುವ ಕಿಣ್ವಗಳನ್ನು ಬಳಸಿ ಪ್ರತ್ಯೇಕಿಸಲಾಗುತ್ತದೆ.

ಬ್ಯಾಕ್ಟಿರಿಯದ ಪ್ಲಾಸ್ಮಿಡ್‌ಗಳನ್ನು ಕ್ಯಾಲ್ಸಿಯಂ ಕ್ಲೋರೈಡ್‌ನಂತಹ ಮಾರ್ಜಕಗಳನ್ನು ಬಳಸಿ ಹೊರತೆಗೆಯಲಾಗುತ್ತದೆ. ಈ ಪ್ಲಾಸ್ಮಿಡ್‌ಗಳನ್ನೂ ಸಹ ರೆಸ್ಟ್ರಿಕ್ಷನ್ ಎಂಡೊನ್ಯೂಕ್ಲಿಯೇಸ್ (ಆರ್‌ಇಎನ್) ಜೀರ್ಣ ಕ್ರಿಯೆಗೆ ಒಳಪಡಿಸಲಾಗುತ್ತದೆ. ಈ ಕಿಣ್ವಗಳು ಪ್ಲಾಸ್ಮಿಡ್‌ನ ಮಧ್ಯಭಾಗದ ಕೆಲವು ನ್ಯೂಕ್ಲಿಯೊಟೈಡ್ ಸರಣಿಗಳನ್ನು (ಪ್ಯಾಲಿಂಡ್ರೋಮಿಕ್ ಸರಣಿ) ಎರಡು ತುದಿಗಳಲ್ಲಿ ಬೇರ್ಪಡಿಸುತ್ತವೆ. ಆರ್‌ಇಎನ್‌ಗಳು ನ್ಯೂಕ್ಲಿಯಿಕ್ ಆಮ್ಲಗಳನ್ನು ವಿಶಿಷ್ಟ ರೀತಿಯಲ್ಲಿ ಕತ್ತರಿಸುತ್ತವೆ. ಈ ಕತ್ತರಿಸುವಿಕೆ ಎಲ್ಲಿಯೇ ಆದರೂ ಕೆಲವು ಜೋಡಿ ಬಂಧವೇರ್ಪಡದ (ಅನ್‌ಪೇರ್ಡ್) ನ್ಯೂಕ್ಲಿಯೊಟೈಡ್ ಸರಣಿಯನ್ನುಂಟುಮಾಡುತ್ತದೆ. ಆರ್‌ಸಿಎನ್ಎ ನಿಂದ ಕತ್ತರಿಸಲ್ಪಟ್ಟ ಇನ್ಸುಲಿನ್ ಜೀನ್ ಮತ್ತು ಪ್ಲಾಸ್ಮಿಡ್‌ಅನ್ನು ಒಂದು ಪ್ರನಾಳದಲ್ಲಿ ಲೈಗೇಸ್ ಎಂಬ ಕಿಣ್ವವನ್ನು ಉಪಯೋಗಿಸಿ ಜೋಡಿಸಲಾಗುತ್ತದೆ. ಹೀಗೆ ಬೆಸೆಯಲ್ಪಟ್ಟ, ಹೊಸದಾಗಿ ತಯಾರಾದ ಪ್ಲಾಸ್ಮಿಡ್‌ನಲ್ಲಿ ಪ್ಲಾಸ್ಮಿಡ್‌ನ ಜೀನ್‌ಗಳಲ್ಲದೆ ಇನ್ಸುಲಿನ್ ಉತ್ಪಾದಿಸುವ ಜೀನ್ ಕೂಡ ಇರುತ್ತದೆ. ಈ ಪ್ಲಾಸ್ಮಿಡ್ ಅನ್ನು ಪುನರ್‌ಸಂಯೋಜಕ ಡಿಎನ್ಎ (ರಿಕಾಂಬಿನೆಂಟ್ ಡಿಎನ್ಎ-ಆರ್‌ಡಿಎನ್ಎ) ಎನ್ನುತಾರೆ. ಆರ್‌ಡಿಎನ್ಎ ಯನ್ನು ಪುನಃ ಮಾರ್ಜಕಗಳನ್ನು ಬಳಸಿ ಬ್ಯಾಕ್ಟೀರಿಯದ ಕೋಶದೊಳಕ್ಕೆ ಮತ್ತೆ ಸೇರಿಸಲಾಗುತ್ತದೆ. ಇಂತಹ ಪ್ಲಾಸ್ಮಿಡ್‌ಗಳನ್ನು ಅನ್ಯಜೀವಿಯ ಜೀನ್ ಅನ್ನು ಹೊತ್ತ ಕಾರಣ ವಾಹಕಗಳು (ವೆಕ್ಟರ್) ಎನ್ನುತ್ತಾರೆ. ಪಿಬಿಆರ್-322, ಪಿಯುಸಿ-18, ಇತ್ಯಾದಿ ಸಾಮಾನ್ಯ ಬಳಕೆಯಲ್ಲಿರುವ ವಾಹಕ ಪ್ಲಾಸ್ಮಿಡ್‌ಗಳು. ಈ ವಾಹಕಗಳನ್ನು ಹೊಂದಿದ ಬ್ಯಾಕ್ಟೀರಿಯವನ್ನು ಆತಿಥೇಯ ಜೀವಿ ಅಥವಾ ಪೋಷಕ (ಹೋಸ್ಟ್) ಎನ್ನುತ್ತಾರೆ. ಪೋಷಕ ಬ್ಯಾಕ್ಟೀರಿಯಗಳನ್ನು ಸೂಕ್ತ ಪೋಷಣಾ ಮಾಧ್ಯಮದಲ್ಲಿ ಬೆಳೆಸಲಾಗುತ್ತದೆ. ಈ ಬ್ಯಾಕ್ಟೀರಿಯಗಳು ಸಾಧಾರಣವಾಗಿ ಇಪ್ಪತ್ತು ನಿಮಿಷಕ್ಕೆ ಒಮ್ಮೆ ವಿಭಜನೆ ಹೊಂದುತ್ತವೆ. ವಿಭಜನೆ ಹೊಂದಿ ತಯಾರಾಗುವ ಸಾವಿರಾರು ಬ್ಯಾಕ್ಟೀರಿಯ ಕೋಶಗಳಲ್ಲೂ ನಾವು ಸೇರಿಸಿದ ಪ್ಲಾಸ್ಮಿಡ್‌ಗಳ ತದ್ರೂಪ ಇರುತ್ತವೆ. ಹೀಗೆ ತಯಾರಿಸಲ್ಪಡುವ ಆರ್-ಡಿಎನ್ಎಗಳನ್ನು ಹೊಂದಿದ ಪ್ಲಾಸ್ಮಿಡ್‌ಗಳ ತಯಾರಿಕೆಯ ಪ್ರಕ್ರಿಯೆಗೆ ಕ್ಲೋನಿಂಗ್ ಎಂದು ಹೆಸರು. ಈ ಆರ್-ಡಿಎನ್ಎ ಪ್ಲಾಸ್ಮಿಡ್‌ಗಳು ತದ್ರೂಪಿಗಳು. ಬ್ಯಾಕ್ಟೀರಿಯದ ಮತ್ತು ಆರ್-ಡಿಎನ್ಎ ಯಲ್ಲಿರುವ ಜೀನ್‌ಗಳು ತಮ್ಮ ತಮ್ಮ ಪ್ರೊಟೀನ್‌ಗಳನ್ನು ಉತ್ಪಾದಿಸುತ್ತವೆ. ಪ್ಲಾಸ್ಮಿಡ್‌ಗಳ ಮಧ್ಯೆ ಸೇರಿಸಲ್ಪಟ್ಟಿರುವ ಇನ್ಸುಲಿನ್ ತಯಾರಿಸುವ ಜೀನ್ ಸಹ ಇನ್ಸುಲಿನ್ ಅನ್ನು ಉತ್ಪತ್ತಿಮಾಡುತ್ತದೆ. ಇನ್ಸುಲಿನ್ ಪ್ರೊಟೀನುಗಳನ್ನು ವಿವಿಧ ವಿಧಾನಗಳಿಂದ ಶುದ್ಧೀಕರಿಸಲಾಗುತ್ತದೆ.

ಇದೇ ತಂತ್ರಜ್ಞಾನದಿಂದ ಮಾನವನಿಗೆ ಬೇಕಾದ ಯಾವುದೇ ಜೀನ್ ಅನ್ನಾದರೂ ಪ್ಲಾಸ್ಮಿಡ್‌ಗಳಲ್ಲಿ ಸೇರಿಸಿ ಅಗತ್ಯವಿರುವ ಪ್ರೊಟೀನ್ ಅನ್ನು ಉತ್ಪಾದಿಸಬಹುದು. ಇಂದು ಮಾರುಕಟ್ಟೆಯಲ್ಲಿ ದೊರೆಯುವ ಬಹುತೇಕ ಕಿಣ್ವಗಳು ಮತ್ತು ಹಾರ್ಮೋನುಗಳು ಈ ಜೈವಿಕ ತಂತ್ರಜ್ಞಾನ ಪದ್ಧತಿಯನ್ನನುಸರಿಸಿಯೇ ಪಡೆಯಲಾದ ಉತ್ಪನ್ನಗಳು. ಈಗ ಪ್ಲಾಸ್ಮಿಡ್‌ಗಳಲ್ಲದೆ ಬೇರೆ ಬೇರೆ ವಾಹಕಗಳನ್ನು ಕೂಡ ಬಳಸಲಾಗುತ್ತದೆ. ಆದರೆ ಈ ತಂತ್ರಜ್ಞಾನದ ಅಭಿವೃದ್ಧಿಯ ಮೊದಲ ಹಂತಗಳಲ್ಲಿ ಪ್ಲಾಸ್ಮಿಡ್‌ಗಳು ವಹಿಸಿದ ಪಾತ್ರ ಮಹತ್ತರವಾದದ್ದು. (ಎಸ್.ಪಿ.ವಿ)

**ಪ್ಲಿಯೊಸೀನ್ ಸ್ತೋಮ:** ಚತುರ್ಥ ಕಾಲದ (ಸೀನೋಜೋಯಿಕ್ ಕಲ್ಪದ) ಐದು ಪ್ರಧಾನ ವಿಭಾಗಗಳ ಪೈಕಿ ಅತ್ಯಂತ ತರುಣವಾದ ಕಲ್ಪ. ಈ ಸ್ತೋಮವನ್ನು ಚಾರಲ್ಸ್ ಲಯಲ್ 1833ರಲ್ಲಿ ವ್ಯಾಖ್ಯಿಸಿದ. ಪ್ಲಿಯೊಸೀನ್ ಎಂದರೆ ಮಿಯೊಸೀನ್ ಕಾಲಕ್ಕಿಂತ ಈ ಕಾಲದಲ್ಲಿ ಈಗ ಜೀವಿಸಿರುವ ಪ್ರಭೇದಗಳ ಹೆಚ್ಚು ಪ್ರಾಣಿವರ್ಗದಿಂದ ಕೂಡಿತ್ತು ಎಂದರ್ಥ. ಯೂರೋಪ್ ಖಂಡದಲ್ಲಿ ಈ ಯುಗದ ಸಸ್ಯವರ್ಗ ಮಿಯೊಸೀನ್ ಕಾಲದ ಉಷ್ಣವಲಯದ ಸಸ್ಯವರ್ಗ ಮತ್ತು ಈಗಿನ ಸಮಶೀತೋಷ್ಣ ವಲಯದ ಸಸ್ಯವರ್ಗಗಳ ಮಧ್ಯಾವಸ್ಥೆಯದಾಗಿತ್ತು. ಆಂಗ್ಲೊ-ಫ್ರಾಂಕ್-ಬೆಲ್ಜಿಯನ್ ನಿಕ್ಷೇಪ ಪ್ರದೇಶದಿಂದ ಹಿಂಜರಿದಿದ್ದ ಸಮುದ್ರ ಈ ಕಾಲದಲ್ಲಿ ಹಿಂತಿರುಗಿ ಇಂಗ್ಲೆಂಡಿನ ದಕ್ಷಿಣ ಮತ್ತು ಆಗ್ನೇಯದ ಪ್ರದೇಶಗಳನ್ನು ಆಕ್ರಮಿಸಿಕೊಂಡು ಹಾಲೆಂಡ್ ಮತ್ತು ಬೆಲ್ಜಿಯಮ್‌ಗಳ ಮೇಲೆ ಪ್ರಸರಿಸಿ, ಫ್ರಾನ್ಸಿನ ಉತ್ತರಭಾಗದ ಸ್ವಲ್ಪಪ್ರದೇಶಕ್ಕೂ ವಿಸ್ತರಿಸಿತು. ಮೆಡಿಟರೇನಿಯನ್ ಸಮುದ್ರ ಪಶ್ಚಿಮಕ್ಕೆ ಇಟಲಿಯ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಂಡು ರಿವೆರ ಮತ್ತು ರೋಹೀನ್ ಕಣಿವೆಗಳಿಗೂ ನುಗ್ಗಿತು. ಇವಲ್ಲದೆ ಕೆಲವು ಸ್ಥಳಗಳಲ್ಲಿ ಸರೋವರ ಮತ್ತು ನದೀ ನಿಕ್ಷೇಪಗಳೂ ರೂಪುಗೊಂಡಿವೆ. ಈ ನಿಕ್ಷೇಪಗಳಲ್ಲಿ ಸ್ತನಿಗಳ ಮತ್ತು ಭೂಸಸ್ಯಗಳ ಅವಶೇಷಗಳೂ ಸಿಕ್ಕಿವೆ. ಸಾಮಾನ್ಯವಾಗಿ ಪ್ಲಿಯೊಸೀನ್ ಸ್ತೋಮವನ್ನು ಪ್ಲೈಸಾನ್ಸಿಯನ್, ಆಸ್ಟಿಯನ್ ಮತ್ತು ಸಿಸಿಲಿಯನ್ ಎಂಬ ಮೂರು ಶಿಲಾಭಾಗಗಳಾಗಿ ವಿಭಜಿಸಲಾಗಿದೆ.

ಇಟಲಿಯಲ್ಲಿ ಪ್ಲಿಯೊಸೀನ್ ಸ್ತೋಮ ಸಂಪೂರ್ಣವಾಗಿ ಸಾಗರನಿಕ್ಷೇಪಗಳಿಂದ ಕೂಡಿರುವುದರಿಂದಲೂ ಅತ್ಯುತ್ತಮವಾಗಿ ರೂಪುಗೊಂಡಿರುವುದರಿಂದಲೂ ಈ ಸ್ತೋಮವನ್ನು ಮಾದರಿಯಾಗಿ ಇಟ್ಟುಕೊಳ್ಳಲಾಗಿದೆ. ಇದರ ಅತ್ಯಂತ ಕೆಳಭಾಗ ಮರಳು ಮತ್ತು ಜೇಡು ಮಿಶ್ರ ಮಾರಲ್ ಶಿಲೆಗಳು ಮತ್ತು ಪೆಂಟೆ ಶಿಲೆಗಳಿಂದ ಕೂಡಿದೆ. ಇವುಗಳ ಮಧ್ಯೆ ಜಿಪ್ಸಮ್ ಸುಣ್ಣಶಿಲೆ ಡಾಲೊಮೈಟ್ ಶಿಲೆಗಳ ಮತ್ತು ಲಿಗ್ನೈಟ್ ಕಲ್ಲಿದ್ದಲುಗಳ ಪದರಗಳಿವೆ. ಮೊದಲನೆಯವನ್ನು ಮೆಸ್ಸಿನಿಯನ್ ಶಿಲಾವರ್ಗವೆಂದೂ ಎರಡನೆಯವನ್ನು ಕಾಂಗಯ ಶಿಲಾವರ್ಗವೆಂದೂ ಕರೆಯಲಾಗಿದೆ. ನಿಕ್ಷೇಪ ಪ್ರದೇಶ ಸಮುದ್ರದಿಂದ ಪದೇ ಪದೇ ಬೇರ್ಪಟ್ಟು ಪುನಸ್ಸಂಪರ್ಕ ಹೊಂದಿರುವುದನ್ನು ಈ ಶಿಲಾರಾಶಿ ಸೂಚಿಸುತ್ತದೆ. ಈ ಶಿಲೆಗಳಲ್ಲಿ ಪೆಕ್ಟೆನ್, ಟರಿಟೆಲ್ಲ, ವೀನಸ್ ಸೆರಿತಿಯಮುಗಳೂ ವಾಮ್ ಗಿಡಗಳು ಅವಶೇಷಗಳೂ ಇವೆ. ಇವುಗಳಿಗಿಂತ ಸ್ವಲ್ಪ ಕಿರಿದಾದ ನಿಕ್ಷೇಪಗಳನ್ನು ಪ್ಲೈಸಾನ್ಸಿಯನ್ ಶಿಲಾಶ್ರೇಣಿ ಎಂದು ಕರೆಯಲಾಗಿದೆ. ಈ ನಿಕ್ಷೇಪಗಳು ಮಾರಲ್ ಮತ್ತು ಜೇಡುಗಳಿಂದ ಆಗಿದೆ. ಟಸ್ಕನಿಯಲ್ಲಿರುವ ಈ ಕಾಲದ ನಿಕ್ಷೇಪಗಳಲ್ಲಿ ಸ್ತನಿಗಳ ಅವಶೇಷ ಸಂಗ್ರಹ ಉಂಟು. ಅವುಗಳಲ್ಲಿ ಹಿಪ್ಪೇರಿಯನ್ ಕುದುರೆ, ಸುಸ್ ಎಂಬ ಹಂದಿ, ಸಾರಂಗ, ತಪೀರ್ ಮತ್ತು ಸಮ್ನೊಪಿತಿಕಸ್ ಕಪಿ ಮುಂತಾದವು ಮುಖ್ಯವಾದವು. ಅಥೆನ್ಸ್ ಮತ್ತು ಮರತಾನ್‌ಗಳಿಗೆ ಮಧ್ಯೆ ಇರುವ ಪ್ರದೇಶದಲ್ಲೇ ಕೆಂಪು ಜೇಡು ಮತ್ತು ನೊರಜು ನಿಕ್ಷೇಪಗಳು ಪುನರಾವೃತ್ತಿಗೊಂಡಿವೆ. ಇವುಗಳಿಗೆ ಪಿಕರ್ಮಿ ಶಿಲೆಗಳೆಂದು ಹೆಸರು. ಈ ಶಿಲೆಗಳಲ್ಲಿ ಸ್ತನಿಗಳ ಅವಶೇಷಗಳ ಅಪೂರ್ವ ಸಂಗ್ರಹ ಉಂಟು. ಅವೆಲ್ಲ ದೈತ್ಯಾಕಾರಿಗಳೇ, ಚಿಕ್ಕವು ಬಲು ಅಪರೂಪ, ಅವುಗಳಲ್ಲಿ ಸಾಕಷ್ಟು ಸಂಯೋಜಿತ ಜೀವಿಗಳೂ ಇವೆ. ಮೀಸೊಪಿತಿಕಸ್ (ಕಪಿ) ಫೆಲಿಸ್‌ನ ಅನೇಕ ಬಗೆಗಳು ಮತ್ತು ಇತರ ಮಾಂಸಾಹಾರಿಗಳು, ಮ್ಯಾಸ್ಟಡಾನ್ ಮತ್ತು ಡೈನೋಥೀರಿಯಮ್ (ಆನೆಗಳು), ಖಡ್ಗಮೃಗ, ಹಿಪ್ಪೇರಿಯನ್ (ಕುದುರೆ), ಸುಸ್ (ಹಂದಿ) ಮತ್ತು ಸಾರಂಗಗಳು ಮುಖ್ಯವಾದುವು. ಈ ಸ್ತನಿಗಳ ಆಧಾರದ ಮೇಲೆ ಪಿಕರ್ಮಿಶಿಲೆಗಳು ಮಿಯೊಸೀನ್ ಅಂತ್ಯಕಾಲಕ್ಕೆ ಸೇರಿದವೆಂದು ನಿರ್ಧರಿಸಲಾಗಿದೆ. ಆದರೆ ಇವು ಪ್ಲಿಯೊಸೀನ್ ಆದಿಕಾಲದ ಮೃದ್ವಂಗಿಗಳ ಅವಶೇಷಗಳನ್ನೊಳಗೊಂಡ ಸಾಗರ ನಿಕ್ಷೇಪಗಳ ಮೇಲೆ ಸಂಚಯಗೊಂಡಿವೆ. ಆದ್ದರಿಂದ ಇವನ್ನು ಪ್ಲಿಯೊಸೀನ್ ಸ್ತೋಮದ ಕೆಳಭಾಗಕ್ಕೆ ಸೇರಿಸಲಾಗಿದೆ.

ಮಧ್ಯಭಾಗ ನೀಲಿ ಮಾರಲ್ ಶಿಲೆಗಳು ಮತ್ತು ಆಳವಿಲ್ಲದ ಕಡೆ ಸಂಚಯಗೊಂಡ ಹಳದಿ ಮರಳುಗಳಿಂದ ಕೂಡಿದ ನಿಕ್ಷೇಪಗಳಿಗೆ ಆಸ್ಟಿಯನ್ ಶ್ರೇಣಿ ಎಂದು ಹೆಸರು. ಇವುಗಳಲ್ಲಿ ಸಿಪ್ರಿನ ಐಲ್ಯಾಂಡಿಕ, ಡೆಂಟಲಿಯಮ್ ಮತ್ತು ನಾಟಿಲಸ್‌ಗಳಿವೆ. ಈ ಶಿಲೆಗಳು ನಿಕ್ಷೇಪಗೊಳ್ಳುತ್ತಿದ್ದಾಗಲೇ ವೆಸುವಿಯಸ್ ಮತ್ತು ಎಟ್ನ ಜ್ವಾಲಾಮುಖಿಗಳು

ಸಮುದ್ರದಡಿಯಲ್ಲಿಯೇ ಶಿಲಾರಸವನ್ನು ಉಗುಳಲಾರಂಭಿಸಿದುವು. ಪ್ಲಿಯೊಸೀನ್ ಸ್ತೋಮದ ಮೇಲ್ಭಾಗ ಸಿಸಿಲಿ ದ್ವೀಪದಲ್ಲಿ ಉತ್ತಮವಾಗಿ ರೂಪುಗೊಂಡು ಸುಮಾರು ೬೧೦ ಮೀಟರುಗಳಷ್ಟು ದಪ್ಪವಿದೆ. ಆದ್ದರಿಂದಲೇ ಇದನ್ನು ಸಿಸಿಲಿಯನ್ ಶಿಲಾಶ್ರೇಣಿ ಎಂದು ಹೆಸರಿಸಲಾಗಿದೆ. ಇಟಲಿಯಲ್ಲಿ ಪ್ಲಿಯೊಸೀನ್ ಮೇಲ್ಭಾಗದ ಸಾಗರ ನಿಕ್ಷೇಪಗಳು ಅಲ್ಲಲ್ಲಿ ವಿರಳವಾಗಿ ಸಂಚಯಗೊಂಡಿವೆ. ಇವನ್ನು ಕ್ಯಾಲಬ್ರೇಯನ್ ಶಿಲೆಗಳೆಂದು ಕರೆಯಲಾಗಿದೆ. ಆದರೆ ಸರೋವರ ಮತ್ತು ನದಿ ನಿಕ್ಷೇಪಗಳು ಹೆಚ್ಚಾಗಿವೆ. ಈ ನಿಕ್ಷೇಪಗಳಲ್ಲಿ ಭೂಸಸ್ಯಗಳು, ಕುದುರೆ, ಆನೆ, ಹಯ, ಕರಡಿ, ಒಂಟೆ, ಹಿಪ್ಪೊಪೊಟಾಮಸ್ (ನೀರ್ಗುದುರೆ) ಮೊದಲಾದ ಪ್ರಾಣಿಗಳ ಅವಶೇಷಗಳಿವೆ. ಈ ನಿಕ್ಷೇಪಗಳಿಗೆ ಅರ್ನೂಸಿಯನ್ ಅಥವಾ ವಿಲ್ಲಫ್ರಾಂಕಿಯನ್ ಶ್ರೇಣಿಗಳೆಂದು ಹೆಸರು.

ಇಂಗ್ಲೆಂಡಿನಲ್ಲಿ ಪ್ಲಿಯೊಸೀನ್ ಸ್ತೋಮ ಪೂರ್ವ ಆಂಗ್ಲಿಕದಲ್ಲಿ ಚೆನ್ನಾಗಿ ರೂಪುಗೊಂಡಿದೆ. ನಾನಾ ಶಿಲೆಗಳ ಶಿಥಿಲೀಕರಣದಿಂದ ಬಂದ ಗುಂಡುಗಳಿಂದ ಆದ ಪೆಂಟೆಶಿಲೆ ಮತ್ತು ಕಬ್ಬಿಣಾಂಶದಿಂದ ಕೂಡಿದ ಮರಳು ಶಿಲೆಗಳು ಇಲ್ಲಿವೆ. ಪೆಂಟೆಶಿಲೆಯ ಗುಂಡುಗಳ ಮಧ್ಯೆ ಮೃದ್ವಂಗಿಗಳ ಚಿಪ್ಪುಗಳಿವೆ. ಪೆಂಟೆ ಶಿಲೆಯಲ್ಲಿ ಭೂವಾಸಿಗಳ ಮತ್ತು ಸಾಗರವಾಸಿಗಳ ಎಲುಬುಗಳು ಮತ್ತು ಹಲ್ಲುಗಳು ಇವೆ. ಈ ಅವಶೇಷಗಳು ಪ್ಲಿಯೊಸೀನ್ ಯುಗದ ಪೂರ್ವದ ನಾನಾ ಯುಗಗಳ ಶಿಲೆಗಳಿಂದ ಬಂದವು. ಇವುಗಳಿಗೆ ಬಾಕ್ಸ್‌ಸ್ಟೋನ್ಸ್ ಎಂದು ಹೆಸರು. ಇವುಗಳ ಮೇಲಿರುವ ಮರಳು ಶಿಲೆಗಳಲ್ಲಿ ಪಳೆಯುಳಿಕೆಗಳಿಲ್ಲ. ಆದರೆ ಲೆನ್‌ಹ್ಯಾಮ್ ಹತ್ತಿರ ಅರ್ಕ ಡೆಲುಮ್ಯೆ, ಲಕಾರ್ಡಿಯಮ್, ಪೇಪಿಲೋಸಮ್, ಕ್ಯಪುಲೇರಿಯ ಮುಂತಾದ ಅವಶೇಷಗಳನ್ನು ಹೊಂದಿವೆ. ಈ ಶಿಲೆಗಳು ಹಾಲೆಂಡ್ ಮತ್ತು ಬೆಲ್ಜಿಯಮ್ ಪ್ರದೇಶಗಳ ಡಿಯಸ್ಟಿಯನ್ ಶಿಲಾವಿಭಾಗಕ್ಕೆ ಸಮವೆನಿಸಿವೆ.

ಮಧ್ಯಭಾಗ ಕರಲಿಯನ್ ಕ್ರ್ಯಾಗ್ ಮತ್ತು ಕೆಂಪು ಕ್ರ್ಯಾಗ್ ಸುಣ್ಣಮಿಶ್ರ ಮರಳುಗಳಿಂದ ಆಗಿದೆ. ಇವುಗಳಲ್ಲಿ ಬ್ರಯಜೋವ ಮತ್ತು ಮೃದ್ವಂಗಿಗಳ ಅವಶೇಷಗಳಿವೆ. ಅಲ್ವಿಯೊಲೇರಿಯ ಮತ್ತು ಪ್ಯಾಸಿಕ್ಯುಲೇರಿಯ ಜಾತಿಯ ಬ್ರಯೊಜೋವಗಳು ಈ ಶಿಲೆಗಳ ವಿಶಿಷ್ಟ ಮತ್ತು ವಿಶೇಷ ಅವಶೇಷಗಳು. ವಲ್ಯುಟ ಲ್ಯಾಂಬರ್ಟಿ, ಪೈರುಲ ರೆಟಿಕ್ಯುಲೇರಿಯ ಮತ್ತು ಕಾರ್ಡಿಟಸೆನಿಲಿಸ್‌ಗಳು ಮುಖ್ಯಮೃದ್ವಂಗಿಗಳು. ಕರಲಿಯನ್ ಕ್ರ್ಯಾಗ್ ಮತ್ತು ಕೆಂಪು ಕ್ರ್ಯಾಗ್‌ಗಳ ಮಧ್ಯೆ ಸ್ಪಷ್ಟ ವ್ಯತ್ಯಾಸಗಳಿವೆ. ಕೆಂಪು ಕ್ರ್ಯಾಗ್ ಕೆಂಪು ಅಥವಾ ಕಂದು ಬಣ್ಣದ ಕಬ್ಬಿಣಾಂಶದ ಮರಳುಗಳಿಂದ ಆಗಿದೆ. ಇವನ್ನು ವಾಲ್ಟೋನಿಯನ್, ನ್ಯೂಬ್ರೌನಿಯನ್ ಮತ್ತು ಬಟ್ಲೆಯನ್ ಎಂಬ ಮೂರು ಭಾಗಗಳಾಗಿ ವಿಭಜಿಸಲಾಗಿದೆ. ವಾಲ್ಟೋನಿಯನ್ನಿನಲ್ಲಿ ದಕ್ಷಿಣ ಪ್ರಾಂತದ ಪಳೆಯುಳಿಕೆಗಳು ನ್ಯೂಬ್ರೌನಿಯನ್ ಮತ್ತು ಬಟ್ಲೆಯನ್‌ಗಳಲ್ಲಿ ಉತ್ತರ ಪ್ರಾಂತದ ಪಳೆಯುಳಿಕೆಗಳಿವೆ. ಕರಲಿಯನ್ ಮತ್ತು ಕೆಂಪು ಕ್ಯಾಗ್‌ಗಳೆರಡರ ಎಲ್ಲ ಭಾಗಗಳೂ ಅವುಗಳಲ್ಲಿರುವ ಪಳೆಯುಳಿಕೆಗಳು ಹಾಲೆಂಡ್–ಬೆಲ್ಜಿಯಮ್ ಪ್ರದೇಶದಲ್ಲಿವೆ.

ಪ್ಲಿಯೊಸೀನ್ ಮೇಲ್ಭಾಗ ಹಾಲೆಂಡ್–ಬೆಲ್ಜಿಯಮ್ ಪ್ರದೇಶದಲ್ಲಿ ರೂಪುಗೊಂಡಿಲ್ಲ. ಇಂಗ್ಲೆಂಡಿನಲ್ಲಿ ಈ ಭಾಗ ಸಾಗರ ನಿಕ್ಷೇಪ ಮತ್ತು ಸಾಗರ ಅಳಿವೆ ನಿಕ್ಷೇಪಗಳ ಪುನರಾವೃತ್ತಿಯಿಂದ ಕೂಡಿದೆ. ಈ ನಿಕ್ಷೇಪಗಳನ್ನು (ಆರೋಹಣ ಕ್ರಮದಲ್ಲಿ) ನಾರ್ವಿಕ್ ಕ್ಯಾಗ್, ಚಿಲ್ಲೆಸ್ ಫೋರ್ಡ್ ಪದರುಗಳು, ವೇಬಾರನ್ ಪದರುಗಳು ಮತ್ತು ಕ್ರೋಮರ್ ವನಪದರುಗಳೆಂಬ ನಾಲ್ಕು ಭಾಗಗಳಾಗಿ ವಿಭಜಿಸಲಾಗಿದೆ. ವಾಲ್ಟೋನಿಯನ್ ಭಾಗ ಮತ್ತು ಚಿಲ್ಲೆಸ್‌ಫೋರ್ಡ್ ಭಾಗಗಳು ಮರಳು, ನೊರಜು ಮತ್ತು ಜೇಡುಗಳಿಂದ ಕೂಡಿವೆ. ಅವುಗಳಲ್ಲಿ ಈಗ ಜೀವಿಸುತ್ತಿರುವ ಪ್ರಾಣಿ ಪ್ರಕಾರಗಳೇ ಹೆಚ್ಚಾಗಿವೆ. ಆದರೆ ಮೊದಲನೆಯದು ಸಾಗರ ನಿಕ್ಷೇಪ, ಎರಡನೆಯದು ಸಮುದ್ರ ಅಳಿವೆ ನಿಕ್ಷೇಪ, ವೇಬಾರನ್ ಸಹ ಸಾಗರ ನಿಕ್ಷೇಪ ಅದರ ಕ್ರೋಮರ್ ವನ ನಿಕ್ಷೇಪ ಸರೋವರ ನಿಕ್ಷೇಪಗಳು.

ಉತ್ತರ ಅಮೆರಿಕ : ಕಾರ್ಡಿಲೆರಾನ್ ಪ್ರದೇಶದಲ್ಲಿ ಜ್ವಾಲಾಮುಖಿಗಳ ಕಾರ್ಯಾಚರಣೆ ಮಿಯೊಸೀನ್ ಕಾಲದಿಂದ ಪ್ಲೀಸ್ಟೊಸೀನ್ ಕಾಲದ ತನಕ ಮುಂದುವರಿಯಿತು. ಆದರೆ ಜ್ವಾಲಾಮುಖಿ ಶಿಲಾಪದರುಗಳ ಮಧ್ಯೆ ಜಲಜ ಶಿಲಾಪದರುಗಳ ಸಂಚಯನವೂ ಆಗಿದೆ. ರಾಕಿ ಪರ್ವತಗಳ ಪೂರ್ವಕ್ಕಿರುವ ವಿಶಾಲ ಮೈದಾನದಲ್ಲಿ ಮಿಯೊಸೀನ್ ನಿಕ್ಷೇಪಗಳ ಮೇಲೆ ಅದೇ ರೀತಿಯ ನಿಕ್ಷೇಪಗಳು ಸಂಚಯನಗೊಂಡಿವೆ. ಆದರೆ ಇವು ಗಟ್ಟಿಯಾಗಿರದೆ ಹುಡಿ ಹುಡಿಯಾಗಿರುತ್ತವೆ. ಈ ನಿಕ್ಷೇಪಗಳಿಗೆ ಒಗೆಲ್ಲ ಶಿಲಾಗುಂಪು ಎಂದು ಹೆಸರು. ಕೊಲಂಬಿಯಾ ಪ್ರಸ್ಥಭೂಮಿಗೆ ದಕ್ಷಿಣ ಮತ್ತು ಪೂರ್ವದಲ್ಲಿ ಒಂದು ವಿಶಾಲವಾದ ನಿಕ್ಷೇಪ ಪ್ರದೇಶವಿತ್ತು. ಇಲ್ಲಿ ಜ್ವಾಲಾಮುಖಿ ಶಿಲೆಗಳೇ ಅಲ್ಲದೆ ಇಲ್ಲಿಯ ಉಪ್ಪುನೀರಿನ ಸರೋವರಗಳ ಇಂಗುವಿಕೆಯಿಂದ ಲವಣ ನಿಕ್ಷೇಪಗಳೂ ಸಂಚಯನಗೊಂಡಿವೆ. ಫೆಸಿಫಿಕ್ ತೀರಪ್ರದೇಶಗಳಾದ ಲಾಸ್‌ಎಂಜಲೀಸ್ ಮತ್ತು ವೆಂಟುರ ಪ್ರದೇಶಗಳಲ್ಲಿ ಸಾಗರ ನಿಕ್ಷೇಪಗಳ ಸಂಚಯನ ಮುಂದುವರಿಯಿತು. ಆದರೆ ಸ್ಯಾನ್‌ಜುವ ಪ್ರದೇಶದಲ್ಲಿ ಪ್ಲಿಯೊಸೀನ್ ಅಂತ್ಯಕಾಲದಲ್ಲಿ ಸಾಗರ ನಿಕ್ಷೇಪಗಳ ಮೇಲೆ ಭೂ ನಿಕ್ಷೇಪಗಳು ಸಂಚಯನಗೊಂಡಿವೆ. ಅಟ್ಲಾಂಟಿಕ್ ತೀರಪ್ರದೇಶಗಳಲ್ಲಿ ಸಾಗರ ನಿಕ್ಷೇಪಗಳು ಮತ್ತು ಭೂ ನಿಕ್ಷೇಪಗಳು ಪರಸ್ಪರ ಹೆಣೆದುಕೊಂಡಿವೆ. ಈ ನಿಕ್ಷೇಪಗಳು ೬೦ ಮೀಟರುಗಳಷ್ಟು ದಪ್ಪವಿದ್ದು ಅಲ್ಲಲ್ಲಿ ಹೇರಳವಾದ ಪಳೆಯುಳಿಕೆಗಳಿವೆ. ಲೌಸಿಯಾನ ಕೊಲ್ಲಿ ಪ್ರದೇಶ ಮತ್ತು ಟೆಕ್ಸಾಸಿನ ವಾಯವ್ಯ ಭಾಗದಲ್ಲಿ ಇರುವ ತೈಲಾಶಯಗಳು ಮಿಯೊಸೀನ್‌ಸೋಮ ಮತ್ತು ಪ್ಲಿಯೊಸೀನ್‌ಸ್ತೋಮದ ಕೆಳಭಾಗದಲ್ಲಿವೆ.

ಇಂಡಿಯ : ಶಿವಾಲಿಕ್ ಸಮುದಾಯದ ಮಧ್ಯ ಮತ್ತು ಮೇಲ್ಭಾಗಗಳು ಪ್ಲಿಯೊಸೀನ್ ಕಾಲಕ್ಕೆ ಸೇರಿದವು.

ಪ್ಲಿಯೊಸೀನ್ ಯುಗದ ಸ್ತನಿಗಳು : ಆನೆ, ಕುದುರೆ, ಎತ್ತು ಮತ್ತು ದೊಡ್ಡ ಜಿಂಕೆಗಳ ಉದಯದಿಂದ ಪ್ಲಿಯೊಸೀನ್ ಯುಗದ ವೈಶಿಷ್ಟ್ಯ ಹಾಗಿದ್ದರೂ ಹಿಪ್ಪೇರಿಯಾನ್ ಮತ್ತು ಪ್ಲಿಯೊಹಿಪ್ಪಸ್ ಕುದುರೆಗಳೇ ಈ ಕಾಲದ ಮರ್ಕಿಹಿಪ್ಪಸಿಗಿಂತ ಹೆಚ್ಚು ಪ್ರಮುಖ ಸ್ತನಿಗಳು. ಇವೆರಡು ಜಾತಿಯ ಕುದುರೆಗಳ ತಲೆಬುರುಡೆ ಮತ್ತು ಹಲ್ಲುಗಳ ವಿಕಾಸದಲ್ಲಿ ಮರ್ಕಿಹಿಪ್ಪಸಿಗಿಂತ ಹೆಚ್ಚು ಪ್ರಗತಿ ಹೊಂದಿದ್ದುವು. ಹಿಪ್ಪೇರಿಯಾನಿಗೆ ಮೂರು ಗೊರಸುಗಳಿದ್ದವು. ಪ್ಲಿಯೊಹಿಪ್ಪಸ್ ಈ ದೆಸೆಯಲ್ಲಿಯೂ ಪ್ರಗತಿ ಸಾಧಿಸಿ ಒಂದೇ ಗೊರಸಿನ ಕುದುರೆಯಾಗಿತ್ತು. ಪಕ್ಕದ ಎರಡು ಗೊರಸುಗಳು ಬಲು ಚಿಕ್ಕವಾಗಿದ್ದು, ಹುದುಗಿಕೊಂಡು ಅಗೋಚರವಾಗಿದ್ದುವು. ಖಡ್ಗಮೃಗ ಮತ್ತು ಒಂಟೆಗಳ ಹೇರಳತನ ಮುಂದುವರಿದಿತ್ತು. ಓರಿಯೊಡಾನುಗಳು ಪ್ಲಿಯೊಸೀನ್ ಯುಗ ಅಂತ್ಯಗೊಳ್ಳುವ ಮೊದಲೇ ಗತವಂಶಿಗಳಾದುವು. ದನ, ಕುರಿ, ಮೇಕೆ, ಸಾರಂಗ, ಕಾಡೆಮ್ಮೆ ಮೊದಲಾದವನ್ನು ಒಳಗೊಂಡ ಬೋವಿಡೆ ಸ್ತನಿಗಳು ಮಿಯೊಸೀನ್ ಅಂತ್ಯಕಾಲದಲ್ಲಿ ಉದಯಿಸಿದರೂ ಬಲುಬೇಗನೆ ವೃದ್ಧಿಹೊಂದಿ ವಿವಿಧ ಜಾತಿಗಳಾಗಿ ವರ್ಗೀಕರಣಗೊಂಡವು. ತೋಳಗಳು, ಕಚ್ಚುವ ಬೆಕ್ಕುಗಳು, ಈ ಕಾಲದ ಮುಖ್ಯ ಮಾಂಸಾಹಾರಿಗಳು. (ಡಿ.ಆರ್.)

**ಪ್ಲೀಸ್ಟೊಸೀನ್ ಯುಗ:** ತೃತೀಯ ಜೀವಕಲ್ಪವಾದ ಮೇಲೆ ಆರಂಭವಾದ ಯುಗ. ಇದನ್ನು ಚತುರ್ಥ ಜೀವಕಲ್ಪಕ್ಕೆ ಸೇರಿಸಲಾಗಿದೆ. ಇದರ ಕಾಲ ಅಲ್ಪಾವಧಿಯದಾದರೂ ಈ ಕಾಲದಲ್ಲೇ ಇಂದು ಕಾಣುವ ಭೂಮಿಯ ಮೇಲ್ಮೈಲಕ್ಷಣಗಳು ರೂಪುಗೊಂಡವು. ಅಲ್ಲದೆ ಈಗ ಕಾಣಬರುತ್ತಿರುವ ಪ್ರಾಣಿ ಮತ್ತು ಸಸ್ಯವರ್ಗಗಳ ಹಂಚಿಕೆಯೂ ಈ ಯುಗದ ಮೊದಲ ಭಾಗದಲ್ಲೇ ಆಯಿತು. ಈ ಕಾಲದ ಶಿಲಾಸಮುದಾಯದ ಒಟ್ಟು ಸಲೆ 4,03,336 ಚದರ ಕಿಮೀ.ಗಳೆಂದು ಅಂದಾಜು ಮಾಡಲಾಗಿದೆ. ಯುಗದ ಆರಂಭದಲ್ಲಿಯೇ ಉತ್ತರಗೋಳಾರ್ಧದಲ್ಲಿ ತೀವ್ರ ಶೀತಲ ವಾಯುಗುಣ ತಲೆದೋರಿತು. ಈಗ ಸಮಶೀತೋಷ್ಣ ಹವೆಯುಳ್ಳ ಹಲವು ಪ್ರದೇಶಗಳಲ್ಲಿ ಅತಿಶೀತ ವಾಯುಗುಣವಿತ್ತೆಂಬುದಕ್ಕೆ ಈ ಯುಗಕ್ಕೆ ಸೇರಿದ ಶಿಲೆಗಳಲ್ಲಿ ಖಚಿತ ಆಧಾರಗಳಿವೆ. ಅನೇಕ ಶಿಲೆಗಳಲ್ಲಿ ಹಿಮಾಶ್ಮ ಪ್ರವಾಹದ ಲಕ್ಷಣಗಳಿದ್ದು ಅಂದು ನಡೆದುಹೋದ ಹಿಮಯುಗದ ಅಚ್ಚಳಿಯದ ಮುದ್ರೆಯನ್ನು ಸುಲಭವಾಗಿ ಗುರುತಿಸಬಹುದು. ಆದ್ದರಿಂದಲೇ ಈ ಯುಗವನ್ನು ಮಹಾ ಹಿಮಯುಗ ಎಂದು ಕರೆಯಲಾಗಿದೆ. ತೃತೀಯ ಜೀವಕಲ್ಪದಲ್ಲಿದ್ದ ಹಿತಕರ ವಾಯುಗುಣ ಈ ವೇಳೆಗಾಗಲೇ ಇಳಿಮುಖವಾಗಿ ಹವೆ ಅತಿಶೀತಲವಾಯಿತು. ಇಂಥ ಶೈತ್ಯಕ್ಕೆ ನಿರ್ದಿಷ್ಟ ಕಾರಣಗಳೇನೆಂಬುದು ಸ್ಪಷ್ಟಗೊಂಡಿಲ್ಲ. ಭೂವಿಜ್ಞಾನಿಗಳಲ್ಲಿ ಈ ವಿಷಯದ ಬಗ್ಗೆ ಒಮ್ಮತವಿಲ್ಲ. ಅಂತೂ ಹಿಮಯುಗಕ್ಕೆ ಒಳಗಾದ ಕಾರಣ ಪ್ಲೀಸ್ಟೊಸೀನ್ ಕಾಲದ ನಿಕ್ಷೇಪಗಳು ಹೆಚ್ಚಾಗಿ ಹಿಮಾಶ್ಮ ಪ್ರವಾಹದ ಮೊರೇನುಗಳು, ಪರದೇಶಿ ಬಂಡೆಗಳು, ಮರಳು, ಗುಂಡುಶಿಲೆ, ಟೆಲ್ ಎಂಬ ಅಸ್ತಾವಸ್ಥೆಯ ಹಿಮಾಶ್ಮ ಪ್ರವಾಹದ ನಿಕ್ಷೇಪಗಳು ಹಾಗೂ ನೀಲಿಊದಾ ಮತ್ತು ಕಾಕಿ ಬಣ್ಣದ ಜೇಡು ಪ್ರಸ್ತರಗಳು ಮತ್ತು ಒಂಡು (ಸಿಲ್ಟ್) ಶಿಲೆಗಳಿಂದ ಕೂಡಿದೆ. ಇವೆಲ್ಲ ಅಲ್ಲದೆ ಮತ್ತೊಂದು ದೃಷ್ಟಿಯಿಂದಲೂ ಈ ಯುಗ ಭೂಚರಿತ್ರೆಯಲ್ಲಿ ಸಾಕಷ್ಟು ಪ್ರಮುಖವಾದುದು. ಜೀವವಿಕಾಸದ ಉತ್ತುಂಗ ಸೃಷ್ಟಿ ಎನಿಸಿದ ಮಾನವ ಕಂಡುಬಂದುದು ಈ ಯುಗದಲ್ಲೇ. ಹೀಗಾಗಿ ಮಾನವನ ವಿಕಾಸದ ದೃಷ್ಟಿಯಿಂದಲೂ ಈ ಯುಗಕ್ಕೆ ತುಂಬ ಪ್ರಾಮುಖ್ಯವುಂಟು.

ಭೂವಿಜ್ಞಾನಿಗಳು ಈ ಕಾಲದಲ್ಲಿ ಪ್ರಧಾನವಾಗಿ ನಾಲ್ಕು ಹಿಮಪ್ರವಾಹಗಳು ಸಂಭವಿಸಿದ್ದವೆಂದೂ ಇವು ಪರಸ್ಪರ ಅಂತರ ಹಿಮಾಶ್ಮಪ್ರವಾಹ ಕಾಲಗಳಿಂದ ಬೇರಾಗಿದ್ದುವೆಂದೂ ಅಭಿಪ್ರಾಯಪಟ್ಟಿದ್ದಾರೆ. ಇವರ ಲೆಕ್ಕಾಚಾರದಂತೆ ನಾವೀಗ ಐದನೆಯ ಹಿಮಾಶ್ಮ ಪ್ರವಾಹಯುಗದಲ್ಲಿದ್ದೇವೆ. ಹಿಮಾಶ್ಮ ಪ್ರವಾಹಗಳಾದಲ್ಲಿ ಇಡೀ ಉತ್ತರಗೋಳಾರ್ಧವೇ ಹಿಮದ ಹಾಳೆಗಳಿಂದ ಆವೃತವಾಗಿ ನಿರ್ನಾಮವಾದಾವು.

ಪ್ಲೀಸ್ಟೊಸೀನ್ ಶಿಲಾಸಮುದಾಯಗಳು ಪ್ರಪಂಚದ ಹಲವಾರು ಪ್ರದೇಶಗಳಲ್ಲಿ ಅತ್ಯುತ್ತಮ ರೀತಿಯಲ್ಲಿ ಕಾಣಬರುತ್ತವೆ. ಅಮೆರಿಕ, ಯೂರೋಪ್, ಗ್ರೀನ್‌ಲೆಂಡ್ ಮತ್ತು ಭಾರತಗಳಲ್ಲಿ ಇವನ್ನು ಅಧ್ಯಯನ ಮಾಡಿ ವರ್ಗೀಕರಿಸಲಾಗಿದೆ*.

*

| ಅಮೆರಿಕ | ಯೂರೋಪ್ | ಭಾರತ |
|---|---|---|
| ವಿಸ್ಕಾನ್‌ಸಿನ್ ಹಿಮಾಶ್ಮಪ್ರವಾಹ ಹಂತ. ಸಾನ್ ಮೌನ್ ಅಂತರಹಿಮಾಶ್ಮ ಪ್ರವಾಹ ಹಂತ | ಉರ್ವ್ ಹಿಮಾಶ್ಮ ಪ್ರವಾಹ ಹಂತ. ಮೂರನೆಯ ಅಂತರಹಿಮಾಶ್ಮ ಪ್ರವಾಹಹಂತ. | ನಾಲ್ಕನೆಯ ಹಿಮಾಶ್ಮ ಪ್ರವಾಹ ಹಂತ. |
| ಇಲಿನಾಯ್ಸಿಯನ್ ಹಿಮಾಶ್ಮ ಪ್ರವಾಹ ಹಂತ.<br>ಯಾರ್‌ಮಾತ್ ಅಂತರಹಿಮಾಶ್ಮ ಪ್ರವಾಹ ಹಂತ. ಕಾನ್ಸಾಸ್ ಹಿಮಾಶ್ಮ ಪ್ರವಾಹ ಹಂತ. ಅಫ್ಟೋನಿಯನ್ ಅಂತರಹಿಮಾಶ್ಮ ಪ್ರವಾಹ ಹಂತ. | ರಿಸ್ ಹಿಮಾಶ್ಮ ಪ್ರವಾಹಹಂತ.<br>ಎರಡನೆಯ ಅಂತರಹಿಮಾಶ್ಮ ಪ್ರವಾಹದ ಹಂತ. ಮಿಂಡೆಲ್ ಹಿಮಾಶ್ಮ ಪ್ರವಾಹ ಹಂತ. ಮೊದಲ ಅಂತರಹಿಮಾಶ್ಮ ಪ್ರವಾಹ ಹಂತ. | ಮೂರನೆಯ ಹಿಮಾಶ್ಮ ಪ್ರವಾಹ ಹಂತ (ಪೋತ್ವಾರ್ ಓಂಡು)<br>ಎರಡನೆಯ ಅಂತಹಿಮಾಶ್ಮ ಪ್ರವಾಹ ಹಂತ (ಕದಂಬಶಿಲೆ) ಮೊದಲ ಅಂತಹಿಮಾಶ್ಮ ಪ್ರವಾಹದ ಹಂತ (ಪಿಂಜೋರ್) |
| ನೆಬ್ರಾಸ್ಕನ್ ಹಿಮಾಶ್ಮ ಪ್ರವಾಹ ಹಂತ. | ಗುಂಜ್ ಹಿಮಾಶ್ಮಪ್ರವಾಹ ಹಂತ. | ಮೊದಲ ಹಿಮಾಶ್ಮ ಪ್ರವಾಹ ಹಂತ (ಟಟ್ರೋಟ್) ಮೊದಲ ಅಂತಹಿಮಾಶ್ಮ ಪ್ರವಾಹದ ಹಂತ (ಪಿಂಜೋರ್) |

ಭಾರತದ ಪ್ಲೀಸ್ಟೊಸೀನ್ ನಿಕ್ಷೇಪ 3600 ಮೀ. ಮಂದವಾಗಿದೆ. ಇದು ನದಿ, ಸರೋವರ ಮತ್ತು ಹಿಮಾಶ್ಮ ಪ್ರವಾಹ ಶಿಲಾವಸ್ತುಗಳಿಂದ ಕೂಡಿದೆ. ಹಿಮಾಲಯ ತಪ್ಪಲಿನಲ್ಲಿ ಮೆಕ್ಕಲುಮಣ್ಣಿನ ಮೇಲೆ ಹರಡಿದೆ. ಕಾಶ್ಮೀರ ಪ್ರಾಂತದಲ್ಲಿ ಈ ವರ್ಗದ ನಿಕ್ಷೇಪಗಳನ್ನು ಕರೇವಾ ಶಿಲೆಗಳೆಂದು ಕರೆಯಲಾಗಿದೆ. ವಾಯವ್ಯ ಪ್ರದೇಶದಲ್ಲಿ ಇವುಗಳ ಅಗಲ 80ಕಿಮೀ ವರೆಗೂ ಇದೆ. ಈಶಾನ್ಯ ಭಾಗದಲ್ಲಿ ಕರೇವಾ ನಿಕ್ಷೇಪ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದೆ. ಇಲ್ಲಿ ಸುಮಾರು 7770 ಚಕಿಮೀ ವಿಶಾಲವಾಗಿದ್ದು 3810 ಮೀ ಗಳಿಗೂ ಮೀರಿ ಮಂದವಾಗಿದೆ. ಕರೇವಾ ನಿಕ್ಷೇಪವನ್ನು ಎರಡು ಭಾಗಗಳಾಗಿ ವಿಭಾಗಿಸಬಹುದು. ಎರಡರ ಮಧ್ಯೆ ಅನನುರೂಪತೆಯೂ ಇದೆ. ಇದು ಪ್ಲಿಯೊಸೀನ್ ಯುಗದ ಆದಿಯಿಂದ ಪ್ಲೀಸ್ಟೊಸೀನ್ ಯುಗದ ಅಂತ್ಯದ ತನಕ ನಿಕ್ಷೇಪಗೊಂಡಿತು. ಅನೇಕ ಕಡೆ ಈ ಶಿಲಾವರ್ಗದ ಮೇಲೆ ಝೀಲಮ್ ನದಿಯಿಂದ ಉಂಟಾದ ಇತ್ತೀಚಿನ ಶಿಲೆಗಳು ಅನುರೂಪತೆಯಿಂದ ಶೇಖರವಾಗಿವೆ.

ಈ ಯುಗದ ಪ್ರಾಣಿ ಮತ್ತು ಸಸ್ಯವರ್ಗಗಳು ಬಲುಮಟ್ಟಿಗೆ ಈಗ ಕಂಡುಬರುವಂತೆಯೇ ಇದ್ದುವು. ಆದರೆ ಸಿವಾಲಿಕ್ ಕಾಲದಲ್ಲಿದ್ದ ಬಹುತೇಕ ಸ್ತನಿಗಳು ನಿರ್ನಾಮವಾದುವೆಂದು ಭಾವಿಸಲಾಗಿದೆ. ಹಿಮಾಲಯ ಪರ್ವತ ಸಹ ಈ ಕಾಲದಲ್ಲೇ ತನ್ನ ಇಂದಿನ ಔನ್ನತ್ಯವನ್ನು ಪೂರ್ಣವಾಗಿ ಪಡೆಯಿತು. ಭಾರತದ ಭೂವಿಜ್ಞಾನಕ್ಕೆ ಮಹತ್ತರ ಸೇವೆ ಸಲ್ಲಿಸಿದ ಡಬ್ಲ್ಯು. ಟಿ. ಬ್ಲಾನ್‌ಫರ್ಡ್ ಭಾರತ ಮತ್ತು ಶ್ರೀಲಂಕಾ ನಡುವಣ ಬೆಟ್ಟಗುಡ್ಡಗಳಲ್ಲಿ ಕಂಡುಬರುವ ಶೀತವಾಯುಗುಣ ಪ್ರಮಾಣಗಳನ್ನು ವಿವರಿಸಿದ್ದಾನೆ. ಆದರೆ ಈ ಕಾಲದಲ್ಲಿ ದಖ್ಖನ್ ಪ್ರಸ್ಥಭೂಮಿಯಲ್ಲಿ ಅತಿಶೀತ ಅಥವಾ ಹಿಮಾಂಶಪ್ರವಾಹ ವಾಯುಗುಣ ಇತ್ತೆಂಬುದಕ್ಕೆ ಸರಿಯಾದ ರುಜುವಾತು ದೊರೆತಿಲ್ಲ. ಅವನ ಅಧ್ಯಯನದಂತೆ ದಖ್ಖನ್ನಿನ ನೀಲಗಿರಿ, ಅಣ್ಣಾಮಲೈ ಮತ್ತು ಸೆವರಾಯ್ ಮತ್ತು ಶ್ರೀಲಂಕಾದ ಬೆಟ್ಟಗಳ ತುದಿಯಲ್ಲಿ ಸಮಶೀತೋಷ್ಣವಲಯದ ಸಸ್ಯಗಳೂ ಹಲವಾರು ಪ್ರಾಣಿಗಳೂ ಇವೆ. ಆದರೆ ಇವು ಅದೇ ಪ್ರದೇಶದ ಬೆಟ್ಟದ ತಪ್ಪಲು ಅಥವಾ ಕೆಳಮೈದಾನ ಪ್ರದೇಶಗಳಲ್ಲಿ ಕಂಡುಬಂದಿಲ್ಲ. ಇವು ಸಮಶೀತೋಷ್ಣ ಹವೆಯುಳ್ಳ ಹಿಮಾಲಯ, ಅಸ್ಸಾಮಿನ ಬೆಟ್ಟಗಳು, ಮಲೇಷಿಯ, ಜಾವಾ ಪ್ರಾಂತಗಳ ಸಸ್ಯ ಮತ್ತು ಪ್ರಾಣಿಗಳನ್ನು ಹೋಲುತ್ತವೆ. ಹಿಮಾಲಯದ ರೋಡೊಡೆನ್‌ಡ್ರಾನ್ ಅರ್ಬೋರಿಯಮ್ ಎಂಬ ಸಸ್ಯ ಹಾಗೂ ಮಾರ್ಟಿಸ್ ಫ್ಲಾವಿಗ್ಯೂಲ ಎಂಬ ಸ್ತನಿ ನೀಲಗಿರಿ ಮತ್ತು ಶ್ರೀಲಂಕಾದ ಬೆಟ್ಟಗಳಲ್ಲಿ ಕಂಡುಬಂದಿವೆ. ಅಂದರೆ ಇಲ್ಲಿ ಶೀತಲ ವಾಯುಗುಣ ಇತ್ತೆಂಬುದು ಸ್ಪಷ್ಟವಾಗಿದೆ.

ಇಂದಿನ ಹಿಮಾಲಯದ ಹಿಮನದಿಗಳು ಬಲು ದೊಡ್ಡವೆಂದು ಪರಿಗಣಿತವಾಗಿವೆ. ಆದರೆ ಪ್ಲೀಸ್ಟೊಸೀನ್ ಕಾಲದಲ್ಲಿ ಇವು ಇನ್ನೂ ವಿಶಾಲವಾಗಿದ್ದು ಕ್ರಮೇಣ ಗಾತ್ರದಲ್ಲಿ ಸಣ್ಣಗಾಗಿವೆ ಎಂದು ಕಾಣುತ್ತದೆ. ಈ ಯುಗದ ಅನೇಕ ಸ್ತನಿಗಳು ಅತ್ಯಲ್ಪ ಕಾಲದಲ್ಲಿ ನಾಶವಾದ ವಿಷಯವನ್ನು ಈಗಾಗಲೇ ನಮೂದಿಸಲಾಗಿದೆ. ಇದು ಭೂ ಹಾಗೂ ಜೀವವಿಜ್ಞಾನಿಗಳಿಗೆ ವಿಸ್ಮಯಕರವಾದ ಒಗಟಾಗಿದೆ. ಪ್ರಕೃತಿ ವಿಜ್ಞಾನಿ ಆಲ್‌ಫ್ರೆಡ್ ರಸೆಲ್ ವ್ಯಾಲೇಸ್ ಈ ಕುತೂಹಲಕಾರಕ ಸಂಗತಿಯ ಕಡೆಗೆ ಪ್ರಪಂಚದ ಗಮನವನ್ನು ಮೊತ್ತಮೊದಲಿಗೆ ಸೆಳೆದನು. ಈ ಯುಗದ ಶಿವಾಲಿಕ್ ಕಾಲದಲ್ಲಿದ್ದ ಶಿವಥೀರಿಯಮ್ ಮುಂತಾದ ವಿವಿಧ ಆನೆಗಳು, ಗೊರಸುಳ್ಳ ಪ್ರಾಣಿಗಳು ಮತ್ತು ಕಪಿಗಳು ಬದಲಾದ ಶೀತಲ ವಾತಾವರಣಕ್ಕೆ ಹೊಂದಿಕೊಳ್ಳಲಾರದೆ ನಾಶಗೊಂಡಿರಬಹುದು. ಆದರೆ ಹೆಚ್ಚಿನ ರೀತಿಯ ವಿಕಾಸಕ್ಕೆ ಒಳಗಾಗದಿದ್ದ ಜೀವಿಗಳು ಹೀಗಾಗದೆ ತಮ್ಮ ಶರೀರರಚನೆಯಲ್ಲಿ ಯುಕ್ತ ಮಾರ್ಪಾಟು ಹೊಂದಿ ಅಥವಾ ಯುಕ್ತಪ್ರದೇಶಗಳಿಗೆ ವಲಸೆ ಹೋಗಿ ಮುಂದಿನ ಯುಗಕ್ಕೂ ಮುಂದುವರಿದವು. ಈ ಕಾಲದಲ್ಲೆಲ್ಲ ನಡೆದ ಹಿಮಾಲಯ ಪರ್ವತದ ಏರಿಕೆಗೂ ತಪ್ಪಲು ಪ್ರದೇಶದಲ್ಲಿ ಉಂಟಾದ ತಗ್ಗಿಗೂ ಸಂಬಂಧ ಉಂಟು. ಈ ಕಿರಿದಾದ ತಗ್ಗು ಪ್ರದೇಶ ಪರ್ವತೋತ್ತರ ಮುನ್ನುಗ್ಗುವಿಕೆಗೆ ಸಂಬಂಧಿಸಿದ ಭೂಚಲನೆಗಳಿಂದಾದವೆಂದು ಎಡ್ವರ್ಡ್ ಸುಯೆಸ್ ಅಭಿಪ್ರಾಯ ಪಟ್ಟಿದ್ದಾನೆ. ಆದರೆ ಸಿಡ್ನಿ ಬರಾರ್ಡ್ ಇವು ಪರ್ವತಜನಿತ ಸ್ತರಭಂಗಗಳಿಂದ ಉಂಟಾದವು ಎಂಬುದಾಗಿ ಸೂಚಿಸಿದ್ದಾನೆ. ಇಲ್ಲಿ ಹರಿಯುವ ಸಿಂಧೂ, ಗಂಗಾ, ಯಮುನಾ ಮತ್ತಿತರ ನದಿಗಳು ಈ ತಪ್ಪಲ ತಗ್ಗಿಗೆ ಮೆಕ್ಕಲ ಮಣ್ಣನ್ನು ಸುರಿದು ಸುಮಾರು 7,77,000 ಚಕಿಮೀ ಸಲೆಯುಳ್ಳ ಅತಿ ಫಲವತ್ತಾದ ಸಿಂಧೂ–ಗಂಗಾ ಬಯಲನ್ನು ಇದೇ ಯುಗದಲ್ಲಿ ಉಂಟುಮಾಡಿದುವು.

ಮಾನವನ ವಿಕಾಸಕ್ಕೆ ಸಂಬಂಧಿಸಿದ ಅವಶೇಷಗಳ ಅಧ್ಯಯನದಲ್ಲಿ ಪ್ಲೀಸ್ಟೊಸೀನ್ ಯುಗದ ನಿಕ್ಷೇಪಗಳಿಗೆ ವಿಶೇಷ ಮಹತ್ವ ಉಂಟು. ಆಫ್ರಿಕಾದ ಬೆಚೂನಾಲೆಂಡಿನ ಟಾಂಗ್ ಎಂಬಲ್ಲಿ ಮೊತ್ತಮೊದಲ ಬಾರಿಗೆ ತಲೆಬುರುಡೆಯ ಅವಶೇಷವೊಂದು ದೊರೆಯಿತು. ಇದು ಕಪಿ ಬುರುಡೆಯಂತಿದೆಯಾದರೂ ಹಲವು ರೂಪರೇಖೆಗಳಲ್ಲಿ ನಿರ್ದಿಷ್ಟವಾಗಿ ಮಾನವನ ಬುರುಡೆಗೆ ಸಂಬಂಧಿಸಿದೆ. ಹೀಗೆಯೇ ಟ್ಯಾಂಗನೀಕಾದ ಓಲ್ಡೊವೇ ಎಂಬಲ್ಲಿಯ ಕೆಳ ಪ್ಲೀಸ್ಟೊಸೀನ್ ಪ್ರಸ್ತರಗಳಲ್ಲಿ ಹಲವಾರು ಬೆಣಚಿನ ಆಯುಧಗಳೊಡನೆ ಮಾನವನ ತಲೆಬುರುಡೆಯೊಂದರ ಚೂರುಗಳು ಬೆರೆತಿದ್ದುದು ಪತ್ತೆಯಾಗಿದೆ. ಈ ಆದಿಮಾನವನಿಗೆ ಜಿನ್‌ಜಾನ್‌ಥ್ರೋಪಸ್ ಮಾನವ ಎಂದು ಹೆಸರಿಡಲಾಯಿತು. 1898 ಮತ್ತು 1930ರಲ್ಲಿ ಜಾವಾ (ಇಂಡೋನೇಷ್ಯ) ದ್ವೀಪದ ನಿಕ್ಷೇಪಗಳಲ್ಲಿ ಶೋಧನೆ ನಡೆದು ತಲೆಬುರುಡೆಯ ಚಿಪ್ಪು, ತೊಡೆಯ ಮೂಳೆ, ದವಡೆ, ಸಂಪೂರ್ಣ ತಲೆಬುರುಡೆ–ಈ ಮೊದಲಾದ ಅವಶೇಷಗಳು ದೊರೆತು ಇವೆಲ್ಲವೂ ಆದಿಮಾನವನಿಗೆ ಸಂಬಂಧಿಸಿದವೆಂದು ನಿರ್ಣಯಿಸಿ ಅವನನ್ನು ಪಿಥಕ್ಯಾನ್‌ಥ್ರೋಪಸ್ ಇರೆಕ್ಟಸ್ ಎಂದು ಕರೆಯಲಾಯಿತು. ಚೀನಾದ ಪೀಕಿಂಗ್ ಬಳಿಯ ಭೂಶೋಧನೆಯಲ್ಲಿ ಹಲವಾರು ತಲೆಬುರುಡೆಗಳು, ದವಡೆಗಳು, ದಂತಗಳು, ಕೈಕಾಲಿನ ಎಲುಬುಗಳು ಸುಮಾರು ನಲವತ್ತು ಜನರದ್ದು ದೊರೆತವು. ಇವನೇ ಪೀಕಿಂಗ್ ಮಾನವ. ಇವೆಲ್ಲವೂ ಈ ಯುಗದ ಮೊದಲ ಅಂತರಹಿಮಾಂಶ ಪ್ರವಾಹ ಹಂತಕ್ಕೆ ಸಮವಾದವೆಂದು ಪರಿಗಣಿತವಾಗಿವೆ.

ಇವೇ ಅಲ್ಲದೆ ದ್ವಿತೀಯ ಹಿಮಾಂಶ ಪ್ರವಾಹ ಹಂತಕ್ಕೆ ಸರಿಸಮವಾದ ಆಲ್ಜೀರಿಯದ ನಿಕ್ಷೇಪಗಳಲ್ಲಿ ಮಾನವನ ಅವಶೇಷಗಳು ದೊರೆತು ಇವನನ್ನು ಅಟ್ಲಾಂಥ್ರೋಪಸ್ ಮೌರಿಟಾನಿಕಸ್ ಎಂದು ಹೆಸರಿಸಲಾಗಿದೆ. ಜರ್ಮನಿಯ ಹಿಡೆಲ್‌ಬರ್ಗ್ ಬಳಿಯ ನದಿ ನಿಕ್ಷೇಪವೊಂದರಲ್ಲಿ ಮಾನವನ ಹಲ್ಲಿರುವ ದವಡೆಯ ಅವಶೇಷ ದೊರೆಯಿತು. ಇವನೇ ಹಿಡಲ್‌ಬರ್ಗ್ ಮಾನವ. ಒಟ್ಟಿನಲ್ಲಿ ಮಾನವವಿಕಾಸಕ್ಕೆ ಸಂಬಂಧಿಸಿದ ಶೋಧನೆಗಳಿಗೆ ಈ ಯುಗದ ನಿಕ್ಷೇಪಗಳು ಹೆಸರಾಂತವು.

***

**ಪ್ಲೆಕ್ಟೋನ್ಯಾತಿ:** ಅತಿ ವಿಚಿತ್ರ ಮತ್ತು ವೈಶಿಷ್ಟ್ಯಪೂರ್ಣ ಮೀನುಗಳಾದ ಫೂಲಮೀನು, ಟ್ರಂಕ್‌ಮೀನು, ಪಫರ್‌ಮೀನು, ಪಾರ್ಕ್ಯುಪೈನ್ ಮೀನು ಮತ್ತು ಹೆಡ್‌ಮೀನುಗಳನ್ನು ಒಳಗೊಂಡಿರುವ ಮತ್ಸ್ಯಕುಟುಂಬ. ಬಲು ನಿಧಾನಗತಿಯಲ್ಲಿ ಚಲಿಸುವ ಮೀನುಗಳಿವು. ಇವುಗಳ ಕಿವಿರಿನ ರಂಧ್ರಗಳು ಬಹಳ ಕಿರಿಗಾತ್ರದವು. ದೇಹದ ಹೊರ ಹೊದಿಕೆ ಎಲುಬು ತಟ್ಟೆಗಳಿಂದ, ಮುಳ್ಳುಗಳಿಂದ ಅಥವಾ ಹುರುಪೆಗಳಿಂದ ರಚಿತವಾಗಿದೆ. ಕೆಲವೊಮ್ಮೆ ಮೃದುವಾಗಿರಬಹುದು. ದವಡೆಗಳು ಮೊಟಕಾಗಿಯೂ ಗಟ್ಟಿಯಾಗಿಯೂ ಇವೆ. ದೇಹದ ಬಣ್ಣ ವೈವಿಧ್ಯಪೂರ್ಣ ಹಾಗೂ ಆಕರ್ಷಕ. ಈ ಮೀನುಗಳು ಉಷ್ಣ ಮತ್ತು ಸಮಶೀತೋಷ್ಣವಲಯಗಳ ಸಮುದ್ರಗಳಲ್ಲಿ ಜೀವಿಸುವುವು. (ವಿ.ಎ.ಆರ್.)

**ಪ್ಲ್ಯಾಟಿಪಸ್:** ಪ್ರೋಟೊಥೀರಿಯ ಉಪವರ್ಗ, ಮಾನೊಟ್ರಿಮಟ ಗಣ ಹಾಗೂ ಆರ್ನಿತೊರಿಂಕಿಡೆ ಕುಟುಂಬಕ್ಕೆ ಸೇರಿದ ಒಂದು ವಿಚಿತ್ರ ಜಲವಾಸಿ ಸ್ತನಿ. ದಕ್ಷಿಣ ಮತ್ತು ಪೂರ್ವ ಆಸ್ಟ್ರೇಲಿಯ ಹಾಗೂ ಟಾಸ್ಮೇನಿಯ ದ್ವೀಪಗಳಲ್ಲಿ ಮಾತ್ರ ಇದು ವಾಸಿಸುತ್ತದೆ. ವೈಜ್ಞಾನಿಕ ಹೆಸರು ಆರ್ನಿತೊರಿಂಕಸ್ ಅನಾಟಿನಸ್.



ಪ್ಲ್ಯಾಟಿಪಸ್

ಚಿಕ್ಕಗಾತ್ರದ ಪ್ರಾಣಿಯಿದು. ಗಂಡಿನ ದೇಹದ ಉದ್ದ 30–45 ಸೆಂಮೀ. 10–15 ಸೆಂಮೀ. ಉದ್ದದ ಪುಟ್ಟ ಬಾಲವೊಂದುಂಟು. ತೂಕ 0.5–2.0 ಕಿಗ್ರಾಂ. ಹೆಣ್ಣುಗಳು ಇನ್ನೂ ಚಿಕ್ಕಗಾತ್ರದವು. ಮೈಬಣ್ಣ ಬೆನ್ನಮೇಲೆ ಕಗ್ಗಂದು, ಹೊಟ್ಟೆಯ ಮೇಲೆ ಬೂದಿಮಿಶ್ರಿತ ಬಿಳಿ. ದೇಹದ ಮೇಲೆ ಎರಡು ತೆರನ ಕೂದಲುಗಳುಂಟು. ಉಣ್ಣೆಯಂಥ ದಟ್ಟ ಹಾಗೂ ಮೋಟು ಕೂದಲುಗಳು ಒಂದು ತೆರನಾದರೆ ಚಪ್ಪಟೆಯಾದ, ಹೊಳೆಯುವ ಹಾಗೂ ಅಲ್ಲಲ್ಲಿ ಚದುರಿದಂತೆ ಬೆಳೆದಿರುವ ಉದ್ದ ಕೂದಲುಗಳು ಇನ್ನೊಂದು ತೆರ. ದೇಹ ತುಂಬ ಸಪೂರವಾಗಿದೆಯಲ್ಲದೆ ಚಪ್ಪಟೆಯಾಗೂ ಇದೆ. ಬಾಲ ಬೀವರ್ ಪ್ರಾಣಿಯ ಬಾಲದಂತಿದೆ. ಕಾಲುಗಳು ಮೋಟು. ಪಾದ ಬಾತಿನ ಪಾದದಂತೆ ಅಗಲವಾಗಿದೆ. ಹಿಂಗಾಲು ಮುಂಗಾಲುಗಳೆರಡರಲ್ಲೂ ತಲಾ ಐದು ಬೆರಳುಗಳುಂಟು. ಬೆರಳುಗಳಲ್ಲಿ ನಖಗಳೂ ಇವೆ. ಮೂತಿ ಒಂದು ತೆರನ ಕೊಕ್ಕಿನಂತೆ ಮುಂದಕ್ಕೆ ಚಾಚಿಕೊಂಡಿದೆ. ಇದರ ಆಕಾರ ಬಾತುಕೋಳಿಯ ಕೊಕ್ಕಿನದರಂತೆ. ಆದ್ದರಿಂದಲೇ ಪ್ಲ್ಯಾಟಿಪಸ್ಸಿಗೆ ಬಾತುಕೊಕ್ಕಿನ (ಡಕ್‌ಬಿಲ್ಡ್) ಪ್ಲ್ಯಾಟಿಪಸ್ ಎಂಬ ಹೆಸರೂ ಉಂಟು. ಕೊಕ್ಕನ್ನು ಮೃದುವಾದ, ತೇವಪೂರಿತವಾದ, ಕೂದಲುರಹಿತವಾದ ಚರ್ಮ ಆವರಿಸಿದೆ. ಈ ಚರ್ಮದ ಮೇಲೆಲ್ಲ ಸಂವೇದನಶೀಲ ರಂಧ್ರಗಳುಂಟು. ಕೊಕ್ಕಿನ ಮೇಲ್ಭಾಗದಲ್ಲಿ ನಾಸಿಕ ರಂಧ್ರಗಳು ಸ್ಥಿತವಾಗಿವೆ. ಪ್ಲ್ಯಾಟಿಪಸ್ಸಿಗೆ ಘ್ರಾಣಶಕ್ತಿ ಕಡಿಮೆ. ಇದಕ್ಕೆ ಹೊರ ಕಿವಿಗಳೂ ಇಲ್ಲ.

ಮರಿ ಪ್ಲ್ಯಾಟಿಪಸುಗಳಲ್ಲಿ ಸಣ್ಣ ಹಲ್ಲುಗಳುಂಟು. ಆದರೆ ಪ್ರೌಢಪ್ರಾಣಿಗಳಲ್ಲಿ ಹಲ್ಲುಗಳ ಬದಲು ಪ್ರತಿ ದವಡೆಯ ಉದ್ದಕ್ಕೂ ಕೊಂಬಿನಂಥ ಫಲಕವಿದೆ. ಬಾಯ ಮುಂಭಾಗದಲ್ಲಿ ಫಲಕಗಳ ಅಂಚು ಚೂಪಾಗಿದೆಯಾದರೆ, ಹಿಂದವಡೆಗಳ ಬಳಿ ಅರೆಯುವ ಕಲ್ಲಿನಂತೆ ಚಪ್ಪಟೆಯಾಗಿದೆ. ಮೇಲಿನ ಹಾಗೂ ಕೆಳಗಿನ ದವಡೆಗಳ ಮೂಳೆಗಳು ಕೊಕ್ಕಿನೊಳಗೆ ಚಾಚಿಕೊಂಡಿದ್ದು ಅದಕ್ಕೆ ಆಧಾರವನ್ನು ಒದಗಿಸುತ್ತವೆ. ಮಿದುಳು ಚಿಕ್ಕದು ಹಾಗೂ ನಯವಾದ ಹಾಲೆಗಳಿಂದ ಕೂಡಿದುದು.

ಗಂಡು ಪ್ಲ್ಯಾಟಿಪಸ್ಸುಗಳ ಹಿಂಗಾಲುಗಳ ಮಣಿಕಟ್ಟಿನಲ್ಲಿ ಹಿಮ್ಮೊಗವಾಗಿ ಚಾಚಿರುವ ಎರಡು ಮುಳ್ಳುಗಳುಂಟು. ಒಳಗಿನ ವಿಷಗ್ರಂಥಿಗಳೊಂದಿಗೆ ಸಂಪರ್ಕದಲ್ಲಿರುವ ಈ ಮುಳ್ಳುಗಳು ಪ್ರಾಣಿಯ ರಕ್ಷಣೆಯ ಸಾಧನೆಗಳು. ಮನುಷ್ಯನಿಗೂ ಈ ವಿಷ ಅಪಾಯಕಾರಿ. ಗಂಡು ಒಂದು ತೆರನ ಕಟುವಾಸನೆಯನ್ನು ಕೂಡ ಸೂಸುತ್ತದೆ.

ಪ್ಲ್ಯಾಟಿಪಸ್ ಕೂಗುವುದು ಕಡಿಮೆ. ಕೂಗು ಒಂದು ಬಗೆಯ ಕೆಳಮಟ್ಟದ ಗುರುಗುಟ್ಟುವಿಕೆ. ಇದಕ್ಕೆ ಚುರುಕಾದ ದೃಷ್ಟಿಯೂ ಶ್ರವಣ ಸಾಮರ್ಥ್ಯವೂ ಉಂಟು. ನೀರಿನಲ್ಲಿ ಮುಳುಗಿ ಈಜುವಾಗ ತಮ್ಮ ತೀಕ್ಷ್ಣ ಸ್ಪರ್ಶಸಾಮರ್ಥ್ಯದಿಂದ ಮಾರ್ಗ ಕಂಡುಕೊಳ್ಳುವುವು.

ಮುಂಜಾವಿನಲ್ಲಿ ಹಾಗೂ ಸಂಜೆಯಲ್ಲಿ ತುಂಬ ಚಟುವಟಿಕೆಯಿಂದ ಈಜುತ್ತ, ಮುಳುಗುತ್ತ, ತೇಲುತ್ತ ಆಹಾರಾನ್ವೇಷಣೆಯಲ್ಲಿ ನಿರತವಾಗಿರುವುವು. ಕೆಸರಿನಲ್ಲಿರುವ ಕ್ರೇ ಮೀನು, ಸೀಗಡಿ, ಬಸವನಹುಳು, ಗೊದಮೊಟ್ಟೆ, ಹುಳಹುಪ್ಪಟೆ, ಸಣ್ಣ ಮೀನು ಮುಂತಾದವು ಇವುಗಳ ಆಹಾರ.

ಹಳ್ಳ, ಕೆರೆಕಟ್ಟೆಗಳ ದಡದಲ್ಲಿ ಎರಡು ತೆರನ ಬಿಲಗಳನ್ನು ರಚಿಸಿಕೊಂಡು ಇವು ಜೀವಿಸುತ್ತವೆ. ಒಂದು ಬಗೆಯ ಬಿಲ ಗಂಡುಹೆಣ್ಣುಗಳೆರಡಕ್ಕೂ ಆಶ್ರಯವನ್ನು ಒದಗಿಸಿದರೆ ಇನ್ನೊಂದು ಬಗೆಯ ಬಿಲ ಮರಿಗಳಿಗಾಗಿ ಹೆಣ್ಣು ಮಾತ್ರ ರಚಿಸುವ ಗೂಡು.

ಪ್ಲ್ಯಾಟಿಪಸುಗಳ ಸಂತಾನವೃದ್ಧಿಶ್ರಾಯ ಆಗಸ್ಟ್ – ನವೆಂಬರ್. ಸಂಭೋಗಾನಂತರ ಹೆಣ್ಣು ಪ್ರಾಣಿ 1–3 ಮೊಟ್ಟೆಗಳನ್ನು ಇಡುತ್ತದೆ. ತರುವಾಯ ಆಹಾರ ಸೇವನೆಗೆ ಕೂಡ ಹೊರಬರದೆ ಗೂಡಿನಲ್ಲೇ ಇದ್ದುಕೊಂಡು 10 ದಿನಗಳ ಕಾಲ ಮೊಟ್ಟೆಗಳ ಮೇಲೆ ಕಾವುಕೂತು ಮರಿಮಾಡುತ್ತದೆ. ಈ ಕಾಲದಲ್ಲಿ ಗೂಡಿನ ಪ್ರವೇಶದ್ವಾರವನ್ನು ಮಣ್ಣಿನಿಂದ ಮುಚ್ಚಿಬಿಟ್ಟಿರುತ್ತದಲ್ಲದೆ ಗೂಡಿನಲ್ಲಿನ ಮೊಟ್ಟೆಗಳು ಒಣಗದಂತೆ ಅವುಗಳ ಸುತ್ತ ನೀರಿನಲ್ಲಿ ನೆನೆಸಿದ ಹುಲ್ಲು, ಎಲೆಗಳನ್ನು ಇಟ್ಟಿರುತ್ತದೆ. ಮೊಟ್ಟೆಗಳು ಹೆಚ್ಚುಕಡಿಮೆ ಗುಬ್ಬಚ್ಚಿಯ ಮೊಟ್ಟೆಗಳ ಗಾತ್ರಕ್ಕಿವೆ. ಮೊಟ್ಟೆಯೊಡೆದು ಹೊರಬರುವ ಮರಿಗಳು ಸುಮಾರು 15 ಮಿಮೀ. ಉದ್ದ ಇರುವುವು. ಕಣ್ಣು ತೆರೆದಿರದು. ಮೈಮೇಲೆ ರೋಮಗಳೂ ಇರುವುದಿಲ್ಲ. ಸುಮಾರು 4 ತಿಂಗಳ ಕಾಲ ತಾಯಿ ಮರಿಗಳಿಗೆ ಹಾಲುಣಿಸಿ ಪೋಷಿಸುತ್ತದೆ.

ಪ್ಲ್ಯಾಟಿಪಸ್ಸುಗಳ ಆಯಸ್ಸು ಸುಮಾರು 10–15 ವರ್ಷಗಳು. ಒಂದು ಕಾಲದಲ್ಲಿ ತುಪ್ಪುಳಕ್ಕೋಸ್ಕರ ಇವನ್ನು ಬೇಟೆಯಾಡುತ್ತಿದ್ದುದರಿಂದ ಇವು ಕಣ್ಮರೆಯಾಗುವ ಭೀತಿಯಿತ್ತು. ಆದರೆ ಈಗ ಕಾನೂನಿನ ಆಶ್ರಯದಲ್ಲಿ ಇವಕ್ಕೆ ಸಂಪೂರ್ಣ ರಕ್ಷಣೆ ದೊರತಿದೆ. ***

**ಪ್ಲ್ಯಾಟಿಹೆಲ್ಮಿಂತಿಸ್:** ಅಕಶೇರುಕ ಉಪಸಾಮ್ರಾಜ್ಯದ ಒಂದು ವಂಶ. ಚಪ್ಪಟೆಹುಳುಗಳು ಸಾಮಾನ್ಯ ಹೆಸರು. ಅನೇಕ ಪರಾವಲಂಬಿಗಳನ್ನೊಳಗೊಂಡ ಈ ವಂಶದ ಸದಸ್ಯರ ಶರೀರ ಚಪ್ಪಟೆ. ಪ್ಲಾಟಿ ಎಂದರೆ ಚಪ್ಪಟೆ, ಹೆಲ್ಮಿಂತ್ ಎಂದರೆ ಹುಳು. ಅದರಿಂದಲೇ ಈ ಹೆಸರು ಬಂದಿದೆ. ದ್ವಿಪಾರ್ಶ್ವ ಸಮಾಂಗತೆ ಇದೆ. ಶರೀರ ಹುಳುಗಳಂತಿದೆ. ವಲಯಗಳಾಗಲಿ, ವಲಯ ವಿಭಜನೆಯಾಗಲೀ ಇಲ್ಲ. ಪಾರ್ಶ್ವ ಚಪ್ಪಟೆಯಾಗಿರುವ ಹುಳುಗಳು ಸಾಮಾನ್ಯ ಹುಳುಗಳನ್ನು ಹೋಲುತ್ತವೆ. ಉಳಿದುವು ಎಲೆಗಳನ್ನು ಅಥವಾ ಕಿರುಅಗಲದ ತೆಳುಪಟ್ಟಿ ರಿಬನ್ನನ್ನು ಹೋಲುತ್ತವೆ. ಗಾತ್ರದಲ್ಲಿ ಕೂಡ ಸಾಕಷ್ಟು ವ್ಯತ್ಯಾಸಗಳಿವೆ. ಸೂಕ್ಷ್ಮವಾದ ಹುಳುಗಳಿಂದ 10–15 ಮೀ ಉದ್ದವಿರುವ ಪ್ರಭೇದಗಳಿವೆ. ಹೆಚ್ಚಿನವು ಬಿಳಿಯ ಬಣ್ಣ ಅಥವಾ ಬಣ್ಣರಹಿತವಾಗಿವೆ. ಕೆಲವು ಸೇವಿಸಿದ ಆಹಾರದ ಬಣ್ಣ ಪಡೆಯುತ್ತವೆ. ಸ್ವತಂತ್ರ ಜೀವಿಗಳಲ್ಲಿ ಕಂದು, ಬೂದು ಕಪ್ಪು ಅಥವಾ ಉಜ್ವಲವಾದ ಬಣ್ಣಗಳಿರಬಹುದು.

ಚಲಿಸುವಾಗ ಮುಂದಿರುವ ಭಾಗವೇ ತಲೆ. ಅನೇಕ ಪ್ರಭೇದಗಳಲ್ಲಿ ತಲೆ ಮತ್ತು ಶರೀರದ ನಡುವೆ ಕತ್ತು ಅಥವಾ ಗುರುತಾಗಲಿ ಇಲ್ಲ. ಸೆಸ್ಟೊಡಾ ವರ್ಗದ ಸದಸ್ಯರಲ್ಲಿ ಮುಂಭಾಗ ಸ್ವಲ್ಪ ದಪ್ಪವಿದ್ದು ತಲೆ ಎನಿಸಿ ಕೊಳ್ಳುತ್ತದೆ (ಸ್ಕೊಲೆಕ್ಸ್). ಟರ್ಬುಲೇರಿಯ ವರ್ಗದಲ್ಲಿ ಬಾಯಿ ಮತ್ತು ಜನನ ರಂಧ್ರಗಳು ಶರೀರದ ಕೆಳಭಾಗದಲ್ಲಿರುವುವು. ಉಳಿದ ಗುಂಪುಗಳಲ್ಲಿ ಬಾಯಿ ಅಷ್ಟು ಪ್ರಮುಖವಾಗಿ ಬೆಳೆದಿಲ್ಲ.

ಶರೀರದ ಹೊರಭಾಗದಿಂದ ಬಗೆ ಬಗೆಯ ಅಂಟು ದ್ರವಗಳನ್ನು ಸ್ರವಿಸುತ್ತವೆ. ಪರಾವಲಂಬಿಗಳಲ್ಲಿ ಆತಿಥೇಯ ಜೀವಿಗೆ ಅಂಟಿಕೊಳ್ಳಲು ಅಥವಾ ಅದರ ಶರೀರದಲ್ಲಿ ಸ್ಥಿತಗೊಳ್ಳಲು ಅಗತ್ಯವಾದ ಅಂಗಗಳು (ಉದಾ: ಕೊಂಡಿ, ಮುಳ್ಳು, ಹೀರುತಟ್ಟೆ ಹೀರುನಳಿಕೆ ಇತ್ಯಾದಿ) ಇವೆ.

ಇವು ಇಪ್ಪದರ ಜೀವಿಗಳು. ಶರೀರದ ಹೊರಭಾಗವನ್ನು ಒಂದೇ ಕೋಶಪದರವುಳ್ಳ ಹೊರಚರ್ಮ ಆವರಿಸಿದೆ. ಈ ಕೋಶಗಳ ಹೊರಭಾಗದಲ್ಲಿ ಅನೇಕ ಶಿಲಿಕಾಂಗಗಳಿವೆ. ಟರ್ಬುಲೇರಿಯಗಳ ಹೊರಚರ್ಮದ ಕೆಲವು ಕೋಶಗಳಲ್ಲಿ ದಂಡಾಕಾರದ ರ‍್ಯಾಬ್ಡೈಟುಗಳೆಂಬ ಆಕೃತಿಗಳಿರುವುವು. ಒಳಚರ್ಮದಲ್ಲಿರುವ ರ‍್ಯಾಬ್ಡೈಟಿಫಾರಂ ಕೋಶಗಳು ಇವನ್ನು ಸ್ರವಿಸುತ್ತವೆ. ಪರಾವಲಂಬಿಗಳಲ್ಲಿ ಹೊರಚರ್ಮ ವಿರುವುದಿಲ್ಲ. ಬದಲಾಗಿ ಚರ್ಮದಿಂದಲೇ ಸ್ರವಿಸಲ್ಪಟ್ಟ ಬಿರುಸಾದ ದಪ್ಪ ಕ್ಯುಟಿಕಲ್ ಇರುವುದು. ಅತಿಥೇಯ ಜೀವಿಯ ಶರೀರದಲ್ಲಿ ತಯಾರಾಗುವ ಕಿಣ್ವಗಳು ಹಾಗೂ ಇತರ ರಸಾಯನಗಳು ಪರಾವಲಂಬಿಯ ಶರೀರದ ಮೇಲೆ ಪರಿಣಾಮ ಬೀರಿ ಅವುಗಳನ್ನು ನಾಶಮಾಡದಂತೆ ಕ್ಯುಟಿಕಲ್ ಇವುಗಳಿಗೆ ರಕ್ಷಣೆ ನೀಡುತ್ತದೆ. ಹೊರಾಸ್ಥಿ ಪಂಜರ ಅಥವಾ ಒಳಾಸ್ಥಿ ಪಂಜರವಿರುವುದಿಲ್ಲವಾದ್ದರಿಂದ ದೇಹ ಮೃದುವಾಗಿರುತ್ತದೆ. ಕ್ಯುಟಿಕಲ್, ಮುಳ್ಳು, ಕೊಕ್ಕೆ, ಹಲ್ಲು ಇವೇ ದೇಹದ ಗಟ್ಟಿ ಭಾಗಗಳು. ಒಳಚರ್ಮದಲ್ಲಿ ನೀಳಾಕಾರದ ಹಾಗೂ ವೃತ್ತಾಕಾರದ ಸ್ನಾಯುಪದರವಿದೆ.

ಶರೀರದಲ್ಲಿ ನಿಜವಾದ ದೇಹಾವಕಾಶ (ಸೀಲೋಮ್) ಇಲ್ಲ. ಶರೀರದ ಒಳಭಾಗವನ್ನು ಪ್ಯಾರಂಖೈಮ ಎಂಬ ಕೋಶಗಳು ತುಂಬಿರುತ್ತವೆ. ದೇಹಾವಕಾಶವಿದ್ದರೂ ಅದನ್ನು ಮೀಸೆಂಖೈಮ್ ಎಂಬ ವಸ್ತು ಆವರಿಸಿರುವುದು. ಅಂದರೆ ಚಪ್ಪಟೆಹುಳುಗಳು ಎಸೀಲೊಮೇಟುಗಳು.



ಸ್ಕಾಲೆಕ್ಸ್ನ ವಿಧಗಳು:

1. ಲಿಕಾನಿಸೆಫಾಲಿಯಂ
2. ಪ್ರೊಟಿಯೊಸೆಫಾಲಸ್
3. ಲೆಖಿನೊಬೊತ್ರಿಯಂ
4. ಟೀನಿಯಂ ಸೋಲಿಯಂ

ಎಸೀಲ ಹಾಗೂ ಲಾಡಿಹುಳುಗಳಲ್ಲಿ ಜೀರ್ಣಾಂಗವ್ಯೂಹವೇ ಇಲ್ಲ. ಉಳಿದುವುಗಳಲ್ಲಿ ಬಾಯಿ, ಗಂಟಲು ಮತ್ತು ಕರುಳು ಮಾತ್ರ ಇರುವುವು. ಶ್ವಾಸಾಂಗವ್ಯೂಹ, ಪರಿಚಲನಾ ವ್ಯೂಹಗಳೂ ಇರುವುದಿಲ್ಲ. ಒಂದು ಅಥವಾ ಎರಡು ಜ್ವಲನಕೋಶ (ಫ್ಲೇಮ್ ಸೆಲ್ಸ್) ಗಳೇ ವಿಸರ್ಜನಾಂಗಗಳು. ಈ ಕೋಶಗಳು ಒಂದೆಡೆಯಲ್ಲಿ ಗೆಡ್ಡೆಯಾಕಾರದಲ್ಲಿದ್ದು ಇನ್ನೊಂದೆಡೆಯಲ್ಲಿ ಉದ್ದ ನಾಳಗಳಿರುವುವು. ಇವಕ್ಕೆ ಪ್ರೊಟೊನೆಫ್ರಿಡಿಯ ಎಂದು ಹೆಸರು.

ನರವ್ಯೂಹ ಸರಳವಾಗಿದ್ದು ಇನ್ನೂ ಪ್ರಾಥಮಿಕ ಹಂತದಲ್ಲಿಯೇ ಇದೆ. ಒಂದು ಜೊತೆ ಮಸ್ತಿಷ್ಕದ ನರಗ್ರಂಥಿಗಳು (ಗ್ಯಾಂಗ್ಲಿಯ) ಕೂಡಿ ಮಿದುಳು ಎನಿಸಿಕೊಳ್ಳುತ್ತದೆ. ಒಂದರಿಂದ ಮೂರು ಜೊತೆ ಅನುಲಂಬವಾದ ನರಹುರಿಗಳು ಮುಂಭಾಗದಿಂದ ಹಿಂಭಾಗದೆಡೆಗೆ ಸಾಗುವುವು. ನರಹುರಿಗಳು ಅಡ್ಡಡ್ಡ ಜೋಡಣೆಗಳಿಂದ ಸೇರಿಕೊಂಡಿದ್ದು ಏಣಿಯಂತಿವೆ. ಟರ್ಬುಲೇರಿಯದಲ್ಲಿ ಇಂದ್ರಿಯಗಳ ಬೆಳವಣಿಗೆಯಾಗಿದೆ, ಆದರೆ ಪರಾವಲಂಬಿಗಳಲ್ಲಿ ಅವು ಬಹಳ ಕ್ಷೀಣಿಸಿರುವುವು. ಶಿಲಿಕಾಂಗಗಳಿರುವ ಕೋಶಗಳು, ಕುಳಿಗಳು, ಕಾಲುವೆಗಳು ಸಂವೇದನಾಂಗಗಳು. ಇವು ರಸಾಯನ ಹಾಗೂ ಸ್ಪರ್ಶಗ್ರಾಹಿಗಳ ಕೆಲಸ ನಿರ್ವಹಿಸುತ್ತವೆ.

ಚಪ್ಪಟೆಹುಳುಗಳು ಉಭಯಲಿಂಗಿಗಳು. ಪ್ರಜನನಾಂಗಗಳು ಉತ್ತಮವಾಗಿ ಬೆಳೆದಿದ್ದು ಹೆಚ್ಚು ವಿಕಾಸವಾಗಿವೆ. ಸಿಹಿನೀರಿನ ಟರ್ಬುಲೇರಿಯಗಳಲ್ಲಿ ನಿರ್ಲಿಂಗ ಪ್ರಜನನವಿದೆ. ಒಂದು ಹುಳು ಯಾವುದೇ ಕಾರಣದಿಂದ ಸೀಳಾದಾಗ ಒಂದೊಂದು ಸೀಳೂ ಬೆಳೆದು ಪ್ರಬುದ್ಧ ಹುಳುವಾಗುತ್ತವೆ.

ಲೈಂಗಿಕ ಪ್ರಜನನವಾಗುವಾಗ ಹೆಣ್ಣು ಜನನಗ್ರಂಥಿಗಳಿಂದ ಅನೇಕ ಮೊಟ್ಟೆಗಳುದ್ಭವಿಸುತ್ತವೆ. ಮೊಟ್ಟೆಗಳಲ್ಲಿ ಲೋಳೆ ಇರುವುದಿಲ್ಲ. ಮೊಟ್ಟೆಯ ಚಿಪ್ಪು ಹಾಗೂ ಹಲವು ಲೋಳೆಕೋಶಗಳಿರುವುವು. ಸಾಮಾನ್ಯವಾಗಿ ಟ್ರಿಮಾಟೋಡ್‌ಗಳಲ್ಲಿ ಅಂತರನಿಷೇಚನ ಹಾಗೂ ಸೆಸ್ಟೋಡ್‌ಗಳಲ್ಲಿ ಒಳನಿಷೇಚನವಾಗುತ್ತವೆ. ಜೀವನ ಚಕ್ರ ಸಂಕೀರ್ಣವಾಗಿದೆ. ಒಂದು ಅಥವಾ ಹಲವು ಲಾರ್ವದ ಹಂತಗಳಿವೆ. ಕೆಲವು ಪ್ರಭೇದಗಳಲ್ಲಿ ಒಂದು ಲಾರ್ವದ ಹಂತದಿಂದ ಇನ್ನೊಂದು ಹಂತದ ಅನೇಕ ಲಾರ್ವಾಗಳು ಬೆಳೆಯುತ್ತವೆ. ಈ ಬೆಳವಣಿಗೆಯನ್ನು ಬಾಲ್ಯಪ್ರಜನನ (ಪೀಡೊಜೆನೆಸಿಸ್) ಎಂದು ಕರೆಯಲಾಗುತ್ತದೆ. ಇದರೊಂದಿಗೆ ಅನಿಶೇಕಜನನ (ಪಾರ್ತೆನೊಜೆನೆಸಿಸ್) ಕೂಡ ಇದೆ.

ಚಪ್ಪಟೆಹುಳುಗಳನ್ನು ಟರ್ಬುಲೇರಿಯ, ಟ್ರಿಮಾಟೊಡ ಹಾಗೂ ಸೆಸ್ಟೊಡ ಎಂಬ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ.

ವರ್ಗ 1. ಟರ್ಬುಲೇರಿಯ: ಸಾಮಾನ್ಯವಾಗಿ ಸ್ವತಂತ್ರ ಜೀವಿಗಳು. ಕೆಲವು ಹೊರ ಅಥವಾ ಒಳ ಪರಾವಲಂಬಿಗಳು. ದೇಹ ಯಾವುದೇ ಬಗೆಯಲ್ಲಿ ವಿಭಾಗವಾಗಿಲ್ಲ. ಖಂಡಗಳೂ ಇಲ್ಲ. ಕೆಲವು ಪ್ರಭೇದಗಳಲ್ಲಿ ಮುಂಭಾಗ ಎಡಬಲಗಳಲ್ಲಿ ಅಗಲವಾಗಿದ್ದು ತಲೆಯ ಭಾಗವೆಂದು ಗುರುತಿಸಬಹುದು. ಹೊರಚರ್ಮದ ಕೋಶಗಳಿಗೆ ಭಿತ್ತಿಇಲ್ಲ. ಆದರೆ ಅವುಗಳ ಹೊರಭಾಗದಿಂದ ಅನೇಕ ಶಿಲಿಕಾಂಗಗಳಿರುವುವು. ಕೋಶಗಳೊಳಗೆ ರ್‍ಯಾಬ್ಡೈಟುಗಳಿರುವುವು. ಹೊರಚರ್ಮ ಹಾಗೂ ಒಳಚರ್ಮಗಳೆರಡರಲ್ಲಿ ಗ್ರಂಥಿಗಳಿದ್ದು ಇವು ಅಂಟು ದ್ರವವನ್ನು ಸ್ರವಿಸುತ್ತವೆ.

ಜೀಣಾಂಗವ್ಯೂಹದಲ್ಲಿ ಬಾಯಿ, ಗಂಟಲು ಮತ್ತು ಕರುಳು ಇರುವುವು. ಎಸೀಲ ಉಪವರ್ಗದ ಸದಸ್ಯರಲ್ಲಿ ಕರುಳು ಇರುವುದಿಲ್ಲ. ಎಲ್ಲ ಚಪ್ಪಟೆಹುಳುಗಳಲ್ಲಿರುವಂತೆ ಜ್ವಲನಕೋಶ (ಫ್ಲೆಮ್ ಸೆಲ್ಸ್) ಅಥವಾ ಪ್ರೊಟೊನೆಫ್ರಿಡಿಯ ವಿಸರ್ಜನಾಂಗಗಳು. ಇವು ಏಕಲಿಂಗಿಗಳು ಅಥವಾ ಉಭಯಲಿಂಗಿಗಳು. ನಿರ್ಲಿಂಗ ಅಥವಾ ಲೈಂಗಿಕ ಪ್ರಜನನವಾಗುತ್ತದೆ. ಜೀವನಚಕ್ರ ಸರಳವಾಗಿದೆ. ಲಾರ್ವದ ಹಂತವಿಲ್ಲ.

ಈ ವರ್ಗದಲ್ಲಿ ಐದು ಗಣಗಳಿವೆ.

ಎಸೀಲ: ಇವು ಸಮುದ್ರವಾಸಿಗಳು. ಚಿಕ್ಕದಾಗಿರುವುವು. ಜೀರ್ಣಾಂಗವ್ಯೂಹದಲ್ಲಿ ಬಾಯಿ ಹಾಗು ಗಂಟಲು ಮಾತ್ರ ಇವೆ. ಕರುಳು ಇಲ್ಲ. ವಿಸರ್ಜನಾಂಗಗಳಿರುವುದಿಲ್ಲ. ಚರ್ಮದ ಕೋಶಗಳೇ ವಿಸರ್ಜನೆಯ ಜವಾಬ್ದಾರಿಯನ್ನು ನಿರ್ವಹಿಸುತ್ತವೆ. ಪ್ರಜನನಾಂಗದಲ್ಲಿ ಅಂಡನಾಳ ಮತ್ತು ಲೋಳೆಗ್ರಂಥಿಗಳಿರುವುದಿಲ್ಲ. ಉದಾ: ಕನ್ವೊಲೂಟ

ರ್‍ಯಾಬ್ಡೊಸೀಲ: ಬಹುತೇಕ ಪ್ರಭೇದಗಳು ಸಿಹಿನೀರಿನಲ್ಲಿ ವಾಸಿಸುವುವು. ಕೆಲವು ಸಮುದ್ರದ ನೀರಿನಲ್ಲಿ ಅಥವಾ ನೆಲದ ಮೇಲೆ ಕಾಣದೊರೆಯುವುವು. ಗಾತ್ರ ಚಿಕ್ಕದು. ಜೀಣಾಂಗವ್ಯೂಹ ಸಂಪೂರ್ಣವಾಗಿದ್ದು ಉತ್ತಮವಾಗಿ ಬೆಳೆದ ಕರುಳು ಇರುವುದು. ವಿಸರ್ಜನಾಂಗಗಳಾದ ಜ್ವಲನಕೋಶಗಳು ಬೆಳೆದಿರುವುವು. ನರವ್ಯೂಹದಲ್ಲಿ ಎರಡು ಅನುಲಂಬವಾದ ನರಹುರಿಗಳಿವೆ. ಪ್ರಜನನಾಂಗದಲ್ಲಿ ಕೆಲವು ಒತ್ತಾದ ಜನನ ಗ್ರಂಥಿಗಳಿರುವುವು. ಸ್ವತಂತ್ರಜೀವಿಗಳು ಅಥವಾ ಕೆಲವು ಪರೋಪಜೀವಿಗಳು. ಉದಾ: ಮೈಕ್ರೊಸ್ಟೊಮಮ್





ಅಲೋಸೀಲ: ಸಾಮಾನ್ಯವಾಗಿ ಸಮುದ್ರವಾಸಿಗಳು. ಕೆಲವು ಮಾತ್ರ ಸಿಹಿನೀರಿನಲ್ಲಿ ವಾಸಿಸುತ್ತವೆ. ಬಾಹ್ಯ ಪರಾವಲಂಬಿಗಳು. ಗಂಟಲಕುಳಿ ಸರಳವಾಗಿರುವುದು. ಕರುಳು ಮಡಿಚಿಕೊಂಡು ಚೀಲಗಳಾಗಿ ವಿಭಾಗವಾಗಿದೆ. ವಿಸರ್ಜನಾಂಗವ್ಯೂಹದಲ್ಲಿ ಎರಡು ಅಥವಾ ಮೂರು ಕವಲುಗಳುಳ್ಳ ಜ್ವಲನಕೋಶಗಳಿರುತ್ತವೆ. ನರಮಂಡಲದಲ್ಲಿ ಮೂರು

ಅಥವಾ ನಾಲ್ಕು ಜೊತೆ ಅನುಲಂಬವಾದ ಟ್ರಂಕ್ ಜೊತೆ ಅಡ್ಡ ಬಂಧಗಳು ಇವೆ. ಪ್ರಜನನಾಂಗದಲ್ಲಿ ಅನೇಕ ಚಿಕ್ಕ ಚಿಕ್ಕ ವೃಷಣಗಳು, ಒಂದು ಜೊತೆ ಅಂಡಾಶಯ, ಶಿಶ್ನತೊಟ್ಟು ಇದೆ. ಉದಾ: ಪ್ಲಜಿಯೊಸ್ಟೊಮಮ್.

ಟ್ರೈಕ್ಲಾಡಿಡ: ಸಮುದ್ರ, ಸಿಹಿನೀರು ವಾಸಿಗಳು ಅಥವಾ ಭೂಜೀವಿಗಳು. ದೊಡ್ಡ ಗಾತ್ರದವು. ಗಂಟಲಕುಳಿ ಮಡಿಚಿಕೊಂಡು ಹಿಂದಕ್ಕೆ ತಿರುಗಿದೆ. ಕರುಳಿನಲ್ಲಿ ಅನೇಕ ಮಡಿಕೆಗಳಿರುವುವು. ವೃಷಣಗಳು ಅನೇಕ. ಅಂಡಾಶಯ ಒಂದು ಜೊತೆ, ಲೋಳೆಗ್ರಂಥಿ ಒಂದು ಜೊತೆ, ಗಂಡಿನಲ್ಲಿ ಶಿಶ್ನ ಹಾಗೂ ಹೆಣ್ಣಿನಲ್ಲಿ ಬರ್ಸ ಎಂಬ ಲಿಂಗಾಂಗಗಳಿವೆ. ಉದಾ: ಡುಜೀಸಿಯ.

ಪಾಲಿಕ್ಲಾಡಿಡ: ಎಲ್ಲವೂ ಸಮುದ್ರಜೀವಿಗಳು. ದೇಹ ಅಗಲ ಹಾಗೂ ಚಪ್ಪಟೆಯಾಗಿದೆ. ಗಂಟಲಕುಳಿ ಮಡಿಚಿಕೊಂಡು ಕರುಳಿನಲ್ಲಿ ತೆರೆದಿದೆ. ಶರೀರದ ಮೇಲೆ ಅನೇಕ ಕಣ್ಣುಗಳಿರುವುವು. ಮೂರು ನಾಲ್ಕು ಜೊತೆ ನರಹುರಿಗಳು ಅಡ್ಡನರಗಳಿಂದ ಕೂಡಿ ಬಲೆಯಂತೆ ಹರಡಿದೆ. ಅನೇಕ ವೃಷಣ ಮತ್ತು ಅಂಡಾಶಯಗಳಿದ್ದು ಶರೀರದಲ್ಲೆಲ್ಲ ಚದುರಿರುವುವು. ಲೋಳೆಗ್ರಂಥಿ ಇಲ್ಲ. ಒಂದು ಅಥವಾ ಎರಡು ಜನನ ರಂಧ್ರಗಳಿವೆ. ಉದಾ: ನೊಟೊಪ್ಲಾನ



ವರ್ಗ 2. ಟ್ರೆಮಟೊಡ: ಹೊರ ಅಥವಾ ಒಳ ಪರಾವಲಂಬಿಗಳು. ದೇಹ ಎಲೆಯ ಆಕಾರವಿದೆ. ಹೊರಚರ್ಮದಲ್ಲಿ ಶಿಲಿಕಾಂಗಗಳಿರುವುದಿಲ್ಲ. ಕ್ಯುಟಿಕಲ್ ಇಡೀ ಶರೀರವನ್ನು ಆವರಿಸಿರುತ್ತದೆ. ಚನ್ನಾಗಿ ಬೆಳೆದ ಹೀರುತಟ್ಟೆಗಳಿವೆ. ಜೀರ್ಣಾಂಗ ವ್ಯೂಹ ಪೂರ್ಣವಾಗಿದ್ದು, ಬಾಯಿ, ಗಂಟಲು, ಕರುಳುಗಳೂ ಇವೆ. ಪ್ರೋಟೊನೆಫ್ರಿಡಿಯ ಉತ್ತಮವಾಗಿ ಬೆಳೆದಿದೆ. ಬಹುತೇಕ ಉಭಯಲಿಂಗಿಗಳು. ಒಂದು ಅಂಡಾಶಯ, ಪ್ರಜನನಾಂಗದಲ್ಲಿ ಎರಡರಿಂದ ಅನೇಕ ವೃಷಣಗಳು ಇವೆ. ಜೀವನ ಚಕ್ರ ಸರಳ ಅಥವಾ ಸಂಕೀರ್ಣ. ಈ ವರ್ಗದಲ್ಲಿ ಮೂರು ಗಣಗಳಿವೆ.



ಮೋನೊಜೀನಿಯ: ಕಶೇರುಕಗಳಲ್ಲಿ ಹೊರ ಅಥವಾ ಒಳಪರಾವಲಂಬಿ. ಬಾಯಿಯಲ್ಲಿ ಹೀರುತಟ್ಟೆ ಇಲ್ಲ. ಹಿಂಭಾಗ ಅಂಟುಬಿಲ್ಲೆ (ಅಡೆಸಿವ್ ಡಿಸ್ಕ್) ಅಥವಾ ಕೊಕ್ಕೆ ಆತಿಥೇಯಜೀವಿಯ ಶರೀರವನ್ನು ಹಿಡಿಯಲು ಸಹಾಯಕವಾಗುವುವು. ಒಂದು ಜೊತೆ ವಿಸರ್ಜಕ ರಂಧ್ರ ಮಾತ್ರ ಇದೆ. ಉದಾ: ಬೆನೆಡೆನಿಯ, ಪಾಲಿಸ್ಟೊಮ

ಆಸ್ಪಿಡೊಬೊತ್ರಿಯ: ಒಳಪರಾವಲಂಬಿ, ಬಾಯಿಯಲ್ಲಿ ಹೀರುನಾಳವಿಲ್ಲ. ಹೀರು ತಟ್ಟೆ ಮುಂಭಾಗದಲ್ಲಿರುವುದರ ಬದಲು ಶರೀರದ ಕೆಳಭಾಗದಲ್ಲಿದೆ. ಕೊಕ್ಕೆಗಳಿಲ್ಲ. ಒಂದು ವಿಸರ್ಜನ ರಂಧ್ರ ಮಾತ್ರ ಇದೆ. ಜೀವನ ಚಕ್ರ ಸರಳವಾಗಿದೆ. ಉದಾ: ಆಸ್ಪಿಡೊಗ್ಯಾಸ್ಟರ್.

ಡೈಜೀನಿಯ: ಒಳಪರಾವಲಂಬಿಗಳು. ಮುಂಭಾಗ ಕೊಕ್ಕೆಗಳಿಲ್ಲದ ಎರಡು ಹೀರುತಟ್ಟೆಗಳಿವೆ. ವಿಸರ್ಜನ ರಂಧ್ರ ಒಂದು ಮಾತ್ರ ಇದೆ. ಗರ್ಭಕೋಶ ಉದ್ದವಾಗಿದ್ದು ಅದರಲ್ಲಿ ಹಲವು ಮೊಟ್ಟೆಗಳಿರುವುವು. ಜೀವನ ಚಕ್ರ ಸಂಕೀರ್ಣವಾಗಿದ್ದು ಅನೇಕ ಲಾರ್ವದ ಹಂತಗಳಿವೆ. ಚಕ್ರ ಪೂರ್ತಿಯಾಗಲು ಒಂದು ಅಥವಾ ಎರಡು ಅತಿಥೇಯಜೀವಿಗಳು ಬೇಕು. ಉದಾ: ಫ್ಯಾಸಿಯೊಲ, ಬುಸೆಫಾಲಸ್. (ನೋಡಿ: ಯಕೃತ ಸಪಾಟಿ ಅಥವಾ ಲಿವರ್ ಫ್ಲೂಕ್)

ವರ್ಗ 3. ಸೆಸ್ಟೊಡ: ಕಶೇರುಕಗಳ ಕರುಳಿನಲ್ಲಿ ಒಳಪರಾವಲಂಬಿಗಳು. ಲಾಡಿಹುಳು ಪರ್ಯಾಯ ಹೆಸರು. ಹೊರಚರ್ಮ ಹಾಗೂ ಶಿಲಿಕಾಂಗಗಳಿಲ್ಲ. ದಪ್ಪ ಕ್ಯುಟಿಕಲ್ ಶರೀರವನ್ನು ಆವರಿಸಿರುತ್ತದೆ. ದೇಹ ಅನೇಕ ಖಂಡಗಳಾಗಿ ವಿಭಾಗವಾಗಿದೆ. ಈ ಖಂಡಗಳಿಗೆ ಪ್ರೊಗ್ಲೊಟಿಡ್ ಎಂದು ಹೆಸರು. ಅದರಿಂದ ವಲಯವಂತಗಳನ್ನು ಹೋಲುವುವಾದರೂ ಇವು ನಿಜವಾದ ವಲಯಗಳಲ್ಲ. ಮುಂಭಾಗ ತಲೆಯಂತೆ ದಪ್ಪ ಇರಬಹುದು (ಸ್ಕೋಲೆಕ್ಸ್) ಅಥವಾ ಇಲ್ಲದಿರಬಹುದು. ಅದರಲ್ಲಿ ಕೊಕ್ಕೆ, ಹೀರುತಟ್ಟೆ ಮುಂತಾದ ಅಂಟಿಕೊಳ್ಳುವ ಅಂಗಗಳಿವೆ. ಚಿಕ್ಕ ಕುತ್ತಿಗೆ ಇದೆ. ಬಾಯಿ ಹಾಗೂ ಜೀರ್ಣಾಂಗಗಳು ಇರುವುದೇ ಇಲ್ಲ. ಚರ್ಮದ ಮುಖಾಂತರ ಆತಿಥೇಯಜೀವಿಯ ಶರೀರದಿಂದ ಜೀರ್ಣವಾದ ಆಹಾರವನ್ನು ಪೌಷ್ಟಿಕಾಂಶಗಳನ್ನು ಹೀರುತ್ತವೆ. ವಿಸರ್ಜನಾಂಗಗಳಲ್ಲಿ ಉತ್ತಮವಾಗಿ ಬೆಳೆದ ಜ್ವಲನಕೋಶಗಳಿವೆ. ನರವ್ಯೂಹದಲ್ಲಿ ಒಂದು ಜೊತೆ ನರಗ್ರಂಥಿ, ಅನುಲಂಬವಾದ ಎರಡು ಪಾರ್ಶ್ವದ ನರಹುರಿಗಳು ಮುಂಭಾಗದಿಂದ ಹಿಂಭಾಗಕ್ಕೆ ಸಾಗುತ್ತವೆ. ಪ್ರತಿಯೊಂದು ಖಂಡದಲ್ಲೂ ಪೂರ್ಣ ಬೆಳೆವಣಿಗೆಯಾದ ಒಂದು ಜೊತೆ ಪ್ರಜನನಾಂಗಗಳಿವೆ. ಜೀವನ ಚಕ್ರ ಸಂಕೀರ್ಣವಾಗಿದೆ. ಭ್ರೂಣದಲ್ಲೂ ಕೊಕ್ಕೆಗಳಿವೆ. ಜೀವನಚಕ್ರ ಪೂರ್ಣವಾಗಲು ಒಂದು ಅಥವಾ ಎರಡು ಆತಿಥೇಯಜೀವಿ ಬೇಕು. ಈ ವರ್ಗವನ್ನು ಎರಡು ಉಪವರ್ಗಗಳಾಗಿ ವಿಂಗಡಿಸಲಾಗಿದೆ.

ಉಪವರ್ಗ ಸೆಸ್ಟೊಡೇರಿಯ: ಅಕಶೇರುಕಗಳ ದೇಹಾವಕಾಶದಲ್ಲಿ ಅಥವಾ ಕಶೇರುಕಗಳ ಶರೀರದಲ್ಲಿ ಒಳಪರಾವಲಂಬಿಗಳು. ಮುಂಭಾಗದಲ್ಲಿ ಸ್ಕೊಲೆಕ್ಸ್ ಇಲ್ಲ. ದೇಹ ಖಂಡಗಳಾಗಿ ವಿಭಜನೆಯಾಗಿಲ್ಲ. ಲಾರ್ವಗಳಿಗೆ 10 ಕೊಕ್ಕೆಗಳಿರುವುವು. ಈ ಉಪವರ್ಗದಲ್ಲಿ ಎರಡು ಗಣಗಳಿವೆ.

ಆಂಫಿಲಿನಿಡಿಯ: ಮೀನುಗಳ ದೇಹಾವಕಾಶದಲ್ಲಿ ಪರಾವಲಂಬಿ. ದೇಹ ಚಪ್ಪಟೆಯಾಗಿದ್ದು ಅಂಡಾಕಾರ ಅಥವಾ ನೀಳಾಕಾರದಲ್ಲಿದೆ. ಜನನರಂಧ್ರಗಳು ಹಿಂಭಾಗದಲ್ಲಿವೆ. ಗರ್ಭಕೋಶ ಸುರುಳಿಯಾಗಿದೆ. ಉದಾ: ಆಂಫಿಲಿನ.

ಗೈರೊಕಾಟಿಲಿಡಿಯ: ಮೀನಿನ ಕರುಳಿನಲ್ಲಿ ಪರಾವಲಂಬಿ. ದೇಹ ನೀಳ ಹಾಗೂ ಚಪ್ಪಟೆಯಾಗಿದೆ. ಮುಂಭಾಗದಲ್ಲಿ ಹೊರಚಾಚಬಲ್ಲ ಹೀರುತಟ್ಟೆಯಿದೆ. ಹಿಂಭಾಗದಲ್ಲಿ ಅಂಟುಬಿಲ್ಲೆ ಇದೆ. ಜನನರಂಧ್ರಗಳು ಮುಂಭಾಗದಲ್ಲಿ ತೆರೆಯುತ್ತವೆ. ಗರ್ಭಕೋಶ ಚಿಕ್ಕದಾಗಿರುವುದು. ಉದಾ: ಗೈರೊಕಾಟೈಲ್.

ಉಪವರ್ಗ ಯುಸೆಸ್ಟೊಡ: ನೀಳ ದೇಹ, ಉದ್ದ ತೆಳುಪಟ್ಟಿ ಅಥವಾ ರಿಬನ್ನಿನಂತಿದೆ. ಶರೀರ ಖಂಡಗಳಾಗಿ ವಿಭಾಗವಾಗಿದೆ. ಮುಂಭಾಗದಲ್ಲಿ ತಲೆಯಂತೆ ಉಬ್ಬಿರುವ ಸ್ಕೊಲೆಕ್ಸ್ ಇದೆ. ಎರಡು ಅಥವಾ ನಾಲ್ಕು ಹೀರುತಟ್ಟೆಗಳಿವೆ. ಪ್ರತಿಯೊಂದು ಖಂಡದಲ್ಲೂ ವಿಸರ್ಜನಾಂಗ ಹಾಗೂ ಪ್ರಜನನಾಂಗಗಳ ಒಂದು ಸಂಪೂರ್ಣ ಪ್ರತಿ ಇದೆ. ಲಾರ್ವಗಳಲ್ಲಿ ಆರು ಕೊಕ್ಕೆಗಳಿವೆ. ಈ ಉಪವರ್ಗದಲ್ಲಿ ಐದು ಗಣಗಳಿವೆ.




ಟೆಟ್ರಫಿಲ್ಲಿಡಿಯ: ಮೀನುಗಳ ಕರುಳಿನಲ್ಲಿರುವುವು. ಸ್ಕೊಲೆಕ್ಸ್‌ನಲ್ಲಿ ನಾಲ್ಕು ಹೀರುತಟ್ಟೆಗಳಿವೆ. ಕೊಕ್ಕೆಗಳೂ ಇವೆ. ವೃಷಣ ಅಂಡಾಶಯದ ಮುಂಭಾಗದಲ್ಲಿದೆ. ಉದಾ: ಫಿಲ್ಲೊಬೊತ್ರಿಯಂ.

ಡೈಫಿಲ್ಲಿಡಿಯ: ಮೃದ್ವಸ್ಥಿಮೀನುಗಳ ಕರುಳಿನಲ್ಲಿರುವುವು. ಖಂಡಗಳ ಸಂಖ್ಯೆ 20ಕ್ಕಿಂತ ಕಡಿಮೆ. ಸ್ಕೊಲೆಕ್ಸ್‌ನಲ್ಲಿ ಎರಡು ಹೀರುತಟ್ಟೆಗಳಿವೆ. ಉದಾ: ಎಖಿನೊಬೊತ್ರಿಯಂ.

ಟ್ರಿಪಾನೊರಿಂಕೆ: ಮೀನುಗಳ ಜೀರ್ಣಾಂಗಗಳಲ್ಲಿ ಪರಾವಲಂಬಿಗಳು. ದೇಹ ಮಧ್ಯಮ ಗಾತ್ರದ್ದು. ಅನೇಕ ಖಂಡಗಳಿವೆ. ಸ್ಕೊಲೆಕ್ಸ್‌ನಲ್ಲಿ ನಾಲ್ಕು ಹೀರು ತಟ್ಟೆಗಳು, ನಾಲ್ಕು ಮುಂಚಾಚಬಲ್ಲ ಸೊಂಡಿಲುಗಳೂ ಇವೆ. ಉದಾ: ಹ್ಯಾಪ್ಲೊಬೊತ್ರಿಯಂ.

ಸೂಡೊಫಿಲ್ಲಿಡಿಯ: ಕಶೇರುಕಗಳ ಕರುಳಿನಲ್ಲಿ ಪರಾವಲಂಬಿಗಳು. ದೇಹದಲ್ಲಿ ಖಂಡಗಳಿರಬಹುದು ಅಥವಾ ಇಲ್ಲದಿರಬಹುದು. ಎರಡರಿಂದ ಆರು ಹೀರುತಟ್ಟೆಗಳಿವೆ. ಅನೇಕ ಲೋಳೆಗ್ರಂಥಿಗಳಿವೆ. ಉದಾ: ಬೊತ್ರಿಯೊಸೆಫಾಲಸ್.

ಸೈಕ್ಲೊಫಿಲ್ಲಿಡಿಯ: ಪಕ್ಷಿ ಮತ್ತು ಸ್ತನಿಗಳ ಕರುಳಿನಲ್ಲಿ ಪರಾವಲಂಬಿಗಳು. ನಾಲ್ಕು ಉತ್ತಮವಾಗಿ ಬೆಳೆದ ಹೀರುನಳಿಕೆಗಳಿವೆ. ದೇಹ ಅನೇಕ ಖಂಡಗಳಾಗಿ ವಿಭಾಗವಾಗಿದೆ. ಸ್ಕೊಲೆಕ್ಸ್ ಮುಂಭಾಗ ಅಗಲವಾದ ಮೂತಿಇದೆ. ಅದರ ಸುತ್ತ ಅನೇಕ ಕೊಕ್ಕೆಗಳಿರುವುವು. ವಿಸರ್ಜನಾಂಗದಲ್ಲಿ ನಾಲ್ಕು ಅನುಲಂಬ ನಾಳಗಳಿವೆ. ಉದಾ: ಟೀನಿಯ ಸೊಲಿಯಂ. (ನೋಡಿ: ಲಾಡಿ ಹುಳು)

(ಎಸ್.ಆರ್.ಎಸ್.)

# ಫ

**ಫಲವಂತಿಕೆ (ಜೀವವಿಜ್ಞಾನದಲ್ಲಿ):** ಸಜೀವ ಸಂತಾನವನ್ನು ಪಡೆಯುವ ಸಾಮರ್ಥ್ಯ (ಫರ್ಟಿಲಿಟಿ). ಇದು ಜೀವಿಗಳ ಲಿಂಗಾಣುಗಳ ಉತ್ಪಾದನಾ ಸಾಮರ್ಥ್ಯ, ಲೈಂಗಿಕ ಸಂಪರ್ಕಸಾಮರ್ಥ್ಯ ಮತ್ತು ಸಂಪರ್ಕಗಳ ಫಲನಸಾಮರ್ಥ್ಯಗಳನ್ನು ಅವಲಂಬಿಸಿದೆ. ಹೆಂಗಸಿನ ಜೀವಮಾನದಲ್ಲಿ ಸರಾಸರಿ 360 ಅಂಡಾಣುಗಳು (ತಿಂಗಳಿಗೊಂದರಂತೆ 15 ವರ್ಷ ವಯಸ್ಸಿನಿಂದ 45ರ ತನಕ) ಆಕೆಯ ಎರಡು ಅಂಡಾಶಯಗಳಿಂದ ವಿಸರ್ಜನೆಯಾಗುತ್ತವೆ. ಗಂಡಸಿನ ಜೀವಮಾನದಲ್ಲಿ ಆತನ ಎರಡು ವೃಷಣಗಳಿಂದ ಅಸಂಖ್ಯಾತ ವೀರ್ಯಾಣುಗಳು ಉತ್ಪತ್ತಿಯಾಗುತ್ತವೆ. ಆದರೆ ಈ ಅಂಡಾಣು ವೀರ್ಯಾಣುಗಳೆಲ್ಲವೂ ಬೆರೆತು ಮಕ್ಕಳಾಗುವುದಿಲ್ಲ. ಏಕೆಂದರೆ ಜೀವಿಗಳ ನಿಜ (ಫಲಯುತ) ಸಂತಾನೋತ್ಪಾದನಾ ಸಾಮರ್ಥ್ಯ, ಸಾಧ್ಯ (ಗರಿಷ್ಠ) ಸಂತಾನೋತ್ಪಾದನಾ ಅಥವಾ ಲಿಂಗಾಣೋತ್ಪಾದನಾ ಸಾಮರ್ಥ್ಯಕ್ಕಿಂತ ಕಡಿಮೆ. ಸಸ್ಯಗಳಲ್ಲೂ ಬಹು ಮಟ್ಟಿಗೆ ಪುಷ್ಪ ಪರಾಗಗಳು ಮತ್ತು ಅಂಡಕಗಳು ನಾಶವಾಗಿ ನಿಜವಾದ ಫಲಮಿತಿ ಕಡಿಮೆಯೆ ಇರುತ್ತದೆ. ಹೆಣ್ಣು ಸೊಳ್ಳೆ ಒಂದು ಸಲಕ್ಕೆ 500 ಮೊಟ್ಟೆಗಳನ್ನಿಟ್ಟರೂ ಜಯಪ್ರದವಾಗಿ ಜನಿಸುವ ಮರಿಗಳು ಕಾರಣಾಂತರಗಳಿಂದ ಹೆಚ್ಚು ಕಡಿಮೆ ಈ ಸಂಖ್ಯೆಯ ಹತ್ತನೇ ಒಂದರಷ್ಟಿರಬಹುದು; ಮೀನುಗಳು ಕೋಟಿಗಟ್ಟಲೆ ಮೊಟ್ಟೆಯಿಟ್ಟರೂ 1%ರಷ್ಟು ಮಾತ್ರ ಮರಿಗಳಾಗಿ ದೊಡ್ಡವಾಗಬಹುದು; ಈ ಮರಿಗಳಲ್ಲಿ 0.1% ರಷ್ಟು ಮಾತ್ರ ಶತ್ರು ಇತ್ಯಾದಿಗಳಿಂದ ತಪ್ಪಿಸಿಕೊಂಡು ಬೆಳೆದು ದೊಡ್ಡವಾಗಬಹುದು.

ಜೀವನ ಸೌಕರ್ಯಗಳು ಕಡಿಮೆಯಿದ್ದಷ್ಟೂ ಪ್ರಾಣಿಗಳ ಸಂತಾನೋತ್ಪಾದನಾ ಸಾಮರ್ಥ್ಯ ಹೆಚ್ಚುವಂತೆ ಪ್ರಕೃತಿಯಲ್ಲಿ ವ್ಯವಸ್ಥೆಯಿದೆ. ಸ್ತನಿಗಳಲ್ಲಿ ಮರಿಗಳು ತಾಯಿಯ ಗರ್ಭಕೋಶದ ರಕ್ಷಣೆ ಮತ್ತು ಆಹಾರ ಸೌಲಭ್ಯ ಪಡೆದು ಬೆಳೆದು ಪ್ರಸವದ ಅನಂತರ ಮೊಲೆ ಹಾಲು ಸಿಗುವ ಏರ್ಪಾಡಿರುವುದರಿಂದ ಸ್ತನಿಗಳ ಸಂತಾನೋತ್ಪಾದನಾ ಸಾಮರ್ಥ್ಯ ಕಡಿಮೆ. ಮಾನವನ ಜೀವನ ಸೌಕರ್ಯಗಳು ಅತ್ಯುತ್ತಮವಾಗಿರುವುದರಿಂದ ಆತನ ಸಂತಾನಪ್ರಾಪ್ತಿ ಇತರ ಪ್ರಾಣಿಗಳಿಗೆ ಹೋಲಿಸಿದರೆ ತೀರ ಕಡಿಮೆ. ಹೀಗಿದ್ದರೂ ಆಹಾರೋತ್ಪಾದನೆ ಮತ್ತು ಆರೋಗ್ಯ ಸಂರಕ್ಷಣೆಗಳ ವ್ಯವಸ್ಥೆಯಿಂದ ಮರಣಗಳು ಕಡಿಮೆಯಾಗಿ ಆಯಸ್ಸು ಹೆಚ್ಚಿ ಪ್ರಕೃತಿಯ ಸಮತೋಲ ಆಯತಪ್ಪಿ ಮಾನವರಾಶಿ ವಿಷಮಸ್ಥಿತಿಯನ್ನು ಮುಟ್ಟಿದೆ.

ಲಿಂಗಾಣೋತ್ಪಾದನಾ ಸಾಮರ್ಥ್ಯ ಹಲವು ಪ್ರಭಾವಗಳಿಗೆ ಒಳಗಾಗುತ್ತದೆ. ಪ್ರಾಣಿಗಳ ಜಾತಿ, ಗಾತ್ರ, ವಂಶ, ಪೌಷ್ಟಿಕಾಹಾರ, ಜೀವಸತ್ವಗಳ ಲಭ್ಯತೆ ಮತ್ತು ಸಂಪರ್ಕ ಶಕ್ತಿಗಳು ಇಂಥ ಪ್ರಭಾವಗಳಲ್ಲಿ ಮುಖ್ಯ. 1. ಸ್ತನಿಗಳಲ್ಲಿ ಮರಿಗಳಿಗೆ ಹೆಚ್ಚು ರಕ್ಷಣೆಯಿರುವುದರಿಂದ ಲಿಂಗಾಣೋತ್ಪಾದನೆ ಕಡಿಮೆ. ಏಕಸಂತಾನ ಪ್ರಸವ ಸಾಮರ್ಥ್ಯವಿರುವ ಹೆಂಗಸು, ಬಾವಲಿ, ಕಪಿ ಇತ್ಯಾದಿಗಳಲ್ಲಿ ಒಂದು ಸಲಕ್ಕೆ ಒಂದೇ (ಅಪರೂಪವಾಗಿ 2–5) ಅಂಡಾಣುವಿನ ವಿಸರ್ಜನೆಯಾಗುತ್ತದೆ. ಪಕ್ಷಿ ಮತ್ತು ಇತರ ಅಂಡಜಗಳು ಒಂದು ವರ್ಷದಲ್ಲಿ ಹೆಚ್ಚು ಮೊಟ್ಟೆಗಳನ್ನಿಟ್ಟು ಮರಿಮಾಡುತ್ತವೆ. ಆದರೆ ಈ ಮರಿಗಳಲ್ಲಿ ಹಲವು ನಾಶವಾಗಿ ಕೆಲವೇ ದೊಡ್ಡವಾಗುತ್ತವೆ. ಸಂರಕ್ಷಣೆ ಕಡಿಮೆಯಿರುವುದರಿಂದ ಹೆಚ್ಚು ಮರಿಗಳಾಗುವಂತಿರುವುದು ಪ್ರಕೃತಿಯ ಒಂದು ಏರ್ಪಾಡು. ಪ್ರಾಣಿಗಳ ಗಾತ್ರ ಹೆಚ್ಚಿದಷ್ಟೂ ಲಿಂಗಾಣು ಉತ್ಪತ್ತಿ ಕಡಿಮೆ; ಉದಾಹರಣೆಗೆ ಆನೆ, ಕುದುರೆ ಮುಂತಾದ ದೊಡ್ಡಗಾತ್ರದ ಪ್ರಾಣಿಗಳಲ್ಲಿ ಒಂದು ಪ್ರಸವದಲ್ಲಿ ಒಂದೇ ಮರಿ ಹುಟ್ಟುವುದು. ಗಾತ್ರ ಕಡಿಮೆಯಾದಷ್ಟೂ ಉತ್ಪಾದನೆ ಹೆಚ್ಚು. ಉದಾಹರಣೆಗೆ ಇಲಿ, ಮೊಲ ಮುಂತಾದವು. ಇವುಗಳ ಒಂದು ಪ್ರಸವದಲ್ಲಿ 5–6 ಮರಿಗಳು ಹುಟ್ಟುವುವು. ಆದರೆ ಅಪವಾದಗಳು ಇಲ್ಲದಿಲ್ಲ. ಉದಾಹರಣೆಗೆ ಗಾತ್ರ ಹೆಚ್ಚಿದ್ದರೂ ಹಂದಿ ಹೆಚ್ಚುಮರಿಗಳನ್ನು ಗಾತ್ರ ಕಡಿಮೆಯಿದ್ದರೂ ಬಾವಲಿ ಒಂದೇ ಮರಿಯನ್ನೂ ಹಾಕುತ್ತವೆ. ಆಹಾರ ಮತ್ತು ವಿಪುಲತೆ ಹೆಚ್ಚಿದಷ್ಟೂ ಮರಿಗಳ ಸಂಖ್ಯೆ ಹೆಚ್ಚು. ಅನ್ನಾಂಗಗಳ ಅಭಾವದಿಂದ ಸಂತಾನಪ್ರಾಪ್ತಿ ಕಡಿಮೆಯಾಗುವುದು. ಸಂಪರ್ಕಶಕ್ತಿ (ಕಾಮುಕತೆ) ಹೆಚ್ಚಿದಷ್ಟೂ ಗರ್ಭಧಾರಣೆಯ ಸಂಭವ ಕಡಿಮೆ.

ವಾರ್ಷಿಕ ಸಂತಾನ ಋತುಚಕ್ರಗಳು ಹೆಚ್ಚಿದಷ್ಟೂ ಗರ್ಭಧಾರಣೆಗೆ ಅವಕಾಶ ಹೆಚ್ಚು. ಹಲವು ಕಾಡುಪ್ರಾಣಿಗಳಲ್ಲಿ ವರ್ಷಕ್ಕೆ 1–3 ಚಕ್ರ ಮಾತ್ರ ಇರುವುದರಿಂದ ಗರ್ಭಧಾರಣೆ ಈ ಋತುಗಳಲ್ಲಿ ಮಾತ್ರ ಆಗುವುದು. ಹೆಂಗಸಿನಲ್ಲಿ ವರ್ಷಕ್ಕೆ 12 ಚಕ್ರ ಇರುವುದರಿಂದ ಗರ್ಭಧಾರಣೆ ಋತುಗಳ ಮಿತಿಯಿಲ್ಲದೆ ಆಗಲು ಸಾಧ್ಯ.

ಪ್ರಾಣಿಯ ಆಯುಷ್ಯ ಹೆಚ್ಚಿದಷ್ಟೂ ಅದರ ಫಲವಂತಿಕೆ ಅವಧಿ ಹೆಚ್ಚುವುದು; ಉದಾಹರಣೆಗೆ ಹೆಂಗಸು ಸುಮಾರು 30 ವರ್ಷಕಾಲ ಫಲವತ್ತಾಗಿರುತ್ತಾಳೆ. ಮಾನವನಷ್ಟು ದೀರ್ಘಕಾಲ ಬದುಕದಿದ್ದರೂ ಸಾಕುಪ್ರಾಣಿಗಳು ಆಹಾರ ಪುಷ್ಟಿ ಮತ್ತು ಮನೆಗಳ ಆಸರೆಯಿಂದ ಹೆಚ್ಚು ಉತ್ಪನ್ನಶಕ್ತಿಯನ್ನು ಪಡೆದಿರುವುವು.

ಮ್ಯೂಲ್ ಮುಂತಾದುವುಗಳಲ್ಲಿ ಲಿಂಗಾಣೋತ್ಪಾದನಾ ಶಕ್ತಿಯಿಲ್ಲದಿರುವುದರಿಂದ ಅವು ಬರಡಾಗಿರುತ್ತವೆ. ಗದ್ದಬಾವು ಮುಂತಾದ ರೋಗಗಳು, ಕೆಲವು ವಿಷಪದಾರ್ಥಗಳು, ಎಕ್ಸ್ ಕಿರಣ ಇತ್ಯಾದಿಗಳಿಂದ ಅಂಡಗಳು ಕ್ಷೀಣಿಸಿ ಮಾನವ ಮತ್ತು ಇತರ ಪ್ರಾಣಿಗಳು ಬರಡಾಗಬಹುದು. ದೇಶಾಂತರ, ಹವೆಯ ಬದಲಾವಣೆ, ಮನೋರೋಗ, ಸತಿಪತಿಗಳ ನಡುವೆ ವೈಷಮ್ಯ ಇತ್ಯಾದಿಗಳಿಂದ ಸಂತಾನವೃದ್ಧಿ ಸಾಮರ್ಥ್ಯ ಕುಗ್ಗಬಹುದು. ಅಸ್ವಾಭಾವಿಕ ಸಂಪರ್ಕ ಅಥವಾ ಸಂಭೋಗಾಂಗಗಳ ವಿಕಲತೆಯಿಂದ ಉತ್ಪಾದನಾ ಸಾಮರ್ಥ್ಯ ಕುಗ್ಗುವುದು. ಸಂಪರ್ಕ ಸರಿಯಿದ್ದರೂ ಸ್ತ್ರೀ ಮತ್ತು ಪುರುಷ ಲಿಂಗಾಣುಗಳ ವಿಕಲತೆ ಅಥವಾ ಪರಸ್ಪರ ಲೀನವಾಗುವ ಸಾಮರ್ಥ್ಯವಿಲ್ಲದಿರುವುದರಿಂದ ಸಂತಾನೋತ್ಪತ್ತಿ ಕಡಿಮೆಯಾಗುವುದು. ಗಂಡು ಮತ್ತು ಹೆಣ್ಣುಗಳ ದೇಹಗುಣಗಳಲ್ಲಿ ಹೊಂದಾಣಿಕೆ ಇಲ್ಲದಿರುವುದರಿಂದಲೂ ಸಂತಾನಫಲ ಕಡಿಮೆಯಾಗುವುದುಂಟು. ಸಾಮಾಜಿಕ ಮತ್ತು ವಿದ್ಯಾಮಟ್ಟಗಳು ಹೆಚ್ಚಿದಷ್ಟೂ ಮಾನವನಲ್ಲಿ ಉತ್ಪಾದನಾಸಾಮರ್ಥ್ಯ ತಿಳಿದ ತರ್ಕಗಳಿಗೆ ಒಳಪಡದೆ ಕುಗ್ಗುವುದು.

ಗರ್ಭಾವಸ್ಥೆಯಲ್ಲಿರಬಹುದಾದ ಕುಂದುಗಳಿಂದ ಭ್ರೂಣಮೃತ್ಯುವಿನ ಸಂಭವವಿದೆ. ಬಹುಸಂತಾನ ಗರ್ಭದಲ್ಲಿ ಹೆಚ್ಚು ಪಿಂಡಗಳ ಪೋಷಣೆ ಸಮರ್ಪಕವಾಗಿಲ್ಲದೆ ಗರ್ಭನಾಶವಾಗಬಹುದು. ಪಾರಂಪರ್ಯ ರೋಗಗಳು ವಂಶದಲ್ಲಿದ್ದರೂ ಗರ್ಭಪಾತಕ್ಕೆ ಹೆಚ್ಚು ಅವಕಾಶವಿದೆ. ಇದರಲ್ಲಿ ಸಾಮಾನ್ಯವಾಗಿ ಹೆಣ್ಣು ಸಂತಾನಕ್ಕಿಂತ ಗಂಡು ಸಂತಾನದ ನಾಶ ಹೆಚ್ಚು.

ಪ್ರಸವಾನಂತರದ ಮೃತ್ಯು ಗಂಡುಸಂತಾನವನ್ನು ಹೆಚ್ಚು ಕಾಡುತ್ತದೆ. 10–15 ವರ್ಷ ವಯಸ್ಸಿನಲ್ಲಿ ಋತುಸಂಬಂಧ ದೌರ್ಬಲ್ಯದಿಂದ ಹೆಚ್ಚು ಹೆಣ್ಣು ಮಕ್ಕಳು ಸಾಯುತ್ತಾರೆ. ಈ ಅಪಮೃತ್ಯುಗಳಿಂದ ಸಂತಾನ ಸಾಮರ್ಥ್ಯ ಕುಗ್ಗುತ್ತದೆ. ***

**ಫಲಭರಿತತೆ ಮತ್ತು ಫಲವಂತಿಕೆ (ಸಂಖ್ಯಾಕಲನವಿಜ್ಞಾನದಲ್ಲಿ):** ಕ್ರಿಯಾಶೀಲ ಲಿಂಗಾಣುಗಳನ್ನು ಉತ್ಪಾದಿಸುವ ಸಾಮರ್ಥ್ಯ ಫಲಭರಿತತೆ (ಫೆಕಂಡಿಟಿ). ಸಜೀವ ಸಂತತಿಯನ್ನು ಪಡೆಯುವ ಮೂಲಕ ವಾಸ್ತವವಾಗಿ ಪ್ರದರ್ಶಿತವಾಗುವ ಮಟ್ಟ ಫಲವಂತಿಕೆ (ಫರ್ಟಿಲಿಟಿ). ಯಾವುದೇ ಜೀವಸಮಷ್ಟಿಯ ಪುನರುತ್ಪತ್ತಿ ದರವನ್ನು ಅದರ ಸದಸ್ಯರ ಫಲಭರಿತತೆ ಮತ್ತು ಫಲವಂತಿಕೆ ನಿರ್ಧರಿಸುತ್ತವೆ. ಮೊದಲನೆಯದನ್ನು ಸಮಷ್ಟಿ ತಲುಪಬಲ್ಲ ಗರಿಷ್ಠ ಪುನರುತ್ಪತ್ತಿ ಮಟ್ಟ ಎಂದೂ ಎರಡನೆಯದನ್ನು ಅದು ನಿಜವಾಗಿಯೂ ತಲುಪಿದ ಮಟ್ಟ ಎಂದೂ ಪರಿಗಣಿಸುವುದುಂಟು. ಕಠಿಣಪರಿಸರದಲ್ಲಿರುವ ಜೀವಿಗಳಲ್ಲಿ ಫಲಭರಿತತೆ ಸಾಮಾನ್ಯವಾಗಿ ಅಧಿಕ. ಸಂರಕ್ಷಿತ ಪರಿಸರದಲ್ಲಿರುವ ಜೀವಿಗಳಲ್ಲಿ ಕಡಿಮೆ. ಅಂದರೆ ಅನೇಕ ಶತ್ರುಗಳಿದ್ದು ಹಲವು ಅಪಾಯಗಳನ್ನು ಎದುರಿಸಬೇಕಾಗಿರುವ ಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಣುಗಳನ್ನು ಉತ್ಪಾದಿಸುತ್ತವೆ. ಕೆಲವು ಬಗೆಯ ಮೀನುಗಳು ವಾರ್ಷಿಕವಾಗಿ 800–7500 ಕೋಟಿ ಮೊಟ್ಟೆಗಳನ್ನು ಉತ್ಪಾದಿಸಿದರೂ ಅವುಗಳಿಂದ ವಾಸ್ತವವಾಗಿ ಜನಿಸುವ ಮರಿಮೀನುಗಳು ಮಾತ್ರ ಸಾವಿರದಲ್ಲಿ ಒಂದು. ಆದರೆ ಮಾನವನಂಥ ಸ್ತನಿಯಲ್ಲಿ ಫಲಭರಿತತೆ ಕಡಿಮೆಯಿದ್ದರೂ ಪುನರುತ್ಪತ್ತಿದರ ಹೆಚ್ಚಾಗಿಯೇ ಇದೆ. ಲಿಂಗಾಣುಗಳ ಸಂಖ್ಯೆ ಮತ್ತು ಕ್ರಿಯಾಶೀಲತೆ, ಜೀವಿಯ ಆಯುಷ್ಯ ಮತ್ತು ಸಂತಾನ ಪಡೆಯುವ ಅವಧಿ, ಅಂಡೋತ್ಪತ್ತಿಯ ಆವರ್ತಾಂಕ–ಇವನ್ನು ನಿರ್ಧರಿಸುವ ಅಂಶಗಳು ಫಲವಂತಿಕೆಯ ಮೇಲೆ ಪ್ರಭಾವಬೀರುತ್ತವೆ.

ಸಜೀವ ಜನನಗಳ ಸಂಖ್ಯೆ ಫಲವಂತಿಕೆಯ ಸೂಚಕ. ಜನನಸಂಬಂಧ ವಿವರಗಳನ್ನು ಬಳಸಿ ಫಲವಂತಿಕೆಯನ್ನು ಅಂದಾಜುಮಾಡಬಹುದು. ಆದರೆ ಫಲಭರಿತತೆಯನ್ನು ನೇರವಾಗಿ ಅಳೆಯಲು ಬರದು. ಮಾನವಸಮಷ್ಟಿಯ ಫಲವಂತಿಕೆಗೆ ಯುಕ್ತಮಾನಕಗಳನ್ನು ರಚಿಸಲು ಯತ್ನಿಸಿದ್ದಾರೆ. ಈ ಕೆಲಸ ಸುಲಭವಲ್ಲ. ಕಾರಣಗಳು ಹಲವು: ಫಲವಂತಿಕೆಗಿರುವ ಹಲವು ವ್ಯಾಖ್ಯೆಗಳು, ಜನನ ವಿತರಣೆಯಲ್ಲಿಯ ವೈಚಿತ್ರ್ಯ, ಹೆಚ್ಚಾಗಿ ಬೇರೆ ಉದ್ದೇಶಕ್ಕಾಗಿ

ಸಂಗ್ರಹಿಸಿದ ಮಾಹಿತಿಯನ್ನು ಬಳಸಬೇಕಾದುದು, ದತ್ತಾಂಶಗಳಲ್ಲಿರುವ ಕುಂದುಕೊರತೆ ಇತ್ಯಾದಿ.

ಜನನಗಳ ಆವರ್ತಾಂಕವೇ ಫಲವಂತಿಕೆಯ ಮಾಪನಕ್ಕೆ ತಳಹದಿ. ಯಾವುದೇ ಪಂಚಾಂಗವರ್ಷದಲ್ಲಿ ಸಂಭವಿಸಿದ ಜನನ ಮತ್ತು ಜನಸಂಖ್ಯಾಮಾಹಿತಿ ಬಳಸಿ ಜನನದರ ಗಣಿಸುವುದು ಒಂದು ಮಾರ್ಗ, ಸಂತಾನಪಡೆಯುವ ಅವಧಿಯಲ್ಲಿ ವ್ಯಕ್ತಿಗೆ/ದಂಪತಿಗೆ ಆಗುವ ಸಂತತಿಯ ಸರಾಸರಿ ಸಂಖ್ಯೆಯನ್ನು (ಪೂರ್ಣಗೊಂಡ ಕುಟುಂಬಗಾತ್ರವನ್ನು) ತಿಳಿಯುವುದು ಇನ್ನೊಂದು ಮಾರ್ಗ. ಮೊದಲನೆಯದು ಹಲವು ವಿಭಿನ್ನ ವರ್ಗಗಳ ಪುನರುತ್ಪತ್ತಿ ಚಟುವಟಿಕೆಯ ದತ್ತ ವರ್ಷದ ಅಂಶವನ್ನು ಮಾತ್ರ ಒಳಗೊಂಡಿರುತ್ತದೆ. ಎರಡನೆಯದು ಒಂದು ವರ್ಗದ ಪೂರ್ಣಗೊಂಡ ಇಂಥ ಚಟುವಟಿಕೆಯನ್ನು ಪ್ರತಿನಿಧಿಸುತ್ತದೆ.

ವಾರ್ಷಿಕ ಜನನದರಗಳು: ಜನಸಮಷ್ಟಿಯಲ್ಲಿ ಫಲವಂತಿಕೆಯನ್ನು ಅಳೆಯುವ ಮುಖ್ಯ ತಳಹದಿ ಯಾವುದಾದರೊಂದು ವಾರ್ಷಿಕ ಸೂಚಿ. ಉದಾಹರಣೆಗೆ ಜನನಗಳ ವಾರ್ಷಿಕ ಸಂಖ್ಯೆ ಮತ್ತು ಆ ವರ್ಷದ ಯಾವುದಾದರೊಂದು ಸಂಬಂಧಿತ ಜನಸಂಖ್ಯೆಗಿರುವ ನಿಷ್ಪತ್ತಿ, ಈ ಮುಂದಿನ ದರಗಳು ಸಾಮಾನ್ಯ ಬಳಕೆಯಲ್ಲಿವೆ: (i) ಕಚ್ಚಾ ಜನನದರ : ನೋಂದಾಯಿಸಿದ ಜನನಗಳ ವಾರ್ಷಿಕ ಸಂಖ್ಯೆ ಮತ್ತು ವರ್ಷಮಧ್ಯದ ಜನಸಂಖ್ಯೆ ಇವುಗಳ ನಿಷ್ಪತ್ತಿ. (ii) ಸಾರ್ವತ್ರಿಕ ಫಲವಂತಿಕೆದರ: ನೋಂದಾಯಿಸಿದ ಜನನಗಳ ವಾರ್ಷಿಕ ಮತ್ತು ಗರ್ಭಧರಿಸುವ ವಯಸ್ಸಿನ (15–44 ಅಥವಾ 15–49) ಮಹಿಳೆಯರ ಸಂಖ್ಯೆಗಳ ನಿಷ್ಪತ್ತಿ. ಇಲ್ಲಿ ನಿಷ್ಪತ್ತಿಯ ಛೇದ ತಾಯಿಯಾಗಬಲ್ಲವರಿಗೆ ಮಾತ್ರ ಸೀಮಿತ. (iii) ವಯೋನಿರ್ದಿಷ್ಟ ಜನನದರ: ಯಾವುದೇ ವಯೋವರ್ಗದ ಮಹಿಳೆಯರಿಗೆ ಜನಿಸಿದ ಮಕ್ಕಳ ವಾರ್ಷಿಕ ಸಂಖ್ಯೆ ಮತ್ತು ಆ ವರ್ಗದ ಮಹಿಳೆಯರ ಒಟ್ಟು ಸಂಖ್ಯೆಗಳ ನಿಷ್ಪತ್ತಿ. (iv) ಶಿಶು–ಸ್ತ್ರೀ ನಿಷ್ಪತ್ತಿ : ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ ಮತ್ತು ಗರ್ಭಧರಿಸುವ ವಯಸ್ಸಿನ ಹೆಂಗಸರ ಸಂಖ್ಯೆಗಳ ನಿಷ್ಪತ್ತಿ. (v) ಸಮಗ್ರ ಫಲವಂತಿಕೆ ದರ: 15–49 ವರ್ಷ ವಯಸ್ಸಿನ ಮಹಿಳೆಯರ ಎಲ್ಲ ವಯೋನಿರ್ದಿಷ್ಟ ಜನನದರಗಳ ಮೊತ್ತ. (vi) ಕಚ್ಚಾಪುನರುತ್ಪತ್ತಿದರ; 15–49 ವರ್ಷ ವಯಸ್ಸಿನ ಮಹಿಳೆಯರ ಎಲ್ಲ ವಯೋನಿರ್ದಿಷ್ಟ ಜನನದರಗಳನ್ನು ಸ್ತ್ರೀ ಜನನಗಳಿಗೆ ಮಾತ್ರ ಅನ್ವಯಿಸುವಂತೆ ಲೆಕ್ಕಿಸಿ ಅವುಗಳ ಮೊತ್ತ.

ಹೆಚ್ಚಿನ ಸಂದರ್ಭಗಳಲ್ಲಿ ದತ್ತಾಂಶಗಳು ಈ ದರಗಳ ಪೈಕಿ ಆಯ್ದುಕೊಳ್ಳುವ ಪ್ರಶ್ನೆ ಉದ್ಭವಿಸಲು ಅವಕಾಶವ ನೀಡುವುದಿಲ್ಲ. ಉದಾಹರಣೆಗೆ ಜನನಗಳ ಮತ್ತು ಜನರ ಸಂಖ್ಯೆ ಮಾತ್ರ ತಿಳಿದಿರುವಾಗ ಕಚ್ಚಾ ಜನನದರವನ್ನು ಮಾತ್ರ ಗಣಿಸಬಹುದು. ಜನಗಣತಿ ನೀಡುವ ವಯೋವಿತರಣೆ ಮಾತ್ರ ತಿಳಿದಿದ್ದು ಜನನಗಳ ವಿವರ ತಿಳಿಯದಿರುವಾಗ ಶಿಶು–ಸ್ತ್ರೀ ನಿಷ್ಪತ್ತಿಯನ್ನು ಗಣಿಸಬೇಕು, ಇತ್ಯಾದಿ.

ಪೂರ್ಣಗೊಂಡ ಕುಟುಂಬದ ಗಾತ್ರ: ಹೆಂಗಸರ ಒಂದು ನಿರ್ದಿಷ್ಟ ಗುಂಪಿಗೆ ಜನಿಸುವ ಎಲ್ಲ ಮಕ್ಕಳನ್ನು ಗಣಿಸುವುದು ಫಲವಂತಿಕೆಯನ್ನು ಅಳೆಯುವ ಇನ್ನೊಂದು ವಿಧಾನ. ಅಂದರೆ ದತ್ತ ವರ್ಷದಲ್ಲಿ ಬೇರೆ ಬೇರೆ ಮಹಿಳೆಯರಿಗಾಗುವ ಜನನಗಳ ಮೊತ್ತದ ಬದಲು ಹೆಂಗಸರ ನಿರ್ದಿಷ್ಟ ಗುಂಪಿನಲ್ಲಿ ಅದರ ಜೀವಮಾನದಲ್ಲಿ ಆಗುವ ಎಲ್ಲ ಜನನಗಳ ಮೊತ್ತವನ್ನು ಪಡೆದು ಸರಾಸರಿಯನ್ನು ಗಣಿಸುವುದು. ಇದಕ್ಕೆ ಬೇಕಾಗುವ ಮಾಹಿತಿಗೆ ಮೂರು ತರಹದ ಮೂಲಗಳಿವೆ: (i) ಕಡಿಮೆಯೆಂದರೆ 30–35 ಅನುಕ್ರಮ ವರ್ಷಗಳ ವಯೋನಿರ್ದಿಷ್ಟ ಜನನಗಳು ತಿಳಿದಿದ್ದರೆ ಅವನ್ನು ಹೆಂಗಸರ ನಿರ್ದಿಷ್ಟ ಗುಂಪಿಗೆ ಅನ್ವಯಿಸುವಂತೆ ಒಟ್ಟುಗೂಳಿಸುವುದು. (ii) ಸ್ತ್ರೀಯರು ವೈಯಕ್ತಿಕವಾಗಿ ಇತ್ತ ಜನ್ಮ ದಾಖಲೆಗಳನ್ನು ಬಳಸುವುದು. ಸು. 35 ಅನುಕ್ರಮ ವರ್ಷಗಳ ಇಂಥ ಮಾಹಿತಿ ಇದ್ದಲ್ಲಿ ಸ್ತ್ರೀಯರ ನಿರ್ದಿಷ್ಟ ಗುಂಪಿನ ಪುನರುತ್ಪಾದನೆ ಚರಿತ್ರೆ ತಿಳಿಯುವುದು ಸಾಧ್ಯ. ಆದರೆ ಇಂಥ ಮಾಹಿತಿ ಸಿಗುವುದು ವಿರಳ. (iii) ಜನಗಣತಿ ಅಥವಾ ವಿಶೇಷ ಸಮೀಕ್ಷೆಗಳ ಸಂದರ್ಭದಲ್ಲಿ ವಯಸ್ಕರು ವೈಯಕ್ತಿಕವಾಗಿ ನೀಡಿದ ವರದಿಗಳ ಬಳಕೆ. ಪ್ರತಿಯೊಬ್ಬ ಮಹಿಳೆಗೆ ಜನಿಸಿದ ಮಕ್ಕಳ ಒಟ್ಟು ಸಂಖ್ಯೆ ಮತ್ತು ಪ್ರತಿ ಮಗುವಿನ ಜನನ ತಾರೀಕಿನ ಕುರಿತ ಪ್ರಶ್ನೆಗೆ ಉತ್ತರವಾಗಿ ಈ ಮಾಹಿತಿ ಇರುತ್ತದೆ. ಫಲವಂತಿಕೆಯ ಮಾಪನ ಜನಸಂಖ್ಯಾವೃದ್ಧಿಯ ಪ್ರರೂಪವನ್ನು ತಿಳಿಯಲು ಅತ್ಯವಶ್ಯ. (ಎಸ್.ಟಿ.)

**ಫಲ್ಗೋರಿಡೆ:** ಸಂಧಿಪದಿ ವಂಶದ ಹೆಮಿಪ್ಟಿರ ಗಣದ ಕುಟುಂಬ. ಇದರ ಸದಸ್ಯರುಗಳು ಆಕಾರದಲ್ಲಿ ಎಲೆಕೀಟಗಳಂತಿವೆ. ಇವುಗಳ ಕಣ್ಣಿನ ಕೆಳಭಾಗದಲ್ಲಿ ಕುಡಿಮೀಸೆ ಇದ್ದು, ಅದು ನೇರವಾಗಿ ತಲೆಗೆ ಅಂಟಿಕೊಂಡಿದೆ. ಕುಡಿಮೀಸೆಯ ಮೊದಲನೆಯ ಎರಡು ಖಂಡಗಳು ಉಳಿದ ಖಂಡಗಳಿಗಿಂತ ದೊಡ್ಡವು. ಕೆಲವು ಪ್ರಭೇದಗಳು, ಉಗುಳು ತಿಗಣೆಯಂತೆ, ಕೆಲವು ಎಲೆಕೀಟಗಳಂತೆ, ಇನ್ನು ಕೆಲವು ಅಗಲವಾದ ಬೀಜಗಳಂತೆ ಇವೆ. ತಲೆಯ ಮುಂಭಾಗದಲ್ಲಿ ಬಾಗಿರುವ ಕೃಶವಾದ ಕೊಂಬಿನಾಕೃತಿಯ ಪ್ರಕ್ಷೇಪಣ ಇದೆ. ರೆಕ್ಕೆಗಳು, ದೇಹದ ಆಕಾರ, ನರರಚನೆ ಮತ್ತು ಬಣ್ಣಗಳಲ್ಲಿ ವಿವಿಧ ಪ್ರಭೇದಗಳಿಗನುಗುಣವಾಗಿ ಬೇರೆಯಾಗಿವೆ. ಕೆಲವೊಮ್ಮೆ ರೆಕ್ಕೆ ಮುಚ್ಚಿದಾಗಲೂ ಹೊಟ್ಟೆಯ ಭಾಗಗಳು ಹೊರಚಾಚಿಕೊಂಡಿರುತ್ತವೆ. ರೆಕ್ಕೆಯ ಹರವು ಸು. ೧೫೦ ಮಿಮೀ. ರೆಕ್ಕೆಗಳು ಸಾಮಾನ್ಯವಾಗಿ ಸಂಪೂರ್ಣ ಅಥವಾ ಅರೆಪಾರದರ್ಶಕವಾಗಿವೆ. ಕೆಲವು ಪ್ರಭೇದಗಳಲ್ಲಿ ರೆಕ್ಕೆಯ ಬಣ್ಣ ಮತ್ತು ದೇಹದ ಬಣ್ಣ ಒಂದೇ ರೀತಿಯದು. ಇನ್ನು ಕೆಲವು ಪ್ರಭೇದಗಳಲ್ಲಿ ದೇಹ ಮಸಕು ವರ್ಣದ್ದಾದರೂ, ರೆಕ್ಕೆಗಳು ವರ್ಣಮಯವಾಗಿರುತ್ತವೆ. ಕಣ್ಣುಗಳಲ್ಲಿ ಎರಡು ಅಥವಾ ಅಪರೂಪವಾಗಿ ಮೂರು ಸರಳನೇತ್ರಗಳಿವೆ. ಪೊರೆಹುಳುಗಳ ಹೊರಮೈಗೆ ಬಿಳಿ ಅಂಟಿನಂಥ ವಸ್ತು ಮೆತ್ತಿಕೊಂಡಿರುತ್ತದೆ. ಕೆಲವು ಪ್ರಭೇದಗಳು ಈ ಅಂಟಿನಂಥ ವಸ್ತುವನ್ನು ಸ್ರವಿಸುತ್ತವೆ. ಪೈರೊಪ್ಸ್ ಚೆನಾಲಿ ಎಂಬುದು ಭಾರತದಲ್ಲಿ ವಾಸಿಸುವ ಸಾಮಾನ್ಯ ಪ್ರಭೇದ. ಫಲ್ಗೋರ ಡೆಲೆಸ್ಸರ್ಟಿ ಪ್ರಭೇದ ಹಿಂಡುಗಟ್ಟಿಕೊಂಡು ಹುಣಸೆ ಮರಗಳಲ್ಲಿರುವುದನ್ನು ದಕ್ಷಿಣಭಾರತದಲ್ಲಿ ಕಾಣಬಹುದು. (ಎಸ್.ಎನ್.ಎಚ್.)

**ಫಾರ್ಮಿಸಿಡೆ:** ಹೈಮೆನಾಪ್ಟರ ಗಣದಲ್ಲಿನ ಇರುವೆಗಳ ಕುಟುಂಬ. ಇರುವೆಗಳಲ್ಲಿ ಹಲವಾರು ಜಾತಿ, ಪ್ರಭೇದಗಳಿವೆ. ಇರುವೆಗಳ ಪ್ರಮುಖ ಲಕ್ಷಣಗಳು: ಹೊಟ್ಟೆಯ ಮೊದಲನೆಯ ಖಂಡ (ಅಥವಾ ಮೊದಲೆರಡು ಖಂಡಗಳು) ಹಿಂಭಾಗದೆಡೆಗೆ ಉಬ್ಬಿಕೊಂಡಿದ್ದು, ಮಿಕ್ಕೆಲ್ಲ ಖಂಡಗಳಿಂದ ಬೇರ್ಪಟ್ಟಂತಿರುತ್ತದೆ. ಕುಡಿಮೀಸೆಯ ತುದಿ ದಪ್ಪವಾಗಿದೆ. ರೆಕ್ಕೆಗಳು (ಇದ್ದರೆ) ಪೊರೆಯಂತಿವೆ. ದಿಂಡುಗಳು ಕಡಿಮೆ. ತಲೆ, ಎದೆ, ಹೊಟ್ಟೆ (ಉದರ) ಪರಸ್ಪರ ಪ್ರತ್ಯೇಕವಾಗಿವೆ. ಸೊಂಟ ಅಥವಾ ತೊಟ್ಟಿನ ಮೇಲೆ ಒಂದೊ, ಎರಡೊ ಗಂತಿಗಳಿವೆ.

ಕೀಟಗಳ ಪೈಕಿ ಇರುವೆಗಳು ಮನುಷ್ಯನಿಗೆ ಅತ್ಯಂತ ಚಿರಪರಿಚಿತ. ಇವು ಕೀಟವರ್ಗದ ಉಳಿದೆಲ್ಲ ಸದಸ್ಯರಿಗಿಂತ ಬಹಳ ಮುಂದುವರಿದ ಕೀಟಗಳು. ಸಂಖ್ಯೆಯಲ್ಲೂ ಇವು ಉಳಿದ ಕೀಟಗಳಿಗಿಂತ ಹೆಚ್ಚು.

ಇರುವೆಗಳು ಸಾಮಾಜಿಕ ಕೀಟಗಳು. ನಿವಹ (ಕಾಲೋನಿ) ರಚಿಸಿಕೊಂಡು ಜೀವಿಸುವ ಸಂಘ ಜೀವಿಗಳು. ಇವುಗಳ ಸಮಾಜ ವ್ಯವಸ್ಥೆ ವಿಶಿಷ್ಟ ಬಗೆಯದು. ಒಂದೊಂದು ಸಮಾಜದಲ್ಲಿ ರಾಣಿ ಮತ್ತು ಗಂಡು ಹಾಗು ಕೆಲಸಗಾರ ಇರುವೆಗಳೆಂಬ ಮೂರು ಬಗೆಗಳಿವೆ. ಇಡೀ ಸಮಾಜಕ್ಕೆ ಒಂದೇ ಒಂದು ರಾಣಿ ಮತ್ತು ಹಲವು ಗಂಡು ಇರುವೆಗಳಿರುತ್ತವೆ. ಗಾತ್ರದಲ್ಲಿ ಕೆಲಸಗಾರ ಇರುವೆಗಳಿಗಿಂತ ದೊಡ್ಡವು. ಹೆಣ್ಣು ಇರುವೆಯ ರೆಕ್ಕೆಗಳು ಸಂಭೋಗದ ತರುವಾಯ ಬಿದ್ದು ಹೋಗುವುವು. ನಿವಹವನ್ನು ಆರಂಭಿಸುವುದು ಮತ್ತು ಮೊಟ್ಟೆಗಳನ್ನು ಇಡುವುದು ರಾಣಿಯ ಕೆಲಸ. ಗಂಡು ಇರುವೆಗಳಿಗೆ ರೆಕ್ಕೆಗಳಿವೆ. ಗಂಡುಗಳ ಆಯಸ್ಸು ಕಡಿಮೆ. ಸಂಭೋಗದ ಅನಂತರ ಸತ್ತು ಹೋಗುವುವು. ಕೆಲಸಗಾರ ಇರುವೆಗಳಿಗೆ ರೆಕ್ಕೆ ಇಲ್ಲ. ಇವು ಬಂಜೆ ಕೀಟಗಳು. ಹೆಸರಿಗೆ ತಕ್ಕಂತೆ ಗೂಡಿನ ಕೆಲಸ ಕಾರ್ಯಗಳಲ್ಲಿ ಸದಾ ನಿರತವಾಗಿರುವುವು.

ಕೆಲವೊಮ್ಮೆ ತನ್ನ ಹಳೆಯ ಗೂಡಿಗೆ, ಅಥವಾ ಬೇರೆ ಇರುವೆಗಳ ಗೂಡಿಗೆ ನುಗ್ಗಿ ಹೊಸ ವಸಾಹತನ್ನು ನಿರ್ಮಿಸುವುದು. ಮೊದಲು ಮರಿಗಳ ಪೋಷಣೆಯನ್ನೂ ಇದು ನಿರ್ವಹಿಸುತ್ತದೆ. ಆದರೆ, ಒಮ್ಮೆ ಕೆಲಸಗಾರ ಇರುವೆಗಳು ಹುಟ್ಟಿದ ತರುವಾಯ, ಗೂಡಿನ ಮುಂದಿನ ಉಸ್ತುವಾರಿ, ಗೂಡಿನಲ್ಲಿ ಹೆಚ್ಚಿನ ಕೋಣೆಗಳ ನಿರ್ಮಾಣ, ದುರಸ್ತು, ಆಹಾರ ಸಂಗ್ರಹಣೆ, ಮರಿಗಳ ಪೋಷಣೆ ಇತ್ಯಾದಿ ಕೆಲಸಗಳನ್ನು ಬಂಜೆ ಕೀಟಗಳಾದ ಇರುವೆಗಳು ನಿರ್ವಹಿಸುವುವು. ರಾಣಿ ಇರುವೆಗೆ ಬರೀ ಮೊಟ್ಟೆಗಳನ್ನಿಡುವ ಕಾರ್ಯಮಾತ್ರ. ರಾಣಿ ಇರುವೆ ಹಲವಾರು ವರ್ಷಗಳು ಬದುಕಿರುತ್ತದೆ.

ಇರುವೆ ಗೂಡುಗಳಲ್ಲಿ ಹಲವಾರು ಬಗೆ. ಒಂದು ಗೂಡಿನಲ್ಲಿ ಕೇವಲ ಕೆಲವೇ ಇರುವೆಗಳಿರಬಹುದು, ಅಥವಾ ಸಹಸ್ರಾರು ಇರುವೆಗಳಿರಬಹುದು. ಗೂಡುಗಳನ್ನು ಹಲವಾರು ನೆಲೆಗಳಲ್ಲಿ ರಚಿಸುವುವು. (ಉದಾ: ಸಸ್ಯಕಾಂಡ, ಕಾಯಿ, ವಿಶೇಷ ಸಸ್ಯಗ್ರಂಥಿ(ಗಾಲ್ಸ್), ಮರಮುಟ್ಟುಗಳು ಇತ್ಯಾದಿ). ವಿಶೇಷವಾಗಿ ಇರುವೆಗಳ ಗೂಡು ನೆಲದಲ್ಲಿರುತ್ತದೆ. ಗೂಡುಗಳು ಸರಳವಾಗಿರಬಹುದು ಇಲ್ಲವೆ ದೊಡ್ಡವಾಗಿದ್ದು ಅನೇಕ ಸುರಂಗ, ಅಟ್ಟಣೆಗಳನ್ನು ಒಳಗೊಂಡಿವೆ. ಕೆಲವು ಬಗೆಯ ಇರುವೆಗಳ ಗೂಡುಗಳಂತೂ ನೆಲದಲ್ಲಿ ಹಲವಾರು ಮೀಟರುಗಳಷ್ಟು ಆಳಕ್ಕೆ ಹೋಗಿರುತ್ತವೆ. ಇಂಥ ಗೂಡುಗಳಲ್ಲಿ ಹಲವಾರು ತರಹದ ಕೋಣೆಗಳಿದ್ದು, ಇವುಗಳ ಪೈಕಿ ಕೆಲವು ಮೊಟ್ಟೆಗಳ ಸಂಗ್ರಹಾಗಾರಗಳು, ಇನ್ನು ಕೆಲವು ಉಗ್ರಾಣಗಳಾಗಿ ಬಳಕೆಯಾಗುತ್ತವೆ.

ಇರುವೆಗಳ ಆಹಾರ ವಿವಿಧ ರೀತಿಯದು. ಕೆಲವು ಮಾಂಸಹಾರಿಗಳು, ಕೆಲವು ಸಸ್ಯಾಹಾರಿಗಳು. ದುಂಬಿ, ಜೇನು ಅಥವಾ ಪ್ರಾಣಿ ಇಲ್ಲವೆ ಸಸ್ಯಗಳಿಂದ ಹೊರಬರುವ

ಅಂಟು, ಜಿಡ್ಡು, ಮುಂತಾದ ರಸಗಳನ್ನು ತಿಂದು ಜೀವಿಸುತ್ತವೆ. ಕೆಲವು ಬೇರೆ ಇರುವೆಗಳ ಸ್ರಾವವನ್ನು ತಿನ್ನುವಂಥವು.




ಆಹಾರಕ್ಕಾಗಿ ಎಂಥ ಸ್ಥಳವನ್ನಾದರು ಹೊಕ್ಕು ಹುಡುಕಿ ಸಂಗ್ರಹಿಸುವ ಸಾಮರ್ಥ್ಯ ಇರುವೆಗಳಿಗಿದೆ. ಈ ದೃಷ್ಟಿಯಿಂದ ಇರುವೆಗಳು ಹಲವಾರು ರೀತಿಯಲ್ಲಿ ಪಿಡುಗುಗಳೆನಿಸಿವೆ.

ಇರುವೆಗಳಿಗೆ ಶತ್ರುಗಳನ್ನು, ಮಿತ್ರರನ್ನು ಪತ್ತೆಹಚ್ಚುವ ಸೂಕ್ಷ್ಮತರದ ಒಂದು ಸ್ರಾವವಿದೆ. ಪ್ರತಿ ಜಾತಿಯ ಇರುವೆ ತನ್ನದೇ ಆದ ಒಂದು ಸ್ರಾವವನ್ನು ಮೈಯಿಂದ ಚಿಮ್ಮುತ್ತ ಹೋದಲ್ಲೆಲ್ಲ ವಿಶಿಷ್ಟ ವಾಸನೆಯನ್ನು ಬೀರುತ್ತದೆ. ಇಂಥ ಸಾಮರ್ಥ್ಯದಿಂದಾಗಿ ಎಲ್ಲಿಗೆ ಹೋದರೂ ಪುನಃ ತಮ್ಮ ವಾಸಸ್ಥಳಕ್ಕೆ ಮರಳುವುದು ಮತ್ತು ತಮ್ಮ ಸಹೋದ್ಯೋಗಿಗಳನ್ನು ಪತ್ತೆ ಹಚ್ಚುವುದು ಇರುವೆಗಳಿಗೆ ಸಾಧ್ಯ. ಕೆಲವು ಬಾರಿ ಶತ್ರುಗಳನ್ನು ಹೆದರಿಸಲು ಇದನ್ನು ಉಪಯೋಗಿಸಿಕೊಳ್ಳುತ್ತವೆ. ಇರುವೆಗಳು ನೋವನ್ನುಂಟು ಮಾಡುವಷ್ಟು ಚುಚ್ಚುತ್ತವೆ ಅಥವಾ ಬಾಯಿಂದ ಕಚ್ಚುತ್ತವೆ.

ಫಾರ್ಮಿಸಿಡೆ ಕುಟುಂಬದಲ್ಲಿ ಏಳು ಉಪಕುಟುಂಬಗಳಿವೆ. ಈ ಕುಟುಂಬಗಳಲ್ಲಿ ಹಲವು ಪ್ರಭೇದಗಳಿವೆ. ಉದಾ: ಕೆಂಜಗ (ಈಕೊಫಿಲ್ಲಸ್ಮ ರಾಗಡೈನ); ಗೊದ್ದ (ಕ್ಯಾಂಪೊನೋಟಸ್ ಕಂಪ್ರೆಸಸ್); ಕೆಂಪಿರುವೆ (ಸೊಲಿನಾಪ್ಸಿಸ್ ಜೆಮಿನೇಟ); ದೊಡ್ಡರೆಕ್ಕೆ ಇರುವೆ (ಡೊರೈಲಸ್ ಓರಿಯಂಟ್ಯಾಲಿಸ್). (ಜಿ.ಕೆ.ವಿ.)

**ಫಿಂಚ್:** ಪಕ್ಷಿಗಳ ವರ್ಗದ ಪ್ಯಾಸೆರಿಫಾರ್ಮಿಸ್ ಗಣದ ಫಿಂಜಿಲಿಡೆ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಹಾಡುಹಕ್ಕಿಗಳಿರುವ ಸಾಮಾನ್ಯ ಹೆಸರು. ಈ ಕುಟುಂಬಕ್ಕೆ ಚಾಫಿಂಚ್, ಗ್ರಾಸ್‌ಬೀಕ್, ಬಂಟಿಂಗ್, ಲಿನ್ನೆಟ್, ಗೋಲ್ಡ್‌ಫಿಂಚ್, ಲಾಂಗ್‌ಸ್ಪರ್, ಬ್ರ್ಯಾಂಬ್ಲಿಂಗ್, ವೈಟ್‌ತ್ರೋಟೆಡ್ ಸ್ಪ್ಯಾರೊ, ಕಾರ್ಡಿನಲ್ ಇತ್ಯಾದಿ ಹಲವಾರು ಹೆಸರಿನ ಹಕ್ಕಿಗಳು ಸೇರಿದ್ದು ಇವೆಲ್ಲಕ್ಕೂ ವಿಶಾಲಾರ್ಥದಲ್ಲಿ ಫಿಂಚ್ ಎಂಬ ಹೆಸರನ್ನೇ ಕೆಲವೊಮ್ಮೆ ಬಳಸಲಾಗುತ್ತದೆ. ಆದರೂ ನಿರ್ದಿಷ್ಟವಾಗಿ ಈ ಕುಟುಂಬದ ಜಿಯೊಸ್ಪೈಜಿನೆ ಉಪಕುಟುಂಬಕ್ಕೆ ಸೇರಿದ ಡಾರ್ವಿನ್ ಫಿಂಚ್ ಅಥವಾ ಗಲಾಪಗಸ್ ಫಿಂಚ್ ಹಕ್ಕಿಗಳಿಗೆ ಈ ಹೆಸರು ಹೆಚ್ಚು ಯುಕ್ತವಾಗಿದೆಯೆನ್ನಬಹುದು. ಗುಬ್ಬಚ್ಚಿ, ಗೀಜಗ, ಕ್ವೆಲಿಯ, ಬುಲ್ ಫಿಂಚ್, ಸಿಸ್ಕಿನ್ ಮುಂತಾದವು ಇವುಗಳ ಹತ್ತಿರ ಸಂಬಂಧಿಗಳು.

ಫಿಂಚ್ ಹಕ್ಕಿಗಳಲ್ಲಿ ಒಟ್ಟು 315 ಪ್ರಭೇದಗಳಿವೆ. ಎಲ್ಲವೂ ನೂತನಲೋಕದ (ನ್ಯೂವರ್ಲ್ಡ್) ನಿವಾಸಿಗಳು. ಹುಲ್ಲು ಮುಂತಾದ ಸಸ್ಯಗಳ ಬೀಜಗಳೇ ಇವುಗಳ ಪ್ರಧಾನ ಆಹಾರವಾದ್ದರಿಂದ ಇವನ್ನು ಬೀಜಭಕ್ಷಿಗಳೆಂದು (ಸೀಡ್ ಈಟರ್ಸ್) ಕರೆಯಲಾಗುತ್ತದೆ. ಇವೆಲ್ಲವೂ ಸಣ್ಣಗಾತ್ರದ ಹಕ್ಕಿಗಳು; ಸರಾಸರಿ ಉದ್ದ 12 ಸೆಂಮೀ. ಬೀಜಗಳನ್ನು ತಿನ್ನಲು ಸಹಾಯವಾಗುವಂತೆ ಇವುಗಳ ಕೊಕ್ಕು ಮೋಟಾಗಿಯೂ ಅಗಲವಾಗಿಯೂ ಇದೆ. ಸಾಮಾನ್ಯವಾಗಿ ನೆಲದ ಮೇಲೆ ಕುಳಿತು ಇಲ್ಲವೆ ನೆಲಕ್ಕೆ ಆದಷ್ಟು ಹತ್ತಿರದ ಮಟ್ಟದಲ್ಲಿ ಕುಳಿತು ಆಹಾರವನ್ನು ಸೇವಿಸುವುವು. ಇವು ಹಾಡುಹಕ್ಕಿಗಳು; ಸಾಧಾರಣವಾಗಿ ಮರಗಿಡಗಳ ರೆಂಬೆಗಳ ಮೇಲೆ ಕುಳಿತು ಇಂಪಾಗಿ ಸ್ವನಗೈಯ್ಯುವುವು. ಮೈಯಲ್ಲಿ 9 ಪ್ರಾಥಮಿಕ ಪುಕ್ಕಗಳಿವೆ (ಪ್ರೈಮರಿ ಫೆದರ್ಸ್). ಸಾಮಾನ್ಯವಾಗಿ ಒಂಟೊಂಟಿಯಾಗಿ ಗೂಡುಕಟ್ಟುವುವು. ಗೂಡುಗಳು ಬಟ್ಟಲಿನಾಕಾರದಲ್ಲಿ ಇರುತ್ತವೆ.

ಜಿಯೊಸ್ಪೈಜಿನೆ ಉಪಕುಟುಂಬದ ಫಿಂಚ್ ಹಕ್ಕಿಗಳಿಗೆ ಡಾರ್ವಿನ್ ಫಿಂಚ್‌ಗಳು ಅಥವಾ ಗಲಾಪಗಸ್ ಫಿಂಚ್‌ಗಳು ಎಂಬ ಹೆಸರು ಬಂದುದಕ್ಕೆ ಕಾರಣ 1835ರಲ್ಲಿ ಚಾರ್ಲ್ಸ್ ಡಾರ್ವಿನ್ ಬೀಗಲ್ ಹಡಗಿನಲ್ಲಿ ಯಾನ ಮಾಡಿ ಎಕ್ವಡಾರಿಗೆ 960 ಕಿಮೀ ಪಶ್ಚಿಮಕ್ಕಿರುವ ಗಲಾಪಗಸ್ ದ್ವೀಪಗಳಿಗೆ ಬಂದಿದ್ದಾಗ ಇವನ್ನು ಪ್ರಥಮಬಾರಿಗೆ ಕಂಡುಹಿಡಿದದ್ದು. ಆತ ಇವುಗಳ ಬಾಹ್ಯರೂಪ, ಸ್ವಭಾವ, ಆಹಾರಸೇವನೆಯ ಕ್ರಮ ಮುಂತಾದವನ್ನು ಅಧ್ಯಯಿಸಿದ. ಇವು ಸ್ಥೂಲವಾಗಿ ಪರಸ್ಪರ ಸಮಾನವಾಗಿದ್ದು ತಮ್ಮತಮ್ಮೊಳಗಿನ ಸಂಬಂಧವನ್ನು ವ್ಯಕ್ತಪಡಿಸುವುವಾದರೂ ಪ್ರತಿಯೊಂದು ಪ್ರಭೇದವೂ ವಿಭಿನ್ನವಾಗಿದ್ದು ಡಾರ್ವಿನ್ನನ ವಿಕಾಸವಾದಕ್ಕೆ ಸಾಕಷ್ಟು ಪುರಾವೆ ಒದಗಿಸಿದವು.

ಇವುಗಳಲ್ಲಿ 4 ಜಾತಿಗಳೂ 14 ಪ್ರಭೇಧಗಳೂ ಉಂಟು. ಪ್ಲಿಯೊಸೀನ್ ಕಾಲದಲ್ಲಿ (5–10ಮಿಲಿಯನ್ ವರ್ಷಗಳ ಹಿಂದೆ) ಅಮೆರಿಕದಿಂದ ವಲಸೆ ಬಂದ ಒಂದೇ ಒಂದು ಫಿಂಚ್ ಪೂರ್ವಜ ಪಕ್ಷಿಪ್ರಭೇದದಿಂದ ಇವು ವಿಕಾಸಗೊಂಡಿವೆ ಎಂದು ನಂಬಲಾಗಿದೆ.




ಪರ್ಪಲ್ ಫಿಂಚ್: ಎ. ಗಂಡು ಬಿ. ಹೆಣ್ಣು

ವಿಕಾಸಾತ್ಮಕ ಪರಿಹೊಂದಾಣಿಕಾ ಅಭಿವರ್ಧನೆಗೆ (ಅಡ್ಯಾಪ್ಟಿವ್ ರೇಡಿಯೇಷನ್)–ಅಂದರೆ ಯಾವುದೇ ಒಂದು ಪಿತೃತಳಿಯಿಂದ ಉಗಮಿಸುವ ಸಂತತಿಜೀವಿಗಳು ತಮ್ಮ ಪರಿಸರದ ವಿಭಿನ್ನ ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಕೊಂಡು ಬೇರೆ ಬೇರೆ ದಿಕ್ಕುಗಳಲ್ಲಿ ವಿಕಿರಣಗೊಳ್ಳುವಂತೆ ವಿಕಾಸಾತ್ಮಕವಾಗಿ ಅಭಿವರ್ಧಿಸುವುದು–ಡಾರ್ವಿನ್ ಫಿಂಚ್ ಹಕ್ಕಿಗಳು ಬಲು ಸೊಗಸಾದ, ಸ್ಪಷ್ಟವಾದ ಹಾಗೂ ನಿಖರವಾದ ಉದಾಹರಣೆಗಳೆನಿಸಿವೆ.




ಗ್ರೇ ಕ್ರೆಸ್ಟೆಡ್ ರೋಸಿ ಫಿಂಚ್: ಎ. ಗಂಡು ಬಿ. ಹೆಣ್ಣು

ಇವುಗಳ ಸರಾಸರಿ ಗಾತ್ರ 10–20 ಸೆಂಮೀ. ಕೆಲವು ಪ್ರಭೇದಗಳಲ್ಲಿ ಗಂಡು ಕಪ್ಪು ಬಣ್ಣದವೂ ಹೆಣ್ಣು ಬೂದಿಮಿಶ್ರಿತ ಕಂದು ಬಣ್ಣದವೂ ಆಗಿವೆಯಾದರೆ ಬಹುತೇಕ ಪ್ರಭೇದಗಳಲ್ಲಿ ಹೆಣ್ಣು ಗಂಡು ಎರಡೂ ಒಂದೇ ತೆರ. ಇವುಗಳ ಕೊಕ್ಕುಗಳ ಆಕಾರ, ರಚನೆಯಲ್ಲಿ ಅಪಾರ ವೈವಿಧ್ಯ ಉಂಟು. ಕೆಲವು ಪ್ರಭೇದಗಳು ಬೀಜಭಕ್ಷಿಗಳಾಗಿದ್ದು ಮೋಟಾದ ಮತ್ತು ದೃಢವಾದ ಕೊಕ್ಕನ್ನು ಪಡೆದಿವೆಯಾದರೆ ಇನ್ನು ಕೆಲವು ಕೀಟಭಕ್ಷಿಗಳು. ಇವುಗಳ ಕೊಕ್ಕು ತೆಳು ಬಗೆಯದು. ಮತ್ತೆ ಕೆಲವಲ್ಲಿ ಕೊಕ್ಕು ಬಾಗಿದಂತಿದೆ ಹಾಗೂ ಇವುಗಳ ನಾಲಿಗೆ ಸೀಳಿಕೊಂಡಿದೆ; ಇಂಥ ಪ್ರಭೇದಗಳು ಪಾಪಾಸುಕಳ್ಳಿಯ ಹೂಗಳನ್ನು ಕೆದಕಿ ಒಳಗಿನ ಮಕರಂದವನ್ನು ಹೀರುವುವು. ಅಂತೆಯೇ ಮೊಗ್ಗು, ಎಲೆ, ಹಣ್ಣುಗಳನ್ನು ತಿನ್ನುವಂಥ ಪ್ರಭೇದಗಳೂ ಉಂಟು. ಇಂಥವುಗಳ ಕೊಕ್ಕು ಚಿಕ್ಕದಾಗಿಯೂ ಬಲವಾಗಿಯೂ ಕೊಂಚ ಬಾಗಿದಂತೆಯೂ ಇದೆ. ಮರಕುಟಿಕದರಂತೆಯೇ ಬಲವಾಗಿಯೂ ನೀಳವಾಗಿಯೂ

ಇದೆ. ಮರಗಿಡಗಳ ತೊಗಟೆಗಳಲ್ಲಿಯೂ ಪೊಟರೆಗಳನ್ನು ಚಾಣದಂತೆ ಬಡಿದು ಒಳಗಿರುವ ಕೀಟಗಳನ್ನು ಹೆಕ್ಕಿತೆಗೆಯಲು ತಕ್ಕುದಾದ ಕೊಕ್ಕು ಇದು. ಆದರೆ ಮರಕುಟಿಗಗಳಲ್ಲಿರುವಂಥ ಉದ್ದನಾಲಿಗೆ ಈ ಫಿಂಚ್ ಹಕ್ಕಿಗಿಲ್ಲವಾದ್ದರಿಂದ ಹುಳುಗಳನ್ನು ಸೆಳೆದುಕೊಳ್ಳಲು ಈ ಹಕ್ಕಿ ಅಸಾಮಾನ್ಯ ವಿಧಾನವನ್ನು ಅನುಸರಿಸುತ್ತದೆ. ಸಣ್ಣ ಕಡ್ಡಿಯನ್ನೋ ಪಾಪಾಸುಕಳ್ಳಿಯ ಮುಳ್ಳನ್ನೋ ಎತ್ತಿಕೊಂಡು ಪೊಟರೆಯೊಳಗೆ ಚುಚ್ಚಿ ಹುಳು ಅಚೆ ಬರುವಂತೆ ಮಾಡಿ ಅನಂತರ ಕಡ್ಡಿಯನ್ನೆಸೆದು ಹುಳುವನ್ನು ಹಿಡಿದು ನುಂಗುತ್ತದೆ. ಹೀಗೆ ಉಪಕರಣವನ್ನು ಬಳಸುವ ವಿಶೇಷ ಸಾಮರ್ಥ್ಯ ಇದಕ್ಕಿದೆ.

ಕೊಕ್ಕುಗಳಲ್ಲಿ ಅಪಾರ ವ್ಯತ್ಯಾಸವಿದೆಯಾದರೂ ಎಲ್ಲ ಡಾರ್ವಿನ್ ಫಿಂಚ್ ಹಕ್ಕಿಗಳ ಒಳ ಅಂಗರಚನೆ ಹಾಗೂ ಗೂಡು ನಿರ್ಮಾಣ ವಿಧಾನ ಒಂದೇ ತೆರನಾಗಿವೆ. ಎಲ್ಲವೂ ತಮ್ಮ ಕ್ಷೇತ್ರಗಳನ್ನು ರೂಪಿಸಿಕೊಳ್ಳುವುವಲ್ಲದೆ, ಗಂಡು ಹಕ್ಕಿಗಳು ಅಂಥ ಇಂಪೇನೂ ಅಲ್ಲದ ಹಾಡಿನಿಂದ ಹೆಣ್ಣುಗಳನ್ನು ಆಕರ್ಷಿಸಿ ಗೂಡು ನಿರ್ಮಾಣದಲ್ಲಿ ತೊಡಗುವುವು. ಪಾಪಾಸುಕಳ್ಳಿಗಳ ಇಲ್ಲವೆ ಇತರ ಮರಗಿಡಗಳ ರೆಂಬೆಗಳಲ್ಲಿ ನೆಲದಿಂದ 1–10 ಮೀ ಎತ್ತರದಲ್ಲಿ ಮುಚ್ಚಿದ ಗೂಡುಗಳನ್ನು ಕಟ್ಟಿ ಸುಮಾರು 4 ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆಗಳು ಬಿಳಿ ಬಣ್ಣದವಾಗಿದ್ದು ನಸುಕೆಂಪು ಚುಕ್ಕೆಗಳಿಂದ ಅಲಂಕೃತವಾಗಿವೆ. ಕಾವು ಕೊಡುವ ಕೆಲಸ ಹೆಣ್ಣಿನದು. 12 ದಿವಸಗಳ ತರುವಾಯ ಮೊಟ್ಟೆಯೊಡೆಯುವುದು. ಕಾವೂಕೂತ ಹೆಣ್ಣಿಗೆ ಗಂಡು ಆಹಾರವನ್ನೊದಗಿಸುತ್ತದೆ. ಎರಡು ವಾರಗಳ ಅನಂತರ ಮರಿಗಳು ದೊಡ್ಡವಾಗಿ ಸ್ವಾವಲಂಬಿಗಳಾಗುವುವು. (ಕೆ.ಪಿ.ಆರ್.)

**ಫಿಲ್ಲೋಕ್ಸೀರಿಡೆ:** ಹೆಮಿಪ್ಟರ ಗಣಕ್ಕೆ ಸೇರಿದ ಕೀಟ ಕುಟುಂಬ. ನುಸಿಗಳಿಗೆ ಹತ್ತಿರದ ಸಂಬಂಧಿಗಳಾದ ಇವು ಸು. ೩೦ ಪ್ರಭೇದಗಳ ಫಿಲ್ಲೋಕ್ಸೀರ ಕೀಟಗಳನ್ನು ಒಳಗೊಂಡಿವೆ. ಇವು ಸೂಕ್ಷ್ಮಗಾತ್ರದ ಕೀಟಗಳು. ಇವುಗಳ ದೇಹ ಮೃದುವಾಗಿದೆ. ಕೆಲವು ಪ್ರಭೇದಗಳ ಮೈಮೇಲೆ ಮೇಣದಂಥ ವಸ್ತುವಿನ ಲೇಪವಿದೆ. ಮೈಬಣ್ಣ ಹಳದಿ, ಕಿತ್ತಳೆ, ಕೆಂಪು ಇತ್ಯಾದಿ. ಆಂಟೆನಗಳು ಮೂರು ಖಂಡಗಳಿಂದ ರಚಿತವಾಗಿವೆ. ಇವುಗಳ ಜೀವನಚರಿತ್ರೆ ಜಟಿಲವಾಗಿದ್ದು ಹಲವಾರು ರೂಪಭೇದಗಳನ್ನು ಒಳಗೊಂಡಿವೆ.

ಉದಾ: ದ್ರಾಕ್ಷಿಗಿಡಗಳಿಗೆ ತಗುಲಿ ಅಪಾರ ಹಾನಿಯುಂಟುಮಾಡುವ ಫಿಲ್ಲೋಕ್ಸೀರೆ (ಡ್ಯಾಕ್ಟೈಲೊಸ್ಫೀರ) ಪಿಟಿಫೋಲಿಯೈ. ದ್ರಾಕ್ಷಿಗಿಡಗಳ ಎಲೆ ಹಾಗೂ ಬೇರುಗಳಿಗೆ ಅಂಟುವ ಈ ಕೀಟ ಎರಡು ಅಂಗಗಳ ಮೇಲೆ ಗಂಟುಗಳನ್ನು ಉಂಟುಮಾಡುತ್ತದೆ.

ಅಮೆರಿಕ, ಯೂರೋಪುಗಳಲ್ಲಿ ಇದರ ಹಾವಳಿ ಹೆಚ್ಚು. ಅಮೆರಿಕದ ದ್ರಾಕ್ಷಿಗಿಡಗಳಿಗಿಂತ ಯೂರೋಪಿನವು ಇದರ ದಾಳಿಗೆ ಹೆಚ್ಚು ತುತ್ತಾಗುವುವು. ಈ ಕೀಟಪೀಡೆಯಿಂದ, ದ್ರಾಕ್ಷಿ ಬಳ್ಳಿಗಳ ಬೆಳವಣಿಗೆ ಕುಂಠಿತಗೊಳ್ಳುವುದಲ್ಲದೆ ಎಲೆಗಳ ಗಾತ್ರ ಕಿರಿದಾಗಿ ಕ್ರಮೇಣ ಇಳುವರಿ ಕಡಿಮೆಯಾಗುವುದು. ಈ ಪಿಡುಗಿನಿಂದಾಗಿ ಲಕ್ಷಾಂತರ ಎಕರೆ ದ್ರಾಕ್ಷಿ ತೋಟಗಳು ಹಾಳಾಗಿವೆ. ಕೀಟನಿರೋಧಕ ಸಾಮರ್ಥ್ಯವುಳ್ಳ ಅಮೆರಿಕದ ದ್ರಾಕ್ಷಿಗಿಡಗಳನ್ನು ಕಸಿ ಮಾಡುವುದರಿಂದ ಮತ್ತು ಉಪಯುಕ್ತ ಕೀಟನಾಶಕದ ಸಿಂಪರಣೆಯಿಂದ ಈ ಕೀಟದ ಭಾದೆಯನ್ನು ನಿಯಂತ್ರಿಸಬಹುದು. (ಎಚ್.ಎಚ್.ಎಸ್).

**ಫೀಬ್:** ಟಿರಾನಿಡೆ ಕುಟುಂಬಕ್ಕೆ ಸೇರಿದ ನೊಣಹಿಡುಕ ಪಕ್ಷಿ. ಉತ್ತರ ಅಮೇರಿಕಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಇದನ್ನು ಅಮೇರಿಕೆಯ ನೊಣಹಿಡುಕ ಎಂದು ಕರೆಯುತ್ತಾರೆ. ಸೆಯಾರ್ನಿಸ್ ಫೀಬ್ ಇದರ ಶಾಸ್ತ್ರೀಯ ಹೆಸರು. ಇದಕ್ಕೆ ವರ್ಣರಂಜಿತ ಗರಿಗಳುಂಟು. ಕಪ್ಪು ಬಣ್ಣದ ಶಿಖೆ, ಬೂದುಬಣ್ಣದ ಗರಿಗಳು ಮತ್ತು ಬಿಳಿಯ ಬಣ್ಣದ ಅಂಚಿನ ರೆಕ್ಕೆ ಹಾಗೂ ಬಾಲದಗರಿಗಳಿಂದ ಕೂಡಿದ ಈ ಹಕ್ಕಿ 8 ಸೆಂಮೀ ಉದ್ದವಾಗಿದೆ. ಮರದ ಮೇಲೆ ಕುಳಿತಾಗ ಪದೇ ಪದೆ ಬಾಲವನ್ನು ಸೆಟೆದುಕೊಳ್ಳುವುದು ಇದರ ಒಂದು ವಿಶಿಷ್ಟ ಲಕ್ಷಣ. ಮೆಕೆನ್ಜಿ ದ್ವೀಪಗಳಲ್ಲಿ ಮೊಟ್ಟೆಯಿಡುತ್ತದೆ. ಸಂಯುಕ್ತ ಸಂಸ್ಥಾನಗಳ ದಕ್ಷಿಣ ಭಾಗ ಹಾಗೂ ಮೆಕ್ಸಿಕೊ ಪ್ರದೇಶಗಳಲ್ಲಿ ಚಳಿಗಾಲವನ್ನು ಕಳೆಯುತ್ತದೆ. ಎತ್ತರ ಪ್ರದೇಶಗಳಲ್ಲಿ ತೊಲೆಗಳ ಮೇಲೆ ಅಥವಾ ಸೇತುವೆಗಳ ಕೆಳಗೆ ಅಥವಾ ಬೃಹತ್ ಭವನಗಳ ಹತ್ತಿರದಲ್ಲಿ ನದಿದಂಡೆಗಳಲ್ಲಿ ಗೂಡು ಕಟ್ಟುತ್ತದೆ. ಪಾಚಿ ಮತ್ತು ಮಣ್ಣಿನಿಂದ ರಚಿತವಾಗುವ ಈ ಗೂಡುಗಳಿಗೆ ಹುಲ್ಲು, ಕೂದಲು ಮತ್ತು ತುಪ್ಪುಳು ಗರಿಗಳ ಮೆತ್ತೆ ಲೇಪನವಿರುತ್ತದೆ. (ಎಚ್.ಎಚ್.ಎಸ್.)

**ಘುಪ್ಪುಸ:** ಶ್ವಾಸನಾಳ (ಟ್ರೇಕಿಯ) ಮತ್ತು ಶ್ವಸನಿಗಳ (ಮುಖ್ಯ ಬ್ರಾಂಕೈ) ಮೂಲಕ ವಾಯುಕೋಶಗಳ (ಆಲ್ವಿಯೋಲೈ) ಒಳಕ್ಕೆ ಎಳೆದುಕೊಳ್ಳಲ್ಪಡುವ ವಾಯುವಿನಿಂದ ಆಮ್ಲಜನಕ ವಿರಳವಾಗಿರುವ ರಕ್ತವನ್ನು ಆಮ್ಲಜನಕಯುಕ್ತವಾಗಿಸುವ ಮತ್ತು ಅದೇ ವೇಳೆ ಅದರಲ್ಲಿರುವ ಹೆಚ್ಚುವರಿ ಇಂಗಾಲದ ಡೈ ಆಕ್ಸೈಡನ್ನು ವಿಸರ್ಜಿಸುವ ಉಸಿರಾಟದ ಅಂಗ (ಲಂಗ್). ನಾಲ್ಕು ಮತ್ತು ಐದನೆಯ ಬೆನ್ನುಮೂಳೆಯ ನಡುಬಿಲ್ಲೆಯ ಮಟ್ಟದಲ್ಲಿ, ಎಡಹೃತ್ಕರ್ಣದ ಮೇಲ್ಭಾಗದಲ್ಲಿ ಶ್ವಾಸನಾಳ ಭಾಗಗಳಾಗಿ ಎಡ ಮತ್ತು ಬಲ ಶ್ವಸನಿಗಳಾಗುತ್ತದೆ. ಶ್ವಾಸನಾಳದ ಎರಡು ಶಾಖೆ ತೊಟ್ಟಿಗೆ ಕಾಯಿ ಜಂಟಿಸಿರುವಂತೆ ಎರಡು ಶ್ವಸನಿಗಳ ಕೊನೆಗಳಿಗೂ ಎಡ ಮತ್ತು ಬಲ ಘುಪ್ಪುಸಗಳು ಜಂಟಿಯಾಗಿವೆ ಮತ್ತು ಎದೆಗೂಡಿನ ಮಧ್ಯತಡಿಕೆಯ (ಮೀಡಿಯಾಸ್ಟೈನಮ್) ಆಯಾಪಕ್ಕಗಳ ಅವಕಾಶಗಳನ್ನು ತುಂಬಿಕೊಂಡಿವೆ. ಎಡಶ್ವಸನಿ ಕಿರಿದಾಗಿಯೂ ಉದ್ದವಾಗಿಯೂ ಇದ್ದು ಸ್ಪಷ್ಟವಾಗಿ ಎಡಕ್ಕೆ ತಿರುಗಿದೆ. ಆದರೆ ಬಲಶ್ವಸನಿ ಶ್ವಾಸನಾಳದ ವಿಸ್ತರಣೆಯಂತೆಯೇ ಇದ್ದು ಅದರಿಂದ ನೇರವಾಗಿ ಕೆಳಕ್ಕೆ ಇಳಿಯುತ್ತದೆ. ಆದ್ದರಿಂದ ಉಸಿರೆಳೆದುಕೊಂಡಾಗ ಅಕಸ್ಮಾತ್ತಾಗಿ ಶ್ವಾಸನಾಳದ ಒಳಕ್ಕೆ ಹೋಗುವ ಘನದ್ರವಾನಿಲವಸ್ತುಗಳು ಬಲಘುಪ್ಪುಸವನ್ನು ಸೇರುವ ಪ್ರಮೇಯವೇ ಹೆಚ್ಚು. ಶ್ವಸನಿಗೆ ಘುಪ್ಪುಸ ಜಂಟಿಯಾಗಿರುವ ಸ್ಥಳಕ್ಕೆ ಘುಪ್ಪುಸದ ನಾಭಿ (ಹೈಲಮ್) ಎಂದು ಹೆಸರು. ಸುಮಾರು 15 ಸೆಂಮೀ ಎತ್ತರ ಮತ್ತು ಬುಡದಲ್ಲಿ 8–10 ಸೆಂಮೀ ವ್ಯಾಸ ಇರುವ ಶಂಕುವಿನ ಆಕಾರವಾಗಿದ್ದು ಘುಪ್ಪುಸ ನೊರೆಯ ಮುದ್ದೆಯಂತೆ (ಮಾಸ್ ಆಫ್ ಲ್ಯಾಥರ್) ಕಂಡುಬರುತ್ತದೆ. ಘುಪ್ಪುಸದ ಮೇಲ್ಮೈ ಪ್ಲೂರ ಎಂಬ ತೆಳು ಪೊರೆಯಿಂದ ಆಗಿದೆ. ಇದೇ ಪೊರೆ ಘುಪ್ಪುಸನಾಭಿಯಲ್ಲಿ ತನ್ನ ಮೇಲೆಯೇ ಮಡಚಿಕೊಂಡಂತಾಗಿ ಎದೆಗೂಡಿನ ಭಿತ್ತಿಗೆ ಒಳಮೈಯಾಗಿ ಅಂಟಿಕೊಂಡಿದೆ. ಭ್ರೂಣಾವಸ್ಥೆಯಲ್ಲಿ ಪ್ಲೂರ ಎದೆಗೂಡಿನಲ್ಲಿಯ ದ್ವಾರರಹಿತ ಖಾಲಿಚೀಲವೊಂದರ ಅತ್ಯಂತ ತೆಳುಭಿತ್ತಿ, ಘುಪ್ಪುಸ ಈ ಚೀಲವನ್ನು ಗೌಸುಹಾಕಿದಂತೆ ಹೊದ್ದು ಬೆಳೆಯುತ್ತ ಆ ಭಾಗದ ಎದೆಗೂಡನ್ನು ಪೂರ್ಣವಾಗಿ ಆಕ್ರಮಿಸುತ್ತದೆ. ಹೀಗಾಗಿ ಪ್ಲೂರದ ಒಳಪದರ ಘುಪ್ಪುಸದ ಹೊರಕವಚವಾಗಿಯೂ ಹೊರಪದರ ಎದೆಗೂಡಿನ ಒಳಮೈಯಾಗಿಯೂ ಕಂಡುಬರುವಂತಾಗಿದೆ.

ಪ್ಲೂರದ ಎರಡು ಪದರಗಳೂ ಪರಸ್ಪರ ಸಂಪರ್ಕಗೊಂಡಿದ್ದು ಒಂದರ ಮೇಲೆ ಒಂದು ಯಾವ ಘರ್ಷಣೆಯೂ ಇಲ್ಲದೆ ಜಾರುವಂತಿವೆ. ಪ್ಲೂರ ಒಂದು ಜಾರುದ್ರವದಿಂದ ತೇವವಾಗಿರುವುದೇ ಇದರ ಕಾರಣ. ತೇವಗೊಳಿಸುವಷ್ಟು, ಕನಿಷ್ಠಪರಿಮಾಣದಲ್ಲಿ ಮಾತ್ರ ಇದ್ದು ಘರ್ಷಣೆಯಿಲ್ಲದೆ ಜಾರಬಹುದಾದರೂ ಒಂದು ಪದರವನ್ನು ಇನ್ನೊಂದರಿಂದ ಬಿಡಿಸಲಾರದಂತಾಗಿದೆ. ಇದು ಒಂದು ಗಾಜಿನ ಫಲಕದ ಮೇಲೆ ಒಂದೆರಡು ತೊಟ್ಟು ನೀರು ಹಾಕಿ ಅದರ ಮೇಲೆ ಇನ್ನೊಂದು ಫಲಕವನ್ನು ಇಟ್ಟರೆ ಕಂಡುಬರುವಂತಿರುವ ಸ್ಥಿತಿ. ಒಂದು ಫಲಕವನ್ನು ಇನ್ನೊಂದರ ಮೇಲೆ ಜಾರಿಸಬಹುದು. ಆದರೆ ಫಲಕಗಳನ್ನು




ಜಾರಿಸದೆ ಸುಲಭವಾಗಿ ಬಿಡಿಸಲು ಆಗುವುದಿಲ್ಲ. ಗಾಜಿನ ಫಲಕಗಳ ನಡುವೆ ತೆಳುಪದರವಾಗಿ ಸೇರಿರುವ ನೀರು ತನ್ನ ಮೇಲ್ಮೈಬಿಗಿತದ (ಸರ್ಫೇಸ್ ಟೆನ್ಷನ್) ಪ್ರಭಾವವನ್ನು ಬೀರುವುದರಿಂದ ಈ ಪರಿಸ್ಥಿತಿ ಎಂಬುದೇ ಭೌತವಿಜ್ಞಾನದ ನಿಯಮ. ಘುಪ್ಪುಸದ ವಿಷಯದಲ್ಲೂ ಹೀಗೆಯೇ ಇರುವುದರಿಂದ ಎದೆಗೂಡು ಉಬ್ಬಿ ಪ್ಲೂರದ ಹೊರ ಪದರ ಹೊರಚಲಿಸಿದಾಗ ಅದು

ಘುಪ್ಘುಸದ ಮೇಲಿನ ಪ್ಲೂರದಿಂದ ಬೇರೆ ಆಗದೆ ತನ್ನ ಜೊತೆಗೇ ಅದನ್ನೂ ಹೊರಕ್ಕೆ ಎಳೆಯುತ್ತದೆ. ಇದರಿಂದ ಘುಪ್ಘುಸವನ್ನು ಎಳೆದು ಹಿಗ್ಗಿಸಿದಂತಾಗಿ ಅದರೊಳಗಿನ ವಾಯು ಒತ್ತಡ ಕಡಿಮೆ ಆಗುತ್ತದೆ. ಆದ್ದರಿಂದಲೇ ಹೊರವಾಯು ಶ್ವಸನಿ ಮತ್ತು ಶ್ವಾಸನಾಳಗಳ ಮೂಲಕ ಘುಪ್ಘುಸದ ಒಳ ನುಗ್ಗುವುದು. ಇದೇ ಉಚ್ಛ್ವಾಸ.

ಘುಪ್ಘುಸದ ಮೇಲಿರುವ ಪ್ಲೂರ ತಡಿಕೆಯಂತೆ ಘುಪ್ಘುಸದ ಒಳಗೂ ನುಗ್ಗಿ ಬಲ ಘುಪ್ಘುಸವನ್ನು ಮೂರು ಹಾಲೆಗಳಾಗಿಯೂ (ಲೋಬ್ಸ್) ಎಡ ಘುಪ್ಘುಸವನ್ನು ಎರಡು ಹಾಲೆಗಳಾಗಿಯೂ ವಿಭಾಗಿಸುತ್ತದೆ. ಘುಪ್ಘುಸದ ಒಳಗೆ ಶ್ವಸನಿ ಮರದ ಕೊಂಬೆಗಳಂತೆ ಕವಲೊಡೆದಿದೆ. ಶಾಖೋಪಶಾಖೆಗಳಿಗೆಲ್ಲ ಒಟ್ಟಾಗಿ ಶ್ವಸನಿ ವೃಕ್ಷವೆಂದು(ಬ್ರಾಂಕಿಯಲ್ ಟ್ರೀ) ಹೆಸರು. ಪ್ರತಿಯೊಂದು ಶ್ವಸನಿಯೂ ಮೊದಲು ನಾಲ್ಕು ಪ್ರಧಾನ ಶಾಖೆಗಳಾಗುತ್ತದೆ. ಇವಕ್ಕೆ ಶ್ವಸನಿಕಗಳೆಂದು ಹೆಸರು(ಸೆಕೆಂಡರಿ ಬ್ರಾಂಕೈ). ಬಲಗಡೆ, ಮೇಲೆ ಮತ್ತು ಮಧ್ಯದ ಹಾಲೆಗಳಿಗೆ ಒಂದೊಂದು ಶ್ವಸನಿಕವೂ ಕೆಳಹಾಲೆಗೆ ಎರಡು ಶ್ವಸನಿಕಗಳೂ (ಒಂದು ಅದರ ಉಚ್ಚ ಹಾಗೂ ಹಿಂಬದಿ ಭಾಗಕ್ಕೆ, ಇನ್ನೊಂದು ಮಿಕ್ಕ ಭಾಗಕ್ಕೆ) ಪೂರೈಕೆ ಆಗಿವೆ. ಎಡಗಡೆ ಒಂದು ಶ್ವಸನಿಕ ಸ್ಪಷ್ಟವಾಗಿ ಮೇಲಿನ ಹಾಲೆಗೂ ಇನ್ನೊಂದು ಅದೇ ಹಾಲೆಯ ನಾಲಿಗೆಯಂಥ ಪ್ರತ್ಯೇಕ ಭಾಗಕ್ಕೂ (ಲಿನ್‌ಗ್ಯುಲರ್ ಡಿವಿಷನ್–ಇದು ಬಲಗಡೆಯ ಮಧ್ಯ ಹಾಲೆಗೆ ಸರಿಸಮ) ಪೂರೈಕೆ ಆಗಿದೆ. ಇನ್ನೆರಡು ಶ್ವಸನಿಕಗಳು ಬಲಗಡೆಯ ಹಾಗೆಯೇ ಕೆಳಹಾಲೆಯ ಎರಡು ಭಾಗಗಳನ್ನು ಪೂರೈಸುತ್ತವೆ.

ಬಲಗಡೆಯ ಮೇಲಿನ ಶ್ವಸನಿಕ ಮೂರು ಶಾಖೆಗಳಾಗುತ್ತದೆ. ಈ ಶಾಖೆಗಳು ಆ ಹಾಲೆಯಲ್ಲಿ ಶೃಂಗ (ಏಪಿಕಲ್), ಮುಂದಣ (ಆಂಟೀರಿಯರ್) ಮತ್ತು ಹಿಂದಣ (ಪೋಸ್ಟೀರಿಯರ್) ಖಂಡಗಳೆಂಬ (ಸೆಗ್ಮೆಂಟ್ಸ್) ಮೂರು ಪ್ರತ್ಯೇಕ ಕ್ಷೇತ್ರಗಳನ್ನು ತಲಪುತ್ತವೆ. ಮಧ್ಯಶ್ವಸನಿಕ ಎರಡು ಶಾಖೆಗಳಾಗಿ ಒಡೆದು ಮಧ್ಯಹಾಲೆಯ ಒಳಬದಿ (ಮೀಡಿಯಲ್) ಮತ್ತು ಹೊರಬದಿ (ಲ್ಯಾಟರಲ್) ಖಂಡವೆಂಬ ಎರಡು ಕ್ಷೇತ್ರಗಳನ್ನು ತಲಪುತ್ತವೆ. ಕೆಳ ಎರಡು ಶ್ವಸನಿಕಗಳಿಂದ ಒಟ್ಟು ಐದು ಶಾಖೆಗಳು ಉದ್ಭವಿಸಿ ಕೆಳಹಾಲೆಯ ಶೃಂಗಿ (ಏಪಿಕಲ್) ಮತ್ತು ಒಳಬದಿ (ಮೀಡಿಯಲ್ ಬೇಸಲ್) ಖಂಡಗಳಿಗೂ ಮುಂದಿನ (ಆಂಟೀರಿಯರ್‌ಬೇಸಲ್), ಹೊರಬದಿಯ (ಲ್ಯಾಟರಲ್ ಬೇಸಲ್) ಮತ್ತು ಹಿಂದಿನ (ಪೋಸ್ಟೀರಿಯರ್ ಬೇಸಲ್) ಖಂಡಗಳಿಗೂ ಪೂರೈಕೆ ಆಗುತ್ತದೆ. ಎಡಗಡೆ ಮೇಲಿನ ಹಾಲೆಗೆ ಸ್ಪಷ್ಟವಾಗಿ ಪೂರೈಕೆ ಆಗುವ ಶ್ವಸನಿಕ ಮೂರು ಶಾಖೆಗಳಾಗಿ ಬಲಗಡೆಯಲ್ಲಿಯಂತೆಯೇ ಆ ಹಾಲೆಯ ಮೂರು ಖಂಡಗಳನ್ನು ತಲಪುತ್ತದೆ. ಜೊತೆಗೆ ಮೇಲಿನಹಾಲೆಯ ನಾಲಿಗೆ ಭಾಗಕ್ಕೆ ಪೂರೈಸುವ ಶ್ವಸನಿಕ ಎರಡು ಶಾಖೆಗಳಾಗಿ ಹಾಲೆಯ ಆ ಭಾಗದ ಮೇಲಣ (ಸುಪೀರಿಯರ್) ಮತ್ತು ಕೆಳಗಣ (ಇನ್‌ಫೀರಿಯರ್) ಖಂಡಗಳನ್ನು ತಲಪುತ್ತದೆ. ಎಡಗಡೆಯ ಕೆಳ ಎರಡು ಶ್ವಸನಿಕಗಳಿಂದ ಒಟ್ಟು ನಾಲ್ಕು ಶಾಖೆಗಳು ಉದ್ಭವಿಸಿ ಕೆಳಹಾಲೆಯ ಶೃಂಗ, ಮುಂದಿನ, ಹೊರಬದಿಯ ಮತ್ತು ಹಿಂದಿನ (ಏಪಿಕಲ್, ಆಂಟೀರಿಯರ್ ಬೇಸಲ್, ಲ್ಯಾಟರಲ್ ಬೇಸಲ್ ಮತ್ತು ಪೋಸ್ಟೀರಿಯರ್ ಬೇಸಲ್) ಖಂಡಗಳೆಂಬ ನಾಲ್ಕು ಕ್ಷೇತ್ರಗಳನ್ನು ತಲಪುತ್ತವೆ. ಅಂದರೆ ಬಲಘುಪ್ಘುಸದಲ್ಲಿ ಒಟ್ಟು ಹತ್ತು ಖಂಡಗಳೂ ಎಡ ಘುಪ್ಘುಸದಲ್ಲಿ ಒಂಬತ್ತು ಖಂಡಗಳೂ ಇದ್ದು ಪ್ರತಿ ಖಂಡಕ್ಕೂ ಶ್ವಸನಿಕದ ಒಂದು ಶಾಖೆ ಪೂರೈಕೆ ಆಗುತ್ತದೆ.

ಘುಪ್ಘುಸದಲ್ಲಿ ಹಾಲೆಗಳ ರಚನೆಯನ್ನು ಪ್ರತ್ಯೇಕ ಭಾಗಗಳೆಂದು ಗುರುತಿಸಬಹುದಾದರೂ ಖಂಡಗಳನ್ನು ಹಾಗೆ ಗುರುತಿಸಲು ಆಗುವುದಿಲ್ಲ. ಕಾರಣ ಖಂಡಗಳನ್ನು ಪ್ರತ್ಯೇಕಿಸುವ ತಡಿಕೆಯಂಥವು ಇಲ್ಲ. ಆದರೂ ಪ್ರತಿಯೊಂದು ಖಂಡವೂ ಕ್ರಿಯಾತ್ಮಕವಾಗಿ ಪ್ರತ್ಯೇಕವಾಗಿಯೆ ಇದೆ. ರೋಗಪ್ರಕ್ರಿಯೆಯಿಂದ ಇವು ವೈಯಕ್ತಿಕವಾಗಿಯೇ ಕುಸಿಯಬಲ್ಲವು, ಘನೀಕರಿಸಬಲ್ಲವು; ಕೀವು ಆ ಖಂಡಕ್ಕೆ ಸೀಮಿತಗೊಳ್ಳಬಹುದು. ಅದರಿಂದಾಗಿ ಶಸ್ತ್ರಕ್ರಿಯೆಯ ಕಾಲದಲ್ಲಿ ರೋಗಿಷ್ಠ ಖಂಡವನ್ನು ಮಾತ್ರ ತೆಗೆಯಲಾಗುವುದು. ಕೀವುಗಟ್ಟಿದ ಖಂಡದ ನೆಲೆಯನ್ನು ಅವಲಂಬಿಸಿ ರೋಗಿಯನ್ನು ಬೇರೆ ಬೇರೆ ಭಂಗಿಗಳಲ್ಲಿ ಮಲಗಿಸಿ ಕೀವು ಹೊರಬರಲು ಸಹಾಯ ನೀಡಲಾಗುತ್ತದೆ.

ಪ್ರತಿಯೊಂದು ಖಂಡದಲ್ಲೂ ಶ್ವಸನಿಕದ ಶಾಖೆ ಪುನಃ ಪುನಃ ಕವಲೊಡೆಯುತ್ತದೆ. ಅಂತಿಮ ಟಿಸಿಲುಗಳ (ಟರ್ಮಿನಲ್ ಬ್ರಾಂಕೈ) ಕೊನೆಭಾಗದಲ್ಲಿ ದ್ರಾಕ್ಷಿಗೊಂಚಲುಗಳಂತಿರುವ ರಚನೆಗಳು ಕಂಡುಬರುತ್ತವೆ. ಇವುಗಳ ಭಿತ್ತಿ ಅತ್ಯಂತ ತೆಳು. ಒಳಗೆ ವಾಯುವಿರುವುದರಿಂದ ದ್ರಾಕ್ಷಿಯಂತಿರುವ ರಚನೆಗಳು ವಾಯುಕೋಶಗಳು ಎನ್ನಲಾಗಿವೆ. ಇವುಗಳ ಹೊರಗೆ ಲೋಮನಾಳಗಳ ಜಾಲವಿದೆ. ವಾಯುಕೋಶಗಳಲ್ಲಿರುವ ವಾಯು ಮತ್ತು ಲೋಮನಾಳಗಳಲ್ಲಿರುವ ರಕ್ತ ಇವುಗಳ ನಡುವೆ ವಾಯುಕೋಶ ಹಾಗೂ ಲೋಮನಾಳಗಳ ತೆಳುಭಿತ್ತಿಗಳ ಮೂಲಕ ಆಮ್ಲಜನಕ ಮತ್ತು ಇಂಗಾಲದ ಡೈ ಆಕ್ಸೈಡುಗಳ ವಿನಿಮಯ ಜರಗುತ್ತದೆ. ಆದ್ದರಿಂದ ಘುಪ್ಘುಸದಲ್ಲಿ ತೆಳುಭಿತ್ತಿ ಇರುವ ಈ ಸ್ಥಳಗಳನ್ನು ಶ್ವಾಸಸಂಬಂಧಿತಭಾಗ (ರೆಸ್ಪಿರೇಟರಿ ಪಾರ್ಟ್) ಎಂದು ಕರೆದಿದೆ. ಘುಪ್ಘುಸದ ಒಳಗೆ ಶಾಖೋಪಶಾಖೆಗಳಾಗಿ ಟಿಸಿಲೊಡೆಯುತ್ತ ಅಂತಿಮ ಟಿಸಿಲುಗಳಾಗುವವರೆಗೂ ಶ್ವಸನಿವೃಕ್ಷದ ಭಿತ್ತಿ ದಪ್ಪವಾಗಿಯೇ ಇರುತ್ತದೆ. ಅದರ ಮೂಲಕ ವಾಯು ವಿನಿಮಯ ಆಗುವಂತಿಲ್ಲ. ಆದ್ದರಿಂದ ಶ್ವಸನಿವೃಕ್ಷವನ್ನು ಘುಪ್ಘುಸದ ವಾಯುವಾಹಿನಿಭಾಗ (ಕಂಡಕ್ಟಿಂಗ್‌ಪಾರ್ಟ್) ಎಂದು ಕರೆದಿದೆ. ಅಂದರೆ ಘುಪ್ಘುಸನಾಭಿಯಿಂದ ಮುಂದುವರಿಯುತ್ತ ಪದೇ ಪದೇ ಕವಲುಗಳಾಗುತ್ತ ಕೊನೆಯಲ್ಲಿ ವಾಯುವಿನಿಮಯ ಭಾಗದಲ್ಲಿ ಮುಕ್ತಾಯವಾಗುವ ನಾಲ್ಕು ಶ್ವಸನಿಕವೃಕ್ಷಗಳೂ ಒಟ್ಟುಗೂಡಿ ಘುಪ್ಘುಸವಾಗಿದೆ ಎಂದಂತಾಯಿತು. ಅಂತಿಮಶ್ವಸನಿ ಶ್ವಸನಿಯ ಹದಿನೈದನೆಯ ತಲೆಮಾರಿನ ಕವಲಾಗಿರುವುದೂ ಉಂಟು. ಶ್ವಸನಿಕಗಳು (ಸ್ಥೂಲವಾಗಿ ಇವು ಶ್ವಸನಿಯ ಮೊದಲ ಐದು ತಲೆಮಾರಿನ ಕವಲುಗಳೆಂದು ಇಟ್ಟುಕೊಳ್ಳಬಹುದು) ಮೃದ್ವಸ್ಥಿ, ಸ್ನಾಯು ಮತ್ತು ದುಗ್ಧರಸಗ್ರಂಥಿಯುಕ್ತ ಭಿತ್ತಿಯಿಂದಾದವು. ಮೃದ್ವಸ್ಥಿ ಅಪೂರ್ಣ ಉಂಗುರದ ಆಕಾರವಾಗಿದ್ದಾಗಲೂ ಒಂದು ಇನ್ನೊಂದರ ಕ್ಷೇತ್ರವನ್ನು ಅತಿಕ್ರಮಿಸುವುದರಿಂದ ನಾಳದ ಸುತ್ತ ಮೃದ್ವಸ್ಥಿ ಇದ್ದಂತೆಯೇ ಆಗಿದೆ. ಸ್ನಾಯುಗಳು ಶ್ವಸನಿಕನಾಳದ ಸುತ್ತ ತಿರುಪು ನುಲುಚಿಕೊಂಡಿರುವಂತೆ ಇದ್ದು ಉಚ್ಛ್ವಾಸ ಕಾಲದಲ್ಲಿ ಅನೈಚ್ಛಿಕವಾಗಿ ವ್ಯಾಕೋಚಿಸಿ ಶ್ವಸನಿಕವನ್ನು ಹಿಗ್ಗಿಸುವುವಲ್ಲದೆ ಲಂಬವಾಗುವಂತೆಯೂ ಮಾಡುತ್ತವೆ. ನಿಶ್ವಾಸಕಾಲದಲ್ಲಿ ಸ್ನಾಯುಗಳು ಅನೈಚ್ಛಿಕವಾಗಿ ಸಂಕೋಚಿಸಿ ಶ್ವಸನಿಕ ಕುಗ್ಗುವಂತೆ ಮತ್ತು ಹ್ರಸ್ವವಾಗುವಂತೆ ಮಾಡುತ್ತವೆ. ಶ್ವಸನಿಕಗಳಿಂದ ಮುಂದೆ ಉದ್ಭವಿಸುವ (ಸ್ಥೂಲವಾಗಿ ಮುಂದಿನ 8–10 ತಲೆಮಾರಿನ) ಕವಲುಗಳಲ್ಲಿ (ಇವನ್ನು ಅಂತಿಮ ಶ್ವಸನಿಕಗಳು–ಟರ್ಮಿನಲ್ ಬ್ರಾಂಕೈ ಅಥವಾ ಬ್ರಾಂಕಿಯೋಲ್ಸ್ ಎಂದಿದೆ) ಕ್ರಮೇಣ ಮೃದ್ವಸ್ಥಿ ಅಂಶ ಹಾಗೂ ದುಗ್ಧರಸ ಗ್ರಂಥಿಗಳು ಕಡಿಮೆ ಆಗುತ್ತ ಕೊನೆಗೆ (ಸ್ಥೂಲವಾಗಿ ಸುಮಾರು 1 ಮಿಮೀ ವ್ಯಾಸದ ಟಿಸಿಲು ಎಂದು ಇಟ್ಟುಕೊಳ್ಳಬಹುದು) ಪೂರ್ತ ಮಾಯವಾಗುತ್ತದೆ. ಆದರೆ ಸ್ನಾಯು ಇಲ್ಲಿಯೂ ಭಿತ್ತಿಯ ಪ್ರಧಾನ ಅಂಶವಾಗಿಯೇ ಇರುತ್ತದೆ ಮತ್ತು ಸ್ನಾಯುವಿರುವ ಭಾಗ ಇಲ್ಲಿಯೇ ಅಂತ್ಯಗೊಳ್ಳುತ್ತದೆ. ಕಾರಣಾಂತರದಿಂದ ಘುಪ್ಘುಸ ಇಲ್ಲವೆ ಅದರ ಒಂದು ಭಾಗದಲ್ಲಿ ವಾಯು ಇಂಗಿ ಘುಪ್ಘುಸದ ಕುಸಿತ ಉಂಟಾಗಿದ್ದರೂ ಮೃದ್ವಸ್ಥಿಯಿಂದ ದೃಢಗೊಂಡಿರುವ ಶ್ವಸನಿ ಕವಲುಗಳು ಚಪ್ಪಟೆ ಆಗದೆ ತಮ್ಮ ನಾಳಾಕಾರವನ್ನು ಉಳಿಸಿಕೊಂಡೇ ಇದ್ದು ವಾಯುವಹನಕ್ಕೆ ಅಡ್ಡಿಮಾಡುವುದಿಲ್ಲ. ಆದರೆ ಅಂತಿಮ ಟಿಸಿಲು ಇಂಥ ಸಮಯದಲ್ಲಿ ಹಿಚಕಿದಂತಾಗಿ ಚಪ್ಪಟೆ ಆಗಿಬಿಡಬಹುದು. ವಾಯುಸಂಚಾರಕ್ಕೆ ಇದರಿಂದ ತಡೆ ಆಗಿ ಘುಪ್ಘುಸದ ಶ್ವಾಸಸಂಬಂಧಿತ ಭಾಗಗಳಿಗೆ ವಾಯುಸಂಪರ್ಕ ಕಡಿದೇ ಹೋಗಬಹುದು.



ಟ್ರೇಕಿಯ ಕವಲೊಡೆದಿರುವುದು

ಘುಪ್ಘುಸದ ಶ್ವಾಸಸಂಬಂಧಿತ ಭಾಗ ಕೊನೆತಲೆಮಾರಿನ ಅಂತಿಮ ಶ್ವಸನಿಯಿಂದ ಮುಂದಿನದು ಎಂದು ಹೇಳಿದೆ. ಇಂಥ ಅಂತಿಮ ಶ್ವಸನಿಯ ಕವಲುಗಳಾಗಿ ವಾಯುಕೋಶಯುಕ್ತ ಶ್ವಸನಿಗಳು (ರೆಸ್ಪಿರೇಟರಿ ಬ್ರಾಂಕಿಯೋಲ್ಸ್) ಉದ್ಭವಿಸುತ್ತವೆ. ಇವುಗಳಿಗೆ

ಅಲ್ಲಲ್ಲಿ ದ್ರಾಕ್ಷಿಗೊಂಚಲಿನಂಥ ವಾಯುಕೋಶ ಗುಚ್ಛಗಳು (ಅಲ್ವಿಯೋಲಾರ್‌ಸ್ಯಾಕ್ಸ್) ಸಂಪರ್ಕಿಸಿದ್ದು ವಾಯುವಿನಿಮಯದಲ್ಲಿ ಭಾಗವಹಿಸುವುದರಿಂದ ಈ ಹೆಸರು. ಶ್ವಸನಿ ಅನಿಯಮಿತಾಕಾರದ ಅವಕಾಶವೊಂದರಲ್ಲಿ ಕೊನೆಗೊಳ್ಳುತ್ತದೆ. ಇದಕ್ಕೆ ಘುಪ್ಫುಸಹಜಾರ (ಪಲ್ಮನರಿ ಏಟ್ರಿಯ) ಎಂದು ಹೆಸರು. ಘುಪ್ಫುಸ ಹಜಾರಕ್ಕೆ ನಾಲ್ಕಾರು ವಾಯುಕೋಶ ಗುಚ್ಛಗಳು ತಮ್ಮ ನಾಳಗಳ (ಆಲ್ವಿಯೋಲಾರ್ ಡಕ್ಟ್) ಮೂಲಕ ಸಂಪರ್ಕಿಸಲ್ಪಟ್ಟಿವೆ. ಪ್ರತಿಯೊಂದು ವಾಯುಕೋಶ ಗುಚ್ಛವನ್ನು ದ್ರಾಕ್ಷಿಗೊಂಚಲಿಗೆ ಹೋಲಿಸಬಹುದು. ಗೊಂಚಲಿನ ತೊಟ್ಟು, ಘುಪ್ಫುಸ ಹಜಾರದೊಡನೆ ಸಂಪರ್ಕಿಸುವ ನಾಳಕ್ಕೆ ಸಮ. ಪ್ರತಿ ದ್ರಾಕ್ಷಿಯೂ ಒಂದು ವಾಯುಕೋಶಕ್ಕೆ ಸಮ.

ಘುಪ್ಫುಸಹಜಾರ, ವಾಯುಕೋಶ ಗುಚ್ಛದ ಸಂಪರ್ಕನಾಳ ಹಾಗೂ ವಾಯುಕೋಶಗಳು ಅತ್ಯಂತ ತೆಳುಭಿತ್ತಿಯಿಂದಾದವು. ಇದು ನೆಲಕ್ಕೆ ಹಾಸುವ ಹಂಚುಗಳಂತೆ ಒಂದೇ ವರಸೆಯಲ್ಲಿ ಒಂದಕ್ಕೊಂದು ಜೋಡಿಸಲ್ಪಟ್ಟ ಕೋಶಗಳಿಂದಾದ ಅವಿಚ್ಛಿನ್ನ ಭಿತ್ತಿ. ಈ ಭಿತ್ತಿಯ ಹೊರಗೆ ಪುಟಿತ ಎಳೆಗಳ (ಇಲ್ಯಾಸ್ಟಿಕ್ ಫೈಬರ್ಸ್) ಮತ್ತು ಲೋಮನಾಳಗಳ ಜಾಲ ಹರಡಿದೆ. ಲೋಮನಾಳಗಳ ನಡುವೆ ಇರುವ ಸ್ಥಳಗಳಲ್ಲಿ ಕೆಲವು ಕಡೆ ಭಿತ್ತಿ ಬೆಲ್ಲದ ಅಚ್ಚಿನ ಆಕಾರದ ಕೋಶಗಳಿಂದ (ಕ್ಯೂಬಾಯ್ಡಲ್ ಸೆಲ್ಸ್) ರಚಿತವಾಗಿರುತ್ತದೆ. ಈ ಕೋಶಗಳು ಡೈಪಾಮಿಟಾಯಿಲ್ ಲೆಸಿಥಿನ್ ಎಂಬ ಅಂಶವುಳ್ಳ ವಸ್ತುವನ್ನು ಸ್ರವಿಸುತ್ತವೆ. ವಾಯುಕೋಶಗಳಲ್ಲಿಯ ವಾಯು ಒತ್ತಡವನ್ನು ಕುಗ್ಗಿಸುವ ಸಾಮರ್ಥ್ಯ ಈ ವಸ್ತುವಿಗಿದೆ.

ಘುಪ್ಫುಸಕ್ಕೆ ಪಲ್ಮನರಿ ಆರ್ಟರಿ ಮತ್ತು ಬ್ರಾಂಕಿಯಲ್ ಆರ್ಟರಿ ಎಂಬ ಅಪಧಮನಿಗಳಿಂದ ಎರಡು ತೆರನಾದ ರಕ್ತಪೂರೈಕೆ ಇದೆ. ಪಲ್ಮನರಿ ಆರ್ಟರಿ ಬಲಹೃತ್ಕುಕ್ಷಿಯಿಂದ ಹೊರಹೊಮ್ಮಿ ಎರಡು ಭಾಗಗಳಾಗಿ ಶ್ವಸನಿವೃಕ್ಷಕ್ಕೆ ಅನುಗುಣವಾಗಿ ಕವಲಾಗುತ್ತ ಅದಕ್ಕೆ ಸಮಾಂತರವಾಗಿ ಸಾಗಿ ಕೊನೆಗೆ ಕಿರಿಧಮನಿಗಳಾಗಿ ಘುಪ್ಫುಸದ ಶ್ವಾಸಸಂಬಂಧಿತಭಾಗದ ಲೋಮನಾಳಗಳ ವಿಸ್ತೃತ ಜಾಲವಾಗುತ್ತದೆ. ಜಾಲ ಸುಮಾರು 140 ಚಮೀ ವಿಸ್ತಾರವಾಗಿದೆ. ಇದು ಹೊತ್ತುತರುವ ಆಮ್ಲಜನಕವಿರಳ ಹಾಗೂ ಇಂಗಾಲ ಡೈಆಕ್ಸೈಡ್ ಹೇರಳವಾಗಿರುವ ರಕ್ತ ವಾಯುಕೋಶಗಳಲ್ಲಿ ಇಂಗಾಲ ಡೈಆಕ್ಸೈಡ್ ಹೊರಹಾಕಿ ಆಮ್ಲಜನಕವನ್ನು ಹೀರಿ ಶುದ್ಧೀಕರಣ ಹೊಂದುತ್ತದೆ. ಬ್ರಾಂಕಿಯಲ್ ಆರ್ಟರಿ ಎದೆಗೂಡಿನಲ್ಲಿ ಅಯೋರ್ಟದಿಂದ ಉದ್ಭವಿಸುತ್ತದೆ. ಅದು ಶ್ವಸನಿವೃಕ್ಷಕ್ಕೆ ಮಾತ್ರ (ಮೊದಲಿನಿಂದ ಕೊನೆ ಕವಲಿನವರೆಗೂ) ರಕ್ತಪೂರೈಕೆಯನ್ನು ಮಾಡುತ್ತದೆ. ಹೀಗೆ ಶ್ವಸನಿವೃಕ್ಷ ಪ್ರದೇಶಕ್ಕೆ ಆಮ್ಲಜನಕಯುಕ್ತ ರಕ್ತವೂ ಅನಿಲವಿನಿಮಯ ಪ್ರದೇಶಕ್ಕೆ ಆಮ್ಲಜನಕವಿರಳ ರಕ್ತವೂ ಸಾಗಿಬರುತ್ತವೆ. ಇವೆರಡೂ ಅಲ್ಲಲ್ಲಿ ಸಂಪರ್ಕ ಪಡೆದಿವೆ.

ಲೋಮನಾಳ ಜಾಲದಿಂದ ಉದ್ಭವಿಸುವ ಕಿರಿಯ ಅಭಿಧಮನಿಗಳು ಮುಂದೆ ಒಟ್ಟಾಗಿ ಕೆಳಗಿನ ಮತ್ತು ಮೇಲಿನ ಪಲ್ಮನರಿ ಅಭಿಧಮನಿಗಳಾಗಿ ಎಡಹೃತ್ಕರ್ಣದಲ್ಲಿ ಮುಕ್ತಾಯವಾಗುತ್ತವೆ. ಘುಪ್ಫುಸದ ನಾಭಿಯಲ್ಲಿ ಶ್ವಸನಿ, ಪಲ್ಮನರಿ ಅಪಧಮನಿ ಮತ್ತು ಪಲ್ಮನರಿ ಅಭಿಧಮನಿಗಳು ಒಗ್ಗೂಡಿವೆ. ಸಿಂಪತೆಟಿಕ್ ಮತ್ತು ಪ್ಯಾರಾಸಿಂಪತೆಟಿಕ್ ನರಗಳು ನಾಭಿಯ ಸುತ್ತ ತಮ್ಮ ಹೆಣಿಲು ಹಾಕಿದ್ದು ಅದರಿಂದ ನರತಂತುಗಳು ಘುಪ್ಫುಸವನ್ನು ತಲುಪುತ್ತವೆ. ಗರ್ಭಾವಸ್ಥೆಯ ನಾಲ್ಕನೆಯ ವಾರದಲ್ಲಿ ಆಹಾರನಾಳದ ಪ್ರಥಮ ಭಾಗದಿಂದ ಹೊರಹೊಮ್ಮಿ ಬೆಳವಣಿಗೆ ಹೊಂದುವ ಉಬ್ಬು ಕೆಳಕ್ಕಿಳಿದು ಮಧ್ಯ ತಡಿಕೆಯಲ್ಲಿ ಎರಡು ಕವಲಾಗಿ ಬೆಳೆದು ಘುಪ್ಫುಸದ ಬೆಳವಣಿಗೆ ಬುನಾದಿಯನ್ನು ಒದಗಿಸುತ್ತದೆ. ಘುಪ್ಫುಸದ ಬೆಳವಣಿಗೆ ಮೂರು ಹಂತಗಳಲ್ಲಿ ಸಾಗಿ ಬರುತ್ತದೆ. ಮೊದಲ ಹದಿನಾರನೆಯ ವಾರದ ತನಕ ಗ್ರಂಥಿಕಾಲ, 16 ರಿಂದ 24ನೆಯ ವಾರದ ತನಕ ನಾಳಕಾಲ. ಅಲ್ಲಿಂದ ಮುಂದೆ ಜನನ ವೇಳೆಯ ತನಕ ವಾಯುಕೋಶ ನಿರ್ಮಾಣ ಕಾಲ. ಸಾಮಾನ್ಯವಾಗಿ ಶ್ವಸನಿಯ ಕವಲುಗೊಳ್ಳುವಿಕೆ 16ನೆಯ ವಾರಕ್ಕೆ ಮುಗಿಯುವುದು. ಈ ಕಾಲದಲ್ಲಿ ಘುಪ್ಫುಸ ಒಂದು ಗ್ರಂಥಿಯಂತೆ ಕಂಡು ದ್ರಾಕ್ಷಿಗೊಂಚಲಿನ ಆಕಾರ ಧರಿಸಿರುತ್ತದೆ. ಶ್ವಸನಿ ಕವಲಿನ ಕೊನೆಯಲ್ಲಿ ಜೀವಿಕಣಗಳ ಪದರ ಇರುತ್ತದೆ. ಲೋಮನಾಳಗಳ ಬೆಳವಣಿಗೆಯ ಫಲವಾಗಿ ಈ ಕೋಶಗಳು ಬೇರ್ಪಟ್ಟು ಶ್ವಸನಿಯ ಅಂತ್ಯ ಟಿಸಿಲುಗಳಾಗಿ ಪರಿವರ್ತನೆ ಹೊಂದುತ್ತವೆ. ಅಂದರೆ ಶ್ವಸನಿವೃಕ್ಷ ಸಂಪೂರ್ಣವಾಗುತ್ತದೆ. ಜನನಾನಂತರ ಯಾವ ಶ್ವಸನಿ ಕವಲೂ ಉದ್ಭವಿಸುವುದಿಲ್ಲ. 21ನೆಯ ವಾರದಿಂದ ವಾಯುಕೋಶಗಳ ಬೆಳವಣಿಗೆ ಕಂಡುಬರುತ್ತದೆ. ಜನನವಾಗುವ ವೇಳೆಗೆ ಅವುಗಳ ಸಂಖ್ಯೆ ನಾಲ್ಕು ಕೋಟಿ. ವಾಯುಕೋಶಗಳ ಸಂಪೂರ್ಣ ಬೆಳವಣಿಗೆ ಜನನಾನಂತರವೇ ಕಂಡು ಬರುತ್ತದೆ. ಎಂಟನೆಯ ವಯಸ್ಸಿನ ಹೊತ್ತಿಗೆ ವಾಯುಕೋಶಗಳ ಸಂಖ್ಯೆ 30 ಕೋಟಿಯಷ್ಟಾಗುತ್ತದೆ. ಎದೆಗೂಡಿನ ಬೆಳವಣಿಗೆ ಆಗುತ್ತಿರುವ ತನಕವೂ ವಾಯುಕೋಶಗಳ ಸಂಖ್ಯಾವೃದ್ಧಿಯೂ ಅದರೊಟ್ಟಿಗೆ ರಕ್ತನಾಳಗಳ ಬೆಳವಣಿಗೆಯೂ ತೋರಿಬರುತ್ತವೆ.

ಇತರ ಕಶೇರುಕಗಳಲ್ಲೂ ಘುಪ್ಫುಸವಿದ್ದು ರಚನೆಯಲ್ಲಿ ಅದು ಅಲ್ಪಸ್ವಲ್ಪ ವ್ಯತ್ಯಾಸವನ್ನು ತೋರುತ್ತದೆ. ಮೀನುಗಳಲ್ಲಿ ಕಿವಿರುಗಳಿದ್ದರೂ ಘುಪ್ಫುಸ ಮೀನು (ಡಿಪ್ನಾಯಿ– ಲಂಗ್ ಫಿಷಸ್)ಗಳಲ್ಲಿ ಕಿವಿರುಗಳೊಂದಿಗೆ ಒಂದು ಘುಪ್ಫುಸವೂ ಇದೆ (ಸೆರಟೋಡಸ್). ಇದು ಅನ್ನನಾಳದ ಅಧೋಭಾಗದಲ್ಲಿ ತೆರೆಯುತ್ತದೆ. ಮಧ್ಯದಲ್ಲಿ ಒಂದು ಅವಕಾಶವಿದ್ದು ಗೋಡೆಯಲ್ಲಿ ಕೆಲವು ಚೀಲಗಳನ್ನೊಳಗೊಂಡಿದೆ. ಈ ಚೀಲಗಳಲ್ಲಿ ಗಾಳಿಜೀವಕೋಶಗಳಿವೆ. ಪ್ರೋಟಾಪ್ಟರಸ್ ಮತ್ತು ಲೆಪಿಡೊಸೈರನ್‌ಗಳಲ್ಲಿ ಎರಡು ಘುಪ್ಫುಸಗಳಿವೆ. ಈ ಮೀನುಗಳಲ್ಲಿ ನೀರು ಬತ್ತಿದಾಗ ಘುಪ್ಫುಸವು ಉಸಿರಾಟಕ್ಕೆ ಸಹಕರಿಸುತ್ತದೆ. ಕಪ್ಪೆಯಂತ ದ್ವಿಚರಿಗಳಲ್ಲಿ ಸ್ಥಿತಿಸ್ಥಾಪಕತ್ವವನ್ನು ಹೊಂದಿರುವ ಒಂದು ಜೊತೆ ಘುಪ್ಫುಸವಿದೆ. ಅವುಗಳ ಒಳಮೈಮೇಲೆ ಸಾಕಷ್ಟು ಉಬ್ಬುಗಳಿದ್ದು ಗಾಳಿ ಒಳಹೊಕ್ಕಾಗ ಅತಿಯಾಗಿ ಹಿಗ್ಗುವ ಸಾಮರ್ಥ್ಯವನ್ನು ಹೊಂದಿವೆ (ನೋಡಿ: ದ್ವಿಚರಿಗಳು). ಸರೀಸೃಪಗಳಲ್ಲಿ ಘುಪ್ಫುಸಗಳು ಕದಿರಿನಾಕಾರದಲ್ಲಿವೆ. ಎರಡೂ ಘುಪ್ಫುಸಗಳು ಒಂದೇ ತೆರನಾಗಿದ್ದು ಗಾಳಿ ತುಂಬಿದಾಗ ದುಂಡನೆಯ ಆಕಾರದಲ್ಲಿರುತ್ತವೆ. ಘುಪ್ಫುಸದ ಒಳಮೈ ಜಾಲರೂಪದಲ್ಲಿರುವ ನೂರಾರು ಉಬ್ಬುಗಳಿಂದ ಕೂಡಿದೆ. ಇದು ಜೇನುಗೂಡಿನಂತೆ ಕಾಣುತ್ತದೆ. ಹಾವುಗಳಲ್ಲಿ ಎಡ ಘುಪ್ಫುಸ ಕ್ಷೀಣಿಸಿದೆ ಅಥವಾ ಇಲ್ಲವಾಗಿದೆ. ಹಲವು ಹಾವುಗಳಲ್ಲಿ ಬೇರೆ ಸರೀಸೃಪಗಳಲ್ಲಿ ಕಾಣುವಂತಹ ವಾಯುಕೋಶಗಳಿರುವುದಿಲ್ಲ. ಮೊಸಳೆಗಳಲ್ಲಿ ಎಲ್ಲವುಗಳಂತೆ ಪುಪ್ಫುಸಗಳು ಸ್ಪಂಜಿನಂತಿದ್ದು ವಾಯುಕೋಶಗಳೂ ಇವೆ.

ಪಕ್ಷಿಗಳಲ್ಲಿ ಶ್ವಾಸನಾಳ ಉದ್ದವಾಗಿದೆ. ಶ್ವಾಸನಾಳಕ್ಕೆ ಆಧಾರವನ್ನು ಒದಗಿಸುವ ರಚನೆಗಳು ಅಸ್ಥಿಯಿಂದಾಗಿವೆ; ಇತರ ಗುಂಪುಗಳಲ್ಲಿದ್ದಂತೆ ಮೃದ್ವಸ್ಥಿಯಿಂದಲ್ಲ. ಮುಖ್ಯ ಶ್ವಸನಿಗಳಲ್ಲಿ ಮಾತ್ರ ಮೃದ್ವಸ್ಥಿಗಳ ಉಂಗುರಗಳಿವೆ. ಘುಪ್ಫುಸಗಳು ಸಣ್ಣವು. ಆದರೆ ಸಾಕಷ್ಟು ಹಿಗ್ಗುವ ಸಾಮರ್ಥ್ಯವನ್ನು ಹೊಂದಿವೆ. ಪಕ್ಷಿಗಳ ಕಡೆಗೆ ಘುಪ್ಫುಸ ಪ್ಲೂರಾ ಪೊರೆಯಿಲ್ಲ. ಇನ್ನೊಂದು ಕಡೆಗೆ ಬೀಸಣಿಕೆಯಂತೆ ರಚಿಸಲ್ಪಟ್ಟಿರುವ ಕಾಸ್ಟೊ–ಪಲ್ಮನರಿ ಸ್ನಾಯುಗಳಿವೆ. ಇವು ಪಲ್ಮನರಿ ಅಪೊನ್ಯುರಾಸಿಸ್ ಎಂಬ ಪೊರೆಯೊಳಗೆ ಹುದುಗಿವೆ. ಶ್ವಸನಿಯಲ್ಲಿ ಹಲವು ಕವಲುಗಳಿವೆ. ದೊಡ್ಡ ಕವಲುಗಳು ಗಾಳಿಚೀಲಗಳಲ್ಲಿ ಕೊನೆಗೊಳ್ಳುತ್ತವೆ. ಈ ತೆರನ ಐದು ಜೊತೆ ಗಾಳಿಚೀಲಗಳಿವೆ. ಈ ಗಾಳಿಚೀಲಗಳು ಗಾಳಿತುಂಬಿರುವ ಮೂಳೆಗಳ ಅವಕಾಶಗಳೊಂದಿಗೆ ಸಂಪರ್ಕ ಹೊಂದಿವೆ. ಸ್ತನಿಗಳಲ್ಲಿ ಘುಪ್ಫುಸಗಳು ಮಾನವನ ಘುಪ್ಫುಸಗಳಂತೆಯೇ ಇವೆ.

***

**ಫೆರೆಟ್:** ಒಂದು ಜಾತಿಯ ಸಾಕು ಬೆಕ್ಕು (ಮಂಟ ಬೆಕ್ಕು). ಇದರ ವೈಜ್ಞಾನಿಕ ನಾಮಧೇಯ ಮಸ್ಟಿಲ ಪುಟೋರಿಯಸ್ ಫರೊ. ಸ್ತನಿಗಳ ಕಾರ್ನಿವೊರ ಗಣದ ಮಸ್ಟಿಲಿಡೆ ಕುಟುಂಬಕ್ಕೆ ಸೇರುತ್ತದೆ. 2500 ವರ್ಷಗಳಿಗೂ ಮೊದಲೇ ಯೂರೋಪಿನ ವನ್ಯ ಪೋಲ್ ಬೆಕ್ಕುಗಳಿಂದ ಈ ತಳಿಯನ್ನು ವೃದ್ಧಿಸಲಾಯಿತು. ಇದರ ವಂಶೋತ್ಪತ್ತಿಯಲ್ಲಿ ಸ್ಟೆಪ್ಪೆಪೋಲ್ ಬೆಕ್ಕುಗಳೂ (ಮಸ್ಟಿಲ ಎವರ್‌ಸ್ಮನಿ) ಪಾತ್ರವಹಿಸಿವೆ ಎಂದು ಭಾವಿಸಲಾಗಿದೆ. ಫೆರೆಟ್‌ಗಳ ಗುಂಪಿಗೆ ಸೇರುವ ಮತ್ತೊಂದು ಪ್ರಭೇದ ಅಪರೂಪದ ಮತ್ತು ವಿನಾಶದಂಚಿನಲ್ಲಿರುವ ಉತ್ತರ ಅಮೆರಿಕೆಯ ಪೋಲ್ ಬೆಕ್ಕು ಅಥವಾ ಕರಿಚರಣ ಫೆರೆಟ್. ಇದರ ವೈಜ್ಞಾನಿಕ ನಾಮಧೇಯ ಮಸ್ಟಿಲ ನಿಗ್ರಿಪೆಸ್.

ಫೆರೆಟ್‌ನ ದೇಹ ಉದ್ದ. ಕಾಲುಗಳು ಗಿಡ್ಡ. ಬಾಲವೂ ಗಿಡ್ಡ. ಮೂತಿ ಚೂಪಾಗಿದ್ದು ಸಣ್ಣ ಕಿವಿಗಳನ್ನು ಹೊಂದಿದೆ. ಮೂತಿಯಿಂದ ಬಾಲದ ತುದಿಯವರೆಗೆ ಸುಮಾರು 0.60 ಮೀ ಉದ್ದವಿದೆ. 2.25 ಕಿಗ್ರಾಂ ದೇಹದ ಭಾರ. ದೇಹದ ಬಣ್ಣ ಮಾಸಲು ಬಿಳಿ. ಇವು ನಿರ್ಬಂಧಕ ಮಾಂಸಾಹಾರಿಗಳು. ಅಸಮತೋಲನ ಆಹಾರ ಪ್ರತಿಶತ 32–38 ರಷ್ಟು ಪ್ರೊಟೀನು ಮತ್ತು ಪ್ರತಿಶತ 15 ರಷ್ಟು ಕೊಬ್ಬನ್ನು ಒಳಗೊಂಡಿರಬೇಕು. ಸ್ವಭಾವತಃ ಸಿಹಿಯನ್ನು ಅಪೇಕ್ಷೆ ಪಡುತ್ತವೆ. ದಿನದ 24 ಗಂಟೆಗಳಲ್ಲಿ, 14 ರಿಂದ 18 ಗಂಟೆಗಳ ಕಾಲ



ನಿದ್ರಿಸುತ್ತವೆ. ಎಚ್ಚರವಿರುವಾಗ ಬಹುಚುರುಕಾಗಿ, ವಿಶ್ರಾಂತಿರಹಿತವಾಗಿ ಚಲಿಸುತ್ತವೆ. ಇವು ಸ್ವಭಾವತಃ ಸಂಧ್ಯಾಚರಿಗಳು (ಕ್ರೆಪಸ್ಕ್ಯುಲಾರ್). ಮೂಲತಃ ಕಚ್ಚುವ ಪ್ರಾಣಿಗಳಲ್ಲ. ಕಾಡಿಸಲ್ಪಟ್ಟರೆ ಅಥವಾ ತೀವ್ರ ನೋವಿನಿಂದ ಬಳಲುತ್ತಿದ್ದರೆ ಮಾತ್ರ ಕಚ್ಚುತ್ತವೆ. ಉನ್ಮಾದಗೊಂಡಾಗ ನರ್ತಿಸುವುದೂ ಉಂಟು.

ಸಂತಾನಾಭಿವೃದ್ಧಿ ಏಪ್ರಿಲ್ ಸಮಯದಲ್ಲಿ. ಆರುವಾರಗಳ ಗರ್ಭಾವಧಿಯ ಅನಂತರ 3–4 ಮರಿಗಳಿಗೆ ಜನ್ಮವೀಯುತ್ತವೆ. ಮರಿಗಳು ಕುರುಡು. 15 ದಿನಗಳಲ್ಲಿ ದೃಷ್ಟಿ ಬರುತ್ತದೆ.

ಫೆರೆಟ್‌ಗಳನ್ನು ಪ್ರೀತಿಯ ಪ್ರಾಣಿಗಳಾಗಿ ಸಾಕುತ್ತಾರೆ. ಸಾಮಾನ್ಯ ಬೆಕ್ಕುಗಳಿಗಿಂತಲೂ ಇವು ಸಾಕಿದವರನ್ನು ಹೆಚ್ಚು ಹಚ್ಚಿಕೊಳ್ಳುತ್ತವೆ. ಸಾಕು ಪ್ರಾಣಿ ಪಟ್ಟಿಯಲ್ಲಿ ಫೆರೆಟ್‌ನದು 3ನೇ ಸ್ಥಾನ. ಸಾಂಘಿಕ ಜೀವನವನ್ನು ಬಯಸುವ ಇವು ಮಾನವರೊಡನೆ ಅತಿ ಸಂತೋಷದಿಂದ ಬೆರೆಯುತ್ತವೆ. ಜೂಜಾಟ, ಹುಡುಕಾಟ ಇಂಥ ಆಟಗಳು ಇವಕ್ಕೆ ಬಲು ಇಷ್ಟ. ಸಾಕಿದವರಿಗೆ ತೋಟಗಾರಿಕೆಯಲ್ಲಿ ನೆರವಾಗುತ್ತವೆ. ಗುಂಡಿ, ಬಿಲ ಕಂಡಲ್ಲೆಲ್ಲಾ ನುಸುಳಲು ಹಾತೊರೆಯುವ ಇವು ಒಮ್ಮೊಮ್ಮೆ ಗಟಾರದಲ್ಲಿ ಸಿಕ್ಕಿಹಾಕಿಕೊಂಡು ತೊಂದರೆಗೀಡಾಗುತ್ತವೆ. ಆದ್ದರಿಂದ ಇವುಗಳನ್ನು ಸಾಕುವಾಗ ಸ್ವೇಚ್ಛೆಯಾಗಿ ಹೊರಹೋಗಲು ಬಿಡದಿರುವುದು ಲೇಸು. ತಮ್ಮತಮ್ಮಲ್ಲೇ ಚೆಲ್ಲಾಟವಾಡಲು ಬಹುವಾಗಿ ಬಯಸುವುದರಿಂದ ಇವನ್ನು ಸಾಕಬಯಸುವವರು ಒಂದು ಜೊತೆಯನ್ನಾದರೂ ಸಾಕಬೇಕು. ಮೈಮೇಲಿನ ಹೇನುಗಳನ್ನು ತೆಗೆದುಹಾಕಿ ಸ್ವಚ್ಛಗೊಳಿಸುವುದು ಅತ್ಯವಶ್ಯಕ. ಉಗುರುಗಳನ್ನು ಕತ್ತರಿಸುತ್ತಿರಬೇಕು. ತುಪ್ಪಳವನ್ನು ಸ್ವಚ್ಛಗೊಳಿಸುತ್ತಿರಬೇಕು. ಕ್ಯಾನೈನ್ ಡಿಸ್ಟೆಂಪರ್ ವೈರಾಣು, ರೇಬಿಸ್ ವೈರಾಣುಗಳಿಗೆ ಲಸಿಕೆ ಹಾಕಿಸಬೇಕು.

ನೂರಾರು ವರ್ಷಗಳವರೆಗೂ ಫೆರೆಟ್‌ಗಳನ್ನು ಬೇಟೆಯಾಡಲು ಬಳಸುತ್ತಿದ್ದರು. ಇದನ್ನು ಫೆರೆಟಿಂಗ್ ಎನ್ನುತ್ತಿದ್ದರು. ನೀಳಕೃಶಕಾಯದ ಇವು ಆಕ್ರಮಣಕಾರಿಗಳು. ಆದ್ದರಿಂದಲೇ ಬೇಟೆಗಳನ್ನು ಸುಲಭವಾಗಿ ಅಟ್ಟಿಸಿಕೊಂಡು ಹೋಗಬಲ್ಲವು. ಇಂದಿಗೂ ಬ್ರಿಟನ್, ಪಶ್ಚಿಮ ಯೂರೋಪ್ ಮುಂತಾದ ಹಲವಾರು ರಾಷ್ಟ್ರಗಳಲ್ಲಿ ಇದನ್ನು ಬೇಟೆಗೆ ಬಳಸುತ್ತಾರೆ. ಆದರೆ ಪರಿಸರ ವ್ಯವಸ್ಥೆಯ ಅಸಮತೋಲನ ನಿವಾರಣೆಗಾಗಿ ಇತ್ತೀಚೆಗೆ ಫೆರೆಟಿಂಗ್ ಅನ್ನು ನಿಷೇಧಿಸಲಾಗಿದೆ ಮತ್ತು ಕಾನೂನು ಬಾಹಿರವೆಂದು ತೀರ್ಮಾನಿಸಲಾಗಿದೆ.

ಇತ್ತೀಚೆಗೆ ಇವುಗಳನ್ನು ದೂರದರ್ಶಕ ಹಾಗೂ ಶಬ್ದವಾಹಕ ಕೇಬಲ್‌ಗಳನ್ನು ಎಳೆಯಲು ಬಳಸುತ್ತಾರೆ. ಜೀವವೈಜ್ಞಾನಿಕ ಹಾಗೂ ವೈದ್ಯಕೀಯ ಸಂಶೋಧನೆಗಳಲ್ಲಿ ಹೇರಳವಾಗಿ ಉಪಯೋಗಿಸಲಾಗುತ್ತಿದೆ. ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿ ಬಿಎಸ್‌ಎ ಯು ಇದನ್ನು ತನ್ನ ಲಾಂಛನವನ್ನಾಗಿಸಿಕೊಂಡಿದೆ.

ಗಂಡು ಫೆರೆಟ್‌ಗಳನ್ನು ಹಾಬ್ ಗಳೆಂದೂ ಹೆಣ್ಣುಗಳನ್ನು ಜಿಲ್ ಗಳೆಂದೂ ಕರೆಯುತ್ತಾರೆ. ಒಂದು ವರ್ಷದ ಒಳಗಿನ ಫೆರೆಟ್‌ಗಳನ್ನು ಕಿಟ್ ಎನ್ನುತ್ತಾರೆ. ಫೆರೆಟ್‌ಗಳ ಗುಂಪನ್ನು ಬುಸಿನೆಸ್ ಎನ್ನುತ್ತಾರೆ. ಇವುಗಳ ಬಣ್ಣ ಸಾಮಾನ್ಯವಾಗಿ ಬಿಳಿ, ಕಂದು, ಬಿಳಿ–ಕಪ್ಪು ಮಿಶ್ರ, ಕಪ್ಪು, ಚಾಕಲೇಟ್ ಮಿಶ್ರ, ಬೆಳ್ಳಿ ಇತ್ಯಾದಿ. ಇವು ಸಾಮಾನ್ಯವಾಗಿ ಅಡ್ರಿನಲ್, ಮೇದೋಜೀರಕ ಗ್ರಂಥಿ, ದುಗ್ಧರಸಗ್ರಂಥಿಗಳ ಕ್ಯಾನ್ಸರ್‌ಗೆ ತುತ್ತಾಗುತ್ತವೆ.

ಕ್ಯಾಲಿಫೋರ್ನಿಯಾ ಮತ್ತು ಹವಾಯ್ ರಾಷ್ಟ್ರಗಳಲ್ಲಿ ಫೆರೆಟ್‌ಗಳ ಒಡೆತನಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರೂಪಿಸಲಾಗಿದೆ. (ಬಿ.ಕೆ.ಎಂ.)

**ಫೆರೊಮೋನುಗಳು:** ಒಂದು ಜೀವಿಯಿಂದ (ದಾತೃ) ಹೊರಹೊರಟು ಅದೇ ಜಾತಿಯ ಇನ್ನೊಂದು ಜೀವಿಯನ್ನು ಮುಟ್ಟಿ (ಗ್ರಾಹಕ) ಅದರ ನಡವಳಿಕೆಯಲ್ಲಿ ಅಥವಾ ಲೈಂಗಿಕ ಚಟುವಟಿಕೆಗಳನ್ನು ಪ್ರಚೋದಿಸಬಲ್ಲ ವಸ್ತುಗಳು. ಕಾರ್ಲಸನ್ ಮತ್ತು ಲಾಷರ್ (1959) ಎಂಬವರ ನಿರೂಪಣೆ ಹೀಗಿದೆ: ಒಂದು ಜೀವಿ ತನ್ನ ದೇಹದ ಹೊರಗಡೆ ವಿಸರ್ಜಿಸುವ ಮತ್ತು ಅದೇ ಜಾತಿಯ ಇನ್ನೊಂದು ಜೀವಿಯಿಂದ ಸ್ವೀಕೃತವಾಗಿ ಆ ಜೀವಿಯಲ್ಲಿ ವಿಶಿಷ್ಟವಾದ (ಉದಾಹರಣೆಗೆ ಸ್ಪಷ್ಟವಾದೊಂದು ನಡವಳಿಕೆಯನ್ನು ಅಥವಾ ಬೆಳವಣಿಗೆಯನ್ನು ಉಂಟುಮಾಡುವ) ಕ್ರಿಯಾಮಾರ್ಗಗಳನ್ನು ಪ್ರಚೋದಿಸುವ ವಸ್ತುಗಳೆ ಫೆರೊಮೋನುಗಳು. ಯಾವುದೊಂದು ಪರಿಸರದಲ್ಲಿ ಜೀವಿಸುವ ಪ್ರಾಣಿಗಳು ತಮ್ಮ ತಮ್ಮಲ್ಲಿ ಅಥವಾ ಇತರ ಪ್ರಾಣಿಗಳೊಂದಿಗೆ ಸಂಪರ್ಕ ಬೆಳೆಸುವ ಆವಶ್ಯಕತೆ ಇದೆ. ಉದಾಹರಣೆಗೆ ಆಡುಮಾತಿನ ಮೂಲಕ ಸಂಪರ್ಕ ಸಾಧಿಸಲಾರದ ಕೆಳದರ್ಜೆಯ ಪ್ರಾಣಿಗಳಾದ ಕೀಟಗಳು ಹಲವಾರು ರಾಸಾಯನಿಕಗಳನ್ನು ಉತ್ಪಾದಿಸಿ ವಾಯು ಅಥವಾ ನೀರಿನ ಮೂಲಕ ಅವನ್ನು ಪ್ರಸರಿಸಿ ಸಂಪರ್ಕ ಸಾಧಿಸುತ್ತವೆ. ಈ ವಿಶಿಷ್ಟ ರಾಸಾಯನಿಕಗಳನ್ನು ಗುರುತಿಸಬಲ್ಲ ಪ್ರಾಣಿಗಳು ಮಾತ್ರ ಅವುಗಳಿಂದ ಪ್ರಭಾವಿತವಾಗುತ್ತವೆ.

ಫೆರೊಮೋನುಗಳಲ್ಲಿ ಎರಡು ವಿಧ: 1 ವಿಶಿಷ್ಟವಾಸನೆಯಿಂದ ಗುರುತಿಸ ಬಹುದಾದಂಥವು, 2 ರುಚಿಯಿಂದ ಗುರುತಿಸ ಬಹುದಾದಂಥವು. ಅಪಾಯಸೂಚಕ ವಸ್ತುಗಳು ಮತ್ತು ಲಿಂಗಾಕರ್ಷಕ ವಸ್ತುಗಳು ಮೊದಲನೆಯ ವರ್ಗಕ್ಕೆ ಸೇರಿವೆ. ಸಮುದಾಯದಲ್ಲಿ ಜೀವಿಸುವ ಪ್ರಾಣಿಗಳಲ್ಲಿ ಒಂದಕ್ಕೆ ಅಪಾಯ ಒದಗಿದಾಗ ಅದು ಇತರ ಪ್ರಾಣಿಗಳಿಗೆ ಎಚ್ಚರಿಕೆ ನೀಡಲು ವಿಶಿಷ್ಟ ರಾಸಾಯನಿಕವನ್ನು ಹೊರ ಚಿಮ್ಮಿಸುತ್ತದೆ. ಬಾಕ್ಸ್ ಮೀನು ಒಂದು ಬಗೆಯ ವಿಷವಸ್ತುವನ್ನು ಅಪಾಯ ಸೂಚಕದಂತೆ ಬಳಸುತ್ತದೆ. ಇದನ್ನು 3–ಅಸಿಟಾಕ್ಸಿಹೆಕ್ಸಾಡೆಕೋನಿಕ್ ಆಮ್ಲದ ಕೋಲಿನ್ ಕ್ಲೋರೈಡ್ ಎಸ್ಟರ್ ಎಂದು ಗುರುತಿಸಲಾಗಿದೆ. ಸಮುದ್ರ ಜೀವಿಗಳು ಅಪಾಯಸೂಚಕಗಳನ್ನು ಬಳಸುತ್ತವೆ ಎಂಬುದರ ಸುಳಿವು ದೊರಕಿದ್ದು ಈ ವಸ್ತುವನ್ನು ಗುರುತಿಸಿದಾಗಲೇ. ಇದು ಇತರ ವರ್ಗದ ಮೀನುಗಳಿಗೆ ನಂಜು.

ಇರುವೆಗಳು ತೊಂದರೆ ಒದಗಿದಾಗ ಅಪಾಯಸೂಚಕಗಳನ್ನು ಹೊರಸೂಸುತ್ತವೆ. ಟರ್ಪೀನ್ ವರ್ಗಕ್ಕೆ ಸೇರಿದ ಈ ಅಪಾಯಸೂಚಕ ಮುಖ್ಯವಾಗಿ ಮೀಥೈಲ್–ಎನ್–ಅಮೈಲ್ ಕೀಟೋನ್, ಮೀಥೈಲ್ ಹೆಪ್ಟನೋನ್ ಮತ್ತು 2 ಹೆಪ್ಟನೋನುಗಳ ಮಿಶ್ರಣ. ಇರುವೆಗಳು ಹೊರಸೂಸುವ ಇತರ ಅಪಾಯಸೂಚಕ ವಸ್ತುಗಳೆಂದರೆ ಡೆಂಡ್ರಾಲೇಸಿನ್, ಸಿಟ್ರಾಲ್, ಸೆಟ್ರೊನೆಲಾಲುಗಳು.

ಇರುವೆಗಳ ವಸತಿ ವ್ಯವಸ್ಥೆಯಲ್ಲಿ ಕೆಲಸಗಾರ ಇರುವೆಗಳು ವಲಸೆ ಹೋಗುವಾಗ ಮಾರ್ಗಸೂಚಕಗಳ ಜವಾಬ್ದಾರಿಯನ್ನು ವಹಿಸುತ್ತವೆ. ಇತರ ಇರುವೆಗಳು ದಾರಿ ತಪ್ಪದೆ ಚದರಿ ಹೋಗದಂತೆ ಮಾಡಲು ಜಾಡನ್ನು ವಿಶಿಷ್ಟವಾದ ಫೆರೊಮೋನಿನಿಂದ ಗುರುತಿಸುತ್ತವೆ. ಇರುವೆಗಳು ಸಾಲುಗಟ್ಟಿ ಹೋಗುವ ದೃಶ್ಯದ ಗುಟ್ಟು ಇದೇ. ಜಾಡಿನ ಪರಿಮಳವನ್ನು ತೊಡೆದು ಹಾಕಿದರೆ ಅಥವಾ ಸ್ವಲ್ಪ ದಪ್ಪದ ಅಡ್ಡಗೆರೆಯನ್ನು ಎಳೆದರೆ ಇರುವೆಗಳು ಅಡ್ಡಗೆರೆಯವರೆಗೆ ಅಥವಾ ಪರಿಮಳ ತೊಡೆದು ಹಾಕಿರುವವರೆಗೆ ಬಂದು ಮುಂದೆ ಹೋಗಲಾರದೆ ನಿಂತು ಬಿಡುತ್ತವೆ, ಅಥವಾ ಹಿಂತಿರುಗುತ್ತವೆ. ಈ ಮಾರ್ಗಸೂಚಕ ವಾಸನಾದ್ರವ್ಯವನ್ನು 2 ಮೀಥೈಲ್ ಹೆಪ್ಟಿನೋನ್ ಎಂದು ಗುರುತಿಸಲಾಗಿದೆ.

$$
\begin{array}{ll}
H_3C & \qquad\qquad O \\
| & \qquad\qquad \| \\
C = CH.CH_2.CH_2.C - C_3H & \\
| & \\
H_3C &
\end{array}
$$

ಅನೇಕ ಜೀವಿ ವರ್ಗಗಳು ಗಂಡು ಹೆಣ್ಣುಗಳ ಪರಸ್ಪರ ಆಕರ್ಷಣೆಗೆ ಮತ್ತು ಕಾಮಾಭಿಲಾಷೆಯ ಉದ್ರೇಕಕ್ಕೆ ಹಲವು ಬಗೆಯ ಫೆರೊಮೋನುಗಳನ್ನು ಬಳಸುತ್ತವೆ. ಕೀಟಗಳು, ಚಿಟ್ಟೆಗಳು, ಚಿಪ್ಪಿನ ಹೊದಿಕೆ ಇರುವ ಜೀವಿಗಳು, ಮೀನುಗಳು, ಸಾಲಮ್ಯಾಂಡರ್ ಹಾವುಗಳು ಮತ್ತು ಸ್ತನಿಗಳು ತಮ್ಮ ಸಂತಾನಾಭಿವೃದ್ಧಿಗೆ ಲಿಂಗಾಕರ್ಷಕ ವಸ್ತುಗಳನ್ನು ಉತ್ಪಾದಿಸಿ ಗಾಳಿ ಅಥವಾ ನೀರಿನ ಮೂಲಕ ಪ್ರಸರಿಸುತ್ತವೆ. ಗಂಡು ಹಾಗೂ ಹೆಣ್ಣು ಎರಡೂ ಲೈಂಗಿಕ ಫೆರೊಮೋನುಗಳನ್ನು ಬಿಡುಗಡೆ ಮಾಡುತ್ತವೆ. ಒಂದೇ ಜಾತಿಯ ಗಂಡು ಹೆಣ್ಣುಗಳ ಫೆರೊಮೋನುಗಳ ರಾಸಾಯನಿಕ ಪ್ರಕೃತಿಯಲ್ಲಿ ವಿಭಿನ್ನತೆ ಉಂಟು. ಅಲ್ಲದೆ ಒಂದೇ ಮೂಲ ಬುಡಕಟ್ಟಿಗೆ ಸೇರಿದರೂ ಬೇರೆ ಒಳ ಜಾತಿಗೆ ಸೇರಿದ ಪ್ರಾಣಿಗಳು, ಉದಾಹರಣೆಗೆ ಇರುವೆಗಳು, ಹೊರಸೂಸುವ ಲೈಂಗಿಕ ಫೆರೊಮೋನುಗಳಲ್ಲಿ ವ್ಯತ್ಯಾಸವಿದೆ. ರೇಷ್ಮೆ ಪತಂಗ ಬೊಂಬೈಕಾಲ್ ಎಂಬ ಸುಗಂಧ ದ್ರವ್ಯವನ್ನೂ ಜಿಪ್ಸಿ ಪತಂಗ ಜಿಪ್ಲಾಲ್ ಎಂಬ ಪರಿಮಳವನ್ನೂ ಲೈಂಗಿಕ ಆಕರ್ಷಕಗಳಾಗಿ ಬಳಸುತ್ತವೆ. ಇವೆರಡೂ ಆಲ್ಕೊಹಾಲುಗಳು. ಸಿವೆಟ್ ಬೆಕ್ಕು ಸಿವಟೋನ್ ಗಂಧವನ್ನೂ, ಕಸ್ತೂರಿ ಮೃಗ ಕಸ್ತೂರಿಯನ್ನೂ ಗಂಡುಹೆಣ್ಣಿನ ಸಂಪರ್ಕ ಸಾಧನವಾಗಿ ಬಳಸುತ್ತವೆ.

ದೇಹದಗ್ರಂಥಿಗಳಲ್ಲಿ ಫೆರೊಮೋನುಗಳು ಉತ್ಪತ್ತಿಯಾಗುತ್ತವೆ, ಗ್ರಂಥಿಗಳಲ್ಲಿ ಸಹ ವೈವಿಧ್ಯವುಂಟು. ಇವುಗಳಿಗೆ ಬಾಹ್ಯಸಂಪರ್ಕ ವಿಶೇಷ ಬಗೆಯ ನಾಳಗಳಿಂದ ಒದಗುತ್ತದೆ. ಹೆಣ್ಣು ಕೀಟಗಳು ಹೊರಬಿಡುವ ಲೈಂಗಿಕ ಫೆರೊಮೋನುಗಳು ಅವುಗಳ ಹೊಟ್ಟೆಯ ಕಡೆಯ ಭಾಗದ ಎರಡು ಖಂಡಗಳ ನಡುವಿನ ಪೊರೆಯಲ್ಲಿರುವ ಗ್ರಂಥಿಗಳಲ್ಲಿ ಉತ್ಪತ್ತಿಯಾಗುತ್ತವೆ. ಗ್ರಂಥಿಗಳನ್ನು ಅಮುಕಿ ಫೆರೊಮೋನುಗಳನ್ನು ಹೊರಹೊರಡಿಸಿ ವಾಯುವಿಗೆ ಒಡ್ಡುವುದರ ಮೂಲಕ ಪ್ರಸರಿಸಲಾಗುತ್ತದೆ. ಡನೈಡ್ ವರ್ಗದ ಗಂಡು ಚಿಟ್ಟೆಗಳು ತಮ್ಮ ಕೂದಲು ಕಡ್ಡಿಗಳ ಮೂಲಕ ಲೈಂಗಿಕ ಫೆರೊಮೋನುಗಳನ್ನು ವಿತರಣೆ ಮಾಡುತ್ತವೆ. ಈ ವರ್ಗಕ್ಕೆ ಸೇರಿದ ಡಾನಾಸ್ ಗಿಲಿಪ್ಪಸ್ ಬೆರಿನಿಸ್ ಕೀಟಗಳಲ್ಲಿ ಹಾರುತ್ತಿರುವ ಹೆಣ್ಣು ಚಿಟ್ಟೆಯನ್ನು ಗಂಡು ಹಿಂಬಾಲಿಸಿ ಅದರ ಮೀಸೆಯನ್ನು ಕೂದಲು ಕಡ್ಡಿಯಿಂದ ಸವರುತ್ತದೆ. ಹೆಣ್ಣು ಚಿಟ್ಟೆ ಹತ್ತಿರದ ಯಾವುದೊಂದು ಸಸ್ಯದ ಮೇಲೆ ಇಳಿಯುತ್ತದೆ. ಅನಂತರವೂ ಗಂಡು ಹೆಣ್ಣು ಸಮಾಧಾನ ತಳೆದು ಸಂಭೋಗ ಕ್ರಿಯೆ ಜರಗುವ ತನಕ ಸವರುವುದನ್ನು ಮುಂದುವರಿಸುತ್ತದೆ. ಕೂದಲು ಕಡ್ಡಿಯಿಂದ ಮೀಸೆಯನ್ನು ಸವರಿದಾಗ ಕೂದಲಕಡ್ಡಿಯ ಮೇಲಿರುವ ಕಾಮೋತ್ತೇಜಕ ಫೆರೊಮೋನ್ ಕಣಗಳು ಮೀಸೆಗೆ ರವಾನೆಯಾಗುತ್ತವೆ. ಕೂದಲುಕಡ್ಡಿ ಕಳಚಿದರೆ ಗಂಡು ನಪುಂಸಕವಾಗುತ್ತದೆ. ಗಲೇರಿಯಾ ಮೆಲ್ಲೋನೆಲ್ಲಾ ಜಾತಿಯ ಗಂಡು ಚಿಟ್ಟೆ ರೆಕ್ಕೆಯ ಗ್ರಂಥಿಗಳಲ್ಲಿ ಉಂಡೆಕನಾಲ್ ಎಂಬ ಲೈಂಗಿಕ ಫೆರೋಮೋನನ್ನು ಉತ್ಪಾದಿಸುತ್ತದೆ. ನಿಶ್ಚಿತ ದಿಕ್ಕಿನಲ್ಲಿ ಹೆಣ್ಣಿನ ಕಡೆಗೆ ಆಕರ್ಷಕ ವಸ್ತುವನ್ನು ಹರಿದು ಬಿಡಲು ಇದರಿಂದ ಅನುಕೂಲವಾಗಬಹುದು.

ಸ್ತನಿಗಳ ಲೈಂಗಿಕ ಫೆರೊಮೋನುಗಳು ಅವುಗಳ ಜನನೇಂದ್ರಿಯ ಅಥವಾ ಅದರ ಸಮೀಪದಲ್ಲಿರುವ ಗ್ರಂಥಿಗಳಲ್ಲಿ ಉತ್ಪತ್ತಿಯಾಗುತ್ತವೆ. ರ್‍ಹೀಸಸ್ ಹೆಣ್ಣು ಕೋತಿಯ ಜನನೇಂದ್ರಿಯದಲ್ಲಿ ಉತ್ಪತ್ತಿಯಾಗುವ ಕೋಪ್ಯುಲಿನ್ ಅದೇ ಜಾತಿಯ ಗಂಡಿನಲ್ಲಿ ಕಾಮವನ್ನು ಕೆರಳಿಸುತ್ತದೆ. ಗಂಡು ಹ್ಯಾಮ್‌ಸ್ಟರುಗಳು ಸಂಭೋಗದ ಮುನ್ನ ಹೆಣ್ಣಿನ ಜನನೇಂದ್ರಿಯವನ್ನು ಮೂಸಿ ನೋಡಿ ನೆಕ್ಕುತ್ತವೆ. ವಾಸನೆಯನ್ನು ಗ್ರಹಿಸುವ ಗ್ರಂಥಿಗಳನ್ನು ತೆಗೆದುಹಾಕಿದರೆ ಗಂಡು ಹ್ಯಾಮ್‌ಸ್ಟರಿನ ಕಾಮಾಸಕ್ತಿ ಲೋಪವಾಗುತ್ತದೆ.

ಕೀಟಗಳು ಪ್ರಸರಿಸುವ ಮುನ್ನೆಚ್ಚರಿಕೆ ಫೆರೊಮೋನುಗಳು ಅಪಾಯ ಸೂಚಕಗಳಾಗಿದ್ದು, ದವಡೆಯ ಗ್ರಂಥಿಗಳಿಂದಲೊ ಗುದದ್ವಾರದ ಗ್ರಂಥಿಗಳಿಂದಲೊ ಅಥವಾ ಚುಚ್ಚು ಕೊಂಡಿಗಳಿಂದಲೊ ಉತ್ಪತ್ತಿಯಾಗುತ್ತವೆ. ಗ್ರಂಥಿಗಳಿಂದ ಹೊರಬಿದ್ದ ವಸ್ತುಗಳು ಶತ್ರುವಿನ ಮೇಲೆರಗಿ ಅದನ್ನು ಆಕ್ರಮಣಕಾರಿ ಎಂದು ಹೆಸರಿಸುತ್ತವೆ. ಅಪಾಯಸೂಚಕಗಳು ಬಲುಮಟ್ಟಿಗೆ ಸಂಘಜೀವಿಗಳಲ್ಲಿ ಕಂಡುಬರುತ್ತವೆ. ವಾಯುವಿನಲ್ಲಿ ಪ್ರಸಾರವಾಗುವ ಅಪಾಯಸೂಚಕಗಳು ಆ ಸಮಾಜಕ್ಕೆ ಸೇರಿದ ಕೀಟಗಳಿಗೆ ಅಪಾಯ ಒದಗಿ ಬರುವ ಸೂಚನೆಯನ್ನು ಕೊಡುತ್ತವೆ. ಚುಚ್ಚುಕೊಂಡಿ ವಿಷವನ್ನು ಮಾತ್ರವಲ್ಲದೆ ಅಪಾಯ ಸೂಚಕಗಳನ್ನೂ ತಯಾರಿಸುತ್ತದೆ. ಶತ್ರುವನ್ನು ಚುಚ್ಚಿದಾಗ ವಿಷದೊಂದಿಗೆ ಇವೂ ಹೊರಬಿದ್ದು ಸಮೀಪದಲ್ಲಿರುವ ಬಂಧುಗಳನ್ನು ಎಚ್ಚರಿಸುತ್ತವೆ. ವೆಸ್ಪಾವರ್ಗದ ಕಣಜಗಳು ಇಂಥ ವ್ಯವಸ್ಥೆಗೆ ಉದಾಹರಣೆ. ಜೇನು ತಾನು ಕಚ್ಚಿದ ಜಾಗದಲ್ಲಿ ಐಸೊಅಮೈಲ್ ಅಸಿಟೇಟ್ ಎಂಬ ವಾಸನಾದ್ರವ್ಯವನ್ನು ಬಿಡುತ್ತದೆ. ಇತರ ಜೇನುಗಳು ಅದೇ ಜಾಗದಲ್ಲಿ ಕಚ್ಚಲಿ ಎಂಬುದು ಉದ್ದೇಶ. ಫಾರ್ಮಿಕ್ ವರ್ಗದ ಇರುವೆಗಳು ಹೊರಸೂಸುವ ಫಾರ್ಮಿಕ್ ಆಮ್ಲ ಅಪಾಯಸೂಚಕ ಮಾತ್ರವಲ್ಲದೆ ರಕ್ಷಣಾ ಸಾಧನೆಯೂ ಹೌದು.

ಜೀವಿಗಳು ಫೆರೊಮೋನನ್ನು ಸಂಶ್ಲೇಷಿಸುವ ವಿಧಾನ ಇನ್ನೂ ತಿಳಿದು ಬಂದಿಲ್ಲ. ಹಲವಾರು ಫೆರೊಮೋನುಗಳು ಮೇದೋಆಮ್ಲ ಮತ್ತು ಟರ್ಪೀನುಗಳಿಗೆ ಸಂಬಂಧಿಸಿವೆಯಾದ್ದರಿಂದ ಈ ಮೂಲವಸ್ತುಗಳ ಪರಿವರ್ತನೆಯಿಂದ ದೊರಕುತ್ತವೆ ಎಂದು ನಿರೀಕ್ಷಿಸಬಹುದು. ಅಕಾಂಥೋ ಮಯೋಪ್ಸ ಕ್ಲಾವಿಗರ್ ಮೆಲೋವಿಕ್ ಆಮ್ಲವನ್ನು (ಮಾನೋಟರ್ಪೀನ್) ಅಪಾಯಸೂಚಕವನ್ನಾಗಿ ಪರಿವರ್ತಿಸಬಲ್ಲದು. ಇವೆ ವಸ್ತುಗಳು ಅಥವಾ ಸಂಬಂಧಿತ ವಸ್ತುಗಳು ಸಸ್ಯಗಳಲ್ಲಿಯೂ ಉತ್ಪತ್ತಿಯಾಗುವುದರಿಂದ ಅನೇಕ ಪ್ರಾಣಿಗಳು ಇವನ್ನು ಸಸ್ಯಗಳಿಂದ ಸಂಪಾದಿಸಿ ಫೆರೊಮೋನುಗಳಾಗಿ ಬಳಸುತ್ತವೆ ಎಂದು ನಂಬಲಾಗಿದೆ.

ಲೈಂಗಿಕ ಫೆರೊಮೋನುಗಳ ವಿಸರ್ಜನೆಗೆ ನಿಯಮಗಳುಂಟು. ದಿನದ ವೇಳೆ ವಾತಾವರಣದ ಪರಿಸ್ಥಿತಿ ಮುಂತಾದವು ವಿಸರ್ಜನೆಯನ್ನು ನಿಯಂತ್ರಿಸುತ್ತವೆ. ಅನೇಕ ಸಂದರ್ಭಗಳಲ್ಲಿ ಹೆಣ್ಣಿಗೆ ಮೊಟ್ಟೆ ಇಡಲು ಅನುಕೂಲಕರವಾದ ಗಿಡಗಳ ಸನಿಹ ಸಹ ಮುಖ್ಯ. ಆಂಥಿರೇ ಪಾಲಿಫೀಮಸ್ ಜಾತಿಯ ರೇಷ್ಮೆ ಹೆಣ್ಣು ಲೈಂಗಿಕ ಫೆರೋಮೋನಿನ ವಿಸರ್ಜನೆಗೆ ರೆಡ್‌ವುಡ್ ಎಲೆಗಳಿಂದ ಹೊರಹೊರಡುವ ಟ್ರಾನ್-2 ಹೆಕ್ಸಿನಾಲ್ ಪ್ರೇರಕ.

ಫೆರೊಮೋನುಗಳು ಪರಿಣಾಮಕಾರಿಗಳಾಗಲು ವಾಯುವಿನಲ್ಲಿ ಅಥವಾ ನೀರಿನಲ್ಲಿ ವ್ಯಾಪಿಸುವ ಗುಣ ಪಡೆದಿರಬೇಕು. ಅವು ವ್ಯಾಪಿಸುವ ರೀತಿಯನ್ನು ಗಣಿತ ಪ್ರತಿರೂಪವೊಂದರ (ಮಾಡೆಲ್) ನೆರವಿನಿಂದ ವಿವರಿಸಬಹುದು. ವಾಯು ನಿಶ್ಚಲವಾಗಿದ್ದು ಫೆರೊಮೋನ್ ಇತರ ಅಣುಗಳೊಂದಿಗೆ ವರ್ತಿಸದಿದ್ದರೆ ಹಾಗೂ ಇತರ ವಸ್ತುಗಳಿಂದ ಅಧಿಶೋಷಿತವಾಗದಿದ್ದರೆ ಅದು ಸರಳ ಪ್ರಸರಣ ನಿಯಮಕ್ಕೆ ಅನುಸಾರವಾಗಿ ವಾಯುವಿನಲ್ಲಿ ಹರಡುತ್ತದೆ ಎಂದು ಪ್ರತಿರೂಪ ತಿಳಿಸುತ್ತದೆ. ಮೂಲದಿಂದ ಸ್ವಲ್ಪ ದೂರವಿರುವ ಯಾವುದೆ ಒಂದು ಜಾಗದಲ್ಲಿ ಫೆರೋಮೋನಿನ ಸಾರತೆ ಅದು ಗ್ರಂಥಿಯಿಂದ ಹೊರಹೊರಡುವ ದರ, ಅದರ ಪ್ರಸರಣ ಸ್ಥಿರಾಂಕ, ಮೂಲಕ್ಕೂ ಆ ಜಾಗಕ್ಕೂ ನಡುವೆ ಇರುವ ಅಂತರ ಮತ್ತು ವಿಸರ್ಜನೆ ಪ್ರಾರಂಭವಾದ ಬಳಿಕ ಕಳೆದ ವೇಳೆ ಇವನ್ನು ಅವಲಂಬಿಸುತ್ತದೆ. ಫೆರೊಮೋನನ್ನು ಗ್ರಹಿಸುವ ಜೀವಿ ಅದರಿಂದ ಪ್ರಭಾವಿತವಾಗಲು ಬೇಕಾಗುವ ಕನಿಷ್ಠ ಸಾರತೆಯನ್ನು ಗೊತ್ತುಮಾಡಬಹುದು. ಇದಕ್ಕೆ ದೇಹಲಿಸಾರತೆ ಎಂದು ಹೆಸರು. ಒಂದು ಫೆರೋಮೋನಿನ ದೇಹಲಿ ಸಾರತೆ ಮತ್ತು ಸಂದೇಶ ಪ್ರಸಾರಕ್ಕೆ ಬಳಸುವ ಪ್ರಮಾಣ ಗೊತ್ತಿದ್ದರೆ ಸಂದೇಶ ಪರಿಣಾಮಕಾರಿಯಾಗಿ ಮುಟ್ಟಬಲ್ಲ ದೂರ (ಮೂಲದಿಂದ) ಮತ್ತು ಅದು ಒಂದೆಡೆಯಲ್ಲಿ ಉಳಿಯಬಲ್ಲ ಅವಧಿಗಳನ್ನು ಗಣಿಸಬಹುದು. ದೇಹಲಿ ಸಾರತೆ ಕಡಿಮೆಯಾದಂತೆ ಪ್ರಸರಣ ದೂರ ಹೆಚ್ಚುತ್ತದೆ.

ವಾಯುವಿನಲ್ಲಿ ಪ್ರಸರಿತವಾಗುವ ಫೆರೊಮೋನುಗಳಲ್ಲಿ ಅವುಗಳ ಬಾಷ್ಪಶೀಲತೆ ಅವು ಪರಿಣಾಮಕಾರಿಯಾಗಬಲ್ಲ ಮಟ್ಟದಲ್ಲಿ ಹೊರಹೊರಡುತ್ತಿವೆಯೆ ಇಲ್ಲವೆ ಎಂಬುದನ್ನು ನಿರ್ಧರಿಸುವ ಮುಖ್ಯ ಗುಣವಾಗಿದೆ. ಬಾಷ್ಪಶೀಲತೆಗೂ ಅಣು ತೂಕಕ್ಕೂ, ಕೆಲವು ವಿಶೇಷ ಸಂದರ್ಭಗಳನ್ನು ಬಿಟ್ಟು, ಸಂಬಂಧ ಉಂಟು. ವಾಯುವಿನಲ್ಲಿ ಪ್ರಸಾರವಾಗುವ ಫೆರೊಮೋನುಗಳ ಅಣುತೂಕ 80ರಿಂದ 300ರ ವರೆಗೆ ಮಾತ್ರ. ನೀರಿನಲ್ಲಿ ಹರಡುವ ಫೆರೊಮೋನುಗಳಲ್ಲಿ ವಿಲೀನತೆ ಮುಖ್ಯ ಗುಣವಾಗುತ್ತದೆ. ಪ್ರೊಟೋಜೋವ ವರ್ಗದ ವಾಲ್ವೊಕ್ಸ್ ಮತ್ತು ಪಾರಾಮೀಸಿಯಮ್‌ಗಳ ಲೈಂಗಿಕ ಫೆರೊಮೋನುಗಳು ಪ್ರೋಟೀನುಗಳು. ವಾಯು ಮಾತ್ರವಲ್ಲದೆ ನೀರಿನಲ್ಲಿ ವಿಸರ್ಜನೆಯಾಗುವ ಫೆರೊಮೋನುಗಳಲ್ಲಿ ಸಹ ವೈವಿಧ್ಯವನ್ನು ಕಾಣುತ್ತೇವೆ. ಉದಾಹರಣೆಗೆ ನೀರಿನಲ್ಲಿರುವ ಶಿಲೀಂಧ್ರ ಅಲೋಮೈಸಿಸ್, ಸೈರೆನಿನ್ ಎಂಬ ಸೆಸ್ಕ್ವಿಟರ್ಪೀನನ್ನು ಫೆರೋಮೋನಿನಂತೆ ಬಳಸುತ್ತದೆ. ಪಾಚಿಶಿಲೀಂಧ್ರವಾದ ಡಿಕ್ಟಿಸೋಲಿಯಮ್ ಡಿಸ್ಕಾಯಿಡೀಯಮಿನಲ್ಲಿ 3, 5 ಚಕ್ರೀಯ ಎಎಂಪಿ ಫೆರೋಮೋನಿನಂತೆ ವರ್ತಿಸುತ್ತದೆ. ಇವೆರಡರ ರಾಸಾಯನಿಕ ವೃತ್ತಾಂತ ತೀರ ಭಿನ್ನ.

ಫೆರೊಮೋನುಗಳು ಪ್ರಚೋದಿಸುವ ಪ್ರತಿಕ್ರಿಯೆಯ ಆಧಾರದ ಮೇಲೆ ಅವುಗಳನ್ನು ಎರಡು ಪಂಗಡಗಳಾಗಿ ವರ್ಗೀಕರಿಸಬಹುದು: ಒಡನೆ ಪ್ರತಿಕ್ರಿಯೆ ಪ್ರಚೋದಿಸುವಂಥವು ಹಾಗು ನಿಧಾನವಾಗಿ (ಉದಾಹರಣೆಗೆ ಬೆಳವಣಿಗೆಯಲ್ಲಿ) ಪ್ರತಿಕ್ರಿಯೆ ಉಂಟುಮಾಡುವಂಥವು. ಅಪಾಯಸೂಚಕಗಳು ಮೊದಲನೆಯ ವರ್ಗದವು. ತದ್ವಿರುದ್ಧವಾಗಿ ರಾಣಿ ಜೇನು ಬಿಡುಗಡೆ ಮಾಡುವ 9 ಕೀಟೋ 2 ಡೆಸಿನೋಯಿಕ್ ಆಮ್ಲ ಕೆಲಸಗಾರ ಜೇನುಹುಳುಗಳ ಗರ್ಭಕೋಶ ಬೆಳೆಯದಂತೆ ತಡೆಯುವುದರಿಂದ ಎರಡನೆಯ ವರ್ಗಕ್ಕೆ ಸೇರುತ್ತದೆ.

ತತ್‌ಕ್ಷಣ ಪ್ರತಿಕ್ರಿಯೆ ಉಂಟುಮಾಡುವ ಫೆರೊಮೋನುಗಳು ಪ್ರಚೋದಿಸುವ ಪ್ರತಿಕ್ರಿಯೆಗಳಲ್ಲಿ ಸಹ ವೈವಿಧ್ಯ ಉಂಟು. ಲೈಂಗಿಕಾಕರ್ಷಕಗಳನ್ನು ಗುರುತಿಸುವ ಚಿಟ್ಟೆಗಳು ಮೂಲದಿಂದ ಹೊರಬಿದ್ದ ವಾಸನೆಯ ಜಾಡನ್ನು ಹಿಡಿದು ಮೂಲವನ್ನು ಅನುಸರಿಸಿ ಗಾಳಿ ಬೀಸುವ ದಿಕ್ಕಿಗೆ ವಿರುದ್ಧವಾಗಿ ಹಾರುತ್ತವೆ. ಪಥದಿಂದ ವಿಚಲಿತವಾದಾಗ ವಾಸನೆಯ ಜಾಡು ತಪ್ಪುತ್ತದೆ. ಮತ್ತೆ ವಾಸನೆಯ ಜಾಡು ಸಿಗುವವರೆಗೆ ಹುಡುಕಾಡಿ ಮೊದಲಿನ ಜಾಡಿಗೆ ಸೇರುತ್ತವೆ. ಮೂಲವನ್ನು ತಲಪಿದಂತೆ ವಾಸನೆಯ ತೀವ್ರತೆ ಒಮ್ಮೆಲೇ ಏರುತ್ತದೆ ಮತ್ತು ಹಾರುತ್ತಿರುವ ಚಿಟ್ಟೆ, ಫೆರೊಮೋನನ್ನು ಬಿಡುಗಡೆ ಮಾಡುತ್ತಿರುವ ಪ್ರಾಣಿಯನ್ನು

ಗುರುತಿಸುತ್ತದೆ. ಮುಂದೆ ಪ್ರಣಯ ಲೀಲೆ ಪ್ರಾರಂಭವಾಗಿ ಸಂಭೋಗದಲ್ಲಿ ಪರ್ಯವಸಾನವಾಗುವ ಹಂತ ಮುಟ್ಟಲು ಹಲವಾರು ಫೆರೊಮೋನುಗಳ ಸಹಾಯ ಬೇಕಾಗಬಹುದು. ಫ್ಲೋಗೋಫೇರಾ ಮೆಟೆಕ್ಯುಲೋಸಾ ಜಾತಿಯ ಚಿಟ್ಟೆಯಲ್ಲಿ ಹೆಣ್ಣು ಗಂಡನ್ನು ಆಕರ್ಷಿಸುವ ಫೆರೊಮೋನನ್ನು ಬಿಡುಗಡೆ ಮಾಡುತ್ತದೆ. ಗಂಡು ಹೆಣ್ಣಿನೆಡೆಗೆ ಹಾರಿಹೋಗಿ ತನ್ನ ಹೊಟ್ಟೆಯ ಮೇಲಿನ ಕೂದಲು ಗ್ರಂಥಿಯ ಪರಿಮಳವನ್ನು ಅದರ ಮೇಲೆ ಸಿಂಪಡಿಸುತ್ತದೆ. ಸಂಭೋಗ ತತ್‌ಕ್ಷಣ ಜರುಗುತ್ತದೆ. ಗಂಡಿನ ಪರಿಮಳ ಸ್ವಂತ ಜಾತಿಯ ಹೆಣ್ಣನ್ನು ಮಾತ್ರ ಉದ್ರೇಕಿಸುತ್ತದೆ. ಹೀಗಾಗಿ ಈ ಫೆರೊಮೋನ್ ಆಕರ್ಷಕ ವಸ್ತುವಿನಂತೆ ವರ್ತಿಸುವುದಲ್ಲದೆ ಬೆರಕೆ ಜಾತಿಯ ಪೀಳಿಗೆಗಳು ಹುಟ್ಟದಂತೆ ಕೂಡ ತಡೆಯಬಲ್ಲದು. ರಾಣಿಚಿಟ್ಟೆ ಜಾತಿಯ ಗಂಡು ಹುಳುಗಳು ಎರಡು ಬಗೆಯ ಫೆರೊಮೋನುಗಳನ್ನು ವಿಸರ್ಜಿಸುತ್ತವೆ. ಇವೆರಡೂ ಹೆಣ್ಣಿನ ಮೀಸೆಯಿಂದ ಗ್ರಹಿತವಾಗಿ ಪ್ರತಿಕ್ರಿಯೆ ಉಂಟುಮಾಡುತ್ತವೆ.

ಸಮಾಜ ಜೀವಿಗಳಲ್ಲಿ ಅಪಾಯಸೂಚಕ ಫೆರೊಮೋನುಗಳು ಎರಡು ಬಗೆಯ ಪ್ರತಿಕ್ರಿಯೆ ಉಂಟುಮಾಡುತ್ತವೆ. ಕೆಲವು ಜಾತಿಗಳಲ್ಲಿ ಅಪಾಯಸೂಚಕಗಳು ಸಂಘದ ಸದಸ್ಯರು ಚದರಿ ಹೋಗುವಂತೆ ಮಾಡಿದರೆ ಇನ್ನೊಂದು ಜಾತಿಯಲ್ಲಿ ಸದಸ್ಯರು ಅಪಾಯ ಸ್ಥಳಕ್ಕೆ ಧಾವಿಸಿ ಬಂದು ಹೋರಾಡುವ ಮನೋಭಾವವನ್ನು ಪ್ರಚೋದಿಸುತ್ತವೆ. ಕ್ಲಾವಿಗರ್ ಇರುವೆಗಳಲ್ಲಿ ಅಪಾಯಸೂಚಕಗಳು ಗುಂಪುಗೂಡಿಸುತ್ತವೆ. ಈ ಜಾತಿಯ ಇರುವೆಗಳು ದಟ್ಟ ವಸತಿಯಲ್ಲಿ ಜೀವಿಸುವುದರಿಂದ ಎರಡು ಅನುಕೂಲತೆ ಉಂಟು. ಇವು ಅಧಿಕ ರಾಶಿಯಲ್ಲಿ ಅನೇಕ ರಕ್ಷಣಾ ಸಾಧನಗಳನ್ನು ಹೊರ ಸೂಸಬಲ್ಲವು. ಒಂದೆಡೆಯಲ್ಲಿ ಕೇಂದ್ರೀಕೃತವಾಗಿ ಶತ್ರುವನ್ನು ಹೊಡೆದೋಡಿಸಬಲ್ಲವು. ಆದರೆ ಲಾಸಿಯಸ್ ಏಲಿಯನಸ್ ಜಾತಿಯ ಇರುವೆಗಳು ಅಪಾಯಸೂಚಕ ಹಾಗೂ ರಕ್ಷಣೆಮಾಡಬಲ್ಲ ಫೆರೊಮೋನನ್ನು ಬಿಡುಗಡೆ ಮಾಡುತ್ತವೆಯಾದರೂ ವಸತಿಯಲ್ಲಿ ಸಾಂದ್ರತೆ ಕಡಿಮೆ. ಬಿಡುಗಡೆಯಾಗುವ ಫೆರೋಮೋನಿನ ಮೊತ್ತವೂ ಕಡಿಮೆ. ಹೀಗಾಗಿ ಅವು ನಿಂತು ಹೋರಾಡುವುದು ಜಾಣತನವಲ್ಲ. ಎಂತಲೆ ಅಪಾಯ ಸೂಚನೆ ಒದಗಿದ ಒಡನೆ ಕಾಲಿಗೆ ಬುದ್ಧಿ ಹೇಳುತ್ತವೆ. ಅಪಾಯಸೂಚಕಗಳನ್ನು ಸ್ವೀಕರಿಸುವ ಪ್ರಾಣಿ ತಾನೇ ಫೆರೊಮೋನನ್ನು ಉತ್ಪಾದಿಸಿ ಪುನಃ ಪ್ರಸರಿಸುವುದಿಲ್ಲ. ಅಲ್ಲದೆ ಕ್ಲಾವಿಗರ್ ಅಪಾಯ ಸಾಕ್ಷಾತ್ತಾಗಿ ಒದಗಿದ ಹೊರತು ತನ್ನ ಅಪಾಯಸೂಚಕವನ್ನು ಬಿಡುಗಡೆ ಮಾಡುವುದಿಲ್ಲ.

ಮೂಗು ಮತ್ತು ನಾಲಗೆಗಳು ಗುರುತಿಸುವ ಫೆರೊಮೋನುಗಳು ಇಂದ್ರಿಯಗಳಲ್ಲಿರುವ ವಿಶಿಷ್ಟ ಕೋಶಗಳೊಂದಿಗೆ ವರ್ತಿಸಿ ಪ್ರತಿಕ್ರಿಯೆಯನ್ನು ಪ್ರಚೋದಿಸುತ್ತವೆ. ಕೀಟಗಳಲ್ಲಿ ಮೀಸೆ ಗ್ರಾಹಕ ಸಾಧನ. ಮೀಸೆಗಳಲ್ಲಿ ನರಕೋಶದ ಅತಿಸೂಕ್ಷ್ಮ ತಂತುಗಳು ಗ್ರಹಿಸುವ ಭಾಗಗಳಾದ ಕೂದಲು, ಗುಳಿಗಳು ಹಾಗೂ ತಟ್ಟೆಗಳಂತಿರುವ ಭಾಗಗಳಲ್ಲಿ ವ್ಯಾಪಿಸಿರುತ್ತವೆ. ವಾಸನಾದ್ರವ್ಯಗಳು ವಿಶಿಷ್ಟ ರಂಧ್ರಗಳ ಮೂಲಕ ಒಳಹೊಕ್ಕು ಈ ತಂತುಗಳನ್ನು ಮುಟ್ಟುತ್ತವೆ. ತಂತುಗಳ ಮೇಲ್ಮೈಯಲ್ಲಿ ವಾಸನಾದ್ರವ್ಯಗಳನ್ನು ಗುರುತಿಸಿ ಅವನ್ನು ಬಂಧಿಸುವ ವಿಶಿಷ್ಟ ಸ್ವಾಗತಕಾರ ಅಣುಗಳಿರುತ್ತವೆ. ಇವೆರಡರ ಸಂಪರ್ಕದ ಪರಿಣಾಮವಾಗಿ ವಿದ್ಯುತ್ ಪ್ರವಾಹ ಸಂಚರಿಸುತ್ತದೆ. ವಾಸನಾದ್ರವ್ಯದ ಅನೇಕಾನೇಕ ಅಣುಗಳು ನರಕೋಶವನ್ನು ಒಮ್ಮೆಲೇ ಮುಟ್ಟಿದಾಗ ವಿದ್ಯುತ್ ಪ್ರವಾಹ ಬಲಗೊಂಡು ಪ್ರತಿಕ್ರಿಯೆಯನ್ನು ಹುಟ್ಟಿಹಾಕುತ್ತವೆ. ಫೆರೊಮೋನ್ ಗ್ರಾಹಿಗಳು ಪ್ರೋಟೀನುಗಳು. ಜೀವಿಗೆ ಅಗತ್ಯವಾದಾಗ ಮಾತ್ರ ಇವು ಉತ್ಪತ್ತಿಯಾಗುತ್ತವೆ. ಅಲ್ಲದೆ ಇವು ಲಿಂಗ ವೈಶಿಷ್ಟ್ಯವನ್ನೂ ಪ್ರದರ್ಶಿಸುತ್ತವೆ.

ಆಂಥಿರೇ ಪರ್ನ್ಯೆ ಕೀಟವರ್ಗದ ಗಂಡುಹುಳುಗಳು ಹೆಣ್ಣಿನ ಫೆರೊಮೋನನ್ನು ಗೊತ್ತುಮಾಡಲು ಮೀಸೆಯನ್ನು ಬಳಸುತ್ತವೆ. ಮೀಸೆಯನ್ನು ತೊಳೆದಾಗ ಪ್ರತಿಕ್ರಿಯೆ ಬಲುಮಟ್ಟಿಗೆ ಕುಂಠಿತವಾಗುತ್ತದೆ. ಈ ಸ್ವೀಕಾರ ಅಣು ಪ್ರೋಟೀನೆಂದು ಗುರುತಿಸಲಾಗಿದೆ. ಹೆಣ್ಣಿನ ಮೀಸೆಯಲ್ಲಿ ಈ ಪ್ರೋಟೀನ್ ಕಂಡು ಬರುವುದಿಲ್ಲ.

ಮೀಸೆಗಳಲ್ಲಿರುವ ಗ್ರಾಹಿಗಳ ಗ್ರಹಣಸಾಮರ್ಥ್ಯ ಸೂಕ್ಷ್ಮ ಸಂವೇದಕವಾಗಿದೆ. ಇದು ಫೆರೋಮೋನಿನ ಒಂದೇ ಒಂದು ಅಣುವನ್ನು ಸಹ ಪತ್ತೆ ಮಾಡಬಲ್ಲದು. ಫೆರೊಮೋನ್ ಮತ್ತು ಗ್ರಾಹಿ ಪರಸ್ಪರ ಕ್ರಿಯೆ ಬಲುಮಟ್ಟಿಗೆ ವಿಶಿಷ್ಟ ರೀತಿಯಲ್ಲಿ ನಡೆಯುತ್ತದೆ. ಅಪಾಯಸೂಚಕ ಅಣುಗಳಿಗಿಂತ ಲೈಂಗಿಕ ಆಕರ್ಷಕ ವಸ್ತುಗಳು ಹೆಚ್ಚಿನ ವೈಶಿಷ್ಟ್ಯ ತೋರಿಸುತ್ತವೆ. ಅಪಾಯ ಸೂಚಕಗಳ ಕಾರ್ಯಕ್ಕೂ ಅವುಗಳ ಆಕಾರಕ್ಕೂ ಸಂಬಂಧವಿದೆ. ಉದಾಹರಣೆಗೆ 2–ಹೆಪ್ಟನೋನ್ ಮತ್ತು ಟಿ–ಬ್ಯುಟೈಲ್ ಅಸಿಟೇಟುಗಳ ರಸಾಯನ ವೃತ್ತಾಂತ ವಿಭಿನ್ನವಾಗಿದ್ದರೂ ಅವುಗಳ ಜ್ಯಾಮಿತೀಯ ಆಕಾರದಲ್ಲಿ ಸಾದೃಶ್ಯ ಉಂಟು. ಇವೆರಡು ಉತ್ತಮ ದರ್ಜೆಯ ಕ್ರಿಯಾಶೀಲ ವಸ್ತುಗಳು.

ಲೈಂಗಿಕ ಫೆರೊಮೋನುಗಳಲ್ಲಿ ಅಣುವಿನ ಆಕಾರದ ವಿಷಯದಲ್ಲಿ ಹೆಚ್ಚಿನ ವೈಶಿಷ್ಟ್ಯ ಕಂಡುಬರುತ್ತದೆ. ಅನೇಕ ಸಂದರ್ಭಗಳಲ್ಲಿ ಸಹಜ ಫೆರೋಮೋನಿನ ಜ್ಯಾಮಿತೀಯ ಹಾಗೂ ರಾಶ್ಮಿಕ ಸಮಾಂಶಿ ಅಣುಗಳು ಮಾತ್ರ ಪರಿಣಾಮಕಾರಿಯಾಗುತ್ತವೆ. ವಿರುದ್ಧ ರಾಶ್ಮಿಕ ಚಟುವಟಿಕೆಯುಳ್ಳ ಅಣುಗಳು ಪ್ರತಿಕ್ರಿಯೆ ತಲೆದೋರದಂತೆ ಅಡ್ಡಿಯನ್ನೇ ಒಡ್ಡುತ್ತವೆ. ಆದರೆ ಒಂದು ಜಾತಿಯ ಕೀಟಗಳಲ್ಲಿ ಪ್ರತಿಕ್ರಿಯೆಗೆ ಅಡ್ಡಿಯೊಡ್ಡುವ ಸಮಾಂಶಿಗಳು ಇನ್ನೊಂದು ಜಾತಿಯಲ್ಲಿ ಪ್ರತಿಕ್ರಿಯೆಯನ್ನು ಪ್ರಚೋದಿಸಬಹುದು. ಈ ಬಗೆಯ ವೈಶಿಷ್ಟ್ಯದಿಂದ ಜಾತಿಸಂಕರಣಕ್ಕೆ ಅವಕಾಶ ಇಲ್ಲದಂತಾಗಿ ಆಯಾ ಜಾತಿಯ ಕೀಟಗಳು ತಮ್ಮ ಜಾತಿಯ ಅಭಿವೃದ್ಧಿಯನ್ನು ಮಾತ್ರ ಸಾಧಿಸಲು ಅನುಕೂಲವಾಗುತ್ತದೆ.

ಒಂದೇ ಫೆರೊಮೋನ್ ಎರಡು ಅಥವಾ ಹೆಚ್ಚಿನ ಬಗೆಯ ಕಾರ್ಯ ನಿರ್ವಹಿಸುವ ಉದಾಹರಣೆ ಉಂಟು, ಕಾಮೋತ್ತೇಜಕಗಳು ಬೇಟೆಯನ್ನು ಅರಸುವ ಸಾಧನಗಳಾಗಬಹುದು. ಟೆಮ್ನೋಕಿಲ ಎಂಬ ಕಣಜ ಡೆಂಡ್ರೋಕ್ಟನಸ್ ಎಂಬ ಮರದ ಚಿಪ್ಪಿನ ಕಣಜವನ್ನು ತಿನ್ನುತ್ತದೆ. ಡೆಂಡ್ರೋಕ್ಟನಸ್ ಹುಳುಗಳು ಗುಂಪುಗೂಡಿಸಲು ಪ್ರಸರಿಸುವ ಫೆರೊಮೋನ್ ಟೆಮ್ನೋಕಿಲಕ್ಕೆ ಭೋಜನಾಹ್ವಾನವನ್ನು ಕೊಡುತ್ತದೆ. ಇರುವೆಯ ಮರಿಹುಳುಗಳನ್ನು ತಿನ್ನುವ ಕಣಜಗಳು ಅದರ ಗೂಡಿನಲ್ಲೆ ವಾಸಿಸುತ್ತವೆ ಮತ್ತು ಇರುವೆಗಳ ವಾಸನೆಯ ಜಾಡನ್ನೆ ಹಿಂಬಾಲಿಸುತ್ತವೆ. ಅಲ್ಲದೆ ಇರುವೆಗಳ ಆಕ್ರಮಣವನ್ನು ಹಿಮ್ಮೆಟ್ಟಿಸಲು ಫೆರೊಮೋನನ್ನೂ ಬಿಡುಗಡೆ ಮಾಡುತ್ತವೆ.

ಜೇನು ಹುಳುಗಳು ಆಹಾರಮೂಲಗಳನ್ನು ಗುರುತಿಸಲು ಫೆರೊಮೋನುಗಳನ್ನು ಬಳಸುತ್ತವೆ. ಇಲ್ಲಿಯೂ ವೈಶಿಷ್ಟ್ಯ ಉಂಟು. ಒಂದು ಗೂಡಿನ ಜೇನುಹುಳು ವಿಸರ್ಜಿಸಿದ ಪರಿಮಳವನ್ನು ಅದೇ ಗೂಡಿನ ಇನ್ನೊಂದು ಹುಳು ಮಾತ್ರ ಗುರುತಿಸಬಲ್ಲದು. ಎಂದರೆ ಆಹಾರ ಸಂಪಾದನೆ ಸುಲಭವಾಗುತ್ತದೆ. ಹಲವಾರು ಹೂವುಗಳಲ್ಲಿ ಸಹ ಫೆರೊಮೋನುಗಳುಂಟು. ಜೇನು ಹುಳುವನ್ನು ಆಕರ್ಷಿಸಲು ಹೂವು ಫೆರೊಮೋನನ್ನು ಸೃಷ್ಟಿಸಿತೊ ಅಥವಾ ಜೇನು ಹುಳು ಹೂವಿನ ಪರಿಮಳ ಅನುಕರಿಸುವ ವಸ್ತುವನ್ನು ತಯಾರಿಸಲು ಪ್ರಾರಂಭಿಸಿತೊ ಗೊತ್ತಿಲ್ಲ. ಹೂವು ಜೇನುಗಳ ಸಂಬಂಧ ವಿಚಿತ್ರವಾಗಿ ಪರಿಣಮಿಸಬಹುದು ಎಂಬುದನ್ನು ಆರ್ಕಿಡ್‌ಗಳ ಸಂದರ್ಭದಲ್ಲಿ ಕಾಣಬಹುದು. ಓಫ್ರಿಸ್ ಜಾತಿಯ ಆರ್ಕಿಡುಗಳು ಒಂಟಿ ಜೇನುಗಳನ್ನು ಆಕರ್ಷಿಸಲು ವಿಸ್ಮಯಕಾರಿ ತಂತ್ರವನ್ನು ಬಳಸುತ್ತವೆ. ಈ ಹೂವು ಆಕಾರದಲ್ಲಿ, ಗಾತ್ರದಲ್ಲಿ ಮತ್ತು ಬಣ್ಣದಲ್ಲಿ ಹೆಣ್ಣು ಜೇನಿನ ಆಕಾರವನ್ನೆ ಹೋಲುತ್ತದೆ. ಹೂವಿನ ಪರಿಮಳದಿಂದ ಆಕರ್ಷಿತವಾದ ಗಂಡು, ಅದು ಹೆಣ್ಣೆಂದು ಭ್ರಮಿಸಿ, ಸಂಭೋಗಕ್ಕೆ ಪ್ರಯತ್ನಿಸುತ್ತದೆ. ಪರಾಗ ಕೀಟದ ಮೈಗೆ ಅಂಟಿಕೊಳ್ಳುತ್ತದೆ.

ಫೆರೊಮೋನುಗಳ ಅಧ್ಯಯನದಿಂದ ಮಾನವ ಪರಿಸರ ನಿಯಂತ್ರಣದ ಬಗೆಯನ್ನು ಕಂಡುಕೊಳ್ಳಬಹುದು. ಅಲ್ಲದೆ ಅವನ ಆಹಾರಗಳನ್ನು ನಿರಂತರವಾಗಿ ನಾಶಮಾಡುವ ಕೀಟಗಳನ್ನು ತೊಡೆದುಹಾಕಲು ಇವನ್ನು ಸಾಧನವಾಗಿ ಬಳಸಬಹುದು. ಅವನು ಈಗ ಬಳಸುವ ರಾಸಾಯನಿಕ ವಸ್ತುಗಳು ಉದ್ದೇಶಿತ ಕೀಟಗಳನ್ನಲ್ಲದೆ ಇತರ ಜೀವಿಗಳನ್ನು ಸಹ ತೊಂದರೆಗೆ ಈಡುಮಾಡುತ್ತವೆ. ಅಲ್ಲದೆ ಆಹಾರ ಸರಪಣಿಯ ಮೂಲಕ ಕಡೆಗೆ ಅವನಿಗೆ ಅಪಾಯ ಒಡ್ಡುವ ಸಾಧ್ಯತೆ ಇದೆ. ಫೆರೊಮೋನುಗಳ ಬಳಕೆಯಿಂದ ಆಯ್ದ ರೀತಿಯಲ್ಲಿ ಜೀವಿಗಳನ್ನು ನಿಯಂತ್ರಿಸಬಹುದು. ಉದಾಹರಣೆಗೆ ಹೆಣ್ಣು ಫೆರೊಮೋನನ್ನು ಸಿಂಪಡಿಸಿ ಗಂಡು ಕೀಟಗಳನ್ನು ಆಕರ್ಷಿಸಿ ಅವನ್ನು ನಾಶಮಾಡಬಹುದು. ಈ ದಿಶೆಯಲ್ಲಿಯೇ ಇನ್ನು ಮುಂದೆ ಕೀಟ ನಿಯಂತ್ರಣ ಕಾರ್ಯಗಳು ಸಾಗಬೇಕು. ***

**ಫೆಲ್ಯಾಂಜರ್:** ಸ್ತನಿವರ್ಗದ ಮಾರ್ಸುಪಿಯೇಲಿಯ ಗಣದ ಫೆಲ್ಯಾಂಜರಿಡೆ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಪ್ರಾಣಿಗಳಿಗೆ ಇರುವ ಸಾಮಾನ್ಯ ಹೆಸರು. ಆಸ್ಟ್ರೇಲಿಯ, ಟಾಸ್ಮೇನಿಯ, ನ್ಯೂಗಿನಿ, ಸೆಲೆಬಸ್, ಟೀಮರ್, ಸೇರಾಮ್, ಸಾಲೋಮನ್ ದ್ವೀಪಸ್ತೋಮ ಮುಂತಾದೆಡೆಗಳಲ್ಲೆಲ್ಲ ವ್ಯಾಪಕವಾಗಿ ಕಾಣಬರುವ ಸು. 17 ಜಾತಿಗಳು ಈ ಕುಟುಂಬಕ್ಕೆ ಸೇರಿ ಇವೆಲ್ಲಕ್ಕೂ ಸ್ಥೂಲಾರ್ಥದಲ್ಲಿ ಈ ಹೆಸರು ಬಳಕೆಯಾಗುತ್ತಿದೆ. ಆದರೆ ನಿಷ್ಕೃಷ್ಟವಾಗಿ ಆಸ್ಟ್ರೇಲಿಯ ಹಾಗೂ ಟಾಸ್ಮೇನಿಯಗಳಲ್ಲಿ ವಾಸಿಸುವ ಟ್ರೆಕೊಸ್ಯೂರಸ್ ವಲ್ಪಿಕ್ಯುಲ ಎಂಬ ಪ್ರಭೇದ, ನ್ಯೂಗಿನಿ ನಿವಾಸಿಯಾದ ಡಿಸ್ಟೋಎಕ್ಯೂರಸ್ ಪೆನ್ನೆಟಸ್ ಪ್ರಭೇದ ಹಾಗೂ ನ್ಯೂಗಿನಿ, ಸೆಲೆಬಸ್, ಸಾಲೋಮನ್ ದ್ವೀಪಸ್ತೋಮ ಮುಂತಾದೆಡೆಗಳಲ್ಲಿ ವಾಸಿಸುವ ಫೆಲ್ಯಾಂಜರ್ ಮ್ಯಾಕ್ಯುಲೇಟಸ್ ಎಂಬವುಗಳಿಗೆ ಈ ಹೆಸರು ಹೆಚ್ಚು ಬಳಕೆಯಲ್ಲಿದೆ. ಕೊನೆಯಲ್ಲಿ ಹೆಸರಿಸಿದ ಪ್ರಭೇದಕ್ಕೆ ಕಸ್ಕಸ್ ಎಂಬ ಹೆಸರೂ ಉಂಟು.

ಫೆಲ್ಯಾಂಜರುಗಳ ಸ್ವಾಭಾವಿಕ ಆವಾಸ ಸಮುದ್ರ ಮಟ್ಟದಿಂದ ಹಿಡಿದು 4000 ಮೀ. ಎತ್ತರದವರೆಗಿನ ಪ್ರದೇಶಗಳ ದಟ್ಟಕಾಡು. ಇಂಗ್ಲೆಂಡಿನ ಅನ್ವೇಷಕ ಕ್ಯಾಪ್ಟನ್ ಜೇಮ್ಸ್ ಕುಕ್ ಆಸ್ಟ್ರೇಲಿಯದ ಕುಕ್‌ಟೌನಿನಲ್ಲಿ ಈ ಕುಟುಂಬದ ಸ್ಯೂಡೊಕೈರಸ್ ಪ್ರಭೇದವನ್ನು ಕಂಡಾಗ, ಅದಕ್ಕೂ ಉತ್ತರ ಅಮೇರಿಕದ ಒಪಾಸಮ್‌ಗಳಿಗೂ ಇರುವ ಮೇಲು ಮೇಲಿನ ಹೋಲಿಕೆಯನ್ನು ಗಮನಿಸಿ ಅದನ್ನು ಒಪಾಸಮ್ ಎಂದೇ ಹೆಸರಿಸಿದ. ಆದರೆ ಆಸ್ಟ್ರೇಲಿಯದ

ಫೆಲ್ಯಾಂಜರಿಗೂ (ಕುಟುಂಬ ಫೆಲ್ಯಾಂಜರೀಡೆ) ಅಮೆರಿಕದ ಒಪಾಸಮಿಗೂ (ಕುಟುಂಬ ಡೈಡೆಲ್ಫಿಡೆ) ಹಲವಾರು ವ್ಯತ್ಯಾಸಗಳಿವೆಯಾಗಿ ಫೆಲ್ಯಾಂಜರುಗಳಿಗೆ ಬರಿಯ ಪಾಸಮ್ ಎಂಬ ಹೆಸರನ್ನು ಈಗ ಬಳಸಲಾಗುತ್ತಿದೆ.

ಫೆಲ್ಯಾಂಜರುಗಳು ನೋಡಲು ಇಲಿಗಳಂತೆ, ಅಳಿಲಿನಂತೆ ಇಲ್ಲವೆ ಲೆಮುರಿನಂತೆ ಇವೆ. ವಯಸ್ಕ ಜೀವಿಗಳ ಸರಾಸರಿ ಉದ್ದ 12–120 ಸೆಂಮೀ. ವರೆಗೆ ವ್ಯತ್ಯಾಸವಾಗುತ್ತದೆ. ಮೈಮೇಲೆ ದಟ್ಟವಾದ ಉಣ್ಣೆಯಂಥ ತುಪ್ಪುಳು ಉಂಟು. ಮೈ ಬಣ್ಣ ಬಿಳಿ, ಬೂದು, ಕೆಂಪು, ಕಂದು ಇತ್ಯಾದಿ. ಬಾಲ ಉದ್ದವಾಗಿದ್ದು (ಸರಾಸರಿ ಉದ್ದ 24–60 ಸೆಂಮೀ.) ಹಲವಾರು ಪ್ರಭೇದಗಳಲ್ಲಿ ಆಸರೆಗಳ ಸುತ್ತ ಸುತ್ತಿ ಆಧಾರವನ್ನು ಒದಗಿಸುವ ಸಹಾಯಕ ಅಂಗವಾಗಿ ಕೆಲಸಮಾಡುತ್ತದೆ. ಎಲ್ಲ ನಾಲ್ಕು ಕಾಲುಗಳಲ್ಲು ತಲಾ ಐದೈದು ಬೆರಳುಗಳಿವೆ. ಹೆಬ್ಬೆರಳು ವಿನಾ ಉಳಿದ ಬೆರಳುಗಳಲ್ಲಿ ಬಲವಾದ, ಬಾಗಿದ ನಖಗಳುಂಟು. ಇವುಗಳ ಸಹಾಯದಿಂದ ಫೆಲ್ಯಾಂಜರುಗಳು ಮರಗಳನ್ನು ಹತ್ತಬಲ್ಲವು. ಹೆಬ್ಬೆರಳು ನಖರಹಿತವಾಗಿದೆಯಾದರೂ ಉಳಿದ ಬೆರಳುಗಳಿಗೆ ಅಭಿಮುಖವಾಗಿರುವುದರಿಂದ ಅಪೋಸಬಲ್ ರೆಂಬೆಗಳನ್ನು ಬಲವಾಗಿ ಹಿಡಿಯಲು ನೆರವಾಗುತ್ತದೆ.

ಇವು ಪ್ರಧಾನವಾಗಿ ವೃಕ್ಷವಾಸಿಗಳು. ಕೆಲವೊಮ್ಮೆ ನೆಲದ ಮೇಲೂ ಓಡಾಡುತ್ತವೆ. ಚಿಗುರು ಎಲೆ, ಹೂ, ಹಣ್ಣು, ಬೀಜ ಇವುಗಳ ಮುಖ್ಯ ಆಹಾರ. ಅನೇಕ ವೇಳೆ ಕೀಟಾದಿಗಳನ್ನೂ ಹಕ್ಕಿಮೊಟ್ಟೆಗಳನ್ನೂ ತಿನ್ನುವುದುಂಟು.

ಗಂಡು, ಹೆಣ್ಣು ಫೆಲ್ಯಾಂಜರುಗಳೆರಡರಲ್ಲೂ ಗುದದ್ವಾರದ ಬಳಿ ಒಂದು ಇಲ್ಲವೆ ಎರಡು ಜೊತೆ ವಾಸನಾಗ್ರಂಥಿಗಳಿವೆ. ಇವುಗಳಿಂದ ಒಸರುವ ವಸ್ತು ಕಟುವಾಸನೆಯುಳ್ಳದ್ದು. ಬಹುಶಃ ತಮ್ಮ ಚಟುವಟಿಕೆಯ ಕ್ಷೇತ್ರವನ್ನು ಗುರುತಿಸಿಕೊಳ್ಳಲು ಈ ವಸ್ತುವನ್ನು ಬಳಸಿಕೊಳ್ಳುತ್ತವೆ. ಗುರುಗುಟ್ಟುವುದು, ಒಂದು ರೀತಿ ಬೊಗಳುವುದು ಇವು ಮಾಡುವ ಸದ್ದುಗಳು.

ಫೆಲ್ಯಾಂಜರುಗಳು ಸಾಧಾರಣವಾಗಿ ಒಂದು ಸಲಕ್ಕೆ ಮೂರು ಮರಿಗಳನ್ನು ಈಯುತ್ತವೆ. 4–5 ತಿಂಗಳತನಕ ಮರಿಗಳನ್ನು ತಮ್ಮ ಸಂಚಿಯಲ್ಲೆ (ಮಾರ್ಸೂಪಿಯಮ್) ಇಟ್ಟುಕೊಂಡು ಸಲಹುತ್ತವೆ. ಅನಂತರ ಮರಿಗಳು ತಾಯಿಯಿಂದ ಬೇರ್ಪಟ್ಟು ಸ್ವಾವಲಂಬಿಗಳಾಗಿ ಬದುಕಲು ಸಮರ್ಥವಾಗಿರುವುವಾದರೂ ಕೆಲಕಾಲ ತಾಯಿಯೊಡನೆಯೇ ಇದ್ದು ಅದರ ಬೆನ್ನ ಮೇಲೆ ಸವಾರಿಮಾಡುತ್ತ ಕಾಲಕಳೆಯುವುವು. ಸು. 15–18 ತಿಂಗಳ ವಯಸ್ಸಿನವಾದ ತರುವಾಯ ಮರಿಗಳು ಲೈಂಗಿಕ ಪ್ರಬುದ್ಧತೆಯನ್ನು ಪಡೆಯುವುವು. ಇವುಗಳ ಗರಿಷ್ಠ ವಯೋಮಿತಿ 13 ವರ್ಷ.

ಹಾವು, ನರಿ, ಬೆಕ್ಕುಗಳು ಇವುಗಳ ಮುಖ್ಯ ಸ್ವಾಭಾವಿಕ ಶತ್ರುಗಳು. ಇವುಗಳ ತುಪ್ಪುಳು ಬೆಲೆಬಾಳುವಂಥಾದ್ದರಿಂದ ಅದಕ್ಕಾಗಿ ಇವನ್ನು ಬೇಟೆಯಾಡುವುದಿದೆ.

(ಎಚ್.ಎಚ್.ಎಸ್.)

**ಫೆಸೆಂಟ್:** ಗ್ಯಾಲಿಫಾರ್ಮಿಸ್ ವರ್ಗದ ಫೆಸಿಯಾನಿಡೆ ಕುಟುಂಬಕ್ಕೆ ಸೇರಿದ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು. ಸುಮಾರು 175 ಪಕ್ಷಿ ಪ್ರಭೇದಗಳಿವೆ. ಆದರೆ ನಿಜವಾದ ಫೆಸೆಂಟ್ ಎನ್ನುವ ಹೆಸರನ್ನು ಫೆಸಿಯನಿನೆ ಕುಟುಂಬದ 50 ಪ್ರಭೇದಗಳು ಮತ್ತು 16 ಪ್ರಕಾರಗಳಿಗೆ ಮಾತ್ರ ಉಪಯೋಗಿಸಲಾಗುವುದು. ಕಾಡುಕೋಳಿ, ನವಿಲು,



ಚೀರ್ ಫೆಸೆಂಟ್

ಕಾಡುಟರ್ಕಿಗಳೂ ಕೂಡ ಇದೆ ಗುಂಪಿಗೆ ಸೇರುವುವು. ಅನೇಕ ಪ್ರಭೇದಗಳಲ್ಲಿ ಉದ್ದವಾದ ಮತ್ತು ಅಲಂಕೃತವಾದ ಬಾಲಗಳು ಇರುತ್ತವೆ. ತಲೆಯ ಭಾಗದಲ್ಲಿ ಗರಿಗಳು ಇರುವುದಿಲ್ಲ. ಅದರ ಜಾಗದಲ್ಲಿ ಪ್ರಕಾಶಮಾನವಾದ ಬಣ್ಣದಿಂದ ಕೂಡಿರುವ ಚರ್ಮವಿದೆ. ಇನ್ನು ಕೆಲವುಗಳಲ್ಲಿ ತೊಂಗುದೊಗಲು ಅಥವಾ ಗರಗಸದ ಹಲ್ಲುಗಳ ರೀತಿಯ ಜುಟ್ಟು ಇರುತ್ತದೆ. ಹೆಣ್ಣು ಮತ್ತು ಗಂಡು ಪಕ್ಷಿಗಳನ್ನು ಅವುಗಳ ಮೈಬಣ್ಣದಿಂದ ಗುರ್ತಿಸಬಹುದು. ಹೆಣ್ಣು ಫೆಸೆಂಟುಗಳಲ್ಲಿ ಮೈಬಣ್ಣವು ಕಂದು ಇಲ್ಲವೆ ಬೂದು ಬಣ್ಣವಾಗಿರುತ್ತದೆ. ಗಂಡು ಫೆಸೆಂಟ್‌ಗಳ ಬಾಲ, ರೆಕ್ಕೆ, ಕತ್ತುಗಳಲ್ಲಿ ಬಣ್ಣ ಬಣ್ಣದ ಗರಿಗಳಿರುತ್ತವೆ. ಈ ಪಕ್ಷಿಗಳಲ್ಲಿ ಚೀನದ ಎಮ್ಹರ್ಸ್ಟ್ ಫೆಸೆಂಟ್ ನೋಡಲು ಬಲು ಚೆನ್ನ. ಸಂತಾನದ ಕಾಲದಲ್ಲಿ ಅದರ ನೀಳವಾದ ಕಪ್ಪು, ಬಿಳಿ ಪಟ್ಟೆಗಳುಳ್ಳ ಬಾಲದ ಗರಿಗಳು, ಕತ್ತು ಮತ್ತು ತಲೆಯ ಗರಿಗಳು ನಯನ ಮನೋಹರ. ಮೂಲತಃ ಏಷ್ಯದ, ಈಗ ಬ್ರಿಟನ್ ಮತ್ತು ಯುರೋಪಿನ ಇತರ ಪ್ರದೇಶಗಳಿಗೆ ಒಗ್ಗಿಕೊಂಡಿರುವ ಫೆಸೆಂಟ್‌ಗಳು ದೊಡ್ಡ ಬೇಟೆಯ ಹಕ್ಕಿಗಳು. ಹಿಮಾಲಯದ ಕೆಳ ತಪ್ಪಲಲ್ಲಿ, ಬರ್ಮಾದೇಶದ ಕಾಡುಗಳಲ್ಲಿ ವಿವಿಧ ಜಾತಿಯ ಫೆಸೆಂಟುಗಳಿವೆ. ಬೆರಿಹಣ್ಣು, ಬೀಜಗಳು ಮತ್ತು ಧಾನ್ಯಗಳು ಇವುಗಳ ಪ್ರಧಾನ ಆಹಾರ. ಹೆಚ್ಚಾಗಿ ಈ ಪಕ್ಷಿಗಳು ಬಹುಪತ್ನೀಕಗಳು. ಅವು ಗೂಡು ಕಟ್ಟುವುದರಲ್ಲಿ ಮತ್ತು ಮರಿಹಕ್ಕಿಗಳ ಪಾಲನೆಯಲ್ಲಿ ಭಾಗವಹಿಸುವುದಿಲ್ಲ.

ಅನೇಕ ಫೆಸೆಂಟ್‌ಗಳನ್ನು ಅಲಂಕಾರಕ್ಕಾಗಿ ಇಟ್ಟುಕೊಳ್ಳುತ್ತಾರೆ. ಉದಾ:ಗೋಲ್ಡನ್ ಫೆಸೆಂಟ್‌ಗಳು (ಕ್ರೈಸೊಲೋಫಸ್ ಪಿಕ್ಟಸ್), ಸಿಲ್ವರ್ ಫೆಸೆಂಟ್ (ಲೊಫುರ), ಲೇಡಿ ಎಮ್ಹರ್ಸ್ಟ್ ಫೆಸೆಂಟ್ (ಕ್ರೈಸೊಲೋಫಸ್ ಎಮ್ಹರ್ಸ್ಟಿಯೆ) ಇತ್ಯಾದಿ. (ಎಸ್.ಆರ್.ಎಸ್.)

**ಫೇಬರ್, ಜೀನ್ ಹೆನ್ರಿ:** (1823–1915). ಫ್ರಾನ್ಸಿನ ಕೀಟವಿಜ್ಞಾನಿ. 1823 ಸೆಪ್ಟೆಂಬರ್ 22ರಂದು ಫ್ರಾನ್ಸಿನ ದಕ್ಷಿಣ ಭಾಗದ ಸೇಂಟ್ ಲಿಯಾನ್ ಎಂಬಲ್ಲಿ ಜನನ. ಬಡತನದ ದೆಸೆಯಿಂದಾಗಿ ಅಜ್ಜನ ಆಶ್ರಯದಲ್ಲಿ ಬೆಳೆಯಬೇಕಾಯಿತು. ಸೇಂಟ್ ಲಿಯಾನ್, ರೋಡೆಸ್, ಟೊಲೂಸ್, ಅವಿನಾನ್, ಕಾರ್ಸಿಕ ಮುಂತಾದ ಸ್ಥಳಗಳಲ್ಲಿ ವಿದ್ಯಾಭ್ಯಾಸ. ಭೌತರಸಾಯನ, ಗಣಿತ ಮತ್ತು ಪ್ರಕೃತಿ ವಿಜ್ಞಾನಗಳಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದ. ಕೀಟವಿಜ್ಞಾನದಲ್ಲಿ ವಿಶೇಷ ಆಸಕ್ತಿ, ಕಣಜ, ಬುವಾಡಿ (ಸಗಣಿಗಳು), ಜೇಡ, ಪತಂಗ, ಒಂಟಿಹುಳು, ಮಿಡತೆ, ವಾಡೆಹುಳು, ಚಿಮ್ಮಂಡೆ, ಕಂಬಳಿಹುಳು ಮುಂತಾದ ಕೀಟಗಳ ಜೀವನ ವಿಧಾನಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಅನೇಕ ವಿದ್ವತ್ಪೂರ್ಣ ಲೇಖನಗಳನ್ನು ಬರೆದು ಪ್ರಕಟಿಸಿ ಹೆಸರುಗಳಿಸಿದ. ಇವನ ಕೃತಿಗಳ ಪೈಕಿ ಮುಖ್ಯವಾದವು: ಸೋಷಿಯಲ್ ಲೈಫ್ ಇನ್ ದಿ ವರ್ಲ್ಡ್ ಆಫ್ ಇನ್ಸೆಕ್ಟ್ಸ್ (ಕೀಟಪ್ರಪಂಚದಲ್ಲಿ ಸಾಮಾಜಿಕ ಜೀವನ), ಮಾರ್ವೆಲ್ಸ್ ಆಫ್ ದಿ ಇನ್ಸೆಕ್ಟ್‌ವರ್ಲ್ಡ್ (ಕೀಟಪ್ರಪಂಚದ ವಿಸ್ಮಯಗಳು), ಸೊವನೀರ್ ಎಂಟೊಮಾಲಜಿಕ್ಸ್ (ಎರಡು ಸಂಪುಟಗಳು). ಫೇಬರನ ಜೀವಿತದ ಕೊನೆಯ ದಿನಗಳು ಸಂತಸಕರವಾಗಿರಲಿಲ್ಲ. ಬಡತನದ ದೆಸೆಯಿಂದಾಗಿ ಕುಗ್ಗಿಹೋಗಿದ್ದ. ಆದರೂ ಜೀವನದ ದುರ್ದೆಶೆಗಳನ್ನು ಗಣನೆಗೆ ತಂದುಕೊಳ್ಳದೆ ಕೀಟ ಪ್ರಪಂಚದಲ್ಲಿ ಮುಳುಗಿರುತ್ತಿದ್ದ. ಕೀಟಜೀವನದಲ್ಲಿಯ ರಸಮಯ ಸನ್ನಿವೇಶ, ನೋವು, ನಲಿವು, ಆಸೆ, ನಿರಾಸೆ, ಮೈತ್ರಿ, ಪ್ರೇಮಜೀವನ ಮುಂತಾದವನ್ನು ಕುರಿತು ಸುಮಾರು 218 ಲೇಖನಗಳನ್ನು ಬರೆದಿದ್ದಾನೆ. ಜೀವನದ ಕೊನೆಯ ಹದಿನೆಂಟು ವರ್ಷಗಳ ಕಾಲ ಸೆರಿನಾನ್ ಎಂಬ ಹಳ್ಳಿಯಲ್ಲಿ ನಡೆಸಿದ ಸಂಶೋಧನೆಗಳು ಅವನಿಗೆ ಕೀರ್ತಿ ತಂದಿದ್ದುವು. 1915 ಅಕ್ಟೋಬರ್ 11ರಂದು ನಿಧನ. ***

**ಫೈಲಾಜನಿ:** ಜೀವಿಗಳ ಯಾವುದೇ ಒಂದು ಪ್ರಭೇದದ ಅಥವಾ ಗುಂಪಿನ ವಿಕಾಸದ ಇತಿಹಾಸ. ಇದರ ಅರ್ಥವನ್ನು ಗುಂಪು ಅಥವಾ ಪ್ರಭೇದಕ್ಕೆ ಸೀಮಿತಗೊಳಿಸುವುದು ಸಾಮಾನ್ಯವಾಗಿದ್ದರೂ ವಿಶಾಲ ಗುಂಪೊಂದರ ವಿಕಾಸದ ಹಾದಿಯನ್ನು ಮತ್ತು ಆ ಗುಂಪಿನ ಜೀವಿಗಳ ನಡುವಿನ ಸಂಬಂಧವನ್ನು ಇದು ತಿಳಿಸುವುದು. ಹೀಗೆ ಇದು ವಿಕಾಸ ವಿವರಣಾತ್ಮಕ ಪದಕಲ್ಪನೆ. ಒಂದು ಸಾಮಾನ್ಯ ಜೀವಿ ಅಥವಾ ಗುಂಪು ತೋರುವ ವಿಕಾಸದ ಹಾದಿಯಲ್ಲಿ ವಿವಿಧ ರೀತಿಯ ಸಂಕೀರ್ಣತೆ ಪಡೆದ ಗುಂಪುಗಳ ವಿವರಣೆಯನ್ನು ಕ್ರಮಬದ್ಧವಾಗಿ ಜೋಡಿಸಲಾಗಿರುವುದು. ಜೀವವಿಕಾಸ ಪ್ರಾಣಿವೈವಿಧ್ಯದ ಸೂಚಕವಾದ್ದರಿಂದ ವಿಕಾಸಮಾರ್ಗವನ್ನು ತಿಳಿಯಲು ಪ್ರಾಣಿವೈವಿಧ್ಯವನ್ನು ಅನುಕ್ರಮವಾಗಿ ಜೋಡಿಸಲಾಗುವುದು. ವಿಕಾಸಬಿಂಬಕ ಅನುಕ್ರಮ ಸಂಕೀರ್ಣತೆಯನ್ನು ನಾನಾ ವಿಧಾನಗಳಿಂದ ಪತ್ತೆ ಹಚ್ಚಲಾಗುವುದು. ವರ್ಗೀಕರಣ, ತುಲನಾತ್ಮಕ ಅಂಗರಚನಾ ವಿಜ್ಞಾನ, ಭ್ರೂಣದ ಬೆಳವಣಿಗೆ, ಅಂಗ ರಚನಾವಿನ್ಯಾಸ–ಫೈಲಾಜನಿಗೆ ಪ್ರಮುಖ ಆಧಾರಗಳು. ತುಲನಾತ್ಮಕ ಲಕ್ಷಣ ವಿಶ್ಲೇಷಣೆಯಿಂದ ವರ್ಗೀಕರಣವನ್ನು ಮತ್ತು ಫೈಲಾಜನಿಯನ್ನು ರಚಿಸಲು ಅನುಕೂಲ. ಅನೇಕ ಜೀವಿಗಳನ್ನು ಮತ್ತು ಜೀವಿಗಳ ಗುಂಪುಗಳನ್ನು ಒಟ್ಟಿಗೆ ವಿಶ್ಲೇಷಿಸಿದಾಗ ಅವುಗಳ ರೂಪಸಾಮ್ಯ ಗಮನಕ್ಕೆ ಬರುತ್ತದೆ. ಈ ರೂಪ ಸಾಮ್ಯವನ್ನು ಒಂದಕ್ಕೊಂದು ತುಲನೆ ಮಾಡಿ ಹೋಲಿಸಿದಾಗ ವಿಕಾಸದ ಚಿತ್ರಣ ದೊರೆಯುತ್ತದೆ. ಇದನ್ನು ಅನುಕ್ರಮವಾಗಿ ಜೋಡಿಸುವುದೇ ಫೈಲಾಜನಿ. ವರ್ಗೀಕರಣದಲ್ಲಿ ಕ್ರಮಬದ್ಧ ಅಧ್ಯಯನದ ಮೂಲಕ ಪ್ರಾಣಿಗಳ ಮತ್ತು ಅವುಗಳ ಗುಂಪುಗಳ ವಿಕಾಸದ ಬದಲಾವಣೆಗಳು ಗೊತ್ತಾಗುವಂತೆ ಫೈಲಾಜನಿಯನ್ನು ರಚಿಸಲಾಗುವುದು. ಇದರಿಂದ ವಿಕಾಸ ಒಂದು ಚಾರಿತ್ರಿಕ ಕ್ರಿಯೆಯೆಂದೂ ಅನುಕ್ರಮ ಬದಲಾವಣೆಗಳಿಂದ ಜೀವಿಗಳು ವಿಕಾಸಗೊಂಡಿವೆ ಎಂದೂ ತಿಳಿಯುವುದು.

ಫೈಲಾಜನಿಯನ್ನು ಬೆಳವಣಿಗೆಯ ಆಧಾರದ ಮೇಲೂ ರಚಿಸಬಹುದು. ಜರ್ಮನ್ ಪ್ರಾಣಿ ವಿಜ್ಞಾನಿ ಹೆಕೆಲನ (1834–1919) ಪುನಃಸ್ಥಾಪನಾ ಸಿದ್ಧಾಂತದ (ಥಿಯರಿ ಆಫ್ ರಿಕ್ಯಾಪಿಟುಲೇಷನ್) ಪ್ರಕಾರ ಯಾವುದೇ ಪ್ರಾಣಿಯ ಭ್ರೂಣ ಬೆಳವಣಿಗೆಯಲ್ಲಿ ಅದರ ಪೂರ್ವಜ ಪ್ರಾಣಿಗಳ ರೂಪವನ್ನು ಸ್ಥೂಲವಾಗಿ ಕಾಣಬಹುದು. ಅಂದರೆ ಅದರ ಬೆಳವಣಿಗೆಯ ಕಾಲದಲ್ಲಿ ಅದರ ಪೂರ್ವಜಗಳ ಲಕ್ಷಣಗಳೆಲ್ಲ ಮರುಕಳಿಸುವುವು. ಮಾನವನ ಬೆಳವಣಿಗೆ ಸಹ ಏಕಕೋಶಾವಸ್ಥೆಯಿಂದಲೇ ಆರಂಭಗೊಳ್ಳುತ್ತದೆ; ಗರ್ಭಾಂಕುರಗೊಂಡ ಅಂಡದಿಂದ ಆರಂಭವಾಗಿ, ಕೆಲವು ಕೋಶಗಳ ಚೆಂಡಿನಿಂದ ಇಪ್ಪದರ ಜೀವಿಯ ಹಂತವನ್ನು ದಾಟಿ ಅನಂತರ ಅನುಕ್ರಮವಾಗಿ ಮೀನಿನ ಹಂತವನ್ನು ಹಾದು, ಬೆಳೆವಣಿಗೆ ಪೂರ್ಣಗೊಂಡಾಗ ಪ್ರಸ್ತುತ ಸ್ಥಿತಿಯನ್ನು ತಲಪುವುದು ಕಾಣಬರುತ್ತದೆ. ಪ್ರಾಣಿಗಳ ವೈವಿಧ್ಯವನ್ನೂ ಬೆಂಬಲಿಸುವ ವಿಕಾಸಸೂಚಿಯಾಗಿ ಫೈಲಾಜನಿ ವೃಕ್ಷ ಗೋಚರವಾಗುತ್ತದೆ. ಈ ಕಾಲ್ಪನಿಕ ವೃಕ್ಷದ ಎಲೆಗಳು ಪ್ರಭೇದಗಳಾಗಿ, ಟೊಂಗೆಗಳು ಜಾತಿಗಳಾಗಿ, ದಪ್ಪ ಟೊಂಗೆಗಳು ಕುಟುಂಬಗಳಾಗಿ, ಹಾಗೆಯೇ ಮರದ ಬುಡ ಪ್ರಾಣಿ ಸಾಮ್ರಾಜ್ಯ ಸೂಚಿಯಾಗಿ, ಕವಲೋಪಕವಲುಗಳು ವರ್ಗ, ಗಣಗಳಾಗಿ ಬಿಂಬಿತವಾಗಿವೆ. ಆದರೆ ಯಾವುದೇ ಒಂದು ಸಸ್ಯದ ಎಲೆಗಳಂತೆ ಫೈಲಾಜನಿಯ ಎಲೆಗಳಲ್ಲಿ ಏಕರೂಪತೆ ಇರದು. ಕಾರಣ ಪ್ರಾಣಿಗಳಲ್ಲಿಯ ವಿಭಿನ್ನತೆ. ಇದರಿಂದ ಸಾಮ್ಯಗಳನ್ನು ಪತ್ತೆ ಹಚ್ಚುವುದು ಸಾಧ್ಯ. ಫೈಲಾಜನಿಯ ರಚನೆಯಲ್ಲಿ ಸಾಮಾನ್ಯವಾಗಿ ಮುಂದುವರೆದ ಪ್ರಾಣಿ ಗುಂಪುಗಳ ತುಲನೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಅಂತೆಯೇ ಫಾಸಿಲುಗಳು ಈ ಜೋಡಣೆಗೆ ಅನುಕೂಲವಾಗುತ್ತವೆ (ಫಾಸಿಲುಗಳು ಅಪೂರ್ಣವಾಗಿದ್ದರೆ ಅವನ್ನೂ ಸಂಪೂರ್ಣವಾಗಿ ಅವಲಂಬಿಸುವಂತಿಲ್ಲ). ಮುಂದುವರೆದ ಪ್ರಾಣಿಗಳ ರಚನೆಗಳ ತುಲನಾತ್ಮಕ ಅಧ್ಯಯನದಿಂದಾಗಿ ಫೈಲಾಜನಿ ಸಂಕೀರ್ಣವಾಗುತ್ತದೆ. ಆದ್ದರಿಂದ ವರ್ಗೀಕರಣಕ್ಕೆ ಆಧಾರವಾದ ರೂಪಸಾಮ್ಯದ ವಿಕಾಸದಲ್ಲಿನ ಬದಲಾವಣೆಗಳು ಫೈಲಾಜನಿಗೆ ಮಾರ್ಗಸೂಚಿಯಾದಂತೆ ಸಮಸ್ಯೆಗಳನ್ನೂ ಒಡ್ಡುತ್ತವೆ. ಆದ್ದರಿಂದಲೇ ಫೈಲಾಜನಿ ರಚನಕಾರರಲ್ಲಿ ಒಮ್ಮತ ಅಭಿಪ್ರಾಯವಿರದೆ ವಿವಿಧ ರೀತಿಯ ಫೈಲಾಜನಿಗಳು ರಚಿತಗೊಂಡಿವೆ.

ಫೈಲಾಜನಿ ಮತ್ತು ವರ್ಗೀಕರಣ: ತಾತ್ತ್ವಿಕವಾಗಿ ಜೀವವಿಜ್ಞಾನದ ಪ್ರತಿಯೊಂದು ವಿಷಯವೂ ಫೈಲಾಜನಿಗೆ ಆಧಾರವೆನಿಸಿದರೂ ನಿರ್ದಿಷ್ಟವಾಗಿ ಕೆಲವು ವಿಷಯಗಳು–ತುಲನಾತ್ಮಕ ರಚನಾವಿಜ್ಞಾನ, ವರ್ಗೀಕರಣ, ಫಾಸಿಲುಗಳ ಅಧ್ಯಯನ–ಉಳಿದವುಗಳಿಗಿಂತ ಹೆಚ್ಚು ಉಪಯುಕ್ತವೆನಿಸಿವೆ. ಒಂದೇ ರೀತಿಯ ವಿಷಯವನ್ನು ವಿವಿಧ ವಿಜ್ಞಾನಿಗಳು ವಿಭಿನ್ನ ರೀತಿಯಲ್ಲಿ ಅರ್ಥೈಸಿ ಬೇರೆ ಬೇರೆ ಫೈಲಾಜನಿಗಳನ್ನು ರಚಿಸಿದ್ದಾರೆ. ಆದರೆ ಸರ್ವಸಮ್ಮತ ರೀತಿಯ ತೀರ್ಮಾನಗಳ ಮೇಲೆ ವಿವಿಧ ಗುಂಪುಗಳ ಮೇಲೆ ಫೈಲಾಜನಿ ರಚನೆಯ ಪ್ರಯತ್ನ ನಡೆದಿದೆ.

ಕ್ಲಾಡಿಸಮ್ ವಿಧಾನದ ವರ್ಗೀಕರಣದಲ್ಲಿ ಮೇಲೆ ಹೇಳಿದ ಫೈಲಾಜನಿ ಮರದ ಕವಲುಗಳನ್ನು ಮತ್ತು ಸಾಮಾನ್ಯ ಮೂಲವನ್ನು ಅನುಸರಿಸಲಾಗಿದೆ. ಇದು ಫೈಲೋಜೆನೆಟಿಕ್ ವರ್ಗೀಕರಣ ಅಂದರೆ ಸಂಪೂರ್ಣವಾಗಿ ವಿಕಾಸದ ಮಾರ್ಗಗಳನ್ನು ಆಧರಿಸಿ ವರ್ಗೀಕರಿಸುವ ವಿಧಾನ (ಮೇಯರ್, 1965). ತುಲನಾತ್ಮಕ ಲಕ್ಷಣ ವಿಶ್ಲೇಷಣೆಯಿಂದ ವರ್ಗೀಕರಣ ಮತ್ತು ಫೈಲಾಜನಿಗಳನ್ನು ರಚಿಸುವುದೂ ಉಂಟು. ಫೈಲಾಜನಿ ವರ್ಗೀಕರಣದ ಮೇಲಾಗಲೀ ಅಥವಾ ವರ್ಗೀಕರಣ ಫೈಲಾಜನಿಯ ಮೇಲಾಗಲೀ ಸಂಪೂರ್ಣವಾಗಿ ಅವಲಂಬನೆಗೊಂಡಿಲ್ಲ.

ಸ್ವಾಭಾವಿಕ ಗುಂಪುಗಳ ಲಕ್ಷಣಗಳನ್ನು ತಾಳೆ ಮಾಡುವುದರ ಮೂಲಕ ಜೀವಿಗಳ ಮತ್ತು ಅವುಗಳ ಲಕ್ಷಣಗಳನ್ನು ಎಚ್ಚರಿಕೆಯಿಂದ ಹೋಲಿಸಿ ಅವುಗಳ ಸಾಮ್ಯ ಮತ್ತು ವ್ಯತ್ಯಾಸಗಳನ್ನು ಗುರುತಿಸಿ ಈ ಎರಡನ್ನೂ ರೂಪಿಸಲಾಗುವುದು. ವರ್ಗೀಕರಣಕ್ಕೆ ಫೈಲಾಜನಿ ಅರ್ಥಪೂರ್ಣವಾಗಿದೆ. ಏಕೆಂದರೆ ವಿಕಾಸಗೊಂಡ ಹಾಗೂ ವಿಕಸನಗೊಳ್ಳುತ್ತಿರುವ ಬದಲಾವಣೆಗಳನ್ನು ಪರಿಗಣಿಸಿ ವರ್ಗೀಕರಣ ಮಾಡಲಾಗುವುದು. ಫೈಲಾಜನಿಯ ಅಂಶಗಳಿಂದ ಹಿಂದುಳಿದ, ಮುಂದುವರೆದ ಲಕ್ಷಣಗಳು ತಿಳಿಯುವುವು. ಎಲ್ಲ ಜೀವಿಗಳೂ ವಿಕಾಸದಿಂದ ರೂಪುತಳೆದಿವೆ. ಆದ್ದರಿಂದ ವರ್ಗೀಕರಣದಲ್ಲಿ ಫೈಲಾಜನಿಯ ಅಂಶಗಳನ್ನು ಒರೆಹಚ್ಚಲು ಅವಕಾಶವಾಗುವುದು. ವರ್ಗೀಕರಣದ ಏಕೈಕ ಗುರಿಯೂ ಇದೇ ಆಗಿದ್ದು ಈ ರೀತಿ ವಿಂಗಡಿಸುವಾಗ ವಿಕಾಸದ ಸಂಬಂಧಗಳನ್ನು ತೋರಿಸಲಾಗುವುದು. ವಿಂಗಡಿಸಲ್ಪಟ್ಟ ಜೀವಿಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಲಿಸಿದಾಗ ರೂಪಸಾಮ್ಯ ದೊರೆತು ವಿಕಾಸದಲ್ಲಿನ ಸಂಬಂಧವನ್ನು ತಿಳಿದುಕೊಳ್ಳಬಹುದು.

ಗುಂಪು ಹಾಗೂ ಉಪಗುಂಪುಗಳನ್ನು ಫೈಲಾಜನಿಯ ಕವಲು ಉಪಕವಲುಗಳು ಪ್ರತಿನಿಧಿಸುತ್ತಿದ್ದು ಇಲ್ಲಿ ಸಾವಿರಾರು ಅಥವಾ ಲಕ್ಷಾಂತರ ಪೀಳಿಗೆಗಳನ್ನು ಕಾಣಬಹುದು. ವ್ಯತ್ಯಯ, ಪುನಸ್ಸಂಯೋಜನೆ, ಆಯ್ಕೆ, ಜೀನ್ ಬದಲಾವಣೆ ಮುಂತಾದವುಗಳ ಮುಖಾಂತರ ಪೀಳಿಗೆಗಳ ನಡುವೆ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಆಯ್ಕೆಯ ಒತ್ತಡದಿಂದ ಸಮೀಪ ಸಂಬಂಧಿಗಳಲ್ಲೇ ಭೇದವಿರಬಹುದು. ಈ ದೃಷ್ಟಿಯಿಂದ ನೋಡಿದಾಗ ಮೊಸಳೆಗಳು ಪಕ್ಷಿಗಳ ಸಮೀಪ ಸಂಬಂಧಿಗಳಾದರೂ (ಎರಡು ಗುಂಪುಗಳೂ ಸೂಡೋಸೂಕಿಯ ಗುಂಪುಗಳಿಂದ ಹುಟ್ಟಿವೆ) ಒಟ್ಟಾರೆ ಜೀನ್ ಸಂರಚನೆಯಲ್ಲಿ ಮೊಸಳೆಗಳು ಮೂಲಜೀವಿಗಳಾದ ಸರೀಸೃಪಗಳಂತೆ ಇವೆಯೇ ಹೊರತು ಬದಲಾದ ಜೀನ್‌ಸಂರಚನೆಯುಳ್ಳ ಪಕ್ಷಿಗಳಂತಿಲ್ಲ (ಹಾರಾಟದ ಹೊಂದಾಣಿಕೆಗಳಿಗೆ ತಕ್ಕಂತೆ ಪಕ್ಷಿಗಳು ಭಿನ್ನವಾಗಿವೆ). ಸರೀಸೃಪಗಳ ಫೈಲಾಜನಿಯಲ್ಲಿ ಪಕ್ಷಿಗಳು ಮತ್ತು ಮೊಸಳೆಗಳು ಇತ್ತೀಚೆಗೆ ಕಾಣಿಸಿಕೊಂಡಿವೆಯಾದರೂ ಮೊಸಳೆಗಳು ಮಾತ್ರ ಪೂರ್ವ ಸಂಬಂಧಿಗಳಾದ ಸರೀಸೃಪಗಳಂತೆ ತೋರುತ್ತವೆ.

ಫೈಲಾಜನಿ ಆಧಾರ ಉಳ್ಳ ಕ್ಲಾಡಿಸ್ಟಿಕ್ ವರ್ಗೀಕರಣದಲ್ಲಿ ವಸ್ತುಸ್ಥಿತಿ ಸ್ಥಾನ ಆ ಗುಂಪಿನ ಆಯುಃಪ್ರಮಾಣದಿಂದ ಸ್ವತಂತ್ರವಾಗಿಲ್ಲ. ಏಕೆಂದರೆ ಒಂದು ಗುಂಪಿನ ವಿಂಗಡಣೆಗೆ ಆ ಗುಂಪಿನ ಉಗಮಕಾಲವೂ ಅದರ ತುಲನಾತ್ಮಕ ವಿಮರ್ಶೆಯೂ ಅಗತ್ಯ ಎಂಬುದು ಹೆನ್ನಿಂಗ್ ಎಂಬ ವಿಜ್ಞಾನಿಯ ಅಭಿಪ್ರಾಯ. ಶಮ್‌ರೋವ್ ಅವರ ಅಭಿಪ್ರಾಯದಂತೆ ಒಂದು ಹೊಸ ಗುಂಪು ಮೂಲಗುಂಪಿನಿಂದ ಉಗಮವಾದರೂ ಪಿತೃವರ್ಗವೂ (ಮೂಲಗುಂಪೂ) ಹೊಸ ಗುಂಪಿನ ಜೊತೆಯಲ್ಲೇ ಲಕ್ಷಾಂತರ ವರ್ಷಗಳ ಕಾಲ ಮುಂದುವರಿಯುವುದು. ಇಂಥ ಉದಾಹರಣೆಗಳಲ್ಲಿ ಮೂಲಗುಂಪು ಪಿತೃಜೀವಿಗಳದ್ದಾದರೂ ಹೊಸ ಗುಂಪುಗಳಿಗೆ ಸೋದರಿ ಗುಂಪಾಗಿ ಉಳಿಯುತ್ತದೆ. ಉದಾಹರಣೆಗೆ ಚತುಷ್ಪಾದಿ ಪ್ರಾಣಿಗಳ ಫೈಲಾಜನಿಯಲ್ಲಿ ಕ್ರಾಸಾಪ್ಟರಿಜಿಯ ಮೀನುಗಳಿಂದ ವಿವಿಧ ಕಶೇರುಕ ಗುಂಪುಗಳು ಒಂದರಿಂದ ಒಂದು ಉಂಟಾಗಿವೆ. ಆದರೂ ಎಲ್ಲವೂ ಜೊತೆಯಲ್ಲಿಯೇ ಮುಂದುವರಿಯುವ ಸೋದರಿ ಗುಂಪುಗಳಾಗಿವೆ. ಕ್ರಾಸಾಪ್ಟರಿಜಿಯಿಂದ ದ್ವಿಚರಿಗಳೂ ದ್ವಿಚರಿಗಳಿಂದ ಸರೀಸೃಪಗಳೂ ಇವುಗಳಿಂದ ಸ್ತನಿಗಳೂ, ಪಕ್ಷಿಗಳೂ ಉದ್ಭವವಾಗಿವೆಯಾದರೂ ಐದು ಗುಂಪುಗಳೂ ಸಮವಾಗಿ ಮುಂದುವರಿಯುತ್ತಿವೆ. ಆದ್ದರಿಂದ ವರ್ಗೀಕರಣ ಫೈಲಾಜನಿಯ ಮೇಲಾಗಲೀ, ಫೈಲಾಜನಿ ವರ್ಗೀಕರಣದ ಮೇಲಾಗಲೀ ಅವಲಂಬಿಸಿಲ್ಲ. ಇದಕ್ಕೆ ಬದಲಾಗಿ ಎರಡೂ ವಿಧಾನಗಳು ಸ್ವಾಭಾವಿಕ ಗುಂಪುಗಳ ತುಲನಾತ್ಮಕ ವಿಶ್ಲೇಷಣೆಯನ್ನು ಅವಲಂಬಿಸಿವೆ. ಜೀವಿಗಳ ನಡುವಿನ ಸಾಮ್ಯ ಮತ್ತು ವ್ಯತ್ಯಾಸಗಳು ಗಮನಾರ್ಹ. ಇದರಲ್ಲಿ ಫೈಲಾಜನಿ ವರ್ಗೀಕರಣಕ್ಕೆ ಅರ್ಥಪೂರ್ಣವಾದುದಾಗಿದೆ. ವಿಕಾಸಗೊಂಡ ಮತ್ತು ವಿಕಾಸಗೊಳ್ಳುವ ಲಕ್ಷಣಗಳು ವರ್ಗೀಕರಣಕ್ಕೆ ಸಹಕಾರಿಯಾಗುವಂತೆ, ಫೈಲಾಜನಿಗೆ ಮುಂದುವರಿದ, ಹಿಂದುಳಿದ ಮೂಲಭೂತ ಲಕ್ಷಣಗಳು ಗಮನಕ್ಕೆ ಬರುತ್ತವೆ. ವರ್ಗೀಕರಿಸುವಾಗ ಸಂಬಂಧಿಗಳು ಒರೆಹಚ್ಚಲ್ಪಡುವಂತೆ ಫೈಲಾಜನಿ ಅಂಶಗಳೂ ಒರೆಹಚ್ಚಲ್ಪಡುತ್ತವೆ. ಆದ್ದರಿಂದ ಇವೆರಡೂ ಒಂದಕ್ಕೊಂದು ಪೂರಕವಾಗಿವೆ.

ಫೈಲಾಜನಿ ವಿಧಾನ: ಫೈಲಾಜನಿಯ ಆರಂಭದ ಘಟ್ಟಗಳು ಜೀವದ ಉಗಮಕ್ಕೆ ಮತ್ತು ಪ್ರಾರಂಭಿಕ ವಿಭಿನ್ನೀಕರಣದೊಂದಿಗೆ ಮಿಳಿತವಾಗಿವೆ. ಜೀವದ ಉಗಮಕಾಲದ ಅವಶೇಷಗಳು ಲಭ್ಯವಿಲ್ಲವಾದರೂ ಸುದೀರ್ಘ ರಾಸಾಯನಿಕ ವಿಕಾಸದಿಂದ ಜೀವಿ ಆರಂಭವಾಯಿತೆಂಬುದು ನಿರ್ವಿವಾದ. ಪುರಾತನ ಭೂಮಿಯಲ್ಲಿ ಮೂಲವಸ್ತುಗಳ ಅನುಕ್ರಮ ಸಂಯೋಜನೆಯಿಂದ ಭೂಚಿಪ್ಪು ಮತ್ತು ವಾಯುಮಂಡಲದ ರಾಸಾಯನಿಕಗಳು ಪರಿವರ್ತಿತವಾಗಿ ಅನೇಕ ಸಂಯುಕ್ತಗಳು ರೂಪುಗೊಂಡಿವೆ. ತತ್ಫಲವಾಗಿ ಪುರಾತನ ಸಾಗರಗಳು ಅನೇಕ ಜೀವರಾಸಾಯನಿಕ ವಸ್ತುಗಳ ರಸಪಾಕಗಳಂತಾಗಿದ್ದುವು. ಇವುಗಳಲ್ಲಿ ಸಾವಯವ ವಸ್ತುಗಳು ಅದರಲ್ಲೂ ಪ್ರೋಟೀನ್‌ಗಳಂಥವು ಸ್ವಯಂ ವೇಗವರ್ಧಕಗಳಂತೆ ವರ್ತಿಸಿ ಇತರ ವಸ್ತುಗಳ ಸಹವರ್ತನೆಯಿಂದ ಒಂದು ಪರಿಮಿತ ಪಟಲದ ಹೊದಿಕೆಯೊಂದಿಗೆ ತಮ್ಮದೇ ರೀತಿಯ ವಸ್ತುಗಳ ಉತ್ಪಾದಕ ಚೈತನ್ಯ ಪಡೆದು ಜೀವಕೋಶಯುಕ್ತ ಜೀವಿಗಳಾದುವು. ಇವನ್ನೇ ಮೂಲಜೀವಿಗಳು ಎನ್ನಬಹುದು. ಇವುಗಳಲ್ಲಿ ದೈತ್ಯಾಣುಗಳು ಮತ್ತು ಪ್ರೋಟೀನ್‌ಗಳು ಮುಖ್ಯವೆನಿಸಿವೆ. ಇದಕ್ಕೂ ಮುಂಚೆಯೇ ಸ್ವಯಂ ವೃದ್ಧಿಗೊಳ್ಳಬಲ್ಲ ಪ್ರೋಟೀನ್‌ಗಳು ರೂಪುತಳೆದಿರಬಹುದೆಂದು ಕೆಲವರ ವಾದ. ಆದರೆ ಜೀವಿಯ ಕನಿಷ್ಠ ರೂಪವೆನಿಸುವ ವೈರಸ್ಸು ಡಿಎನ್‌ಎ ಮತ್ತು ಪ್ರೋಟೀನ್ ಕವಚದಿಂದ ರಚಿತವಾಗಿದೆ. ಪ್ರತಿಯೊಂದು ಜೀವಕೋಶದ ಕೇಂದ್ರದಲ್ಲಿ ಇರುವ ನ್ಯೂಕ್ಲಿಯೋಪ್ರೋಟೀನ್ ಸಂಯುಕ್ತಗಳಾದ ವರ್ಣತಂತುಗಳೇ ಕೋಶನಿಯಂತ್ರಕಗಳೂ ಮತ್ತು ಆನುವಂಶಿಕ ವಾಹಕಗಳು. ಇಂದು ಸಸ್ಯ–ಪ್ರಾಣಿ, ಬ್ಯಾಕ್ಟೀರಿಯ ಕೋಶಗಳಲ್ಲಿ ಪರಾವಲಂಬಿಗಳಾಗಿ ಜೀವಿಸುವ ವೈರಸ್‌ಗಳು ಮೊದಲು ಪುರಾತನ ಸಾವಯುವ ಸಾಗರಗಳಲ್ಲಿ ಜೀವಿರೂಪಗಳಾಗಿ ಪ್ರಾರಂಭವಾಗಿರಬಹುದು. ಡಿಎನ್‌ಎಯಲ್ಲಿ ಉಂಟಾದ ಮ್ಯುಟೇಷನ್ (ವ್ಯತ್ಯಯ) ಮತ್ತು ಆಕಸ್ಮಿಕ ವೈಪರೀತ್ಯಗಳು ಸಂಕೀರ್ಣ ತಳಿಗಳಿಗೆ ಕಾರಣವೆನಿಸಿರಬಹುದು. ಇದರಿಂದ ಸಾವಯವ ವಸ್ತುಗಳ ಸಾಗರ ವೈರಸ್‌ಗಳ ಮ್ಯುಟೇಷನ್ ಮೂಲಕ ಸ್ವತಂತ್ರವಾಗಿ ಆಹಾರ ತಯಾರಿಸಬಲ್ಲ ಸ್ವಯಂಪೋಷಕ ಘಟಕಗಳೂ, ತನ್ಮೂಲಕ ಸಂಕೀರ್ಣ ಕಿಣ್ವಮಂಡಲದಿಂದ

ಕೂಡಿದ ಜೀವಕೋಶೀಯ ಜೀವಿಗಳೂ ರೂಪುಗೊಂಡಿರಬಹುದು. ಆದ್ದರಿಂದ ಪ್ರಾರಂಭಿಕ ಜೀವಿಯೆಂದರೆ ಸಾಗರದ ಸಾವಯವ ವಸ್ತುಗಳಿಂದ ಅರ್ಥಾತ್ ಬೇರೆ ಮೂಲದಿಂದ ಆಹಾರ ಪಡೆದು ಬದುಕುವ ಪರಪೋಷಿ ಜೀವಿ. ಇವುಗಳಿಂದ ಸಂಕೀರ್ಣ ಕಿಣ್ವಪಥಗಳನ್ನು ಬೆಳೆಸಿಕೊಂಡು ರಾಸಾಯನಿಕ ವಸ್ತುಗಳ ನೆರವಿನಿಂದ ಆಹಾರ ತಯಾರಿಸಿ, ಸಂಗ್ರಹಿಸಿ, ಬೇಕಾದಾಗ ಮಧ್ಯವರ್ತಿ ಕ್ರಿಯೆಯಿಂದ ಶಕ್ತಿ ಬಿಡುಗಡೆ ಮಾಡಿಕೊಳ್ಳುವಂಥ ಬ್ಯಾಕ್ಟೀರಿಯಗಳು ರೂಪಿತವಾಗಿರಬಹುದು. ಇಂಥ ಬ್ಯಾಕ್ಟೀರಿಯಗಳು ವಿವಿಧ ಆಹಾರ ಉಸಿರಾಟ ಕ್ರಮಗಳನ್ನು ಬೆಳೆಸಿಕೊಂಡು ಪರಾವಲಂಬನೆಗೆ ಸನ್ನದ್ಧವಾದುವು. ಸತ್ತವುಗಳಿಂದ ಆಹಾರ ಪಡೆಯುವ ಮೃತೋಪಜೀವಿಗಳಾಗಿ ಕೆಲವು ಬೆಳೆದವು. ಮತ್ತೆ ಕೆಲವು ಗಂಧಕ, ಕಬ್ಬಿಣ, ಸಾರಜನಕ ವಸ್ತುಗಳಿಂದ ಉತ್ಕರ್ಷಣೆ ನಡೆಸಿ ರಸಸಂಶ್ಲೇಷಿ ಸ್ವಯಂಪೋಷಿಗಳಾದುವು. ಗಂಧಕ ತಿನ್ನುವ ಬ್ಯಾಕ್ಟೀರಿಯಗಳು ಸೂರ್ಯರಶ್ಮಿಯನ್ನು ಹೀರಿ ಶಕ್ತಿ ಪಡೆಯುತ್ತವೆ. ಬ್ಯಾಕ್ಟೀರಿಯಗಳ ಹರಿತ್ತು, ಪ್ಲಾಸ್ಟಿಡ್‌ಗಳಲ್ಲಿ ಅಡಕವಾಗಿಲ್ಲ; ಇದರಿಂದಾಗಿ ಇವು ಹಸುರು ಸಸ್ಯಗಳಿಂದ ಭಿನ್ನವಾಗಿವೆ. ಅನಂತರ ನೀಲಿ ಹಸುರು ಪಾಚಿಗಳು ರೂಪುಗೊಂಡು ಯಥೇಚ್ಛವಾಗಿ ಆಕ್ಸಿಜನ್ ಬಿಡುಗಡೆಗೆ ಕಾರಣವಾಗಿರಬಹುದು. 200 ಅಥವಾ 300 ಕೋಟಿ ವರ್ಷಗಳ ಹಿಂದೆ ಈ ರೀತಿ ಮುಕ್ತವಾದ ಆಕ್ಸಿಜನ್ ವಾಯುಮಂಡಲವನ್ನು ಸೇರಿ ಆಕ್ಸಿಜನ್‌ಮಯ ವಾತಾವರಣ ಸೃಷ್ಟಿಯಾಗಿ ಉನ್ನತ ಜೀವಿಗಳ ಆರಂಭಕ್ಕೆ ವೇದಿಕೆ ನಿರ್ಮಾಣವಾಯಿತು. ಹರಿತ್ತಿನ ನೆರವಿನಿಂದ ದ್ಯುತಿಸಂಶ್ಲೇಷಣೆ ಸರಾಗವಾಗಿ ನಡೆಯುವಂತೆ ಉತ್ಕರ್ಷಣ ಕ್ರಿಯೆಗೆ ಬೇಕಾದ ಕಚ್ಚಾವಸ್ತುವಾದ ಆಹಾರದಿಂದ ಅಧಿಕ ಶಕ್ತಿ ಬಿಡುಗಡೆಗೆ ಕಾರಣವಾದ ಆಕ್ಸಿಜನ್ ದೊರೆಯುವಂತಾಗಿ ಇಡೀ ಜೀವಪ್ರಪಂಚದಲ್ಲೇ ಕ್ರಾಂತಿ ಉಂಟಾಯಿತು. ಇದರಿಂದ ನೀಲಿ ಹಸುರು ಹಾಗೂ ಇತರ ಬಗೆಯ ಪಾಚಿಗಳು, ಹಾವಸೆಗಳು, ಏಕಕೋಶ ಪ್ರಾಣಿ ಮತ್ತು ವಿಭಿನ್ನ ಸಸ್ಯ ಹಾಗೂ ಪ್ರಾಣಿ ಸಮುದಾಯಗಳು ವಿಕಸನಗೊಂಡವು. ಯೂಗ್ಲಿನ ರೀತಿಯವು ಸಸ್ಯ ಮತ್ತು ಪ್ರಾಣಿ ಪ್ರಪಂಚಗಳಿಗೆ ಸಂಬಂಧ ಕಲ್ಪಿಸುತ್ತವೆ. ಕಂದುಪಾಚಿಗಳಿಂದ (ಫಿಯೋಫೈಟ) ಪ್ರಾಣಿಗಳು ಆರಂಭವಾದುವು ಎಂದು ಒಂದು ವಾದ ಇದೆ. ಹರಿತ್ತಿಲ್ಲದ ಶಿಲೀಂಧ್ರಗಳಿಂದ ಪ್ರಾಣಿಗಳು ಉದ್ಭವವಾಗಿರಬಹುದು ಎಂಬ ಅಭಿಪ್ರಾಯವೂ ಉಂಟು. ಆಹಾರ ಕ್ರಮ, ಚಲನೆ, ರಚನೆ, ವರ್ತನೆ ಮುಂತಾದವುಗಳ ಆಧಾರದ ಮೇಲೆ ಜೀವ ಪ್ರಪಂಚವನ್ನು ಎರಡು ಸಾಮ್ರಾಜ್ಯಗಳಾಗಿ [ಸಸ್ಯಗಳು (ಪ್ಲಾಂಟೇ) ಮತ್ತು ಪ್ರಾಣಿಗಳು (ಅನಿಮೇಲಿಯ)] ಗುರುತಿಸಲಾಯಿತು. ಇವು ಇಡೀ ಜೀವಿಗಳ ಎರಡು ಪ್ರಧಾನ ಗುಂಪುಗಳೆಂದು ಪರಿಗಣಿಸಲಾಗಿತ್ತು. ಬಹುಕೋಶಿಪಾಚಿಗಳನ್ನು ಸಸ್ಯ ಸಾಮ್ರಾಜ್ಯಕ್ಕೂ ಏಕಕೋಶಿ ಪ್ರಾಣಿಗಳನ್ನು ಪ್ರಾಣಿಸಾಮ್ರಾಜ್ಯಕ್ಕೂ ಸೇರಿಸಲಾಯಿತು. ಆದರೆ ಕೆಲವು (ಪ್ರೋಟೊಜೋವ) ಏಕಕೋಶಿ ಪ್ರಾಣಿಗಳನ್ನು ಮತ್ತು ಸಸ್ಯಗಳನ್ನು ಪ್ರತ್ಯೇಕಿಸುವುದು ಬಹಳ ಕ್ಲಿಷ್ಟ ಸಮಸ್ಯೆಯಾಯಿತು. ಇದರಿಂದಾಗಿ ಸಸ್ಯ ಮತ್ತು ಪ್ರಾಣಿ ವಿವರಣೆಯ ಮರು ಪರಿಶೀಲನೆ ಅಗತ್ಯವಾಯಿತು. ಏಕಕೋಶಿ ಸಸ್ಯ ಮತ್ತು ಪ್ರಾಣಿಗಳೆರಡನ್ನೂ ಸಸ್ಯ ಸಾಮ್ರಾಜ್ಯಕ್ಕೇ ಸೇರಿಸಲು ಇರುವ ತೊಡಕುಗಳನ್ನು ಮುಚ್ಚಲು ಪ್ರಯತ್ನಿಸಲಾಯಿತು. ಇದೇ ಸಂದರ್ಭದಲ್ಲಿ ವೈರಸ್‌ಗಳ ಸ್ಥಾನದ ಬಗ್ಗೆ ಮತ್ತು ಅವು ಜೀವಿಗಳೇ ಅಲ್ಲವೇ ಎಂಬ ಬಗ್ಗೆ ಜಿಜ್ಞಾಸೆ ಮೂಡಿತು. ಹೀಗೆ ಅಧ್ಯಯನದಿಂದ ವಿಷಯ ಸಂಗ್ರಹಣೆ ಹಬ್ಬಿದಂತೆಲ್ಲ ಸಮಸ್ಯೆಗಳು ಅಧಿಕಗೊಂಡು ವರ್ಗೀಕರಣ ಮತ್ತು ಫೈಲಾಜನಿಗಳು ಪರಿಷ್ಕರಣಕ್ಕೆ ಒಳಗಾದುವು. ಈ ಸಮಸ್ಯೆಗೆ ಅಂತಿಮ ಪರಿಹಾರವಾಗಿ 3 ಅಥವಾ 4 ಸಾಮ್ರಾಜ್ಯಗಳು ಅನಿವಾರ್ಯ ಮತ್ತು ಸ್ವಾಭಾವಿಕ ಎಂದು ಹಲವಾರು ಜೀವ ವಿಜ್ಞಾನಿಗಳು ಅಭಿಪ್ರಾಯ ತಳೆಯುವಂತಾಯಿತು. ಬ್ಯಾಕ್ಟೀರಿಯ, ನೀಲಿಹಸುರು ಪಾಚಿಗಳನ್ನು (1) ಮೈಕೋಟ ಅಥವಾ ಮಾನೀರ ಎಂದೂ (ವೈರಸ್‌ಗಳನ್ನು ನಿರ್ಜೀವಿಗಳೆಂದು ಕೈಬಿಡಲಾಗಿದೆ) ಏಕಕೋಶ ಜೀವಿಗಳನ್ನು ಮತ್ತು (ಹಸುರು ಪಾಚಿಗಳನ್ನು ಬಿಟ್ಟು) ಉಳಿದ ಪಾಚಿಗಳನ್ನು (2) ಪ್ರೋಟಿಸ್ಟ ಎಂದೂ ಹಸುರು ಪಾಚಿಗಳು, ಹಾವಸೆಗಳು, ಮುಂದುವರೆದ ಸಸ್ಯಗಳನ್ನು (3) ಪ್ಲಾಂಟೇ ಎಂದೂ ಬಹುಕೋಶ ಪ್ರಾಣಿಗಳನ್ನು (4) ಅನಿಮೇಲಿಯ ಎಂದೂ ಒಟ್ಟು ನಾಲ್ಕು ಸಾಮ್ರಾಜ್ಯಗಳಾಗಿ ಜೀವಿಗಳನ್ನು ವಿಂಗಡಿಸಲಾಗಿದೆ. ಸಾಮ್ರಾಜ್ಯಗಳು ಮೂರು ಇರುವಂಥ ಪದ್ಧತಿಯಲ್ಲಿ ಪ್ರೋಟಿಸ್ಟ ಗುಂಪಿನವು ಪ್ರಾಣಿ ಮತ್ತು ಸಸ್ಯಗಳ ಗುಂಪುಗಳಲ್ಲಿ ಹಂಚಿ ಹೋಗಿದ್ದು ಸಸ್ಯ (ಪ್ಲಾಂಟೇ), ಪ್ರಾಣಿ (ಅನಿಮೇಲಿಯ) ಹಾಗೂ ಬಿಟ್ಟರೆ ಮೈಕೋಟ ಅಥವಾ ಮಾನೀರ ಎಂಬ ಸಾಮ್ರಾಜ್ಯಗಳಿವೆ. ಇದನ್ನೇ ಮತ್ತೊಂದು ರೀತಿಯಲ್ಲಿ (1) ಪ್ರೋಟಿಸ್ಟ (ಮಾನೀರ, ಪಾಚಿಗಳು, ಶಿಲೀಂಧ್ರ ಮತ್ತು ಏಕಕೋಶ ಪ್ರಾಣಿಗಳು ಸೇರಿ) (2) ಸಸ್ಯ (3) ಪ್ರಾಣಿ ಸಾಮ್ರಾಜ್ಯಗಳೆಂದು ಪರಿಗಣಿಸುವುದೂ ಉಂಟು.

ಕೋಶವ್ಯವಸ್ಥೆಯಲ್ಲಿ ಆದಿಕೋಶಿಗಳು (ಪ್ರೋಕ್ಯಾರಿಯೋಟ್ಸ್) ಮತ್ತು ನಿಜಕೋಶಿಗಳು (ಯೂಕ್ಯಾರಿಯೋಟ್ಸ್) ಎಂಬ ಕಲ್ಪನೆ ಬಂದಮೇಲೆ ಹಳೆಯ ಆಧಾರಗಳೂ ಸಡಿಲಗೊಂಡು ಹಿಂದುಳಿದ ಮತ್ತು ಮುಂದುವರೆದ ಲಕ್ಷಣಗಳು; ಪುರಾತನ ಕಾಲ ಅಥವಾ ಆರಂಭ ಸ್ಪಷ್ಟವಾಗತೊಡಗಿದವು. ಬ್ಯಾಕ್ಟೀರಿಯ ಮತ್ತು ನೀಲಿ ಹಸುರು ಪಾಚಿಗಳಲ್ಲಿ ಕೋಶಕೇಂದ್ರ ಭಿತ್ತಿ ಇಲ್ಲ. ಆದ್ದರಿಂದ ಇವನ್ನು ಕೋಶಕೇಂದ್ರ ಆರಂಭವಾಗುವ ಆದಿಕೋಶಗಳು (ಪ್ರೋಕ್ಯಾರಿಯೋಟುಗಳು) ಎಂದೂ ಉಳಿದವನ್ನು ಕೋಶಕೇಂದ್ರ ಪೊರೆಯುಳ್ಳ ನಿಜಕೋಶಿಗಳು (ಯೂಕ್ಯಾರಿಯೋಟುಗಳು) ಎಂದೂ ಪರಿಗಣಿಸಲಾಯಿತು. ಪ್ರೋಕ್ಯಾರಿಯೋಟುಗಳಲ್ಲಿ ಡಿಎನ್‌ಎ ಸಹ ಮುಕ್ತರೂಪದಲ್ಲಿದೆ; ಪ್ರೋಟೀನ್ ಜೊತೆಗೂಡಿ ಕ್ರೊಮೋಸೋಮ್ ಆಗಿ ರೂಪುಗೊಂಡಿಲ್ಲ. ಲಿಂಗರೀತಿಯ ವ್ಯವಸ್ಥೆಯೂ ಉತ್ತಮವಾಗಿಲ್ಲ. ಕೋಶದ್ರವ್ಯ (ಸೈಟೋಪ್ಲಾಸಮ್) ಸರಳವಾದುದು (ಹರಿಯುವ ರೀತಿಯಲ್ಲಿ ಇಲ್ಲ). ರಸದಾನಿಗಳೂ ಇಲ್ಲ. ಬ್ಯಾಕ್ಟೀರಿಯಗಳ ಕಶಾಂಗಗಳು ಸಹ ಭಿನ್ನವಾಗಿವೆ. ತದ್ವಿರುದ್ಧವಾಗಿ ಯೂಕ್ಯಾರಿಯೋಟುಗಳು ಸಂಕೀರ್ಣ ಬಗೆಯವು. ಈ ರೀತಿಯ ಸಂಕೀರ್ಣ ಜೀವನ ಪ್ರಾಯಶಃ ಎರಡೂ ರೀತಿಯ ಜೀವಕೋಶಗಳ ಒಡನಾಟದಿಂದ ಪ್ರಾರಂಭವಾಗಿರಬಹುದು. ಪರಸ್ಪರಾವಲಂಬನೆಯ ರೂಪದಲ್ಲಿ ಸೇರಿದ ಇವುಗಳಲ್ಲಿ ಪ್ರೋಕ್ಯಾರಿಯೋಟ್ ಜೀವಿಗಳನ್ನು ಯೂಕ್ಯಾರಿಯೋಟ್ ಜೀವಕೋಶ ಕಬಳಿಸಿ ಮೈಟೋಕಾಂಡ್ರಿಯಗಳು (ಡಿಎನ್‌ಎ ಯುಕ್ತ) ರೂಪುಗೊಂಡಿರಬಹುದು. ಇದೇ ರೀತಿ ನೀಲಿ ಹಸುರು ಪಾಚಿಗಳನ್ನು ಕಬಳಿಸಿ ಪ್ಲಾಸ್ಟಿಡ್‌ಗಳು ಪ್ರಾರಂಭವಾಗಿರಬಹುದು. ಕಲ್ಲು ಹೂಗಳಲ್ಲಿ ಕಾಣುವ ಪಾಚಿ ಶಿಲೀಂಧ್ರಗಳ ಒಡನಾಟ (ಪರಸ್ಪರಾವಲಂಬನೆ) ಮತ್ತು ಪ್ಲಾಸ್ಟಿಡ್ ಹಾಗೂ ಮೈಟೋಕಾಂಡ್ರಿಯಾಗಳಲ್ಲಿ ಕಾಣಬರುವ ಡಿಎನ್‌ಎ ಈ ವಾದಕ್ಕೆ ಪುಷ್ಟಿಕೊಡುವ ಅಂಶಗಳು. ಇದರ ಆಧಾರದ ಮೇಲೆ 4 ಸಾಮ್ರಾಜ್ಯಗಳ ಒಂದು ಮೂಲ ಫೈಲಾಜನಿಯನ್ನು ರಚಿಸಬಹುದು.

1 ಪ್ರೋಕ್ಯಾರಿಯೋಟ್ ಸಾಮಾಜ್ಯ–ಮಾನೀರ

2 ಪರಸ್ಪರಾವಲಂಬನೆಯ ಮಾರ್ಪಾಟು–ಸ್ವಯಂಪೋಷಿ, ಪರಿಪೋಷಿಗಳಿಂದಾಗಿ ಪ್ರೋಟೋಕ್ಟಿಸ್ಟಾ. ಇಂಥವುಗಳಲ್ಲಿ ನಿವಹಗಳು (ಕಾಲನಿ) ರೂಪುಗೊಂಡು ಬಹುಕೋಶಿ ಪಾಚಿಗಳಾಗಿರಬಹುದು. ದ್ಯುತಿಸಂಶ್ಲೇಷಣೆಯಿಲ್ಲದ ಯೂಕ್ಯಾರಿಯೋಟ್‌ಗಳಿಂದ ಶಿಲೀಂಧ್ರಗಳೂ, ಪ್ರೋಟೊಝೋವಗಳಿಂದ ಪ್ರಾಣಿ ಸಾಮಾಜ್ಯವೂ, ಹಸಿರುಪಾಚಿಗಳಿಂದ ಸಸ್ಯಸಾಮ್ರಾಜ್ಯವೂ ಬೆಳೆದಿರಬಹುದು. ಆದರೆ ನಾಲ್ಕು ಸಾಮ್ರಾಜ್ಯಗಳ ಫೈಲಾಜನಿ ವಿಧಾನಕ್ಕೆ ಯಾವುದೇ ರೀತಿಯ ಒಮ್ಮತವಿಲ್ಲ.

ಪ್ರಾಣಿ–ಫೈಲಾಜನೀಯ ಪ್ರಮುಖ ಮಜಲುಗಳು: ಯೂಗ್ಲಿನ ರೀತಿಯಲ್ಲಿ ಪ್ರಾಣಿಗಳು ಸಸ್ಯ ಮತ್ತು ಪ್ರಾಣಿಗಳ ನಡುವಿನ ಕೊಂಡಿಯಂತಿವೆ (ಪರಪೋಷಣೆಗೆ ತಕ್ಕಂತೆ). ಹರಿತ್ತನ್ನು ಪಡೆಯುವ ಬದಲು ಸಂಕೀರ್ಣ ವ್ಯವಸ್ಥೆಯನ್ನು ರೂಢಿಸಿಕೊಂಡಿರುವ ಜೀವಿಗಳು ಪ್ರಾಣಿಸಮುದಾಯವಾಗಿವೆ. ಇವುಗಳಲ್ಲಿ ಜೀವಕೋಶದ ರಚನೆಯೂ ಸೇರಿದಂತೆ ರಚನೆಗೆ ಸಂಬಂಧಿಸಿದ ಮತ್ತು ಆಯಾ ವ್ಯವಸ್ಥೆಗೆ ಸಂಬಂಧಿಸಿದ ಬದಲಾವಣೆಗಳು ಇವೆ. ಏಕಕೋಶಿ ಪ್ರಾಣಿಗಳಿಂದ ಬಹುಕೋಶಿ ಪ್ರಾಣಿಗಳು, ಅಂಗಾಂಶ, ಅಂಗಸೌಷ್ಠವ, ವಲಯಗಳು, ತಲೆಯ ಪ್ರಾಮುಖ್ಯ ಮುಂತಾದವನ್ನು ವಿವಿಧ ಸ್ತರಗಳಲ್ಲಿ ರೂಪಿಸಿಕೊಂಡು ವಿಕಾಸಗೊಂಡಿವೆ. ಬಹುಕೋಶಿ ಪ್ರಾಣಿಯ ಉಗಮಕ್ಕೆ ವಿವಿಧ ರೀತಿಯ ಕಾರಣಗಳನ್ನು ಮುಂದಿಡಲಾಗಿದೆ. ಹೆಕೆಲನ ಗ್ಯಾಸ್ಟ್ರಿಯು ಸಿದ್ಧಾಂತದ ಪ್ರಕಾರ ವಾಲ್ವಾಕ್ಸ್‌ನಂಥ ನಿವಹಯುಕ್ತ ಪ್ರೋಟೊಝೋವಗಳಿಂದ ಬಹುಕೋಶಿ ಪ್ರಾಣಿಗಳು ಉಗಮಿಸಿವೆ. ಈ ರೀತಿಯ ಕಾಲ್ಪನಿಕ ಗ್ಯಾಸ್ಟ್ರಿಯಾಸ್ ಪ್ರಾಣಿ ಹವಳ ಅಥವಾ ಲೋಳೆ ಮೀನುಗಳಂತೆ ಇದ್ದಿರಬಹುದು. ಈ ಅಭಿಪ್ರಾಯಕ್ಕೆ ಫೈಲಾಜನಿ ಮಹತ್ತ್ವವನ್ನು ಭ್ರೂಣಾವಸ್ಥೆಯ ಹೊಂದಾಣಿಕೆಗಳು ಪೂರಕವಾಗಿ ದೊರಕಿಸಿಕೊಡಲಾರವು. ಪ್ಲಾನುಲ ರೀತಿಯಲ್ಲಿ ಬಹುಕೋಶಿಗಳ ಉಗಮವಾಗಿದೆ ಎಂದು ಮತ್ತೆ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಸೀಲಿಯೇಟ್‌ಗಳಿಂದ ಚಪ್ಪಟೆ ಹುಳುಗಳು ಉಗಮಿಸಿರಬಹುದೆಂಬ ವಾದವೂ ಉಂಟು. ಬಹುಕೋಶಿ ಸಸ್ಯಗಳ ಹರಿತ್ತಿನ ನಾಶದಿಂದ ಪ್ರಾಣಿಗಳು ರೂಪಗೊಂಡಿವೆ ಎಂದೂ ಕೆಲವರ ಅಭಿಮತ. ಹೀಗೆ ಒಮ್ಮತಾಭಿಪ್ರಾಯ ಇಲ್ಲದಿದ್ದರೂ ಪ್ರೋಟಿರೋಸ್ಪಾಂಜಿಯದಂಥ ನಿವಹಯುಕ್ತ ಪ್ರೋಟೊಝೋವಗಳ ಮಟ್ಟದಲ್ಲಿ ಬಹುಕೋಶ ವ್ಯವಸ್ಥೆ ಆರಂಭವಾಗಿದೆ ಎಂಬುದು ಗಮನಾರ್ಹ.

ಅಂಗಸೌಷ್ಠವ: ಒಂದು ಅಕ್ಷದ ಮೇಲೆ ಅಂಗಗಳ ಜೋಡಣೆಯೇ ಅಂಗಸೌಷ್ಠವ. ಕೆಲವು ಏಕಕೋಶಿಗಳಲ್ಲಿ ಮತ್ತು ಸ್ಪಂಜುಗಳಲ್ಲಿ ಅಂಗಸೌಷ್ಠವ ಅನಿಯತವಾಗಿಯಾದರೆ ಅನೇಕ (ಪ್ರೋಟೊಜೋವ) ಏಕಕೋಶಿಗಳಲ್ಲಿ, ಸ್ಪಂಜುಗಳಲ್ಲಿ, ಕುಟುಕುಕಣದಂತಗಳಲ್ಲಿ ಸ್ಥಿರವಾಸಕ್ಕೆ ಅನುಗುಣವಾಗಿ ಅಂಗಸೌಷ್ಠವ ರೀತಿಯದ್ದಾಗಿದೆ. ದ್ವಿಪಾರ್ಶ್ವ ಅಂಗಸೌಷ್ಠವವೂ ಬಹುತೇಕ ಪ್ರಾಣಿಗಳಲ್ಲಿ ಉಂಟು. ಈ ಬಗೆಯ ಸೌಷ್ಠವಕ್ಕೆ ಆಯ್ಕೆ ಅನುಕೂಲತೆ ಇರುವುದರಿಂದ ಇದು ವ್ಯಾಪಕವಾಗಿ ಕಾಣಬರುತ್ತದೆ.

ಅಂಗಾಂಶ ಅಂಗಗಳ ಆರಂಭ: ಏಕಕೋಶಿಗಳು ಮತ್ತು ಸ್ಪಂಜುಗಳು ಬರಿಯ ಜೀವ ಕೋಶ ಉಳ್ಳ ಪ್ರಾಣಿಗಳು. ಇವುಗಳಲ್ಲಿ ಅಂಗಾಂಶಗಳಾಗಲೀ ಅಂಗಮಂಡಲಗಳಾಗಲೀ ಇಲ್ಲ. ಮೀಸೊಝೋವ ಮತ್ತು ಸೀಲೆಂಟೆರೇಟಗಳಲ್ಲಿ ಅಂಗಾಂಶಗಳು ಮಾತ್ರ ಇವೆ. ಎರಡು ಪದರ ಕೋಶಗಳನ್ನು ಪ್ರತ್ಯೇಕಿಸುವ ಮೀಸೋಗ್ಲಿಯ ಲೋಳೆಯಂತಿದ್ದು

ಜೀವಕೋಶರಹಿತವಾಗಿದೆ. ಮಧ್ಯಪದರವನ್ನು ಪಡೆದಿರುವ ಚಪ್ಪಟೆಹುಳುಗಳಲ್ಲಿ ಸ್ನಾಯುಗಳೂ ರೂಪುಗೊಂಡು ಅಂಗಾಂಗಗಳು ಆರಂಭ ಹಂತದಲ್ಲಿವೆ. ಆದರೆ ಅಂಗಗಳಿಗೆ ಅವಕಾಶವೀಯುವ ದೇಹಾಂತರಾವಕಾಶ (ಸೀಲೋಮ್) ಬೆಳೆದಿಲ್ಲ. ದುಂಡು ಹುಳುಗಳಲ್ಲಿ ಮಿಥ್ಯಸೀಲೋಮ್ ಪ್ರಾರಂಭವಾಗಿ ವಲಯವಂತಗಳಲ್ಲಿ ವೃದ್ಧಿಗೊಂಡು ಉಳಿದವುಗಳಲ್ಲಿ ನಾನಾರೂಪದಲ್ಲಿ ಪ್ರಕಟಗೊಂಡಿದೆ. ಇದರ ಆಧಾರದ ಮೇಲೆ ಏಸೀಲೋಮೇಟ್, ಸೂಡೊಸೀಲೋಮೇಟ್, ಯೂಸೀಲೋಮೇಟ್ ಎಂದು ಕ್ರಮವಾಗಿ ಗುಂಪುಗಳನ್ನು ದರ್ಜೆಗಳಾಗಿ ವಿಂಗಡಿಸಲಾಗಿದೆ. ಸೀಲೋಮ್‌ಗೆ ಸೇರಿದಂತೆಯೇ ಅಂಗಮಂಡಲಗಳು ವಿಕಾಸಗೊಂಡಿವೆ.

ವಲಯರಚನೆ (ಮೆಟಮೆರಿಸಮ್): ಅಂಗಗಳು ಉಂಟಾದಂತೆಯೇ ವಲಯಗಳೂ ದೇಹಚಲನೆಗೆ ತಕ್ಕಂತೆ ರೂಪುಗೊಂಡಿರುವುದನ್ನು ಗಮನಿಸಬಹುದು. ವಲಯವಂತಗಳಲ್ಲಿ, ಸಂಧಿಪದಿಗಳಲ್ಲಿ, ಕಾರ್ಡೇಟುಗಳಲ್ಲಿ ಇದು ಗಮನಾರ್ಹ. ಹಾವುಗಳ ಚಲನೆಗೂ ಸ್ನಾಯುಗಳ ವ್ಯವಸ್ಥೆಗೂ ಸಂಬಂಧ ಇರುವುದು ವಲಯರಚನೆಯಿಂದ. ವಲಯರಚನೆ ಎರಡು ದಿಕ್ಕಿನಲ್ಲಿ ವಿಕಾಸಗೊಂಡಿದೆ; ಅಧಿಕ ಸಂಖ್ಯೆಯ ವಲಯಗಳನ್ನು ಪಡೆದಿರುವ ವಲಯವಂತಗಳದ್ದು ಮತ್ತು ಸಂದಿಪದಿಗಳದ್ದು ಒಂದು ಗುಂಪಾದರೆ ಮಿತಸಂಖ್ಯೆಯ ವಲಯರಚನೆಯನ್ನು ತೋರುವ ಕಠಿಣಚರ್ಮಿ ಹಾಗೂ ಕಾರ್ಡೇಟುಗಳದ್ದು ಮತ್ತೊಂದು ಗುಂಪು.

ತಲೆಯ ರಚನೆ: ಇಡೀ ದೇಹದ ನಿಯಂತ್ರಕವಾಗಿ ಅಮೂಲ್ಯವಾದ ಮಿದುಳು, ಜ್ಞಾನೇಂದ್ರಿಯಗಳು ಮತ್ತು ಆಹಾರ ಸೇವನಾಭಾಗಗಳನ್ನು ಪಡೆದ ತಲೆ ದೇಹದ ಮುಂಭಾಗದಲ್ಲಿ ರಚಿತವಾಗಿದೆ. ಇದು ಚಪ್ಪಟೆ ಹುಳುಗಳಲ್ಲಿ ಸ್ಕೋಲೆಕ್ಸ್ ಎಂಬುದಾಗಿ ಆರಂಭವಾಗಿ, ಸಂದಿಪದಿ, ಕ್ರಸ್ಟೇಶಿಯ ಮತ್ತು ಕೀಟಗಳಲ್ಲಿ ಉತ್ತಮವಾಗಿ ಬೆಳೆದು ಕಾರ್ಡೇಟುಗಳಲ್ಲಿ ಅದರಲ್ಲೂ ಸ್ತನಿಗಳಲ್ಲಿ ಉತ್ತುಂಗ ಹಂತವನ್ನು ತಲಪಿದೆ.

ಹೊಂದಾಣಿಕಾ ಪ್ರಸರಣ: ವಿವಿಧ ಪರಿಸರಗಳಿಗೆ ತಕ್ಕಂತೆ ಒಂದೇ ಗುಂಪಿನ ಪ್ರಾಣಿಗಳು ಅಥವಾ ಒಂದು ಅಂಗಮಂಡಲದ ಭಾಗಗಳು ವೈವಿಧ್ಯಮಯವಾಗಿರುತ್ತವೆ. ಏಕಮುಖ ವಿಕಾಸ ಅಥವಾ ದ್ವಿಮುಖ ವಿಕಾಸ ಹೊಂದಾಣಿಕಾ ಪ್ರಸರಣಕ್ಕೆ ಅನುವು ಮಾಡಿಕೊಡಬಹುದು. ಸರೀಸೃಪಗಳ ವಿಭಿನ್ನ ಜೀವನಕ್ರಮ, ಪಕ್ಷಿಗಳ ಕೊಕ್ಕು ಅಥವಾ ಕಾಲುಗಳು, ಸ್ತನಿಗಳ ಹಲ್ಲುಗಳು ಹೊಂದಾಣಿಕಾ ಪ್ರಸರಣಕ್ಕೆ ಉತ್ತಮ ಉದಾಹರಣೆಗಳು.

ಪ್ರಾಣಿಗಳ ಫೈಲಾಜನಿಗೆ ಸಂಬಂಧಿಸಿದಂತೆ ಎರಡು ಗುಂಪಿನ ವ್ಯವಸ್ಥೆ ಇದೆ. ಏಕಮುಖ ಹಾಗೂ ದ್ವಿಮುಖ ಫೈಲಾಜನಿಗಳೇ ಈ ಎರಡು ವ್ಯವಸ್ಥೆಗಳು. ಏಕಮುಖ ವ್ಯವಸ್ಥೆಗೆ (ಮಾನೊಫೈಲೆಟಿಕ್) ಸೀಲೋಮ್ ಆಧಾರ. ಬ್ರೆಜಿಲ್‌ನ ಅರ್ನ್‌ಸ್ಟ್ ಮಾರ್ಕಸ್ ಪ್ರಕಾರ ಸೀಲೋಮ್ ಇಲ್ಲದ ಏಸೀಲೋಮೇಟ್‌ಗಳು ಕೆಳದರ್ಜೆಯವು; ಸೀಲೋಮ್ ಉಳ್ಳವು (ಸೀಲೋಮೇಟ್) ಮುಂದುವರೆದವು. ಯುಗೋಸ್ಲಾವಿಯದ ಹಡ್ಜಿ ಎಂಬಾತ ಇದೇ ವಿಧಾನದಲ್ಲಿ ನೇರ ಫೈಲಾಜನಿಯನ್ನು ರಚಿಸಿದ್ದಾನೆ. ಇದರ ಪ್ರಕಾರ ವಲಯವಿಲ್ಲದ ಏಮೀರಿಯ, ಮಿತವಲಯಗಳುಳ್ಳ ಆಲಿಗೋಮೀರಿಯ, ಬಹುವಲಯಯುಕ್ತ ಪಾಲಿಮೀರಿಯ ಮತ್ತು ಕಾರ್ಡೀನಿಯ ಎಂಬ ಪ್ರಾಣಿಗುಂಪುಗಳನ್ನು ಗುರುತಿಸಲಾಗಿದೆ. ಆರಂಭದಲ್ಲಿ ಇದಕ್ಕೆ ಪ್ರಬಲ ಬೆಂಬಲವಿತ್ತಾದರೂ ಇದರ ಮಹತ್ತ್ವ ಈಗ ಇಳಿಮುಖವಾಗಿದೆ. ದ್ವಿಮುಖ (ಡೈಫೈಲೆಟಿಕ್) ಫೈಲಾಜನಿಯಲ್ಲಿ ಪ್ರೊಟೀರೊಸ್ಟೋಮಿಯ ಮತ್ತು ಡ್ಯೂಟಿರೊಸ್ಟೋಮಿಯ ಎಂದು ಅಕಶೇರುಕ ಹಾಗೂ ಕಾರ್ಡೇಟ್ ಹಾದಿಗಳನ್ನು ಗುರುತಿಸಲಾಗಿದೆ. ಪ್ರೊಟೀರೊಸ್ಟೋಮಿಯ ಗುಂಪಿನವುಗಳಲ್ಲಿ ಭ್ರೂಣದ ಪ್ರಮುಖ ಹಂತ ಗ್ಯಾಸ್ಟ್ರುಲದ ಬ್ಲಾಸ್ಟೋಪೋರ್ ಭಾಗ ಪ್ರೌಢಜೀವಿಯಲ್ಲಿ ಬಾಯಿಯಾಗಿ ಉಳಿಯುವುದು. ಆದ್ದರಿಂದ ಇವನ್ನು ಆರಂಭಿಕ ಬಾಯಿ ಉಳ್ಳ ಗುಂಪು ಎನ್ನಬಹುದು. ಸಾಮಾನ್ಯವಾಗಿ ಅಕಶೇರುಕಗಳನ್ನು ಒಳಗೊಂಡ ಇವನ್ನು ವಲಯವಂತ ಸಂಧಿಪದಿಗಳ ಹಾದಿ ಎಂದೂ ಗುರುತಿಸುವರು. ಅಲ್ಲದೆ ಸುರುಳಿ ಅಥವಾ ನಿರ್ಧಾರಕ ವಿದಳನ, ಮಧ್ಯದರ್ಮ ಒಡೆದು ಬರುವ ಸ್ಕೀಜೋಸೀಲ್ ಸೀಲೋಮ್ ಭ್ರೂಣ ಬಾಯಿಯೇ ಪ್ರೌಢಬಾಯಿಯಾಗುವುದು. ಟ್ರೋಕೋಫೋರ್‌ನಂಥ ನಿರ್ದಿಷ್ಟ ಡಿಂಬ ಮುಂತಾದ ಲಕ್ಷಣಗಳನ್ನು ಇವುಗಳಲ್ಲಿ ಗಮನಿಸಬಹುದು.

ಇದಕ್ಕೆ ತದ್ವಿರುದ್ಧವಾಗಿ ಡ್ಯೂಟಿರೊಸ್ಟೋಮಿಯದ ಪ್ರೌಢಜೀವಿಗಳಲ್ಲಿ ಬಾಯಿ ಹೊಸದಾಗಿ ರೂಪುಗೊಳ್ಳುವುದು; ಬ್ಲಾಸ್ಟೋಪೋರ್ ಗುದರಂಧ್ರವಾಗುತ್ತದೆ. ಅಲ್ಲದೆ ಇವುಗಳಲ್ಲಿ ಸುರುಳಿ ಅಥವಾ ನಿರ್ಧಾರಕ ವಿದಳನವಿಲ್ಲ. ಕರುಳಿನಿಂದ ಹೊರಚಾಚಿದ ಚೀಲಗಳು ಎಂಟಿರೋಸೀಲ್ ಸೀಲೋಮ್ ಆಗುತ್ತವೆ. ಸಾಮಾನ್ಯ ಡಿಂಬಾವಸ್ಥೆಯೂ ಇಲ್ಲ. ಕಠಿಣಚರ್ಮಿಕಾರ್ಡೇಟ್ ಹಾದಿಯ ಈ ಗುಂಪು ಕಾರ್ಡೇಟುಗಳ ಗುಂಪಿನಲ್ಲಿ ಪರ್ಯವಸಾನಗೊಳ್ಳುತ್ತದೆ.

ಕಾರ್ಡೇಟುಗಳ ಉಗಮ: ಪ್ರಾಯಶಃ ಎಲ್ಲ ಅಕಶೇರುಕ ಗುಂಪುಗಳನ್ನೂ ಕಾರ್ಡೇಟುಗಳ ಉಗಮದ ಮೂಲವೆಂದು ಭಾವಿಸಲಾಗುವುದು. ನೋಟೊಕಾರ್ಡ್ (ಬೆನ್ನುಹುರಿ), ನರಹುರಿ, ಮತ್ತು ಐದು ಜೊತೆ ಕಿವಿರು ರಂಧ್ರಗಳು ಇವುಗಳ ಪ್ರಮುಖ ಲಕ್ಷಣಗಳು. ಕಠಿಣ ಚರ್ಮಿಗಳಲ್ಲಿ, ಕಾರ್ಡೇಟುಗಳಲ್ಲಿ ಆದಿ ಕಾರ್ಡೇಟುಗಳ ಲಕ್ಷಣ ಉಂಟು. ಅರೆಕಾರ್ಡೇಟುಗಳು, ಟಾರ್ನೇರಿಯ ಮತ್ತು ಕಠಿಣಚರ್ಮಿಗಳು, ಬೈಪಿನೇರಿಯ ಡಿಂಬಗಳಲ್ಲಿ ಸಾಮ್ಯತೆ ಇದೆ. ಆದ್ದರಿಂದ ಪ್ರೀಕೇಂಬ್ರಿಯನ್ ಕಾಲದ ಡೈಪ್ಲೂರುಲ ರೀತಿಯ ಡಿಂಬ ಕಾರ್ಡೇಟುಗಳ ಮೂಲವಾಗಿರಬಹುದೆಂದು ಬಗೆಯಲಾಗಿದೆ. ಈ ರೀತಿ ಆದಿಕಾರ್ಡೇಟುಗಳಾಗಿ ರೂಪುಗೊಂಡ ಕಾರ್ಡೇಟುಗಳು ದವಡೆರಹಿತ ಮೀನುಗಳಾಗಿ (ಲ್ಯಾಂಪ್ರೆಗಳು) ವಿಕಸನಗೊಂಡಿವೆ. ಇವು ಪ್ಲ್ಯಾಕೋಡರ್ಮ್‌ಗಳ ಹಂತ ದಾಟಿ ಮೃದ್ವಸ್ಥಿ ಶಾರ್ಕ್ ಮೀನುಗಳಾಗಿವೆ. ಶಾರ್ಕ್‌ಗಳಿಂದ ಮೂಳೆಮೀನುಗಳೂ ಇವುಗಳಿಂದ ರೇಮುಳ್ಳು ಮತ್ತು ದಳಮುಳ್ಳು ಮೀನುಗಳೆಂಬ ಎರಡು ಗುಂಪುಗಳೂ ರೂಪುತಳೆದಿವೆ. ಸಿಹಿನೀರುವಾಸಿ ದಳಮುಳ್ಳು ಮೀನುಗಳಿಂದ ಉಭಯವಾಸಿಗಳೂ ದ್ವಿಚರಿಗಳಿಂದ ಸರೀಸೃಪಗಳೂ ಸರೀಸೃಪಗಳಿಂದ ಪಕ್ಷಿ ಮತ್ತು ಸ್ತನಿಗಳೂ ರೂಪುಗೊಳ್ಳುವ ವಿಕಾಸ ಕ್ರಿಯೆ ಮಾನವನವರೆಗೆ ಅವ್ಯಾಹತವಾಗಿ ಸಾಗಿದೆ. ಆಯ್ಕೆಗೆ ತಕ್ಕಂತೆ ಹೊಂದಾಣಿಕೆ–ಭಿನ್ನತೆಗಳು ವ್ಯತ್ಯಯಗಳ ಮೂಲಕ ಉಂಟಾಗಿವೆ. ಹೀಗೆ ಅತಿಸರಳ ರೀತಿಯವುಗಳಿಂದ ಮುಂದುವರೆದ ಗುಂಪುಗಳು ಜನಿಸಿವೆ. ಒಟ್ಟಾರೆ ಫೈಲಾಜನಿಯ ಅಭ್ಯಾಸದಿಂದ ಜೀವಿಮೂಲಗಳನ್ನೂ ವಿಕಾಸದ ಹಂತಗಳನ್ನೂ ಅರಿಯುವುದು ಸಾಧ್ಯವಾಗಿದೆ. (ಟಿ.ವಿ.ಎಚ್.)

**ಫೈಲೇರಿಯ ಬೇನೆ:** ಫೈಲೇರಿಯ ಜಾತಿಗೆ ಸೇರಿದ ಫೈ. ಬ್ಯಾನ್‌ಕ್ರಾಫ್ಟಿ, ಫೈ.ಮಲೈ, ಫೈ.ಲೋವಲೋವ ಎಂಬ ದುಂಡು ಹುಳುಗಳ (ನೆಮಟೋಡ) ಸೋಂಕಿನಿಂದ ಉಂಟಾಗುವ ರೋಗಗಳು (ಫೈಲೇರಿಯಾಸಿಸ್). ನಾರುಹುಣ್ಣನ್ನು ಉಂಟುಮಾಡುವ ಗಿನಿವರ್ಮ್, ಸೊಂಟ, ಕಂಕುಳು, ಎದೆ ಮುಂತಾದ ಸ್ಥಳಗಳಲ್ಲಿ ದಪ್ಪ ಗೋಲಿ ಗಾತ್ರದ ನೀರುಗೆಡ್ಡೆಗಳನ್ನು (ಸಿಸ್ಟ್ಸ್) ಉಂಟುಮಾಡುವ ಅಪೋಸರ್ಕಸ್ ವಾಲ್‌ವ್ಯಲಸ್ ಅಲ್ಲದೆ ಅಕ್ಯಾಂಥೊಸಿಲೋನಿಮ ಪರ್‌ಸ್ಟನ್ಸ್, ಮ್ಯಾನ್ಸೊನೆಲ್ಲ ಒಸ್ಸಾರ್ಡಿ ಇತ್ಯಾದಿ ದುಂಡು ಹುಳುಗಳನ್ನೂ ಫೈಲೇರಿಯ ಜಾತಿಗೆ ಸೇರಿದವೆಂದು ಗಣಿಸುವುದಿದೆ. ಆದರೆ ಸಾಮಾನ್ಯವಾಗಿ ಫೈಲೇರಿಯ ಬೇನೆ ಎಂದರೆ ಮೇಲೆ ಹೇಳಿದ ಮೂರು ಬಗೆಯ ಫೈಲೇರಿಯ ಸೋಂಕಿನಿಂದ ಉಂಟಾದ ಬೇನೆ ಎಂದೇ ಅರ್ಥ. ಸೋಂಕು ಒಬ್ಬರಿಂದ ಒಬ್ಬರಿಗೆ ಸೊಳ್ಳೆ, ಕ್ರೈಸಾಪ್ಸ್ ಮುಂತಾದ ಕೀಟಗಳಿಂದ ಹರಡುತ್ತದೆ. ರೋಗಿಯನ್ನು ಕೀಟ ಕಚ್ಚಿ ರಕ್ತ ಹೀರಿದಾಗ ಆತನ ರಕ್ತದಲ್ಲಿರುವ ರೋಗಕ್ರಿಮಿಗಳ ಅರ್ಧ ಬೆಳೆದ ಮರಿಗಳು (ಮೈಕ್ರೊಫೈಲೇರಿಯಗಳು) ಅದರ ಜಠರವನ್ನು ಪ್ರವೇಶಿಸುತ್ತವೆ. ಇವು ಕೊಂಚಕಾಲ ಅಲ್ಲಿಯೇ ತಂಗಿ ಪೂರ್ಣವಾಗಿ ಬೆಳೆದ ಮರಿಗಳಾಗಿ ಕೀಟದ ಬಾಯಿಯ ಲಾಲಾಗ್ರಂಥಿಗಳನ್ನು ಸೇರುತ್ತವೆ. ಕೀಟ ಇನ್ನೊಮ್ಮೆ ರಕ್ತ ಹೀರಲು ಈ ವ್ಯಕ್ತಿಯನ್ನು ಕಡಿದಾಗ ಪೂರ್ತಿ ಬೆಳೆದ ಮರಿಕ್ರಿಮಿಗಳು ಈತನ ದೇಹ ಹೊಕ್ಕು ಕ್ರಮಿಸುತ್ತ ತಮ್ಮ ನೆಲೆಗೆ ಬಂದು ಸೇರಿ ದೊಡ್ಡ ಹೆಣ್ಣು ಹಾಗೂ ಗಂಡು ಹುಳುಗಳಾಗುತ್ತವೆ. ಇವುಗಳ ಸಂತಾನೋತ್ಪತ್ತಿಯ ಫಲವಾಗಿ ಮರಿಗಳು ಅಸಂಖ್ಯಾತವಾಗಿ ಹುಟ್ಟಿ ಅರ್ಧ ಮಾತ್ರ ಬೆಳೆದು ವ್ಯಕ್ತಿಗೆ ರೋಗಕಾರಕಗಳಾಗಿ ಪರಿಣಮಿಸುತ್ತವೆ ಮತ್ತು ಆ ವ್ಯಕ್ತಿಯ ರಕ್ತದಲ್ಲೂ ಇರುತ್ತವೆ.

ಫೈಲೇರಿಯ ಬೇನೆಯನ್ನು ಬಲು ಹಿಂದಿನ ಕಾಲದಿಂದಲೂ ಗುರುತಿಸಲಾಗಿದೆ. ಪ್ರಾಚೀನ ಭಾರತದ ವೈದ್ಯರೂ ಪ್ರಾಚೀನ ಗ್ರೀಕ್ ವೈದ್ಯರೂ ಇದನ್ನು ಗುರುತಿಸಿದ್ದರೆಂದು ತಿಳಿದುಬಂದಿದೆ. ಆದರೆ ಇದರ ಕಾರಣ ವೈಜ್ಞಾನಿಕವಾಗಿ ತಿಳಿದುಬಂದದ್ದು ಈಚೆಗೆ. ೧೭೦೯ ರಲ್ಲಿ ಕ್ಲಾರ್ಕ್ ಎಂಬ ವೈದ್ಯ ಈ ಬೇನೆಯನ್ನು ಕೊಚ್ಚಿ ಪ್ರಾಂತ್ಯದಲ್ಲಿ ಗುರುತಿಸಿ ಅದಕ್ಕೆ ಕೊಚ್ಚಿಕಾಲು ಎಂದು ಹೆಸರಿಟ್ಟಿದ್ದ. ಬ್ರೆಜ಼ಿಲಿನಲ್ಲಿ ಈ ಬೇನೆಯಿಂದ ನರಳುತ್ತಿದ್ದವರ ಮೂತ್ರದಲ್ಲಿ ಅತಿಸೂಕ್ಷ್ಮ ಕ್ರಿಮಿಗಳಿದ್ದುದನ್ನು ವುಚೆರರ್ ಎಂಬ ವೈದ್ಯ ತೋರಿಸಿದ (೧೮೬೬). ಇವೇ ಸೂಕ್ಷ್ಮಕ್ರಿಮಿಗಳು ಭಾರತದಲ್ಲಿಯ ರೋಗಿಗಳ ರಕ್ತದಲ್ಲಿಯೂ ಇದ್ದುದನ್ನು ಲೆವಿಸ್ ಪತ್ತೆಹಚ್ಚಿದ (೧೮೭೨). ನಾಲ್ಕು ವರ್ಷಗಳ ತರುವಾಯ ಆಸ್ಟ್ರೇಲಿಯದ ಬ್ರಿಸ್‌ಬೇನಿನಲ್ಲಿ ಬ್ಯಾನ್‌ಕ್ರಾಫ್ಟ್ ಎಂಬ ವೈದ್ಯನ ವ್ಯಾಸಂಗ ಫೈಲೇರಿಯ ಬೇನೆಯಿಂದ ನರಳುವವರಲ್ಲಿ ದೊಡ್ಡ ಹೆಣ್ಣು ದುಂಡು ಹುಳು ಇರುವುದನ್ನು ತೋರಿಸಿಕೊಟ್ಟಿತು. ಈ ಸೂಕ್ಷ್ಮಕ್ರಿಮಿಗಳು ರೋಗಿಯ ರಕ್ತದಲ್ಲಿ ರಾತ್ರಿಕಾಲ ಮಾತ್ರ ಕಾಣಿಸಿಕೊಳ್ಳುತ್ತವೆಂದೂ ಹಗಲು ಇವು ಫುಪ್ಫುಸ ಮುಂತಾದ ದೇಹದ ಒಳಅಂಗಗಳಲ್ಲಿ ಅಡಗಿರುತ್ತವೆಂದೂ ಮ್ಯಾನ್ಸನ್ ೧೮೭೮ರಲ್ಲಿ ವಿಶದಪಡಿಸಿದ. ಭಾರತದ ಕೆಲವು ಫೈಲೇರಿಯ ರೋಗಿಗಳಲ್ಲಿ ಬೆಳೆದು ಬಲಿತ ಫೈಲೇರಿಯ ಮಲೈ ಕ್ರಿಮಿ ಇರುವುದನ್ನು ಎಸ್. ಎಸ್. ರಾವ್ ಮತ್ತು ಮೇಪಲ್‌ಸ್ಟೋನ್ ಎಂಬವರು ತೋರಿಸಿದರು. ಫೈ. ಲೋವಲೋವದಲ್ಲಿ ಅರ್ಧ ಬೆಳೆದ ಮರಿಗಳು ಹಗಲು ರಕ್ತದಲ್ಲಿದ್ದು ರಾತ್ರಿ ಹೊತ್ತು ಒಳ ಅಂಗಗಳಲ್ಲಿ ಅಡಗಿರುತ್ತವೆ.

ಫೈ. ಬ್ಯಾನ್‌ಕ್ರಾಫ್ಟಿಯ (ವುಚೆರೆರಿಯಾ ಬ್ಯಾನ್‌ಕ್ರಾಫ್ಟಿ ಇದರ ಪರ್ಯಾಯ ನಾಮ) ಸೋಂಕು ಮುಖ್ಯವಾಗಿ ಪ್ರಪಂಚದ ಉಷ್ಣವಲಯದಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ.

ಕ್ಯೂಲೆಕ್ಸ್ ಫ್ಯಾಟಿಗಾನ್ಸ್ ಮತ್ತು ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಗಳು ಇದನ್ನು ಹರಡುತ್ತವೆ. ಭಾರತದಲ್ಲಿ ಈ ಸೋಂಕು ಹೊಳೆ ತಡಿಯಿಂದ ಜೌಗು ಪ್ರದೇಶಗಳಲ್ಲಿ ಮತ್ತು ಸಮುದ್ರ ತೀರಪ್ರದೇಶಗಳಲ್ಲಿ–ಮುಖ್ಯವಾಗಿ ಪಶ್ಚಿಮತೀರದ ದಕ್ಷಿಣಭಾಗ ಹಾಗೂ ಗಂಗಾನದಿಯ ಅಳಿವೆ ಪ್ರದೇಶಗಳಲ್ಲಿ ಕಂಡುಬರುತ್ತದೆ. ಫೈ. ಮಲ್ಯೆ ಸೋಂಕು ಮುಖ್ಯವಾಗಿ ಇಂಡಿಯಾ ಪರ್ಯಾಯ ದ್ವೀಪ, ಚೀನ ಮತ್ತು ಮಲೇಷ್ಯಗಳಲ್ಲಿ ಕಂಡುಬರುತ್ತದೆ. ಇದನ್ನು ಕೆಲವು ಜಾತಿಯ ಅನಾಫಿಲೀಸ್ ಸೊಳ್ಳೆಗಳು ಹರಡುತ್ತವೆ. ಫೈ. ಲೋವಲೋವದ ಸೋಂಕು ಪ್ರಮುಖವಾಗಿ ಪಶ್ಚಿಮ ಆಫ್ರಿಕದಲ್ಲಿ ಕಂಡುಬರುತ್ತದೆ. ಇದನ್ನು ಕ್ರೈಸಾಪ್ಸ್ ಜಾತಿಗೆ ಸೇರಿದ ಕೀಟಗಳು ಹರಡುತ್ತವೆ. ಪ್ರಾಯಕ್ಕೆ ಬಂದ ಫೈಲೇರಿಯ ಹುಳುಗಳಲ್ಲಿ ಹೆಣ್ಣೇ ದೊಡ್ಡದು. ಹೆಣ್ಣಿಗಿಂತಲೂ ಗಂಡು ಬಲು ಚಿಕ್ಕದಾಗಿದ್ದು ಸಾಮಾನ್ಯವಾಗಿ ಹೆಣ್ಣಿನ ದೇಹಕ್ಕೆ ತೊಡರಿಕೊಂಡಿರುವಂತೆ ಸುತ್ತಿಕೊಂಡಿರುತ್ತದೆ. ಫೈ. ಬ್ಯಾನ್‌ಕ್ರಾಫ್ಟಿ ಹೆಣ್ಣು ಹುಳು ೫–೧೦ ಸೆಂಮೀ ಉದ್ದವಾದ ಟ್ವೈನ್ ದಾರದಂತೆ ಇರುತ್ತದೆ. ಇದು ಐದಾರು ವರ್ಷ ಪರ್ಯಂತ ಸುಮಾರು ೧ ಮಿಮೀ ನಷ್ಟು ಉದ್ದವಿರುವ ಅತಿಸೂಕ್ಷ್ಮ ಮರಿಗಳನ್ನು ಅಸಂಖ್ಯಾತವಾಗಿ ಹಾಕುತ್ತಲೇ ಇರುತ್ತದೆ. ರೋಗಿಯ ರಕ್ತದಲ್ಲಿ ರಾತ್ರಿ ಹೊತ್ತು ಕಂಡುಬರುವ ಸೊಳ್ಳೆ ರೋಗಿಯ ರಕ್ತಹೀರಿದಾಗ ಅದರ ದೇಹವನ್ನು ಹೊಗುವ ಈ ಮರಿಗಳೇ. ಸೊಳ್ಳೆಯ ದೇಹದಲ್ಲಿ ಇವು ಸುಮಾರು ಎರಡು ವಾರ ಬೆಳೆದು ಅದರ ಲಾಲಾಗ್ರಂಥಿ, ಬಾಯಿಗಳನ್ನು ಸೇರಿ ಪುನಃ ಮಾನವನ ದೇಹವನ್ನು ಪ್ರವೇಶಿಸಲು ಸಿದ್ಧವಾಗುತ್ತವೆ. ವ್ಯಕ್ತಿಯನ್ನು ಸೊಳ್ಳೆ ಕಚ್ಚಿದಾಗ ಮರಿಗಳು ಅವನ ದುಗ್ಧರಸನಾಳಗಳನ್ನು ಸೇರಿ ಅವುಗಳ ಮೂಲಕ ದುಗ್ಧರಸ ಗ್ರಂಥಿಗಳಲ್ಲಿ ತಂಗಿ, ಬೆಳೆದು ಪ್ರಾಯದ ಗಂಡು ಮತ್ತು ಹೆಣ್ಣು ಹುಳುಗಳಾಗುತ್ತವೆ. ಹೀಗೆ ಬೆಳೆದು ಪ್ರಾಯಕ್ಕೆ ಬರಲು ಸುಮಾರು ಒಂದು, ಒಂದೂವರೆ ವರ್ಷಗಳಾಗುತ್ತವೆ. ಅನಂತರ ಹೆಣ್ಣು ಸಣ್ಣ ಮರಿಗಳನ್ನು ಹಾಕುವುದಕ್ಕೆ ಪ್ರಾರಂಭಿಸುತ್ತದೆ. ಇವು ದುಗ್ಧರಸವಾಹಿನಿಯ ಮೂಲಕವೇ ಒಯ್ಯಲ್ಪಡುತ್ತ ರಕ್ತವನ್ನು ಪ್ರವೇಶಿಸುತ್ತವೆ. ಸೋಂಕು ಉಂಟಾದ ಮೇಲೆ ಈ ಮರಿಗಳು ಹುಟ್ಟುವವತನಕ ವ್ಯಕ್ತಿಗೆ ಯಾವ ತೊಂದರೆಯೂ ಇರುವುದಿಲ್ಲ. ಮರಿಗಳು ಹುಟ್ಟಿ ರಕ್ತನಾಳಗಳಲ್ಲಿ ಮತ್ತು ದುಗ್ಧರಸನಾಳಗಳಲ್ಲಿ ಶೇಖರವಾಗುವುದಕ್ಕೆ ಪ್ರಾರಂಭಿಸಿದ ಬಳಿಕ ತೊಂದರೆಗಳು ಉದ್ಭವಿಸುತ್ತವೆ. ಇವು ಅತಿ ಬೆಳೆದ ಹುಳುಗಳಿಂದ ಉತ್ಪನ್ನವಾದ ವಿಷವಸ್ತುಗಳಿಂದ ಜನಿಸಿ ಮೊದಮೊದಲು ದುಗ್ಧರಸನಾಳಗಳಲ್ಲಿಯೂ ಗ್ರಂಥಿಗಳಲ್ಲಿಯೂ ಉರಿಯೂತ ಪ್ರಾರಂಭವಾಗುತ್ತದೆ. ತತ್ಫಲವಾಗಿ ಕೈಕಾಲುಗಳ ಚರ್ಮದ ಮೇಲೆ ಕೆಂಪಾದ ಗೆರೆಗಳು (ಲಿಂಫಾಂಜೈಟಿಸ್) ಮೂಡುತ್ತವೆ. ಈ ನಾಳಗಳು ಸಂಕುಚಿಸುವುದರಿಂದ ದುಗ್ಧರಸ ಹರಿಯುವುದಕ್ಕೆ ಅಡಚಣೆ ಉಂಟಾಗಿ ಕೈಕಾಲುಗಳು ಊದಿಕೊಳ್ಳುತ್ತವೆ. ಊತ ಹೊರಜನನಾಂಗಗಳಲ್ಲಿಯೂ ಕಂಡುಬರಬಹುದು. ವೃಷಣ, ಸ್ತನಗಳು, ಅಂಡಾಶಯಗಳಲ್ಲೂ ಉರಿಯೂತ ಸಾಮಾನ್ಯ. ಈ ಕಾಲದಲ್ಲಿ ವೃಷಣಕೋಶದಲ್ಲಿ ನೀರು ತುಂಬಿಕೊಳ್ಳಬಹುದು (ಹೈಡ್ರೊಸೀಲ್). ಮೂತ್ರದಲ್ಲಿ ಮೇದಸ್ಸಿನ ಅಂಶ ಕಂಡುಬರಬಹುದು (ಕೈಲ್ಯೂರಿಯ). ಇದೇ ಕಾಲದಲ್ಲಿ ತೀವ್ರಜ್ವರ ಬಂದು ಮೂರು ನಾಲ್ಕು ದಿವಸಗಳಿದ್ದು ಇಳಿಯಬಹುದು. ಇದಕ್ಕೆ ಫೈಲೇರಿಯ ಜ್ವರ ಎಂದೇ ಹೆಸರು. ಅನೇಕ ಬಾರಿ ಹೀಗೆ ಜ್ವರ, ಊತಗಳು ಉಂಟಾಗುವುದು ಸಾಮಾನ್ಯ. ಕೊನೆಗೆ ಜ್ವರ ನಿಂತು ಹೋಗಿ ಊತ ಮಾತ್ರ ಉಳಿದುಕೊಳ್ಳುತ್ತದೆ. ಬರಬರುತ್ತ ಊತ ಹೆಚ್ಚಾಗುತ್ತದೆ. ಅಲ್ಲದೆ ಊದಿದ ಭಾಗ ಮರದ ಕೊರಡಿನಂತೆ ಗಡುಸಾಗುತ್ತದೆ. ಆ ಭಾಗದ ಚರ್ಮವೂ ದಪ್ಪವಾಗಿ, ಒರಟಾಗಿ ಆನೆ ಚರ್ಮದಂತಾಗುತ್ತದೆ. ಕಾಲಿನಲ್ಲಿ ಈ ರೀತಿ ಆಗುವುದು ಅತಿ ಸಾಮಾನ್ಯವಾದ್ದರಿಂದ ಈ ಬೇನೆಗೆ ಆನೆಕಾಲು ರೋಗವೆಂಬ ಹೆಸರು ಬಂದಿದೆ. ಹಿಂದಿನ ಆಯುರ್ವೇದಾಚಾರ್ಯರು ಶಿಲಾಪಾದವೆಂದು ವರ್ಣಿಸಿರುವ ಸ್ಥಿತಿಯೂ ಇದೇ ಇರಬೇಕು. ಫೈ. ಲೋವಲೋವದ ಸೋಂಕಿನಲ್ಲಿ ಇಂಥ ತೊಂದರೆಗಳು ಉದ್ಭವಿಸುವುದು ಸಾಮಾನ್ಯವಾಗಿ ಅಪರೂಪ. ಆದರೆ ಪ್ರಾಯದ ಹುಳುಗಳೇ ದುಗ್ಧರಸನಾಳ, ರಕ್ತನಾಳಗಳಲ್ಲಿ ಸಂಚರಿಸುತ್ತ ಆ ಪ್ರಾಂತ್ಯದಲ್ಲೆಲ್ಲ ಒಂದು ರೀತಿಯ ನವೆಯನ್ನು ಉಂಟುಮಾಡಬಹುದು. ಕಣ್ಣಿನ ಪಾರದರ್ಶಕ ಪೊರೆಯ ಹಿಂದೆಯೂ ಕಾಣಿಸಿಕೊಳ್ಳುವುದಿದೆ. ಅಲ್ಲದೆ ಚರ್ಮದ ಅಡಿ ಅಲ್ಲಲ್ಲಿ ನೆಲಸಿ ನೋವಿಲ್ಲದ ಊತ, ಗಂಟುಗಳನ್ನು ಉಂಟುಮಾಡಬಹುದು. ಇವಕ್ಕೆ ಕೆಲಬಾರ್ ಸ್ವೆಲಿಂಗ್ ಎಂದು ಹೆಸರು.

ಫೈಲೇರಿಯ ಬೇನೆಯನ್ನು ಮೇಲೆ ವಿವರಿಸಿರುವ ಲಕ್ಷಣಗಳಿಂದಲೂ ರಕ್ತಪರೀಕ್ಷೆಯಿಂದಲೂ ಗುರುತಿಸಬಹುದು. ಈ ಬೇನೆಯ ತಡೆ ಹಾಗೂ ಚಿಕಿತ್ಸೆಗಾಗಿ ವಿವಿಧ ಕ್ರಮಗಳನ್ನು ಅನುಸರಿಸುವುದು ಇದೆ. ಫೈಲೇರಿಯ ವಾಹಕ ಕೀಟಗಳನ್ನು ಬೇರೆ ಬೇರೆ ಕ್ರಮಗಳಿಂದ ನಾಶಪಡಿಸುವುದು, ಸೊಳ್ಳೆ ಪರದೆಯನ್ನು ಬಳಸುತ್ತ ಸೊಳ್ಳೆ ಕಡಿಯದಂತೆ ನೋಡಿಕೊಳ್ಳುವುದು, ಡೈಈಥೈಲ್ ಕಾರ್ಬಜೀನ್ ಮುಂತಾದ ಔಷಧಿಗಳನ್ನು ಕೊಟ್ಟು ಫೈಲೇರಿಯ ರೋಗಿಯನ್ನು ಚಿಕಿತ್ಸಿಸುವುದು. ಈಚೆಗೆ ಐವರ್‌ಮೆಕ್ಟಿನ್ ಎಂಬ ಔಷಧಿಯನ್ನು ಕೂಡ ಚಿಕಿತ್ಸೆಯಲ್ಲಿ ಬಳಸಲಾಗುತ್ತಿದೆ. (ಎನ್.ಬಿ.ಜಿ.)

**ಫೈಸೇಲಿಯ:** ಸೀಲೆಂಟರೇಟ ವಂಶದ ಸೈಫನಾಫೊರ ಗಣದ ಸದಸ್ಯ. ಇದರ ವೈಜ್ಞಾನಿಕ ಹೆಸರು ಫೈಸೇಲಿಯ ಫೈಸೇಲಿಸ್ ಅಥವಾ ಫೈಸೇಲಿಯ ಪೆಲ್ಯಾಜಿಕ. ಇದನ್ನು ಸಾಮಾನ್ಯವಾಗಿ ಪೋರ್ಚುಗೀಸ್ ಮ್ಯಾನ್ ಆಫ್ ವಾರ್ ಎಂದು ಕರೆಯುವರು. ಇದು ಪ್ರಪಂಚದ ಎಲ್ಲ ಸಾಗರಗಳಲ್ಲಿದೆ.

ಫೈಸೇಲಿಯ ನಿವಹಯುಕ್ತ ಅಂಬಲಿಮೀನು (ಜೆಲಿಫಿಶ್). ನೋಡಲು ಏಕಜೀವಿಯಂತೆ ಕಾಣುತ್ತದಾದರೂ ಇದು ವಾಸ್ತವವಾಗಿ ಅನೇಕ ಬಿಡಿ ಪಾಲಿಪ್ ಜೀವಿಗಳಿಂದ ರಚಿತವಾದ ನಿವಹ (ಕಾಲನಿ). ಇದರಲ್ಲಿ ಸು. ೩೦ ಸೆಂಮೀ ಉದ್ದ ಬೆಳೆಯುವ ಮೂಲ ಪಾಲಿಪ್ ಇದೆ. ಇದರ ತಳಭಾಗದಲ್ಲಿ, ಉದ್ದಕ್ಕೂ ಚಾಚಿದಂತೆ ಪಾಲಿಪ್ ಗುಚ್ಛಗಳ ಎರಡು ಪ್ರಧಾನ ಸಾಲುಗಳಿವೆ. ಇವುಗಳಿಂದ ಕೆಳಗೆ ತೂಗುಬಿದ್ದಿರುವಂತೆ ಜೋಡಣೆಗೊಂಡಿರುವ ದ್ವಿತೀಯಕ ಹಾಗೂ ತೃತೀಯಕ ಪಾಲಿಪ್ ಗುಚ್ಛಗಳಿವೆ. ಈ ಪಾಲಿಪ್ ಗುಚ್ಛಗಳಲ್ಲಿ ಕೆಲವು ಪಾಲಿಪ್‌ಗಳು ಆಹಾರ ಸೇವನೆಗೂ (ಗ್ಯಾಸ್ಟ್ರೊಜೂಆಯಿಡ್ಸ್), ಇನ್ನು ಕೆಲವು




ಫೈಸೇಲಿಯ

ಪ್ರಜನನಕ್ರಿಯೆಗೂ (ಗೋನೊಜೂಆಯಿಡ್ಸ್) ಮತ್ತೆ ಕೆಲವು ಆಹಾರವನ್ನು ಸೆರೆಹಿಡಿಯುವುದಕ್ಕೂ (ಡ್ಯಾಕ್ಟೈಲೊಜೂಆಯಿಡ್ಸ್) ಮೀಸಲಾಗಿವೆ. ಮೂಲ ಪಾಲಿಪ್ಪಿನ ಮೇಲ್ಭಾಗದಲ್ಲಿ ಅದರ ಉದ್ದಕ್ಕೂ ಹರಡಿರುವಂತೆ ಒಂದೇ ಒಂದು ಅನಿಲ ಸಂಚಿಯುಂಟು (ನ್ಯೂಮ್ಯಾಟೊಫೋರ್). ಇದು ೨೦–೩೦ ಸೆಂಮೀ ಉದ್ದ, ಸು. ೧೦ ಸೆಂಮೀ ಅಗಲ ಇರುವ ಚೀಲದಂತಿದೆ. ಇದರ ತಳದಲ್ಲಿರುವ ಒಂದು ಗ್ರಂಥಿಯಿಂದ ನೈಟ್ರೊಜನ್, ಆಕ್ಸಿಜನ್ ಹಾಗೂ ಆರ್ಗಾನ್ ಅನಿಲಗಳ ಮಿಶ್ರಣ ಉತ್ಪತ್ತಿಯಾಗಿ ಚೀಲ ತುಂಬಿಕೊಂಡು ಪ್ರಾಣಿ ನೀರಿನ ಮೇಲೆ ತೇಲಲು ಸಹಾಯಕವಾಗಿದೆ.

ಡ್ಯಾಕ್ಟೈಲೊಜೂಆಯಿಡ್ಡುಗಳು, ಸ್ಪರ್ಶಕಾಂಗಗಳಾಗಿ ಕೆಲಸಮಾಡುವುವು. ಇವು ತುಂಬ ಉದ್ದವಾದ ಚಾಟಿಯಂತಿವೆ. ಇವುಗಳ ಉದ್ದ ಸು. ೫೦ ಮೀ. ಇವುಗಳ ಮೇಲೆ ಅಲ್ಲಲ್ಲಿ ನೆಮಾಟೊಸಿಸ್ಟುಗಳೆಂಬ ಮುಳ್ಳುಗಳಿವೆ.

ಇವು ವಿಷಪೂರಿತ ಜೀವಿಗಳು. ಇವುಗಳ ಕುಟುಕಿನಿಂದ ಮಾನವನಲ್ಲಿ ತೀವ್ರತರವಾದ ಗಂದೆಗಳೆದ್ದು ಇಡೀ ದೇಹ ಒಗ್ಗದಿಕೆಗೆ ಒಳಗಾಗುವುದು. ಕೆಲವೊಮ್ಮೆ ಸಾವು ಸಂಭವಿಸುವುದು. ಇವು ಸಾಗರಗಳ ಮೀನುಗಳನ್ನು ತಿಂದು ಜೀವಿಸುತ್ತದೆ. ***

**ಫೊರೋನಿಡ:** ಅಕಶೇರುಕಗಳ ಗುಂಪಿನಲ್ಲಿರುವ ಉಪ ವಂಶ. ಇದರಲ್ಲಿ ೨ ಜಾತಿ ಮತ್ತು ೧೫ ಪ್ರಭೇದಗಳಿವೆ. ಎಲ್ಲವೂ ಸೂಕ್ಷ್ಮ ಗಾತ್ರದ ಸಾಗರವಾಸಿ ಹುಳುಗಳು. ಸ್ಥಾವರ ಜೀವನ ನಡೆಸುವ ಇವು, ಸಮುದ್ರಗಳ ಆಳವಿಲ್ಲದ ಮಣ್ಣಿನಲ್ಲಿ ಪೊರೆಯಂಥ ಅಥವ ಗಟ್ಟಿಯಾದ ಕೊಳವೆಗಳನ್ನು ರಚಿಸಿಕೊಂಡು ಜೀವಿಸುವುವು. ಪ್ರೌಢಜೀವಿಗಳು ದ್ವಿಲಿಂಗಿಗಳು. ಇವುಗಳ ದೇಹ ವಲಯಗಳಾಗಿ ವಿಭಾಗಗೊಂಡಿಲ್ಲ. ಡಿಂಬಗಳು

ಮುಕ್ತವಾಗಿ ಈಜುತ್ತಾ, ನೀರಿನಲ್ಲಿ ಇರುವುವು. ಇವಕ್ಕೆ ಆಕ್ಟಿನೋಟ್ರೋಕ ಎಂದು ಹೆಸರು. ಉದಾ: ಫೊರೋನಿಸ್ ಮತ್ತು ಫೊರೋನಾಪ್ಸಿಸ್‌ಗಳು. ಫೊರೋನಿಸ್ ಗಡುಸಾದ ಅಥವಾ ಪೊರೆಯಂತಿರುವ ಕೊಳವೆಗಳಲ್ಲಿ ಜೀವಿಸುತ್ತದೆ. ಇದರ ದೇಹ ಉದ್ದವಾಗಿ ಖಂಡರಹಿತ ಕೊಳವೆಯಂತಿದೆ. ದೇಹದ ಮುಂದಿನ ತುದಿಯಲ್ಲಿ ಶಿಲಿಕೆಗಳಿಂದ ಕೂಡಿದ ಕೋಡುಗಳಿವೆ. ಇವು ಒಳ ಮತ್ತು ಹೊರ ಸಾಲುಗಳಲ್ಲಿ ಕುದುರೆ ಲಾಳದ ಆಕಾರದಲ್ಲಿ ಜೋಡಣೆಗೊಂಡಿವೆ. ಈ ಗುಂಪಿಗೆ ಲೋಫೊಫೋರ್ ಎಂದು ಹೆಸರು. ಕೋಡುಗಳ ಒಳ ಮತ್ತು ಹೊರಸಾಲಿನ ಮಧ್ಯೆ ಬಾಯಿ ಇದೆ. ಬಾಯಿ ಸಮೀಪ ಗುದದ್ವಾರವಿದೆ. ಬಾಯಿಯ ಮೇಲೆ ಮುಚ್ಚಳದಂತೆ ಮುಂಚಾಚಿರುವ ಎಪಿಸ್ಟೋಮ್ ಸ್ನಾಯುಭಾಗ ಇದೆ. ದೇಹದ ಹೊರಭಾಗದಲ್ಲಿ ತೆಳುವಾದ ಹೊರ ಪದರವಿದೆ. ಇದರ ಕೆಳಗೆ ತಳಪೊರೆ, ಒಳಭಾಗದಲ್ಲಿ ವರ್ತುಲಾಕಾರದ ಸ್ನಾಯುತಂತುಗಳು, ಇವೆ. ಸ್ನಾಯುಗಳ ಒಳಮುಖದಲ್ಲಿ ಸೀಲೋಮಿಕ್ ಅನುಲೇಪಕ ಕಣಗಳು ಹರಡಿವೆ.




ಫೊರೊನಿಸ್

ದೇಹದೊಳಗಿನ ದೇಹಾಂತರಾವಕಾಶವನ್ನು (ಸೀಲೋಮ್) ಅಡ್ಡ ಪೊರೆ, ಮುಂಭಾಗದ ಸಣ್ಣ ಅವಕಾಶ ಮತ್ತು ಹಿಂಭಾಗದ ದೊಡ್ಡ ಅವಕಾಶ ಭಾಗಗಳಾಗಿ ವಿಭಾಗಿಸುತ್ತದೆ. ಹಿಂಭಾಗದ ಅವಕಾಶದಲ್ಲಿ ೩ ವಿಭಾಗಗಳಿವೆ. ಜೀರ್ಣನಾಳ U–ಆಕಾರದ್ದು. ಅನ್ನನಾಳ, ಜಠರ, ಕರುಳು ಮತ್ತು ಗುದಭಾಗಗಳನ್ನು ಇದು ಒಳಗೊಂಡಿದೆ. ನಿರ್ದಿಷ್ಟ ಶ್ವಾಸಾಂಗಗಳು ಇಲ್ಲ. ಎರಡು ನೆಫ್ರೀಡಿಯಲ್ ನಾಳಗಳು ಶುದ್ಧೀಕರಣಾಂಗಗಳಂತೆ ಕೆಲಸ ಮಾಡುತ್ತವೆ. ಇವು ಗುದದ ಬಳಿ ಹೊರ ತೆರೆಯುವುವು.

ಬಾಯಿಯ ಕೆಳಭಾಗದಲ್ಲಿ ಉಂಗುರಾಕಾರದ ನರತಂತುಗಳಿವೆ. ಇವುಗಳಿಂದ ಕೋಡು, ಬಾಯಿ, ಎಪಿಸ್ಟೋಮ್ ಮತ್ತು ಇತರ ರಚನೆಗಳಿಗೆ ನರತಂತುಗಳು ಹರಡುವುವು. ದೇಹದ ಹಿಂಭಾಗದಲ್ಲಿ ೨ ನೀಳ ನರತಂತುಗಳಿವೆ. ಜ್ಞಾನೇಂದ್ರೀಯಗಳು ಬಹಳ ಸರಳ ರಚನೆಯವು.

ಫೊರೋನಿಡಿಯದ ಸದಸ್ಯರು ದ್ವಿಲಿಂಗಿಗಳು. ದೇಹಾಂತರಾವಕಾಶದ ಹಿಂದಿನ ಕೋಣೆಯಲ್ಲಿರುವ ನೀಳ ರಕ್ತನಾಳಗಳ ಮೇಲೆ ಪ್ರಜನನಾಂಗಗಳು ಉತ್ಪತ್ತಿಯಾಗುವುವು. ನೆಫ್ರೀಡಿಯಗಳ ಮೂಲಕ ಪ್ರಜನನ ಜೀವಕಣಗಳು ಹೊರ ಬರುತ್ತವೆ.

***

**ಫೊರ್ಯಾಮಿನಿಫೆರ:** ಪ್ರೋಟೋಜೋವ ವಂಶದ ಸಾರ್ಕೊಡೈನ ವರ್ಗದ ಒಂದು ಉಪವರ್ಗ. ಈ ಜೀವಿಗಳು ಸಮುದ್ರ ವಾಸಿಗಳು. ಇವು ಸೂಕ್ಷ್ಮಗಾತ್ರದವು. ಕೆಲವು ಜಾತಿಯ ಪ್ರಾಣಿಗಳು ಸಿಹಿನೀರಿನಲ್ಲಿ ವಾಸಿಸುತ್ತವೆ. ಆಳವಿಲ್ಲದ ನೀರಿರುವ ಜಲಾಶಯಗಳ ತಳದಲ್ಲಿ ಇವು ಹೇರಳವಾಗಿರುತ್ತವೆ. ಕೆಲವು ಸಿಹಿನೀರಿನಲ್ಲಿ ವಾಸಿಸುತ್ತವೆ. ಕೆಲವು ಆಳವಿಲ್ಲದ ನೀರಿನಲ್ಲಿ ತೇಲುಜೀವನ ನಡೆಸುವುವು. ಇವುಗಳ ದೇಹದ ಸುತ್ತ ಸುಣ್ಣದಿಂದ ರಚಿತವಾದ ಕವಚದ ರಕ್ಷಣೆ ಇದೆ. ಇವು ಭಾರಿ ಸಂಖ್ಯೆಯ ಗುಂಪುಗಳಲ್ಲಿ ವಾಸಿಸುವುವು. ಮಹಾಸಾಗರದ ತಳದಲ್ಲಿ ವಿಪುಲವಾಗಿವೆ.

ಒಂದು ಗ್ರಾಂ ತೂಕದ ಉಸುಬಿನಲ್ಲಿ ೫೦,೦೦೦ ಕ್ಕೂ ಹೆಚ್ಚು ಜೀವಿಗಳಿರುತ್ತವೆ. ಇವುಗಳ ಪೂರ್ವಜರು ಪ್ರಥಮವಾಗಿ ಕಾಣಿಸಿಕೊಂಡಿದ್ದು ಕೇಂಬ್ರಿಯನ್ ಯುಗದಲ್ಲಿ. ಆದರೆ, ಈ ಜೀವಿಗಳು ಈಗಲು ಬದುಕಿ ಉಳಿದಿವೆ. ಯುರೋಪ್, ಏಷ್ಯಾ ಹಾಗೂ ಉತ್ತರ ಆಫ್ರಿಕದಲ್ಲಿ ಕಂಡುಬರುವ ಸುಣ್ಣದ ಕಲ್ಲುಗಳ ರಾಶಿಗಳು ಇವುಗಳಿಂದಲೇ ನಿರ್ಮಾಣವಾಗಿವೆ. ಪೆಟ್ರೋಲಿಯಮಿನ ಪತ್ತೆಕಾರ್ಯದಲ್ಲಿ, ಬಂಡೆಗಲ್ಲುಗಳ ಪದರುಗಳನ್ನು ಪತ್ತೆ ಹಚ್ಚಲು, ಈ ಕವಚಗಳ ಫಾಸಿಲುಗಳು (ಪಳೆಯುಳಿಕೆಗಳು) ಬಹಳ ಮಹತ್ವದ ಪಾತ್ರ ವಹಿಸಿವೆ. ಡೈಆಟಮ್ ಮತ್ತು ಆಲ್ಗೆ ಗುಂಪುಗಳಿಗೆ ಸೇರಿದ ಸೂಕ್ಷ್ಮಗಾತ್ರದ ಸಸ್ಯಗಳೇ




ಪಾಲಿಸ್ಟೊಮೆಲ್ಲ

ಇವುಗಳ ಆಹಾರ. ಸಂಚರಿಸುವುದಕ್ಕಾಗಿ ದೇಹದ ಎಲ್ಲ ಕಡೆಗು ಮಿಥ್ಯಾಪಾದಗಳನ್ನು ಚಾಚುವುವು. (ಎಸ್.ಬಿ.ಎಮ್.)

**ಫ್ರಿಗೇಟ್:** ಪೆಲಿಕಾನಿಫಾರ್ಮಿಸ್ ಗಣದ ಫ್ರಿಗೇಟಿಡೆ ಕುಟುಂಬಕ್ಕೆ ಸೇರಿದ ಫ್ರಿಗೇಟ ಜಾತಿಯ ಹಕ್ಕಿ. ಫ್ರಿ.ಮ್ಯಾಗ್ನಿಫಿಸೆನ್ಸ್, ಫ್ರಿ.ಆಕ್ವಿಲ, ಫ್ರಿ.ಆಂಡ್ರ್ಯೂಸೈ, ಫ್ರಿ.ಏರಿಯಲ್ ಮತ್ತು ಫ್ರಿ.ಮೈನರ್ ಎಂಬ ಐದು ಪ್ರಭೇದಗಳುಂಟು. ಇವು ಮಧ್ಯಮ ಗಾತ್ರದ ಹಕ್ಕಿಗಳು. ಸರಾಸರಿ ಉದ್ದ 75–110 ಸೆಂಮೀ. ರೆಕ್ಕೆಯ ಹರವು 175–230 ಸೆಂಮೀ. ತೂಕ

ಫ್ರಿಗೇಟ್ ಪಕ್ಷಿ

ಸುಮಾರು 1.5 ಕಿಗ್ರಾಂ. ಕೊಕ್ಕು ಉದ್ದವಾಗಿದ್ದು ತುದಿಯಲ್ಲಿ ಕೊಕ್ಕೆಯಂತೆ ಬಾಗಿದೆ. ರೆಕ್ಕೆಗಳು ಕಿರಿಯಗಲದುವು. ತೋಕೆ ಕವಲೊಡೆದಿದ್ದು ಹಾರುವಾಗ ವಿಸ್ತೃತಗೊಳ್ಳುತ್ತದೆ. ಗಂಡುಗಳಿಗಿಂತ ಹೆಣ್ಣು ಹಕ್ಕಿಗಳು ದೊಡ್ಡ ಗಾತ್ರದುವು. ದೇಹದ ಬಣ್ಣ ಕಪ್ಪು. ಪ್ರಣಯಾಚರಣೆಯ ಕಾಲದಲ್ಲಿ ಗಂಡುಗಳ ಕತ್ತುಗಳ ಬಳಿ ಕೆಂಪುಬಣ್ಣದ ಹಾಗೂ ಗಾಳಿತುಂಬಿದ ಬಲೂನಿನಂತೆ ಉಬ್ಬಿಕೊಂಡಿರುವ ಚೀಲವೊಂದು ರೂಪುಗೊಳ್ಳುತ್ತದೆ. ಹೆಣ್ಣು ಹಕ್ಕಿಗಳನ್ನು ಆಕರ್ಷಿಸುವ ಮುಖ್ಯ ಸಾಧನ ಇದು. ಫ್ರಿಗೇಟ್ ಹಕ್ಕಿಗಳು ಸಾಗರ

ಜೀವನಕ್ಕೆ ಸೊಗಸಾಗಿ ಹೊಂದಿಕೊಂಡಿವೆ. ಸಾಧಾರಣವಾಗಿ ನೀರಿಗೆ ಇಳಿಯಲು ಹಿಂದೇಟು ಹಾಕುವುದಾದರು ಸಮುದ್ರದ ಮೇಲೆ ಅತ್ಯಂತ ಸರಾಗವಾಗಿ ಹಾರಾಡುತ್ತ ನೀರಿನಿಂದ ಮೇಲಕ್ಕೆ ನೆಗೆಯುವ ಹಾರುವ ಮೀನು ಇತ್ಯಾದಿ ಪ್ರಾಣಿಗಳನ್ನು ಹಿಡಿಯುತ್ತ ಜೀವನ ನಡೆಸುವುವು. ಅಂತೆಯೇ ಚಾಣಾಕ್ಷತನದಿಂದ ನೀರಿಗೆ ಸೋಕದಂತೆ, ನೀರಿನ ಪಾತಳಿಯ ಮೇಲೆಯೇ ಈಜುವ ಅಂಬಲಿ ಮೀನು, ಸ್ಕ್ವಿಡ್ಡುಗಳು, ನೀರಾಮೆ ಮತ್ತಿತರ ಜೀವಿಗಳನ್ನು ಹಿಡಿಯುವ ಸಾಮರ್ಥ್ಯವೂ ಇವಕ್ಕಿದೆ. ಜೊತೆಗೆ ಬೇರೆ ಕಡಲ ಹಕ್ಕಿಗಳಾದ ಬೂಬಿ, ಪೆಲಿಕನ್, ಕಾರ್ಮೊರಾಂಟ್, ಗಲ್ ಮುಂತಾದವುಗಳ ಗೂಡುಗಳನ್ನು ಕೊಳ್ಳೆ ಹೊಡೆಯುವುದೂ ಉಂಟು.

ಸಾಗರದ ದ್ವೀಪಗಳ ಮೇಲೆ, ಮರಗಿಡಗಳ ಮೇಲೆ ಕಡ್ಡಿಗಳ ಒರಟು ಗೂಡನ್ನು ರಚಿಸಿ ಮೊಟ್ಟೆಯಿಡುವುವು. ಒಂದು ಸಲಕ್ಕೆ ಒಂದೇ ಮೊಟ್ಟೆ. ಗಂಡು ಹೆಣ್ಣುಗಳೆರಡೂ ಸು. 6 ವಾರಗಳ ಕಾಲ ಕಾವು ಕೂತು ಮರಿಮಾಡುತ್ತವೆ. ಮರಿಯ ತಲೆ ಮೊದಲು ಬಿಳಿಯ ಬಣ್ಣದ್ದಾಗಿದ್ದು ಬರ ಬರುತ್ತ 2–3 ವರ್ಷಗಳ ತರುವಾಯ ಕಪ್ಪು ಬಣ್ಣವನ್ನು ತಳೆಯುತ್ತದೆ. ***

**ಫ್ಲೌಂಡರ್:** ಫ್ಲೂರೊನೆಕ್ಟಿಫಾರ್ಮಿಸ್ ಗಣದ ಸೆಟೊಡಾಯ್ಡೈ, ಫ್ಲೂರೊನೆಕ್ಟಾಯ್ಡೈ ಮತ್ತು ಸೋಲೈಯಾಯ್ಡೈ ಎಂಬ ಮೂರು ಅಧಿಗಣಗಳಿಗೆ ಸೇರಿದ ಹಲವಾರು ಬಗೆಯ ಸಾಗರವಾಸಿ ಮೀನುಗಳಿಗೆ ಅನ್ವಯವಾಗುವ ಸಾಮಾನ್ಯ ಹೆಸರು. ಇವೆಲ್ಲವೂ ಚಪ್ಪಟೆ ಮೀನುಗಳೆಂಬ ಹೆಸರಿನಿಂದಲೂ (ಫ್ಲ್ಯಾಟ್ ಫಿಷ್) ಪ್ರಸಿದ್ಧವಾಗಿವೆ. ಟರ್ಬಟ್, ಸೋಲ್, ಹ್ಯಾಲಿಬಟ್, ಬ್ರಿಲ್, ಟಾಪ್‍ನಾಟ್ ಮುಂತಾದವು ಕೆಲವು ಮುಖ್ಯ ಬಗೆಯ ಫ್ಲೌಂಡರುಗಳು.

ಎಲ್ಲ ಫ್ಲೌಂಡರುಗಳ ವಯಸ್ಕ ಜೀವಿಗಳೂ ಪಾರ್ಶ್ವೀಯವಾಗಿ ಚಪ್ಪಟೆಯಾಗಿವೆ. ಸದಾಕಾಲ ಸಮುದ್ರದ ತಳದ ಮಣ್ಣಿನ ಮಧ್ಯೆ ಹುದುಗಿದಂತೆ ಬಿದ್ದಿರುವುವು. ದೇಹ ಚಪ್ಪಟೆಯಾಗಿರುವುದರಿಂದ ಇವುಗಳ ಎರಡು ಕಣ್ಣುಗಳೂ (ಸಾಧಾರಣವಾಗಿ ತಲೆಯ ಆಚೀಚೆ ಇರಬೇಕಾದವು) ಮೇಲೆ ಕಾಣಿಸುವ ಪಾರ್ಶ್ವದ ಮೇಲೆಯೆ ಸ್ಥಿತವಾಗಿರುವುವು. ಆದರೆ ಲಾರ್ವಾವಸ್ಥೆಯಲ್ಲಿ ಇವು ಬೇರಾವುದೇ ಮೀನಿನ ಮರಿಗಳಂತೆ ದ್ವಿಪಾರ್ಶ್ವ ಸಮಮಿತಿಯನ್ನು ತೋರುತ್ತಿದ್ದು ಸಹಜವಾಗಿರುವುವು. ಆದರೆ ವಯಸ್ಸಿನಲ್ಲಿ ಬೆಳೆದಂತೆ ದೇಹದ ಒಳಗೆ ಹಾಗೂ ಹೊರಗೆ ಕೆಲವು ಬದಲಾವಣೆಗೆ ಒಳಗಾಗಿ ಇವು ಚಪ್ಪಟೆ ಮೀನುಗಳಾಗಿ ರೂಪುತಳೆಯುತ್ತವೆ.



ಭಾರತದಲ್ಲಿ ಸೆಟೋಡಸ್ ಎರುಮ್ಯೆ, ಸೂಡೊರಾಂಬಸ್, ಸೋಲಿಯ, ಸೈನೊಗ್ಲಾಸಸ್ ಮುಂತಾದ ಫ್ಲೌಂಡರುಗಳು ಕಾಣದೊರೆಯುತ್ತವೆ. ***

**ಫ಼ಾಸ್‍ಮಿಡ:** ಫ಼ಾಸ್‍ಮಿಡ ಗಣದಲ್ಲಿ ಕಡ್ಡಿಕೀಟ ಮತ್ತು ಎಲೆಕೀಟಗಳಿವೆ. ಆಕಾರದಲ್ಲಿ ಬಹಳ ವ್ಯತ್ಯಾಸವುಳ್ಳದ್ದಾಗಿವೆ. ಕೆಲವಕ್ಕೆ ರೆಕ್ಕೆಗಳೇ ಇರುವುದಿಲ್ಲ. ಸಾಮಾನ್ಯವಾಗಿ ಎಲೆಯಂತೆ ಅಗಲವಾಗಿಯೂ, ಕಡ್ಡಿಯಂತೆ ಉದ್ದವಾಗಿಯೂ ಇರುತ್ತವೆ. ಇವಕ್ಕೆ ಕತ್ತರಿಸಿ ಅಗಿಯುವ ದವಡೆಯುಳ್ಳ ಬಾಯಿ ಇದೆ. ಎದೆಯ ಮುಂದಿನ ಭಾಗ (ಪ್ರೊಥೋರಾಕ್ಸ್) ಕಿರಿದು. ಹಿಂದಿನ ಎರಡು ಭಾಗಗಳು ಅಗಲ (ಮಿಸೋ ಮತ್ತು ಮೆಟಾಥೋರಾಕ್ಸ್)ವಾಗಿವೆ. ಕಾಲುಗಳು ಉದ್ದವಾಗಿವೆ. ರೆಕ್ಕೆಗಳಿದ್ದರೆ ಮುಂದಿನದು ಚಿಕ್ಕದು. ಈ ಗುಂಪಿನ ಕೀಟಗಳು ಹೆಚ್ಚಾಗಿ ಉಷ್ಣವಲಯದಲ್ಲಿರುತ್ತವೆ. ಇವುಗಳ ಆಹಾರ ಬೇರೆ ಜಾತಿಯ ಕೀಟಗಳು. ಕೆಲವು ಆಗಾಗ ಮೈ ಬಣ್ಣವನ್ನು ಬದಲಿಸುತ್ತವೆ. ಕೆಲವಕ್ಕೆ ಕಾಲು ತುಂಡಾದರೆ ಪುನಃ ಬೆಳೆಯುವ ಶಕ್ತಿ ಇದೆ. ಇವು ಕೀಟ ಭಕ್ಷಕಗಳು. (ಜಿ.ಕೆ.ವಿ.)

# ಬ

**ಬಂಗಡೆ:** ಸ್ಕಾಂಬ್ರಿಡೆ ಕುಟುಂಬಕ್ಕೆ ಸೇರಿದ ಮೀನು (ಮ್ಯಾಕರೆಲ್). ಭಾರತದ ಮೀನುಗಾರಿಕೆ ಉದ್ಯಮದ ಮೂಲಾಧಾರ ಜಾತಿಗಳಲ್ಲಿ ಒಂದೆನಿಸಿದೆ. ಇದರ ಶಾಸ್ತ್ರೀಯ ಹೆಸರು ರಾಸ್ಟ್ರೆಲ್ಲಿಜರ್ ಕನಗುರ್ತಾ. ಹಿಂದೂ ಮಹಾಸಾಗರ ಹಾಗೂ ಪೆಸಿಫಿಕ್ ಮಹಾಸಾಗರಗಳಲ್ಲಿ ಆಫ್ರಿಕ ಖಂಡದ ಪೂರ್ವ ಕರಾವಳಿಯಿಂದ ಪಾಲಿನೇಷ್ಯ ದ್ವೀಪಸ್ತೋಮಗಳವರೆಗೆ ಹರಡಿದೆ. ಇದರ ಸಮೀಪ ಸಂಬಂಧಿಯಾದ ರಾ. ಬ್ರಾಕಿಸೋಮ ಪ್ರಭೇದ ಕೂಡ ಅಂಡಮಾನ್ ದ್ವೀಪಗಳ ಹತ್ತಿರ ದೊರೆಯುತ್ತದೆಂದು ಇತ್ತೀಚೆಗೆ ಗೊತ್ತಾಗಿದೆ.



ಬಂಗಡೆ ಮೀನುಗಾರಿಕೆ ಭಾರತದ ಪಶ್ಚಿಮ ಕರಾವಳಿಯಲ್ಲಿ ಹೆಚ್ಚು ಪ್ರಾಮುಖ್ಯ ಪಡೆದಿದೆ. 1958–65 ಅವಧಿಯಲ್ಲಿ ಬಂಗಡೆಯ ಸರಾಸರಿ ವಾರ್ಷಿಕ ಉತ್ಪಾದನೆ 6,342 ಟನ್ನುಗಳಾಗಿತ್ತು. 1958 ಮತ್ತು 1960ರಲ್ಲಿ ಉತ್ಪಾದನೆ ಒಂದುಲಕ್ಷ ಟನ್ನಿಗೂ ಮಿಗಿಲಾಗಿತ್ತು. ಪ್ರತಿವರ್ಷ ಒಂದು ಕೋಟಿ ರೂಪಾಯಿ ಮೌಲ್ಯದ ಬಂಗಡೆ ಉತ್ಪಾದನೆಯಿದೆ. ಪಶ್ಚಿಮ ಕರಾವಳಿಯಲ್ಲಿ ಕೂಡ ಬಂಗಡೆಯ ಬೇಟೆ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ, ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಹಾಗೂ ಕೇರಳದ ಕಣ್ಣಾನೂರು, ಕಲ್ಲಿಕೋಟೆ ಜಿಲ್ಲೆಗಳಲ್ಲಿಯೂ ಹೆಚ್ಚಾಗಿ ಆಗುವುದು. ಅಲ್ಲಿಂದ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೂ ಅಷ್ಟು ಹೆಚ್ಚಾಗಿಲ್ಲದಿದ್ದರೂ ಇದರ ಬೇಟೆ ಗಣನೀಯವಾಗಿದೆ.

ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಬಂಗಡೆಯ ಮೀನುಗಾರಿಕೆ ಅತ್ಯಂತ ಮುಖ್ಯವಾದ ಉದ್ಯಮವೆನಿಸಿದ್ದು ಈ ಪ್ರದೇಶವನ್ನು ಬಂಗಡೆ ಕರಾವಳಿ ಎಂದೇ ಕರೆಯುವುದಿದೆ.

ಬಂಗಡೆಯ ಮೀನುಗಾರಿಕೆಯ ಶ್ರಾಯ ಸಾಧಾರಣವಾಗಿ ಆಗಸ್ಟ್ ತಿಂಗಳಿನಿಂದ ಮಾರ್ಚ್ ತಿಂಗಳತನಕ. ಮಂಗಳೂರಿನಿಂದ ದಕ್ಷಿಣಕ್ಕೆ ಈ ಶ್ರಾಯ ಆಗಸ್ಟ್–ಸೆಪ್ಟೆಂಬರಿನಿಂದ ಪ್ರಾರಂಭವಾಗಿ ಮಾರ್ಚ್–ಏಪ್ರಿಲ್ ತಿಂಗಳ ತನಕ ಇರುವುದು. ಮಂಗಳೂರಿನಿಂದ ಉತ್ತರಕ್ಕೆ ಈ ಮೀನುಗಾರಿಕೆಯ ಶ್ರಾಯ ಸ್ವಲ್ಪ ಕಡಿಮೆ ಅವಧಿಯದಾಗಿ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಆರಂಭಗೊಂಡು ಫೆಬ್ರವರಿ–ಮಾರ್ಚ್ ತಿಂಗಳತನಕ ಮಾತ್ರ ಇರುವುದು.

ಬಂಗಡೆಯ ಆಹಾರ ಮುಖ್ಯವಾಗಿ ನೀರಿನ ಮೇಲ್ಭಾಗದಲ್ಲಿ ಯಾವಾಗಲೂ ತೇಲುವ ಪ್ಲವಕಗಳು.

ಪಶ್ಚಿಮ ಕರಾವಳಿಯಲ್ಲಿ ಬಂಗಡೆ ಏಪ್ರಿಲ್–ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿ ಮೊಟ್ಟೆಯಿಡುತ್ತದೆ. ವಿಳಿಂಗಮ್‍ಲ್ಲಿ (ಕೇರಳ ರಾಜ್ಯ) ಮಾಡಿದ ಅಧ್ಯಯನಗಳ ಪ್ರಕಾರ ಇದು ವರ್ಷದಲ್ಲಿ ಎರಡಾವರ್ತಿ, ಅಂದರೆ ನವೆಂಬರ್‌ನಿಂದ ಮಾರ್ಚ್ ತಿಂಗಳತನಕ ಮತ್ತು ಮೇ ಇಂದ ಆಗಸ್ಟ್ ತಿಂಗಳ ತನಕ ಮೊಟ್ಟೆ ಇಡುತ್ತದೆ ಎನ್ನಲಾಗಿದೆ.

ಬಂಗಡೆ ಮೀನನ್ನು ದಕ್ಷಿಣ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ರಂಪಣಿ ಬಲೆಗಳ ಸಹಾಯದಿಂದ ಹಿಡಿಯುವರು. ಕಿವುರು ಬಲೆಯಾದ ಪಟ್ಟೆ ಬಲೆಯನ್ನೂ ಬಂಗಡೆಯ ಬೇಟೆಯಲ್ಲಿ ಉಪಯೋಗಿಸುವುದುಂಟು. ಕೇರಳ ಕರಾವಳಿಯಲ್ಲಿ ಪಟ್ಟೆನ್‌ಕೊಲ್ಲಿ, ಐಲಕ್ಕೊಲ್ಲಿ ಮತ್ತು ಪೈತ್ತುವಲ ಎಂಬ ಸಂಚಿ ಬಲೆಗಳ ಬಳಕೆಯಿಂದಲೂ ಐಲಚ್ಚಾಲಪಲ ಎಂಬ ಕಿವುರು ಬಲೆಯ ಸಹಾಯದಿಂದಲೂ ಬಂಗಡೆಯ ಬೇಟೆ ನಡೆಯುವುದು.

***

**ಬಂಜೆತನ:** ಸಂಭೋಗದ ಫಲವಾಗಿ ಸಂತಾನಪ್ರಾಪ್ತಿ ಎಂದೂ ಆಗದಿರುವ ಸ್ಥಿತಿ (ಸ್ಟರಿಲಿಟಿ). ಬಂಜೆತನ ಗಂಡು ಅಥವಾ ಹೆಣ್ಣಿನಲ್ಲಿ ಇರಬಹುದು. ಗರ್ಭಧಾರಣೆ ಆಗಬೇಕಾದರೆ ಗಂಡಿನ ವೀರ್ಯದಲ್ಲಿ ಸಾಕಷ್ಟು ಸುಪುಷ್ಟ ವೀರ್ಯಾಣುಗಳಿರಬೇಕು. ಇವು ಶಿಶ್ನದ ಮುಖಾಂತರ ಹೆಣ್ಣಿನ ಯೋನಿಯಲ್ಲಿ ಚೆಲ್ಲಲ್ಪಟ್ಟು ಅಲ್ಲಿ ಶೇಖರವಾಗಬೇಕು. ಹೆಣ್ಣಿನ ಗರ್ಭದ್ವಾರ, ಗರ್ಭಕೋಶ, ಡಿಂಬನಳಿಕೆಗಳಲ್ಲಿ ಅಡಚಣೆಯೇನೂ ಇರಬಾರದು. ಇಷ್ಟು ಮಾತ್ರವಲ್ಲ, ಅಂಡಾಣುವೂ ಆರೋಗ್ಯಕರವಾಗಿರಬೇಕು. ಭ್ರೂಣ ಬೆಳೆಯಲು ಗರ್ಭಕೋಶದ ಒಳಪದರ ವಿಶಿಷ್ಟರೀತಿಯ ಮಾರ್ಪಾಡು ಹೊಂದಿ ದಪ್ಪಗಿರಬೇಕು. ಇವುಗಳಲ್ಲಿ ಯಾವುದೊಂದರ ಕೊರತೆಯಿದ್ದರೂ ಅಂಥ ಸ್ತ್ರೀ ಪುರುಷರ ಸಂಭೋಗದಿಂದ ಮಕ್ಕಳಾಗುವುದಿಲ್ಲ.

ಗಂಡಿನ ಬಂಜೆತನಕ್ಕೆ ಕಾರಣಗಳು ಹಲವಾರು. ವೃಷಣದ ಹಾಲೆಗಳಲ್ಲಿ ಉತ್ಪತ್ತಿಯಾಗುವ ವೀರ್ಯಾಣುಗಳು ಎಪಿಡಿಡಿಮಸ್‌ನಲ್ಲಿ ಶೇಖರವಾಗಿದ್ದು ಸಂಭೋಗ ಕಾಲದಲ್ಲಿ ವಾಹಕನಾಳವನ್ನು ಸೇರುವುವು. ಅಲ್ಲಿಂದ ಇವು ವೀರ್ಯಕೋಶ ಮತ್ತು ಪ್ರಾಸ್ಟೇಟ್ ಗ್ರಂಥಿಗಳ ಸ್ರಾವದ ಜೊತೆಗೂಡಿ ವೀರ್ಯವಾಗಿ ಮೂತ್ರನಾಳ ತಲುಪಿ ಶಿಶ್ನದ ಮುಖಾಂತರ ದೇಹದಿಂದ ಹೊರಕ್ಕೆ ದಾಟುತ್ತವೆ. ಆದ್ದರಿಂದ ಮೇಲಿನ ಯಾವುದೆ ಅವಯವಗಳಲ್ಲಿ ತೊಂದರೆಯಾಗಿ ವೀರ್ಯಾಣುಗಳ ಉತ್ಪಾದನೆಗೆ ಮತ್ತು ವಾಹಕತೆಗೆ ತೊಂದರೆ ಉಂಟಾದರೂ ಪುರುಷನಿಗೆ ಬಂಜೆತನ ಪ್ರಾಪ್ತವಾಗುತ್ತದೆ. ವೃಷಣದ ಸೋಂಕಾದರೆ ವೀರ್ಯಾಣುಗಳ ಉತ್ಪತ್ತಿ ಕುಗ್ಗುತ್ತದೆ. ಪಿಟ್ಯುಟರಿ ಮತ್ತು ಥೈರಾಯಿಡ್ ಗ್ರಂಥಿಗಳ ಹಾರ್ಮೋನ್‌ಗಳ ಕೊರತೆ, ಪೋಷಕಗಳ ಕೊರತೆ, ಲೈಂಗಿಕ ಅವಯವಗಳ ಸೋಂಕು ಮುಂತಾದವು ವೀರ್ಯಾಣು ಉತ್ಪಾದನೆಯನ್ನು ತಗ್ಗಿಸಬಹುದು. ಗದ್ದಗಟ್ಟು, ಸಿಫಿಲಿಸ್, ಗಾನೊರೀಯಾ ಮತ್ತು ಕ್ಷಯರೋಗಗಳಲ್ಲಿ ವೃಷಣದ ಸೋಂಕು ಉಂಟಾಗಿ ವೀರ್ಯಾಣು ಉತ್ಪಾದನೆ ಇಳಿಮುಖವಾಗುತ್ತದೆ. ಕೆಲವು ಆಜನ್ಮ ದೋಷಗಳಲ್ಲಿ ವೃಷಣದಿಂದ ವೀರ್ಯಾಣು ಉತ್ಪಾದನೆಯೇ ಆಗುವುದಿಲ್ಲ. ವೀರ್ಯವನ್ನು ಸೂಕ್ಷ್ಮದರ್ಶಕದ ಅಡಿಯಲ್ಲಿಟ್ಟು ಪರೀಕ್ಷಿಸಿ ವೀರ್ಯಾಣುಗಳ ಸಂಖ್ಯೆ ಹಾಗೂ ಚಲನೆಯನ್ನು ಗುರುತಿಸುವುದು ಸಾಧ್ಯ. ಗರ್ಭಧಾರಣೆ ಆಗಬೇಕಾದರೆ ಒಂದು ಘನ ಸೆಂಮೀ ವೀರ್ಯದಲ್ಲಿ 50–100 ದಶಲಕ್ಷ ವೀರ್ಯಾಣುಗಳಾದರೂ ಇರಬೇಕು. ವೀರ್ಯಾಣುವಿನ ಮಿಲನ ಸಾಮರ್ಥ್ಯದ ದ್ಯೋತಕವೆ ಚಲನೆ. ಒಟ್ಟು ವೀರ್ಯಾಣುಗಳಲ್ಲಿ ಚೆನ್ನಾಗಿ ಚಲಿಸುವವು 80% ಇದ್ದರೆ ಅಂಡಾಣುವಿನೊಡನೆ ವೀರ್ಯಾಣು ಮಿಲನವಾಗಿ ಗರ್ಭಧಾರಣೆಯಾಗಲು ಸಹಕಾರಿ. ಚಲನೆ ಕಡಿಮೆ ಇರುವ ಮತ್ತು ಅಪಕ್ವ ವೀರ್ಯಾಣುಗಳೂ ಅಸಹಜ ವೀರ್ಯಾಣುಗಳೂ ಇದ್ದರೆ ಹಾಗೂ ವೀರ್ಯಾಣು ಸಂಖ್ಯೆ ಪ್ರತಿ ಘನ ಸೆಂಮೀ ವೀರ್ಯದಲ್ಲಿ 50 ದಶಲಕ್ಷಕ್ಕಿಂತ ಕಡಿಮೆಯಿದ್ದರೆ ಬಂಜೆತನ ಉಂಟಾಗುತ್ತದೆ. ಸೋಂಕಿನಿಂದ ಉಂಟಾದ ಉರಿಯೂತ, ಅಪಘಾತಗಳು, ವಾಹಕ ನಾಳದಲ್ಲಿ ಅಡಚಣೆ ಮಾಡಬಹುದು. ಹೀಗಾದಾಗಲೂ ವೀರ್ಯಾಣುವಿಗೆ ತಡೆ ಉಂಟಾಗುವುದರಿಂದ ಬಂಜೆತನ ಸಂಭವಿಸುತ್ತದೆ. ಒಂದು ವೇಳೆ ಗಂಡು ಆರೋಗ್ಯವಂತ ವೀರ್ಯಾಣುಗಳನ್ನು ಉತ್ಪಾದನೆ ಮಾಡಿದರೂ ಶಿಶ್ನದ ನಿಮಿರಿಕೆಯ ತೊಂದರೆಯಿದ್ದರೆ ಅವು ಹೆಣ್ಣಿನ ಯೋನಿಯನ್ನು ಸೇರಲಾರವು. ಹಾರ್ಮೋನುಗಳ ಕೊರತೆ ಹಾಗೂ ಮಿದುಳಿನ ಕಾಯಿಲೆಗಳಾದಾಗ ಶಿಶ್ನದ ನಿಮಿರುವಿಕೆಯೆ ಇರುವುದಿಲ್ಲ. ಅಥವಾ ಶಿಶ್ನ ನಿಮಿರಿದರೂ ಅದನ್ನು ಹೆಚ್ಚು ಹೊತ್ತು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ವಾಸ್ತವವಾಗಿ ಇದು ನಪುಂಸಕತ್ವ.ವಾಗಿದ್ದು ಬಂಜೆತನವಲ್ಲ.

ಗಂಡಿನಲ್ಲಿ ಬಂಜೆತನಕ್ಕೆ ಕಾರಣ ಅರಿತರೆ ಚಿಕಿತ್ಸೆಯೂ ಸುಲಭ. ಹಾರ್ಮೋನು ಹಾಗೂ ಪೋಷಕಗಳ ಕೊರತೆ ಇದ್ದರೆ ಅದನ್ನು ಸರಿಪಡಿಸಬೇಕು. ಸಿಫಿಲಿಸ್, ಗಾನೊರೀಯಾ ಮುಂತಾದ ಮೇಹರೋಗಗಳ ಚಿಹ್ನೆ ಕಂಡುಬಂದೊಡನೆ ಅದಕ್ಕೆ ಯುಕ್ತ ಚುಚ್ಚುಮದ್ದು ತೆಗೆದುಕೊಳ್ಳಬೇಕು. ವಾಹಕನಾಳದ ಅಡಚಣೆಯನ್ನು ಶಸ್ತ್ರಕ್ರಿಯೆಯಿಂದ ನಿವಾರಿಸಲು ಸಾಧ್ಯ. ನಿಮಿರಿಕೆಯ ತೊಂದರೆ ಇರುವವರು ಯೋಗ್ಯ ವ್ಯಾಯಾಮಗಳನ್ನು ಮಾಡಿ ತಮ್ಮ ದೇಹ ತ್ರಾಣವನ್ನು ವೃದ್ಧಿಪಡಿಸಿಕೊಳ್ಳಬೇಕು. ವೃಷಣ ವೀರ್ಯಾಣುಗಳನ್ನೇ ಉತ್ಪತ್ತಿ ಮಾಡದಿದ್ದರೆ ಅದಕ್ಕೆ ಯಾವ ಚಿಕಿತ್ಸೆಯೂ ಇಲ್ಲ. ಅಂಥ ದಂಪತಿ ಅನ್ಯವೀರ್ಯದಾನದ ಮೊರೆಹೊಗಬೇಕಾದೀತು.

ಹೆಣ್ಣಿನ ಬಂಜೆತನಕ್ಕೆ ಹಲವಾರು ಕಾರಣಗಳಿವೆ. ಸ್ತ್ರೀಯಲ್ಲಿ ಗರ್ಭಧಾರಣೆ ಆಗಬೇಕಾದರೆ ಅಂಡಾಣು ಆರೋಗ್ಯವಂತವಾಗಿರಬೇಕು. ಗರ್ಭಕೋಶ ಅಥವಾ ಡಿಂಬನಳಿಕೆಗಳಲ್ಲಿ ಎಲ್ಲೂ ಅಡಚಣೆ ಇರಬಾರದು ಮತ್ತು ಭ್ರೂಣದ ನೆಲಸುವಿಕೆಗಾಗಿ ಗರ್ಭಕೋಶದ ಒಳಪದರ ಚೆನ್ನಾಗಿ ಬೆಳವಣಿಗೆಯಾಗಬೇಕು. ಮೇಲಿನ ಯಾವುದೊಂದರ ದೋಷವಿದ್ದರೂ ಅಂಥ ಸ್ತ್ರೀಗೆ ಬಂಜೆತನ ಉಂಟಾಗುತ್ತದೆ. ತಿಂಗಳಿಗೊಂದರಂತೆ ಅಂಡಾಣು ಪಕ್ವವಾಗಿ ಅಂಡಾಂಶಯದಿಂದ ಹೊರಬರುತ್ತದೆ. ಡಿಂಬನಳಿಕೆಯ ಚಾಚು ಬೆರಳುಗಳಲ್ಲಿರುವ ಲೋಮಗಳು ಅಂಡಾಣುವನ್ನು ಆಕರ್ಷಿಸಿ ನಾಳದೊಳಗೆ ಎಳೆದುಕೊಳ್ಳುತ್ತವೆ. ಯೋನಿಯ ಮುಖಾಂತರ ಗರ್ಭಕೋಶವನ್ನು ಹಾದು ಡಿಂಬನಳಿಕೆಗೆ ವೀರ್ಯಾಣು ಬಂದರೆ ಅಂಡಾಣು ವೀರ್ಯಾಣುಗಳ ಮಿಲನವಾಗುತ್ತದೆ. ಇದೇ ನಿಷೇಚನ. ಹೀಗೆ ಫಲಿತ ಅಂಡಾಣು (ಭ್ರೂಣಾಣು) ಅಥವಾ ಯುಗ್ಮ ಅನಂತರ ಗರ್ಭಕೋಶಕ್ಕೆ ಚಲಿಸಿ ಅಲ್ಲಿ ನೆಲೆಗೊಂಡು ಭ್ರೂಣವಾಗಿ, ಬೆಳೆದು ಮಗುವಾಗುತ್ತದೆ. ಹಾರ್ಮೋನಿನ ದೋಷವಿರುವ ಸ್ತ್ರೀಯರಲ್ಲಿ ಅಂಡಾಣು ಪಕ್ವವಾಗಿ ಹೊರಬರುವುದೇ ಇಲ್ಲ. ಅಂಡಾಣುವೆ ಇಲ್ಲದಿದ್ದ ಮೇಲೆ ಮಗುವಾಗುವುದೂ ಸಾಧ್ಯವಿಲ್ಲ. ಜನನೇಂದ್ರಿಯಗಳ ಸೋಂಕಿದ್ದರೆ ವೀರ್ಯಾಣು ಮುಂದೆ ಚಲಿಸಲು ಅವಕಾಶವಿರುವುದಿಲ್ಲ. ಯೋನಿಸೋಂಕಿನಲ್ಲಿ ಸಂಭೋಗ ಕಷ್ಟವಾಗುತ್ತದೆ. ಗರ್ಭದ್ವಾರದ ಸೋಂಕಾದರೆ ರಂಧ್ರ ಮುಚ್ಚಿಕೊಳ್ಳುವುದು. ಅಂಜಿಕೆಯ ಸ್ವಭಾವದ ಹೆಂಗಸರಿಗೆ ಯೋನಿಸ್ನಾಯುಗಳು ವಿಪರೀತ ಸಂಕೋಚನಗೊಳ್ಳುವುದರಿಂದ ಸಫಲ ಸಂಭೋಗ ಸಾಧ್ಯವಾಗದೆ ಬಂಜೆತನ ಉಂಟಾಗುತ್ತದೆ. ಯೋನಿ ಹಾಗೂ ಗರ್ಭಕೋಶಗಳ ಆಜನ್ಮ ದೋಷಗಳಲ್ಲಿ ಯೋನಿ ಅಥವಾ ಗರ್ಭಕೋಶ ಪೂರ್ಣ ಬೆಳವಣಿಗೆಗೊಂಡಿರುವುದಿಲ್ಲ. ಅನೇಕ ಬಾರಿ ಯೋನಿ ಅಥವಾ ಗರ್ಭಕೋಶದ ಮಧ್ಯೆ ಸ್ನಾಯುಗೋಡೆಗಳು ಉಳಿದುಬಿಟ್ಟಿರುತ್ತವೆ. ಇವೂ ಬಂಜೆತನಕ್ಕೆ ಮೂಲ. ಗರ್ಭಕೋಶದಲ್ಲಿ ಗಡ್ಡೆಯಿದ್ದರೆ ಭ್ರೂಣ ನೆಲೆಗೊಳ್ಳಲು ಜಾಗವೇ ಇರುವುದಿಲ್ಲವಾದುದರಿಂದ ಬಂಜೆತನ ಸಹಜ. ಡಿಂಬನಳಿಕೆಯ ಸೋಂಕು ಇರುವಾಗ ನಾಳದಲ್ಲಿ ಅಡಚಣೆ ಉಂಟಾಗುತ್ತದೆ. ತತ್ಪರಿಣಾಮವಾಗಿ ವೀರ್ಯಾಣು ಅಥವಾ ಅಂಡಾಣು ಚಲನೆಗೆ ಅವಕಾಶವಿಲ್ಲ. ಕ್ಷಯ, ಸಿಫಿಲಿಸ್, ಗಾನೊರೀಯಾ, ಸ್ಟ್ರೆಪ್ಟೊಕಾಕಸ್ ಮತ್ತು ಸ್ಟೆಫಲೋಕಾಕಸ್ ಕ್ರಿಮಿಗಳ ಸೋಂಕು ಇಲ್ಲಿ ಪ್ರಮುಖವಾದವು. ಬಂಜೆಯಲ್ಲಿ ಪ್ರತಿ ತಿಂಗಳೂ ಅಂಡಾಣು ಪಕ್ವವಾಗುವುದೊ ಇಲ್ಲವೋ ಎಂಬುದನ್ನು ತಿಳಿಯಲು ಉಷ್ಣತಾಮಾಪಕ ಪಟ್ಟಿಯೊಂದನ್ನು ಇಟ್ಟು ಪರೀಕ್ಷಿಸಬಹುದು. ಮುಟ್ಟಾದ ಮೊದಲ ಹದಿನಾಲ್ಕು ದಿವಸಗಳು ಮುಂಜಾನೆ ಎಚ್ಚರಾದ ಕೂಡಲೆ ಸ್ತ್ರೀಯ ದೇಹದ ಉಷ್ಣತೆ $97^0$–$98^0$ ಫ್ಯಾ ಇರುತ್ತದೆ. ಅಂಡಾಣು ಪಕ್ವಗೊಂಡು ಹೊರಬೀಳುವ ಸಮಯದಲ್ಲಿ ದೇಹದ ಉಷ್ಣತೆ $98^0$–$99^0$ಫ್ಯಾ ವರೆಗೆ ಏರುತ್ತದೆ. ಒಂದು ವೇಳೆ ಇಡೀ ತಿಂಗಳು ದೇಹದ ಉಷ್ಣತೆಯಲ್ಲಿ ಈ ರೀತಿಯ ಏರುವಿಕೆ ಕಾಣದೆ ಹೋದರೆ ಆ ತಿಂಗಳು ಅಂಡಾಣು ಪಕ್ವವಾಗಿ ಹೊರಬಂದಿಲ್ಲ ಎಂದು ಅರ್ಥ. ಅಂಡಾಣು ಪಕ್ವವಾಗಿದೆ ಎಂದು ತಿಳಿದರೆ ಆ ಬಳಿಕ ಒಂದೆರಡು ದಿವಸಗಳಲ್ಲಿ ದಂಪತಿ ಸಂಭೋಗಿಸಿದರೆ ಮಗುವಾಗುವ ಸಾಧ್ಯತೆ ಉಂಟು.

ಡಿ ಅಂಡ್ ಸಿ ಶಸ್ತ್ರಚಿಕಿತ್ಸೆಯಿಂದ ಅನೇಕ ಬಂಜೆಯರಿಗೆ ಸಹಾಯವಾಗಿದೆ. ಗರ್ಭದ್ವಾರವನ್ನು ಹಿಗ್ಗಿಸಿ ಗರ್ಭಕೋಶವನ್ನು ಕೆರೆಯುವುದೆ ಇದರ ಉದ್ದೇಶ. ಸಾಧಾರಣವಾಗಿ ಹೆಣ್ಣು ಮುಟ್ಟಾದ ಮೂರನೆಯ ವಾರ ಈ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಗರ್ಭಕೋಶದ ಒಳಪದರವನ್ನು ಕೆರೆದು ಸೂಕ್ಷ್ಮದರ್ಶಕದ ಕೆಳಗೆ ಪರೀಕ್ಷಿಸಿದಾಗ ಪ್ರೊಜೆಸ್ಟಿರಾನ್ ಹಾರ್ಮೋನ್ ಸ್ರಾವವಾಗಿದೆಯೆ ಇಲ್ಲವೆ ಎಂಬುದು ತಿಳಿಯುತ್ತದೆ. ಪ್ರೊಜೆಸ್ಟಿರಾನ್ ಸ್ರಾವ ಸಾಲದಿದ್ದರೆ ಗರ್ಭಕೋಶ ಗರ್ಭ ತಾಳಲಾರದು. ಯೋನಿ, ಗರ್ಭಕೋಶ, ಡಿಂಬನಳಿಕೆಗಳ ಸೋಂಕನ್ನು ಪ್ರತಿಜೈವಿಕಗಳ ನೆರವಿನಿಂದ ಪೂರ್ಣ ಹತೋಟಿಗೆ ತಂದುಕೊಳ್ಳಬಹುದು. ಸೋಂಕಿನಿಂದ ಡಿಂಬನಳಿಕೆ ಮುಚ್ಚಿಕೊಂಡಿದ್ದರೆ ಶಸ್ತ್ರಕ್ರಿಯೆಯಿಂದ ಆ ಅಡಚಣೆಯನ್ನು ನಿವಾರಿಸಬೇಕು. ಡಿಂಬನಳಿಕೆ ಮುಚ್ಚಿಕೊಂಡಿದೆಯೆ ಇಲ್ಲವೆ ಎಂಬುದನ್ನು ಅರಿಯಲು ಎರಡು ವಿಧಾನಗಳಿವೆ: ಎಕ್ಸ್‌ಕಿರಣ ಪರೀಕ್ಷಣೆ ಮತ್ತು ನಳಿಕೆ ಪರೀಕ್ಷಣೆ (ಟ್ಯೂಬ್ ಟೆಸ್ಟಿಂಗ್). ಎಕ್ಸ್‌ಕಿರಣಕ್ಕೆ ಪಾರದರ್ಶಕವಲ್ಲದ ಡಯಡೋನ್ ಎಂಬ ದ್ರವವನ್ನು ಗರ್ಭದ್ವಾರದ ಮುಖಾಂತರ ಗರ್ಭಕೋಶದೊಳಗೆ ತೂರಿಸಿ ಎಕ್ಸ್‌ಕಿರಣ ಚಿತ್ರ ತೆಗೆಯಬೇಕು. ಇದರಿಂದ ಗರ್ಭಕೋಶ ಹಾಗೂ ಡಿಂಬನಳಿಕೆಗಳ ಚಿತ್ರ ಕಾಣಸಿಗುತ್ತದೆ. ಡಿಂಬನಳಿಕೆಯಲ್ಲಿ ಅಡಚಣೆಯಿದ್ದರೆ ದ್ರವ ಮುಂದೆ ಹೋಗದೆ ಅಲ್ಲೇ ನಿಲ್ಲುತ್ತದೆ. ನಳಿಕೆ ಪರೀಕ್ಷಣೆಯಲ್ಲಿ ಗರ್ಭದ್ವಾರದ ಮುಖಾಂತರ ವಾಯು ತೂರಿಸಿ ಅದು ಎರಡೂ ಡಿಂಬನಳಿಕೆಗಳ ಮೂಲಕ ಹೊರಗೆ ಬರುವುದೊ ಇಲ್ಲವೊ ಎಂಬುದನ್ನು ಗಮನಿಸುತ್ತಾರೆ. ಎಷ್ಟೋಸಲ ಈ ಪರೀಕ್ಷೆ ಮಾಡುವಾಗಿನ ವಾಯು ಒತ್ತಡದಿಂದಾಗಿಯೇ ಮುಚ್ಚಿಕೊಂಡಿರುವ ನಳಿಕೆ ತೆರೆದುಕೊಳ್ಳುವುದುಂಟು.

ಗಂಡಿನಲ್ಲಿ ಶಿಶ್ನ ನಿಮಿರಿಕೆಯ ತೊಂದರೆಯಿದ್ದರೆ ಕೃತಕ ವೀರ್ಯದಾನ ಅಗತ್ಯವಾಗುತ್ತದೆ. ಗಂಡಿನ ಶಿಶ್ನ ನಿಮಿರದೆ ಹೋದಾಗ, ಪುಂಸತ್ತ್ವ ಕಡಿಮೆ ಇದ್ದಾಗ ಅಥವಾ ಬೇಗ ವೀರ್ಯಪತನವಾದರೆ ಆತ ವೀರ್ಯಾಣುಗಳನ್ನು ಹೆಣ್ಣಿನ ಯೋನಿಯಲ್ಲಿಡಲು ಅಸಮರ್ಥನಾಗುತ್ತಾನೆ. ಆಗ ಆತನ ವೀರ್ಯವನ್ನು ಸಂಗ್ರಹಿಸಿ ಸಿರಿಂಜಿನ ಮೂಲಕ ಆತನ ಪತ್ನಿಯ ಯೋನಿಯೊಳಗೆ ಹಾಕುವಿಕೆ ಕೃತಕ ವೀರ್ಯದಾನ. ಹೆಂಡತಿಯ ಅಂಡಾಣು ಹೊರಬರುವ ವೇಳೆಯನ್ನು ತಿಳಿದುಕೊಂಡು ಇಂಥ ವೀರ್ಯದಾನ ಮಾಡಬೇಕು. ಒಂದು ವೇಳೆ ಗಂಡನ ವೀರ್ಯದಲ್ಲಿ ವೀರ್ಯಾಣುಗಳು ಇಲ್ಲದಿದ್ದರೆ, ಪರಪುರುಷನ ವೀರ್ಯ ಸಂಗ್ರಹಿಸಿ ಅದನ್ನು ಹೆಣ್ಣಿನ ಯೋನಿಯೊಳಗೆ ಹಾಕುವುದು ಅಗತ್ಯ. ಆದರೆ ಇಂಥ ಸನ್ನಿವೇಶಗಳು ಹಲವಾರು ಮಾನವೀಯ ಹಾಗೂ ನೈತಿಕ ಸಮಸ್ಯೆಗಳಿಗೆ ಕಾರಣವಾಗುತ್ತವೆ. ***

**ಬಂಟಿಂಗ್:** ಎಂಬರಿಜಿಡೆ ಕುಟುಂಬಕ್ಕೆ ಸೇರಿದ ಹಕ್ಕಿಗಳ ಸಾಮಾನ್ಯ ಹೆಸರು. ಪ್ಯಾಸೆರಿಫಾರ್ಮಿಸ್ ಗಣದ ಗುಬ್ಬಿಗಳನ್ನು, ಫಿಂಚ್‌ಗಳನ್ನು ಹೋಲುತ್ತವೆ. ಎಂಬರಿಜ ಮೆಲನೊಸೆಫಾಲ ಎಂಬ ಕಪ್ಪು ತಲೆಯ ಮತ್ತು ಎಂಬರಿಜ ಬ್ರನಿಸೆಪ್ಸ್ ಎಂಬ ಕೆಂಪು ತಲೆಯ ಬಂಟಿಂಗ್‌ಗಳು ಸಾಮಾನ್ಯವಾಗಿ ಚಳಿಗಾಲದಲ್ಲಿ ಭಾರತಕ್ಕೆ ವಲಸೆ ಬರುತ್ತವೆ. ಈ ಪ್ರಭೇದಗಳಲ್ಲಿ ಹೆಣ್ಣು ಹಕ್ಕಿಯ ಬೆನ್ನು ನಸುಗೆಂಪು ಮಿಶ್ರಿತ ಹಳದಿ ಅಥವಾ ಕಂದು ಬಣ್ಣದ್ದು. ಮುಸುಕಿನ ಜೋಳ, ಗೋಧಿ ಮುಂತಾದ ಬೆಳೆಗಳನ್ನು ತಿನ್ನುವುದರಿಂದ ಪಿಡುಗುಗಳೆನಿಸಿವೆ. ಕೆಂಪು ತಲೆಯ ಹಕ್ಕಿಗಳು ಪಶ್ಚಿಮ ಪಾಕಿಸ್ತಾನದಲ್ಲೂ ಕಪ್ಪು ತಲೆಯವು ಪೂರ್ವ ಯುರೋಪು ಹಾಗೂ ಪಶ್ಚಿಮ ಏಷ್ಯದಲ್ಲೂ ಸಂತಾನೋತ್ಪತ್ತಿ ನಡೆಸುತ್ತವೆ.

ಇತರ ಪ್ರಭೇದಗಳ ಪೈಕಿ ಮುಖ್ಯವಾದವು ಪರ್ವತ ಪ್ರದೇಶಗಳಲ್ಲಿ ವಾಸಿಸುವ ಎಂಬರಿಜ ಸಿಯ ಮತ್ತು ಧ್ರುವ ಪ್ರದೇಶದ ಬಿಳಿ ಪುಕ್ಕಗಳ ಪ್ಲೆಕ್ಟ್ರೊಫೀನ್ಯಾಕ್ಸ್ ನಿವ್ಯಾಲಿಸ್ ಹಾಗೂ ಹಳದಿ ಬಣ್ಣದ ಎದೆಯುಳ್ಳ ಎಂಬರಿಜ ಏರಿಯೋಲ ಎಂಬವು. ಈ ಹಕ್ಕಿಗಳು ತೆರೆದ ಬಟ್ಟಲಿನಾಕಾರದ ಗೂಡುಗಳನ್ನು ನೆಲಕ್ಕೆ ಸಮೀಪದಲ್ಲಿ, ಪೊದೆಗಳಲ್ಲಿ, ಕುಳ್ಳುಮರದ ರೆಂಬೆಗಳಲ್ಲಿ ರಚಿಸುತ್ತವೆ. ಸುಮಾರು 2 ರಿಂದ 6 ಮೊಟ್ಟೆಗಳನ್ನಿಟ್ಟು ಹೆಣ್ಣು ಹಕ್ಕಿ ಕಾವು ಕೊಟ್ಟು ಮರಿಮಾಡುತ್ತದೆ. ಕೆಲವೊಮ್ಮೆ ಗಂಡುಹಕ್ಕಿ ಕಾವು ಕೊಡಲು ಸಹಕರಿಸುವುದೂ ಉಂಟು. ಮೊಟ್ಟೆಗಳು ಮಾಸಲು ಬಣ್ಣದವು. ಅಲ್ಲಲ್ಲಿ ಚಿಕ್ಕ ಚಿಕ್ಕ ಚುಕ್ಕಿಗಳಿವೆ. ಬಂಟಿಂಗ್ ಒಂದು ವರ್ಷದಲ್ಲಿ ಹಲವು ಬಾರಿ ಮೊಟ್ಟೆ ಇಡುತ್ತದೆ.

ಬಂಟಿಂಗ್

ಹಲವೊಮ್ಮೆ ಫ್ರಿಂಜಿಲ್ಲಿಡೆ ಕುಟುಂಬಕ್ಕೆ ಸೇರಿದ ನೂತನ ಲೋಕದ ಗುಬ್ಬಚ್ಚಿ ಮತ್ತು ಫಿಂಚ್‌ಗಳನ್ನು ಬಂಟಿಂಗ್‌ಗಳೆಂದು ಕರೆಯುವುದುಂಟು. ನೂತನ ಲೋಕದ ಈ ಹಕ್ಕಿಗಳ ಗಂಡುಗಳು 115 ರಿಂದ 140 ಮಿಮೀ ಗಳಷ್ಟು ಉದ್ದವಾಗಿವೆ. ಹೆಣ್ಣು ಹಕ್ಕಿಗಳು ಗಂಡುಗಳಿಗಿಂತ ಚಿಕ್ಕವು ಮತ್ತು ಮಾಸಲು ಬಣ್ಣದ ಗರಿಗಳನ್ನು ಪಡೆದಿವೆ. ಗಂಡು ಬಂಟಿಂಗ್‌ಗಳಿಗೆ ಬಣ್ಣದ ಗರಿಗಳಿವೆ. ನೂತನ ಲೋಕದ ಬಂಟಿಂಗ್‌ಗಳ ಪೈಕಿ ರಂಗುರಂಗಿನ ಪ್ಯಾಸ್ಸರಿನ ಸಿರಿಸ್, ನೀಲವರ್ಣದ ಪ್ಯಾಸ್ಸರಿನ ಸೈನಿಯ, ಉಜ್ವಲ ನೀಲವರ್ಣದ ಪ್ಯಾಸ್ಸರಿನ ಅಮೀನ ಮತ್ತು ವಿವಿಧ ಬಣ್ಣಗಳಿರುವ ಪ್ಯಾಸ್ಸರಿನ ವರ್ಸಿಕಲರ್ ಮುಖ್ಯವಾದ ಪ್ರಭೇದಗಳು. (ಎಂ.ಎಸ್.ಎಲ್.)

**ಬಂಡೀಪುರ**: ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಒಂದು ಗ್ರಾಮ. ಗುಂಡ್ಲು ಪೇಟೆಯ ದಕ್ಷಿಣಕ್ಕೆ 19 ಕಿಮೀ ದೂರದಲ್ಲಿದೆ. ಬಂಡೀಪುರ ವನ್ಯಮೃಗ ಸಂರಕ್ಷಣಾ ಕೇಂದ್ರದಿಂದಾಗಿ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ.

ಬಂಡೀಪುರ ವನ್ಯಮೃಗ ಸಂರಕ್ಷಣಾ ಕೇಂದ್ರ ಸು. 57 ಚಕಿಮೀ ವಿಸ್ತಾರವಾಗಿದೆ. ಇದು 1941 ರಿಂದ ವೇಣುಗೋಪಾಲ ವನ್ಯಮೃಗ ಉದ್ಯಾನವನದ ಒಂದು ಭಾಗವಾಗಿ ಪರಿಗಣಿತವಾಗಿದೆ. ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಮೈಸೂರು ನಗರದ ದಕ್ಷಿಣಕ್ಕೆ 80 ಕಿಮೀ ದೂರದಲ್ಲಿದ್ದು, ಸಮುದ್ರಮಟ್ಟಕ್ಕಿಂತ 1,022 ರಿಂದ 1,454 ಮೀ ಎತ್ತರದಲ್ಲಿದೆ. ವರ್ಷದ ಸರಾಸರಿ ಮಳೆ 890 ಮಿಮೀ. ಉಷ್ಣತೆ $11^0$–$38^0$ ಸೆ ಇರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಅಧಿಕ ಉಷ್ಣತೆ ಇರುವುದು. ಮಳೆ ಕಡಿಮೆಯಾದ್ದರಿಂದ ಬಂಡೀಪುರದ ಕಾಡು ದಟ್ಟವಾಗಿಲ್ಲ. ಸ್ವಾಭಾವಿಕವಾಗಿ ಎಲೆ ಉದುರುವ ಮರದ ಕಾಡು ಇಲ್ಲಿಯ ಮುಖ್ಯ ಸಸ್ಯವರ್ಗ. ಸವನ್ನ ಕಾಡಿನಲ್ಲಿರುವ ಹಾಗೆ ಇಲ್ಲಿ ತೇಗ, ಮತ್ತಿ, ದಿಂಡಲು, ಹೊನ್ನೆ, ಜಾಲಾರಿ, ಯತಿಗ, ಬೀಟೆ, ತಡಸಲು, ನೇರಳೆ, ಬೂರುಗ ಮತ್ತು ತಾರೆ ಮರಗಳು ಅಲ್ಲಲ್ಲಿ ಗುಂಪಾಗಿ ಬೆಳೆದು ಕಾಡಿನ ಬಹುಭಾಗವನ್ನು ಆಕ್ರಮಿಸಿವೆ. ಮರದ ಗುಂಪುಗಳ ಮಧ್ಯಭಾಗದಲ್ಲಿ ಅಖಂಡವಾಗಿ ಬೆಳೆದಿರುವ ಆನೆಹುಲ್ಲನ್ನು ಕಾಣಬಹುದು. ಇಲ್ಲಿ ನೀರಿನ ಸಣ್ಣ ಬುಗ್ಗೆಗಳು ಹೇರಳವಾಗಿವೆ. ನೈರುತ್ಯ ಶೀತಮಾರುತ ಬರುವ ಮುನ್ನವೇ ಅವು ಬತ್ತಿಹೋಗುತ್ತವೆ. ಸದಾ ನೀರು ತುಂಬಿ ಹರಿಯುವ ಕೆಕ್ಕನ ಹಳ್ಳವೇ ಕಾಡಿನ ಮೃಗಗಳ ನೀರಿಗೆ ಆಧಾರ. ಈ ನದಿ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳನ್ನು ಬೇರ್ಪಡಿಸುವ ಗಡಿರೇಖೆಯಂತಿದೆ. ಕಾಡಿನಲ್ಲಿರುವ ಕೆಸರುಗುಂಡಿಗಳು ಕಾಡಾನೆಗಳಿಗೆ ಬೇಸಗೆಯಲ್ಲಿ ಮರಳು ಗಾಡಿನ ಓಯಸಿಸ್ ಇದ್ದಹಾಗೆ. ಆದುದರಿಂದಲೇ ಕಾಡಾನೆಗಳು ಬಂಡೀಪುರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತವೆ. ಕೆಸರುಗುಂಡಿಯ ಮತ್ತು ಸಣ್ಣ ಝರಿಗಳ ಅಂಚಿನಲ್ಲಿ ದಟ್ಟವಾಗಿ ಬೆಳೆದಿರುವ ಬಿದಿರುಮೆಳೆ ಸಣ್ಣ ಪ್ರಾಣಿಗಳಿಗೆ ವಾಸಸ್ಥಾನ. ವನ್ಯಮೃಗಗಳು ನೆಕ್ಕಲು ಬೇಕಾಗುವ ಉಪ್ಪಿನ ನೆಲ ಈ ಕಾಡಿನಲ್ಲಿ ಯಥೇಚ್ಛವಾಗಿ ಕಂಡುಬರುತ್ತದೆ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅಂತಿಮ ವರ್ಷ ಮತ್ತು ಐದನೆಯ ಪಂಚವಾರ್ಷಿಕ ಪೂರ್ಣಾವಧಿಗೆ ಹುಲಿರಕ್ಷಣೆ ಯೋಜನೆಯ ಕಾರ್ಯಕ್ರಮದಲ್ಲಿ ಭಾರತದ ಒಂಬತ್ತು ಹುಲಿ ರಕ್ಷಣಾಕೇಂದ್ರಗಳಲ್ಲಿ ಬಂಡೀಪುರ ಅಭಯಾರಣ್ಯವು ಸೇರಿದೆ. ಬಂಡೀಪುರದ ವನ್ಯ ಮೃಗಗಳಲ್ಲಿ ಸಾಮಾನ್ಯವಾಗಿ ಆನೆ, ಕಾಡು ಕೋಣ, ಚಿಕ್ಕೆಜಿಂಕೆ, ಬೊಗಳುವ ಜಿಂಕೆ, ಕಾಡುಹಂದಿ, ಕಾಡುನಾಯಿ, ನರಿ, ಮುಂಗುಸಿ, ಕಪ್ಪು ಮುಖದ ಮುಸುವ ಇವೆ. ಆಗಾಗ ಕಾಣಿಸಿಕೊಳ್ಳುವ ಪ್ರಾಣಿಗಳಲ್ಲಿ ಹುಲಿ, ಚಿರತೆ, ಕಾಡುಕುರಿ, ಕರಡಿ, ಕಾಡುಬೆಕ್ಕು ಮುಖ್ಯವಾದವು. ಜೊತೆಗೆ ನವಿಲು, ಹಸಿರು ಪಾರಿವಾಳ, ಮುಳ್ಳುಹಂದಿ, ಹೆಬ್ಬಾವು, ನಾಗರಹಾವು, ಹಸಿರು ಹಾವು, ಮಂಡಲದ ಹಾವು ಮೊದಲಾದುವನ್ನು ಕಾಣಬಹುದು.

ವನ್ಯಮೃಗಗಳನ್ನು ನೋಡುವುದಕ್ಕೆ ಮಾರ್ಚಿಯಿಂದ ಆಗಸ್ಟ್ ತಿಂಗಳುಗಳು ಒಳ್ಳೆಯ ಕಾಲ. ಪ್ರವಾಸೀ ಕೇಂದ್ರವಾಗಿ ಅಭಿವೃದ್ಧಿ ಹೊಂದಿರುವ ಬಂಡೀಪುರದಲ್ಲಿ ತಂಗಲು ಪ್ರವಾಸೀ ಮಂದಿರ ಇದೆ. ವನ್ಯಮೃಗಗಳನ್ನು ನೋಡಲು ಸಾರಿಗೆ ಮತ್ತು ಅರಣ್ಯ ಅಧಿಕಾರಿಗಳ ಸಹಾಯ ದೊರಕುತ್ತದೆ. ನೋಡಿ: ರಾಷ್ಟ್ರೀಯ ಉದ್ಯಾನ. ***

**ಬಂಡೂರು ಕುರಿ:** ಕುರಿಗಳಲ್ಲಿ ಪ್ರಸಿದ್ಧವಾದ ಸಾಕುತಳಿ. ರುಚಿಕಟ್ಟಾದ ಮಾಂಸಕ್ಕೆ ಭಾರತದಲ್ಲೇ ಹೆಸರುವಾಸಿಯಾಗಿರುವ ಬನ್ನೂರು ಹಾಗೂ ಮಂಡ್ಯ ಕುರಿಯೆಂದೂ ಕರೆಯುತ್ತಾರೆ. ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಬನ್ನೂರು, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು, ತುಮಕೂರು ಹಾಗೂ ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಇವು ವ್ಯಾಪಿಸಿವೆ. ಓವಿಸ್ ಜಾತಿಗೆ ಸೇರಿದೆ. ಸಾಮಾನ್ಯವಾಗಿ ಹಾಲು ಬಿಳುಪಾಗಿದ್ದು ತಲೆ ಮತ್ತು ಕುತ್ತಿಗೆಯ ಭಾಗದಲ್ಲಿ ಕಂದು ಬಣ್ಣವಿರುತ್ತದೆ. ಕಾಲುಗಳು ಗಿಡ್ಡವಾಗಿದ್ದು ದೇಹ ಸದೃಢವಾಗಿದೆ. ಎದೆಯ ಭಾಗ ಉಬ್ಬಿಕೊಂಡು ಅಗಲವಾಗಿದೆ. ಕಿವಿ ಉದ್ದವಾಗಿದ್ದು ಜೋತುಬಿದ್ದಿರುತ್ತದೆ. ಮೂಗು ಮಧ್ಯದಲ್ಲಿ ಉಬ್ಬಿಕೊಂಡಿದ್ದು ರೋಮನ್ ಮೂಗಿನ ತರಹ ವಿಶಿಷ್ಟವಾಗಿದೆ. ಬನ್ನೂರು ಟಗರುಗಳಿಗೆ ಬೇರೆ ಟಗರುಗಳಿಗಿರುವಂತೆ ಕೊಂಬುಗಳು ಇರುವುದಿಲ್ಲ. ಕುತ್ತಿಗೆಯ ಕೆಳಭಾಗದಲ್ಲಿ ಟಸೆಲ್ಸ್ ಎನ್ನುವ ಎರಡು ಸಣ್ಣ ಅಂಗಗಳು ನೇತಾಡುತ್ತಿರುತ್ತವೆ. ಬಾಲ ಸಣ್ಣದಿದ್ದು ಗಿಡ್ಡವಾಗಿದೆ.

ಸದೃಢ ದೇಹ ಹಿಂದಿನಿಂದ ನೋಡಿದರೆ ತಲೆಕೆಳಗಾದ U ಆಕಾರದಲ್ಲಿದೆ. ಇದರ ಮಾಂಸ ವಿಶಿಷ್ಟವಾಗಿದ್ದು ಸ್ವಾದಿಷ್ಟವಾಗಿದೆ. ಮಾಂಸದ ಎಳೆಗಳ ಮಧ್ಯೆ ಕೊಬ್ಬಿನ ಪದರ ಹಾಸುಹೊಕ್ಕಾಗಿರುವುದರಿಂದ ಮಾಂಸವು ಅತ್ಯಂತ ಮೃದುವಾಗಿದೆ. ಬೇಯಿಸಿದರೆ ಸುವಾಸನಾಭರಿತ ವಿಶಿಷ್ಟ ಕಂಪು ಹೊರಸೂಸುತ್ತದೆ.

ಇವು ಕೊಡುವ ಉಣ್ಣೆಯ ಪ್ರಮಾಣ ಕಡಿಮೆಯಾಗಿದ್ದು (ಕೇವಲ 375 ಗ್ರಾಂ.) ಇದರಿಂದ ಕಂಬಳಿ, ಕಾಲೊರಸನ್ನು ತಯಾರಿಸುತ್ತಾರೆ.

ಆರು ತಿಂಗಳಲ್ಲಿ ಸುಮಾರು 15 ಕಿಗ್ರಾಂ ತೂಕ ಪಡೆದು, ಒಂದೂರವರೆ ವರ್ಷಗಳಲ್ಲಿ ಪ್ರಾಯಕ್ಕೆ ಬರುತ್ತವೆ. ಗರ್ಭಾವಧಿ 150 ದಿನಗಳಾಗಿದ್ದು ಎರಡು ವರ್ಷದಲ್ಲಿ ಮೊದಲ ಮರಿಯನ್ನು ಹಾಕುತ್ತವೆ. ಟಗರುಗಳು ಸುಮಾರು 38, ಕುರಿಗಳು 25 ಕಿಗ್ರಾಂ ವರೆಗೆ ಬೆಳೆಯುತ್ತವೆ.

ಬನ್ನೂರು ಕುರಿಗಳು ಒಳ ಹಾಗೂ ಹೊರ ಪರೋಪಜೀವಿಗಳಿಂದ ನರಳುತ್ತವೆ. ಕರುಳು ಬೇನೆ, ಆಂತ್ರಾಕ್ಸ್, ಸಿಡುಬುರೋಗ ಇವುಗಳನ್ನು ಬಾಧಿಸುವ ಮಾರಣಾಂತಿಕ ಕಾಯಿಲೆಗಳು. ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ದೇಶದಲ್ಲೇ ವಿಶಿಷ್ಟವಾದ ಮಾಂಸದ ತಳಿ ಬನ್ನೂರು ಕುರಿ ನಮ್ಮ ರಾಜ್ಯದ್ದಾಗಿರುವುದು ಹೆಮ್ಮೆಯ ವಿಷಯ. (ಎಸ್.ಬಿ.ಆರ್.)

**ಬಡಗಿಜೇನು:** ಹೈಮೆನಾಪ್ಟಿರ ಗಣದ ಜೈಲೊಕೋಪಿಡೆ ಕುಟುಂಬದ ಸದಸ್ಯ. ಇದು ಒಂಟಿ ಜೀವನ ನಡೆಸುವ ಜೇನ್ನೊಣ. ಆಂಗ್ಲಭಾಷೆಯಲ್ಲಿ ಕಾರ್ಪೆಂಟರ್ ಬೀ ಎನ್ನುವರು. ಇದರಲ್ಲಿ ಸು. 350 ಪ್ರಭೇದಗಳಿವೆ. ಇವು ಪ್ರಮುಖವಾಗಿ ಉಷ್ಣವಲಯದ ಅರಣ್ಯಗಳಲ್ಲಿ ವಾಸಿಸುತ್ತವೆ. ಬಡಗಿ ಜೇನು ಮಧ್ಯಮ ಗಾತ್ರದಿಂದ ದೊಡ್ಡ ಗಾತ್ರದವರೆಗೆ ಬೆಳೆಯುತ್ತದೆ. ಇದರ ದೇಹದ ಉದ್ದ 15–35 ಮಿಮೀ. ಜೇನುನೊಣಗಳ ಪೈಕಿ ಇದೇ ಅತ್ಯಂತ ದೊಡ್ಡ ಗಾತ್ರದ್ದು. ದೇಹದ ಮೇಲೆಲ್ಲ ದಟ್ಟ ಕೂದಲುಗಳ ಹೊದಿಕೆಯಿದೆ. ನೋಡಲು ದುಂಬಿಯಂತೆ ಕಾಣುತ್ತದೆ. ಮೈಬಣ್ಣ ಕಪ್ಪು ಅಥವಾ ದಟ್ಟ ನೀಲಿ. ಇದು ಮರಗಳನ್ನು ಕೊರೆದು ಗೂಡನ್ನು ರಚಿಸುತ್ತದೆ. ಕಾರಣ ಈ ಹೆಸರು. ತನ್ನ ಬಲವಾದ ದವಡೆಗಳ ಸಹಾಯದಿಂದ ಬೊಂಬು, ದೂಲ ಮತ್ತು ಬಿದುರಿನ ಗಳುಗಳಲ್ಲಿ 30 ಸೆಂಮೀ ಗಿಂತ ಹೆಚ್ಚು ಉದ್ದದ ಸುರಂಗಗಳನ್ನು ಕೊರೆದು, ಅದರಲ್ಲಿ ಅನೇಕ ಕೋಣೆಗಳನ್ನು



ರಚಿಸಿ ಅವುಗಳಲ್ಲಿ ಜೇನುತುಪ್ಪ ಮತ್ತು ಪುಷ್ಪಗಳ ಪರಾಗವನ್ನು ಶೇಖರಿಸಿಡುತ್ತದೆ. ಈ ಜಾಗದಲ್ಲಿ ಮೊಟ್ಟೆಗಳನ್ನಿಟ್ಟು ಮರಿಗಳನ್ನು ಬೆಳೆಸುತ್ತದೆ. ಮೊಟ್ಟೆಗಳನ್ನಿಟ್ಟ ಮೇಲೆ ಕೆಲವೊಮ್ಮೆ ತಾಯಿಹುಳು ಅವುಗಳ ಜೊತೆಯಲ್ಲೇ ಇರುವುದು. ಆದರೆ ಇವುಗಳಲ್ಲಿ ಜೇನ್ನೊಣಗಳಲ್ಲಿರುವಂಥ ಸಾಮಾಜಿಕ ಜೀವನ ಇಲ್ಲ. ಬಡಗಿ ಜೇನಿನಿಂದ ಮರ ಮುಟ್ಟುಗಳಿಗೆ ಹೆಚ್ಚು ನಷ್ಟವಾಗುವುದಾದರೂ, ಪರಾಗ ಸ್ಪರ್ಶ ಕ್ರಿಯೆಯ ಮೂಲಕ ಹಣ್ಣು ಹಂಪಲುಗಳು ಹೆಚ್ಚುವಂತೆ ಇದು ಮಾಡುವುದರಿಂದ ಮಾನವನಿಗೆ ಉಪಕಾರಿಯೆನಿಸಿದೆ. ಭಾರತದಲ್ಲಿ ಸು. 18 ಬಗೆಯ ಬಡಗಿ ಜೇನುಗಳಿವೆ. ಉದಾ: ಜೈಲೊಕೋಪ ಈಸ್ಟುವಾನ್ಸ್, ಜೈ. ಇರಿಡಿಪೆನ್ನಿಸ್, ಜೈ. ಲ್ಯಾಟಿಪಸ್, ಜೈ. ಡಿಸ್ಸಿಮಿಲಿಸ್ ಹಾಗೂ ಜೈ. ಕೊಲಾರಿಸ್. ಯೂರೊಪಿನಲ್ಲಿ ವಾಸಿಸುವ ಜೈ. ವಯೋಲೇಸಿಯ ಅಮೆರಿಕದಲ್ಲಿರುವ ಜೈ. ವರ್ಜಿನಿಕ ಹಾಗೂ ಜೈ. ಕ್ಯಾಲಿಫೋರ್ನಿಕ ಮತ್ತು ಬರ್ಮದಲ್ಲಿರುವ ಜೈ. ರೂಫೆಸೆನ್ಸ್ ಪ್ರಮುಖವಾದವು.

***

**ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ:** ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆ, ಆನೇಕಲ್ ತಾಲೂಕಿನ ಗ್ರಾಮ. ಇಲ್ಲಿ ಸರ್ಕಾರಿ ರಾಷ್ಟ್ರೀಯ ಉದ್ಯಾನವಿದೆ. ಈ ರಾಷ್ಟ್ರೀಯ ಉದ್ಯಾನದ ಒಟ್ಟು ಪ್ರದೇಶ ಸು. 129 ಚಕಿಮೀ. ಇಲ್ಲಿ ನಾನಾ ಜಾತಿಯ ಮರಗಿಡಗಳಿವೆ. ದೇಶದ ಹಲವು ಭಾಗಗಳಿಂದ ತಂದ ವಿವಿಧ ಕಾಡುಪ್ರಾಣಿಗಳನ್ನು ಇಲ್ಲಿಯ ಸ್ವಾಭಾವಿಕ ಪರಿಸರದಲ್ಲಿ ಸಂರಕ್ಷಿಸುವುದು ಈ ಯೋಜನೆಯ ಉದ್ದೇಶ. ಪ್ರಾಣಿಗಳಿಗೆ ಬೇಕಾದ ನೀರಿನ ಸೌಲಭ್ಯಕ್ಕಾಗಿ ಹರಿಯುವ ಸಣ್ಣ ತೊರೆಗಳಿಗೆ ಅಡ್ಡಗಟ್ಟೆ ಹಾಕಿ ನೀರನ್ನು ಸಂಗ್ರಹಿಸಲಾಗಿದೆ. ಸಫಾರಿ ಪಾರ್ಕ್‌ನ ನಿರ್ಮಾಣ ಈ ಯೋಜನೆಯ ಗಮನಾರ್ಹ ಅಂಶ. ಇಲ್ಲಿ ಸಿಂಹ, ಹುಲಿ, ಆಫ್ರಿಕನ್ ಗೊರಿಲ್ಲಾಗಳನ್ನು ಸಂರಕ್ಷಿಸಿ, ಅವುಗಳ ವಂಶಾಭಿವೃದ್ಧಿ ಕಾರ್ಯ ಮಾಡಲಾಗುತ್ತದೆ. ಮೊಸಳೆ ಕೇಂದ್ರವೂ ಈ ಉದ್ಯಾನದಲ್ಲಿದೆ. ಮೊಸಳೆಗಳ ವಂಶಾಭಿವೃದ್ಧಿಗಾಗಿ ಇಲ್ಲಿ ಒಂದು ಸಣ್ಣ ಕೃತಕ ಸರೋವರ ನಿರ್ಮಿಸಿ ಅದರೊಳಗೆ ವಿವಿಧ ಜಾತಿಯ ಮೊಸಳೆಗಳನ್ನು ಬಿಡಲಾಗಿದೆ. ಬನ್ನೇರುಘಟ್ಟ ಭಾರತದಲ್ಲಿ ಒಂದು ಪ್ರಸಿದ್ಧ ವಿಹಾರ ಕೇಂದ್ರವಾಗಿದೆ. ನೋಡಿ: ರಾಷ್ಟ್ರೀಯ ಉದ್ಯಾನಗಳು.

***

**ಬಬೂನ್:** ಸಿರ್‌ಕೋಪಿಥೆಸಿಡೆ ಕುಟುಂಬ, ಪೇಪಿಯೋ ಗುಂಪು ಅಥವಾ ಕೆಲವು ವಿಜ್ಞಾನಿಗಳ ಪ್ರಕಾರ ಚೆಯಿರೊಪಿರ್ತೆಕಸ್ ಗುಂಪಿಗೆ ಸೇರಿದ ದೊಡ್ಡ, ದೃಢಕಾಯದ ಕೋತಿ. ಈ ಗುಂಪಿನಲ್ಲಿ ಐದು ಪ್ರಭೇದಗಳಿವೆ. ಅರೇಬಿಯ, ಆಫ್ರಿಕಾ, ಸಹರದ ದಕ್ಷಿಣ ಭಾಗಗಳಲ್ಲಿ ಮುಖ್ಯವಾಗಿ ಇವು, ಒಭ ಸವಾನಾ ಮತ್ತು ಬಂಡೆಗಳಿರುವ ಸ್ಥಳಗಳಲ್ಲಿ ವಾಸಿಸುತ್ತವೆ.

ಇವು ಚತುಷ್ಪಾದಿ ಮಂಗಗಳು. ಇವಕ್ಕೆ ದಪ್ಪ ತಲೆ, ಗಲ್ಲ, ಚೀಲಗಳು (ಪೌಚ್) ಮತ್ತು ಉದ್ದ, ನಗ್ನ, ನಾಯಿರೀತಿ ಮೂತಿ ಇವೆ. ಮೂತಿಯ ತುದಿಯಲ್ಲಿ ಹೊಳ್ಳೆಯಿದೆ. ತೂಕ 14 ರಿಂದ 40 ಕಿಗ್ರಾಂ. ಉದ್ದ 50 ರಿಂದ 115 ಸೆಂಮೀ. 45–75 ಸೆಂಮೀ ಉದ್ದದ ಕಮಾನಿನ ರೀತಿಯ ಬಾಲವಿದೆ. ಗಂಡು ಹೆಣ್ಣಿಗಿಂತ ಎರಡರಷ್ಟು ದೊಡ್ಡದು.

ಬಬೂನ್‌ಗಳು ನೆಲ ಅಥವಾ ಮರದ ಮೇಲಿರುತ್ತವೆ. ಸಣ್ಣ ಸ್ತನಿಗಳನ್ನು, ಪಕ್ಷಿಗಳನ್ನು ಮತ್ತು ಪಕ್ಷಿಗಳ ಮೊಟ್ಟೆಗಳನ್ನು, ಗಿಡದ ಚಿಗುರುಗಳನ್ನು, ಗೆಡ್ಡೆಗೆಣಸುಗಳನ್ನು ತಿನ್ನುತ್ತವೆ. ಬೆಳೆಯನ್ನು ಸಾಕಷ್ಟು ಹಾಳುಮಾಡುತ್ತವೆ. ಆಹಾರ ಸಂಗ್ರಹಣೆಗೆ ದೊಡ್ಡ ಕೋರೆಹಲ್ಲು, ಶಕ್ತಿಯುತವಾದ ಕೈ, ಕಾಲು ಸಹಾಯಕವಾಗಿವೆ.



ಬಬೂನ್ ಗುಂಪಾಗಿ ವಾಸಿಸುತ್ತವೆ. ಹಿಂಡಿನಲ್ಲಿರುವ ಪ್ರತಿಯೊಂದು ಮಂಗ, ನಿಕಟವಾದ ಸಾಂಘಿಕ ಜೀವನಕ್ಕೆ ಪ್ರಮುಖ ಪಾತ್ರವಹಿಸುತ್ತದೆ. ಸಮಸ್ತ ಹಿಂಡನ್ನು ನಿರ್ವಹಿಸುವ ಮತ್ತು ರಕ್ಷಿಸುವ ಹೊಣೆ ಕೆಲವು ಬಲಿಷ್ಠ ಗಂಡು ಮಂಗಗಳದ್ದು. ಕಾದಾಟದಿಂದ ಒಂದು ಬಬೂನ್ ತನ್ನ ಯಜಮಾನಿಕೆಯನ್ನು ಸ್ಥಾಪಿಸಬೇಕು. ಹಿಂಡಿನಲ್ಲಿರುವ ಪ್ರತಿಯೊಂದು ಗಂಡು ಮತ್ತು ಹೆಣ್ಣಿಗೆ ಬೇರೆ ಬೇರೆ ಶ್ರೇಣಿ ಇರುತ್ತದೆ.

ಬಬೂನ್‌ಗಳು ಬಹಳ ಗದ್ದಲ ಮಾಡುವ ಪ್ರಾಣಿಗಳು. ಹಿಂಡಿನಲ್ಲಿ, ಬೇರೆ ಕಪಿಗಳಿಗೆ ಏನಾದರೂ ತಿಳಿಸಲು, ಅವು ನಿರ್ದಿಷ್ಟ ಅರ್ಥವಿರುವ ಸಂಜ್ಞೆಗಳನ್ನು ಮಾಡುತ್ತವೆ. ಅಪಾಯವನ್ನು ಊಳಿಡುವುದರ ಹಾಗು ಬಾಲ ಅಥವಾ ಭಂಗಿಯ ಮುಖಾಂತರ ಸೂಚಿಸುತ್ತವೆ.

ಬಬೂನ್ ತುಂಬ ಬುದ್ಧಿಶಕ್ತಿಯಿರುವ ಶಿಕ್ಷಣಾರ್ಹ ಪ್ರಾಣಿ. ರೋಮ ಕವಚದ ಬಣ್ಣದಲ್ಲಿ ವ್ಯತ್ಯಾಸವಿರುತ್ತದೆ, ಅದರ ರಚನೆ ಒರಟಾಗಿರುತ್ತದೆ. ಗಂಡು ಕಪಿಗಳಲ್ಲಿ ಭುಜಭಾಗದಲ್ಲಿ ಉದ್ದ ರೋಮಗಳಿರುತ್ತವೆ. ದೇಹದ ಕೆಳಭಾಗಗಳು, ಕೈ, ಕಾಲು, ಮುಖ ಮತ್ತು ಪೃಷ್ಠ ಭಾಗಗಳಲ್ಲಿ ಎದ್ದು ಕಾಣುವ ಬಣ್ಣಗಳಿರುತ್ತವೆ.

ಒಂದು ಸಲಕ್ಕೆ ಒಂದೇ ಮರಿ ಹುಟ್ಟುವುದು. ಗರ್ಭಾವಸ್ಥೆ ಏಳು ತಿಂಗಳು. ಪಿ. ಅರ್ಸಿನಸ್, ಪಿ. ಕೊಮ್ಯಾಟಸ್, ಪಿ.ಪೆಪಿಯೊ, ಪಿ. ಹೆಮಾಡ್ರೈಯರ್ ಮುಖ್ಯ ಪ್ರಭೇದಗಳು. (ಎಸ್.ಆರ್.ಎಸ್.)

**ಬರ್ನೆಟ್, ಸರ್ ಫ್ರಾಂಕ್ ಮ್ಯಾಕ್ ಫರ್ಲೇನ್ (1899–1985) :** ಆಸ್ಟ್ರೇಲಿಯದ ಸೋಂಕುರಕ್ಷಣ ವಿಜ್ಞಾನಿ (ಇಮ್ಯೂನಾಲಜಿಸ್ಟ್), ಜನನ ವಿಕ್ಟೋರಿಯಾ (ಆಸ್ಟ್ರೇಲಿಯ). 3–9–1899. ಆಸ್ಟ್ರೇಲಿಯದ ವಿಕ್ಟೋರಿಯ ಪ್ರಾಂತ್ಯದಲ್ಲಿರುವ ಟ್ರಾರಲ್‌ಗನ್ ಎಂಬ ಪಟ್ಟಣದಲ್ಲಿ ಸ್ಥಳೀಯ ಬ್ಯಾಂಕೊಂದರ ಕಾರ್ಯನಿರ್ವಾಹಕನ ಮಗನಾಗಿ ಜನಿಸಿದ ಬರ್ನೆಟ್ ವಿಕ್ಟೋರಿಯದ ಗೀಲಾಂಗ್ ಕಾಲೇಜಿನಲ್ಲಿ ವೈದ್ಯಕೀಯ ವ್ಯಾಸಂಗ ಮಾಡಿ ಮೆಲ್‌ಬೋರ್ನ್ ವಿಶ್ವವಿದ್ಯಾಲಯದ ವೈದ್ಯಕೀಯ ಪದವಿಯನ್ನು 1923ರಲ್ಲಿ ಪಡೆದು ಅಲ್ಲೇ ಅಧ್ಯಾಪಕರಾಗಿ ಸೇರಿದರು. ಅನಂತರ ಲಂಡನ್ನಿನ ಲಿಸ್ಟರ್ ಇನ್‌ಸ್ಟಿಟ್ಯೂಟಿನಲ್ಲಿ ಎರಡು ವರ್ಷ ಉನ್ನತ ವ್ಯಾಸಂಗ ಕೈಗೊಂಡು ವಿಕಾಣುವಿಜ್ಞಾನದಲ್ಲಿ ಪಿ.ಎಚ್.ಡಿ. ಪದವಿ ಗಳಿಸಿ 1927ರಲ್ಲಿ ಮೆಲ್‌ಬೋರ್ನಿಗೆ ವಾಪಸಾಗಿ ಅಲ್ಲಿಯ ವಾಲ್ಟರ್ ಮತ್ತು ಎಲೀಜಾ ಹಾಲ್ ವೈದ್ಯಕೀಯ

ಸಂಶೋಧನ ಸಂಸ್ಥೆಯಲ್ಲಿ ಸಹಾಯಕ ನಿರ್ದೇಶಕರಾಗಿ ನೇಮಿತರಾದರು. 1944ರಲ್ಲಿ ಅದೇ ಸಂಸ್ಥೆಯ ಮುಖ್ಯ ನಿರ್ದೇಶಕರಾಗಿ ಬಡ್ತಿ ಪಡೆದರು. ಬ್ಯಾಕ್ಟೀರಿಯಾಗಳಲ್ಲಿ ಸೋಂಕು ಉಂಟುಮಾಡುವ ಬ್ಯಾಕ್ಟೀರಿಯೋಫೇಜುಗಳೆಂಬ ವೈರಸುಗಳ ವ್ಯಾಸಂಗ ಕೈಗೊಂಡು ಅವನ್ನು ಬಳಸಿಕೊಂಡು ಏಕಾಣುಗಳ ಜಾತಿಯನ್ನು ನಿರ್ದಿಷ್ಟವಾಗಿ ಗುರುತು ಹಚ್ಚಬಹುದೆಂಬ ಸಂಗತಿ ವ್ಯಕ್ತಪಡಿಸಿದರು. ಕೋಳಿಮೊಟ್ಟೆಯೊಳಗೆ ಬೆಳೆಯುತ್ತಿರುವ ಭ್ರೂಣದೊಳಗೆ ವೈರಸ್ ಹುಗಿಸಿ ಕೃಷಿಮಾಡಬಹುದು ಎಂದು ಮೊತ್ತಮೊದಲಾಗಿ ತೋರಿಸಿದರು (1933). ವೈರಸುಗಳ ಕೃಷಿಯ ಈ ವಿಧಾನವನ್ನು ಇಂದಿಗೂ ಅನುಸರಿಸಲಾಗುತ್ತಿದೆ.

ಕೋಳಿಮೊಟ್ಟೆಯ ಭ್ರೂಣದೊಳಗೆ ವೈರಸುಗಳನ್ನು ಹುಗಿಸಿ ಕೃಷಿಮಾಡಬಹುದಾದ ವಿಧಾನ ಕಂಡುಕೊಂಡ ಮೇಲೆ ಬರ್ನೆಟ್ ಇನ್‌ಫ್ಲೂಎಂಜಾ ಕ್ರಿಮಿಗಳನ್ನೂ ಇತರ ವೈರಸುಗಳನ್ನೂ ಕೃಷಿ ಮಾಡತೊಡಗಿದರು. ಭ್ರೂಣ ಇಂಥ ವೈರಸುಗಳ ಕೃತಕ ಸೋಂಕನ್ನು ಪ್ರತಿರೋಧ ತೋರದೆ ಸಹಿಸಿಕೊಂಡು ಅವುಗಳ ಸಂಖ್ಯಾಭಿವೃದ್ಧಿಗೆ ಅವಕಾಶಕೊಡುವುದು ಇವರಿಗೆ ಆಶ್ಚರ್ಯಕರ ಎನಿಸಿತು. ಯಾವುದೇ ಪ್ರಾಣಿಯು ದೇಹದ ಒಳಗೆ ಅನ್ಯಪ್ರೋಟೀನ್ ಯುಕ್ತವಸ್ತುವನ್ನು–ಉದಾಹರಣೆಗೆ ರೋಗಾಣುಗಳು, ಸಹಿಸಿಕೊಳ್ಳದು. ಪ್ರತಿರೋಧಜನಕ ಪ್ರೋಟೀನ್ ಸಾಮಾನ್ಯವಾಗಿ ಅನ್ಯಜಾತಿ ಜೀವಿಜನ್ಯವಾಗಿರಬೇಕಾಗಿದ್ದರೂ ಕೆಲವು ವೇಳೆ ಸ್ವಜಾತಿ ಪ್ರಾಣಿಗಳ ಪ್ರೋಟೀನ್‌ಕೂಡ ಪ್ರತಿರೋಧವಸ್ತುಗಳನ್ನು ಉತ್ಪಾದಿಸುವ ವಿಷಯ ಈ ಶತಮಾನದ ಅದಿಯಲ್ಲಿ ವ್ಯಕ್ತಪಟ್ಟಿತ್ತು. ಅಂದರೆ ಒಂದು ಜೀವಿಯಲ್ಲಿ ಅದೇ ಜಾತಿ ಜೀವಿಗೆ ಒಗ್ಗದ ಪ್ರೋಟೀನುಗಳು ಇರುವುದೂ, ಈ ತಳಹದಿಯ ಮೇಲೆ ಒಂದೇ ಜಾತಿಪ್ರಾಣಿಗಳಲ್ಲಿ ವಿವಿಧಗೋತ್ರಗಳನ್ನು ವಿಂಗಡಿಸಬಹುದೆಂಬುದೂ ವೈದ್ಯವಿಜ್ಞಾನಿಗಳಿಗೆ ಗೊತ್ತಾಗಿತ್ತು. ಆದರೆ ಈಗ ಬರ್ನೆಟ್ಟನ ವೈರಸ್ ಕೃಷಿ ವಿಧಾನದಿಂದ ಅನ್ಯಪ್ರೋಟೀನಾದ ವೈರಸ್ ಕೋಳಿಭ್ರೂಣದಲ್ಲಿ ಪ್ರತಿರೋಧ ವಸ್ತುಜನಕವಾಗಿ ಇಲ್ಲದೇ ಇರುವುದು ವ್ಯಕ್ತಪಟ್ಟಿತು. ಅಲ್ಲದೆ ವಿಸ್‌ಕಾನ್‌ಸಿನ್ ವಿಶ್ವವಿದ್ಯಾಲಯದ ಓವೆನ್ ಎಂಬಾತ ಗರ್ಭಸ್ಥ ಯಮಳ ಕರುಗಳಲ್ಲಿ ಅವುಗಳ ರಕ್ತ ಪ್ರಾರಂಭದಲ್ಲಿ ಬೇರೆ ಬೇರೆ ಗೋತ್ರದವೇ ಆಗಿದ್ದರೂ ಗರ್ಭದಲ್ಲಿ ಬೆಳೆಯುತ್ತಿರುವಾಗ ಬೆರಕೆ ಆಗಿ, ಎಡವಟ್ಟು ಏನೂ ಆಗದೆ ಜೀವಂತ ಕರುಗಳನ್ನು ಈಯುವುದನ್ನೂ, ಆಗುವುದನ್ನೂ ಅವು ತಮ್ಮ ಜೀವಮಾನಪರ್ಯಂತ ಹೀಗೆ ಬೆರಕೆ ರಕ್ತದವೇ ಆಗಿರುವುದನ್ನೂ ತೋರಿಸಿದ (1946). ಇದಕ್ಕೆ ಕೆಲವು ವರ್ಷಗಳ ಹಿಂದೆ ಅಮೆರಿಕದ ರಾಕ್‌ಫೆಲರ್ ಸಂಸ್ಥೆಯಲ್ಲಿ ಟ್ರೌಟ್ ಎಂಬಾತ ಗರ್ಭಸ್ಥ ಇಲಿಭ್ರೂಣಗಳಿಗೆ ವಿಶಿಷ್ಟ ವೈರಸ್ಸೊಂದರ ಸೋಂಕನ್ನು ತಾಗಿಸಿದಾಗ ಅವು ರೋಗ ಬಾಧಿತವಾಗದೆ ಆರೋಗ್ಯಸ್ಥಿತಿಯಲ್ಲಿ ಜನಿಸುವುದನ್ನೂ ಆದರೆ ಜೀವಮಾನ ಪರ್ಯಂತ ತಮ್ಮ ದೇಹದೊಳಗೆ ಈ ವೈರಸ್ಸುಗಳನ್ನು ಹೊಂದಿರುವುವೆಂಬುದನ್ನೂ ವಿಶದಪಡಿಸಿದ್ದ. ಆಗಿನ ವೈದ್ಯಕೀಯ ತಿಳಿವಳಿಕೆಯ ಪ್ರಕಾರ ಮೇಲಿನ ಪ್ರಯೋಗಗಳಲ್ಲಿ ಒಂದು ಕರುವಿನ ರಕ್ತ ಇನ್ನೊಂದು ಕರುವಿನಲ್ಲಿ ಮತ್ತು ವೈರಸ್ ಇಲಿಭ್ರೂಣದಲ್ಲಿ ಅನ್ಯಪ್ರೋಟೀನಾಗಿ ವರ್ತಿಸಿ ಪ್ರತಿರೋಧ ವಸ್ತುವನ್ನು ಉತ್ಪಾದಿಸಿ ಅನಾಹುತವನ್ನು ಉಂಟು ಮಾಡಬೇಕಾಗಿತ್ತು. ಬೆಳೆದ ಕರುಗಳಲ್ಲಿ ರಕ್ತಮಿಶ್ರಣ ಮತ್ತು ಬೆಳೆದ ಇಲಿಯಲ್ಲಿ ವೈರಸ್ಸಿನ ಸೋಂಕು ಉಂಟಾದಾಗ ಅನಾಹುತ ಆಗುವುದೇ ಖಂಡಿತ. ಆದರೆ ಗರ್ಭಸ್ಥ ಕರುವಿನಲ್ಲಿ ಮತ್ತು ಇಲಿಯ ಭ್ರೂಣದಲ್ಲಿ ಹೀಗಾಗಲಿಲ್ಲ. ಟ್ರೌಟನ, ಓವೆನ್ನನ ಮತ್ತು ಸ್ವಂತ ಪ್ರಯೋಗಗಳಿಂದ ತಿಳಿದುಬಂದ ಈ ವಿಷಯಗಳನ್ನೆಲ್ಲ ಕ್ರೋಡೀಕರಿಸಿ ಪರ್ಯಾವಲೋಚಿಸುತ್ತ ಬರ್ನೆಟ್ ಈ ತೀರ್ಮಾನಕ್ಕೆ ಬಂದರು: ಭ್ರೂಣಾವಸ್ಥೆಯ ವೇಳೆ ಭ್ರೂಣದ ಸಂಪರ್ಕಹೊಂದಿದ ಯಾವ ಪ್ರೋಟೀನಿಗೇ ಅಗಲಿ ಪ್ರತಿರೋಧವಿರುವುದಿಲ್ಲ. ಆ ಪ್ರೋಟೀನುಗಳೆಲ್ಲ ಜನನಾನಂತರವೂ ಜೀವಿಗೆ ಒಗ್ಗುವಂಥವೇ ಆಗಿರುತ್ತವೆ. ಜನನಾನಂತರ ಅನ್ಯ, ಆದರೆ ಜೀವಿಯ ದೇಹದಲ್ಲಿಲ್ಲದ ಮತ್ತು ಅದರ ಭ್ರೂಣಾವಸ್ಥೆಯಲ್ಲಿ ಅದು ಸಂಪರ್ಕ ಪಡೆದಿರದ, ಪ್ರೋಟೀನುಗಳಿಗೆ ಪ್ರತಿರೋಧವಿದ್ದು ಅಂಥ ಪ್ರೋಟೀನುಗಳು ಜೀವಿಗೆ ಒಗ್ಗದವಾಗಿರುತ್ತವೆ. ಜೀವಿಯ ದೇಹದಲ್ಲಿ ಇಂಥ ಪ್ರೋಟೀನುಗಳೆಲ್ಲ ಪ್ರತಿರೋಧವಸ್ತುಜನಕಗಳಾಗಿ ವರ್ತಿಸಿ ಪ್ರತಿರೋಧವಸ್ತುಗಳನ್ನು ಉತ್ಪಾದಿಸಿ ಅವುಗಳಿಂದ ತಾವೇ ನಿಷ್ಕ್ರಿಯೆಗೊಳ್ಳಪಡುತ್ತವೆ.

ಸೋಂಕು ನಿರೋಧಕತೆಯ ವಿಚಾರವಾಗಿ ಬರ್ನೆಟ್ ಅವರ ಈ ಸಿದ್ಧಾಂತಕ್ಕೆ ಕ್ಲೋನಲ್ ಸೆಲೆಕ್ಷನ್ ಸಿದ್ಧಾಂತ ಎಂದು ಹೆಸರು (ಜೀವಿಯಲ್ಲಿ ಕಾಣಬರುವ ಪ್ರತಿರೋಧಕತೆಯ ವಿಚಾರವಾಗಿ ವ್ಯಾಸಂಗಗಳು ಇಂದಿಗೂ ಮುಂದುವರಿಯುತ್ತಲೇ ಇದ್ದು ಬರ್ನೆಟರ ಕ್ಲೋನಲ್ ಸೆಲೆಕ್ಷನ್ ಸಿದ್ಧಾಂತ ಮಾರ್ಪಾಡಾಗಿ ಇನ್ನೂ ಅನೇಕ ವಿಷಯಗಳು ಸ್ಪಷ್ಟವಾಗಿವೆ). ತಮ್ಮ ಸಿದ್ಧಾಂತದ ಪ್ರಕಾರ ಯಾವುದೇ ನಿರ್ದಿಷ್ಟ ಪ್ರೋಟೀನನ್ನು ಒಂದು ಪ್ರಾಣಿಯ ಭ್ರೂಣಾವಸ್ಥೆಯಲ್ಲಿ ಅದರ ಒಳಹುಗಿಸಿ ಜನನಾನಂತರವೂ ಆ ಪ್ರೋಟೀನ್ ಅದರ ದೇಹದಲ್ಲಿ ಪ್ರತಿರೋಧವಸ್ತುಜನಕವಾಗಿ ವರ್ತಿಸದೆ ಒಗ್ಗಿಕೊಳ್ಳುವಂತೆ ಮಾಡಬಹುದು, ಎಂದು ಬರ್ನೆಟ್ ಭವಿಷ್ಯ ನುಡಿದಿದ್ದರು (1946).

ಆದರೆ ಈ ದಿಶೆಯಲ್ಲಿ ಬರ್ನೆಟ್ ಸ್ವತಃ ಮಾಡಿದ ಪ್ರಯೋಗಗಳು ಸಫಲವಾಗಲಿಲ್ಲ. ಕೋಳಿಯ ಭ್ರೂಣದೊಳಗೆ ಸಾಮಾನ್ಯವಾಗಿ ಪ್ರತಿರೋಧವಸ್ತುಜನಕಗಳಾಗಿ ಬಳಸುವ ಅನ್ಯ ಪ್ರೋಟೀನುಗಳನ್ನು ಹುಗಿಸಿದ ಬಳಿಕ ಜನಿಸಿದ ಕೋಳಿಮರಿಯಲ್ಲಿ ಈ ಪ್ರೋಟೀನುಗಳು ಒಗ್ಗದಂಥವೇ ಆಗಿದ್ದು ಪ್ರತಿರೋಧವಸ್ತುಗಳನ್ನು ಉತ್ಪಾದಿಸುವುದು ಕಂಡುಬಂತು. ಇದರಿಂದ ಬರ್ನೆಟ್ ಮಾಡಿದ ಸೂಚನೆ ತಪ್ಪೇನೋ ಅವರ ಭವಿಷ್ಯವಾಣಿ ಸುಳ್ಳೇನೋ ಎನ್ನಿಸಿದರೂ ಬೇರೆ ರೀತಿಯ ಪ್ರಯೋಗಗಳಿಂದ ಅವರು ಸೂಚಿಸಿದ ತತ್ತ್ವಕ್ಕೆ (ರ್‍ಯಾಷನಲ್) ಬೆಂಬಲ ಸಿಕ್ಕಿತು. ಬರ್ನೆಟ್ ಅವರ ವ್ಯಾಸಂಗಗಳು ಜರುಗುತ್ತಿದ್ದ ಆ ಸಮಯದಲ್ಲೆ ಅಂಗ, ಅಂಗಾಂಶಗಳ ನಾಟಿವಿಷಯದಲ್ಲೂ ಪ್ರಯೋಗಾತ್ಮಕ ವ್ಯಾಸಂಗಗಳು ಜರುಗುತ್ತಿದ್ದವು. ಒಂದು ಪ್ರಾಣಿಗೆ ಅದೇ ಜಾತಿಯ ಇನ್ನೊಂದು ಪ್ರಾಣಿಯ ಅಂಗವನ್ನು ನಾಟಿಹಾಕಿದರೆ, ನಾಟಿಮಾಡಿದ ಅಂಗ ಪ್ರಾಣಿಯ ದೇಹದಲ್ಲಿ ಅನ್ಯಪ್ರೋಟೀನಿನಂತೆ ವರ್ತಿಸಿ ಪ್ರತಿರೋಧವಸ್ತುಗಳನ್ನು ಉತ್ಪಾದಿಸಿ ಅವುಗಳಿಂದ ತಾನೇ ನಿಷ್ಕ್ರಿಯೆಗೊಳಿಸಲ್ಪಟ್ಟು ನಾಶವಾಗುವುದೂ ಆದ್ದರಿಂದಲೇ ಅನ್ಯಮೂಲದ ನಾಟಿ ಸಾಮಾನ್ಯವಾಗಿ ಸಫಲವಾಗದೆ ಹೋಗುವುದೂ ಇಷ್ಟು ಹೊತ್ತಿಗೆ ತಿಳಿದುಬಂದಿತು. ಮೈಸುಟ್ಟು ವಿಕೃತಿಗೊಂಡ ವ್ಯಕ್ತಿಗಳಿಗೆ ಬೇರೆಯವರ ಚರ್ಮವನ್ನು ನಾಟಿಹಾಕಿ ದುರಸ್ತಿಮಾಡುವ ಕ್ರಮ ಹೀಗೆ ಸಾಮಾನ್ಯವಾಗಿ ವಿಫಲವೇ ಆಗುತ್ತಿತ್ತು. ಬರ್ನೆಟ್ ದೇಹಕ್ಕೆ ಅನ್ಯ ಪ್ರೋಟೀನನ್ನು ಒಗ್ಗಿಸಬೇಕಾದರೆ ಏನು ಮಾಡಬೇಕು ಎಂದು ಸೂಚಿಸಿದ್ದಂತೆ ಮೇಡಾವರ್ ಎಂಬ ಬ್ರಿಟಿಷ್ ವೈದ್ಯ ಚರ್ಮದ ನಾಟಿ ವಿಷಯದಲ್ಲಿ ಪ್ರಯೋಗ ಕೈಗೊಂಡರು (1948). ಇಲಿಯ ಭ್ರೂಣಾವಸ್ಥೆಯಲ್ಲಿ ಮೇಡಾವರ್ ಅದರ ದೇಹಕ್ಕೆ ಇನ್ನೊಂದು ವಂಶದ ಇಲಿಯ ಗುಲ್ಮದ ಕೋಶಗಳನ್ನು ಹುದುಗಿಸಿದರು. ಜನನಾನಂತರ ಈ ಇಲಿಮರಿಗೆ ಗುಲ್ಮಕೋಶದಾತೃ ಇಲಿಯ ಚರ್ಮವನ್ನು ನಾಟಿ ಹಾಕಿದರು. ನಾಟಿ ಸಫಲವಾಯಿತು. ಹೀಗೆ ಬರ್ನೆಟರ ವಾದ ಪ್ರಾಯೋಗಿಕವಾಗಿ ದೃಢೀಕರಿಸಲ್ಪಟ್ಟಂತಾಯಿತು. ಈ ಸಿದ್ಧಿ ಬರ್ನೆಟ್ ಮತ್ತು ಮೇಡಾವರ್ ಇವರಿಗೆ ನೊಬೆಲ್ ಪಾರಿತೋಷಕವನ್ನು (1960) ಜಂಟಿಯಾಗಿ ದೊರಕಿಸಿಕೊಟ್ಟಿತು.

ಮಾನವರಲ್ಲಿ ಅಂಗನಾಟಿಯ ಸಾಫಲ್ಯಕ್ಕಾಗಿ ಬರ್ನೆಟ್ ಸೂಚಿಸಿದ ಕ್ರಮವನ್ನು ಅನುಸರಿಸುವ ಹಾಗಿಲ್ಲವೆಂಬುದು ವ್ಯಕ್ತ. ಅದೃಷ್ಟವಶಾತ್ ಅನ್ಯಪ್ರೋಟೀನಿಗೆ ಪ್ರತಿರೋಧವಿರದಂತೆ ಮಾಡಲು ಬೇರೆ ವಿಧಾನಗಳು ತಿಳಿದುಬಂದಿವೆ. ಉದಾಹರಣೆಗೆ 6–ಮರ್‌ಕ್ಯಾಪ್ಟೋಪ್ಯೂರಿನನ್ನು ಬಳಸಿ ಪ್ರತಿರೋಧವಸ್ತು ಉತ್ಪಾದನೆಯನ್ನು ತಡೆಯಬಹುದು ಎಂದು ತೋರಿಸಲಾಗಿದೆ. ಅಂಥ ರಾಸಾಯನಿಕಗಳ ಬಳಕೆಯಿಂದ ಮತ್ತು ಇತರ ಅಗತ್ಯಕ್ರಮಗಳಿಂದ ಈಗ ಮಾನವರಲ್ಲಿ ಅಂಗನಾಟಿ ಸಫಲವಾಗುತ್ತಿದೆ.

ಪ್ರಧಾನವಾಗಿ ವೈರಸುಗಳ ಸೋಂಕು ಹಾಗೂ ಅವುಗಳ ವಿರುದ್ಧ ರಕ್ಷಣೆ. ಈ ವ್ಯಾಸಂಗಗಳಲ್ಲಿ ನಿರತರಾಗಿದ್ದು ಆನುಷಂಗಿಕವಾಗಿ ಕ್ಲೋನಲ್ ಸೆಲೆಕ್ಷನ್ ಸಿದ್ಧಾಂತವನ್ನು ಮಂಡಿಸಿದ ಬರ್ನೆಟ್ Q ಜ್ವರದ ಕ್ರಿಮಿ, ಒಂದು ಬಗೆಯ ರಿಕೆಟ್ಸಿಯ (ಇದನ್ನು ರಿಕೆಟ್ಸಿಯ *ಬರ್ನೆಟಿ* ಎಂದೇ ಕರೆಯಲಾಗಿದೆ) ಮುಂತಾದ ಆಸ್ಟ್ರೇಲಿಯದಲ್ಲಿ ಪ್ರಧಾನವಾಗಿ ಕಾಣಬರುವ ಅನೇಕ ಬಗೆಯ ವೈರಸುಗಳು ಮತ್ತಿತರ ರೋಗಾಣುಗಳನ್ನು ಪ್ರತ್ಯೇಕಿಸಿದ್ದಾರೆ. ಇವರ ವೈಜ್ಞಾನಿಕ ಸಂಶೋಧನೆಗಳ ಮಹತ್ವವನ್ನು ಗುರುತಿಸಿ 1942ರಲ್ಲಿ ಇವರನ್ನು ಲಂಡನ್ನಿನ ರಾಯಲ್ ಸೊಸೈಟಿಯ ಫೆಲೋ ಅಗಿ ಚುನಾಯಿಸಲಾಯಿತು. 1947ರಲ್ಲಿ ಇವರಿಗೆ ರಾಯಲ್ ಸೊಸೈಟಿಯ ಪದಕವೂ 1950ರಲ್ಲಿ ಕೋಪ್ಲಿ ಪದಕವೂ ದೊರೆತುವು. 1951ರಲ್ಲಿ ಸರ್ ಪದವಿಯನ್ನು ಕೊಡಲಾಯಿತು. ಬರ್ನೆಟ್, 1985 ರಲ್ಲಿ ಮರಣಹೊಂದಿದರು.

***

**ಬರ್ಬಟ್:** ಗ್ಯಾಡಿಡೆ ಕುಟುಂಬಕ್ಕೆ ಸೇರಿದ ಮೀನು. ಲೋಟ ಲೋಟ ಇದರ ವೈಜ್ಞಾನಿಕ ಹೆಸರು. ನಿಷ್ಕೃಷ್ಟವಾಗಿ ಒಳನಾಡಿನ ಆಳವಾದ ಜಲಾಶಯಗಳಲ್ಲಿ ವಾಸಿಸುವ ಕಾಡ್ ಮೀನಿನ ಜಾತಿಗೆ ಸೇರಿದ ಏಕೈಕ ಮೀನು. ಉತ್ತರ ಅಮೆರಿಕ, ಮಧ್ಯ ಮತ್ತು



ಉತ್ತರ ಯುರೋಪಿನ ಒಳನಾಡ ನೀರಿನಲ್ಲಿ ಕಾಣದೊರೆಯುತ್ತದೆ. ಕೆಳದವಡೆಯಲ್ಲಿ ಒಂದೇ ಒಂದು ಸ್ಪರ್ಶಾಂಗವೂ ಗಂಟಲಿನ ಭಾಗದಲ್ಲಿ ಸಣ್ಣ ಕಿಬ್ಬೊಟ್ಟೆಯ ಎರಡು ಈಜು ರೆಕ್ಕೆಗಳೂ ಇರುವುದು ಈ ಮೀನಿನ ವೈಶಿಷ್ಟ್ಯ. ಇದರ ಉದ್ದ ಸುಮಾರು 1.5 ಮೀ. ತೂಕ ಸುಮಾರು 4 ಕಿಗ್ರಾಂ.

ಬರ್ಬಟ್ ಮೀನು ನಿಶಾಚರಿ. ನೀರಿನಲ್ಲಿರುವ ಹುಳುಗಳು, ಇತರ ಮೀನು ಮರಿಗಳು ಮತ್ತು ಕಪ್ಪೆಗಳು ಇದರ ಪ್ರಧಾನ ಆಹಾರ. ಚಳಿಗಾಲದಲ್ಲಿ ಆಳವಿಲ್ಲದ ನೀರಿನಲ್ಲಿ ಅಥವಾ ಸಣ್ಣ ಝರಿಗಳಲ್ಲಿ ಮೊಟ್ಟೆ ಇಟ್ಟು ಮರಿಮಾಡುತ್ತದೆ. ಸಾಮಾನ್ಯವಾಗಿ ಈ ಮೀನು ಹಗಲಿನಲ್ಲಿ ಬಂಡೆಗಳ ಸಂದಿಗಳಲ್ಲಿ, ಗಿಡಗಳ ಮಧ್ಯದಲ್ಲಿ ಅವಿತುಕೊಂಡಿದ್ದು ರಾತ್ರಿ ವೇಳೆಯಲ್ಲಿ ಮಾತ್ರ ಹೊರಕ್ಕೆ ಬರುವುದರಿಂದ ಬೇರೆ ಮೀನುಗಳಷ್ಟು ಪ್ರಸಿದ್ಧವಾಗಿಲ್ಲ. (ಕೆ.ವಿ.ಡಿ)

**ಬಯೊಮೆಡಿಕಲ್ ಎಂಜನಿಯರಿಂಗ್:** ಕೃತಕ ಅಂಗಗಳು (ಪ್ರಾಸ್ತೆಸಿಸ್), ವೈದ್ಯಕೀಯ ಉಪಕರಣಗಳು, ರೋಗಪರೀಕ್ಷಾ ಉಪಕರಣಗಳು, ಔಷಧಿಗಳು ಹಾಗೂ ಇನ್ನಿತರ ಚಿಕಿತ್ಸೆಗಳ ಅಭಿವೃದ್ಧಿ ಮತ್ತು ಉತ್ಪಾದನೆಗಳಿಗೆ ಸಂಬಂಧಪಟ್ಟ ಶಾಖೆ. ತಂತ್ರಜ್ಞಾನದ ಇತರ ಪ್ರಕಾರಗಳಿಗೆ ಹೋಲಿಸಿದಾಗ ಇದು ಜೈವಿಕ ಸುರಕ್ಷತೆ ಹಾಗೂ ನಿಯಂತ್ರಣಗಳ ಬಗ್ಗೆ ಜಾಸ್ತಿ ಕಾಳಜಿವಹಿಸುತ್ತದೆ. ಆದ ಕಾರಣ ಇದನ್ನು ತಂತ್ರಜ್ಞಾನದ ಸಿದ್ಧಾಂತಗಳು (ಪ್ರಿನ್ಸಿಪಲ್ಸ್) ಹಾಗೂ ಕೌಶಲ್ಯಗಳನ್ನು (ಟೆಕ್ನಿಕ್ಸ್) ವೈದ್ಯಕೀಯ ವಿಜ್ಞಾನದಲ್ಲಿ ಅಳವಡಿಸಿಕೊಳ್ಳುವುದು ಎಂದು ವ್ಯಾಖ್ಯಾನಿಸಬಹುದು.

1930ನೇ ದಶಕದಲ್ಲಿ, ಹಿಂದೆಯೇ ಅನ್ವೇಷಿಸಲ್ಪಟ್ಟಿದ್ದ ಕ್ಷ–ಕಿರಣಗಳು ಅಂಗಾಂಶಗಳ ಮೇಲೆ ಬೀರುವ ಪರಿಣಾಮ ಹಾಗೂ ಅಂಗಾಂಶಗಳ ವಿದ್ಯುದ್ಗ್ರಾಹಕತೆಗಳ ಬಗ್ಗೆ ವಿಜ್ಞಾನಿಗಳು ಅರಿತುಕೊಳ್ಳಲಾರಂಭಿಸಿದ್ದರು. ಈ ಅನ್ವೇಷಣೆಗಳ ಪರಿಣಾಮವಾಗಿ ಕ್ಷ–ಕಿರಣಗಳ ಸಹಾಯದಿಂದ ದೇಹದ ಹೆಚ್ಚಿನ ಅಂಗವ್ಯವಸ್ಥೆಗಳ ಪರೀಕ್ಷೆ ಸಾಧ್ಯವಾಯಿತು. ಇದೇ ಮುಂದೆ ಬೆಳೆದು ವೈದ್ಯಕೀಯ ದೃಶ್ಯ (ಇಮೇಜಿಂಗ್) ತಂತ್ರಜ್ಞಾನದ ಆಧುನಿಕ ವಿನ್ಯಾಸಕ್ಕೆ ನಾಂದಿಯಾಯಿತು ಹಾಗೂ ಅನ್ವೇಷಣಾ ಕಾರಣಗಳಿಗಾಗಿ ಮಾಡಲಾಗುತ್ತಿದ್ದ ಶಸ್ತ್ರಚಿಕಿತ್ಸೆಗಳ ಅಗತ್ಯತೆ ಕೊನೆಯಾಯಿತು. ಈ ದೃಶ್ಯತಂತ್ರಜ್ಞಾನದ ಬಳಕೆಯಿಂದಾಗಿ ಇಂದು ಅನೇಕಾನೇಕ ಜೀವವೈದ್ಯಕೀಯ ಸೌಲಭ್ಯಗಳು ಲಭ್ಯವಿರುತ್ತವೆ. ಇವುಗಳು ಮುಂಚೆ ಉಪಯೋಗಿಸಲ್ಪಡುತ್ತಿದ್ದ ಊರುಗೋಲು (ಕ್ರಚ್ಸ್), ಮರದ ಹಲ್ಲುಗಳು ಹಾಗೂ ವೈದ್ಯರ ಪೆಟ್ಟಿಗೆಯಲ್ಲಿ ಸಾಮಾನ್ಯವಾಗಿ ಗೋಚರಿಸಲ್ಪಡುತ್ತಿದ್ದ ವಸ್ತುಗಳ ಸ್ಥಾನದಲ್ಲಿ ಕೃತಕ ಹೃದಯೋಪಕರಣಗಳು, ರಕ್ತ ಶುದ್ಧೀಕರಣ ಯಂತ್ರಗಳು, ಪರೀಕ್ಷಾ ಉಪಕರಣಗಳು, ಕೃತಕ ಅಂಗಾಂಶಗಳು, ಅಂಗಾಂಶಕಸಿ ಮುಂತಾದುವುಗಳು ಉಪಯೋಗಕ್ಕೆ ಬರಲು ಮುಖ್ಯ ಕಾರಣವಾಗಿರುತ್ತವೆ.

ಜೀವ ವೈದ್ಯಕೀಯ ವಿಜ್ಞಾನವು ಮುಖ್ಯವಾಗಿ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ;

1. ಹೊಸ ಹೊಸ ಜ್ಞಾನಗಳ ಗಳಿಕೆ ಹಾಗೂ ತಂತ್ರಜ್ಞಾನವನ್ನು ಆಧಾರವಾಗಿಟ್ಟುಕೊಂಡು, ಪ್ರಾಯೋಗಿಕ ಹಾಗೂ ವಿಶ್ಲೇಷಕ (ಅನೆಲಿಟಿಕಲ್) ತಂತ್ರಗಳನ್ನು ಬಳಸಿಕೊಂಡು ಜೈವಿಕ ವ್ಯವಸ್ಥೆಗಳನ್ನು ಕೂಲಂಕಶವಾಗಿ ತಿಳಿದುಕೊಳ್ಳುವುದು.

2. ಜೀವವಿಜ್ಞಾನ ಹಾಗೂ ವೈದ್ಯವಿಜ್ಞಾನಗಳ ಬೆಳೆವಣಿಗೆಗೆ ಸಹಾಯಕವಾಗುವಂತಹ ಹೊಸ ಉಪಕರಣಗಳ, ಪ್ರಕ್ರಿಯೆಗಳ ಹಾಗೂ ವ್ಯವಸ್ಥೆಗಳ ಬೆಳೆವಣಿಗೆ ಮತ್ತು ಈ ಮೂಲಕ ವೈದ್ಯವಿಜ್ಞಾನ ಹಾಗೂ ಆರೋಗ್ಯ ರಕ್ಷಣೆಗಳ ಸುಧಾರಣೆ.

ಜೀವವೈದ್ಯಕೀಯ ವಿಜ್ಞಾನದ ಮುಖ್ಯಶಾಖೆಗಳು ಈ ಕೆಳಗಿನಂತಿವೆ;

1. ಜೀವ ಯಂತ್ರೋಪಕರಣ ವಿಜ್ಞಾನ (ಬಯೊ ಇನ್‌ಸ್ಟ್ರುಮೆಂಟೇಷನ್)
2. ಜೈವಿಕ ವಸ್ತುವಿಜ್ಞಾನ (ಬಯೊ ಮೆಟೀರಿಯಲ್ಸ್)
3. ಜೈವಿಕ ಯಂತ್ರವಿಜ್ಞಾನ (ಬಯೊ ಮೆಕಾನಿಕ್ಸ್)
4. ಜೈವಿಕ ವ್ಯವಸ್ಥೆಗಳು (ಬಯೊ ಸಿಸ್ಟಂಸ್)
5. ಜೈವಿಕ ಸಂದೇಶ ವಿಜ್ಞಾನ (ಬಯೊ ಸಿಗ್ನಲ್ಸ್)
6. ಜೈವಿಕ ಸಾರಿಗೆ (ಬಯೊ ಟ್ರಾನ್ಸ್‌ಪೋರ್ಟ್)
7. ಕೋಶ ತಂತ್ರಜ್ಞಾನ (ಸೆಲ್ಯುಲಾರ್ ಇಂಜಿನಿಯರಿಂಗ್)
8. ರೋಗನಿದಾನ ತಂತ್ರಜ್ಞಾನ (ಕ್ಲಿನಿಕಲ್ ಇಂಜಿನಿಯರಿಂಗ್)
9. ಅಂಗಾಂಶ ತಂತ್ರಜ್ಞಾನ (ಟಿಶ್ಯು ಇಂಜಿನಿಯರಿಂಗ್)
10. ಸುಧಾರಣಾ ತಂತ್ರಜ್ಞಾನ (ರಿಹ್ಯಾಬಿಲಿಟೇಷನ್ ಇಂಜಿನಿಯರಿಂಗ್)

ಜೀವ ಯಂತ್ರೋಪಕರಣ ವಿಜ್ಞಾನವು ಕೋಶ, ಪರಮಾಣು ಪ್ರಕ್ರಿಯೆಗಳಿಂದ (ಮಾಲಿಕ್ಯುಲರ್ ಪ್ರೊಸಸ್) ಉತ್ಪನ್ನವಾದ ಜೈವಿಕ ಚರತೆಗಳನ್ನು (ವೇರಿಯಬಲ್ಸ್) ಅಳೆಯಲು ಉಪಕರಣಗಳನ್ನು ಬಳಸುವ ವಿಜ್ಞಾನವಾಗಿದೆ. ಈ ಚರತೆಗಳನ್ನು ಯಾಂತ್ರಿಕ, ವಿದ್ಯುದ್ಕಾಂತೀಯ (ಎಲೆಕ್ಟ್ರಿಕಲ್), ರಾಸಾಯನಿಕ ಹಾಗೂ ಇತರ ಪರಿಣಾಮ (ಇವೆಂಟ್ಸ್) ಗಳಿಂದ ವಿವರಿಸಲಾಗುತ್ತದೆ.

ಜೈವಿಕ ವಸ್ತುವಿಜ್ಞಾನದಲ್ಲಿ (ಬಯೊ ಮೆಟೀರಿಯಲ್ಸ್) ವೈದ್ಯಕೀಯ / ಜೈವಿಕ / ಶುಶ್ರೂಶಕ (ಡೈಗ್ನೊಸಿಸ್) ಉತ್ಪನ್ನಗಳನ್ನು ಉತ್ಪಾದಿಸಲು ವಸ್ತು ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ದೇಹವು ತನ್ನದಲ್ಲದ ವಸ್ತುವೆಂದು ನಿರಾಕರಿಸದಿರುವ ಹೊಸ ಹೊಸ ವಸ್ತುಗಳನ್ನು ಉತ್ಪಾದಿಸುವುದು ಈ ತಂತ್ರಜ್ಞಾನದ ಮುಂದಿರುವ ದೊಡ್ಡ ಸವಾಲಾಗಿದೆ.

ಜೀವಯಂತ್ರವಿಜ್ಞಾನವು (ಬಯೊ ಮೆಕಾನಿಕ್ಸ್), ಜೈವಿಕ ಅಂಗಾಂಶಗಳ (ಬಯಾಲಾಜಿಕಲ್ ಟಿಶ್ಯುಸ್ – ಸ್ನಾಯು, ಅಸ್ಥಿ, ಇತ್ಯಾದಿ) ಹಾಗೂ ಜೀವದ್ರವಗಳ (ರಕ್ತ, ಅಂತರ್ಕೋಶೀಯ ದ್ರವ ಇತ್ಯಾದಿ) ರಚನೆ, ಗುಣಲಕ್ಷಣಗಳ ಅಧ್ಯಯನವನ್ನೊಳಗೊಂಡಿರುತ್ತದೆ.

ಜೈವಿಕ ಸಂದೇಶ ವಿಜ್ಞಾನವು (ಬಯೊ ಸಿಗ್ನಲ್ಸ್) ಜೈವಿಕ ದತ್ತಾಂಶ (ಡೇಟಾ)ವನ್ನು ದೈಹಿಕ ಪ್ರಕ್ರಿಯೆಗಳ ಒಳಗಡಗಿರುವ ಪ್ರಕೃತಿಯನ್ನು ವಿಶ್ಲೇಷಿಸುವುದಕ್ಕಾಗಿ ಉಪಯೋಗಿಸುವ ವಿಜ್ಞಾನವಾಗಿದೆ.

ರೋಗನಿದಾನ ತಂತ್ರಜ್ಞಾನವು (ಬಯೊ ಇಂಜಿನಿಯರಿಂಗ್), ತಂತ್ರಜ್ಞಾನವನ್ನು ಆರೋಗ್ಯರಕ್ಷಣೆಗಾಗಿ ಉಪಯೋಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತದೆ.

ಕೋಶೀಯ ತಂತ್ರಜ್ಞಾನವು (ಸೆಲ್ಯುಲಾರ್ ಇಂಜಿನಿಯರಿಂಗ್) ಜೀವರಾಸಾಯನಿಕ (ಬಯೊ ಕೆಮಿಕಲ್) ಹಾಗೂ ಜೀವ ಭೌತವಿಜ್ಞಾನದ (ಬಯೊ ಫಿಸಿಕ್ಸ್) ತಂತ್ರಜ್ಞಾನಗಳನ್ನು ಕೋಶಕ್ರಿಯೆಗಳ ಅಧ್ಯಯನಕ್ಕಾಗಿ ಉಪಯೋಗಿಸಿಕೊಳ್ಳುವುದಾಗಿದೆ.

ಸುಧಾರಣಾ ತಂತ್ರಜ್ಞಾನವು (ರಿಹ್ಯಾಬಿಲಿಟೇಷನ್ ಇಂಜಿನಿಯರಿಂಗ್) ದೈಹಿಕವಾಗಿ ವಿಕಲಾಂಗರಾಗಿರುವ ವ್ಯಕ್ತಿಗಳ ಜೀವನಮಟ್ಟ ಸುಧಾರಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳುವುದಾಗಿದೆ.

ಜೀವವೈದ್ಯಕೀಯ ತಂತ್ರಜ್ಞಾನಿಗಳು ಕಾರ್ಯನಿರ್ವಹಿಸುವ ವಿಭಾಗಗಳು ಈ ಕೆಳಗಿನಂತಿರುತ್ತವೆ;

1. ಕೈಗಾರಿಕೆಗಳು: ಜೀವವೈದ್ಯಕೀಯ ಉಪಕರಣಗಳ ರಚನೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾಗಿರುವ ಇವರಿಗೆ, ಜೈವಿಕ ವ್ಯವಸ್ಥೆಗಳು ಹಾಗೂ ತಂತ್ರಜ್ಞಾನದ ಅರಿವಿರಬೇಕಾಗುತ್ತದೆ.

2. ಸರ್ಕಾರದ ವಿಭಾಗಗಳು: ಉತ್ಪನ್ನಗಳ ಪರೀಕ್ಷೆ ಹಾಗೂ ರಕ್ಷಣೆ ಹಾಗೂ ಜೀವವೈದ್ಯಕೀಯ ಉಪಕರಣಗಳ ಹಾಗೂ ವ್ಯವಸ್ಥೆಗಳ ರಕ್ಷಣಾ ಮಾನದಂಡವನ್ನು (ಸೇಫ್ಟಿ ಸ್ಟ್ಯಾಂಡರ್ಡ್ಸ್) ರಚಿಸುವುದು ಇವರ ಮುಖ್ಯಕಾರ್ಯವಾಗಿರುತ್ತದೆ.

3. ಆಸ್ಪತ್ರೆಗಳು: ವೈದ್ಯಕೀಯ ಉಪಕರಣಗಳ ಆಯ್ಕೆ ಹಾಗೂ ಉಪಯೋಗದ ಬಗ್ಗೆ ಮಾರ್ಗದರ್ಶನ, ವೈದ್ಯಕೀಯ ಸಲಕರಣೆಗಳ ಕಾರ್ಯಕ್ಷಮತೆ ಹಾಗೂ ನಿರ್ವಹಣೆಯ ಮೇಲ್ವಿಚಾರಣೆ ಮತ್ತು ವಿಶೇಷ ಆರೋಗ್ಯ ರಕ್ಷಣೆ (ಸ್ಪೆಷಲ್ ಹೆಲ್ತ್ ಕೇರ್) ಅಥವಾ ಸಂಶೋಧನಾ ಅವಶ್ಯಕತೆಗಳಿಗಾಗಿ ಸಲಕರಣೆಗಳನ್ನು ಬಳಕೆಗೆ ತರುವುದು ಇವರ ಜವಾಬ್ದಾರಿಯಾಗಿರುತ್ತದೆ.

4. ಸಂಶೋಧನಾ ಸಂಸ್ಥೆಗಳು: ಸಂಶೋಧನಾ ಸಲಕರಣೆಗಳ ಮೇಲ್ವಿಚಾರಣೆ, ತಂತ್ರಜ್ಞಾನ, ವೈದ್ಯವಿಜ್ಞಾನ, ಶರೀರವಿಜ್ಞಾನ ಮುಂತಾದ ಸಂಶೋಧನೆಗಳಲ್ಲಿ ನೇರವಾಗಿ ಭಾಗವಹಿಸುವಿಕೆ ಇವರ ಕಾರ್ಯ ವ್ಯಾಪ್ತಿಗೆ ಬರುತ್ತದೆ. (ಡಿ.ಬಿ.)

**ಬಲನೊಗ್ಲಾಸಸ್:** ಕಾರ್ಡೇಟವಂಶ, ಹೆಮಿಕಾರ್ಡೇಟ ಉಪವಂಶ, ಎಂಟರೊನ್ಯೂಸ್ಟ ವರ್ಗಕ್ಕೆ ಸೇರಿದ ಸಾಗರವಾಸಿ. ಹೆಚ್ಚು ಆಳವಿಲ್ಲದ ಪ್ರದೇಶದಲ್ಲಿ ಕಾಣ ಸಿಗುತ್ತದೆ. 'U' ಆಕಾರದ ಬಿಲಗಳಲ್ಲಿ ವಾಸಿಸುತ್ತದೆ. ತನ್ನ ಬಿಲವನ್ನು ಮರಳಿನ ತಳದಲ್ಲಿ ತೋಡುತ್ತದೆ. ಬಿಲದ ಗೋಡೆಯಲ್ಲಿ ಮ್ಯೂಕಸ್ ಪದರವಿದೆ. ಇದನ್ನು ಶ್ಲೇಷ್ಮ ಗ್ರಂಥಿಗಳು ಸ್ರವಿಸುತ್ತವೆ. ಮ್ಯೂಕಸ್‌ಗೆ ಕೆಟ್ಟ ವಾಸನೆಯಿದೆ. ಬಿಲ ಎರಡೂ ಕಡೆ ತೆರೆದಿರುತ್ತದೆ. ಬಿಲದಲ್ಲಿ ಸ್ಪಂದನ ಶಿಲಕೆಗಳ ಸಹಾಯದಿಂದ ಚಲಿಸುತ್ತದೆ.

ದೇಹ ಮೃದುವಾಗಿಯೂ ಉದ್ದವಾಗಿಯೂ ಮತ್ತು ವರ್ತುಲಸ್ತಂಭ ಆಕೃತಿಯಾಗಿಯೂ ಇದೆ. ದೇಹ ಪೂರ್ತಿಯಾಗಿ ಸ್ಪಂದನ ಶಿಲಕೆಗಳಿಂದ ಅಂಚುಗಟ್ಟಿದೆ ಮತ್ತು ಶ್ಲೇಷ್ಮದಿಂದ ಆವೃತವಾಗಿದೆ. ಉದ್ದ 2–2.5 ಸೆಂಮೀ. ಹೆಚ್ಚಿನವು ಮಂಕಾದ ನಸು ಕಂದು ಬಣ್ಣ. ಕೆಲವು ತಿಳಿಕೆಂಪು ಬಣ್ಣ ಕೂಡ ಇರುತ್ತವೆ. ಅನೇಕ ಪ್ರಭೇದಗಳಲ್ಲಿ ದೇಹವು ಶ್ಲೇಷ್ಮದಿಂದ ಆವೃತವಾಗಿರುವುದರಿಂದ ಹೊಳೆಯುತ್ತವೆ.

ದೇಹ ದ್ವಿಪಾರ್ಶ್ವ ಸುಸಂಗತವಾಗಿದೆ. ದೇಹವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಪ್ರೋಬಾಸಿಸ್ ಅಥವಾ ಪ್ರೋಟೋಸೋಮ್, ಕಾಲರ್ ಅಥವಾ ಮಿಸೊಸೋಮ್ ಮತ್ತು ಟ್ರಂಕ್ ಅಥವಾ ಮೆಟಸೋಮ್. ದೇಹದ ಗೋಡೆಯ ಎಪಿಡರ್ಮಿಸ್ ನಲ್ಲಿ ಅನೇಕ ರೆಟಿಕ್ಯುಲೇಟ್ ಮತ್ತು ಗಾಬ್ಲೆಟ್ ಗ್ರಂಥಿ ಜೀವಕೋಶಗಳು ಮತ್ತು ನರಸಂವೇದಿ ಜೀವಕೋಶಗಳಿವೆ. ಡರ್ಮಿಸ್ ಇಲ್ಲ. ಹೊರಚರ್ಮದ ಕೆಳಗೆ ನರಕೋಶಗಳು ಮತ್ತು ತಂತುಗಳಿಂದಾದ ನರಗಳ ಪದರ ಇರುತ್ತದೆ. ಹೊರ ಚರ್ಮ

ಉದ್ದವಾಗಿರುವ ಶಿಲಕೆಯುಕ್ತ ಅನುಲೇಪಕ ಅಂಗಾಂಶದ ಪದರದಿಂದಾಗಿದೆ. ದೇಹಾವಕಾಶ ಎಂಟರೋಸೀಲಸ್ ರೀತಿಯದು. ನಿರ್ದಿಷ್ಟವಾದ ಒಳ ಅಸ್ಥಿಪಂಜರವಿಲ್ಲ. ಅದರ ಬದಲು ಬಕಲ್ ಡೈವರ್ಟಿಕ್ಯುಲಮ್, ಪ್ರೋಬಾಸಿಸ್ ಅಸ್ಥಿಪಂಜರ, ಬ್ರ್ಯಾಂಕಿಯ ಅಸ್ಥಿಪಂಜರ ಮತ್ತು ಪೈಗೊಕಾರ್ಡ್ ಎಂಬ ಆಧಾರ ರಚನೆಗಳಿವೆ. ಕಾರ್ಡೇಟಗಳಲ್ಲಿರುವ ನೋಟೊಕಾರ್ಡ್ ಬಕಲ್ ಡೈವರ್ಟಿಕ್ಯುಲಂ ರಚನೆಯಲ್ಲಿದೆ ಎಂಬ ಕಾರಣದಿಂದ ಇದನ್ನು ಕಾರ್ಡೇಟ ವಂಶಕ್ಕೆ ಸೇರಿಸಲಾಗಿದೆ.



ಪ್ರೌಢ ಬಲನೋಗ್ಲಾಸಸ್



ಟಾರ್ನೇರಿಯ ಲಾರ್ವ


ಬಲನೋಗ್ಲಾಸಸ್‌ನ ಬೆಳವಣಿಗೆ ಹಂತಗಳು

ಬಿಲ ತೋಡುವಾಗ ಸಿಗುವ ಸಾವಯವ ವಸ್ತುಗಳೇ ಇದರ ಆಹಾರ. ಆಹಾರವನ್ನು ಮಣ್ಣು ಮತ್ತು ನೀರಿನ ಜೊತೆ ತೆಗೆದುಕೊಳ್ಳುತ್ತದೆ. ಅನೇಕ ಕಿವಿರು ಚೀಲಗಳು ಉಸಿರಾಟದ ಅಂಗಗಳು. ಪ್ರೊಬಾಸಿಸ್ ಗ್ರಂಥಿ ಅಥವಾ ಗ್ಲಾಮೆರ್ಯುಲಸ್‌ಗಳೇ ವಿಸರ್ಜನಾಂಗಗಳು. ನರವ್ಯೂಹ ಬಹಳ ಸರಳ. ಇಂದ್ರಿಯಗಳು ಅತ್ಯಲ್ಪವಾಗಿ ಬೆಳೆದಿವೆ. ಬಲನೊಗ್ಲಾಸಸ್ ಏಕಲಿಂಗಿ. ನಿಷೇಚನ ದೇಹದ ಹೊರಗೆ ಆಗುತ್ತದೆ. ಬೆ. ಕೋವಲೆಸ್ಕಿಯಲ್ಲಿ ನೇರವಾದ ಬೆಳವಣಿಗೆಯಿದೆ. ಬೆ.ಬ್ಲೈಮಿನಿಯೆನ್ಸಿಸ್‌ನಲ್ಲಿ ಮೊಟ್ಟೆಯಿಂದ ಟಾರ್ನೆರಿಯ ಲಾರ್ವಗಳು ಹೊರಬರುತ್ತವೆ. ಇವು ರೂಪಪರಿವರ್ತನೆ ಹೊಂದಿ ಪ್ರೌಢಾವಸ್ಥೆಗೆ ಬರುತ್ತವೆ. ಕೆಲವು ಪ್ರಭೇದಗಳಲ್ಲಿ ನಿರ್ಲಿಂಗ ಸಂತಾನೋತ್ಪತ್ತಿ ಇದೆ. ಇವುಗಳಿಗೆ ಪುನರುತ್ಪಾದನಾ ಶಕ್ತಿಯೂ ಇದೆ. (ಎಸ್.ಆರ್.ಎಸ್.)

**ಬಸವನಹುಳು:** ಮೊಲುಸ್ಕ (ಮೃದ್ವಂಗಿ) ವಂಶದ, ಉದರಪದಿ ವರ್ಗದ, ಪಲ್ಮೊನೇಟ ಗಣದಲ್ಲಿನ ಹೆಲಿಪಿಡಿ ಕುಟುಂಬದ ಸದಸ್ಯ. ಆಂಗ್ಲಭಾಷೆಯಲ್ಲಿ ಸ್ನೇಲ್ ಎನ್ನುವರು. ಇದು ಭೂವಾಸಿ ಅಕಶೇರುಕ. ಹುಲ್ಲುಗಾವಲು, ತೋಟ ಇತ್ಯಾದಿ ಅಧಿಕ ತೇವಾಂಶವಿರುವ ಸ್ಥಳಗಳಲ್ಲಿ ಇದರ ವಾಸ. ಬಸವನಹುಳುವಿನ ಸು. 40,000 ಜೀವಂತ ಪ್ರಭೇದಗಳಿವೆ. ಹಗಲಿನಲ್ಲಿ ಎಲೆಗಳ ಕೆಳಭಾಗದಲ್ಲಿ, ಕಲ್ಲುಗಳ ಕೆಳಗೆ, ಮರದ ದಿಮ್ಮಿಗಳ ಕೆಳಗೆ, ಮತ್ತು ಗಿಡಗಳ ಕೆಳಭಾಗದಲ್ಲಿ ವಿಶ್ರಮಿಸುತ್ತವೆ. ಸಂಜೆ, ಇರುಳು ಮತ್ತು ಮುಂಜಾನೆ ಸಮಯದಲ್ಲಿ ಹೊರಬಂದು ಹರಿದಾಡುತ್ತವೆ. ಪಾದದ ಮೇಲೆ ನಿಧಾನವಾಗಿ ತೆವಳುತ್ತಿರುವಾಗ ತಲೆ ಹಾಗೂ ಶರೀರ ಚಿಪ್ಪಿನಿಂದ ಹೊರಕ್ಕೆ ಬರುತ್ತದೆ. ಚಿಪ್ಪನ್ನು ಬೆನ್ನಿನ ಮೇಲೆ ಹೊತ್ತು ನಡೆಯುತ್ತದೆ. ಇದರ ಒಳಭಾಗದಲ್ಲಿ ತಿರುಪು ಕೋಣೆ ಇದೆ. ಚಿಪ್ಪಿನ ಬಾಯಿ ಮುಚ್ಚಳು ಮುಚ್ಚಳವಿಲ್ಲ. ಪ್ರಾಣಿ ಚಲಿಸುತ್ತಿರುವಾಗ, ಶರೀರ ಚಿಪ್ಪಿನಿಂದ ಹೊರಕ್ಕೆ ಪೂರ್ಣವಾಗಿ ಚಾಚಿಕೊಂಡಿರುತ್ತದೆ. ಯಾರಾದರೂ ಇದನ್ನು ಮುಟ್ಟಿದ ತಕ್ಷಣ ಇದು ತನ್ನ ಪೂರ್ಣ ದೇಹವನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುತ್ತದೆ. ಹೀಗೆ ಚಿಪ್ಪು ಬಸವನಹುಳುವಿಗೆ ರಕ್ಷಣೆ ನೀಡುತ್ತದೆ. ಚಿಪ್ಪು ಸುರುಳಿಯಾಕಾರವಾಗಿದ್ದು, ಸುರುಳಿಗಳು ಬಲಗಡೆಗೆ ತಿರುಗಿವೆ. ಆದ್ದರಿಂದ, ಇದನ್ನು ಬಲಮುರಿ ಶಂಖುಹುಳ ಎನ್ನುವರು. ಅಪರೂಪವಾಗಿ ಸುರುಳಿಗಳು ಎಡಗಡೆಗೆ ತಿರುಗಿರುತ್ತವೆ. ಇದಕ್ಕೆ ಎಡಮುರಿ ಶಂಖು ಎನ್ನುವರು. ಶಂಖುದಲ್ಲಿ ಹೆಚ್ಚು ಸುಣ್ಣದಂಶವಿದೆ. ಕೆಲವು ಬಸವನಹುಳುಗಳಿಗೆ ಹೊರಚಿಪ್ಪು ಇಲ್ಲ. ಇಂಥವುಗಳಿಗೆ ಸಿಂಬಳದ ಹುಳು (ಸ್ಲಗ್) ಎಂದು ಹೆಸರು. ಸಮುದ್ರದ ಬಸವನಹುಳು, ಕೊಳದ ಬಸವನ ಹುಳು, ನದಿಯ ಬಸವನ ಹುಳು ಎಂಬ ಅನೇಕ ರೀತಿಯ ಬಸವನಹುಳುಗಳಿವೆ.



ಇತರ ಮೃದ್ವಂಗಿಗಳಂತೆ ಇವುಗಳ ಚರ್ಮ ಮೃದು. ಹೊರಭಾಗದಲ್ಲಿ ಲೋಳೆ ದ್ರವ ಸ್ರವಿಸುತ್ತಿರುವುದು. ಹೀಗಾಗಿ ಇವು ವೈರಿಗಳ ಹಿಡಿತದಿಂದ ಸುಲಭವಾಗಿ ನುಣಿಚಿಕೊಳ್ಳಬಲ್ಲವು. ಚರ್ಮದ ಹೊರ ಮಡಿಕೆಯ ಒಳಭಾಗ ಪೊಳ್ಳು. ಇದಕ್ಕೆ ಮ್ಯಾಂಟಲ್ ಅವಕಾಶ ಎಂದು ಹೆಸರು. ಇದರ ಛಾವಣಿಗೆ ಹೊದಿಸಿರುವ ಚರ್ಮದ ಭಾಗ ಉಸಿರಾಟಕ್ಕೆ ನೆರವಾಗುತ್ತದೆ. ಉಸಿರಾಟದ ಅಂಗವಾದ ಟಿನಿಡಿಯಮ್ ಬಸವನಹುಳುವಿಗಿಲ್ಲ. ಬಹುತೇಕ ಬಸವನಹುಳು ಪ್ರಭೇದಗಳಲ್ಲಿ ವಿಸರ್ಜನ ಮತ್ತು ಶ್ವಾಸನಾಳಗಳು ಕೂಡಿಕೊಂಡಿವೆ. ಶರೀರದ ಮುಂಭಾಗದಲ್ಲಿ ಎರಡು ಜೊತೆ ಸ್ಪರ್ಶಾಂಗ (ಟೆಂಟಕಲ್ಸ್)ಗಳಿವೆ. ಕಣ್ಣುಗಳು ದೊಡ್ಡ ಸ್ಪರ್ಶಾಂಗದ ತುದಿಯಲ್ಲಿವೆ. ಉಳಿದ ಮೃದ್ವಂಗಿ ಮತ್ತು ಉದರಪಾದಿಗಳಲ್ಲಿ ಶಾರೀರಿಕ ಅಸಮತೆ ಇದೆ. ಆದರೆ, ಬಸವನ ಹುಳುಗಳಲ್ಲಿ ಮಾತ್ರ ಶಾರೀರಿಕ ಸಮತೆ ಕಂಡುಬರುತ್ತದೆ. ನರಗಳು ಅನ್ನನಾಳದ ಸುತ್ತ ಗುಂಪಾಗಿವೆ. ಇದನ್ನು ಮಿದುಳು ಎನ್ನುವರು.

ಬಸವನಹುಳು ದ್ವಿಲಿಂಗಿ. ವಿಸರಲ್ ಸುರುಳಿಯಲ್ಲಿ ಒಂದೇ ಒಂದು ಜನನ ಗ್ರಂಥಿ ಇದೆ. ಇದು ವೀರ್ಯಾಣು ಮತ್ತು ಅಂಡ ಎರಡನ್ನೂ ಬೇರೆ ಬೇರೆಯಾಗಿ ಉತ್ಪತ್ತಿಮಾಡುತ್ತದೆ. ಸಂಭೋಗ ಕಾಲದಲ್ಲಿ ಎರಡು ಬಸವನಹುಳುಗಳು ಒಂದಾಗುತ್ತವೆ. ಅವುಗಳ ಜನನೇಂದ್ರಿಯ ದ್ವಾರಗಳು ಹಿಗ್ಗುತ್ತವೆ. ಹೊರಕ್ಕೆ ಚಾಚಿದ ಶಿಶ್ನ ಇನ್ನೊಂದರ ಜನನೇಂದ್ರಿಯ ರಂಧ್ರದೊಳಕ್ಕೆ ತೂರಿಸಲ್ಪಡುತ್ತದೆ. ಈ ರೀತಿ ಸಂಭೋಗವಾಗುವಾಗ ವಿಸರ್ಜಿಸಲ್ಪಟ್ಟ ವೀರ್ಯಾಣು ಆಯಾ ಬಸವನಹುಳುಗಳ ಸ್ಪರ್ಮತೀಕಗಳಲ್ಲಿ ಶೇಖರಿಸಲ್ಪಡುತ್ತದೆ. ಈ ರೀತಿಯಾಗಿ ವೀರ್ಯಾಣುವಿನ ವಿನಿಮಯ ಆದನಂತರ ಅವು ಸಂಭೋಗದಿಂದ ಬೇರ್ಪಡುತ್ತವೆ. ಗರ್ಭ ಕಟ್ಟಿದ ಅನಂತರ ಅಂಡಗಳನ್ನು ತೇವವಾದ ಮಣ್ಣಿನಲ್ಲಿ ಇಡುತ್ತವೆ. ಇವು ಬೆಳೆದು 3 ವಾರಗಳಲ್ಲಿ ಸಣ್ಣ ಬಸವನಹುಳುಗಳು ಮೊಟ್ಟೆಗಳಿಂದ ಹೊರಬರುತ್ತವೆ. ಬಸವನ ಹುಳುವಿನ ಆಯುಷ್ಯ ಸು. 1–4 ವರ್ಷಗಳು. (ಕೆ.ಪಿ.ಆರ್.)

**ಬಾಂಬೆ ಡಕ್:** ಹಾರ್ಪಡಾನ್ ನೆಹೇರಿಯಸ್ ಎಂಬ ಶಾಸ್ತ್ರೀಯ ಹೆಸರುಳ್ಳ ಸಮುದ್ರವಾಸಿ ಮೀನಿನ ರೂಢಿಯ ಇಂಗ್ಲಿಷ್ ಹೆಸರು. ಆಫ್ರಿಕದ ಪೂರ್ವ ಕರಾವಳಿ, ಭಾರತ, ಮಲೇಶಿಯ, ಇಂಡೊನೇಶಿಯ ಮತ್ತು ಚೀನದ ಕರಾವಳಿಗಳಲ್ಲಿ ಕಾಣಬರುತ್ತದೆ. ಭಾರತದಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರಗಳ ಕರಾವಳಿ ಪ್ರದೇಶಗಳು ಇದರ ಮೀನುಗಾರಿಕೆಗೆ ಪ್ರಸಿದ್ಧವಾಗಿವೆ. ಈ ಪ್ರದೇಶಗಳಲ್ಲಿ ಇದನ್ನು ಬೊಂಬಿಲ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಆಂಧ್ರಪ್ರದೇಶ ಮತ್ತು ಒರಿಸ್ಸಗಳ ಸಮುದ್ರದಲ್ಲಿಯೂ ಗಣನೀಯವಾದ

ಮೊತ್ತದಲ್ಲಿ ಬಾಂಬೆ ಡಕ್ಕನ್ನು ಹಿಡಿಯಲಾಗುತ್ತದೆ. ಭಾರತದಲ್ಲಿ ಇತ್ತೀಚೆಗೆ ಹೆಚ್ಚು ಬಳಕೆಗೆ ಬರುತ್ತಿರುವ ಯಂತ್ರಕೌಶಲದಿಂದಾಗಿ ಬಾಂಬೆ ಡಕ್ಕಿನ ಮೀನುಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ದೊರಕುತ್ತಿದೆ.


ಬಾಂಬೆ ಡಕ್

1956–65ರ ದಶಕದಲ್ಲಿ ಬಾಂಬೆ ಡಕ್ಕಿನ ಹಿಡಿವಡೆ ಸಮುದ್ರದ ಮೀನುಗಳ ಹಿಡಿವಡೆಯಲ್ಲಿ ಸರಾಸರಿ 12.19% ರಷ್ಟಿತ್ತು. ಇದರ 90% ಭಾಗ ಮಹಾರಾಷ್ಟ್ರ ಮತ್ತು ಗುಜರಾತ್ ಕರಾವಳಿಯ ಹಿಡಿವಡೆ. ಈ ಎರಡು ರಾಜ್ಯಗಳಲ್ಲಿ ಬಾಂಬೆ ಡಕ್ಕಿನ ಪ್ರಾಮುಖ್ಯ ಕರ್ನಾಟಕ ಮತ್ತು ಕೇರಳ ರಾಜ್ಯಗಳಲ್ಲಿ ಬಂಗಡೆ ಮತ್ತು ಬೈಗೆಯ ಪ್ರಾಮುಖ್ಯದಷ್ಟೇ ಆಗಿದೆ ಎಂದು ಹೇಳಬಹುದು.

ಬಾಂಬೆ ಡಕ್ ಮೀನು ನೀಳದೇಹಿ. ಸುಮಾರು 40 ಸೆಂಮೀ ಬೆಳೆಯುತ್ತದೆ. ಬೆನ್ನಿನ ಮೇಲೆ ಎರಡು ರೆಕ್ಕೆಗಳಿವೆ. ಬಾಲದ ರೆಕ್ಕೆಯಲ್ಲಿ ಮೂರು ಹಾಲೆಗಳಿವೆ. ಬೇಟೆಗೆ ಹೆಚ್ಚಾಗಿ ಸಿಗುವ ಮೀನುಗಳು 6 ರಿಂದ 27 ಸೆಂಮೀ ಗಳಷ್ಟು ಉದ್ದವಾಗಿರುವುವು. ಇಷ್ಟು ಉದ್ದ ಬೆಳೆಯಲು ಸುಮಾರು 2 ವರ್ಷ ಹಿಡಿಯುತ್ತದೆ. ಮೀನು ಪ್ರಾಯಕ್ಕೆ ಬರುವುದೂ 2 ವರ್ಷಗಳಾದ ಮೇಲೆಯೇ. ಮೊಟ್ಟೆ ಇಡಲು ನಿರ್ದಿಷ್ಟ ಶ್ರಾಯವಿಲ್ಲ. ಪ್ರೌಢ ಹೆಣ್ಣೊಂದು 20,000–1,00,000 ಮೊಟ್ಟೆ ಇಡುತ್ತದೆ.

ಬಾಂಬೆ ಡಕ್ ಹೊಟ್ಟೆಬಾಕ ಮೀನು. ಮಾಂಸಾಹಾರಿ. ಸ್ವಜಾತಿಯ ಮೀನನ್ನು ಕೂಡ ತಿಂದುಬಿಡುವುದು. ಅನೇಕ ಜಾತಿಯ ಮೀನುಗಳೂ ಸೀಗಡಿಯೂ ಇದರ ಆಹಾರ. ಬಾಂಬೆ ಡಕ್ ಮೀನನ್ನು ಸಮುದ್ರದಲ್ಲಿ ನೆಡುವ ಸಂಚಿ ಬಲೆಗಳ (ದೋಲ್) ಸಹಾಯದಿಂದ ಹಿಡಿಯುವರು. ***

**ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ:** ನಿಸರ್ಗದ ಸಂರಕ್ಷಣೆ ಮತ್ತು ಸಂಶೋಧನೆಯಲ್ಲಿ ತೊಡಗಿರುವ ಭಾರತ ಉಪಖಂಡದ ಅತ್ಯಂತ ದೊಡ್ಡ ಸರ್ಕಾರೇತರ ಸಂಸ್ಥೆ. ಕಳೆದ ೧೨೩ ವರ್ಷಗಳಿಂದ ಭಾರತದ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ದಾಖಲಾತಿ, ಸರಿಯಾದ ಬಳಕೆ ಹಾಗೂ ಸೂಕ್ತ ಅಭಿವೃದ್ಧಿಗಳಿಂದ ಮುಂಬರುವ ಜನಾಂಗಗಳಿಗೂ ಇವು ಉಳಿಯುವಂತೆ ಮಾಡುವತ್ತ ಗಮನ ಹರಿಸಿದೆ. ಸಂರಕ್ಷಣೆ ಯಾವಾಗಲೂ ವೈಜ್ಞಾನಿಕ ಸಂಶೋಧನೆಯ ಆಧಾರವನ್ನು ಹೊಂದಿರಬೇಕು ಎನ್ನುವುದು ಇದರ ಧ್ಯೇಯ.

ಇತಿಹಾಸ: ೧೮೮೩ರಲ್ಲಿ ಮುಂಬಯಿನ ೮ ಜನ ನಾಗರಿಕರು ನೈಸರ್ಗಿಕ ಇತಿಹಾಸ ಹಾಗೂ ಪರಂಪರೆಯನ್ನು ಅಧ್ಯಯನ ಮಾಡುವ ಹಾಗೂ ಸಂರಕ್ಷಿಸುವ ನಿರ್ಧಾರ ಮಾಡಿದರು. ಇದರ ಫಲವಾಗಿ ವಿಕ್ಟೋರಿಯ ಹಾಗೂ ಆಲ್ಬರ್ಟ್ ಮ್ಯೂಸಿಯಂನಲ್ಲಿ ೧೮೮೩ರ ಸೆಪ್ಟೆಂಬರ್‌ನಲ್ಲಿ "ಸೊಸೈಟಿ" ತಲೆಯೆತ್ತಿತ್ತು. ಅನಂತರ ಪ್ರತಿ ತಿಂಗಳೂ ಸಭೆ ಸೇರುತ್ತಿದ್ದ ಅವರು ಆಸಕ್ತಿಯುತ ಪ್ರಭೇದಗಳ ಸಂಗ್ರಹ, ಅವುಗಳ ಅಧ್ಯಯನಗಳನ್ನು ಕುರಿತು ಚರ್ಚಿಸುತ್ತಿದ್ದರು. ತಮ್ಮ ಸಂಗ್ರಹವನ್ನು ಪ್ರದರ್ಶಿಸುತ್ತಿದ್ದರು. ೧೮೮೪ರ ಜನವರಿಯಲ್ಲಿ ಶ್ರೀ ಎಚ್. ಈಘ್‌ಸನ್ ಈ ಸಭೆಗಾಗಿ ಬಾಂಬೆಯ ೧೮ ಫೋರ್ಬ್ಸ್–ರಸ್ತೆಯ ಕಟ್ಟಡವನ್ನು ಬಿಟ್ಟುಕೊಟ್ಟರು. ಆದರೆ ವೃದ್ಧಿಸಿದ ಸದಸ್ಯರ ಸಂಖ್ಯೆ, ಸಂಗ್ರಹಗಳಿಂದಾಗಿ ಕಟ್ಟಡ ಅಪಲೋ ರಸ್ತೆಯ ಕಟ್ಟಡಕ್ಕೆ ವರ್ಗಾಯಿಸಲಾಯಿತು. ೧೯೦೫ರಲ್ಲಿ ನಗರಕ್ಕೆ ಭೇಟಿಕೊಟ್ಟ ಪ್ರಿನ್ಸ್ ಆಫ್ ವೇಲ್ಸ್ ಹಾಗೂ ಪ್ರಿನ್ಸಸ್ ಆಫ್ ವೇಲ್ಸ್‌ರವರ ಸ್ಮರಣಾರ್ಥ ಸಂಸ್ಥೆಗೆ ಮ್ಯೂಸಿಯಂ ಹಾಗೂ ಗ್ರಂಥಾಲಯವನ್ನು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಗೆ ನೀಡಲು ಸರಕಾರ ಘೋಷಿಸಿತು. ೧೯೨೧ರಲ್ಲಿ ಈ ಹೊಸ ಮ್ಯೂಸಿಯಂಗೆ ಎಲ್ಲ ಸಂಗ್ರಹಗಳನ್ನು ವರ್ಗಾಯಿಸಲಾಯಿತು. ಸ್ವಾತಂತ್ರ್ಯ ಬಂದ ಹತ್ತು ವರ್ಷಗಳ ಅನಂತರ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಹಾಗೂ ರಾಜ್ಯ ಸರಕಾರದ ನಡುವೆ ಆದ ಒಪ್ಪಂದದ ಪ್ರಕಾರ ಮಹಾರಾಷ್ಟ್ರ ಸರಕಾರ ಮ್ಯೂಸಿಯಂನ ಉಸ್ತುವಾರಿಯನ್ನು ವಹಿಸಿಕೊಂಡಿತು. ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಅದರೊಂದಿಗೆ ಮೊದಲಿನ ಸಂಪರ್ಕವನ್ನು ಉಳಿಸಿಕೊಂಡಿತು.

ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ದಾಖಲಾತಿ, ಹಾಗೂ ಸಂಶೋಧನೆಯಲ್ಲಿ ಸಂಸ್ಥೆಯ ಕೊಡುಗೆ ಹಾಗೂ ಪ್ರಾಮುಖ್ಯತೆಯನ್ನು ಗಮನಿಸಿದ ಕೇಂದ್ರ ಸರಕಾರ ಹಾರ್ನ್ ಬಿಲ್ ಹೌಸ್ ಎಂಬ ಹೆಸರಿನ ಕಟ್ಟಡವನ್ನು ನಿರ್ಮಿಸಿಕೊಟ್ಟಿತು. ಅದರಲ್ಲಿ ಬಾಂಬೆ ನ್ಯಾಚುರಲ್ ಹಿಸ್ಟರಿಯ ಕಾರ್ಯ ಚಟುವಟಿಕೆಗಳು ೧೯೭೫ರಲ್ಲಿ ಪ್ರಾರಂಭವಾದವು. ಇದು ಮುಂಬಯಿಯ ಪದ್ಮವಿಭೂಷಣ ಡಾ॥ ಸಲೀಂ ಅಲಿ ಚೌಕದಲ್ಲಿದೆ. ಸಂಸ್ಥೆಯ ಗುರುತು ಸಹ ಹಾರ್ನ್ ಬಿಲ್ ಅಂದರೆ ಜಂಗಿಲೆ ಅಥವಾ ಮಂಗಟ್ಟೆ ಪಕ್ಷಿ. ಬಾಲಕನಾಗಿದ್ದಾಗ ಕುತೂಹಲದಿಂದ ಇದನ್ನು ಪ್ರವೇಶಿಸಿ ತಮ್ಮ ೯೧ನೇ ವಯಸ್ಸಿನವರೆಗೂ ಸಂಸ್ಥೆಯೊಡನೆ ಸಂಪರ್ಕವಿರಿಸಿಕೊಂಡಿದ್ದ ಹಾಗೂ ಇದರ ಅಧ್ಯಕ್ಷರೂ ಆಗಿದ್ದ ಸಲೀಂ ಅಲಿ ಇದರ ಬೆಳೆವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದರು.

ಸಂಸ್ಥೆಯ ಮುಖ್ಯ ಚಟುವಟಿಕೆಗಳು

೧) ಸಂಶೋಧನೆ ಹಾಗೂ ಪರಿಸರ ಸಂರಕ್ಷಣೆ.

೨) ಎನ್‌ವಿರಾನ್‌ಮೆಂಟಲ್ ಇನ್‌ಫರ್‌ಮೇಶನ್ ಸಿಸ್ಟಮ್. ಅಂದರೆ ೧೯೯೭ರಲ್ಲಿ ಪ್ರಾರಂಭವಾದ ಇದು ಪರಿಸರದ ಸಂರಕ್ಷಣೆಯೊಂದಿಗೆ ಪಕ್ಷಿಗಳ ಆವಾಸ ಹಾಗೂ ಜೌಗು ಪ್ರದೇಶಗಳ ಅಧ್ಯಯನದಲ್ಲಿ ತೊಡಗಿದೆ.

೩) ಅಳಿವಿನಂಚಿಲ್ಲಿರುವ ಗ್ರೇಟ್ ಇಂಡಿಯನ್ ಬಸ್ಟರ್ಡ್, ಜಂಗಿಲೆ, ೪ ಕೊಂಬುಗಳ ಜಿಂಕೆ ಮುಂತಾದುವುಗಳ ಬಗ್ಗೆ ಅಧ್ಯಯನ.

೪) ಜೈವಿಕ ವೈವಿಧ್ಯವನ್ನು ಸಂರಕ್ಷಿಸುವ ಎಲ್ಲ ಪಾರಂಪರಿಕ ಆಚರಣೆ ಪ್ರೋತ್ಸಾಹಿಸುವುದು.

೫) ಜೈವಿಕ ವೈವಿಧ್ಯವನ್ನು ದಾಖಲಿಸಲು ಪ್ರಯತ್ನಿಸುವುದು.

೬) ಈ ಎಲ್ಲಾ ಸಂದೇಶವನ್ನು ಪಸರಿಸುವ ಪತ್ರಿಕೆ, ಪುಸ್ತಕ, ಡೈರಿ, ಗ್ರೀಟಿಂಗ್ ಕಾರ್ಡ್‌ಗಳನ್ನು ಪ್ರಕಟಿಸುವುದು. (ಎಸ್.ಎಂ.ಜಿ.)

**ಬಾಣಂತಿ ಜ್ವರ:** ಹೆರಿಗೆಯಾದ 10 ದಿನಗಳಲ್ಲಿ ಜ್ವರ $38^0$ಸೆ. ಗಿಂತ ಹೆಚ್ಚು ಬಂದು ಅದು 48 ಗಂಟೆಗಳ ಕಾಲಕ್ಕಿಂತ ಹೆಚ್ಚು ಹೊತ್ತು ಉಳಿದಲ್ಲಿ ಅದಕ್ಕೆ ಈ ಹೆಸರಿದೆ. ಹೆರಿಗೆ ಮತ್ತು ಅದಕ್ಕೆ ಸಂಬಂಧಿಸಿದ ಜಾಡ್ಯಗಳಲ್ಲದೇ ಚಳಿಜ್ವರ, ವಿಷಮಶೀತ ಜ್ವರ, ಘುಪ್ಪುಸದ ಉರಿಯೂತ (ನ್ಯೂಮೋನಿಯಾ), ಕ್ಷಯ ಮೊದಲಾದ ಇತರ ಹಲವು ಕಾರಣಗಳಿಂದ ಇದು ತಲೆದೋರುತ್ತದೆ. ಈ ರೋಗದ ತಿಳಿವಳಿಕೆ ಆಧುನಿಕ ವೈದ್ಯವಿಜ್ಞಾನದ ಪಿತಾಮಹ ಹಿಪಾಕ್ರಟೀಸನಿಗೂ ಇತ್ತು. ಆದರೆ ಆತ ಮಾತ್ರ ಅದು ಹೆರಿಗೆಯ ಶಾಪವೆಂದು ತಪ್ಪಾಗಿ ವಿವರಿಸಿದ್ದ. ಸುಮಾರು 100–150 ವರ್ಷಗಳ ಹಿಂದೆ ವಿಯೆನ್ನಾ ನಗರದಲ್ಲಿ ಸೆಮೆಲ್ ವಿಸ್ ಎಂಬ ವೈದ್ಯ ಕಂಡ ಸಂಗತಿ ಈ ರೋಗದ ಮೇಲೆ ಹೊಸ ಬೆಳಕು ಚೆಲ್ಲಿತು. ಮನೆ ಹೆರಿಗೆಗಳಲ್ಲಿ ಇದರ ಪ್ರಮಾಣ ಆಸ್ಪತ್ರೆ ಹೆರಿಗೆಗಳಿಗಿಂತ ಕಡಿಮೆ ಇದ್ದುದನ್ನು ಆತ ಗಮನಿಸಿದ. ಅನಂತರ ಬಹಳಷ್ಟು ದೀರ್ಘಾಭ್ಯಾಸ ಮತ್ತು ಪರಿಶ್ರಮದಿಂದ ಇದು ಸೋಂಕುರೋಗ ಎಂಬ ಅಂಶವನ್ನು ಶೋಧಿಸಿದ, ಅವನು ಕ್ಲೋರಿನ್‌ಯುಕ್ತ ಸುಣ್ಣದ ತಿಳಿನೀರಿನಿಂದ ಕೈತೊಳೆಯುವ ಪದ್ಧತಿಯನ್ನು ಆರಂಭಿಸಿ ಹೆರಿಗೆಗೆ ಮೊದಲೂ ಬಳಿಕವೂ ಇದನ್ನು ಸ್ವತಃ ಪಾಲಿಸುತ್ತಿದ್ದುದಲ್ಲದೆ ಇತರರನ್ನೂ ಅದಕ್ಕಾಗಿ ಬಲವಂತ ಪಡಿಸುತ್ತಿದ್ದ. ಇದರಿಂದಾಗಿ ಬಾಣಂತಿಯರ ಮರಣ ಪ್ರಮಾಣ ಪ್ರತಿಶತ 20 ರಿಂದ 1ಕ್ಕೆ ಇಳಿಯಿತು. ಅವನು ರೂಪಿಸಿದ ತತ್ವಗಳು ಇಂದಿಗೂ ದಾರಿದೀಪಗಳಾಗಿವೆ.

ಜನನಾಂಗಗಳ ಸೋಂಕುರೋಗ ಬಾಣಂತಿ ಜ್ವರಕ್ಕೆ ಬಹಳಷ್ಟು ಪ್ರಮುಖ ಕಾರಣ. ಹೆರಿಗೆಯಾದ ತರುವಾಯ ಇರುವ ನಿಃಶಕ್ತಿ ಮತ್ತು ಸಾಕಷ್ಟು ಸುಲಭದಲ್ಲಿ ಉಂಟಾಗುವ ಸೋಂಕು ಇವು ಕೂಡ ಪ್ರಬಲ ಕಾರಣಗಳು, ಸಾಮಾನ್ಯವಾಗಿ ಈ ರೋಗ ಯೋನಿ ಮೂಲಕವಾಗಿ ಮೇಲೇರುತ್ತ ಇತರ ಅಂಗಗಳಿಗೆ ಹಬ್ಬುವುದು. ಯೋನಿಮಾರ್ಗ ಸದಾ ಪೂರ್ಣ ನಿರ್ಜಂತುವಾಗಿರುವದಿಲ್ಲ. ಶರೀರದ ಇತರ ಭಾಗಗಳಂತೆ ಇದರಲ್ಲಿ ಸಹ ಬಹಳಷ್ಟು ಸೂಕ್ಷ್ಮಜೀವಿಗಳು ಇರುತ್ತವೆ. ಇವು ಚರ್ಮದ ಆವರಣವನ್ನು ಭೇದಿಸಲಾರವು. ಆದರೆ ಅದರಲ್ಲಿ ಬಿರಿತ (ಯೋನಿಮಾರ್ಗದ ಪ್ರವೇಶದ್ವಾರದ ಹತ್ತಿರ) ಆಗುವುದು ಸಾಮಾನ್ಯ ಮಾಸು ಅಂಟಿಕೊಂಡಂತ ಸ್ಥಳ ಹತ್ತು ದಿವಸಗಳ ತನಕ ಹಸಿಯಾಗಿರುವುದರಿಂದ ಅದರ ಮೂಲಕ ಸೋಂಕು ಸಾಧ್ಯ. ಇದಕ್ಕೆ ಪೂರಕವಾಗಿ ಮಾಸುವಿನ ಸಣ್ಣ ತುಂಡುಗಳು ಮತ್ತು ರಕ್ತದ ಕರಣೆಗಳು ಗರ್ಭದಲ್ಲಿ ಉಳಿದಾಗ ರೋಗದ ಕ್ರಿಮಿಗಳಿಗೆ ಅತಿ ಹಿತವಾದ ಪರಿಸರ ಒದಗುತ್ತದೆ. ಕ್ರಿಮಿಗಳು ರೋಗಿಯ ಶರೀರದ ಮೇಲೆ, ಚರ್ಮದ ಮೇಲೆ ಮತ್ತು ಯೋನಿಮಾರ್ಗದಲ್ಲಿ ಇರುತ್ತವೆ. ಹೆಂಗಸು ಬಸಿರಾಗಿದ್ದಾಗ ತನ್ನ ಗುಪ್ತಾಂಗವನ್ನು ಸ್ವಚ್ಛವಾಗಿ ಇಡದಿದ್ದಲ್ಲಿ ಇಂಥ ಕ್ರಿಮಿಗಳು, ಶರೀರವನ್ನು ಮೇಲಿಂದ ಮೇಲೆ ಪರೀಕ್ಷಿಸಿಕೊಳ್ಳುವ ವೇಳೆ, ಯೋನಿಮಾರ್ಗ ತಲುಪಿ ಅಲ್ಲಿಯೆ ಬೆಳೆಯುವ ಸಾಧ್ಯತೆ ಉಂಟು. ಇದಲ್ಲದೆ ಗುದದ್ವಾರದ ಮೂಲಕ ಬರುವ ಕ್ರಿಮಿಗಳು ಯೋನಿಮಾರ್ಗದ ಅತಿಸಾಮೀಪ್ಯದಿಂದ ಅಲ್ಲಿಯೆ ಸೇರಿಕೊಂಡು ಬೆಳೆಯಬಹುದು. ಹಾಗೆಯೆ ಹೆರಿಗೆಗೆ ಸಮೀಪದ ದಿನಗಳಲ್ಲಿ ಸಂಭೋಗ ಇಂಥ ಕ್ರಿಮಿಗಳನ್ನು ಗರ್ಭಾಶಯದವರೆಗೆ ತಲುಪಿಸಿ ಸೋಂಕಿನ ತೀವ್ರತೆಯನ್ನು ಹೆಚ್ಚಿಸಬಹುದು.

ಹೆರಿಗೆಯಲ್ಲಿ ಸಹಾಯ ಮಾಡುವ ವ್ಯಕ್ತಿಗಳು (ವೈದ್ಯ, ದಾಯಿ, ಸೂಲಗಿತ್ತಿ ಇತ್ಯಾದಿ) ತಮ್ಮ ಜೊತೆಗೆ ತಂದ ಕ್ರಿಮಿಗಳನ್ನು ಜನನಾಂಗದಲ್ಲಿ ಸೇರಿಸುವ ಅಚಾತುರ್ಯ

ನಡೆಯಬಹುದು. ಕೊಳೆಯಾದ ಕೈ ಮತ್ತು ಉಪಕರಣ ಇದಕ್ಕೆ ಮುಖ್ಯ ಕಾರಣ. ಇಂಥ ವ್ಯಕ್ತಿಗಳಲ್ಲಿ ಕೆಲವರು ಹಾನಿಕಾರಕ ಕ್ರಿಮಿಗಳನ್ನು ತಮ್ಮ ಮೂಗು, ಗಂಟಲು, ಶ್ವಾಸಕೋಶ ಇತ್ಯಾದಿ ಭಾಗಗಳಲ್ಲಿ ಹೊತ್ತವರಾಗಿರಬಹುದು. ಆದರೆ ಇವರಿಗೆ ಮಾತ್ರ ಇವು ಏನನ್ನೂ ಮಾಡುವುದಿಲ್ಲ. ತಮ್ಮ ಶ್ವಾಸೋಚ್ಛ್ವಾಸ, ಕೆಮ್ಮು ಮೊದಲಾದ ಪದ್ಧತಿಗಳಿಂದ ಇವರು ಈ ಕ್ರಿಮಿಗಳ ಹರಡುವಿಕೆಗೆ ಸಹಾಯಕರಾಗುತ್ತಾರೆ. ನೊಣ ಮತ್ತು ಬೇರೆ ಕೀಟಗಳು ರೋಗಾಣುಗಳನ್ನು ಸ್ಥಳಾಂತರಿಸುವುದರಲ್ಲಿ ನೆರವಾಗುತ್ತವೆ. ಬಾಣಂತಿಯರ ಸಾಮಾನ್ಯ ಸ್ರಾವದ ಮೂಲಕ ಉಂಟಾಗುವ ನಿಃಶಕ್ತಿಯಿಂದ ಕ್ರಿಮಿಗಳು ಬೆಳೆಯಲು ಹೆಚ್ಚು ಸಹಾಯವಾಗುತ್ತದೆ.

ಹೀಗಿದ್ದರೂ ಪ್ರತಿಯೊಂದು ಬಾಣಂತಿಗೂ ಈ ಸೋಂಕು ತಗಲದಂತೆ ನೈಸರ್ಗಿಕ ರಕ್ಷೆ ಉಂಟು. ಬಾಣಂತಿಯ ಆರೋಗ್ಯ ಮತ್ತು ನಿರೋಧ ಸಾಮರ್ಥ್ಯ, ಸುಲಭ ಮತ್ತು ಸುಲಲಿತ ಹೆರಿಗೆ, ಯುಕ್ತ ವೇಳೆಯಲ್ಲಿ ತೂಗುಬಟ್ಟಲು (ಪೊರೆ, ಮೆಂಬ್ರೇನ್) ಒಡೆಯುವುದು ಮತ್ತು ಹೆರಿಗೆಯ ತರುವಾಯ ಬರುವ ನೀರಿನ ಪ್ರವಾಹ ಯೋನಿಮಾರ್ಗದಲ್ಲಿಯ ಕ್ರಿಮಿಗಳನ್ನು ಕೊಚ್ಚಿಕೊಂಡು ಹೋಗುವುದು ಅಲ್ಲದೆ ಬಹಳಷ್ಟು ಕ್ರಿಮಿಗಳು ನಿರಪಾಯಕಾರಿ ಆಗಿರುವುದೂ ಉಂಟು.

ಬಾಣಂತಿ ಜ್ವರ ಕಾಣಿಸಿಕೊಳ್ಳುವ ವಿಶೇಷ ಸಂದರ್ಭಗಳು ಹೀಗಿವೆ: 1. ರಕ್ತಹೀನತೆ, ರಕ್ತಸ್ರಾವ ಮತ್ತು ಶಾರೀರಿಕ ದೌರ್ಬಲ್ಯ, 2. ಕಷ್ಟದ ಹೆರಿಗೆ ಮತ್ತು ಪೂರಕ ಕ್ರಮಗಳು, 3. ಗರ್ಭಜಲ ಅಕಾಲದಲ್ಲಿ ಸೋರಿ ಹೋಗುವುದು (ತೂಗುಬಟ್ಟಲಿನ ಅಥವಾ ಪೊರೆಯ ಅಕಾಲ ಛೇದನ), 4. ಹೆರಿಗೆಗೆ 12–13 ಗಂಟೆಗಳ ಮೊದಲೆ ಗರ್ಭ ಪೊರೆ ಸರಿದಿರುವುದು. 5. 2 ಗಂಟೆಗಳಿಗೂ ಕಡಿಮೆ ಅವಧಿಯಲ್ಲಿ ಜನನಾಂಗಗಳಲ್ಲಿ ಬಿರಿತ ಹಾಗೂ ಕೊರೆತ, 6. ಮಾಸು ಅಥವಾ ಪರೆ ಉಳಿದುಕೊಳ್ಳುವುದು ಮತ್ತು ಅವನ್ನು ತೆಗೆಯಲು ಬೇಕಾದ ಕ್ರಮಗಳು.

ಸೋಂಕಿನ ಕ್ರಿಮಿಗಳ ಮೂಲಕ ಬರುವ ಉರಿಯೂತ ಜನನಾಂಗಗಳ ಎಲ್ಲ ಭಾಗವನ್ನೂ ಕ್ರಮವಾಗಿ ವ್ಯಾಪಿಸುತ್ತದೆ. ಇದರ ಪ್ರಮಾಣ ಹಾಗೂ ರೋಗಿಯ ಅನಾರೋಗ್ಯ ಇವು ಇದರ ವ್ಯಾಪ್ತಿಯನ್ನು ನಿರ್ಧರಿಸುತ್ತವೆ.

ರೋಗ ಲಕ್ಷಣಗಳು: 1. ಜ್ವರ, ಸೋಂಕಿನ ಪ್ರಮಾಣ ಅನುಸರಿಸಿ $38^0$ – $40^0$ಸೆ. ವರೆಗೆ ಇರುತ್ತದೆ. ಜ್ವರ ಬರುವಾಗ ಚಳಿ ಹಾಗೂ ಜ್ವರ ಇಳಿಯುವಾಗ ಬೆವರು ಇರಬಹುದು ಅಥವಾ ಸತತವಾಗಿ ಜ್ವರ ಇರಬಹುದು.

2. ಹೆರಿಗೆಯ ಬಳಿಕ ಗರ್ಭಕೋಶದಿಂದ ಬರುವ ಸ್ರಾವಕ್ಕೆ ಹೊಲಸು ವಾಸನೆ ಉಂಟಾಗಿ ಬಣ್ಣ ಕೂಡ ಬಿಳಿಹಳದಿ (ಕೀವಿನಂತೆ) ಆಗುವುದು. ಕೆಲಸಂದರ್ಭದಲ್ಲಿ ಜ್ವರದ ತೀವ್ರತೆಯಲ್ಲಿ ಇದು ಒಣಗಿ ಹೋಗುವುದೂ ಸಾಧ್ಯ.

3. ನೋವು: ಜನನಾಂಗಗಳಲ್ಲಿ ಬಿರಿತ ಉಂಟಾದಲ್ಲಿ ಮತ್ತು ಹರಿದ ಭಾಗವನ್ನು ಕೂಡಿಸಿದ ಹೊಲಿಗೆಗಳಲ್ಲಿ ಸಿಡಿಯುವ ಅಥವಾ ಸೆಳೆತದ ನೋವು ಕಂಡುಬರುವುದು. ಕಿಬ್ಬೊಟ್ಟೆಯಲ್ಲಿ ಸದಾಕಾಲ ತೀವ್ರ ನೋವು ಈ ರೋಗ ಉಲ್ಬಣಗೊಂಡದ್ದನ್ನು ತಿಳಿಸುತ್ತದೆ.

4. ಹೊಟ್ಟೆ ಬಿಗಿತ: ಗರ್ಭಾಶಯದ ಹೊರಪೊರೆಗೆ (ಪೆರಿಟೋನಿಯಂ) ಊತ ಬಂದಲ್ಲಿ ಕರುಳಿನ ಕ್ರಿಯೆ ಮಂದವಾಗಿ ಹೊಟ್ಟೆ ಉಬ್ಬರಿಸುತ್ತದೆ. ಹೀಗಾದಾಗ ವಾಂತಿ ಆಗುತ್ತದೆ. ಹಾಗೂ ಅಪಾನವಾಯು ಕಟ್ಟಿಕೊಳ್ಳುತ್ತದೆ. ಇದು ರೋಗಿಯ ಸ್ಥಿತಿ ತೀವ್ರವಾಗಿರುವುದರ ಸೂಚನೆ.

ಗುರುತಿಸುವ ವಿಧಾನ: ಜ್ವರ ಮತ್ತು ಸ್ರಾವ ಇವುಗಳ ಕಡೆಗೆ ಗಮನ ಹರಿಸಬೇಕು. ಗರ್ಭಚೀಲದ ಆಕುಂಚನದ ಪ್ರಮಾಣ ಕಡಿಮೆ ಆದಲ್ಲಿ ಈ ರೋಗವನ್ನು ಪ್ರಥಮ ಹಂತದಲ್ಲಿ ಗುರುತಿಸಬಹುದು. ಸೌಲಭ್ಯವಿದ್ದಲ್ಲಿ ಯೋನಿಮಾರ್ಗದಲ್ಲಿಯ ಕ್ರಿಮಿಗಳನ್ನು ಆಯ್ದು ಪ್ರಯೋಗಶಾಲೆಯಲ್ಲಿ ಬೆಳೆಸಿ, ತಳಿ ಗುರುತಿಸಿ ಯುಕ್ತವಾದ ಪ್ರತಿಜೈವಿಕಗಳನ್ನು (ಆ್ಯಂಟಿಬಯಾಟಿಕ್ಸ್) ಕೊಡುವುದು ಉತ್ತಮ ಪ್ರಸೂತಿಪೂರ್ವ ಚಿಕಿತ್ಸೆ. ಇಲ್ಲಿ ಬಸುರಿಯರ ಆರೋಗ್ಯ ಮತ್ತು ರಕ್ತದ ಪ್ರಮಾಣ ಪರೀಕ್ಷೆ ಹಾಗೂ ಹೆರಿಗೆಯ ಬಗ್ಗೆ ಪೂರ್ವ ಸೂಚನೆ ಮತ್ತು ಯುಕ್ತ ಉಪಚಾರ ಅವಶ್ಯ.

ಪ್ರಸೂತಿ ವೇಳೆ ಜಾಗರೂಕತೆ : ಜನನಾಂಗಗಳ ಸ್ವಚ್ಛತೆ, ಗುದದ್ವಾರದ ಆಂತರಿಕ ಶುದ್ಧಿ, ಕ್ರಿಮಿನಿರೋಧಕ ದ್ರವ್ಯಗಳ ಬಳಕೆ ಅಗತ್ಯವಿದ್ದಾಗ ಮಾತ್ರ ಒಳ ಪರೀಕ್ಷೆ, ಕ್ರಿಮಿಮುಕ್ತ ಉಪಕರಣಗಳು, ವೈಯಕ್ತಿಕ ಹಾಗೂ ದಾದಿ ಮೊದಲಾದವರ ಸ್ವಂತ ಶುಚಿತ್ವ, ರಕ್ತಸ್ರಾವದ ಪ್ರಮಾಣ ಕಡಿಮೆ ಮಾಡುವುದು – ಇವು ಮುಖ್ಯವಾದವು.

ಪ್ರಸವೋತ್ತರ ಚಿಕಿತ್ಸೆ: ಇಲ್ಲಿ ಕೂಡ ಕ್ರಿಮಿಮುಕ್ತ ವಿಧಾನ ಸರ್ವವಿಧದ ಶುಚಿತ್ವ ಹಾಗೂ ಕ್ರಿಮಿನಿರೋಧಕಗಳ ಬಳಕೆ ಇವು ಅವಶ್ಯ.

ರೋಗ ವಾಹಕರು: ಸೋಂಕನ್ನು ಹೊತ್ತು ತಿರುಗುವ ವಾಹಕರನ್ನು ಪ್ರಸೂತಿ ಗೃಹದಿಂದ ಹಾಗು ಪ್ರಸವೋತ್ತರ ಚಿಕಿತ್ಸೆಯ ವಿಭಾಗದಿಂದ ದೂರ ಇಡಬೇಕು.

ಉಪಚಾರ: ಇಂಥ ಸೋಂಕು ಬಂದ ರೋಗಿಯನ್ನು ಬೇರೆ ಇರಿಸಬೇಕು, ಇಲ್ಲವಾದರೆ ರೋಗ ಇತರರಿಗು ತಗಲಬಹುದು. ರೋಗಿಯ ಪರೀಕ್ಷೆಗೆ ಮೊದಲು ಹಾಗೂ ಅನಂತರ ವೈದ್ಯ ಮತ್ತು ಸಂಬಂಧಿಸಿದ ಸಿಬ್ಬಂದಿ ಕೈಗಳನ್ನು ಸ್ವಚ್ಛವಾಗಿ ತೊಳೆದು ಕ್ರಿಮಿನಾಶಕ ದ್ರಾವಣದಲ್ಲಿ ಅದ್ದಬೇಕು. ರೋಗಿಗೆ ಅವಶ್ಯಕವಾಗುವ ನಿದ್ರೆ ಮತ್ತು ಆಹಾರ ಇವುಗಳ ಕಡೆಗೆ ಲಕ್ಷ್ಯ ಕೊಡಬೇಕು. ಆಹಾರ ಮತ್ತು ನೀರು ದಕ್ಕದೆ ಹೋದರೆ ರಕ್ತನಾಳಗಳ ಮೂಲಕ ಪೂರಕ ದ್ರವ್ಯಗಳನ್ನು ಕೊಡಬೇಕು. ರಕ್ತಹೀನತೆಯನ್ನು ರಕ್ತದಾನದ ಮೂಲಕ ಪರಿಹರಿಸಬೇಕು. ಕ್ರಿಮಿನಾಶಕ ದ್ರವ್ಯಗಳನ್ನು ಬಳಸಿ ಸಂಯುಕ್ತವಾದ ಪ್ರತಿಜೈವಿಕಗಳನ್ನು ಕೊಡಬೇಕು. ಕೀವು ತುಂಬಿಕೊಂಡು ಎಲ್ಲಿಯಾದರೂ ಗಡ್ಡೆಯಾಗಿದ್ದರೆ ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ಬಸಿಯುವಂತೆ ಮಾಡಬೇಕು. ಬಾಣಂತಿ ಜ್ವರಕ್ಕೆ ಇನ್ನೊಂದು ಮುಖ್ಯವಾದ ಕಾರಣ ಮೂತ್ರದ ದೋಷ. ಹೆರಿಗೆಯ ವೇಳೆ ಮೂತ್ರಾಶಯ ಮತ್ತು ಮೂತ್ರನಾಳ ಮಗುವಿನ ತಲೆ, ತಾಯಿಯ ಸೊಂಟ ಇವುಗಳ ಮಧ್ಯದಲ್ಲಿ ಸೇರಿಕೊಂಡು ಜಜ್ಜಿ ಘಾಸಿಗೊಳ್ಳುತ್ತವೆ. ಇದರ ಪ್ರಮಾಣ ಹೆರಿಗೆಗೆ ಬೇಕಾದ ಅವಧಿ ಮತ್ತು ಮಗುವಿನ ತಲೆಯ ಗಾತ್ರ ಇವನ್ನು ಅವಲಂಬಿಸಿದೆ. ಹೀಗೆ ಮೂತ್ರನಾಳ ಗಾಸಿಗೊಂಡಾಗ ಮೂತ್ರವಿಸರ್ಜನೆ ಕಷ್ಟವಾಗಿ ಮೂತ್ರಾಶಯದಲ್ಲಿ ಮೂತ್ರ ಕಟ್ಟಿಕೊಳ್ಳುತ್ತದೆ. ಈ ತೆರನಾಗಿ ಸಂಗ್ರಹಿತವಾದ ಮೂತ್ರದಲ್ಲಿ ಕ್ರಿಮಿಗಳು ಬೆಳೆಯಲು ಅವಕಾಶ ಒದಗುತ್ತದೆ. ಕಟ್ಟಿಕೊಂಡ ಮೂತ್ರವನ್ನು ತೆಗೆಯಲು ಉಪಯೋಗಿಸುವ ತೂರುನಳಿಕೆ ಕುರಿತು ಸರಿಯಾದ ಮುಂಜಾಗ್ರತೆ ವಹಿಸದಿದ್ದಲ್ಲಿ ಅದು ಕೂಡ ಸೋಂಕಿಗೆ ಕಾರಣವಾಗುತ್ತದೆ. ಹೆಂಗಸು ಬಸುರಿ ಆಗಿರುವಾಗ ಶರೀರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ರವಿಸುವ ಪ್ರೊಜೆಸ್ಟಿರಾನ್ ಹಾರ್ಮೋನ್ ಮೂತ್ರನಳಿಕೆಯನ್ನು ಹಿಗ್ಗಿಸಿಡುವುದರಿಂದ ಸೋಂಕು ಮೇಲಕ್ಕೆ ಏರಿ ಮೂತ್ರ ಪಿಂಡವನ್ನು ತಲುಪುವುದು. ಹೀಗಾಗಿ ರೋಗ ತೀವ್ರವಾಗುತ್ತದೆ. ಇದಕ್ಕೆ ಕಾರಣೀಭೂತವಾದ ಕ್ರಿಮಿಗೆ ಎ. ಕೋಲಿ ಎಂದು ಹೆಸರು. ದೊಡ್ಡ ಕರುಳಿನಲ್ಲಿ ಇದರ ವಾಸ್ತವ್ಯ. ಇದು ಮೂತ್ರಾಂಗಗಳಲ್ಲಿ ಬೆಳೆಯತೊಡಗಿದಾಗ ಉರಿ ಮೂತ್ರ, ಕಿಬ್ಬೊಟ್ಟೆ ನೋವು ಮತ್ತು ತೀವ್ರ ಚಳಿಜ್ವರ ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಮೂತ್ರವನ್ನು ಸೂಕ್ಷ್ಮ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಕೀವುಕೋಶಗಳ ಪ್ರಮಾಣ ಅತಿಯಾಗಿರುವುದು ಕಂಡುಬರುವುದೇ ಇದಕ್ಕೆ ಖಚಿತ ಪರೀಕ್ಷೆ. ಉಪಚಾರದಿಂದ ಉರಿತ ಕಡಿಮೆಯಾಗುವುದು. ಆದರೆ ಅದಕ್ಕೆ ಬೇಕಾಗುವ ಯುಕ್ತ ಪ್ರತಿಜೈವಿಕವನ್ನು ಉಪಯೋಗಿಸಿ ಕ್ರಿಮಿಗಳನ್ನು ಪೂರ್ಣವಾಗಿ ನಾಶ ಮಾಡದಿದ್ದಲ್ಲಿ ಈ ರೋಗ ಬಹಳಷ್ಟು ದಿನ ತೊಂದರೆ ಕೊಡುವುದು.

ಬಾಣಂತಿ ಜ್ವರದ ಇನ್ನೊಂದು ಮುಖ್ಯವಾದ ಕಾರಣವೆಂದರೆ ಸ್ತನಗಳಲ್ಲಿ ಉಂಟಾಗುವ ಊತ. ಮೊಲೆತೊಟ್ಟಿನಲ್ಲಿ ಉಂಟಾಗುವ ಬಿರಿತ ಮತ್ತು ಒಳಸೇರಿದ ಮೊಲೆತೊಟ್ಟು ಇರುವಾಗ ಮಗುವಿಗೆ ಮೊಲೆಯೂಡಿಕೆ ವೇಳೆ ವಿಪರೀತ ವೇದನೆ ಆಗುತ್ತದೆ. ಆಗ ಹಾಲು ಮೊಲೆಯಲ್ಲಿಯೆ ಉಳಿದುಕೊಳ್ಳುತ್ತದೆ. ಕ್ರಿಮಿಗಳು ಬೆಳೆಯಲು ಹಾಲು ತುಂಬ ಪೌಷ್ಟಿಕ ಮಾಧ್ಯಮ. ಹೀಗಾಗಿ ಒಳಸೇರಿದ ಕ್ರಿಮಿಗಳು ಬಹಳಷ್ಟು ವೇಗವಾಗಿ ಬೆಳೆಯುತ್ತವೆ. ಆಗ ಸ್ತನಗಳಲ್ಲಿ ಉರಿಯೂತ ಉಂಟಾಗಿ ಕೀವು ಆಗುತ್ತದೆ. ಮೊಲೆಯಲ್ಲಿ ಬಿಗಿತ, ಸೆಳೆತ, ಹೊಡೆತ, ನೋವು, ತೀವ್ರಜ್ವರ ಇವು ಈ ರೋಗದ ಮುಖ್ಯ ಲಕ್ಷಣಗಳು. ಇಂಥ ಮೊಲೆಯಲ್ಲಿ ಕುರು ಇದ್ದಾಗ ಆ ಭಾಗ ಗಟ್ಟಿಯಾಗಿ ಬಿಗಿದುಕೊಂಡಿರುವುದು. ಚರ್ಮದ ಕಡೆಗೆ ಕುರು ಸಾಗಿದಂತೆ ಚರ್ಮ ಕೆಂಪಾಗುವುದು. ಮೊಲೆ ಕುಡಿಸುವುದು ಅಸಾಧ್ಯವಾಗಿ ರೋಗ ಒಳಗೆಯೆ ಬಲಿಯುತ್ತ ಹೋಗುತ್ತದೆ. ಕೆಲವು ಸಲ ಕುರು ತಾನಾಗಿಯೆ ಒಡೆದು ಕೀವು ಸ್ವಲ್ಪವೆ ಸೋರಿಹೋಗುವುದು. ಆದರೆ ಕ್ರಿಮಿಗಳು ಒಳಗೆ ಉಳಿಯುವುದರಿಂದ ಮತ್ತೆ ಮತ್ತೆ ಕುರು ಆಗುತ್ತಿರುವುದು.

ಪ್ರತಿಬಂಧಕ ಉಪಾಯಗಳಲ್ಲಿ ಕೆಳಗಿನವು ಮುಖ್ಯ: 1. ಬಸುರಿಯನ್ನು ಪರೀಕ್ಷೆ ಮಾಡುವಾಗ ಮೊಲೆತೊಟ್ಟನ್ನು ಪರೀಕ್ಷಿಸಿ ಅಲ್ಲಿದ್ದ ಬಿರಿತಗಳನ್ನು ಸರಿಯಾದ ಲೇಪನಗಳಿಂದ ಉಪಚರಿಸಬೇಕು. 2. ಬಿರಿತವಿಲ್ಲದಿದ್ದಲ್ಲಿ ತೊಟ್ಟನ್ನು ಪ್ರತಿದಿವಸ ಎರಡು ಸಲ ಉಗುರುಬೆಚ್ಚಗಿನ ನೀರು ಹಾಕಿ ತೊಳೆಯಬೇಕು. 3. ತೊಟ್ಟು ಒಳಸೇರಿದ್ದರೆ ಅದನ್ನು ಮತ್ತೆ ಮತ್ತೆ ಹಿಡಿದು ಎಳೆಯುವಂತೆ ತಿಳುವಳಿಕೆ ಕೊಡಬೇಕು. 4. ಬಾಣಂತಿಯರಲ್ಲಿ ಬಿರಿತ ಅಥವಾ ಒಳಸೇರಿದ ತೊಟ್ಟು ಕಂಡುಬಂದಲ್ಲಿ ಮಗುವಿಗೆ ಹಾಲನ್ನು ತೊಟ್ಟಿನ ಕವಚ ಉಪಯೋಗಿಸಿ ಕುಡಿಸಬೇಕು. ಅದು ಸಾಧ್ಯವಾಗದಿದ್ದಲ್ಲಿ ಹಾಲನ್ನು ಕೈಯಿಂದ ಹಿಂಡಿ ಮೊಲೆಯನ್ನು ಖಾಲಿ ಮಾಡಬೇಕು.

ಒಮ್ಮೆ ಮೊಲೆ ಕುರುವಾದರೆ ಶಾಖ ಕೊಟ್ಟು ಅದನ್ನು ಮಾಗಿಸಬೇಕು. ಹದವಾದ ಕುರುವನ್ನು ಕುಯ್ದು ಕೀವನ್ನು ಬಸಿಯಬೇಕು. ಗಾಯ ಮಾಯುವತನಕ ಅದಕ್ಕೆ ಅವಶ್ಯವಾದ ಪಟ್ಟಿಯನ್ನು ಹಾಕಬೇಕು. ಸ್ತನವನ್ನು ಸರಿಯಾದ ಮೊಲೆಕಟ್ಟಿನಿಂದ ಎತ್ತಿಕಟ್ಟಬೇಕು. ಪ್ರತಿಜೈವಿಕವನ್ನು ಸರಿಯಾಗಿ ಉಪಯೋಗಿಸಿದಲ್ಲಿ ಗಾಯ ಮಾಯಲು ಸಹಾಯಕವಾಗುತ್ತದೆ.

ಬಾಣಂತಿ ಜ್ವರದ ಬೇರೆ ಕಾರಣಗಳಲ್ಲಿ ಅಭಿಧಮನಿಗಳ ಉರಿಯೂತವೂ ಸೇರಿದೆ. ಕ್ರಿಮಿಗಳು ರಕ್ತನಾಳಕ್ಕೆ ಹಬ್ಬಿ ಅಲ್ಲಿ ರಕ್ತ ಗಡ್ಡೆಕಟ್ಟಿ ರಕ್ತಪ್ರವಾಹಕ್ಕೆ ತಡೆ ಉಂಟಾಗುತ್ತದೆ.

ಇದು ಮುಖ್ಯವಾಗಿ ಕಾಲಿನಲ್ಲಿ ಕಂಡುಬರುವುದು. ಕಾಲುನೋವು, ಕಾಲಿನ ಊತ ಮತ್ತು ರಕ್ತದ ಅಭಾವದಿಂದ ಬಿಳಚಿಕೊಂಡ ಕಾಲು ಮೇಲಿಂದ ಮೇಲೆ ಬರುವ ಚಳಿ ಮತ್ತು ಒಮ್ಮೆಲೆ ಏರಿ ಇಳಿಯುವ ಜ್ವರ ಇವು ಇದರ ಮುಖ್ಯ ಲಕ್ಷಣಗಳು. ಬಾಣಂತಿ ಜ್ವರದ ಪರಿಣಾಮ ಕೆಲವು ಸಲ ಆಮ್ಲಜನಕದ ಪೂರೈಕೆಗೆ ಪ್ರತ್ಯಯವನ್ನು ಉಂಟು ಮಾಡುತ್ತದೆ. ಇದರಿಂದ ಮರಣವೇ ಸಂಭವಿಸಬಹುದು. ಈ ರೋಗಕ್ಕೆ ರೋಗಿಯನ್ನು ಕಟ್ಟುನಿಟ್ಟಾಗಿ ಮಲಗಿಸಿ ಕಾಲನ್ನು ಎತ್ತಿಕಟ್ಟಿ ಕಾಲಿಗೆ ಒತ್ತುವ ಪಟ್ಟಿಯನ್ನು ಕಟ್ಟಿ ರಕ್ತ ಪ್ರವಾಹಕ್ಕೆ ಅನುವು ಮಾಡಿಕೊಡಲಾಗುತ್ತದೆ.

ಮಿದುಳಿನ ರಕ್ತನಾಳಗಳಿಗೂ ಕೂಡ ಈ ಕುರುಗಡ್ಡೆಗಳು ತಲುಪಿ ಸಂಬಂಧಿಸಿದ ನರಗಳಿಗೆ ರಕ್ತ ಕಡಿತಗೊಳಿಸುತ್ತದೆ. ಆಗ ಪರ್ಯಾಯವಾಗಿ ನರಗಳ ದೌರ್ಬಲ್ಯ, ಲಕ್ವ ಹೊಡೆಯುವ ಸಾಧ್ಯತೆಯಿದೆ. ಇದು ಶಾಶ್ವತ ಊನವಾಗಿ ಪರಿಣಮಿಸಬಹುದು.

ಬಾಣಂತಿಯನ್ನು ಹಾಸಿಗೆಯಲ್ಲಿ ದಿನಗಟ್ಟಲೆ ಮಲಗಲು ಬಿಡುವುದರಿಂದ ಈ ತೊಂದರೆ ಸಂಭವಿಸುತ್ತದೆ. ಬದಲಾಗಿ ನಾಲ್ಕಾರು ಗಂಟೆಗಳ ವಿಶ್ರಾಂತಿಯ ಬಳಿಕ ಹಗುರಾಗಿ ಓಡಾಡಲು, ಮೂತ್ರ ವಿಸರ್ಜನೆ ಮಾಡಲು ಉತ್ತೇಜಿಸಬೇಕು; ಹೆಚ್ಚಿನ ದ್ರವಾಹಾರವೂ ಈ ತೊಂದರೆ ತಡೆಗಟ್ಟುವಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಇತ್ತೀಚೆಗೆ ಹೆಚ್ಚಿನ ಸಿಝೇರಿಯನ್ ಹೆರಿಗೆಗಳಲ್ಲಿ ಹೊಟ್ಟೆಯ ಮೇಲೆ ಹೊಲಿಗೆ ಹಾಕಲಾಗಿರುತ್ತದೆ. ಅಲ್ಲಿ ರಕ್ತ ಕಟ್ಟಿಕೊಳ್ಳುವುದು, ಕೀವುತುಂಬುವುದು ಕೂಡ ಬಾಣಂತಿ ಜ್ವರಕ್ಕೆ ಕಾರಣ. ಕೀವುತೆಗೆದು ಮತ್ತೆ ಹೊಲಿಗೆ ಹಾಕಬೇಕಾಗಬಹುದು. ಅರಿವಳಿಕೆ ನೀಡುವಾಗ ಉಸಿರಿನನಾಳಕ್ಕೆ ಆಮ್ಲಜನಕ ಪೂರೈಕೆ ಮಾಡಲು ಕೊಳವೆ ಸಿಕ್ಕಿಸಿರುತ್ತಾರೆ. ಮುಂದೆ ಕೆಲಬಾರಿ ಅವರಿಗೆ ಶ್ವಾಸಕೋಶದ ಉರಿಯೂತ, ಕೆಮ್ಮು ಕಾಣಿಸುವುದು ಅಪರೂಪವಲ್ಲ. ಇದನ್ನು ಪಟ್ಟಿಯಲ್ಲಿ ಗಮನಿಸಬೇಕು. ಶಸ್ತ್ರಚಿಕಿತ್ಸೆಗೊಳಗಾದವರನ್ನು ಎರಡನೇ ಮೂರನೆ ದಿನವೆ ಓಡಾಡಲು ಅನುಗೊಳಿಸಬೇಕು. ಇದರಿಂದ ಮುಂದೆ ಆಗುವ ಅನಾಹುತಗಳನ್ನು ಸುಲಭವಾಗಿ ದೂರ ಇಡಬಹುದು.

***

**ಬಾತುಕೋಳಿ:** ಅನಾಟಿಡೆ ಕುಟುಂಬದ ಅನಾಟಿನೆ ಉಪಕುಟುಂಬಕ್ಕೆ ಸೇರಿದ ಸುಮಾರು 120 ಬಗೆಯ ಜಲಪಕ್ಷಿಗಳಿಗಿರುವ ಸಾಮಾನ್ಯ ಹೆಸರು (ಡಕ್‌ಗೂಸ್). ಇದೇ ಕುಟುಂಬದ ಆನ್ಸರಿನೆ ಉಪಕುಟುಂಬಕ್ಕೆ ಸೇರಿದ ಹಂಸಪಕ್ಷಿಗಳು ಹಾಗೂ ಹೆಬ್ಬಾತುಗಳಿಗಿಂತ ಕಿರಿಯ ಗಾತ್ರದ ಪಕ್ಷಿಗಳಿವು. ಅನಾಟಿನೆ ಗುಂಪಿನ ಜಲಪಕ್ಷಿಗಳು, ಸೈರೋಸಿನೆ ಉಪಕುಟುಂಬಕ್ಕೆ ಸೇರಿದ ಮುಳುಗು ಹಾಕುವ ಸಮುದ್ರ ಬಾತುಗಳು, ಮೆರ್‌ಗಾನಿಟಿನೆಯ ತೊರೆಬಾತುಗಳು, ಅಕ್ಸಿಯುರಿನೆಯ ಚಿಮ್ಮುವ ಬಾಲದ ಬಾತುಗಳು ಹಾಗೂ ಡೆಂಡ್ರೋಸಿಗ್ನಿನೆ ಉಪಕುಟುಂಬದ ಸದಸ್ಯರಾದ ಉದ್ದಕಾಲಿನ ಬಾತುಗಳೂ ಈ ಗುಂಪಿಗೆ ಸೇರುವುವು.



ಅನಾಟಿಡೆ ಕುಟುಂಬದ ಇತರ ಪಕ್ಷಿಗಳಿಗಿರುವಂತೆ ಬಾತುಕೋಳಿಗಳಿಗೂ ಕೆಂಪುಬಣ್ಣದ ಕೊಕ್ಕು ಮತ್ತು ಜಾಲಪಾದಗಳಿವೆ. ವಿವಿಧ ಪ್ರಭೇದಗಳಲ್ಲಿ ಕೊಕ್ಕಿನ ಆಕಾರ ಹಾಗೂ ಗಾತ್ರದಲ್ಲಿ ಸೂಕ್ಷ್ಮ ವ್ಯತ್ಯಾಸಗಳಿವೆಯಾದರೂ ಸಾಮಾನ್ಯ ಆಕಾರ ಚಪ್ಪಟೆ. ಎಲ್ಲ ತೆರನ ಕೊಕ್ಕುಗಳಲ್ಲಿ ಬಿರುಸಾದ ಹಲ್ಲಿನಂಥ ಚಕ್ಕೆಗಳು, ಅಂಚಿನಲ್ಲಿ ಗರಗಸದಂಥ ಕಚ್ಚುಗಳು ಉಂಟು. ಇಂಥ ರಚನೆಗಳು ಆಹಾರ ಜಗಿಯುವಲ್ಲಿ ಮತ್ತು ಅದು ಹಾರದಂತೆ ಹಿಡಿಯುವಲ್ಲಿ ನೆರವಾಗುತ್ತವೆ. ಬಾತುಗಳಲ್ಲಿ ದಟ್ಟ ಹಾಗೂ ತೈಲಯುಕ್ತ ಗರಿಗಳ ಹೊದಿಕೆ ಉಂಟು. ತಮ್ಮ ಬಾಲದ ಬಳಿ ಇರುವ ತೈಲಗ್ರಂಥಿ ಸ್ರವಿಸುವ ತೈಲವನ್ನು ಗರಿಗಳಿಗೆ ಲೇಪಿಸಿ ಅವು ನೀರಿನಿಂದ ಒದ್ದೆಯಾಗದಂತೆ ನೋಡಿಕೊಳ್ಳುತ್ತವೆ. ಸಾಧಾರಣವಾಗಿ ಇವುಗಳ ತೂಕ 0.5–5 ಕಿಗ್ರಾಂ. ದಕ್ಷಿಣ ಅಮೆರಿಕದ ಸ್ಟೀಮರ್ ಬಾತು (ಟ್ಯಾಕಿಎರೆಸ್ ಬ್ರಾಕಿಪ್ಟರಸ್) ಅತಿಭಾರವಾದ ಬಾತು ಎನಿಸಿದೆ. ಇದರ ತೂಕ ಸುಮಾರು 8 ಕಿಗ್ರಾಂ.

ಬಾತುಕೋಳಿಗಳು ಈಜುವುದರಲ್ಲಿ ಮಾತ್ರವಲ್ಲದೇ ಮುಳುಗು ಹಾಕುವುದರಲ್ಲಿ ಕೂಡ ಪರಿಣಿತ ಪಕ್ಷಿಗಳೆನಿಸಿವೆ. ನೆಲದ ಮೇಲೆ ವಿಚಿತ್ರವಾದ ಓಲುನಡಿಗೆಯೊಂದಿಗೆ ನಡೆದಾಡುವುವು. ಕೆಲವು ಪ್ರಭೇದಗಳ ಹೊರತು ಉಳಿದವೆಲ್ಲವೂ ಹಾರಬಲ್ಲವು. ಹಲವು ಬಗೆಯ ಬಾತುಗಳು ಚಳಿಗಾಲದಲ್ಲಿ ಗುಂಪು ಗುಂಪಾಗಿ ದೂರದ ಪ್ರದೇಶಗಳಿಗೆ ವಲಸೆ ಹೋಗುತ್ತವೆ. ಗಂಡು ಮತ್ತು ಹೆಣ್ಣುಗಳ ನಡುವೆ ವ್ಯತ್ಯಾಸ ಉಂಟು. ಸಾಧಾರಣವಾಗಿ ಹೆಣ್ಣಿಗಿಂತ ಗಂಡು ಹೆಚ್ಚು ವರ್ಣಮಯ. ವರ್ಷಕ್ಕೊಮ್ಮೆ ನೆಲದ ಮೇಲೆಯೇ 5 ರಿಂದ 12 ಮೊಟ್ಟೆ ಇಡುತ್ತವೆ. ಪ್ರಣಯಕಾಲದಲ್ಲಿ ಹೆಣ್ಣು ತನಗೆ ಬೇಕಾದ ಗಂಡನ್ನು ಆರಿಸಿಕೊಂಡು ಕೂಡುತ್ತದೆ. ಸ್ವಾಭಾವಿಕ ಪರಿಸ್ಥಿತಿಗಳಲ್ಲಿ ಏಕಪತ್ನಿತ್ವವನ್ನು ತೋರುವ ಗಂಡು ಪಳಗಿಸಿದಾಗ ಹಲವು ಹೆಣ್ಣುಗಳೊಡನೆ ಕೂಡುವುದೂ ಉಂಟು. ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುವ ಹೊಣೆ ಪೂರ್ತಿ ಹೆಣ್ಣಿನದು. ಈ ಸಮಯದಲ್ಲಿ ಹಳೆಯ ಗರಿಗಳನ್ನು ಕಳಚಿ ಹೊಸವನ್ನು ಬೆಳೆಸಿಕೊಳ್ಳುವ ಗಂಡು ಅಸಹಾಯ ಸ್ಥಿತಿಯಲ್ಲಿರುವುದು. ಮೊಟ್ಟೆಯೊಡೆದು ಹೊರಬರುವ ಮರಿಹಕ್ಕಿಗಳಿಗೆ ಆಹಾರ ಅರಸಿ ಓಡಾಡುವ ಸಾಮರ್ಥ್ಯ ಉಂಟು. ಬಾತುಕೋಳಿಗಳು ಸಸ್ಯಾಹಾರಿಗಳಾದರೂ ಬಸವನಹುಳು, ಕೀಟಗಳು, ಇವುಗಳ ಲಾರ್ವ ಹಾಗೂ ಸಣ್ಣ ಮೀನುಗಳನ್ನು ತಿನ್ನುತ್ತವೆ.

ಯುರೋಪ್, ಏಷ್ಯಾಖಂಡಗಳ ಸಮಶೀತೋಷ್ಣವಲಯಗಳಲ್ಲಿ ಹೆಚ್ಚಾಗಿ ಕಂಡು ಬರುವ ಷೆಲ್‌ಬಾತುಗಳು (ಟಡೊರ್ನ ಫೆರುಜಿನಿಯ) ಪ್ರರೂಪಿ ಬಾತುಗಳು. ಇವುಗಳಲ್ಲಿ ಮಲಾರ್ಡ್ ಬಾತು (ಅನಾಸ್ ಪ್ಲಾಟಿರಿಂಕೋಸ್) ಹೆಸರುವಾಸಿ. ನದಿ, ಸರೋವರ, ಕೊಳಗಳ ಬಳಿ ವಾಸಿಸುವ ಮುಳುಗುವ ಬಾತುಗಳು (ಅಯಿಕ್ಸ್ ಗ್ಯಾಲರಿಕ್ಯುಲಾಟ) ದಕ್ಷಿಣ ಭಾರತದಲ್ಲಿ ಪರಿಚಿತ ಹಕ್ಕಿಗಳು. ಅಮೆರಿಕದ ಮಸ್ಕೋವಿ ಮತ್ತು ಜಪಾನಿನ ಮ್ಯಾಂಡರಿನ್ ಬಾತುಗಳು ಮರದ ಮೇಲೆ ಗೂಡುಕಟ್ಟುತ್ತವೆ.

ಬಾತುಗಳನ್ನು ಮೊಟ್ಟೆ, ಮಾಂಸ ಮತ್ತು ತುಪ್ಪುಳಕ್ಕಾಗಿ ಸಾಕುವುದಿದೆ. ಮೋಜಿಗಾಗಿ ಬಾತುಗಳ ಬೇಟೆ ಆಡುವುದೂ ಉಂಟು. ಸಮುದ್ರಬಾತುಗಳ ಪೈಕಿ ಅತಿ ಚಿಕ್ಕಗಾತ್ರದ್ದಾಗಿದ್ದ ಹಾಗೂ ಅತಿಸುಂದರವಾಗಿದ್ದ ಲ್ಯಾಬ್ರಡಾರ್ ಬಾತು ಮಾನವನ ಈ ಹವ್ಯಾಸದಿಂದಾಗಿ 1875ರಲ್ಲಿ ಗತವಂಶಿಯಾಯಿತು. ಮಾಂಸಕ್ಕಾಗಿ ಮಲಾರ್ಡ್ ಹಕ್ಕಿಗಳನ್ನೂ ಮೊಟ್ಟೆಗಳಿಗಾಗಿ ಮಸ್ಕೋವಿಗಳನ್ನೂ ಚೀನ, ಅಮೆರಿಕಗಳಲ್ಲಿ ಅತಿ ಆಸ್ಥೆಯಿಂದ ಸಾಕಲಾಗುತ್ತದೆ.

(ಎ.ಎಸ್.ಕೆ.ವಿ.ಎಸ್.ಎ.)

**ಬಾನಕ್ಕಿ:** ಪ್ಯಾಸರಿಫಾರ್ಮಿಸ್ ಗಣದ ಹೀರುಂಡಿನಿಡೆ ಕುಟುಂಬಕ್ಕೆ ಸೇರಿದ ಪಕ್ಷಿ (ಮಾರ್ಟಿನ್). ಡೆಲಿಕಾನ್ ಉರ್ಬಿಕಾ (ಸಾಮಾನ್ಯ ಮಾರ್ಟಿನ್), ಪೆಟ್ರೊಕೆಲಿಡಾನ್ ನೈಗ್ರಿಕನ್ಸ್ (ಮರದ ಮಾರ್ಟಿನ್), ಫೆಡಿನಾ ಬಾರ್ಬೊನಿಕ (ಮಸ್ಕರೀನ್ ಮಾರ್ಟಿನ್) ಮತ್ತು ರಿಪಾರಿಯ ರಿಪಾರಿಯ (ಮರಳು ಮಾರ್ಟಿನ್) ಕೆಲವು ಪ್ರಭೇದಗಳು. ಧ್ರುವಪ್ರದೇಶ ಮತ್ತು ನ್ಯೂಜಿಲೆಂಡ್ ದೇಶವನ್ನು ಬಿಟ್ಟರೆ ಪ್ರಪಂಚದ ಉಳಿದೆಲ್ಲಕಡೆಗಳಲ್ಲೂ ಕಾಣದೊರೆಯುತ್ತದೆ. ಪುಟ್ಟಗಾತ್ರದ ಹಕ್ಕಿ. ದೇಹದ ಬಣ್ಣ ನೀಲಿ ಮಿಶ್ರಿತ ಕಪ್ಪು. ಎದೆಯ ಭಾಗ ಮಾತ್ರ ಬಿಳಿ. ಇದು ಕೀಟಾಹಾರಿ. ದಿನದ ಬಹುಭಾಗವನ್ನು ಆಹಾರಾನ್ವೇಷಣೆಯಲ್ಲಿ

ಹಾರಾಡುತ್ತ ಕಳೆಯುತ್ತದೆ. ಕಟ್ಟಡಗಳ ಮೇಲೆ ಮತ್ತು ವಿದ್ಯುತ್ ತಂತಿಗಳ ಮೇಲೆ ಕುಳಿತು ವಿಶ್ರಮಿಸುವುದು ಸಾಮಾನ್ಯ ನೋಟ. ಇದು ವಲಸೆ ಹೋಗುವ ಪರಿಪಾಟ ತೋರುತ್ತದೆ. ಮನೆಯ ಮಾಡುಗಳಲ್ಲಿ, ಗೋಡೆಯ ಪೊಟರುಗಳಲ್ಲಿ ಮತ್ತು ಸೇತುವೆಯ ಅಡಿಯಲ್ಲಿ ಕಡ್ಡಿ, ಮಣ್ಣು ಉಪಯೋಗಿಸಿ ಗೂಡುಕಟ್ಟುತ್ತದೆ. ಗೂಡಿನ ಒಳಭಾಗಕ್ಕೆ ತುಪ್ಪಳ, ಗರಿ ಮತ್ತು ಮೆದು ಹುಲ್ಲುಗಳ ಲೇಪನ ಮಾಡುವುದುಂಟು. ಒಮ್ಮೆಗೆ 4 ಅಥವಾ 5 ಮೊಟ್ಟೆ ಇಟ್ಟು ಕಾವು ಕೊಡುತ್ತದೆ. ರೆಕ್ಕೆ ಬಲಿತ ಮರಿಗಳು ಚಳಿಗಾಲದಲ್ಲಿ ದಕ್ಷಿಣಾಭಿಮುಖವಾಗಿ ವಲಸೆ ಹೋಗುತ್ತವೆ. ಬಾನಕ್ಕಿ ಕೀಟಗಳನ್ನು ತಿಂದು ಬದುಕುವುದರಿಂದ ಮನುಷ್ಯನಿಗೆ ಉಪಕಾರಿ.

(ಎಂ.ಎಸ್.ಎಲ್.)

**ಬಾರ್ಥೋಲಿನಸ್, ಥಾಮಸ್** (1616–80): ಅಂಗರಚನಾ ವಿಜ್ಞಾನಿ. ಡೆನ್ಮಾರ್ಕಿನಲ್ಲಿ ನೆಲಸಿದ್ದ ಪ್ರತಿಭಾವಂತ ಸ್ವೀಡಿಷ್ ವಿಜ್ಞಾನಿಗಳ ಮನೆತನದಲ್ಲಿ 1616 ಅಕ್ಟೋಬರ್ 20ರಂದು ಕೋಪೆನ್‌ಹೇಗನ್ ನಗರದಲ್ಲಿ ಜನಿಸಿ ಪ್ರಾಥಮಿಕ ಮತ್ತು ವೈದ್ಯಕೀಯ ವಿದ್ಯಾಭ್ಯಾಸವನ್ನು ಅಲ್ಲಿಯೇ ಮುಗಿಸಿ, ಮುಂದೆ ಒಂಬತ್ತು ವರ್ಷಗಳ ಕಾಲ ಪರ್ಯಂತ ಬೇಸಲ್ ಮತ್ತು ಪಾಡುವ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವೈದ್ಯಕೀಯ ಮತ್ತು ಇತರ ಶಾಸ್ತ್ರಗಳ ವ್ಯಾಸಂಗ ಮುಂದುವರಿಸಿದ. 1646ರಲ್ಲಿ ಗಣಿತ ಹಾಗೂ ಭಾಷಾಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕಗೊಂಡ. ಎರಡು ವರ್ಷಾನಂತರ ಇವನನ್ನು ಕೋಪನ್‌ಹೇಗನ್ನಿನಲ್ಲಿ ದೇಹರಚನಾ ವಿಜ್ಞಾನದ ಪ್ರಾಧ್ಯಾಪಕನಾಗಿ ನೇಮಿಸಲಾಯಿತು. ಈ ಕೆಲಸದಲ್ಲಿ ಈತನಿಗೆ ಸಾಕಷ್ಟು ಹುಮ್ಮಸ್ಸು ಇಲ್ಲದಿದ್ದರೂ ದೇಹರಚನೆ ಕುರಿತಂತೆ ಪ್ರಮುಖ ಆವಿಷ್ಕಾರ ಗೈದದ್ದುಂಟು. ಮಾನವನಲ್ಲಿ ತೊರಾಸಿಕ್ ಡಕ್ಟ್ ಎಂಬ ಪ್ರಧಾನ ದುಗ್ಧರಸನಾಳವನ್ನೂ ಇತರ ದುಗ್ಧರಸ ನಾಳಗಳನ್ನೂ ಗುರುತಿಸಿ ದುಗ್ಧರಸವ್ಯೂಹದ ವಿವರಣೆ ನೀಡಿದ (1652–54). ಪಾಶ್ಚಾತ್ಯ ವೈದ್ಯದಲ್ಲಿ ಇವಕ್ಕೆ ಈಗ ಪ್ರಚಲಿತವಾಗಿರುವ ಲಿಂಫಾಟಿಕ್ ಎಂಬ ಪದವನ್ನು ಸೃಷ್ಟಿಸಿದಾತ ಇವನೇ. ಯಕೃತ್ತು ರಕ್ತದ ನಿರಂತರ ಉತ್ಪಾದನ ಸ್ಥಳವೆಂದು ಆ ಕಾಲದ ತನಕವೂ ಪ್ರಚಲಿತವಾಗಿದ್ದ ಅಭಿಪ್ರಾಯ ಶುದ್ಧಾಂಗ ತಪ್ಪು ಎಂಬುದಾಗಿ ಸಾರಿದವನೂ ಇವನೇ. ಅರಿಸ್ಟಾಟಲ್, ಗೇಲೆನ್ ಮುಂತಾದ ಪ್ರಾಚೀನ ವೈದ್ಯ ವಿಜ್ಞಾನಿಗಳ ಸಿದ್ಧಾಂತಕ್ಕೆ ವ್ಯತಿರಿಕ್ತವಾಗಿ 1626ರಲ್ಲಿ ಇಂಗ್ಲೆಂಡಿನ ವಿಲಿಯಮ್ ಹಾರ್ವೆ ಪ್ರತಿಪಾದಿಸಿದ ಹೃದಯ ಮಿಡಿತ ಮತ್ತು ರಕ್ತಪರಿಚಲನಾ ಕ್ರಮದ ನೂತನ ಸಿದ್ಧಾಂತವನ್ನು ಬಲವಾಗಿ ಅನುಮೋದಿಸಿದವರಲ್ಲಿ ಬಾರ್ಥೋಲಿನಸ್ ಒಬ್ಬ. 1650–53ರ ಅವಧಿಯಲ್ಲಿ ಸ್ವೀಡನ್ನಿನ ಉಪ್ಸಲ ವಿಶ್ವವಿದ್ಯಾಲಯದ ಓಲ್‌ರುಡ್‌ಬ್ಲಿಕ್ ಎಂಬ ವಿಜ್ಞಾನಿಯೂ ದುಗ್ಧರಸವ್ಯೂಹ ಗುರುತಿಸಿ ವಿವರಿಸಿದ್ದರಿಂದ ಪ್ರಥಮ ಆವಿಷ್ಕಾರದ ಗೌರವ ಈ ಇಬ್ಬರ ಪೈಕಿ ಯಾರಿಗೆ ಸಲ್ಲಬೇಕು ಎಂಬುದು ದೀರ್ಘ ಹಾಗೂ ಕಟುವಿವಾದದ ವಿಷಯವಾಯಿತು. ಮೊದಲಿನಿಂದಲೇ ಹುದ್ದೆಯಲ್ಲಿ ಆಸಕ್ತಿ ಕಡಿಮೆ ಇದ್ದ ಬಾರ್ಥೋಲಿನಸ್ ಇದರಿಂದ ಬೇಸತ್ತು ಉದ್ಯೋಗ ತ್ಯಜಿಸಿ ತನ್ನ ಗ್ರಾಮಕ್ಕೆ ಹೋಗಿ ನೆಲಸಿದ(1661). ಅಲ್ಲಿ ಆಸ್ತಿ ರೂಢಿಸುತ್ತ ಮತ್ತು ಅಧ್ಯಯನ ಮುಂದುವರಿಸುತ್ತ ಇದ್ದಾಗ 1670ರಲ್ಲಿ ಆಕಸ್ಮಿಕವಾಗಿ ಬೆಂಕಿ ಬಿದ್ದು ಅವನ ಮನೆಯೂ ಅಮೂಲ್ಯವಾದ ಅಪ್ರಕಟಿತ ವ್ಯಾಸಂಗ ಲೇಖನಗಳೂ ನಾಶವಾಗಿಹೋದುವು. ನಿರ್ಗತಿಕವಾಗಿಹೋದ ಈ ಗೌರವಾನ್ವಿತ ವಿಜ್ಞಾನಿಯ ಮೇಲೆ ಕನಿಕರಗೊಂಡು ದೊರೆ ಐದನೆಯ ಕ್ರಿಶ್ಚಿಯನ್‌ಸನ್ ಇವನನ್ನು ಕೋಪನ್‌ಹೇಗನ್ ವಿಶ್ವವಿದ್ಯಾಲಯದ ಗ್ರಂಥಪಾಲಕನಾಗಿಯೂ ಒಂದಿಗೇ ತನ್ನ ಖಾಸಗಿ ವೈದ್ಯನಾಗಿಯೂ ನೇಮಿಸಿಕೊಂಡ. 1680 ಡಿಸೆಂಬರ್ 4 ರಂದು ಮೃತನಾದ. ***

**ಬಾರ್ನಕಲ್:** ಸಂಧಿಪದಿ ವಂಶದ, ಕಠಿಣ ಚರ್ಮಿಗಳ ವರ್ಗದಲ್ಲಿನ ಸಿರಿಪಿಡಿಯ ಉಪವರ್ಗಕ್ಕೆ ಸೇರಿದ ಪ್ರಾಣಿ. ಒಂದು ಸಾವಿರ ಪ್ರಭೇದಗಳಿವೆ. ಇವುಗಳನ್ನು ಬಾರ್ನಕಲ್ ಎಂದು ಕರೆಯುವರು. ಇವು ಕಡಲಲ್ಲಿ ವಾಸಿಸುವ ಜೀವಿಗಳು. ಪ್ರಾಯದ ಬಾರ್ನಕಲ್‌ಗಳು ಚಲಿಸುವುದಿಲ್ಲ. ಇವು ಬಂಡೆಗಳಿಗೆ, ಸಮುದ್ರ ಪಾಚಿಗೆ, ಹಡಗುಗಳ ಒಡಲಿಗೆ, ನೀರಿನ ಪ್ರವಾಹದಿಂದ ಕೊಚ್ಚಿಬಂದ ಕಟ್ಟಿಗೆಗಳಿಗೆ ಸಮುದ್ರದಲ್ಲಿರುವ ದೊಡ್ಡ ದೊಡ್ಡ ಜೀವಿಗಳಾದ ತಿಮಿಂಗಲಗಳ ದೇಹಕ್ಕೆ ತಲೆಕೆಳಗಾಗಿ ಅಂಟಿಕೊಂಡಿರುತ್ತವೆ. ಇವು ಗಟ್ಟಿಯಾಗಿರುವ ಕಾಂಡ (ಸ್ಟಾಲ್ಕ್) ಅಥವಾ ಪೆಡಿಸಲ್ ಸಹಾಯದಿಂದ ಅಂಟಿಕೊಳ್ಳುತ್ತವೆ. ಪೆಡಿಸಲ್ ಬಾಯಿಯ ಮುಂದಿನ ಭಾಗ (ಪ್ರೀ ಓರಲ್). ಈ ಭಾಗದಲ್ಲಿ ಸಿಮೆಂಟ್ ಅಥವಾ ಅಂಟು ಗ್ರಂಥಿಗಳಿವೆ.

ಇವುಗಳ ದೇಹದಲ್ಲಿ ಖಂಡಗಳ ಜೋಡಣೆ ವ್ಯವಸ್ಥಿತವಾಗಿಲ್ಲ. ಪ್ರಾಣಿಗಳ ದೇಹ ದ್ವಿಪದರ ಚರ್ಮವಿರುವ ಹೊದಿಕೆಯಿಂದಾದ ಕ್ಯಾರಪೇಸ್ ನೊಳಗೆ ಇದೆ. ಕ್ಯಾರಪೇಸ್ ಸುಣ್ಣದ ಕಲ್ಲಿನಿಂದಾದ ಪದರಗಳಿಂದ ಆವೃತವಾಗಿದೆ. ಇವುಗಳಲ್ಲಿ ಕುಡಿಮೀಸೆಗಳಿಲ್ಲ. 6 ಜೊತೆ ದ್ವಿಶಾಖ (ಬಿರಾಮಾಸ್) ಗುಂಗುರು ಕೂದಲಿನಂಥ ಅಥವಾ ತಂತಿಯಂತಹ ಎದೆಗೂಡಿನ ಉಪಾಂಗಗಳು (ಅಪೆಂಡೇಜ್) ಇವೆ. ಉದರ ಭಾಗ ಅಪೂರ್ಣಾವಸ್ಥೆ (ರುಡಿಮೆಂಟರಿ) ಯಲ್ಲಿದೆ. ಕಾಲುಗಳಿಲ್ಲ, ಬದಲಾಗಿ ಒಂದು ಜೊತೆ ಬಾಲದ ಕುಡಿಗಳಿವೆ. (ಕಾಡಲ್ ಸ್ಟೈಲ್ಸ್). ಆನ್ಟಿನ್ಯೂಲ್‌ಗಳು ಅವಶೇಷವಾಗಿದ್ದು ಅಂಟಿಕೊಳ್ಳುವುದಕ್ಕಾಗಿ ಮಾರ್ಪಾಟಾಗಿದೆ. ಕುಡಿಮೀಸೆ ಮತ್ತು ಸಂಯುಕ್ತ ಕಣ್ಣು (ಕಾಂಪೌಂಡ್ ಐಸ್) ಪ್ರಾಯದ ಬಾರ್ನಕಲ್‌ಗಳಲ್ಲಿ ಇಲ್ಲ. ಇವು ಸಾಮಾನ್ಯವಾಗಿ ದ್ವಿಲಿಂಗಿಗಳು. ಆದರೆ, ಕೆಲವು ಪ್ರಭೇದಗಳಲ್ಲಿ ಎರಡೂ ಲಿಂಗಗಳು ಇವೆ. ಮರಿಹುಳು (ಲಾರ್ವ) ಸ್ವತಂತ್ರವಾಗಿ ಈಜುವ ನಾಪ್ಲಿಯಸ್. ಇದು ನಂತರ ಸೈಪ್ರಿಸ್ ಆಗಿ ಮಾರ್ಪಾಡಾಗುತ್ತದೆ. ಈ ಹಂತದಲ್ಲಿ ಅವುಗಳಿಗೆ ಎರಡು ಕವಾಟಗಳುಳ್ಳ ಕೈಟಿನ್‌ನಿಂದಾದ ಚಿಪ್ಪು ಇರುತ್ತದೆ. ಇವು ರೂಪ ಪರಿವರ್ತನೆಯ ಮುಖಾಂತರ ದೊಡ್ಡದಾಗುತ್ತವೆ.

ದೇಹದೊಳಗೆ U ಆಕಾರದ ಕರುಳು ಮತ್ತು ಸರಳವಾದ ಹೊಟ್ಟೆ ಇದೆ. ಇವು ನೀರಿನಲ್ಲಿರುವ ಸಣ್ಣ ಜೀವಿಗಳನ್ನು ಪುಕ್ಕದಂಥ ಮುದುರಿಕೊಂಡಿರುವ ಅಂಗ ಸಿರೈ ಸಹಾಯದಿಂದ ಹಿಡಿದು ತಿನ್ನುತ್ತವೆ. ಸಿರೈ ಕೆಲವು ಕಾಲುಗಳ ರೂಪ ಪರಿವರ್ತನೆಯಿಂದಾದ ಅಂಗ. ಉಸಿರಾಟ ಮ್ಯಾಂಟಲ್ ಮತ್ತು ಸಿರೈ ಮುಖಾಂತರ ನೀರಿನಲ್ಲಿ ಕರಗಿರುವ ಅನಿಲದ ಸೇವನೆಯಿಂದ ನಡೆಯುತ್ತದೆ.

ಬಾರ್ನಕಲ್‌ನಲ್ಲಿ ಅನೇಕ ವಿಧಗಳಿವೆ. ಥೋರ್ಯಾಸಿಕ ಗಣಕ್ಕೆ ಸೇರಿದ ಬಾರ್ನಕಲ್‌ಗಳಲ್ಲಿ 6 ಜೊತೆ ಸಿರೈ ಇರುತ್ತವೆ ಮತ್ತು ಪೂರ್ಣವಾದ ಚಿಪ್ಪು ಇರುತ್ತದೆ. ಪೆಡಂಕ್ಯುಲೇಟ್ ಬಾರ್ನಕಲ್‌ಗಳು (ಲೆಪಾಸ್‌ಜಾತಿಗೆ ಸೇರಿದ ಗೂಸ್‌ಬಾರ್ನಕಲ್) ಪ್ರಪಂಚದಾದ್ಯಂತ ಇವೆ. ಇವುಗಳಿಗೆ ಕಾಂಡವಿದೆ. ಗೂಸ್‌ಬಾರ್ನಕಲ್‌ನ ಬಾಯಿ, ದವಡೆ, ಮ್ಯಾಕ್ಸಿಲ, ಮ್ಯಾಕ್ಸಿಲ್ಯೂಲ್‌ಗಳಿಂದ ಆವೃತವಾಗಿದೆ. ದೊಡ್ಡ ಶಿಶ್ನ ದೇಹದ ಹಿಂಭಾಗದಿಂದ ಚಾಚಿಕೊಂಡಿದೆ. ಇದಕ್ಕೆ ಹೃದಯ ಇಲ್ಲ. ರಾಕ್ ಬಾರ್ನಕಲ್ಸ್ ಅಥವಾ ಅಕಾರ್ನ್ ಶೆಲ್‌ನಲ್ಲಿ (ಉದಾ: ಬೆಲಾನಸ್) ಕಾಂಡವಿರುವುದಿಲ್ಲ. ಪರಸ್ಪರ ಅನುರೂಪತೆಯಿಂದ ಕೂಡಿದ ಇದರ ಚಿಪ್ಪು, ಪೀಪಾಯಿ ಅಥವಾ ವಿಶಾಲವಾದ ಶಂಕುವಿನಾಕಾರವಿರುತ್ತದೆ. ಬೆಲಾನಸ್, ಹಡಗುಗಳನ್ನು ಮತ್ತು ಬಂದರುಗಳ ರಚನೆಯನ್ನು ಹೆಚ್ಚಾಗಿ ಹಾಳು ಮಾಡುವ ಬಾರ್ನಕಲ್. ವಾರ್ಟ್ ಬಾರ್ನಕಲ್‌ನಲ್ಲಿ ಚಿಪ್ಪು ಪರಸ್ಪರ ಅನುರೂಪತೆಯಿಂದ ಕೂಡಿರುವುದಿಲ್ಲ. ಬರೋಯಿಂಗ್ ಬಾರ್ನಕಲ್ (ಆಕ್ರೋಥೋರ್ಯಾಸಿಕ ಗಣ) ಚಿಕ್ಕದಾಗಿದೆ. ಚಿಪ್ಪು ಇರುವುದಿಲ್ಲ, 6 ಜೊತೆಗಿಂತ ಕಡಿಮೆ ಸಿರೈ ಇದೆ. ಇದು ಏಕಲಿಂಗಿ. ಗಟ್ಟಿಯಾದ ಸುಣ್ಣದ ಕಲ್ಲಿನಿಂದಾದ ಕ್ಲಾಮ್ ಚಿಪ್ಪುಗಳ ಮೇಲೆ ಅಥವಾ ಹವಳಗಳ (ಕೋರಲ್) ಮೇಲೆ ಬಿಲ ತೋಡುತ್ತದೆ. ರೈಸೊಸೆಫಾಲಾ ಗಣದಲ್ಲಿ ಪರೋಪಜೀವಿ ಬಾರ್ನಕಲ್ ಇವೆ. ಉದಾ: ಸ್ಯಾಕುಲೈನ. ಇದಕ್ಕೆ ಖಂಡಗಳು, ಉಪಾಂಗಗಳು, ಚಿಪ್ಪು, ಹೊಟ್ಟೆ ಮತ್ತು ಇಂದ್ರಿಯಗಳಿಲ್ಲ. ಶಿಲೀಂಧ್ರವನ್ನು ಹೋಲುತ್ತದೆ. ಡೆಕಾಪೊಡದ ಕ್ರಸ್ಟೇಶಿಯನ್ಸ್ (ಏಡಿ ಮತ್ತು ಇತರೆ ಜೀವಿಗಳು) ಮೇಲೆ ಪರಾವಲಂಬಿಗಳಾಗಿವೆ. ಪೋಷಕ ಜೀವಿಗಳ ದೇಹದೊಳಕ್ಕೆ ಬೇರಿನಂತಹ ಹೀರಿಕೊಳ್ಳುವ ಮೂಲಾಂಗಗಳನ್ನು ಚಾಚುತ್ತವೆ. ಇದರಿಂದ ಆ ಜೀವಿಗಳ ಜನನೇಂದ್ರಿಯಗಳ ಬೆಳವಣಿಗೆಗೆ ತಡೆಯಾಗುತ್ತದೆ (ಪ್ಯಾರಸಿಟಿಕ್ ಕ್ಯಾಸ್ಟ್ರೇಶನ್). ಆಸ್‌ಕೋಥೋರ್ಯಾಸಿಕ್ ಗಣಕ್ಕೆ ಸೇರಿದ ಪರೋಪಜೀವಿಗಳು ಬಹಳ ಸರಳವಾಗಿವೆ.

ಬಾರ್ನಕಲ್‌ಗಳು, ಹಡಗುಗಳ ತಳಕ್ಕೆ ಅಂಟಿಕೊಳ್ಳುವುದರಿಂದ, ಒಂದು ರೀತಿಯ ಹೊರಪೊರೆ ಉಂಟಾಗುತ್ತದೆ. ಇದರಿಂದ, ಹಡಗುಗಳ ವೇಗದಲ್ಲಿ ಶೇಕಡ 30 ರಷ್ಟು ಕಡಿಮೆಯಾಗಿ, ಇಂಧನದ ವೆಚ್ಚ ಹೆಚ್ಚಾಗುತ್ತದೆ. ಈ ಕಾರಣದಿಂದ ಇವು ಮಾನವನಿಗೆ ಉಪದ್ರವಿಗಳಾಗಿವೆ. (ಎಸ್.ಆರ್.ಎಸ್.)

**ಬಾರ್ಬರಿ ಕೋತಿ:** ಮ್ಯಾಮೇಲಿಯ ವರ್ಗದ ಪ್ರೈಮೇಟ್ ಗಣಕ್ಕೆ ಸೇರಿದೆ. ಮಕಾಕ ಸಿಲ್ವಾನಸ್ ವೈಜ್ಞಾನಿಕ ಹೆಸರು. ಆಫ್ರಿಕದ ವಾಯವ್ಯ ಭಾಗದಲ್ಲಿ ಮುಖ್ಯವಾಗಿ ಜಿಬ್ರಾಲ್ಟರ್ ಮೊರಾಕ್ಕೊ, ಆಲ್ಜೀರಿಯಗಳಲ್ಲಿ ಹಾಗೂ ಯೂರೋಪ್ ಖಂಡದ ಕೆಲವು ಭಾಗಗಳಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಕಲ್ಲು ಬಂಡೆಗಳಿಂದ ಆವೃತವಾಗಿರುವ ಪರ್ವತ ಪ್ರದೇಶ ಇದರ ಮೆಚ್ಚಿನ ತಾಣ. ಬೃಹತ್ ಕೋತಿಗಳ ಗುಂಪಿಗೆ ಸೇರಿಸಲಾಗುವುದಾದರೂ ವಾಸ್ತವವಾಗಿ ಇದು ಮಕಾಕ್ ಕೋತಿಗಳ ಗುಂಪಿಗೆ ಸೇರಿದೆ. ಲಕ್ಷಣಗಳಲ್ಲಿ ಸಾಮಾನ್ಯ ಕೋತಿಗಳನ್ನು ಹೋಲುತ್ತದೆ; ಬಾಲಮಾತ್ರ ಬಹಳ ಚಿಕ್ಕದು. ಎತ್ತರ ಸುಮಾರು 75 ಸೆಂಮೀ. ತೂಕ 5–6 ಕಿಗ್ರಾಂ ಮೈತುಂಬ ಕಂದು ಬಣ್ಣದ ಬಿರುಸಾದ ಕೂದಲುಗಳಿವೆ.



ಯೂರೋಪ್ ಮತ್ತು ಆಫ್ರಿಕ ಖಂಡಗಳಲ್ಲಿ ಮಾತ್ರ ಇರುವ ಮಕಾಕ್ ಕೋತಿಗಳ ಪೈಕಿ ಇಂದು ಜೀವಂತವಾಗಿ ಕಾಣದೊರೆಯುವುದು ಇದೊಂದೇ. ಬಾರ್ಬರಿ ಕೋತಿಯನ್ನು

ಬಿಟ್ಟು ಮಕಾಕ್ ಗುಂಪಿನ ಉಳಿದೆಲ್ಲ ಪ್ರಭೇದಗಳು ಈ ಪ್ರದೇಶಗಳಲ್ಲಿ ನಶಿಸಿಹೋಗಿ ಪಳೆಯುಳಿಕೆಗಳ ರೂಪದಲ್ಲಿ ಮಾತ್ರ ದೊರೆಯುತ್ತವೆ. ಇಂಥ ಪಳೆಯುಳಿಕೆಗಳು ಯುರೋಪ್ ಮತ್ತು ಆಫ್ರಿಕದ ಎಲ್ಲ ಭಾಗಗಳಲ್ಲಿ ದೊರೆಯುವುದರಿಂದ, ಬಾರ್ಬರಿ ಕೋತಿ ಹಾಗೂ ಅದರ ಪೂರ್ವಜ ಕೋತಿಗಳು ಯೂರೋಪ್ ಮತ್ತು ಆಫ್ರಿಕ ಖಂಡಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹರಡಿದ್ದುವು ಎಂದು ಅಭಿಪ್ರಾಯಪಡಲಾಗಿದೆ. ಪರಿಸರದ ಏರಿಳಿತಗಳು, ಮಾನವನ ಆಗಮನ ಮುಂತಾದ ಪ್ರತಿಕೂಲ ಸನ್ನಿವೇಶಗಳಿಗೆ ಹೊಂದಿಕೊಳ್ಳಲಾರದೆ ಇವುಗಳ ಸಂಖ್ಯೆ ಕ್ರಮೇಣ ಕಡಿಮೆಯಾಗಿರಬೇಕು. ಮಕಾಕ ಗುಂಪಿಗೆ ಸೇರಿರುವ ಹಲವಾರು ಪ್ರಭೇದಗಳು ಇಂದಿಗೂ ಏಷ್ಯಖಂಡದಲ್ಲಿವೆ. ಬಾರ್ಬರಿ ಕೋತಿಗಳ ಉಗಮದ ಬಗ್ಗೆ ನಿರ್ದಿಷ್ಟ ಮಾಹಿತಿಗಳು ದೊರೆತಿಲ್ಲ. ಬಾರ್ಬರಿ ಕೋತಿ ಹಲವಾರು ಪ್ರದೇಶಗಳಲ್ಲಿ ಇದೆಯಾದರೂ ಇದರ ಸಂಖ್ಯೆ ಗಣನೀಯ ಮೊತ್ತದಲ್ಲೇನೂ ಇಲ್ಲ. ಜ್ರಾಲ್ಟರಿನಲ್ಲಿ 1955ರಲ್ಲಿ ಕೇವಲ 30 ಕೋತಿಗಳಿದ್ದುವು. ನಶಿಸುತ್ತಿರುವ ಈ ಪ್ರಭೇದವನ್ನು ಉಳಿಸಿಕೊಳ್ಳಲು ಬ್ರಿಟಿಷ್ ಸರ್ಕಾರ ಇವುಗಳ ಮೇಲೆ ಬಲವಾದ ಮಿಲಿಟರಿ ಕಾವಲನ್ನೇ ಹಾಕಿದೆ. ಬ್ರಿಟಿಷ್ ಸರ್ಕಾರದ ಕಾನೂನಿನಂತೆ ಬಾರ್ಬರಿಕೋತಿಯನ್ನು ಕೊಲ್ಲುವುದು ಅಕ್ಷಮ್ಯ ಅಪರಾಧ. ಈ ಕೋತಿಯ ಕೊಲೆಗಾರನಿಗೆ ಮನುಷ್ಯನನ್ನು ಕೊಲೆಮಾಡಿದವನಿಗೆ ನೀಡುವ ಶಿಕ್ಷೆಯನ್ನೇ ನೀಡಲಾಗುತ್ತದೆ.

ಬಾರ್ಬರಿ ಕೋತಿಗಳ ಚಟುವಟಿಕೆಯೆಲ್ಲ ಹಗಲಿನಲ್ಲಿ, ರಾತ್ರಿವೇಳೆಯನ್ನು ಪೊಟರೆಗಳಲ್ಲಿ, ಕಲ್ಲುಬಂಡೆಗಳ ಸಂದುಗಳಲ್ಲಿ ಕಾಲ ಹಾಕುತ್ತಿರುತ್ತವೆ. ಇವು ಚಿಕ್ಕ ಗುಂಪುಗಳಲ್ಲಿ ವಾಸಿಸುತ್ತಿದ್ದು ಇತರ ಕೋತಿಗಳಂತೆಯೇ ಸಮಾಜ ಜೀವನವನ್ನು ನಡೆಸುತ್ತವೆ.

ಇವುಗಳ ಆಹಾರ ಸಮ್ಮಿಶ್ರ ಬಗೆಯದು; ಗಿಡಗಳ ಚಿಗುರುಗಳು, ಎಲೆ ಹಾಗೂ ಹಣ್ಣುಗಳು, ಕೀಟಗಳು, ಚೇಳು ಮತ್ತಿತರ ಚಿಕ್ಕ ಪ್ರಾಣಿಗಳನ್ನು ತಿನ್ನುತ್ತವೆ. ಇವು ಮನುಷ್ಯನಿಗೆ ಸಾಕಷ್ಟು ಕೀಟಲೆಯನ್ನೂ ಕೊಡುತ್ತವೆ. ತಾವು ವಾಸಿಸುವ ಕಾಡುಗಳ ಹತ್ತಿರದ ಹಳ್ಳಿಗಳಿಗೆ ನುಗ್ಗಿ ಅಲ್ಲಿಯ ಬೆಳೆಗಳನ್ನು ನಾಶಪಡಿಸುತ್ತವಲ್ಲದೆ ಮನೆಗಳಿಗೆ ನುಗ್ಗಿ ಆಹಾರ ಅಥವಾ ಅವಕ್ಕೆ ಕುತೂಹಲ ಹುಟ್ಟಿಸುವ ಯಾವುದೇ ವಸ್ತುವನ್ನು ಕದ್ದೊಯ್ಯುವುದುಂಟು. ಇವುಗಳ ದೃಷ್ಟಿ ಸೂಕ್ಷ್ಮವಾಗಿರುವುದರಿಂದ ವೈರಿಗಳನ್ನು ಸುಲಭವಾಗಿ ಗುರುತಿಸಬಲ್ಲುವು. ಆದ್ದರಿಂದ ಇವನ್ನು ಹಿಡಿಯುವುದು ಕಠಿಣ.

ಹೆಣ್ಣು ಗರ್ಭಧಾರಣೆಯಾದ ಅನಂತರ ಸುಮಾರು 210 ದಿನಗಳಲ್ಲಿ ಮರಿ ಹಾಕುತ್ತದೆ. ಮರಿ ಜನಿಸುವಾಗ ರೋಮರಹಿತವಾಗಿರುವುದು. ತಾಯಿ ಅದನ್ನು ಸುಮಾರು ಒಂದು ವರ್ಷದವರೆಗೆ ಸಲಹುತ್ತದೆ. ಮರಿಗಳ ಪಾಲನೆಯಲ್ಲಿ ಗಂಡುಕೋತಿಯ ಸಹಾಯವೂ ಉಂಟು. (ಎಸ್.ಎನ್.ಎಚ್.)

**ಬಾವಲಿ:** ಕೈರಾಪ್ಟರ ಗಣಕ್ಕೆ ಸೇರಿದ ಸ್ತನಿ (ಬ್ಯಾಟ್). ಹಕ್ಕಿಗಳಂತೆ ಹಾರಬಲ್ಲ ಸಾಮರ್ಥ್ಯವುಳ್ಳ ಏಕಮಾತ್ರ ಸ್ತನಿ. ಕಣ್‌ಕಪಟೆ, ಚಕ್ಕಳದಹಕ್ಕಿ, ತೋಲಕ್ಕಿ ಪರ್ಯಾಯ ಹೆಸರುಗಳು. ವಿವರಗಳಿಗೆ ನೋಡಿ–ಕೈರಾಪ್ಟರ. ***

**ಬಾವಲಿ ಮೀನು:** ಪರ್‌ಕಾಯ್ಡಿಯೈ ಉಪವರ್ಗದ ಪ್ಲಟಾಸಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ಅಸ್ಥಿಮೀನು. ಶಾಸ್ತ್ರೀಯ ನಾಮ ಪ್ಲಟಾಕ್ಸ್ ಅರ್ಬಿಕ್ಯೂಲಾರಿಸ್ (ಬ್ಯಾಟ್‌ಫಿಶ್). ದುಂಡು ಬಾವಲಿ ಮೀನು ಪರ್ಯಾಯನಾಮ. ಇದು ಕರಾವಳಿಪ್ರದೇಶದ ನೀರಿನಲ್ಲಿ ವಾಸಿಸುತ್ತದೆ. ಕೆಂಪುಸಮುದ್ರ, ಆಫ್ರಿಕದ ಪೂರ್ವ ಕರಾವಳಿಯ ತೀರದಿಂದ ಹಿಡಿದು ಭಾರತದ ಕರಾವಳಿಯ ಪ್ರದೇಶಗಳನ್ನೊಳಗೊಂಡು ಮಲಯ ಪರ್ಯಾಯ ದ್ವೀಪಗಳ ತೀರಗಳಲ್ಲೂ ಅವುಗಳಿಂದಾಚೆಗೂ ಹರಡಿದೆ.

ದೇಹ ಸಂಕುಚಿತವಾಗಿದ್ದು ಗುಂಡಗಿರುತ್ತದೆ. ಉದ್ದ 32 ಸೆಂಮೀ. ಮೂತಿ ಚಿಕ್ಕದು. ದೇಹದ ಬಣ್ಣ ಬೂದು ಅಥವಾ ಕಂದು. ಮೈಮೇಲೆ 3 ಅಡ್ಡ ಪಟ್ಟೆಗಳುಂಟು. ಈಜು ರೆಕ್ಕೆಗಳು ಕಪ್ಪುಬಣ್ಣದುವು. ಎದೆಯ ಈಜುರೆಕ್ಕೆಗಳು ಮಾತ್ರ ಹಳದಿ ಬಣ್ಣದುವು. ಮರಿಮೀನುಗಳಲ್ಲಿ ವಿಸ್ತಾರವಾಗಿ ಹರಡಿರುವ ಸಣ್ಣ ಚುಕ್ಕೆಗಳಿವೆ. ಗುದದ್ವಾರದ ಈಜುರೆಕ್ಕೆ ಬಹಳ ಚಿಕ್ಕಗಾತ್ರದ್ದು. (ಕೆ.ವಿ.ಆರ್.ಜಿ.)

**ಬಾಸ್ ಮೀನು:** ಪರ್‌ಕಾಯ್ಡಿಯೈ ಗುಂಪಿನ ಸೆಂಟ್ರಾರ್ಕಿಡೆ ಮತ್ತು ಸೆರಾನಿಡೆ ಕುಟುಂಬಗಳಿಗೆ ಸೇರಿದ ಹಲವಾರು ಬಗೆಯ ಮೀನುಗಳಿಗಿರುವ ಸಾಮಾನ್ಯ ಹೆಸರು. ಇವುಗಳ ಪೈಕಿ ಮುಖ್ಯವಾದವು: ಪಟ್ಟೆ ಬಾಸ್ (ಸ್ಟ್ರೈಪ್ಡ್ ಬಾಸ್ – ರಾಕಸ್ ಸ್ಯಾಕ್ಸಾಟಿಲಿಸ್), ಕಪ್ಪು ಬಾಸ್ (ಬ್ಲಾಕ್ ಸೀ ಬಾಸ್ – ಸೆಂಟ್ರೊಪ್ರಿಸ್ಟಿಸ್ ಸ್ಟ್ರಯೇಟಸ್,) ಕಿರಿಬಾಯಿಯ ಕಪ್ಪುಬಾಸ್ (ಸ್ಮಾಲ್ ಮೌತ್ ಬ್ಲಾಕ್ ಬಾಸ್ – ಮೈಕ್ರಾಪ್ಟಿರಸ್ ಡೋಲೊಮಿಯು) ಹಾಗೂ ಅಗಲ ಬಾಯಿಯ ಕಪ್ಪು ಬಾಸ್ (ಲಾರ್ಜ್ ಮೌತ್ ಬ್ಲಾಕ್ ಬಾಸ್ – ಮೈಕ್ರಾಪ್ಟಿರಸ್ ಸಾಲ್ಮಾಯ್ಡಿಸ್). ಮೊದಲನೆಯ ಎರಡು ಮೀನುಗಳು ಸೆರಾನಿಡೆ ಕುಟುಂಬಕ್ಕೆ ಸೇರಿದ್ದು ಉತ್ತರ ಅಮೆರಿಕದ ಪೂರ್ವ ಹಾಗೂ ಪಶ್ಚಿಮ ಕರಾವಳಿಗಳಲ್ಲಿ ಕಾಣದೊರೆಯುತ್ತವೆ. ಎರಡೂ ತುಂಬ ಉತ್ತಮ ಖಾದ್ಯ ಮೀನುಗಳೆನಿಸಿವೆ. ಏಡಿ, ಸ್ಕ್ವಿಡ್ ಹಾಗೂ ಇತರ ತೆರನ ಮೀನುಗಳು ಇವುಗಳ ಆಹಾರ. ಇವು ಮರಿಮಾಡುವ ಶ್ರಾಯ ವಸಂತ ಋತು. ಮೊಟ್ಟೆಯಿಡುವ ಕಾಲದಲ್ಲಿ ಸಮುದ್ರದಿಂದ ಅಳಿವೆಗಳ ಉತ್ತರಕ್ಕೂ ವಲಸೆ ಹೋಗುತ್ತವೆ. ಕಪ್ಪುಬಾಸ್ ಮೀನಿನಲ್ಲಿ ಹಲವಾರು ಹೆಣ್ಣು ಮೀನುಗಳು ಐದು ವರ್ಷ ವಯಸ್ಸಾದ ತರುವಾಯ ಕ್ರಮೇಣ ಗಂಡು ಮೀನುಗಳಾಗಿ ಪರಿವರ್ತಿತವಾಗುವ ವಿಚಿತ್ರ ಲಕ್ಷಣ ಕಾಣಬಹುದು.

ಕಿರಿಬಾಯಿಯ ಹಾಗೂ ಅಗಲಬಾಯಿಯ ಕಪ್ಪು ಬಾಸ್‌ಗಳು ಸಿಹಿನೀರು ನಿವಾಸಿಗಳು. ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡಗಳ ಹಲವಾರು ನದೀ ವ್ಯವಸ್ಥೆಗಳಲ್ಲಿ ಇವು ಕಾಣದೊರೆಯುವುವು. ಅಲ್ಲದೆ ಕಿರಿಬಾಯಿಯ ಬಾಸ್ ಮೀನನ್ನು ದಕ್ಷಿಣ ಆಫ್ರಿಕ, ಬ್ರಿಟಿಷ್ ದ್ವೀಪಗಳು ಹಾಗೂ ಯುರೋಪಿನ ಹಲವಾರು ದೇಶಗಳಿಗೆ ತಂದು ಬೆಳೆಸಲಾಗಿದೆ. ಇದು ಸಾಧಾರಣಗಾತ್ರದ ಮೀನು. ಪ್ರೌಢ ಮೀನಿನ ಉದ್ದ ಸು. 25 ಸೆಂಮೀ. ತೂಕ ಸು. 1 ಕಿಗ್ರಾಂ.



ಇದರ ಸಂತಾನೋತ್ಪತ್ತಿಯ ಶ್ರಾಯ ಏಪ್ರಿಲ್ – ಜುಲೈ. ಈ ಸಮಯದಲ್ಲಿ ಹಲವಾರು ಗಂಡು ಮೀನುಗಳು 1–2 ಮೀ ಆಳದ ಹಾಗೂ ಕಲ್ಲುಗಳಿಂದ ಕೂಡಿದ ಸ್ಥಳಗಳಲ್ಲಿ ಗುಂಪುಗೂಡುವುವು. ಪ್ರತಿಯೊಂದು ಗಂಡು ತನ್ನದೇ ಆದ ಕ್ಷೇತ್ರ ಸ್ಥಾಪಿಸಿಕೊಂಡು, ಸುಮಾರು 1 ಮೀ ವ್ಯಾಸದ ತಟ್ಟೆ ಗೂಡು ಕಟ್ಟುತ್ತದೆ. ಆಗಿಂದಾಗ್ಗೆ ಅದನ್ನು ಸ್ವಚ್ಛಗೊಳಿಸುವುದೂ ಅದರ ಬಳಿ ಇನ್ನಿತರ ಜಲಚರಿಗಳು ಸುಳಿದಲ್ಲಿ ಅವನ್ನು ಓಡಿಸುವುದೂ ಇತ್ಯಾದಿ ಕಾರ್ಯಗಳಲ್ಲಿ ತೊಡಗಿರುತ್ತದೆ. ಕೊಂಚ ಸಮಯದಲ್ಲಿ ಗೂಡಿಗೆ ಹಲವಾರು ಹೆಣ್ಣು ಮೀನುಗಳು ಬರುವುವು. ಅವುಗಳ ಪೈಕಿ ಯಾವುದಾದರೂ ಒಂದು ಗೂಡಿನೊಳಕ್ಕೆ ನುಗ್ಗಿ ತಳದಲ್ಲಿಯ ಕಲ್ಲುಗಳಿಗೆ ತನ್ನ ಮೊಟ್ಟೆಗಳನ್ನು ಅಂಟಿಸಿ ಹೊರಟುಹೋಗುವುದು. ಅನಂತರ ಮೊಟ್ಟೆಗಳ ಹಾಗೂ ಅವುಗಳಿಂದ ಹೊರಬರುವ ಮರಿಗಳ ರಕ್ಷಣೆಯ ಕಾರ್ಯವನ್ನು ಗಂಡು ನಿರ್ವಹಿಸುತ್ತದೆ. ತುಂಬ ಚುರುಕಾಗಿ ಈ ಕೆಲಸ ನೋಡಿಕೊಳ್ಳುವ ಗಂಡು ಆಗಿಂದಾಗ್ಗೆ ಮೊಟ್ಟೆಗಳ ಮೇಲೆ ತನ್ನ ಈಜು ರೆಕ್ಕೆಗಳನ್ನು ಬಡಿಯುತ್ತ, ಇನ್ನಿತರ ಪ್ರಾಣಿಗಳು ಬಂದರೆ ಓಡಿಸುತ್ತ ಸುಮಾರು 15–20 ದಿನ ಪರ್ಯಂತ ಅವಕ್ಕೆ ಕಾಪಿರುತ್ತದೆ. ಇದೇ ರೀತಿಯ ಮೊಟ್ಟೆ, ಮರಿಗಳ ರಕ್ಷಣೆಯ ಪರಿಪಾಟಿಯನ್ನು ಅಗಲಬಾಯಿಯ ಕಪ್ಪು ಬಾಸ್ ಮೀನಿನಲ್ಲಿಯೂ ಕಾಣಬಹುದು.

ಇವೆರಡು ಕಪ್ಪು ಬಾಸ್ ಮೀನುಗಳು ಮರಿಗಳಾಗುವಾಗ ನೀರುಚಿಗಟ ಮುಂತಾದ ಸಣ್ಣ ಪುಟ್ಟ ಕಠಿಣಚರ್ಮಿಗಳನ್ನು ತಿನ್ನುತ್ತವೆ. ವಯಸ್ಕಗಳಾದ ಮೇಲೆ ಇನ್ನಿತರ ಮೀನುಗಳು, ಕೆಲವೊಮ್ಮೆ ಸಣ್ಣಗಾತ್ರದ ಹಕ್ಕಿಗಳು ಇವುಗಳ ಪ್ರಧಾನ ಆಹಾರವಾಗಿರುತ್ತವೆ. (ಪಿ.ಎ.ಆರ್.)

**ಬಾಳೆ ಮೀನು:** ನದಿಗಳಲ್ಲಿ, ಕೆರೆಗಳಲ್ಲಿ ವಾಸಿಸುವ ಸಿಹಿನೀರು ಮೀನು. ಕೆಲವೊಮ್ಮೆ ಅಳಿವೆ ನೀರಿನಲ್ಲೂ ಕಾಣಸಿಕ್ಕುವುದುಂಟು. ಸೈಲ್ಯೂರಿಡೆ ಕುಟುಂಬಕ್ಕೆ ಸೇರಿದೆ. ಇದರ ಶಾಸ್ತ್ರೀಯ ನಾಮ ವಲ್ಲಾಗೋ ಅಟ್ಟು. ಭಾರತಾದ್ಯಂತ ಹಾಗೂ ಶ್ರೀಲಂಕದಲ್ಲಿ ಕಾಣದೊರೆಯುತ್ತದೆ. ಬೇರೆ ಜಾತಿಯ ಮೀನುಗಳನ್ನು (ಉದಾ: ಕಾರ್ಪ್) ಬೇಟೆಯಾಡಿ ಭಕ್ಷಿಸುತ್ತದೆ. ಆದ್ದರಿಂದ ಇದನ್ನು ಸಿಹಿನೀರಿನ ಶಾರ್ಕ್ ಎಂದು ಕರೆವುದುಂಟು. ಇದು ದೊಡ್ಡ ಗಾತ್ರದ ಮೀನು. ಇದರ ಉದ್ದ ಸುಮಾರು 182 ಸೆಂಮೀ. ತೂಕ 20–25 ಕಿಗ್ರಾಂ.

ಇದರ ಮೂತಿ ಸ್ವಲ್ಪ ಮುಂದಕ್ಕೆ ಚಾಚಿದೆ. ಬಾಯಿ ದೊಡ್ಡದು. ಕೆಳದವಡೆ ಮೇಲಿನದಕ್ಕಿಂತ ತುಸು ಉದ್ದ. ಮೇಲುದವಡೆ ಹಾಗೂ ಕೆಳದವಡೆ ಮೇಲೆ ದಾಡಿಗಳಂತಿರುವ ಸ್ಪರ್ಶಾಂಗಗಳಿವೆ. ಬೆನ್ನಿನ ಈಜುರೆಕ್ಕೆಗಳು ಹೆಚ್ಚು ಕಡಿಮೆ ಎದೆಯ ಈಜು ರೆಕ್ಕೆಗಳಷ್ಟೇ ಉದ್ದವಿರುವುದುಂಟು. ಗುದದ್ವಾರದ ಈಜುರೆಕ್ಕೆ ಹಾಗೂ ಬಾಲದ ಈಜು ರೆಕ್ಕೆಗಳು ಬೇರೆ

ಬೇರೆಯಾಗಿವೆ. ಕೂಡಿಕೊಂಡಿಲ್ಲ. ಮೈ ಬೆಳ್ಳಿ ಬಣ್ಣದ್ದು. ಈಜುರೆಕ್ಕೆಗಳ ಮೇಲೆ ಸೂಕ್ಷ್ಮವಾದ ಚುಕ್ಕೆಗಳುಂಟು.

ಬಾಳೆ ಮೀನು ತುಂಬ ರುಚಿಕರವಾದ ಮೀನೆಂದು ಹೆಸರಾಗಿದೆ. ಇದರಿಂದ ಇದನ್ನು ಕೆರೆ, ಕಟ್ಟೆಗಳಲ್ಲಿ ಸಾಕುವುದುಂಟು. ***

**ಬಿಂಟುರಾಂಗ್:** ಸಿವೆಟ್ ಅಥವಾ ವೈವರಿಡೆ ಕುಟುಂಬಕ್ಕೆ ಸೇರಿದ ಬೆಕ್ಕಿನ ರೀತಿಯ ಮಾಂಸಾಹಾರಿ ಸ್ತನಿ. ಆರ್ಕ್‌ಟಿಕ್ಟಿಸ್ ಬಿಂಟುರಾಂಗ್ ವೈಜ್ಞಾನಿಕ ಹೆಸರು. ದಕ್ಷಿಣ ಏಷ್ಯ, ಇಂಡೋನೇಷಿಯಾ, ಮಲೇಷಿಯಾಗಳ ದಟ್ಟ ಅರಣ್ಯಗಳಲ್ಲಿ ವಿಸ್ತರಿಸಿದೆ. ಬಿಂಟುರಾಂಗ್‌ನ ಒಂದು ಪ್ರಭೇದವನ್ನು ಬರ್ಮ, ವಿಯಟ್ನಾಮ್, ಥೈಲ್ಯಾಂಡ್, ಫಿಲಿಪೀನ್ಸ್, ಅಸ್ಸಾಂ, ನೇಪಾಳ ಮತ್ತು ಭೂತಾನ್‌ಗಳಲ್ಲಿ ನೋಡಬಹುದು.

ಉದ್ದನೆಯ ಒರಟು ರೋಮ, ಜುಟ್ಟು ಕಿವಿ, ಉದ್ದನೆಯ ಪೊದೆಯ ರೀತಿಯ ಗ್ರಾಹಕ ಬಾಲ (ಪ್ರಿಹೆನ್ಸೈಲ್ ಬಾಲ) ಇದರ ವಿಶಿಷ್ಟ ಲಕ್ಷಣಗಳು. ಸಾಮಾನ್ಯವಾಗಿ ಬಣ್ಣ ಕಪ್ಪು, ಜೊತೆಗೆ ಬಿಳಿ ಅಥವಾ ಕಂದು ಬಣ್ಣದ ಸಿಂಚನ. ನೋಡುವುದಕ್ಕೆ ದೊಡ್ಡ, ಒರಟು ರೋಮಗಳಿರುವ ಮುಂಗುಸಿಯಂತೆ ಕಾಣುತ್ತದೆ. ಬಾಲದ ಮೇಲಿನ ರೋಮ, ದೇಹದ ಮೇಲಿನ ರೋಮಕ್ಕಿಂತ ಉದ್ದ. ಕಿವಿಯ ಹಿಂಭಾಗದಲ್ಲಿ ಉದ್ದವಾದ ರೋಮ ಗೊಂಚಲಿನಂತಿದೆ. ದೇಹದ ಅಳತೆ 60 ರಿಂದ 95 ಸೆಂಮೀ. ಬಾಲ 55 ರಿಂದ 90 ಸೆಂಮೀ ಉದ್ದ, ತೂಕ 9 ರಿಂದ 14 ಕಿಗ್ರಾಂ.

ಬಿಂಟುರಾಂಗ್ ಪ್ರಧಾನವಾಗಿ ಮರದ ಮೇಲೆ ವಾಸಿಸುವ ಮತ್ತು ರಾತ್ರಿವೇಳೆ ಚಟುವಟಿಕೆಯಿಂದ ಇರುವ ಪ್ರಾಣಿ. ಮರವನ್ನು ಹತ್ತುವುದರಲ್ಲಿ ನಿಸ್ಸೀಮ. ತನ್ನ ಗ್ರಾಹಕ ಬಾಲವನ್ನು ಮರಹತ್ತಲು ಬಳಸುತ್ತದೆ. ಮರದ ಕೊಂಬೆಗಳಲ್ಲಿ ತಲೆಕೆಳಗಾಗಿ ನೇತಾಡುತ್ತಾ ನಡೆಯುತ್ತದೆ. ನೆಲದ ಮೇಲಿದ್ದಾಗ ಅಡ್ಡಾದಿಡ್ಡಿ ನೆಗೆಯುತ್ತದೆ. ಹಣ್ಣುಗಳು, ಚಿಗುರು ಎಲೆ, ಮೊಟ್ಟೆ, ಸಣ್ಣಪುಟ್ಟ ಪ್ರಾಣಿಗಳು, ಪಕ್ಷಿಗಳು, ಸಣ್ಣ ಸ್ತನಿಗಳು ಇದರ ಆಹಾರ. ಬೇಟೆಯಾಡುವಾಗ ನಿರೀಕ್ಷೆಗೆ ಮೀರಿದ ವೇಗದಲ್ಲಿ ಪ್ರಾಣಿಗಳ ಮೇಲೆ ಎರಗುತ್ತದೆ. ಇದರ ಸಂತಾನೋತ್ಪತ್ತಿಯ ರೀತಿಯ ಬಗ್ಗೆ ಹೆಚ್ಚು ಮಾಹಿತಿಗಳಿಲ್ಲ. ಮರದ ಕೊಂಬೆಯಲ್ಲಿರುವ ಬಿಲದಲ್ಲಿ ಅಥವಾ ಗುಹೆಯಲ್ಲಿ ಒಂದು ಸಲಕ್ಕೆ ಎರಡರಿಂದ ಮೂರು ಮರಿಗಳನ್ನು ಹಾಕುತ್ತದೆ. ಇದನ್ನು ಸುಲಭವಾಗಿ ಪಳಗಿಸಬಹುದು. ಪಳಗಿಸಿದ ಪ್ರಾಣಿ ಪ್ರೀತಿಯಿಂದ ನಾಯಿಯ ರೀತಿ ಯಜಮಾನನನ್ನು ಹಿಂಬಾಲಿಸುತ್ತದೆ. ಕೆರಳಿಸಿದರೆ ಬಲವಾಗಿ, ಬೆರಳು ಕಿತ್ತುಬರುವ ಹಾಗೆ ಕಚ್ಚುತ್ತದೆ. ಅಥವಾ ಸಣ್ಣದಾಗಿ ಗುರ್ರೆನ್ನುವ ಜೊತೆಗೆ ಸಿಡಿಯುವ ರೀತಿ ಉಗುಳುವುದು ಮತ್ತು ಜೋರಾಗಿ ದೇಹವನ್ನು ಅಲುಗಾಡಿಸುವುದರ ಮುಖಾಂತರ ಆಕ್ರಮಣಕಾರರಿಗೆ ಸವಾಲು ಒಡ್ಡುತ್ತದೆ. (ಎಸ್.ಆರ್.ಎಸ್.)

**ಬಿಡುಕ ಮೀನು:** ಟೆಟ್ರಡಾಂಟಿಫಾರ್ಮಿಸ್ ಗಣದ ಬ್ಯಾಲಿಸ್ಟಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ಮೀನು (ಟ್ರಿಗರ್ ಫಿಶ್). ಅರಮೀನು (ಫೈಲ್ ಫಿಶ್) ಪರ್ಯಾಯ ನಾಮ. ಬ್ಯಾಲಿಸ್ಟಸ್ ಜಾತಿಗೆ ಸೇರಿದ ಸುಮಾರು 35 ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಅಟ್ಲಾಂಟಿಕ್ ಸಾಗರದಲ್ಲಿ ಬ್ಯಾ. ಮ್ಯಾಕ್ಯುಲೇಟಸ್ ಮತ್ತು ಬ್ಯಾ. ಕ್ಯಾಪ್ರಿಸೆನ್ಸ್ ಪ್ರಭೇದಗಳೂ ಭಾರತದ ಪೂರ್ವ ಕರಾವಳಿಯಲ್ಲಿ ಬ್ಯಾ. ಬ್ಯಾಸ್ಟೆಲೀಟಸ್ ಪ್ರಭೇದವೂ ಕಾಣದೊರೆಯುವುವು.

ಭಾರತದ ಬಿಡುಕ ಮೀನು ಸುಮಾರು 60 ಸೆಂಮೀ ಉದ್ದ ಬೆಳೆಯುತ್ತದೆ. ದೇಹ ಆಲಿವ್ ಹಸುರು ಮಿಶ್ರಿತ ಬೂದು ಬಣ್ಣದ್ದು. ಉದರ ಭಾಗ ಬಿಳಿ. ದೇಹದ ಎಡಬಲ ಪಕ್ಕಗಳಲ್ಲಿ ತಿಳಿಹಸುರು ಬಣ್ಣದ ಪಟ್ಟೆಗಳು, ಮಚ್ಚೆಗಳು ಉಂಟು. ಮೈಮೇಲೆ ಎಲುಬಿನಂಥ ಹುರುಪೆಗಳ ಕವಚವಿದೆ. ಬೆನ್ನಿನ ಈಜುರೆಕ್ಕೆಯಲ್ಲಿ ಮೂರು ಮೊನಚು ಮುಳ್ಳುಗಳುಂಟು. ಪ್ರತಿ ದವಡೆಯಲ್ಲಿ ಬಲವಾದ, ಬಾಚಿಯಂಥ ಎಂಟು ಹಲ್ಲುಗಳಿವೆಯಾಗಿ ಈ ಮೀನು ತನ್ನ ಸಹಜ ಆಹಾರವಾದ ಇಚ್ಚಿಪ್ಪು ಪ್ರಾಣಿಗಳ ಚಿಪ್ಪನ್ನು ಸುಲಭವಾಗಿ ಮುರಿಯಬಲ್ಲುದು. ಇದು ಮುತ್ತಿನ ಚಿಪ್ಪು ಪ್ರಾಣಿಗಳಿಗೆ ಪೀಡಕಜೀವಿಯೆನಿಸಿದೆ. (ಪಿ.ಎ.ಆರ್.)

**ಬಿಲೋನಿ:** ಬಿಲೋನಿಫಾರ್ಮಿಸ್ ಗಣದ ಬಿಲೋನಿಡೆ ಕುಟುಂಬಕ್ಕೆ ಸೇರಿದ ಮೂಳೆಮೀನು. ಗಾರ್‌ಮೀನು ಎಂಬ ಹೆಸರೂ ಉಂಟು. ಸುಮಾರು 60 ಸೆಂಮೀ ಉದ್ದ ಬೆಳೆಯುತ್ತದೆ. ತಲೆಯ ಮೇಲ್ಭಾಗ ಹಾಗೂ ಬೆನ್ನುಗಳು ಹಳದಿಮಿಶ್ರಿತ ಹಸುರು ಬಣ್ಣದುವು. ಅಲ್ಲಲ್ಲಿ ಕಂದು ಚುಕ್ಕೆಗಳುಂಟು. ಅಕ್ಕಪಕ್ಕಗಳ ಬಣ್ಣ ಬೆಳ್ಳಿಯಂತೆ. ಉದರಭಾಗದ ಬಣ್ಣ ಬಿಳಿ. ಇದರ ಎರಡು ದವಡೆಗಳೂ ಕೊಕ್ಕಿನಂತೆ ಉದ್ದವಾಗಿವೆ. ಎರಡರಲ್ಲೂ ಉದ್ದವಾದ ಮತ್ತು ಮೊನಚಾದ ಹಲ್ಲುಗಳಿವೆ. ಸಮುದ್ರದ ಮೇಲಿನಮಟ್ಟದ ನೀರಿನಲ್ಲಿ ಈಜುತ್ತ ಸಣ್ಣ ಸಣ್ಣ ಮೀನುಗಳನ್ನು, ಸೀಗಡಿ, ಏಡಿಗಳನ್ನು ಹಿಡಿದು ತಿನ್ನುತ್ತದೆ. ಗಂಟಲು ಸಣ್ಣದಾದ್ದರಿಂದ ಸಣ್ಣ ಮೀನುಗಳನ್ನು ಮಾತ್ರ ನುಂಗಬಲ್ಲು ದು. ಈಜುವಾಗ ತರಂಗಗತಿಯಲ್ಲಿ ಬಳುಕುತ್ತದೆ. ಈ ಜಾತಿಯಲ್ಲಿ ಸುಮಾರು ಐವತ್ತು ಪ್ರಭೇದಗಳಿವೆ. ಎಲ್ಲವೂ ಉಷ್ಣವಲಯದ ಸಮುದ್ರಗಳಲ್ಲಿ ಜೀವಿಸುವುವು. ಭಾರತದ ಸಮುದ್ರಗಳಲ್ಲಿ ಬಿಲೋನಿ ಸ್ಟ್ರಾಂಗೈಲ್ಯೂರಸ್ ಪ್ರಭೇದ ಕಾಣದೊರೆಯುತ್ತದೆ. ಇದು ತಿನ್ನುವುದಕ್ಕೆ ಬಹಳ ರುಚಿಯಾದ ಮೀನಾದರೂ ಇದರ ಮೂಳೆಗಳು ಹಸುರಾಗಿರುವುದರಿಂದ ಅಷ್ಟಾಗಿ ಜನಪ್ರಿಯವಾಗಿಲ್ಲ.

ಮೊಟ್ಟೆಯಿಡುವ ಶ್ರಾಯ ಸೆಪ್ಟೆಂಬರ್ – ಡಿಸೆಂಬರ್. ಆ ಸಮಯದಲ್ಲಿ ಸಮುದ್ರದಿಂದ ಅಳಿವೆಗಳಿಗೆ ವಲಸೆಬರುತ್ತದೆ. ಮೊಟ್ಟೆಗಳನ್ನು ನೀರಿನ ಪಾಚಿಗಳಿಗೆ ಅಂಟಿಸಿಸುವುದು ಇದರ ಪರಿಪಾಠ.

ಇದನ್ನು ಗಾಳ ಇಲ್ಲವೆ ಬಲೆಯ ಸಹಾಯದಿಂದ ಹಿಡಿಯಲಾಗುತ್ತದೆ. ತಮಿಳುನಾಡಿನ ತಂಜಾವೂರು ಜಿಲ್ಲೆಯ ಅರ್ಕಾಟ್ – ತೊರೈ, ಸೇತುಭಾವಚತ್ರಮ್, ರಾಮನಾಡು ಜಿಲ್ಲೆಯ ಪಾಂಬನ್, ಕೇರಳದ ಕಲ್ಲಿಕೋಟೆ, ತಾನೂರ್, ಚಾಲಿಯಮ್ ಹಾಗೂ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಹಂಗಾರುಕಟ್ಟೆ ಇದರ ಉದ್ಯಮಕ್ಕೆ ಹೆಸರಾಗಿವೆ. (ಪಿ.ಎ.ಆರ್.)

**ಬಿಸಿಜಿ ಲಸಿಕೆ:** ಕ್ಯಾಮೆಟ್ ಮತ್ತು ಗುಯರಿನ್ ಎಂಬ ಫ್ರೆಂಚ್ ಏಕಾಣು ವಿಜ್ಞಾನಿಗಳಿಂದ ಪ್ರತ್ಯೇಕಿಸಲ್ಪಟ್ಟು ಮಾನವನಲ್ಲಿ ತೀವ್ರರೋಗ ಉಂಟುಮಾಡಬಲ್ಲ ಆದರೆ ಹಾಗೆ ಮಾಡದಂತೆ ಸಾಮರ್ಥ್ಯ ಕುಂದಿಸಿದ (ಅಟ್ಟೆನುಯೇಟೆಡ್) ಪಶುಕ್ಷಯಾಣುಗಳಿರುವ ಲಸಿಕೆ. ಬ್ಯಾಸಿಲ್ಲಸ್ (ಏಕಾಣುಜೀವಿ)–ಕ್ಯಾಮೆಟ್–ಗುಯರಿನ್ ವ್ಯಾಕ್ಸಿನ್ ಎನ್ನುವುದರ ಸಂಕ್ಷಿಪ್ತ ರೂಪ ಬಿಸಿಜಿ. ವ್ಯಕ್ತಿಯಲ್ಲಿ ಕ್ಷಯರೋಗ ಪ್ರತಿರೋಧನ ಉಂಟು ಮಾಡಲು ಇದನ್ನು ಬಳಸುವುದುಂಟು. ಬಿಸಿಜಿ ಲಸಿಕೆ ಕೊಡುವುದರಿಂದ ದೇಹದ ಸಾಮಾನ್ಯ ಪ್ರತಿರೋಧ ಕೂಡ ವೃದ್ಧಿಯಾಗುವುದು ತಿಳಿದಿದೆ. ಆದ್ದರಿಂದ ಏಡಿಗಂತಿ ಪ್ರಾರಂಭಿಕ ಹಂತದಲ್ಲಿ ಪತ್ತೆ ಆದಾಗ ಬಿಸಿಜಿ ಲಸಿಕೆ ಚುಚ್ಚಿ ಚಿಕಿತ್ಸೆ ಕೊಡುವುದುಂಟು. ಚರ್ಮದಲ್ಲಿ ಉದ್ಭವಿಸುವ, ಸಾಮಾನ್ಯವಾಗಿ ಕರಿಬಣ್ಣಕ್ಕಿದ್ದು ಬಲು ಚಿಕ್ಕದಾಗಿರುವ ಆದರೆ ಕ್ರಮೇಣ ದೇಹಾದ್ಯಂತ ಹಬ್ಬಿ ಮಾರಕವಾಗುವ ಮೆಲನೋಮ ಎಂಬ ಏಡಿಗಂತಿಯೊಳಕ್ಕೆ ನೇರವಾಗಿ ಬಿಸಿಜಿ ಲಸಿಕೆ ಚುಚ್ಚಿದರೆ ಗಂತಿನಾಶವಾಗುವುದು. ಕೆಲವು ಸಂದರ್ಭಗಳಲ್ಲಿ ಬಿಸಿಜಿಯನ್ನು ಕುಷ್ಠರೋಗ ಚಿಕಿತ್ಸಕವಾಗಿ ಬಳಸುವುದೂ ಉಂಟು.

ಕ್ಷಯಾಣುಗಳ ಸೋಂಕಿಗೆ ಸುಲಭವಾಗಿ ಈಡಾಗಬಹುದಾದ ಕ್ಷಯಾಸ್ಪತ್ರೆಯ ವೈದ್ಯರಿಗೂ ದಾದಿಯರಿಗೂ ಚುಚ್ಚುಮದ್ದಾಗಿ ಬಿಸಿಜಿ ಲಸಿಕೆ ಕೊಡುವುದರಿಂದ ಐವರಲ್ಲಿ ನಾಲ್ವರು ಪೂರ್ಣರಕ್ಷಣೆ ಪಡೆಯುತ್ತಾರೆಂದು ಹೇಳಲಾಗಿದೆ. ಉಳಿದ ಒಬ್ಬ ಕ್ಷಯರೋಗಕ್ಕೆ ಈಡಾದರೂ ರೋಗ ಸೌಮ್ಯರೂಪದಲ್ಲಿದ್ದು ಸುಲಭ ಚಿಕಿತ್ಸೆಗೆ ಒಳಪಡುತ್ತದೆ. ಯಾವುದೆ ಜಿಲ್ಲೆಯಲ್ಲಿ ಕ್ಷಯರೋಗದ ಹಾವಳಿ ಅತ್ಯಧಿಕವಾಗಿದ್ದು ಅಲ್ಲಿ ಮಕ್ಕಳಿಗೆ ಬಿಸಿಜಿ ಲಸಿಕೆ ಕೊಡುವುದರಿಂದ ಆ ಮಕ್ಕಳು ಮಿಯರಿ ಎಂಬ ಘೋರ ರೂಪಕ ಕ್ಷಯಕ್ಕಾಗಲಿ ಮಾರಕ ಮಿದುಳುಪೊರೆ ಕ್ಷಯಕ್ಕಾಗಲಿ ತುತ್ತಾಗುವ ಸಂಭವ ಬಲುಮಟ್ಟಿಗೆ ಕಡಿಮೆ ಆಗುತ್ತದೆ. ಆದರೂ ಬಿಸಿಜಿ ಲಸಿಕೆಯಿಂದ ರಕ್ಷಣೆ ಒದಗಿಸುವುದರ ಬಗ್ಗೆ ಪ್ರಪಂಚದಾದ್ಯಂತ ಸಾರ್ವತ್ರಿಕ ಮನ್ನಣೆ ದೊರೆತಿಲ್ಲ. ಕ್ಷಯರೋಗದ ಪ್ರತಿಬಂಧಕವಾಗಿ ಭಾರತದಲ್ಲಿ ಎಲ್ಲ ನವಜಾತ ಶಿಶುಗಳಿಗೆ ಬಿಸಿಜಿ ಲಸಿಕೆಯನ್ನು ಕೊಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಚುಚ್ಚಿದ ಸ್ಥಳದಲ್ಲಿ ವ್ರಣ ತಲೆದೋರಿ ಹಲವು ವರ್ಷ ಮಾಯದೆ ಇರಬಹುದು. ಆದರೆ ಲಸಿಕೆ ಒದಗಿಸುವ ರಕ್ಷಣೆಯ ಪ್ರಮಾಣಕ್ಕೆ ಹೋಲಿಸಿದಾಗ ಲಸಿಕೆಯಿಂದಲೆ ವ್ಯಾಪಕ ರೋಗ ಪಡೆಯುವವರ ಸಂಖ್ಯೆ ಮತ್ತು ವ್ರಣದಿಂದ ನರಳುವವರ ಸಂಖ್ಯೆ ತೀರ ಅಗಣನೀಯ ಎಂಬ ವಾದವೂ ಉಂಟು.

ವ್ಯಕ್ತಿ ಕ್ಷಯರೋಗಕ್ಕೆ ಈಡಾಗಬಹುದಾದ ಸಂಭವವನ್ನು ಟ್ಯುಬರ್ಕ್ಯುಲಿನ್ ಪರೀಕ್ಷೆ ಎಂಬ ವಿಧಾನದಿಂದ ಕಂಡುಕೊಳ್ಳುವುದು ರೂಢಿ. ಬಿಸಿಜಿ ಲಸಿಕೆ ಚುಚ್ಚಿದ ಬಳಿಕ ಆ ವ್ಯಕ್ತಿ ಟ್ಯುಬರ್ಕ್ಯುಲಿನ್ ಪರೀಕ್ಷೆಯಲ್ಲಿ ಸ್ಪಷ್ಟ ಸೂಚನೆಗೆ (ಪಾಸಿಟಿವ್) ಅವಕಾಶವೆ ಇಲ್ಲದೆ ಯಾವಾಗಲೂ ಅದು ನಕಾರಾತ್ಮಕವಾಗಿಯೇ (ನೆಗೆಟಿವ್) ಇರುತ್ತದೆ. ಕ್ಷಯದ ಹಾವಳಿ ಅಷ್ಟಾಗಿ ಇಲ್ಲದ ಪ್ರದೇಶದಲ್ಲಿ ಒಬ್ಬ ವ್ಯಕ್ತಿ ಕ್ಷಯ ರೋಗಕ್ಕೆ ಈಡಾಗಬಹುದಾದ ಸಂಭವವನ್ನು ಕಂಡುಕೊಳ್ಳುವ ಬಲುಮುಖ್ಯ ವಿಧಾನ ಬಿಸಿಜಿ ಲಸಿಕೆಯ ಪ್ರಯೋಗದಿಂದ ಕೈತಪ್ಪುವುದಾಗಿ ಇದಕ್ಕೆ ಮನ್ನಣೆ ನೀಡಬಾರದು ಎಂಬ ವಾದವಿದೆ. ಈ ವಾದ ಪುರಸ್ಕರಿಸಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬಿಸಿಜಿ ಬಳಕೆ ಕೈಬಿಡಲಾಗಿದೆ. ಅಲ್ಲದೆ ಐಸೋನಿಯಾಸಿಡ್ ಎಂಬ ಔಷಧದ ಬಳಕೆಯಿಂದ ಕ್ಷಯರೋಗ ಬಾರದಂತೆ ತಡೆಗಟ್ಟಬಹುದಾದ್ದರಿಂದ ಈ ಉದ್ದೇಶಕ್ಕಾಗಿ ವಾದಗ್ರಸ್ತವಾದ ಬಿಸಿಜಿಯನ್ನು ಏಕೆ ಬಳಸಬೇಕು ಎಂಬ ಪ್ರಶ್ನೆ ಏಳುತ್ತದೆ. ಆದರೂ ವಿಶಿಷ್ಟ ಸಂದರ್ಭಗಳಲ್ಲಿ ಬಿಸಿಜಿ ಲಸಿಕೆಯ ಪ್ರಯೋಜನ ಖಚಿತ ಎನ್ನಿಸಿದೆ. ಒಂದು ಪ್ರಾಂತ್ಯದ ಮಾಧ್ಯಮಿಕ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ 20 ವ್ಯಕ್ತಿಗಳು ಟ್ಯುಬರ್ಕ್ಯುಲಿನ್ ಪಾಸಿಟಿವ್ ಆಗಿದ್ದರೆ ಆ ಪ್ರಾಂತ್ಯದ ನಕಾರಾತ್ಮಕ (ನೆಗೆಟಿವ್) ವಿದ್ಯಾರ್ಥಿಗಳಿಗೆ ಲಸಿಕೆ ಕೊಡುವುದರಿಂದ ಖಂಡಿತ ರಕ್ಷಣೆ ಒದಗಿಸಬಹುದು. ಪಾಸಿಟಿವ್ ಆಗಿರುವ ವ್ಯಕ್ತಿಗಳಿಗೆ ಬಿಸಿಜಿ ಲಸಿಕೆಕೊಡುವುದರಿಂದ ಏನೂ ಪ್ರಯೋಜನವಿಲ್ಲ. ಬದಲು ಇಂಥವರಿಗೆ

ಬಿಸಿಜಿ ಲಸಿಕೆ ಕೊಟ್ಟರೆ ವ್ಯಾಪಕ ಕ್ಷಯ ರೋಗ ಇಲ್ಲವೆ ಸ್ಥಳೀಯ ವ್ರಣ ಕಾಣಬರುವ ಸಂಭವ ಗಣನೀಯವಾಗಿ ಇರುತ್ತದೆ. ಕ್ಷಯರೋಗದಿಂದ ನರಳುತ್ತಿರುವ ಸ್ತ್ರೀಯ ನವಜಾತ ಶಿಶುಗಳಿಗೆ ಬಿಸಿಜಿ ಲಸಿಕೆಯ ರಕ್ಷಣೆ ಕೊಡಬಹುದು. ಆದರೆ ಸುಮಾರು ಆರುವಾರದ ಮಗುವನ್ನು ತಾಯಿಯಿಂದ ದೂರವಾಗಿ ಇಟ್ಟಿರಬೇಕಾದ ಅಗತ್ಯ ಕಷ್ಟದ್ದು ಎಂಬುದು ವಿದಿತ. ***

**ಬಿಳಿಮೀನು:** ಸೈಪ್ರಿನಿಫಾರ್ಮಿಸ್ ಗಣದ ಸೈಪ್ರಿನಿಡೆ ಕುಟುಂಬಕ್ಕೆ ಸೇರಿದ ಮೀನು. ಪೆರುವಾಲ, ಎಳಲು ಪರ್ಯಾಯ ನಾಮಗಳು. ಉತ್ತರ ಭಾರತದಲ್ಲಿ ಮಹಸೀರ್ ಎಂದು ಪ್ರಸಿದ್ಧವಾಗಿದೆ. ಟೋರ್ ಟೋರ್ ಅಥವಾ ಬಾರ್ಬಸ್ ಟೋರ್ ಇದರ ವೈಜ್ಞಾನಿಕ ಹೆಸರು. ಸಿಹಿನೀರು ಮೀನಾದ ಇದು ಭಾರತಾದ್ಯಂತ ನದಿಗಳ ತಿಳಿನೀರಿನ ಪಾತ್ರಗಳಲ್ಲಿ ಸಣ್ಣ ಉರುಟು ಕಲ್ಲುಗಳಿರುವೆಡೆ ವಾಸಿಸುತ್ತದೆ. ಬೆಟ್ಟದ ತೊರೆಗಳಲ್ಲಿ ಹೆಚ್ಚು ಸಿಗುತ್ತದೆ. ಮೈಸೂರಿನ ಕಾವೇರಿ ನದಿ ಇದರ ಬೇಟೆಗೆ ಪ್ರಸಿದ್ಧವಾಗಿದೆ. ಶ್ರೀರಂಗಪಟ್ಟಣದ ಹತ್ತಿರ ಇರುವ ದೊಡ್ಡಿನಮಡು ಮತ್ತು ಬಿಲಾಮ್ಮನಮಡು, ತಿರಮಕೂಡಲು ನರಸೀಪುರ ತಾಲ್ಲೂಕಿನ ಮುಡುಕುತೊರೆ, ಕಾಕನಕೋಟೆ ಕಾಡಿನಲ್ಲಿ ಹರಿಯುವ ಕಬಿನಿ ನದಿಯ ಮಡುಗಳು ಈ ಮೀನಿನ ಬೇಟೆಗೆ ಪ್ರಸಿದ್ಧವಾದ ತಾಣಗಳು. ಉತ್ತರ ಭಾರತದಲ್ಲಿ ಪಂಜಾಬ್, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಮಧ್ಯಪ್ರದೇಶಗಳಲ್ಲೂ ಇದು ಕಾಣದೊರೆಯುತ್ತದೆ.

ಬಿಳಿಮೀನು ದೊಡ್ಡ ಗಾತ್ರದ್ದು; ಸುಮಾರು 1 ಮೀ ಉದ್ದ ಬೆಳೆಯುವುದುಂಟು. ಮೂತಿ ಚೂಪಾಗಿದೆ. ಮೈಮೇಲೆ ಸೈಕ್ಲಾಯಿಡ್ ಮಾದರಿ ಹುರುಪೆಗಳಿವೆ. ಹುರುಪೆಗಳು ಇತರ ಮೀನುಗಳವಕ್ಕೆ ಹೋಲಿಸಿದರೆ ಗಾತ್ರದಲ್ಲಿ ದೊಡ್ಡವು. ಮೀನಿನ ಮೈಬಣ್ಣ ತುಂಬ ಚೆಲುವಾಗಿದೆ. ತಲೆ, ಬೆನ್ನುಭಾಗ ಗಾಢ ಹಸುರು ಅಥವಾ ಆಲಿವ್ ಹಸುರು. ಅಕ್ಕಪಕ್ಕಗಳು ಬಂಗಾರಬಣ್ಣದುವು. ಉದರ ಭಾಗ ಬಿಳಿ. ಅಂಚುಗಳು ಮಾತ್ರ ಕೆಂಪು.

ಸಾಮಾನ್ಯವಾಗಿ ಚಳಿಗಾಲದಲ್ಲಿ ನದಿಗಳಲ್ಲಿ ತಿಳಿನೀರಿರುವ ಕಡೆ, ಉರುಟು ಕಲ್ಲುಗಳಿರುವೆಡೆ ಮೊಟ್ಟೆಯಿಡುತ್ತದೆ. ಸಾಲ್ಮನ್ ಮೀನಿನಂತೆ ಪ್ರವಾಹಕ್ಕೆದುರಾಗಿ ಈಜುತ್ತ, ನೆಗೆಯುತ್ತ ಮೊಟ್ಟೆಯಿಡುವ ತಾಣಗಳನ್ನು ಅರಸಿಕೊಂಡು ಹೋಗುತ್ತದೆ. ಇದು ಒಳ್ಳೆಯ ಆಹಾರ ಮೀನೆಂದು ಹೆಸರಾಗಿದೆ. ಅಷ್ಟೇ ಒಳ್ಳೆಯ ಬೇಟೆ ಮೀನೂ (ಗೇಮ್ ಫಿಶ್) ಹೌದು. ಇದನ್ನು ಅಣೆಕಟ್ಟು, ಕೆರೆಗಳಲ್ಲಿ ಬೆಳೆಸಲಾಗಿದೆ. (ಎನ್.ಬಿ.)

**ಬೀವರ್:** ಮ್ಯಾಮೇಲಿಯ ವರ್ಗದ ರಾಡೆಂಷಿಯ ಗಣದ, ಕ್ಯಾಸ್ಟೊರಿಡೆ ಕುಟುಂಬಕ್ಕೆ ಸೇರಿದ ಜಲವಾಸಿ ದಂಶಕ. ಈ ಜಾತಿಯ ವೈಜ್ಞಾನಿಕ ಹೆಸರು ಕ್ಯಾಸ್ಟರ್. ಇದರಲ್ಲಿ ಕೆನಡೆನ್ಸಿಸ್ ಮತ್ತು ಫೈಬರ್ ಎಂಬ ಎರಡು ಪ್ರಭೇದಗಳಿವೆ. ಮೊದಲನೆಯದು ನವೀನ ಪ್ರಪಂಚದ (ನ್ಯೂವರ್ಲ್ಡ್) ಬೀವರ್. ಉತ್ತರ ಅಮೆರಿಕದಲ್ಲಿ ಮಾತ್ರ ದೊರೆಯುವ ಇದು ಹಿಂದೆ ಉತ್ತರ ಮೆಕ್ಸಿಕೋದಿಂದ ಹಿಡಿದು ಆರ್ಕ್‌ಟಿಕ್ ವರೆಗಿನ ವಿಸ್ತಾರ ಪ್ರದೇಶದಲ್ಲಿ ಜೀವಿಸಿತ್ತು. ತುಪ್ಪಳಿನ ಆಸೆಗಾಗಿ ಇದನ್ನು ವ್ಯಾಪಕವಾಗಿ ಬೇಟೆಯಾಡಿದ್ದರಿಂದ ಇದರ

ಸಂಖ್ಯೆ ಕ್ಷೀಣಿಸುತ್ತ ಬಂದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ತರ ಭಾಗ ಹಾಗೂ ಕೆನಡಗಳಲ್ಲಿ ಈ ಬೀವರ್ ಬದುಕುವಂತಾಗಿದೆ. ಈಗ ಇದರ ಬೇಟೆಯನ್ನು ನಿಷೇಧಿಸಿರುವುದರಿಂದ ಇದಕ್ಕೆ ಸಾಕಷ್ಟು ರಕ್ಷಣೆ ದೊರೆತಿದೆ. ಎರಡನೆಯ ಪ್ರಭೇದವಾದ ಫೈಬರ್ ಯೂರೋಪಿನ ಎಲ್ಬೆ ಮತ್ತು ರೋನ್ ನದಿಹರವುಗಳಲ್ಲಿ ವಾಸಿಸುತ್ತಿದ್ದು ಪ್ರಾಚೀನ ಪ್ರಪಂಚದ (ಓಲ್ಡ್ ವರ್ಲ್ಡ್) ಬೀವರ್ ಎಂದು ಪ್ರಸಿದ್ಧವಾಗಿದೆ. ಇದಕ್ಕೂ ಕಾನೂನಿನ ರಕ್ಷಣೆ ಉಂಟು.

ಬೀವರ್ ದಷ್ಟ ಪುಷ್ಟ ಪ್ರಾಣಿ; ಸುಮಾರು 1.3 ಮೀ ಉದ್ದವೂ 30 ಕಿಗ್ರಾಂ ಭಾರವೂ ಇರುತ್ತದೆ. 0.3 ಮೀ ಉದ್ದದ ದೋಣಿಯ ಹುಟ್ಟಿನಂತೆ ಚಪ್ಪಟೆಯಾದ ಬಾಲವಿದೆ. ಬಾಲದ ಮೇಲೆ ಕೂದಲುಗಳ ಬದಲು ಶಲ್ಕಗಳ ಹೊದಿಕೆಯಿದೆ. ದೇಹದ ಮೇಲೆ ಮೃದುವಾದ ದಟ್ಟವಾದ ಉಣ್ಣೆಯಂಥ ತುಪ್ಪುಳು ಉಂಟು. ಮೈಬಣ್ಣ ಹೊಳೆಯುವ ಹಳದಿಕಂದು. ಉದರ ಭಾಗ ತಿಳಿಕಂದು, ಬಾಲ ಹಾಗೂ ಪಾದಗಳು ಕಪ್ಪು ಬಣ್ಣದುವು. ಕಿವಿಗಳು ಗುಂಡಗೂ ಕಿರಿಗಾತ್ರದವೂ ಆಗಿವೆ. ಕಾಲುಗಳು ಮೋಟು. ಹಿಂಗಾಲಿನಲ್ಲಿ ಜಾಲಪಾದಗಳುಂಟು. ಗಂಡು ಹೆಣ್ಣುಗಳೆರಡರಲ್ಲೂ ಗುದದ್ವಾರದ ಬಳಿ ಪುನುಗಿನ ಗ್ರಂಥಿಗಳಿವೆ. ಇದರಿಂದ ಕ್ಯಾಸ್ಟೋರಿಯಮ್ ಎಂಬ ಸುವಾಸನಾಯುಕ್ತ ದ್ರವ ಉತ್ಪತ್ತಿಯಾಗುತ್ತದೆ. ಇದನ್ನು ಸುಗಂಧ ತಯಾರಿಕೆಯಲ್ಲಿ ಬಳಸುವುದಿದೆ.

ಬೀವರುಗಳು ಸಾಮಾನ್ಯವಾಗಿ ಸಣ್ಣಪುಟ್ಟ ನದಿ, ಹಳ್ಳ ಹಾಗೂ ಝರಿಗಳ ದಂಡೆಗಳಲ್ಲಿ ವಾಸಿಸುವುವು. ಅರಣ್ಯಗಳ ಅಂಚಿನಲ್ಲಿರುವ ಸರೋವರಗಳ ದಡಗಳಲ್ಲೂ ವಾಸಿಸುವುದುಂಟು. ತಮ್ಮ ಬಾಚಿಹಲ್ಲುಗಳ ಸಹಾಯದಿಂದ ಮರಗಿಡಗಳನ್ನು ಕಡಿದು ನದಿ, ಹಳ್ಳಗಳ ಹರಿವಿಗೆ ಅಡ್ಡಲಾಗಿ ಇಟ್ಟು, ಕೆಸರು ಕಲ್ಲು, ಸೊಪ್ಪು ಸೆದೆಗಳನ್ನು ಮೆತ್ತಿ ಬಲವಾದ ಅಣೆಗಳನ್ನು ಕಟ್ಟುವ, ಕೌತುಕಮಯ ಗುಣವನ್ನು ಬೀವರ್‌ಗಳು ತೋರುವುವು. ಕಡ್ಡಿ, ಕೆಸರುಗಳನ್ನು ಬಳಸಿಕೊಂಡು ನದಿ ದಂಡೆಗಳಲ್ಲಿ ಕೊಳಗಳ ಅಂಚಿನಲ್ಲಿ ತಮ್ಮ ವಾಸದ ಮನೆಗಳನ್ನು (ಲಾಡ್ಜ್) ಕೂಡ ಇವು ಕಟ್ಟಿಕೊಳ್ಳುವುವು. ಇಂಥ ಗುಣದಿಂದಾಗಿ ಬೀವರುಗಳನ್ನು ಪ್ರಾಣಿಪ್ರಪಂಚದ ಇಂಜಿನಿಯರುಗಳು ಎಂದು ಕರೆಯುವುದಿದೆ. ಇವು ನಿರ್ಮಿಸುವ ಅಣೆಗಳು ಸುಮಾರು 25 ಮೀಗಳಿಂದ 600 ಮೀ ಉದ್ದ ಇರುವುದುಂಟು. ಇಂಥ ಒಡ್ಡುಗಳಿಂದಾಗಿ ನದಿಗಳಲ್ಲಿ ಅಲ್ಲಲ್ಲಿ ಭಾರಿಯಾದ ಹಲವಾರು ಎಕರೆ ವಿಸ್ತೀರ್ಣದ ಮಡುಗಳು ರೂಪು ಗೊಳ್ಳುವುವು. ಒಡ್ಡುಗಳನ್ನು ಆಗಾಗ ರಿಪೇರಿ ಮಾಡುತ್ತ ಹಲವಾರು ವರ್ಷಗಳ ಕಾಲ ಕಾಪಾಡಿಕೊಳ್ಳುವುದರಿಂದ ಮಡುಗಳಲ್ಲಿ ಹೂಳು ಸಂಗ್ರಹಗೊಳ್ಳುತ್ತ ಬಂದು ಕಾಲಕ್ರಮೇಣ ಹುಲ್ಲುಗಾವಲುಗಳು ರಚಿತವಾಗುವುದುಂಟು. ಇವುಗಳ ವಾಸದ ಮನೆಗಳು ಸುಮಾರು 1.8 ಮೀ ಎತ್ತರದ, 12 ಚಮೀ ವಿಸ್ತೀರ್ಣದ ಗೋಪುರಾಕೃತಿಯ ಬಿಲಗಳು. ಮಲಗಲು ಬಳಸುವ ಪ್ರತ್ಯೇಕ ಕೋಣೆಯೂ ಇರುವುದುಂಟು. ಒಂದೊಂದು ಮನೆಯಲ್ಲೂ ಹೆಣ್ಣು, ಗಂಡು ಹಾಗೂ ಹಲವಾರು ಮರಿಗಳು ವಾಸಿಸುವುವು. ಇಂಥ ಅನೇಕ ಮನೆಗಳು ಒಟ್ಟಿಗಿದ್ದು ಬೀವರುಗಳ ವಸಾಹತುಗಳೇ ರೂಪುಗೊಂಡಿರುವುದುಂಟು.

ಮರಗಿಡಗಳ ತೊಗಟೆ, ಚಿಗುರು, ಮೊಗ್ಗು, ಬೇರು ಮುಂತಾದುವು ಇವುಗಳ ಆಹಾರ. ರೆಂಬೆ ಕೊಂಬೆಗಳನ್ನು ಸಣ್ಣಗಾತ್ರದ ದಿಮ್ಮಿಗಳನ್ನು ಇವು ತಳದ ಕೆಸರಿನಲ್ಲಿ ಹೂತಿಟ್ಟಿದ್ದು ಚಳಿಗಾಲದಲ್ಲಿ ಇವನ್ನು ಆಹಾರವಾಗಿ ಬಳಸುವುದೂ ಉಂಟು.

ಇವು ಸಂತಾನವೃದ್ಧಿ ಚಟುವಟಿಕೆಯಲ್ಲಿ ತೊಡಗುವ ಶ್ರಾಯ ಚಳಿಗಾಲ. ಹೆಣ್ಣು ಗಂಡುಗಳು ಆಜೀವ ಪರ್ಯಂತ ಸಂಸಾರ ನಡೆಸುವುವು. ನಾಲ್ಕು ತಿಂಗಳ ಗರ್ಭಾವಸ್ಥೆಯ ಅನಂತರ ಒಂದು ಸೂಲಿಗೆ 2–8 (ಸಾಮಾನ್ಯವಾಗಿ ನಾಲ್ಕು) ಮರಿಗಳು ಹುಟ್ಟುತ್ತವೆ. ಎರಡರಿಂದ ಮೂರು ವರ್ಷಗಳ ಕಾಲ ತಂದೆ ತಾಯಿಗಳೊಡನೆಯೇ ಇದ್ದು ಅನಂತರ ಮರಿಗಳು ಬೇರೆಯಾಗುವುವು. ಬೀವರುಗಳ ಆಯಸ್ಸು 15–20 ವರ್ಷ. ಸಾಧು ಸ್ವಭಾವದ ಪ್ರಾಣಿಗಳಿವು. ಸಾಮೂಹಿಕವಾಗಿ ಕಲೆತು ಸಹಕಾರದಿಂದ ಒಡ್ಡುಗಳ ನಿರ್ಮಾಣದಲ್ಲಿ ತೊಡಗುವುವು. ಅಪಾಯ ಒದಗಿದಾಗ ಗಾಬರಿಯಿಂದ ನೀರನ್ನು ಬಾಲದಿಂದ ಹೊಡೆದು ನೀರಿಗೆ ನೆಗೆದು ಬಿಲಗಳನ್ನು ಸೇರಿಕೊಳ್ಳುತ್ತವೆ. ಕರಡಿ, ತೋಳ, ನೀರುನಾಯಿ, ಲಿಂಕ್ಸ್, ಮುಂತಾದ ಮಾಂಸಾಹಾರಿಗಳು ಇವುಗಳ ಮುಖ್ಯ ಶತ್ರುಗಳು.

ತುಪ್ಪಳಕ್ಕಾಗಿ, ಚರ್ಮಕ್ಕಾಗಿ, ಮಾಂಸಕ್ಕಾಗಿ ಬೀವರುಗಳನ್ನು ಬೇಟೆಯಾಡುವುದಿತ್ತು. (ಟಿ.ವಿ.ಎಚ್.)

**ಬೀಷಾ., ಮೇರಿಫ್ರಾಂಕೊ ಕ್ಸೇವಿಯರ್ (1771–1802):** ಅಂಗಾಂಶ ವಿಜ್ಞಾನಕ್ಕೆ (ಹಿಸ್ಟಾಲಜಿ) ಬುನಾದಿ ಹಾಕಿದ ದೇಹರಚನಾ ವಿಜ್ಞಾನಿ. ದೇಹ ಕಾರ್ಯ ವಿಜ್ಞಾನಿಯೂ ಹೌದು. ಫ್ರಾನ್ಸಿನ ಥೊಯರೆ ಎಂಬಲ್ಲಿ 1771 ನವೆಂಬರ್ 11 ರಂದು ಜನನ. ತಂದೆ ವೈದ್ಯ. ಹೀಗಾಗಿ ಮಗನ ಆಸಕ್ತಿ ಈ ಕಡೆ ವಾಲಿತು. ದೇಹರಚನಾ ವಿಜ್ಞಾನದಲ್ಲಿ ಸಂಶೋಧನೆ ಈತನ ಕಾರ್ಯಕ್ಷೇತ್ರ. ಆರುನೂರಕ್ಕಿಂತಲೂ ಹೆಚ್ಚು ಶವಪರೀಕ್ಷೆ ಮಾಡಿ ಅಂಗಗಳು ಕಾರ್ಯ ದೃಷ್ಟಿಯಿಂದ ಬಹುವಿಧವಾಗಿ ಬೇರೆ ಬೇರೆಯಾಗಿ ಕಂಡರೂ ರಚನೆಯ ದೃಷ್ಟಿಯಿಂದ ಕೇವಲ ಕೆಲವೇ ರೀತಿಯವು ಎಂಬುದನ್ನು ಪ್ರಕಟಿಸಿದ. ರಚನೆಯ ವೈಶಿಷ್ಟ್ಯದ ದೃಷ್ಟಿಯಲ್ಲಿ ಬೇರೆ ಬೇರೆಯಾದ ಕೋಶಗಳಿಂದ ಬೇರೆ ಬೇರೆ ಅಂಗಾಂಶಗಳು ಅಥವಾ ಊತಕಗಳು (ಟಿಶ್ಯೂಸ್) ಮತ್ತು ಈ ವಿವಿಧ ಅಂಗಾಂಶಗಳಿಂದ ಎಲ್ಲ ಅಂಗಗಳು ರೂಪುಗೊಂಡಿವೆ ಎಂಬುದನ್ನು ವಿವರಿಸಿದ. ಆಗ ಹೆಚ್ಚು ಹೆಚ್ಚು ಬಳಕೆಗೆ ಬರುತ್ತಲಿದ್ದ ಸೂಕ್ಷ್ಮದರ್ಶಕವನ್ನು ಬಳಸದೆಯೆ 21 ಅಂಗಾಂಶಗಳನ್ನು ಗುರುತುಹಿಡಿದ. ದೇಹರಚನೆ

ಅಭ್ಯಾಸ ಮಾಡಲು ಅಂಗಾಂಶಗಳ ಅಧ್ಯಯನ ಎಂದು ತೋರಿಸಿ ಅಂಗಾಂಶವಿಜ್ಞಾನಕ್ಕೆ ತಳಪಾಯ ಹಾಕಿದ.

ಖಾಯಿಲೆಯಿಂದ ಅಂಗೋಪಾಂಗಗಳಲ್ಲಿ ಆಗುವ ಬದಲಾವಣೆಗಳ ಬಗ್ಗೆ ಈತ ಕೂಡ ಸಂಶೋಧನೆ ನಡೆಸಿದ. ದೇಹದೊಳಗೆ ರಸಗಳು ನಡುವೆ ತಾಳೆ ತಪ್ಪುವುದೇ ಖಾಯಿಲೆಗೆ ಕಾರಣ ಎಂಬ ಪ್ರಚಲಿತ ನಂಬಿಕೆಯನ್ನು ತಿರಸ್ಕರಿಸಿದ. ದೇಹ ಕಾರ್ಯಗಳಿಗೆ ಜೀವನ ಅಂತಸ್ಸತ್ತ್ವ (ಸ್ಪಿರಿಟ್ ಆಫ್ ಲೈಫ್) ಬೇಕು ಎಂಬುದಾಗಿ ಸ್ಟಾಲ್ ಮಂಡಿಸಿದ ವಾದವನ್ನು ಈತ ಒಪ್ಪಲಿಲ್ಲ. ಈತನ ಸ್ಪಷ್ಟ, ನಿರ್ದಿಷ್ಟ ಮತ್ತು ಪ್ರಾಯೋಗಿಕ ಮಾರ್ಗಗಳು ಈ ಅಂಗಾಂಶ ವಿಜ್ಞಾನದ ಸಂಶೋಧನೆಯಲ್ಲಿ ಗುರುತುಗಲ್ಲುಗಳು.

ಬೀಷಾ ಬರೆದಿರುವ ಗ್ರಂಥಗಳ ಪೈಕಿ ಈತನ ಗುರುವಿನ ಜೀವನ ಚರಿತ್ರೆಯೂ ಸೇರಿದೆ. ಈತನ ಸಂಶೋಧನೆಗಳೆಲ್ಲವೂ ಅಡಕವಾಗಿರುವ ಅನಾಟಮಿ ಡಿಸ್ಕ್ರಿಪ್ಟಿವ್ ಎಂಬ ಐದು ಸಂಪುಟಗಳ ಉದ್ಗ್ರಂಥ ಉಲ್ಲೇಖಾರ್ಹವಾದದು. ಈ ಗ್ರಂಥ ಮುಗಿಯುವ ಮೊದಲೇ ಈತ ತೀರಿಹೋದದ್ದರಿಂದ (22–7–1902) ಈತನ ಶಿಷ್ಯರುಗಳಾದ ಎಂ.ಎಫ್.ಆರ್.ಬೂಸನ್ ಮತ್ತು ಪಿ.ಜೆ.ರೊ ಅವರುಗಳಿಂದ ಇದು ಪೂರ್ಣವಾಯಿತು.

***

**ಬುಡ್ಡಪಕ್ಕೆ:** ಸೈಪ್ರಿನಿಫಾರ್ಮಿಸ್ ಗಣದ ಸೈಪ್ರಿನಿಡೆ ಕುಟುಂಬಕ್ಕೆ ಸೇರಿದ ಮೀನು. ಬಾಳೆ, ಕಾಟ್ಲಾ, ಬೀಳಿಮೀನು ಮುಂತಾದವುಗಳ ಹತ್ತಿರ ಸಂಬಂಧಿ. ಬಾರ್ಬಸ್ ಟಿಕ್ಟೊ ಇದರ ಶಾಸ್ತ್ರೀಯ ಹೆಸರು. ಸಣ್ಣಗಾತ್ರದ್ದು. 6–13 ಸೆಂಮೀ ವರೆಗೆ ಬೆಳೆಯುತ್ತದೆ. ಕಿವಿರು ಸೀಳಿನ ಮುಂದಕ್ಕೆ ಅಂದರೆ 4–6 ಹುರುಪೆಗಳಿಂದ ಮುಂದಕ್ಕೆ ಪಾರ್ಶ್ವರೇಖೆ ಕಾಣಿಸದು. ಬೆನ್ನಿನ ಈಜುರೆಕ್ಕೆಯಲ್ಲಿ ಒಂದು ಬಲವಾದ, ಹರಿತವಾದ ಮುಳ್ಳಿದೆ. ಮೀನಿನ ಬಣ್ಣ ಬೆಳ್ಳಿ, ಪಾರ್ಶ್ವರೇಖೆಯ ಮೇಲೆ ಎರಡು ಕರಿಯ ಚುಕ್ಕೆಗಳಿವೆ; ಒಂದು ಕಿವಿರುಗಳ ಹಿಂದೆ ಇರುವ ಮೂರನೆಯ ಹುರುಪೆಯ ಮೇಲೆ; ಇನ್ನೊಂದು ಆಸನದ ಈಜು ರೆಕ್ಕೆಯ ಹಿಂದೆ ಅಂದರೆ 19–21 ಹುರುಪೆಗಳಿರುವ ಸ್ಥಾನದಲ್ಲಿ.

ಈ ಮೀನು ಕೆರೆಗಳಲ್ಲಿ ಹೇರಳವಾಗಿ ಸಿಗುತ್ತದೆ. ಬೀಸು ಬಲೆಗಳು ಮತ್ತು ಎಳೆಯಾಲೀ ಬಲೆಗಳನ್ನು ಬಳಸಿ ಇದನ್ನು ಹಿಡಿಯುವುದಿದೆ. ಸಂತಾನೋತ್ಪತ್ತಿಯ ಶ್ರಾಯದಲ್ಲಿ ಗಂಡು ಮತ್ತು ಹೆಣ್ಣುಗಳಲ್ಲಿ ಬಣ್ಣ ಬದಲಾವಣೆಯುಂಟು.

ಅತಿ ಚಿಕ್ಕ ಮೀನಾದರೂ ಬಹಳ ಉಪಯುಕ್ತವೆನಿಸಿದೆ. ನಾರುಹುಣ್ಣು ಬೇನೆ ಹರಡುವುದಕ್ಕೆ ಕಾರಣವಾದ ಸೈಕ್ಲಾಪ್ಸ್ ಎಂಬುದನ್ನು ಬುಡ್ಡಪಕ್ಕೆ ತಿಂದು ಹಾಕುವುದರ ಮೂಲಕ ರೋಗ ಪ್ರಸಾರವನ್ನು ತಡೆಗಟ್ಟುತ್ತದೆ. ತತ್ಕಾರಣವಾಗಿ ಕರ್ನಾಟಕದ ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ನೀರು ಕುಡಿಯುವ ಬಾವಿಗಳಲ್ಲಿ ಹೆಚ್ಚಾಗಿ ಈ ಮೀನನ್ನು ಬಿಟ್ಟು ನಾರುಹುಣ್ಣುರೋಗ ನಿವಾರಣೆ ಕೈಗೊಳ್ಳಲಾಗಿದೆ.

***

**ಬೂದು ಕರಡಿ:** ಸ್ತನಿವರ್ಗದ ಕಾರ್ನಿವೊರ ಗಣದ ಅರ್ಸಿಡೆ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಪ್ರಾಣಿ (ಗ್ರೇಬೇರ್). ಕಂದು, ಕೆಂಪು, ಬೆಳ್ಳಿ ಕರಡಿ ಎಂದು ಕೂಡ ಕರೆಯುವುದಿದೆ. ಅರ್ಸಸ್ ಇಸಾಬೆಲಿನಸ್ ವೈಜ್ಞಾನಿಕ ಹೆಸರು. ಭಾರತದ ಗಢವಾಲ ಹಾಗೂ ಬಿಶಹರ್‌ನಿಂದ ಪಶ್ಚಿಮ ಕಾಶ್ಮೀರದ ವರೆಗಿನ ದಟ್ಟ ಕಾಡುಗಳಲ್ಲಿ ಇದರ ವಾಸ. ಇದು ಸಾಧ್ಯವಾದಷ್ಟು ಮನುಷ್ಯನ ದೃಷ್ಟಿಯಿಂದ ದೂರವಿರುತ್ತದೆ. ಆಗೊಮ್ಮೆ ಈಗೊಮ್ಮೆ ಕಾಡಿನಿಂದ ಹೊರಬಿದ್ದು ಸಮೀಪದ ತೋಟಗಳಿಗೆ ದಾಳಿಯಿಡುವುದುಂಟು. ಮಾಂಸಾಹಾರಿ ಪ್ರಾಣಿಗುಂಪಿಗೆ ಸೇರಿದೆಯಾದರೂ ಶುದ್ಧ ಮಾಂಸಾಹಾರಿ ಪ್ರಾಣಿಯಲ್ಲ. ಇದರ ಆಹಾರ ಮಿಶ್ರ ಬಗೆಯದು. ಗೆಡ್ಡೆ, ಗೆಣಸು, ಹಣ್ಣು, ಹುಲ್ಲು, ಮುಂತಾದ ಸಸ್ಯಜನ್ಯ ಆಹಾರವನ್ನೂ ಕೀಟ, ಸರೀಸೃಪ ಇತ್ಯಾದಿ ಪ್ರಾಣಿ ಆಹಾರವನ್ನೂ ಇದು ತಿನ್ನುತ್ತದೆ. ಇದರ ಘ್ರಾಣೇಂದ್ರಿಯ ಬಹಳ ಸೂಕ್ಷ್ಮ ತೆರನಾದ್ದು. ಸುಮಾರು ಒಂದು ಕಿಲೊಮೀಟರ್ ದೂರದ ವೈರಿಗಳ ಇರವನ್ನು ವಾಸನೆಯಿಂದಲೇ ಪತ್ತೆಮಾಡಬಲ್ಲುದು ಎಂದು ಹೇಳಲಾಗಿದೆ. ದೃಷ್ಟಿ ಮಾತ್ರ ಬಲು ಮಂದ. ಬೇರೆ ಕರಡಿಗಳಂತೆಯೇ ಇದು ಕೂಡ ಶಿಶಿರಸ್ವಾಪವನ್ನು ತೋರುತ್ತದೆ.

ಇದರ ಸಂತಾನವೃದ್ಧಿ ಶ್ರಾಯ ಸಾಮಾನ್ಯವಾಗಿ ಆಗಸ್ಟ್ ತಿಂಗಳು. ಸುಮಾರು 9 ತಿಂಗಳ ಕಾಲ ಗರ್ಭಧರಿಸುವ ಹೆಣ್ಣು ಒಂದು ಸೂಲಿಗೆ ಎರಡು ಮರಿಗಳನ್ನು ಈಯುತ್ತದೆ. ಆಗತಾನೇ ಜನಿಸಿದ ಮರಿ 9.5–9.75 ಕಿಗ್ರಾಂ ತೂಗುತ್ತದೆ. ವಯಸ್ಕ ಕರಡಿಯಾದರೂ ಸುಮಾರು 750 ಕಿಗ್ರಾಂ ತೂಗುವುದುಂಟು. ಬೂದು ಕರಡಿಯ ಆಯಸ್ಸು 30–35 ವರ್ಷಗಳು. (ಎಸ್.ಎನ್.ಎಚ್.)

**ಬೂಬಿ:** ಪೆಲಿಕಾನಿಫಾರ್ಮಿಸ್ ಗಣ, ಸೂಲಿಡೆ ಕುಟುಂಬಕ್ಕೆ ಸೇರಿದ ಕಡಲ ಹಕ್ಕಿ. ಉಷ್ಣವಲಯಗಳ ಕರಾವಳಿಗಳಲ್ಲಿ ಕಾಣದೊರೆಯುತ್ತದೆ. ವೈಜ್ಞಾನಿಕ ಹೆಸರು ಸೂಲ. ಇದರಲ್ಲಿ ಮಾಸ್ಕಡ್, ಕೆಂಪುಕಾಲಿನ, ಕಂದುಬಣ್ಣದ, ನೀಲಿಕಾಲಿನ, ಪೆರೂವಿಯನ್ ಹಾಗೂ ಅಬ್ಬಟ್ ಬೂಬಿಗಳೆಂದು ಆರು ವಿಧಗಳುಂಟು. ಇವುಗಳ ಪೈಕಿ ಮೊದಲ ಮೂರು ವಿಧಗಳು ಪ್ರಪಂಚಾದ್ಯಂತ ಕಾಣಸಿಗುವುವಾದರೂ ನೀಲಿಕಾಲಿನ ಮತ್ತು ಪೆರೂವಿಯನ್ ಬೂಬಿಗಳು ಅಮೆರಿಕ ಖಂಡಗಳ ಪಶ್ಚಿಮ ಕರಾವಳಿಗಳಲ್ಲೂ ಅಬ್ಬಟ್ ಬೂಬಿ ಇಂಡಿಯನ್ ಸಾಗರದ ಪ್ರದೇಶಗಳಲ್ಲೂ ವಾಸಿಸುವುವು.

ಬೂಬಿ ಎಂದರೆ ಪೆದ್ದ ಎಂದು ಅರ್ಥ. ಈ ಹಕ್ಕಿಯ ರೂಪ ಮತ್ತು ಸ್ವಭಾವದಲ್ಲಿ ಈ ಪೆದ್ದುತನ ಸುವ್ಯಕ್ತವಾಗುವುದರಿಂದ ಬೂಬಿ ಎಂಬ ಹೆಸರು ಅನ್ವರ್ಥವಾಗಿದೆ. ಮನುಷ್ಯ ತನ್ನ ಶತ್ರು ಎಂಬ ಅರಿವೇ ಇಲ್ಲದೆ ಹಡಗುಗಳ ಹಗ್ಗ, ಕಂಬಿಗಳ ಮೇಲೆ ಕುಳಿತು ನಾವಿಕರ ಬಾಯಿಗೆ ಬಲಿಯಾಗುತ್ತದೆ. ಗೂಡು ಕಟ್ಟುವ ಪ್ರದೇಶಗಳ ಬಳಿಯೂ ಇದೇ ಮೂರ್ಖತೆಯ ಪ್ರದರ್ಶನ. ಆದರೆ ಇದು ಮನುಷ್ಯ ಎಟುಕದ ಪ್ರಪಾತಗಳಲ್ಲಿಯೂ ಹೋಗದ ದ್ವೀಪಗಳಲ್ಲಿಯೂ ಗೂಡುಕಟ್ಟುವುದರಿಂದ ಇದರ ಸಂತತಿ ನಶಿಸಿಹೋಗಿಲ್ಲ.



ಕೆಂಪು ಕಾಲಿನ ಬೂಬಿ

ಬೂಬಿ ಸು. 80 ಸೆಂಮೀ ಉದ್ದದ ಹಕ್ಕಿ. ಮೈಬಣ್ಣ ಬಿಳಿ ಇಲ್ಲವೆ ಕಂದು. ರೆಕ್ಕೆಗಳು ಕರಿಯ ಬಣ್ಣದುವು. ಕಾಲು ಹಳದಿ, ನೀಲಿ, ಕೆಂಪು ಇತ್ಯಾದಿ ವೈವಿಧ್ಯಮಯ. ಹಾರುವ ಮೀನುಗಳು ಇದರ ಅಚ್ಚುಮೆಚ್ಚಿನ ಆಹಾರ. ಕಡಲಿನಲ್ಲಿ ಸಾಗುವ ಹಡಗುಗಳ ಸುತ್ತಮುತ್ತ ಹಾರಾಡುತ್ತಿದ್ದು, ಹಡಗುಗಳ ಚಲನೆಯಿಂದ ಕ್ಷೋಭೆಗೊಂಡು ನೀರಿನಿಂದ ಮೇಲಕ್ಕೆ ಹಾರುವ ಮೀನುಗಳ ಮೇಲೆ ಎರಗಿ ಅವನ್ನು ಹಿಡಿದು ನುಂಗುತ್ತದೆ.

ಸಂತಾನೋತ್ಪತ್ತಿಯ ಕಾಲ ಹವಾಮಾನ ಹಾಗೂ ಸಾಗರದ ಸ್ವಭಾವಕ್ಕನುಗುಣವಾಗಿದೆ. ಗುಂಪಾಗಿ ಗೂಡುಕಟ್ಟುತ್ತವೆ. ಪ್ರಣಯಾಚರಣೆ ದೀರ್ಘವಾಗಿರುತ್ತದೆ. ಸಾಮಾನ್ಯವಾಗಿ ಎರಡು ಮೊಟ್ಟೆಗಳನ್ನಿಡುತ್ತವೆ. ಗಂಡು ಹೆಣ್ಣುಗಳೆರಡೂ ಕಾವು ಕೊಡುತ್ತವೆ. 6–7 ವಾರಕ್ಕೆ ಮೊಟ್ಟೆಯೊಡೆದು ಮರಿ ಹೊರಕ್ಕೆ ಬರುತ್ತದೆ. 5 ತಿಂಗಳೊಳಗೆ ಇವು ಸದೃಢವಾಗಿ ಬೆಳೆದು ಹಾರಲು ಸಮರ್ಥವಾಗುತ್ತವೆ.

***

**ಬೆಕ್ಕು:** ಸ್ತನಿ ವರ್ಗದ ಕಾರ್ನಿವೊರ ಕುಟುಂಬಕ್ಕೆ ಸೇರಿದ ಪ್ರಾಣಿ. ಈ ಗುಂಪಿನಲ್ಲಿ ಹಲವಾರು ಜಾತಿಗಳಿದ್ದು ಇವುಗಳ ಪೈಕಿ ಫೆಲಿಸ್ ಎಂಬ ಜಾತಿಗೆ ಸೇರುವ ಎಲ್ಲ ಪ್ರಭೇದಗಳನ್ನೂ ಬೆಕ್ಕುಗಳು ಎನ್ನುತ್ತಾರೆ. ಈ ಜಾತಿಗೆ ಹುಲಿ, ಸಿಂಹ, ಕಾಡುಬೆಕ್ಕು ಮುಂತಾದ ಪ್ರಾಣಿಗಳೂ ಸೇರಿವೆ. ಇವುಗಳಿಗೆ ಮುಂಗಾಲಿನಲ್ಲಿ ಐದು ಹಾಗೂ ಹಿಂಗಾಲಿನಲ್ಲಿ ನಾಲ್ಕು ಬೆರಳುಗಳಿರುತ್ತವೆ. ಬೆರಳುಗಳ ತುದಿಯಲ್ಲಿ ಹರಿತ ಪಂಜುಗಳಿವೆ. ಬೆಕ್ಕು ಎಂದು ಪರಿಚಿತವಾಗಿರುವ ಮತ್ತು ಮನೆಗಳಲ್ಲಿ ಸಾಕುವ ಪ್ರಾಣಿ ಫೆಲಿಸ್ ಡೊಮೆಸ್ಟಿಕ ಎಂಬ ಪ್ರಭೇದಕ್ಕೆ ಸೇರುತ್ತದೆ. ಇದೇ ನಿಜವಾದ ಸಾಕು ಬೆಕ್ಕು.

ಸಾಕು ಬೆಕ್ಕುಗಳೆಲ್ಲವೂ ಫೀಲಿಸ್ ಡೊಮೆಸ್ಟಿಕ ಪ್ರಭೇದಕ್ಕೆ ಸೇರುತ್ತವಾದರೂ ಇವುಗಳಲ್ಲಿ ಹಲವಾರು ತಳಿಗಳಿವೆ. ಸಾಮಾನ್ಯವಾಗಿ ಇವನ್ನು ಮೂರು ವಿಧಗಳಾಗಿ ವಿಂಗಡಿಸಬಹುದು: ನೀಳ (ಉದ್ದ) ಕೂದಲಿನವು, ಚಿಕ್ಕ ಕೂದಲಿನವು, ವಿದೇಶಿ ಚಿಕ್ಕ ಕೂದಲಿನವು. ಇವುಗಳ ಪೈಕಿ ನೀಳಕೂದಲಿನ ಬೆಕ್ಕುಗಳನ್ನು ಶ್ರೀಮಂತ ಬೆಕ್ಕುಗಳೆಂದು ಪರಿಗಣಿಸುವುದುಂಟು.

ಇಂದಿನ ಬೆಕ್ಕು ಫೆಲಿಸ್ ಮ್ಯಾನ್ಯುಲ್ ಎಂಬ ಪ್ರಭೇದಕ್ಕೆ ಸೇರಿರುವ ಪಲ್ಲ ಎಂಬ ಬೆಕ್ಕಿನಿಂದ ಉದಯವಾಗಿ ಮಾರ್ಪಾಡಾಯಿತು ಎಂಬ ನಂಬಿಕೆಯಿತ್ತು. ಆದರೆ ಪಲ್ಲ ಬೆಕ್ಕಿಗೆ ಅತ್ಯಂತ ದಟ್ಟ ಕೂದಲಿನ ಬಾಲವಿದ್ದು ಅದರ ಶರೀರ ಮತ್ತು ಮುಖದ ಮೇಲೆ ಬೆಕ್ಕಿನಲ್ಲಿರದ ಗುರುತುಗಳಿರುವುವು. ಈ ಕಾರಣದಿಂದ ಸಾಕು ಬೆಕ್ಕು ಪಲ್ಲ ಬೆಕ್ಕಿನಿಂದ ವಿಕಸಿಸಿದುವು ಎಂಬ ನಂಬಿಕೆಯನ್ನು ಕೈಬಿಡಲಾಯಿತು.

ಸಾಮಾನ್ಯವಾಗಿ ಬೆಕ್ಕು ಮಾಂಸಾಹಾರಿ ಪ್ರಾಣಿ. ಬ್ರೆಡ್ಡು ಅಥವಾ ಅನ್ನ ತಿನ್ನಬಲ್ಲುದಾದರೂ ವಾಸ್ತವವಾಗಿ ಇದರ ದವಡೆ ಹಾಗೂ ಹಲ್ಲು ಮಾಂಸಭಕ್ಷಣೆಗೆ ಅನುಕೂಲವಾಗುವಂತೆ

ಮಾರ್ಪಾಡಾಗಿವೆ. ಇಲಿ, ಅಳಿಲು, ಕೀಟ, ಮೀನು, ಪಕ್ಷಿ ಮುಂತಾದುವು ಬೆಕ್ಕಿನ ಸಾಮಾನ್ಯ ಆಹಾರ. ಹೊಟ್ಟೆ ತುಂಬಿದ ಬೆಕ್ಕು ಇಲಿ ಹಿಡಿಯುವುದಿಲ್ಲ ಎಂಬುದು ತಪ್ಪು ಕಲ್ಪನೆ. ಇಲಿ ಹಿಡಿಯುವುದು ಬೆಕ್ಕಿಗೆ ಆನುವಂಶಿಕವಾಗಿ ಬಂದ ಗುಣ. ಬೆಕ್ಕು ಬೇರೆ ಬೇರೆ ಪ್ರಾಣಿಗಳನ್ನು ತಿನ್ನುವುದಾದರೂ ಇಲಿ, ಅಳಿಲು ಅಥವಾ ಮೊಲಗಳನ್ನು ತಿನ್ನುವುದೇ ಹೆಚ್ಚು. ಏಕೆಂದರೆ ಮೀನು ಅಥವಾ ಪಕ್ಷಿಗಳನ್ನು ಇದು ಸುಲಭವಾಗಿ ಹಿಡಿಯಲಾರದು.

ಬೆಕ್ಕಿನ ಇತಿಹಾಸದ ಬಗ್ಗೆ ಹಲವಾರು ದಂತಕಥೆಗಳಿವೆ. ಕ್ರಿ.ಪೂ.ಸು. 3000 ವರ್ಷಗಳಷ್ಟು ಹಿಂದಿನ ತನಕ ಮಾಹಿತಿಗಳು ಸಿಗುತ್ತವೆ. ಈಜಿಪ್ಟಿನಲ್ಲಿ ಬೆಕ್ಕನ್ನು ಮೊತ್ತಮೊದಲಿಗೆ ಸಾಕುಪ್ರಾಣಿಯಾಗಿ ಮಾಡಲಾಯಿತು ಎಂದು ಹಲವರು ನಂಬುತ್ತಾರೆ. ಆದರೆ ಅದೇ ವೇಳೆಗೆ ಭಾರತದಲ್ಲಿ ಕೂಡ ಬೆಕ್ಕು ಸಾಕುಪ್ರಾಣಿ ಆಗಿತ್ತು ಎಂದು ಸಂಸ್ಕೃತದ ಬರಹಗಳಲ್ಲಿ ಹೇಳಲಾಗಿದೆ. ಯೂರೋಪಿನಲ್ಲಿ ಬೆಕ್ಕು ಯಾವಾಗ ಪ್ರಥಮ ಬಾರಿಗೆ ಸಾಕುಪ್ರಾಣಿಯಾಯಿತು ಎಂಬುದರ ಬಗ್ಗೆ ಉಲ್ಲೇಖ ಇಲ್ಲವಾದರೂ ಫೀನೀಷಿಯನ್ನರು ಈಜಿಪ್ಟಿನಿಂದ ತಮ್ಮ ಹಡಗುಗಳಲ್ಲಿ ಬೆಕ್ಕನ್ನು ಯೂರೋಪಿಗೆ ಸಾಗಿಸಿದರು ಎಂಬ ದಾಖಲೆ ಸಿಗುತ್ತದೆ. ರೋಮನ್ನರ ಕಾಲದ ತನಕ ಬೆಕ್ಕು ಯೂರೋಪ್ ಖಂಡ ಪ್ರವೇಶಿಸಿರಲಿಲ್ಲ ಎಂದು ಇನ್ನು ಕೆಲವು ದಾಖಲೆಗಳು ತಿಳಿಸುತ್ತವೆ.

ಬೆಕ್ಕು ಮತ್ತು ಮಾನವ ಸಂಬಂಧ ಮಾನವನ ಸಾಂಘಿಕ ಜೀವನದ ಜೊತೆಗೆ ಬೆಳೆದಿರಬೇಕು ಹಾಗೂ ಇದು ಬೆಕ್ಕಿನಿಂದಲೇ ಆರಂಭವಾಗಿರಬೇಕು. ಪ್ರಾಚೀನ ಮಾನವನ ಶಿಬಿರಾಗ್ನಿಗಳು ಬೆಕ್ಕಿಗೆ ಬೆಚ್ಚನೆಯ ವಾತಾವರಣ ಕಲ್ಪಿಸಿ ಕೊಡುವುದರ ಜೊತೆಗೆ ಶಿಬಿರಾಗ್ನಿಗಳ ಎದುರು ಕುಳಿತು ಆತ ಸೇವಿಸುತ್ತಿದ್ದ ಆಹಾರ ಬೆಕ್ಕಿಗೆ ಆಕರ್ಷಕವಾಗಿದ್ದು ಆ ಕಾರಣ ಆತನೊಂದಿಗೆ ಹೊಂದಿಕೊಂಡಿರಬೇಕು. ಮಾನವ ಸಂಗ್ರಹಿಸಿಟ್ಟ ಪ್ರಾಣಿಗಳ ಮಾಂಸ ತಿಂದು ಹಾಳು ಮಾಡುತ್ತಿದ್ದ ಪ್ರಾಣಿಗಳನ್ನು ಬೆಕ್ಕು ನಾಶ ಮಾಡುತ್ತಿದ್ದುದರಿಂದ ಅದು ಮಾನವನಿಗೆ ಉಪಯುಕ್ತ ಸಂಗಾತಿ ಆಗಿರಬೇಕು. ಆತ ಅದನ್ನು ದೂರ ಮಾಡದೇ ಇದ್ದುದರಿಂದ ಬೆಕ್ಕು ಮಾನವ ಸಂಬಂಧ ಕುದುರಿರಬೇಕು.



ಪ್ರಾಗೈತಿಹಾಸ ದೃಷ್ಟಿಯಿಂದಲೂ ಬೆಕ್ಕು ಮಾನವನಿಗೆ ಸರಿ ಸಮಾನವಾದುದು. ಇದರ ಕುಟುಂಬದ ಪಳೆಯುಳಿಕೆಗಳು ಸುಮಾರು 35 ದಶಲಕ್ಷ ವರ್ಷಗಳಷ್ಟು ಹಿಂದಿನಿಂದಲೂ ದೊರೆಯುತ್ತವೆ. ಪುರಾತನ ಮಾಂಸಾಹಾರಿ ಪ್ರಾಣಿಯಿಂದ ವಿಕಾಸಗೊಂಡ ಬೆಕ್ಕಿನಿಂದ ಎರಡು ಕವಲೊಡೆದು ಒಂದು ಕವಲಿನಿಂದ ಇಂದಿನ ಹುಲಿ, ಸಿಂಹ, ಸಾಕುಬೆಕ್ಕು ಇತ್ಯಾದಿ ಪ್ರಾಣಿಗಳೂ ಇನ್ನೊಂದು ಕವಲಿನಿಂದ ಇಂದು ಕೇವಲ ಪಳೆಯುಳಿಕೆಗಳಾಗಿರುವ ಬಾಗಿದ ಕತ್ತಿ ಅಲಗಿನಂತೆ ಹಲ್ಲು ಇರುವ (ಸೇಬರ್ ಹಲ್ಲುಗಳಿರುವ) ಬೆಕ್ಕುಗಳೂ ಉದಯವಾದುವು. ಬೆಕ್ಕು, ಪುನುಗಿನ ಬೆಕ್ಕು ಹಾಗೂ ಮುಂಗುಸಿ ಒಂದೇ ಮೂಲದಿಂದ ವಿಕಾಸವಾದುವು.

ಸಾಕುಬೆಕ್ಕು ಯೂರೋಪಿನ ಕಾಡುಬೆಕ್ಕನ್ನು ಹೋಲುವುದಾದರೂ ಆ ಕಾಡು ಬೆಕ್ಕಿನಿಂದ ಸಾಕುಬೆಕ್ಕು ಉದಯವಾಯಿತೇ ಎಂಬುದು ತಿಳಿಯುತ್ತಿಲ್ಲ. ರೋಮನ್ನರ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಸಾಕುಬೆಕ್ಕುಗಳೂ ಕಡಿಮೆ ಸಂಖ್ಯೆಯಲ್ಲಿಯೂ, ಕಾಡುಬೆಕ್ಕುಗಳು ಅಧಿಕ ಸಂಖ್ಯೆಯಲ್ಲಿಯೂ ಇದ್ದುವು. ಕಾಡು ನಾಶವಾಗುತ್ತ ಬಂದಂತೆ ಕಾಡುಬೆಕ್ಕುಗಳ ಸಂಖ್ಯೆ ಕಡಿಮೆಯಾಗಿ ಸಾಕುಬೆಕ್ಕುಗಳ ಸಂಖ್ಯೆ ಜಾಸ್ತಿಯಾಯಿತು ಎಂಬ ನಂಬಿಕೆ ಇದೆ. ಯೂರೋಪಿನ ಕಾಡುಬೆಕ್ಕು ಫೀಲಿಸ್ ಸಿಲ್ವೆಸ್ಟ್ರಿಸ್ ಎಂಬ ಪ್ರಭೇದಕ್ಕೆ ಸೇರಿದೆ. ಇದು ಕಪ್ಪು ಚುಕ್ಕಿಗಳಿರುವ ಟ್ಯಾಬಿ ಎಂಬ ಸಾಕುಬೆಕ್ಕನ್ನು ಹೋಲುತ್ತದೆ. ಆದರೆ ಈ ಕಾಡು ಬೆಕ್ಕು ಬಲಿಷ್ಠವಾಗಿದೆ. ಇದಕ್ಕೆ ಸಾಕುಬೆಕ್ಕಿಗಿಂತ ದೊಡ್ಡದಾದ ತಲೆ ಹಾಗೂ ಹಲ್ಲು ಇವೆ. ತಲೆ ಮತ್ತು ಶರೀರ 60 ಸೆಂಮೀನಷ್ಟು ಉದ್ದವಾಗಿದೆ. ಬಾಲದಉದ್ದ 30 ಸೆಂಮೀ, ಇದರಲ್ಲಿ ಅಲ್ಲಲ್ಲಿ ಕಪ್ಪು ಉಂಗುರಗಳಿದ್ದು ಇದರ ತುದಿ ಕಪ್ಪಾಗಿದೆ. ಬುಡದಿಂದ ತುದಿಯವರೆಗೂ ಇದರ ಗಾತ್ರ ಒಂದೇ ರೀತಿ ಇದೆ. ತಲೆ ಅಗಲ, ಕುಡಿಮೀಸೆ ಉಂಟು. ತುಪ್ಪುಳ ಸಾಕುಬೆಕ್ಕಿನದಕ್ಕಿಂತ ದಟ್ಟವಾಗಿದೆ. ಸಾಮಾನ್ಯವಾಗಿ ಇವು ಒಂಟಿಜೀವಿಗಳು. ಸಂಭೋಗಕಾಲದಲ್ಲಿ ಮಾತ್ರ ಗಂಡುಹೆಣ್ಣು ಜೊತೆಯಾಗುತ್ತವೆ. ಚಿಕ್ಕ ಸ್ತನಿಗಳು, ಕೀಟಗಳು ಮತ್ತು ಪಕ್ಷಿಗಳು ಇವುಗಳ ಆಹಾರ. ಇಂಗ್ಲೆಂಡಿನಲ್ಲಿ ಈಗ ಫೆಲಿಸ್ ಸಿಲ್ವೆಸ್ಟ್ರಿಸ್ ಗ್ರಾಂಪಿಯ ಎಂಬ ಪ್ರಭೇದ ಮಾತ್ರ ಉಳಿದಿದೆ. ಈ ಬೆಕ್ಕುಗಳು ಎತ್ತರದ ಹಾಗೂ ಬಂಡೆಗಳಿಂದಾವೃತವಾದ ಪ್ರದೇಶಗಳಲ್ಲಿ ವಾಸಿಸುತ್ತವೆ.

ಸಾಹಿತ್ಯದಲ್ಲಿ ಬೆಕ್ಕಿನ ಬಗ್ಗೆ ಬಹಳ ಹಿಂದಿನಿಂದ ಉಲ್ಲೇಖವಿದೆ. ಪ್ರಾಚೀನ ಭಾರತದಲ್ಲಿ ಮಹಿಳೆಯರು ಧಾನ್ಯವನ್ನು ಇಲಿಗಳಿಂದ ಕಾಪಾಡಲು ಬೆಕ್ಕು ಸಾಕುತ್ತಿದ್ದರೆಂದು ತಿಳಿದಿದೆ. ಈಜಿಪ್ಟಿನ ಬರಹಗಳಿಂದ ಅಲ್ಲಿ ಮೊದಲಿಗೆ ಬೆಕ್ಕಿಗೆ ಮುಖ್ಯ ಸ್ಥಾನವಿತ್ತು ಎಂದು ತಿಳಿದುಬರುತ್ತದೆ. ಇದರ ರಫ್ತನ್ನು ಅಪರಾಧವೆಂದು ಅಲ್ಲಿ ಪರಿಗಣಿಸಲಾಗುತ್ತಿತ್ತು. ಇದರಿಂದ ಫೀನೀಷಿಯನ್ನರು ಬೆಕ್ಕನ್ನು ಕಳ್ಳಸಾಗಾಣಿಕೆ ಮೂಲಕ ಯೂರೋಪಿನ ವಿವಿಧ ಭಾಗಗಳಿಗೆ ಒಯ್ಯುತ್ತಿದ್ದರಂತೆ. ಚೀನಾ ದೇಶದಲ್ಲಿ ರೇಷ್ಮೆಗೂಡುಗಳನ್ನು ಇಲಿಗಳಿಂದ ರಕ್ಷಿಸಲು ಕ್ರಿ.ಪೂ.100ಕ್ಕೆ ಮೊದಲೇ ಬೆಕ್ಕುಗಳನ್ನು ಉಪಯೋಗಿಸುತ್ತಿದ್ದುದರ ಬಗ್ಗೆ ಉಲ್ಲೇಖವಿದೆ. ಗ್ರೀಸ್‌ನಲ್ಲಿ ಕೂಡ ಬೆಕ್ಕು ಪ್ರಾಚೀನ ಕಾಲದಲ್ಲಿ ಇತ್ತು ಎಂದು ಪ್ರಸಿದ್ಧ ಬರಹಗಾರ ಹೆರೊಡೊಟಸ್ ಹೇಳಿದ್ದಾನೆ. ಬೆಕ್ಕನ್ನು ಕೊಲ್ಲುವವರಿಗೆ ಅಲ್ಲಿ ಮರಣದಂಡನೆ ವಿಧಿಸಲಾಗುತ್ತಿತ್ತು. ಫ್ರಾನಿನಲ್ಲಿ ಮಾತ್ರ ಸಾಕು ಬೆಕ್ಕುಗಳು ಕ್ರಿ.ಶ. 13ನೆಯ ಶತಮಾನದ ಅನಂತರ ಕಂಡುಬಂದುವು.

ಬೆಕ್ಕು ಸಾಮಾನ್ಯವಾಗಿ ಉಷ್ಣವಲಯ ಹಾಗೂ ಸಮಶೀತೋಷ್ಣವಲಯ ಪ್ರದೇಶಗಳಲ್ಲಿ ವಾಸಿಸುತ್ತದೆ. ಅತ್ಯಂತ ಚಳಿಯಿರುವ ಶೀತವಲಯ ಅಥವಾ ಧ್ರುವ ಪ್ರದೇಶಗಳಲ್ಲಿ ಬೆಕ್ಕುಗಳು ಇಲ್ಲ. ಆದರೆ ಈ ಪ್ರದೇಶಗಳಲ್ಲಿ ಹಾಗೂ ಟಿಬೆಟಿನಲ್ಲಿ ಬೆಕ್ಕಿನ ಕುಟುಂಬದ ಹಿಮಕರಡಿಗಳು ಇವೆ.

ಸಾಕುಬೆಕ್ಕು ಕಾಡುಬೆಕ್ಕಿನಂತೆಯೇ ಬೆರಳುಗಳ ಮೇಲೆ ನಡೆಯಬಲ್ಲುದು. ಕಾಲುಗಳಲ್ಲಿ ಮೆದು ಮೆತ್ತೆಗಳು ಇರುವುದರಿಂದ ಇದು ಚಲಿಸುವಾಗ ಶಬ್ದವಾಗುವುದಿಲ್ಲ. ಸುಲಭವಾಗಿ ಮರ ಹತ್ತಬಲ್ಲುದು. ಮರವನ್ನು ಏರುವಾಗ ಉಗುರುಗಳು ತಳವನ್ನು ಭದ್ರವಾಗಿ ಹಿಡಿದು

ಜಾರದಂತೆ ಸಹಾಯ ಮಾಡುತ್ತವೆ. ಅಪಾಯ ಎದುರಾದಾಗ ನಾಯಿ ಓಡಿಹೋದರೆ ಬೆಕ್ಕು ತನ್ನ ಬೆನ್ನನ್ನು ಬಿಲ್ಲಿನಂತೆ ಬಾಗಿಸಿ ಬೆನ್ನನ್ನು ಮೇಲಕ್ಕೆತ್ತುತ್ತದೆ. ಹೀಗೆ ಮಾಡುವುದರಿಂದ ತನ್ನ ನಿಜ ಗಾತ್ರಕ್ಕಿಂತ ಹೆಚ್ಚು ಗಾತ್ರದ್ದಾಗಿ ಕಾಣುತ್ತದೆ. ವೈರಿಯ ಮೇಲಾಗಲೀ ತನ್ನ ಕೊಳ್ಳೆಯ ಮೇಲಾಗಲೀ ಒಮ್ಮೆಗೇ ಆಕ್ರಮಣ ಮಾಡುವುದಿಲ್ಲ. ಸಾಧ್ಯವಿದ್ದಷ್ಟು ಅದು ಅವಕಾಶ ಸಿಕ್ಕಾಗ ಮಾತ್ರ ವೈರಿಯ ಮೇಲೆ ಬಿದ್ದು ಹಲ್ಲುಗಳಿಂದ ಹಿಡಿಯುತ್ತದೆ. ಇದರಿಂದ ಬೆಕ್ಕಿನ ಬಾಯಿಗೆ ಒಮ್ಮೆ ಸಿಕ್ಕ ಕೊಳ್ಳೆ ತಪ್ಪಿಸಿಕೊಳ್ಳಲಾರದು.

ಬೆಕ್ಕಿಗೆ ಕತ್ತಲಿನಲ್ಲಿಯೂ ನೋಡುವ ಸಾಮರ್ಥ್ಯವಿದೆಯೆಂಬ ನಂಬಿಕೆ ಇದೆ. ವಾಸ್ತವವಾಗಿ ಪೂರ್ಣ ಕತ್ತಲಿನಲ್ಲಿ ಬೆಕ್ಕು ಕೂಡ ಕುರುಡೇ. ಸಂಪೂರ್ಣ ಕತ್ತಲಿನಲ್ಲಿ ಇದಕ್ಕೆ ದೃಷ್ಟಿ ಸಾಮರ್ಥ್ಯವಿಲ್ಲ. ಮಂದ ಬೆಳಕಿನಲ್ಲಿ ಮಾತ್ರ ಅದು ಉಳಿದ ಸ್ತನಿಗಳಿಗಿಂತ ಹೆಚ್ಚು ನಿರ್ದಿಷ್ಟವಾಗಿ ನೋಡಬಲ್ಲದು. ಬೆಕ್ಕಿಗೆ ಅದರ ಅಕ್ಷಿಪಟದ ಹಿಂಭಾಗದಲ್ಲಿ ಕಣ್ಣುಗುಡ್ಡೆಯ ಪೊರೆಯಲ್ಲಿ ಟಪೀಟಮ್ ಎಂಬ ಪ್ರತಿಫಲಿಸುವ ಪದರವಿದೆ. ಇದರಿಂದ ಬೆಕ್ಕಿನ ಕಣ್ಣುಗಳು ಕತ್ತಲೆಯಲ್ಲಿ ಹೊಳೆಯುತ್ತಿರುತ್ತವೆ. ಕಣ್ಣು ಪಾಪೆ ಅತಿಯಾಗಿ ಕುಗ್ಗಬಹುದು. ಮಂದ ಬೆಳಕಿನಲ್ಲಿ ಈ ಪಾಪೆ ಅಗಲವಾಗಿ ತೆರೆದಿದ್ದು ಬೆಳಕಿನ ತೀವ್ರತೆ ಜಾಸ್ತಿ ಆದಂತೆಲ್ಲ ಇದರ ವಿಸ್ತಾರ ಕಿರಿದಾಗುತ್ತದೆ. ಇದರಿಂದಲೇ ಬೆಕ್ಕುಗಳ ದೃಷ್ಟಿ ಚುರುಕಾಗಿದೆ. ಬೆಕ್ಕಿನ ಕಣ್ಣುಗಳು ಚಲಿಸುವ ವಸ್ತುಗಳನ್ನು ಕೂಡ ನಿರ್ದಿಷ್ಟವಾಗಿ ಗುರುತಿಸಬಲ್ಲುವು. ಆದರೆ ಇವುಗಳಿಗೆ ಬಿಳಿ ಮತ್ತು ಕಪ್ಪು ಬಣ್ಣಬಿಟ್ಟು ಉಳಿದವನ್ನು ಗುರುತಿಸುವ ಶಕ್ತಿ ಇಲ್ಲ.

ಬೆಕ್ಕು ಮಾಂಸಹಾರಿ ಪ್ರಾಣಿ ಆಗಿರುವುದರಿಂದ ಅದರ ಕಾಲುಗಳು ಒಂದೇ ಬಾರಿಗೆ ವೈರಿಯ ಮೇಲೆ ಜಿಗಿದು ಬೀಳಲು ಸಹಾಯವಾಗುವಂತೆ ಭಾರ ಹೊರಲು ಶಕ್ತವಾಗಿವೆ. ಬೆಕ್ಕಿನ ಶರೀರದಲ್ಲಿ 230 ವಿವಿಧ ಎಲುಬುಗಳಿವೆ. ಇವೆಲ್ಲವೂ ಶರೀರವನ್ನು ಎಷ್ಟಾದರೂ ಬಾಗಿಸಲು ಅನುಕೂಲವಾಗುವಂತೆ ಜೋಡಿಸಲ್ಪಟಿವೆ. ಶರೀರದ ಬಾಗುವಿಕೆಗೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಭುಜದ ಭಾಗ ಸ್ವತಂತ್ರವಾಗಿರುವುದರಿಂದ ಮುಂಗಾಲುಗಳನ್ನು ಅದು ಯಾವ ಕಡೆಗಾದರೂ ಬಾಗಿಸಬಲ್ಲುದು. ಎರಡನೆಯದಾಗಿ ಕೊರಳಪಟ್ಟಿಯ ಎಲುಬು ಅತಿ ಚಿಕ್ಕದಾಗಿರುವುದು. ಬಾಲದ ಭಾಗದ ಮೂಳೆಗಳು ಸಡಿಲವಾಗಿರುವುದರಿಂದ ಬಾಲವನ್ನು ಎತ್ತಕಡೆಗೆ ಬೇಕಾದರೂ ತಿರುಗಿಸಬಹುದು. ಐನೂರಕ್ಕೂ ಹೆಚ್ಚಾಗಿರುವ ಸ್ನಾಯು ರಜ್ಜುಗಳು ಎಲುಬುಗಳನ್ನು ಬಿಗಿಯುತ್ತವೆ.

ಬೆಕ್ಕುಗಳಿಗೆ ಮಾನವನಂತೆ ಎರಡು ರೀತಿಯ ಹಲ್ಲುಗಳಿವೆ. ಮರಿಗಳಿಗೆ ಆರು ತಿಂಗಳಾದಾಗ ಹಾಲು ಹಲ್ಲುಗಳು ಬಿದ್ದು ಎರಡನೆಯ ಜೊತೆ ಅಂದರೆ ಸ್ಥಿರ ಹಲ್ಲುಗಳು ಬರುತ್ತವೆ. ಮೇಲ್ದವಡೆಯ ಮುಂಭಾಗದ ಮೂರು ಜೊತೆ ಹಲ್ಲುಗಳು ಚಿಕ್ಕದಾಗಿದ್ದು ಸಾಮಾನ್ಯ ಆಕಾರದುವು. ಇವು ಬಾಚಿಹಲ್ಲುಗಳು, ಕೆಳದವಡೆಯಲ್ಲಿ ಕೂಡ ಆರು ಬಾಚಿಹಲ್ಲುಗಳಿವೆ. ಇವು ಮೇಲ್ದವಡೆಯವುಗಳಿಗಿಂತ ಚಿಕ್ಕವು. ಬಾಚಿಹಲ್ಲುಗಳು ಪ್ರಾಣಿಗಳನ್ನು ಇರಿದು ಸಾಯಿಸಲು ಅನುಕೂಲವಾಗಿವೆ. ಮುಂದಿನ ಒಂದು ಜೊತೆ ಹಲ್ಲುಗಳು ಬಲಿಷ್ಠ ಮತ್ತು ದಪ್ಪವಾಗಿ ಮುಂಭಾಗದಲ್ಲಿ ಬಾಗಿಕೊಂಡಿದ್ದು ತುದಿಯಲ್ಲಿ ಚೂಪಾಗಿರುತ್ತವೆ. ಇವುಗಳಿಗೆ ಕೋರೆಹಲ್ಲು ಎಂದು ಹೆಸರು. ಇವು ಮಾಂಸವನ್ನು ಅಗಿದು ಕತ್ತರಿಸಲು ಸಹಾಯಕವಾಗಿವೆ. ದವಡೆಯ ಹಾಗೂ ಮುಂದವಡೆಯ ಹಲ್ಲುಗಳು ಮಾಂಸವನ್ನು ಅಗಿಯಲು ಸಹಾಯಕವಲ್ಲವಾದರೂ ಮೇಲಿನದವಡೆಯ ಕೊನೆಯ ಹಲ್ಲು ಮತ್ತು ಕೆಳಗಿನ ದವಡೆಯ ಮೊದಲನೆಯ ಹಲ್ಲು ವಿಶೇಷವಾಗಿ ಮಾರ್ಪಾಡಾಗಿದ್ದು ಮಾಂಸ ಕತ್ತರಿಸಲು ಸಹಾಯಕವಾಗುತ್ತವೆ. ಇವುಗಳಿಗೆ ಕ್ಯಾರ್ನಸಿಯಲ್ ಹಲ್ಲು ಎಂದು ಹೆಸರು. ಮೇಲ್ಭಾಗದ ಕ್ಯಾರ್ನಸಿಯಲ್ ಹಲ್ಲಿನ ಹೊರಭಾಗದ ಏಣಿನಿಂದ ಇವುಗಳ ಬೆಳವಣಿಗೆಯಾಗಿದೆ. ಪ್ಯಾರಾಕೋನ್ ಎಂಬ ಏಣು ಮತ್ತು ಪ್ರೋಟೋಕೋನುಗಳು ಒಂದೇ ಅಲಗಿನಂತೆ ಇರುತ್ತವೆ. ಪ್ರೋಟೊಕೋನ್ ಮಾತ್ರ ಹಲ್ಲಿನ ಮುಂಭಾಗದಲ್ಲಿ ಒಳಕ್ಕೆ ಬಾಗಿರುವ ಏಣಿನಂತೆ ಇರುವುದು. ಇದು ಇನ್ನೊಂದು ಅಲಗಿನಂತೆ ಇದೆ. ಕೆಳದವಡೆಯಲ್ಲಿ ಪ್ಯಾರಾಕೋನ್ ಮತ್ತು ಪ್ರೋಟೋಕೋನ್ ಉಂಟುಮಾಡಿರುವ ಅಲಗಿನ ಮೇಲೆ ಮೇಲಿನದು ತಡೆಯುತ್ತದೆ. ಇದರಿಂದ ಮಾಂಸಭಕ್ಷಣೆ ಸುಸೂತ್ರವಾಗುತ್ತದೆ. ಮುಂದವಡೆಯ ಹಾಗೂ ಇತರ ದವಡೆಯ ಹಲ್ಲುಗಳು ಸಾಮಾನ್ಯವಾಗಿ ಕ್ಷೀಣವಾಗಿವೆ. ಮುಂದವಡೆ ಹಲ್ಲುಗಳು ಅಸ್ತಿತ್ವದಲ್ಲಿದೆ. ಬೆಕ್ಕಿನ ದಂತ ಸೂತ್ರ ಹೀಗಿದೆ. ಐಸಿಪಿಎಂ 3 1 3 1 / 3 1 3 1 = 32

ಬೆಕ್ಕುಗಳ ದವಡೆಗಳು ಬಲಿಷ್ಠವಾಗಿವೆ. ಕೆಳದವಡೆಯಲ್ಲಿ ಒಂದೇ ಮೂಳೆ ಇದ್ದು ಮೂರು ಮಾಂಸ ಖಂಡಗಳು ಮತ್ತು ಅಸ್ಥಿಬಂಧಗಳು ಅದನ್ನು ಬಂಧಿಸಿವೆ. ಮೇಲು ಮತ್ತು ಕೆಳದವಡೆಗಳು ಒಂದಕ್ಕೊಂದು ಕೀಲುಗಳಿಂದ ಸೇರಿಕೊಂಡು ಬಿಗಿಯಾಗಿ ಅಡ್ಡ ಹರಡಿದ ಚಿಲಕದಂತಿವೆ. ಇದರಿಂದ ಉಳಿದ ಸ್ತನಿಗಳಲ್ಲಿ ಕಂಡುಬರುವಂತೆ ಬೆಕ್ಕುಗಳಲ್ಲಿ ದವಡೆಗಳ ಸುತ್ತು ಚಲನೆ ಕಂಡು ಬರುವುದಿಲ್ಲ. ದವಡೆಯ ಮಾಂಸಗಳಲ್ಲಿ ಬಲವಾದ ಟೆಂಪೊರಲ್‌ಗಳಿವೆ. ಇವು ಅಂಟಿಕೊಳ್ಳುವ ಸಲುವಾಗಿ ದೊಡ್ಡದಾದ ಕೊರೊನಾಯಿಡ್ ಪ್ರವರ್ಧವಿದೆ. ಟೆಂಪೊರಲ್ ಕುಳಿ ವಿಶಾಲವಾಗಿದ್ದು, ಬಲಯುತವಾದ ಮ್ಯಾಸ್ಸಿಟಿಕ್ಕಿನ ಪ್ರದೇಶ ವಿಶೇಷವಾಗಿ ವೃದ್ಧಿಯಾಗುವ ಅವಶ್ಯಕತೆ ಇಲ್ಲದಿರುವುದರಿಂದ ಈ ಕುಳಿ ಕಣ್ಣು ಗೂಡಿನಿಂದ ಬೇರ್ಪಟ್ಟಿಲ್ಲ. ದವಡೆಗಳಿಗೆ ಯುಕ್ತ ಚಲನೆ ಇಲ್ಲದಿರುವುದರಿಂದ ಟೆರಿಗಾಯಿಡ್ ಮಾಂಸಗಳು ಮತ್ತು ಅವುಗಳ ಕುಳಿ ಕ್ಷೀಣವಾಗಿವೆ.

ತಲೆಬುರುಡೆಯ ಹಿಂಭಾಗದ ಅಸ್ಥಿಪಂಜರ ಬೆಕ್ಕಿನ ನೆಗೆಯುವ ಚಲನೆಗೆ ಅನುಗುಣವಾಗಿ ಉಳಿದ ಸ್ತನಿಗಳಿಗೆ ಹೊರತಾದ ಕೆಲವು ವಿಶೇಷತೆಗಳನ್ನು ಹೊಂದಿದೆ. ಕಶೇರು ಸ್ತಂಭದಲ್ಲಿ ಕಶೇರುಮಣಿಗಳು ಈ ಚಲನೆಗೆ ಅವಶ್ಯವಿರುವಂತೆ ಹೊಂದಿಕೊಂಡಿರುತ್ತದೆ. ಹೊರಭಾಗದ ನ್ಯೂರಲ್ ಮುಳ್ಳು ಎತ್ತರದಲ್ಲಿದೆ. ಬೆಕ್ಕು ನೆಗೆಯುವಾಗ ಸ್ಯಾಕ್ರೊಸ್ಪೈನಾಲಿಸ್ ಎಂಬ ಮಾಂಸಗಳ ಒತ್ತಡ ಗ್ರಹಿಸುವಂತೆ ಕಶೇರು ಸ್ತಂಭವಿದೆ. ಲಂಬಾರ್ ಭಾಗದಲ್ಲಿ ಪಾರ್ಶ್ವ ಪ್ರವರ್ಧಗಳು ಅಗಲವಾಗಿವೆ. ಕುತ್ತಿಗೆಯಲ್ಲಿಯೂ ಇವು ಚಲಿಸುವ ಸ್ನಾಯುಗಳಿಗಾಗಿ ಅಗಲವಾಗಿದೆ. ಕ್ಲಾವಿಕಲ್ ಕ್ಷೀಣವಾಗಿದೆ. ಕಾಡುಬೆಕ್ಕುಗಳಲ್ಲಿ ಬಾಲ ಬಲವಾಗಿ ಬೆಳೆದಿದೆ. ಇದಕ್ಕೆ ಹೋಲಿಸುವಾಗ ಸಾಕು ಬೆಕ್ಕಿನ ಬಾಲ ತೀರ ಕ್ಷೀಣವೆನಿಸುತ್ತದೆ.

ಬೆಕ್ಕುಗಳಲ್ಲಿ ಅನ್ನನಾಳ ಮೊಟಕಾಗಿದೆ. ಜಠರದ ರಚನೆ ಸರಳವಾಗಿದೆ. ಹಾಗೆಯೇ ಸೀಕಮ್ ಕೂಡ ಚಿಕ್ಕದಾಗಿಯೇ ಇದೆ. ಉಳಿದ ಅಂಗಗಳು ಸಾಮಾನ್ಯ ರಚನೆಯಲ್ಲಿ ಸ್ತನಿಗಳ ಇತರ ಗುಂಪನ್ನು ಹೋಲುತ್ತವಾದರೂ ಕೆಲವು ಸಣ್ಣ ಪುಟ್ಟ ಮಾರ್ಪಾಡುಗಳಾಗಿವೆ. ಬೆಕ್ಕಿನ ಶ್ರವಣಾಂಗಗಳು ಉತ್ತಮವಾಗಿದ್ದು ಶ್ರವಣ ಶಕ್ತಿ ಚುರುಕಾಗಿದೆ. ಮಾನವನದಕ್ಕಿಂತ ಸುಮಾರು 30 ಪಾಲು ಉತ್ತಮ. ಮಾನವ ಕರ್ಣ ಸುಮಾರು 2000 ಚಕ್ರಗಳವರೆಗೆ ಗುರುತಿಸಬಲ್ಲದಾದರೆ ಬೆಕ್ಕು 60,000 ಚಕ್ರಗಳವರೆಗೆ ಗುರುತಿಸಬಲ್ಲದು. ಇಷ್ಟು ಸೂಕ್ಷ್ಮ ಶ್ರವಣ ಶಕ್ತಿ ಪಡೆಯಲು ಬೆಕ್ಕಿನ ನಿಮಿರಿದ ಹೊರಕಿವಿಯೇ ಕಾರಣ. ಇದರ ಜೊತೆಗೆ ಕಿವಿಯಲ್ಲಿ 27 ಮಾಂಸಖಂಡಗಳು ಕಿವಿಯನ್ನು ವಿವಿಧ ದಿಕ್ಕುಗಳಿಗೆ ತಿರುಗಿಸಿ ಶಬ್ದತರಂಗಗಳನ್ನು ಗ್ರಹಿಸುವಂತೆ ಸಹಾಯ ಮಾಡುತ್ತವೆ. ಕಿವಿಯಲ್ಲಿಯ ಅರ್ಧಚಂದ್ರಾಕಾರದ ಕಾಲುವೆಗಳು ಶರೀರದ ಸಮತೋಲನವನ್ನು ಕಾಯ್ದುಕೊಳ್ಳುತ್ತವೆ. ಇವುಗಳಿಂದಾಗಿ ಬೆಕ್ಕು ಜಿಗಿಯುವಾಗ ಅಥವಾ ಮರ ಏರುವಾಗ ತನ್ನ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ.

ಬೆಕ್ಕು ಚೊಕ್ಕಟ ಪ್ರಾಣಿ. ತನ್ನ ಶರೀರವನ್ನು ತಾನೇ ಚೊಕ್ಕಟಮಾಡಿ ಕೊಳ್ಳುತ್ತದೆ. ಜನಿಸಿದ ಮರಿಗಳು ತಮ್ಮ ಶರೀರವನ್ನು ಶುಚಿಗೊಳಿಸುವುದನ್ನು ತಾಯಿಯಿಂದ ಕಲಿಯುತ್ತದೆ. ಬೆಕ್ಕಿನ ತುಪ್ಪುಳದಲ್ಲಿ ಕೂದಲುಗಳಿವೆ. ಮೂಗು, ಪಾದ, ಗುದದ್ವಾರ ಹಾಗೂ ಮೊಲೆಯ ತೊಟ್ಟುಗಳ ಹೊರತು ಇನ್ನುಳಿದ ಎಲ್ಲ ಭಾಗಗಳೂ ಕೂದಲಿನಿಂದಾವೃತವಾಗಿವೆ. ಕಣ್ಣುಗಳ ಮೇಲ್ಭಾಗದಲ್ಲಿ, ಕಿವಿ ಹಾಗೂ ಮೂತಿಯ ಭಾಗಗಳಲ್ಲಿ ಕೂದಲು ಉದ್ದವಿದೆ. ಇವುಗಳಲ್ಲಿ ಮೂತಿಯ ಭಾಗದ ಕೂದಲಿಗೆ ಕುಡಿಮೀಸೆ ಎಂದು ಹೆಸರು. ಇವು ಜ್ಞಾನವಾಹಿಗಳಂತೆ ಕೆಲಸ ಮಾಡುತ್ತವೆ.

ವರ್ಷದ ಎಲ್ಲ ಋತುಗಳಲ್ಲಿಯೂ ಬೆಕ್ಕಿಗೆ ಲೈಂಗಿಕ ಆಸಕ್ತಿ ಇರುತ್ತದೆ. ಹೆಣ್ಣುಬೆಕ್ಕು ವರ್ಷದ ಯಾವ ತಿಂಗಳಲ್ಲಿಯೂ ಗರ್ಭಧಾರಣೆ ಮಾಡಬಹುದು. ಬೆಕ್ಕಿಗೆ ಐದು ತಿಂಗಳಾದಾಗ ಲೈಂಗಿಕ ಬೆಳವಣಿಗೆ ಹೊಂದಿರುತ್ತದೆ. ಹೆಣ್ಣು ಬೆಕ್ಕು ಹುಟ್ಟಿದ ಐದು ತಿಂಗಳ ತರುವಾಯ ಗರ್ಭ ಧರಿಸಬಲ್ಲುದು ಇತರ ಸ್ತನಿಗಳಂತೆ ಬೆಕ್ಕಿಗೆ ಕೂಡ ಸಂಭೋಗ ಚಕ್ರ ಉಂಟು. ಪ್ರತಿ ಚಕ್ರದ ಮಧ್ಯೆ 3 ರಿಂದ 4 ದಿನ ಮಾತ್ರ ಹೆಣ್ಣು ಫಲವಂತವಾಗಿರುತ್ತದೆ. ಈ ಸಂದರ್ಭದಲ್ಲಿ ಹೆಣ್ಣು ಗಂಡಿನ ಸಂಯೋಗವಾದರೆ ಮಾತ್ರ ಹೆಣ್ಣು ಗರ್ಭ ಧರಿಸಬಲ್ಲುದು. ಹೆಣ್ಣು ಸಂಭೋಗಕ್ಕೆ ಯೋಗ್ಯವಾದಾಗ ಅತ್ತಿಂದಿತ್ತ ಅವಿಶ್ರಾಂತವಾಗಿ ಓಡಾಡುತ್ತ ವಿಚಿತ್ರವಾಗಿ ಕೂಗಲು ಪ್ರಾರಂಭಿಸುತ್ತದೆ. ಈ ಕೂಗುವಿಕೆಯೇ ಅದರ ಪ್ರಣಯ ಸಂಗೀತ. ಇದು ಸಾಮಾನ್ಯ ಕೂಗಿಗಿಂತ ಹೆಚ್ಚಿನ ದೂರದವರೆಗೆ ಪಸರಿಸುತ್ತದೆ. ಇದರಿಂದ ಆಕರ್ಷಿತವಾದ ಗಂಡು ಬೆಕ್ಕು ಹೆಣ್ಣಿನ ಸಮೀಪಕ್ಕೆ ಬರುತ್ತದೆ. ಸಾಮಾನ್ಯವಾಗಿ ಗಂಡು ಬೆಕ್ಕು ಇಂಥ ಸಂದರ್ಭದಲ್ಲಿ ದೈನ್ಯವನ್ನು ವ್ಯಕ್ತ ಪಡಿಸುತ್ತದೆ. ಬಾಲವನ್ನು ಎರಡೂ ಹಿಂಗಾಲುಗಳ ಮಧ್ಯೆ ಸೇರಿಸಿಕೊಂಡು ಹೆಣ್ಣಿನ ಹಿಂಭಾಗದಲ್ಲಿ ಅಂಡಲೆಯುವುದು ಹಾಗೂ ಹೆಣ್ಣಿನ

ಜನನೇಂದ್ರಿಯಗಳನ್ನು ಮೂಸುವುದು ಇವು ಗಂಡು ಬೆಕ್ಕು ತೋರಿಸುವ ಪ್ರತಿಕ್ರಿಯೆಗಳು. ಅನಂತರ ಸಂಭೋಗ ನಡೆಯುತ್ತದೆ. ಒಂದು ಋತುಚಕ್ರದಲ್ಲಿ ನಾಲ್ಕಾರು ಗಂಡು ಬೆಕ್ಕುಗಳು ಹೆಣ್ಣೊಂದನ್ನು ಸಂಭೋಗಿಸಬಹುದು. ಹಾಗೆಯೇ ಒಂದೇ ಗರ್ಭದಿಂದ ಜನಿಸುವ ಮರಿಗಳು ಬೇರೆ ಬೇರೆ ತಂದೆಗಳನ್ನು ಹೊಂದುವ ಸಾಧ್ಯತೆ ಕೂಡ ಇದೆ. ಅಂದರೆ ಹೆಣ್ಣಿನ ಗರ್ಭಾಶಯದಲ್ಲಿರುವ ಅಂಡಾಣುಗಳು ಬೇರೆ ಬೇರೆ ಗಂಡಿನ ವೀರ್ಯಾಣುಗಳಿಂದ ನಿಷೇಚನಗೊಳ್ಳಬಹುದು.

ಬೆಕ್ಕಿನ ಗರ್ಭದ ಅವಧಿ 59 ರಿಂದ 69 ದಿನಗಳು. ಮರಿ ಜನಿಸುವುದಕ್ಕೆ ಮೊದಲು ಬೆಕ್ಕು ಹೆಚ್ಚು ಹೆಚ್ಚು ಯಜಮಾನನನ್ನು ಆಶ್ರಯಿಸುತ್ತದೆ. ಮರಿಗಳು ಗರ್ಭದಿಂದ ಹೊರಬರುವಾಗ ಚೀಲವೊಂದರಲ್ಲಿದ್ದು ತಾಯಿ ಅದನ್ನು ಛಿದ್ರಗೊಳಿಸಿ ಮರಿಗಳನ್ನು ಹೊರತೆಗೆದು ನಾಲಿಗೆಯಿಂದ ಸ್ವಚ್ಛಮಾಡುತ್ತದೆ. ಮರಿಗಳು ಜನಿಸಲು 2 ರಿಂದ 4 ಗಂಟೆ ಬೇಕು. ತಾಯಿ ಬೆಕ್ಕು ತನ್ನ ಜರಾಯು ತಿಂದಾಗ ಅದರ ಮೊಲೆಗಳಲ್ಲಿ ಹಾಲು ಸ್ವಾಭಾವಿಕವಾಗಿ ಹರಿಯುತ್ತದೆ. ಮರಿಗಳ ಕಣ್ಣುಗಳು ಎರಡು ದಿನಗಳ ತನಕ ಮುಚ್ಚಿಕೊಂಡಿರುತ್ತವೆ. ಒಂದು ಸೂಲಿನಲ್ಲಿ ಐದರಿಂದ ಆರು ಮರಿಗಳವರೆಗೆ ಜನಿಸಬಹುದು.

ಬೆಕ್ಕುಗಳನ್ನು ಅವುಗಳಿಂದಾಗುವ ಉಪಯೋಗಕ್ಕೋಸ್ಕರ ಕೆಲವರು ಸಾಕುತ್ತಾರೆ. ಕೆಲವರು ಹವ್ಯಾಸಕ್ಕಾಗಿಯೂ ಸಾಕುತ್ತಾರೆ. ಹೀಗೆ ಸಾಕಿದ ಬೆಕ್ಕುಗಳನ್ನು ಪ್ರದರ್ಶಿಸುವವರು ಇದ್ದಾರೆ. ಈ ಪ್ರದರ್ಶನಗಳಲ್ಲಿ ಆಯ್ಕೆಯಾದ ಬೆಕ್ಕುಗಳಿಗೆ ಬಹುಮಾನಗಳನ್ನು ಪದಕ ರೂಪದಲ್ಲಿ ನೀಡಲಾಗುತ್ತದೆ. ಕೆಲವು ದೇಶಗಳಲ್ಲಿ ಕಾನೂನಿನ ಮೂಲಕ ಬೆಕ್ಕನ್ನು ಕೊಲ್ಲುವುದನ್ನು ನಿಷೇಧಿಸಲಾಗಿದ್ದರೆ ಇನ್ನು ಕೆಲವು ದೇಶಗಳಲ್ಲಿ ಬೆಕ್ಕನ್ನು ಕೊಲ್ಲುವುದು ಮಹಾಪರಾಧವೆಂದು ಪರಿಗಣಿಸಲಾಗಿದೆ. ಇತರ ಕೆಲವು ದೇಶಗಳಲ್ಲಿ ಬೆಕ್ಕನ್ನು ಕೊಲ್ಲುವುದು ಅಪರಾಧವೆನ್ನಿಸುವುದಿಲ್ಲ. ಅಮೆರಿಕದಲ್ಲಿ ಬೆಕ್ಕು ವನ್ಯಜೀವಿ ಸಂರಕ್ಷಣಾ ಕಾನೂನಿಗೆ ಒಳಪಡುತ್ತದೆ. ಭಾರತದಲ್ಲಿ ಇಂಥ ಕಾನೂನು ಏನೂ ಇಲ್ಲ. (ಎಸ್.ಎನ್.ಎಚ್.)

**ಬೆಕ್ಕುಮೀನು:** ಮತ್ಸ್ಯ ವರ್ಗದ ಸಿಲ್ಯುರಿಫಾರ್ಮಿಸ್ ಗಣಕ್ಕೆ ಸೇರಿದ ಮೀನುಗಳು (ಕ್ಯಾಟ್ ಫಿಷ್). ಒಂಬತ್ತು ಕುಟುಂಬಗಳಿವೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿ ಹರಡಿವೆ. ಬಾಯಿಯ ಸುತ್ತ ನಾಲ್ಕು ಜೊತೆ ಉದ್ದವಾದ ಸ್ಪರ್ಶ ಪ್ರವರ್ಧಿಗಳಿವೆ (ಬಾರ್‌ಬೆಲ್). ಚಿಕ್ಕ ಕಣ್ಣು, ಉತ್ತಮವಾಗಿ ಬೆಳೆದ ವೆಬರಿಯನ್ ಅಸ್ಥಿಕ (ಆಸಿಕಲ್), ಈಜುಚೀಲ, ಹೊರಪೆ ರಹಿತ ಚರ್ಮ ಮುಖ್ಯ ಲಕ್ಷಣಗಳು. ಅನೇಕ ಪ್ರಭೇದಗಳು ಸಿಹಿನೀರಿನಲ್ಲಿ ವಾಸಿಸುವುವು. ಯೂರೋಪಿನ ಬೆಕ್ಕು ಮೀನುಗಳು ಸಿಲ್ಯೂರಿಡ್ ಕುಟುಂಬಕ್ಕೆ ಸೇರುತ್ತವೆ.



ಬೆಕ್ಕುಮೀನು

ಈ ಕುಟುಂಬಕ್ಕೆ ಸೇರಿದ ಬೆಕ್ಕು ಮೀನುಗಳು ಯುರೇಷಿಯದ ಸಿಹಿನೀರಿನಲ್ಲಿ ವಾಸಿಸುತ್ತವೆ. ಮೇಲ್ಭಾಗದ ಈಜೆರೆಕ್ಕೆ ಚಿಕ್ಕದು, ಮುಳ್ಳಿಲ್ಲ. ಬಾಲದ ರೆಕ್ಕೆ ಉತ್ತಮವಾಗಿ ಬೆಳೆದಿದೆ. ಸಿಲ್ಯೂರಿಸ್ ಗ್ಲಾನಿಸ್ ಮುಖ್ಯ ಪ್ರಭೇದ. ಇದು ಯೂರೋಪಿನ ದೊಡ್ಡ ನದಿಗಳಲ್ಲಿ ಕಾಣಸಿಗುವುದು. ವೆಲ್ಸ್ ಎಂಬುದು ಸಾಮಾನ್ಯ ಹೆಸರು. ತಲೆ ದಪ್ಪ ಹಾಗೂ ಅಗಲವಾಗಿದೆ. ಬಾಯಿ ಅಗಲವಾಗಿದೆ. 3 ಜೊತೆ ಮೀಸೆಗಳಿವೆ, ಅವುಗಳಲ್ಲಿ ಒಂದು ಜೊತೆ ಉದ್ದವಾಗಿದ್ದು (ಚಿತ್ರ ನೋಡಿ) ಚಲನಶೀಲವಾಗಿದೆ. ಕಣ್ಣು ಚಿಕ್ಕದು, ದೇಹ ಬಲಿಷ್ಠವಾಗಿದೆ.

ದೇಹದ ಮುಂಭಾಗ ಸಿಲಿಂಡರಾಕಾರ ಮತ್ತು ಹಿಂಭಾಗ ಸ್ವಲ್ಪ ಪಾರ್ಶ್ವ ಚಪ್ಪಟೆಯಾಗಿದೆ. ಚರ್ಮ ಲೋಳೆಯಾಗಿದ್ದು ಹುರುಪೆ ಇಲ್ಲ. ಉದ್ದದ ಹಿಂಬದಿಯ ರೆಕ್ಕೆಯನ್ನು ಬಿಟ್ಟರೆ, ಉಳಿದೆಲ್ಲ ಈಜುರೆಕ್ಕೆಗಳು ಚಿಕ್ಕವು. ಶರೀರದ ಬಣ್ಣ ಕೆಳಗೆ ದಟ್ಟ ಹಸಿರು ಅಥವಾ ನೀಲಿಮಿಶ್ರಿತ ಕಪ್ಪು, ಪಕ್ಕೆ ತಿಳಿ ಜೊತೆಗೆ ಪ್ರಕಾಶಮಾನವಾದ ಕೆಂಪುಬಣ್ಣ, ಹೊಟ್ಟೆ ಬಿಳಿಯ ಬಣ್ಣ. ದೇಹದ ಮೇಲೆಲ್ಲ ಕಲೆ ಮತ್ತು ಮಚ್ಚೆ ಇರುತ್ತವೆ.

ಹೇರಳವಾಗಿ ಸಸ್ಯಗಳಿರುವ ನದಿಯಲ್ಲಿ ಅಥವಾ ಆಳ ಸರೋವರಗಳಲ್ಲಿ ಜೀವಿಸುತ್ತದೆ. ಬೆಳಗಿನ ಸಮಯ ನೀರಿನಲ್ಲಿ ಆಳದಲ್ಲಿರುವ ಮಣ್ಣಿನಲ್ಲಿ, ಮೀಸೆಯ ಸಹಾಯದಿಂದ ಆಹಾರ ಹುಡುಕುವುದರಲ್ಲಿ ನಿರತವಾಗಿರುತ್ತದೆ. ರಾತ್ರಿಯ ವೇಳೆ ಬೇಟೆ ಮಾಡಿ ತುಂಬ ಆಹಾರವನ್ನು ಸೇವಿಸುತ್ತದೆ.

ಸಣ್ಣ ಅಕಶೇರುಕಗಳು, ಇತರೆ ಮೀನುಗಳು, ಕಠಿಣ ಚರ್ಮಿಗಳು ಮತ್ತು ಕಪ್ಪೆಗಳು ಇದರ ಆಹಾರ. ದೊಡ್ಡ ಬೆಕ್ಕು ಮೀನುಗಳು, ಸಣ್ಣ ನೀರಿನ ಪಕ್ಷಿಗಳನ್ನು ಮತ್ತು ಸ್ತನಿಗಳನ್ನು ತಿನ್ನುತ್ತವೆ.

ಮೇ–ಜೂನ್ ತಿಂಗಳು ಸಂತಾನವೃದ್ಧಿ ಶ್ರಾಯ. ಆ ಸಮಯದಲ್ಲಿ ಇವು ಆಳವಿಲ್ಲದ ಜಾಗಕ್ಕೆ ಹೋಗುತ್ತವೆ. ಅಲ್ಲಿ ಹೆಣ್ಣು ಮೀನುಗಳು ತಮ್ಮ ಬಾಲದ ಬಡಿತದಿಂದ ಮಣ್ಣಿನಲ್ಲಿ ತಗ್ಗುಮಾಡಿ, ಅದರಲ್ಲಿ ಮೊಟ್ಟೆ ಇಡುತ್ತವೆ. ದೊಡ್ಡ ಹೆಣ್ಣು ಮೀನುಗಳು 100,000 ಮೊಟ್ಟೆಗಳನ್ನು ಇಡಬಲ್ಲುವು. ಗಂಡುಮೀನುಗಳು ಮೊಟ್ಟೆಗಳನ್ನು ರಕ್ಷಿಸುತ್ತವೆ. ಮರಿಗಳ ಬಣ್ಣ ಕಪ್ಪು. ಗೊದಮೊಟ್ಟೆಯಂತಿರುವುವು. ವಿವಿಧ ಪ್ರಭೇದಗಳ ನಡುವೆ ಆಕಾರ, ವಾಸಸ್ಥಳಗಳ ಭಿನ್ನತೆಯಿದೆ.

ದಕ್ಷಿಣ ಅಮೇರಿಕಾದ ಬ್ಯಾಂಜೊ ಬೆಕ್ಕು ಮೀನು ನದಿಗಳಲ್ಲಿ ಮತ್ತು ಉಪ್ಪುನೀರಿನ ಅಳಿವೆಗಳಲ್ಲಿ (ಎಸ್ಚ್ಯುಅರಿ) ಇನ್ನು ಕೆಲವು ಸಮುದ್ರಗಳಲ್ಲಿ ವಾಸಿಸುವುವು. ಚಪ್ಪಟೆಯಾದ ಅಸಾಮಾನ್ಯ ಉದ್ದದ ಬಾಲಗಳನ್ನು ಅವಲಂಬಿಸಿ ಇವುಗಳನ್ನು ವರ್ಗೀಕರಿಸಲಾಗುವುದು. ಆಸ್ಪ್ರಿಡಿನಿಕ್‌ತಿಸ್ ಟಬಿಸೆಸ್ ಪ್ರಭೇದದಲ್ಲಿ ಬಾಲ ದೇಹದ ಮೂರರಷ್ಟಿರುತ್ತದೆ. ಸಂತಾನಾಭಿವೃದ್ಧಿ ಕಾಲದಲ್ಲಿ ಹೆಣ್ಣಿನ ಹೊಟ್ಟೆಯ ಮೇಲೆ ಸ್ಪಂಜಿನಂಥ ಸ್ಪರ್ಶಾಂಗಗಳು ಬೆಳೆಯುತ್ತವೆ. ಮೊಟ್ಟೆ ಸ್ಪರ್ಶಾಂಗಗಳಿಗೆ ಅಂಟಿಕೊಂಡಿರುತ್ತವೆ. ಅರಿಡೆ ಕುಟುಂಬಕ್ಕೆ ಸೇರಿದ, ಸಮುದ್ರ ಬೆಕ್ಕು ಮೀನು ಬಾಯಿಯ ಸಹಾಯದಿಂದ ಸಂತಾನಾಭಿವೃದ್ಧಿ ಮಾಡುತ್ತವೆ. ಅಂದರೆ ಗಂಡು ತಮ್ಮ ಬಾಯಿಯಲ್ಲಿ ಮೊಟ್ಟೆಗಳನ್ನು ಇಟ್ಟುಕೊಂಡಿರುತ್ತವೆ. ಮೊಟ್ಟೆಗಳಿಂದ ಮರಿಗಳು ಬಂದ ಮೇಲೂ ಅವುಗಳನ್ನು ಬಾಯಿಯಲ್ಲೇ ಇಟ್ಟುಕೊಂಡು ರಕ್ಷಿಸುತ್ತವೆ. ಇದರಿಂದ ಸುಮಾರು ಒಂದು ತಿಂಗಳು ಗಂಡು ಮೀನುಗಳು ಉಪವಾಸ ಮಾಡಬೇಕಾಗುತ್ತದೆ.

ಪ್ಲೋಟೊಸಿಡೆ ಕುಟುಂಬಕ್ಕೆ ಸೇರಿದ ಅನೇಕ ಸಮುದ್ರದ ಹವಳ ದಿಬ್ಬದ ಬೆಕ್ಕುಮೀನುಗಳು ಬಹಳ ಅಪಾಯಕಾರಿ. ಇವುಗಳಲ್ಲಿ ಬೆನ್ನಿನ ಮತ್ತು ಎದೆಯ ಈಜುರೆಕ್ಕೆಗಳಿಲ್ಲ. ಗ್ರಂಥಿಗಳಿರುವ ಮುಳ್ಳುಗಳಿರುತ್ತವೆ. ಮುಳ್ಳು ಚರ್ಮವನ್ನು ಸವರಿಕೊಂಡು ಹೋದರೂ ಸಾಕಷ್ಟು ನೋವು ಮತ್ತು ಗಾಯಗಳಾಗುತ್ತವೆ. ಟ್ರೈಕೊಮಿಕ್ಟೆರಿಡೆ ಕುಟುಂಬದ ಮೀನುಗಳು ಇಷ್ಟೆ ಅಪಾಯಕಾರಿ. ಹೆಚ್ಚಿನವು ಕಿವಿರು ಮುಚ್ಚಳದ ಮೇಲೆ ಇರುವ ಮುಳ್ಳುಗಳಿಂದ ಬೇರೆ ಮೀನುಗಳಿಗೆ ಅಂಟಿಕೊಂಡಿರುತ್ತವೆ. ಸ್ವತಂತ್ರವಾಗಿಯೂ ಬದುಕಬಲ್ಲವು. ಇವು ಆ ಮೀನುಗಳ ಚರ್ಮವನ್ನು ಚುಚ್ಚಿ ರಕ್ತ ಹೀರಿ ಆಹಾರವಾಗಿ ಉಪಯೋಗಿಸಿಕೊಳ್ಳುತ್ತವೆ. ಇನ್ನು ಕೆಲವು ಕಿವಿರು ಕೋಷ್ಠದೊಳಗೆ ನುಸುಳಿ ಕಿವಿರನ್ನು ತಿಂದು ಬದುಕುವುವು.

ಉತ್ತರ ಅಮೆರಿಕಾದಲ್ಲಿ, ಇಕ್ಟಲ್ಯೂರಿಡೆ ಕುಟುಂಬಕ್ಕೆ ಸೇರಿದ ಬೆಕ್ಕು ಮೀನುಗಳಿವೆ. ಇವುಗಳ ಉದ್ದ 1.65 ಮೀ, ತೂಕ 45 ಕಿಗ್ರಾಂ. ತಲೆ ಚಪ್ಪಟೆಯಾಗಿರುವುದು. ಚ್ಯಾನಲ್ ಬೆಕ್ಕುಮೀನು, ಆಹಾರ ದೃಷ್ಟಿಯಿಂದ ಬಲು ಉಪಯುಕ್ತ. ಮ್ಯಾಡ್‌ಟೋಮ್ಸ್ 12–13 ಸೆಂಮೀ ಉದ್ದವಿದ್ದು ಎದೆಯ ಮೇಲೆ ಮುಳ್ಳು ಹಾಗೂ ವಿಷಗ್ರಂಥಿಗಳಿವೆ. ಆಫ್ರಿಕಾದ ನದಿಗಳಲ್ಲಿರುವ ಕೆಲವು ಬೆಕ್ಕುಮೀನುಗಳಲ್ಲಿ ವಿಚಿತ್ರ ನಡವಳಿಕೆಯಿದೆ. ಈಜುತ್ತಿರುವಾಗ, ತಕ್ಷಣ ಕಾರಣವಿಲ್ಲದೆ ತಲೆಕೆಳಗಾಗುತ್ತವೆ. ಪ್ರಣಯದ ಕಾಲದಲ್ಲಿ ಗಂಡು ಮತ್ತು ಹೆಣ್ಣು ತಲೆಕೆಳಗಾಗಿ ಒಂದರ ಕಡೆ ಇನ್ನೊಂದು ಈಜುತ್ತ ಡಿಕ್ಕಿ ಹೊಡೆಯುತ್ತವೆ. ಅರ್ಧನಿಮಿಷಕ್ಕೊಮ್ಮೆ ಡಿಕ್ಕಿ ಹೊಡೆಯುವುದನ್ನು ಪುನರಾವರ್ತಿಸುತ್ತವೆ.

ಭಾರತದಲ್ಲಿ ಕ್ಲೆರಿಯಿಡೆ ಹಾಗೂ ಹೆಟರೊನ್ಯೂಸ್ಟಿಡೆ ಎಂಬ ಎರಡು ಕುಟುಂಬಗಳ ಬೆಕ್ಕುಮೀನುಗಳಿವೆ. ಅಗಲವಾದ ತಲೆ ನಾಲ್ಕು ಸ್ಪರ್ಶ ಪ್ರವರ್ಧಿ ಜೊತೆಯುಳ್ಳ ಈ ಪ್ರಭೇದಗಳು ಸಿಹಿನೀರಿನ ತಾಣವಾದ ನದಿ ಸರೋವರಗಳಲ್ಲಿ ಕಾಣಸಿಗುವುವು. ಕಿವಿರುಗಳ ಹಿಂಭಾಗ ಈಜುಚೀಲವಿದ್ದು ಪ್ರತಿಕೂಲ ಸ್ಥಿತಿಯಲ್ಲಿ ನೀರಿನಲ್ಲಿ ಕಡಿಮೆ ಆಮ್ಲಜನಕವಿದ್ದರೂ ಬದುಕಬಲ್ಲುವು. (ಎಸ್.ಆರ್.ಎಸ್.)

**ಬೆಣ್ಣೆ ಮೀನು:** ಸ್ಟ್ರೊಮಾಟಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ಮೀನು (ಬಟರ್ ಫಿಶ್). ಫ್ಲಾರಿಡ, ನೋವಸ್ಕೋಷಿಯ, ನ್ಯೂ ಇಂಗ್ಲೆಂಡ್ ಮುಂತಾದ ಪ್ರದೇಶಗಳ ಸಮುದ್ರಗಳಲ್ಲಿ ದೊರೆಯುತ್ತದೆ. ಪೋರೊನೋಟಸ್ ಟ್ರಯಕ್ಯಾಂತಸ್ ಇದರ ವೈಜ್ಞಾನಿಕ ಹೆಸರು.

ಸುಮಾರು 300 ಮಿಮೀ ಉದ್ದ ಮತ್ತು ಸುಮಾರು 700 ಗ್ರಾಂ ಭಾರ ಇರುವ ಇದು ಮಧ್ಯಮ ಗಾತ್ರದ ಮೀನುಗಳ ಪೈಕಿ ಒಂದು. ದೇಹದ ಬಣ್ಣ ಬೂದು. ಮೈಮೇಲೆ ಅಲ್ಲಲ್ಲಿ ಸಣ್ಣ ಸಣ್ಣ ಚುಕ್ಕೆಗಳಿವೆ. ಸಮುದ್ರದಲ್ಲಿ ಸಿಕ್ಕುವ ಹುಳುಹುಪ್ಪಟೆ, ಇತರ ಜಾತಿಯ ಸಣ್ಣ ಗಾತ್ರದ ಮೀನುಗಳು ಇದರ ಆಹಾರ. ವಸಂತ–ಬೇಸಿಗೆ ಶ್ರಾಯಗಳಲ್ಲಿ ಸಂತಾನವೃದ್ಧಿಯಲ್ಲಿ ತೊಡಗುತ್ತದೆ. ಇದು ಖಾದ್ಯಯೋಗ್ಯ ಮೀನು.

ಭಾರತದ ಪಶ್ಚಿಮ ಹಾಗೂ ಪೂರ್ವ ಕರಾವಳಿಗಳಲ್ಲೂ ಮಲಯ, ಶ್ರೀಲಂಕಾ, ಬರ್ಮ, ಫಿಲಿಪೀನ್ಸ್ ಸಮುದ್ರ ತೀರಗಳಲ್ಲೂ ಕಾಣಸಿಕ್ಕುವ ಸ್ಕಾಟೋಫೇಗಸ್ ಅರ್ಗಸ್



ಫೋರೋನೋಟಸ್ ಟ್ರಯಕ್ಯಾಂತಸ್

(ಕುಟುಂಬ: ಸ್ಕಾಟೋಫೇಗಿಡೆ) ಎಂಬ ವೈಜ್ಞಾನಿಕ ಹೆಸರುಳ್ಳ ಮೀನನ್ನು ಸಹ ಬೆಣ್ಣೆ ಮೀನೆಂದು ಕರೆಯಲಾಗುತ್ತದೆ. ಕೆನ್ನೀಲಿ ಬಣ್ಣದ ಮತ್ತು ಹಸುರು ಮಿಶ್ರಿತ ಕಪ್ಪು ಚುಕ್ಕೆಗಳಿಂದ ಕೂಡಿದ ದೇಹದ ಈ ಮೀನು ಸುಮಾರು 300 ಮಿಮೀ ಉದ್ದ ಬೆಳೆಯುವುದು. ಇದು ಕೂಡ ಖಾದ್ಯಯೋಗ್ಯವಾಗಿದೆ. (ಕೆ.ವಿ.ಡಿ.)

**ಬೆನ್ನುಮೂಳೆ:** ದೇಹದ ಕಂಠಮುಂಡಗಳ ಬೆನ್ನಿನ ನಡುಮಧ್ಯೆ ಕಾಣಿಸುವ ಮೂಳೆಗಳ ಸರ (ಸ್ಪೈನ್). ಪರ್ಯಾಯ ನಾಮಗಳು ಕಶೇರುಸರ, ಬೆನ್ನೆಲುಬು, ಬೆನ್ನುಕಂಬ ಇತ್ಯಾದಿ (ವರ್ಟಿಬ್ರಲ್‌ಚೆಯ್ನ್, ವರ್ಟಿಬ್ರಲ್‌ಕಾಲಮ್, ಬ್ಯಾಕ್ ಬೋನ್). ಇದರ ರಚನೆ ಕಶೇರುಗಳೆಂಬ ಬಿಡಿ ಎಲುಬುಗಳ ಸರ ರೂಪಕ ಜೋಡಣೆಯಿಂದ ಆಗಿರುವುದಾದರೂ ಜೋಡಣೆ ಮೃದ್ವಸ್ಥಿ ಹಾಗೂ ರಜ್ಜುಗಳಿಂದ ಬಿಗಿಯಾಗಿದ್ದು ವ್ಯಕ್ತಿ ನೆಟ್ಟಗೆ ನಿಂತಾಗ ಸ್ಥಿರವಾದ ಕಂಬದಂತೆಯೇ ಇರುವುದರಿಂದ ಈ ಸರವನ್ನು ಬೆನ್ನುಮೂಳೆ ಅಥವಾ ಬೆನ್ನುಕಂಬ ಎನ್ನಲಾಗಿದೆ. ಬೆನ್ನುಮೂಳೆ ಮಾನವನ ರುಂಡಮುಂಡಗಳಿಗೆ ಆಧಾರ ಸ್ತಂಭ. ಅವುಗಳ ಭಾರ ಕಾಲುಗಳ ಮೇಲೆ ನೇರವಾಗಿ ಬೀಳುವಂತೆ ಮಾಡಿದೆ. ವ್ಯಕ್ತಿಯ ನೆಟ್ಟನೆಯ ನಿಲುವು, ನಡಿಗೆಗಳ ಸಮತೋಲನ ಅತ್ಯಲ್ಪ ಸ್ನಾಯುಕ್ರಿಯೆಯಿಂದ ಸಾಧ್ಯವಾಗುತ್ತದೆ. ಆದರೂ ಒಂದು ಕಶೇರು ಅದರ ಒತ್ತಿನ ಕಶೇರುಗಳೊಡನೆ ಸ್ವಲ್ಪ ಮಟ್ಟಿಗೆ ಚಲಿಸಲು ಸಾಧ್ಯವಿರುವುದರಿಂದ ಮುಂಡವನ್ನು ಅಕ್ಕ ಪಕ್ಕಕ್ಕೆ ಹಾಗೂ ಹಿಂದುಮುಂದಕ್ಕೆ ಬಾಗಿಸುವುದು, ಎಡಬಲಗಳಿಗೆ ಸ್ವಲ್ಪ ಮಟ್ಟಿಗೆ ತಿರುಗಿಸುವುದು ಇತ್ಯಾದಿ ಚಲನೆಗಳು ಸಾಧ್ಯವಾಗಿವೆ. ಇಂಥ ಚಲನೆ ಕಂಠ ಮತ್ತು ಸೊಂಟ ಪ್ರದೇಶಗಳಲ್ಲಿ ಗರಿಷ್ಠ. ಒಟ್ಟಿನಲ್ಲಿ ಬೆನ್ನು ಮೂಳೆ ಒಂದು ಗಡುಸಾದ ಆದರೂ ಉಪಯುಕ್ತವಾಗಿರುವಷ್ಟರ ಮಟ್ಟಿಗೆ ನಮ್ರತೆ ಉಳ್ಳ ರಚನೆ. ಮಿದುಳು ಬಳ್ಳಿಗೆ ಸುರಕ್ಷ ಕವಚವಾಗಿ ವರ್ತಿಸುವುದು ಬೆನ್ನು ಮೂಳೆಯ ಇನ್ನೊಂದು ಕ್ರಿಯೆ. ಇದರ ಉದ್ದಕ್ಕೂ ಎಲುಬುಚಾಚುಗಳಿಂದಲೆ ರಚಿತವಾದ ಒಂದು ನಾಳ ಏರ್ಪಟ್ಟಿದ್ದು ಇದರೊಳಗೆ ಮಿದುಳುಬಳ್ಳಿ ಸಾಗುವುದರಿಂದ ಈ ರಕ್ಷಣೆ ಒದಗುತ್ತದೆ. ಬೆನ್ನೆಲುಬಿನ ಅಗ್ರದಲ್ಲಿ ರುಂಡವಿದ್ದು ಇವೆರಡರ ನಡುವೆ ಸಮಚಲನ ಸಾಮರ್ಥ್ಯಯುತ ಕೀಲು ಏರ್ಪಟ್ಟಿದೆ. ಹೀಗಾಗಿ ತಲೆಯನ್ನು ದೇಹದ ಮೇಲೆ ಹಿಂದಕ್ಕೂ ಮುಂದಕ್ಕೂ ಅಕ್ಕಪಕ್ಕಗಳಿಗೂ ಬಾಗಿಸಬಹುದು. ಅಲ್ಲದೆ ಅದನ್ನು ಎಡಬಲಭಾಗಗಳಿಗೆ ಹೊರಳಿಸಿ ತಕ್ಕಮಟ್ಟಿಗೆ ಹಿನ್ನೋಟ ಪಡೆಯುವುದು ಕೂಡ ಸಾಧ್ಯವಾಗಿದೆ. ವಕ್ಷದ ಅಗ್ರಭಾಗ ಹಾಗೂ ಸೊಂಟ ಪ್ರದೇಶದಲ್ಲಿ ಬೆನ್ನೆಲುಬಿಗೆ ಕೈ ಕಾಲುಗಳ ಮತ್ತು ಇತರ ಎಲುಬುಗಳು ಸೇರಿ ಕೀಲುಗಳು ಏರ್ಪಟ್ಟಿವೆಯಾಗಿ ಬೆನ್ನುಮೂಳೆಯ ಆಧಾರದ ಮೇಲೆ ಕೈ ಕಾಲು ಆಡಿಸುವುದು ಸಾಧ್ಯವಾಗಿದೆ.

ವಾಸ್ತವವಾಗಿ ಬೆನ್ನು ಕಂಬದಂಥ ಆಸರೆ ಕಶೇರುಕಗಳಲ್ಲಿ ಮೀನುಗಳಿಗಿಂತ ಕಡಿಮೆ ವಿಕಸಿತ ಪ್ರಾಣಿಗಳಾದ ಅಸೀಡಿಯನ್ನುಗಳು, ಆಂಫಿಯಾಕ್ಸಸ್ ಮುಂತಾದುವುಗಳಲ್ಲಿ ಕಂಡುಬರುವುದಿದೆ. ಇದಕ್ಕೆ ನೋಟೊಕಾರ್ಡ್ ಎಂದು ಹೆಸರು. ದೈಹಿಕ ಖಂಡ ಪ್ರತಿಯೊಂದಕ್ಕೂ ಅನುರೂಪ ಆಸರೆ ಖಂಡವಾಗಿ ಕಾಣಬರುವ ಇದು ಒಂದು ರೀತಿಯ ಗಡಸು ಆದರೂ ತಕ್ಕಮಟ್ಟಿಗೆ ಮೃದುವಾದ ಬಂಧನಾಂಗಾಂಶದಿಂದ ರಚಿತವಾಗಿದೆ. ಈ ಕೆಳದರ್ಜೆ ಪ್ರಾಣಿಗಳ ವಿವಿಧ ಪಂಗಡಗಳಲ್ಲಿ ನೋಟೊಕಾರ್ಡ್ ವಿವಿಧ ದೇಹಭಾಗಗಳಿಗೆ ಮಾತ್ರ ಸೀಮಿತವಾಗಿರಬಹುದು. ವಿಕಾಸ ಮುಂದುವರಿದಂತೆ ನೋಟೊಕಾರ್ಡಿನ ಖಂಡಗಳ ಬದಲು ಮೃದ್ವಸ್ಥಿ ಖಂಡಗಳು ಕಂಡುಬಂದು ಅವುಗಳ ಮಧ್ಯೆ ನೋಟೊಕಾರ್ಡಿನ ಅವಶೇಷ ಇರುತ್ತದೆ. ಉದಾ: ನಾಯಿ ಮೀನು, ಶಾರ್ಕ್ ಇಂಥವುಗಳಲ್ಲಿ ಬೆನ್ನುಕಂಬ ಹೀಗಿದೆ. ಇನ್ನೂ ಮುಂದುವರಿದ ವಿಕಾಸದಲ್ಲಿ ಮೃದ್ವಸ್ಥಿಯ ಬದಲು ಎಲುಬು ಉಪಸ್ಥಿತವಾಗುತ್ತದೆ. ಎಲುಬು ಖಂಡಗಳ ನಡುವೆ ಮೃದ್ವಸ್ಥಿಫಲಕವಿದ್ದು ಅದು ಖಂಡಗಳನ್ನು ಪರಸ್ಪರ ಬಂಧಿಸುತ್ತದೆ. ಆದರೂ ಒಂದು ಖಂಡ (ಕಶೇರು) ನೆರೆಯ ಕಶೇರುವಿನೊಡನೆ ಈ ರೀತಿ ಕೀಲುಗೊಂಡಿದ್ದು ಸ್ವಲ್ಪ ಚಲನೆ ಉಳ್ಳದ್ದಾಗಿರುತ್ತದೆ. ಅಲ್ಲದೆ ನಡೆದಾಡುವಾಗ ಓಡಾಡುವಾಗ ಮತ್ತು ಧುಮುಕಿ ಕುಪ್ಪಳಿಸುವಾಗ ಸಂಭವಿಸುವ ಕಶೇರುಗಳ ಪರಸ್ಪರ ಜಖಮ್ಮನ್ನು ಈ ಮೃದ್ವಸ್ಥಿ ಫಲಕಗಳು ಶಮನಗೊಳಿಸುತ್ತವೆ.

ಫಲಕಗಳ ನಡುಮಧ್ಯೆ ಮಾತ್ರ ಪ್ರಾಚೀನ ಆಧಾರವಾದ ನೋಟೋಕಾರ್ಡಿನ ಅವಶೇಷವನ್ನು ಗುರುತಿಸಬಹುದಾಗಿದೆ. ಕೆಲವು ಮೀನು ಹಾಗೂ ಕೆಲವು ಸರ್ಪಗಳಲ್ಲಿ ಈ ಅವಶೇಷವನ್ನು ಕಶೇರುಮಣಿಯ ನಡುಮಧ್ಯದಲ್ಲಿ ಗುರುತಿಸಬಹುದು. ವಿಕಾಸ ಈ ಕ್ರಮದಲ್ಲಿ ಸಾಗಿದೆ ಎಂಬುದಕ್ಕೆ ಬೆನ್ನೆಲುಬುಳ್ಳ ಎಲ್ಲ ಪ್ರಾಣಿಗಳಲ್ಲಿ ಅವುಗಳ ಭ್ರೂಣಾವಸ್ಥೆಯಲ್ಲಿ ಮೇಲೆ ವಿವರಿಸಿರುವ ವಿವಿಧ ಹಂತಗಳು ಕಂಡು ಬರುವುದೆ ಸಾಕ್ಷಿ. ನೋಟೋಕಾರ್ಡ್, ಅದರ ಅವಶೇಷ, ಅಥವಾ ಬೆನ್ನೆಲುಬಿರುವ ಪ್ರಾಣಿಗಳನ್ನು ಕಶೇರುಕಗಳೆಂದು ಇನ್ನೂ ಕೆಳದರ್ಜೆಯ (ಅಂದರೆ ಬೆನ್ನುಕಂಬದಂಥ ಆಸರೆ ಇಲ್ಲದ) ಪ್ರಾಣಿಗಳನ್ನು ಅಕಶೇರುಕಗಳೆಂದೂ ವಿಂಗಡಿಸಲಾಗಿದೆ.

ಬೆನ್ನುಕಂಬದ ರಚನೆಯಲ್ಲಿ ಭಾಗವಹಿಸುವ ಕಶೇರುಗಳ ಸಂಖ್ಯೆ ವಿವಿಧ ಪ್ರಾಣಿಗಳಲ್ಲಿ ವಿವಿಧವಾಗಿದೆ. ಹಾವುಗಳಲ್ಲಿ ಅತ್ಯಧಿಕ. ಜೊತೆಗೆ ಎಲ್ಲ ಕಶೇರುಗಳೂ ಒಂದೇ ಆಕೃತಿಯವು. ಆಮೆಗಳಲ್ಲಿ ಸೇರಿಕೊಂಡು ಚಿಪ್ಪಾಗಿವೆ. ಪಕ್ಷಿಗಳಲ್ಲಿ ಕಂಠಭಾಗದಲ್ಲಿ ಮಾತ್ರ ಮಣಿಗಳನ್ನು ಗುರುತಿಸಬಹುದು. ಮಿಕ್ಕವು ಒಂದೇ ಮೂಳೆ ಆಗಿ ಸೇರಿಹೋಗಿ ಬೆನ್ನುಮೂಳೆ ಆಗಿದೆ. ಸ್ತನಿಗಳಲ್ಲಿ ಸಾಮಾನ್ಯವಾಗಿ 33–34 ಮಣಿಗಳು ಕಂಡುಬರುವುವಲ್ಲದೆ ಇವುಗಳ ಆಕಾರ ಗಾತ್ರ ಇತ್ಯಾದಿ ವ್ಯತ್ಯಾಸಗಳಿಂದ ಕಂಠಪ್ರದೇಶದ ಕಶೇರುಗಳು, ವಕ್ಷ ಕಶೇರುಗಳು, ಉದರ ಕಶೇರುಗಳು, ಶ್ರೋಣಿ ಕಶೇರುಗಳು ಮತ್ತು ಪುಚ್ಛ ಕಶೇರುಗಳು ಎಂದು ಗುರುತಿಸಬಹುದಾಗಿದೆ. ಕಂಠಕಶೇರುಗಳು 7, ಕಂಠ ಎಷ್ಟೇ ಉದ್ದವಾಗಿರಲಿ ಗಿಡ್ಡವಾಗಿರಲಿ ಇವುಗಳ ಸಂಖ್ಯೆ ಸಾಮಾನ್ಯವಾಗಿ ಅಷ್ಟೆ. ತಿಮಿಂಗಿಲಗಳಲ್ಲಿ ಮಾತ್ರ ಇವು ಹೆಚ್ಚು ಕಡಿಮೆ ಆಗಿರಬಹುದು. ಕಶೇರುಮಣಿಯ ಉದ್ದ ಅಥವಾ ಗಿಡ್ಡ ಆಕಾರದಮೇಲೆ ಪ್ರಾಣಿಯ ಕಂಠದ ಉದ್ದ ನಿರ್ಧಾರವಾಗುತ್ತದೆ. ವಕ್ಷ ಕಶೇರುಗಳು ಯಾವಾಗಲೂ 12. ಉದರ ಭಾಗದ ಮತ್ತಿತರ ಕಶೇರುಗಳ ಸಂಖ್ಯೆ ವಿವಿಧ ಪ್ರಾಣಿ ಜಾತಿಗಳಲ್ಲಿ ವಿವಿಧ. ಮಾನವನಲ್ಲಿ ಬೆನ್ನುಕಂಬ 32–34 ಕಶೇರುಗಳಿಂದಾಗಿದೆ. ಕಂಠಕಶೇರುಗಳು 7, ವಕ್ಷಕಶೇರುಗಳು 12, ಉದರ ಕಶೇರುಗಳು 5, ಶ್ರೋಣಿ ಕಶೇರುಗಳು 4 ಮತ್ತು ಪುಚ್ಛಕಶೇರುಗಳು 4–5. ಆದರೆ ಈ ಸಂಖ್ಯೆ ಭ್ರೂಣಾವಸ್ಥೆಯಲ್ಲಿ ಮಾತ್ರ ನಿಜ. ಹುಟ್ಟಿದ ಮೇಲೆ ಸಾಮಾನ್ಯವಾಗಿ 26 ಮಣಿಗಳನ್ನು ಮಾತ್ರ ಲೆಕ್ಕಿಸಬಹುದು. ಏಕೆಂದರೆ ಶ್ರೋಣಿ ಕಶೇರುಗಳೆಲ್ಲ ಸೇರಿ ತ್ರಿಕಾಸ್ಥಿ (ಸೇಕ್ರಮ್) ಎಂಬ ಒಂದೇ ಎಲುಬಾಗಿ ಹೋಗಿದೆ. ಹಾಗೆಯೇ ಪುಚ್ಛಕಶೇರುಗಳೆಲ್ಲ ಸೇರಿ ಪುಚ್ಛ ಎಲುಬಾಗಿದೆ. (ಕಾಕ್ಸಿಕ್ಸ್).

ಮಾನವನ ಆದರ್ಶರೂಪದ ಕಶೇರುವಿನಲ್ಲಿ ದಪ್ಪವಾಗಿ ಎದ್ದು ಕಾಣುವ ಭಾಗ ಕಶೇರು ಕಾಯ. ಇದರ ಮೇಲಿನ ಹಾಗೂ ಕೆಳಗಿನ ಮೈಗಳು ತಟ್ಟೆಯಾಗಿ ಮಿಕ್ಕಮೈ ಕಂಬದಂತೆ ಗುಂಡಗೆ ಇವೆ. ಕಾಯದ ವ್ಯಾಸ ವಿವಿಧ ಕಶೇರುಗಳಲ್ಲಿ 20–40 ಸೆಂಮೀ. ಕಶೇರು ಕಾಯದ ಎರಡು ಪಕ್ಕಗಳಿಂದಲೂ ಹಿಂದಕ್ಕೆ ಎರಡು ಕಮಾನುಗಳು ಚಾಚಿಕೊಂಡಿವೆ. ಇವೆರಡೂ ಹಿಂದೆ ಸೇರಿಕೊಂಡು ಒಂದು ಮೊಂಡು ಮುಳ್ಳಿನಂತಾಗುತ್ತದೆ. ಚಾಚುಗಳ ನಡುವೆ ಉಂಗುರ ಏರ್ಪಡುತ್ತದೆ. ಕಮಾನುಗಳ ಎರಡು ಪಕ್ಕಗಳಿಂದಲೂ ಮೇಲಕ್ಕೆ ಮತ್ತು ಕೆಳಕ್ಕೆ ಹಾಯುವ ಎರಡು ಚಾಚುಗಳು (ಆರ್ಟಿಕ್ಯುಲೇಟಿಂಗ್ ಪ್ರಾಸೆಸ್) ಇದ್ದು ಅವುಗಳ ಮೂಲಕ ಮೇಲಿನ ಮತ್ತು ಕೆಳಗಿನ ಕಶೇರುವಿನೊಡನೆ ಅಲ್ಪ ಚಲನೆಯ ಕೀಲುಗಳು ಏರ್ಪಡುತ್ತವೆ. ಸುಮಾರು ಈ ಚಾಚುಗಳ ನೇರದಲ್ಲಿ ಕಶೇರು ಕಾಯದಿಂದ ಎಡ ಬಲಪಕ್ಕಗಳಲ್ಲಿ ಅಡ್ಡ ಚಾಚುಗಳು (ಟ್ರಾನ್ಸ್‌ವರ್ಸ್ ಪ್ರಾಸೆಸ್) ಉದ್ಭವಿಸುತ್ತವೆ. ಈ ಎಲ್ಲ ಚಾಚುಗಳನ್ನೂ ಕಶೇರು ಮುಳ್ಳುಗಳನ್ನೂ ರಜ್ಜುಗಳು ಮತ್ತು ಸ್ನಾಯುಬಂಧನಗಳು ಮೇಲಿನಿಂದ ಕೆಳಗಿನವರೆಗೆ ಭದ್ರವಾಗಿ ಬಂಧಿಸುತ್ತವೆ. ನೆಟ್ಟಗೆ ನಿಂತಾಗ ಕಶೇರು ಸರದ ಮುಳ್ಳುಗಳೆಲ್ಲ ಮೇಲಿನಿಂದ ಕೆಳಕ್ಕೆ ಒಂದೇ ನೇರದಲ್ಲಿದ್ದು ಬೆನ್ನುಹುರಿಯಂತೆ ಕಾಣಲೂ ಮುಟ್ಟಲೂ ಸಿಕ್ಕುತ್ತವೆ. ಕಶೇರು ಕಮಾನುಗಳ ನಡುವಿನ ಉಂಗುರಗಳು ಕಶೇರು ಸರದಲ್ಲಿ ನೇರವಾಗಿ ಒಂದರ ಕೆಳಗೆ ಒಂದು ಇವೆ. ಇದೊಂದು ಎಲುಬು ಆಚ್ಛಾದಿತ ನಾಳದಂಥ ರಚನೆ. ಈ ಬೆನ್ನೆಲುಬು ನಾಳದಲ್ಲಿ (ಸ್ಪೈನಲ್ ಕೆನಾಲ್) ಮಿದುಳುಬಳ್ಳಿ ಮೇಲಿನಿಂದ ಕೆಳಸಾಗಿ ಅಂತ್ಯಗೊಳ್ಳುತ್ತದೆ. ಎರಡು ಕಶೇರು ಉಂಗುರಗಳ ನಡುವೆ ಎಡಬಲ ಎರಡು ಪಕ್ಕಗಳಲ್ಲು ನರಗಳು ಸಾಗಿ ಮುಂಡ ಕೈಕಾಲುಗಳ ಎಲ್ಲ ಭಾಗಗಳನ್ನು ಮಿದುಳು ಬಳ್ಳಿಗೆ ಸಂಪರ್ಕಿಸುತ್ತವೆ.

ಕಂಠಕಶೇರುಗಳ ಅಡ್ಡ ಚಾಚುಗಳಲ್ಲಿ ಒಂದು ರಂಧ್ರವಿದ್ದು ಅದರ ಮೂಲಕ ಕಶೇರು ಅಪಧಮನಿ (ವರ್ಟಿಬ್ರಲ್ ಆರ್ಟರಿ) ಒಂದೊಂದು ಕಶೇರುವಿನ ಮೂಲಕ ಮೇಲಕ್ಕೇರಿ ತಲೆಯ ಒಳಹೋಗುತ್ತದೆ. ಕಂಠದ ಮೊದಲ ಮತ್ತು ಎರಡನೆಯ ಕಶೇರುಗಳಿಗೆ ಅನುಕ್ರಮವಾಗಿ ಅಟ್ಲಾಸ್ ಮತ್ತು ಆಕ್ಸಿಸ್ ಎಂಬ ಅನ್ವರ್ಥನಾಮಗಳಿವೆ. ಗ್ರೀಕ್ ಪುರಾಣದಂತೆ ಗುಂಡಾಗಿರುವ ಭೂಮಿಯನ್ನು ಅಟ್ಲಾಸ್ ಎಂಬ ದೈತ್ಯ ಹೊತ್ತಿರುವನಂತೆ. ಮಾನವನಲ್ಲಿ ಗುಂಡಾಗಿರುವ ರುಂಡವನ್ನು ಮುಂಡದ ಕಶೇರು ಸರದ ಮೊದಲ ಘಟಕ ಹಾಗೆಯೇ ಹೊತ್ತಿರುವುದರಿಂದ ಅದಕ್ಕೆ ಅಟ್ಲಾಸ್ ಎಂದು ಪ್ರಾಚೀನ ಪಾಶ್ಚಾತ್ಯ ವೈದ್ಯರು ಹೆಸರಿಸಿದರು. ಅಟ್ಲಾಸಿನ ಹಿಂಚಾಚುಗಳ ನಡುವೆ ಇರುವ ರಂಧ್ರವನ್ನು ಜೀವಿತ ಕಾಲದಲ್ಲಿ ಮುಂದಿನ ಮತ್ತು ಹಿಂದಿನ ರಂಧ್ರಗಳಾಗಿ ಭದ್ರವಾದ ಒಂದು ರಜ್ಜು ತಡಿಕೆ ಇಬ್ಭಾಗಿಸುತ್ತದೆ. ಹಿಂಭಾಗದ ರಂಧ್ರದ ಮೂಲಕ ಮಿದುಳು ಬಳ್ಳಿ ಕೆಳಹಾಯುತ್ತದೆ. ಎರಡನೆಯ ಕಶೇರು ಕಾಯದಿಂದ ಒಂದು ಗೂಟ ಮೇಲಕ್ಕೆ ಚಾಚಿಕೊಂಡಿದ್ದು ಅಟ್ಲಾಸಿನ ಮುಂದಿನ ರಂಧ್ರದ ಒಳನುಗ್ಗುತ್ತದೆ ಮತ್ತು ಅಟ್ಲಾಸಿಗೆ ತಿರುಗಣೆ ಗೂಟದಂತೆ ಅಥವಾ ಅಕ್ಷದಂತೆ ವರ್ತಿಸುತ್ತದೆ. ಆದ್ದರಿಂದ ಈ ಕಶೇರುವಿಗೆ ಆಕ್ಸಿಸ್ ಎಂದು ಹೆಸರು. ಗೂಟದ ಹಿಂದಿರುವ ರಜ್ಜುತಡಿಕೆ ಅದಕ್ಕೂ ಹಿಂದಕ್ಕೆ ಇರುವ ಮಿದುಳುಬಳ್ಳಿಗೂ ಗೂಟದಿಂದ ಜಖಮ್ಮಾಗದಂತೆ ರಕ್ಷಣೆ ಒದಗಿಸುತ್ತದೆ. ಎತ್ತರದಿಂದ ಬಿದ್ದಾಗ ಇಲ್ಲವೆ ನೇಣುಹಾಕಿಕೊಂಡಾಗ ರಜ್ಜು ತಡಿಕೆ ಹರಿದುಹೋಗುವದರಿಂದ ಜಖಮ್ಮು ಆಗಿ ಮಿದುಳು ಬಳ್ಳಿ ಅಪ್ಪಚ್ಚಿ ಆಗಿ ಒಡನೆ ಮರಣ ಸಂಭವಿಸುತ್ತದೆ. ವಕ್ಷ ಕಶೇರುಗಳ ಅಡ್ಡ ಚಾಚುಗಳೊಡನೆ ಎಡ ಬಲಪಕ್ಕೆಲುಬುಗಳು ಕೀಲುಗೂಡಿವೆ. ಉಸಿರಾಟದಲ್ಲಿ ಪಕ್ಕೆಲುಬುಗಳ ಚಲನೆಗೆ ಈ ಕೀಲುಗಳು ಆಧಾರಬಿಂದುಗಳಾಗಿ (ಫಲ್ಕ್ರಂ) ವರ್ತಿಸುತ್ತವೆ. ಉದರ ಕಶೇರುಗಳ ಕಾಯದ ಗಾತ್ರ ಎಲ್ಲ ಕಶೇರುಗಳಿಗಿಂತಲು ದೊಡ್ಡದಾಗಿದೆ. ಇಲ್ಲಿ ಕಶೇರುಗಳ ಮಧ್ಯಬಾಗುವಿಕೆ ಸಾಧ್ಯವಿದೆ. ಇದರ ಕೆಳಗಿರುವ ಕಶೇರುಗಳು ಸೇರಿಹೋಗಿ ತ್ರಿಕಾಸ್ಥಿ ಮತ್ತು ಕಾಕ್ಸಿಕ್ಸ್ ಆಗುವುದನ್ನು ಹೇಳಿದೆ. ತ್ರಿಕಾಸ್ಥಿ ಹಿಂದಕ್ಕೆ ಉಬ್ಬಿ ಬಾಗಿರುವ ದೊಡ್ಡ ಚಮಚದಂತಿದೆ. ಶ್ರೋಣಿಯ ಮಿಕ್ಕ ಎಲುಬುಗಳೊಡನೆ ಅಚಲವಾಗಿ ಬಂಧಿತವಾಗಿದ್ದ ಕಿಬ್ಬೊಟ್ಟೆ ಅಂಗಗಳಾದ ಮೂತ್ರಾಶಯ, ಗರ್ಭಾಶಯ (ಸ್ತ್ರೀಯರಲ್ಲಿ), ಮಲಾಶಯಗಳಿಗೆ ಇದು ಒಂದು ಅಸ್ಥಿನಿರ್ಮಿತ ಗೂಡಿನಂತಿದೆ (ಪೆಲ್ವಿಕ್‌ಕ್ಯಾವಿಟಿ). ಅಲ್ಲದೆ ಬೋಗಸೆಯಂತಿರುವ ತ್ರಿಕಾಸ್ಥಿಯ ಆಸರೆಯಲ್ಲಿ ಉದರದ ಅಂಗಗಳು ನೆಲೆಯಾಗಿವೆ.

ಚತುಷ್ಪಾದಿ ಸ್ತನಿಗಳಲ್ಲಿಯೂ ಎಳೆಮಗುವಿನಲ್ಲಿಯೂ ಕಶೇರುಸರ ಅಗ್ರದಿಂದ ಅಂತ್ಯದವರೆಗೆ ಒಂದೇ ಸಮನೆ ಬೆನ್ನಕಡೆ ಡುಬ್ಬಾಗಿದೆ. ಆದರೆ ನಡೆದಾಡುವಂತಾದ ಮೇಲೆ ಮಾನವನ ಬೆನ್ನುಕಂಬದಲ್ಲೆ ನಾಲ್ಕು ಬಾಗುಗಳನ್ನು ಗುರುತಿಸಬಹುದು. ಕಂಠ ಪ್ರದೇಶದಲ್ಲಿ ಸರದ ಡುಬ್ಬು ಮುಂದಕ್ಕೆ ಇದೆ. ಎಳೆಮಗು ಮಗುಚಿಕೊಂಡು ತಲೆ ಎತ್ತಲು ಪ್ರಾರಂಭವಾದಾಗಿನಿಂದ ಮೂಡಿ ಮುಂದೆ ಬಾಗಿ ಉಳಿಯುವ ಬಾಗು ಇದು. ಕುತ್ತಿಗೆಯನ್ನು ಮುಂದಕ್ಕೆ ಬಗ್ಗಿಸಿದಾಗ ಈ ಡೊಂಕು ಮಾಯವಾಗಿ ಪುನಃ ತಲೆ ಎತ್ತಿದಾಗ ಪ್ರಕಾಶವಾಗುತ್ತದೆ. ನೆಟ್ಟ ನಡಿಗೆಯ ಆದಿಮಾನವ ಮೊದಲುಗೊಂಡು ಎಲ್ಲ ಮಾನವ ವರ್ಗಗಳಲ್ಲು ಈ ಬಾಗು ಕಂಡುಬರುತ್ತದೆ. ಸೊಂಟ ಮುಂದಕ್ಕೆ ಬಗ್ಗಿಸಿದಾಗಲೂ ಇದು ಮಾಯವಾಗುವುದಿಲ್ಲ. ಮಾನವನಿಗಿಂತ ಕೆಳದರ್ಜೆ ಕಶೇರುಕಗಳಲ್ಲಿ ಈ ಬಾಗು ಕಾಣಬರುವುದಿಲ್ಲವಾದರೂ ವಾನರಗಳು ತಳಊರಿ ಕುಳಿತಾಗ ಹಂಗಾಮಿಯಾಗಿ ಕಂಡುಬರಬಹುದು. ಕಶೇರು ಸರದ ಕಂಠ ಭಾಗದ ಮುಂಚಾಚಿಗೂ ಉದರ ಭಾಗದ ಮುಂಚಾಚಿಗೂ ನಡುವೆ ಕಶೇರು ಸರದ ವಕ್ಷಭಾಗದಲ್ಲಿ ಈ ಎರಡು ಬಾಗುಗಳನ್ನೂ ವಿನಾಯಿಸುವಂತೆ ಒಂದು ಹಿಂಬಾಗು ಇದೆ. ಮುಂಡವನ್ನು ಹಿಂದಕ್ಕೆ ಅಥವಾ ಮುಂದಕ್ಕೆ ಬಗ್ಗಿಸಿದಾಗ ಈ ಬಾಗಿನ ಡೊಂಕು ಅನುರೂಪವಾಗಿ ಹಂಗಾಮಿಯಾಗಿ ವ್ಯತ್ಯಾಸವಾಗುವುದು ಇದೆ. ಕಶೇರುಸರ ದೇಹಕ್ಕೆ ಒಂದು ನೇರವಾದ ಅಕ್ಷ ನೀಡಿದಂತಿದೆ.

ರೋಗದ ಪರಿಣಾಮವಾಗಿ ಬೆನ್ನು ಕಂಬದ ನೇರ ಅಕ್ಷದಲ್ಲಿ ಅರೂಪತೆ ಉಂಟಾಗುವುದಿದೆ. ದೇಹ ಮುಂಬಾಗಿ ಗೂನುಬೆನ್ನು ಸ್ಥಿತಿ ಉಂಟಾಗಬಹುದು. ಇದಕ್ಕೆ ಕೈಫೋಸಿಸ್ ಎಂದು ಹೆಸರು. ಉದರದ ಸಹಜ ಬಾಗು ಹೆಚ್ಚಾಗುವುದು ಇದೆ. ಇದಕ್ಕೆ ಲಾರ್ಡೋಸಿಸ್ ಎಂದು ಹೆಸರು. ಕಶೇರುಸರ ಯಾವುದಾದರೂ ಪಕ್ಕಕ್ಕೆ ಡೊಂಕಾಗಿರಬಹುದು. ಇದಕ್ಕೆ ಸ್ಕೋಲಿಯೋಸಿಸ್ ಎಂದು ಹೆಸರು. ಈ ಸ್ಥಿತಿಗಳು ವ್ಯಕ್ತಿಯ ಚಲನವಲನಗಳಿಗೆ ತೊಂದರೆಯಾಗದಷ್ಟು ಅಲ್ಪವಾಗಿರಬಹುದು, ಇಲ್ಲವೆ ತುರ್ತುಶಸ್ತ್ರ ಚಿಕಿತ್ಸೆ ಅಗತ್ಯವಾಗುವಷ್ಟು ತೀವ್ರವಾಗಿರಬಹುದು. ರೋಗದ ಪರಿಣಾಮವಾಗಿ ಬೆನ್ನುಕಂಬದಲ್ಲಿ ಅರೂಪತೆ ಉಂಟಾಗದೆ ಅದರ ಚಲನಸಾಮರ್ಥ್ಯ ತೀರ ಕಂಠಿತವಾಗುವುದೂ ಉಂಟು. ಆಘಾತ ಪ್ರಸಂಗಗಳಲ್ಲಿ ಕಶೇರುಮಣಿಯ ಅಂಚುಚಾಚುಗಳು ಛಿದ್ರವಾಗಬಹುದು. ಕಶೇರುಗಳನ್ನು ಬಂಧಿಸುವ ರಜ್ಜುಗಳೂ ಹರಿದು ಮೇಲಿನ ಕಶೇರು ಕೆಳಗಿನ ಕಶೇರುವಿನ ಮೇಲೆ ಮುಂದಕ್ಕೆ ಜಾರಬಹುದು. ಹೀಗಾದರೆ ಈ ಎರಡು ಕಶೇರುಗಳ ನಡುವೆ ಮಿದುಳು ಬಳ್ಳಿ ಸಿಕ್ಕಿ ಅಪ್ಪಚ್ಚಿ ಆಗುವುದು ಅಥವಾ ಛಿದ್ರವಾಗುವುದು. ಕಂಠಭಾಗದಲ್ಲಿ ಹೀಗಾದರೆ ಒಡನೆ ಮರಣ ಸಂಭವಿಸುತ್ತದೆ. ವಕ್ಷ ಭಾಗದಲ್ಲಿ ಇಂಥ ಆಘಾತಗಳಿಂದ ಆ ಮಟ್ಟದ ಕೆಳಗಿನ ದೇಹಭಾಗಗಳ ಸ್ವಾಧೀನ ಹಾಗೂ ಸಂವೇದನೆಗಳ ನಾಶ, ಮೂತ್ರ ವಿಸರ್ಜನೆಯ ಹತೋಟಿ ತಪ್ಪುವುದು ಮುಂತಾದುವು ಕಂಡುಬರುತ್ತದೆ. ***

**ಬೆಲೀನ:** ಸಿಟೇಸಿಯ ಗಣದ ಬೆಲೀನಿಡೇ ಕುಟುಂಬಕ್ಕೆ ಸೇರಿದ ಸಾಗರವಾಸಿ ಸ್ತನಿ. ಡಾಲ್ಫಿನ್, ನಾರ್‌ವಾಲ್, ಪಾರ್ಪಾಯಿಸ್ ಮುಂತಾದ ತಿಮಿಂಗಿಲಗಳ ಸಮೀಪ ಸಂಬಂಧಿಯಾದ ಇದು ಒಂದು ಮುಖ್ಯ ಲಕ್ಷಣದಲ್ಲಿ ಅವುಗಳಿಂದ ಬೇರೆಯೆನಿಸಿದೆ. ಮೊದಲ ಮೂರು ಬಗೆಯ ತಿಮಿಂಗಿಲಗಳಲ್ಲಿ ಹಲ್ಲುಗಳಿವೆಯಾದರೆ ಬೆಲೀನದಲ್ಲಿ ಹಲ್ಲುಗಳ ಬದಲಿಗೆ ತೆಳುತಟ್ಟೆಗಳಂತೆ ರೂಪುಗೊಂಡಿರುವ ಲೋಳೆಪೊರೆ (ಮ್ಯೂಕಸ್ ಮೆಂಬ್ರೇನ್) ಇದೆ. ಹಲವಾರು ತಟ್ಟೆಗಳಿಂದ ರಚಿತವಾಗಿರುವ ಈ ಇಡೀ ರಚನೆಗೆ ಬೆಲೀನ್ ಅಥವಾ ತಿಮಿ ಮೂಳೆ (ವ್ಹೇಲ್ ಬೋನ್) ಎಂದು ಹೆಸರು. ಪ್ರತಿಯೊಂದು ಬೆಲೀನದಲ್ಲಿ ಸುಮಾರು 350 ತಟ್ಟೆಗಳಿದ್ದು ಇವು ಬಾಯಂಗಳದಿಂದ ಕೆಳಮುಖವಾಗಿ ಎರಡು ಸಾಲುಗಳಲ್ಲಿ ಒಂದರ ಹಿಂದೆ ಒಂದರಂತೆ ಜೋಡಣೆಗೊಂಡಿರುವುವು. ಒಂದೊಂದು ತಟ್ಟೆಯೂ ಸುಮಾರು 40 ಸೆಂಮಿ ಉದ್ದ ಇದೆ. ತಟ್ಟೆಗಳ ಹೊರ ಅಂಚುಗಳು ನುಣುಪಾಗಿವೆಯಾದರೆ ಒಳ ಅಂಚುಗಳು ಕುಂಚದ ತಂತುಗಳಂತೆ ಸೀಳಿಕೊಂಡಿವೆ. ಈ ತಟ್ಟೆಗಳು ಆಹಾರ ಸೋಸುವ ಜರಡಿಯಂತೆ ಕಾರ್ಯವೆಸಗುವುವು. ಜಲಚರಗಳಿಂದ ತುಂಬಿರುವ ಸಮುದ್ರದ ನೀರನ್ನು ಬೆಲೀನ ಸೇವಿಸಿದಾಗ, ಅದರಲ್ಲಿಯ ತೇಲುಜೀವಿಗಳು ಬೆಲೀನ್ ತಟ್ಟೆಯ ಪದರದಲ್ಲಿ ಸಿಕ್ಕಿಕೊಂಡು ಬರಿಯ ನೀರು ಹೊರಸುರಿಯುವುದು. ಆದ್ದರಿಂದ ಬೆಲೀನ್ ಜಲಶೋಧಕ ಯಂತ್ರ ಎನ್ನಬಹುದು.

ಬೆಲೀನಗಳಲ್ಲಿ ಬೆಲೀನಾಪ್ಟರ, ಮೆಗಾಪ್ಟರ, ಬೆಲೀನ, ಯೂಬೆಲೀನ ಮುಂತಾಗಿ ಅನೇಕ ಜಾತಿಗಳಿವೆ. ಇವು ಪ್ರಧಾನವಾಗಿ ಉತ್ತರಧ್ರುವ ಹಾಗೂ ದಕ್ಷಿಣ ಧ್ರುವ ಪ್ರದೇಶಗಳ ಕಡಲುಗಳಲ್ಲಿ ವಾಸಿಸುವುವು. ದೇಹ ಲಕ್ಷಣಗಳಲ್ಲಿ ಮತ್ತು ಜೀವನ ಕ್ರಮದಲ್ಲಿ ತಿಮಿಂಗಿಲಗಳನ್ನೆ ಹೋಲುತ್ತವೆ. (ಎಂ.ಎನ್.ವಿ.ಐ.)

**ಬೆವರು:** ದ್ರವ ಅಥವಾ ಆವಿಯರೂಪದಲ್ಲಿ ಚರ್ಮದ ಮೂಲಕ ವಿಸರ್ಜಿತವಾಗುವ ದೇಹಜಲಾಂಶ (ಪರ್ಸ್ಪಿರೇಶನ್, ಸ್ವೆಟ್). ಸ್ವೇದ ಪರ್ಯಾಯ ನಾಮ. ಸಾಮಾನ್ಯವಾಗಿ ಬೆವರು ಎನ್ನುವುದು ದ್ರವರೂಪದ ಸ್ವೇದಕ್ಕೆ. ಕಾರಣ ಇದು ಗೋಚರಲಭ್ಯ. ಆವಿರೂಪದ ಸ್ವೇದ ಅಗೋಚರ. ವೈದ್ಯ ವಿಜ್ಞಾನದಲ್ಲಿ ಇದಕ್ಕೆ ಅವ್ಯಕ್ತಸ್ವೇದವೆಂದು (ಇನ್‌ಸೆನ್ಸಿಬಲ್ ಪರ್ಸ್ಪಿರೇಶನ್) ಎಂದು ಹೆಸರು. ಅವ್ಯಕ್ತವಾಗಿಯೂ ವ್ಯಕ್ತವಾಗಿಯೂ ದೇಹದ ಜಲಾಂಶ ನಷ್ಟವಾಗುತ್ತಿರುವುದರಿಂದ ದೇಹದ ತೂಕ ಕಡಿಮೆ ಆಗುವುದೂ, ಆಹಾರಪಾನೀಯಗಳ ಸೇವನೆಯಿಂದ ಈ ನಷ್ಟ ಭರ್ತಿ ಆಗಿ ತೂಕ ಮಾಮೂಲುಮಟ್ಟಕ್ಕೆ ಏರುವುದೂ ಸ್ಪಷ್ಟ. ಬೆವರಿನ ಮೂಲಕ ಜಲಾಂಶ ವ್ಯತ್ಯಾಸವಾಗುವಷ್ಟು ನಷ್ಟವಾಗುವ ವಿಷಯ ಬಹುಶಃ ಪ್ರಾಚೀನ ವೈದ್ಯರಿಗೆ ಮನದಟ್ಟಾಗಿರಲಾರದು. ಇಟಲಿಯ ಪಾಡುವ ವಿಶ್ವವಿದ್ಯಾಲಯದ ವೈದ್ಯಕೀಯ ಪ್ರಾಧ್ಯಾಪಕನೂ ಗೆಲಿಲಿಯೋನ ಸಮಕಾಲೀನನೂ ಆಗಿದ್ದ ಸಾಂಟಾರಿಯೊ ಸಾಂಟಾನಿ (1561–1636) ಎಂಬಾತ ಬಲು ನವುರಾಗಿ ತೂಗಬಲ್ಲ ಆದರೆ ಸಾಕಷ್ಟು ದೊಡ್ಡದಾದ ತ್ರಾಸನ್ನು ಉಪಜ್ಞಿಸಿ ಅದರಲ್ಲಿ ದಿನಂಪ್ರತಿ ಗಂಟೆಗಟ್ಟಲೆ ತಾನೇ ಸತತವಾಗಿ ತೂಗಿಕೊಳ್ಳುತ್ತ ಈ ರೀತಿ ತೂಕ ಕಡಿಮೆ ಆಗುವುದನ್ನು ತೋರಿಸಿದ. ಹೀಗೆ ಒಂದು ರಾತ್ರಿಯಲ್ಲಿ ಸುಮಾರು ಒಂದು ಕಿಲೊಗ್ರಾಮಿನಷ್ಟು ತೂಕ ಕಡಿಮೆ ಆದದ್ದು ತಿಳಿಯಿತು.

ಅವ್ಯಕ್ತ ಸ್ವೇದೋತ್ಪತ್ತಿಗೆ ಕಾರಣಭೂತವಾದ ಕ್ರಿಯಾವಿನ್ಯಾಸ (ಮೆಕ್ಯಾನಿಸಮ್) ಯಾವುದೂ ಇಲ್ಲವೆಂದು ತೋರುತ್ತದೆ. ಚರ್ಮದ ಹೊರಭಾಗದಲ್ಲಿ ಕೋಶಗಳು ಉದ್ಭವಿಸುತ್ತವೆ. ಇವುಗಳಲ್ಲಿ ಕೆರಾಟಿನ್ ಎಂಬ ಪ್ರೊಟೀನ್ ವಸ್ತು ಶೇಖರಗೊಂಡು ಅಂತಿಮವಾಗಿ ಇವು ನಶಿಸಿ ಹುರುಪಿನಂತಾಗಿ ವಿಸರ್ಜಿತವಾಗುತ್ತವೆ. ಈ ಹಂತದಲ್ಲಿ ಇಂಥ ಲಕ್ಷಗಟ್ಟಲೆ ಕೋಶಗಳಲ್ಲಿ ಇವುಗಳ ಜಲಾಂಶ ಆವಿಯಾಗಿ ಹೋಗುತ್ತದೆ. ಬಹುಶಃ ಈ ಜಲನಷ್ಟವೇ ಅವ್ಯಕ್ತಸ್ವೇದ. ಏಕೆಂದರೆ ಕೆಲವು ವಿಶಿಷ್ಟ ಚರ್ಮರೋಗಗಳಲ್ಲಿ ಈ ಘಟನೆಗಳ ವೇಗ ವ್ಯತ್ಯಾಸವಾದ ಸಂದರ್ಭಗಳಲ್ಲಿ ಅವ್ಯಕ್ತಸ್ವೇದದ ಪ್ರಮಾಣ ಅನುಗುಣವಾಗಿ ವ್ಯತ್ಯಾಸವಾಗುವುದು ತಿಳಿದಿದೆ. ಆದರೆ ಆರೋಗ್ಯ ಸ್ಥಿತಿಯಲ್ಲಿ ಈ ಘಟನೆಗಳು ಏರುಪೇರು ಇಲ್ಲದೆ ಒಂದೇ ಸಮ ಸತತವಾಗಿ ಜರಗುತ್ತಿರುವುವು. ಆದ್ದರಿಂದ ಅವ್ಯಕ್ತ ಸ್ವೇದ ದೇಹದ ಮೇಲ್ಮೈ ವಿಸ್ತೀರ್ಣಕ್ಕೆ ಅನುಲೋಮವಾಗಿರುತ್ತದೆ. ವಯಸ್ಕರಲ್ಲಿ ಹೀಗೆ ದಿನಂಪ್ರತಿ 600–800 ಮಿಲೀ ಜಲಾಂಶ ನಷ್ಟವಾಗುವುದು ಇದೆ. ಈ ಜಲಾಂಶವೂ ಇದೇ ರೀತಿ ನಿಯತವಾಗಿರುವ ನಿಶ್ವಾಸದ ಜಲಾಂಶವೂ ಆವಿಯಾಗಿ ವಿಸರ್ಜಿತವಾಗುವಾಗ ದೇಹೋಷ್ಣತೆಯ ನಷ್ಟವೂ ನಿಯತವಾಗಿ ಸಂಭವಿಸುವುದು ಸ್ಪಷ್ಟ.. ಅವ್ಯಕ್ತಸ್ವೇದದ ಮೂಲಕ ದಿನವೊಂದಕ್ಕೆ 400 ಕಿಲೊಕೆಲೊರಿ ಶಾಖ ನಷ್ಟವಾಗುತ್ತದೆ.

ದ್ರವರೂಪದಲ್ಲಿ ಉತ್ಪತ್ತಿಯಾಗುವ ಸ್ವೇದ ದೇಹದ ಮೇಲ್ಮೈಯಿಂದ ಸಾಮಾನ್ಯವಾಗಿ ಆವಿಯಾಗಿ ಆರಿಹೋಗುವುದು ಎಲ್ಲರಿಗೂ ತಿಳಿದ ವಿಷಯ. ಹೀಗಾಗುವಾಗಲೂ ದೇಹೋಷ್ಣತೆ ತಗ್ಗುವುದು ಸ್ಪಷ್ಟ. ವಾಸ್ತವವಾಗಿ ಈ ಕಾರಣಕ್ಕಾಗಿಯೇ ದ್ರವರೂಪದ ಸ್ವೇದದ ಉತ್ಪತ್ತಿ ಆಗುತ್ತದೆ. ಇದಕ್ಕೆ ಶಾಖ ನಿಯಂತ್ರಣ ಸ್ವೇದೋತ್ಪತ್ತಿ (ಥರ್ಮಲ್ ಸ್ವೆಟಿಂಗ್) ಎಂದು ಹೆಸರು. ವ್ಯಕ್ತಿ ಶ್ರಮ ಕಾರ್ಯ ಗೈಯುತ್ತಿರುವಾಗ ಮತ್ತು ಪರಿಸರದ ಉಷ್ಣತೆ ಹೆಚ್ಚಾಗಿರುವಾಗ (>28 ಡಿಗ್ರಿ ಸೆ.) ದೇಹೋಷ್ಣತೆಯೂ ಹೆಚ್ಚುತ್ತದೆ. ಇಂಥ ಸಂದರ್ಭಗಳಲ್ಲಿ ಸಾಮಾನ್ಯ ಉಷ್ಣ ವಿನಿಮಯ ವಿಧಾನಗಳಾದ ವಹನ, ನಯನ ಹಾಗೂ ವಿಕಿರಣ ಕ್ರಮಗಳಿಂದ (ಕಂಡಕ್ಷನ್, ಕನ್‌ವೆಕ್ಷನ್, ರೇಡಿಯೇಷನ್) ಅಧಿಕೋಷ್ಣವನ್ನು ಕಳೆದುಕೊಂಡು ದೇಹೋಷ್ಣತೆಯನ್ನು ನಿಯತಮಟ್ಟಕ್ಕೆ ತಂದುಕೊಳ್ಳುವುದು ಅಸಾಧ್ಯ. ದೇಹದ ಮೇಲ್ಮೈಯಿಂದ ನೀರು ಬಾಷ್ಪೀಭವಿಸುವುದೊಂದೇ ಇದಕ್ಕಿರುವ ಮಾರ್ಗ. ಆದ್ದರಿಂದ ಆ ವೇಳೆ ಮೈಮೇಲೆ ಬೆವರಿ ಅದು ಬಾಷ್ಪೀಭವಿಸುವ ಕ್ರಿಯಾವಿನ್ಯಾಸವನ್ನು ನಿಸರ್ಗ ಒದಗಿಸಿಕೊಟ್ಟಿದೆ.

ದೇಹೋಷ್ಣತೆ ಹೆಚ್ಚಿರುವ ವೇಳೆ ಪುನಃ ದೇಹದ ನಿಯತ ಉಷ್ಣತೆ ಮುಟ್ಟಲು ಉಷ್ಣ ಎಷ್ಟು ಮಟ್ಟಿಗೆ ಸೋರಿಹೋಗಬೇಕೊ ಅಷ್ಟಕ್ಕೆ ತಕ್ಕಂತೆ ಬೆವರಿನ ಉತ್ಪತ್ತಿ ಆಗುವುದು. ಅಂದರೆ ಬೆವರಿನ ಪ್ರಮಾಣ ಅನಿಯಮಿತ. ಗರಿಷ್ಠ ಎಂದರೆ 0.7 ಲೀಟರಿನಷ್ಟು. 5–8 ಗಂಟೆಗಳ ಅವಧಿಯಲ್ಲಿ 8–11 ಲೀಟರುಗಳಷ್ಟೂ 24 ಗಂಟೆಗಳಲ್ಲಿ 12 ಲೀಟರುಗಳಷ್ಟೂ ಬೆವರು ಉತ್ಪತ್ತಿ ಆಗುವುದು ವ್ಯಾಸಂಗಗಳಿಂದ ವಿಶದವಾಗಿದೆ. 1 ಲೀಟರ್ ನೀರು ಆವಿ ಆಗಲು 540 ಕಿಲೊಕೆಲೊರಿಗಳಷ್ಟು ಉಷ್ಣ ಬೇಕಾಗಿರುವುದರಿಂದ ಹೀಗೆ ಅಗಾಧ ಪ್ರಮಾಣದಲ್ಲಿ ಉತ್ಪತ್ತಿ ಆದ ಬೆವರು ಬಾಷ್ಪೀಭವಿಸಿದಾಗ ಕ್ರಮವಾಗಿ ಗಂಟೆಗೆ ಸುಮಾರು 1000 ಕಿಲೊಕೆಲೊರಿಗಳಷ್ಟೂ ದಿನಕ್ಕೆ 7000 ಕಿಲೊಕೆಲೊರಿಗಳಷ್ಟೂ ಉಷ್ಣ ನಷ್ಟವಾಗಲು ಸಾಧ್ಯ. ಚಳಿ ಇರುವಾಗ ದೇಹದ ಉಷ್ಣನಷ್ಟ ಸಾಮಾನ್ಯವಾದ ಉಷ್ಣ ವಿನಿಮಯ ವಿಧಾನಗಳಿಂದಲೇ ಸಾಧ್ಯವಾಗುವುದರಿಂದ ಬೆವರುವ ಮತ್ತು ಬಾಷ್ಪೀಭವನದಿಂದ ನಷ್ಟವಾಗುವ ಅಗತ್ಯ ಇರುವುದಿಲ್ಲ. ಆದ್ದರಿಂದ ಚಳಿ ಆಗಿರುವಾಗ ಬೆವರುವುದಿಲ್ಲ.

ಅಗತ್ಯ ಪ್ರಮಾಣದಲ್ಲಿ ಉಷ್ಣನಷ್ಟಕ್ಕೆ ತಕ್ಕಂತೆ ಬೆವರಿನ ಉತ್ಪತ್ತಿಯಾದಾಗ, ಉದ್ದೇಶ ಸಫಲವಾಗಲು ಬೆವರು ಆವಿರೂಪದಲ್ಲಿ ದೇಹದ ಮೇಲ್ಮೈಯಿಂದ ವಿಸರ್ಜಿತವಾಗಬೇಕಾದುದು ಅವಶ್ಯಕ. ಆವಿಯಾಗುವ ವೇಗಕ್ಕಿಂತ ಹೆಚ್ಚಾದ ವೇಗದಲ್ಲಿ ಬೆವರಿನ ಉತ್ಪತ್ತಿ ಆದಾಗ ಬೆವರು ಮೈ ಮೇಲೆ ಹನಿಗೂಡಿ ತೊಟ್ಟು ತೊಟ್ಟಾಗಿ ಬಿದ್ದುಹೋಗಬಹುದು. ಹೀಗಾದಾಗ ಈ ಹೆಚ್ಚಿನ ಸ್ವೇದೋತ್ಪತ್ತಿ ವ್ಯರ್ಥವೆ ಸರಿ. ಮೋಡ ಕವಿದುಕೊಂಡು ಸೆಕೆ ಹೆಚ್ಚಾಗಿರುವ ದಿನಗಳಲ್ಲಿ, ಅದರಲ್ಲೂ ಅಂಥ ದಿನಗಳಲ್ಲಿ ಶ್ರಮಕೆಲಸ ಗೈಯುವಾಗ, ಹೀಗೆ ಬೆವರು ತೊಟ್ಟಿಕ್ಕುವುದು ಎಲ್ಲರ ಗಮನಕ್ಕೂ ಬಂದಿರುವ ಸಂಗತಿ. ಕಡಲ ತೀರದ ಪ್ರದೇಶಗಳಲ್ಲಿಯ (ಉದಾಹರಣೆಗೆ ಮಂಗಳೂರು, ಕಾರವಾರ) ವಾತಾವರಣದಲ್ಲಿ ಜಲಾಂಶ ಸಾಮಾನ್ಯವಾಗಿ ಅಧಿಕವಾಗಿಯೇ ಇರುವುದರಿಂದ ಅಲ್ಲಿ ಬೆವರು ಆವಿಯಾಗಿ ಆರುವುದು ಕಷ್ಟಸಾಧ್ಯ. ಆದ್ದರಿಂದ ಅಲ್ಲಿಯ ಜನ ಬೆಳಗ್ಗೆ ಇನ್ನೂ ತಂಪಾಗಿರುವ ಕಾಲದಿಂದಲೇ ದೇಹದ ಮೇಲೆ ಸತತವಾಗಿ ಮೂಡುವ ಬೆವರು ಹನಿಗಳನ್ನು ಒರಸಿಕೊಳ್ಳತೊಡಗುವುದು ಸಾಮಾನ್ಯ. ಆದರೆ ವ್ಯಾಯಾಮಪಟುಗಳೂ ಕಡಲ ತೀರದಲ್ಲಿ ನೆಲೆನಿಂತ ಜನರೂ ಅವರವರ ವಿಶೇಷ ಸಂದರ್ಭಗಳಿಗೆ ಒಗ್ಗಿಕೊಳ್ಳುವುದರಿಂದ ಅವರಲ್ಲಿ ಸ್ವೇದಾಧಿಕ್ಯ ಸ್ಥಿತಿ ಕಂಡು ಬರದಿರಬಹುದು. ಸ್ಥೂಲಕಾಯರಲ್ಲಿ ದೇಹೋಷ್ಣತೆಯ ನಿಯಂತ್ರಣಕ್ಕಾಗಿ ಹೆಚ್ಚಾಗಿ ಬೆವರುವುದು ನಿಯಮ. ಇವರಲ್ಲಿ ಬೆವರುವ ವೇಗ ಅದು ಆವಿಯಾಗಿ ಆರುವ ವೇಗಕ್ಕಿಂತ ಹೆಚ್ಚಾಗಿರುವುದರಿಂದ ಅಂಥವರಲ್ಲೂ ಬೆವರು ಹನಿಯ ಪೀಡೆ ಕಂಡುಬರುವುದು ಸಾಮಾನ್ಯ.

ಸನ್ನಿವೇಶಕ್ಕೆ ತಕ್ಕ ಪ್ರಮಾಣದಲ್ಲಿ ಸ್ವೇದೋತ್ಪತ್ತಿ ಆಗುವುದು ನಿಯಂತ್ರಿತ ಚಟುವಟಿಕೆಯಿಂದ. ಸುಮಾರು ಇಪ್ಪತ್ತು ಲಕ್ಷ ಸ್ವೇದ ಗ್ರಂಥಿಗಳು ದೇಹದ ಎಲ್ಲೆಡೆಯೂ ಚರ್ಮದಲ್ಲಿ ಇವೆ. ಅಂಗಾಲುಗಳಲ್ಲಿ ಅವು ಅಧಿಕ ಸಂಖ್ಯೆಯಲ್ಲೂ (ಚಸೆಂಮೀಗೆ ಸುಮಾರು 400) ಬೆನ್ನಿನಲ್ಲಿ ಅತ್ಯಲ್ಪ ಸಂಖ್ಯೆಯಲ್ಲೂ (ಚಸೆಂಮೀಗೆ ಸುಮಾರು 80) ಇವೆ. ಇವುಗಳಿಗೆ ಪೂರೈಕೆ ಆಗುವ ಅನುಕಂಪೀ ನರಗಳಿಂದ ಇವುಗಳ ಚಟುವಟಿಕೆ ನಿಯಂತ್ರಿತವಾಗುತ್ತದೆ. ಈ ನರಗಳ ಕೊನೆಗಳಿಂದ ಸ್ವೇದ ಗ್ರಂಥಿಗೆ ಪ್ರಚೋದನೆ ಒಯ್ಯುವ ರಾಸಾಯನಿಕ ಮಾಧ್ಯಮ ಅಸಿಟೈಲ್ ಕೋಲಿನ್. ಆದರೆ ಮಿಕ್ಕ ಅನುಕಂಪೀ ನರಗಳ ಕೊನೆಗಳಲ್ಲಿ ಈ ಕ್ರಿಯೆ ಅಡ್ರಿನಲಿನ್ ಇಲ್ಲವೆ ನಾರಡ್ರಿನಲಿನ್ನಿನಿಂದ ಜರುಗುತ್ತದೆ. ಅನುಕಂಪೀ ನರಗಳ ಮೂಲ ಮಿದುಳಿನ ಹೈಪೊಥೆಲಮಸ್ ಎಂಬ ಭಾಗ. ರಕ್ತ ಪರಿಚಲನೆ ಮತ್ತು ಉಷ್ಣವಾಹಿ ನರಗಳ ಮೂಲಕ ದೇಹೋಷ್ಣತೆಯ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲ ಹೈಪೊಥೆಲಮಸ್ ಅನುಕಂಪೀ ನರಗಳ ಮೂಲಕ ಯುಕ್ತ ಆದೇಶಗಳನ್ನು ರವಾನಿಸಿ ಸ್ವೇದಗ್ರಂಥಿಗಳನ್ನು ಅನುಗುಣವಾಗಿ ಉದ್ರೇಕಿಸಿ ತಕ್ಕ ಪ್ರಮಾಣದಲ್ಲಿ ಸ್ವೇದೋತ್ಪತ್ತಿ ಆಗುವಂತೆಯೂ, ಅಗತ್ಯಕ್ಕೆ ತಕ್ಕಷ್ಟು ಉಷ್ಣನಷ್ಟವಾಗುವಂತೆಯೂ ಮಾಡಿ ಹೆಚ್ಚಿರುವ ಉಷ್ಣ ಕಡಿಮೆ ಆಗಿ ಅದು ಮಾಮೂಲು ಮಟ್ಟಕ್ಕೆ ಬರುವಂತೆ ನಿಯಂತ್ರಿಸುತ್ತದೆ. ಅನೇಕ ವ್ಯಾಸಂಗಗಳಿಂದ ಈ ಕ್ರಿಯಾವಿನ್ಯಾಸ ಖಚಿತವಾಗಿದೆ.

ಭೂಚರಿ ನಿಯತತಾಪಿಗಳಲ್ಲಿ ದೇಹೋಷ್ಣತೆ ಮಿತಿಮೀರಿ ಹೆಚ್ಚುವ ಪ್ರಮೇಯ ಇರಬಹುದಾದ್ದರಿಂದ ಇಂಥ ನಿಯಂತ್ರಣದ ಅಗತ್ಯ ಹೆಚ್ಚಾಗಿದ್ದು ಅವುಗಳಲ್ಲಿ ಸ್ವೇದಗ್ರಂಥಿಗಳು ಹೇರಳವಾಗಿ ಕಂಡುಬರುತ್ತವೆ. ಪಕ್ಷಿಗಳಲ್ಲಿ ಹಾಗೂ ಜಲಚರಿ ಮತ್ತು ಮರುಭೂಮಿವಾಸಿ ಸ್ತನಿಗಳಲ್ಲಿ ಸನ್ನಿವೇಶಕ್ಕೆ ತಕ್ಕಂಥ ದೇಹ ರಚನಾ ವ್ಯತ್ಯಾಸಗಳಿರುವುದರಿಂದ ನಿಯತ ದೇಹೋಷ್ಣತೆಯ ಪಾಲನೆ ಸುಲಭ. ಅಂತೆಯೆ ಅವುಗಳಲ್ಲಿ ಸ್ವೇದ ಗ್ರಂಥಿಗಳು ವಿರಳ. ಪೂರ್ಣವಾಗಿ ಲೋಪವೇ ಆಗಿರಬಹುದು. ಮೈತುಂಬ ರೋಮ ಇದ್ದು ಬೆವರು ತಕ್ಕಷ್ಟು ಶೀಘ್ರವಾಗಿ ಆರಿಹೋಗಲು ಅವಕಾಶವಿಲ್ಲದಿರುವ ದನ, ಹಂದಿ, ನಾಯಿ ಮುಂತಾದ ಪ್ರಾಣಿಗಳಲ್ಲಿ ಮುಸುಡಿ, ಕಾಲಿನ ಪಂಜಗಳಲ್ಲಿ ಬೆವರುವುದು ಅಗತ್ಯಕ್ಕೆ ತಕ್ಕಂತೆ ಹೆಚ್ಚಾಗುತ್ತದೆ. ಮೂಷಿಕ, ಮೊಲ, ಮೇಕೆ ಈ ಪ್ರಾಣಿಗಳಲ್ಲಿ ಬೆವರುವಿಕೆ ಕಾಣಬರುವುದಿಲ್ಲವೆಂದು ತಿಳಿದಿದೆ.

ಮಾನವನಲ್ಲಿರುವ ಸ್ವೇದಗ್ರಂಥಿಗಳು ದೇಹೋಷ್ಣತೆಯ ಸಮತೋಲನ ಕ್ರಿಯೆಯಲ್ಲಿ ಎಷ್ಟರಮಟ್ಟಿಗೆ ಸಮರ್ಥವಾಗಿವೆ ಎಂದು ತೋರಿಸುವುದಕ್ಕೆ ಒಂದು ಪ್ರಯೋಗಮಾಡಿದ್ದಾರೆ. ಇದರಲ್ಲಿ ನಗ್ನ ವ್ಯಕ್ತಿ ಶುಷ್ಕವಾತಾವರಣದಲ್ಲಿ 100 ಡಿಗ್ರಿ ಸೆ ಗೂ ಮೇಲ್ಪಟ್ಟ ಆವರಣ ಉಷ್ಣತೆಯನ್ನು ಹತ್ತು ಮಿನಿಟುಗಳಿಗೂ ಮೀರಿ ತಡೆದುಕೊಳ್ಳಬಲ್ಲ ಎಂದು ತೋರಿಸಲಾಗಿದೆ. ವ್ಯಕ್ತಿ ಧಾರಾಳವಾಗಿ ಬೆವರುತ್ತಿದ್ದು ಆ ಬೆವರು ಶೀಘ್ರವಾಗಿ ಆವಿಯಾಗಿ ಆರಿಹೋಗುತ್ತಿದ್ದುದರಿಂದಲೇ ಅವನು ಆವರಣದ ಅಗಾಧ ಉಷ್ಣತೆಯನ್ನು ತಡೆದುಕೊಳ್ಳಬಲ್ಲನಾದನೆಂಬುದೂ ಅವನ ದೇಹೋಷ್ಣತೆ ಅಂಥ ವಿಷಮ ಪರಿಸ್ಥಿತಿಯಲ್ಲಿ ಕೇವಲ ಒಂದು ಡಿಗ್ರಿಯಷ್ಟು ಮಾತ್ರ ಏರಿತ್ತೆಂಬುದೂ ಪ್ರಯೋಗದಿಂದ ಸ್ಪಷ್ಟವಾಯಿತು. ಅಗತ್ಯವಾಗಿರುವಷ್ಟು ಸ್ವೇದೋತ್ಪತ್ತಿಮಾಡುವ ಸಾಮರ್ಥ್ಯವಿರುವುದರಿಂದಲೇ ಪರಿಸರದ ಉಷ್ಣತೆಯನ್ನು ತಡೆದುಕೊಳ್ಳಬಹುದು ಎಂಬುದಕ್ಕೆ ಪುರಾವೆಯಾಗಿ ಇನ್ನೊಂದು ಸಂದರ್ಭವನ್ನು ಉದಾಹರಿಸಬಹುದು. ಕೆಲವು ವ್ಯಕ್ತಿಗಳಲ್ಲಿ ಸ್ವೇದ ಗ್ರಂಥಿಗಳು ಜನ್ಮತಃ ಲೋಪವಾಗಿರುತ್ತದೆ. ಹೀಗಾಗಿ ಅವರು ಯಾವ ಸಂದರ್ಭದಲ್ಲಿಯೂ ಬೆವರಲಾರರು. ಬೇರೆಯವರು ತಡೆದುಕೊಳ್ಳುವ ಮಟ್ಟಿನ ಆವರಣದ ಉಷ್ಣತೆಯ ಸಾಧಾರಣ ಏರಿಕೆಯನ್ನು ಕೂಡ ಅವರು ಸಹಿಸಲಾರದೆ ಶಾಖಧಕ್ಕೆಗೆ (ಹೀಟ್‌ಸ್ಟ್ರೋಕ್) ಈಡಾಗಿರುವ ಸನ್ನಿವೇಶಗಳುಂಟು.

ಸ್ವೇದೋತ್ಪತ್ತಿ ಆಗುವುದು ದೇಹೋಷ್ಣತೆಯ ನಿಯಂತ್ರಣಕ್ಕೆ ಮಾತ್ರ ಅಲ್ಲ ಎಂಬುದನ್ನು ಗಮನಿಸಬೇಕು. ಹಲವು ಬಗೆಯ ಮಾನಸಿಕ ಉದ್ವೇಗ ಸಂದರ್ಭಗಳಲ್ಲಿ ವ್ಯಕ್ತಿ ಬೆವತು ಹೋಗುವುದಿದೆ. ಸಾಮಾನ್ಯವಾಗಿ ಅಂಗೈ ಅಂಗಾಲುಗಳಲ್ಲಿ ಹೀಗೆ ಹೆಚ್ಚು ಬೆವರುವುದಾದರೂ ಕೆಲವು ಸಂದರ್ಭಗಳಲ್ಲಿ ಮುಖ ಬೆವೆತುಕೊಳ್ಳುವುದೂ ದೇಹಾದ್ಯಂತ ಬೆವರುವುದೂ ಇದೆ. ಪರಿಸರದ ಉಷ್ಣತೆ ಅಥವಾ ದೇಹದ ಉಷ್ಣತೆ ಕಡಿಮೆ ಇದ್ದರೂ ಹೀಗೆ ಬೆವರುವುದು ತಪ್ಪಿದ್ದಲ್ಲ. ಮಾನಸಿಕ ಕಾರಣಗಳಿಗಾಗಿ ಬೆವರುವುದಕ್ಕೆ ಹಿರಿಮಸ್ತಿಷ್ಕದ (ಸೆರಿಬ್ರಮ್) ಪ್ರಭಾವ ಕಾರಣ. ಕೆಲವು ವ್ಯಕ್ತಿಗಳಲ್ಲಿ ಇಂಥ ಮಾನಸಿಕ ಬೆವರುವಿಕೆ (ಮೆಂಟಲ್ ಸ್ವೆಟಿಂಗ್) ಕಂಡುಬರುವ ಸ್ಥಳಗಳಲ್ಲಿ ಸಾಮಾನ್ಯ ಸಂದರ್ಭಗಳಲ್ಲೂ ಹೆಚ್ಚು ಬೆವರುವುದುಂಟು. ಇದಕ್ಕೆ ಸ್ವೇದಾಧಿಕ್ಯ ಅಥವಾ ಅತಿಬೆವರಿಕೆ (ಹೈಪರ್‌ಹೈಡ್ರೋಸಿಸ್) ಎಂದು ಹೆಸರು. ಈ ವ್ಯಾಧಿಗೆ ಸುಲಭ ಚಿಕಿತ್ಸೆ ಇಲ್ಲ. ಅನುಕಂಪೀ ನರಗಳ ನಿರ್ಮೂಲನದಂಥ ಕಠಿಣ ಶಸ್ತ್ರ ಚಿಕಿತ್ಸೆಯೇ ಅಗತ್ಯವಾದೀತು. ಕೆಲವು ಸಲ ವೀಳ್ಯಸೇವನೆ ಮಾಡುತ್ತಿರುವಾಗ ಸೊಕ್ಕಿದಂತಾಗಿ ಮುಖ ಬೆವೆತುಕೊಳ್ಳುವುದು ಉಂಟು. ವ್ಯಕ್ತಿ ತಡೆಯಲಾರದಷ್ಟು ಕಾರ ಪದಾರ್ಥ ಸೇವಿಸಿದಾಗಲೂ ಮುಖದಲ್ಲಿ ಬೆವರುವುದಿದೆ. ಇದಕ್ಕೆ ಆಸ್ವಾದನ ಸ್ವೇದೋತ್ಪತ್ತಿ (ಗಸ್ಟೇಟರಿ ಸ್ವೆಟಿಂಗ್) ಎಂದು ಹೆಸರು. ಬಾಯಿ, ನಾಲಿಗೆ ಈ ಸ್ಥಳಗಳಿಂದ ಉದ್ಭವಿಸುವ ಅಸಾಧಾರಣ ಸಂವೇದನೆಗಳು ಇಂಥ ಸ್ವೇದೋತ್ಪತ್ತಿಗೆ ಕಾರಣ. ಆಘಾತ ಪ್ರಸಂಗಗಳಲ್ಲಿ ಕಾಣಬರುವ ಸುಸ್ತು ಧಕ್ಕೆ (ಷಾಕ್), ಮಧುಮೂತ್ರ ರೋಗಿಗಳಲ್ಲಿ ಕಾಣಬಹುದಾದ ಇನ್ಸುಲಿನ್ ಧಕ್ಕೆ, ಹೃದಯಾಘಾತವಾದಾಗ ಕಂಡುಬರುವ ಧಕ್ಕೆ–ಈ ಸಂದರ್ಭಗಳಲ್ಲಿ ಮೈ ಎಲ್ಲ ಬೆವರಿ ಅಂಟು ಅಂಟಾಗಿಯೂ ತಣ್ಣಗಾಗಿಯೂ ಆಗುವುದು ಸಾಮಾನ್ಯ. ಇದಕ್ಕೆ ವ್ಯತಿರಿಕ್ತವಾಗಿ ಕಾರಣಾಂತರದಿಂದ ಅತ್ಯಧಿಕ ಬೆವರು ವಿಸರ್ಜನೆ ಆದ ಸಂದರ್ಭಗಳಲ್ಲಿ ಸುಸ್ತು ಧಕ್ಕೆ ಪರಿಣಮಿಸುವುದಿದೆ. ನ್ಯೂಮೋನಿಯ ಜ್ವರ ಇಳಿದಾಗ ಹಠಾತ್ತಾಗಿ ಜಿಲ್ಲೆಂದು ಬೆವರುವುದೂ, ಹೈಪರ್‌ತೈರಾಯ್ಡಿಸಮಿನಿಂದ ಪೀಡಿತರಾದ ರೋಗಿಗಳು ಸದಾ ಬೆವರುತ್ತಿರುವುದೂ, ಕ್ಷಯ ರೋಗಿಗಳು ರಾತ್ರಿ ನಿದ್ರಿಸುತ್ತಿರುವಾಗ ಯಾವಾಗಲೂ ಮೈಯೆಲ್ಲ ಅತಿಯಾಗಿ ಬೆವರಿ ಚಳಿಯಾಗಿ ವ್ಯಕ್ತಿಗೆ ಎಚ್ಚರವಾಗುವುದೂ ಈ ರೋಗಗಳ ವಿಶೇಷ ಲಕ್ಷಣಗಳು. ಮಧುಮೂತ್ರ

ರೋಗ, ಇಕ್‌ಥಿಯೋಸಿಸ್, ಸೋರಿಯಾಸಿಸ್, ಸ್ಕ್ಲೀರೋಡರ್ಮ ಮುಂತಾದ ರೋಗಗಳಲ್ಲಿ ಬೆವರುವುದು ಬಲು ಕಡಿಮೆ ಆಗಿದ್ದು ಚರ್ಮ ಶುಷ್ಕವಾಗಿರುತ್ತದೆ. ಶಾಖಧಕ್ಕೆಯಲ್ಲಿ ಬೆವರುವುದು ನಿಂತುಹೋಗಿ ಚರ್ಮ ಶುಷ್ಕವಾಗಿರುವುದೇ ಅಲ್ಲದೆ ಬಹಳ ಬಿಸಿಯಾಗಿಯೂ (ಸುಮಾರು $42^0$ಸೆ.) ಇರುತ್ತದೆ. ಅನೇಕ ವಿಧವಾದ ಜ್ವರಗಳಲ್ಲಿ ದೇಹೋಷ್ಣತೆ ಹೆಚ್ಚಾಗಿದ್ದರೂ ಬೆವರು ಹೆಚ್ಚಾಗುವುದಿಲ್ಲ. ಬಹುಶಃ ಹೈಪೊಥೆಲಮಸ್ ಕಾರಣಾಂತರವಾಗಿ ಸ್ವೇದೋತ್ಪತ್ತಿಯನ್ನು ತಡೆಹಿಡಿದು ಆಯಾ ಜ್ವರದ ವಿಶಿಷ್ಟ ದೇಹೋಷ್ಣತೆ ಉಂಟಾಗುವಂತೆ ಅವಕಾಶ ಮಾಡಿಕೊಟ್ಟಿರುತ್ತದೆ. ಜ್ವರ ಇಳಿಯುವಾಗ ದೇಹದ ಅಧಿಕೋಷ್ಣತೆಯನ್ನು ಕಳೆದುಕೊಳ್ಳುವುದಕ್ಕೋಸ್ಕರ ಅತಿಯಾಗಿ ಬೆವರುವುದು ಸಾಮಾನ್ಯ. ಪೈಲೊಕಾರ್ಪಿನ್, ಪಿಕ್ರೊಟಾಕ್ಸಿನ್, ನಿಕೋಟಿನ್, ಅಮೋನಿಯ, ಕರ್ಪೂರ ಈ ಮದ್ದುಗಳ ಪ್ರಯೋಗದಿಂದ ಬೆವರಿಕೆ ಹೆಚ್ಚಾಗುವುದು; ಅಟ್ರೊಪೀನ್ ಮತ್ತು ಮಾರ್ಫೀನುಗಳ ಪ್ರಯೋಗದಿಂದ ಕಡಿಮೆ ಆಗುವುದೂ ತಿಳಿದಿದೆ. ವಾಸ್ತವವಾಗಿ ಮಿತಿಮೀರಿ ಜ್ವರದ ತಾಪ ಏರಿದಾಗ ಪೈಲೊಕಾರ್ಪಿನ್ನಿನಂಥ ಮದ್ದು ಕೊಟ್ಟು ಹೆಚ್ಚಾಗಿ ಬೆವರುವಂತೆ ಮಾಡಿ ಅದನ್ನು ಇಳಿಸುವ ಚಿಕಿತ್ಸಾ ಕ್ರಮ ಉಂಟು.

ದೇಹದಲ್ಲಿ ಉತ್ಪತ್ತಿ ಆಗುವ ಅತ್ಯಲ್ಪ ಸಾಂದ್ರತೆಯ ದ್ರವಗಳ ಪೈಕಿ ಬೆವರುಕೂಡ ಒಂದು. ವಾಸನಾರಹಿತವಾಗಿ ನೀರಿನಂತೆಯೇ ಕಂಡುಬರುವ ಈ ದ್ರವದ ಸಾಂದ್ರತೆ 1.005ನ್ನು ಎಂದೂ ಮೀರುವುದಿಲ್ಲ. ಇದರಲ್ಲಿ ಘನಾಂಶ ಸಾಧಾರಣವಾಗಿ 1% ರಷ್ಟು ಇರುತ್ತದೆ. ಮುಖ್ಯವಾಗಿ ಸೋಡಿಯಮ್ ಕ್ಲೋರೈಡ್, ಗಂಧಕ ಸಂಯುಕ್ತ ಪ್ರೋಟೀನ್, ಯೂರಿಯ ಮತ್ತು ಫಾಸ್ಫೇಟುಗಳು. ಮೂತ್ರದಲ್ಲಿರುವಂತೆ ಬೆವರಿನಲ್ಲಿಯೂ ಪ್ರತ್ಯಾಮ್ಲೀಯ ಫಾಸ್ಫೇಟಿಗಿಂತ ಆಮ್ಲೀಯ ಫಾಸ್ಫೇಟ್ ಅಧಿಕವಾಗಿದೆ. ಹೀಗಾಗಿ ಇದು ಸ್ವಲ್ಪ ಮಟ್ಟಿಗೆ ಆಮ್ಲಗುಣ ಉಳ್ಳದ್ದಾಗಿದ್ದರೂ ಸೋಡಿಯಮ್ ಕ್ಲೋರೈಡಿನ ಪ್ರಮಾಣ ಅದಕ್ಕಿಂತ ಹೆಚ್ಚಾಗಿರುವುದರಿಂದ ಉಪ್ಪುಪ್ಪಾಗಿರುತ್ತದೆ. ಅತಿಯಾಗಿ ಬೆವರುತ್ತಿರುವಾಗ ಆಮ್ಲೀಯ ಲಕ್ಷಣವೂ, ಉಪ್ಪುಪ್ಪಾಗಿರುವಿಕೆಯೂ ಕಡಿಮೆ ಆಗುತ್ತವೆ. ಹೀಗಿದ್ದರೂ ಇಂಥ ಸಂದರ್ಭಗಳಲ್ಲಿ ದೇಹದ ಜಲಾಂಶ ಅಗಾಧವಾಗಿ ಕಡಿಮೆ ಆಗುವುದು ಮಾತ್ರವಲ್ಲದೆ ಲವಣದ ಅಂಶವೂ ಗಣನೀಯವಾಗಿ ಕಡಿಮೆ ಆಗುವುದಿದೆ. ಇದರ ಪರಿಣಾಮವಾಗಿ ಅನೇಕ ವೇಳೆ ಸ್ನಾಯುಗಳ ಸೆಳೆತ (ಕ್ರಾಂಪ್ಸ್) ಕಂಡುಬರುತ್ತದೆ. ಇದರ ನಿವಾರಣೆಗಾಗಿ (ಹೇಗೂ ತೃಷೆಯೂ ಕಂಡು ಬರುವುದರಿಂದ) ನೀರನ್ನು ಸೇವಿಸಿದರೆ ಬಾಯಾರಿಕೆ ಇಂಗುವುದೇ ಹೊರತು ಸ್ನಾಯುವಿನ ಸೆಳೆತ ನಿಲ್ಲುವುದಿಲ್ಲ. ನೀರಿನೊಡನೆ ಕಿಂಚಿತ್ ಪ್ರಮಾಣದಲ್ಲಿ ಉಪ್ಪು ಬೆರೆಸಿ ಕುಡಿದರೆ ಸ್ನಾಯುಗಳ ಸೆಳೆತವೂ ಮಾಯವಾಗುತ್ತದೆ.

ಔಷಧವಾಗಿ ಅಥವಾ ಇನ್ನೂ ಬೇರೆ ರೀತಿಯಲ್ಲಿ ದೇಹಕ್ಕೆ ಸೇರಿದ ಬೆಂಜೋಯಿಕ್ ಆಮ್ಲ, ಟಾರ್ಟಾರಿಕ್ ಆಮ್ಲ, ಆರ್ಸೆನಿಕ್, ಕ್ವಿನೀನ್, ಅಯೋಡೀನ್ ಮುಂತಾದ ವಸ್ತುಗಳೂ ಪಾದರಸ ಸಂಯುಕ್ತಗಳೂ ಬೆವರಿನಲ್ಲಿ ಕಂಡುಬರುತ್ತವೆ. ಆದ್ದರಿಂದ ಬೆವರು ಈ ವಸ್ತುಗಳ ವಿಸರ್ಜನೆಯಲ್ಲಿ ಭಾಗವಹಿಸುವುದೆಂದೂ ಎಂದೇ ಬೆವರಿಕೆ ಒಂದು ವಿಸರ್ಜನಾಕ್ರಮವಾಗಿದೆಯೆಂದೂ ಗಣಿಸಬಹುದು. ಕಾಮಾಲೆ ರೋಗದಲ್ಲಿ ಪಿತ್ತರಸದ ವರ್ಣದ್ರವ್ಯ (ಬೈಲ್ ಪಿಗ್‌ಮೆಂಟ್) ಬೆವರಿನಲ್ಲಿ ಕಂಡುಬಂದು ಬಟ್ಟೆ ಹಳದಿ ಬಣ್ಣವಾಗುವುದು ತಿಳಿದಿದೆ. ಬಾಣಂತಿಜ್ವರದಲ್ಲಿ (ಪರ್ಪ್ಯೂರಿಯಲ್ ಫೀವರ್) ಬೆವರಿನಲ್ಲಿ ಲ್ಯಾಕ್ಟಿಕ್ ಆಮ್ಲ ಇರಬಹುದು. ಸಂಧಿವಾತ ಜ್ವರದಲ್ಲಿ (ರ್‍ಹ್ಯೂಮ್ಯಾಟಿಕ್ ಫೀವರ್) ಬೆವರಿನಲ್ಲಿ ಆಮ್ಲೀಯ ವಸ್ತುಗಳು ಹೆಚ್ಚಾಗಿರುತ್ತವೆ. ಯುರೀಮಿಯ ಎಂಬ ರೋಗಸ್ಥಿತಿ ಬೆವರು ಆರಿದಾಗ ಅಲ್ಲಲ್ಲಿ ಮಾಸಲ ಬಿಳಿಪುಡಿ ಅಂಟಿಕೊಂಡಿರುವಂತೆ ಕಾಣುವುದಲ್ಲದೆ ವಿಶಿಷ್ಟ ಮೂರಿ ಕೂಡ ಇರುತ್ತದೆ. ಟೈಫಾಯಿಡ್ ಜ್ವರದಲ್ಲಿಯೂ ಇದೇ ಸ್ಥಿತಿ. ನುರಿತವೈದ್ಯರು ಈ ಮೂರಿ ಗಮನಿಸಿಯೇ ರೋಗಿ ಇಂಥ ಜ್ವರದಿಂದ ನರಳುತ್ತಿದ್ದಾನೆಂದು ಊಹಿಸಬಲ್ಲರು. ಆರೋಗ್ಯ ಸ್ಥಿತಿಯಲ್ಲಿ ಅಪರೂಪವಾಗಿ ಕೆಲವರಲ್ಲಿ (ಮುಖ್ಯವಾಗಿ ಸ್ತ್ರೀವ್ಯಕ್ತಿಗಳು ಬಹಿಷ್ಠೆಯರಾಗಿದ್ದಾಗ) ಬೆವರಿನಲ್ಲಿ ನೀಲಿ, ಕೆಂಪು, ಹಸುರು, ಕಪ್ಪು ಇತ್ಯಾದಿ ವರ್ಣದ್ರವ್ಯಗಳು ಕಂಡುಬರಬಹುದು. ಈ ಸ್ಥಿತಿಗೆ ಕ್ರೋಮ್ಹೈಡ್ರೋಸಿಸ್ ಎಂದು ಹೆಸರು.

ಬೇಸಗೆಯಲ್ಲಿ ಅಧಿಕವಾಗಿ ಬೆವರು ಸುರಿಯುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ಬೇಸಗೆ ದೂಳಿನಿಂದ ಸ್ವೇದಗ್ರಂಥಿ ನಾಳಗಳ ದ್ವಾರ ಮುಚ್ಚಿಹೋಗಬಹುದು. ಆಗ ಬೆವರು ಹೊರಬರುವುದಕ್ಕೆ ಅಡಚಣೆ ಆಗಿ ಗ್ರಂಥಿಗಳಲ್ಲಿಯೂ ನಾಳಭಾಗಗಳಲ್ಲಿಯೂ ಶೇಖರವಾಗಿ ಚರ್ಮದ ಮೇಲೆ ಬೊಕ್ಕೆಗಳು ಏಳುತ್ತವೆ. ಇವಕ್ಕೆ ಬೆವರು ಸಾಲೆ (ಪ್ರಿಕ್ಲೀಹೀಟ್) ಎಂದು ಹೆಸರು.

ದೇಹದಲ್ಲಿ ಕಂಕುಳು, ಸ್ತನಾಗ್ರ, ಭಗ ಈ ಸ್ಥಳಗಳಲ್ಲಿ ಬೆವರನ್ನು ಸ್ರವಿಸುವ ಗ್ರಂಥಿಗಳ ಜೊತೆಗೆ ವಿಶಿಷ್ಟ ರೀತಿಯ ಬೆವರು ಗ್ರಂಥಿಗಳೂ ಇರುತ್ತವೆ. ಇವು ಸಾಮಾನ್ಯ ಗ್ರಂಥಿಗಳಿಗಿಂತ ಬಲುದೊಡ್ಡವು. ಇವುಗಳಿಗೆ ನರಪೂರೈಕೆ ಆಗುವುದಿಲ್ಲ. ಅಲ್ಲದೆ ಸಾಮಾನ್ಯ ಸ್ವೇದಗ್ರಂಥಿಗಳ ಸ್ರಾವಕ್ರಿಯೆಯಲ್ಲಿ ಕಾಣಬರುವ ನರಸಾಂಬಂಧಿಕ ಕ್ರಿಯಾವಿನ್ಯಾಸವೂ ಕಾಣಬರುವುದಿಲ್ಲ. ಇವು ದೇಹೋಷ್ಣತೆಯ ನಿಯಂತ್ರಣದಲ್ಲಿ ಪಾಲುಗೊಳ್ಳುವುದಿಲ್ಲ. ಈ ಗ್ರಂಥಿಗಳು ಸ್ರವಿಸುವ ದ್ರವ ಅತಿನೀರಾದ ಹಾಲಿನಂತೆ ಬೆಳ್ಳಗೆ ಇರುತ್ತದೆ. ಸ್ರವಿಸಲ್ಪಟ್ಟಾಗ ವಾಸನಾರಹಿತವಾಗಿದ್ದರೂ ಶೀಘ್ರವಾಗಿ ಬ್ಯಾಕ್ಟೀರಿಯಾಗಳ ಚಟುವಟಿಕೆಯಿಂದ ಸ್ರಾವ ಹುದುಗುವುದರಿಂದ ಕೆಲವು ಬಾಷ್ಪಶೀಲ ಮೇದೋಆಮ್ಲಗಳು (ವಾಲಟೈಲ್ ಫ್ಯಾಟಿ ಆಸಿಡ್ಸ್) ಉತ್ಪತ್ತಿಗೊಂಡು ವಾಸನೆ ಅಥವಾ ಮೂರಿ ಉಂಟಾಗುತ್ತದೆ. ಮೂರಿ ಒಂದು ವ್ಯಕ್ತಿಯ ಅಥವಾ ಒಂದು ಜನಾಂಗದ ವೈಶಿಷ್ಟ್ಯ ಎಂದು ವಿವರಿಸಲಾಗಿದೆ. ಅಲ್ಲದೆ ಸಾಮಾನ್ಯವಾಗಿ ಅಹಿತ ಎನ್ನಿಸುವ ಈ ಮೂಲ ಲೈಂಗಿಕ ಚಟುವಟಿಕೆಯಲ್ಲಿ ಪ್ರಾಮುಖ್ಯ ಪಡೆದಿದ್ದು ವಿಭಿನ್ನಲಿಂಗದ ವ್ಯಕ್ತಿಗಳನ್ನು ಪರಸ್ಪರ ಆಕರ್ಷಿಸಿ ತೃಪ್ತಿಪಡಿಸುತ್ತದೆ ಎಂದು ಹೇಳಲಾಗಿದೆ. ಇವಕ್ಕೆ ನರಗಳ ಪೂರೈಕೆ ಆಗುವುದಿಲ್ಲವಾದ್ದರಿಂದ ನರಗಳ ಮೂಲಕವೇ ವರ್ತಿಸುವ ಪೈಲೊಕಾರ್ಪಿನ್, ಅಟ್ರೊಪೀನ್ ಮುಂತಾದ ಮದ್ದುಗಳಿಂದ ಈ ಗ್ರಂಥಿಗಳ ಚಟುವಟಿಕೆಯನ್ನು ಪ್ರಭಾವಿಸಲಾಗುವುದಿಲ್ಲ. ಆದರೆ ರಕ್ತದಲ್ಲಿರುವ ಅಡ್ರೀನಲಿನ್ ಈ ಗ್ರಂಥಿಗಳನ್ನು ನೇರವಾಗಿ ಪ್ರಚೋದಿಸುವುದು ತಿಳಿದಿದೆ. ಲೈಂಗಿಕ ಕ್ರಿಯೆಯ ವೇಳೆ ಮನೋದ್ರೇಕ ಸ್ಥಿತಿಯಲ್ಲಿ ರಕ್ತದಲ್ಲಿ ಅಡ್ರೀನಲಿನ್ನಿನ ಮಟ್ಟ ಹೆಚ್ಚುವುದರಿಂದ ಈ ಗ್ರಂಥಿಗಳ ಸ್ರಾವ ಆ ಕಾಲದಲ್ಲಿ ಹೆಚ್ಚಿ ಮೊದಲೇ ಆ ಸ್ಥಳದಲ್ಲಿ ಉದ್ಭವಿಸಿರುವ ಮೂರಿಯನ್ನ ಪ್ರಸರಿಸುವುದೆಂದು ತಿಳಿಯಲಾಗಿದೆ.

ಆಶ್ಚರ್ಯದ ಸಂಗತಿ ಎಂದರೆ ಕುದುರೆಗಳಲ್ಲಿ ಸ್ವೇದಗ್ರಂಥಿಗಳು ಈ ತೆರನವೇ. ಅವಕ್ಕೂ ನರಪೂರೈಕೆ ಆಗುವುದಿಲ್ಲ. ಅವುಗಳ ಚಟುವಟಿಕೆಯೂ ರಕ್ತದಲ್ಲಿರುವ ಅಡ್ರೀನಲಿನ್ನಿನ ಮಟ್ಟವನ್ನು ಅವಲಂಬಿಸಿದೆ. ಆದರೂ ಅವು ಮನುಷ್ಯರಲ್ಲಿ ಉತ್ಪತ್ತಿಯಾಗುವಂಥ ಮತ್ತು ವಾಸನಾಯುಕ್ತವಾದಂಥ ದ್ರವವನ್ನು ಸ್ರವಿಸದೇ ಸಾಮಾನ್ಯ ಬೆವರನ್ನೇ ಸ್ರವಿಸುತ್ತವೆ. ಅಲ್ಲದೆ ಮನುಷ್ಯರಲ್ಲಿ ಸಾಮಾನ್ಯ ಸ್ವೇದಗ್ರಂಥಿಗಳು ದೇಹೋಷ್ಣತೆಯ ನಿಯಂತ್ರಣದಲ್ಲಿ ಪಾಲುಗೊಳ್ಳುವಂತೆಯೇ ಇವು ಕುದುರೆಯ ದೇಹೋಷ್ಣತೆಯ ನಿಯಂತ್ರಣದಲ್ಲಿ ಪಾಲುಗೊಳ್ಳುವುದು ತಿಳಿದಿದೆ.

16ನೆಯ ಶತಮಾನದಲ್ಲಿ ಕಂಡುಬರುವ ಬೆವರುರೋಗ (ಸ್ವೆಟಿಂಗ್ ಸಿಕ್‌ನೆಸ್, ಇಂಗ್ಲಿಷ್ ಸ್ವೆಟ್ ಎಪಿಡೆಮಿಕ್) ಎಂಬ ಒಂದು ತೀವ್ರಮಾರಕ ಸ್ಥಿತಿಯನ್ನು ಆಗಿನ ಪ್ರಸಿದ್ಧ ಇಂಗ್ಲಿಷ್ ವೈದ್ಯ ಕಯಸ್ ಎಂಬಾತ ವಿವರಿಸಿದ್ದಾನೆ. 1506, 1517, 1528, 1551, 1578 ಈ ಇಸವಿಗಳಲ್ಲಿ ಇದು ವ್ಯಾಪಕಪಿಡುಗಾಗಿ (ಎಪಿಡೆಮಿಕ್) ಕಂಡುಬಂದು ಮುಖ್ಯವಾಗಿ ಇಂಗ್ಲೆಂಡ್ ಮತ್ತು ವಾಯುವ್ಯ ಯೂರೊಪಿನಲ್ಲಿ ಜನತೆಯನ್ನು ಪೀಡಿಸಿತು. ಚಳಿ, ತಲೆನೋವು, ಅತೀವಸುಸ್ತು ಇವುಗಳಿಂದ ರೋಗ ಪ್ರಾರಂಭವಾಗಿ 3-4 ಗಂಟೆಗಳಲ್ಲಿ ದೇಹ ತೊಯ್ದು ಹೋಗುವಷ್ಟು ಬೆವರಿ ಮುಂಪರಬಂದು ರೋಗಿಗಳು ಮೃತ್ಯುಹೊಂದುತ್ತಿದ್ದರೆಂದು ವಿವರವಿದೆ. 24 ಗಂಟೆಗಳ ಒಳಗೆ ಮೃತ್ಯು ಹೊಂದದಿದ್ದರೆ ವ್ಯಕ್ತಿ ಸಾಮಾನ್ಯವಾಗಿ ಬದುಕಿಕೊಳ್ಳುತ್ತಿದ್ದರೂ ರೋಗ ಮರುಕಳಿಸುವ ಇಲ್ಲವೇ ಪುನಃ ಪ್ರಾರಂಭವಾಗುವ ಅಪಾಯವಿತ್ತು ಎಂದೂ ಹೇಳಿದೆ. ಮಾಗಿಕಾಲದ ಕೊನೆಯ ಇಲ್ಲವೆ ವಸಂತ ಕಾಲದ ಮೊದಲ ದಿನಗಳಲ್ಲಿ ಕಾಣಬರುತ್ತಿದ್ದ ಈ ರೋಗ ಅನುಕೂಲಸ್ಥರು ಮತ್ತು ಆರೋಗ್ಯವಾಗಿದ್ದವರಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು ಎಂದು ಕಯಸ್ ವಿವರಿಸಿದ್ದಾನೆ. ಮುಂದಿನ ಶತಮಾನಗಳಲ್ಲಿ ಇಂಥ ರೋಗವನ್ನು ಯಾರೂ ವಿವರಿಸಿರುವುದು ಪತ್ತೆ ಆಗಿಲ್ಲ. ವಿಶಿಷ್ಟ ಲಕ್ಷಣಗಳಿದ್ದ ಒಂದು ರೋಗ ಹಠಾತ್ತಾಗಿ ತಂತಾನೇ ಅದೃಶ್ಯವಾಯಿತು ಎನ್ನುವುದು ಸಮಂಜಸವಲ್ಲ. ಬಹುಶಃ ಈಗಲೂ ವೈಯಕ್ತಿಕವಾಗಿ ಕಾಣಬರುವ ಮತ್ತು ಅಗಾಧ ಬೆವರುವಿಕೆ ಲಕ್ಷಣವಾಗಿರುವ ಯಾವುದೋ ರೋಗ ಆ ದಿನಗಳಲ್ಲಿ ಪಿಡುಗಾಗಿ ಕಂಡು ಬಂದುದರಿಂದಲೂ ಆಧುನಿಕ ರೀತಿಯ ವೈದ್ಯ ಚಿಕಿತ್ಸಾ ಕ್ರಮಗಳು ಆಗ ಇನ್ನೂ ಪ್ರಾರಂಭದೆಶೆಯಲ್ಲಿದ್ದುದರಿಂದಲೂ ಈ ರೋಗ ಒಂದು ಮಹಾಮಾರಿ ರೋಗ ಎನ್ನಿಸಿತ್ತೆಂದು ತೋರುತ್ತದೆ. ಕೈಯಗನ ರೋಗ ವಿವರಣೆಯನ್ನು 1952ರಲ್ಲಿ ಪುನಃ ಅವಲೋಕಿಸಿದ ಮರ್ಲೆಸ್ ಎಂಬ ವೈದ್ಯ ಬೆವರು ರೋಗ ಇಂದಿನ ಮರುಕಳಿಸುವಜ್ವರ (ರಿಲಾಪ್ಸಿಂಗ್ ಫೀವರ್) ಇರಬಹುದು ಎಂದಿದ್ದಾನೆ. ***

**ಬೆಸ್ಟ್, ಚಾರ್ಲ್ಸ್ ಹರ್ಬರ್ಟ್ (1899-1978):** ಕೆನಡಾದ ದೇಹಕ್ರಿಯಾ ವಿಜ್ಞಾನಿ. ಜನನ 27-2-1899, ಇಂಗ್ಲೆಂಡಿನ ಪಶ್ಚಿಮ ಪೆಂಬ್ರೋಕಿನಲ್ಲಿ (ವೇಲ್ಸ್). ಉನ್ನತ ವಿದ್ಯಾಭ್ಯಾಸವನ್ನು ಕೆನಡಾದಲ್ಲಿ ಮುಗಿಸಿ ಒಂದನೆಯ ಮಹಾಯುದ್ಧದಲ್ಲಿ ಆ ದೇಶದ ಸೈನ್ಯ ಸೇರಿ ಅಲ್ಲಿಯ ಪೌರತ್ವ ಪಡೆದ. ಅನೇಕ ಬಾರಿ ಸಮುದ್ರಯಾನಗಳಾದ ಬಳಿಕ ವ್ಯಾಸಂಗವನ್ನು ಮುಂದುವರಿಸಲು ಟೊರೊಂಟೋ ವಿಶ್ವವಿದ್ಯಾಲಯಕ್ಕೆ ದಾಖಲಾದ. ಇನ್ನೂ ಪದವಿ ಗಳಿಸುವ ಮೊದಲೇ (1921) ತನ್ನ ಪ್ರಯೋಗಶಾಲೆಯ ಸಹೋದ್ಯೋಗಿಯಾಗಿ ಫ್ರೆಡೆರಿಕ್ ಬ್ಯಾಂಟಿಂಗ್ ಜೊತೆ ಸೇರಿದ. ಆ ವೇಳೆಗೆ ಬ್ಯಾಂಟಿಂಗ್ ಇನ್ಸ್ಯುಲಿನ್ ಮತ್ತು ಮಧುಮೇಹದ ಚಿಕಿತ್ಸೆಯಲ್ಲಿ ಇನ್ಸ್ಯುಲಿನ್ ಪಾತ್ರದ ವಿಚಾರವಾಗಿ

ಪ್ರಯೋಗ ನಡೆಸುತ್ತಿದ್ದ. ಇವರ ಸಹಯೋಗ ಆರಂಭವಾದ ಕೆಲವೇ ತಿಂಗಳುಗಳಲ್ಲಿ ನಾಯಿಯ ಮೇಲೆ ಪ್ರಯೋಗ ನಡೆಸಿ, ಶಸ್ತ್ರಕ್ರಿಯೆಯಿಂದ ಅದರ ಮೇದೋಜೀರಕ ಗ್ರಂಥಿಯನ್ನು ತೆಗೆದುಹಾಕಿ ಕೃತಕವಾಗಿ ಮಧುಮೇಹ ಬರಿಸಲಾದ ನಾಯಿಗಳಲ್ಲಿ ಇನ್ಸುಲಿನ್‌ಸಾರಕ ರೋಗವನ್ನು ಗುಣಪಡಿಸಿದ ವಿಷಯವನ್ನು ಇವರು ರುಜುವಾತುಪಡಿಸಿದರು. ಇದೇ ರೀತಿ ಮನುಷ್ಯರಲ್ಲಿಯೂ ಉಂಟಾಗುವ ಮಧುಮೇಹ ಇನ್ಸುಲಿನ್ ಸಾರಕದಿಂದ ಗುಣವಾಗುತ್ತದೆಂದು ತೀರ್ಮಾನಿಸಿದರು. ಹೀಗೆ ಮೇದೋಜೀರಕ ಗ್ರಂಥಿಯಿಂದ ಇನ್ಸುಲಿನ್ನನ್ನು ಬೇರ್ಪಡಿಸಿದ ಮೊದಲಿಗರೆಂದರೆ ಬ್ಯಾಂಟಿಂಗ್ ಮತ್ತು ಬೆಸ್ಟ್.

ಬೆಸ್ಟ್ ಟೊರೊಂಟೋ ವಿಶ್ವವಿದ್ಯಾಲಯದಲ್ಲಿ ದೇಹಕ್ರಿಯಾವಿಜ್ಞಾನಿಯಾಗಿ ನೇಮಕ ಹೊಂದಿದ. ಬ್ಯಾಂಟಿಂಗ್ ಮತ್ತು ಬೆಸ್ಟ್ ಇವರ ಜ್ಞಾಪಕಾರ್ಥವಾಗಿ ಆ ವಿಶ್ವವಿದ್ಯಾಲಯದಲ್ಲಿ 1923ರಲ್ಲಿ ಒಂದು ವೈದ್ಯ ಪ್ರಯೋಗ ಶಾಖೆಯನ್ನು ತೆರೆಯಲಾಯಿತು. ಬ್ಯಾಂಟಿಂಗನ ನಿಧನಾನಂತರ, 1941ರಲ್ಲಿ ಬೆಸ್ಟನನ್ನು ಈ ಶಾಖೆಯ ನಿರ್ದೇಶಕನನ್ನಾಗಿ ನೇಮಿಸಲಾಯಿತು. ಬ್ಯಾಂಟಿಂಗ್ ಮತ್ತು ಮೆಕ್‌ಲಿಯೋಡ್ ಅವರಿಗೆ 1923ರಲ್ಲಿ ನೊಬೆಲ್ ಪಾರಿತೋಷಿಕ ಪ್ರದಾನಿಸಿದಾಗ ಬೆಸ್ಟನನ್ನು ಈ ಯಾದಿಗೆ ಸೇರಿಸದೆ ಮೆಕ್‌ಲಿಯೋಡ್‌ನನ್ನು ಸೇರಿಸಿದ್ದು ಬ್ಯಾಂಟಿಂಗನಿಗೆ ಕೋಪ ತಂದಿತ್ತು. ಮಿತ್ರನ ಒತ್ತಾಯಕ್ಕಾಗಿ ತನ್ನ ಪಾಲಿನ ಬಹುಮಾನ ಧನ ಸ್ವೀಕರಿಸಿದ ಬ್ಯಾಂಟಿಂಗ್ ಅದರ ಅರ್ಧಾಂಶವನ್ನು ಬೆಸ್ಟನಿಗೆ ಉಡುಗೊರೆಯಾಗಿ ನೀಡಿದ. (ಎಸ್.ಕೆ.ಎಚ್.)

**ಬೈಗೆ:** ಕ್ಲೂಪಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ಮೂಳೆಮೀನು (ಆಯಿಲ್ ಸಾರ್ಡೀನ್) ಹೆರಿಂಗ್ ಮೀನುಗಳ ಹತ್ತಿರ ಸಂಬಂಧಿಯಾದ ಇದು ಭಾರತದ ಮೀನುಗಾರಿಕೆಯಲ್ಲಿ ಬಹಳ ಪ್ರಾಮುಖ್ಯ ಪಡೆದಿದೆ. ಬೂತಾಯಿ ಪರ್ಯಾಯನಾಮ. ಸಾರ್ಡಿನೆಲ ಲಾಂಜಿಸೆಪ್ಸ್ ಇದರ ವೈಜ್ಞಾನಿಕ ಹೆಸರು.

ಅರೇಬಿಯ, ಇರಾನ್, ಪಾಕಿಸ್ತಾನ, ಭಾರತದ ಪಶ್ಚಿಮ ಮತ್ತು ಪೂರ್ವ ಕರಾವಳಿ ಮತ್ತು ಅಂಡಮಾನ್ ಸುತ್ತಮುತ್ತ ಹಾಗೂ ಜಾವ ಮತ್ತು ಬಾಲಿ ಕರಾವಳಿಗಳಲ್ಲಿ ದೊರೆಯುವುದು. ಭಾರತದ ಪಶ್ಚಿಮ ಕರಾವಳಿಯಲ್ಲಿ ಮಹಾರಾಷ್ಟ್ರದ ರತ್ನಗಿರಿಯಿಂದ ದಕ್ಷಿಣಕ್ಕೆ ಕೇರಳದ ಕೋಯಿಲೋನ್‌ವರೆಗೆ ಬೈಗೆಯ ಮೀನುಗಾರಿಕೆ ಬಹಳ ಮುಖ್ಯವಾಗಿದೆ. ಪೂರ್ವ ಕರಾವಳಿಯಲ್ಲಿ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳ ನೆರೆಯ ಸಮುದ್ರದಲ್ಲಿ ಕೂಡ ಕೆಲವು ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಬೈಗೆಯನ್ನು ಹಿಡಿಯಲಾಗಿದೆ.



ಬೈಗೆ ಮೀನನ್ನು ತಾಜಾ ಆಗಿಯೂ ಹದಮಾಡಿದ ಸ್ಥಿತಿಯಲ್ಲೂ ಆಹಾರವಾಗಿ ಉಪಯೋಗಿಸಲಾಗುತ್ತದೆ. ಅಲ್ಲದೆ ಇದರ ದೇಹದಲ್ಲಿ ಹೆಚ್ಚಿನ ಮೊತ್ತದಲ್ಲಿರುವ ಎಣ್ಣೆ, ಗೋಣಿನಾರು, ತೊಗಲು ಮತ್ತು ಸಾಬೂನು ತಯಾರಿಕೆಯಲ್ಲಿ ಉಪಯುಕ್ತವೆನಿಸಿದೆ. ಬೈಗೆಮೀನಿನ ಹಿಂಡಿ ತೆಂಗು, ಕಾಫಿ, ಟೀ ಮೊದಲಾದ ತೋಟಗಳಿಗೆ ಉತ್ತಮ ಗೊಬ್ಬರ. ದೇಹದ ಎಣ್ಣೆಯನ್ನು ದೋಣಿಗಳಿಗೆ ಹಚ್ಚಲೂ ಉಪಯೋಗಿಸುವುದಿದೆ. ಇದು ಸಣ್ಣ ಗಾತ್ರದ ಮೀನು; ದೇಹದ ಉದ್ದ 20 ಸೆಂಮೀ ಮೀರದು. ಮೈಬಣ್ಣ ಬಂಗಾರದಿಂದ ಕೂಡಿದ ನೀಲಿ. ಹೊಟ್ಟೆ ಮಾತ್ರ ಬಿಳಿ. ಬೆನ್ನಮೇಲೆ ಒಂದೇ ಒಂದು ಈಜುರೆಕ್ಕೆಯುಂಟು.

ಪಶ್ಚಿಮ ಕರಾವಳಿಯಲ್ಲಿ ಬೈಗೆ ಮೀನು ದೊರೆಯವ ಶ್ರಾಯ ಮುಂಗಾರು ಮಳೆಯೊಡನೆಯೇ ಪ್ರಾರಂಭವಾಗುವುದು. ಮೊದಲು ಪ್ರಾಯದ ಮೀನುಗಳು ಕಾಣಿಸಿಕೊಳ್ಳುವುವು. ಸೆಪ್ಟೆಂಬರ್ ತಿಂಗಳಿನಿಂದ ಜನವರಿ ತಿಂಗಳ ತನಕ ಮಧ್ಯಮ ಗಾತ್ರದ (12 ರಿಂದ 15 ಸೆಂಮೀ ಉದ್ದದ) ಮೀನುಗಳೇ ಹೆಚ್ಚು ಮೊತ್ತದಲ್ಲಿ ಸಿಕ್ಕುವುವು. ತರುವಾಯ ಈ ಮೀನಿನ ಬೇಟೆ ಏಪ್ರಿಲ್ ತಿಂಗಳ ವೇಳೆಗೆ ಸಂಪೂರ್ಣವಾಗಿ ನಿಂತುಹೋಗುವುದು. ಬೈಗೆ ಮೀನಿನ ಹೆಚ್ಚಳವಿರುವಾಗ ನೀರಿನ ಉಷ್ಣತೆ $27^0$–$29^0$ ಸೆ. ಮತ್ತು ಲವಣಾಂಶ ಶೇ. 33 ರಿಂದ ಶೇ. 35 ರ ವರೆಗೆ ಇರುವುದು ಕಂಡುಬರುವುದು.

ಬೈಗೆ ಮೀನು ಜುಲೈ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳ ತನಕ ಮೊಟ್ಟೆ ಇಡುತ್ತದೆ. ತನ್ನ ಜೀವಮಾನದಲ್ಲಿ ಈ ಮೀನು ಒಂದೇ ಸಲ ಮೊಟ್ಟೆ ಇಡಬಹುದೆಂದು ನಂಬಲಾಗಿತ್ತು. ಆದರೆ, ಇತ್ತೀಚಿನ ಸಂಶೋಧನೆಗಳಿಂದ ಜೀವಮಾನದಲ್ಲಿ ಎರಡು ಸಲ ಮೊಟ್ಟೆಯಿಡುವುದೆಂದು ಗೊತ್ತಾಗಿದೆ. ಇದರ ಬೇಟೆ ಇಲ್ಲಿಯ ತನಕ ಸಾಂಪ್ರದಾಯಿಕ ರೀತಿಯಲ್ಲಿಯೇ ಸಾಗಿದೆ. ಸಮುದ್ರದ ದಂಡೆಯಿಂದ ಸಂಕುಚಿತವಾದ ಒಂದು ಭಾಗದಲ್ಲಿ ಮಾತ್ರ, ಅಂದರೆ 25 ಫಾಥಮ್ ರೇಖೆಯೊಳಗೆ ಮಾತ್ರ ಈ ಬೇಟೆ ನಡೆಯುತ್ತದೆ. ಕೇರಳದಲ್ಲಿ ಮತ್ತಿಕೊಲ್ಲಿವಲ್ಲ, ಪಟ್ಟೆನ್ ಕೊಲ್ಲಿವಲ್ಲ. ಸುಟ್ಟುಂ ವಲ, ಪೈತ್ತು ವಲ ಮುಂತಾದ ದೋಣಿಸಂಚಿ ಬಲೆಗಳನ್ನೂ ಕಿವಿರುಬಲೆಗಳನ್ನೂ ಕರ್ನಾಟಕದ ಕರಾವಳಿವಲ್ಲಿ ರಂಪಣಿ, ಕೈರಂಪಣಿ, ಯೆಂಡಿ ಮುಂತಾದ ಕಿನಾರೆ ಸಂಚಿ ಬಲೆಗಳನ್ನೂ ಬೈಗೆಯ ಬೇಟೆಗೆ ಬಳಸಲಾಗುತ್ತದೆ. ***

**ಬೈರುಂಡೆ:** ಏಪೋಡಿಫಾರ್ಮಿಸ್ ಗಣದ ಏಪೋಡಿಡೆ ಕುಟುಂಬಕ್ಕೆ ಸೇರಿದ ಸುಮಾರು 67 ಪ್ರಭೇದಗಳ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು (ಸ್ವಿಫ್ಟ್). ಇಂಗ್ಲಿಷ್ ಹೆಸರೇ ಸೂಚಿಸುವಂತೆ ಇವು ತಮ್ಮ ಹಾರಾಟದ ವೇಗಕ್ಕೆ ಹೆಸರಾಗಿವೆ. ಇವುಗಳ ಪೈಕಿ ಕೆಲವು ಗಂಟೆಗೆ 160 ಕಿಮೀ ವೇಗದಲ್ಲಿ ಹಾರುವುವು. ಭಾರತ, ಇಂಡೋಚೀನ, ಫಿಲಿಪೀನ್ಸ್, ಈಸ್ಟ್ ಇಂಡೀಸ್‌ಗಳಲ್ಲಿ ಕಾಣದೊರೆಯುವ ಸ್ಪೈನ್‌ಟೇಲ್ ಸ್ವಿಫ್ಟ್ ಎಂಬುದಂತೂ ಹಕ್ಕಿಗಳಲ್ಲೇ ಅತಿವೇಗದಲ್ಲಿ ಹಾರಬಲ್ಲ ಜೀವಿಯೆನಿಸಿದೆ. ಇದರ ಹಾರಾಟದ ವೇಗ ಗಂಟೆಗೆ 240–320 ಕಿಮೀ. ಇವುಗಳ ರೆಕ್ಕೆಬಡಿತ ಬರಿಗಣ್ಣಿಗೆ ಅಗೋಚರವಾಗುವಷ್ಟು ಶ್ರೀಘ್ರಗತಿಯದು. ಅಲ್ಲದೆ ಕೆಲವು ಬಗೆಯ ಬೈರುಂಡೆಗಳು ತಮ್ಮೆರಡು ರೆಕ್ಕೆಗಳನ್ನು ವಿಭಿನ್ನ ವೇಗಗಳಲ್ಲಿ ಬಡಿಯಬಲ್ಲುವು. ಹೀಗೆ ಮಾಡುವುದರಿಂದ ಹಾರುವಾಗ ದಿಕ್ಕು ಬದಲಿಸಲು ಸಾಧ್ಯವಾಗುತ್ತದೆ. (ಇವುಗಳ ಬಾಲದ ಗರಿಗಳು ಚಿಕ್ಕವಾಗಿರುವುದರಿಂದ ಬೇರೆ ಹಕ್ಕಿಗಳಂತೆ ಬಾಲದ ಸಹಾಯದಿಂದ ದಿಕ್ಕು ಬದಲಿಸಲು ಇವಕ್ಕೆ ಆಗದು).

ಏಪಸ್ ಅಫಿನಿಸ್ ಪ್ರಭೇದ

ಇವುಗಳ ಹಾರಾಟವೂ ನಿರಾಯಾಸಕರವಾದ್ದು. ಸ್ವಲ್ಪವೂ ವಿಶ್ರಮಿಸದೆ ನಿರಂತರವಾಗಿ ಹಾರಾಡುತ್ತಲೇ ಕಾಲಕಳೆಯುವುವು ಎಂಬ ಅಭಿಪ್ರಾಯ ಇದೆಯಾದರೂ ಇದು ಉತ್ಪ್ರೇಕ್ಷೆ. ಆದರೆ ಬೇರೆ ಹಕ್ಕಿಗಳಿಗೆ ಹೋಲಿಸಿದರೆ ಇವು ಹೆಚ್ಚು ಕಾಲವನ್ನು, ರಾತ್ರಿ ಸಮಯವೂ ಸೇರಿದಂತೆ, ಹಾರಾಟದಲ್ಲೇ ಕಳೆಯುತ್ತವೆ ಎಂಬುದು ನಿಜ. ಬೈರುಂಡೆಗಳು ಪ್ರತಿರಾತ್ರಿ ಸ್ವರ್ಗದಲ್ಲಿ ವಿಶ್ರಾಂತಿ ಪಡೆಯುತ್ತವೆ ಎಂಬ ನಂಬಿಕೆಯೂ ಇತ್ತು.

ಇವು ಚಿಕ್ಕಗಾತ್ರದ ಹಕ್ಕಿಗಳು. ಮೈಬಣ್ಣ ಸಾದಾತೆರನಾದ್ದು. ಬೂದಿ ಇಲ್ಲವೆ ಕಂದು. ಹೆಣ್ಣು ಗಂಡುಗಳಲ್ಲಿ ಬಣ್ಣ ವ್ಯತ್ಯಾಸವಾಗಲಿ ಗಾತ್ರಭಿನ್ನತೆಯಾಗಲಿ ಇಲ್ಲ. ದೇಹ ಮಾತ್ರ ಹಾರಾಟಕ್ಕೆ ಅತ್ಯಂತ ಯುಕ್ತ ರೀತಿಯಲ್ಲಿ ರಚಿತವಾಗಿದೆ. ರೆಕ್ಕೆಗಳು ಸಪುರ ಹಾಗೂ ಚೂಪು. ಬಾಲ ಮೋಟು, ಗಡಸು. ಕೊಕ್ಕು ಪುಟ್ಟದು. ಬಾಯಿ ಅಗಲ; ಕಣ್ಣಿನವರೆಗೆ ತೆರೆಯುವಂತಿದೆ. ಹಾರಾಡುತ್ತಲೇ ಗಾಳಿಯಲ್ಲಿರುವ ಕೀಟಾದಿಗಳನ್ನು ಹಿಡಿಯುವುದರಿಂದ ಇಂಥ ಬಾಯಿ ಅತ್ಯಂತ ಅನುಕೂಲ. ಕಾಲುಗಳು ತುಂಬ ಚಿಕ್ಕವು. ಜೊತೆಗೆ ಹಕ್ಕಿಯ

ಭಾರವನ್ನು ಕೂಡ ಹೊರಲಾರದಷ್ಟು ಇವು ದುರ್ಬಲವಾಗಿರುವುದರಿಂದ ಹಕ್ಕಿ ನೆಲದ ಮೇಲಾಗಲೀ ರೆಂಬೆಗಳ ಮೇಲಾಗಲೀ ಕೂರದು. ಬಹುಶಃ ದಿನದ ಬಹು ವೇಳೆಯನ್ನು ಹಾರಾಟದಲ್ಲೇ ಕಳೆಯುವುದರಿಂದ ಕಾಲುಗಳಿಗೆ ಕೆಲಸವಿಲ್ಲವಾಗಿ ಇವು ಬಲಹೀನವಾಗಿರಬೇಕು. ಆದರೆ ಚೂಪು ನಖಗಳಿರುವುದರಿಂದ ವಿಶ್ರಮಿಸಿಕೊಳ್ಳುವಾಗ ಪ್ರಪಾತಗೋಡೆಗಳು, ಮರದ ಕಾಂಡಗಳು ಇಲ್ಲವೆ ಹೊಗೆ ಕೊಳವೆಗಳು, ಮುಂತಾದ ಊರ್ಧ್ವತಲಗಳಿಗೆ ಮುಖಮೇಲಾಗಿ ಅಂಟಿಕೊಂಡಿರುವುವು.

ಬೈರುಂಡೆಗಳ ಇನ್ನೊಂದು ವಿಚಿತ್ರ ಗುಣ ವ್ಯಕ್ತವಾಗುವುದು ಗೂಡು ನಿರ್ಮಾಣದಲ್ಲಿ. ಹುಲ್ಲು ಕಡ್ಡಿ, ಗರಿ ಮುಂತಾದ ಹಗುರ ವಸ್ತುಗಳನ್ನು ತಮ್ಮ ಅಂಟಂಟಾದ ಜೊಲ್ಲಿನಿಂದ ಮೇಲೆ ಹೇಳಿದಂಥ ಊರ್ಧ್ವತಲಗಳಿಗೆ ಅಂಟಿಸಿ ರಚಿಸುವುವು. ಕೆಲವು ಬಗೆಯ ಬೈರುಂಡೆಗಳು ಪ್ರಪಾತಗಳ ಬಂಡೆಗಳನ್ನು ಆಯ್ದರೆ, ಇನ್ನು ಕೆಲವು ನಿರ್ವಸಿತ ಮನೆ, ಶಾಲೆ, ಕಾರ್ಖಾನೆ ಮುಂತಾದುವುಗಳ ಹೊಗೆ ಕೊಳವೆಗಳ ಒಳಮೈಯನ್ನು ಆಯ್ದುಕೊಳ್ಳುವುವು. ಮತ್ತೆ ಕೆಲವು (ಉದಾಹರಣೆಗೆ, ಆಫ್ರಿಕದ ತಾಳೆ ಬೈರುಂಡೆ – ಪಾಮ್‌ಸ್ವಿಫ್ಟ್; ಸಿಪ್ಸಿಯೂರಸ್ ಪಾರ್ವಸ್, ಟಾಕೊರ್ನಿಸ್ ಸ್ಕ್ವಾಮಾಟ) ನೇತುಬಿದ್ದತಾಳೆಗರಿ, ಬಾಳೆಎಲೆ, ಮುಂತಾದುವುಗಳ ಮೇಲೆ ಗರಿಪುಕ್ಕಗಳನ್ನು ಬಳಸಿ ಚಪ್ಪಟೆಯಾದ ಮೆತ್ತೆಯಂಥ ಗೂಡನ್ನು ನಿರ್ಮಿಸಿ ಜೊಲ್ಲಿನ ನೆರವಿನಿಂದ ಅಂಟಿಸುವುವು. ಸ್ವತಃ ತಾವೇ ಕೂರಲಾರದಷ್ಟು ಚಿಕ್ಕದಾಗದ ಈ ಗೂಡಿಗೆ ಹೆಣ್ಣು ಹಕ್ಕಿ ತನ್ನ ಒಂದು ಇಲ್ಲವೆ ಎರಡು ಮೊಟ್ಟೆಗಳನ್ನು ಜೊಲ್ಲಿನಿಂದ ಅಂಟಿಸಿಡುತ್ತದೆ. ಗಾಳಿಬೀಸಿ ಗರಿ ಅಲ್ಲಾಡಿದರೂ ಮೊಟ್ಟೆಗಳು ಬೀಳುವುದಿಲ್ಲ. ತಂದೆತಾಯಿ ಹಕ್ಕಿಗಳೆರಡೂ ತಮ್ಮ ಬೆರಳುಗಳಿಂದ ನೇತುಬಿದ್ದು, ಮೊಟ್ಟೆಗಳಿಗೆ ಕಾವುಕೊಟ್ಟು ಮರಿಮಾಡುವುವು. ಮರಿಗಳು ಸಹ ದೊಡ್ಡವಾಗುವವರೆಗೂ ಇದೇ ರೀತಿ ತಲೆಮೇಲಾಗಿ ತೂಗುಬಿದ್ದೇ ಕಾಲ ಕಳೆಯುವುವು.

ಇಂಡೋ – ಆಸ್ಟ್ರೇಲಿಯ ವಲಯ ಮತ್ತು ಪಶ್ಚಿಮ ಪೆಸಿಫಿಕ್ ದ್ವೀಪಗಳಲ್ಲಿ ವಾಸಿಸುವ ಗುಹಾಬೈರುಂಡೆಗಳು ತೊಗಟೆಗಳ ಚೂರುಪಾರು, ಕಲ್ಲುಹೂಗಳ ತುಣುಕುಗಳು, ಇನ್ನಿತರ ಸಸ್ಯ ಸಾಮಾಗ್ರಿಗಳನ್ನೂ ವಿಪುಲ ಮೊತ್ತದ ಜೊಲ್ಲನ್ನೂ ಸೇರಿಸಿ ಬಟ್ಟಲಿನಾಕಾರದ ಗೂಡುಗಳನ್ನು ಕಟ್ಟಿ ಕಲ್ಲುಬಂಡೆಗಳ ಊರ್ಧ್ವತಲ, ಮರಗಳ ಬೊಡ್ಡೆಗಳಿಗೆ ಅಂಟಿಸಿಡುವುವು. ಈ ಜೊಲ್ಲಿನಲ್ಲಿ ಗಣನೀಯ ಮೊತ್ತದ ಪ್ರೋಟೀನ್ ಇರುವುದರಿಂದ ಆ ದ್ವೀಪಗಳ ಮೂಲನಿವಾಸಿಗಳು ಗೂಡುಗಳನ್ನು ಕಿತ್ತು, ಇವುಗಳಿಂದ ಸಾರನ್ನು ತಯಾರಿಸಿ ಸೇವಿಸುವರು. ಇದು ಅಲ್ಲಿಯವರಿಗೆ ಬಲು ಅಚ್ಚುಮೆಚ್ಚಿನ ಖಾದ್ಯ ವಸ್ತುವಾಗಿ, ಗೂಡು ಸಂಗ್ರಹ ಲಾಭದಾಯಕ ವ್ಯಾಪಾರವಾಗಿದೆ. (ಎಂ.ಎಸ್.ಎಲ್.)

**ಬೊಗಳುಜಿಂಕೆ:** ಆರ್ಟಿಯೊಡ್ಯಾಕ್ಟಿಲ ಗಣದ ಸರ್ವಿಡೆ ಕುಟುಂಬಕ್ಕೆ ಸೇರಿದ ಚಿಕ್ಕ ಗಾತ್ರದ ಜಿಂಕೆ (ಮಂಟ್‌ಜ್ಯಾಕ್). ಮುಂಟಿಯಾಕಸ್ ಮಂಟ್‌ಜ್ಯಾಕ್ ಇದರ ವೈಜ್ಞಾನಿಕ ಹೆಸರು. ನೇಪಾಳ, ಭಾರತ ಶ್ರೀಲಂಕಾ, ಜಾವ, ಬೋರ್ನಿಯಾ, ಸುಮಾತ್ರ, ದಕ್ಷಿಣಚೀನ,

ಬೊಗಳುಜಿಂಕೆ

ಫಾರ್ಮೋಸಗಳಲ್ಲಿ ಕಾಣದೊರೆಯತ್ತದೆ. ಇದರ ಉದ್ದ ಸುಮಾರು 800–100 ಮೀಮೀ ಎತ್ತರ 450–580ಮೀಮೀ. ತೂಕ 14–18 ಕಿಗ್ರಾಂ. ದೇಹದ ಮೇಲೆ ಮೃದು ಕೂದಲುಗಳಿವೆ. ಮೈಬಣ್ಣ ಗಾಢ ಕಂದು ಇಲ್ಲವೆ ಬೂದುಮಿಶ್ರಿತ ಕಂದು. ಗಂಡು ಜಿಂಕೆಗಳಲ್ಲಿ ಮಾತ್ರ ಕೋಡುಗಳಿವೆ. ವರ್ಷಕ್ಕೊಮ್ಮೆ (ಮೇ ತಿಂಗಳಿನಲ್ಲಿ) ಕೋಡುಗಳು ಉದುರಿ, ಮತ್ತೆ ಹೊಸಕೋಡುಗಳು ಮೂಡುವುವು. ಕೋಡುಗಳ ಉದ್ದ ಸುಮಾರು 150 ಮೀಮೀ. ಇವುಗಳ ಬುಡದಲ್ಲಿ ರೋಮಾವೃತವಾದ ತೊಟ್ಟುಗಳಿವೆ. ಅಂತೆಯೇ ಗಂಡುಗಳ ಮೇಲ್ದವಡೆಯ ಕೋರೆಹಲ್ಲುಗಳು ಬಾಯಿಯಿಂದ ಹೊರಚಾಚಿ ನಸುಬಾಗಿದ ದಾಡೆಗಳಾಗಿವೆ. ಹರಿತವಾಗಿರುವ ಈ ದಾಡೆಗಳನ್ನು ಇವು ಪರಿಣಾಮಕಾರಿ ಅಸ್ತ್ರವಾಗಿ ಬಳಸುವುವು. ಹೆಣ್ಣುಗಳ ಕೋರೆಹಲ್ಲುಗಳಾದರೂ ಗಂಡಿನವುಗಳಷ್ಟು ದೊಡ್ಡವೂ ಅಲ್ಲ ಹರಿತವೂ ಅಲ್ಲ.

ಬೊಗಳುಜಿಂಕೆಗಳು ಗಾಬರಿಗೊಂಡಾಗ ಇಲ್ಲವೆ ಸಂತಾನಾಭಿವೃದ್ಧಿ ಸಮಯ ಬಂದಾಗ ಬೊಗಳುವ ತೆರ ಸದ್ದುಗೈಯುವುವು. ಈ ಗುಣವೇ ಇವುಗಳ ಹೆಸರಿಗೆ ಕಾರಣ. ದಟ್ಟ ಕಾಡುಗಳಲ್ಲಿ, ಪರ್ವತಸೀಮೆಗಳಲ್ಲಿ ಇವು ವಾಸಿಸುವುವು. ಇವುಗಳ ಚಟುವಟಿಕೆಯೆಲ್ಲ ಕತ್ತಲಾದ ಮೇಲೆ. ಹುಲ್ಲು, ಎಳೆಚಿಗುರು ಇವುಗಳ ಪ್ರಧಾನ ಆಹಾರ. ಇವು ಒಂಟೊಂಟಿಯಾಗಿ ಸಾಮಾನ್ಯವಾಗಿ ನೀರತಾಣಗಳ ಸನಿಹದಲ್ಲಿ ಓಡಾಡಿಕೊಂಡಿರುವುವು. ವರ್ಷದ ಯಾವಕಾಲದಲ್ಲಾದರೂ ಮರಿಹಾಕಬಹುದಾದರೂ ಜನವರಿ–ಫೆಬ್ರುವರಿ ತಿಂಗಳುಗಳಲ್ಲಿ ಇದು ಹೆಚ್ಚು ಸಾಮಾನ್ಯ. ಗರ್ಭಾವಧಿಯ ಕಾಲ 180 ದಿನಗಳು. ಇವುಗಳ ಆಯಸ್ಸು ಸುಮಾರು 10 ವರ್ಷಗಳು. ಮಾಂಸಕ್ಕಾಗಿ, ಚರ್ಮಕ್ಕಾಗಿ ಇವನ್ನು ಬೇಟೆಯಾಡುವುದಿದೆ. ಹುಲಿ ಚಿರತೆಗಳು ಇವುಗಳ ಸ್ವಾಭಾವಿಕ ಶತ್ರುಗಳು. ***

**ಬೊಜ್ಜು:** ವಯಸ್ಸು, ಲಿಂಗ ಹಾಗೂ ಎತ್ತರಗಳಿರುವ ವೈಯಕ್ತಿಕ ಭೇದಗಳಿಗೆ ಅನುಸಾರವಾಗಿ ಸರಾಸರಿ ಇರಬೇಕಾದ ತೂಕಕ್ಕಿಂತಲೂ ಅಧಿಕ ದೇಹತೂಕ (ಹೆಂಗಸರಲ್ಲಿ ಪ್ರತಿಶತ 30 ಹಾಗೂ ಗಂಡಸರಲ್ಲಿ ಪ್ರತಿಶತ 20 ಕ್ಕಿಂತ ಹೆಚ್ಚಿಗೆ) ಹಾಗೂ ಆಕಾರ ಇರುವ ವ್ಯಕ್ತಿಯ ಸ್ಥಿತಿ (ಒಬೇಸಿಟಿ). ಸಾಮಾನ್ಯವಾಗಿ ವಯಸ್ಸಿಗೆ ಹೊಂದಿಕೊಂಡು ತೂಕವಿರುತ್ತದೆ. ವ್ಯಕ್ತಿ ತನ್ನ ದೇಹದ ಆವಶ್ಯಕತೆಗಿಂತ ಹೆಚ್ಚಿನ ಆಹಾರ ಸೇವಿಸಿದಾಗ ಆತನ ತೂಕ ಹೆಚ್ಚಾಗುತ್ತದೆ. ತೂಕ ನಿಯಂತ್ರಣದಲ್ಲಿ ಮಿದುಳು ಭಾಗವಾದ ಹೈಪೊತೆಲಮಸಿನಲ್ಲಿರುವ ಒಂದು ಕೇಂದ್ರ ಮುಖ್ಯ ಪಾತ್ರವಹಿಸುತ್ತದೆ. ಈ ಕೇಂದ್ರಕ್ಕೆ ಆಘಾತವಾದಾಗ ಹೆಚ್ಚಿಗೆ ತಿನ್ನುವಂತಾಗುತ್ತದೆ. ಉದಾಹರಣೆಗೆ ತಲೆಯ ಬುರುಡೆಯೊಳಗೆ ದುರ್ಮಾಂಸ ಬೆಳೆದಾಗ, ಮಿದುಳಿನ ಮೂರನೆಯ ಕುಹರದ ತಳದಲ್ಲಿ ಗೆಡ್ಡೆ ಬೆಳೆದಾಗ, ಮೂರನೆಯ ಕುಹರದ್ರವದಲ್ಲಿ ಒತ್ತಡ ಏರಿಕೆ ಆದಾಗ ಅಥವಾ ಪಿಟ್ಯುಟರಿ ಗ್ರಂಥಿಯಲ್ಲಿ ಗೆಡ್ಡೆ ಬೆಳೆದಾಗ ಸ್ಥೂಲಕಾಯ ಉಂಟಾಗುತ್ತದೆ. ಮಾನಸಿಕಕಾರಣಗಳು ದೇಹದ ತೂಕವನ್ನು ವ್ಯತ್ಯಾಸ ಮಾಡಬಲ್ಲುವು. ಸ್ಥೂಲಕಾಯದಲ್ಲಿ ತೂಕ ಹೆಚ್ಚಾಗಲು ಚರ್ಮದ ಅಡಿಯಲ್ಲಿರುವ ಕೊಬ್ಬು ಮುಖ್ಯ ಕಾರಣವಾಗಿರುತ್ತದೆ.

ಬೊಜ್ಜು ಸಾಮಾನ್ಯವಾಗಿ ಹೊಕ್ಕಳದ ಅಂಡವಾಯುವನ್ನು ಉಂಟುಮಾಡುತ್ತದೆ. ಹೆಚ್ಚಿಗೆ ದಪ್ಪವಾಗಿರುವ ವ್ಯಕ್ತಿಗಳಲ್ಲಿ ಚರ್ಮದ ಕೆಳಗಡೆಯಲ್ಲಿ ಅಲ್ಲದೆ ದೇಹದ ಒಳಗಿರುವ ಅಂಗಾಂಶಗಳಲ್ಲಿಯೂ ಕೊಬ್ಬು ಶೇಖರವಾಗಿರುತ್ತದೆ. ಕೆಲವು ಜನರಲ್ಲಿ ಬೊಜ್ಜು ವಂಶಪಾರಂಪರ್ಯವಾಗಿ ಬರಬಹುದು. ಹೆಚ್ಚಿನ ಆಹಾರ ಸೇವನೆಯಿಂದ ದೇಹದ ಅವಶ್ಯಕತೆಗೆ ಮೀರಿದ ಆಹಾರ ಕೊಬ್ಬಾಗಿ ರೂಪುಗೊಂಡು ನಮ್ಮ ದೇಹದಲ್ಲಿ ಶೇಖರವಾಗುತ್ತದೆ. ಒಂದೇ ವಿಧವಾದ ಆಹಾರವನ್ನು ಸೇವಿಸುವುದರಿಂದ ಕೆಲವರು ದಪ್ಪವಾದರೆ ಇನ್ನು ಕೆಲವರ ದೇಹತೂಕದ ಮೇಲೆ ಅದರಿಂದ ಯಾವ ತೆರನಾದ ಪರಿಣಾಮವೂ ಉಂಟಾಗುವುದಿಲ್ಲ. ಪ್ರಾರಂಭದಲ್ಲಿ ಮಾನಸಿಕ ಕಾರಣಗಳಿಂದ ಬಲತ್ಕಾರದಿಂದ ಇಲ್ಲವೆ ಭಾವಾತಿರೇಕದಿಂದ ಕೆಲವರು ಹೆಚ್ಚಿಗೆ ಆಹಾರ ಸೇವಿಸಲು ಪ್ರಾರಂಭಿಸುತ್ತಾರೆ. ಕೊನೆಗೆ ಅವರಿಗೆ ಅದು ರೂಢಿಯಾಗಿಬಿಡುತ್ತದೆ. ಅಂಥವರು ದೇಹದ ಅವಶ್ಯಕತೆಗಿಂತ ಹೆಚ್ಚಿನ ಆಹಾರ ಸೇವನೆಮಾಡಿ ದಪ್ಪವಾಗುತ್ತಾರೆ. ದೇಹದ ಅವಶ್ಯಕತೆಗೆ ಸಾಕಾಗುವಷ್ಟು ಮಾತ್ರ ಆಹಾರ ಸೇವಿಸಿದರೂ ಒಬ್ಬ ವ್ಯಕ್ತಿಗೆ ಬಲವಂತವಾಗಿ ಜಡತೆ ಏರ್ಪಟ್ಟಲ್ಲಿ ದೇಹದ ತೂಕ ಹೆಚ್ಚಾಗುತ್ತದೆ. ಕೆಲವರಲ್ಲಿ ದಪ್ಪವಾಗುವಿಕೆ ಅವರ ದೇಹ ಪ್ರಕೃತಿಯನ್ನು ಅವಲಂಬಿಸುತ್ತದೆ.

ಸ್ಥೂಲಕಾಯದ ಜನರಲ್ಲಿ ಕಾಯಿಲೆಗಳು ಬಹಳ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ. ಮುಖ್ಯವಾಗಿ ಹೃದ್ರೋಗ, ರಕ್ತನಾಳಗಳ ಕಾಯಿಲೆ, ಚರ್ಮವ್ಯಾಧಿ, ಶ್ವಾಸಕೋಶಗಳ ರೋಗ, ಮೂಳೆಗಳ ತೊಂದರೆಗಳು, ಪಿತ್ತಕೋಶ ಮತ್ತು ಪಿತ್ತಜನಕಾಂಗದ ತೊಂದರೆಗಳು, ಜಠರರೋಗ, ಮಧುಮೇಹ ಇತ್ಯಾದಿ ಕಂಡುಬರುವ ಹಲವಾರು ಕಾಯಿಲೆಗಳಲ್ಲಿ ಕೆಲವು. ಸ್ಥೂಲಕಾಯದವರ ಆಯುಷ್ಯ ಬಹಳ ಮಟ್ಟಿಗೆ ಬೇರೆ ಜನರಿಗಿಂತ ಕಡಿಮೆ.

ದೇಹವನ್ನು ಸಮತೂಕದಲ್ಲಿರಿಸಬಯಸುವವರು ಪಿಷ್ಟಪದಾರ್ಥಗಳ ಮತ್ತು ಹೆಚ್ಚಿನ ಆಹಾರದ ಸೇವನೆಯನ್ನು ಕಡಿಮೆ ಮಾಡಬೇಕು. ಮೇದಸ್ಸನ್ನು ಕಡಿಮೆ ಸೇವಿಸಬೇಕು. ಆಹಾರ ಸೇವನೆ ಮತ್ತು ಶಕ್ತಿಯ ಉಪಯೋಗಗಳನ್ನು ಮನದಟ್ಟಾಗುವಂತೆ ತಿಳಿಯಬೇಕು. ಸ್ಥೂಲಕಾಯಕ್ಕೆ ಅಂಜುವವರು ವ್ಯಾಯಾಮಕ್ಕಿಂತ ಆಹಾರ ಸೇವನೆಯ ಕಡೆಗೆ ಗಮನ ಹರಿಸುವುದು ಒಳ್ಳೆಯದು. ಹಸಿವೆಯನ್ನು ಕುಗ್ಗಿಸುವ ಔಷಧಿಗಳಾದ ಓರ್ಲಿಸ್ಟಾಟ್ ಮತ್ತು ಸಿಬುಟ್ರಮಿನ್‌ಗಳು ಕೊಡುವ ಲಾಭ ಗಮನಾರ್ಹವಲ್ಲ. ಶಸ್ತ್ರಚಿಕಿತ್ಸೆಯಿಂದ ದೇಹದಲ್ಲಿ ಒಗ್ಗೂಡಿ ಬಿದ್ದ ಕೊಬ್ಬನ್ನು ತೆಗೆಯಬಹುದು. ***

**ಬ್ಯಾಕ್ಟೀರಿಯ:** ಬ್ಯಾಕ್ಟೀರಿಯಾಗಳು ಕೋಶಯುಕ್ತ (ಸೆಲ್ಯೂಲಾರ್) ಸೂಕ್ಷ್ಮಜೀವಿಗಳು. ಇವು ಭೂಮಿಯ ಎಲ್ಲ ವಾತಾವರಣಗಳಲ್ಲಿ ಜೀವಿಸುತ್ತವೆ. ಸ್ಕೈಜೋಮೈಸಿಟಿಸ್ ವರ್ಗದ ಸ್ಕೈಜೋಮೈಕೊಫೈಟ ವಿಭಾಗದ ಸದಸ್ಯರು. ನವ್ಯ ವರ್ಗೀಕರಣದ ಪ್ರಕಾರ ಬ್ಯಾಕ್ಟೀರಿಯಗಳನ್ನು ನೀಲಿ ಹಸಿರು ಪಾಚಿಯ ಜೊತೆ, ಮೊನೆರ ಸಾಮ್ರಾಜ್ಯದಲ್ಲಿ ಸೇರಿಸಲಾಗಿದೆ. ಗ್ರೀಕ್ ಭಾಷೆಯಲ್ಲಿ ಬ್ಯಾಕ್ಟೀರಿಯ ಪದದ ಅರ್ಥ ಪುಟ್ಟ ಕಂಬಿ (ರಾಡ್) ಗಳೆಂದು. ಬ್ಯಾಕ್ಟೀರಿಯಗಳ ಅಧ್ಯಯನಕ್ಕೆ ಬ್ಯಾಕ್ಟೀರಿಯಾಲಜಿ ಎಂದು ಹೆಸರು.

1676 ರಲ್ಲಿ ಡಚ್ ವಿಜ್ಞಾನಿ ಆಂಟನ್‌ವಾನ್ ಲುವೆನ್‌ಹಾಕ್ ಮೊಟ್ಟಮೊದಲು ತಾನೇ ತಯಾರಿಸಿದ ಸೂಕ್ಷ್ಮದರ್ಶಕದ ಮುಖಾಂತರ ಬ್ಯಾಕ್ಟೀರಿಯಾವನ್ನು ನೋಡಿದ. ಇವುಗಳನ್ನು ಎನಿಮಾಲಿಕ್ಯೂಲ್ಸ್ ಎಂದು ಕರೆದ. ನಂತರ ಬ್ಯಾಕ್ಟೀರಿಯ ಎಂದು ನಾಮಕರಣ ಮಾಡಲಾಯಿತು. ಫ್ರಾನ್ಸಿನ ವಿಜ್ಞಾನಿ ಲೂಯಿ ಪಾಶ್ಚರ್ (1822–1895) ಬ್ಯಾಕ್ಟೀರಿಯದಿಂದ ಕಿಣ್ವನ (ಫರ್ಮೆಂಟೇಷನ್) ಜೀರ್ಣ ಕ್ರಿಯೆ ಆಗುತ್ತದೆಂದು ಕಂಡು ಹಿಡಿದ. ಬ್ಯಾಕ್ಟೀರಿಯಗಳ ಮತ್ತು ಅವುಗಳಿಂದ ಉಂಟಾಗುವ ಕಾಯಿಲೆಗಳ ಬಗ್ಗೆ ಆಳವಾದ ಅಧ್ಯಯನ ಮಾಡಿದ. ಇವನನ್ನು ಬ್ಯಾಕ್ಟೀರಿಯಶಾಸ್ತ್ರದ ಪಿತಾಮಹನೆಂದು ಹೆಸರಿಸಲಾಗಿದೆ. ಅನಂತರ ಜರ್ಮನ್ ದೇಶದ ರಾಬರ್ಟ್ ಕಾಕ್ (1843–1910) ಬ್ಯಾಕ್ಟೀರಿಯಾಲಜಿ ವಿಜ್ಞಾನ ಬೆಳೆಯುವುದಕ್ಕೆ ಮಹತ್ತ್ವವಾದ ಪಾತ್ರವಹಿಸಿದ. ಇವನು ಕ್ಷಯ, ಆಂತ್ರ್ಯಾಕ್ಸ್, ಏಷಿಯಾಟಿಕ್ ಕಾಲರ ರೋಗಗಳು ಬ್ಯಾಕ್ಟೀರಿಯಾದಿಂದ ಉಂಟಾಗುತ್ತವೆಂದು ತಿಳಿಸಿದ. ಎಮಿಲಿ ರೊಕ್ಸ ಮತ್ತು ಎಮಿಲಿ ಬ್ಹೆರಿಂಗ್ಸ್ ವಿಜ್ಞಾನಿಗಳು ಬ್ಯಾಕ್ಟೀರಿಯದಿಂದ ಬರುವ ಡಿಫ್ತೀರಿಯ ರೋಗಕ್ಕೆ ಪ್ರತಿಜೀವಿವಿಷವನ್ನು (ಆಂಟಿಟಾಕ್ಸಿನ್) ಕಂಡು ಹಿಡಿದರು. ಅಮೆರಿಕದ ವಿಜ್ಞಾನಿ ಟಿ.ಜೆ ಬ್ಯೂರಿಲ್ (1879) ಅನೇಕ ಸಸ್ಯರೋಗಗಳಿಗೆ ವಿವಿಧ ಬಗೆಯ ಬ್ಯಾಕ್ಟೀರಿಯಗಳೆ ಕಾರಣ ಎಂದು ತಿಳಿಸಿದ. ಅಮೆರಿಕದ ಥಿಯೋಬಾಲ್ಡ್ ಸ್ಮಿತ್ 1893 ರಲ್ಲಿ ಟೆಕ್ಸಾಸ್ ಫೀವರ್ ಉಂಟು ಮಾಡುವ ರೋಗಾಣುಗಳನ್ನು ಹಸುವಿನ ರಕ್ತಕಣಗಳಲ್ಲಿ ಕಂಡು ಹಿಡಿದ. ನಂತರ ವಿಶ್ವವ್ಯಾಪಿ ಅನೇಕ ಜೀವ ವಿಜ್ಞಾನಿಗಳು ವಿವಿಧ ಪ್ರಭೇದದ ಬ್ಯಾಕ್ಟೀರಿಯಗಳನ್ನು ಕಂಡು ಹಿಡಿದು, ಬ್ಯಾಕ್ಟೀರಿಯ ವಿಜ್ಞಾನಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ.




ಮಾದರಿ ಬ್ಯಾಕ್ಟೀರಿಯ

ಪ್ರಕೃತಿಯಲ್ಲಿ ಬ್ಯಾಕ್ಟೀರಿಯಗಳು ವ್ಯಾಪಕವಾಗಿ ಹರಡಿವೆ. ಇವು ಕೊಳ, ಕಂದಕ, ಹರಿಯುವ ತೊರೆ, ನದಿ, ಸಮುದ್ರ, ಹೊಲಸು ಮತ್ತು ಗೊಬ್ಬರದ ಗುಡ್ಡೆ, ಮಣ್ಣು, ಗಾಳಿ, ಭೂಮಿಯ ಆಳದಲ್ಲಿ ಸಿಗುವ ಕಲ್ಲೆಣ್ಣೆ ಅಥವಾ ಪೆಟ್ರೋಲ್, ಆಹಾರ, ಕೊಳೆಯುವ ಜೈವಿಕ ವಸ್ತು, ದೇಹದ ಮೇಲ್ಮೈ, ಮನುಷ್ಯ ಮತ್ತು ಪ್ರಾಣಿಗಳ ಕರುಳು, ಧ್ರುವ ಪ್ರದೇಶದ ಮಂಜುಗಡ್ಡೆ, ಕುದಿಯುವ ಚಿಲುಮೆ, ಪರ್ವತ ತುದಿ ಹೀಗೆ ಸರ್ವತ್ರ ವಾಸಿಸುತ್ತವೆ.

ಹೆಚ್ಚಿನ ಬ್ಯಾಕ್ಟೀರಿಯಾಗಳು ವಾತಾವರಣದ ಉಷ್ಣಾಂಶ $5^{0}$ ಸೆ ಗಿಂತ ಹೆಚ್ಚಿದ್ದಾಗ ಚಟುವಟಿಕೆಯಿಂದಿರುತ್ತವೆ. ಆದರೆ, ಸಮುದ್ರ ಮತ್ತು ಮಣ್ಣಿನಲ್ಲಿರುವ ಬ್ಯಾಕ್ಟೀರಿಯಗಳು $0^{0}$ ಸೆ ಅಥವಾ ಸ್ವಲ್ಪ ಕಡಿಮೆ ತಾಪಮಾನದಲ್ಲಿ ಚುರುಕಾಗಿರುತ್ತವೆ. ಮಣ್ಣಿನಲ್ಲಿರುವ ಬ್ಯಾಕ್ಟೀರಿಯಗಳಿಗೆ ಗರಿಷ್ಠ ಉಷ್ಣಾಂಶ $30^{0}$ ಸೆ ಪ್ರಾಣಿ ಪರೋಪಜೀವಿಗಳಲ್ಲಿರುವ ಬ್ಯಾಕ್ಟೀರಿಯಗಳಿಗೆ ಗರಿಷ್ಠ ಉಷ್ಣಾಂಶ $70^{0}$ ಸೆ ಗಿಂತ ಹೆಚ್ಚಿದ್ದಾಗ ಇವುಗಳ ಚಟುವಟಿಕೆ ಸ್ಥಗಿತಗೊಳ್ಳುವುದು. ಕೆಲವು ಬ್ಯಾಕ್ಟೀರಿಯಾಗಳು ವಾತಾವರಣದಲ್ಲಾಗುವ ವೈಪರೀತ್ಯಗಳನ್ನು ತಡೆದುಕೊಂಡು ಜೀವಿಸಲು, ಬೀಜಾವಸ್ಥೆ ಅಥವಾ ಸುಪ್ತಾವಸ್ಥೆಯಂತಹ ಮಾರ್ಪಾಡು ಹೊಂದುತ್ತವೆ. ಅನುಕೂಲಕರ ವಾತಾವರಣ ಮರುಕಳಿಸಿದಾಗ ಮತ್ತೆ ತಮ್ಮ ಚಟುವಟಿಕೆಯನ್ನು ಪ್ರಾರಂಭಿಸುತ್ತವೆ. ಬ್ಯಾಕ್ಟೀರಿಯಾಗಳಲ್ಲಿರುವ ಈ ಸಾಮರ್ಥ್ಯವು ಅವು ಭೂಮಿಯ ಮೇಲೆ ವ್ಯಾಪಕವಾಗಿ ಹರಡಿರುವುದಕ್ಕೆ ಕಾರಣ.

ಸಾಮಾನ್ಯ ಲಕ್ಷಣಗಳು: ಇವು 1) ಏಕಕೋಶ ಜೀವಿಗಳು. 2) ಇವುಗಳ ಆಕಾರ ಗೋಲಾಕೃತಿ, ಸರಳು ರೀತಿ, ಸುರುಳಿ ರೀತಿ ಅಥವಾ ಕವಲಾಗಿರಬಹುದು. ಕೆಲವು ಬ್ಯಾಕ್ಟೀರಿಯಾಗಳ ಕೋಶಗಳು ಸೇರಿಕೊಂಡು ದಾರದಂತೆ (ಫಿಲಮೆಂಟ್) ತಳುಕಿಕೊಂಡಿವೆ. ವಾತಾವರಣಕ್ಕೆ ಅನುಗುಣವಾಗಿ ಇವುಗಳ ಬಾಹ್ಯ ಚಹರೆಯಲ್ಲಿ ಬದಲಾವಣೆಯಾಗುತ್ತದೆ. ಬೆಳೆಸಿದಾಗ, ಇವು ತಮ್ಮ ಲಕ್ಷಣಗಳನ್ನು ಉಳಿಸಿಕೊಳ್ಳುತ್ತವೆ. 3) ಇವುಗಳ ಗಾತ್ರವನ್ನು ಮೈಕ್ರಾನ್ (ಮೈಕ್ರೊ ಮೀಟರ್) ನಲ್ಲಿ ಅಳೆಯುವರು. ಕೆಲವು 1 ಮೈಮಿ, 0.5 ಮೈಮೀ (ಗೋಲಕೃತಿಯವು). ಸರಳು ರೀತಿಯವು 2 ಮೈಮೀ ನಿಂದ 10 ಮೈಮೀ ನಷ್ಟು ಉದ್ದವಿರುತ್ತವೆ. 4) ಚಲನೆ ಇರಬಹುದು ಅಥವಾ ಇಲ್ಲದಿರಬಹುದು. 5) ಆಮ್ಲಜನಕ ಸೇವನೆ ಅಥವಾ ಆಮ್ಲಜನಕ ರಹಿತ ಅಥವಾ ಅನುಮೋದಕ ವಾಯುಜೀವಿ ಅಥವಾ ಅನುಮೋದಕ ನಿರ್ವಾಯು ಜೀವಿಗಳು. 6) ನಿರ್ದಿಷ್ಟವಾದ ಬೀಜಕೇಂದ್ರವಿಲ್ಲ (ಪ್ರೋಕ್ಯಾರಿಯೊಟ್), ವರ್ಣ ಕಣಗಳು (ಕ್ರೊಮಾಟಿನ್ ಗ್ರಾನ್ಯೂಲ್) ಆದಿಮ ಬೀಜಕೇಂದ್ರಗಳಾಗಿರುತ್ತವೆ. 7) ಕೋಶಭಿತ್ತಿ ಮ್ಯೂರಿನ್ ಆಗಿದೆ. 8) ಕೆಲವು ಬ್ಯಾಕ್ಟೀರಿಯಾಗಳಲ್ಲಿ ಒಂದು ಅಥವಾ ಹಲವು ಅಂಚುಗೂದಲು ಅಥವಾ ಕಶಾಂಗಗಳಿವೆ. 9) ವಾತಾವರಣ ಅನುಕೂಲವಾಗಿದ್ದಾಗ ಇವು ತೀವ್ರ ಗತಿಯಲ್ಲಿ ಬೆಳೆಯುತ್ತವೆ. ಪ್ರಯೋಗ




ಬ್ಯಾಸಿಲಸ್ ಬ್ಯಾಕ್ಟೀರಿಯಗಳ ವಿವಿಧ ಪ್ರಭೇದಗಳು




ಬ್ಯಾಕ್ಟೀರಿಯಗಳ ಆಕಾರಗಳು

ಶಾಲೆಯ ಕೃತಕ ವಾತಾವರಣದಲ್ಲಿ ಬೆಳೆಸಿದಾಗ ಪ್ರತಿ 15 ನಿಮಿಷಕ್ಕೊಮ್ಮೆ ಸಂತಾನೋತ್ಪತ್ತಿ ಮಾಡಿ, ಅತಿ ಹೆಚ್ಚಿನ ಸಂಖ್ಯೆಯಲ್ಲಿ ವೃದ್ಧಿಯಾಗಿ ಗುಂಪು ಗುಂಪಾಗಿ ಕಾಣುತ್ತವೆ. ಕೆಲವು ಪ್ರಭೇದಗಳಲ್ಲಿ ಅಥವಾ ಒಂದು ಪ್ರಭೇದದ ಬೇರೆ ಬೇರೆ ತಳಿಗಳಲ್ಲಿ ಬಣ್ಣ, ಆಕಾರ, ವಿಭಿನ್ನ. ಈ ಗುಂಪುಗಳಲ್ಲಿ ಕೆಲವು ಪೂತಿಜೀವಿ (ಸ್ಯಾಪ್ರೊಫೈಟ್) ಅಥವಾ ಪರೋಪಜೀವಿ ಅಥವಾ ರೋಗಕಾರಗಳಾಗಿವೆ. ಬ್ಯಾಕ್ಟೀರಿಯಾಗಳಲ್ಲಿ ಪ್ರೊಟೀನ್ ಮತ್ತು ಶರ್ಕರ

ಪಿಷ್ಟಗಳಿಂದಾದ ಸ್ಪಷ್ಟ ಕೋಶಭಿತ್ತಿ ಇದೆ. ಇದು ಸಾಮಾನ್ಯವಾಗಿ ಮ್ಯೂರಿನ್‌ನಿಂದಾಗಿದೆ. ಆದರೆ, ಸೆಲ್ಯುಲೋಸ್ ಇರುವುದಿಲ್ಲ. ಕೋಶಭಿತ್ತಿಯ ಸುತ್ತಲು ಲೋಳೆಯಂಥ ಪದರವಿರುತ್ತದೆ.

ಕೆಲವು ಬ್ಯಾಕ್ಟೀರಿಯಾಗಳಲ್ಲಿ ಈ ಪದರ ಕ್ಯಾಪ್ಸ್ಯೂಲ್‌ಗಳಾಗಿ ಮಾರ್ಪಾಡಾಗಿದೆ. ವ್ಯತಿರಿಕ್ತವಾದ ವಾತಾವರಣದಲ್ಲಿ ಈ ಕ್ಯಾಪ್ಸೂಲ್ ಬ್ಯಾಕ್ಟೀರಿಯಾಕ್ಕೆ ರಕ್ಷಣೆ ಕೊಡುತ್ತದೆ. ಅನೇಕ ವಿಧಗಳಲ್ಲಿ ಒಂದು ಅಥವ ಹೆಚ್ಚು ತೆಳ್ಳನೆಯ, ಚಾವಟಿ ರೀತಿಯ ಎಳೆ ಇರುತ್ತದೆ. ಇದನ್ನು ಕಶಾಂಗವೆಂದು ಕರೆಯುತ್ತಾರೆ. ಕಶಾಂಗ ಕೋಶದ್ರವ್ಯದಿಂದ ಪ್ರಾರಂಭವಾಗುತ್ತದೆ. ಕಶಾಂಗವಿರುವ ಬ್ಯಾಕ್ಟೀರಿಯಾಗಳಲ್ಲಿ ಚಲನೆ ಇರುತ್ತದೆ. ಕೆಲವು ಬ್ಯಾಕ್ಟೀರಿಯಾಗಳ ಜೀವಕೋಶಗಳಲ್ಲಿ ಚಿಕ್ಕದಾದ ಗಟ್ಟಿಯಾಗಿ ಕಾಣುವ, ಚೂಪಾದ, ಮತ್ತು ಚಾಚಿಕೊಂಡಿರುವ ರಚನೆಗಳಿವೆ. ಇವಕ್ಕೆ ರೋಮವೆನ್ನುತ್ತಾರೆ. ಇವು ಕಾಂಜುಗೇಷನ್ ಕ್ರಿಯೆಗೆ ಸಹಾಯಕವಾಗಿವೆ.

ಕೋಶಭಿತ್ತಿಯು ಪ್ಲಾಸ್ಮ ಪೊರೆಯನ್ನು ಮತ್ತು ಪ್ಲಾಸ್ಮ ಪೊರೆ ಕೋಶ ದ್ರವ್ಯವನ್ನು ಆವರಿಸಿವೆ. ಜೀವಕೋಶದಲ್ಲಿ ಕೋಶದ್ರವ್ಯ ಒಂದೇ ಸಮನಾಗಿ ಹರಡಿದೆ. ಇದರಲ್ಲಿ ಅನೇಕ ರಸದಾನಿಗಳಿವೆ. ಸಂಗ್ರಹಿಸಿದ ಆಹಾರ ಕಣಗಳು (ವೆಲ್ಯೂಟಿನ್, ಗ್ಲೈಕೊಜನ್, ಕೊಬ್ಬು ಮತ್ತು ಗಂಧಕ) ಮತ್ತು ಇನ್ಸಿಪಿಯೆಂಟ್ ಬೀಜಕೇಂದ್ರ ಕೋಶದ್ರವ್ಯದಲ್ಲಿದೆ. ಜೀವಕೋಶಗಳಲ್ಲಿ ಶೇ.90ರಷ್ಟು ನೀರು ಇರುತ್ತದೆ. ಸುವ್ಯವಸ್ಥಿತವಾದ ಬೀಜಕೇಂದ್ರ, ನ್ಯೂಕ್ಲಿಯೊಲಸ್, ಹಾಗೂ ಬೀಜಕೇಂದ್ರದ ಪದರ ಇರುವುದಿಲ್ಲ. ಆದರೆ, ಬೀಜಕೇಂದ್ರದಲ್ಲಿ ಒಂದು ಅಥವಾ ಎರಡು ವರ್ಣಗ್ರಾಹಿ (ಕ್ರೊಮಾಟಿನ್) ಇರುವುವು. ಇವು ವರ್ಣತಂತುವನ್ನು ನಿರೂಪಿಸುತ್ತವೆ. ರಾಸಾಯನಿಕವಾಗಿ ಮಡಿಚಿಕೊಂಡ ಡಿಎನ್‌ಎ ತಂತುಗಳಿಂದ ಕೂಡಿವೆ. ಇದು ಆನುವಂಶಿಕ ವಸ್ತು. ಕೋಶದ್ರವ್ಯದಲ್ಲಿ ಪ್ರೊಟೀನ್ ತಯಾರಿಸಲು ರೈಬೋಸೋಮ್ ಅಥವಾ ಪಾಲಿ ರೈಬೋಸೋಮ್ ಇರುತ್ತದೆ.

ಸ್ಪೋರುಲೇಶನ್ (ಬೀಜಕ ಜನನ) ಸಮಯದಲ್ಲಿ, ನಿರ್ಲಿಂಗ ರೀತಿಯ ವಂಶಾಭಿವೃದ್ಧಿಗಾಗಿ ಇಡೀ ಜೀವಕೋಶ ಪೂರ್ಣವಾಗಿ ಬೀಜಕ (ಸ್ಪೋರ್) ವಾಗಿ ರೂಪಾಂತರವಾಗುತ್ತದೆ.

ಆಕಾರಗಳು:– ಬ್ಯಾಕ್ಟೀರಿಯಾಗಳಲ್ಲಿ ನಾಲ್ಕು ಆಕಾರದ ಕೋಶ ಕಣಗಳನ್ನು ಗುರುತಿಸಿದ್ದಾರೆ. 1) ಬ್ಯಾಸಿಲಸ್ 2) ಕಾಕಸ್ 3) ಸ್ಪೈರಲಂ 4) ಕಾಮಾಸ್

1) ಬ್ಯಾಸಿಲಸ್: ಈ ಜಾತಿಯ ಬ್ಯಾಕ್ಟೀರಿಯ ಉದ್ದವಾಗಿ, ಕಂಬಿಯಾಕಾರದಲ್ಲಿದೆ. ಬ್ಯಾಕ್ಟೀರಿಯಾದ ಪ್ರಭೇದಗಳಲ್ಲೇ ಇವಕ್ಕೆ ಗಾತ್ರದಲ್ಲಿ ಎರಡನೆ ಸ್ಥಾನ. ಇವುಗಳ ಆಕಾರದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಅಂಡಾಕೃತಿಯ ಅಥವಾ ದುಂಡಾಗಿ ಚಪ್ಪಟೆ ತುದಿ, ಬದಿಗಳಲ್ಲಿ ಅಗಲಕ್ಕಿಂತ ತುಂಬ ಉದ್ದವಾಗಿ, ಚಿಕ್ಕದಾಗಿರುತ್ತವೆ. ಬ್ಯಾಸಿಲಸ್ ಬ್ಯಾಕ್ಟೀರಿಯಾಗಳಲ್ಲಿ ಅನೇಕ ವಿಧಗಳಿವೆ. ಪ್ರತ್ಯೇಕವಾದ ಒಂದೇ ಜೀವಕೋಶವಿದ್ದರೆ, ಬ್ಯಾಸಿಲಸ್ ಎಂದೂ, ಜೋಡಿಯಾಗಿದ್ದರೆ, ಡಿಪ್ಲೊ ಬ್ಯಾಸಿಲಸ್ ಎಂದೂ, ಸರಪಳಿ ರೀತಿಯಾಗಿದ್ದರೆ ಸ್ಟ್ರೆಪ್ಟೊ ಬ್ಯಾಸಿಲಸ್ (ಬ್ಯಾಸಿಲಸ್ ಸಬ್‌ಟಿಲಿಸ್), ಜೀವಕೋಶಗಳ ಮಧ್ಯೆ ಹೆಚ್ಚು ಸಂಪರ್ಕವಿದ್ದು, ಸರಪಳಿಯನ್ನು ಹೋಲುವುದಕ್ಕೆ ಟೈಕೋಮ್ ಸ್ಯಾಪ್ರೋಸ್ಪೊರ, ಬೆಂಕಿ ಕಡ್ಡಿ ರೀತಿಯ ಜೀವಕೋಶಗಳು ಅಕ್ಕಪಕ್ಕ ಜೋಡಣೆಯಾಗಿದ್ದರೆ ಪ್ಯಾಲಿಸೈಡ್ ಎಂದೂ ಕರೆಯುತ್ತಾರೆ. ಉದಾ: ಕೊರೈನಿ ಬ್ಯಾಕ್ಟೀರಿಯಂ ಡಿಫ್ತಿರಿಯೆ. ಕೆಲವು ಬ್ಯಾಕ್ಟೀರಿಯಾಗಳಲ್ಲಿ ಉದ್ದವಾದ ಕವಲುಗಳಿದ್ದು, ಅನೇಕ ಕೋಶಕೇಂದ್ರಗಳಿಂದ ಕೂಡಿದ ತಂತುಗಳು (ಹೈಪೆ) ಸೇರಿ ಕವಕಜಾಲ (ಮಿಸೇಲಿಯಂ) ಆಗಿರುತ್ತದೆ. ಉದಾ: ಸ್ಟ್ರೆಪ್ಟೊಮೈಸಿಸ್;

2) ಕಾಕಸ್:– ಈ ವಿಧದಲ್ಲಿ ಜೀವಕೋಶ ದುಂಡಾಗಿರುತ್ತದೆ. ಬ್ಯಾಕ್ಟೀರಿಯಗಳಲ್ಲೇ ಇವು ಚಿಕ್ಕ ಗಾತ್ರದುವು. ಇವುಗಳಲ್ಲಿ ಅನೇಕ ವಿಧ. ಪ್ರತ್ಯೇಕವಾದ ಜೀವಕೋಶವಿದ್ದರೆ, ಮೈಕ್ರೊಕಾಕಸ್, ಜೋಡಿಯಾಗಿದ್ದರೆ ಡಿಪ್ಲೊಕಾಕಸ್, ಸರಪಳಿಯಂತಿದ್ದರೆ ಸ್ಟ್ರೆಪ್ಟೊಕಾಕಸ್, ಪದರಗಳಿದ್ದರೆ ಸ್ಟಾಫೈಲೊಕಾಕಸ್, ನಾಲ್ಕು ಜೀವಕೋಶಗಳಿದ್ದರೆ ಟೆಟ್ರಾಕಾಕೈ, ಜೀವಕೋಶಗಳು ಘನಾಕೃತಿಯಲ್ಲಿ ಜೋಡಣೆಯಾಗಿದ್ದರೆ ಸರ್‌ಸಿನೆ ಎಂದು ಕರೆಯಲಾಗಿದೆ. ಉದಾ: ಅಝುಟೊಬ್ಯಾಕ್ಟರ್.

3) ಸ್ಪೈರಿಲಂ: ಇವುಗಳ ಜೀವಕೋಶ ಬಿಡಿಯಾದ ಸುರುಳಿಯಾಕಾರದಲ್ಲಿರುತ್ತದೆ. ಗಾತ್ರದಲ್ಲಿ ಇವಕ್ಕೆ ಅಗ್ರಸ್ಥಾನ. ಉದಾ: ಸ್ಪೈರೊಕೀಟ, ರೊಡೊಸ್ಪೈರಿಲಂ.

4) ಕಾಮಾಸ್: ಇವುಗಳ ಕೋಶವು ಸ್ವಲ್ಪ ಬಾಗಿರುತ್ತದೆ. ಉದಾ: ವೈಬ್ರಿಯೊ ಕಾಲರೆ.

ಕೆಲವು ಬ್ಯಾಕ್ಟೀರಿಯಾಗಳು ಹಲವು ಆಕಾರಗಳನ್ನು ಹೊಂದಿರಬಹುದು. ಈ ವಿದ್ಯಮಾನವನ್ನು ಪ್ಲೀಯೊಮಾರ್ಫಿಸಮ್ ಎಂದು ಕರೆಯಲಾಗಿದೆ. ಉದಾ: ಅಝುಟೊಬ್ಯಾಕ್ಟರ್.

ಯುಬ್ಯಾಕ್ಟೀರಿಯೇಲ್ ಪ್ರಭೇದದ ಮಾದರಿ ಜೀವಕೋಶ ಅಥವಾ ನಿಜವಾದ ಬ್ಯಾಕ್ಟೀರಿಯ ಬ್ಯಾಸಿಲಸ್ ಆಗಿರುತ್ತದೆ. ಇದರ ವ್ಯಾಸ 1 ಮೈಮೀ ನಿಂದ ಕೆಲವು ಮೈಮೀಗಳಷ್ಟು. ಈ ಎಲ್ಲ ಬ್ಯಾಕ್ಟೀರಿಯಾಗಳ ಸಾಮಾನ್ಯವಾದ ಆಕಾರ ಪಿಯರ್ ಆಕಾರ. ಉದಾ: ಪ್ಯಾಶ್ಚೂರಿಯ, ಲೋಬ್‌ಸ್ಪಿಯರ್, ಸಲ್ಫೊಲೋಬಸ್. ಅರ್ಧಗೋಳದ ಬದಲು, ಚಚ್ಚೌಕಾಕಾರ ತುದಿಯಿರುವ ಕಂಬಿಯಾಕಾರದಂತಿದೆ. ಉದಾ: ಬ್ಯಾಸಿಲಸ್ ಆಂತ್ರಾಸಿಸ್. ನಾಣ್ಯಗಳು ಒಂದರ ಮೇಲೊಂದು ಜೋಡಣೆ ರೀತಿಯ ಡಿಸ್ಕ್ ಆಕಾರ, (ಕ್ಯಾರಿಯೋಫೋನ್), ಸುರುಳಿ ರೀತಿಯ ಮೇಲ್ಮೈ ಇರುವ ಕಂಬಿಯಾಕಾರದುವು (ಉದಾ: ಸೆಲಿಬೆರಿಯ).

ಗಾತ್ರ: ಪ್ರಭೇದಗಳಿಗನುಗುಣವಾಗಿ ಬ್ಯಾಕ್ಟೀರಿಯಾಗಳ ಗಾತ್ರದಲ್ಲಿ ಹೆಚ್ಚಿನ ವ್ಯತ್ಯಾಸವಿದೆ. ಕಾಕಸ್ ಅಥವಾ ದುಂಡಾಗಿರುವ ಬ್ಯಾಕ್ಟೀರಿಯಾ ಗಾತ್ರವನ್ನು ವ್ಯಾಸದ ಅಳತೆಯಿಂದ ಅಳೆಯಲಾಗುವುದು. ಕಂಬಿ ಅಥವಾ ಸುರುಳಿಯಾಕಾರದುವುಗಳನ್ನು ಉದ್ದ ಮತ್ತು ಅಗಲದ ಅಳತೆಯಿಂದ ಅಳೆಯಲಾಗುವುದು. ಕೆಲವು ಬ್ಯಾಕ್ಟೀರಿಯಾಗಳ ಗಾತ್ರ 80 ಮೈಮೀ ಉದ್ದವಿರುತ್ತದೆ (ಗಂಧಕ ಮತ್ತು ಕಬ್ಬಿಣ ಬ್ಯಾಕ್ಟೀರಿಯಾಗಳು), ಕೆಲವು 0.2 ಮೈಮೀ ನಷ್ಟು ಚಿಕ್ಕದಾಗಿವೆ. ಆದರೆ, ಬಹುತೇಕ ಬ್ಯಾಕ್ಟೀರಿಯಾಗಳ ಗಾತ್ರ (ರೋಗಾಣುಗಳನ್ನು ಒಳಗೊಂಡು) 0.5 ಮೈಮೀ ನಷ್ಟು (ವ್ಯಾಸ). ಕಾಕಸ್ 0.5 ಮೈಮೀ ಉದ್ದ, 2 ರಿಂದ 3 ಮೈಮೀ ಅಗಲ. ಉದಾ: ಬ್ಯಾಸಿಲಸ್. ಬೀಜಕವನ್ನು ಉತ್ಪಾದಿಸುವ ಬ್ಯಾಕ್ಟೀರಿಯಗಳು ಸಾಮಾನ್ಯವಾಗಿ ಬೀಜಕವನ್ನು ಉತ್ಪಾದಿಸದವುಗಳಿಗಿಂತ ಗಾತ್ರದಲ್ಲಿ ದೊಡ್ಡವು.

ಎಶ್ಚೆರಿಷಿಯ ಕೋಲಿ 0.5 ಮೈಮೀ ಉದ್ದ, 1.0 ಮೈಮೀ ನಿಂದ 2.0 ಮೈಮೀ ಅಗಲ. ಪ್ರೋಟಿಯಸ್ ವ್ಲಲ್ಗಾರಿಸ್ 0.5 ಮೈಮೀ ನಿಂದ 1.0 ಮೈಮೀ ಉದ್ದ, 1.0 ಮೈಮೀ ನಿಂದ 3.0 ಮೈಮೀ ಅಗಲ. ಸಾಲ್ಮೊನೇಲ ಟೈಫೂಸ 0..6 ಮೈಮೀ ನಿಂದ 0.7 ಮೈಮೀ ಉದ್ದ, 2.0 ಮೈಮೀ ನಿಂದ 3.0 ಮೈಮೀ ಅಗಲ. ಸ್ಟ್ರೆಪ್ಟೊಕಾಕಸ್ 0.5 ಮೈಮೀ ನಿಂದ 1.0 ಮೈಮೀ ನಷ್ಟು ವ್ಯಾಸ. ಸ್ಟ್ರೆಪ್ಟೊಕಾಕಸ್ ಪೈಯೋನಜೀನ್ಸ್ 0.6 ಮೈಮೀ ನಿಂದ 1.0 ಮೈಮೀ ವ್ಯಾಸ. ಮೈಕ್ರೊಕಾಕಸ್ ಪೈಯೊಜೀನ್ಸ ವೆರ ಆರಿಯಸ್ 0.8 ಮೈಮೀ ನಿಂದ 1.0 ಮೈಮೀ ವ್ಯಾಸ. ಲ್ಯಾಕ್ಟೊ ಬ್ಯಾಸಿಲಸ್ ಅಸಿಡೊಫಿಲಸ್ 0.6 ಮೈಮೀ ನಿಂದ 0.9 ಮೈಮೀ ಉದ್ದ, 1.5 ಮೈಮೀ ನಿಂದ 6.0 ಮೈಮೀ ಅಗಲ. ಬ್ಯಾಸಿಲಸ್ ಆನ್‌ತ್ರ್ಯಾಸಿಸ್ 1.0 ಮೈಮೀ ನಿಂದ 1.5 ಮೈಮೀ ಉದ್ದ, 5.0 ಮೈಮೀ ನಿಂದ 10.0 ಮೈಮೀ ಅಗಲ.

ಬ್ಯಾಕ್ಟೀರಿಯದ ಗಾತ್ರ ಅಳತೆ ಮಾಡಲು ಆಕ್ಯುಲರ್ ಮೈಕ್ರೊಮೀಟರ್ ವಿಧಾನ ಅನುಸರಿಸುವರು. ಕ್ಯಾಮರ ಲ್ಯುಸಿಡದಿಂದಲು ಸಹ ಅಳೆಯಬಹುದು.




ಚಲನೆ: ಬ್ಯಾಕ್ಟೀರಿಯಾಗಳು ಸಾಮಾನ್ಯವಾಗಿ ಕಶಾಂಗಗಳಿಂದ ಚಲಿಸುತ್ತವೆ. ಕೆಲವು ಗಂಧಕ ಬ್ಯಾಕ್ಟೀರಿಯಗಳಲ್ಲಿ ಕಶಾಂಗಗಳು ಇಲ್ಲ. ಇವು ನಿಧಾನವಾಗಿ ತೆವಳಿಕೊಂಡು

ಚಲಿಸುತ್ತವೆ. ಕಶಾಂಗಗಳು ಬಹಳ ಸೂಕ್ಷ್ಮವಾಗಿದ್ದು, ಉದ್ದವಾಗಿ, ನೀಳವಾಗಿವೆ. ಇವುಗಳಿಂದ ಅಲೆಯಾಕಾರವಾಗಿ ಚಲಿಸುತ್ತವೆ. ಇವುಗಳ ತುದಿ ಮೊಂಡಾಗಿದ್ದು, ದಪ್ಪವಾಗಿದೆ. ಬ್ಯಾಕ್ಟೀರಿಯಾದ ಮಾದರಿ ಕಶಾಂಗದ ದಪ್ಪ 120Å ಮತ್ತು ಉದ್ದ 4 ಮೈಮೀ ನಿಂದ 5 ಮೈಮೀ. ಕಶಾಂಗವು ಬೇಸಲ್ ಗ್ರ್ಯಾನ್ಯುಲ್‍ನಿಂದ ಹುಟ್ಟುತ್ತದೆ. ಇದು ಯಾವಾಗಲೂ ಚಲನೆಯ ದಿಕ್ಕಿನ ಹಿಂದಕ್ಕೆ ತಿರುಗಿರುತ್ತದೆ.

ಕಶಾಂಗಗಳ ಸಂಖ್ಯೆ ಮತ್ತು ಅವುಗಳಿರುವ ಭಾಗವನ್ನು ಅವಲಂಬಿಸಿ, ಬ್ಯಾಕ್ಟೀರಿಯಾಗಳನ್ನು ಅನೇಕ ವಿಧವಾಗಿ ವರ್ಗೀಕರಿಸಿದ್ದಾರೆ. 1. ಏಟ್ರೈಕೇಸ್ ಬ್ಯಾಕ್ಟೀರಿಯ. ಇವುಗಳಿಗೆ ಕಶಾಂಗಗಳಿಲ್ಲ. ಉದಾ: ಕಾಕಸ್. 2. ಮೊನೊಟ್ರೈಕೇಸ್, ಇವುಗಳ ಜೀವಕೋಶದ ಒಂದು ತುದಿಯಲ್ಲಿ ಒಂದು ಕಶಾಂಗ ಇದೆ. ಉದಾ: ವಿಬ್ರಿಯೊ. 3. ಲೋಫೋ ಟ್ರೈಕಸ್, ಜೀವಕೋಶದ ಒಂದು ತುದಿಯಲ್ಲಿ ಅನೇಕ ಕಶಾಂಗಗಳಿವೆ. ಉದಾ: ಸ್ಪೈರಿಲ್ಲಮ್ ಅನ್‍ಡ್ಯೂಲ. 4. ಆ್ಯಂಫಿಟ್ರೈಕಸ್, ಎರಡು ಕಶಾಂಗಗಳ ಗೊಂಚಲು, ಜೀವಕೋಶದ ಎರಡು ತುದಿಯಲ್ಲಿದೆ. ಉದಾ: ಸ್ಪೈರಿಲ. 5. ಪೆರಿಟ್ರೈಕೋಸ್, ಜೀವಕೋಶದ ಸುತ್ತಲು ಕಶಾಂಗಗಳಿವೆ. ಉದಾ: ಸಾಲ್ಮೊನೆಲ್ಲ ಟೈಫೊಸ.

ಬ್ಯಾಕ್ಟೀರಿಯಾಗಳ ಚಲನ ವೇಗದಲ್ಲಿ ವ್ಯತ್ಯಾಸವಿದೆ. ಕೆಲವು ಬ್ಯಾಕ್ಟೀರಿಯಾಗಳು ಒಂದು ಗಂಟೆಯಲ್ಲಿ ಅವುಗಳ ಗಾತ್ರದ 2000ಪಟ್ಟು ಚಲಿಸುತ್ತವೆ. ಉದಾ: ಹೇ ಬ್ಯಾಸಿಲಸ್, ಒಂದು ಸೆಕೆಂಡಿಗೆ 200 ಮೈಮೀ ವೇಗದಲ್ಲಿ ಚಲಿಸುತ್ತವೆ. ಬ್ಯಾಕ್ಟೀರಿಯಾಗಳ ಈಜುವ ಸಮರ್ಥ್ಯ ಸೆಕೆಂಡಿಗೆ 20 ಮೈಮೀ

ಶರೀರದ (ಫಿಸಿಯಾಲಾಜಿಕಲ್) ಲಕ್ಷಣಗಳು: ಬ್ಯಾಕ್ಟೀರಿಯಾಗಳ ಬೆಳೆವಣಿಗೆಗೆ ಬೇಕಾದ ಉಷ್ಣಾಂಶವನ್ನು ಅವಲಂಬಿಸಿ ಅವನ್ನು 3 ವಿಧಗಳಾಗಿ ವರ್ಗೀಕರಿಸಲಾಗಿದೆ. 1. ಸೈಕ್ರೊಫಿಲ್ಸ್ ($0^{o}$ ಇಂದ $30^{o}$ಸೆ). 2. ಮಿಸೊಫಿಲ್ಸ್ ($15^{o}$ ನಿಂದ $45^{o}$ಸೆ). ಇವುಗಳಲ್ಲಿ ಉತ್ತಮ ಬೆಳೆವಣಿಗೆಯನ್ನು $25^{o}$ ನಿಂದ $40^{o}$ ಸೆ ತಾಪಮಾನದಲ್ಲಿ ಕಾಣಬಹುದು. ಥರ್ಮೊಫಿಲ್ಸ್ ($45^{o}$ ಸೆ. $60^{o}$ಸೆ).

ವಿವಿಧ ಗುಂಪಿನ ಬ್ಯಾಕ್ಟೀರಿಯಾಗಳಲ್ಲಿ ನಿರ್ದಿಷ್ಟವಾದ ಕನಿಷ್ಠ, ಗರಿಷ್ಠ ಮತ್ತು ಪ್ರಶಸ್ತ ಉಷ್ಣಾಂಶ ಅವುಗಳ ಬೆಳೆವಣಿಗೆಗೆ ಬೇಕು. ಉದಾ: ಸ್ಯೂಡೊಮೊನ್ಯಾಸ್ ಡೆಲ್ಫಿನಿಲ್ $1^{o}$ ಸೆ ನಿಂದ $30^{o}$ಸೆ ತಾಪಮಾನದಲ್ಲಿ ಬೆಳೆಯುತ್ತದೆ. ಆದರೆ ಅದರ ಪ್ರಶಸ್ತ ಬೆಳೆವಣಿಗೆ $25^{o}$ ಸೆ ಉಷ್ಣಾಂಶಬೇಕು.

ಕೆಲವು ಬ್ಯಾಕ್ಟೀರಿಯಾಗಳಿಗೆ (ವಾಯುಜೀವಿ), ವಾತಾವರಣದ ಆಮ್ಲಜನಕ ಅವಶ್ಯಕ. ಕೆಲವು ನಿರ್ವಾಯು ಜೀವಿಗಳು. ಆಮ್ಲಜನಕವಿರುವ ವಾತಾವರಣದಲ್ಲಿ ಇವುಗಳ ಬೆಳೆವಣಿಗೆ ಕುಂಠಿತವಾಗುವುದು. ಇನ್ನು ಕೆಲವು ಅನುಮೋದಕ ನಿರ್ವಾಯುಜೀವಿಗಳು. ಇವುಗಳಿಗೆ ಆಮ್ಲಜನಕದ ಅವಶ್ಯಕತೆ ಇಲ್ಲ. ಆದರೆ, ಆಮ್ಲಜನಕ ವಾತಾವರಣವಿದ್ದಾಗ್ಯೂ ಬೆಳೆಯಬಲ್ಲುವು.

ಬ್ಯಾಕ್ಟೀರಿಯಾಗಳ ಬೆಳೆವಣಿಗೆಗೆ ಲವಣ, ಆಮ್ಲ ಅಥವಾ ಕ್ಷಾರೀಯ ವಾತಾವರಣ ಅವಶ್ಯಕ. ಆದರೆ, ಹೆಚ್ಚಿನ ಬ್ಯಾಕ್ಟೀರಿಯಾಗಳು ತಟಸ್ಥ ವಾತಾವರಣದಲ್ಲಿ ಚೆನ್ನಾಗಿ ಬೆಳೆಯುತ್ತವೆ. ಉದಾ: ತಯೋಬ್ಯಾಸಿಲಸ್ ತೆಯೋಆಕ್ಸಿಡೆನ್ಸ್ ಆಮ್ಲೀಯ ವಾತಾವರಣದಲ್ಲಿ, ನೈಟ್ರೊಬ್ಯಾಕ್ಟರ್ ಪ್ರಭೇದದ ಬ್ಯಾಕ್ಟೀರಿಯಾಗಳು ಬೆಳೆಯುತ್ತವೆ. ಕೆಲವು ಬ್ಯಾಕ್ಟೀರಿಯಾಗಳಿಗೆ ಬೆಳಕು ಅವಶ್ಯಕ.

ಪೌಷ್ಟಿಕತೆ: ಪೌಷ್ಟಿಕತೆಯನ್ನು ಅವಲಂಬಿಸಿ ಬ್ಯಾಕ್ಟೀರಿಯಾಗಳನ್ನು ಎರಡು ವಿಧವಾಗಿ ವಿಂಗಡಿಸಲಾಗಿದೆ. 1. ಸ್ವಯಂಪೋಷಕ. 2. ಪರಾವಲಂಬಿ ಬ್ಯಾಕ್ಟೀರಿಯಾಗಳು.

ಸ್ವಯಂಪೋಷಕ ಬ್ಯಾಕ್ಟೀರಿಯಗಳು: ಇವು ತಮ್ಮ ಆಹಾರವನ್ನು ತಾವೆ ತಯಾರಿಸಿಕೊಳ್ಳುತ್ತವೆ. ಇದರಲ್ಲಿ ಎರಡು ವಿಧ 1. ದ್ಯುತಿ ಸಂಶ್ಲೇಷಕ 2. ರಾಸಾಯನಿಕ ಸಂಶ್ಲೇಷಕ ಬ್ಯಾಕ್ಟೀರಿಯ.

ದ್ಯುತಿಸಂಶ್ಲೇಷಕ ಬ್ಯಾಕ್ಟೀರಿಯಾಗಳು: ಬಣ್ಣವನ್ನು ಅವಲಂಬಿಸಿ, ದ್ಯುತಿಸಂಶ್ಲೇಷಕ ಬ್ಯಾಕ್ಟೀರಿಯಾಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವು ಹಸಿರು ಮತ್ತು ನೇರಳೆ ಬಣ್ಣದ ಬ್ಯಾಕ್ಟೀರಿಯಾಗಳು. ದ್ಯುತಿಸಂಶ್ಲೇಷಕ ಬ್ಯಾಕ್ಟೀರಿಯಾಗಳಲ್ಲಿ ಕಂಬಿ ರೀತಿಯ, ದುಂಡಗಿರುವ ಮತ್ತು ಸುರಳಿಯಾಕಾರದ ಬ್ಯಾಕ್ಟೀರಿಯಾಗಳಿವೆ. ಬ್ಯಾಕ್ಟೀರಿಯಾಗಳಲ್ಲಿ ಮತ್ತು ಸಸ್ಯಗಳಲ್ಲಿರುವ ಹರಿತ್ತಿನಲ್ಲಿ ರಾಸಾಯನಿಕವಾಗಿ ಹೆಚ್ಚಿನ ವ್ಯತ್ಯಾಸವಿಲ್ಲ.

ರಾಸಾಯನಿಕ ಸಂಶ್ಲೇಷಕ ಬ್ಯಾಕ್ಟೀರಿಯಾಗಳು: ಇವುಗಳಲ್ಲಿ ವರ್ಣದ್ರವ್ಯ (ಪಿಗ್ಮೆಂಟ್) ಇಲ್ಲ. ಇವು ಅಜೈವಿಕ ವಸ್ತುಗಳ ಆಕ್ಸಿಡೀಕರಣದಿಂದ ತಮ್ಮ ಶಕ್ತಿಯನ್ನು ಪಡೆದುಕೊಳ್ಳುತ್ತವೆ. ಆಕ್ಸಿಡೀಕರಣದಲ್ಲಿ ಉಪಯೋಗಿಸುವ ಅಜೈವಿಕ ವಸ್ತುಗಳನ್ನು ಅವಲಂಬಿಸಿ ಬ್ಯಾಕ್ಟೀರಿಯಾಗಳನ್ನು ಗಂಧಕದ ಬ್ಯಾಕ್ಟೀರಿಯಾ, ಕಬ್ಬಿಣ ಬ್ಯಾಕ್ಟೀರಿಯ, ಜಲಜನಕ ಬ್ಯಾಕ್ಟೀರಿಯಾ, ಇಂಗಾಲದ ಬ್ಯಾಕ್ಟೀರಿಯಾಗಳೆಂದು ವರ್ಗೀಕರಿಸಲಾಗಿದೆ. ತಯೋಬಸಿಲಸ್ ತಯೋಆಕ್ಸಿಡೆನ್ಸ್ ಗಂಧಕ ಬ್ಯಾಕ್ಟೀರಿಯಾ, ಫೆರೊಬ್ಯಾಸಿಲಸ್ ಕಬ್ಬಿಣ ಬ್ಯಾಕ್ಟೀರಿಯಾ.

ಪರಾವಲಂಬಿ ಬ್ಯಾಕ್ಟೀರಿಯಾಗಳು: ಈ ಬ್ಯಾಕ್ಟೀರಿಯಾಗಳಲ್ಲಿ ವರ್ಣ ದ್ರವ್ಯ (ಪಿಗ್ಮೆಂಟ್) ಇಲ್ಲ. ಇವುಗಳು ತಮ್ಮ ಆಹಾರಕ್ಕಾಗಿ ಬೇರೆ ಜೀವಿಗಳನ್ನು ಅವಲಂಬಿಸಿವೆ. ಸತ್ತ ಜೀವಿಗಳ ಮೇಲೆ ಬದುಕಿ, ಆಹಾರವನ್ನು ಪಡೆದುಕೊಳ್ಳುತ್ತವೆ. ಇವನ್ನು ಸ್ಯಾಪ್ರೊಫೈಟ್ ಅಥವಾ ಕೊಳೆತಿನಿಗಳೆನ್ನುವರು. ಕೊಳೆತಿನಿಗಳಲ್ಲಿ (ಸ್ಯಾಪ್ರೊಫೈಟ್) ಎರಡು ವಿಧ 1. ಕಿಣ್ವಿಸುವ (ಫರ್ಮೆಂಟೇಷನ್) ಬ್ಯಾಕ್ಟೀರಿಯಾ 2. ಪ್ಯೂಟ್ರಿಫಾಯಿಂಗ್ (ಕೊಳೆಯಿಸುವಿಕೆಯ) ಬ್ಯಾಕ್ಟೀರಿಯಾ.

ಫರ್ಮೆಂಟಿಂಗ್ (ಕಿಣ್ವನ) ಬ್ಯಾಕ್ಟೀರಿಯಾ: ಇವು ಶರ್ಕರ ಪಿಷ್ಟವನ್ನು ಉಸಿರಾಟದಲ್ಲಿ ಉಪಯೋಗಿಸುತ್ತವೆ. ಆದರೆ, ಇವುಗಳು ನಿರ್ವಾಯು ಜೀವಿಗಳು. ಆದ್ದರಿಂದ ಆಕ್ಸಿಡೀಕರಣ ಅಪೂರ್ಣವಾಗಿದ್ದು, ಮದ್ಯಸಾರವನ್ನು ಉತ್ಪತ್ತಿ ಮಾಡುತ್ತವೆ.

ಪ್ಯೂಟ್ರಿಫೈಯಿಂಗ್ ಬ್ಯಾಕ್ಟೀರಿಯಾ: ಇವು ಉಸಿರಾಟದಲ್ಲಿ ಪ್ರೊಟೀನ್ ಅಥವಾ ಸಾರಜನಕಯುಕ್ತ ವಸ್ತುಗಳನ್ನು ಉಪಯೋಗಿಸಿಕೊಂಡು, ಅಮೋನಿಯಾ ಮತ್ತು ಮಿಥೇನ್ (ಜವುಗು ಅನಿಲ) ಗಳನ್ನು ಬಿಡುಗಡೆ ಮಾಡುತ್ತವೆ.

ಬೆಳೆವಣಿಗೆ ಮತ್ತು ಸಂತಾನೋತ್ಪತ್ತಿ: ಬ್ಯಾಕ್ಟೀರಿಯಾಗಳ ಜೀವನ ಚಕ್ರದಲ್ಲಿ ಬೆಳೆವಣಿಗೆ ಮತ್ತು ಸಂತಾನೋತ್ಪತ್ತಿ ಕ್ರಿಯೆಗಳಿವೆ. ಆದರೆ, ಬೆಳೆವಣಿಗೆ ಎಂಬುದು ಈ ಜೀವಿಗಳ ಸಂಖ್ಯೆಯ ಹೆಚ್ಚಳಕ್ಕೆ ಮಾತ್ರ ಸೀಮಿತ. ವಿಭಜನೆಯ ಕೆಲವು ಹಂತಗಳಲ್ಲಿ ಮಾತ್ರ ಬ್ಯಾಕ್ಟೀರಿಯ ಜೀವಕೋಶದ ಗಾತ್ರದಲ್ಲಿ ಬದಲಾವಣೆಗಳನ್ನು ಕಾಣಬಹುದು.

ಬ್ಯಾಕ್ಟೀರಿಯಾಗಳಲ್ಲಿ ಸಂತಾನೋತ್ಪತ್ತಿ ದ್ವಿವಿಭಜನೆಯಿಂದ ಆಗುತ್ತದೆ. ಅಂದರೆ, ಒಂದು ಜೀವಕೋಶ ಎರಡು ಹೊಸ ಜೀವಕೋಶಗಳಾಗುವುದು. ಇದು ನಿರ್ಲಿಂಗ ಸಂತಾನೋತ್ಪತ್ತಿ. ಈ ವಿಧದ ಸಂತಾನೋತ್ಪತ್ತಿಯಲ್ಲಿ, ಜೀವಕೋಶ ಉದ್ದವಾಗುತ್ತದೆ. ಕೋಶದ ಗೋಡೆ ಮಧ್ಯದಲ್ಲಿ ಮಡಿಚಿಕೊಂಡು, ಅಡ್ಡಲಾಗಿ ಇನ್ನೊಂದು ಗೋಡೆ ಬೆಳೆದು, ಎರಡು ಹೊಸ ಜೀವಕೋಶಗಳಾಗುತ್ತವೆ. ಈ ಕ್ರಿಯೆ ಮರುಕಳಿಸುತ್ತಿರುತ್ತದೆ.

ಬ್ಯಾಕ್ಟೀರಿಯಾಗಳಲ್ಲಿ, ಸಂತಾನೋತ್ಪತ್ತಿ ಮತ್ತು ವಿಭಜನೆ ಕ್ರಿಯೆ ಜ್ಯಾಮಿತೀಯ ಮುನ್ನಡೆಯಲ್ಲಿ ನಡೆಯುತ್ತದೆ. ಒಂದು ಜೀವಕೋಶ ಎರಡಾಗಿ, ಎರಡು ನಾಲ್ಕಾಗಿ, ನಾಲ್ಕು ಎಂಟಾಗಿ ವಿಭಜನೆ ಹೊಂದುತ್ತವೆ. ಬ್ಯಾಕ್ಟೀರಿಯಾಗಳ ಸಂಖ್ಯೆ ದ್ವಿಗುಣವಾಗಲು, ಅಂದರೆ ಒಂದು ಜೀವಕೋಶ ವಿಭಜನೆ ಹೊಂದಿ ದ್ವಿಗುಣಿಸಲು ಬೇಕಾಗುವ ಸಮಯಕ್ಕೆ ಸಂತಾನಾಭಿವೃದ್ಧಿ ಸಮಯ (G) ಎಂದು ಕರೆಯುವರು. ಇದನ್ನು ಸಂತಾನಾಭಿವೃದ್ಧಿ ಕಾಲಾವಧಿ, ಬ್ಯಾಕ್ಟೀರಿಯಾಗಳ ಪ್ರಭೇದಗಳಲ್ಲಿ ವ್ಯತ್ಯಾಸವಾಗುತ್ತದೆ. ಉದಾ: ಎಶ್ಚಿರಿಷಿಯ ಕೊಲಿ ಬ್ಯಾಕ್ಟೀರಿಯಾದ ಸಂತಾನಾಭಿವೃದ್ಧಿ ಕಾಲಾವಧಿ 15 ನಿಮಿಷಗಳು. ಇದು ಅತಿ ಹೆಚ್ಚು ವೇಗದಲ್ಲಿ ಬೆಳೆಯುವ ಬ್ಯಾಕ್ಟೀರಿಯಾಗಳಲ್ಲಿ ಒಂದು. ಮೈಕೊಬ್ಯಾಕ್ಟೀರಿಯ ಟ್ಯೂಬರ್‌ಕ್ಯುಲಾಸಿಸ್‍ನ ಸಂತಾನಾಭಿವೃದ್ಧಿ ಕಾಲಾವಧಿ 16 ಗಂಟೆಗಳು.

ನೈಜ ಬ್ಯಾಕ್ಟೀರಿಯಾಗಳಲ್ಲಿ ದ್ವಿವಿಭಜನೆ ಆಯಾ ವರ್ಗಕ್ಕೆ ವಿಶಿಷ್ಟವಾಗಿರುತ್ತದೆ. ಆದರೆ ಅನೇಕ ಬ್ಯಾಕ್ಟೀರಿಯಾ ಪ್ರಭೇದಗಳಲ್ಲಿ, ಬೇರೆ ರೀತಿಯ ಸಂತಾನಾಭಿವೃದ್ಧಿಯನ್ನು ಕಾಣಬಹುದು. ಉದಾ: ರೊಡೊಮೈಕ್ರೊಬಿಯಂ ವ್ಯಾನ್‍ನಿಲ್ಲಿ, ಹೈಪೊ ಮೈಕ್ರೊಬಿಯೆಲ್ಸ ವರ್ಗ ಜೀವಾಂಕುರ (ಬಡ್ಡಿಂಗ್) ವಿಧವನ್ನು, ಸ್ಟ್ರೆಪ್ಟೊಮೈಸಿಸ್ (ಆಕ್ಟಿನೊಮೈಸಿಟೇಲ್ಸ್ ವರ್ಗ) ಪ್ರಭೇದವು ಸರಪಳಿ ರೀತಿಯ ಬೀಜಕಗಳ (ಸ್ಪೋರ್) ಉತ್ಪತ್ತಿಯಿಂದ, ಮೈಕೊ ಪ್ಲಾಸ್ಮ (ಮೈಕೊಪ್ಲಾಸ್ಮಟೇಲ್ಸ್ ವರ್ಗ) ಪದರದಿಂದ ಸುತ್ತುವರಿದ ದೇಹದಲ್ಲಿನ ಮೂಲರೂಪದ ಘಟಕದ (ಎಲಿಮೆಂಟರಿ ಯೂನಿಟ್ಸ್) ಖಂಡೀಕರಣ (ಸೆಗ್ಮೆಂಟೇಷನ್ ) ನಿಂದ ಸಂತಾನೋತ್ಪತ್ತಿ ಮಾಡುತ್ತವೆ.

ಕೆಲವು ಬ್ಯಾಕ್ಟೀರಿಯಾ ಪ್ರಭೇಧಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿ (ಒಗ್ಗೂಡಿಕೆ ಅಥವಾ ಕಾಂಜುಗೇಷನ್) ಕಾಣಬಹುದು. ಈ ವಿಧದಲ್ಲಿ ಕಾಂಜ್ಯುಗೆಟ್ಸ್ (ಜೋಡಿಗಳು) ಅಥವಾ ಮ್ಯಾಟಿಂಗ್ ವಿಧಗಳು, ತಾತ್ಕಾಲಿಕವಾಗಿ ಭೌತಿಕವಾಗಿ ಸಂಪರ್ಕಿಸುತ್ತವೆ. ಕಾಂಜ್ಯುಗೆಟ್ಸ್ ಜೋಡಿಗಳಲ್ಲಿ ಕೊಡುವ (ಗಂಡು) ಮತ್ತು ಪಡೆದುಕೊಳ್ಳುವ (ಹೆಣ್ಣು) ಜೀವಕೋಶವಿರುತ್ತದೆ. ಕಾಂಜುಗೇಷನ್ ನಲ್ಲಿ, ವರ್ಣತಂತುವಿನ ಒಂದು ಭಾಗ , ಕೊಡುವ (ಡೋನರ್) ಜೀವಕೋಶದಿಂದ ಪಡೆದುಕೊಳ್ಳುವ ಜೀವಕೋಶಕ್ಕೆ ವರ್ಗಾವಣೆಯಾಗಿ, ಆ ಜೀವಕೋಶದ ವರ್ಣತಂತುವಿನ ಭಾಗವಾಗಿಬಿಡುತ್ತದೆ.

ಬ್ಯಾಕ್ಟೀರಿಯಾಗಳ ಬೆಳೆವಣಿಗೆಯ ವಕ್ರರೇಖೆ (ಕರ್ವ್): ಬ್ಯಾಕ್ಟೀರಿಯಾಗಳ ಜೀವಕೋಶವನ್ನು ಕೃತಕ ಮಾಧ್ಯಮದಲ್ಲಿ ಇಟ್ಟು, ಬೆಳೆವಣಿಗೆಗೆ ಬೇಕಾದ ಎಲ್ಲ ಪೌಷ್ಟಿಕಾಂಶವನ್ನು ಒದಗಿಸಿದಾಗ, ಅವುಗಳ ಸಂಖ್ಯೆ ಒಂದು ನಿರ್ದಿಷ್ಟವಾದ ಮಾದರಿಯಲ್ಲಿ ಹೆಚ್ಚುತ್ತದೆ. ಇದನ್ನು ನಾವು ಬೆಳೆವಣಿಗೆಯ ರೇಖೆ (ಗ್ರೊತ್‌ಕರ್ವ್) ಎಂದು ಕರೆಯುತ್ತೇವೆ.

ಇದರಲ್ಲಿ ನಾಲ್ಕು ಹಂತಗಳಿವೆ. 1. ಲ್ಯಾಗ್ 2. ಲಾಗ್ 3. ಸ್ಥಾಯಿ ಮತ್ತು 4. ಇಳಿತ (ಡಿಕ್ಲೈನ್ ಫೇಸ್):

ಬ್ಯಾಕ್ಟೀರಿಯಾ ಕೋಶವನ್ನು, ಕೃತಕ ಮಾಧ್ಯಮದಲ್ಲಿ ಇರಿಸಿದ ತಕ್ಷಣ, ಅವುಗಳ ವಿಶಿಷ್ಟವಾದ ಸಂತಾನಾಭಿವೃದ್ಧಿ ಸಮಯದ ರೀತಿಯನ್ನು ಅವಲಂಬಿಸಿ ಸಂತಾನಾಭಿವೃದ್ಧಿಯಾಗುವುದಿಲ್ಲ. ಜೀವಕೋಶಗಳು ಹೊಸ ಜೀವ ಮಾಧ್ಯಮಕ್ಕೆ ಹೊಂದಾಣಿಕೆಯಾದ ಅನಂತರ, ಪ್ರಶಸ್ತವಾದ ವಾತಾವರಣದಲ್ಲಿ ಪೌಷ್ಟಿಕಾಂಶಗಳ ಮತ್ತು ಭೌತಿಕ ವಾತಾವರಣವನ್ನು ಅವಲಂಬಿಸಿ, ಗರಿಷ್ಠ ಮತ್ತು ಬದುಕಬಲ್ಲ ಸಂಖ್ಯೆಯನ್ನು ಲಾಗ್ ಹಂತದ ಮುಕ್ತಾಯದಲ್ಲಿ ತಲುಪುತ್ತವೆ. ಕೆಲವು ಕ್ರಿಯಾಶೀಲ ಬ್ಯಾಕ್ಟೀರಿಯಾ ಪ್ರಭೇದಗಳಲ್ಲಿ ಸಾಂದ್ರತೆ ಒಂದು ಮಿಲಿಗೆ 10,000,000,000 ಜೀವಕೋಶಗಳು.

ಬ್ಯಾಕ್ಟೀರಿಯಾಗಳ ಕೃಷಿ (ಕಲ್ಚರಿಂಗ್): ಪ್ರಯೋಗಶಾಲೆಯಲ್ಲಿ ಸೂಕ್ಷ್ಮ ಜೀವಿಗಳನ್ನು ಕೃತಕ ಮಾಧ್ಯಮದಲ್ಲಿ ಬೆಳೆಸುವುದೇ ಬ್ಯಾಕ್ಟೀರಿಯಾ ಕೃಷಿ (ಕಲ್ಚರಿಂಗ್). ಕೃಷಿ ಮಾಡುವಾಗ ತೇವಾಂಶವನ್ನು ಕೃತಕವಾಗಿ ನಿಯಂತ್ರಿಸಲಾಗುವುದು. ಕೃಷಿ ಮಿಶ್ರಿತವಾದ ಅಥವಾ ಶುದ್ಧವಾದ ವಿಧವಾಗಿರಬಹುದು. ಮಿಶ್ರಿತ ಕೃಷಿಯಲ್ಲಿ ಎರಡು ಅಥವಾ ಹೆಚ್ಚು ಪ್ರಭೇದಗಳನ್ನು ಒಟ್ಟಿಗೆ ಬೆಳೆಯಲಾಗುವುದು. ಶುದ್ಧ ಕೃಷಿಯಲ್ಲಿ ಒಂದೇ ಪ್ರಭೇದದ ಸೂಕ್ಷ್ಮಜೀವಿಯನ್ನು ಪೌಷ್ಟಿಕಾಂಶ ಜೀವ ಮಾಧ್ಯಮದಲ್ಲಿ ಅಥವಾ ಮೇಲೆ ಬೆಳೆಯಲಾಗುವುದು. ಸೂಕ್ಷ್ಮ ಜೀವಿಗಳ ರೂಪ ಮತ್ತು ಅವುಗಳ ಫಿಸಿಯಾಲಜಿಯನ್ನು ಶುದ್ಧ ಕೃಷಿಯಿಂದ ಅಧ್ಯಯನ ಮಾಡಬಹುದು. ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ಅಧ್ಯಯನವನ್ನು ಹೊರತು ಪಡಿಸಿ, ಸಾಮಾನ್ಯವಾಗಿ ಬ್ಯಾಕ್ಟೀರಿಯಾಗಳನ್ನು ಅಧ್ಯಯನಕ್ಕಾಗಿ ಪ್ರಯೋಗಶಾಲೆಯಲ್ಲಿ ಬೆಳೆಯಲಾಗುವುದು. ಅನೇಕ ಪೌಷ್ಟಿಕಾಂಶ ಜೀವ ಮಾಧ್ಯಮಗಳನ್ನು ಅವುಗಳ ಬೆಳವಣಿಗೆಗೆ ಉಪಯೋಗಿಸಲಾಗುವುದು. ಬ್ಯಾಕ್ಟೀರಿಯಾಗಳ ಪೌಷ್ಟಿಕತೆಯಲ್ಲಿ ಸಾಕಷ್ಟು ವ್ಯತ್ಯಾಸವಿರುವುದರಿಂದ ಅವುಗಳ ಕೃಷಿಗೆ ಉಪಯೋಗಿಸುವ ಜೀವಮಾಧ್ಯಮದ ರಾಸಾಯನಿಕ ಸಂಯೋಜನೆಯಲ್ಲಿ ಬದಲಾವಣೆಯಿರುತ್ತದೆ. ಪೌಷ್ಟಿಕಾಂಶದ ಜೊತೆಗೆ ಭೌತಿಕ ಪರಿಸ್ಥಿತಿಗಳಾದ ಉಷ್ಣಾಂಶ, ರಸಸಾರ, ಅನಿಲೀಯ ವಾತಾವರಣ, ಅವುಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ.

ಸಾಮಾನ್ಯವಾಗಿ, ಪ್ರತಿಯೊಂದು ಬ್ಯಾಕ್ಟೀರಿಯಾದ ಪ್ರಭೇದವನ್ನು ನಿರ್ದಿಷ್ಟವಾದ ಘನ ಜೀವಮಾಧ್ಯಮದಲ್ಲಿ ಬೆಳೆದಾಗ, ವೈಶಿಷ್ಟವಾದ ವಿಧದಲ್ಲಿ ಗುಂಪು (ಕಾಲೋನಿ) ಇರುತ್ತದೆ. ಗುಂಪಿನ (ಕಾಲೋನಿ) ಗಾತ್ರ, ಆಕಾರ, ತುದಿ, ಎತ್ತರ ಮತ್ತು ಒಳರಚನೆಗಳಲ್ಲಿ ವ್ಯತ್ಯಾಸವಿರುತ್ತದೆ.

ಅಗಾರ್ ಜೀವಮಾಧ್ಯಮದಲ್ಲಿ ಬ್ಯಾಕ್ಟೀರಿಯಾಗಳನ್ನು ಬೆಳೆಯಬಹುದು. ಬ್ಯಾಕ್ಟೀರಿಯಾದ ಜೀವಕೋಶದ ರಚನೆಯನ್ನು ತಿಳಿದುಕೊಳ್ಳಲು, ಅನೇಕ ವಿಧದ ಬಣ್ಣ (ಸ್ಟೈನ್) ಉಪಯೋಗಿಸುವರು. ಗ್ರಾಮ್ ಬಣ್ಣದ ವಿಧಾನ ಪ್ರಮುಖವಾದುದು. ಇದನ್ನು ಡೆನ್ಮಾರ್ಕಿನ ಜೀವವಿಜ್ಞಾನಿ ಹೆಚ್.ಸಿ.ಜೆ. ಗ್ರಾಮ್ ಕಂಡು ಹಿಡಿದ. ಈ ವಿಧದಲ್ಲಿ ಬ್ಯಾಕ್ಟೀರಿಯಾವನ್ನು ಗ್ರಾಮ್‌ಧನ (ಪಾಸಿಟಿವ್) ಅಥವಾ ಗ್ರಾಮ್ ಋಣ ನೆಗೆಟಿವ್ ಎಂದು ಗುರ್ತಿಸಲಾಗುವುದು. ಬ್ಯಾಕ್ಟೀರಿಯಾಗಳ ಬಣ್ಣವನ್ನು ಅವಲಂಬಿಸಿ ಮೂಲ ಬಣ್ಣವಾದ ನೇರಳೆ ಬಣ್ಣ (ಹರಳುನೇರಳೆ ಬಣ್ಣ) ಅಥವಾ ವಿರುದ್ಧ ವಿಂಗಡಿಸಲು ಸಹಾಯಕಾರಿಯಾಗಿದೆ.

ನೀರಿನಲ್ಲಿರುವ ಬ್ಯಾಕ್ಟೀರಿಯಾಗಳು, ಜೈವಿಕ ಮತ್ತು ಅಜೈವಿಕ ವಸ್ತುಗಳನ್ನು ಪರಿವರ್ತಿಸುತ್ತವೆ. ಇದರಿಂದ ಕಡಲಿನ ಜೀವಿಗಳಿಗೆ ಪೌಷ್ಟಿಕಾಂಶಗಳು ದೊರೆಯುತ್ತವೆ. ರೋಗಕಾರಕ ಬ್ಯಾಕ್ಟೀರಿಯಾಗಳು ನೀರಿನಲ್ಲಿದ್ದರೆ ಅಪಾಯಕಾರಿ.

ಗಾಳಿಯಲ್ಲಿರುವ ಕೆಲವು ಪ್ರಭೇದದ ಬ್ಯಾಕ್ಟೀರಿಯಾಗಳು ಮನುಷ್ಯನಲ್ಲಿ, ಪ್ರಾಣಿಗಳಲ್ಲಿ ಮತ್ತು ಸಸ್ಯಗಳಲ್ಲಿ ರೋಗವನ್ನು ಹರಡುತ್ತವೆ. ಇವು ಅನೇಕ ವಸ್ತುಗಳನ್ನು ಮಲಿನಗೊಳಿಸುತ್ತವೆ.

ಮಣ್ಣಿನಲ್ಲಿರುವ ಬ್ಯಾಕ್ಟೀರಿಯಾಗಳು ಅತಿ ಹೆಚ್ಚು ಚಟುವಟಿಕೆಯಿಂದಿದ್ದು, ಅನೇಕ ಜೀವ ರಾಸಾಯನಿಕ ಕ್ರಿಯೆಗಳಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಉದಾ: ಸಾರಜನಕ ಚಕ್ರ, ಇಂಗಾಲದ ಚಕ್ರ, ಗಂಧಕದ ಚಕ್ರ ಇತ್ಯಾದಿ.

ಅನೇಕ ರೋಗಕಾರಕ ಬ್ಯಾಕ್ಟೀರಿಯಾಗಳು ಆಹಾರದ ಮುಖಾಂತರ ಪ್ರಸಾರವಾಗುತ್ತದೆ. ಉದಾ: ಸಾಲ್ಮೊನೆಲ್ಲ ಟೈಫೂಸ, ಶಿಗೆಲ್ಲ ಡಿಸೆಂಟ್ರಿಯ. ಅನೇಕ ಬ್ಯಾಕ್ಟೀರಿಯಾಗಳು ಆಹಾರ ಹಾಳಾಗಲು ಕಾರಣವಾಗುತ್ತವೆ. ಉದಾ: ಸ್ಟೆಫೈಲೊಕಾಕಸ್ ಕ್ಲಾಸ್ಟ್ರಿಡಿಯಂ ಬಾಟ್ಯುಲಿನಂ. ಬ್ಯಾಕ್ಟೀರಿಯಾಗಳು ಬೆಳೆಯುವುದಕ್ಕೆ ಹಾಲು ಬಹು ಉತ್ತಮ ಮಾಧ್ಯಮ. ಹಾಲನ್ನು ಸರಿಯಾಗಿ ಸಂಸ್ಕರಿಸದಿದ್ದರೆ, ಬ್ಯಾಕ್ಟೀರಿಯಾಗಳ ಸಂಖ್ಯೆ ತೀವ್ರಗತಿಯಲ್ಲಿ ಹೆಚ್ಚಾಗುತ್ತದೆ.

ಬ್ಯಾಕ್ಟೀರಿಯಾಗಳ ಹೊಂದಾಣಿಕೆ: ವಿವಿಧ ಬ್ಯಾಕ್ಟೀರಿಯ ಪ್ರಭೇದಗಳ ನಡುವೆ ಮತ್ತು ಬೇರೆ ವರ್ಗದ ಜೀವಿಗಳ ನಡುವೆ ಅನೇಕ ರೀತಿಯ ಹೊಂದಾಣಿಕೆಗಳಿವೆ. ಮಂಡ (ಯೀಸ್ಟ್) ಪಾಚಿ, ಬೂಜು, ಪ್ರೋಟೋಜೋವ ಮತ್ತು ಬ್ಯಾಕ್ಟೀರಿಯಾಗಳ ನಡುವೆ ಹೊಂದಾಣಿಕೆ ಕಾಣಬಹುದು. ಉದಾ: ಸಹಬಾಳ್ವೆ, ಸಹಕ್ರಿಯೆ, ಸಹಜೀವತ್ವ ಮತ್ತು ಪ್ರತಿಜೀವಾಣುತ್ವ.

ಪ್ರತಿಜನಕದ (ಆಂಟಿಜೆನಿಕ್) ಹೊಂದಾಣಿಕೆಗಳು: ಬ್ಯಾಕ್ಟೀರಿಯಾಗಳ ಜೀವಕೋಶದಲ್ಲಿ ವಿವಿಧ ಪ್ರತಿ ವಿಷಜನಕ (ಅಂಟಿಜನ್ಸ್) ಗಳಿವೆ. ಉದಾ: ಕಶಾಂಗ, ಕ್ಯಾಪ್‌ಸೂಲ್ ಮತ್ತು ಜೀವಕೋಶಗೋಡೆ ಪ್ರತಿ ವಿಷಜನಕಗಳು.

ವಿಕೃತಿ (ಮ್ಯೂಟೇಶನ್): ಜೀನ್ ತಕ್ಷಣ ಬದಲಾವಣೆ ಹೊಂದಿ ಜೀವಿಯ ದೇಹದಲ್ಲಿ ಬೇರೆ ರೂಪವನ್ನು ಪಡೆಯುವ ಕ್ರಿಯೆಯೇ ವಿಕೃತಿ (ಮ್ಯೂಟೇಶನ್). ಜೀವಿಗಳಲ್ಲಿ ಈ ಬದಲಾವಣೆ ಸ್ಥಿರವಾಗಿಯೂ ಮತ್ತು ಶಾಶ್ವತವಾಗಿಯೂ ಇರುತ್ತದೆ. ಬ್ಯಾಕ್ಟೀರಿಯಾಗಳು, ಯಾವುದೇ ಬ್ಯಾಕ್ಟೀರಿಯಾ ನಿರೋಧಕಗಳಿಗೆ (ಆಂಟಿಬ್ಯಾಕ್ಟೀರಿಯಲ್) ತಕ್ಷಣ ವಿಕೃತಿಗೊಳ್ಳುತ್ತವೆ. ಇವನ್ನು ಪರಿವರ್ತಿತ (ವಿಕೃತಿ) ರೂಪ ಅಥವಾ ಮ್ಯೂಟೆಂಟ್ಸ್ ಎಂದು ಕರೆಯಲಾಗುತ್ತದೆ. ಕೆಲವು ಭೌತಕಾರಕಗಳಾದ (ಫಿಸಿಕಲ್ ಏಜೆಂಟ್ಸ್) ಅತಿ ನೇರಳೆ ಕಿರಣಗಳು (ಯುವಿಕಿರಣಗಳು) ಮತ್ತು ಕ್ಷ ಕಿರಣಗಳು ಕಿರಣಗಳು ಅಥವಾ ರಾಸಾಯನಿಕ ವಸ್ತುಗಳಾದ ಸಾಸಿವೆ ಅನಿಲ ಮತ್ತು ಜೈವಿಕ ಪೆರಾಕ್ಸೈಡ್‌ಗಳಿಂದ ಬ್ಯಾಕ್ಟೀರಿಯಾ ಸಂಖ್ಯೆಯಲ್ಲಿ ವಿಕೃತಿ ರೂಪ (ಮ್ಯೂಡೆಂಟ್ಸ್) ಗಳನ್ನು ತೀವ್ರವಾಗಿ ಹೆಚ್ಚಿಸಬಹುದು.

ಜೀವ–ಸಂದೀಪ್ತಿ (ಬಯೊಲ್ಯೂಮಿನೆಸನ್ಸ್): ಬ್ಯಾಕ್ಟೀರಿಯಾ ಪ್ರಭೇದಗಳಲ್ಲಿ ಸೂಡೊಮೊನಾಸ್ ಮತ್ತು ವೈಬ್ರಿಯೊಗಳ ಕೆಲವು ಪ್ರಭೇದಗಳು ಕಡಲಿನಲ್ಲಿ ವಾಸಿಸುವುವು. ಸಮುದ್ರದಲ್ಲಿ ಮತ್ತು ಭೂಮಿಯ ಮೇಲೆ ವಾಸಿಸುವ ಕೆಲವು ಬ್ಯಾಕ್ಟೀರಿಯಾಗಳಲ್ಲಿ ಸ್ವಯಂ ಪ್ರಕಾಶವಿರುತ್ತದೆ. ಸಿಹಿನೀರಿನಲ್ಲಿರುವ ಬ್ಯಾಕ್ಟೀರಿಯಾಗಳಿಗೆ ಸ್ವಯಂ ಪ್ರಕಾಶಮಾನವಿರುವುದಿಲ್ಲ. ಬ್ಯಾಕ್ಟೀರಿಯಾಗಳಲ್ಲಿ ಬೇರೆ ಜೀವಿಗಳಂತೆ, ಜೀವ ದೀಪ್ತಿ ಬಾಹ್ಯ ಪ್ರಚೋದನೆಯನ್ನು ಅವಲಂಬಿಸಿಲ್ಲ. ಹಗಲು ರಾತ್ರಿ ಒಂದೇ ರೀತಿಯಲ್ಲಿ ಬೆಳಕನ್ನು ಚೆಲ್ಲುತ್ತವೆ. ಇಂಥ ಬ್ಯಾಕ್ಟೀರಿಯಾಗಳನ್ನು ಪ್ರಯೋಗ ಶಾಲೆಯಲ್ಲಿ ಸುಲಭವಾಗಿ ಅಧ್ಯಯನ ಮಾಡಬಹುದು. ಇವುಗಳ ಜೀವಕೋಶ, ಅನೇಕ ಕಠಿಣವಾದ, ಜೀವಿಗಳಿಗೆ ಸಂಬಂಧಿಸಿದ, ಜೀವಕ್ರಿಯೆಗಳು ಮತ್ತು ಜೀವರಸಾಯನಿಕ ಕ್ರಿಯೆಗಳ ಅಧ್ಯಯನಕ್ಕೆ ಮಾದರಿಯಾಗಿದೆ.

ಬ್ಯಾಕ್ಟೀರಿಯಾಗಳ ಪ್ರಯೋಜನಗಳು ಹಲವು. ಇವು ಜೀವಿಗಳ ದೇಹದಲ್ಲಿ ಅನೇಕ ಜೀವರಸಾಯನಿಕ ವಸ್ತುಗಳನ್ನು ಪರಿವರ್ತನೆಗೊಳಿಸುತ್ತವೆ. ಉದಾ: ಎ) ಹಸುಗಳ ಪ್ರಥಮ ಜಠರದಲ್ಲಿ (ರೂಮೆನ್), ಹುಲ್ಲು ಮತ್ತು ಇತರೆ ಆಹಾರದಲ್ಲಿರುವ ಸೆಲ್ಯುಲೋಸ್‌ನ ಪಚನಗೊಳಿಸುವಲ್ಲಿ ಸಹಾಯಕಾರಿಯಾಗಿವೆ. ಮನುಷ್ಯನ ಕರುಳಿನಲ್ಲಿರುವ ಬ್ಯಾಕ್ಟೀರಿಯಾಗಳು, ಅವನ ಆರೋಗ್ಯಕ್ಕೆ ಬಹಳ ಉಪಯುಕ್ತ. ಬಿ) ರೊಚ್ಚಿನಲ್ಲಿರುವ ಜೈವಿಕ ವಸ್ತುಗಳು, ಸರಳ ಸಂಯುಕ್ತ ವಸ್ತುಗಳಾಗಲು ಮತ್ತು ಸಸ್ಯಗಳ ಬೆಳವಣಿಗೆಗೆ ಬೇಕಾದ ಪೌಷ್ಟಿಕಾಂಶಗಳ ಮೇಲೆ ವಾಸಿಸುವ ಬ್ಯಾಕ್ಟೀರಿಯಾಗಳು ಅನೇಕ ಜೈವಿಕ ವಸ್ತುಗಳನ್ನು ಸರಳ ವಸ್ತುಗಳನ್ನಾಗಿ ಮಾರ್ಪಡಿಸುತ್ತವೆ. ಉದಾ: ನೈಟ್ರೈಟ್ (ನೈಟ್ರಿಫಿಕೇಷನ್), ಅಮೋನಿಯಂ ಸಂಯುಕ್ತ ವಸ್ತುಗಳು (ಅಮೋನಿಫಿಕೇಷನ್), ನೈಟ್ರೇಟ್ಸ್, ಸಲ್ಫೇಟ್ಸ್, ಫಾಸ್ಪೇಟ್ಸ್‌ಗಳು ಭೂಮಿಗೆ ಸೇರುತ್ತವೆ. ಡಿ) ನೈಟ್ರೋಜನ್ ಸ್ಥಿರೀಕರಣ ಬ್ಯಾಕ್ಟೀರಿಯಾಗಳು, ವಾತಾವರಣದಲ್ಲಿರುವ ಅನಿಲೀಯ ಸಸಾರಜನಕವನ್ನು ಹೀರಿಕೊಂಡು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಕೃಷಿಯ ದೃಷ್ಟಿಯಿಂದ ಇವು ಬಹಳ ಮುಖ್ಯ. ಉದಾ: ಆಜೊಟೊಬ್ಯಾಕ್ಟರ್, ಕ್ಲೊಸ್ಟ್ರಿಡಿಯಂ, ಲೆಗ್ಯುಮಿನಿಸೀ ವಂಶದ ಸಸ್ಯದ ಬೇರುಗಳ ಗಂಟುಗಳಲ್ಲಿರುವ (ನಾಡ್ಯೂಲ್) ರೈಸೋಬಿಯಂಗಳು. ಇ) ಪ್ರಾಣಿಗಳ ಮಲ ಮೂತ್ರಗಳನ್ನು ಗೊಬ್ಬರವನ್ನಾಗಿ ಪರಿವರ್ತಿಸುತ್ತವೆ ಮತ್ತು ಹ್ಯೂಮಸ್ ಅಥವಾ ಎಲೆಬೂಜು (ಲೀಫ್ ಮೌಲ್ಡ್) ತಯಾರಿಸುತ್ತವೆ.

2) ಕೈಗಾರಿಕೆ: ಕೈಗಾರಿಕೆಯಲ್ಲಿ ಬ್ಯಾಕ್ಟೀರಿಯಾಗಳು ಬಹಳ ಉಪಯುಕ್ತ. ಉದಾ: ಲ್ಯಾಕ್ಟಿಕ್ ಆಸಿಡ್ ಬ್ಯಾಕ್ಟೀರಿಯಾ ಹಾಲು ಹುಳಿಯಾಗಲು, ಮೊಸರಾಗಲು ಮತ್ತು ಹಾಲಿನಿಂದ ಚೀಸ್ ಉತ್ಪಾದಿಸಲು ಸಹಾಯಕ. ಮದ್ಯಸಾರದ ತಯಾರಿಕೆ (ಪ್ರೊಪೈನೋಬ್ಯಾಕ್ಟೀರಿಯಂ, ಕ್ಲೊಸ್ಟ್ರಿಡಿಯಂ ಅಸಿಟೊಬ್ಯುಟೈಲಿ), ಆಮ್ಲಗಳ ತಯಾರಿಕೆ (ಲ್ಯಾಕ್ಟೊಬಸಿಲಸ್ ಅಸಿಡ್ಯುಲಸ್, ಅಸಿಟೊಬ್ಯಾಕ್ಟರ್ ಅಸಿಟಿ), ಕಾಫಿ, ಟೀ ಮತ್ತು ತಂಬಾಕು ಸಂಸ್ಕರಣ (ವಿಶಿಷ್ಟವಾದ ಪರಿಮಳಕ್ಕಾಗಿ), ಚರ್ಮದ ಸಂಸ್ಕರಣ, ನಾರುಗಳ ರೆಟ್ಟಿಂಗ್, ಸೈಲೆಜ್ ತಯಾರಿಕೆ (ಹಸುಗಳಿಗೋಸ್ಕರ ಕಿಣ್ವಿಸಿದ ಪೋಷಕಯುಕ್ತ ಆಹಾರ), ಖನಿಜಗಳ ಸಂಸ್ಕರಣಗಳಲ್ಲಿ ಹಲವು ಬಗೆಯ ಬ್ಯಾಕ್ಟೀರಿಯಾಗಳು ಸಹಾಯಕವಾಗಿವೆ.

ಔಷಧ: ಆಕ್ಟಿನೊಮೈಸಿಟೇಲ್ಸ್ ವರ್ಗಕ್ಕೆ ಸೇರಿದ ಬ್ಯಾಕ್ಟೀರಿಯಾಗಳಿಂದ ಬಹು ಉಪಯುಕ್ತ ಪ್ರತಿಜೀವಕಗಳನ್ನು ತಯಾರಿಸಲಾಗುತ್ತದೆ. ಉದಾ: ಸ್ಟ್ರೆಪ್ಟೊಮೈಸಿನ್, ಕ್ಲೊರೊಮೈಸಿನ್, ಟೆರಮೈಸಿನ್, ಇತ್ಯಾದಿ.

ಬ್ಯಾಕ್ಟೀರಿಯಾಗಳ ಹಾನಿಕಾರಕ ಚಟುವಟಿಕೆಗಳು: ಅ) ಕ್ಲೊಸ್ಟ್ರಿಡಿಯಂ ಬಾಟ್ಯುಲಿನಂ ಉತ್ಪತ್ತಿ ಮಾಡುವ ವಿಷದಿಂದ (ಆಹಾರ ವಿಷವಾಗಿ) ಬಾಟ್ಯುಲಿಸಂ ಎಂಬ ಕಾಯಿಲೆ

ಉಂಟಾಗುತ್ತದೆ. ಆ) ಆಹಾರ ಹಾಳಾಗುವುದು (ತರಕಾರಿ, ಹಣ್ಣು, ಮಾಂಸ, ಬೇಯಿಸಿದ ಆಹಾರ), ಲೋಹಗಳ ಸವೆತ, ಮರ ಕೊಳೆಯುವುದು, ವಸ್ತುಗಳು ಬೇಡವಾದ ರೀತಿಯಲ್ಲಿ ಬದಲಾಗುವುದಕ್ಕೆ ಕೆಲವು ಪ್ರಭೇದದ ಬ್ಯಾಕ್ಟೀರಿಯಾಗಳು ಕಾರಣ. ಇ) ಅನೇಕ ಪರೋಪಜೀವಿಗಳು, ರೋಗಕಾರಕಗಳು ಅಥವಾ ಕಾಯಿಲೆ ಉಂಟುಮಾಡುವ ಬ್ಯಾಕ್ಟೀರಿಯಾಗಳು. ಸಸ್ಯಗಳಲ್ಲಿ, ಪ್ರಾಣಿಗಳಲ್ಲಿ ಮತ್ತು ಮನುಷ್ಯನಲ್ಲಿ ಸೋಂಕು ಉಂಟುಮಾಡುತ್ತವೆ. ಮನುಷ್ಯನಲ್ಲಿ ಬ್ಯಾಕ್ಟೀರಿಯಾಗಳಿಂದ ಅನೇಕ ರೋಗಗಳುಂಟಾಗುತ್ತವೆ. ಟೈಫಾಯ್ಡ್ (ಬ್ಯಾಸಿಲಸ್ ಟೈಫೋಸಸ್), ಟೆಟ್ಯಾನಸ್ (ಕ್ಲೋಸ್ಟ್ರಿಡಿಯಂ ಟೆಟ್ಯಾನಿ), ಕ್ಷಯ (ಮೈಕೋಬ್ಯಾಕ್ಟೀರಿಯಂ ಟ್ಯೂಬರ್‌ಕ್ಯೂಲೊಸಿಸ್), ಕುಷ್ಠರೋಗ (ಮೈಕೊಬ್ಯಾಕ್ಟೀರಿಯಂ ಲೆಪ್ರೆ), ಆಮಶಂಕೆ (ಬಿ ಡಿಸೆಂಟರಿಯೆ), ನ್ಯುಮೋನಿಯ (ಡಿಪ್ಲೊಕಾಕಸ್), ಕಾಲರ (ವೈಬ್ರಿಯೊ ಕಾಲರೆ), ಸ್ಟ್ರೆಪ್ಟೊಕಾಕೈ ಪ್ರಭೇದಕ್ಕೆ ಸೇರಿದ ಕೆಲವು ಬ್ಯಾಕ್ಟೀರಿಯಾಗಳು ಮನುಷ್ಯನಿಗೆ ಮರಣಾಂತಕಾರಿ. ಇವು ರಕ್ತದ ಸೋಂಕನ್ನು ಉಂಟುಮಾಡುತ್ತವೆ. ಇದರ ಜೊತೆಗೆ ಜಾನುವಾರುಗಳಲ್ಲಿ, ಬ್ಯಾಸಿಲಸ್ ಆಂತ್ರ್ಯಾಸಿಸ್ ಎಂಬ ಬ್ಯಾಕ್ಟೀರಿಯ ನೆರಡಿ ರೋಗವನ್ನು ಉಂಟುಮಾಡುತ್ತದೆ.

ಪರೋಪಜೀವಿ ಬ್ಯಾಕ್ಟೀರಿಯಾಗಳು, ಸಸ್ಯಗಳಲ್ಲಿ ಅನೇಕ ರೋಗಗಳನ್ನು ಉಂಟು ಮಾಡುತ್ತವೆ. ಉದಾ: ಸೇಬಿನ ಫೈರ್ ಬ್ಲೈಟ್ ಮತ್ತು ಪಿಯರ್, ಆಲೂಗಡ್ಡೆಯಲ್ಲಿ ರಿಂಗ್ ಕಾಯಿಲೆ, ಕೋಸುಗಡ್ಡೆಯಲ್ಲಿ ಬ್ಲಾಕ್ ರಾಟ್, ನಿಂಬೆ, ಕಿತ್ತಳೆಯಲ್ಲಿ ಕ್ಯಾಂಕರ್ (ಸ್ಯೂಡೊಮೋನಾಸ್ ಸಿಟ್ರೈ), ಆಂಗ್ಯುಲರ್ ಲೀಫ್ ಸ್ಪಾಟ್ ಕಾಯಿಲೆ (ಕ್ಸಾಂತೊಮೋನಾಸ್ ಮ್ಯೂಲ್ವ ಸೀರಂ):

ರೋಗಕಾರಕತೆ: ರೋಗಕಾರಕ ಸಾಮರ್ಥ್ಯ, ಪೆಥೋಜೆನಿಸಿಟಿ. ಬ್ಯಾಕ್ಟೀರಿಯಾಗಳಲ್ಲಿರುವ ಕಾಯಿಲೆಯನ್ನುಂಟು ಮಾಡುವ ಶಕ್ತಿಗೆ ವಿಷಮತೆ (ವಿರುಲನ್ಸ್) ಎಂದು ಹೆಸರು. ಪ್ರಭೇದಕ್ಕನುಗುಣವಾಗಿ ವಿಷಮತೆಯಲ್ಲಿ ವ್ಯತ್ಯಾಸವಿದೆ. ಕೆಲವು ಬ್ಯಾಕ್ಟೀರಿಯಾಗಳಲ್ಲಿ ಅತಿ ಹೆಚ್ಚು ವಿಷಮತೆಯಿದೆ. ಸಂಶೋಧನೆಯಿಂದ ವಿಷಮತೆಯನ್ನು ಪರಿಮಾಣಾತ್ಮಕವಾಗಿ ಕಂಡು ಹಿಡಿಯಬಹುದು. ಒಂದು ನಿರ್ದಿಷ್ಟವಾದ ಪ್ರಯೋಗಾತ್ಮಕ ಪ್ರಾಣಿಯನ್ನು ಸಾಯಿಸಲು ಅಥವಾ ಸೋಂಕು ಉಂಟುಮಾಡಲು ಬೇಕಾಗುವ ಬ್ಯಾಕ್ಟೀರಿಯಾದ ಜೀವಕೋಶಗಳ ಸಂಖ್ಯೆಯನ್ನು ಅವಲಂಬಿಸಿ, ವಿಷಮತೆಯನ್ನು ಪರಿಮಾಣಾತ್ಮಕವಾಗಿ ಹೇಳಬಹುದು. ಇದನ್ನು ಲೀಥಲ್ ಡೋಜ್ ಎನ್ನುವರು. ಇದರಿಂದ ಶೇ.50 ರಷ್ಟು ಜೀವಿಗಳನ್ನು ಸಾಯಿಸಲು ಬೇಕಾಗುವ ಬ್ಯಾಕ್ಟೀರಿಯಾಗಳ ಸಂಖ್ಯೆಯನ್ನು (ಎಲ್ ಡಿ$_{50}$) ತಿಳಿದುಕೊಳ್ಳಬಹುದು. ಕೆಲವು ರೋಗಕಾರಕಗಳು ದೇಹದಲ್ಲಿ ನಿರ್ದಿಷ್ಟವಾದ ಭಾಗಕ್ಕೆ ಸೋಂಕು ಉಂಟು ಮಾಡುತ್ತವೆ. ಉದಾ: ಮೆನಿಂಗೊಕಾಕಲ್ ಬ್ಯಾಕ್ಟೀರಿಯಾ ಮಿದುಳಿನ ಪದರ ಮೆನಿಂಜಿಸ್, ಟ್ಯೂಬರ್‌ಕಲ್ ಬ್ಯಾಕ್ಟೀರಿಯಾ ಶ್ವಾಸಕೋಶವನ್ನು, ಡಿಫ್ತೀರಿಯ ಬ್ಯಾಕ್ಟೀರಿಯಾ ಗಂಟಲಿನ ಸೋಂಕನ್ನು ಉಂಟು ಮಾಡುತ್ತವೆ. ಅನೇಕ ರೋಗಕಾರಕ ಬ್ಯಾಕ್ಟೀರಿಯಾಗಳಲ್ಲಿ ನಿರ್ದಿಷ್ಟ ಲಕ್ಷಣವಿರುವುದಿಲ್ಲ. ಉದಾ: ಸ್ಟೆಫೈಲೊಕಾಕಸ್ ಬ್ಯಾಕ್ಟೀರಿಯಾ ಚರ್ಮದಲ್ಲಿ ಹುಣ್ಣು ಅಥವಾ ಕುರುವನ್ನು ಉಂಟುಮಾಡಬಲ್ಲುದು. ರಕ್ತವನ್ನು ವಿಷಮಯವಾಗಿಸುವುದು (ಸೆಪ್ಸಿಸ್) ಅಥವಾ ಮೂಳೆಗಳಲ್ಲಿ ಆಸ್ಟಿಯೋಮೈಲಿಟಿಸ್‌ನ್ನು ಉಂಟುಮಾಡುವುದು.

ಬ್ಯಾಕ್ಟೀರಿಯಾಗಳ ನಿಯಂತ್ರಣ: ಬ್ಯಾಕ್ಟೀರಿಯಾಗಳನ್ನು ಅನೇಕ ರೀತಿಯಲ್ಲಿ ನಿಯಂತ್ರಿಸಬಹುದು. ಅ) ಸ್ಟೆರಿಲೈಝೇಶನ್–ನಿಷ್ಕ್ರಿಮೀಕರಣ. ಇದನ್ನು ಕೆಲವು ರಾಸಾಯನಿಕ ವಸ್ತುಗಳಿಂದ ಉದಾ: ಎಥಿಲೀನ್ ಆಕ್ಸೈಡ್ ಅನಿಲ, ಕೀವುಗಳೆಕ (ಆನ್ಟಿಸೆಪ್ಟಿಕ್)ಗಳು, ರೋಗಾಣುಹಾರಿ (ಜರ್ಮಿಸೈಡ್)ಗಳ ಬಳಕೆ ಅಥವಾ ಕಾಯಿಸುವುದರಿಂದ (ಭಸ್ಮೀಕರಣ), ಒತ್ತಡದಲ್ಲಿ ಹಬೆಯನ್ನು ಹಾಯಿಸುವುದು (ಸ್ವತಾಪಕಾರಿ ಅಥವಾ ಆಟೋಕ್ಲೇವ್‌ನಿಂದ), ಒಣ ವಾತಾವರಣದಲ್ಲಿ ಕಾಯಿಸುವುದರಿಂದ (ಬಿಸಿ ಗಾಳಿಯ ಒಲೆಗಳಿಂದ) ಸಾಧಿಸಬಹುದು. ಆ) ವಿಕಿರಣಗಳಿಂದ (ಅತಿನೇರಳೆ ಅಥವಾ ಗಮಾ ಕಿರಣಗಳು) ಮತ್ತು ಇ) ಸೂಕ್ಷ್ಮ ಸೋಸುಕದ ಮೂಲಕ ಗಾಳಿಯನ್ನು ಸೋಸುವುದರಿಂದಲೂ (ಬ್ಯಾಕ್ಟೀರಿಯಲ್ ಫಿಲ್ಟರ್‌ನಿಂದ) ನಿಯಂತ್ರಣ ಮಾಡಬಹುದು.

ವಿಕಾಸ ಮತ್ತು ಉಗಮ: ಬ್ಯಾಕ್ಟೀರಿಯಾಗಳು, ಬಹಳ ಪುರಾತನ ಕಾಲದ ಜೀವಿಗಳು. ಇವುಗಳನ್ನು ಡಿವೋನಿಯನ್ ಕಾಲದ ಬಂಡೆಗಳಲ್ಲಿ (3,95,000,000 ವರ್ಷಗಳ ಪುರಾತನ) ಜೀವ ಅವಶೇಷವಾಗಿ ಕಂಡು ಹಿಡಿಯಲಾಗಿದೆ. ಇವುಗಳಲ್ಲಿರುವ ಅಸ್ಪಷ್ಟ ಬೀಜ ಕೇಂದ್ರಗಳ ಆಧಾರದ ಮೇಲೆ ಬ್ಯಾಕ್ಟೀರಿಯಾಗಳು, ನೀಲಿ, ಹಸಿರು ಪಾಚಿಗೆ ನಿಕಟವಾದುವು ಎಂದು ಭಾವಿಸಲಾಗಿದೆ. ಸಾಮಾನ್ಯ ದ್ಯುತಿಸಂಶ್ಲೇಷಕ ಪೂರ್ವಜರಿಂದ ಬ್ಯಾಕ್ಟೀರಿಯಾಗಳು ಮತ್ತು ನೀಲಿ ಹಸಿರು ಪಾಚಿಗಳೆರಡೂ ವಿಕಾಸವಾಗಿರುವೆಂದು ಊಹಿಸಲಾಗಿದೆ. ಬ್ಯಾಕ್ಟೀರಿಯಾದ ಅನೇಕ ಲಕ್ಷಣಗಳಿಗೂ ಮತ್ತು ಬೇರೆ ವರ್ಗದ ಜೀವಿಗಳಿಗೂ ಹೋಲಿಕೆ ಇದೆ.

ಜೀವಿ ವರ್ಗೀಕರಣದ ಲಕ್ಷಣಗಳು: ಆಕಾರ, ಗಾತ್ರ, ಆಹಾರದ ವಿಧಗಳು, ಜೀವ ಕ್ರಿಯೆಗಳ ಉತ್ಪನ್ನಗಳು, ರಾಸಾಯನಿಕ ವಸ್ತುಗಳಿಗೆ ಪ್ರತಿಕ್ರಿಯಿಸುವುದು, ಪ್ರತಿ ವಿಷಜನಕದ ಸಂಯೋಜನೆ ಮತ್ತು ವಾತಾವರಣದ ಬದಲಾವಣೆಗೆ ಹೊಂದಿಕೊಳ್ಳುವ ಶಕ್ತಿಯನ್ನು ಅವಲಂಬಿಸಿ ಬ್ಯಾಕ್ಟೀರಿಯಾಗಳನ್ನು ವರ್ಗೀಕರಿಸಲಾಗಿದೆ.

ಜೂಮೈಸಿಟಿಸ್ ವರ್ಗ : ಏಕಕೋಶ ಜೀವಿಗಳು, 1 ರಿಂದ 5 ಮೈಮೀ ಗಾತ್ರ. ಆಕಾರದಲ್ಲಿ ಮತ್ತು ಪೌಷ್ಟಿಕತೆಯಲ್ಲಿ ಭಿನ್ನತೆಯಿದೆ. ನಿರ್ದಿಷ್ಟವಾದ ಬೀಜಕೇಂದ್ರವಿಲ್ಲ. ಹೆಚ್ಚಿನವುಗಳಲ್ಲಿ ದ್ಯುತಿಸಂಶ್ಲೇಷಣ ಕ್ರಿಯೆಯಿಲ್ಲ, ಒಂಟಿಯಾಗಿ ಅಥವಾ ಸರಪಳಿಯ ರೀತಿಯಲ್ಲಿ ಅಥವಾ ಗುಂಪಾಗಿರುತ್ತವೆ. ಪ್ರಪಂಚದಾದ್ಯಂತ ಸು. 1500 ಪ್ರಭೇದಗಳಿವೆ.

1) ಸ್ಯೂಡೊಮೋನಡೇಲ್ಸ್ ಕ್ರಮ: ಗಡಸು ಗೋಡೆಯುಕ್ತ ಜೀವಕೋಶ. ಆಕಾರದಲ್ಲಿ ವ್ಯತ್ಯಾಸವಿದೆ. ಕೆಲವು ಪ್ರಭೇದಗಳಲ್ಲಿ ಸರಪಳಿಯ ರೀತಿ ಇದೆ. ದ್ಯುತಿಸಂಶ್ಲೇಷಣೆ ಕೆಲವು ಪ್ರಭೇದಗಳಲ್ಲಿ ಮಾತ್ರ ಇದೆ. ಒಂದು ಕಶಾಂಗದಿಂದ ಚಲನೆ. ಮಣ್ಣು, ನೀರು ಅಥವಾ ಉಪ್ಪು ನೀರಿನ ಜೀವಿಗಳು. ಉದಾ: ವೈಬ್ರಿಯೊ ಕೊಮ, ಸ್ಯೂಡೊಮೊನಾಸ್, ನೈಟ್ರೋಸೋಮೊನಾಸ್, ತಯೋಬ್ಯಾಸಿಲಸ್.

2) ಕ್ಲಾಮೈಡೊ ಬ್ಯಾಕ್ಟೀರಿಯೇಲ್ಸ್: ಗಡಸು ಜೀವಕೋಶ. ಟ್ರೈಕೋಮ್ಸ್, ಪೊರೆಯಿಂದ ಆವೃತವಾಗಿದೆ. ಚಲಿಸುವ ಬೀಜಕಗಳನ್ನು ಉತ್ಪಾದಿಸುತ್ತವೆ. ಅನಿಯಮಿತವಾಗಿ ಸಿಹಿನೀರಿನಲ್ಲಿ ಅಥವಾ ಉಪ್ಪು ನೀರಿನಲ್ಲಿ ಕಾಣಸಿಗುವುದು. ಉದಾ: ಸ್ಫೆರೊಟೈಲಸ್ ನ್ಯಾಟೆನ್ಸ್.

3) ಹೈಪೊ ಮೈಕ್ರೊಬಿಯೇಲ್ಸ್: ಗಡಸು ಗೋಡೆಯ ಜೀವಕೋಶ, ಆಧಾರದ ಮೇಲ್ಮೈಗೆ ಕಾಂಡದ ಸಹಾಯದಿಂದ ಅಂಟಿಕೊಂಡಿದೆ. ಜೀವಾಂಕುರ ವಿಧದ ಸಂತಾನೋತ್ಪತ್ತಿ. ಉದಾ: ರೊಡೊಮೈಕ್ರೊಬಿಯಂ, ಹೈಪೊಮೈಕ್ರೊಬಿಯಂ.

4) ಯುಬ್ಯಾಕ್ಟೀರಿಯಲ್ಸ್: ಗಡಸು ಗೋಡೆಯುಕ್ತ ಜೀವಕೋಶ, ಕಾಕಾಯಿಡ್ ಅಥವಾ ಬಸಿಲಾಯಿಡ್ ಅಥವಾ ಸರಪಳಿ ರೀತಿ ರಚನೆ. ಕಶಾಂಗಗಳಿಂದ ಚಲನೆ. ಉದಾ: ಎಶ್ಚಿರೀಷಿಯ, ಡಿಪ್ಲೊಕಾಕಸ್, ಸ್ಟೆಫಲೋಕಾಕಸ್, ಸ್ಟ್ರೆಪ್ಟೊಕಾಕಸ್, ಲ್ಯಾಕ್ಟೊಬ್ಯಾಸಿಲಸ್.

5) ಕ್ಯಾರ್ರೈಫನೇಲ್ಸ್: ಟ್ರೈಕೋಮ್‌ಗಳಿಂದ ಆವೃತವಾದ ಗಡಸು ಗೋಡೆಯುಕ್ತ ಜೀವಕೋಶ. ಕಶಾಂಗಗಳಿಂದ ಚಲನೆ. ದೊಡ್ಡ ಜೀವಕೋಶ, (30 ಮೈಮೀ ಉದ್ದ ಮತ್ತು 3 ಮೈಮೀ ಅಗಲ), ನೀರು ಕೊಳೆತ ವಸ್ತುಗಳು ಸಂದಿಪದಿ ಮತ್ತು ಕಶೇರುಕಗಳ ಕರುಳಿನಲ್ಲಿ ಜೀವಿಸುತ್ತವೆ. ಉದಾ: ಕ್ಯಾರ್ರೈಫೆನಾನ್ ಲೇಟ್ಯುಮ್, ಸಿಮೋಸಿಲ ಮ್ಯೂಲೀರಿ.

6) ಆಕ್ಟಿನೊಮೈಸಿಟೇಲ್ಸ್: ಗಡಸು ಗೋಡೆಯುಕ್ತ ಜೀವಕೋಶ. ಇವು ಕವಲುಗಳಾಗಿ ಬೆಳೆಯಬಹುದು. ಉದಾ: ಮೈಕೋಬ್ಯಾಕ್ಟೀರಿಯಂ ಟ್ಯೂಬರ್‌ಕ್ಯೂಲಾಸಿಸ್, ಸ್ಟ್ರೆಪ್ಟೊಮೈಸಿಸ್.

7) ಮೈಕ್ರೊಬ್ಯಾಕ್ಟೀರಿಯಲ್ಸ್: ಮೆದುವಾದ ಗೋಡೆಯ ಜೀವಕೋಶ. ತೆವಳುತ್ತವೆ. ಕಾಂಡಯುಕ್ತ ಫ್ರುಟಿಂಗ್ ದೇಹ. ಮಣ್ಣು, ಮಿಶ್ರಗೊಬ್ಬರ, ಗೊಬ್ಬರ ಮತ್ತು ಕೊಳೆಯುವ ಮರಗಳೇ ಇವುಗಳ ವಾಸಸ್ಥಾನ. ಮೈಕ್ರೊಕಾಕಸ್, ಕೋನ್‌ಡ್ರೊಕಾಕಸ್, ಸ್ಪೊರ್‍ಯಾನ್‌ಜಿಯಂ.

8) ಸ್ಪೈರೋಕೀಟೇಲ್ಸ್: ಸುರುಳಿಯಾಕಾರದ ಜೀವಕೋಶಗಳು. ವಕ್ರವಾಗಿ ಈಜುತ್ತವೆ. ನೀರು ಮತ್ತು ಕಶೇರುಕಗಳ ದೇಹದಲ್ಲಿ ವಾಸ. ಉದಾ: ಬೋರಿಲಿಯ ಟ್ರಿಪೊನೀಮ, ಲಿಪ್ಟೋಸ್ಪೈರ. ಮನುಷ್ಯನ ಮತ್ತು ಪ್ರಾಣಿಗಳ ಪರೋಪಜೀವಿಗಳು.

9) ಮೈಕೊಪ್ಲಾಸ್ಮಟೇಲ್ಸ್: ಮೆದುವಾದ ಗೋಡೆಯುಕ್ತ ಜೀವಕೋಶಗಳು, ಚಲನೆಯಿಲ್ಲ, ಬೇರೆ ಬೇರೆ ಹಂತಗಳಲ್ಲಿ ಆಕಾರ ಬದಲಾಗುವುದು. ಉದಾ: ಮೈಕೊಪ್ಲಾಸ್ಮ, ಪ್ಲೂರೊನ್ಯೂಮೊನಿಯ ರೀತಿಯ ಜೀವಿಗಳು ಮತ್ತು ಎಲ್ ರೀತಿಯ ನೈಜ ಬ್ಯಾಕ್ಟೀರಿಯಾ ಮತ್ತು ರಿಕೆಟ್ಸಿಯಾಗೆ ಮಧ್ಯದ ವಿಧದುವು.

10) ಬಿಜಿಯಾಟೋಲ್ಸ್: ಗಡಸು ಗೋಡೆಯುಕ್ತ ಜೀವಕೋಶ, ಸಾಮಾನ್ಯವಾಗಿ ದೊಡ್ಡದಾಗಿರುತ್ತದೆ. ತೆವಳಿಕೊಂಡು ಚಲನೆ (ನೀಲಿ ಹಸಿರು ಪಾಚಿಯ ರೀತಿ) ಉದಾ: ಬಿಜಿಯಾಟೊ ಟ್ರಿಯೋತ್ರಿಕ್. (ಎಸ್.ಆರ್.ಎಸ್.)

**ಬ್ಯಾಡ್ಜರ್:** ಕಾರ್ನಿವೊರ ಗಣದ ಮಸ್ಟೆಲಿಡೆ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಮಾಂಸಾಹಾರಿ ಸ್ತನಿಗಳಿಗಿರುವ ಸಾಮಾನ್ಯ ಹೆಸರು. ಭಾರತವೂ ಸೇರಿದಂತೆ ಆಫ್ರಿಕ, ಅರೇಬಿಯ, ತುರ್ಕಿಸ್ತಾನಗಳಲ್ಲಿ ಕಾಣದೊರೆಯುವ ಹನಿ ಬ್ಯಾಡ್ಜರ್ (ಮೆಲಿವೊರ ಕ್ಯಾಪೆನ್ಸಿಸ್), ಟಿಬೆಟ್, ಉತ್ತರ ಬರ್ಮ ಹಾಗೂ ದಕ್ಷಿಣ ಚೀನಗಳ ದಟ್ಟಕಾಡುಗಳಲ್ಲಿ ಸಿಕ್ಕುವ ಓಲ್ಡ್ ವರ್ಲ್ಡ್ ಬ್ಯಾಡ್ಜರ್ (ಮೆಲಿಸ್ ಮೆಲಿಸ್), ಕೆನಡ ಹಾಗೂ ಅಮೆರಿಕದ ಬ್ಯಾಡ್ಜರ್ (ಟ್ಯಾಕ್ಸಿಡಿಯ ಟ್ಯಾಕ್ಸಸ್) ಹಾಗೂ ಚೀನ, ಫಾರ್ಮೋಸ, ಬರ್ಮ, ಇಂಡೋಚೀನ, ಜಾವ, ಬೋರ್ನಿಯೊಗಳಲ್ಲಿ ಕಂಡುಬರುವ ಫೆರೆಟ್ ಬ್ಯಾಡ್ಜರ್ (ಮೆಲೋಗೇಲ್ ಪ್ರಭೇದ)– ಇವೆಲ್ಲಕ್ಕು ಈ ಹೆಸರು ಅನ್ವಯವಾಗುತ್ತದೆ.

ಅಮೇರಿಕನ್ ಬ್ಯಾಡ್ಜರ್ ಶುಷ್ಕ ಹಾಗೂ ಬಯಲುಸೀಮೆಗಳಲ್ಲಿ ವಾಸಿಸುತ್ತದೆ. ದೇಹದ ಉದ್ದ 42–72 ಸೆಂಮೀ. 10–15 ಸೆಂಮೀ. ಉದ್ದದ ಬಾಲವುಂಟು. ತೂಕ 3.5–10

ಕಿಗ್ರಾಂ. ದೇಹದ ಬಣ್ಣ ಬೂದು ಇಲ್ಲವೆ ಕೆಂಪು. ಮುಸುಡಿನ ತುದಿಯಿಂದ ಭುಜದವರೆಗೆ ಚಾಚಿರುವ ಬಿಳಿ ಪಟ್ಟೆ, ಕೆನ್ನೆಯ ಮೇಲಿರುವ ಕಪ್ಪು ಮಚ್ಚೆ, ಬಿಳಿಬಣ್ಣದ ಕತ್ತು ಹಾಗೂ ಹೊಟ್ಟೆ ಇದರ ಇನ್ನಿತರ ಲಕ್ಷಣಗಳು. ದೇಹದ ಅಕ್ಕಪಕ್ಕಗಳ ಕೂದಲು ಉದ್ದವಾಗಿವೆ. ಗುದದ್ವಾರದ ಬಳಿ ವಾಸನಾ ಗ್ರಂಥಿಗಳುಂಟು.

ಸಾಧಾರಣವಾಗಿ ಒಂಟಿಯಾಗಿ ಓಡಾಡುತ್ತದೆ. ಹಗಲಿನಲ್ಲಿ ಚಟುವಟಿಕೆಯಿಂದಿರುವ ಪ್ರಾಣಿಯಾದರೂ ಮನುಷ್ಯನಿಗೆ ಹೆದರಿ ನಿಶಾಚರಿಯಾಗಿದೆ. ನೆಲದಲ್ಲಿ ಬಿಲತೋಡಿ ವಾಸಿಸುತ್ತದೆ. ಮೊಲ, ಇಲಿ ಮುಂತಾದ ದಂಶಕಗಳು ಇದರ ಆಹಾರ.

ಇದರ ಸಂತಾನವೃದ್ಧಿಯ ಕ್ರಾಯ ಆಗಸ್ಟ್–ಸೆಪ್ಟಂಬರ್. 6 ತಿಂಗಳ ಗರ್ಭಾವಸ್ಥೆಯ ತರುವಾಯ 1–5 ಮರಿಗಳು ಹುಟ್ಟುವುವು. ಆಯಸ್ಸು ಸುಮಾರು 13 ವರ್ಷಗಳೆನ್ನಲಾಗಿದೆ. ಬ್ಯಾಡ್ಜರಿನ ತುಪ್ಪಳಿನಿಂದ ಮೇಲುಡುಪನ್ನು ತಯಾರಿಸುವುದಿದೆ. ಕುಂಚಗಳನ್ನೂ ಇದರ ಕೂದಲಿನಿಂದ ತಯಾರಿಸುವುದುಂಟು. ***

**ಬ್ರಾಂಟೊಸಾರಸ್:** ಮೇಲಿನ ಜುರಾಸಿಕ್ ಕಾಲದಲ್ಲಿ ಬದುಕಿದ್ದ ಸಸ್ಯಾಹಾರಿ ದೈತ್ಯೋರಗಗಳ ಪೈಕಿ ಒಂದು. ಇಗ್ವಾನೋಡಾನ್ ಸರೀಸೃಪದ ಸಮಕಾಲಿಕ. ಇದು ನಡೆಯುವಾಗ ಅತೀವ ಶಬ್ದ ಮಾಡುತ್ತಿದ್ದಿತಾದ್ದರಿಂದ ಇದನ್ನು ಗುಡುಗು ಸರೀಸೃಪ ಎಂದು ಕರೆವುದಿದೆ. ಉತ್ತರ ಅಮೇರಿಕದ ವ್ಯೋಮಿಂಗ್ ಮತ್ತು ಕೊಲರಾಡೊ ಪ್ರಾಂತ್ಯಗಳಲ್ಲಿ ಇದರ ಪಳೆಯುಳಿಕೆಗಳು ದೊರೆತಿವೆ. ಇದರ ಪಾದಗಳಲ್ಲಿ ತಲಾ 5 ಬೆರಳುಗಳಿದ್ದುವು. ಸುಮಾರು 20 ಮೀ ಉದ್ದ ಬೆಳೆಯುತ್ತಿತ್ತು. ಉದ್ದವಾದ ತೆಳು ಕುತ್ತಿಗೆಯೂ ಅತ್ಯಲ್ಪ ಗಾತ್ರದ ಮೆದುಳುಳ್ಳ ಸಣ್ಣ ತಲೆಯೂ ಇದರ ಕೆಲವು ಲಕ್ಷಣಗಳ ಪೈಕಿ ಎರಡು.

ಬ್ರಾಂಟೊಸಾರಸ್ ಪ್ರಾಯಶಃ ಜೌಗುಪ್ರದೇಶವಾಸಿಯಾಗಿದ್ದು ಆಳವಿಲ್ಲದ ನೀರಿನಲ್ಲಿ ತಲೆಯನ್ನು ಮಾತ್ರ ಹೊರಗಿಟ್ಟು ಜಲಸಸ್ಯಗಳನ್ನು ತಿಂದು ಜೀವಿಸುತ್ತಿತ್ತು. ಇದರ ಇನ್ನೊಂದು



ಬ್ರಾಂಟೊಸಾರಸ್,

ವೈಶಿಷ್ಟ್ಯ ಮಿದುಳುಬಳ್ಳಿ ಸೊಂಟದ ಭಾಗದಲ್ಲಿ ಕೊಂಚಮಟ್ಟಿಗೆ ಕೇಂದ್ರೀಕೃತವಾಗಿ ಎರಡನೆಯ ಮಿದುಳು ರೂಪುಗೊಂಡಿದ್ದುದು. ತಲೆಯಲ್ಲಿರುವ ಸಣ್ಣ ಮಿದುಳನ್ನು ಬಲಪಡಿಸುವುದಕ್ಕೆ ಈ ಏರ್ಪಾಟು ಇದ್ದಿರಬೇಕು. ಬೇರೆ ಜಾತಿಯ ಮಾಂಸಾಹಾರಿ ಸರೀಸೃಪಗಳಿಗೆ ಸುಲಭವಾಗಿ ಆಹಾರವಾಗುತ್ತಿತ್ತೆನ್ನಲಾಗಿದೆ. ***

**ಬ್ರೀಮ್:** ಸೈಪ್ರಿನಿಡೆ ಕುಟುಂಬಕ್ಕೆ ಸೇರಿದ ಸಿಹಿನೀರು ಮೀನು. ಅಬ್ರಾಮಿಸ್ ಬ್ರಾಮ ಮತ್ತು ಪ್ಯಾರಬ್ರಾಮಿಸ್ ಪೆಕಿನೆನ್ಸಿಸ್ ಎಂಬ ಎರಡು ಬಗೆಯ ಮೀನುಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಮೊದಲನೆಯದು ಯೂರೋಪಿನ ಉತ್ತರ ಮಧ್ಯ ಹಾಗೂ ಪೂರ್ವಭಾಗಗಳ ನದಿಗಳಲ್ಲಿ, ಜಲಾಶಯಗಳಲ್ಲಿ ವಾಸಿಸುತ್ತದೆ. ಇದರ ಉದ್ದ ಸುಮಾರು 700 ಮಿಮೀ. ದೇಹ ಗಡಸು, ದೇಹದ ಗಾತ್ರಕ್ಕೆ ಹೋಲಿಸಿದರೆ ತಲೆ ಚಿಕ್ಕದು. ಆಳವಾದ ನೀರಿನಲ್ಲಿ, ಹೆಚ್ಚಾಗಿ ಓಡಾಡಿಕೊಂಡಿರುವ ಈ ಪ್ರಭೇದ ಬಸವನ ಹುಳು, ಕೀಟಗಳು, ಮೃದ್ವಂಗಿಗಳು ಮುಂತಾದ ಜಲಪ್ರಾಣಿಗಳನ್ನು ತಿನ್ನುತ್ತದೆ. ಸಂತಾನವೃದ್ಧಿಯ ಸಮಯದಲ್ಲಿ ಹೆಣ್ಣು ಮೀನಿನ ದೇಹದಗಾತ್ರ ಹೆಚ್ಚುತ್ತದಲ್ಲದೆ, ತಲೆ ಹಾಗೂ ರೆಕ್ಕೆಗಳ ಮೇಲೆ ಒಂದು ವಿಧದ ಗಂಟುಗಳು ಮೂಡುವುವು. ಮೊಟ್ಟೆಗಳನ್ನು ಒತ್ತಾಗಿ ಬೆಳೆದ ಜಲಸಸ್ಯಗಳ ಬಳಿ ಇಡುವುದು.

ಎರಡನೆಯ ಬಗೆಯ ಬ್ರೀಮ್ ಚೀನದ ಉತ್ತರ, ಮಧ್ಯ ಹಾಗೂ ದಕ್ಷಿಣ ಭಾಗಗಳ ನದಿಗಳಲ್ಲಿ ವಾಸಿಸುತ್ತದೆ. ಇದು ಸುಮಾರು 300 ಮಿಮೀ ಉದ್ದಕ್ಕೆ ಬೆಳೆಯುತ್ತದೆ. ನೀರಿನಲ್ಲಿರುವ ಕ್ರಿಮಿಕೀಟಗಳು, ಹುಳುಗಳು ಹಾಗೂ ಸಣ್ಣ ಗಾತ್ರದ ಇತರ ಮೀನುಗಳು ಇದರ ಆಹಾರ. ಜಲಸಸ್ಯಗಳನ್ನು ತಿನ್ನುವುದೂ ಉಂಟು.

ಎರಡು ತೆರನ ಬ್ರೀಮ್‌ಗಳೂ ಉತ್ತಮ ಬಗೆಯ ಖಾದ್ಯಯೋಗ್ಯ ಮೀನುಗಳೆನಿಸಿದ್ದು, ಇವನ್ನು ಒಳನಾಡಿನ ಜಲಾಶಯಗಳಲ್ಲಿ, ಕೆರೆಕುಂಟೆಗಳಲ್ಲಿ, ಬೆಳೆಸುವುದಿದೆ. (ಕೆ.ವಿ.ಡಿ)

**ಬ್ರುಸೆಲ್ಲಾ ಜ್ವರ:** ಬ್ರುಸೆಲ್ಲಾ ಜಾತಿಗೆ ಸೇರಿದ ರೋಗಾಣುಗಳಿಂದ ಉಂಟಾಗುವ ಸಾಂಕ್ರಾಮಿಕ ಜ್ವರ. ಡೇವಿಡ್ ಬ್ರೂಸ್ (1887) ಎಂಬಾತ ಈ ಜ್ವರಕ್ಕೆ ಕಾರಣವಾದ ದಂಡಾಣುವನ್ನು ಪತ್ತೆ ಹಚ್ಚಿದ್ದರಿಂದ ಈ ಹೆಸರು. ಇದಕ್ಕೆ ಮಾಲ್ಟಾ ಜ್ವರ, ಜಿಬ್ರಾಲ್ಟರ್ ಜ್ವರ, ಭೂಮಧ್ಯ ಸಮುದ್ರ ಜ್ವರ, ತರಂಗಿತ ಜ್ವರ ಎಂಬ ಇತರ ಹೆಸರುಗಳೂ ಇವೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭೂಮಧ್ಯ ಸಮುದ್ರದ ಆಸುಪಾಸಿನಲ್ಲಿದ್ದ ಆಂಗ್ಲ ಪದಾತಿ ಹಾಗೂ ನಾವಿಕ ಪಡೆಗಳಲ್ಲಿ ಹೊಸರೀತಿಯ ಒಂದು ಜ್ವರ ತಲೆದೋರಿ ವೈದ್ಯಕೀಯ ಸಿಬ್ಬಂದಿಗಳಿಗೆ ಒಗಟಾಗಿ ಪರಿಣಮಿಸಿತು. ಇದು ಮಲೇರಿಯಾ ಮತ್ತು ವಿಷಮ ಜ್ವರಗಳಿಂದ ಬೇರೆಯಾಗಿದ್ದು ಇದರ ಕಾರಣ ಹುಡುಕುವುದು ಕಷ್ಟಕರವಾಗಿತ್ತು. ಆಗಲೇ ಬ್ರೂಸ್ ತನ್ನ ಸಂಶೋಧನೆಯಿಂದ ಖ್ಯಾತನಾಮನಾದದ್ದು. ಬ್ರುಸೆಲ್ಲಾ ವರ್ಗಕ್ಕೆ ಸೇರಿದ ಇನ್ನೆರಡು ಇದೇ ಜಾತಿಯ ರೋಗಾಣುಗಳನ್ನು 1897 ಹಾಗೂ 1914 ಕಂಡುಹಿಡಿಯಲಾಯಿತು. ಡೇವಿಸ್ ಬ್ರೂಸ್‌ನಿಂದ ಪ್ರಥಮವಾಗಿ ಗುರುತಿಸಲಾದ ಸೂಕ್ಷ್ಮಾಣುಗಳ ಪೈಕಿ ಬ್ರುಸೆಲ್ಲಾ ಮೆಲಿಟೆನ್ಸಿಸ್ ಮೊದಲಿಗೆ ಆಡುಗಳಿಗೆ ತಗಲಿ ಅವುಗಳಲ್ಲಿ ಸಾಂಕ್ರಾಮಿಕ ಗರ್ಭಪಾತ ಉಂಟುಮಾಡುತ್ತದೆ. 1897ರಲ್ಲಿ ಗುರುತಿಸಲಾದ ಬ್ರುಸೆಲ್ಲಾ ಅಬಾರ್ಟಸ್ ಜಾನುವಾರುಗಳಲ್ಲಿ ಇದೇ ರೀತಿಯ ಗರ್ಭಪಾತ ಉಂಟುಮಾಡುತ್ತದೆ. 1914ರಲ್ಲಿ ಗುರುತಿಸಲಾದ ಬ್ರುಸೆಲ್ಲಾ ಸೂಯಿಸ್ ಹಂದಿಗಳಲ್ಲಿ ಇದೇ ರೀತಿಯ ಕಾಯಿಲೆಗೆ ಕಾರಣವಾಗಿದೆ.

ಈ ಮೂರು ಬಗೆಯ ರೋಗಾಣುಗಳು ಮನುಷ್ಯನ ದೇಹವನ್ನು ಆಕ್ರಮಿಸಿ ಬ್ರುಸೆಲ್ಲಾ ಜ್ವರ ಉಂಟುಮಾಡಬಲ್ಲುವು. ಮೇಲೆ ಹೆಸರಿಸಿರುವ ಪ್ರಾಣಿಗಳೊಡನೆ ಸದಾ ಸಂಪರ್ಕವಿರುವ ಜನರಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುವುದು. ಅದಲ್ಲದೆ ಹಾಲುಸರಬರಾಜು, ಮಾಂಸ ವ್ಯಾಪಾರ, ಗೋಸಂಗೋಪನೆ, ಪಶುವೈದ್ಯ ಸಿಬ್ಬಂದಿ ಇಂಥ ವೃತ್ತಿಯಲ್ಲಿರುವವರಿಗೆ ಈ ರೋಗ ಹೆಚ್ಚಾಗಿ ತಗಲುತ್ತದೆ. ಬ್ರುಸೆಲ್ಲಾ ರೋಗಾಣುಗಳು ದನದ ಮತ್ತು ಆಡಿನ ಸ್ತನಗಳಲ್ಲಿದ್ದು ಅವುಗಳ ಹಾಲಿನೊಂದಿಗೆ ಬೆರೆತಿರುತ್ತವೆ. ಆದ್ದರಿಂದ ಈ ರೋಗಾಣುಗಳಿಂದ ಕಲುಷಿತವಾದ ಹಾಲನ್ನು ಚೆನ್ನಾಗಿ ಕುದಿಸದೆ ಉಪಯೋಗಿಸಿದರೆ ಬ್ರುಸೆಲ್ಲಾ ಜ್ವರ ಉಂಟಾಗುವುದು. ಅಲ್ಲದೆ ರೋಗಿಷ್ಠ ಪ್ರಾಣಿಯ ಮೂತ್ರ ಹಾಗೂ ಯೋನಿಸ್ರಾವಗಳ ಸಂಪರ್ಕವೂ ರೋಗಕಾರಕ. ಈ ವ್ಯಾಧಿ ಮೇಲೆ ಹೇಳಿದ ಯಾವುದೇ ಪ್ರಾಣಿಯ ಮೂಲಕ ಮನುಷ್ಯನಿಗೆ ತಗಲುವುದಲ್ಲದೆ ಮನುಷ್ಯನಿಂದ ಮನುಷ್ಯನಿಗೆ ಅಂಟುವುದಿಲ್ಲ. ಅಲ್ಲದೆ ಸ್ತ್ರೀಯರಲ್ಲಿ ಗರ್ಭಪಾತ ಉಂಟುಮಾಡುವುದಿಲ್ಲ.

ರೋಗ ಲಕ್ಷಣ ಹಾಗೂ ಚಿಹ್ನೆಗಳು : ಸಾಮಾನ್ಯವಾಗಿ ಈ ರೋಗ ನಿಧಾನವಾಗಿ ಆರಂಭವಾಗುವುದು. ಮೈ ಕೈ ನೋವು, ಸಂದು ನೋವು ಬೆನ್ನು ನೋವು, ತಲೆಸಿಡಿತ, ಚಳಿಗಳಿಂದ ಕೂಡಿ ಇತರ ಯಾವುದೇ ಜ್ವರದಂತೆ ಇದರ ಲಕ್ಷಣಗಳಿರುವುದು. ಜ್ವರದ ಜತೆಯಲ್ಲಿ ವಿಪರೀತವಾಗಿ ಬೆವರುವಿಕೆ ಮತ್ತು ಅಂಗೋಪಾಂಗಗಳಲ್ಲಿ ಬಲಹೀನತೆ ಕಂಡು ಬರುವುದು. ದಿನಗಳು ಉರುಳಿದಂತೆ ಹಸಿವು ಕಡಿಮೆಯಾಗಿ ದೇಹ

ಕೃಶವಾಗುತ್ತಬರುತ್ತದೆ. ದಿನದ ಒಂದು ನಿರ್ದಿಷ್ಟ ವೇಳೆಗೆ ಜ್ವರ ಏರಿ ಮತ್ತೆ ಇಳಿಯುತ್ತದೆ. ತಾಪ ಸಾಧಾರಣ $100^0$ಸೆ. ಈ ನಿಂದ $103^0$ ಸೆ. ವರೆಗೆ ಇರುವುದು. ಆಸ್ಪತ್ರೆಗಳಲ್ಲಿ ಪ್ರತಿ ನಾಲ್ಕು ಗಂಟೆಗಳಿಗೊಮ್ಮೆ ಜ್ವರ ಅಳೆದು ರೇಖಾಪಟ್ಟಿಯ ಮೇಲೆ ಚಿತ್ರಿಸಿದರೆ ಅದು ಅಲೆಯ ಸ್ವರೂಪದಲ್ಲಿ ಕಾಣುವುದು. ಇದರಿಂದಾಗಿ ಇದಕ್ಕೆ ತರಂಗಿತ ಜ್ವರ ಎಂಬ ಹೆಸರುಂಟು.

ರೋಗಿಯನ್ನು ಪರೀಕ್ಷಿಸಿದರೆ ಅವನ ಯಕೃತ್ ಮತ್ತು ಗುಲ್ಮಗಳು ಊದಿ ಹಿರಿದಾಗಿರುವುದನ್ನು ಉದರದ ಮೇಲಿನ ಮತ್ತು ಎದುರಿನ ಭಾಗ ಅಮುಕಿ ಕಂಡುಹಿಡಿಯಬಹುದು. ಇದಲ್ಲದೆ ದುಗ್ಧ ರಸಗ್ರಂಥಿಗಳು ಕೂಡ ದೇಹದ ನಾನಾ ಕಡೆಗಳಲ್ಲಿ ಊದಿಕೊಂಡಿರುವುವು. ರಕ್ತದ ಮೂಲಕ ಹರಡಿ ಬೀಜದ ಉರಿತ, ನೋವು ಉಂಟುಮಾಡಬಹುದು. ಕೆಲವೊಮ್ಮೆ ಈ ರೋಗದಿಂದ ಮಾನಸಿಕ ರೋಗದ ಲಕ್ಷಣಗಳೂ ಕಾಣಿಸಿಕೊಳ್ಳುವುವು.

ರೋಗ ನಿದಾನ: ಯಾವ ರೋಗಿಯಾದರೂ ದೀರ್ಘ ಕಾಲದ ವಾಯಿದೆ ಜ್ವರದಿಂದ ನರಳುತ್ತಿದ್ದರೆ, ಅವನ ಉದ್ಯೋಗದಲ್ಲಿ ಪ್ರಾಣಿಗಳ ಸಂಪರ್ಕವಿದ್ದರೆ ಅಥವಾ ಅಂಥ ರೋಗಪೀಡಿತ ಹಸು ಅಥವಾ ಆಡಿನ ಹಾಲು ಉಪಯೋಗಿಸಿದ ಸಂಶಯವಿದ್ದರೆ ಬ್ರುಸೆಲ್ಲ ರೋಗದ ಸಾಧ್ಯತೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ರೋಗವನ್ನು ರುಜುಪಡಿಸುವಂತೆ ಅಂಟಿಕೆ (ಅಗ್ಲುಟಿನೇಶನ್) ಪರೀಕ್ಷೆ ಮಾಡಬಹುದು; ನಿರೋಧಜನಕವನ್ನು ಮಿಶ್ರಣಗೊಳಿಸಿದಲ್ಲಿ ನಿರೋಧಜನಕದ ಕಣಗಳು ಒಂದಕ್ಕೊಂದು ಅಂಟಿಕೊಳ್ಳುವುದನ್ನು ಸೂಕ್ಷ್ಮದರ್ಶಕದಲ್ಲಿ ನೋಡಬಹುದು. ಹೀಗಾದಾಗ ರೋಗಿ ಬ್ರುಸೆಲ್ಲ ಜ್ವರದಿಂದ ಪೀಡಿತನೆಂಬುದು ಸ್ಪಷ್ಟ.

ಚಿಕಿತ್ಸೆ: ರೋಗದ ಚಿಕಿತ್ಸೆಯಲ್ಲಿ ದಿನಕ್ಕೆ ಎರಡು ಬಾರಿ 100 ಮಿಗ್ರಾ ಡೋರ್ಸೈಕ್ಲಿನ್ ಮತ್ತು ಒಮ್ಮೆ 600 ಮಿಗ್ರಾ ರಿಫಾಂಪಿಸಿನ್ 21 ದಿನಗಳ ಕಾಲ ಕೊಡಬೇಕಾಗುವುದು. ಇಲ್ಲವೆ ಟ್ರೈಮೆಥೊಪ್ರಿಂ (600 ಮಿಗ್ರಾ) ಮತ್ತು ಸಲ್ಫಾಮೆಥಾಕ್ಸಜೋಲ್ (2400 ಮಿಗ್ರಾ) ಕೊಡಬಹುದು. ಆದರೆ ಅದರಲ್ಲಿ ರೋಗದ ಮರುಕಳಿಕೆ ವಿಶೇಷ.

ರೋಗ ನಿರೋಧ ವಿಧಾನ: ಪ್ರಾಣಿಗಳಲ್ಲಿ ಈ ರೋಗವನ್ನು ತಡೆಗಟ್ಟುವುದರ ಮೂಲಕ ಮನುಷ್ಯರಲ್ಲಿ ಇದನ್ನು ಕಡಿಮೆ ಮಾಡಬಹುದು. ರೋಗ ಪೀಡಿತ ಜಾನುವಾರಗಳ ಸಂಪರ್ಕದಲ್ಲಿರುವವರು ತಮ್ಮ ನೈರ್ಮಲ್ಯ ಕಾಪಾಡಿಕೊಂಡಿದ್ದರೆ ರೋಗ ಬರದಂತೆ ತಡೆಹಿಡಿಯಬಹುದು. ಮನೆ, ಶಾಲೆ, ಹೋಟೆಲು ಮುಂತಾದೆಡೆ ಬಳಸುವ ಹಾಲನ್ನು ಕಡ್ಡಾಯವಾಗಿ ಪಾಸ್ಚರೀಕರಿಸುವುದರಿಂದ ಹಾಲಿನೊಡನೆ ಕಲಬೆರಕೆಯಾದ ರೋಗಾಣುಗಳು ನಾಶಹೊಂದಿ ಈ ರೋಗ ಬಾರದಂತಾಗುವುದು. ***

**ಬ್ಲಾಕ್, ಕೊನ್ರಾಡ್ ಎಮಿಲ್ (1912):** ಅಮೆರಿಕಾದಲ್ಲಿ ನೆಲಸಿರುವ ಜರ್ಮನ್ ಜೀವರಸಾಯನವಿಜ್ಞಾನಿ. ಕೊಲೆಸ್ಟಿರಾಲಿನ ಜೈವಿಕ ಸಂಶ್ಲೇಷಣೆಯ ವಿವರಣೆಗಾಗಿ 1964ರಲ್ಲಿ ಲೈನೆನ್ ಎಂಬ ಇನ್ನೊಬ್ಬ ಜೀವರಸಾಯನ ವಿಜ್ಞಾನಿಯೊಡನೆ ನೊಬೆಲ್ ಪಾರಿತೋಷಿಕ ದೊರೆಯಿತು. ಬ್ಲಾಕ್ 1912 ಜನವರಿ 21ರಂದು, ಆಗ ಜರ್ಮನಿಗೆ ಸೇರಿದ್ದು ಈಗ ಪೋಲೆಂಡಿನಲ್ಲಿ ಇರುವ, ನೇಯ್ಸ್, ಎಂಬ ಪಟ್ಟಣದಲ್ಲಿ ಜನಿಸಿದ. ಮ್ಯೂನಿಕ್ಕಿನ ಟೆಕ್ನಿಕಲ್ ಹೈಸ್ಕೂಲಿನಲ್ಲಿ ವ್ಯಾಸಂಗಮಾಡಿ 1934ರಲ್ಲಿ ಕೆಮಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿಗಳಿಸಿದ. ಜರ್ಮನಿಯಲ್ಲಿ ಹಿಟ್ಲರನ ಪ್ರಾಬಲ್ಯ ಪ್ರಾರಂಭವಾದಾಗ ಸ್ವಿಟ್ಸರ್ಲೆಂಡಿಗೆ ವಲಸೆಹೋದ. 1936ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ತೆರಳಿ ಅಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದ ಡಾಕ್ಟೋರೇಟ್ ಡಿಗ್ರಿ ಪಡೆದ (1938). ಕೂಡಲೇ ರೊಡಾಲ್ಫ್ ಶೊಎನ್ ಹೈಮರನ ಕೈ ಕೆಳಗೆ ಅನ್ವೇಷಣ ಸಹಾಯಕನಾಗಿ ಸೇರಿ ಸಮಸ್ಥಾನಿ ವಿಧಾನರೀತ್ಯ ಕೋಶಗಳ ರಾಸಾಯನಿಕ ವಿನ್ಯಾಸ ವ್ಯಾಸಂಗಿಸುವುದರಲ್ಲಿ ನಿರತನಾದ. 1946–54 ಅವಧಿಯಲ್ಲಿ ಷಿಕಾಗೋ ವಿಶ್ವವಿದ್ಯಾಲಯದಲ್ಲಿಯೂ, 1954ರಿಂದ ಮುಂದೆ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿಯೂ ಕೋಶರಾಸಾಯನಿಕ ವಿನ್ಯಾಸ ವ್ಯಾಸಂಗ ಮುಂದುವರಿಸಿದ. ದೇಹದಲ್ಲಿ ಆಹಾರವಸ್ತುಗಳ ಅಪಚಯ ಕ್ರಿಯೆಯ ಅಂತ್ಯದಲ್ಲಿ ಉತ್ಪತ್ತಿ ಆಗುವ ಅಸಿಟೇಟ್ ಎಂಬ ದ್ವಿಕಾರ್ಬನಿಕ ಘಟಕ (ಟುಕಾರ್ಬನ್ ಫ್ರಾಗ್‌ಮೆಂಟ್) ಕೊಲೆಸ್ಟಿರಾಲಿನ ಅಣುಸಂಶ್ಲೇಷಣೆಯ ಸುಮಾರು 30 ಘಟ್ಟಗಳಲ್ಲಿ ಪಾಲುಗೊಳ್ಳುವ ಮುಖ್ಯ ಕಚ್ಚಾವಸ್ತು ಎಂಬುದನ್ನು ಬ್ಲಾಕ್ ಮತ್ತು ರಿಟ್ಟನ್‌ಬರ್ಗ್ 1942ರಲ್ಲಿ ತೋರಿಸಿದ್ದರು. ದ್ವಿಕಾರ್ಬನಿಕ ಘಟಕಗಳು ಹಂತಹಂತವಾಗಿ ಕೊಲೆಸ್ಟ್ರಾಲ್ ರೂಪಕ್ಕೆ ಪರಿವರ್ತನೆಯಾಗುವ ಒಟ್ಟು 36 ಹಂತಗಳಲ್ಲಿ ಸ್ಕ್ವಾಲೀನ್ ಎಂಬ ಅಣುವಿನ ಜನನ ಅತಿ ಮುಖ್ಯ ಹಂತವೆಂದೂ, ಇದೇ ರೀತಿ ದೇಹದಲ್ಲಿ ದ್ವಿಕಾರ್ಬನಿಕ ಘಟಕಗಳ ಹಂತಹಂತವಾದ ಸೇರ್ಪಡೆಯಿಂದ ದೇಹದ ಮೇದೋಆಮ್ಲಗಳ (ಫ್ಯಾಟಿ ಆಸಿಡ್ಸ್) ಸಂಯೋಜನೆ ಆಗುವುದೆಂದೂ ಬ್ಲಾಕ್ ಮತ್ತು ಲೈನೆನ್ ವಿಶದೀಕರಿಸಿದರು. ದೇಹದಲ್ಲಿ ಕೊಲೆಸ್ಟಿರಾಲಿನ ಸಂಯೋಜನೆಯ ವಿವರ ತಿಳಿದು ಬಂದ ಬಳಿಕ ರಕ್ತದಲ್ಲಿ ಅದರ ಮಟ್ಟದ ಏರಿಳಿತಗಳ ವಿವರಗಳೂ ಅವಕ್ಕೂ ಅಥಿರೋಸ್ಕ್ಲಿರೋಸಿಸ್ (ಅಥಿರೋಮ) ರೋಗಸ್ಥಿತಿಗೂ ಇರುವ ಸಂಬಂಧ ಸ್ಪಷ್ಟವಾಯಿತು. ***

# ಭ

**ಭಕ್ಷಕಕೋಶ ಕಬಳಿಕೆ:** ಜೀವಾಣುಗಳು ಅಥವಾ ಭಕ್ಷಕ ಕೋಶಗಳು ತಮ್ಮ ನೆರೆಯಲ್ಲಿರುವ ಜೈವಿಕ ಹಾಗೂ ಅಜೈವಿಕ ಕಣಗಳನ್ನು ಕಬಳಿಸಿ ಅಂತರ್ಗತ ಮಾಡಿಕೊಳ್ಳುವ ವಿಧಾನ (ಫೇಗೋಸೈಟೋಸಿಸ್). ಇಂಥ ಸಾಮರ್ಥ್ಯ ಪ್ರಾಣಿದೇಹದ ಕೆಲವು ಭಕ್ಷಕ ಕೋಶಗಳಿಗೆ ಇವೆ. ಇವುಗಳಿಗೆ ಕಬಳಿಸುವ ಭಕ್ಷಕ ಕೋಶಗಳೆಂದು (ಫೇಗೋಸೈಟ್ಸ್) ಹೆಸರು. ಏಕಾಣುಜೀವಿಯಾದ ಅಮೀಬ ಕಬಳಿಸುವ ಭಕ್ಷಕ ಕೋಶವೇ. ಅಮೀಬ, ಸ್ಪಾಂಜುಗಳಲ್ಲಿ ಭಕ್ಷಕ ಕೋಶ ಕಬಳಿಕೆ ಆಹಾರ ಪೂರೈಕೆಯ ಮಾರ್ಗ. ಮೇಲ್ದರ್ಜೆಯ ಪ್ರಾಣಿಗಳಲ್ಲಿ ಇದು ಸೋಂಕಿನ ವಿರುದ್ಧ ರಕ್ಷಣೆಯನ್ನು ಒದಗಿಸುವ ಒಂದು ಮುಖ್ಯ ವಿಧಾನ. ಫೇಗೋಸೈಟೋಸಿಸ್, ಫೇಗೋಸೈಟ್ಸ್ ಎಂಬ ಪದಗಳನ್ನು ಸೃಷ್ಟಿಸಿದವ ರಷ್ಯದ ವೈದ್ಯ ಎಲೀ ಮೆಚ್ನಿಕಾಫ್ (1845–1916). ಈತನ ಕಂಪ್ಯಾರಟಿವ್ ಪೆಥಾಲಜಿ ಆಫ್ ಇನ್‌ಫ್ಲಮೇಷನ್ ಎಂಬ ಗ್ರಂಥದಲ್ಲಿ ಭಕ್ಷಕಕೋಶ ಕಬಳಿಕೆ ವಿವಿಧ ಪ್ರಾಣಿವರ್ಗದಲ್ಲಿ ಹೇಗೆ ವಿಕಾಸಗೊಂಡಿದೆ ಎಂಬುದರ ವಿವರ ಇದೆ. ಪ್ರಾರಂಭದಲ್ಲಿ ಈ ಪದ ಆಹಾರ ಕಣಗಳ ಕಬಳಿಕೆಗೆ ಸೀಮಿತವಾಗಿತ್ತು. ತಮ್ಮ ಇರುವಿಕೆಯಿಂದ ಪೀಡನೆಯನ್ನು ಉಂಟುಮಾಡುವ ಕಣಗಳು, ಮೃತಪ್ರಾಯವಾದ ಭಕ್ಷಕಕಣಗಳು ಹಾಗೂ ಅವುಗಳ ಅವಶೇಷಗಳು, ಸೋಂಕಿನಿಂದ ದೇಹದ ಒಳಹೊಕ್ಕು ರೋಗವನ್ನು ಉಂಟು ಮಾಡುವ ವಿಷಾಣುಗಳ ಕಬಳಿಕೆಗೂ ಈ ಪದ ಮುಂದಕ್ಕೆ ಅನ್ವಯವಾಯಿತು. ಕಬಳಿಸಿದ ಕಣಗಳನ್ನು ಈ ಭಕ್ಷಕ ಕೋಶಗಳು ಜೀರ್ಣಿಸಿಕೊಳ್ಳುತ್ತವೆ. ಜೀರ್ಣವಾಗದ ಕಣಗಳು ಪುನಃ ಹೊರಕ್ಕೆ ವಿಸರ್ಜಿತವಾಗುವುದು ಸಾಮಾನ್ಯ. ಹಾಗಾದರೆ ಬಹುಕಾಲ ಭಕ್ಷಕ ಕೋಶದೊಳಗೇ ಅಡಕವಾಗಿ ಇರಬಹುದು. ಜೀರ್ಣವಾಗದ ವಿಷಾಣುಗಳು ಕಬಳಿಸುವ ಭಕ್ಷಕ ಕೋಶಗಳೊಳಗೇ ವೃದ್ಧಿಸಿ, ಕೊನೆಗೆ ಈ ಭಕ್ಷಕ ಕೋಶಗಳನ್ನೇ ಆಹುತಿ ತೆಗೆದುಕೊಳ್ಳುವುದು. ರಕ್ತ ಪರಿಚಲನೆಯಿಂದ ಬೇರೆ ಸ್ಥಳಕ್ಕೆ ಒಯ್ಯಲ್ಪಟ್ಟು, ವಿಷಾಣು ಸೋಂಕು ಅಲ್ಲಿಗೂ ವ್ಯಾಪಿಸಬಹುದು. ವಿಷಮಶೀತಜ್ವರ, ಕ್ಷಯ, ಟುಲರೀಮಿಯ, ಬ್ರೂಸೆಲ್ಲೋಸಿಸ್ ಮುಂತಾದ ರೋಗಕಾರಕ ವಿಷಾಣುಗಳು ಈ ರೀತಿ ದೇಹದ ನಾನಾ ಕಡೆಗೂ ವ್ಯಾಪಿಸುತ್ತವೆ. ಈ ವಿಷಾಣುಗಳ ಕಬಳಿಸುವ ಭಕ್ಷಕ ಕೋಶಗಳೊಳಗಿರುವುದರಿಂದ ರಕ್ತದಲ್ಲಿರುವ ಪ್ರತಿರೋಧಕ ವಸ್ತುಗಳಿಂದ ರಕ್ಷಿಸಲ್ಪಟ್ಟು, ಸೋಂಕು ವ್ಯಾಪನೆಗೆ ಹಾದಿ ಸುಗಮವಾದಂತಾಗಿದೆ. ಭಕ್ಷಕಕಣಕಬಳಿಕೆಯಲ್ಲಿ ಇದೊಂದು ನ್ಯೂನತೆ.

ಕಬಳಿಸುವ ಭಕ್ಷಕ ಕೋಶಗಳಲ್ಲಿ ಎರಡು ವಿಧ. ಸಣ್ಣವು ಮೈಕ್ರೊಫೇಜಸ್, ದೊಡ್ಡವು ಮ್ಯಾಕ್ರೋಫೇಜಸ್. ಈ ಹೆಸರುಗಳೂ ಮೆಚ್ನಿಕಾಫನ ಸೃಷ್ಟಿ. ಸಣ್ಣವು ಪಾಲಿಮಾರ್ಫ್‌ಗಳೆಂಬ ನ್ಯೂಟ್ರೋಫಿಲ್. ಒಂದು ಬಗೆಯ ಬಿಳಿರಕ್ತಕಣಗಳು. ವಿಷಾಣುಗಳ ಸೋಂಕಿನಿಂದ ಉರಿ ಊತಗೊಂಡ ಸ್ಥಳದಲ್ಲಿ ರಕ್ತ ಪ್ರವಾಹ ಹೆಚ್ಚುವುದು. ರಕ್ತದಲ್ಲಿನ ಪಾಲಿಮಾರ್ಫ್‌ಗಳು ಲೋಮನಾಳಗಳ ಭಿತ್ತಿಯನ್ನು ತೂರಿ ಹೊರಬಂದು, ಅಲ್ಲಿ ಅಸಂಖ್ಯಾತವಾಗಿ ಘೇರಾಯಿಸುವುದು, ಅನಂತರ ಸನಿಹದಲ್ಲಿರುವ ವಿಷಾಣುಗಳನ್ನು ಕಬಳಿಸುವುದು, ಕಬಳಿಸಿದ ವಿಷಾಣುಗಳನ್ನು ಜೀರ್ಣಿಸಿಕೊಳ್ಳುವುದು, ಜೀರ್ಣವಾಗದೆ ಅಗಾಧ ಸಂಖ್ಯೆಯಲ್ಲಿ ವಿಷಾಣುಗಳು ಅಂತರ್ಗತವಾಗಿ ಅವುಗಳ ಕೈಮೇಲಾಗಿದ್ದರೆ, ಅವೇ ಪಾಲಿಮಾರ್ಫನ್ನು ನಾಶ ಮಾಡುವಂತಹ ಕಾರ್ಯ ಜರುಗುತ್ತದೆ. ಕಬಳಿಸುವ ದೊಡ್ಡ ಭಕ್ಷಕಕಣಗಳು (ಮ್ಯಾಕ್ರೋಫೇಜಸ್) ಸಣ್ಣವಕ್ಕಿಂತ 2–3 ಪಟ್ಟು ಗಾತ್ರದವಾಗಿರುತ್ತವೆ. ದೇಹದ ಅಂಗಗಳಲ್ಲೆಲ್ಲ ಮುಖ್ಯವಾಗಿ ಘುಪ್ಫುಸ, ಯಕೃತ್ತು, ಗುಲ್ಮ, ದುಗ್ಧರಸ ಗ್ರಂಥಿಗಳು, ಮಜ್ಜೆ ಇವುಗಳಲ್ಲಿ ಒಂಟೊಂಟಿಯಾಗಿ ನೆಲೆಸಿರುತ್ತವೆ.

ದೇಹದೊಳಗಿನ ಕೊಳಚೆ ಕಣಗಳನ್ನು ಕಬಳಿಸಿ ನಿರ್ಮಲೀಕರಿಸುವುದು ಇವುಗಳ ಮುಖ್ಯ ಕಾರ್ಯ. ಬಂಧನಾಂಗಾಂಶಗಳಲ್ಲಿರುವ (ಕನೆಕ್ಟಿವ್ ಟಿಶ್ಯೂಸ್) ಈ ಮಾದರಿಯ ಕಣಗಳು ಇದ್ದ ಜಾಗದಿಂದ ಕಳಚಿಕೊಂಡು ರಕ್ತನಾಳವನ್ನು ಸೇರಿ ಬೇರೆಡೆಗೆ ಒಯ್ಯಲ್ಪಟ್ಟು ಅಲ್ಲಿ ನೆಲೆಸುವುದು, ಅಲ್ಲಿಂದ ಪುನಃ ಬೇರೆಡೆ ನೆಲೆಸುವುದು ಸಾಮಾನ್ಯ. ರಕ್ತದ ಮಾನೋಸೈಟುಗಳೆಂಬ ಬಿಳಿ ಕಣಗಳಿವೆ. ಉಸಿರಿನ ಮೂಲಕ ದೇಹದೊಳಗೆ ಹೋಗುವ ದೂಳು, ಇಂಗಾಲದಂತಹ ಕಣಗಳನ್ನು ಫುಪ್ಫುಸದಲ್ಲಿರುವ ಈ ಮಾದರಿಯ ಭಕ್ಷಕಕಣಗಳು ಕಬಳಿಸುವುದರಿಂದ, ಇವುಗಳಲ್ಲಿ ಆಯಾ ಕಣಗಳು ಅಡಕವಾಗಿರುವುದು ಕಂಡುಬರುತ್ತದೆ. ಪಟ್ಟಣ ವಾಸಿಗಳಲ್ಲಿ ಈ ರೀತಿ ದೂಳು ಕಣಗಳು ಅಡಕವಾಗಿರುವುದನ್ನು, ಕಲ್ನಾರು ಉದ್ಯೋಗದಲ್ಲಿರುವವರಲ್ಲಿ ನಾರಿನಂತಿರುವ ಕಣಗಳು ಅಡಕವಾಗಿರುವುದನ್ನು (ಆಸ್‌ಬೆಸ್ಟೋಸಿಸ್), ಕಲ್ಲಿದ್ದಲಿನ ಗಣಿ ಕೆಲಸಗಾರರಲ್ಲಿ ಇಂಗಾಲದ ಕಣಗಳು ಅಡಕವಾಗಿರುವುದನ್ನು (ಆಂಥ್ರಕೋಸಿಸ್), ಚಿನ್ನದ ಗಣಿ ಕೆಲಸಗಾರರಲ್ಲಿ, ಕಲ್ಲು ಕುಟಿಕರಲ್ಲಿ ಶಿಲಾಕಣಗಳು ಅಡಕವಾಗಿರುವುದನ್ನು (ಸಿಲಿಕೋಸಿಸ್) ನೋಡಬಹುದು. ದೇಹದೊಳಗೆ ನಿರಂತರವಾಗಿ ಸಂಚಯವಾಗುವ ಮೃತಭಕ್ಷಕಕಣಗಳ ಹಾಗೂ ಅಂಗಾಂಶಗಳ ಅವಶೇಷಗಳನ್ನು ಇವು ಕಬಳಿಸುವುವು. ಆದರೆ, ಆಯಸ್ಸು ತೀರಿದ ಬಳಿಕ ಛಿದ್ರಗೊಂಡ ಕೆಂಪುಕಣಗಳ ಅವಶೇಷಗಳ ನಿರ್ಮೂಲನೆ ಯಕೃತ್ತು, ಗುಲ್ಮಗಳಲ್ಲಿ ನೆಲೆಸಿರುವ ಈ ಮಾದರಿಯ ಭಕ್ಷಕಕಣಗಳ ವಿಶಿಷ್ಟ ಕ್ರಿಯೆ. ಭಕ್ಷಕಕಣಕ್ಕಿಂತ ಅದು ಕಬಳಿಸಬೇಕಾದ ವಸ್ತುವಿನ ಗಾತ್ರ ಹೆಚ್ಚಾಗಿದ್ದರೆ 4–6 ಭಕ್ಷಕಕಣಗಳು ಒಂದಕ್ಕೊಂದು ಅಂಟಿ, ಮಿಲನವಾಗಿ ಒಂದು ದೈತ್ಯಭಕ್ಷಕ ಕೋಶ (ಜಯಂಟ್ ಸೆಲ್) ಸೃಷ್ಟಿಗೊಳ್ಳುತ್ತದೆ. ಇಂಥ ದೈತ್ಯಭಕ್ಷಕಕಣಗಳು ವರ್ಜ್ಯವಸ್ತುವಿನ ಗಾತ್ರ ಎಷ್ಟಾದರೂ ಕ್ರಮೇಣವಾಗಿ ಕಬಳಿಸಿ ದೇಹವನ್ನು ನಿರ್ಮಲೀಕರಿಸಬಲ್ಲುವು.

ಕಬಳಿಸುವ ಭಕ್ಷಕಕಣಗಳಿಗೆ ಅಮೀಬದಂತೆ ಚಲಿಸುವ ಸಾಮರ್ಥ್ಯವಿರುವುದರಿಂದ ಭಕ್ಷಕಕಣದಿಂದ ಕಬಳಿಕೆ ಸಾಧ್ಯ. ಭಕ್ಷಕಕಣ, ವಿಶಿಷ್ಟ ರಾಸಾಯನಿಕ ಆಕರ್ಷಣೆಯಿಂದ (ಕೀಮೊಟ್ಯಾಕ್ಸಿಸ್) ಕಣದ ಸನಿಹಕ್ಕೆ ಚಲಿಸಿ ಅದನ್ನು ಸಂಪರ್ಕಿಸುತ್ತದೆ. ಕಣ ಸಣ್ಣದಾಗಿದ್ದರೆ ಭಕ್ಷಕಕಣದಲ್ಲಿ ಸಂಪರ್ಕ ಸ್ಥಳದಲ್ಲಿ ಒಂದು ಗುಳಿ ಉಂಟಾಗಿ ಅದು ಕಣವನ್ನು ಹುದುಗಿಸಿಕೊಳ್ಳುವುದು. ಕ್ಷಣ ಮಾತ್ರದಲ್ಲಿ ಗುಳಿಯ ಕಂಠ ಜಿಗುಟಿಗೊಂಡು ಕಣ ಭಕ್ಷಕಕಣದೊಡನೆ ಸೇರುತ್ತದೆ. ಈ ಕಾರ್ಯ ಮಿಂಚಿನ ವೇಗದಲ್ಲಿ ಜರುಗಿ ಈ ಕ್ಷಣ ಹೊರಗೆ ಇರುವ ಕಣ ಮರುಕ್ಷಣದಲ್ಲೇ ಭಕ್ಷಕಕಣದೊಳಗೆ ಕಾಣಿಸಿಕೊಳ್ಳುತ್ತದೆ. ಇದೊಂದು ಆಶ್ಚರ್ಯಕರ ಘಟನೆ. ಕಣ ದೊಡ್ಡದಾಗಿದ್ದರೆ, ಕಣದ ಎರಡು ಪಾರ್ಶ್ವಗಳಲ್ಲಿ ಭಕ್ಷಕಕಣ, ಹುಸಿಪಾದಗಳನ್ನು (ಸೂಡೋಪೋಡಿಯಮ್) ಪಸರಿಸಿ ಅದನ್ನು ಆವರಿಸಿಕೊಳ್ಳುತ್ತದೆ. ಎರಡು ಕಡೆಯ ಹುಸಿಪಾದಗಳೂ ಸಂಧಿಸಿ ಮಿಲನವಾಗಿ ಕಬಳಿಕೆ ಅಂತ್ಯಗೊಳ್ಳುವುದು. ನುಣುಪಾಗಿಲ್ಲದ ಸ್ಥಳದಲ್ಲಿ ಕಬಳಿಕೆ ಸುಲಭ. ಸ್ಥಳ ನುಣುಪಾಗಿದ್ದರೆ ಭಕ್ಷಕಕಣವನ್ನು ಮುಂದಕ್ಕೆ ತಳ್ಳುತ್ತ ಕೊನೆಗೆ ಏನಾದರು ಅಡ್ಡಬಂದು ಕಣ ನುಣುಚಿಕೊಳ್ಳಲಾರದೆ ಸಿಕ್ಕಿಕೊಂಡಾಗ ಕಬಳಿಸಿಬಿಡುತ್ತದೆ. ವಿಷಾಣುಗಳ ವಿಚಾರದಲ್ಲಿ, ಅವು ಉಗ್ರವಾಗಿಲ್ಲದಿದ್ದರೆ ಕಬಳಿಕೆ ಸುಲಭ. ಉಗ್ರ ವಿಷಾಣುಗಳ ಮೇಲ್ಮೈಯು ಕಬಳಿಕೆಗೆ ನಿರುತ್ತೇಜಕವೆಂದು ತಿಳಿದುಬಂದಿದೆ. ಆದರೆ, ಇಂಥ ವಿಷಾಣುಗಳಿಂದ ಅಲ್ಪ ಸೋಂಕುಂಟಾದಾಗ ಪ್ರತಿರೋಧಕ ವಸ್ತುಗಳು (ಆ್ಯಂಟಿಬಾಡೀಸ್) ದೇಹದಲ್ಲಿ ಉತ್ಪತ್ತಿ ಆಗುವಂತೆಯೇ, ಆಪ್ಸೋನಿನ್‌ಗಳೆಂಬ ವಸ್ತುಗಳು ಉತ್ಪತ್ತಿಯಾಗುವುವು. ಆಪ್ಸೋನಿನ್‌ಗಳು ಉಗ್ರ ವಿಷಾಣುಗಳ ಕಬಳಿಕೆಯನ್ನು ಉತ್ತೇಜಿಸುವಂಥವು.

ಕಬಳಿಕೆಗೆ ದ್ರವಮಾಧ್ಯಮದಲ್ಲೇ ಇರುವ ಭಕ್ಷಕಕಣ ಅದೇ ದ್ರವ ಮಾಧ್ಯಮದಲ್ಲಿರುವ ಕಣವನ್ನು ಸಂಪರ್ಕಿಸಬೇಕು. ಅಂದರೆ, ಕಣಕ್ಕೂ ದ್ರವಕ್ಕೂ ಇರುವ ಸಂಬಂಧ ಕಡಿಮೆ ಆಗಿ ಕಣಕ್ಕೂ ಭಕ್ಷಕಕಣಕ್ಕೂ ಸಂಪರ್ಕಾನುಕೂಲತೆ ಹೆಚ್ಚಬೇಕು. ಬಹುಶಃ ಉಗ್ರವಿಷಾಣುಗಳ ಮೇಲೆ ಆಪ್ಸೋನಿನ್ನುಗಳ ಪ್ರಭಾವ ಈ ರೀತಿ ವರ್ತಿಸುವಂಥದ್ದು ಎಂದು ವಾದಿಸಲಾಗಿದೆ. ಇಂಥ ಅಭಿಪ್ರಾಯಗಳನ್ನು ಸಮರ್ಥಿಸಲು ಅಜೈವಿಕ ಪ್ರತಿರೂಪಗಳನ್ನು ತಯಾರಿಸಿ ಅಭ್ಯಸಿಸಿದ್ದಾರೆ. ಒಂದು ಪಾತ್ರೆಯಲ್ಲಿ ನೀರಿಟ್ಟು ಅದರೊಳಗೆ ಒಂದು ತೊಟ್ಟು ಕ್ಲೋರೊಫಾರಮ್ಮನ್ನು ಬಿಡುವುದು. ಕ್ಲೋರೋಫಾರಮ್ ತೊಟ್ಟಿನ ಸನಿಹದಲ್ಲಿ ಒಂದು ಗಾಜಿನ ಎಳೆಯ (ಗ್ಲಾಸ್ ವೂಲ್) ಸಣ್ಣ ಚೂರನ್ನು ಇಡುವುದು. ಗಾಜು ಮತ್ತು ಕ್ಲೋರಾಫಾರಮ್ ಕಣ ಭಕ್ಷಕಕಣಗಳನ್ನು ಪ್ರತ್ಯೇಕಿಸುತ್ತವೆ. ಗಾಜು, ನೀರಿನ ಸಂಬಂಧ ಕಣ ಕ್ಲೋರೋಫಾರಮ್ಮುಗಳೆರಡು ಯಥಾಸ್ಥಾನದಲ್ಲಿರುತ್ತವೆ. ಆದರೆ, ಗಾಜಿನ ಕಣವನ್ನು ಶೆಲ್ಲಾಕ್ ಎಂಬ ರಾಳದಲ್ಲಿ ಅದ್ದಿ ಇಟ್ಟರೆ ಆಗ ಕ್ಲೋರೊಫಾರಮ್ಮಿನೊಡನೆ ಸಂಪರ್ಕಾನುಕೂಲತೆ ಹೆಚ್ಚಿ ಕ್ಲೋರೊಫಾರಂ ನಿಧಾನವಾಗಿ ಗಾಜಿನ ಕಣದ ಸುತ್ತ ಹರಡಿಕೊಳ್ಳುತ್ತ ಕೊನೆಗೆ ಕಣ ಕ್ಲೋರೊಫಾರಂ ಬಿಂದುವಿನಲ್ಲಿ ಅಂತರ್ಗತವಾಗುತ್ತದೆ. ಇಲ್ಲಿ ಕಣದ ಮೈಮೇಲಿರುವ ಶೆಲ್ಲಾಕ್ ಕ್ಲೋರೊಫಾರಂ ನಲ್ಲಿ ಕ್ರಮೇಣ ಕರಗಿ ಹೋಗುತ್ತದೆ. ಇದನ್ನು ಭಕ್ಷಕಕಣದಲ್ಲಿ ಜರಗುವ ಜೀರ್ಣಕಾರ್ಯಕ್ಕೆ ಹೋಲಿಸಬಹುದು. ಶೆಲ್ಲಾಕ್ ಎಲ್ಲ ಕರಗಿ ಹೋದ ಬಳಿಕ ಉಳಿಯುವ ಗಾಜಿನ ಕಣ ಪುನಃ ಕ್ಲೋರೊಫಾರಂ ಬಿಂದುವಿನಿಂದ ಹೊರಬರುತ್ತದೆ. ಇದನ್ನು ಜೀರ್ಣವಾಗದ ಕಣಗಳ ವಿಸರ್ಜನೆಗೆ ಹೋಲಿಸಿದ್ದಾರೆ. ಸ್ಥೂಲವಾಗಿ ಇಂಥ ಹೋಲಿಕೆಯನ್ನು ತೋರುವ ಪ್ರತಿರೂಪಗಳನ್ನು ಸೃಷ್ಟಿಸಿ, ವಾದ ಮಂಡಿಸಬಹುದೇ ಹೊರತು, ನಿಜವಾಗಿ ಭಕ್ಷಕಕಣ ಕಬಳಿಕೆ ಇನ್ನೂ ಜಟಿಲವಾದ ಹಾಗೂ ಪೂರ್ಣವಾಗಿ ಅರ್ಥವಾಗಿರದ ಜೈವಿಕ ಚಟುವಟಿಕೆ.

ಭಕ್ಷಕಕೋಶ ಕಬಳಿಕೆಯನ್ನು ಬಳಸಿಕೊಂಡು, ಕಬಳಿಸುವ ಭಕ್ಷಕಕಣಗಳು, ದೇಹದಲ್ಲಿ ಎಲ್ಲೆಲ್ಲಿವೆ ಮತ್ತು ಏನು ಕೆಲಸ ಮಾಡುತ್ತವೆ ಎಂದು ಅಭ್ಯಸಿಸಿಲಾಗಿದೆ. ಟ್ರಿಪಾನ್ ಬ್ಲೂ, ಇಂಡಿಯನ್ ಇಂಕ್ ಮುಂತಾದ ನಿರುಪದ್ರವೀ ವರ್ಣವಸ್ತುಗಳ ಅತಿ ತೆಳುವಾದ ದ್ರಾವಣವನ್ನು ಸೂಜಿಮದ್ದಿನ ಮೂಲಕ ಸ್ವಲ್ಪ ಪ್ರಮಾಣದಲ್ಲಿ ರಕ್ತಗತವಾಗಿಸಿದರೆ, ಅದು ರಕ್ತದೊಡನೆ ಮಿಲನವಾಗಿ ದೇಹದಲ್ಲೆಲ್ಲ ವ್ಯಾಪಿಸುತ್ತದೆ. ವರ್ಣವಸ್ತು ಎಲ್ಲೆಲ್ಲೂ ಅತ್ಯಲ್ಪ ಪ್ರಮಾಣದಲ್ಲಿರುವುದರಿಂದ ದೇಹದ ಯಾವ ಅಂಗಾಂಶವೂ ವರ್ಣೀಕೃತವಾಗಿರುವುದಿಲ್ಲ. ಆದರೆ, ಶೀಘ್ರದಲ್ಲೇ ಕಬಳಿಸುವ ಭಕ್ಷಕಕಣಗಳು ತಮ್ಮ ನೆರೆಯಲ್ಲಿರುವ ವರ್ಣವಸ್ತುವಿನ ಕಣಗಳನ್ನು ಕಬಳಿಸಿ ತಮ್ಮೊಳಗೆ ಅಡಗಿಕೊಳ್ಳುವುದರಿಂದ, ಇಂಥ ಕಣಗಳಿಗೆ ಬಣ್ಣ ಕೊಟ್ಟರೆ, ಅವುಗಳು ಎದ್ದು ಕಾಣುವಂತಾಗುತ್ತದೆ. ಅಲ್ಲದೆ, ಅತ್ಯಧಿಕವಾಗಿ ಕಣ ಶೇಖರಣೆ ಆದರೆ, ಈ ಭಕ್ಷಕಕಣಗಳ ಸಹಜ ಕಾರ್ಯಕ್ಕೆ ಅಡ್ಡಿಯಾಗಿ ದೇಹಕ್ರಿಯೆಯಲ್ಲಿ ಏರುಪೇರಾಗುವುದು.

***

**ಭಾರತದ ಜೀವವೈವಿಧ್ಯ:** ಒಂದು ಸ್ಥಳದಲ್ಲಿ ಜೀವಿಸುವ ವಿವಿಧ ರೀತಿಯ ಜೀವ ಪ್ರಭೇದಗಳ ಶ್ರೀಮಂತಿಕೆಯನ್ನು ಜೀವವೈವಿಧ್ಯ ಎನ್ನುವರು. ಜೀವವೈವಿಧ್ಯದ ವ್ಯಾಪ್ತಿ ವಿಸ್ತಾರವಾಗಿದೆ. ಒಂದು ಸ್ಥಳದಲ್ಲಿರುವ ಜೀವ ಪ್ರಭೇದದ ಸದಸ್ಯರ ನಡುವಿನ ಆನುವಂಶೀಯ ವೈವಿಧ್ಯ, ವಿವಿಧ ಪ್ರಭೇದಗಳ ಶ್ರೀಮಂತಿಕೆಯ ಜೀವವೈವಿಧ್ಯ ಹಾಗೂ ವಿವಿಧ ರೀತಿಯ ಜೀವವಾಸಗಳ ವೈವಿಧ್ಯವನ್ನು ಒಟ್ಟಾರೆಯಾಗಿ ಜೀವವೈವಿಧ್ಯ ಎನ್ನುವರು. ಭಾರತವು ಮೂರೂ ರೀತಿಯ ಜೀವವೈವಿಧ್ಯದಲ್ಲಿ ಶ್ರೀಮಂತವಾಗಿದೆ.

ಪ್ರಪಂಚದ ಭೂ ಪ್ರದೇಶದಲ್ಲಿ, ಭಾರತವು ಕೇವಲ ಶೇ.2 ರಷ್ಟು ಭೂ ಪ್ರದೇಶವನ್ನು ಹೊಂದಿದೆ. ಭೌಗೋಳಿಕವಾಗಿ ವಿಶ್ವದಲ್ಲಿ ಭಾರತವು ಏಳನೆಯ ಅತಿದೊಡ್ಡ ರಾಷ್ಟ್ರ. ಇದು 3,287,263 ಚಕಿಮೀ ಭೂ ಪ್ರದೇಶ ಹೊಂದಿದ್ದು, ಅ. $8^{\circ}$ 4' ನಿಂದ $37^{\circ}$ 6' ವರೆಗೆ ಮತ್ತು ರೇ. $68^{\circ}$ 7' ನಿಂದ $97^{\circ}$ 25' ರವರೆಗೆ ವಿಸ್ತರಿಸಿದೆ. ದೇಶದ ಒಟ್ಟು ಗಡಿಭಾಗದ ಉದ್ದ ಸು. 15,200 ಕಿಮೀ ಹಾಗೂ ಕರಾವಳಿಯ ಉದ್ದ ಸು. 7615 ಕಿಮೀ. ಭಾರತದ ಭೂ ಪ್ರದೇಶವನ್ನು ಆರು ಪ್ರಮುಖ ಭಾಗಗಳನ್ನಾಗಿ ವಿಂಗಡಿಸಲಾಗಿದೆ. 1. ಉತ್ತರದ ಪರ್ವತ ಶ್ರೇಣಿ. 2. ಉತ್ತರದ ಮೈದಾನ ಪ್ರದೇಶ. 3. ದಕ್ಷಿಣದ ಮೈದಾನ ಪ್ರದೇಶ. 4. ಭಾರತದ ಮರುಭೂಮಿ. 5. ಕಡಲ ತೀರದ ಮೈದಾನ ಮತ್ತು 6. ಅಂಡಮಾನ್, ನಿಕೋಬಾರ್ ಹಾಗೂ ಲಕ್ಷ ದ್ವೀಪಗಳ ಸಮೂಹ.

ಭಾರತದ ಹವಾಮಾನ ಪ್ರಮುಖವಾಗಿ ಏಷ್ಯಾ ಹವಾಮಾನ ಮಾದರಿಯದು. ಜೂನ್ ತಿಂಗಳಿಂದ ಸೆಪ್ಟೆಂಬರ್‌ವರೆಗೆ ಮುಂಗಾರು ಮಳೆಗಾಲ, ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಶುಷ್ಕ ಮಾರುತಗಳ ಹಿಂಗಾರು ಮಳೆಗಾಲ ಹಾಗೂ ಮಾರ್ಚ್‌ನಿಂದ ಮೇ ತಿಂಗಳವರೆಗೆ ಶುಷ್ಕ ಹಾಗೂ ಬೇಸಗೆ ಕಾಲವಿರುವುದು.

ಉಷ್ಣ ಹಾಗೂ ಸಮಶೀತೋಷ್ಣವಲಯಗಳಿರುವ ಭಾರತದಲ್ಲಿ ವೈವಿಧ್ಯಮಯ ಜೀವವಾಸಗಳಿವೆ. ಹಿಮಾಲಯ ಪರ್ವತ ಶ್ರೇಣಿ, ಪಶ್ಚಿಮ ಘಟ್ಟಗಳ ಸಾಲುಗಳು, ಥಾರ್ ಮರುಭೂಮಿ, ದಕ್ಷಿಣ ಪ್ರಸ್ಥಭೂಮಿ, ವಿಶಿಷ್ಟ ವಾತಾವರಣವಿರುವ ಅಂಡಮಾನ್, ನಿಕೋಬಾರ್ ಹಾಗೂ ಲಕ್ಷದ್ವೀಪಗಳು ಅನೇಕ ಜೀವಿಗಳ ಹುಟ್ಟಿಗೆ ಹಾಗೂ ವಾಸಕ್ಕೆ ಯೋಗ್ಯವಾದ ವಾತಾವರಣ ಕಲ್ಪಿಸಿವೆ. ಇಲ್ಲಿನ ಹವಳ ದ್ವೀಪಗಳು, ಆಳವಿಲ್ಲದ ಕಡಲು, ಕಡಲ ಹಿನ್ನೀರು, ಅಳಿವೆ ಪ್ರದೇಶಗಳು ವಿವಿಧ ರೀತಿಯ ಜೀವಿಗಳಿಗೆ ಆಶ್ರಯ ನೀಡಿವೆ. ಹಿಮ ತುಂಬಿದ ಪರ್ವತಗಳ ವಿವಿಧ ಸ್ತರಗಳು, ಪೂರ್ವ ಹಿಮಾಲಯದ ಸಾಲುಗಳು, ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟಗಳು ನಿತ್ಯ ಹರಿದ್ವರ್ಣ, ಅರೆನಿತ್ಯ ಹರಿದ್ವರ್ಣ, ಶೋಲ ಕಣಿವೆ ಕಾಡುಗಳಿಗೆ ಆಶ್ರಯ ನೀಡಿವೆ. ಮೈದಾನದ ಪ್ರದೇಶದಲ್ಲಿ ಎಲೆ ಉದುರುವ ಕಾಡುಗಳು, ಕುರುಚಲು ಕಾಡು, ಹುಲ್ಲುಗಾವಲು ಇವೆ. ಹೊಳೆ, ಝರಿ, ಹಳ್ಳ, ನದಿ, ಕೆರೆ, ತೊರೆ, ಕೊಳ ಮುಂತಾದ ಸಿಹಿನೀರಿನ ತಾಣಗಳು ಭಾರತದಲ್ಲಿ ಹೇರಳವಾಗಿವೆ. ಗಂಗಾ, ಸಿಂಧು, ಬ್ರಹ್ಮಪುತ್ರ, ನರ್ಮದ, ಗೋದಾವರಿ, ಮಹಾನದಿ, ಕೃಷ್ಣ, ಕಾವೇರಿ ನದಿಗಳು ವಿವಿಧ ರೀತಿಯ ಜಲ ಜೀವಿಗಳನ್ನು ಹೊಂದಿವೆ. ಹಿನ್ನೀರು ಪ್ರದೇಶಗಳು ಹಾಗೂ ತರಿ ಜಮೀನುಗಳು, ಭಾರತದಲ್ಲಿ ಸಾಕಷ್ಟಿವೆ. ಚಿಲಿಕ ಸರೋವರ, ಮನ್ನಾರ್‌ನ ಖಾರಿ ಪ್ರದೇಶ ಹಾಗೂ ಕೇರಳದ ಹಿನ್ನೀರು ಪ್ರದೇಶಗಳು ಹೆಸರುವಾಸಿಯಾಗಿವೆ. ಭಾರತದಲ್ಲಿ ಮಾನವನ ನಾಗರೀಕತೆ ಸಹಸ್ರಾರು ವರ್ಷಗಳ ಇತಿಹಾಸ ಹೊಂದಿದ್ದು,

ಆತನ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪಶುಪಾಲನೆಯಿಂದಾಗಿ ವಿವಿಧ ರೀತಿಯ ಕೃಷಿ ಜೀವಾವಾಸಗಳು ಇಲ್ಲಿ ಶ್ರೀಮಂತವಾಗಿವೆ. ಈ ಎಲ್ಲಾ ವಾಸಸ್ಥಾನಗಳು, ವೈವಿಧ್ಯಮಯ ಪರಿಸರ ತಾಣಗಳು ಜೀವ ಸಂಪತ್ತಿಗೆ ಹೆಸರುವಾಸಿ.

ಭಾರತವು ಜೀವ ಪ್ರಭೇದಗಳ ವೈವಿಧ್ಯದಲ್ಲಿ ಶ್ರೀಮಂತವಾಗಿದೆ. ಸು. 1,08,276 ಕ್ಕೂ ಹೆಚ್ಚು ಜೀವ ಪ್ರಭೇದಗಳಿವೆ. ಇವುಗಳಲ್ಲಿ ಕೀಟಗಳು ಪ್ರತಿಶತ ಐವತ್ತರಷ್ಟಿವೆ. ಭಾರತದಲ್ಲಿ ಸು. 45,000 ಸಸ್ಯ ಪ್ರಭೇದಗಳಿದ್ದು, ಅವುಗಳಲ್ಲಿ ಹೂ ಬಿಡುವ ಸಸ್ಯ ಪ್ರಭೇದಗಳು 15,000 ಕ್ಕೂ ಹೆಚ್ಚಿವೆ. ವಿಶ್ವದಲ್ಲಿರುವ ಸಸ್ಯ ಸಂಪತ್ತಿನ ರಾಷ್ಟ್ರಗಳಲ್ಲಿ ಭಾರತವು ಹತ್ತನೆಯ ಸ್ಥಾನ ಪಡೆದಿದೆ. ಹಾಗೂ ಏಷ್ಯಾದಲ್ಲಿ ನಾಲ್ಕನೇ ಸ್ಥಾನ ಪಡೆದಿದೆ. ಉನ್ನತ ಕಶೇರುಕಗಳಾದ ದ್ವಿಚರಿಗಳು, ಪಕ್ಷಿಗಳು ಮತ್ತು ಸ್ತನಿಗಳಲ್ಲಿನ ಸ್ಥಳೀಯ ಪ್ರಭೇದಗಳನ್ನು ಆಧರಿಸಿದರೆ ಭಾರತವು ವಿಶ್ವದಲ್ಲಿ ಹನ್ನೊಂದನೇ ಸ್ಥಾನವನ್ನು ಹಾಗೂ ಸ್ತನಿಗಳ ಶ್ರೀಮಂತಿಕೆಯಲ್ಲಿ ಹತ್ತನೇ ಸ್ಥಾನ ಪಡೆದಿದೆ. (ಜೀವವೈವಿಧ್ಯದ ಬಗ್ಗೆ ಕೋಷ್ಠಕದಲ್ಲಿ ವಿವರಣೆ ನೀಡಲಾಗಿದೆ.)

| ಗುಂಪು | ವಿಶ್ವದ ಜೀವ ವೈವಿಧ್ಯ | ಭಾರತದ ಜೀವವೈವಿಧ್ಯ | ಸ್ಥಳೀಯ ಪ್ರಭೇದಗಳು |
|---|---|---|---|
| 1. ಪ್ರೊಕ್ಯಾರಿಯೋಟ್‌ಗಳು | 4,800 | 850 | * |
| 2. ಶಿಲೀಂಧ್ರಗಳು | 69,000 | 23,500 | * |
| 3. ಶೈವಲಗಳು | 26,900 | 2,500 | * |
| 4. ಹೂ ಬಿಡುವ ಸಸ್ಯಗಳು | 2,50,000 | 17,000 | 5,750 |
| 5. ಕೀಟಗಳು | 8,00,000 | 60,000 | * |
| 6. ಮೃದ್ವಂಗಿಗಳು | 50,000 | 5,050 | * |
| 7. ಮೀನುಗಳು | 23,500 | 2,500 | * |
| 8. ದ್ವಿಚರಿಗಳು(ಉಭಯವಾಸಿಗಳು) | 4,200 | 204 | 110 |
| 9. ಸರೀಸೃಪಗಳು | 6,300 | 446 | 187 |
| 10. ಪಕ್ಷಿಗಳು | 9,000 | 1,250 | 70 |
| 11. ಸ್ತನಿಗಳು | 4,000 | 372 | 44 |

(* ಗುರುತು ಮಾಡಿರುವ ಜೀವ ವರ್ಗಗಳಲ್ಲಿನ ಸ್ಥಳೀಯವಾಗಿ ವೈಶಿಷ್ಟ್ಯಪೂರ್ಣವಾಗಿರುವ ಪ್ರಭೇದಗಳ ಸಂಪೂರ್ಣ ದಾಖಲಾತಿ ಲಭ್ಯವಿಲ್ಲ)

ಭಾರತದ ಪ್ರಭೇದ ವೈವಿಧ್ಯದ ವಿವರಗಳು: ಪ್ರಭೇದ ವೈವಿಧ್ಯ ಉಷ್ಣವಲಯದ ಪ್ರದೇಶದಲ್ಲಿ ಹೇರಳವಾಗಿದ್ದು, ವಿಶೇಷವಾಗಿ ಉಷ್ಣವಲಯದ ಮಳೆ ಕಾಡುಗಳಲ್ಲಿ ಅತಿ ಹೆಚ್ಚು. ವಿಶ್ವದಲ್ಲಿ ಪಟ್ಟಿ ಮಾಡಿರುವ ಪ್ರಭೇದ ವೈವಿಧ್ಯದ ಅಗ್ರತಾಣಗಳು 12. ಇದರಲ್ಲಿ

ಹೂಲಾಕ್ ಗಿಬನ್

ಭಾರತವೂ ಒಂದು ಪ್ರಮುಖ ಅಗ್ರತಾಣವಾಗಿದೆ. ಕೆಲವು ಪ್ರಭೇದಗಳು ಸೀಮಿತ ಭೂಗೋಳಿಕ ಪ್ರದೇಶದಲ್ಲಿ ಮಾತ್ರ ಇವೆ. ಅಂತಹ ಪ್ರಭೇದಗಳನ್ನು ಸ್ಥಳೀಯ ಪ್ರಭೇದ (ಎಂಡೆಮಿಕ್ ಸ್ಪೀಸಿಸ್) ಎಂದು ಹೆಸರು. ಸ್ಥಳೀಯ ಪ್ರಭೇದಗಳ ಸಂಖ್ಯೆ ಹೆಚ್ಚಿದ್ದಲ್ಲಿ, ಆ ಭಾಗವು ವಿಶಿಷ್ಟವಾದ ಪರಿಸರವನ್ನು ಹೊಂದಿರುತ್ತದೆ. ಮಾನವನ ಚಟುವಟಿಕೆಗಳಿಂದಾಗಿ ಇಂತಹ ಭಾಗಗಳು ವಿನಾಶಕ್ಕೆ ಒಳಗಾಗುತ್ತಿವೆ. ಒಂದು ಪ್ರದೇಶವು 1500 ಸ್ಥಳೀಯ ಸಸ್ಯ ಪ್ರಭೇದಗಳನ್ನು ಹೊಂದಿದ್ದು, ಅದು ಮಾನವನ ಚಟುವಟಿಕೆಗಳಿಂದ ಪ್ರತಿಶತ 70 ಕ್ಕಿಂತ ಹೆಚ್ಚು ನಾಶಹೊಂದಿದ್ದರೆ, ಆ ಪ್ರದೇಶವನ್ನು ಜೀವವೈವಿಧ್ಯದ ಬಿಸಿತಾಣಗಳೆಂದು ಕರೆಯುವರು. ವಿಶ್ವದಲ್ಲಿ ಅಂತಹ ತಾಣಗಳು 25 ಇವೆ. ಭಾರತದಲ್ಲಿ ಎರಡು ಬಿಸಿತಾಣ (ಹಾಟ್‌ಸ್ಪಾಟ್ಸ್)ಗಳಿವೆ. ಅವು ಪಶ್ಚಿಮ ಘಟ್ಟಗಳು ಹಾಗೂ ಪೂರ್ವ ಹಿಮಾಲಯ. ಈ ಎರಡು ಪ್ರದೇಶಗಳಲ್ಲಿ 5,332 ಕ್ಕಿಂತ ಹೆಚ್ಚಿನ ಸ್ಥಳೀಯ ಸಸ್ಯ ಪ್ರಭೇದಗಳಿವೆ. ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ 1,600 ಸಸ್ಯಗಳು, 6 ಪಕ್ಷಿಗಳು, 6 ಸ್ತನಿಗಳು, 77 ಸರೀಸೃಪಗಳು ಹಾಗೂ 84 ಸ್ಥಳೀಯ ದ್ವಿಚರಿಗಳಿವೆ. ನೀಲಗಿರಿ ಜೀವವಾಸದಲ್ಲಿ ಪ್ರತಿಶತ 15 ರಷ್ಟು ಚಿಟ್ಟೆಗಳು ಹಾಗೂ 25 ರಷ್ಟು ಕಶೇರುಕಗಳಿವೆ. ಕೋಷ್ಠಕದಲ್ಲಿ ವಿವರಣೆ ನೀಡಿದೆ.

ಭಾರತದ ವಿವಿಧ ತಾಣಗಳಲ್ಲಿ ಸ್ಥಳೀಯ ಪ್ರಭೇದಗಳ ಸಂಖ್ಯೆ

| ಗುಂಪು | ಪೂರ್ವ ಹಿಮಾಲಯ | ಪಶ್ಚಿಮ ಘಟ್ಟಗಳು | ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು |
|---|---|---|---|
| 1. ಹೂಬಿಡುವ ಸಸ್ಯಗಳು | 3500 | 1720 | 144 |
| 2. ಸರೀಸೃಪಗಳು | 20 | 91 | 23 |
| 3. ದ್ವಿಚರಿಗಳು | 25 | 84 | 2 |
| 4. ಸ್ತನಿಗಳು | – | 7 | – |

ಭಾರತದಲ್ಲಿನ ಪ್ರಮುಖ ಸ್ಥಳೀಯ ಪ್ರಭೇದ ವೈವಿಧ್ಯದ ವಿವರಗಳು: ಭಾರತದಲ್ಲಿ ಜೀವಿಸುತ್ತಿರುವ ಹಲವು ಪ್ರಾಣಿ ಪ್ರಭೇದಗಳ ಸಂಖ್ಯೆ ತೀವ್ರ ಇಳಿಮುಖವಾಗುತ್ತಿದ್ದು, ಅವನ್ನು ಅಪಾಯದಲ್ಲಿರುವ ಪ್ರಭೇದಗಳೆಂದು ಗುರುತಿಸಿದ್ದಾರೆ. ಕೃಷಿ ವಿಸ್ತರಣೆಯಿಂದ, ಅರಣ್ಯನಾಶದಿಂದ, ಕಳ್ಳಬೇಟೆ, ಬೇಟೆ ಮುಂತಾದ ಮಾನವ ಚಟುವಟಿಕೆಗಳಿಂದ ಅನೇಕ ಜೀವಪ್ರಭೇದಗಳು ವಿನಾಶದ ಅಂಚಿಗೆ ಸಾಗಿವೆ. ನಿಸರ್ಗ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಅಂತಾರಾಷ್ಟ್ರೀಯ ಸಂಸ್ಥೆಯು ವಿನಾಶದ ಅಂಚಿನಲ್ಲಿರುವ ಪ್ರಭೇದಗಳನ್ನು ಕೆಂಪು ದತ್ತಕದ ಪುಸ್ತಕದಲ್ಲಿ ದಾಖಲಿಸುತ್ತದೆ. ಭಾರತದಲ್ಲಿನ ಕೆಲವು ಜೀವಿ ಪ್ರಭೇದಗಳನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. ಅವುಗಳಲ್ಲಿ ಭಾರತದ ಆನೆ, ಹುಲಿ, ಸಿಂಹ, ಒಂಟಿಕೊಂಬಿನ ಘೇಂಡಾಮೃಗ, ಸಿಂಹ, ಬಾಲದಕೋತಿ, ಮೊಸಳೆ, ಹೆಬ್ಬಾವು, ಕಡಲ ಆಮೆ (ಆಲಿವ್ ರಿಡ್ಲಿ ಆಮೆ), ಕೀಟಾಹಾರಿ ಸಸ್ಯಗಳಾದ ನೆಪೆಂಥಸ್, ಡ್ರಾಸೆರ, ಬಿದಿರು, ಸರ್ಪಗಂಧ ಪ್ರಮುಖವಾದುವು.

ರಣಹದ್ದು

ಮಾನವನ ಚಟುವಟಿಕೆಯಿಂದ ಸಂಪೂರ್ಣವಾಗಿ ಭಾರತದಲ್ಲಿ ನಶಿಸಿಹೋಗಿರುವ ಪ್ರಭೇದಗಳಲ್ಲಿ ಕಂದು ತಲೆಯ ಬಾತುಕೋಳಿ (ರೊಡೊನೆಸ್ಸಾ ಕರ್‍ಯೊಫೈವಾಸಿಯ) ಹಾಗೂ ಚೀತ (ಅಸಿನೊಸೈಕ್ಸ್ ಜುಬಾಟಸ್) ಪ್ರಮುಖವಾದವು. ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಬೆಳೆಯುತ್ತಿದ್ದ ಮರ್ದು (ಮಧುಕ ಇಲನ್‌ಸೈನಿಕ್) ಮರವು ಕಳೆದ ಶತಮಾನದಿಂದ ಕಾಣೆಯಾಗಿದೆ.

ಭಾರತದಲ್ಲಿ ಹುಟ್ಟಿ, ಜಗತ್ತಿನಾದ್ಯಂತ ಪ್ರಸಾರವಾಗಿರುವ ಸಸ್ಯ ಪ್ರಭೇದಗಳಲ್ಲಿ ಬತ್ತ, ಕಬ್ಬು, ಮಾವು, ನಿಂಬೆ, ಬಾಳೆ, ಸೆಣಬು, ಹಲಸು, ಸೌತೆ, ಮೆಣಸು, ಶುಂಠಿ, ವೀಳ್ಯದೆಲೆ, ಗೋಡಂಬಿ ಹಾಗು ಬಿದಿರು ಮುಖ್ಯವಾಗಿವೆ. ಭಾರತದಲ್ಲಿ ಹುಟ್ಟದಿದ್ದರೂ, ಇಲ್ಲಿಗೆ

ಬಂದ ಮೇಲೆ ವಿಕಾಸಗೊಂಡು ಮಾನವನ ಕಲ್ಯಾಣಕ್ಕೆ ಕೊಡುಗೆ ನೀಡುತ್ತಿರುವ ಸಸ್ಯ ಪ್ರಭೇದಗಳಲ್ಲಿ ತಾಳೆ, ಕೆಂಪು ಮೆಣಸು, ಸೋಯ, ಅವರೆ ಪ್ರಮುಖವಾದುವು. ಭಾರತದ ಸಸ್ಯಗಳಲ್ಲಿನ ಆನುವಂಶೀಯ ಗುಣಗಳ ವೈವಿಧ್ಯವನ್ನು ಬಳಸಿಕೊಂಡು, ಕೃಷಿ ಉತ್ಪಾದನೆಯನ್ನು ಹೆಚ್ಚಿಸಿದ ಉದಾಹರಣೆಗಳಿವೆ. ಕೇರಳದಲ್ಲಿ ಮೂವತ್ತಕ್ಕೂ ಹೆಚ್ಚು ಕಾಡು ಬತ್ತದ ತಳಿಗಳಿದ್ದು, ಅವುಗಳಲ್ಲಿ ರೋಗ ನಿರೋಧಕ ಜೀನ್‌ಗಳಿವೆ. ಈ ಜೀನ್ ಗಳನ್ನು ಇತರೆ ಸಸ್ಯ ಪ್ರಭೇದಗಳಿಗೆ ಜೈವಿಕ ತಂತ್ರಜ್ಞಾನದ ವಿಧಾನದಿಂದ ವರ್ಗಾಯಿಸಿ. ಕೃಷಿ ಕ್ಷೇತ್ರದಲ್ಲಿ ರೋಗ ನಿರೋಧಕ ಗುಣವಿರುವ, ಅಧಿಕ ಇಳುವರಿಯ ತಳಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಭಾರತದಲ್ಲಿನ ಕಾಡು ಕರಬೂಜ ಸಸ್ಯಗಳಲ್ಲಿ ಹಣ್ಣಿನ ಕಾಂಡವು ಮಂಜುಹನಿಯಂತೆ ಸಣ್ಣ ಕಣಗಳಾಗಿ, ಪುಡಿಯಾಗದಂತಹ ಗುಣವಿದೆ. ಈ ಗುಣ ನಿರ್ಧರಿಸುವ ಆನುವಂಶೀಯ ಗುಣವನ್ನು ಕ್ಯಾಲಿಫೋರ್ನಿಯದ ಕರಬೂಜಗಳಿಗೆ ವರ್ಗಾಯಿಸಲಾಗಿದೆ. ಇದರಿಂದ ಅಮೆರಿಕದ ಕಲ್ಲಂಗಡಿ ಕೃಷಿ ಉದ್ಯಮ ಪ್ರತಿ ವರ್ಷ ಹಲವು ಕೋಟಿ ಡಾಲರುಗಳಷ್ಟು ಲಾಭ ನಡೆಯುತ್ತಿದೆ.



ಭಾರತದಲ್ಲಿನ ವಿವಿಧ ಜೀವ ಪ್ರಭೇದಗಳಲ್ಲಿ ಲಭ್ಯವಿರುವ ಗುಣಗಳನ್ನು ಉಪಯೋಗಿಸಿಕೊಂಡು ವಿದೇಶೀ ಕಂಪೆನಿಗಳು ಹಲವಾರು ಡಾಲರುಗಳ ಲಾಭ ಪಡೆಯುತ್ತಿವೆ. ಬತ್ತದ ಪ್ರಭೇದ ಒಂದರಲ್ಲಿಯೇ 30,000ಕ್ಕೂ ಹೆಚ್ಚಿನ ತಳಿಗಳನ್ನು ವರದಿ ಮಾಡಲಾಗಿದೆ. ದೊಡ್ಡ ಬತ್ತ, ದೇವಮಲ್ಲಿಗೆ, ಬಾಲದ ಬತ್ತ, ಬಸುಮತಿ, ಸೋನ ಮಸೂರಿ, ಕೊಯಮತ್ತೂರು ಸಣ್ಣ, ಮಂಡ್ಯ ಬತ್ತ, ಮುಂತಾದುವು ಹೆಸರುವಾಸಿ. ಅದೇ ರೀತಿ ಮಾವು, ಹಲಸು, ಮೇಕೆ, ಕುರಿ, ದನ, ಕಬ್ಬು, ಕಡಲೆಕಾಯಿ ಮುಂತಾದುವುಗಳಲ್ಲಿ ವಿವಿಧ ಜೀವಿಯ ವೈವಿಧ್ಯವನ್ನು ಗುರುತಿಸಲಾಗಿದೆ. ಭಾರತದ ದನಗಳಲ್ಲಿ ಓಂಗೋಲ್ ತಳಿಯ ರೋಗನಿರೋಧಕ ಜೀನ್‌ಗಳನ್ನು ಆಸ್ಟ್ರೇಲಿಯ ದನಗಳಿಗೆ ಅಡ್ಡಹಾಯಿಸಿ ಕೋಟ್ಯಾಂತರ ರೂಪಾಯಿಗಳ ಲಾಭ ಪಡೆಯಲಾಗಿದೆ. ಇತ್ತೀಚೆಗೆ ಹಸಿರು ಕ್ರಾಂತಿಯ ಹೆಸರಿನಲ್ಲಿ ಅಧಿಕ ಇಳುವರಿ ಪಡೆಯಲು ಒಂದೇ ಪ್ರಭೇದ ಅಥವಾ ಒಂದೇ ತಳಿಯ ಕೃಷಿ ಹೆಚ್ಚಾಗುತ್ತಿರುವುದರಿಂದ ಅನೇಕ ಕಾಡು ತಳಿಗಳು ನಶಿಸಿ ಹೋಗಿವೆ ಅಥವಾ ಅಪಾಯದ ಅಂಚಿನಲ್ಲಿವೆ.

ಭಾರತದಲ್ಲಿನ ಜೀವಿ ವೈವಿಧ್ಯವನ್ನು ಸಂರಕ್ಷಿಸುವ, ದಾಖಲಿಸುವ ಹಾಗೂ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಜೀವವೈವಿಧ್ಯ ಕಾರ್ಯ 2002 ನ್ನು ಜಾರಿಗೆ ತರಲಾಗಿದೆ. ಜೀವವೈವಿಧ್ಯದ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಜೀವವೈವಿಧ್ಯ ಮಂಡಲಿಗಳು ಸ್ಥಾಪನೆಯಾಗಿವೆ. ಜನರ ಬೆಂಬಲದಿಂದ ಜೀವವೈವಿಧ್ಯದ ಶ್ರೀಮಂತಿಕೆಯಿರುವ ಪ್ರದೇಶಗಳನ್ನು ಗುರುತಿಸಿ ಸಂರಕ್ಷಣಾ ಪ್ರದೇಶಗಳೆಂದು ಘೋಷಿಸಿ ಸಂರಕ್ಷಣೆ ನಡೆಸುವ ಪ್ರಯತ್ನ ಸಾಗುತ್ತಿದೆ. ರಾಷ್ಟ್ರೀಯ ವನ್ಯಧಾಮ, ಅಭಯಾರಣ್ಯಗಳು, ಸಂರಕ್ಷಣಾ ಅರಣ್ಯಗಳು ಹಾಗು ಜೀವವೈವಿಧ್ಯ ವಲಯಗಳನ್ನು ಗುರುತಿಸಿ, ಸಂರಕ್ಷಿಸಲಾಗುತ್ತಿದೆ. ಜೀವವೈವಿಧ್ಯ ಧಾಮಗಳನ್ನು ಪಟ್ಟಿ ಮಾಡಲಾಗುತ್ತಿದೆ. ಅಲ್ಲದೆ ವಿವಿಧ ತಳಿಗಳ ಬೀಜನಿಧಿಯನ್ನು ಸ್ಥಾಪಿಸಲಾಗುತ್ತಿದೆ. ಪವಿತ್ರ ಸಸ್ಯ, ಪವಿತ್ರ ಪ್ರಾಣಿ, ಪವಿತ್ರವನ ಹಾಗೂ ಪವಿತ್ರ ಪ್ರದೇಶಗಳನ್ನು ಗುರುತಿಸಿ ನಮ್ಮ ಸಂಸ್ಕೃತಿ ಹಾಗೂ ಸಂಪ್ರದಾಯಗಳಲ್ಲಿರುವ ಜೀವವೈವಿಧ್ಯ ಸಂರಕ್ಷಣಾ ವಿಧಾನಗಳನ್ನು ಜನಪ್ರಿಯಗೊಳಿಸಲಾಗುತ್ತಿದೆ. (ಎಚ್.ಎಸ್.ಎನ್.)

**ಭಾರತದ ಪ್ರಾಣಿ ಸಂಪತ್ತು:** ಭಾರತ ಉಪಖಂಡದಲ್ಲಿರುವ ಜೀವವೈವಿಧ್ಯ ಮತ್ತು ಪ್ರಾಣಿವಿತರಣೆ ದೃಷ್ಟಿಯಿಂದ ಭಾರತವನ್ನು ಪೌರಸ್ತ್ಯ ದೇಶಗಳ (ಓರಿಯಂಟಲ್) ಗುಂಪಿಗೆ ಸೇರಿಸಲಾಗಿದೆ. ನೆರೆಯ ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾ ದೇಶ, ನೇಪಾಳ, ಬರ್ಮ, ಇಂಡೋನೇಷಿಯ ರಾಷ್ಟ್ರಗಳು ಇದೇ ಗುಂಪಿಗೆ ಸೇರುತ್ತವೆ. ನಾಲ್ಕು ದಶಲಕ್ಷ ಚಕಿಮೀಗಳಿಗಿಂತಲೂ ಹೆಚ್ಚು ವಿಸ್ತಾರವಾದ ಭಾರತದಲ್ಲಿ ವಿಭಿನ್ನ ತೆರನ ಭೌತ ಲಕ್ಷಣ, ಹವಾ ವೈವಿಧ್ಯ ಮತ್ತು ಸಸ್ಯ ಸಂಪತ್ತು ಅದಕ್ಕನುಗುಣವಾಗಿ ಪ್ರಾಣಿ ಸಂಪತ್ತು ಸಹ ಇದೆ.

ವಿಸ್ತಾರವಾದ ಈ ಉಪಖಂಡ ಪ್ರಾಣಿಗಳನ್ನು ಸಾಮಾನ್ಯವಾಗಿ ಜಲ, ನೆಲ ಹಾಗೂ ವಾಯು ಎಂಬ ಮೂರು ಪರಿಸರ ವಲಯಗಳಲ್ಲಿ ವಾಸಿಸುವ 8 ಗುಂಪುಗಳಾಗಿ ವಿಂಗಡಿಸಬಹುದಾದರೂ, ಇವುಗಳೆಲ್ಲಾ ವೈವಿಧ್ಯಮಯವಾಗಿರುವುದರಿಂದ, ಪ್ರಾಣಿಗಳ ಹಂಚಿಕೆಯ ದೃಷ್ಟಿಯಿಂದ, ಭಾರತವನ್ನು ಹಿಮಾಲಯದ ಉಪಪ್ರಾಂತ್ಯ ಮತ್ತು ಪರ್ಯಾಯ ದ್ವೀಪತಲದ ಉಪಪ್ರಾಂತ್ಯ ಎಂಬ ಎರಡು ಮುಖ್ಯ ಭಾಗಗಳಾಗಿ ವಿಭಾಗಿಸಲಾಗಿದೆ.

1. ಹಿಮಾಲಯದ ಉಪ ಪ್ರಾಂತ್ಯ: ಪೂರ್ವಕ್ಕೆ ಬ್ರಹ್ಮ ಪುತ್ರ, ಪಶ್ಚಿಮಕ್ಕೆ ಸಿಂಧೂ ನದಿ ಇವುಗಳ ನಡುವೆಯಿರುವ ಹಿಮಾಲಯ ಪರ್ವತಗಳ ಸುತ್ತಮುತ್ತಲಿನ ಪ್ರದೇಶಗಳು ಈ ಪ್ರಾಂತ್ಯಕ್ಕೆ ಸೇರುತ್ತವೆ. ವಿವಿಧ ಎತ್ತರಗಳ ಈ ಪರ್ವತ ವಿಭಾಗ ವಿಚಿತ್ರ ಮಾದರಿಯ ಪ್ರಾಣಿಗಳ ವಾಸಸ್ಥಾನವಾಗಿದೆ. ಈ ಪ್ರಾಂತ್ಯವನ್ನು ಪುನಃ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

ಅ) ಅರಣ್ಯ ವಿಭಾಗ: ಕಾಶ್ಮೀರ, ಭೂತಾನಗಳನ್ನೊಳಗೊಂಡ ಹಿಮಾಲಯ ಪೂರ್ವಕ್ಕೆ ಇಳಿಜಾರು ಪ್ರದೇಶ ದಟ್ಟ ಮತ್ತು ಸದಾ ಹಸಿರು ಕಾಡುಗಳಿಂದ ಕೂಡಿದೆ. ಪರ್ಯಾಯ ದ್ವೀಪ ಕಲ್ಪದ ಪ್ರಾಂತ್ಯದ ಕಾಡುಗಳಲ್ಲಿ ಹುಲಿ, ಆನೆ, ಕಾಟಿ, ಕಡವೆ ಮತ್ತು ಕಾಡುಕುರಿ (ಮಂಟ್ ಜ್ಯಾಕ್) ಪ್ರಾಣಿಗಳು ಇವೆ. ಪರ್ವತದ ತಪ್ಪಲಿನ ಜೌಗು ಪ್ರದೇಶಗಳಲ್ಲಿ ಹಾಗೂ ಅಡವಿಗಳಲ್ಲಿ ಕಾಟಿಯ ಬದಲು ಕಾಡೆಮ್ಮೆ (ವೈಲ್ಡ್ ಬಫೆಲೊ), ಹಂದಿ, ಜಿಂಕೆ, ಜೌಗು ಜಿಂಕೆಗಳು ವಾಸಿಸುತ್ತವೆ. ಸಮುದ್ರ ಮಟ್ಟಕ್ಕಿಂತ 1525 ರಿಂದ 1530 ಮೀ ಎತ್ತರದ ಪ್ರದೇಶಗಳಲ್ಲಿ ಕಾಡುಗಳು ದಟ್ಟವಾಗಿವೆ. ಈ ಭಾಗಗಳಲ್ಲಿ ಪ್ಯಾಂಡ, ಅನ್ವೇಷಕ ಬ್ಯಾಡ್ಜರ್ (ಫೆರೆಟ್ ಬ್ಯಾಡ್ಜರ್), ಜೌಗುಜಿಂಕೆ, ಶಿಖರಹಿತ ಮುಳ್ಳು ಹಂದಿ, ಕೂರು ಹಂದಿ, ಕೆಲವು ಜಾತಿಯ ಚಿಗರೆಗಳು ವಾಸಿಸುತ್ತವೆ. ಇಲ್ಲಿಯ ಕೆಲವು ಪ್ರಾಣಿಗಳಿಗು ಚೀನಾ ದೇಶದ ಪ್ರಾಣಿಗಳಿಗು ಹೋಲಿಕೆ ಇದೆ.

ಆ) ಪಶ್ಚಿಮ ವಿಭಾಗ: ಲಡಾಕಿನಿಂದ ಕಾಶ್ಮೀರದ ಚಿತ್ರಾಲದವರೆಗಿನ ಪ್ರದೇಶಗಳನ್ನೊಳಗೊಂಡ ಈ ಭಾಗದಲ್ಲಿ ವಾಸಿಸುವ ಕೆಲವು ಪ್ರಾಣಿಗಳು ಯೂರೋಪ್ ಹಾಗೂ ಉತ್ತರ ಏಷ್ಯದ ಮಾದರಿಗಳನ್ನು ಹೋಲುತ್ತವೆ. ಉಳಿದವು ಭಾರತಕ್ಕೆ ಸೀಮಿತವಾಗಿರುವ ಪ್ರಾಣಿಗಳು. ಕಾಡುಕುರಿ, ಕೃಷ್ಣಮೃಗ ಮತ್ತು ಚಿಂಕಾರಗಳು ಮುಖ್ಯವಾದುವು. ಈ ಪ್ರದೇಶದ ಅತಿ ಮುಖ್ಯ ಹಾಗೂ ವಿಶಿಷ್ಟ ಪ್ರಾಣಿ ಕಾಶ್ಮೀರಿ ಜಿಂಕೆ.

ಇ) ಮಧ್ಯ ಭಾಗ: ವಕ್ಷ ರೇಖೆ ಮತ್ತು ರಸಭರಿತ ಹುಲ್ಲುಗಳ ಮೈದಾನ ಹಾಗೂ ಟಿಬೆಟಿನ ಒಣ ಮೈದಾನಗಳ ಭಾಗ. ಪರ್ವತ ಶ್ರೇಣಿಗಳಿಂದ ಸುತ್ತುವರಿದಿರುವ ಈ ಭಾಗ, ವಾತಾವರಣದ ವೈಪರೀತ್ಯದಿಂದಾಗಿ ಪೌರಸ್ತ್ಯದೇಶಗಳ ಗುಂಪನ್ನು ಪುರಾತನ ಶೀತವಲಯದ ಗುಂಪಿನ ದೇಶಗಳಿಂದ ಬೇರ್ಪಡಿಸಿದೆ. ಈ ಭಾಗದ ಉತ್ತರದಲ್ಲಿ ಹೆಗ್ಗಣ (ಮೋಲ್), ನೀರಿಲಿ (ವಾಟರ್ ಶ್ರೂ), ಕುಂದಿಲಿ (ಮ್ಸ್ ಹೇರ್), ಕೃಷ್ಣಮೃಗ, ಭರಲ್‌ಗಳೂ, ದಕ್ಷಿಣದಲ್ಲಿ ನರ, ಬಾವಲಿ, ಮರಮೂಗಿಲಿ (ಟ್ರೀ ಶೂ) ಪನುಗು ಬೆಕ್ಕು, ಮುಂಗುಸಿ, ಹಾರುಬೆಕ್ಕು, ಅಳಿಲುಗಳು ವಾಸಿಸುತ್ತವೆ.

ಈ) ಟಿಬೆಟ್ ಭಾಗ: ಟಿಬೆಟಿನ ಮೈದಾನಗಳು, ಲಡಾಕಿನಿಂದ ಭೂತಾನದವರೆಗಿನ ಕಾಶ್ಮೀರದ ಮೈದಾನಗಳು. ಉತ್ತರ ಸರಹದ್ದಿನ ಪ್ರಾಂತ್ಯಗಳು ಈ ಭಾಗದಲ್ಲಿ ಸೇರಿರುವ

ಎತ್ತರದ ಭೂ ಪ್ರದೇಶಗಳ ಕಡಿಮೆ ಮಳೆ, ಕಡುಚಳಿ ಇಲ್ಲಿಯ ಹವಾ ವೈಶಿಷ್ಟ್ಯ. ಪ್ರಪಂಚದಲ್ಲಿ ಮರಳುಗಾಡು ಹಾಗೂ ಶೀತವಲಯಗಳೆರಡರ ಗುಣಗಳನ್ನೂ ಒಟ್ಟಿಗೆ ಪಡೆದಿರುವ ಪ್ರದೇಶವೆಂದರೆ ಇದೊಂದೇ. ಏಷ್ಯದ ಮರಳುಗಾಡಿನಲ್ಲಿ ಕಂಡು ಬರುವ ಕಾಡುಕತ್ತೆಗಳು ಈ ಪ್ರದೇಶದಲ್ಲಿ ವಾಸಿಸುತ್ತವೆ. ವೈವಿಧ್ಯಮಯ ಹವಾಗುಣ, ಸಸ್ಯಗಳಿಂದ ಈ ಭಾಗ ಪ್ರಾಣಿಗಳ ಹಂಚಿಕೆಯ ದೃಷ್ಟಿಯಿಂದ ಬಹು ಮುಖ್ಯವಾದದ್ದು.

ಅಸ್ಸಾಮ್, ಮಣಿಪುರ, ಮೇಘಾಲಯ, ಸಿಕ್ಕಿಮ್ ಪ್ರದೇಶಗಳಲ್ಲಿ ವಾಸಿಸುವ ಪ್ರಾಣಿಗಳು ಹಿಮಾಲಯದ ಅರಣ್ಯಗಳಲ್ಲಿರುವ ಪ್ರಾಣಿಗಳನ್ನೇ ಹೋಲುವುದರಿಂದ ಈ ಪ್ರದೇಶಗಳನ್ನೂ ಅರಣ್ಯಭಾಗಕ್ಕೆ ಸೇರಿಸಲಾಗಿದೆ.

2) ಪರ್ಯಾಯ ದ್ವೀಪಕಲ್ಪ ಪ್ರಾಂತ್ಯ: ಭಾರತದ ಬಹುತೇಕ ಭಾಗವನ್ನು ಆವರಿಸಿಕೊಂಡಿರುವ ಈ ಉಪ ವಿಭಾಗ ಗಂಗಾನದಿಯ ದಂಡೆಯಿಂದ ಕನ್ಯಾಕುಮಾರಿಯವರೆಗೂ ಹರಡಿದೆ. ಗಂಗಾನದಿಯ ದಕ್ಷಿಣಕ್ಕೆ, ಅಂಚಿನಲ್ಲಿ ಕರಾವಳಿ ಪ್ರದೇಶವಿದೆ. ಪಶ್ಚಿಮ ಕರಾವಳಿಗೆ ಹೊಂದಿಕೊಂಡಿರುವ ಪಶ್ಚಿಮ ಘಟ್ಟಗಳು, ಮಹಾರಾಷ್ಟ್ರ, ಕರ್ನಾಟಕ ಹಾಗೂ ಕೇರಳ ರಾಜ್ಯಗಳಿಗೆ ಚಾಚಿಕೊಂಡಿರುವ ದಖ್ಖನ್ ಪ್ರಸ್ಥಭೂಮಿಯನ್ನು ಕರಾವಳಿಯಿಂದ ಬೇರ್ಪಡಿಸಿದೆ. ಪೂರ್ವತೀರದಲ್ಲಿ ಪೂರ್ವಘಟ್ಟಗಳು, ತಮಿಳುನಾಡಿನ ಕೆಲವೆಡೆ ಹರಡಿಕೊಂಡಿವೆ. ಹವೆ ಹಾಗೂ ಔನ್ನತ್ಯದ ದೃಷ್ಟಿಯಿಂದ ಇವೆರಡು ಘಟ್ಟ ಪ್ರದೇಶಗಳು ವಿಭಿನ್ನವಾಗಿವೆ. ಈ ಭಾಗದಲ್ಲಿ ನೀಲಗಿರಿ, ಪಳನಿ, ಬಾಬಾಬುಡನ್ ಗಿರಿ, ಬಿಳಿಗಿರಿರಂಗನ ಬೆಟ್ಟಗಳಿವೆ. ಈ ಭಾಗದಲ್ಲಿ ಕೆಲವು ಪ್ರಾಣಿಗಳು ವೈಶಿಷ್ಟ್ಯ ಪೂರ್ಣವಾಗಿದ್ದು, ಅವು ಭಾರತಕ್ಕೆ ಮಾತ್ರ ಮೀಸಲಾಗಿವೆ. ಉದಾ: ಚುಕ್ಕೆ ಜಿಂಕೆ (ಜಿತಲ್), ನೀಲ್ಗಾಯ್, ಕೃಷ್ಣಮೃಗ ನಾಲ್ಕು ಕೊಂಬಿನ ಚಿಗರೆ, ಅಲಸಿಕರಡಿ. ಈ ವಿಭಾಗವನ್ನು ಹಲವಾರು ಉಪ ಭಾಗಗಳಾಗಿ ವಿಂಗಡಿಸಲಾಗಿದೆ.

ಅ) ಭಾರತದ ಮರುಭೂಮಿ ಪ್ರದೇಶ: ಗುಜರಾತ್ ಹಾಗೂ ರಾಜಸ್ಥಾನ ರಾಜ್ಯಗಳ ಕೆಲವು ಭಾಗಗಳನ್ನು ಆವರಿಸಿಕೊಂಡಿರುವ ಈ ಪ್ರದೇಶ ಪಾಕಿಸ್ತಾನ, ಆಫ್ಘಾನಿಸ್ತಾನಗಳವರೆಗೂ ಹರಡಿದೆ. ಇಲ್ಲಿಯ ಪ್ರಾಣಿಗಳು ಪಶ್ಚಿಮದ ಮರಳುಗಾಡಿನ ಇತರ ಪ್ರದೇಶಗಳಿಂದ ವಲಸೆ ಬಂದಂಥವು. ಮರಳುಗಾಡಿನ ನರಿ, ಮೊಲ, ಜೆರ್‌ಬಿಲ್ ಇಲ್ಲಿಯ ಮುಖ್ಯ ಪ್ರಾಣಿಗಳು.

ಆ) ಗಂಗಾನದಿ ತೀರದ ಮೈದಾನ ಪ್ರದೇಶ: ಈ ಭಾಗದಲ್ಲಿ ಸಾಧಾರಣ ಮಳೆ ಬೀಳುತ್ತದೆ. ಚಳಿಗಾಲದಲ್ಲಿ ಉಷ್ಣತೆ ಕಡಿಮೆ. ಗೆಜೆಲ್ ಎಂಬ ಜಿಂಕೆ ಮುಖ್ಯವಾದದ್ದು. ಪೂರ್ವಭಾಗದಲ್ಲಿ ತಂಪು ಪ್ರದೇಶಗಳಿವೆ. ಪಶ್ಚಿಮದಲ್ಲಿ ಬಂಗಾಳದ ಸುಂದರಬನವಿದೆ. ಇಲ್ಲಿ ಸದಾ ಹಸುರಾಗಿರುವ ಸಮೃದ್ಧ ಸಸ್ಯಸಂಪತ್ತು ಇದೆ. ಈ ಭಾಗದಲ್ಲಿ ಚೌಗುಜಿಂಕೆ ಹಾಗೂ ಹುಲಿಗಳಿವೆ.

ಇ) ಮುಖ್ಯ ಪರ್ಯಾಯ ದ್ವೀಪಕಲ್ಪ ಭಾಗ: ಮಧ್ಯಭಾರತ, ದಕ್ಷಿಣ ಪ್ರಸ್ಥಭೂಮಿ ಹಾಗೂ ಉನ್ನುಳಿದ ಎಲ್ಲಾ ಪ್ರದೇಶಗಳೂ ಈ ಭಾಗದಲ್ಲಿ ಸೇರಿವೆ. ಪಶ್ಚಿಮ ಘಟ್ಟಗಳು ನೈರುತ್ಯ ಮಾರುತಗಳನ್ನು ತಡೆಯುವುದರಿಂದ ಪ್ರಸ್ಥಭೂಮಿಯಲ್ಲಿ ಕಡಿಮೆ ಮಳೆ ಬೀಳುತ್ತದೆ. ಈ ಪ್ರದೇಶದಲ್ಲಿ ಸಸ್ಯಗಳು ಮತ್ತು ಕೆಲವೆಡೆ ಹುಲ್ಲುಗಾವಲುಗಳಿವೆ. ಮೈದಾನ ಬೆಟ್ಟಗುಡ್ಡಗಳು, ತಗ್ಗುಗಳು ಈ ಪ್ರದೇಶದಲ್ಲಿವೆ. ಗೆಜೆಲ್, ಚಿಗರೆ ಸಾಮಾನ್ಯವಾಗಿದ್ದು, ಇವುಗಳೊಂದಿಗೆ ಮುಂಗುಸಿ, ತೋಳ ವಿವಿಧ ರೀತಿಯ ಅಳಿಲು, ಮೊಲ, ಇಲಿ ವಾಸಿಸುತ್ತವೆ. ಪರ್ಣಪಾತಿ ಕಾಡುಗಳಲ್ಲಿ ಕಾಟಿ, ಕಡವೆ, ಚುಕ್ಕೆಜಿಂಕೆ, ಕರಡಿ, ಕಾಡು ನಾಯಿ ಇವೆ. ತೇವಪೂರಿತ ಕಾಡುಗಳಲ್ಲಿ ಕಾಡಾನೆ, ಕಾಡಿ ಚೌಗುಜಿಂಕೆ ವಾಸಿಸುತ್ತವೆ.



ಪಶ್ಚಿಮ ಘಟ್ಟದ ಕಾಡು

ಈ) ಪಶ್ಚಿಮ ಘಟ್ಟಗಳು ಹಾಗೂ ಕರಾವಳಿ ಪ್ರದೇಶ: ಈ ಭಾಗಗಳಲ್ಲಿ ಅತಿವೃಷ್ಟಿಯಾಗುತ್ತಿದ್ದು, ಯಾವಾಗಲು ವಾತಾವರಣ ತಂಪಾಗಿರುತ್ತದೆ. ಪಶ್ಚಿಮ ಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ದಟ್ಟ ಕಾಡುಗಳಿವೆ. ಸದಾ ಹಸುರಾಗಿರುವ ಎತ್ತರವಾದ ಮರಗಳು, ಬೆತ್ತ, ಬಿದಿರು ಸಸ್ಯಗಳು ಸಾಮಾನ್ಯ. ಹಲವಾರು ಅರಣ್ಯ. ಹಳ್ಳಗಳು, ಚಿಕ್ಕ ನದಿಗಳು ಇಲ್ಲಿವೆ. ನೀಲಗಿರಿ, ಪಳನಿ, ಬಾಬಾಬುಡನ್ ಗಿರಿ, ಬಿಳಿಗಿರ ರಂಗನ ಬೆಟ್ಟ ಮುಂತಾದುವು ಇಲ್ಲಿಯ ಮುಖ್ಯ ಗಿರಿಗಳು, ನೀಲಗಿರಿ ಮುಸುವ, ಮಕಾಕ್ ಕೋತಿ, ನೀಲಗಿರಿಯ ಕಂದು ಮುಂಗುಸಿ, ರಾಮಳಿಲು, ಕೆಂಜಳಿಲು, ಮಲಬಾರ್ ಪುನುಗು ಬೆಕ್ಕು, ಮುಳ್ಳಿಲಿ, ನೀರುನಾಯಿ, ಆನೆ, ಹುಲಿ ಇಲ್ಲಿ ವಾಸಿಸುವ ಮುಖ್ಯ ಪ್ರಾಣಿಗಳು.

ಭಾರತದ ಪ್ರಾಣಿಸಂಪತ್ತನ್ನು ಕೂಲಂಕಷವಾಗಿ ಅಭ್ಯಸಿಸಿದರೆ, ಸ್ತನಿಗಳ ಎಲ್ಲ ಗುಂಪುಗಳು ಇಲ್ಲಿವೆ. ಪ್ರೈಮೇಟು ಗಣಕ್ಕೆ ಸೇರಿದ ವಿವಿಧ ಬಗೆಯ ಕೋತಿಗಳು, ಪ್ರಮುಖವಾದುವು. ಮಾನವನ ಹತ್ತಿರದ ಸಂಬಂಧಿಗಳಾದ ಗೊರಿಲ್ಲ, ಚಿಂಪಾಂಜಿ, ಒರಾಂಗೂಟಾನ್‌ಗಳು ಮಾತ್ರ ಇಲ್ಲ. ಬೃಹತ್ ಕೋತಿಗಳ ಪೈಕಿ ಗಿಬ್ಬನ್ ಪ್ರಭೇದ (ಹೈಲೊಬೇಟಸ್ ಹೂಲೂಕ್) ಅಸ್ಸಾಮಿನ ಕಾಡುಗಳಲ್ಲಿ ಮಾತ್ರ ಕಂಡು ಬರುತ್ತದೆ. ಸು. 90 ಸೆಂಮೀ ಎತ್ತರವಾಗಿರುವ ಈ ಕೋತಿ ಮನುಷ್ಯನಂತೆ ಹಿಂಗಾಲುಗಳ ಮೇಲೆ ನೇರವಾಗಿ ನಿಂತುಕೊಳ್ಳಬಲ್ಲುದು. ಇದರ ಕೈಗಳು ಕಾಲುಗಳಿಗಿಂತ ಹೆಚ್ಚು ಉದ್ದ. ಗಂಡು ಮತ್ತು ಮರಿಗಳು ಕಪ್ಪು ಬಣ್ಣದುವು. ಹೆಣ್ಣು ಹಳದಿ ಮಿಶ್ರಿತ ಬೂದುಬಣ್ಣದ್ದು. ಸಾಮಾನ್ಯವಾಗಿ 5–6 ಗಿಬ್ಬನ್‌ಗಳು ಗುಂಪುಗೂಡಿ, ವ್ಯವಸ್ಥಿತ ಸಾಮಾಜಿಕ ಜೀವನ ನಡೆಸುತ್ತವೆ.

ಪ್ರೈಮೇಟ್ ಗಣದ ಇನ್ನುಳಿದುವು ಬಾಲವುಳ್ಳ ಕಪಿಗಳು. ಇವುಗಳನ್ನು ಸಯನೋಮಾರ್ಫ ಉಪಗಣದಲ್ಲಿ ಸೇರಿಸಲಾಗಿದೆ. ಇವು ಸರ್ಕೊಪಿತೆಸಿಡೆ ಕುಟುಂಬದ ಸರ್ಕೊಪಿತೆಸಿನೆ ಉಪಕುಟುಂಬಕ್ಕೆ ಸೇರುತ್ತವೆ.

ಬಾನೆಟ್ ಮಂಗ (ಮಕಾಕ ರೇಡಿಯೇಟ), ಸು. 60 ಸೆಂಮೀ ಎತ್ತರವಾಗಿದ್ದು, 6–9 ಕಿಗ್ರಾಂ ಭಾರವಿದೆ. ಇದರ ಬಾಲ ಬಲು ಉದ್ದ, ಮುಖದ ಸುತ್ತ ಟೋಪಿಯಂತೆ ಕಪ್ಪು ಕೂದಲಿನ ಆವರಣ ಇದೆ. ಮುಖದಲ್ಲಿ ಮಾತ್ರ ಕೂದಲು ಇಲ್ಲ. ಕಾಲಮಾನವನ್ನು ಅವಲಂಬಿಸಿ ಕೂದಲಿನ ವರ್ಣ ಬದಲಾಗುತ್ತಿರುತ್ತದೆ. ಮರಗಳ ಮೇಲೆ ವಾಸಿಸುವ ಈ ಕೋತಿಗಳು 20–30 ಗುಂಪುಗಳಲ್ಲಿ ವಾಸಿಸುತ್ತವೆ. ಇವುಗಳಲ್ಲಿ ವ್ಯವಸ್ಥಿತ ಸಮಾಜ ಜೀವನ ಪದ್ಧತಿ ಇದೆ.

ರೀಸಸ್ ಕೋತಿ (ಮಕಾಕ ಮುಲೆಟ), ಹಿಮಾಲಯ, ಅಸ್ಸಾಮ್, ಉತ್ತರ ಮತ್ತು ಮಧ್ಯಭಾರತದಲ್ಲಿ ವಾಸಿಸುವ ಪ್ರಾಣಿ. ಬರ್ಮ ಮತ್ತು ಆಗ್ನೇಯ ದೇಶಗಳಲ್ಲಿ ಕಂಡು ಬರುತ್ತದೆ. ಬಾಲ ಚಿಕ್ಕದು, ಶರೀರ ಬಲಯುತವಾಗಿದೆ. ಕಟಿ ಭಾಗದಲ್ಲಿ ಕಿತ್ತಳೆಗೆಂಪು ಬಣ್ಣದ ಗುರುತು ಇದೆ. ಈ ಕೋತಿ ಕಾಡುಗಳಲ್ಲಿ, ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ರೈಲು ನಿಲ್ದಾಣಗಳಲ್ಲಿ ಹಾಗೂ ಜನವಸತಿಯಿರುವ ಪ್ರದೇಶಗಳಲ್ಲಿ ವಾಸಿಸುತ್ತದೆ.

ಅಸ್ಸಾಮಿನ ಮಕಾಕ್ ಕೋತಿ ಹಿಮಾಲಯದ ಮಸ್ಸೂರಿಯಿಂದ ಪೂರ್ವದ ಸುಂದರಬನ, ಅಸ್ಸಾಮ್ ಹಾಗೂ ಬರ್ಮದ ಕಾಡುಗಳಲ್ಲಿ ವಾಸಿಸುತ್ತದೆ. ನೋಡಲು ರೀಸಸ್ ಕೋತಿಯಂತೆಯೇ ಇದೆ. ಬಾಲ ಸ್ವಲ್ಪ ಉದ್ದ.

ಸಿಂಗಳೀಕ (ಮಕಾಲೀ ಸೈಕನಸ್) ಕಾರವಾರದಿಂದ ಹಿಡಿದು ಕನ್ಯಾಕುಮಾರಿಯವರೆಗಿನ ಪಶ್ಚಿಮಘಟ್ಟಗಳ ಬೆಟ್ಟಗಳಲ್ಲಿ ವಾಸಿಸುವ ಕೋತಿ. ಇದರ ಎತ್ತರ 50–60 ಸೆಂಮೀ. ಇದಕ್ಕೆ 25–35 ಸೆಂಮೀ ಉದ್ದದ ಬಾಲವಿದೆ. ಹೆಣ್ಣು ಗಂಡಿಗಿಂತ ಸ್ವಲ್ಪ ಚಿಕ್ಕದು. ಮುಖದ ಸುತ್ತ ಬೂದುಬಣ್ಣದ ಉದ್ದ ಕೂದಲಿನ ಅಯಾಲು ಇದೆ. ಸ್ವಲ್ಪ ನಾಚಿಕೆ ಸ್ವಭಾವದ ಈ ಕೋತಿ ದಟ್ಟ ಅರಣ್ಯಗಳಲ್ಲಿ ವಾಸಿಸುತ್ತದೆ.



ಸಿಂಗಳೀಕ

ಮುಸುವ ಅಥವಾ ಹನುಮಾನ್ ಕೋತಿ (ಲಂಗೂರ್) ಪ್ರಸ್ಬಿಟಿಸ್ ಎನ್‌ಟೆಲಸ್ ಎಂಬ ಪ್ರಭೇದಕ್ಕೆ ಸೇರಿದೆ. ಭಾರತ, ಶ್ರೀಲಂಕಾದಲ್ಲಿ ಇದು ವಾಸಿಸುತ್ತದೆ. ಇದರ ಎತ್ತರ

60–75 ಸೆಂಮೀ, ತೂಕ 16–20 ಕಿಗ್ರಾಂ. ಉದ್ದ ಕಾಲುಗಳಿವೆ. ಬಾಲದ ಉದ್ದ 95 ಸೆಂಮೀ ಮುಖ ಭಾಗದಲ್ಲಿ ಕಪ್ಪು ಕೂದಲು ಇವೆ. ದೇಹದ ಇತರ ಭಾಗಗಳಲ್ಲಿ ಬೂದು ಅಥವಾ ಕಂದುಬಣ್ಣದ ತುಪ್ಪುಳವಿದೆ. ಇವು ಮರದ ಮೇಲೆ ವಾಸಿಸುತ್ತಿದ್ದು, ಸಮಾಜ ಜೀವನ ನಡೆಸುತ್ತವೆ. ಮುಸುವಗಳ ಇನ್ನೊಂದು ಪ್ರಭೇದ ಪ್ರೆಸ್ಬಿಟಿಸ್ ಪೈಲಿಯೇಟಸ್. ಇದು ಅಸ್ಸಾಮ್, ಬಾಂಗ್ಲಾದೇಶ ಮತ್ತು ಬರ್ಮಗಳಲ್ಲಿ ವಾಸಿಸುತ್ತದೆ. ನೀಲಗಿರಿ ಮುಸುವ (ಪ್ರೆಸ್ಬಿಟಿಸ್ ಜಾನಿ) ಭಾರತಕ್ಕೆ ಮಾತ್ರ ಸೀಮಿತವಾಗಿದ್ದು, ಪಶ್ಚಿಮಘಟ್ಟಗಳ ನೀಲಗಿರಿ, ಬ್ರಹ್ಮಗಿರಿ, ಪಳನಿ ಬೆಟ್ಟಗಳಲ್ಲಿ, ಕೊಡಗಿನಿಂದ ಕನ್ಯಾಕುಮಾರಿಯವರೆಗಿನ ಕಾಡುಗಳಲ್ಲಿ ಹರಡಿದೆ. ಇದರ ಎತ್ತರ 60 ಸೆಂಮೀ ತೂಕ 11 ಕಿಗ್ರಾಂ. ಬಾಲದ ಉದ್ದ 75–90 ಸೆಂಮೀ. ಮುಖ ಭಾಗದಲ್ಲಿ ಹಳದಿಬಣ್ಣದ ಹಾಗೂ ಶರೀರದ ಇತರ ಭಾಗಗಳಲ್ಲಿ ಕಪ್ಪು ಅಥವಾ ಬೂದು ಬಣ್ಣದ ಕೂದಲುಗಳಿವೆ.

ಕಾಡುಪಾಪಗಳ ಎರಡು ಪ್ರಭೇದಗಳು ಭಾರತದಲ್ಲಿವೆ. ಇವು ಬರ್ಮ ಮತ್ತು ಶ್ರೀಲಂಕಾಗಳಲ್ಲಿಯು ಕಂಡು ಬರುತ್ತವೆ. ಲಜ್ಜು ಕಾಡುಪಾಪ (ನಿಕ್ಟಿಸೀಬಸ್ ಕೌಕಾಂಗ್), ಅಸ್ಸಾಮ್, ಬರ್ಮಗಳಲ್ಲಿ ಇದೆ. ತೆಳು ಕಾಡುಪಾಪ (ಲೋರಿಸ್ ಟಾರ್ಡಿಗ್ರೇಡಸ್) ದಕ್ಷಿಣ ಭಾರತ ಹಾಗೂ ಶ್ರೀಲಂಕಾಗಳಲ್ಲಿ ಕಂಡು ಬರುತ್ತದೆ. ಉಳಿದ ಕೋತಿಗಳಿಗೆ ಹೋಲಿಸಿದರೆ ಇವುಗಳ ಗಾತ್ರ ಚಿಕ್ಕದು (ಉದ್ದ 25–40 ಸೆಂಮೀ) ದುಂಡಾದ ತಲೆ, ಎರಡು ದೊಡ್ಡ ಕಣ್ಣುಗಳಿವೆ. ಇವುಗಳ ಎರಡನೆಯ ಬೆರಳು ಮೊನೆಯುಗುರನ್ನು, ಉಳಿದ ಬೆರಳುಗಳು ಉಗುರುಗಳನ್ನು ಪಡೆದಿರುವುದು ಇದರ ಲಕ್ಷಣಗಳು.

ಭಾರತ ಹಲವು ಮಾಂಸಾಹಾರಿ ಪ್ರಾಣಿಗಳಿಗೂ ಆವಾಸಸ್ಥಾನ. ಇವುಗಳ ಪೈಕಿ ಹುಲಿ ಪ್ರಮುಖವಾದದ್ದು. ಹುಲಿಯ ವೈಜ್ಞಾನಿಕ ಹೆಸರು ಪ್ಯಾಂಥೆರ್ ಟಿಗ್ರಿಸ್. ಇದು ವರ್ಣಮಯ ಪ್ರಾಣಿ. (ನೋಡಿ ಹುಲಿ)

ಹಿಮಚಿರತೆ (ಪ್ಯಾಂಥೆರ ಅನ್‌ಸಿಯ) ಹಿಮಾಲಯ ಕಾಶ್ಮೀರ, ಭೂತಾನ, ಟಿಬೆಟ್ ಹಾಗೂ ಮಧ್ಯ ಏಷ್ಯಾಗಳ ವಾಸಿ. ಇದು ಸಾಮಾನ್ಯ ಚಿರತೆಗಳಿಗಿಂತ ಚಿಕ್ಕ ಗಾತ್ರದ್ದು. 100–110 ಸೆಂಮೀ ಉದ್ದ ಇದೆ. ಇದರ ಮೂತಿ ಚಿಕ್ಕದು ಮೈತುಂಬ ಮೃದುವಾದ ಬೂದು ಅಥವಾ ಬಿಳಿ ಬಣ್ಣದ ಕೂದಲುಗಳಿವೆ. ದೇಹದ ಮೇಲೆ ಕಪ್ಪು ಚುಕ್ಕೆಗಳಿವೆ. ತಲೆಯ ಹಾಗೂ ಕಾಲುಗಳ ಭಾಗದಲ್ಲಿ ಚುಕ್ಕೆಗಳು ಸ್ಪಷ್ಟವಾಗಿದ್ದು, ಉಳಿದ ಭಾಗದಲ್ಲಿ ಮಸುಕಾಗಿವೆ.

ಮೇಘ ಚಿರತೆ (ಕ್ಲೌಡೆಡ್ ಲೆಪರ್ಡ, ನಿಯೋಫೀಲಿಸ್ ನೆಬ್ಯೂಲೋಸ್) ಸಿಕ್ಕಿಮ್, ಅಸ್ಸಾಮ್‌ಗಳಲ್ಲಿ ವಾಸಿಸುತ್ತವೆ. ನೇಪಾಳ, ಭೂತಾನ, ಬರ್ಮ, ದಕ್ಷಿಣ ಚೀನ ಹಾಗೂ ಮಲೇಷಿಯಗಳಲ್ಲಿ ಸಹ ಇದೆ. ಬಾಲ ಸೇರಿ ಇದರ ದೇಹದ ಉದ್ದ 190–200 ಸೆಂಮೀ. ದೇಹದ ಉದ್ದಕ್ಕೆ ಹೋಲಿಸಿದರೆ ಕಾಲುಗಳು ಚಿಕ್ಕವು. ಇದರ ಕೋರೆ ಹಲ್ಲುಗಳು ಹುಲಿ ಚಿರತೆಗಳಿಗಿಂತ ಬಲಯುತವಾಗಿ ಮತ್ತು ಉದ್ದವಾಗಿ ಇವೆ. ಇದರ ಮೈಬಣ್ಣ ಬೂದು ಅಥವಾ ಕಂದು. ತಲೆಯ ಭಾಗದಲ್ಲಿ ಎರಡು ದೊಡ್ಡ ಹಾಗೂ ಹಲವು ಚಿಕ್ಕ ಪಟ್ಟೆಗಳಿವೆ. ಕುತ್ತಿಗೆ ಮತ್ತು ಬೆನ್ನುಭಾಗದಲ್ಲಿ ಹಾಗೂ ಬಾಲದ ಬುಡದಲ್ಲಿ ಈ ಪಟ್ಟೆಗಳು ಅಗಲವಾಗಿದ್ದು, ಮೇಲಿನಿಂದ ಕೆಳಗೆ ಅಥವಾ ಮುಂಭಾಗದಿಂದ ಹಿಂಭಾಗಕ್ಕೆ ಹಾಯುತ್ತವೆ. ಬಾಲದ ಮಧ್ಯದಲ್ಲಿ ಮತ್ತು ಹಿಂಭಾಗದಲ್ಲಿ ಈ ಪಟ್ಟೆಗಳು ಒಂದರ ಪಕ್ಕ ಇನ್ನೊಂದರಂತೆ ಜೋಡಿಸಿದ ಉಂಗುರಗಳಂತೆ ಕಾಣುತ್ತವೆ. ಕಾಲಿನ ಭಾಗದಲ್ಲಿ ಇವು ಚಿಕ್ಕ ಪಟ್ಟೆಗಳಾಗಿ ಮಾರ್ಪಟ್ಟಿವೆ.

ಕಾಡುಬೆಕ್ಕುಗಳ ಪೈಕಿ ಪಂಚರಂಗಿ ಬೆಕ್ಕು (ಮಾರ್ಬಲ್ಡ್ ಕ್ಯಾಟ್ ಫೀಲಿಸ್ ಮಾರ್ಮೊರೇಟ) ಮುಖ್ಯವಾದ್ದು. ಇದು ಅಸ್ಸಾಮ್, ಸಿಕ್ಕಿಮ್‌ಗಳಲ್ಲಿ, ಬರ್ಮ, ಮಲೇಷಿಯ ಮತ್ತು ಆಗ್ನೇಯ ಏಷ್ಯದ ಇತರ ದೇಶಗಳಲ್ಲಿ ಇದೆ. ಇದು ಮನೆ ಬೆಕ್ಕಿಗಿಂತ ಸ್ವಲ್ಪ ದೊಡ್ಡದು. ಗಾತ್ರ ಹೊರತಾಗಿ ನೋಡಲು ಸಾಮಾನ್ಯ ಚಿರತೆಯಂತೆಯೇ ಇದೆ. ಬಾಲದ ಪಟ್ಟೆಗಳು ಮೇಲ್ಭಾಗದಲ್ಲಿ ಮಾತ್ರ ಇವೆ.

ಫೀಲಿಸ್ ಟೆಮ್ಮಿಂಕಿಯೈ ಪ್ರಭೇದದ ಕಾಡುಬೆಕ್ಕಿಗೆ ಬಂಗಾರದ ಬೆಕ್ಕು ಎಂದು ಕರೆಯುವರು. ಭಾರತದಾದ್ಯಂತ ಇದು ವಾಸಿಸುತ್ತದೆ. ಉದ್ದ 60 ಸೆಂಮೀ. ಬಣ್ಣದಲ್ಲಿ ಚಿರತೆಯಂತೆ ಕಾಣುತ್ತದೆ. ಅಡವಿಗಳಲ್ಲಿ ವಾಸಿಸುತ್ತಿದ್ದು, ಮರದ ಪೊಟರೆಗಳಲ್ಲಿ ಆಶ್ರಯ ಪಡೆಯುತ್ತದೆ. ಮತ್ಸ್ಯ ಭಕ್ಷಕ ಬೆಕ್ಕು (ಫೀಲಿಸ್ ವೈವರಿನ ) ಬಂಗಾಳ, ಉತ್ತರ ಪ್ರದೇಶ ಹಾಗೂ ಪಶ್ಚಿಮಘಟ್ಟಗಳ ದಕ್ಷಿಣ ಭಾಗಗಳಲ್ಲಿ ವಾಸಿಸುತ್ತವೆ. ಫೀಲಿಸ್ ಚಾವುಸ್ ಪ್ರಭೇದದ ಕಾಡುಬೆಕ್ಕು ಭಾರತದ ಎಲ್ಲ ಉಪ ಪ್ರಾಂತ್ಯಗಳಲ್ಲಿ ಕಂಡುಬರುತ್ತದೆ. ಕಂದು ಹಾಗೂ ಹಳದಿ ಮಿಶ್ರಿತ ಮೈಬಣ್ಣವಿದೆ. ಗಾತ್ರದಲ್ಲಿ ಸಾಮಾನ್ಯ ಬೆಕ್ಕಿಗಿಂತ ಸ್ವಲ್ಪ ದೊಡ್ಡದು. ಬಾಲದ ತುದಿ, ದೇಹದ ಕೆಳಭಾಗ ಹಾಗೂ ಕಾಲುಗಳ ಮೇಲೆ ಮಾತ್ರ ವರ್ಣರಂಜಿತ ಪಟ್ಟೆಗಳಿವೆ. ಹುಲ್ಲುಗಾವಲುಗಳಲ್ಲಿ ಹಾಗೂ ಜೌಗು ಪ್ರದೇಶಗಳಲ್ಲಿ ಇದರ ವಾಸ.



ಮರಳುಗಾಡಿನ ಬೆಕ್ಕು (ಫೀಲಿಸ್ ಲಿಬಿಕ) ಭಾರತದ ಮರಳುಗಾಡಿನಲ್ಲಿ, ಒಣ ಪ್ರದೇಶಗಳಲ್ಲಿ ವಾಸಿಸುತ್ತವೆ. ಗಾತ್ರದಲ್ಲಿ ಕಾಡುಬೆಕ್ಕಿನಷ್ಟಿದೆ. ಮೈಮೇಲಿರುವ ವಿಶಿಷ್ಟ ಚುಕ್ಕೆಗಳಿಂದ ಇದನ್ನು ಸುಲಭವಾಗಿ ಗುರುತಿಸಬಹುದು. ಕ್ಯಾರಕಲ್ (ಫೀಲಿಸ್ ಕ್ಯಾರಕಲ್) ಕಚ್ ಪ್ರದೇಶದ ಬೆಟ್ಟಗಳಲ್ಲಿ, ಪಂಜಾಬ್, ರಾಜಸ್ಥಾನ, ಉತ್ತರ ಪ್ರದೇಶಗಳ ಒಣಕಾಡುಗಳಲ್ಲಿ ವಾಸಿಸುತ್ತದೆ. ಪಶ್ಚಿಮ ಏಷ್ಯ ಹಾಗೂ ಆಫ್ರಿಕ ದೇಶದಲ್ಲಿದೆ. ಇದು ಸು. 60 ಸೆಂಮೀ ಉದ್ದವಿದೆ. ಅಗಲ ತಲೆ, ಕೂದಲು ಗೊಂಡೆಯುಳ್ಳ ಕಿವಿ ಇದರ ಮುಖ್ಯ ಲಕ್ಷಣಗಳು. ದಟ್ಟವಾದ ಮೃದು ಕೂದಲುಗಳು ಇಡೀ ದೇಹವನ್ನು ಆವರಿಸಿವೆ. ಕುರುಚಲು ಗಿಡಗಳಿಂದ ಕೂಡಿದ ಕಾಡುಗಳೇ ಇದರ ಮೆಚ್ಚಿನ ಆವಾಸ ನೆಲೆ.

ಲಿಂಕ್ಸ್ (ಫೀಲಿಸ್ ಲಿಂಕ್ಸ) ಬೆಕ್ಕು ಕೂಡ ಕ್ಯಾರಕಲ್ಲಿನಂತೆಯೇ ಇದೆ. ಆದರೆ, ಇದು ಅದಕ್ಕಿಂತ ಹೆಚ್ಚು ಉದ್ದ ಹಾಗೂ ಎತ್ತರವಾಗಿದೆ. ಇದರ ಬಾಲ ಕ್ಯಾರಕಲ್ಲಿನ ಬಾಲಕ್ಕಿಂತ ಚಿಕ್ಕದು. ಕೊರಳ ಸುತ್ತ ಕೂದಲುಗಳಿವೆ. ಈ ಬೆಕ್ಕು ಸಿಂಧೂನದೀ ತೀರದಲ್ಲಿ ಲಡಕ್ ಮತ್ತು ಟಿಬೆಟ್‌ಗಳಲ್ಲಿ ಕಂಡುಬರುತ್ತವೆ.

ಬೇಟೆ ಚಿರತೆ (ಆಸಿನೋನಿಕ್ಸ್ ಜುಬಬೇಟಸ್) ಉತ್ತರ ಹಾಗೂ ಮಧ್ಯಭಾರತದ ಅಡವಿಯಲ್ಲಿ 50 ವರ್ಷಗಳ ಹಿಂದೆ ಹೇರಳವಾಗಿತ್ತು. ಆದರೆ, ಇಂದು ಗತವಂಶಿ (ಆಫ್ರಿಕದಲ್ಲಿ ಮಾತ್ರ ಇದೆ). ಅಂದಿನ ರಾಜಮಹಾರಾಜರುಗಳು ಜಿಂಕೆ ಬೇಟೆಯಲ್ಲಿ ಈ ಚಿರತೆಯನ್ನು ಬಳಸುತ್ತಿದ್ದರು.

ಪುನುಗಿನ ಬೆಕ್ಕು ವೈವರಿಡೆ ಕುಟುಂಬಕ್ಕೆ ಸೇರಿದೆ. ಸಾಮಾನ್ಯ ನೋಟಕ್ಕೆ ಇದು ಬೆಕ್ಕಿನಂತಿದ್ದರೂ, ಉದ್ದ ದೇಹ, ಗಿಡ್ಡ ಕಾಲುಗಳಿಂದ ಇದನ್ನು ಸುಲಭವಾಗಿ ಗುರುತಿಸಬಹುದು. ಇದರ ಮೂತಿ ಬೆಕ್ಕಿನದ್ದಕ್ಕಿಂತ ಉದ್ದವಾಗಿದೆ. ಇದು ಮಿಶ್ರ ಆಹಾರವನ್ನು ಸೇವಿಸುವುದರಿಂದ ದಂತವಿನ್ಯಾಸದಲ್ಲಿ ಮಾರ್ಪಾಟುಗಳಿವೆ. ವೈರಿ ಆಕ್ರಮಣ ಮಾಡಿದಾಗ ವಿಶೇಷ ಗ್ರಂಥಿಯಿಂದ ಕೆಟ್ಟ ವಾಸನೆಯುಳ್ಳ ದ್ರವವನ್ನು ಸಿಂಪಡಿಸಿ ರಕ್ಷಣೆ ಮಾಡಿಕೊಳ್ಳುವುದು. ಈ ದುರ್ವಾಯುಗ್ರಂಥಿ ಮಾರ್ಪಾಡಾದ ಗುದದ್ವಾರದ ಗ್ರಂಥಿ. ಅಸ್ಸಾಮಿನ ಕಾಡುಗಳಲ್ಲಿ ಪುನುಗು ಹುಲಿ (ಪ್ರೈಯೋನೊಡಾನ್ ಪಾರ್ಡಿಕಲರ್) ಇದೆ. ಭಾರತದ ಚಿಕ್ಕ ಪುನುಗುಬೆಕ್ಕು ಹಿಮಾಲಯದಿಂದ ಕನ್ಯಾಕುಮಾರಿವರೆಗೂ ವ್ಯಾಪಿಸಿವೆ. ಬಣ್ಣ, ದೇಹದ ಆಕಾರ, ಗಾತ್ರ, ಬಾಲದ ಉದ್ದ ಇವುಗಳಿಂದ ಪುನುಗಿನ ಬೆಕ್ಕುಗಳ ವಿವಿಧ ಪ್ರಭೇದಗಳನ್ನು ಗುರುತಿಸಲಾಗುತ್ತದೆ.

ಮುಂಗುಸಿಗಳು ಪುನುಗಿನ ಬೆಕ್ಕನ್ನು ಹೋಲುತ್ತವೆ. ಆದರೆ, ಗಾತ್ರದಲ್ಲಿ ಚಿಕ್ಕವು. ಇವು ಮಾಂಸಾಹಾರಿಗಳು, ಇವು ಹರ್ಪೆಸ್ಟಿಡೆ ಕುಟುಂಬಕ್ಕೆ ಸೇರಿವೆ. ಮುಂಗುಸಿಗಳಲ್ಲಿ ಮುಂಗುಸಿ (ಹರ್ಪೆಸ್ಟಸ್ ಫಸ್ಕಸ್) ಭಾರತಕ್ಕೆ ಮಾತ್ರ ಸೀಮಿತವಾಗಿದೆ. ಸಾಮಾನ್ಯ ಮುಂಗುಸಿ (ಕೀರ –ಹರ್ಪೆಸ್ಟಿಸ್ ಎಡ್ವಾರ್ಡ್ಸಿ), ಭಾರತದ ಚಿಕ್ಕ ಮುಂಗುಸಿ (ಹರ್ಪೆಸ್ಟಿಸ್

ಆರೋಪಂಕ್ಟಸ್), ಏಡಿ ಭಕ್ಷಕ ಮುಂಗುಸಿ (ಹೆರ್ಪೆಸ್ಟಿಸ್ ಆರವ), ಇವು ಭಾರತ, ಮಯನ್ಮಾರ್ ಮತ್ತು ಶ್ರೀಲಂಕಾ ದೇಶಗಳಲ್ಲಿ ವಾಸಿಸುತ್ತವೆ.

ಮಾಂಸಾಹಾರಿ ಸ್ತನಿಗಳ ಪೈಕಿ ನಾಯಿಗಳನ್ನು ಹಾಗೂ ಇವನ್ನು ಹೋಲುವ ಎಲ್ಲ ಪ್ರಾಣಿಗಳನ್ನು ಕೇನಿಡೆ ಕುಟುಂಬಕ್ಕೆ ಸೇರಿಸಲಾಗಿದೆ. ಕತ್ತೆ ಕಿರುಬ, ನರಿ, ತೋಳಗಳು ಈ ಕುಟುಂಬಕ್ಕೆ ಸೇರಿವೆ. ಭಾರತದಲ್ಲಿ ಪಟ್ಟೆ ಕತ್ತೆಕಿರುಬ ಒಂದು ಪ್ರಭೇದ (ಹೈಯೀನ ಸ್ಟ್ರಯೇಟ) ಮಾತ್ರ ಕಂಡು ಬರುತ್ತದೆ. 150 ಸೆಂಮೀ ಉದ್ದವಿದೆ. ಇದು ನೋಡಲು ನಾಯಿಯಂತೆ ಇದೆ. ಆದರೆ, ಇದರ ದೇಹದ ಮೇಲೆ ಕಪ್ಪು ಪಟ್ಟೆಗಳಿವೆ.

ತೋಳ (ಕೇನಿಸ್ ಲೂಪಸ್) ಭಾರತದ ಎಲ್ಲ ಪ್ರಾಂತ್ಯಗಳಲ್ಲಿದೆ. ಗಾತ್ರದಲ್ಲಿ ಸಾಮಾನ್ಯ ನಾಯಿಗಿಂತ ತುಸು ದೊಡ್ಡದು. ಕುರುಚಲು ಕಾಡುಗಳಲ್ಲಿ, ಅಭಯಾರಣ್ಯಗಳಲ್ಲಿ ಇದರ ವಾಸ. ಕಾಡಿನ ಹೊರ ಅಂಚಿನಲ್ಲಿರುವ ಊರುಗಳಿಂದ ಕೋಳಿಗಳನ್ನು ಚಿಕ್ಕ ಪ್ರಾಣಿಗಳನ್ನು ಕದ್ದು ತಿಂದು ಹೊಟ್ಟೆ ಹೊರೆಯುತ್ತದೆ.

ನರಿಗಳ 3 ಪ್ರಭೇದಗಳು ಭಾರತದಲ್ಲಿವೆ. ಸಾಮಾನ್ಯ ನರಿ (ಕೇನಿಸ್ ಆರಿಯಸ್), ಕಂದುನರಿ (ವುಲ್ಪೆಸ್ ವುಲ್ಪೆಸ್) ಹಾಗೂ ಗುಳ್ಳೆನರಿ (ವುಲ್ಪೆಸ್ ಬೆಂಗಾಲೆನ್ಸಿಸ್). ಇವುಗಳ ಪೈಕಿ ಕಂದುನರಿ ಉತ್ತರ ಭಾಗಕ್ಕೆ ಸೀಮಿತವಾಗಿದ್ದು, ಉಳಿದವು ಭಾರತದ ಎಲ್ಲ ಕಡೆ ವಾಸಿಸುತ್ತವೆ. ಇವು ತೋಳಗಳಿಗಿಂತ ಚಿಕ್ಕವು. ದೇಹದ ಉದ್ದ 40 ಸೆಂಮೀ. ಇದೇ ಕುಟುಂಬದ ಇನ್ನೊಂದು ಪ್ರಮುಖ ಪ್ರಾಣಿ ಕಾಡುನಾಯಿ (ಕ್ಯುವೋನ್ ಆಲ್ಪೈನಸ್). ನಾಯಿಗಳ ಸಮೀಪ ಬಂಧು ಕರಡಿ. ಆಲಸಿ ಕರಡಿ (ಸ್ಲಾತ್ ಬೇರ್. ಕಪ್ಪು ಕರಡಿ – ಮೆಲರ್ಸಸ್ ಆರ್ಸಿನಸ್), ಕಂದು ಕರಡಿ (ಆರ್ಸಸ್ ಆರ್ಕಟೋಸ್) ಮತ್ತು ಹಿಮಾಲಯದ ಕಪ್ಪು ಕರಡಿ (ಸೆಲಿನಮಾರ್ಕ ಟೋಸ್ ಟಿಬೇಟಾನಸ್) ಇವು ಭಾರತದಲ್ಲಿರುವ ಪ್ರಭೇದಗಳು. ಇವುಗಳ ಪೈಕಿ ಮೊದಲನೆಯದು ಭಾರತದ ಎಲ್ಲ ಭಾಗಗಳಲ್ಲಿ ಉಳಿದೆರಡು ಹಿಮಾಲಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತವೆ. ಕಾಡಿನ ಅಂಚಿನಲ್ಲಿ ಇವುಗಳ ವಾಸ. ಆಲಸಿ ಕರಡಿ 60 ರಿಂದ 80 ಸೆಂಮೀ ಉದ್ದವಿದೆ. ಉಳಿದೆರಡು ಪ್ರಭೇದಗಳು 150 ರಿಂದ 180 ಸೆಂಮೀ ಉದ್ದ ಇವೆ. ಇವುಗಳ ದೇಹ, ಮೂತಿಯನ್ನುಳಿದು ದಟ್ಟ ಕೂದಲುಗಳಿಂದ ಆವರಿಸಿದೆ.

ದೇಹ ರಚನೆಯಲ್ಲಿ ಕರಡಿಗಳನ್ನು ಹೋಲುವ ಇನ್ನೊಂದು ಪ್ರಾಣಿ ಪಾಂಡ. ಭಾರತದಲ್ಲಿರುವಂಥದು ಐಲ್ಯೂರಸ್ ಫಲ್ಗೆನ್ಸ್ ಎಂಬ ಪ್ರಭೇದಕ್ಕೆ ಸೇರುವ ಕೆಂಪು ಪಾಂಡ ಹಿಮಾಲಯದ ಕೆಲವು ಭಾಗಗಳಲ್ಲಿ, ನೇಪಾಳ, ಸಿಕ್ಕಿಮ್‌ಗಳಲ್ಲಿ ಮಾತ್ರ ಇದು ವಾಸಿಸುತ್ತದೆ.

ಮಸ್ಟೆಲಿಡೆ ಕುಟುಂಬಕ್ಕೆ ಸೇರಿದ ನೀರು ನಾಯಿಗಳು ಭಾರತದಲ್ಲಿವೆ. ಬಲಯುತ ಸ್ನಾಯು, ಪುಷ್ಟ ಬಾಲ, ಹುಟ್ಟಿನಂತೆ ಮಾರ್ಪಾಡಾದ ಪಾದ, ಮುಂಗಾಲಿಗಿಂತ ಬಲವಾದ ಹಿಂಗಾಲುಗಳು, ವಿಶಿಷ್ಟವಾದ ಮೀಸೆ ನೀರು ನಾಯಿಯ ಲಕ್ಷಣಗಳು. ಲುಟ್ರ ಲುಟ್ರ, ಲುಟ್ರ ಪರ್‌ಸ್ಪಿಸಿಲ್ಲೇಟ, ಅಯೋನಿಕ್ಸ್ ಸಿನೆರಿಯ ಎಂಬ ಮೂರು ಪ್ರಭೇದಗಳು ಭಾರತದಲ್ಲಿವೆ. ಮೊದಲೆರಡು ಪ್ರಭೇದಗಳು ದೇಶದ ಎಲ್ಲ ಭಾಗಗಳಲ್ಲಿ ವಾಸಿಸುತ್ತವೆ. ಮೂರನೆಯದನ್ನು (ಪಂಜ ರಹಿತ ನೀರು ನಾಯಿ) ಕುಲು ಕಣಿವೆ, ಅಸ್ಸಾಮಿನ ಗುಡ್ಡಗಾಡು ಪ್ರದೇಶಗಳು, ನೀಲಗಿರಿ, ಪಳನಿ ಮತ್ತು ಕೊಡಗಿನಲ್ಲಿ ಕಾಣಬಹುದು. ಅಯೋನಿಕ್ಸ್ ನೀರುನಾಯಿ 45–55 ಸೆಂಮೀ ಉದ್ದವಿದ್ದು, ಉಳಿದ ನೀರು ನಾಯಿಗಳಿಗಿಂತ ಚಿಕ್ಕದೆನಿಸಿದೆ. ಉಳಿದವು 60–85 ಸೆಂಮೀ ಉದ್ದ ಇವೆ. ಮಾರ್ಟಿನ್ ಎಂಬ ಇನ್ನೊಂದು ಪ್ರಾಣಿ ಇದೇ ಕುಟುಂಬಕ್ಕೆ ಸೇರುತ್ತದೆ. ಮಾರ್ಟಿನ್‌ಗಳ ಪೈಕಿ ಹಿಮಾಲಯದ ಮಾರ್ಟಿನ್ ಫ್ಲೂವಿಗುಲ ಹಾಗೂ ನೀಲಗಿರಿಯ ಮಾರ್ಟಿನ್ ಗ್ಲಾಡ್ವರ್ಸಿ ಎಂಬ ಪ್ರಭೇದಗಳಿವೆ. ಇವು ಸಾಮಾನ್ಯ ನೋಟಕ್ಕೆ ನೀರುನಾಯಿಯಂತೆ ಕಂಡರೂ, ನೆಲದ ಮೇಲೆ ವಾಸಿಸುವಂಥ ಪ್ರಾಣಿಗಳು. ನೀರು ನಾಯಿಗಳ ಬಾಲ ಮೊನಚಾಗಿದ್ದರೆ ಇವುಗಳದು ಮೊಂಡು.

ವೀಸಲ್‌ಗಳು ನೀರುನಾಯಿಯನ್ನು ಹೋಲುವ ಪ್ರಾಣಿಗಳು, ಇವು ನೆಲ ಹಾಗೂ ಮರಗಳ ಮೇಲೆ ವಾಸಿಸುತ್ತವೆ. ಹಿಮಾಲಯದ ತಪ್ಪಲುಗಳಲ್ಲಿ, ಮಧ್ಯ ಏಷ್ಯಾ ಹಾಗೂ ಬರ್ಮಗಳಲ್ಲಿ ಇವೆ.

ಹಿಮಾಲಯದ ಬ್ಯಾಡ್ಜರುಗಳಿವೆ. ಚೀನಾ, ಬರ್ಮ ಮತ್ತು ಇಂಡೋನೇಷ್ಯಗಳಲ್ಲೂ ಇವೆ. ಅನ್ವೇಷಕ ಬ್ಯಾಡ್ಜರ್ (ಮೆಲೋಗೇಲ್ ಮೊಶ್ಚಾಟ) ಹಾಗೂ ಹಂದಿ ಬ್ಯಾಡ್ಜರ್ (ಆರ್ಕ ಟೋನಿಸ್ ಕಾಲರಿಸ್) ಪ್ರಭೇದಗಳು ಭಾರತದಲ್ಲಿವೆ. ರಾಟೆಲ್ ಅಥವಾ ಜೇನು ಬ್ಯಾಡ್ಜರ್ (ಮೆಲ್ಲಿವೊರ ಕೆಪೆನ್ಸಿಸ್), ಭಾರತದಾದ್ಯಂತ ಸಿಗುವ ಪ್ರಾಣಿ.

ಭಾರತದ ಕೀಟಭಕ್ಷಕ ಸ್ತನಿಗಳಲ್ಲಿ ನಾಲ್ಕು ವಿಧ. ಮರಮೂಗಿಲಿ (ಟ್ರೀ ಶ್ರೂ), ಮುಳ್ಳು ಹಂದಿ (ಹೆಜ್ ಹಾಗ್) ಇವು ಕ್ರಮವಾಗಿ ಟುಲಿಪಿಡೆ, ಎರಿನೇಸೈಯಿಡೆ ಟಾಲ್ಪಡೆ ಮತ್ತು ಸೊರಿಸಿಡೆ ಕುಟುಂಬಗಳಿಗೆ ಸೇರಿವೆ. ಮರ ಮೂಗಿಲಿಗಳ ಪೈಕಿ ಅನಾತಾನ ಇಲಿಯೋಟಿ ಹಾಗೂ ಟುಪಾಯಗ್ಲಿಸ್ ಪ್ರಭೇದಗಳು ಭಾರತದಲ್ಲಿವೆ. ದಕ್ಷಿಣ ಭಾರತದ ಒಣಕಾಡುಗಳಲ್ಲಿ ಇವುಗಳ ವಾಸ. ಮುಳ್ಳು ಹಂದಿ, ಹೆಮಿಎಕೈನಸ್ ಆರಿಟಸ್ ಹಾಗೂ ಪ್ಯಾರಾಎಕೈನಸ್ ಮೈಕ್ರೋಪಸ್ ಪ್ರಭೇದಗಳು ಒಣ ಪ್ರದೇಶಗಳಿಗೆ ಹಾಗೂ ರಾಜಸ್ಥಾನದ ಮರಳುಗಾಡಿಗೆ ಮಾತ್ರ ಸೀಮಿತ. ಮಖಮಲ್ ಹೆಗ್ಗಣದ (ಟಾಲ್ಪ ಮೈಕ್ರೂರ) ಎರಡು ಉಪ ಪ್ರಭೇದಗಳು ಇವೆ. ನೆಲಮೂಗಿಲಿಗಳ ಪೈಕಿ ಸಂಕಸ್ ಮುರಿನಸ್ ಎಂಬ ಪ್ರಭೇದ ಮಾತ್ರ ದೇಶದ ಎಲ್ಲ ಭಾಗಗಳಲ್ಲಿ ಹರಡಿವೆ.

ಬಾವುಲಿಗಳ ಪೈಕಿ, ದೈತ್ಯಬಾವುಲಿ ಹಾಗೂ ಪುಟ್ಟ ಬಾವುಲಿಗಳೆರಡು (ಮೆಗಕೈರಾಪ್ಟರ ಮತ್ತು ಮೈಕ್ರೊಕೈರಾಪ್ಟರ) ಇವೆ. ಪುಟ್ಟ ಬಾವುಲಿಗಳು ಕೀಟಭಕ್ಷಕ ಪ್ರಾಣಿಗಳು. ಬಾವುಲಿಗಳ 11 ಪ್ರಭೇದಗಳು ದೇಶದಲ್ಲಿ ಇವೆ. ಇವುಗಳ ಪೈಕಿ ಎಫ್ಟಿಸಿಕಸ್ ಸ್ಕೋಟಿನಸ್ ಪ್ರಭೇದ ಈ ದೇಶಕ್ಕೆ ಮಾತ್ರ ಮೀಸಲು. ಉಳಿದುವು ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ದಕ್ಷಿಣ ಆಫ್ರಿಕ ಹಾಗೂ ಆಗ್ನೇಯ ಏಷ್ಯಾ ದೇಶಗಳಲ್ಲಿ ಕಂಡು ಬರುತ್ತದೆ.

ದಂಶಕ ಪ್ರಾಣಿಗಳ ಎಲ್ಲ ಗುಂಪುಗಳು ಭಾರತದಲ್ಲಿವೆ. ಇವುಗಳಲ್ಲಿ ಅಳಿಲು, ಮಾರ್ಮಟ್, ಇಲಿ ಮತ್ತು ಹೆಗ್ಗಣಗಳು ಮುಖ್ಯವಾದುವು. ಅಳಿಲುಗಳ ಪೈಕಿ ಹಾರುವ ಅಳಿಲು ಸೋಜಿಗದ ಪ್ರಾಣಿ. ಇದರಲ್ಲಿ ಸಾಮಾನ್ಯವಾಗಿ ಎರಡು ಬಗೆ. ಮೊದಲನೆಯದು 45 ಸೆಂಮೀ ಉದ್ದವಿದೆ. ಎರಡನೆಯದು 25–30 ಸೆಂಮೀ ಉದ್ದವಿದೆ. ಇವುಗಳಲ್ಲಿ ಮೊದಲು ಗುಂಪಿನ ಕಾಶ್ಮೀರಿ ಹಾರುವ ಅಳಿಲು (ಯುಪೆಟಾರಸ್ ಸಿನೇರಿಯಸ್) ಕಾಶ್ಮೀರ ಪ್ರಾಂತ್ಯ ಹಾಗೂ ಸಿಕ್ಕಿಮ್‌ಗಳಲ್ಲಿ, ಕಂದು ಬಣ್ಣದ ಹಾರುವ ಅಳಿಲು ದಕ್ಷಿಣ ಭಾರತ ಮತ್ತು ಗಂಗಾ ನದಿಯ ಉತ್ತರ ಭಾಗಗಳಲ್ಲಿ ವಾಸಿಸುತ್ತವೆ. ಚಿಕ್ಕ ಹಾರುವ ಅಳಿಲುಗಳಲ್ಲಿ 4 ಪ್ರಭೇದಗಳಿವೆ. ಇವು ಭಾರತದ ವಿವಿಧ ಭಾಗಗಳಲ್ಲಿ ವಾಸಿಸುತ್ತವೆ. ಸಾಮಾನ್ಯ ಅಳಿಲುಗಳ ಪೈಕಿ 3 ಪ್ರಭೇದಗಳು ಭಾರತದಲ್ಲಿವೆ. ಕೇಶಳಿಲು (ರಟೂಫ ಇಂಡಿಕ) ಪಶ್ಚಿಮ ಘಟ್ಟಗಳಲ್ಲಿ, ದಕ್ಷಿಣ ಮತ್ತು ಮಧ್ಯಭಾರತದ ಇತರ ಕಾಡುಗಳಲ್ಲಿ ದೊರೆಯುತ್ತದೆ. ಹಿಮಾಲಯದ ಅಳಿಲುಗಳಲ್ಲಿ 2 ಪ್ರಭೇದಗಳಿವೆ. ಇವು ಹಿಮಾಲಯ ಉಪ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಹಾಗೂ ಸುತ್ತಮುತ್ತಲಿನ ದೇಶಗಳಲ್ಲಿ ಕಂಡು ಬರುತ್ತವೆ. ರಾಮಳಿಲು ಅಥವಾ ಪಟ್ಟೆ ಅಳಿಲುಗಳ 2 ಪ್ರಭೇದಗಳು ಭಾರತದಲ್ಲಿದ್ದು ಫೆನಂಬುಲಸ್ ಪೆನ್ನಾಂಟಿ ಈ ದೇಶಕ್ಕೆ ಮಾತ್ರ ಸೀಮಿತ. ಬಿಲವಾಸಿ ಅಳಿಲುಗಳಲ್ಲಿ ಮಾರ್ಮೋಟ ಕಾಡೇಟ ಎಂಬ 2 ಪ್ರಭೇದಗಳಿದ್ದು ಇವು ಉತ್ತರ ಭಾರತದಲ್ಲಿವೆ.

ಜಿಂಕೆ ಇಲಿಗಳು (ಜೆರ್ಬಿಲ್) ನೋಡಲು ಇಲಿಗಳಂತೆ ಇದ್ದರೂ, ಇವುಗಳ ರೋಮಯುಕ್ತ ಬಾಲಗಳಿಂದ ಇವನ್ನು ಸುಲಭವಾಗಿ ಗುರುತಿಸಬಹುದು. ಭಾರತದಲ್ಲಿ ಜಿಂಕೆ ಇಲಿಗಳ 2 ಪ್ರಭೇದಗಳಿವೆ. ಇವುಗಳ ಪೈಕಿ ಟಟೇರ ಇಂಡಿಕ ಹಿಮಾಲಯದಿಂದ ಕನ್ಯಾಕುಮಾರಿಯವರೆಗು ದೊರೆಯುತ್ತದೆ. ಮರಿಯೋನಸ್ ಹರಿಯಾನಿ ಮರಳುಗಾಡಿಗೆ ಮಾತ್ರ ಮೀಸಲು.



ಜೆರ್ಬಿಲ್

ಹೆಗ್ಗಣಗಳ ಪೈಕಿ 2 ಪ್ರಭೇದಗಳು ಭಾರತದಲ್ಲಿವೆ. ಬ್ಯಾಂಡಿಕೂಟ ಬೆಂಗಾಲೆನ್ಸಿಸ್ ಭಾರತದ ಎಲ್ಲ ಪ್ರಾಂತ್ಯಗಳಲ್ಲಿ, ನಿಸೊಕಿಯ ಇಂಡಿಕ ಮರಳುಗಾಡು ಮತ್ತು ಒಣಹವೆ ಇರುವ ಪ್ರದೇಶಗಳಲ್ಲಿ ಕಾಣಬರುತ್ತದೆ. ಮಿಲ್ಲಾರ್ಡಿಯ ಮೆಲ್ಟಡ್ ಪ್ರಭೇದ, ಬ್ಯಾಂಡಿಕೂಟ ಬೆಂಗಾಲಿನ್ಸಿಸ್‌ಗಿಂತ ಚಿಕ್ಕಗಾತ್ರದ್ದು. ಪಶ್ಚಿಮ ಮತ್ತು ದಕ್ಷಿಣ ಭಾರತದ ಹೊಲಗಳಲ್ಲಿ ವಾಸಿಸುತ್ತದೆ.

ಭಾರತದ ಇಲಿಗಳ ಪೈಕಿ ಮಸ್ ಬೂಡುಗಾ, ಮಸ್ ಮಸ್ಕುಲಸ್, ಮಸ್ ಪ್ಲಾಟಿಥ್ರಿಕ್ಸ್, ವ್ಯಾಂಡಲೂರಿಯ ಓಲರೇಸಿಯ, ಗೋಲಂಡ ಎಲಿಯೋಟೈ, ರ್‍ಯಾಟಸ್ ಬ್ಲಾನ್ ಫೋರ್ಡಿಯೈ ರ್‍ಯಾಟಸ್, ರ್‍ಯಾಟಸ್ ನಾರ್ವಿಜಿಕಸ್ ಮತ್ತು ಬ್ಯಾಂಡಿಕೂಟ ಇಂಡಿಕ ಮುಖ್ಯ ಪ್ರಭೇದಗಳು. ಇವುಗಳನ್ನು ಆಕಾರ, ಗಾತ್ರ, ತಲೆ, ಬಾಲ, ಬಣ್ಣಗಳಿಂದ ಇವನ್ನು ಸುಲಭವಾಗಿ ಗುರುತಿಸಬಹುದು. ಚಿಕ್ಕ ಬಾಲವಿರುವ ಆಲ್ಟಿಕೋಲ ರಾಯಲಿಯೈ ಪ್ರಭೇದ ಹಿಮಾಲಯದ

ಉಪಪ್ರಾಂತ್ಯದಲ್ಲಿ ಕಂಡುಬರುತ್ತದೆ. ಬಿದಿರಿಲಿ (ಕನ್ನೊನಿಮಸ್ ಬೇಬ್ಬೆಡಿಯಸ್) ಹಿಮಾಲಯದ ತಪ್ಪಲು, ಅಸ್ಸಾಮ್, ಸಿಕ್ಕಿಮ್‌ಗಳಲ್ಲಿ ಹಾಗೂ ಬರ್ಮಗಳಲ್ಲಿ ಸಿಗುತ್ತದೆ. ಕಣೆ ಹಂದಿಗಳೂ, ರಾಡೆಂಷಿಯ ಗುಂಪಿಗೆ ಸೇರುತ್ತವೆ. ಹಿಸ್ಪ್ರಿಕ್ಸ್ ಹಾಜ್‌ಸೋನಿ ಪ್ರಭೇದಗಳು ಭಾರತದಲ್ಲಿವೆ.

ಮೊಲಗಳ ಎರಡು ಜಾತಿಗಳು ಭಾರತದಲ್ಲಿವೆ. ಲೀಪಸ್ ಹಾಗೂ ಓರಿಕ್ಟೊಲ್ಯಾಗಸ್ ಜಾತಿಗಳ ವಿವಿಧ ಪ್ರಭೇದಗಳು ದೇಶದ ಎಲ್ಲ ಭಾಗಗಳ ಕಾಡುಗಳಲ್ಲಿ, ಹುಲ್ಲುಗಾವಲುಗಳಲ್ಲಿ ವಾಸಿಸುವುವು. ಹಿಮಾಲಯದ ಮೊಲ (ಓಕೊಟೋನ ರಾಯಲಿ) ಹಿಮಾಲಯದ ಸುತ್ತಮುತ್ತ ಇರುತ್ತದೆ.

ಭಾರತ ಆನೆಗಳಿಗೂ ಪ್ರಸಿದ್ಧ. ಆಫ್ರಿಕದ ಆನೆಗಿಂತ ಸ್ವಲ್ಪ ಚಿಕ್ಕಗಾತ್ರದ ಭಾರತದ ಆನೆ ಪಶ್ಚಿಮ ಘಟ್ಟಗಳಲ್ಲಿ, ಮೈಸೂರಿನ ದಕ್ಷಿಣ ಭಾಗದ ಕಾಡುಗಳಲ್ಲಿ, ಹಿಮಾಲಯ, ಅಸ್ಸಾಮ್‌ಗಳಲ್ಲಿ ವಾಸಿಸುತ್ತದೆ. ಶ್ರೀಲಂಕಾ, ಮಯನ್ಮಾರ್, ಮಲಯ ಪರ್ಯಾಯ ದ್ವೀಪಗಳಲ್ಲೂ ಇವೆ (ನೋಡಿ: ಆನೆ).

ಗೊರಸುಳ್ಳ ಪ್ರಾಣಿಗಳ ಪೈಕಿ ಹಲವು ಪ್ರಭೇದಗಳು ಭಾರತದಲ್ಲಿ ವಾಸಿಸುತ್ತವೆ. ಈ ಗುಂಪಿಗೆ ಹಸು, ಎಮ್ಮೆ, ಆಡು, ಕುರಿ, ಕತ್ತೆ, ಕುದುರೆ ಮುಂತಾದ ಸಾಕುಪ್ರಾಣಿಗಳೂ, ಚಿಗರೆ, ಜಿಂಕೆ, ಖಡ್ಗಮೃಗ ಕಾಡುಪ್ರಾಣಿಗಳೂ ಸೇರುತ್ತವೆ. ಖಡ್ಗಮೃಗಗಳ ಸಂಖ್ಯೆ ಇಂದು ಭಾರತದಲ್ಲಿ ಕಡಿಮೆ. ಪುರಾತನ ಪುರಾವೆಗಳಿಂದ ಪ್ರಾಚೀನ ಭಾರತದಲ್ಲಿ ಕನಿಷ್ಠ ನಾಲ್ಕು ಪ್ರಭೇದಗಳು ವಾಸಿಸುತ್ತಿದ್ದುವು ಎಂದು ಊಹಿಸಲಾಗಿದೆ. ಈಗ ಬದುಕುಳಿದಿರುವುದು ಒಂಟಿ ಕೊಂಬಿನ (ರೈನಾಸಿರಸ್ ಯೂನಿಕಾರ್ನಿಸ್) ಪ್ರಭೇದ ಮಾತ್ರ. ಹಿಂದೆ ಗಂಗಾನದಿಯ ತೀರದಲ್ಲಿ, ಅಸ್ಸಾಮ್, ಪಶ್ಚಿಮ ಬಂಗಾಳಗಳಲ್ಲಿ ವಾಸಿಸುತ್ತಿತ್ತು. ಆದರೆ, ಇಂದು ಕೇವಲ ಅಸ್ಸಾಮ್ ಮತ್ತು ಪಶ್ಚಿಮ ಬಂಗಾಳದ ಕಾಡುಗಳಿಗೆ ಮಾತ್ರ ಸೀಮಿತವಾಗಿದೆ. ಜವುಗು ತುಂಬಿರುವ ಕಾಡುಗಳಲ್ಲಿ ಇದರ ವಾಸ.

ಕಾಟಿ (ಬಾಸ್ ಗೌರಸ್) ಪಶ್ಚಿಮ ಘಟ್ಟದ ಕಾಡುಗಳಲ್ಲಿ, ಮಧ್ಯ ಹಾಗೂ ಪೂರ್ವದ ರಾಜ್ಯಗಳಲ್ಲಿ ವಾಸಿಸುತ್ತವೆ. ಬಣ್ಣ ಕೂದಲು ಹಾಗೂ ನಿಲುವುಗಳಿಂದ ಸಾಮಾನ್ಯ ಎತ್ತುಗಳಿಗಿಂತ ಭಿನ್ನವಾಗಿದೆ. ಬಾಸ್ ಗ್ರುನ್ನಿಯೆನ್ಸ್ ಪ್ರಭೇದಕ್ಕೆ ಸೇರುವ ಯಾಕ್ ಪ್ರಾಣಿ ಹಸುವಿನ ನಿಲುವನ್ನೇ ಪಡೆದಿದ್ದರೂ, ಮುಂಭಾಗದಿಂದ ಕತ್ತಿನವರೆಗೆ ಹಾಗೂ ದೇಹದ ಕೆಳಭಾಗದಲ್ಲಿರುವ ಉದ್ದ ಹಾಗೂ ದಟ್ಟ ಕೂದಲುಗಳಿಂದ ಇದನ್ನು ಸುಲಭವಾಗಿ ಗುರುತಿಸಬಹುದು. ಲಡಾಕಿನ ಮತ್ತು ಮುತ್ತಲಿನ ಕಣಿವೆಗಳಲ್ಲಿ ಮಾತ್ರ ವಾಸಿಸುತ್ತವೆ. ಕಾಡುಕೋಣ (ಬುಬೆಲಸ್ ಬುಬೆಲಿಸ್) ಮಧ್ಯಪ್ರದೇಶ, ಒರಿಸ್ಸಾ ಪಶ್ಚಿಮ ಬಂಗಾಲ ಹಾಗೂ ಅಸ್ಸಾಮಿನ ಕಾಡುಗಳಲ್ಲಿ ಕಂಡುಬರುತ್ತದೆ.

ಶಾಪು ಅಥವಾ ಉರಿಯಲ್ (ಓರಿಸ್ ಒರಿಯಂಟ್ಯಾಲಿಸ್) ಪ್ರಾಣಿ ಪಂಜಾಬ್ ಹಾಗೂ ಗುಜರಾತ್‌ಗಳಲ್ಲಿ ದೊರೆಯುತ್ತದೆ. ಇದರ ಕುತ್ತಿಗೆಯ ಕೆಳಭಾಗದಲ್ಲಿ ಉದ್ದವಾದ ಕಟ್ಟಕೂದಲುಗಳಿವೆ. ಇದು ಕುರಿ, ಮೇಕೆಗಳ ಸಂಬಂಧಿ. ಟಿಬೆಟಿನ ಕುರು ಓವಿಸ್ ಅಮ್ಮನ್, ಲಡಾಕಿನಿಂದ ಪೂರ್ವಕ್ಕೆ ಮತ್ತು ಸಿಕ್ಕಿಮ್ ರಾಜ್ಯದ ಪ್ರದೇಶಗಳಲ್ಲಿ ದೊರೆಯುತ್ತದೆ. ಇವುಗಳಲ್ಲಿ ಹಾಜ್‌ಸೋನಿಯೈ ಹಾಗೂ ಪೋಲಿಯೈ ಎಂಬ ಎರಡು ಉಪಪ್ರಭೇದಗಳಿವೆ. ಇವುಗಳ ಕೊಂಬುಗಳು ಬುಡದಲ್ಲಿ ದಪ್ಪವಿದ್ದು ತುದಿಯೆಡೆಗೆ ಸುರುಳಿಸುತ್ತಿಕೊಂಡಂತಿವೆ. ನೀಲಿಕುರಿ ಅಥವಾ ಭರಲ್ (ಸುಡೋಯಿಸ್ ನಯ್ಯಾ) ಲಡಾಕ್, ಟಿಬೆಟ್ ಸಿಕ್ಕಿಮ್ ರಾಜ್ಯಗಳಲ್ಲಿ ಮಾತ್ರ ದೊರೆಯುತ್ತದೆ. ಕೋಪ್ರಾ ಐಬೆಕ್ಸ್ ಪ್ರಭೇದ ಕಾಶ್ಮೀರದಲ್ಲಿ ಮಾತ್ರ ಇದೆ. ಇದು ಇಲ್ಲಿನ ಅತಿ ಸುಂದರ ಕಾಡುಕುರಿ. ಕೋಪ್ರಾಫಾಲ್ಕನೆರಿ ಕಾಶ್ಮೀರ ಕಣಿವೆಗಳಿಂದ ಹಿಂದೂ ಕುಶದವರೆಗಿನ ಕಣಿವೆಗಳಲ್ಲಿ ಹರಡಿವೆ. ತಹರ್ ಪ್ರಾಣಿಯ ಎರಡು ಬಗೆಗಳು ಭಾರತದಲ್ಲಿವೆ. ಹಿಮಾಲಯದ ತಹರ್ (ಹೆಮಿಟ್ರೇಗಸ್ ಜೆಮ್ಲಾಹಿತಸ್) ಹಿಮಾಲಯದ ತಪ್ಪಲಿನ ಕಾಡುಗಳಲ್ಲಿ, ನೀಲಗಿರಿ ತಹರ್ ಪಶ್ಚಿಮ ಘಟ್ಟಗಳಲ್ಲಿ ನೀಲಗಿರಿ ಕಾಡಿನಲ್ಲಿ ದೊರೆಯುತ್ತವೆ. ನೋಡಲು ನೀಲಗಿರಿ ತಹರ್ ಆಡುಗಳಂತೆ ಇದೆ. ಆದರೆ, ದೇಹ ರಚನೆ ಹಾಗೂ ಕೋಡುಗಳು ವಿಭಿನ್ನವಾಗಿವೆ. ಹಿಮಾಲಯದ ತಹರ್‌ನ ತಲೆಯ ಭಾಗವನ್ನುಳ್ಳಿದು, ದೇಹದ ಎಲ್ಲ ಭಾಗಗಳಲ್ಲಿ ಉದ್ದ ಕೂದಲುಗಳಿವೆ. ಹಿಮಾಲಯ ತಪ್ಪಲುಗಳಲ್ಲಿ ಜಿಂಕೆ ಆಡುಗಳು ದೊರೆಯುತ್ತವೆ.

ಗಜೆಲ ಗಜೆಲ ಪ್ರಭೇದದ (ಚಿಂಕಾರ) ಜಿಂಕೆ ಮಧ್ಯ ಭಾರತದ ಮತ್ತು ಕೃಷ್ಣಾನದಿಯ ದಕ್ಷಿಣ ತೀರದ ಮೈದಾನಗಳಲ್ಲಿ ವಾಸಿಸುತ್ತಿದೆ. ಭಾರತದ ಚಿಗರೆ (ಆಂಟಿಲೋಪ್ ಸರ್ವಿಕಾಪ್ರ) ಸೂರತ್ತಿನಿಂದ ದಕ್ಷಿಣಕ್ಕೆ ಹರಡಿದೆ. ಮೈದಾನ ಪ್ರದೇಶಗಳಲ್ಲಿ ಅಥವಾ ಕಾಡಿನ ಅಂಚಿನಲ್ಲಿ ಇದರ ವಾಸ, ಗಂಡು ಮತ್ತು ಹೆಣ್ಣುಗಳಲ್ಲಿ ಭಿನ್ನತೆ ಸ್ಪಷ್ಟ. ಗಂಡಿನಲ್ಲಿ 50 ಸೆಂಮೀ ಉದ್ದದ ಒಂದು ಜೊತೆ ಕೊಂಬುಗಳಿವೆ. ಗಂಡು ಹೆಣ್ಣುಗಳಲ್ಲಿ ವರ್ಣ ವ್ಯತ್ಯಾಸ ಸಾಮಾನ್ಯ 4 ಕೊಂಬಿನ ಚಿಗರೆ (ಟಿಟ್ರಾಸಿರಸ್ ಕ್ವಾಡ್ರಿಮಾರ್ನಿಸ್) ದಕ್ಷಿಣ ಭಾರತದ ಮೈದಾನವಾಸಿ. ಇದು ದಟ್ಟ ಕಾಡುಗಳಲ್ಲಿ ವಾಸಿಸುವುದಿಲ್ಲ. ಗಾತ್ರದಲ್ಲಿ ಸಾಮಾನ್ಯ ಜಿಂಕೆಗಳ ಅರ್ಧದಷ್ಟಿದೆ. ಮುಂಭಾಗದ ಕೊಂಬುಗಳು 2 ರಿಂದ 2.5 ಸೆಂಮೀ ಮತ್ತು ಹಿಂಭಾಗದವು 8 ರಿಂದ 10 ಸೆಂಮೀ ಉದ್ದ ಇವೆ.

ನೀಲ್‌ಗಾಯಿ ಭಾರತಕ್ಕೆ ಮಾತ್ರ ಸೀಮಿತವಾಗಿರುವ ಕಾಡೆತ್ತು. ಇದು ಅಸ್ಸಾಮ್, ಪಶ್ಚಿಮ ಬಂಗಾಲ, ಮಲಬಾರ್ ಪ್ರಾಂತ್ಯ ಹಾಗೂ ಇತರ ದಟ್ಟಕಾಡುಗಳ ಹೊರತಾಗಿ ಉಳಿದೆಲ್ಲ ಕಡೆ ವಾಸಿಸುತ್ತದೆ. 130–140 ಸೆಂಮೀ ಎತ್ತರದ ಈ ಪ್ರಾಣಿಗಳಲ್ಲಿ ಗಂಡಿಗೆ 20 ಸೆಂಮೀ ಉದ್ದದ ಕೊಂಬುಗಳಿವೆ. ಹೆಣ್ಣಿಗೆ ಕೊಂಬಿಲ್ಲ. ಗಂಡಿನ ಕುತ್ತಿಗೆಯ ಕೆಳಭಾಗದಲ್ಲಿ ಕೂದಲಿನ ಗೊಂಚಲು ಇದೆ. ಗಂಡುಹೆಣ್ಣುಗಳಲ್ಲಿ ವರ್ಣ ವ್ಯತ್ಯಾಸವಿದೆ.

ಭಾರತದ ಸುಂದರ ಪ್ರಾಣಿಗಳು ಜಿಂಕೆಗಳು. ಇವುಗಳ ಪೈಕಿ ಕಾಶ್ಮೀರ ಜಿಂಕೆ ಕಾಶ್ಮೀರದ ಕಣಿವೆಗಳಲ್ಲಿ ಕಂಡುಬರುತ್ತದೆ. ಮಣಿಪುರದ ಕಾಡುಗಳಲ್ಲಿ ತಮಿನ್ ಎಂಬ ಇನ್ನೊಂದು ಜಿಂಕೆ ವಾಸಿಸುತ್ತದೆ. ಜಿಂಕೆಯ ವಿವಿಧ ಪ್ರಭೇದಗಳನ್ನು ಕೊಂಬುಗಳ ಉದ್ದ ಹಾಗೂ ರಚನೆಯ ಮೂಲಕ ಗುರುತಿಸಲಾಗುತ್ತದೆ. ಜೌಗುಜಿಂಕೆ (ಸರ್ವಸ್ ಡುವಯುಸೆಲಿ) ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಸುಂದರ ಬನಗಳಲ್ಲಿ ವಾಸಿಸುತ್ತವೆ. ಇದರ ಕೊಂಬುಗಳು ಅ ಆಕಾರದಲ್ಲಿದ್ದು ತುದಿಯಲ್ಲಿ ಕವಲೊಡೆದಿವೆ. ಸರ್ವಸ್ ಯೂನಿಕಲರ್ ಅಥವಾ ಕಡವೆ (ಸಾಂಬಾರ್) ಭಾರತದ ಎಲ್ಲ ಕಾಡುಗಳಲ್ಲಿ ವಾಸಿಸುವ ದೊಡ್ಡ ಗಾತ್ರದ ಜಿಂಕೆ. ಇದರ ಕುತ್ತಿಗೆಯ ಭಾಗದಲ್ಲಿ ಉದ್ದ ಕೂದಲುಗಳಿವೆ. ಪಂಜಾಬ್ ಮತ್ತು ಅಸ್ಸಾಮಿನ ಕಾಡುಗಳಲ್ಲಿ ಆಕ್ಸಿಸ್ ಪೊರ್ಸಿನಸ್ ಸಾರಂಗ ದೊರೆಯುತ್ತದೆ. ಆಕ್ಸಿಸ್ ಆಕ್ಸಿಸ್ ಸಾರಂಗ ಭಾರತದ ಎಲ್ಲ ಭಾಗಗಳಲ್ಲಿ ಶ್ರೀಲಂಕಾದಲ್ಲಿ ವಾಸಿಸುವ ಪ್ರಾಣಿ. ಇದನ್ನು ಚುಕ್ಕೆ ಜಿಂಕೆ ಎಂದು ಕರೆಯುವರು. ಈ ಪ್ರಾಣಿಯ ಮೈ ಬಂಗಾರದ ಬಣ್ಣದ ಬಿಳಿ ಅಥವಾ ವರ್ಣದ ಚುಕ್ಕೆಗಳಿಂದ ಕೂಡಿದೆ. ಕಾಡುಕುರಿ ಅಥವಾ ಬೊಗಳುವ ಜಿಂಕೆ (ಮುಂಟಿಯಾಕಸ್ ಮುಂಟ್‌ಜಾಕ್) ಉತ್ತರ ಭಾರತದಲ್ಲಿದೆ. ಇದರ ಕೊಂಬು ಚಿಕ್ಕದು. ಕಸ್ತೂರಿ ಮೃಗ ಕಾಶ್ಮೀರ ಮತ್ತು ಸಿಕ್ಕಿಮ್‌ಗಳಲ್ಲಿ ವಾಸಿಸುತ್ತವೆ. ಕೂರಂದಿ (ಟ್ರಾಗುಲಸ್ ಮೆಮಿನ್ನಾ) ದಕ್ಷಿಣ ಭಾರತದಲ್ಲಿ ದೊರೆಯುತ್ತದೆ. ಇದು ಕೊಂಬುರಹಿತ ಜಿಂಕೆ ದೇಹದ ಮೇಲೆ ಬಿಳಿ ಅಥವಾ ಹಳದಿ ಪಟ್ಟಿಗಳಿವೆ.

ಹಂದಿಗಳ ಪೈಕಿ ಸಾಕುಹಂದಿ ಹಾಗೂ ಕಾಡುಹಂದಿಗಳಿವೆ. ಕಾಡುಹಂದಿ (ಸಸ್ ಸ್ಕ್ರಾಫ) ಭಾರತದ ಎಲ್ಲ ಕಾಡುಗಳಲ್ಲಿ ಮತ್ತು ಬರ್ಮ ಹಾಗೂ ಮಲೇಷ್ಯಾ ಕಾಡುಗಳ ಹುಲ್ಲುಗಾವಲುಗಳಲ್ಲಿ ವಾಸಿಸುತ್ತದೆ. ಇರುವೆ ಭಕ್ಷಕ ಅಥವಾ ಪ್ಯಾಂಗೋಲಿನ್ನಿನ ಎರಡು ಪ್ರಭೇದಗಳಿವೆ. ಭಾರತದಲ್ಲಿ ಮ್ಯಾನಿಸ್ ಕ್ರಾಸಿಕಾಡೇಟ ಎಂಬ ಪ್ರಭೇದ ವಾಸಿಸುತ್ತದೆ. ಇದರ ಮೈಮೇಲೆ ಬಿರುಸಾದ ತಟ್ಟೆಗಳಂಥ ಕವಚವಿದೆ. ಗಂಡಾಂತರ ಒದಗಿದಾಗ ಈ ಪ್ರಾಣಿ ಶರೀರವನ್ನು ಪೂರ್ತಿ ಸುರುಳಿ ಸುತ್ತಿಕೊಂಡು ಗಟ್ಟಿ ಚೆಂಡಿನಂತಾಗುತ್ತದೆ. ಬಿಲವಾಸಿಯಾದ ಇದು, ಇರುವೆ ಗೆದ್ದಲುಗಳನ್ನು ತಿಂದು ಬದುಕುತ್ತದೆ.

ಜಲವಾಸಿ ಸ್ತನಿಗಳ ಪೈಕಿ ತಿಮಿಂಗಲಗಳು, ಡಾಲ್ಫಿನ್‌ಗಳು ಭಾರತದಲ್ಲಿವೆ. ಬಲಿನಾಪ್ಟಿರ ಮಸ್ಕುಲಸ್, ಪೈಸೆಸ್ಟರ್ ಕಟಡಾನ್ ಪ್ರಭೇದಗಳು ಭಾರತದ ಜಲಪರಿಧಿಯಲ್ಲಿ ಕಾಣುವ ತಿಮಿಂಗಲಗಳು. ಡಾಲ್ಫಿನ್‌ಗಳಲ್ಲಿ ಡೆಲ್ಫಿನಸ್ ಡೆಲ್ಫಿಸ್ ಭಾರತೀಯ ಜನಗಡಿಯಲ್ಲಿ ಆಗಾಗ ಕಂಡು ಬಂದಿದೆ. ಬ್ರಹ್ಮಪುತ್ರ ನದಿಯಲ್ಲಿ ಪ್ಲಾಟನಿಸ್ಟ ಗ್ಯಾಂಜೆಟಿಕ್ ಪ್ರಭೇದದ ಡಾಲ್ಫಿನ್ ದೊರೆಯುತ್ತದೆ. ಇದರ ಉದ್ದ 2–3 ಮೀ. ಕಡಲಹಸು (ಡುಗಾಂಗ್ ಡುಗಾಂಗ್) ಸಾಮಾನ್ಯ ನೋಟಕ್ಕೆ ತಿಮಿಂಗಲವನ್ನೇ ಹೋಲುವ ಇದು 32 ಮೀ. ಉದ್ದ ಇದೆ. ಅಂಡಮಾನ್ ದ್ವೀಪಗಳಲ್ಲಿ ಮಲಬಾರ್ ಹಾಗೂ ಕಚ್ ತೀರಗಳಲ್ಲಿ ಇದು ಸಾಮಾನ್ಯ.



ಹಿಮಾಲಯನ್ ನ್ಯೂಟ್ (ಟೈಲಟೊಟ್ರೈಟಾನ್ ವೆರುಕೊಸಸ್)

ಅಳಿಲು

ಗುಮ್ಮಾಡಲು ಹಕ್ಕಿ



ಪೆಟ್ಟಿಗೆ ಮೀನು

ಪೆರಿಗ್ರೀನ್ ಗಿಡುಗ

ಬರಿಂಕ



ಬಣ್ಣದ ಬಾವಲಿ

ಮಲೆನಾಡಿನ ತೇಲುವ ಕಪ್ಪೆ

ನೀಲಿ ಬಾಲದ ಜೇನುಹಿಡುಕ

ನಾಗರಹಾವು

ಪ್ರಾಣಿವಿತರಣೆಯನ್ನು ವಿವರಿಸುವಾಗ ಸಾಮಾನ್ಯವಾಗಿ ಸ್ತನಿಗಳಷ್ಟೆ ಗಣನೆಗೆ ತೆಗೆದುಕೊಳ್ಳುವುದು ರೂಢಿ. ಆದರೆ ರೂಪ ವೈವಿಧ್ಯ ಕೇವಲ ಸ್ತನಿಗಳಿಗೆ ಮಾತ್ರ ಮೀಸಲು ಎಂದರ್ಥವಲ್ಲ. ಎಲ್ಲ ವರ್ಗದ ಪ್ರಾಣಿಗಳಲ್ಲಿ ವೈವಿಧ್ಯ ಇದೆ. ಭಾರತದಲ್ಲಿ ಉಳಿದ ವರ್ಗದ ಪ್ರಾಣಿಗಳು ಸ್ತನಿಗಳಷ್ಟೆ ವೈವಿಧ್ಯಮಯವಾಗಿವೆ. ಉದಾಹರಣೆಗೆ ಭಾರತದಲ್ಲಿ 2060 ಪಕ್ಷಿ ಪ್ರಭೇದಗಳಿವೆ. ಇವುಗಳ ಪೈಕಿ 350ಕ್ಕೂ ಹೆಚ್ಚು ಪಕ್ಷಿಗಳು ಚಳಿಗಾಲದಲ್ಲಿ ಉತ್ತರ ದೇಶಗಳಿಂದ ವಲಸೆ ಬರುತ್ತವೆ. ಪ್ರತಿ ಪ್ರಭೇದದಲ್ಲಿಯು ಹಲವಾರು ಉಪಪ್ರಭೇದಗಳಿವೆ. ಉಪಪ್ರಭೇದಗಳನ್ನು ಪರಿಗಣಿಸಿದರೆ ಭಾರತದಲ್ಲಿ 8000 ಕ್ಕೂ ಹೆಚ್ಚು ಬಗೆಯ ಪಕ್ಷಿಗಳಿರಬಹುದೆಂದು ಬಗ್ಗೆ ಪಕ್ಷಿ ತಜ್ಞರು ಅಂದಾಜಿಸಿದ್ದಾರೆ. ಉದಾಹರಣೆಗೆ ಭಾರತದಲ್ಲಿ ಕಾಗೆಗಳ ಎರಡು ಪ್ರಭೇದಗಳಿವೆ. ಟಿಟ್ ಪಕ್ಷಿಯ ಎರಡು ಪ್ರಭೇದಗಳಿವೆ. ಬ್ಯಾಬರ್‌ನ ಎಂಟು ಪ್ರಭೇದಗಳಿವೆ. ಥ್ರಶ್ ಪಕ್ಷಿಯ ಎರಡು ಪ್ರಭೇದಗಳಿವೆ. ಬುಲ್ ಬುಲ್ ಹಕ್ಕಿಯ ಒಂಬತ್ತು ಪ್ರಭೇದಗಳಿವೆ. ಇವುಗಳಲ್ಲಿ ಪಿಕ್ನೊ ನೋಟಸ್ ಲ್ಯೂಟಿಯೋಲಸ್ ದಕ್ಷಿಣ ಭಾರತ ಹಾಗೂ ಶ್ರೀಲಂಕಾಗಳಲ್ಲಿ ಮಾತ್ರ ಸಿಗುತ್ತದೆ. ಕೀಟ ಭಕ್ಷಕ ಪಕ್ಷಿ ರಾಬಿನ್ನಿನ ಎರಡು ಪ್ರಭೇದಗಳಿವೆ. ನೊಣಹಿಡುಕ ಪಕ್ಷಿಗಳ ನಾಲ್ಕು ಪ್ರಭೇದಗಳಿದ್ದು, ಅವುಗಳ ಪೈಕಿ ಬಿಳಿಚುಕ್ಕೆಯ ನೊಣ ಹಿಡುಕ ಗುಜರಾತ್, ಮಧ್ಯಪ್ರದೇಶ ಮತ್ತು ದಕ್ಷಿಣ ಭಾರತದಲ್ಲಿ ಮಾತ್ರ ವಾಸಿಸುತ್ತವೆ. ಕಳಿಂಗ ಪಕ್ಷಿ, ಗೀಜಗ, ಬೆಳೆದ ಓರಿಯಲ್, ಮೈನಾ, ಮುನಿಯ, ಗುಬ್ಬಚ್ಚಿ, ಸ್ಕೈಲಾರ್ಕ, ಪುಷ್ಪಕುಟಿಗ, ಕೋಗಿಲೆ, ಫೆಸೆಂಟ್, ಗಿಳಿ, ಜೇನುಭಕ್ಷಕ, ಗೂಬೆ, ಗಿಡುಗ, ರಣಹದ್ದು, ಡೇಗೆ, ಕಾಡುಕೋಳಿ, ಬಸ್ಟರ್ಡ, ಹಾರ್ನಬಿಲ್ ಮುಂತಾದ ಎಲ್ಲ ಗುಂಪಿನ ಪಕ್ಷಿಗಳು ಭಾರತದ ಒಂದಲ್ಲ ಒಂದು ಕಡೆ ದೊರೆಯುತ್ತವೆ. ನವಿಲು ಈ ದೇಶದ ವರ್ಣಮಯ ಪಕ್ಷಿ. ಎಲ್ಲ ಭಾಗಗಳಲ್ಲೂ ವಾಸಿಸುತ್ತದೆ. ಇದು ಭಾರತದ ರಾಷ್ಟ್ರಪಕ್ಷಿ. ಜಲವಾಸಿ ಪಕ್ಷಿಗಳಲ್ಲಿ ಕೂಡ ಎಲ್ಲ ಗುಂಪುಗಳ ಒಂದೆರಡು ಪ್ರಭೇದಗಳನ್ನು ಕಾಣಬಹುದು. ಇವುಗಳ ಪೈಕಿ ಹೆರಾನ್, ಈಗ್ರೆಟ್, ಫ್ಲೆಮಿಂಗೋ ಬಾತು, ಟೀಲ್, ಸ್ಟಾರ್ಕ್, ಐಬಿಸ್, ಸ್ಪೂನ್ ಬಿಲ್, ಪೆಲಿಕನ್ ಮುಂತಾದವು ಮುಖ್ಯವಾದವು. ಭಾರತದಲ್ಲಿ ಹಲವಾರು ಪಕ್ಷಿಧಾಮಗಳಿದ್ದು, ಸೈಬೀರಿಯ, ರಷ್ಯ ಹಾಗೂ ಉತ್ತರದ ಇತರ ದೇಶಗಳಿಂದ ವಲಸೆ ಬರುವ ಪಕ್ಷಿಗಳನ್ನು ಕೆಲವು ಋತುಗಳಲ್ಲಿ ಕಾಣಬಹುದು.

ಸರೀಸೃಪಗಳ ಎಲ್ಲ ಪ್ರಮುಖ ಜಾತಿಗಳು ಭಾರತದಲ್ಲಿವೆ. ಆಮೆಗಳ ಗುಂಪಿನ ಕಿಲೋನ್, ಟೆಸ್ಟುಡೊ, ಡರ್ಮೋಕಿಲಸ್ ಪ್ರಭೇದಗಳಿವೆ. 250 ಕ್ಕೂ ಹೆಚ್ಚು ಸರ್ಪ ಪ್ರಭೇದಗಳಿವೆ. ಇವುಗಳಲ್ಲಿ ಕಾಳಿಂಗ ಸರ್ಪ ಹಾಗೂ ನಾಗರಹಾವು ದಕ್ಷಿಣ ಭಾರತದ

ಟೆರ್ರಾಪಿನ್ (ಕಚುಗಾ ಕಚುಗಾ)



ಭಾರತದ ಗೋಸುಂಬೆ (ಕೆಮೆಲಿಯಾನ್ ಜೈಲಾನಿಕಸ್)

ಕಾಡುಗಳಲ್ಲಿ ವಾಸಿಸುತ್ತವೆ. ದಟ್ಟ ಅರಣ್ಯಗಳಲ್ಲಿ ಹೆಬ್ಬಾವು, ಕಟ್ಟಿನಹಾವು, ಇಮ್ಮಡಿಗ ಮುಂತಾದ ಹಾವುಗಳು ವಾಸಿಸುತ್ತವೆ. ಇವೇ ಗುಂಪಿಗೆ ಸೇರಿದ ಮೊಸಳೆಗಳು ಮುಖ್ಯವಾಗಿ ಕ್ರಾಕಡಿಲಸ್ ಪಾಲುಸ್ಟ್ರಿಸ್ ಮತ್ತು ಗೇವಿಯಾಲಿಸ್ ಗ್ಯಾಂಜೆಟಿಕ ವಾಸಿಸುತ್ತವೆ.

ಉಭಯಜೀವಿಗಳಲ್ಲಿ ಕೈಕಾಲು ರಹಿತ ಇಕ್‌ಥಿಯೋಫಿಸ್ ಪಶ್ಚಿಮ ಘಟ್ಟಗಳಲ್ಲಿವೆ. ಕಪ್ಪೆಗಳ ಹಲವು ಪ್ರಭೇದಗಳಿವೆ. ಗೂಳಿಕಪ್ಪೆ, ಮರಗಪ್ಪೆ, ನೆಲಗಪ್ಪೆ ಮುಂತಾದುವು ಉಭಯ ಜೀವಿಗಳ ಪೈಕಿ ಮುಖ್ಯವಾದುವು.

ನಿಕ್ಟಿಬೆಟ್ರಾಕಸ್ ಹುಸೇನಿ, ಕೃಷ್ಣಮೂರ್ತಿ ಸಂ.
(ಕುದುರೆಮುಖದಲ್ಲಿ ಕಂಡುಹಿಡಿದ ಹೊಸ ಮಂಡೂಕ ಪ್ರಭೇದ)

ಮೀನುಗಳಲ್ಲಿ ಭಾರತ ಮುಖ್ಯಸ್ಥಾನ ಪಡೆಯುತ್ತದೆ. ಮೀನಿನ ಎಲ್ಲ ಗಣಗಳು ಇಲ್ಲವೆ. ಮೀನುಗಾರಿಕೆ ಈ ದೇಶದ ಕರಾವಳಿ ಪ್ರದೇಶಗಳ ಲಕ್ಷಾಂತರ ಜನರ ಮುಖ್ಯ ಕಸುಬು. ಮೀನನ್ನು ರಫ್ತು ಮಾಡುವ ಪ್ರಮುಖ ದೇಶಗಳ ಪೈಕಿ ಭಾರತವು ಒಂದು. ದೈತ್ಯಶಾರ್ಕ ಮೀನುಗಳ ಪೈಕಿ ಸ್ಕೋಲಿಯೊಡಾನ್, ಸ್ಫೀಗೋಸ್ಟಿಮ, ಜೈಜೀನ, ಸಿಲ್ಲಿಯಮ್‌ಗಳೂ ರೇಮೀನುಗಳ ಪೈಕಿ ಪ್ರಿಸ್ಟಿಸ್, ಟ್ರೈಗಾನ್, ಎಲೆಕ್ಟ್ರಿಕ್‌ರೇ, ಟಾರ್ಪಿಡೊ ಮುಂತಾದುವು ದೊರೆಯುತ್ತವೆ. ಮೂಳೆ ಮೀನುಗಳ ಹಲವಾರು ಪ್ರಭೇದಗಳಿದ್ದು, ಅವುಗಳಲ್ಲಿ ಕೆಲವು ಸಿಹಿನೀರಿನಲ್ಲಿ, ಇನ್ನು ಕೆಲವು ಸಮುದ್ರದಲ್ಲಿ ವಾಸಿಸುತ್ತವೆ. ಇವುಗಳ ಪೈಕಿ ಲೇಬಿಯೋ, ಕಾಟ್ಲ, ಸಿರೈನ, ಮಿಸ್ಟಸ್, ವೆಲ್ಲಾಗೊ, ನೋಟಾಪ್ಟಿರಸ್, ಓಫಿಯೊಕೆಫಲಸ್ ಮುಂತಾದುವನ್ನು ಆಹಾರಕ್ಕಾಗಿ ಉಪಯೋಗಿಸಲಾಗುತ್ತದೆ. ಹಲವು ಮೀನುಗಳನ್ನು ಅವುಗಳ ವರ್ಣ ಮತ್ತು ಸುಂದರ ಶರೀರ ರಚನೆಯಿಂದಾಗಿ ಮತ್ಸ್ಯಾಗಾರಗಳಲ್ಲಿ ಸಾಕುತ್ತಾರೆ. ಭಾರತದ ಕೆಲವು ಮೀನುಗಳಿಂದ ಮೀನೆಣ್ಣೆ, ಮೀನು ಗೊಬ್ಬರ ಮುಂತಾದುವನ್ನು ತಯಾರಿಸಲಾಗುತ್ತಿದೆ. ವಿಷಯುಕ್ತ ಮೀನುಗಳಾದ ಮೈಲಿಯೋಬೇಟಸ್, ಸ್ಕ್ವಾಲಸ್ ಅಥವಾ ನಾಯಿ ಮೀನುಗಳು ಭಾರತದ ತೀರ ಪ್ರದೇಶಗಳಲ್ಲಿ ದೊರೆಯುತ್ತವೆ. ಅಕಶೇರುಕ ಮತ್ತು ಕಶೇರುಕಗಳ ಮಧ್ಯೆ ಕೊಂಡಿಯಂತಿರುವ ಬೆಲನೋಗ್ಲಾಸಸ್ ದಕ್ಷಿಣಭಾರತದ ಕಡಲತೀರಗಳಲ್ಲಿ ದೊರೆಯುತ್ತದೆ. ಆಂಫಿಯಾಕಿಸ್, ಮತ್ಸ ಸಮುದ್ರ ಕಾರಂಜಿಗಳು (ಸೀ ಸ್ಕ್ವರ್ಟ್) ಇಲ್ಲಿವೆ.

ಅಕಶೇರುಕಗಳ ಪೈಕಿ ಏಕಕೋಶಜೀವಿಗಳಿಂದ ಹಿಡಿದು ಕಂಟಕಚರ್ಮಿಗಳವರೆಗಿನ ಎಲ್ಲ ಗುಂಪುಗಳು ಭಾರತದಲ್ಲಿವೆ. ಭಾರತದ ಅಕಶೇರುಕಗಳು ವೈವಿಧ್ಯಮಯ. ಏಕಕೋಶಜೀವಿಗಳಲ್ಲಿ ಸ್ವತಂತ್ರವಾಗಿ ಜೀವಿಸುವ ಪ್ರಭೇದಗಳು ಗುಂಪಾಗಿ ಜೀವಿಸುವ ಪ್ರಭೇದಗಳು, ಪರತಂತ್ರಜೀವಿಗಳು ದೊರೆಯುತ್ತವೆ.

ಕಡಲ ತಾವರೆ, ಸೀ ಅನಮೋನ್‌ಗಳಲ್ಲಿ ಹಲವು ಪ್ರಭೇದಗಳಿವೆ. ದಕ್ಷಿಣ ಕಡಲ ತೀರಗಳಲ್ಲಿ ಹವಳದ ಪ್ರಾಣಿಗಳು ಹವಳದ ದಿಬ್ಬಗಳನ್ನೇ ನಿರ್ಮಿಸಿರುವುದನ್ನು ಕಾಣುತ್ತೇವೆ. ವಲಯವಂತಗಳಲ್ಲಿ ಪಾಲಿಕೀಟ ಗುಂಪಿನ ಹಲವು ಪ್ರಭೇದಗಳು, ವಿವಿಧ ಪ್ರಭೇದದ ಎರೆಹುಳುಗಳು, ಜಿಗಣೆಗಳು ಭಾರತದಲ್ಲಿವೆ. ಭಾರತದಲ್ಲಿ ಸಂದಿಪದಿಗಳ ಅಸಂಖ್ಯ ಪ್ರಭೇದಗಳಿಗೂ ಆವಾಸಸ್ಥಾನವಾಗಿದೆ. ಸಂದಿಪದಿಗಳ ಪೈಕಿ ಉಪಕಾರಿ ಹಾಗೂ ಅಪಕಾರಿ ಪ್ರಾಣಿಗಳಿವೆ. ಸೀಗಡಿ, ಲಾಬ್‌ಸ್ಟರ್ ಮತ್ತು ಏಡಿಗಳು ಮಾನವನ ಆಹಾರವಾಗಿದ್ದು, ಇವು ಮತ್ಸ್ಯಗಾರಿಕೆಯ ಪರಿಮಿತಿಯಲ್ಲಿ ಬರುತ್ತವೆ. ಭಾರತದ ಕೀಟಗಳು ವೈವಿಧ್ಯಮಯ, ಸಹಸ್ರಾರು ಪ್ರಭೇದಗಳು ಇವೆ. ಇವುಗಳ ಪೈಕಿ ರೇಷ್ಮೆಪತಂಗ, ಜೇನು, ಅರಗು ಕೀಟ ಉಪಕಾರಿಗಳಾದರೆ, ಸೊಳ್ಳೆ, ಚಿಗಟ, ಮುಂತಾದುವು, ರೋಗ ಹರಡುವ ಕೀಟಗಳು. ಮೃದ್ವಂಗಿಗಳ ಪೈಕಿ ಹಲವು ರೀತಿಯ ಶಂಖಗಳು ಮತ್ತು ಮುತ್ತುಗಳನ್ನು ಉತ್ಪಾದಿಸುವ ಪ್ರಭೇದಗಳು ಭಾರತದಲ್ಲಿವೆ. (ಎಸ್.ಎನ್.ಎಚ್.)

**ಭ್ರೂಣ ವಿಜ್ಞಾನ:** ಪ್ರಜನನ ಕ್ರಿಯೆಯ ಘಟ್ಟಗಳಾದ ಭ್ರೂಣದ ಹುಟ್ಟು ಅದರ ಬೆಳವಣಿಗೆ, ಹಾಗು ವಿಭೇದನೆ, ಅಂಗೋತ್ಪತ್ತಿ ಮುಂತಾದ ಬೆಳವಣಿಗೆಯ ವಿವಿಧ ಹಂತಗಳ ಅಭ್ಯಾಸ. ಒಂದು ಜೀವಿಯು ಮೊಟ್ಟೆ ಅಥವಾ ತಾಯಿಯ ದೇಹದಿಂದ

ಹೊರಬರುವ ಮುಂಚಿನ ಹಂತವನ್ನು ಭ್ರೂಣ ಎನ್ನಲಾಗಿದೆ. ವೀರ್ಯಾಣುವಿನಿಂದ ಫಲಿತವಾದ ಅಂಡಾಣುವು ಯುಗ್ಮವಾಗಿ, ಕೋಶವಿದಳನದ ಮೂಲಕ ಅನೇಕ ಹಂತಗಳನ್ನು ಹಾದು ಭ್ರೂಣವಾಗುವವರೆಗಿನ ಎಲ್ಲ ಜೈವಿಕ ಪ್ರಕ್ರಿಯೆಗಳೂ ಭ್ರೂಣ ವಿಜ್ಞಾನ ವಿಷಯದ ಪರಿಮಿತಿಯಲ್ಲಿ ಬರುತ್ತವೆ. ಏಕಕೋಶ ಜೀವಿಗಳ ಪ್ರಜನನ ಕ್ರಿಯೆ ಭಿನ್ನವಾಗಿದ್ದು, ಅವುಗಳ ಯುಗ್ಮ ವಿದಳನ ಹೊಂದದ ಕಾರಣ ಸಾಮಾನ್ಯವಾಗಿ ಭ್ರೂಣವಿಜ್ಞಾನದ ವ್ಯಾಪ್ತಿ ಬಹುಕೋಶ ಜೀವಿಗಳಿಗೆ ಸೀಮಿತವಾಗಿದೆ.

ಅನಾದಿಕಾಲದಿಂದಲೂ ಮಾನವನಿಗೆ ಭ್ರೂಣದ ಬೆಳವಣಿಗೆ, ಪ್ರಜನನಕ್ರಿಯೆಯ ಬಗೆಗೆ ಅಪಾರ ಕುತೂಹಲ ಇತ್ತು. ಗ್ರೀಕ್ ತತ್ತ್ವಜ್ಞಾನಿ, ದಾರ್ಶನಿಕ ಅರಿಸ್ಟಾಟಲ್ ಕ್ರಿ.ಪೂ. 384–322 ರಲ್ಲಿಯೇ ಭ್ರೂಣದ ಬಗೆಗೆ ತನ್ನ ವಿಷಯಸಂಗ್ರಹಣೆಯನ್ನು ದ ಜನರೇಶನ್ ಅನಿಮಾಲಮ್ ಮತ್ತು ದ ಹಿಸ್ಟರಿ ಅನಿಮಾಲಮ್ ಎಂಬ ಪುಸ್ತಕಗಳಲ್ಲಿ ದಾಖಲಿಸಿದ್ದಾನೆ. ಆತ ವೀರ್ಯ ಮತ್ತು ಋತುಸ್ರಾವದ ಮಿಲನ ಮತ್ತು ಹೆಪ್ಪುಗಟ್ಟುವಿಕೆಯಿಂದ ಭ್ರೂಣ ರೂಪು ಪಡೆಯುತ್ತದೆಂದು ಪ್ರತಿಪಾದಿಸಿದನಾದರೂ ಮುಂದೆ ಬಹಳ ಕಾಲದವರೆಗೂ ಈ ನಿಟ್ಟಿನಲ್ಲಿ ಹೆಚ್ಚಿನ ಜ್ಞಾನವರ್ಧನೆ ಕಾಣಲಿಲ್ಲ. ಸುಮಾರು ಕ್ರಿ.ಶ. 17ನೇ ಶತಮಾನದ ಹೊತ್ತಿಗೆ ಭ್ರೂಣವಿಜ್ಞಾನದ ಎರಡು ಮುಖ್ಯ ಸಿದ್ಧಾಂತಗಳು ಪ್ರತಿಪಾದನೆಗೊಂಡವು.

1) ಪೂರ್ವರೂಪಣ ವಾದ (ಥಿಯರಿ ಆಫ್ ಪ್ರಿಫಾರ್ಮೇಶನ್) : ಬಾನೆಟ್ ಮತ್ತು ಅವನ ಸಹಚರರು ಪ್ರತಿಪಾದಿಸಿದ ಈ ಸಿದ್ಧಾಂತದ ಪ್ರಕಾರ ಅಂಡಾಣುವಿನಲ್ಲಿ ಮೊದಲೇ ಅವ್ಯಕ್ತ ರೂಪದಲ್ಲಿ ಅಡಗಿರುವ ಭ್ರೂಣವು ಸೂಕ್ತ ವಾತಾವರಣ ದೊರೆತಲ್ಲಿ ತಾನೇತಾನಾಗಿ ವ್ಯಕ್ತರೂಪವನ್ನು ಪಡೆದು ಬೆಳೆಯುತ್ತದೆ. ಆಂಟೊನಿ ವಾನ್ ಲ್ಯುವೆನ್‌ಹಾಕ್‌ನ ಮತ್ತೊಂದು ಗುಂಪಿನ ಅಭಿಪ್ರಾಯದ ಪ್ರಕಾರ ಭ್ರೂಣ ಅವ್ಯಕ್ತವಾಗಿ ವೀರ್ಯಾಣುವಿನಲ್ಲಿ ಇರುತ್ತದೆ. ಇದರಿಂದಾಗಿ ಸ್ಪರ್ಮಿಸ್ಟ್ ಮತ್ತು ಓವಿಸ್ಟ್ ಎಂಬ ಎರಡು ಪಂಥಗಳು ಆದವು.

2) ಜೀವಾಂಕುರ ಸೃಷ್ಟಿ ವಾದ (ಥಿಯರಿ ಆಫ್ ಎಪಿಜೆನಿಸಿಸ್) : ಹದಿನೆಂಟನೆ ಶತಮಾನದ ಕೊನೆಯಲ್ಲಿ ಭ್ರೂಣವಿಜ್ಞಾನದ ಸಮಸ್ಯೆಗಳ ಬಗೆಗೆ ಹೆಚ್ಚು ತಾರ್ಕಿಕವಾದ ಯೋಚನೆಗಳು ಮೂಡಿಬಂದವು. ಅವುಗಳ ಫಲವಾಗಿ ಈ ಸಿದ್ಧಾಂತ ಹೊರಹೊಮ್ಮಿತು. ಕ್ಯಾಸ್ಪರ್ ಫ್ರೆಡ್‌ರಿಕ್ ವುಲ್ಫ್ (1733–94) ಎಂಬಾತ 1759 ರಲ್ಲಿ ಜೀವಾಂಕುರ ಸೃಷ್ಟಿ ವಾದಕ್ಕೆ ತಳಹದಿ ಹಾಕಿದ. ಭ್ರೂಣವು ಮೊದಲಿಗೆ ಒಂದೇ ತೆರನಾದ ಯಾವ ಭಿನ್ನಾಂಗಗಳೂ ತೋರ್ಪಡದ ದ್ರವ್ಯರಾಶಿಯಂಥ ವಸ್ತುವಿನಿಂದ ಮೂಡುತ್ತದೆ. ಈ ವಸ್ತು ಬೆಳೆದಂತೆ ಸಂಕೀರ್ಣ ರೂಪ ಪಡೆದು ಅನೇಕ ಅಂಗಾಂಗ ಮತ್ತು ಅವಯವಗಳಾಗಿ ರೂಪುಗೊಳ್ಳುತ್ತದೆ ಎಂಬುದನ್ನು ಆತ ಮೊತ್ತ ಮೊದಲಿಗೆ ಪ್ರಾಯೋಗಿಕವಾಗಿ ತೋರಿಸಿದ. ತಾನು ಪ್ರತಿಪಾದಿಸಿದ ಜರ್ಮ್ ಲೇಯರ್ ಸಿದ್ಧಾಂತ (ಜರ್ಮ್ ಲೇಯರ್ ಥಿಯರಿ) ದಿಂದ ಕಾರ್ಲ್ ಫಾನ್ ಬೇರ್ (1792–1876) ಆಧುನಿಕ ಭ್ರೂಣವಿಜ್ಞಾನದ ಪಿತೃ ಎನಿಸಿದ. ಅವನ ಪ್ರಕಾರ ವಿವಿಧ ಪ್ರಾಣಿಗಳ ದೇಹದಲ್ಲಿಯ ಯಾವುದೇ ಒಂದು ರಚನೆ ಒಂದು ನಿರ್ದಿಷ್ಟ ಪದರದಿಂದ ಮೂಡಿಬರುತ್ತದೆ. 1938–39 ರಲ್ಲಿ ಹುಟ್ಟಿಕೊಂಡ ಕೋಶಕವಾದ (ಜೀವಕೊಶ ಸಿದ್ಧಾಂತ) ಮೂಲಕ ಶ್ಲಿಡನ್ ಮತ್ತು ಶ್ವಾನ್ ಎಂಬ ವಿಜ್ಞಾನಿಗಳು ಭ್ರೂಣವಿಜ್ಞಾನಕ್ಕೆ ಹೊಸದೊಂದು ಆಯಾಮವನ್ನೇ ಒದಗಿಸಿಕೊಟ್ಟರು. ಭ್ರೂಣದ ರಚನೆಯಲ್ಲಿ ವಿವಿಧ ಜೀವಕೋಶಗಳ ಸ್ಥಳದ ಪಾತ್ರ ಏನೆಂಬುದನ್ನು ಈ ಸಿದ್ಧಾಂತ ತೋರಿಸಿಕೊಟ್ಟಿತು.

ಜೀವಾಂಕುರ ಸೃಷ್ಟಿವಾದದ ಪ್ರಕಾರ ಭ್ರೂಣದ ಯಾವುದೇ ವ್ಯಕ್ತ, ನಿರ್ದಿಷ್ಟ ರಚನೆಯನ್ನು ಹೊಂದಿರದ ಅಂಡಾಣುವು, ಮೂಲತತ್ವವಾದ ವೀರ್ಯಾಣುವಿನ ಸಂಯೋಗದಿಂದ ಉತ್ತೇಜಿತಗೊಂಡು ಅನೇಕ ಪ್ರಕ್ರಿಯೆಗಳ ಮೂಲಕ ಭ್ರೂಣವಾಗಿ ಬೆಳೆಯುತ್ತದೆ. ಸಮುದ್ರ ಅರ್ಚಿನ್‌ನ ಯುಗ್ಮದ ಬೆಳವಣಿಗೆಯನ್ನು ಅಭ್ಯಸಿಸಿದ ಹ್ಯಾನ್ಸ್‌ಡ್ರಿಶ್ ಎಂಬ ವಿಜ್ಞಾನಿ ಈ ಸಿದ್ಧಾಂತವನ್ನು ಬಲಪಡಿಸಿದ.

ಆಧುನಿಕ ಭ್ರೂಣವಿಜ್ಞಾನಿಗಳು ಅನೇಕ ಪ್ರಯೋಗಗಳ ಮೂಲಕ ಜೀವಾಂಕುರ ಸೃಷ್ಟಿ ವಾದವು ತಾರ್ಕಿಕವಾಗಿ ಹೆಚ್ಚು ಸರಿಯಾದುದೆಂದು ತೋರಿಸಿಕೊಟ್ಟಿದ್ದಾರೆ. ಅವರ ಅನೇಕ ಪ್ರಯೋಗಗಳಲ್ಲಿ ಕಪ್ಪೆ ಅಥವಾ ಅರ್ಚಿನ್‌ನ ಯುಗ್ಮಕೋಶವು ಮೊದಲ ವಿಭಜನೆಗೊಂಡ ಅನಂತರ ದೊರೆಯುವ ಎರಡು ಕೋಶಗಳನ್ನು ಸೂಕ್ಷ್ಮವಾಗಿ ಬೇರ್ಪಡಿಸಿದಾಗ ಕೆಲವೊಮ್ಮೆ ಎರಡೂ ಕೋಶಗಳೂ ಸ್ವಂತಂತ್ರವಾಗಿ ಸಂಪೂರ್ಣ ಭ್ರೂಣಗಳಾಗಿ ಬೆಳೆದವು. ಅನಂತರದ ಪ್ರಯೋಗಗಳಿದ ಈ ಎರಡು ಕೋಶಗಳು ಪೂರ್ಣ ಅಥವಾ ಅಪೂರ್ಣ ಭ್ರೂಣವಾಗಿ ಬೆಳೆಯುವುದು ಅವುಗಳನ್ನು ಯಾವ ಸಮತಲದಲ್ಲಿ ಬೇರ್ಪಡಿಸಲಾಯಿತು ಎಂಬುದರ ಮೇಲೆ ಆಧಾರವಾಗಿದೆ ಎಂದು ತಿಳಿದುಬಂದಿತು.

ಅನೇಕ ವೈಜ್ಞಾನಿಕ ಚಿಂತನೆಗಳಿಗೆ ದಾರಿಮಾಡಿಕೊಟ್ಟ ಸೂಕ್ಷ್ಮದರ್ಶಕಗಳ ಆವಿಷ್ಕಾರದ ಅನಂತರ ಒಂದು ಜೀವಿಯ ಎಲ್ಲ ಮೂಲಸತ್ವ, ಗುಣಧರ್ಮ, ರಚನೆ, ವರ್ತನೆ, ಅದರ ದೇಹದ ಕೋಶಗಳಲ್ಲಿರುವ ವರ್ಣತಂತುಗಳನ್ನೂ ಅವುಗಳು ಹೊಂದಿರುವ ವಂಶವಾಹಕಗಳನ್ನೂ (ಜೀನ್ಸ್) ಆಧರಿಸಿದೆ ಎಂದು ದೃಢಪಟ್ಟಿತು. ಪ್ರತಿ ಗುಣವು ಒಂದು ಜೀನ್‌ನಿಂದ ನಿರ್ಧರಿಸಲ್ಪಟ್ಟಿದೆ ಎಂದಾಗ ಹಿಂದೆ ಪ್ರತಿಪಾದಿಸಿದ ಭ್ರೂಣದಲ್ಲಿ ಮೂಡುವ ಪ್ರತಿಗುಣಧರ್ಮವೂ ಅದು ಅಂಡಾಣು ಹಾಗೂ ವೀರ್ಯಾಣುಗಳಿಂದ ಪಡೆಯುವ ಜೀನ್‌ಗಳ ಪ್ರಕೃತಿಯನ್ನು ಆಧರಿಸಿರುತ್ತದೆ.

ಭ್ರೂಣವಿಜ್ಞಾನದ ಅಧ್ಯಯನ ಮುಖ್ಯವಾಗಿ ಮೂರು ಶಾಖೆಗಳಲ್ಲಿ ನಡೆಯುತ್ತದೆ.

1) ವಿವರಣಾತ್ಮಕ ಭ್ರೂಣವಿಜ್ಞಾನ : ಮೂಲತಃ ಇದು ವಿವಿಧ ಜೀವ ಪ್ರಭೇದಗಳಲ್ಲಿ ಭ್ರೂಣದ ಹುಟ್ಟು ಮತ್ತು ಬೆಳವಣಿಗೆಯನ್ನು ಅಧ್ಯಯನ ಮಾಡುವುದು ಮತ್ತು ದಾಖಲಿಸುವುದನ್ನು ಒಳಗೊಂಡಿದೆ. ಅನಾದಿಕಾಲದಿಂದ ಮಾನವನ ಕುತೂಹಲಕ್ಕಿದು ಗ್ರಾಸವನ್ನೊದಗಿಸಿದೆ. ಅರಿಸ್ಟಾಟಲ್ ಆದಿಯಾಗಿ ಅನೇಕ ವಿಜ್ಞಾನಿಗಳು ಬೇರೆ ಬೇರೆ ಪ್ರಾಣಿಗಳಲ್ಲಿ ಭ್ರೂಣದ ಬೆಳವಣಿಗೆಯನ್ನು ಅಧ್ಯಯನ ಮಾಡಿದ್ದಾರೆ. ಇತ್ತೀಚೆಗೆ ಆಧುನಿಕ ಭ್ರೂಣವಿಜ್ಞಾನಿಗಳು ಅಂಗಚ್ಛೇದನೆ ಮುಂತಾದ ವಿಧಾನಗಳ ಮೂಲಕ ಈ ಅಧ್ಯಯನ ಪ್ರಕಾರದ ವಿಸ್ತಾರ ಹಾಗೂ ಆಳವನ್ನು ಹೆಚ್ಚಿಸಿದ್ದಾರೆ.

2) ತುಲನಾತ್ಮಕ ಭ್ರೂಣವಿಜ್ಞಾನ : ಒಂದಕ್ಕಿಂತ ಹೆಚ್ಚು ಪ್ರಭೇದಗಳ ಭ್ರೂಣದಿಂದ ಬೆಳವಣಿಗೆಯನ್ನು ತುಲನಾತ್ಮಕವಾಗಿ ವಿಶ್ಲೇಷಿಸಿ ಅಧ್ಯಯನ ಮಾಡುವುದು. ಈ ಅಧ್ಯಯನವು ಜೀವ ವಿಜ್ಞಾನದ ಬೆನ್ನೆಲುಬಾದ ವಿಕಾಸದಿಂದ ಒಂದರಿಂದ ಮತ್ತೊಂದು ಜೀವಿ ಮೂಡಿಬಂದ ಬಗೆ, ಅವುಗಳ ನಡುವಣ ಸಾಮೀಪ್ಯ, ಹೋಲಿಕೆ, ಸಂಬಂಧ, ಮುಂತಾದ ವಿಷಯಗಳ ಮೇಲೆ ಹೆಚ್ಚು ಬೆಳಕು ಬೀರುತ್ತದೆ. ಕಾರ್ಲ್ ಫಾನ್ ಬೇರ್‌ನ ರಿಕ್ಯಾಪ್ಟುಲೇಶನ್ ಅಥವಾ ಬಯೋಜೆನೆಟಿಕ್ ಸಿದ್ಧಾಂತದ ಪ್ರಕಾರ ಮೇಲ್‌ಸ್ತರದ ಹಾಗೂ ಕೆಳಸ್ತರದ ಪ್ರಾಣಿಗಳ ಭ್ರೂಣಗಳು ಬೆಳವಣಿಗೆಯ ಆರಂಭದ ಹಂತದಲ್ಲಿ ಹೊರನೋಟಕ್ಕೆ ಹಾಗು ರಚನೆಯಲ್ಲಿ ಹೆಚ್ಚಿನ ವ್ಯತ್ಯಾಸ ಹೊಂದಿರುವುದಿಲ್ಲ. ಬೆಳವಣಿಗೆ ಮುಂದುವರಿದಂತೆ ವಿಕಸನ ಪಥದಲ್ಲಿ ಅವುಗಳ ಸ್ಥಾನದ ಆಧಾರದ ಮೇಲೆ ಅವುಗಳ ರಚನೆ ಬೇರೆಯಾಗುತ್ತ ಹೋಗುತ್ತದೆ. ತುಲನಾತ್ಮಕ ಭ್ರೂಣವಿಜ್ಞಾನದ ಅಧ್ಯಯನ ಕೆಲಮಟ್ಟಿಗೆ ಈ ಸಿದ್ಧಾಂತಕ್ಕೆ ಪುಷ್ಟಿಕೊಡುತ್ತದೆ.

3) ಪ್ರಾಯೋಗಿಕ ಭ್ರೂಣವಿಜ್ಞಾನ : ಮೇಲಿನ ಎರಡು ರೀತಿಯ ಅಧ್ಯಯನಗಳಿಂದಲೇ ಭ್ರೂಣದ ಬೆಳವಣಿಗೆ ಮತ್ತು ವರ್ತನೆಯ ಬಗ್ಗೆ ಸಂಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ಹಲವಾರು ಪ್ರಯೋಗಗಳಿಂದ ಭ್ರೂಣದ ಬೆಳವಣಿಗೆಯ ವಿವಿಧ ಮಜಲುಗಳನ್ನು ವಿಷದವಾಗಿ ಶೃತಪಡಿಸಬಹುದು. ಇಂತಹ ಪ್ರಯೋಗಗಳಿಂದ ಭ್ರೂಣದ ಬೆಳವಣಿಗೆಯಲ್ಲಿ ಕಂಡುಬರುವ ಅನೇಕ ವೈಚಿತ್ರ್ಯಗಳನ್ನು ಅರ್ಥಮಾಡಿಕೊಳ್ಳಬಹುದು. ಜೀವಿಯ ದೇಹದ ಪ್ರತಿಯೊಂದು ಅಂಗವೂ ಭ್ರೂಣದ ಒಂದು ನಿರ್ದಿಷ್ಟ ಭಾಗದಿಂದ ಮೂಡಿಬರುತ್ತದೆ ಎಂಬ ವಿಲ್‌ಹೆಲ್ಮ್ ರೂಕ್ಸನ ಸಿದ್ಧಾಂತದಿಂದ ಹಿಡಿದು ದೇಹದ ರಚನೆಯಲ್ಲಿ ಕಂಡುಬರುವ ವಿವಿಧ ಅಂಗಗಳ ವ್ಯವಸ್ಥಿತ (ಆರ್ಗನೈಜೇಶನ್ ಆಫ್ ಬಾಡಿಪಾರ್ಟ್ಸ್) ವನ್ನು ಕುರಿತ ಹ್ಯಾನ್ಸ್ ಸ್ಪೀಮನ್ ಮತ್ತು ಹಿಲ್ದೆ ಮ್ಯಾನ್‌ಗೋಲ್ಡ್‌ರ ಸಿದ್ಧಾಂತದವರೆಗೆ ಎಲ್ಲವೂ ಪ್ರಾಯೋಗಿಕ ಭ್ರೂಣವಿಜ್ಞಾನ ಅಧ್ಯಯನದ ಮೂಲಕ ಪ್ರತಿಪಾದನೆಗೊಂಡಿವೆ.

ಪ್ರತಿಜೀವಿಯಲ್ಲೂ ಭ್ರೂಣದ ಹುಟ್ಟು, ರಚನೆ ಹಾಗೂ ಬೆಳವಣಿಗೆ ಒಂದು ನಿರ್ದಿಷ್ಟ ರೀತಿಯದ್ದಾಗಿ ಇರುತ್ತದೆ. ಜನನಾಂಗಗಳಲ್ಲಿ ಉತ್ಪತ್ತಿಯಾಗುವ ವೀರ್ಯಾಣು ಮತ್ತು ಅಂಡಾಣುಗಳು ಮಿಲನಗೊಂಡು ಗರ್ಭಾಂಕುರವಾಗುವುದು ಭ್ರೂಣದ ಸೃಷ್ಟಿಗೆ ಆಧಾರ. ಹೀಗೆ ಫಲಿತಗೊಂಡ ಯುಗ್ಮಕೋಶವು ವಿಶಿಷ್ಟ ರೀತಿಯ ಕೋಶವಿದಳನದಿಂದ ಮೊದಲಿಗೆ ಎರಡಾಗಿ, ಅನಂತರ ನಾಲ್ಕಾಗಿ ವಿಭಜನೆಗೊಳ್ಳುತ್ತ ಹೋಗುತ್ತದೆ. ದೇಹದ ಸಾಮಾನ್ಯ ಬೆಳವಣಿಗೆಯಲ್ಲಿನ ಕೋಶ ವಿಭಜನೆಗಿಂತ ಈ ಕ್ರಿಯೆ ಭಿನ್ನವಾಗಿದೆ. ಇಲ್ಲಿ ಎರಡು ವಿಭಜನೆಗಳ ನಡುವೆ ಕಾಲಾವಕಾಶವಾಗಲಿ, ಪ್ರತಿವಿಭಜನೆಯ ಅನಂತರ ದೊರೆತ ಕೋಶಗಳು ಗಾತ್ರದಲ್ಲಿ ಬೆಳೆಯುವುದಾಗಲಿ ಇರುವುದಿಲ್ಲ. ಕೋಶಿಕಾವಿದಳನದ ನಮೂನೆಯು ಜೀವವಿಕಾಸ ಮಾರ್ಗದಲ್ಲಿ ಜೀವಿಗಳಿಗಿರುವ ಪರಸ್ಪರ ಸಂಬಂಧ ಹಾಗೂ ಅಂಡಾಣುವಿನಲ್ಲಿ ಶೇಖರವಾಗಿರುವ ಬಂಡಾರದ ಪ್ರಮಾಣ – ಈ ಎರಡು ಅಂಶಗಳನ್ನು ಆಧರಿಸಿ ಬೇರೆ ಬೇರೆ ಪ್ರಭೇದಗಳಲ್ಲಿ ವಿಭಿನ್ನವಾಗಿರುತ್ತದೆ. ಈ ವಿದಳನದಿಂದ ಕೋಶಗಳ ಸಂಖ್ಯೆ ಹೆಚ್ಚಿದಂತೆ ಭ್ರೂಣ ಒಂದು ಚೆಂಡಿನಾಕಾರವನ್ನು ತಳೆಯುತ್ತದೆ. ಕ್ರಮೇಣ ಅದರ ನಡುವೆ ದ್ರವದಿಂದ ತುಂಬಿದ ಒಂದು ಕಂದಕ ಕಂಡುಬರುತ್ತದೆ. ಇದನ್ನು ಕೋಶಿಕಾಕಂದಕ ಘಟ್ಟ (ಬ್ಲಾಸ್ಟುಲ) ಎನ್ನುತ್ತಾರೆ. ಈ

ಬ್ಲಾಸ್ಟುಲದ ಕೋಶಗಳು ಮುಂದೆ ನಿರ್ದಿಷ್ಟ ರೀತಿಯಲ್ಲಿ ಚಲಿಸಿ ಪ್ರಾಣಿಯ ಪ್ರಭೇದಕ್ಕನುಗುಣವಾಗಿ, ಎರಡು ಅಥವಾ ಮೂರು ಪದರಗಳಲ್ಲಿ ಜೋಡಣೆಗೊಳ್ಳುತ್ತವೆ. ಇದು ಗ್ಯಾಸ್ಟ್ರುಲಾ ಹಂತ. ಮುಂದಿನ ಹಂತದಲ್ಲಿ ಬೇರೆ ಬೇರೆ ಪದರಗಳಿಂದ ವಿವಿಧ ಅಂಗಾಂಗಗಳು ಮೂಡಿಬರುತ್ತವೆ. ಉದಾ: ಚರ್ಮ, ನರಮಂಡಲ, ಕೂದಲು ಮುಂತಾದವು ಹೊರಪದರದಿಂದ, ಆಹಾರನಾಳ ಮತ್ತು ಸಂಬಂಧಿಸಿದ ಗ್ರಂಥಿಗಳು ಒಳಪದರದಿಂದ ಮೂಡಿದರೆ ಸ್ನಾಯು, ಮೂಳೆ, ರಕ್ತ, ರಕ್ತನಾಳಗಳು ಮುಂತಾದವು ಮಧ್ಯದ ಪದರದಿಂದ ಬೆಳೆಯುತ್ತವೆ. ಕೆಳಸ್ತರದ ವಲಯವಂತಗಳಿಂದ ಹಿಡಿದು ಮಾನವನವರೆಗೆ ಭ್ರೂಣದ ಬೆಳವಣಿಗೆ ಹೆಚ್ಚುಕಡಿಮೆ ಹೀಗೇ ಆಗುತ್ತದೆ.

ಸಸ್ಯಗಳಲ್ಲಿ ಭ್ರೂಣದ ಹುಟ್ಟಿನ ಜೊತೆಜೊತೆಯಲ್ಲಿಯೇ ಬೀಜಾಂತಸಾರ (ಎಂಡೋಸ್ಪರ್ಮ್) ದ ಬೆಳವಣಿಗೆಯೂ ಆರಂಭವಾಗುತ್ತದೆ. ಮುಂದೆ ಇದು ಬೆಳೆಯುವ ಭ್ರೂಣಕ್ಕೆ ಆಹಾರದ ಮೂಲವಾಗುತ್ತದೆ. ಇತ್ತೀಚೆಗೆ ಹುಟ್ಟಿಕೊಂಡ ಅಂಗಾಂಶಕೃಷಿಯಂತಹ ಅನೇಕ ವಿಶಿಷ್ಟ ಅಧ್ಯಯನದ ಪ್ರಕಾರಗಳು ಭ್ರೂಣವಿಜ್ಞಾನ ವಿಷಯದ ಆಳ ಮತ್ತು ಆಯಾಮವನ್ನು ಹೆಚ್ಚಿಸಿವೆ. (ಟಿ.ಆರ್.ಎಸ್.)

ವಿವರಣಾತ್ಮಕ ಭ್ರೂಣವಿಜ್ಞಾನದಲ್ಲಿದ್ದ ಆಸಕ್ತಿ ಪ್ರಾಯೋಗಿಕ ಭ್ರೂಣವಿಜ್ಞಾನದ ಕಡೆಗೆ ತಿರುಗಿದಂತೆ ಅಕಶೇರುಕ ಮತ್ತು ಕಶೇರುಕ ಭ್ರೂಣವಿಜ್ಞಾನಗಳ ನಡುವೆ ಇದ್ದ ಹಳೆಯ ಭಿನ್ನ ಭೇದಗಳು ಮರೆಯಾಗಿವೆಯಾದರೂ ಅಕಶೇರುಕಗಳ ಬೆಳವಣಿಗೆಯ ಅಭ್ಯಾಸ ಕೆಲವು ವಿಶಿಷ್ಟ ಲಕ್ಷಣಗಳನ್ನು ಪರಿಚಯಮಾಡಿಕೊಟ್ಟು ಭ್ರೂಣವಿಜ್ಞಾನದ ಹಲವಾರು ಕ್ಲಿಷ್ಟ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಭ್ರೂಣದ ಬೆಳವಣಿಗೆಯ ರೀತಿಗೂ ಭ್ರೂಣದ ಪರಿಸರಕ್ಕೂ ನಿಕಟ ಸಂಬಂಧವಿದೆ. ಕೇವಲ ವಯಸ್ಕ ಪ್ರಾಣಿಗಳು ಮಾತ್ರವಲ್ಲದೆ ಅವುಗಳ ಭ್ರೂಣ ಮತ್ತು ಡಿಂಬಗಳು ಕೂಡ ತಮ್ಮ ಪರಿಸರಕ್ಕೆ ಹೊಂದಿಕೊಂಡಿರಬೇಕಾಗುತ್ತದೆ. ಆದರೆ ಒಂದು ಪ್ರಾಣಿ ತಾನು ವಯಸ್ಕ ಸ್ಥಿತಿಯಲ್ಲಿ ಬದುಕುಳಿಯಲಾರದ ಪರಿಸರದಲ್ಲಿ ಮೊಟ್ಟೆಯನ್ನಿಡುವುದಾದರೆ ಹೊರಬರುವ ಮರಿ ಅಥವಾ ಡಿಂಬ ಆ ನಿರ್ದಿಷ್ಟ ಪರಿಸರಕ್ಕೆ ಹೊಂದಿಕೊಂಡು ಬೆಳೆಯುವ ಸಾಮರ್ಥ್ಯಗಳಿಸಿಕೊಳ್ಳುತ್ತದೆ. ಇಂಥ ಡಿಂಬದಿಂದ ಪ್ರಬುದ್ಧ ಪ್ರಾಣಿ ಬೆಳೆದು ತನ್ನ ಸಹಜನೆಲೆಯಲ್ಲಿ ಜೀವನ ನಡೆಸುವಂತಾಗುವ ಮುನ್ನ ಡಿಂಬದ ರೂಪಪರಿವರ್ತನೆ ಆಗಬೇಕಾಗುತ್ತದೆ. ಕೆಲವು ಸಾರಿ ಭ್ರೂಣ ಪ್ರಬುದ್ಧಾವಸ್ಥೆಯನ್ನು ತಲುಪಲು ಅದು ಅನೇಕ ಡಿಂಬ ಹಂತಗಳ ಮೂಲಕ ಹಾದು ಬೆಳೆಯಬೇಕಾಗುತ್ತದೆ. ಇಲ್ಲಿ ಹೊಂದಾಣಿಕೆಯ ಸಂಬಂಧ ಇರುವುದನ್ನು ಕಾಣಬಹುದು.



ಬೆಳೆಯುತ್ತಿರುವ ಕೋಳಿ ಮೊಟ್ಟೆ ಭ್ರೂಣ :72 ಗಂಟೆಗಳ ನಂತರ 120 ಗಂಟೆಗಳ ನಂತರ 8 ನೇ ದಿನ

ವಿವಿಧ ಅಕಶೇರುಕಗಳಲ್ಲಿ ಅನೇಕ ರೀತಿಯ ಡಿಂಬಗಳುಂಟು. ಮೊದಲ ನೋಟಕ್ಕೆ ಇವು ತೀರ ಭಿನ್ನ ಎಂದು ಕಂಡುಬಂದರೂ ಇವುಗಳ ರೂಪಪರಿವರ್ತನೆಯಲ್ಲಿ ಏಕರೂಪತೆಯನ್ನು ಕಾಣಬಹುದು. ಬಹುಪಾಲು ಪ್ರಾಣಿಗಳು ಕಡಲ ನೀರಿನಲ್ಲಿ ಅಥವಾ ಸಿಹಿನೀರಿನಲ್ಲಿ ಅಥವಾ ಮೊಟ್ಟೆಯೊಳಗಿನ ದ್ರವಮಾಧ್ಯಮದಲ್ಲಿ ಬೆಳೆಯುತ್ತವೆ. ಒಟ್ಟಿನಲ್ಲಿ ಇವುಗಳ ಬೆಳವಣಿಗೆಗೆ ದ್ರವಮಾಧ್ಯಮ ಅಗತ್ಯ. ಏಕೆಂದರೆ ಭ್ರೂಣದ ವಿವಿಧ ಭಾಗಗಳಿಗೆ ಅಗತ್ಯವಾಗುವ ಶಕ್ತಿಯನ್ನು ಪೋಷಕಾಂಶಗಳನ್ನು ಒದಗಿಸುವ ಅನಿಲಗಳು ಮತ್ತು ಲವಣಗಳು ದ್ರವರೂಪದಲ್ಲಿ ಅಭಿಸರಣ ಕ್ರಿಯೆಯ ಮೂಲಕ ಮಾತ್ರ ಪಸರಿಸಲು ಸಾಧ್ಯ. ಅಕಶೇರುಗಳ ಆದಿಮ ಮಾದರಿಯ ಡಿಂಬ ಸರಳ ಗ್ಯಾಸ್ಟ್ರುಲಾವಸ್ಥೆಯಿಂದ ಅವತರಿಸಬಹುದಾದ ಶಿಲಿಕಾಂಗಧಾರಿ ಈಜುವ ಡಿಂಬ. ಡಿಂಬದ ರೂಪ ಪರಿವರ್ತನೆಯಲ್ಲಿ ನಿರ್ದಿಷ್ಟವಾದ ಸೂತ್ರಗಳನ್ನು ಹಾಗೂ ಪ್ರಕ್ರಿಯೆಗಳನ್ನು ಕಾಣಬಹುದು. ಎಲ್ಲ ಪ್ರಾಣಿವಂಶಗಳಲ್ಲಿಯೂ ಇವು ಕಂಡುಬರುತ್ತವೆ. ಭಿನ್ನ ಪರಿವೃದ್ಧಿ, ಭಾಗಗಳ ಕಳೆತ, ನಿರಂತರ ಏಕರೀತಿಯ ಪರಿವೃದ್ಧಿ ಹಾಗೂ ಕೋಶ ಮತ್ತು ಅಂಗಾಂಶ ವಿಭೇಧೀಕರಣಗಳು ಡಿಂಬದ ರೂಪ ಪರಿವರ್ತನೆಯಲ್ಲಿ ಕಂಡುಬರುವ ಕೆಲವು ಮುಖ್ಯ ಘಟನೆಗಳು.

ಮುಂದೆ ಕಾಣಿಸಿಕೊಳ್ಳುವ ಅಂಗಾಂಗಗಳ ಆದ್ಯಾಂಗಗಳು ರೂಪಗೊಳ್ಳುವ ಭಾಗದಲ್ಲಿ ಕೋಶ ವಿಭಜನೆಯ ವೇಗ ತೀವ್ರಗೊಳ್ಳುವುದೇ ಭಿನ್ನ ಪರಿವೃದ್ಧಿಯ ಲಕ್ಷಣ. ಅಂತರಾವಸ್ಥೆ ಮತ್ತು ವಿಭಜನೆಯ ಕಾಲದಲ್ಲಿ ತುಲನಾತ್ಮಕವಾಗಿ ಕೋಶಸಂಖ್ಯೆಯನ್ನು ಅಭ್ಯಸಿಸುವುದರಿಂದ ವೃದ್ಧಿಯನ್ನು ಗುರುತಿಸಬಹುದು. ವಿಭೇಧೀಕರಣಗೊಳ್ಳುತ್ತಿರುವ ಭ್ರೂಣದ ಕೋಶಗಳು ವೈಯಕ್ತಿಕ ಚಲನಸಾಮರ್ಥ್ಯ ಕಳೆದುಕೊಂಡಿಲ್ಲದಿರುವುದರಿಂದ ನೆರೆಯ ವಲಯಗಳಿಂದ ನಡೆಯುವ ಕೋಶಗಳ ವಲಸೆಯಿಂದ ವೃದ್ಧಿ ತೀವ್ರಗೊಳ್ಳಬಹುದು. ದ್ರವರೂಪದಲ್ಲಿ ಲವಣಗಳನ್ನು ಮತ್ತು ಪೋಷಕಾಂಶಗಳನ್ನು ಹೀರಿಕೊಳ್ಳುವುದರ ಮೂಲಕ ಸಹ ಪರಿವೃದ್ಧಿ ತೀವ್ರಗೊಳ್ಳಬಹುದು. ಕೆಲವೊಮ್ಮೆ ಇದಕ್ಕೆ ವಿರುದ್ಧವಾಗಿ ಕೆಲವು ಪ್ರದೇಶಗಳಲ್ಲಿ ಬೆಳವಣಿಗೆ ಪಾರ್ಶ್ವಿಕವಾಗಿ ಅಥವಾ ಪೂರ್ಣವಾಗಿ ಸ್ಥಗಿತಗೊಳ್ಳಬಹುದು. ಈ ಎರಡೂ ಕ್ರಿಯೆಗಳು ಪರಿವೃದ್ಧಿಯ ದರವನ್ನು ನಿರ್ಧರಿಸುವ ಅಂಶಗಳು. ಸ್ವಲ್ಪಮಟ್ಟಿಗೆ ಇವಕ್ಕೂ ಇವುಗಳ ತಳಿ ವಿಧಾನಕ್ಕೂ ಸಂಬಂಧವಿದ್ದು ಈ ಕ್ರಿಯೆಗಳು ನಡೆಯುವ ಕಾಲ ಅವುಗಳ ಪ್ರಾಮುಖ್ಯವನ್ನು ನಿರ್ಧರಿಸುತ್ತದೆ. ಬೆಳವಣಿಗೆಯಲ್ಲಿ ಸಂಕಷ್ಟ ಕಾಲಗಳಿದ್ದು, ಆ ಕಾಲದಲ್ಲಿ ಮಾತ್ರ ಬೆಳವಣಿಗೆಯ ಬದಲಾವಣೆಗಳು ಪ್ರಭಾವ ಬೀರಬಹುದು. ಅನಂತರದ ಘಟನೆಗಳು ಇದನ್ನು ಅವಲಂಬಿಸುವ ಅನೇಕ ಉದಾಹರಣೆಗಳಿವೆ. ಭಿನ್ನ ಪರಿವೃದ್ಧಿ ಪ್ರಕ್ರಿಯೆ ಅಪ್ರತ್ಯಕ್ಷ ಬೆಳವಣಿಗೆಯಂಥ ರೂಪಪರಿವರ್ತನೆಗೆ ಮಾತ್ರ ಮೀಸಲಾಗಿದೆ ಎಂಬುದೇನಿಲ್ಲ. ನೇರವಾಗಿ ಬೆಳೆಯುವ ಪ್ರಾಣಿಗಳಲ್ಲಿಯೂ ನಡೆಯಬಹುದು.

ರೂಪಪರಿವರ್ತನೆಯ ಕಾಲಕ್ಕೆ ಅಂಗಾಂಗಗಳ ಕಳೆತ ನಡೆಯುತ್ತದೆ ಎಂದು ಸಾಮಾನ್ಯವಾಗಿ ಹೇಳಿದರೂ ಇದು ವಾಸ್ತವಕ್ಕಿಂತ ಸಾಪೇಕ್ಷಿಯವೆಂದೇ ಹೇಳಬೇಕು. ಒಂದು ಡಿಂಬದ ತತ್ಕಾಲದ ಜೀವನಕ್ಕೆ ಅಗತ್ಯವಾಗುವ ತಾತ್ಕಾಲಿಕ ಅಂಗಾಂಗಗಳು ಅದು ಪ್ರಬುದ್ಧ ಪ್ರಾಣಿಯಾಗಿ ಬೆಳೆದಾಗ ಕೆಲಸಕಾರ್ಯಗಳನ್ನು ಪೂರೈಸಲಾಗದೆ ರೂಪಪರಿವರ್ತನೆಯ ಕಾಲದಲ್ಲಿ ಕಳಚಿಕೊಂಡು ಕಳೆದುಹೋಗಬಹುದು. ಇಲ್ಲವೆ ಭಕ್ಷಾಣುಕೋಶಗಳಿಂದ ಭಕ್ಷಿಸಲ್ಪಟ್ಟು ಅಥವಾ ಕಿಣ್ವಲಯಕಗಳ ಪ್ರಭಾವಕ್ಕೆ ಸಿಕ್ಕು ಕಣ್ಮರೆಯಾಗಬಹುದು. ಕೆಲವೊಮ್ಮೆ ಈ ಅಂಗಾಂಗಗಳ ರಚನೆಯಲ್ಲಿ ಪಾತ್ರವಹಿಸುವ ಕೋಶಗಳು ನಿರ್ವಿಭೇದೀಕರಣಗೊಂಡು ಬೇರೆ ಅಂಗಾಂಗಗಳ ರಚನೆಯಲ್ಲಿ ಭಾಗವಹಿಸಬಹುದು.

ನೇರವಾದ ಭ್ರೂಣದ ಬೆಳವಣಿಗೆಯಲ್ಲಿಯಾಗಲಿ ರೂಪಪರಿವರ್ತನೆಯಲ್ಲಾಗಲಿ ನಿರಂತರ ಏಕರೀತಿಯ ಲಯಬದ್ಧ ಪರಿವೃದ್ಧಿಯ ಮೂಲಕ ಹೊಸ ಆದ್ಯಾಂಗಗಳು ನಿರ್ಮಾಣವಾಗುತ್ತಿರಬಹುದು. ಆಗ ಕೋಶೀಯ ಹಾಗೂ ಅಂಗಾಂಶೀಯ ವಿಭೇದೀಕರಣಗಳು ನಡೆಯುತ್ತವೆ. ಕೋಶಗಳು ಪದರಗಳಾಗುವುವು. ವಿವಿಧ ಅಂಗಾಂಶ ಪ್ರರೂಪಗಳಿಗೆ ಹೊಂದಿಕೊಳ್ಳುವ ಸಲುವಾಗಿ ಕೋಶ ಆಕಾರದ ಬದಲಾವಣೆಯಾಗುವುದು. ಕೋಶದ್ರವ್ಯದಲ್ಲಿ ಕಣಗಳು, ತಂತುಕಗಳೇ ಮುಂತಾದ ವಿಶೇಷ ರಚನೆಗಳ ನಿಕ್ಷೇಪಣ ಮುಂತಾದ ಕ್ರಿಯೆಗಳೇ ವಿಭೇದೀಕರಣದಲ್ಲಿ ಪಾಲ್ಗೊಳ್ಳುವ ಪ್ರಕ್ರಿಯೆಗಳು.

ಹೀಗೆ ಆಧುನಿಕ ಭ್ರೂಣ ವಿಜ್ಞಾನ ಶೋಧನೆಗಳು ಪ್ರಾಣಿಗಳ ರಚನಾ ಬೆಳವಣಿಗೆಯ ಮೇಲೆ, ಪ್ರಾಣಿಗಳು ನಿರ್ವಹಿಸುವ ವಿವಿಧ ಕ್ರಿಯೆಗಳ ಮೇಲೆ, ವರ್ಗ ಸಂಬಂಧಗಳ ಮೇಲೆ ಹಾಗೂ ವೈಯಕ್ತಿಕ ಮತ್ತು ಗುಂಪುಗಳ ನಡುವಿನ ವಂಶಸಂಬಂಧಗಳ ಮೇಲೆ ಹೊಸ ಬೆಳಕು ಚೆಲ್ಲಿವೆ. ಏಕಕೋಶೀಯಅಂಡ ಜಟಿಲವಾದಅಂಗ ಬಹುಕೋಶಜೀವಿಯಾಗಿ ಪರಿವರ್ತನೆಗೊಳ್ಳುವುದು ಜೀವಿಯ ಚಟುವಟಿಕೆಗಳು ಅಭಿವ್ಯಕ್ತಿಗೊಳ್ಳುವುದರ ಪ್ರತೀಕ. ಇದರ ಅಭ್ಯಾಸ ಈ ಜೀವಿಗಳ ಸ್ವಭಾವವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅತ್ಯುತ್ತಮ ಅವಕಾಶವನ್ನು ಒದಗಿಸುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

(ಎಚ್.ಬಿ.ಡಿ:ಎಚ್.ಎಚ್.ಎಸ್.)

# ಮ

**ಮಂಗ, ಬಾಲವಿಲ್ಲದ:** ಪ್ರೈಮೇಟ್ ಗಣದ ಆಂತ್ರಪ್ರಾಯ್ಡಿಯ ಗುಂಪಿಗೆ ಸೇರಿದ ಬೃಹತ್ ಕಪಿ (ಏಪ್). ಇದರಲ್ಲಿ ಗಿಬ್ಬನ್, ಒರಾಂಗೂಟಾನ್, ಗೊರಿಲ್ಲ ಮತ್ತು ಚಿಂಪಾಂಜಿ ಎಂಬ ನಾಲ್ಕು ಜಾತಿಗಳಿವೆ. ಮೊದಲೆರಡು ಮಂಗಗಳು ಏಷ್ಯಕ್ಕೂ ಉಳಿದವೆರಡು ಆಫ್ರಿಕಕ್ಕೂ ಸೀಮಿತವಾಗಿವೆ. ಆಗ್ನೇಯ ಏಷ್ಯಾವಾಸಿಯಾದ ಗಿಬ್ಬನ್ ಮಂಗನ ಕೆಲವು ಲಕ್ಷಣಗಳನ್ನುಳಿಸಿಕೊಂಡಿದ್ದರೂ ಮಾನವನಂತೆ ದ್ವಿಪಾದಿ. ಆದರೆ ಕಾಲುಗಳನ್ನು ನೆಟ್ಟಗೆ ಇಡದೆ ಮಡಚಿಕೊಂಡೇ ಇರುತ್ತದೆ. ಮರಗಳಲ್ಲಿ ಹೆಚ್ಚಾಗಿ ವಾಸಿಸುತ್ತ ಸಸ್ಯಾಹಾರಿಯಾಗಿದ್ದರೂ ಹುಳಹುಪ್ಪಟೆ, ಹಕ್ಕಿ ಮತ್ತು ಅದರ ಮೊಟ್ಟೆಗಳನ್ನು ತಿನ್ನುತ್ತದೆ. ಸುಮಾತ್ರ–ಬೋರ್ನಿಯೊ ದ್ವೀಪ ವಾಸಿಯಾದ ಒರಾಂಗೂಟಾನ್ ಮರಗಳ ಮೇಲೆ ವಾಸಿಸುತ್ತ ಕೊಂಬೆಯಿಂದ ಕೊಂಬೆಗೆ ನೆಗೆಯುವುದರಲ್ಲಿ ನಿಷ್ಣಾತ. ಸಸ್ಯಾಹಾರಿಯಾಗಿದ್ದು ಅರಣ್ಯ ಫಲಗಳನ್ನು ತಿನ್ನುತ್ತದೆ. ಆಫ್ರಿಕದ ಮಧ್ಯಪ್ರದೇಶವಾಸಿಯಾದ ಗೊರಿಲ್ಲ ಅತ್ಯಪೂರ್ವವಾದ್ದು. ಬೃಹತ್ ಮಂಗಗಳಲ್ಲಿ ಅದೇ ಅತ್ಯಂತ ದೊಡ್ಡದು. ನೆಲದಮೇಲೆ ವಾಸಿಸುವ ಇದು ಚತುಷ್ಪಾದಿಯಾಗಿದ್ದರೂ ಹಿಂಗಾಲುಗಳ ಮೇಲೆ ನಿಲ್ಲಬಲ್ಲದು. ಇದು ಕೂಡ ಸಸ್ಯಾಹಾರಿ ಚಿಂಪಾಂಜಿ. ಆಫ್ರಿಕದ ಉಷ್ಣಪ್ರದೇಶವಾಸಿ. ಮರಗಳ ಮೇಲೆ ನೆಗೆಯುತ್ತ ವೇಗವಾಗಿ ಚಲಿಸಬಲ್ಲುದು. ಅನೇಕ ಬಗೆಯ ಸಸ್ಯಗಳನ್ನು ತಿನ್ನುತ್ತದೆ. ಇದು ಹಲವು ವಿಧವಾದ ಶಬ್ದಗಳನ್ನು ಮಾಡಬಲ್ಲುದಾದರೂ ಮಾತನಾಡಲಾರದು. ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ. (ಬಿ.ಕೆ.ಜಿ.)

**ಮಂಗಮಾನವ:** ಆಧುನಿಕ ಮಾನವನಿಗೂ ಬಾಲವಿಲ್ಲದ ಮಂಗಗಳಿಗೂ ನಡುವಣ ಹಂತದ ಲಕ್ಷಣಗಳಿರುವ ಪ್ರಾಣಿ (ಏಪ್ ಮ್ಯಾನ್). ಪ್ರೈಮೇಟ್ ಗಣದ ಆಂತ್ರಪಾಯ್ಡಿಯ ಗುಂಪಿಗೆ ಸೇರಿದ ಇದನ್ನು ಮಂಗ (ವಾನರ), ಮಾನವನಾಗಿ ಪರಿವರ್ತನೆಯಾಗುವ ಹಂತಕ್ಕೆ ಸೇರಿಸಲಾಗಿದೆ. ಆಯುಧಗಳ ನಿರ್ಮಾಣ ಮತ್ತು ಬಳಕೆ ಗೊತ್ತಿದ್ದು ನೇರವಾದ ನಿಲುವುಳ್ಳ ಲಕ್ಷಣಗಳಿದ್ದರೂ ಈತನ ಕಪಾಲ ಒಳಪಿಡಿ (ಕ್ರೇನಿಯಲ್ ಕೆಪಾಸಿಟಿ) ಕಿರಿದಾಗಿದ್ದುದರಿಂದ (ಸುಮಾರು 900 ಸಿ ಸಿ), ಈತ ಮಾನವ ವರ್ಗಕ್ಕೆ ಸೇರುವುದಿಲ್ಲವೆಂದು ಹಲವರ ವಾದ. 1891ರಲ್ಲಿ ಮೊತ್ತ ಮೊದಲಿಗೆ ಜಾವದ ಟ್ರೆನಿಲ್ ಎಂಬಲ್ಲಿ ಈ ಮಾನವನ ಅವಶೇಷಗಳು (ಪಿತಿಕ್ಯಾಂತ್ರೋಪಸ್ ಇರೆಕ್ಟಸ್ ಮತ್ತು ಪಿ.ರೋಬಸ್ಟಸ್) ದೊರಕಿದುವು. ಅನಂತರ ಚೀನಾದ ಪೀಕಿಂಗ್ ಬಳಿಯ ಚೌಕೊಟಿಯನ್ ಗುಹೆಗಳಲ್ಲಿ 1000 ಸಿಸಿಗಳಷ್ಟು ಹಿರಿದಾದ ಕಪಾಲವಿದ್ದ ಮತ್ತು ಉಂಡೆಕಲ್ಲಿನ ಆಯುಧಗಳನ್ನೂ ಬೆಂಕಿಯನ್ನೂ ಉಪಯೋಗಿಸುತ್ತಿದ್ದ ಮಾನವನ ಅವಶೇಷಗಳು (ಪೀಕಿಂಗ್ ಮ್ಯಾನ್) ದೊರಕಿ ಈ ವಾದ ಕೊನೆಗೊಂಡು ಇವನನ್ನು ನೇರ ನಿಲುವುಳ್ಳ ಮಂಗಮಾನವನೆಂದು ಹೆಸರಿಸಲಾಯಿತು.

ಮಂಗಮಾನವನ ಮುಖ ಚಪ್ಪಟೆಯಾಗಿದ್ದು ಮೇಲ್ಭಾಗ ಹಿಂಚಾಚಿಕೊಂಡಿದೆ. ಹುಬ್ಬಿನ ಮೂಳೆ ಮುಂಚಾಚಿದೆ. ಸಾಮಾನ್ಯವಾಗಿ ಮಂಗನ ಮುಖವನ್ನೇ ಹೋಲುತ್ತಿದ್ದರೂ ಹಲ್ಲುಗಳ ರಚನಾಕ್ರಮ ಆಧುನಿಕ ಮಾನವನ ರೀತಿಯದಾಗಿದೆ. ಈತ ಸಾಧಾರಣವಾಗಿ 170 ಸೆಂಮೀ ಎತ್ತರವಿದ್ದು ನಡಿಗೆಯ ರೀತಿಯಲ್ಲಿ ಆಧುನಿಕ ಮಾನವನನ್ನು ಹೋಲುತ್ತಿದ್ದ. ಚೀನದ ಮಂಗಮಾನವ ಜಾವದ ಮಂಗಮಾನವನಿಗಿಂತ ಮುಂದುವರಿದ ಹಂತಕ್ಕೆ ಸೇರಿದ್ದು ದಪ್ಪ ಹುಬ್ಬು, ಎದ್ದು ಕಾಣುವ ಮೂಳೆಗಳನ್ನು ಪಡೆದಿದ್ದ.

ಜಾವದಲ್ಲಿ ಈ ಅವಶೇಷಗಳೊಂದಿಗೆ ಕಲ್ಲಿನ ಆಯುಧಗಳು ದೊರೆತಿರಲಿಲ್ಲ. ಚೀನದಲ್ಲಿ ಆಯುಧಗಳಿಲ್ಲದೆ ಇತರ ಪ್ರಾಣಿಗಳೂ ಬೂದಿ, ಇದ್ದಿಲು ಮುಂತಾದ ಬೆಂಕಿಯ ಕುರುಹುಗಳೂ ದೊರೆತಿದ್ದು ಇವು ಈ ಮಾನವನ ಸಾಂಸ್ಕೃತಿಕ ಲಕ್ಷಣಗಳನ್ನು ಸ್ಪಷ್ಟಪಡಿಸುತ್ತವೆ. ದೊಡ್ಡ ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಮಾಂಸಭಕ್ಷಣೆ ಮಾಡುತ್ತಿದ್ದ ಇವನಲ್ಲಿ ಸಾಮೂಹಿಕ ಸಹಕಾರೀ ಜೀವನ ಬೆಳೆದಿತ್ತೆಂದು ತಿಳಿಯುತ್ತದೆ. ಕೆಲ ಬಾರಿ ಸ್ವಜಾತಿಯವರನ್ನೇ ಚೀನ ಮಂಗಮಾನವ ಭಕ್ಷಿಸುತ್ತಿದ್ದನೆಂಬುದಕ್ಕೆ ಆಧಾರಗಳಿವೆ. ಅಲ್ಲದೆ ಕಾಡುಗಳಲ್ಲಿ ದೊರಕುತ್ತಿದ್ದ ಗೆಡ್ಡೆಗೆಣಸು, ಹಣ್ಣುಕಾಯಿಗಳನ್ನೂ ತಿನ್ನುತ್ತಿದ್ದ. ಈ ಮಂಗ ಮಾನವನ ಅವಶೇಷಗಳು ಮಧ್ಯ ಪ್ಲೀಸ್ಟೊಸೀನ್ ಯುಗಕ್ಕೆ ಸೇರಿವೆಯೆನ್ನಲಾಗಿದೆ.

ಏಷ್ಯಾದಿಂದ ಹೊರಗೆ ಮಂಗಮಾನವ ಸಂತತಿ ನೆಲಸಿದ್ದಿತೇ ಎಂಬುದು ವಿವಾದಾತ್ಮಕವಾಗಿದ್ದರೂ 1907ರಲ್ಲಿ ಜರ್ಮನಿಯ ಹೈಡಲ್‌ಬರ್ಗ್ ಬಳಿ ಇತರ ಪ್ರಾಣಿಗಳ ಅವಶೇಷಗಳೊಂದಿಗೂ 1954ರಲ್ಲಿ ಆಲ್ಜೀರಿಯದಲ್ಲಿ ಅಷ್ಯೂಲಿಯನ್‌ರಲ್ಲಿ ಕೈಗೊಡಲಿಗಳೊಂದಿಗೂ 1960 ಟಾಂಗನೀಕದ ಓಲ್ಡುವೈ ಕೊಳ್ಳದಲ್ಲೂ 1921ರಲ್ಲಿ ದಕ್ಷಿಣ ಆಫ್ರಿಕದ ರೊಡೇಸಿಯದಲ್ಲೂ 1953ರಲ್ಲಿ ಸಾಲ್ಡಾನಾ ಬೇ ಎಂಬಲ್ಲೂ ದೊರಕಿದ ಅವಶೇಷಗಳನ್ನೂ ಈ ಗುಂಪಿಗೆ ಸೇರಿಸಬೇಕೆಂಬುದು ಬಹುಮಂದಿ ವಿದ್ವಾಂಸರ ಅಭಿಪ್ರಾಯ. ಆದ್ದರಿಂದ ಏಷ್ಯಾದ ಮಂಗಮಾನವ ಯೂರೋಪ್, ಆಫ್ರಿಕಗಳಿಗೂ ಪಸರಿಸಿದ್ದಂತೆ ಕಾಣುತ್ತದೆ. ಮಂಗಮಾನವ ಅನಂತರದ ಆಧುನಿಕ ಮಾನವಸಂತತಿಯ ಮೂಲಪುರುಷನಾಗಿರಬಹುದು. (ಬಿ.ಕೆ.ಜಿ.)

**ಮಂಡಲದ ಹಾವು:** ವೈಪರಿಡೆ ಕುಟುಂಬದ ವೈಪರಿನೆ ಉಪಕುಟುಂಬಕ್ಕೆ ಸೇರಿದ ವಿಷಪೂರಿತ ಹಾವು (ರಸೆಲ್ಸ್ ವೈಪರ್). ವೈಪರ್ ರಸೆಲಿಯೈ ಇದರ ವೈಜ್ಞಾನಿಕ ಹೆಸರು. ಭಾರತದ ನಾಲ್ಕು ಅತ್ಯಂತ ವಿಷಯುಕ್ತ ಹಾವುಗಳ ಪೈಕಿ ಒಂದು. ಸಾಧಾರಣವಾಗಿ 1 ಮೀ ಉದ್ದಕ್ಕೆ ಬೆಳೆಯುತ್ತದೆ. ದೇಹ ತೋರವಾಗಿದೆ. ತಲೆ ಮುಮ್ಮೂಲೆಯಾಕಾರದ್ದು. ಮೂತಿ ಚೂಪು. ಮೂಗಿನ ಹೊಳ್ಳೆಗಳು ಪ್ರಧಾನವಾಗಿವೆ. ಕಣ್ಣುಗಳ ಸುತ್ತ ಬಿಳಿ ಅಂಚು ಉಂಟು. ತಲೆಯ ಮೇಲೆ ಶಲ್ಕಗಳ ಬದಲು ಫಲಕಗಳಿವೆ. ಮೈಬಣ್ಣ ಕಂದು ಇಲ್ಲವೆ ಹಳದಿ. ಉದರಭಾಗ ಬಿಳಿ. ಆಗ್ನೇಯ ಮತ್ತು ಈಶಾನ್ಯ ಭಾಗದ ಪ್ರದೇಶಗಳಲ್ಲಿರುವ ಬಗೆಗಳಲ್ಲಿ ಉದರದ ಮೇಲೆ ಚುಕ್ಕೆಗಳುಂಟು. ತಲೆಯಿಂದ ಬಾಲದವರೆಗೆ ಬೆನ್ನು ಹಾಗೂ ಪಾರ್ಶ್ವಗಳ ಮೇಲೆ ಮೂರು ಸಾಲುಗಳಲ್ಲಿ ವೃತ್ತಾಕಾರದ ಗುರುತುಗಳಿವೆ. ಬೆನ್ನುಹುರಿಗುಂಟ ಇರುವ ಗುರುತುಗಳು ಕ್ರಮಬದ್ಧವಾಗಿ ಜೋಡಣೆಗೊಂಡಿವೆ.

ಇದು ಭಾರತಾದ್ಯಂತ 300 ಮೀ ಎತ್ತರ ಮೀರದ ಎಲ್ಲ ಪ್ರದೇಶಗಳಲ್ಲೂ ವಾಸಿಸುತ್ತದೆ. ಸಾಮಾನ್ಯವಾಗಿ ಹಗಲಿನಲ್ಲಿ, ಉಷ್ಣತೆ ಹೆಚ್ಚಾಗಿರುವ ವೇಳೆಯಲ್ಲಿ ಕಲ್ಲುಪೊಟರೆ, ತರಗೆಲೆಗಳ ಅಡಿ, ಮುಳ್ಳುಪೊದರು, ಕತ್ತಾಳೆ ಮೆಳೆ ಮುಂತಾದ ತಾಣಗಳಲ್ಲಿ ಅಡಗಿರುತ್ತದೆ. ಕೇದಗೆ, ಕತ್ತಾಳೆ ಪೊದೆಗಳು ಇದರ ಮೆಚ್ಚಿನ ತಾಣಗಳು.

ನೋಟಕ್ಕೆ ತುಂಬ ಆಲಸಿಯಾಗಿ ಕಾಣುತ್ತದೆ. ಆದರೆ ರೇಗಿದಾಗ ಇಲ್ಲವೇ ಉದ್ರೇಕಗೊಂಡಾಗ ಥಟ್ಟನೆ ನೆಗೆಯಬಲ್ಲದು. ಆಗ ತಲೆ ಎತ್ತಿ, ನಾಲಿಗೆ ಹೊರಚಾಚಿ ಅಲುಗಿಸಿ, ಒಂದೇ ಸಮನೆ ಜೋರಾಗಿ ಭುಸುಗುಡುತ್ತ ಕಚ್ಚಲು ನುಗ್ಗುತ್ತದೆ. ಸ್ವಭಾವತಃ ಅಳ್ಳೆದೆಯದು. ಅಪಾಯ ಒದಗಿದೆ ಎನಿಸಿದಾಗ ಅವಿತುಕೊಳ್ಳುವುದೇ ಸಹಜ ಪ್ರವೃತ್ತಿ. ಮನುಷ್ಯನಿಂದ ಆದಷ್ಟು ದೂರದಲ್ಲೇ ಇರುತ್ತದೆ. ಆದರೆ ಅತ್ಯಂತ ವಿಷಪೂರಿತವಾದ್ದರಿಂದ ಇದನ್ನು ಲಘುವಾಗಿ ಕಾಣಲಾಗದು. ಇದರ ವಿಷದ ಹಲ್ಲುಗಳು ಊಜಿಯಂತೆ ಬಲು ಉದ್ದ ಹಾಗೂ ತೀಕ್ಷ್ಣ. ಚುಚ್ಚುಮದ್ದಿನ ಸೂಜಿಯಂತೆ ಒಳಗೆ ಕೊಳವೆಯಿಂದ ಕೂಡಿವೆ. ಬಾಯಿಯ ಹಿಂಭಾಗದಲ್ಲಿ ಎರಡೂ ಪಾರ್ಶ್ವಗಳಲ್ಲಿರುವ ವಿಷಗ್ರಂಥಿಗಳಲ್ಲಿ ಉತ್ಪತ್ತಿಯಾಗುವ ವಿಷ ಈ ಕೊಳವೆಗಳ ಮೂಲಕ ಹರಿದುಬರುತ್ತದೆ. ಕೆಲವೊಮ್ಮೆ ಹಾವು ಬಾಯಿ ತೆರೆದಾಕ್ಷಣ ವಿಷ ಚಿಮ್ಮುವುದೂ ಉಂಟು. ಇದರ ವಿಷಕ್ಕೆ ರಕ್ತಚಲನೆ ನಿಲ್ಲಿಸುವ ಗುಣ ಉಂಟು. ದಂಶನಕ್ಕೆ ಒಳಗಾದ ಅಂಗ ಬಾತುಕೊಂಡು ಅಲ್ಲಿ ವಿಪರೀತ ಉರಿ ಉಂಟಾಗುತ್ತದೆ.

ಮಂಡಲದ ಹಾವಿನ ಪ್ರಧಾನ ಆಹಾರ ಇಲಿ, ಓತಿ, ಹಲ್ಲಿ, ಏಡಿ, ಕೆಲವು ತೆರನ ಕೀಟಗಳು. ಬೇರೆ ಹಾವುಗಳನ್ನೂ ಹಕ್ಕಿಗಳನ್ನೂ ತಿನ್ನುವುದಿದೆ. ಹಲವು ಸಲ ಸ್ವಜಾತಿ ಹಾವುಗಳನ್ನೂ ತಿನ್ನುವುದುಂಟು.

ಇದರ ಸಂತಾನವೃದ್ಧಿ ಶ್ರಾಯ ಜುಲೈ – ಆಗಸ್ಟ್, ನೇರವಾಗಿ ಮರಿಗಳನ್ನೆ ಹಾಕುತ್ತದೆ. ಒಂದು ಸಲಕ್ಕೆ 20–40 ಮರಿಗಳು ಹುಟ್ಟುವುವು. ಕೆಲವೊಮ್ಮೆ 80–90 ಮರಿಗಳು

ಹುಟ್ಟುವುದೂ ಉಂಟು. ಹುಟ್ಟಿದಾಗ ಸುಮಾರು 130 ಮಿಮೀ ಉದ್ದವಿರುವ ಇವು ವಯಸ್ಕಗಳಿಗಿಂತ ಹೆಚ್ಚು ಹೊಳೆಯುತ್ತಿರುತ್ತವೆ. ಮರಿಗಳೂ ವಯಸ್ಕಗಳಷ್ಟೇ ಅಪಾಯಕರ. ಮಂಡಲದ ಹಾವಿನ ಕಡಿತದಿಂದ ಸಾವು ಸಂಭವಿಸುವುದು ವಿಷದ ಮೊತ್ತವನ್ನವಲಂಬಿಸಿದೆಯಾದರೂ ಪ್ರತಿವಿಷವನ್ನು ಧಾರಾಳ ಮೊತ್ತದಲ್ಲಿ ಕೊಡುವುದು ಉತ್ತಮ ಎನ್ನಲಾಗಿದೆ. (ಕೆ.ಎಂ.ವಿ.)

**ಮಕಾಕ್ ಕೋತಿ:** ಸ್ತನಿ ವರ್ಗದ ಪ್ರೈಮೇಟ್ ಗಣದ ಸರ್ಕೋಪಿತಿಸಿಡೇ ಕುಟುಂಬಕ್ಕೆ ಸೇರಿದ ಮಕಾಕ ಜಾತಿಯ ಕೋತಿ. ಇದರಲ್ಲಿ ಸುಮಾರು 12 ಪ್ರಭೇದಗಳಿವೆ. ದಕ್ಷಿಣ ಏಷ್ಯಾದಿಂದ ತೊಡಗಿ ಇಂಡೊನೇಷ್ಯ, ಫಿಲಿಪೀನ್ಸ್, ಹೈನಾನ್, ಫಾರ್ಮೋಸ, ಜಪಾನ್ ವರೆಗಿನ ವಿವಿಧ ದೇಶಗಳಲ್ಲಿ ಸುಮಾರು 11 ಪ್ರಭೇದಗಳೂ ಆಫ್ರಿಕದ ಆಲ್ಜೀರಿಯಾ, ಮೊರಾಕೊಗಳಲ್ಲಿ ಹಾಗೂ ಜಿಬ್ರಾಲ್ಟರಿನಲ್ಲಿ ತಲಾ ಒಂದು ಪ್ರಭೇದವೂ ಇವೆ. ಇವುಗಳ ಪೈಕಿ ಭಾರತದಲ್ಲಿ ಸಿಕ್ಕುವ ಮಕಾಕ ರೇಡಿಯೇಟ (ಬಾನೆಟ್ ಕೋತಿ) ; ಮಕಾಕ ಮುಲೆಟ (ರೀಸಸ್ ಕೋತಿ) ; ಮಕಾಕ ಸೈಲಿನಸ್ (ಲಯನ್ ಟೇಲ್ಡ್ ಮಕಾಕ್–ಸಿಂಗಳೀಕ); ಜಪಾನಿನಲ್ಲಿ ವಾಸಿಸುವ ಮಕಾಕ ಫಸ್ಕೇಟ ; ಫಿಲಿಪೀನ್ಸ್ ವಾಸಿಯಾದ ಮಕಾಕ ಐರಸ್ (ಏಡಿಭಕ್ಷಕ ಮಕಾಕ್); ಆಲ್ಜೀರಿಯ, ಮೊರಾಕೊಗಳಲ್ಲಿ ಕಾಣಸಿಕ್ಕುವ ಮಕಾಕ ಸಿಲ್ವೇನಸ್ (ಬಾರ್ಬರಿ ಕೋತಿ) ಮುಖ್ಯವಾದುವು.

ಮಕಾಕ್ ಕೋತಿಗಳೆಲ್ಲವೂ ಮಧ್ಯಮಗಾತ್ರದವು; ದೇಹದ ಉದ್ದ 35–75 ಸೆಂಮೀ. ತೂಕ 5–15 ಕಿಗ್ರಾಂ. ಗಂಡು ಹೆಣ್ಣಿಗಿಂತ ದೊಡ್ಡದು. ಬಾರ್ಬರಿ ಕೋತಿಯನ್ನುಳಿದು ಎಲ್ಲವುಗಳಿಗೂ ಬಾಲವುಂಟು. ಬಾಲದ ಉದ್ದ ಕೆಲವು ಸೆಂಟಿಮೀಟರುಗಳಿಂದ ಹಿಡಿದು ಸುಮಾರು 60 ಸೆಂಮೀ ವರೆಗೆ ಇರುವುದುಂಟು. ಮುಖವನ್ನು ಬಿಟ್ಟು ಇಡೀ ದೇಹ ರೋಮಾವೃತವಾಗಿದೆ. ಕೆಲವು ಪ್ರಭೇದಗಳಲ್ಲಿ ತಲೆಯ ಮೇಲೆ ಉದ್ದ ಕೂದಲುಗಳ 'ಟೋಪಿ'ಯುಂಟು. ಸಿಂಗಳೀಕದ ಮುಖದ ಸುತ್ತ ಜೂಲು ಇದೆ. ಜಪಾನಿನ ಮಕಾಕ್ ಕೋತಿಗೆ ಉದ್ದಮೀಸೆ, ಗಡ್ಡಗಳಿವೆ. ಎಲ್ಲ ಕೋತಿಗಳ ಮೈಬಣ್ಣ ಕಂದು ಇಲ್ಲವೇ ಹಸುರುಮಿಶ್ರಿತ ಕಪ್ಪು. ಮೂತಿ ಸ್ವಲ್ಪ ಮುಂಚಾಚಿದೆ. ಮೂಗಿನ ಹೊಳ್ಳೆಗಳು ಮೂತಿಯ ತುದಿಯಲ್ಲಿರದೆ ಕೊಂಚ ಮೇಲ್ಭಾಗದಲ್ಲಿವೆ. ಮಕಾಕ್ ಕೋತಿಗಳು ಭಾರಿಗಾತ್ರದವಲ್ಲವಾದರೂ ಸದೃಢ ಮೈಕಟ್ಟು, ಪುಷ್ಟವಾದ ಕೈಕಾಲುಗಳನ್ನು ಪಡೆದಿರುವ ಬಲಶಾಲಿ ಕೋತಿಗಳೆನಿಸಿವೆ. ಧೈರ್ಯಶಾಲಿಗಳೂ ಹೌದು.

ಸಾಮಾನ್ಯವಾಗಿ ವಿವಿಧ ವಯಸ್ಸಿನ ಎರಡೂ ಲಿಂಗಗಳ ಸದಸ್ಯರ ಸಣ್ಣ ಹಿಂಡುಗಳಲ್ಲಿ ಇವು ವಾಸಿಸುವುವು. ಒಂದೊಂದು ಹಿಂಡಿನಲ್ಲಿ ಸುಮಾರು 24 ಸದಸ್ಯರಿರುವುದುಂಟು. ಗುಂಪಿಗೆ ಬಲಯುತ ಗಂಡುಕೋತಿ ನಾಯಕ. ಇವು ನೆಲದ ಮೇಲೆ ಹೇಗೋ ಹಾಗೆ ಮರದ ಮೇಲೂ ಚುರುಕಾಗಿ ಸಾಗುವುವು. ಚೆನ್ನಾಗಿ ಈಜಲೂ ಬಲ್ಲವು. ಇವುಗಳ ಚಟುವಟಿಕೆಗಳೆಲ್ಲ ಹಗಲಿನಲ್ಲಿ. ವಿವಿಧ ಬಗೆಯ ಸಸ್ಯ ಸಾಮಗ್ರಿಗಳೂ ಕೀಟ, ಮೊಟ್ಟೆ ಮುಂತಾದ ಪ್ರಾಣಿವಸ್ತುಗಳೂ ಇವುಗಳ ಆಹಾರ. ಮಕಾಕ್ ಕೋತಿಗಳಲ್ಲಿ ಸಂತಾನವೃದ್ಧಿಯ ನಿರ್ದಿಷ್ಟ ಶ್ರಾಯವಿಲ್ಲ. ಗರ್ಭಾವಧಿಯ ಕಾಲ 5–7 ತಿಂಗಳುಗಳು. ಸಾಮಾನ್ಯವಾಗಿ ಒಂದು ಸಲಕ್ಕೆ ಒಂದೇ ಒಂದು ಮರಿ, ಅಪೂರ್ವವಾಗಿ ಅವಳಿ ಮರಿಗಳು ಹುಟ್ಟುವವು. ಮರಿಗಳು ಸುಮಾರು ಒಂದು ವರ್ಷ ಕಾಲ ತಾಯಿಯೊಂದಿಗೆ ಇದ್ದು ನಾಲ್ಕು ವರ್ಷ ವಯಸ್ಸಾಗುವ ವೇಳೆಗೆ ಬೇರೆಯಾಗುವುವು. ಇವುಗಳ ಸರಾಸರಿ ಜೀವಿತಕಾಲ 30 ವರ್ಷಗಳು.

ರೀಸಸ್ ಹಾಗೂ ಬಾನೆಟ್ ಕೋತಿಗಳನ್ನು ಭಾರತದಲ್ಲಿ ಪೂಜ್ಯಭಾವನೆಯಿಂದ ಕಾಣಲಾಗುತ್ತದೆ. ಇವನ್ನು ಸಾಕುವುದೂ ಉಂಟು. ಪಳಗಿಸಿ ಹಲವಾರು ಆಟಗಳನ್ನು ಕಲಿಸಿ ಸರ್ಕಸ್ ಮುಂತಾಗಿ ಮನರಂಜನೆಗೆ ಬಳಸಲಾಗುತ್ತದೆ. ಹಲವಾರು ರೀತಿಯ ವೈದ್ಯಕೀಯ, ಬಾಹ್ಯಾಕಾಶ ಪ್ರಯೋಗಗಳಲ್ಲೂ ಇವನ್ನು ಉಪಯೋಗಿಸಿದೆ. ರಕ್ತದ ರೀಸಸ್ ಘಟಕ ಮೊತ್ತ ಮೊದಲು ಪತ್ತೆಯಾದದ್ದು ರೀಸಸ್ ಕೋತಿಗಳಲ್ಲಿ. ಅಂತೆಯೇ ಫಿಲಿಫೀನ್ಸ್ ದ್ವೀಪಗಳ ಏಡಿಭಕ್ಷಕ ಕೋತಿಯನ್ನು ಪೋಲಿಯೋ ಲಸಿಕೆ ಸಿದ್ಧಪಡಿಸುವ ಪ್ರಯೋಗಗಳಲ್ಲಿ ಬಳಸಲಾಯಿತು. (ಎಸ್.ಎನ್.ಎಚ್.)

**ಮಡ್‌ಸ್ಕಿಪ್ಪರ್:** ಪೆರಿಯೊಫ್ತಾಲ್ಮಿಡೆ ಕುಟುಂಬಕ್ಕೆ ಸೇರಿದ ಕಡಲಮೀನು. ಸಾಮಾನ್ಯವಾಗಿ ಸಮುದ್ರದ ಅಂಚಿನ ಜೌಗುನೀರಿನಲ್ಲಿ ವಾಸಿಸುತ್ತದೆ. ಅಳಿವೆ ಪ್ರದೇಶಗಳಲ್ಲೂ ಉಬ್ಬರವಿಳಿತ ವಲಯಗಳಲ್ಲೂ ಕಾಣದೊರೆಯುತ್ತದೆ. ಇದೊಂದು ಚಿಕ್ಕ ಗಾತ್ರದ ವಿಚಿತ್ರ ರೂಪದ ಮೀನು. ದೇಹದ ಉದ್ದ 15–30 ಸೆಂಮೀ. ಮೈಮೇಲೆ ಟೀನಾಯಿಡ್ ರೀತಿಯ ಹುರುಪೆಗಳಿವೆ. ಎದೆಯ ಈಜು ರೆಕ್ಕೆಗಳು ಬಲವಾದ ಸ್ನಾಯುಗಳಿಂದ ರಚಿತವಾಗಿವೆ; ಇವುಗಳ ಸಹಾಯದಿಂದ ಮೀನು ಕೆಸರಿನಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ನೆಗೆಯಬಲ್ಲದು. ಎಂದೇ ಇದಕ್ಕೆ ಮಡ್‌ಸ್ಕಿಪ್ಪರ್ ಎಂದು ಹೆಸರು. ಕಣ್ಣುಗಳು ಕೂಡ ವಿಚಿತ್ರ ತೆರನಾದವು. ನೆತ್ತಿಯ ಮೇಲೆ ಸ್ಥಿರವಾಗಿರುವ ಇವು ಒಂದಕ್ಕೊಂದು ತೀರ ಸಮೀಪದಲ್ಲಿವೆಯಲ್ಲದೆ ಆಚೀಚೆ ಚಲಿಸಬಲ್ಲವಾಗಿವೆ ಕೂಡ (ಹೆಚ್ಚು ಕಡಿಮೆ ಕಪ್ಪೆಯ ಕಣ್ಣುಗಳನ್ನು ಹೋಲುವುವು). ಈ ಮೀನಿನ ಮೇಲ್ದವಡೆ ಕೆಳಗಿನದಕ್ಕಿಂತ ಹೆಚ್ಚು ಮುಂಚಾಚಿದೆ. ಬಾಲದ ಈಜುರೆಕ್ಕೆಯ ಕೆಳ ಅಂಚು ಅಲಗಿನಂತಿದೆ. ತನ್ನ ಎದೆಯ ಈಜುರೆಕ್ಕೆಗಳ ಸಹಾಯದಿಂದ ಕಡಲ ತೀರದ ಕೆಸರಿನಲ್ಲಿ ನಡೆದಾಡುವುದು ಕಡಲ ಕಿನಾರೆಯಲ್ಲಿ ಬೆಳೆಯುವ ಮ್ಯಾಂಗ್ರೂವ್ ಸಸ್ಯಗಳ ಬೇರು, ರೆಂಬೆಗಳನ್ನು ಹತ್ತುವುದು ಇದರ ಸ್ವಭಾವ. ಹೆಚ್ಚುಕಾಲ ನೀರಿನ ಹೊರಗೆ ಇರಬಲ್ಲದು. ಆದ್ದರಿಂದ ಈ ಜಾತಿಯ ಮೀನು ತನ್ನ ಬಾಲದ



ಸಹಾಯದಿಂದ ಉಸಿರಾಡುತ್ತದೆಂದು ತಪ್ಪಾಗಿ ಭಾವಿಸಲಾಗಿತ್ತು. ವಾಸ್ತವವಾಗಿ ಇದು ನೀರಿನ ಹೊರಗೆ ಬಂದು ತನ್ನ ಕಿವಿರಿನ ಕೋಣೆಯಲ್ಲಿ ನೀರನ್ನು ತುಂಬಿಸಿಕೊಂಡು, ಅದರಲ್ಲಿರುವ ವಿಲೀನಿತ ಆಮ್ಲಜನಕವನ್ನು ಉಸಿರಾಡುತ್ತದೆ. ಅಲ್ಲದೆ ಗಂಟಲು ಹಾಗೂ ಚರ್ಮದಿಂದ ಕೂಡ ಉಸಿರಾಡಬಹುದು. ವಿವಿಧ ರೀತಿಯ ಕೀಟಗಳು, ಹುಳುಗಳು ಇದರ ಆಹಾರ. ಸಂತಾನವೃದ್ಧಿಯ ಬಗ್ಗೆ ಹೆಚ್ಚು ಮಾಹಿತಿ ಇಲ್ಲ. ಪೆರಿಯೊಫ್ತಾಲ್ಮಸ್ ಜಾತಿಯ ಮಡ್‌ಸ್ಕಿಪ್ಪರ್ ಮೀನು ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳಲ್ಲಿ ಪೂರ್ವ ಆಫ್ರಿಕದಿಂದ ಹಿಡಿದು ಆಸ್ಟ್ರೇಲಿಯವರೆಗಿನ ವಿಸ್ತಾರ ಪ್ರದೇಶಗಳಲ್ಲಿ ವಾಸಿಸುತ್ತದೆ. (ಬಿ.ಆರ್.ಸಿ.ಆರ್.)

**ಮಡಿವಾಳ ಹಕ್ಕಿ:** ಪ್ಯಾಸರಿಫಾರ್ಮಿಸ್ ಗಣ, ಕ್ಯಾಂಪಿಫ್ಯಾಜಿಡೆ ಕುಟುಂಬ, ಟರ್ಡಿನೆ ಉಪಕುಟುಂಬಕ್ಕೆ ಸೇರಿದ ಹಕ್ಕಿ (ಮ್ಯಾಗ್‌ಪೈ ರಾಬಿನ್). ಕಾಪ್ಸಿಕಸ್ ಸೌಲಾರಿಸ್ ಇದರ ಶಾಸ್ತ್ರೀಯ ನಾಮ. ಹಳ್ಳಿ, ಊರುಗಳ ಸುತ್ತಮುತ್ತಲಿನ ಪೊದೆ, ಕಾಡುಗಳಲ್ಲಿ ವಾಸಿಸುತ್ತದೆ. ನಗರಗಳ ಉದ್ಯಾನವನಗಳಲ್ಲೂ ನೋಡಬಹುದು. ಭಾರತಾದ್ಯಂತ ಇದರ ವ್ಯಾಪ್ತಿಯುಂಟು.

ಸುಮಾರು 20 ಸೆಂಮೀ ಉದ್ದದ ಹಕ್ಕಿಯಿದು. ಗಂಡಿಗೂ ಹೆಣ್ಣಿಗೂ ಬಣ್ಣದಲ್ಲಿ ವ್ಯತ್ಯಾಸವಿದೆ. ಗಂಡಿನ ತಲೆ, ಬೆನ್ನು, ರೆಕ್ಕೆ, ಬಾಲದ ಮೇಲ್ಭಾಗ ಹಾಗೂ ಎದೆ ಮಿರುಗುವ ಕಪ್ಪು ಬಣ್ಣದವಾದರೆ ಹೆಣ್ಣಿನವು ಕಂದು ಇಲ್ಲವೆ ಬೂದಿ. ಎರಡರ ಉದರ ಭಾಗ ಮಾತ್ರ ಬಿಳಿ. ರೆಕ್ಕೆಗಳ ಮೇಲೆ ಬಿಳಿಬಣ್ಣದ ಗುರುತುಂಟು. ಬಾಲವನ್ನು ಮೇಲಕ್ಕೆತ್ತಿಕೊಂಡಿರುವುದು ಇದರ ಸ್ವಭಾವ. ಒಂಟೊಂಟಿಯಾಗಿ ಇಲ್ಲವೆ ಗಂಡು ಹೆಣ್ಣು ಜೋಡಿಗಳಲ್ಲಿ ಓಡಾಡಿಕೊಂಡಿರುತ್ತವೆ. ಮಣ್ಣಿನಲ್ಲಿ ಸಿಕ್ಕುವ ಕೀಟಗಳೇ ಇದರ ಪ್ರಧಾನ ಆಹಾರ. ಬೂರುಗ, ಹಾಲುವಾಣ ಮುಂತಾದ ವೃಕ್ಷಗಳ ಮಕರಂದವನ್ನೂ ತಿನ್ನುತ್ತದೆ. ಇದರ ಸಂತಾನವೃದ್ಧಿಯ ಹಂಗಾಮು ಏಪ್ರಿಲಿನಿಂದ ಜುಲೈ. ಆ ಕಾಲದಲ್ಲಿ ಗಂಡು ಹಕ್ಕಿ ಮರಗಳ ಇಲ್ಲವೆ ಕಂಬಗಳ ತುದಿ ಕುಳಿತು ಬಾಲವನ್ನು ಆಗಾಗ್ಗೆ ಮೇಲಕ್ಕೆ ಹಾರಿಸುತ್ತ ಇಂಪಾಗಿ, ಗಟ್ಟಿಯಾಗಿ ಹಾಡುತ್ತದೆ. ಕೆಲವು ಸಲ ಬೇರೆ ಹಕ್ಕಿಗಳ ಕೂಗನ್ನು ಅನುಕರಿಸುವುದುಂಟು. ತನ್ನ ಕ್ಷೇತ್ರದೊಳಗೆ ಬೇರೆ ಗಂಡುಗಳಾವುವನ್ನೂ ಬಿಡದೆ ಕಾಯ್ದುಕೊಳ್ಳುತ್ತದೆ.

ರೆಂಬೆಕವಲು, ಪೊಟರೆ ಅಥವಾ ಗೋಡೆಗಳ ಬಿರುಕುಗಳಲ್ಲಿ ಹುಲ್ಲು, ಬೇರುನಾರುಗಳನ್ನು ಬಳಸಿ ಗೂಡು ರಚಿಸಿ ಮೂರು ನಾಲ್ಕು ಹಸುರು ಬಣ್ಣದ ಮೊಟ್ಟೆಗಳನ್ನಿಡುವುದು. ಕಾವುಕೊಡುವ ಕಾರ್ಯ ಹೆಣ್ಣಿನದು. ಗಂಡು ಕೂಡ ಅಲ್ಲೇ ಇದ್ದು ಗೃಹಪಾಲನೆಯ ಇನ್ನಿತರ ಕಾರ್ಯಗಳನ್ನು ನಿರ್ವಹಿಸುತ್ತದೆ. (ಎಂ.ಎಸ್.ಎಲ್.)

**ಮಧ್ಯಜೀವಯುಗ:** ಭೂವಿಜ್ಞಾನದಲ್ಲಿ ಸು. 70–220 ದಶಲಕ್ಷ ವರ್ಷತನಕದ ಪ್ರಾಚೀನಕಾಲ (ಮೀಸೊಜೋಯಿಕ್ ಈರಾ). ಇದು ಪ್ರಾಗ್ಜೀವ ಯುಗ (ಪೇಲಿಯೊಜೋಯಿಕ್ ಈರಾ) ಮತ್ತು ಆಧುನಿಕ ಜೀವ ಯುಗಗಳ (ಸೀನೋಜೋಯಿಕ್ ಈರಾ) ನಡುವಿನ ಅವಧಿ. ಮಧ್ಯಜೀವಕಲ್ಪ ಪ್ರಾಗ್ಜೀವ ಯುಗದ ಅಂತ್ಯದಲ್ಲಿ ನಡೆದ ಮಹಾಪ್ರಳಯದ ಅನಂತರ ಪ್ರಾರಂಭವಾಗಿ ಆಧುನಿಕ ಜೀವಯುಗದ ಪ್ರಾರಂಭಕ್ಕೆ ಮುಂಚೆ ನಡೆದ ಮತ್ತೊಂದು ಮಹಾಪ್ರಳಯದ ಪ್ರಾರಂಭಕಾಲಕ್ಕೆ ಕೊನೆಗೊಳ್ಳುತ್ತದೆ. ಈ ಎರಡು ಮಹಾಪ್ರಳಯಗಳ ಮಧ್ಯದ ಕಾಲವನ್ನು ಟ್ರಯಾಸಿಕ್, ಜ್ಯುರಾಸಿಕ್ ಮತ್ತು ಕ್ರಿಟೇಷಸ್

ಎಂದು 3 ಭಾಗಗಳಾಗಿ ವಿಂಗಡಿಸಿದೆ. ಆಯಾ ಕಾಲಗಳಲ್ಲಿ ಸಂಚಯನಗೊಂಡ ಶಿಲಾಸ್ತೋಮಗಳಿಗೆ ಅನುಕ್ರಮವಾಗಿ ಟ್ರಯಾಸಿಕ್, ಜುರಾಸಿಕ್ ಮತ್ತು ಕ್ರಿಟೇಷಸ್ ಶಿಲಾಸ್ತೋಮಗಳೆಂದು ಹೆಸರು.

ಈ ಎಲ್ಲ ಶಿಲೆಗಳಲ್ಲಿರುವ ಜೀವ ಅವಶೇಷಗಳು ತೋರುವ ಭಿನ್ನತೆ ಎದ್ದು ಕಾಣುವಂಥದು. ಪರ್ಮಿಯನ್ ಕಲ್ಪದ ಅಂತ್ಯದಲ್ಲಿ ಜೀವವರ್ಗಗಳಲ್ಲಿ ತೀವ್ರ ಬದಲಾವಣೆಯಾಗಿರುವುದು ಗಮನಾರ್ಹ. ಪ್ರಾಗ್ಜೀವಯುಗದಲ್ಲಿ ಹೇರಳವಾಗಿ ಪ್ರಭಾವ ಸ್ಥಾನಗಳಿಸಿಕೊಂಡಿದ್ದ ಕೆಲವು ಪ್ರಾಣಿವರ್ಗಗಳು ಇಂದು ನಾಮಾವಶೇಷಗೊಂಡಿವೆ. ಕೆಲವು ಪ್ರಭಾವ ಸ್ಥಾನವನ್ನು ಕಳೆದುಕೊಂಡಿದ್ದರೂ, ಹಾಗೂ ಹೀಗೂ ಉಳಿದುಕೊಂಡಿವೆ. ಆದರೆ, ಆ ಕಾಲದಲ್ಲಿ ವಿರಳವಾಗಿಯೂ, ಪ್ರಭಾವರಹಿತವಾಗಿಯೂ ಜೀವನ ನಡೆಸುತ್ತಿದ್ದ ಕೆಲವು ಜೀವಿವರ್ಗಗಳು ಪ್ರಭಾವ ಸ್ಥಾನವನ್ನು ಆಕ್ರಮಿಸಿಕೊಂಡು, ಬಲು ಬೇಗ ವೃದ್ಧಿಹೊಂದಿರುವುದು ಕಂಡುಬರುತ್ತದೆ.

ಈ ಯುಗದಲ್ಲಿ ಟ್ರೈಲೊಬೈಟ್, ಸಿಸ್ಟಿಡ್, ಬ್ಲಾಸ್ಟಾಯ್ಡ್ ಮತ್ತು ಪೇಲಕನಾಯ್ಡ್ ಪ್ರಾಣಿವರ್ಗಗಳು ಸಂಪೂರ್ಣವಾಗಿ ವಂಶನಷ್ಟ ಹೊಂದಿದುವು. ಕ್ರೈನಾಯ್ಡ್ ಮತ್ತು ಸ್ಪಿರಿಫೆರಿಡ್‌ಗಳು ಬಲು ವಿರಳವಾಗಿ ಉಳಿದುಕೊಂಡವು. ಸ್ಪಿರಿಫೆರಿಡ್‌ಗಳು ಜುರಾಸಿಕ್ ಕಲ್ಪದ ಅದಿಕಾಲದಲ್ಲಿ ವಂಶನಷ್ಟ ಹೊಂದಿದವು. ಪ್ರಾಗ್ಜೀವಯುಗದ ಅನೇಕ ವಿಧಗಳ ಬ್ರೇಕಿಯೊಪೋಡ ಪ್ರಾಣಿಗಳು ವಂಶನಷ್ಟಗೊಂಡವು. ಉಳಿದುವು ತೀವ್ರ ಬದಲಾವಣೆಗೆ ಒಳಗಾದವು. ಪ್ರಾಗ್ಜೀವಯುಗದ ರೂಗೋಸ ಜಾತಿಯ ಹವಳಗಳು ನಿರ್ನಾಮಗೊಂಡು ಅವುಗಳ ಜಾಗದಲ್ಲಿ ಆಧುನಿಕ ಜಾತಿಯ ಹವಳಗಳು ಉದಯಿಸಿದವು. ಸೆಫಲೊಪೋಡ ಪ್ರಾಣಿಗಳಲ್ಲಿ ಪ್ರಾಗ್ಜೀವ ಯುಗದಲ್ಲಿ ಪ್ರತಿನಿಧಿಸಲ್ಪಟ್ಟಿದ್ದ ಆರ್ಥೋಸೆರಟಿಡ್ ಮತ್ತು ಗೋನಿಯೊಟೈಟಿಸ್ ಎಂಬ ಜಾತಿಗಳು ವಂಶನಷ್ಟಗೊಂಡು ಅವುಗಳ ಸ್ಥಾನವನ್ನು ಹೊಸದಾಗಿ ಉದಯಿಸಿದ ಸೆರಟೈಟಿಸ್ ಎಂಬ ಸೆಫೆಲೊಪಾಡ್‌ಗಳು ಆಕ್ರಮಿಸಿ ಟ್ರಯಾಸಿಕ್ ಕಲ್ಪದ ಅಂತ್ಯದಲ್ಲಿ ವಂಶನಷ್ಟ ಹೊಂದಿದುವು. ಇವುಗಳ ಸ್ಥಾನವನ್ನು ಜುರಾಸಿಕ್, ಕ್ರಿಟೇಷಿಯಸ್ ಕಲ್ಪದ ಅಮ್ಮೊನೈಟ್ ಪ್ರಾಣಿಗಳು ಆಕ್ರಮಿಸಿಕೊಂಡವು. ಇವು ಗಾತ್ರದಲ್ಲಿ ಅತಿ ಚಿಕ್ಕದೇಹಿಗಳಿಂದ ಬಂಡಿಗಾಲಿಗಳಷ್ಟರವರೆಗೆ ದೊಡ್ಡವಾಗಿದ್ದುವು. ಅಧಿಕ ಸಂಖ್ಯೆಯಲ್ಲಿ ಮಾತ್ರವಲ್ಲದೆ, ಪ್ರಪಂಚದೆಲ್ಲೆಡೆ ವ್ಯಾಪಕವಾಗಿದ್ದವು. ಇವಿಲ್ಲದ ಸಾಗರ ಭಾಗ ಮಧ್ಯಜೀವಯುಗದಲ್ಲಿ ಇರಲಿಲ್ಲವೆಂದೇ ಹೇಳಲಾಗಿದೆ. ಆದ್ದರಿಂದ ಮಧ್ಯಜೀವಯುಗವನ್ನು ಅಮ್ಮೊನೈಟ್‌ಗಳ ಯುಗವೆಂದೇ ಕರೆಯಲಾಗಿದೆ.

ಕಶೇರುಕ ಪ್ರಾಣಿಗಳಲ್ಲಿ ಸರೀಸೃಪಗಳು ಅತಿಯಾಗಿ ವೃದ್ಧಿಗೊಂಡು ಭೂಭಾಗವನ್ನೆಲ್ಲ ಆಕ್ರಮಿಸಿದುವು. ಅವು ಯಾವುದೇ ವಾತಾವರಣಕ್ಕಾದರೂ ಹೊಂದಿಕೊಂಡು ಎಲ್ಲ ಬಗೆಯ ಆಹಾರಕ್ಕೆ ಒಗ್ಗಿಸಿಕೊಂಡಿದ್ದುವು. ಅವುಗಳಲ್ಲಿ ಸಸ್ಯಾಹಾರಿಗಳು, ಮಾಸಾಂಹಾರಿಗಳು ಮಾತ್ರವಲ್ಲದೆ ಕ್ರಿಮಿಕೀಟ ಭಕ್ಷಿಗಳು ಇದ್ದುವು. ಆ ಪೈಕಿ ಕೆಲವು ಮರದ ಮೇಲೆ ವಾಸಿಸುತ್ತ ಕ್ರಮೇಣ ಹಾರುವುದನ್ನು ಕಲಿತು ವಾಯುಮಂಡಲವನ್ನು ಸೇರಿದುವು. ಕೆಲವು ಪುನಃ ಜಲವಾಸಿಗಳಾದುವು. ಅವುಗಳ ಗಾತ್ರ ಬಲು ದೊಡ್ಡದಾಗಿತ್ತು. ಡೈನೊಸಾರಸ್ ಎಂಬ ಒಂದು ಜಾತಿಯ ಸರೀಸೃಪ ಸು. 30 ಮೀ ಉದ್ದ ಮತ್ತು 3 ಮೀ ಎತ್ತರ ಇತ್ತು. ಇಂಥ ಪ್ರಾಣಿಗಳನ್ನು ಮಧ್ಯಜೀವಯುಗದ ಪೆಡಂಭೂತಗಳೆಂದು ಕರೆದಿದ್ದಾರೆ.

ಈ ಯುಗದ ಸಸ್ಯವರ್ಗದಲ್ಲಿಯು ಅಷ್ಟೇ ಮಹತ್ತರ ಬದಲಾವಣೆ ಆಯಿತು. ಪ್ರಾಗ್ಜೀವಯುಗದಲ್ಲಿ ನಿಬಿಡವಾಗಿದ್ದ ಕೆಲಮೈಟಿಸ್, ಲೆಪಿಡೊಡೆಂಡ್ರಾನ್ ಮತ್ತು ಸಿಜಿಲೇರಿಯ ಮುಂತಾದ ಟೆರಿಡೋಫೈಟ್ ವರ್ಗದ ಸಸ್ಯಗಳು ಹಾಗೂ ಟೆರಿಡೊಸ್ಪರ್ಮ್ ಜಾತಿಯ ಸಸ್ಯಗಳು ವಂಶನಷ್ಟಗೊಂಡವು ಅಥವಾ ತಮ್ಮ ಪ್ರಭಾವ ಸ್ಥಾನದಿಂದ ಸರಿದು ಸೈಕಾಡ್ ಮತ್ತು ಕೋನಿಫೆರಸ್‌ಗಳಿಂದ ಕೂಡಿದ ಜಿಮ್ನೊಸ್ಪರ್ಮ್ ವರ್ಗದ ಸಸ್ಯಗಳಿಗೆ ಸ್ಥಾನ ಮಾಡಿಕೊಟ್ಟವು. ಈ ಹೊಸ ಸಸ್ಯವರ್ಗ ವಿಪರೀತ ವೃದ್ಧಿಗೊಂಡು ಭೂಮಿಯ ಎಲ್ಲ ಭಾಗಗಳನ್ನು ಆಕ್ರಮಿಸಿಕೊಂಡಿತು. ಈ ಕಾರಣದಿಂದ ಮಧ್ಯಜೀವಯುಗವನ್ನು ಜಿಮ್ನೊಸ್ಪರ್ಮ್‌ಗಳ ಕಾಲ ಎಂದು ಕರೆಯಲಾಗಿದೆ.

ಈ ಯುಗದ ಸ್ತನಿಗಳು ಬಲು ಚಿಕ್ಕವಾಗಿದ್ದು, ತಮ್ಮ ದೀರ್ಘ ಜೀವಿತಕಾಲವನ್ನು ಅಜ್ಞಾತವಾಸದಲ್ಲಿ ಬಿಲವಾಸಿಗಳಾಗಿ ಕಳೆದುವು. ಪ್ರಾಯಶಃ ಪೆಡಂಭೂತಗಳ ಭಯದಿಂದ ಹೀಗಾಗಿರಬೇಕು. ಈ ಪ್ರಾಣಿಗಳು ಆನೆ, ಕುದುರೆ, ಒಂಟೆ, ಸಿಂಹ, ಕೊನೆಗೆ ಮಾನವನ ಪೂರ್ವಜ ಎಂಬ ಅಭಿಪ್ರಾಯವೂ ಇದೆ. ಈ ಯುಗದ ಮತ್ತೊಂದು ವಿಶೇಷ ಹಲ್ಲುಳ್ಳ, ಬಾಲವಿದ್ದ, ರೆಕ್ಕೆ ಕೊಕ್ಕುಗಳಿಂದ ಕೂಡಿ ಹಾರುವ ಸಾಮರ್ಥ್ಯ ಇದ್ದ ಆರ್ಕಿಯಾಪ್ಟೆರಿಕ್ಸ್ ಜಾತಿಯ ಪಕ್ಷಿ. ಇದು ಪೆಡಂಭೂತಗಳ ಕೆಲವು ಲಕ್ಷಣಗಳನ್ನು ಹೊಂದಿದ್ದುದರಿಂದ, ಪಕ್ಷಿಗಳು ಪೆಡಂಭೂತಗಳಿಂದ ಉದ್ಭವಿಸಿದ್ದು ಎಂಬ ಅಭಿಪ್ರಾಯಕ್ಕೆ ಆಸ್ಪದವಾಗಿದೆ. ಮಧ್ಯಜೀವಯುಗದ ಕ್ರಿಟೇಸಿಯಸ್ ಕಲ್ಪದಲ್ಲಿ, ಸಾಗರದಲ್ಲಿ ನೀರು ಬಲು ಸ್ವಚ್ಛವಾಗಿದ್ದ ಕಾರಣ ಫೆರಾಮಿನಿಫೆರ ಮುಂತಾದ ಅತಿಸೂಕ್ಷ್ಮ ಪ್ರಾಣಿಗಳ ಅವಶೇಷಗಳಿಂದ ಒಂದು ಜಾತಿಯ ಸುಣ್ಣ ಅಧಿಕ ಪ್ರಮಾಣದಲ್ಲಿ ನಿರ್ಮಾಣಗೊಂಡಿತು. ಮಧ್ಯ ಜೀವಯುಗದಲ್ಲಿ ಬೀಜಬಿಡುವ, ಅದರೆ ಹೂ ಬಿಡದ (ಹೂಬಿಡುವ ಸಸ್ಯಗಳು ಈ ಯುಗದ ಕೊನೆಯಲ್ಲಿ ಉದಯಿಸಿದುವು) ಗಿಡಮರಗಳು ಇದ್ದುವು.

ಈ ಯುಗದಲ್ಲಿ ಭೂಇತಿಹಾಸದ ಅತಿ ಪ್ರಾಚೀನ ಕಾಲದಿಂದಲೂ ಇದ್ದ ಗೊಂಡ್ವಾನ ಎಂಬ ಭೂರಾಶಿ ಆಫ್ರಿಕ, ಆಸ್ಟ್ರೇಲಿಯ, ದಕ್ಷಿಣ ಭಾರತ, ದಕ್ಷಿಣ ಅಮೆರಿಕಾ ಮತ್ತು ಅಂಟಾರ್ಕ್‌ಟಿಕ ಎಂಬ 5 ಭಾಗಗಳಾಗಿ ಒಡೆದು ಬೇರ್ಪಟ್ಟಿತು. ಹೀಗೆ ಬೇರ್ಪಟ್ಟ ಜಾಗಗಳಲ್ಲಿ ಅಗಾಧ ಪ್ರಮಾಣದ, ಅದರಲ್ಲೂ ಭಾರತದಲ್ಲಿ ಅತ್ಯಗಾಧ ಪ್ರಮಾಣದ ಶಿಲಾರಸ ಹೊರಹೊಮ್ಮಿತು. ಬೇರ್ಪಟ್ಟ ಖಂಡ ಭಾಗಗಳು ಅನುಕ್ರಮವಾಗಿ ಪೂರ್ವ, ಉತ್ತರ, ಪಶ್ಚಿಮ ಮತ್ತು ದಕ್ಷಿಣಾಭಿಮುಖವಾಗಿ ಸರಿಯತೊಡಗಿದವು. ಇದಕ್ಕೆ ಖಂಡಗಳ ಅಲೆತ ಎಂದು ಹೆಸರು. ಈ ಚಲನೆಯ ಪರಿಣಾಮವಾಗಿ ಆಲ್ಪ್ಸ್, ಹಿಮಾಲಯ, ರಾಕೀಸ್ ಮತ್ತು ಆಂಡೀಸ್ ಪರ್ವತಸ್ತೋಮಗಳ ಉದಯವಾಯಿತು. (ಡಿ.ಆರ್.)

**ಮರಕುಟಿಗ:** ಪೈಸಿಫಾರ್ಮಿಸ್ ಗಣ ಪೈಸಿಡೆ ಕುಟುಂಬ ಪೈಸಿನೆ ಉಪಕುಟುಂಬಕ್ಕೆ ಸೇರಿದ ವೃಕ್ಷವಾಸಿ ಹಕ್ಕಿ (ವುಡ್ ಪೆಕರ್). ಸುಮಾರು 180 ವಿವಿಧ ಪ್ರಭೇದಗಳುಂಟು. ಹೆಸರೇ ಹೇಳುವಂತೆ ಮರುಕುಟಿಗಗಳು ಮರಗಳ ಕಾಂಡ, ರಂಬೆಗಳನ್ನು ಕುಟ್ಟಿ ತೊಗಟೆಯಡಿ ಅವಿತಿರಬಹುದುದಾದ ಕೀಟಗಳನ್ನೂ ಕ್ರಿಮಿಗಳನ್ನೂ ಪತ್ತೆ ಹಚ್ಚಿ, ಹೆಕ್ಕಿ ತೆಗೆದು ಕಬಳಿಸುತ್ತವೆ; ಬೇರಾವ ಹಕ್ಕಿಗಳಿಗೂ ಪ್ರವೇಶವಿರದಂಥ ವೃಕ್ಷಕಾಂಡಗಳ ಕ್ಷೇತ್ರ ಇವುಗಳ ಆಡುಂಬೊಲವಾಗಿವೆ. ಅಂತೆಯೇ ಇಂಥ ಸನ್ನಿವೇಶಕ್ಕೆ ಇವುಗಳ ಅಂಗಚರನೆಯಲ್ಲಿ ಕೆಲವೊಂದು ಯುಕ್ತ ಮಾರ್ಪಾಡುಗಳನ್ನೂ ಕಾಣಬುಹುದು. ಮರಗಳ ಕಾಂಡಗಳಿಗೆ ಆತುಕೊಂಡು ಕೀಟಗಳನ್ನು ಹುಡುಕಬೇಕಾಗುವುದರಿಂದ ಅದಕ್ಕೆ ತಕ್ಕಂತೆ ಕಾಲುಗಳು ಮೋಟಾಗಿವೆ. ಬೆರಳುಗಳು ಉದ್ದವಾಗಿವೆ. ಇರುವ ನಾಲ್ಕು ಬೆರಳುಗಳ ಪೈಕಿ ಎರಡು ಮುಂದಕ್ಕೆ ಚಾಚಿಕೊಂಡಿದ್ದರೆ ಇನ್ನೆರಡು ಹಿಂದಕ್ಕೆ ಚಾಚಿವೆ. ಉಗುರುಗಳು ಮೊನಚಾಗಿರುವುವಲ್ಲದೆ ಬಾಗಿಕೊಂಡಿವೆ ಕೂಡ. ಇದರಿಂದ ತೊಗಟೆಗೆ ಅಂಟಿಕೊಳ್ಳಲು ಅನುಕೂಲ. ಕಾಂಡಗಳ ಮೇಲೆ ಊರಿಕೊಂಡು ಲಂಬವಾಗಿ ನಿಲ್ಲಲು ಬೇಕಾಗುವ ಆಸರೆಯನ್ನು ದೃಢವಾದ ಗರಿಗಳಿಂದ ರಚಿತವಾದ ಇವುಗಳ ತೋಕೆ ಒದಗಿಸುತ್ತದೆ. ಕೊಕ್ಕು ಕೂಡ ನೀಳ, ಗಡಸು ಹಾಗೂ ಚೂಪಾಗಿದ್ದು ತೊಗಟೆಯನ್ನು ಕುಟ್ಟಲು ಯುಕ್ತವಾದ ಉಳಿಯಂತಿದೆ. ತನ್ನ ಕುತ್ತಿಗೆಯಲ್ಲಿರುವ ಬಲಯುತ ಸ್ನಾಯುಗಳ ಸಹಾಯದಿಂದ ಅತ್ಯಂತ ಚಟುಲಗತಿಯಲ್ಲಿ ಕೊಕ್ಕನ್ನು ಕಾಂಡಕ್ಕೆ ಘಟ್ಟಿಸಬಲ್ಲುದೆನ್ನಲಾಗಿದೆ (ನಿಮಿಷಕ್ಕೆ 120 ಬಾರಿ). ಇಷ್ಟು ವೇಗದ ಘಟ್ಟಣೆಯ ಧಕ್ಕೆಯನ್ನು ತಡೆದುಕೊಳ್ಳಲು ಸಮರ್ಥವಾದ ಗಟ್ಟಿ ತಲೆಬುರುಡೆ ಮರಕುಟಿಗಕ್ಕೆ ಉಂಟು. ನಾಲಗೆ ಬಲು ಉದ್ದವಾಗಿದ್ದು ಸಾಮಾನ್ಯವಾಗಿ ತಲೆಬುರುಡೆಯ ವಿಶೇಷ ಕುಳಿಯಲ್ಲಿ ಸುರುಳಿ ಸುತ್ತಿರುತ್ತದೆ; ಅಗತ್ಯ ಬಿದ್ದಾಗ ಕೊಕ್ಕಿನಿಂದ ಸುಮಾರು ದೂರಕ್ಕೆ ಹೊರಚಾಚಬಲ್ಲುದು. ನಾಲಗೆಯ ತುದಿಯಲ್ಲಿ ಹಿಮ್ಮುಖವಾಗಿ ಬಾಗಿರುವ ಕೊಕ್ಕೆಗಳುಂಟು; ಅಲ್ಲದೆ ಲಾಲಾಗ್ರಂಥಿಗಳಿಂದ ಉತ್ಪತ್ತಿಯಾಗುವ ಒಂದು ವಿಧದ ಅಂಟುದ್ರವ ಇದರ ಮೇಲೆ ಲೇಪನಗೊಂಡಿರುತ್ತದೆ. ಮರಕುಟಿಗ ಕೀಟ ಲಾರ್ವಗಳಿರುವ ತಾಣಗಳನ್ನು ಕೊಕ್ಕಿನಿಂದ ತೆರೆದಾಗ ನಾಲಿಗೆಯನ್ನು ಹಾವಿನಂತೆ ಒಳಗೆ ಚಾಚಿ ಎರೆಗಳನ್ನು ಹಿಡಿಯಬಲ್ಲುದು. ಮರಗಳ ಬುಡದಿಂದ ತೊಡಗಿ ವಂಕಿವಂಕಿಯಾಗಿ ಮೇಲಿನ ರೆಂಬೆಗಳಿಗೆ ಏರುವುದೂ ಮಧ್ಯೆ ಮಧ್ಯೆ ಕೀಟಗಳಿರಬಹುದಾದ ಡೊಗರುಗಳಿಗಾಗಿ ತಡಕುವುದೂ ಒಂದು ಮರದ ತುದಿಯನ್ನು ತಲಪಿದ ಮೇಲೆ ಸರ್ರನೆ ಬಿಟ್ಟು ರೆಕ್ಕೆ ಬಡಿಯುತ್ತ ತರಂಗಗತಿಯಲ್ಲಿ ಮತ್ತೊಂದು ಮರದ ಬುಡಕ್ಕೆ ಹಾರುವುದೂ ಇದರ ಸ್ವಭಾವ.

ಮರಕುಟಿಗದ ಕೂಗು ಕರ್ಕಶ ಹಾಗೂ ಗಟ್ಟಿ. ಬೇಟೆಯ ಕಾಲದಲ್ಲಿ ಇದೇ ಕೂಗನ್ನು ಪದೇ ಪದೇ ಮಾಡುತ್ತದೆಯೇ ವಿನಾ ಬೇರಾವ ವಿಶೇಷ ರೀತಿಯ ಕೂಗನ್ನು

ಇದರಲ್ಲಿ ಕೇಳಲಾಗದು. ಆದರೆ ಸತ್ತು ಒಣಗಿಹೋದ ರೆಂಬೆಯ ಮೇಲೋ ತಗಡಿನ ಚಾವಣಿಯ ಮೇಲೋ ಕೊಕ್ಕನ್ನು ಗಟ್ಟಿಯಾಗಿ ಬಡಿದು ತನ್ನ ಇರವನ್ನು, ಕಾಮನೆಯನ್ನು, ಉದ್ದೇಶವನ್ನು ಜಾಹೀರುಪಡಿಸುತ್ತದೆ.

ಎಲ್ಲ ಮರಕುಟಿಗಗಳೂ ಮರಗಳ ಕಾಂಡವನ್ನು ಕೊರೆದು ಒರಟುಗೂಡು ರಚಿಸುವುವು. ಮೆತ್ತೆಗಳನ್ನು ರೂಪಿಸುವ ಪರಿಪಾಟ ಇಲ್ಲ. ಸಾಮಾನ್ಯವಾಗಿ ಒಂದು ಸಲಕ್ಕೆ ಮೂರು ಅಚ್ಚ ಬಿಳಿಬಣ್ಣದ ಮೊಟ್ಟೆಗಳನ್ನಿಡುವುದು. ಗಂಡು ಹೆಣ್ಣುಗಳೆರಡೂ ಕಾವುಕೊಟ್ಟು ಮರಿಮಾಡಿ ಮರಿಗಳನ್ನು ಪೋಷಿಸುತ್ತವೆ.

ಭಾರತದಲ್ಲಿ ಡೆಂಡ್ರೊಕೋಪಸ್ ಮರಾಟೆನ್ಸಿಸ್ (ಮರಾಟ ವುಡ್‌ಪೆಕರ್), ಡೈನೋಪಿಯಮ್ ಬೆಂಗಾಲೆನ್ಸ್ (ಚಿನ್ನದ ಬೆನ್ನಿನ ಮರಕುಟಿಗ) ಮತ್ತು ಮೈಕ್ರೊಟರ್ನಸ್ ಬ್ರಾಕಿಯೂರಸ್ (ರೂಫಸ್ ವುಡ್‌ಪೆಕರ್) ಎಂಬ ಪ್ರಭೇದಗಳು ಕಾಣದೊರೆಯುವುವು.

(ಎಂ.ಡಿ.ಪಿ.)

**ಮರಗಪ್ಪೆ:** ದ್ವಿಚರಿಗಳ (ಆಂಫಿಬಿಯ) ವರ್ಗ, ಅನ್ಯುರ ಗಣ, ಹೈಲಿಡೆ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಕಪ್ಪೆಗಳಿಗೆ ಅನ್ವಯವಾಗುವ ಸಾಮಾನ್ಯ ಹೆಸರು (ಟ್ರೀ ಫ್ರಾಗ್). ಇವುಗಳ ಪೈಕಿ ಮುಖ್ಯವಾದ್ದು ಉತ್ತರ ಮತ್ತು ದಕ್ಷಿಣ ಅಮೆರಿಕಗಳೆರಡರಲ್ಲೂ ಜೀವಿಸುವ ಹೈಲ ಜಾತಿ. ಸಾಮಾನ್ಯವಾಗಿ ಕಪ್ಪೆಗಳು ಜಲ ಅಥವಾ ಭೂವಾಸಿಗಳು. ಆದರೆ ಹೈಲ ಮತ್ತಿತರ ಜಾತಿಯವು ತಮ್ಮ ಜೀವನದ ಬಹು ಕಾಲವನ್ನು ಮರಗಳ ಮೇಲೆ ಕಳೆಯುತ್ತವೆ. ಇಂಥ ವೃಕ್ಷಜೀವನಕ್ಕೆ ಅನುಕೂಲವಾಗುವಂತೆ ಇವುಗಳ ಕಾಲಿನ ರಚನೆಗಳೂ ಮಾರ್ಪಾಟಾಗಿವೆ; ಮರಗಿಡಗಳನ್ನು ಹತ್ತಲು ನೆರವಾಗುವಂತೆ ಬೆರಳುಗಳ ತುದಿಗಳು ಅಂಟುಫಲಕಗಳಾಗಿ ರೂಪುಗೊಂಡಿವೆ. ಜೊತೆಗೆ ಬೆರಳಿನ ತುದಿಮೂಳೆ ಕೆಳಮುಖವಾಗಿ ಬಾಗಿದೆ. ಅಂಟು ಫಲಕಗಳಿಂದ ಜಿಗುಟಾದ ದ್ರವ ಒಸರುತ್ತಿದ್ದು ಕಪ್ಪೆ ಮರವನ್ನೇರಲು ಸಹಾಯಕವಾಗುವ ಹಿಡಿತವನ್ನು ಒದಗಿಸುತ್ತದೆ. ಗಂಟಲಿನಲ್ಲಿ ಶಬ್ದ ಉಂಟುಮಾಡಲು ಬಳಕೆಯಾಗುವ ದೊಡ್ಡ ಗಾತ್ರದ ಧ್ವನಿಚೀಲಗಳುಂಟು. ಇವು ಹೊರಡಿಸುವ ಸದ್ದು ಉಳಿದ ಕಪ್ಪೆಗಳ ಸದ್ದಿಗಿಂತ ಜೋರುತೆರನಾದುದು.



ಮರಗಪ್ಪೆಗಳ ವಿವಿಧ ಪ್ರಭೇದಗಳು ಕೆಲವು ಮೊಟ್ಟೆಗಳಿಂದ ಹಿಡಿದು ಸಾವಿರಕ್ಕೂ ಹೆಚ್ಚು ಮೊಟ್ಟೆಗಳನ್ನಿಡುತ್ತವೆ. ಹೆಚ್ಚು ಸಂಖ್ಯೆಯಲ್ಲಿ ಮೊಟ್ಟೆಯಿಡುವಂಥ ಪ್ರಭೇದಗಳಲ್ಲಿ ಮೊಟ್ಟೆಗಳು ಪರಸ್ಪರ ಅಂಟಿಕೊಂಡಿದ್ದು ಉದ್ದ ಸರಪಳಿಯಂತಿವೆ. ಕೆಲವು ಪ್ರಭೇದಗಳಲ್ಲಿ ಮೊಟ್ಟೆ ಹಾಗೂ ಮರಿಗಳ ಪಾಲನೆಯ ಪರಿಪಾಟವನ್ನು ಕಾಣಬಹುದು.

ರ‍್ಯಾಕೋಫೋರಸ್ ಮತ್ತು ಪೈಪ ಎಂಬ ಜಾತಿಯ ಕಪ್ಪೆಗಳನ್ನು ಸಹ ಮರಗಪ್ಪೆಗಳೆಂದು ಕರೆಯುವುದಿದೆ. ಅದರೆ ಇವು ವಾಸ್ತವವಾಗಿ ನೆಲವಾಸಿ ಕಪ್ಪೆಗಳು. (ಎಸ್.ಎನ್.ಎಚ್.)

**ಮರಳು ಸೊಳ್ಳೆ ಜ್ವರ:** ಫ್ಲೀಬಾಟಿಮಿನೆ ಕುಟುಂಬದ ಫ್ಲೀಬಾಟಮಸ್ ಸೊಳ್ಳೆಯ ಕಡಿತದಿಂದ ಹರಡುವ ಒಂದು ವೈರಸ್ ರೋಗ (ಸ್ಯಾಂಡ್ ಫ್ಲೈ ಫೀವರ್). ಈ ಸೊಳ್ಳೆ, ನೊಣಗಳ ಜಾತಿಗೆ ಸೇರಿದೆ. ಫ್ಲೀ. ಪಪಾಟಾಸಿಯೈ ಪ್ರಭೇದದಿಂದಲೇ ಮುಖ್ಯವಾಗಿ ರೋಗ ಹರಡುವುದರಿಂದ ಇದಕ್ಕೆ ಪಪಾಟಾಸಿ ಜ್ವರ ಎಂಬ ಹೆಸರಿದೆ. ಆದರೆ, ಪಪಾಟಾಸಿಯೈ ಅಲ್ಲದೆ ಫ್ಲೀ. ಆರ್ಜೆಂಟಿಪಿಸ್, ಫ್ಲೀ. ಸಾರ್ಜೆಂಟ್ ಮುಂತಾದ ಪ್ರಭೇದಗಳೂ ರೋಗವನ್ನು ಹರಡುತ್ತವೆ. ಇದಲ್ಲದೆ ಉಷ್ಣವಲಯ ವ್ರಣ (ಟ್ರಾಪಿಕಲ್ ಸೋರ್, ಡೆಲ್ಲಿ ಬಾಯಿಲ್ ಮತ್ತು ಕಾಳಜ್ವರ (ಕಾಲ ಆಜಾರ್) ಇವುಗಳ ಹರಡುವಿಕೆಗು ಮರಳು ಸೊಳ್ಳೆಗಳು ಕಾರಣವಾಗಿವೆ.

ಮರಳು ಸೊಳ್ಳೆ ಸಾಧಾರಣ ಸೊಳ್ಳೆಗಿಂತ ಚಿಕ್ಕದು. ಯೂರೋಪ್, ಏಷ್ಯಾ ಮತ್ತು ಆಫ್ರಿಕ ಖಂಡಗಳಲ್ಲಿ ಕಂಡುಬರುತ್ತದೆ. ಮೆಡಿಟರೇನಿಯನ್ ಸಮುದ್ರದ ಸುತ್ತಣ ತೀರ, ಅಲ್ಲಿಂದ ಪೂರ್ವಕ್ಕೆ ಪಾಕಿಸ್ತಾನ, ಚೀನಾ ಮತ್ತು ಬರ್ಮ ಪ್ರಾಂತ್ಯಗಳಲ್ಲಿ ಈ ಕೀಟ ಸಾಮಾನ್ಯ. ಪಾಕಿಸ್ತಾನದ ಚಿತ್ರಾಲ್‌ನಲ್ಲಿ ಇದರ ಹಾವಳಿ ಹೆಚ್ಚಾಗಿದ್ದು ರೋಗ ಅಲ್ಲಿ ಪಿಡುಗಾಗಿದೆ (ಎಂಡೆಮಿಕ್). ಬೇಸಿಗೆ ಮತ್ತು ಮಳೆಗಾಲ ಆರಂಭವಾಗುವಾಗ ಈ ಸೊಳ್ಳೆಗಳ ಸಂಖ್ಯಾಭಿವೃದ್ಧಿ ಆಗುತ್ತದೆ. ಇವುಗಳ ಹಾವಳಿ ಅನುಸರಿಸಿ ರೋಗದ ವ್ಯಾಪಕತೆ ಇರುತ್ತದೆ. ಮಲೇರಿಯಾದಂತೆ ಇಲ್ಲಿಯು ಗಂಡು ಸೊಳ್ಳೆ ನಿರುಪದ್ರವಿ. ಹೆಣ್ಣುಸೊಳ್ಳೆ ಮಾತ್ರ ರಕ್ತಾಹಾರಿ ಅರ್ಥಾತ್ ರೋಗಕಾರಕ. ಸಾಮಾನ್ಯವಾಗಿ ನಿಶಾಚರಿಯಾಗಿದ್ದರೂ, ಮನೆಯೊಳಗೆ ಕತ್ತಲು ಸ್ಥಳಗಳಲ್ಲಿದ್ದು, ಹಗಲಿನಲ್ಲಿಯೂ ಹೆಣ್ಣು ಸೊಳ್ಳೆ ಕಡಿಯುವುದು. ಬಚ್ಚಲಿನಲ್ಲಿ ಅಥವಾ ಕಲ್ಲು ಚಪ್ಪಡಿಗಳ ಸಂದಿಯಲ್ಲಿ ಅಡಗಿದ್ದು, ಅಲ್ಲಿ ಸೇರುವ ಕಸದಲ್ಲಿ ಮೊಟ್ಟೆ ಇಟ್ಟು ಸಂಖ್ಯಾಭಿವೃದ್ಧಿ ಮಾಡುತ್ತದೆ. ಹೆಣ್ಣುಸೊಳ್ಳೆ ರೋಗಿಯನ್ನು ಕಡಿದು ರಕ್ತ ಹೀರಿದ ಮೇಲೆ ಇನ್ನೊಬ್ಬ ವ್ಯಕ್ತಿಯನ್ನು ಕಡಿದಾಗ ಅದರ ಬಾಯಿಯಿಂದ ಒಸರುವ ಲಾಲಾರಸದೊಡನೆ ರೋಗಾಣು ಹೊರಬಂದು, ಸೋಂಕಿಗೆ ಕಾರಣವಾಗುತ್ತದೆ. ರೋಗಾಣುಗಳನ್ನು ಧರಿಸಿರುವ ಇಂಥ ಸೊಳ್ಳೆ ತನ್ನ ಸಂತಾನಕ್ಕೂ ಅವನ್ನು ವರ್ಗಾಯಿಸುವುದರಿಂದ ಆ ಮೂಲಕ ರೋಗ ಹರಡಬಹುದು. ಮರಳು ಸೊಳ್ಳೆ ಜ್ವರವೇ ಇರದ ಕಡೆ ಆನುವಂಶಿಕವಾಗಿ ಕ್ರಿಮಿಯನ್ನು ಪಡೆದಿರುವ ಇಂಥ ಸೊಳ್ಳೆಗಳ ಕಡಿತದಿಂದ ಹೊಸದಾಗಿ ಜ್ವರ ಕಂಡುಬರಬಹುದು.

ರೋಗಕಾರಕ ವೈರಸ್ ಹೊಂದಿದ ಕೀಟ ಆರೋಗ್ಯವಂತರನ್ನು ಕಡಿದ 3–6 ದಿವಸಗಳ ಬಳಿಕ, ಯಾವುದೇ ರೋಗ ಲಕ್ಷಣಗಳನ್ನು ವ್ಯಕ್ತಪಡಿಸದೆ ರೋಗ ತಲೆದೋರುತ್ತದೆ. ಜ್ವರ ಹೆಚ್ಚಾಗಿದ್ದು ($39.5^0$–$40.5^0$ಸೆ.), ಮೈ ಕೈ ನೋವು, ಬೆನ್ನುನೋವು, ತಲೆನೋವುಗಳಿಂದ ಇದು ಇನ್‌ಫ್ಲೂಯೆಂಜದಂತೆ ಕಂಡುಬಂದರೂ, ನೆಗಡಿ ಕೆಮ್ಮುಗಳಿರುವುದಿಲ್ಲ. ಆದರೆ ಕಣ್ಣು ಕೆಂಪೇರುವುದು, ಕಣ್ಣಿನಲ್ಲಿ ನೀರು ಸುರಿಯುವುದು, ಬೆಳಕಿನಲ್ಲಿ ಕಣ್ಣು ತೆರೆಯಲಾಗದು. ಕಣ್ಣುಗುಡ್ಡೆ ಚಲಿಸಿದಾಗ ನೋವಾಗುವುದು. ಹಸಿವಾಗದಿರುವುದು, ವಾಕರಿಕೆ, ವಾಂತಿ ಇತರ ಲಕ್ಷಣಗಳು. ದಡಾರ, ಟೈಫಸ್ ಮುಂತಾದ ಜ್ವರಗಳಲ್ಲಿ ದದ್ದು, ಗಳಲೆಗಳು ಕಂಡುಬರುತ್ತವೆ. ಆದರೆ, ಈ ಜ್ವರದಲ್ಲಿ ಇಂಥ ಲಕ್ಷಣಗಳ್ಯಾವುವೂ ಪ್ರಕಟವಾಗುವುದಿಲ್ಲ. ಜ್ವರ ಕಾಣಿಸಿಕೊಳ್ಳುವ ಮುಂಚೆ ಒಂದು ದಿನ, ಜ್ವರ ಬಂದಮೇಲೆ ಕಡೆಪಕ್ಷ ಒಂದು ದಿನ ವ್ಯಕ್ತಿಯ ರಕ್ತದಲ್ಲಿ ರೋಗಾಣುಗಳಿರುತ್ತವೆ. ಈ ವೇಳೆ ಮರಳು ಸೊಳ್ಳೆ ಕಡಿದರೆ ರೋಗಾಣು ಅದರ ದೇಹದ ಒಳಹೊಕ್ಕು ಬೇರೆಯವರನ್ನು ಅದು ಕಡಿದಾಗ ರೋಗ ಹರಡುತ್ತದೆ.

ಮರಳುಸೊಳ್ಳೆ ಜ್ವರ ಮಾರಕ ರೋಗವಲ್ಲ. 3–5 ದಿವಸಗಳಲ್ಲಿ ತಾನಾಗಿಯೇ ವಾಸಿ ಆಗುತ್ತದೆ. ಹಠಾತ್ತನೆ ಬೆವರಿ, ಜ್ವರ ಇಳಿದುಬಿಡುತ್ತದೆ. ಈ ವೇಳೆ ಮೂಗಿನಿಂದ ರಕ್ತಸ್ರಾವ ಆಗಬಹುದು. ಆತಂಕಪಡಬೇಕಾದ ಸ್ಥಿತಿ ಇಲ್ಲ. ಜ್ವರ ಇರುವ ಕಾಲದಲ್ಲಿ ತಕ್ಷಣ ಚಿಕಿತ್ಸೆ ನೀಡುವುದು ರೂಢಿ. ಜ್ವರ ಕಡಿಮೆಯಾದರೆ ರೋಗದಿಂದ ನಿಶ್ಶಕ್ತನಾದ ರೋಗಿ ಚೇತರಿಸಿಕೊಳ್ಳಲು ಸಮಯಬೇಕು. ಚೇತರಿಸಿಕೊಂಡು ರೋಗಿ ಸಾಮಾನ್ಯವಾಗಿ ಶೀಘ್ರದಲ್ಲಿ, ಇನ್ನೊಂದು ಸಲ ಇದೇ ಜ್ವರದಿಂದ ಪೀಡಿತನಾಗುವುದಿಲ್ಲ, ಆದರೆ, ಈ ಜ್ವರದ ವೈರಸ್ ದೀರ್ಘಕಾಲಿಕ ಪ್ರತಿರೋಧಕ ವಸ್ತುವನ್ನು ಉತ್ಪಾದಿಸಲಾರದು.

(ಎಸ್.ಆರ್.ಆರ್.)

**ಮರುಭೂಮಿಯ ಪ್ರಾಣಿಗಳು:** ಅಧಿಕ ಉಷ್ಣತೆ ಮತ್ತು ಬಾಷ್ಪೀಕರಣ, ಅತ್ಯಲ್ಪಮಳೆ, ನೀರಿನ ಅಭಾವ, ವಿರಳವಾದ ಸಸ್ಯವರ್ಗ ಮತ್ತು ಮರಳಿನಿಂದಾವೃತವಾದ ಪ್ರದೇಶ ಇವು ಮರುಭೂಮಿಯ ಮುಖ್ಯ ಲಕ್ಷಣಗಳು. ಮರುಭೂಮಿಗಳನ್ನು ಮೂರು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

1. ಉಷ್ಣವಲಯದ ಮರುಭೂಮಿ ಉದಾ : ಸಹರಾ, 2. ಮದ್ಯ ಅಕ್ಷಾಂಶಗಳಲ್ಲಿರುವ ಖಂಡಾಂತರ ಮರುಭೂಮಿಗಳು ಉದಾ : ಗೋಬಿ ಮತ್ತು ಟರ್ಕಿ ಮತ್ತು 3. ಅತಿ ಶೀತ ಮರುಭೂಮಿ ಉದಾ : ಟಂಡ್ರಾ

ಉಷ್ಣವಲಯದ ಮರುಭೂಮಿಗಳು ಅತ್ಯಂತ ವಿಶಾಲವಾಗಿದ್ದು ವೈವಿಧ್ಯವಾಗಿವೆ. ಈ ಮರುಭೂಮಿಗಳು ಸಮಭಾಜಕ ವೃತ್ತದಿಂದ $12^0$ ಯಿಂದ $32^0$ ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳ ಮಧ್ಯೆ ವಿಸ್ತಾರವಾಗಿ ಹರಡಿಕೊಂಡಿವೆ. ಪ್ರಪಂಚದ ಪ್ರಮುಖ ಮರುಭೂಮಿಗಳಾದ ಉತ್ತರ ಆಫ್ರಿಕಾದ ಸಹರಾ, ಸೋಮಾಲಿ, ದಕ್ಷಿಣ ಆಫ್ರಿಕಾದ ಕಲಹರಿ, ಸೌದಿ ಅರೇಬಿಯಾದ ಅರೇಬಿಯನ್ ಮರುಭೂಮಿ, ಭಾರತದ ಥಾರ್ ಮರುಭೂಮಿ, ಉತ್ತರ ಅಮೆರಿಕದ ಆರಿಜೋನಾ ಮತ್ತು ದಕ್ಷಿಣ ಅಮೇರಿಕಾದ ಆಟಕಾಮಾ ಮುಂತಾದವು ಈ ವಲಯದಲ್ಲಿ ಕಂಡುಬರುತ್ತವೆ. ಉಷ್ಣವಲಯದ ಮರುಭೂಮಿಗಳ ವಾಯುಗುಣವು ಶುಷ್ಕವಾಗಿದ್ದು, ವಾರ್ಷಿಕ ಸರಾಸರಿ ಮಳೆಯು ಕೇವಲ 10 ರಿಂದ 25 ಸೆಂಮೀ ಗಳಷ್ಟಿರುವುದು. ಆಕಾಶವು ಮೋಡರಹಿತವಾಗಿದ್ದು

ಬಿಸಿಲು ಅತ್ಯಂತ ಪ್ರಖರವಾಗಿರುತ್ತದೆ. ಕೆಲವು ಮರುಭೂಮಿಗಳಲ್ಲಿ ಬೇಸಿಗೆಯಲ್ಲಿ ಮಳೆಯಾದರೆ (ಹುಲ್ಲುಗಾವಲಿಗೆ ಹೊಂದಿಕೊಂಡ ಮರುಭೂಮಿಗಳಲ್ಲಿ) ಕೆಲವು ಕಡೆ ಚಳಿಗಾಲದಲ್ಲಿ ಮಳೆ ಬೀಳುತ್ತದೆ (ಮೆಡಿಟರೇನಿಯನ್ ಪ್ರದೇಶಗಳ ಸಮೀಪವಿರುವ ಮರುಭೂಮಿಗಳಲ್ಲಿ).

ಮರುಭೂಮಿಯ ಗೋಸುಂಬೆ

ಬೇಸಿಗೆ ಗರಿಷ್ಠ ಪ್ರಮಾಣದ ಉಷ್ಣತೆಯನ್ನು (ಸು. 38$^0$ಸೆ.) ಹೊಂದಿದರೆ ಚಳಿಗಾಲದಲ್ಲಿ ಸು. 8$^0$ಸೆ. ಕ್ಕಿಂತ ಕಡಿಮೆ ಉಷ್ಣತೆ, ಮೈಕೊರೆಯುವ ಚಳಿ ಇರುತ್ತವೆ. ಕೆಲವು ಬಾರಿ ಹಗಲಿನ ಉಷ್ಣತೆ 57$^0$ ಸೆ ಗಳಿಗಿಂತಲೂ ಹೆಚ್ಚಾಗಿ ರಾತ್ರಿಯ ವೇಳೆ ಇದಕ್ಕೆ ಪ್ರತಿಯಾಗಿ ಅತ್ಯಂತ ಶೀತ ಹವಾಮಾನವಿದ್ದು, ಸಸ್ಯಗಳ ಮೇಲೆ ನೀರು ಶೇಖರವಾಗುತ್ತದೆ. ಬೇಸಿಗೆಯ ಅವಧಿಯಲ್ಲಿ ಧೂಳು ಮಿಶ್ರಿತ ಬಿರುಗಾಳಿಗಳು ಬೀಸುತ್ತವೆ.

ನಮೀಬ್ ದುಂಬಿ

ಸಾಮಾನ್ಯವಾಗಿ ಮರುಭೂಮಿಗಳಲ್ಲಿ ಪ್ರಾಣಿ ಹಾಗು ಸಸ್ಯವೈವಿಧ್ಯ ಬಹಳ ಸೀಮಿತ. ಒಂಟೆ ಇಲ್ಲಿಯ ಪ್ರಮುಖ ಪ್ರಾಣಿಯಾದರೆ, ಓಯಸಿಸ್‌ಗಳಿರುವ ಕಡೆಗಳಲ್ಲಿ ಹೇಸರಗತ್ತೆ, ಕುರಿ, ಮೇಕೆ, ಕುದುರೆ ಮುಂತಾದ ಸಾಕುಪ್ರಾಣಿಗಳು ಹಾಗು ನರಿ, ತೋಳ, ಜಿರಾಫೆ, ಆಂಟಿಲೋಪ್, ಚಿಂಕೆ, ತೋಳ ಮೊದಲಾದವು ಕುರುಚಲು ಗಿಡಗಳ ಪೊದೆಗಳಲ್ಲಿ ವಾಸಿಸುತ್ತವೆ. ಇವಲ್ಲದೆ ಕೆಲವು ಕೀಟಗಳು, ಮುಳ್ಳಿನ ಹಂದಿ, ಆನೆಮುಖದ ಇಲಿಗಳು, ರಣಹದ್ದುಗಳು ಕೂಡ ಇರುತ್ತವೆ.

ಉಷ್ಣವಲಯದ ಮರುಭೂಮಿಯಲ್ಲಿ ವಾಸಿಸುವ ಜನರು (ಮೂಲನಿವಾಸಿಗಳು) ಅಲೆಮಾರಿಗಳಾಗಿದ್ದು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವರು. ಇವರು ಅತ್ಯಂತ ಶಕ್ತಿಶಾಲಿಗಳು, ಧೈರ್ಯಶಾಲಿಗಳಾಗಿದ್ದು ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಣೆಗಳು ಇವರ ವೃತ್ತಿಗಳಾಗಿವೆ. ನೀರಿನ ಕೊರತೆ ಇರುವುದರಿಂದ ಮುಂಜಾನೆ ಎಲೆಗಳ ಮೇಲೆ ನಿಂತ ಮಂಜಿನ ಹನಿಯನ್ನು ಸಂಗ್ರಹಿಸುತ್ತಾರೆ. ಒಂಟೆ, ಕತ್ತೆ, ಕುದುರೆಗಳೇ ಇವರ ಆಸ್ತಿಯಾಗಿವೆ. ಪಶ್ಚಿಮ ಸಹರಾ ಮರುಭೂಮಿಯ ಚೌರೇಜ ಅರೇಬಿಯಾ ಮರುಭೂಮಿಯ ಬೆಡೋಯಿಸ್ ಆಸ್ಟ್ರೇಲಿಯಾ ಮರುಭೂಮಿಯ ಬಿಂಡಿಬಸ್ ಪ್ರಮುಖ ಮೂಲನಿವಾಸಿಗಳಾಗಿದ್ದಾರೆ. ಓಯಾಸಿಸ್, ಹಾಗು ಸುತ್ತಲೂ ನೆಲೆಸಿರುವ ಜನರು ಖಾಯಂ ವಸತಿಗಳನ್ನು ನಿರ್ಮಿಸಿಕೊಂಡು ವ್ಯವಸಾಯವನ್ನು ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದಾರೆ.

ಶೀತ ಮರುಭೂಮಿ ಪ್ರದೇಶಗಳು: ಶೀತಮರುಭೂಮಿ ಅಥವಾ ಟಂಡ್ರಾ ಪ್ರದೇಶಗಳು ಉತ್ತರ ಗೋಳಾರ್ಧದಲ್ಲಿ 70$^0$ ಇಂದ 90$^0$ ಉತ್ತರ ಅಕ್ಷಾಂಶಗಳ ಮಧ್ಯೆ ಅಗಾಧವಾದ ಹಿಮರಾಶಿಯಿಂದಾವೃತವಾದ ಪ್ರದೇಶಗಳಾಗಿವೆ. ಈ ಪ್ರದೇಶಗಳಲ್ಲಿ ಸುಮಾರು ನೂರಾರು ಮೀಟರ್ ಅಡಿ ದಪ್ಪನೆಯ ಹಿಮಪದರು ಇದೆ. ಅಲ್ಪಾವಧಿ ಬೇಸಿಗೆಯಲ್ಲಿ ಟಂಡ್ರಾ ಮಾದರಿಯ ಸಸ್ಯವರ್ಗ ಕಾಣಿಸಿಕೊಳ್ಳುವುದು. ಈ ಪ್ರದೇಶಗಳು ಗ್ರೀನ್‌ಲ್ಯಾಂಡ್, ಫಿನ್‌ಲ್ಯಾಂಡ್, ಐಸ್‌ಲ್ಯಾಂಡ್, ಅಲಾಸ್ಕಾ, ಕೆನಡಾ ಉತ್ತರಭಾಗ, ಉತ್ತರ ಸೈಬೇರಿಯಾ ಮತ್ತು ಅಂಟಾರ್ಟಿಕಾ ಖಂಡಗಳಲ್ಲಿ ಕಂಡುಬರುತ್ತವೆ. ಈ ಪ್ರದೇಶಗಳಲ್ಲಿ ದೀರ್ಘಾವಧಿಯ ಚಳಿಗಾಲ ಮತ್ತು ಅಲ್ಪಾವಧಿ ಬೇಸಿಗೆ ಕಾಲಗಳು ಇವೆ. ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ಪ್ರದೇಶಗಳಲ್ಲಿ ಅನೇಕ ವಾರಗಳವರೆಗೆ ಅಂಧಕಾರವಿರುತ್ತದೆ. ಚಳಿಗಾಲದಲ್ಲಿ ಉಷ್ಣಾಂಶ –30$^0$ಸೆ ಯಿಂದ –40$^0$ ಸೆ ವರೆಗಿದ್ದು ಪ್ರತೀ ಗಂಟೆಗೆ 200 ಕಿಮೀ ಗಳಷ್ಟು ವೇಗವಾಗಿ ಹಿಮಗಾಳಿಗಳು ಬೀಸುತ್ತವೆ ಮತ್ತು ಸಾಮಾನ್ಯವಾಗಿ ಹಿಮವೃಷ್ಟಿಯಾಗುವುದು. ಬೇಸಿಗೆ ಕಾಲದ ಉಷ್ಣಾಂಶ ಕೇವಲ 10$^0$ ಸೆ ವಾರ್ಷಿಕ ಸರಾಸರಿ ಮಳೆ 25 ಸೆಂಮೀ ಗಿಂತಲೂ ಕಡಿಮೆ. ಬೇಸಿಗೆಯಲ್ಲಿ ಮಾತ್ರ ಮಳೆಯಾಗುವುದು.

ಈ ಪ್ರದೇಶಗಳು ಪ್ರಾಣಿಗಳ ಜೀವನಕ್ಕೆ ಹೆಚ್ಚು ಅನುಕೂಲವಾಗಿಲ್ಲ. ಆದರೂ ಕೂಡ ಈ ವಾಯುಗುಣಕ್ಕೆ ಹೊಂದಿಕೊಳ್ಳುವಂತಹ ದಪ್ಪ ತುಪ್ಪಳವನ್ನು ಹೊಂದಿರುವ ಪ್ರಾಣಿಗಳಾದ ಹಿಮಕರಡಿ, ಹಿಮಸಾರಂಗ, ಕಸ್ತೂರಿಮೃಗ, ಹಿಮನಾಯಿ, ಹಿಮನರಿ ಮುಂತಾದವು ಇಲ್ಲಿ ಜೀವಿಸುತ್ತವೆ. ಸಮುದ್ರದಲ್ಲಿ ತಿಮಿಂಗಲ ಮತ್ತು ಸೀಲ್ ಪ್ರಾಣಿಗಳು ಜೀವಿಸುತ್ತವೆ. ಈ ಪ್ರದೇಶದ ಜನರಿಗೆ ಹಿಮಸಾರಂಗವು ಆಹಾರ ಮತ್ತು ಬಟ್ಟೆಯನ್ನು ಒದಗಿಸುವುದಲ್ಲದೆ, ಸಾರಿಗೆಯ ಸಾಧನವೂ ಆಗಿದೆ.

ಟಂಡ್ರಾ ಅಥವಾ ಶೀತ ಮರುಭೂಮಿಗಳಲ್ಲಿನ ಜನರ ಜೀವನ ಕರಾವಳಿ ತೀರಗಳಿಗೆ ಮಾತ್ರ ಸೀಮಿತವಾಗಿದೆ. ಎತ್ತರವಾದ ಪ್ರದೇಶಗಳು ಸದಾಕಾಲ ಹಿಮಚ್ಛಾದಿತವಾಗಿರುವುದರಿಂದ ಜನಜೀವನಕ್ಕೆ ಯೋಗ್ಯವಾಗಿಲ್ಲ. ಇಲ್ಲಿ ವಾಸಿಸುವ ಜನ ಅಲೆಮಾರಿ ಜೀವನ ನಡೆಸುತ್ತಾರೆ ಮತ್ತು ಇಲ್ಲಿನ ಪ್ರತಿಕೂಲ ವಾಯುಗುಣಕ್ಕೆ ಹೊಂದಿಕೊಂಡಿದ್ದಾರೆ. ಇವರು ಬೇಟೆಗಾರಿಕೆ, ಮೀನುಗಾರಿಕೆ ಮತ್ತು ಆಹಾರ ಸಂಗ್ರಹಣೆಯನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಗ್ರೀನ್‌ಲ್ಯಾಂಡ್‌ನ ವಾಯುವ್ಯ ದಿಕ್ಕಿನ ಥುಲೆ ಎಂಬಲ್ಲಿ ವಾಸಿಸುತ್ತಿರುವ ಎಸ್ಕಿಮೋಗಳು ತಮ್ಮ ಪೂರ್ವಜರಂತೆ ಇಂದಿಗೂ ಅನಿಶ್ಚಿತ ಬದುಕನ್ನು ನಡೆಸುತ್ತಿದ್ದಾರೆ ಮತ್ತು ಚಳಿಗಾಲದಲ್ಲಿ ಹಿಮದ ಗಟ್ಟಿಗಳಿಂದ ತಯಾರಿಸಿದ ಇಗ್ಲೂಗಳಲ್ಲಿ ವಾಸಿಸುತ್ತಾರೆ. ಬೇಸಿಗೆ ಕಾಲದಲ್ಲಿ ನೀರಿನ ಝರಿಗಳಿರುವ ಕಡೆಗಳಲ್ಲಿ ಡೇರೆಗಳಲ್ಲಿ ವಾಸಿಸುತ್ತಾರೆ. ಇವರು ಹೆಚ್ಚಾಗಿ ಮಾಂಸಹಾರಿಗಳಾಗಿದ್ದು ಸೀಲ್, ವಾಲ್ರಸ್ ಮತ್ತು ಮೀನುಗಳನ್ನು ತಿನ್ನುತ್ತಾರೆ. ಕೆಲವು ಎಸ್ಕಿಮೊ ಜನಾಂಗದವರು ತಮ್ಮ ದಿನನಿತ್ಯದ ಬೇಡಿಕೆಯನ್ನು ಪೂರೈಸಲು ಸಾರಂಗಗಳ ಬೇಟೆಯಾಡಿ, ಈ ಪ್ರಾಣಿಯ ಚರ್ಮ, ಮಾಂಸ, ಹಾಲು, ಕೊಬ್ಬು, ಎಲುಬುಗಳನ್ನು ಬಳಸುತ್ತಾರೆ.

ಮುಖ್ಯವಾಗಿ ಹಗಲಿನ ಅಧಿಕ ಉಷ್ಣತೆ ಮತ್ತು ನೀರಿನ ಅಭಾವಗಳನ್ನು ಎದುರಿಸಲು ಮಾರ್ಪಾಡುಗಳ ಅವಶ್ಯಕತೆ ಇದೆ. ಮರುಭೂಮಿಯ ಪರಿಸರಕ್ಕೆ ಚೆನ್ನಾಗಿ ಹೊಂದಿಕೊಂಡಿರುವ ಒಂಟೆ, ಹಗಲಿನಲ್ಲಿ ದೇಹದ ಉಷ್ಣತೆಯನ್ನು ಕಡಿಮೆ ಮಾಡಿಕೊಳ್ಳಲು ನೀರಿನ ಭಾಷ್ಪೀಕರಣವನ್ನು ಉಪಯೋಗಿಸದೆ ದೇಹದ ಉಷ್ಣಾಂಶವನ್ನು ಸ್ವಲ್ಪ ಹೆಚ್ಚಿಸಿಕೊಳ್ಳುವುದರ ಮೂಲಕ ನೀರಿನ ಉಳಿತಾಯ ಮಾಡುತ್ತದೆ. ರಾತ್ರಿವೇಳೆ, ಪರಿಸರದ ತಾಪಮಾನ ಕಡಿಮೆ ಇರುವುದರಿಂದ, ನೀರಿನ ಬಾಷ್ಪೀಕರಣವಿಲ್ಲದೆ, ಸಂವಹನ ಮತ್ತು ವಿಕಿರಣಗಳ ಮೂಲಕ ಹೆಚ್ಚಿನ ಶಾಖವನ್ನು ಪರಿಸರಕ್ಕೆ ಕಳೆದುಕೊಂಡು ದೇಹ ಸಾಮಾನ್ಯ ತಾಪಮಾನಕ್ಕೆ ಹಿಂದಿರುಗುತ್ತದೆ. ಇದೇ ರೀತಿ ದೇಹದ ಉಷ್ಣತೆಯ ಚಕ್ರವನ್ನು ನೀರಿನ ಅಭಾವವಿದ್ದಾಗ, ಪ್ರತಿದಿನ ತೋರಿಸುತ್ತದೆ. ಆದರೆ ಸಾಕಷ್ಟು ನೀರು ಲಭ್ಯವಿದ್ದಾಗ, ಒಂಟೆ ತನ್ನ ದೇಹದ ತೂಕದ 1/3 ಭಾಗಕ್ಕೆ ಸಮನಾಗಿ (ಸು. 200 ಲೀ.) ನೀರನ್ನು ಕುಡಿದು, ದೇಹದ ಕೋಶಗಳ ನಿರ್ಜಲೀಕರಣ (ಡಿಹೈಡ್ರೇಶನ್) ವನ್ನು ಸರಿಪಡಿಸಿಕೊಳ್ಳುತ್ತದೆ. ಆದರೆ, ಒಂಟೆಯ ದೇಹದಲ್ಲಿ ನೀರಿನ ಶೇಖರಣೆಗಾಗಿ ಯಾವುದೇ ವಿಶೇಷ ರಚನೆಯಿಲ್ಲ.

ಸರೀಸೃಪಗಳು (ರೆಪ್ಟೈಲ್ಸ್) (ಉದಾ : ಮರುಭೂಮಿ ಹಲ್ಲಿಗಳು, ಮರುಭೂಮಿ ಆಮೆಗಳು) ನೀರನ್ನು ತಮ್ಮ ದೇಹದಲ್ಲಿನ ಖಾಲಿ ಜಾಗಗಳಲ್ಲಿ (ಕ್ಯಾವಿಟಿ) ತುಂಬಿಕೊಳ್ಳುತ್ತವೆ. ಸಾಮಾನ್ಯವಾಗಿ ಮರುಭೂಮಿಗಳಲ್ಲಿ ಉಭಯವಾಸಿಗಳು ಇರುವುದಿಲ್ಲ. ಏಕೆಂದರೆ ಅವುಗಳಿಗೆ ನೀರಿನ ಶೇಖರಣೆಯ ಸಾಮರ್ಥ್ಯ ಇರುವುದಿಲ್ಲ. ಆದರೂ ಕೂಡ ಆಸ್ಟ್ರೇಲಿಯಾದ ಮರುಭೂಮಿಗಳಲ್ಲಿ ಉಭಯವಾಸಿ ಜೀವಿಗಳು ಇವೆ. ಕೈರೋಲೆಪ್ಸ್ ಎಂಬ ಮರುಭೂಮಿ ಕಪ್ಪೆ ಇದ್ದು ಆ ಕಪ್ಪೆಯು ಮರಳಿನ ಒಳಗೆ

ಅಂದರೆ ಒಂದು ಅಡಿ ಒಳಗೆ ಜೀವಿಸುತ್ತಿದ್ದು, ಈ ಕಪ್ಪೆಯು ಮಳೆಗಾಲದಲ್ಲಿ ನೀರನ್ನು ತನ್ನ ದೇಹದಲ್ಲಿ ಶೇಖರಿಸಿಕೊಂಡಿರುತ್ತದೆ ಮತ್ತು ಆ ನೀರಿನ ಸಹಾಯದಿಂದ ಆ ಪ್ರಾಣಿಯ ಮರಳಿನಿಂದ ಗೂಡನ್ನು ಮಾಡಿಕೊಂಡು ಜೀವಿಸುತ್ತದೆ.

ಮರುಭೂಮಿಯಲ್ಲಿ ಅತಿ ಉಷ್ಣಾಂಶವಿದ್ದು ಅತಿ ಬಾಷ್ಪೀಕರಣದಿಂದ ನೀರಿನ ಅಭಾವವಾಗುತ್ತದೆ. ಆದಕಾರಣ ಅಲ್ಲಿನ ಪ್ರಾಣಿಗಳು ಬಾಷ್ಪೀಕರಣ ತಡೆಗಟ್ಟಲು ರಾತ್ರಿ ಹೊತ್ತು ಕ್ರಿಯಾಶೀಲವಾಗಿರುತ್ತವೆ. ಹಗಲಿನಲ್ಲಿ ಸೂರ್ಯನ ಕಿರಣಗಳ ಶಾಖದಿಂದ ಮರುಭೂಮಿಯಲ್ಲಿನ ಉಷ್ಣಾಂಶ ಅಧಿಕವಾಗುತ್ತದೆ. ಆದುದರಿಂದ ಈ ಪ್ರಾಣಿಗಳು ತಮ್ಮ ಬಿಲಗಳಲ್ಲಿ ಬಚ್ಚಿಕೊಂಡಿರುತ್ತವೆ. ಇನ್ನೂ ಕೆಲವು ಪ್ರಾಣಿಗಳು ದಪ್ಪನೆಯ ಚರ್ಮವನ್ನು ಹೊಂದಿರುತ್ತವೆ. ಉದಾ: ಮರುಭೂಮಿ ಜೀರುಂಡೆ, ಹುಲಿ ಜೀರುಂಡೆ ಮುಂತಾದವು. ನಿಶಾಚರ ಪ್ರಾಣಿಗಳಾದ ಮರುಭೂಮಿ ಗೂಬೆಗಳು, ಮರುಭೂಮಿ ತೋಳಗಳು, ಜೇಡರ ಚೇಳುಗಳು ಇನ್ನೂ ಮುಂತಾದ ಪ್ರಾಣಿಗಳು ರಾತ್ರಿಯ ವೇಳೆಯಲ್ಲಿ ಆಹಾರ ಹುಡುಕಲು ಹೊರಡುತ್ತವೆ. ಇದರಿಂದ ಆ ಪ್ರಾಣಿಗಳು ಸೂರ್ಯನ ಕಿರಣಗಳಿಂದ ತಪ್ಪಿಸಿಕೊಳ್ಳುತ್ತವೆ ಮತ್ತು ತಮ್ಮಲ್ಲಿರುವ ನೀರಿನಾಂಶವನ್ನು ಕಾಪಾಡಿಕೊಳ್ಳುತ್ತವೆ.

ಕಂಟಕ ದೆವ್ವ ಹಲ್ಲಿ

ನಮೀಬ್ ಹಲ್ಲಿ

ಕೆಲವು ಮರುಭೂಮಿಯ ಪ್ರಾಣಿಗಳು ಬರಗಾಲದಲ್ಲಿ ತಮ್ಮ ತಮ್ಮ ಆವಾಸಸ್ಥಾನಗಳಿಂದ ಹೊರಕ್ಕೆ ಬರದೆ ಅಲ್ಲಿಯೇ ನಿದ್ರಾವಸ್ಥೆಯಲ್ಲಿರುತ್ತವೆ. ಆ ಸಮಯದಲ್ಲಿ ಆ ಪ್ರಾಣಿಗಳು ಯಾವುದೇ ರೀತಿಯ ಆಹಾರವನ್ನು ಸೇವಿಸುವುದಿಲ್ಲ. ಯಾವುದೇ ರೀತಿಯ ಬೆಳವಣಿಗೆಯನ್ನು ಹೊಂದುವುದಿಲ್ಲ. ಸಂತಾನೋತ್ಪತ್ತಿ ಕಾರ್ಯದಲ್ಲಿ ಭಾಗಿಯಾಗುವುದಿಲ್ಲ. ಈ ದೀರ್ಘ ನಿದ್ರೆ ಮುಗಿದ ಅನಂತರ, ಆ ಪ್ರಾಣಿಗಳು ತಮ್ಮ ಆವಾಸಸ್ಥಾನದಿಂದ ಹೊರಬಂದು ತಮ್ಮ ದೈನಂದಿನ ಜೀವನದಲ್ಲಿ ಭಾಗಿಯಾಗುತ್ತವೆ.

ಇಲ್ಲಿನ ಪ್ರಾಣಿಗಳು ಮರಳಿನಲ್ಲಿ ಚಲಿಸುವುದಕ್ಕೆ ಒಪ್ಪುವಂತಹ ಕಾಲಿನ ಪಾದದ ರಚನೆಯನ್ನು ಹೊಂದಿವೆ. ಉದಾ : ಒಂಟೆಯ ಕಾಲಿನ ಬೆರಳು ಎರಡರ ಸಂಖ್ಯೆಯಲ್ಲಿದೆ ಮತ್ತು ಆಂಟಿಲೋಪ್ ಜಿಂಕೆಯ ಕಾಲಿನ ಬೆರಳು ಒಂದರ ಸಂಖ್ಯೆಯಲ್ಲಿದೆ. ಈ ರೀತಿಯ ಮಾರ್ಪಾಡುಗಳಿಂದ ಆ ಪ್ರಾಣಿಗಳು ಮರುಳುಗಾಡಿನಲ್ಲಿ ಆರಾಮವಾಗಿ ಚಲಿಸುತ್ತವೆ ಮತ್ತು ಅಲ್ಲಿನ ಪ್ರಾಣಿಗಳ ಕಾಲಿನ ಭಾಗದ ಮೂಳೆಗಳು ಉದ್ದವಾಗಿದ್ದು, ಪ್ರಾಣಿಗಳ ಚಲನೆಗೆ ಸಹಾಯಕವಾಗಿದೆ. ಆ ಪ್ರಾಣಿಗಳ ಕಾಲಿನ ಬೆರಳಲ್ಲಿ ಉಗುರುಗಳಿರುವುದಿಲ್ಲ. ಆದಕಾರಣ ಆ ಪ್ರಾಣಿಗಳು ಮರಳನ್ನು ಸರಾಗವಾಗಿ ತಳ್ಳುತ್ತ ಮುಂದೆ ಸಾಗುತ್ತವೆ.

ಮರುಭೂಮಿಯಲ್ಲಿ ಸಸ್ಯವರ್ಗ ವಿರಳವಾಗಿದ್ದು, ಕೇವಲ ಹುಲ್ಲು ಪೊದೆಯಷ್ಟು ಎತ್ತರವಿರುತ್ತವೆ. ಅಲ್ಲಿನ ಪ್ರಾಣಿಗಳು ಅವುಗಳ ಮೇಲೆ ಅವಲಂಬಿತವಾಗಿರುತ್ತವೆ. ಈ ರೀತಿಯ ಸಸ್ಯಗಳ ಮೇಲೆ ಅವಲಂಬಿತವಾಗಿರುವ ಪ್ರಾಣಿಗಳ ಹಲ್ಲಿನ ಜೋಡಣೆಯಲ್ಲಿ ಕೆಲವು ಮಾರ್ಪಾಡುಗಳಿವೆ. ಉದಾ : ಒಂಟೆಯಲ್ಲಿನ ಹಲ್ಲಿನ ಸಂಖ್ಯೆ 34 ಇರುತ್ತದೆ. ಆದರೆ ಒಂಟೆಯ ಪೂರ್ವಜರಲ್ಲಿ ಹಲ್ಲಿನ ಸಂಖ್ಯೆ 44. ಇವುಗಳ ಮೇಲಿನ ದವಡೆಯಲ್ಲಿ 2 ಬಾಚಿ ಹಲ್ಲುಗಳು, ಎರಡು ಕಡೆಗಳಲ್ಲಿ ಕೋರೆಹಲ್ಲುಗಳಾಗಿವೆ. ಆದರೆ ಕೆಳಗಿನ ದವಡೆಹಲ್ಲಿನ ಬಾಚಿಹಲ್ಲುಗಳು ಹಾಗೇ ಇರುತ್ತವೆ. ಈ ಹಲ್ಲುಗಳು ಅಗಲವಾಗಿರುತ್ತವೆ. ಕೋರೆ ಹಲ್ಲು ಮತ್ತು ಬಾಚಿಹಲ್ಲು ಒಂದೇ ತರಹದ ಕೆಲಸವನ್ನು ಮಾಡುತ್ತವೆ. ಕೋರೆ ಹಲ್ಲು ಮತ್ತು ದವಡೆಹಲ್ಲುಗಳ ನಡುವೆ ಸ್ವಲ್ಪ ಸ್ಥಳಾವಕಾಶವಿದ್ದು, ಆ ಸ್ಥಳದಲ್ಲಿ ಯಾವುದೇ ರೀತಿಯ ಹಲ್ಲುಗಳಿಲ್ಲ. ಇದು ಒಂದು ತರಹದ ಮಾರ್ಪಾಡು. 4 ದವಡೆ ಹಲ್ಲುಗಳನ್ನು ಹೊಂದಿದ್ದು, ಅವುಗಳಲ್ಲಿ ನಾಲ್ಕನೆಯದು ಮುಂದವಡೆ ಹಲ್ಲು ಮತ್ತು ಇನ್ನುಳಿದ ಮೂರು ದವಡೆ ಹಲ್ಲುಗಳು (ಹಿಂದವಡೆ ಹಲ್ಲುಗಳು) ಬಾಚಿಹಲ್ಲು, ಕೋರೆ ಹಲ್ಲುಗಳು ಹುಲ್ಲು ಅಥವಾ ಪೊದೆಯ ಸೊಪ್ಪನ್ನು ಕೀಳಲು ಸಹಾಯ ಮಾಡುತ್ತವೆ ಮತ್ತು ದವಡೆಯ ಹಲ್ಲುಗಳು ಆ ಆಹಾರವನ್ನು ಚೆನ್ನಾಗಿ ಅರೆಯಲು ಸಹಾಯ ಮಾಡುತ್ತವೆ.

ಇಲ್ಲಿನ ಪ್ರಾಣಿಗಳ ಕಣ್ಣುಗಳು ಮರಳಿನಿಂದ ಸುಮಾರು 5 ರಿಂದ 6 ಅಡಿ ಎತ್ತರದಲ್ಲಿರುತ್ತವೆ. ಉದಾ : ಒಂಟೆ ಮತ್ತು ಮರುಭೂಮಿಯ ಉಷ್ಟ್ರಪಕ್ಷಿ, ಇವುಗಳ ಕಣ್ಣುಗಳು ನೆಲದಿಂದ ಅಂದರೆ ಮರಳಿನ ಮೇಲ್ಭಾಗದಿಂದ ಸುಮಾರು 5 ರಿಂದ 9 ಅಡಿಗಳ ಎತ್ತರದಲ್ಲಿರುತ್ತವೆ. ಈ ರೀತಿಯ ರಚನೆ ಅವುಗಳ ಕುತ್ತಿಗೆಯ ಉದ್ದದ ಮೇಲೆ ಅವಲಂಬಿಸಿರುತ್ತದೆ. ಒಂಟೆಯಲ್ಲಿ ಕುತ್ತಿಗೆಯು ಅತಿ ಉದ್ದವಾಗಿದ್ದು ಅದರ ತಲೆಯ ಭಾಗವು ಭೂಮಿಯಿಂದ ಸುಮಾರು 7 ಅಡಿಗಳ ಎತ್ತರದಲ್ಲಿ ಇರುತ್ತದೆ ಮತ್ತು ಉಷ್ಟ್ರಪಕ್ಷಿಯಲ್ಲಿ ಅದರ ಕುತ್ತಿಗೆಯು ಭೂಮಿಯಿಂದ ಐದು ಅಡಿಗಳಷ್ಟು ಎತ್ತರದಲ್ಲಿರುತ್ತದೆ. ಹೀಗೆ ಕುತ್ತಿಗೆಯ ಉದ್ದದ ಮೇಲೆ ಅವುಗಳ ತಲೆಯ ಭಾಗವು ಭೂಮಿಯಿಂದ ದೂರ ಇರುತ್ತದೆ. ಈ ರೀತಿಯ ಮಾರ್ಪಾಡುಗಳು ಆ ಪ್ರಾಣಿಗಳ ಕಣ್ಣುಗಳು ಮರಳಿನಿಂದ ಬರುವ ಶಾಖವನ್ನು ಕಣ್ಣಿಗೆ ಹೆಚ್ಚಿಗೆ ತಗಲದಂತೆ ತಡೆಯುತ್ತವೆ. ಇಲ್ಲಿ ಮರಳಿನ ಕಣಗಳು ಹೆಚ್ಚಾಗಿದ್ದು, ಆ ಮರಳಿನ ಕಣಗಳು ದೇಹವನ್ನು ಸೇರಬಾರದೆಂದು ಆ ಪ್ರಾಣಿಗಳಲ್ಲಿ ಕೆಲವು ಮಾರ್ಪಾಡುಗಳಿವೆ. ಮೂಗಿನ ಹೊಳ್ಳೆಯನ್ನು ಮೇಲ್ಭಾಗಕ್ಕೆ ಚಾಚಿಕೊಂಡಿರುತ್ತವೆ ಮತ್ತು ಆ ಮೂಗಿನ ರಂಧ್ರದಲ್ಲಿ ಒಂದು ರೀತಿಯ ಪೊರೆಯನ್ನು ಬೆಳೆಸಿಕೊಂಡಿರುತ್ತವೆ. ಉದಾ : ಒಂಟೆಯು ಮಲಗಿರುವಾಗ ಅದರ ಮೂಗಿನ ರಂಧ್ರವು ಮೇಲ್ಮುಖವಾಗಿರುತ್ತದೆ ಮತ್ತು ಆ ರಂಧ್ರವು ಕವಾಟದ ತರಹ ಮಾಡಲ್ಪಟ್ಟಿದೆ. ಈ ರೀತಿಯ ರಚನೆಯು ಆ ಪ್ರಾಣಿಯು ಮರಳಿನ ಕಣದ ಸೇವನೆಯನ್ನು ತಡೆಗಟ್ಟುತ್ತದೆ.

ಇಲ್ಲಿಯ ಜೀವಿಗಳ ಮತ್ತೊಂದು ವಿಶೇಷವೆಂದರೆ ಈ ಜೀವಿಗಳು ಆ ಪ್ರದೇಶದ ಬಣ್ಣಕ್ಕೆ ಹೊಂದಿಕೊಂಡಿರುತ್ತವೆ. ಈ ಜೀವಿಗಳ ದೇಹದ ಬಣ್ಣ ಮತ್ತು ಮರಳಿನ ಬಣ್ಣ ಎರಡೂ ಒಂದೇ ಆಗಿರುತ್ತದೆ. ಆದ್ದರಿಂದ ಈ ಪ್ರಾಣಿಗಳು ಬೇರೆ ಪ್ರಾಣಿಗಳ ಬೇಟೆಯಿಂದ ಸುಲಭವಾಗಿ ತಪ್ಪಿಸಿಕೊಳ್ಳುತ್ತವೆ. ಸಹಜವಾಗಿ ಇಲ್ಲಿನ ಪ್ರಾಣಿಗಳ ಬಣ್ಣ ಕಂದುಬಣ್ಣದ್ದಾಗಿರುತ್ತದೆ. ಉದಾ : ಇಲ್ಲಿನ ಮರುಭೂಮಿ ಮೊಲ, ಆನೆ ಮುಖದ ಇಲಿಗಳು, ಸರೀಸೃಪಗಳಾದ ಹಲ್ಲಿಗಳು, ಹಾವುಗಳು ಕಂದುಬಣ್ಣಗಳಿಂದ ಕೂಡಿದ್ದು, ಈ ಪ್ರಾಣಿಗಳು ಹೊರಗಡೆಯಿಂದ ಬಂದ ಮತ್ತು ಮಾಂಸಾಹಾರಿ ಪ್ರಾಣಿಗಳಿಂದ ತಪ್ಪಿಸಿಕೊಳ್ಳುತ್ತವೆ.

ಕೆಲವು ಮರುಭೂಮಿ ಪ್ರಾಣಿಗಳು ತುಂಬ ವಿಷಕಾರಿಗಳಾಗಿರುತ್ತವೆ. ಈ ಪ್ರಾಣಿಗಳ ದೇಹವು ಬೇರೆ ಯಾವುದೇ ಪ್ರಾಣಿಗೆ ಸೋಕಿದರೂ ಆ ಪ್ರಾಣಿಯು ಸಾಯುತ್ತದೆ. ಉದಾ : ಜೇಡರ ಹುಳುವಿಗೆ ಸಂಬಂಧಪಟ್ಟ ಕೀಟಗಳು, ಕೆಲವು ಹಾವುಗಳು, ಹಲ್ಲಿಗಳು ಮುಂತಾದವು. ಇದರಿಂದ ಆ ಪ್ರಾಣಿಗಳು ಬೇರೆ ಪ್ರಾಣಿಗಳಿಂದ ತಪ್ಪಿಸಿಕೊಳ್ಳುತ್ತವೆ. ಇನ್ನೂ ಕೆಲವು ಪ್ರಾಣಿಗಳು (ಉದಾ : ಮುಳ್ಳಿನ ಹಲ್ಲಿ) ದೇಹದ ಮೇಲೆ ಮುಳ್ಳಿನಾಕಾರದ ಚೂಪಾದ ಅಂಗಗಳಿದ್ದು, ಅವುಗಳನ್ನು ರಕ್ಷಣೆಯ ಅಂಗವಾಗಿ ಉಪಯೋಗಿಸುತ್ತವೆ. ಮರುಭೂಮಿಯ ಪ್ರಾಣಿಗಳಲ್ಲಿ ಶ್ರವಣಶಕ್ತಿ ಹಾಗು ದೃಷ್ಟಿಶಕ್ತಿ ಹೆಚ್ಚಾಗಿದ್ದು ಬೇಗನೆ ತಮ್ಮ ಶತ್ರುಗಳನ್ನು ಗುರುತಿಸುತ್ತವೆ. ಇಲ್ಲಿನ ಪ್ರದೇಶದಲ್ಲಿ

ನೀರಿನಾಂಶ ಕಡಿಮೆ ಇರುವುದರಿಂದ ಅಲ್ಲಿನ ಕೆಲವು ಪ್ರಾಣಿಗಳು ರಾತ್ರಿ ಹೊತ್ತು ಬೀಳುವ ಹಿಮದ ಮೇಲೆ ಅವಲಂಬಿತವಾಗಿರುತ್ತವೆ. ಅಂತಹ ಪ್ರಾಣಿಗಳು ಬೆಳಗಿನ ಜಾವ ಎಲೆಗಳ ಮೇಲೆ ಬಿದ್ದಿರುವ ಮಂಜಿನ ಹನಿಗಳನ್ನು ಸೇವಿಸಿ ನೀರಿನ ದಾಹವನ್ನು ಇಂಗಿಸಿಕೊಳ್ಳುತ್ತವೆ. ಉದಾ : ಮರುಭೂಮಿಯ ಮೊಲ, ಕೆಲವು ಇಲಿಗಳು ಮುಂತಾದವು. ಇಲ್ಲಿನ ಮಾಂಸಹಾರಿ ಜೀವಿಗಳು ತಮಗೆ ಬೇಕಾಗಿರುವ ನೀರಿನಾಂಶವನ್ನು ಬೇಟೆಯಾಡಿ ಬೇಟೆಗೆ ಒಳಗಾದ ಪ್ರಾಣಿಗಳಿಂದ ಪಡೆದುಕೊಳ್ಳುತ್ತವೆ.

ಶೀತ–ಮರುಭೂಮಿ ಪ್ರಾಣಿಗಳ ಮಾರ್ಪಾಡುಗಳು: ಇಲ್ಲಿನ ಮರುಭೂಮಿಗಳಲ್ಲಿ ಉಷ್ಣಾಂಶ ತೀರ ಕಡಿಮೆ ಇದ್ದು, ಇಲ್ಲಿ ಯಾವಾಗಲು ಹಿಮ ಮಳೆ ಸುರಿಯುತ್ತಿರುತ್ತದೆ. ಹಿಮಸಾರಂಗವು ಇಲ್ಲಿನ ಪ್ರಮುಖ ಪ್ರಾಣಿಯಾಗಿದ್ದು, ಅತಿಯಾದ ಚಳಿ ವಾತಾವರಣಕ್ಕೆ ಹೊಂದಿಕೊಂಡಿದೆ. ಇಲ್ಲಿನ ಪ್ರಾಣಿಗಳು ಹಿಮದ ವಾತಾವರಣದಲ್ಲಿ ಬದುಕಲು ದಪ್ಪ ತುಪ್ಪಟವನ್ನು ಬೆಳೆಸಿಕೊಂಡಿವೆ. ತುಪ್ಪಟ ಆ ಪ್ರಾಣಿಗಳ ದೇಹವನ್ನು ಸಂಪೂರ್ಣವಾಗಿ ಮುಚ್ಚಿ, ದೇಹದ ಉಷ್ಣತೆ ಕಡಿಮೆಯಾಗದಂತೆ ರಕ್ಷಿಸುತ್ತದೆ. ಹಿಮಸಾರಂಗವನ್ನು ಅಲ್ಲಿನ ಜನರು ಸಾರಿಗೆಗಾಗಿ ಹಾಗು ಅದರ ತುಪ್ಪಟವನ್ನು ಪೋಷಾಕಗಳಿಗಾಗಿ ಬಳಸುತ್ತಾರೆ. ಹಿಮಕರಡಿ, ಹಿಮನಾಯಿ, ಹಿಮನರಿಗಳು ಕೂಡ ಇಂತಹದ್ದೇ ಮಾರ್ಪಾಡನ್ನು ಹೊಂದಿವೆ. ಅಲ್ಲಿನ ಪ್ರಾಣಿಗಳು ಬಿಳಿಬಣ್ಣದ ದೇಹವನ್ನು ಹೊಂದಿದ್ದು ಅಲ್ಲಿಯ ಹಿಮರಾಶಿಯ ಬಣ್ಣಕ್ಕೆ ಹೊಂದಿಕೊಂಡು ತಮ್ಮ ಶತ್ರುಗಳಿಂದ ತಪ್ಪಿಸಿಕೊಳ್ಳುತ್ತವೆ. ಮಾಂಸಾಹಾರಿ ಪ್ರಾಣಿಗಳು ಉದ್ದನೆಯ ಉಗುರುಗಳನ್ನು ಹೊಂದಿದ್ದು ಆ ಉಗುರುಗಳಿಂದ ಹಿಮದ ರಾಶಿಯನ್ನು ಬಗೆಯಲು ಬಳಸುತ್ತವೆ.

(ಎಚ್.ಆರ್.ಎಚ್.)

**ಮರ್ಫಿ, ವಿಲಿಯಮ್ ಪ್ಯಾರಿ (1892):** ಅಮೆರಿಕದ ವೈದ್ಯ. ಮಾರಕ ರಕ್ತಕಣಕೊರತೆ (ಪರ್ನಿಶಿಯಸ್ ಅನಿಮಿಯ) ಎಂಬ ವ್ಯಾಧಿಗೆ ಚಿಕಿತ್ಸಕವನ್ನು ಆವಿಷ್ಕರಿಸಿದ್ದಕ್ಕಾಗಿ ಮೈನಾಟ್ ಮತ್ತು ವಿಪ್ಪಲ್ ಎಂಬ ವಿಜ್ಞಾನಿಗಳೊಡನೆ ಒಟ್ಟಾಗಿ 1934ರ ನೊಬೆಲ್ ಪಾರಿತೋಷಿಕ ಪಡೆದಾತ. ವಿಸ್ಕಾನ್ಸಿನ್ ಪ್ರಾಂತ್ಯದ ಸ್ಟಫ್‌ಟನ್ ಎಂಬಲ್ಲಿ 1892 ಫೆಬ್ರುವರಿ 6ರಂದು ಜನನ. ಓರಿಗನ್ ವಿಶ್ವವಿದ್ಯಾಲಯದ ಎ.ಬಿ. ಡಿಗ್ರಿಯನ್ನು 1914ರಲ್ಲಿ ಪಡೆದ ಮೇಲೆ ಎರಡು ವರ್ಷ ಓರಿಗನ್ ಪ್ರೌಢಶಾಲೆಯಲ್ಲಿ ಭೌತವಿಜ್ಞಾನ ಹಾಗೂ ಗಣಿತ ಅಧ್ಯಾಪಕನಾಗಿದ್ದ. ಅನಂತರ ವೈದ್ಯ ವ್ಯಾಸಂಗಮಾಡಿ ಅದರಲ್ಲಿ ಪದವಿ ಪಡೆದು ರ್‍ಹೋಡ್ ಐಲೆಂಡ್ ಪ್ರಾಂತ್ಯದ ಪ್ರಾವಿಡೆನ್ಸ್ ನಗರ ಆಸ್ಪತ್ರೆಯಲ್ಲಿ ಕಿರಿವೈದ್ಯನಾಗಿ ಕೆಲಸಮಾಡಿ ಅನುಭವ ಗಳಿಸಿದ. 1923ರಲ್ಲಿ ಬಾಸ್ಟನ್ನಿಗೆ ಬಂದು ಅಲ್ಲಿಯ ಪೀಟರ್ ಬ್ರೆಂಟ್ ಬ್ರಿಂಗ್ಹಾಮ್ ಆಸ್ಪತ್ರೆಯಲ್ಲಿ ಪುನಃ ಕಿರಿವೈದ್ಯನಾಗಿ ಕೆಲಸಕ್ಕೆ ಸೇರಿ ಬಡ್ತಿ ಪಡೆದು ರಕ್ತರೋಗತಜ್ಞನಾಗಿ (ಹಿಮಾಟಾಲಜಿಸ್ಟ್) ನೇಮಿತನಾದ. ಜೊತೆಯಲ್ಲಿ ಹಾರ್ವರ್ಡ್ ವೈದ್ಯವಿಭಾಗದಲ್ಲಿ ಅಧ್ಯಾಪಕನಾಗಿಯೂ ಇದ್ದ. ಬಾಸ್ಟನ್ನಿನ ಇನ್ನೊಬ್ಬ ವೈದ್ಯ ಮೈನಾಟನೊಡನೆ ರಕ್ತಕಣಕೊರತೆಗೆ ಚಿಕಿತ್ಸಕವನ್ನು ಆವಿಷ್ಕರಿಸಿದ. (ಎಸ್.ಆರ್.ಆರ್.)

**ಮಲಬಾರ್ ಅಳಿಲು:** ರಾಡೆಂಷಿಯ ಗಣದ ಸ್ಕಯೂರಿಡೆ ಕುಟುಂಬಕ್ಕೆ ಸೇರಿದ ದಂಶಕ. ಕೇಶಳಿಲು ಪರ್ಯಾಯ ನಾಮ. ಇಂಡಿಯನ್ ಜಯಂಟ್ ಸ್ಕ್ವಿರಲ್ ಎಂಬ ಹೆಸರಿನಿಂದಲೂ ಪ್ರಸಿದ್ದವಾಗಿದೆ. ರಟೂಫ ಇಂಡಿಕ ವೈಜ್ಞಾನಿಕ ಹೆಸರು. ವ್ಯಾಪ್ತಿಯಲ್ಲಿ ಭಾರತಕ್ಕೆ ಮಾತ್ರ ಸೀಮಿತವಾಗಿರುವ ಇದು ಗಂಗಾನದಿಯ ದಕ್ಷಿಣಕ್ಕಿರುವ ಪರ್ಣಪಾತಿ, ಮಿಶ್ರಪರ್ಣಪಾತಿ ಹಾಗೂ ಆರ್ದ್ರನಿತ್ಯಹರಿದ್ವರ್ಣ ಕಾಡುಗಳಲ್ಲಿ ವಾಸಿಸುತ್ತದೆ.

ಹೆಚ್ಚುಕಡಿಮೆ ಎಲ್ಲ ವೇಳೆಯನ್ನು ಎತ್ತರವಾದ ಮರಗಳ ನೆತ್ತಿಯ ಮೇಲೆ ಕಳೆಯುವ ಇದು ಬಲು ಅಪರೂಪವಾಗಿ ನೆಲಕ್ಕೆ ಬರುವುದುಂಟು. ಮರಗಳ ಮೇಲ್ಭಾಗದಲ್ಲಿ ಅಲ್ಲಿಂದಿಲ್ಲಿಗೆ ಚುರುಕಾಗಿ ಜಿಗಿದಾಡುತ್ತ (ಒಂದು ಜಿಗಿತಕ್ಕೆ ಸುಮಾರು 6 ಮೀ ದೂರವನ್ನು ಕ್ರಮಿಸಬಲ್ಲುದು) ಆಹಾರ ಸೇವನೆಯಲ್ಲಿ ತೊಡಗಿರುತ್ತದೆ; ಇದರ ಚಟುವಟಿಕೆ ನಸುಕಿನಲ್ಲಿ ಹಾಗೂ ಮುಸ್ಸಂಜೆಯಲ್ಲಿ ಹೆಚ್ಚು. ವಿಶ್ರಾಂತಿಯ ಕಾಲ ನಡುಹಗಲು. ಮಧ್ಯಾಹ್ನದ ಹೊತ್ತಿನಲ್ಲಿ ರೆಂಬೆಗಳ ಮೇಲೆ ಆಚೀಚೆ ಕಾಲುಗಳನ್ನು ಚಾಚಿಕೊಂಡು ಮಲಗಿರುತ್ತದೆ. ಚಳಿ ಮಳೆ ಇದ್ದರೆ ಮರಗಳ ಪೊಟರೆಗಳಲ್ಲಿ ವಿಶ್ರಮಿಸಿಕೊಳ್ಳುತ್ತದೆ.

ಮಲಬಾರ್ ಅಳಿಲು ಪುಕ್ಕಲು ಸ್ವಭಾವದ ಪ್ರಾಣಿ. ಕಣ್ಣಿಗೆ ಬೀಳುವುದು ಅಪರೂಪ. ಕಣ್ಣಿನಿಂದ ಪತ್ತೆಹಚ್ಚುವುದಕ್ಕಿಂತ ಮೊದಲೇ ಇದು ಹೊರಡಿಸುವ ವಿಚಿತ್ರ ಕೂಗಿನಿಂದ (ಬುಡುಬುಡುಕೆಯ ಸದ್ದನ್ನು ಹೋಲುವ) ಇದರ ಇರವನ್ನು ಗುರುತಿಸಬಹುದು. ತನಗೆ ಅಪರಿಚಿತವಾದ ಸದ್ದು ಕೇಳಿದಾಗ ಇಲ್ಲವೆ ಅಪಾಯ ಸನಿಹದಲ್ಲಿದೆಯೆಂದು ಬಗೆದಾಗ ಓಡಿಹೋಗುವುದಕ್ಕಿಂತ ಹೆಚ್ಚಾಗಿ ಕೊಂಬೆಗಳ ಅಡಿಯಲ್ಲಿ ಹುದುಗಿಕೊಳ್ಳುವುದು ಅಥವಾ ರೆಂಬೆಗಳಿಗೆ ದೇಹವನ್ನು ಚಪ್ಪಟೆಮಾಡಿಕೊಂಡು ಆತುಕೊಳ್ಳುವುದು ಇದರ ಸ್ವಭಾವ.

ಇದು ಸಾಮಾನ್ಯವಾಗಿ ಒಂಟಿಯಾಗಿ ಇಲ್ಲವೆ ಜೋಡಿಯಾಗಿ ಬಾಳುತ್ತದೆ. ಎಲೆಗಳನ್ನು ಬಳಸಿ ಟೊಂಗೆ ಟಿಸಿಲುಗಳ ನಡುವೆ ದೊಡ್ಡ ಗೋಲಾಕಾರದ ಗೂಡುಗಳನ್ನು ಕಟ್ಟುತ್ತದೆ. ಒಂದು ಅಳಿಲು ಹಲವಾರು ಗೂಡುಗಳನ್ನು ನಿರ್ಮಿಸುವುದುಂಟು. ಇವುಗಳ ಪೈಕಿ ಹಲವನ್ನು ವಿಶ್ರಾಂತಿ ನೆಲೆಗಳಾಗಿಯೂ ಯಾವುದೋ ಒಂದನ್ನು ಮರಿಗಳನ್ನು ಈಯುವ ತಾಣವಾಗಿಯೂ ಬಳಸುತ್ತದೆ. ಇದರ ಸಂತಾನವೃದ್ಧಿಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಬಹುಶಃ ಫೆಬ್ರುವರಿ–ಮಾರ್ಚ್ ತಿಂಗಳುಗಳಲ್ಲಿ ಮರಿಗಳನ್ನು ಹಾಕುತ್ತದೆ. (ಎಸ್.ಎನ್.ಎಚ್.)

**ಮಲೇರಿಯಾ:** ಪ್ಲಾಸ್ಮೋಡಿಯಂ ಎಂಬ ಪರಾವಲಂಬಿ ಏಕಕೋಶ ರೋಗಾಣುಗಳ ಸೋಂಕಿನಿಂದ ಉಂಟಾಗುವ ಕಾಯಿಲೆ. ನಿಗದಿತವಾಗಿ ಚಳಿ (ನಡುಕ), ಜ್ವರ, ಮೈಬೆವರುವುದು ಮಲೇರಿಯಾ ರೋಗದ ವಿಶಿಷ್ಟ ಲಕ್ಷಣ. ಅನಾಫಿಲಿಸ್ ಜಾತಿಯ ಹೆಣ್ಣು ಸೊಳ್ಳೆಗಳು ಈ ಕಾಯಿಲೆಯನ್ನು ಹರಡುತ್ತವೆ. ಇತಿಹಾಸದುದ್ದಕ್ಕೂ ಮಲೇರಿಯಾ ಮಾನವನನ್ನು ಕಾಡುತ್ತಲೇ ಬಂದಿದೆ. ಜಗತ್ತಿನ ಇತಿಹಾಸದಲ್ಲಿ ಮಲೇರಿಯಾದಿಂದ ಉಂಟಾದಷ್ಟು ಸಾವು ನೋವುಗಳು ಬೇರಾವ ಕಾಯಿಲೆಯಿಂದಾಗಲೀ, ಯುದ್ಧಗಳಿಂದಾಗಲೀ ಸಂಭವಿಸಿಲ್ಲ ಎನ್ನುತ್ತಾರೆ ಕೀಟತಜ್ಞರು. ವಿಶ್ವದಾದ್ಯಂತ ಮಲೇರಿಯಾ ರೋಗ ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಭೂಮಧ್ಯ ರೇಖೆಯ $60^0$ ಉತ್ತರ ಹಾಗೂ $44^0$ ದಕ್ಷಿಣದೊಳಗಿನ ಉಷ್ಣ ಪ್ರದೇಶಗಳಲ್ಲಿ ಮಲೇರಿಯಾ ಹಾವಳಿ ಹೆಚ್ಚಾಗಿದೆ. ಮಲೇರಿಯಾಕ್ಕೆ ಉಷ್ಣವಲಯದ ಕಾಯಿಲೆಗಳ ರಾಜ ಎಂಬ ಹೆಸರಿದೆ. ಮಲೇರಿಯಾ ಉಪಟಳ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದೆ. ಆದರೂ, ವಿಶ್ವದಲ್ಲಿ ಪ್ರತಿವರ್ಷ 300 ರಿಂದ 500 ಮಿಲಿಯನ್ ಜನರಿಗೆ ಈ ಕಾಯಿಲೆ ತಗುಲುತ್ತಿದೆ. ಪ್ರತಿವರ್ಷ 1.5 ರಿಂದ 2.5 ಮಿಲಿಯನ್ ಜನರು ಮಲೇರಿಯಾ ರೋಗದಿಂದಾಗಿ ಸಾಯುತ್ತಿದ್ದಾರೆ. ವಿವಿಧ ದೇಶಗಳಲ್ಲಿ, ವಿವಿಧ ಪ್ರಾಂತ್ಯಗಳಲ್ಲಿ, ಪ್ರದೇಶಗಳಲ್ಲಿ, ಅನಾಫಿಲಿಸ್ ಉಪಜಾತಿಯ ಸೊಳ್ಳೆಗಳು ಮಲೇರಿಯಾವನ್ನು ಹರಡುತ್ತಿವೆ. ಹೆಣ್ಣು ಸೊಳ್ಳೆಗಳು ಮಾತ್ರ ರೋಗವಾಹಕವಾಗಿವೆ. ಮಲೇರಿಯಾಕ್ಕೆ ಕಾರಣವಾದ ಪ್ಲಾಸ್ಮೋಡಿಯಂ ಪರಾವಲಂಬಿಗಳಲ್ಲಿ ಪ್ಲಾ. ಮಲೇರಿಯಾ, ಪ್ಲಾ. ವಿವಾಕ್ಸ್, ಪ್ಲಾ. ಫಾಲ್ಸಿಫಾರಮ್ ಮತ್ತು ಪ್ಲಾ. ಓವೆಲ್ ಉಪಜಾತಿಗಳು ಮಲೇರಿಯ ಕಾಯಿಲೆ ಕಾರಕಗಳಾಗಿವೆ. ನಮ್ಮ ದೇಶದಲ್ಲಿ ತಲೆದೋರುವ ಶೇ. 75–80 ಮಲೇರಿಯಾಕ್ಕೆ ಪ್ಲಾಸ್ಮೋಡಿಯಂ ವಿವಾಕ್ಸ್ ಕಾರಣ. ಶೇ. 15–25 ಪ್ರಕರಣಗಳಿಗೆ ಪ್ಲಾ. ಫಾಲ್ಸಿಫಾರಮ್ ಕಾರಣ. ಪ್ಲಾ. ಮಲೇರಿಯೆ ತುಮಕೂರು ಮತ್ತು ಹಾಸನ ಜಿಲ್ಲೆಯಲ್ಲಿ ಹೆಚ್ಚಾಗಿದೆ. ಪ್ಲಾ. ಓವೆಲ್ ನಮ್ಮ ದೇಶದಲ್ಲಿ ಇಲ್ಲ.

ಮಲೇರಿಯಾ ರೋಗಾಣುಗಳು ಮಾನವನ ಕೆಂಪು ರಕ್ತಕಣಗಳಲ್ಲಿ ಸೇರಿ ಅಲೈಂಗಿಕವಾಗಿ ತಮ್ಮ ಸಂತಾನ ವೃದ್ಧಿಸಿಕೊಳ್ಳುತ್ತವೆ. ಅನಾಫಿಲಿಸ್ ಹೆಣ್ಣು ಸೊಳ್ಳೆಯ ದೇಹದಲ್ಲಿ ರೋಗಾಣುಗಳು ಲೈಂಗಿಕವಾಗಿ ಅಭಿವೃದ್ಧಿಗೊಳ್ಳುತ್ತವೆ.

ರೋಗಾಣುಯುಕ್ತ ಸೊಳ್ಳೆ ಮಾನವನನ್ನು ಕಚ್ಚಿದಾಗ ತಮ್ಮ ಜೊಲ್ಲಿನಲ್ಲಿರುವ ರೋಗಾಣುವನ್ನು (ಸ್ಪೋರೋಜಾಯಿಟ್ ರೂಪದ) ಮಾನವ ರಕ್ತಕ್ಕೆ ಸೇರಿಸುತ್ತದೆ. ಈ ರೋಗಾಣುಗಳು ತಾತ್ಕಾಲಿಕವಾಗಿ ಯಕೃತ್‌ನಲ್ಲಿ ನೆಲೆಸುತ್ತವೆ. ಅನಂತರ ಕೆಂಪು ರಕ್ತಕಣಗಳಲ್ಲಿ ನೆಲೆಸಿ ರಕ್ತಕಣಗಳನ್ನು ಧ್ವಂಸಗೊಳಿಸುತ್ತವೆ. ಹೀಗಾಗಿ ಮಲೇರಿಯಾ ಬಂದರೆ, ರಕ್ತಹೀನತೆಯೂ ಉಂಟಾಗುತ್ತದೆ. ರಕ್ತಕಣಗಳನ್ನು ಒಡೆದುಕೊಂಡು ಬಂದ ರೋಗಾಣುಗಳು ಹೊಸ ಹೊಸ ಕೆಂಪು ರಕ್ತಕಣಗಳನ್ನು ಸೇರಿಕೊಳ್ಳುತ್ತವೆ. ಹೀಗೆ ಮಾನವ ದೇಹದಲ್ಲಿ ಪ್ಲಾಸ್ಮೋಡಿಯಂ ರೋಗಾಣುವಿನ ಬದುಕು ಸಾಗುತ್ತದೆ.

ಅನಾಫಿಲಿಸ್ ಜಾತಿಯ ಹೆಣ್ಣು ಸೊಳ್ಳೆ ಮಲೇರಿಯಾ ಪೀಡಿತ ಮಾನವನನ್ನು ಕಚ್ಚಿ ರಕ್ತ ಹೀರುವಾಗ ರೋಗಾಣುಗಳನ್ನು ಹೀರಿಕೊಳ್ಳುತ್ತದೆ. ಸೊಳ್ಳೆಯ ಜಠರದಲ್ಲಿ ರೋಗಾಣುವಿನ ಗಂಡು ಹೆಣ್ಣು ಜೀವ ಕಣಗಳು ಮಿಲನಗೊಂಡು ಜಠರದ ಮಾಂಸಖಂಡದಲ್ಲಿ ವಿಭಜನೆಗೊಳ್ಳುತ್ತವೆ. ಉತ್ಪತ್ತಿಯಾದ ಸ್ಪೋರೋಜೊಯಿಟ್ ರೂಪದ ರೋಗಾಣುಗಳು ಸೊಳ್ಳೆಯ ಜೊಲ್ಲು ಗ್ರಂಥಿಯಲ್ಲಿ ಸೇರಿಕೊಳ್ಳುತ್ತವೆ. ಸೊಳ್ಳೆ ಮಾನವನನ್ನು

ಕಚ್ಚುವಾಗ ಈ ರೋಗಾಣುಗಳು ಮಾನವ ದೇಹಕ್ಕೆ ಸೇರುತ್ತವೆ. ನಡುಕ ತರುವ ಚಳಿ, ಕೆಂಡದಂತೆ ಕಾಯುವ ಜ್ವರ, ಮೈ ತೋಯಿಸುವ ಬೆವರು, ಗುಲ್ಮದ ಊತ, ಹಾಗೂ ರಕ್ತ ಹೀನತೆ ಮಲೇರಿಯಾ ರೋಗದ ಲಕ್ಷಣಗಳು.

ಮಲೇರಿಯಾ ಜ್ವರಕ್ಕೆ ಉತ್ತಮ ಚಿಕಿತ್ಸೆ ಇದೆ. ಮಲೇರಿಯಾ ಪೀಡಿತ ಪ್ರದೇಶಗಳಿಗೆ ಹೋಗುವಾಗ ರಕ್ಷಣೆ ದೊರಕಿಸುವ ಮಾತ್ರೆಗಳಿವೆ. ಲಸಿಕೆಗಾಗಿ ಸಂಶೋಧನೆಗಳು ನಡೆದಿವೆ. ಮಲೇರಿಯಾಕ್ಕೆ ಕಡಿವಾಣ ಹಾಕಲು ರಾಷ್ಟ್ರವ್ಯಾಪಿ ಮಲೇರಿಯಾ ನಿರ್ಮೂಲನ ಕಾರ್ಯಕ್ರಮ ಜಾರಿಯಲ್ಲಿದೆ. ಮಲೇರಿಯಾ ನಿಯಂತ್ರಣದಲ್ಲಿ ಸೊಳ್ಳೆಗಳ ಸಂಹಾರ, ಜಲನಿರ್ವಹಣೆ, ಪರಿಸರ ಸ್ವಚ್ಛತೆ ಅತಿ ಮುಖ್ಯ. ಸೊಳ್ಳೆಯ ಜಠರದಲ್ಲಿ ಮಲೇರಿಯಾ ರೋಗಾಣುಗಳು ವೃದ್ಧಿಗೊಳ್ಳುವುದು. ಮಲೇರಿಯಾ ಜೀವಿಗೆ ಪ್ರತಿರೋಧವನ್ನುಂಟು ಮಾಡುವ ಲಸಿಕೆಯ ಸೃಷ್ಟಿಗಾಗಿ ವಿಶ್ವ ಆರೋಗ್ಯ ಸಂಸ್ಥೆಯ ದಿಗ್ದರ್ಶನದಲ್ಲಿ ಸಂಶೋಧನೆಗಳು ನಡೆದಿವೆಯಾದರೂ, ಬಲು ಶೀಘ್ರವಾಗಿ ತನ್ನ ಸ್ವರೂಪ ಬದಲಿಸಿಕೊಳ್ಳುವ ಪ್ಲಾಸ್ಮೋಡಿಯಂನ ಗುಣದಿಂದಾಗಿ ಫಲಪ್ರದ ಲಸಿಕೆಗಳು ಸಾಧ್ಯವಾಗಿಲ್ಲ. ಜೈವಿಕ ತಂತ್ರಜ್ಞಾನದ ತಂತ್ರಗಳನ್ನು ಬಳಸಿಕೊಂಡು ಇದನ್ನು ಸಾಧ್ಯಮಾಡಲು ಪ್ರಯತ್ನಗಳು ಸಾಗಿವೆ. ***

**ಮಾಂಜಿ ಮೀನು:** ಸ್ಟ್ರೊಮಾಟಿಯಿಡೆ ಕುಟುಂಬಕ್ಕೆ ಸೇರಿದ *ಕಾಂಡ್ರಾಪ್ಲೈಟಿಸ್ ಚೈನೆನ್ಸಿಸ್* (*ಸ್ಟ್ರೊಮಾಟಿಯಸ್ ಸೈನೆನ್ಸಿಸ್* ಅಥವಾ *ಪ್ಯಾಂಪಸ್ ಚೈನೆನ್ಸಿಸ್*, *ಚೈನೀಸ್ ಪಾಂಫ್ರೆಟ್* ಅಥವಾ *ವೈಟ್ ಪಾಂಫ್ರೆಟ್*) ಮತ್ತು *ಸ್ಟ್ರೊಮಾಟಿಯಸ್ ಅರ್ಜೆಂಟಿಯಸ್* (*ಪ್ಯಾಂಪಸ್ ಅರ್ಜೆಂಟಿಯಸ್*–ಗ್ರೇ ಅಥವಾ ಸಿಲ್ವರ್ ಪಾಂಫ್ರೆಟ್) ಎಂಬ ಮೀನುಗಳಿಗೂ ಫಾರ್ಮಿಯೋನಿಡೆ ಕುಟುಂಬಕ್ಕೆ ಸೇರಿದ *ಫಾರ್ಮಿಯೊ ನೈಜರ್* (*ಪ್ಯಾರಸ್ಟ್ರೊಮಾಟಿಯಸ್ ನೈಜರ್*–ಬ್ಲ್ಯಾಕ್ ಪಾಂಫ್ರೆಟ್) ಎಂಬ ಮೀನಿಗೂ ಇರುವ ಸಾಮಾನ್ಯ ಹೆಸರು. ಮೊದಲನೆಯದನ್ನು ತೊಂಡ್ರೊಟ್ಟೆ ಎಂದೂ ಮೂರನೆಯದನ್ನು ಚಂದ್ರಾವ್ಯ ಎಂದೂ ಸ್ಥಳೀಯವಾಗಿ ಗುರುತಿಸಲಾಗಿದೆ. ಇವು ಮೂರು ಬಗೆಗಳೂ ಉತ್ತಮ ರೀತಿಯ ಆಹಾರದ ಮೀನುಗಳಾಗಿ ಪ್ರಸಿದ್ಧವಾಗಿವೆ. ಪಾಕಿಸ್ತಾನದಿಂದ ತೊಡಗಿ ಭಾರತ, ಶ್ರೀಲಂಕಾ, ಬರ್ಮ, ಇಂಡೊ–ಚೀನ ಪ್ರದೇಶಗಳನ್ನೊಳಗೊಂಡಂತೆ ಜಪಾನಿನ ಕರಾವಳಿಗಳೆಲ್ಲೆಡೆಯಲ್ಲೂ ಇವು ಕಾಣಬರುವುವು.

ಬಿಳಿ ಮತ್ತು ಬೆಳ್ಳಿ ಮಾಂಜಿ ಮೀನುಗಳು ಸುಮಾರು 30–36 ಸೆಂಮೀ ಉದ್ದ, 0.5 ಕಿಗ್ರಾಂ ತೂಕವಿರುತ್ತವೆ. ಮೊದಲನೆಯದು ಬೂದು ಮಿಶ್ರಿತಕಂದು ಬಣ್ಣದ್ದಾದರೆ ಎರಡನೆಯದು ಬೂದು ಮಿಶ್ರಿತ ಬೆಳ್ಳಿ ಬಣ್ಣದ್ದು. ಎರಡರಲ್ಲೂ ಮೈಮೇಲೆ ಸಣ್ಣಗಾತ್ರದ ಕಪ್ಪುಚುಕ್ಕೆಗಳುಂಟು. ದೇಹ ಅಂಡಾಕಾರದ್ದು. ತಲೆ ಹಾಗೂ ಬಾಯಿ ಚಿಕ್ಕಗಾತ್ರದವು. ಬಾಲದ ಈಜುರೆಕ್ಕೆ ಆಳವಾಗಿ ಕವಲೊಡೆದಿದೆ. ಎರಡು ಬಗೆಯ ಮಾಂಜಿ ಮೀನುಗಳೂ ಜೂನ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಹೇರಳವಾಗಿ ಕೇರಳ ಕರಾವಳಿಯಲ್ಲಿ ಕಾಣಬರುವುವು.

ಚಂದ್ರಾವ್ಯ ಎಂಬ ಹೆಸರಿನ ಮಾಂಜಿ ಮೀನು ಉಳಿದವೆರಡಕ್ಕಿಂತ ಹೆಚ್ಚು ರುಚಿಕರವೂ ಪುಷ್ಟಿಕರವೂ ಆಗಿದೆ. ಇದು ಕೂಡ ಹೆಚ್ಚು ಕಡಿಮೆ ಅಂಡಾಕಾರದ ಮೀನು. ದೇಹದ ಉದ್ದ ಸುಮಾರು 60 ಸೆಂಮೀ. ತೂಕ 0.5–1 ಕಿಗ್ರಾಂ. ಮೈಬಣ್ಣ ಗಾಢ ಕಂದು ಇಲ್ಲವೆ ಬೂದಾಮಿಶ್ರಿತ ಕಂದು. ಈಜುರೆಕ್ಕೆಗಳ ಅಂಚು ಕಪ್ಪು ಬಣ್ಣಕ್ಕಿರುತ್ತದೆ. ಬಾಲದ ರೆಕ್ಕೆ ಇಬ್ಭಾಗವಾಗಿದೆ.

ಭಾರತದ ಮೀನುಗಾರಿಕೆಯಲ್ಲಿ ಪ್ರಸಿದ್ಧವಾಗಿರುವ ಮೀನುಗಳ ಪೈಕಿ ಮಾಂಜಿ ಮೀನುಗಳೂ ಸೇರಿವೆ. ಇವನ್ನು ತಾಜಾ ಆಗಿಯೋ ಉಪ್ಪುಸೇರಿಸಿ ಒಣಗಿಸಿಯೋ ಮಾರುತ್ತಾರೆ. ಕರ್ನಾಟಕ ಕರಾವಳಿಯ ಗಂಗೊಳ್ಳಿ, ಕೇರಳದ ಬಡಗರ, ಪರವಣ್ಣ, ಆಂಧ್ರದ ರಜಿಯಾಪೇಟೆ, ಕುಮಾರವೇಣಿಪೇಟೆ, ತಮಿಳುನಾಡಿನ ನೆಲತ್ತೂರುಪಾಳಯಮ್, ಪುಲಿಯಾಂಜಿರಿಕುಪ್ಪಮ್, ಮಹಾರಾಷ್ಟ್ರದ ಥಾಣಾ, ರತ್ನಗಿರಿ, ಕೊಲಾಬ, ಗುಜರಾತಿನ ಸೂರತ್, ಬ್ರೋಚ್, ವೇರಾವಲ್, ದ್ವಾರಕಾ, ಬಂಗಾಲದ ಸುಂದರಬನ್ಸ್ ಮುಂತಾದವು ಮಾಂಜಿ ಮೀನುಗಾರಿಕೆಯ ತಾಣಗಳು. (ಕೆ.ವಿ.ಡಿ.)

**ಮಾಂಬಹಾವು:** ಎಲಾಪಿಡೆ ಕುಟುಂಬಕ್ಕೆ ಸೇರಿದ ಆಫ್ರಿಕದ ವಿಷಸರ್ಪ. ಇದರಲ್ಲಿ ಡೆಂಡ್ರೊಆಸ್ಪಿಸ್ ಪಾಲಿಲೆಪಿಸ್ (ಕರಿಯ ಮಾಂಬ) ಮತ್ತು ಡೆಂ.ಆಗಸ್ಟಿಸೆಪ್ಸ್ (ಹಸುರು ಮಾಂಬ) ಎಂಬ ಎರಡು ಪ್ರಭೇದಗಳಿವೆ. ಮೊದಲನೆಯದು ಸು. 4 ಮೀ ಗಳಷ್ಟು ಉದ್ದವಿದ್ದು ಆಫ್ರಿಕದ ವಿಷಸರ್ಪಗಳ ಪೈಕಿ ಅತ್ಯಂತ ದೊಡ್ಡದು. ತೆಳ್ಳಗೆ ಉದ್ದವಾಗಿರುವ ಇದಕ್ಕೆ ಕಿರಿದಾದ ತಲೆ, ನಯವಾದ ಫಲಕಗಳು ಇವೆ. ಕಣ್ಣುಗಳು ದೊಡ್ಡವು. ಪಾಪೆ ಗುಂಡಗಿದೆ. ಪಕ್ಷಿಗಳು, ಮರದಮೇಲೆ ವಾಸಿಸುವ ಹಲ್ಲಿಗಳು, ಅಳಿಲುಗಳು ಮತ್ತು ಮರಗಪ್ಪೆಗಳು ಇದರ ಪ್ರಧಾನ ಆಹಾರ. ಇದರ ಹೆಸರು ಕರಿಯ ಮಾಂಬ ಎಂದಿದ್ದರೂ ವಾಸ್ತವವಾಗಿ ಇದು ಕಂದು ಇಲ್ಲವೆ ಬೂದಿ ಬಣ್ಣಕ್ಕೆ ತಿರುಗುತ್ತದೆ. ಹೆಣ್ಣು ಮಾಂಬಹಾವು 10–15 ಅಂಡಾಕಾರದ ಮತ್ತು ಬಿಳಿಬಣ್ಣದ ಮೊಟ್ಟೆಗಳನ್ನು ಭೂಮಿಯ ಗುಳಿಗಳಲ್ಲಿ ಅಥವಾ ಮರದ ಪೊಟರೆಗಳಲ್ಲಿ ಇಡುತ್ತದೆ. ಮೊಟ್ಟೆಗಳು 120–130 ದಿನಗಳಲ್ಲಿ ಒಡೆಯುತ್ತವೆ.

ಸಹರಾ ಮರುಭೂಮಿಯ ದಕ್ಷಿಣಕ್ಕೆ ಆಫ್ರಿಕಾದ್ಯಂತ ಇದು ವ್ಯಾಪಕವಾಗಿ ಕಾಣದೊರೆಯುತ್ತದೆ. ಚಟುಲಗತಿಯ ಚಲನೆ, ಕ್ಷಣಾರ್ಧದಲ್ಲಿ ಎರಗಿ ಕಚ್ಚುವ ಸ್ವಭಾವ, ತುಂಬ ತೀಕ್ಷ್ಣವಾದ ವಿಷ–ಇವುಗಳಿಂದಾಗಿ ಕರಿಯ ಮಾಂಬ ಬಲು ಅಪಾಯಕಾರಿ ಹಾವು ಎಂದು ಹೆಸರಾಗಿದೆ. ಜೊತೆಗೆ ಕೆಣಕಿದಾಗ ಕ್ರೂರವಾಗಿ ಆಕ್ರಮಣ ಮಾಡುವ ಪ್ರವೃತ್ತಿಯೂ ಇದಕ್ಕಿದೆ. ಇದಕ್ಕೆ ನಾಗರಹಾವಿಗಿರುವಂಥ ಹೆಡೆಯಿಲ್ಲವಾದರೂ ಕೋಪಬಂದಾಗ ಕತ್ತನ್ನು ಗಾಳಿಯಿಂದ ಹಿಗ್ಗಿಸಬಲ್ಲುದು. ಕಲ್ಲು ಪೊಟರೆಗಳಲ್ಲಿ ಇದರ ವಾಸ.

ಹಸುರು ಮಾಂಬ ಗಾತ್ರದಲ್ಲಿ ಕರಿಯದಕ್ಕಿಂತ ಚಿಕ್ಕದು. ಸಾಧಾರಣವಾಗಿ 1 ಮೀ ಉದ್ದ ಇರುತ್ತದೆ. ಇದರ ಮೈಬಣ್ಣ ಉಜ್ವಲ ಹಸುರು. ಸಾಮಾನ್ಯವಾಗಿ ಮರಗಿಡಗಳಲ್ಲಿ ವಾಸಿಸುತ್ತದೆ. ರೆಂಬೆಕೊಂಬೆಗಳನ್ನು ಹತ್ತಲು ಸಹಾಯಕವಾಗುವಂತೆ ಇದರ ಬಾಲಕ್ಕೆ ಸುರುಳಿಸುತ್ತಿಕೊಳ್ಳುವ ಸಾಮರ್ಥ್ಯ ಉಂಟು. ಕರಿಯ ಮಾಂಬಕ್ಕೆ ಹೋಲಿಸಿದರೆ ಇದು ಕಡಿಮೆ ಉಗ್ರ ಸ್ವಭಾವದ್ದು. ***

**ಮಾಂಸಾಹಾರಿ ಪ್ರಾಣಿಗಳು:** ನೋಡಿ ಕಾರ್ನಿವೋರ

**ಮಾಕಸಿನ್ ಹಾವು:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಆಗ್ನೇಯ ಹಾಗೂ ದಕ್ಷಿಣ ಭಾಗದಲ್ಲಿ ಕಂಡುಬರುವ ವಿಷಪೂರಿತ ಹಾವು. ಮಿಸಿಸಿಪ್ಪಿ ಮತ್ತು ಫ್ಲಾರಿಡ ರಾಜ್ಯಗಳ ಜವುಗು ಪ್ರದೇಶಗಳಲ್ಲಿ ಬಲು ಸಾಮಾನ್ಯ. ವೈಪರಿಡೆ ಕುಟುಂಬದ ಕ್ರೋಟಾಲಿನೆ ಉಪಕುಟುಂಬಕ್ಕೆ ಸೇರಿದ ಇದು ಬುಡಬುಡಿಕೆ ಹಾವು (ರ್‍ಯಾಟಲ್ ಸ್ನೇಕ್), ಕೆಂಪುತಲೆ ಹಾವು (ಕಾಪರ್ ಹೆಡ್) ಮುಂತಾದ ಕುಳಿಮಂಡಲ ಹಾವುಗಳಿಗೆ (ಪಿಟ್ ವೈಪರ್ಸ್) ಹತ್ತಿರ ಸಂಬಂಧಿಯಾಗಿದೆ. *ಅಗ್‍ಕಿಸ್ಟ್ರೊಡಾನ್ ಪಿಸಿವೊರಸ್* ಇದರ ಶಾಸ್ತ್ರೀಯ ನಾಮ. ವಾಟರ್ ಮಾಕಸಿನ್ ಅಥವಾ ಕಾಟನ್ ಮೌತ್ (ಅರಳೆ ಬಾಯಿಯ ಹಾವು) ಎಂದೂ ಹೆಸರಿದೆ. ಮಧ್ಯಮ ಗಾತ್ರದ್ದಾಗಿದ್ದು 1 ಮೀ ಉದ್ದಕ್ಕೆ ಬೆಳೆಯುತ್ತದೆ. 2 ಮೀ ಬೆಳೆದ ದಾಖಲೆಯೂ ಇದೆ. ಮೈಬಣ್ಣ ಕಂದು ಮಿಶ್ರಿತ ಬೂದು.

ನೆಲವಾಸಿಯಾದರೂ ಸಾಮಾನ್ಯವಾಗಿ ನೀರಿನಲ್ಲಿ ಇಲ್ಲವೆ ನೀರಿಗೆ ಹತ್ತಿರದಲ್ಲಿ ವಾಸಿಸುತ್ತದೆ. ಕೆರೆ, ನದಿಗಳ ಅಂಚಿನಲ್ಲಿ ಅಥವಾ ನೀರಿನಲ್ಲಿರುವ ದಿಮ್ಮಿಗಳ ಮೇಲೆ ಬಿಸಿಲಿಗೆ ಮೈಯೊಡ್ಡಿರುತ್ತದೆ. ಕಪ್ಪೆ, ಮೀನು, ಸಣ್ಣಪುಟ್ಟ ಮೃದುಬೆನ್ನಿನ ಆಮೆ ಮುಂತಾದ ಜಲಚರಿಗಳೇ ಇದರ ಪ್ರಧಾನ ಆಹಾರ.

ಇದು ಮಂದಸ್ವಭಾವದ ಹಾವು. ಸಮೀಪಿಸಿದಾಗ ಓಡಿಹೋಗದು. ಇದರಿಂದ ಇದರ ಬಗ್ಗೆ ಹುಷಾರಿರುವುದು ಅಗತ್ಯ. ಆದರೆ ಕೆಣಕಿದಾಗ ಒಮ್ಮೆಲೆ ಕಚ್ಚದೆ ತಲೆಯೆತ್ತಿ ಬಾಯಂಗಳ ಕಾಣುವಂತೆ ಬಾಯನ್ನು ಅಗಲಿಸಿ ತನ್ನ ಕೋಪವನ್ನು ವ್ಯಕ್ತಪಡಿಸುತ್ತದಾಗಿ ಕಚ್ಚಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳಬಹುದು. ಬಾಯನ್ನು ತೆರೆದಾಗ ಒಳಗಿನ ಭಾಗ ಬೆಳ್ಳಗೆ ಅರಳೆಯಂತೆ ಕಾಣುತ್ತದೆ. ಆದ್ದರಿಂದಲೇ ಇದಕ್ಕೆ ಕಾಟನ್ ಮೌತ್ ಎಂಬ ಹೆಸರು ಬಂದಿದೆ. ಸಂತಾನವೃದ್ಧಿಯ ಕಾಲ ಸೆಪ್ಟೆಂಬರ್. ಒಂದು ಸಲಕ್ಕೆ ಎಂಟು ಮರಿಗಳನ್ನು ಪಡೆಯುತ್ತದೆ. ಹುಟ್ಟುವಾಗ ಸುಮಾರು 16 ಸೆಂಮೀ ಉದ್ದವಿರುವ ಇವುಗಳ ಮೈಮೇಲೆ ಹೊಳೆಯುವ ಪಟ್ಟೆಗಳಿರುವುದಲ್ಲದೆ ಬಾಲ ಹಳದಿ ಬಣ್ಣದ್ದಾಗಿರುತ್ತದೆ. (ಕೆ.ಎಂ.ವಿ.)

**ಮಾನವ:** ಕಶೇರುಕ ವಿಭಾಗ, ಸ್ತನಿ ವರ್ಗ, ಪ್ರೈಮೇಟ್ ಉಪವರ್ಗ, ಹೋಮಿನಿಡೆ ಕುಟುಂಬದ ಏಕೈಕ ಜೀವಂತ ಜೀವಿ (ಮ್ಯಾನ್). ಪ್ರೈಮೇಟ್ ಉಪವರ್ಗದಲ್ಲಿ ಎರಡು ಮುಖ್ಯ ಉಪವರ್ಗಗಳಿವೆ; ಪ್ರೋಸಿಮಿ ಮತ್ತು ಆಂಥ್ರೊಪಾಯ್ಡಿಯದಲ್ಲಿ ಮೂರು ಅಧಿಕುಟುಂಬಗಳಿವೆ. ಅದರಲ್ಲಿ ಮುಖ್ಯವಾದದ್ದು ಹೋಮಿನಾಯ್ಡಿಯ. ಈ ಕುಟುಂಬದ ಪಾಂಗಿಡೇಯಲ್ಲಿ ವಾನರಗಳನ್ನು (ಏಪ್ಸ್) ಮತ್ತು ಹೋಮಿನಿಡೇಯಲ್ಲಿ ಮಾನವ ಮತ್ತು ಅವನ ಪೂರ್ವಜರನ್ನು ಸೇರಿಸಲಾಗಿದೆ. ಮಾನವನ ವೈಜ್ಞಾನಿಕ ಹೆಸರು ಹೋಮೊ ಸೆಪಿಯನ್ಸ್. ಇತರ ಅನೇಕ ಪ್ರೈಮೇಟ್‌ಗಳಂತೆ ಮಾನವ ಒಂದೇ ಪ್ರಭೇದಕ್ಕೆ ಸೇರಿದವನು.

ಇತರ ಅನೇಕ ಪ್ರಾಣಿಗಳ ಜೀವವಿಕಾಸದ ಇತಿಹಾಸದಂತೆಯೇ ಮಾನವನ ಉಗಮ ಕೂಡ ಅಪೂರ್ಣ ಕಥೆಯಾಗಿದೆ. ಜನಸಾಮಾನ್ಯರು ಭಾವಿಸಿರುವಂತೆ ಮಾನವ ಮರದ ಮೇಲಿನ ಮಂಗಗಳಿಂದ ನೇರವಾಗಿ ಉದ್ಭವಿಸದೆ ಬಳಸು ದಾರಿಯಲ್ಲಿ ವಿಕಾಸವಾಗಿದ್ದಾನೆ. ಆಧುನಿಕ ಜೀವವಿಕಾಸ ತತ್ತ್ವದ ಜನಕ ಚಾರ್ಲ್ಸ್ ಡಾರ್ವಿನ್ (ಮಾನವನ ಪೂರ್ವಜ ಜೀವಿಗಳ ಅವಶೇಷಗಳು ಸಿಗದೆ ಇದ್ದರೂ) ವಿಕಾಸ ನಡೆದು ಬಂದಿರಬಹುದಾದ ಮಾರ್ಗದ ರೂಪರೇಷೆಗಳನ್ನು ವಿವರಿಸಿ ವಾನರ ಮತ್ತು ಮಾನವನ ಮಧ್ಯೆ ಇದ್ದಿರಬಹುದಾದ 'ಕಳೆದು ಹೋದ ಕೊಂಡಿ' (ಮಿಸ್ಸಿಂಗ್ ಲಿಂಕ್) ಬಗ್ಗೆ ಆಸಕ್ತಿ ಹುಟ್ಟುವಂತೆ ಮಾಡಿದ್ದ. ಅಲ್ಲಿಂದ ಶುರುವಾದ 'ಕಳೆದು ಹೋದ ಕೊಂಡಿ'ಯ ಹುಡುಕಾಟ ಇನ್ನೂ ನಿರಂತರವಾಗಿ

ಸಾಗಿದೆ. ಈ ದಿಸೆಯಲ್ಲಿ ಮೊತ್ತ ಮೊದಲನೆಯ ಗಮನಾರ್ಹ ಪಳೆಯುಳಿಕೆ (ಫಾಸಿಲ್) ಸಿಕ್ಕಿದ್ದು 1856ರಲ್ಲಿ. ಜರ್ಮನಿಯ ನೀಯಂಡರ್‌ತಲ್ ಕೊಳ್ಳದಲ್ಲಿರುವ ಕಲ್ಲಿನ ಗಣಿಯಲ್ಲಿ ಸಿಕ್ಕಿದ ಮೂಳೆಗಳನ್ನು ಮಾನವನ ಮೂಳೆಗಳಿರಬಹುದೆಂದು ಗುರುತಿಸಿ ಪರೀಕ್ಷೆಗೆ ಕಳುಹಿಸಿದವರು ಜೋನ್ ಕಾರ್ಲ್ ಫ್ಯೊಲ್‌ಡ್‌ಲೊಟ್ ಎಂಬ ಶಾಲಾ ಶಿಕ್ಷಕ. ಹೀಗೆ ಸಿಕ್ಕಿದ ಈ ಫಾಸಿಲೀಕೃತ ಜೀವಿಗಳಿಗೆ ನೀಯಂಡರ್‌ತಲ್ ಮಾನವ ಎಂದು ಹೆಸರಿಸಲಾಯಿತು. ಅನಂತರ ಸಿಕ್ಕಿದ ಪಳೆಯುಳಿಕೆ ಪಿತಿಕ್ಯಾಂತ್ರೊಪಸ್ ಎರೆಕ್ಟಸ್ 1894ರಲ್ಲಿ. ಹೀಗೆ ಸಾಗಿದ ಹುಡುಕಾಟ ಈಗೀಗ ಒಂದು ಹಂತಕ್ಕೆ ಬಂದು ತಲುಪಿದೆ. ಸಿಕ್ಕಿದ ಪಳೆಯುಳಿಕೆಗಳಲ್ಲಿ ಸುಮಾರು 9,00,000 ವರ್ಷಗಳಷ್ಟು ಹಿಂದಿನ ನೀಯಂಡರ್‌ತಾಲ್ ಹಾಗೂ ಕ್ರೊಮ್ಯಾಗ್ನನ್ ಮನುಷ್ಯ. ಅಂದರೆ ಆಧುನಿಕ ಮಾನವ ಭೂಮಿಯ ಮೇಲೆ ಅಸ್ತಿತ್ವಕ್ಕೆ ಬಂದದ್ದು ಒಂದು ಲೆಕ್ಕಾಚಾರದಂತೆ ಸುಮಾರು 1,00,000 ವರ್ಷಗಳ ಹಿಂದೆಯಷ್ಟೆ. ಆದರೆ ಲೀಕಿ ಮತ್ತು ಇನ್ನೂ ಅನೇಕ ಸಂಶೋಧಕರ ಅಭಿಮತದಂತೆ ಮಾನವನ ಉಗಮ ಸುಮಾರು 3 ಮಿಲಿಯನ್ ವರ್ಷಗಳ ಹಿಂದೆಯೇ ಆಗಿರಬಹುದು. ಹೇಗೆ ನೋಡಿದರೂ ಭೂಮಿಯ ಇತರ ಜೀವಿಗಳ ವಿಕಾಸದ ಸಂಗಡ ಹೋಲಿಸಿದರೆ ಮಾನವನ ಪ್ರವೇಶ ತೀರ ಇತ್ತೀಚಿನದು.

ಅನುಕೂಲವಾಗುವಂತೆ ಇರುವ ಕೈ. ಹಾಗೂ ರೆಂಬೆಗಳ ಮೇಲೆ ನಡೆದಾಡಲು ಬರುವಂಥ ಕಾಲು–ಇವು ಪ್ರಾಚೀನ ರಚನೆಯನ್ನು ತೋರಿಸುತ್ತವೆ. ಅಂತೆಯೇ ಅನೇಕ ಅವಯವಗಳ ರಚನೆ ಸಹ ಮಾನವನ ದೇಹದಲ್ಲಿ ಹೆಚ್ಚು ವಿಕಾಸ ಆಗದಿರುವುದನ್ನು ತೋರಿಸುತ್ತದೆ. ಮಾತ್ರವಲ್ಲ, ಎರಡು ಕಾಲುಗಳ ಮೇಲೆ ನಡೆದಾಡುವ ಪ್ರವೃತ್ತಿಗೂ ಮಾನವ ಸರಿಯಾಗಿ ಹೊಂದಿಕೊಂಡಿಲ್ಲ ಎಂಬುದು ಇತ್ತೀಚಿನ ಸಂಶೋಧನೆಗಳಿಂದ ಕಂಡುಬಂದಿದೆ. ಮುಖ್ಯವಾಗಿ ಮಾನವನನ್ನು ಬಾಧಿಸುವ ಬೆನ್ನು ಮೂಳೆಯ ನೋವು, ಬೂರು (ಹರ್ನಿಯ), ಇತ್ಯಾದಿ ಅವಸ್ಥೆಗಳು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತವೆ. ಮಾನವನಲ್ಲಿ ವಿಶೇಷವಾಗಿ ವಿಕಾಸ ಹೊಂದಿದ ಭಾಗ ಎಂದರೆ ತಲೆಬುರುಡೆ ಮತ್ತು ಮಿದುಳು.

ಮಾನವ ಇಂದು ಪ್ರಪಂಚದ ಇತರ ಜೀವಿಗಳ ಮೇಲೆ ಏಕರೂಪವಾಗಿ ಸ್ಥಾಪಿಸಿರುವ ಪ್ರಾಬಲ್ಯಕ್ಕೆ ಕಾರಣ ಅವನ ಮಿದುಳಿನ ಬೆಳೆವಣಿಗೆ. (ಎ.ಕೆಯು.)

**ಮಾನವ ವಿಕಾಸ:** ಅತಿ ಬುದ್ಧಿವಂತ ಪ್ರಾಣಿಯೆಂಬ ಹೆಗ್ಗಳಿಕೆಗೆ ಪಾತ್ರವಾದ ಮಾನವ ಪ್ರಭೇದ ಹೋಮೋ ಸೆಪಿಯನ್ಸ್, ತನ್ನ ಪೂರ್ವಜರಿಂದ ವಿವಿಧ ಪರಂಪರೆಗಳ ಮೂಲಕ ನವಮಾನವನಾಗಿ ಉದಯವಾದ ವಿಧಾನ. ಮಾನವ ಒಂದು ಕಶೇರುಕ



ಅಥವಾ ಬೆನ್ನೆಲುಬುಳ್ಳ ಪ್ರಾಣಿ, ಹಿಂಗಾಲುಗಳ ಮೇಲೆ ಮಾತ್ರ ನಿಲ್ಲಬಲ್ಲ ದ್ವಿಪಾದಿ. ಅಪಾರ ಬುದ್ಧಿಶಕ್ತಿ, ಯೋಚನಾಶಕ್ತಿ, ವಿವೇಚನಾಶಕ್ತಿ, ವಾಕ್ಚಾತುರ್ಯ, ನೇರನಿಲುವು, ವಿರುದ್ಧ ದಿಕ್ಕಿನಲ್ಲಿ ಅಳವಡಿಸಿದ ಹೆಬ್ಬೆರಳು, ಚಪ್ಪಟೆ ಮುಖ, U ಆಕಾರದ ದವಡೆ, ಕೂದಲಿಲ್ಲದ ಬರಿಮೈ, 1350 ಘಸೆಮೀ ಗಾತ್ರದ ಮೆದುಳು ಮುಂತಾದುವು ಈತನ ಗುಣಲಕ್ಷಣಗಳು. ಈತನ ಜೈವಿಕ ವರ್ಗೀಕರಣ ಹೀಗಿದೆ; ಗುಂಪು:ಕಾರ್ಡೇಟಾ, ಉಪಗುಂಪು:ವರ್ಟಿಬ್ರೇಟಾ, ವರ್ಗ:ಸ್ತನಿ(ಮ್ಯಾಮೇಲಿಯ), ಉಪವರ್ಗ:ಯುತೀರಿಯ, ಗಣ:ಪ್ರೈಮೇಟು, ಕುಟುಂಬ:ಹೊಮಿನಿಡೆ, ಕುಲ:ಹೋಮೋ, ಪ್ರಭೇದ: ಸೆಪಿಯನ್ಸ್.

ವಾನರರಿಂದ ಮಾನವ ಉದ್ಭವಿಸಿದ ಬಗ್ಗೆ ಅನೇಕ ಊಹಾಪೋಹಗಳಿವೆ. ಅವುಗಳಲ್ಲಿ ಮುಖ್ಯವಾದ್ದು 'ಬಾಲ ಪ್ರೌಢಿಮೆ' ವಾದ (ನಿಯೊಟನಿ). ಈ ವಾದದಂತೆ ಮಾನವ ವಿಸ್ತೃತ ಬಾಲ್ಯಾವಸ್ಥೆಯಲ್ಲಿರುವ ವಾನರ. ಈ ರೀತಿ ವಿಸ್ತೃತ ಬಾಲ್ಯಾವಸ್ಥೆಯನ್ನು ಕೆಲವು ಪ್ರಾಣಿಗಳಲ್ಲಿ ಕಾಣಬಹುದು. ಉದಾಹರಣೆಗೆ ಆಕ್ಸಲಾಟಲ್ ಎನ್ನುವ ಸ್ಯಾಲಮಾಂಡರ್ ಪ್ರಾಣಿಯಲ್ಲಿ ಸಾಮಾನ್ಯವಾಗಿ ಕಪ್ಪೆಗಳಂತೆ ನೀರಿನಲ್ಲಿ ಮೊಟ್ಟೆ ಇಟ್ಟು ಅವು ಗೊದಮೊಟ್ಟೆಗಳಾಗಿ ಅನಂತರ ಪ್ರೌಢ ಸ್ಯಾಲಮಾಂಡರ್‌ಗಳಾಗಿ ಬೆಳೆಯುತ್ತವೆ. ಆದರೆ ನೀರಿನಲ್ಲಿ ಅಯೋಡಿನ್ ಅಂಶ ಕಡಿಮೆ ಇದ್ದರೆ ಗೊದಮೊಟ್ಟೆಗಳು ರೂಪಪರಿವರ್ತಿತವಾಗದೆ ಆ ಸ್ಥಿತಿಯಲ್ಲಿಯೇ ಪ್ರೌಢಾವಸ್ಥೆ ತಲುಪಿ ಮರಿಗಳನ್ನು ಇಡುತ್ತವೆ. ಇದೇ ರೀತಿ ಯಾವುದೋ ಆಂತರಿಕ ನ್ಯೂನತೆಯಿಂದಾಗಿ ಆದಿಮಾನವನ ಅಥವಾ ವಾನರನ ಬಾಲ್ಯಾವಸ್ಥೆ ವಿಸ್ತೃತಗೊಂಡು ಮಾನವನಾಗಿರಬಹುದು ಎಂಬುದೇ ಈ 'ಬಾಲ ಪ್ರೌಢಿಮೆ' ವಾದದ ತಿರುಳು. ಮಾನವ ಪ್ರೌಢವಸ್ಥೆಗೆ ಬರಲು 15–16ವರ್ಷಗಳು ಗತಿಸಬೇಕು; (ವಾನರ ಮತ್ತಿತರ ಜೀವಿಗಳಲ್ಲಿ ಬಾಲ್ಯಾವಸ್ಥೆ ಹೆಚ್ಚೆಂದರೆ 3–4 ವರ್ಷಗಳು ಮಾತ್ರ). ಮಾನವನಲ್ಲಿ ಸಹ ಮರಿ ವಾನರಗಳಲ್ಲಿ ಇರುವಂತೆ ಕೂದಲುಗಳು ಕಡಿಮೆ. ಮರಿ ವಾನರಗಳಲ್ಲಿ ಇರುವಂತೆ ಮಾನವನ ಮೆದುಳಿನ ಗಾತ್ರ ಹಾಗೂ ತೂಕ ಕೂಡ ತುಲನಾತ್ಮಕವಾಗಿ ಹೆಚ್ಚು, ಅಂತೆಯೇ ತಲೆಗೂ ದೇಹಕ್ಕೂ ಇರುವ ಕೋನಗಳಲ್ಲಿ ಇರುವಂತೆಯೇ ಇವೆ. 1926ರಲ್ಲಿ ಬೋಕ್ ಎಂಬ ವಿಜ್ಞಾನಿ ಈ ವಾದವನ್ನು ಮೊದಲಿಗೆ ಮಂಡಿಸಿದ. ಈ ವಾದದ ಪ್ರಕಾರ ಮಾನವನ ಪರಿಪೂರ್ಣ ಬೆಳೆವಣಿಗೆಯನ್ನು ತಲುಪಲಾರದ ವಾನರ ಎಂದು ಪರಿಗಣಿಸುವುದರಲ್ಲಿ ಅಡ್ಡಿ ಇಲ್ಲ. ಆದರೆ ಜೀವವಿಕಾಸದ ಹಾದಿ ಇಷ್ಟು ಸುಲಭವಾಗಿಲ್ಲ. ವಿಕಾಸದ ಹಂತಗಳಲ್ಲಿ ನಡೆದಿರಬಹುದಾದ ಖಚಿತವಾದ ಬದಲಾವಣೆಗಳ ಅವಸ್ಥೆಗಳ ಬಗ್ಗೆ. ಇನ್ನೂ ಸಿಗದೆ ಮಣ್ಣಿನ ಅಡಿಯಲ್ಲೆ ಹುದುಗಿಕೊಂಡಿರುವ 'ಕೊಂಡಿ'ಗಳ ಬಗ್ಗೆ ಸಂಶೋಧನೆ ಆಗಬೇಕಾಗಿದೆ.

ಜೀವವಿಕಾಸದ ಹಾದಿಯಲ್ಲಿ ಮಾನವ ಈ ಭೂಮಿಯ ಮೇಲೆ ಅಡಿ ಇಟ್ಟದ್ದು ತೀರ ಇತ್ತೀಚೆಗೆ. ಅಂದ ಮಾತ್ರಕ್ಕೆ ಮಾನವ ಇತರ ಎಲ್ಲ ಜೀವಿಗಳಿಗಿಂತ ಹೆಚ್ಚು ವಿಕಾಸ ಹೊಂದಿದ ಜೀವಿ ಎಂದು ತಿಳಿಯಬಾರದು. ದೇಹರಚನೆಯಲ್ಲಿ, ಶಕ್ತಿ ಸಾಮರ್ಥ್ಯದಲ್ಲಿ ಮಾನವನಿಗಿಂತ ಇನ್ನೂ ಅನೇಕಪಟ್ಟು ಹೆಚ್ಚು ಪ್ರೌಢಿಮೆ ತೋರುವ ಮಿಲಿಯಾಂತರ ವರ್ಷಗಳ ಹಿಂದೆಯೇ ವಿಕಾಸ ಹೊಂದಿದ ಜೀವಿಗಳು ಅನೇಕ ಇವೆ. ಹಾಗೆ ನೋಡಿದರೆ ಮಾನವ ಒಂದು ಹಿಂದುಳಿದ (ಪ್ರಿಮಿಟಿವ್) ಜೀವಿ ಎನ್ನಬಹುದು. ಅವನ ಕೈಕಾಲುಗಳಲ್ಲಿ ಸ್ತನಿಗಳ ಪೂರ್ವಜರಂತೆ ಪಂಚಾಂಗುಲಿ (ಪೆಂಟಡ್ಯಾಕ್ಟೈಲ್) ರಚನೆ ಇದೆ. $180^0$ಗೆ ತಿರುಗಿಸಬಹುದಾದ ಹಸ್ತ, 4:1 ಅಂತರದಲ್ಲಿ ಇರುವ ಕೈ ಬೆರಳುಗಳು. ಎಲ್ಲ ಬೆರಳುಗಳೂ ನೆಲಕ್ಕೆ ತಾಗುವಂತೆ ಇರುವ ಪಾದಗಳು, ಮರದ ರೆಂಬೆಗಳನ್ನು ಹಿಡಿಯಲು

ಸ್ತನಿಗಳ ಇನ್ಸೆಕ್ಟಿವೊರಾ (ಕೀಟಭಕ್ಷಕ) ಗಣಕ್ಕೆ ಸೇರಿದ ಕೀಟಭಕ್ಷಕ ಮೂಲ ಜೀವಿಯಿಂದ ಪ್ರೈಮೇಟು ಗಣ ಉದ್ಭವವಾಗಿ, ತನ್ಮೂಲಕ ಆದಿಮಾನವನ ಉದ್ಭವವಾಗಿರಬೇಕು. ಮುಂದೆ ನವ ಮಾನವನ ಉದಯವಾಗಿರಬಹುದು ಎಂದು ಅಂದಾಜಿಸಲಾಗಿದೆ. ಬೇರೆ ಬೆನ್ನೆಲುಬುಳ್ಳ ಪ್ರಾಣಿಗಳಿಂದ ಸ್ತನಿಗಳ ಉದಯವಾಗುವುದು ಮಾನವ ವಿಕಾಸದಲ್ಲಿ ಮೊದಲ ಹಂತ. ಬಹುಶಃ 135 ದಶಲಕ್ಷ ವರ್ಷಗಳ ಹಿಂದೆ, ಮೀಸೊಜೋಯಿಕ್‌ಯುಗದ ಜುರಾಸಿಕ್ ಅವಧಿ ಮುಗಿದು ಕ್ರಿಟೇಸಿಯಸ್ ಪ್ರಾರಂಭವಾದ ದಿನಗಳಲ್ಲಿ, ಸರೀಸೃಪಗಳ ಒಂದು ಕವಲಿನಿಂದ ಸ್ತನಿಗಳ ಉದಯವಾಗಿರಬೇಕು. ದೈತ್ಯಕಾಯದ, ಪುಟ್ಟ ಮೆದುಳುಳ್ಳ ಡೈನೊಸಾರ್‌ಗಳು ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳಲಾರದೆ ವಿನಾಶವಾಗುತ್ತಿದ್ದುವು. ಆಗ ಕೀಟಭಕ್ಷಕ ಸ್ತನಿಗಳ ಉದಯವಾಯಿತು. ಡೈನೊಸಾರ್‌ಗಳಿಗಿಂತ ಇವು ಚುರುಕಾಗಿದ್ದುವು. ಕೀಟಭಕ್ಷಕಗಳು ಇಂದಿನ ಸುಂಡಿಲಿಯನ್ನು ಹೋಲುತ್ತಿದ್ದುವು. ಇವು ಚತುಷ್ಪಾದಿಗಳು. ಪ್ರತಿಯೊಂದು ಪಾದಗಳಲ್ಲಿ ಉಗುರುಗಳಿದ್ದ ಐದು ಬೆರಳುಗಳಿದ್ದುವು. ಈ ಕೀಟಭಕ್ಷಕ ಪ್ರಾಣಿಗಳೇ ನಮ್ಮ ವಿಕಾಸದ ಮೂಲ ಜೀವಿಗಳು. ಇದಕ್ಕೆ ಪುರಾವೆಯಾಗಿ, ಮಾನವ ಅನುವಂಶೀಯ ಯೋಜನೆಯು, ಸುಂಡಿಲಿ ಹಾಗೂ ಮಾನವನ ಡಿ.ಎನ್.ಎಗಳ ನಡುವೆ ಸಾಮ್ಯವಿರುವುದನ್ನು ತೋರಿಸಿದೆ.

ಕೀಟಭಕ್ಷಕಗಳಿಂದ ಪ್ರೈಮೇಟುಗಳ ಉದಯ ಮಾನವ ವಿಕಾಸದ ಮುಂದಿನ ಹಂತ. ನವ ಪ್ರಾಗ್ಯುಗವು (ಸೀನೊಜೋಯಿಕ್) ಪ್ರಾರಂಭವಾಗುವಷ್ಟರಲ್ಲಿ ಅನೇಕ ಸ್ತನಿಗಳು ವಿಕಾಸವಾಗಿದ್ದವು. ಕೀಟಭಕ್ಷಕಗಳಿಂದ, ಉದ್ದ ಬಾಲ, ಚೂಪು ಮೂತಿ, ಶರೀರದ ತುಂಬೆಲ್ಲ ಆವರಿಸಿದ ಕೂದಲುಗಳು, ಮರದ ಮೇಲೆ ಒಂದೆಡೆಯಿಂದ ಇನ್ನೊಂದೆಡೆಗೆ ಜಿಗಿಯುವ ಪ್ರವೃತ್ತಿಯ ಇಂದಿನ ಕಾಡು ಪಾಪಗಳನ್ನು ಹೋಲುವ ಸ್ತನಿಗಳು ಉಗಮವಾದವು. ಇವು ಮೂಲ ಪ್ರೈಮೇಟುಗಳು. ಮಾನವನನ್ನೂ ಸೇರಿದಂತೆ ಪ್ರೈಮೇಟುಗಣದ ಎಲ್ಲ ಪ್ರಭೇದಗಳಿಗೂ ಈ ಜೀವಿಯು ಪೂರ್ವಜ. ಇವುಗಳಿಂದ, ಮೂವತ್ತೈದು ದಶಲಕ್ಷ ವರ್ಷಗಳ ಹಿಂದೆ ಮಂಗಗಳ ಉದಯವಾಯಿತು. ಚಪ್ಪಟೆ ಮುಖ, ಕೂದಲಿನಿಂದಾವೃತ

ಶರೀರ, ಮುಂಗಾಲುಗಳಿಗಿಂತ ಚಿಕ್ಕ ಹಿಂಗಾಲುಗಳು ಈ ಕೋತಿಗಳ ಲಕ್ಷಣಗಳು. ಸಮೂಹ ಜೀವನ, ಸಸ್ಯಾಹಾರ ಇವುಗಳ ಪ್ರವೃತ್ತಿ. ಮುಂದಿನ ಹಂತ ಗೊರಿಲ್ಲ, ಚಿಂಪಾಂಜಿಗಳಂಥ ಬಾಲರಹಿತ ಕೋತಿ ಅಥವಾ ಏಪ್ಸ್‌ಗಳ ಉಗಮ. ಬಹುಶಃ ಇಪ್ಪತ್ತು ಮಿಲಿಯ ವರ್ಷಗಳ ಹಿಂದೆ ಇವು ಉದ್ಭವವಾಗಿರಬಹುದು. ಮನುಷ್ಯನಂತೆ ಹಿಂಗಾಲುಗಳ ಮೇಲೆ ನೇರವಾಗಿ ನಿಲ್ಲಬಲ್ಲ ಇವು ವೇಗವಾಗಿ ಚಲಿಸುವಾಗ ಮಾತ್ರ ಮುಂಗಾಲುಗಳನ್ನು ಉಪಯೋಗಿಸುತ್ತಿದ್ದವು. ಮೆದುಳಿನ ಗಾತ್ರ ಸಾಮಾನ್ಯ ಕೋತಿಗಳಿಗಿಂತ ಹೆಚ್ಚಿದ್ದು, ಅಂಗೈ–ಪಾದಗಳು ಬೆಳೆದಿದ್ದವು. ಇವೂ ಸಸ್ಯಾಹಾರಿಗಳು. ವಿವಿಧ ಭೂಪದರಗಳಲ್ಲಿ ದೊರೆತಿರುವ ಹಲವು ಪಳೆಯುಳಿಕೆಗಳು ಅನಂತರದ ದಿನಗಳಲ್ಲಿ ಅನೇಕ ಮಾನವ ಪರಂಪರೆಗಳು ಹುಟ್ಟಿಕೊಂಡವು ಎಂದು ತಿಳಿಸುತ್ತವೆ. ಕೆಲವು ಮುಖ್ಯ ಪಳೆಯುಳಿಕೆಗಳು ಈ ಕೆಳಗಿನಂತಿವೆ.

ಕೆನ್ಯಾಪಿತಕಸ್: ಆಫ್ರಿಕಾ ಖಂಡದಲ್ಲಿ ದೊರಕಿದ, ಮಾನವ ವಿಕಾಸದಲ್ಲಿ ಅತ್ಯಂತ ಪ್ರಾಚೀನವೆನ್ನಬಹುದಾದ ಪರಂಪರೆಯ ಪಳೆಯುಳಿಕೆ. ಹದಿನೈದು ಮಿಲಿಯ ವರ್ಷಗಳ ಹಿಂದೆ, ಮೈಯೋಸೀನ್ ಅವಧಿಯಲ್ಲಿ ಈ ಮಾನವ ಬದುಕಿದ್ದಿರಬೇಕು. ಹಿಮಾಲಯದ ಶಿವಾಲಿಕ್ ಶ್ರೇಣಿಗಳಲ್ಲಿ ಇಂಥದೇ ಇನ್ನೊಂದು ಪಳೆಯುಳಿಕೆ ದೊರಕಿದೆ. ಅದರ ಹೆಸರು ರಾಮಾಪಿತಕಸ್. ಚಿಕ್ಕಮುಖ, ಚೌಕಾಕಾರದ ದವಡೆ, 300 ಘಸೆಂಮೀ ಗಾತ್ರದ ಮೆದುಳು ಮುಂತಾದುವು ಕೆನ್ಯಾಪಿತಕಸ್‌ನ ಮುಖ್ಯ ಲಕ್ಷಣಗಳು. ಇದು ಮರಗಳ ಮೇಲೆಯೇ ವಾಸಿಸುತ್ತಿದ್ದ ಚತುಷ್ಪಾದಿ.

ಆಸ್ಟ್ರಲೋಪಿತಕಸ್: ಪ್ಲೀಸ್ಟೊಸೀನ್ ಅವಧಿಯ ಮಾನವನ ಪಳೆಯುಳಿಕೆ. ಆಫ್ರಿಕಾದಲ್ಲಿಯೇ ದೊರೆತ ದ್ವಿಪಾದಿ. ಆಸ್ಟ್ರಲೋಪಿತಕಸ್ ಅಫರೆನ್ಸಿಸ್ ಇದರ ಜೈವಿಕ ಹೆಸರು. ಮರವಾಸಿಯಾದರೂ ಮೆದುಳು 600 ಘಸೆಂಮೀ ಇತ್ತು. ಇದು ಆಯುಧಗಳನ್ನು ಉಪಯೋಗಿಸುತ್ತಿದ್ದ ಜೀವಿ. ಮುಖ ಸ್ವಲ್ಪ ಮುಂದಕ್ಕಿದ್ದು, ತಲೆಬುರುಡೆ, ಗೊರಿಲ್ಲ ಚಿಂಪಾಂಜಿಗಳನ್ನು ಹೋಲುತ್ತಿತ್ತು. ದಂತಪಂಕ್ತಿ ಮಾನವರಂತಿತ್ತು. ಸೊಂಟ ಮತ್ತು ಕಾಲಿನ ಮೂಳೆಗಳ ರಚನೆಯಿಂದ ಈ ಪ್ರಾಣಿಗಳು ಹಿಂಗಾಲುಗಳ ಮೇಲೆ ನೇರವಾಗಿಯಲ್ಲದಿದ್ದರೂ ಸ್ವಲ್ಪ ಬಾಗಿ ನಿಂತುಕೊಳ್ಳುತ್ತಿದ್ದವು ಎಂದು ಅರಿವಾಗುತ್ತದೆ. ಇಷ್ಟಾದರೂ ಆಸ್ಟ್ರಲೋಪಿತಕಸ್‌ನಿಂದ ಆಧುನಿಕ ಮಾನವನ ವಿಕಾಸವಾಯಿತು ಎನ್ನಲು ಯಾವುದೇ ಪುರಾವೆಗಳಿಲ್ಲ. ಆಸ್ಟ್ರಲೋಪಿತಕಸ್ ಅನ್ನು ಹೋಲುವ ಇನ್ನಾವುದೋ ಜೀವಿಯಿಂದ ಮಾನವನ ಉದಯವಾಗಿರಬೇಕು ಎಂಬ ಕಲ್ಪನೆ ಬೆಳೆಯಿತು.

ಆಸ್ಟ್ರಲೋಪಿತಕಸ್, ಆಧುನಿಕ ಮಾನವನಾಗಲು 600 ಘಸೆಂಮೀ ಗಾತ್ರದ ಮೆದುಳು 1350 ಘಸೆಂಮೀ ಆಗಬೇಕಿತ್ತು. ವಾಕ್‌ಶಕ್ತಿ ಹಾಗೂ ತರ್ಕಬದ್ಧವಾದ ಬುದ್ಧಿಶಕ್ತಿ, ದೊಡ್ಡ ಮೆದುಳನ್ನು ಅಳವಡಿಸಿಕೊಳ್ಳಲು ತಲೆಬುರುಡೆಯಲ್ಲಿ ಸ್ಥಳ, U ಆಕಾರದ ದವಡೆ, ಬರೀ ಮೈ ಬೆಳವಣಿಗೆಯಾಗಬೇಕಿತ್ತು. ಸೊಂಟ ಹಾಗೂ ಬೆನ್ನಿನ ಮೂಳೆಗಳಲ್ಲಿಯೂ ವ್ಯತ್ಯಾಸವಾಗಬೇಕಿತ್ತು. ಆಸ್ಟ್ರಲೋಪಿತಕಸ್ ಅನಂತರದ ಪಳೆಯುಳಿಕೆಗಳಲ್ಲಿ ಈ ಬದಲಾವಣೆಗಳನ್ನು ಕಾಣುತ್ತೇವೆ.

ಜಾವಾ ಮಾನವ: 1891ರಲ್ಲಿ ಜಾವಾ ಎಂಬ ಪ್ರದೇಶದಲ್ಲಿ ದೊರೆತ ಆಧುನಿಕ ಮಾನವನನ್ನು ಹೋಲುವ ಪಳೆಯುಳಿಕೆ. ಈ ಪಳೆಯುಳಿಕೆಗೆ ಪಿತಕ್ಯಾಂತ್ರೊಪಸ್ ಎರೆಕ್ಟಸ್ ಅಥವಾ ಹೋಮೋ ಎರೆಕ್ಟಸ್ ಅಥವಾ ಸೈನಾನ್‌ತ್ರೊಪಸ್ ಎರೆಕ್ಟಸ್ ಎಂದು ಹೆಸರಿಡಲಾಯಿತು. ಚಪ್ಪಟೆಮುಖ, 900 ಘಸೆಮೀ ಗಾತ್ರದ ಮೆದುಳು, ನೇರನಿಲುವುಗಳ ಈ ವ್ಯಕ್ತಿ ಚೂಪಾದ ಕಲ್ಲುಗಳನ್ನು, ಕೋಲುಗಳನ್ನು ಆಯುಧಗಳಂತೆ ಉಪಯೋಗಿಸುತ್ತಿದ್ದ. ಬಹುಶಃ ಒಂದೂವರೆ ದಶಲಕ್ಷ ವರ್ಷಗಳ ಹಿಂದೆ ಪಿತಕ್ಯಾಂತ್ರೊಪಸ್ ಬದುಕಿರಬೇಕು.

ಪೀಕಿಂಗ್ ಮಾನವ: 1929ರಲ್ಲಿ ಪೀಕಿಂಗ್ (ಇಂದಿನ ಬೀಜಿಂಗ್) ಪ್ರಾಂತ್ಯದಲ್ಲಿ ಜಾವಾ ಮಾನವನನ್ನು ಹೋಲುವ ಇನ್ನೊಂದು ಪಳೆಯುಳಿಕೆ ದೊರೆಯಿತು. ಈ ವ್ಯಕ್ತಿಯನ್ನು ಪೀಕಿಂಗ್ ಮಾನವ ಎಂದು ಹೆಸರಿಡಲಾಯಿತು. ಈತನ ಮೆದುಳಿನ ಗಾತ್ರ 900–1200 ಘ.ಸೆಂ.ಮೀ ಇತ್ತು. ಈತ ಸುಮಾರು ಐದು ಅಡಿ ಎತ್ತರವಿದ್ದ. ಆಕಾರದಲ್ಲಿ ಜಾವಾ ಮಾನವನಿಗೂ ಈತನಿಗೂ ಹೆಚ್ಚು ವ್ಯತ್ಯಾಸಗಳಿರಲಿಲ್ಲ. ಬಹುಶಃ ಈತ ಅರ್ಧ ಮಿಲಿಯ ವರ್ಷಗಳ ಹಿಂದೆ ಬದುಕಿದ್ದಿರಬೇಕು.

ನಿಯಾಂಡರ್‌ತಲ್ ಮಾನವ: ಸೀನೋಜೋಯಿಕ್ ಅವಧಿಯಲ್ಲಿ ಭೂಮಿಯ ಅನೇಕ ಭಾಗಗಳು ಇದ್ದಕ್ಕಿದ್ದಂತೆ ಹಿಮಾಚ್ಛಾದಿತವಾಗಿದ್ದು ವಿಕಾಸಕ್ಕೆ ಪ್ರತಿಕೂಲವಾಗಿದ್ದವು. ಒಮ್ಮೆ ಹಿಮ ಆವರಿಸಿದರೆ ಅದು ಕರಗಿ ಯಥಾಸ್ಥಿತಿಗೆ ಮರಳಲು ನೂರಾರು ವರ್ಷ ತಗುಲುತ್ತಿತ್ತು. ಈ ಹಂತದಲ್ಲಿ ಕನಿಷ್ಠ ನಾಲ್ಕುಬಾರಿ ಹೀಗೆ ಹಿಮದ ವಾತಾವರಣ ಸೃಷ್ಟಿಯಾಗಿತ್ತು ಎಂಬುದಕ್ಕೆ ಪುರಾವೆಗಳಿವೆ. ಮೂರು ಮತ್ತು ನಾಲ್ಕನೇ ಹಿಮಪಾತಗಳ ನಡುವಿನ ಪದರಗಳಲ್ಲಿ ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾದ ಕೆಲವು ಭಾಗಗಳಲ್ಲಿ ಮಾನವನ ಇನ್ನಷ್ಟು ಪಳೆಯುಳಿಕೆಗಳು ದೊರೆತಿವೆ. ಈ ಮಾನವನಿಗೆ ನಿಯಾಂಡರ್‌ತಲ್ ಮಾನವ ಅಥವಾ ಹೋಮೋ ನಿಯಾಂಡರ್‌ತಲೆನ್ಸಿಸ್ ಎಂದು ಹೆಸರಿಡಲಾಗಿದೆ. ಈತ ಕಳೇವರಗಳನ್ನು ನೆಲದಡಿಯಲ್ಲಿ ಹುಗಿಯುತ್ತಿದ್ದುದರಿಂದ ಅನೇಕ ಅವಶೇಷಗಳು ದೊರೆತಿವೆ. ಐದು ಅಡಿ ಎತ್ತರ, ದೃಢಕಾಯ, ಬಲವಾದ ಮಾಂಸಖಂಡ ಮತ್ತು ದವಡೆಗಳು, 1350–1450 ಘಸೆಂಮೀ ಗಾತ್ರದ ಮೆದುಳು, ಅನ್ವೇಷಕ ಬುದ್ಧಿ ಮುಂತಾದುವು ಈತನ ಲಕ್ಷಣಗಳು. ಕಲ್ಲುಗಳಿಂದ ಆಯುಧಗಳನ್ನು ತಯಾರಿಸಿಕೊಂಡು ಬೇಟೆಯಾಡಿ ಜೀವನ ಸಾಗಿಸುತ್ತಿದ್ದ. ಆನೆಗಾತ್ರದ ಮ್ಯಾಮತ್‌ನ್ನು ಕೂಡಾ ಬೇಟೆಯಾಡುವಷ್ಟು ಸಾಮರ್ಥ್ಯ ಈತನಲ್ಲಿತ್ತು. ಸಾಂಸ್ಕೃತಿಕವಾಗಿ ಮುಂದುವರಿದಿದ್ದು ಗುಂಪು ಜೀವನ ನಡೆಸುತ್ತಿದ್ದ.




ಮಾನವ ಪಳೆಯುಳಿಕೆಗಳು

ಕ್ರೊಮಾಗ್ನನ್ ಮಾನವ: 75 ಸಾವಿರ ವರ್ಷಗಳಷ್ಟು ಹಿಂದಿನ ಭೂಪದರಗಳಲ್ಲಿ ಯುರೋಪಿನ ಕೆಲವು ಭಾಗಗಳಲ್ಲಿ ದೊರೆತ ಮಾನವ ಅವಶೇಷ. ಹೋಮೋ ಸೆಪಿಯನ್ಸ್ ಜೈವಿಕ ಹೆಸರು. ನಿಯಾಂಡರ್‌ತಲ್ ಮಾನವನಿಗಿಂತ ಮುಂದುವರಿದ ವ್ಯಕ್ತಿ ಈತ. ಆರು ಅಡಿ ಎತ್ತರ, 1650 ಘಸೆಂಮೀ ಗಾತ್ರದ ಮೆದುಳು, ಆಧುನಿಕ ಮಾನವನ ಚಹರೆ, ಮುಂತಾದುವು ಈ ವ್ಯಕ್ತಿಯ ಗುಣಗಳು. ಆತ ವಾಸಿಸುತ್ತಿದ್ದ ಗುಹೆಗಳ ಮೇಲೆ ಬರೆದ ಪ್ರಾಣಿ ಹಾಗೂ ಸಸ್ಯಗಳ ಚಿತ್ರಗಳು ಆತನ ಕೌಶಲ್ಯಕ್ಕೆ ನಿದರ್ಶನಗಳು. ಕೂದಲು ಮಾಯವಾಗಿ ಇಡೀ ಶರೀರ ಮಾನವನ ಶರೀರದಂತೆಯೇ ಬೋಳಾಗಿತ್ತು. ಕೂದಲ ಬಣ್ಣ ಹಾಗೂ ರಚನೆ ಬಗ್ಗೆ ಉಪಯುಕ್ತ ಮಾಹಿತಿ ದೊರಕಿಲ್ಲವಾದರೂ ಎಲುಬುಗಳ ರಚನೆಯಿಂದ ಆತ ಇಂದಿನ ನೀಗ್ರೋಗಳನ್ನು ಹೋಲುತ್ತಿದ್ದ ಎನ್ನಬಹುದು.

ಮಾನವ ಪರಂಪರೆಗಳಲ್ಲಿ ಕ್ರೊಮಾಗ್ನನ್ ಹೆಚ್ಚು ವಿಕಾಸವಾದದ್ದು. ಆದರೆ ಈತ ಆಧುನಿಕ ಮಾನವನಾಗಿ ಯಾವಾಗ ಮಾರ್ಪಾಡಾದ ಎನ್ನುವುದಕ್ಕೆ ಪುರಾವೆಗಳು ಸಿಗುತ್ತಿಲ್ಲ. 1650 ಘಸೆಂಮೀ ಗಾತ್ರದ ಮೆದುಳು, ಬುದ್ಧಿಶಕ್ತಿಯಲ್ಲಿ ಯಾವ ವ್ಯತ್ಯಾಸವೂ ಆಗದೆ,

ಹೇಗೆ, ಏಕೆ, ಯಾವಾಗ ಚಿಕ್ಕದಾಯಿತು ಎನ್ನುವುದಕ್ಕೆ ಕೂಡ ಉತ್ತರ ಸಿಗುತ್ತಿಲ್ಲ. ಅದರಿಂದ ನಿಯಾಂಡರ್‌ತಲ್ ಮಾನವ ನೇರವಾಗಿ ಅಥವಾ ನಿಯಾಂಡರ್‌ತಲ್ ಮಾನವ ವಾಸಿಸುತ್ತಿದ್ದ ಕಾಲದಲ್ಲಿದ್ದ ಇನ್ನೊಂದು ಮಾನವ ಪರಂಪರೆಯಿಂದ ಆಧುನಿಕ ಮಾನವನ ಉದ್ಭವವಾಯಿತು ಎನ್ನುವವರಿದ್ದಾರೆ. ಈಗ ದೊರೆತಿರುವ ಪಳೆಯುಳಿಕೆಗಳೆಲ್ಲವೂ ಮಾನವ ವಿಕಾಸವಾಗುವಾಗ ಕವಲೊಡೆದ ವಿವಿಧ ಪರಂಪರೆಗಳು, ಆಫ್ರಿಕಾ ಖಂಡದಲ್ಲಿ ಬದುಕಿದ್ದ ಕೆನ್ಯಾಪಿತಕಸ್ ಹಾಗೂ ಆಸ್ಟ್ರಲೋಪಿತಕಸ್‌ಗಳಿಂದ ಉದ್ಭವವಾದ ಆಧುನಿಕ ಮಾನವನೊಡನೆ ಸ್ಪರ್ಧಿಸಲಾರದೆ ಈ ಪರಂಪರೆಗಳು ಪಳೆಯುಳಿಕೆಗಳಾದವು ಎನ್ನುವವರಿದ್ದಾರೆ. ಇವರ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ಇದೆ.




A ನಿಯಾಂಡರ್‌ತಲ್ ಮಾನವ B ಕ್ರೊಮ್ಯಾಗ್ನನ್ ಮಾನವ

ಪಳೆಯುಳಿಕೆ, ವರ್ಣತಂತು, ಕೋಶ ಹಾಗೂ ಮೈಟೊಕಾಂಡ್ರಿಯಗಳ ಡಿ.ಎನ್.ಎಯ ಅಧ್ಯಯನ ಮುಂತಾದ ಆಧುನಿಕ ತಂತ್ರಗಳು, ಸುಂಡಿಲಿಯಂಥ ಕೀಟಭಕ್ಷಕದಿಂದ, ಅನಂತರ ಕಾಡುಪಾಪದಂಥ ಕೋತಿಯಿಂದ, ಕೆನ್ಯಾಪಿತಕಸ್‌ನಂಥ ಆದಿಮಾನವನಿಂದ ಆಫ್ರಿಕಾ ಖಂಡದ ದಕ್ಷಿಣ ಅಥವಾ ಪೂರ್ವ ಭಾಗದಲ್ಲಿ ಆಧುನಿಕ ಮಾನವನ ಉಗಮವಾಯಿತು ಎಂದು ತಿಳಿಸುತ್ತವೆ. (ಎಸ್.ಎನ್.ಹೆಚ್.)

**ಮಾನವನ ಆನುವಂಶೀಯ ನೀಲನಕ್ಷೆ ಯೋಜನೆ :** ಇದು ಒಂದು ಬೃಹತ್ ಯೋಜನೆ. ಈ ಯೋಜನೆಯ ಉದ್ದೇಶ, ಮಾನವನ 23 ವರ್ಣತಂತುಗಳಲ್ಲಿರುವ ಜೀನ್‌ಗಳನ್ನು ಗುರುತಿಸಿ, ಅವುಗಳ ಕ್ಷಾರ ಸರಣಿ ಹಾಗೂ ಆನುವಂಶೀಯ ನಕ್ಷೆಯನ್ನು ತಯಾರಿಸುವುದು. 1975ನೇ ಸಾಲಿನ ನೋಬೆಲ್ ಪ್ರಶಸ್ತಿ ವಿಜೇತ ಡಾ॥ ರೊನ್ಯಾಟೊ ಡುಬ್ಬಾಕ್ಕೊ ಈ ಯೋಜನೆಯ ಬಗ್ಗೆ ಮೊದಲು ಚಿಂತಿಸಿದರು. 1983 ರಲ್ಲಿ ಯೋಜನೆ ಸಿದ್ಧವಾಯಿತು. ಅನಂತರ ಅಮೇರಿಕಾದ ವಿಜ್ಞಾನ ಮಂಡಲಿಗೆ ಅನುಮತಿಗಾಗಿ ಕಳಿಸಲಾಯಿತು. ಆದರೆ ತಕ್ಷಣ ಈ ಯೋಜನೆಗೆ ಪುರಸ್ಕಾರ ದೊರೆಯಲಿಲ್ಲ. 1985ರಲ್ಲಿ ಪುನಃ ಅವರು ಅಮೇರಿಕಾ ಮತ್ತು ಇಟಲಿ ದೇಶದ ಜೀವ ವಿಜ್ಞಾನಿಗಳ ಜಂಟಿ ಸಭೆಯಲ್ಲಿ ಈ ಯೋಜನೆಯ ಬಗ್ಗೆ ಪ್ರಸ್ತಾಪಿಸಿದರು. ಆಗ ಇಟಲಿ ರಾಷ್ಟ್ರೀಯ ಸಂಶೋಧನಾ ಮಂಡಲಿಯ ಮುಖ್ಯಸ್ಥ ಡಾ॥ ರೋಸಿ ಬರ್ನಾರ್ಡಿ, ಇಟಲಿಯಲ್ಲಿ ಈ ಯೋಜನೆಯನ್ನು ಪ್ರಾರಂಭಿಸುವುದಾಗಿಯೂ ಡುಬ್ಬಾಕ್ಕೋರವರು ಇದರ ನೇತೃತ್ವವನ್ನು ವಹಿಸಬೇಕೆಂದೂ ನಿರ್ಧರಿಸಿದರು. ಆಗ ಯೋಜನೆಗೊಂದು ಸ್ವರೂಪ ಬಂತು.

ಅನಂತರ ಅಮೇರಿಕಾದ ರಾಷ್ಟ್ರೀಯ ಸಂಶೋಧನಾ ಮಂಡಲಿ ಈ ಯೋಜನೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿತು. ಡಿಎನ್ಎ ಭೌತಿಕ ರಚನೆಯನ್ನು ಗುರುತಿಸಿದ ವಿಜ್ಞಾನಿ ಜೇಮ್ಸ್ ವ್ಯಾಟ್ಸನ್ ನೇತೃತ್ವದಲ್ಲಿ 1988 ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಗೆ ವಾರ್ಷಿಕ ವೆಚ್ಚ ಸು. 200 ಮಿಲಿಯನ್ ಡಾಲರ್‌ಗಳು (650 ಕೋಟಿ ರೂಪಾಯಿಗಳು) ಎಂದು ಅಂದಾಜು ಮಾಡಲಾಗಿತ್ತು. ಇದಕ್ಕೆ ಬೇಕಾದ ವೆಚ್ಚವನ್ನು ದೊಡ್ಡ ದೊಡ್ಡ ಸಂಸ್ಥೆಗಳು ವಹಿಸಲು ಮುಂದೆ ಬಂದವು. 1990 ರಲ್ಲಿ ಯುಎಸ್ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಹೆಲ್ತ್ ಮತ್ತು ಡಿಪಾರ್ಟ್‌ಮೆಂಟ್ ಆಫ್ ಎನರ್ಜಿ 3 ಬಿಲಿಯನ್ ಡಾಲರ್ ಕೊಟ್ಟಿತು. ಈ ಯೋಜನೆಯನ್ನು ಪೂರ್ಣಗೊಳಿಸಲು ಸು. 15 ವರ್ಷಗಳು ಬೇಕಾಗಬಹುದು ಎಂದು ಅಂದಾಜು ಮಾಡಲಾಯಿತು.

ಸೆಲೆರಾ ಸಂಸ್ಥೆಯಲ್ಲಿ ಹೊಸ ತಂತ್ರಜ್ಞಾನದಿಂದ ಸಂಶೋಧನಾ ಕಾರ್ಯ ಬಹಳ ಬೇಗ ಆಯಿತು. ಅವರು ಉಪಯೋಗಿಸಿದ ತಂತ್ರಜ್ಞಾನಕ್ಕೆ ಹೋಲ್ ಜೀನೋಮ್ ಶಾಟ್‌ಗನ್ ಸೀಕ್ವೆನ್ಸಿಂಗ್ ಎಂದು ಹೆಸರು. 2007 ರಲ್ಲಿ ಮುಗಿಯಬಹುದು ಎಂದು ಅಂದಾಜಿಸಿದ್ದ ಈ ಯೋಜನೆಯ 2000 ಇಸವಿಯಲ್ಲಿ ಕರಡು ತಯಾರಾಗಿ 14 ಏಪ್ರಿಲ್ 2003 ರಲ್ಲಿಯೇ ಪೂರ್ಣಗೊಂಡಿತು. ಈ ಯೋಜನೆಯ ಮೊದಲ ಹಂತದಲ್ಲಿ ಮಾನವನಲ್ಲಿ ಒಂದು ಲಕ್ಷ ಜೀನ್‌ಗಳು ಇರಬಹುದು ಎಂದು ಭಾವಿಸಲಾಗಿತ್ತು. ಆದರೆ ಯೋಜನೆ ಪೂರ್ಣಗೊಂಡ ಮೇಲೆ ಬೆಳಕಿಗೆ ಬಂದ ಮಾಹಿತಿ ಭಿನ್ನವಾಗಿತ್ತು.

ಶೇ. 99 ಜೀನ್‌ಗಳು ಎಲ್ಲಾ ಮಾನವರಲ್ಲಿಯೂ ಒಂದೇ ರೀತಿ ಇರುತ್ತವೆ. ಇದರಲ್ಲಿ ಶೇ. 97ರಷ್ಟು ಅನುಪಯುಕ್ತ (ಜಂಕ್) ಎಂದು ತಿಳಿದು ಬಂದಿದೆ. ಇಲ್ಲಿಯವರೆಗೆ, 38,000 ಜೀನ್‌ಗಳ ಬಗ್ಗೆ ಮಾಹಿತಿ ದೊರೆತಿದೆ. ಈ ಯೋಜನೆಯಿಂದ ಮಾನವನ ಹಾಗೂ ಇತರ ಜೀವಿಗಳ ನಡುವೆ ಆನುವಂಶೀಯ ಹೋಲಿಕೆಯು ಸಾಧ್ಯವಾಗಿದೆ. ಉದಾ: ಮಾನವ ಮತ್ತು ಕೊಲಿ ಬ್ಯಾಕ್ಟೀರಿಯಗಳ ಶೇ. 15 ಜೀನ್‌ಗಳಲ್ಲಿ ಸಾಮ್ಯವಿದೆ. ಹೀಗೆಯೇ ಮಾನವ–ಈಸ್ಟ್‌ಗಳ ನಡುವೆ ಶೇ. 30, ಮಾನವ–ಇಲಿಗಳಲ್ಲಿ ಶೇ. 75ರಷ್ಟು, ಮಾನವ–ಚಿಂಪಾಜಿಗಳ ನಡುವೆ ಶೇ. 98.4ರಷ್ಟು ಹೋಲಿಕೆ ಇದೆ. ಈಗ ಬೇರೆ ಬೇರೆ ಜೀವಿಗಳ ಜೀನೋಮ್‌ಗಳ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ.

ಈ ಯೋಜನೆಯಲ್ಲಿ ಬಳಸಲಾದ ವಿಧಾನ: ಮಾನವನ ಸಣ್ಣ ಕರುಳಿನಲ್ಲಿರುವ ಎಶ್ಚಿರಿಕಿಯ ಕೊಲಿ ಬ್ಯಾಕ್ಟೀರಿಯಾದಲ್ಲಿ ಸು. 4,000 ಜೀನ್‌ಗಳಿವೆ. ಪ್ರತಿಯೊಂದು ಜೀನ್‌ನ ವಿಕೃತ ರೂಪವೂ ನಿಸರ್ಗದಲ್ಲಿಯೇ ದೊರೆಯುತ್ತದೆ. ವಿಕೃತ ಜೀನ್‌ಗಳಿರುವ ಬ್ಯಾಕ್ಟೀರಿಯಾದ ಕೋಶಗಳನ್ನು ಸಾಮಾನ್ಯ ಬ್ಯಾಕ್ಟೀರಿಯಾ ಕೋಶಗಳೊಡನೆ ಸಂಕರಗೊಳಿಸಿ, ವರ್ಣತಂತುವಿನ ಮೇಲೆ ಜೀನ್‌ಗಳ ಸ್ಥಾನವನ್ನು ಗುರುತಿಸಲಾಗಿದೆ. ಕೆಲವು ಕಿಣ್ವಗಳ ಸಹಾಯದಿಂದ ಕ್ಷಾರಗಳನ್ನು ಡಿಎನ್ಎಯಿಂದ ಪ್ರತ್ಯೇಕಿಸಿ, ವಿವಿಧ ಪ್ರಾಯೋಗಿಕ ತಂತ್ರಗಳಿಂದ ಕೊಲಿ ಬ್ಯಾಕ್ಟೀರಿಯಾದ ಕ್ಷಾರ ಸರಣಿಯನ್ನು ತಿಳಿದು, ಅದರ ತಳಿನಕ್ಷೆಯನ್ನು ತಯಾರಿಸಲಾಗಿದೆ. ಇದೇ ತಂತ್ರಗಳನ್ನು ಉಪಯೋಗಿಸಿಕೊಂಡು ಮಾನವನ ತಳಿನಕ್ಷೆಯನ್ನು ತಯಾರಿಸುವ ಉದ್ದೇಶದಿಂದ ಈ ಆನುವಂಶೀಯತಾ ಯೋಜನೆಯನ್ನು ತಯಾರಿಸಲಾಯಿತು.

20ನೇ ಶತಮಾನದ ಮೈಲಿಗಲ್ಲು ಮಿಲಿಯನ್‌ಗಟ್ಟಲೆ ಅಮೆರಿಕನ್ ಡಾಲರ್ ವ್ಯಯಿಸಿ ಸಂಶೋಧಿಸಿದ ಈ ಯೋಜನೆಯ ಮೂಲಕ ಸಿಹಿಮೂತ್ರ ರೋಗ, ಪಾರ್ಕಿನ್‌ಸೋನಿಸಂನಂಥ ಹಲವು ಆನುವಂಶೀಯ ರೋಗಗಳು, ಬುದ್ಧಿಮಾಂದ್ಯವನ್ನುಂಟುಮಾಡುವ ಅನೇಕ ಆನುವಂಶೀಯ ವಿಕಾರಗಳಿಗೆ ಪರಿಹಾರ ಪಡೆಯಲು ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ. ಏಯ್ಡ್ಸ್‌ನಂತಹ ಮಾರಕ ರೋಗಗಳಿಗೆ ಸಂಬಂಧಿಸಿದ ಹಲವು ನಿಗೂಢ ಸಮಸ್ಯೆಗಳಿಗೆ ಉತ್ತರ ದೊರೆಯಬಹುದು. ಈ ಯೋಜನೆಯಿಂದ ಮಾನವನ ಪುರೋಭಿವೃದ್ಧಿಯಾಗಿ ನಮ್ಮ ಮುಂದಿನ ಪೀಳಿಗೆಗೆ ಇದು ವರದಾನವಾಗಲಿದೆ ಎಂಬುದು ತಜ್ಞರ ಅಭಿಪ್ರಾಯ. (ವಿ.ಜೆ.ಎಸ್.)

**ಮಾನವ ಪರಿಸರ ವಿಜ್ಞಾನ:** ಮಾನವಕುಲ ಮತ್ತು ಅದರ ಪರಿಸರದ ಅಭ್ಯಾಸ ಮಾಡುವ ವಿಜ್ಞಾನದ ಅಂಗ (ಹ್ಯೂಮನ್ ಈಕಾಲಜಿ). ಮಾನವ ಜನಸಂಖ್ಯೆಗೆ ಸಂಬಂಧಪಟ್ಟ ಕೆಲವು ವಿಷಯಗಳಿಗಷ್ಟೇ ಸೀಮಿತವಾದ ಜನಸಂಖ್ಯಾಶಾಸ್ತ್ರಕ್ಕಿಂತ (ಡಿಮೊಗ್ರಫೀ) ಇದು ವಿಶಾಲವಾದುದು. ಪರಿಸರದ ಎಲ್ಲ ಪ್ರಭಾವಗಳನ್ನೂ ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಲ್ಲದೆ ಮಾನವ ಜನಸಂಖ್ಯೆಯನ್ನು ಮಾತ್ರವಲ್ಲದೆ ಅದಕ್ಕೆ ಸಂಬಂಧಿಸಿದಂತೆ ಪ್ರಾಣಿ ಮತ್ತು ಸಸ್ಯಕುಲಗಳ ಸಂಖ್ಯೆಯನ್ನೂ ಅಧ್ಯಯನ ಮಾಡಲಾಗುತ್ತದೆ.

ಯಾವುದೇ ಪ್ರದೇಶದಲ್ಲಿ ಕಂಡುಬರುವ ಜೀವಜಾತಿಗೆ ಸೇರಿದ ಎಲ್ಲ ವ್ಯಕ್ತಿಗಳನ್ನೂ ಒಟ್ಟಾಗಿ ಒಂದು ಜೀವಿಸಂದಣಿ ಎಂದು ಕರೆಯಬಹುದು. ಈ ಸಂದಣಿಗೆ ತನ್ನದೇ ಆದ ಜನನಪ್ರಮಾಣ, ಮರಣಪ್ರಮಾಣ, ಸಾಂದ್ರತೆ, ವಯೋವಿತರಣೆ, ಸಂಖ್ಯಾ ಪ್ರಸಾರ, ವೃದ್ಧಿಯ ಗತಿ ಮುಂತಾದ ಲಕ್ಷಣಗಳಿವೆ. ಪ್ರತಿಯೊಂದು ಸಂದಣಿಗೂ ಅವಶ್ಯಕವಾದ ಪರಿಸರದ ಅನೇಕ ಅಂಶಗಳಿವೆ. ಅವುಗಳಲ್ಲಿ ವಾಯುಗುಣ, ಬೆಳಕು, ನೆಲ, ಆಹಾರ, ಉಷ್ಣತೆ–ಇವು ಕೆಲವು. ಕಾಲಕ್ರಮದಲ್ಲಿ ಜನಸಂಖ್ಯೆಯಲ್ಲಿ ಏರಿಳಿತಗಳಾಗುವುದಿದೆ. ಜನನಪ್ರಮಾಣ, ಮರಣಪ್ರಮಾಣ, ವೃದ್ಧಿ ಪ್ರಮಾಣಗಳು ಏರಿಳಿತಗಳೂ ಜನಸಾಂದ್ರತೆಯ ಏರಿಳಿತಗಳೂ ಆಗುತ್ತವೆ. ಕೆಲವು ಜೀವಿಗಳಲ್ಲಿ ಜನಸಾಂದ್ರತೆ ತೀರ ಹೆಚ್ಚುತ್ತಿರುವ ಹಾಗೆಯೇ ಜನನ ಪ್ರಮಾಣ ಇಳಿಯುತ್ತ ಹೋಗುವುದನ್ನು ಕಾಣುತ್ತೇವೆ. ಮತ್ತೆ ಕೆಲವು ಹೀಗೆ ತಂತಾನೆ ಕುಂಠಿತವಾಗದೆ ಜ್ಯಾಮಿತಿಯ ರೀತ್ಯ ಬೆಳೆಯುತ್ತ ಹೋಗುತ್ತವೆ. ಉದಾಹರಣೆಗೆ ಮಾನವ ಜನಸಂಖ್ಯೆ ಹೊರಗಿನ ಅಡತಡೆಗಳಿಲ್ಲದಿದ್ದರೆ ಬೆಳೆಯುತ್ತ ಹೋಗಿ ಕೊನೆಗೊಮ್ಮೆ ತನ್ನ ಶಕ್ತಿ ಹಾಗೂ ಸಂಪನ್ಮೂಲಗಳ ಮಿತಿ ದಾಟುವ ಸಂಭವವಿದೆ. ಇನ್ನೂ ಕೆಲವು ಸಂದಣಿಗಳಲ್ಲಿ ಅತಿ ವಿರಳತೆ ಅಥವಾ ಅತ್ಯಧಿಕ ಸಾಂದ್ರತೆಯಿದ್ದಾಗ ಜನನಪ್ರಮಾಣ ಬೆಳೆಯುವುದಿಲ್ಲ. ಅದು ಮಧ್ಯಮ ಪ್ರಮಾಣದಲ್ಲಿದ್ದಾಗ ಮಾತ್ರ ಜನನಪ್ರಮಾಣ ಹೆಚ್ಚಾಗಿರುತ್ತದೆ. ಇನ್ನೂ ಒಂದು ವೈಲಕ್ಷಣ್ಯವನ್ನು ನಾವು ಕೆಲವು ಸಂದಣಿಗಳಲ್ಲಿ ಗುರುತಿಸಬಹುದು. ಅದೇಂದರೆ, ಕೆಲವು ವರ್ಷಗಳಿಗೊಮ್ಮೆ ಅವು ಅತಿ ಪ್ರಜನನಶಕ್ತಿಯನ್ನು ಪ್ರದರ್ಶಿಸಿ ಮತ್ತೆ ಹಿಂಬೀಳುತ್ತವೆ.

ಪ್ರತಿಯೊಂದು ಸಂದಣಿಗೂ ತನ್ನದೇ ಆದ ಕಾರ್ಯಕ್ಷೇತ್ರವಿದೆ. ಅದು ಬೇರೆ ಸಂದಣಿಗಳಿಂದ ತನ್ನನ್ನು ಪ್ರತ್ಯೇಕಿಸಿಕೊಂಡು, ರಕ್ಷಣೆ ಪಡೆದು, ಅಲ್ಲೇ ವಾಸಮಾಡುತ್ತದೆ. ತಾತ್ಕಾಲಿಕವಾಗಿ ಹೊರವಲಸೆ ಹೋದರೂ ತಿರುಗಿ ಸ್ವಕ್ಷೇತ್ರಕ್ಕೆ ಮರಳುತ್ತದೆ. ಕೆಲವೊಮ್ಮೆ, ಕಾರಣಾಂತರಗಳಿಂದ ಕೆಲವು ಮರಳಿ ಬಾರದಂತೆ ವಲಸೆ ಹೋದೆಡೆಯೇ ನೆಲೆಸುತ್ತವೆ. ಇದನ್ನು ಯಾದೃಚ್ಛಿಕ ವಲಸೆ ಎನ್ನಬಹುದು. ವಲಸೆ, ಪ್ರಾಬಲ್ಯ, ವಂಶಾನುಕ್ರಮ, ಸ್ತರೀಕರಣ–ಇವು ಮಾನವ ಪರಿಸರ ವಿಜ್ಞಾನದಲ್ಲಿ ಕಂಡುಬರುತ್ತವೆ.

ಇಲ್ಲಿ ಅಧ್ಯಯನ ಮಾಡುವ ಇನ್ನೊಂದು ವಿಷಯ, ಭಿನ್ನ ಸಂದಣಿಗಳ ನಡುವಿನ ಅಂತರಕ್ರಿಯೆ. ಪ್ರತಿಯೊಂದು ಸಂದಣಿಯೂ ಯಾವುದಾದರೊಂದು ಜಾಗವನ್ನು ಕೆಲವು ಕಾಲ ಆಕ್ರಮಿಸಿಕೊಂಡಿರುತ್ತದೆ. ಈ ಗೂಡು ಅಥವಾ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಪ್ರಾಣಿಗಳೊಡನೆ ಸ್ಪರ್ಧಿಸುತ್ತದೆ. ಈ ಸ್ಪರ್ಧೆಯಲ್ಲಿ ಬಲಹೀನ ಸ್ಪರ್ಧಿ ನಾಶವಾಗಿ ಸಬಲ ಸ್ಪರ್ಧಿ ಜಯಶಾಲಿಯಾಗಿ ತನ್ನ ಅಧಿಪತ್ಯ ಬೆಳೆಸಿಕೊಳ್ಳಬಹುದು. ಮತ್ತೆ ಕೆಲವೊಮ್ಮೆ ಅವು ಪರಸ್ಪರ ಹೊಂದಿಕೊಂಡು ಸಹಜೀವನ ನಡೆಸಲೂಬಹುದು. ಇನ್ನೂ ಕೆಲವು ಅಂತರಕ್ರಿಯೆಗಳಿವೆ. ಇವುಗಳಲ್ಲಿ ತಾಟಸ್ಥ್ಯ ಒಂದು. ಪರಸ್ಪರ ಪ್ರಯೋಜನ ಇನ್ನೊಂದು. ಆದ್ಯ ಸಹಕಾರ ಮತ್ತೊಂದು. ಪರಾಶ್ರಯ ಜೀವನ ಮಗುದೊಂದು. ಇವುಗಳಲ್ಲದೆ ಬೇಟೆ–ಬೇಟೆಗಾರರ ಸಂಬಂಧವಾಗಲೀ ಪರಸ್ಪರಾಶ್ರಯವಾಗಲೀ ಇರಬಹುದು.

ಜೀವಿಗಳು ತಮ್ಮ ಪೋಷಣೆಗಾಗಿ ಬೇರೆ ಜೀವಿಗಳನ್ನು ಅನ್ನವಾಗಿ ಪಡೆಯುವುದು ಎಷ್ಟು ನಿಜವೊ ತಾವೂ ಬೇರೆಯವರ ಅನ್ನವಾಗುವುದೂ ಅಷ್ಟೇ ನಿಜ. ಹೀಗೆ ಅನ್ನದ ಸರಪಣಿಯೊಂದಿದೆ. ಸೌರಶಕ್ತಿಯನ್ನು ಹೀರಿಕೊಳ್ಳುವ ಸಸ್ಯಗಳು, ಸಸ್ಯಗಳನ್ನು ತಿಂದು ಬದುಕುವ ಸಸ್ಯಾಹಾರಿಗಳು, ಹಾಗೂ ಮಾಂಸಾಹಾರಿಗಳಾದ ಪ್ರಾಣಿಜಾತಿಗಳು–ಇವು ಆಹಾರಜಾಲದಲ್ಲಿ ಬಂಧಿತವಾದ ಜೀವಿಗಳು.

ಮಾನವ ಸಂದಣಿಗಳು ಉಳಿದ ಜೀವಿಸಂದಣಿಗಳಂತೆ ಹಾಗೆಯೇ ನಿಸರ್ಗದಲ್ಲಿ ಸೆಣಸಿ ಉಳಿದಿವೆ ಹಾಗೂ ಯಶಸ್ವಿಯಾದ ವಂಶಗುಣಗಳನ್ನು ಮುಂದುವರಿಸಿಕೊಂಡು ಬಂದಿವೆ. ಬೇರೆ ಪ್ರಾಣಿಗಳ ಹಾಗೆಯೇ ಮಾನವರೂ ಈ ಪೃಥ್ವಿಯಲ್ಲಿ ಏಕಾಕಿಗಳಲ್ಲ. ಬೇರೆ ಪ್ರಾಣಿಗಳೊಡನೆ ಸಹಕರಿಸುತ್ತ, ಸ್ಪರ್ಧಿಸುತ್ತ, ಆಹಾರಜಾಲಗಳಲ್ಲಿ ಸೇರಿ ಕೊಂಡಿದ್ದಾರೆ. ಪರಸ್ಪರಾಶ್ರಯ ಹಾಗೂ ಪರಾಶ್ರಯದ ತತ್ತ್ವಗಳು ಮಾನವರಿಗೂ ಅನ್ವಯಿಸುತ್ತವೆ.

ಮಾನವವಿಕಾಸ ಈ ಅಧ್ಯಯನದ ಮತ್ತೊಂದು ಮುಖ್ಯ ವಿಷಯ. ಸರಳ ಜೀವರಾಶಿಗಳಿಂದ ಮಾನವಸದೃಶ ಪ್ರಾಣಿಗಳವರೆಗೆ ಮತ್ತು ಅಲ್ಲಿಂದ ಆಧುನಿಕ ಮಾನವನವರೆಗಿನ ವಿಕಾಸವನ್ನು ಇಲ್ಲಿ ನೋಡುತ್ತೇವೆ. ಭೌತಿಕ ಮಾನವಶಾಸ್ತ್ರ, ಪಳಿಯುಳಿಕೆಗಳ ವಿಜ್ಞಾನ, ಭೂವಿಜ್ಞಾನ ಮತ್ತು ಪ್ರಾಚ್ಯಸಂಶೋಧನಾವಿಜ್ಞಾನಗಳ ಸಹಾಯದಿಂದ ಮಾನವ ಮತ್ತು ಪರಿಸರಗಳ ಸಂಬಂಧವನ್ನು ಕಾಲಕ್ರಮಾನುಗುಣವಾಗಿ ಇಲ್ಲಿ ನೋಡಬಹುದು.

ಮಾನವ ಪ್ರಭೇದಗಳನ್ನು ಅವು ಹುಟ್ಟುವ ಸನ್ನಿವೇಶಗಳನ್ನೂ ತಿಳಿಯುವ ಪ್ರಯತ್ನವನ್ನು ಮಾನವ ಪರಿಸರವಿಜ್ಞಾನಿ ಮಾಡುತ್ತಾನೆ. ಆಕೃತಿ ರಚನೆಯ ದೃಷ್ಟಿಯಿಂದ ನೋಡಿದಾಗ ಮಾನವರಲ್ಲಿ ನೀಗ್ರಾಯಿಡ್, ಕಾಕಸಾಯಿಡ್, ಆಸ್ಟ್ರಲಾಯಿಡ್ ಹಾಗೂ ಮಾಂಗಲಾಯಿಡ್ ಎಂಬ ನಾಲ್ಕು ಜನಾಂಗಗಳನ್ನು ಗುರುತಿಸಬಹುದು. ಈ ಜನಾಂಗಗಳು ಹೇಗೆ ಹುಟ್ಟಿದುವೆಂದು ನಿಶ್ಚಯವಾಗಿ ಹೇಳಲಾಗದು. ಆದರೂ ಪರಿಸರದ ಪ್ರಭಾವಗಳು ಈ ಜನಾಂಗಗಳು ಹುಟ್ಟುವುದಕ್ಕೂ ಕೆಲವು ಪ್ರದೇಶಗಳಲ್ಲೇ ಅವು ಕೇಂದ್ರೀಕೃತವಾಗಿ ಉಳಿಯಲಿಕ್ಕೂ ಅನಂತರ ನಿಧಾನವಾಗಿ ಮಾಯವಾಗಲಿಕ್ಕೂ ಕಾರಣವಾಗಿವೆ ಎಂಬುದಂತೂ ನಿಶ್ಚಿತ.

ಪರಿಸರವಿಜ್ಞಾನಿಗಳು ಆದಿಮ ಮತ್ತು ಆಧುನಿಕ ಮಾನವ ಗುಂಪುಗಳ ಗಾತ್ರಕ್ಕೂ ಅವುಗಳ ನೆಲೆಗಳ ವಿಸ್ತೀರ್ಣಕ್ಕೂ ವಾರ್ಷಿಕ ಮಳೆಯ ಪ್ರಮಾಣ ಮೊದಲಾದ ಪರಿಸರದ ಅಂಶಗಳಿಗೂ ಇರುವ ಸಂಬಂಧಗಳನ್ನು ಗುರುತಿಸಿದ್ದಾರೆ. ಆಹಾರ ಉತ್ಪಾದನೆ, ಆಹಾರಜಾಲಗಳ ರಚನೆ ಹಾಗೂ ಸಂದಣಿಗಳ ಸಂಬಂಧವನ್ನು ಗುರುತಿಸಲು ಯತ್ನಿಸಿದ್ದಾರೆ. ವಾಯುಗುಣ, ಸ್ವಾಭಾವಿಕ ಲಕ್ಷಣಗಳು, ಭೂಗುಣ ಮತ್ತು ಆಹಾರಸಂಗ್ರಹಣ ಶಕ್ತಿಗಳನ್ನು ಅನುಸರಿಸಿ ಜನಸಾಂದ್ರತೆ ಹಾಗೂ ಜನನ ಮರಣ ಪ್ರಮಾಣಗಳಲ್ಲಿ ಏರಿಳಿತಗಳಾಗುತ್ತಿದ್ದುದನ್ನು ಕಂಡಿದ್ದಾರೆ. ಸುಮಾರು 42ರಷ್ಟು ಸಂತಾನ ಪಡೆಯಬಹುದಾದ ಮಾನವ ಸ್ತ್ರೀ ಆ ಪ್ರಮಾಣಕ್ಕಿಂತ ನಾಲ್ಕೆಂಟು ಪಟ್ಟು ಕಡಿಮೆ ಸಂತಾನ ಪಡೆಯುತ್ತ ಬಂದುದಕ್ಕೆ ಕಾರಣಗಳನ್ನು ಹುಡುಕಿದ್ದಾರೆ.

ಸುಮಾರು 6000–8000 ವರ್ಷಗಳ ಹಿಂದೆಯೇ ಪ್ರಾರಂಭವಾದ ಕೃಷಿಕ್ಷೇತ್ರದ ಬೆಳವಣಿಗೆಯಿಂದಾಗಿ ಮಾನವ ನೆಲೆಗಳ ನಿರ್ವಹಣಾಶಕ್ತಿ ಬೆಳೆಯಿತು. ಇದರಿಂದಾಗಿ ನಗರಗಳು ಹುಟ್ಟುವುದು ಸಾಧ್ಯವಾಯಿತು. ತಾತ್ಕಾಲಿಕವಾಗಿ ಅವು ಸಾಂದ್ರತೆಯ ಮಿತಿಯನ್ನು ದಾಟುವಷ್ಟು ಜನರನ್ನು ಸಾಕುವಷ್ಟು ಸಮರ್ಥವಾಗಿದ್ದುವು. ಆದರೆ ಸಾಂದ್ರತೆ ಹೆಚ್ಚುತ್ತಿದ್ದಂತೆ ರೋಗಗಳು ಹಬ್ಬಿಕೊಳ್ಳುವುದು ಸುಲಭವಾಯಿತು. ಈಜಿಪ್ಟಿನ ಗೋರಿಗಳಲ್ಲಿಟ್ಟ ಶವಗಳಿಂದ ಹರಡಿದ ಕರುಳು ಹಾಗೂ ಮೂತ್ರಕೋಶದ ರೋಗದಿಂದ ಸಾವಿರಾರು ಜನರು ಸತ್ತುದು ಸಾಂಕ್ರಾಮಿಕ ರೋಗದ ವ್ಯಾಪ್ತಿಗೆ ಒಂದು ಪ್ರಾಚೀನ ಉದಾಹರಣೆ. 14ನೆಯ ಶತಮಾನದ ಪ್ಲೇಗು ರೋಗದ ಸೋಂಕು ಇನ್ನೊಂದು ಅಂಥ ಉದಾಹರಣೆ. ಇನ್ನೂ ಜೀವಂತವಾಗಿರುವ ಇನ್‌ಫ್ಲುಯೆಂಜ ಪಿಡುಗು ಜನಸಂಖ್ಯೆಯ ಒತ್ತಡವನ್ನು ಕಡಿಮೆ ಮಾಡಬಲ್ಲದಂತೆ. ಆಧುನಿಕ ರೋಗನಿವಾರಕ ಔಷಧಗಳನ್ನು ಹಾಗೂ ಆಹಾರೋತ್ಪಾದನೆಯ ಶಕ್ತಿ ಸುಧಾರಿಸಿದಂತೆ ರೋಗ ಮತ್ತು ಉಪವಾಸಗಳ ಮಾರಕ ಶಕ್ತಿ ಕುಗ್ಗಿದೆ; ಇದರಿಂದ ಜನಸಂಖ್ಯೆ ಆಸ್ಫೋಟಗೊಳ್ಳುತ್ತಿದೆ. ಸದ್ಯ ಮೂವತ್ತೈದು ವರ್ಷಗಳಿಗೊಮ್ಮೆ ಅದು ದ್ವಿಗುಣಗೊಳ್ಳುತ್ತಿದೆ.

ಪರಿಸರವಿಜ್ಞಾನಿಯ ಪ್ರಕಾರ ಪ್ರಾಣಿ ಮತ್ತು ಸಸ್ಯವರ್ಗಗಳಲ್ಲಿ ಸಂಖ್ಯಾ ನಿಯಂತ್ರಣ ವ್ಯವಸ್ಥೆಗಳು ಸಹಜವಾಗಿ ಇವೆ. ಹಾಗೆಯೇ ಮಾನವ ಪರಿಸರದಲ್ಲಿಯೂ ರೋಗ, ಆಹಾರಾಭಾವಗಳು ಒಂದು ಕಾಲಕ್ಕೆ ನಿಯಂತ್ರಣ ಮಾರ್ಗಗಳಾಗಿದ್ದುವು. ರೋಗ ಹಾಗೂ ಅಭಾವಗಳನ್ನು ನಾವು ಈಗ ನಿಯಂತ್ರಿಸುವುದರಲ್ಲಿದ್ದೇವೆ. ಹೀಗಾಗುತ್ತಲೇ ಮತ್ತೆ ಜನಸಂಖ್ಯಾ ಸ್ಫೋಟ ಪ್ರಖರಗೊಳ್ಳುತ್ತಿರುವುದರಿಂದ ಬೇರೆ ಕೆಲವು ನಿಯಂತ್ರಣ ವಿಧಾನಗಳು ಅಗತ್ಯವಾದುವು. ರಾಸಾಯನಿಕ ಸಂಯೋಜನೆಯಿಂದ ಅಥವಾ ಬೇರೆ ವಿಧಾನಗಳಿಂದ ಬೇಕಾದಷ್ಟು ಆಹಾರವನ್ನು ಸೃಷ್ಟಿಸಿ ನೆಲದ ನಿರ್ವಹಣಾಶಕ್ತಿಯನ್ನು ಬೆಳೆಸಬೇಕು. ಹಿಂದೆ ಮಾನವಕುಲಗಳು ಹೀಗೆ ಮಾಡಿದ ದಾಖಲೆಗಳಿವೆ. ದುರ್ಧರ ಪ್ರಸಂಗಗಳಲ್ಲಿ ಅವು ತಮ್ಮ ಆಹಾರಜಾಲಗಳನ್ನು ಬದಲಾಯಿಸಿಕೊಂಡಿವೆ. ಮೊದಲು ಬೇಟೆಯಾಡುತ್ತಿದ್ದಾಗ, ಆ ಮುಂದೆ ಗಡ್ಡೆ ಗೆಣಸು, ಹಣ್ಣು ಹಂಪಲು ಮುಂತಾದ ಆಹಾರ ಸಂಗ್ರಹಿಸುತ್ತಿದ್ದಾಗ, ಅನಂತರ ಕೃಷಿಯನ್ನು ಅಭಿವೃದ್ಧಿಗೊಳಿಸಿದಾಗ, ಸಮುದಾಯಗಳ ನಿರ್ವಹಣ ಶಕ್ತಿ ಹೆಚ್ಚಿತು. ಪ್ರಾಣಿಗಳನ್ನು ಹೊಂಚುಹಾಕಿ ಕೊಂದು ತಿನ್ನಬೇಕಾಗಿದ್ದ ಮಾನವ ಆಹಾರವನ್ನು ಬೇರೆಬೇರೆ ವಿಧಾನಗಳಿಂದ ಬೆಳೆದು, ಸಂಗ್ರಹಿಸಿ ತಿನ್ನುವಂತಾಯಿತು. ಇದರಿಂದ ಅವನು ತನ್ನ ಆಹಾರಜಾಲಗಳ ತೊಡಕಿಗೊಳಗಾದ ಬೇರೆ ಸಂದಣಿಗಳ ಸ್ಪರ್ಧೆಯಿಂದ ಪಾರಾಗುವುದು ಸಾಧ್ಯವಾಯಿತು. ತತ್ಪರಿಣಾಮವಾಗಿ ಪರಿಸರವ್ಯೂಹದಲ್ಲಿ ಹೊಸ ಸಂಬಂಧಗಳು ಹುಟ್ಟಿಕೊಂಡವು. ಜನಸಂಖ್ಯೆ ಇಂದು ತೀವ್ರಗತಿಯಿಂದ ಏರುತ್ತಿರುವಾಗ ಮತ್ತೊಮ್ಮೆ ಇಂಥ ಬದಲಾವಣೆ ಅವಶ್ಯಕವಾಗಿದೆ. ಇದು ಸಾಧ್ಯವಾಗದೆ ಹೋದರೆ ಸಂತಾನ ನಿರೋಧ ಅತ್ಯಗತ್ಯವೆನಿಸಿತು.

ಪರಿಸರವಿಜ್ಞಾನಿಗಳು ಭಯದಿಂದ ಇದಿರುನೋಡುತ್ತಿರುವ ವಿಷಯವೊಂದಿದೆ. ಈಗ ಗೊತ್ತಿರುವಂತೆ ಜನಸಾಂದ್ರತೆ ವಿಪರೀತವಾಗುತ್ತ ಹೋದಂತೆ ಪ್ರಾಣಿ ಜನಾಂಗಗಳಲ್ಲಿ ವಿಚಿತ್ರವಾದ ಬಳಲಿಕೆಯ ಲಕ್ಷಣಗಳು (ಸ್ಟ್ರೆಸ್ ಸಿಂಡ್ರೊಮ್) ಕಾಣಿಸಿಕೊಳ್ಳುತ್ತವೆ. ಆಗ ಅವು ತಮ್ಮ ಜನನಿಬಿಡ ಪ್ರದೇಶದಿಂದ ದೂರ ದೂರದ ಪ್ರದೇಶಗಳಿಗೆ ವಲಸೆಹೋಗಿ ತಂಡ ತಂಡವಾಗಿ ಸಾವನ್ನು ಅಪ್ಪಿದ ಉದಾಹರಣೆಗಳಿವೆ. ಹಾಗೆಯೇ ಮಾನವರಲ್ಲೂ ಆಗಬಹುದೇನೋ ಎಂದು ಕೆಲವು ವಿಜ್ಞಾನಿಗಳು ಶಂಕಿಸಿದ್ದಾರೆ. ಸದ್ಯ ಅಂಥ ಲಕ್ಷಣಗಳೇನೂ ಇಲ್ಲ. ಹಾಗಾಗುವ ಮೊದಲೇ ಪರಿಸರ ಮತ್ತು ಪ್ರಾಣಿಗಳಿಗಿರುವ ಸಂಬಂಧವನ್ನು ಚೆನ್ನಾಗಿ ಅರಿತುಕೊಳ್ಳುವುದು ಶ್ರೇಯಸ್ಕರ. ಮಾನವ ಪರಿಸರವಿಜ್ಞಾನಿಗಳು ಈ ಬಗ್ಗೆ ಹೆಚ್ಚಿನ ಕೆಲಸ ಮಾಡುತ್ತಾರೆ. (ಎಚ್.ವಿ.ಎನ್.)

**ಮಾರ್ಜಾಲಗಳು:** ಕಾರ್ನಿವೋರ ಗಣದ ಫೆಲಿಡೆ ಕುಟುಂಬದ ಕೆಲವು ಸ್ತನಿಗಳಿಗಿರುವ ಸಾಮಾನ್ಯ ಹೆಸರು. ಫೆಲಿಸ್ ಮತ್ತು ಪ್ಯಾಂತೆರ ಜಾತಿಗೆ ಸೇರಿವೆ. ಫೆಲಿಸ್ ಗುಂಪಿನ ಫೆಲಿಡೆ ಉಪ ಕುಟುಂಬದಲ್ಲಿ 13 ಜಾತಿಯ ಮಾರ್ಜಾಲಗಳಿವೆ. ಪ್ಯಾಂತೆರ ಗುಂಪಿನ ಪ್ಯಾಂತೆರಿನೆ ಉಪ ಕುಟುಂಬದಲ್ಲಿ 4 ಜಾತಿಗಳನ್ನು ಸೇರಿಸಲಾಗಿದೆ. ಚೀತಾ ಅಸಿನೊಸ್ಟೈಟಿನೆ ಉಪ ಕುಟುಂಬಕ್ಕೆ ಸೇರಿದೆ. ಇದಲ್ಲದೆ ತಜ್ಞರ ಪ್ರಕಾರ ಇನ್ನೂ 36 ಪ್ರಭೇದಗಳಿವೆ. ಇಷ್ಟಲ್ಲದೆ ಭೌಗೋಳಿಕ ಪ್ರದೇಶಕ್ಕನುಗುಣವಾಗಿ ಪುನರ್ ವಿಂಗಡಿಸಿ ಹಲವು ಉಪ ಪ್ರಭೇದಗಳನ್ನೂ ಗುರುತಿಸಲಾಗಿದೆ.

ಭಾರತವೂ ಸೇರಿದಂತೆ ಏಷ್ಯಾಖಂಡದಲ್ಲಿ ಫೆಲಿಸ್ ಜಾತಿಯ 12 ಪ್ರಭೇದಗಳು ಮತ್ತು 4 ಪ್ಯಾಂತೆರ ಜಾತಿಯ ಪ್ರಭೇದಗಳು ಕಾಣಸಿಗುತ್ತವೆ; ಫೆಲಿಸ್ ಜಾತಿಯ ಫೆ. ಲೈಬಿಕ್ ಓರ್ನಾಟ (ಮರುಭೂಮಿ ಬೆಕ್ಕು), ಫೆಲಿಸ್ ಟೆಮಿಂಕಿ (ಗೋಲ್ಡನ್ ಬೆಕ್ಕು), ಫೆಲಿಸ್ ಕರಾಕಲ್ (ಕರಾಕಲ್), ನಿಯೋಫೆಲಿಸ್ ನೆಬುಲೋಸ್ (ಕ್ಲೌಡೆಡ್ ಲೆಪರ್ಡ್), ಫೆ. ಪ್ರಿಯಾನೈಲುರಸ್ (ಮೀನು ಬೆಕ್ಕು), ಫೆ. ಚುಹಾಸ್ (ಕಾಡು ಬೆಕ್ಕು), ಫೆ. ಬೆಂಗಾಲೆನ್ಸಿಸ್ (ಚಿರತೆ ಬೆಕ್ಕು), ಫೆ. ಮನುಲ್ (ಮನುಲ್), ಫೆ. ಮರ್‍ಮರಾಟ್ ( ಮರ್‍ಬಲ್ಡ್ ಕ್ಯಾಟ್), ಫೆ. ಮರ್ನೋರಿಟ್ (ಮರಳು ಬೆಕ್ಕು), ಫೆ.ಬೈಟಿ (ಚೈನೀಸ್ ಮರುಭೂಮಿ ಬೆಕ್ಕು), ಫೆ.ಇರೊಮೊಟೆನ್ಸಿಸ್ (ಇರಿಯೊಮೊಟೆ ಬೆಕ್ಕು) ಮತ್ತು ಪ್ಯಾಂತೆರ ಜಾತಿಯ ಪ್ಯಾ. ಟೈಗ್ರಿಸ್ (ಹುಲಿ), ಪ್ಯಾಲಿಯೊ (ಸಿಂಹ), ಪ್ಯಾಯುನಿಕ ಮತ್ತು ಪ್ಯಾಪರಡಸ್ (ಚಿರತೆ).

ಆಫ್ರಿಕ ಖಂಡದಲ್ಲಿ ಫೆಲಿಸ್ ಜಾತಿಯ 6 ಪ್ರಭೇದಗಳು ಪ್ಯಾಂತೆರ ಜಾತಿಯ 2 ಪ್ರಭೇದಗಳು ಮತ್ತು ಚೀತಾ (ಅಸಿನೊನಿಕ್ಸ್ ಜುಬಾಟಸ್) ವಾಸವಾಗಿವೆ. ಈ ಒಂಬತ್ತು



ಚೀತಾ

ಕಾರಕಲ್

ಹಿಮ ಚಿರತೆ



ಚಿರತೆ ಬೆಕ್ಕು

ಸಾಕು ಬೆಕ್ಕುಗಳು



ಮೀನು ಹಿಡಿಯುವ ಬೆಕ್ಕು

ಮಾರ್ಜಾಲಗಳಲ್ಲಿ ಚೀತಾ ಅತ್ಯಂತ ಅಪಾಯದಂಚಿನಲ್ಲಿರುವ ಮಾರ್ಜಾಲ. ಅಮೇರಿಕ ಭೂ ಖಂಡದಲ್ಲಿ ಒಟ್ಟು 10 ಪ್ರಭೇದದ ಮಾರ್ಜಾಲಗಳಿವೆ. ಫೆಲಿಸ್ ಜಾತಿಯ 9 ಪ್ರಭೇದಗಳು ಮತ್ತು ಪ್ಯಾಂತೆರ ಪ್ರಭೇದವೂ ಸೇರಿದಂತೆ ಒಟ್ಟು 39 ಬಗೆಯ ಮಾರ್ಜಾಲಗಳು ವಿಶ್ವದ ವಿವಿಧ ಭೂ ಖಂಡ ಪ್ರದೇಶಗಳಲ್ಲಿ ವಾಸಿಸುತ್ತವೆ.

ಮಾರ್ಜಾಲಗಳು ಸುಂದರವಾದ ಮೈಕಟ್ಟು, ಬಲಿಷ್ಠವಾದ ಕಾಲು, ಕಾಲುಗಳ ತುದಿಯಲ್ಲಿ ಕೊಕ್ಕೆಯಂತಹ ಉಗುರುಗಳನ್ನು ಹೊಂದಿವೆ. ಉಗುರಿನ ಮೊನಚನ್ನು ಸಂರಕ್ಷಿಸಲು ಪಂಜಿನೊಳಗೆ ಎಳೆದುಕೊಂಡು, ಅಗತ್ಯವಾದಾಗ ಮಾತ್ರ ಹೊರತೆಗೆದು ಉಪಯೋಗಿಸುವ ವ್ಯವಸ್ಥೆ ಹೊಂದಿರುವುದು ಇವುಗಳ ವಿಶೇಷ ಗುಣ. ಕುತ್ತಿಗೆಯ ಸ್ನಾಯುಗಳು ಬಲವಾಗಿವೆ. ಬೇಟೆಯಾಡಲ್ಪಟ್ಟ ಪ್ರಾಣಿಗಳನ್ನು ಬಾಯಿಯಿಂದ ಜಾರಿ ಹೋಗದಂತೆ ತಡೆಯಲು ಕತ್ತರಿಯೋಪಾದಿಯಲ್ಲಿರುವ ದವಡೆ ಹಲ್ಲು (ಕಾರ್ನಾಸಿಯಲ್ ಹಲ್ಲು) ಗಳಿವೆ. ಈ ಎಲ್ಲಾ ವಿಶೇಷ ಗುಣಗಳ ಜೊತೆಗೆ ವಾಸಿಸುವ ಪ್ರದೇಶಕ್ಕನುಗುಣವಾಗಿ ಆಕರ್ಷಕ ಮೈಬಣ್ಣ ಹೊಂದಿವೆ.

ಸಿಂಹ: ನಿಶಾಚರ ಪ್ರಾಣಿ ಮತ್ತು ಸಂಘ ಜೀವಿ. ವೈಜ್ಞಾನಿಕ ಹೆಸರು ಪ್ಯಾಂತೆರ ಲಿಯೋ ಪೆರ್ಸಿಕ (ನೋಡಿ: ಸಿಂಹ)

ಹುಲಿ: ಪ್ಯಾಂತೆರ ಟೈಗ್ರಿಸ್ ಇದರ ವೈಜ್ಞಾನಿಕ ನಾಮ (ನೋಡಿ; ಹುಲಿ). ಹುಲಿಗಳು ವರ್ಷಕ್ಕೊಮ್ಮೆ ಸಂತಾನ ಕೈಗೊಳ್ಳುತ್ತವೆ. ಗಂಡು ಹೆಣ್ಣು ಹುಲಿಗಳು ಸಂಭೋಗ ಮಾಡಿದ ಅನಂತರ 113 ದಿನಗಳ ಗರ್ಭಾವದಿ ಮುಗಿಸಿ, ಹೆಣ್ಣು ಹುಲಿ 2–3 ಮರಿಗಳಿಗೆ ಜನ್ಮ ನೀಡುತ್ತದೆ. ಕೆಲವು ಬಾರಿ 5–6 ಮರಿಗಳಿಗೆ ಜನ್ಮ ನೀಡಿದ ಬಗ್ಗೆ ವರದಿಗಳಿವೆ. ಹೆಣ್ಣು ಹುಲಿ ಮರಿಗಳನ್ನು ಜೋಪಾನವಾಗಿ ಒಂದು ವರ್ಷ ನೋಡಿಕೊಳ್ಳುತ್ತದೆ. ಎರಡನೇ ವರ್ಷದಲ್ಲಿ ಕಾಲಿಟ್ಟ ಹುಲಿ ಮರಿಗಳು ಬೇಟೆ ಆಡುವುದನ್ನು ಕಲಿಯುತ್ತವೆ. ಬಲಿಷ್ಠವಾಗಿ ಬೆಳೆದು, ಆಹಾರ ಪ್ರಾಣಿಗಳನ್ನು ಹಿಡಿದು ತಿನ್ನುವ ಸಾಮರ್ಥ್ಯ ಪಡೆದ ಅನಂತರ ತಾಯಿಯ ಸಂಘ ತೊರೆದು ಸ್ವತಂತ್ರ ಜೀವನ ನಡೆಸುತ್ತವೆ. ಹೆಣ್ಣು ಹುಲಿ ತನ್ನ ಜೀವಿತಾವಧಿಯಲ್ಲಿ ಏಳೆಂಟು ಬಾರಿ ಸಂತಾನದಲ್ಲಿ ತೊಡಗುತ್ತದೆ. ವನ್ಯ ಪ್ರದೇಶಗಳಲ್ಲಿ ವಾಸಿಸುವ ಹುಲಿಗಳು ಸಾಮಾನ್ಯವಾಗಿ 10 ರಿಂದ 15 ವರ್ಷಗಳ ಕಾಲ ಬದುಕುತ್ತವೆ. ಮಾನವ ನಿರ್ಮಿತ, ರಕ್ಷಿತ ಅರಣ್ಯ ಪ್ರದೇಶದಲ್ಲಿ, ಮೃಗಾಲಯಗಳಲ್ಲಿ ವಾಸಿಸುವ ಹುಲಿಗಳ ಜೀವಿತಾವಧಿ ಹೆಚ್ಚು.

ಚಿರತೆ: ವೈಜ್ಞಾನಿಕ ಹೆಸರು ಪ್ಯಾಂತೆರ ಪರಡಸ್ (ನೋಡಿ; ಚಿರತೆ)

ಚಿರತೆ ಬೆಕ್ಕು: ವೈಜ್ಞಾನಿಕ ಹೆಸರು ಫೆಲಿಸ್ ರುಫಸ್. ಸಾಕು ಬೆಕ್ಕಿನ ದೇಹಗಾತ್ರವುಳ್ಳ ಆದರೆ ತುಂಬಾ ಉದ್ದ ಕಾಲುಗಳನ್ನು ಹೊಂದಿರುವ ಮಾರ್ಜಾಲ. ಮೈಬಣ್ಣ ಚಿರತೆಯನ್ನು ಹೋಲುವುದರಿಂದ ಮತ್ತು ದೇಹದ ಗಾತ್ರ ಸಾಮಾನ್ಯ ಬೆಕ್ಕಿನಂತಿರುವುದರಿಂದ ಚಿರತೆ ಬೆಕ್ಕು ಎನ್ನುವರು. 60 ಸೆಂಮೀ ಉದ್ದವಿದೆ. ಮುಖ ಮತ್ತು ಗಲ್ಲದ ಮೇಲೆ ಅಡ್ಡಪಟ್ಟೆಗಳು ಉದ್ದವಾಗಿವೆ. ತಲೆಯ ತುದಿಯಿಂದ ಕುತ್ತಿಗೆ ಪಟ್ಟಿಯವರೆಗೂ 4 ಕಪ್ಪನಯ ಪಟ್ಟೆಗಳಿವೆ. ಭುಜದ ಹತ್ತಿರ ದುಂಡಾಕೃತಿಯ ಚುಕ್ಕೆಗಳಿವೆ. ಭಾರತದ ಎಲ್ಲಾ ಕಾಡುಗಳಲ್ಲಿ ವಾಸಿಸುತ್ತದೆ. ರಾತ್ರಿ ಚಟುವಟಿಕೆಯಿಂದಿರುವ ಚಿರತೆ ಬೆಕ್ಕು, ಹಗಲಿನಲ್ಲಿ ಮರದ ಪೊಟರೆಯೊಳಗೆ ವಾಸಿಸುತ್ತದೆ. ರಾತ್ರಿ ಸಮಯದಲ್ಲಿ ಸಣ್ಣ ಪಕ್ಷಿ, ಪ್ರಾಣಿಗಳನ್ನು, ಕೆಲವು ಸಲ ಕೋಳಿಯನ್ನೂ ಹಿಡಿದು ತಿನ್ನುತ್ತದೆ.

ಮರ್ಬಲ್ಡ್ ಕ್ಯಾಟ್: ಫೆಲಿಸ್ ಮರ್ಮೋರಟ್ ಇದರ ವೈಜ್ಞಾನಿಕ ಹೆಸರು. ಸಾಕು ಬೆಕ್ಕಿಗಿಂತ ದೊಡ್ಡ ದೇಹ. ಉದ್ದ 80 ಸೆಂಮೀ. ಬಣ್ಣ ಮತ್ತು ಗಾತ್ರದಲ್ಲಿ ಕ್ಲೌಡೆಡ್ ಲೆಪರ್ಡ್ ತರಹ ಇರುವ ಇದರ ಚರ್ಮದ ಮೇಲೆ ಅಮೃತ ಶಿಲೆಯಂತಹ ಚುಕ್ಕೆಗಳಿವೆ. ಮರದ ಮೇಲೆ ವಾಸಿಸುತ್ತದೆ. ಅಸ್ಸಾಂ, ಸಿಕ್ಕಿಂ ಮತ್ತು ಈಶಾನ್ಯ ರಾಜ್ಯಗಳಲ್ಲಿನ ಕಾಡುಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಇದರ ಆಹಾರ ಇಲಿ, ಅಳಿಲು, ಪಕ್ಷಿಗಳು ಮತ್ತು ಸಣ್ಣ ಗಾತ್ರದ ಸ್ತನಿಗಳು.

ಕ್ಲೌಡೆಡ್ ಲೆಪರ್ಡ್: ವೈಜ್ಞಾನಿಕವಾಗಿ ಈ ಮಾರ್ಜಾಲವನ್ನು ನಿಯೋಫೆಲಿಸ್ ನೆಬುಲೋಸ್ ಎನ್ನುವರು. ಇದರ ಮೇಲ್ದವಡೆಯಲ್ಲಿ ಕೋರೆ ಹಲ್ಲುಗಳು ಚೆನ್ನಾಗಿ ಬೆಳೆದಿವೆ. ದೇಹಾಕೃತಿಯಲ್ಲಿ ಹುಲಿಯನ್ನು ಹೋಲುತ್ತದೆ. ಚರ್ಮದ ಬಣ್ಣ ಕಂದು ಕೆಂಪು ಮಿಶ್ರಿತ. ಕಪ್ಪು ಬಣ್ಣದ ಉದ್ದನೆಯ ಗುರುತು ಪಟ್ಟೆಗಳನ್ನು ಹೊಂದಿದೆ. ಉದ್ದವಾದ ಬಾಲದಲ್ಲಿ ಕಪ್ಪು ಉಂಗುರಾಕೃತಿಯ ಗುರುತುಗಳಿವೆ.

ಕರಾಕಲ್: ಫೆಲಿಸ್ ಕರಾಕಲ್ ಇದರ ವೈಜ್ಞಾನಿಕ ನಾಮಧೇಯ. ಚಿರತೆಯಂತಿರುವ ಪಾದಗಳಿವೆ. ದೇಹ ಸುಮಾರು 60 ಸೆಂಮೀ ಉದ್ದವಾಗಿದೆ. ದೇಹದ ತುಂಬಾ ದಪ್ಪನೆಯ ನುಣುಪಾದ ಮತ್ತು ಸೂಕ್ಷ್ಮವಾದ ಕೆಂಪು ಕಂದು ಬಣ್ಣಯುಕ್ತ ಕೂದಲುಗಳಿವೆ. ಹೊಟ್ಟೆಯ ಕೆಳಭಾಗದಲ್ಲಿ ಬಿಳಿ ಕೂದಲುಗಳಿವೆ. ಕಿವಿಗಳು ತುಂಬ ಉದ್ದ. ಕಿವಿಯ ತುದಿಯಲ್ಲಿ ದಪ್ಪದಾದ ಗುಚ್ಛದಂತೆ ಕಪ್ಪು ಕೂದಲುಗಳಿವೆ. ಕರಾಕಲ್ ಮಧ್ಯ ಭಾರತದ ರಾಜ್ಯಗಳಲ್ಲಿ, ಉತ್ತರ ಪ್ರದೇಶ, ಪಂಜಾಬ್ ಮತ್ತು ರಾಜಸ್ಥಾನಗಳಲ್ಲಿನ ಒಣಹವೆಯುಕ್ತ ಮತ್ತು ಅರೆಮಲೆನಾಡಿನ ವಾತಾವರಣವಿರುವ ಭೂ ಪ್ರದೇಶದಲ್ಲಿ ವಾಸಿಸುತ್ತದೆ. ಪಕ್ಷಿಗಳು, ಮರಿ ಜಿಂಕೆ ಇತ್ಯಾದಿ ಇದರ ಆಹಾರ.

ಮರುಭೂಮಿ ಬೆಕ್ಕು:– ಕಾಡುವಾಸಿ ಬೆಕ್ಕಿಗಿಂತ ವಿಭಿನ್ನ. ಫೆಲಿಸ್ ಲೈಬಿಕ್ ವೈಜ್ಞಾನಿಕ ನಾಮ. ನಾಡವಾಸಿ ಬೆಕ್ಕಿನಂತಿರುವ ಈ ಮಾರ್ಜಾಲ 60 ಸೆಂಮೀ ಉದ್ದ ಮತ್ತು 30 ಸೆಂಮೀ ಎತ್ತರ ಬೆಳೆಯುತ್ತದೆ. ಬಾಲದ ಮೇಲೆ ಉಂಗುರಾಕೃತಿಯ ಕೆಂಪು ಗುರುತುಗಳಿವೆ. ಗಲ್ಲದ ಮೇಲೆ ಉದ್ದನೆಯ ಕಪ್ಪು ಪಟ್ಟೆಗಳಿವೆ. ದವಡೆ, ಕುತ್ತಿಗೆ ಮತ್ತು ಎದೆಯ ಭಾಗ ಬಿಳಿ. ವಾಯುವ್ಯ ಭಾರತದ ಮರುಭೂಮಿ ಪ್ರದೇಶದಲ್ಲಿ ಮತ್ತು ಮಧ್ಯಭಾರತದ ಅರೆಮಲೆನಾಡಿನ ಪ್ರದೇಶದಲ್ಲಿ ಕಾಣಸಿಗುತ್ತದೆ. ಇಲಿ, ಸಣ್ಣ, ಪಕ್ಷಿಗಳು, ಹುಳ ಹುಪ್ಪಟೆಗಳು ಇದರ ಆಹಾರ.

ಮೀನು ಹಿಡಿಯುವ ಬೆಕ್ಕು:– ಫೆಲಿಸ್ ವಿವೆರಿನ್ ವೈಜ್ಞಾನಿಕ ಹೆಸರು. ಸುಮಾರು 100 ಸೆಂಮೀ ಉದ್ದದ ದೇಹದ ಜೊತೆಗೆ 30 ಸೆಂಮೀ ಉದ್ದನೆಯ ಬಾಲ ಹೊಂದಿದೆ. ಕೆಸರು ಮಣ್ಣಿನ ಬಣ್ಣ. ಮುಂದಲೆಯ ಮೇಲೆ 6–8 ಸಾಲು ಉದ್ದನೆಯ ಕಪ್ಪು ಚುಕ್ಕೆಗಳಿವೆ. ಬಾಲದಲ್ಲಿ ಕಪ್ಪು ಬಣ್ಣದ ಉಂಗುರಾಕೃತಿಯ ಗುರುತುಗಳಿವೆ. ಚಮಚದ ತುದಿಯಂತಹ ಆಕೃತಿಯ ಮುಂಗಾಲು ಪಾದಗಳು ನೀರಿನಲ್ಲಿ ಮೀನು ಹಿಡಿಯಲು ಸಹಾಯ ಮಾಡುತ್ತವೆ. ಮೀನು, ಮೃದ್ವಂಗಿಗಳು, ಸಣ್ಣ ಸ್ತನಿಗಳಾದ ಆಡು, ಕುರಿ ಮರಿಗಳು ಇತ್ಯಾದಿ ಈ ಮಾರ್ಜಾಲದ ಆಹಾರ ಪ್ರಾಣಿಗಳು.

ಬಂಗಾರದ ಬೆಕ್ಕು (ಗೋಲ್ಡನ್ ಕ್ಯಾಟ್): ಫೆಲಿಸ್ ಟೆಮಿಂಕಿ ಇದರ ವೈಜ್ಞಾನಿಕ ನಾಮ. ಚರ್ಮ ಕಂದು ಅಥವಾ ಬಂಗಾರದ ಬಣ್ಣದಿಂದ ಕೂಡಿದೆ. 120 ಸೆಂಮೀ ಉದ್ದನೆಯ ದೇಹ ಮತ್ತು ದೇಹದ ತುದಿಯಲ್ಲಿ 45 ಸೆಂಮೀ ಉದ್ದನೆಯ ಬಾಲವಿದೆ. ದೇಹದ ಮೇಲೆ ಚಿಕ್ಕದಾದ ಸೂಕ್ಷ್ಮವಾದ ಕೂದಲುಗಳಿವೆ. ತಂಪನೆಯ ಕಾಡುಗಳಲ್ಲಿ ವಾಸಿಸುವ ಈ ಮಾರ್ಜಾಲ, ಪೂರ್ವ ಮತ್ತು ಈಶಾನ್ಯ ಭಾರತದ ರಾಜ್ಯಗಳಲ್ಲಿ ಕಾಣಸಿಗುತ್ತವೆ. ಇದರ ಆಹಾರ, ಆಡು, ಕುರಿ, ಜಿಂಕೆ ಮತ್ತು ದನಕರುಗಳು.

ಚೀತಾ: ವೈಜ್ಞಾನಿಕ ಹೆಸರು ಅಸಿನೊನಿಕ್ಸ್ ಜುಬಾಟಸ್. ಆಫ್ರಿಕ ಖಂಡದಲ್ಲಿ ಮಾತ್ರ ಇದರ ಅಸ್ತಿತ್ವವಿದೆ. ದಕ್ಷಿಣ ಮತ್ತು ಪೂರ್ವ ಅಫ್ರಿಕ ಖಂಡದ ದೇಶಗಳ ಕುರುಚಲು ಕಾಡುಗಳಲ್ಲಿ ಇದರ ವಾಸ. ಭಾರತದಲ್ಲಿ ಇದರ ಸಂತತಿ ಸಂಪೂರ್ಣ ನಾಶವಾಗಿದೆ. ಹಳದಿ ಮಿಶ್ರಿತ ಬಂಗಾರದ ಬಣ್ಣದ ಮೈ ಮೇಲೆ ಕಪ್ಪನೆಯ ಚುಕ್ಕೆಗಳಿವೆ. ದೇಹ 1.1. ಮೀ ಎತ್ತರ ಮತ್ತು ಮೂಗಿನ ತುದಿಯಿಂದ ಬಾಲದ ತುದಿಯವರೆಗೆ 1.8 ಮೀ ಉದ್ದವಿದೆ. ತೂಕ 24–45 ಕಿಗ್ರಾಂ. ಹುಟ್ಟಿದ 2–3 ವರ್ಷಗಳಲ್ಲಿ ಸಂತಾನೋತ್ಪತ್ತಿಯ ಸಾಮರ್ಥ್ಯ ಪಡೆಯುತ್ತದೆ. ಗರ್ಭಾವಧಿ 90–100 ದಿನಗಳು. ಪ್ರತಿಬಾರಿ 6–8 ಮರಿಗಳಿಗೆ ಜನ್ಮ ನೀಡುತ್ತದೆ. ಮರಿಗಳು 1–2 ವರ್ಷಗಳ ಕಾಲ ತಾಯಿಯ ಜೊತೆ ವಾಸಿಸುತ್ತವೆ. ವಿಶೇಷವೆಂದರೆ ಕಾಲುಗಳಲ್ಲಿರುವ ಉಗುರುಗಳನ್ನು ಪಂಜಿನೊಳಗೆ ಎಳೆದುಕೊಂಡು ಅಥವಾ ಹೊರಗೆ ಹಾಕುವ ಸಾಮರ್ಥ್ಯವಿಲ್ಲ. ಬೇರೆ ಮಾರ್ಜಾಲಗಳಲ್ಲಿರುವಂತೆ ಅತಿವೇಗವಾಗಿ ಓಡಬಲ್ಲದು. ಇದರ ಆಹಾರ ಜಿಂಕೆ, ಮೊಲ, ಇಲಿ ಮತ್ತು ಜಿಬ್ರಾ. ಚೀತಾಗಳು ಗುಂಪು ಗುಂಪಾಗಿ ವಾಸಿಸುತ್ತವೆ. ಹೆಣ್ಣು ಚೀತಾ ಏಕಾಂಗಿಯಾಗಿ ವಾಸಿಸಲು ಇಷ್ಟ ಪಡುತ್ತದೆ. ಗಂಡು ಚೀತಾ ಹಲವು ಮರಿಗಳ ಜೊತೆ ವಾಸಿಸುತ್ತದೆ. ಜೀವಿತಾವಧಿ 12 ವರ್ಷಗಳು.

ಕಾಡುಬೆಕ್ಕು:– ಬಾಬ್ ಕ್ಯಾಟ್ ಪರ್ಯಾಯ ನಾಮ. ಲಿಂಕ್ಸ್ ರುಫಸ್ ವೈಜ್ಞಾನಿಕ ಹೆಸರು. ಇದರ ಮೈಬಣ್ಣ ಕಂದು. ಸಣ್ಣ ಸಣ್ಣ ಪಟ್ಟಿ ಅಥವಾ ಚುಕ್ಕೆಗಳಿವೆ. ಉದ್ದನೆಯ ಕಾಲುಗಳೂ ತೀಕ್ಷ್ಣವಾದ ವಾಸನೆ ಗ್ರಹಿಸುವ ಅಂಗಗಳೂ ಇವೆ. ಬಾಲ ಚಿಕ್ಕದು. ಅತಿ ಚುರುಕು ಮತ್ತು ತೀಕ್ಷ್ಣ ಬುದ್ಧಿಯುಳ್ಳ ಬೇಟೆಗಾರ. ಹಕ್ಕಿಗಳನ್ನು, ಜಿಂಕೆ ಮರಿಗಳನ್ನು ಹಿಡಿದು ತಿನ್ನುತ್ತದೆ. ಉಷ್ಣವಲಯ ಪ್ರದೇಶವೂ ಸೇರಿದಂತೆ ಭಾರೀ ಮಳೆ ಬೀಳುವ ಪ್ರದೇಶದಲ್ಲಿ ಇದರ ವಾಸ. ಭಾರತವೂ ಸೇರಿದಂತೆ ಶ್ರೀಲಂಕದ ಕಾಡು ಮೇಡುಗಳಲ್ಲಿ ಇದರ ಜೀವ ಜಾಲ ಹರಡಿಕೊಂಡಿದೆ.

ಸಾಕು ಬೆಕ್ಕು:– ಫೆಲಿಸ್ ಡೊಮೆಸ್ಟಿಕ ಇದರ ವೈಜ್ಞಾನಿಕ ಹೆಸರು. ಸಾಧಾರಣವಾಗಿ ಮೈಬಣ್ಣ ಮಾಸಲಾಗಿದ್ದರೂ ವೈವಿಧ್ಯತೆಯಿದೆ. ಕಣ್ಣುಗಳು ಸಾಮಾನ್ಯವಾಗಿ ನೀಲಿ ಬಣ್ಣದವು.

ಜಾಗ್ವಾರ್ (ಜಾಗ್ವಾರಿಸ್ ಓಂಕಾ), ಪ್ಯೂಮ (ಫೆಲಿಸ್ ಕಾಂಕಲರ್), ಸೆರ್ವಲ್ (ಫೆಲಿಸ್ ಸರ್ವಲ್), ಜಾಗ್ವಾರುಂಡಿ (ಫೆಲಿಸ್ ಜಾಗ್ವಾರುಂಡ್), ಜಂಗಲ್ ಕ್ಯಾಟ್ (ಫೆಲಿಸ್ ಚೂಸ್) ಮುಂತಾದ ಮಾರ್ಜಾಲಗಳು ಮೈಬಣ್ಣದಲ್ಲಿ ವೈವಿಧ್ಯತೆ ಹೊಂದಿವೆ. ಹಳದಿ ಮಿಶ್ರಿತ ಕಂದು ವರ್ಣದ ಹಿನ್ನೆಲೆಯಲ್ಲಿ ಕಪ್ಪು ಬಣ್ಣದ ಚುಕ್ಕೆಗಳೂ ಉದ್ದ ಪಟ್ಟೆಗಳೂ ಅಡ್ಡ ಪಟ್ಟೆಗಳೂ ಉಂಗುರಾಕೃತಿಯಂತಹ ಪ್ರಕಾರಗಳೂ ಎದ್ದು ಕಾಣುತ್ತವೆ. ಋತುಗಳಿಗನುಸರಿಸಿ ಹಾಗೂ ಪರಿಸರಕ್ಕನುಗುಣವಾಗಿಯೂ ಮೈಬಣ್ಣ ಆಗಾಗ ಬದಲಾಗುತ್ತದೆ. ಈ ಎಲ್ಲಾ

ಮಾರ್ಜಾಲಗಳೂ ಉತ್ತಮ ವಾಸನೆಯ ಜಾಡನ್ನು ಹಿಡಿದು, 4–5 ಕಿಮೀ ಗಳವರೆಗೆ ಆಹಾರ ಪ್ರಾಣಿಗಳನ್ನು ಹುಡುಕಿಕೊಂಡು ಹೋಗಬಲ್ಲ ನಿಶಾಚರಿಗಳು.

ಅಪರೂಪದ ಮಾರ್ಜಾಲಗಳು:– ವರ್ಣರಹಿತ (ಅಲ್ಬೈನೋ–ಬಿಳಿ) ವ್ಯಾಘ್ರಗಳು ಆನುವಂಶಿಕ ಗುಣಕ್ಕನುಸರಿಸಿ ಜನ್ಮತಾಳಬಲ್ಲವು. (ಬಿಳಿ ವ್ಯಾಘ್ರಗಳು). ಹುಲಿ, ಚಿರತೆಯಂತಹ ವನ್ಯ ಮೃಗಗಳಲ್ಲಿ ಅಪರೂಪಕ್ಕೊಮ್ಮೆ ಜನಿಸುತ್ತವೆ. ಈ ಪ್ರಾಣಿಗಳ ಚರ್ಮದಲ್ಲಿ ಮೆಲಾನಿನ್ ಇರುವುದಿಲ್ಲ. ಅದೇ ರೀತಿ ಕಪ್ಪು ಚಿರತೆ (ಬ್ಲ್ಯಾಕ್ ಪ್ಯಾಂಥರ್) ಸಹ ಅಪರೂಪಕ್ಕೊಮ್ಮೆ ಜನ್ಮ ತಾಳಬಲ್ಲದು. ಕಪ್ಪು ಚಿರತೆಯು ಇನ್ನುಳಿದ ಚಿರತೆಗಳಿಗಿಂತ ಜಾತಿಯಲ್ಲಿ ಭಿನ್ನವಾದುದಲ್ಲ. ಚರ್ಮದ ಹಿನ್ನೆಲೆಯ ವರ್ಣವು ಹಳದಿಯ ಬದಲು ಮೆಲಾನಿನ್‌ನಿಂದಾಗಿ ಕಪ್ಪಾಗಿರುತ್ತದೆ. ಕಪ್ಪು ಚಿರತೆ ಹೆಚ್ಚಾಗಿ ವಿಷಮ ವೃತ್ತದ ದಟ್ಟಾರಣ್ಯಗಳಲ್ಲಿ (ಕಾಂಗೋ ಬೆಸಿನ್) ಕಂಡು ಬರುತ್ತದೆ.

ಪರಿಸರದಲ್ಲಿ ಮಾರ್ಜಾಲಗಳ ಪಾತ್ರ: ಮಾರ್ಜಾಲಗಳು ಪರಿಸರ ಸಮತೋಲನದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಸಿಂಹ, ಹುಲಿ, ಚಿರತೆ ಮುಂತಾದುವು ಪರಿಸರದಲ್ಲಿ ವ್ಯವಸ್ಥಿತವಾಗಿ ಹರಡಿಕೊಂಡಿರುವ ಆಹಾರ ಸರಪಳಿ ಮತ್ತು ಆಹಾರ ಜಾಲಗಳನ್ನು ನಿಯಂತ್ರಿಸುವ ಪ್ರಬಲ ಜೀವಿಗಳು. ಸಸ್ಯಾಹಾರಿ ಜೀವಿಗಳನ್ನು ಬೇಟೆಯಾಡಿ ತಿನ್ನುವ ಮೂಲಕ ಮಿತಿಮೀರಿ ಬೆಳೆಯುವ ಅವುಗಳ ಸಂಖ್ಯೆಯನ್ನು ನಿಯಂತ್ರಿಸುತ್ತವೆ. ಸಸ್ಯ ಪ್ರಾಣಿಗಳ ನಡುವೆ ಇರುವ ಸಮತೋಲನವನ್ನು ಏರುಪೇರಾಗದಂತೆ ಕಾಪಾಡುತ್ತವೆ. (ಎಸ್.ಬಿ.)

**ಮಾರ್ಮಸೆಟ್:** ಪ್ರೈಮೇಟ್ ಗಣದ ಕ್ಯಾಲಿತ್ರೈಸಿಡೆ ಕುಟುಂಬಕ್ಕೆ ಸೇರಿದ ಚಿಕ್ಕಗಾತ್ರದ ಹಾಗೂ ಉದ್ದಬಾಲ ಇರುವ ಹಲವಾರು ಬಗೆಯ ಕೋತಿಗಳಿಗೆ ಅನ್ವಯವಾಗುವ ಹೆಸರು. ಇವುಗಳ ತವರು ದಕ್ಷಿಣ ಹಾಗೂ ಮಧ್ಯ ಅಮೆರಿಕ. ಅಳಿಲಿನಂತೆ ಕಾಣುವ ವೃಕ್ಷವಾಸಿ ಪ್ರಾಣಿಗಳು. ಮರಗಳಲ್ಲಿ ಚುರುಕಾದ ವಿಚಿತ್ರ ನುಲಿಚಲನೆಯಿಂದ ಓಡಾಡಿಕೊಂಡಿರುವುವು. ಹಗಲಿನಲ್ಲಿ ಚಟುವಟಿಕೆ ಹೆಚ್ಚು. ವೃಕ್ಷ ವಾಸಿಗಳಾದ್ದರಿಂದ ರೆಂಬೆಗಳನ್ನು ಹಿಡಿದು ಹತ್ತಲು ಅನುಕೂಲವಾಗುವಂತೆ ಕೈಕಾಲುಗಳ ಬೆರಳುಗಳಲ್ಲಿ (ಹೆಬ್ಬೆರಳು ವಿನಾ) ಉಗುರಿಗೆ ಬದಲಾಗಿ ಮೊನೆಯುಗುರುಗಳಿವೆ. ಮುಖ್ಯವಾಗಿ ಕೀಟಭಕ್ಷಿಗಳು. ಹಣ್ಣುಗಳನ್ನೂ ಇನ್ನಿತರ ಪ್ರಾಣಿಗಳನ್ನೂ ತಿನ್ನುವುದುಂಟು.

ಮಾರ್ಮಸೆಟ್ ಕೋತಿಗಳಲ್ಲಿ ಹಲವಾರು ಬಗೆಗಳಿವೆ. ಮುಖ್ಯವಾದವು ಇಂತಿವೆ: 1. ಕ್ಯಾಲಿತ್ರಿಕ್ಸ್ ಜಾತಿಯ ಪೆನಿಸಿಲೇಟ, ಕ್ರೈಸೊಲ್ಯೂಕ, ಅರ್ಜೆಂಟೇಟ, ಜ್ಯಾಕಸ್ ಪ್ರಭೇದಗಳು. ಇವು ಬ್ರೆಜಿಲ್ ಹಾಗೂ ಬೊಲೀವಿಯಗಳ ಕಾಡುಗಳಲ್ಲಿ ಕಾಣದೊರೆಯುವುವು. 15–25 ಸೆಂಮೀ ಉದ್ದದ ಪ್ರಾಣಿಗಳಿವು; 25–40 ಸೆಂಮೀ ಉದ್ದದ ಬಾಲ ಉಂಟು. ಮೈಬಣ್ಣ ಬಿಳಿಯಿಂದ ಕಗ್ಗೆಂಪಿನವರೆಗೆ ವ್ಯತ್ಯಸ್ಥ. ಕೆಲವಲ್ಲಿ ಬಾಲದ ಮೇಲೆ ಅಡ್ಡಪಟ್ಟೆಗಳಿರುವುದುಂಟು. ತುಪ್ಪುಳು ರೇಷ್ಮೆಯಂತೆ ಬಲುಮೃದು. ಕಿವಿಗಳ ತುದಿಯಲ್ಲಿ ರೋಮಗುಚ್ಛಗಳಿವೆ.

2. ಸೆಬುಯೆಲ ಪಿಗ್ಮಿಯ (ಪಿಗ್ಮಿ ಮಾರ್ಮಸೆಟ್): ಪೆರು ಹಾಗೂ ಎಕ್ವಡಾರುಗಳಲ್ಲಿ ಸಿಕ್ಕುತ್ತದೆ. ಬಲುಚಿಕ್ಕಗಾತ್ರದ್ದು, ಉದ್ದ ಕೇವಲ 14 ಸೆಂಮೀ. ವಯಸ್ಕ ಪ್ರಾಣಿ 90 ಗ್ರಾಂ.ಗೂ ಹೆಚ್ಚು ಭಾರವಿರದು. ದೇಹದ ಬಣ್ಣ ಕಗ್ಗಂದು ಇಲ್ಲವೆ ಬೂದು.

ಮಾರ್ಮಸೆಟ್ಟುಗಳನ್ನು ಸಾಕುವುದು ಸುಲಭ. ***

**ಮಿಂಕ್:** ಕಾರ್ನಿವೊರ ಗಣದ ಮಸ್ಟೆಲಿಡೆ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಸ್ತನಿ. ಮಸ್ಟೆಲ ವೈಸನ್ ಮತ್ತು ಮಸ್ಟೆಲ ಲೂಟ್ರಿಯೋಲ ಎಂಬ ಎರಡು ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಮೊದಲನೆಯದು ಉತ್ತರ ಅಮೆರಿಕದ ಕಾಡುಗಳಲ್ಲೂ ಎರಡನೆಯದು ಯೂರೋಪಿನಲ್ಲೂ ಏಷ್ಯಾದ ಉತ್ತರ ಭಾಗಗಳಲ್ಲೂ ವಾಸಿಸುತ್ತವೆ.

ವೀಸಲ್, ಫೆರೆಟ್, ಸ್ಟೋಟ್, ಪೋಲ್‌ಕ್ಯಾಟ್, ಮಾರ್ಟನ್, ಬ್ಯಾಜರ್ ಮುಂತಾದವುಗಳ ಸಂಬಂಧಿಯಾದ ಇದು ತನ್ನ ರೂಪದಲ್ಲೂ ಸ್ವಭಾವದಲ್ಲೂ ಚಟುವಟಿಕೆಯಲ್ಲೂ ಅವನ್ನೇ ಹೋಲುತ್ತದೆ. ತನ್ನ ಅಚ್ಚುಮೆಚ್ಚಿನ ಆಹಾರವಾದ ಮೀನು, ಏಡಿ, ಕಪ್ಪೆಗಳು ಸುಲಭವಾಗಿ ಸಿಕ್ಕುವಂಥ ನದಿ, ಕೆರೆಕೊಳ್ಳಗಳೇ ಇದರ ವಾಸಸ್ಥಾನ. ನೆಲದ ಮೇಲೆ ಹೇಗೋ ನೀರಿನಲ್ಲೂ ಹಾಗೆ ಚುರುಕಾಗಿ ಓಡಾಡಿಕೊಂಡಿರುತ್ತದೆ. ಅಮೆರಿಕದ ಮಿಂಕ್ 30–50 ಸೆಂಮೀ ಉದ್ದದ ಹಾಗೂ ಸು. 1.5 ಕಿಗ್ರಾಂ ತೂಕದ ಪ್ರಾಣಿ ಸು. 20 ಸೆಂಮೀ ಉದ್ದದ ಪೊದೆಯಂಥ ಬಾಲವೂ ಉಂಟು. ಯೂರೋಪಿನ ಮಿಂಕ್ ಕೊಂಚ ಚಿಕ್ಕಗಾತ್ರದ್ದು. ಮೋಟು ಕಾಲುಗಳು, ಉದ್ದ ಕತ್ತು, ಅಗಲ ಮೂತಿ, ಚಿಕ್ಕ ಗುಂಡನೆಯ ಕಿವಿಗಳು ಇತರ ಲಕ್ಷಣಗಳು. ಮೈಬಣ್ಣ ತಿಳಿಗಂದಿನಿಂದ ಗಾಢ ಚಾಕೊಲೇಟ್‌ವರೆಗೆ ವ್ಯತ್ಯಾಸವಾಗುತ್ತದೆ. ಮೈಮೇಲೆ ದಟ್ಟ ಮೃದು ತುಪ್ಪಳ, ಗಾಢವರ್ಣದ ಹೊಳೆಯುವ ಉದ್ದ ರೋಮಗಳೂ ಇವೆ. ಇದಕ್ಕೆ ಕಟುತೀಕ್ಷ್ಣ ಮತ್ತು ಅಸಹ್ಯ ವಾಸನೆಯುಂಟು.

ಜಲಪ್ರಾಣಿಗಳಲ್ಲದೆ ಇಲಿ, ಹಕ್ಕಿ ಮುಂತಾದ ನೆಲಪ್ರಾಣಿಗಳನ್ನು ಇದು ತಿನ್ನುವುದುಂಟು. ಇದರ ಚಟುವಟಿಕೆಯೆಲ್ಲ ಪ್ರಧಾನವಾಗಿ ರಾತ್ರಿವೇಳೆ.

ಮಿಂಕ್ ಒಂದು ಸೂಲಿಗೆ 4–10 ಮರಿಗಳನ್ನು ಈಯುತ್ತದೆ. ಮರಿಗಳು ಹುಟ್ಟುವ ಕಾಲ ವಸಂತ. ಕಲ್ಲುಪೊಟರೆಗಳಲ್ಲಿ, ಟೊಳ್ಳುದಿಮ್ಮಿಗಳಲ್ಲಿ ಇಲ್ಲವೆ ಬೇರುಗಳ ಸಂದುಗಳಲ್ಲಿ ಮರಿಗಳನ್ನು ಅಡಗಿಸಿಟ್ಟು ಪೋಷಿಸುತ್ತದೆ. ಲಿಂಕ್ಸ್, ಬಾಬ್‌ಕ್ಯಾಟ್, ನರಿ, ಗೂಬೆ ಹಾಗೂ ಮನುಷ್ಯ ಇದರ ಮುಖ್ಯ ಶತ್ರುಗಳು. ಮಿಂಕ್ ತುಪ್ಪುಳು ಚರ್ಮ ಅತ್ಯಂತ ಜನಪ್ರಿಯ ಹಾಗೂ ಬೆಲೆಬಾಳುವ ವಸ್ತುವೆನಿಸಿದೆ. ಇದರಿಂದ ಅನೇಕ ತೆರನ ಉಡುಗೆಗಳನ್ನು ತಯಾರಿಸುವುದಿದೆ. ಕಾಡುಮಿಂಕ್‌ಗಳಿಂದ ಲಭಿಸುವ ತುಪ್ಪುಳು ಬೇಡಿಕೆಯನ್ನು ಈಡೇರಿಸಲು ಅಸಮರ್ಥವಾಗಿರುವುದರಿಂದ ಮಿಂಕ್‌ಗಳನ್ನು ಸಾಕುವ ವಿಶೇಷ ಕೇಂದ್ರಗಳನ್ನು ಅಮೆರಿಕದಲ್ಲಿ ಸ್ಥಾಪಿಸಲಾಗಿದೆ. (ಪಿ.ಎಸ್.ಆರ್.)

**ಮಿಡತೆ:** ಆರ್ಥಾಪ್ಟರ ಗಣದ ಅಕ್ರಿಡೋಯಿಡಿಯ ಉಪಗಣದ ಲೋಕಸ್ಟಿಡೆ ಅಥವಾ ಆಕ್ರಿಡಿಡೆ ಕುಟುಂಬದ ಸದಸ್ಯ. ಈ ಕುಟುಂಬದ ಹಲವಾರು ಜಾತಿಯ ಕೀಟಗಳಿಗೆ ಮಿಡತೆಗಳೆನ್ನುವರು. ಚಿಮ್ಮಂಡೆ ಇದರ ಪರ್ಯಾಯನಾಮ. ಇದರಲ್ಲಿ ಎರಡು ಪ್ರಧಾನ ಬಗೆಗಳಿವೆ. 1. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರತಿವರ್ಷ ವಲಸೆ ಹೋಗುವಂಥವು (ಲೋಕಸ್ಟ್). 2. ವಲಸೆ ಹೋಗದೆ ಇರುವಂಥವು (ಗ್ರಾಸ್‌ಹಾಪರ್ಸ್). ಎರಡು ಗುಂಪಿನವು ಸಸ್ಯಾಹಾರಿಗಳಾಗಿದ್ದು, ಅನೇಕ ವೇಳೆ ಧಾನ್ಯ ಬೆಳೆಗಳಿಗೆ, ಆರ್ಥಿಕ ಬೆಳೆಗಳಿಗೆ ಮುತ್ತಿ ಅಪಾರ ಹಾನಿ ಉಂಟುಮಾಡುತ್ತವೆ. ಇಂಥವುಗಳ ಪೈಕಿ ಆಫ್ರಿಕ ಹಾಗೂ ಏಷ್ಯದ ಹಲವಾರು ದೇಶಗಳಲ್ಲಿ ಪ್ರತಿ ವರ್ಷ ಕಂಡುಬರುವ ಮಿಡತೆಗಳು ಅತ್ಯಂತ ಪ್ರಸಿದ್ಧವಾಗಿವೆ. ಈ ಕೀಟಗಳ ಹಾವಳಿ ಎಷ್ಟು ಭೀಕರವಾಗಿರುತ್ತದೆಂದರೆ, ಈ ಭೂಖಂಡಗಳ ದೇಶಗಳಲ್ಲಿ ಇವು ದಾಳಿಯಿಕ್ಕುವ ತಿಂಗಳುಗಳಲ್ಲಿ ಮಿಡತೆಗಳ ದಂಡು ಕಾರ್ಮೋಡಗಳ ತೆರದಲ್ಲಿ ಎರಗಿ, ಪೈರುಗಳನ್ನು ಅತ್ಯಲ್ಪ ಸಮಯದಲ್ಲಿ ಸಂಪೂರ್ಣವಾಗಿ ಕಬಳಿಸಿ, ಬರಗಾಲ ಪರಿಸ್ಥಿತಿಗಳನ್ನು ಉಂಟು ಮಾಡುತ್ತವೆ. ಉದಾ: ಶಿಸ್ಟೋಸರ್ಕ ಗ್ರಿಗೇರಿಯ (ಡೆಸರ್ಟ್ ಲೋಕಸ್ಟ್) ಮಿಡತೆ ಈಜಿಪ್ಟ್, ಉತ್ತರ ಆಫ್ರಿಕ, ಅರೇಬಿಯ, ಆಫ್‌ಘಾನಿಸ್ತಾನ ಹಾಗೂ ಉತ್ತರ ಭಾರತದಲ್ಲಿ ಅಪಾರ ಸಂಖ್ಯೆಯಲ್ಲಿ ಪೈರುಗಳ ಮೇಲೆ ದಾಳಿಯಿಕ್ಕಿ, ಅಗಾಧ ನಷ್ಟವನ್ನುಂಟುಮಾಡುತ್ತದೆ.

ಎಲ್ಲ ಮಿಡತೆಗಳು ಸು. 2.5 – 5 ಸೆಂಮೀ ಉದ್ದದ ಕೀಟಗಳು. ಇವುಗಳ ದೇಹದ ಎದೆಭಾಗದಲ್ಲಿ ಎರಡು ಜೊತೆ ರೆಕ್ಕೆಗಳಿವೆ. ಮುಂದಿನವು ಚೆಗ್ಗಿನ, ಕಿರಿಯಗಲವಾಗಿದ್ದು, ದೃಢವಾಗಿವೆ. ಹಿಂದಿನ ಜೊತೆ ರೆಕ್ಕೆಗಳು ತೆಳುವಾಗಿದ್ದು, ಅಗಲವಾಗಿವೆ. ಕೀಟ ಕುಳಿತಿರುವಾಗ ಮಡಿಚಿಕೊಂಡಿದ್ದು, ಮುಂದಿನ ರೆಕ್ಕೆಗಳಿಂದ ಮುಚ್ಚಿಹೋಗಿರುತ್ತವೆ. ಹಾರುವಾಗ ಎರಡು

ಜೊತೆ ರೆಕ್ಕೆಗಳು ಬಳಕೆಯಾಗುತ್ತವೆ. ದೇಹದಲ್ಲೆಲ್ಲ ಪ್ರೋಥೊರ್‍ಯಾಕ್ಸ್ ಭಾಗ ಅತ್ಯಂತ ದೊಡ್ಡದು. ಸ್ಪರ್ಶಾಂಗಗಳು ಉದ್ದ ಮತ್ತು ನಳಿಕೆಯಾಕಾರವಾಗಿದ್ದು, ಹಲವಾರು ಖಂಡಗಳಿಂದ ರಚಿತವಾಗಿವೆ. ಕಣ್ಣುಗಳು ದೊಡ್ಡ ಗಾತ್ರದವು. ಮೂರು ಜೊತೆ ಕಾಲುಗಳ ಪೈಕಿ ಮೊದಲನೆಯವು ಮತ್ತು ಎರಡನೆಯವು ಚಿಕ್ಕವು. ಕೀಟ ತೆವಳಲು, ಆಸರೆಗಳ ಮೇಲೆ ಹತ್ತಲು, ಹಿಡಿಯಲು ಬಳಕೆಯಾಗುತ್ತವೆ. ಮೂರನೆಯ ಜೋಡಿ ಮಾತ್ರ ಬಲಯುತವಾಗಿದ್ದು ಕೀಟ ಜಿಗಿಯಲು ಸಹಾಯಕವಾಗಿವೆ. ಹಿಂಭಾಗದ ಕಾಲುಗಳ ತೊಡೆ ಭಾಗದ ಒಳಮುಖದ ಮೇಲೆ ಅನೇಕ ಮುಳ್ಳುಗಳಿವೆ. ಇವನ್ನು ಮುಂದಿನ ರೆಕ್ಕೆಗಳ ಮೇಲೆ ಇರುವ ಏಣಿನ ಮೇಲೆ ಉಜ್ಜುವುದರ ಮೂಲಕ ಮಿಡತೆಗಳು ಕೀಚುಕೀಚಾದ ಸದ್ದನ್ನು ಉಂಟುಮಾಡುತ್ತವೆ. ಜೊತೆಗೆ ಮಿಡತೆಗಳ ರೆಕ್ಕೆಗಳ ಬುಡದಲ್ಲಿ ಶಬ್ದಗ್ರಾಹಕ ಸಾಮರ್ಥ್ಯವುಳ್ಳ ಕಿವಿತಮ್ಮಟೆ ಇದೆ.



ಕ್ರಿಕೆಟ್

ಲೋಕಸ್ಟ್

ಸಂತಾನವೃದ್ಧಿ ಕಾಲದಲ್ಲಿ ಹೆಣ್ಣು ಮಿಡತೆ ತನ್ನ ಉದರದ ಹಿಂತುದಿಯಿಂದ ನೆಲವನ್ನು ತೋಡಿ, ಕುಳಿ ನಿರ್ಮಿಸಿ, ಅದರೊಳಗೆ 20ರಿಂದ 100 ಮೊಟ್ಟೆಗಳನ್ನಿಡುತ್ತದೆ. ಸಾಮಾನ್ಯವಾಗಿ ಮೊಟ್ಟೆಗಳ ಸುತ್ತ ಗಟ್ಟಿಯಾದ ಕವಚವಿದೆ. ಮೊಟ್ಟೆಯೊಡೆದು ಹೊರಬರುವ ಮರಿಗಳು ನೋಡಲು ವಯಸ್ಕ ಕೀಟಗಳಂತೆ ಇವೆ. ಆದರೆ, ಗಾತ್ರದಲ್ಲಿ ಚಿಕ್ಕವು ಮತ್ತು ರೆಕ್ಕೆರಹಿತವಾಗಿವೆ. ಬೆಳೆಯುತ್ತ ಹೋದಂತೆ 5–8 ಸಲ ಪೊರೆಕಳಚಿ ಪ್ರೌಢ ಹಂತವನ್ನು ತಲುಪುತ್ತವೆ.

ಮಿಡತೆಗಳ ಪೈಕಿ ಪರಿಚಿತವಾದ ಇತರ ಪ್ರಭೇದಗಳೆಂದರೆ: ದಕ್ಷಿಣ ಆಫ್ರಿಕದ ಲೋಕಸ್ಟಾನ ಪಾರ್ಡಲೈನ (ಬ್ರೌನ್ ಲೋಕಸ್ಟ್), ದಕ್ಷಿಣ ಅಮೆರಿಕದ ಶಿಸ್ಟೋಸರ್ಕ ಪ್ಯಾರನೆನ್ಸಿಸ್, ಉತ್ತರ ಅಮೆರಿಕದ ಮೆಲನೋಪ್ಲಸ್ ಸ್ಪ್ರಿಟಸ್ ಮತ್ತು ಮೆಲನೋಪ್ಲಸ್ ಬೈವಿಟೇಟಸ್. ***

**ಮಿಣುಕು ಹುಳು :** ಕೋಲಿಯಾಪ್ಟರ ಗಣದ ಲ್ಯಾಂಪೈರಿಡೆ ಮತ್ತು ಇಲ್ಯಾಟರಿಡೆ ಕುಟುಂಬದ ಸದಸ್ಯರು (ಫೈರ್ ಫ್ಲೈ). ಈ ಕುಟುಂಬಗಳಲ್ಲಿ ಸು. 1000ಕ್ಕೂ ಹೆಚ್ಚು ಬಗೆಯ ಕೀಟಗಳಿವೆ. ಮಿಂಚುಹುಳು ಅಥವಾ ಮಿಂಚುದುಂಬಿ ಪರ್ಯಾಯನಾಮಗಳು. ರಾತ್ರಿಯ ವೇಳೆ ವಿಶಿಷ್ಟ ತೆರನಾದ ಬೆಳಕನ್ನು ಸೂಸುತ್ತ ಮಿನುಗುವುದರಿಂದ ಇವಕ್ಕೆ ಈ ಹೆಸರು. ಇವು ದುಂಬಿಗಳ (ಬೀಟಲ್ಸ್) ಹತ್ತಿರ ಸಂಬಂಧಿಗಳು. ಪ್ರಪಂಚದ ಉಷ್ಣ ಹಾಗೂ ಉಪೋಷ್ಣವಲಯಗಳಲ್ಲಿ ಹೇರಳವಾಗಿವೆ.

ಚಿಕ್ಕಗಾತ್ರದ ಅಥವಾ ಮಧ್ಯಮ ಗಾತ್ರದ (ದೇಹದ ಉದ್ದ 10–18 ಮಿಮೀ) ನಿಶಾಚರಿ ಕೀಟಗಳಿವು. ದೇಹ ಚಪ್ಪಟೆಯಾಗಿದೆ. ಹೊರ ರೆಕ್ಕೆಗಳು (ಎಲಿಟ್ರ) ಕೊಂಚ ಮಿದುವಾಗಿವೆ. ಮೈ ಕಪ್ಪು, ಕಂದು, ಹಳದಿ, ಕೆಂಪು ವರ್ಣದ್ದಾಗಿದೆ. ಉದರಭಾಗದಲ್ಲಿ ಬೆಳಕನ್ನು ಸೂಸುವ ಅಂಗಗಳಿವೆ. ಬಹುಪಾಲು ಪ್ರಭೇದಗಳಲ್ಲಿ ಹೆಣ್ಣು ಗಂಡು ಕೀಟಗಳೆರಡರಲ್ಲೂ ರೆಕ್ಕೆಗಳಿವೆ. ಆದರೆ ಕೆಲವು ಪ್ರಭೇದದ ಹೆಣ್ಣುಗಳು ರೆಕ್ಕೆರಹಿತವಾಗಿವೆ. ಇಂಥವು ಕೆಲವೊಮ್ಮೆ ಡಿಂಬಗಳಂತೆ (ಲಾರ್ವ) ಕಾಣುತ್ತವೆ.

ಮಿಣುಕು ಹುಳುಗಳ ಆಹಾರ ಎರೆಹುಳು, ಬಸವನಹುಳು, ಕೀಟಗಳು ಇತ್ಯಾದಿ. ಆಹಾರಜೀವಿ ಜೀವಂತವಾಗಿರುವಾಗಲೇ ವಿಷದ್ರವವನ್ನು ಅದರೊಳಕ್ಕೆ ಚುಚ್ಚಿ, ಅದರಿಂದ, ಅರೆಜೀರ್ಣವಾದ ಆಹಾರವನ್ನು ಹೀರಿ ಸೇವಿಸುವುದು ಇವುಗಳ ಆಹಾರಸೇವನೆಯ ಕ್ರಮ. ಇವು ಸಾಮಾನ್ಯವಾಗಿ ಹಳ್ಳ, ನದಿ, ಜೌಗು ಮುಂತಾದ ತೇವಪೂರಿತ ನೆಲೆಗಳಲ್ಲಿ ವಾಸಿಸುವುವು. ಕೆಲವು ಪ್ರಭೇದದ ಮಿಣುಕು ಹುಳಗಳು ಸಸ್ಯಾಹಾರಿಗಳಾಗಿದ್ದು, ಪರಾಗ ಅಥವಾ ಮಧುವನ್ನು ಸೇವಿಸಿ ಬದುಕುವುವು.



ಲೂಸಿಡೋಟ ಅಟ್ರ



ಫೊಟೂರಿಸ್ ಪೆನಿಸಿಲ್ವಾನಿಕಸ್

ಮಿಣುಕು ಹುಳುಗಳು ಪ್ರಸಿದ್ಧವಾಗಿರುವುದು ಅವು ಪ್ರದರ್ಶಿಸುವ ಜೈವಿಕ ಸ್ಫುರಸಂದೀಪ್ತಿಯಿಂದ (ಬಯೋಲೂಮಿನಿಸೆನ್ಸ್). ಇದೊಂದು ವಿಶೇಷ ಬಗೆಯ ಉತ್ಕರ್ಷಣ ಪೂರ್ಣ ರಾಸಾಯನಿಕ ಚಟುವಟಿಕೆಯಾಗಿದೆ. ಇದು ಉದರ ಭಾಗದಲ್ಲಿ ಸ್ಥಿತವಾಗಿರುವ ಕೆಲವು ವಿಶೇಷ ಕೋಶಗಳಿಂದ ನಡೆಯುತ್ತದೆ. ಇವು ಮಾರ್ಪಾಟುಗೊಂಡ ಮೇದಸ್ಸು ಕೋಶಗಳು. ಇವುಗಳಲ್ಲಿ ಕೆಲವು ತೆರನ ಕಿಣ್ವಗಳಿದ್ದು, ಇವು ಸಂದೀಪ್ತ ಕ್ರಿಯೆಯನ್ನು ವೇಗೋತ್ಕರ್ಷಗೊಳಿಸುವುವು. ಈ ಕೋಶಗಳಿಗೆ ಆಕ್ಸಿಜನ್ ಪೂರೈಸಲು ವಿಶೇಷ ಗಾಳಿ ಕೊಳವೆಗಳಿವೆ. ಈ ವಿದ್ಯಮಾನದ ಕ್ರಿಯೆ ಮಿದುಳಿನ ನಿಯಂತ್ರಣಕ್ಕೊಳಪಟ್ಟಿದೆ. ಕಾಡಿನಲ್ಲಿ, ಗದ್ದೆ ಬಯಲಿನಲ್ಲಿ, ಜೌಗು ಪ್ರದೇಶಗಳಲ್ಲಿ ಒಂದು ನೆಲೆಯಲ್ಲಿ ವಾಸಿಸುವ ಮಿಣುಕುಹುಳುಗಳೆಲ್ಲ, ಲಯಬದ್ಧವಾಗಿ ಒಟ್ಟಿಗೆ ಪ್ರದರ್ಶಿಸುವ ಈ ಸ್ಫುರಸಂದೀಪ್ತಿ ಅತ್ಯಂತ ಮನೋಹರವಾದ ನೈಸರ್ಗಿಕ ವಿದ್ಯಮಾನಗಳಲ್ಲಿ ಒಂದು.

ಲ್ಯಾಂಪೈರಿಡೆ ಕುಟುಂಬದ ಲ್ಯಾಂಪೈರಿಸ್ ನಾಕ್ಟಲ್ಯೂಕ, ಫಾಸ್ಫೀನಸ್, ಹೆಮಿಫ್ಟರಸ್, ಪೋಟಿನಸ್, ಫೊಟೂರಿಸ್, ಫಾಸಿಸ್ ಸ್ಪೆಂಡಿಡ್ಯುಲ, ಲ್ಯಾಂಪ್ರೋಪೋರಸ್ ಟೆನಿಬ್ರೋಸಸ್ ಪ್ರಭೇದದ ಮಿಣುಕುಹುಳಗಳು ಭಾರತ ಹಾಗೂ ಶ್ರೀಲಂಕಾಗಳಲ್ಲಿ ವಾಸಿಸುತ್ತವೆ. ಇಲ್ಯಾಟರಿಡೆ ಕುಟುಂಬದಲ್ಲಿ ಪೈರೊಪೋರಸ್ ಜಾತಿಯ ಪೆಲ್ಯೂಸೆನ್ಸ್, ಲೂಮಿನೋಸ, ನಾಕ್ಟಿಲ್ಯೂಕಸ್ ಮತ್ತು ಫಾಸ್ಫರೆಸೆನ್ಸ್ ಪ್ರಭೇದಗಳಿವೆ. (ಎಸ್.ಎನ್.ಎಚ್.)

**ಮಿಥ್ಯಾಪಾದಗಳು:** ಪ್ರಾಣಿ ಜೀವಕೋಶದ ಹೊರಮೈಯಿಂದ ಹೊರಚಾಚಿಕೊಂಡ ಭಾಗಗಳು (ಸೂಡೊಪೊಡಿಯ). ಪ್ರೋಟೋಜೋವ ವಿಭಾಗದ ಸಾರ್ಕೊಡೈನ ಮತ್ತು ರೈಜೋಪೋಡಾ ವರ್ಗದ ಸೂಕ್ಷ್ಮ ಪ್ರಾಣಿಗಳಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಬಿಳಿ ರಕ್ತಕಣಗಳು ಹಾಗೂ ಕೆಲವು ವಿಶೇಷ ಕೋಶಗಳಲ್ಲಿಯೂ ಇವೆ. ಏಕಕೋಶ ಪ್ರಾಣಿಗಳು ಆಹಾರವನ್ನು ಹಿಡಿಯಲು ಇವು ಉಪಯುಕ್ತ. ಇವು ತಾತ್ಕಾಲಿಕವಾಗಿರಬಹುದು ಅಥವಾ ಅರೆಶಾಶ್ವತವಾಗಿರಬಹುದು. ಆಕಾರ ಹಾಗೂ ರಚನೆಗಳ ಆಧಾರದ ಮೇಲೆ ನಾಲ್ಕು ಬಗೆಯ ಮಿಥ್ಯಾಪಾದಗಳನ್ನು ಗುರುತಿಸಲಾಗಿದೆ. 1. ಲೋಬೊಪಾಡ್ ಎಂಬವು ಅಗಲವಾಗಿ ದುಂಡನೆಯ ತುದಿಗಳನ್ನು ಹೊಂದಿವೆ. ಎಕ್ಟೊಪ್ಲಾಸಮ್ ಮತ್ತು ಎಂಡೊಪ್ಲಾಸಮ್ ಎರಡನ್ನೂ ಒಳಗೊಂಡಿವೆ. ಉದಾ: ಅಮೀಬ ಪ್ರೋಟಿಯಸ್. 2. ಫೈಲೊಪಾಡ್ ಎಂಬ ಮಿಥ್ಯಪಾದಗಳು ಚೂಪಾಗಿವೆ. ಎಕ್ಟೊಪ್ಲಾಸಮ್‌ನ್ನು ಮಾತ್ರ ಒಳಗೊಂಡಿವೆ. ಉದಾ: ಟೆಸ್ಟೆಸಿಯಾ. 3. ರೈಜೊ ಅಥವಾ ರೆಟಿಕ್ಯೂಲೊಪಾಡ್ ಎಂಬ ಮಿಥ್ಯಾಪಾದಗಳು ದಾರದಂಥ ಕವಲುಗಳಿಂದ ಕೂಡಿವೆ. ಇವುಗಳಲ್ಲಿಯ ಕೋಶದ್ರವ್ಯವನ್ನು ಎಕ್ಟೊಪ್ಲಾಸಮ್ ಮತ್ತು ಎಂಡೊಪ್ಲಾಸಮ್ ಎಂದು ವಿಂಗಡಿಸಲಾಗುವುದಿಲ್ಲ. ಉದಾ: ಫೊರ್‍ಯಾಮಿನಿಫೆರ. ಈ ಮೂರು ಬಗೆಯ ಮಿಥ್ಯಾಪಾದಗಳು ತಾತ್ಕಾಲಿಕ ತೆರನಾದವು. 4 ಆಕ್ಸೊಪಾಡಗಳು ಕಿರಣಗಳಂತಿರುವ ಅರೆಶಾಶ್ವತ ಮಿಥ್ಯಾಪಾದಗಳು. ಪ್ರತಿ ಆಕ್ಸೊಪಾಡಿನ ಮಧ್ಯೆ ಪೆಡುಸಾದ ಕೋಲಿನ ರಚನೆಯು ಇದರ ಸುತ್ತ ತೆಳುವಾದ ಕೋಶದ್ರವ್ಯವು ಇದೆ. ಕೋಶದ್ರವ್ಯ ಸದಾಕಾಲವು ಚಲಿಸುತ್ತಿರುತ್ತದೆ. ಉದಾ: ಹೀಲಿಯೊಜೋವ ಮತ್ತು ರೇಡಿಯೋಲೇರಿಯ ಮಿಥ್ಯಾಪಾದಗಳು. ಒಂದೊಂದು ಜಾತಿ ಅಥವಾ ಗುಂಪಿನಲ್ಲಿ ಬಹುಪಾಲು ಒಂದೇ ತೆರನಾಗಿರುವುದರಿಂದ ಪ್ರಭೇದಗಳ ವರ್ಗೀಕರಣದಲ್ಲಿ ಬಹಳ ಮಹತ್ತ್ವದ ಪಾತ್ರ ವಹಿಸಿವೆ. ಕೆಲವೊಮ್ಮೆ ಪರಿಸ್ಥಿತಿಯ ಬದಲಾವಣೆಯಿಂದ ವ್ಯತ್ಯಾಸ ತೋರಬಹುದು.

ಮಿಥ್ಯಾಪಾದಗಳ ಸಹಾಯದಿಂದ ನಡೆಯುವ ಚಲನೆಗೆ ಅಮೀಬ ರೀತಿಯ ಚಲನೆ ಎಂದು ಹೆಸರು. ಈ ಬಗೆಯ ಚಲನೆ ಪ್ರಾಣಿಚಲನೆಯಲ್ಲಿ ಅತ್ಯಂತ ಪ್ರಾಚೀನವಾದದ್ದೆಂದು ತಜ್ಞರ ಅಭಿಮತ. ಅದರ ಅಭ್ಯಾಸ ಸ್ನಾಯುಗಳ ಸಂಕೋಚನ ಕ್ರಿಯೆಯ ಮೇಲೆ ಹೆಚ್ಚು ಬೆಳಕನ್ನು ಬೀರಬಲ್ಲದು ಎಂಬ ನಂಬಿಕೆಯು ಇದೆ. ಮುಖ್ಯವಾಗಿ ಚಲನೆಯಲ್ಲಿ ಭಾಗವಹಿಸುವ




ಅಕ್ವಿನೊಫೈರಸ್

ಲೋಬೊಪಾಡ್‌ಗಳು ಮುಂಚಾಚುವ ಮತ್ತು ಹೊರಚಾಚುವ ಎರಡು ರೀತಿಯಲ್ಲಿ ರೂಪುಗೊಳ್ಳುತ್ತವೆ. ಮೊದಲನೆಯ ರೀತಿಯಲ್ಲಿ ಬಾಹ್ಯಜೀವರಸ ಉಬ್ಬಿಕೊಂಡು ಮುಂದೆ ಚಾಚುತ್ತದೆ. ಇದರೊಳಗೆ ಅಂತರ ರಸ ಸಮವಾಗಿ ಹರಿಯುವುದು. ಎರಡನೆಯ ರೀತಿಯಲ್ಲಿ ಹೊರಮೈಯ ಒಂದು ಭಾಗ ಒಡೆದು ಅಂತರಜೀವರಸ ಮತ್ತು ಬಾಹ್ಯಜೀವರಸಗಳೆರಡು ಸ್ಫೋಟಗೊಳ್ಳುವಂತೆ ಅದರಲ್ಲಿ ಧುಮುಕುವುವು.




ಲೋಬೊಪಾಡುಗಳು ಯಾವ ರೀತಿಯಲ್ಲಿಯೇ ರೂಪುಗೊಳ್ಳಲಿ, ಅವು ಬೇರೆ ಬೇರೆ ದಿಕ್ಕಿನಲ್ಲಿ ಹುಟ್ಟುವುದರಿಂದ ಪ್ರಾಣಿ ಸರಳ ರೇಖೆಯಲ್ಲಿ ಚಲಿಸದೆ ಅಂಕುಡೊಂಕಾಗಿ ಚಲಿಸುವುದು. ಅಮೀಬ ರೀತಿಯ ಚಲನೆಯನ್ನು ಅರ್ಥಮಾಡಿಕೊಳ್ಳಲು ಮೇಲ್ಮೈತುಯ್ತ ಸಿದ್ಧಾಂತ ಮತ್ತು ಸಾಂದ್ರತೆಯ ಬದಲಾವಣೆಯ ಸಿದ್ಧಾಂತಗಳು ಬಳಕೆಯಲ್ಲಿದ್ದು ಅವನ್ನೇ ಈಗ ಸದ್ಯಕ್ಕೆ ಎಲ್ಲ ಪ್ರಾಣಿವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಮೊದಲನೆಯ ಸಿದ್ಧಾಂತ ತೀರ ದ್ರವರೋಪಿಯಾದ ಮಿಥ್ಯಾಪದಿಗಳಿಗೂ, ಎರಡನೆಯದು ಉಳಿದ ಮಿಥ್ಯಾಪದಿಗಳಿಗೂ ಅನ್ವಯವಾಗುವುದು. ಇತ್ತೀಚಿನ ಶೋಧಗಳ ಪ್ರಕಾರ ಕೋಶಗಳೊಳಗಿರುವ ಆಕ್ಟಿನ್ ಹಾಗೂ ಮಯೋಸಿನ್‌ಗಳೆಂಬ ಶಿಥಿಲಗೊಂಡು ಕೋಶಾಸ್ಥಿಗಳು ಛಿದ್ರಗೊಳ್ಳುವುದು ಹಾಗೂ ಪುನರ್ ನಿರ್ಮಾಣವಾಗುವುದರಿಂದ ಅಮೀಬೀಯ ಚಲನೆ ಸಾಧ್ಯವಾಗುತ್ತದೆ.

(ಎಸ್.ಎನ್.ಎಚ್)

**ಮಿದುಳು:** ನರಮಂಡಲದ ಅತಿಮುಖ್ಯ ಭಾಗ. ಆಂಗ್ಲ ಭಾಷೆಯಲ್ಲಿ ಬ್ರೇನ್ ಎನ್ನುವರು. ನರಮಂಡಲದಲ್ಲಿ ಕೇಂದ್ರ (ಸೆಂಟ್ರಲ್) ಮತ್ತು ಪರಿಧಿ (ಪೆರಿಫೆರಲ್) ಎಂಬ ಎರಡು ಭಾಗಗಳಿವೆ. ಮಿದುಳು ಮತ್ತು ಮಿದುಳುಬಳ್ಳಿ ಇವೆರಡು ಸೇರಿ ಕೇಂದ್ರ ನರಮಂಡಲವಾಗಿದೆ. ದೇಹದ ವಿವಿಧ ಭಾಗಗಳಲ್ಲಿರುವ ನರಗಳು ಹಾಗೂ ನರಗಂತಿಗಳು (ಗ್ಯಾಂಗ್ಲಿಯ) ಪರಿಧಿ ನರಮಂಡದಲ್ಲಿವೆ.

ಮಿದುಳು ಒಂದು ದೊಡ್ಡ ಅಂಗ. ಬೆಣ್ಣೆಯಂಥ ಮಿದುವಾದ ಘನವಸ್ತುವಾಗಿದ್ದು, ತಲೆಬುರುಡೆಯ ಒಳಗೆ ಸುರಕ್ಷಿತವಾಗಿದೆ. ಸಂಘಟ್ಟನೆ ಇತ್ಯಾದಿಗಳಿಂದ ಬುರುಡೆ ಒಡೆಯದೆ ಇದ್ದರೂ, ರಭಸವಾಗಿ ಕುಲುಕಿದಂತಾಗುವುದರಿಂದ ಮಿದುಳಿಗೆ ಧಕ್ಕೆ ಆಗಿ ಜ್ಞಾನ ತಪ್ಪಬಹುದು, ಮನೋವಿಕಾರ ಆಗಬಹುದು, ಪ್ರಾಣವೇ ಹೋಗಬಹುದು. ಆದರೆ, ಇಂಥ ಸಂಭವಗಳು ಕಡಿಮೆ. ಕಾರಣ, ಅತ್ಯಂತ ಸುರಕ್ಷಿತ ರಕ್ಷಣೆ ಮಿದುಳಿಗೆ ಲಭಿಸಿದೆ.

ವಯಸ್ಕ ವ್ಯಕ್ತಿಯಲ್ಲಿ ಮಿದುಳಿನ ತೂಕ 1300–1400 ಗ್ರಾಂ. ಸು. 1200 ಗ್ರಾಂಗಳಿಗಿಂತ ಕಡಿಮೆ ಇದ್ದರೆ ಆ ವ್ಯಕ್ತಿ ದಡ್ಡ. ಅಂದ ಮಾತ್ರಕ್ಕೆ ಮಿದುಳಿನ ತೂಕದ ಮೇಲೆಯೇ ಬುದ್ಧಿವಂತಿಕೆ ಆಧರಿಸಿಲ್ಲ. ದೇಹದ ಗಾತ್ರಕ್ಕೆ ಅನುರೂಪವಾಗಿ ಮಿದುಳು ಬೆಳೆದಿದೆ. ಸು. 1400 ಗ್ರಾಂ ತೂಕದ ಮಿದುಳುಳ್ಳ ವ್ಯಕ್ತಿ 1300 ಗ್ರಾಂ ತೂಕದ ಮಿದುಳಿನವನಿಗಿಂತ ಬುದ್ಧಿವಂತನಾಗಿರುವುದು ಖಾತರಿ ಇಲ್ಲ. ಬುದ್ಧಿವಂತಿಕೆ ಮಿದುಳಿನ ಆಂತರಿಕ ಕಣಗಳನ್ನು ಮತ್ತು ನರಜಾಲಗಳನ್ನು ಆಧರಿಸಿವೆ.

ಭ್ರೂಣದಲ್ಲಿ ಮೊತ್ತ ಮೊದಲಿಗೆ ಮಿದುಳು ನಾಳಾಕಾರವಾಗಿ ಉದ್ಭವಿಸುತ್ತದೆ. ತಲೆಯಲ್ಲಿ ಇದು ದೊಡ್ಡದಾಗಿ ಮತ್ತು ಜಟಿಲ ರಚನೆಯದಾಗಿ ವಿಕಸಿಸಿ ಮಿದುಳಾಗುತ್ತದೆ. ನಾಳದ ಮಿಕ್ಕ ವಿಕಾಸಿತ ಭಾಗಗಳ ಮೇಲೆ ಹತೋಟಿ ಪಡೆಯುತ್ತದೆ. ಭ್ರೂಣದ ಬೆಳವಣಿಗೆ ಘಟ್ಟಗಳು ಪ್ರಾಣಿ ರಾಜ್ಯದ ವಿಕಾಸ ಮಾರ್ಗದ ಘಟ್ಟಗಳ ಪುನರಾವರ್ತನೆ. ಭ್ರೂಣ ಹಾಗೂ ಪ್ರಾಣಿ ರಾಜ್ಯದಲ್ಲಿ ಕಂಡುಬರುವ ಮಿದುಳಿನ ಹಿರಿಮೆಗೆ ಮಸ್ತಿಷ್ಕೀಕರಣ (ಎನ್ಸೆಫಲೈಸೇಷನ್) ಎಂದು ಹೆಸರು.

ಭ್ರೂಣದ ಮಿದುಳು ಮುಮ್ಮಿದುಳು (ಫೋರ್‌ಬ್ರೇನ್), ನಡು ಮಿದುಳು (ಮಿಡ್‌ಬ್ರೇನ್) ಮತ್ತು ಹಿಮ್ಮಿದುಳು (ಹೈಂಡ್‌ಬ್ರೇನ್) ಎಂದು ಸ್ಥೂಲವಾಗಿ ವಿಭಾಗವಾಗುತ್ತದೆ. ಮುಮ್ಮಿದುಳು ಮುಖ್ಯವಾಗಿ ಮಹಾಮಸ್ತಿಷ್ಕ ಮತ್ತು ಥಲಮಸ್ ಎಂಬ ಎರಡು ಭಾಗಗಳಾಗಿ ರೂಪುಗೊಳ್ಳುತ್ತದೆ. ಎರಡು ಎಡ ಹಾಗೂ ಬಲಾರ್ಧಗಳಾಗಿದ್ದು ನಡುಮಧ್ಯದಲ್ಲಿ ಎರಡಕ್ಕೂ ಎರಡು ಅರ್ಧಗಳು ಕೂಡಿಕೊಂಡಿವೆ. ಮಹಾಮಸ್ತಿಷ್ಕದಲ್ಲಿ ಸಾಮಾನ್ಯ ಇಂದ್ರಿಯಗಳು (ನೋವು, ಶೀತೋಷ್ಣ, ಸ್ಪರ್ಶ, ಕಂಪನ ಹಾಗೂ ಒತ್ತಡ) ಮತ್ತು ವಿಶೇಷ ಇಂದ್ರಿಯಗಳು (ದೃಷ್ಟಿ, ಶ್ರವಣ, ಘ್ರಾಣ ಮತ್ತು ರುಚಿ) ಇವು ಅನುಭವಕ್ಕೆ ಬರುತ್ತವೆ. ಅವಕ್ಕೆ ಅರ್ಥವತ್ತಾದ ಪ್ರತಿಕ್ರಿಯಾ ಕರ್ಮಗಳು ರೂಪಿತವಾಗಿ ಐಚ್ಛಿಕ ಚಲನೆಗಳು ಜರಗುತ್ತವೆ. ಥೆಲಮಸ್ಸಿನಲ್ಲಿ ಇದೇ ರೀತಿ ಸಂವೇದನಗ್ರಹಣ ಹಾಗೂ ಅನುರೂಪ ಪ್ರತಿಕ್ರಿಯೆ ಕಂಡುಬಂದರೂ, ಇವು ಮನೋಗೋಚರವಲ್ಲ ಮತ್ತು ಐಚ್ಛಿಕ ಚಲನೆಯು ಅಲ್ಲ. ನಡುಮಿದುಳಿನಲ್ಲಿ ಅಗಾಧ ವಿಕಸನ ಕಾಣಬರುವುದಿಲ್ಲ. ಅದು ಮುಖ್ಯವಾಗಿ ದೃಷ್ಟಿಗೆ ಸಂಬಂಧಪಟ್ಟ ಅನೈಚ್ಛಿಕ ಪ್ರತಿಕ್ರಿಯೆಗಳಿಗೆ ಮಾತ್ರ ಮೀಸಲು. ಹಿಮ್ಮಿದುಳು ವಿಕಸನದ ಪ್ರಾರಂಭ ಹಂತದಲ್ಲಿ ದೇಹದ ಸಮತೂಕ ರಕ್ಷಣೆಗೆ ಕಾರಣವಾಗಿದ್ದರು, ಕ್ರಮೇಣ ಹೃದಯಮಿಡಿತ, ಉಸಿರಾಟದಂತಹ, ಅನೈಚ್ಛಿಕ ಮರ್ಮ ಕ್ರಿಯೆಗಳಿಗೆ (ವೈಟಲ್) ನಿಯಂತ್ರಣ ಸ್ಥಾನವಾಗಿ ರೂಪಿತಗೊಳ್ಳುತ್ತದೆ.

ಮಹಾಮಸ್ತಿಷ್ಕ (ಸೆರಿಬ್ರಮ್): ಇದನ್ನು ಪ್ರಧಾನ, ಹಿರಿಯ ಅಥವಾ ಗುರು ಮಸ್ತಿಷ್ಕ ಎನ್ನುವರು. ಇದು ಮಿದುಳಿನ ಭಾಗಗಳಲ್ಲೆಲ್ಲ ಅತಿದೊಡ್ಡದು. ಇದರ ಅರ್ಧವನ್ನು ಗೋಳಾರ್ಧವೆಂದು ಹೆಸರಿಸಲಾಗಿದೆ. ಇಡೀ ಮಹಾಮಸ್ತಿಷ್ಕ ಅಂಡಾಕಾರವಾಗಿದೆ ಮತ್ತು ಅದೇ ಆಕಾರದ ಬುರುಡೆ ಒಳಗಿನ ಹೆಚ್ಚು ಭಾಗವನ್ನು ಆಕ್ರಮಿಸಿದೆ. ಹಿಂದಿನ ತುದಿಯಿಂದ (ಆಕ್ಸಿಪೀಟಲ್ ಪೋಲ್) ಮುಂದಿನ ತುದಿಯವರೆಗೂ (ಫ್ರಾಂಟಲ್ ಪೋಲ್) ಆಕ್ರಮಿಸಿರುವ ಆಳವಾದ ಒಂದು ಸೀಳು (ಮೀಡಿಯನ್ ಸಲ್ಕಸ್) ಎಡಬಲ ಗೋಳಾರ್ಧಗಳನ್ನು ಬಲುಮಟ್ಟಿಗೆ ಬೇರ್ಪಡಿಸಿದೆ. ಆದರೆ, ಸೀಳಿನ ತಳದಲ್ಲಿ ಗೋಳಾರ್ಧಗಳನ್ನು ಕೂಡಿಸುವ ಅಡ್ಡತಂತುಗಳ ಸೇತು (ಕಾರ್ಪಸ್ ಕಲೋಸಮ್) ಇದೆ. ಪ್ರತಿಯೊಂದು ಗೋಳಾರ್ಧದಲ್ಲಿ ವಕ್ರವಾದ ಹಳ್ಳ, ದಿಣ್ಣೆಗಳಿರುವ (ನುಲಿಕೆ) ಹೊರಬೂದು ಬಣ್ಣದ ವಸ್ತು (ಗ್ರೇಮ್ಯಾಟರ್) ಇದೆ. ಇದನ್ನು ಸಿಪ್ಪೆ, ವಲಯ, ಕರಟ, ಕವಚ (ಕಾರ್ಟೆಕ್ಸ್) ಎಂದು ಕರೆಯುವರು. ಇದರಲ್ಲಿ ಲಕ್ಷಾಂತರ ನರಕಣಗಳು ವಿಶಿಷ್ಟ ವಿನ್ಯಾಸಗಳಾಗಿ ತುಂಬಿಕೊಂಡು, ಪರಸ್ಪರ ಸಂಪರ್ಕಗಳ ಮೂಲಕ ಸಂಬಂಧಿತವಾಗಿದ್ದು, ಮಿದುಳಿನ ಇತರ ಭಾಗಗಳೊಡನೆ ಮತ್ತು ಮಿದುಳು ಬಳ್ಳಿಯೊಡನೆ ಲಕ್ಷಾಂತರ ನರತಂತುಗಳಿಂದ ಸಂಪರ್ಕಗೊಂಡಿವೆ. ಬೂದು ವಸ್ತುವಿನ ಅಡಿಯಲ್ಲಿ ಬಿಳಿವಸ್ತು (ವೈಟ್ ಮ್ಯಾಟರ್) ಇದೆ. ಮಹಾಮಸ್ತಿಷ್ಕವನ್ನು ಇತರ

ಕಡೆಗಳಿಗೆ ಸಂಪರ್ಕಿಸುವ ನರತಂತುಗಳು ಇದರ ಮೂಲಕ ಹಾಯುತ್ತವೆ. ಬಿಳಿಬಣ್ಣದ ಈ ನರತಂತುಗಳಿಂದಲೇ ಪ್ರಧಾನವಾಗಿ ಬಿಳಿ ವಸ್ತು ರಚಿತವಾಗಿದೆ. ಈ ನರತಂತು ಕಂತೆಗಳ ನಡುವೆ ಅಲ್ಲಲ್ಲಿ ಗುಂಬಗಳನ್ನು, ಗೆರೆ ಕಾಯವನ್ನು (ನ್ಯೂಕ್ಲಿಯೈ, ಕಾರ್ಪಸ್ ಸ್ಟ್ರೈಯೇಟಮ್) ಗುರುತಿಸಬಹುದು. ಕೆಳದರ್ಜೆ ಪ್ರಾಣಿಗಳಲ್ಲಿ ವಾಸನೆಗೆ ಮೀಸಲಾಗಿರುವ ಮಸ್ತಿಷ್ಕ ಭಾಗ (ರೈನನ್‌ಸೆಫಲಾನ್) ಪ್ರಧಾನವಾಗಿದೆ. ಹಿಂದು ಮುಂದಾಗಿ ಪಸರಿಸಿರುವ ಪ್ರಧಾನ ಸೀಳಿನ ಜೊತೆಗೆ ಇನ್ನು ಕೆಲವು ಸೀಳುಗಳು ಆಳವಾಗಿ ಇದ್ದು, ಪ್ರತಿಯೊಂದು ಗೋಳಾರ್ಧದ ಬೂದುವಸ್ತುವನ್ನು ಮುಂದಿನ ಪಕ್ಕದ ಹಿಂದಿನ, ಕೆಳಗಿನ ಮುಂತಾದ ಹಾಳೆಗಳಾಗಿ ವಿಂಗಡಿಸಿದೆ. ಮುಂದಿನ (ಹಣೆ) ಹಾಲೆಗೂ ಕೆಳಗಿನ ಹಾಲೆಗೂ ನಡುವೆ ಇರುವ ಸೀಳಿನ ಆಳದ ಅಡಿಯಲ್ಲಿ ಬೂದುವಸ್ತು ಇದೆ. ಇದಕ್ಕೆ ರೀಲನದ್ವೀಪ (ಐಲೆಂಡ್ ಆಫ್ ರೀಲ್) ಎಂದು ಹೆಸರು. ಸುತ್ತಲು ಸೀಳಿದ್ದು, ಮಿಕ್ಕ ಮಸ್ತಿಷ್ಕ ಭಾಗಗಳಿಂದ ಇದು ಬೇರ್ಪಟ್ಟಂತೆ ತೊರುವುದರಿಂದ ಈ ಹೆಸರು.

ಹಣೆ ಹಾಲೆಗೂ (ಫ್ರಾಂಟಲ್ ಲೋಬ್) ಪಕ್ಕದ ಹಾಲೆಗೂ (ಪೆರೈಟಲ್ ಲೋಬ್) ನಡುವೆ ಇರುವ ಸೀಳಿಗೆ, ಕೇಂದ್ರ ಸೀಳಿಕೆ (ಸೆಂಟ್ರಲ್ ಸಲ್ಕಸ್) ಎಂದು, ಕೇಂದ್ರ ಸೀಳಿಕೆಯ ಹಿಂದಿರುವ ಪಕ್ಕಹಾಲೆಯ ನಲಿಕೆಯ ಹಿಂದಿನ ಕೇಂದ್ರನುಲಿಕೆ (ಪೋಸ್ಟ್‌ಸೆಂಟ್ರಲ್ ಗೈರಸ್) ಎಂದು ಹೆಸರು. ಇದು ದೇಹದ ಎಲ್ಲ ಭಾಗಗಳಿಂದಲು ಉದ್ಭವಿಸುವ ಸಂವೇದನೆಗಳನ್ನು (ಸ್ಪರ್ಶ, ಶೀತೋಷ್ಣ, ನೋವು, ಕಂಪನ, ಇತ್ಯಾದಿ) ಸಾಮಾನ್ಯವಾಗಿ ಗ್ರಹಿಸುತ್ತದೆ. ಪಾದದ ಸಂವೇದನೆಗಳು ನುಲಿಕೆಯ ಮೇಲು ಭಾಗದಲ್ಲಿ, ತಲೆಯ ಸಂವೇದನೆಗಳು ಕೆಳಭಾಗದಲ್ಲಿ, ಅನುಭವಕ್ಕೆ ಬರುತ್ತವೆ. ಕೈ ಮುಖಗಳಿಗೆ (ಅದರಲ್ಲೂ ತುಟಿಗೆ) ಪ್ರಾತಿನಿಧ್ಯ ಹೆಚ್ಚು. ಇತರ ಬೆರಳುಗಳಿಗಿಂತ ಹೆಬ್ಬೆರಳಿಗೆ ಹೆಚ್ಚು ಭಾಗ ಮೀಸಲು. ತಲೆಯ ಹಿಂಭಾಗಕ್ಕಿಂತ ಮುಂಭಾಗಕ್ಕೆ ಅಧಿಕ ಪ್ರಾಶಸ್ತ್ಯ. ಕೇಂದ್ರ ನುಲಿಕೆಗೆ ಮುಂದೆ ಇರುವ ಹಣೆಹಾಲೆ ನುಲಿಕೆಗೆ ಮುಂದಿನ ಕೇಂದ್ರನುಲಿಕೆ (ಪ್ರೀಸೆಂಟ್ರಲ್ ಗೈರಸ್) ಎಂದು ಹೆಸರು. ಇದು ಐಚ್ಛಿಕ ಕ್ರಿಯೆಗಳು ಉದ್ಭವಿಸುವ ಭಾಗ. ಇಲ್ಲಿ ಕೂಡ ದೇಹ ತಲೆಕೆಳಗಾಗಿಯೇ ಪ್ರತಿನಿಧಿಸಲ್ಪಟ್ಟಿದೆ. ಇಲ್ಲಿ ಹೆಬ್ಬೆರಳು, ಕೈ ಬಾಯಿಗಳಿಗೆ ಹೆಚ್ಚು ಸ್ಥಾನವಿದೆ.



ಮಾನವ ಮೆದುಳಿನ ಪಾರ್ಶ್ವನೋಟ

ಮಹಾಮಸ್ತಿಷ್ಕದ ಸಿಪ್ಪೆಯ ಕೋಶಗಳ ವಿನ್ಯಾಸ ಮತ್ತು ಕೂಡಿಕೆಗಳ (ಕನೆಕ್ಷನ್ಸ್) ಶಸ್ತ್ರವೈದ್ಯದಲ್ಲಿ ವಿಶಿಷ್ಟ ಭಾಗಗಳನ್ನು ತೆಗೆಯುವುದರಿಂದ ಆಗುವ ಪರಿಣಾಮ, ವಿಶಿಷ್ಟ ಭಾಗಗಳನ್ನು ವಿದ್ಯುತ್ ಪ್ರಚೋದನೆಗೆ ಗುರಿಪಡಿಸಿದಾಗ ಕಾಣಬರುವ ಪ್ರತಿಕ್ರಿಯೆಗಳು, ಪ್ರಾಣಿಗಳಲ್ಲಿ ಇನ್ನೂ ವಿವರವಾದ ಪ್ರಯೋಗಗಳು ಮುಂತಾದ ವಿಧಾನಗಳಿಂದ ಮಹಾಮಸ್ತಿಷ್ಕದಲ್ಲಿ ಇನ್ನೂ ಅನೇಕ ವಿಶಿಷ್ಟ ಭಾಗಗಳನ್ನು ಗುರುತಿಸಲಾಗಿದೆ. ಕೋಶವಿನ್ಯಾಸದಲ್ಲಿರುವ ವ್ಯತ್ಯಾಸಗಳನ್ನು ಗುರುತಿಸಿ ಬ್ರಾಡ್‌ಮನ್ ಎಂಬಾತ ಮಹಾಮಸ್ತಿಷ್ಕದಲ್ಲಿ 47 ಬೇರೆ ಬೇರೆ ಕ್ಷೇತ್ರಗಳನ್ನು ವಿವರಿಸಿ, ಅಂಕಿಸಿದ್ದಾನೆ. ತಂತು ಕೂಡಿಕೆಗಳನ್ನು ಗಮನಿಸಿ ವೋಗ್ಟ್ ಎಂಬಾತ 200 ಕ್ಷೇತ್ರಗಳನ್ನು ವಿಂಗಡಿಸಿದ್ದಾನೆ. ಸಾಮಾನ್ಯ ಬಳಕೆಯಲ್ಲಿ ಮಸ್ತಿಷ್ಕದ ಸಂವೇದನ ಗ್ರಾಹಕ ಭಾಗವನ್ನು ಮೇಲಿನಿಂದ ಕೆಳಗಾಗಿ 3, 1, 2, ಎಂದು ಗಣಿಸಲಾಗಿದೆ. ಐಚ್ಛಿಕ ಕ್ರಿಯಾಭಾಗವನ್ನು 4ನೆಯ ಸಂಖ್ಯೆಯ ನುಲಿಕೆಯನ್ನು ಸೇರಿಸಿ ಒಟ್ಟಿಗೆ ಚಾಲಕ ಸಿಪ್ಪೆ (ಮೋಟಾರ್ ಏರಿಯ) ಎಂದು ಕರೆದಿದೆ. ಈ ಭಾಗದ ವಿದ್ಯುತ್‌ಚೋದನೆಯಿಂದ ದೇಹದ ಅನ್ಯಪಾರ್ಶ್ವದಲ್ಲಿ ಅನುಗುಣ ಪೇಶಿಗಳು ಸಂಕುಚಿಸುವುದನ್ನು ಕಣ್ಣಾರೆ ನೋಡಬಹುದು. ಹಣೆಹಾಲೆಯನ್ನು ಆಂತರಿಕವಾಗಿ (ಅಂದರೆ ಬಿಳಿ ವಸ್ತುವನ್ನು ಮಾತ್ರ) ಕೊಯ್ದರೆ ಇದಕ್ಕೆ ಪ್ರಿಫ್ರಾಂಟಲ್ ಲೋಬೋಟಮಿ ಅಥವಾ ಲ್ಯೂಕಾಟಮಿ ಎಂದು ಹೆಸರು. ಅದಕ್ಕೂ ಮಸ್ತಿಷ್ಕದ ಬೇರೆ ಭಾಗಗಳಿಗು ಇರುವ ಕೂಡಿಕೆಗಳು ಛಿದ್ರವಾಗುತ್ತವೆ. ಇದಕ್ಕಿಂತಲೂ ಹೆಚ್ಚಾಗಿ ಅದರೊಡನೆ ಥೆಲಮಸ್ಸಿಗಿರುವ ಕೂಡಿಕೆಗಳು ಕತ್ತರಿಸಲ್ಪಡುತ್ತವೆ. ಇದರಿಂದ, ಆಹಾರ ಭಾಗ ಮಿಕ್ಕ ಭಾಗಗಳಿಂದ ಬೇರ್ಪಟ್ಟಂತಾಗುತ್ತದೆ. ಉಗ್ರ ಮಾನಸಿಕ ಆಕ್ರಮಣ ಚಿಕಿತ್ಸೆಯಲ್ಲಿ ಹೀಗೆ ಮಾಡುವುದಿದೆ. ಅನೇಕ ವೇಳೆ ಇದರಿಂದ ವ್ಯಕ್ತಿಯ ಸುಲಭೋದ್ರೇಕ ವೈಪರೀತ್ಯ ಕಡಿಮೆ ಆಗಿ ಎಷ್ಟೋ ಅನುಕೂಲವಾಗುತ್ತದೆ. ಮುಂದಿನ ಹಾಲೆಯ ಇತರ ಭಾಗಗಳ ಪ್ರಚೋದನೆಯಿಂದ ರಕ್ತಪರಿಚಲನೆಗೆ, ಉಸಿರಾಟ, ಪಾಪೆಯ ಪ್ರತಿಕ್ರಿಯೆ ಮುಂತಾದವುಗಳಲ್ಲಿ ಪರಿಣಾಮಗಳು ಕಂಡುಬರುತ್ತವೆ. ಹಣೆಹಾಲೆಯ ಕೆಳನುಲಿಕೆಯಲ್ಲಿರುವುದು 44ನೆಯ ಸಂಖ್ಯೆಯ ಕ್ಷೇತ್ರ. ಇದಕ್ಕೆ ಬ್ರೋಕಾಸನ ವಾಕ್ ಕ್ಷೇತ್ರ ಎಂದು ಹೆಸರು. ಇದು ಬಲಚರಲ್ಲಿ, ಎಡ ಗೋಳಾರ್ಧದಲ್ಲಿ, ಎಡಚರಲ್ಲಿ ಬಲಗೋಳಾರ್ಧದಲ್ಲಿ, ಕಾರ್ಯಶೀಲವಾಗಿರುವುದು. ಇನ್ನೊಂದು ಕಡೆ ನಿಷ್ಕ್ರಿಯವಾಗಿರುತ್ತದೆ (ಸೈಲೆಂಟ್ ಏರಿಯ).

17ನೆಯ ಸಂಖ್ಯೆಯ ಕ್ಷೇತ್ರ ದೃಷ್ಟಿ ಜ್ಞಾನ ಕ್ಷೇತ್ರ. ಮಸ್ತಿಷ್ಕದ ಹಿಂದಿನ ಧ್ರುವವನ್ನು ಬಳಸಿಕೊಂಡು ಗೋಳಾರ್ಧದ ಹೊರಮೈಮೇಲೆ ಪಸರಿಸಿದೆ. ಇದು ಅದೇ ಭಾಗದ ಪಕ್ಕ ಜಾನುಕಾಯದಿಂದ (ಲ್ಯಾಟರಲ್ ಜೆನಿಕ್ಯುಲೇಟ್ ಬಾಡಿ) ತಂತುಗಳನ್ನು ಪಡೆಯುತ್ತದೆ. ವಸ್ತುಗಳ ಬಣ್ಣ, ಗಾತ್ರ, ರೂಪ, ಚಲನೆ, ಕಾಂತಿ, ಪಾರದರ್ಶಕತೆ ಇತ್ಯಾದಿಗಳನ್ನು ಗುರುತಿಸುವುದು ಈ ಕ್ಷೇತ್ರದ ಕ್ರಿಯೆ. 18, 19ನೆಯ ಸಂಖ್ಯೆಯ ಕ್ಷೇತ್ರಗಳು ದೃಷ್ಟಿಜ್ಞಾನ ಕ್ಷೇತ್ರವನ್ನು ಸುತ್ತುವರಿದಿವೆ. ಇವು ದೃಷ್ಟಿ ಮಾನಸಿಕ ಕ್ಷೇತ್ರಗಳು (ಸೈಕಿಕ್ ಏರಿಯ ಆಫ್ ವಿಷನ್) ದೃಷ್ಟಿಯ ಅನುಭವವನ್ನು ಪರ್ಯಾಲೋಚಿಸಿ, ಪರಿಷ್ಕರಿಸಿ, ವಿಶದೀಕರಿಸಿ, ಹಿಂದಿನ ಅನುಭವಗಳೊಡನೆ ಸಂಯೋಜಿಸಿ, ಹೋಲಿಸಿ ಗುರುತು ಹಚ್ಚುವ ಸಾಮರ್ಥ್ಯವುಳ್ಳದ್ದು. ಅಂದರೆ 17ನೆಯ ಕ್ಷೇತ್ರದ ಅನುಭವವನ್ನು ಅರ್ಥವತ್ತಾಗಿ ಮಾಡಿ ದೃಷ್ಟಿ ಮುದ್ರಿಕೆಗಳನ್ನು ಕಣ್ಣುಗಳ ಚಲನೆಗಳೊಡನೆ ಸಂಯೋಜಿಸಿ ತಕ್ಕ ಪ್ರತಿಕ್ರಿಯೆ ಜರುಗುವಂತೆ ಮಾಡುತ್ತದೆ.

41, 42ನೇಯಸಂಖ್ಯೆಯ ಕ್ಷೇತ್ರ ಶ್ರವಣ ಕ್ಷೇತ್ರ. ಇದು ಕೆಳಹಾಲೆಯ ಮೇಲಡಿ ಭಾಗದಲ್ಲಿರುವ ಅಡ್ಡನುಲಿಕೆಯಲ್ಲಿದೆ. ಇದಕ್ಕೆ ಒಳಜಾನುಕಾಯದಿಂದ (ಮೀಡಿಯಲ್ ಜೆನಿಕ್ಯುಲೇಟ್ ಬಾಡಿ) ತಂತುಗಳು ಬಂದು ಸೇರುತ್ತವೆ. ಈ ಕ್ಷೇತ್ರ ಶಬ್ದದ ಘೋಷ (ಲೌಡ್‌ನೆಸ್) ಮತ್ತು ಶ್ರುತಿಗಳನ್ನು (ಪಿಚ್) ಶಬ್ದೋತ್ಪತ್ತಿಯ ಆಕರ ಗುರುತಿಸುವ ವಿಶಿಷ್ಟ ಗುಣವನ್ನು (ಕ್ವಾಲಿಟಿ) ಅನುಭವಕ್ಕೆ ತರುವುದು. ಇದರ ಪಕ್ಕಹಾಲೆಯ ಮೇಲುನುಲಿಕೆಯಲ್ಲಿ ಶ್ರವಣ ಮಾನಸಿಕ ಕ್ಷೇತ್ರವಿದೆ. ಇದರಿಂದ ಕೇಳಿದ ಶಬ್ದದ ಅರ್ಥವಿಸುವಿಕೆ (ಅಂದರೆ ಶಬ್ದದ ಉತ್ಪತ್ತಿ ಸ್ಥಾನ ಮತ್ತು ಅದರ ಪ್ರಾಮುಖ್ಯ) ಸಾಧ್ಯವಾಗುತ್ತದೆ.



ಮಾನವ ಮೆದುಳಿನ ಪಾರ್ಶ್ವನೋಟ

ಮಹಾಮಸ್ತಿಷ್ಕದ ಪ್ರತಿಯೊಂದು ಗೋಳಾರ್ಧದ ಮಧ್ಯದಲ್ಲೂ ದ್ರವದಿಂದ ಭರ್ತಿ ಆಗಿರುವ ಕುಳಿ (ಕುಹರ) ಇದೆ. ಇವಕ್ಕೆ ಮಿದುಳಿನ ಪಕ್ಕ ಕುಳಿಗಳೆಂದು (ಕುಹರ) (ಲ್ಯಾಟರಲ್ ವೆಂಟ್ರಿಕಲ್ಸ್) 1ನೆ ಮತ್ತು 3ನೆ ಮಿದುಳುಕುಳಿಗಳೆಂದು (ಕುಹರ) ಹೆಸರು.

ಕುಹರಭಿತ್ತಿಯಲ್ಲಿರುವ ವಿಶಿಷ್ಟ ಕೋಶಾಚ್ಛಾದಿತ ಲೋಮನಾಳ ಗೊಂಚಲುಗಳಿಂದ ಈ ದ್ರವ ನಿರಂತರವಾಗಿ ಉತ್ಪತ್ತಿ ಆಗುತ್ತದೆ. ಎರಡು ಪಕ್ಕ ಕುಹರಗಳನ್ನು ಪರಸ್ಪರ ಸೇರಿಸುವ ಅಂತರ್ಕುಹರ ರಂಧ್ರ (ಇಂಟರ್‌ವೆಂಟ್ರಿಕ್ಯುಲರ್ ಫೊರಾಮೆನ್) ಇದೆ. ಇದೇ ರಂಧ್ರ ಎರಡು ಕುಹರಗಳ ಅಡಿಯಲ್ಲಿ ನಡುಮಧ್ಯದಲ್ಲಿರುವ ಮಿದುಳಿನ 3ನೆಯ ಕುಹರಕ್ಕೆ ತೆರೆದುಕೊಳ್ಳುವಂತೆ ಮಾಡುತ್ತದೆ. ಪಕ್ಕ ಕುಹರಗಳಲ್ಲಿ ದ್ರವವನ್ನು ಸ್ರವಿಸುವ ರಕ್ತನಾಳ ಗೊಂಚಲು ಈ ರಂಧ್ರದ ಮೂಲಕ 3ನೆಯ ಕುಹರದ ಒಳಗೂ ಪಸರಿಸಿದೆ.

ಮಹಾಮಸ್ತಿಷ್ಕದ ಬಿಳಿವಸ್ತು ಬೂದುವಸ್ತುವಿನ ಅಡಿಯಲ್ಲಿ ಎಲ್ಲ ಕಡೆ ಇದೆ. ಇದರಲ್ಲಿ ಬಿಳಿ ನರತಂತುಗಳೇ ಪ್ರಧಾನ ಘಟಕಗಳು. ಈ ಹಿಂದೆ ಹೇಳಿರುವಂತೆ ತಿರುಳಿನಂತಿರುವ ಈ ಬಿಳಿ ವಸ್ತುವಿನಲ್ಲಿ ಬೂದುಬಣ್ಣದ ಗುಂಬಗಳಿವೆ. ಇವಕ್ಕೆ ಅಡಿಗುಂಬಗಳು (ಬೇಸಲ್ ನ್ಯೂಕ್ಲಿಯೈ) ಎಂದು ಹೆಸರು. ಇವುಗಳಲ್ಲಿ ಮುಖ್ಯವಾದ್ದದು ಅಡಿಗಂಬ ಗೆರೆಕಾಯ (ಕಾರ್ಪಸ್ ಸ್ಟ್ರೈಯೇಟಮ್). ಇದು ಎರಡು ಭಾಗಗಳಿಂದಾಗಿದೆ. ದೇಹ ಮಧ್ಯಗೆರೆ ಕಡೆಗೆ ಇರುವುದು ಬಾಲಗುಂಬ (ಕಾಡೇಟ್ ನ್ಯೂಕ್ಲಿಯಸ್), ಹೊರಗೆ ಇರುವುದು ಮಸೂರಿಕಗುಂಬ (ಲೆಂಟಿಫಾರಮ್ ನ್ಯೂಕ್ಲಿಯಸ್). ಇವೆರಡರ ನಡುವೆ ಬಿಳಿ ನರತಂತುಗಳಿಂದ ರಚಿತವಾದ ಬಿಳಿ ವಸ್ತುವಾಗಿ ಒಳಕವಚ ಇದೆ (ಇಂಟರ್ನಲ್ ಕ್ಯಾಪ್ಸೂಲ್). ಇದರ ಮೂಲಕವೇ ಮಹಾಮಸ್ತಿಷ್ಕದ ಗೋಳಾರ್ಧವನ್ನು ದೇಹದ ಇನ್ನೊಂದು ಪಾರ್ಶ್ವದೊಡನೆ ಸಂಬಂಧಿಸುವ ಎಲ್ಲ ಜ್ಞಾನವಾಹಿ ಹಾಗೂ ಕ್ರಿಯಾವಾಹಿ ನರತಂತುಗಳು ಹಾಯುವುವು. ಬಲು ಕಿರಿದಾದ ಈ ಸ್ಥಳದಲ್ಲಿ ವ್ಯಾಪಕ ಹಾಗೂ ಪ್ರಮುಖ ನರತಂತುಗಳು ಸಾಗುವುದರಿಂದ ಈ ಸ್ಥಳದಲ್ಲಿ ಅಲ್ಪ ರಕ್ತಸ್ರಾವದಂಥ ಆಘಾತವಾದರೂ, ಪ್ರಾಣನಾಶ ಆಗುವುದು. ಮಸೂರಿಕ ಗುಂಬದಲ್ಲಿ ಪುಟಮೆನ್ ಎಂಬ ದೊಡ್ಡ ಹೊರಭಾಗ ಹಾಗು ಗ್ಲೋಬಸ್ ಪ್ಯಾಲಿಡಸ್ (ಬಿಳಿಗುಂಬ) ಎಂಬ ಒಳಭಾಗವಿದೆ. ಬಾಲಗುಂಬ ಮಹಾಮಸ್ತಿಷ್ಕದಲ್ಲಿ ಪಕ್ಕ ಕುಹರದ ಭಿತ್ತಿಯನ್ನು ಉಬ್ಬಿಸುತ್ತದೆ. ಈ ಗುಂಬದಲ್ಲಿ ತಲೆ, ಕಾಯ ಮತ್ತು ಬಾಲಗಳನ್ನು ಗುರುತಿಸಬಹುದು. ಬಾಲ ಅದರ ಮುಂದೆಯೇ ಇರುವ ಬಾದಾಮಿಗುಂಬದಲ್ಲಿ (ಅಮಿಗ್ದಲಿಸ್) ಅಂತ್ಯಗೊಳ್ಳುತ್ತದೆ. ಪುಟಮೆನ್ನಿನ ಹೊರಭಾಗದಲ್ಲಿ ಹೊರಕವಚ (ಎಕ್ಸ್‌ಟರ್ನಲ್ ಕ್ಯಾಪ್ಸೂಲ್) ಮತ್ತು ತೆಳುಗಂಬ ಇವೆ. ಒಳಕವಚ, ಹೊರಕವಚಗಳು ಮಸೂರಿಕ ಗುಂಬದ ಒಳ ಮತ್ತು ಹೊರ ಕವಚಗಳೇ ಆಗಿವೆ. ಈ ಗುಂಬಗಳ ಕ್ರಿಯೆ ನಿರ್ದಿಷ್ಟವಾಗಿಲ್ಲ.

ವಾಸನೆ ಮಿದುಳು (ರೈನೆನ್‌ಸೆಫಲಾನ್): ಇದು ಮಹಾಮಸ್ತಿಷ್ಕದಲ್ಲಿ ಕ್ರಿಯೆಗೆ ಅನುಗುಣವಾಗಿ ವಿಂಗಡಿಸಬಹುದಾದ ಒಂದು ಭಾಗ. ಕೆಳದರ್ಜೆ ಪ್ರಾಣಿಗಳಲ್ಲಿ, ಅದರಲ್ಲೂ ಜೀವಕ್ರಿಯೆಯಲ್ಲಿ, ವಾಸನೆ ಪ್ರಮುಖ ಸಂವೇದನೆಯಾಗಿರುವ ಪ್ರಾಣಿ ಪಂಗಡಗಳಲ್ಲಿ ಇದು ಮುಖ್ಯವಾಗಿದೆ. ಮಾನವನಲ್ಲಿ ವಾಸನೆ ಮುಖ್ಯ ಸಂವೇದನೆಯಾಗದಿದ್ದರೂ, ಅದರಿಂದ ದೇಹಕ್ರಿಯೆಗೆ ಗಮನೀಯ ಮಾಹಿತಿ ದೊರೆಯದೆ, ಮಾನಸಿಕವಾಗಿ ಅದು ವ್ಯಕ್ತಿಯನ್ನು ಪ್ರಚೋದಿಸಬಹುದಾಗಿದೆ. ವಾಸನೆ ಮಿದುಳು ಮಹಾಮಸ್ತಿಷ್ಕದಲ್ಲಿ ಒಂದಕ್ಕೊಂದು ಸಂಪರ್ಕಿಸಿ ವ್ಯಾಪಕವಾಗಿರುವ 7 ಭಾಗಗಳಿಂದಾಗಿದೆ. ವಾಸನೆಗೆಡ್ಡೆ (ಅಲ್‌ಫ್ಯಾಕ್ಟರಿ ಬ್ರ್ಯಾಕ್ಟ್, ಸ್ಟ್ರೈಯ), ರಂಧ್ರಗಳ ಮುಂದಿನ ವಸ್ತು (ಪರ್ಫೊರೇಟೆಡ್ ಏರಿಯ), ಸೀಬೆಹಣ್ಣುರೂಪದ ಸ್ಥಳಿ (ಪೈರಿಫಾರಮ್ ಏರಿಯ). ಕಡಲ್‌ಗುದುರೆ (ಹಿಪ್ಪೋಕ್ಯಾಮ್‌ಪಸ್), ಪಾರ್ಶ್ವಘ್ರಾಣ ಕೇಂದ್ರಗಳು (ಲ್ಯಾಟರಲ್ ಆಲ್‌ಫ್ಯಾಕ್ಟರಿ ಏರಿಯ), ಕಮಾನು (ಲಿಂಬಸ್) ಇವು ವಾಸನೆಗೆ ಸಂಬಂಧಪಟ್ಟಿವೆ.

ವಾಸನೆಗೆಡ್ಡೆ ಜಾಲರಾಸ್ಥಿಯ ಜರಡಿರೇಖೆಯ ಮೇಲೆ (ಕ್ರಿಬ್ರಿಫಾರಮ್ ಪ್ಲೇಟ್ ಆಫ್ ಎತ್‌ಮಾಯ್ಡ್ ಬೋನ್) ಇದೆ. ವಾಸನೆ ನರದ (1ನೆ ತಲೆನರ, ಆಲ್‌ಫ್ಯಾಕ್ಟರಿನರ್ವ್) ಸು.20 ನರತಂತು ಕಟ್ಟುಗಳು ಜರಡಿಯಲ್ಲಿ ತೂರಿ ಗೆಡ್ಡೆಯನ್ನು ಇಲ್ಲಿಂದ ನರತಂತುಗಳು ಹೊರಟು ಘ್ರಾಣಮಾರ್ಗವಾಗಿ ಮಸ್ತಿಷ್ಕದ ಹಣೆಹಾಲೆಯನ್ನು ಸೇರುತ್ತವೆ. ಬೆಕ್ಕಿನಲ್ಲಿ ವಿದ್ಯುತ್ ಪ್ರಚೋದನೆಗಳಿಂದ ವಿಚಿತ್ರ ಪರಿಣಾಮಗಳಾಗುವುದನ್ನು ತೋರಿಸಿದ್ದಾರೆ. ಬಾದಾಮಿಗುಂಬದ ಕೆಳಭಾಗದ ಚೋದನೆಯಿಂದ ಕಾಲುಗಳನ್ನು ಮಡಿಸಿ ನಡೆಯುವುದು, ನೆಕ್ಕಿ ಮೂಸಿ ಆಗಿಯುವುದು. ಕಮ್ಮಿ ಉಸಿರಾಟ, ಐಚ್ಛಿಕ ಸ್ನಾಯುಗಳ ಸ್ವಯಂಚಾಲನೆ. ಪಾಪೆಗಳು ದೊಡ್ಡದಾಗುವುದು, ಜೊಲ್ಲುಸುರಿಕೆ, ಮಲಮೂತ್ರ ವಿಸರ್ಜನೆ ಮತ್ತು ರೋಮಾಂಚನ ಕಂಡುಬರುತ್ತವೆ. ಪಾರ್ಶ್ವಘ್ರಾಣ ಕೇಂದ್ರಗಳ ಚೋದನೆಯಿಂದ ಎದುರು ಹಾಗೂ ಪಕ್ಕದಲ್ಲಿ ಹುಡುಕಾಡುವ ಚಲನೆಗಳು, ತಬ್ಬಿಬ್ಬಾಗುವುದು, ಕಾತರತೆ, ಕೆಲವು ವೇಳೆ ಭಯ, ಕೋಪ, ಉಗ್ರತೆ ಇವು ವಿವಿಧವಾಗಿ ಕಂಡುಬರುತ್ತವೆ. ಮಾನವನಲ್ಲಿ ಈ ಮಿದುಳು ಭಾಗ ರೋಗಗ್ರಸ್ಥವಾದರೆ ದುರ್ವಾಸನೆಗಳ ಭ್ರಾಂತಿ ಆಗುತ್ತದೆ. ರುಚಿಗಳ ಭ್ರಾಂತಿಯು ಉಂಟಾಗಬಹುದು. ಸುಮ್ಮನೆ ಆಗಿಯುವುದು, ತುಟಿಯಾಡಿಸಿ ಚಪ್ಪರಿಸುವುದು ಇವು ಕಾಣಬರಬಹುದು. ಕನಸಿನಲ್ಲಿ ಏನೋ ಆದಂತೆ ಭ್ರಮಣೆ ಆಗುವುದು.

ಥೆಲಮಸ್: ಭ್ರೂಣದ ಮುಮ್ಮಿದುಳಿನ ಇನ್ನೊಂದು ಮುಖ್ಯಭಾಗ. ಇದು ಮಹಾಮಸ್ತಿಷ್ಕದ ಅಡಿಯಲ್ಲಿ ಅಂಡಾಕಾರ ಕಾಯ. ಮಿಕ್ಕ ಮಿದುಳಿನ ಭಾಗಗಳಂತೆಯೇ ಇದು ಕಣಸಮೃದ್ಧಿಯಾಗಿರುವ ಹೊರಬೂದುವಸ್ತುವಿನಿಂದಲೂ, ಬಿಳಿನರತಂತುಗಳು ಸಮೃದ್ಧಿಯಾಗಿರುವ ಒಳ ಬಿಳಿ ವಸ್ತುವಿನಿಂದಲೂ ರಚಿತವಾಗಿದೆ. ಇದರ ಅಗ್ರ ಎಲ್ಲೆ ದೃಷ್ಟಿನರಗಳ ಕತ್ತರಿ (ಆಪ್ಟಿಕ್ ಕೈಯಾಸ್ಮ), ಅಂತ್ಯ ನಡುಮಿದುಳಿನ ಭಾಗಗಳಾದ ಚತುಷ್ಕಾಯಗಳು (ಕಾರ್ಪೋರ ಕ್ವಾಡ್ರಿಜೆಮ್ಮೈನ). ಇದು ದೇಹದ ಎಲ್ಲ ಭಾಗಗಳಿಂದಲು ಸಂವೇದನೆಗಳನ್ನು ಗ್ರಹಿಸುವುದಾದರೂ, ಅವು ಅರಿವಿಗೆ ಬರುವುದಿಲ್ಲ, ಆದರೆ ಅಗತ್ಯ ಪ್ರತಿಕ್ರಿಯೆಗಳನ್ನು ಥೆಲಮಸ್ ಮಾಡುತ್ತದೆ. ಇವು ಸ್ಥೂಲ ಪ್ರತಿಕ್ರಿಯೆಗಳಾಗಿಯು, ಅನೈಚ್ಛಿಕ ಪ್ರತಿಕ್ರಿಯೆಗಳಾಗಿಯು ಇರುತ್ತವೆ. ಥೆಲಮಸ್ಸಿನ ಒಳಗೆ 3ನೆಯ ಮಿದುಳುಕುಳಿ ಭಾಗಶಃ ಇದೆ. ಥೆಲಮಸ್ಸಿನ ಮೇಲೆ ಮಂಡಿಸಿರುವ ಮಹಾಮಸ್ತಿಷ್ಕ ಭಾಗದ ಒಳಗೆ 1 ಮತ್ತು 2ನೆ ಮಿದುಳು ಕುಳಿ (ಕುಹರ) ಆಯಾ ಗೋಳಾರ್ಧದಲ್ಲಿದೆ. ಥೆಲಮಸ್ಸಿನ ಬಿಳಿ ತಿರುಳಿನಲ್ಲಿ ಅನೇಕ ಗುಂಬಗಳು ವಿಶಿಷ್ಟ ಗುಂಪುಗಳಾಗಿ ಕಂಡು ಬರುತ್ತವೆ. ಒಳ ಮತ್ತು ಹೊರ ಜಾನುಕಾಯಗಳು (ಮೀಡಿಯಲ್ ಅಂಡ್ ಲ್ಯಾಟರಲ್ ಜೈನಿಕ್ಯುಲೇಟ್ ಬಾಡೀಸ್) ಆನುಷಂಗಿಕ ಭಾಗಗಳಂತೆ ಕಂಡು ಬಂದರು ವಾಸ್ತವವಾಗಿ ಥೆಲಮಸ್ಸಿನ ಭಾಗಗಳೇ ಆಗಿವೆ. ಥೆಲಮಸ್ಸಿನ ಬೆನ್ನುಭಾಗದಲ್ಲಿ (ಡಾರ್ಸಮ್) ಎಪಿಥೆಲಮಸ್ ಅಥವಾ ಪೈನಿಯಲ್ ಕಾಯ ಇದೆ. ಅಳಿದು ಹೋಗಿರುವ ಅನೇಕ ಕೆಳದರ್ಜೆ ಪ್ರಾಣಿಜಾತಿಗಳಲ್ಲಿ ಮತ್ತು ಹಾಲಿ ಒಂದೇ (ಸರೀಸೃಪಕ್ಕೆ ಸೇರಿದ) ಪ್ರಾಣಿಯಲ್ಲಿ ಇದು ಬುರುಡೆಯ ಹೊರಕ್ಕೆ ಚಾಚಿಕೊಂಡಿದ್ದು ಅದರ ಮೇಲೆ ಕ್ರಿಯಾಶೀಲವಾದ ಒಂದು ಕಣ್ಣು ಇದೆ. ಥೆಲಮಸ್ಸಿನ ಅಡಿಯಲ್ಲಿರುವ ಮಿದುಳು ಭಾಗ ಹೈಪೊಥೆಲಮಸ್. ಹೈಪೊಥೆಲಮಸ್ಸಿನ ತಳಕ್ಕೆ ಪಿಟುಟರಿ ಕಾಯ ತೊಟ್ಟಿನಿಂದ ಅಂಟಿಕೊಂಡಿದೆ.

ಮಧ್ಯಮಿದುಳು (ಮಿಡ್ ಬ್ರೆಯ್ನ್): ಥೆಲಮಸ್ಸಿಗು, ಸೇತುವೆಗು (ಪ್ರಾನ್ಸ್) ನಡುವೆ ಇರುವ ಮಿದುಳು ಭಾಗ. ಇದನ್ನು ನಡು ಮಿದುಳು ಎಂದು ಕರೆಯುವರು. ಇದರ ಕೆಳಚಾಚಾಗಿರುವ ಮೆಡ್ಯುಲವು ಸೇರಿ ಮಿದುಳು ಕಾಂಡ (ಬ್ರೆಯ್ನ್‌ಸ್ಟೆಮ್) ಆಗುತ್ತದೆ. ಥೆಲಮಸ್ ಮಿದುಳು ಪೀಠ ಅದರ ಮೇಲೆ ಪ್ರತಿಷ್ಠಿತವಾಗಿ ಮಹಾಮಸ್ತಿಷ್ಕವಿದೆ. ನಡುಮಿದುಳಿನ ಒಳಗೆ ಸಿಲ್ವಿಯಸ್ಸಿನ ನಾಲೆ (ಅಕ್ವಿಡಕ್ಟಸ್ ಸಿಲ್ವಿಯಸ್) ಇದ್ದು, ಇದು ಮೇಲಿನ 3ನೆಯ ಕುಹರವನ್ನು ಕೆಳಗಿನ 4ನೆಯ ಕುಹರಕ್ಕೆ ಜೋಡಿಸುತ್ತದೆ. ಇದರಲ್ಲಿ ಮಿದುಳು ದ್ರವ ತುಂಬಿಕೊಂಡಿದೆ. ನಡುಮಿದುಳಿನಲ್ಲಿ ನಾಲೆಯ ಮುಂಭಾಗ ವಸ್ತುವಿಗೆ ಮಹಾ ಮಸ್ತಿಷ್ಕದ ಅಡಿತೊಟ್ಟು (ಎಡ, ಬಲ ಎರಡು–ಸೆರಿಬ್ರಲ್ ಪಿಡಂಕಲ್ಸ್) ಎಂದು ನಾಲೆಯ ಹಿಂಭಾಗ ವಸ್ತುವಿಗೆ ಚತುಷ್ಕಾಯ (ಕಾಯ ಚತುಷ್ಟಯ–ಕಾರ್ಪೋರ ಕ್ವಾಡ್ರಿಜೆಮ್ಮೈನ) ಎಂದೂ ಹೆಸರು. ಚತುಷ್ಕಾಯದಲ್ಲಿ ಮೇಲಿನ ಜೊತೆ ಕಣ್ಣುಗಳೂ, ಕೆಳಗಿನ ಜೊತೆ ಕಿವಿಗಳೂ ಸಂಬಂಧಿತವಾಗಿವೆ. ಮೇಲಿನ ಜೊತೆ ಇರುವ ಮಟ್ಟದಲ್ಲೇ ನಡುಮಿದುಳಿನಲ್ಲಿ 4ನೆಯ ತಲೆ ನರದ ಗುಂಬವಿದೆ.

ಲಘುಮಸ್ತಿಷ್ಕ (ಸೆರಿಬೆಲ್ಲಮ್): ಕಿರಿಮಸ್ತಿಷ್ಕ ಪರ್ಯಾಯನಾಮ. ಮಿದುಳಿನ ಈ ಭಾಗ ಬುರುಡೆಯ ತಳದಲ್ಲಿ ಕಾಣುವ ಹಿಂದಿನ ಕುಳಿಯಲ್ಲಿ ಅಡಕವಾಗಿದೆ. ಇದರ ತೂಕ ಮಹಾಮಸ್ತಿಷ್ಕದ 1/8 ರಷ್ಟು. ಅಂದರೆ, ಸು. 150 ಗ್ರಾಂ. ಇದರ ಮೈಮೇಲೆ ಅಡ್ಡಡ್ಡವಾಗಿ ಅನೇಕ ಸಮದೂರ ಗೆರೆಗಳು, ಅವುಗಳ ನಡುವೆ ಉಬ್ಬಿಕೊಂಡಿರುವ ಕಿರುಹಾಲೆಗಳಿವೆ. ಬಲು ಹೆಚ್ಚು ಸಂಖ್ಯೆಯಲ್ಲಿರುವ ಈ ಕಿರುಹಾಲೆಗಳಿಂದಾಗಿ ಕಿರಿಮಸ್ತಿಷ್ಕದ ಮೇಲ್ಮೈ ವಿಸ್ತೀರ್ಣ ಅಗಾಧವಾಗಿದೆ. ಮಹಾಮಸ್ತಿಷ್ಕದ ಗಾತ್ರದಲ್ಲಿ ಕೇವಲ 1/20ರಷ್ಟು ಮಾತ್ರ ಲಘುಮಸ್ತಿಷ್ಕದ ಗಾತ್ರ ಇದ್ದರೂ, ಅದರ ಮೇಲ್ಮೈ ವಿಸ್ತೀರ್ಣ ಮಹಾಮಸ್ತಿಷ್ಕದ 1/6 ರಷ್ಟಿದೆ. ಮಿದುಳಿನ ಮಾಮೂಲು ರಚನೆಯಂತೆ ಲಘುಮಸ್ತಿಷ್ಕದಲ್ಲಿ ಹೊರವಸ್ತುವಿನ ಬಣ್ಣ ಬೂದು, ಒಳವಸ್ತುವಿನದು ಬಿಳಿ. ಇವುಗಳಲ್ಲಿ ಅನುಕ್ರಮವಾಗಿ ಕಣಬಾಹುಳ್ಯ ಮತ್ತು ತಂತುಬಾಹುಳ್ಯ ಕಾಣಬಹುದು. ಇವನ್ನು ಕೂಡಿಸುವ ತಂತುಗಳು ಆಯಾಕಾರ ಕಂಡಿಗಳುಳ್ಳ ಜಾಲರಿಯಂತೆ ಏರ್ಪಟ್ಟಿವೆ. ಇಷ್ಟು ನಿಕಟವಾಗಿ ಸಂಬಂಧಗೊಂಡಿದ್ದು ಒಂದು ಕಣದಿಂದ ಅನೇಕ ಕಣಗಳು ಪ್ರಭಾವಿಸಲ್ಪಡುವುದು ಲಘುಮಸ್ತಿಷ್ಕದ ಕ್ರಿಯಾಚರಣೆಗೆ ಕಾರಣ. ಈ ಕಣಗಳನ್ನು ಬಂದು ಸೇರುವ ಮತ್ತು ಇವುಗಳಿಂದ ಹೊರಡುವ ಬಿಳಿ ನರತಂತುಗಳು ಲಘುಮಸ್ತಿಷ್ಕದ ಒಳವಸ್ತುವಾಗಿದ್ದು ಇವು ಲಘುಮಸ್ತಿಷ್ಕವನ್ನು ಮಹಾಮಸ್ತಿಷ್ಕಕ್ಕೂ ಮಿದುಳು ಬಳ್ಳಿಗೂ ಸಂಪರ್ಕಿಸುತ್ತವೆ.

ಲಘುಮಸ್ತಿಷ್ಕದ ಕ್ರಿಯೆ ಮುಖ್ಯವಾಗಿ ಎರಡು. ಒಂದನೆಯದು ವ್ಯಕ್ತಿಯ ನೆಟ್ಟನೆ ನಿಲವನ್ನು ಕಾಪಾಡುವುದು. ಎರಡನೆಯದು ಐಚ್ಛಿಕ ಚಲನೆಗಳು ಸಮರ್ಪಕವಾಗಿ ನೆರವೇರುವಂತೆ (ಸಂಬಂಧಿಸಿದ ಸ್ನಾಯುಗಳೆಲ್ಲ ಯುಕ್ತ ರೀತಿಯಲ್ಲಿ ಸಂಕೋಚಿಸಿ ವಿಕಸಿಸುವಂತೆ) ಅವುಗಳಲ್ಲಿ ಪರಸ್ಪರ ಸುಸಂಘಟನೆ (ಕೊ-ಆರ್ಡಿನೇಷನ್) ಕಾಪಾಡುವುದು.

ಹಿರಿಮಸ್ತಿಷ್ಕದ ಕ್ರಿಯೆಯಿಂದ ಪ್ರಾರಂಭವಾಗುವ ಐಚ್ಛಿಕ ಚಲನೆಯ ಮಾಹಿತಿ ಮಿದುಳುಬಳ್ಳಿಯ ಮೂಲಕ ಸಂಬಂಧಪಟ್ಟ ನರಗಳಿಗೆ ತಲಪುವಾಗಲೇ ಲಘುಮಸ್ತಿಷ್ಕಕ್ಕೂ ತಲಪುತ್ತದೆ. ಇದರಂತೆ ಸ್ನಾಯುಗಳು ಸಂಕುಚಿಸುತ್ತಿರುವ ಮಾಹಿತಿ ವಾಪಸ್ಸು ಮಿದುಳುಬಳ್ಳಿ ಮಹಾಮಸಿಷ್ಕಗಳಿಗೆ ಹೋಗುತ್ತಿರುವಾಗಲೇ ಲಘುಮಸ್ತಿಷ್ಕಕ್ಕೂ ಹೋಗುತ್ತದೆ. ಉದ್ದಿಷ್ಟ ಕ್ರಿಯೆ ಸಮರ್ಪಕವಾಗಿ ನಡೆಯಬೇಕಾದರೆ ಹೋಗುವ ಮತ್ತು ಬರುವ ಎರಡು ರೀತಿಯ ಮಾಹಿತಿಗಳನ್ನು ಹೋಲಿಸಿ ತಾಳೆಯಾಗದಿದ್ದರೆ ಹಾಗೆ ಬರುವಂಥ ಮಾರ್ಪಾಡು ಮಾಡಬೇಕು. ಅಂದರೆ, ಹಿರಿಮಸ್ತಿಷ್ಕದಿಂದ ಪುನಃ ಐಚ್ಛಿಕ ಸ್ನಾಯುಗಳಿಗೆ ಸಕ್ರಮಗೊಳಿಸುವ ಮಾಹಿತಿಗಳು ಒದಗಬೇಕು. ಉದ್ದಿಷ್ಟ ಚಲನೆ ಆಯಿತೇ ಇಲ್ಲವೇ ಎಂದು ತುಲನೆಮಾಡಿ ಹಾಗೆ ಆಗುವಂತೆ ಕ್ರಮಗೊಳಿಸುವುದೇ ಕಿರಿಮಸ್ತಿಷ್ಕದ ಕ್ರಿಯೆ. ತುಲನೆಗೆ ಬೇಕಾದ ಮಾಹಿತಿಗಳೆರಡು ಇದಕ್ಕೆ ಒದಗುತ್ತವೆ. ಅದರಂತೆ, ಇಚ್ಛಿತ ಕ್ರಿಯೆ ಸಫಲವಾಗಲು ಸಾಧನವಾಗಿದೆ.

ಲಘುಮಸ್ತಿಷ್ಕದ ಕ್ರಿಯೆ ಕೆಟ್ಟಿದ್ದರೆ ದೇಹದ ಸಮತೋಲ ಕಾಯ್ದುಕೊಳ್ಳುವುದು ಕಷ್ಟ. ಇಚ್ಛಿತ ಕಾರ್ಯವನ್ನು ಸಫಲವಾಗಿ ಮಾಡಲು ಆಗುವುದಿಲ್ಲ. ವಾಸ್ತವವಾಗಿ ಇಂಥ ಲಕ್ಷಣಗಳಿಂದಲೇ ಲಘುಮಸ್ತಿಷ್ಕ ವ್ಯಾಧಿಗ್ರಸ್ತವಾಗಿರಬೇಕು ಎಂದು ನಿರ್ಣಯಿಸಲಾಗುತ್ತದೆ.

ಲಘುಮಸ್ತಿಷ್ಕ ಭ್ರೂಣದ ಹಿಮ್ಮಿದುಳಿನ (ಹೈಂಡ್ ಬ್ರೈನ್) ಭಾಗವಾಗಿ ವಿಕಸಿಸಿರುವಂತೆಯೇ ಮೆಡ್ಯುಲ (ಮಿದುಳಿನ ಮರ್ಮಭಾಗ–ವೈಟಲ್ ಬಲ್ಬ್) ಮತ್ತು ಸೇತುಗಳಾಗಿಯು (ಪಾನ್ಸ್) ವಿಕಾಸಿಸಿದೆ. ಮೆಡುಲ್ಲ ಮಿದುಳಿನ ಅಂತ್ಯಭಾಗ ಬುರುಡೆಯತಳದ ದೊಡ್ಡರಂಧ್ರದ (ಫೊರಾಮೆನ್ ಮ್ಯಾಗ್ನಮ್) ಮೂಲಕ ಬೆನ್ನುಮೂಳೆ ನಾಳದ ಒಳಕ್ಕೆ ಇಳಿದು ಮಿದುಳು ಬಳ್ಳಿ ಆಗುತ್ತದೆ. ಇದರ ಮುಂದಿನಭಾಗ ಆಳವಾಗಿದ್ದು ಅದಕ್ಕೂ ಮೇಲೆ ಹೊದ್ದಿರುವ ಮಿದುಳು ಪೊರೆಗು ನಡುವೆ ಇರುವ ಸ್ಥಳಕ್ಕೆ ಮಿದುಳಿನ ನಾಲ್ಕನೆಯ ಕುಹರ (ಫೋರ್ತ್ ವೆಂಟ್ರಿಕಲ್) ಎಂಬ ಹೆಸರಿದೆ. ಇದು ನಡು ಮಿದುಳಿನಲ್ಲಿರುವ ಅಕ್ವಿಡಕ್ಟ್ ಆಫ್ ಸಿಲ್ವಿಯಸ್ಸಿನ ಮೂಲಕ ಮೆದುಳಿನ 3ನೆಯ ಕುಹರದೊಡನೆ ಐಕ್ಯವಾಗುವುದು. 4ನೆಯ ಕುಹರ ವಜ್ರಾಕೃತಿಯಂತಿದ್ದು, ಅದರ 2 ಪಕ್ಕ ಮೂಲೆಗಳಲ್ಲೂ, ಕೆಳಮಧ್ಯದಲ್ಲೂ ರಂಧ್ರಗಳಿವೆ. ಇವಕ್ಕೆ ಅನುಕ್ರಮವಾಗಿ ಲಷ್ಕನ ರಂಧ್ರಗಳು ಮತ್ತು ಮೆಜೆಂಡಿಯ ರಂಧ್ರಗಳೆಂದು ಹೆಸರು. ಇವುಗಳ ಮೂಲಕ 4ನೆಯ ಕುಹರದಲ್ಲಿರುವ ಮಿದುಳು ದ್ರವ ಮಿದುಳುಬಳ್ಳಿಗೂ, ಮಿದುಳುಬಳ್ಳಿ ಪೊರೆಗೂ, ನಡುವೆ ಇರುವ ಮಿದುಳುಪೊರೆ ದ್ರವದೊಡನೆ ಐಕ್ಯವಾಗಿದೆ. ಅಂದರೆ, ಮಿದುಳಿನ ಕುಹರಗಳಲ್ಲಿರುವ ದ್ರವವೇ ಮಿದುಳುಬಳ್ಳಿಯನ್ನು ಆವರಿಸಿರುತ್ತದೆ. ಆದ್ದರಿಂದ, ಒಟ್ಟಿನಲ್ಲಿ ಈ ದ್ರವವನ್ನು ಮಿದುಳು–ಮಿದುಳು ಬಳ್ಳಿದ್ರವ (ಸೆರಿಬ್ರೊಸ್ಪೈನಲ್ ಫ್ಲೂಯಿಡ್) ಎಂದು ಹೆಸರಿಸಲಾಗಿದೆ. ಮೆಡ್ಯುಲದಲ್ಲಿ ಹೊರವಸ್ತುವಿನ ಬಣ್ಣ ಬೂದು ಒಳವಸ್ತುವಿನದು ಬಿಳಿ. ಆದರೆ, ಮೆಜೆಂಡಿಯ ರಂಧ್ರವನ್ನು ತೂರಿ ಮಿದುಳು ಬಳ್ಳಿ ಆದಾಗ ಅದರಲ್ಲಿ ಬಿಳಿ ವಸ್ತು ಹೊರಗೂ, ಬೂದುವಸ್ತು ಒಳಗೂ ಇರುವುದನ್ನು ನೋಡಬಹುದು. ಮೆಡ್ಯುಲದಲ್ಲಿ ಆಲಿವ್ ಎಂಬ ನರಗುಂಬವಿದೆ. ಅಲ್ಲದೆ 8, 9, 10, 11, 12ನೆ ತಲೆನರಗಳ ಗುಂಬಗಳು ಹಣೆಚರ್ಮಕ್ಕೆ ಪೂರೈಕೆ ಆಗುವ 5ನೆ ತಲೆನರಕ್ಕೆ ಸೇರಿದ ತಂತುಗಳ ಗುಂಬವು ಮೆಡ್ಯುಲದ ಒಳ ಬಿಳಿ ವಸ್ತುವಿನಲ್ಲಿ ಅಡಗಿವೆ.

ಸೇತು ಮೆಡ್ಯುಲದ ಮೇಲೆ (ಅಗ್ರದಲ್ಲಿ) ಇರುವ ಭಾಗ, ಗುರುಮಸ್ತಿಷ್ಕ ಲಘುಮಸ್ತಿಷ್ಕ ಮತ್ತು ಮಿದುಳು ಬಳ್ಳಿಗಳೊಡನೆ ಪರಸ್ಪರ ಸಂಬಂಧ ಕಲ್ಪಿಸುವ ನರತಂತುಗಳ ಕಂತೆಗಳಿಂದಾಗಿದೆ. 6, 7, 8ನೆ ತಲೆನರಗಳ ಗುಂಬಗಳು ಸೇತುವಿನ ಒಳಗೆ ಇವೆ.

***

**ಮಿದುಳು ಜ್ವರ:** ವಿಷಾಣು ಸೋಂಕು ಮತ್ತಿತರ ಕಾರಣಗಳಿಂದ ಮಿದುಳಿನ ಉರಿಊತ ಉಂಟಾಗಿ, ಜ್ವರ ಬರುವ ಸ್ಥಿತಿ. ಆಂಗ್ಲ ಭಾಷೆಯಲ್ಲಿ ಎನ್‌ಸಿಫಲೈಟಿಸ್, ಬ್ರೆಯ್ನ್ ಫೀವರ್ ಎನ್ನುವರು. ಸೋಂಕಿನಿಂದ ಬರುವ ಮಿದುಳುಜ್ವರ (ಅಕ್ಯೂಟ್). ಕೆಲವು ಬಗೆಯ ವೈರಸ್ಸುಗಳು ಸೊಳ್ಳೆಗಳ ಮುಖಾಂತರ ಮಾನವನ ದೇಹ ಸೇರುತ್ತದೆ. ರಕ್ತಹೀರುವ ಕ್ರಿಮಿಕೀಟಗಳ ಹೆಚ್ಚುವಿಕೆಯಿಂದ ದೇಹವನ್ನು ಪ್ರವೇಶಿಸಿ, ರಕ್ತಪರಿಚಲನೆಯ ಮೂಲಕ ಮಿದುಳನ್ನು ಸೇರಿ ಅಲ್ಲಿ ಉರಿಊತವನ್ನು ಉಂಟುಮಾಡುತ್ತವೆ. ಸಾಮಾನ್ಯವಾಗಿ ಜ್ವರ ಬರುತ್ತದೆ. ಜೊತೆಗೆ ತಲೆನೋವು, ಓಕರಿಕೆ, ವಮನ, ಕಣ್ಣುಕತ್ತಲೆ ಬರುವುದು, ಅದಿರುವಾಯು (ಕನ್‌ವಲ್ಷನ್), ಸಂವೇದನ ನಾಶ ಮತ್ತು ಮುಖ್ಯವಾಗಿ ರುಂಡಕ್ಕೆ ಸೀಮಿತವಾದ ಪಕ್ಷಾಘಾತ ಕಾಣಬರುತ್ತವೆ. ಈ ಕೊನೆಸಂದರ್ಭದ ಫಲವಾಗಿ ದ್ವಂದ್ವ ದೃಷ್ಟಿ (ಡಿಪ್ಲೋಪಿಯ), ಮೆಳ್ಳೆಗಣ್ಣು, ದೃಷ್ಟಿ ಚುರುಕುನಾಶ ಪರಿಣಮಿಸುತ್ತವೆ.

ಶಿಶುಗಳಲ್ಲಿ ಹಾಗೂ ಬಾಲಕ ಬಾಲಕಿಯರಲ್ಲಿ ರೋಗ ತೀವ್ರವಾಗಿಯೇ ಕಂಡುಬರುತ್ತದೆ. ಅನಂತರ, ಒಂದೆರಡು ದಿವಸಗಳಲ್ಲಿ ಸಾವು ಸಂಭವಿಸುತ್ತದೆ. ರೋಗಿಗಳು ಜಡತೆ, ಆಲಸ್ಯ, ಮಂಪರು, ವಾರಗಟ್ಟಲೆ ಜ್ಞಾನತಪ್ಪಿದ ಸ್ಥಿತಿಯಲ್ಲಿ ಮೃತರಾಗುತ್ತಾರೆ. ಬದುಕಿದರೆ ಬುದ್ಧಿಮಾಂದ್ಯ, ಅಪಸ್ಮಾರ, ಐಚ್ಛಿಕ ಹತೋಟಿನಾಶ ಕಂಡುಬರುತ್ತದೆ. ಕೆಲವು ವಾರಗಳ ತರುವಾಯ ಹಠಾತ್ತಾಗಿ ಸ್ಥಿತಿ ಗೆಟ್ಟು ಮರಣ ಸಂಭವಿಸುವುದು. ಒಟ್ಟಿನಲ್ಲಿ ರೋಗಿಗಳ ಪೈಕಿ ಬಹು ಪಾಲು ವ್ಯಕ್ತಿಗಳು ಮೃತರಾಗುವ ಸಂಭವವಿದೆ. ಬದುಕಿದ ವ್ಯಕ್ತಿಗಳ ಮಾನಸಿಕ ಕ್ರಿಯೆಯಲ್ಲಿ ಮೂಲಭೂತ ವ್ಯತ್ಯಾಸಗಳು ಕಂಡುಬರುತ್ತವೆ.

ತಲೆ ಮತ್ತು ಕೈನಡುಕ ಕಂಡುಬಂದು ಕ್ರಮೇಣ ಅಲ್ಲಿಯ ಮಾಂಸಗಳ ಸ್ವಾಧೀನ ತಪ್ಪಿ ಮುಖದಲ್ಲಿ ಭಾವನಾ ಶೂನ್ಯಸ್ಥಿತಿ ಕಂಡುಬರುತ್ತದೆ. ಇಂಥ ಸ್ಥಿತಿಗೆ ಪಾರ್ಕಿನ್ಸನ್ನನ ಲಕ್ಷಣ ಕೂಟ (ಸಿಂಡ್ರೋಮ್) ಅಥವಾ ರೋಗ ಎಂಬ ಹೆಸರೂ ಇದೆ.

1979 ರಿಂದ ಕರ್ನಾಟಕದಲ್ಲಿ ಪಿಡುಗಾಗಿ ಹರಡಿರುವ ಈ ಜ್ವರ ಜಪಾನೀಸ್ ಬಿ–ಎನ್‌ಸಿಫಲೈಟಿಸ್ ಎಂಬ ಹೆಸರಿನದು. ಹೆಸರೆ ಹೇಳುವಂತೆ, ಇದು ಜಪಾನ್, ಚೀನಾ ಮತ್ತು ನೆರೆರಾಷ್ಟ್ರಗಳಾದ ಮಂಚೂರಿಯ, ರಷ್ಯಾದಿಂದ ಭಾರತಕ್ಕೆ ಬಂದಿದೆ. ಭಾರತದಲ್ಲಿ 1955ರಲ್ಲಿ ಮೊದಲ ಬಾರಿ ಈ ರೋಗದ ಪತ್ತೆ ಆಯಿತು. ಅಂದಿನಿಂದ ಭಾರತದ ಬಿಹಾರ, ಪಶ್ಚಿಮಬಂಗಾಲ, ಉತ್ತರ ಪ್ರದೇಶದ ಪೂರ್ವಭಾಗ, ತಮಿಳುನಾಡು, ಕೇರಳ ಮುಂತಾದೆಡೆ ಆಗೊಮ್ಮೆ ಈಗೊಮ್ಮೆ ಇದು ಸಾಂಕ್ರಾಮಿಕ ರೋಗವಾಗಿ ಪೀಡಿಸಿದೆ. ಮಳೆಗಾಲದಲ್ಲಿ ಸೊಳ್ಳೆಗಳು ಹೆಚ್ಚಾಗಿರುವ 2–3 ತಿಂಗಳು (ಆಗಸ್ಟ್ – ನವಂಬರ್ ತಿಂಗಳುಗಳು) ಈ ರೋಗ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ತಪ್ಪದೆ ಪ್ರತಿ ವರ್ಷ ಕಂಡುಬರುತ್ತದೆ. ಮುಖ್ಯವಾಗಿ ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತಿದೆ.

ಮಿದುಳುರೋಗ ಮೂಲಭೂತವಾಗಿ ಹಂದಿಗಳ ರೋಗ. ಹಂದಿಯಿಂದ ಹಂದಿಗೆ ಸೊಳ್ಳೆಗಳ ಕಡಿತದಿಂದ ಹರಡುತ್ತದೆ. ಹಂದಿಗಳ ರಕ್ತ ಹೀರಿ ಬದುಕುವ ಸೊಳ್ಳೆಗಳು, ಆಕಸ್ಮಾತ್ತಾಗಿ ಮನುಷ್ಯರನ್ನು ಕಡಿದಾಗ ಆ ವ್ಯಕ್ತಿಯಲ್ಲಿ ವಿಷಾಣುವಿನ ಸೋಂಕುಂಟಾಗಿ ಅವರಿಗೆ ಮಿದುಳುಜ್ವರ ಬರುತ್ತದೆ. ಈ ಸೊಳ್ಳೆಗಳು ಹೀಗೆಯೇ ಬೇರೆ ಪ್ರಾಣಿಗಳನ್ನು ಕಡಿದಾಗ ಅವುಗಳಲ್ಲಿ ವಿಷಾಣುಗಳು ಊರ್ಜಿತವಾಗುವುದಿಲ್ಲ ಆದ್ದರಿಂದ ಈ ಪ್ರಾಣಿಗಳಿಗೆ ರೋಗ ಬರುವುದಿಲ್ಲ. ಅವು ಈ ರೋಗದ ಆಕರಗಳು ಆಗುವುದಿಲ್ಲ. ವಿಚಿತ್ರವೆಂದರೆ ಮನುಷ್ಯರಿಂದ ಮನುಷ್ಯರಿಗೆ ಈ ಸೊಳ್ಳೆ ಕಡಿತದಿಂದ ಈ ರೋಗ ಹರಡುವುದಿಲ್ಲ.

ಮಿದುಳು ರೋಗಕ್ಕೆ ಉತ್ತಮ ಚಿಕಿತ್ಸೆ ಅಗತ್ಯ. ಇಲ್ಲದಿದ್ದರೆ, ರೋಗ ಮಾರಕವಾಗಬಹುದು. ಶಾಮಕ ಔಷಧಗಳಿಂದ ಜ್ವರ, ಮಿದುಳಿನ ಉರಿಯೂತ, ಅನೈಚ್ಛಿಕ ಚಟುವಟಿಕೆಗಳನ್ನು ಕಡಿಮೆ ಮಾಡಬೇಕು. ರೋಗ ದೀರ್ಘಕಾಲಿಕದಾಗಿದ್ದಾಗ ಶ್ವಾಸಾಂಗ ಅನ್ನಾಂಗಗಳ ಕ್ರಿಯೆಗೆ ತೊಂದರೆ ಉಂಟಾದರೆ, ಅಗತ್ಯ ಔಷದಿಗಳನ್ನು ನೀಡಬೇಕು. ಮಲಮೂತ್ರಗಳನ್ನು ಸಕ್ರಮವಾಗಿಟ್ಟಿರುವಿಕೆ, ದೀರ್ಘಕಾಲ ಮಲಗಿಯೇ ಇರಬೇಕಾಗಿರುವುದರಿಂದ ತತ್ಫಲವಾಗಿ ಶಯನವ್ರಣವಾಗದಂತೆ ಎಚ್ಚರ ವಹಿಸುವುದು ಅಗತ್ಯ. ಸೊಳ್ಳೆ ನಿರ್ಮೂಲನ, ಹಂದಿಗಳನ್ನು ಜನವಾಸಸ್ಥಳದಿಂದ ದೂರವಾಗಿಡುವುದು ಹಾಗೂ ರೋಗ ನಿವಾರಣ ಲಸಿಕೆಯನ್ನು ಚುಚ್ಚುಮದ್ದಾಗಿ ಜನರಿಗೆ ಕೊಡುವುದರಿಂದ ಈ ರೋಗದ ಬಾಧೆಯನ್ನು ಕಡಿಮೆಗೊಳಿಸಬಹುದು.

ಬೇರೆ ರೋಗಗಳು ಬಂದಾಗ, ಇದು ಒಂದು ಜಟಿಲತೆಯಾಗಿ ಕಂಡುಬರುವ ಸಾಧ್ಯತೆ ಇದೆ. ಸಂಧಿವಾತ, ಜ್ವರ, ಇನ್‌ಫ್ಲೂಯೆಂಜಾ, ರೂಬೆಲ್ಲ, ಡೆಂಗೆ ಜ್ವರ, ದಡಾರ, ಸೀತಾಳೆ ಸಿಡುಬು, ಪೀತಜ್ವರಗಳುಂಟಾದಾಗ, ಮಿದುಳು ಉರಿ ಮತ್ತು ಜ್ವರ ಬರುವುದಿದೆ. ಸಾಮಾನ್ಯವಾಗಿ ಪ್ರಧಾನ ರೋಗ ಹತೋಟಿಗೆ ಬಂದರೆ, ಇಂಥ ಮಿದುಳು ಜ್ವರವು ವಾಸಿ ಆಗುತ್ತದೆ. ಆದರೆ, ಕೆಲವು ಸಂದರ್ಭಗಳಲ್ಲಿ ಇಂಥ ಸ್ಥಿತಿಗಳಲ್ಲಿ ಪಕ್ಷಾಘಾತಗಳಂಥ ಪರಿಣಾಮಗಳು ಮಿದುಳು ರೋಗದ ಅವಶೇಷವಾಗಿ ಉಳಿದುಕೊಳ್ಳುವ ಸಂಭವವಿದೆ. ಸಿಡುಬು ರೋಗಕ್ಕಾಗಿ ಮುಂಚೆ ನಿವಾರಣ ಲಸಿಕೆಯನ್ನು ಹಾಕುತ್ತಿದ್ದ (ವ್ಯಾಕ್ಸಿನೇಷನ್) ಕಾಲದಲ್ಲಿ ಅಪರೂಪವಾಗಿ ಕೆಲವರಲ್ಲಿ ಇದರಿಂದ ಮಿದುಳುಜ್ವರ ಉಂಟಾಗಿ ಮಾರಕವು ಆಗುತ್ತಿತ್ತು. (ಎಸ್.ಆರ್.ಆರ್.)

**ಮಿದುಳು ಬಳ್ಳಿ:** ಬೆನ್ನುಮೂಳೆಯಲ್ಲಿ ಸುರಕ್ಷಿತವಾಗಿ ಅಡಕವಾಗಿರುವ ಕೇಂದ್ರ ನರಮಂಡಲ ಭಾಗ (ಸ್ಪೈನಲ್ ಕಾರ್ಡ್). ಇದು ಬಿಳಿ ಬೆಣ್ಣೆಯಂತೆ ಮೃದುವಾಗಿದ್ದು, ಬೆನ್ನುಮೂಳೆಯಲ್ಲಿ ಕಿರುಬೆರಳುಗಾತ್ರದ ಹಗ್ಗದಂತಿದ್ದು, ಸೂಕ್ಷ್ಮವಾಗಿದೆ. ಇದರ ಉದ್ದ ಸು. 45 ಸೆಂಮೀ. ತೂಕ ಸುಮಾರು 30 ಗ್ರಾಂ. ಸುತ್ತಳತೆ 33–38 ಮಿಮೀ. ಗಂಡಸರ ಮಿದುಳು ಬಳ್ಳಿಯ ಸರಾಸರಿ ಉದ್ದಕ್ಕಿಂತ, ಹೆಂಗಸರ ಮಿದುಳು ಬಳ್ಳಿಯ ಸರಾಸರಿ ಉದ್ದ ಕಡಿಮೆ.

ಇದು ಬೆನ್ನಿನ ಮಧ್ಯದಲ್ಲಿ ತಲೆಬುರುಡೆಯ ಕೆಳಗಿನಿಂದ ಉದರದ ಮೊದಲ ಕಶೇರುವಿನ ಮಟ್ಟದವರೆಗೆ ಇದೆ. ಇದು ಮತ್ತು ಇದರ ಕೆಳಭಾಗದಿಂದ ಹೊರಟು ಕುದುರೆಬಾಲದಂತಿರುವ ನರಗಳ ಗೊಂಚಲು ಒಂದರ ಮೇಲೊಂದಿರುವ 20 ಬೆನ್ನು ಮಣಿ ಕಶೇರುಗಳ ರಂಧ್ರಗಳ ಸಾಲಿನಿಂದ ರಚಿತವಾದ ಕೊಳವೆಯಲ್ಲಿವೆ.

ಬಗ್ಗಿದರೆ ಇದರ ಮೊನಚಾದ ಕೆಳಕೊನೆ ಸ್ವಲ್ಪ ಮೇಲಕ್ಕೇರುತ್ತದೆ. ಇದರ ಮೇಲು ಕೊನೆಯ ಭಾಗ ಮೆಡ್ಯುಲ ಆಬ್ಲಾಂಗೇಟ. ಇದು ಮಸ್ತಿಷ್ಕದ ಮುಂದುವರಿದ ಭಾಗವೇ ಆಗಿದೆ.

ಬಳ್ಳಿಯ ಸುತ್ತಲು ಮೂರು ಪೊರೆಗಳಿವೆ. ಹೊರಪೊರೆ (ಬಾಹ್ಯಪಟಲ) ಸುಲಭವಾಗಿ ಹರಿಯದಷ್ಟು ಬಿಗಿಯಾಗಿದೆ. ಮಧ್ಯದ ಪೊರೆ ಜೇಡ ಬಲೆಯಂತೆ ನವುರಾದ ಎಳೆಗಳಿಂದಾಗಿದೆ. ಒಳಪೊರೆ ತೆಳುವಾಗಿ ಬಳ್ಳಿಯ ಹೊರಮೈಗೆ ಅಂಟಿಕೊಂಡಿದೆ. ಇದರಿಂದ ಹೊರಚಾಚಿಕೊಂಡು ಗರಗಸದ ಹಲ್ಲಿನಂಥ 21 ಚಾಚುಗಳು, ಮಿದುಳು ಬಳ್ಳಿಯ ಪ್ರತಿ ಪಾರ್ಶ್ವವನ್ನು ಬೆನ್ನುಮೂಳೆನಾಳಕ್ಕೆ ಅಂಟಿಸಿ, ಬಳ್ಳಿಯನ್ನು ಹೆಚ್ಚು ಅಲುಗದಂತೆ ಹಿಡಿದಿವೆ. ಬಳ್ಳಿಯ ಕೆಳಕೊನೆಯಿಂದ ಒಳಪೊರೆಯ ಎಳೆ, ಕೆಳಕ್ಕೆ ಹೊರಟು ಗುದಾಸ್ಥಿಗೆ ಅಂಟಿಕೊಂಡು ಬಳ್ಳಿಯನ್ನು ಹಿಡಿದಿದೆ. ಹೊರ ಮತ್ತು ಒಳಪೊರೆಗಳ ನಡುವೆ ಬಲೆಯಂತಿರುವ ಮಧ್ಯಪೊರೆಯ ಅವಕಾಶದಲ್ಲಿರುವ ಮಸ್ತಿಷ್ಕದೊಳಗಿನ ರಕ್ತನಾಳಗಳ ಗೊಂಚಲುಗಳಿಂದ ಸ್ರವಿಸುವ ಮಸ್ತಿಷ್ಕಜಲದಲ್ಲಿ ಬಳ್ಳಿ ತೇಲುವಂಥ ವ್ಯವಸ್ಥೆಯಿದ್ದು, ಬಳ್ಳಿಯ ರಕ್ಷಣೆ ಹೆಚ್ಚಿದೆ.



ಮಿದುಳು ಬಳ್ಳಿ

ಒಟ್ಟು 31 ಜೊತೆ ಬೆನ್ನು ನರಗಳು ಈ ಬಳ್ಳಿಯಿಂದ ಹುಟ್ಟುತ್ತವೆ. ಇವುಗಳ ಪೈಕಿ 8 ಜೊತೆ ಕತ್ತಿನ ನರಗಳು 12 ಜೊತೆ ವಕ್ಷನರಗಳು, 5 ಜೊತೆ ಉದರ ನರಗಳು, 5 ಜೊತೆ ಶ್ರೋಣಿ ನರಗಳು ಮತ್ತು 1 ಜೊತೆ ಗುದಪ್ರದೇಶ ನರಗಳು. ಪ್ರತಿಯೊಂದು ನರಕ್ಕೂ 2 ಬೇರುಗಳಿವೆ. ಮುಂದಿನ ಬೇರು ಸ್ನಾಯು ಸಂಕೋಚಕ, ಹಿಂದಿನ ಬೇರಿಗೆ ಇಂದ್ರಿಯಸಂವೇದಕ ಚರ್ಮ ಮತ್ತು ಒಳ ಅಂಗಗಳ ಅರಿವು ಕೊಡುವ ಕ್ರಿಯೆ ಇದೆ. ಇದರಲ್ಲಿ ಒಂದು ಗಂಟು ಇದೆ. ಕೆಳ 4 ಕತ್ತಿನ ನರಗಳು ತೋಳಿನಲ್ಲೂ ಉದರದ ಮತ್ತು ಶ್ರೋಣಿಯ ನರಗಳು ಹೊಟ್ಟೆ, ಕಿಬ್ಬೊಟ್ಟೆ ಮತ್ತು ಹೆಚ್ಚಾಗಿ ಕಾಲಿನಲ್ಲೂ ವ್ಯಾಪಿಸಿವೆ. 10ನೆಯ ವಕ್ಷ ನರದ ಶಾಖೆಗಳು ಓರೆಯಾದ ಪಟ್ಟಿಯಂಥ ಪ್ರದೇಶದಲ್ಲಿ ಹೊಕ್ಕಳಿನವರೆಗೂ ವ್ಯಾಪಿಸುತ್ತವೆ. ಇದೇ ರೀತಿ ಇತರ ನರಗಳು ಬೇರೆ ಬೇರೆ ಮಟ್ಟಗಳಲ್ಲಿ ಹರಡುತ್ತವೆ.



ಮಿದುಳು ಬಳ್ಳಿಯ ಅಡ್ಡ ಸೀಳಿಕೆ

ವಕ್ಷಭಾಗದಲ್ಲಿ ಬಳ್ಳಿ ಸಲಾಕಿಯಂತೆ ದುಂಡಾಗಿದೆ. ತೋಳುನರಗಳು ಹೊರಡುವ ಕೆಳಕತ್ತಿನ ಭಾಗ ಮತ್ತು ಕಾಲಿನ ನರಗಳು ಹೊರಡುವ ಸೊಂಟ ಮತ್ತು ಶ್ರೋಣಿಯ ಭಾಗಗಳು ಮಿಕ್ಕ ಭಾಗಗಳಿಗಿಂತ ಸ್ವಲ್ಪ ದಪ್ಪವಾಗಿ ಅಂಡಾಕಾರವಾಗಿವೆ. ಇವುಗಳ ಅಡ್ಡವ್ಯಾಸ ಹೆಚ್ಚಾಗಿದೆ.

ಅಡ್ಡಕೊಯ್ದ ಬಳ್ಳಿಯ ಹೋಳುಗಳನ್ನು ಪರೀಕ್ಷಿಸಿದರೆ, ಮಧ್ಯೆ ಹೆಚ್ ಆಕಾರದ ಬೂದುಭಾಗವಿದೆ. ಇದರ ಸುತ್ತಲು ಬಿಳಿಯ ಭಾಗವಿದೆ. ಬೂದುಭಾಗದಲ್ಲಿ ಮುಂದಿನ ಪಕ್ಕದ ಮತ್ತು ಹಿಂದಿನ ಎರಡೆರಡು ಕೊಂಬು(ಕಂಬ)ಗಳಿವೆ. ಅಡ್ಡಕೊಯ್ತದಲ್ಲಿ ಈ ಆಕಾರವಿದ್ದರೂ, ವಾಸ್ತವವಾಗಿ ಇದು ಮಿದುಳುಬಳ್ಳಿಯ ಉದ್ದಕ್ಕೂ ಇರುವ ರಚನೆ. ಎಡ ಹಾಗೂ ಬಲ ಅರ್ಧಗಳಲ್ಲಿ ಇರುವ ಮತ್ತು ಅಡ್ಡಕೊಯ್ತದಲ್ಲಿ ಚಂದ್ರಲೇಖೆಯಂತಿರುವ ರಚನೆಗಳನ್ನು ಉದ್ದಕ್ಕೂ ಮಧ್ಯದಲ್ಲಿ ಕೂಡಿಸುವ ಭಾಗಗಳನ್ನು ಒಳಗೊಂಡಿರುವುದು. ಬೂದುಭಾಗದಲ್ಲಿ ವಿಶೇಷವಾಗಿ ನರಕಣಗಳನ್ನು ಬಿಳಿಭಾಗದಲ್ಲಿ ವಿಶೇಷವಾಗಿ ನರತಂತುಗಳನ್ನು, ಸೂಕ್ಷ್ಮದರ್ಶಕದಲ್ಲಿ ನೋಡಬಹುದು. ಕೋಶಗಳ ಸಂಖ್ಯೆ ಬಳ್ಳಿಯಲ್ಲಿ ಕೋಟ್ಯಾಂತರ. ಬಿಳಿಯ ಭಾಗ ವಿಶೇಷ ರೀತಿಯ ಮೇದಸ್ಸಿನಿಂದ ಬೆಳ್ಳಗಿದೆ. ಇದರಲ್ಲಿ ಕಣಗಳಲ್ಲದೆ ಕೋಟ್ಯಾಂತರ ನರತಂತುಗಳ (ಎಳೆ) ಕಟ್ಟುಗಳಿವೆ. ಒಂದೊಂದು ಎಳೆಗೂ ಬಲು ತೆಳುವಾದ ಮೇದಸ್ಸಿನ ಕವಚವಿದೆ. ಕಾರಣ, ಈ ಭಾಗ ಬೆಳ್ಳಗಿದೆ.

ಮುಂದಿನ ಬೂದು ಕೊಂಬುಗಳಲ್ಲಿ ಗಸಗಸೆಯ ಕಾಲುಭಾಗದಷ್ಟಿರುವ ನರಕಣಗಳಿವೆ. ಇವು ಸ್ನಾಯು ಸಂಕೋಚಿಗಳು. ಕ್ರಿಯಾತ್ಮಕ ಕೋಶಗಳು ಇವುಗಳಿಂದ ಬಾಲದಂತೆ ಹೊರಟ ಸೂಕ್ಷ್ಮನರತಂತುಗಳಿಂದಲೇ ಬೆನ್ನು ನರಗಳ ಮುಂದಿನ ಬೇರುಗಳ ರಚನೆಯಾಗಿರುವುದು. ಇಂದ್ರಿಯ ಸಂವೇದಕ ತಂತುಗಳು ಚರ್ಮ, ಕೀಲು, ಸ್ನಾಯು ಮತ್ತು ಇತರ ಅಂಗಗಳಿಂದ ಹೊರಟು ಮೊದಲು ಹಿಂದಿನ ಬೇರಿನಲ್ಲಿರುವ ಅಂಡಾಕಾರದ ಕಣಗಳನ್ನು ಸೇರುತ್ತವೆ. ಇವುಗಳಿಂದ ಹೊರಟ ತಂತುಗಳು ಹಿಂದಿನ ಕೊಂಬಿನಲ್ಲಿರುವ ಸಣ್ಣ ಕಣಗಳನ್ನು ಸೇರುತ್ತವೆ. ಈ ಕಣಗಳ ತಂತುಗಳು ಹಿಂದಿನ ಮತ್ತು ಪಕ್ಕದ ಬಿಳಿಕಂಬಗಳಲ್ಲಿ ಸೇರಿ ಮಸ್ತಿಷ್ಕದಲ್ಲಿ ಬೇರೆ ಬೇರೆ ಮಟ್ಟಗಳಲ್ಲಿ ಕಣಗಳನ್ನು ಮುಟ್ಟುತ್ತವೆ. ಮುಂದೆ ಈ ಕಣಗಳ ತಂತುಗಳು ಮಸ್ತಿಷ್ಕದ ಮೇಲ್ಮೈಯನ್ನು ಸೇರುತ್ತವೆ. ಇಲ್ಲಿಯ ಕಣಗಳ ತಂತುಗಳು ಸ್ನಾಯು ಚಾಲಕ ವಿಭಾಗವನ್ನು ತಲಪಿ, ಅಲ್ಲಿಂದ ಹೊರಟ ತಂತುಗಳು ಬೆನ್ನು ಬಳ್ಳಿಯ ಮುಂದಿನ ಕೊಂಬಿನಲ್ಲಿ ಬೇರೆ ಬೇರೆ ಮಟ್ಟಗಳಲ್ಲಿರುವ ಸಂಕೋಚಕ ಕಣಗಳನ್ನು ಚೋದಿಸಿ ಇವುಗಳ ಮೂಲಕ ಅನುಗುಣವಾದ ಸ್ನಾಯುಗಳು ಸಂಕುಚಿಸುವಂತೆ ಮಾಡುತ್ತವೆ. ವ್ಯಕ್ತಿ ಕೈ ಕೆಲಸ ಮಾಡಬೇಕಾದಾಗ ಆ ಇಚ್ಛೆ ಮಿದುಳಿನಲ್ಲಿ ಹುಟ್ಟಿ ಅಲ್ಲಿಂದ ಕೆಳಕ್ಕಿಳಿಯುವ ತಂತುಗಳಲ್ಲಿ ಚೋದಕಶಕ್ತಿ ಪ್ರವಾಹ ಹರಿದು ಮಿದುಳುಬಳ್ಳಿಯ ಕೆಳಕತ್ತಿನ ಭಾಗದ ಮುಂದಿನ ಕೊಂಬುಗಳಲ್ಲಿರುವ ಕಣಗಳನ್ನು ಚೋದಿಸಿ ಇವುಗಳಿಂದ ಹೊರಟ ಶಕ್ತಿ ಪ್ರವಾಹಗಳಿಂದ ತೋಳು ಮತ್ತು ಕೈಗಳ ಸ್ನಾಯುಗಳು ಯುಕ್ತವಾಗಿ ಸಂಕುಚಿಸುವಂತಾಗುತ್ತವೆ.

ಮಿದುಳು ಬಳ್ಳಿ ಅನೈಚ್ಛಿಕ ಆತ್ಮರಕ್ಷಣಾ ಶೀಘ್ರ ಪ್ರತಿಕ್ರಿಯೆಗಳ ಕೇಂದ್ರ (ಪ್ರೊಟೆಕ್ಟಿವ್ ರಿಫ್ಲೆಕ್ಸ್ ಸೆಂಟರ್). ಉದಾ: ಮುಳ್ಳುತುಳಿದರೆ ಅದು ನಮ್ಮ ಮನಸ್ಸಿಗೆ ಹತ್ತುವುದಕ್ಕೆ ಮೊದಲೇ ಕಾಲನ್ನು ಎತ್ತಿರುತ್ತೇವೆ. ಮುಳ್ಳು ಚುಚ್ಚಿದ ಸ್ಥಳದಿಂದ ಹೊರಡುವ ಸಂವೇದಕ ನರಗಳಲ್ಲಿ ಚೋದಕ ಶಕ್ತಿ ಪ್ರವಹಿಸಿ, ಸಂಬಂಧಿಸಿದ ಬೆನ್ನು ನರದ (ಒಂದನೆಯ ಶ್ರೋಣಿನರದ) ಹಿಂಬೇರು ಗಂಟಿನ ಕೆಲವು ಕಣಗಳನ್ನು ಚೋದಿಸುತ್ತದೆ. ಈ ಕಣಗಳಲ್ಲಿ ಹುಟ್ಟಿದ ಆವೇದನ ಆ ಮಟ್ಟದಲ್ಲಿ ಹಿಂದಿನ ಕೊಂಬಿನಲ್ಲಿರುವ ಕಣಗಳನ್ನು ಪ್ರಚೋದಿಸುತ್ತದೆ. ಇವು ಆ ಮಟ್ಟದ ಮುಂದಿನ ಕೊಂಬಿನ ಕಣಗಳನ್ನು ಪ್ರಚೋದಿಸಿ ಮುಳ್ಳುಚುಚ್ಚಿದ ಸಂಗತಿ ಅರಿವಿಗೆ ಬರುವಷ್ಟರಲ್ಲಿ ಕಾಲನ್ನು ಹಿಂದೆ ಎಳೆಯುವಂತೆ ಮಾಡುತ್ತವೆ. ನರತಂತುಗಳನ್ನು ದೂರವಾಣಿ ತಂತಿಗಳಿಗೆ ಹೋಲಿಸಿದರೆ ಮಿದುಳು ಬಳ್ಳಿಯನ್ನು ಒಂದು ದೂರವಾಣಿ ವಿನಿಮಯ ಕೇಂದ್ರಕ್ಕೆ ಹೋಲಿಸಬಹುದು. ಮಿದುಳು ಬಳ್ಳಿ ಒಂದು ಕಡೆ ದೇಹದ ಎಲ್ಲ ವಿಧದ ಸೂಕ್ಷ್ಮ ಭಾಗಗಳೊಡನೆ, ಮತ್ತೊಂದು ಕಡೆ ಕೇಂದ್ರ ಕಛೇರಿಯಂತಿರುವ ಮಿದುಳಿನೊಡನೆ ಸಂಬಂಧ ಪಡೆದಿದೆ.

ಮಿದುಳು ಬಳ್ಳಿಯ ನರತಂತು ಮಾರ್ಗಗಳ ಪೈಕಿ ಕೆಲವು ದೇಹದ ಭಾಗಗಳಿಂದ ಮಿದುಳಿಗೆ ಸುದ್ದಿ ಒಯ್ಯುವ ಆರೋಹಣಮಾರ್ಗಗಳು. ಮಿಕ್ಕವು ಮಿದುಳಿನಿಂದ ಕೆಳಕ್ಕೆ ಆಜ್ಞೆಗಳನ್ನು ಒಯ್ಯುವ ಅವರೋಹಣ ಮಾರ್ಗಗಳು.

ಹಿಂದಿನ ಬಿಳಿ ಕಂಬದಲ್ಲಿ ಒತ್ತಡ, ಕಂಪನ, ಚಲನಸ್ಥಿತಿ ಮತ್ತು ಸ್ಪರ್ಶನ ಸಮಾಚಾರಗಳನ್ನು ಒಯ್ಯುವ ಆರೋಹಣ ನರತಂತುಗಳಿವೆ. ಮಧ್ಯರೇಖೆಯ ನೇರದಿಂದ ಪಕ್ಕಕ್ಕೆ ಅನುಕ್ರಮವಾಗಿ ಕಾಲು, ಎದೆ ಮತ್ತು ತೋಳುಗಳಿಂದ ಬರುವ ಮಾರ್ಗಗಳಿವೆ.

ಪಕ್ಕದ ಬಿಳಿಕಂಬದಲ್ಲಿ ಒಂದು ಅವರೋಹಣ ಮತ್ತು 3 ಆರೋಹಣ ಮುಖ್ಯ ಮಾರ್ಗಗಳಿವೆ. ಇವುಗಳಲ್ಲಿ ಆ್ಯಂಟೀರಿಯರ್ ಸ್ಪೈನೊಸೆರಿಬೆಲ್ಲಾರ್ ಟ್ರ್ಯಾಕ್ಟ್ ಮತ್ತು ಪೋಸ್ಟೀರಿಯರ್ ಸ್ಪೈನೊಸೆರಿಬೆಲ್ಲಾರ್ ಟ್ರ್ಯಾಕ್ಟ್ ಎಂಬ ಆರೋಹಣ ಮಾರ್ಗಗಳು, ಸ್ನಾಯುಗಳು ಮತ್ತು ಕೀಲುಗಳಿಂದ ಹೊರಡುವ ಸಮಾಚಾರಗಳನ್ನು ಬಳ್ಳಿಯಿಂದ ಸೆರಿಬೆಲ್ಲಮ್ ಎಂಬ ಚಲನ ಸಾಮರಸ್ಯ ಕೇಂದ್ರವಾದ ಅನುಮಸ್ತಿಷ್ಕಕ್ಕೆ ಒಯ್ಯುತ್ತವೆ.

ಇವಕ್ಕೆ ಗಾಯವಾದರೆ ಅಥವಾ ರೋಗ ತಗಲಿದರೆ ಚಲನೆಗಳು ಇಚ್ಛಾನುಸಾರ ನಡೆದರೂ, ಇಚ್ಛೆ ಪೂರೈಕೆ ಆಗುವುದಿಲ್ಲ. ಮೂರನೆಯ ಆರೋಹಣ ಮಾರ್ಗವಾದ ಲ್ಯಾಟರಲ್ ಸ್ಪೈನೋತೆಲಮಿಕ್ ಟ್ರ್ಯಾಕ್ಟನಲ್ಲಿ ಶಾಖ ಮತ್ತು ನೋವುಗಳ ಸುದ್ದಿಗಳನ್ನು ತೆಲಮಸ್ ಎಂಬ ಮಿದುಳಿನ ಭಾಗಕ್ಕೆ ಒಯ್ಯುವ ತಂತುಗಳಿವೆ. ಲ್ಯಾಟರಲ್ ಸೆರಿಬ್ರೊಸ್ಪೈನಲ್ ಟ್ರ್ಯಾಕ್ಟ್ ಎಂಬ ಅವರೋಹಣ ಮಾರ್ಗ ಮಿದುಳಿನ ಇಚ್ಛಾಕೇಂದ್ರದಿಂದ ಬಳ್ಳಿಗೆ ಇಳಿದು ನಮ್ಮ ಇಚ್ಛೆಗೆ ಅನುಸಾರವಾಗಿ ದೇಹಭಾಗಗಳ ಚಲನೆಗಳನ್ನು ಉಂಟುಮಾಡುತ್ತದೆ. ಇದಕ್ಕೆ ರೋಗ ಅಥವಾ ಗಾಯವಾದರೆ ಅದೇ ಪಕ್ಕದಲ್ಲಿ ಪಾರ್ಶ್ವವಾಯು ಬಡಿಯುವುದು.

ಮುಂದಿನ ಬಿಳಿ ಕಂಬದಲ್ಲಿ ಆ್ಯಂಟೀರಿಯರ್ ಸೆರಿಬ್ರೊಸ್ಪೈನಲ್ ಟ್ರ್ಯಾಕ್ಟ್ ಎಂಬ ಇಚ್ಛಾಚಲನೆಗೆ ಸಂಬಂಧಿಸಿದ ಅವರೋಹಣ ಮಾರ್ಗವು ಆ್ಯಂಟೀರಿಯರ್ ಸ್ಪೈನೊತೆಲಮಿಕ್ ಟ್ರ್ಯಾಕ್ಟ್ ಎಂಬ ಸ್ಪರ್ಶ ಮತ್ತು ಒತ್ತಡದ ಸುದ್ದಿಗಳನ್ನು ಒಯ್ಯುವ ಆರೋಹಣ ಮಾರ್ಗವು ಮುಖ್ಯವಾದುವು. (ಎಂ.ಡಿ.)

**ಮಿರಿಡೆ:** ಹೆಮಿಪ್ಟರ ಗಣದ ಹೆಟರಾಪ್ಟರ ಉಪಗಣಕ್ಕೆ ಸೇರಿದ ಕೀಟ ಕುಟುಂಬ. ಒಟ್ಟು 43 ಕುಟುಂಬಗಳ ಪೈಕಿ ಇದು ಅತ್ಯಂತ ದೊಡ್ಡ ಕುಟುಂಬ. ಇದರಲ್ಲಿ ಸು. 600 ಜಾತಿಗಳು, 5,000 ಪ್ರಭೇದಗಳಿವೆ. ಇದನ್ನು ಕ್ಯಾಪ್ಸಿಡೆ ಎಂದು ಹೆಸರಿಸಿದ್ದಾರೆ. ಇದಕ್ಕೆ ಸೇರಿದ ಕೀಟಗಳನ್ನು ಗಿಡತಿಗಣೆ ಅಥವಾ ಎಲೆ ತಿಗಣೆ ಎಂದು ಕರೆಯುವರು. ಮೃದುಚರ್ಮದ ದೇಹ, ಅಸಿಲಸ್ ಇಲ್ಲದಿರುವುದು, ದೇಹಕ್ಕಿಂತ ದೊಡ್ಡಗಾತ್ರದ ಎಲಿಟ್ರ ರೆಕ್ಕೆಗಳು, ನಾಲ್ಕು ಖಂಡಗಳಿಂದ ರಚಿತವಾದ ಸ್ಪರ್ಶಾಂಗಗಳು, ತೆಳುವಾದ ಕಾಲುಗಳು, ನಯವಾದ ಹಾಗು ತ್ರಿಕೋನಾಕಾರದ ಸ್ಕುಟೆಲಮ್ ಈ ತಿಗಣೆಗಳ ಪ್ರಮುಖ ಲಕ್ಷಣಗಳು.



ಆರ್ಥಾಪ್ಸ್ ಕ್ಯಾಂಪೆಸ್ಟ್ರಿಸ್

ಬಹುತೇಕ ಪ್ರಭೇದಗಳು ಸಸ್ಯಾಹಾರಿಗಳು. ಬೇರೆ ಕೀಟಗಳನ್ನು ತಿಂದು ಜೀವಿಸುವ ಕೆಲವು ಪ್ರಭೇದಗಳಿವೆ. ಕೆಲವು ಪ್ರಭೇದದ ಕೀಟಗಳು ಮಿಶ್ರಹಾರಿಗಳು. ಇವು ಸಸ್ಯ ಪ್ರಾಣಿಗಳೆರಡನ್ನು ತಿನ್ನುತ್ತವೆ. ಸಾಲ್‌ಬರ್ಜೆಲ ಸಿಂಗ್ಯುಲೇರಿಸ್ ಪಶ್ಚಿಮ ಆಫ್ರಿಕದ ಕೋಕೊ ಗಿಡಗಳನ್ನು ತಿಂದು ಹಾಳು ಮಾಡಿ ರೈತರಿಗೆ ತುಂಬಾ ನಷ್ಟ ಮಾಡುತ್ತದೆ. ಕಿಯಾಂಬುರ ಕಾಫಿಯೈ ಪೂರ್ವ ಆಫ್ರಿಕದಲ್ಲಿ ಕಾಫಿಗಿಡಗಳಿಗೆ ಉಪದ್ರವವನ್ನುಂಟು ಮಾಡುತ್ತದೆ. ಯೂರೋಪಿನಲ್ಲಿ ಹಣ್ಣಿನ ಗಿಡಗಳ ಮೇಲೆ ಕ್ಯಾಲೋಕೋರಿಸ್ ಫಲ್ವೊಮ್ಯಾಕ್ಯುಲೇಟಸ್ ತಿಗಣೆ ವಾಸಿಸುತ್ತದೆ.



ಲೈಗೋಕೋರಿಸ್ ಪ್ಯಾಬುಲೈನಸ್



ಲೈಗಸ್ ರುಗುಲಿಪೆನ್ನಿಸ್

ಹೆಲೋಪೆಲ್ಟಿಸ್ ಜಾತಿ ತಿಗಣೆಗಳು ಭಾರತ, ಶ್ರೀಲಂಕಾ, ಮಲೇಷ್ಯ, ಆಫ್ರಿಕಗಳಲ್ಲಿ ಕ್ವಿನೀನು ಮರಗಳನ್ನು ಪೀಡಿಸುತ್ತವೆ. ಇವುಗಳ ಪೈಕಿ ಹೆಲೋಪೆಲ್ಟಿಸ್ ತಿವೋರು ಎಂಬುದು ಅಸ್ಸಾಮಿನ ಟೀ ತೋಟಗಳಲ್ಲಿ ಹೇರಳವಾಗಿದೆ. ಇದನ್ನು ಟೀ ಸೊಳ್ಳೆ ಎಂದು ಕರೆಯವರು. ಕರ್ನಾಟಕದಲ್ಲಿ ಮಹಾಗನಿ, ಬೇವು, ಟೀ, ಕೋಕೊ, ಸಿಂಕೋನ ಮರಗಳ ಮೇಲೆ ಹೆಲೋಪೆಲ್ಟಿಸ್ ಅಂಟೊನಿಯೈ ಹಾನಿಕಾರಕ ತಿಗಣೆ ವಾಸಿಸುತ್ತದೆ. ಅಂತೆಯೇ ಡಿಸ್‌ಫಿಂಕ್ಟಸ್ ಪಾಲಿಟನ್ ಎಂಬುದು ವೀಳೆಯದೆಲೆ ಬಳ್ಳಿಗಳಿಗೆ, ಕ್ಯಾಲೊಕೋರಿಸ್ ಆಂಗುಸ್ಟೇಟಸ್ ಜೋಳ ಮತ್ತು ಮುಸುಕಿನ ಜೋಳ ಸಸ್ಯಕ್ಕೆ, ಗ್ಯಾಲೊಬೆಲಿಕಸ್ ಕ್ರಾಸಿಯೊಕೋರಿಸ್ ತಂಬಾಕು ಗಿಡಗಳಿಗೆ ಹಾನಿ ಉಂಟು ಮಾಡುತ್ತವೆ.

ಉಪಕಾರಿ ತಿಗಣೆಗಳು: ಮಿರಿಡೆ ಕುಟುಂಬದ ಪರಭಕ್ಷಿ ತಿಗಣೆಗಳ ಪೈಕಿ ಯೂರೋಪಿನ ಡೆರಿಯೊ ಕೋರಿಸ್ ರೂಬರ್ ಎಂಬುದು ಏಫಿಡ್ ಕೀಟಗಳನ್ನು ತಿಂದು ಅವನ್ನು ನಿಯಂತ್ರಿಸುತ್ತದೆ. ಸಿರ್ಟೊರೈನಸ್ ಮುಂಡಲಸ್ ಕಬ್ಬಿನ ಬೆಳೆಗೆ ಬೀಳುವ ಮಿಡತೆಗಳನ್ನು ತಿಂದು ಉಪಕಾರವೆಸಗುತ್ತದೆ. ಅಂತೆಯೇ ಮ್ಯಾಲಗ್ಯಾಸೀ ದ್ವೀಪದಲ್ಲಿರುವ ಲಿಸೊಕ್ಯಾಪ್ಸಸ್ ವಾಸ್‌ಮ್ಯಾನಿಯೈ ಎಂಬುದು ಕ್ರೆಮಟೋಗ್ಯಾಸ್ಟರ್ ಕೀಟಗಳನ್ನು ತಿಂದು ಜೀವಿಸುತ್ತದೆ. (ಜೆ.ವಿ.ಎನ್.)

**ಮಿರಿಯಾಪೊಡ:** ಸಂಧಿಪದಿ ವಂಶದ ಒಂದು ವರ್ಗ. ಇದರಲ್ಲಿ ಶತಪದಿ, ಜರಿ ಅಥವಾ ಲಕ್ಷ್ಮಿಚೇಳು (ಸೆಂಟಿಪೀಡ್ಸ್) ಹಾಗೂ ಸಹಸ್ರಪದಿ ಅಥವಾ ಹೆಜ್ಜರಿ (ಮಿಲಿಪೀಡ್ಸ್) ಎಂಬ ಎರಡು ಬಗೆಯ ಪ್ರಾಣಿಗಳಿವೆ. ಶತಪದಿಗಳು ಕೈಲೊಪೊಡ ಉಪವರ್ಗಕ್ಕೂ, ಸಹಸ್ರ ಪದಿಗಳು ಡಿಪ್ಲೊಪೊಡ ವರ್ಗಕ್ಕೂ ಸೇರಿವೆ.

ಮಿರಿಯಾಪೊಡ ಗುಂಪಿನ ಪ್ರಾಣಿಗಳ ದೇಹ ಉದ್ದವಾಗಿದ್ದು, ಸದೃಶರಚನೆಯ ಅನೇಕ ಖಂಡಗಳಿಂದ ರಚಿತವಾಗಿದೆ. ಖಂಡಗಳ ಸಂಖ್ಯೆ ನಿರ್ದಿಷ್ಟವಾಗಿ ಮತ್ತು ನಿಯಮಿತವಾಗಿಲ್ಲ. ದೇಹವನ್ನು ತಲೆ ಮತ್ತು ಮುಂಡ (ಎದೆ) ಭಾಗವನ್ನಾಗಿ ವಿಭಾಗಿಸಲಾಗಿದೆ. ಮುಂಡದಲ್ಲಿ ಎದೆ ಮತ್ತು ಉದರಭಾಗಗಳಿಲ್ಲ. ತಲೆಯ ಭಾಗದಲ್ಲಿ ಒಂದು ಜೊತೆ ಕಣ್ಣುಗಳು, ಒಂದು ಜೊತೆ ಸ್ಪರ್ಶಾಂಗಗಳು ಹಾಗು ದವಡೆಗಳಿವೆ. ಉಸಿರಾಡಲು ನೆರವಾಗುವ ಶ್ವಾಸನಳಿಕೆಗಳು, ತ್ಯಾಜ್ಯ ವಸ್ತುಗಳನ್ನು ದೇಹದಿಂದ ಹೊರಹಾಕಲು ಮ್ಯಾಲ್ಪಿಘಿಯನ್ ನಳಿಕೆಗಳಿವೆ. ಜೀವನಚರಿತ್ರೆಯಲ್ಲಿ ನಿರ್ದಿಷ್ಟ ರೂಪಪರಿವರ್ತನೆ ಹಂತ ಕಂಡುಬರುವುದಿಲ್ಲ. ಇವು ಉಷ್ಣ ಹಾಗೂ ಸಮಶೀತೋಷ್ಣ ವಲಯಗಳಲ್ಲಿ, ತೇವಭರಿತ ಸ್ಥಳಗಳಲ್ಲಿ ವಾಸಿಸುತ್ತವೆ.

ಶತಪದಿಗಳಲ್ಲಿ ಸು. 3,000 ಪ್ರಭೇದಗಳಿವೆ. ಇವುಗಳ ಪೈಕಿ ಸ್ಕೋಲೊಪೆಂಡ್ರ ಎಂಬುದು ಸಾಮಾನ್ಯವಾದುದು. ಇದರ ದೇಹ ಚಪ್ಪಟೆಯಾಗಿದೆ. ಕ್ಯಾಲ್ಸಿಯಮ್ ಲವಣಗಳ ಸಂಗ್ರಹವಿಲ್ಲದ ಕಾರಣ, ಮೈಮೇಲಿನ ಕೈಟಿನ್ ಪದರ ಗಡುಸಾಗಿರದೆ ಮೃದುವಾಗಿ ಸ್ಥಿತಿಸ್ಥಾಪಕ ಗುಣಗಳಿಂದ ಕೂಡಿದ್ದು, ದೇಹ ಬಾಗಲು ಸಹಾಯಕವಾಗಿದೆ. ಇದು ಮಾಂಸಾಹಾರಿ ಮತ್ತು ನಿಶಾಚರಿ. ಇದು ವಿಷಜಂತು. ಇವು ಎರೆಹುಳು, ಜಿರಲೆ ಇತ್ಯಾದಿ ಕೀಟಗಳನ್ನು ತಿಂದು ಜೀವಿಸುತ್ತವೆ. ಅಮೆರಿಕದಲ್ಲಿರುವ 30 ಸೆಂಮೀ ಉದ್ದ ಬೆಳೆಯಬಲ್ಲ ದೈತ್ಯ ಶತಪದಿ ಸ್ಕೋಲೊಪೆಂಡ್ರ ಜೈಗಾಂಟಿಯಾ ಎಂಬುದು ಹಲ್ಲಿ, ಇಲಿಯಂತಹ ದೊಡ್ಡ ಪ್ರಾಣಿಗಳನ್ನು ಸುಲಭವಾಗಿ ಹಿಡಿದು ತಿನ್ನುತ್ತದೆ. ಶತಪದಿಗಳ ತಲೆಯ ಮೇಲೆ ಅಗಲವಾದ ಫಲಕವಿದೆ. ಪ್ರತಿಯೊಂದು ಖಂಡದಲ್ಲಿ ಒಂದು ಜೊತೆ ಕಾಲುಗಳಿವೆ. ಒಟ್ಟು ಕಾಲುಗಳ ಸಂಖ್ಯೆ 15–20 ಜೊತೆ. ಮೊದಲನೆಯ ಜೋಡಿಕಾಲು ವಿಷದ ನಖಗಳಾಗಿ, ರಕ್ಷಣೆ ಮತ್ತು ಭಕ್ಷಣೆಗೆ ಸಹಾಯಕವಾಗಿವೆ. ಜನನೇಂದ್ರಿಯ ದ್ವಾರ ದೇಹದ ಕೊನೆಯ ಭಾಗದಲ್ಲಿ ಸ್ಥಿತವಾಗಿದೆ. ಕೆಲವು ಶತಪದಿಗಳಿಗೆ ಸ್ಫುರ ಸಂದೀಪ್ತ ಸಾಮರ್ಥ್ಯವಿದೆ. ಶತಪದಿಗಳು ಭಿನ್ನಲಿಂಗಿಗಳು. ಮೊಟ್ಟೆಗಳನ್ನು ನೆಲದ ಬಿಲಗಳಲ್ಲಿಡುತ್ತವೆ.

ಸಹಸ್ರಪದಿಗಳಲ್ಲಿ ಸು. 8,000 ಪ್ರಭೇದಗಳಿವೆ. ಇವುಗಳ ಪೈಕಿ ಸು. 300 ಪ್ರಭೇದಗಳನ್ನು ಭಾರತದಲ್ಲಿ ಕಾಣಬಹುದು. ಸತ್ತ ಎಲೆ, ಕೊಳೆಯುತ್ತಿರುವ ಜೀವವಸ್ತುಗಳನ್ನು ತಿನ್ನುತ್ತವೆ. ಕಾರಣ, ಈ ಅನುಪಯುಕ್ತ ಪದಾರ್ಥಗಳಲ್ಲಿರುವ ಪೋಷಕಾಂಶಗಳನ್ನು ಮಣ್ಣಿಗೆ ಹಿಂದಿರುಗಿಸುವ ಕಾರ್ಯದಲ್ಲಿ ಸಹಾಯಕವಾಗಿದ್ದು, ಉಪಯುಕ್ತವೆನಿಸಿವೆ. ಕೆಲವೊಮ್ಮೆ ಆಹಾರದ ಅಭಾವವಾದಾಗ ಗಿಡಗಳನ್ನು ತಿಂದು ಹಾನಿ ಉಂಟುಮಾಡುತ್ತವೆ. ಸಹಸ್ರಪದಿಗಳ ದೇಹ ಉರುಟಾಗಿ, ಉದ್ದವಾದ ಕೊಳವೆಯಂತಿದೆ. ದೇಹದ ಪ್ರತಿಯೊಂದು ಖಂಡ ಎರಡು ಖಂಡಗಳ ಸಮ್ಮಿಲನದಿಂದ ರೂಪಿತವಾಗಿದ್ದಂತೆ ತೋರುತ್ತದೆ. ಇದರಿಂದಾಗಿ ಪ್ರತಿಯೊಂದು ಖಂಡದಲ್ಲಿ ಎರಡು ಜೊತೆ ಕಾಲು, ಎರಡು ಜೊತೆ ಸ್ಟಿಗ್ಮೆಟ (ಶ್ವಾಸನಾಳರಂಧ್ರ) ಇವೆ. ಹೆಸರಿಗೆ ಸಹಸ್ರಪದಿಗಳಾದರೂ, ಕಾಲುಗಳ ಸಂಖ್ಯೆ 200 ಅಥವಾ 250ಕ್ಕಿಂತ ಹೆಚ್ಚಾಗಿರದು. ಬಹುಪಾಲು ಸಹಸ್ರಪದಿಗಳು ಅಪಾಯ ಸನ್ನಿಹಿತವಾದಾಗ ತಮ್ಮ ದೇಹವನ್ನು ಸುರುಳಿಯಾಗಿ ಚೆಂಡಿನಂತೆ ಸುತ್ತಿಕೊಂಡು, ರಕ್ಷಿಸಿಕೊಳ್ಳುತ್ತವೆ. ದೇಹದ ಇಕ್ಕೆಡೆಗಳಲ್ಲಿ ಸಾಲಾಗಿ ಕಂಡುಬರುವ ಸ್ಟಿಂಕ್ ಗ್ರಂಥಿಗಳಿಂದ ಹೊರಸೂಸುವ ದ್ರವ ಪದಾರ್ಥ ಚಿಕ್ಕ ಪ್ರಾಣಿಗಳಿಗೆ ವಿಷಕಾರಿಯಾಗಿದೆ. ಈ ಪ್ರಾಣಿಗಳು ಭಿನ್ನಲಿಂಗಿಗಳು. ಜನನೇಂದ್ರಿಯ ದ್ವಾರ ದೇಹದ ಕೊನೆಯ ಭಾಗದಲ್ಲಿದೆ. ಇವುಗಳ ಆಯಸ್ಸು ಸಾಧಾರಣವಾಗಿ 1 ರಿಂದ 2 ವರ್ಷಗಳಾದರೂ, ಕೆಲವು ಪ್ರಭೇದದ ಜೀವಿಗಳು 7 ವರ್ಷ ಬದುಕಿರುವ ನಿದರ್ಶನಗಳಿವೆ. (ಬಿ.ಆರ್.ಸಿ.ಆರ್.)

**ಮೀಂಚುಳ್ಳಿ:** ಕೊರಾಸಿಯಿಫಾರ್ಮಿಸ್ ಗಣದ ಅಲ್‌ಸೆಡಿನಿಡೆ ಕುಟುಂಬದ ಸದಸ್ಯ. ಅಲ್‌ಸೆಡಿನಿಡೆ ಕುಟುಂಬದಲ್ಲಿ ಸು. 85 ಬಗೆಯ ಹಕ್ಕಿಗಳಿವೆ. ಇವುಗಳನ್ನು ಕಿಂಗ್‌ಫಿಶರ್

ಎನ್ನುವರು. ಪ್ರಾಚೀನ ಪ್ರಪಂಚ, ಮುಖ್ಯವಾಗಿ ಆಗ್ನೇಯ ಏಷ್ಯ ಹಾಗೂ ಈಸ್ಟ್ ಇಂಡೀಸ್‌ಗಳಲ್ಲಿ ಮೀಂಚುಳ್ಳಿಗಳ ಪ್ರಭೇದಗಳ ಪೈಕಿ ಮುಕ್ಕಾಲುಪಾಲು ಕಾಣಸಿಗುತ್ತವೆ. ನವ ಪ್ರಪಂಚದಲ್ಲಿ ಕೇವಲ 6 ಪ್ರಭೇದಗಳಿವೆ. ಆಫ್ರಿಕದಲ್ಲಿ 15 ಪ್ರಭೇದಗಳಿವೆ.

ಮೀಂಚುಳ್ಳಿಗಳು ಪುಟ್ಟ ಅಥವಾ ಮಧ್ಯಮ ಗಾತ್ರದ ಬಲಯುತವಾದ ಮೈಯುಳ್ಳ ಪಕ್ಷಿಗಳು. ಚಿಕ್ಕಕತ್ತು, ಚೋಟುಬಾಲ, ದೇಹದ ಗಾತ್ರಕ್ಕೆ ಹೋಲಿಸಿದರೆ ಕೊಂಚ ದೊಡ್ಡದೆನ್ನಬಹುದಾದ ತಲೆ, ಉದ್ದವಾದ, ಬಲವಾದ ಮತ್ತು ಚೂಪಾದ ಕೊಕ್ಕು ಇವೆ. ಗಿಡ್ಡಕಾಲು, ಚಿಕ್ಕ ಹಾಗೂ ದುರ್ಬಲವಾದ ಪಾದಗಳು ಈ ಹಕ್ಕಿಗಳ ಕೆಲವು ಲಕ್ಷಣಗಳು. ಎಲ್ಲಾ ಮೀಂಚುಳ್ಳಿಗಳ ಕಾಲ್ಬೆರಳುಗಳು ಬುಡದಿಂದ ಕೊಂಚ ಉದ್ದದವರೆಗೆ ಕೂಡಿಕೊಂಡಿವೆ. ಬಹುಪಾಲು ಮೀಚುಂಳ್ಳಿಗಳು ಉಜ್ಜ್ವಲ ವರ್ಣದವು. ಹಸುರು, ನೀಲಿಬಣ್ಣಗಳು ಪ್ರಧಾನ ವರ್ಣಗಳಾಗಿದ್ದು ಕೆಲವೊಮ್ಮೆ ಬಿಳಿ ಹಾಗೂ ಮಾಸಲು ಕೆಂಪುಬಣ್ಣಗಳು ಮಿಳಿತವಾಗಿ, ಹಕ್ಕಿಗಳು ತುಂಬ ಸುಂದರವಾಗಿ ಕಾಣುವುವು. ಕೊಕ್ಕು ಕೆಂಪು ಅಥವಾ ಹಳದಿ, ಕಂದು, ಕಪ್ಪು ಬಣ್ಣದ್ದಾಗಿದೆ. ಕೆಲವು ಮೀಂಚುಳ್ಳಿಗಳು ಬಿಳಿ, ಕಪ್ಪು ಬಣ್ಣಗಳ ಮಿಶ್ರಣದಿಂದ ಕೂಡಿವೆ. ಗಂಡು ಹೆಣ್ಣುಗಳ ನಡುವೆ ಸಾಮಾನ್ಯವಾಗಿ ವರ್ಣವ್ಯತ್ಯಾಸವಿಲ್ಲ.

ಮೀಂಚುಳ್ಳಿಗಳನ್ನು ಎರಡು ಪ್ರಧಾನ ಉಪಪಂಗಡಗಳಾಗಿ ವಿಂಗಡಿಸಲಾಗಿದೆ. 1. ಆಲ್‌ಸೆಡಿನಿನೆ ಪಂಗಡ; ಇವು ಮೀನುಗಳನ್ನೇ ಪ್ರಧಾನ ಅಹಾರವನ್ನಾಗಿ ತಿನ್ನುವ ಮೀಂಚುಳ್ಳಿಗಳು. 2. ಡ್ಯಾಸಿಲೋನಿನೀಯ ಪಂಗಡದಲ್ಲಿ ಸೇರಿರುವಂಥವು ಕಾಡಿನ ಮೀಂಚುಳ್ಳಿಗಳು. ಇವು ಕೀಟಗಳು, ಕಪ್ಪೆ, ಓತಿ, ಕೆಲವೊಮ್ಮೆ ಸಣ್ಣ ಸ್ತನಿ ಹಾಗೂ ಹಕ್ಕಿಗಳನ್ನು ತಿನ್ನುತ್ತವೆ. ಇವುಗಳ ಪೈಕಿ ಕೆಲವು ಮೀಂಚುಳ್ಳಿಗಳು ನೀರಿನ ಬಳಿಗೆ ಹೋಗುವುದೇ ಇಲ್ಲ.

ಮತ್ಸ್ಯಾಹಾರಿ ಮೀಂಚುಳ್ಳಿಗಳು ಸಾಮಾನ್ಯವಾಗಿ ಹಳ್ಳ, ತೊರೆ, ಕೆರೆಗಳ ಬಳಿಯೇ ವಾಸಿಸುತ್ತವೆ. ನೀರಹಾಳೆಯ ಮೇಲೆ ಚಾಚಿರುವಂಥ ರೆಂಬೆಗಳ ಮೇಲೆ ನಿಶ್ಚಲವಾಗಿ, ನೀರೊಳಗೆ ಈಜುವ ಮೀನುಗಳನ್ನು ನಿರೀಕ್ಷಿಸುತ್ತ ಹೊಂಚು ಹಾಕಿ ಕುಳಿತಿರುವುವು. ಎರೆ ಕಣ್ಣಿಗೆ ಬಿದ್ದ ತತ್‌ಕ್ಷಣ ಶರವೇಗದಲ್ಲಿ ಅದರ ಮೇಲೆ ಎರಗಿ ಹಿಡಿದು, ರೆಂಬೆಗೆ ಮರಳಿ ಎರೆಯನ್ನು ತಲೆ ಮುಂದಾಗುವಂತೆ ಬಾಯೊಳಕ್ಕೆ ಎಸೆದು ನುಂಗುತ್ತವೆ. ಮತ್ತೆ ಕೆಲವು ಮೀಂಚುಳ್ಳಿಗಳು (ಉದಾ: ಭಾರತದಲ್ಲಿನ ಹಂಡಬಂಡ ಮಿಂಚುಳ್ಳಿ – ಪೈಡ್ ಕಿಂಗ್‌ಫಿಶರ್, ಕೆರೆ, ನದಿ ಮುಂತಾದವುಗಳ ನೀರ ಪಾತಳಿಗಳ ಮೇಲೆ 8–10 ಮೀ ಗಳ ಎತ್ತರದಲ್ಲಿ ಹೆಲಿಕಾಪ್ಟರಿನಂತೆ ನಿಂತಲ್ಲೇ ಹಾರುತ್ತಿದ್ದು, ಮೀನುಗಳನ್ನು ನಿರೀಕ್ಷಿಸುತ್ತ ಅವು ಸುಳಿದಾಗ ಎರಗಿ ಹಿಡಿಯುತ್ತವೆ.



ಮೀಂಚುಳ್ಳಿಗಳು ನೀರನೆಲೆಗಳ ದಡಗಳಲ್ಲಿ ಮಣ್ಣು ಕೊರೆದು ಬಿಲದ ರೀತಿಯ ಗೂಡುಗಳನ್ನು ನಿರ್ಮಿಸುವುವು. ಗೂಡುಗಳಲ್ಲಿ ಯಾವುದೇ ತೆರನ ಮೆತ್ತೆ ವಸ್ತುಗಳನ್ನು ಉಪಯೋಗಿಸುವುದಿಲ್ಲ. ಒಂದು ಸಲಕ್ಕೆ 5–8 ಮೊಟ್ಟೆಗಳನ್ನಿಡುವುವು. ಗಂಡು ಹೆಣ್ಣುಗಳೆರಡೂ ಮೊಟ್ಟೆಗಳಿಗೆ ಕಾವುಕೊಟ್ಟು ಮರಿಗಳು ಹುಟ್ಟಿದಮೇಲೆ ಅವನ್ನು ಪೋಷಿಸುವುವು. ಮೊಟ್ಟೆಯೊಡೆದು ಮರಿಗಳಾಗುವುದಕ್ಕೆ ಹಿಡಿಯುವ ಅವಧಿ 18–24 ದಿನಗಳು. ಮರಿಗಳು ಹುಟ್ಟಿದಾಗ ಕಣ್ಣು ತೆರೆದಿರುವುದಿಲ್ಲ ಮತ್ತು ಪುಕ್ಕಗಳ ಹೊದಿಕೆ ಪಡೆದಿರುವುದಿಲ್ಲ. 3 ಅಥವಾ 4 ವಾರಗಳ ಕಾಲ ಗೂಡಿನಲ್ಲಿದ್ದು, ನಂತರ ಮರಿಗಳು ಹೊರಹೋಗುವುವು. ಆದರೆ, ತಂದೆತಾಯಿ ಹಕ್ಕಿಗಳು ಹಲವಾರು ದಿನಗಳ ಕಾಲ ಮರಿಗಳೊಡನೆ ಇದ್ದು, ಅವು ಮೀನು ಹಿಡಿಯಲು ಸಮರ್ಥವಾಗುವ ತನಕ ಆಹಾರ ನೀಡಿ ಪೋಷಿಸುತ್ತವೆ.

ಭಾರತದಲ್ಲಿರುವ ಮೀಂಚುಳ್ಳಿಗಳೆಂದರೆ: 1. ನೀಲಿ ಮೀಂಚುಳ್ಳಿ (ಕಾಮನ್ ಅಥವಾ ಸ್ಮಾಲ್ ಬ್ಲ್ಯೂ ಕಿಂಗ್‌ಫಿಶರ್), 2. ಬಿಳಿ ಎದೆಯ ಮೀಂಚುಳ್ಳಿ (ವೈಟ್ ಬ್ರೆಸ್ಟೆಡ್ ಕಿಂಗ್ ಫಿಶರ್), 3. ಹಂಡಬಂಡ ಮೀಂಚುಳ್ಳಿ (ಪೈಡ್ ಕಿಂಗ್‌ಫಿಶರ್) ಮತ್ತು 4. ಮೂರು ಬೆರಳಿನ ಮೀಂಚುಳ್ಳಿ (ತ್ರೀ ಟೋಡ್ ಕಿಂಗ್‌ಫಿಶರ್) (ಎಂ.ಡಿ.ಪಿ.)

**ಮೀನು:** ಕಶೇರುಕಗಳ ಒಂದು ಗುಂಪು (ಫಿಶ್). ಕೆಲವು ಅಕಶೇರುಕಗಳು ಹಾಗೂ ಇತರ ಜಲವಾಸಿ ಪ್ರಾಣಿಗಳಿಗೂ ಮೀನು (ಉದಾ: ಅಂಬಲಿ ಮೀನು, ನಕ್ಷತ್ರ ಮೀನು ಇತ್ಯಾದಿ) ಎಂದು ಹೆಸರಿಸಲಾಗುವುದಾದರೂ, ಮತ್ಸ್ಯ (ಪಿಸೀಸ್) ವರ್ಗಕ್ಕೆ ಸೇರುವ ಜೀವಿಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದೆ. ಇವು ನೀರಿನಲ್ಲಿ ಕರಗಿರುವ ಆಕ್ಸಿಜನ್ನನ್ನು ಬಳಸಲು ಸಮರ್ಥವಾಗಿರುವುದರ ಜೊತೆಗೆ, ಈಜು ರೆಕ್ಕೆಗಳಾಗಿ ಮಾರ್ಪಾಟಾಗಿರುವ ಚಲನಾವಯವಗಳನ್ನೂ ಸಾಮಾನ್ಯವಾಗಿ ಕದಿರಿನಾಕಾರದ ಮತ್ತು ಶಲ್ಕ ಅಥವಾ ಹುರುಪೆಗಳಿಂದ (ಸ್ಕೇಲ್ಸ್) ಆವೃತವಾಗಿರುವ ದೇಹವನ್ನೂ ದೇಹದ ಹಿಂತುದಿಯಲ್ಲಿ ಬಾಲದ ಈಜುರೆಕ್ಕೆಯನ್ನೂ ಪಡೆದಿರುವುವು. ಹಳೆಯ ವರ್ಗೀಕರಣಗಳ ಪ್ರಕಾರ ಇವು ಪಿಸೀಸ್ ವರ್ಗಕ್ಕೆ ಸೇರಿವೆಯಾದರೆ ಆಧುನಿಕ ವರ್ಗೀಕರಣ ಪದ್ಧತಿಗಳ ಅನುಸಾರ ಮೀನುಗಳು ಸೈಕ್ಲೊಸ್ಟೋಮಟ, ಇಲ್ಯಾಸ್ಮೊಬ್ರಾಂಕಿಯೈ, ಹಾಲೊಸೆಫಲೈ, ಡಿಪ್ನಾಯ್ ಮತ್ತು ಟೀಲಿಯೊಸ್ಟೋಮೈ (ಆಸ್ಟಿಯಿಕ್ತಿಸ್) ವರ್ಗಗಳಿಗೆ ಸೇರಿವೆ.

ಮೀನಿನ ಆಕಾರ: ದೇಹ ರಚನೆ ಜಲಜೀವನಕ್ಕೆ ಬಹಳ ಅನುಕೂಲವಾಗಿ ಹೊಂದಿಕೊಂಡಿವೆ. ಮೀನುಗಳ ಈಜುವ ವೇಗವನ್ನೂ ರೂಪದ ಚೆಲುವನ್ನೂ ನೋಡಿದಲ್ಲಿ ಈ ಹೊಂದಾಣಿಕೆ ಸ್ಪಷ್ಟವಾಗುತ್ತದೆ. ಹೆಚ್ಚು ಶ್ರಮವಾಗಲೀ ಶಕ್ತಿವಿಕ್ರಯವಾಗಲೀ ಆಗದೆ ಸರಾಗವಾಗಿ ಈಜಾಡಲು ಸಹಕಾರಿಯಾಗಿ ಮೀನಿನ ಆಕಾರ ಕದಿರು ಅಥವಾ ಚುಟ್ಟಾದಂತೆ ಇದ್ದು ದೇಹದ ಎರಡು ತುದಿಗಳೂ ಮೊನಚಾಗಿ ರೂಪುಗೊಂಡಿವೆ. ಭೂಚರ ಕಶೇರುಕಪ್ರಾಣಿಗಳಲ್ಲಿ ಇರುವಂತೆ ಮೀನುಗಳಲ್ಲಿ ಸ್ಪಷ್ಟವಾದ ಕತ್ತು ಮತ್ತು ಕೊರಳು ಇಲ್ಲ. ಮೂತಿ ಮೊನಚಾಗಿದ್ದು ದವಡೆ ಒತ್ತಿಕೊಂಡು ತಲೆ ಒಪ್ಪಾದ ಆಕೃತಿಯನ್ನು ತಾಳಿದೆ. ಮೇಲ್ದರ್ಜೆಯ ಪ್ರಾಣಿಗಳಲ್ಲಿ ಇರುವ ಕಣ್ಣುಗೂಡು ಅಥವಾ ಕುಳಿಗಳು ಇಲ್ಲ. ಇದರಿಂದಾಗಿ ಕಣ್ಣು ದೇಹದ ಮೇಲ್ಮೈಗೆ ಸಮಮಟ್ಟದಲ್ಲಿದೆ. ಕಿವಿರಿನ ಮುಚ್ಚಳ ಹೊರಚಾಚಿರದೆ ದೇಹಕ್ಕೆ ಒತ್ತಿಕೊಂಡಂತಿದೆ. ಚರ್ಮದ ಮೇಲಿನ ಶಲ್ಕ ಅಥವಾ ಫಲಕಗಳು (ಸ್ಕೇಲ್ಸ್) ಒಂದರ ಮೇಲೊಂದು ಹೆಂಚು ಹೊದಿಸಿದ ರೀತಿಯಲ್ಲಿ ಜೋಡಣೆಯಾಗಿರುವುದರಿಂದ ದೇಹ ನಯವಾಗಿರುವಂತೆ ಭಾಸವಾಗುತ್ತದೆ. ನೀರಿನಲ್ಲಿ ಈಜುವಾಗ ಪ್ರತಿರೋಧ ಕಡಿಮೆಯಾಗಲು ದೇಹದ ಹೊರಭಾಗವೆಲ್ಲ ಲೋಳೆಯಿಂದ ಆವೃತವಾಗಿದೆ. ಬಂಗಡೆ ಮ್ಯಾಕರೆಲ್ ಜಾತಿಯ ಕಡಲು ಮೀನಿನ ಆಕಾರ ಮೀನು ವರ್ಗದ ಮಾದರಿ ಆಕಾರ ಅಥವಾ ಸ್ವರೂಪವೆನ್ನಬಹುದು.

ಎಲ್ಲ ಮೀನುಗಳಲ್ಲು ಈ ಆಕಾರವೇ ಇರುತ್ತದೆ ಎಂದಲ್ಲ. ಸನ್ನಿವೇಶಕ್ಕೆ, ಸ್ವಭಾವಕ್ಕೆ ಮತ್ತು ಜೀವನಕ್ರಮಕ್ಕೆ ತಕ್ಕಂತೆ ಕದಿರಿನ ಆಕಾರದಲ್ಲಿ ಬದಲಾವಣೆಗಳು ರೂಪಾಂತರಗಳು ಕಾಣಬರುತ್ತವೆ. ಈ ಆಕಾರ ವ್ಯತ್ಯಾಸ ವೈವಿಧ್ಯಗಳಲ್ಲಿ ಬಹುಮುಖ್ಯವಾದ ಕೆಲವು ಇಂತಿವೆ.

ಮೀನುಗಳ ಗುಂಪನ್ನು ಸ್ಥೂಲವಾಗಿ ಮೂರು ವರ್ಗ ಅಥವಾ ವಿಭಾಗಗಳಾಗಿ ವಿಂಗಡಿಸಬಹುದು. (1) ಇಲ್ಯಾಸ್ಮೊಬ್ರಾಂಕಿಯೈ: ಗಟ್ಟಿಯಾದ ಮೂಳೆಗಳ ಬದಲು ಮೃದ್ವಸ್ಥಿ ಕಂಕಾಲವುಳ್ಳ ಮೀನುಗಳು, ಗೊಮ್ಮೆ ಸೊರಕೆ, ಹುಲಿ ಬಳಿಯಾರ್, ಬುಗ್ಗೆ ತಟ್ಟೆ ಮುಂತಾದವು (2) ಟೀಲಿಯೊಸ್ಟೋಮೈ:ಗಟ್ಟಿ ಎಲುಬುಳ್ಳ ಆಧುನಿಕ ಕಾಲದ ಮೀನುಗಳು ಎರಜಾಯ್, ಬೊಯ್ಗೆ, ಪಲಿಯ, ಕೋಲಮಂಗು ಮುಂತಾದ ಮೂಳೆಮೀನುಗಳು (3) ಡಿಪ್ನಾಯ್: ಫುಪ್ಫುಸಯುಕ್ತ ಮೀನುಗಳು ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣ ಅಮೆರಿಕದ ಜೌಗು ಪ್ರದೇಶಗಳಲ್ಲಿ ವಾಸಿಸುವಂಥವು. ಮೀನಿನ ರಚನೆ ಮತ್ತು ಆಕಾರಗಳ ವೈವಿಧ್ಯವನ್ನು ತಿಳಿಯಲು ಈ ವರ್ಗಗಳ ಕೆಲವು ಮೀನುಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಇಲ್ಯಾಸ್ಮೊಬ್ರಾಂಕ್ ಗುಂಪಿನ ಮೀನುಗಳಲ್ಲಿ, ದೇಹ ಸಾಮಾನ್ಯವಾಗಿ ಚಪ್ಪಟೆಯಾಗಿರುತ್ತದೆ. ಷಾರ್ಕ್ (ಸೊರಕೆ, ಬಳಿಯಾರ್ ಮುಂತಾದವು) ಮೀನುಗಳ ದೇಹದ ಆಕಾರ, ಈಜುವಾಗ ನೀರಿನ ಪ್ರತಿರೋಧವನ್ನು ಆದಷ್ಟು ಕಡಿಮೆ ಮಾಡಲು ಅನುಕೂಲವಾಗಿದೆ. (ಚಿತ್ರ ನೋಡಿ) ರೇಮೀನು ಅಥವಾ ಗಿಟಾರುಮೀನುಗಳಲ್ಲಿ ದೇಹ ಬಹಳ ಅಗಲವಾಗಿಯೂ, ಚಪ್ಪಟೆಯಾಗಿಯೂ ಇದೆ. ಉದಾಹರಣೆ: ರೈನೊಬೇಟಸ್ ಗ್ರಾನ್ಯುಲೇಟಸ್ ಎಂಬ ಸ್ಕೇಟ್ ಮೀನು, ಎತ್ತಿ ಬಳಿಯಾರ್.

ಸುತ್ತಿಗೆತಲೆ ಷಾರ್ಕುಗಳಲ್ಲಿ ತಲೆ ಸುತ್ತಿಗೆಯ ಆಕಾರದಲ್ಲಿದ್ದು ಕಣ್ಣುಗಳ ತಲೆಯ ತುದಿ ಭಾಗದಲ್ಲಿ ಸ್ಥಿತವಾಗಿವೆ. ಉದಾಹರಣೆ: ತಟ್ಟೆ ಬಳಿಯಾರ್ – ಸ್ಫಿರ್ನ ಜೈಗೀನ (ಚಿತ್ರ ನೋಡಿ). ಮೂಳೆ ಮೀನುಗಳು ಸಾಮಾನ್ಯವಾಗಿ ದೇಹ ಪಾರ್ಶ್ವಸ್ಥವಾಗಿ ಚಪ್ಪಟೆಯಾಗಿ ಇರುತ್ತವೆ. ಆದರೆ ಪ್ಲೂರೋನೆಕ್ಟಿಫಾರ್ಮೀಸ್ ವರ್ಗದ ಮೀನುಗಳಲ್ಲಿ (ನಂಗುಮೀನುಗಳು) ದೇಹ ಚಪ್ಪಟೆಯಾಗಿರುವುದಲ್ಲದೆ ತಗ್ಗಿಯೂ ಇರುತ್ತದೆ. ಮೀನಿನ ಎರಡು ಕಣ್ಣುಗಳೂ ಒಂದೇ ಪಕ್ಕದಲ್ಲಿರುತ್ತವೆ. ಉದಾಹರಣೆ: ಸೈನೊಗ್ಲಾಸಸ್ ಸೆಮಿಫ್ಯಾಸಿಯೇಟಸ್.

ಟೆಟ್ರೊಡಾಂಟಿಫಾರ್ಮೀಸ್ ಎಂಬ ವರ್ಗಕ್ಕೆ ಸೇರಿದ ಬುರುಡೆಮೀನು, ಉಬ್ಬು ಮೀನುಗಳಲ್ಲಿ ದೇಹ ಮೋಟಾಗಿಯೂ ದುಂಡಾಗಿಯೂ ಇರುತ್ತದೆ. ಇವು ತಮ್ಮ ದೇಹವನ್ನು ಬಲೂನಿನಂತೆ ಹಿಗ್ಗಿಸಿಕೊಳ್ಳಬಲ್ಲವು. ಉದಾಹರಣೆ: ಟೆಟ್ರೊಡಾನ್ ಪಟ್ರೋಕ.

ದೇಹದ ಇತರ ವಿಪರೀತ ಮಾರ್ಪಾಡುಗಳನ್ನು ಹಾವು ಮೀನುಗಳಲ್ಲಿ (ಈಲ್ ಅಂಗ್ವಿಲಿ ಫಾರ್ಮಿಸ್) ಕಾಣಬಹುದು. ಇವುಗಳ ದೇಹ, ಹಾವಿನಂತೆ ನೀಳವಾಗಿ ದುಂಡಾಗಿ ಇರುತ್ತದೆ. ಉದಾಹರಣೆ: ಅಂಗ್ವಿಲ ಬೆಂಗಾಲೆನ್ಸಿಸ್ (ಬಂಗಾಲದ ಹಾವು ಮೀನು).

ತಟ್ಟೆ ಬಳಿಯಾರ್

ಸಿನಾಥಿಫಾರ್ಮಿಸ್ ವರ್ಗದ ಕಡಲಕುದುರೆಗಳಲ್ಲಿ (ಸೀ ಹಾರ್ಸ್) ತಲೆಮುಂದಕ್ಕೆ ದೇಹಕ್ಕೆ ಲಂಬವಾಗಿ ಬಾಗಿರುತ್ತದೆ. ಕತ್ತು ಸ್ಪಷ್ಟವಾಗಿರುತ್ತದೆ. ಬಾಲ ಕಪ್ಪರು ಶುಂಠಿಯಂತೆ ಸುರುಳಿಸುತ್ತಿ ಇತರ ವಸ್ತುಗಳನ್ನು ಹಿಡಿದುಕೊಳ್ಳಲು ಅನುವಾಗುವಂತಿದೆ. ಇದನ್ನು ಲಂಗರು ಹಾಕಿ ನಿಲ್ಲುವಂತೆ ಒಂದೇ ಸ್ಥಳದಲ್ಲಿ ನಿಲ್ಲಲು ಬಳಸಿಕೊಳ್ಳುತ್ತದೆ. ಉದಾಹರಣೆ: ಹಿಪೊಕ್ಯಾಂಪಸ್ ಪ್ರಭೇದ.

ಹೀಗೆ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ, ಜೀವನಕ್ರಮಕ್ಕೆ ಅನುವಾಗುವಂತೆ ಮೀನುಗಳ ದೇಹಾಕೃತಿ ವಿಕಾಸಗೊಂಡು ವಿವಿಧ ರೂಪಗಳನ್ನು ತಾಳಿದೆ.

ಆದಿ ಮೀನುಗಳು, ಮುಂಡದ ಅಥವಾ ಬಾಲದ ಮಾಂಸಖಂಡಗಳ ಸಂಕೋಚನೆ ಅಥವಾ ಮಿಡಿತದಿಂದ ನೀರಿನಲ್ಲಿ ಸಾಗುತ್ತಿದ್ದವು. ಇವುಗಳ ದೇಹದ ಮಾಂಸಖಂಡ ಅಥವಾ ಸ್ನಾಯುಗಳು (ಮೈಯೊಮೀರ್‌ಗಳು) ಜೊತೆ ಜೊತೆಯಾಗಿ ಒಂದರ ಹಿಂದೆ ಒಂದು ಜೋಡಣೆಗೊಂಡಿವೆ. ಇವುಗಳ ಮಧ್ಯೆ ತಡಿಕೆಗಳುಂಟು. ಮೀನುಗಳಿಗೂ ಇತರ ಭೂಚರ ಕಶೇರುಕಗಳಿಗೂ ಇರುವ ವ್ಯತ್ಯಾಸಗಳಲ್ಲಿ ಇದೂ ಒಂದು. ಈ ಉಚ್ಚಪ್ರಾಣಿಗಳಲ್ಲಿ ಮಾಂಸಖಂಡಗಳು (ಚಲನೆಯಲ್ಲಿ ಬಳಕೆಯಾಗುವ ಮಾಂಸಖಂಡಗಳು) ಕೇಂದ್ರೀಕೃತವಾಗಿರುವುದು ಮುಂಗಾಲು ಹಿಂಗಾಲುಗಳಲ್ಲಿ ಮಾತ್ರ. ಮೈಯೋಮೀರ್ ಸ್ನಾಯುಗಳ ಮಿಡಿತ, ರೆಕ್ಕೆಗಳ (ಈಜುರೆಕ್ಕೆ) ಬಡಿತ ಮತ್ತು ಕಿವಿರುಗಳ ಮೂಲಕ ನೀರನ್ನು ರಭಸದಿಂದ ಹೊರ ಒಯ್ಯುವಿಕೆ ಈ ಮೂರು ಕಾರಣಗಳಿಂದ ಮೀನುಗಳು ಚಲಿಸುತ್ತವೆ.

ಮೀನಿನ ಸರಾಸರಿ ವೇಗ, ಗಂಟೆಗೆ ಸುಮಾರು 11 ಕಿಮೀ. ಇತರ ಮೀನುಗಳನ್ನು, ಹಡಗಿನ ಅಥವಾ ದೋಣಿಯ ಮರವನ್ನು ಕೊರೆಯಬಲ್ಲ ಹರಿತವಾದ ಚಾಚಿರುವ ಮೇಲ್ದವಡೆಯುಳ್ಳ ಕತ್ತಿ ಮೀನು ಗಂಟೆಗೆ 96 ಕಿಮೀ ವೇಗದಲ್ಲಿ ಸಾಗಬಲ್ಲದು. ಕೇದಾರಮೀನಿನ ವೇಗ ಗಂಟೆಗೆ 80 ಕಿಮೀ. ಕಡಲಕುದುರೆ ಬಹಳ ಮಂದಗಾಮಿ.

ಎಲ್ಲ ಜಾತಿಯ ಮೀನುಗಳಿಗೂ ನೀರಿನಲ್ಲಿ ಸಪಾಟವಾಗಿ ಸಮಮಟ್ಟದಲ್ಲಿ ಈಜಲು ಅನುಕೂಲವಾದ ದೇಹಾಕೃತಿ ಮತ್ತು ದೇಹರಚನೆ ಇರುತ್ತದೆ. ಆದರೂ ಈ ತೆರದ ಸಾಮಾನ್ಯ ಚಲನೆಗೆ ಕೆಲವು ಅಪವಾದಗಳು ಇಲ್ಲದೆ ಇಲ್ಲ. ಕೆಲವು ಹಾರಬಲ್ಲವು ಕೆಲವು ನಡೆಯಬಲ್ಲವು ಮತ್ತೆ ಕೆಲವು ಮೂಷಕಗಳಂತೆ ನೆಲವನ್ನು ಕೊರೆಯಬಲ್ಲವು.

ಕಡಲಕುದುರೆ ಲಂಬವಾಗಿ ಈಜಬಲ್ಲುದಾದರೆ ಸೂಜಿಮೀನುಗಳು ತಮ್ಮ ಸೂಜಿಸೊಂಡಿಲನ್ನು ಕೆಳಮುಖವಾಗಿ ತಿರುಗಿಸಿ ಲಂಬವಾಗಿ ಈಜಬಲ್ಲವು. ಈಜಿಪ್ಟಿನ ನೈಲ್ ನದಿಯಲ್ಲಿ ಸಿಗುವ ಒಂದು ಬಗೆಯ ಮೀಸೆಮೀನು ಹೊಟ್ಟೆ ಮೇಲು ಮಾಡಿಕೊಂಡು ಅಂಗಾತವಾಗಿ ಈಜುತ್ತದೆ.

ಮೀನಿನ ದೇಹದ ಹೊರಭಾಗಗಳು: ಮೀನುಗಳು ನೇರವಾಗಿ ವಾಯುವಿನಲ್ಲಿರುವ ಆಕ್ಸಿಜನ್ನನ್ನು ಉಚ್ಚ ಪ್ರಾಣಿಗಳಂತೆ ಹೀರಿಕೊಳ್ಳಲಾರವು. ಬದಲಿಗೆ ನೀರಿನಲ್ಲಿ ಕರಗಿರುವ ಆಕ್ಸಿಜನ್ನನ್ನು ಮಾತ್ರ ಉಪಯೋಗಿಸಬಲ್ಲವು. ಹೀರಿಕೆ ನಡೆಯುವುದು ಕಿವಿರುಗಳಿಂದ, ಉಚ್ಚ ಪ್ರಾಣಿಗಳಲ್ಲಿರುವ ಫುಪ್ಫುಸಗಳು ಮೀನುಗಳಲ್ಲಿ ಇಲ್ಲ.

ಕಿವಿರುಗಳು ಜೀರ್ಣಾಂಗದ ಮೇಲ್ಭಾಗದಲ್ಲಿರುವ ಫ್ಯಾರಿಂಕ್ಸ್ (ಗಂಟಲು) ಪ್ರದೇಶದಲ್ಲಿ ಸ್ಥಿತವಾಗಿವೆ. ಷಾರ್ಕುಗಳಲ್ಲಿ 5 ಕಿವಿರುಗಳಿರುತ್ತವೆ. ಕೆಲವಲ್ಲಿ 6 ಅಥವಾ 7 ಕಿವಿರುಗಳು ಇರುವುದೂ ಉಂಟು. ಕಿವಿರುಗಳಲ್ಲಿ ಎಳೆ ಅಥವಾ ತಂತುಗಳು ಇರುತ್ತವೆ. ಇವನ್ನು ಬ್ರ್ಯಾಂಕಿಯಲ್ ಲಮೆಲ್ಲೆ ಎನ್ನುತ್ತಾರೆ. ಈ ತಂತುಗಳ ಒಂದು ಏಣು ಬಿಡಿಯಾಗಿದ್ದು ಕಿವಿರಿನ ಸಂಚಿಯೊಳಕ್ಕೆ ಚಾಚಿಕೊಂಡಿರುತ್ತವೆ. ಕಿವಿರಿನ ತೆರಪುಗಳು ಕೂಡ ಪ್ರತ್ಯೇಕವಾಗಿರುತ್ತವೆ.

ಮೂಳೆಮೀನುಗಳಲ್ಲಿ ಕಿವಿರುಗಳು ಪ್ರತ್ಯೇಕವಾಗಿ ತೆರೆದಿರದೆ ಜಲಶ್ವಾಸಾಂಗದ ಗೂಡಿನೊಳಗೆ ತೆರೆದಿರುತ್ತವೆ. ಇದರ ಹೊರಭಿತ್ತಿಯಲ್ಲಿ ಚಲಿಸಬಲ್ಲ ಮುಚ್ಚಳ ಅಥವಾ ತೆರಪಟ್ಟಿ ಇರುತ್ತದೆ. ಇದಕ್ಕೆ ಒಪರ್‌ಕ್ಯುಲಮ್ ಎಂದು ಹೆಸರು. ಮೀನು ಉಸಿರೆಳೆದಾಗ, ಕಿವಿರಿನ ಕಮಾನು ಹಿಗ್ಗುವುದರ ಮೂಲಕ ಗಂಟಲು ದೊಡ್ಡದಾಗುತ್ತದೆ. ಹೀಗಾದಾಗ ನೀರು ಒಳಸರಿಯುತ್ತದೆ. ಆಗ ಕಿವಿರಿನ ಹೊರತೆರಪು ಅಥವಾ ಕಂಡಿ ಮುಚ್ಚಿರುತ್ತದೆ. ನಿಶ್ವಾಸ ಕ್ರಿಯೆಯಲ್ಲಿ ಮೊದಲು ಬಾಯಿ ಮುಚ್ಚಿ ಗಂಟಲು ಕಿರಿದಾಗುತ್ತದೆ. ಆಗ ಅದರೊಳಗಿದ್ದ ನೀರು ಕಿವಿರುಗಳ ಮೇಲೆ ಹರಿದು ಹೊರ ಹೋಗುತ್ತದೆ. ಕಿವಿರಿನ ತಂತುಗಳು ತೆಳುವಾಗಿವೆ. ಇವುಗಳ ಒಳಗೆ ರಕ್ತ ಹರಿಯುತ್ತಲೇ ಇರುತ್ತದೆ. ಈ ತಂತುಗಳ ಮೇಲೆ ನೀರು ಹಾದು ಹೋದಾಗ, ನೀರಿನಲ್ಲಿ ಕರಗಿರುವ ಆಕ್ಸಿಜನ್ ರಕ್ತದಲ್ಲಿರುವ ಕಾರ್ಬನ್ ಡೈ ಆಕ್ಸೈಡ್ ವಿನಿಮಯವಾಗುತ್ತವೆ. ಆಕ್ಸಿಜನ್ ರಕ್ತವನ್ನು ಸೇರಿದರೆ ಕಾರ್ಬನ್ ಡೈ ಆಕ್ಸೈಡ್ ಹೊರ ಹೋಗುತ್ತದೆ. ಉಸಿರಾಟದ ದರದಲ್ಲಿ ಮೀನುಗಳಲ್ಲಿ ವ್ಯತ್ಯಾಸಗಳುಂಟು. ನಿಮಿಷಕ್ಕೆ 12 ಬಾರಿಯಿಂದ 150 ಬಾರಿ ಉಸಿರಾಡುವ ಮೀನುಗಳಿವೆ.



ನೆತ್ತಿಕೊರವ ಮೀನು

ಮೀನು ಜಾತಿಗಳಲ್ಲಿ ಬಹುಪಾಲು, ನೀರಿನ ಹೊರಗೆ ಬಹಳ ಕಾಲ ಜೀವಿಸಲಾರವು. ಆದರೆ ಮೀಸೆಮೀನು, ಕುಚ್ಚು ಮೀನು ಕಲ್ಲು, ಗಿಡಗಳನ್ನು ಏರಬಲ್ಲ ಕ್ಲೈಂಬಿಂಗ್ ಪರ್ಚ್ ಮುಂತಾದುವುಗಳಲ್ಲಿ ತಲೆಯ ಎರಡು ಕಡೆಯೂ ವಿಶೇಷ ಶ್ವಾಸಾಂಗಗಳು ಇರುವುದರಿಂದ ಇವು ಹೆಚ್ಚು ಕಾಲ ನೀರಿನಿಂದ ಹೊರಗೆ ಜೀವಿಸಬಲ್ಲವು. ಗಾಳಿಯನ್ನು ಜಲಶ್ವಾಸಾಂಗದ ಗೂಡುಗಳಲ್ಲಿ ಹಿಡಿದಿಡುವ ವ್ಯವಸ್ಥೆ ಉಂಟು. ಪ್ರತಿಯೊಂದು ಗೂಡೂ ಹೂಕೋಸಿನ ಆಕಾರದ ಸ್ನಾಯುಯುಕ್ತ ಅಂಗ.

ಮಿನುಗಳಲ್ಲಿ ಶ್ವಾಸಾಂಗಗಳಲ್ಲದೆ (ಕಿವಿರು) ಸಹಾಯಕ (ಆನುಷಂಗಿಕ) ಶ್ವಾಸಾಂಗಗಳೂ ಉಂಟು. ಇವು ಫುಪ್ಫುಸದಂತೆ ಕಾಣುವ ಚೀಲಗಳಾಗಿದ್ದು ದೇಹದ ಕುಳಿಯಲ್ಲಿ, ಬೆನ್ನು ಮೂಳೆಯ ಕೆಳಗೆ ಇವೆ. ಇವುಗಳ ಆಕಾರ ಮತ್ತು ಗಾತ್ರ ಎಲ್ಲ ಮೀನುಗಳಲ್ಲೂ ಒಂದೇ ಬಗೆಯಾಗಿ ಇರುವುದಿಲ್ಲ. ಇದು ಜಲಸಮಸ್ಥಿತಿಯನ್ನು ಏರ್ಪಡಿಸುವ ಅಂಗ. ಕೆಲವು ಮೀನುಗಳಲ್ಲಿ ಇದರಿಂದ ಶಬ್ದ ಉತ್ಪತ್ತಿಯಾಗುವುದೂ ಉಂಟು. ಮತ್ತೆ ಕೆಲವು ಮೀನುಗಳಲ್ಲಿ ಇದು ಶಬ್ದಗ್ರಾಹಿ ಅಂಗವಾಗಿದೆ. ಉಚ್ಚಪ್ರಾಣಿಗಳಲ್ಲಿ ಫುಪ್ಫುಸನಾಳಕ್ಕೂ ಅನ್ನನಾಳಕ್ಕೂ ಸಂಪರ್ಕವಿರುವಂತೆ ಈ ಅಂಗಕ್ಕೂ ಮೀನಿನ ಜೀರ್ಣಾಂಗಗಳಿಗೂ ಸಂಪರ್ಕವಿದೆ. ಡಿಪ್ನಾಯಿಸ್ಟಿ ಎಂಬ ಫುಪ್ಫುಸಮೀನುಗಳಲ್ಲಿ ಈ ಅಂಗ ನಿಜವಾದ ಫುಪ್ಫುಸವಾಗಿ ರೂಪುಗೊಂಡಿದೆ.

ಈಜುರೆಕ್ಕೆಗಳು ಮೀನಿನ ಲಕ್ಷಣವಾದ ವಿಶಿಷ್ಟಚಲನಾಂಗಗಳು. ಇವುಗಳ ಸಹಾಯದಿಂದ ಮೀನು ನೀರಿನಲ್ಲಿ ಸ್ಥಿರವಾಗಿ ಚಲಿಸಬಲ್ಲದು. ವಾಲಿ ಹೊರಳಿ ಬೀಳದಂತೆ, ಸಮವಾಗಿ ತೇಲಬಲ್ಲದು. ಈಜುವಾಗ ತಿರುಗಲು ಅಥವಾ ದಿಕ್ಕು ಬದಲಾಯಿಸಲು ಸಾಧ್ಯವಿರುವುದು ಈ ಚುಕ್ಕಾಣಿಗಳಿಂದಲೇ. ಸ್ಥಿರತೆ ಸಮತೋಲನ ಮತ್ತು ದಿಕ್ಕು ಬದಲಾವಣೆಗೆ ಅನುಕೂಲವಾಗುವಂತೆ ಈ ರೆಕ್ಕೆಗಳು ವಿಕಾಸಗೊಂಡಿವೆ. ಈಜುರೆಕ್ಕೆಗಳಲ್ಲಿ ಎರಡು ಬಗೆ; ಮಧ್ಯರೆಕ್ಕೆ (ಮೀಡಿಯನ್) ಮತ್ತು ಜೋಡಿರೆಕ್ಕೆ.

ಬೆನ್ನಿನ ಮೇಲೆ ಬೆನ್ನು ರೆಕ್ಕೆ, ಗುದದ್ವಾರದ ಹಿಂದೆ ಹೊಟ್ಟೆಯ ಮೇಲೆ ಗುದರೆಕ್ಕೆ ಮತ್ತು ಬಾಲದ ಭಾಗದ ಬಾಲದ ರೆಕ್ಕೆಗಳು ಮಧ್ಯರೆಕ್ಕೆಗಳು. ಇವು ಒಂಟಿರೆಕ್ಕೆಗಳು. ಒಂದು ಜೊತೆ ಹೆಗಲಿನ ಬಳಿ ತೋಳುರೆಕ್ಕೆ, ಮತ್ತೊಂದು ಜೊತೆ ಸೊಂಟದ ಬಳಿ– ಸೊಂಟದ ರೆಕ್ಕೆಗಳು ಜೋಡಿರೆಕ್ಕೆಗಳು. ಇವನ್ನು ಉಚ್ಚಪ್ರಾಣಿಗಳ ಕೈಕಾಲುಗಳಿಗೆ ಹೋಲಿಸಬಹುದು.

ಈಜುರೆಕ್ಕೆಗಳಲ್ಲಿ ಅನೇಕ ಬಗೆಯ ಮಾರ್ಪಾಡುಗಳುಂಟು. ಕೆಲವು ಸ್ವಾರಸ್ಯ ರೀತಿಯ ಮಾರ್ಪಾಡುಗಳನ್ನು ಇಲ್ಲಿ ತಿಳಿಸಿದೆ.

ಬೆನ್ನು ರೆಕ್ಕೆಯ ಮಾರ್ಪಾಡು : ಸ್ಟಿಂಗ್‌ರೇಗಳಲ್ಲಿ ಬೆನ್ನು ರೆಕ್ಕೆಗಳೇ ಇಲ್ಲ. ಕೆಲವು ಷಾರ್ಕಗಳಲ್ಲಿ ಈ ಬೆನ್ನು ರೆಕ್ಕೆಯ ಮುಂದೆ ಬಹಳ ಬಲವಾದ ಚೂಪಾದ ಮುಳ್ಳುಗಳಿವೆ.

ಹೀರುಸಿಂಬಿಮೀನುಗಳಲ್ಲಿ (ರೆಮೋರ ರೆಮೋರ) ಈ ರೆಕ್ಕೆ, ತಲೆಯ ಅಗಲವಾದ ಚಪ್ಪಟೆಯಾದ ಜಾಗದಲ್ಲಿ ಸಿಂಬಿಯಾಕಾರದ ಹೀರುತಟ್ಟೆಯಾಗಿ ಮಾರ್ಪಾಡಾಗಿದೆ.

ಗುದರೆಕ್ಕೆಯಲ್ಲಿ ಮಾರ್ಪಾಡುಗಳು : ಹಾವು ಮೀನುಗಳಲ್ಲಿ (ಈಲ್) ಈಜುರೆಕ್ಕೆ ಬಹಳ ಉದ್ದವಾಗಿದೆ. ಸೈಪ್ರಿನೋಡಾಂಟಿಫಾರ್ಮೀಸ್ ಗಣದ ಮೀನುಗಳಲ್ಲಿ (ಸಾಸಲು, ಅಗಸಗಿತ್ತಿ ಮೀನು, ಜೀಬ್ರಮೀನು, ಕೆಮ್ಮೀನು ಮುಂತಾದುವು) ಈ ರೆಕ್ಕೆ ಸಂಭೋಗದ ಅಂಗವಾಗಿ ಮಾರ್ಪಾಡಾಗಿದೆ.



ಈಟಿ ಮೀನು

ಬಾಲದ ರೆಕ್ಕೆಯ ಕಾರ್ಯವೂ ವಿಭಿನ್ನವಾಗಿರುವುದುಂಟು. ಕಡಲಕುದುರೆಯಲ್ಲಿ ಬಾಲ ಹಿಡಿಯುವ ಅಂಗವಾಗಿರುವುದರಿಂದ ಈ ರೆಕ್ಕೆಯೇ ಇರುವುದಿಲ್ಲ. ಕೆಲವು ಮೀನುಗಳಲ್ಲಿ ತೋಳರೆಕ್ಕೆಗಳ ಹೊರ ಅಂಚು ದಪ್ಪ ಮುಳ್ಳುಗಳಾಗಿ ರೂಪುಗೊಂಡಿದೆ. ಹಾರು ಮೀನುಗಳಲ್ಲಿ ಇವು ವಿಸ್ತಾರವಾಗಿದ್ದು ಇವುಗಳ ಸಹಾಯದಿಂದ ಈ ಮೀನುಗಳು ಹಾರಬಲ್ಲವು.

ಸೊಂಟದ ರೆಕ್ಕೆಗಳಲ್ಲೂ ಅವು ದೇಹಕ್ಕೆ ಸೇರುವ ಜಾಗದಲ್ಲೂ ರೂಪದಲ್ಲೂ ವೈವಿಧ್ಯವಿದೆ. ಷಾರ್ಕುಗಳಲ್ಲಿ ಸೊಂಟದ ರೆಕ್ಕೆಯ ಹಿಂಭಾಗ ತಬ್ಬಿಕೊಳ್ಳುವುದಕ್ಕೆ ಅನುಕೂಲವಾಗಿ ಮಾರ್ಪಾಡಾಗಿದೆ. ಗರ್ಭಾಧಾನಕ್ರಿಯೆಗೆ ಇದು ಸಹಾಯಕ. ಕಲ್ಲುಕುರಿ ಮುಂತಾದ ಹೊಳೆ ಮೀನುಗಳಲ್ಲಿ ಈ ರೆಕ್ಕೆ ಹೀರುಸಿಂಬಿಯಂತೆ ರೂಪಿತವಾಗಿದೆ. ಇದರಿಂದ ಈ ಮೀನುಗಳು ಕಲ್ಲುಬಂಡೆಗಳನ್ನು ಕಚ್ಚಿಕೊಳ್ಳಬಲ್ಲವು. ಹಾವು ಮೀನುಗಳಲ್ಲಿ ಸೊಂಟದ ರೆಕ್ಕೆಗಳಿಲ್ಲ.

ಚರ್ಮ ಹೊರಚರ್ಮ ಮತ್ತು ಒಳಚರ್ಮಗಳೆಂಬ ಎರಡು ಪದರಗಳಿಂದ ಕೂಡಿದೆ. ಹೊರಚರ್ಮದಲ್ಲಿ ಲೋಳೆಯನ್ನು ಸೂಸುವ ಲೋಳೆಗ್ರಂಥಿಗಳಿವೆ. ಇವು ಉತ್ಪತ್ತಿ ಮಾಡುವ ಬಂಕೆ, ಮೀನಿನ ದೇಹದ ಮೇಲೆಲ್ಲ ಹರಡಿರುತ್ತದೆ. ಈ ಹೊರಚರ್ಮದ ಹೊರಪದರದಲ್ಲಿ ಅನೇಕ ಮೀನುಗಳಲ್ಲಿ ಫಲಕ ಅಥವಾ ಶಲ್ಕಗಳಿವೆ. ಇವು ಮೀನಿನ ಚರ್ಮದ ಉತ್ಪನ್ನ. ಇವುಗಳಲ್ಲಿ ಸುಣ್ಣದ ಲವಣಗಳುಂಟು. ಶಲ್ಕಗಳ ಆಕಾರ ಮುಂತಾದ ಲಕ್ಷಣಗಳಲ್ಲಿ ವೈವಿಧ್ಯವಿದೆ.

ಇಲ್ಯಾಸ್ಮೊಬ್ರಾಂಕ್ ಮೀನುಗಳಲ್ಲಿ ಶಲ್ಕಗಳು ಚರ್ಮದಿಂದ ಹೊರಹೊರಟು ಸಣ್ಣ ಹಲ್ಲುಗಳಂತಿವೆ. ಇವಕ್ಕೆ ಪ್ಲಕಾಯಡ್ ಫಲಕಗಳೆಂದು ಹೆಸರು. ದಂತಭಾಗದ ಮುಳ್ಳುಗಳ ಮೇಲೆ ಎನಾಮಲ್ ವಸ್ತುವಿನ ಗಟ್ಟಿ ಹೊದಿಕೆಯಿದೆ.

ಈ ಶಲ್ಕಗಳಲ್ಲೂ ಮಾರ್ಪಾಡುಗಳು ಇರುವುದುಂಟು. ಸ್ಟಿಂಗ್‌ರೇಗಳಲ್ಲಿ (ಮುಚಿಬಳಿಯಾರ್, ಕೊಟ್ಟಿರ ತೊರಕೆ) ಇವು ಒಟ್ಟಾಗಿ ಕೂಡಿ ಬೆಳೆದು ಬಾಲದ ಮುಳ್ಳಾಗಿ ರೂಪುಗೊಂಡಿವೆ.

ರಂಪದ ಮೀನುಗಳಲ್ಲಿ (ಪ್ರಿಸ್ಟೀಡೆ) ಇರುವ ಉದ್ದವಾದ, ಚಪ್ಪಟೆಯಾದ ಗರಗಸದಂತಿರುವ ಅಲಗು ಕೂಡ ಈ ಚರ್ಮದಂತಗಳ ರೂಪಾಂತರ.

ಮೂಳೆಮೀನುಗಳಲ್ಲಿ ಹುರುಪೆಗಳು ಚರ್ಮದಿಂದ ರೂಪಿತವಾಗಿವೆ. ಇವುಗಳ ಮೇಲೆ ಎನಾಮಲ್ ಇರುವುದಿಲ್ಲ. ಈ ಬಗೆಯ ಮೀನುಗಳ ಪೂರ್ವಜ ಪ್ರಾಣಿಗಳಲ್ಲಿ ದೇಹದ ಮೇಲೆಲ್ಲ ಹೊಳೆಯುವ ಎಲುಬಿನ ಫಲಕಗಳು ಇದ್ದುವೆನ್ನಲಾಗಿದೆ. ಇವು ಶತ್ರುಗಳನ್ನು ಎದುರಿಸುವ ಅಥವಾ ಅವುಗಳಿಂದ ಪಾರಾಗುವ ಗುರಾಣಿಯಂತೆ. ಈ ಫಲಕಗಳನ್ನು ಗ್ಯಾನಾಯಿಡ್ ಹುರುಪೆಗಳೆಂದು ಕರೆಯಲಾಗುತ್ತದೆ.

ಹುರುಪೆಗಳ ಜೋಡಣೆಯನ್ನು ತಿಳಿಯಲು ಕಾರ್ಪುಗಳನ್ನು (ಸಿಹಿನೀರಿನಲ್ಲಿ ವಾಸ ಮಾಡುವ ಸಾಸಲು, ಕೆಮ್ಮೀನು, ತಾರಿಮೀನು ಮುಂತಾದವು) ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇವುಗಳಲ್ಲಿ ಈ ಹುರಪೆಗಳು ತಲೆ ವಿನಹ ದೇಹದ ಇತರ ಎಲ್ಲ ಭಾಗಗಳ ಮೇಲೂ ಸಾಲುಸಾಲಾಗಿ ಇರುತ್ತವೆ. ತೆಳ್ಳಗಿರುವ ಇವನ್ನು ಸೈಕ್ಲಾಯಿಡ್ ಹುರುಪೆಗಳು ಎನ್ನುತ್ತಾರೆ.

ಒಂದೊಂದು ಹುರುಪೆಯಲ್ಲೂ ಮುಂಭಾಗದ ತುದಿ ಚರ್ಮದಡಿ ಇರುವ ಒಂದು ಚೀಲದಲ್ಲಿ ಸೇರಿರುತ್ತದೆ. ಹಿಂಭಾಗ ಸ್ವತಂತ್ರವಾಗಿರುತ್ತದೆ. ಹಿಂಭಾಗದಲ್ಲಿ ಹಲ್ಲಿನಂಥ ಮುಳ್ಳುಗಳ ಸಾಲು ಇದ್ದರೆ ಇವನ್ನು ಟೀನಾಯಿಡ್ ಹುರುಪೆಗಳೆಂದು ಕರೆಯುವುದಿದೆ. ಇವು ಪೊರೆ, ಮುಳ್ಳು, ಗುಬಟು ಅಥವಾ ಗಳಲೆ ಇತ್ಯಾದಿ ರೀತಿಯಾಗಿಯೂ ರೂಪಾಂತರವಾಗಬಹುದು.

ಅನೇಕ ಮೀನುಗಳಲ್ಲಿ ಹುರುಪೆಗಳ ಜೋಡಣೆ ಕ್ರಮಬದ್ಧವಾಗಿರುತ್ತದೆ. ಒಂದೊಂದು ನಿರ್ದಿಷ್ಟವಂಶದಲ್ಲೂ ಇವುಗಳ ಗಾತ್ರ, ಸಂಖ್ಯೆ, ವಿನ್ಯಾಸ ಏಕಪ್ರಕಾರವಾಗಿರುತ್ತದೆ.

ಪಾರ್ಶ್ವರೇಖೆ: ಮೀನಿನ ದೇಹದ ಮೇಲೆ ಎರಡೂ ಪಕ್ಕಗಳಲ್ಲಿ ಒಂದು ರೀತಿಯ ಕಾಲುವೆ ಉಂಟು. ಇದೇ ಪಾರ್ಶ್ವರೇಖೆ. ಇದರ ಅಡಿಯಲ್ಲಿ ವಿಶೇಷವಾದ ಜ್ಞಾನೇಂದ್ರಿಯಗಳುಂಟು. ಹುರುಪೆಗಳ ಒಳಗಿರುವ ರಂಧ್ರಗಳ ಮೂಲಕ ಈ ಕಾಲುವೆಯಲ್ಲಿ ಒಂದು ಭಾಗಕ್ಕೂ ಮತ್ತೊಂದು ಭಾಗಕ್ಕೂ ಸಂಪರ್ಕ ಏರ್ಪಟ್ಟಿದೆ.

ಕೆಲವು ಮೀನು ಗುಂಪುಗಳಲ್ಲಿ ಮೀನಿನ ವಯಸ್ಸನ್ನು ಹುರುಪೆಗಳ ಮೇಲಿರುವ ಗೀಚು ಅಥವಾ ಗೆರೆಗಳಿಂದ ಅಂದಾಜು ಮಾಡಬಹುದು. ಮೀನಿನ ಜೀವಪರ್ಯಂತ ಹುರುಪೆಗಳು ಬೆಳೆಯುತ್ತಿದ್ದು ಹುರುಪೆಗಳ ಮೇಲೆ ಗೆರೆಗಳು ಮೂಡುತ್ತವೆ. ವರ್ಷದ ನಾನಾ ಋತುಗಳಲ್ಲಿ ನಡೆದ ಮೀನಿನ ವೃದ್ಧಿಯ ದಾಖಲೆಗಳು ಅಥವಾ ಸೂಚಕಗಳು ಇವು. ವಸಂತ ಮತ್ತು ಗ್ರೀಷ್ಮದಲ್ಲಿ ಅನೇಕ ಗೆರೆಗಳು ಸೇರಿ ಹುರುಪೆಗಳು ಬೆಳೆಯುತ್ತವೆ. ಈ ಗೆರೆ ಅಥವಾ ರೇಖೆಗಳ ಮಧ್ಯದ ಅಂತರ ಸ್ಪಷ್ಟವಾಗಿರುತ್ತದೆ. ಚಳಿಗಾಲದಲ್ಲಿ ಗೆರೆಗಳ ಬೆಳೆವಣಿಗೆ ನಿಧಾನ. ಆದ್ದರಿಂದ ಗೆರೆಗಳ ಸಂಖ್ಯೆಯೂ ಕಡಿಮೆ. ಗೆರೆಗಳೂ ಒತ್ತಾಗಿರುತ್ತವೆ. ಹೀಗೆ ಚಳಿಗಾಲದಲ್ಲಿ ಮೀನಿನ ಬೆಳೆವಣಿಗೆ ಮತ್ತು ಗೆರೆಗಳಲ್ಲಿ ಆಗುವ ತಡೆ ಮೀನಿನ ವಯಸ್ಸನ್ನು ನಿರ್ಧರಿಸಲು ನೆರವಾಗುತ್ತದೆ.

ಇಲ್ಯಾಸ್ಮೊಬ್ರಾಂಕ್ ಮೀನುಗಳಲ್ಲಿ ಬಾಯಿ ತಲೆಯ ಆದಿಭಾಗದಲ್ಲಿದ್ದು ಅರ್ಧಚಂದ್ರಾಕೃತಿಯಲ್ಲಿರುತ್ತದೆ. ಮೂಳೆಮೀನುಗಳಲ್ಲಾದರೆ ಬಾಯಿ ತಲೆಯ ತುದಿಯಲ್ಲಿದೆ. ಆಹಾರದ ಬಗೆ, ಆಹಾರವನ್ನು ತಿನ್ನುವ ರೀತಿಗಳಿಗೆ ಅನುಗುಣವಾಗಿ ಬಾಯಿಯ ಗಾತ್ರ ಮತ್ತು ಸ್ಥಾನಗಳಲ್ಲಿ ವೈವಿಧ್ಯ ಕಾಣಬರುತ್ತದೆ.

ಹೆಮಿರ್‍ಯಾಂಫಿಡೆ (ಕಂಡೆ ಮೀನಿನ ಕುಟುಂಬ) ಗುಂಪಿನ ಮೀನುಗಳಲ್ಲಿ ಕೆಳದವಡೆ ಮೇಲ್ದವಡೆಗಿಂತ ಉದ್ದ. ಬಿಲೋನಿಡೆ (ಕೊಂಟಿಮೀನುಗಳ ಕುಟುಂಬ) ಗುಂಪಿನವಲ್ಲಿ ಎರಡು ದವಡೆಗಳೂ ಮುಂದೆ ಚಾಚಿ ಕೊಕ್ಕಿನ ರೂಪತಾಳಿವೆ. ಕತ್ತಿಮೀನಿನಲ್ಲಿ ಮೇಲಿನ ದವಡೆ ಮಾತ್ರ ಮುಂದೆ ಚಾಚಿದೆ. ಕಾರ್ಪುಮೀನುಗಳ ಪೈಕಿ ಕೆಲವು ಬೇಕಾದಾಗ ಬಾಯನ್ನು ಉದ್ದಕ್ಕೆ ಚಾಚಬಲ್ಲವು. ಇಲ್ಯಾಸ್ಮೊಬ್ರಾಂಕ್ ಮೀನುಗಳಲ್ಲಿ ಹಲ್ಲುಗಳು ಮಾರ್ಪಾಟುಹೊಂದಿದ ದಂತರಚನೆಗಳಾಗಿದ್ದು ದವಡೆಯಲ್ಲಿ ಮಾತ್ರ ಇವೆ. ಮೂಳೆಮೀನುಗಳಲ್ಲಿ ಸಣ್ಣ ಹಲ್ಲುಗಳು, ನಾಲಗೆಯ ಮೇಲೂ ಬಾಯಿಯ ಅಂಗುಳದಲ್ಲೂ ಇರುವುದುಂಟು. ಬಿಳಿಮೀನಿನಲ್ಲಿ ಗಂಟಲಿನಲ್ಲೂ ಇರುವುದುಂಟು. ಹಲ್ಲುಗಳ ಗಾತ್ರದಲ್ಲಿ, ಆಕಾರದಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣಬಹುದು.

ಇಲ್ಯಾಸ್ಮೊಬ್ರಾಂಕ್ ವರ್ಗದ ಡೇಸಿಯಾಟಿಡೆ ಕುಟುಂಬಕ್ಕೆ ಸೇರಿದ ಸ್ಟಿಂಗ್‌ರೇ ಮತ್ತು ಮಿಲಿಯೊಬ್ಯಾಟಿಡೆ ಕುಟುಂಬಕ್ಕೆ ಸೇರಿದ ಈಗಲ್ ರೇ ಗಳಲ್ಲಿ ವಿಷ ಗ್ರಂಥಿಗಳಿವೆ. ಮೂಳೆಮೀನುಗಳಲ್ಲಿ ಈ ಗ್ರಂಥಿಗಳ ರಚನೆ ಸ್ವಲ್ಪ ಜಟಿಲವಾಗಿಯೇ ಇದೆ. ಮೀಸೆಮೀನು ಮತ್ತು ಚೇಳುಮೀನುಗಳಲ್ಲಿ ವಿಷಗ್ರಂಥಿಗಳು ಹರಿತವಾದ ಮುಳ್ಳುಗಳ ಜೊತೆಗೇ ಇದ್ದು ಸ್ವರಕ್ಷಣೆಗಾಗಿ ಇಲ್ಲವೆ ಇತರ ಪ್ರಾಣಿಗಳ ವಿರುದ್ಧ ಬಳಸಿಕೊಳ್ಳುವ ಸಾಧನಗಳಾಗಿವೆ.

ಕೆಲವು ಮೀನುಗಳಲ್ಲಿ ವಿಷಗ್ರಂಥಿಗಳು ಇಲ್ಲದಿದ್ದರೂ ಅವುಗಳ ಸ್ನಾಯುಗಳಲ್ಲಿ ವಿಷವಸ್ತುಗಳು ವ್ಯಾಪಿಸಿರುತ್ತವೆ. ಇಂಥ ಮೀನುಗಳನ್ನು ತಿಂದಲ್ಲಿ ದೇಹಕ್ಕೆ ಅಪಾಯವೂ ಕೆಲವು ವೇಳೆ ಸಾವೂ ಆಗಬಹುದು. ಟೆಟ್ರೊಡಾಂಟಿಡೆ ಕುಟುಂಬದ ಬುರುಡೆಮೀನುಗಳು ಉದಾಹರಣೆಗಳು.

ಕೆಲವು ಮೀನುಗಳು ವಿದ್ಯುತ್ತನ್ನು ಉತ್ಪತ್ತಿಮಾಡಬಲ್ಲವು. ಇವನ್ನು ಮುಟ್ಟಿದೊಡನೆಯೆ ವಿದ್ಯುತ್ ಆಘಾತ ಉಂಟಾಗುತ್ತದೆ. ಉದಾಹರಣೆ: ಟಾರ್ಪಿಡೊ, ಸ್ಕೇಟ್ ಮತ್ತು ರೇಮೀನುಗಳು. ಟಾರ್ಪಿಡಿನಿಡೆ ಕುಟುಂಬದ ಮೀನುಗಳಲ್ಲಿ ತಲೆಗೂ ಉಬ್ಬಿರುವ ಸೊಂಟದ ರೆಕ್ಕೆಗಳಿಗೂ ಮಧ್ಯೆ ದೇಹದ ಎರಡು ಪಕ್ಕಗಳಲ್ಲೂ ಸಿಂಬಿಯಂತಿರುವ ಎರಡು ವಿದ್ಯುಜ್ಜನಕ ಅಂಗಗಳಿವೆ. ಅಂಗದ ಮೇಲ್ಭಾಗ ಧನವಿದ್ಯುತ್ತು ತಳಭಾಗ ಋಣವಿದ್ಯುತ್ತು ಇರುವುವು.

ಮೂಳೆಮೀನುಗಳ ಪೈಕಿ ಎಲೆಕ್ಟ್ರಿಕ್ ಈಲ್ (ಒಂದು ಬಗೆಯ ಹಾವು ಮೀನು) ಮತ್ತು ಎಲೆಕ್ಟ್ರಿಕ್ ಚೇಳುಮೀನುಗಳಲ್ಲಿ ಈ ತೆರನ ವಿಶಿಷ್ಟ ಅಂಗಗಳುಂಟು. ಆಹಾರ ಪ್ರಾಣಿಗಳನ್ನು ಕೊಲ್ಲುವುದಕ್ಕೂ ನಿಶ್ಚೇತನಗೊಳಿಸುವುದಕ್ಕೂ ಇವನ್ನು ಬಳಸಿಕೊಳ್ಳುತ್ತವೆ.

ಕೆಲವು ಬಗೆಯ ಮೀನುಗಳಲ್ಲಿ ಬೆಳಕನ್ನು ಉತ್ಪಾದಿಸುವ ಸ್ಫುರಸಂದೀಪ್ತ ಅಂಗಗಳಿವೆ. ಇವು ಕೇವಲ ಸರಳಜೀವಕೋಶಗಳಾಗಿರಬಹುದು ಇಲ್ಲವೆ ಜಟಿಲರಚನೆ ಉಳ್ಳ ಅಂಗಗಳಾಗಿರಬಹುದು. ಬೊಂಬ್ಲಿ (ಬಾಂಬೆ ಡಕ್ – ಹಾರ್ಪೊಡಾನ್ ನೆಹೆರಿಯಸ್) ಮೀನನ್ನು ಹಿಡಿದ ಕ್ಷಣದಲ್ಲಿ ಉಜ್ವಲವಾಗಿ ಮಿನುಗುತ್ತಿರುತ್ತದೆ. ಈ ಮೀನಿನಲ್ಲಿ ಬೆಳಕು ಉತ್ಪಾದಿಸುವ ವಿಶೇಷ ಅಂಗವಿಲ್ಲವಾದರೂ ಅದರ ಮೈಮೇಲಿರುವ ಕೆಲವು ಸ್ಫುರಸಂದೀಪ್ತ ಬ್ಯಾಕ್ಟೀರಿಯಗಳಿಂದಾಗಿ ಈ ಗುಣವನ್ನು ತೋರುತ್ತದೆ. ಇಲ್ಯಾಸ್ಮೊಬ್ರಾಂಕ್ ಗುಂಪಿನ ಕೆಲವು ಷಾರ್ಕುಗಳಲ್ಲಿ ಬೆಳಕನ್ನು ಉತ್ಪತ್ತಿ ಮಾಡುವ ಸಾಮರ್ಥ್ಯವಿದೆ. ಮೂಳೆಮೀನುಗಳ

ಪೈಕಿ ಆಳಸಾಗರ ವಾಸಿಗಳಾದ ಕೆಲವು ಪ್ರಭೇದಗಳಲ್ಲಿ ಫೋಟೋಫೋರ್ಸ್ ಎಂಬ ಬೆಳಕು ಬೀರುವ ವಿಶೇಷ ಅಂಗವಿದೆ.

ಲಾಟೀನು ಮೀನುಗಳಲ್ಲಿ ಫೋಟೊಫೊರ್ಸ್ ಅಂಗಗಳು ಉದ್ದವಾಗಿಯೂ ಹೆಚ್ಚು ಪ್ರಕಾಶಯುತವಾಗಿಯೂ ಇವೆ.

ಮೀನುಗಳು ಶಬ್ದವನ್ನು ಉತ್ಪತ್ತಿ ಮಾಡುವುದಿಲ್ಲವೆಂಬುದು ಸಾಮಾನ್ಯ ನಂಬಿಕೆ. ಇದು ನಿಜವಲ್ಲ, ಅನೇಕ ಮೂಳೆ ಮೀನುಗಳು ಕೆಲವು ವಿಶೇಷ ಅಂಗಗಳ ಮೂಲಕ ಶಬ್ದವನ್ನು ಉತ್ಪತ್ತಿ ಮಾಡುತ್ತವೆ. ಈ ಅಂಗಗಳು ಗಾಳಿಬುರುಡೆ, ಮುಳ್ಳು ಮತ್ತು ಕಶೇರುಕಗಳೊಡನೆ ಲಗತ್ತಾಗಿರುವುವು. ನಳ್ಳಿ ಮೀನುಗಳು (ಲೋಚಸ್), ಕಾರ್ಪುಗಳು ಮತ್ತು ಮೀಸೆ ಮೀನುಗಳು ಶಬ್ದವನ್ನು ಉತ್ಪಾದಿಸುವುವು.

ಒಳ ಅಂಗಗಳು ಮೀನಿನ ಕಂಕಾಲ, ಜೀರ್ಣಾಂಗ ಮಂಡಲ, ರಕ್ತ ಪರಿಚಲನಾಂಗ ಮಂಡಲ, ನರಮಂಡಲ ಇತ್ಯಾದಿ ಅಂಗಗಳನ್ನು ಒಳಗೊಂಡಿವೆ.

ಕಂಕಾಲದಲ್ಲಿ ತಲೆಯೋಡು ಅಥವಾ ಕಪಾಲ, ಕಶೇರು ಕಂಬ ಅಥವಾ ಬೆನ್ನು ಹುರಿ ಮತ್ತು ಈಜುರೆಕ್ಕೆಗಳು ಎಂಬ ಮೂರು ಭಾಗಗಳುಂಟು.

ಕಪಾಲದಲ್ಲಿ ಎರಡು ಭಾಗ – ಮಿದುಳು ಮತ್ತು ಜ್ಞಾನೇಂದ್ರಿಯಗಳನ್ನು ಆವರಿಸಿರುವ ಕ್ರೇನಿಯಮ್ (ಮಿದುಳುಕೋಶ) ಹಾಗೂ ದವಡೆ ಮತ್ತು ಕಿವಿರುಗಳನ್ನು ಒಳಗೊಂಡ ಅಂತರ ಅವಯವಗಳ ಕಮಾನು. ಮೂಳೆಮೀನುಗಳ ಕಪಾಲದಲ್ಲಿ, ದವಡೆಗೆ ಸಂಬಂಧಪಟ್ಟಂತೆ ವಿನಹ ಹೆಚ್ಚು ಮಾರ್ಪಾಡುಗಳಿರುವುದಿಲ್ಲ.

ಕಶೇರುಕಂಬ ಅಥವಾ ಬೆನ್ನುಹುರಿ ಕಶೇರುಗಳಿಂದ ರೂಪಿತವಾಗಿದೆ. ಒಂದೊಂದು ಕಶೇರುಮಣಿಯೂ ಹಲವು ಘಟಕಗಳಿಂದ ಕೂಡಿದ ಸಂಕೀರ್ಣ ಕಟ್ಟು, ಕಶೇರುಗಳ ಸಂಖ್ಯೆಯ ಆಧಾರದ ಮೇಲೆ ಮೀನುಗಳ ವರ್ಗೀಕರಣ ಮಾಡುತ್ತಾರೆ.

ಸ್ನಾಯು: ಮೀನಿನ ಸ್ನಾಯು ರಚನೆ ಸರಳವಾದದ್ದು. ಸ್ನಾಯು ಖಂಡಗಳ ಸಂಖ್ಯೆ ಕಶೇರುವಿನ ಸಂಖ್ಯೆಗೆ ಅನುಗುಣವಾಗಿದೆ. ಮಾಂಸಖಂಡಗಳ ಬಣ್ಣ ಬಿಳಿ ಅಥವಾ ನಸುಗೆಂಪು. ಕೆಲವು ವೇಳೆ ಮಾಂಸಖಂಡ ಎಣ್ಣೆಯಿಂದ ಕೂಡಿದ್ದು ಕಿತ್ತಳೆ ಬಣ್ಣಕ್ಕಿರುವುದುಂಟು.

ಬಹುಪಾಲು ಮೀನುಗಳಲ್ಲಿ ಜೀರ್ಣಾಂಗವ್ಯೂಹ ಸರಳವಾಗಿದೆ. ಗಂಟಲು, ಅನ್ನನಾಳ, ಜಠರ, ಕರುಳು ಮತ್ತು ಗುದನಾಳ ಇವೇ ಜೀರ್ಣಾಂಗ ವ್ಯೂಹದ ಪ್ರಧಾನ ಅಂಗಗಳು.

ಉನ್ನತ ಕಶೇರುಕ ಪ್ರಾಣಿಗಳಲ್ಲಿರುವಂತೆ ಮೀನಿನಲ್ಲಿ ಚಾಚಬಲ್ಲ ನಾಲಗೆಯಾಗಲಿ, ಜೊಲ್ಲುರಸವನ್ನು ಸೂಸುವ ಜೊಲ್ಲು ಗ್ರಂಥಿಗಳಾಗಲಿ ಇಲ್ಲ. ಅನ್ನನಾಳಕ್ಕಿಂತ ಜಠರ ದೊಡ್ಡದು. ಅನೇಕ ಮೂಳೆ ಮೀನುಗಳಲ್ಲಿ ಜಠರದ ಪ್ರದೇಶ ಭಾಗದ ಬಳಿ ಕೆಲವು ಕುರುಡು ಸಂಚಿಗಳಿವೆ. ಇವಕ್ಕೆ ಮುಂಗರುಳುನಾಶಕೋಶ (ಪೈಲೋರಿಕ್ ಸೀಕೆ) ಎಂದು ಹೆಸರು. ಉಚ್ಚ ಪ್ರಾಣಿಗಳಲ್ಲಿ ಕಾಣವು. ಈ ಚೀಲಗಳ ಸಂಖ್ಯೆಯಲ್ಲಿ ವರ್ಗಗಳಲ್ಲಿ ವ್ಯತ್ಯಾಸವುಂಟು.

ಮೀನಿನ ಕರುಳು ಒಂದು ಸರಳನಾಳ. ಇದರ ಗಾತ್ರ ಮತ್ತು ಉದ್ದ ಮೀನಿನ ಆಕಾರಕ್ಕೆ ತಕ್ಕಂತೆ ಇರುತ್ತದೆ. ಮಾಂಸಾಹಾರಿ ಮೀನುಗಳಲ್ಲಿ ಈ ನಾಳ ಚಿಕ್ಕದು. ಸಸ್ಯಾಹಾರಿ ಮೀನುಗಳಲ್ಲಿ ಉದ್ದವಾಗಿದ್ದು ಸುರುಳಿ ಸುತ್ತಿಕೊಂಡಿರುತ್ತದೆ.

ಮೀನಿನ ಯಕೃತ್ ನಿರ್ದಿಷ್ಟ ಆಕಾರವಿಲ್ಲದ ಅಂಗಾಂಶದ ಮುದ್ದೆ. ಇದರ ಗಾತ್ರವೂ ವಿಭಿನ್ನವಾಗಿರುತ್ತದೆ. ಪಿತ್ತಕೋಶ ಈ ಅಂಗಕ್ಕೆ ಅಂಟಿಕೊಂಡಿದೆ. ಮೇದೋಜೀರಕ ಗ್ರಂಥಿ ಕೂಡ ಅಡಕವಾದ ಅಂಗವಾಗಿರದೆ ಹರಡಿರುತ್ತದೆ.

ಮೀನಿನ ಗುದದ್ವಾರ ನೇರವಾದ ಕೊಳವೆ. ಷಾರ್ಕು ಮುಂತಾದ ಕೆಲವು ಮೀನುಗಳಲ್ಲಿ ಸುರುಳಿಯಾಕಾರದ ಕವಾಟವುಂಟು.

ಪರಸ್ಪರ ಸಂಪರ್ಕವಿರುವ ಶುದ್ಧ ಮತ್ತು ಮಲಿನ ರಕ್ತನಾಳಗಳ ಮೂಲಕ ರಕ್ತಹರಿದು ದೇಹದ ಪ್ರತಿಯೊಂದು ಭಾಗದ ಜೀವಕೋಶಕ್ಕೂ ಪೋಷಣೆಯನ್ನು ಒದಗಿಸುತ್ತದೆ. ಹೃದಯ 4 ಭಾಗಗಳಿಂದ ಕೂಡಿದೆ. ಕೋನಾಕಾರದ ಪೊಳ್ಳು ಹೃತ್ಕರ್ಣ, ಹೃತ್ಕುಕ್ಷಿ ಮತ್ತು ಬಲ್ಬ. ಮೀನಿನಲ್ಲಿರುವ ರಕ್ತದ ಮೊತ್ತ, ಉನ್ನತ ವರ್ಗದ ಪ್ರಾಣಿಗಳ ದೇಹಗಳಲ್ಲಿರುವುದಕ್ಕಿಂತ ಬಹಳ ಕಡಿಮೆ. ಅಲ್ಲದೆ ಅದರ ಬಣ್ಣ ಕಗ್ಗೆಂಪಲ್ಲ; ಬಿಳಿಚಿರುತ್ತದೆ. ರಕ್ತಪರಿಚಲನೆ ಕೂಡ ಮಂದಗತಿಯದು; ಮೀನಿನ ರಕ್ತದ ಉಷ್ಣತೆ ಸುತ್ತಲಿನ ನೀರಿನ ಉಷ್ಣತೆಗಿಂತ ಸ್ವಲ್ಪ ಹೆಚ್ಚು.

ಇದಲ್ಲದೆ ಮೀನಿನ ಇತರ ಒಳ ಅಂಗಗಳು ಯಾವುವೆಂದರೆ ಮೂತ್ರ ಪಿಂಡ, ಜನನೇಂದ್ರಿಯಗಳು, ಗಾಳಿ ಬುರುಡೆ, ಥೈರಾಯಿಡ್, ಥೈಮಸ್ ಮತ್ತು ಸುಪ್ರಾರೀನಲ್ ಗ್ರಂಥಿಗಳು.

ಮಿದುಳು, ಮಿದುಳುಬಳ್ಳಿ ಮತ್ತು ನರಗಳನ್ನು ನರವ್ಯೂಹ ಒಳಗೊಂಡಿದೆ. ಇಲ್ಯಾಸ್ಮೊಬ್ರಾಂಕ್ ಮೀನುಗಳಲ್ಲಿ ಒಂದು ಜೊತೆ ಟೊಳ್ಳುಗೂಡಿನಂಥ ಘ್ರಾಣ ಹಾಲೆಗಳುಂಟು, ಮೂಳೆ ಮೀನುಗಳಲ್ಲಿ ಇವು ಕಿರಿದಾಗಿರುತ್ತವೆ.

ಮಿದುಳಿನ ಇತರ ಮುಖ್ಯಭಾಗಗಳು: ಮುಮ್ಮಿದುಳಿನ ಎರಡು ಅರ್ಧ ಗೋಳಗಳು, ದೃಷ್ಟಿಕೋನಕಗಳು ಮತ್ತು ಹಿಮ್ಮಿದುಳು. ಮಿದುಳುಬಳ್ಳಿ ದೇಹದ ಉದ್ದಕ್ಕೂ ಏಕಪ್ರಕಾರವಾಗಿದೆ. ನರಗಳನ್ನು ಬೆನ್ನು ಹುರಿಯ ನರಗಳು ಮತ್ತು ಕಪಾಲದ ನರಗಳು ಎಂಬ ಎರಡು ಗುಂಪುಗಳಾಗಿ ವಿಭಾಗಿಸಬಹುದು.

ಜ್ಞಾನೇಂದ್ರಿಯಗಳು, ಘ್ರಾಣ, ದೃಷ್ಟಿ, ಶ್ರವಣ, ರುಚಿ ಮತ್ತು ಸ್ಪರ್ಶಕ್ಕೆ ಸಂಬಂಧಪಟ್ಟವು. ಘ್ರಾಣೇಂದ್ರಿಯ ಮೂಗಿನ ಹೊಳ್ಳೆಗಳ ಒಳಗಿರುತ್ತವೆ. ಮೀನುಗಳಲ್ಲಿ ಈ ಇಂದ್ರಿಯ ಬಹಳ ತೀಕ್ಷ್ಣವಾದದ್ದು.

ಕಣ್ಣು ನೀರಿನಲ್ಲಿ ನೋಡಲು ಅನುಕೂಲವಾಗಿರುವಂತೆ ಮಾರ್ಪಾಡಾಗಿದೆ. ಕಣ್ಣಿನ ಮಸೂರ ಗೋಳಾಕಾರದ್ದು. ಕನೀನಿಕೆ ಉಚ್ಚ ಪ್ರಾಣಿಗಳಲ್ಲಿ ದೊಡ್ಡದಾಗಬಹುದು ಇಲ್ಲವೆ ಚಿಕ್ಕದಾಗಬಹುದು. ಆದರೆ ಈ ಸಾಮರ್ಥ್ಯ ಮೀನಿನ ಕನೀನಿಕೆಗೆ ಇಲ್ಲ. ಅಲ್ಲದೆ ಕೆಲವು ವೇಳೆ ಇದು ಬಣ್ಣದಿಂದ ಕೂಡಿರಬಹುದು.

ಕಣ್ಣುಗಳು ತಲೆಯ ಎರಡು ಪಕ್ಕಗಳಲ್ಲಿರುವುದರಿಂದ ಮೀನಿನ ದೃಷ್ಟಿ ಏಕಪಾರ್ಶ್ವನೋಟ ಅಥವಾ ಒಕ್ಕಣ್ಣು ನೋಟ. ಮತ್ತೊಂದು ವಿಶೇಷವೆಂದರೆ ಮೀನುಗಳಲ್ಲಿ ಕಣ್ಣಿನ ರೆಪ್ಪೆಯಾಗಲೀ ಕಣ್ಣೀರು ಸುರಿಸುವ ಗ್ರಂಥಿಗಳಾಗಲೀ ಇಲ್ಲದಿರುವುದು.

ಶ್ರವಣೇಂದ್ರಿಯ: ಮೀನಿನ ಶ್ರವಣೇಂದ್ರಿಯ ಮುಖ್ಯವಾಗಿ ಒಳಕಿವಿ. ಇದರಲ್ಲಿ ಒಂದು ತೆಳುವಾದ ಪಟಲವುಂಟು. ಇದಕ್ಕೆ ವೆಸ್ಟಿಬ್ಯೂಲ್ ಎಂದು ಹೆಸರು. ಇದು ತಲೆ ಬುರುಡೆಯ ಎರಡು ಪಕ್ಕಗಳಲ್ಲಿರುವ ಗೂಡುಗಳಲ್ಲಿ ಸ್ಥಿತವಾಗಿದೆ. ಇದರ ಕೆಲಸ ಎರಡು ತೆರನಾದದ್ದು. ಒಂದು ಶಬ್ದವನ್ನು ಕೇಳುವುದು. ಇನ್ನೊಂದು ದೇಹದ ಸಮತೋಲನವನ್ನು ಕಾಪಾಡುವುದು. ಮೀನುಗಳಲ್ಲಿ ನಡುಗಿವಿಯಾಗಲೀ ಹೊರಕಿವಿಯಾಗಲೀ ಇಲ್ಲ. ಯುಟ್ರಿಕ್ಯುಲಸ್ ಅಥವಾ ಮೇಲ್ಗೂಡು ಮತ್ತು ಸ್ಯಾಕ್ಯುಲಸ್ ಎಂಬ ಕೆಳಗೂಡುಗಳಿವೆ. ದೇಹದ ಸಮತೋಲನವನ್ನು ಕಾಯ್ದುಕೊಳ್ಳಲು ನೆರವಾಗುವ ಅರೆವೃತ್ತಾಕಾರದ ಮೂರು ಕಾಲುವೆಗಳುಂಟು. ಈ ಕಾಲುವೆಗಳ ಒಂದು ತುದಿ ಊದಿಕೊಂಡಿದ್ದು ಇದನ್ನು ಅಂಪುಲ ಎಂದು ಕರೆಯಲಾಗುತ್ತದೆ.

ಕೆಲವು ಮೀನುಗಳಲ್ಲಿ ಗಾಳಿ ಬುರುಡೆಗೂ ಒಳಕಿವಿಗೂ ನಿಕಟ ಸಂಬಂಧವುಂಟು. ಸೈಪ್ರಿನಿಡ್ (ಸಾಸಲು, ಅಗಸಗಿತ್ತಿಮೀನು ಮುಂತಾದವು) ಮತ್ತು ಸೈಲ್ಯುರಾಯಿಟ್ (ಮೀಸೆ ಮೀನು) ಮೀನುಗಳಲ್ಲಿ ಎಲುಬಿನ ವಿಶಿಷ್ಟ ಅಂಗವೊಂದುಂಟು. ಇದನ್ನು ವೆಬಿರಿಯನ್ ಆಸಿಕಲ್ಸ್ ಎನ್ನುತ್ತಾರೆ. ಇವು ಗಾಳಿ ಬುರುಡೆಗೂ ಒಳಕಿವಿಗೂ ಸಂಪರ್ಕವನ್ನು ಏರ್ಪಡಿಸುತ್ತವೆ. ಇವು ಸಿಹಿನೀರಿನಲ್ಲಿ ವಾಸಿಸುವ ಮೀನುಗಳಲ್ಲಿ ಮಾತ್ರವಿರುತ್ತವೆ. ಬಹುಶಃ ಇವು ಶಬ್ದತರಂಗಗಳ ಕಂಪನವನ್ನು ತೀವ್ರಗೊಳಿಸುವುವು.

ರಸನೇಂದ್ರಿಯ ಮೀನುಗಳಲ್ಲಿ ವಿಕಾಸಗೊಂಡಿಲ್ಲ. ಸಾಮಾನ್ಯವಾಗಿ ಮೀನುಗಳು ಆಹಾರವನ್ನು ಅಗಿಯದೆ ನುಂಗುವುದರಿಂದ ರಸನೇಂದ್ರಿಯದ ಅವಶ್ಯಕತೆ ಕಡಿಮೆ.

ಸ್ಪರ್ಶೇಂದ್ರಿಯ: ಮೀನುಗಳಲ್ಲಿ ಸ್ಪರ್ಶೇಂದ್ರಿಯ ಬಹುಮಟ್ಟಿಗೆ ವಿಕಾಸಗೊಂಡಿದ್ದು ಇದಕ್ಕೆ ಸಂಬಂಧಪಟ್ಟ ಕೆಲವು ವಿಶೇಷಾಂಗಗಳು ಬೆಳೆದಿರುತ್ತವೆ. ಮೀನಿನ ಹೊರಚರ್ಮದ ಮೇಲೆಲ್ಲ ಬಾರ್ಬೆಲ್ ಎಂಬ ಸಣ್ಣ ಸ್ಪರ್ಶಾಂಗಗಳಿವೆ. ಇವು ಸಾಮಾನ್ಯವಾಗಿ ಬಾಯಿಯ ಹತ್ತಿರವೇ ಹೆಚ್ಚು. ಮೀಸೆಮೀನುಗಳಲ್ಲಿ ಇವು ಬಾಯಿ ಸುತ್ತಲೂ ಜೋಡಿಯಾಗಿರುವುವು. ಆಹಾರವನ್ನು ಹುಡುಕುವುದರಲ್ಲಿ ಇವು ಸಹಾಯಕ.

ಪಾರ್ಶ್ವರೇಖೆ ಕೂಡ ನೀರಿನಲ್ಲಿ ಉಂಟಾಗುವ ಕಂಪನಗಳನ್ನು ಗುರುತಿಸಲು ಸಹಾಯಕವಾಗಿದೆ.

ವರ್ಣವಿನ್ಯಾಸ: ಸಾಮಾನ್ಯವಾಗಿ ಮೀನುಗಳು ತಾವು ವಾಸಿಸುವ ಪರಿಸರಕ್ಕೆ ಹೊಂದಿಕೊಳ್ಳುವಂತೆ ವಿವಿಧ ವರ್ಣಗಳನ್ನು ಪಡೆದಿವೆ. ಉಷ್ಣವಲಯದ ಮೀನುಗಳ ಬಣ್ಣ ಉಜ್ವಲ. ಚಪ್ಪಟೆ ಮೀನುಗಳಲ್ಲಿ ಮೈಬಣ್ಣ ಗೋಸುಂಬೆಯದರಂತೆ ಸನ್ನಿವೇಶಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತದೆ. ಕೆಲವು ಕುಟುಂಬಗಳಲ್ಲಿ ಎಳೆಯ ಮೀನಿನ ಬಣ್ಣ ಅದು ಬೆಳೆದಂತೆ ಮಾಯವಾಗುತ್ತದೆ. ಉದಾಹರಣೆ: ಕುಚ್ಚು ಮೀನು (ಚಾನ ಸ್ಟ್ರಯೇಟಸ್). ಅನೇಕ ಮೀನುಗಳಲ್ಲಿ ಹೆಣ್ಣು ಮತ್ತು ಗಂಡಿನ ಬಣ್ಣಗಳು ಬೇರೆಬೇರೆಯಾಗಿರುವುವು.

ಸಂತಾನಕ್ರಿಯೆ: ಜನನಾಂಗಗಳು ಆಕಾರದಲ್ಲಿ ನೀಳವಾಗಿಯೂ ಜೊತೆ ಜೊತೆಯಾಗಿಯೂ ಇರುವುವು. ಲಿಂಗಗಳು ಪ್ರತ್ಯೇಕ. ಗರ್ಭಧಾರಣೆ ದೇಹದ ಹೊರಗೆ ನಿರ್ದಿಷ್ಟ ಶ್ರಾಯ ಅಥವಾ ಋತುವಿನಲ್ಲಿ ನಡೆಯುತ್ತದೆ.

ಹೆಣ್ಣಿನಿಂದ ಅಂಡವೂ ಗಂಡಿನಿಂದ ವೀರ್ಯವೂ ನೀರೊಳಗೆ ಹೊರಬಿದ್ದ ತರುವಾಯ ಬೆರೆತು ಆಮೇಲೆ ಗರ್ಭ ಬೆಳೆಯುತ್ತದೆ. ಈ ವಿಧಿಗೆ ಕೆಲವು ಸೈಪ್ರಿನೋಡಾಂಟ್ (ಕುಡಬಡ್ಡು, ಕುಡಿಯಾನ್, ಮಲೇರಿಯ ಮೀನು ಇತ್ಯಾದಿ ) ಅಪವಾದವೆನಿಸಿವೆ. ಈ ಬಗೆಯ ಮೀನುಗಳಲ್ಲಿ ಗಂಡಿನ ವೀರ್ಯ ಹೆಣ್ಣಿನೊಳಕ್ಕೆ ಸೇರಿ ದೇಹದ ಒಳಗೂಡಿನಲ್ಲಿ

ಗರ್ಭ ಬೆಳೆಯುತ್ತದೆ. ಹೀಗಾಗುವುದರಿಂದ ಇವು ಮೊಟ್ಟೆಯಿಡುವುದರ ಬದಲು ಜೀವಂತಮರಿಗಳನ್ನು ಹೆರುತ್ತವೆ. ಉದಾಹರಣೆ:ಗಾಂಬೂಸಿಯ ಮೀನು ಮತ್ತು ಎಲ್ಲ ಬಗೆಯ ಇಲ್ಯಾಸ್ಮೊ ಬ್ರಾಂಕ್‌ಗಳು. ಇಂಥ ಗಂಡುಮೀನುಗಳಲ್ಲಿ ಸಂಭೋಗ ಅಂಗಗಳಿವೆ. ಸ್ಟೈಕ್ಲಿಡ್ ಜಾತಿಯ ಹಲವಾರು ಮೀನುಗಳಲ್ಲಿ ಗಂಡುಮೀನು ಒಂದು ಬಗೆಯ ಮರಿಮಾಡುವ ಗೂಡನ್ನು ಕಟ್ಟುತ್ತದೆ. ಲ್ಯಾಬಿರಿಂತಿಯೈ ಮೀನುಗಳಲ್ಲಿ ಅನೇಕವು ಗಾಳಿಗುಳ್ಳೆಗಳನ್ನು ರಚಿಸಿ ಇಂಥ ಗೂಡುಗಳನ್ನು ನಿರ್ಮಿಸುತ್ತವೆ. ಉದಾಹರಣೆ: ಪ್ಯಾರಡೈಸ್ ಮೀನು (ಮ್ಯಾಕ್ರೊಪೋಡಸ್ ಕುಪಾನಸ್), ಕುಂಬಳದಬೀಜಮೀನು. ಈ ಗುಳ್ಳೆಗಳು ಒಂದಕ್ಕೊಂದು ಅಂಟಿಕೊಂಡು ನೊರೆರಾಶಿಯಂತೆ ತೇಲಾಡುತ್ತವೆ. ಈ ಮೀನುಗಳು ಮೊಟ್ಟೆಯನ್ನು ಹೊತ್ತು ರಕ್ಷಿಸುವುದುಂಟು. ಕಡಲದುರೆಗಳಲ್ಲಿ ಬಾಲದ ಕೆಳಗೆ ಒಂದು ಚೀಲವಿದೆ. ಇದರೊಳಗೆ ಮೊಟ್ಟೆಗಳು ಸಂಗ್ರಹಗೊಂಡು ಒಡೆಯುವ ತನಕ ಅಲ್ಲೇ ಇರುತ್ತದೆ. ಕೆಲವು ಬಗೆಗಳಲ್ಲಿ ಗಂಡುಮೀನು ಮೊಟ್ಟೆಗಳನ್ನು ತನ್ನ ಬಾಯಿಯಲ್ಲೇ ಮರಿಗಳಾಗುವ ತನಕ ಇರಿಸಿಕೊಂಡು ಕಾಪಾಡುತ್ತದೆ. ಉದಾಹರಣೆ:ಟೈಲಾಪಿಯ.

ಹೀಗೆ ಪ್ರಣಯಾಚರಣೆ, ಸಂಭೋಗ ಮತ್ತು ಮರಿಗಳ ರಕ್ಷಣೆ ಮುಂತಾದ ಕಾರ್ಯಗಳನ್ನು ವಿವಿಧ ಮೀನು ಜಾತಿಗಳು ವಿವಿಧ ರೀತಿಯಲ್ಲಿ ನಡೆಸುತ್ತವೆ. ಒಂದು ವಿಶೇಷ ಬಗೆಯ ಲಿಂಗಸಂಬಂಧವನ್ನು ಸಿರಾಟಾಯಿಡ್ ಅಕ್ಲಾರ್ ಎಂಬ ಮೀನುಗಳಲ್ಲಿ ಕಾಣಬಹುದು. ಇದರಲ್ಲಿ ಗಂಡು ಮೀನು ಹೆಣ್ಣಿನ ಮೇಲೆ ಪರೋಪಜೀವಿಯಂತೆ ಸ್ಥಿರವಾಗಿ ಅಂಟಿಕೊಂಡು ಬಾಳುತ್ತವೆ. ಈ ಗುಂಪಿನಲ್ಲಿ ಈಜುವ ಪ್ರಾಯದ ಮೀನುಗಳೆಲ್ಲ ಹೆಣ್ಣು ಮೀನುಗಳೆ. ಇವು ಆಳ ಸಾಗರದಲ್ಲಿ ನೆಲೆಸಿರುವುದರಿಂದ ಮತ್ತು ಒಂಟಿ ಜೀವನಕ್ರಮವನ್ನು ಅನುಸರಿಸುವುದರಿಂದ ಹೆಣ್ಣು ಮೀನು ಗಂಡಿನ ಸಂಪರ್ಕಕ್ಕೆ ಬರುವ ಸಂಭವ ಅತಿ ವಿರಳ. ಈ ಪರಿಸ್ಥಿತಿ ಅಥವಾ ಇಕ್ಕಟ್ಟನ್ನು ಎದುರಿಸಲು ಗಂಡುಮೀನುಗಳು ಮೊಟ್ಟೆಯಿಂದ ಹೊರಬಂದ ಕೂಡಲೆ ಹೆಣ್ಣು ಮೀನುಗಳಿಗೆ ಅಂಟಿಕೊಳ್ಳುತ್ತವೆ. ಹೀಗೆ ಅಂಟಿಕೊಂಡ ಮೇಲೆ ಗಂಡು ತನ್ನ ಬಾಯಿ, ದವಡೆ, ರೆಕ್ಕೆ ಮತ್ತು ಕಿವಿರುಗಳನ್ನು (ಅಂದರೆ ಸಂತಾನಕ್ರಿಯೆಗೆ ಸಹಾಯಕವಾಗುವ ಅಂಗಗಳು) ವಿನಾ ಇತರ ಅಂಗಗಳನ್ನು ಕಳೆದುಕೊಳ್ಳುತ್ತದೆ. ಗಂಡಿನ ದೇಹಪೋಷಣೆ ಹೆಣ್ಣಿನ ರಕ್ತದ ಮೂಲಕ ನಡೆಯುತ್ತದೆ.

ಇಲ್ಯಾಸ್ಮೊ ಬ್ರಾಂಕ್ ಮೀನುಗಳು ಮೊಟ್ಟೆಗಳನ್ನು ಇಡುವುದಲ್ಲದೆ ಮರಿಗಳನ್ನೂ ಹಾಕುತ್ತವೆ. ಮೊಟ್ಟೆ ಒಡೆಯಲು ನಾಲ್ಕೂವರೆ ತಿಂಗಳಿನಿಂದ ಹದಿನೈದು ತಿಂಗಳ ಕಾಲ ಹಿಡಿಯುವುದುಂಟು. ಮೊಟ್ಟೆಗಳು ಪೊರೆ ಚೀಲಗಳಿಂದ ಆವೃತವಾಗಿರುತ್ತದೆ. ಮೂಳೆ ಮೀನುಗಳಲ್ಲಿ ಎರಡು ವಿಧದ ಮೊಟ್ಟೆಗಳುಂಟು. ಪೆಲಾಜಿಕ್ (ತೇಲುಮೊಟ್ಟೆ) ಮತ್ತು ಡೆಮೆರ್ಸಲ್ (ಮುಳುಗು ಮೊಟ್ಟೆ). ಸಿಹಿನೀರು ಮೀನುಗಳ ಮೊಟ್ಟೆಗಳು ಸಾಗರದ ಮೀನುಗಳ ಮೊಟ್ಟೆಗಿಂತ ದೊಡ್ಡವು. ಬೆಳೆಯುವಾಗ ಮೀನಿನ ಭ್ರೂಣದಲ್ಲಿ ಅನೇಕ ಬದಲಾವಣೆಗಳು ಆಗುತ್ತವೆ. ಮಳಗುಮೀನು (ಈಲ್), ತಟ್ಟೆಮೀನುಗಳ ಭ್ರೂಣಾಭಿವೃದ್ಧಿಯಲ್ಲಿ ದೇಹದ ರೂಪರಚನೆಗಳಲ್ಲಿ ಪರಿವರ್ತನೆಯುಂಟು.

ಸಾಗರಗಳಲ್ಲಿ ಮೀನುಗಳ ವ್ಯಾಪ್ತಿ ನೀರಿನ ಉಷ್ಣತೆ, ಸಾಗರಪ್ರವಾಹಗಳ ವೇಗ ಮತ್ತು ದಿಕ್ಕು, ಸಮುದ್ರತೀರದ ಲಕ್ಷಣ, ನೀರಿನ ಲವಣಾಂಶ, ಸಮುದ್ರ ತಳದ ಏರುಪೇರುಗಳು, ಆಹಾರದ ಲಭ್ಯತೆ ಮುಂತಾದ ಅಂಶಗಳಿಗೆ ಅನುಗುಣವಾಗಿರುತ್ತದೆ. ಆದರೆ ಸಿಹಿನೀರು ಮೀನುಗಳ ವ್ಯಾಪ್ತಿ ಭೂಕಶೇರುಕ ಪ್ರಾಣಿಗಳ ವ್ಯಾಪ್ತಿಯನ್ನು ನಿರ್ಧರಿಸುವ ಅಂಶಗಳಿಗೆ ಅಧೀನವಾಗಿರುತ್ತದೆ.

ಸಮುದ್ರದ ಮೀನುಗಳಲ್ಲಿ ಎರಡು ಮುಖ್ಯ ಗುಂಪುಗಳಿವೆ. 1 ಸಾಗರವಾಸಿ ಮೀನುಗಳು 2 ಕರಾವಳಿ ಮೀನುಗಳು.

ಸಾಗರವಾಸಿ ಮೀನುಗಳು ಮೂರು ವಲಯಗಳಲ್ಲಿ ಕಾಣದೊರೆಯುವುವು.

1. ಸಮುದ್ರ ಮಟ್ಟದಿಂದ 150 ಮೀಟರ್ ಆಳದ ವಲಯ
2. 150 ರಿಂದ 500 ಮೀಟರ್ ಆಳದ ವಲಯ
3. ಸಾಗರ ಪಾತಾಳ (ಬೇತಿಪೆಲಾಜಿಕ್) ವಲಯ

ಕರಾವಳಿ ಮೀನುಗಳು ಸಮುದ್ರ ದಡದ ಹತ್ತಿರ ವಾಸಿಸುತ್ತವೆ. ಸಾರ್ಡಿನ್ (ಪೇಡಿ, ಬೊಯ್ಗೆ, ಸಿರಿಯಂಡೆ ಮುಂತಾದವು), ಮ್ಯಾಕೆರಲ್ (ಬಂಗಡೆ) ಮುಂತಾದ ಮೀನುಗಳೂ ಸಮುದ್ರ ತಳದಲ್ಲಿ ಪ್ಲೇಸ್, ಗುರುನಾರ್ಡ ಮುಂತಾದ ಮೀನುಗಳೂ ನೆಲಸಿವೆ. ಈ ಮೀನುಗಳಲ್ಲಿ ಸಾಗರಮೀನುಗಳಿಗಿಂತ ಹೆಚ್ಚು ವೈವಿಧ್ಯ ಇರುತ್ತದೆ. (ಚಿತ್ರ ನೋಡಿ). ಪೆಲಾಜಿಕ್ ಮೀನುಗಳ ವ್ಯಾಪ್ತಿ ನೀರಿನ ಉಷ್ಣತೆಗೆ ನಿಕಟವಾಗಿ ಹೊಂದಿಕೊಂಡಿದೆ. ಇದರಿಂದ ಪ್ರಪಂಚವನ್ನು ಮೀನುವಲಯಗಳನ್ನಾಗಿ ವಿಭಾಗಿಸಲು ಸಾಧ್ಯ.

1. $20^0$ ಸಮ ಉಷ್ಣತೆಯ ರೇಖೆಯೊಳಗಿರುವ ಉಷ್ಣವಲಯ
2. ಇದರ ಉತ್ತರ ಮತ್ತು ದಕ್ಷಿಣ ರೇಖೆಯ $6^0$ಸೆ ತನಕ ಇರುವ ಸಮಶೀತೋಷ್ಣ ವಲಯ ಮತ್ತು
3. ಇದಕ್ಕಿಂತ ತಂಪಾಗಿರುವ ಶೀತವಲಯ. ಉಷ್ಣವಲಯದಲ್ಲಿ ಉಳಿದ ವಲಯಗಳಿಗಿಂತ ಹೆಚ್ಚು ಜಾತಿಯ ಮೀನುಗಳಿವೆ.

ಕರಾವಳಿಯ ಮೀನುಗಳಲ್ಲಿ ಎರಡು ಮುಖ್ಯ ಗುಂಪುಗಳುಂಟು: ಇಂಡೋ ಫೆಸಿಫಿಕ್ ಕರಾವಳಿಯವು ಮತ್ತು ಅಟ್ಲಾಂಟಿಕ್ ಕರಾವಳಿಯವು. ಅಟ್ಲಾಂಟಿಕ್ ವಲಯದಲ್ಲಿರುವುದಕ್ಕಿಂತ ಹೆಚ್ಚು ಮೀನುಜಾತಿ ಮತ್ತು ಕುಟುಂಬಗಳನ್ನು ಇಂಡೋಪೆಸಿಫಿಕ್ ವಲಯದಲ್ಲಿ ಕಾಣಬಹುದು. ಶೀತವಲಯಗಳಲ್ಲಿ (ಆರ್ಕಟಿಕ್ ಹಾಗೂ ಅಂಟಾರ್ಕಟಿಕ್) ಆ ವಲಯಕ್ಕೆ ನಿರ್ದಿಷ್ಟವೆನಿಸುವ ಮೀನುಗಳಿವೆ. ಇವುಗಳಲ್ಲಿ ಅನೇಕವು ನೋಟೋಥೆನಿಡ್ ಗುಂಪಿಗೆ ಸೇರಿದವು.

ಮೀನುಗುಂಪುಗಳು ಸಾಗರಗಳಲ್ಲಿ ನಿರ್ದಿಷ್ಟ ಭೌಗೋಳಿಕ ಮಿತಿ ಅಥವಾ ಎಲ್ಲೆಯಲ್ಲಿ ವಾಸಿಸುತ್ತವೆ. ಅವು ವಲಸೆ ಹೋಗುವುದಾದರೂ ಈ ಪ್ರದೇಶದ ಎಲ್ಲೆಯೊಳಗೆ ಆಹಾರಾನ್ವೇಷಣೆಗಾಗಿ ಅಥವಾ ಮೊಟ್ಟೆಗಳನ್ನು ಇಡುವ ಉದ್ದೇಶದಿಂದ ಇವು ವಲಸೆ ಹೋಗುವುವು.

ಟನ್ನಿ, ಮ್ಯಾಕರಲ್, ಸಾರ್ಡೀನ್, ಈಲ್ (ಮಳಗು ಮೀನುಗಳು) ಸ್ಯಾಲ್ಮನ್ ಮುಂತಾದ ಮೀನುಗಳು ಸಾಗರಗಳಿಂದ ತೀರಪ್ರದೇಶಗಳಿಗೂ ಅಲ್ಲಿಂದ ವಾಪಸು ಕಡಲುಗಳಿಗೂ ಕೆಲವು ಋತುಗಳಲ್ಲಿ ವಲಸೆ ಹೋಗುವುವು. ಬಹುಶಃ ಸಮುದ್ರವೇ ಆ ಮೀನುಗಳ ಆದಿ ನೆಲೆಯಾಗಿದ್ದಿರಬಹುದು. ಈಗ ನದಿಗಳಲ್ಲಿ, ಹಳ್ಳಗಳಲ್ಲಿ, ಸರೋವರಗಳಲ್ಲಿ ನೆಲೆಸಿರುವ ಅನೇಕ ಬಗೆಯ ಮೀನುಗಳು ಸಾಗರಮೀನುಗಳಿಂದ ಉಗಮಿಸಿದುದಾಗಿ ಕಾಲ ಕ್ರಮೇಣ ಇವು ಸಿಹಿ ನೀರು ಮೀನಿನ ಸ್ವಷ್ಟಕುಟುಂಬಗಳಾಗಿ ವಿಕಸಿಸಿದುವು.

ಸಿಹಿನೀರು ಮೀನುಗಳನ್ನು ಎರಡು ಗುಂಪುಗಳಾಗಿ ವಿಭಾಗಿಸಬಹುದು: 1 ತಮ್ಮ ಜೀವನದ ಒಂದು ಹಂತವನ್ನು ಸಮುದ್ರದಲ್ಲಿ ಕಳೆಯುವ ಮೀನುಗಳು, 2 ಯಾವತ್ತೂ ಸಿಹಿನೀರಿನಲ್ಲೇ ವಾಸ ಮಾಡುವ ಮೀನುಗಳು. ಮ್ಯುಜಿಲಿಡೀ ಕುಟುಂಬದ ಗ್ರೇ ಮಲೆಟ್ ಮತ್ತು ಕಾಮನ್ ಈಲ್ (ಸಾಮಾನ್ಯ ಮಳಗು ಮೀನು) ಹಾಗೂ ಸ್ಯಾಲ್ಮನುಗಳು ಮೊದಲನೆಯ ಗುಂಪಿಗೆ ಸೇರಿದವು.

ಬಹುಪಾಲು ಸಿಹಿನೀರು ಮೀನುಗಳನ್ನು ಒಳಗೊಂಡಿರುವ ಅಸ್ಟೇರಿಯೊಫೈಸೀ ಗುಂಪಿನ ವ್ಯಾಪ್ತಿ ಖಂಡಗಳ ಭೂ ಚರಿತ್ರೆಯನ್ನು ಅರಿಯಲು ಸಹಾಯಕವಾಗುತ್ತದೆ. ಈ ಸಿಹಿ ನೀರಿನ ಮೀನುಗಳ ವ್ಯಾಪ್ತಿಯನ್ನು ಅಧ್ಯಯನ ಮಾಡಲು ಭೂಮಿಯನ್ನು 7 ಪ್ರಾಣಿ ಭೌಗೋಳಿಕ ಪ್ರದೇಶಗಳನ್ನಾಗಿ ವಿಂಗಡಿಸಬಹುದು: 1. ಆಸ್ಟ್ರೇಲಿಯ ಪ್ರದೇಶ, 2. ಮಡಗಾಸ್ಕರ್ 3. ನವೋಷ್ಣವಲಯ (ನಿಯೊಟ್ರಾಪಿಕಲ್) 4. ಆಫ್ರಿಕ 5. ಇಂಡಿಯ 6. ಪ್ರಾಚೀನ ಶೀತವಲಯ (ಪೇಲಿಯಾರ್ಕಟಿಕ್) 7. ನವಶೀತವಲಯ (ನಿಯೊ ಆರ್ಕಟಿಕ್)

ಆಸ್ಟ್ರೇಲಿಯ ಪ್ರದೇಶದಲ್ಲಿ ಶುದ್ಧ ಸಿಹಿನೀರು ಮೀನುಗಳಿಲ್ಲ. ಸಮುದ್ರವಾಸಿ ಮೀನುಗಳ ಸಂಬಂಧಿಗಳಾದ ಗೋಬಿಗಳು, ಸೀಪರ್ಚುಗಳು, ಗ್ರೇಮಲೆಟ್‌ಗಳು ಮುಂತಾದ ಸಿಹಿನೀರು ಮೀನುಗಳು ಮಾತ್ರ ಇಲ್ಲಿ ಕಾಣದೊರೆಯುತ್ತವೆ. ನಿರ್ದಿಷ್ಟವಾದ ಸಿಹಿನೀರುವಂಶಗಳು ಎರಡು ಮಾತ್ರ ಆಸ್ಟ್ರೇಲಿಯದ ಲಂಗ್‌ಫಿಷ್ (ಎಪಿಸಿರಾಟೋಡಸ್) ಮತ್ತು ಆಸ್ಟಿಯೊಗ್ಲಾಸಿಡ್ (ಸ್ಕ್ಲೆರೊಪ್ಲೇಜಿಸ್). ಆಸ್ಟೇರಿಯೊ ಫೈಸೀ ಗುಂಪಿಗೆ ಸೇರಿದ ಯಾವ ಮೀನುಗಳೂ ಈ ಪ್ರದೇಶದಲ್ಲಿಲ್ಲ. ಮಡಗಾಸ್ಕರ್ ಪ್ರದೇಶ ಆಸ್ಟ್ರೇಲಿಯ ಪ್ರದೇಶವನ್ನು ನಿಕಟವಾಗಿ ಹೋಲುತ್ತದೆ. ಈ ಪ್ರದೇಶದಲ್ಲೂ ಶುದ್ಧ ಸಿಹಿನೀರು ಮೀನುಗಳಿಲ್ಲ. ನವೋಷ್ಣಪ್ರದೇಶದಲ್ಲಿ ಎರಡು ಜಲ ಹರಿವುಗಳು ಒಂದಕ್ಕೊಂದು ಸೇರಿದ್ದರೂ ಉತ್ತರ ಅಮೆರಿಕದ ಮೀನುಗಳೇ ಬೇರೆ ದಕ್ಷಿಣ ಅಮೆರಿಕದ ಮೀನುಗಳೇ ಬೇರೆ. ದಕ್ಷಿಣ ಅಮೆರಿಕದ ಮೀನುಗಳು ಆಫ್ರಿಕದ ಮೀನುಗಳನ್ನು ಹೆಚ್ಚು ಹೋಲುತ್ತದೆ. ಚಾರ್ಸಿನ್ ಎಂಬ ಮೀನುಗಳು ಮಾತ್ರ ಎರಡು ಖಂಡಗಳಲ್ಲಿಯೂ ಇವೆ.

ಆಫ್ರಿಕಾ ಮತ್ತು ಇಂಡಿಯ ಪ್ರದೇಶಗಳು ಮೀನುಗಳ ವ್ಯಾಪ್ತಿಯ ದೃಷ್ಟಿಯಲ್ಲಿ ಬಹುಪಾಲು ಒಂದೇ ಬಗೆಯವು. ಆಸ್ಟೇರಿಯೊಫೈಸೀ ಮೀನು ಗುಂಪು ಈ ಪ್ರದೇಶದಲ್ಲೇ ವಿಕಾಸವಾಗಿರಬೇಕು. ಸೈಪ್ರಿನಿಡೆ ಕುಟುಂಬದ ಸಾಸಲು, ಕೆಮ್ಮೀನು ಇತ್ಯಾದಿ ಮೀನುಗಳು ಕೂಡ ವಿಕಾಸವಾಗಿದ್ದು ಇಲ್ಲಿಯೇ. ಈ ಪ್ರದೇಶಕ್ಕೆ ವಿಶಿಷ್ಟವೆಂದು ಕರೆಯುವ ಮೀನುಗಳು ಇಲ್ಲ. ಆದರೆ ಅನೇಕ ಬಗೆಯ ಕಾರ್ಪು, ಸಕರ್, ಲೋಡು ಇತ್ಯಾದಿ ಮೀನುಗಳನ್ನು ಇಲ್ಲಿ ಕಾಣಬಹುದು.

ವರ್ಗೀಕರಣ: ಮೀನುಗಳನ್ನು ಇಲ್ಯಾಸ್ಮೊಬ್ರಾಂಕಿಯೈ, ಟೀಲಿಯೊಸ್ಟೋಮೈ ಮತ್ತು ಡಿಪ್ನಾಯ್ ಎಂಬ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಇಲ್ಯಾಸ್ಮೊಬ್ರಾಂಕಿಯೈ ಮೀನುಗಳು ಮೃದ್ವಸ್ಥಿಪಂಜರವುಳ್ಳವಂಥವು ಮತ್ತು ಆದಿಕಾಲದವು. ಟೀಲಿಯೊಸ್ಟೋಮೈ ಮೀನುಗಳು ಎಲುಬಿನ ಕಂಕಾಲವುಳ್ಳವು ಮತ್ತು ಈಚಿನ ಕಾಲದವು. ಡಿಪ್ನಾಯ್




ಆಳ ಸಮುದ್ರದ ಮೀನುಗಳು

ಗುಂಪಿನವು ಫುಪ್ಫುಸಯುಕ್ತ. ಇವು ಆಸ್ಟ್ರೇಲಿಯ, ಆಫ್ರಿಕ, ಮತ್ತು ದಕ್ಷಿಣ ಅಮೆರಿಕದ ಜೌಗುಭೂಮಿಯಲ್ಲಿ ಕಾಣದೊರೆಯುತ್ತವೆ.

ಭಾರತದ ಜಲಪ್ರದೇಶಗಳಲ್ಲಿ ಸಾವಿರಕ್ಕಿಂತ ಹೆಚ್ಚು ಕುಟುಂಬಗಳಿವೆ. ಇವುಗಳ ಪೈಕಿ ಸುಮಾರು 370 ಆರ್ಥಿಕ ದೃಷ್ಟಿಯಿಂದ ಮುಖ್ಯವೆನಿಸಿವೆ. ಇವುಗಳ ವಿವರಣೆ ಈ ರೀತಿಯಾಗಿದೆ.

ವರ್ಗ 1 ಇಲ್ಯಾಸ್ಮೊಬ್ರಾಂಕಿಯೈ: ಮೃದ್ವಸ್ಥಿಪಂಜರವುಳ್ಳ ಮೀನುಗಳು, ಎಲುಬುಗಳು ಇಲ್ಲ. ಕೆಲವನ್ನುಳಿದು ಸಾಮಾನ್ಯವಾಗಿ ಗರ್ಭಧಾರಣೆ ದೇಹದೊಳಗೆ. ಇವು ಜರಾಯುಜಗಳು. ಅಂದರೆ ಮೊಟ್ಟೆಗೆ ಬದಲಾಗಿ ಮರಿಗಳನ್ನು ಹಾಕುವ ಮೀನುಗಳು. ಕಿವಿರು ಕಂಡಿಯೊಳಗೆ ಕಿವಿರಿದೆ. ಈ ಕಂಡಿ ಹೊರಕ್ಕೆ ತೆರೆದಿರುತ್ತದೆ. ಸಾಮಾನ್ಯವಾಗಿ ಸಿಹಿನೀರಿನಲ್ಲಿ ಇವು ಕಾಣದೊರೆಯುವುವು. ಷಾರ್ಕುಗಳು, ರೇ ಮೀನುಗಳು, ಸ್ಕೇಟುಗಳು ಈ ವರ್ಗಕ್ಕೆ ಸೇರಿವೆ. ಭಾರತದಲ್ಲಿ ಈ ವರ್ಗದ 38 ಪ್ರಭೇದಗಳು ಆರ್ಥಿಕ ದೃಷ್ಟಿಯಿಂದ ಮುಖ್ಯವಾಗಿವೆ.

ಗಣ: ಲಾಮ್ನಿಫಾರ್ಮೀಸ್ ಘಾರ್ಕುಗಳು:ಕಿವಿರು ತೆರಪುಗಳು, 2 ಬೆನ್ನಿನ ರೆಕ್ಕೆ ಮತ್ತು ಒಂದು ಗುದರೆಕ್ಕೆಗಳಿವೆ.

ಕುಟುಂಬ 1 ಒರೆಕ್ಟೊಲೋಬಿಡೆ. ಮಾರ್ಜಾಲ ಷಾರ್ಕುಗಳು: ತಿಮಿಂಗಲ ಷಾರ್ಕುಗಳು. ದೊಡ್ಡಬಾಲ ಸಣ್ಣಕಣ್ಣು ಗಳುಳ್ಳ ಇವು ಆಳವಾದ ನೀರಿನಲ್ಲಿ ವಾಸಮಾಡುವುವು. ಉದಾಹರಣೆಗೆ ಕೈಲೊಸಿಲ್ಲಿಯಮ್ ಗ್ರಿಸಿಯಮ್ (ಗೊಮ್ಮೆಸೊರಕೆ), ಸ್ಟೀಗೊಸ್ಟೋಮ ವೇರಿಯಸ್, ಹುಲಿ ಬಳಿಯಾರ್ (ಟೈಗರ್ ಷಾರ್ಕ್) ಮತ್ತು ರಿಂಕೊಡಾನ್ ಟೈಪಸ್-ಗೊಮ್ಮೆ ಸೊರಕೆ (ತಿಮಿಂಗಲ ಷಾರ್ಕ್). ಇದು ತುಂಬ ಉದ್ದವಾದ ಮೀನು; 15.2 ಮೀ ಉದ್ದ ಬೆಳೆಯಬಲ್ಲದು.

ಕುಟುಂಬ 2 ಸ್ಫರ್ನಿಡೆ: ಸುತ್ತಿಗೆ ತಲೆ ಷಾರ್ಕುಗಳನ್ನು ಒಳಗೊಂಡಿದೆ. ಇವುಗಳ ತಲೆ ಮುಂಭಾಗದಲ್ಲಿ ಚಪ್ಪಟೆಯಾಗಿದ್ದು ಆಚೀಚೆ ಸುತ್ತಿಗೆಯ ಆಕಾರದಲ್ಲಿ ಉಬ್ಬಿಕೊಂಡಿದೆ. ಉದಾಹರಣೆಗೆ ತಟ್ಟೆ ಬಳಿಯಾರ್ (ಸ್ಫಿರ್ನ ಜೈಗೀನ) ಇದು 2.7 ಮೀ ಉದ್ದಕ್ಕೆ ಬೆಳೆಯುತ್ತದೆ. ಇದರ ಯಕೃತ್ತಿನಿಂದ ಪಡೆಯಲಾಗುವ ಎಣ್ಣೆಯೇ ಷಾರ್ಕ್ ಲಿವರ್ ಎಣ್ಣೆ.

ಕುಟುಂಬ 3 ಕ್ಯಾರ್ಕಾರೈಯಿಡೆ: ಬೂದುಬಣ್ಣದ (ಗ್ರೇ) ಷಾರ್ಕುಗಳು ಇದಕ್ಕೆ ಸೇರಿವೆ. ಕಣ್ಣಿನಲ್ಲಿ ಮೂರನೆಯ ರೆಪ್ಪೆ (ನಿಕ್ಟಿ ಟೇಟಿಂಗ್ ಮೆಂಬ್ರೇನ್ ) ಉಂಟು. ಉದಾಹರಣೆಗೆ ಪಿಲ್ ತಟ್ಟೆ (ಗೇಲಿಯೊ, ಸಿರಾಡೊ ಟೈಗ್ರಿನಸ್), ಬಳಿಯಾರ್ (ಸ್ಕೋಲಿಯೊಡಾನ್ ಸರಕೋವ), ಬುಗ್ಗೆ ತಟ್ಟೆ (ಕಾರ್ಕಾರೈನಸ್ ಲಿಂಬೇಟಸ್) ನೈಕಪ್ಪ ತಟ್ಟೆ ಅಥವಾ ಕಪ್ಪು ರೆಕ್ಕೆ ಷಾರ್ಕು (ಕಾರ್ಕಾರೈನಸ್ ಮಿಲನಾಪ್ಟಿನಸ್), ಮತ್ತು ಬಗ್ಗಾರ್ ಕುರುವೆ (ಕಾರ್ಕಾರೈನಸ್ ಗ್ಯಾಂಜೆಟೀಸ್). ಕೊನೆಯಲ್ಲಿ ಉಲ್ಲೇಖಿಸಿರುವ ಷಾರ್ಕು ನದಿಗಳಿಗೆ ವಲಸೆ ಹೋಗುತ್ತದೆ.

ಕುಟುಂಬ 4 ಓಡಂಟಾಸ್ಪೀಡೆ: ಉದಾಹರಣೆಗೆ ಕಾರ್ಕಾರಿಯಾಸ್ ಟ್ರೈಕಸ್ಪಡೇಟಸ್

ಗಣ 2. ರ್‍ಯಾಜಿಫಾರ್ಮೀಸ್: ಸಾಮಾನ್ಯವಾಗಿ ಚಪ್ಪಟೆ ದೇಹವುಳ್ಳ ಸ್ಕೇಟುಗಳು. ರೇಮೀನುಗಳು ಮತ್ತು ರಂಪದ ಮೀನುಗಳನ್ನು (ಸಾ ಫಿಶ್) ಒಳಗೊಂಡಿದೆ. ಇದರಲ್ಲಿ ಐದು ಕುಟುಂಬಗಳುಂಟು. ಇವು ಇಂತಿವೆ: 1 ಪ್ರಿಸ್ಟಿಡೆ; ಈ ಕುಟುಂಬದ ಮೀನುಗಳ ಮೂತಿ ಉದ್ದವಾಗಿದೆ ಗರಗಸದಂತೆ ಚಾಚಿಕೊಂಡಿದೆ. ಉದಾಹರಣೆ : ಪ್ರಿಸ್ಟಿಸ್ ಕಸ್ಪಿಡೇಟಸ್ (ಎಟ್ಟೆ ತೊರಕೆ). ಇದು ಸುಮಾರು 6 ಮೀ ಉದ್ದ ಬೆಳೆಯುತ್ತದೆ. 2 ರೈನೊಬ್ಯಾಟಿಡೆ; (ಗಿಟಾರು ಮೀನುಗಳು) ಚಪ್ಪಟೆ ದೇಹ, ಮೊನಚು ಮೂತಿ, ಪಟ್ಟೆಗಳ ರೀತಿ ಜೋಡಣೆಗೊಂಡ ಹಲ್ಲುಗಳು ಈ ಮೀನುಗಳ ವಿಶೇಷ ಲಕ್ಷಣಗಳು. ಉದಾಹರಣೆ ರಿಂಕೊ ಬೇಟಸ್ ಗ್ರ್ಯಾನುಲೇಟಸ್ (ಎತ್ತಿ ಬಳಿಯಾರ್). 3 ಡ್ಯಾಸಿಯಾಟಿಡೆ (ಸ್ಟಿಂಗ್ ರೇ ಮೀನುಗಳು); ಇವುಗಳಲ್ಲಿ ಬೆನ್ನಿನ ರೆಕ್ಕೆ ಇಲ್ಲ. ಬಾಲ ಕಿರಿಯಗಲದ ಚೂಪಾದ ಚಾವಟಿಯಂತಿದೆ. ಇದರ ಮೇಲೆ ವಿಷಯುಕ್ತ ಮುಳ್ಳು ಉಂಟು. ಉದಾಹರಣೆ ಡಸಿಯಾಟಿಸ್ ಉವರ್ ನಾಕ್ (ಪುಪ್ಪಿ ಬಳಿಯಾರ್) ಮತ್ತು ಡಸಿಯಾಡಿನ್ ಸೆಫೆಸ್ (ಕೊಟ್ಟರ ತೊರಕೆ). 4 ರೈನಾಪ್ಟರಿಡೆ (ಕೌ ರೇ ಮೀನುಗಳು); ತಲೆ ದೇಹದ ಪ್ರಧಾನ ಅಂಗವಾಗಿದ್ದು ಇದರ ಮಧ್ಯೆ ಆಳವಾದ ಹಳ್ಳ ಇರುವುದರಿಂದ ಎರಡು ಉರುಟು ಹೋಳುಗಳಂತೆ ಕಾಣುತ್ತದೆ. ಉದಾಹರಣೆ ರೈನಾಪ್ಟರ ಜವಾನಿಕ. 5 ಮಿಲಿಯೊಬ್ಯಾಟಿಡೆ (ಈಗಲ್ ರೇ ಮೀನುಗಳು); ಅಗಲವಾದ ಮುಮ್ಮೂಲೆಯಾಕಾರದ ರೆಕ್ಕೆಗಳನ್ನೂ ಚೂಪುಮುಳ್ಳಿನಿಂದ ಕೂಡಿದ ಚಾವಟಿಯಂಥ ಬಾಲವನ್ನೂ ಪಡೆದಿರುವ ಮೀನುಗಳಿವು. ಇವುಗಳ ತಲೆ ಮೇಲ್ಮುಖವಾಗಿ ಉಬ್ಬಿರುವುದರಿಂದ ಕಣ್ಣುಗಳು ಪಾರ್ಶ್ವಸ್ಥವಾಗಿವೆ. ಉದಾಹರಣೆ: ಈಟೊಮೈಲಸ್ ನಿಕೋಫಿಯೈ (ಕಪ್ಪು ತೊರಕೆ) ಮತ್ತು ಈಟೊಬ್ಯಾಟಸ್ ಫ್ಲಾಜೆಲಮ.

ಗಣ 3 ಟಾರ್ಪೆಡಿನೀಫಾರ್ಮೀಸ್; ಹಾವು ಮೀನುಗಳನ್ನು (ಈಲ್) ಹೋಲುತ್ತವೆ. ವಿದ್ಯುತ್ ಉತ್ಪಾದಕ ಅಂಗಗಳುಂಟು. ಮೃದುವಾದ ಚಿಪ್ಪಿಲ್ಲದ ಚರ್ಮವೂ ಮುಳ್ಳುರಹಿತ ಬಾಲವೂ ಇವೆ. ಇದರಲ್ಲಿ ಟಾರ್ಪೆಡಿನಿಡೆ ಎಂಬ ಕುಟುಂಬವುಂಟು (ಎಲೆಕ್ಟ್ರಿಕ್ ರೇ ಮೀನುಗಳು). ಉದಾಹರಣೆ: ಟಾರ್ಪೆಡೊ ಮಾರ್ಮರೇಟ. ನಾರ್ಸಿನ್ ಬ್ರೂನಿಯ ಮತ್ತು ನಾರ್ಕೆ ಡಿಪ ರೀಜಿಯ.

ವರ್ಗ II ಟೀಲಿಯೊಸ್ಟೋಮೈ

ಈ ವರ್ಗದ ಮೀನುಗಳಲ್ಲಿ ಮೂಳೆಯಿಂದ ರಚಿತವಾದ ಕಂಕಾಲವುಂಟು. ಚರ್ಮದ ಮೇಲೆ ಒಂದರ ಮೇಲೊಂದು ಕಂಕಾಲ ಹಾಗೂ ಹುರುಪೆಗಳಿವೆ. ಕಿವಿರುಗಳ ಮೇಲೆ ಮೂಳೆಯಿಂದ ಕೂಡಿದ ಮುಚ್ಚಳ (ಒಪರ್‌ಕ್ಯುಲಮ್) ಇದೆಯಲ್ಲದೆ ಕಿವಿರು ಕಂಡಿ ಒಂದೇ ಒಂದು ಬಾಹ್ಯ ತೆರಪಿನಿಂದ ಹೊರತೆರೆಯುತ್ತದೆ. ಈ ಮೀನುಗಳು ಸಾಮಾನ್ಯವಾಗಿ ಮೊಟ್ಟೆಯಿಡುವುದರ ಮೂಲಕ ಮರಿ ಮಾಡುತ್ತವೆ.

ಈ ವರ್ಗದಲ್ಲಿ ಈ ಮುಂದಿನ ಗಣಗಳು ಸೇರಿವೆ: 1 ಕ್ಲೂಪಿಯಿಫಾರ್ಮೀಸ್: ಇದಕ್ಕೆ ಸೇರಿದ ಮೀನುಗಳು ಕಡಲ ನೀರಿನಲ್ಲೂ ಸಿಹಿನೀರು ತಾಣಗಳಲ್ಲೂ ಕಾಣದೊರೆಯುತ್ತವೆ. ಮುಳ್ಳುಗಳಿಲ್ಲದ ಬೆನ್ನಿನ ಹಾಗೂ ಗುದದ ಈಜು ರೆಕ್ಕೆಗಳನ್ನು ಪಡೆದಿವೆ. ಈ ಗಣದಲ್ಲಿ ಎಲೋಪಿಡೆ, ಮೆಗಲೋಪಿಡೆ, ಆಲ್ಬುಲಿಡೆ, ಕ್ಲೂಪಿಯಿಡೆ, ಎನ್‌ಗ್ರಾಲಿಡೆ, ಚಾನಿಡೆ ಮತ್ತು ಸಾಲ್ಮನೀಡೆಗಳು. ಭಾರತದ ಮೀನುಗಾರಿಕೆಯಲ್ಲಿ ಕ್ಲೂಪಿಯಿಡೆ ಕುಟುಂಬಕ್ಕೆ ಸೇರಿದ ಹೆರಿಂಗ್ ಮತ್ತು ಸಾರ್ಡೀನ್ ಮೀನುಗಳ ಪಾತ್ರ ಹಿರಿದು. ಉದಾಹರಣೆಗೆ ಎಟ್ಟಿ ಎರೆಬಾಯ್ (ಸಾರ್ಡಿನೆಲ್ಲ ಗಿಬ್ಬೋಸ). ಸ್ವಾದಿ (ಕೊವಾಲ ಕೊವಲ್), ಪಲಿಯ (ಹಿಲ್ಸ ಇಲಿಷ), ಕಡಲ ಸ್ವಾದಿ (ಹಿಲ್ ಕನಗುರ್ತ) ಅಂತೆಯೇ ಎನ್‌ಗ್ರಾಲಿಡೆ ಕುಟುಂಬದ ಆಂಚೊವಿಗಳು, ಮನಗಳು ಮೀನುಗು (ತ್ರಿಸೊಕ್ಲಿಸ್) ಮತ್ತು ಚಾನಿಡೆ ಕುಟುಂಬದ ಹೂಮೀನು (ಚನೋಸ್), ಸಾಲ್ಮನಿಡೆ ಕುಟುಂಬದ ಸಾಲ್ಮನ್ ಮತ್ತು ಟ್ರೌಟ್ ಮೀನುಗಳೂ ಕೂಡ ಬಲು ಮುಖ್ಯ ಜಾತಿಗಳಾಗಿವೆ.

2. ಸ್ಕೊಪೆಲಿಫಾರ್ಮೀಸ್: ಆಳ ಸಮುದ್ರದ ಮೀನುಗಳಿವು. ಬೆಳಕು ಸೂಸುವ ಅಂಗಗಳನ್ನು ಪಡೆದಿವೆ. ಬೆನ್ನಿನ ಈಜುರೆಕ್ಕೆಯಲ್ಲಾಗಲಿ ಗುದದ ಈಜು ರೆಕ್ಕೆಯಲ್ಲಾಗಲಿ ಮುಳ್ಳುಗಳಿಲ್ಲ. ಈ ಗಣದ ಸೈನೊಡಿಡೆ ಕುಟುಂಬಕ್ಕೆ ಸೇರಿದ ಬೊಂಬ್ಲಿ (ಹಾರ್ಪೊಡಾನ್ ನೆಹೀರಿಯಸ್-ಬಾಂಬೆ ಡಕ್) ಮೆಚ್ಚಿನ ಖಾದ್ಯಯೋಗ್ಯ ಮೀನಾಗಿದ್ದು ಭಾರತದ ಪಶ್ಚಿಮಕರಾವಳಿಯ ಮೀನುಗಾರಿಕೆಯಲ್ಲಿ ಮುಖ್ಯವೆನಿಸಿದೆ. ಇದು ಮುಕ್ತ ಕಡಲಿನಲ್ಲಿ ಗುಂಪುಗುಂಪಾಗಿ ಕಾಣದೊರೆಯುತ್ತದೆ.

3. ಸೈಪ್ರಿನಿಫಾರ್ಮೀಸ್: ಇದು ಮೀನುಗಳ ಗುಂಪಿನ ಅತಿ ದೊಡ್ಡ ವಿಭಾಗ: ಇದಕ್ಕೆ ಸೇರಿದ ಸೈಪ್ರಿನಿಡೆ ಕುಟುಂಬ ಇನ್ನೂರಕ್ಕೂ ಹೆಚ್ಚು ಜಾತಿಗಳನ್ನು ಒಳಗೊಂಡಿದೆ. ಸಿಹಿನೀರಿನಲ್ಲಿ ಸಿಗುವ ಮೀನುಗಳ ಪೈಕಿ ಆರ್ಥಿಕ ದೃಷ್ಟಿಯಿಂದ ಬಲು ಮುಖ್ಯವಾಗಿರುವ ಜಾತಿಗಳು ಇಂತಿವೆ: ಸಾಸಲು (ಆಡ್ಸ್ಗ್ಯಾಸ್ಟರ್ ಅರ್ಜೆಂಟಿಯ) ಅಗಸಗಿತ್ತಿ ಮೀನು (ಬೆರಿಲಿಯಸ್ ಬೆಂಡೆಲೆಸಿಸ್), ಪಕ್ಕೆ (ಎಸೋಮಸ್ ಡ್ಯಾನ್ರಿಕಸ್), ಪಂಡಿಪಕ್ಕೆ ಕಳ್ಮುರ (ಗ್ಯಾರ್ ಲಮ್ಟ) ಕುರಿಮೀನು (ಲೇಬಿಯೊ ಕಲ್ಬಾಸು), ಕೆಮ್ಮೀನು (ಲೇಬಿಯೊ ಫಿಂಬ್ರಿಯೇಟಸ್) ರೋಹು (ಲೇಬಿಯಾ ರೋಹಿಟ), ಅರ್ಜ (ಸಿರೈನ ಸಿರೋಸ -ಹ್ವೈಟ್ ಕಾರ್ಪ), ಮೃಗಾಲ (ಸಿರೈನ ಮೃಗಾಲ), ತರಿ ಮೀನು (ಸಿರೈನ ರೀಬ), ನಾಗೇಂದ್ರಮ್ (ಆಸ್ಟಿಯೊಕೈಲಸ್ ತಾಮಸ್ಸೈ), ಕಾಟ್ಲ (ಕಾಟ್ಲ ಕಾಟ್ಲ) ಕಾವೇರಿ ಗೆಂಡೆ (ಪಂಟಿಯಸ್ ಕರ್ನಾಟಿಕಸ್), ಹಂದಿಮೀನು (ಪಂಟಿಯಸ್ ಡೂಬಿಯಸ್), ಗೆಂಡೆ (ಪಂಟಿಯಸ್ ಸರಾನ), ಬಿಳಿಮೀನು ಅಥವಾ ಮಹಸೀರ್ (ಬಾರ್ಬಸ್ ಟೋರ್).

ಈ ಗಣದ ಇತರ ಕುಟುಂಬಗಳೂ ಅದಕ್ಕೆ ಸೇರಿದ ಜಾತಿಗಳೂ ಈ ಮುಂದಿನಂತಿವೆ. ಕೋಬಿ ಟೈಯಿಡೆ, ಲೆಪಿಡೊಸಿಫ್ಯಾಲಸ್ ತರ್ಮ್ಯಾಲಿಸ್; ಹೋಮಲೋಪ್ಟರಿಡೆ ಬ್ಯಾಲಿಟೋರ ಬ್ರೂಸಿಯೈ; ಟ್ಯಾಕಿಸೂರಿಡೆ, ಟ್ಯಾಕಿಸೂರಸ್ ಡಸ್ಸುಮಿಯರಿ (ಮೊಂಗಮ್ ಶೇಡೆ) ಕ್ಲಾರೈಯಿಡೆ, ಕ್ಲಾರಿಯಸ್ ಬಟ್ರಾಕಸ್ (ಆನೆ ಮೀನು); ಹೆಟರಾಪ್‌ನ್ಯೂಸ್ಟಿಡೆ, ಹೆಟರಾಪ್ ನ್ಯೂಸ್ಟಸ್ ಫಾಸಿಲಿಸ್ (ಚೇಳು ಮೀನು) ಸೈಲ್ಯೂರಿಡೆ, ಓಂಪಾಕ್ ಬೈಮ್ಯಾಕ್ಯುಲೇಟಸ್ (ಗೊಡೊ) ವಲಾಗೊ ಅಟ್ಟು (ಬಾಳೆ ಮೀನು): ಪ್ಲೋಟೊಸಿಡೆ – ಪ್ಲೋಟೊಸಸ್ ಅಂಗ್ವಿಲೇರಿಸ್; ಚಾಸಿಡೆ, ಚಾಕ ಚಾಕ; ಶಿಲ್‌ಬೈಯಿಡೆ, ಪಂಗೇಸಿಯಸ್ ಪಂಗೇಸಿಯಸ್: ಸಿನೋರಿಡೆ, ಬಗೇರಿಯಸ್ ಬಗೇರಿಯಸ್ (ದೊಮ್ಮೆ) ಮತ್ತು ಬಾಗ್ರಿಡೆ ಮಿಸ್ಟಸ್ ಅಯೊರ್ (ಶೇಡೆ ತೊರವಿ),ಮಿಸ್ಟಸ್ ಸಿಂಗಾಲ.

4. ಅಂಗ್ವಿಲಿಫಾರ್ಮೀಸ್: ಉದ್ದ ಹಾವಿನಂಥ ದೇಹವುಳ್ಳ ಮೀನುಗಳ ಗಣ; ಹುರುಪೆಗಳಿಲ್ಲ, ಸೊಂಟದ ಈಜುರೆಕ್ಕೆಗಳೂ ಇಲ್ಲ, ವಲಸೆ ಹೋಗುವ ಸ್ವಭಾವದ ಮೀನುಗಳಿವು. ಇದರಲ್ಲಿ ಅಂಗ್ವಿಲಿಡೆ (ಮಳಗು ಮೀನುಗಳು), ಮ್ಯುರೀನಿಸಾಸಿಡೆ (ಕಡಲ

ಮಳಗು ಮೀನುಗಳು), ಆಫಿಕ್ತಿಯಿಡೆ (ಹಾವು ಬತ್ತಿ ಮೀನುಗಳು), ಮ್ಯುರೀನಿಡೆ (ಮೊರೇ ಹಾವು ಮೀನುಗಳು) ಎಂಬ ನಾಲ್ಕು ಕುಟುಂಬಗಳುಂಟು.

5. ಬೆಲೋನಿಫಾರ್ಮೀಸ್: ಪ್ರಧಾನವಾಗಿ ಕಡಲುಗಳಲ್ಲಿ ವಾಸಿಸುವ ಮೀನುಗಳಾದ ಇವು ನೀಳವಾದ ದೇಹವುಳ್ಳಂಥವು. ಒಳ್ಳೆಯ ಆಹಾರದ ಮೀನುಗಳೆಂದು ಹೆಸರು ಗಳಿಸಿವೆ. ಈ ಗಣದಲ್ಲಿ ಬೆಲೋನಿಡೆ (ಉದಾಹರಣೆ:ಸೂಜಿ ಮೀನುಗಳು, ಗಾರ್ ಮೀನುಗಳು, ಸ್ಟ್ರಾಂಗೈಲ್ಯೂರ ಸ್ಟ್ರಾಂಗೈಲ್ಯೂರಸ್–ಕೆಂತೆ), ಹೆಮಿರ್‍ಯಾಂಫಿಡೆ (ಹಾಫ್ ಬೀಕ್ ಮೀನು), ಎಕ್ಸೊಸೀಟಿಡೆ (ಹಾರುವ ಮೀನುಗಳು, ಸೈಪ್ಸೆಲ್ಯೂರಸ್ ಬಾಹಿಯೆನ್ಸಿಸ್ – ಹಾಯಿಮೀನು) ಎಂಬ ಮೂರು ಕುಟುಂಬಗಳಿವೆ.

6. ಗ್ಯಾಡಿಫಾರ್ಮೀಸ್: ಇವು ಸಮಶೀತೋಷ್ಣವಲಯ ಪ್ರದೇಶಗಳ ಸಾಗರವಾಸಿ ಮೀನುಗಳನ್ನು ಒಳಗೊಂಡಿರುವ ಗಣ. ಇವರ ಬ್ರೆಗ್ಮಸಿರೋಟಿಡೆ ಕುಟುಂಬಕ್ಕೆ ಸೇರಿದ ಒಂದೇ ಒಂದು ಜಾತಿಯ ಮೀನು ಭಾರತದ ಕಾರವಾರ ಹಾಗೂ ರತ್ನಗಿರಿ ಪ್ರದೇಶದಲ್ಲಿ ಕಾಣದೊರೆಯುತ್ತದೆ.

7. ಸಿನ್‌ಗ್ನಾತಿಫಾರ್ಮೀಸ್: ವಿಶೇಷ ರೀತಿಯ ದೇಹವುಳ್ಳ ಕಡಲವಾಸಿ ಮೀನುಗಳಿವು. ಮೂತಿ ಕೊಳವೆಯಂತೆ ಚಾಚಿದೆ. ದೇಹದ ಸುತ್ತ ಎಲುಬಿನ ಕವಚ ಉಂಟು. ಇದರಲ್ಲಿ ಸಿನ್‌ಗ್ನಾತಿಡೆ ಎಂಬ ಒಂದೇ ಒಂದು ಕುಟುಂಬ ಇದ್ದು ಪೈಪ್ ಮೀನು ಹಾಗೂ ಕಡಲ ಕುದುರೆಗಳನ್ನು (ಹಿಪೊಕ್ಯಾಂಪಸ್) ಒಳಗೊಂಡಿವೆ.

8. ಸೈಪ್ರಿನಿಡಾಂಟಿಫಾರ್ಮೀಸ್: ಈ ಗಣದ ಮೀನುಗಳೆಲ್ಲ ಕೀಟಾಹಾರಿಗಳು. ಸಣ್ಣ ಗಾತ್ರದವು. ಅಲ್ಲದೆ ಜನಪ್ರಿಯ ಮೀನುತೊಟ್ಟಿ ಬಗೆಗಳೆನಿಸಿವೆ. ಇದಕ್ಕೆ ಸೇರಿದ ಕುಟುಂಬಗಳೂ ಜಾತಿಗಳೂ ಇಂತಿವೆ.

ಎ. ಸೈಪ್ರಿನಿಡಾಂಟಿಡೆ: ಕಾರ್ಪುಗಳನ್ನೂ ಮಿನೋಗಳನ್ನೂ ಒಳಗೊಂಡಿದೆ. ಉದಾಹರಣೆ: ಒರೈಜಿಯಾಸ್ ಮೆಲಸ್ಟಿಗ್ಮಾಸ್ (ಕುಡುಬಡ್ಡು), ಆಪ್ಲೊಕೈಲಸ್ ಲೈನಿ ಯೇಟಮ್ (ಕುಡ್ಡಿಯನ್).

ಬಿ. ಪೋಸಿಲ್ಲೆಯಿಡೆ : ಉದಾಹರಣೆ : ಗ್ಯಾಂಬೂಸಿಯ ಆಫಿಸಿಸ್ (ಮಲೇರಿಯ ಮೀನು).

9. ಮ್ಯೂಜಿಲಿಫಾರ್ಮೀಸ್: ಮುಳ್ಳುಗಳಿರುವ ಹಾಗೂ ಎರಡು ಪ್ರತ್ಯೇಕ ರೀತಿಯ ಬೆನ್ನು ರೆಕ್ಕೆಗಳಿರುವ ಮೀನುಗಳನ್ನು ಒಳಗೊಂಡಿದೆ. ಇದರಲ್ಲಿ ಸ್ಫೈರೀನಿಡೆ (ಬಾರಕೂಡ), ಮ್ಯೂಜಿಲಿಡೆ (ಗ್ರೇ ಮಲೆಟ್ ಮ್ಯೂಜಿಲ್ ಜಾತಿ) ಹಾಗೂ ಅಥೆರಿನಿಡೆ ಎಂಬ ಮೂರು ಕುಟುಂಬಗಳಿವೆ.

10. ಪಾಲಿನೆಮಿಫಾರ್ಮೀಸ್: ಈ ಗಣಕ್ಕೆ ಸೇರಿದ ಮೀನುಗಳು ಕಡಲಿನಲ್ಲೂ ಅಳಿವೆ ನೀರಿನಲ್ಲೂ ಕಾಣದೊರೆಯುತ್ತದೆ. ಇದರ ಏಕೈಕ ಕುಟುಂಬವಾದ ಪಾಲಿನೆಮಿಡೆ ಅತ್ಯುತ್ತಮ ಖಾದ್ಯಮೀನಾದ ಇಂಡಿಯನ್ ಸ್ಯಾಲ್ಮನ್ (ವಾಮೀನು, ಎಲ್ಯೂಥರೊನೀಮ ಟೆಟ್ರಡೈಕ್ಟಿಲಸ್) ಎಂಬುದನ್ನು ಒಳಗೊಂಡಿದೆ.

11. ಓಫಿಯೊಸೊಫ್ಯಾಲಿಫಾರ್ಮೀಸ್: ಇದಕ್ಕೆ ಸೇರಿದ ಮೀನುಗಳು ಹಾವಿನ ತಲೆಯಂಥ ತಲೆಯುಳ್ಳವು. ಗಾಳಿಯನ್ನು ನೇರವಾಗಿ ಉಸಿರಾಡುತ್ತವೆ. ಮಾಂಸಾಹಾರಿಗಳು, ಸಿಹಿನೀರಿನಲ್ಲಿ ವಾಸ ಮಾಡುತ್ತವೆ. ಉದಾಹರಣೆ ಚಾನ ಪಂಕ್ಟೇಟಸ್ (ಕೊರವ, ಬಿಳಿಕೊರವ), ಚಾನ ಮರೂಲಿಯಸ್ (ಹೂಮೀನು), ಚಾನ ಗಚುವ (ಮಹಾ ಕೊರವ), ಜಾನ ಸ್ಟ್ರಯೇಟಸ್ (ಕುಚ್ಚು ಮೀನು)

12. ಸಿಂಬ್ರಾಂಕಿಫಾರ್ಮೀಸ್:ಹಾವಿನಾಕಾರದ ಸಿಹಿನೀರು ಮೀನುಗಳನ್ನು ಈ ಗಣದಲ್ಲಿ ಸೇರಿಸಲಾಗಿದೆ. ಜೋಡಿ ಈಜುರೆಕ್ಕೆಗಳಿಲ್ಲ. ಹುರುಪೆಗಳು ಅತಿ ಚಿಕ್ಕವು ಅಥವ ಇಲ್ಲವೇ ಇಲ್ಲ. ಉದಾಹರಣೆ: ಸಿಂಬ್ರಾಂಕಿಡೆ ಕುಟುಂಬದ ಪಿಗ್ಮಿ ಈಲುಗಳು (ಸಿಂಬ್ರಾಂಕಸ್ ಬೆಂಗಾಲೆನ್ಸಿಸ್) ಮತ್ತು ಆಂಫಿಪ್ನಾಯ್ಡಿಡೆ ಕುಟುಂಬದ ಕೆಸರು ಈಲುಗಳು (ಆಂಫಿಪ್ನಸ್ ಕೂಚಿಯೆ).

13. ಪರ್ಸಿಫಾರ್ಮೀಸ್: ಇದಕ್ಕೆ ಸೇರಿದ ಮೀನುಗಳೆಲ್ಲವೂ ಮೂಳೆ ಮೀನುಗಳು. ಗಾಳಿಚೀಲ ಮುಚ್ಚಿದ ಬಗೆಯದು. ಕೆನ್ನೆಯ ಮೇಲೂ ಕಿವಿರು ಮುಚ್ಚಳದ ಮೇಲೂ ಹುರುಪೆಗಳಿವೆ. ಬೆನ್ನು ರೆಕ್ಕೆಮುಳ್ಳುಗಳಿಂದ ಕೂಡಿದೆ. ಇದರಲ್ಲಿ 38 ಕುಟುಂಬಗಳಿವೆ. ಇವುಗಳ ಪೈಕಿ ಅತಿ ಮುಖ್ಯವಾದವು: ಸೆಂಟ್ರೊಪೋಮಿಡೆ, ಲ್ಯಾಟಿಸ್ ಕ್ಯಾಲ್ ಕ್ಯಾರಿಫರ್ (ಕೊಳಜಿ), ಥಾರ್ಮಿಯೋನಿಡೆ; ಥಾರ್ಮಿಯೊನೈಜರ್ (ಚಂದ್ರಾತ್ರ್ಯ). ಸೈಯೀನಿಡೆ ಸೈಯೀನ (ಕೊಲ್ಲರ್, ಬಲ್ಡೆ) ಸ್ಪಾರಿಡೆ; ಸ್ಪಾರಸ್ ಬೆರಡೆ (ಯೆರಿ). ಸ್ಕಾಟೊ ಫೇನಿಡೆ; ಸ್ಕಾಟೊಫೇಗಸ್ ಆರ್ಗಸ್ (ಹುಚ್ಚ ಮೀನು). ಸ್ಕಾಂಬ್ರಿಡೆ; ರಾಸ್ಟ್ರೆಲಿಜರ್ ಕನಗುರ್ತ (ಬಂಗಡೆ); ಸ್ಟ್ರೊಮಾಟೈಯಿಡೆ (ಫಾಂಪ್ರೆಟ್ಸ್ ತೊಂಡ್ರೊಟ್ಟೆ, ಬಿಳಿಮಾಂಜಿ); ಅನಾಬ್ಯಾಂಟಿಡೆ (ಕ್ಲೈಂಬಿಂಗ್ ಪರ್ಚ) ಮತ್ತು ಗೋಬಿಯಿಡೆ (ಗೋಬಿ ಮೀನುಗಳು); ಗ್ಲಾಸೊಗೋಬಿಯಸ್ (ನೆತ್ತಿಕೊರವ).

14. ಟನ್ನಿಫಾರ್ಮೀಸ್: ಆಳ ಸಾಗರದ ಮೀನುಗಳಿವು. ದೇಹದ ಉಷ್ಣತೆ ಹೆಚ್ಚು ಕಡಿಮೆ ಏಕ ರೀತಿಯದಾಗಿರುತ್ತದೆ. ಉದಾಹರಣೆ: ಟನ್ನಿಡೆ ಕುಟುಂಬದ ಟನ್ನಸ್ ಹಾಗೂ ಯೂತಿನ್ನಸ್ (ಕೇದಾರ್).

15. ಪ್ಲೂರೊನೆಕ್ಟಿ ಫಾರ್ಮೀಸ್: ಈ ಗಣದ ಮೀನುಗಳು ಸಾಗರ ತಳದಲ್ಲಿ ಜೀವಿಸುವಂಥದು. ಚಪ್ಪಟೆಯಾಗಿರುತ್ತದೆ. ಎರಡು ಕಣ್ಣುಗಳೂ ಸಹ ದೇಹದ ಒಂದು ಪಾರ್ಶ್ವದಲ್ಲಿ (ಮೇಲ್ಭಾಗದಲ್ಲಿ) ಸ್ಥಿತವಾಗಿರುತ್ತದೆ. ಉದಾಹರಣೆ: ದೊಡ್ಡನಂಗಿ, ಫ್ಲೌಂಡರುಗಳು, ನಂಗುಮೀನುಗಳು.

16. ಮ್ಯಾಸ್ಟೊಸೆಂಬೆಲಿಫಾರ್ಮೀಸ್: ಇವು ಕೂಡ ಹಾವಿನಾಕಾರದ ಮೀನುಗಳು. ಬಲು ರುಚಿಯಾದ ಮೀನುಗಳೆಂದು ಹೆಸರಾಗಿವೆ. ಉದಾಹರಣೆ: ಮ್ಯಾಸ್ಟೊಸೆಂಬಲಸ್ ಆರ್ಮೇಟಸ್.

17. ಎಕಿನೈಫಾರ್ಮೀಸ್: ಷಾರ್ಕುಗಳ, ಟನ್ನಿಗಳ ಮತ್ತಿತರ ಬಗೆಯ ಸಾಗರ ವಾಸಿ ಮೀನುಗಳ ದೇಹದ ತಳಭಾಗಕ್ಕೆ ಅಂಟಿ ಜೀವನ ಸಾಗಿಸುವಂಥ ಹೀರುಬಟ್ಟಲು ಮೀನುಗಳಿವು (ಸಕರ್ ಫಿಶ್). ಇವುಗಳ ಪೈಕಿ ಅತ್ಯಂತ ಪ್ರಸಿದ್ಧವಾದುದು ರೆಮೋರ.

18. ಟೆಟ್ರಡಾಂಟಿಫಾರ್ಮೀಸ್: ಇವು ಕೂಡ ಸಾಗರವಾಸಿ ಮೀನುಗಳು. ಇದರಲ್ಲಿ ಬ್ಯಾಲಿಸ್ಟಿಡೆ (ಟ್ರಿಗರ್ ಮೀನುಗಳು), ಆಸ್ಟ್ರಸ್ಯೆಯಿಡೆ (ಟ್ರಂಕ್ ಮೀನುಗಳು), ಟೆಟ್ರಡಾಂಟಿಡೆ (ಗ್ಲೋಬ್ ಮೀನುಗಳು), ಡೈಯೊಡಾಂಟಿಡೆ (ಪಾರ್ಕ್ಯುಪೈನ್ ಮೀನುಗಳು) ಮತ್ತು ಮೋಲಿಡೆ (ಸನ್ ಮೀನುಗಳು) ಎಂಬ ಐದು ಕುಟುಂಬಗಳಿವೆ. (ಎಚ್.ಡಿ.ಆರ್.ಐ.)

**ಮೀನುಗಾರಿಕೆ:** ಆಹಾರದ ಒಂದು ಘಟಕವಾಗಿ ಮೀನುಗಳನ್ನು ಸಾಕುವುದು, ಹಿಡಿಯುವುದು, ಸಂಸ್ಕರಿಸುವುದು, ಬಳಸುವುದು (ಫಿಶರಿ, ಪೈಸಿಕಲ್ಚರ್). ಶೇಕಡಾ 60ರಿಂದ 82ರವರೆಗೆ ತೇವಾಂಶ, ಶೇಕಡಾ 13ರಿಂದ 20ರ ವರೆಗೆ ಪ್ರೋಟೀನ್ ಹಾಗೂ ಕೊಂಚ ಪರಿಮಾಣದಲ್ಲಿ ಕೊಬ್ಬನ್ನುಳ್ಳ ಮೀನಿನ ಮಾಂಸ ಒಂದು ಉತ್ಕೃಷ್ಟ ಆಹಾರ. ಜೊತೆಗೆ ಮೀನಿನ ಮಾಂಸದಲ್ಲಿ ಗಣನೀಯ ಪರಿಮಾಣದಲ್ಲಿ ಯಥೋಚಿತ ಮತ್ತು ಯೋಗ್ಯ ರೂಪದಲ್ಲಿ ಆಹಾರದ ಅತ್ಯವಶ್ಯ ವಸ್ತುಗಳಾದ ಜೀವಸತ್ತ್ವಗಳು ಅಡಕಗೊಂಡಿವೆ. ಬಹುಶಃ ಈ ಕಾರಣದಿಂದಲೇ ಇಂಥ ಸಂಪೂರ್ಣ ಸತ್ತ್ವಶಾಲಿ ಆಹಾರವಾದ ಮೀನನ್ನು ಪ್ರಾಚೀನ ಮಾನವ ತನ್ನ ಆಹಾರದಲ್ಲಿ ಬಳಸಲು ಪ್ರಾರಂಭಿಸಿದ. ಮೊದಮೊದಲು ಆದಿಮಾನವ ಬರಿಗೈಗಳಿಂದ ಇಲ್ಲವೆ ಒರಟು ಭರ್ಜಿಗಳ ಬಳಕೆಯಿಂದ ಮೀನನ್ನು ಹಿಡಿಯುತ್ತಿದ್ದ. ಪ್ರಪಂಚದ ಅನೇಕ ಕಡೆಗಳಲ್ಲಿ ಇಂದಿಗೂ ಈ ವಿಧಾನಗಳನ್ನೇ ಅನುಸರಿಸುವುದುಂಟು. ಅನಂತರದಲ್ಲಿ ಮೀನು ಹಿಡಿಯಲು ಬಲೆಗಳ ಬಳಕೆ ರೂಢಿಗೆ ಬಂತು. ಆಳವಿಲ್ಲದ ಕೊಳಗಳ ಅಥವಾ ಮಡುಗಳ ಪ್ರವೇಶ ದ್ವಾರಗಳಲ್ಲಿ ಅಡ್ಡಲಾಗಿ, ಸಾಮಾನ್ಯವಾಗಿ ಕಲ್ಲುಗಳ ಮತ್ತು ಕಡ್ಡಿಗಳ ಇಲ್ಲವೆ ಜೇಡಿಮಣ್ಣಿನ ಅಣೆಕಟ್ಟುಗಳನ್ನು ಈ ಕಾರಣಕ್ಕಾಗಿಯೇ ಕಟ್ಟುತ್ತಿದ್ದರು. ಮೀನುಗಳು ಬರತಗಳ ಕಾಲದಲ್ಲಿ ಹಾಗೂ ನದಿಗಳು ಮಳೆಯಿಂದ ಉಬ್ಬಿದ ಸಮಯಗಳಲ್ಲಿ ಈ ಅಣೆಕಟ್ಟಿನ ಮೇಲೆ ಈಜುತ್ತಿದ್ದು ನೀರು ಕಡಿಮೆಯಾದಾಗ ತಡೆಯಿಂದಾಗಿ ಹಿಂತಿರುಗಿ ಈಜಲು ಸಾಧ್ಯವಾಗದೆ ಉಳಿಯುತ್ತಿದ್ದುವು. ಆಗ ಅವುಗಳನ್ನು ಸುಲಭವಾಗಿ ಹಿಡಿಯಲಾಗುತ್ತಿತ್ತು. ಮೀನನ್ನು ದೊಡ್ಡ ಪರಿಮಾಣದಲ್ಲಿ ಹಿಡಿಯಲು ಮಾಡಿದ ಪ್ರಥಮ ಹಾಗೂ ಅತ್ಯಂತ ಸರಳ ಪ್ರಯತ್ನ ಇದು. ಜೀವನೋಪಾಯಕ್ಕಾಗಿ ಮೀನನ್ನು ಹಿಡಿಯುವ ಉದ್ಯೋಗ ಹಾಗೂ ವಾಣಿಜ್ಯ ಮೀನುಗಾರಿಕೆಗಳು ಸಹ ಬಹಳ ಹಿಂದಿನಿಂದ ರೂಢಿಯಲ್ಲಿವೆ. ಗ್ರೀಸ್, ಸಿಸಿಲಿ, ಸ್ಪೇನ್, ಭಾರತ, ಚೀನಗಳನ್ನೊಳಗೊಂಡಂತೆ ಪ್ರಪಂಚದ ಅನೇಕ ದೇಶಗಳಲ್ಲಿ ಮೀನುಗಾರಿಕೆ ಅತ್ಯಂತ ಹಿಂದಿನಕಾಲದಿಂದಲೂ ನಡೆದುಬಂದಿದೆ.

ಹೆಚ್ಚು ಕಡಿಮೆ ಸಮುದ್ರದ ಎಲ್ಲ ಭಾಗಗಳಲ್ಲಿಯೂ ಮೀನುಗಳು ವಾಸಿಸುತ್ತವೆ. ಆದರೆ ಕೆಲವು ನಿರ್ದಿಷ್ಟ ನೆಲೆಗಳನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಅವು ಚದುರಿ ಹೋಗುವುವಲ್ಲದೆ ಸಂಖ್ಯೆಯಲ್ಲಿ ಸಹ ಕಡಿಮೆ ಇರುತ್ತವೆ. ಹೆಚ್ಚಿನ ಮೊತ್ತದಲ್ಲಿ ಮೀನುಗಳಿರುವ ಇಂಥ ನಿರ್ದಿಷ್ಟ ನೆಲೆಗಳನ್ನೇ ಮೀನು ಹಿಡಿಯುವ ಪ್ರದೇಶಗಳೆಂದು ಕರೆಯಲಾಗುತ್ತದೆ. ಈ ಪ್ರದೇಶಗಳು ಸಾಮಾನ್ಯವಾಗಿ ತೀರ ಪ್ರದೇಶದಿಂದಾಚೆಗೆ ಸ್ವಲ್ಪ ದೂರದವರೆಗೆ ಹೆಚ್ಚಾಗಿ ಆಳವಿಲ್ಲದ ನೀರಿನಲ್ಲಿ ಇರುತ್ತವೆ. ಇವು ಹೀಗೆಯೇ ಮುಂದೆ ಸಾಗಿ ಆಳ ಸಮುದ್ರದೊಳಕ್ಕೆ ಕ್ರಮೇಣ ಇಳಿಜಾರಾಗಿ ಹೋಗಿ ಬಹಳಷ್ಟು ದೂರಕ್ಕೆ ಓಡಿ ಸಮುದ್ರದಾಳಕ್ಕೆ ಜಗಿಯುತ್ತವೆ. ಭೂಖಂಡದ ಸಮತಟ್ಟಿನ ಈ ಭಾಗಗಳಲ್ಲಿ ಮೀನುಗಳು ಆಹಾರವನ್ನು ಪಡೆಯುವುವಲ್ಲದೇ ಮೊಟ್ಟೆಗಳನ್ನಿಟ್ಟು ಮರಿಗಳನ್ನೂ ಮಾಡುತ್ತವೆ. ಇಂಥ ಸ್ಥಳಗಳಲ್ಲಿಯೇ ಮೀನುಗಳನ್ನು ಸಮೃದ್ಧವಾಗಿ ಹಿಡಿಯಲಾಗುತ್ತದೆ. ಮೀನು ಹಿಡಿಯುವ ಪ್ರದೇಶಗಳ ಪೈಕಿ ಅತ್ಯುತ್ತಮವಾದ್ದು ನ್ಯೂಫೌಂಡ್‌ಲ್ಯಾಂಡ್ ತೀರಪ್ರದೇಶ. ಈ ಪ್ರದೇಶದಲ್ಲಿ ಅಪರಿಮಿತ ಮೊತ್ತದಲ್ಲಿ ಕಾಡ್, ಹ್ಯಾಲಿಬಟ್, ಹೆರಿಂಗ್ ಹಾಗೂ ಉತ್ತರ ಸಮುದ್ರಗಳಲ್ಲಿ ಸಿಕ್ಕುವ ಪ್ರಾಯಶಃ ಎಲ್ಲ ತೆರನ

ಮೀನುಗಳನ್ನು ಪ್ರತಿವರ್ಷವೂ ಹಿಡಿಯಲಾಗುತ್ತಿದೆ. ಈ ಕಾರಣದಿಂದಲೇ ಅಮೆರಿಕ, ಕೆನಡ, ರಷ್ಯ, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ದೇಶಗಳಿಂದ ಮೀನು ಹಿಡಿಯುವ ಹಡಗುಗಳು ಈ ಪ್ರದೇಶಕ್ಕೆ ಯಾವಾಗಲೂ ಬರುತ್ತಿರುತ್ತವೆ. ನಾರ್ವೆಯ ತೀರ ಪ್ರದೇಶದಲ್ಲಿ ಕೂಡ ಮುಖ್ಯವಾದ ಮೀನುಗಾರಿಕೆ ಕಂಡುಬರುತ್ತದೆ. ಪೆಸಿಫಿಕ್ ಸಾಗರದಲ್ಲಿ ಜಪಾನ್ ವಿಪುಲವಾದ ಮೀನುಗಾರಿಕೆಯ ಕಾರ್ಯ ನಡೆಸುತ್ತದೆ. ಪೋರ್ಚುಗಲ್ ಹಾಗೂ ಸ್ಪೇನ್‌ಗಳಲ್ಲಿ ಬೂತಾಯಿ ಮೀನಿನ ಮೀನುಗಾರಿಕೆ ಅಧಿಕವಾಗಿದೆ. ಉತ್ತರ ಅಮೆರಿಕದ ಉತ್ತರ ಪೆಸಿಫಿಕ್ ತೀರದಲ್ಲಿ ಸ್ಯಾಲ್ಮನ್ ಮತ್ತು ಕ್ಯಾಲಿಫೋರ್ನಿಯಾದಲ್ಲಿ ಟ್ಯೂನ ಮೀನುಗಾರಿಕೆಗಳು ಅತ್ಯಂತ ಹೆಸರುವಾಸಿಯಾದುವು. ಖಾರಿ (ಆಖಾತ) ತೀರಗಳ ಉದ್ದಕ್ಕೂ ಪ್ರಖ್ಯಾತ ಸೀಗಡಿ ಮೀನುಗಾರಿಕೆ ಕಂಡುಬರುತ್ತದೆ.

ಮೀನುಗಾರಿಕೆಯಲ್ಲಿ ಎರಡು ವಿಧಗಳುಂಟು: ಸಮುದ್ರ ಮೀನುಗಾರಿಕೆ ಮತ್ತು ಒಳನಾಡಿನ ಮೀನುಗಾರಿಕೆ.

ಸಮುದ್ರ ಮೀನುಗಾರಿಕೆಯನ್ನು ಸ್ಥೂಲವಾಗಿ ಆಳ ಸಮುದ್ರದ ಮೀನುಗಾರಿಕೆ ಮತ್ತು ಕರಾವಳಿ ಮೀನುಗಾರಿಕೆಯೆಂದು ವರ್ಗೀಕರಿಸಬಹುದು. ಆಳ ಸಮುದ್ರದ ಮೀನುಗಾರಿಕೆಯಂತೂ ಅತ್ಯಂತ ಅಮೂಲ್ಯವಾದ್ದು. ಭೂಖಂಡದ ನೀರಿನೊಳಗಿನ ಮರಳು ದಂಡೆಗಳ ಹಾಗೂ ಮಹಾಸಮುದ್ರಗಳ ದಂಡೆಗಳ ಆಳ ಸಮುದ್ರದ ಮೀನುಗಾರಿಕೆಗಳು ಹೆಚ್ಚು ಕಡಿಮೆ ಸಂಪೂರ್ಣವಾಗಿ ಇನ್ನೂರು ಮಾರು ಆಳದ ಮಿತಿಯೊಳಗೇ ನೆಲಸಿರುವುದು ಕಂಡುಬರುತ್ತದೆ. ಆದರೆ ಬಹಳಷ್ಟು ಮೀನುಗಾರಿಕೆಗಳು 100 ಮಾರಿನ ಆಳಕ್ಕೆ ಮಾತ್ರ ಸೀಮಿತವಾಗಿವೆ. ಪ್ರಪಂಚದ ಪ್ರಮುಖ ಮೀನುಗಾರಿಕೆ ನೆಲೆಗಳು ಉತ್ತರ ಸಮಶೀತೋಷ್ಣ ವಲಯದಲ್ಲಿ. ಅದರಲ್ಲಿಯೂ ಹೆಚ್ಚಾಗಿ ಉತ್ತರ ಅಕ್ಷಾಂಶ $40^0$ ಯಿಂದ $70^0$ ವರೆಗಿನ ನಡುವಣ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ. ಈ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಇನ್ನೂರು ಮಾರಿಗಿಂತ ಕಡಿಮೆ ಆಳವಿರುವ ಅನೇಕ ವಿಸ್ತಾರ ಕ್ಷೇತ್ರಗಳಿದ್ದು ಅಮೂಲ್ಯವಾದ ನೀರಿನ ತಳದ ವಾಸಿಗಳಾದ ಅಥವಾ ನೀರಿನ ಕೆಳಸ್ತರಗಳಲ್ಲಿ ಜೀವಿಸುವ ಮೀನುಗಳಿಗೆ ಆಶ್ರಯವಿತ್ತಿರುವ ನೆಲೆಗಳಾಗಿವೆ. ಇಂಥ ಮೀನುಗಳನ್ನೇ ಅವಲಂಬಿಸಿರುವ ಅಸಂಖ್ಯಾತ ಎಳೆಬಲೆಯಿಂದ (ಟ್ರಾಲ್) ಮೀನು ಹಿಡಿಯುವ ಕೈಗಾರಿಕೆಗಳಿವೆ. ಉತ್ತರದ ಸಮುದ್ರಗಳಲ್ಲಿ ಮೀನುಗಾರಿಕೆಗಳ ಕೇಂದ್ರೀಕರಣ ಯಾವ ರೀತಿ ಇದೆ ಎನ್ನುವುದು ಪ್ರಪಂಚದ ಒಟ್ಟು ಉತ್ಪನ್ನದ ಶೇಕಡಾ 70 ರಷ್ಟಕ್ಕೆ ಕಡಿಮೆ ಇಲ್ಲದಷ್ಟನ್ನು ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಜಪಾನ್, ಗ್ರೇಟ್‌ಬ್ರಿಟನ್, ಫ್ರಾನ್ಸ್, ಸ್ಪೇನ್, ನಾರ್ವೆ ಹಾಗೂ ರಷ್ಯದಂಥ ರಾಷ್ಟ್ರಗಳು ಒಟ್ಟುಗೂಡಿ ಪ್ರತಿನಿಧಿಸುವುದರಿಂದಲೇ ಗೊತ್ತಾಗುತ್ತದೆ. ಇತ್ತೀಚೆಗೆ ಭಾರತದಲ್ಲಿ ಸಮುದ್ರ ಮೀನುಗಾರಿಕೆಯನ್ನು ಚುರುಕಾಗಿ ಅಭಿವೃದ್ಧಿಗೊಳಿಸಲಾಗಿದೆ. ಇದೇ ರೀತಿ ಶ್ರೀಲಂಕಾ ಹಾಗೂ ಮಲಯಗಳಲ್ಲಿ ಸಮುದ್ರ ಮೀನುಗಾರಿಕೆಯ ಅಭಿವೃದ್ಧಿಯಾಗಿದ್ದರೂ ಒಳನಾಡಿನ ಮೀನುಗಾರಿಕೆಯೇ ಅತ್ಯಂತ ವಾಣಿಜ್ಯ ಪ್ರಾಮುಖ್ಯವನ್ನು ಪಡೆದಿದೆ.

ಮೀನು ಹಿಡಿಯುವ ಅನೇಕ ಹಾಗೂ ವೈವಿಧ್ಯಮಯ ವಿಧಾನಗಳ ಬಗ್ಗೆ ಮಾಹಿತಿ ವಿಪುಲವಾಗಿದೆ. ಮೀನು ಹಿಡಿಯುವ ವಿಧಾನಗಳ ವಿಕಾಸ ಪುರಾತನ ಕಾಲದಲ್ಲಿ ಪೌರಸ್ತ್ಯ ದೇಶಗಳಲ್ಲಿ ಪಳಗಿಸಿದ ನೀರು ನಾಯಿ, ರೆಮೋರ ಅಥವಾ ಹೀರುಮೀನು ಹಾಗೂ ಕಾರ್ಮೊರೆಂಟ್ ಪಕ್ಷಿ ಮುಂತಾದವುಗಳ ಸಹಾಯದಿಂದ ಮೀನು ಹಿಡಿಯುವ ಪದ್ಧತಿಯಿಂದ ಮೊದಲುಗೊಂಡು ಇತ್ತೀಚಿನ ಆಧುನಿಕ ರೀತಿಯ ವೈವಿಧ್ಯಮಯ ಸಲಕರಣೆಗಳ ಬಳಕೆಯ ಕ್ರಮದ ತನಕ ಸಾಗಿದೆ. ಮೀನುಗಳನ್ನು ಮುಖ್ಯವಾಗಿ ನಾಲ್ಕು ರೀತಿಯಲ್ಲಿ ಹಿಡಿಯಬಹುದು. ಅವೆಂದರೆ ಈಟಿ, ಬೋನು, ಬಲೆ ಮತ್ತು ಗಾಳಗಳು. ಅತ್ಯಂತ ಪ್ರಾಚೀನ ಮೀನು ಹಿಡಿಯುವ ಸಲಕರಣೆಗಳು ನಿಶ್ಚಯವಾಗಿಯೂ ಈಟಿ ಮತ್ತು ಬೋನುಗಳೇ ಆಗಿದ್ದುವು. ಈಗಲೂ ಇವನ್ನು ಪ್ರಪಂಚದ ಅನೇಕ ಭಾಗಗಳಲ್ಲಿ ಉಪಯೋಗಿಸುವುದುಂಟು. ಇಂಥ ಪುರಾತನ ಬೋನುಗಳಿಂದ ಇತ್ತೀಚಿನ ಹೆಚ್ಚು ಸಮರ್ಥವಾದ ಮೀನುಅಣೆಕಟ್ಟು ಅಥವಾ ಒಡ್ಡುಗಳವರೆಗೆ (ಫಿಶ್ ವಿಯರ್) ಇಂಥ ಮೀನುಗಾರಿಕೆ ವಿಕಸಿಸಿದೆ. ಈ ಮೀನುಅಣೆಕಟ್ಟಿನಲ್ಲಿ ಅನುಸರಿಸುವ ಸಾಮಾನ್ಯ ನಿಯಮವೆಂದರೆ ಮೀನುಗಳನ್ನು ಪ್ರವಾಹಭರತಕ್ಕೆ ಪ್ರವೇಶಿಸುವಂತೆ ಮಾಡಿ ಉಬ್ಬರದ ನೀರಿನ ಇಳಿತದ ಮೇಲೆ ಉಳಿಸಿಕೊಂಡು ಅನಂತರ ಅವುಗಳನ್ನು ಹಿಡಿಯುವುದು. ಈಗಲೂ ಈ ಪದ್ಧತಿ ಅನೇಕ ಕಡೆಗಳಲ್ಲಿ ರೂಢಿಯಲ್ಲಿದೆ. ಸರಳ ಮೀನುಅಣೆಕಟ್ಟುಗಳಿಂದ ಮುಂದಕ್ಕೆ ವಿಶದವಾದ ಸರಳು ಹಾಗೂ ಕೊಂಬೆಗಳಿಂದ ಒಂದಕ್ಕೊಂದು ಹೆಣೆದು ಮಾಡಿದ ಬೇಲಿಯ ರಚನೆಯವರೆಗೆ ಅಭಿವೃದ್ಧಿಗೊಂಡಿತು. ಇವುಗಳಿಂದ ಕ್ರಮೇಣ ಸ್ಥಿರವಾಗಿ ನೆಲೆಗೊಳಿಸುವ ಬಲೆಗಳು ವಿಕಾಸಗೊಂಡವು. ಬಹುಶಃ ಗಾಳಗಳು ಸಹ ಮಾನವನ ಇತಿಹಾಸದ ಆದಿಯ ಮಜಲಲ್ಲಿಯೇ ಉಪಯೋಗದಲ್ಲಿದ್ದುವು. ಅಂತಿಮವಾಗಿ ಅಣೆಕಟ್ಟನ್ನು ಮೀನು ಪ್ರವೇಶಿಸುವುದನ್ನೇ ಕಾಯುತ್ತಾ ಇರುವುದಕ್ಕೆ ಬದಲು ಮೀನಿಗೇ ಬಲೆಯನ್ನು ತರುವ ಪ್ರಯತ್ನಗಳನ್ನು ಮಾಡಲಾಯಿತು. ಈ ಪ್ರಯತ್ನಗಳೇ ಪ್ರಥಮ ಎಳೆಬಲೆ ದೋಣಿಗಳು ಅಥವಾ ದೋಣಿಗಳಿಂದಾಗಲೀ ತೀರದಿಂದಾಗಲೀ ಬಳಕೆಯಾಗುವ ಸೀನ್ ಬಲೆಗಳ ಶೋಧನೆಗೆ ನಾಂದಿಯಾದವು.

ಇತ್ತೀಚಿನ ವಾಣಿಜ್ಯದ ಮೀನುಗಾರಿಕೆಯಲ್ಲಿ ಬಹುತೇಕವಾಗಿ ಉಪಯೋಗಿಸುವ ನಾಲ್ಕು ಪ್ರಧಾನ ವಿಧಾನಗಳೆಂದರೆ ಎಳೆಬಲೆಯಿಂದ ಮೀನು ಹಿಡಿಯುವುದು, ಮೇಲು ಅಂಚಿನಲ್ಲಿ ತೇಲು ಬೆಂಡುಗಳನ್ನು ಕೆಳಂಚಿನಲ್ಲಿ ಭಾರಗಳನ್ನು ಕಟ್ಟಿ ಮೀನುಗಳನ್ನು ಸುತ್ತುವರಿದು ದಡಕ್ಕೆ ಎಳೆಯಬಹುದಾದ ಬಲೆಗಳಿಂದ ಹಿಡಿಯುವುದು, ಗಾಳಿಯ ಹರವಿನಲ್ಲಿ ಹೊಡೆದುಕೊಂಡು ಹೋಗುತ್ತಿರುವಾಗ ಕೊಚ್ಚು ಬಲೆ ಹಾಕಿ ಮೀನುಹಿಡಿಯುವುದು ಹಾಗೂ ಗಾಳದ ಹುರಿಯಿಂದ ಮೀನು ಹಿಡಿಯುವುದು. ಪ್ರತಿಯೊಂದು ವಿಧಾನ ಒಂದು ವಿಶಿಷ್ಟ ಬಗೆಯ ಸಾಧನದ ಉಪಯೋಗದಿಂದೊಡಗೂಡಿ ನಿರ್ದಿಷ್ಟ ಜಾತಿಯ ಮೀನುಗಳನ್ನು ಹಿಡಿಯುವುದಕ್ಕೆ ಯೋಜಿತವಾಗಿದೆ. ಎಳೆಬಲೆ ದೋಣಿಗಳು, ಸೀನ್ ಬಲೆ ದೋಣಿಗಳು ಹಾಗೂ ಗಾಳದ ಹುರಿಯದೋಣಿಗಳು ವಿಶೇಷವಾಗಿ ಕಾಡ್, ಹ್ಯಾಡಕ್, ಹೇಕ್, ಹ್ಯಾಲಿಬಟ್, ಪ್ಲೇಸ್ ಮತ್ತು ಚಪ್ಪಟೆ ಮೀನುಗಳಂಥ ನೀರಿನ ತಳದಲ್ಲಿ ವಾಸಿಸುವ ಮೀನುಗಳನ್ನು ಹಿಡಿಯಲು ಉಪಯುಕ್ತವಾದರೆ ಹೆರ್ರಿಂಗ್, ಪಿಲ್‌ಚಾರ್ಡ್ ಮತ್ತು ಬಂಗುಡೆ ಮುಂತಾದ ವಿಸ್ತಾರಸಮುದ್ರದ ಮೇಲಿನ ಮೀನುಗಳನ್ನು ಹಿಡಿಯಲು ಕೊಚ್ಚುಬಲೆ ದೋಣಿ ಸಹಾಯಕ.

ಸಮತಲವಾಗಿದ್ದು ಶಂಕ್ವಾಕೃತಿಯುಳ್ಳ ಬಲೆಯೇ ಎಳೆಬಲೆ. ಇದರ ಒಂದು ತುದಿಯಲ್ಲಿ ಅಗಲವಾದ ಬಾಯಿಯಿದೆ. ಇನ್ನೊಂದು ತುದಿ ಚೂಪಾಗಿ ಹೋಗುತ್ತ ಕಟ್ಟಕಡೆಯಲ್ಲಿ ಚೀಲ ಅಥವಾ ಸಂಧಿಯಲ್ಲಿ (ಕಾಡ್ ಎಂಡ್) ಅಂತ್ಯಗೊಳ್ಳುತ್ತದೆ. ಈ ಬಲೆಯ ಉದ್ದ ಸುಮಾರು 30 ಮೀ. ವಿಸ್ತಾರವಾದ ಈ ಚೀಲ ಹಡಗಿನ ಮೇಲಿರುವ ಒಂದು ಬಲಿಷ್ಠ ಎತ್ತುಗೆಯಂತ್ರಕ್ಕೆ ಜೋಡಣೆಗೊಂಡಿದ್ದು ಹಡಗಿನ ಹಗ್ಗಗಳ ಸಹಾಯದಿಂದ ಸಮುದ್ರ ತಳದ ಉದ್ದಕ್ಕೂ ನಿಧಾನವಾಗಿ ಎಳೆಯಲ್ಪಡುತ್ತದೆ. ಮೀನುಗಳು ಒಂದು ಸಲ ಬಲೆಯೊಳಕ್ಕೆ ಬಂದರೆ ಬಲೆಯಿಂದ ಹೊರಕ್ಕೆ ಈಜಿಕೊಂಡು ಹೋಗದಂತೆ ಕವಾಟದಂತಿರುವ ವಿಶೇಷ ಸಾಧನಗಳು ತಡೆಯುತ್ತವೆ. ಬಲೆಯ ಕೆಳಗಿನ ಅಂಚಾಗಿ ರೂಪುಗೊಂಡಿರುವ ಪಾದಹಗ್ಗ ಮುಖ್ಯವಾಗಿ ಮರಳಿನಲ್ಲಿ ಹುಗಿದು ನೆಲಸಿರುವ ಚಪ್ಪಟೆಮೀನುಗಳಂಥ ಮೀನುಗಳನ್ನು ಎಬ್ಬಿಸಲು ನೆರವಾಗುತ್ತದೆ. ಸುಮಾರು 12–15 ಮೀ ಉದ್ದದ ದಪ್ಪ ಮರದ ತೊಲೆಯನ್ನು ಬಾಯಿಯ ಮೇಲಿನ ಅಂಚಿನಲ್ಲಿ ಜೋಡಿಸಲಾಗಿರುವ ತೊಲೆ ಎಳೆಬಲೆಯನ್ನು (ಬೀಮ್ ಟ್ರಾಲ್) ಸಂಶೋಧನೆಯ ಉದ್ದೇಶಗಳಿಗಾಗಿ ಉಪಯೋಗಿಸುವುದುಂಟು. ಆದರೆ ವಿಶೇಷವಾಗಿ ಅತ್ಯಂತ ವ್ಯಾಪಕವಾಗಿ ಉಪಯೋಗಿಸುವ ಬಲೆ ಎಂದರೆ ನೀರುನಾಯಿ ಎಳೆಬಲೆ (ಆಟರ್ ಟ್ರಾಲ್). ಇದರಲ್ಲಿ ಬಾಯಿಯ ಸುತ್ತ ಮರದ ತೊಲೆಯ ರಚನೆಯಿಲ್ಲ. ಬಲೆಯ ಬಾಯಿ 2–8 ಮೀ ಉದ್ದದ ಹಾಗೂ 1–2 ಮೀ ಎತ್ತರದ ಭಾರವುಳ್ಳ ಕಬ್ಬಿಣದಿಂದ ಕೂಡಿದ ಮರದಿಂದ ರಚಿತವಾದ ಎರಡು ದೊಡ್ಡ ಬಾಗಿಲುಗಳು ಅಥವಾ ನೀರುನಾಯಿ ಹಲಗೆಗಳ ಸಹಾಯದಿಂದ ತೆರೆದಿರುತ್ತದೆ. ಸಮುದ್ರತಳದ ಉದ್ದಕ್ಕೂ ಈ ಬಲೆಯನ್ನು ನಿಧಾನವಾಗಿ ಎಳೆದಾಗ ನೀರಿನ ಪ್ರತಿರೋಧ ಶಕ್ತಿ ಎರಡು ಬಾಗಿಲುಗಳನ್ನು ಜಗ್ಗುತ್ತದೆ.

ಅನೇಕ ರಾಷ್ಟ್ರಗಳಲ್ಲಿ ವಿವಿಧ ರೀತಿಯ ಸೀನ್ ಬಲೆಗಳ ಉಪಯೋಗ ಉಂಟು. ಸೀನ್ ಬಲೆ ಉದ್ದವಾಗಿದ್ದು ಇದರ ಮೇಲಿನ ಅಂಚಿನಲ್ಲಿ ತೇಲುಬೆಂಡುಗಳನ್ನೂ ಕೆಳಗಿನ ಅಂಚಿನಲ್ಲಿ ಭಾರಗಳನ್ನೂ ಕಟ್ಟಲಾಗಿರುತ್ತದೆ. ಈ ಬಲೆಯನ್ನು ಮೀನಿನ ಒಂದು ಹಿಂಡು ಕಂಡುಬಂದಾಗ ಅದನ್ನು ಸುತ್ತುವರಿಯುವಂತೆ ಮಾಡಿ ಮೀನುಗಳನ್ನು ಬಲೆಯಲ್ಲಿ ಬಂಧಿಸಲಾಗುತ್ತದೆ. ಅನಂತರ ಸುಲಭವಾಗಿ ಹಿಡಿದು ತೆಗೆದುಕೊಳ್ಳಲು ಸಾಧ್ಯವಾಗುವಂತೆ ಕ್ರಮಕ್ರಮವಾಗಿ ದೋಣಿಯ ಹತ್ತಿರಕ್ಕೆ ಬಲೆಯನ್ನು ಎಳೆಯುತ್ತಾರೆ. ಈ ಬಲೆ ಸಾಮಾನ್ಯವಾಗಿ ಚಲಿಸುತ್ತಿರುವ ಒಂದು ದೋಣಿಯಿಂದ ಬಿಡಲ್ಪಡುವುದು ಅಥವಾ ಮೀನುಹಿಂಡನ್ನು ಒಂದು ವೃತ್ತ ಅಥವಾ ಅರ್ಧ ವೃತ್ತದಲ್ಲಿ ಸುತ್ತುವರಿಯುವಂತೆ ದೋಣಿಯಿಂದ ಹಾಯಿಸಲ್ಪಡುವುದು. ಕೊನೆಯಲ್ಲಿ ವಿಶೇಷ ಎತ್ತುಗೆ ಯಂತ್ರದ ಸಹಾಯದಿಂದ ದೋಣಿಯೊಳಕ್ಕೆ ಇಲ್ಲವೆ ಹಗ್ಗದ ಸಹಾಯದಿಂದ ದಡದ ಮೇಲಕ್ಕೆ ಎಳೆಯಲಾಗುತ್ತದೆ.

ಚೀಲಬಲೆ ಎಂಬುದು ಸೀನ್ ಬಲೆಗಳ ಪೈಕಿ ವಿಶೇಷ ತೆರನಾದ್ದು. ಇದರಿಂದ ಬಂಗುಡೆ, ಟ್ಯೂನ, ಹೆರ್ರಿಂಗ್ ಹಾಗು ಮೆನ್‌ಹ್ಯಾಡೆನ್‌ನಂಥ ಗುಂಪುಗುಂಪಾಗಿ ಈಜುವ ಪಾತಳಿ ಮೀನುಗಳನ್ನು ಹಿಡಿಯಲು ಸಾಧ್ಯವಾಗುತ್ತದೆ. ಈ ಬಲೆಯನ್ನು ಚೀಲಬಲೆ ದೋಣಿ ಎಂಬ ದೊಡ್ಡ ನೌಕೆಯಿಂದ ಮುನ್ನುಗ್ಗಿಸುವ ಎರಡು ಲಘು ದೋಣಿಗಳಿಂದ ಅರ್ಧವೃತ್ತಾಕಾರದಲ್ಲಿ ಹರಡುತ್ತಾರೆ. ಮೀನಿನ ಹಿಂಡು ಕಾಣಿಸಿಕೊಂಡಾಗ ಅದನ್ನು ಸುತ್ತುವರಿದು ಬಂಧಿಸುವಂತೆ ಈ ಬಲೆಯನ್ನು ಹೂಡುತ್ತಾರೆ. ತರುವಾಯ ಬಲೆಯನ್ನು ಒಂದು ರೀತಿಯ ಚೀಲ ಅಥವಾ ಕೋಶದೊಳಕ್ಕೆ ಒಟ್ಟಿಗೆ ತಳದಲ್ಲಿ ಉಂಗುರಗಳ ಮೇಲೆ

ಚಲಿಸುವ ಹಗ್ಗದ ಸಹಾಯದಿಂದ ಎಳೆಯುತ್ತಾರೆ. ಬಿರಟೆಯಿಂದ ರಚಿತವಾದ ತೇಲುವ ಚೆಂಡುಗಳಿಂದ ಬಲೆಯ ಶಿಖರ ನೆಟ್ಟಗೆ ನಿಲ್ಲುವಂತೆ ಮಾಡಲಾಗುವುದು.

ಇತ್ತೀಚೆಗೆ ಬ್ರಿಟಿಷ್ ಮೀನುಗಾರಿಕೆಯಲ್ಲಿ ಡೇನಿಷ್ ಸೀನ್ ಅಥವಾ ಸ್ನರ್‌ವಾಡ್ ಎಂಬ ಬಲೆಯನ್ನು ಬಳಸಲಾಗುತ್ತದೆ. ಈ ಬಲೆ ಅನೇಕ ಅಂಶಗಳಲ್ಲಿ ಟ್ರೌಲ್ ಹಾಗೂ ಸೀನ್‌ಗಳ ಮಧ್ಯಮ ರೀತಿಯದು. 50 ಮೀ ಗಿಂತಲೂ ಉದ್ದವಿರುವ ಈ ಬಲೆಯ ಪ್ರತಿಯೊಂದು ಪಾರ್ಶ್ವಕ್ಕೂ ಸುಮಾರು ಒಂದು ಕಿಮೀ.ಗೂ ಮೀರಿದ ಹಡಗಿನ ಎಳೆಯುವ ಹಗ್ಗವನ್ನೂ ಕಟ್ಟಲಾಗಿರುತ್ತದೆ. ಬಲೆಗೆ ಹೊಂದಿಕೊಂಡಂತೆ 15–20 ಮೀ ಉದ್ದದ ಒಂದು ದೊಡ್ಡ ಚೀಲ ಇರುತ್ತದೆ. ದಡದಮೇಲೆ ಎಳೆದು ತರಲಾಗದ ಈ ಬಲೆಯನ್ನು ತೀರದಾಚೆಯ ನೀರಿನಲ್ಲಿರುವ ಒಂದು ದೋಣಿಯಿಂದ ಕಾರ್ಯಾಚರಣೆಗೊಳಿಸುತ್ತಾರೆ.

ಕೊಚ್ಚುಬಲೆಗಳ ಕಾರ್ಯವಿಧಾನದ ಮೂಲತತ್ತ್ವ ಎಳೆಬಲೆ ಹಾಗೂ ಸೀನ್ ಬಲೆಗಳದ್ದಕ್ಕಿಂತ ಭಿನ್ನ ರೀತಿಯದು. ಕಾರ್ಯನಿರ್ವಹಣೆಯಲ್ಲಿ ಇದು ನಿಜವಾಗಿಯೂ ಮೀನುಗಳನ್ನು ಸಮೀಪಿಸುವುದಿಲ್ಲ. ಆದರೆ ಈ ಬಲೆಯನ್ನು ಸ್ಥಿರವಾಗಿ ನೆಲೆಗೊಂಡಿರುವ ಬಲೆ ಮತ್ತು ಬೋನುಗಳಂತಲ್ಲದೆ ನಿಧಾನವಾಗಿ ಚಲಿಸುತ್ತಿರುವ ಹಡಗಿಗೂ ಇಲ್ಲವೆ ತೇಲುತ್ತಿರುವ ಈಜುಬುರುಡೆಗೂ ಕಟ್ಟಲಾಗಿರುತ್ತದೆ. ಈ ಬಲೆ ಭಾರ ಹಾಗೂ ಗಾಳಿಯ ಪ್ರಭಾವದಿಂದಾಗಿ ಹಡಗಿನ ಅಥವಾ ತೇಲುಬುರುಡೆಯ ಜೊತೆಗೇ ಚಲಿಸುತ್ತದೆ. ಕೊಚ್ಚುಬಲೆಯಲ್ಲಿ ಹಿಡಿಯುವಂಥ ಮೀನುಗಳೆಂದರೆ ಸಮುದ್ರತಳದ ಮೇಲೆ ನೀರಿನ ಸ್ತರಗಳಲ್ಲಿ ಈಜುತ್ತ ತಮ್ಮ ಕಾಲವನ್ನು ಕಳೆಯುವ, ಆದರೆ ಹಗಲಿನಲ್ಲಿ ಸಂಪೂರ್ಣವಾಗಿ ಬಹಳ ಆಳಕ್ಕೆ ಇಳಿದು ರಾತ್ರಿಯಲ್ಲಿ ನೀರಿನ ಮೇಲ್ಮೈಯನ್ನು ಸಮೀಪಿಸುವ ಸ್ವಭಾವದ ಮೀನುಗಳು. ರಚನೆಯಲ್ಲಿ ಪ್ರತಿಯೊಂದು ಬಲೆಯೂ ಸುಮಾರು 12 ಮೀ ಆಳವುಳ್ಳ ಬಲಯುತವಾದ ಜಾಲದ ಒಂದು ಸರಳ ಹರವು. ಅದರ ಮೇಲಿನ ಅಂಚು ಬಿರಟೆಗಳಿಂದ ತೇಲುವಂತಿದ್ದರೆ ಕೆಳಗಿನ ಅಂಚು ಸೀಸದ ಗುಂಡುಗಳಿಂದ ಕೆಳಕ್ಕೆ ಜಗ್ಗುವಂತಿರುತ್ತದೆ. ರಾತ್ರಿ ಸಮೀಪಿಸಿದಂತೆ ಭರತದೊಂದಿಗೆ ಈ ಬಲೆಗಳನ್ನು ಬೀಸುತ್ತಾರೆ. ಒಂದೇ ಹಡಗಿನಿಂದ ಸುಮಾರು ಎಂಬತ್ತೈದು ಬಲೆಗಳನ್ನು ಒಂದೇ ಕಾಲದಲ್ಲಿ ಉಪಯೋಗಿಸುತ್ತಾರೆ. ಆಗ ನೀರಿನ ಮೇಲ್ಮೈಯಲ್ಲಿ ಅಥವಾ ಕೆಲವು ಮೀಟರು ಆಳದಲ್ಲಿ ಸುಮಾರು 5 ಕಿಮೀ ಉದ್ದದವರೆಗೆ ನೆಟ್ಟಗೆ ನಿಂತು ನೇತಾಡುತ್ತಿರುವ ಜಾಲದ ಒಂದು ಸಂಪೂರ್ಣ ಭಿತ್ತಿಯಂತೆಯೇ ಇವು ತೋರಿ ಬರುತ್ತವೆ. ಜಾಲದ ಭಿತ್ತಿಯ ಒಂದು ಕೊನೆಯಿಂದ ಕಟ್ಟಿರುವ ಹಡಗು ಭರತದೊಂದಿಗೆ ಅನೇಕ ಗಂಟೆಗಳ ತನಕ ಚಲಿಸುತ್ತಿರುತ್ತದೆ. ಈ ಬಲೆಯ ಜಾಲರಂಧ್ರಗಳು ಮೀನುಗಳ ತಲೆಯನ್ನು ನೂಕಲು ಮಾತ್ರ, ಆದರೆ ದೇಹವನ್ನು ಹೊರಕ್ಕೆ ತಳ್ಳಲು ಸಾಧ್ಯವಾಗದಷ್ಟು ಚಿಕ್ಕವಾಗಿರುತ್ತವೆ. ಈ ಜಾಲರಂಧ್ರದೊಳಗೆ ಒಂದು ಸಲ ಮೀನಿನ ಕಿವಿರುಮುಚ್ಚಳಗಳು ಹೊಕ್ಕರೆ ಮೀನಿಗೆ ತನ್ನ ತಲೆಯನ್ನು ಅದರಿಂದ ಬಿಡಿಸಿಕೊಳ್ಳಲು ಅಸಾಧ್ಯವಾಗುತ್ತದೆ. ಹೀಗೆ ಕತ್ತಲೆಯಲ್ಲಿ ಅಸಂಖ್ಯಾತ ಮೀನುಗಳು ಬಲೆಯೊಳಕ್ಕೆ ಈಜಿಕೊಂಡು ಬಂದು ಅದಕ್ಕೆ ಅಂಟಿಕೊಳ್ಳುತ್ತವೆ. ಬೆಳಗಾದಾಗ ಹಡಗಿಗೆ ಈ ಬಲೆಗಳೆಲ್ಲವನ್ನೂ ಎಳೆದುಕೊಂಡು ಬಂದು ಬಲೆ ಅಲ್ಲಾಡಿಸಿ ಮೀನುಗಳನ್ನು ಸಂಗ್ರಹಿಸುತ್ತಾರೆ.

ಕಾಡ್ ಹಾಗು ಹ್ಯಾಲಿಬಟ್‌ಗಳಂಥ ನೀರಿನ ತಳವಾಸಿ ಮೀನುಗಳನ್ನು ಗಾಳದ ಹುರಿಯಿಂದ ಹಿಡಿಯುತ್ತಾರೆ (ಲೈನಿಂಗ್). ನ್ಯೂ ಫೌಂಡ್‌ಲ್ಯಾಂಡ್ ತೀರಗಳಲ್ಲಿ ಈ ವಿಧಾನದಿಂದ ಕಾರ್ಯಾಚರಣೆಯಲ್ಲಿದ್ದ ಕಾಡ್ ಮೀನುಗಾರಿಕೆ ಪ್ರಪಂಚದಲ್ಲಿಯೇ ಪ್ರಖ್ಯಾತವಾಗಿತ್ತು. ಹಳೆಯ ಕೈಗಾಳದ ಹುರಿಯ ಬಳಕೆ ಈಗ ಬಹು ವಿರಳ. ಬದಲಿಗೆ ಉದ್ದಗಾಳದ ಹುರಿಯ ಉಪಯೋಗ ರೂಢಿಗೆ ಬಂದಿದೆ. ಇದು ಸುಮಾರು 4000 ಮೀ ಗಿಂತ ಹೆಚ್ಚು ಉದ್ದವಿದ್ದು 0.75–2 ಮೀ ಉದ್ದದ ಗಿಡ್ಡಕೊಕ್ಕೆ ಹುರಿಗಳಿಗೆ (ಸ್ನೂಡ್ಸ್) ನಿಯಮಿತವಾದ ಅಂತರಗಳಲ್ಲಿ ಕಟ್ಟಿರುವ ಕೊಕ್ಕೆಗಳನ್ನು ಹೊಂದಿರುತ್ತದೆ. ಬಲೆಯಿರುವ ಸ್ಥಳವನ್ನು ಪತ್ತೆಮಾಡಲು ಅನುಕೂಲವಾಗುವಂತೆ ಒಂದು ತೇಲು ಬುರುಡೆ ಅಥವಾ ತೇಲುಚೆಂಡನ್ನು ಪ್ರತಿಯೊಂದು ದಾರಕ್ಕೂ ಕಟ್ಟಲಾಗಿರುತ್ತದೆ. ಒಂದು ದೊಡ್ಡ ಮೋಟಾರ್ ಲೈನರಿನ ಒಂದು ಏಕೈಕ ಗಾಳದ ಹುರಿಯಮೇಲೆ ಕೊಕ್ಕೆಗಳ ಸಂಖ್ಯೆ 1000–5000 ದಷ್ಟಿರಬಹುದು. ಈ ಕೊಕ್ಕೆಗಳಿಗೆ ಸಿಕ್ಕಿಸುವ ಪ್ರಾಣಿಗಳೆಂದರೆ ಎರೆಗಳು, ಶಂಖ ಮೀನು, ಜೋಡು ಚಿಪ್ಪಿನ ಪ್ರಾಣಿಗಳು, ಕಟಲ್ ಮೀನುಗಳು ಹಾಗೂ ಹೆರ್ರಿಂಗ್‌ಗಳನ್ನೊಳಗೊಂಡಂತೆ ವಿವಿಧ ಬಗೆಯ ಮೀನುಗಳು. ಗಾಳದ ಹುರಿಗಳನ್ನು ಬೆಳಿಗ್ಗೆ ಇಲ್ಲವೆ ಮಧ್ಯಾಹ್ನ ಕಾಲಗಳಲ್ಲಿ ಹೂಡುತ್ತಾರೆ. ಈಚೆಗೆ ಸಾಮಾನ್ಯವಾಗಿ ಗಾಳದ ಹುರಿಯಿಂದ ಸ್ಯಾಲ್ಮನ್, ಕೆಂಪು ಸ್ನಾಪರ್, ಟ್ಯೂನ, ಹಾಲು ಹೆಂಚು ಮೀನುಗಳನ್ನು ಹಿಡಿಯುವುದುಂಟು.

ಮೀನುಗಾರಿಕೆಯಲ್ಲಿ ಮೀನುಗಳ ಪಾತ್ರ ಹಿರಿದಾದರೂ ಸೀಗಡಿಗಳು (ಪ್ರಾನ್ಸ್), ಸಿಂಪಿಗಳು (ಆಯಿಸ್ಟರ್ಸ್), ಮರುವಾಯಿಗಳು (ಕ್ಲ್ಯಾಮ್ಸ್), ಸಮುದ್ರ ನಳ್ಳಿಗಳು (ಲಾಬ್‌ಸ್ಟರ್ಸ್), ಏಡಿಗಳು (ಕ್ರ್ಯಾಬ್ಸ್) ಮುಂತಾದವು ಅನಂತರದ ಸ್ಥಾನವನ್ನು ಆಕ್ರಮಿಸುತ್ತವೆ. ಇವು ಕೂಡ ಈಗ ವಾಣಿಜ್ಯದ ಮೀನುಗಾರಿಕೆಯ ಮುಖ್ಯ ಅಂಗವೇ ಆಗಿದ್ದು ಭಾರತವನ್ನು ಒಳಗೊಂಡಂತೆ ಅನೇಕ ರಾಷ್ಟ್ರಗಳಲ್ಲಿ ಸೀಗಡಿ ಮೀನುಗಾರಿಕೆ ಇತ್ತೀಚೆಗೆ ವಿದೇಶಿ ವಿನಿಮಯಗಳಿಸುವಂಥ ಉದ್ಯಮವಾಗಿ ರೂಪುಗೊಂಡಿದೆ. ಅಳಿವೆಗಳಲ್ಲಿ, ತೀರಪ್ರದೇಶಗಳಲ್ಲಿ ಹಾಗೂ ಆಳಸಮುದ್ರಗಳಲ್ಲಿ ವಾಸಮಾಡುವ ಸೀಗಡಿಗಳನ್ನು ಸಾಮಾನ್ಯವಾಗಿ ಯಾಂತ್ರೀಕೃತ ದೋಣಿಗಳ ಎಳೆ ಬಲೆಗಳಿಂದ ಹಿಡಿಯುತ್ತಾರೆ. ಜಪಾನ್ ಹಾಗೂ ಇತರ ಕೆಲವು ರಾಷ್ಟ್ರಗಳು ಈಚೆಗೆ ಚೌಳು ನೀರಿನಲ್ಲಿ ಸೀಗಡಿ ಕೃಷಿಯನ್ನು ಕೈಗೊಂಡಿವೆ. ಸಿಂಪಿಗಳು ಹಾಗೂ ಮರುವಾಯಿಗಳು ನೀರಿನ ಅಲ್ಪ ಸೆಳೆತವಿರುವ ಆಳವಿಲ್ಲದ ನೀರಿನಲ್ಲಿ ವಾಸಿಸುತ್ತಿದ್ದು ಇಂಥವು ಕೂಡ ನದಿ, ಸಮುದ್ರಗಳ ಮೀನುಗಾರಿಕೆಯಲ್ಲಿ ಮುಖ್ಯವೆನಿಸಿವೆ. ಈಗ ನದಿಗಳಲ್ಲಿ ಸಿಂಪಿ ಮತ್ತು ಮರುವಾಯಿಗಳನ್ನು ಕೃಷಿಮಾಡುವ ಮೂಲಕ ವಿಸ್ತಾರವಾದ ಒಂದು ಉದ್ಯೋಗವೇ ಸ್ಥಾಪಿತವಾಗಿದೆ. ಇಂಥಲ್ಲಿ ಸಿಂಪಿಗಳು ಹಾಗೂ ಮರುವಾಯಿಗಳಿಗೆ ರಕ್ಷಣೆಯನ್ನು ಕೊಡಲು ಬೇಲಿಯನ್ನು ಕಟ್ಟಿ ಅವನ್ನು ನಾಟಿ ಮಾಡಿ ಬೆಳೆಸಲಾಗುತ್ತದೆ. ಯುಕ್ತ ಕಾಲದಲ್ಲಿ ಇತರ ಬೆಳೆಗಳಂತೆಯೇ ಸಿಂಪಿಗಳನ್ನು ಕಬ್ಬಿಣದಿಂದ ಮಾಡಿದ ಉದ್ದವಾದ ಹಿಡಿಗಳುಳ್ಳ ಸಿಂಪಿ ಇಕ್ಕಳಗಳಿಂದ, ಮರುವಾಯಿಗಳನ್ನು ವಿಶಿಷ್ಟ ಬಗೆಯ ಹಲುಬೆಗಳಿಂದ ಸಂಗ್ರಹಿಸಲಾಗುತ್ತದೆ. ಸಮುದ್ರ ನಳ್ಳಿಗಳನ್ನು ಹಾಗೂ ಏಡಿಗಳನ್ನು ಮರದ ಅಥವಾ ತಂತಿಯ ಬೋನುಗಳಿಂದ ಹಿಡಿಯಲಾಗುತ್ತದೆ. ಸರ್ವೋತ್ಕೃಷ್ಟವಾದ ಸಮುದ್ರ ನಳ್ಳಿಗಳು ಮತ್ತು ಮರುವಾಯಿಗಳು ಕೆನಡದಿಂದ ; ಸಿಂಪಿಗಳು ಅಮೆರಿಕ ಸಂಯುಕ್ತ ಸಂಸ್ಥಾನ, ರೋಡ್ ದ್ವೀಪಗಳು, ಕನ್ನೆಕ್ಟಿಕಟ್, ಲಾಂಗ್ ಐಲೆಂಡ್‌ಗಳು, ಚೆಸಾಪೀಕ್ ಕೊಲ್ಲಿ, ಭಾರತ ಮತ್ತು ಇತರ ರಾಷ್ಟ್ರಗಳಿಂದ ದೊರಕುತ್ತವೆ. ನ್ಯೂ ಇಂಗ್ಲೆಂಡ್‌ನ ತೀರ ಇಚ್ಚಿಪ್ಪು ಮೀನುಗಾರಿಕೆಗೆ ಹೆಸರಾಗಿದೆ.

ಸಮುದ್ರತೀರದಲ್ಲಿ ಕಂಡುಬರುವ ಮೀನು ಹಿಡಿಯುವಿಕೆಯೇ ಕರಾವಳಿ ಮೀನುಗಾರಿಕೆ. ಇದರಲ್ಲಿ ಮೊದಲನೆಯ ಪದ್ಧತಿಯೆಂದರೆ ವಿವಿಧ ರೀತಿಯ ಬಲೆಗಳಿಂದ ಪರಂಪರಾನುಗತವಾಗಿ ನಡೆದುಬಂದ ಮಾನವಶಕ್ತಿಯಿಂದ ನಡೆಸಲಾಗುವ ಮೀನುಗಾರಿಕೆ. ಯಾಂತ್ರೀಕೃತ ದೋಣಿಗಳಿಂದ ವೈವಿಧ್ಯಮಯ ಬಲೆಗಳನ್ನು ಬಳಸಿ ಮೀನು ಹಿಡಿಯುವ ಮೀನುಗಾರಿಕೆ ಮತ್ತೊಂದು. ಹೀಗೆ ಹಿಡಿದ ಮೀನುಗಳನ್ನು ರಫ್ತಿಗಾಗಿ ಸಂಸ್ಕರಣ ಮಾಡುವುದು ಮೀನುಗಾರಿಕೆಯ ಮೂರನೆಯ ಹಂತ. ರಂಪಣಿ ಮತ್ತು ಇತರ ಬಲೆಗಳಿಂದ ತೀರದುದ್ದಕ್ಕೂ ಸಮುದ್ರ ಮೀನುಗಳಾದ ಬಂಗುಡೆ, ಬೂತಾಯಿ ಮುಂತಾದವುಗಳನ್ನು ಹಿಡಿಯುತ್ತಾರೆ. ಯಾಂತ್ರೀಕೃತ ದೋಣಿಗಳಿಂದ ನೀರುನಾಯಿ ಎಳೆಬಲೆ, ಸಂಚಿಬಲೆ ಇತ್ಯಾದಿ ಸಾಧನಗಳನ್ನು ಬಳಸಿ ಹೇರಳ ಮೊತ್ತದಲ್ಲಿ ಮೀನುಗಳನ್ನು ಹಿಡಿಯುವುದುಂಟು. ಇದಕ್ಕೋಸ್ಕರವಾಗಿಯೇ ಸುಧಾರಿತ ಯಾಂತ್ರಿಕ ದೋಣಿಗಳನ್ನು ರಚಿಸುವುದಕ್ಕೆ ದೋಣಿ ನಿರ್ಮಾಣ ಕೇಂದ್ರಗಳು ಸ್ಥಾಪಿತವಾಗಿವೆ. ಅಂತೆಯೇ ಮೀನುಗಾರರ ತರಬೇತಿ ಕೇಂದ್ರಗಳ ಸ್ಥಾಪನೆಯೂ ಆಗಿದೆಯಲ್ಲದೆ ಮೀನುಗಾರಿಕೆ ಬಂದರುಗಳ ನಿರ್ಮಾಣವೂ ನಡೆಯುತ್ತಿದೆ.

ಕೆರೆ, ಕೊಳ, ನದಿ, ಸರೋವರ ಮುಂತಾದ ಸಿಹಿನೀರು ಪ್ರದೇಶಗಳಲ್ಲಿ ಮೀನುಗಳನ್ನು ಹಿಡಿಯುವ ಪದ್ಧತಿಗೆ ಒಳನಾಡು ಮೀನುಗಾರಿಕೆ ಎಂದು ಹೆಸರು. ಸಿಹಿನೀರು ಪ್ರದೇಶಗಳು ವೈವಿಧ್ಯಮಯವಾಗಿರುವಂತೆಯೇ ಇವುಗಳಲ್ಲಿ ಮೀನು ಹಿಡಿಯಲು ವಿವಿಧ ರೀತಿಯ ವಾಹನಗಳೂ ಯಥೋಚಿತ ಸಾಧನ ಸಲಕರಣೆಗಳೂ ಉಪಯೋಗಿಸಲ್ಪಡುತ್ತವೆ.

ಒಳನಾಡು ಮೀನುಗಾರಿಕೆಯಲ್ಲಿ ಉಪಯುಕ್ತವೆನಿಸುವ ಪ್ರಮುಖ ವಾಹನಗಳೆಂದರೆ– ತೆಪ್ಪ ಮತ್ತು ತೋಡು ದೋಣಿ. (1) ಹಲಗೆಗಳಿಂದ ನಿರ್ಮಿಸಿದ ದೋಣಿಗಳು ಮತ್ತು (2) ದೊಡ್ಡ ಮೀನು ಹಿಡಿಯುವ ದೋಣಿಗಳು. ಬಾಳೆಯದಿಂಡು ಮತ್ತು ಶೋಲ ಕಡ್ಡಿಗಳಿಂದ ಕಂತೆಗಳನ್ನು ಒಟ್ಟಿಗೆ ಕಟ್ಟಿ ಅದರಮೇಲೆ ಊದಿ ಉಬ್ಬಿಸಿದ ಚರ್ಮವನ್ನು ಬಿಗಿದು ಒಂದು ಒರಟು ತೆಪ್ಪವನ್ನು ರಚಿಸಿ ತೆಪ್ಪದಮೇಲೆ ಕುಳಿತು ಬಲೆಹಾಕಿ ಮೀನು ಹಿಡಿಯುತ್ತಾರೆ. ಮಗುಚಿಹಾಕಿದ ಮಡಕೆಗಳನ್ನು ಬೊಂಬುಗಳ ಪಟ್ಟಿಯೊಡನೆ ಕೂಡಿಸಿ ಕಟ್ಟಿಹಾಕಿದರೆ ಇನ್ನೊಂದು ರೀತಿಯ ತೆಪ್ಪವಾಗುತ್ತದೆ. ದನ ಹಾಗೂ ಎಮ್ಮೆಚರ್ಮವನ್ನು ಉಪಯೋಗಿಸಿ ದುಂಡಗಿನ ಹರಿಗೋಲನ್ನು ರಚಿಸುವುದುಂಟು. ತೋಡು ದೋಣಿಗಳಲ್ಲಿ ಮುಖ್ಯವಾದವು ಡೊಂಗ ಮತ್ತು ಏಕ್ಥಾ. ಡೋಂಗ ಹಲಗೆಗಳಿಂದ ರಚಿತವಾಗಿದೆಯಾದರೆ ಏಕ್ಥಾ ತಾಳೆಯಮರದ ಕೆಳಗಿನ ತುದಿಗಳಿಂದ ರಚಿತವಾಗಿದೆ. ಡಿಂಗ್ಗಿನ್ ಮತ್ತು ಚಿಪ್ ಎಂಬವನ್ನು ಹಲಗೆಗಳಿಂದ ನಿರ್ಮಿಸಲಾಗುತ್ತದೆ. ನದಿಗಳಲ್ಲಿ ಮೀನುಹಿಡಿಯುವುದಕ್ಕೂ ಅವುಗಳನ್ನು ಸಾಗಿಸುವುದಕ್ಕೂ ಇವು ಉಪಯುಕ್ತ. ದೊಡ್ಡ ಮೀನು ಹಿಡಿಯುವ ದೋಣಿಗಳು ಒಳ್ಳೆಯ ಮರದಿಂದ ರಚಿತವಾಗಿದ್ದು ಗಟ್ಟಿಮುಟ್ಟಾಗಿಯೂ ಬಲಯುತವಾಗಿಯೂ ಇರುವುವು. ಇವನ್ನು ಹುಟ್ಟುಗಳಿಂದಲೋ ಎಣ್ಣೆಯಂತ್ರಗಳಿಂದಲೋ ನಡೆಸಬಹುದು.

ಸಿಹಿನೀರಿನ ಮೀನುಗಳನ್ನು ಹಿಡಿಯುವ ಸಲಕರಣೆಗಳಲ್ಲಿ ವೈವಿಧ್ಯತೆ ಉಂಟು. ಅವೆಂದರೆ ಗಾಳದ ಹುರಿ, ಕಿವಿರು ಬಲೆ, ಎಳೆಯುವ ಬಲೆ, ಸಂಚಿ ಬಲೆ, ಎಸೆಯುವ ಬಲೆ, ಬೋನು ಮುಂತಾದವು.

ಗಾಳದ ಹುರಿಗಳಿಂದ ಮೀನುಹಿಡಿಯುವ ಕ್ರಮದಲ್ಲಿ ಮೂರು ವಿಧ: ಗಾಳದ ಕೋಲು ಮತ್ತು ಹುರಿ, ಉದ್ದವಾದ ಗಾಳದ ಹುರಿ ಮತ್ತು ಎಸೆಯುವ ಗಾಳದ ಹುರಿ. ಈ ಎಲ್ಲಾ ಗಾಳದ ಹುರಿಗಳಿಂದ ಹುಳುಗಳನ್ನೊ, ಸೀಗಡಿಗಳನ್ನೋ, ಕೊಳೆಮೀನುಗಳನ್ನೊ ಎರೆಗಳಂತೆ ಉಪಯೋಗಿಸಿ ಮೀಸೆಮೀನು, ಗೆಂಡೆ, ಬಿಳಿಮೀನು (ಮಹಸೀರ್), ಹಾವುಮೀನು, ಕುಚ್ಚುಮೀನು ಮುಂತಾದವನ್ನು ಹಿಡಿಯುತ್ತಾರೆ. ಕಿವಿರು ಬಲೆಗಳು ಹಾಗೂ ಪಾತಾಳಗರಡಿ ಬಲೆಗಳು ಏಕಭಿತ್ತಿಯ ಬಲೆಗಳು. ವಿವಿಧ ರೀತಿಯ ಕಿವಿರು ಬಲೆಗಳಿಂದ ವರ್ಷಪೂರ್ತಿ ಗೆಂಡೆಗಳಂಥ ಮೀನುಗಳನ್ನು ಹಿಡಿಯುವುದುಂಟು. ಕೆರೆಗಳಲ್ಲಿ, ಸಿಹಿನೀರಿನ ಸರೋವರಗಳಲ್ಲಿ ಸಾಮಾನ್ಯವಾಗಿ ಎಳೆಯುವ ಬಲೆ ಮತ್ತು ತೀರದ ಸೀನ್‌ಬಲೆಗಳಿಂದ ಪರಿಣಾಮಕಾರಿಯಾಗಿ ಮಾಲಾಗಳು, ಗಾರ್‌ಮೀನುಗಳು, ಅರೆಕೊಕ್ಕುಗಳು, ಸಣ್ಣ ಮೀನುಗಳು, ಸೀಗಡಿಗಳು ಮತ್ತು ಏಡಿಗಳನ್ನು ಹಿಡಿಯಲಾಗುತ್ತದೆ. ಸ್ಥಿರವಾದ ನೆಲಗೊಳಿಸುವ ಶಂಕ್ವಾಕಾರದ ಸಂಚಿಬಲೆ ಮತ್ತು ಬಿದಿರು ಗಾಳದ ಹುರಿಗಳಿಂದ ಹೆಚ್ಚಾಗಿ ಮಾಲಾಗಳು, ನೆಮಟೆಲೋಸ್ ನಾಸಸ್, ಕಾಣೆ, ಮಟ್ಟತಲೆಯ ಮೀನು, ಸೀಗಡಿ, ತುರಗಿಮೀನು, ಬಿಳಿಸುರಗಿಮೀನು ಹಾಗೂ ಕೋಬಿಡ್ ಮೀನುಗಳನ್ನು ಹಿಡಿಯುವುದುಂಟು. ಸ್ಥಿರವಾಗಿ ನಿಂತ ಬೋನುಬಲೆಗಳಾದ ಸ್ಟೇಕ್‌ಬಲೆ ಮತ್ತು ಮುಳುಗು ಬಲೆಗಳಿಂದ ಸರೋವರ ಮೀನುಗಳನ್ನೂ ವಿಶೇಷವಾಗಿ ಸೀಗಡಿಗಳನ್ನೂ ಹಿಡಿಯುತ್ತಾರೆ. ಅತ್ಯಂತ ಸಾಮಾನ್ಯವಾಗಿ ಉಪಯೋಗಿಸುವ ಎಸೆ ಬಲೆಯಿಂದ ಅಳಿವೆ ಹಾಗೂ ನದಿಗಳಲ್ಲಿ ವಿವಿಧ ಮೀನುಗಳನ್ನೂ ಸೀಗಡಿಗಳನ್ನೂ ಹಿಡಿಯುವುದುಂಟು. ಮೀನುಗಳು ಸಿಕ್ಕಿ ಹಾಕಿಕೊಳ್ಳಲು ಮೀನು ಬೋನುಗಳೂ ಸಹಾಯಕಾರಿ. ಬೆತ್ತದಿಂದ ಹೆಣೆದು ಮಾಡಿದ ಬೋನುಗಳು ರೂಢಿಯಲ್ಲಿ ಕೊಡಮೆ, ದಂಡಿ, ಆಯಾಕಾರ, ವೃತ್ತಾಕಾರ, ಪಂಜರದ ಬೋನುಗಳೆಂದು ಹೆಸರುವಾಸಿಯಾಗಿವೆ. ಮೀನು ಹಿಡಿಯುವ ಇನ್ನೊಂದು ವಿಶಿಷ್ಟ ವಿಧಾನವೆಂದರೆ ಮೀನುಗಳನ್ನು ನಿಶ್ಚೇತನಗೊಳಿಸಿ ಹಿಡಿಯುವುದು. ಇದರಲ್ಲಿ ಮೂರು ವಿಧಗಳುಂಟು. 1. ಯಾಂತ್ರಿಕ ಜಡಗೊಳಿಸುವಿಕೆ: ಡೈನಾಮೈಟನ್ನು ನೀರಿನಲ್ಲಿ ಆಸ್ಫೋಟಿಸಿ ಮೀನುಗಳನ್ನು ಜಡಗೊಳಿಸಿ ಹಿಡಿಯುವುದು. 2. ರಾಸಾಯನಿಕ ಜಡಗೊಳಿಸುವಿಕೆ : ವಿವಿಧ ರೀತಿಯ ವಿಷಗಳಿಂದ ಮೀನುಗಳನ್ನು ಮಂಕುಗೊಳಿಸಿ ಹಿಡಿಯುವುದು. 3. ವಿದ್ಯುತ್ತಿನಿಂದ ಜಡಗೊಳಿಸುವಿಕೆ: ವಿದ್ಯುತ್ ಕ್ಷೇತ್ರವನ್ನು ನಿರ್ಮಿಸಿ ಮೀನುಗಳನ್ನು ಮರವಡಿಸಿ ಹಿಡಿಯುವುದು.

ಮೀನುಗಾರಿಕೆಯಲ್ಲಿ ಮೀನು ಸೆರೆಹಿಡಿಯುವುದಕ್ಕೆ ಪ್ರಥಮ ಪ್ರಾಶಸ್ತ್ಯ. ಅನಂತರದ ಕ್ರಮಗಳಿಗೂ ಆದ್ಯತೆ ಉಂಟು. ಮೀನು ಹಿಡಿದಮೇಲೆ ಅವನ್ನು ಉಪಯೋಗಿಸುವ ತನಕ ಜೋಪಾನಮಾಡಿ ರಕ್ಷಿಸುವುದು ಅತ್ಯಂತ ಆವಶ್ಯಕ. ಮೀನು, ಸಿಗಡಿ, ಸಿಂಪಿಗಳ ಮಾಂಸ ಶೀಘ್ರವಾಗಿ ಕೊಳೆತುಹೋಗುವಂತ ಸರಕು. ಸತ್ತ ತತ್‌ಕ್ಷಣವೇ ಮಾಂಸ ಕೆಲವು ಅನಪೇಕ್ಷಣೀಯ ಬದಲಾವಣೆಗಳಿಗೆ ಒಳಗಾಗುವುದರಿಂದ ಅದನ್ನು ಹಾಗೆಯೇ ಬಿಟ್ಟರೆ ಕೊನೆಯಲ್ಲಿ ಅದು ಮಾನವನಿಗೆ ಅನುಪಯುಕ್ತವಾಗುತ್ತದೆ. ಹಿಡಿದ ಮೀನುಗಳನ್ನು ದೀರ್ಘಕಾಲ ಕೆಡದಂತೆ ಸಂರಕ್ಷಿಸಲು ಆಧುನಿಕ ಸಾಧನಗಳನ್ನು, ವಿಧಾನಗಳನ್ನು ರೂಪಿಸಲಾಗಿದೆ. ಆಗತಾನೆ ಹಿಡಿದ ಮೀನುಗಳನ್ನು ದೂರದ ಸ್ಥಳಗಳಿಗೆ ಒಯ್ಯಲು ಹಾಗೂ ಬಹುಕಾಲ ಕೆಡದಂತೆ ಸಂಗ್ರಹಿಸಲು ಬಳಸಲಾಗುವ ವಿಧಾನ ಗಾಢಘನೀಭವಿಸುವಿಕೆ (ಡೀಪ್ ಫ್ರೀಜಿಂಗ್).

ಉಪಯೋಗದಲ್ಲಿರುವ ಮೀನುಸಂಸ್ಕರಣದ ಮುಖ್ಯ ವಿಧಾನಗಳೆಂದರೆ: 1. ಉಪ್ಪು ಹಾಕುವಿಕೆ ಅಥವಾ ಉಪ್ಪುನೀರಿನಲ್ಲಿ ಊನಿ ಹಾಕುವಿಕೆ 2. ಹೊಗೆ ಹಾಕುವಿಕೆ 3. ಒಣಗಿಸುವಿಕೆ ಹಾಗೂ 4. ಡಬ್ಬಿಜೋಪಾಸನೆ. ಉಪ್ಪು ಹಾಕುವಿಕೆ ಪ್ರಪಂಚಾದ್ಯಂತ ಬಳಕೆಯಲ್ಲಿರುವ ಒಂದು ಸಾಮಾನ್ಯ ವಿಧಾನ. ಯೂರೋಪ್ ಹಾಗೂ ಅಮೆರಿಕಗಳಲ್ಲಿ ಕಾಡ್‌ಮೀನುಗಳನ್ನು ಹೀಗೆ ಉಪ್ಪು ಹಾಕಿ ಒಣಗಿಸುವುದು ಒಂದು ಪ್ರಮುಖ ಉದ್ಯಮವಾಗಿದೆ. ಈ ವಿಧಾನ ಉಳಿದ ದೇಶಗಳಲ್ಲಿಯೂ ಇತ್ತೀಚೆಗೆ ವ್ಯಾಪಕವಾಗುತ್ತಿದೆ. ಕೆಲವು ವೇಳೆ ಇಡೀ ಕಾರ್ಯವಿಧಾನವನ್ನು ದಡದ ಮೇಲೆಯೇ ನಡೆಸಲಾಗುವುದು. ಮೀನುಗಳನ್ನು ಹಿಡಿದ ತತ್‌ಕ್ಷಣವೇ ಅವುಗಳ ತಲೆತೆಗೆದು ದೇಹವನ್ನು ಸೀಳಿ ಶುಚಿಮಾಡಿ, ಉಪ್ಪುಹಾಕಿ, ಉಪ್ಪಿನಸ್ತರಗಳ ಮಧ್ಯೆ ಇರುವಂತೆ ಮಾಡಿ ಮೀನುಕುಳಿಗಳಲ್ಲಿ ರಾಶಿಮಾಡಲಾಗುತ್ತದೆ. ಅನಂತರ ಸಂಸ್ಕರಣ ಸ್ಥಳಕ್ಕೆ ಉಪ್ಪೂರಿಸಿದ ಮೀನುಗಳನ್ನು ಸಾಗಿಸುತ್ತಾರೆ. ಇಲ್ಲಿಯೇ ಅವುಗಳನ್ನು ಒಣಗಿಸಿ ರಫ್ತು ಮಾಡಲು ಪೀಪಾಯಿಗಳಲ್ಲಿ ಕೊನೆಗೆ ಗಂಟುಕಟ್ಟಿ ಇಡುತ್ತಾರೆ. ಅನೇಕ ಶತಮಾನಗಳ ತನಕ ಉಪ್ಪು ಹಾಕಿದ ಮೀನುಗಳು (ಕಾಡ್) ಯೂರೋಪಿನ ವಿವಿಧ ದೇಶಗಳ ಅರ್ಥವ್ಯವಸ್ಥೆಯಲ್ಲಿ ಒಂದು ಪ್ರಮುಖ ಪಾತ್ರವಹಿಸಿದ್ದವೆಂಬುದು ಉಲ್ಲೇಖಾರ್ಹ. ಮೀನಿಗೆ ಹೊಗೆ ಊಡುವುದು ಉಪ್ಪು ಹಾಕುವುದರ ಮತ್ತು ಒಣಗಿಸುವುದರ ವಿಧಾನದಂತೆಯೇ ಇದೆ. ಹೊಗೆ ಹಾಕುವುದು ಸಾಮಾನ್ಯವಾಗಿ ಹೆರಿಂಗ್, ವೈಟಿಂಗ್, ಕಾಡ್, ಲಿಂಗ್, ಸ್ಮೈಥ್ ಹ್ಯಾಡಕ್, ಮೀಸೆಮೀನು, ಬಂಗುಡೆ ಮುಂತಾದ ಮೀನುಗಳಿಗೆ ಅನ್ವಯವಾಗುತ್ತದೆ. ಆದಿಮಾನವ ತಾನು ಹಿಡಿದ ಮೀನನ್ನು ಶಿಬಿರದ ಹೊರಗೆ ಬೆಂಕಿಯ ಮೇಲೆ ತೂಗಾಡಿಸುತ್ತ ಹೊಗೆ ಊಡುತ್ತಿದ್ದ. ಈಗಲೂ ಅನೇಕ ಹಳೆಯ ಜನಾಂಗಗಳಲ್ಲಿ ಈ ಪದ್ಧತಿ ಉಂಟು. ಆದರೆ, ಆಧುನಿಕ ಹೊಗೆಮನೆಯಲ್ಲಿ ಒಂದೇ ಸಮಯದಲ್ಲಿ ಸಾವಿರಾರು ಮೀನುಗಳನ್ನು ಸಂಸ್ಕರಿಸಬಹುದಾಗಿದೆ. ಬೆಂಕಿಮಾಡಲು ಉಪಯೋಗಿಸುವ ಮರಗಳು ವಿಶೇಷವಾದ ಪ್ರಾಮುಖ್ಯ ಪಡೆದಿವೆ. ಓಕ್, ಹಿಕರಿ, ಮಹಾಗನಿ ಮುಂತಾದ ಗಡಸು ಮರಗಳನ್ನು ಸಾಮಾನ್ಯವಾಗಿ ಈ ಕಾರ್ಯಕ್ಕೆ ಬಳಸಲಾಗುತ್ತದೆ. ಏಕೆಂದರೆ ಈ ಮರಗಳಲ್ಲಿ ಕಡಿಮೆ ಮೊತ್ತದ ಎಣ್ಣೆ ಹಾಗೂ ರಾಳಗಳಿರುವುವಲ್ಲದೆ ಇವು ಮೀನಿಗೆ ಒಂದು ಬಗೆಯ ರುಚಿಯನ್ನು ಸಹ ಕೊಡಬಲ್ಲವು. ನೇರ ಮರವನ್ನೇ ಉರಿಸದೆ ಮರದಪುಡಿಯನ್ನು ಉರಿಸುತ್ತ ದಟ್ಟವಾದ ಹೊಗೆಯ ಮೋಡಗಳನ್ನು ಉತ್ಪತ್ತಿಮಾಡಿ ಮೀನುಗಳನ್ನು ಸುಡುತ್ತಾರೆ. ಹೊಗೆ ಊಡುವುದರ ಮೊದಲು ಮೀನಿನ ತಲೆ ಕತ್ತರಿಸಿ, ಕೆಳಗಿನ ಭಾಗದವರೆಗೆ ಸೀಳಿ, ಒಳಗಿನ ಭಾಗಗಳನ್ನು ತೆಗೆದು ಹಾಕಲಾಗುತ್ತದೆ. ಅನಂತರ ಅದನ್ನು ತೊಳೆದು ಅಲ್ಪಕಾಲದ ತನಕ ಉಪ್ಪುನೀರಿನ ಸಾರದ್ರಾವಣದಲ್ಲಿ ಮುಳುಗಿಸಿ, ಒಣಗಿಸಿ, 5 ರಿಂದ 6 ಗಂಟೆಯತನಕ ಹೊಗೆಗೆ ಹಿಡಿಯಲಾಗುತ್ತದೆ. ಮೀನಿನ ಸಂಸ್ಕರಣದ ಇನ್ನೊಂದು ವಿಧಾನ ಒಣಗಿಸುವಿಕೆ. ಬಿಸಿಲು ಹೆಚ್ಚಾಗಿರುವಂಥ ಉಷ್ಣವಲಯ ದೇಶಗಳಲ್ಲಿ ಈ ಕ್ರಮ ಹೆಚ್ಚು ಪ್ರಚಲಿತವಿದೆ. ಒಣಗಿದ ಮೀನುಗಳೇ ಪ್ರಧಾನ ಆಹಾರವಾಗಿರುವ ದೇಶಗಳಾದ ಆಫ್ರಿಕ, ಭಾರತ, ಮಲಯ, ಫಿಲಿಪೀನ್ಸ್, ಚೀನ ಹಾಗೂ ಜಪಾನ್‌ಗಳಲ್ಲಿ ಈ ವಿಧಾನ ಜನಪ್ರಿಯ. ಸಾಮಾನ್ಯವಾಗಿ ಮೀನುಗಳನ್ನು ಸರಳವಾಗಿ ಕತ್ತರಿಸಿ, ಒಳಗಿನ ಭಾಗಗಳನ್ನು ತೆಗೆದುಹಾಕಿ ಬಿಸಿಲಿನಲ್ಲಿ ಒಣಗಲು ಬಿಡುತ್ತಾರೆ. ಆದರೆ ಕೆಲವು ವೇಳೆ ಒಣಗಿಸುವ ಮೊದಲು ಸ್ವಲ್ಪಮಟ್ಟಿಗೆ ಉಪ್ಪಿನಲ್ಲಿ ಹಾಕುವುದುಂಟು. ಮೀನು ಸಂಸ್ಕರಣದ ಇನ್ನೊಂದು ವಿಧಾನವೆಂದರೆ ಡಬ್ಬಿಜೋಪಾಸನೆ. ಇದು ಸಂರಕ್ಷಣೆಯ ಆಧುನಿಕ ವಿಧಾನವಾಗಿದ್ದು ಅನೇಕ ಅನುಕೂಲಗಳನ್ನು ಪಡೆದಿದೆ. ಅಮೆರಿಕದಲ್ಲಂತೂ ಇದು ಅತ್ಯಂತ ಮುಖ್ಯವಾದ ಉದ್ಯಮವೇ ಆಗಿಹೋಗಿದೆ. ಅಮೆರಿಕದಲ್ಲಿ ಪೆಸಿಫಿಕ್ ಸ್ಯಾಲ್ಮನ್, ಯೂರೋಪಿನಲ್ಲಿ ಹೆರಿಂಗ್, ಸ್ಪ್ರಾಟ್, ಬೂತಾಯಿ, ಆ್ಯಂಚೊವಿ, ಬಂಗುಡೆ ಹಾಗು ಟನ್ನಿಗಳು, ಫ್ರಾನ್ಸ್ ಹಾಗೂ ಪೋರ್ಚುಗಲ್‌ಗಳಲ್ಲಿ ಬೂತಾಯಿ ಉದ್ಯಮ ಅತ್ಯಂತ ಮುಖ್ಯವೆನಿಸಿವೆ. ಡಬ್ಬಿಜೋಪಾಸನೆಯಲ್ಲಿ ಮೊದಲು ಮೀನಿನ ತಲೆ ಹಾಗೂ ಒಳಭಾಗಗಳನ್ನು ತೆಗೆದುಹಾಕಿ ದೇಹಕ್ಕೆ ಸ್ವಲ್ಪ ಉಪ್ಪನ್ನು ಚಿಮುಕಿಸಲಾಗುತ್ತದೆ. ಅನಂತರ ಸ್ವಲ್ಪ ಕಾಲದತನಕ ಉಪ್ಪು ನೀರಿನೊಳಗೆ ಮುಳುಗಿಸಿ ಹೊರತೆಗೆದು ತೊಳೆದು ಒಣಗಿಸಲಾಗುತ್ತದೆ. ಕೊನೆಯಲ್ಲಿ ಅದನ್ನು ಆಲಿವ್ ಮುಂತಾದ ಎಣ್ಣೆಯಲ್ಲಿ ಎರಡು ನಿಮಿಷಗಳ ತನಕ ಕರಿಯಲಾಗುತ್ತದೆ. ಜೊತೆಗೆ ಇತರ ಸಂಬಾರ ಘಟಕಗಳಾದ ಲಿಂಬೆಎಣ್ಣೆ, ಲವಂಗ, ಬೇ ಎಲೆಗಳ ಬಟ್ಟಿಯಿಂದ ಪಡೆದ ಸುಗಂಧದ್ರವ, ಮಸಾಲೆ ಅಣಬೆ ಮುಂತಾದ ಪದಾರ್ಥಗಳೊಂದಿಗೆ ಮಿಶ್ರ ಮಾಡಲಾಗುತ್ತದೆ. ಕೊನೆಗೆ ಡಬ್ಬಿಯೊಳಗೆ ಆಲಿವ್ ಎಣ್ಣೆ ಹಾಕಿ ಮೀನನ್ನು ತುಂಬಿ ಗಾಳಿ ಸೇರದಂತೆ ಮೊಹರು ಮಾಡಲಾಗುತ್ತದೆ. ನಾರ್ವೆಯಲ್ಲಿ ಸಹ ಸ್ಪ್ರಾಟ್ (ಕ್ಲೂಪಿಯ ಸ್ಪ್ರಾಟಸ್) ಮತ್ತು ಹೆರಿಂಗ್ ಎಳೆಯ ಮೀನುಗಳನ್ನು (ಕ್ಲೂಪಿಯ ಹ್ಯಾರಂಗಸ್) ಇದೇ ರೀತಿ ಸಂಸ್ಕರಿಸಲಾಗುತ್ತದೆ.

ಮೀನುಗಳ ಮಾಂಸದಿಂದ ತಯಾರಿಸಲಾಗುವ ಮೀನು ಸಾಸೇಜ್, ಮೀನಿನ ದೋಸೆ ಉಂಡೆ (ರಿಸೋಲ್ಸ್), ಆ್ಯಂಚೊವಿ ಪಿಷ್ಟದ ವ್ಯಂಜನ, ಮೀನುದೋಸೆ, ಕ್ಯಾವೀಯಾರ್ ವ್ಯಂಜನ ಮುಂತಾದವು ಕೂಡ ಮೀನುಗಾರಿಕೆಯ ಉಪೋತ್ಪನ್ನಗಳೇ ಆಗಿವೆ. ಅಲ್ಲದೆ ಇತರ ಉತ್ಪನ್ನಗಳಾದ ಶಾರ್ಕ್ ಮಾಂಸದ ಕಣಕ, ಶಾರ್ಕ್‌ಮೀನಿನ ಎಣ್ಣೆ, ಮೀನಿನ ಮರವಜ್ರ, ಮೀನಂಟು ವಜ್ರ ಮುಂತಾದವು ಪ್ರಸಿದ್ಧವಾಗಿವೆ. ಸ್ತನಿಗಳಾದ ತಿಮಿಂಗಿಲ, ಸೀಲ್‌ಪ್ರಾಣಿ, ಕಡಲಸಿಂಹ, ಕಡಲಹಸು ಹಾಗೂ ಸರೀಸೃಪವರ್ಗದ ಆಮೆಗಳ ಮೀನುಗಾರಿಕೆ ಸಹ ಇತ್ತೀಚೆಗೆ ಜನಪ್ರಿಯವಾಗುತ್ತಿದೆ. ಹೀಗಾಗಿ ಮೀನುಗಾರಿಕೆ ಪ್ರಪಂಚದ ಒಂದು ಅತ್ಯಂತ ವಾಣಿಜ್ಯ ಹಾಗೂ ಜೀವನೋಪಾಯದ ಉದ್ಯಮವಾಗಿ ಬೆಳೆದಿದೆ. ***

**ಮೀಸೆಮೀನು:** ಟ್ಯಾಕಿಸೂರಿಡೆ, ಎರ‍್ರೈಯಿಡೆ (ಶೇಡೆ), ಕ್ಲಾರೈಯಿಡೆ, ಹೆಟರೊನ್ಯೂಸ್ಟಿಡೆ (ಚೇಳು ಮೀನು), ಸ್ಯಾಕೊಬ್ರಾಂಕಿಡೆ, ಸ್ಲೈಲ್ಯೂರಿಡೆ (ಗೊಡ್ಲೆ, ಕೆಂಬಾರಿ, ಬಾಳೆ), ಸಿಸೊರಿಡೆ, ಬಾಗ್ರಿಡೆ (ತೊರವಿ) ಕುಟುಂಬಗಳಿಗೆ ಸೇರಿದ ಹಲವಾರು ಜಾತಿಯ ಮೀನುಗಳಿಗೆ ಅನ್ವಯವಾಗುವ ಸಾಮಾನ್ಯ ಹೆಸರು (ಕ್ಯಾಟ್ ಫಿಶ್). ಇವೆಲ್ಲವೂ ಬೇರೆ ಬೇರೆ ಕುಟುಂಬಗಳಿಗೆ

ಸೇರಿದ ವಿಭಿನ್ನ ಬಗೆಯ ಮೀನುಗಳಾದರೂ ಮೂತಿಯ ಮೇಲೆ 2–4 ಜೊತೆ ಮೀಸೆಗಳಂಥ ರಚನೆಗಳು (ಬಾರ್ಬೆಲ್ಸ್) ಇರುವುದರಿಂದ ಎಲ್ಲವಕ್ಕೂ ಮೀಸೆ ಮೀನು ಎಂಬ ಹೆಸರು ಬಂದಿದೆ. ಇವುಗಳ ಪೈಕಿ ಟ್ಯಾಕಿಸೂರಿಡೆ, ಏರೈಯಿಡೆ ಕುಟುಂಬದವು ಕಡಲವಾಸಿಗಳಾದರೆ ಸೈಲ್ಯೂರಿಡೆ, ಸಿಸೊರಿಡೆ, ಬಾಗ್ರಿಡೆ ಕುಟುಂಬದ ಮೀನುಗಳು ನದಿ, ಕೆರೆ, ಹಳ್ಳಗಳಲ್ಲಿ ವಾಸಿಸುವಂಥವು. ಕ್ಲಾರೈಯಿಡೆ ಮತ್ತು ಸ್ಯಾಕೊಬ್ರಾಂಕಿಡೆ ಕುಟುಂಬಕ್ಕೆ ಸೇರಿದ ಮೀಸೆಮೀನುಗಳು ಸಿಹಿನೀರಿನಲ್ಲೂ ಅಳಿವೆ ನೀರಿನಲ್ಲೂ ಕಾಣದೊರೆಯುತ್ತವೆ. ಭಾರತದ ಪಶ್ಚಿಮ ಹಾಗೂ ಪೂರ್ವಕರಾವಳಿ ಪ್ರದೇಶಗಳಲ್ಲೂ ಗಂಗಾ, ಯಮುನಾ, ಕೃಷ್ಣಾ, ಗೋದಾವರಿ ಹಾಗೂ ಕಾವೇರಿ ನದಿಗಳಲ್ಲೂ ಮೀಸೆಮೀನುಗಳ ವಿವಿಧ ಪ್ರಭೇದಗಳು ಸಿಕ್ಕುತ್ತವೆ. ಇವುಗಳಲ್ಲಿ ಬಹುಪಾಲು ಆಹಾರಕ್ಕೆ ಯೋಗ್ಯ ಮೀನುಗಳೆಂದು ಪ್ರಸಿದ್ಧವಾಗಿವೆ. ಉದಾಹರಣೆಗೆ, ಟ್ಯಾಕಿಸೂರಸ್ ದಸ್ಯುಮಿಯೆರಿ, ಕ್ಲಾರಿಯಾಸ್ ಬಟ್ರಾಕಸ್, ಓಂಪಾಕ್ ಬೈಮ್ಯಾಕ್ಯುಲೇಟಸ್, ವಲಾಗೊ ಅಟ್ಟು, ಬಗೇರಿಯಸ್, ಮಿಸ್ಟಸ್ ಸಿಂಗಾಲ ಮತ್ತು ಮಿಸ್ಟಸ್ ವಿಟೇಟಸ್. (ಎಂ.ಎ.ಡಿ.ಎಚ್.)

**ಮುಂಗುಸಿ:** ಕಾರ್ನಿವೊರ ಗಣದ ಹರ್ಪೆಸ್ಟಿಡೆ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಸ್ತನಿ (ಮಾಂಗುಸ್). ಕೀರ ಪರ್ಯಾಯ ನಾಮ. ಇದರ ವೈಜ್ಞಾನಿಕ ಹೆಸರು ಹರ್ಪೆಸ್ಟಿಸ್. ಇದರಲ್ಲಿ ಎಡ್ವರ್ಡ್‌ಸಿಯೈ, ಆರೊಪಂಕ್ಟೇಟಸ್, ವಿಟಿಕಾಲಿಸ್, ಆರ್ವ ಮತ್ತು ಫಸ್ಕಸ್ ಎಂಬ ಐದು ಪ್ರಧಾನ ಜಾತಿಗಳುಂಟು. ಇವಕ್ಕೆ ಕ್ರಮವಾಗಿ ಸಾಮಾನ್ಯ ಮುಂಗುಸಿ ಭಾರತದ ಸಣ್ಣ ಮುಂಗುಸಿ ಪಟ್ಟೆಕತ್ತಿನ ಮುಂಗುಸಿ, ಏಡಿ ತಿನ್ನುವ ಮುಂಗುಸಿ ಮತ್ತು ಕಂದುಮುಂಗುಸಿ ಎಂಬ ಸಾಮಾನ್ಯ ಹೆಸರುಗಳುಂಟು. ಇವುಗಳ ಪೈಕಿ ಮೊದಲನೆಯದು ಭಾರತದಾದ್ಯಂತ ಇದೆ. ಎರಡನೆಯದು ಇರಾನ್‌ನಿಂದ ಮೊದಲುಗೊಂಡು ಬರ್ಮ ಮಲಯವರೆಗೆ, ಭಾರತದ ಕಾಶ್ಮೀರ, ಬಂಗಾಲ, ಅಸ್ಸಾಮ್ ಮುಂತಾದ ಪ್ರದೇಶಗಳಲ್ಲೂ ಮೂರನೆಯದು ದಕ್ಷಿಣ ಭಾರತದ ಪಶ್ಚಿಮ ಮತ್ತು ಶ್ರೀಲಂಕಾದಲ್ಲೂ ನಾಲ್ಕನೆಯದು ನೇಪಾಲ, ಅಸ್ಸಾಮ್, ಬರ್ಮ, ದಕ್ಷಿಣ ಚೀನಗಳಲ್ಲೂ ಐದನೆಯದು ದಕ್ಷಿಣ ಭಾರತದ ಗುಡ್ಡಗಾಡುಗಳಲ್ಲೂ ಸಿಕ್ಕುತ್ತವೆ.

ಪುನುಗು ಬೆಕ್ಕು, ಮರಬೆಕ್ಕು, ಲಿನ್‌ಸ್ಯಾಂಗ್ ಮುಂತಾದ ಸ್ತನಿಗಳಿಗೆ ಹತ್ತಿರ ಸಂಬಂಧಿಗಳೆನಿಸಿರುವ ಮುಂಗುಸಿಗಳನ್ನು ಮೇಲಿನವುಗಳ ಜೊತೆಯಲ್ಲಿ ವೈವರಿಡೆ ಎಂಬ ಕುಟುಂಬಕ್ಕೆ ಸೇರಿಸಲಾಗಿತ್ತು. ಆದರೆ ಕೆಲವೊಂದು ದೈಹಿಕ ಹಾಗೂ ಸ್ವಭಾವ ಸಂಬಂಧಿ ಗುಣಲಕ್ಷಣಗಳಲ್ಲಿ ಮುಂಗುಸಿಗಳು ಪುನುಗುಬೆಕ್ಕುಗಳಿಗಿಂತ ಭಿನ್ನವಾಗಿರುವುದರಿಂದ ಮುಂಗುಸಿಗಳನ್ನು ಹರ್ಪೆಸ್ಟಿಡೆ ಕುಟುಂಬಕ್ಕೆ ಸೇರಿಸಲಾಗಿದೆ. ಉದಾಹರಣೆಗೆ ಮುಂಗುಸಿಗಳ ಕಿವಿಗಳು ಚಿಕ್ಕವು: ಬೆರಳುಗಳು ದೊಡ್ಡವೂ ಹೆಚ್ಚು ಬಿಡಿ ಬಿಡಿಯಾಗಿರುವಂಥವು ಉದ್ದ ಉಗುರು ಪಡೆದಿರುವಂಥವು. ಮುಂಗುಸಿಗಳಲ್ಲಿ ಪುನುಗು ಅಥವಾ ಸುಗಂಧಗಳಿಲ್ಲ: ಹಾಗೂ ಅವು ಸ್ವಭಾವತಃ ಬೇಟೆಯಾಡಿ ಜೀವಿಸುವಂಥವು.

ದೇಹದ ಗಾತ್ರದಲ್ಲೂ ಮೈಬಣ್ಣದಲ್ಲೂ ಮುಂಗುಸಿಗಳ ವಿವಿಧ ಜಾತಿಗಳು ವೈವಿಧ್ಯವನ್ನು ತೋರುವುವಾದರೂ ಎಲ್ಲವೂ ಹೆಚ್ಚು ಕಡಿಮೆ ಒಂದೇ ತೆರನಾಗಿ ಕಾಣುವುವು. ಇವುಗಳ ಪೈಕಿ ಅತಿ ಚಿಕ್ಕದೆಂದರೆ ಭಾರತದ ಸಣ್ಣಮುಂಗುಸಿ (ಇದರ ದೇಹದ ಒಟ್ಟು ಉದ್ದ 45–50 ಸೆಂಮೀ). ಅತಿ ದೊಡ್ಡದು ಪಟ್ಟೆ ಕತ್ತಿನ ಮುಂಗುಸಿ (ಇದರ ಉದ್ದ ಸುಮಾರು 90 ಸೆಂಮೀ; ತೂಕ 3.2 ಕಿಗ್ರಾಂ.). ಸಾಮಾನ್ಯ ಮುಂಗುಸಿ ಹೆಚ್ಚು ಕಡಿಮೆ ಇದರಷ್ಟೇ ಇದೆಯಾದರೂ ತೂಕದಲ್ಲಿ ಅರ್ಧದಷ್ಟಿದೆ. ಎಲ್ಲವುಗಳಲ್ಲೂ ದೇಹದ ಉದ್ದದ ಅರ್ಧದಷ್ಟು ಬಾಲ ಇದೆ.

ಮೈಬಣ್ಣ ಸಾಮಾನ್ಯ ಮುಂಗುಸಿಯಲ್ಲಿ ಹಳದಿಮಿಶ್ರಿತ ಬೂದಿ. ಅಲ್ಲದೆ ಪ್ರತಿಯೊಂದು ಕೂದಲಿನ ಮೇಲೆ ತಿಳಿಬಣ್ಣದ ಮತ್ತು ಕಡುಬಣ್ಣದ ಪಟ್ಟೆಗಳು ಇರುವುದರಿಂದ ಇಡೀ ದೇಹಕ್ಕೆ ಒಂದು ರೀತಿಯ ಬಿಳಿಗಪ್ಪಿನ ಛಾಯೆ ಒದಗಿದೆ. ಸಣ್ಣ ಮುಂಗುಸಿ ಹಸುರುಮಿಶ್ರಿತ ಕಂದು ಬಣ್ಣದ್ದಾದರೆ, ಪಟ್ಟೆ ಕತ್ತಿನ ಮುಂಗುಸಿ ಕೆಂಪು ಬಣ್ಣದ್ದೂ, ಏಡಿತಿನ್ನುವ ಮುಂಗುಸಿ ಬೂದು ಬಣ್ಣದ್ದು.

ಎಲ್ಲ ಮುಂಗುಸಿಗಳೂ ಕುರುಚಲು ಕಾಡು, ಕೃಷಿಭೂಮಿ ಮರಗಳ ತೋಪು ಇತ್ಯಾದಿ ನೆಲೆಗಳ ಬಳಿ ವಾಸಿಸುತ್ತಿದ್ದು ಹಗಲಿನಲ್ಲೂ ರಾತ್ರಿಯಲ್ಲೂ ಬೇಟೆಯಾಡುತ್ತ ತಮ್ಮ ಆಹಾರನ್ವೇಷಣೆಯಲ್ಲಿ ತೊಡಗಿರುತ್ತವೆ. ಒಂಟಿಯಾಗಿ ಇಲ್ಲವೆ ಹೆಣ್ಣು ಗಂಡು ಮುಂಗುಸಿಗಳು ಜೊತೆಗೂಡಿ ಅಥವಾ ತಾಯಿ ಮರಿಗಳೊಡಗೂಡಿ ಬೇಟೆಯಾಡುವುವು. ಇಲಿ, ಹಾವು, ಓತಿ, ಕಪ್ಪೆ, ಕೀಟ, ಚೇಳು ಜರಿ ಮುಂತಾದುವಲ್ಲದೆ ಕೋಳಿ ಹಲವು ಬಗೆಯ ಹಣ್ಣು, ಬೇರುಗಳನ್ನು ತಿನ್ನುತ್ತವೆ. ಏಡಿ ತಿನ್ನುವ ಮುಂಗುಸಿ ಕೆರೆಹಳ್ಳಗಳ ಬಳಿ ವಾಸಿಸುತ್ತಿದ್ದು ಮೀನು, ಏಡಿ ಮುಂತಾದ ಜಲವಾಸಿ ಪ್ರಾಣಿಗಳನ್ನು ಭಕ್ಷಿಸುತ್ತದೆ.

ಸಂತಾನವೃದ್ಧಿಗೆ ನಿರ್ದಿಷ್ಟ ಋತುವಿಲ್ಲ. ವರ್ಷಕ್ಕೆ ಸುಮಾರು 3 ಸೂಲಿನಲ್ಲಿ ಮರಿ ಹಾಕುತ್ತದೆ. ಮುಂಗುಸಿಗಳನ್ನು ಮನೆಯಲ್ಲಿ ಸಾಕುವುದಿದೆ. (ಜೆ.ಆರ್.ಪಿ.)

**ಮುಟ್ಟು:** ಸ್ತ್ರೀಯರಲ್ಲಿ 11–13 ವರ್ಷ ವಯಸ್ಸಿನಿಂದ ಹಿಡಿದು 45–50 ವರ್ಷ ವಯಸ್ಸಿನ ತನಕ (ಗರ್ಭಿಣಿಸ್ಥಿತಿ, ಮಗುವಿಗೆ ಎದೆ ಹಾಲು ಕುಡಿಸುವ ಕಾಲ ಇವನ್ನು ಬಿಟ್ಟು) ಪ್ರತಿ ತಿಂಗಳು ಯೋನಿಯಿಂದ ಆಗುವ ರಕ್ತಸ್ರಾವ (ಮೆನ್ಸಸ್, ಮೆನ್‌ಸ್ಟ್ರುಯೇಷನ್, ಮಂತ್ಲಿ ಪೀರಿಯಡ್). ಹೊರಗಾಗುವಿಕೆ, ಋತುಕ್ರಮ, ರಜಸ್ರಾವ, ತಿಂಗಳು ಇತ್ಯಾದಿ ಪರ್ಯಾಯನಾಮಗಳು. ಹೆಂಗಸು ಸಂತಾನ ಸಾಮರ್ಥ್ಯ ಉಳ್ಳವಳೆಂದು ಅಂಥ ವಯಸ್ಸಿನವಳೆಂದು ವ್ಯಕ್ತವಾಗುವ ಈ ಕಾಲ ಆಕೆಯ ಜೀವನದಲ್ಲಿ ಬಲುವಿಶಿಷ್ಟವಾದ ಕಾಲ. ಬಾಲಕಿ ಸುಮಾರು ಹದಿಮೂರನೆಯ ವಯಸ್ಸಿನಲ್ಲಿ ಮೊದಲಬಾರಿ ಮುಟ್ಟಾಗುವುದನ್ನು (ಪ್ರಥಮ ರಜೋದರ್ಶನ, ಮೇನಾರ್ಕಿ) ಮೈನೆರೆಯುವುದು, ದೊಡ್ಡವಳಾಗುವುದು, ಪುಷ್ಪವತಿಯಾಗುವುದು ಎಂದೆಲ್ಲ ವ್ಯವಹರಿಸುವುದಿದೆ. ಮೈನೆರೆದಮೇಲೆ ತಿಂಗಳು ತಿಂಗಳೂ ಆಕೆ ತನ್ನ 45–50 ವರ್ಷ ವಯಸ್ಸಿನ ತನಕ ಮುಟ್ಟಾಗುತ್ತಿರುತ್ತಾಳೆ, ಅನಂತರ ಈ ಕ್ರಮ ಹಠಾತ್ತಾಗಿ ಇಲ್ಲವೆ ಕ್ರಮೇಣ ನಿಂತುಹೋಗುತ್ತದೆ. ಮುಟ್ಟು ನಿಂತಿತು ಎಂದರೆ ಸ್ತ್ರೀ ಮುಂದೆ ಮಕ್ಕಳನ್ನು ಪಡೆಯಲಾರಳು ಎಂದರ್ಥ. ಸಂತಾನ ಪಡೆಯುವ ಸಾಮರ್ಥ್ಯ ನಿಂತಮೇಲೆ ಸಾಮಾನ್ಯವಾಗಿ ಎಲ್ಲ ಸ್ತನಿಗಳೂ ಕೇವಲ ಒಂದೆರಡು ವರ್ಷ ಬದುಕಿರುವುವಾದರೂ ಮನುಷ್ಯ ಜಾತಿಯಲ್ಲಿ ಈ ಅವಧಿ 20–30 ವರ್ಷಗಳಿಗೂ ಮೀರಿ ಇರುವುದು ಒಂದು ವೈಶಿಷ್ಟ್ಯ. ನೈಸರ್ಗಿಕವಾಗಿಯೆ ಇರುವ ಈ ಮಾನವ ಜೀವಕ್ರಿಯಾ ವ್ಯತ್ಯಾಸದ, ಅರ್ಥಾತ್ ದೀರ್ಘಾವಧಿವಾರ್ಧಿಕ್ಯದ, ಅರ್ಥ ಜೀವವಿಜ್ಞಾನಿಗಳಿಗೆ ಇನ್ನೂ ಸರಿಯಾಗಿ ತಿಳಿದಿಲ್ಲ. ಇಂಥ ದೀರ್ಘಕಾಲಿಕ ಸಂತಾನೋತ್ತರ ಕಾಲದಿಂದ ವ್ಯಕ್ತಿ ಪಡೆಯುವ ಅನುಕೂಲವೇನು, ವಿಕಾಸಕ್ರಮದಲ್ಲಿ ಇದಕ್ಕೇನಾದರೂ ಪ್ರಾಮುಖ್ಯ ಇದೆಯೆ ಎಂದು ಹೇಳಲಾಗುವುದಿಲ್ಲ.

ಸ್ತ್ರೀ ಮುಟ್ಟಾಗುತ್ತಿರುವ ವಯಸ್ಸಿನಲ್ಲಿ ಕೂಡ ನಾನಾ ಕಾರಣಗಳಿಂದ ಮುಟ್ಟಾಗದೆ ಹೋಗಬಹುದು. ರೋಗಪ್ರಕ್ರಿಯೆಗಳನ್ನು ಬಿಟ್ಟು ಹೀಗೆ ಮುಟ್ಟಾಗದೆ ಇರುವುದು ಮುಖ್ಯವಾಗಿ ಎರಡು ಪರಿಸ್ಥಿತಿಗಳಲ್ಲಿ. ಒಂದು ವ್ಯಕ್ತಿ ಗರ್ಭಿಣಿಯಾದಾಗ. ವಾಸ್ತವವಾಗಿ ಮುಟ್ಟಾಗುವಳೆಂದು ನಿರೀಕ್ಷಿಸಿದ ಕಾಲದಲ್ಲಿ ವ್ಯಕ್ತಿ ಮುಟ್ಟಾಗದೆ ಇದ್ದರೆ ಅದು ಆಕೆ ಗರ್ಭತಾಳಿದ್ದಾಳೆಂಬುದರ ಪ್ರಥಮ ಹಾಗೂ ಸರ್ವಸಾಮಾನ್ಯ ಸೂಚನೆ. ಎರಡನೆಯ ಸ್ಥಿತಿ ಅಂದರೆ ಆಕೆ ಮಗುವನ್ನು ಹೆತ್ತು ಮಗುವಿಗೆ ಎದೆಹಾಲು ಊಡಿಸುತ್ತಿರುವ ಸಮಯ. ಈ ಕಾಲದಲ್ಲಿ ಆಕೆ 8–10 ತಿಂಗಳು ಮುಟ್ಟಾಗುವುದಿಲ್ಲ. ಅನಂತರ ಕ್ರಮೇಣ ತಿಂಗಳಿನ ಮುಟ್ಟಿನ ಕ್ರಮ ಪ್ರಾರಂಭವಾಗುತ್ತದೆ.

ಮುಟ್ಟಿನ ಕ್ರಮ ಪ್ರತಿಯೊಬ್ಬ ಸ್ತ್ರೀಯ ವೈಯಕ್ತಿಕ ವೈಶಿಷ್ಟ್ಯವಾದರೂ ಕೆಲವು ಸಾಮಾನ್ಯ ನಿಯಮ ಹಾಗೂ ಲಕ್ಷಣಗಳಿಂದೊಡಗೂಡಿದೆ. ಒಂದು ಮುಟ್ಟಿಗೂ ಮುಂದಿನಕ್ಕೂ ಸಾಮಾನ್ಯವಾಗಿ 4 ವಾರಗಳ (28 ದಿನ, ಒಂದು ಚಾಂದ್ರಮಾನ ತಿಂಗಳು) ಅವಧಿ ಇರುತ್ತದೆ. ಇದನ್ನು ಮುಟ್ಟಾದ ಮೊದಲ ದಿನದಿಂದ ಲೆಕ್ಕಹಾಕಲಾಗುತ್ತದೆ. ಕೆಲವು ವ್ಯಕ್ತಿಗಳಲ್ಲಿ ಅವಧಿ ಕಡಿಮೆ ಇರಬಹುದು. ಕೆಲವರಲ್ಲಿ ಹೆಚ್ಚಾಗಿರಬಹುದು. 21ರಿಂದ 35 ದಿನಗಳ ತನಕ ವೈಯಕ್ತಿಕ ವ್ಯತ್ಯಾಸವಿರಬಹುದು. ಆದರೆ ಒಂದೇ ವ್ಯಕ್ತಿಯಲ್ಲಿ ಎರಡು ಮುಟ್ಟುಗಳ ನಡುವೆ ಅವಧಿ ಸಾಮಾನ್ಯವಾಗಿ ಕ್ಲುಪ್ತವಾಗಿರುತ್ತದೆ. ಅರ್ಧದಿನ ಒಂದು ದಿನ ವ್ಯತ್ಯಾಸವಿರಬಹುದು. ಆತಂಕ, ಬಿಡುವೇ ಇಲ್ಲದ ಕೆಲಸದ ಹೊರೆ, ಹೊಸಸ್ಥಳದಲ್ಲಿ ಹೊಸ ಜನರೊಡನೆ ವಾಸ ಇತ್ಯಾದಿ ಪರಿಸ್ಥಿತಿಗಳಲ್ಲಿ ಮುಟ್ಟಾಗುವುದು ನಾಲ್ಕಾರು ದಿನಗಳು, 2 ಅಥವ 4 ವಾರಗಳು ಕೂಡ ತಡವಾಗಬಹುದು.

ಪ್ರಾರಂಭದ ದಿನದಿಂದ ನಾಲ್ಕು ದಿನಗಳ ಪರ್ಯಂತ ಮುಟ್ಟು ಹೋಗುವುದು ಸಾಮಾನ್ಯ. ಅದರೆ ವೈಯಕ್ತಿಕ ವೈಶಿಷ್ಟ್ಯದಂತೆ ಇದು 2–5 ದಿನಗಳಷ್ಟೂ ಕಡಿಮೆ ಇರಬಹುದು. 5–6 ದಿನಗಳಷ್ಟೂ ಹೆಚ್ಚಾಗಿರಬಹುದು. ಈ ಅವಧಿಯಲ್ಲಿ ಸಾಮಾನ್ಯವಾಗಿ 120 «Ä°Ã ರಕ್ತಮಿಶ್ರಿತ ದ್ರವ ನಷ್ಟವಾಗುವುದಿದೆ. ಕೆಲವರಲ್ಲಿ 60–80 «Ä°Ã ಅಥವಾ ಇನ್ನು ಕೆಲವರಲ್ಲಿ 170–200 «Ä°Ã ದ್ರವನಷ್ಟವಾಗುವುದಿದೆ. ಇದು ವೈಯಕ್ತಿಕ ವೈಶಿಷ್ಟ್ಯ. ಸ್ರಾವ ಪ್ರಾರಂಭದಲ್ಲಿ ಹೆಚ್ಚಾಗಿದ್ದು ಕೊನೆಕೊನೆಯಲ್ಲಿ ಅತಿ ಸ್ವಲ್ಪವಾಗುತ್ತದೆ. ವಾಸ್ತವವಾಗಿ ರಕ್ತಕೂಡಿದ ದ್ರವ ಬರುವುದು ಗರ್ಭಕೋಶದಿಂದ. ಇದು ಅವಧಿಯಷ್ಟು ಕಾಲವೂ ನಿರಂತರವಾಗಿ ನಿಧಾನವಾಗಿ ಜಿನುಗುತ್ತ ಬರುವುದಿಲ್ಲ. ಆಗಾಗ್ಗೆ ಸ್ವಲ್ಪಸ್ವಲ್ಪ ದ್ರವ ಕೊಚ್ಚಿಹರಿದಂತೆ ಹೊರಬರುವುದು. ಸಾಮಾನ್ಯ ಹೊರಬರುವ ರಕ್ತ ಗರಣೆಕಟ್ಟಬಲ್ಲದಾದರೂ ಅದು ನಿಧಾನವಾಗಿ ಯೋನಿಮಾರ್ಗದಲ್ಲಿ ಧಾವಿಸುತ್ತಿರುವಾಗ ಆ ಲಕ್ಷಣವನ್ನು ಕಳೆದುಕೊಳ್ಳುತ್ತದೆ. ಹೀಗಾಗಿ ಮುಟ್ಟಿನ ರಕ್ತ ದ್ರವವಾಗಿ ಇರುತ್ತದೆ.

ಮುಟ್ಟು ನೈಸರ್ಗಿಕಕ್ರಮವಾಗಿಯೇ ಇರುವುದರಿಂದ ರಜಸ್ರಾವ ಕಾಲದಲ್ಲಿ ವ್ಯಕ್ತಿಯಲ್ಲಿ ಯಾವ ದೈಹಿಕಬಾಧೆ ಅಸಾಮರ್ಥ್ಯಗಳೂ ಕಾಣಬರಬಾರದು. ಆದರೂ ಮುಟ್ಟಿನ ಕಾಲದಲ್ಲಿ ಅನೇಕ ವ್ಯಕ್ತಿಗಳು ಅಲ್ಪ ಇಲ್ಲವೆ ಅಗಾಧ ಬಾಧೆಗಳನ್ನು ಅನುಭವಿಸುತ್ತಾರೆ. ಮೈಭಾರ, ಲವಲವಿಕೆ ಇಲ್ಲದಿರುವುದು, ತಲೆನೋವು, ಹೊಟ್ಟೆನೋವು ಇತ್ಯಾದಿ ಬಾಧೆಗಳು ಯಾವ ಕಾರಣಗಳಿಂದ ಉಂಟಾಗುವುವೋ ತಿಳಿಯದು. ಕಾರಣ ಗೊತ್ತಾಗುವ ಅಪರೂಪ ಸಂದರ್ಭಗಳಲ್ಲಿ ಬಾಧೆಗಳಿಗೆ ಕಾರಣವಾದ ದೈಹಿಕ ಅಕ್ರಮಗಳನ್ನು ಚಿಕಿತ್ಸಿಸಬಹುದು. ಆದರೆ ಬಹುತೇಕ ಈ ಬಾಧೆಗಳು ಮಾನಸಿಕ ಕಾರಣಗಳಿಂದ ಎಂದು ತೋರುತ್ತದೆ. ಮುಟ್ಟಿನ ಕಾಲ ಒಂದು ಪರ್ವಕಾಲ ಎಂಬ ಭಾವನೆ ಬಲು ಸಾಮಾನ್ಯ. ಹಾಗೆಂದುಕೊಂಡೇ ರೂಢಿಸಿ ಕೊಂಡಿರುವ ವೈಯಕ್ತಿಕ ಸಾಮಾಜಿಕ ನಡೆವಳಿಕೆಗಳೂ ಇಂಥ ಮಾನಸಿಕಜನ್ಯ ಬಾಧೆಗಳಿಗೆ ಕಾರಣವಿರಬಹುದು. ಒಟ್ಟಿನಲ್ಲಿ ಈ ಸ್ಥಿತಿಯ ಚಿಕಿತ್ಸೆ ದುಸ್ಸಾಧ್ಯ.

ವಾಸ್ತವವಾಗಿ ವ್ಯಕ್ತಿಯ ಸಾಮಾನ್ಯ ಜೀವನಕ್ರಮ ಮುಟ್ಟಿನ ದಿನಗಳಲ್ಲಿ ಬೇರೆ ದಿನಗಳಿಗಿಂತ ಏನೂ ವ್ಯತ್ಯಾಸವಾಗಿರುವುದಿಲ್ಲ. ಯೋನಿಯ ಮೂಲಕ ರಕ್ತಮಿಶ್ರಿತ ದ್ರವ ಹೋರಬರುತ್ತಿರುವುದಕ್ಕೆ ನಿಗಾ ಕೊಡುವುದರ ವಿನಃ ವ್ಯಕ್ತಿ ಮುಟ್ಟಿನ ದಿನಗಳಲ್ಲಿ ಕೂಡ ದಿನದಿನದ ನಡೆವಳಿಕೆಗಳಲ್ಲಿ ಏನು ವ್ಯತ್ಯಾಸ ಮಾಡಬೇಕಿಲ್ಲ. ಸ್ನಾನ, ದೈನಂದಿಕಕ್ರಿಯೆಗಳು, ಆಟಗಳು, ವ್ಯಾಯಾಮ (ಮಾಡುವವರಲ್ಲಿ) ಇದೆಲ್ಲಕ್ಕೂ ವಿನಾಯಿತಿ ಕೊಡಬೇಕಾಗಿಲ್ಲ. ಬೇಕೆನ್ನಿಸಿದರೆ ಸಂಭೋಗಕ್ರಿಯೆಗೂ ಅಡ್ಡಿಯಿಲ್ಲ. ಮುಟ್ಟಿನ ಕಾಲದಲ್ಲಿ ಅನೇಕ ರೀತಿಯ ವೈಯಕ್ತಿಕ ಮತ್ತು ಸಾಮಾಜಿಕ ನಿರ್ಬಂಧಗಳನ್ನು ಹಾಕಿಕೊಂಡಿರುವುದಕ್ಕೆ ವೈಜ್ಞಾನಿಕ ಆಧಾರಗಳು ಏನೂ ಇಲ್ಲವೆಂದೇ ಹೇಳಬೇಕು.

ಮೇಲಿನ ವಿವರದಿಂದ ಮುಟ್ಟಿಗೂ ಮಕ್ಕಳಾಗುವುದಕ್ಕೂ ನಿಕಟ ಸಂಬಂಧ ಇರುವುದು ವ್ಯಕ್ತವಾಗುತ್ತದೆ. ಗರ್ಭತಾಳಿ ಮಗುವನ್ನು ಹೆತ್ತು ಮಗುವಿಗೆ ಎದೆ ಹಾಲು ಕುಡಿಸುತ್ತಿರುವ ಅವಧಿಯಲ್ಲಿ ಮುಟ್ಟಾಗದೆ ಇರುವುದು, ಅನಂತರ ಪ್ರಾರಂಭವಾದ ಮುಟ್ಟಿನ ಕ್ರಮ ಇನ್ನೊಂದು ಸಾರಿ ಗರ್ಭತಾಳುವ ತನಕವೂ ತಿಂಗಳು ತಿಂಗಳೂ ಮುಟ್ಟಾಗುತ್ತಿರುವುದೂ ಒಂದು ವಿಶಿಷ್ಟ ಏರ್ಪಾಡು. ಸ್ತ್ರೀಯ ಪಿಟ್ಯೂಯಿಟರಿ ಗ್ರಂಥಿ ಮತ್ತು ಅಂಡಾಶಯಗಳೂ ಗರ್ಭಿಣಿಸ್ತ್ರೀಯ ಜರಾಯುವೂ ವಿವಿಧ ಹಾರ್ಮೋನುಗಳನ್ನು ಕ್ಲುಪ್ತಕಾಲದಲ್ಲಿ ಸ್ರವಿಸುವುದರಿಂದಲೇ ಈ ಏರ್ಪಾಡು ಸಾಧ್ಯವಾಗಿದೆ. ವಾಸ್ತವವಾಗಿ ಬಾಲಕಿ ಮೈನೆರೆಯುವುದಕ್ಕೂ ವಯಸ್ಕಸ್ತ್ರೀಯಲ್ಲಿ ಮುಟ್ಟು ನಿಲ್ಲುವುದಕ್ಕೂ ಪಿಟ್ಯೂಯಿಟರಿ ಹಾಗೂ ಅಂಡಾಶಯಗಳ ಹಾರ್ಮೋನುಗಳೆ ಕಾರಣ.

ಬಾಲಕಿಯ ಪಿಟ್ಯುಯಿಟರಿ ಗ್ರಂಥಿಯಿಂದ ಮೂರು ವಿಶಿಷ್ಟ ಹಾರ್ಮೋನುಗಳು ಸ್ರವಿಸವುದಿಲ್ಲ (ಎಫ್‌ಎಸ್‌ಎಚ್,ಎಲ್‌ಎಚ್,ಎಲ್‌ಟಿಎಚ್). ಹುಡುಗಿಯ ಅಂಡಾಶಯಗಳೂ ಗರ್ಭಕೋಶ ಸ್ತನಗಳೂ ಸಣ್ಣದಾಗಿದ್ದು ಅಪಕ್ವ ಸ್ಥಿತಿಯಲ್ಲಿರುತ್ತವೆ. 11–13ನೆಯ ವಯಸ್ಸಿನಲ್ಲಿ ಪಿಟ್ಯುಯಿಟರಿ ಗ್ರಂಥಿಯಿಂದ ಈ ಮೂರು ಹಾರ್ಮೋನುಗಳೂ ಸ್ರವಿಸಲು ತೊಡಗುತ್ತವೆ. ವೈಯಕ್ತಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳು, ಆನುವಂಶಿಕತೆ, ದೇಶದ ಹವೆ ಇತ್ಯಾದಿಗಳೆಲ್ಲವುಗಳ ಒಟ್ಟು ಪ್ರಭಾವ ಪಿಟ್ಯುಯಿಟರಿಯ ಮೇಲೆ ಆ ಕಾಲದಲ್ಲಿ ಕಾಣಬರುವುದರಿಂದ (ಬಹುಶಃ ಪಿಟ್ಯುಯಿಟರಿ ಆ ಕಾಲಕ್ಕೆ ಸಾಕಷ್ಟು ಬಲಿತಿರುವುದರಿಂದ) ಈ ಮೂರು ಹಾರ್ಮೋನುಗಳ ಸ್ರಾವವೂ ಪ್ರಾರಂಭವಾಗುವುದೆಂದು ತೋರುತ್ತದೆ. ಮೊದಲನೆಯ ಹಾರ್ಮೋನಿಗೆ ಫಾಲಿಕಲ್ ಸ್ಟಿಮ್ಯುಲೇಟಿಂಗ್ ಹಾರ್ಮೋನ್ (ಎಫ್‌ಎಸ್‌ಎಚ್) ಎಂದು ಹೆಸರು. ಮೇಲೆ ಹೇಳಿರುವ ಆವರಣ ಪ್ರಭಾವಗಳಿಂದ, ಆ ವಯಸ್ಸಿಗೆ ತಕ್ಕಷ್ಟು ಬಲಿತಿರುವ ಅಂಡಾಶಯಗಳ ಪಕ್ವವಾಗಿ ಬೆಳೆಯುವುದಲ್ಲದೆ ಅವುಗಳೊಳಗೆ ಅಂಡಾಣುವಿನ ತಯಾರಿಯೂ ಪ್ರಾರಂಭವಾಗುತ್ತದೆ. ಬಹುಶಃ ಇನ್ನು ಕೆಲವು ತಿಂಗಳುಗಳಲ್ಲಿ ಪಿಟ್ಯುಯಿಟರಿಯಿಂದ ಇನ್ನೆರಡು ಹಾರ್ಮೋನುಗಳೂ ಸ್ರವಿಸಲಾರಂಭಿಸುತ್ತವೆ. ಲ್ಯೂಟಿನೈಸಿಂಗ್ ಹಾರ್ಮೋನ್ (ಎಲ್ ಎಚ್) ಮತ್ತು ಲ್ಯೂಟಿಯೊಟ್ರೋಫಿಕ್ ಹಾರ್ಮೋನ್ (ಎಲ್‌ಟಿಎಚ್) ಎಂಬ ಇವು ಎಫ್‌ಎಸ್‌ಎಚ್ ನಿಂದ ಪ್ರಭಾವಿತವಾದ ಅಂಡಾಶಗಳ ಮೇಲೆ ತಮ್ಮ ಪ್ರಭಾವವನ್ನು ಮುಂದುವರಿಸುತ್ತವೆ. ಎರಡು ವಾರ ಹೀಗಿದ್ದು ಎಫ್‌ಎಸ್‌ಎಚ್ ಸ್ರಾವ ತಟ್ಟನೆ ಕಡಿಮೆ ಆಗಿ ಎಲ್‌ಎಚ್ ಸ್ರಾವ ಹೆಚ್ಚಾಗುತ್ತದೆ. ಇದೂ ಎರಡು ವಾರ ಪರ್ಯಂತ. ಅನಂತರ ಇದು ನಿಂತು ಪುನಃ ಎಫ್‌ಎಸ್‌ಎಚ್ ಸ್ರಾವ ವಾಗುತ್ತದೆ.

ಎಫ್‌ಎಸ್‌ಎಚ್ ಸ್ರಾವವಾಗುತ್ತಿರುವ ಎರಡು ವಾರಗಳು ಅಂಡಾಶಯಗಳಲ್ಲಿ ಅಂಡಾಣು ವೃದ್ಧಿ ಆಗುತ್ತಿರುವ ವೇಳೆ ಅಂಡಾಣುವಿನ ನೆರೆಕೋಶ ಸಮೂಹದಿಂದ ಎಸ್ಟ್ರೋಜೆನ್‌ಗಳೆಂಬ ಎರಡು ಮೂರು ಹಾರ್ಮೋನುಗಳು ಸ್ರವಿಸಲ್ಪಡುತ್ತವೆ. ಇವುಗಳಿಗೆ ವ್ಯಕ್ತಿಯ ಗರ್ಭಾಶಯ, ಸ್ತನಗಳ ಮೇಲೆ ಪ್ರಭಾವವಿದ್ದು ಅವುಗಳ ಬೆಳವಣಿಗೆಗೆ ಕಾರಣವಾಗಿದೆ. ಅಲ್ಲದೆ ವ್ಯಕ್ತಿಯ ದೈಹಿಕಬೆಳೆವಣಿಗೆಯ ಮೇಲೂ ಇದರ ಪ್ರಭಾವ ಉಂಟು. ಎರಡು ವಾರಗಳ ಕೊನೆಯಲ್ಲಿ ಎಫ್‌ಎಸ್‌ಎಚ್ ಸ್ಥಗಿತವಾಗಿ ಎಲ್‌ಎಚ್ ಸ್ರಾವ ಪ್ರಾರಂಭವಾದ ಕೂಡಲೆ ಅಂಡಾಶಯದಿಂದ ಅಂಡಾಣು ಹೊರಬರುತ್ತದೆ. ಅಂಡಾಣುವನ್ನು ಕವಿಚಿದ್ದ ಕೋಶಗಳು ವ್ಯವಸ್ಥಿತಗೊಂಡು ಪೀತಗ್ರಂಥಿ (ಕಾರ್ಪಸ್‌ಲ್ಯೂಟಿಯಮ್) ಆಗಿ, ಪೋಜೆಸ್ಟಿರಾನ್ ಹಾರ್ಮೋನನ್ನು ಸ್ರವಿಸುತ್ತವೆ. ಇದಕ್ಕೆ ಕಾರಣ ಈಗ ಪಿಟ್ಯುಯಿಟರಿಯಿಂದ ಸ್ರವಿಸಲ್ಪಡುತ್ತಿರುವ ಎಲ್‌ಎಚ್. ಎರಡುವಾರ ಪರ್ಯಂತ ಕಾರ್ಪಸ್ ಲೂಟಿಯಮ್ಮಿನ ಅಸ್ತಿತ್ವಖಚಿತವಾಗಿರುತ್ತದೆ. ಇಷ್ಟೆ ಅಲ್ಲದೆ ಇದೇ ಸಮಯದಲ್ಲಿ ಪಿಟ್ಯುಯಿಟರಿ ಸ್ರವಿಸವ ಎಲ್‌ಟಿಎಚ್. ಕಾರ್ಪಸಲೂಟಿಯಮ್ಮಿನ ಮೇಲೆ ಪ್ರಭಾವಿಸಿ ಅದು ಪ್ರೊಜೆಸ್ಟಿರೋನ್ ಎಂಬ ಹಾರ್ಮೋನನ್ನು ಸ್ರವಿಸುವಂತೆ ಮಾಡುತ್ತದೆ. ಅಂಡಾಣು ಬಿಡುಗಡೆ ಆದ ಬಳಿಕ ಅಂದರೆ ಎಸ್ಟ್ರೋಜೆನ್ನುಗಳ ಸ್ರಾವ ಸ್ಥಗಿತವಾದಂದಿನಿಂದ ಎರಡುವಾರ ಪರ್ಯಂತ ಅಂಡಾಶಯದಿಂದ ಪ್ರೊಜೆಸ್ಟಿರೋನ್ ಸ್ರವಿಸಲ್ಪಡುತ್ತದೆ. ಇದು ಪೂರ್ವಭಾವಿಯಾಗಿ ಎಸ್ಟ್ರೋಜೆನ್ನುಗಳಿಂದ ಪ್ರಭಾವಿತವಾಗಿರುವ ಗರ್ಭಾಶಯ, ಸ್ತನಗಳನ್ನು ವಿಶಿಷ್ಟವಾಗಿ ಪ್ರಚೋದಿಸುವಂಥದು. ತತ್ಪರಿಣಾಮವಾಗಿ ಗರ್ಭಾಶಯ ವೃದ್ಧಿಗೊಂಡು ಅದರ ಒಳಪದರ ದಪ್ಪವಾಗಿ ಹಾಗೂ ಆರಕ್ತವಾಗಿ ಮಾರ್ಪಡುತ್ತದೆ. ಈ ಎರಡು ವಾರಗಳ ಕೊನೆಗೆ ಪಿಟ್ಯುಯಿಟರಿಯಲ್ಲಿ ಎಲ್‌ಎಚ್ ಸ್ರಾವ ತಟ್ಟನೆ ನಿಂತು ಎಫ್‌ಎಸ್‌ಎಚ್ ಸ್ರಾವ ಪುನರಾರಂಭವಾಗುವುದರಿಂದ ಕಾರ್ಪಸ್ ಲ್ಯೂಟಿಯಮ್ಮಿನ ಅಸ್ತಿತ್ವಕ್ಕೆ ಧಕ್ಕೆಯಾಗಿ ಅದು ನಶಿಸಿಹೋಗುತ್ತದೆ. ಅರ್ಥಾತ್ ಪ್ರೊಜೆಸ್ಟಿರೋನಿನ ಸ್ರಾವ ತಟ್ಟನೆ ನಿಂತುಹೋಗುತ್ತದೆ. ತತ್ಪರಿಣಾಮವಾಗಿ ಗರ್ಭಕೋಶದಲ್ಲಿ ಆಗಿದ್ದ ಮಾರ್ಪಾಡು ಕುಸಿದು ಬೀಳುತ್ತದೆ. ಒಳಪದರದ ಕೋಶಗಳು ನಶಿಸಿ ದ್ರವವಾಗುವುದಲ್ಲದೆ ರಕ್ತನಾಳಗಳ ಛಿದ್ರದಿಂದ ರಕ್ತಸ್ರಾವವೂ ಆಗುತ್ತದೆ. ಈ ಮಿಶ್ರಣದ್ರವವೇ ಮುಟ್ಟುದ್ರವ. ನಾಲ್ಕು ದಿವಸಗಳ ತನಕ ಇಂಥ ಅವನತಿ ಹಾಗೂ ಋತುಸ್ರಾವ ಕಂಡುಬಂದು ಮತ್ತೊಂದು ಋತುಚಕ್ರ, ಪ್ರಾರಂಭವಾಗಿ ಮೇಲಿನ ಎಲ್ಲ ಕ್ರಿಯೆಗಳ ಪುನರಾವರ್ತನೆಯಾಗುತ್ತದೆ. ಅಂದರೆ, ಎಫ್‌ಎಸ್‌ಎಚ್ ಅರ್ಥಾತ್ ಎಸ್ಟ್ರೋಜೆನ್ನುಗಳ ಪ್ರಭಾವ ಹೆಚ್ಚಾಗುತ್ತಿದ್ದಂತೆ ಋತುಸ್ರಾವ ನಿಂತುಹೋಗಿ ಗರ್ಭಾಶಯದ ದುರಸ್ತಿಯೂ ಆಗುತ್ತದೆ. ಇನ್ನು ಮುಂದೆ ಹತ್ತು ದಿನಗಳೂ ಇದೇ ಸ್ಥಿತಿ. ಅನಂತರ ಪಿಟ್ಯೂಯಿಟರಿಯಲ್ಲಿ ಎಲ್‌ಎಚ್ ಸ್ರಾವ ಪ್ರಾರಂಭ, ಅಂಡಾಶಯದಲ್ಲಿ ಅಂಡಾಣು ಬಿಡುಗಡೆ. ಕಾರ್ಪಸ್‌ಲ್ಯೂಟಿಯಮ್ ಸೃಷ್ಟಿ, ಪ್ರೊಜೆಸ್ಟಿರೋನಿನ ಸ್ರಾವ, ಮತ್ತೆ ಮುಟ್ಟು–ಹೀಗೆ ಇದು ಸ್ತ್ರೀಯಲ್ಲಿ ಪ್ರತಿ ನಾಲ್ಕು ವಾರಗಳಿಗೊಮ್ಮೆ ಕಾಣಬರುವ ವಿದ್ಯಮಾನ. ಪಿಟ್ಯೂಯಿಟರಿ ಮತ್ತು ಅಂಡಾಶಯಗಳ ಹಾರ್ಮೋನುಗಳ ಕ್ರಮವತ್ತಾದ ಪ್ರಭಾವದಿಂದ ಮೊದಲಸಾರಿ ಮುಟ್ಟಾಗುವುದನ್ನೇ ಮೈನೆರೆಯುವುದು ಎಂದಿದೆ. ವ್ಯಕ್ತಿಗೆ 45–50 ವರ್ಷಗಳಾದಾಗ ಅಂಡಾಶಯದಲ್ಲಿದ್ದ ಅಂಡಾಣುಗಳೆಲ್ಲವೂ ಮುಗಿದು ಹೋಗುವುದರಿಂದ, ಈ ಅಂಡಾಶಯ ನಿಷ್ಕ್ರಿಯವಾಗಿ, ಋತುಚಕ್ರ ನಿಂತುಹೋಗುತ್ತದೆ. ಈ ಸ್ಥಿತಿಗೆ ಮುಟ್ಟುನಿಲ್ಲುವಿಕೆ (ಮೆನೊಪಾಸ್) ಎಂದು ಕರೆಯಲಾಗಿದೆ.

ಮೇಲೆ ವಿವರಿಸಿರುವ ಮಾಸಿಕಕ್ರಮದಲ್ಲಿ ಬಿಡುಗಡೆ ಆದ ಅಂಡಾಣು ಸಂಭೋಗ ನಿಮಿತ್ತವಾಗಿ ಫಲಿತವಾಗುವ ಸಂಭವವಿದೆ. ಈ ಅಂಡಾಣು ಬಿಡುಗಡೆ ಆದ ಮೇಲೆ ಕಾರ್ಪಸ್‌ಲ್ಯೂಟಿಯಮ್ಮಿನ ಅಸ್ತಿತ್ವ ಎರಡು ವಾರಗಳು. ಅಂಡಾಣು ಫಲಿತ ಆದಾಗ ಪಿಟ್ಯುಯಿಟರಿಯ ಎಲ್‌ಎಚ್‌ಸ್ರಾವ ಎರಡು ವಾರಗಳಲ್ಲಿ ನಿಂತುಹೋಗದೆ ಮುಂದುವರಿಯುತ್ತದೆ. ಆದ್ದರಿಂದ ಅಂಡಾಶಯದಲ್ಲಿ ಪ್ರೊಜೆಸ್ಟಿರೋನಿನ ಸ್ರಾವವೂ, ತತ್ಫಲವಾಗಿ ಗರ್ಭಕೋಶದ ಒಳಪದರವೂ ನಶಿಸದೆ ಮುಂದುವರಿಯುತ್ತವೆ. ಅರ್ಥಾತ್ ಸ್ತ್ರೀ ಮುಟ್ಟಾಗುವುದಿಲ್ಲ. ಎಲ್‌ಎಚ್ ಸ್ರವಿಸುತ್ತಿರುವ ತನಕವೂ ಪಿಟ್ಯುಯಿಟರಿಯಲ್ಲಿ ಎಫ್‌ಎಸ್‌ಎಚ್ ಸ್ರಾವ ಇಳಿಮುಖವಾಗಿರುವುದರಿಂದ ಅಂಡಾಶಯದಲ್ಲಿ ಅಂಡಾಣು ಬೆಳೆವಣಿಗೆ ಸ್ಥಗಿತವಾಗಿರುತ್ತದೆ. ಅಂದರೆ ಗರ್ಭಿಣಿ ವ್ಯಕ್ತಿ ಗರ್ಭಾವಸ್ಥೆ ಕಾಲದಲ್ಲಿ ಪುನಃ ಗರ್ಭತಾಳುವಂತಿಲ್ಲ. ಗರ್ಭವಾಗಿರುವ ಕಾಲದಲ್ಲಿ ಜರಾಯುವಿನಿಂದಲೂ ಪ್ರೊಜೆಸ್ಟಿರೋನ್ ಸ್ರಾವವಾಗುವುದರಿಂದ ಗರ್ಭಕಾಲಪೂರ್ತ ವ್ಯಕ್ತಿ ಮುಟ್ಟಾಗುವುದಿಲ್ಲ.

ಗರ್ಭಕಾಲದ ಅಂತ್ಯದಲ್ಲಿ ಪ್ರೊಜೆಸ್ಟಿರೋನಿನ ಸ್ರಾವ ತಟ್ಟನೆ ನಿಂತುಹೋಗುತ್ತದೆ. ಇದೇ ಪ್ರಸವಕ್ಕೆ ಕಾರಣ. ಅಲ್ಲದೆ ಮುಂದೆ ಪಿಟ್ಯೂಯಿಟರಿಯ ಎಫ್‌ಎಸ್‌ಎಚ್ ಸ್ರಾವಕ್ಕೂ ಎಡೆಗೊಡಬಹುದು. ಆದರೆ ಈ ಸಮಯದಲ್ಲಿ ಅಧಿಕವಾಗಿ ಸ್ರಾವವಾಗುತ್ತಿರುವ ಪಿಟ್ಯೂಯಿಟರಿಯ ಎಲ್‌ಟಿಎಚ್ ಕೂಡ ಪಿಟ್ಯುಯಿಟರಿಯಲ್ಲಿ ಎಫ್‌ಎಸ್‌ಎಚ್ ಸ್ರಾವಕ್ಕೆ ತಡೆಮಾಡುತ್ತದೆ. ಎಲ್‌ಟಿಎಚ್ ಸ್ತನಗಳ ಮೇಲೆ ಪ್ರಭಾವ ಹೊಂದಿದ್ದು ಪ್ರಸವವಾದ ಮೇಲೆ ಅವುಗಳಲ್ಲಿ ಹಾಲು ಉತ್ಪತ್ತಿ ಆಗುವಂತೆ ಮಾಡುತ್ತದೆ. ಮಗುವಿಗೆ ಎದೆಹಾಲೂಡುತ್ತಿರುವ ತನಕ ಇಂಥ ಪ್ರಭಾವ ಕಂಡುಬರುವುದಿದೆ. ಅಂದರೆ ಅಲ್ಲಿಯ ತನಕ ಪಿಟ್ಯುಯಿಟರಿ ಎಫ್‌ಎಸ್‌ಎಚ್ ಅಂಡಾಶಯದ ಎಸ್ಟ್ರೋಜೆನ್, ಪ್ರೊಜೆಸ್ಟಿರೋನುಗಳ ಸ್ರಾವ ಸ್ಥಗಿತ. ಅರ್ಥಾತ್ ಋತುಕ್ರಮ ಕಂಡುಬರುವುದಿಲ್ಲ. (ಎಸ್.ಆರ್.ಆರ್.)

ಮುಟ್ಟಿನ ದೋಷಗಳು: 1. ಮುಟ್ಟಾಗದಿರುವಿಕೆ: ಸಹಜವಾಗಿ ಆಗ ಬೇಕಾದ ಮುಟ್ಟು ಆಗದೇ ಇರುವಿಕೆ (ಎಮೆನೋರ್‍ರಿಯ). ಕೆಲ ತಿಂಗಳುಗಳಿಂದ ಹೀಗಾಗಿರುವುದೆಂದು

ಸಾಮಾನ್ಯವಾಗಿ ಸ್ತ್ರೀಯರು ವೈದ್ಯರೊಡನೆ ಹೇಳಿಕೊಳ್ಳುವುದಿದೆ. ಇದಕ್ಕೆ ಕಾರಣಗಳು ಬಲುಮಟ್ಟಿಗೆ ಪತ್ತೆ ಆಗಿದ್ದರೂ ಈ ಸ್ಥಿತಿಯ ಚಿಕಿತ್ಸೆ ಇನ್ನೂ ಶೇ. 100 ರಷ್ಟು ಇಲ್ಲ.

ಮುಟ್ಟಾಗದಿರುವುದು ಮೈನೆರೆಯದ ಬಾಲಕಿಯರಲ್ಲಿ, ಗರ್ಭಿಣಿಯರಲ್ಲಿ, ಮಗುವಿಗೆ ಎದೆ ಹಾಲೂಡಿಸುತ್ತಿರುವ ತಾಯಿಯರಲ್ಲಿ ಹಾಗೂ ಮುಟ್ಟು ನಿಂತು ಹೋಗಿರುವ ವಯಸ್ಕಸ್ತ್ರೀಯರಲ್ಲಿ ನೈಸರ್ಗಿಕಸ್ಥಿತಿಯೇ ಹೊರತು ರೋಗವಲ್ಲ. ಹಲವು ವೇಳೆ ಸ್ತ್ರೀಯರಲ್ಲಿ ತಾವು ಬಸುರಾಗಿದ್ದೇವೆಂಬ ಭಾವನೆ ಬಲವಾಗಿ ಬೇರೂರಿರುವುದುಂಟು. ಬಸುರಾಗಬೇಕೆಂಬ ಉತ್ಕಟೇಚ್ಛೆ ಇಲ್ಲವೆ ಬಸುರಾಗಿ ಬಿಟ್ಟಿದ್ದೇನೆಂಬ ತೀವ್ರಭೀತಿಯಿಂದ ಕೂಡಿರುವ ಇವರಲ್ಲಿ ಅವರ ಮನಸ್ಸಿನ ಎಣಿಕೆಯಂತೆಯೇ ಮುಟ್ಟಾಗದಿರುವುದು ಉಂಟು. ಇದಕ್ಕೆ ನಕಲಿ ಬಸಿರು ಎಂದು ಹೆಸರು.

ಹೀಗಿಲ್ಲದೆ ಏನೋ ಶಾರೀರಕ ಅವ್ಯವಸ್ಥೆಯ ಕಾರಣದಿಂದ ಮುಟ್ಟಾಗದಿರುವಿಕೆ (ಪ್ರೈಮರಿ ಎಮೆನೋರ್‍ಹಿಯ) ಎಂಬ ಸ್ಥಿತಿಯಲ್ಲಿ ಮುಟ್ಟುಪ್ರಕ್ರಿಯೆಯಲ್ಲಿ (ಮೆನ್‍ಸ್ಟ್ರುಯಲ್ ಪ್ರಾಸೆಸ್) ಭಾಗವಹಿಸುವ ಅಂಗಗಳ ಶ್ರೇಣಿಯಲ್ಲಿ ಎಲ್ಲೋ ದೋಷ ಇರುತ್ತದೆ. ಮಹಮಸ್ತಿಷ್ಕ (ಸೆಂಟ್ರಲ್ ಕಾರ್ಟೆಕ್ಸ್), ಹೈಪೊಥೆಲಮಸ್ ಎಂಬ ಮಿದುಳಿನ ಭಾಗ ಪಿಟ್ಯುಯಿಟರಿಗ್ರಂಥಿ, ಅಡ್ರೀನಲ್ ಗ್ರಂಥಿ, ಅಂಡಾಶಯಗಳು ಇಲ್ಲವೇ ಗರ್ಭಕೋಶ ಯೋನಿಮಾರ್ಗಗಳಲ್ಲಿ ಎಲ್ಲಿಯಾದರೂ ಆಜನ್ಮನ್ಯೂನತೆಯಾಗಿ ಕಂಡು ಬರಬಹುದು. ಇಂಥ ಸಂದರ್ಭಗಳಲ್ಲಿ ಹುಡುಗಿಗೆ 18 ವರ್ಷ ವಯಸ್ಸು ಮೀರಿದರೂ ಅವಳು ಮೈನೆರೆಯದೆ ಮುಟ್ಟಾಗದೆ ಇರುವಳು. ಹುಡುಗಿ ಮೈನೆರೆದ ಮೇಲೆ ಕೇವಲ ಕೆಲವು ಸಾರಿ ಮುಟ್ಟಾಗಿ ಅನಂತರ ಮುಟ್ಟಾಗದೆ ಇರುವ ಸ್ಥಿತಿಗೆ ದ್ವಿತೀಯಕ ಮುಟ್ಟಾಗದಿರುವಿಕೆ (ಸೆಕೆಂಡರಿ ಎಮೆನೋರ್‍ಹಿಯ) ಎಂದು ಹೆಸರು. ಇಂಥ ಕೆಲವು ಸಂದರ್ಭಗಳಲ್ಲಿಯೂ ಚಿಕಿತ್ಸೆ ಪರಿಣಾಮಕಾರಿ ಆಗಿರುತ್ತದೆ.

ಪ್ರಜನನಮಾರ್ಗದ (ಜೆನಿಟಲ್ ಪಾತ್‍ವೇ) ಆಜನ್ಮ ನ್ಯೂನತೆಗಳಿಂದ ಮುಟ್ಟಾಗದೆ ಇರುವುದಕ್ಕೆ ಅತಿ ಸಾಮಾನ್ಯ ಕಾರಣವೆಂದರೆ ರಂಧ್ರರಹಿತ ಕನ್ಯಾವಪೆ (ಹೈಮೆನ್), ಇಂದ ಯೋನಿಮಾರ್ಗ ಮುಚ್ಚಿರುವಿಕೆ. ಈ ಸ್ಥಿತಿಯಲ್ಲಿ ವಾಸ್ತವವಾಗಿ ವ್ಯಕ್ತಿ ಮೈನೆರೆದು ಮುಟ್ಟಾಗುತ್ತಿದ್ದರೂ ಬಹಿರಂಗವಾಗಿ ಸ್ರಾವವಾಗುವುದಿಲ್ಲ. ಇದಕ್ಕೆ ಅವ್ಯಕ್ತಮುಟ್ಟು (ಕ್ರಿಪ್ಟೊಮೆನೊರ್‍ಹಿಯ) ಎಂದು ಹೆಸರು. ಕನ್ಯಾವಸ್ಥೆಯಲ್ಲಿ ಯೋನಿಯ ದ್ವಾರವನ್ನು ಒಂದು ತೆಳುಪೊರೆ ಮುಚ್ಚಿದ್ದು ಅದರಲ್ಲಿ ಒಂದು ಸಣ್ಣ ರಂಧ್ರವಿರುತ್ತದೆ. ಮೈನೆರೆದು ಪ್ರಥಮವಾಗಿ ಮುಟ್ಟಾದಾಗ ಈ ರಂಧ್ರದಿಂದ ಮುಟ್ಟು ದ್ರವ ಹೊರಬರುತ್ತದೆ. ಸಾಧಾರಣವಾಗಿ ಪ್ರಥಮ ಸಂಭೋಗ ಕಾಲದಲ್ಲಿ ಈ ಕನ್ಯಾವಪೆ ಹರಿದುಹೋಗುವ ತನಕ ಪ್ರತಿಸಾರಿ ಮುಟ್ಟಾದಾಗಲೂ ಹೀಗಿಯೇ ಇರುತ್ತದೆ. ಕನ್ಯಾವಪೆಯಲ್ಲಿ ರಂಧ್ರವಿಲ್ಲದಿದ್ದರೆ ಪ್ರಥಮ ಮುಟ್ಟಿನ ಸ್ರಾವ ಯೋನಿಯಲ್ಲಿ ತಡೆಗಟ್ಟಲ್ಪಡುತ್ತದೆ. ಮುಂದಿನ ಸಲ ಮುಟ್ಟಾದಾಗಲೂ ಹೀಗೆಯೇ ಆಗುತ್ತ ಯೋನಿ ತುಂಬಿ (ರಕ್ತಯುಕ್ತಯೋನಿ) ಗರ್ಭಕೋಶ ತುಂಬಿ ಕೊನೆಗೆ ಅಂಡನಾಳಗಳೂ ಮುಟ್ಟುದ್ರವದಿಂದ ತುಂಬಿಕೊಳ್ಳುತ್ತವೆ. ಪ್ರತಿಯೊಂದು ಮುಟ್ಟಿನ ಕಾಲದಲ್ಲೂ ಈ ರೀತಿ ಮುಟ್ಟುದ್ರವ ಕೂಡಿಕೊಳ್ಳುತ್ತ ಬಲವಾಗಿ ಹೊಟ್ಟೆನೋವು ಉಂಟಾಗುವುದಿದೆ. ಕನ್ಯಾವಪೆಯನ್ನು ಕೃತಕವಾಗಿ ಛಿದ್ರಿಸಿ ಶೇಖರವಾಗಿರುವ ಮುಟ್ಟುದ್ರವ ಹೊರಹೋಗುವಂತೆ ಮಾಡುವುದು ಈ ಸ್ಥಿತಿಗೆ ತಕ್ಕ ಚಿಕಿತ್ಸೆ.

ಇದಕ್ಕಿಂತ ವಿರಳವಾದ ಆಜನ್ಮ ನ್ಯೂನತೆಗಳಿಂದ ಮುಟ್ಟಾಗದಿರುವುದಕ್ಕೆ ಕಾರಣಗಳಿವೆ: ಯೋನಿ ಅಂಗಾಂಶ ನಾಳೀಕರಣವೇ ಆಗದಿರುವಿಕೆ (ನಾನ್‍ಕೆನಲೈಸೇಷನ್), ಗರ್ಭಕೋಶದ ಕಂಠ ಸಹಜವಾಗಿ ವಿಕಸಿಸದೆ ಮುಚ್ಚಿಹೋಗಿರುವುದು (ಸರ್ವೈಕಲ್ ಅಟ್ರೀಸಿಯ), ಗರ್ಭಕೋಶ ಶೈಶವಸ್ಥಿತಿಯಲ್ಲಿರುವುದು (ಹೈಪೊಪ್ಲೇಸಿಯ ಆಫ್ ಯೂಟಿರಸ್), ಅಪರೂಪವಾಗಿ ಗರ್ಭಕೋಶವೇ ಲೋಪವಾಗಿರುವುದು, ಅಂಡಾಶಯಗಳು ಉರಿಊತ ಇಲ್ಲವೇ ಏಡಿಗಂತಿಯಿಂದ ಕಾರ್ಯವಿಮುಖವಾಗಿರಬಹುದು ಇತ್ಯಾದಿ. ಅಂಡಾಶಯದ ಕೆಲವು ಏಡಿಗಂತಿಗಳು ಪುಂಸಕಾರಕಗಳಾಗಿದ್ದು ವ್ಯಕ್ತಿ ಮುಟ್ಟಾಗದೆ ಇರುವುದರ ಜೊತೆಗೆ ಧ್ವನಿ ಒಡೆಯುವುದು, ಗಲ್ಲ ತುಟಿಗಳಲ್ಲಿ ಕೂದಲು ಕಾಣಬಹುದು ಇತ್ಯಾದಿ ಪುರುಷ ಲಕ್ಷಣಗಳೂ ಪ್ರಕಟವಾಗುತ್ತವೆ. ಆಜನ್ಮವಾಗಿಯೇ ಅಂಡಾಶಯಗಳು ಕಾರ್ಯೋನ್ಮುಖವಾಗದೆ ಇರುವ ಸ್ಥಿತಿಗೆ ಟರ್ನರನ ಲಕ್ಷಣ ಕೂಟ (ಟರ್ನರ್ಸ್‍ಸಿನ್‍ಡ್ರೋಮ್) ಎಂದು ಹೆಸರು. ವ್ಯಕ್ತಿಯ ಜನನಾಂಗಗಳು ಬಾಲ್ಯಾವಸ್ಥೆಯಲ್ಲಿದ್ದಂತೆಯೇ ಮುಟ್ಟಾಗದೇ ಇರುವುದು, ದೈಹಿಕವಾಗಿ ಬೆಳೆಯದೇ ಇರುವುದು ಕುತ್ತಿಗೆ ಮೊಟಕಾಗಿದ್ದು ಬುಡ ಬಲು ವಿಸ್ತಾರವಾಗಿರುವುದು ಇವು ಈ ಲಕ್ಷಣಕೂಟದ ವೈಶಿಷ್ಟ್ಯಗಳು. ಸ್ಟೈಯಿನ್ ಲೆವಿಎನ್‍ಥಾಲನ ಲಕ್ಷಣಕೂಟ ಎಂಬುದು ಇನ್ನೊಂದು. ಇದರಲ್ಲಿ ಅಂಡಾಶಯಗಳಲ್ಲಿ ಅಂಡಾಣುಗಳು ವಿಕಸಿಸುವ ಬದಲು ಖಾಲಿಗುಡ್ಡೆಗಳಂಥ ರಚನೆಗಳು ಉದ್ಭವಿಸುತ್ತವೆ. ಈ ಸ್ಥಿತಿಯಲ್ಲಿ ಮುಟ್ಟು ನಿಂತಿರುವುದಲ್ಲದೆ ಮುಖ ಮೈಗಳು ರೋಮಯುಕ್ತವಾಗಿರುತ್ತವೆ ಕೂಡ. ಶಸ್ತ್ರಕ್ರಿಯೆಯಿಂದ ಅಂಡಾಶಯಗಳನ್ನು ನಿರ್ಮೂಲ ಮಾಡಿದಾಗ, ಇಲ್ಲವೆ ಎಕ್ಸ್‍ಕಿರಣಗಳಿಂದ ಅಥವಾ ಏಡಿಗಂತಿಗಳಿಂದ ಅವು ನಿಷ್ಕ್ರಿಯಗೊಂಡಾಗ ಕೂಡ ಮುಟ್ಟು ಆಗದೆ ಹೋಗುತ್ತದೆ. ಗರ್ಭಕೋಶದ ಒಳಪದರವನ್ನು ರೇಡಿಯಮ್ ವಿಕಿರಣದಿಂದ ನಾಶಪಡಿಸಿರುವಾಗ ಇಲ್ಲವೇ ಪೂರ್ಣವಾಗಿ ಗರ್ಭಕೋಶವನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಿರುವಾಗ ಮುಟ್ಟಾಗದಿರುವುದಕ್ಕೆ ಗರ್ಭಕೋಶ ಕಾರಣವಾಗಿರುತ್ತದೆ.

ಮುಟ್ಟಾಗದೆ ಇರುವುದಕ್ಕೆ ಪಿಟ್ಯೂಯಿಟರಿ ಗ್ರಂಥಿ ಕಾರಣವಾಗಿರುವ ಸಂದರ್ಭಗಳಲ್ಲಿ ಅದು ರೋಗ ಇಲ್ಲವೇ ಏಡಿಗಂತಿಯಿಂದ ನಿಷ್ಕ್ರಿಯಗೊಂಡಿರುತ್ತದೆ. ಪ್ರಸವೋತ್ತರ ಪ್ರಸಂಗವಾಗಿ ಅದು ಅವನತಿ ಹೊಂದಿರುವುದೂ ಉಂಟು. ಇಲ್ಲವೇ ಪ್ರಬುದ್ಧತೆಯ ಸಮಯದಲ್ಲಿ ಅದು ವಿಕಸಿಸದೆ ಶೈಶವಾವಸ್ಥೆಯಲ್ಲಿ ಮುಂದುವರಿಯುವುದೂ ಉಂಟು. ಈ ಸಂದರ್ಭಗಳಲ್ಲೂ ಮುಟ್ಟಾಗದೇ ಇರುವುದಿದೆ. ಕಶಿಂಗನ ರೋಗ ಎಂಬ ಸ್ಥಿತಿಯಲ್ಲಿ ಪಿಟ್ಯುಯಿಟರಿಯಲ್ಲಿ ಪ್ರತ್ಯಾಮ್ಲವಾಗಿ ಕಣಗಳ ವೃದ್ಧಿ ಆಗುವುದಿದೆ. ಇದರಲ್ಲಿ ಇನ್ಸುಲಿನ್ನಿಗೆ ಮಣಿಯದ ಮಧುಮೂತ್ರರೋಗ, ಎಮ್ಮೆಯ ಮೈಯಲ್ಲಿರುವಂತೆ ದೇಹದಲ್ಲಿ ಕೊಬ್ಬಿನ ಶೇಖರಣೆ ಆಗಿರುವಿಕೆ. ಪೂರ್ಣಚಂದ್ರಾಕಾರದ ಮುಖ ಇವುಗಳೂ ಮುಟ್ಟಾಗದಿರುವುದರ ಜೊತೆಗೆ ಕಂಡುಬರುತ್ತವೆ. ಷೀಹಾನನ ರೋಗದಲ್ಲಿ ರಕ್ತಪೂರೈಕೆಯ ಕೊರತೆಯಿಂದಾಗಿ ಪಿಟ್ಯುಯಿಟರಿಯ ಸಮಸ್ತಕಾರ್ಯವೂ ಇಳಿಮುಖವಾಗಿರುತ್ತದೆ. ಆಗ ಮುಟ್ಟಾಗದಿರುವುದು ಜೊತೆಗೆ ಕಾಮ ಅಡಗಿ ಎದೆಹಾಲು ಕಡಿಮೆ ಆಗಿ ಇನ್ಸುಲಿನ್ನಿಗೆ ತೀವ್ರ ಪ್ರತಿಕ್ರಿಯೆ ತೋರುವ ಮಧು ಮೂತ್ರರೋಗ ಕಂಡುಬರುವುದಿದೆ.

ಮುಟ್ಟಾಗದೇ ಇರುವುದಕ್ಕೆ ಇನ್ನಿತರ ಕಾರಣಗಳೆಂದರೆ ಥೈರಾಯ್ಡ್‍ಗ್ರಂಥಿಯ ಕ್ರೆಟಿನಿಸಮ್ ಎಂಬ ರೋಗ, ಅಡ್ರೀನಲ್‍ನ ಹೊರವಲಯದ ರೋಗ, ಮಧುಮೂತ್ರ ರೋಗದ ತೀವ್ರ ಆಘಾತ, ಅತಿಯಾಗಿ ಶಕ್ತಿಗುಂದಿಸುವ ರೋಗಗಳು, ದೀರ್ಘಕಾಲಿಕ ಆಹಾರಕೊರತೆ ಮತ್ತು ಅನೊರೆಕ್ಸಿಯನರ್ವೊಸ್ ಎಂಬ ರೋಗ.

ಚಿಕ್ಕಂದಿನಿಂದ ಕಂಡುಬಂದಿರುವ ಘಟನೆಗಳನ್ನೆಲ್ಲ ಲಕ್ಷಿಸಿ ವ್ಯಕ್ತಿಮುಟ್ಟಾಗದಿರುವುದಕ್ಕೆ ಮೇಲಿನವುಗಳ ಪೈಕಿ ಯಾವುದು ಕಾರಣ ರೋಗ ಎಂದು ಕಂಡುಹಿಡಿಯಲು ವ್ಯಾಪಕ ಪರೀಕ್ಷಾ ವಿಧಾನಗಳನ್ನು ಕೈಗೊಳ್ಳಬೇಕಾಗುತ್ತದೆ. ಆದರೂ ರೋಗ ಚಿಕಿತ್ಸಾ ಫಲಿತಾಂಶಗಳಲ್ಲಿ ಅತಿ ನಿರುತ್ಸಾಹಕರವಾಗಿರುವುದು ಸಾಮಾನ್ಯ. ಪ್ರತಿಯೊಂದು ಮಾಸಿಕ ಚಕ್ರದ ಅವಧಿಯಲ್ಲೂ ಹಾರ್ಮೋನುಗಳನ್ನು ಕ್ರಮಶಃ ಬಳಸುತ್ತ ಮೂರು ನಾಲ್ಕು ಬಾರಿ ಚಿಕಿತ್ಸಿಸಿ ವ್ಯಕ್ತಿ ತಾನಾಗಿಯೆ ಮುಟ್ಟಾಗುತ್ತಾಳೇನೋ ಎಂದು ನೋಡಬಹುದು. ಸಂಬಂಧಿಸಿದ ಅಂಗಗಳ ವೈಪರೀತ್ಯ ಅಗಾಧವಾಗಿಲ್ಲದಿದ್ದ ಸಂದರ್ಭಗಳಲ್ಲಿ ರೋಗ ಗುಣವಾಗುವ ಸಂಭವವಿದೆ. ಆದರೆ ಚಿಕಿತ್ಸೆಯನ್ನು ಪ್ರಾರಂಭಿಸುವುದಕ್ಕೇ ಬಲುವಿಳಂಬವಾಗಿದ್ದರೆ ಚಿಕಿತ್ಸಾ ಫಲಿತಾಂಶ ಅನುಗುಣವಾಗಿ ನಿರಾಶಾದಾಯಕ ಆಗಿರುತ್ತದೆ. ಮೈನೆರೆಯುವುದೇ ತಡವಾಗಿರುವ ಅಪರೂಪಸಂದರ್ಭಗಳಲ್ಲಿ (ಡಿಲೇಡ್‍ಪ್ಯೂಬರ್ಟಿ) ವಿನಾ ಮೂಲತಃ ಮುಟ್ಟಾಗದೇ ಇರುವ ಸ್ಥಿತಿಗೆ ಸಾಮಾನ್ಯವಾಗಿ ಚಿಕಿತ್ಸೆ ಇಲ್ಲ.

2 ಅತಿರಜಸ್ರಾವ (ಮೆನೊರ್‍ಹೇಜಿಯ): ಪ್ರತಿಯೊಂದುಸಲ ಮುಟ್ಟಾದಾಗಲೂ ಅತಿ ಹೆಚ್ಚಾಗಿ ಋತುಸ್ರಾವವಾಗುವಿಕೆ. ಮಾಮೂಲಾಗಿ 3–4 ದಿನ ಮುಟ್ಟು ಹೋಗುತ್ತಿರುವ ಬದಲು 7–10 ದಿನ ಹೋಗುತ್ತದೆ ಮತ್ತು 200 ಮಿಲೀ ಗಳಿಗಿಂತಲೂ ಹೆಚ್ಚಾಗಿ ಸ್ರಾವವಾಗುವುದಿದೆ. ಇಷ್ಟಾದರೂ ಎರಡು ಮುಟ್ಟುಗಳ ನಡುವಿನ ಅವಧಿಯಲ್ಲಿ ವ್ಯತ್ಯಾಸವಿರುವುದಿಲ್ಲ ಸಾಮಾನ್ಯವಾಗಿ ಇದು ಸ್ವತಃ ಒಂದು ರೋಗ ಆಗಿರದೆ ಪ್ರಜನನಕ್ರಿಯೆಯಲ್ಲಿ ಏನೋ ಏಡವಟ್ಟಾಗಿರುವುದರ ಲಕ್ಷಣವಾಗಿರುವುದೇ ಹೆಚ್ಚು. ಅತಿರಜಸ್ರಾವಕ್ಕೆ ರಕ್ತ ಒತ್ತಡಾಧಿಕ್ಯ ಸಾಮಾನ್ಯ ಕಾರಣವಾಗಿರಬಹುದು ಎನ್ನಿಸಿದರೂ ಹಾಗಿರುವುದು ಅಪರೂಪ. ಬದಲು ಆಶ್ಚರ್ಯ ಎನ್ನಿಸಿದರೂ ಅಲ್ಪಕಣರಕ್ತತೆ (ಅನೀಮಿಯ) ಕಾರಣವಾಗಿರಬಹುದು. ಅಲ್ಪಕಣರಕ್ತಕ್ಕೆ ಅತಿರಜಸ್ರಾವದ ಪರಿಣಾಮವೂ ಆಗಿರಬಹುದು. ಹೀಗಾಗಿ ಈ ಸ್ಥಿತಿ ಕ್ರಮೇಣ ಹೆಚ್ಚು ಹದಗೆಡುವ ವಿಷವರ್ತುಲ ಆಗಬಹುದು. ಅತಿರಜಸ್ರಾವ ಮಾನಸಿಕ ಕಾರಣಗಳಿಂದಲೂ ಉಂಟಾಗಬುಹುದು. ಕೆಲವರಲ್ಲಿ ಮಾನಸಿಕ ಹಾಗೂ ಲೈಂಗಿಕ ವಿವಿಧೋದ್ದೇಶಗಳ ಪೂರೈಕೆಗಾಗಿ ಅನುಕೂಲ ನೆಪ ಆಗಬಹುದಾದ್ದರಿಂದ ಈ ಪರಿಸ್ಥಿತಿ ಉದ್ಭವಿಸಬಹುದು. ಅತಿರಜಸ್ರಾವಕ್ಕೆ ಸ್ಥಳೀಯ ಅವ್ಯವಸ್ಥೆಗಳು ಕಾರಣವಾಗಿರುವುದು ಸಾಮಾನ್ಯ. ಗರ್ಭಕೋಶದ ಉರಿಊತ, ಸ್ಥಾನಪಲ್ಲಟವಾಗಿರುವಿಕೆ, ಗಂತಿಯುಕ್ತವಾಗಿರುವಿಕೆ, ಗರ್ಭವಲ್ಲದೆ ಬೇರೆ ಕಾರಣಗಳಿಂದ ಗರ್ಭಕೋಶ ದೊಡ್ಡದಾಗಿರುವಿಕೆ ಇಂಥ ಸ್ಥಿತಿಗಳಲ್ಲಿ ಅತಿರಜಸ್ರಾವವಾಗುವುದಿದೆ. ಥೈರಾಯ್ಡ್‍ಗ್ರಂಥಿಯ ಅತಿಸ್ರಾವದಿಂದ ನರಳುವ ವ್ಯಕ್ತಿ ಸ್ವಲ್ಪಕಾಲಾನಂತರ ಮುಟ್ಟಾಗದೆ ಹೋಗಬಹುದಾದರೂ ಮೊದಮೊದಲು ಅತಿರಜಸ್ರಾವವಾಗುವುದಿದೆ. ಕೆಲವು ದರ್ಮ ರೋಗಗಳಿಗೂ ಮುಟ್ಟುನಿಲ್ಲುತ್ತಿರುವ ವ್ಯಕ್ತಿಗಳ ಬಾಧೆಗಳಿಗೂ ಚಿಕಿತ್ಸಕಗಳಾಗಿ ಎಸ್ಟ್ರೊಜೆನ್ನುಗಳನ್ನು ಆಧಿಕಪ್ರಮಾಣದಲ್ಲಿ ಕೊಟ್ಟಾಗ ಅಧಿಕಕಾಲಿಕವಾಗಿ ಗರ್ಭಕೋಶದೊಳಗೆ ಪ್ಲಾಸ್ಟಿಕ್‍ವಂಕಿಯನ್ನು (ಲೂಪ್) ಅಳವಡಿಸಿರುವಾಗ

ಅನೇಕರಲ್ಲಿ ಅತಿರಜಸ್ರಾವವಾಗುವುದು ಕಂಡುಬರುತ್ತದೆ. ಕಾರಣಾಂತರಗಳಿಂದ ಎರಡು ಮುಟ್ಟುಗಳ ನಡು ಅವಧಿ ಮೂರು ವಾರಗಳಷ್ಟು ಕಡಿಮೆ ಆದಾಗಲೂ ಅತಿರಜಸ್ರಾವವಾಗುವುದಿದೆ.

ಸಾಮಾನ್ಯವಾಗಿ ಅತಿರಜಸ್ರಾವವಾಗುತ್ತಿರುವ ವ್ಯಕ್ತಿಗಳಲ್ಲಿ ಆ ವೇಳೆ ಬಳಲಿಕೆ ಕಂಡುಬರುವುದು. ಈ ಸ್ಥಿತಿಯನ್ನು ಚಿಕಿತ್ಸಿಸುವುದು ಕಷ್ಟ. ಮೂಲಕಾರಣ ಪತ್ತೆ ಅದರೆ ಅದನ್ನು ಚಿಕಿತ್ಸಿಸಬಹುದು. ಇಲ್ಲದಿದ್ದರೆ ವ್ಯಕ್ತಿಯ ಸಾಮಾನ್ಯ ಆರೋಗ್ಯ ಮತ್ತು ಪೌಷ್ಟಿಕಸ್ಥಿತಿಗಳನ್ನು ಉತ್ತಮಗೊಳಿಸುವುದು ಒಂದು ಮಾರ್ಗ. ಏಕೆಂದರೆ ಚಿಕಿತ್ಸಕಗಳಾಗಿ ಲೈಂಗಿಕ ಹಾರ್ಮೋನುಗಳ ಬಳಕೆ ಅನೇಕ ವೇಳೆ ಅನುಪಯುಕ್ತ.

3 ಮೆಟ್ರೊರ್‍ಹೇಜಿಯ: ಎರಡು ಮುಟ್ಟುಗಳ ನಡುವೆ ಯಾವಾಗಲೊ ಅಷ್ಟಿಷ್ಟು ಮುಟ್ಟು ಹೋಗುತ್ತಿರುವುದು ಈ ರೋಗದ ವೈಶಿಷ್ಟ್ಯ. ಸಾಮಾನ್ಯವಾಗಿ ಗರ್ಭಕೋಶದ ಗಂತಿಸ್ಥಿತಿಗಳಲ್ಲಿ ಹೀಗಾಗುವುದಿದೆ. ಬಿಡುವೆ ಇಲ್ಲದೆ ನಿರಂತರವಾಗಿ ರಜಸ್ರಾವವಾಗುವ ಸಂಭವವೂ ಇದೆ. ಗರ್ಭಪಾತ. ಅನ್ಯಸ್ಥಾನದಲ್ಲಿ ಗರ್ಭ ತಾಳುವಿಕೆ (ಎಕ್ಟಾಪಿಕ್ ಪ್ರೆಗ್ನೆನ್ಸಿ), ಪ್ರಸವಾಂಗಗಳ ಏಡಿಗಂತಿ, ಈ ಪರಿಸ್ಥಿತಿಗಳಲ್ಲಿ ನಿರಂತರವಾಗಿ ರಜಸ್ರಾವವಾಗುವುದಿದೆ. ಮೂಲಕಾರಣವನ್ನು ಚಿಕಿತ್ಸಿಸುವುದರಿಂದ ಈ ದೋಷವನ್ನು ಪರಿಹರಿಸಬಹುದು.

4 ಮುಟ್ಟುನೋವು (ಡಿಸ್‌ಮೆನೋರ್‍ಹಿಯ): ಮುಟ್ಟಿನ ಕಾಲದಲ್ಲಿ ಸೊಂಟಕಿಬ್ಬೊಟ್ಟೆಗಳು ನೋಯುವಿಕೆ. ಈ ಸ್ಥಿತಿಯಲ್ಲಿ ಲೈಂಗಿಕಾಂಗಗಳ ರಚನೆಯಲ್ಲಾಗಲಿ ಹಾರ್ಮೋನುಗಳ ಸ್ರಾವದಲ್ಲಾಗಲಿ ಸಾಮಾನ್ಯವಾಗಿ ಏನು ಏರುಪೇರೂ ಕಾಣಬರುವುದಿಲ್ಲ. ಮುಟ್ಟುನೋವು ಮೂರುಬಗೆಯದ್ದಾಗಿದೆ:

(I) ರಕ್ತದುಂಬಿಕೆ ಕೃತ ಮುಟ್ಟುನೋವು (ಕನ್‌ಜೆಸ್ಟಿವ್ ಡಿಸ್‌ಮೆನೋರ್‍ಹಿಯ), ಸೊಂಟ ಹಾಗೂ ನಡುವಿನಲ್ಲಿ ಮತ್ತು ಕಿಬ್ಬೊಟ್ಟೆಯಲ್ಲಿ ಏನೋ ಒಂದು ಬಗೆ ಹಿಂಸಕಾರಕ ಆದರೂ ಅತಿಯಾಗಿ ಬಾಧಿಸುವ ನೋವಾಗುವುದು ಇದರ ವೈಶಿಷ್ಟ್ಯ. ಮುಟ್ಟಾಗುವುದಕ್ಕೆ ಒಂದೆರಡುದಿನ ಮುಂಚೆಯೆ ಇಂಥ ನೋವು ಕಂಡುಬಂದಿದ್ದರೆ ಮುಟ್ಟಾದ ಕೂಡಲೆ ನೋವೂ ನಿಂತುಹೋಗುತ್ತದೆ. ಮಲಬದ್ಧತೆ ಮತ್ತು ದೊಡ್ಡಕರುಳ ಹಿಂಡಿಕೆ (ಸ್ಪಾಸ್ಮ್) ಅದೇ ಕಾಲದಲ್ಲಿ ಅನೇಕರಲ್ಲಿ ಕಂಡುಬಂದು ನೋವು ತೀವ್ರವಾಗಿರುವುದಕ್ಕೆ ಕಾರಣವಾಗಿರಬಹುದು. ಮಲಬದ್ಧತೆಗೆ ಭೇದಿಔಷಧಿ ತೆಗೆದುಕೊಳ್ಳುವುದು ಯುಕ್ತವಲ್ಲ. ಏಕೆಂದರೆ ಮಲಬದ್ಧತೆ ಮುಟ್ಟುನೋವಿನ ಫಲವೇ ಹೊರತು ಕಾರಣವಲ್ಲ. ಜೊತೆಗೆ ಭೇದಿಮಾಡಿಸುವ ಔಷಧಗಳಿಂದ ಮುಟ್ಟುನೋವು ಹೆಚ್ಚೆ ಆಗಬಹುದು. ಇದರ ಬದಲು ನೋವನ್ನು ಕಡಿಮೆಮಾಡಲು ಬಿಸ್ಕೋಪ್ಯಾನ್ ಮುಂತಾದ ಹಿಂಡಿಕೆಶಾಮಕವನ್ನು (ಅಂಟಿಸ್ಪಾಸ್ಮಾಡಿಕ್ಸ್) ತೆಗೆದುಕೊಳ್ಳುವುದು ಒಳ್ಳೆಯದು.

(ii) ಮುಟ್ಟುಶೂಲೆ (ಸ್ಪಾಸ್ಮಾಡಿಕ್ ಡಿಸ್‌ಮೆನೋರ್‍ಹಿಯ): ಮುಟ್ಟು ನೋವುಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಕಾಣಬರುವ ಸ್ಥಿತಿ. ಮುಖ್ಯವಾಗಿ ಇದು ಹಿಂಡಿದಂತಾಗುದ ಕಿಚ್ಚುನೋವು. ಸೊಂಟನೋವು ಮೈಭಾರ ಆಗುವಿಕೆ ಇವೂ ಇರಬಹುದು. ಮುಟ್ಟಿನ ಮೊದಲನೆಯ ದಿನ ಬಾಧೆ ಅತ್ಯಂತ ತೀವ್ರವಾಗಿದ್ದು ಕ್ರಮೇಣ ಕಡಿಮೆ ಆಗುತ್ತದೆ. ಮುಟ್ಟಾಗುತ್ತಿರುವ ವಯಸ್ಸಿನ ಸುಮಾರು 50% ಸ್ತ್ರೀಯರು ಹಲವು ಬಾರಿಯಾದರೂ ಈ ಶೂಲೆಯನ್ನು ಅನುಭವಿಸಿರುತ್ತಾರೆ. ಆದರೆ ಸು. ಶೇ. 10 ಸ್ತ್ರೀಯರಲ್ಲಿ ಮಾತ್ರ ನೋವು ಬಲು ತೀವ್ರವಾಗಿರುತ್ತದೆ. ಮೈನೆರೆದ ಮೇಲೆ 2–3 ವರ್ಷಗಳು, ಅಲ್ಲಿಂದ ಮುಂದೆ ವ್ಯಕ್ತಿಯ 18–19 ವರ್ಷಗಳ ತನಕ ಮುಟ್ಟುಶೂಲೆ ಬಲುಸಾಮಾನ್ಯ ಆದರೂ ಶೂಲೆ ಅಷ್ಟು ತೀವ್ರವಾಗಿರುವುದಿಲ್ಲ. ಜೊತೆಗೆ ಎಸ್ಟ್ರೊಜೆನ್ನುಗಳಿಂದ ಇದನ್ನು ಸುಲಭವಾಗಿ ಚಿಕಿತ್ಸಿಸಬಹುದಾಗಿದೆ. 19–20ನೆಯ ವಯಸ್ಸಿನವರಲ್ಲಿ ಶೂಲೆಯ ತೀವ್ರತೆ ಸಹನಾತೀತವಾಗಿರುತ್ತದೆ. ಕಿಬ್ಬೊಟ್ಟೆ ಶೂಲೆ ಪ್ರಾರಂಭವಾಗಿ ಸೊಂಟ ಹೊಡೆತ, ಹೊಟ್ಟೆಹಿಂಡಿದಂತಾಗುವುದು, ಇಂಥ ಬಾಧೆಗಳು ಕಂಡುಬಂದು ತಡೆದುಕೊಳ್ಳುವುದೇ ಪ್ರಯಾಸವಾಗಿ ವಮನ ಹಾಗೂ ಅತೀದ ನಿತ್ರಾಣಗಳಿಂದ ವ್ಯಕ್ತಿ ಬಳಲಿಹೋಗುವುದಿದೆ. ಬಹುಮಕ್ಕಳ ತಾಯಿಯರಲ್ಲಿ ಮುಟ್ಟುಶೂಲೆ ಹೆಚ್ಚಾಗಿ ಕಂಡುಬರುವುದಾದರೂ ಅವರಿಗೆ 35 ವರ್ಷಗಳಾದ ಬಳಿಕ ಈ ಸ್ಥಿತಿ ವಿರಳವಾಗುತ್ತದೆ. ಈ ಕಾಲಕ್ಕೆ ಶೂಲೆ ತಾನಾಗಿಯೇ ಏಕೆ ನಿಂತುಹೋಗುತ್ತದೆ ಎನ್ನುವುದಕ್ಕೆ ಕಾರಣ ತಿಳಿಯದು. ಬಂಜೆಯರಲ್ಲಿ ಮುಟ್ಟುಶೂಲೆ ಕಾಣಬರುವುದೆ ಇಲ್ಲವೆನ್ನಬಹುದು. ಅನೇಕರಲ್ಲಿ ಮದುವೆ ಆಗಿ ಲೈಂಗಿಕಜೀವನ ಪ್ರಾರಂಭವಾದಾಗ ಇಲ್ಲವೆ ಒಂದು ಮಗು ಆದಮೇಲೆ ಶೂಲೆ ನಿಂತುಹೋಗುವುದು. ಕೆಲವರಲ್ಲಿ ನಿರಂತರ ರಕ್ತಸ್ರಾವವಾಗುತ್ತದೆ. ಆದ್ದರಿಂದ ಪ್ರೊಜಿಸ್ಟಿರೋನನ್ನು ಕೊಟ್ಟು ರೋಗವನ್ನು ಚಿಕಿತ್ಸಿಸಬಹುದು. ಕಾಲಾಂತರದಲ್ಲಿ ಈ ರೋಗ ತಾನಾಗಿಯೆ ವಾಸಿ ಆಗುವುದರಿಂದ ಚಿಕಿತ್ಸೆಯನ್ನು ಒಂದು ವರ್ಷಕ್ಕು ಮೀರಿ ಮುಂದುವರಿಸಬೇಕಾಗಿಲ್ಲ.

(ಜೆ.ವೈ.ಐ.)

**ಮುಟ್ಟು ನಿಲ್ಲುವಿಕೆ:** ಸ್ತ್ರೀಯ ಸಂತಾನಪ್ರಾಪ್ತಿಕಾಲ ಮುಗಿಯಿತೆಂಬುದಕ್ಕೆ ಬಲು ಸ್ಪಷ್ಟ ಸಂಕೇತವಾಗಿರುವ ಮಾಸಿಕ ರಜಸ್ರಾವದ ಸ್ಥಿರನಿಲುಗಡೆ (ಮೆನೋಪಾಸ್ ಆಥವಾ ಕ್ಲೈಮ್ಯಾಕ್ಟೆರಿಕ್). ಅಂಡಾಶಯದದಲ್ಲಿ ಕ್ಲುಪ್ತವಾಗಿ ಪ್ರತಿ ತಿಂಗಳೂ ಜರಗುವ ಕ್ರಿಯೆಗಳು ದೇಹದ ರಾಸಾಯನಿಕಸ್ಥಿತಿಯಲ್ಲಿ ಬದಲಾವಣೆಗಳನ್ನು ಮಾಡುತ್ತವೆ. ಇಂಥ ಬದಲಾವಣೆಗಳಲ್ಲಿ ಇತರ ಅಂತಃಸ್ರಾವ ಗ್ರಂಥಿಗಳಾದ ತೈರಾಯ್ಡ್ ಮತ್ತು ಪಿಟ್ಯುಟರಿಗಳು ಭಾಗವಹಿಸುತ್ತವೆ. ರಜೋನಿವೃತ್ತಿಯಲ್ಲಿ ಅಂಡಾಶಯದ ಸ್ರಾವ ಸ್ಥಗಿತಗೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ವ್ಯಕ್ತಿಯ ಆರೋಗ್ಯಕ್ಕೆ ಧಕ್ಕೆ ಆಗುವುದೂ ಇದೆ.

ಮುಟ್ಟು ನಿಲ್ಲುವುದಕ್ಕೆ ನಿರ್ದಿಷ್ಟ ಕಾಲವಿಲ್ಲ. ಮುಕ್ಕಾಲುಪಾಲು ಸ್ತ್ರೀಯರಲ್ಲಿ 40–50ನೆ ವರ್ಷದಲ್ಲಿ ಮುಟ್ಟು ನಿಲ್ಲುತ್ತದೆ. ಮುಟ್ಟು ನಿಲ್ಲುವ ವಿಧಾನ ಕೂಡ ಒಬ್ಬೊಬ್ಬರಲ್ಲಿ ಒಂದೊಂದು ರೀತಿ. ಕೆಲವರಲ್ಲಿ ಒಮ್ಮಿಂದೊಮ್ಮೆಗೆ ನಿಂತು ಹೋಗಬಹುದು. ಕ್ರಮೇಣ ಕಡಿಮೆಯಾಗಿ ಒಂದೆರಡು ವರ್ಷಗಳಲ್ಲಿ ನಿಂತುಹೋಗಬಹುದು. ಇನ್ನೂ ಕೆಲವರಲ್ಲಿ ಅವ್ಯವಸ್ಥಿತವಾಗಿ ಒಂದೊಂದು ಸಲ ಅತಿಸ್ರಾವವಾಗಬಹುದು.

ಸಾಧಾರಣವಾಗಿ ಈ ಸಮಯಗಳಲ್ಲಿ ದೇಹದೊಳಗೆ ಆಗುವ ಮಾರ್ಪಾಡುಗಳಿಂದ ಹೆಂಗಸಿನ ದೈಹಿಕ ಅಥವಾ ಮಾನಸಿಕಸ್ಥಿತಿಗೆ ಯಾವ ತೊಂದರೆಯೂ ಉಂಟಾಗುವುದಿಲ್ಲ. ಏನಾದರೂ ಆದರೆ ಅವು ಬಹಳ ಅಲ್ಪಪ್ರಮಾಣದ್ದಾಗಿರುತ್ತವೆ. ಈ ಸಣ್ಣ ತೊಂದರೆಗಳೆ ಅತಿಯಾಗಿ ತೋರಿ ಅವುಗಳಿಗೆ ಔಷಧಿ ಕೊಡಬೇಕಾಗಬಹುದು. ಮಾನಸಿಕ ತೊಂದರೆಗಳಲ್ಲಿ ಸಾಮಾನ್ಯವಾಗಿ ಮನಸ್ಸು ಕುಗ್ಗುವುದು, ಬಲ ಕಡಿಮೆಯಾಗುವುದು, ನಿದ್ದೆ ಇಲ್ಲದಿರುವುದು, ನರಗಳ ನೋವು ಮತ್ತು ತಲೆಸಿಡಿತ ಮುಂತಾದವು ಬರಬಹುದಾದ ತೊಂದರೆಗಳು. ಇಂಥ ಸಮಯದಲ್ಲಿ ಮಕ್ಕಳಿಲ್ಲದ ಹೆಣ್ಣಿಗೆ ತಾನು ಬಸುರಿಯೆಂಬ ಸುಳ್ಳು ನಂಬಿಕೆ ಬಂದು, ಹೊಟ್ಟೆ ದೊಡ್ಡದಾಗಿ ಹುಸಿ ಹೆರಿಗೆ ನೋವು ಕೂಡ ಬರಬಹುದು. ಮಾನಸಿಕದೌರ್ಬಲ್ಯಕ್ಕೆ ಒಳಗಾದವರಿಗೆ ಮತ್ತು ಅವರ ವಂಶದಲ್ಲಿ ಮಾನಸಿಕದೌರ್ಬಲ್ಯ ಉಂಟಾದವರಿದ್ದರೆ ಅಂಥವರಿಗೆ ಇಂಥ ಸವಯದಲ್ಲಿ ಮನೋರೋಗ, ಖಿನ್ನತೆ ಬರುವ ಸಂಭವಗಳು ಹೆಚ್ಚಾಗುತ್ತವೆ. ಹೆಂಗಸರಿಗೆ ಸಾಧಾರಣವಾಗಿ ಮುಟ್ಟು ನಿಲ್ಲುವ ಕಾಲದಲ್ಲಿ ಮುಖ ಮತ್ತು ಕುತ್ತಿಗೆ ಬೆಚ್ಚಗಾಗಿ ಕೆಂಪಾಗುತ್ತದೆ. ಅತಿಯಾಗಿ ಬೆವರು ಬರುತ್ತದೆ. ಇವು ಕೆಲವೇ ಕ್ಷಣಗಳಿರಬಹುದು ಅಥವಾ ಕೆಲವು ನಿಮಿಷಗಳು ಕೂಡ ಇರಬಹುದು. ಮುಟ್ಟು ನಿಂತಮೇಲೆ ಕೆಲವು ಹೆಂಗಸರು ಸ್ಥೂಲಕಾಯರಾಗುತ್ತಾರೆ.

ಅಂಡಾಶಯಗಳ ಕಾಯಿಲೆಯಿಂದಾಗಲಿ ಇನ್ನಿತರ ನಿರ್ನಾಳಗ್ರಂಥಿಗಳ ಕಾಯಿಲೆಯಿಂದಾಗಲಿ ನಿರ್ದಿಷ್ಟ ಕಾಲಕ್ಕೆ ಮೊದಲೆ ಮುಟ್ಟು ನಿಂತುಹೋಗಬಹುದು. ಕೆಲವೊಮ್ಮೆ ಅತಿಯಾದ ದೈಹಿಕಕಾಯಿಲೆಗಳಿಂದಲೂ ತೀವ್ರವಾದ ಭಾವನಾತ್ಮಕ ಹಾಗೂ ಮಾನಸಿಕ ತೊಂದರೆಯಿಂದಲೂ 40ವರ್ಷಗಳಿಗೂ ಮೊದಲೆ ಮುಟ್ಟು ನಿಂತುಹೋಗಬಹುದು. ಅಂಡಾಶಯಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದು ಅಥವಾ ಎಕ್ಸ್‌ಕಿರಣಗಳಿಂದ ಅವುಗಳ ಕೆಲಸವನ್ನು ನಿಲ್ಲಿಸಿ, ನಿರ್ದಿಷ್ಟ ಕಾಲಕ್ಕೆ ಮೊದಲೆ ಮುಟ್ಟು ನಿಲ್ಲಿಸಬಹುದು. ಆದರೆ ಇಂಥ ವ್ಯಕ್ತಿಗಳಿಗೆ ಮಾನಸಿಕ ಮತ್ತು ನರಸಂಬಂಧಿ ತೊಂದರೆಗಳು ಬಲುಬೇಗನೆ ಬರುತ್ತವೆ.

ಮುಟ್ಟು ನಿಲ್ಲುವುದನ್ನು ವೈದ್ಯಕೀಯ ದೃಷ್ಟಿಯಂದ ನೋಡಿದರೆ ಮುಖ್ಯವಾಗಿ ಹೆಂಗಸಿನ ಬಾಳಿನಲ್ಲಿ ಮಕ್ಕಳನ್ನು ಹಡೆಯುವ ಕಾಲ ಮುಗಿಯುತ್ತ ಬಂದಂತೆ. ಆಗ ಗರ್ಭಕೋಶದ ಗಡ್ಡೆಗಳು ಮತ್ತು ಅಂಡಾಶಯದ ಗಡ್ಡೆಗಳು ಬರುವ ಸಂಭವ ಹೆಚ್ಚುತ್ತ ಹೋಗುತ್ತದೆ. ಅವ್ಯವಸ್ಥಿತವಾಗಿ ರಕ್ತಸ್ರಾವವಾಗುವುದೆ ಗರ್ಭಕೋಶದ ಏಡಿಗಂತಿ ರೋಗದ ಮೊದಲನೆಯ ಕುರುಹು. ಅತಿಸ್ರಾವವಾಗುವುದು ಗರ್ಭಕೋಶದ ಗಡ್ಡೆಗೆ ಕುರುಹು. ಇವೆರಡೂ ಮುಟ್ಟು ನಿಲ್ಲುವ ಕಾಲಕ್ಕೆ ಬರಬಹುದು. ಆದ್ದರಿಂದ ಹೆಂಗಸು ಇವಕ್ಕೆ ಹೆಚ್ಚು ಗಮನ ಕೊಡದೆ ಇರಬಹುದು ಮತ್ತು ರೋಗಗಳ ಮೊದಲನ್ನು ಅಸಡ್ಡೆ ಮಾಡಬಹುದು. ಹೊಟ್ಟೆ ದಪ್ಪವಾಗಿರುವುದನ್ನು ನಿರ್ಲಕ್ಷಿಸಿ ಅದನ್ನು ಮುಟ್ಟುನಿಂತಮೇಲೆ ಸಾಮಾನ್ಯವಾಗಿ ಬರುವ ಬೊಜ್ಜು ಎಂದು ಭಾವಿಸಬಹುದು. ಇಂಥ ಸಂದರ್ಭಗಳಲ್ಲಿ ಯೋಗ್ಯ ವೈದ್ಯಕೀಯಸಲಹೆ ಪಡೆಯುವುದು ಅಪೇಕ್ಷಣೀಯ. (ಜೆ.ವೈ.ಐ.)

ಈ ಸಂದರ್ಭದಲ್ಲಿ ಮೂಳೆಗಳ ಸವೆತ ಆರಂಭವಾಗುತ್ತದೆ. ಬೆನ್ನುಮೂಳೆ, ಸೊಂಟದ ಮೂಳೆ, ಹಾಗು ತೊಡೆಯ ಮೂಳೆಗಳು ಅತಿಯಾಗಿ ತೆಳುವಾಗಿ ಬಿಡುತ್ತವೆ (ಆಸ್ಟಿಯೋಪೋರೋಸಿಸ್). ಸಣ್ಣ ಏಟು, ಏಳುವುದು, ಕೂಡುವುದು, ಇಂತಹ ನಿತ್ಯದ ಕೆಲಸಗಳಿಗೆ ಮೂಳೆ ಸುಲಭವಾಗಿ ಮುರಿಯುತ್ತದೆ. ಇದಕ್ಕಾಗಿ ತೀವ್ರ ಮುನ್ನೆಚ್ಚರಿಕೆ ವಹಿಸಬೇಕು. ನಿಯಮಿತ ಆಹಾರ, ವ್ಯಾಯಾಮ, ಯೋಗ, ಮಾನಸಿಕ ನೆಮ್ಮದಿಗಾಗಿ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಪ್ರಯೋಜನಕಾರಿ.

***

**ಮುತ್ತಿನ ಮೀನು:** ಕರಾಪಿಡೆ (ಫಿಯರ್ಸ್‌ಫಿರಿಡೆ) ಕುಟುಂಬಕ್ಕೆ ಸೇರಿದ ಕಡಲಮೀನು (ಪರ್ಲ್ ಫಿಶ್). ಹೆಚ್ಚಾಗಿ ಬೆಚ್ಚಗಿನ ಸಾಗರಗಳಲ್ಲಿ ಕಂಡುಬಂದರೂ ಅಟ್ಲಾಂಟಿಕ್ ಸಾಗರದಲ್ಲಿ ಕೂಡ ಅಲ್ಲಲ್ಲಿ ಕಂಡುಬರುತ್ತದೆ. ಕರಾಪಸ್ ಎಕ್ಯುಸ್, ಕರಾಪಸ್ ಹೋಮಿ ಇತ್ಯಾದಿ ಅನೇಕ ಪ್ರಭೇದಗಳು ಇದ್ದು ಸುಮಾರು 20 ಸೆಂಮೀ ಉದ್ದಕ್ಕೆ ಬೆಳೆಯುತ್ತವೆ. ಎಲ್ಲವೂ ಉದ್ದನೆಯ ನಾಜೂಕಾದ ದೇಹವುಳ್ಳವು. ಹುರುಪೆ, ವರ್ಣಕಗಳಾಗಲೀ ಭುಜದ ರೆಕ್ಕೆಗಳಾಗಲೀ ಇಲ್ಲ. ಗುದದ್ವಾರ ಗಂಟಲ ಭಾಗದಲ್ಲಿದೆ. ಒಂಟಿ ಈಜುರೆಕ್ಕೆಗಳು ಹಿಂಬದಿಯಲ್ಲಿ ಒಂದುಗೂಡಿ ಮೊನಚಾದ ತುದಿಯಲ್ಲಿ ಕೊನೆಗೊಳ್ಳುತ್ತವೆ. ಈ ಮೀನುಗಳು ಸಮುದ್ರಸೌತೆ ಪ್ರಾಣಿಯ ದೇಹದೊಳಗೆ ಪರತಂತ್ರಜೀವಿಯಾಗಿ ಜೀವಿಸುತ್ತವೆ. ಹಾಗಾಗಿ ಸೌತೆ ಮೀನು ಎಂದೂ ಕರೆಯುವುದುಂಟು. ಎಳೆಯ ಮೀನು ತನ್ನ ತಲೆಯನ್ನೂ ಬೆಳೆದ ಮೀನು ತನ್ನ ಬಾಲವನ್ನೂ ಮೊದಲು ಸಮುದ್ರಸೌತೆಯ ವಿಸರ್ಜನದ್ವಾರದ ಮೂಲಕ ತುರುಕಿಸಿ ಆತಿಥೇಯದ ದೇಹದೊಳಗೆ ನುಸುಳಿಕೊಳ್ಳುತ್ತದೆ. ಆತಿಥೇಯ ಪ್ರಾಣಿಯ ಉಸಿರಾಟದ ಅಂಗದ ಭಿತ್ತಿಯನ್ನು ಕೊರೆದು ದೇಹಾಂತರಾವಕಾಶವನ್ನು ಸೇರುತ್ತದೆ. ಇಲ್ಲಿ ಆತಿಥೇಯದ ದೇಹದ ಉಸಿರಾಟದ ಅಂಗ, ಪ್ರಜನನಾಂಗ ಇತ್ಯಾದಿ ಅಂಗಾಂಶಗಳನ್ನು ತಿಂದು ಬದುಕುತ್ತದೆ. ಆತಿಥೇಯಪ್ರಾಣಿಗೆ ಅತ್ಯಧಿಕ ಪುನರುತ್ಪಾದನಾ ಸಾಮರ್ಥ್ಯವಿರುವುದರಿಂದ ಪರತಂತ್ರಜೀವಿ ತಿಂದರೂ ಅದು ತನ್ನ ಅಂಗಾಂಶಗಳನ್ನು ಉತ್ಪಾದಿಸಿಕೊಳ್ಳುತ್ತದೆ. ಕೆಲವು ಪ್ರಭೇದಗಳು ಆಹಾರಕ್ಕಾಗಿಯೋ ಪುನರುತ್ಪಾದನೆಗಾಗಿಯೋ ಆತಿಥೇಯಪ್ರಾಣಿಯ ದೇಹದಿಂದ ಹೊರಬರುತ್ತವೆ. ಕೆಲವು ಮಾತ್ರ ಮತ್ತೆ ಅದೇ ಆತಿಥೇಯವನ್ನು ಪ್ರವೇಶಿಸಿದರೂ ಇನ್ನು ಕೆಲವು ಪ್ರಭೇದಗಳು ಬೇರೆ ಯಾವುದಾದರೂ ಚಿಪ್ಪು ಅಥವಾ ಸಮುದ್ರಸೌತೆಯನ್ನು ಪ್ರವೇಶಿಸುತ್ತವೆ. ಮುತ್ತಿನ ಮೀನಿನ ಲಾರ್ವ ಪ್ರೌಢಮೀನಿಗಿಂತ ಭಿನ್ನವಾಗಿದ್ದು ನೀರಿಲ್ಲಿ ತೇಲಾಡುತ್ತಿರುತ್ತದೆ. ಲಾರ್ವದ ತಲೆಯಲ್ಲಿ ಉದ್ದವಾದ ನೂಲಿನಾಕಾರದ ರಚನೆಯುಂಟು. (ಎಂ.ಎ.ಡಿ.ಎಚ್.)

**ಮುತ್ತು:** ಮೃದ್ವಂಗಿಗಳ (ಮಾಲಸ್ಕ) ಗುಂಪಿಗೆ ಸೇರಿದ, ಮುತ್ತಿನ ಸಿಂಪಿ (ಪರ್ಲ್ ಆಯ್‌ಸ್ಟರ್) ಪ್ರಾಣಿಗಳ ಉತ್ಪನ್ನ. ಈ ಪ್ರಾಣಿಗಳು ಆಶ್ರಯ ಪಡೆಯಲು ತಮ್ಮ ದೇಹದ ಮೇಲ್ಭಾಗ ಅಥವಾ ಒಳಭಾಗವನ್ನು ಬಂದು ಸೇರುವ ಪರಾವಲಂಬಿ ವಸ್ತುವಿನ ಸುತ್ತ ಶರೀರದಲ್ಲಿ ಉತ್ಪತ್ತಿಯಾಗುವ ಧೃತಿಯನ್ನು (ನೇಕರ್) ತೆಳುಪದರು ಪದರುಗಳಾಗಿ ಲೇಪನಗೈಯ್ಯುವುದರಿಂದ ಉಂಟಾಗುವ ದುಂಡನೆಯ ನಸುಬಿಳಿಬಣ್ಣದ, ಮುದ್ದೆಗೊಂಡಿರುವ, ಹೊಳಪುಳ್ಳ ನೈಸರ್ಗಿಕ ಜೈವಿಕೋತ್ಪನ್ನ (ಪರ್ಲ್). ಬೆಲೆ ಬಾಳುವ ನವರತ್ನಗಳ ಪೈಕಿ ಇದು ಒಂದು. ಭಾರತದಲ್ಲಿ ವೇದಗಳ ಕಾಲದಿಂದಲೂ ಖ್ಯಾತಿದೀಪ್ತಿಯನ್ನು ಬೆಳಗಿ ಬಂದಿರುವ ಮುತ್ತುಗಳಿಗೆ ಪ್ರಪಂಚಾದ್ಯಂತ ಹೆಚ್ಚಿನ ಬೇಡಿಕೆ ಹಾಗೂ ಬೆಲೆ ಇದೆ. ಆದಿಮಾನವ ತನ್ನ ಜೀವನೋಪಾಯಕ್ಕಾಗಿ ನೀರಿನಲ್ಲಿ ದೊರಕುತ್ತಿದ್ದ ಚಿಪ್ಪು ಪ್ರಾಣಿಗಳನ್ನು ಸಂಗ್ರಹಿಸಿ ಅವನ್ನು ತಿನ್ನಲು ಯತ್ನಿಸಿದಾಗ ಅವುಗಳ ದೇಹದೊಳಗೆ ಕಾಂತಿಯಿಂದ ಹೊಳೆಯುತ್ತಿದ್ದ ಮುತ್ತುಗಳನ್ನು ಕಂಡ. ಹೀಗಾಗಿ ಮುತ್ತುಗಳ ಮೆರುಗಿಗೆ, ಕಾಂತಿಗೆ ಜನ ಆಕರ್ಷಿತರಾಗಿದ್ದಾರೆ.




**ಮುತ್ತು ಉತ್ಪಾದಿಸುವ ಮೈಟಿಲಸ್**

ಮುತ್ತಿನಲ್ಲಿರುವ ರಾಸಾಯನಿಕವಸ್ತುಗಳ ಪೈಕಿ ಮುಖ್ಯವಾದುದು ಕ್ಯಾಲ್ಸಿಯಮ್ ಕಾರ್ಬೊನೇಟ್ (ಶೇ. 92) ಜೈವಿಕವಸ್ತು (ಶೇ. 6) ಮತ್ತು ನೀರಿನಾಂಶ ( ಶೇ. 2) ಗಳಿವೆ. ಕ್ಯಾಲ್ಸಿಯಮ್ ಕಾರ್ಬೊನೇಟ್ ಎಂಬುದು ಆರ್ಥೊರಾಂಬಿಕ್ ಸ್ಫಟಿಕಾಕೃತಿಯಲ್ಲಿ ರೂಪುಗೊಳ್ಳುವ ಅರಗೋನೈಟ್ ಖನಿಜ. ಕೆಲವು ವೇಳೆ ಅರಗೋನೈಟ್‌ಗೆ ಬದಲು ಕ್ಯಾಲ್ಸೈಟ್ ಖನಿಜ ಸ್ಫಟಿಕೀಕರಣಗೊಂಡಿರುತ್ತದೆ. ಇವೆರಡು ಖನಿಜಗಳು ಬೆಳ್ಳಿಯಂತೆ ಹೊಳಪುಳ್ಳವು. ಮುತ್ತನ್ನು ಸೂಜಿ, ನಾಣ್ಯ ಅಥವಾ ಚಾಕುವಿನಿಂದ ಗೀರಿದರೆ ಇದರ ಮೇಲೆ ಗೆರೆಬೀಳುತ್ತದೆ. ಸಾಪೇಕ್ಷಸಾಂದ್ರತೆ 1.91 ರಿಂದ 2.76. ಯಾವುದೇ ಆಮ್ಲ ಮುತ್ತಿಗೆ ಸೋಕದಂತೆ ಎಚ್ಚರವಹಿಸಬೇಕು. ಸೋಕಿದರೆ ಕರಗಿ ಹೋಗುತ್ತದೆ. ಆಮ್ಲದ ಅನಿಲಗಳು ತಾಗಿದರೂ ಕೂಡ ಮುತ್ತು ತನ್ನ ಹೊಳಪನ್ನು ಕಳೆದುಕೊಳ್ಳುತ್ತದೆ. ಮುತ್ತನ್ನು ಸುಟ್ಟರೆ ಭಸ್ಮವಾಗಿ ಸುಣ್ಣದ ಪುಡಿ ಬರುತ್ತದೆ. ಶ್ರೀಮಂತರು ಮುತ್ತಿನ ಭಸ್ಮಕ್ಕೆ ನೀರು ಸೇರಿಸಿ ಸುಣ್ಣದಂತೆ ಮಾಡಿಕೊಂಡು ಎಲೆ ಅಡಕೆಯೊಂದಿಗೆ ಹಾಕಿಕೊಳ್ಳುವ ರೂಢಿ ಇದೆ. ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ ಮುತ್ತಿನ ಭಸ್ಮವನ್ನು ಬಳಸುವರು.

ಮುತ್ತು ಸಾಮಾನ್ಯವಾಗಿ ಬೆಳ್ಳಿಯಂತೆ ಬಿಳಿಯ ಬಣ್ಣದ, ಹೊಳಪುಳ್ಳದ್ದು. ಕೆಲವು ವೇಳೆ ನಸುಹಳದಿ, ಬೂದು, ನೀಲಿ, ಹಳದಿ, ನೇರಳೆ, ಹಸುರು, ಧೂಮ್ರವರ್ಣ ಮುಂತಾದ ಬಣ್ಣಗಳನ್ನು ಹೊಂದಿರುವುದು. ಗುಲಾಬಿ ಛಾಯೆಯಿಂದ ಕೂಡಿರುವ, ಭಾರತದ ಮುತ್ತಿಗೆ ಪ್ರಪಂಚದಲ್ಲಿ ಹೆಚ್ಚಿನ ಬೇಡಿಕೆ ಮತ್ತು ಬೆಲೆ ಇದೆ. ಕೆಲವೊಮ್ಮೆ ವಿವಿಧ ಬಣ್ಣಗಳ ಸೂಕ್ಷ್ಮಹೊಳಪು ಮುತ್ತಿನ ಹೊರ ಪದರದ ಮೇಲೆ ಕಂಡುಬರುತ್ತದೆ. ಗಾತ್ರದಲ್ಲಿ ಮುತ್ತುಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿವೆ. ಅತಿ ಕಡಿಮೆ ತೂಕವುಳ್ಳ ಮುತ್ತು ಒಂದು ಕಣದ (ಗ್ರೇನ್) ತೂಕದ ¼ ಭಾಗಕ್ಕಿಂತ ಕೊಂಚ ಕಡಿಮೆ ತೂಕದ್ದು. ಇಂಥ ಮುತ್ತುಗಳು ಒಂದು ಔನ್ಸಿಗೆ ಸು. 9,000 ಸಮವಾಗುತ್ತವೆ. ಇವಕ್ಕೆ ಬೀಜ ಮುತ್ತುಗಳು (ಸೀಡ್ ಪರ್ಲ್ಸ್) ಎಂದು ಹೆಸರು. 1987 ರವರೆಗೆ ದೊರೆತಿರುವ ಅತಿ ದೊಡ್ಡ ಮುತ್ತಿನ ತೂಕ 1860 ಗ್ರಾಂ. ಇದು ಅಸಮರೂಪದ ವಿಕೃತ ಮುತ್ತು. ಗುಣಗಳಲ್ಲಿ ಎಲ್ಲ ಮುತ್ತುಗಳು ಒಂದೇ ತೆರನಾಗಿ ಹಾಗು ಒಂದೇ ಸಮನಾಗಿ ಇರುವುದಿಲ್ಲ. ಆಸ್ಟ್ರಿಯ ಎಡ್ಯುಲಿಸ್ ಮೃದ್ವಂಗಿಯಲ್ಲಿ ಉತ್ಪತ್ತಿಯಾದ ಮುತ್ತು ಬಲು ಹೊಳಪಿನಿಂದ ಕೂಡಿ ಎರಡು ಪದರಗಳನ್ನು ಒಳಗೊಂಡಿರುತ್ತದೆ. ಮೂರು ಪದರುಗಳನ್ನು ಒಳಗೊಂಡಿರುವ ಮುತ್ತುಗಳು ತಮ್ಮ ಚಿಪ್ಪಿನ ಮೇಲೆ ಹೊಳಪಿನ ಪೊರೆಯನ್ನು ಹೊಂದಿರುತ್ತವೆ. ರತ್ನ ವ್ಯಾಪಾರಿಗಳು ಇಂಥ ಮುತ್ತುಗಳನ್ನು ಅತಿಶಯವಾಗಿ ಬಯಸುತ್ತಾರೆ. ಎಷ್ಟೋ ವೇಳೆ 2 ಅಥವಾ ಇನ್ನೂ ಹೆಚ್ಚು ಮುತ್ತುಗಳು ಒಂದಕ್ಕೊಂದು ಕೂಡಿಕೊಂಡು ಜೋಡಿ ಅಥವಾ ಸಂಯುಕ್ತ ಮುತ್ತುಗಳಾಗುತ್ತವೆ.




**ಮುತ್ತು ಉತ್ಪಾದನೆಯಾಗುವ ಹಂತಗಳು**

**A ಮೊದಲ ಹಂತ**

**B ಮುಂದುವರೆದ ಹಂತ**

**C ಅಂತಿಮ ಹಂತ**

ಮುತ್ತುಗಳ ಉತ್ಪತ್ತಿ: ನೀರಿನ ಮಡುವುಗಳಲ್ಲಿ ಮೃದ್ವಂಗಿ ತನ್ನ ಶರೀರದಲ್ಲಿ ಉತ್ಪತ್ತಿಯಾಗುವ ಧೃತಿಯೊಂದರಿಂದ ಆತ್ಮರಕ್ಷಣೆಗಾಗಿ ಚಿಪ್ಪನ್ನು ಉತ್ಪತ್ತಿಮಾಡಿ ಗೂಡು

ಕಟ್ಟಿಕೊಂಡು ಜೀವಿಸುತ್ತಿರುತ್ತದೆ. ಮನುಷ್ಯನಿಗೆ ಹೇನು ಮತ್ತು ಕೂರೆಗಳು ಕಾಟಕೊಡುವ ರೀತಿಯಲ್ಲಿ ಮೃದ್ವಂಗಿಯ ದೇಹದೊಳಕ್ಕೆ ಸಣ್ಣ ಪ್ರಾಣಿಯೊಂದು ನುಸುಳಿ ಬಾಧೆಯನ್ನು ಕೊಡಲು ಪ್ರಾರಂಭಿಸುತ್ತದೆ. ಆ ಪ್ರಾಣಿಯ ಕಾಟವನ್ನು ನಿವಾರಿಸಿಕೊಳ್ಳಲು ಮೃದ್ವಂಗಿ ತನ್ನ ಶರೀರದಲ್ಲಿ ಉತ್ಪತ್ತಿಯಾಗುವ ಧೃತಿಯನ್ನು ಪರಾವಲಂಬಿಯ ಸುತ್ತ ಪದರು ಪದರುಗಳಾಗಿ ಲೇಪನ ಮಾಡುತ್ತ, ಕೊನೆಗೆ ಆ ಪ್ರಾಣಿಯ ಗೋರಿಯನ್ನೇ ನಿರ್ಮಿಸುತ್ತದೆ. ಹೀಗೆ ಧೃತಿಯ ಲೇಪನ ಪದರು ಪದರುಗಳಾಗಿ ಬೆಳೆದು ಕ್ರಮೇಣ ಒಂದು ಸೊಗಸಾದ, ಮುದ್ದೆಗೊಂಡ ಮುತ್ತಾಗುತ್ತದೆ. ಶರೀರವನ್ನು ಒಳಹೊಕ್ಕ ಪದಾರ್ಥ ಜೈವಿಕ ಪರಾವಲಂಬಿಯೇ ಆಗಲಿ ಮರಳು ಕಣ ಅಥವ ಮಣ್ಣಿನ ಕಣದಂತಹ ನಿರ್ಜೀವ ವಸ್ತು ಆಗಲಿ, ಮೃದ್ವಂಗಿ ಅದರ ಸುತ್ತಲು ಮುತ್ತಿನ ಚಿಪ್ಪಿನ ಪದಾರ್ಥದಿಂದ ಸುತ್ತುಗಟ್ಟುತ್ತ ಕಾಂತಿಯುಕ್ತ ಮುತ್ತಿಗೆ ಎಡೆಮಾಡಿಕೊಡುತ್ತದೆ.

ಮೃದ್ವಂಗಿಗಳು ಉತ್ಪಾದಿಸಿದ ಮುತ್ತುಗಳು ಮಾತ್ರ ವರ್ಣಸ್ಫುರಣ ಮತ್ತು ಪಾರದರ್ಶಕ ಗುಣಗಳಿಂದ ಕೂಡಿರುತ್ತದೆ. ಇವನ್ನು ಆಭರಣಗಳಲ್ಲಿ ಅಳವಡಿಸುವರು. ಕೆಲವು ಸ್ತನಿಗಳು ಮತ್ತು ಕೀಟಗಳು ತಮ್ಮ ಹೊರಕವಚದಲ್ಲಿ ಮುತ್ತನ್ನು ಯಥಾರೀತಿ ಹೋಲುವ ಪದಾರ್ಥಗಳನ್ನು ಉತ್ಪಾದಿಸುತ್ತವೆ. ಇಂಥ ಮುತ್ತುಗಳು ನಸುಗೆಂಪು ಮತ್ತು ಪಿಂಗಾಣಿ ಬಿಳಿ ಬಣ್ಣದಿಂದ ಕೂಡಿದ್ದು, ಹೆಚ್ಚಿನ ಹೊಳಪನ್ನು ಹೊಂದಿರುವುದಿಲ್ಲ. ಕಡಿಮೆ ಬೆಲೆಯುಳ್ಳ ಇಂಥ ಮುತ್ತುಗಳಿಗೆ ಬೆಡಗು ಮುತ್ತುಗಳು (ಫ್ಯಾನ್ಸಿ ಪರ್ಲ್ಸ್) ಎಂದು ಹೆಸರು. ಪ್ರಶಸ್ತ ಮುತ್ತುಗಳ ಬೆಲೆ 1928 ಮತ್ತು 1929ರಲ್ಲಿ ಅತ್ಯಧಿಕವಾಗಿ ಏರಿ ನವರತ್ನಗಳ ಬೆಲೆಯ ಸರಿ ಸುಮಾರಿಗೆ ನಿಲುಕಿತ್ತು. ಅತ್ಯಂತ ಹೆಚ್ಚು ಬೆಲೆಬಾಳುವ ಮುತ್ತುಗಳನ್ನು ಮೆಲಿಯಾಗ್ರಿನ ವರ್ಗಕ್ಕೆ ಸೇರಿದ ಮೃದ್ವಂಗಿಗಳು ಉತ್ಪಾದಿಸುತ್ತವೆ.

ಮುತ್ತನ್ನು ಉತ್ಪಾದಿಸುವ ಜೀವಕಣಗಳು ಮೃದ್ವಂಗಿಯ ಕರುಳು ಮತ್ತು ನವಜೀವಕಣಗಳಿಂದ ಆದ ಚರ್ಮದ ಹೊರಮಡಿಕೆಗಳಲ್ಲಿ ಇರುತ್ತವೆ. ಪರಾವಲಂಬಿ ಅಥವಾ ಪರವಸ್ತು ಮೃದ್ವಂಗಿಯ ದೇಹದಲ್ಲಿ ಕರುಳಿನವರೆಗೆ ಒಳಹೊಕ್ಕಾಗ ಅದರ ಸುತ್ತಲು ಮೊದಲು ಚೀಲದಂಥ ತೆಳುಪೊರೆಯ ನಿರ್ಮಾಣವಾಗಿ ಮುತ್ತಿನ ಬೆಳೆವಣಿಗೆ ಆ ಚೀಲದೊಳಗೆ ಮುಂದುವರಿಯುತ್ತದೆ. ಇದಕ್ಕೆ ಮುತ್ತಿನ ಚೀಲ ಎಂದು ಹೆಸರು. ಈ ಬೆಳೆವಣಿಗೆ ಮುತ್ತಿನ ಚೀಲದ ಕುತ್ತಿಗೆ ಭಾಗವನ್ನು ಆಕ್ರಮಿಸಿಕೊಳ್ಳುವ ತನಕ ನಡೆಯುತ್ತದೆ. ಹೀಗೆ ಬೆಳೆದ ಮುತ್ತುಗಳು ಏಕ ಕೇಂದ್ರಕ ಬಿಂದುವಿನೊಡಗೂಡಿ ದುಂಡಾಗಿ ಅಥವಾ ಅಂಡಾಕಾರ, ಕಿತ್ತಳೆ ಹಣ್ಣು ಅಥವಾ ನಿಂಬೆಹಣ್ಣಿನಾಕಾರವಾಗಿ ಇರುತ್ತವೆ. ಇವು ಸುಂದರವಾದ, ಅಧಿಕ ಕಾಂತಿಯುಳ್ಳ, ಧೃತಿಲೇಪನವನ್ನು ಹೊಂದಿರುವ ಪ್ರಶಸ್ತ ಮುತ್ತುಗಳೆನಿಸುತ್ತವೆ. ಮೃದ್ವಂಗಿಯ ಕರುಳು ಭಾಗದಲ್ಲಲ್ಲದೆ ಅದರ ದೇಹದ ಚಿಪ್ಪು ಮುಂತಾದ ಭಾಗಗಳ ಮೇಲೆ ಪರಾವಲಂಬಿ ನೆಲೆಸಿದರೆ, ಮುತ್ತಿನ ಲೇಪನಗಳಿಂದ ಉಂಟಾದ ಮುತ್ತುಗಳ ಕೆಳಭಾಗ ಚಪ್ಪಟೆಯಾಗಿ ಮತ್ತು ಮಿಕ್ಕಭಾಗ ಮಂಡಾಗಿ ಇರುತ್ತದೆ. ಇಂಥವಕ್ಕೆ ಬೊಬ್ಬೆಯಾಕಾರದ ಮುತ್ತುಗಳು (ಬ್ಲಿಸ್ಟರ್ ಪರ್ಲ್ಸ್) ಎಂದು ಹೆಸರು. ವರ್ಣಸ್ಫುರಿತ ಧೃತಿಲೇಪನ ಹೊಂದಿ, ಅತಿ ಬೆಲೆಬಾಳುವ ಮುತ್ತುಗಳು ಪಿಂಕ್‌ಟಡ ವರ್ಗದ ಸಮುದ್ರ ಜೀವಿ ಮೃದ್ವಂಗಿಗಳಿಂದ ಉತ್ಪತ್ತಿ ಆಗುತ್ತವೆ. ಇಂಥ ಹೊಳಪುಳ್ಳ ಮುತ್ತುಗಳನ್ನು ನದಿ ಮಡುವುಗಳಲ್ಲಿ (ಸಿಹಿ ನೀರಲ್ಲಿ) ಜೀವಿಸುವ ಮಾರ್ಗರಿಟಿಫೆರ, ಯೂನಿಯೋ, ಎಲ್ಲಿಪ್ಟಿಯೋ ಕ್ವಾಡ್ರುಲ ಜಾತಿಯ ಮೃದ್ವಂಗಿಗಳು ಉತ್ಪತ್ತಿ ಮಾಡುತ್ತವೆ.

ಮುತ್ತುಗಳು ಮೃದ್ವಂಗಿಯ ಶರೀರದ 6 ಮುಖ್ಯ ಭಾಗಗಳಲ್ಲಿ ಬೆಳೆಯುತ್ತವೆ. 1. ಅಸ್ಥಿರಜ್ಜು ಪ್ರದೇಶ, 2. ಕರುಳಿನ ಮುಂಭಾಗ, 3. ಕರುಳುರೇಖಾ ಪ್ರದೇಶ, 4. ಅಭಿಕರ್ಷಕ ಸ್ನಾಯುವಿನ ಮುಂಭಾಗ, 5. ಕರುಳಿನ ಹೊರ ಅಂಚುಗಳು ಮತ್ತು 6. ಅಭಿಕರ್ಷಕ ಸ್ನಾಯುವಿನ ಹಿಂಭಾಗ. ವಿವಿಧ ಭಾಗಗಳಲ್ಲಿ ಉತ್ಪತ್ತಿಯಾದ ಮುತ್ತುಗಳು ವಿವಿಧ ತೆರನಾಗಿರುತ್ತವೆ. ಅಸ್ಥಿರಜ್ಜು ಪ್ರದೇಶ ಮತ್ತು ಕರುಳಿನ ಅಂಚಿನ ಭಾಗಗಳಲ್ಲಿ ಮೃದ್ವಂಗಿ ತನ್ನ ದ್ರವವನ್ನು ಸ್ರವಿಸುವುದರಿಂದ ಅಲ್ಲಿ ಉತ್ಪತ್ತಿಯಾದ ಮುತ್ತುಗಳು ಕೆಂಪು ಅಥವಾ ನಸುಕಪ್ಪು ಬಣ್ಣದಿಂದ ಕೂಡಿವೆ. ಮೃದ್ವಂಗಿಯ ಕರುಳು ಮತ್ತು ಕರುಳಿನ ಹೊರಭಾಗ ಹಾಗೂ ಮಾಂಸಖಂಡಗಳ ಮಧ್ಯ ಭಾಗಗಳಲ್ಲಿ ಬೆಳೆದಂಥ ಮುತ್ತುಗಳು ಅತ್ಯಂತ ಹೊಳಪಿನ ಹೊರಪದರವನ್ನು ಹೊಂದಿ ವಿಶಿಷ್ಟವಾದ ಮುತ್ತುಗಳೆನಿಸಿವೆ. ಜೀವಿಯ ಸ್ರಾವಕೋಶ ಮತ್ತು ಸ್ನಾಯುಗಳ ಸಮೀಪದಲ್ಲಿ ಬೆಳೆದ ಮುತ್ತುಗಳು ಧೃತಿಯ ಲೇಪನಗಳಿಂದ ಒಡಗೂಡಿ ಜೋಡಿ ಅಥವಾ ಕೆಲವೊಮ್ಮೆ ಸಂಯುಕ್ತ ಮುತ್ತುಗಳಾಗಿ ಬೆಳೆಯುವುವು.

ಮುತ್ತಿನ ಆಕಾರ ಮೃದ್ವಂಗಿಯ ಯಾವ ಭಾಗದಲ್ಲಿ ಬೆಳೆಯಿತೆಂಬುದನ್ನು ಅವಲಂಬಿಸಿದೆ. ಪೂರ್ಣಬೆಳೆವಣಿಗೆ ಹೊಂದಿ, ಚೆಂಡಿನ ಆಕಾರದಲ್ಲಿರುವ ಮುತ್ತು ಜೀವಿಯ ಕರುಳಿನ ಹಿಂಭಾಗ ಮತ್ತು ಮಾಂಸಖಂಡಗಳ ಮಧ್ಯ ಬೆಳೆವಂಥದು. ಏಕೆಂದರೆ, ಮುತ್ತು ಉಲ್ಬಣಗೊಳ್ಳುವಾಗ ಯಾವ ಅಡೆತಡೆಯು ಇಲ್ಲದೆ ತನ್ನ ದುಂಡನೆಯ ಆಕಾರವನ್ನು ಉಳಿಸಿಕೊಂಡಿರುತ್ತದೆ. ಕರುಳಿನ ಅಂಚುಗಳಲ್ಲಿ ಬೆಳೆದ ಮುತ್ತುಗಳು ಉಲ್ಬಣಗೊಳ್ಳುವಾಗ ಅಕ್ಕಪಕ್ಕದ ಸ್ನಾಯುಗಳಿಂದ ಅದುಮಲ್ಪಟ್ಟು ಅಂಡಾಕಾರ ಅಥವ ಉದ್ದವಾಗಿ ಮಾರ್ಪಾಡಾಗುತ್ತವೆ. ಅಭಿಕರ್ಷಕ ಸ್ನಾಯುಗಳ ಮಧ್ಯೆ ಬೆಳೆಯುವ ಮುತ್ತುಗಳು ತಮ್ಮ ಬೆಳೆವಣಿಗೆಯ ಹಂತದಲ್ಲಿ ಅತಿ ಹೆಚ್ಚಿನ ಒತ್ತಡಗಳಿಗೆ ಈಡಾಗಿ ಅಸಮರೂಪ ತಳೆದು ವಕ್ರವಕ್ರವಾಗಿ ಬೆಳೆಯುತ್ತವೆ. ಇಂಥ ವಕ್ರರೀತಿಯ ಮುತ್ತುಗಳಿಗೆ ವಿಕೃತರೂಪ ಮುತ್ತುಗಳೆಂದು ಹೆಸರು.

ಅಭಿವರ್ಧಿಸಿದ ಮುತ್ತುಗಳು: ಚೀನಾದಲ್ಲಿ ಕ್ರಿ.ಶ. 13ನೆಯ ಶತಮಾನದಿಂದಲು ಮೃದ್ವಂಗಿಗಳನ್ನು ಸಾಕಿ, ಬೆಳೆಸಿ, ಅವುಗಳಿಂದ ಮುತ್ತುಗಳನ್ನು ಪಡೆಯುವುದು ನಡೆದಿದೆ. ಮೊತ್ತಮೊದಲಿಗೆ ಹೂ ಚೌ ಎಂಬಲ್ಲಿ ಯೆ-ಜಿನ್-ಯಾಗರ್ ಎಂಬವ ನದಿ ಮಡುವುಗಳಲ್ಲಿ ಜೀವಿಸುವ ಮೃದ್ವಂಗಿಗಳನ್ನು ಹಿಡಿದು ಅವುಗಳ ದೇಹದೊಳಕ್ಕೆ ಮರದ ಚೂರು, ಕೊಂಬಿನ ಚೂರು, ಎಲುಬು, ಹಿತ್ತಾಳೆಚೂರು ಮುಂತಾದುವನ್ನು ಚಿಪ್ಪಿನಬಾಯಿ ಬಿಡಿಸಿ ಹಾಕಿ ಪುನಃ ಅವನ್ನು ಮತ್ತೆ ಮಡುವಿನಲ್ಲಿ ಬಿಟ್ಟು ಸಾಕಿದ. ಮೂರುವರ್ಷಗಳ ಅನಂತರ ಆ ಪದಾರ್ಥಗಳ ಸುತ್ತ ಬೆಳೆದಿದ್ದ ಉತ್ತಮ ಧೃತಿಲೇಪನ ಹೊಂದಿದ್ದ ಮುತ್ತುಗಳನ್ನು ಪಡೆದ. ಇದೇ ರೀತಿ ಗೌತಮಬುದ್ಧನ ಸಣ್ಣ ಸಣ್ಣ ಲೋಹವಿಗ್ರಹಗಳನ್ನು ಮೃದ್ವಂಗಿಗಳ ದೇಹದೊಳಕ್ಕಿಟ್ಟು ಮುತ್ತಿನ ವಿಗ್ರಹವನ್ನು ಪಡೆದಿದ್ದಾರೆಂದು ತಿಳಿದುಬಂದಿದೆ. ಮುತ್ತುಗಳು ಸಾಮಾನ್ಯವಾಗಿ ಅರ್ಧಗೋಳಾಕಾರದಲ್ಲಿರುವುದರಿಂದ ಅಂಥದೇ ಮತ್ತೊಂದು ಮುತ್ತನ್ನು ಅದರೊಂದಿಗೆ ಸೇರಿಸಿ ಬೆಸೆದು ಪೂರ್ಣಗೋಳಾಕಾರದ ಮುತ್ತುಗಳನ್ನು ತಯಾರು ಮಾಡುತ್ತಾರೆ. ಜಪಾನಿನಲ್ಲಿ ಏಗೋ ಬೇ ಕಡಲತೀರದಲ್ಲಿ ಸು. 32 ಕಿಮೀ ದೂರಕ್ಕೆ 300ಕ್ಕೂ ಹೆಚ್ಚು ಮುತ್ತು ಸಾಕಾಣಿಕೆ ಕೇಂದ್ರಗಳಿವೆ. ನದಿ ಮಡುವಿನಲ್ಲಿ ಬೆಳೆಸಿದ ಮುತ್ತುಗಳ ಪೈಕಿ ಅನೊಡಾಂಟ್ ಜಪಾನಿಕ ಎಂಬ ಮುತ್ತುಗಳು ಪ್ರಪಂಚದ ಮುತ್ತು ಮಾರುಕಟ್ಟೆಯಲ್ಲಿ ಬಲು ಪ್ರಖ್ಯಾತಿ ಪಡೆದಿವೆ.

ಕೃತಕ ಮುತ್ತುಗಳು: ಕ್ರಿ.ಶ. 1680ರಲ್ಲಿ ಫ್ರಾನ್ಸ್‌ನಲ್ಲಿ ಜಾಕ್ವಿನ್ ಎಂಬಾತ ಬೆಳ್ಳಿಯಂತೆ ಹೊಳಪುಳ್ಳ, ಬ್ಲೀಕ್ ಎಂಬ ವರ್ಗದ ಮೀನುಗಳ ಚರ್ಮದ ಮೇಲಿನ ಕಣಗಳಿಂದ ಎಸ್ಸೆನ್ಸ್-ಡಿ-ಓರಿಯಂಟ್ ಎಂಬ ದ್ರಾವಣವನ್ನು ತಯಾರಿಸಿ ಗೋಳಾಕಾರದ ಸಣ್ಣ ಸಣ್ಣ ಅಲಬಾಸ್ಟರ್ ಗಾಜಿನ ಮಣಿಗಳಿಗೆ ಬಳಿದು ಕೃತಕಮುತ್ತುಗಳನ್ನು (ಆರ್ಟಿಫಿಶಿಯಲ್ ಪರ್ಲ್ಸ್) ತಯಾರಿಸಿದ. ಈ ಮುತ್ತುಗಳು ಮೇಲು ನೋಟಕ್ಕೆ ನೈಸರ್ಗಿಕ ಮತ್ತು ಬೆಳೆಸಿದ ಮುತ್ತುಗಳಂತೆ ಇರುತ್ತವೆ. ಕಾರಣ, ವ್ಯತ್ಯಾಸಗಳನ್ನು ಪತ್ತೆಮಾಡುವುದು ಕಷ್ಟ. ಈಗ ಕೃತಕ ಮುತ್ತುಗಳನ್ನು ಬೇರೆ ಬೇರೆ ವಿಧಾನಗಳಿಂದ ತಯಾರಿಸುವರು. ಬಿಳಿಬಣ್ಣದ, ನಸುನೇರಳೆ ಮತ್ತು ಗುಲಾಬಿ ಬಣ್ಣದ ಮುತ್ತುಗಳನ್ನು ಶಂಖುಚಿಪ್ಪು ಮತ್ತು ಹವಳಗಳಿಂದ, ಕಪ್ಪು ಬಣ್ಣದ ನಕಲಿ ಮುತ್ತುಗಳನ್ನು ಹಿಮಟೈಟ್ ಖನಿಜದ ಹರಳುಗಳಿಂದ ತಯಾರಿಸುತ್ತಾರೆ.

ಮುತ್ತುಗಳ ಪರೀಕ್ಷೆ: ಮುತ್ತುಗಳನ್ನು ಪರೀಕ್ಷಿಸುವ ಯಂತ್ರಕ್ಕೆ ನೆಕ್ರೋಸ್ಕೋಪ್ ಎಂದು ಹೆಸರು. ಎಕ್ಸ್‌ಕಿರಣಗಳ ಸಹಾಯದಿಂದ ಮನುಷ್ಯನ ದೇಹದೊಳಗಿನ ಎಲುಬುಗಳನ್ನು ನೋಡುವಂತೆಯೇ ನೆಕ್ರೋಸ್ಕೋಪಿನ ಸಹಾಯದಿಂದ ಮುತ್ತುಗಳ ಪರೀಕ್ಷೆ ನಡೆಸುತ್ತಾರೆ. ಈ ಉಪಕರಣದಲ್ಲಿ ಇರುವ ವಿದ್ಯುತ್ ದೀಪದಿಂದ ಹೊರಟ ಕಿರಣಗಳು ಮುತ್ತಿನ ಪದರಗಳ ಮೂಲಕ ಹಾದು ಒಳಗಿರುವ ನ್ಯೂಕ್ಲಿಯಸ್ ಮಾತೃಕೆ ಪ್ರಕಾಶಮಾನವಾಗಿ ಕಾಣುವಂತೆ ಮಾಡುತ್ತದೆ. ಮಾತೃಕೆ ಕಪ್ಪಾಗಿ ಕಾಣುತ್ತಿದ್ದು, ಚಿಕ್ಕದಾಗಿದ್ದಲ್ಲಿ ಆ ಮುತ್ತು ಪ್ರಕೃತಿ ಜನ್ಯವೆಂತಲೂ, ದೊಡ್ಡದಾಗಿದ್ದಲ್ಲಿ ಅಭಿವರ್ಧಿಸಿದ ಮುತ್ತೆಂದು ತಿಳಿಯಬಹುದು. ಅದೇ ದೀಪದ ಪ್ರಕಾಶದಲ್ಲಿ ಮುತ್ತನ್ನು ತಿರುಗಿಸುತ್ತ ಹೋದರೆ ಮಾತೃಕೆಯ ಕಪ್ಪುಭಾಗ ಕಡಿಮೆಯಾದಲ್ಲಿ ಅಭಿವರ್ಧಿಸಿದ ಮುತ್ತೆಂದೂ ಸ್ವಲ್ಪವೂ ಕಡಿಮೆಯಾಗದೆ ಹಾಗೆ ಉಳಿದಿದ್ದ ಪಕ್ಷದಲ್ಲಿ ಪ್ರಕೃತಿಜನ್ಯ ಮುತ್ತೆಂದು ಪರಿಗಣಿಸುವರು.

ಪ್ರಶಸ್ತ ಮುತ್ತುಗಳ ಲಭ್ಯಸ್ಥಳಗಳು: ವಿಶಿಷ್ಟವಾದ, ಹೊಳಪುಳ್ಳ ಉತ್ತಮ ದರ್ಜೆಯ ಮುತ್ತುಗಳು ಪರ್ಷಿಯ ಖಾರಿಯಲ್ಲಿ ಓಮನ್‌ನಿಂದ ಕತಾರ್‌ವರೆಗೆ ಹಬ್ಬಿರುವ ಗ್ರೇಟ್‌ಬೈಟ್ ಎಂಬ ಕಡಲತಿರುವಿನಲ್ಲಿ ವಿಪುಲವಾಗಿ ದೊರೆಯುತ್ತವೆ. ಅತ್ಯುತ್ತಮ ಮುತ್ತುಗಳು ಬೆಹರಿನ್ ದ್ವೀಪದಲ್ಲಿ ಸಿಗುತ್ತವೆ. ಇರಾನಿನ ಪ್ರಖ್ಯಾತ ಬಂದರಾಗಿರುವ ನಗರ್‌ಲಿಂಗ್ಗೆ ಮುತ್ತುಗಳಿಗೆ ಪ್ರಸಿದ್ಧ ಮಾರಾಟಸ್ಥಳ. ಅಧಿಕ ಪ್ರಕಾಶವುಳ್ಳ ಮುತ್ತುಗಳು ಶ್ರೀಲಂಕಾದ ಮನ್ನಾರ್ ಕೊಲ್ಲಿಯಲ್ಲಿ ಯಥೇಚ್ಛವಾಗಿ ದೊರೆಯುತ್ತವೆ. ಆಫ್ರಿಕದಲ್ಲಿ ಜ್ಹಾನ್ಸಿಬಾರ್ ದ್ವೀಪದಿಂದ ಮೊಜಾಂಬಿಕ್‌ನ ಇನಹ್ಯಾಂಟೇನ್‌ವರೆಗಿರುವ ಕಡಲತೀರದಲ್ಲಿ ದೊರೆವ ಮುತ್ತುಗಳು ಬಲು ಉತ್ಕೃಷ್ಟವಾದುವು. ಇವು ಸಿಲೆಬಿಸ್ ದ್ವೀಪದಲ್ಲಿ ಸಿಗುತ್ತವೆ. ಅತಿ ಬಿಳುಪು ಛಾಯೆಯುಳ್ಳ ಮುತ್ತುಗಳು ಆಸ್ಟ್ರೇಲಿಯದ ಪಶ್ಚಿಮತೀರದಲ್ಲಿ ಅತಿದೊಡ್ಡವೆನಿಸುವ ಚಪ್ಪಟೆಯಾಕಾರದ, ವಿಶಿಷ್ಟ ಮೆರುಗು ಹೊಂದಿರುವ, ಹೆಚ್ಚು ಬೆಲೆಬಾಳುವ ಮುತ್ತುಗಳು ಉತ್ತರತೀರದಲ್ಲಿ ದೊರೆಯುತ್ತವೆ. ಇದೇ ತೆರನಾದ ಉತ್ತಮದರ್ಜೆಯ ಮುತ್ತುಗಳು ಪೆಸಿಫಿಕ್‌ಸಾಗರದ ದಕ್ಷಿಣಭಾಗದ ದ್ವೀಪಗಳಲ್ಲಿ ಲಭ್ಯವಿದೆ. ಸಮುದ್ರದಲ್ಲಿ ಮುಳುಗಿ

ಮುತ್ತುಗಳನ್ನು ಆರಿಸಿ ಹೊರತರುವುದರಲ್ಲಿ ಆಸ್ಟ್ರೇಲಿಯದ ಗಂಡಸರು, ಹೆಂಗಸರು ಬಲು ನಿಸ್ಸೀಮರು.

ಅಮೆರಿಕದ ಕ್ಯಾರಿಬಿಯನ್, ಕ್ಯಾಲಿಫೋರ್ನಿಯ ಮತ್ತು ಮೆಕ್ಸಿಕೋ ಖಾರಿಗಳಲ್ಲಿ ಲೋಹದಂತೆ ಹೊಳೆಯುವ, ಕಪ್ಪು ಮುತ್ತುಗಳು ಹಾಗೂ ಬಿಳಿ ಮುತ್ತುಗಳು ದೊರೆಯುತ್ತವೆ. ಮಿಸಿಸಿಪಿ ಮತ್ತು ಅದರ ಉಪನದಿಗಳ ತೀರದಲ್ಲಿ ಯೂನಿಯೋ ಮಾರ್ಗರಿಟಫೆರ ಎಂಬ ವರ್ಗದ ಮೃದ್ವಂಗಿಗಳಿಂದ ಉತ್ಪಾದಿಸಲ್ಪಟ್ಟ ಶ್ರೇಷ್ಠ ಮಟ್ಟದ ಮುತ್ತುಗಳು ಸಿಗುತ್ತವೆ. ಸ್ಕಾಟ್ಲೆಂಡಿನ ಸ್ಪೆಯ್ ಮತ್ತು ಟೆಯ್ ನದೀತೀರಗಳಲ್ಲಿ ಮತ್ತು ನಾರ್ತ್‌ವೇಲ್ಸ್‌ನ ಕಾನವೇ ನದಿ ತೀರದಲ್ಲಿ ದೊರೆಯುವ ಮುತ್ತುಗಳಿಗೆ ಬಾರಿ ಬೇಡಿಕೆ ಇದೆ. ಬವೇರಿಯ ಕಾಡಿನ ಹೊಳೆಗಳಲ್ಲಿ ಬಲು ಉತ್ಕೃಷ್ಟವಾದ ಮುತ್ತುಗಳು ದೊರೆಯುತ್ತವೆ. ಮುತ್ತುಗಳ ಮಾರಾಟ ಮಧ್ಯ ಯೂರೋಪಿನಲ್ಲಿ ಇಂದಿಗೂ ಲಾಭದಾಯಕವಾದ ಉದ್ಯೋಗವೆನಿಸಿದೆ. ಚೀನಾದಲ್ಲಿ ಕ್ರಿ.ಪೂ. 2000 ವರ್ಷಗಳ ಹಿಂದಿನಿಂದಲೂ ಮುತ್ತುಗಳನ್ನು ಹೊರತೆಗೆದು ಸಂಗ್ರಹಿಸಿ ಮಾರಾಟಮಾಡುತ್ತಿದ್ದಾರೆ.

ಪ್ರಖ್ಯಾತ ಮುತ್ತುಗಳು: ಪ್ರಪಂಚದಲ್ಲಿ ಕೆಲವು ಮುತ್ತುಗಳು ಅವುಗಳ ಗಾತ್ರ, ಸೌಂದರ್ಯ ಮತ್ತು ಚಾರಿತ್ರಿಕ ಗುಣಗಳಿಗೆ ಹೆಸರುಗಳಿಸಿವೆ. ಲಾರಿನ್-ಡೆಸ್-ಪಾರ್ಲೆರ್ ಎಂಬ ಓರಿಯಂಟಲ್ ಮುತ್ತು (27.6 ಕ್ಯಾರೆಟ್ ತೂಕ) ಫ್ರೆಂಚ್ ಚಕ್ರವರ್ತಿಯ ಕಿರೀಟವನ್ನು ಅಲಂಕರಿಸಿತ್ತು. ಇದು ಕ್ರಿ.ಶ. 1792ರಲ್ಲಿ ಅಪಹೃತವಾಯಿತು. ಅಂಡಾಕಾರದ ಲಾ-ರಿಜೆಂಟ್ ಎಂಬ (34 ಕ್ಯಾರಟ್ ತೂಕ) ಮುತ್ತನ್ನು ಓರ್ವ ಫ್ರೆಂಚ್ ಅಧಿಕಾರಿ ಹೊಂದಿದ್ದ. ಭಾರತದಲ್ಲಿ ದೊರೆತ ಲಾ ಪೆಲ್ಲಗ್ರಿನ (28 ಕ್ಯಾರಟ್ ತೂಕ) ಎಂಬ ದುಂಡನೆಯ, ಅತಿ ಸೌಂದರ್ಯದ ಮುತ್ತು ಈಗ ರಷ್ಯದ ಮಾಸ್ಕೊ ನಗರದ ಮ್ಯೂಸಿಯಮ್‌ನಲ್ಲಿದೆ. ಪ್ರಪಂಚದಲ್ಲೇ ಅತಿದೊಡ್ಡದಾದ 454 ಕ್ಯಾರಟ್ ತೂಕದ, ಸು. 11 ಸೆಂಮೀ ಸುತ್ತಳತೆ ಮತ್ತು 5 ಸೆಂಮೀ ಉದ್ದದ ಮುತ್ತು ಹೆನ್ರಿ ತಾಮಸ್ ಹೋಪ್ ಎಂಬವರ ಬಳಿ ಇದೆ. ಅಮೆರಿಕದ ಪೀಟರ್ ಸನ್ ಬಳಿ ಇರುವ ನಾಚ್‌ಬ್ರೂಕ್ ಎಂಬ ಝರಿಯಲ್ಲಿ 1857ರಲ್ಲಿ ದೊರೆತ ನಸುನೇರಳ ಬಣ್ಣದ 23.25 ಕ್ಯಾರಟ್ ತೂಕದ ರಾಣಿ ಮುತ್ತು ಈಗ ಯೂಗಿನಿಯ ಚಕ್ರವರ್ತಿನಿಯ ಬಳಿ ಇದೆ.

ಭಾರತದಲ್ಲಿ ಚಂದ್ರನನ್ನು ಮುತ್ತಿಗೆ ಅಧಿದೇವತೆಯಾಗಿ ಪರಿಗಣಿಸುವರು. ಮುತ್ತನ್ನು ಅಭರಣ ರೂಪದಲ್ಲಿ ಧರಿಸಿದವರಿಗೆ ಅದರ ಅಧಿದೇವತೆ ಚಂದ್ರನಿಂದ ಕಾಂತಿಯು, ಮನಃಶಾಂತಿಯು ಲಭಿಸುವುದೆಂಬ ಪ್ರತೀತಿ ಇದೆ. (ಎಂ.ಜೆ.ಸಿ.)

**ಮುಪ್ಪು:** ಮುಪ್ಪು ಜೀವಿಯ ಬದುಕಿನ ಕೊನೆಯ ಹಂತ (ಸೆನಿಲಿಟಿ). ವಾರ್ಧಕ್ಯ ಪರ್ಯಾಯನಾಮ. ಪ್ರತಿಯೊಂದು ಜೀವಿಗೂ ಹುಟ್ಟಿದ ಗಳಿಗೆಯಿಂದ ದಿನಂಪ್ರತಿ ವಯಸ್ಸು ಕಳೆಯುತ್ತಿರುತ್ತದೆ. ಮುಪ್ಪು ಹತ್ತಿರವಾಗುತ್ತಿರುತ್ತದೆ. ಅನೇಕ ಹಿರಿಯ ವಯಸ್ಕರಿಗೆ ಮುಪ್ಪು ಬೇಡದ ಸ್ಥಿತಿ. ವಾರ್ಧಕ್ಯ ಹತ್ತಿರ ಬರುತ್ತ ಕಳವಳ. ಅಭದ್ರತೆ ಮತ್ತು ಅಂಜಿಕೆ ಅವರನ್ನು ಮುತ್ತುತ್ತವೆ. ತಮ್ಮ ಅತ್ಯುತ್ತಮ ಕಾಲ ಕಳೆದು ಹೋಯಿತು ಇನ್ನು ಮುಂದೆ ಬರುವುದೆಲ್ಲ ನಿಕೃಷ್ಟ ಕಾಲವೆಂಬ ಚಿಂತೆ ಅವರದು. ಸಾಯುವ ಭಯವೂ ಸೇರಿಕೊಳ್ಳುತ್ತದೆ!.

ವೃದ್ಧರ ಸಂಖ್ಯೆ ಪ್ರಪಂಚದಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿದೆ ಎಂದು ರಾಷ್ಟ್ರಗಳ ಜನಗಣತಿಯಿಂದ ತಿಳಿಯಬರುತ್ತದೆ. ಇದು ಒಟ್ಟು ಜನಸಂಖ್ಯೆಯ ಶೇ. 8 ರಿಂದ 10 ಕ್ಕೇರಿದೆ. ಹೀಗೆ ಮುದುಕರ ಜನಸಂಖ್ಯೆ ಹೆಚ್ಚುತ್ತಿರುವುದಕ್ಕೆ ಕಾರಣಗಳು ಉಂಟು: 1. ಸಾರ್ವಜನಿಕ ಆರೋಗ್ಯಪಾಲನಾ ಕ್ರಮಗಳಿಂದಾಗಿ ಸಾಂಕ್ರಾಮಿಕ ರೋಗಗಳನ್ನು ಹರಡುವ ರೋಗಕ್ರಿಮಿಗಳನ್ನು ನಾಶಪಡಿಸಿ ರೋಗ ಹರಡದಂತೆ ತಡೆಗಟ್ಟುತ್ತಿರುವುದು. 2 ವೈದ್ಯಚಿಕಿತ್ಸೆಯು ಪ್ರಗತಿಮಾರ್ಗದಲ್ಲಿದ್ದು ಹೊಸ ಪ್ರಯೋಗ ತಂತ್ರಗಳ ಸಹಾಯದಿಂದ ರೋಗದಿಂದ ನರಳುತ್ತಿರುವ ಹಿರಿಯ ವಯಸ್ಕರು ಗುಣಹೊಂದುತ್ತಿರುವುದು. 3 ವೈದ್ಯಕೀಯ ಶಿಕ್ಷಣದ ಮುನ್ನಡೆ ಮತ್ತು ರೋಗ ನಿವಾರಣಾ ಚಿಕಿತ್ಸಾ ಕೇಂದ್ರಗಳಲ್ಲಿ ನಡೆಯುತ್ತಿರುವ ವೈಜ್ಞಾನಿಕ ಸಂಶೋಧನೆ. ಆಗಾಗ್ಗೆ ಈ ಕೇಂದ್ರಗಳಿಂದ ಉತ್ತಮ ಔಷಧಿಗಳು ಹೊರಬೀಳುತ್ತಿದ್ದು ಅವುಗಳ ಸೇವನೆಯಿಂದ ಮನುಷ್ಯನ ಸರಾಸರಿ ಆಯುಷ್ಯ ಹೆಚ್ಚುತ್ತಲಿರುವುದು – ಇವೇ ಮುಂತಾದ ಕಾರಣಗಳಿಂದ ಸರಾಸರಿ ಆಯುಷ್ಯ ಪ್ರಮಾಣ ಹೆಚ್ಚಿದ್ದು ತತ್ಪರಿಣಾಮವಾಗಿ ವೃದ್ಧರ ಸಂಖ್ಯೆಯೂ ಹೆಚ್ಚಿದೆ.

ಲಕ್ಷಣಗಳು: ಮುಪ್ಪು ಹತ್ತಿರವಾಗುತ್ತಿದ್ದಂತೆ ಕಣ್ಣಿಗೆ ಕಾಣುವ ಮತ್ತು ಕಾಣದ ಹಲವಾರು ಬದಲಾವಣೆಗಳು ಶರೀರದಲ್ಲಿ ಆಗುತ್ತವೆ. ಚರ್ಮವನ್ನು ಶರೀರದ ಅಂಗಗಳೊಂದಿಗೆ ಬಂಧಿಸಿ ಹಿಡಿದಿರುವ ಮಾಂಸಖಂಡಗಳ ಸ್ಥಿತಿಸ್ಥಾಪಕತ್ವ ಕಡಿಮೆಯಾಗಿ ಚರ್ಮ ಸುಕ್ಕು ಕಟ್ಟುತ್ತದೆ. ಬೆನ್ನುಮೂಳೆ ಮತ್ತು ಇತರ ಎಲುಬುಗಳು ಸಡಿಲಗೊಂಡು ಬೆನ್ನು ಬಾಗುತ್ತದೆ. ಕೂದಲುಗಳು ಉದುರಿ ತಲೆ ಬೋಳಾಗುತ್ತದೆ. ಇಲ್ಲವೆ ಕೂದಲು ಬೆಳ್ಳಗಾಗುತ್ತದೆ. ಧ್ವನಿ ಪೆಟ್ಟಿಗೆಯ ತಂತುಗಳ ಬಿಗಿ ಕಡಿಮೆಯಾಗಿ ಧ್ವನಿ ನಡುಗುತ್ತದೆ. ರುಚಿ, ವಾಸನೆ ಹಾಗೂ ದೃಷ್ಟಿ ಗುರುತಿಸುವಂಥ ಸಂವೇದನಾಂಗಗಳ ಶಕ್ತಿ ಕುಂದುತ್ತದೆ, ಹಲ್ಲುಗಳು ವಸಡಿನ ಸಂಬಂಧ ಕಳೆದುಕೊಂಡು ಬೀಳತೊಡಗುತ್ತವೆ. ಇವು ದೃಷ್ಟಿಗೋಚರ ಬದಲಾವಣೆಗಳು. ಇನ್ನು ಆಂತರಿಕವಾಗಿ ಹಲವಾರು ಬದಲಾವಣೆಗಳಾಗುತ್ತವೆ. ಕೊಲೆಸ್ಟೆರಾಲ್ ಅಂಶ ರಕ್ತನಾಳಗಳ ಒಳಭಾಗದಲ್ಲಿ ಶೇಖರಣೆಗೊಂಡು ವಿವಿಧ ಅಂಗಗಳಿಗೆ ರಕ್ತದ ಹಂಚಿಕೆಯ ಪರಿಮಾಣ ಕಡಿಮೆಯಾಗುತ್ತದೆ. ಈ ಬದಲಾವಣೆಗಳು 30 ರಿಂದ 50 ವರ್ಷದ ಅವಧಿಯಲ್ಲಿ ಮಂದಗತಿಯಲ್ಲೂ 50 ವರ್ಷ ದಾಟಿದ ಬಳಿಕ ತೀವ್ರಗತಿಯಲ್ಲೂ ಸಾಗುತ್ತವೆ.

ವ್ಯಕ್ತಿ 60 ನೆಯ ವಯಸ್ಸಿಗೆ ಕಾಲಿಟ್ಟಾಗ ಅವನಲ್ಲಿ ಗಮನಾರ್ಹ ಬದಲಾವಣೆಗಳನ್ನು ಕಾಣಬಹುದು. ವಾಸಿಯಾಗದ ರೋಗದಿಂದ ನರಳಲೂಬಹುದು. ಹೃದಯರೋಗ, ರಕ್ತದ ಏರೊತ್ತಡ, ಸಂಧಿವಾತ, ಖಿನ್ನತೆ, ಮತಿಹೀನಸ್ಥಿತಿ (ಡೆಮೆನ್ಷಿಯ) ರೋಗಗಳು ಮುಪ್ಪಿನಲ್ಲಿ ಕಾಡುವ ರೋಗಗಳು. ಗ್ರಹಣಶಕ್ತಿ ಕುಂದಿ, ಶರೀರದ ಚೈತನ್ಯ ಮಾಯವಾಗುವುದು. ದೃಷ್ಟಿ ಮಂದವಾಗುವುದು. ಶ್ರವಣೇಂದ್ರಿಯ, ಘ್ರಾಣೇಂದ್ರಿಯ, ರಸನೇಂದ್ರಿಯ, ಸ್ಪರ್ಶೇಂದ್ರಿಯಗಳಲ್ಲಿಯ ಕಾರ್ಯಶೀಲತೆ ಕಡಿಮೆಯಾಗುವುದು. ಹೀಗೆ ದೇಹದ ಶಕ್ತಿಯನ್ನು ತಗ್ಗಿಸಿ ರೂಪವನ್ನು ವಿರೂಪಗೊಳಿಸುವ ಮುಪ್ಪು ಯಾರಿಗೆ ತಾನೆ ಪ್ರಿಯ?

ಪರಿಣಾಮಗಳು: ಹಿರಿಯ ವಯಸ್ಕರಲ್ಲಿ ಉಂಟಾಗುವ ಮಾನಸಿಕ ಬದಲಾವಣೆಗಳು ಎಂಥ ಧೈರ್ಯಶಾಲಿಗಳನ್ನೂ ಅಂಜಿಸುವುದಾಗಿದೆ.

1. ಚಿತ್ತೈ ಕಾಗ್ರತೆ ದುರ್ಬಲವಾಗಿ ಚಂಚಲವಾಗುವುದು. ನೆನಪು ಇಲ್ಲದಂತಾಗುವುದು. ತಾರುಣ್ಯದಲ್ಲಿ ಸಂಭವಿಸಿದ ಘಟನೆಗಳಲ್ಲಿ ಗಲಿಬಿಲಿಯುಂಟಾಗಿ ಅವ್ಯವಸ್ಥೆಗಿಟ್ಟುಕೊಳ್ಳುವುವು. ಇತ್ತೀಚೆಗೆ ನಡೆದ ಸುದ್ದಿಗಳ ನೆನಪು ಕಡಿಮೆಯಾಗುವುದು, ಮರೆವು ಹೆಚ್ಚುತ್ತಲಿರುವುದು. ಪರಿಚಿತರನ್ನು ಗುರುತಿಸಲು ಆಗದಿರುವುದು. ತಿಥಿ ವಾರ, ಪಕ್ಷವನ್ನು ತಪ್ಪಾಗಿ ಲೆಕ್ಕಮಾಡುವುದು. ಊಟ ಮಾಡಿದ್ದರೂ ಊಟ ಮಾಡಿಲ್ಲವೆಂದು ಹೇಳುವುದು.

2. ಅಲ್ಪ ವಿಷಯಗಳಿಗೆಲ್ಲ ರೇಗಾಡುವರು. ತಾವು ತಿನ್ನುವ ಆಹಾರದಲ್ಲಿ, ಧರಿಸುವ ಉಡುಪಿನಲ್ಲಿ, ಆಪ್ತರ ನಡವಳಿಕೆಯಲ್ಲಿ ಸ್ವಲ್ಪ ಬದಲಾವಣೆ ಕಂಡರೂ ಸಹಿಸಲು ಅಶಕ್ತರಾಗುವರು. ಚಿಕ್ಕಮಕ್ಕಳು ಅತ್ತರೆ, ಗಲಾಟೆ ಮಾಡಿದರೆ ಸಹಿಸಲಾರದಷ್ಟು ದುರ್ಬಲರಾಗುವರು.

3. ತಾವು ಕಲಿತ ಕಲೆಯನ್ನಾಗಲಿ ಕಸುಬನ್ನಾಗಲಿ ಸಮರ್ಥವಾಗಿ ಉಪಯೋಗ ಮಾಡಿಕೊಳ್ಳಲಾರದೆ ಹೋಗುವುದು. ವಾರ್ಧಕ್ಯದಲ್ಲಿ ಕೈಗಳ ಕೆಲಸ ಅಡ್ಡಾದಿಡ್ಡಿಯಾಗಿ ಸಾಗುವುದು. ನೈಪುಣ್ಯದಲ್ಲಿ ಕೊರತೆ ಬರುವುದು. ಸಾಮಾಜಿಕ ಕಾರ್ಯಗಳಲ್ಲಿ ಅಭಿಲಾಷೆ ಕಡಿಮೆಯಾಗುವುದು. ಕಲಿಯುವಿಕೆಯಲ್ಲಿ ಆಸಕ್ತಿ ಇಲ್ಲದಂತಾಗುವುದು.

4. ಲೈಂಗಿಕಶಕ್ತಿ ಕುಂದುವುದು. ಹೆಂಗಸರು ನಲವತ್ತೆಂಟು ಐವತ್ತು ವರ್ಷದ ಸಮಯದಲ್ಲಿ ಋತುಬಂಧಕ್ಕೆ ಒಳಗಾಗುವರು. ಶಾರೀರಕ ಕಾರ್ಯದಲ್ಲಿ ಪರಿವರ್ತನೆಯಾಗುವುದೇನೋ ಸಹಜ. ಆದರೆ ತಾವು ಇನ್ನು ಬೇಕಿಲ್ಲದ ವಸ್ತುವೆಂಬ ಭಾವನೆ ಕೆಲವರಲ್ಲಿ ಬೇರೂರಿ ಖಿನ್ನರಾಗಿ ಬುಡವಿಲ್ಲದ ಭಯಕ್ಕೆ ಎಡೆಗೊಟ್ಟು ಒಂದು ರೀತಿಯ ಮನೋರೋಗ ತಂದುಕೊಳ್ಳುವರು. ಗಂಡಸರಲ್ಲೂ ಬದಲಾವಣೆಗಳುಗುವುದುಂಟು. ಅರುವತ್ತು ವರ್ಷ ತುಂಬುವ ಹೊತ್ತಿಗೆ ಲೈಂಗಿಕಜೀವನದಲ್ಲಿ ಹುರುಪು ಕಾಣದೆ ತಮ್ಮ ಇಡೀ ವ್ಯಕ್ತಿತ್ವವೇ ನಶಿಸಿ ಹೋಗುತ್ತಿದೆಯೆಂದು ವಿಷಣ್ಣರಾಗಿ ಚಿಂತೆಗೊಳಗಾಗುವರು.

5. ಮುಪ್ಪಿನಲ್ಲಿ ಬಹುಮಂದಿ ಒಂಟಿಜೀವಿಗಳಾಗಿ ಉಳಿಯುವರು. ಪತಿ-ಪತ್ನಿಯ ಮರಣ ಮತ್ತು ಅವರ ಅಗಲಿಕೆ ಇವಕ್ಕೆ ಮುಖ್ಯ ಕಾರಣಗಳು. ಇದರ ದೆಸೆಯಿಂದ ಅವರಲ್ಲಿ ಜೀವನದ ಹೊಂದಾಣಿಕೆ ತಪ್ಪುವುದರಲ್ಲಿ ಆಶ್ಚರ್ಯವಿಲ್ಲ. ಮಕ್ಕಳೂ ಈಗ ದೂರವಾಗುತ್ತಾರೆ.

6. ಸಾಮಾನ್ಯವಾಗಿ ಹಿರಿಯ ವಯಸ್ಕರು ಉದ್ಯೋಗಕ್ಕೆ ಅಸಮರ್ಥರೆಂದು ಸಂಸ್ಥೆಗಳು ನಿರಾಕರಿಸುವುವು. ತತ್ಫಲವಾಗಿ ಅವರು ಮಾನಸಿಕ ಚಿಂತೆಗೊಳಗಾಗುವರು. ಇಷ್ಟು ಕಾಲ ಅವರಲ್ಲಿದ್ದ ಭದ್ರತಾ ಸಂವೇದನೆಗೆ ಧಕ್ಕೆ ಒದಗಿ ದಿಕ್ಕು ತೋಚದಂತೆ ಆಗುವುದು. ಆದರೆ ಹಿರಿಯ ವಯಸ್ಕರು ಉದ್ಯೋಗಕ್ಕೆ ಅಷ್ಟು ಅಸಮರ್ಥರೇನಲ್ಲ. ಬಹಳ ವರ್ಷದಿಂದಲೂ ಕೆಲಸಮಾಡಿ ಹಲವಾರು ರೀತಿಯಲ್ಲಿ ಅನುಭವ ಸಂಪಾದಿಸಿರುವುದರಿಂದ ವೃತ್ತಿಯನ್ನು ಜಾಣ್ಮೆಯಿಂದ ನಡೆಯಿಸಲು ತರುಣರಿಗಿಂತ ಸಮರ್ಥರಾಗಿರುತ್ತಾರೆ.

ಸಲಹೆಗಳು: 1. ಹಿರಿಯ ವಯಸ್ಕರು ಉದ್ಯೋಗದಿಂದ ನಿವೃತ್ತರಾದಮಾತ್ರಕ್ಕೆ ನಿರುತ್ಸಾಹಿಗಳಾಗಬೇಕಿಲ್ಲ. ತಾವು ಕಿರಿಯರಾಗಿದ್ದಾಗ ಕಲಿತ ಉಪಕಸುಬನ್ನು ಬಳಸಿ ಉಪಯುಕ್ತ ರೀತಿಯಲ್ಲಿ ಕಾಲಕಳೆಯಬಹುದು. ಮುಪ್ಪು ಅನಿವಾರ್ಯವೆಂದು ಭಾವಿಸಿ ಅದನ್ನು ಸಹಜರೀತಿಯಲ್ಲಿ ಬರಮಾಡಿಕೊಳ್ಳುವುದು ಒಳ್ಳೆಯದು. 2. ತಮ್ಮ ತಮ್ಮ ಸಂಸ್ಕೃತಿಯನ್ನು ಅನುಸರಿಸಿ ಮತಸಂಬಂಧ ಕಾರ್ಯದಲ್ಲಿ ತೊಡಗುವುದು ಆತ್ಮಗೌರವವನ್ನು ಹೆಚ್ಚಿಸುತ್ತದೆ. ಮಾನಸಿಕ ಆರೋಗ್ಯಕ್ಕೆ ತಳಹದಿ ಆತ್ಮಗೌರವ. 3. ಕಬ್ಬಿಣ ಮತ್ತು ಕ್ಯಾಲ್ಸಿಯಮ್

ಧಾತುಗಳಿಂದ ಕೂಡಿದ ಆಹಾರವನ್ನು ಧಾರಾಳವಾಗಿ ಸೇವಿಸಿದರೆ ಶರೀರದ ದುರ್ಬಲತೆ ಕಡಿಮೆ ಮಾಡಿಕೊಳ್ಳಬಹುದು. 4. ಕೆಲವು ರಾಷ್ಟ್ರ ಹಾಗೂ ರಾಜ್ಯ ಸರ್ಕಾರಗಳು ಗೊತ್ತಾದ ವಯಸ್ಸು ಮೀರಿದ ಪ್ರತಿಯೊಬ್ಬ ಅನಾಥಪ್ರಜೆಗೂ ತಿಂಗಳಿಗೊಂದಾವರ್ತಿ ವೃದ್ಧಾಪ್ಯ ವೇತನ ಕೊಡುತ್ತಿರುವ ಪದ್ಧತಿ ಶ್ಲಾಘನೀಯವಾದುದು. ಇದರ ದೆಸೆಯಿಂದ ಹಿರಿಯ ವಯಸ್ಕರಲ್ಲಿ ಹಣಕಾಸಿನ ಅಭಾವ ಕಡಿಮೆಯಾಗಿ ಸ್ವಲ್ಪ ಮಟ್ಟಿಗೆ ಅವರು ನೆಮ್ಮದಿಯಿಂದ ಬದುಕಲು ಸಹಾಯವಾಗುತ್ತಿದೆ. ಕರ್ನಾಟಕ ಸರ್ಕಾರವೂ ಇಂಥ ಯೋಜನೆಯನ್ನು ಹಮ್ಮಿಕೊಂಡಿದೆ. 5. ಸದಾ ಜನಸಂಪರ್ಕ ಇಟ್ಟುಕೊಳ್ಳಲು ಹಿರಿಯ ವಯಸ್ಕರು ಯತ್ನಿಸಬೇಕು. ಇದರಿಂದಾಗಿ ತಾವು ಒಂಟಿಯಲ್ಲ ಎಲ್ಲರಿಗೂ ತಾವು ಬೇಕು ಎನ್ನುವ ಭಾವನೆ ಮೂಡುತ್ತದೆ. ಭಾರತೀಯ ಕುಟುಂಬಗಳಲ್ಲಿ ಹಿರಿಯ ವಯಸ್ಕರಿಗೆ ಮಾಡಲು ಸಾಕಷ್ಟು ಕೆಲಸವಿರುತ್ತದೆ. ಅಂಗಡಿಗೆ ಹೋಗಿ ಕಾಯಿ ಪಲ್ಯ ಕೊಂಡುತರುವುದು, ಮೊಮ್ಮಕ್ಕಳ ಆಟಪಾಠಗಳಲ್ಲಿ ಆಸಕ್ತಿ ತೋರಿಸುವುದು. ಗ್ರಂಥಗಳನ್ನು ಓದುವುದು. ದೇವರ ಧ್ಯಾನ ಪೂಜೆಯಲ್ಲಿ ತೊಡಗುವುದು, ಗುಡಿಗಳಿಗೆ ಮತ್ತು ಮಠಗಳಿಗೆ ಹೋಗಿ ಬರುವುದು, ಪುರಾಣ ಪುಣ್ಯಕಥೆಗಳನ್ನು ಕೇಳುವುದು, ಮನೆಯ ಅಂಗಳದಲ್ಲಿರುವ ಗಿಡಗಳಿಗೆ ನೀರು ಹಾಕುವುದು ಮುಂತಾದ ಚಟುವಟಿಕೆಗಳಿಂದ ಸದಾ ಕಾರ್ಯಮಗ್ನರಾಗಿರಬಹುದು. 6. ಹಿರಿಯ ವಯಸ್ಕರನ್ನು ತಾವು ಬಾಳಿ ಬದುಕಿದ ಮನೆಯಿಂದ ಹೊರದೂಡುವುದು ಭಾರತೀಯ ಸಂಸ್ಕೃತಿಗೆ ವಿರುದ್ಧ. ಆದರೆ ಕೆಲವು ಪಾಶ್ಚಾತ್ಯ ದೇಶಗಳು ಕುಟುಂಬತ್ಯಕ್ತರಾದ ಮುದುಕರಿಗೆ ಆಶ್ರಯ ನೀಡಲು ಆಶ್ರಮಗಳನ್ನು ಏರ್ಪಡಿಸಿರುವರು. ಇವುಗಳಿಗೆ ಸರ್ಕಾರದ ಸಹಾಯ ಮತ್ತು ಬೆಂಬಲವಿರುತ್ತದೆ. ಭಾರತದ ಕೆಲವು ದೊಡ್ಡ ನಗರಗಳಲ್ಲಿ ಇಂಥ ಆಶ್ರಮಗಳನ್ನು ಸ್ಥಾಪಿಸಲಾಗಿದೆ. 7. ದೈಹಿಕ ಮತ್ತು ಮಾನಸಿಕ ದುರ್ಬಲತೆಯನ್ನು ತಡೆಗಟ್ಟಲು ಮತ್ತು ತೊಂದರೆಗೊಳಗಾದ ಹಿರಿಯ ವಯಸ್ಕರು ತಮ್ಮ ಜೀವನವನ್ನು ಪುನರ್ ವ್ಯವಸ್ಥೆಗೊಳಿಸಲು ಸಮರ್ಥರಾಗುವಂತೆ ಸಹಾಯ ಸಲಹೆ ಏರ್ಪಾಡೂ ಇದೆ. ಭಾರತದಲ್ಲೂ ಇಂಥ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. 8. ಸಮೀಪದಲ್ಲಿರುವ ವೈದ್ಯರ ನೆರವಿನಿಂದ ಅನಾರೋಗ್ಯವನ್ನು ನಿಭಾಯಿಸಬೇಕು.

ಚಿರಂಜೀವಿ ಆಗಿರಬೇಕು ಇಲ್ಲದೆ ಜೀವನಪರ್ಯಂತ ತರುಣನಾಗಿರಬೇಕು ಎಂಬ ಹಂಬಲ ಕೆಲವು ರಾಜರಲ್ಲಿ ಹಾಗೂ ತತ್ತ್ವಜ್ಞಾನಿಗಳಲ್ಲಿ ಇತ್ತೆಂಬ ಸಂಗತಿ ಇತಿಹಾಸ ಪ್ರಸಿದ್ಧ. ತಮ್ಮ ಅಪೇಕ್ಷೆ ಈಡೇರಿಸಿಕೊಳ್ಳಲು ಹಲವು ಅವೈಜ್ಞಾನಿಕ ಪ್ರಯತ್ನಗಳನ್ನು ಅವರು ಕೈಕೊಂಡಿದ್ದರಾದರೂ ಅವು ಫಲಿಸಲಿಲ್ಲ.

ಮೊತ್ತಮೊದಲಿಗೆ ವಯೋಮಾನ ಹಾಗು ಮುಪ್ಪಿನ ಮೇಲೆ ವೈಜ್ಞಾನಿಕ ಪ್ರಯೋಗ ನಡೆಸಿದ ಕೀರ್ತಿ 19ನೆಯ ಶತಮಾನದ ಆಗಸ್ಟ್ ವೀಸ್‌ಮನ್ನರಿಗೆ ಸಲ್ಲುತ್ತದೆ. ಅಂದಿನಿಂದ ಈ ತನಕವೂ ಹಲವು ವಿಜ್ಞಾನಿಗಳು ಮುಪ್ಪಿನ ಹಾಗೂ ವಯೋಮಾನದ ಬಗ್ಗೆ ಹಲವಾರು ಪ್ರಯೋಗಗಳನ್ನು ಮಾಡಿ ಅನೇಕ ನಿಗೂಢ ವಿಷಯಗಳನ್ನು ಬೆಳಕಿಗೆ ತಂದಿದ್ದಾರೆ. ಮುಂದಿನ ಮಾನವ ಈ ಮುಪ್ಪನ್ನು ಎದುರಿಸಿ ನಿಲ್ಲಬಲ್ಲನೆ? ಇದಕ್ಕೆ ಕಾಲವೊಂದೇ ಉತ್ತರ ನೀಡಬೇಕು.
(ಸಿ.ಕೆ.ವಿ.ಆರ್.)

**ಮುಸ್ತಾಂಗ್:** ಪಶ್ಚಿಮ ಅಮೆರಿಕೆಯಲ್ಲಿ ಕಾಣಸಿಗುವ ಒಂದು ವಿಧದ ವನ್ಯ ಕುದುರೆ. ಈಕ್ವಸ್ ಕ್ಯಾಬಾಲಸ್‌ನ ಒಂದು ತಳಿ. ಇದನ್ನು ಅಮೆರಿಕೆಯ ಕಾಡುಕುದುರೆ, ಬಿಎಲ್ಎಂ ಕುದುರೆ (ಬಿಎಲ್ಎಂ ಎಂದರೆ ಬ್ಯೂರೊ ಆಫ್ ಲ್ಯಾಂಡ್ ಮ್ಯಾನೇಜ್‌ಮೆಂಟ್), ರೇಂಜ್ ಕುದುರೆ ಎಂಬ ಹೆಸರುಗಳಿಂದಲೂ ಗುರುತಿಸಿದ್ದಾರೆ. 'ಮುಸ್ತಾಂಗ್' ಎಂಬುದು ಮೂಲತಃ ಸ್ಪೇನ್ ಭಾಷೆಯ ಪದ. ಮೆಸ್ಟೆನ್ಯೋ ಅಥವಾ ಮಾಂಸ್ಟೆಂಕೊ ಎಂದರೆ ವನ್ಯ ಎಂದರ್ಥ. ಈ ಕಾಡುಕುದುರೆಯ ತವರು ಸ್ಪೇನ್ ದೇಶವಾದರೂ ಇಂದಿಗೆ ಇದು

ಹಲವಾರು ತಳಿಗಳಲ್ಲಿ ಬೆರೆತುಹೋಗಿದೆ. ವಿಶಾಲ ಮೈದಾನ ನಿವಾಸಿ. ಅಮೆರಿಕನ್ನರ ಜೀವನ ಶೈಲಿಯನ್ನೇ ಈ ಕುದುರೆಗಳು ಬದಲಿಸುದುವು. ಯೂರೋಪಿಯನ್ನರು ಪಶ್ಚಿಮಕ್ಕೆ ವಲಸೆಬಂದಾಗ ಅವರು ಕುದುರೆಗಳನ್ನು ಜೊತೆಯಲ್ಲೇ ತಂದರು. ಈ ಪಯಣ ಮಾರ್ಗ ಮಧ್ಯದಲ್ಲಿ ಕೆಲವು ಭಾರತವನ್ನು ಸೇರಿದರೆ, ಇನ್ನು ಕೆಲವು ತಪ್ಪಿಸಿಕೊಂಡು ಚದುರಿ ಹೋದುವು. ಹೀಗೆ ಮುಸ್ತಾಂಗ್ ಕುದುರೆಗಳು ಚೆಲ್ಲಾಪಿಲ್ಲಿಯಾಗಿ ಚದುರಿ ಇತರೇ ಕುದುರೆ ತಳಿಗಳೊಡನೆ ಸಂಲಗ್ನಗೊಂಡವು.

ಪಶ್ಚಿಮ ಅಮೆರಿಕೆಯಲ್ಲಿ ಮೇಯುವ ಸಾಕುಪ್ರಾಣಿಗಳ ಸಾಕಣೆ ಹೆಚ್ಚಿದಂತೆಲ್ಲಾ, ಮುಸ್ತಾಂಗ್‌ಗಳನ್ನು ಗುಂಡಿಕ್ಕಿ ಕೊಲ್ಲಲಾಗುತ್ತಿತ್ತಂತೆ. ನಿರಂತರ ವಧಿಸುವಿಕೆಯಿಂದ ಮುಸ್ತಾಂಗ್‌ಗಳ ಸಂಖ್ಯೆ ಅರ್ಧದಷ್ಟಾಯಿತು. ಇಂದಿಗೆ ಇವುಗಳ ಸಂಖ್ಯೆ ಸುಮಾರು 30,000. 1971 ರಲ್ಲಿ ಜಾರಿಗೊಳಿಸಲಾದ ವೈಲ್ಡ್ ಫ್ರೀ ರೋಮಿಂಗ್ ಹಾರ್ಸ್ ಅಂಡ್ ಬ್ಯೂರೊ ಆಕ್ಟ್‌ನಿಂದ ಈ ಕಾಡುಕುದುರೆಗಳಿಗೆ ಸಂರಕ್ಷಣೆ ಒದಗಿತು. ಹೀಗೆ 1970 ರ ತನಕದ ಅನಂತರದ ದಿವಸಗಳಲ್ಲಿ ಮುಸ್ತಾಂಗ್‌ಗಳ ಸಂಖ್ಯೆ ಕ್ಷಿಪ್ರಗತಿಯಲ್ಲಿ ಏರತೊಡಗಿತು. ಈ ಏರಿಕೆ ಎಷ್ಟು ಅಗಾಧವಾಗಿತ್ತೆಂದರೆ 1971 ರ ಸಂರಕ್ಷಣಾ ಕಾಯಿದೆಗೆ 1976 ಹಾಗೂ 1978 ತಿದ್ದುಪಡಿಗಳನ್ನು ಜಾರಿಗೊಳಿಸಿ, ಮುಸ್ತಾಂಗ್‌ಗಳ ಸಂಖ್ಯಾಸಂದಣಿ ನಿರ್ವಹಣೆಗೆ ಯೋಜನೆಗಳನ್ನು ರೂಪಿಸಲಾಯಿತು. ಇಂಥ ಒಂದು ಯೋಜನೆಯೇ 'ಕುದುರೆಯೊಂದನ್ನು ದತ್ತಕ್ಕೆ ಪಡೆ' ಎಂಬುದು. ದತ್ತು ಪಡೆದುಕೊಳ್ಳಬಯಸಿದವನಿಗೆ ಕುದುರೆಯೊಂದಕ್ಕೆ 125 $ ಗಳ ದರದಲ್ಲಿ ವಿಕ್ರಯಿಸಲಾಯಿತು. ದತ್ತು ಕೊಂಡವನು ಕುದುರೆಯ ಸುಸ್ಥಿತಿ ಬಗ್ಗೆ ಸರ್ಕಾರಕ್ಕೆ ವರದಿ ನೀಡಬೇಕಾಗಿದ್ದಿತ್ತು. ಹೀಗೆ ಒಂದು ವರುಷ ಕಾಲ ಕುದುರೆಯನ್ನು ಸಮಂಜಸವಾಗಿ ಸಾಕಿದ. ನಂತರವೇ ಈ ಕುದುರೆ ಕೊಂಡವನ ವಶವಾಗುತ್ತಿತ್ತು. ಇಂದಿಗೂ ಸವಾರಿ ಮಾಡಲು ಈ ಕುದುರೆಗಳು ಬಹು ಮಜಬೂತಾದ ತಳಿಗಳೆನಿಸಿವೆ.

ಬಹುತೇಕ ಮುಸ್ತಾಂಗ್‌ಗಳು ಬಿಸಿರಕ್ತ ವಿಧದ ಕುದುರೆಗಳು. ಇತರೇ ಕುದುರೆಗಳಲ್ಲಿ ಕಂಡು ಬರುವ ಎಲ್ಲ ಮೈಬಣ್ಣಗಳನ್ನು ಈ ಕುದುರೆಗಳೂ ತೋರುತ್ತವೆ. ಬಹಳಷ್ಟು ಕುದುರೆಗಳು ಸ್ಪೇನ್ ಕುದುರೆಗಳ ಗುಣಲಕ್ಷಣಗಳನ್ನು ಇಂದಿಗೂ ಮೈಗೂಡಿಸಿಕೊಂಡಿವೆ. ಸ್ಪೇನ್‌ನ ಮೂಲ ಶುದ್ಧ ತಳಿಗಳು ಈಗಲೂ ಲಭ್ಯವಿವೆ. ಅವುಗಳಲ್ಲಿ ಕೆಲವು ಕೈಗರ್ ಹಾಗೂ ಸೆರಾಟ್ ಮುಸ್ತಾಂಗ್‌ಗಳು. (ಬಿ.ಕೆ.ಎಂ.)

**ಮುಳ್ಳುಹಂದಿ:** ಮ್ಯಾಮೇಲಿಯ ವರ್ಗ, ಇನ್ಸೆಕ್ಟಿವೊರ ಗಣದ ಎರಿನೇಸೈಯಿಡೇ ಕುಟುಂಬಕ್ಕೆ ಸೇರಿದ ಎರಿನೇಸಿಯಸ್ ಹೆಮಿಎರೈನಸ್ ಮತ್ತು ಪ್ಯಾರಎಕೈನಸ್ ಜಾತಿಯ ಪ್ರಾಣಿಗಳಿಗೂ ಅದೇ ವರ್ಗದ ರಾಡೆಂಷಿಯ ಗಣದ ಹಿಸ್ಟ್ರಿಸಿಡೇ ಕುಟುಂಬಕ್ಕೆ ಸೇರಿದ ಹಿಸ್ಟ್ರಿಕ್ಸ್, ಅತಿರೂರಸ್, ಟ್ರೈಕಿಸ್ ಮುಂತಾದ ಜಾತಿಯ ಪ್ರಾಣಿಗಳಿಗೂ ಅನ್ವಯವಾಗುವ ಸಾಮಾನ್ಯ ಹೆಸರು. ಮೊದಲ ಗುಂಪಿನವು ಕೀಟಭಕ್ಷಿಗಳು. ಇವನ್ನು ಇಂಗ್ಲಿಷಿನಲ್ಲಿ ಹೆಜ್‌ಹಾಗ್ಸ್ ಎಂದು ಕರೆಯಲಾಗುತ್ತದೆ. ಎರಡನೆಯ ಗುಂಪಿನವು ದಂಶಕಗಳು, ಇಲಿ, ಅಳಿಲು, ಮೊಲ ಮುಂತಾದುವುಗಳ ಸಂಬಂಧಿಗಳು. ಪಾರ್ಕ್ಯುಪೈನ್ ಎಂಬ ಸಾಮಾನ್ಯ ಇಂಗ್ಲಿಷ್ ಹೆಸರುಳ್ಳ ಇವನ್ನು ಕನ್ನಡದಲ್ಲಿ ಕಣೆಹಂದಿಗಳೆಂದೂ ಕರೆಯಲಾಗುತ್ತದೆ.

ಮೇಲೆ ಹೇಳಿದ ಹಾಗೆ ಈ ಎರಡು ಗುಂಪಿನ ಪ್ರಾಣಿಗಳು ವೈಜ್ಞಾನಿಕವಾಗಿ ವಿಭಿನ್ನವಾಗಿದ್ದರೂ ಇವುಗಳಲ್ಲಿ ಕಾಣಬರುವ ಉಭಯಸಾಮಾನ್ಯ ಲಕ್ಷಣವೆಂದರೆ ಮೈಮೇಲೆ ಬಿರುಸಾದ ಮುಳ್ಳುಗಳಿರುವುದು. ಎಂದೇ ಕನ್ನಡದಲ್ಲಿ ಮುಳ್ಳುಹಂದಿ ಎಂಬ ಹೆಸರಿನಿಂದ ಇವು ಪ್ರಸಿದ್ಧ. ಪ್ರಸಕ್ತ ಲೇಖನದಲ್ಲಿ ಎರಿನೇಸಿಯಸ್ ಮತ್ತು ಹಿಸ್ಟ್ರಿಕ್ಸ್ ಜಾತಿಗಳ ಸ್ಥೂಲ ವಿವರಣೆ ಕೊಡಲಾಗಿದೆ.

ಎರಿನೇಸಿಯಸ್ ಜಾತಿ ಬಲು ವಿಶಾಲ ವ್ಯಾಪ್ತಿಯುಳ್ಳದ್ದು ಬ್ರಿಟಿಷ್ ದ್ವೀಪಗಳಿಂದ ಹಿಡಿದು ಯೂರೋಪಿನಾದ್ಯಂತವೂ ರಷ್ಯ, ಕೊರಿಯ, ಉತ್ತರ ಹಾಗೂ ಪೂರ್ವ ಚೀನಗಳಲ್ಲೂ ಏಷ್ಯಾ ಮೈನರ್, ಕಾಕಸಸ್ ಪ್ರದೇಶ, ಆಫ್ರಿಕದ ಮೊರಾಕೊ, ಲಿಬ್ಯ, ಅಂಗೋಲಗಳಲ್ಲೂ ಇದರ 6 ಪ್ರಭೇದಗಳನ್ನು ಕಾಣಬಹುದು. ಬಲು ಮುಖ್ಯ ಪ್ರಭೇದ ಎ. ಯೂರೋಪಿಯಸ್ (ಯೂರೋಪ್ಪದ ಹೆಜ್‌ಹಾಗ್). ಇದು 135–270 ಮಿಮೀ ಉದ್ದದ ಪ್ರಾಣಿ. 10–50 ಮಿಮೀ ಉದ್ದದ ಬಾಲವುಂಟು. ವಯಸ್ಕ ಪ್ರಾಣಿಯ ತೂಕ 400–1100 ಗ್ರಾಮ್. ಮುಸುಡು, ಕಾಲು, ಉದರಭಾಗಗಳನ್ನು ಬಿಟ್ಟರೆ ಮೈಮೇಲೆಲ್ಲ ದಟ್ಟ ಮತ್ತು ಬಿರುಸು ಮುಳ್ಳುಗಳಿವೆ. ಮೈಬಣ್ಣ ಚಾಕಲೇಟ್ ಕಂದು. ಉದ್ದನೆಯ ಚೂಪುಮೂತಿ, ಕಿರಿಯಗಲದ ಕಿವಿಗಳು ಇದರ ಇನ್ನುಳಿದ ಲಕ್ಷಣಗಳು.

ಸಾಧಾರಣವಾಗಿ ಮೆಲುಗತಿಯಲ್ಲಿ ಓಲುತ್ತ ನಡೆಯುವ ಇದು ಅಗತ್ಯವಿದ್ದಲ್ಲಿ ವೇಗವಾಗಿ ಕೂಡ ಓಡಬಲ್ಲುದು. ಮರ ಹತ್ತುವುದರಲ್ಲೂ ನೀರಿನಲ್ಲಿ ಈಜುವುದರಲ್ಲೂ ನಿಷ್ಣಾತ. ಮೈಮೇಲಿನ ಮುಳ್ಳುಗಳು ಶತ್ರುಗಳ ವಿರುದ್ಧ ರಕ್ಷಣೆಯೊದಗಿಸುವುದಲ್ಲದೆ, ಮರಗಿಡಗಳಿಂದ ಆಕಸ್ಮಾತ್ ಬಿದ್ದಾಗ ಮೆತ್ತೆಯಂತೆ ವರ್ತಿಸಿ ಪೆಟ್ಟಾಗುವುದನ್ನು ಕೂಡ ತಡೆಯುತ್ತದೆ. ಇದು

ನಿಶಾಚರಿ. ಹಗಲಿನಲ್ಲಿ ಬಿಲಗಳಲ್ಲೊ ಕಲ್ಲು ಸಂದುಗಳಲ್ಲೊ ಅವಿತಿದ್ದು ರಾತ್ರಿ ವೇಳೆ ತನ್ನ ಎರೆಪ್ರಾಣಿಗಳಾದ ಹಲವು ವಿಧದ ಅಕಶೇರುಕಗಳನ್ನೂ ಕಪ್ಪೆ, ಹಾವು, ಓತಿ, ಸಣ್ಣಪುಟ್ಟ ಹಕ್ಕಿಗಳು, ಇಲಿ ಮುಂತಾದುವನ್ನೂ ಹುಡುಕುತ್ತ ಅಲೆಯುತ್ತದೆ.

ಅಕ್ಟೋಬರಿನಿಂದ ಏಪ್ರಿಲ್ ತನಕ ಇದು ಶಿಶಿರಸ್ವಾಪದಲ್ಲಿ ತೊಡಗಿರುವುದುಂಟು. ಮೈಯನ್ನು ತನ್ನ ಜೊಲ್ಲಿನಿಂದ ಪೂಸಿಕೊಳ್ಳುವ ವಿಚಿತ್ರ ಪರಿಪಾಟಿಯನ್ನು ಇದು ಪ್ರದರ್ಶಿಸುತ್ತದೆ. ಯಾವುದೇ ವಸ್ತು ಸಿಕ್ಕಿದರೂ ಅದನ್ನು ನೆಕ್ಕುತ್ತ ನೆಕ್ಕುತ್ತ ಜೊಲ್ಲಿನ ನೊರೆಯನ್ನು ಉತ್ಪಾದಿಸಿಕೊಂಡು ಈ ನೊರೆಯಿಂದ ಮುಳ್ಳುಗಳಮೇಲೆ ಸವರಿಕೊಳ್ಳುತ್ತದೆ. ಶತ್ರುಗಳಿಂದ ರಕ್ಷಿಸಿಕೊಳ್ಳುವ ಮಾರ್ಗ ಎಂದರೆ ಚೆಂಡಿನಂತೆ ಸುತ್ತಿಕೊಳ್ಳುವುದು.

ಇದು ವರ್ಷದ ಯಾವ ಕಾಲದಲ್ಲಾದರೂ ಸಂತಾನವೃದ್ಧಿ ಮಾಡಬಲ್ಲುದಾದರೂ ಚಳಿಪ್ರದೇಶಗಳಲ್ಲಿ ವರ್ಷಕ್ಕೆರಡು ಬಾರಿ ಮಾತ್ರ ಮರಿ ಹಾಕುತ್ತದೆ. ಗರ್ಭಾವಧಿಯ ಕಾಲ 34–49 ದಿನಗಳು, ಒಂದು ಸೂಲಿಗೆ ಸುಧಾರಣವಾಗಿ 4 ಮರಿಗಳು, ಹುಟ್ಟಿದಾಗ ಮರಿಗಳು ಕಣ್ಣು ತೆರೆದಿರುವುದಿಲ್ಲ ; ಹುಟ್ಟಿದ 14–18 ದಿನಗಳ ತರುವಾಯ ಕಣ್ಣು ತೆರೆಯುತ್ತವೆ. ಎರಿನೇಸಿಯಸ್ ಮುಳ್ಳುಹಂದಿಗಳನ್ನು ಸಾಕಬಹುದು. ಇವುಗಳ ಆಯುಷ್ಯ ಸುಮಾರು 6 ವರ್ಷಗಳು.

ಹೆಮಿಎಕೈನಸ್ ಮತ್ತು ಪ್ಯಾರಎಕೈನಸ್ ಜಾತಿಯ ಮುಳ್ಳುಹಂದಿಗಳು ಭಾರತದಲ್ಲಿ ರಾಜಸ್ಥಾನದ ಮರುಭೂಮಿಯಲ್ಲಿ ಕಾಣದೊರೆಯುವುವು. ಇವುಗಳ ಜೀವನ ಕ್ರಮ ಎರಿನೇಸಿಯಸ್ ಜಾತಿಯದರಂತೆಯೇ ಇದೆ.

ಹಿಸ್ಟ್ರಿಕ್ಸ್ ಜಾತಿಯ ಮುಳ್ಳುಹಂದಿಯಲ್ಲಿ ಸುಮಾರು 6 ಪ್ರಭೇದಗಳಿವೆ. ದಕ್ಷಿಣ ಯೂರೋಪ್, ಆಫ್ರಿಕ, ಭಾರತ, ಸುಮಾತ್ರ, ಜಾವ, ಬೋರ್ನಿಯೊಗಳ ಹಾಗೂ ಆಗ್ನೇಯ ಏಷ್ಯಾದ ಹಲ ಕೆಲವು ದ್ವೀಪಗಳ ಅರಣ್ಯಗಳು, ಬೆಟ್ಟಗಳು ಇವುಗಳ ಸ್ವಾಭಾವಿಕ ನೆಲೆಗಳು.

ಇವುಗಳ ದೇಹದ ಸರಾಸರಿ ಉದ್ದ 600–800 ಮಿಮೀ: ತೂಕ 18–30 ಕಿಗ್ರಾಂ ಸುಮಾರು 125–150 ಮಿಮೀ ಉದ್ದದ ಬಾಲ ಉಂಟು. ದೇಹದ ಮೇಲ್ಭಾಗ ದೃಢವೂ ಉದ್ದವೂ ಆದ ಟೊಳ್ಳು ಕಣೆಗಳ (ಮುಳ್ಳುಗಳ) ಕವಚದಿಂದ ಆವೃತವಾಗಿದೆ. ಇವುಗಳ ಬಣ್ಣ ಕಗ್ಗಂದು ಅಥವಾ ಕಪ್ಪು, ಪ್ರತಿಯೊಂದು ಮುಳ್ಳಿನುದ್ದಕ್ಕೂ ಬಿಳಿ ಇಲ್ಲವೆ ಹಳದಿ ಬಣ್ಣದ ಪಟ್ಟೆಗಳುಂಟು. ಅಲ್ಲಲ್ಲಿ ಪೂರ್ತಿ ಬಿಳಿಯ ಬಣ್ಣದ ಇನ್ನೂ ಹೆಚ್ಚು ಉದ್ದದ ಮುಳ್ಳುಗಳೂ ಇದೆ. ಕೆಲವು ಪ್ರಭೇದಗಳಲ್ಲಿ ಹೆಕ್ಕತ್ತಿನ ಮೇಲೂ ಮುಳ್ಳುಗಳಿವೆ. ಮೈಯಿಯ ತಳಭಾಗದಲ್ಲಿ ಒರಟಾದ, ನೆಟ್ಟನೆಯ ಬಿರುಗೂದಲುಗಳು ಮಾತ್ರ ಇವೆ. ಹುಟ್ಟುವ ಮರಿಗಳ ಮೈಮೇಲೂ ಮುಳ್ಳುಗಳಿರುವುವು. ಆದರೆ ಇವು ಮೃದುವಾಗಿದ್ದು ಸ್ವಲ್ಪಕಾಲದ ತರುವಾಯ ಬಿರುಸಾಗುವುವು. ಈ ಜಾತಿಯ ಮುಳ್ಳುಹಂದಿಗಳ ಮುಂಗಾಲುಗಳಲ್ಲಿ ನಾಲ್ಕು ಬೆರಳುಗಳೂ ಹಿಂಗಾಲುಗಳಲ್ಲಿ ಐದು ಬೆರಳುಗಳೂ ಇವೆ. ಇವು ಕೂಡ ನಿಶಾಚರಿಗಳು. ಇವುಗಳ ಆಹಾರ ಪ್ರಧಾನವಾಗಿ ತೊಗಟೆ, ಬೇರು, ಗೆಡ್ಡೆಗೆಣಸು, ಹಣ್ಣು ಇತ್ಯಾದಿ. ಸತ್ತಪ್ರಾಣಿಯ ದೇಹಗಳನ್ನೂ ಮೂಳೆ ದಂತಗಳನ್ನೂ ತಿನ್ನುವುದೆನ್ನಲಾಗಿದೆ. ವೈರಿಗಳೆದುರಾದಾಗ ಪಲಾಯನವೇ ರಕ್ಷಣೆಯ ಸಾಮಾನ್ಯ ಮಾರ್ಗ. ಆದರೆ ಹೀಗೆ ಓಡಿ ತಪ್ಪಿಸಿಕೊಳ್ಳುವುದು ಕಠಿಣ ಎನಿಸಿದಾಗ ಶತ್ರುವಿಗೆ ಬೆನ್ನಾಗಿ ನಿಂತು, ಕಣೆಗಳನ್ನು ನಿಮಿರಿಸಿಕೊಂಡು ಕಂಪಿಸುತ್ತದೆ. ಕಣೆಗಳು ಟೊಳ್ಳಾಗಿರುವುದರಿಂದ ಒಂದು ರೀತಿಯ ಕಟಕಟ ಸದ್ದು ಉಂಟಾಗುತ್ತದೆ. ವೈರಿ ಇನ್ನೂ ಹತ್ತಿರ ಬಂದರೆ ಕಣೆಗಳನ್ನು ಅದರತ್ತ ಎಸೆಯುವುದೂ ಉಂಟು.

ಇವುಗಳ ಸಂತಾನವೃದ್ಧಿ ಶ್ರಾಯ ವಸಂತ. ಒಂದು ಸೂಲಿಗೆ 1–4 ಮರಿಗಳು ಹುಟ್ಟುವುವು. ಗರ್ಭಾವಧಿ ಸುಮಾರು 112 ದಿನಗಳು. ಇವು ಸುಮಾರು 20 ವರ್ಷ ಬದುಕಿರುವುವು. ಇವುಗಳ ಮಾಂಸ ಬಲು ರುಚಿಕರವಾಗಿರುವುದೆನ್ನಲಾಗಿದೆ. ***

**ಮೂಗಿಲಿ:** ಇನ್‌ಸೆಕ್ಟಿವೊರ ಗಣದ ಸೋರಿಸಿಡೆ ಕುಟುಂಬಕ್ಕೆ ಸೇರಿದ ಸ್ತನಿ (ಶ್ರೂ). ಸುಂಡಿಲಿ ಪರ್ಯಾಯ ನಾಮ. ಇದರಲ್ಲಿ ಸುಮಾರು 20 ಜಾತಿಗಳೂ 200ಕ್ಕೂ ಮೇಲ್ಪಟ್ಟು ಪ್ರಭೇದಗಳೂ ಇವೆ. ಇವುಗಳ ಪೈಕಿ ಮುಖ್ಯವಾದವು: ಸೋರೆಕ್ಸ್, ಮೈಕ್ರೊಸೋರೆಕ್ಸ್, ನಿಯೋಮಿಸ್, ಬ್ಲಾರಿನ, ಕ್ರಿಪ್ಟೋಟಿಸ್, ಕ್ರಾಸಿಡ್ಯೂರ. ಎಲ್ಲ ಬಗೆಗಳೂ ನೋಡಲು ಇಲಿಯಂತೆಯೇ ಇವೆಯಾದರೂ ಮೋಲ್ ಪ್ರಾಣಿಗಳಿಗೆ ಹತ್ತಿರ ಸಂಬಂಧಿಗಳಾಗಿದ್ದು ಹಲವಾರು ಲಕ್ಷಣಗಳಲ್ಲಿ ಇಲಿಗಳಿಗಿಂತ ಭಿನ್ನವಾಗಿವೆ. ಸ್ತನಿಗಳ ಪೈಕಿ ಮೂಗಿಲಿಗಳೇ ಅತ್ಯಂತ ಚಿಕ್ಕಗಾತ್ರದವೆನಿಸಿವೆ. ದೇಹದ ಸರಾಸರಿ ಉದ್ದ 3.5–18 ಸೆಂಮೀ. ತೂಕ 3–18 ಗ್ರಾಂ ಇರುತ್ತದೆ. ಇದರಲ್ಲಿ ಬಾಲವೇ ಸುಮಾರು 9–12 ಸೆಂಮೀ ಉದ್ದ ಇರುತ್ತದೆ. ಅಲಾಸ್ಕ, ಕೆನಡ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಕಾಣದೊರೆಯುವ ಗುಜ್ಜಾರಿ ಮೂಗಿಲಿ (ಪಿಗ್ಮಿ ಶ್ರೂ) ಕೇವಲ 5.5 ಸೆಂಮೀ ಉದ್ದ ಇದ್ದು 3.5 ಗ್ರಾಂ ಭಾರ ಇದೆ.

ಆರ್ಕ್‌ಟಿಕ್ ದ್ವೀಪಗಳು, ಗ್ರೀನ್‌ಲೆಂಡ್, ಐಸ್‌ಲೆಂಡ್, ವೆಸ್ಟ್ ಇಂಡೀಸ್, ಆಸ್ಟ್ರೇಲಿಯ, ನ್ಯೂಜ಼ೀಲೆಂಡ್, ಟಾಸ್ಮೇನಿಯ ಹಾಗೂ ಪೆಸಿಫಿಕ್ ದ್ವೀಪಗಳನ್ನು ಬಿಟ್ಟರೆ ಪ್ರಪಂಚದ ಉಳಿದೆಡೆಗಳಲ್ಲೆಲ್ಲ ಮೂಗಿಲಿಗಳು ಕಾಣದೊರೆಯುವುವು. ಚಿಕ್ಕದೇಹ, ಉದ್ದನೆಯ ಮತ್ತು ಚೂಪಾದ ಮುಸುಡು, ಸಣ್ಣ ಕಣ್ಣುಗಳು, ಉದ್ದನೆಯ ಬಾಲ–ಇವು ಮೂಗಿಲಿಗಳ ಪ್ರಧಾನ ಲಕ್ಷಣಗಳು. ಮೈಮೇಲೆ ಬೂದು ಇಲ್ಲವೆ ಕಂದು ಬಣ್ಣದ ದಟ್ಟವಾದ, ನುಣ್ಣನೆಯ, ಮೋಟು ಕೂದಲುಗಳ ತುಪ್ಪಳು ಉಂಟು. ಕೆಲವು ಬಗೆಗಳಲ್ಲಿ ದೇಹದ ಇಕ್ಕೆಲಗಳಲ್ಲಿ ವಾಸನಾಗ್ರಂಥಿಗಳುಂಟು. ದೃಷ್ಟಿಸಾಮರ್ಥ್ಯ ಕ್ಷೀಣ. ಆದರೆ ಶ್ರವಣ ಹಾಗೂ ಘ್ರಾಣೇಂದ್ರಿಯಗಳು ಚುರುಕಾಗಿವೆ.

ಮೂಗಿಲಿಗಳು ಭೂವಾಸಿಗಳು. ಆದರೆ ನೀರಿನಲ್ಲಿ ಸರಾಗವಾಗಿ ಈಜಬಲ್ಲವಾಗಿದ್ದು ಕೆಲವು ಪ್ರಭೇದಗಳಲ್ಲಿ ಕಾಲ್ಬೆರಳುಗಳು ಜಾಲಪಾದ ರೀತಿಯಲ್ಲಿ ಕೂಡಿರುವುವು. ಕೆಲವು ಬಗೆಗಳು ಹಗಲು ಮತ್ತು ರಾತ್ರಿವೇಳೆಗಳೆರಡರಲ್ಲೂ ಚಟುವಟಿಕೆ ತೋರಿದರೆ ಇನ್ನು ಕೆಲವು ನಿಶಾಚರಿಗಳು ಮಾತ್ರ. ಮೂಗಿಲಿಗಳು ತುಂಬ ಗಾಬರಿ ಸ್ವಭಾವದ ಪ್ರಾಣಿಗಳು; ಅನೇಕ ವೇಳೆ ಕೇವಲ ಜೋರಾದ ಸದ್ದಿನಿಂದಲೇ (ಸಿಡಿಲು, ಗುಡುಗು ಇತ್ಯಾದಿ) ಹೆದರಿ ಸತ್ತುಹೋಗುವುದುಂಟು. ಗಾಬರಿಗೊಂಡಾಗ ಇವುಗಳ ಗುಂಡಿಗೆ ಬಡಿತ ನಿಮಿಷಕ್ಕೆ 1200 ರಷ್ಟು ಇರುವುದೆಂದು ಹೇಳಲಾಗಿದೆ.

ಮೂಗಿಲಿಗಳು ಪ್ರಧಾನವಾಗಿ ಕೀಟಾಹಾರಿಗಳು. ಆದರೆ ಕೆಲವು ಬಗೆಯವು ಬೀಜ ಇತ್ಯಾದಿ ಸಸ್ಯಾಹಾರವನ್ನೂ ಸೇವಿಸುವುದುಂಟು. ಕೆಲವು ಪ್ರಭೇದಗಳ ಲಾಲಾರಸದಲ್ಲಿ ವಿಷವಸ್ತುವೊಂದಿದ್ದು ಸಣ್ಣಪುಟ್ಟ ಎರೆಗಳು ಇದರಿಂದ ಸಾಯುವುದಿದೆ. ಮೂಗಿಲಿಗಳಿಂದ ಕಚ್ಚಿಸಿಕೊಂಡ ಮನುಷ್ಯರಿಗೆ ಉರಿಯೂ ನವೆಯೂ ನೋವೂ ಆಗುವುದುಂಟು. ಆಹಾರಾಭಾವ ಸಮಯಗಳಲ್ಲಿ ಮೂಗಿಲಿಗಳು ತಮ್ಮ ಮರಿಗಳನ್ನೋ ಇತರ ಮೂಗಿಲಿಗಳನ್ನೋ ತಿನ್ನುವುವೆನ್ನಲಾಗಿದೆ.

ಉಷ್ಣವಲಯಗಳಲ್ಲಿ ವಾಸಿಸುವ ಮೂಗಿಲಿಗಳಲ್ಲಿ ವರ್ಷವಿಡೀ ಸಂತಾನವೃದ್ಧಿ ಕಂಡುಬರುತ್ತದಾದರೆ ಉತ್ತರದ ಶೀತ ಪ್ರದೇಶಗಳಲ್ಲಿ ಇರುವಂಥವು ಮಾರ್ಚ್–ನವೆಂಬರ್ ಅವಧಿಯಲ್ಲಿ ಸಂತಾನವೃದ್ಧಿ ಚಟುವಟಿಕೆ ತೋರುವುವು. 17–28 ದಿನಗಳ ಗರ್ಭಾವಧಿಯ

ತರುವಾಯ ಹೆಣ್ಣು ಒಂದು ಸೂಲಿಗೆ 2–10 ಮರಿಗಳಿಗೆ ಜನ್ಮ ಕೊಡುತ್ತದೆ. ಹುಟ್ಟಿದಾಗ ಮರಿಗಳಿಗೆ ಕೂದಲು ಇರದು. ಅಂತೆಯೆ ಕಣ್ಣು ಮುಚ್ಚಿಕೊಂಡಿರುವುವು. ನೆಲದಲ್ಲಿ ಮಾಡಿದ ಬಿಲದಲ್ಲಿ ಹುಲ್ಲು, ಎಲೆಗಳನ್ನು ಕೂಡಿಸಿ ರಚಿಸಿದ ಗೂಡಿನಲ್ಲಿ 2–4 ವಾರಗಳ ಕಾಲ ಮರಿಗಳಿಗೆ ಪೋಷಣೆ ನೀಡಿ ನೋಡಿಕೊಳ್ಳುತ್ತವೆ. ಮೂಗಿಲಿಗಳ ಆಯಸ್ಸು ಸುಮಾರು 12–18 ತಿಂಗಳುಗಳು.

ಕೀಟಗಳನ್ನು, ಕೀಟ ಲಾರ್ವಗಳನ್ನು ದೊಡ್ಡ ಮೊತ್ತದಲ್ಲಿ ತಿನ್ನುವುದರ ಮೂಲಕ ಮೂಗಿಲಿಗಳು ಕೃಷಿಕರಿಗೆ ಸಹಾಯಕವಾಗಿವೆ.

ಭಾರತದಲ್ಲಿ ಸಂಕಸ್ ಮ್ಯೂರಿನಸ್ (ಗ್ರೇ ಮಸ್ಕ್ ಶ್ರೂ) ಎಂಬ ಪ್ರಭೇದದ ಮೂಗಿಲಿ ಕಾಣಸಿಕ್ಕುತ್ತದೆ. (ಎಸ್.ಎನ್.ಎಚ್.)

**ಮೂಗು:** ಉಸಿರಾಟಕ್ಕೆ, ವಾಸನೆ ಗ್ರಹಣಕ್ಕೆ ಹಾಗು ಶಬ್ದೋಚ್ಚಾರಣೆಗೆ ಮೀಸಲಾದ ಅಂಗ (ನೋಸ್). ಸ್ತನಿಗಳಲ್ಲಿ ಮಾತ್ರ ಮೂಗು ಬಾಯಿಗಳನ್ನು ಅಂಗಳು ಬೇರ್ಪಡಿಸಿದೆ. ಹೀಗಾಗಿ ಇವು ಉಸಿರಾಡುವಾಗಲೂ ಆಹಾರ ಜಗಿಯುವುದು ಸಾಧ್ಯವಾಗುತ್ತದೆ. ಉಚ್ಛ್ವಸಿತ ಶ್ವಾಸದ ಉಷ್ಣತೆಯನ್ನು ಮೂಗು ಮತ್ತು ಅದರ ಪಕ್ಕದ ಗಾಳಿ ಗೂಡುಗಳು ದೇಹೋಷ್ಣತೆಯ ಮಟ್ಟಕ್ಕೆ ಏರಿಸುತ್ತದೆ. ಮಾನವನಲ್ಲಿ ದವಡೆಗಳು ಚಿಕ್ಕವಾಗಿದ್ದು ಮೂಗು ಮುಖಮಧ್ಯೆ ಮುಂಚಾಚಿ ಎದ್ದು ಕಾಣುವಂತಿದೆ. ಇದರಲ್ಲಿ ಹೊರ ಮತ್ತು ಒಳ ಮೂಗುಗಳಿವೆ.

ಹೊರ ಮೂಗು: ಪಿರಮಿಡ್ಡಿನಂತಿದೆ. ಇದರ ಬುಡ ಹಣೆಗೆ ಸೇರಿ ಕಣ್ಣೂಡುಗಳ ನಡುವೆ ನೆಲೆಸಿದೆ. ಕೆಳ ಮುಂದಿನ ಕೋಣೆ ಮೂಗಿನ ತುದಿ. ತುದಿಯ ಹಿಂದೆ ದೀರ್ಘವೃತ್ತಾಕಾರದ ಹೊಳ್ಳೆಗಳಿವೆ. ಪಕ್ಕಮೈಗಳು ಮೂಗಿನ ಬೆನ್ನು. ಇದರ ಆಕಾರದಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ವೈವಿಧ್ಯ ಕಂಡುಬರುತ್ತದೆ. ಮೂಗಿನ ಮೇಲ್ಭಾಗದಲ್ಲಿ ನಾಸಿಕಾಸ್ಥಿಗಳೂ ಪಕ್ಕದಲ್ಲಿ ಮೇಲ್ದವಡೆ ಮೂಳೆಗಳ ಮೇಲ್ಚಾಚುಗಳೂ ಇವೆ. ಕೆಳಭಾಗದಲ್ಲಿ ಮೃದ್ವಸ್ಥಿಗಳಿವೆ. ಹೊಳ್ಳೆಗಳ ಪಕ್ಕಗಳು ಪೇಶಿಗಳ ಕ್ರಿಯೆಯಿಂದ ಆಡಬಲ್ಲವಾದ್ದರಿಂದ ಹೆಚ್ಚು ಉಸಿರಾಡುವಾಗ ಹೊಳ್ಳೆಗಳು ದೊಡ್ಡವಾಗುತ್ತವೆ. ಮೂರುಜೊತೆ ಪೇಶಿಗಳಿವೆ. ಪ್ರೋಸೀರಸ್ ಎಂಬವು ತಾತ್ಸಾರಭಾವ ಸೂಚಕವಾಗಿ ಚರ್ಮದ ಅಡ್ಡ ಸುಕ್ಕುಗಳನ್ನು ಉಂಟುಮಾಡುತ್ತವೆ (ಇವು ಆನೆಯ ಸೊಂಡಿಲಿನಲ್ಲಿ ಬಲು ದೊಡ್ಡದಾಗಿದೆ). ಚಿಕ್ಕ ಪೇಶಿಗಳು ಹೊಳ್ಳೆಗಳನ್ನು ದೊಡ್ಡವು ಚಿಕ್ಕವು ಆಗಿ ಮಾಡುತ್ತವೆ. ಮೂಗಿನ ಪೇಶಿಗಳನ್ನು ಮುಖ ನರಗಳ (7ನೆಯ ತಲೆ) ಶಾಖೆಗಳು ಚೋದಿಸುತ್ತವೆ. ಸ್ಪರ್ಶ ಇತ್ಯಾದಿ ಸಂವೇದನ ತಂತುಗಳು 5ನೆಯ ತಲೆ ನರಗಳಿಂದ ಮೂಗಿನ ಚರ್ಮಕ್ಕೆ ಹೋಗುತ್ತವೆ. ಮುಖದ ಮತ್ತು ಕಣ್ಣೂಡಿನ ಅಪಧಮನಿಗಳ ಶಾಖೆಗಳು ರಕ್ತವನ್ನು ಮೂಗಿಗೆ ಹಂಚುತ್ತವೆ. ಮುಖ ಮತ್ತು ಕಣ್ಣೂಡುಗಳ ಅಭಿಧಮನಿಗಳು (ಸಿರಗಳು) ಮಲಿನ ರಕ್ತವನ್ನು ಮೂಗಿನಿಂದ ಒಯ್ಯುತ್ತವೆ. ಮೂಗಿನ ಬೆನ್ನು ಮತ್ತು ಪಕ್ಕಗಳ ಚರ್ಮ ಸಡಿಲವಾಗಿ ತೆಳುವಾಗಿದೆ. ತುದಿ ಮತ್ತು ಹೊಳ್ಳೆಗಳಲ್ಲಿ ದಪ್ಪಗಿದ್ದು ಅಳ್ಳಾಡದಂತೆ ಅಡಿ ಭಾಗಗಳ ಗಂಟಿದೆ.

ಒಳ ಮೂಗು ಕುಹರ : ಒಳ ಮೂಗು ಮಧ್ಯ ತಡಿಕೆಯಿಂದ ಬಲ ಎಡಕುಹರಗಳಾಗಿವೆ. ಪ್ರತಿಯೊಂದು ಕುಹರದ ಉದ್ದ 5.7 ಸೆಂಮೀ. ಎತ್ತರ 5 ಸೆಂಮೀ. ನೆಲಗಟ್ಟಿನ ಅಗಲ 1.5 ಸೆಂಮೀ, ಅಗಲ 1–2 ಮಿಮೀ.

ಬಲ/ಎಡ ನಾಸಿಕ ಕುಹರ : 1 ಮೇಲ್ಭಾಗ ಅಥವಾ ವಾಸನೆ ಭಾಗ : ಮೇಲಿನ ನಾಸಿಕ ಸುರುಳಿಯವರೆಗೂ ಮತ್ತು ಮಧ್ಯ ತಡಿಕೆಯ ಮೇಲ್ಭಾಗದವರೆಗೂ ವ್ಯಾಪಿಸಿದೆ. ಇದರ ಕಣಪೊರೆಯಲ್ಲಿ ಬಲ/ಎಡ ತಲೆ ನರತಂತುಗಳ ಕೊನೆಗಳಿವೆ. ವಾಸನೆ ಸರಿಯಾಗಿ ತಿಳಿಯಬೇಕಾದರೆ ಉಸಿರಿನ ವಾಯು ಮೇಲಕ್ಕೆ ಹೋಗುವಂತೆ ಮೂಸಿನೋಡಬೇಕು.

2 ಕೆಳಭಾಗ ಅಥವಾ ಶ್ವಾಸಭಾಗ : ಮೇಲಿನ ಸುರುಳಿಯ ಕೆಳಗೆ ಮೇಲಿನ ನಾಸಿಕ ಕುರುಚಾಗಿ ಓರೆಯಾಗಿದೆ. ಮಧ್ಯಸುರುಳಿ ಮೇಲಿನದಕ್ಕಿಂತ ಹೆಚ್ಚು ಉದ್ದವಾಗಿದೆ. ಅದರ ಕೆಳಗಿನ ಮಧ್ಯನಾಸಿಕ ಮಾರ್ಗವೂ ಹೆಚ್ಚು ಉದ್ದವಿದೆ. ಇದರ ಮುಂದೆ ಇರುವ ಭಾಗ ಮಧ್ಯಾಂಗಣ. ಕೆಳಸುರುಳಿ ಹೆಚ್ಚು ಉದ್ದವಿದ್ದು ಇದರ ಕೆಳಗಿನ ಕೆಳನಾಸಿಕಮಾರ್ಗವೂ ಅಷ್ಟೇ ಉದ್ದವಿದೆ. ಸುರುಳಿಗಳಲ್ಲಿ ರಕ್ತನಾಳಗಳು ಹೇರಳವಿದ್ದು ಒಳಉಸಿರಿನ ಉಷ್ಣತಾಮಟ್ಟವನ್ನು ದೇಹೋಷ್ಣತೆಯ ಮಟ್ಟಕ್ಕೆ ಏರಿಸುತ್ತವೆ. ಸೂಕ್ಷ್ಮಜೀವಿಗಳಿಂದ ಶೀತ (ನೆಗಡಿ) ಆದರೆ ಸುರಳಿಗಳ ಲೋಳೆಪೊರೆ ಊದಿಕೊಂಡು ಮೂಗು ಕಟ್ಟಿಕೊಳ್ಳುತ್ತದೆ. ಹಲವರಲ್ಲಿ ಮಧ್ಯ ತಡಿಕೆ ವಕ್ರವಾಗಿದ್ದು ಎಡಕುಹರ ಇಕ್ಕಟ್ಟಾಗಿರುವುದರಿಂದ ಎಡಗಡೆ ಮೂಗು ಹೆಚ್ಚು ಕಟ್ಟಿಕೊಂಡು ಉಸಿರಾಟಕ್ಕೆ ತೊಂದರೆ ಆಗಬಹುದು. ಕೆಳನಾಸಿಕ ಸುರುಳಿಯ ಮುಂಕೊನೆ ಕೆಳಗೆ ನಾಸಿಕಾಶ್ರುನಾಳ ಕಣ್ಣಿನಿಂದ ಇಳಿದು ತೆರೆಯುವುದರಿಂದ ಕಣ್ಣೀರು ಮೂಗಿನಲ್ಲಿ ಸುರಿಯುತ್ತದೆ. ಪಕ್ಕದ ಗಾಳಿಗೂಡುಗಳು ಮೂಗಿನೊಳಕ್ಕೆ ತೆರೆಯುವುದರಿಂದ ಒಳಉಸಿರಿನ ವಾಯು ಅವುಗಳಿಗೆ ಸುಳಿಯಾಗಿ ತಿರುಗಿ ಅದು ಬೆಚ್ಚಗಾಗುತ್ತದೆ. ಗಂಟಲಧ್ವನಿಯೂ ಅವುಗಳಲ್ಲಿ ಅನುರಣನಗೊಂಡು ಗಟ್ಟಿಯಾಗುತ್ತದೆ. ಹೆಂಗಸರಲ್ಲಿ ಗಾಳಿಗೂಡುಗಳು ಚಿಕ್ಕವಿರುವುದರಿಂದ ಅನುರಣನ ಕಮ್ಮಿ. ಇವು ಎಲ್ಲರಲ್ಲೂ ಒಂದೇ ರೀತಿ ಇಲ್ಲದಿರುವುದರಿಂದ ಅನುರಣನವೂ ಒಂದೇ ಇರದೆ ಶಬ್ದ ಗುಣ ವಿಶಿಷ್ಟ ವೈಯಕ್ತಿಕವಾಗಿರುತ್ತದೆ. ಮೇಲಿನ ಸುರುಳಿಯ ಮೇಲೆ ಜತೂಕಾಸ್ಥಿಯ ಗಾಳಿಗೂಡು ತೆರೆಯುತ್ತದೆ. ಲಲಾಟಾಸ್ಥಿ ಜಾಲರಾಸ್ಥಿಗಳ ಗೂಡುಗಳು ಮಧ್ಯ ನಾಸಿಕ ಮಾರ್ಗದಲ್ಲಿ ತೆರೆಯುತ್ತವೆ. ಗಾಳಿಗೂಡುಗಳಲ್ಲಿ ಅತಿದೊಡ್ಡದಾದ ಮೇಲ್ದವಡೆ ಮೂಳೆಯದೂ ಮಧ್ಯ ಸುರುಳಿಯ ಕೆಳಗೆ ತೆರೆಯುತ್ತದೆ. ಅದರ ರಂಧ್ರ ಅದರ ತಳಕ್ಕಿಂತ ಮೇಲ್ಮಟ್ಟದಲ್ಲಿ ಇರುವುದರಿಂದ ಅದರಲ್ಲಿ ಕೀವು ತುಂಬಿಕೊಂಡರೆ ಸುಲಭವಾಗಿ ಆಚೆ ಬರಲಾರದು. ಇದನ್ನು ಪರಿಹರಿಸಲು ಮೂಗಿನ ವೈದ್ಯರು ಕೆಳಮಟ್ಟದಲ್ಲಿ ಕೃತಕ ರಂಧ್ರವನ್ನು ಕೊರೆಯುತ್ತಾರೆ. ಹಣೆ ಮೂಳೆಯ ಗೂಡಿನಲ್ಲಿ ಕೀವು ಸೇರಿಕೊಂಡರೆ ಅಪಾಯ ಹೆಚ್ಚು. ಅದು ಮಿದುಳು ಬುರುಡೆಯೊಳಕ್ಕೆ ಸೇರಬಹುದು. ಪಿಟ್ಯುಯಿಟರಿಗ್ರಂಥಿ ಜತೂಕಾಸ್ಥಿಯ ಗುಳಿಯಲ್ಲಿದೆ. ಅದರ ಅರ್ಬುದ ಮೂಗಿನೊಳಕ್ಕೆ ನುಗ್ಗಬಹುದು. ಆಗ ಅದನ್ನು ಮೂಗಿನ ಮೂಲಕ ತೆಗೆಯಬೇಕು.

ಬಲ/ಎಡ ಕುಹರದ ಒಳಭಿತ್ತಿ: ಮಧ್ಯ ತಡಿಕೆಯಿಂದಾಗಿದೆ. ಸಾಮಾನ್ಯವಾಗಿ ಇದು ವಕ್ರವಾಗಿ ಎಡಕುಹರವನ್ನು ಚಿಕ್ಕದುಮಾಡಿರುತ್ತದೆ. ವಕ್ರತಡಿಕೆಯಿಂದ ಏಣು ಅಥವಾ ಮುಳ್ಳುಗಳು ಬಲ/ಎಡ ಕುಹರದೊಳಕ್ಕೆ ಕೆಲವು ಸಲ ಬೆಳೆಯುತ್ತವೆ. ಬಾಚಿಹಲ್ಲು ಹಿಂದಿನ ಅಸ್ಥಿನಾಳದ ಮೇಲೆ ತಲೆಯ ಮೃದ್ವಸ್ಥಿಯ ಕೆಳ ಅಂಚಿನಲ್ಲಿ ಮೂಗು–ಅಂಗುಳು ಗೂಡು ಇದೆ. ಇದು ತಡಿಕೆಯ ಕುರುಡು ಕಿಸೆಯೊಳಕ್ಕೆ ತೆರೆಯುತ್ತದೆ. ಕಿಸೆಯಲ್ಲಿ ಜಾಕೋಬ್ಸನ್ನನ ಸೀರಿತಾನಾಸಿಕಾಂಗವು ಸೀರಿತಾನಾಸಿಕ ಮೃದ್ವಸ್ಥಿಯ ಮೇಲಿದೆ. ಹಲವು ಕೆಳದರ್ಜೆ ಪ್ರಾಣಿಗಳಲ್ಲಿ ಈ ಅಂಗ ದೊಡ್ಡದಾಗಿ ಬೆಳೆದು ವಾಸನೆ ಅಂಗವಾಗಿರುತ್ತದೆ. ಇದರಿಂದ ತಂತುಗಳು 1ನೆಯ ತಲೆನರದಲ್ಲಿ ಮಿದುಳಿಗೆ ಹೋಗುತ್ತವೆ.

ಹಿಂಭಾಗದಲ್ಲಿ ಕುಹರದ ಚಾವಣಿ ಅಗಲವಿದ್ದು ಮುಂಭಾಗದಲ್ಲಿ ಅಡ್ಡಡ್ಡವಾಗಿ ಇಕ್ಕಟ್ಟಾಗಿದೆ. ಕುಹರದ ನೆಲಗಟ್ಟು ಹಿಂದು ಮುಂದಕ್ಕೆ ಚರಂಡಿಯಂತಿದೆ. ಅದರ ಮುಂದಿನ ಮುಕ್ಕಾಲು ಭಾಗ ಮೇಲ್ದವಡೆ ಮೂಳೆಯ ಅಂಗುಳು ಫಲಕದಿಂದಾಗಿದೆ. ಹಿಂದಿನ ಕಾಲುಭಾಗ ಅಂಗುಳು ಮೂಳೆಯ ಸಮಕಟ್ಟು ಭಾಗದಿಂದಾಗಿದೆ.

ಮೂಗಿನ ಲೋಳೆಪೊರೆ ಕುಹರ ಭಿತ್ತಿಗಳ ಮೇಲೆ ಹರಡಿ, ಮೂಳೆಮೃದ್ವಸ್ಥಿ ಪರಿವೇಷ್ಟನಗಳಿಗೆ ಅಂಟಿದೆ. ಹೊರ ಹೊಳ್ಳೆಗಳ ಮೂಲಕ ಅದು ಮುಖದ ಚರ್ಮದೊಡನೆಯೂ ಒಳಹೊಳ್ಳೆಗಳ ಮೂಲಕ ಗಂಟಲಿನ ಲೋಳೆಪೊರೆಯೊಡನೆಯೂ ನಾಸಿಕಾಶ್ರುನಾಳದ ಮೂಲಕ ಕಣ್ಣು ಲೋಳೆಪೊರೆಯೊಡನೆಯೂ ನಿರಂತರವಾಗಿದೆ. ನಾಸಿಕ ಮಾರ್ಗಗಳಲ್ಲಿರುವ ರಂಧ್ರಗಳ ಮೂಲಕ ಹಣೆ, ಜಾಲರ, ಜತೂಕ ಮತ್ತು ಮೇಲ್ದವಡೆ ಮೂಳೆಗಳ ಗಾಳಿಗೂಡುಗಳ ಲೋಳೆಪೊರೆಯೊಡನೆ ಅವಿರತವಾಗಿದೆ. ಮೂಗುಗಂಟಲಿನ ಲೋಳೆಪೊರೆ ಮೂಲಕ ನಡುಗಿವಿಯ ಲೋಳೆಪೊರೆಯೊಡನೆ ನಿರಂತರತೆ ಇದೆ. ಮಧ್ಯತಡಿಕೆ ಮೇಲೆ ಲೋಳೆಪೊರೆ ದಪ್ಪವಾಗಿದೆ. ನಾಸಿಕ ಮಾರ್ಗಗಳಲ್ಲಿ ಮತ್ತು ಗಾಳಿಗೂಡುಗಳ ಲೋಳೆಪೊರೆ ತೆಳುವಾಗಿದೆ. ಮೂಗಿನ ಲೋಳೆಪೊರೆಯ ಹೆಚ್ಚು ಭಾಗ ದಪ್ಪವಾಗಿರುವುದರಿಂದ ಅಸ್ಥಿಪಂಜರದಲ್ಲಿರುವುದಕ್ಕಿಂತ ನಾಸಿಕ ಕುಹರಗಳು ಇಕ್ಕಟ್ಟಾಗಿವೆ ಮತ್ತು ಗಾಳಿಗೂಡುಗಳ ರಂಧ್ರಗಳು ಚಿಕ್ಕವಾಗಿವೆ.

ಮೂಗಿನ ರಕ್ತಪೂರೈಕೆ ಕಣ್ಣೂಡು ಧಮನಿಯ ಶಾಖೆಗಳಿಂದಾಗುತ್ತದೆ. ಮಲಿನರಕ್ತ ಮುಖದ ಮತ್ತು ಕಣ್ಣೂಡಿನ ಅಭಿಧಮನಿಗಳಿಗೆ ಹೋಗುತ್ತದೆ. 1ನೆಯ ತಲೆನರಗಳು ಮೂಗಿನ ಇಕ್ಕಟ್ಟು ಚಾವಣಿ ಮತ್ತು ಪಕ್ಕಗಳು ವಾಸನೆ ಲೋಳೆಪೊರೆಯಿಂದ ವಾಸನೆ ಮಿದುಳಿಗೆ ಹೋಗುತ್ತವೆ. ಸಾಮಾನ್ಯ ಸಂವೇದನಾ ನರಗಳು 5ನೆಯ ತಲೆನರಗಳ ಶಾಖೆಗಳು. ಇವುಗಳಿಂದ ಮೂಗಿನಲ್ಲಿ ಉರಿ ನೋವುಗಳೇ ಅಲ್ಲದೆ ಪರವಸ್ತುವಿರುವುದು ಕೂಡ ತಿಳಿಯುತ್ತದೆ ಮತ್ತು ಸೀನಿನ ಪ್ರತಿಕ್ರಿಯೆಗೆ ಚೋದನೆಯಾಗುತ್ತದೆ. (ಎಂ.ಡಿ.)

**ಮೂತ್ರ:** ರಕ್ತದಲ್ಲಿ ಲೀನವಾಗಿರುವ ನಿರುಪಯುಕ್ತ ಹಾಗೂ ನಿರ್ವಿಷೀಕೃತ (ಡಿಟಾಕ್ಸಿಕೇಟೆಡ್) ವಸ್ತುಗಳನ್ನು ವರ್ಜಿಸಲು ದೇಹದ ವಿಶಿಷ್ಟ ವಿಸರ್ಜನಾಂಗಗಳು ನಿರಂತರವಾಗಿ ತಯಾರಿಸಿ ಆಗಿಂದಾಗ ಹೊರದೂಡುವ ದ್ರವ (ಯೂರಿನ್). 24 ಗಂಟೆಗಳಲ್ಲಿ ಇದರ ಪ್ರಮಾಣ 600–2500 ಮಿಲೀ ವರೆಗೆ (ಮನುಷ್ಯರಲ್ಲಿ) ವ್ಯತ್ಯಾಸವಾಗುತ್ತಿರಬಹುದಾದರೂ ಸಾಧಾರಣವಾಗಿ 1500 ಮಿಲೀ ಗಳಷ್ಟು ಮೂತ್ರೋತ್ಪತ್ತಿ ಆಗುವುದು ವಾಡಿಕೆ. ಮೂತ್ರೋತ್ಪಾದನೆಯ ಪ್ರಮಾಣವನ್ನು ಪ್ರಭಾವಿಸುವ ಕಾರಕಗಳೆಂದರೆ ಹವೆ, ದೈಹಿಕಶ್ರಮ ಮತ್ತು ಮಾನಸಿಕ ಪರಿಸ್ಥಿತಿ. ಮೂತ್ರೋತ್ಪತ್ತಿಯನ್ನು ವರ್ಧಿಸುವ ಔಷಧಿಗಳ ಸೇವನೆಯಿಂದ ಅತಿಮೂತ್ರಸ್ಥಿತಿ ಉಂಟಾಗುವುದು. ಸೇವಿಸಿದ ಆಹಾರದಲ್ಲಿ ಪ್ರೋಟೀನ್ ಅಂಶ ಹೆಚ್ಚಾಗಿದ್ದರೆ ಅಥವಾ ಮದ್ಯಸಾರಯುಕ್ತ ಇಲ್ಲವೆ ಮದ್ಯಸಾರರಹಿತ ಪಾನೀಯಗಳನ್ನೊ ಕೇವಲ ನೀರನ್ನೊ ಹೆಚ್ಚಾಗಿ ಸೇವಿಸಿದರೆ ಅಧಿಕ ಮೂತ್ರೋತ್ಪತ್ತಿ ಆಗಿ

ವಿಸರ್ಜಿತವಾಗುತ್ತದೆ. ಬೇಸಗೆಯಲ್ಲಿ ಕಡಿಮೆ ಆಗಿಯೂ ಚಳಿಗಾಲದಲ್ಲಿ ಹೆಚ್ಚಾಗಿಯೂ ಮೂತ್ರ ವಿಸರ್ಜನೆ ಆಗುವುದು. ಆ ಕಾಲಗಳಲ್ಲಿ ಕ್ರಮವಾಗಿ ಹೆಚ್ಚು ಬೆವರುವುದು ಅಥವಾ ಬೆವರದೆ ಇರುವುದು ಮೂತ್ರೋತ್ಪತ್ತಿ ಕಡಿಮೆ ಅಥವಾ ಹೆಚ್ಚು ಆಗಲು ಕಾರಣ. (ಇದಕ್ಕೆ ವ್ಯತಿರಿಕ್ತವಾಗಿ ಮೂತ್ರಪ್ರಮಾಣದ ಮೇಲೆ ಬೆವರಿನ ಪ್ರಮಾಣ ಆಧರಿಸಿಲ್ಲ ಎಂದು ತಿಳಿಯುವುದು ಮುಖ್ಯ). ದಿನದಲ್ಲಿ ಎಚ್ಚರವಾಗಿರುವ ಕಾಲದಲ್ಲಿ ಉತ್ಪತ್ತಿ ಆಗುವ ಮೂತ್ರದ ಅರ್ಧ ಪ್ರಮಾಣ ಮಾತ್ರ ರಾತ್ರಿ ನಿದ್ರಾಕಾಲದಲ್ಲಿ ಉತ್ಪತ್ತಿಯಾಗಿ ಕೇವಲ ಒಂದೆರಡು ಬಾರಿ ಮಾತ್ರ ವಿಸರ್ಜಿತವಾಗಬಹುದು. ಹಗಲಿನಲ್ಲಿ ಸಾಮಾನ್ಯವಾಗಿ ಇದರ ನಾಲ್ಕು ಪಟ್ಟು ಬಾರಿ ಮೂತ್ರ ವಿಸರ್ಜನೆ ಆಗುವುದಿದೆ.

ಮೂತ್ರ ಸಾಂದ್ರತೆ 1.003ರಿಂದ 1.030 ವರೆಗೆ ಇರುವುದು. ಮೂತ್ರೋತ್ಪತ್ತಿ ಕಡಿಮೆ ಆಗಿರುವಾಗ ಮೂತ್ರ (ರಾತ್ರಿ ಕಾಲದ ಮೂತ್ರವನ್ನು ಉದಾಹರಿಸಬಹುದು) ಅಧಿಕ ಸಾಂದ್ರವಾಗಿಯೂ ಅಧಿಕವಾಗಿರುವಾಗ ಕಡಿಮೆ ಸಾಂದ್ರವಾಗಿಯೂ ಇರುತ್ತದೆ. ವಾಸ್ತವವಾಗಿ ಮೂತ್ರಸಾಂದ್ರತೆ ಅದರಲ್ಲಿ ವಿಲೀನವಾಗಿರುವ ಘನ ವಸ್ತುಗಳ ಪ್ರಮಾಣವನ್ನು ಆಧರಿಸಿರುವುದು. ದಿನದ 24 ಘಂಟೆಗಳ ಮೂತ್ರವನ್ನು ಶೇಖರಿಸಿ ಅದರ ಸಾಂದ್ರತೆಯನ್ನು ನಿರ್ಣಯಿಸಿ ಆ ಸಂಖ್ಯೆಯ ಕೊನೆಯ ಎರಡು ದಶಮಾಂಶಸ್ಥಾನದ ಅಂಕೆಗಳನ್ನು 2.6ರಿಂದ ಗುಣಿಸಿದರೆ ಬರುವ ಲಬ್ಧ ಒಂದು ಲೀ ಮೂತ್ರದಲ್ಲಿ ವಿಸರ್ಜಿತವಾದ ಘನವಸ್ತುಗಳ ಪ್ರಮಾಣವನ್ನು ಗ್ರಾಂ ಗಳಲ್ಲಿ ಸೂಚಿಸುತ್ತದೆ. 2.6ನ್ನು ಲಾಂಗ್ ಎಂಬಾತ ಅನುಭವದಿಂದ ಪತ್ತೆ ಮಾಡಿದ್ದರಿಂದ ಇದಕ್ಕೆ ಲಾಂಗನ ಗುಣಾಂಕ ಎಂದು ಹೆಸರು.

ಸಾಮಾನ್ಯವಾಗಿ ಮೂತ್ರಕ್ಕೆ ಸು. *pH* 6ರಷ್ಟು ಮಟ್ಟದ ಆಮ್ಲೀಯ ಗುಣ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಆಮ್ಲೀಯತೆ *pH* 4.7ರಷ್ಟು ಮಟ್ಟ ಏರಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಮೂತ್ರ ಪ್ರತ್ಯಾಮ್ಲೀಯ ಗುಣವನ್ನೇ ಹೊಂದಿದ್ದು ಅದರ *pH* 8ರ ಮಟ್ಟದಲ್ಲಿ ಇರಬಹುದು. ಆಹಾರದಲ್ಲಿ ಪ್ರೋಟೀನ್ ಅಂಶ ಬಲು ಹೆಚ್ಚಾಗಿರುವಾಗ ಮತ್ತು ವ್ಯಕ್ತಿ ಜ್ವರದಿಂದ ನರಳುತ್ತಿರುವಾಗ ಆಮ್ಲೀಯತೆ ಜಾಸ್ತಿ. ಹುಳಿಹಣ್ಣು ಮತ್ತು ತರಕಾರಿಗಳನ್ನು ಪ್ರಧಾನ ಆಹಾರವಾಗಿ ಸೇವಿಸಿದ್ದಾಗ ಮೂತ್ರಪ್ರತ್ಯಾಮ್ಲೀಯ ಗುಣದ್ದಾಗಿರಬಹುದು.

ಮೂತ್ರಕ್ಕೆ ಸಾಮಾನ್ಯವಾಗಿ ಒಣಹುಲ್ಲಿನ ಬಣ್ಣವಿರುತ್ತದೆ. ಮೂತ್ರೋತ್ಪತ್ತಿ ಅಧಿಕವಾಗಿದ್ದಾಗ ಅದರ ವರ್ಣ ಇನ್ನೂ ಪೇಲವ. ಜ್ವರ ಮುಂತಾದ ಕಾರಣಗಳಿಂದ ಮೂತ್ರಸಾಂದ್ರತೆ ಹೆಚ್ಚಾಗಿದ್ದಾಗ ಕೆಂಪು ಮಿಶ್ರಿತ ಹಳದಿ ಬಣ್ಣದ್ದಾಗಿರುತ್ತದೆ. ಆದರೆ ಮಧುಮೂತ್ರರೋಗಿಗಳಲ್ಲಿ ಮೂತ್ರದ ಸಾಂದ್ರತೆ ಹೆಚ್ಚಾಗಿದ್ದರೂ ಅದರ ಬಣ್ಣ ತಿಳಿಹಳದಿ ವರ್ಣವಾಗಿರುವುದೇ ಸಾಮಾನ್ಯ. ಯೂರೊಕ್ರೋಮ್ ಮತ್ತು ಪಿತ್ತವರ್ಣದ ವಿಸರ್ಜಿತ ರೂಪವಾದ ಯೂರೊಬಿಲಿನ್ ಮೂತ್ರದ ಬಣ್ಣಕ್ಕೆ ಕಾರಣ. ರೋಗದ ಲಕ್ಷಣವಾಗಿ ಸ್ವತಃ ಪಿತ್ತವರ್ಣವೇ ಮೂತ್ರದಲ್ಲಿ ಇರುವುದುಂಟು. ಇಂಥ ಸಂದರ್ಭದಲ್ಲಿ ಮೂತ್ರ ಗಾಢ ಹಳದಿಬಣ್ಣ ಇಲ್ಲವೇ ಕಂದುಬಣ್ಣ ತಳೆಯಬಹುದು. ಮೂತ್ರ ಕಾರಣಾಂತರಗಳಿಂದ ರಕ್ತಮಿಶ್ರಿತವಾಗಿದ್ದರೆ ಹೆಚ್ಚು ಕೆಂಪಾಗಿರುತ್ತದೆ. ಇದಕ್ಕೆ ರಕ್ತಮೂತ್ರ ಸ್ಥಿತಿ (ಹಿಮಚ್ಯೂರಿಯ) ಎಂದು ಹೆಸರು. ಶೇಖರಿಸಲ್ಪಟ್ಟಿದ್ದ ಮೂತ್ರ ಕಪ್ಪು ಛಾಯೆತಾಳಬಹುದು. ಇದು ಮೂತ್ರದಲ್ಲಿ ಹೋಮೊಜೆನ್‌ಟಿಸಿಕ್ ಆಮ್ಲ ಇರುವುದನ್ನು ಸೂಚಿಸುತ್ತದೆ. ಈ ಆಮ್ಲವಿಸರ್ಜನೆ ಅನ್ಯತಃ ಆರೋಗ್ಯವಂತರೇ ಆಗಿರುವ ಕೆಲವು ವ್ಯಕ್ತಿಗಳ ಆಜನ್ಮ ದೇಹಕ್ರಿಯಾ ವೈಚಿತ್ರ್ಯ.

ದಿನದ ಮೂತ್ರದಲ್ಲಿ ಲೀನವಾಗಿರುವ ಘನಪದಾರ್ಥಗಳು ಸುಮಾರು 50 ಗ್ರಾಗಳಷ್ಟು, ಇವುಗಳಲ್ಲಿ ಸುಮಾರು ಅರ್ಧ ಯೂರಿಯ, ಕಾಲುಭಾಗ ಸೋಡಿಯಮ್ ಕ್ಲೋರೈಡ್ ಮತ್ತು ಇನ್ನು ಕಾಲು ಭಾಗ ಮಿಕ್ಕ ಅನೇಕ ವಸ್ತುಗಳು. ವ್ಯಕ್ತಿಯ ಆಹಾರದ ಪ್ರೋಟೀನ್ ಅಂಶದ ಉಪಾಪಚಯದ ಅಂತ್ಯ ವಸ್ತು ಯೂರಿಯ. ಆದ್ದರಿಂದ ಅಧಿಕ ಪ್ರೋಟೀನ್‌ಯುಕ್ತ ಆಹಾರಸೇವನೆಯ ಸಂದರ್ಭದಲ್ಲಿ ಮೂತ್ರದಲ್ಲಿ ಯೂರಿಯದ ಪ್ರಮಾಣ ಹೆಚ್ಚಾಗಿರುತ್ತದೆ.

ದೇಹದ ಸ್ನಾಯುಗಳಲ್ಲಿ ಕ್ರಿಯಾಟಿನ್ ಎಂಬ ರಾಸಾಯನಿಕವಿದ್ದು ಸ್ನಾಯುಗಳ ನೈಸರ್ಗಿಕ ಸವೆತದಿಂದ ಹೊರಬಿದ್ದು ರಕ್ತದಲ್ಲಿ ಸೇರಿ ಕ್ರಿಯಾಟಿನ್ ಎಂಬ ವಸ್ತುವಾಗಿ ಮಾರ್ಪಟ್ಟು ಮೂತ್ರದಲ್ಲಿ ವಿಸರ್ಜಿತವಾಗುತ್ತದೆ. ಕಾರಣಾಂತರಗಳಿಂದ ಸ್ನಾಯುಗಳ ಅವನತಿ ಹೆಚ್ಚಾದ ಹೊರತು ದಿನದ ಮೂತ್ರದಲ್ಲಿ ಕ್ರಿಯಾಟಿನ್ನಿನ ಪ್ರಮಾಣ (ಗಂಡಸರಲ್ಲಿ ಸುಮಾರು 1.4 ಗ್ರಾ. ಹೆಂಗಸರಲ್ಲಿ ಸ್ವಲ್ಪ ಕಡಿಮೆ) ಬದಲಾಗುವುದಿಲ್ಲ. ಸ್ನಾಯುಗಳ ಅಧಿಕ ಶೈಥಿಲ್ಯದ ಸಂದರ್ಭಗಳಲ್ಲಿ ಸ್ವತಃ ಕ್ರಿಯಾಟಿನ್ನೇ ಮೂತ್ರದಲ್ಲಿ ವಿಸರ್ಜಿತವಾಗುವುದಿದೆ. ಗರ್ಭಿಣಿಯಲ್ಲೂ ಬಾಣಂತಿಯಲ್ಲೂ ಇದು ನೈಸರ್ಗಿಕ.

ಮೂತ್ರದಲ್ಲಿ ಇರುವ ಇನ್ನೊಂದು ಸಾವಯವ ವಸ್ತುವೆಂದರೆ ಯೂರಿಕ್ ಆಮ್ಲ. ದಿನದ ಮೂತ್ರದಲ್ಲಿ ಸುಮಾರು 700 ಮಿಗ್ರಾ. ಗಳಷ್ಟು ಇದ್ದರೂ ಮೂತ್ರದ ಆಮ್ಲೀಯತೆಗೆ ಇದು ಕಾರಣವಲ್ಲ. ದೇಹದಲ್ಲಿ ಸದಾ ನಶಿಸುತ್ತಿರುವ ಕೋಶಗಳ ಮತ್ತು ಆಹಾರದಲ್ಲಿರುವ ಕೋಶಗಳ ದ್ರವ್ಯದ (ಪ್ರೋಟೋಪ್ಲಾಸಮ್) ಮುಖ್ಯಘಟಕವಾದ ನ್ಯೂಕ್ಲಿಯಿಕ್ ಆಮ್ಲದ ಪ್ಯೂರಿನ್ ಅಂಶಗಳ ಅಪಚಯದಿಂದ ಯೂರಿಕ್ ಆಮ್ಲ ಫಲಿಸಿ ವಿಸರ್ಜನೆಯಾಗುತ್ತದೆ. ಲ್ಯುಕೇಮಿಯ (ರಕ್ತದ ಏಡಿಗಂತಿ), ಗೌಟ್ ಮುಂತಾದ ರೋಗಗಳಲ್ಲಿ ಯೂರಿಕ್ ಆಮ್ಲ ವಿಸರ್ಜನೆ ಅಧಿಕವಾಗಿರುತ್ತದೆ.

ಆಹಾರ ಪಚನಾಂತ್ಯ ಸಾಮಗ್ರಿಗಳಾದ ಅಮೈನೋ ಆಮ್ಲಗಳು, ಗ್ಲೂಕೋಸ್ ಮುಂತಾದ ಸರಳ ಸಕ್ಕರೆಗಳು ಮತ್ತು ಮೇದೋ ಆಮ್ಲಗಳು ಸಾಮಾನ್ಯವಾಗಿ ಮೂತ್ರದಲ್ಲಿ ಕಂಡು ಬರುವುದಿಲ್ಲ. ಹಾಗೇನಾದರೂ ಆದರೆ ಅದು ರೋಗಸೂಚಕ. ಅನ್ಯತಃ ನಿರೋಗಿಗಳೇ ಆಗಿರುವವರಲ್ಲಿ ವಿರಳವಾಗಿ ಗ್ಲೂಕೋಸ್, ಫ್ರಕ್ಟೋಸ್, ಗ್ಯಾಲಾಕ್ಟೋಸ್, ಲ್ಯಾಕ್ಟೋಸ್, ಮುಂತಾದ ಸಕ್ಕರೆಗಳು, ಸಿಸ್ಟಿನ್ ಮುಂತಾದ ಅಮೈನೋ ಆಮ್ಲಗಳು, ಮೇದೋ ಆಮ್ಲಗಳು ಮತ್ತು ಪೆಂಟೋಸ್ ಎಂಬ ಸಕ್ಕರೆ ಅಲ್ಪಸ್ವಲ್ಪವಾಗಿ ವಿಸರ್ಜಿತವಾಗಬಹುದು. ಜನ್ಮತಃ ಆ ವ್ಯಕ್ತಿಗಳಲ್ಲಿ ಸಂಬಂಧಿತ ಕಿಣ್ವಗಳ ಕೊರತೆಯೆ ಇದರ ಕಾರಣ.

ಮೂತ್ರದಲ್ಲಿ ವಿಸರ್ಜಿತವಾಗುವ ನಿರವಯವ ವಸ್ತುಗಳಲ್ಲಿ ಮುಖ್ಯವಾದದ್ದು ಸೋಡಿಯಮ್ ಕ್ಲೋರೈಡ್ (ಅಡಿಗೆ ಉಪ್ಪು), ದಿನದ ಮೂತ್ರದಲ್ಲಿ ಸುಮಾರು 10 ಗ್ರಾಂ ಗಳಷ್ಟಿರುತ್ತದೆ. ಉಪ್ಪಿನ ಸೇವನೆಯಿಂದಾಗಿ ಅದು ಮೂತ್ರದಲ್ಲಿ ವಿಸರ್ಜನೆಯಾಗುತ್ತದೆ. ಉಪ್ಪನ್ನೂ ಸೇವಿಸದ ನಿರಶನ ಸಂದರ್ಭಗಳಲ್ಲಿ ಮೂತ್ರದಲ್ಲಿ ಅದು ಹೆಚ್ಚು ಕಡಿಮೆ ಇಲ್ಲವಾಗಿಯೆ ಹೋಗಬಹುದು. ಸೋಡಿಯಮ್ ಕ್ಲೋರೈಡನ್ನು ಬಿಟ್ಟರೆ ಸಲ್ಫೇಟುಗಳು ಮತ್ತು ಫಾಸ್ಫೇಟುಗಳು (ಅನುಕ್ರಮವಾಗಿ 2.5 ಮತ್ತು 2 ಗ್ರಾಂ ಗಳಷ್ಟು) ಮುಖ್ಯವಾಗಿ ಸೋಡಿಯಮ್ ಹಾಗೂ ಪೊಟ್ಯಾಷಿಯಮ್ ಲವಣಗಳಾಗಿ ವರ್ಜಿತವಾಗುತ್ತವೆ. ಕಿಂಚಿತ್ತಾಗಿ ಕ್ಯಾಲ್ಸಿಯಮ್ ಹಾಗೂ ಮೆಗ್ನೀಸಿಯಮ್ ಕ್ಲೋರೈಡುಗಳು (0.2 ಗ್ರಾಂ ನಷ್ಟು) ವಿಸರ್ಜನೆಯಾಗುವುವು ಫಾಸ್ಫೇಟುಗಳಲ್ಲಿ ಡೈ ಸೋಡಿಯಮ್ ಹೈಡ್ರೋಜನ್ ಫಾಸ್ಫೇಟ್ ಹಾಗೂ ಡೈಸೋಡಿಯಮ್ ಹೈಡ್ರೋಜನ್ ಫಾಸ್ಫೇಟುಗಳ ಪರಸ್ಪರ ಪ್ರಮಾಣ ಮೂತ್ರದ ಆಮ್ಲೀಯ ಅಥವಾ ಪ್ರತ್ಯಾಮ್ಲೀಯ ಗುಣವನ್ನು ನಿರ್ಧರಿಸುತ್ತದೆ. ಸಾಧಾರಣವಾಗಿ ಇದು 4:1ರಷ್ಟಿರುತ್ತದೆ.

ರೋಗದ ಪರಿಸ್ಥಿತಿಗಳಲ್ಲಿ ಮೂತ್ರದ ಭೌತ ಹಾಗೂ ರಾಸಾಯನಿಕ ವೈಲಕ್ಷಣ್ಯಗಳು ವಿಶಿಷ್ಟವಾಗಿ ಬದಲಾಗುತ್ತವೆ. ಆದ್ದರಿಂದ ರೋಗತನಿಖೆ ಹಾಗೂ ಪತ್ತೆಯಲ್ಲಿ ಮೂತ್ರಪರೀಕ್ಷೆ ಬಲು ಮುಖ್ಯ. ನೈಸರ್ಗಿಕ ವಿಸರ್ಜನೆಯಲ್ಲಿ ಕಂಡುಬರಬಹುದಾದ ವೈಪರೀತ್ಯಗಳನ್ನು ಈ ಮೊದಲೆ ಸೂಚಿಸಿದೆ. ಇವನ್ನು ಬಿಟ್ಟು ಕೆಲವು ರೋಗಗಳಲ್ಲಿ ರೋಗಲಕ್ಷಣವಾಗಿ ಮೂತ್ರದಲ್ಲಿ ವಿಸರ್ಜನೆಯಾಗುವ ಕೆಲವು ವಸ್ತುಗಳ ವಿಷಯವನ್ನು ಮುಂದೆ ತಿಳಿಸಿದೆ.

ಆಲ್ಬ್ಯುಮಿನ್ : ಇದು ಒಂದು ಪ್ರೋಟೀನ್. ಮೂತ್ರಪಿಂಡರೋಗಗಳಲ್ಲಿ ದಿನಕ್ಕೆ ಸುಮಾರು 10–20 ಗ್ರಾ. ಗಳಷ್ಟು ಅಲ್ಬ್ಯುಮಿನ್ ವಿಸರ್ಜಿತವಾಗುತ್ತದೆ. ಮೂತ್ರಪರೀಕ್ಷೆಯಲ್ಲಿ ಗಣನೀಯವಾಗಿ ಆಲ್ಬ್ಯುಮಿನ್ ಪತ್ತೆ ಆಯಿತೆಂದರೆ ಅದು ಮೂತ್ರಪಿಂಡದ ತೀವ್ರರೋಗ ಹಾಗೂ ಕ್ರಿಯಾಭ್ರಷ್ಟತೆಯ ಸ್ಪಷ್ಟಸೂಚನೆ. ಬೆನ್ಸ್‌ಜೋನ್ಸ್‌ಪ್ರೋಟೀನ್ ಎಂಬುದು ಇನ್ನೊಂದು ವಿಸರ್ಜಿತವಾಗುವ ಪ್ರೋಟೀನ್, ವಾಸ್ತವವಾಗಿ ಇದು ಪ್ರೋಟಿಯೋಸ್ ಎಂಬ ಸ್ವಲ್ಪ ಬೃಹದಣುಗಾತ್ರದ ಪ್ರೋಟೀನ್ ಸಂಬಂಧಿ. ಇದು ಇರುವ ಮೂತ್ರವನ್ನು ಪ್ರಯೋಗನಳಿಕೆಯಲ್ಲಿಟ್ಟು ಸ್ವಲ್ಪ ಬಿಸಿಮಾಡಿದರೆ ($50^0$ಸೆ–$60^0$ಸೆ) ಮೂತ್ರ ಬಗ್ಗಡವಾಗುತ್ತದೆ. ಕುದಿಯುವಷ್ಟು ಬಿಸಿಮಾಡಿದರೆ ತಿಳಿಯಾಗುತ್ತದೆ ಮತ್ತು ಆರಿದಾಗ ಪುನಃ ಬಗ್ಗಡವಾಗುತ್ತದೆ. ಇದು ಬೆನ್ಸ್‌ಜೋನ್ಸ್‌ಪ್ರೋಟೀನಿನ ವಿಶಿಷ್ಟ ಲಕ್ಷಣ. ಮೈಲೋಮ, ಲಿಂಫೊಸಾರ್ಕೋಮ ಮತ್ತು ಹಾಜ್ಕಿನ್ನನ ರೋಗ ಇವುಗಳಲ್ಲಿ ಈ ಪ್ರೋಟೀನ್ ವಿಸರ್ಜನೆವಾಗುವುದರಿಂದ ಆ ರೋಗಗಳ ಪತ್ತೆಗೆ ಮೂತ್ರಪರೀಕ್ಷೆ ಮುಖ್ಯ.

ಇದೇ ರೀತಿ ಮಧುಮೂತ್ರರೋಗದ ವಿಶಿಷ್ಟಲಕ್ಷಣವಾಗಿ ಮೂತ್ರದಲ್ಲಿ ಗ್ಲೂಕೋಸ್ ವಿಸರ್ಜಿತವಾಗುವುದು. ಮಧುಮೂತ್ರರೋಗದ ಉಲ್ಬಣಾವಸ್ಥೆಯಲ್ಲಿ ಅಸಿಟೋನ್, ಅಸಿಟೊ ಅಸಿಟಿಕ್ ಆಮ್ಲ, ಬೀಟ ಆಕ್ಸಿಬ್ಯೂಟೈರಿಕ್ ಆಮ್ಲಗಳು ವಿಸರ್ಜನೆಯಾಗುವುದಿದೆ. ಈ ವಸ್ತುಗಳು ಕೀಟೋನುಗಳೆಂಬ ರಾಸಾಯನಿಕಗಳ ಗುಂಪಿಗೆ ಸೇರುವದರಿಂದ ಈ ಸ್ಥಿತಿಗೆ ಕೀಟೊನ್ಯೂರಿಯ ಎಂದು ಕರೆಯಲಾಗಿದೆ. ಇದರ ಪತ್ತೆಗೆ ಮೂತ್ರ ಪರೀಕ್ಷೆ ಅಗತ್ಯ.

ಕಾಮಾಲೆಯಲ್ಲಿ ಪಿತ್ತವರ್ಣಕವಾದ ಬಿಲಿರೂಬಿನ್ ಮೂತ್ರದಲ್ಲಿ ವಿಸರ್ಜಿತವಾಗಬಹುದು. ಇಲ್ಲವೆ ಆಗದೇ ಇರಬಹುದು. ಮೂತ್ರಪರೀಕ್ಷೆಯಲ್ಲಿ ಇದನ್ನು ಪತ್ತೆಮಾಡಿ ವಿವಿಧ ಬಗೆಯ ಕಾಮಾಲೆಗಳಲ್ಲಿ ವ್ಯಕ್ತಿ ನರಳುತ್ತಿರುವ ಬಗೆ ಯಾವುದು ಎಂದು ತಿಳಿಯಬಹುದು. ಬಿಲಿರೂಬಿನ್ ರೂಪಾಂತರಗೊಂಡು ಯೂರೊಬಿಲಿನೋಜೆನ್ನಾಗಿ ಮೂತ್ರದ ಸಾಮಾನ್ಯ ವರ್ಣಕ್ಕೆ ಕಾರಣಗಿರುವುದರಿಂದ ಪ್ರಮಾಣ ಹೆಚ್ಚಾಗಿದ್ದರೆ ಅದರ ಮೂಲವಸ್ತುವಾದ ಬಿಲಿರೂಬಿನ್ ರಕ್ತದಲ್ಲಿ ಹೆಚ್ಚು ಪ್ರಮಾಣದಲ್ಲಿದೆ ಎಂದು ಅರ್ಥ. ಯೂರೊಬಿಲಿನೋಜನ್ ಲೋಪವಾಗಿದ್ದರೆ ಪಿತ್ತರಸ ಕರುಳಿಗೆ ಸೇರುತ್ತಿಲ್ಲ (ಬಹುಶಃ ನಾಳಗಳ ಅಡಚಣೆಯಿಂದಾಗಿ) ಎಂದು ತಿಳಿಯಬಹುದು. ***

**ಮೂತ್ರಕೋಶ:** ಮೂತ್ರಪಿಂಡಗಳಿಂದ ನಿರಂತರವಾಗಿ ಉತ್ಪತ್ತಿ ಆಗುವ ಮೂತ್ರವನ್ನು ಕೂಡಿಟ್ಟುಕೊಂಡು ಯುಕ್ತ ವೇಳೆಯಲ್ಲಿ ವಿಸರ್ಜಿಸುವ ಆಶಯ (ಯೂರಿನರಿ ಬ್ಲ್ಯಾಡರ್). ಇದೊಂದು ಸ್ನಾಯು ಲೋಳೆಪೊರೆಯುಕ್ತ ಕೋಶ. ಹೀಗಿಲ್ಲವಾಗಿದ್ದರೆ ಮೂತ್ರ ಸದಾ ತೊಟ್ಟಿಕ್ಕುತ್ತಿರಬೇಕಾಗಿತ್ತು. ಇದರಲ್ಲಿ ಸಂಗ್ರಹವಾಗುವ ಮೂತ್ರದ ಪ್ರಮಾಣಕ್ಕೆ ಅನುಸಾರವಾಗಿ ಇದರ ಗಾತ್ರ, ಸ್ಥಾನ ಮತ್ತು ನೆರೆ ಅಂಗಗಳೊಡನೆ ಸಂಬಂಧ ವ್ಯತ್ಯಾಸಗೊಳ್ಳುತ್ತಿರುತ್ತವೆ. ಇದರ ಹಿಂದಿರುವ ಗುದನಾಳ ತುಂಬಿದರೆ ಮೂತ್ರಕೋಶವನ್ನು ಮುಂದಕ್ಕೆ ಹಾಗೂ ಮೇಲಕ್ಕೆ ತಳ್ಳುತ್ತದೆ.

ಖಾಲಿ ಮೂತ್ರಕೋಶ: ನಾಲ್ಕು ಅಸಮ ತ್ರಿಕೋಣಾಕಾರ ಮುಖಗಳಿವೆ. ಹಿಮ್ಮುಖದ ಕಡೆ ಗುದನಾಳ, ವೃಷಣ ನಾಳಗಳು ಮತ್ತು ವೀರ್ಯಕೋಶಗಳಿರುತ್ತವೆ. ತುದಿ ಬಲ ಎಡ ಮೇಢ್ರಾಸ್ಥಿಗಳ ಮಧ್ಯಸಂಧಿಯ ಹಿಂದಿದೆ. ತುದಿಗೆ ಮಧ್ಯನಾಭಿ ಹುರಿ ಅಂಟಿದೆ. ಮೇಲ್ಮುಖದ ಹಿಂದಿನ ಕೋಣಗಳಲ್ಲಿ ಬಲ ಎಡ ಮೂತ್ರಪಿಂಡನಾಳಗಳು ತೆರೆಯುತ್ತವೆ. ಮೇಲ್ಮುಖದ ಪಕ್ಕಗಳಲ್ಲಿ ಉದರ ಪರಿವೇಷ್ಟನ ಕೋಶದ ಚಾಚುಗಳು ಮೂತ್ರಕೋಶ ಪಾರ್ಶ್ವಗಳಲ್ಲಿವೆ. ಬಲ ಎಡ ಮುಖಗಳಿಗೂ ಮೇಢ್ರಾಸ್ಥಿಗಳಿಗು (ಭಗ) ನಡುವೆ ರೆಟ್ಜಿಯಸ್‌ನ ಸಡಿಲ ನಾರೂತಕದ ಕುಳಿ ಇದೆ.

ತುಂಬಿದ ಮೂತ್ರಕೋಶ : ಇದರ ಮೇಲ್ಮುಖ ಉದರದೊಳಕ್ಕೇರಿ ಕೋಶ ಅಂಡಾಕಾರ ಪಡೆಯುತ್ತದೆ. ಇದರಲ್ಲಿ ಸುಮಾರು 0.5 ಲೀ ಮೂತ್ರವಿರುತ್ತದೆ. ಇದರ ದೀರ್ಘವ್ಯಾಸ 12 ಸೆಂಮೀ. ಮೇಲಿನಮೈ ಹಿಂತಿರುಗಿ ಇದಕ್ಕೂ ಗುದನಾಳಕ್ಕೂ ನಡುವೆ ಇರುವ ಉದರ ಪರಿವೇಷ್ಟನ ಕಿಸೆಯಲ್ಲಿ ಕರುಳಿನ ಗೋಣಸುಗಳಿವೆ. ಕೆಳಮೈ ಮೇಢ್ರಾಸ್ಥಿಗಳ ಮೇಲಿರುವ ಉದರದ ಮುಂಭಿತ್ತಿಯ ಮೇಲೆ ವಾಲಿರುತ್ತದೆ. ಹಿಮ್ಮೈ ಸ್ಥಾನವ್ಯತ್ಯಾಸವಿಲ್ಲದೆ ಇದ್ದಲ್ಲೇ ಇರುತ್ತದೆ. ತುದಿ ಹೊಕ್ಕಳಿನ ಕಡೆ ಏರಿರುತ್ತದೆ; ಮೂತ್ರ ಕಟ್ಟಿದರೆ ಹೊಕ್ಕಳಿನವರೆಗೂ ಏರಬಹುದು.

ಮೂತ್ರಕೋಶದ ಒಳಭಾಗ : ಲೋಳೆಪೊರೆ ಸ್ನಾಯು ಪದರಕ್ಕೆ ಸಡಿಲವಾಗಿ ಅಂಟಿರುವುದರಿಂದ ಕೋಶ ಖಾಲಿಯಾದಾಗ ಲೋಳೆಪೊರೆ ಸುಕ್ಕು ಬಿದ್ದು ಮಡಿಕೆಗಳಾಗುತ್ತದೆ. ಕೋಶ ತುಂಬಿ ಬಿರಿಯುವಾಗ ಮಡಿಕೆಗಳಿರುವುದಿಲ್ಲ. ಮೂತ್ರಪಿಂಡ ನಾಳಗಳು ಮೂತ್ರಕೋಶದೊಳಗೆ ತೆರೆಯುವಲ್ಲಿ ಮೂತ್ರಕೋಶನಾಳದ ಒಳದ್ವಾರದ ಮೇಲಿರುವ ಮೂತ್ರಕೋಶ ತ್ರಿಕೋಣದಲ್ಲಿ ಲೋಳೆಪೊರೆ ಪೇಶಿಪದರಕ್ಕೆ ಗಟ್ಟಿಯಾಗಿ ಅಂಟಿರುವುದರಿಂದ ಅದು ಸುಕ್ಕಾಗದೆ ನುಣ್ಣಗಿರುತ್ತದೆ. ಮೂತ್ರಪಿಂಡನಾಳಗಳ ರಂಧ್ರಗಳ ನಡುವೆ, ಅಂದರೆ ಮೂತ್ರಕೋಶ ತ್ರಿಕೋಣದ ಹಿಂದಿರುವ ಅಡಿಯಲ್ಲಿ, ಪಿಂಡನಾಳಗಳ ದುಂಡೇಣು (ಟೋರಸ್) ಇದೆ. ಕೋಶವೀಕ್ಷಕದ (ಸಿಸ್ಟೊಸ್ಕೋಪ್) ಮೂಲಕ ಬೆಳಕು ಬಿಟ್ಟಾಗ ಮೂತ್ರಪಿಂಡನಾಳಗಳೊಳಕ್ಕೆ ಮೂತ್ರಾಪಕರ್ಷಕ ಕೊಳವೆಯನ್ನು (ಯುರೀಟರಿಕ್ ಕೆತೀಟರ್) ತೂರಿಸಲು ಮಾರ್ಗದರ್ಶಿ ಅನ್ನುವಂತೆ ದುಂಡೇಣು ಕಾಣುತ್ತದೆ. ಇದರ ಕೊನೆಗಳಲ್ಲಿ ಮೂತ್ರಪಿಂಡನಾಳಗಳ ರಂಧ್ರಗಳು ಉದ್ದ ಕಂಡಿಗಳಂತಿರುತ್ತವೆ. ಸಂಕುಚಿತ ಶೂನ್ಯಕೋಶದಲ್ಲಿ ರಂಧ್ರಗಳು 2.5 ಸೆಂಮೀ ಅಂತರದಲ್ಲಿರುತ್ತವೆ. ಮೂತ್ರಕೋಶನಾಳದ್ವಾರದಿಂದಲೂ ಇವು 2.5 ಸೆಂಮೀ ದೂರದಲ್ಲಿವೆ. ತುಂಬಿ ಉಬ್ಬಿದ ಕೋಶದಲ್ಲಿ ಅಂತರಗಳೂ 5 ಸೆಂಮೀ ಇರುತ್ತವೆ. ಮೂತ್ರಕೋಶದ ಅತಿ ಕೆಳಭಾಗದಲ್ಲಿ ಇದರ ನಾಳದ ದ್ವಾರ ಮುಂಬಾಗಿದ ಬಾಲಚಂದ್ರಾಕಾರದಲ್ಲಿದೆ. ದ್ವಾರದ ಹಿಂದೆ ಪ್ರಾಸ್ಟೇಟ್ ಗ್ರಂಥಿಯ ಮಧ್ಯ ಹಾಲೆ ಇದ್ದು ಕೋಶದೊಳಕ್ಕೆ ಕೊಂಚ ಉಬ್ಬಿರುವುದರಿಂದ ಮೂತ್ರಕೋಶ ನಾಳ ರಂಧ್ರ ಬಾಲಚಂದ್ರಾಕಾರದಲ್ಲಿರುತ್ತದೆ.

***

**ಮೂತ್ರಪಿಂಡ:** ರಕ್ತದಲ್ಲಿರುವ ತ್ಯಾಜ್ಯ ವಸ್ತುಗಳು ಹಾಗು ದೇಹಕ್ಕೆ ಅನಗತ್ಯ ವಸ್ತುಗಳನ್ನು, ರಕ್ತದಿಂದ ಬೇರ್ಪಡಿಸಿ ಮೂತ್ರ ಉತ್ಪಾದಿಸುವ ಅಂಗ (ಕಿಡ್ನಿ). ಎಡ ಮತ್ತು ಬಲ ಎಂದು ಎರಡು ಮೂತ್ರಪಿಂಡಗಳು ಇವೆ. ಇವು ಮೂತ್ರಮಂಡಲದ ಮುಖ್ಯ ಅಂಗಗಳು, ಮಿಕ್ಕವು 2 ಮೂತ್ರಪಿಂಡ ನಾಳಗಳು, ಮೂತ್ರಕೋಶ ಮತ್ತು ಮೂತ್ರ ಕೋಶನಾಳ.

ಮೂತ್ರಪಿಂಡ ಅಥವಾ ಮೂತ್ರಜನಕಾಂಗವನ್ನು ಗ್ರಂಥಿ ಎಂದು ವಿವರಿಸಬಹುದಾದರೂ ವಾಸ್ತವವಾಗಿ ಅದು ವಿಸರ್ಜಿತವಾಗಬೇಕಾದ ವಸ್ತುಗಳನ್ನು ಯಾವ ಪ್ರಚೋದನೆಯೂ ಇಲ್ಲದೆ ನಿರಂತರವಾಗಿ ರಕ್ತದಿಂದ ಬೇರ್ಪಡಿಸುವ ಶುದ್ಧೀಕರಣಾಂಗ. ಘುಪ್ಫುಸಗಳು ಇಂಗಾಲ ಡೈ ಆಕ್ಸೈಡ್ ದೇಹದಿಂದ ಹೊರಕ್ಕೆ ಕಳುಹಿಸಿ ರಕ್ತವನ್ನು ಶುದ್ಧೀಕರಿಸುತ್ತವೆ. ಮೂತ್ರಪಿಂಡಗಳು ನೀರಿನಲ್ಲಿ ವಿಲೀನವಾಗುವ ಯೂರಿಯ ಮುಂತಾದ ಘನವಸ್ತುಗಳನ್ನು ದೇಹದಿಂದ ಆಚೆಗೆ ಕಳುಹಿಸಿ ಸ್ವಚ್ಛೀಕರಿಸುತ್ತವೆ. ಮೂತ್ರಪಿಂಡ ರಕ್ತವನ್ನು ಶೋಧಿಸಿ ಕಣಗಳು ಹಾಗೂ ಪ್ರೋಟೀನುಗಳನ್ನು ಬಿಟ್ಟು ಮಿಕ್ಕ ನೀರಿನಂಥ ಭಾಗವನ್ನು ಬೇರ್ಪಡಿಸಿ ಆಮೇಲೆ ಅದರಿಂದ ದೇಹಕ್ಕೆ ಬೇಕಾದ ಗ್ಲೂಕೋಸ್, ಬೇಕಾದಷ್ಟು ಲವಣ ಇತ್ಯಾದಿಗಳನ್ನು ನೀರಿನೊಡನೆ ಪುನಃ ಹೀರುತ್ತವೆ.

ದೇಹಕ್ಕೆ ಬೇಡದ ವಿಷಮಯ ಪದಾರ್ಥ ಹಾಗು ತ್ಯಾಜ್ಯವಸ್ತುಗಳ ನೀರಿನ ದ್ರಾವಣವೆ ಮೂತ್ರ. ಮೂತ್ರ ಪಿಂಡಗಳು ಕೆಟ್ಟರೆ ಪ್ರಾಣಕ್ಕೆ ಅಪಾಯ. ಈಚೆಗೆ ಡಯಾಲಿಸಿಸ್ (ಪಾರಪೃಥಕ್ಕರಣ) ಉಪಕರಣದಿಂದ ರಕ್ತವನ್ನು ಶುದ್ಧಿಮಾಡುತ್ತ ಹಲವು ತಿಂಗಳು ಪ್ರಾಣವನ್ನು ಕಾಪಾಡುವ ತಂತ್ರವಿದೆ. ರೋಗಿಯ ದೇಹ ಸಾಮ್ಯವಿರುವ ದಾನಿಯ ಮೂತ್ರಪಿಂಡವನ್ನು ಅಳವಡಿಸುವ ಶಸ್ತ್ರವೈದ್ಯತಂತ್ರವೂ ಅಭಿವರ್ಧಿಸಿದೆ.

ಬಲ ಎಡ ಮೂತ್ರಪಿಂಡಗಳು ಬೆನ್ನೂಳೆಯ ಬಲ ಎಡ ಪಕ್ಕಗಳಲ್ಲಿ, ಹೊಕ್ಕುಳಿಂದ ಮೇಲ್ಮಟ್ಟದಲ್ಲಿ, ಜಠರ, ಕರುಳು, ಮೇದೋಜೀರಕಾಂಗ, ಉದರ ಪರಿವೇಷ್ಟನಗಳ ಹಿಂದೆ ಹುರುಳಿ ಬೀಜಾಕಾರದಲ್ಲಿವೆ. ವಪೆಗೆ ಅಂಟಿರುವುದರಿಂದ ಉಸಿರಿನೊಡನೆ ಮೇಲು ಕೆಳಕ್ಕಾಡುತ್ತ ಇರುತ್ತವೆ. ಬಲಗುಮ್ಮಟದ ಕೆಳಗೆ ಪಿತ್ತಜನಕಾಂಗವಿರುವುದರಿಂದ ನೆಟ್ಟ ನಿಲುವಿನಲ್ಲಿ ಮನುಷ್ಯನಲ್ಲಿ ಬಲ ಮೂತ್ರ ಪಿಂಡ ಎಡ ಪಿಂಡಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿದೆ ಚತುಷ್ಪಾದಿಗಳಲ್ಲಿ ಯಕೃತ್ತಿನ ಭಾರ ಬೀಳದಿರುವುದರಿಂದ ಬಲಮೂತ್ರಪಿಂಡ ಎಡಪಿಂಡಕ್ಕಿಂತ ತಲೆಯ ಕಡೆಗೆ ಮುಂದಿದೆ. ಮನುಷ್ಯನ ಪ್ರತಿಯೊಂದು ಮೂತ್ರಪಿಂಡದ ದೀರ್ಘಾಕ್ಷ ಬೆನ್ನೂಳೆಗೆ ಸಮಾಂತರವಾಗಿದೆ. ಮೂತ್ರಪಿಂಡದ ಉದ್ದ 11 ಸೆಂಮೀ. ಅಗಲ 7ರಿಂದ 7.5 ಸೆಂಮೀ. ದಪ್ಪ (ಹಿಂದು ಮುಂದು) 2.5 ಸೆಂಮೀ.ಗಿಂತ ತುಸು ಹೆಚ್ಚಿರಬಹುದು. ತೂಕ ಗಂಡಿನಲ್ಲಿ 125–170 ಗ್ರಾ. ಹೆಣ್ಣಿನಲ್ಲಿ 115–155 ಗ್ರಾ. ಎರಡೂ ಮೂತ್ರಪಿಂಡಗಳ ತೂಕ ದೇಹ ತೂಕದ 1/240ರಷ್ಟು. ಹುಟ್ಟಿದ ಮಗುವಿನಲ್ಲಿ ಎರಡೂ ಮೂತ್ರ ಪಿಂಡಗಳ ತೂಕ ಮಗುವಿನ ತೂಕದ 1/50ರಷ್ಟು.

ಮೂತ್ರಪಿಂಡದ ಸಾಮಾನ್ಯ ರಚನೆ : ಮೂತ್ರಪಿಂಡದ ಕವಚ ನುಣ್ಣಗೆ ಬಿಗಿಯಾಗಿದೆ. ಆದರೆ ಕವಚವನ್ನು ಸುಲಭವಾಗಿ ಸುಲಿದು ತೆಗೆಯಬಹುದು. ಕವಚಕ್ಕೆ ಅಂಟಿಕೊಳ್ಳಲು ಒಳ ಆಧಾರ ನಾರೆಳೆಗಳಿಲ್ಲದಿರುವುದೆ ಇದರ ಕಾರಣ. ಕವಚ ಸುಲಿದಾಗ ಪಿಂಡದ ಮೇಲ್ಮೈ ನುಣ್ಣಗಿರುತ್ತದೆ. ಜೀವಂತವಿದ್ದರೆ ದಟ್ಟ ಕೆಂಪಾಗಿರುತ್ತದೆ. ಕೈಕೂಸಿನ ಮೂತ್ರಪಿಂಡದ ಮೇಲೆ ಸುಮಾರು ಹನ್ನೆರಡು ಹಾಲೆಗಳು ಉಬ್ಬಿ, ಅವುಗಳ ನಡುವೆ ಪ್ರತ್ಯೇಕಿಸುವ ಗಾಡಿಗಳು ಕಾಣುತ್ತವೆ. ಮೂತ್ರಪಿಂಡ ಅಪಧಮನಿಯ ಐದು ಶಾಖೆಗಳು ರಕ್ತ ಒದಗಿಸುತ್ತವೆ.




ಮೂತ್ರಪಿಂಡ

ಈ ಶಾಖೆಗಳ ಉಪಶಾಖೆಗಳೂ ಅಡ್ಡ ಸೇರದಿರುವುದರಿಂದ ಯಾವ ಒಂದು ಶಾಖೆಯಲ್ಲಿ ಅಡಚಣೆಯಾದರೂ ಆ ಶಾಖೆ ರಕ್ತ ಒದಗಿಸುವ ಮೂತ್ರಪಿಂಡ ಭಾಗಕ್ಕೆ ರಕ್ತವಿಲ್ಲದೆ ಅದು ಸತ್ತು ನಾರು ಕಟ್ಟುತ್ತದೆ. ಹೊರಪಕ್ಕ ಒಳಪಕ್ಕ ಅಂಚುಗಳ ಮೂಲಕ ಲಂಬವಾಗಿ ಅರ್ಧಕ್ಕೆ ಕೊಯ್ದರೆ ಮೂತ್ರಪಿಂಡದ ನಾಭಿಯ ವಿಶಾಲಕುಹರ ಪಿಂಡದ ಮಧ್ಯೆ ಕಾಣುತ್ತದೆ. ಇದರಲ್ಲಿ ಮೂತ್ರಪಿಂಡನಾಳದ ಮೇಲ್ತೊನೆಯ ವಿಸ್ತೃತಭಾಗವಾದ ಅದರ ಶ್ರೋಣಿ ಮತ್ತು ಅದರ ಶಾಖೆಗಳಾದ ಸಾಧಾರಣವಾಗಿ ಎರಡು ದೊಡ್ಡ ಕೇಲಿಕ್ಸ್‌ಗಳೂ ಉಪಶಾಖೆಗಳಾದ 4 ರಿಂದ 13 ಕಿರುಕೇಲಿಕ್ಸ್‌ಗಳೂ (ಪಾತ್ರ) ಜೊತೆಗೆ ರಕ್ತನಾಳ ನರಗಳೂ ಕೊಬ್ಬಿನಲ್ಲಿ ಹುದುಗಿರುತ್ತವೆ. ಕಿರುಕೇಲಿಕ್ಸ್‌ಗಳು ಒಂದೊಂದು ಪಿರಮಿಡ್ಡನ್ನು ಆವರಿಸಿರುವ ಬಟ್ಟಲು ಕೊನೆಗಳಿರುವ ಕೊಳವೆಗಳು. ಕೆಲವು ಎರಡು ಅಥವಾ ಹೆಚ್ಚು ಪಿರಮಿಡ್ಡುಗಳನ್ನು ಆವರಿಸಿರಬಹುದು. ಕಿರುಕೇಲಿಕ್ಸ್‌ಗಳು ಒಂದು ಗೂಡಿ 2–3 ದೊಡ್ಡ ಪಾತ್ರನಾಳಗಳಾಗಿ ಒಂದುಗೂಡಿ ಪನ್ನಾಲೆಯಂಥ ಮೂತ್ರಪಿಂಡ ನಾಳದ ಶ್ರೋಣಿಯಾಗುತ್ತದೆ. ಕೇಲಿಕ್ಸ್ ಭಿತ್ತಿಗಳಲ್ಲಿರುವ ಸುರುಳಿ ಸ್ನಾಯುಗಳ ಸಂಕೋಚನದಿಂದ ಮೂತ್ರ ಹೆಚ್ಚು ಸುಲಭವಾಗಿ ಶ್ರೋಣಿಗೆ ಹರಿಯುತ್ತದೆ. ಮೂತ್ರಪಿಂಡದ ನಾಭಿಕುಳಿಯನ್ನು ಬಿಟ್ಟು ಬಳಿಕ ಶ್ರೋಣಿ ಕ್ರಮೇಣ ಚಿಕ್ಕದಾಗುತ್ತ ಮೂತ್ರಪಿಂಡ ನಾಳವಾಗುತ್ತದೆ.

ಮೂತ್ರಪಿಂಡದ ಹೊರಭಾಗವಾಗಿ ಕಾರ್ಟೆಕ್ಸ್ ಮತ್ತು ಒಳಭಾಗವಾಗಿ ಮೆಡುಲ್ಲ ಇವೆ. ಕಿರಣಗಳಂತೆ ಗೆರೆಗಳು ಮೂತ್ರಪಿಂಡದ ಅಂಚು ಅಂಚಿನ ಉದ್ದ ಕೊಯ್ತದಲ್ಲಿ ಕಾಣುತ್ತವೆ. ಮೆಡುಲ್ಲದ ವಸ್ತು 8–18 ಪಿರಮಿಡ್ಡುಗಳಾಗಿ ಅವುಗಳ ತುದಿಗಳು ಕಿರುಕೇಲಿಕ್ಸ್‌ಗಳು ಬಟ್ಟಲುಗಳೊಳಕ್ಕೆ ಚಾಚುತ್ತವೆ. ಕಾರ್ಟೆಕ್ಸಿನ ಬಣ್ಣ ಕೆಂಪು ಕಂದು, ಅದು ಮೃದುವಾಗಿ ತರಿತರಿಯಾಗಿದೆ. ಕವಚದ ಕೆಳಗೆ ಪಿರಮಿಡ್ಡುಗಳ ಅಡಿಗಳನ್ನು ಬಳಸಿ ಅವುಗಳ ನಡುವೆ ಕಾರ್ಟೆಕ್ಸ್ ತೂರಿದೆ. ಹೀಗೆ ಪಿರಮಿಡ್ ಅಡಿಗಳ ನಡುವೆ ಇರುವ ಕಾರ್ಟೆಕ್ಸ್ ಭಾಗಗಳಿಗೆ ಮೂತ್ರಪಿಂಡಕಂಬಗಳು ಎಂದು ಹೆಸರು. ಕಾರ್ಟೆಕ್ಸ್ ಮೆಡುಲ್ಲ ಸಂಧಿ ಭಾಗ ಗಡಿವಲಯ. ಕಾರ್ಟೆಕ್ಸನ್ನು ಭೂತಕನ್ನಡಿಯಲ್ಲಿ ನೋಡಿದರೆ ಕೆಂಪು ಕಂದು ಬಣ್ಣ ಕಮ್ಮಿಯುಳ್ಳ ಕಿರಣ (ಅಪಸರಣ) ಭಾಗಗಳೂ ಅವುಗಳ ನಡುವೆ ಹೆಚ್ಚು ಬಣ್ಣದ ಸಂಕೀರ್ಣ ಭಾಗಗಳೂ ಕಾಣುತ್ತವೆ. ಮೂತ್ರಪಿಂಡದ ಕವಚದ ಕಡೆಗೆ ಕಿರಣಗಳು ಸಣ್ಣದಾಗುತ್ತವೆ. ಅವು ಪಿರಮಿಡ್ಡಿನ ಅಡಿಗಳಿಂದ ಪರಿಧಿಗೆ ಹೋಗುತ್ತವೆ.

ನೆಫ್ರಾನ್: ಮನುಷ್ಯನ ಪ್ರತಿ ಕಿಡ್ನಿ ಸು. ಒಂದು ದಶಲಕ್ಷ ನೆಫ್ರಾನ್ ಹೊಂದಿದೆ. ಅವುಗಳ ರಚನೆ, ರಕ್ತಪರಿಚಲನೆ, ಹಾಗು ಕಾರ್ಯವಿಧಾನಗಳನ್ನು ಅಭ್ಯಸಿಸುವುದು ಮೂತ್ರಪಿಂಡದಲ್ಲಿ ಮೂತ್ರದ ಉತ್ಪಾದನೆ ಹೇಗೆ ಆಗುತ್ತದೆ. ಎಂಬುದನ್ನು ತಿಳಿದುಕೊಳಲು ಅವಶ್ಯ. ಪ್ರತಿ ನೆಫ್ರಾನ್ 3 ಸೆಂಮೀ ಉದ್ದವಿದ್ದು, ಎಲ್ಲಾ ನೆಫ್ರಾನ್‌ಗಳ ಒಟ್ಟು ಉದ್ದ 120 ಕಿಮೀ ಗಳಿಷ್ಟಿದ್ದು, ವಸ್ತುಗಳ ವಿನಿಮಯಕ್ಕೆ ಅಗಾಧ ಮೆಲ್ಮೈಯನ್ನು ಒದಗಿಸುತ್ತವೆ. ಇದರ ಶಿರೋಭಾಗ ಲೋಮನಾಳಗಳಿಂದಾದ ಗ್ಲೊಮೆರುಲಸ್ ಹಾಗು ಬೌಮನನ ಬುಟ್ಟಿಯಾಕಾರದ ರಚನೆಯನ್ನು ಹೊಂದಿರುತ್ತದೆ. ಅದು ನಾಳರೂಪದಲ್ಲಿ ಮುಂದುವರೆದ ರಚನೆಯಲ್ಲಿ ಮೂರು ಭಾಗಗಳನ್ನು (ಮುಂದಿನ, ಮಧ್ಯದ ಹಾಗು ಕೊನೆಯ ಭಾಗ) ಗುರುತಿಸಬಹುದು. ಮಧ್ಯದ ಭಾಗವು U ಆಕಾರದಲ್ಲಿದೆ, ಇದನ್ನು 'ಹೆನ್ಲೆ ಲೂಪ' ಎಂದು ಕರೆಯಲಾಗಿದೆ. ನೆಫ್ರಾನ್ ಕೊನೆಯ ಭಾಗವು ಕಲೆಕ್ಟಿಂಗ್ ನಾಳಗಳಲ್ಲಿ ತೆರೆಯುತ್ತವೆ. ಹಾಗು ಅನೇಕ ಕಲೆಕ್ಟಿಂಗ್ ನಾಳಗಳು ಒಂದುಗೂಡಿ, ಮೂತ್ರ ನಾಳವಾಗುತ್ತದೆ.




**ನೆಫ್ರಾನ್ ರಚನೆ**

ರಕ್ತವು ಮೂತ್ರಪಿಂಡ ಅಪಧಮನಿಯ ಮೂಲಕ ಮೂತ್ರಪಿಂಡ ಸೇರುತ್ತದೆ. ಅಲ್ಲಿ ಅಪಧಮನಿಯು ಚಿಕ್ಕ ಅಪಧಮನಿಗಳಾಗಿ ವಿಭಜಿಸಿ, ನೆಫ್ರಾನಿನ್ ಗ್ಲೊಮರುಲಸ್ ಸೇರುತ್ತದೆ. ಅಲ್ಲಿ ಲೋಮನಾಳಗಳ ಗುಚ್ಛವಿದ್ದು ಅದರಲ್ಲಿ ಈ ಚಿಕ್ಕ ಅಪಧಮನಿಗಳಲ್ಲಿರುವ ರಕ್ತ ಹರಿಯುತ್ತದೆ. ನಂತರ ಚಿಕ್ಕ ಅಭಿಧಮನಿಯ ಮೂಲಕ ರಕ್ತ ಗ್ಲೊಮೆರುಲಸ್‌ನಿಂದ ಹೊರಬಂದು, ಅನೇಕ ಚಿಕ್ಕ ಅಭಿಧಮನಿಗಳು ಕೂಡಿಕೊಂಡು, ಮೂತ್ರಪಿಂಡದ ಅಭಿಧಮನಿಯಾಗಿ ಮೂತ್ರಪಿಂಡದಿಂದ ಹೊರಬಂದು ಹೃದಯದ ಕಡೆಗೆ ಮುಂದುವರೆಯುತ್ತವೆ. ರಕ್ತನಾಳಗಳು ಅನೇಕಾನೇಕ ಚಿಕ್ಕ, ಚಿಕ್ಕ ನಾಳಗಳಾಗಿ ವಿಭಜಿಸುವುದರಿಂದ, ರಕ್ತವು ಹೆಚ್ಚಿನ ಒತ್ತಡದಿಂದ ಗ್ಲೊಮುರಲಸ್ ಸೇರುತ್ತದೆ. ಅಲ್ಲಿರುವ ಲೋಮನಾಳಗಳು ರಂಧ್ರಮಯವಾಗಿರುವುದರಿಂದ, ಅತಿ ಒತ್ತಡದಿಂದ ಪ್ರವೇಶಸಿಸಿದ ರಕ್ತವು ಶೋಧಿಸಲ್‌ಪಟ್ಟು, ಬುಟ್ಟಿಯಾಕಾರದ ಬೌಮನನ್ ಕಾಪ್ಸುಲಗಳ ಮೂಲಕ ಚಲಿಸುತ್ತದೆ.

ಕ್ರಿಯಾವಿಧಾನ: ಇತರ ಗ್ರಂಥಿಗಳಂತೆ ಮೂತ್ರಪಿಂಡಗಳು ಯಾವುದೋ ಪ್ರಚೋದನೆಯ ಫಲವಾಗಿ ಸ್ರವಿಸುವುದಿಲ್ಲ. ಬದಲಾಗಿ ರಕ್ತವನ್ನು ಸೋಸುತ್ತವೆ. ಮತ್ತು ಸೋಸಿದ ದ್ರವದಲ್ಲಿರುವ ದೇಹಾವಶ್ಯಕ ವಸ್ತುಗಳನ್ನು ಪುನಃ ಹೀರುತ್ತವೆ. ಈ ರೀತಿ ಮೂತ್ರಪಿಂಡಗಳು ರಕ್ತದ ರಚನೆ, ಆಮ್ಲತ್ವ (*p*H) ಮತ್ತು ವಿಲೀನವಾಗಿರುವ ವಸ್ತುಗಳ ಸೂಕ್ಷ್ಮಾಭಿಸರಣ ಒತ್ತಡ ಇತ್ಯಾದಿಗಳನ್ನು ಒಂದೇ ಸಮವಾಗಿಡುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ದೇಹದಲ್ಲಿ ಉತ್ಪತ್ತಿಯಾದ ಅಪ್ರಯೋಜಕ ಹಾಗೂ ಹಾನಿಕರ ವಸ್ತುಗಳನ್ನೂ ದೇಹಕ್ಕೆ ಪರಕೀಯವಾದ ವಿಷ ಇತ್ಯಾದಿ ವಸ್ತುಗಳನ್ನೂ ಮೂತ್ರರೂಪದಲ್ಲಿ ದೇಹದಿಂದಾಚೆಗೆ ಸಾಗಿಸಿ ರಕ್ತವನ್ನು ಶುದ್ಧಿ ಮಾಡುವುದು ಇವುಗಳ ಅತಿ ಮುಖ್ಯ ಕ್ರಿಯೆ.

ಪ್ರತಿ ಮಿನಿಟಿನಲ್ಲೂ ದೇಹದ ರಕ್ತದ 1/5 ಭಾಗ ಮೂತ್ರಪಿಂಡದಲ್ಲಿ ಹರಿಯುತ್ತದೆ. ಪ್ರತಿ ದಿನವೂ ಬೋಮನ್ ಕವಚಗಳೊಳಕ್ಕೆ ಸುಮಾರು 1.0 ಲೀ ಗಳಷ್ಟು, ರಕ್ತದಿಂದ ಶೋಧಿತ ದ್ರವ ಹರಿಯುತ್ತದೆ. ಅಂದರೆ ಮಿನಿಟಿಗೆ 140 ಮಿಲೀ ಗಳು. ರಕ್ತದ ಒತ್ತಡವೇ ಸೋಸಲು ಅವಶ್ಯಕವಾದ ಒತ್ತಡ. ಅಪಧಮನಿಗಿಂತ ಅಭಿಧಮನಿ ಕಿರಿದಾಗಿರುವುದರಿಂದ ಲೋಮನಾಳ ಗುಚ್ಛದಲ್ಲಿ ಸ್ವಲ್ಪ ಏರಿದ ಒತ್ತಡವಿದ್ದು ಸೋಸುವುದಕ್ಕೆ ಸಹಾಯಕಾರಿ. ಬೋಮನ್ ಕವಚದೊಳಗಿನ ದ್ರವ ಪ್ರೋಟೀನ್, ಕೊಬ್ಬು ಮತ್ತು ಕಣಗಳಿಲ್ಲದ ರಕ್ತ. ಸೋಸಿಕೆ ಬರಿಯ ಭೌತಿಕ ಕಾರ್ಯ. ಇದು ಮಾಲ್ಪಿಘಿ ಸೂಕ್ಷ್ಮಾಂಗಗಳ ಕಾರ್ಯ.

ಸೂಕ್ಷ್ಮಾಂಗಗಳಲ್ಲಿ ಶೋಧನೆಯಾದ ದ್ರವದಿಂದ ಗ್ಲೂಕೋಸ್, ಅಮೈನೋ ಆಮ್ಲಗಳೂ, ಅಜೈವಿಕ ಅಯಾನುಗಳು ಮತ್ತು ದೇಹಾವಶ್ಯಕ ನೀರು ಇವನ್ನು ನಾಳಗಳು ಹೀರುತ್ತವೆ. ಯೂರಿಯ ಮುಂತಾದ ಅಂತರ್ದಹನ ಮತ್ತು ಉಪಾಪಚಯಗಳಿಂದಾಗುವ ಅಪ್ರಯೋಜಕ ಹಾನಿಕರ ವಸ್ತುಗಳ ಮರುಹೀರಿಕೆಯಾಗದೆ ದೇಹಕ್ಕೆ ಅನಾವಶ್ಯಕವಾದ ನೀರಿನೊಡನೆ ಮುಂದೆ ಸಾಗುತ್ತವೆ. ಹೆನ್ಲೆ ಕುಣಿಕೆಯ ಸಣಕಲು ಭಾಗದಲ್ಲಿರುವ ದ್ರವ ರಕ್ತದಷ್ಟೆ ಸೂಕ್ಷ್ಮಾಭಿಸರಣ ಒತ್ತಡ ಹೊಂದಿರುತ್ತದೆ. ಸಣಕಲು ಇಳಿಯುವ ಭಾಗದಲ್ಲಿ ಅಗ್ರಭಾಗದಿಂದ ಅಂತ್ಯಭಾಗದವರೆಗೂ ನೀರಿನ ಹೀರಿಕೆಯಾಗಿ ಸೋಡಿಯಮ್ ಸೇರುತ್ತ ಸೂಕ್ಷ್ಮಾಭಿಸರಣ ಒತ್ತಡ ಹೆಚ್ಚುತ್ತದೆ. ಏರುವ ಶಾಖೆಯಲ್ಲಿ ಅದು ಏರುತ್ತ ಹೋದಂತೆ ರಕ್ತಕ್ಕೆ ಸೋಡಿಯಮ್ ಸೇರಿ ಸೂಕ್ಷ್ಮಾಭಿಸರಣ ಒತ್ತಡ ಕಮ್ಮಿಯಾಗುತ್ತದೆ. ಎರಡನೆಯ ವಕ್ರನಾಳದಲ್ಲಿ ದೇಹಕ್ಕೆ ಇನ್ನೂ ಅಗತ್ಯವೆನ್ನುವಷ್ಟು ಸೋಡಿಯಮ್ ರಕ್ತಕ್ಕೆ ಸೇರಿ ಅದಕ್ಕೆ ಬದಲು ಪೊಟ್ಯಾಸಿಯಮ್, ಹೈಡ್ರೋಜನ್, ಅಮೋನಿಯಮ್ ಅಯಾನ್ ಇವು ಆಮ್ಲೀಯ ದ್ರವವಾಗುತ್ತವೆ. ಅತಿಮೂತ್ರ ವಿರುದ್ಧದ ಅಂತಸ್ರಾವದಿಂದ ಸಂಗ್ರಹನಾಳಗಳು ನೀರನ್ನು ಹೀರುತ್ತವೆ. ಗುಚ್ಛಾಂಗ ಪಕ್ಕದ ಅಂಗವ್ಯೂಹಗಳಿಂದ (ಅಪಧಮನಿ ಸುತ್ತಲಿನ ಮತ್ತೆ ಮತ್ತು ದಟ್ಟ ಚುಕ್ಕೆ) ರೆನಿನ್ ಎಂಬ ಅಂತಃಸ್ರಾವಕ ರಕ್ತದೊಳಕ್ಕಾಗಿ ರಕ್ತದೊತ್ತಡ ಏರುತ್ತದೆ.

ಮೂತ್ರಪಿಂಡಗಳಲ್ಲಿ ವ್ಯತ್ಯಯಗಳು ಅಪರೂಪವಲ್ಲ : 1. ಒಂದು ಕಡೆ ಮಾತ್ರ ಒಂದು ಮೂತ್ರ ಪಿಂಡವಿದ್ದು ಇನ್ನೊಂದು ಕಡೆ ಬೆಳೆಯದಿರಬಹುದು ಅಥವಾ ಅತಿ ಚಿಕ್ಕದಿರಬಹುದು. 2. ಎರಡು ಪಿಂಡಗಳೂ ಒಂದಾಗಿ ಕುದುರೆ ಲಾಳ ಅಥವಾ ಬಿಲ್ಲೆ ಆಕಾರದ ಮೂತ್ರಪಿಂಡವಾಗಿರಬಹುದು. 3. ಒಂದು ಮೂತ್ರ ಪಿಂಡ ಡಮರುಗದಂತೆ ಮಧ್ಯೆ ಸಣ್ಣದಾಗಿರಬಹುದು. 4 ಭ್ರೂಣದಲ್ಲಿ ಮೂತ್ರಪಿಂಡ ಉದರದ ಕೆಳಭಾಗದಲ್ಲಿ ಬೆಳೆದು ಭ್ರೂಣವೃದ್ಧಿಯೊಡನೆ ಮೇಲಕ್ಕೇರುತ್ತ ಹೊಸ ಹೊಸ ರಕ್ತನಾಳಗಳನ್ನು ಹೊಂದುತ್ತದೆ. ಹೀಗೆ ಮೇಲಕ್ಕೇರದೆ ದೊಡ್ಡವರಲ್ಲೂ ಶ್ರೋಣಿಯಲ್ಲೇ ಮೂತ್ರಕೋಶ ಗುದನಾಳಗಳ ನಡುವೆ ಇರಬಹುದು. ಸ್ತ್ರೀಯರಲ್ಲಿ ಗರ್ಭಕೋಶದ ಪಕ್ಕದಲ್ಲಿರಬಹುದು. 5. ಭ್ರೂಣವೃದ್ಧಿಯಲ್ಲಿ ಮೂತ್ರ ಜನಕನಾಳಗಳೂ ಸಂಗ್ರಹನಾಳಗಳೂ ಪ್ರತ್ಯೇಕ ಉತ್ಪತ್ತಿ ಹೊಂದಿ ಆಮೇಲೆ ಅಂತ್ಯಾಂತ್ಯ ಕೊಡುತ್ತವೆ. ಲಕ್ಷಗಟ್ಟಲೆ ನಾಳಗಳಲ್ಲಿ ಕೆಲವು ಕೂಡದಿದ್ದರೂ ಕೂಡದ ಮೂತ್ರ ಜನಕನಾಳಗಳಲ್ಲಿ ಮೂತ್ರ ತುಂಬಿಕೊಂಡು ಕ್ರಮೇಣ ದೊಡ್ಡ ದೊಡ್ಡ ಬುಡ್ಡೆಗಳಾಗಿ ಚೆನ್ನಾಗಿರುವ ನಾಳಗಳನ್ನು ಒತ್ತುತ್ತ ಅವನ್ನೂ ಹಾಳುಮಾಡಿ ಪ್ರಾಣಕ್ಕೆ ಅಪಾಯ ಒಡ್ಡುತ್ತವೆ. 6. ಮೂತ್ರಪಿಂಡಗಳ ಸ್ಥಳಪಲ್ಲಟವಿರಬಹುದು ಅಥವಾ ಅವು ಸ್ಥಳಪಲ್ಲಟಗೊಳ್ಳುತ್ತಿರಬಹುದು. ತೇಲುವ ಮೂತ್ರಪಿಂಡಗಳಾಗಿ ಸ್ಥಳ ಬದಲಾಯಿಸುತ್ತಿರುವಾಗ ಮೂತ್ರಪಿಂಡನಾಳ ಕೊಂಕಾಗಿ ಅಡಚಣೆಯಾಗಿ ಮೂತ್ರ ಪಿಂಡ ಒತ್ತಡದಿಂದ ನಶಿಸಿ ಪ್ರಾಣಕ್ಕೆ ಅಪಾಯವಾಗಬಹುದು. ಬಡಕಲಾದವರಲ್ಲಿ (ಹೆಚ್ಚು ಸ್ತ್ರೀಯರಲ್ಲಿ) ಮೂತ್ರಪಿಂಡಗಳ ಸುತ್ತಲಿನ ಕೊಬ್ಬು ನಶಿಸಿದಾಗ ಪಿಂಡಗಳೂ ಸ್ಥಳ ಪಲ್ಲಟಗೊಳ್ಳುವುದು ಹೆಚ್ಚು. 7. ಅಂತರಕಿರುಹಾಲೆ ಅಪಧಮನಿಗಳು ಅಡ್ಡ ಸೇರುವೆಗಳಿಲ್ಲದ ಅಂತ್ಯ ಅಪಧಮನಿಗಳು. ಇವುಗಳಲ್ಲಿ ಅಡಚಣೆಯಾದಾಗ ಇತರ ಅಪಧಮನಿಗಳ ನೆರವಿಲ್ಲದೆ ರಕ್ತಚಲನೆ ನಿಂತ ಮೂತ್ರಪಿಂಡ ಭಾಗ ಸತ್ತು ನಾರು ಕಟ್ಟುತ್ತದೆ. 8. ಮೂತ್ರಪಿಂಡದ ನಾಳಗಳಲ್ಲಿ, ಕೇಲಿಕ್ಸ್‌ಗಳಲ್ಲಿ, ಶ್ರೋಣಿಯಲ್ಲಿ ಕಲ್ಲುಗಳಾಗಿ ಅಡಚಣೆಯಿಂದ ಮೂತ್ರಪಿಂಡ ಕ್ಷೀಣಿಸುತ್ತದೆ. 9. ಗಂಟಲು ನೋವಿನ ಕ್ರಿಮಿದಾಳಿಯಿಂದ ಮೂತ್ರಪಿಂಡಗಳು ಕೆಟ್ಟರೆ ಕಣ್ಣುರೆಪ್ಪೆಗಳು ಊದುತ್ತವೆ. ಹೀಗಾಗುವುದು ಮಕ್ಕಳಲ್ಲಿ ಹೆಚ್ಚು. ***

**ಮೂತ್ರಪಿಂಡನಾಳ:** ಮೂತ್ರಪಿಂಡಗಳಿಂದ ಮೂತ್ರವನ್ನು ಕೆಳಗಿರುವ ಮೂತ್ರಕೋಶಕ್ಕೆ ಒಯ್ಯುವ ನಾಳಗಳು (ಯೂರಿಟರ್ಸ್). ಪ್ರತಿಯೊಂದು ನಾಳದಲ್ಲಿಯೂ ನಾಲ್ಕು

ಭಾಗಗಳಿವೆ. ಪಿಂಡದ ನಾಭಿಭಾಗ, ಮೂತ್ರಪಿಂಡನಾಳದ ಉದರಭಾಗ, ಶ್ರೋಣಿಭಾಗ, ಮೂತ್ರಕೋಶ ಭಿತ್ತಿಭಾಗಗಳು. ಕೊನೆಯ ಮೂರು ಭಾಗಗಳನ್ನೇ ಸಾಮಾನ್ಯವಾಗಿ ಮೂತ್ರಪಿಂಡನಾಳ ಎನ್ನುವುದು. ಇವುಗಳ ವ್ಯಾಸ ಹೆಚ್ಚು ಕಡಿಮೆ ಒಂದೇ. ಮೂತ್ರ ಪಿಂಡಭಾಗ 7 ರಿಂದ 13 ಲಾಳಿಕೆ ಆಕಾರದ (ಫನಲ್) ಕೊನೆಗಳಿರುವ ಕಿರುಕೇಲಿಕ್ಸ್ ನಾಳಗಳಿಂದ ಪ್ರಾರಂಭವಾಗುತ್ತದೆ. ಕಿರುಕೇಲಿಕ್ಸ್‌ಗಳು ಕೂಡಿ 2 ಅಥವಾ 3 ಹ್ರಸ್ವ ದೊಡ್ಡ ಕೇಲಿಕ್ಸ್‌ಗಳಾಗಿರುತ್ತವೆ. ಇವು ಒಂದಾಗಿ ಮೂತ್ರಪಿಂಡನಾಳದ ಪನ್ನಾಲೆಯಂಥ ಶ್ರೋಣಿಯಾಗುತ್ತದೆ. ಶ್ರೋಣಿಯ ಮೇಲ್ಭಾಗ ಮೂತ್ರಪಿಂಡ ನಾಭಿಯಲ್ಲಿದೆ; ಕೆಳಭಾಗ ನಾಭಿಕುಳಿಯ ಹೊರಗಿದೆ. ಸಾಧಾರಣವಾಗಿ ಎದೆಗೂಡಿನ ಮೇಲಿನ ಕೋನಕ್ಕೂ ಹೊಕ್ಕಳಿಗೂ ಮಧ್ಯ ಮಟ್ಟದಲ್ಲಿ ಶ್ರೋಣಿ ಸರಿಯಾದ ಮೂತ್ರಪಿಂಡನಾಳವಾಗುತ್ತದೆ. ಸರಿಯಾದ ಮೂತ್ರಪಿಂಡನಾಳದ ಉದ್ದ 28–34 ಸೆಂಮೀ ಬಲಗಡೆಯದು ಎಡಗಡೆಯದಕ್ಕಿಂತ 1 ಸೆಂಮೀ ಕೆಳಗಿದೆ. ಮೂತ್ರನಾಳದ ಭಿತ್ತಿ ದಪ್ಪವಿದ್ದು ನಾಳಮಾರ್ಗ (ಲೂಮೆನ್) ಇಕ್ಕಟ್ಟಾಗಿದೆ. ವ್ಯಾಸ 1 ಮಿಮೀ ನಿಂದ 1 ಸೆಂಮೀ ವರೆಗೆ ವಿವಿಧ ಮಟ್ಟಗಳಲ್ಲಿ ವ್ಯತ್ಯಾಸಗೊಳ್ಳುತ್ತದೆ. ಬೆನ್ನುಮೂಳೆಯ ಪಕ್ಕದಲ್ಲಿರುವ ತೊಡೆ ಮಡಿಸುವ ಸ್ನಾಯು (ದೊಡ್ಡ ಸೋಯಾಸ್) ಮುಂದೆ ಇಳಿಯುತ್ತ ಅದರ ಹೊರಪಕ್ಕದಿಂದ ಒಳಪಕ್ಕಕ್ಕೆ ದಾಟುತ್ತ ಶ್ರೋಣಿಯನ್ನು ಸೇರಿ ಮೂತ್ರಕೋಶದೊಳಕ್ಕೆ ತೆರೆಯುತ್ತದೆ. ಇದೇ ಉದರಭಾಗದ ಮೂತ್ರಪಿಂಡನಾಳ, ಉದರ ಪರಿವೇಷ್ಟ ಇದನ್ನು ಕವುಚಿದೆ. ಬಲಪಿಂಡನಾಳ ಬಲ ಅಯೋರ್ಟ ಶಾಖೆಯನ್ನೂ ಎಡಪಿಂಡನಾಳ ಎಡ ಶಾಖೆಯನ್ನೂ ದಾಟಿ ಶ್ರೋಣಿಗೆ ಇಳಿಯುತ್ತದೆ. ಶ್ರೋಣಿ ಭಾಗದ ಮೂತ್ರಪಿಂಡನಾಳ ಶ್ರೋಣಿಯ ಪಕ್ಕ ಭಿತ್ತಿಮೇಲಿಳಿದು ಮೂತ್ರ ಕೋಶಭಾಗದ ಮಟ್ಟದಲ್ಲಿ ಮುಂದಕ್ಕೆ ಸರಿದು ಕೋಶದ ಹಿಂಭಿತ್ತಿಯ ಮೂಲ 2 ಸೆಂಮೀ. ನಷ್ಟು ಓರೆಯಾಗಿ ಸಾಗಿ ಕೋಶದೊಳಕ್ಕೆ ತೆರೆಯುತ್ತದೆ. ಖಾಲಿ ಮೂತ್ರಕೋಶದೊಳಗೆ ಬಲ ಹಾಗು ಎಡ ಮೂತ್ರಪಿಂಡನಾಳರಂಧ್ರಗಳ ಅಂತರ 2.5 ಸೆಂಮೀ. ಮತ್ತು ಪೂರ್ತಿ ತುಂಬಿದ ಕೋಶದಲ್ಲಿ 5 ಸೆಂಮೀ. ಕೋಶಭಿತ್ತಿಯಲ್ಲಿ ಓರೆಯಾಗಿ ತೂರುವುದರಿಂದ ಕೋಶ ತುಂಬಿದಷ್ಟೂ ನಾಳದ ಕೊನೆಯ ಮೇಲಿನ ಒತ್ತಡ ಹೆಚ್ಚುತ್ತ ದ್ವಾರ ಮುಚ್ಚಿದಂತಾಗಿ ಮೂತ್ರನಾಳದೊಳಕ್ಕೆ ಹಿನ್ನುಗ್ಗುವುದನ್ನು ನಿರೋಧಿಸುತ್ತದೆ.

ಪಿಂಡನಾಳದಲ್ಲಿ ಮೂರು ಮಟ್ಟಗಳಲ್ಲಿ ಸಂಪೀಡನವಾಗಿ ಅದರ ಕುಳಿಕಿರಿದಾಗಿದೆ. ಪಿಂಡನಾಳದ ಶ್ರೋಣಿಭಾಗ ಉದರಭಾಗಗಳ ಸಂಧಿಯಲ್ಲಿ ಸರಾಸರಿ ವ್ಯಾಸ 2 ಮಿಮೀ. ಉದರ ಭಾಗ ಅಯೋರ್ಟದ ಬಲ ಅಥವಾ ಎಡ ಅಂತ್ಯ ಶಾಖೆಯನ್ನು ದಾಟುವಾಗ ಇರುವ ಸಂಪೀಡನದ ವ್ಯಾಸ 4 ಮಿಮೀ. ಪಿಂಡನಾಳದ ಕೋಶ ಪ್ರವೇಶದಲ್ಲಿ ಭಿತ್ತಿ ಭಾಗದ ವ್ಯಾಸ ಸುಮಾರು 1 ರಿಂದ 5 ಮಿಮೀ. ಮೂರು ಸಂಪೀಡನಗಳ ನಡುವೆ ಪಿಂಡನಾಳದ ಉದರಭಾಗದ ವ್ಯಾಸ ಸರಾಸರಿ 10 ಮಿಮೀ. ಮತ್ತು ಶ್ರೋಣಿ ಭಾಗದಲ್ಲಿ ಸರಾಸರಿ 5 ಮಿಮೀ. ಸಂಪೀಡನ ಕಂಡುಬರುವ ಸ್ಥಳಗಳಲ್ಲಿ ಮೂತ್ರ ಅಶ್ಮರಿಗಳು ನಾಳದ ಮೂಲಕ ಸಾಗುವಾಗ ಸಿಕ್ಕಿಹಾಕಿಕೊಂಡು ಮೂತ್ರ ಸಾಗಣೆಗೆ ಅಡ್ಡಿಯಾಗುವುದಲ್ಲದೆ ಅತಿನೋವಿಗೂ ಕಾರಣವಾಗುತ್ತವೆ. ಸ್ತ್ರೀಯರಲ್ಲಿ ಪಿಂಡನಾಳದ ಉದರಭಾಗ ಗಂಡಿನಲ್ಲಿ ಇರುವಂತಿದೆ. ಶ್ರೋಣಿಭಾಗ ಸ್ತ್ರೀಜನನಗ್ರಂಥಿ ಗುಳಿಯ ಹಿಂದಿನ ಎಲ್ಲೆ. ಗುಳಿಯಿಂದ ನಾಳ ಒಳಪಕ್ಕಕ್ಕೆ ಮತ್ತು ಮುಂದಕ್ಕೆ ಹೊರಟು ಗರ್ಭಕೋಶ ಕಂಠದ ಮತ್ತು ಯೋನಿಯ ಮೇಲ್ಭಾಗದ ಪಕ್ಕದಲ್ಲಿ 2 ಸೆಂಮೀ ದೂರದಲ್ಲಿ ದಾಟಿ ಮೂತ್ರಕೋಶವನ್ನು ಸೇರುತ್ತದೆ. ಇದಕ್ಕೆ ಮೊದಲು 2.5 ಸೆಂಮೀ. ನಷ್ಟು ಅದರ ಜೊತೆಯಲ್ಲಿ ಗರ್ಭಕೋಶಧಮನಿ ಇರುತ್ತದೆ.

ವ್ಯತ್ಯಾಸಗಳು : ಪಿಂಡನಾಳದ ಮೇಲ್ಭಾಗ ಎರಡಾಗಿ ಕವಲೊಡೆದಿರಬಹುದು. ಅಪರೂಪವಾಗಿ ಇಡೀನಾಳವೆ ಎರಡಾಗಿ ಕೋಶದ ಒಂದು ಅಥವಾ ಎರಡು ಪಕ್ಕಗಳಲ್ಲು ಎರಡೆರಡು ಪಿಂಡನಾಳ ರಂಧ್ರಗಳಿರಬಹುದು. ಈ ವ್ಯತ್ಯಾಸಗಳಿಂದ ಹೆಚ್ಚು ಕೆಡುಕೇನೂ ಇರುವುದಿಲ್ಲ. ಒಂದು ನಾಳವಿದ್ದಾಗ ಎಷ್ಟು ಕೆಡುಕಾಗಬಲ್ಲದೊ ಎರಡಿದ್ದರೂ ಅಷ್ಟೆ ಆಗುತ್ತದೆ. ಈ ವ್ಯತ್ಯಾಸಗಳಲ್ಲಿ ಸಮಪಾರ್ಶ್ವತೆ ಇರುವುದಿಲ್ಲ. ತೊಂದರೆಗಳಾಗದಿದ್ದರೆ ವ್ಯತ್ಯಾಸಗಳಿರುವುದೂ ತಿಳಿಯುವುದಿಲ್ಲ. ಯೂರೊಸೆಲೆಕ್ಟಾನ್ ಎಂಬ ಚುಚ್ಚುಮದ್ದು ಕೊಟ್ಟು ಎಕ್ಸ್‌ಕಿರಣ ಛಾಯಾಚಿತ್ರವನ್ನು ತೆಗೆದಾಗ ವ್ಯತ್ಯಾಸಗಳಿರುವುದು ತಿಳಿಯುತ್ತದೆ. ಇಂದಿನ ದಿನಗಳಲ್ಲಿ ಶ್ರವಣಾತೀತ ಶಬ್ದ ಪ್ರತಿಫಲನದ ಚಿತ್ರ (ಅಲ್ಟ್ರಾಸೋನೋಗ್ರಾಫ್)ದ ಮೂಲಕ ಮೂತ್ರ ಪಿಂಡಗಳ, ಮೂತ್ರ ಪಿಂಡನಾಳಗಳ ರಚನೆ ಮತ್ತು ಅವುಗಳಲ್ಲಿಯ ಏರುಪೇರು ಗುರುತಿಸಲು ಸರಳ ಸಾಧ್ಯವಾಗಿದೆ. (ಎಂ.ಡಿ.)

**ಮೂತ್ರರೋಗಗಳು:** 1. ವಿಶಿಷ್ಟ ಕ್ರಿಮಿಶೂನ್ಯ ಉರಿಮೂತ್ರ: ತೀವ್ರ ಗೊನೋರಿಯದ ಲಕ್ಷಣಗಳೆ ಇದರ ಲಕ್ಷಣಗಳಾದರೂ ಗೊನೋಕಾಕಸ್ ಕೀವಿನಲ್ಲಿ ಇಲ್ಲವೆ ಮೂತ್ರದಲ್ಲಿ ಯಾವರೀತಿ ಹುಡುಕಿದರೂ ಕಾಣಿಸುವುದಿಲ್ಲ. ಆದ್ದರಿಂದ ಇದಕ್ಕೆ ಗೊನೋರಿಯ ಕ್ರಿಮಿಶೂನ್ಯ ಉರಿಮೂತ್ರ ಎನ್ನಬಹುದು. ಪೆನಿಸಿಲಿನ್ ಔಷಧಿ ಉಪಯೋಗಕ್ಕೆ ಬಂದಂದಿನಿಂದ ಈ ರೋಗದ ಅಸ್ತಿತ್ವವನ್ನು ಸ್ಥಾಪಿಸಲಾಗಿದೆ. ಪೆನಿಸಿಲಿನ್‌ನಿಂದ ಈ ರೋಗ ಗುಣವಾಗದು. ಸ್ಟಫಿಲೋಕಾಕಸ್, ಬಿ.ಕೋಲೈ ಸೂಕ್ಷ್ಮಜೀವಿಗಳು ಮತ್ತು ಟ್ರೈ ಕೊಮೋನ ವೆಜೈನಾಲೀಸ್ ಎಂಬ ಏಕಕಣಜೀವಿಗಳು (ಪ್ರೊಟೊಜ಼ೋವ) ಇಂಥ ಕೀವುಯುಕ್ತ ಉರಿ ಮೂತ್ರಗಳನ್ನು ಉಂಟುಮಾಡುತ್ತವೆ. ದ್ರಾವಕ ಮತ್ತು ಕ್ಷಾರಗಳು ಮೂತ್ರನಾಳಗಳು ಉರಿಯೂತಕ್ಕೀಡುಮಾಡಿ ಉರಿಮೂತ್ರಕ್ಕೆ ಕಾರಣವಾಗಬಹುದು. ಮೂತ್ರನಾಳಕ್ಕೆ ಯಾವುದೆ ವಿಧವಾದ ಗಾಯವಾದಾಗ ಅಥವಾ ರಬ್ಬರ್ ಇಲ್ಲವೆ ಲೋಹದ ನಳಿಕೆ ಹಾಕಿ ಮೂತ್ರಕೋಶದಿಂದ ನೀರು ತೆಗೆದಾಗ ಉರಿಮೂತ್ರ ಬರುವುದು. ಶಸ್ತ್ರಕ್ರಿಯೆ ಮಾಡುವ ಮುಂಚೆ ಶುಭ್ರಮಾಡಲು ನಳಿಕೆದ್ವಾರದ ಮೂಲಕ ಕೆಲವು ದ್ರವಗಳನ್ನು ಹಾಕಿ ತೊಳೆಯುವುದುಂಟು. ಹೀಗೆ ಮಾಡುವಾಗ ಮೂತ್ರನಾಳದ ಅಂಟುಪೊರೆಗೆ ಗಾಯವಾದರೆ ಉರಿಮೂತ್ರ ಬರುತ್ತದೆ.

ಮಿಮೆ ಎಂಬ ಕ್ರಿಮಿಗಳನ್ನು ಉರಿಮೂತ್ರದಲ್ಲಿ ಗುರುತಿಸಲಾಗಿದೆ. ಕ್ರಿಮಿಗಳು ಗೊನೋಕಾಕಸಿನಂತಿದ್ದು ಗ್ರಾಮನಬಣ್ಣ ಕೊಡುವ ಕ್ರಮದಲ್ಲಿ ನೀಲಿಯಾಗಿ ಕಾಣುವುವು. ಮಿಮೆ ಎಂದರೆ ಅನುಕರಿಸುವ ಕ್ರಿಮಿ ಎಂದರ್ಥ. ಇನ್ನೂ ಕೆಲವರು ಉರಿಮೂತ್ರದಲ್ಲಿ ಪ್ಲೂರೊ ನ್ಯೂಮೋನಿಯ ಕ್ರಿಮಿಗಳನ್ನು ಅನುಕರಿಸುವ ಕ್ರಿಮಿಗಳನ್ನು ಕಂಡಿದ್ದಾರೆ. ಇವು ಸಾಧಾರಣವಾಗಿ, ಕುರಿ, ಆಡು, ನಾಯಿ ಮತ್ತು ಇಲಿಗಳಲ್ಲಿ ರೋಗ ಉಂಟು ಮಾಡುತ್ತವೆ. ಎಲ್ಲರಲ್ಲಿಯೂ ಯಾವಾಗಲೂ ರೋಗ ಉತ್ಪನ್ನ ಮಾಡಲಾರವು. ಕೃತ್ರಿಮವಾಗಿ ಬೆಳೆಸಲು ರಕ್ತದ್ರವ ಇಲ್ಲವೆ ಜಲೋದರದ್ರವ ಬೇಕು. ಕೆಲ ಕ್ರಿಮಿಗಳು (ಬಿ. ಕೋಲೈ) ಕೃತ್ರಿಮ ಅನಾನುಕೂಲ ಪರಿಸ್ಥಿತಿಯಲ್ಲಿ ಬದಲಾವಣೆ ಹೊಂದಿ ಪ್ಲೂರೊನ್ಯೂಮೋನಿಯ ಕ್ರಿಮಿಗಳನ್ನು ಹೋಲುವಂತಾಗುತ್ತವೆಂದು ಊಹಿಸಲಾಗಿದೆ.

2. ರೀಟರನ ಲಕ್ಷಣಕೂಟ (ಸಿಂಡ್ರೋಮ್): ಉರಿಮೂತ್ರದಿಂದಲೇ ಪ್ರಾರಂಭವಾಗುತ್ತದೆ. ಸ್ವಲ್ಪ ದಿನಸಗಳ ಬಳಿಕ ಅನೇಕ ಕೀಲುಗಳ ಉರಿಯೂತ ಮತ್ತು ಕಣ್ಣಿನ ಬಿಳಿಪೊರೆಯ ಉರಿಯೂತ ಬರುವುವು. ಉರಿಮೂತ್ರ ಕ್ಷಣಿಕ. ಕೀಲು ಉರಿಯೂತದಿಂದ ಕೆಲವು ಕೀಲುಗಳಲ್ಲಿ ನೋವು, ಕಾವು, ಕೆಂಪು ಬಾವು ಇರುವುವು. ಕಣ್ಣಿನ ಬಿಳಿ ಪೊರೆ ಕೆಂಪಾಗಿ ನೀರು ಸುರಿಸಿ ನೋವು ಬರಬಹುದು, ಕಣ್ಣು, ಕೀಲು ಮೂತ್ರನಾಳ ಈ ಕ್ರಿಯೇಂದ್ರಿಯಗಳ ಉರಿಯೂತದಿಂದುಂಟಾದ ಲಕ್ಷಣಕೂಟವೇ ಈ ರೋಗದ ವೈಶಿಷ್ಟ್ಯ. ಸಾಧಾರಣವಾಗಿ ಇದು ವಯಸ್ಕ ಗಂಡಸರಲ್ಲಿ ಕಾಣಬರುವುದು. ಕೆಲರೋಗಿಗಳಲ್ಲಿ ಉದುರುವ (ಸ್ಕೇಲಿ), ತೊಗಟೆಯುಳ್ಳ (ಕ್ರಸ್ಟಿ) ಚರ್ಮದ ಗಾಯಗಳನ್ನು ದೇಹದ ಎರಡೂ ಕಡೆ ಅಂಗೈ ಅಂಗಾಲು, ಹಾಗು ಮೊಣಕಾಲುಗಳಲ್ಲಿ ಕಾಣಬಹುದು. ವಿಶಿಷ್ಟ ಲಕ್ಷಣ ಮಾಯವಾಗಿ ಮರಳಬಹುದು. ಕೆಲರೋಗಿಗಳು ಆಮಶಂಕೆಯಿಂದ ನರಳುವುದುಂಟು.

(ಎನ್.ಕೆ.ಎಂ.)

**ಮೂತ್ರಾಂಗ ವ್ಯೂಹ:** ಮೂತ್ರೋತ್ಪತ್ತಿ ಮಾಡಿ ಅದನ್ನು ಕಾಲಕಾಲಕ್ಕೆ ವಿಸರ್ಜಿಸುವ ಅಂಗಗಳ ಸಮೂಹ. (ಯೂರಿನರಿ ಸಿಸ್ಟಮ್). ಮೂತ್ರಪಿಂಡ, ಮೂತ್ರಪಿಂಡನಾಳ, ಮೂತ್ರಕೋಶ, ಮೂತ್ರಕೋಶನಾಳ, ಇವೇ ಈ ಸಮೂಹದ ಅಂಗಗಳು. ಇವುಗಳ ಸ್ಥೂಲರಚನೆ ಹಾಗೂ ಕ್ರಿಯೆಗಳನ್ನು ಆಯಾ ಶೀರ್ಷಿಕೆಗಳ ಅಡಿಯಲ್ಲಿ ಪ್ರತ್ಯೇಕವಾಗಿ ಕೊಟ್ಟಿದೆ. ಈ ಸಮೂಹದ ಪ್ರಮುಖ ಅಂಗವಾದ ಮೂತ್ರಪಿಂಡಗಳು ಇಡೀ ದೇಹಕ್ಕೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುವ ಪರಿಯನ್ನು ಈ ಲೇಖನದಲ್ಲಿ ತಿಳಿಸಿದೆ. ಮೂತ್ರಪಿಂಡಗಳು ವ್ಯಕ್ತಿ ಜನಿಸಿದ ಗಳಿಗೆಯಿಂದ ಮರಣ ಸಂಭವಿಸುವ ತನಕ ಒಂದು ಕ್ಷಣವೂ ಬಿಡದೆ ಮೂತ್ರೋತ್ಪತ್ತಿ ಮಾಡುತ್ತಲೆ ಇರುತ್ತವೆ. ಒಂದೊಂದು ಮೂತ್ರಪಿಂಡದಿಂದಲೂ ವಯಸ್ಕರಲ್ಲಿ ಮಿನಿಟಿಗೆ ಸುಮಾರು ½ ಮೀ. ಮೂತ್ರ ಉತ್ಪತ್ತಿ ಆಗುತ್ತದೆ. ಆಯಾ ಕಡೆಯ ಮೂತ್ರಪಿಂಡನಾಳದ (ಯೂರಿಟರ್) ಮೂಲಕ ಮೂತ್ರ ಕಿಬ್ಬೊಟ್ಟೆಯಲ್ಲಿರುವ ಮೂತ್ರಕೋಶಕ್ಕೆ (ಯೂರಿನರಿ ಬ್ಲಾಡರ್) ಒಯ್ಯಲ್ಪಟ್ಟು ಅದರ ವ್ಯಾಕೋಚನಗಳಿಂದಾಗಿ ಅಲ್ಲಿ ಶೇಖರವಾಗುತ್ತದೆ. ಸುಮಾರು 300 ಮಿಲೀ ಮೂತ್ರ ಸಂಗ್ರಹವಾದಾಗ ಸಾಮಾನ್ಯವಾಗಿ ಮೂತ್ರಕೋಶ ಸಂಕುಚಿಸುತ್ತದೆ ಮತ್ತು ಮೂತ್ರಕೋಶನಾಳದ (ಯೂರೆತ್ರ) ಮೂಲಕ ಮೂತ್ರವನ್ನು ದೇಹದಿಂದ ಹೊರದೂಡುತ್ತದೆ. ಹೀಗೆ ದಿವಸದ 24 ಗಂಟೆಗಳಲ್ಲಿ ಒಟ್ಟು ಸುಮಾರು 1½ ಲೀ.ಗಳಷ್ಟು ಮೂತ್ರ ದೇಹದಿಂದ ಹೊರಗೆ ಹೋಗುತ್ತದೆ.

ಮೂತ್ರದಲ್ಲಿ ದೇಹಕ್ಕೆ ಅನಾವಶ್ಯಕವೆನಿಸುವ ಸಲ್ಫೇಟುಗಳು, ಆಮ್ಲೀಯ ಫಾಸ್ಫೇಟುಗಳು ಮುಂತಾದ ಲವಣಗಳೂ ಯೂರಿಕ್ ಆಮ್ಲ, ಕ್ರಿಯಾಟಿನಿನ್, ಯೂರಿಯ ಮುಂತಾದ ನೈಟ್ರೊಜನ್‌ಯುಕ್ತ ವರ್ಜನೀಯ ವಸ್ತುಗಳೂ (ನೈಟ್ರೋಜಿನಸ್ ವೇಸ್ಟ್), ಅವಶ್ಯಕವಾಗಿದ್ದರೂ ನಿರ್ದಿಷ್ಟಮಟ್ಟಕ್ಕಿಂತ ಹೆಚ್ಚಾಗಿರುವ ಗ್ಲೂಕೋಸ್, ಸೋಡಿಯಮ್ ಕ್ಲೋರೈಡ್ ಮುಂತಾದುವೂ

ವಿಷಪ್ರಾಯವಾಗಿ ಪರಿಣಮಿಸಬಹುದಾದ ಅನ್ಯವಸ್ತುಗಳೂ ದೇಹದಲ್ಲಿ ನಿರ್ದಿಷ್ಟ ಮಟ್ಟಕ್ಕಿಂತ ಹೆಚ್ಚಾಗಿರುವ ನೀರಿನಲ್ಲಿ ಲೀನವಾಗಿ ವಿಸರ್ಜಿತವಾಗುತ್ತವೆ. ಹೀಗಾಗಿ ಮೂತ್ರ ವ್ಯೂಹದ ಕ್ರಿಯೆ ದೇಹಕ್ಕೆ ಬೇಡದ ವಸ್ತುಗಳನ್ನು ಹೊರದೂಡುವುದು.

ಮೂತ್ರಪಿಂಡಗಳು ಮಾತ್ರ ತ್ಯಾಜ್ಯವಸ್ತುಗಳನ್ನು ಹೊರಹಾಕುವುದಿಲ್ಲ. ಸ್ವೇದಗ್ರಂಥಿಗಳು ಬೆವರನ್ನು ಸ್ರವಿಸಿದಾಗ ಅದರಲ್ಲಿಯೂ ಸ್ವಲ್ಪಮಟ್ಟಿನ ಯೂರಿಯ ಹಾಗೂ ಸೋಡಿಯಮ್ ಕ್ಲೋರೈಡುಗಳು ವಿರ್ಜಿಸಲ್ಪಡುತ್ತವೆ. ಬಲು ಶ್ರಮದ ಕೆಲಸಮಾಡುವಾಗ ಬೆವರಿನಲ್ಲಿ ಲ್ಯಾಕ್ಟಿಕ್ ಆಮ್ಲವೂ ಕೊಂಚ ವಿಸರ್ಜಿತವಾಗುವುದುಂಟು. ದೇಹದಲ್ಲಿ ನಿರಂತರವಾಗಿ ಉತ್ಪತ್ತಿ ಆಗುವ ಕಾರ್ಬನ್ ಡೈ ಆಕ್ಸೈಡ್ ವಿಸರ್ಜನವಸ್ತುವೆ. ಆದರೆ ಇದು ಅನಿಲರೂಪದಲ್ಲಿ ಶ್ವಾಸಕೋಶಗಳಿಂದ ವಿಸರ್ಜಿತವಾಗುತ್ತದೆ. ಲೀನವಾಗದ ಅನುಪಯುಕ್ತ ವಸ್ತುಗಳು ಮಲದ ಮೂಲಕ ವಿಸರ್ಜಿತವಾಗುತ್ತವೆ. ಹೀಗೆ ತ್ಯಾಜ್ಯವಸ್ತುಗಳು ಬಗೆಬಗೆಯಾಗಿ ವಿಸರ್ಜಿತವಾಗುತ್ತವಾದರೂ ರಕ್ತದಲ್ಲಿ ಲೀನವಾಗಿರುವ ಘನವಸ್ತುಗಳು (ಸೊಲ್ಯೂಟ್ಸ್) ಪ್ರಮುಖವಾಗಿ ಮೂತ್ರಾಂಗ ವ್ಯೂಹದಿಂದ ವಿಸರ್ಜಿತವಾಗುತ್ತವೆ. ಇದಕ್ಕಾಗಿ ರಕ್ತದ ಶುದ್ಧೀಕರಣಕ್ಕಾಗಿ ರಕ್ತ ಅಗಾಧಪ್ರಮಾಣದಲ್ಲಿ ಮೂತ್ರಪಿಂಡಗಳಲ್ಲಿ ಪರಿಚಲಿಸುತ್ತದೆ. ಎಡಹೃತ್ಕುಕ್ಷಿಯಿಂದ ರೇಚಿಸಲ್ಪಡುವ ರಕ್ತದ ಸುಮಾರು ಕಾಲು ಭಾಗ ಮೂತ್ರಪಿಂಡಗಳಿಗೆ ಪೂರೈಕೆ ಆಗುತ್ತದೆ.

ಪ್ರತಿಯೊಂದು ಮೂತ್ರಪಿಂಡದಲ್ಲಿಯು ಮಿನಿಟಿಗೆ ಸುಮಾರು 750 ಮಿಲೀ ರಕ್ತ ಹರಿಯುತ್ತದೆ. ಇದರಿಂದ ಸುಮಾರು 60 ಮಿಲೀ ತಿಳಿದ್ರಾವಣ ಜರಡಿಯಲ್ಲಿ ಸೋಸಿ ಬರುವಂತೆ ಮೊತ್ತಮೊದಲು ಫಲಿಸುತ್ತದೆ. ಈ ದ್ರಾವಣದಲ್ಲಿ ರಕ್ತದಲ್ಲಿದ್ದ ದೇಹಕ್ಕೆ ಬೇಕಾದ ಹಾಗೂ ಬೇಡವಾದ ಎಲ್ಲ ವಸ್ತುಗಳೂ ರಕ್ತದಲ್ಲಿದ್ದ ಶೇಕಡಾವಾರುಮಟ್ಟದಲ್ಲಿ ಇರುವುವು. ಈ ದ್ರಾವಣದಿಂದ ಸೋಡಿಯಮ್ ಕ್ಲೋರೈಡ್, ಸೋಡಿಯಮ್ ಬೈ ಕಾರ್ಬೊನೇಟ್ ಮುಂತಾದ ಲವಣಗಳು, ದೇಹಕ್ಕೆ ಉಪಯುಕ್ತವಾಗಿರುವಷ್ಟು ಗ್ಲೂಕೋಸ್, ಅಮೈನೋ ಆಮ್ಲಗಳು ಇತ್ಯಾದಿ ಪೂರ್ಣವಾಗಿಯೂ, ತಕ್ಕಷ್ಟು ನೀರಿನೊಡನೆ ವಾಪಸ್ಸು ಹೀರಲ್ಪಟ್ಟು ರಕ್ತಗತವಾಗುತ್ತವೆ. ಉಳಿದ ಸುಮಾರು 7–8 ಮಿಲೀ ದ್ರಾವಣದಲ್ಲಿ ಉಳಿದ ವಸ್ತುಗಳಷ್ಟೂ ಲೀನವಾಗಿದ್ದು ಮೂತ್ರಪಿಂಡದಲ್ಲಿ ಮುಂದುವರಿಯುತ್ತ ಅನೇಕ ರಾಸಾಯನಿಕ ಪರಿವರ್ತನೆಗಳಿಗೆ ಒಳಗಾಗುತ್ತವೆ. ಈ ಪರಿವರ್ತಿತ ದ್ರಾವಣದಿಂದ ಇನ್ನೂ ಕೆಲವು ರಾಸಾಯನಿಕಗಳು ಸುಮಾರು 6½–7 ಮಿಲೀ ಗಳಷ್ಟು ನೀರಿನೊಡನೆ ಹೀರಲ್ಪಟ್ಟು ರಕ್ತಗತವಾಗುತ್ತವೆ. ಪ್ರತಿಯೊಂದು ಮೂತ್ರಪಿಂಡದಲ್ಲೂ ಪ್ರತಿಯೊಂದು ಮಿನಿಟೂ ಅಂತಿಮವಾಗಿ ಉಳಿದ ಸುಮಾರು ½ ಮಿಲೀ ನಷ್ಟು ಮೂತ್ರ ತ್ಯಾಜ್ಯವಸ್ತುಗಳಷ್ಟನ್ನೂ ಲೀನವಾಗಿಸಿಕೊಂಡು ಮೂತ್ರಕೋಶಕ್ಕೆ ಒಯ್ಯಲ್ಪಟ್ಟು ಅಲ್ಲಿ ಸಂಗ್ರಹವಾಗುತ್ತದೆ. ಮೂತ್ರಪಿಂಡದ ವಿಶಿಷ್ಟಕೋಶಗಳು ಅವಕ್ಕೇ ವಿಶಿಷ್ಟವಾದ ಕಿಣ್ವಗಳನ್ನು ಹೊಂದಿರುವುದರಿಂದಲೂ ಅನೇಕ ಇಂಥ ಕಿಣ್ವಗಳು ಮೂತ್ರಪಿಂಡದ ಮೇಲೆ ಪ್ರಭಾವಿಸುವ ಅನೇಕ ಹಾರ್ಮೋನುಗಳ ಹತೋಟಿಗೆ ಒಳಪಟ್ಟಿರುವುದರಿಂದಲೂ ಮೂತ್ರಪಿಂಡದಲ್ಲಿ ಈ ಹಿಂದೆ ವಿವರಿಸಿರುವ ರಾಸಾಯನಿಕ ಮಾರ್ಪಾಡುಗಳೂ ಅವುಗಳ ಹೀರಿಕೆ ಹಾಗೂ ವಿನಿಮಯಗಳೂ ಸಾಧ್ಯವಾಗಿವೆ. ಮೂತ್ರಪಿಂಡದ ನಿರಂತರವಾದ ಈ ಕ್ರಿಯೆ ನಿರ್ಬಾಧಿತ ಆರೋಗ್ಯಜೀವನಕ್ರಿಯೆಗೆ ಅತ್ಯಗತ್ಯ. ದೇಹದ ಸಹಜ ಜೈವಿಕಕ್ರಿಯೆಗಳು ಸಕಲವೂ ದೇಹದ್ರವದ ಒಟ್ಟು ಮೊತ್ತ ಮತ್ತು ಅದರ ರಾಸಾಯನಿಕ ಘಟಕಗಳ ನಿರುದ್ದೋಲನಸ್ಥಿತಿಯನ್ನು (ಹೋಮಿಯೋಸ್ಟೇಸಿಸ್) ಪೂರ್ಣವಾಗಿ ಅವಲಂಬಿಸಿದೆ. ಆದ್ದರಿಂದ ದೇಹ ಆ ದ್ರವದ ಸಮತೋಲಸ್ಥಿತಿಯನ್ನು ಸರ್ವಥಾ ಕಾಯ್ದಿಟ್ಟುಕೊಂಡಿರಬೇಕಾಗುತ್ತದೆ. ದೈಹಿಕ ಚಟುವಟಿಕೆ, ಉಸಿರಾಟ, ಆಹಾರಸೇವನೆ, ಉಪಾಪಚಯಕ್ರಿಯೆ ಮುಂತಾದುವುಗಳಿಂದ ದೇಹದ್ರವದ ಮೊತ್ತ ಹಾಗೂ ರಾಸಾಯನಿಕ ಸಂಘಟನೆ (ಕೆಮಿಕಲ್ ಕಾಂಪೋಸಿಷನ್) ನಿರಂತರವು ಬದಲಾವಣೆಯಾಗುತ್ತಿರುತ್ತದೆ. ಇದಲ್ಲದೆ ವರ್ಜ್ಯವಸ್ತುಗಳೂ ಸೇರಿಕೊಂಡು ಈ ಕ್ರಿಯೆಗಳನ್ನು ವಿಷಮಿಸುತ್ತಲೆ ಇರುತ್ತವೆ. ದೇಹದ್ರವ ಹಾಗೂ ರಕ್ತ ಇವೆರಡರ ನಡುವೆ ನಿರಂತರವು ವಸ್ತುವಿನಿಮಯ ಆಗುತ್ತಿರುವುದರಿಂದ ದೇಹದ್ರವದ ಬದಲಾವಣೆಗಳು ರಕ್ತದಲ್ಲೂ ಪ್ರತಿಬಿಂಬಿತವಾಗುತ್ತದೆ. ದೇಹದ್ರವ ಕಲುಷಿತವಾದಾಗ ರಕ್ತವೂ ಕಲುಷಿತವಾಗುತ್ತದೆ. ಮೂತ್ರಪಿಂಡಗಳು ರಕ್ತವನ್ನು ಶುದ್ಧೀಕರಿಸುತ್ತ ತತ್ಫಲವಾಗಿ ದೇಹದ್ರವವನ್ನೂ ಶುದ್ಧೀಕರಿಸುತ್ತವೆ. ಇದರಿಂದ ದೇಹಕ್ರಿಯೆಗಳು ಕ್ಷೋಭೆಗೆ ಒಳಗಾಗದೆ ನಿಯತವಾಗಿ ಜರಗುವುದು ಸಾಧ್ಯವಾಗಿದೆ.

ನೀರು : ಆಹಾರಪಾನೀಯಗಳಿಂದ ದಿನಂಪ್ರತಿ ಸು. 3 ಲೀ ಗಳಷ್ಟು ನೀರು ದೇಹದೊಳಕ್ಕೆ ಹೋಗುತ್ತದೆ. ಇದರಲ್ಲಿ ಸು. 800 ಮಿ ಲೀ ಗಳಷ್ಟು ನೀರು, ಬೆವರು ಹಾಗೂ ಅವ್ಯಕ್ತ ಆವಿಯ ರೂಪದಲ್ಲಿ ಚರ್ಮದ ಮೂಲಕ ಕಳೆದುಹೋಗುತ್ತದೆ. ಇನ್ನು ಸ. 400–600 ಮಿ ಲೀ.ಗಳಷ್ಟು ನೀರು ಉಸಿರಿನಲ್ಲಿಯ ಆವಿಯ ರೂಪದಲ್ಲಿ ವಿಸರ್ಜಿತವಾಗುತ್ತದೆ. ಇನ್ನೂ ಸು. 200 ಮೀ ನೀರು ಇನ್ನು ಬೇರೆ ಬೇರೆ ರೂಪಗಳಲ್ಲಿ ನಷ್ಟವಾಗುತ್ತದೆ. ಮಿಕ್ಕ ನೀರು ಸು. 1500 ಮಿಲೀ ಗಳಷ್ಟು ಮೂತ್ರ ರೂಪದಲ್ಲಿ ವಿಸರ್ಜಿತವಾಗುತ್ತದೆ. ಕಾರಣಾಂತರಗಳಿಂದ ದೇಹದ ನೀರು ಹೆಚ್ಚಾದಾಗ (ಐಚ್ಛಿಕ–ಅನೈಚ್ಛಿಕವಾಗಿ ಅತಿಯಾಗಿ ಪಾನೀಯ ಸೇವನೆ, ಅಗಾಧ ಪ್ರಮಾಣದಲ್ಲಿ ಸೂಜಿಮದ್ದು ತೆಗೆದುಕೊಳ್ಳುವುದು ಇತ್ಯಾದಿ) ಮೂತ್ರದ ಪ್ರಮಾಣ ಅಧಿಕವಾಗಿ ಹೆಚ್ಚುವರಿಯನ್ನು ಕಳೆಯುತ್ತದೆ. ಇಂಥ ಸಮಯದಲ್ಲಿ ಉಸಿರಿನಲ್ಲಿ, ಬೆವರು ರೂಪದಲ್ಲಿ ನೀರಿನ ವಿಸರ್ಜನೆ ಏನೂ ಹೆಚ್ಚಾಗುವುದಿಲ್ಲ. ಹಾಗೆಯೇ ದೇಹದ ನೀರು ಕಡಿಮೆ ಆದಾಗ (ಐಚ್ಛಿಕ–ಅನೈಚ್ಛಿಕವಾಗಿ ನೀರು ಹಾಗೂ ಪಾನೀಯಗಳನ್ನು ಸೇವಿಸದಿರುವುದು, ಅತಿವಮನ, ಅತಿಭೇದಿ, ಅತ್ಯಧಿಕವಾಗಿ ಬೆವರುವಿಕೆ ಇತ್ಯಾದಿ) ಪುನಃ ಮೂತ್ರದ ಪ್ರಮಾಣ ಮಾತ್ರವೇ ಕುಗ್ಗಿ ದೇಹದ ನೀರು ಇನ್ನಷ್ಟು ಈ ರೀತಿಯಿಂದಲೂ ಕಡಿಮೆ ಆಗುವುದಿಲ್ಲ. ಮೇಲಿನ ವಿಶಿಷ್ಟ ಸಂದರ್ಭಗಳಲ್ಲಿ ದಿನದಲ್ಲಿ ಸು. 12–16 ಲೀ ಗಳಷ್ಟು ಮೂತ್ರ ಹೆಚ್ಚಬಹುದು ಇಲ್ಲವೆ ಸು. 500 ಮಿಲೀ ಗೆ ಕಡಿಮೆ ಆಗಬಹುದು. ಬೆವರುವುದು ಹೆಚ್ಚು ಕಡಿಮೆ ಆಗುವುದು ಸರ್ವವಿದಿತ. ಆದರೆ ಇದು ದೇಹದ ಉಷ್ಣತೆಯ ನಿಯಂತ್ರಣಕ್ಕಾಗಿ (ನೋಡಿ: ಸಮತಾಪಿಗಳು) ಹೊರತು ದೇಹದ ನೀರಿನ ನಿಯಂತ್ರಣಕ್ಕಾಗಿ ಅಲ್ಲ. ಬಿಸಿಲಿನ ಬೇಗೆ, ಕಷ್ಟದ ಕೆಲಸ ಹಾಗೂ ವ್ಯಾಯಾಮಗಳನ್ನು ಸೆಕೆಯಾಗಿರುವ ವಾತಾವರಣದಲ್ಲಿ ಮಾಡುವುದರಿಂದ ಹೆಚ್ಚಾಗಿ ಬೆವರುವುದು ಸಾಮಾನ್ಯ. ಈ ಸಂದರ್ಭಗಳಲ್ಲಿ ದೇಹೋಷ್ಣತೆ ಹೆಚ್ಚಾಗಿರುತ್ತದೆ. ಬೆವರುವುದು ಹೆಚ್ಚಿ ನೀರು ದೇಹದ ಮೇಲ್ಮೈಯಿಂದ ಆವಿಯಾಗಿ ಆರಿಹೋಗುತ್ತ ದೇಹೋಷ್ಣತೆಯ ಹೆಚ್ಚುವರಿ ಕಳೆದು, ದೇಹವನ್ನು ತಂಪುಗೊಳಿಸುತ್ತದೆ. ದನ, ನಾಯಿ ಇತ್ಯಾದಿಗಳು ಹೆಚ್ಚಿದ ದೇಹೋಷ್ಣತೆಯನ್ನು ಕಳೆದುಕೊಳ್ಳುವುದಕ್ಕಾಗಿ ನಾಲಗೆಯನ್ನು ಹೊರಚಾಚಿ ಮೇಲುಸಿರಾಡುವುದು ದೇಹೋಷ್ಣತೆಯ ನಿಯಂತ್ರಣಕ್ಕಾಗಿ.

ಲವಣಗಳು : ಆಹಾರದ ಮೂಲಕ ದೇಹದ ಒಳಹೊಗುವ ಸೋಡಿಯಮ್ ಹಾಗೂ ಪೊಟ್ಯಾಷಿಯಮ್ ಕ್ಲೋರೈಡ್, ಆಮ್ಲೀಯ ಫಾಸ್ಫೇಟ್ ಇತ್ಯಾದಿಗಳನ್ನು ಮೊತ್ತಮೊದಲಾಗಿ ಉತ್ಪತ್ತಿಯಾದ ತಿಳಿದ್ರಾವಣದಿಂದ ಮೂತ್ರಪಿಂಡ ಅಗತ್ಯ ಮಟ್ಟಕ್ಕೆ ಅನುಗುಣವಾಗಿ ಮಾತ್ರ ಹೀರಿಕೊಂಡು ಉಳಿಕೆಯನ್ನು ವಿಸರ್ಜಿಸಿ ದೇಹ ದ್ರವದಲ್ಲಿ ಅವುಗಳ ಮಟ್ಟವನ್ನು ನಿಯಂತ್ರಿಸುತ್ತದೆ. ಈ ಕೆಲಸವನ್ನು ನಿರ್ವಹಿಸುವುದು ಮೂತ್ರಪಿಂಡ ಮಾತ್ರ. ಇದರಿಂದ ದೇಹದ್ರವದ ಜಲಾಕರ್ಷಣ ಸಂಮರ್ದ (ಆಸ್ಮಾಟಿಕ್ ಪ್ರಷರ್) ಕಾಯಲ್ಪಡುತ್ತದೆ. ದೇಹದ ನೀರಿನಮಟ್ಟ ತಕ್ಕಷ್ಟು ಇಲ್ಲದೆ ಇದ್ದರೂ ಲವಣಗಳು ಅಧಿಕಪ್ರಮಾಣದಲ್ಲಿ ವರ್ಜಿತವಾಗಬೇಕಾಗಿದ್ದಲ್ಲಿ ಅದಕ್ಕೆ ತಕ್ಕಷ್ಟು ನೀರೂ ಅವಶ್ಯಕವಾಗಿ ವರ್ಜಿತವಾಗಬೇಕಾಗುತ್ತದೆ. ಇಂಥ ಸಮಯದಲ್ಲಿ ಮತ್ತು ಪ್ರೋಟೀನ್ ಅಂಶ ಹೆಚ್ಚಾಗಿರುವ ಆಹಾರ ಪಚನಾನಂತರ ಅವುಗಳಿಂದ ಹೆಚ್ಚಾಗಿ ಉದ್ಭವಿಸುವ ಯೂರಿಯ ಮುಂತಾದ ನೈಟ್ರೋಜನ್ ತ್ಯಾಜ್ಯವಸ್ತುಗಳ ವರ್ಜನೆಯ ಸಮಯದಲ್ಲಿ ಸ್ವಾಭಾವಿಕವಾಗಿಯೇ ಮೂತ್ರದ ಸಾಂದ್ರತೆ ಹೆಚ್ಚಾಗಿರುತ್ತದೆ. ಮಧುಮೇಹರೋಗಿಗಳಲ್ಲಿ ಮೂತ್ರದಲ್ಲಿ ಸಕ್ಕರೆ ವಿಸರ್ಜಿತವಾಗುವಾಗಲೂ ಹೀಗೆಯೆ. ದೇಹದಲ್ಲಿ ನೀರಿನಮಟ್ಟ ಕಾರಣಾಂತರಗಳಿಂದ ಕಡಿಮೆ ಆಗಿದ್ದಾಗ ಕಡಿಮೆ ಮೂತ್ರೋತ್ಪತ್ತಿ ಆಗುತ್ತಿರುವಾಗಲೂ ಹೀಗೆಯೇ ಮೂತ್ರದ ಸಾಂದ್ರತೆ ಹೆಚ್ಚಾಗಿರುತ್ತದೆ. ಸಾಮಾನ್ಯ ಎನಿಸುವ 1.015–1.025ರ ಸಾಪೇಕ್ಷಸಾಂದ್ರತೆ ಇಂಥ ಸಮಯದಲ್ಲಿ 1.045ಕ್ಕೂ ಮೀರಬಹುದು. ಇದಕ್ಕೆ ಪ್ರತಿಯಾಗಿ ನೀರು ಅಧಿಕಮಟ್ಟದಲ್ಲಿ ವಿಸರ್ಜನೆ ಆಗುತ್ತಿರುವಾಗ ಸಾಪೇಕ್ಷ ಸಾಂದ್ರತೆ 1.005ರಷ್ಟಕ್ಕಿಂತ ಕಡಿಮೆ ಇರಬಹುದು.

ದೇಹದ್ರವ ಯಾವಾಗಲೂ ಸ್ವಲ್ಪ ಪ್ರತ್ಯಾಮ್ಲೀಯವೇ ಆಗಿರಬೇಕಾಗಿರುವುದು ಜೀವಕ್ರಮಕ್ಕೆ ಅತ್ಯಗತ್ಯ. ಇದು ದೇಹದಲ್ಲಿ ಕಾರ್ಬನಿಕ್ ಆಮ್ಲ ಹಾಗೂ ಸೋಡಿಯಮ್ ಮತ್ತು ಪೊಟ್ಯಾಷಿಯಮ್ ಬೈಕಾರ್ಬೊನೇಟ್‌ಗಳ ಪರಸ್ಪರ ನಿಷ್ಪತ್ತಿಯನ್ನು (1:20) ಮುಖ್ಯವಾಗಿ ಅವಲಂಬಿಸಿದೆ. ಇದಲ್ಲದೆ ಸಾಧಾರಣವಾಗಿ ಉಸಿರಾಟ ಸಂದರ್ಭಾನುಸಾರ ಹೆಚ್ಚಿ ಅಥವಾ ಕಡಿಮೆ ಆಗಿ ತನ್ಮೂಲಕ ಹೆಚ್ಚು ಅಥವಾ ಕಡಿಮೆ ಕಾರ್ಬನ್ ಡೈ ಆಕ್ಸೈಡ್ ಅರ್ಥಾತ್ ಕಾರ್ಬಾನಿಕ್ ಆಮ್ಲದ ವಿಸರ್ಜನೆ ಆಗುತ್ತ ಈ ಪ್ರಮಾಣ ಕಾಯಲ್ಪಡುತ್ತದೆ. ಆದರೆ ಈ ಕ್ರಿಯೆಗೋಸ್ಕರ ಉಸಿರಾಟದಲ್ಲಿ ವ್ಯತ್ಯಾಸ ಏರ್ಪಡುವುದು ತಾತ್ಕಾಲಿಕ ಮಾತ್ರ. ಉಸಿರಾಟ ಎನ್ನುವುದು ಪ್ರಮುಖವಾಗಿ ದೇಹಕ್ಕೆ ಅಗತ್ಯ ಬಿದ್ದಾಗ ತಾತ್ಕಾಲಿಕವಾಗಿ ಉಸಿರಾಟದ ವ್ಯತ್ಯಾಸದಿಂದ ಕಾರ್ಬನ್ ಡೈ ಆಕ್ಸೈಡಿನ ಪ್ರಮಾಣ ನಿಯಂತ್ರಿತವಾಗಿ ದೇಹದ್ರವದ ಪ್ರತ್ಯಾಮ್ಲತೆಯ ನಿಯಂತ್ರಣ ಆನುಷಂಗಿಕವಾಗಿ ಹಾಗೂ ತಾತ್ಕಾಲಿಕವಾಗಿ ಏರ್ಪಡುತ್ತದೆ ಅಷ್ಟೆ. ದೇಹದ್ರವದ ಪ್ರತ್ಯಾಮ್ಲೀಯತೆಗೆ ಇನ್ನೊಂದು ಮುಖ್ಯ ಕಾರಣ ಎಂದರೆ ಅದರಲ್ಲಿ ಲೀನವಾಗಿರುವ ಫಾಸ್ಫೇಟುಗಳು. ದೇಹದ್ರವದಲ್ಲಿ ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಫಾಸ್ಫೇಟುಗಳು ಎರಡೂ ಇರುತ್ತವೆ. ಅವುಗಳ ಪರಸ್ಪರ ನಿಷ್ಪತ್ತಿ 1:4 ಇರುವುದರಿಂದ ದೇಹದ್ರವ

ಪ್ರತ್ಯಾಮ್ಲ ಸ್ವಭಾವದ್ದಾಗಿರುತ್ತದೆ. ಈಗಾಗಲೆ ತಿಳಿದಿರುವಂತೆ ಆಹಾರ ಸೇವನೆ. ಉಪಾಪಚಯಕ್ರಿಯೆ ಇತ್ಯಾದಿ ಕಾರಣಗಳಿಂದ ದೇಹದ್ರವದ ಪ್ರತ್ಯಾಮ್ಲೀಯತೆ ಕಡಿಮೆ ಆಗುತ್ತಲೇ ಇರುತ್ತದೆ. ಎಂದರೆ ಆಮ್ಲೀಯ ಫಾಸ್ಫೇಟುಗಳು ಹೆಚ್ಚಾಗಿ ಪ್ರತ್ಯಾಮ್ಲೀಯ ಫಾಸ್ಫೇಟುಗಳು ಕಡಿಮೆ ಆಗಿರುತ್ತವೆ. ಮೂತ್ರಪಿಂಡಗಳು ಆಮ್ಲೀಯ ಫಾಸ್ಫೇಟುಗಳನ್ನೇ ಹೆಚ್ಚಾಗಿ ವಿಸರ್ಜಿಸಿ ಪ್ರತ್ಯಾಮ್ಲೀಯ ಫಾಸ್ಫೇಟುಗಳು ದೇಹದಲ್ಲೆ ಉಳಿಯುವಂತೆ ಮಾಡುತ್ತವೆ. ಮೂತ್ರದಲ್ಲಿ ಈ ಎರಡು ಫಾಸ್ಫೇಟುಗಳ ನಿಷ್ಪತ್ತಿ 10 : 1 ಈ ರೀತಿ ವಿಸರ್ಜನೆ ಸಾಧ್ಯವಾಗಲು ಮೂತ್ರಪಿಂಡಗಳು ಪ್ರತ್ಯಾಮ್ಲೀಯ ಫಾಸ್ಫೇಟುಗಳನ್ನು ಆಮ್ಲೀಯ ಫಾಸ್ಫೇಟುಗಳನ್ನಾಗಿ ಪರಿವರ್ತಿಸಿ ದೇಹದ ಆಮ್ಲೀಯತೆಯನ್ನು ಕಳೆಯುತ್ತದೆ. ಇದೇ ಸಂದರ್ಭದಲ್ಲಿ ದೇಹದ್ರವದ ಪ್ರತ್ಯಾಮ್ಲೀಯತೆಗೆ ಪರೋಕ್ಷವಾಗಿ ಕಾರಣವಾದ ಸೋಡಿಯಮ್ ಹಾಗೂ ಪೊಟ್ಯಾಷಿಯಮ್ ಅಯಾನುಗಳು ಮೂತ್ರದಲ್ಲಿ ಅನ್ಯಾಯವಾಗಿ ವಿಸರ್ಜಿತವಾಗುವಂತೆ ಮೂತ್ರಪಿಂಡಗಳು ಅಮೋನಿಯವನ್ನು ಉತ್ಪತ್ತಿ ಮಾಡಿ ಸೋಡಿಯಮ್ ಹಾಗೂ ಪೊಟ್ಯಾಷಿಯಮ್ ಫಾಸ್ಫೇಟುಗಳ ಬದಲಿಗೆ ಅಮೋನಿಯಮ್ ಫಾಸ್ಫೇಟುಗಳು ಮೂತ್ರದಲ್ಲಿ ವಿಸರ್ಜನೆ ಆಗುವಂತೆ ಮಾಡುತ್ತವೆ.

ಹೊಸ ರಾಸಾಯನಿಕ ಉತ್ಪತ್ತಿ: ದೇಹಕ್ಕೆ ಸೇರುವ ಅನೇಕ ಔಷಧಗಳು ಹಾಗೂ ವಿಷವಸ್ತುಗಳು ರಾಸಾಯನಿಕ ಮಾರ್ಪಾಡು ಹೊಂದಿ ವಿಸರ್ಜಿತವಾಗುವವು. (ಉದಾಹರಣೆಗೆ ಬೆನ್‌ಜೋಯಿಕ್ ಆಮ್ಲ ಹಿಪ್ಪೂರಿಕ್ ಆಮ್ಲವಾಗಿ ಪರಿವರ್ತಿತವಾಗುವುದು). ಮೂತ್ರಪಿಂಡಗಳಿಂದ ರೀನಿನ್ ಎಂಬ ಹಾರ್ಮೋನು ಉತ್ಪತ್ತಿ ಆಗಿ, ರಕ್ತಸೇರಿಕೊಂಡು, ರಕ್ತದಲ್ಲಿರುವ ಇನ್ನೊಂದು ಪ್ರೋಟೀನ್ ಅಂಜಿಯೊಟೆನ್ಸಿನೊಜೆನ್‌ನ್ನು ಅಂಜಿಯೊಟೆನ್ಸಿನ್‌ಗೆ ಪರಿವರ್ತಿಸುತ್ತದೆ. ಅಂಜಿಯೊಟೆನ್ಸಿನ ಎಡ್ರಿನಲ್ ಗ್ರಂಥಿಗಳು ಅಲ್ಡೊಸ್ಟಿರೊನ್ ಸ್ರವಿಸುವಂತೆ ಪ್ರಚೋದಿಸುತ್ತದೆ. ಅಲ್ಡೊಸ್ಟಿರೊನ್, ನೆಫ್ರಾನ್, ನೀರುದ್ರವದಿಂದ ಸೋಡಿಯಂ ಹೀರಿಕೊಳ್ಳುವಂತೆ ಪ್ರಚೋದಿಸುತ್ತದೆ. ಇದು ಅಡ್ರಿನಲ್ ಗ್ರಂಥಿಗಳ ಮೇಲೆ ವರ್ತಿಸಿ ಅವುಗಳಿಂದ ಆಲ್ಡೋಸ್ಟಿರೋನ್ ಎಂಬ ಹಾರ್ಮೋನಿನ ಉತ್ಪತ್ತಿಗೆ ಕಾರಣವಾಗಿದೆ. ಅದು ನೆಫ್ರಾನ್‌ಗಳಲ್ಲಿ ಸೋಡಿಯಂ ಅನ್ನು ನೀರುದ್ರವದಿಂದ ಹಿರಿಕೊಳ್ಳುವಿಕೆಯನ್ನು ಪ್ರಚೋದಿಸುತ್ತದೆ.

ಈ ಮೇಲೆ ವಿವರಿಸಿದ ಕಾರ್ಯಗಳಿಂದ ಮೂತ್ರಪಿಂಡಗಳು ದೇಹದ ನೀರು, ಲವಣಾಂಶ, *pH* ರಕ್ತದೊತ್ತಡಗಳನ್ನು ಸಮಸ್ಥಿತಿಯಲ್ಲಿಡಲು ಸಹಾಯಕವಾಗಿವೆ. ***

**ಮೂರ್ಛೆರೋಗ:** ಜ್ಞಾನತಪ್ಪಿ ವ್ಯಕ್ತಿ ನೆಲಕ್ಕೆ ಬಿದ್ದು ಸೆಳವು ಬಂದು ಅನೇಕ ವೇಳೆ ಬಾಯಿಯಲ್ಲಿ ನೊರೆಗಟ್ಟುವ ನರಮಂಡಲ ರೋಗ (ಎಪಿಲೆಪ್ಸಿ). ಇದನ್ನು ಒಂದು ರೋಗಕ್ಕಿಂತ ಮೇಲೆ ಹೇಳಿದ ಲಕ್ಷಣಕೂಟ (ಸಿಂಡ್ರೋಮ್) ಎನ್ನುವುದಿದೆ. ಇದರಲ್ಲಿ ಎರಡು ಬಗೆ ಉಂಟು: ಒಂದು ಬೇರೆ ರೋಗದ ಕುರುಹಾಗಿ ಕಾಣಿಸಿಕೊಳ್ಳುವ ಅಪಸ್ಮಾರ (ಸೆಕೆಂಡರಿ ಎಪಿಲೆಪ್ಸಿ), ಎರಡು, ಅವ್ಯಕ್ತ ಕಾರಣದಿಂದ ಬರುವ ಅಪಸ್ಮಾರ (ಈಡಿಯೊಪ್ಯಾಥಿಕ್ ಎಪಿಲೆಪ್ಸಿ). ಮಿದುಳಿನಲ್ಲಿ ಲಾಡಿಹುಳುವಿನ ಮರಿಗಳು ಹೊಕ್ಕು ನೆಲಸಿದಾಗ, ಮಿದುಳಿನ ಕೆಲವು ಭಾಗಗಳಲ್ಲಿ ಗಂತಿ (ಟ್ಯೂಮರ್) ಬೆಳೆದಾಗ, ಮಿದುಳಿಗೆ ಜಖಮ್ಮಾಗಿ ಯಾವುದೋ ವಿಶಿಷ್ಟ ಭಾಗದಲ್ಲಿ ಗಾಯದ ಕಲೆ ಉಳಿದಿದ್ದು ವ್ಯಕ್ತಿ ಉದ್ರೇಕಗೊಂಡಾಗ, ಇತ್ಯಾದಿ ಸ್ಥಿತಿಗಳಲ್ಲಿ ವ್ಯಕ್ತ ಕಾರಣ ಫಲವಾದ ಮೂರ್ಛೆರೋಗ ಕಂಡುಬರುತ್ತದೆ.

ಇದು ಬಲು ಕಾಲ ನರಳಿಸುವ ರೋಗ. ರೋಗತಲೆದೋರಿದಾಗ ಅರೆ ಅಥವಾ ಪೂರ್ಣ ಪ್ರಜ್ಞಾಹೀನತೆಯೆ ಮುಖ್ಯಚಿಹ್ನೆ. ಅನೇಕರಲ್ಲಿ ಪ್ರಜ್ಞಾಶೂನ್ಯತೆಯ ಜೊತೆಯಲ್ಲಿ ಅಂಗೋಪಾಂಗಗಳ ಒದರುವಿಕೆ (ಟಾನಿಕ್ ಕಂಟ್ರಾಕ್ಷನ್, ಸ್ಪಾಸ್ಮ್ ಅಥವಾ ಅದಿರುವಾಯು) ಬೆರೆತಿರುವುದು. ಈ ಅದಿರು ವಾಯುವಿನ ಹರಡುವಿಕೆ ಮತ್ತು ತೀವ್ರತೆಗಳಲ್ಲಿ ಏರಿಳಿತಗಳಿರುತ್ತವೆ. ಕ್ಷಣಕಾಲ ಮಾತ್ರ ತಲೆದೋರುವ ಪ್ರಜ್ಞಾಶೂನ್ಯತೆಯನ್ನು ಪೆಟಿಟ್ಮಾಲ್ ಎಂದೂ, ಒದರುವಿಕೆ ಗಣನೀಯವಾಗಿರುವ ಪ್ರಜ್ಞಾಶೂನ್ಯತೆಯನ್ನು ಅಪಸ್ಮಾರ. ಮಲ್ಲಾಗರ (ಗ್ರ್ಯಾಂಡ್ ಮಾಲ್, ಮೇಜರ್ ಎಪಿಲೆಪ್ಸಿ) ಎಂದೂ ಕರೆಯುವುದುಂಟು. ಲಿಂಗ ಭೇದವಿಲ್ಲದಂತೆ ಹೆಂಗಸರಲ್ಲೂ ಗಂಡಸರಲ್ಲೂ ಸಾಮಾನ್ಯವಾಗಿ ಈ ಸ್ಥಿತಿ ಕಾಣಿಸಿಕೊಳ್ಳುವುದು.

ಲಕ್ಷಣಗಳು: ಮೂರ್ಛಾವಸ್ಥೆ ಕಾಣಿಸಿಕೊಳ್ಳುವ ಮೊದಲು ಅಂದರೆ 12 ರಿಂದ 14 ಗಂಟೆಗಳ ಮುನ್ನ ತಲೆನೋವು, ತಲೆ ತಿರುಗುವಿಕೆ. ಒಂದು ಬಗೆಯ ಆಲಸ್ಯ, ಪರಿಸ್ಥಿತಿಯ ಬದಲಾವಣೆ, ನಡವಳಿಕೆಯಲ್ಲಿ ಏನೋ ಒಂದು ರೀತಿಯ ವ್ಯತ್ಯಾಸ ಮುಂತಾದ ಸೂಚನೆಗಳು ಕೆಲವರಲ್ಲಿ ಕಾಣಿಸಕೊಳ್ಳುತ್ತವೆ. ಮತ್ತೆ ಕೆಲವರಲ್ಲಿ ಒಂದು ಬಗೆಯ ಮನ್ಸೂಚನೆಯ ಅರಿವು ಒಂದು ಕ್ಷಣಮಾತ್ರ ಭಾಸವಾದಂತಾಗಿ ಮುಂದೊದಗುವ ವಿಪತ್ತಿನ ಸೂಚನೆಯನ್ನು ಕೊಡುವುದು. ಇದು ಬಹುಶಃ ಉದ್ರೇಕವಾಗಲಿರುವ ಮಿದುಳಿನ ನರಾಣುಗಳಿರುವ ಜಾಗಕ್ಕೆ ಸಂಬಂಧಿಸಿರಬಹುದೆಂದು ಊಹೆ. ದೇಹಾದ್ಯಂತವೂ ಒಂದು ಬಗೆಯ ಅಲೆ ತೇಲಿ ಹೋದಂತೆ ಜೋಮು ಹಿಡಿದಂತಾಗುವುದು. ಥಳಥಳ ಹೊಳೆಯವ ಬೆಳಕು, ವಿವಿಧ ವರ್ಣಗಳು ಅಥವಾ ಕಿವಿಯಲ್ಲಿ ಹಾಡು ಮುಂತಾದ ಭಾವನೆಗಳು ರೋಗಿಯಲ್ಲಿ ಉಂಟಾಗಬಹುದು. ಇಲ್ಲವೇ ಮಾಂಸಖಂಡಗಳ ಒದರುವಿಕೆ, ಒಮ್ಮೊಮ್ಮೆ ಬೆದರುವಿಕೆ ಕಾಣಿಸಿಕೊಳ್ಳಬಹುದು. ಅಪರೂಪವಾಗಿ ರೋಗಿ ಮುಂದಕ್ಕೆ ಓಡುತ್ತಲೊ ಇಲ್ಲವೆ ಗುಂಡಗೆ ಸುತ್ತುತ್ತಲೊ ಇರಬಹುದು. ಇಲ್ಲವೆ ವಿಚಿತ್ರವಾದ ಯೋಚನೆಗಳು, ಭಯಾನಕ ಭ್ರಾಂತಿಕಾರಕ ದೃಶ್ಯಗಳು ಗೋಚರಿಸಿ ಉಪ್ತವಾಗುವುದುಂಟು. ಹೊಟ್ಟೆಯಲ್ಲಿ ತಳಮಳ. ಹೊಟ್ಟೆ ಅದಿರುವುದು ಮತ್ತು ವಮನಪೂರ್ವಸ್ಥಿತಿ ಕಂಡುಬರಬಹುದು. ಇದನ್ನು ಆರಾ ಎನ್ನಲಾಗುತ್ತದೆ.

ಸಾಮಾನ್ಯಫಿಟ್ಸ್‌ನಲ್ಲಿ ಪ್ರಜ್ಞಾಹೀನತೆಯ ತುರ್ತುಸೂಚನೆಗಳು ಕಾಣಿಸಿಕೊಂಡು ರೋಗಿಗೆ ಅರಿವಾಗುವುದಕ್ಕೆ ಮೊದಲೆ ಥಟ್ಟನೆ ಜ್ಞಾನ ತಪ್ಪಿಹೋಗುತ್ತದೆ. ಅಪಾಯಗಳಿಂದ ರಕ್ಷಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ಕೂಡ ಇರುವುದಿಲ್ಲ. ಆದ್ದರಿಂದಲೆ ಪ್ರಜ್ಞಾಹೀನತೆಯ ಅವಸ್ಥೆಯಿಂದ ರೋಗಿಗೆ ಅಪಾಯಗಳು ಹೆಚ್ಚು.

ಒದರುವಿಕೆ ಪ್ರಜ್ಞಾಹೀನತೆಯ ಜೊತೆಯಲ್ಲೆ ಇಲ್ಲವೇ ಪ್ರಜ್ಞಾಹೀನತೆ ಕಂಡೊಡನೆಯೆ ಕಾಣಿಸಿಕೊಳ್ಳುವುದು. ಒಂದು ಬಗೆಯ ವಿಕಾರಧ್ವನಿಯಿಂದ ಕಿರುಚುತ್ತ ವ್ಯಕ್ತಿ ಅದಿರುವಾಯುವಿಗೆ ಈಡಾಗಬಹುದು. ಒದರುವಿಕೆಯ ಬಿಗಿತಸ್ಥಿತಿ ಅಥವಾ ಸೆಟೆತ 40 ಸೆಕೆಂಡ್ ಕಾಲವಿದ್ದು ಒದರುವಿಕೆಯ ಸಡಿಲ ಅಥವಾ ಅದಿರುವಾಯು ಸ್ಥಿತಿ ಬರುವುದು. ಇದು 1 ರಿಂದ 3 ನಿಮಿಷಗಳ ತನಕ ಇರುವುದು. ಬಿಗಿತದ ಸ್ಥಿತಿಯಲ್ಲಿ ಉಸಿರು ಕಟ್ಟಿ ಬೆನ್ನು ಬಿಗಿಯಾಗಿ ಕಾಲು ಉದ್ದವಾಗಿಯೂ ಬಿಗಿಯಾಗಿಯೂ ಇರುವುದು, ನಾಡಿ ವೇಗವಾಗಿರುವುದಲ್ಲದೆ ಅಗೋಚರವಾಗಿರುವುದು, ಸಡಿಲಸ್ಥಿತಿ ದೇಹಾದ್ಯಂತ ವ್ಯಾಪಿಸುವುದು. ಕೆಲವು ಸಾರಿ ಇದು ವೈಪರೀತ್ಯ ಹೊಂದಿ ಕೈಕಾಲುಗಳು ವೇಗವಾಗಿ ಬಡಿದುಕೊಳ್ಳುತ್ತ ಕಣ್ಣುಗಳು ಬೇಗ ಬೇಗ ಮುಚ್ಚಿ ತೆರೆಯುತ್ತ, ದವಡೆಯ ಚಲನವಲನಗಳು ವೇಗದಿಂದ ಆಗುತ್ತಿರುವುವು. ಈ ಎರಡು ಸ್ಥಿತಿಗಳಲ್ಲೂ ಉಸಿರಾಟಕ್ಕೆ ಅಡ್ಡಿ ಉಂಟಾಗಿ ಗೊರಗುಟ್ಟುವ ಧ್ವನಿ ಕೇಳುವುದು. ಮುಖ ನೀಲಿಯಾಗಿರುವುದು. ನಾಲಗೆ ಹಲ್ಲುಗಳ ಮಧ್ಯೆ ಸಿಲುಕಿ ಗಾಯವಾಗುವುದು. ಕಣ್ಣಿನ ಪಾಪೆಗಳ ರಂಧ್ರಗಳು ಅಗಲವಾಗಿ ಬೆಳಕು ಚೆಲ್ಲಿದರೂ ವ್ಯತ್ಯಾಸ ತೋರಗೊಡುವುದಿಲ್ಲ. ಒದರುವಿಕೆ ಇಳಿಮುಖವಾದಂತೆ ಉಸಿರಾಟ ಗೊರಕೆ ಹೊಡೆಯುತ್ತಿರುವಂತೆ ಸೌಮ್ಯವಾಗಿರುವುದು. ಈ ಅವಸ್ಥೆಯಲ್ಲಿ ಮಲಮೂತ್ರ ವಿಸರ್ಜನೆಯಾಗಬಹುದು. ಜೊಲ್ಲು ಬಾಯಿಯಿಂದ ನೊರೆನೊರೆಯಾಗಿ ಹೊರಬೀಳುವುದು. ನಾಲಗೆಯ ಗಾಯದಿಂದ ಜೊಲ್ಲು ರಕ್ತಮಿಶ್ರಿತವಾಗಿರಬಹುದು.

ಒದರುವಿಕೆ ನಿಂತಮೇಲೆ ಒಂದು ಬಗೆಯ ಮಂಕು ಕವಿದಂತಾಗಿ ಕ್ರಮೇಣ ಗಾಢ ನಿದ್ರೆ ಆವರಿಸುವುದು. ಆ ವೇಳೆಗೆ ದೇಹೋಷ್ಣತೆ $3^{0}$ಸೆ. ಏರಿರುತ್ತದೆ. ಮೂರ್ಛೆರೋಗದ ಸ್ವಭಾವ ಎಲ್ಲರಲ್ಲೂ ಅಥವಾ ಯಾವಾಗಲೂ ಹಗಲು ಅಥವಾ ರಾತ್ರಿಯ ಯಾವ ವೇಳೆಯಲ್ಲಾದರೂ ಕಾಣಿಸಿಕೊಳ್ಳಬಹುದು. ಹಾಸಿಗೆಯಿಂದ ಎದ್ದ ಕೂಡಲೆ ಇಲ್ಲವೇ ಮಲಗುವ ಮುನ್ನ ಕಾಣಿಸಿಕೊಳ್ಳಬಹುದು. ಇಲ್ಲವೆ ರಾತ್ರಿಯಲ್ಲಿ ನಿದ್ರೆಯಲ್ಲಿ ಮಾತ್ರ ಕಾಣಿಸಿಕೊಳ್ಳಬಹುದು. ಹೆಂಗಸರಲ್ಲಿ ಹೊರಗಾಗುವ ಹಿಂದು ಇಲ್ಲವೆ ಮುಂದಿನ ದಿವಸಗಳಲ್ಲಿ ಒದರುವಿಕೆ ಕಾಣಿಸಿಕೊಳ್ಳುವ ಸಂಭವವುಂಟು. ಗೊತ್ತಾದ ದಿವಸಗಳ ಅಂತರದಲ್ಲಿ ಕಾಣಿಸಿಕೊಳ್ಳಬಹುದು. ಇಲ್ಲವೇ ಒಂದೇ ದಿನದಲ್ಲಿ ಹಲವು ಸಾರಿ ಬಂದು ಹಲವು ವಾರಗಳ ಅಥವಾ ತಿಂಗಳುಗಳ ಬಿಡುವು ಕೊಡಬಹುದು. (ಎನ್.ಟಿ.ಪಿ.)

ಮೂರ್ಛೆರೋಗಕ್ಕೆ ಪರಿಣಾಮಕಾರಿಯಾದ ಔಷಧಿಗಳಿವೆ. ಫೀನೋಬಾರ್ಬಿಟೋನ್, ಫೆನಿಟಾಯಿನ್, ಕಾರ್ಬಮೆಜಿಪಿನ್, ಸೋಡಿಯಂವಾಲ್‌ಪ್ರೊಯೇಟ್, ಪ್ರೀಸಿಯಂ, ಟೋಪಿರಮೈಡ್ ಇತ್ಯಾದಿ. ವೈದ್ಯರ ಮಾರ್ಗದರ್ಶನದಲ್ಲಿ ಒಂದು ಔಷಧಿಯನ್ನು ಕ್ರಮವಾಗಿ ಸೇವಿಸಬೇಕು. ಔಷಧಿಯ ಪ್ರಮಾಣವನ್ನು ನಿಗದಿಪಡಿಸಿಕೊಳ್ಳಬೇಕು. ಫಿಟ್ಸ್ ಬರುವುದು ನಿಂತ ಮೇಲೆ ಮೂರರಿಂದ ಐದು ವರ್ಷಗಳ ಕಾಲ ಔಷಧಿಯ ಸೇವನೆಯನ್ನು ಮುಂದುವರೆಸಬೇಕು. ಉಪವಾಸ, ನಿದ್ರೆಗೇಡುವುದು, ವಿಪರೀತ ದೈಹಿಕ, ಮಾನಸಿಕ ಶ್ರಮ, ಔಷಧಿ ಸೇವನೆಯನ್ನು ಥಟ್ಟನೆ ನಿಲ್ಲಿಸುವುದು – ಇವುಗಳಿಂದ ಫಿಟ್ಸ್ ಮರುಕಳಿಸುತ್ತದೆ. ಆದ್ದರಿಂದ ರೋಗಿ ಸಮಯಕ್ಕೆ ಸರಿಯಾಗಿ ಊಟ – ನಿದ್ರೆ ಮಾಡಬೇಕು. ಪ್ರಶಾಂತ ಜೀವನ ನಡೆಸಬೇಕು. ಇತರ ಕಾಯಿಲೆ ಬಂದಾಗ ಮೂರ್ಛೆರೋಗಕ್ಕೆ ಕೊಡುವ ಔಷಧವನ್ನು ನಿಲ್ಲಿಸಬಾರದು. ***

**ಮೂಲವ್ಯಾಧಿ:** ಗುದನಾಳದ ಅಭಿಧಮನಿಗಳು ದಪ್ಪವಾಗಿ ಹೊಸೆದ ಹಗ್ಗದಂತೆ ಉಡಿತುಕೊಂಡಿರುವ ಸ್ಥಿತಿ (ಪೈಲ್ಸ್; ಹಿಮೊರಾಯ್ಡ್ಸ್). ಪರ್ಯಾಯ ನಾಮ ಮೊಳೆರೋಗ. ಗುದನಾಳದ ಕೆಳಭಾಗದ ಲೋಳೆಪೊರೆಯ ಅಡಿಯಲ್ಲಿರುವ ಅಭಿಧಮನಿಗಳಿಗೆ ಅನೇಕ ಸಂದರ್ಭಗಳಲ್ಲಿ ಮಲದ್ವಾರದ ಚರ್ಮದ ಅಡಿಯಲ್ಲಿರುವ ಅಭಿಧಮನಿಗಳೊಡನೆ ಸಂಪರ್ಕವಿರುತ್ತದೆ. ಉಡಿತುಕೊಂಡಿರುವ ಈ ಅಭಿಧಮನಿಗಳಿಂದ ಸುಲಭವಾಗಿ ರಕ್ತಸ್ರಾವವಾಗುವುದರಿಂದ ಇಂಗ್ಲಿಷಿನಲ್ಲಿ ಇವಕ್ಕೆ ಹಿಮೊರಾಯ್ಡ್ಸ್ ಎಂದೂ ಉಬ್ಬಿರುವ ಅಭಿಧಮನಿಗೊಂಚಲು ಚೆಂಡಿನಂತಿರುವುದರಿಂದ ಪೈಲ್ಸ್ ಎಂದೂ (ಪೈಲ್ ಎಂದರೆ

ಲ್ಯಾಟಿನ್ ಭಾಷೆಯಲ್ಲಿ ಚೆಂಡು) ಹೆಸರುಗಳಿವೆ. ಈ ಸ್ಥಿತಿಯಲ್ಲಿ ಗುದನಾಳದ ಲೋಳೆಪೊರೆಯಲ್ಲಿ ಡೊಂಕುಡೊಂಕಾಗಿ ಬಗ್ಗಿರುವ ಮೊಳೆಗಳೋಪಾದಿಯಲ್ಲಿ ಉಬ್ಬುಗಳನ್ನು ಉಂಟುಮಾಡುವ ವಿಕೃತಿಗೊಂಡ ಅಭಿಧಮನಿಗಳಿರುವುದರಿಂದ ಇದನ್ನು ರೂಢಿಯಲ್ಲಿ ಮೊಳೆರೋಗವೆಂದೂ ಕರೆಯುವುದುಂಟು. ಮೊಳೆರೋಗದಲ್ಲಿ ಬಾಹ್ಯ ಮತ್ತು ಆಂತರಿಕ ಎಂಬ ಎರಡು ಬಗೆಗಳನ್ನು ಗುರುತಿಸಬಹುದು. ಚರ್ಮದ ಅಡಿಯ ಅಭಿಧಮನಿಗಳು ವಿಕೃತವಾಗಿವೆಯೆ ಅಥವಾ ಲೋಳೆ ಪೊರೆ ಅಡಿಯವು ವಿಕೃತವಾಗಿವೆಯೆ ಎಂಬುದನ್ನು ಆಧರಿಸಿ ಈ ಎರಡು ಬಗೆಗಳನ್ನು ಅನುಕ್ರಮವಾಗಿ ವಿಂಗಡಿಸಲಾಗಿದೆ.

ಬಾಹ್ಯಮೂಲವ್ಯಾಧಿ:ಇದು ಹಠಾತ್ತಾಗಿ ಸಂಭವಿಸಬಹುದು, ಇಲ್ಲವೆ ದೀರ್ಘಕಾಲಿಕವಾಗಿದ್ದು ಕ್ರಮೇಣ ವ್ಯಕ್ತವಾಗಿ ಹೆಚ್ಚು ಹದಗೆಡುತ್ತ ಹೋಗಬಹುದು. ಕೆಮ್ಮು ಹತ್ತಿ ಶ್ರಮಪಟ್ಟು ಕೆಮ್ಮುವಾಗ ಇಲ್ಲವೆ ಭಾರ ಎತ್ತುವ ವೇಳೆ ಮುಕ್ಕುವಾಗ ಹಠಾತ್ತನೆ ಬಾಹ್ಯ ಮೂಲವ್ಯಾಧಿ ವ್ಯಕ್ತವಾಗುವುದಿದೆ. ಆ ಸಮಯದಲ್ಲಿ ಆಸನದ ಚರ್ಮದ ಅಡಿಯ ಯಾವುದೋ ಅಭಿಧಮನಿ ಬಿರಿದು ಅಲ್ಲಿ ರಕ್ತಸ್ರಾವವಾಗಿ ರಕ್ತ ಗರಣೆಕಟ್ಟಿ ಅಲ್ಲಿ ಒಂದು ನೋಯುವ ಗಂಟು ಕಾಣಬರುವುದೆ ಈ ಸ್ಥಿತಿ. ಈ ಗಂಟಿನಲ್ಲಿ ಸೋಂಕಿನಿಂದ ಉರಿಯೂತ ಉಂಟಾಗಿ ಗಂಟು ಒಡೆದು ವ್ರಣವಾಗಿ ಹಲವಾರು ದಿನಗಳ ಬಳಿಕ ವಾಸಿ ಆಗಬಹುದು. ಶಸ್ತ್ರಕ್ರಿಯೆಯಿಂದ ಗಂಟನ್ನು ಛೇದಿಸಿ ರಕ್ತವನ್ನು ಹೊರ ಹೊರಡಿಸುವುದು ಯುಕ್ತ ಚಿಕಿತ್ಸೆ.

ದೀರ್ಘಕಾಲಿಕ ಬಾಹ್ಯಮೂಲವ್ಯಾಧಿ: ಮಲಬದ್ಧತೆಯ ಕಾರಣದಿಂದ ಗಟ್ಟಿಯಾದ ಮಲವನ್ನು ವಿಸರ್ಜಿಸುವಾಗ ಅದು ಮಲದ್ವಾರದ ಚರ್ಮವನ್ನು ಘರ್ಷಿಸಿ ಉಜ್ಜು ಹುಣ್ಣನ್ನು ಉಂಟುಮಾಡುತ್ತದೆ. ಇದು ವಾಸಿ ಆದಾಗ ತೊಟ್ಟು ಅಥವಾ ಕಾವು ಉಳ್ಳ ಚರ್ಮದ ಮಡಚುಗಳಂತಾಗಿ ಅಡಿಚರ್ಮವನ್ನು ಸಂಪರ್ಕಿಸುತ್ತದೆ. ಇವುಗಳಲ್ಲಿ ಬಲವಾಗಿ ನವೆ ಉಂಟಾಗುವುದಲ್ಲದೆ ಇವು ಮಲವಿಸರ್ಜನೆ ಕಷ್ಟವಾಗುವಂತೆ ಮಾಡುತ್ತವೆ ಕೂಡ. ಈ ಮಡಚುಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕುವುದು ಯುಕ್ತ ಚಿಕಿತ್ಸೆ.

ಅಂತರಿಕ ಮೂಲವ್ಯಾಧಿ: ಲೋಳೆಪೊರೆಯ ಅಡಿಯಲ್ಲಿರುವ ಅಭಿಧಮನಿಗಳು ಮೂರು ಗುಂಪುಗಳಾಗಿ ಹರಡಿಕೊಂಡಿರುವುದರಿಂದ ಯಾವ ಗುಂಪು ವಿಕೃತಿಗೊಂಡಿದೆಯೋ ಆ ಸ್ಥಳದಲ್ಲಿ ಮೊಳೆ ಕಂಡುಬರುತ್ತದೆ. ಗುಂಪುಗಳು ಗಡಿಯಾರದ 3ಗಂಟೆ, 7ಗಂಟೆ ಮತ್ತು 11ಗಂಟೆಗಳಿಗೆ ಹೋಲುವ ಸ್ಥಳಗಳಲ್ಲಿರುವುದರಿಂದ ಪರೀಕ್ಷಿಸಿದಾಗ ಎಡಭಾಗದಲ್ಲಿ ಎರಡು ಕಡೆ, ಬಲಭಾಗದಲ್ಲಿ ಒಂದು ಕಡೆ ಮೊಳೆಗಳು ಕಾಣಿಸಿಕೊಳ್ಳಬಹುದು. ಇವುಗಳಲ್ಲದೆ 7ಕ್ಕೆ ಮೀರದಂತೆ ಇತರ ಸಣ್ಣ ಮೊಳೆಗಳು ಕಂಡುಬರಬಹುದು. ಅಂತರಿಕ ಮೂಲವ್ಯಾಧಿ 20 ವರ್ಷ ವಯಸ್ಸಿನವರಿಗಿಂತ ಚಿಕ್ಕವರಲ್ಲಿ ಕಂಡುಬರುವುದು ವಿರಳ. ಶುಕ್ಲಗ್ರಂಥಿವೃದ್ಧಿ ಇಲ್ಲವೇ ಮೂತ್ರನಾಳ ಕುಂಠಿತವಾಗಿರುವ ಸಂದರ್ಭಗಳಲ್ಲಿ ಮೂತ್ರವಿಸರ್ಜಿಸುವಾಗಲೂ ಪ್ರಸವವಾಗುವಾಗಲೂ ವ್ಯಕ್ತಿ ಅತಿಯಾಗಿ ಮುಕ್ಕಬೇಕಾಗಿದ್ದು ಆ ಕಾರಣದಿಂದ ಅಭಿಧಮನಿಗಳಲ್ಲಿ ರಕ್ತ ಒತ್ತಡ ಹೆಚ್ಚಿ ಆಂತರಿಕ ಮೂಲವ್ಯಾಧಿ ಉದ್ಭವಿಸುವುದುಂಟು. ಮಲಬದ್ಧತೆ ಪ್ರಸಂಗಗಳಲ್ಲಿ ಮಲವಿಸರ್ಜನೆಗಾಗಿ ಮುಕ್ಕಬೇಕಾಗುವುದೊಂದೇ ಅಲ್ಲದೆ ಗುದನಾಳದಲ್ಲಿ ಶೇಖರಿಸಿರುವ ಮಲ ಅಲ್ಲಿಯ ಅಭಿಧಮನಿಗಳ ಮೇಲೆ ಒತ್ತುತ್ತ ರಕ್ತ ಪ್ರವಾಹಕ್ಕೆ ಅಡ್ಡಿ ಮಾಡಿ ಅವು ಉಬ್ಬುವಂತೆ ಮಾಡುವುದರಿಂದ ಮಲಬದ್ಧತೆಯೂ ಆಂತರಿಕ ಮೂಲವ್ಯಾಧಿಗೆ ಕಾರಣವಾಗಿದೆ. ಯಕೃತ್ತುನಾರುಗಟ್ಟುವಿಕೆ (ಫೈಬ್ರೂಸಿಸ್), ಗುದನಾಳದಲ್ಲಿ ಏಡಿಗಂತಿ, ಉದರದಲ್ಲಿ ಗಂತಿ ಇವೂ ಆಂತರಿಕ ಮೂಲವ್ಯಾಧಿಗೆ ಕಾರಣಗಳಾಗಬಹುದು.

ಮಲವಿಸರ್ಜನೆ ಕಾಲದಲ್ಲಿ ನೋವಿಲ್ಲದೆ ರಕ್ತಸ್ರಾವವಾಗುವುದು ಆಂತರಿಕ ಮೂಲವ್ಯಾಧಿಯ ಪ್ರಥಮ ಲಕ್ಷಣ. ಮಲವಿಸರ್ಜನೆಗೆ ಮೊದಲೇ ಇಲ್ಲವೆ ಜೊತೆಯಲ್ಲೆ ರಕ್ತಸ್ರಾವ ಆಗುವುದರಿಂದ ಮಲಕ್ಕೆ ರಕ್ತಹಚ್ಚಿದಂತಿರುತ್ತದೆ. ಮೊಳೆಗಳು ಕೆಳಕ್ಕಿಳಿದು ಹೊರಕ್ಕೆ ತೂರುವುದು ಮುಂದಿನ ಹಂತ. ಪ್ರಾರಂಭದಲ್ಲಿ ಇವು ಮಲವಿಸರ್ಜನಾನಂತರ ತಾವಾಗಿಯೆ ಒಳಸೇರಿಕೊಳ್ಳುತ್ತವೆ. ಕಾಲಾಂತರದಲ್ಲಿ ಯಾವಾಗ ಮುಕ್ಕಿದರೂ ಇಲ್ಲವೆ ಪ್ರತಿ ಮಲವಿಸರ್ಜನೆ ಕಾಲದಲ್ಲೂ ಹೊರ ಬಂದಮೊಳೆಗಳನ್ನು ಕೈಯಿಂದ ತಳ್ಳಿಯೆ ಒಳಸೇರಿಸಬೇಕಾಗುತ್ತದೆ.

ಮೊಳೆಗಳು ಒಳಗೆ ಇದ್ದಾಗ ಹೊರಪರೀಕ್ಷೆಯಿಂದ ಏನೂ ಪತ್ತೆ ಆಗಿರುವುದಿಲ್ಲ. ಆದರೆ ಗುದನಾಳದರ್ಶಕ (ಪ್ರಾಕ್ಟಾಸ್ಕೋಪ್) ಮೂಲಕ ಪರೀಕ್ಷಿಸಿದಾಗ ಮೊಳೆಗಳು ಕಂಡುಬರುತ್ತವೆ. ಆಂತರಿಕ ಮೊಳೆಗಳಿಂದ ಅಧಿಕರಕ್ತಸ್ರಾವ ಆಗಬಹುದು. ಧಮನಿಗಳಲ್ಲಿ ರಕ್ತ ಗರಣೆಕಟ್ಟಬಹುದು. ಸ್ಥಳೀಯವಾಗಿ ವ್ರಣವಾಗಬಹುದು. ಹೊರಹೊರಟುಕೊಂಡ ಮೊಳೆ ಕ್ಷಯಿಸಿ ಕೊನೆಯಾಗಬಹುದು. ನೆರೆಯ ಮೂತ್ರಪಿಂಡ ಧಮನಿಯ ಉರಿಯೂತವು ಉಂಟಾಗಬಹುದು.

ಆಂತರಿಕ ಮೂಲವ್ಯಾಧಿ ಕಾಣಿಸಿಕೊಂಡ ತರುಣದಲ್ಲೆ ಮೊಳೆ ಕಂಡುಬಂದ ಸ್ಥಳಗಳಲ್ಲಿ ಬಾದಾಮಿಎಣ್ಣೆಯಲ್ಲಿ ವಿಲೀನಿಸಿದ 5% ಫೀನಾಲ್ ದ್ರಾವಣವನ್ನು (2 ಮಿಲೀ) ಚುಚ್ಚುಮದ್ದಾಗಿ ಕೊಡುವುದು ಯುಕ್ತಚಿಕಿತ್ಸೆ. ಎರಡು ವಾರಗಳಿಗೊಮ್ಮೆಯಂತೆ ಮೂರು ಬಾರಿ ಚಿಕಿತ್ಸೆಮಾಡಬೇಕು. ರೋಗ ದೀರ್ಘಕಾಲದ್ದಾಗಿದ್ದು ಮೊಳೆಗಳು ಹೊರಬರುವ ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ಅಗತ್ಯ. ಮೊಳೆಗಳನ್ನು ಶಸ್ತ್ರಕ್ರಿಯೆಯಿಂದ ಬಿಡಿಸಿ ಧಮನಿ ಗೊಂಚಲಿನ ಬುಡವನ್ನು ದಾರದಿಂದ ಕಟ್ಟಿ ಮೊಳೆಗೊಂಚಲುಗಳನ್ನು ತೆಗೆದುಹಾಕಬೇಕಾಗುತ್ತದೆ. ***

**ಮೃಗಾಲಯ:** ವಿವಿಧ ಕಾಡುಪ್ರಾಣಿಗಳನ್ನು ಸಂಗ್ರಹಿಸಿಟ್ಟುಕೊಂಡು ಪ್ರದರ್ಶಿಸುವ ಸ್ಥಳ (ಝೂ; ಝೂ ಆಲಾಜಿಕಲ್ ಗಾರ್ಡನ್). ಪ್ರಾಣಿಸಂಗ್ರಹಾಲಯ, ಪ್ರಾಣಿಗಳ ಉದ್ಯಾನ, ಮೃಗೋದ್ಯಾನ ಇವೆಲ್ಲ ಪರ್ಯಾಯ ಪದಗಳು.

ಮೃಗಾಲಯಗಳಲ್ಲಿನ ಪ್ರಾಣಿಗಳಿಗೆ ನೈಸರ್ಗಿಕವಾಗಿ ಸಿಗುವುದಕ್ಕಿಂತ ಹೆಚ್ಚು ಪೋಷಣೆ ದೊರೆಯುತ್ತದೆ. ಸಾಮಾನ್ಯವಾಗಿ ಮೃಗಾಲಯಗಳಲ್ಲಿ ಜೀವಜಗತ್ತಿನ ಎಲ್ಲ ವರ್ಗಗಳ, ಗುಂಪುಗಳ ಪ್ರಾಣಿಗಳನ್ನು ಸಂಗ್ರಹಿಸಿಡಲಾಗುತ್ತದೆ. ಸ್ತನಿಗಳಿಗೆ, ಹುಲಿಗಳಿಗೆ, ಪಕ್ಷಿ, ಉರಗ, ಮೀನು ಮುಂತಾದುವುಗಳಿಗೆಂದೇ ಪ್ರತ್ಯೇಕವಾದ ಸಂಗ್ರಹಾಲಯಗಳೂ ಇವೆ. ಇವುಗಳನ್ನು ಸರ್ಪೋದ್ಯಾನ, ಉರಗೋದ್ಯಾನ, ಮತ್ಸ್ಯಾಗಾರ, ಪಕ್ಷಿಧಾಮ ಎಂದು ಆಯಾ ಗುಂಪಿಗೆ ಸಂಬಂಧಿಸಿದಂತೆ ಹೆಸರು ನೀಡಲಾಗಿದೆ.

ಮೃಗಾಲಯಗಳ ಸ್ಥಾಪನೆಗೆ ಸಂಬಂಧಿಸಿದಂತೆ ಮಹತ್ತ್ವದ ದಾಖಲೆಗಳು ದೊರೆಯುತ್ತಿಲ್ಲವಾದ್ದರಿಂದ ಮೊದಲು ಪ್ರಾಣಿ ಸಂಗ್ರಹಾಲಯಗಳು ಎಲ್ಲಿ, ಯಾವಾಗ, ಪ್ರಾರಂಭವಾದುವು ಎಂಬ ಮಾಹಿತಿ ದೊರೆಯುತ್ತಿಲ್ಲ. ಬಹುಶಃ ಪ್ರಾಣಿಗಳ ಸಾಕಣೆ ಅಸ್ತಿತ್ವಕ್ಕೆ ಬಂದಾಗಲೇ ಪ್ರಾಣಿಸಂಗ್ರಹಾಲಯಗಳ ಉದಯವಾಗಿರಬೇಕು. ಪ್ರಾಣಿಗಳ ಉಪಯುಕ್ತತೆ ಅಥವಾ ಮಾನವನ ಹವ್ಯಾಸ ಪ್ರಾಣಿಗಳ ಸಂಗ್ರಹಕ್ಕೆ ಕಾರಣವಾಗಿರಬೇಕು.

ಐತಿಹಾಸಿಕವಾಗಿ ಪರಿಶೀಲಿಸಿದಾಗ ಕ್ರಿ.ಪೂ.4500ರ ಸುಮಾರಿಗೆ ಪಾರಿವಾಳಗಳನ್ನು ಬಂಧನದಲ್ಲಿರಿಸುತ್ತಿದ್ದರೆಂದು ತಿಳಿದುಬರುತ್ತದೆ. ಕ್ರಿ.ಪೂ.2500ರ ಸಮಯಕ್ಕೆ ಆನೆಗಳನ್ನು ಹಿಡಿದು ಪಳಗಿಸಿ ಸಾಕಲಾಗುತ್ತಿತ್ತು. ಈಜಿಪ್ಟಿನ ಶಿಲಾಶಾಸನಗಳಲ್ಲಿ ಜಿಂಕೆ, ಕಾಡುಕುರಿಗಳ ಚಿತ್ರಗಳಿರುವುದನ್ನು ಕಾಣುತ್ತೇವೆ. ಚೀನದ ತಾಂಕಿ ಎಂಬ ರಾಣಿ ಕ್ರಿ.ಪೂ.1150ರಲ್ಲಿ ಜಿಂಕೆಯ ನಿವಾಸವೊಂದನ್ನು ಸ್ಥಾಪಿಸಿದ್ದಳೆಂದು ದಾಖಲೆಗಳು ತಿಳಿಸುತ್ತವೆ. ಕ್ರಿ.ಪೂ.1000ದಲ್ಲಿ ವೆನ್‌ವ್ಯಾಂಗ್ ಎಂಬಾತ 1500 ಎಕರೆ ಸ್ಥಳದಲ್ಲಿ ಪ್ರಾಣಿಸಂಗ್ರಹಾಲಯವೊಂದನ್ನು ಸ್ಥಾಪಿಸಿ ಅದನ್ನು ಬುದ್ಧಿವಂತಿಕೆಯ ಉದ್ಯಾನ ಎಂದು ಹೆಸರಿಸಿದ. ಕ್ರಿ.ಪೂ.600ರ ಹೊತ್ತಿಗೆ ಅಸ್ಸೀರಿಯ ಹಾಗೂ ಬ್ಯಾಬಿಲೋನಿಯಾದ ದೊರೆಗಳು ಪ್ರಾಣಿ ಸಂಗ್ರಹಾಲಯಗಳನ್ನು ಸ್ಥಾಪಿಸಿದರು. ಮುಂದೆ ತತ್ತ್ವಜ್ಞಾನಿ ಅರಿಸ್ಟಾಟಲ್ ಅಧ್ಯಯನಕ್ಕಾಗಿ ಸಂಗ್ರಹಿಸಿದ ಎಲ್ಲ ಪ್ರಾಣಿಗಳನ್ನು ಇಟ್ಟುಕೊಂಡಿದ್ದ. ಆತನ ಸಂಗ್ರಹವೂ ಒಂದು ಪ್ರಾಣಿ ಸಂಗ್ರಹಾಲಯದಂತೆಯೇ ಇತ್ತು.

ಪುರಾತನ ಕಾಲದ ಈಜಿಪ್ಟ್ ಮತ್ತು ಏಷ್ಯಾದ ಮೃಗಾಲಯಗಳು ಮನರಂಜನೆಗಾಗಿ ರಚಿತವಾದಂಥವು. ಅರಿಸ್ಟಾಟಲನ ಕಾಲದ ಮೃಗಾಲಯಗಳು ಅಧ್ಯಯನಕ್ಕೆ ಮೀಸಲಾಗಿದ್ದವು. ರೋಮನ್ನರು ಮಾತ್ರ ಅಧ್ಯಯನಕ್ಕೆ ಹಾಗೂ ಮನರಂಜನೆಗೆ ಪ್ರತ್ಯೇಕ ಮೃಗಾಲಯಗಳನ್ನು ಸ್ಥಾಪಿಸಿದರು. ಮುಂದೆ ರೋಮನ್ನರ ಸಾರ್ವಭೌಮತ್ವ ಕೊನೆಗೊಂಡಂತೆ ಪ್ರಾಣಿಸಂಗ್ರಹಾಲಯಗಳ ಸಂಖ್ಯೆ ಇಳಿಯಿತು.

ಮುಂದೆ ಇಂಗ್ಲೆಂಡಿನ ರಾಜ ಮೊದಲನೆಯ ಹೆನ್ರಿಯ ಕಾಲದಲ್ಲಿ (12ನೆಯ ಶತಮಾನ) ಪುನಃ ಮೃಗಾಲಯಗಳನ್ನು ಪ್ರಾರಂಭಿಸಲಾಯಿತು. ಕ್ರಿ.ಶ.1333ರಲ್ಲಿ ಫಿಲಿಪ್ಸ್ ದೊರೆ ಪ್ಯಾರಿಸ್ಸಿನಲ್ಲಿ ಮೃಗಾಲಯವೊಂದನ್ನು ಸ್ಥಾಪಿಸಿದ. ಅನಂತರ ಮೆಕ್ಸಿಕೋದಲ್ಲಿ 300 ಸಿಬ್ಬಂದಿಗಳನ್ನೊಳಗೊಂಡ ಒಂದು ಬೃಹತ್ ಮೃಗಾಲಯ ಅಸ್ತಿತ್ವಕ್ಕೆ ಬಂತು. ಮುಂದೆ ಅಲ್ಲೊಂದು ಇಲ್ಲೊಂದು ಮೃಗಾಲಯಗಳು ಪ್ರಾರಂಭವಾದರೂ ನವೀನ ಮಾದರಿಯ ಮೃಗಾಲಯ ಪ್ರಾರಂಭವಾದದ್ದು ಕ್ರಿ.ಶ.1752ರಲ್ಲಿ. ವಿಯನ್ನದ ಶೊಂಬ್ರನ್ ಅರಮನೆಯಲ್ಲಿ ಪ್ರಾರಂಭವಾದ ಈ ಮೃಗಾಲಯಕ್ಕೆ 1755ರಲ್ಲಿ ಸಾರ್ವಜನಿಕರಿಗೆ ಪ್ರವೇಶ ನೀಡಲಾಯಿತು. ಇಂದು ಅಸ್ತಿತ್ವದಲ್ಲಿರುವ ಮೃಗಾಲಯಗಳ ಪೈಕಿ ಇದು ಅತ್ಯಂತ ಹಳೆಯದು. 1775ರಲ್ಲಿ ಮ್ಯಾಡ್ರಿಡ್‌ನ ರಾಯಲ್ ಉದ್ಯಾನ ಪ್ರಾರಂಭವಾಯಿತು. ಪ್ರಖ್ಯಾತ ರಾಯಲ್ ಸೊಸೈಟಿ ಆಫ್ ಲಂಡನ್ನಿನ ಆಶ್ರಯದಲ್ಲಿ, 1828ರಲ್ಲಿ ರೀಜೆಂಟ್ ಪಾರ್ಕಿನಲ್ಲಿ ಮೃಗಾಲಯವೊಂದು ಪ್ರಾರಂಭವಾಯಿತು. ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ಹಲವು ಮೃಗಾಲಯಗಳು ಹುಟ್ಟಿಕೊಂಡವು. ಇಂದು ಯುರೋಪಿನಾದ್ಯಂತ ಹರಡಿರುವ 100 ಮೃಗಾಲಯಗಳ ಪೈಕಿ ನಲವತ್ತು, ನೂರು ವರ್ಷಗಳಿಗಿಂತ ಹಳೆಯವು. ಪ್ರಪಂಚದಾದ್ಯಂತ ಇಂದು ಸಾವಿರಕ್ಕೂ ಹೆಚ್ಚು ಮೃಗಾಲಯಗಳಿವೆ.

ಮಾನವ ನಾಗರಿಕತೆ ಬೆಳೆಯುತ್ತಿದ್ದಂತೆ, ತನ್ನ ಜೀವನ ಸೌಲಭ್ಯಗಳಿಗಾಗಿ ಆತ ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳುವುದು ಹೆಚ್ಚಾಗುತ್ತಿದೆ. ಹೀಗಾಗಿ ನಿಸರ್ಗ ಪರಿಸರ ಬದಲಾವಣೆಗೆ ಒಳಗಾಗುತ್ತಿದೆ. ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳಲಾರದ ಹಲವು ಸಸ್ಯಗಳು ಹಾಗೂ ಪ್ರಾಣಿಗಳು ವಿನಾಶದ ಹಾದಿ ಹಿಡಿಯುತ್ತಿವೆ. ಇದೇ ಸ್ಥಿತಿ ಮುಂದುವರಿಯುತ್ತಿದ್ದರೆ ಇಂದು ಬದುಕಿರುವ ಹಲವು ಜೀವಿಗಳು ನಶಿಸಿ ಪಳೆಯುಳಿಕೆಗಳಾಗಬಹುದು. ಇಂಥ ಸಂದರ್ಭದಲ್ಲಿ ನಶಿಸಿಹೋಗುತ್ತಿರುವ ಹಲವು ಪ್ರಭೇದಗಳಿಗೆ ಮೃಗಾಲಯಗಳು ರಕ್ಷೆ ನೀಡುವ ಸ್ಥಾನಗಳಾಗಿವೆ. ವಿರಳವಾಗುತ್ತಿರುವ ಪ್ರಾಣಿಗಳನ್ನು ಮೃಗಾಲಯಗಳಲ್ಲಿಟ್ಟು ಅವುಗಳ ಸಂತತಿಯನ್ನು ಹೆಚ್ಚಿಸುವುದು ಮೃಗಾಲಯಗಳ ಉದ್ದೇಶಗಳಲ್ಲಿ ಒಂದು.

ಪ್ರಾಣಿಗಳ ಆಕಾರ, ದೇಹ ರಚನೆ, ಜೀವನಕ್ರಮ ವೈವಿಧ್ಯಮಯವಾದದ್ದು. ಅವುಗಳ ನಡತೆ, ಜೀವನಕ್ರಮ, ಉಪಯುಕ್ತತೆ ಮುಂತಾದವುಗಳ ಬಗೆಗೆ ಆಯಾ ಪ್ರಾಣಿಗಳ ನೈಸರ್ಗಿಕ ಪರಿಸರದಲ್ಲಿ ಅಧ್ಯಯನ ನಡೆಸುವುದು ಕಷ್ಟಸಾಧ್ಯ. ಪ್ರಾಣಿಗಳ ಬಗೆಗೆ ವಿವರವಾಗಿ ಅಧ್ಯಯನ ನಡೆಸಲು ಮೃಗಾಲಯಗಳು ಉಪಯುಕ್ತವಾಗಿವೆ. ಪ್ರಾಣಿಗಳ ವರ್ಗೀಕರಣ, ಅಂಗರಚನೆ, ನಡತೆ, ರೋಗವಿಜ್ಞಾನ ಇತ್ಯಾದಿ ಹಲವು ವಿಷಯಗಳನ್ನು ಕುರಿತು ಮೃಗಾಲಯಗಳಲ್ಲಿ ಆಳವಾದ ಅಧ್ಯಯನ ನಡೆಸಲಾಗಿದ್ದು ಹಲವು ಕುತೂಹಲಕಾರಿ ಅಂಶಗಳು ಬೆಳಕಿಗೆ ಬಂದಿವೆ.

ಪ್ರಾಣಿಸಂಗ್ರಹಾಲಯಗಳು ಮಕ್ಕಳಿಗಂತೂ ಅತ್ಯಂತ ಪ್ರಿಯವಾದ ಸ್ಥಳಗಳು. ಪ್ರಾಣಿಜೀವನಕ್ಕೆ ಸಂಬಂಧಿಸಿದ ಸಾಮಾನ್ಯ ಜ್ಞಾನವನ್ನು ಅವು ಮಕ್ಕಳಿಗೆ ನೀಡುತ್ತವೆ. ಅಷ್ಟೇ ಅಲ್ಲ ಎಲ್ಲ ವಯಸ್ಸಿನವರಿಗೂ ಭೂಮಿಯ ವಿವಿಧ ಭಾಗಗಳಲ್ಲಿ ವಾಸಿಸುವ ಪ್ರಾಣಿಗಳ ಬಗ್ಗೆ ಹಾಗೂ ಅವುಗಳ ಪರಿಸರದ ಬಗ್ಗೆ ಮೃಗಾಲಯಗಳು ತಿಳಿವಳಿಕೆ ನೀಡುತ್ತವೆ. ಇತ್ತೀಚೆಗೆ ಕೆಲವು ಪ್ರಾಣಿ ಸಂಗ್ರಹಾಲಯಗಳು ಸ್ವಯಂಸೇವಕರನ್ನು ನೇಮಿಸಿಕೊಂಡು ಜನರ ಸಾಮಾನ್ಯ ಜ್ಞಾನವರ್ಧನೆಗೆ ಸಹಾಯಮಾಡುತ್ತಿವೆ. ಹಲವು ಸಂಘ ಸಂಸ್ಥೆಗಳೂ ಮೃಗಾಲಯಗಳ ಈ ಉದ್ದೇಶವನ್ನು ನೆರವೇರಿಸಲು ಸಹಕರಿಸುತ್ತಿವೆ.

ಉಳಿವು–ಅಳಿವಿನ ನಿರಂತರ ಸಂಗ್ರಾಮದಲ್ಲಿ ಹೋರಾಡಲಾಗದೆ ನಶಿಸುತ್ತಿರುವ ಕೆಲವು ಪ್ರಭೇದಗಳಿಗಂತೂ ಮೃಗಾಲಯಗಳು ವಿಶ್ರಾಂತಿಧಾಮಗಳಾಗುತ್ತಿವೆ. ಇಂಥ ಪ್ರಾಣಿಗಳನ್ನು ಸಂಗ್ರಹಿಸಿ ಅವುಗಳಿಗೆ ಶೋಷಣೆಯಿಲ್ಲದ ಮುಕ್ತ ಪರಿಸರವನ್ನು ನಿರ್ಮಿಸಿ ಪ್ರಾಣಿಸಂಗ್ರಹಾಲಯಗಳಲ್ಲಿ ಅವುಗಳ ಸಂತಾನಾಭಿವೃದ್ಧಿಗೂ ಅವಕಾಶ ಮಾಡಿಕೊಡಲಾಗುತ್ತದೆ. ಸಂಗ್ರಹಿಸಿದ ಎಲ್ಲ ಪ್ರಾಣಿಗಳೂ ಮೃಗಾಲಯದ ಕೃತಕ ವಾತಾವರಣದಲ್ಲಿ ಸಂತಾನಾಭಿವೃದ್ಧಿ ಮಾಡಲಾರವು ನಿಜ. ಆದರೆ ಕೆಲವು ಅಪರೂಪದ ಪ್ರಾಣಿಗಳು ಸಂತಾನಾಭಿವೃದ್ಧಿಯನ್ನು ನಿರಾತಂಕವಾಗಿ ಮಾಡಿ ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಂಡಿವೆ. ಉದಾಹರಣೆಗೆ:1950ರಲ್ಲಿ ಹವಾಯಿಯ ಬಾತುಕೋಳಿಗಳ ಒಂದು ಜೊತೆಯನ್ನು ಇಂಗ್ಲೆಂಡಿನ ಕಾಡುಕೋಳಿ (ವೈಲ್ಡ್ ಫೌಲ್) ಟ್ರಸ್ಟ್‌ಗೆ ತರಲಾಯಿತು. ಅಲ್ಲಿ ಅವು ಮೊಟ್ಟೆಯಿಟ್ಟು ಕೇವಲ ಹತ್ತು ವರ್ಷಗಳಲ್ಲಿ ಅವುಗಳ ಸಂಖ್ಯೆ 12ಕ್ಕೆ ಏರಿತು. ಇನ್ನೊಂದು ಉದಾಹರಣೆಯೆಂದರೆ ಯುರೋಪಿನ ಕಾಡುಕೋಣ ಸಂತತಿ ನೈಸರ್ಗಿಕ ಪರಿಸರದಲ್ಲಿ 1925ರಲ್ಲಿ ನಾಶವಾಯಿತು. ಅದೃಷ್ಟವಶಾತ್ ಈ ಪಶುಗಳನ್ನು ಮೃಗಾಲಯಗಳಲ್ಲಿ ಸಾಕಲಾಗುತ್ತಿತ್ತು. ಅಂದು ಯುರೋಪಿನ ಮೃಗಾಲಯಗಳಲ್ಲಿ ಒಟ್ಟು 50 ಕಾಡು ಕೋಣಗಳಿದ್ದವು. ಮೃಗಾಲಯಗಳಲ್ಲಿ ಅವುಗಳ ಸಂತಾನಾಭಿವೃದ್ಧಿ ಕ್ರಿಯೆಯಿಂದ 1938ರಲ್ಲಿ ಅವುಗಳ ಸಂಖ್ಯೆ 97ಕ್ಕೇರಿತು. ಇಂದು 600ಕ್ಕೂ ಹೆಚ್ಚು ಕಾಡುಕೋಣಗಳು ಯುರೋಪಿನ ವಿವಿಧ ಮೃಗಾಲಯಗಳಲ್ಲಿವೆ.

ಈವರೆಗೆ ತಿಳಿಸಲಾದವುಗಳು ಮೃಗಾಲಯಗಳ ಸಾಮಾನ್ಯ ಉದ್ದೇಶಗಳು. ಕೆಲವು ಮೃಗಾಲಯಗಳು ವಿಶೇಷ ಉದ್ದೇಶಗಳನ್ನಿಟ್ಟುಕೊಂಡಿವೆ. ಉದಾಹರಣೆಗೆ ಲಂಡನ್ನಿನ ಪ್ರಾಣಿ ವಿಜ್ಞಾನ ಸಂಘ ತನ್ನದೇ ಆದ ಪ್ರಯೋಗಾಲಯ ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಿಕೊಂಡಿದೆ. 1960ರಲ್ಲಿ ಈ ಸಂಘ ಅಂತಾರಾಷ್ಟ್ರೀಯ ಮೃಗಾಲಯಗಳನ್ನು ಕುರಿತ ಕೈಪಿಡಿಯೊಂದನ್ನು ಬಿಡುಗಡೆ ಮಾಡಿತು. ಈ ಪುಸ್ತಕದಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿರುವ ಮೃಗಾಲಯಗಳ ಬಗ್ಗೆ ಹಾಗೂ ಅವುಗಳ ಕಾರ್ಯಚಟುವಟಿಕೆಗಳ ಬಗೆಗೆ ಮಹತ್ತ್ವದ ದಾಖಲೆಗಳಿವೆ. ಇದೇ ಸಂಘವು ಪ್ರೊಸೀಡಿಂಗ್ಸ್ ಆಫ್ ಝೂಆಲಾಜಿಕಲ್ ಸೊಸೈಟಿ ಆಫ್ ಲಂಡನ್ ಎಂಬ ಮಾಸಿಕವನ್ನು 1830 ರಿಂದಲೇ ಹೊರತರುತ್ತಿದೆ. ಪ್ರಾಣಿಗಳ ಬಗೆಗಿನ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದು ಈ ಪತ್ರಿಕೆಯ ಉದ್ದೇಶ. ಇದೇ ರೀತಿ ಹಲವು ಮೃಗಾಲಯಗಳು ವೈವಿಧ್ಯಮಯ ಪ್ರಕಟಣೆಗಳನ್ನು ಹೊರತರುತ್ತಿವೆ. ಭಾರತದ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಇಂಥದೇ ಉದ್ದೇಶಗಳನ್ನು ಇಟ್ಟುಕೊಂಡಿರುವ ಒಂದು ಸಂಸ್ಥೆ. ಈ ಸಂಸ್ಥೆಯ ಸಂಗ್ರಹಾಲಯದಲ್ಲಿ ಹೆಚ್ಚು ಕಡಿಮೆ ಭಾರತದ ಎಲ್ಲ ಬಗೆಯ ಪ್ರಾಣಿ ಪಕ್ಷಿಗಳ ದೇಹಗಳನ್ನು ರಕ್ಷಿಸಿ ಇಡಲಾಗಿದೆ. ಜರ್ನಲ್ ಆಫ್ ಬಾಂಬೆ ನ್ಯಾಚುರಲ್ ಹಿಸ್ಟರಿ ಎಂಬುದು ಸಂಸ್ಥೆಯ ನಿಯತಕಾಲಿಕ ಪ್ರಕಟಣೆ.

ಮೃಗಾಲಯಗಳ ರಚನೆ ಮತ್ತು ವಿನ್ಯಾಸ: ಮೃಗಾಲಯಗಳನ್ನು ರಚಿಸುವಾಗ ಪ್ರಾಣಿಗಳಿಗೆ ಅವಶ್ಯಕವಾದ ಸೌಕರ್ಯ ಮತ್ತು ಜನಸಾಮಾನ್ಯರಿಗೆ ವೀಕ್ಷಣೆಗೆ ಅವಕಾಶ ಎರಡನ್ನೂ ಕಲ್ಪಿಸಿಕೊಡಬೇಕು. ಈಗ ಅಸ್ತಿತ್ವದಲ್ಲಿರುವ ಮೃಗಾಲಯಗಳಲ್ಲಿ ಸ್ಥಳಾವಕಾಶ, ವಾತಾವರಣ ಮುಂತಾದುವು ವೈವಿಧ್ಯಮಯವಾಗಿದ್ದು ಅವುಗಳಿಗೆ ನಿಶ್ಚಿತ ರಚನೆ ಎಂಬುದಿಲ್ಲ. ಮೃಗಾಲಯಗಳಲ್ಲಿ ಪ್ರಾಣಿಗಳನ್ನು ಪಂಜರದಲ್ಲಿಟ್ಟು ಅವು ತಪ್ಪಿಸಿಕೊಂಡು ಹೋಗದಂತೆ, ವೀಕ್ಷಕರಿಂದ ತೊಂದರೆಯಾಗದಂತೆ ಕಾಪಾಡುವುದು ಒಂದು ವಿಧಾನ. ಮೃಗಾಲಯದ ವಿಶಾಲ ಆವರಣದಲ್ಲಿ ಮೃಗಗಳನ್ನು ಸ್ವೇಚ್ಛೆಯಾಗಿ ಬಿಟ್ಟು ವೀಕ್ಷಕರು ಮತ್ತು ಮೃಗಗಳ ನಡುವೆ ವಿಶಾಲವಾದ ತಂತಿಯ ಬೇಲಿ ಅಥವಾ ಜಾಳಿಗೆಗಳನ್ನು ರಚಿಸುವುದು ಮತ್ತೊಂದು ವಿಧಾನ. ಸಾಮಾನ್ಯವಾಗಿ ಚಿಕ್ಕ ಪ್ರಾಣಿಗಳನ್ನು ಪಂಜರದಲ್ಲಿಯೂ ದೊಡ್ಡ ಪ್ರಾಣಿಗಳನ್ನು ಮುಕ್ತ ವಾತಾವರಣದಲ್ಲಿಡುವುದು ಉತ್ತಮ. ಕೆಲವು ಪ್ರಾಣಿಗಳು ಪಂಜರಗಳಲ್ಲಿ ಬಹಳಕಾಲ ಬದುಕುವುದಿಲ್ಲ. ಇಂಥ ಪ್ರಾಣಿಗಳ ಗಾತ್ರವನ್ನು ಗಣನೆಗೆ ತೆಗೆದುಕೊಳ್ಳದೆ ಮುಕ್ತ ಪರಿಸರದಲ್ಲಿರಿಸುವುದು ಒಳ್ಳೆಯದು.

ಕೆಲವು ಪ್ರಾಣಿಗಳಿಗೆ ವಿಶಿಷ್ಟವಾದ ಪರಿಸರದ ಆವಶ್ಯಕತೆಯಿದೆ. ಅಂಥ ಪ್ರಾಣಿಗಳಿಗೆ ಮಾತ್ರ ಯುಕ್ತ ವಾತಾವರಣವನ್ನು ಕಲ್ಪಿಸಲು ಮೃಗಾಲಯಗಳಲ್ಲಿ ಅವಕಾಶವಿರಬೇಕು. ಸ್ಥಳಾವಕಾಶ ಹೆಚ್ಚಾಗಿರಲಿ, ಕಡಿಮೆಯಾಗಿರಲಿ, ಆಯಾ ಪ್ರಾಣಿಗಳ ನೈಸರ್ಗಿಕ ಪರಿಸರವನ್ನು ಹೋಲುವಂಥ ಆವರಣಗಳನ್ನು, ಕಟಕಟೆಗಳನ್ನು ನಿರ್ಮಿಸಿದರೆ ಅಂಥ ಮೃಗಾಲಯ ಆದರ್ಶ ಮೃಗಾಲಯವಾಗುತ್ತದೆ. ಉದಾಹರಣೆಗೆ ಹಿಮಕರಡಿಯನ್ನು ತಂಪಾದ ನೀರಿನ ಕೊಳದಲ್ಲೊ ಅಥವಾ ವಾತಾವರಣವನ್ನು ಸದಾ ತಂಪಾಗಿಸುವ ಕೃತಕ ಸಾಧನಗಳ ಉಪಯೋಗದಿಂದಲೊ ಸುಲಭವಾಗಿ ರಕ್ಷಿಸಬಹುದು. ಮರದ ಮೇಲೆ ವಾಸಿಸುವ ಮರ್ಕಟಗಳ ವಿವಿಧ ಪ್ರಭೇದಗಳನ್ನು ಪಂಜರದಲ್ಲಿಯೇ ಪೋಷಿಸಲು ಸಾಧ್ಯವಿದ್ದರೂ ನಿಸರ್ಗದಲ್ಲಿರುವಂತೆ ಮರಗಳ ರೆಂಬೆಗಳು ಅಥವಾ ಇತರ ಕೃತಕ ವಿಧಾನಗಳಿಂದ ಅವು ಅತ್ತಿಂದಿತ್ತ ಇತ್ತಿಂದತ್ತ ಜಿಗಿಯಲು ಸಾಧ್ಯವಿರುವಂತೆ ಪಂಜರಗಳನ್ನು ನಿರ್ಮಿಸಿದರೆ ಅವು ಮೃಗಾಲಯದ ಪರಿಸರಕ್ಕೆ ಸುಲಭವಾಗಿ ಹೊಂದಿಕೊಳ್ಳಬಲ್ಲುವು. ಹೊಸ ಪ್ರಾಣಿಗಳು ಮೃಗಾಲಯಕ್ಕೆ ಬಂದರೆ ಅವುಗಳನ್ನು ಇಡಲು ಯುಕ್ತ ಸ್ಥಳಾವಕಾಶವಿರಬೇಕು.

ಇತ್ತೀಚಿನ ದಿವಸಗಳಲ್ಲಿ ಬಯಲು ಮೃಗಾಲಯಗಳು (ಸಫಾರಿ ಪಾರ್ಕ್ಸ್) ಪ್ರಾಮುಖ್ಯ ಪಡೆಯುತ್ತಿವೆ. ವಿಶಾಲವಾದ ಹೊರಾಂಗಣದಲ್ಲಿ ಇಂಥ ಮೃಗಾಲಯಗಳನ್ನು ನಿರ್ಮಿಸಲಾಗುತ್ತದೆ. ಮೃಗಗಳ ವೀಕ್ಷಣೆಗೆ ಎರಡೂ ಕಡೆ ತಂತಿಯ ಜಾಳಿಗೆ ಅಥವಾ ಬೇಲಿಗಳನ್ನು ನಿರ್ಮಿಸಿ ಮಧ್ಯೆ ವೀಕ್ಷಕರು ವಾಹನಗಳಲ್ಲಿ ಇಲ್ಲವೆ ಕಾಲುನಡಿಗೆಯಲ್ಲಿ ಸಂಚರಿಸುವಂತೆ ವ್ಯವಸ್ಥೆಮಾಡಲಾಗುತ್ತದೆ. ಇಂಥ ಮೃಗಾಲಯಗಳಲ್ಲಿ ಕೆಲವೇ ಪ್ರಭೇದಗಳನ್ನು ಸಂಗ್ರಹಿಸಿಡಲಾಗುತ್ತದೆ. ವಿವಿಧ ಪ್ರಭೇದಗಳಿಗೆ, ಗುಂಪುಗಳಿಗೆಂದೇ ಪ್ರತ್ಯೇಕ ಮೃಗಾಲಯಗಳನ್ನು ನಿರ್ಮಿಸಿರುವುದೂ ಉಂಟು. ಅಭಯಾರಣ್ಯಗಳೂ ಒಂದು ದೃಷ್ಟಿಯಲ್ಲಿ ಮೃಗಾಲಯಗಳೇ. ಬಯಲು ಮೃಗಾಲಯಗಳಲ್ಲಿ ಮೃಗಗಳಿಗೆ ನೈಸರ್ಗಿಕ ಪರಿಸರ ದೊರೆಯುತ್ತದೆ. ಅಮೆರಿಕದ ಮಿಯಾಮಿಯಲ್ಲಿರುವ ಮರ್ಕಟಾರಣ್ಯ ಇಂಥ ಬಯಲು ಮೃಗಾಲಯಗಳ ಪೈಕಿ ಪ್ರಸಿದ್ಧವಾದದ್ದು.

ಕೃತಕ ಪರಿಸರದಲ್ಲಿ ಪ್ರಜನನ ನಡೆಸುವ ಸಾಮರ್ಥ್ಯವುಳ್ಳ ಪ್ರಾಣಿಗಳ ಸಂಖ್ಯೆ ಕಡಿಮೆ. ಅದರಿಂದ ಮೃಗಾಲಯಗಳಲ್ಲಿ ಪ್ರಾಣಿಗಳನ್ನು ಸಂಗ್ರಹಿಸುವುದು ಹಾಗೂ ರಕ್ಷಿಸುವುದು ಮುಖ್ಯ ಕೆಲಸ. ಅವುಗಳನ್ನು ಅಡವಿಗಳಿಂದ ಹಿಡಿದು ತರುವುದು ಇಲ್ಲವೆ ವ್ಯಾಪಾರಿಗಳಿಂದ ಕೊಳ್ಳುವುದು, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವಾಗ ಆ ಪ್ರಾಣಿಗೆ ಯಾವುದೇ ಧಕ್ಕೆಯಾಗದಂತೆ ಅಥವಾ ಅದು ಸಾಯದಂತೆ ರಕ್ಷಿಸುವುದು ಮುಖ್ಯ. ಇವೆಲ್ಲ ಕಷ್ಟಸಾಧ್ಯವಾದುದರಿಂದ ಪ್ರಾಣಿಗಳು ಮೃಗಾಲಯದಲ್ಲಿಯೇ ಸಂತಾನಾಭಿವೃದ್ಧಿ ಮಾಡುವಂತೆ ಪ್ರೋತ್ಸಾಹಿಸುವತ್ತ ಮೃಗಾಲಯ ರಕ್ಷಕರು ಇತ್ತೀಚೆಗೆ ಗಮನಹರಿಸುತ್ತಿದ್ದಾರೆ.

ಪ್ರಾಣಿಗಳ ಸಂಗ್ರಾಹಕರೂ ಕೆಲವು ಮುಖ್ಯ ಅಂಶಗಳನ್ನು ಗಮನಿಸುವುದು ಅಗತ್ಯ. ಜೀವಿಯೊಂದರ ಅಸ್ತಿತ್ವಕ್ಕೆ ಧಕ್ಕೆಯಾಗುವಂತೆ ಗೋಚರಿಸಿದರೆ ಅದನ್ನು ಕೆಂಪು ದಾಖಲೆ ಪುಸ್ತಕದಲ್ಲಿ (ರೆಡ್ ಡೇಟ ಬುಕ್) ನಮೂದಿಸಬೇಕು. ಇಂಥ ಪ್ರಾಣಿಗಳನ್ನು ಹಿಡಿಯುವುದು ಅಂತಾರಾಷ್ಟ್ರೀಯ ವನ್ಯಜೀವಿ ಸಂರಕ್ಷಣಾ ಕಾನೂನಿನ ಪ್ರಕಾರ ಶಿಕ್ಷಾರ್ಹವಾಗುತ್ತದೆ. ಇಂಥ ಪ್ರಭೇದ ಮೃಗಾಲಯದ ಕೃತಕ ಪರಿಸರದಲ್ಲಿ ವಂಶಾಭಿವೃದ್ಧಿ ಮಾಡಬಲ್ಲುದು ಎಂದು ಖಚಿತವಾಗಿ ತಿಳಿದಿದ್ದರೆ ಮಾತ್ರ ಅದನ್ನು ಸಂಗ್ರಹಿಸಿ ಮೃಗಾಲಯಕ್ಕೆ ಸ್ಥಳಾಂತರಿಸಬೇಕು.

ಮೃಗಾಲಯದಲ್ಲಿ ಮೃಗಗಳ ಸಂಗ್ರಹ, ರಕ್ಷಣೆ ಮುಂತಾದ ಜವಾಬ್ದಾರಿ ನಿರ್ವಹಿಸಬಲ್ಲ ತಜ್ಞ, ಸಂಯಮಶೀಲ, ಕಷ್ಟ ಸಹಿಷ್ಣುಗಳಾದ ಸಿಬ್ಬಂದಿಗಳಿರಬೇಕು. ಸಿಬ್ಬಂದಿಗಳು ಸ್ವಲ್ಪವೇ ನಿರ್ಲಕ್ಷ್ಯ ತಾಳಿದರೂ ಅದರಿಂದಾಗುವ ಹಾನಿ ಅಪಾರ. ಮೃಗಗಳಿಗೆ ರೋಗ ತಗುಲಿದಾಗ ಸೂಕ್ತ ಚಿಕಿತ್ಸೆ ಮಾಡಬಲ್ಲ ತಜ್ಞ ವೈದ್ಯರ ಅಗತ್ಯವೂ ಇದೆ.

ಭಾರತದಲ್ಲಿ ಇಂದು 44 ಅಂಗೀಕೃತ ಮೃಗಾಲಯಗಳಿವೆ. ಇವುಗಳಲ್ಲಿ ಕೆಲವು ಕೇಂದ್ರಸರ್ಕಾರದ ಅಧೀನದಲ್ಲೂ ಉಳಿದುವು ಆಯಾ ರಾಜ್ಯ ಸರ್ಕಾರಗಳ ಆಧೀನದಲ್ಲೂ ಇವೆ. ಈ ಮೃಗಾಲಯಗಳಲ್ಲಿ ಕೆಲವು ವಿಶಿಷ್ಟ ಪ್ರಾಣಿಗಳ ಸಂಗ್ರಹವಿದ್ದು, ಕೆಲವು ಮೃಗಾಲಯಗಳಲ್ಲಿ ಅವು ಪ್ರಜನನವನ್ನು ಮಾಡುತ್ತಿವೆ. ಉದಾಹರಣೆಗೆ ಅಸ್ಸಾಂ ರಾಜ್ಯದ ಗೌಹತಿಯ ರಾಜ್ಯ ಮೃಗಾಲಯದಲ್ಲಿ ಘೇಂಡಾಮೃಗಗಳ ಸಂತಾನಾಭಿವೃದ್ಧಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಹೈದರಾಬಾದಿನ ನೆಹರೂ ಝೂಆಲಾಜಿಕಲ್ ಪಾರ್ಕಿನಲ್ಲಿ ಮೊಸಳೆಗಳ ಸಂಕರ, ದೆಹಲಿಯ ರಾಷ್ಟ್ರೀಯ ಮೃಗಾಲಯದಲ್ಲಿ ಬಿಳಿ ಹುಲಿಗಳ ಹಾಗೂ ತೋಳಗಳ ಸಂತಾನಾಭಿವೃದ್ಧಿ ನಡೆಯುತ್ತಿದೆ. ಮಹಾರಾಜಾ ಫತೇಸಿಂಹ ಮೃಗಾಲಯದಲ್ಲಿ ಕಾಡುಕತ್ತೆ, ಏಷ್ಯಾದ ಸಿಂಹಗಳು, ಒಂಟೆಗಳು ಪ್ರಮುಖ ಆಕರ್ಷಣೆಗಳು. ಸಿಮ್ಲಾದ ಹಿಮಾಲಯನ್ ಝೂಆಲಾಜಿಕಲ್ ಪಾರ್ಕಿನಲ್ಲಿ ಮೊನಾಲ್ ಫೆಸೆಂಟ್ ಎಂಬ ಪಕ್ಷಿ ಪ್ರಸಿದ್ಧವಾದದ್ದು. ತಿರುವನಂತಪುರದ ಮೃಗಾಲಯದಲ್ಲಿ ನೀಲಗಿರಿ ಟಹರ್, ಕಾಡುಕುರಿ, ಮಕಾಕ್ ಕೋತಿಗಳು ಬಹು ಮುಖ್ಯ ಸಂಗ್ರಹಗಳು. ಕರ್ನಾಟಕದಲ್ಲಿ ಮೈಸೂರಿನ ಮೃಗಾಲಯವೂ ಸೇರಿ 210 ದೊಡ್ಡ ಹಾಗೂ ಚಿಕ್ಕ ಪ್ರಾಣಿ ಸಂಗ್ರಹಾಲಯಗಳಿವೆ.

ಶ್ರೀ ಚಾಮರಾಜೇಂದ್ರ ಝೂಆಲಾಜಿಕಲ್ ಗಾರ್ಡನ್, ಮೈಸೂರು: ಭಾರತದ ಅಂಗೀಕೃತ ಮೃಗಾಲಯಗಳಲ್ಲೊಂದು. ಅತ್ಯಂತ ಹಳೆಯದು ಹಾಗೂ ಪ್ರಸಿದ್ಧವಾದುದು. 1892 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ಸ್ಥಾಪಿತವಾದ ಈ ಮೃಗಾಲಯ ಈಗಾಗಲೇ ಶತಮಾನೋತ್ಸವ (1992) ಆಚರಿಸಿದೆ. 100 ಎಕರೆ ವಿಸ್ತಾರವಿದ್ದು ಸುಸಜ್ಜಿತ ಪಶು



ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರವೇಶದ್ವಾರ

ಆಸ್ಪತ್ರೆ ಹಾಗೂ ಪ್ರಯೋಗಾಲಯ ಹೊಂದಿದೆ. ವಿಶಾಲ ಪಂಜರಗಳು, ಕೆಲವು ಪ್ರಾಣಿಗಳಿಗೆ ನೈಸರ್ಗಿಕ ಪರಿಸರವನ್ನು ಹೋಲುವಂತೆ ವ್ಯವಸ್ಥೆಗೊಳಿಸಿದ ಸ್ಥಳಾವಕಾಶ, ಪ್ರೇಕ್ಷಕರಿಗೆ ತಿರುಗಾಡಲು ವಿಶಾಲ ಪಥ, ಮನರಂಜನೆ ಸೌಲಭ್ಯಗಳೂ ಇವೆ. ಮೃಗಾಲಯದ ಹಿಂಭಾಗದ ಕಾರಂಜಿಕೆರೆಗೆ ಪ್ರತಿ ವರ್ಷ ಆನೇಕ ಪಕ್ಷಿಗಳು ವಲಸೆ ಬರುತ್ತಿರುವುದು ವಿಶೇಷ. ಏಷ್ಯಾ ಮತ್ತು ಆಫ್ರಿಕದ ಆನೆ, ಹುಲಿ, ಬಿಳಿ ಹುಲಿ, ಚಿರತೆ, ಕಾಡೆಮ್ಮೆ, ಜಿಂಕೆ, ರೈನೊಸಾರಾಸ್, ಚಿಂಪಾಂಜಿ, ಗೊರಿಲ್ಲ, ಬಬೂನ್, ಜಿರಾಫೆ, ತಪೀರ್, ಜೀಬ್ರ, ಹಿಪ್ಪೊಪೊಟಮಸ್, ಸಿಂಗಳೀಕ, ನೀಲಗಿರಿ ತಹರ್ ಮುಂತಾದ ಅಪರೂಪದ ಪ್ರಾಣಿಗಳಿವೆ. ಹುಲಿಗಳ ಸಂತಾನಾಭಿವೃದ್ಧಿಗೆ ವಿಶೇಷ ಆಸಕ್ತಿ ನೀಡಲಾಗಿದೆ. ಹಲವು ವರ್ಷಗಳ ಪ್ರಯತ್ನದ ನಂತರ ಇತ್ತೀಚೆಗೆ ಜಿರಾಫೆಯ ಸಂತಾನಾಭಿವೃದ್ಧಿಗೊಳಿಸುವುದರಲ್ಲಿಯೂ ಯಶಸ್ವಿಯಾಗಿದೆ. ಭಾರತದ ಗಾರ್ (ಕಾಡೆಮ್ಮೆ ಅಥವಾ ಕಾಟಿ) ಯ ಒಂದೇ ಗಂಡಿನಿಂದ ಹದಿನಾಲ್ಕು ಸಂತತಿಗಳನ್ನು ಪಡೆದು ಈ ಮೃಗಾಲಯ ದಾಖಲೆ ಸ್ಥಾಪಿಸಿದೆ. ಮೈಸೂರ್ ಝೂ ನ್ಯೂಸ್ ಲೆಟರ್ ಎಂಬ ನಿಯತಕಾಲಿಕೆಯನ್ನು ಹೊರತರುತ್ತಿದೆ.

ಭಾರತದ ಮೃಗಾಲಯಗಳನ್ನು ಕುರಿತಂತೆ ಭಾರತ ಸರ್ಕಾರ ಭಾರತದ ಸಸ್ಯೋದ್ಯಾನಗಳು ಮತ್ತು ಮೃಗಾಲಯಗಳ ಬಗೆಗೆ ನಿಯತಕಾಲಿಕವೊಂದನ್ನು ಹೊರತರುತ್ತಿದೆ. ಈ ಪತ್ರಿಕೆಯಲ್ಲಿ ಭಾರತದ ಮೃಗಾಲಯಗಳ ಬಗೆಗೆ ಸಮಗ್ರ ಮಾಹಿತಿ ದೊರೆಯುತ್ತದೆ.

(ಎಸ್.ಎನ್.ಎಚ್)

**ಮೃದ್ವಂಗಿಗಳು:** ಮೊಲಸ್ಕ ವಂಶದ ಮೃದು ದೇಹಿ ಅಕಶೇರುಕಗಳು. ಜಲವಾಸಿ ಮತ್ತು ಭೂವಾಸಿ ಪ್ರಾಣಿಗಳು. ದೇಹ ಮೃದುವಾಗಿದ್ದು, ಖಂಡರಹಿತವಾಗಿದೆ. ದೇಹದಲ್ಲಿ ತಲೆ, ಕಾಲು ಮತ್ತು ಒಳಾಂಗಗಳು ಉದರಭಾಗದಲ್ಲಿವೆ. ದೇಹವು ಅಂಚುಗೂದಲುಳ್ಳ ಬಾಹ್ಯತ್ವಚೆಯ ಪದರ (ಮ್ಯಾಂಟಲ್) ದಿಂದ ಆವೃತವಾಗಿದೆ. ದೇಹದ ಹೊರಭಾಗದ ಮೇಲೆ ಸುಣ್ಣ (ಕ್ಯಾಲ್ಸಿಯಂ ಕಾರ್ಬೋನೇಟ್) ದಿಂದಾದ ಗಟ್ಟಿ ಕವಚವಿದೆ. ಈ ಕವಚ ಒಂದು ಅಥವಾ ಬಹು ಸಂಖ್ಯೆ ಭಾಗಗಳಿಂದಾಗಿದೆ. ಇದಕ್ಕೆ ಶೆಲ್ ಎನ್ನುವರು. ಈ ಕವಚವನ್ನು ಮ್ಯಾಂಟಲ್ ಪದರ ಸ್ರವಿಸುತ್ತದೆ. ಮೃದ್ವಂಗಿಗಳಿಗೆ ಈ ಕವಚ ರಕ್ಷಣೆ ನೀಡುತ್ತದೆ.

ತಲೆಯಲ್ಲಿ ಬಾಯಿ, ಕಣ್ಣು, ಸ್ಪರ್ಶಾಂಗ ಮತ್ತು ಇಂದ್ರಿಯಗಳಿವೆ. ಕೆಲವು ಜಾತಿಯವುಗಳಿಗೆ ಈ ಅಂಗಗಳು ಚೆನ್ನಾಗಿ ಬೆಳೆದಿಲ್ಲ. ಕೆಲವು ಪ್ರಾಣಿಗಳಲ್ಲಿ ಸ್ಪರ್ಶಾಂಗ ಮತ್ತು ಇಂದ್ರಿಯಗಳು ವಿಭಿನ್ನವಾಗಿವೆ. ಕಾಲು ದಪ್ಪನೆಯ ಮೃದು ಮಾಂಸದಿಂದಾಗಿದೆ. ಇದು ವಿವಿಧ ಆಕಾರದಲ್ಲಿದೆ. ಇದರಿಂದ ಮೃದ್ವಂಗಿಗಳು ತೆವಳುತ್ತವೆ, ಮತ್ತು ಈಜುತ್ತವೆ. ಕೆಲವು ಜಾತಿಯವು ಮಣ್ಣು ಕೊರೆಯಲು ಬಳಸುತ್ತವೆ.

ಕಣ್ಣುಗಳು ಸರಳ ರೀತಿಯವು. ಕೆಲವು ಜಾತಿಯ ಜೀವಿಗಳಲ್ಲಿ ಸಂಕೀರ್ಣ ರೀತಿಯ ಕಣ್ಣುಗಳಿವೆ. ಜೀರ್ಣಾಂಗವ್ಯೂಹ ಸರಳವಾಗಿದ್ದು, ಮುಂಭಾಗದಲ್ಲಿ ಬಾಯಿ ಮತ್ತು ಹಿಂಭಾಗದಲ್ಲಿ ಆಸನದ್ವಾರ (ಎನಸ್) ಇದೆ. ಆದರೆ, ಗ್ಯಾಸ್ಟ್ರೋಪಾಡ್ಸ್, ಸ್ಕ್ಯಾಪೊಪಾಡ್ ಮತ್ತು ಸೆಫೊಲೊಪಾಡ್‌ಗಳಲ್ಲಿ ಜೀರ್ಣಾಂಗವ್ಯೂಹ ಚೆನ್ನಾಗಿ ರೂಪುಗೊಂಡಿದ್ದು, U ಆಕಾರದಲ್ಲಿದೆ. ಆಸನದ್ವಾರ (ಎನಸ್) ಬಾಯಿಯ ಪಕ್ಕ ಇದೆ. ಪೆಲಿಸಿಪೋಡವನ್ನು ಹೊರತುಪಡಿಸಿ, ಉಳಿದ ಜಾತಿಯ ಮೃದ್ವಂಗಿಗಳಲ್ಲಿ ಗಂಟಲ ಕುಳಿಯಲ್ಲಿ ರ‍್ಯಾಸ್ಪಿಂಗ್ ಅಂಗ (ರ‍್ಯಾಡುಲ) ಇದೆ. ಸೆಫ್ಯಾಲೊಪಾಡ್‌ಗಳಲ್ಲಿ ಹೊರತು ಉಳಿದುವುಗಳಲ್ಲಿ ರಕ್ತಪರಿಚಲನಾವ್ಯೂಹ ತೆರೆದ ರೀತಿಯದು. ಕೆಲವು ಜಾತಿಯ ಮೃದ್ವಂಗಿಗಳಲ್ಲಿನ ದೇಹದ ಕುಳಿ ಹೀಮೋಸೀಲ್. ಹೀಮೋಸೀಲ್ ಹೃದಯಾವರಣದಲ್ಲಿ, ಜನನಗ್ರಂಥಿಯ ನಳಿಕೆಯಲ್ಲಿ ಮತ್ತು ನೆಫ್ರೀಡಿಯದಲ್ಲಿದೆ.

ಉಸಿರಾಟದ ಅಂಗಗಳು ಕಿವಿರುಗಳು ಅಥವಾ ಟೆನಿಡಿಯಂ. ಭೂವಾಸಿಗಳಲ್ಲಿ ಶ್ವಾಸಕೋಶವಿದೆ. ವಿಸರ್ಜನಾಂಗವ್ಯೂಹದಲ್ಲಿ ಒಂದು ಜೊತೆ ಮೆಟನೆಫ್ರಿಡಿಯ ಇದೆ. ಇವು ನಿಜವಾದ ಸೀಲೊಮೊಡಕ್ಟ್ ಮತ್ತು ಹೃದಯಾವರಣದ ಕುಳಿಯಿಂದ ಹೊರಕ್ಕೆ, ನೆಫ್ರೀಡಿಯಾಪೋರ್ ಮುಖಾಂತರ ಸಂಪರ್ಕಿಸುತ್ತವೆ. ನರವ್ಯೂಹದಲ್ಲಿ ಒಂದು ಜೊತೆ ಪ್ರಮಸ್ತಿಷ್ಕ, ಪ್ಲೂರಲ್, ಪೀಡಲ್ ಮತ್ತು ಒಳಾಂಗಗಳ ನರಗಂಟು, ಅಡ್ಡಡ್ಡವಾದ ಮತ್ತು ಲಂಬವಾದ ಜೋಡಣೆಯಿಂದ ಸೇರುತ್ತವೆ. ಇವು ದ್ವಿಲಿಂಗಿಗಳು. ಕೆಲವು ಜಾತಿಯ ಮೃದ್ವಂಗಿಗಳು ಉಭಯಲಿಂಗಿಗಳು. ಗರ್ಭಧಾರಣೆ ದೇಹದ ಹೊರಗೆ ಅಥವಾ ಒಳಗೆ ಆಗುತ್ತದೆ. ಭ್ರೂಣ ಬೆಳವಣಿಗೆ ಆರಂಭಗೊಂಡು, ಟ್ರೊಕೊಫೋರ್ ಲಾರ್ವದ ಹಂತ ಮುಗಿಸಿ, ವೆಲಿಜರ್ ಲಾರ್ವ ದಂತ ದಾಟಿ, ರೂಪಪರಿವರ್ತನೆಗೊಂಡು ಪ್ರೌಢಾವಸ್ಥೆ ತಲುಪುತ್ತದೆ.

ಮೃದ್ವಂಗಿಗಳ ವರ್ಗೀಕರಣ : ಇವುಗಳನ್ನು ಆರು ವರ್ಗಗಳಾಗಿ ವಿಂಗಡಿಸಲಾಗಿದೆ. ವರ್ಗ – 1. ಆಪ್ಲಕೊಫೋರ : ಉರುಳೆಯಾಕಾರದ ಹುಳುಗಳಂತಿವೆ. ಇವುಗಳ ದೇಹದಲ್ಲಿ ನಿಖರವಾದ ತಲೆ, ಕವಚ, ಕಾಲು, ಚಿಪ್ಪು ಮತ್ತು ನೆಫ್ರಿಡಿಯ ಇಲ್ಲ. ಆದರೆ, ಕ್ಯುಟಿಕಲ್ ದೇಹವನ್ನು ಆವರಿಸಿದೆ. ಈ ಕ್ಯುಟಿಕಲ್ ಮೇಲೆ ಸುಣ್ಣ (ಕ್ಯಾಲ್ಶಿಯಂ ಕಾರ್ಬೋನೇಟ್) ದಿಂದಾದ ಅನೇಕ ಸ್ಪಿಕ್ಯೂಲ್‌ಗಳು ಇವೆ. ಬಾಯಿ

ಮತ್ತು ಆಸನದ್ವಾರ ಉಪಾಂತ ತುದಿಯಲ್ಲಿ ಅಭಿಮುಖವಾಗಿವೆ. ಜೀರ್ಣಾಂಗವ್ಯೂಹ ನೇರವಾಗಿದ್ದು, ರ್ಯಾಡ್ಯುಲ ಇದೆ. ಒಂದು ಜೊತೆ ಸೀಲೊಮೊಡಕ್ಟ್ ಕರುಳಿನ ಕೊನೆಯಲ್ಲಿ ಸ್ವತಂತ್ರವಾಗಿದೆ. ಇವು ಉಭಯಲಿಂಗಿಗಳು ಅಥವಾ ಭಿನ್ನಲಿಂಗಿಗಳು. ಈ ವರ್ಗದಲ್ಲಿ 2 ಗಣಗಳಿವೆ. 1. ನಿಯೊಮಿನ್ನೈಕಿಯ. ಉದಾ : ಲಿಪೈಡೊಮೇನಿಯ ಮತ್ತು ನಿಯೊಮೇನಿಯ. 2. ಕಿಟೊಡರ್ಮಟಾಯ್ಡಿಯ ಉದಾ : ಕೀಟೊಡರ್ಮ ಮತ್ತು ಪ್ರೊಕೀಟೋಡರ್ಮ.

ವರ್ಗ – 2 ಪಾಲಿಪ್ಲಕೊಫೋರ : ದೇಹ ಅಂಡಾಕಾರವಾಗಿದೆ. ನಿಖರವಾದ ತಲೆ ಇದೆ. ಬೆನ್ನು ಚಪ್ಪಟೆಯಾಗಿದೆ. ತಲೆಯಲ್ಲಿ ಕಣ್ಣು ಮತ್ತು ಗ್ರಹಣಾಂಗವಿಲ್ಲ. ಚಿಪ್ಪಿನಲ್ಲಿ ಅನುಲಂಬವಾದ ಎಂಟು ಸರಣಿಯ, ಕಿವಿರನ್ನು ಒಳಗೊಂಡಿರುವ ಕೊರಕಲು ಅಂಚಿನಲ್ಲಿದೆ. ಜೀರ್ಣಾಂಗವ್ಯೂಹದಲ್ಲಿ ರ್ಯಾಡ್ಯುಲ ಚೆನ್ನಾಗಿದೆ. ಇದರಲ್ಲಿ 17 ಹಲ್ಲುಗಳಿವೆ. ಕರುಳು ಸುರುಳಿಯಾಗಿದ್ದು, ತುದಿಯಲ್ಲಿ ಆಸನದ್ವಾರವಿದೆ. ಒಂದು ಜೊತೆ ನೆಫ್ರಿಡಿಯ ಹೃದಯಾವರಣದಿಂದ ಪಾರ್ಶ್ವದ ಕೊರಕಲಿಗೆ ವಿಸ್ತಾರವಾಗಿದೆ. ಹೃದಯಾವರಣದೊಡನೆ ಸಂಬಂಧವಿಲ್ಲದ, ಒಂದು ಜೊತೆ ಗೋನೊಡಕ್ಟ್ ಇದೆ. ಇವು ಭಿನ್ನ ಲಿಂಗಿಗಳು. ಇವುಗಳಲ್ಲಿ 2 ಗಣಗಳಿವೆ.

1. ಪೆಲಿಯೊಲೊರಿಕೇಟ ಉದಾ: ಲೆಪಿಡೊಪ್ಲೋರಸ್, ಹ್ಯಾನಲಿಯ
2. ನಿಯೊಲೊರಿಕೇಟ ಉದಾ: ಕೈಟನ್, ಕ್ರಿಪ್ಟೊಕೈಟನ್

ವರ್ಗ–3 ಮಾನೊಪ್ಲಕೊಫೋರ : ದೇಹದಲ್ಲಿ ದ್ವಿಪಾರ್ಶ್ವ ಸಮಾಂಗತೆ ಇದೆ. ತಲೆಯಲ್ಲಿ ಕಣ್ಣು ಮತ್ತು ಗ್ರಹಣಾಂಗವಿಲ್ಲ. ಚಪ್ಪಟೆಯಾದ ಕವಚ ದೇಹವನ್ನೂ ಮತ್ತು ದೇಹದ ಗೋಡೆಯನ್ನು ದುಂಡಾದ ಮಡಿಕೆಯಂತೆ ಸುತ್ತುವರೆದಿದೆ. ಹೊರ ಕಿವಿರುಗಳು ಸರಣಿಯಾಗಿ ಜೋಡಣೆಯಾಗಿವೆ. ಐದು ಜೊತೆ ನೆಫ್ರಿಡಿಯ ಇವೆ. ಇವು ಭಿನ್ನಲಿಂಗಿಗಳು ಉದಾ : ನಿಯೊಪಲೈನ ಗೆಲಾತಿಯೆ.

ವರ್ಗ–4 ಗ್ಯಾಸ್ಟ್ರೋಪೋಡ : ಇವು ಸಮುದ್ರದಲ್ಲಿ ಮತ್ತು ಸಿಹಿ ನೀರಿನಲ್ಲಿ ವಾಸಿಸುತ್ತವೆ. ಕೆಲವು ಪ್ರಭೇದದ ಜೀವಿಗಳು ಭೂವಾಸಿಗಳು. ಕೆಲವು ಜಾತಿಯ ಜೀವಿಗಳು ಕಂಟಕಚರ್ಮಿಗಳಲ್ಲಿ ಪರೋಪಜೀವಿಗಳಾಗಿವೆ. ದೇಹ ಮೃದುವಾಗಿದ್ದು, ಖಂಡರಹಿತವಾಗಿದೆ. ದೇಹದ ಹೊರಭಾಗದಲ್ಲಿರುವ ಚಿಪ್ಪು ನಿಂಬೆಯ ರೀತಿ ಅಥವಾ ಸುರುಳಿಯಾಕಾರದಲ್ಲಿದೆ. ತಲೆ ಭಿನ್ನವಾಗಿದೆ. ದೇಹದಲ್ಲಿ ದ್ವಿಪಾರ್ಶ್ವ ಸಮಾಂಗತೆ ಇಲ್ಲ. ತಲೆಯಲ್ಲಿ ಕಣ್ಣು, ಬಾಯಿ ಮತ್ತು ಗ್ರಹಣಾಂಗಗಳಿವೆ. ಕಾಲು ಕುಕ್ಷಿ ಅಗಲ ಮತ್ತು ಚಪ್ಪಟೆಯಾಗಿದ್ದು, ಸ್ನಾಯುವಿನಿಂದಾಗಿದೆ. ದೇಹದೊಳಗಿರುವ ಅಂಗಾಂಗಗಳು ನಿಂಬೆಯ ರೀತಿ ಸುರುಳಿಯಾಗಿದ್ದು, ತಿರುಚಿಕೊಂಡಿವೆ. ದೇಹವನ್ನು ತೆಳುವಾದ ಕವಚ ಆವರಿಸಿದೆ. ಬಾಯಿಯಲ್ಲಿ ಕೆಲವು ಸಾಲುಗಳ ಕೈಟಿನ್‌ನಿಂದಾದ ಹಲ್ಲುಗಳಿರುವ ರ್ಯಾಡುಲವಿದೆ. ಜೀರ್ಣಾಂಗವ್ಯೂಹದಲ್ಲಿ ಗಂಟಲಕುಳಿ, ಉದ್ದವಾದ ಅನ್ನನಾಳ, ಜಠರ, ಸುರುಳಿಯಂತಿರುವ ಕರುಳು ಮತ್ತು ತಲೆಯ ಸಮೀಪ ಆಸನದ್ವಾರವಿದೆ. ಉಸಿರಾಟ ಕಿವಿರುಗಳಿಂದ ಆಗುತ್ತದೆ. ಕೆಲವು ಜೀವಿಗಳಲ್ಲಿ ದೇಹದ ಕವಚ ಗೋಡೆಯಿಂದ ಉಸಿರಾಟ ಆಗುತ್ತದೆ. ಇವುಗಳಲ್ಲಿ ತೆರೆದ ರಕ್ತ ಪರಿಚಲನಾವ್ಯೂಹ ಇದೆ. ಹೃದಯವಿದೆ.



ಕ್ಸಿನೋಫೊರ

ವಿಸರ್ಜನೆ ಮೆಟನೆಫ್ರಿಡಿಯದಿಂದಾಗುತ್ತದೆ. ನರವ್ಯೂಹದಲ್ಲಿ ಭಿನ್ನವಾದ ಮಸ್ತಿಷ್ಕ, ಪ್ಲುರಲ್ ಗ್ಯಾಂಗ್ಲಿಯ, ಪಾದದಲ್ಲಿ ಪೀಡಲ್ ಗ್ಯಾಂಗ್ಲಿಯ, ದೇಹಭಿತ್ತಿಯಲ್ಲಿ ಪೆರೈಟಲ್ ಗ್ಯಾಂಗ್ಲಿಯ ಇವೆ. ಇವು ಭಿನ್ನಲಿಂಗಿಗಳು. ಕೆಲವು ಜಾತಿಯ ಜೀವಿಗಳು ಉಭಯಲಿಂಗಿಗಳು. ಬೆಳವಣಿಗೆಯಲ್ಲಿ ಟ್ರೊಕೊಫೋರ್ ಮತ್ತು ವೆಲಿಜರ್ ಲಾರ್ವ ಹಂತಗಳಿವೆ. ಈ ಹಂತಗಳನ್ನು ಮುಗಿಸಿ, ಪ್ರೌಢಾವಸ್ಥೆ ತಲುಪುತ್ತವೆ. ಇವುಗಳನ್ನು ಮುಖ್ಯವಾಗಿ ಮೂರು ಉಪವರ್ಗಗಳನ್ನಾಗಿ ವಿಂಗಡಿಸಿದ್ದಾರೆ.

ಉಪವರ್ಗ – 1 ಪ್ರೊಸೊಬ್ರಾಂಕಿಯ : ಇವು ಜಲ ಮತ್ತು ಭೂವಾಸಿಗಳು. ಕೆಲವು ಜಾತಿಯ ಜೀವಿಗಳು ಸಿಹಿ ನೀರಿನಲ್ಲಿ ಮತ್ತು ಸಮುದ್ರ ನೀರಿನಲ್ಲಿ ವಾಸಿಸುತ್ತವೆ. ದೇಹದಲ್ಲಿ ನರಜೋಡಣೆ 8 ಆಕಾರದಲ್ಲಿದೆ. ಉಸಿರಾಟ ಕಿವಿರು(ಟಿನಿಡಿಯ) ಗಳಿಂದಾಗುತ್ತದೆ. ಇವು ಭಿನ್ನಲಿಂಗಿಗಳು. ಈ ಉಪವರ್ಗದಲ್ಲಿ 3 ಗಣಗಳಿವೆ. 1. ಆರ್ಕಿಗ್ಯಾಸ್ಟ್ರೊಪೊಡ ಉದಾ : ಟ್ರೊಕಸ್, ಟುರಬೊ, 2. ಮಿಸೊಗ್ಯಾಸ್ಟ್ರೊಪೋಡ. ಉದಾ : ವೈವಿಪ್ಯಾರಸ್ ಮತ್ತು ಲಿಟೊರೈನ, 3. ಸ್ಟೆನೊಗ್ಲಾಸ್ ಉದಾ : ಕೊನಸ್ ಮತ್ತು ಮುರೆಕ್ಸ್.

ಉಪವರ್ಗ 2 ಒಫಿಸ್‌ತೊಬ್ರಾಂಕಿಯ : ಇವು ಸಮುದ್ರ ವಾಸಿಗಳು. ದೇಹವನ್ನು ಚಿಪ್ಪು ಆವರಿಸಿಲ್ಲ. ಕೆಲವು ಜೀವಿಗಳಲ್ಲಿ ಇದು ಪೀಡಲ್ ಮಡಿಕೆಯಿಂದ ಆವೃತವಾಗಿದೆ. ಉಸಿರಾಟ ಕಿವಿರುಗಳಿಂದಾಗುತ್ತದೆ. ನರವ್ಯೂಹ ಕೇಂದ್ರೀಕೃತವಾಗಿದೆ. ಇವು ಉಭಯಲಿಂಗಿಗಳು. ಈ ಉಪವರ್ಗದಲ್ಲಿ ವೈವಿಧ್ಯಮಯ ಜಾತಿ ಮತ್ತು ಪ್ರಭೇದಗಳಿವೆ. ಇವುಗಳನ್ನು 12 ಗಣಗಳಾಗಿ ವರ್ಗೀಕರಿಸಲಾಗಿದೆ.

1. ಓಂಕಿಡೆನಿಯ ಉದಾ : ಓಂಕಿಡೆಯಂ
2. ಸೆಫಲೊಸ್‌ಪಿಡಿಯ ಉದಾ : ಬುಲ್ಲಾ, ಆಕ್ಟರನ್
3. ಅನಾಸ್‌ಪಿಡಿಯ ಉದಾ : ಅಕೀರ, ಅಪಲೈನಿಯ
4. ಟೆರೊಪೋಡ : ಉದಾ : ಕ್ಯಾಪೊಲೈನ್ ಮತ್ತು ಕ್ಲಿಯೊನ್
5. ಎಕೊಚಿಲಿಡೆಸಿಯ ಉದಾ : ಎಕೊಚಿಲಿಡಿಯಂ
6. ಫಿಲಿನೊಗ್ಲಾಸೆಸಿಯ ಉದಾ : ಫಿಲೊನೊಗ್ಲಾಸ್
7. ಸ್ಯಾಕೊಗ್ಲಾಸ್ ಉದಾ : ಆಕ್ಸ್‌ನೊಯಿ
8. ನಾಟ್‌ಸ್‌ಪೀಡಿಯ ಉದಾ : ಟೈಲೊಡೈನ್ ಮತ್ತು ಪ್ಲೋರೊಬ್ರಾಂಕಸ್
9. ನೂಡಿಬ್ರಾಂಕಿಯ ಉದಾ : ಡೊರಿಸ್ ಮತ್ತು ಆರ್‌ಮೈನಾ
10. ರೊಡೊಪೆಸಿಯ (ಬಸವನ ಹುಳು ರೀತಿಯ ಜೀವಿಗಳು) ಉದಾ : ರೋಡೊಫಿ
11. ಫೈರಮಿಡೆಲಸಿಯ ಉದಾ : ಟರ್‌ಬೊನಿಲ್ಲ, ಓಡೊಸ್ಟೊಮಿಯ
12. ಪ್ಯಾರಾಸಿಟ ಉದಾ : ಎನ್ಟೊಕಾಂಚಾ ಮತ್ತು ತೈನಿಕೊಲ

ಉಪವರ್ಗ–3 ಪಲ್ಮೊನೆಟ : ಇವು ಸಿಹಿನೀರು ಮತ್ತು ಸಮುದ್ರನೀರಿನಲ್ಲಿ ವಾಸಿಸುತ್ತವೆ. ಕೆಲವು ಭೂವಾಸಿಗಳು. ದೇಹದ ಮೇಲೆ ಸುರುಳಿಯಾಕಾರದ ಚಿಪ್ಪಿದೆ. ಕೆಲವು ಜಾತಿಯ ಜೀವಿಗಳಲ್ಲಿ ಚಿಪ್ಪು ಕ್ಷೀಣಿಸಿದೆ. ದೇಹದ ಮೇಲೆ ಮತ್ತು ಚಿಪ್ಪಿನ ಕೆಳಗಿರುವ ಕವಚದ ಅವಕಾಶ ಪುಪ್ಪುಸ ಚೀಲವಾಗಿ ಮಾರ್ಪಟ್ಟಿದೆ. ಕಾರಣ, ಕಿವಿರುಗಳಿಲ್ಲ. ಹೃದಯದಲ್ಲಿ ಒಂದು ಹೃತ್ಕರ್ಣ ಮತ್ತು ಹೃತ್ಕುಕ್ಷಿ ಇವೆ. ನರವ್ಯೂಹ ಸಮಾಂಗತೆಯಿಂದಿದೆ. ಇವು ಉಭಯಲಿಂಗಿಗಳು. ಈ ಉಪವರ್ಗದಲ್ಲಿ 2 ಗಣಗಳಿವೆ. 1. ಬೆಸೋಮೆಟಫೋರ ಉದಾ : ಸೈಫೊನೇರಿಯ ಮತ್ತು ಫ್ಲೆನ್‌ರೊಬಿಸ್ 2. ಸ್ಟೈಲೊಮೇಟಫೋರ ಉದಾ :ಲೈಮೆಕ್ಸ್, ಹೆಲಿಕ್ಸ್

ಕ್ಯಾಸಿಡೆರಿಯಾ

ವರ್ಗ – 5 ಸ್ಕ್ಯಾಫೊಪೋಡ : ಇವು ಸಮುದ್ರ ವಾಸಿಗಳು. ನೀಳವಾದ ದೇಹವಿದ್ದು, ಆನೆಯ ಕೋರೆಹಲ್ಲು (ಟಸ್ಕ್) ತರಹದ ಚಿಪ್ಪಿನ ಹೊರಕವಚದೊಳಗೆ

ಜೀವಿಸುತ್ತವೆ. ದೇಹದಲ್ಲಿ ಕಣ್ಣು, ಗ್ರಹಣಾಂಗ ಮತ್ತು ಕಿವಿರುಗಳು ಇಲ್ಲ. ಕೊಳವೆಯಂತಿರುವ ಚಿಪ್ಪು ಎರಡುಕಡೆ ತೆರೆದಿದೆ. ಬಾಯಿ ಹಾಲೆಯಂತಹ (ಲಾಬ್ಯುಲಾರ್) ಪ್ರವರ್ಧಕದಿಂದ ಸುತ್ತುವರೆದಿದೆ. ಪಾದ ಕ್ಷೀಣಿಸಿದೆ. ಇವು ಭಿನ್ನಲಿಂಗಿಗಳು ಉದಾ : ಡೆಂಟಲಿಯಂ.

ವರ್ಗ – 6 ಪೆಲಿಸಿಪೋಡ : ಇವು ಜಲವಾಸಿಗಳು. ಕೆಲವು ಸಮುದ್ರದಲ್ಲಿ ಮತ್ತೆ ಕೆಲವು ಸಿನಿಹೀರಿನಲ್ಲಿ ವಾಸಿಸುತ್ತವೆ. ಇವುಗಳ ದೇಹವು ಎರಡು ಚಿಪ್ಪುಗಳ ಮಧ್ಯ ಇದೆ. ರ‍್ಯಾಡುಲ ಮತ್ತು ಗ್ರಹಣಾಂಗಗಳು ಇಲ್ಲ. ಪಾದ ಅಗಲವಾಗಿದೆ. ಜೀರ್ಣಾಂಗವ್ಯೂಹ ಸುರುಳಿಯಾಕಾರದಲ್ಲಿದೆ. ಒಂದು ಜೊತೆ ಜೀರ್ಣಗ್ರಂಥಿಗಳಿವೆ. ಹೃದಯ ಹೃತ್ಕುಕ್ಷಿ ಮತ್ತು ಎರಡು ಹೃತ್ಕರ್ಣಗಳನ್ನೊಳಗೊಂಡಿದ್ದು, ತೆಳುವಾದ ಪದರದಲ್ಲಿದೆ. ಒಂದು ಜೊತೆ ನೆಫ್ರಿಡಿಯ ಇವೆ. ನರವ್ಯೂಹದಲ್ಲಿ ಪ್ಲುರಲ್, ಪೀಡಲ್ ಮತ್ತು ಕೇಂದ್ರ ಗ್ಯಾಂಗ್ಲಿಯಗಳಿವೆ. ದೇಹವನ್ನು ಸಮವಾಗಿ ಸ್ಥಿರತೆಯಲ್ಲಿಡಲು ಸ್ಟ್ಯಾಟೋಸಿಸ್ಟ್ ಸೂಕ್ಷ್ಮ ಅಂಗ ಇದೆ. ಇವು ಭಿನ್ನಲಿಂಗಿಗಳು. ಬೆಳವಣಿಗೆ ರೂಪಪರಿವರ್ತನೆ ಮೂಲಕ ಆಗುತ್ತದೆ. ಟ್ರೊಕೊಫೊರ್ ಲಾರ್ವ ಹಂತ ಇದೆ. ಈ ವರ್ಗದ ಪ್ರಾಣಿಗಳನ್ನು 5 ಗಣಗಳಲ್ಲಿ ವಿಂಗಡಿಸಲಾಗಿದೆ.

1. ಪ್ರೊಟೊಬ್ರಾಂಕಿಯ ಉದಾ : ನುಕುಲ ಮತ್ತು ಸೊಲೆನೊಮ್ಯೆ
2. ಫಿಲ್ಲಿಬ್ರಾಂಕಿಯೇಟಾ ಉದಾ : ಮೈಟಿಲಸ್ ಮತ್ತು ಆರ್ಕ್
3. ಸುಡೊಲೆಮೆಲ್ಲಿಬ್ರಾಂಕಿಯೇಟಾ ಉದಾ : ಪೆಕ್ಟೆನ್ ಮತ್ತು ಮೆಲಗ್ರೀನ್
4. ಯುಲೆಮೆಲ್ಲಿಬ್ರಾಂಕಿಯೆಟಾ ಉದಾ : ಕಾರಡಿಯಂ, ವಿನಸ್
5. ಸೆಪ್ಟಿಬ್ರಾಂಕಿಯೆಟಾ ಉದಾ : ಕಸ್‌ಪಿಡೆರಿಯ, ಪೊರೊಮ್ಯೆಯ

ವರ್ಗ – 7 ಸೆಫಲೊಪೋಡ : ಇವು ಸಮುದ್ರವಾಸಿಗಳು. ತಲೆಯ ಭಾಗದಲ್ಲಿ 8–10 ಉದ್ದವಾದ ತೋಳು (ಆರ್ಮ್ಸ್) ಗಳು ಬೆಳೆದಿದ್ದು, ಇವು ಬಾಯಿಯನ್ನು ಸುತ್ತುವರೆದಿವೆ. ಈ ತೋಳುಗಳ ಒಳಭಾಗದಲ್ಲಿ ದುಂಡಾಕೃತಿಯ ಹೀರುವ ತಟ್ಟೆಗಳು ಸಾಲಾಗಿವೆ. ದೇಹವು ಚಿಪ್ಪಿನಿಂದ ಆವೃತವಾಗಿಲ್ಲ. ಆದರೆ, ಚೆಂಡಿನಂತಿರುವ, ಹಗುರವಾದ ಚಿಪ್ಪು ದೇಹದ ಒಳಭಾಗದಲ್ಲಿದೆ. ತಲೆಯಲ್ಲಿ ದೊಡ್ಡ ಕಣ್ಣುಗಳಿವೆ. ಬಾಯಿಯಲ್ಲಿ ದವಡೆ ಮತ್ತು ರ‍್ಯಾಡುಲ ಇದೆ. 2–4 ಜೊತೆ ಕಿವಿರುಗಳು ಉಸಿರಾಟಕ್ಕೆ ಸಹಾಯಕವಾಗಿವೆ. ರಕ್ತ ಪರಿಚಲನಾವ್ಯೂಹ ನಾಳಗಳನ್ನು ಮತ್ತು ಹೃದಯವನ್ನೊಳಗೊಂಡಿದೆ. 2–4 ಜೊತೆ ನೆಫ್ರಿಡಿಯಗಳಿವೆ. ಇವು ಭಿನ್ನಲಿಂಗಿಗಳು. ಬೆಳವಣಿಗೆಯಲ್ಲಿ ಲಾರ್ವ ಹಂತವಿಲ್ಲ. ಇವು ತುಂಬಾ ವೇಗವಾಗಿ ಈಜಬಲ್ಲುವು. ಈ ವರ್ಗದಲ್ಲಿನ ಜೀವಿಗಳನ್ನು 3 ಉಪವರ್ಗಗಳಾಗಿ ವಿಂಗಡಿಸಲಾಗಿದೆ.



ಲಾಲಿಗೊ

ಉಪವರ್ಗ – 1 ಡೈಬ್ರಾಂಕಿಯೇಟಾ : ಇವುಗಳ ದೇಹದಲ್ಲಿ 2 ಕಿವಿರುಗಳು, 2 ನೆಫ್ರಿಡಿಯ, 2 ಬ್ರಾಂಕಿಯಲ್ ಹೃದಯಗಳಿವೆ. ಕಣ್ಣಿನ ರಚನೆ ಸಂಕೀರ್ಣವಾಗಿದೆ. ಈ ಉಪವರ್ಗದ ಪ್ರಾಣಿಗಳನ್ನು 2 ಗಣಗಳಲ್ಲಿ ಸೇರಿಸಲಾಗಿದೆ. 1. ಡೆಕಪೋಡ. ಉದಾ : ಸೆಪಿಯ, ಸ್ಪೈರುಲ 2. ಆಕ್ಟೋಪೋಡ ಉದಾ : ಆರ್ಗೊನಾಟ್, ಆಕ್ಟೊಪಸ್.

ಉಪವರ್ಗ – 2 ಟೆಟ್ರಬ್ರಾಂಕಿಯೇಟ. ಇವುಗಳ ದೇಹದಲ್ಲಿ 4 ಕಿವಿರುಗಳು, 4 ನೆಫ್ರಿಡಿಯ, 4 ಹೃತ್ಕರ್ಣಗಳಿರುವ ಹೃದಯವಿದೆ. ಕಣ್ಣುಗಳು ಸರಳವಾಗಿವೆ ಉದಾ : ನಾಟಿಲಸ್.

ಉಪವರ್ಗ – 3 : ಅಮೋನೈಡಿಯ. ಇವು ನಶಿಸಿವೆ ಉದಾ : ಅಮೋನೈಟಸ್ (ಎಸ್.ಆರ್.ಎಸ್.)

**ಮೃದ್ವಸ್ಥಿ:** ದೇಹದ ಕೆಲವು ಮೃದುಭಾಗಗಳಿಗೆ ಆಧಾರಭೂತವಾಗಿದ್ದು ಆಕಾರಕೊಡುವ ಮತ್ತು ಮಡಿಸಿದರೆ ಮುರಿಯದ ಘನರೂಪದ; ಕಶೇರುಕಗಳಲ್ಲಿ ಮಾತ್ರ (ಕಾರ್ಟಿಲೇಜ್). ಕಂಡುಬರುವ ವಿಶಿಷ್ಟ ಅಂಗಾಂಶ. ಮೆಲ್ಲೆಲುಬು, ಮೆತ್ತೆಲುಬು, ಮೃದ್ವಸ್ಥಿ ಪರ್ಯಾಯ ನಾಮಗಳು. ಇದು ಆಧಾರ ಅಂಗಾಂಶಗಳಲ್ಲೊಂದು. ಮೂಳೆಯಷ್ಟು ಗಟ್ಟಿ ಇಲ್ಲದಿದ್ದರೂ ಭಾರ ಒತ್ತಡಗಳನ್ನು ತಡೆಯಬಲ್ಲುದು ಮತ್ತು ಪುಟಿತ ಗುಣವುಳ್ಳದ್ದು. ಇದರಲ್ಲಿ ಜೀವಂತ ಕಣಗಳಿಗಿಂತ ನಿರ್ಜೀವ ಅಂತರಕಣ ವಸ್ತುವೇ ಹೆಚ್ಚು. ಇದರಲ್ಲಿ ನರತಂತುಗಳು, ರಕ್ತನಾಳಗಳು ಹಾಗು ದುಗ್ಧನಾಳಗಳು ಇಲ್ಲ. ಜೀವಕಣಗಳಿಗೆ ಬೇಕಾದ ಆಹಾರ, ಆಮ್ಲಜನಕಗಳು ಅಂತರಕಣ ವಸ್ತುವಿನ ಮೂಲಕ ವ್ಯಾಪಿಸುತ್ತ ಹೋಗುತ್ತವೆ. ಕಾಂಡ್ರಾಯಟಿನ್ ಸಲ್ಫೇಟ್, ಕಾಂಡ್ರೊಮ್ಯುಕಾಯಿಡುಗಳಿಂದ ಅಂತರಕಣ ವಸ್ತುವಿನ ಭೂಮಿಕೆಗಾಗಿ ಅದರಲ್ಲಿ ಕೊಲ್ಲಾಜೆನ್ ಜನಕ ತಂತುಗಳಿರುತ್ತವೆ. ಬೇಯಿಸಿದರೆ ತಂತುಗಳಿಂದ ಜೆಲೆಟಿನ್ ಉಂಟಾಗುತ್ತದೆ. ಭೂಮಿಕ ಮತ್ತು ತಂತುಗಳು ಸೇರಿ ಮಾತೃಕೆ (ಅಂತರಕಣವಸ್ತು ಮಾಧ್ಯಮವಸ್ತು) ಆಗುತ್ತದೆ. ಇದನ್ನು ಕತ್ತಿಯಿಂದ ಕೊಯ್ಯಬಹುದು.

ಕೀಲುಗಳಲ್ಲಿ, ಎದೆ ಪಂಜರದ ಎಲುಬುಗಳ ನಡುವೆ, ಧ್ವನಿನಾಳ, ಶ್ವಾಸನಾಳ,ಘುಪ್ಪುಸನಾಳಗಳು, ಮೂಗು ಮತ್ತು ಕಿವಿಗಳಲ್ಲಿ ಮೃದ್ವಸ್ಥಿ ಇದೆ. ಇದರಿಂದ ಅಸ್ಥಿಪಂಜರ ಹೆಚ್ಚು ಎಗರುಸ್ವಭಾವವುಳ್ಳದಾಗಿ ಸ್ಪ್ರಿಂಗಿನಂತೆ ಧಕ್ಕೆಗಳನ್ನು ತಡೆಯಬಲ್ಲುದು. ಮೂಳೆಗಳು ಕೀಲುಬಾಗಗಳ ಮೇಲೆ ತೆಳುಮೃದ್ವಸ್ಥಿ ಇರುವುದರಿಂದ ಶಬ್ದವಿಲ್ಲದೆ ಕೀಲುಗಳು ಚಲಿಸುತ್ತವೆ. ವಯಸ್ಸಾಗುತ್ತ ಮೃದ್ವಸ್ಥಿ ಮೂಳೆಯಾಗಿ ಮಾರ್ಪಾಡಾಗಬಹುದು ಇಲ್ಲವೆ ನಶಿಸಬಹುದು. ಕೆಲವು ಮುದುಕರಲ್ಲಿ ಚಲಿಸುವ ಕೀಲುಗಳಿಂದ ಶಬ್ದವಾಗಿ ನೋಯಬಹುದು. ಉಸಿರು ನಾಳಮಾರ್ಗಗಳ ಭಿತ್ತಿಯಲ್ಲಿ ಮೃದ್ವಸ್ಥಿ ಉಂಗುರ ಅಥವಾ ಚೂರುಗಳಿರುವುದರಿಂದ ನಾಳಗಳು ಮುದುಡಿಕೊಳ್ಳದೆ, ಉಸಿರು ತಡೆಯಿಲ್ಲದೆ ಆಡುವುದು. ಎದೆಪಂಜರ ಉಸಿರಾಟದಲ್ಲಿ ಉಬ್ಬಿ ತಗ್ಗಲು ಮೃದ್ವಸ್ಥಿ ಸಹಾಯಕಾರಿ. (ಎಂ.ಡಿ.)

ಮೂರು ರೀತಿಯ ಮೃದ್ವಸ್ಥಿಗಳನ್ನು ಗುರುತಿಸಲಾಗಿದೆ: 1) ಕಚಾಭ ಮೃದ್ವಸ್ಥಿ (ಹ್ಯಾಲಿನ್ ಕಾರ್ಟಿಲೇಜ್), 2) ಪ್ರತ್ಯಸ್ತ ಮೃದ್ವಸ್ಥಿ (ಇಲಾಸ್ಟಿಕ್ ಕಾರ್ಟಿಲೇಜ್), 3) ತಂತು ಮೃದ್ವಸ್ಥಿ (ಫೈಬ್ರಸ್ ಕಾರ್ಟಿಲೇಜ್),

1) ಕಚಾಭ ಮೃದ್ವಸ್ಥಿ (ಹ್ಯಾಲಿನ್ ಕಾರ್ಟಿಲೇಜ್): ಇದು ನೋಡಲು ಗಾಜಿನ ಹಾಗೆ ಮಿನುಗುತ್ತದೆ ಮತ್ತು ಪಾರಶಕವಾಗಿರುತ್ತದೆ. ಮಾತೃಕೆಯಲ್ಲಿ ಖಾಂಡ್ರೊಸೈಟ್ಸ್ ಇರುತ್ತವೆ. ಇವು ಕುಹರಗಳಲ್ಲಿ (ಲ್ಯಾಕುನಾರ್) 2 ಅಥವಾ 4, ಹೀಗೆ ಗುಂಪಾಗಿ ಇರುತ್ತವೆ. ಹೊಸ ಕೋಶಗಳು ಪೆರಿಕಾಂಡ್ರಿಯಮ್ ನಿಂದ ಉತ್ಪತ್ತಿಯಾಗುತ್ತವೆ. ಭ್ರೂಣಾವಸ್ಥೆಯಲ್ಲಿ ಕಚಾಭ ಮೃದ್ವಸ್ಥಿ ಕಾಣಬರುತ್ತದೆ. ಮಾತೃಕೆಯಲ್ಲಿ ಖಾಂಡ್ರೋಮ್ಯೂಕೋಪ್ರೋಟೀನ್ ಇರುತ್ತವೆ. ಮೂಳೆಗಳ ತುದಿಗಳಲ್ಲಿ, ಮೂಗಿನ ತುದಿ, ಶ್ವಾಸನಾಳಗಳಲ್ಲಿ ಇರುತ್ತದೆ. ಈ ಭಾಗಗಳಲ್ಲಿ ಆಧಾರ ನೀಡುತ್ತದೆ.

2)ಪ್ರತ್ಯಸ್ತ ಮೃದ್ವಸ್ಥಿ (ಇಲಾಸ್ಟಿಕ್ ಕಾರ್ಟಿಲೇಜ್) : ಹೊಸದರಲ್ಲಿ ಹಳದಿ ಬಣ್ಣವಾಗಿದ್ದು ಅಪಾರದರ್ಶಕವಾಗಿರುತ್ತದೆ. ಬಾಗುವ ನಾರುಗಳು (ಇಲಾಸ್ಟಿಕ್ ಫೈಬರ್ಸ್) ಹೇರಳವಾಗಿ ಮಾತೃಕೆಯಲ್ಲಿರುತ್ತವೆ. ಇವು ಕವಲೊಡೆದು ಎಲ್ಲ ಕಡೆ ಚದುರಿ ದಟ್ಟ ಜಾಲವನ್ನು ಉಂಟು ಮಾಡುತ್ತವೆ. ಹೊರಗಿವಿಗೆ ಮತ್ತು ಧ್ವನಿಪೆಟ್ಟಿಗೆಗೆ ಈ ಮೃದ್ವಸ್ಥಿ ಆಕಾರ ನೀಡುತ್ತದೆ. ಇದಲ್ಲದೆ ಯಾಸ್ಟೇರಿಯನ್ ನಾಳ ಹಾಗೂ ಕಿರುನಾಲಿಗೆಯಲ್ಲೂ ಕೂಡ ಕಂಡು ಬರುತ್ತದೆ.

3)ತಂತು ಮೃದ್ವಸ್ಥಿ (ಫೈಬ್ರಸ್ ಕಾರ್ಟಿಲೇಜ್): ಬಹಳ ಗಟ್ಟಿಯಾಗಿರುತ್ತದೆ. ದಟ್ಟವಾದ ಕೊಲ್ಲಾಜೆನ್ ತಂತುಗಳು ಇರುತ್ತವೆ. ಮಾತೃಕೆ ಬಹಳ ದಟ್ಟವಾಗಿರುತ್ತದೆ. ಬಾಗಬಲ್ಲುದು ಮತ್ತು ಹಿಗ್ಗಬಲ್ಲುದು. ಅಪಾರದರ್ಶಕ; ಪೆರಿಕಾಂಡ್ರಿಯಮ್ ಇರುವುದಿಲ್ಲ. ಯಾವಾಗಲೂ ಇನ್ನೆರಡು ವಿಧದ ಮೃದ್ವಸ್ಥಿಗಳ ಹತ್ತಿರವೇ ಇರುತ್ತದೆ. ಕಶೇರು ನಡುವಿನ ಫಲಕಗಳು, ಪೆಲ್‌ವಿಸ್ (ಫ್ಯೂಬಿಕ್) ಮೂಳೆಗಳ ನಡುವೆ ಮತ್ತು ಮೂಳೆಗಳ ಕೀಲುಗಳಲ್ಲಿ ಕಂಡುಬರುತ್ತದೆ. (ಎಸ್.ಎಸ್.)

**ಮೆಂಡಲ್, ಯೋಹಾನ್, ಗ್ರೆಗೋರ್:** 1822–84. ಆಸ್ಟ್ರಿಯದ ಪ್ರಸಿದ್ಧ ತಳಿವಿಜ್ಞಾನಿ. 1822 ಜುಲೈ 22ರಂದು ಆಸ್ಟ್ರಿಯದ ಉತ್ತರ ಮೊರೇವಿಯ ಜಿಲ್ಲೆಯ ಹೈನ್‌ಸೈನ್‌ಡಾರ್ಫ್ ಎಂಬ ಹಳ್ಳಿಯಲ್ಲಿ ಜನಿಸಿದ. ಈ ಹಳ್ಳಿಯ ಈಗಿನ ಹೆಸರು ಹ್ರನೀಸ್. ತಂದೆ ಆಂಟೋನ್ ಮೆಂಡಲ್. ಕುಟುಂಬದ ಪ್ರಧಾನವೃತ್ತಿ ಬೇಸಾಯವಾಗಿದ್ದು ಜೇನುಸಾಕಣೆ ಮತ್ತು ಗಿಡಗಳ ಕಸಿಕಟ್ಟುವುದರಲ್ಲಿ ಈತನಿಗೆ ಆಸಕ್ತಿಯಿತ್ತು.

ಯೋಹಾನನ ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರಿನಲ್ಲೆ ಆರಂಭವಾಯಿತು. ಪ್ರಕೃತಿವಿಜ್ಞಾನ ಅಧ್ಯಯನ ಪಠ್ಯಕ್ರಮಗಳಲ್ಲೊಂದಾದ್ದರಿಂದ ಉಪಾಧ್ಯಾಯರುಗಳು ಮಕ್ಕಳನ್ನು ಬಯಲಿಗೆ ಪ್ರಕೃತಿ ಅಧ್ಯಯನಕ್ಕಾಗಿ ಕರೆದುಕೊಂಡು ಹೋಗಿ ಅವರಲ್ಲಿ ಪ್ರಚೋದನೆಯನ್ನುಂಟು ಮಾಡುತ್ತಿದ್ದರು. ಯೋಹಾನ್ ಪ್ರಕೃತಿಯಲ್ಲಿ ಕಂಡುಬಂದ ಕೆಲವು ವಿಚಿತ್ರ ವಿಷಯಗಳನ್ನು ಕುರಿತು ತನ್ನ ತಂದೆತಾಯಿಗಳ ಜೊತೆಯಲ್ಲೂ ಗುರುಹಿರಿಯರ ಜೊತೆಯಲ್ಲೂ ಚರ್ಚಿಸುತ್ತಿದ್ದನಲ್ಲದೆ ಇವಕ್ಕೆ ಕಾರಣಗಳನ್ನು ಕಂಡುಹಿಡಿಯುವ ದಿಸೆಯಲ್ಲಿ ಯೋಚಿಸುತ್ತಿದ್ದ. ಯಾವುದೇ ಗಿಡದ ಆಕಾರ, ಬಣ್ಣ, ಬೀಜಗಳ ಆಕಾರ, ಹೂಗಳ ವಿನ್ಯಾಸ, ಇವುಗಳಿಗೆ ಏನು ಕಾರಣ, ಪ್ರೇರಕಗಳಾವುವು ಮುಂತಾದ ವಿಷಯಗಳು ಯೋಹಾನನನ್ನು ಕಾಡುತ್ತಿದ್ದವು.

ಶಾಲೆಯ ಆಧ್ಯಾಪಕರು ಯೋಹಾನನ ಮೇಲ್ಮಟ್ಟದ ಆಸಕ್ತಿಯನ್ನೂ ಪ್ರತಿಭೆಯನ್ನೂ ಗಮನಿಸಿ ತಂದೆತಾಯಿಗಳಿಗೆ ಸಲಹೆ ನೀಡಿ ಪಕ್ಕದ ಊರಾದ ಲೈಪ್‌ನಿಕ್ ಎಂಬಲ್ಲಿಯ ಶಾಲೆಗೆ ಸೇರಿಸಲು ಸಲಹೆ ನೀಡಿದರು. ಲೈಪ್‌ನಿಕ್‌ನ ಶಾಲೆಯಲ್ಲಿ ಎರಡು ವರ್ಷಗಳ ಕಾಲ ವಿದ್ಯಾಭ್ಯಾಸ ನಡೆಸಿ ಪ್ರಥಮದರ್ಜೆಯಲ್ಲಿ ತೇರ್ಗಡೆ ಹೊಂದಿದ. ಇಂಥ ಪ್ರತಿಭಾವಂತ ವಿದ್ಯಾರ್ಥಿಯ ಮುನ್ನಡೆಗೆ ತೊಂದರೆ ಉಂಟಾಗಬಾರದೆಂದು ಯೋಹಾನನ ತಂದೆತಾಯಿಗಳು ಟ್ರೊಪೌ ಎಂಬ ಊರಿಗೆ ಹೆಚ್ಚಿನ ವಿದ್ಯಾರ್ಜನೆಗಾಗಿ ಕಳುಹಿಸಿಕೊಟ್ಟರು. ಈ ಊರಿನ ಈಗಿನ ಹೆಸರು ಪ್ರೇರೊ. ಮನೆಯ ಆರ್ಥಿಕಸ್ಥಿತಿ ಅಷ್ಟು ಉತ್ತಮವಾಗಿರಲಿಲ್ಲವಾದ್ದರಿಂದ ಯೋಹಾನ ಬಲು ಕಷ್ಟದಿಂದ ವಿದ್ಯಾಭ್ಯಾಸ ಮಾಡಬೇಕಾಯಿತು. ಕಾಲಕಾಲಕ್ಕೆ ಆಹಾರವಿಲ್ಲದೆ ದೇಹ ಕೃಶವಾಯಿತು. ಅನಾರೋಗ್ಯ ನಿಮಿತ್ತ ಹುಟ್ಟೂರಿಗೆ ಹೋಗಿ ಸುಧಾರಿಸಿಕೊಳ್ಳುತ್ತಿದ್ದ. ಈ ಮಧ್ಯೆ, ಯೋಹಾನನ ತಂದೆ ಅಪಘಾತಕ್ಕೆ ಒಳಗಾಗಿ, ಅಂಗಹೀನನಾದ್ದರಿಂದ ಸಂಸಾರಕ್ಕೆ ಇದ್ದ ಸಂಪಾದನೆಯೂ ಕುಂಠಿತವಾಯಿತು. ಇಷ್ಟೆಲ್ಲ ಕಷ್ಟವನ್ನು ಎದುರಿಸಿ ಛಲವನ್ನು ಬಿಡದೆ ಯೋಹಾನ್, ಕೆಲವು ವಿದ್ಯಾರ್ಥಿಗಳಿಗೆ ಪಾಠ ಹೇಳಿ ಹಣವನ್ನು ಸಂಪಾದಿಸಿ ವಿದ್ಯಾರ್ಜನೆಯನ್ನು ಬಿಡದೆ ಮುಂದುವರಿಸಿದನಲ್ಲದೆ 1840ರಲ್ಲಿ ನಡೆದ ಪ್ರೌಢಶಾಲಾ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಸಿ ತೇರ್ಗಡೆ ಹೊಂದಿದ. ವಿದ್ಯಾಭ್ಯಾಸ ಮುಂದುವರಿಸಲು ಆಕಾಂಕ್ಷೆಯಿದ್ದರೂ ಅನುಕೂಲವಿರಲಿಲ್ಲ. ಇಂಥ ಸಮಯದಲ್ಲಿ ಯೋಹಾನನ ತಂಗಿಯಾದ ತೆರೇಸಿಯ, ಅಣ್ಣನ ಆಸೆ ಮಣ್ಣುಪಾಲಾಗಲು ಬಿಡದೆ, ತನ್ನ ವರದಕ್ಷಿಣೆಗಾಗಿ ತಂದೆ ಕೊಟ್ಟಿದ್ದ ಕುಟುಂಬದ ಸ್ಥಿರ ಆಸ್ತಿಯ ಭಾಗವನ್ನು ವಿತರಣೆ ಮಾಡಿ, ಓದನ್ನು ಮುಂದುವರಿಸಲು ಸಹಾಯಮಾಡಿದಳು. ಓಲ್‌ಮಟ್ಸ್ ಎಂಬ ಊರಿನಲ್ಲಿದ್ದ (ಈಗಿನ ಹೆಸರು ಓಲೋಮಕ್) ತತ್ತ್ವಶಾಸ್ತ್ರಾಧ್ಯಯನ ಸಂಸ್ಥೆಗೆ ಸೇರಿಕೊಂಡ. ಬಡತನ ಇಲ್ಲಿಯೂ ಕಾಡಿತು. ಇದರಿಂದ ಬೇಸರಗೊಂಡ ಯೋಹಾನ್ ಈ ಸಮಸ್ಯೆಯನ್ನು ಬಗೆಹರಿಸಲು ಕೆಲಸ ಹಿಡಿಯುವುದೇ ಯುಕ್ತ ಎಂದು ಯೋಚಿಸಿದ. ಮನದ ತೊಳಲಾಟವನ್ನು ಗುರುಗಳಾದ ಫ್ರೈಡ್ರಿಜ್ ಫ್ರಾನ್ಸ್‌ರವರಲ್ಲಿ ತೋಡಿಕೊಂಡಾಗ ಕ್ರೈಸ್ತಸನ್ಯಾಸಿ ಜೀವನವೇ ತಕ್ಕುದೆಂದು ಬುದ್ಧಿವಾದ ಹೇಳಿದರು. ಗುರುಗಳ ಬಯಕೆಯಂತೆ ಬ್ರೂಯಿನ್‌ನಲ್ಲಿದ್ದ ಸೇಂಟ್ ತಾಮಸ್‌ರ ಕ್ರೈಸ್ತಮಠವನ್ನು ಪ್ರತಿಜ್ಞಾಪೂರ್ವಕವಾಗಿ ಸ್ವೀಕರಿಸಿ ಅಗಸ್ಟೀನಿಯನ್ ಪಂಥದ ಶಿಷ್ಯನಾದ. ಆಗ ಈತನಿಗೆ ಕೇವಲ ಇಪ್ಪತ್ತೊಂದು ವರ್ಷ ವಯಸ್ಸು. ಇಲ್ಲಿ ನಾಲ್ಕು ವರ್ಷಗಳ ಕಾಲ ಶ್ರದ್ಧಾಪೂರ್ವಕ, ಧಾರ್ಮಿಕಜೀವನ ನಡೆಸಿ ವಿಧಿಪೂರ್ವಕವಾಗಿ ಕ್ರೈಸ್ತ ಸಂನ್ಯಾಸದೀಕ್ಷೆಯನ್ನು ಪಡೆದು ಗ್ರೆಗೊರ್ ಎಂಬ ನಾಮಾಂಕಿತ ಪಡೆದ. ಕ್ರೈಸ್ತ ಪಾದ್ರಿಯಾಗಿದ್ದರೂ ಉಪಾಧ್ಯಾಯ ವೃತ್ತಿಯ ಕಡೆಗೆ ಈತನ ಒಲವು. ಒಂದು ಪ್ರೌಢಶಾಲೆಯಲ್ಲಿ ಉಪಾಧ್ಯಾಯನಾಗಿ ಸೇವೆ ಸಲ್ಲಿಸಲು ಅವಕಾಶ ಒದಗಿತು. ಸೌಜನ್ಯ, ಸ್ನೇಹಪರತೆ, ಕಾರ್ಯತತ್ಪರತೆಯಿಂದ ಎಲ್ಲರ ಮನವನ್ನು ಸೆಳೆದ. ಸಹೋದ್ಯೋಗಿ ಪ್ರಚೋದನೆಯಿಂದ ಬೋಧಕ ವೃತ್ತಿಯ ಅರ್ಹತಾಪರೀಕ್ಷೆಗೆ ಕುಳಿತುಕೊಳ್ಳಲು ನಿರ್ಧರಿಸಿದ. ಆದರೆ ಪ್ರಯತ್ನ ಸಫಲವಾಗಲಿಲ್ಲ. ಮೆಂಡಲನನ್ನು ಪರೀಕ್ಷಿಸಿದ ಪರಿಣತರು ಆತನಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಗಮನಿಸಿ ವಿಶ್ವವಿದ್ಯಾಲಯ ತರಬೇತಿಗೆ ಕಳುಹಿಸಬೇಕೆಂದು ಸಲಹೆ ನೀಡಿ ಮುಖ್ಯಾಧಿಕಾರಿಯ ಮನ ಒಲಿಸಿದರು. ಇದರಿಂದಾಗಿ 1851ರಿಂದ ಎರಡು ವರ್ಷಗಳ ಕಾಲ ಭೌತವಿಜ್ಞಾನ, ಗಣಿತವಿಜ್ಞಾನ ಮತ್ತು ಪ್ರಕೃತಿವಿಜ್ಞಾನಗಳ ಅಧ್ಯಯನ ಮುಗಿಸಿ ಹಿಂತಿರುಗಿ ಪುನಃ ಅಧ್ಯಾಪಕ ವೃತ್ತಿಯನ್ನು ಹಿಡಿದ. 1856ರಲ್ಲಿ ಪುನಃ ಬೋಧಕ ವೃತ್ತಿಯ ಅರ್ಹತಾ ಪರೀಕ್ಷೆಗೆ ಕುಳಿತು ಅನುತ್ತೀರ್ಣನಾದ. ಆದರೂ ಇವನ ಪ್ರತಿಭೆಯನ್ನು ಗುರುತಿಸಿದ ಶಾಲಾ ಸಂಸ್ಥೆಯ ಮುಖ್ಯರು ಬೋಧಕವೃತ್ತಿಯಲ್ಲಿ ಉಳಿಯಲು ಅವಕಾಶ ಕೊಟ್ಟರು. ಇದರಿಂದ ಮೆಂಡಲನು ಜೀವನದಲ್ಲಿ ಬಯಸಿದ ಶಾಂತಿ ಮತ್ತು ಸುಖ ಸಿಕ್ಕಿತು.

ಉಪಾಧ್ಯಾಯ ವೃತ್ತಿಯಲ್ಲಿ ಮೆಂಡಲನಿಗೆ ಹೆಚ್ಚು ವಿರಾಮ ದೊರೆಯುತ್ತಿದ್ದುದರಿಂದ ತನ್ನ ಮನದಲ್ಲಿ ಪ್ರಚೋದನೆಗೊಳ್ಳುತ್ತಿದ್ದ ಅದ್ಭುತ ಪ್ರಕೃತಿಲೀಲೆಯ ಸಮಸ್ಯೆಗಳ ಅಧ್ಯಯನ ನಡೆಸಲು ಅವಕಾಶವಾಯಿತು. ತಾನು ವಾಸವಾಡುತ್ತಿದ್ದ ಕ್ರೈಸ್ತಮಠವೇ ಪ್ರಯೋಗಶಾಲೆಯಾಯಿತು. ಅಲ್ಲಿಯೇ ಮಿಶ್ರತಳಿ ಮತ್ತು ಆನುವಂಶೀಯತೆ ಬಗ್ಗೆ ವಿಶೇಷ ಪ್ರಯೋಗಗಳನ್ನು ನಡೆಸಿದ. ಈ ಪ್ರಯೋಗಗಳಿಗೆ ಬಟಾಣಿ ಗಿಡವೇ ಬಹಳ ಅನುಕೂಲವಾದದ್ದು ಎಂದು ಯೋಚಿಸಿ, ಈ ಗಿಡವನ್ನು ಉಪಯೋಗಿಸಿ ಪ್ರಯೋಗಗಳನ್ನು ನಡೆಸಿದ. ಎಂಟುವರ್ಷಗಳ ಕಾಲ (1856–64) ಪ್ರಯೋಗ ನಡೆಸಿ ಪ್ರತಿಯೊಂದು ಪೀಳಿಗೆಯ ಪ್ರತಿಯೊಂದು ಗಿಡದ ಗುಣ ವಿಶೇಷವನ್ನೂ ಪರೀಕ್ಷಿಸಿ, ನಿಖರವಾದ ಅಂಕಿಅಂಶಗಳನ್ನು ಸಂಗ್ರಹಿಸಿ, ಅವನ್ನು ಗಣಿತಾತ್ಮಕ ಸೂತ್ರಗಳಿಗೆ ಅಳವಡಿಸಿಕೊಂಡು ಆನುವಂಶೀಯತೆಯ ಎರಡು ಮೂಲಭೂತ ನಿಯಮಗಳನ್ನು ನಿರೂಪಿಸಿದ.

1851ರಲ್ಲಿ ಪ್ರಕೃತಿವಿಜ್ಞಾನ ಸಂಘ ಸ್ಥಾಪನೆಯಾಗಿತ್ತು. ಒಂದು ದಿನ ಮೆಂಡಲನ ಭಾಷಣವನ್ನು ಅಲ್ಲಿ ಏರ್ಪಡಿಸಿದ್ದರು. ಸಸ್ಯಗಳಲ್ಲಿ ತಳಿಮಿಶ್ರಣ ಪ್ರಯೋಗ ಪರೀಕ್ಷೆಗಳು ಮತ್ತು ತಳಿಮಿಶ್ರಣ ಪ್ರಯೋಗ ಫಲಿತಾಂಶಗಳಿಂದ ಕಂಡ ಆನುವಂಶೀಯತೆಯ ನಿಯಮಗಳು ಎಂಬ ವಿಷಯಗಳ ಮೇಲೆ ಭಾಷಣ ಮಾಡಿದ. ಇವನ ಭಾಷಣಗಳು ಸಂಘದ ವಾರ್ಷಿಕ ವರದಿಯಲ್ಲಿ ಪ್ರಕಟವಾದುವು. ಅನಂತರ ಇವನು ಮಠದ ಮುಖ್ಯಾಧಿಕಾರಿಯಾದ. ಸಮಯಾಭಾವದಿಂದ ತಳೀಕರಣ ಕುರಿತ ಕೆಲಸ ಕುಂಠಿತವಾಯಿತು. ಈತ ಬದುಕಿರುವ ತನಕ ಈತನ ಸಂಶೋಧನೆ ಮೂಲೆ ಸೇರಿ ಮರೆತುಹೋದುದರಿಂದ ಈತನ ವೈಜ್ಞಾನಿಕ ಕೊಡುಗೆಯನ್ನು ಯಾರೂ ಗುರುತಿಸಲಿಲ್ಲ. 1884 ಜನವರಿ 4ರಂದು ಈತ ಸಾವನ್ನಪ್ಪಿದ. 1900ರಲ್ಲಿ ಹಾಲೆಂಡಿನ ಹ್ಯೂಗೋಡಿ ವ್ರೀಸ್‌ನೆಂಬ ವಿಜ್ಞಾನಿ ಸಸ್ಯದ ಮಿಶ್ರತಳಿಗಳು ಎಂಬ ಗ್ರಂಥವನ್ನು ಓದುತ್ತಿದ್ದಾಗ, ತನ್ನ ಫಲಿತಾಂಶಗಳನ್ನೇ ಹೋಲುತ್ತಿದ್ದ ಮೆಂಡಲನ ದತ್ತಾಂಶಗಳನ್ನು ಕಂಡು, ತಾನು ಕಂಡ ಆನುವಂಶೀಯತೆಯ ನಿಯಮಗಳನ್ನೇ ಮೆಂಡಲನು 35 ವರ್ಷಗಳ ಹಿಂದೆ ಆವಿಷ್ಕರಿಸಿದ್ದರಿಂದ ಅವನಿಗೆ ಮಾನ್ಯತೆ ಕೊಟ್ಟು, ಆ ವಿಷಯವನ್ನು ವೈಜ್ಞಾನಿಕ ಪತ್ರಿಕೆಯಲ್ಲಿ ಪ್ರಕಟಿಸಿದ. ಮೆಂಡಲ್ ಆವಿಷ್ಕರಿಸಿದ ಆನುವಂಶೀಯತೆಯ ನಿಯಮಗಳು ಮೆಂಡಲ್ ನಿಯಮಗಳು ಎಂದು ಹೆಸರಾದುವು.

ಪ್ರಾರಂಭದಲ್ಲಿ ಕೇವಲ ಕಲೆಯಾಗಿದ್ದ ತಳೀಕರಣಶಾಸ್ತ್ರಕ್ಕೆ ಮೆಂಡಲನ ಪ್ರಯೋಗಗಳಿಂದ ವೈಜ್ಞಾನಿಕ ತಳಹದಿ ದೊರೆತಂತಾಗಿ ತಳಿ ಸುಧಾರಣೆಗೆ ನೇರ ಹಾದಿ ರೂಪುಗೊಂಡಿತು. ಈತನಿಗೆ ಆಧುನಿಕ ತಳಿವಿಜ್ಞಾನದ ಪಿತಾಮಹ ಎಂದೂ ಹೆಸರು ದೊರಕಿತು. ನೋಡಿ : ಮೆಂಡಲನ ನಿಯಮಗಳು)

***

**ಮೆಂಡಲ್, ಲೇಫೇಯೆಟ್ ಬೆನೆಡಿಕ್ಟ್:** 1872–1935. ಅಮೆರಿಕದ ಶರೀರ ಕ್ರಿಯಾ ರಸಾಯನವಿಜ್ಞಾನಿ (ಫಿಸಿಯೊಲಾಜಿಕಲ್ ಕೆಮಿಸ್ಟ್). ಜೈವಿಕ ಪೋಷಣೆಯಲ್ಲಿ ಪ್ರೋಟೀನುಗಳು ಮತ್ತು ಜೀವಸತ್ವಗಳ ಪ್ರಾಮುಖ್ಯವನ್ನು ಕುರಿತು ವಿಶೇಷ ಪ್ರಾಯೋಗಿಕ ವ್ಯಾಸಂಗ ನಡೆಸಿದವ. ಜನಿಸಿದ್ದು (5 ಫೆಬ್ರುವರಿ 1872) ಅಮೆರಿಕದ ನ್ಯೂಯಾರ್ಕ್ ರಾಜ್ಯದ ಡೆಲ್ಲಿ ಎಂಬಲ್ಲಿ.

ಇವನ ತಂದೆ ಬೆನೆಡಿಕ್ಟ್ ಮೆಂಡಲ್ ವರ್ತಕ. ತಾಯಿ ಪಾಲೀನ್ ಉಲ್‌ಮನ್. ಇಬ್ಬರೂ ಮೂಲತಃ ಜರ್ಮನರಾಗಿದ್ದು ಅಮೆರಿಕಕ್ಕೆ ವಲಸೆ ಬಂದು ನ್ಯೂಯಾರ್ಕಿನ ಡೆಲ್ಲಿ ಎಂಬಲ್ಲಿ ನೆಲೆಸಿದ್ದರು. ಮೆಂಡಲನ ವಿದ್ಯಾಭ್ಯಾಸ ಮಾಧ್ಯಮಿಕ ಹಂತದವರೆಗೆ ಇಲ್ಲಿ ಜರುಗಿತು. ನ್ಯೂಯಾರ್ಕ್ ರಾಜ್ಯದಿಂದ ಯೇಲ್ ವಿಶ್ವವಿದ್ಯಾಲಯಕ್ಕೆ ಆಯ್ಕೆ ಮಾಡಲು ನಡೆದ ಸ್ಪರ್ಧಾಪರೀಕ್ಷೆಯಲ್ಲಿ ಉತ್ತೀರ್ಣನಾಗಿ ವಿದ್ಯಾರ್ಥಿವೇತನ ಪಡೆದು ಮೆಂಡಲ್ 1891ರಲ್ಲಿ ಯೇಲ್ ವಿಶ್ವವಿದ್ಯಾಲಯದ ಪದವೀಧರನಾದ. ಆ ಕೂಡಲೆ ಅಮೆರಿಕದ ಷೆಫೀಲ್ಡ್ ವಿಜ್ಞಾನ ಶಾಲೆಯಲ್ಲಿ ರಸ್ಸೆಲ್ ಎಚ್. ಚಿಟ್ಟೆಂಡೆನ್ ಎಂಬ ವಿಜ್ಞಾನಿಯ ನೇತೃತ್ವದಲ್ಲಿ ಶರೀರಕ್ರಿಯಾ ರಸಾಯನ ವಿಜ್ಞಾನದಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿವೇತನ ದೊರಕಿದ್ದರಿಂದ ಅಲ್ಲಿಗೆ ತೆರಳಿದ. ಪೂರ್ವಭಾವಿ ವೈಜ್ಞಾನಿಕ ಶಿಕ್ಷಣವಾಗಲಿ ಪ್ರಾಯೋಗಿಕ ವ್ಯಾಸಂಗದ ಅನುಭವವಾಗಲಿ ಇವನಿಗೆ ಇರದಿದ್ದರೂ ಕಷ್ಟಪಟ್ಟು ಅಲ್ಲಿ ಪ್ರಾಯೋಗಿಕ ವ್ಯಾಸಂಗ ನಡೆಸಿ ಕೇವಲ 3 ವರ್ಷಗಳಲ್ಲಿ ಪಿಎಚ್.ಡಿ. ಪದವಿ ಪಡೆದ. ಸೆಣಬಿನ ಬೀಜದಿಂದ (ಹಂಪ್‌ಸೀಡ್) ಇಡೆಸ್ಟಿನ್ ಎಂಬ ಪ್ರೋಟೀನನ್ನು ಶುದ್ಧರೂಪದ ಹರಳುಗಳಾಗಿ ಪ್ರತ್ಯೇಕಿಸಿ, ಅದರ ರಾಸಾಯನಿಕ ವಿಶ್ಲೇಷಣೆ ಮಾಡಿದುದು ಇವನ ವ್ಯಾಸಂಗದ ವಿಷಯವಾಗಿತ್ತು.

ಮೆಂಡಲ್ ಷೆಫೀಲ್ಡ್ ಶಾಲೆಗೆ ವಿಜ್ಞಾನಿಯಾಗಿ ಸೇರಿ ಒಂದು ವರ್ಷ ಅವಧಿಯ ಉನ್ನತವ್ಯಾಸಂಗಕ್ಕಾಗಿ ಜರ್ಮನಿಗೆ ತೆರಳಿದ (1893). ಬ್ರೆಸ್‌ಲೋವ್‌ನಲ್ಲಿ ಹೀಡನ್‌ಹೇಯ್ನ್ ಎಂಬವನೊಂದಿಗೆ ಪ್ರಾಯೋಗಿಕ ಶರೀರಕ್ರಿಯಾ ವಿಜ್ಞಾನದಲ್ಲೂ ಫ್ರೀಬರ್ಗ್‌ಮ್‌ನಲ್ಲಿ ಬೌಮನ್ ಎಂಬವನೊಂದಿಗೆ ಕ್ರಿಯಾಟಿನಿನ್, ಪ್ಯೂರಿನ್, ಪಿರಮಿಡಿನ್ ಮುಂತಾದ ಜೈವಿಕ ರಾಸಾಯನಿಕ ಚಯಾಪಚಯ ವಿಷಯದಲ್ಲೂ ಪರಿಣತಿ ಪಡೆದು ಷೆಫೀಲ್ಡ್‌ಗೆ ಹಿಂದಿರುಗಿದ. ಅದೇ ಶಾಲೆಯಲ್ಲಿ 1897ರಲ್ಲಿ ಸಹಾಯಕ ಪ್ರಾಧ್ಯಾಪಕನಾಗಿಯೂ 1903ರಲ್ಲಿ ಸ್ಟರ್ಲಿಂಗ್ ಪ್ರಾಧ್ಯಾಪಕನಾಗಿಯೂ ಬಡ್ತಿ ಪಡೆದ. ಮುಂದೆ 1921ರಲ್ಲಿ ಯೇಲ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ನೇಮಕಗೊಂಡ. ಅಲ್ಲಿ ಈತ ಮೇಧಾವಿ, ಪ್ರಚೋದಕ ಹಾಗೂ ಪ್ರಭಾವ ಪೂರ್ವಕ ಆಚಾರ್ಯ ಎನಿಸಿಕೊಂಡ. ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಇಂಗ್ಲಿಷ್ ಭಾಷಾಶೈಲಿಯನ್ನು ಕಾಯ್ದುಕೊಂಡಿರಬೇಕೆಂದೂ ತಮ್ಮ ಪ್ರಯೋಗ ಫಲಿತಾಂಶವನ್ನು ಪ್ರಕಟಿಸುವಾಗ ನಿಖರವಾಗಿ ನಿರೂಪಿಸಬೇಕೆಂದೂ ಒತ್ತಿ ಒತ್ತಿ ಹೇಳುತ್ತಿದ್ದುದುಂಟು. ಶಿಷ್ಯರಿಗೆ ಸಲಹೆ ಸಹಾಯಗಳನ್ನು ನೀಡಲು ಸದಾ ಸಿದ್ಧನಾಗಿದ್ದನಲ್ಲದೆ ಅನಂತರವೂ ಅವರ ಜೀವನ ಮೇಲ್ಮೆಯಲ್ಲಿ ಆಸಕ್ತನಾಗಿದ್ದ ಕೂಡ. ಹೀಗಾಗಿ ಎಲ್ಲರ ವಿಶ್ವಾಸಕ್ಕೆ ಈತ ಪಾತ್ರನಾಗಿದ್ದ.

1905ರ ಅನಂತರ ತಾಮಸ್ ಆಸ್‌ಬೋರ್ನ್ ಎಂಬ ಮತ್ತೊಬ್ಬ ಮೇಧಾವಿ ವಿಜ್ಞಾನಿಯೊಡನೆ ಆಹಾರದ ಪೌಷ್ಟಿಕಾಂಶಗಳ ವಿಷಯವಾಗಿ ಮೆಂಡಲ್ ವ್ಯಾಸಂಗ ಕೈಗೊಂಡ. ಬಿಳಿಇಲಿಗಳನ್ನು ಪ್ರಯೋಗಕ್ಕೆ ಈಡುಮಾಡಿ ಅವಕ್ಕೆ ಶುದ್ಧ ರೂಪದ ಪ್ರೋಟೀನು, ಪಿಷ್ಟ ಹಾಗೂ ಕೊಬ್ಬಿನ ಮಿಶ್ರಣವನ್ನು ಆಹಾರವಾಗಿ ಕೊಟ್ಟಾಗ ಅವು ಬೆಳೆಯಲಾರವೆಂದೂ ಬದುಕಿರಲಾರವೆಂದೂ, ಆದರೆ ಮಿಶ್ರಣಕ್ಕೆ ಸ್ವಲ್ಪ ಹಾಲನ್ನು ಸೇರಿಸಿದರೆ ಅವು ಸಹಜವಾಗಿ ಬದುಕುತ್ತವೆಂದೂ ಈ ವ್ಯಾಸಂಗದಿಂದ ತಿಳಿದು ಬಂತು. ಇಂಥದೇ ವ್ಯಾಸಂಗ ಅಮೆರಿಕದಲ್ಲಿ ಬೇರೆಡೆ ಮೆಕ್‌ಕಾಲಮ್ ಮುಂತಾದವರಿಂದಲೂ, ಯುರೋಪಿನಲ್ಲಿ ಕೋಪನ್‌ಹೇಗನ್, ಬೇಸಲ್ ಮುಂತಾದ ಸ್ಥಳಗಳ ವಿಜ್ಞಾನಿಗಳಿಂದಲೂ ಜರುಗಿತ್ತು. ಪ್ರಯೋಗಕ್ಕೆ ಈಡಾಗಿರುವ ಇಲಿಗಳ ಬೆಳವಣಿಗೆ ಮುಂದುವರಿದು ಅವು ಜೀವದಿಂದ ಇರಬೇಕಾದರೆ ಅವಕ್ಕೆ ನೀಡುವ ಆಹಾರದಲ್ಲಿ ಪ್ರೋಟೀನು, ಪಿಷ್ಟ ಮತ್ತು ಕೊಬ್ಬಿನ ಅಂಶಗಳಲ್ಲದೆ ಕಿಂಚಿತ್ತಾಗಿ ಇನ್ನು ಏನೋ ಅವ್ಯಕ್ತ ಅಂಶಗಳು ಇರಬೇಕೆಂಬುದು ಪತ್ತೆ ಆಯಿತು. ಹಾಲಿನ ಕೊಬ್ಬಿನಲ್ಲಿ ಲೀನವಾಗಿ, ಅಲ್ಪಪ್ರಮಾಣದಲ್ಲಿರುವ ಇಂಥ ಅಂಶ ಒಂದನ್ನು ಆಸ್‌ಬೋರ್ನ್ ಮತ್ತು ಮೆಂಡಲ್ಲರು ಪ್ರತ್ಯೇಕಿಸಿದರು. ಆದರೆ ಹಲವು ವಾರಗಳ ಮುಂಚೆಯೇ ಮೆಕ್‌ಕಾಲಮ್ ಈ ವಸ್ತುವನ್ನು ಪ್ರತ್ಯೇಕಿಸಿದ್ದ ಹಾಗೂ ಅದನ್ನು ಪ್ರಕಟಿಸಿಯೂ ಇದ್ದ. ಆದ್ದರಿಂದ ಪ್ರಥಮ ಆವಿಷ್ಕರಣದ ಹಕ್ಕು ಮೆಕ್‌ಕಾಲಮ್‌ಗೇ ಸಂದಿತು. ಇದಕ್ಕೆ ಈಗಿರುವ ಹೊಸ ಹೆಸರು ಎ–ಜೀವಸತ್ವ.

ಮೆಂಡಲ್ ಪ್ರೋಟೀನುಗಳ ಪೌಷ್ಟಿಕತೆಯ ವಿಚಾರವಾಗಿಯೂ ಸಂಶೋಧನೆ ನಡೆಸಿ ಲೈಸಿನ್ ಮತ್ತು ಟ್ರಿಪ್ಟೋಫೇನ್ ಎಂಬ ಅಮೈನೋ ಆಮ್ಲಗಳು ಲೋಪವಾಗಿರುವ ಪ್ರೋಟೀನುಗಳು ಉತ್ತಮ ಪೌಷ್ಟಿಕಗಳಲ್ಲವೆಂದೂ, ಬೆಳವಣಿಗೆಗೆ ಈ ಆಮ್ಲಗಳು ಮತ್ತು ಇನ್ನಿತರ ಕೆಲವು ಅಮೈನೋ ಆಮ್ಲಗಳು ಇದ್ದೇ ತೀರಬೇಕೆಂದೂ, ಇಂಥ ಅತ್ಯಗತ್ಯ ಅಮೈನೋ ಆಮ್ಲಗಳಿರುವ (ಎಸ್ಸೆನ್ಷಿಯಲ್ ಅಮೈನೋ ಆಸಿಡ್ಸ್) ಪ್ರೋಟೀನುಗಳು ಮಾತ್ರವೇ ಉತ್ತಮ ಪೌಷ್ಟಿಕಗಳೆಂದೂ ವಿಶದಪಡಿಸಿದ.

ಮೆಂಡಲನ ಸಂಶೋಧನೆಗಳಿಂದ ಅಲ್ಲಿಯ ತನಕವೂ ಬೆಳವಣಿಗೆಯ ಹಾಗೂ ಅದಕ್ಕೆ ಅಗತ್ಯ ಆಧಾರವಾಗಿರುವ ಆಹಾರಾಂಶಗಳ ವಿಚಾರವಾಗಿ ಕವಿದಿದ್ದ ಅನಿರ್ದಿಷ್ಟತೆ ಕಳೆದು ಪೌಷ್ಟಿಕ ವಿಚಾರಗಳು ಸುಭದ್ರ ವೈಜ್ಞಾನಿಕ ತಳಹದಿಯ ಮೇಲೆ ಊರ್ಜಿತವಾದುವು. ಮೆಂಡಲ್ 1935 ಡಿಸೆಂಬರ್ 9ರಂದು ನಿಧನನಾದ. ಅಲ್ಲಿಯ ತನಕವೂ ಈತ ಯೇಲ್ ವಿಶ್ವವಿದ್ಯಾಲಯದಲ್ಲಿ ಈ ವಿಚಾರಗಳಲ್ಲಿ ಹೆಚ್ಚಿನ ಸಂಶೋಧನೆ ಹಾಗೂ ಪಾಠಪ್ರವಚನಗಳಲ್ಲಿ ನಿರತನಾಗಿದ್ದ. ***

**ಮೆಂಡಲನ ನಿಯಮಗಳು:** ಜೀವಿಗಳಲ್ಲಿಯ ಆನುವಂಶೀಯತೆಯನ್ನು ಕುರಿತಂತೆ 1857 – 1864ರ ಸುಮಾರಿಗೆ ಗ್ರೆಗೊರ್ ಮೆಂಡಲ್ ಎಂಬಾತ ಬಟಾಣಿಗಿಡಗಳ ಮೇಲಿನ ಪ್ರಯೋಗಗಳ ಆಧಾರದ ಮೇಲೆ ಪ್ರತಿಪಾದಿಸಿದ ಮೂಲಭೂತ ನಿಯಮಗಳು. ಈತ ಗತಿಸಿದ 16 ವರ್ಷಗಳ ತರುವಾಯ 1900ರಲ್ಲಿ ಈ ನಿಯಮಗಳ ಮಹತ್ತ್ವವನ್ನು ವಿಜ್ಞಾನಿಗಳು ಅರಿತು ಬೆಳಕಿಗೆ ತಂದರು. ಮೆಂಡಲನಿಗೂ ಮುಂಚೆ ಕೆಲವು ವಿಜ್ಞಾನಿಗಳು ಆನುವಂಶೀಯತೆಯನ್ನು ಕುರಿತು ಅನೇಕ ಪ್ರಯೋಗಗಳನ್ನು ನಡೆಸಿದ್ದರಾದರೂ ಯಾವ ನಿರ್ದಿಷ್ಟ ತೀರ್ಮಾನಗಳಿಗೂ ಬರಲಾಗಿರಲಿಲ್ಲ. ಏಕೆಂದರೆ ಹಿಂದಿನವರೆಲ್ಲರೂ ಜೀವಿಯ ಹಲವಾರು ಗುಣವಿಶೇಷಗಳನ್ನು ಒಂದೇ ಸಲಕ್ಕೆ ಗಮನಿಸಿ ಅಧ್ಯಯನ ನಡೆಸಿದ್ದರು. ಈ ಕಾರಣವಾಗಿ ಜಟಿಲವಾಗಿ ಹೆಣೆದು ಕೊಂಡಿರುವ ಜೀವಿಯ ಲಕ್ಷಣಗಳ ಆನುವಂಶಿಕ ವರ್ತನೆಯನ್ನು ವಿಶ್ಲೇಷಿಸುವುದು ಅವರಿಗೆ ಸಾಧ್ಯವಾಗಲಿಲ್ಲ. ಹೀಗಾಗಿ ಅವರದು ಕೇವಲ ಒಂದು ವಿಹಂಗಮ ದೃಷ್ಟಿಯಾಗಿತ್ತು. ಇದಲ್ಲದೆ ಅವರ ಅಧ್ಯಯನ ಕೇವಲ ಎರಡು ಅಥವಾ ಮೂರು ಪೀಳಿಗೆಗೆ ಮಾತ್ರ ಸೀಮಿತವಾಗಿತ್ತು. ಇಂಥ ಸಂಶೋಧನೆಗಳಿಂದ ಫಲಿತಾಂಶಗಳು ಅಷ್ಟು ಸ್ಪಷ್ಟವಾಗಿರುತ್ತಿರಲಿಲ್ಲ. ಇದನ್ನೆಲ್ಲ ಮೆಂಡಲನು ಗಮನಿಸಿ ಪ್ರತಿಯೊಂದು ಲಕ್ಷಣವನ್ನು ಎಚ್ಚರಿಕೆಯಿಂದ ಪರೀಕ್ಷಿಸಿ, ಗಿಡಗಳನ್ನು ಎಣಿಸಿ ಒಂದು ನಿಯಮಬದ್ಧವಾದ, ಸುವ್ಯವಸ್ಥಿತವಾದ ಮತ್ತು ಸಮಗ್ರವಾದ ದಾಖಲೆಯನ್ನು ಬರೆದಿಡುತ್ತಿದ್ದ. ತನ್ನ ಪ್ರತಿಯೊಂದು ಪ್ರಯೋಗದಲ್ಲೂ ಏಕರೂಪತೆಯ ಫಲಿತಾಂಶಗಳನ್ನು ನೋಡಿ ಆನುವಂಶೀಯತೆಯ ನಿಯಮಗಳನ್ನು ಕಂಡುಹಿಡಿಯುವ ಸಾಧ್ಯತೆಯನ್ನು ನೋಡುತ್ತಿದ್ದ. ಪ್ರಯೋಗ ಫಲಿತಾಂಶಗಳನ್ನು ಬೀಜಗಣಿತ ರೂಪಕ್ಕೆ ಒರೆಹಚ್ಚಿ ಒಂದೊಂದು ಬಗೆಯ ಅನುಪಾತವನ್ನು ಮತ್ತೊಂದಕ್ಕೆ ಹೋಲಿಸಿ, ತಾಳೆನೋಡಿ ಮೂಲಭೂತವಾದ ಮತ್ತು ಗಣಿತಾತ್ಮಕವಾದ ಸೂತ್ರವನ್ನು ಕಂಡುಹಿಡಿಯುವುದೇ ಆತನ ಗುರಿಯಾಗಿತ್ತು.

ಬಟಾಣಿ ಗಿಡ ಏಕವಾರ್ಷಿಕ ಬೆಳೆಯಾಗಿದ್ದು ಬೇಗ ಫಸಲು ಕೊಡುವ ಸಾಮರ್ಥ್ಯ ಪಡೆದಿತ್ತು. ಅಲ್ಲದೆ ಬಟಾಣಿ ಗಿಡದ ಪುಷ್ಪರಚನೆ ಸ್ವಪರಾಗಾರ್ಪಣೆಗೆ ಹೊಂದಿಕೊಂಡಿದ್ದು ಬೇರಾವುದೇ ಅಜ್ಞಾತ ಮೂಲದ ಪರಕೀಯ ಪರಾಗದಿಂದ ತಳಿಸಂಕರವಾಗದಂತೆ ರಕ್ಷಿತವಾಗಿತ್ತು. ಇವೆರಡು ಕಾರಣಗಳಿಂದ ಮೆಂಡಲ್ ಬಟಾಣಿ ಗಿಡದ ಆಯ್ಕೆ ಉಳಿದವರ ಆಯ್ಕೆಗಿಂತ ಉತ್ಕೃಷ್ಟವಾಗಿತ್ತು.

ತಾಯಿಗಿಡಗಳಾಗಿ ಉಪಯೋಗಿಸಲ್ಪಡುವ ಬಟಾಣಿ ಹೂವಿನಲ್ಲಿ ಸ್ವಕೀಯ ಪರಾಗಾರ್ಪಣೆಯನ್ನು ತಪ್ಪಿಸಲು ಇನ್ನೂ ಪಕ್ವವಾಗದ ಪುಂಕೇಸರಗಳನ್ನು ತೆಗೆದು ಹಾಕಿ ಅನಂತರ ಅದರ ಶಲಾಕಾಗ್ರದ ಮೇಲೆ ಬೇರೊಂದು ತಂದೆಗಿಡದ ಪರಾಗವನ್ನು ಹಚ್ಚಲಾಯಿತು. ಹೀಗೆ ಕೃತಕ ಪರಾಗಾರ್ಪಣೆ ಮಾಡಿದ ಹೂಗಳನ್ನು ಹೊರಗಿನ ಯಾವ ಪರಾಗವೂ ತಲುಪದಂತೆ ಸಂರಕ್ಷಿಸಲಾಗಿತ್ತು. ಇದರಿಂದಾಗಿ ಇಷ್ಟಪಟ್ಟ ಗುಣಗಳಿರುವ ಪುಷ್ಪಪರಾಗವನ್ನು ಅಭಿವೃದ್ಧಿಪಡಿಸಬೇಕಾದ ಗಿಡಕ್ಕೆ ಹಾಯಿಸಬಹುದಾಯಿತು. ಉದಾಹರಣೆಗೆ ಎತ್ತರವಾದ ಗಿಡದ ಪರಾಗವನ್ನು ಕುಳ್ಳ ಗಿಡದ ಹೂವಿನ ಶಲಾಕಾಗ್ರದ ಮೇಲೆ ಕೃತಕವಾಗಿ ತಂದುಹಾಕಬಹುದು. ತತ್ಫಲವಾಗಿ ಪರಿಚಿತ ಗುಣಲಕ್ಷಣಗಳುಳ್ಳ ಗಿಡಗಳನ್ನು ಪಡೆಯಬಹುದು.

ಹೀಗೆ ನಡೆಸಿದ ಕೃತಕ ಪರಾಗಾರ್ಪಣೆಯಿಂದ ಅಂಡಾಶಯಗಳು ಬೀಜಗಳನ್ನು ಉತ್ಪಾದಿಸುವುವು. ಈ ಬೀಜಗಳನ್ನು ಬಿತ್ತಿದಾಗ ಮೊದಲನೆಯ ಪೀಳಿಗೆ ಗಿಡಗಳು ಹುಟ್ಟಿಕೊಳ್ಳುತ್ತವೆ. ಬೀಜಗಳನ್ನು ಪಡೆದು ತಿರುಗಿ ಬಿತ್ತಿದಾಗ ಹುಟ್ಟುವ ಗಿಡಗಳು ಎರಡನೆಯ ಪೀಳಿಗೆ ಗಿಡಗಳೆಂದೂ ಅದೇ ಎರಡನೆಯ ಪೀಳಿಗೆ ಗಿಡಗಳನ್ನು ಬಿತ್ತಿ ಪಡೆಯುವ ಗಿಡಗಳಿಗೆ ಮೂರನೆಯ ಪೀಳಿಗೆ ಗಿಡಗಳೆಂದೂ ಗುರುತಿಸಲಾಗುತ್ತದೆ. ತಳಿಪೀಳಿಗೆಯನ್ನು $F_1, F_2, F_3, F_4$……… ಎಂಬ ಇಂಗ್ಲೀಷ್ ಪದಸಂಕೇತದಿಂದ ಗುರುತಿಸಲಾಗುತ್ತದೆ.

ತಾನು ನಡೆಸಿದ ಪ್ರಯೋಗ ಒಂದರಲ್ಲಿ ಎತ್ತರವಾದ ಬಟಾಣಿ ಗಿಡಗಳನ್ನು, ಗಿಡ್ಡಜಾತಿಯ ಗಿಡಗಳೊಂದಿಗೆ ಅಡ್ಡಹಾಯಿಸಿ ಮೊದಲನೆಯ ಪೀಳಿಗೆ ಬೀಜಗಳನ್ನು ಮೆಂಡಲ್ ಪಡೆದು ಬಿತ್ತಿದ. ಇದರಿಂದ ಹುಟ್ಟಿದ ಗಿಡಗಳೆಲ್ಲವೂ ಮೆಂಡಲ್ ಎಣಿಸಿದಂತೆ ಮಧ್ಯಮಾವರ್ತಿ ಎತ್ತರದ ಗಿಡಗಳಾಗಿರದೆ ಆಶ್ಚರ್ಯಕರವಾಗಿ ಎತ್ತರವಾದ ಗಿಡಗಳಾಗಿದ್ದುವು. ಈ




ಮೆಂಡೆಲನ ಪ್ರತ್ಯೇಕತಾ ನಿಯಮ. ಎತ್ತರದ ಹಾಗೂ ಕುಳ್ಳು ಗಿಡಗಳನ್ನು ಸಂಕರಗೊಳಿಸಿದಾಗ ಎರಡನೇಪೀಳಿಗೆಯಲ್ಲಿ ಅವು 3:1 ಪ್ರಮಾಣದಲ್ಲಿ ದೊರೆಯುತ್ತವೆ




ಮೆಂಡೆಲನು ತನ್ನ ಪ್ರಯೋಗಗಳಿಗೆ ಬಟಾಣಿಗಿಡದಲ್ಲಿ ಆಯ್ಕೆ ಮಾಡಿಕೊಂಡ ಗುಣಗಳು




ಚಿತ್ರ – 1




(ಗುಂಡು ಹಳದಿ =9; ಗುಂಡು ಹಸಿರು=3; ಸುಕ್ಕು ಹಳದಿ=3; ಸುಕ್ಕು ಹಸಿರು=1;)

**ಸ್ವತಂತ್ರ ವಿಂಗಡನಾ ನಿಯಮ.**

ಚಿತ್ರ – 2

ಮೊದಲನೆಯ ಪೀಳಿಗೆಯ ಗಿಡಗಳ ನಡುವೆ ಸ್ವಕೀಯ ಪರಾಗಾರ್ಪಣೆಯಾಗಲು ಅವಕಾಶ ಮಾಡಿಕೊಟ್ಟು ಅನಂತರ ಪಡೆದ ಬೀಜಗಳಿಂದ ಎರಡನೆಯ ಪೀಳಿಗೆಯ ಗಿಡಗಳನ್ನು ಪಡೆದಾಗ ಶೇಕಡಾ 75ರಷ್ಟು ಗಿಡಗಳು ಎತ್ತರವಾಗಿಯೂ, ಶೇಕಡಾ 25ರಷ್ಟು ಗಿಡಗಳು ಕುಳ್ಳಾಗಿಯೂ ಇದ್ದುವು. ಅಂದರೆ ಎತ್ತರವಾದ ಗಿಡ ಮತ್ತು ಕುಳ್ಳಗಿಡಗಳು ಕ್ರಮವಾಗಿ 3:1 ಅನುಪಾತದಲ್ಲಿ ಇದ್ದುವು. ಕುಳ್ಳ ಗಿಡಗಳನ್ನು ಸ್ವಕೀಯ ಪರಾಗಾರ್ಪಣೆಗೆ ಒಳಪಡಿಸಿ ಉತ್ಪಾದಿಸಿದ 3ನೆಯ ಪೀಳಿಗೆ ಬೀಜದಲ್ಲಿ ಎಲ್ಲ ಗಿಡಗಳು ಕುಳ್ಳಾಗಿಯೇ ಇದ್ದುವು. ಮೆಂಡಲ್ ನಡೆಸಿದ ಮೇಲಿನ ಮತ್ತು ಇತರೆ ಕೆಲವು ಪ್ರಯೋಗಗಳಿಂದ ಆನುವಂಶೀಯ ಲಕ್ಷಣಗಳಾದ ಆಕಾರ, ಬಣ್ಣ, ರುಚಿ ಮುಂತಾದುವು ಯಾವುದೊ ಒಂದು ಘಟಕದಿಂದ ನಿರ್ಧರಿತವಾಗುತ್ತವೆ ಎಂಬ ತೀರ್ಮಾನಕ್ಕೆ ಬಂದ. ಎರಡನೆಯ ಪೀಳಿಗೆಯಲ್ಲಿ, ಎತ್ತರದ ಗಿಡ ಮತ್ತು ಕುಳ್ಳಗಿಡಗಳೆರಡು ಬಗೆಯವೂ ಇರುವುದರಿಂದ ಮೊದಲನೆಯ ಪೀಳಿಗೆಯ ಬೀಜಗಳಲ್ಲಿ ಘಟಕಗಳು ಜೋಡಿಯಾಗಿದ್ದು ಎರಡನೆಯ ಪೀಳಿಗೆಯ ಬಿತ್ತನೆಯಲ್ಲಿ ಚದರಿ ಹೋಗಿ ತಿರುಗಿ ಒಂದೊಂದು ಘಟಕವೂ ಪ್ರತ್ಯೇಕವಾಗಿ ಗೋಚರವಾಗುತ್ತದೆ. ಮೊದಲನೆಯ ಪೀಳಿಗೆಯಲ್ಲಿ ಜೋಡಿಯಾಗಿದ್ದ ಘಟಕಗಳು ಎರಡನೆಯ ಪೀಳಿಗೆಯಲ್ಲಿ ಇಬ್ಭಾಗ ಹೊಂದಿ ಎರಡೂ ಘಟಕಗಳು ಪ್ರತ್ಯೇಕ ಅಸ್ತಿತ್ವ ಹೊಂದುತ್ತವೆ. ಎತ್ತರ ಜಾತಿಯ ಬಟಾಣಿಗಿಡವನ್ನು ಗಿಡ್ಡ ಬಟಾಣಿಗಿಡದೊಂದಿಗೆ ಅಡ್ಡಹಾಯಿಸಿದಾಗ ಲಭಿಸುವ ಮೊದಲನೆಯ ಪೀಳಿಗೆಯಲ್ಲಿ ಎಲ್ಲ ಎತ್ತರದ ಗಿಡಗಳೇ ಇರುತ್ತವೆ. ಇದರಲ್ಲಿ ಎತ್ತರತನದ ಘಟಕ ಕುಳ್ಳಗಿನ ಘಟಕದೊಡನೆ ಜೊತೆಗೂಡಿರುತ್ತದೆ. ಆದರೆ ಎತ್ತರತನದ ಘಟಕ ಪ್ರಬಲವಾದ ಘಟಕವಾದ್ದರಿಂದ ಅಪ್ರಬಲ ಘಟಕವಾದ ಕುಳ್ಳುತನವನ್ನು ಮರೆಮಾಡಿ, ಎಲ್ಲ ಗಿಡಗಳೂ ಎತ್ತರವಾಗಿ ಇರುವ ಹಾಗೆ ಆಗುತ್ತದೆ. ಈ ಪೀಳಿಗೆಯ ಬೀಜಗಳನ್ನು ಬಿತ್ತಿದಾಗ ಹುಟ್ಟುವ ಗಿಡಗಳಲ್ಲಿ ಜೊತೆಗೂಡಿದ್ದ ಎತ್ತರತನದ ಘಟಕವೂ ಮತ್ತು ಕುಳ್ಳುತನದ ಘಟಕವೂ ಇಬ್ಭಾಗವಾಗಿ ಹಂಚಿಹೋಗಿ ಎತ್ತರದ ಗಿಡಗಳು ಮತ್ತು ಕುಳ್ಳಗಿನ ಗಿಡಗಳು ಬೇರೆ ಬೇರೆಯಾಗಿ ಕಾಣಿಸಿಕೊಳ್ಳುತ್ತವೆ. ಅಂದರೆ ಪೀಳಿಗೆಯ ಲಕ್ಷಣಗಳ ಸರ್ವಸಾಧ್ಯತೆಯಲ್ಲಿ ಜೊತೆಗೂಡಿದ ಅಥವಾ ಹಂಚಿಹೋಗುವ ನಿಯಮದಿಂದ ಜೀವಿಯ ಲಕ್ಷಣಗಳಿಗೆ ಪ್ರೇರಕವಾದ ಅಂಶ ಅಥವಾ ಘಟಕಗಳಿವೆ ಎಂದು ತಿಳಿದು ಬಂತು. ಇವು ತಂದೆ ತಾಯಿ ಗುಣಲಕ್ಷಣಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಸಾಧನಗಳು. ತಂದೆ ಅಥವಾ ತಾಯಿಯ ಒಂದು ಗೊತ್ತಾದ ಗುಣಲಕ್ಷಣಕ್ಕೆ ಪ್ರೇರಕವಾದ ಘಟಕವನ್ನು ಮುಂದಿನ ಪೀಳಿಗೆಗೆ ಸಾಗಿಸುವುದರಿಂದ ಪ್ರತಿಯೊಂದು ಜೀವಿಯಲ್ಲೂ ಒಂದು ಗುಣಕ್ಕೆ ಸಂಬಂಧಿಸಿದಂತೆ ಎರಡು ಘಟಕಗಳು ಕೂಡಿರುತ್ತವೆ ಎಂಬುದು ವೇದ್ಯ. ಅಂದರೆ ತಂದೆಯಿಂದ ಒಂದು ಘಟಕ ಮತ್ತು ತಾಯಿಯಿಂದ ಒಂದು ಘಟಕ–ಹೀಗೆ ಪಡೆದ ತಳಿಯ ಗುಣಲಕ್ಷಣಗಳು ಈ ಘಟಕಗಳಿಂದ ಕೂಡಿ ಉದ್ಭವವಾಗುತ್ತವೆ. ಘಟಕ ಅಥವಾ ಜೀನ್‌ಗಳು ಆನುವಂಶೀಯತೆಯ ಗುಣಲಕ್ಷಣಗಳನ್ನು ನಿಯಂತ್ರಿಸುತ್ತವೆ ಮತ್ತು ಈ ಘಟಕಗಳು ಒಂದು ಜೋಡಿಯಲ್ಲಿ ಇರುತ್ತವೆ. ಇದೇ ಏಕಮಾನ ಘಟಕ ನಿಯಮ (ಲಾ ಆಫ್ ಯೂನಿಟ್ ಕ್ಯಾರಕ್ಟರ್).

ಪ್ರತಿಯೊಂದು ಜೀವಿಯಲ್ಲೂ ಒಂದೊಂದು ಗುಣಲಕ್ಷಣವನ್ನು ನಿರ್ದೇಶಿಸುವ ಒಂದೊಂದು ಘಟಕವಿರುತ್ತದೆ. ಪ್ರತಿ ಲಕ್ಷಣಕ್ಕೂ ಸಂಬಂಧಿಸಿದಂತೆ ಒಂದು ಜೊತೆ ಘಟಕಗಳಿರುತ್ತವೆ. ಈ ಜೋಡಿ ಘಟಕದಲ್ಲಿ ಒಂದು ತಂದೆಯಿಂದಲೂ ಮತ್ತೊಂದು ತಾಯಿಯಿಂದಲೂ ಬಂದು ಸೇರಿರುತ್ತದೆ. ಒಂದು ಘಟಕ ಪ್ರಬಲವಾಗಿದ್ದರೆ, ಅದು ಮೊದಲನೆಯ ಪೀಳಿಗೆಯಲ್ಲಿ ಪ್ರಕಟಗೊಳ್ಳುತ್ತದೆ. ಗರ್ಭಾಂಕುರತೆ ಕಾಲದಲ್ಲಿ ಒಂದುಗೂಡಿದ್ದ ಘಟಕಗಳು ಪರಾಗ ಮತ್ತು ಅಂಡಕಗಳು ಉತ್ಪಾದನೆಯಾಗುವಾಗ ಪ್ರತ್ಯೇಕಗೊಳ್ಳುತ್ತವೆ. ಹಾಗೆ ಪ್ರತ್ಯೇಕಗೊಂಡ ಪ್ರತಿಘಟಕವೂ ಮೂಲ ಘಟಕದಂತೆಯೇ ತನ್ನ ಗುಣವನ್ನು ಉಳಿಸಿ ಕೊಂಡಿರುತ್ತದೆ. ಇದೇ ಪ್ರತ್ಯೇಕತಾ ನಿಯಮ (ಲಾ ಆಫ್ ಸೆಗ್ರಿಗೇಷನ್).

ಮೆಂಡಲನು ನಡೆಸಿದ ಎತ್ತರದ ಮತ್ತು ಕುಳ್ಳಗಿನ ಬಟಾಣಿಗಿಡದ ಅಡ್ಡಹಾಯ್ಕೆ ಪ್ರಯೋಗದಲ್ಲಿ (ಚಿತ್ರ–1) '*T*' ಎಂಬುದು ಎತ್ತರತನದ ಘಟಕ ಅಥವಾ ಜೀನ್‌ನ ಸಂಕೇತ ಮತ್ತು ಇದು ಎತ್ತರತನವನ್ನು ನಿಯಂತ್ರಿಸುತ್ತದೆ. 't'ಎಂಬುದು ಕುಳ್ಳುತನದ ಘಟಕ ಅಥವಾ ಜೀನ್‌ನ ಸಂಕೇತ ಮತ್ತು ಇದು ಕುಳ್ಳುತನವನ್ನು ನಿಯಂತ್ರಿಸುತ್ತದೆ. '*T*' ಎಂಬ ಇಂಗ್ಲಿಷಿನ ದೊಡ್ಡ ಅಕ್ಷರ ಪ್ರಾಬಲ್ಯಗುಣವನ್ನು ತೋರಿಸುವ ಲಿಪಿ ಸಂಕೇತ. ಅದೇ 't' ಎಂಬ ಇಂಗ್ಲಿಷಿನ ಸಣ್ಣ ಅಕ್ಷರ ಅಪ್ರಬಲವಾದ ಗುಣವನ್ನು ತೋರಿಸುವ ಲಿಪಿಸಂಕೇತ.

ಎತ್ತರತನವುಳ್ಳ ತಂದೆತಾಯಿಯನ್ನು *TT* ಎಂದು ತೋರಿಸುತ್ತಾರೆ. ಏಕೆಂದರೆ ಒಂದು ಘಟಕವು ತಂದೆಯಿಂದಲೂ ಮತ್ತೊಂದು ತಾಯಿಯಿಂದಲೂ ಕೂಡಿಬಂದಿರುತ್ತದೆ. ಆದ್ದರಿಂದ ಅವು ಜೋಡಿಯಲ್ಲಿ ಇರುತ್ತವೆ. ಹೀಗೆಯೇ '*tt*' ಎಂಬುದು ಕುಳ್ಳಗಿನ ತಂದೆ ತಾಯಿಯ ಸಂಕೇತ. *P* ಎಂಬ ಲಿಪಿ ಪಿತೃಪೀಳಿಗೆಯ ಸಂಕೇತ.

ಈ ಪಿತೃಗಳು ಉತ್ಪಾದಿಸಿದ ಲಿಂಗಕೋಶ ಅಥವಾ ಗ್ಯಾಮೀಟುಗಳಲ್ಲಿ ಘಟಕಗಳು ಜೋಡಿಯಲ್ಲಿ ಇರುತ್ತವೆ. ಲಿಂಗಕೋಶಗಳ ಉತ್ಪಾದನೆಯ ಕಾಲದಲ್ಲಿ ಈ ಘಟಕಗಳು ಪ್ರತ್ಯೇಕಗೊಳ್ಳುತ್ತವೆ. ಗರ್ಭಾಂಕುರತೆ ಕಾಲದಲ್ಲಿ ಹೆಣ್ಣು ಮತ್ತು ಗಂಡು ಲಿಂಗಕೋಶಗಳು ಕೂಡಿದಾಗ *T* ಮತ್ತು *t* ಘಟಕಗಳು ಅಂದರೆ ಒಂದು ಪ್ರಬಲಘಟಕ ಮತ್ತೊಂದು ಅಪ್ರಬಲಘಟಕ ಜೋಡಿಯಾಗುತ್ತವೆ. ಅಂದರೆ ಮಿಶ್ರತಳಿಯಲ್ಲಿ *Tt* ಎಂಬ ಘಟಕರೂಪ ಅಥವಾ ಜೀನ್‌ರೂಪ ಕಾಣಬರುತ್ತದೆ. ಮೊದಲ ಪೀಳಿಗೆಯಲ್ಲಿ ಗಿಡಗಳನ್ನು *Tt* ಎಂದು ತೋರಿಸಲಾಗುತ್ತದೆ. ಅಂದರೆ ಈ ಪೀಳಿಗೆಯ ಗಿಡದ ಪ್ರತಿಯೊಂದು ಜೀವಕೋಶದಲ್ಲಿ ಎತ್ತರತನದ ಒಂದು ಘಟಕ ಕುಳ್ಳುತನದ ಇನ್ನೊಂದು ಘಟಕ ಇರುತ್ತದೆ. ಮೊದಲನೆಯ ಪೀಳಿಗೆಯ ಗಿಡಗಳಲ್ಲಿ ಸ್ವಕೀಯ ಪರಾಗಾರ್ಪಣೆ ಮಾಡಿದಾಗ ಎರಡು ರೀತಿಯ ಗ್ಯಾಮೀಟುಗಳು ಉತ್ಪತ್ತಿಯಾಗುತ್ತವೆ. ಒಂದು ಗಂಡು, ಮತ್ತೊಂದು ಹೆಣ್ಣು. ಉತ್ಪತ್ತಿಯಾದ ಗಂಡು ಗ್ಯಾಮೀಟುಗಳಲ್ಲಿ ಅರ್ಧಭಾಗದಲ್ಲಿ ಎತ್ತರತನದ *T* ಘಟಕ ಘಟಕ ಇದ್ದರೆ ಉಳಿದ ಇನ್ನರ್ದಭಾಗದಲ್ಲಿ *t* ಅಂದರೆ ಕುಳ್ಳುತನದ ಘಟಕ ಇರುತ್ತದೆ. ಉತ್ಪತ್ತಿಯಾದ ಹೆಣ್ಣು ಗ್ಯಾಮೀಟುಗಳಲ್ಲಿಯೂ ಅರ್ಧ ಭಾಗದಲ್ಲಿ *T* ಘಟಕ, ಇನ್ನರ್ಧ ಭಾಗದಲ್ಲಿ *t* ಘಟಕ ಇರುತ್ತದೆ. ಗರ್ಭಾಂಕುರತೆ ಸಮಯದಲ್ಲಿ ಈ ಗ್ಯಾಮೀಟುಗಳು ಯಾದೃಚ್ಛಿಕವಾಗಿ ಕೂಡಿಕೊಳ್ಳುತ್ತವೆ. *T* ಸಂಕೇತದ ಗಂಡು ಗ್ಯಾಮೀಟು *T* ಸಂಕೇತದ ಹೆಣ್ಣು ಗ್ಯಾಮೀಟಿನೊಡನೆ ಸೇರಿ ಎರಡನೆಯ ತಳಿಯಲ್ಲಿ *TT* ಘಟಕದ ಜೀವಿಯ ಉತ್ಪಾದನೆಯಾಗುತ್ತದೆ: '*T*' ಸಂಕೇತದ ಗಂಡ '*t*' ಸಂಕೇತದ ಹೆಣ್ಣು ಗ್ಯಾಮೀಟಿನೊಂದಿಗೆ ಸೇರಿ '*Tt*' ಘಟಕದ ಜೀವಿ ಉತ್ಪಾದನೆಯಾಗುತ್ತದೆ; '*t*' ಸಂಕೇತದ ಗಂಡು ಗ್ಯಾಮೀಟು '*T*' ಸಂಕೇತದ ಹೆಣ್ಣು ಗ್ಯಾಮೀಟಿನೊಡನೆ ಬೆರೆತು '*tT*' ಘಟಕದ ಜೀವಿ ಉತ್ಪಾದನೆಯಾಗುತ್ತದೆ; '*t*' ಸಂಕೇತದ ಗಂಡು ಗ್ಯಾಮೀಟು '*t*' ಸಂಕೇತದ ಹೆಣ್ಣು ಗ್ಯಾಮೀಟಿನೊಡನೆ ಬೆರೆತು '*tt*' ಘಟಕ ಜೀವಿ ಉತ್ಪಾದನೆಯಾಗುತ್ತದೆ. ಗರ್ಭಾಂಕುರತೆಯಿಂದ ಮೇಲೆ ತಿಳಿಸಿದ ನಾಲ್ಕು ವಿಧದ ಸಂಯೋಜನೆಗಳ ಸಾಧ್ಯತೆ ಉಂಟು. *TT* ಘಟಕದ ಗಿಡವು ಎತ್ತರವಾಗಿರುತ್ತದೆ. ಏಕೆಂದರೆ ಅದರಲ್ಲಿ ಎತ್ತರತನದ ಜೀನ್‌ಗಳು ಮಾತ್ರ ಇವೆ. *Tt* ಘಟಕದ ಎರಡು ಸಂಯೋಜಿತ ಗಿಡಗಳಿವೆಯಷ್ಟೆ.. ಇವು ಕೂಡ ಎತ್ತರವಾಗಿಯೇ ಇರುತ್ತವೆ. ಏಕೆಂದರೆ '*T*' ಎಂಬ ಎತ್ತರತನದ ಘಟಕ ತನ್ನ ಪ್ರಾಭಲ್ಯದಿಂದ ಕುಳ್ಳುತನದ ಘಟಕವಾದ '*t*' ಘಟಕವನ್ನು ಮಸಕು ಮಾಡುತ್ತದೆ. *tt* ಘಟಕವುಳ್ಳ ಗಿಡಗಳು ಗಿಡ್ಡವಾಗಿಯೇ ಇರುತ್ತವೆ. ಏಕೆಂದರೆ *t* ಎಂಬ ಕುಳ್ಳುತನದ ಘಟಕವನ್ನು ಮಾತ್ರ ಇವು ಪಡೆದಿವೆ. ಹೀಗೆ *TT, Tt, tT* ಎಂಬ ಮೂರು ವಿಧದ ಸಂಯೋಜನೆಯುಳ್ಳ ಗಿಡಗಳು ಎತ್ತರವಾಗಿದ್ದು *tt* ಎಂಬ ಘಟಕದ ಗಿಡಗಳು ಕುಳ್ಳಾಗಿರುತ್ತವೆ. ಅಂದರೆ 3:1 ಅನುಪಾತದಲ್ಲಿ ಗಿಡಗಳು ಹುಟ್ಟಿಕೊಳ್ಳುತ್ತವೆ: ಇದರಿಂದ ತಿಳಿದುಬರುವುದೇನೆಂದರೆ ಎರಡು ಜೀವಿಗಳು ಬಾಹ್ಯನೋಟದಲ್ಲಿ ನೋಡುವುದಕ್ಕೆ ಒಂದೇ ರೀತಿ ಇದ್ದರೂ ಅವುಗಳು ಹೊಂದಿರುವ ಜೀನ್ ಅಥವಾ ಘಟಕಗಳಲ್ಲಿ ವ್ಯತ್ಯಾಸವಿರುತ್ತದೆ. ಮಿಶ್ರತಳಿಯಲ್ಲಿ–*Tt* ಎಂಬ ಘಟಕರೂಪ ಅಥವಾ ಜೀನ್‌ರೂಪ (*Tt* ಮತ್ತು *tT*) ಕಂಡುಬರುತ್ತದೆಯಷ್ಟೆ.. ಇದೇ ಆ ಜೀವಿಯ ನಿಜವಾದ ರೂಪ. ಆದರೆ ಶುದ್ಧಸಂತಾನದ ಹಾಗೂ ಮಿಶ್ರ ತಳಿಯ ಜೀವಿ ಎತ್ತರವಾಗಿ (*TT* ಮತ್ತು *Tt*) ಕಾಣುವುದರಿಂದ ಜೀವಿಯ ದೃಶ್ಯರೂಪ (ಫೀನೊಟೈಪ್ ಅಥವಾ ತೋರು ರೂಪ) ಎಂದು ಕರೆಯಲಾಗುತ್ತದೆ. ಒಂದೇ ತೆರನಾದ ಎರಡು ಘಟಕಗಳು ಸೇರಿ ಆದ ಸಂಯುಕ್ತ ರೂಪವನ್ನು ಅಂದರೆ *TT* ಮತ್ತು *tt*ಯನ್ನು ಸಮಯುಗ್ಮ ಅಥವಾ (ಹೋಮೋಜೈಗಸ್) ಎಂದೂ ಬೇರೆ ತೆರನಾದ ಘಟಕಗಳು ಸೇರಿ ಆದ ಸಂಯುಕ್ತ ರೂಪವನ್ನು ಅಂದರೆ *Tt* ಘಟಕವನ್ನು ವಿಷಮಯುಗ್ಮ (ಹೆಟರೊಜೈಗಸ್) ಎಂದೂ ಕರೆಯಲಾಗುತ್ತದೆ. ಸಮಯುಗ್ಮ ಜೀವಿಗಳು ಶುದ್ಧಸಂತಾನದ ಜೀವಿಗಳನ್ನೇ ಕೊಡುತ್ತವೆ. ಸಮಯುಗ್ಮ ಗಿಡಗಳು ಸ್ವಪರಾಗಾರ್ಪಣೆಯಿಂದಾಗಲೀ ಅಥವಾ ಇನ್ನೊಂದು ಸಮಯುಗ್ಮ ಗಿಡದೊಡನೆ ಅಡ್ಡ ಹಾಯಿಸಿದಾಗ ತಮಗೆ ತದ್ರೂಪವಾದ ಗಿಡಗಳನ್ನು ಕೊಡುವುದನ್ನು ಕಾಣಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಪರಸ್ಪರ ಅಡ್ಡಹಾಯ್ಕೆಯಿಂದ ಕೆಲವು ಗುಣಲಕ್ಷಣಗಳು ತಂದೆ ತಾಯಿಯಿಂದ ಮುಂದಿನ ಪೀಳಿಗೆಯಲ್ಲಿ ಅಪ್ರಬಲ ಗುಣಲಕ್ಷಣಗಳನ್ನು ಮಸುಕುಮಾಡಿ ತನ್ನ ಪ್ರಾಬಲ್ಯವನ್ನು ತೋರುತ್ತವೆ. ಇದೇ ಪ್ರಬಲ್ಯ ನಿಯಮ (ಲಾ ಆಫ್ ಡಾಮಿನೆನ್ಸ್).

ದ್ವಿಗುಣ ಮಿಶ್ರತಳಿ ಎಂದರೆ ಎರಡು ಬೇರೆ ಗುಣಗಳಿರುವ ಜೀವಿಗಳನ್ನು ಮಿಶ್ರತಳೀಕರಣ ಮಾಡುವುದು. ಉದಾಹರಣೆಗೆ ಮೆಂಡಲ್ ಎರಡು ಜಾತಿಯ ಬಟಾಣಿಗಿಡಗಳನ್ನು ಅಡ್ಡಹಾಯಿಸಿದ. ಒಂದು ಜಾತಿಯ ಗಿಡದ ಬಟಾಣಿ ಬೀಜಗಳು ಹಳದಿ ಬಣ್ಣವನ್ನೂ ಗುಂಡನೆಯ ಆಕಾರವನ್ನೂ ಪಡೆದಿದ್ದುವು (ಚಿತ್ರ–2). ಇನ್ನೊಂದು ಜಾತಿಯ ಗಿಡದ ಬಟಾಣಿ ಬೀಜಗಳು ಹಸುರು ಬಣ್ಣದವಾಗಿದ್ದು ಸುಕ್ಕುಸುಕ್ಕಾದ್ದುವು. ಈ ಮಿಶ್ರತಳಿ ಪ್ರಯೋಗದ ಮೂಲಕ ಮೆಂಡಲ್ ಹಳದಿ ಬಣ್ಣ ಮತ್ತು ದುಂಡಗಿನ ಆಕಾರಗಳು

ಪ್ರಬಲಗುಣಗಳೆಂದೂ ಹಸುರು ಬಣ್ಣ ಮತ್ತು ಸುಕ್ಕು ಅಪ್ರಬಲಗುಣಗಳೆಂದೂ ಪತ್ತೆಹಚ್ಚಿದ. ಹಳದಿ ಬಣ್ಣಕ್ಕೆ YY ಎಂಬ ಸಂಕೇತ ಮತ್ತು ದುಂಡಗಿನ ಆಕಾರಕ್ಕೆ RR ಎಂಬ ಸಂಕೇತ. ಅದೇ ಹಸುರು ಬಣ್ಣಕ್ಕೆ *yy* ಮತ್ತು ಸುಕ್ಕು ನಿರಿಗೆಗೆ ಡಿಡಿ ಎಂಬ ಸಂಕೇತಗಳು. ಪ್ರಬಲಗುಣವಿರುವ ಪಿತೃತಳಿಗಳು *Y, R* ಗ್ಯಾಮೀಟುಗಳನ್ನು ಉತ್ಪಾದಿಸುತ್ತವೆ. ಬೇರೆಯವು y, r ಇರುವ ಗ್ಯಾಮೀಟುಗಳನ್ನು ಉತ್ಪಾದಿಸುತ್ತವೆ. ಈ ಗ್ಯಾಮೀಟುಗಳು ಸೇರಿದಾಗ ಉತ್ಪತ್ತಿಯಾಗುವ ಯುಗ್ಮಗಳು *Yy, Rr* ಜೀನ್‌ಗಳನ್ನು ಹೊಂದಿರುತ್ತವೆ. ಈ ಯುಗ್ಮಗಳಿಂದ ಉತ್ಪತ್ತಿಯಾದ ಗಿಡಗಳೆಲ್ಲ ಹಳದಿಬಣ್ಣದ ಗುಂಡುಬೀಜಗಳನ್ನು ಉತ್ಪಾದಿಸುತ್ತವೆ. ಏಕೆಂದರೆ ಹಳದಿಬಣ್ಣ ಮತ್ತು ಗುಂಡಾಕಾರ ಪ್ರಬಲ ಘಟಕ ಜೋಡಿ. ಈ ಮೊದಲನೆಯ ಪೀಳಿಗೆಯ ಗಿಡಗಳನ್ನು ವಿಷಮಯುಗ್ಮ ಸ್ಥಿತಿಯೆಂದು ಕರೆಯಬಹುದು. ಇವನ್ನು ಸ್ವಪರಾಗಾರ್ಪಣೆಗೆ ಒಳಪಡಿಸಿದಾಗ ಹೆಣ್ಣು ಮತ್ತು ಗಂಡು ಗ್ಯಾಮೀಟುಗಳು ಉದ್ಭವವಾದುವು. ಗಂಡಿನಲ್ಲೂ ಹೆಣ್ಣಿನಲ್ಲೂ ನಾಲ್ಕು ರೀತಿಯ ಗ್ಯಾಮೀಟುಗಳನ್ನು ಇದರಲ್ಲಿ ಕಾಣಬಹುದು: *YR, Yr, yR* ಮತ್ತು *yr* ಇವು ಸೇರಿ ಎರಡನೆಯ ಪೀಳಿಗೆಯ ಯುಗ್ಮಗಳು ಉದ್ಭವವಾಗುತ್ತವೆ. ಇವುಗಳ ದೃಶ್ಯರೂಪಗಳು 9 : 3 : 3 : 1 ಎಂಬ ಅನುಪಾತದಲ್ಲಿರುತ್ತವೆ. ಒಂದು ಜೀವಿಯಲ್ಲಿ ಅಸಂಖ್ಯಾತ ಗುಣಲಕ್ಷಣಗಳು ಕ್ಲಿಷ್ಟವಾಗಿ ಹೆಣೆದುಕೊಂಡಿರುವುದರಿಂದ ಆ ಗುಣಲಕ್ಷಣಗಳಿಗೆ ಕಾರಣಗಳಾದ ಘಟಕ ಅಥವಾ ಜೀನ್‌ಗಳ ವರ್ತನೆಯನ್ನು ಮೆಂಡಲ್ ಮೇಲೆ ತಿಳಿಸಿದ ದ್ವಿಗುಣ ಮಿಶ್ರತಳಿ ಅಡ್ಡಹಾಯುವಿಕೆಯಿಂದ ವಿಶ್ಲೇಷಿಸಿದ. ಅಂದರೆ ಒಂದು ಜೊತೆ ಘಟಕಗಳು ಪ್ರತ್ಯೇಕವಾಗುವಾಗ ಜೀವಿಕೋಶದಲ್ಲಿರುವ ಇತರೆ ಘಟಕಜೋಡಿಗಳ ಸಂಪರ್ಕ ಮತ್ತು ಪ್ರಭಾವಕ್ಕೆ ಒಳಗಾಗದೆ ಸ್ವತಂತ್ರವಾಗಿ ವಿಂಗಡಗೊಳ್ಳುತ್ತವೆ. ಇದೇ ಸ್ವತಂತ್ರ ವಿಂಗಡಣೆ ನಿಯಮ (ಲಾ ಆಫ್ ಇಂಡಿಪೆಂಡೆಂಟ್ ಅಸಾರ್ಟ್‌ಮೆಂಟ್).

(ಎಮ್.ಎಸ್.ಕೆ.; ಎಸ್.ಎನ್.ಎಚ್.)

**ಮೆಂಬ್ರೇಸಿಡೆ:** ಹೋಮಾಪ್ಟರ ಉಪಗಣದ ಕೀಟಗಳ ಕುಟುಂಬ. ಇದರಲ್ಲಿ ಸು. 350 ಜಾತಿಗಳಿದ್ದು, ಇವೆಲ್ಲವನ್ನು ಒಟ್ಟಾಗಿ ಮರಜಿಗಿಗಳು (ಟ್ರೀ ಹಾಪರ್ಸ್) ಎಂದು ಕರೆಯುವರು. ಇವುಗಳ ಆಕಾರ ವಿಚಿತ್ರವಾಗಿದ್ದು, ಗುರುತಿಸುವುದು ಸುಲಭ. ಇವುಗಳ ಪ್ರೋನೋಟಮ್ ಭಾಗ ತಲೆಯನ್ನು ಸಂಪೂರ್ಣವಾಗಿ ಆವರಿಸಿದೆಯಲ್ಲದೆ, ಉದರಭಾಗದ ಮೇಲೆ ವಿಸ್ತರಿಸಿದಂತಿದ್ದು, ವಿವಿಧ ಆಕಾರವನ್ನು ತಳೆಯುತ್ತದೆ. ಕೆಲವು ಪ್ರಭೇದಗಳ ಬೆನ್ನುಭಾಗ ಗೂನಾಗಿದ್ದು, ಇನ್ನು ಕೆಲವಲ್ಲಿ ಮುಳ್ಳು, ಕೋಡು ಮುಂತಾಗಿ ಬಾಚಿಕೊಂಡಿರುತ್ತದೆ. ರೆಕ್ಕೆಗಳು ತುಂಬ ತೆಳುವಾಗಿದ್ದು, ಪ್ರೋನೋಟಮ್‌ನ ಒಳಗೆ ಹುದುಗಿವೆ.

ಗಾತ್ರದಲ್ಲಿ ಇವು ಚಿಕ್ಕವು. ದೇಹದ ಉದ್ದ 16–12 ಮಿಮೀ. ದೇಹದ ಬಣ್ಣ ಹಳದಿ, ಹಸುರು, ಕಂದು, ಕಪ್ಪು. ಇದು ಪ್ರಭೇದಕ್ಕನುಗುಣವಾಗಿದೆ. ಇವುಗಳ ವಾಸ ಮರಗಳಲ್ಲಿ ಅಥವಾ ಪೊದೆಗಳಲ್ಲಿ. ಕೆಲವು ಪ್ರಭೇದಗಳು ಮೈದಾನ ಪ್ರದೇಶಗಳಲ್ಲಿ ಬೆಳೆಯುವ ಹುಲ್ಲು, ಕಳೆಗಿಡಗಳ ಮೇಲೆ ವಾಸಿಸುತ್ತವೆ. ಮರಗಳ ತೊಗಟೆ, ದಾರುಭಾಗ, ಎಲೆಗಳ ಮಧ್ಯನಾಳ, ಕಾಂಡ ಭಾಗಗಳಲ್ಲಿ ಅಂಡನಿಕ್ಷೇಪಕದ (ಓವಿಪಾಸಿಟರ್) ಸಹಾಯದಿಂದ ಮೊಟ್ಟೆಯಿಡುವುವು. ವರ್ಷದಲ್ಲಿ ಸಾಮಾನ್ಯವಾಗಿ ಎರಡು ಬಾರಿ ಸಂತಾನೋತ್ಪತ್ತಿ ಆಗುವುದು. ಮೊಟ್ಟೆಗಳಿರುವ ಕಾಂಡಭಾಗ ಒಣಗಿ ಗಿಡಗಳು ನಾಶವಾಗುತ್ತವೆ. ಕಾರಣ, ಇವು ಹಾನಿಕಾರಕ ಕೀಟಗಳು.

ಈ ಕೀಟಗಳು ಗಿಡಮರಗಳಿಗೆ ಅಷ್ಟಾಗಿ ಹಾನಿಕರವಲ್ಲ. ಅಮೆರಿಕದಲ್ಲಿ ಸೇಬು ಗಿಡಗಳಿಗೆ ಸ್ಟಿಕ್ಟೊಸಿಫ್ಯಾಲ ಬ್ಯುಬೇಲಸ್ ಎಂಬ ಮರಜಿಗಿ (ಬಫೆಲೊ ಟ್ರೀ ಹಾಪರ್) ಕೊಂಚ ಪ್ರಮಾಣದಲ್ಲಿ ಹಾನಿಯುಂಟು ಮಾಡುತ್ತದೆ. ಭಾರತದಲ್ಲಿ ಇವುಗಳ ಪಿಡುಗು ಗಣನೀಯವಾಗಿಲ್ಲ. (ಜಿ.ಕೆ.ವಿ.)

**ಮೇತೆ:** ಪಕ್ಷಿಗಳು ತಾವು ತಿಂದ ಆಹಾರವನ್ನು ಜಠರಕ್ಕೆ ಸಾಗಿಸುವ ಮೊದಲು, ಜೀರ್ಣಕಾರ್ಯಕ್ಕೆ ಅನುಕೂಲವಾಗುವಂತೆ ಮಾರ್ಪಡಿಸಲು ಸಂಗ್ರಹಿಸಿಟ್ಟುಕೊಳ್ಳುವ ಗಂಟಲಿನ ಭಾಗದಲ್ಲಿರುವ ಅನ್ನನಾಳದ ಸಂಚಿಯಂಥ ಅಂಗ (ಕ್ರಾಪ್). ಹಲ್ಲುಗಳಿಲ್ಲದಿರುವುದರಿಂದ ಆಹಾರವನ್ನು ಅಗಿದು ಪಚನಕ್ರಿಯೆಗೆ ಅನುಕೂಲವಾಗುವಂತೆ ಮೇತೆಯಲ್ಲಿ ಆಹಾರ ಸಂಗ್ರಹವಾಗಿ, ತೇವಗೊಂಡು, ಮೆತುವಾಗುತ್ತದೆ. ಇದರಲ್ಲಿ ನಿರ್ದಿಷ್ಟವಾದ ಜೀರ್ಣಕಾರ್ಯವೇನೂ ನಡೆಯುವುದಿಲ್ಲ. ತಾತ್ಕಾಲಿಕ ಆಹಾರ ಸಂಗ್ರಹಣಾ ಕಾರ್ಯವನ್ನು ಮಾತ್ರ ನಿರ್ವಹಿಸುತ್ತದೆ. ನುಂಗಿದ ಆಹಾರ ಇದರಲ್ಲಿ ಉಬ್ಬಿಕೊಂಡು, ಮೃದುವಾಗಿ ಇಲ್ಲಿಂದ ಮುಂದೆ ಸಾಗಿ ಜಠರವನ್ನು ಸೇರಿದಾಗ ಸುಲಭವಾಗಿ ಜೀರ್ಣವಾಗುವ ಸ್ಥಿತಿಗೆ ಬರುತ್ತದೆ. ಕೆಲವು ಹಕ್ಕಿಗಳಲ್ಲಿ ಮೇತೆಯ ವಿಶಿಷ್ಟ ಗ್ರಂಥಿಗಳು ಒಂದು ದ್ರವವನ್ನು ಸ್ರವಿಸುತ್ತದೆ. ಸಂಗ್ರಹಿತ ಆಹಾರ ಈ ದ್ರವದ ರಾಸಾಯನಿಕ ಕ್ರಿಯೆಗೆ ಒಳಗಾಗುವುದುಂಟು.

ಮೇತೆ ಕೆಲವು ಹಕ್ಕಿಗಳಲ್ಲಿ ಅಂಡಾಕಾರವಾಗಿದೆ. ಬರಿಯ ಕಾಳು ತಿನ್ನುವ ಅಥವಾ ಮಾಂಸಾಹಾರಿ ಹಕ್ಕಿಗಳಲ್ಲಿ ಉದ್ದುದ್ದವಾಗಿಯೂ ತ್ರಿಕೋಣಾಕಾರವಾಗಿಯೂ ಇದೆ. ಪಾರಿವಾಳಗಳಲ್ಲಿ ಇದು ಮೂರು ಕೋಣೆಗಳನ್ನೊಳಗೊಂಡಿದೆ. ಪಾರಿವಾಳಗಳ ಮೇತೆಗ್ರಂಥಿಗಳಲ್ಲಿ ಒಂದು ರೀತಿಯ ವಿಶಿಷ್ಟ ಹೊಂದಾಣಿಕೆ ಕಂಡುಬರುತ್ತದೆ. ಗಂಡು ಮತ್ತು ಹೆಣ್ಣು ಪಕ್ಷಿಗಳ ಮೇತೆಯಲ್ಲಿ ಎರಡು ಗ್ರಂಥಿಗಳು ನಿರ್ದಿಷ್ಟ ಪ್ರದೇಶದಲ್ಲಿ ರೂಪುಗೊಳ್ಳುತ್ತವೆ. ಈ ಗ್ರಂಥಿಗಳನ್ನು ದೇಹದ ಉಳಿದ ಗ್ರಂಥಿಗಳಿಗೆ ಹೋಲಿಸುವುದು ಕಷ್ಟ. ಒಂದು ರೀತಿಯಲ್ಲಿ ಜೀರ್ಣದ್ರವವನ್ನು ಸ್ರವಿಸಿದರೂ ಇತರೆ ಗ್ರಂಥಿಗಳಿಗೆ ಸಲ್ಲದ ವಿಶಿಷ್ಟ ಗುಣವಾದ ಕೋಶ ಬೆಳವಣಿಗೆಯ ರಚನೆಗಳು ಕಂಡುಬರುವುದು ವಿಶೇಷ ಗುಣ. ಈ ಗ್ರಂಥಿಗಳು ಕ್ರಮಬದ್ಧ ಪ್ರಚೋದನೆಗಳಿಂದ ವಿಸ್ತಾರಗೊಂಡು ಕೋಶಗಳು ರೂಪುಗೊಳ್ಳಲು ಸಾಧ್ಯವಾಗುವುದು. ಇದರಿಂದಾಗಿ ಅತ್ಯಂತ ಪುಷ್ಟಿಕರವಾದ ಮೇತೆಹಾಲು (ಕ್ರಾಪ ಮಿಲ್ಕ್) ಅದರ ಅವಕಾಶದಲ್ಲಿ ಬಂದು ಸೇರಲು ಸಾಧ್ಯವಾಗುತ್ತದೆ. ಈ ಹಾಲನ್ನು ಮರಿಗಳ ಗಂಟಲಿಗೆ ತಾಯಿ ಹಕ್ಕಿಗಳು ಗುಟುಕು ನೀಡಿ ಅವುಗಳ ಪೋಷಣೆ ಮಾಡುವುವು. ಮೇತೆಯ ಒಳಭಾಗದಲ್ಲಿ ಶ್ಲೇಷ್ಮ ಗ್ರಂಥಿಗಳಿರುವುವು. ಮೇತೆ ಗ್ರಂಥಿಗಳ ಕಾರ್ಯ ಪಿಟ್ಯುಟರಿ ಗ್ರಂಥಿಗಳ ಪ್ರೊಲ್ಯಾಕ್ಟಿನ್ ಹಾರ್ಮೋನಿನ ಅಧೀನಕ್ಕೊಳಪಟ್ಟಿರುತ್ತದೆ. ಮರಿಹಕ್ಕಿಗಳ ಪಾಲನೆಯ ಅನಂತರ ಈ ಗ್ರಂಥಿಗಳು ತಮ್ಮ ಮೊದಲಿನ ಸ್ಥಿತಿಗೆ ಬರುವುವು.

ಹೆಣ್ಣು ಮತ್ತು ಗಂಡು ಹಕ್ಕಿಗಳೆರಡೂ ಈ ಹಾಲನ್ನು ಸ್ರವಿಸುವುದುಂಟು. ಹೆಣ್ಣಿನಲ್ಲಿ ಕೊಲಸ್ಟ್ರಂ ಎಂಬ ಪದಾರ್ಥವಿದೆ. ಗಂಡಿನಲ್ಲಿರುವುದಿಲ್ಲ. ಮೇತೆಯ ಹಾಲು ಸ್ತನಿಗಳ ಹಾಲನ್ನು ಹೋಲುವುದಿಲ್ಲ. ಇದರಲ್ಲಿ ಲ್ಯಾಕ್ಟೋಸ್ ಆಗಲೀ ಜಿಡ್ಡಾಗಲೀ ಇರುವುದಿಲ್ಲ.

( ಎನ್.ಎಂ.)

**ಮೆನೀಯರನ ರೋಗ:** ಪದೇ ಪದೇ ಬರುವ ತಲೆಸುತ್ತು, ಓಕರಿಕೆ ವಾಂತಿ, ಗುಂಯ್‌ಗುಟ್ಟುವುದು, ಕ್ರಮೇಣ ಕಿವುಡು – ಈ ಲಕ್ಷಣಕೂಟವಿರುವ ಒಂದು ರೋಗ (ಮೆನಿಯರ್ಸ್ ಸಿಂಡ್ರೋಮ್). ದೇಹದ ಸಮತೋಲನೆಯ ಯಾಂತ್ರಿಕ ವ್ಯವಸ್ಥೆ ಮತ್ತು ಶ್ರವಣ ಸಾಮರ್ಥ್ಯದ ಊನಗಳು ಒಳಕಿವಿಯ ಹಜಾರ ಮತ್ತು ಕರ್ಣಶಂಖ ಎರಡು ಭಾಗಗಳಲ್ಲಿಯೂ ರೋಗಗತಿಯನ್ನು ಸೂಚಿಸುತ್ತವೆ. ಮೆನೀಯರನ ರೋಗದಿಂದ ಸತ್ತವರ ಪರೀಕ್ಷೆಗಳಿಂದ ಕಂಡುಬರುವ ಕರ್ಣಶಂಖನಾಳ ಉಬ್ಬಿರುವ ಸ್ಥಿತಿ ಮತ್ತು ಒಳಗಿನ ಸಂಕೀರ್ಣ ಕುಹರದಲ್ಲಿ ದ್ರವಸಮತೋಲನೆ ಏರು ಪೇರಾಗಿರುವುದು – ಇವುಗಳಿಂದ ಈ ರೋಗ ಉಂಟಾಗುವುದೆಂದು ಹೇಳಲಾಗಿದೆ. ಔಷಧಗಳಿಗೆ ಜಗ್ಗದ ರೋಗವಿದ್ದಾಗ ಶಸ್ತ್ರವೈದ್ಯದಿಂದ ಮಿದುಳು ಬುರುಡೆಯಲ್ಲಿ ಒಳಗಿವಿ ಹಜಾರಕ್ಕೆ ಪೂರೈಕೆ ಆಗುವ ಭಾಗವನ್ನು ಕತ್ತರಿಸುವುದು, ಒಳಗಿವಿ ಸಂಕೀರ್ಣಕುಹರವನ್ನು ನಾಶಪಡಿಸುವುದು ಅಥವಾ ಲೇಸರ್ ಕಿರಣದಿಂದ ಒಳಗಿವಿ ಹಜಾರದ ನರಗಳ ಅಂತ್ಯಾಂಗಗಳನ್ನು ನಾಶಮಾಡುವುದು ಚಿಕಿತ್ಸಾಕ್ರಮ. ಸಂಕೀರ್ಣಕುಹರವನ್ನು ತೆಗೆಯುವುದರಿಂದ ಪ್ರಾಣಿಗಳಲ್ಲಾಗುವ ಪರಿಣಾಮಗಳಿಗಿಂತ ಭಿನ್ನವಾದವು ಮನುಷ್ಯನಲ್ಲಿ ಕಂಡುಬರುತ್ತವೆ. ಈ ವ್ಯತ್ಯಾಸಕ್ಕೆ ಕಾರಣ ಶಸ್ತ್ರವೈದ್ಯಕ್ಕಿಂತ ಮುಂಚೆಯ ರೋಗದಿಂದ ಮನುಷ್ಯನಲ್ಲಿ ಸಮತೋಲನ ವ್ಯವಸ್ಥೆ ತೀರ ಕೆಟ್ಟಿರುವುದು. ಸಹಜಸ್ಥಿತಿಯ ಪ್ರಾಣಿಯಲ್ಲಿ ಒಂದು ಪಕ್ಕದಲ್ಲಿ ಸಂಕೀರ್ಣ ಕುಹರವನ್ನು ನಾಶಪಡಿಸುವುದರ ಫಲ ಸರಿಯಾಗಿರುವ ಇನ್ನೊಂದು ಕಡೆಯ ಒಳಗಿವಿಯ ಹಜಾರ ಪ್ರೇರಿಸುವುದರ ಫಲದಂತಿರುತ್ತದೆ. ನಾಶಪಡಿಸಿದ ಕಡೆಗೆ ಕಣ್ಣಾಲಿಗಳು ನಿಧಾನವಾಗಿ ಹೊರಳುತ್ತಿರುತ್ತವೆ ಮತ್ತು ಆ ಕಡೆಯ ಮಡಿಸುವ ಪೇಶಿಗಳು ಸೆಟೆದುಕೊಂಡಿರುತ್ತವೆ ; ನಾಶಪಡಿಸಿದ ಕಡೆಯ ಪೇಶಿಗಳ ಬಿಗುವು ಹೆಚ್ಚಿರುತ್ತದೆ.

ಸ್ಟ್ರೆಪ್ಟೊಮೈಸಿನಿನ್ನಂಥ ವಿಷಮಯ ಪದಾರ್ಥಗಳಿಂದಲೂ ಒಳಗಿವಿ ಹಜಾರದ ಕಾರ್ಯ ಸ್ಥಗಿತವಾಗಬಹುದು. ಎರಡು ಗ್ರಾಂ ಅಥವಾ ಹೆಚ್ಚು ಸ್ಟ್ರೆಪ್ಟೊಮೈಸಿನನ್ನು ದಿನವೂ ವಾರಗಳ ಪರ್ಯಂತ ಚುಚ್ಚುತ್ತಿದ್ದರೆ ಒಳಗಿವಿ ರೋಗಚಿಹ್ನೆಗಳು ಕಾಣಿಸುವ ಪ್ರಮೇಯ ಹೆಚ್ಚು. ಪ್ರಾಣಿಗಳ ಮೇಲಿನ ಪ್ರಾಯೋಗಿಕ ಅಧ್ಯಯನಗಳಿಂದ ಪರಿಧಿನರಗಳ ಅಂತ್ಯಾಂಗಗಳ ಮೇಲೆ ನೇರ ಪರಿಣಾಮವಾಗುವುದು ಕಾಣಿಸುತ್ತದೆ. ಆದರೆ ಮನುಷ್ಯನಲ್ಲಿ ಮುಂದಿರುವ ಕರ್ಣಶಂಖದ ಗುಂಬದ ಮೇಲೆ ಪರಿಣಾಮವಿರುವುದೆಂದು ಕೆಲವರ ಮತ. ಸ್ಟ್ರೆಪ್ಟೊಮೈಸಿನ್ ಚುಚ್ಚುಮದ್ದಿನಿಂದ ಸಾಮಾನ್ಯವಾಗಿ ದ್ವಿಪಾರ್ಶ್ವ ಪರಿಣಾಮವಾಗುತ್ತದೆ. ಔಷಧ ಪ್ರಯೋಗವನ್ನು ಸಾಕಷ್ಟು ಬೇಗನೆ ನಿಲ್ಲಿಸಿದಷ್ಟೂ ಒಳ್ಳೆಯ ಪರಿಣಾಮ ಉಂಟುಮಾಡಲು ಸಾಧ್ಯ. ಶ್ರವಣಸಾಮರ್ಥ್ಯ ನಷ್ಟದ ಪುರಾವೆ ಸಿಗುವ ಮೊದಲೆ ಒಳಗಿವಿ ಹಜಾರದ ಕ್ರಿಯಾಶೀಲತೆ ಕೆಟ್ಟಿರುತ್ತದೆ. ಎತ್ತರದ ಶ್ರುತಿಗಳಿಗೆ ಕಿವುಡಾಗುವುದರಿಂದ ಮೊದಲಿಗೆ ಕರ್ಣಶಂಖಕ್ಕಾದ ಹಾನಿ ತಿಳಿಯದಿರಬಹುದು. ಏಕೆಂದರೆ ಮಾತಾಡುವುದು ಕೇಳಿಸುತ್ತದೆ. ವಿಪರೀತ ತಲೆಸುತ್ತು, ವಾಂತಿ, ಸುಸ್ತು, ಕಿವಿಮೊರೆತ, ಹೆಚ್ಚುವ ಕಿವುಡು ಇವು ಒಟ್ಟಾಗಿರುವುವು.

ಗಂಡಸರಿಗೆ ಬರುವುದು ಜಾಸ್ತಿ. ಮಧ್ಯವಯಸ್ಸಿಗೆ (ಅಂದಾಜು 45 ವರ್ಷ) ಬಂದು ಹಲವು ವರ್ಷ ಕಾಡಿ ಕೊನೆಗೆ ಕಡಿಮೆ ಆಗಬಹುದು. ತಜ್ಞ ವೈದ್ಯರ ಸಲಹೆ ಪಡೆದು ಚಿಕಿತ್ಸೆ ಮಾಡುವುದು ಯೋಗ್ಯ. (ಎಂ.ಡಿ.)

**ಮೇದೋಜೀರಕಗ್ರಂಥಿ:** ಆಹಾರ ಪಚನಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸುವ ಜೀರ್ಣರಸವನ್ನು ಸ್ರವಿಸುವ ಗ್ರಂಥಿ (ಪ್ಯಾನ್‌ಕ್ರಿಯಾಸ್). ಇದರ ಗಾತ್ರ ತೀರ ಚಿಕ್ಕದು. ತೂಕ ಕೇವಲ 85 ಗ್ರಾಂ ಇದು ಸ್ರವಿಸುವ ರಸದಲ್ಲಿ ಪ್ರೋಟೀನ್, ಪಿಷ್ಟ ಮತ್ತು ಮೇದಸ್ಸುಗಳನ್ನು ಪೂರ್ತಿ ಜೀರ್ಣಿಸುವ ಮೂರು ಶಕ್ತಿಯುತ ಕಿಣ್ವಗಳಿವೆ. ದಿನಕ್ಕೆ 1–1.5 ಲೀ ನಷ್ಟು ಜೀರ್ಣರಸವನ್ನು ಸ್ರವಿಸುತ್ತದೆ. ಇದು ಬರೀ ಮೇದೋಜೀರಕರಸವಲ್ಲ, ಸರ್ವಜೀರಕರಸ. ಆದರೆ ಮೇದಸ್ಸಿನ ಪಚನ ಈ ರಸದಿಂದ ಮಾತ್ರ ಸಾಧ್ಯವಾಗುವುದರಿಂದ ಅಂಗಕ್ಕೆ ಆ ಹೆಸರು ಕೊಟ್ಟಿದೆ. ಇದು ಬಹಿಃಸ್ರಾವಕ ಹಾಗೂ ಅಂತಃಸ್ರಾವಕ ಗ್ರಂಥಿಗಳನ್ನು ಹೊಂದಿದ್ದು, ಜೀರ್ಣರಸವು ಬಹಿಃಸ್ರಾವಕ ಗ್ರಂಥಿಯ ಸ್ರವಿಕೆಯಾದರೇ, ಅಂತಃಸ್ರಾವಕ ಭಾಗ ಇನ್ಸುಲಿನ್ ಹಾರ್ಮೋನನ್ನು ಸ್ರವಿಸುತ್ತದೆ. ಹೀಗೆ ಮೇದೋಜೀರಕಾಂಗದ ಬಹಿಸ್ರಾವ ಪಿಷ್ಟವನ್ನು ಸಕ್ಕರೆಗೆ ಜೀರ್ಣಿಸಿದರೆ ಅಂತಃಸ್ರಾವ (ಇನ್ಸುಲಿನ್) ಸಕ್ಕರೆಯನ್ನು ದಹಿಸಿ ಶಕ್ತಿಯನ್ನು ಬಿಡುಗಡೆಮಾಡಲು ಸಸಹಾಯಕವಾಗಿದೆ. ಈ ರೀತಿ ಮೇದೋಜೀರಕಾಂಗ ನಾಲ್ಕು ಗ್ರಂಥಿಗಳ ಕೆಲಸಗಳನ್ನು ಮಾಡುತ್ತದೆ. ಇದರ 85 ಗ್ರಾಂ ತೂಕದಲ್ಲಿ ಕೇವಲ 1.3 ಗ್ರಾಂ ಅಂತಃಸ್ರಾವ ಭಾಗವಿದೆ.



ಮೇದೋಜೀರಕಾಂಗದ ಅಡ್ಡ ಸೀಳಿಕೆ

ಮೇದೋಜೀರಕ ಗ್ರಂಥಿಯ ಲ್ಯಾಟಿನ್ ಹೆಸರಿನ (ಪ್ಯಾನ್‌ಕ್ರಿಯಾಸ್) ಅರ್ಥ ಮಾಂಸಲಿ ಎಂದು. ಏಕೆಂದರೆ ಇದರ ರಚನೆಯಲ್ಲಿ ಕವಚ ಒಳತಡಿಕೆಗಳು ಇತ್ಯಾದಿ ನಾರಿನ ಅಂಶ ಬಲು ಕಡಿಮೆ. ಹೀಗಾಗಿ ಈ ಅಂಗ ಬಲು ಮೃದು. ಕಾರಣ ಇದನ್ನು ಇಂಗ್ಲಿಷ್‌ನಲ್ಲಿ ಕಸಾಯಿ ಅಂಗಡಿಯಲ್ಲಿ ಸಿಹಿ ಬ್ರೆಡ್ ಎನ್ನುತ್ತಾರೆ. ಇದರ ಉದ್ದ 12–15 ಸೆಂಮೀ. ದೊಡ್ಡನಾಯಿಯ ನಾಲಿಗೆ, ಗೊದ್ದ (ಬಾಲದ ಕಪ್ಪೆಮರಿ), ಬಟ್ಟಿ ಇಳಿಸುವ ಗಾಜಿನ ರಿಟಾರ್ಟ್, ಇತ್ಯಾದಿಗಳಿಗೆ ಇದರ ಆಕಾರವನ್ನು ಹೋಲಿಸುವುದುಂಟು. ಇದನ್ನು ತಲೆ, ಕತ್ತು, ಮುಂಡ ಬಾಲಗಳೆಂಬ ಭಾಗಗಳಾಗಿ ವಿಂಗಡಿಸಿ ವರ್ಣಿಸಲಾಗಿದೆ. ಈ ಅಂಗ ಉದರದಲ್ಲಿ ಬೆನ್ನು ಮೂಳೆಯ ನಡುವಿಗೆ ಚಿಕ್ಕ ಕರುಳಿನ ಮೊದಲ ಭಾಗವಾದ ಬಿಲ್ಲರುಳಿನ (ದ್ವಾದಶಾಂತ್ರ, ಡುಯೋಡಿನಮ್) ಬಾಗಿನಲ್ಲಿ ಹೊಂದಿಕೊಂಡಿದೆ. ತಲೆಗಿಂತ ಬಾಲ ತುಸು ಮೇಲ್ಮಟ್ಟದಲ್ಲಿ ಪ್ಲೀಹದ ನಾಭಿಗೆ ಅಂಟಿಕೊಂಡಿದೆ.

ಜಠರದಿಂದ ಭಾಗಶಃ ಜೀರ್ಣವಾದ ಆಹಾರ ಬರುತ್ತಲೆ ಬಿಲ್ಲರುಳು ಸಿಕ್ರೀಟಿನ್ ಎಂಬ ಮೇದೋಜೀರಕ ಸ್ರಾವ ಚೋದಕವನ್ನು ರಕ್ತಕ್ಕೆ ಸುರಿಸುತ್ತದೆ. ಇದರಿಂದ ಮೇದೋಜೀರಕ ಚುರುಕುಗೊಂಡು ತನ್ನ ರಸವನ್ನು ಅಗಾಧವಾಗಿ ಸ್ರವಿಸಿ ನಾಳದ ಮೂಲಕ ಬಿಲ್ಲರುಳಿನೊಳಕ್ಕೆ ಕಳುಹಿಸುತ್ತದೆ. ಹೀಗೆ ಇದು ತಾನೇ ಭಾಗಶಃ ಒಂದು ಒಳರಸವನ್ನು ಸುರಿಸುವ ಗ್ರಂಥಿಯಾದರೂ ತನ್ನನ್ನು ಚೋದಿಸುವ ಇನ್ನೊಂದು ಹಾರ್ಮೋನಿನಿಂದ ಪ್ರಭಾವಿತವಾಗುತ್ತದೆ.

ಭ್ರೂಣದಲ್ಲಿ ಬೆಳವಣಿಗೆ: ಭ್ರೂಣದ ಆದ್ಯಂತದ ಮೊದಲ ಭಾಗದಿಂದ ಮೊದಲ ಮತ್ತು ಮಧ್ಯದ ಭಾಗಗಳ ಸಂಧಿಯ ಹತ್ತಿರ, ಚಿಗುರಿದ ಪಿತ್ತಜನಕಾಂಗದ ಮೊಗ್ಗಿನ ತೊಟ್ಟಿನ ಭಾಗದಿಂದ ಮೇದೋಜೀರಕದ ಮೊಗ್ಗು ಹೊರಟು ಅದರಿಂದ ಮೇದೋಜೀರಕಾಂಗದ ತಲೆಯ ಕೆಳಭಾಗ ಮತ್ತು ಮೇದೋಜೀರಕಾಂಗ ನಾಳದ ಅಂತ್ಯಭಾಗ ಬೆಳೆಯುತ್ತವೆ. ಇದಕ್ಕೆ ಸ್ವಲ್ಪ ಮೇಲೆ ಅಂದರೆ ತಲೆಯ ಕಡೆ, ಮತ್ತೊಂದು ಮೊಗ್ಗು ಬೆನ್ನುಕಡೆ ಚಿಗುರಿ ಹೊಟ್ಟೆ ಕಡೆ ತಿರುಗಿ ಮೊದಲ ಮೊಗ್ಗಿನೊಡನೆ ಕಲೆತು ಮೇದೋಜೀರಕಾಂಗದ ತಲೆಯ ಮೇಲ್ಭಾಗ, ಕತ್ತು, ಕಾಯ, ಬಾಲಗಳಾಗಿ ಬೆಳೆಯುತ್ತದೆ. ಶೇಕಡಾ 40 ಜನರಲ್ಲಿ ಪಿತ್ತನಾಳ ಮತ್ತು ಮೇದೋಜೀರಕಾಂಗ ನಾಳಗಳು ಬೇರೆ ಬೇರೆ ತೆರೆಯುತ್ತವೆ. ಆಗಾಗ ಒಂದು ಆನುಷಂಗಿಕ ಮೇದೋಜೀರಕಾಂಗನಾಳ ಪಿತ್ತನಾಳಕ್ಕೆ 2.5 ಸೆಂಮೀ ಮೇಲೆ ತೆರೆಯುತ್ತದೆ. ಶೇಕಡಾ 60 ಜನರಲ್ಲಿ ಪಿತ್ತನಾಳ ಮೇದೋಜೀರಕಾಂಗ ನಾಳಗಳು ಒಂದೇ ರಂಧ್ರದ ಮೂಲಕ ತಮ್ಮ ರಸಗಳನ್ನು ಸ್ರವಿಸುತ್ತವೆ. ಕೆಲವು ಸಲ ಈ ಸಾಮಾನ್ಯ ರಂಧ್ರದಲ್ಲಿ ಪಿತ್ತಕಲ್ಲು (ಕ್ಯಾಲ್ಕುಲಸ್ – ಅಶ್ಮರಿ) ಸಿಕ್ಕಿಕೊಂಡರೆ ಅಡಚಣೆಯಾಗಿ ಪಿತ್ತ ಮೇದೋಜೀರಕ ನಾಳದೊಳಕ್ಕೆ ನುಗ್ಗಿ ಮೇದೋಜೀರಕ ರಸದ ಕಿಣ್ವಗಳನ್ನು ಚುರುಕುಗೊಳಿಸುವುದರಿಂದ ಮೇದೋಜೀರಕಾಂಗದ ಮತ್ತು ಸುತ್ತಲಿನ ಅಂಗ ಅಂಗಾಂಶಗಳು ಜೀರ್ಣವಾಗಿ ಪ್ರಾಣಕ್ಕೆ ಅಪಾಯ ಉಂಟುಮಾಡುತ್ತದೆ.

ರಚನೆ: ಮೇದೋಜೀರಕಾಂಗ ಒಂದು ಸಂಯುಕ್ತ ಗ್ರಂಥಿ. ಮುಖ್ಯನಾಳ ಸೂಕ್ಷ್ಮ ನಾಳಗಳಾಗುವವರೆಗೆ ಅನೇಕ ಬಾರಿ ಕವಲೊಡೆದು ಪ್ರತಿ ಸೂಕ್ಷ್ಮ ಶಾಖೆಗಳ ಕೊನೆಯಲ್ಲಿ ಒಂದೊಂದು ಗುಂಡಾದ ಅಥವಾ ಗದೆಯಾಕಾರದ ತೊಳೆ ಇರುತ್ತದೆ. ಇವು ನೂರಾರು ಕಿರುಹಾಲೆಗಳಾಗಿ ಹಲವು ದೊಡ್ಡ ಹಾಲೆಗಳಾಗಿ ನಾರೆಳೆಗಳಿಂದ ವಿಂಗಡಿಸಲ್ಪಟ್ಟು ಒಟ್ಟು ಅಂಗ ಕವಚಾವೃತವಾಗಿದೆ. ಮೇದೋಜೀರಕಾಂಗದಲ್ಲಿ ಲಕ್ಷಗಟ್ಟಲೆ ತೊಳೆಗಳಿವೆ. ಪ್ರತಿಯೊಂದು ತೊಳೆಯ ಕೇಂದ್ರಕುಹರದ ಸುತ್ತ ಪಿರಮಿಡ್ ಆಕಾರದ ಕಣಗಳಿವೆ. ಇವುಗಳ ಅಡಿಭಾಗಗಳಲ್ಲಿ ಕ್ಷಾರೀಯ ಬಣ್ಣ ತೆಗೆದುಕೊಳ್ಳುವ ನಡುಬೀಜ, ರೈಬೊನ್ಯೂಕ್ಲಿಯಕ್ ಆಮ್ಲ ಹಾಗೂ ಕಿಣ್ವಗಳಿವೆ. ಇವು ಜಡಸ್ಥಿತಿಯ ಕಿಣ್ವಗಳು. ಕರುಳು ಬರಿದಾಗಿರುವಾಗ ಮೇದೋಜೀರಕ ರಸ ಹೋದರೆ ಕೆಡುಕು. ಅದು ಕರುಳನ್ನೆ ಜೀರ್ಣಿಸಿಬಿಡಬಹುದು. ಕರುಳಿಗೆ ಜಠರದಿಂದ ಆಮ್ಲಯುತ ಆಹಾರ ಬಂದರೆ ಕರುಳಿನ ಅಂತಃಸ್ರಾವವಾದ ಸಿಕ್ರೀಟಿನ್ ರಕ್ತಕ್ಕೆ ಸೇರಿ ಮೇದೋಜೀರಕಾಂಗ ಸ್ರವಿಸಲು ಚೋದಿಸುತ್ತದೆ. ಮೇದೋಜೀರಕ ರಸ ಕರುಳಿಗೆ ಬಂದಾಗ ಕರುಳು ರಸ ಮಿಶ್ರಣದಿಂದಾಗಿ ಕಿಣ್ವಗಳು ಚುರುಕುಗೊಳ್ಳುತ್ತವೆ. ರಸ ಕ್ಷಾರೀಯವಾಗಿರುವುದರಿಂದ ಭಾಗಶಃ ಜೀರ್ಣವಾದ ಆಹಾರದೊಡನೆ ಇರುವ ಜಠರಾಮ್ಲವನ್ನು (ಹೈಡ್ರೋಕ್ಲೋರಿಕ್ ಆಮ್ಲ) ಶಮನ ಮಾಡುತ್ತದೆ. (ನೋಡಿ: ಪಚನಕ್ರಿಯೆ)




ಮೇದೋಜೀರಕಾಂಗದ ಅಂತಃಸ್ರಾವಭಾಗ ಲ್ಯಾಂಗರ್‌ಹ್ಯಾನ್ಸ್‌ನ ಕಿರುದ್ವೀಪಗಳಿಂದಾಗಿದೆ. (ಐಲೆಟ್ಸ್ ಆಫ್ ಲ್ಯಾಂಗರ್‌ಹ್ಯಾನ್ಸ್) ಇಂಥವುಗಳ ಸಂಖ್ಯೆ ಸರಾಸರಿ ಒಂದು ದಶಲಕ್ಷ. ಇವು ತೊಳೆಗಳ ನಡುವೆ ಅಲ್ಲಲ್ಲಿವೆ. ಬಾಲದಲ್ಲಿ ಹೆಚ್ಚು ದ್ವೀಪಗಳು ಚಿಕ್ಕವಾಗಿದ್ದು ಕೆಲವು ಕಣಗಳ ಗೊಂಚಲುಗಳಾಗಿರಬಹುದು. ದೊಡ್ಡವು 3 ಮಿಮೀ ಗಾತ್ರ ಇರಬಹುದು. ದ್ವೀಪಗಳಲ್ಲಿ ಲೋಮರಕ್ತ ನಾಳಗಳಿವೆ. ಬಂಧನಾಂಗಾಂಶದ ಒಳಕಟ್ಟು ನವುರಾಗಿದೆ. ಗ್ರಂಥಿಯ ಮೇಲ್ಕವಚವೂ ಗಟ್ಟಿಯಾದುದಲ್ಲ. ದ್ವೀಪಗಳ ಕೋಶಗಳು ಕಡಿಮೆ ಬಣ್ಣ ತೆಗೆದುಕೊಳ್ಳುತ್ತವೆ. ಆಲ್ಫ, ಬೀಟ. ಗಾಮ ಹಾಗೂ ಡೆಲ್ಟ ಎಂದು ನಾಲ್ಕು ವಿಧ ಕೋಶಗಳಿವೆ.

ಇವುಗಳಲ್ಲಿ ಬೀಟಾ ಮತ್ತು ಆಲ್ಫ ಕೋಶಗಳು ಪ್ರಮುಖವಾಗಿದ್ದು, ಅನುಕ್ರಮವಾಗಿ ಇನ್ಸುಲಿನ್ ಮತ್ತು ಗ್ಲುಕಾಗಾನ್ ಹಾರ್ಮೋನಗಳನ್ನು ಸ್ರವಿಸುತ್ತವೆ. ಈ ಹಾರ್ಮೋನುಗಳು ರಕ್ತ ಪರಿಚಲನೆಯ ಮೂಲಕ ದೇಹದ ಇತರ ಭಾಗಗಳಿಗೆ ಸೇರಿ, ಕೋಶಗಳನ್ನು ಪ್ರಚೋದಿಸುತ್ತವೆ. ಇನ್ಸುಲಿನ್ ರಕ್ತದಲ್ಲಿಯ ಸಕ್ಕರೆ (ಗ್ಲುಕೋಸ್) ದೇಹದ ಎಲ್ಲಾ ಜೀವಕೋಶಗಳೊಳಗೆ ಸೇರಿಕೊಳ್ಳಲು ಹಾಗೂ ಅದರಿಂದ ಶಕ್ತಿಉತ್ಪದನೆಯಾಗಲು ಸಹಾಯಕವಾಗಿದೆ. ಇದಲ್ಲದೆ ರಕ್ತದಲ್ಲಿರುವ ಹೆಚ್ಚಿನ ಸಕ್ಕರೆ, ಯಕೃತ್ ಅನ್ನು ಸೇರಿ 'ಗ್ಲೈಕೋಜನ್' ಆಗಿ ಪರಿವರ್ತನೆಯಾಗಿ, ಶೇಖರಣೆಯಾಗಲು ಪ್ರಚೋದಿಸಿ, ರಕ್ತದ ಸಕ್ಕರೆಯ ಪ್ರಮಾಣವನ್ನು ಕುಗ್ಗಿಸುತ್ತದೆ. ಗ್ಲುಕಾಗಾನ್, ರಕ್ತದಲ್ಲಿ ಸಕ್ಕರೆಯ ಪ್ರಮಾಣ ಕುಗ್ಗಿದಾಗ, ಸ್ರವಿಸಲ್ಪಟ್ಟು, ಯಕೃತ್ತಿನಲ್ಲಿ ಶೇಖರವಾಗಿರುವ ಗ್ಲೈಕೋಜನ್‌ನ್ನು ಗ್ಲುಕೊಸ್ (ಸಕ್ಕರೆ)ಗೆ ಪರಿವರ್ತಿಸಿ, ರಕ್ತವನ್ನು ಸೇರುವಂತೆ ಪ್ರಚೋದಿಸುತ್ತದೆ. ಈ ಕಾರ್ಯದಲ್ಲಿ ಅಸಮತೋಲನವಾದರೆ (ಡಯಬಿಟಿಸ್) ಉಂಟಾಗುವುದು.

ರಕ್ತನಾಳಗಳು: ಮೇದೋಜೀರಕಾಂಗದ ರಕ್ತಪೂರೈಕೆ ಪ್ಲೀಹ ಧಮನಿಯ ಶಾಖೆಗಳಿಂದಾಗುತ್ತದೆ. ಮೇಲಿನ ರಕ್ತವೂ ಪ್ಲೀಹ ಸಿರೆಯ ಮೂಲಕ ದ್ವಾರ (ಯಕೃತ್) ಸಿರೆಗೆ ಹೋಗುತ್ತವೆ. ಗ್ರಂಥಿ ದುಗ್ಧನಾಳಗಳೂ ಸಿರೆಗಳ ಜೊತೆ ಹೋಗುತ್ತವೆ.

ನರಗಳು : ಸ್ವಯಂಚಾಲಕ ನರಗಳೂ ತಂತುಗಳೂ ಮೇದೋಜೀರಕಾಂಗಕ್ಕೆ ಪೂರೈಸುತ್ತದೆ. ಅನುಕಂಪನರಗಳು ರಕ್ತನಾಳಗಳಿಗೆ ಹೋಗುತ್ತವೆ. ಇವುಗಳ ಚೋದನೆಯಿಂದ ನಾಳಗಳು ಸಂಕೋಚಿಸಿ ಕಿರಿದಾಗಿ ರಕ್ತಪೂರೈಕೆ ಕಡಿಮೆ ಆಗುತ್ತದೆ. ಸಂವೇದನೆ ನರತಂತುಗಳು ಒಳಾಂಗ ನರಗಳನ್ನು ಸೇರುತ್ತವೆ. ಗ್ರಂಥಿಕಾರ್ಯಗಳು ಪ್ರಜ್ಞೆಗೆ ತಿಳಿಯುವುದಿಲ್ಲ. ಪ್ರಜ್ಞೆಯ ಅಧೀನದಲ್ಲೂ ಇಲ್ಲ. (ಎಂ.ಡಿ.)

**ಮೇಯರ್‌ಹಾಫ್, ಆಟೋ ಫ್ರೀಟ್ಸ್ (1884–1951):** ಜರ್ಮನ್ ಸಂಜಾತ ಅಮೇರಿಕನ್ ಶರೀರಕ್ರಿಯಾ ಹಾಗೂ ಜೈವಿಕರಸಾಯನವಿಜ್ಞಾನಿ. ಸ್ನಾಯುಗಳ ಸಂಕುಚನ ಆಕುಂಚನಗಳಲ್ಲಿ ಕ್ರಮಾಗತವಾಗಿ ಜರಗುವ ರಾಸಾಯನಿಕ ಹಾಗೂ ಉಷ್ಣತೆಯ ಬದಲಾವಣೆಗಳನ್ನು ಪರಸ್ಪರ ಅನ್ವಯಿಸಿ ವಿಶದಗೊಳಿಸಿದ್ದಕ್ಕಾಗಿ ಇವನಿಗೂ ಇಂಗ್ಲೆಂಡಿನ ಶರೀರಕ್ರಿಯಾವಿಜ್ಞಾನಿ ಎ.ವಿ. ಹಿಲ್ ಎಂಬುವನಿಗೂ ಒಟ್ಟಿಗೆ ವೈದ್ಯ ಹಾಗೂ ಶರೀರಕ್ರಿಯಾವಿಜ್ಞಾನ ವಿಭಾಗದ, 1921ರ ನೊಬೆಲ್ ಪಾರಿತೋಷಕ ಸಂದಿತು (1922). ಈ ಬಗ್ಗೆ ಅನಂತರ ಅನೇಕ ತಪಶೀಲುಗಳ ಆವಿಷ್ಕಾರವಾಗಿದ್ದರೂ ಇವರ ಮೂಲಭೂತ ವಿವರಗಳಿಗೆ ಯಾವುದೇ ಚ್ಯುತಿ ಬಂದಿಲ್ಲ.

ಇವನ ತಂದೆ ಫೆಲಿಕ್ಸ್ ಒಬ್ಬ ವರ್ತಕ. ತಾಯಿ ಬೆಟ್ಟಿನ ಮೇ. ಈ ದಂಪತಿಗಳಿಗೆ ಜರ್ಮನಿಯ ಹ್ಯಾನೋವರಿನಲ್ಲಿ 1884 ಏಪ್ರಿಲ್ 12ರಂದು ಮೇಯರ್ ಹಾಫ್ ಹುಟ್ಟಿದ. ಇವನ ವಿದ್ಯಾಭ್ಯಾಸ ಬರ್ಲಿನ್, ಫೀಬರ್ಗ್ ಮತ್ತು ಸ್ಟ್ರಾಸ್‌ಬರ್ಗ್‌ಗಳಲ್ಲಿ ನಡೆಯಿತು. ಮನಃಶಾಸ್ತ್ರ, ತತ್ತ್ವಶಾಸ್ತ್ರಗಳಲ್ಲಿ ಪರಿಣತನಾಗಬೇಕೆಂದು ಈತ ಅಲ್ಲಿ ವಿದ್ಯಾಭ್ಯಾಸ ನಡೆಸಿದ್ದ. ಆದರೆ ಲೂಡಾಲ್ಡ್ ಕ್ರೆಹ್ಲ್ ಎಂಬ ವೈದ್ಯನ ಖಾಸಗಿ ವೈದ್ಯಸಂಸ್ಥೆಯಲ್ಲಿ ಈತ ಆಟೋ ವಾರ್‌ಬರ್ಗ್ ಎಂಬ ಘನ ಜೈವಿಕರಸಾಯನವಿಜ್ಞಾನಿಯ ಪ್ರಭಾವಕ್ಕೆ ಒಳಗಾಗಿ ತತ್ತ್ವಶಾಸ್ತ್ರ, ಮನಃಶಾಸ್ತ್ರಗಳನ್ನು ಕೈಬಿಟ್ಟು ಜೈವಿಕರಸಾಯನ ವಿಜ್ಞಾನದ ವ್ಯಾಸಂಗದಲ್ಲಿ ಆಸಕ್ತನಾದ. ಈತ ಹೈಡಲ್‌ಬರ್ಗ್ ವಿದ್ಯಾಲಯದ ಎಂ.ಡಿ. ಪದವಿ ಪಡೆದು (1909) ಕೀಲ್ ಎಂಬಲ್ಲಿ ಶರೀರಕ್ರಿಯಾವಿಜ್ಞಾನ ಹಾಗೂ ಭೌತರಸಾಯನವಿಜ್ಞಾನ ಅಧ್ಯಾಪಕನಾಗಿ ನೇಮಕಗೊಂಡ. ಮುಂದೆ ಕೆಲವು ವರ್ಷಗಳು ಬರ್ಲಿನ್ ವೈದ್ಯಕೀಯ ಕಾಲೇಜಿನಲ್ಲೂ ಅನಂತರ 1929ರಿಂದ ಹೈಡಲ್‌ಬರ್ಗಿನ ಕೈಸರ್ ವಿಲ್‌ಹೆಲ್ಮ್ ವೈದ್ಯಕೀಯ ಸಂಸ್ಥೆಯಲ್ಲೂ ಶರೀರಕ್ರಿಯಾ ವಿಜ್ಞಾನ ಪ್ರಾಧ್ಯಾಪಕನಾಗಿ ಸೇವೆಗೈದ. ಜರ್ಮನಿಯಲ್ಲಿ ನಾಜಿಗಳ ಪ್ರಾಬಲ್ಯ ಹೆಚ್ಚಿದಂತೆ ಮಿಕ್ಕ ಅನೇಕ ಯಹೋದ್ಯರಂತೆ ಮೇಯರ್‌ಹಾಫನೂ 1938ರಲ್ಲಿ ಜರ್ಮನಿಯನ್ನು ಬಿಟ್ಟು ಪ್ಯಾರಿಸ್ಸನ್ನು ಸೇರಬೇಕಾಯಿತು. ಆದರೆ 1940ರಲ್ಲಿ ಅಲ್ಲಿಂದಲೂ ಓಡಿ ಹೋಗಬೇಕಾಗಿ ಬಂದು ಅಮೇರಿಕದ ಪೆನ್ಸಿಲ್‌ವೇನಿಯ ರಾಜ್ಯದ ಫಿಲಡೆಲ್ಫಿಯ ಸೇರಿದ. ಅಲ್ಲಿ ಪೆನ್ಸಿಲ್‌ವೇನಿಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ನೇಮಕಗೊಂಡು ತನ್ನ ಅಂತಿಮಕಾಲದ ತನಕವೂ ಅಲ್ಲಿಯೇ ಪಾಠಪ್ರವಚನ ಸಂಶೋಧನೆಗಳಲ್ಲಿ ತೊಡಗಿದ್ದ.

ಆಕ್ಸಿಜನ್ ವಾತಾವರಣದಲ್ಲಿ ಸ್ನಾಯು ಸಂಕುಚಿಸುತ್ತಿರುವಾಗ ಅದಕ್ಕೆ ಅಗತ್ಯವಾದ ಶಕ್ತಿ (ಎನರ್ಜಿ) ಸ್ನಾಯುವಿನ ಗ್ಲೈಕೋಜೆನ್ ಎಂಬ ರಾಸಾಯನಿಕ ಲ್ಯಾಕ್ಟಿಕ್ ಆಮ್ಲವಾಗಿ ವಿಚ್ಛೇದನಗೊಳ್ಳುವುದರಿಂದ ದೊರೆಯುತ್ತದೆಯೆಂದು ಮೇಯರ್‌ಹಾಫ್ ನಿರೂಪಿಸಿದ (1919). ಅಲ್ಲದೆ ಸಂಕುಚನಾನಂತರ ವಿಶ್ರಾಂತ ಸಮಯದಲ್ಲಿ ಆಕ್ಸಿಜನ್ ದೊರೆತರೆ ಲ್ಯಾಕ್ಟಿಕ್ ಆಮ್ಲದಲ್ಲಿ 1/5 ಭಾಗ ಉತ್ಕರ್ಷಣೆಗೊಂಡು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಪರಿಣಮಿಸುತ್ತೆದೆಂದೂ, ಆಗ ಬಿಡುಗಡೆಯಾದ ಶಕ್ತಿ ಮಿಕ್ಕ 4/5 ಭಾಗ ಲ್ಯಾಕ್ಟಿಕ್ ಆಮ್ಲವನ್ನು ಗ್ಲೈಕೋಜೆನ್ನಾಗಿ ಮತ್ತೆ ಪರಿವರ್ತಿಸುತ್ತದೆಂದೂ ವಿಶದಪಡಿಸಿದ.

ಇಂಗ್ಲೆಂಡಿನ ಶರೀರಕ್ರಿಯಾವಿಜ್ಞಾನಿ ಎ.ವಿ. ಹಿಲ್ ಎಂಬವ ಸ್ನಾಯು ಸಂಕುಚನ–ಆಕುಂಚನದಲ್ಲಿ ಆಗುವ ಉಷ್ಣತಾವ್ಯತ್ಯಾಸಗಳನ್ನು (ಅವು ಅತ್ಯಲ್ಪವಾಗಿದ್ದರೂ) ನಿಖರವಾಗಿ ವಿವರಿಸಿದ್ದ (1913–14). ಈ ವ್ಯತ್ಯಾಸಗಳನ್ನು ಮೇಯರ್‌ಹಾಫ್ ತಾನು ವಿಶದೀಕರಿಸಿದ್ದ ರಾಸಾಯನಿಕ ಬದಲಾವಣೆಗಳಿಗೆ ಅನ್ವಯಮಾಡಿ ಅರ್ಥವತ್ತಾಗಿ ವ್ಯಾಖ್ಯಾನ ನೀಡಿದ. ಇದಕ್ಕಾಗಿ ಇವನಿಗೂ ಹಿಲ್‌ಗೂ ಜಂಟಿಯಾಗಿ ನೊಬೆಲ್ ಪಾರಿತೋಷಿಕ ಲಭಿಸಿತು.

ಈ ರಾಸಾಯನಿಕ ಮಾರ್ಪಾಡುಗಳಿಗೆ ಅಗತ್ಯವಾದ ಕಿಣ್ವಗಳ ಮಿಶ್ರಣವನ್ನು ಸ್ನಾಯುವಿನಿಂದ ಬೇರ್ಪಡಿಸಿ ಅವು ಪ್ರಯೋಗಾಲಯದಲ್ಲೂ ತಮ್ಮ ಕ್ರಿಯಾ ಸಾಮರ್ಥ್ಯವನ್ನು ಹೊಂದಿರುವುದೆಂದು ಮೇಯರ್‌ಹಾಫ್ ನಿರೂಪಿಸಿದ. ದ್ರಾಕ್ಷಾರಸದ ಸಕ್ಕರೆಯನ್ನು ಯೀಸ್ಟ್ ಕೋಶಗಳು ಆಲ್ಕೊಹಾಲನ್ನಾಗಿ ಪರಿವರ್ತಿಸುವುದು ಅವುಗಳ ಅವ್ಯಕ್ತ ಜೈವಿಕ ಸಾಮರ್ಥ್ಯದಿಂದಲ್ಲ; ಬದಲು ಅವುಗಳಲ್ಲಿರುವ ಕಿಣ್ವದ ರಾಸಾಯನಿಕ ಕ್ರಿಯೆಯಿಂದ. ಕಿಣ್ವವನ್ನು ಕೋಶರಹಿತವಾಗಿ ಪಡೆದು ಪ್ರಯೋಗ ನಳಿಕೆಯಲ್ಲಿ ಸಕ್ಕರೆ ದ್ರಾವಣ ದೊಡನೆ ಸೇರಿಸಿ ಬೆಚ್ಚಗೆ ಇಟ್ಟಿದ್ದರೆ, ಸಕ್ಕರೆ ದ್ರಾವಣ ಮದ್ಯಸಾರವಾಗಿ ಪರಿವರ್ತಿತವಾಗುತ್ತದೆ ಎಂದು ಆಗ ಭಾವಿಸಲಾಗಿತ್ತು. ಕಿಣ್ವಗಳು ತಮ್ಮ ಮಾತೃಕೋಶಗಳ ಹೊರಗೇ ಇದ್ದರೂ ತಮಗೆ ವಿಶಿಷ್ಟವಾದ ರಾಸಾಯನಿಕ ಪರಿವರ್ತನೆಗಳನ್ನು ನಡೆಸಬಲ್ಲವಾದ್ದರಿಂದ ಜೈವಿಕವಾಗಿ ನಡೆಯುವ ರಾಸಾಯನಿಕ ಕ್ರಿಯೆಗಳೂ ಇವುಗಳಿಂದಲೇ ಜರುಗುವುದು ನಿಜ. ಅಂಥ ರಾಸಾಯನಿಕ ಕ್ರಿಯೆಗಳಿಗೆ ಅವ್ಯಕ್ತ ಜೈವಿಕಪ್ರಭಾವ ಅಗತ್ಯ ಎಂದು ಭಾವಿಸುವುದು ತಪ್ಪು : ಜೈವಿಕ ಕ್ರಿಯೆಗಳೆಲ್ಲವೂ ಮೂಲಭೂತವಾಗಿ ರಾಸಾಯನಿಕ, ಭೌತಿಕ ಕ್ರಿಯೆಗಳು ಎಂದು ಮೇಯರ್‌ಹಾಫ್ ಒತ್ತಿ ಒತ್ತಿ ಹೇಳುತ್ತಿದ್ದ. ಈ ವಿಚಾರಸರಣಿಯನ್ನು ಮೇಯರ್‌ಹಾಫ್‌ನ ಶಿಷ್ಯರಾದ ಲಿಪ್‌ಮನ್ ಮತ್ತು ಓಕೋವ ಎಂಬುವವರೂ ಮುಂದುವರಿಸಿದರು. ಅದನ್ನು ಅನುಸರಿಸಿ ಜೈವಿಕ ರಾಸಾಯನಿಕ ವ್ಯಾಸಂಗಗಳಲ್ಲಿ ಸಂಶೋಧನೆಗಳನ್ನು ಮಾಡಿ ಅವರಿಬ್ಬರೂ ಬೇರೆ ಬೇರೆಯಾಗಿ ನೊಬೆಲ್ ಪಾರಿತೋಷಿಕ ಪಡೆದರು.

ಯೀಸ್ಟ್‌ನಿಂದ ಸಕ್ಕರೆ ಮದ್ಯಸಾರವಾಗುವುದರಲ್ಲೂ ಸ್ನಾಯುಗಳಲ್ಲಿ ಗ್ಲೈಕೋಜೆನ್ ಲ್ಯಾಕ್ಟಿಕ್ ಆಮ್ಲವಾಗುವುದರಲ್ಲೂ ವಿವಿಧ ಹಂತಗಳು ಸಮಾನವಾಗಿರುತ್ತವೆ ಎಂಬುದು ಮುಂದೆ ವ್ಯಕ್ತಪಟ್ಟಿತು. ಕ್ರಿಯಾಟಿನ್ ಫಾಸ್ಫೇಟ್ (ಸಿ. ಪಿ. 1926ರಲ್ಲಿ) ಮತ್ತು ಆಡಿನೊಸಿನ್ ಟ್ರೈಫಾಸ್ಫೇಟ್ (ಎ.ಟಿ.ಪಿ. 1929ರಲ್ಲಿ) ಎಂಬ ರಸಾಯನಿಕಗಳು, ಕ್ಷಿಪ್ರವಿಭಜನೆಗೊಂಡು ಶಕ್ತಿಯನ್ನು ಬಿಡುಗಡೆ ಮಾಡಬಲ್ಲ ಸಾಮರ್ಥ್ಯ ಹೊಂದಿದ್ದು ಅಲ್ಪಪ್ರಮಾಣದಲ್ಲಿಯೇ ಆದರೂ ಸ್ನಾಯುಗಳಲ್ಲಿ ಇರುವುದು ತಿಳಿಯಬಂತು. ಎ.ಟಿ.ಪಿ. ಎಂಬುದು ಎಲ್ಲ ಜೀವಕೋಶಗಳಲ್ಲೂ ಸರ್ವಥಾ ಇದ್ದೇ ಇರುವಂಥ ಘಟಕವೆಂದೂ ಜೈವಿಕ ಕ್ರಿಯೆಗಳಿಗೆ ತಕ್ಷಣ ಅಗತ್ಯವಾದ ಶಕ್ತಿ ಒದಗುವುದಕ್ಕೆ ಎ.ಟಿ.ಪಿ. ಯೇ ಕಾರಣವೆಂದೂ, ಮರುಕ್ಷಣದಲ್ಲಿ ಎ.ಟಿ.ಪಿ. ಮತ್ತೆ ಸಂಯೋಜನೆಗೊಂಡು ಕ್ರಿಯೆ ಮುಂದುವರಿಯುವುದೆಂದೂ ಅರಿವಾಯಿತು. ಶಕ್ತಿ ಅಗತ್ಯವೆನಿಸುವಂಥ ಜೈವಿಕ ಕ್ರಿಯೆಗಳು ಯಾವುದೇ ಪ್ರಾಣಿಯಲ್ಲಾಗಲಿ ಯಾವುದೇ ಸಸ್ಯದಲ್ಲಾಗಲಿ ಎಲ್ಲಕ್ಕೂ ಮೂಲ ಒಂದೇ; ಅದು ಎ.ಟಿ.ಪಿ. ವಿಭಜನೆ ಎಂಬುದು ಸ್ಪಷ್ಟವಾಯಿತು. ಈ ಬಗ್ಗೆ ಮೇಯರ್‌ಹಾಫ್ ಹಾಗೂ ಅವನ ಶಿಷ್ಯರು ವಿಶೇಷವಾಗಿ ಕೆಲಸ ಮಾಡಿದರು. ಮೇಯರ್‌ಹಾಫ್ 6 ಅಕ್ಟೋಬರ್ 1951ರಲ್ಲಿ, ಫಿಲಿಡೆಲ್ಫಿಯದಲ್ಲಿ ಮೃತನಾದ.

***

**ಮೇಹರೋಗಗಳು:** ರೋಗಿಷ್ಠವ್ಯಕ್ತಿಯಿಂದ ನಿರೋಗಿಗೆ ಮುಖ್ಯವಾಗಿ ಸಂಭೋಗಕ್ರಮದಿಂದ ಅಂಟುವ ರೋಗಗಳು (ವೆನೇರಿಯಲ್ ಡಿಸೀಸಸ್). ಇವು ಪ್ರಪಂಚದ ಎಲ್ಲೆಡೆಗಳಲ್ಲೂ ಅನಾದಿಕಾಲದಿಂದಲೂ ಮಾನವನಿಗೆ ಅಂಟಿರುವ ರೋಗಗಳು. ಈ ಅಂಟುರೋಗದ ಚಿಹ್ನೆಗಳು ಲಿಂಗ, ಮೂತ್ರಾಂಗಗಳಲ್ಲಿ ಕಂಡುಬರುವುದರಿಂದ ಇವುಗಳಿಗೆ ಲಿಂಗಮೂತ್ರಾಂಗಗಳ ರೋಗಗಳೆನ್ನಬಹುದು. ಇವು ಅಮಿತ ಹಾಗೂ ಸಂಕೀರ್ಣ ಸಂಭೋಗದಿಂದ ಉತ್ಪನ್ನವಾದವಾದರೂ ಕ್ರಿಮಿಗಳೇ ರೋಗಕಾರಣಗಳೆಂದು 19ನೆಯ ಶತಮಾನದ ಕೊನೆಯ ಭಾಗದಲ್ಲಿ ಮತ್ತು 20 ನೆಯ ಶತಮಾನದ ಪ್ರಾರಂಭದಲ್ಲಿ ಶೋಧಿಸಲಾಯಿತು.

ಮುಖ್ಯವಾದ ಪಂಚ ಮೇಹರೋಗಗಳಲ್ಲಿ ಸಿಫಿಲಿಸ್ ಮತ್ತು ಗನೋರಿಯ ಎಂಬೆರಡು ರೋಗಗಳನ್ನು ಹಿರಿಯಮೇಹವೆಂದು ಸಾಂಕ್ರಾಯ್ಡ್, ಲಿಂಫೋಗ್ರಾನ್ಯುಲೋಮ ವಿನೀರಿಯಮ್ ಮತ್ತು ಗ್ರಾನ್ಯುಲೋಮ ಇಂಗ್ವೈನಲಿ ಎಂಬ ಮೂರು ರೋಗಗಳನ್ನು

ಕಿರಿಯ ಮೇಹವೆಂದು ವಿಂಗಡಿಸಿದೆ. ಇವಲ್ಲದೆ ಇತರ ಮೇಹರೋಗಗಳೂ ಇವೆ: ಕಾಂಡಿಲೋಮ ಆಕ್ಯುಮಿನೇಟ, ಹರ್ಪಿಸ್ ಪ್ರೊಜೆನೈಟಾಲಿಸ್, ವಿಶಿಷ್ಟಕ್ರಿಮಿರಹಿತ ಗನೋರಿಯ, ಕ್ರಿಮಿರಹಿತ ಉರಿಮೂತ್ರ ಇತ್ಯಾದಿ.

ಈ ರೋಗಗಳು ಸಾಮಾನ್ಯವಾಗಿ ಸಂಭೋಗದಿಂದ ಹರಡುವುವಾದರೂ ಚುಂಬನ, ಆಲಿಂಗನ ಮುಂತಾದ ಸಮೀಪಸ್ಪರ್ಶಗಳಿಂದ ಇಲ್ಲವೆ ಸಂಭೋಗ ವಕ್ರತೆಗಳಿಂದ ಒಬ್ಬರಿಂದೊಬ್ಬರಿಗೆ ಹರಡುವುದೂ ಉಂಟು. ರೋಗಗ್ರಸ್ತ ಗಂಡನಿಂದ ಹೆಂಡತಿಗೆ ತಗಲುವುದು. ಈಕೆ ರೋಗಯುತ ಮಕ್ಕಳನ್ನು ಹಡೆಯುತ್ತಾಳೆ. ಈ ಕುಟುಂಬದ ಮಕ್ಕಳಿಗೆಲ್ಲ ಮೇಹ ಆಜನ್ಮಬೇನೆಯಾಗಬಹುದು. ಸಾಮಾಜಿಕ ಆಂದೋಲನ ಮತ್ತು ಯುದ್ಧಕಾಲದಲ್ಲಿ ಅನೈತಿಕ ಸಂಭೋಗಗಳು ವಿಪರೀತವಾಗಿ ಲೈಂಗಿಕ ರೋಗಗಳು ವ್ಯಾಪಕವಾಗಿ ಹರಡುತ್ತವೆ. ಕೆಲವು ಕಾಡು ಜನರಲ್ಲಿ ರೋಗಗಳು ಹೊಸದಾಗಿ ಕಾಣಿಸಿಕೊಂಡು ಆ ಜನಸಮೂಹವನ್ನು ನಾಶಮಾಡಿವೆ. ಈ ರೋಗಗಳಿದ್ದ ಕುಟುಂಬಗಳಲ್ಲಿ ಕಿವುಡ, ಕುರುಡ ಮತ್ತು ಹೆಳವರು ಬಹಳ ಇರುವರು. ಅವರಲ್ಲಿ ಕೆಲವರಿಗೆ ಮಿದುಳಿನ ರೋಗಗಳು ಇಲ್ಲವೆ ಪಾಲ್ಸಿ ರೋಗಗಳುಂಟಾಗಬಹುದು. ಹಿಂದುಳಿದ ಜನಾಂಗಗಳಲ್ಲಿ ಈ ರೋಗಗಳನ್ನು ಅಧಿಕವಾಗಿ ಕಾಣಬಹುದು. ಅಜ್ಞಾನಿ ಜನರಲ್ಲಿ ಇವು ಸ್ಥಳೀಕವಾಗಿ ನೆಲೆಸುತ್ತವೆ. ವೇಶ್ಯಾವೃತ್ತಿಯ ಸೊತ್ತಾದ ಈ ರೋಗಗಳನ್ನು ವೇಶ್ಯೆಯರು ಒಬ್ಬ ಗಿರಾಕಿಯಿಂದ ಇನ್ನೊಬ್ಬನಿಗೆ, ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾಯಿಸುವ ಮಾಧ್ಯಮವಾಗಿದ್ದು ಕೆಲವೇ ದಿವಸಗಳಲ್ಲಿ ರೋಗ ಸರ್ವವ್ಯಾಪಕವಾಗಿ ಹರಡಬಲ್ಲುದು.

ಮೇಹರೋಗ ಬರಲು ಸಮಾಜದ ಕುಂದುಕೊರತೆ ಕಾರಣವಾಗಿ ಅತಿಸಂಭೋಗಪ್ರಿಯತೆ ಮತ್ತು ಅತಿಸಂಭೋಗ ಹಾಗೂ ಸಂಕೀರ್ಣಸಂಭೋಗಕ್ಕೆ ಅನುಕೂಲವಿರುವುದೇ ಮುಖ್ಯ ಕಾರಣಗಳು. ಮನೆ ಬಿಟ್ಟು ದೂರ ಹೋಗಿ ಕೆಲಸ ಮಾಡುವವರಲ್ಲಿ ಮತ್ತು ಸಂಚಾರಿಜನಾಂಗದಲ್ಲಿ, ಮನೋರೋಗಗಳು ಹೆಚ್ಚಿದ್ದರೆ, ವಿದ್ಯಾಹೀನರು ಹೆಚ್ಚಿದ್ದರೆ ಅಧಿಕಜನ ರೋಗಗಳಿಗೀಡಾಗುತ್ತಾರೆ. ಇತ್ತೀಚಿಗೆ ಸಲಿಂಗಪ್ರಿಯತೆ ಹೆಚ್ಚಾಗಿ ಗಂಡಸು ಇನ್ನೊಬ್ಬ ಗಂಡಸಿಗೆ, ಸ್ತ್ರೀ ಮತ್ತೊಬ್ಬ ಸ್ತ್ರೀಗೆ ರೋಗವನ್ನು ಪಸರಿಸುತ್ತಿದ್ದಾರೆ.

ಪ್ರಥಮ ಚಿಹ್ನೆಗಳು ಬಾಹ್ಯಜನನಾಂಗ ಮತ್ತು ಮೂತ್ರಾಂಗಗಳಲ್ಲಿ ಕಂಡರೂ ಈ ರೋಗಗಳ ಪರಿಣಾಮಗಳನ್ನು ದೇಹದೆಲ್ಲೆಡೆಗಳಲ್ಲಿಯೂ ಕಾಣಬಹುದು. ರೋಗಫಲವಾಗಿ ಸ್ತ್ರೀ ಬಂಜೆಯಾಗಿ ಪುರುಷ ಷಂಡನಾಗಿ ಮಾರ್ಪಡಬಹುದು. ಇಲ್ಲವೆ ಲಿಂಗ ಮೂತ್ರಾಂಗಗಳು ಕ್ಷೀಣವಾಗಿ ವಿಕಾರಹೊಂದಿ ಕೃಶವಾಗಿ ಕೊಳೆತು ನಾಶವಾಗಬಹುದು.

ಕೆಲವೆಡೆಗಳಲ್ಲಿ ಮೇಹರೋಗಿಯಾದವ ಕನ್ಯೆಯರ ಸಂಭೋಗದಿಂದ ರೋಗ ವಿಮುಕ್ತನಾಗುವೆನೆಂದು ತಿಳಿದು ಬಲಾತ್ಕಾರ ಸಂಪರ್ಕ ಮಾಡುವುದುಂಟು. ಈ ಮೂಢ ನಂಬಿಕೆಯ ಪರಿಣಾಮವಾಗಿ ಏನೂ ತಿಳಿಯದ ಶಿಶು ಹಾಗೂ ಕನ್ಯೆ ಬಲವಂತವಾಗಿ ರೋಗಪೀಡಿತರಾಗುತ್ತಾರೆ. ಸಾಮಾಜಿಕ ಪ್ರಜ್ಞೆ, ಕಳಕಳಿ ಮತ್ತು ಯೋಗ್ಯ ಶಿಕ್ಷಣಗಳಿಂದ ಮಾತ್ರ ಇಂಥ ಕ್ರೌರ್ಯವನ್ನು ನಿವಾರಿಸಬಹುದು.

ಪ್ರಾರಂಭದ ಚಿಹ್ನೆಗಳನ್ನರಿತು ರೋಗಗಳ ಪ್ರಥಮಾವಸ್ಥೆಯಲ್ಲೇ ಯುಕ್ತ ಚಿಕಿತ್ಸೆಯನ್ನಿತ್ತಲ್ಲಿ ರೋಗಿ ಸಂಪೂರ್ಣ ಗುಣಮುಖನಾಗಬಹುದು. ತಾವು ಎಂದಿಗೂ ಗುಣಹೊಂದಲಾರೆವೆಂದು ಮೇಹರೋಗದ ಅಂಜಿಕೆಯಿಂದ ಭಯಭೀತರಾಗಿ ಜೀವವನ್ನೆ ನಿರರ್ಥಕಗೊಳಿಸುತ್ತಿರುವ ಕೆಲವರನ್ನು ಸಮಾಜ ಕಾರ್ಯಕರ್ತರು ತಿದ್ದಲು ಸಾಧ್ಯ.

(ಎನ್.ಕೆ.ಎಮ್.)

**ಮೈನ:** ಏವೀಸ್ ವರ್ಗ, ನಿಯೊನ್ಯಾತೆ ಉಪವರ್ಗ, ಪ್ಯಾಸೆರಿಫಾರ್ಮಿಸ್ ಗಣದ ಸ್ಟರ್ನಿಡೆ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಹಕ್ಕಿಗಳ ಸಾಮಾನ್ಯ ಹೆಸರು. ಇದರಲ್ಲಿ ಆಕ್ರಿಡೊತೀರಸ್, ಸ್ಟರ್ನಸ್, ಗ್ರ್ಯಾಕುಲ, ಸಾರೊಗ್ಲಾಸ್, ಮಿನೊ ಮತ್ತು ಏಪ್ಲಾನಿಸ್ ಎಂಬ ಆರು ಜಾತಿಗಳೂ ಇವುಗಳಿಗೆ ಸೇರಿದ ಒಟ್ಟು ಸುಮಾರು 18 ಪ್ರಭೇದಗಳೂ ಉಂಟು. ಇವುಗಳ ಪೈಕಿ ಪ್ರಧಾನ ಬಗೆಯೆನಿಸಿಕೊಂಡಂಥವು ಆಕ್ರಿಡೊತೀರಸ್ ಟ್ರಿಸ್ಟಿಸ್ (ಸಾಮಾನ್ಯ ಮೈನ), ಆಕ್ರಿಡೋತೀರಸ್ ಬೆಂಜಿಯಾನಸ್ (ಬ್ಯಾಂಕ್ ಮೈನ), ಆಕ್ರಿಡೋತೀರಸ್ ಫಸ್ಕಸ್ (ಕಾಡುಮೈನ), ಸ್ಟರ್ನಸ್ ಪಗೋಡಾರಮ್ (ಕಪ್ಪು ತಲೆಯ ಮೈನ), ಸ್ಟರ್ನಸ್ ರೋಸಿಯಸ್ (ಸ್ಟಾರ್ಲಿಂಗ್ ಅಥವಾ ರೋಸಿ ಪ್ಯಾಸ್ಟರ್) ಮತ್ತು ಗ್ರ್ಯಾಕುಲ ರಿಲಿಜಿಯೋಸ (ಬೆಟ್ಟದ ಮೈನ). ಸಾಮಾನ್ಯವಾಗಿ ಮೈನ ಗಾತ್ರದಲ್ಲಿ ಬುಲ್ ಬುಲ್ ಮತ್ತು ಪಾರಿವಾಳಗಳ ಮಧ್ಯೆ ಅಂದರೆ ಸುಮಾರು 20 ಸೆಂಮೀ ಉದ್ದವಿರುವುದು. ಇದಕ್ಕೆ ಗೊರವಂಕ ಎಂಬ ಹೆಸರೂ ಉಂಟು. ದೇಹದ ಬಣ್ಣ ಕಪ್ಪು ಮಿಶ್ರಿತ ಕಂದು. ತಲೆ ಕಪ್ಪು ಬಣ್ಣದ್ದು. ಕೊಕ್ಕು ಮತ್ತು ಕಾಲುಗಳು ಹಳದಿ ಬಣ್ಣದವು. ಕಣ್ಣುಗಳ ಸುತ್ತ ಗರಿಗಳಿಲ್ಲ. ಹಾರುವಾಗ ರೆಕ್ಕೆಗಳಲ್ಲಿ ಬಿಳಿ ಬಣ್ಣದ ಗುರುತು ಕಾಣುತ್ತದೆ. ಸಾಮಾನ್ಯ ಮೈನ ಭಾರತಾದ್ಯಂತ ಕಾಣಸಿಗುವ ಹಕ್ಕಿ.

ಕಾಗೆ, ಗುಬ್ಬಚ್ಚಿ, ಹದ್ದುಗಳಂತೆಯೇ ಮೈನ ಜನನಿಬಿಡ ಪ್ರದೇಶಗಳಲ್ಲಿ ಯಾವ ಭಯವೂ ಇಲ್ಲದೆ ವಾಸಿಸುವುದನ್ನು ಕಾಣಬಹುದು. ಕಾಳು, ವಿವಿಧ ಬಗೆಯ ಹಣ್ಣು, ಕೀಟಗಳು ಇತ್ಯಾದಿ ಇದರ ಆಹಾರ. ಹುಲ್ಲುಗಾವಲು ಇಲ್ಲವೇ ಹೊಲಗಳಲ್ಲಿ ಮಿಡತೆಗಳನ್ನು ಹಿಡಿದು ತಿನ್ನುವುದಲ್ಲದೆ ಹೊಲ, ತೋಟ ಇತ್ಯಾದಿಗಳನ್ನು ಉಳುವಾಗ ದೊರೆಯುವ ಕೀಟ, ಎರೆಹುಳುಗಳನ್ನು ಆರಿಸಿ ತಿನ್ನುತ್ತದೆ. ಪ್ರತಿ ದಿನ ಸಂಜೆ ಸೂರ್ಯಾಸ್ತದ ವೇಳೆ ಬಳಗದ ಎಲ್ಲ ಹಕ್ಕಿಗಳೂ ಯಾವುದಾದರೂ ಆಯ್ದ ದೊಡ್ಡ ಮರದಲ್ಲೋ ತೆಂಗಿನ ತೋಪುಗಳಲ್ಲೋ ಕಬ್ಬಿನ ಗದ್ದೆಗಳಲ್ಲೋ ಕಲೆತು ರಾತ್ರಿ ವಿಶ್ರಮಿಸುವುವು. ಆಕ್ರಿಡೊತೀರಸ್ ಜಿಂಜಿಯಾನಸ್ ಎಂಬುದು ಟ್ರಿಸ್ಟಿಸ್ ಪ್ರಭೇದಕ್ಕಿಂತ ಗಾತ್ರದಲ್ಲಿ ಸ್ವಲ್ಪ ಚಿಕ್ಕದು. ಸಾಮಾನ್ಯ ಮೈನ ಹಕ್ಕಿಯಂತಿರದೆ ತಿಳಿನೀಲಿ ಮಿಶ್ರಿತ ಬೂದಿ ಬಣ್ಣದ ಗರಿಗಳನ್ನು ಪಡೆದಿದೆ. ಕಣ್ಣಿನ ಸುತ್ತಲಿನ ಚರ್ಮ ತಿಳಿಕೆಂಪು ಬಣ್ಣದಿಂದ ಕೂಡಿದೆ. ಉತ್ತರ ಭಾರತದಲ್ಲಿ ಸಿಂಧ್‌ನಿಂದ ಪೂರ್ವ ಬಂಗಾಲದವರೆಗೂ ದಕ್ಷಿಣದಲ್ಲಿ ಮುಂಬೈವರೆಗೂ ಕಾಣಬರುವುವು. ಇದು ಅಷ್ಟಾಗಿ ವಲಸೆ ಹೋಗುವುದಿಲ್ಲ.

ಸ್ಟರ್ನಸ್ ಪಗೋಡಾರಮ್ ಅಥವಾ ಕಪ್ಪು ತಲೆಯ ಮೈನ ಮತ್ತೊಂದು ಜಾತಿ. ಇದು ಸಾಮಾನ್ಯ ಮೈನಕ್ಕಿಂತ ಸಣ್ಣದು. ಮೈಬಣ್ಣ ಬೂದಿ, ಉದರ ಭಾಗ ಮಾತ್ರ ತಿಳಿಗೆಂಪು. ತಲೆಯ ಮೇಲೆ ಕಪ್ಪು ಬಣ್ಣದ ಶಿಖೆಯುಂಟು. ಭಾರತಾದ್ಯಂತ ಕಾಣದೊರೆಯುತ್ತದೆ. ಕುರುಚಲು ಕಾಡುಗಳ ಬಳಿ ಹೆಚ್ಚು ಸಾಮಾನ್ಯ. ಸಾಧಾರಣವಾಗಿ 6–12 ಹಕ್ಕಿಗಳು ಒಟ್ಟಿಗೆ ತೋಪುಗಳಲ್ಲಿ ಇಲ್ಲವೇ ತೋಟಗಳಲ್ಲಿ ವಾಸಿಸುತ್ತವೆ. ಹಣ್ಣುಗಳು, ಕೀಟ, ಮಿಡತೆಗಳು, ಕಂಬಳಿಹುಳುಗಳನ್ನು ತಿನ್ನುತ್ತದೆ.

ಗ್ರ್ಯಾಕುಲ ರಿಲಿಜಿಯೋಸ ಅಥವಾ ಬೆಟ್ಟದ ಮೈನ ಸಾಮಾನ್ಯ ಮೈನ ಹಕ್ಕಿಗಿಂತ ದೊಡ್ಡದು. ಪೂರ್ತಿ ಕಪ್ಪು ಬಣ್ಣದ ಹಕ್ಕಿಯಿದು. ಕೊಕ್ಕು ಮತ್ತು ಕಾಲುಗಳು ಕಿತ್ತಳೆ ಹಳದಿ ಬಣ್ಣದವು. ಕತ್ತಿನ ಹಿಂಭಾಗ ಮತ್ತು ತಲೆಯ ಪಕ್ಕಗಳಲ್ಲಿ ಕಿತ್ತಳೆ ಬಣ್ಣದ ಗರಿಸಹಿತ ಚರ್ಮ ಉಂಟು. ಘಟ್ಟಪ್ರದೇಶಗಳ ದಟ್ಟ ಕಾಡುಗಳಲ್ಲಿ ವಾಸ. ತುಂಬ ಸದ್ದುಗೈಯುತ್ತ ಕಾಡು ಅತ್ತಿ ಮುಂತಾದ ಹಣ್ಣುಗಳನ್ನು ತಿನ್ನುತ್ತ ಕಾಲ ಕಳೆಯುತ್ತದೆ. ಬಲು ಮಾತುಗಾರ ಹಕ್ಕಿ ಎನಿಸಿದ ಇದು ಬೇರೆ ಹಕ್ಕಿಗಳ ಧ್ವನಿಯನ್ನೂ ಮನುಷ್ಯರ ಮಾತುಗಳನ್ನೂ ಅನುಕರಿಸುತ್ತದೆ. ಹೀಗಾಗಿ ಮೆಚ್ಚಿನ ಪಂಜರ ಹಕ್ಕಿಯಾಗಿ ಇದನ್ನು ಸಾಕುವುದುಂಟು.

ರೋಸಿ ಪ್ಯಾಸ್ಟರ್ ಹಕ್ಕಿ (ಸ್ಟರ್ನಸ್ ರೋಸಿಯಸ್) ಸಾಮಾನ್ಯ ಮೈನ ಹಕ್ಕಿಯ ಗಾತ್ರದ್ದು. ಇದರ ಮೈಬಣ್ಣ ಗುಲಾಬಿಕೆಂಪು. ತಲೆ, ಕತ್ತು, ಎದೆಯ ಮೇಲ್ಭಾಗ, ರೆಕ್ಕೆಗಳು ಮತ್ತು ಬಾಲ ಕಪ್ಪು ಬಣ್ಣದವು. ಉತ್ತರ ಭಾರತ ಮತ್ತು ದಕ್ಷಿಣ ಪ್ರದೇಶದಲ್ಲಿ ಬಲು ಸಾಮಾನ್ಯ. ಚಳಿಗಾಲದಲ್ಲಿ ಭಾರತದಾದ್ಯಂತ ಕಾಣದೊರೆಯುತ್ತದೆ. ಇದು ಕೂಡ ಪ್ರಧಾನವಾಗಿ ಫಲಭಕ್ಷಕ ಪಕ್ಷಿ. ಅಲ್ಲದೆ ಕೀಟ, ಮಿಡತೆಗಳನ್ನೂ ತಿಂದು ಕೃಷಿಕರಿಗೆ ಉಪಕಾರಿ ಎನಿಸಿದೆ. ಜೊತೆಗೆ ಹಲವಾರು ಜಾತಿ ಆಲ, ಅತ್ತಿ ಮರಗಳ ಪರಾಗಾರ್ಪಣ ಕ್ರಿಯೆಗೆ ಸಹಕಾರಿ ಎನಿಸಿದೆ.

(ಎನ್.ಎಂ.)

**ಮೈನೂಟ್, ಜಾರ್ಜ್ ರಿಚರ್ಡ್ (1885–1950) :** ಅಮೆರಿಕನ್ ವೈದ್ಯ. ಆ ಕಾಲಕ್ಕೆ ಮಾರಕ ರೋಗವೆನಿಸಿದ್ದ ಪರ್ನಿಷಿಯಸ್ ಅನೀಮಿಯವನ್ನು (ಮಾರಕ ರಕ್ತಕಣ ಕೊರತೆ) ಯಕೃತ್ತಿನ ಸಾರಪ್ರಯೋಗದಿಂದ ಗುಣಪಡಿಸಬಹುದೆಂಬುದನ್ನು ಪ್ರಾಣಿಗಳ ಮೇಲಿನ ಪ್ರಾಯೋಗಿಕ ವ್ಯಾಸಂಗಗಳಿಂದ ಆವಿಷ್ಕರಿಸಿದ್ದಕ್ಕಾಗಿ ವ್ಹಿಪ್ಪಲ್ ಹಾಗೂ ಮರ್ಫಿ ಎಂಬ ಸಹವೈದ್ಯರೊಡನೆ 1934ರ ನೋಬೆಲ್ ಪಾರಿತೋಷಿಕ ಪಡೆದ.



ಬಾಸ್ಟನ್ ನಗರದಲ್ಲಿ 1885 ಡಿಸೆಂಬರ್ 2ರಂದು ಮೈನೂಟ್ ಜನಿಸಿದ. 1912 ರಲ್ಲಿ ಹಾರ್ವರ್ಡಿನ ಎಂ.ಡಿ. ಪದವಿ ಪಡೆದು ಮುಂದೆ ಮೆಸಾಚೂಸೆಟ್ಸ್ ಜನರಲ್ ಆಸ್ಪತ್ರೆಯಲ್ಲಿಯೂ ಬಾಲ್ಟಿಮೋರಿನ ಜಾನ್ ಹಾಪ್‌ಕಿನ್ಸ್ ಆಸ್ಪತ್ರೆಯಲ್ಲಿಯೂ ಕಿರಿವೈದ್ಯನಾಗಿ ಕೆಲಸಮಾಡಿ ಅನುಭವ ಗಳಿಸಿದ. ಪ್ರಸಿದ್ಧ ಶರೀರ ಕ್ರಿಯಾ ವಿಜ್ಞಾನಿ ವಿಲಿಯಮ್ ಹೊವೆಲ್ಲನ ಕೈಕೆಳಗೆ ಸಂಶೋಧನ ವ್ಯಾಸಂಗದಲ್ಲಿ ನಿರತನಾದ. ಅನಂತರ 1915ರಲ್ಲಿ ಮ್ಯಾಸಚೂಸೆಟ್ಸ್ ಆಸ್ಪತ್ರೆಗೆ ವೈದ್ಯನಾಗಿ ಹಿಂತಿರುಗಿದ. ಅಲ್ಲಿ ರಕ್ತರೋಗಗಳು

ಮತ್ತು ರಕ್ತ ವರ್ಗಾವಣೆ ಎಂಬ ವಿಷಯದ ಬಗ್ಗೆ ಸಂಶೋಧನ ನಿರತನಾದ. 1925ರಲ್ಲಿ ಇವನಿಗೆ ಮಧುಮೂತ್ರ ರೋಗವಿರುವುದು ಪತ್ತೆ ಆಯಿತು. ಆ ತರುಣದಲ್ಲಿ ಬ್ಯಾಂಟಿಂಗ್ ಮತ್ತು ಬೆಸ್ಟ್ ಇವರುಗಳಿಂದ ಆವಿಷ್ಕಾರಗೊಂಡಿದ್ದ ಇನ್ಸುಲಿನ್ ಅನ್ನು ರೋಗಚಿಕಿತ್ಸಕವಾಗಿ ತೆಗೆದುಕೊಂಡ ಮೊದಲಿಗರಲ್ಲಿ ಮೈನೂಟ್ ಒಬ್ಬ. ಇದೇ ಕಾಲದಲ್ಲಿ ಜಿ. ಎಚ್. ವ್ಹಿಪ್ಪಲ್ ಎಂಬ ವಿಜ್ಞಾನಿ ನಾಯಿಗಳಲ್ಲಿ ಪದೇ ಪದೇ ರಕ್ತಸ್ರಾವ ಮಾಡಿಸಿ ರಕ್ತಕಣ ಕೊರತೆಯನ್ನು (ಅನೀಮಿಯ) ಕೃತಕವಾಗಿ ಸೃಷ್ಟಿಸಿ ಯಾವ ಬಗೆಯ ಆಹಾರ ಕೊಟ್ಟರೆ ಎಷ್ಟು ಶೀಘ್ರವಾಗಿ ರಕ್ತಕಣಗಳ ಪುನರುತ್ಪತ್ತಿ ಆಗುತ್ತದೆ ಎಂಬ ವ್ಯಾಸಂಗದಲ್ಲಿ ಹಲವು ವರ್ಷಗಳಿಂದಲೂ ನಿರತನಾಗಿದ್ದ. ಮೈನೂಟ್ ಮತ್ತು ಮರ್ಫಿ ಆಹಾರ ನೀಡಿ ರಕ್ತಕಣ ಕೊರತೆ ನೀಗಿಸುವ ಯೋಜನೆಯನ್ನು ಅಳವಡಿಸಿಕೊಂಡರು. ಮಾರಕ ರಕ್ತಕಣ ಕೊರತೆಯ ರೋಗಿಗಳಿಗೆ ವಿವಿಧ ಆಹಾರಗಳನ್ನು ನೀಡಿ ವ್ಯಾಸಂಗ ನಡೆಸಿದರು. ತಾವು ಅನ್ವೇಷಿಸುತ್ತಿದ್ದ ಅಗತ್ಯ ಘಟಕ ಯಕೃತ್ತಿನಲ್ಲಿ ಇರುವ ಸಂಗತಿ ಆಗ ಅವರಿಗೆ ತಿಳಿಯಿತು. ಮುಂದೆ ಮೈನೂಟ್ ಸೂಜಿಮದ್ದಾಗಿ ಕೊಡಬಲ್ಲ ಸಾರವನ್ನು ಯಕೃತ್ತಿನಿಂದ ಪ್ರತ್ಯೇಕಿಸಿದ. ಬೇರೆ ವಿಜ್ಞಾನಿಗಳು ತದನಂತರದ ವ್ಯಾಸಂಗಗಳನ್ನು ಕೈಕೊಂಡಾಗ ಮಾರಕ ರಕ್ತಕಣ ಕೊರತೆಯನ್ನು ಚಿಕಿತ್ಸೆ ಮಾಡಬಲ್ಲ ಘಟಕ ಯಕೃತ್ತಿನ ಸಾರದಲ್ಲಿರುವ ಜೀವಸತ್ತ್ವ B ಗುಂಪಿಗೆ ಸೇರಿದ ಸೈಯನೊಕೋಬಾಲಮೀನ್ ಅಥವಾ ಜೀವಸತ್ತ್ವ $B_{12}$ ಎಂಬುದು ವೇದ್ಯವಾಯಿತು. ಇದನ್ನು ಪ್ರತ್ಯೇಕಿಸಿ ಇದರ ರಾಸಾಯನಿಕ ಸೂತ್ರ ನಿರ್ಣಯಿಸಿ ಸಂಶ್ಲೇಷಿಸುವುದು ಸಾಧ್ಯವಾಗಿರುವುದರಿಂದ ಇಂದು ಮಾರಕ ರಕ್ತಕಣ ಕೊರತೆಯ ಪೂರಕತ್ವ ಪೂರ್ಣ ನಿವಾರಣೆ ಆಗಿದೆ. ಮೈನೂಟ್ ಮ್ಯಾಸಚೂಸೆಟ್ಸಿನ ಬ್ರೂಕ್‌ಲೈನಿನಲ್ಲಿ 1950 ಫೆಬ್ರುವರಿ 25ರಂದು ನಿಧನನಾದ. (ಎಸ್.ಆರ್.ಆರ್.)

**ಮೊಲ:** ಮ್ಯಾಮೇಲಿಯ ವರ್ಗದ ಲ್ಯಾಗೊಮಾರ್ಫ ಗುಂಪಿನ ಲೆಪೊರಿಡೆ ಕುಟುಂಬಕ್ಕೆ ಸೇರಿದ ಲೀಪಸ್ ಜಾತಿಯ ಪ್ರಾಣಿ (ಹೇರ್). ಕುಂದಿಲಿ (ರ್‍ಯಾಬಿಟ್) ಗಳಿಗೆ ಹತ್ತಿರ ಸಂಬಂಧಿ. ಮೊಲಕ್ಕೂ ಕುಂದಿಲಿಗೂ ಹಲವಾರು ಹೊರ ವ್ಯತ್ಯಾಸಗಳುಂಟು. (ನೋಡಿ– ಕುಂದಿಲಿ)

ಲೀಪಸ್ ಜಾತಿಯಲ್ಲಿ ಸುಮಾರು 26 ಪ್ರಭೇದಗಳಿದ್ದು ಇವು ಯೂರೋಪ್, ಏಷ್ಯದ ಬಹುಭಾಗ, ಆಫ್ರಿಕ, ಉತ್ತರ ಅಮೆರಿಕಗಳಲ್ಲಿ ಕಾಣದೊರೆಯುವುವು. ದಕ್ಷಿಣ ಅಮೆರಿಕ, ಆಸ್ಟ್ರೇಲಿಯ, ನ್ಯೂಜೀಲೆಂಡ್‌ಗಳಲ್ಲಿ ಇವನ್ನು ಬೇರೆಡೆಯಿಂದ ತಂದು ಬಿಡಲಾಗಿದ್ದು ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಜೀವಿಸುತ್ತವೆ. ಈ ಪ್ರಭೇದಗಳ ಪೈಕಿ ಮುಖ್ಯವಾದವು ಲೀ. ಅಮೆರಿಕಾನಸ್ (ಉತ್ತರ ಅಮೆರಿಕದ ಉತ್ತರ ಭಾಗ), ಲೀ. ಯುರೋಪಿಯಸ್ (ಯುರೋಪ್), ಲೀ. ಆರ್ಕ್‌ಟಿಕಸ್ (ಉತ್ತರ ಧ್ರುವಪ್ರದೇಶ), ಲೀ. ನೈಸರ್ಗಿಕಾಲಿಸ್ (ಭಾರತ).



ಭಾರತದಲ್ಲಿ ಸಿಕ್ಕುವ ಮೊಲಕ್ಕೆ ಬ್ಲಾಕ್‌ನೇಘ್ಡ್ ಹೇರ್ ಅಥವಾ ಇಂಡಿಯನ್ ಹೇರ್ ಎಂಬ ಹೆಸರುಂಟು. ಇದರಲ್ಲಿ ಸುಮಾರು 7 ವಿಭಿನ್ನ ಬಗೆಗಳಿದ್ದು ದೇಹದ ಬಣ್ಣ, ಗಾತ್ರಗಳಲ್ಲಿ ವ್ಯತ್ಯಾಸವನ್ನು ಪ್ರದರ್ಶಿಸುವುವು. ಇವುಗಳ ಸರಾಸರಿ ಉದ್ದ 40–50 ಸೆಂಮೀ; ತೂಕ 1.8–3.6 ಕಿಗ್ರಾಂ. ಕತ್ತಿನ ಮೇಲೆ ಅಂದರೆ ಕಿವಿಯಿಂದ ಹಿಡಿದು ಭುಜದವರೆಗೆ ಕಗ್ಗಂದು ಇಲ್ಲವೆ ಕಪ್ಪು ಬಣ್ಣದ ಗುರುತು ಇದೆ. ಬಾಲದ ಮೇಲ್ಮೈ ಕೂಡ ಕಪ್ಪು ; ಬಾಲದ ಉದ್ದ ಸುಮಾರು 10 ಸೆಂಮೀ. ಮುಂಗಾಲುಗಳು ಚಿಕ್ಕವು; ಇವುಗಳಲ್ಲಿ ತಲಾ 5 ಬೆರಳುಗಳಿವೆ. ಹಿಂಗಾಲುಗಳು ಬಲು ಉದ್ದ ; ಇವುಗಳಲ್ಲಿ ತಲಾ 4 ಬೆರಳುಗಳಿವೆ. ಕಿವಿ ಕುಂದಿಲಿಯದಕ್ಕಿಂತ ತುಂಬ ಉದ್ದ.

ಮೊಲಗಳು ಸಸ್ಯಾಹಾರಿಗಳು. ಮೈದಾನ ಪ್ರದೇಶದ ಹುಲ್ಲುಗಾವಲುಗಳು ಇವುಗಳ ಮೆಚ್ಚಿನ ನೆಲೆ. ಹಳ್ಳಿಗಳ, ಕೃಷಿಭೂಮಿಗಳ ಸನಿಹದಲ್ಲೂ ವಾಸಿಸುತ್ತವೆ. ಕೆಲವೊಮ್ಮೆ ಹಳ್ಳಿ ರಸ್ತೆಗಳಿಗೂ ಮನೆತೋಟಗಳಿಗೂ ಬರುವುದುಂಟು. ಸಾಧಾರಣವಾಗಿ ನಿಶಾಚಾರಿಗಳಾದ ಇವು ಸಂಜೆ ವೇಳೆ ತಮ್ಮ ನೆಲೆಗಳಿಂದ ಹೊರಬಂದು ಹುಲ್ಲಿನ ಎಳೆಚಿಗುರು ಮುಂತಾದವನ್ನು ತಿನ್ನುತ್ತವೆ. ಆದರೆ ಹಲವಾರು ಸಲ ಹಗಲಿನಲ್ಲೂ ಆಹಾರಾನ್ವೇಷಣೆಯಲ್ಲಿ ತೊಡಗುವುದುಂಟು. ಸಾಮಾನ್ಯವಾಗಿ ಹಗಲಿನಲ್ಲಿ ಪೊದೆಗಳಲ್ಲೂ ಹುಲ್ಲು ತೆಂಡೆಗಳಲ್ಲೋ ಅಡಗಿದ್ದು ತಮ್ಮ ಸಹಜ ವೈರಿಗಳಾದ ನರಿ, ಮುಂಗುಸಿ, ಕಾಡುಬೆಕ್ಕು ಮುಂತಾದುವುಗಳಿಂದ ರಕ್ಷಣೆ ಪಡೆಯುತ್ತವೆ. ಇವುಗಳ ಮೈಬಣ್ಣ ವಾಸಸ್ಥಳಗಳ ಹಿನ್ನಲೆಯೊಂದಿಗೆ ಚೆನ್ನಾಗಿ ಹೊಂದುಕೊಳ್ಳುವುದರಿಂದ ಸುಲಭವಾಗಿ ಕಣ್ಣಿಗೆ ಬೀಳವು. ಅಲ್ಲದೆ ವೈರಿಯೋ ಮನುಷ್ಯರೋ ತುಂಬ ಹತ್ತಿರ ಬರುವವರೆಗೂ ಚಲಿಸದೆ ಅಡಗಿದ್ದು ಕೊನೆಯ ಗಳಿಗೆಯಲ್ಲಿ ಚಂಗನೆ ನೆಗೆದು ಓಡಿ ಹೋಗುವುವು. ಇದರಿಂದಾಗಿ ಇವನ್ನು ಹಿಡಿಯುವುದು ಕಷ್ಟ.. ಕೊಂಚ ದೂರ ಓಡಿದ ಬಳಿಕ ಹಿಂಗಾಲಿನ ಮೇಲೆ ನಿಂತು ಹಿಂದಕ್ಕೆ ತಿರುಗಿ ನೋಡುವುದು ಇವುಗಳ ಸ್ವಭಾವ.

ಮೊಲ ವರ್ಷವಿಡೀ ಮರಿಗಳನ್ನು ಹಾಕುತ್ತದೆ. ಒಂದು ಸೂಲಿಗೆ ಒಂದು ಇಲ್ಲವೆ ಎರಡು ಮರಿಗಳು ಹುಟ್ಟುತ್ತವೆ. ಕುಂದಿಲಿಯ ಮರಿಗಳಂತಲ್ಲದೆ ಮೊಲದ ಮರಿಗಳು ಹುಟ್ಟುವಾಗಲೇ ಮೈತುಂಬ ಕೂದಲನ್ನೂ ತೆರೆದಿರುವ ಕಣ್ಣುಗಳನ್ನೂ ಪಡೆದಿರುವುವು. ಮೊಲದ ಮಾಂಸ ರುಚಿಕರವಾದ್ದರಿಂದ ಇದನ್ನು ಬೇಟೆಯಾಡುವುದಿದೆ.

(ಎಸ್.ಎನ್.ಎಚ್.)

**ಮೊಲೆಹಾಲೂಡುವಿಕೆ:** ಮೊಲೆಯಿಂದ ನೇರವಾಗಿ ಮಗುವಿಗೆ ಹಾಲು ಕುಡಿಸುವಿಕೆ (ಬ್ರೆಸ್ಟ್ ಫೀಡಿಂಗ್). ಸ್ತನಿವರ್ಗದಲ್ಲಿ ಹಾಲು ಉತ್ಪಾದನೆ ಹಾಗೂ ಕುಡಿಸುವಿಕೆ ಅತ್ಯಂತ ವಿಶಿಷ್ಟವಾದುದು. ತಾಯಿಯ ಹಾಲು ಸಣ್ಣ ಮಗುವಿಗೆ ಆದರ್ಶ ಆಹಾರ. ಮೊದಲು ಕೆಲವು ತಿಂಗಳಲ್ಲಿ ಅದು ಪೂರ್ಣ ಅಹಾರವಾಗಿರುವುದೂ ನಿಜ.

ಮೊಲೆಹಾಲೂಡುವಿಕೆ ಕೃತಕಹಾಲೂಡುವಿಕೆಗಿಂತ ಉತ್ಕೃಷ್ಟವಾದುದು. ಕಾರಣ : 1. ಮಗುವಿಗೆ ಬೇಕಾದ ಹಾಲು ದೇಹೋಷ್ಣತೆಯಲ್ಲೇ ಸಿಗುತ್ತದೆ. ಬಿಸಿ ಮಾಡುವ ಅಥವಾ ತಯಾರುಮಾಡುವ ಅಗತ್ಯವಿಲ್ಲ. 2. ಅದು ಸ್ವಚ್ಛವಾದುದು ಮತ್ತು ಕ್ರಿಮಿಹೀನವಾದುದು. 3. ದುಬಾರಿಯಲ್ಲ : ಖರ್ಚಿಲ್ಲದೆ ದೊರೆಯುವಂಥದು. 4. ಮಗುವಿಗೆ ಮಾನಸಿಕ ಭದ್ರತೆಯುಂಟಾಗುತ್ತದೆ. ತಾಯಿಗೆ ಹಾಲೂಡಿಸುವ ಸಂತೋಷ ಉಂಟಾಗುತ್ತದೆ. 5. ಮೊಲೆ ಹಾಲಿನಲ್ಲಿ ಅನೇಕ ರಕ್ಷಣಾಘಟಕಗಳಿದ್ದು ಅವು ಮಗುವಿನ ಆರೋಗ್ಯವನ್ನು ಕಾಪಾಡುತ್ತವೆ. ಮೊದಲ 2–4 ದಿವಸಗಳಲ್ಲಿ ಬರುವ ಮೊಲೆಯ ದ್ರವಕ್ಕೆ ಗಿಣ್ಣುಹಾಲು (ಕೋಲೊಸ್ಟ್ರೋಮ್) ಎಂದು ಹೆಸರು. ಇದರ ಸಂಯೋಜನೆ ಬೇರೆ ರೀತಿಯದು. ಗಿಣ್ಣು ಹಾಲನ್ನು ಕುಡಿಸುವುದರಿಂದ ಯಾವ ಅಪಾಯವೂ ಇಲ್ಲ. ಕರುಳಿಗೆ ಅಗತ್ಯವಾದ ರಕ್ಷಣಾ ಕಣ–ಘಟಕಗಳು ಇದರಲ್ಲಿ ಸಾಂದ್ರೀಕೃತವಾಗಿರುತ್ತವೆ. ಮೊಲೆ ಹಾಲಿನಲ್ಲಿ ಶೇ. 2 ಸಸಾರಜನಕ, ಶೇ. 4 ಕೊಬ್ಬು ಮತ್ತು ಶೇ. 6 ಪಿಷ್ಟಪದಾರ್ಥಗಳಿರುತ್ತವೆ.

ಮೊಲೆಹಾಲೂಡುವಿಕೆಯನ್ನು ಶಿಶುಜನಿಸಿದ 1/2 ಗಂಟೆಯ ಒಳಗೆ ಆರಂಭಿಸಬಹುದು. ಮಗುವಿನ ಜನನವಾದ ಕೂಡಲೇ ಮೊಲೆ ಹಾಲೂಡುವಿಕೆಗೆ ಪ್ರೋತ್ಸಾಹ ನೀಡಬೇಕು. ತಾಯಿ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು.

1) ಮೊಲೆಯ ಆರೈಕೆ : ಮೊಲೆ ತೊಟ್ಟು ಸಣ್ಣದಾಗಿದ್ದರೆ ಅಥವಾ ಒಳಗೆ ತಿರುಗಿಕೊಂಡಿದ್ದರೆ ಅದನ್ನು ಹೊರಗೆ ಮೆದುವಾಗಿ ಎಳೆಯಬೇಕು. ಮೊಲೆ ಹಾಲೂಡುವ ಮುನ್ನ ಮತ್ತು ಆ ಬಳಿಕ ಅದನ್ನು ನೀರಿನಲ್ಲಿ ತೊಳೆಯಬೇಕು.

2) ಹಾಲೂಡುವಿಕೆಗೆ ಅಂತರ : ಒಂದು ಸಾರಿ ಹಾಲೂಡುವಿಕೆ ಅರಂಭವಾದ ಬಳಿಕ, ಮೂರು ತಿಂಗಳ ತನಕ ಪ್ರತಿ ಮೂರು ಗಂಟೆಗಳಿಗೊಮ್ಮೆ ದಿನಕ್ಕೆ ಆರು ಬಾರಿ ಕೊಡುವ ಗುರಿಯಿರಿಸಿಕೊಳ್ಳಬೇಕು. ಮೂರು ತಿಂಗಳ ಬಳಿಕ ನಾಲ್ಕು ಗಂಟೆಗಳಿಗೊಮ್ಮೆ, ದಿನಕ್ಕೆ ಐದು ಸಾರಿ ಕೊಡಬೇಕು. ಸಾಧಾರಣವಾಗಿ ಮಗು ಹಾಲೂಡುವಿಕೆಗೆ ನಿಯಮಿತವಾಗಿ ಸಮಯವನ್ನು ಬೆಳೆಸಿಕೊಳ್ಳುತ್ತದೆ. ಅದರೆ ಕಟ್ಟುನಿಟ್ಟಾಗಿ ಗಡಿಯಾರಕ್ಕೆ ಅಂಟಿಕೊಳ್ಳುವ ಪರಿಪಾಠವನ್ನು ಎಂದಿಗೂ ಮಾಡಬಾರದು. ಮಗುವಿನ ಹಸಿವು ಮತ್ತು ಮನೋಧರ್ಮವನ್ನು ಗೌರವಿಸಬೇಕು.

3) ಮೊಲೆ ಕೊಡುವ ಅವಧಿ ಪ್ರತಿಯೊಂದು ಮಗುವಿಗೂ ಬೇರೆ ಬೇರೆಯಾಗುತ್ತದೆ. ಆದರೆ ಪ್ರತಿಬಾರಿ ಬೇಕಾದಷ್ಟು ಪ್ರಮಾಣ ಸಿಗಬೇಕಾದರೆ ಸರಾಸರಿ 20 ಮಿನಿಟುಗಳು ಸಾಕು.

4) ವಿಧಾನ : ತಾಯಿ ಆರಾಮವಾಗಿ ಕುಳಿತುಕೊಳ್ಳಬೇಕು. ಮಗುವನ್ನು ಮೊಲೆಗೆ ಸಮೀಪವಾಗಿ $30^0$–$40^0$ ಕೋನದಲ್ಲಿ ಬೆನ್ನು ಆಧರಿಸಿ ಹಿಡಿಯಬೇಕು. ಅವಳು ಮೊಲೆತೊಟ್ಟನ್ನು ಬೆರಳುಗಳ ಮಧ್ಯೆ ಹಿಡಿದು, ಮಗುವಿನ ತುಟಿಗೆ, ಕೆನ್ನೆಗೆ ಮಿದುವಾಗಿ ತಾಗಿಸಿದಾಗ ಮಗು ಜೋರಾಗಿ ಬಾಯಿ ತೆಗೆದು ತೊಟ್ಟನ್ನು ಹುಡುಕತೊಡಗುತ್ತದೆ. ಆಗ ಮಗುವಿನ ಬಾಯೊಳಗೆ ತೊಟ್ಟನ್ನು ಅದರ ಸುತ್ತ ಇರುವ ಕಪ್ಪುಭಾಗವನ್ನು (ಏರಿಯೋಲಾ) ತೂರಿಸಬೇಕು. ಮಗು ಏರಿಯೋಲಾದ ಮೇಲೆ ದವಡೆಯನ್ನಿಟ್ಟು ಕಚ್ಚಲು ಅನುವು ಮಾಡಿಕೊಡಬೇಕು. ಪ್ರತಿ ಸಲ ಎರಡೂ ಕಡೆ ಕುಡಿಸಬೇಕು. ಮಗುವಿನ ಮುಖವನ್ನು ತಾಯಿಯ ಹೆಗಲಮೇಲಿರಿಸಿಕೊಂಡು ಬೆನ್ನನ್ನು ಮೆಲ್ಲನೆ ನೀವಿ ವಾಯುವನ್ನು ಹೊರಗೆ ಬರಿಸಬೇಕು.

5) ಹಾಲು ಸಾಕಾಗುತ್ತದೆಯೆ ಎಂಬುದನ್ನು ಈ ಮುಂದಿನವುಗಳಿಂದ ನಿರ್ಧರಿಸಬಹುದು : ಮಗುವಿನ ತೃಪ್ತಿ, ತೂಕಮಾಡಿದಾಗ ಮಗುವಿನ ತೂಕ ಏರುವಿಕೆ ಸಮಾಧಾನಕರವಾಗಿರುತ್ತದೆ. ತಿಂಗಳಿಗೆ 300–400 ಗ್ರಾಂ ಹೆಚ್ಚಳ ತೂಕ ಆಗುತ್ತವೆ. ಸಾಕಾಗದಿದ್ದರೆ ಮಲಬದ್ಧತೆಯುಂಟಾಗುತ್ತದೆ. ಸಾಕಷ್ಟು ಬಾರಿ ಮಗು ಮೂತ್ರ ವಿಸರ್ಜನೆ ಮಾಡುತ್ತದೆ.

ತೊಟ್ಟಿನ ಸುತ್ತ ಇರುವ ಏರಿಯೋಲಾ ಭಾಗದಲ್ಲಿ ಸಿದ್ಧಗೊಂಡ ಹಾಲು ಶೇಖರಣೆಯಾಗಿರುತ್ತವೆ. ಅದು ಮೊದಲು ಸುಲಭವಾಗಿ ಮಗುವಿನ ಬಾಯೊಳಗೆ ಹೋಗುತ್ತದೆ. ಮಗು ಚೀಪಲು ಆರಂಭಿಸಿದಾಗ ದುಗ್ಧನಾಳಗಳಲ್ಲಿ, ಗ್ರಂಥಿಗಳಲ್ಲಿ ಉತ್ಪತ್ತಿಯಾದ ಹಾಲನ್ನು ಎಳೆಯಲು ಸಮರ್ಥವಾಗುತ್ತದೆ. ತಾಯಿಗೆ ಅನಿರ್ವಚನೀಯ ಆನಂದ ಸಿಗುತ್ತದೆ.

(ಪಿ.ಸಿ.ಬಿ.)

**ಮೊಸಳೆ:** ಕ್ರಾಕೊಡಿಲಿಯ ಗಣ ಕ್ರಾಕೊಡೈಲಿಡೆ ಕುಟುಂಬದ ಕ್ರಾಕೊಡೈಲಸ್ ಜಾತಿಗೆ ಸೇರಿದ ಸುಮಾರು 11 ಬಗೆಯ ಜಲವಾಸಿ ಸರೀಸೃಪಗಳಿಗೆ ಅನ್ವಯವಾಗುವ ಸಾಮಾನ್ಯ ಹೆಸರು (ಕ್ರಾಕೊಡೈಲ್). ಅಲಿಗೇಟರ್ (ಅಲಿಗೇಟೊರಿಡೆ) ಮತ್ತು ಘರಿಯಾಲ್ (ಗೇವಿಯಾಲಿಡೆ) ಮೊಸಳೆಗಳಿಗೆ ಬಲುಹತ್ತಿರದ ಸಂಬಂಧಿಗಳಿವು. ಇವುಗಳ ಪೈಕಿ ಪ್ರಧಾನವಾದುವು ಇಂತಿವೆ : ಓರಿನೋಕೊ ಮೊಸಳೆ (ಕ್ರಾ. ಇಂಟರ್‌ಮೀಡಿಯಸ್–ದಕ್ಷಿಣ ಅಮೆರಿಕದ ಓರಿನೋಕೊ, ಅಮೆಜಾನ್ ನದಿಗಳು ), ಅಮೆರಿಕದ ಮೊಸಳೆ (ಕ್ರಾ. ಅಕ್ಯೂಟಸ್–ಉತ್ತರ ಅಮೆರಿಕದ ಫ್ಲಾರಿಡ ಮತ್ತು ಮಧ್ಯ ಅಮೆರಿಕ ಹಾಗೂ ವಾಯುವ್ಯ ದಕ್ಷಿಣ ಅಮೆರಿಕ), ಮೋರ್‌ಲೆಟ್ ಮೊಸಳೆ (ಕ್ರಾ. ಮೋರ್‌ಲೆಟೈ–ಮೆಕ್ಸಿಕೊ, ಹಾಂಡುರಾಸ್, ಗ್ವಾಟೆಮಾಲ), ಆಸ್ಟ್ರೇಲಿಯದ ಮೊಸಳೆ (ಕ್ರಾ. ಜಾನ್‌ಸೋನೈ–ಆಸ್ಟ್ರೇಲಿಯ), ನ್ಯೂಗಿನಿ ಮೊಸಳೆ (ಕ್ರಾ. ನಿಲೋಟಿಕಸ್–ಆಫ್ರಿಕದ ಕೆಲವು ಪ್ರದೇಶಗಳು), ಭಾರತದ ಮೊಸಳೆ (ಕ್ರಾ. ಪ್ಯಾಲಸ್ಟ್ರಿಸ್–ಭಾರತ ಮತ್ತು ಶ್ರೀಲಂಕಾ), ಉಪ್ಪುನೀರಿನ ಮೊಸಳೆ (ಕ್ರಾ. ಪೋರೋಸಸ್–ಭಾರತವೂ ಸೇರಿದಂತೆ, ಫಿಲಿಪೀನ್ಸ್, ನ್ಯೂ ಹೆಬ್ರಿಡೀಸ್ ದ್ವೀಪಗಳ ಕರಾವಳಿ ಪ್ರದೇಶಗಳು). ಇವುಗಳ ಪೈಕಿ ಕೊನೆಯ ಪ್ರಭೇದವನ್ನು ಬಿಟ್ಟರೆ ಉಳಿದೆಲ್ಲ ಸಿಹಿನೀರಿನ ಮೊಸಳೆಗಳು ನದಿಗಳಲ್ಲಿ ವಾಸಿಸುತ್ತವೆ.



ಭಾರತದ ಮೊಸಳೆ ಸುಮಾರು 4 ಮೀ ಉದ್ದದ ಪ್ರಾಣಿ. ತೂಕ 200 ಕಿಗ್ರಾಂ. ಅಥವಾ ಅದಕ್ಕೂ ಹೆಚ್ಚು. ದೇಹದ ಬಣ್ಣ ಹಸುರುಮಿಶ್ರಿತ ಕಪ್ಪು. ಹೊಟ್ಟೆಯ ಭಾಗ ಹಳದಿ ಇಲ್ಲವೆ ಬಿಳಿ ಬಣ್ಣದ್ದು. ಮೂತಿಯ ತುದಿ ಅಗಲವಾಗಿದೆ. ಕತ್ತು ಮತ್ತು ತಲೆ ಸೇರುವೆಡೆಯಲ್ಲಿ ಮೇಲ್ಭಾಗದಲ್ಲಿ ಉಬ್ಬಿಕೊಂಡಂತಿರುವ 4 ಹುರುಪೆಗಳಿವೆ. ಬೆನ್ನಿನ ಉದ್ದಕ್ಕೂ ಅಡ್ಡಡ್ಡಲಾಗಿ 16–17, ಉದ್ದುದ್ದವಾಗಿ 6 ಸಾಲುಗಳ ಎಲುಬಿನ ಫಲಕಗಳುಂಟು. ಬಾಲದುದ್ದಕ್ಕೂ 2 ಸಾಲುಗಳಲ್ಲಿ ಚಪ್ಪಟೆಯಾದ ಹಾಗೂ ಎದ್ದುಕೊಂಡಿರುವಂತಹ ಹುರುಪೆಗಳಿವೆ. ಕಾಲ್ಬೆರಳುಗಳು ಜಾಲದಿಂದ ಪರಸ್ಪರ ಕೂಡಿಕೊಂಡಿವೆ. ಬಾಯಿಯಲ್ಲಿ ದವಡೆಯುದ್ದಕ್ಕೂ ಹಲ್ಲುಗಳಿವೆ. ಕೆಳದವಡೆಯ ನಾಲ್ಕನೆಯ ಹಲ್ಲು ಮೇಲ್ದವಡೆಯ ಅಂಚಿನಲ್ಲಿರುವ ಒಂದು ಕುಳಿಯಲ್ಲಿ ಗುತ್ತವಾಗಿ ಅಳವಡಿಕೆಯಾಗುವಂತಿದ್ದು ಬಾಯಿ ಮುಚ್ಚಿದರೂ ಹಲ್ಲುಗಳು ಕಾಣುತ್ತವೆ. ಜೀವಮಾನವಿಡೀ ಹಲ್ಲುಗಳು ಬಿದ್ದು ಹುಟ್ಟುತ್ತಿರುತ್ತವೆ.

ಮೊಸಳೆಗಳಲ್ಲಿ ದೃಷ್ಟಿ, ಘ್ರಾಣ ಮತ್ತು ಶ್ರವಣೇಂದ್ರಿಯಗಳು ಚುರುಕಾಗಿವೆ. ದೇಹದ ಉಳಿದ ಭಾಗ ನೀರಿನಲ್ಲಿ ಮುಳುಗಿದ್ದರೂ ಉಸಿರಾಟಕ್ಕೆ ತೊಂದರೆಯಾಗದಂತೆ ಮುಸುಡಿನ ತುದಿಯಲ್ಲಿರುವ ಉಬ್ಬಿನಲ್ಲಿ ಮೂಗಿನ ಹೊಳ್ಳೆಗಳು ಸ್ಥಿತವಾಗಿವೆ. ಅಲ್ಲದೆ ಹೊಳ್ಳೆಗಳಿಗೂ ಕಿವಿಗಳಿಗೂ ಪಟಲದ ಹೊದಿಕೆಯಿದ್ದು ಮೊಸಳೆ ನೀರಿನಲ್ಲಿ ಮುಳುಗಿದರೂ ಒಳಕ್ಕೆ ನೀರು ಹೋಗದಂತೆ ತಡೆಯಾಗುತ್ತದೆ. ಜೊತೆಗೆ ಹೊಳ್ಳೆಗಳಿಗೂ ಗಂಟಲಿಗೂ ಸಂಪರ್ಕ ಕಲ್ಪಿಸುವ ಉದ್ದನೆಯ ಕೊಳವೆಗಳನ್ನು ಬಾಯಿಯಿಂದ ಪ್ರತ್ಯೇಕಿಸುವಂತೆ ತಡೆಯೂ ಇದ್ದು ಬಾಯಿಯಲ್ಲಿ ಎರೆಯನ್ನು ಕಚ್ಚಿಕೊಂಡಿರುವಾಗ ಉಸಿರಾಟಕ್ಕೆ ಯಾವುದೇ ತೊಂದರೆಯಾಗದು. ಮೊಸಳೆ ಬೇರೆ ಸರೀಸೃಪಗಳಂತೆ ನಾಲಗೆಯನ್ನು ಹೊರಚಾಚಲಾರದು. ನಾಲಿಗೆಯ ಮೇಲೂ ಅಂಗುಳದ ಮೇಲೂ ಹಲವಾರು ಮಡಿಕೆಗಳಿದ್ದು ನೀರಿನೊಳಗೆ ಮುಳುಗಿ ಬಾಯಿ ತೆರೆದರೂ ನೀರು ಒಳಹೋಗದಂತೆ ತಡೆಯಲು ಅನುಕೂಲವಾಗಿದೆ. ಕಣ್ಣುಗಳಲ್ಲಿ ಪಾರದರ್ಶಕವಾದ ಮೂರನೆಯ ರೆಪ್ಪೆಯುಂಟು. ಇವೆಲ್ಲ ಲಕ್ಷಣಗಳಿಂದಾಗಿ ಜಲವಾಸಕ್ಕೆ ಚೆನ್ನಾಗಿ ಹೊಂದಿಕೊಂಡಿದೆ. ಗಂಟಲಲ್ಲಿ ಒಂದು ಜೊತೆ ಮತ್ತು ಗುದದ್ವಾರದ ಬಳಿ ಒಂದು ಜೊತೆ–ಹೀಗೆ ಒಟ್ಟು ಎರಡು ಜೊತೆ ವಾಸನಾಗ್ರಂಥಿಗಳಿವೆ.



ಮೊಸಳೆಗಳು ಈಜುವುದರಲ್ಲಿ ಬಲು ನಿಸ್ಸೀಮ ಪ್ರಾಣಿಗಳು. ಜಾಲಪಾದಗಳನ್ನು ಪಡೆದಿದ್ದರೂ ಈಜುವುದು ಬಾಲದ ಸಹಾಯದಿಂದ. ನೆಲದ ಮೇಲೆ ತೆವಳಿಕೊಂಡೊ ನಡೆದುಕೊಂಡೊ ಚಲಿಸಬಲ್ಲುದು. ನಡೆಯುವುದು ಕೊಂಚ ವಿಚಿತ್ರ ; ದೇಹವನ್ನು ನೆಲದಿಂದ ಎತ್ತರವಾಗಿ ಎತ್ತಿಕೊಂಡು ನಡೆಯುತ್ತವೆ. ಕೆಲವೊಮ್ಮೆ ಗಂಟೆಗೆ ಸು. 50 ಕಿಮೀ ವೇಗದಲ್ಲಿ ನಾಗಾಲೋಟ ಮಾಡುವುದೂ ಉಂಟು. ವಾಸಿಸುವುದು ನೀರಿನಲ್ಲಿಯೇ ಆದರೂ ಹಗಲಿನಲ್ಲಿ ಯಾವುದಾದರೂ ಅಯಕಟ್ಟಿನ ಬಂಡೆಯ ಮೇಲೆ ಬಾಯಿತೆರೆದುಕೊಂಡು ನಿಶ್ಚಲವಾಗಿ ಮಲಗಿರುವುದು ಇವುಗಳ ಸ್ವಭಾವ. ದೇಹದಲ್ಲಿ ಸ್ವೇದಗ್ರಂಥಿಗಳಿಲ್ಲದಿರುವುರಿಂದ ಮೈಯಿಂದ ನೀರು ಆವಿಯಾಗಲೂ ತನ್ಮೂಲಕ ದೇಹದ ತಾಪವನ್ನು ಕಾಯ್ದುಕೊಳ್ಳಲೂ ಇದರಿಂದ ಅನುಕೂಲ. ರಾತ್ರಿವೇಳೆ ಯಾವುದಾದರೂ ಆಯ್ಕೆಮಾಡಿದ ನೆರಳು ಇಲ್ಲವೆ ನದಿ ಅಂಚಿನ ಡೊಗರುಗಳಲ್ಲಿ ಅಡಗಿರುತ್ತವೆ. ವಾಸದ ನೆಲೆಗಳು 60–80 ಸೆಂಮೀ ಅಗಲದ ಪ್ರವೇಶದ್ವಾರವನ್ನೂ 2.5–4.5 ಮೀ ಉದ್ದದ ದಾರಿಯನ್ನೂ 8–10 ಮೀ ವ್ಯಾಸದ ಕೋಣೆಯನ್ನೂ ಒಳಗೊಂಡಿರುತ್ತವೆ.

ಮೊಸಳೆ ಮಾಂಸಹಾರಿ. ನೀರಿನಲ್ಲಿ ಸಿಕ್ಕುವ ಮೀನು ಪ್ರಧಾನ ಆಹಾರವಾದರೂ ನೀರಿಗೆಂದು ಬರುವ ಯಾವುದೇ ನೆಲವಾಸಿ ಪ್ರಾಣಿಗಳನ್ನೂ ಬೇಟೆಯಾಡುವುದು ಉಂಟು. ಉದಾಹರಣೆಗೆ, ಕೋತಿ, ನಾಯಿ, ಆಡು, ದನಕರು, ಜಿಂಕೆ, ಕಡವೆ, ಕತ್ತೆಕಿರುಬ,

ಕಾಡುನಾಯಿ, ಹಂದಿ, ಬಾತು ಇತ್ಯಾದಿ. ಅಪೂರ್ವಕ್ಕೆ ಮನುಷ್ಯ ಕೂಡ ಇವುಗಳ ಬಾಯಿಗೆ ಬೀಳುವುದುಂಟು. ಇನ್ನಿತರ ಹಿಂಸ್ರಪ್ರಾಣಿಗಳಂತೆ ಮೊಸಳೆಗೆ ಬೇಟೆಯನ್ನು ಸಿಗಿದು ತಿನ್ನುವುದಕ್ಕಾಗಲಿ ಅಗಿಯುವುದಕ್ಕಾಗಲಿ ಆಗದು. ಸಿಕ್ಕ ಎರೆಯನ್ನು ಬಲವಾಗಿ ಹಿಡಿದು, ನೀರಿನಲ್ಲಿ ಮುಳುಗಿಸಿ ಸಾಯಿಸಿ, ನೀರಿನ ಅಡಿಯಲ್ಲಿರಬಹುದಾದ ಬಂಡೆಸಂದುಗಳಲ್ಲಿ ಸಿಕ್ಕಿಸಿ ಇಟ್ಟು ಅದು ಕೊಳೆತ ತರುವಾಯ ಬಿಡಿಸಿ ತಿನ್ನುತ್ತದೆ. ಇವು ಸಾಮಾನ್ಯವಾಗಿ ಯಾವ ತೆರನ ಸದ್ದನ್ನೂ ಮಾಡುವುದಿಲ್ಲ. ಅದರೆ ಶತ್ರುವಿಗೆ ಎದುರಾದಾಗ ಬುಸುಗುಟ್ಟುತ್ತವೆ. ಕೆಲವೊಮ್ಮೆ ಆಕಳುಗಳ ಕೂಗಿನಂತೆ ಸದ್ದು ಮಾಡುವುದುಂಟು.

ಸಂತಾನವೃದ್ಧಿಯ ಋತು ಜನವರಿಯಿಂದ ಮಾರ್ಚ್. ಗಂಡು ಹೆಣ್ಣುಗಳ ಕೂಡುವಿಕೆ ನೀರಿನಲ್ಲಿ ನಡೆಯುತ್ತದೆ. ಗರ್ಭಧರಿಸಿದ ಹೆಣ್ಣು ಮರಳಿನಲ್ಲೊ ನದಿ ಕೆರೆಗಳ ದಂಡೆಯ ನೆಲದಲ್ಲೊ ನೀರಿನಿಂದ 2–500 ಮೀ ದೂರದಲ್ಲಿ ಗೂಡು ರಚಿಸಿ 10–40 ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳಿಗೆ ಕಾವುಕೊಡುವ ಪರಿಪಾಟ ಇಲ್ಲವಾದರೂ ಹೆಣ್ಣು ಗೂಡಿಗೆ ಆದಷ್ಟು ಹತ್ತಿರದಲ್ಲೇ ಕಾವಲು ಕಾಯುತ್ತಿದ್ದು ವೈರಿಗಳಿಂದ ರಕ್ಷಿಸಿ, ಮೊಟ್ಟೆಯೊಡೆದು ಮರಿಗಳು ಹೊಬರಲು ಸಹಾಯ ಮಾಡುತ್ತದೆ. ಮೊಟ್ಟೆಗಳು ಬಿಳಿಬಣ್ಣದವು. ಮರಿಯಾಗಿ ಹೊರಬರಲು ಹಿಡಿಯುವ ಅವಧಿ ಹೊರಗಿನ ಉಷ್ಣತೆಯನ್ನು ಅನುಸರಿಸಿ 2–3 ತಿಂಗಳು ಆಗುತ್ತದೆ. ಮರಿಗಳ ಬೆಳೆವಣಿಗೆ ಶೀಘ್ರಗತಿಯದು. ತಿಂಗಳಿಗೆ 6 ಸೆಂಮೀ ದರದಲ್ಲಿ ಮರಿಗಳು ಬೆಳೆಯುವುವು.

ಭಾರತದಲ್ಲಿ ಸಿಕ್ಕುವ ಇನ್ನೆರಡು ಬಗೆಯ ಮೊಸಳೆಗಳೆಂದರೆ ಕಡಲ ನೀರಿನ ಮೊಸಳೆ (ಕ್ರಾ. ಪ್ರೋರೋಸಸ್) ಮತ್ತು ಘರಿಯಾಲ್ (ಗೇವಿಯಾಲಿಸ್ ಗ್ಯಾಂಜೆಟಿಕಸ್). ಇವುಗಳಲ್ಲಿ ಮೊದಲನೆಯದು ನೋಡಲು ಹೆಚ್ಚುಕಡಿಮೆ ಪ್ಯಾಲಸ್ಟ್ರಿಸ್ ಪ್ರಭೇದದಂತೆಯೇ ಇದೆ. ಇದು ಭಾರತದ ಕೇರಳದಿಂದ ತೊಡಗಿ ಪಶ್ಚಿಮ ಬಂಗಾಲದವರೆಗೆ ಕರಾವಳಿಯುದ್ದಕ್ಕೂ ಅಳಿವೆ, ಮ್ಯಾಂಗ್ರೂವ್ ಕಾಡುಗಳಲ್ಲೂ ಕೆಲವು ಕರಾವಳಿಯ ಉಪ್ಪುನೀರಿನ ಸರೋವರಗಳಲ್ಲೂ ಕಾಣದೊರೆಯುತ್ತದೆ. ಅಂಡಮಾನ್, ನಿಕೋಬಾರ್ ದ್ವೀಪಸಮೂಹಗಳಲ್ಲೂ ಉಂಟು.

ಘರಿಯಾಲ್ ಮೊಸಳೆ ಸಿಂಧೂ, ಗಂಗಾ, ಬ್ರಹ್ಮಪುತ್ರ, ಮಹಾನದಿಗಳಲ್ಲೂ ಚಂಬಲ್, ಗಿರ್ವ, ರಪ್ತಿ, ನಾರಾಯಣಿ ಹೊಳೆಗಳಲ್ಲೂ ಸಿಕ್ಕುತ್ತದೆ. ಇದರ ಮೂತಿ ಉದ್ದವೂ ಕಿರಿಯಗಲದ್ದೂ ಆಗಿದ್ದು ಗಂಡಿನಲ್ಲಿ ಮುಸುಡಿಯ ತುದಿಯಲ್ಲಿ ಚೆಂಡಿನ ಗಾತ್ರದ ಗಂಟಿದೆ. ಈ ಲಕ್ಷಣದಿಂದ ಇದನ್ನು ಉಳಿದ ಮೊಸಳೆಗಳಿಂದ ಬೇರೆಯಾಗಿ ಗುರುತಿಸಬಹುದು.

ಮೊಸಳೆ ಚರ್ಮಕ್ಕೆ ಹೆಚ್ಚು ಬೇಡಿಕೆಯೂ ಬೆಲೆಯೂ ಇರುವುದರಿಂದ ಇದನ್ನು ಬೇಟೆಯಾಡಲಾಗುತ್ತದೆ. ಇದರಿಂದಾಗಿ ಇವುಗಳ ಸಂಖ್ಯೆ ಗಣನೀಯವಾಗಿ ಇಳಿದು ಹೋಗಿ ಮೊಸಳೆ ಸಂತತಿ ಅಪಾಯದ ಅಂಚಿನಲ್ಲಿ ಇರುವಂತಾಗಿದೆ. ಇತ್ತೀಚಿನ ದಿನಗಳಲ್ಲಿ ಮೊಸಳೆ ಸಂತತಿಗೆ ಕಾನೂನಿನ ರಕ್ಷಣೆ ದೊರೆತಿದೆ.

ಪ್ರಪಂಚಾದ್ಯಂತ ಮೊಸಳೆಗಳ ಬಗ್ಗೆ ಮಾನವನ ಭಾವನೆ ಭಯ, ಅಸಹ್ಯಗಳಿಂದ ಹಿಡಿದು ಧಾರ್ಮಿಕ ಎಂಬುದರವರೆಗೆ ವ್ಯತ್ಯಾಸವಾಗುತ್ತದೆ. ಪಾಕಿಸ್ತಾನದ ಕಾಚಿಯಲ್ಲಿ ಮೊಸಳೆಗಳಿಗೆಂದೇ ಮೀಸಲಾದ ಕೊಳವೊಂದಿದ್ದು ಇದರಲ್ಲಿ ವಾಸವಾಗಿರುವ ಮೊಸಳೆಗಳನ್ನು ಪೂಜ್ಯವೆಂದು ಗಣಿಸಲಾಗಿದೆ. ಪ್ರಾಚೀನ ಈಜಿಪ್ಟಿನಲ್ಲಿ ನದೀದೇವತೆಯನ್ನು ಪ್ರಸನ್ನಗೊಳಿಸಲು ಮೊಸಳೆಗಳಿರುವ ನದಿಗೆ ನರಬಲಿ ಕೊಡುವ ಪದ್ಧತಿ ಇತ್ತು. ಆಫ್ರಿಕದ ವಿಕ್ಟೋರಿಯ ಸರೋವರದ ಕೆಲವು ದ್ವೀಪಗಳಲ್ಲಿನ ಜನ ಮೊಸಳೆಯನ್ನು ಅವರ ದೇವರ ಪ್ರಧಾನ ಅರ್ಚಕ ಎಂದು ಭಾವಿಸಿದ್ದರು. ಮನುಷ್ಯರನ್ನು ಕತ್ತರಿಸಿ ಎಸೆದು ಬಲಿ ನೀಡುತ್ತಿದ್ದರು. ಭಾರತದಲ್ಲಿ ಮೊಸಳೆ ನೈಋತ್ಯ ದಿಕ್ಕಿನ ಅಧಿಪತಿಯಾದ ನಿರುತಿಯ ಹಾಗೂ ಗಂಗೆಯ ವಾಹನವೆಂದು ಪರಿಗಣಿತವಾಗಿದೆ. ***

**ಮೋವ:** ನ್ಯೂಜೀಲೆಂಡಿನಲ್ಲಿ ವಾಸಿಸುತ್ತಿದ್ದು ಸುಮಾರು 600 ವರ್ಷಗಳ ಹಿಂದೆ ಗತವಂಶಿಯಾದ ಹಾರಲಾರದ ಹಕ್ಕಿ. ಪೇಲಿಯೊಗ್ನಾತೆ ಅಥವಾ ರ‍್ಯಾಟಿಟೆ ಗುಂಪಿನ ಡೈನಾರ್ನಿತಿಫಾರ್ಮಿಸ್ ಗಣದ ಡೈನಾರ್ನಿತಿಡೆ ಕುಟುಂಬಕ್ಕೆ ಸೇರಿಸಲಾಗಿದೆ. ಸುಮಾರು 22 ಪ್ರಭೇದಗಳಿದ್ದುವೆನ್ನಲಾಗಿದ್ದು ಎಲ್ಲವೂ ಅಳಿದುಳಿದ ಮೂಳೆ ಇಲ್ಲವೆ ಗರಿಗಳ ರೂಪದಲ್ಲಿ ಮಾತ್ರ ಪತ್ತೆಯಾಗಿವೆ. ಹಾರಲಾರದ ಪಕ್ಷಿಗಳಲ್ಲಿ ಇವು ಅತಿ ದೊಡ್ಡವೆನಿಸಿದ್ದುವು. ಇವುಗಳ ಪೈಕಿ ಡೈನಾರ್ನಿಸ್ ಮ್ಯಾಕ್ಸಿಮಸ್ ಎಂಬ ಬಗೆಯದು ಸುಮಾರು 4 ಮೀ ಎತ್ತರವಾಗಿತ್ತೆಂದೂ ಕಿರಿ ಗಾತ್ರದ್ದೆನಿಸಿದ್ದು ಇಂದಿನ ಟರ್ಕಿಕೋಳಿಯ ಗಾತ್ರದ್ದಾಗಿತ್ತೆಂದೂ ಹೇಳಲಾಗಿದೆ.

ಇವುಗಳಲ್ಲಿ ರೆಕ್ಕೆಗಳೇ ಇರಲಿಲ್ಲ. ಸ್ಟರ್ನಮ್, ಕೊರಕಾಯಿಡ್, ಸ್ಕ್ಯಾಪುಲ ಮತ್ತು ರೆಕ್ಕೆಯ ಮೂಳೆಗಳು ಚಿಕ್ಕವಾಗಿದ್ದುವು. ಇಲ್ಲವೆ ಸಂಪೂರ್ಣವಾಗಿ ನಶಿಸಿ ಹೋಗಿದ್ದುವು. ಕ್ಲಾವಿಕಲ್ ಮತ್ತು ಪೈಗೋಸ್ಟೈಲ್‌ಗಳ ಕೊರತೆ ಇತ್ತು. ಇವುಗಳ ಮೊಟ್ಟೆಗಳು ಸುಮಾರು 22 ಸೆಂಮೀ ಅಗಲ ಮತ್ತು 30 ಸೆಂಮೀ ಉದ್ದ ಇದ್ದುವು. ಮೋವಗಳ ನಾಶಕ್ಕೆ ಖಚಿತ



ಕಾರಣ ಗೊತ್ತಿಲ್ಲವಾದರೂ ನ್ಯೂಜೀಲೆಂಡಿಗೆ ಮಾವೋರಿ ಜನಗಳು ವಲಸೆ ಬಂದ ಮೇಲೆ ಬಹುಶಃ ಅವರ ಬೇಟೆಗೆ ತುತ್ತಾಗಿ ನಶಿಸಿಹೋಗಿರಬೇಕು. (ವಿ.ಕೆ.ವಿ.)

**ಮ್ಯಾಕರಲ್:** ಬಹಳ ವೇಗವಾಗಿ ಈಜಬಲ್ಲ ಹಾಗೂ ಅತ್ಯಂತ ಚಟುವಟಿಕೆಯ ಮೀನುಗಳ ಗುಂಪಿಗಿರುವ ಸಾಮಾನ್ಯ ಹೆಸರು. ದೇಹದ ಮೇಲ್ಭಾಗ ನೀಲಿಬಣ್ಣದ್ದು. ಕೆಳಭಾಗ ಬಿಳಿ. ಬೆನ್ನಿನ ರೆಕ್ಕೆ ಮತ್ತು ಗುದದ ರೆಕ್ಕೆಗಳ ಹಿಂದೆ ಕಿರಿರೆಕ್ಕೆಗಳ ಸಾಲೊಂದು ಇರುವುದು. ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ವಾಸಿಸುವ ಇವು ಮುಖ್ಯವಾಗಿ ಪಶ್ಚಿಮ ಕರಾವಳಿಯಲ್ಲಿ ಮೀನುಗಾರಿಕೆಗೆ ಪ್ರಾಮುಖ್ಯ ಪಡೆದಿದೆ.

ನಿಜವಾದ ಮ್ಯಾಕರಲ್‌ಗಳು ಎಂದು ಹೇಳಬಹುದಾದ ಜಾತಿಗಳು:



(1) ಸ್ಕಾಂಬರ್: ಮೆಡಿಟರೇನಿಯನ್ ಮತ್ತು ಉತ್ತರ ಅಟ್ಲಾಂಟಿಕ್ ಮಹಾಸಾಗರಗಳಲ್ಲಿ ನೆಲಸಿರುವ ಸ್ಕಾಂಟರ್ ಸ್ಕಾಂಬ್ರಸ್ ಜಾತಿಯ ಮೀನು. ಸ್ಕಾಂಬರ್ ಜಾತಿಯ ಮೀನುಗಾರಿಕೆ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಜಪಾನ್, ಸ್ಕಾಂಡಿನೇವಿಯ, ನೆದರ್‌ಲೆಂಡ್, ಸ್ಪೇನ್, ಪೋರ್ಚುಗಲ್ ಮತ್ತು ಬ್ರಿಟನ್‌ಗಳಲ್ಲಿ ವಿಶೇಷವಾಗಿದೆ. ಸ್ಕಾಂಬರ್ ಜಪಾನಿಕಸ್ ಪ್ರಭೇದ ಪೆಸಿಫಿಕ್ ಮಹಾಸಾಗರದ ಪ್ರಧಾನ ಮ್ಯಾಕರಲ್ ಮೀನು.

(2) ರಾಸ್ಟ್ರೆಲ್ಲಿಜರ್ : ರಾಸ್ಟ್ರೆಲ್ಲಿಜರ್ ಕನಗುರ್ತ (ಬಂಗುಡೆ) ಹಿಂದೂ ಮಹಾಸಾಗರದ ಮುಖ್ಯವಾದ ಮ್ಯಾಕರಲ್ ಮೀನು. ಭಾರತ ಮತ್ತು ಥಾಯ್ಲೆಂಡ್ ದೇಶಗಳಲ್ಲಿ ಇದರ ಮೀನುಗಾರಿಕೆ ಮುಖ್ಯವೆನಿಸಿದೆ. (ನೋಡಿ: ಬಂಗಡೆ)

ಮ್ಯಾಕರಲ್ ಗುಂಪಿಗೆ ಸೇರಿದ ಆದರೆ ನಿಜವಾದ ಮ್ಯಾಕರಲ್‌ಗಳಲ್ಲದ ಬೇರೆ ಮುಖ್ಯವಾದ ಮೀನುಗಳು ಸ್ಕಾಂಬಿರೋಮೋರಸ್ (ಸುರ್ಮೈ) ಮತ್ತು ಆಕ್ಸಿಸ್ ಜಾತಿಗಳಿಗೆ ಸೇರಿದ ಮೀನುಗಳು. ಸ್ಕಾಂಬಿರೋಮೋರಸ್ ಕೆವಲ್ಲ ಪ್ರಭೇದ ಈ ಗುಂಪಿನ ಅತಿ ದೊಡ್ಡ ಮೀನು. ಇದು ಸುಮಾರು 50 ಕಿಗ್ರಾಂ ತೂಕದ್ದು. ಉತ್ತರ ಮತ್ತು ದಕ್ಷಿಣ ಅಮೆರಿಕ

ಖಂಡಗಳ ಪೂರ್ವ ಸಮುದ್ರಗಳ ನಿವಾಸಿ. ಆಕ್ಸಿಸ್ ಥಿನ್ನಾಯ್‌ಡೆಸ್ (ಆಕ್ಸಿಸ್ ಟಾನೋಸೋಮ) ಇವುಗಳಲ್ಲಿ ಇನ್ನೊಂದು ಪ್ರಭೇದ. ***

**ಮ್ಯಾನ್‌ಸನ್, ಪ್ಯಾಟ್ರಿಕ್:** 1844–1922. ಸ್ಕಾಟ್ಲೆಂಡಿನ ಶರೀರಕ್ರಿಯಾ ವಿಜ್ಞಾನಿ; ಪರೋಪಜೀವಿಕೃತ ರೋಗತಜ್ಞ; ಮಿಗಿಲಾಗಿ ಉಷ್ಣವಲಯ ರೋಗಶಾಸ್ತ್ರದ ಜನಕ ಎಂದು ವೈದ್ಯಲೋಕದಲ್ಲಿ ಪ್ರಸಿದ್ಧಿ ಪಡೆದವ. ತಂದೆ ಜಾನ್ ಮ್ಯಾನ್‌ಸನ್ ಬ್ಯಾಂಕೊಂದರ ಮ್ಯಾನೇಜರ್. ತಾಯಿ ಎಲಿಜಬೆತ್ ಲಿವಿಂಗ್‌ಸ್ಟನ್. ಈಕೆ ಪ್ರಸಿದ್ಧ ಭೂಗೋಳ ಅನ್ವೇಷಕ ಎಂದೆನಿಸಿದ್ದ ಡೇವಿಡ್ ಲಿವಿಂಗ್‌ಸ್ಟನ್‌ನ ದೂರ ಸಂಬಂಧಿ. ಈ ದಂಪತಿಗಳು ಸ್ಕಾಟ್‌ಲೆಂಡಿನ ಅಬರ್‌ಡೀನ್ ಜಿಲ್ಲೆಗೆ ಸೇರಿದವರು. ಎಲಿಜಬೆತ್ ಕಬ್ಬಿಣ ಕಾರ್ಖಾನೆಯ ಮಾಲೀಕರಾಗಿದ್ದ ಬ್ಲೆಯ್ಕಿ ಮನೆತನಕ್ಕೆ ಸೇರಿದ್ದವಳು. ಈಕೆ ತನ್ನ 88ನೆಯ ವಯಸ್ಸಿನ ತನಕವೂ ಬದುಕಿದ್ದು ಮ್ಯಾನ್‌ಸನ್ನನ ಮೇಲೆ ಬಹಳಷ್ಟು ಪ್ರಭಾವ ಬೀರಿದ್ದಳು. ದಂಪತಿಗಳ 5 ಗಂಡು 4 ಹೆಣ್ಣು ಮಕ್ಕಳ ಪೈಕಿ ಮ್ಯಾನ್‌ಸನ್ 2ನೆಯ ಮಗ. ಜನಿಸಿದ್ದು 3 ಅಕ್ಟೋಬರ್ 1844 ಓಲ್ಡ್ ಮೆಲ್‌ಡ್ರಮ್ ಎಂಬ ಊರಿನಲ್ಲಿ. ಮಕ್ಕಳ ವಿದ್ಯಾಭ್ಯಾಸಕ್ಕೆಂದು ಇವನ ತಾಯಿ ತಂದೆ ಮೆಲ್‌ಡ್ರಮ್ಮನ್ನು ಬಿಟ್ಟು 1857ರಲ್ಲಿ ಅಬರ್‌ಡೀನ್ ನಗರದಲ್ಲೆ ಸಂಸಾರ ಹೂಡಿದರು. ಅನಂತರ ಈತ ಅಲ್ಲಿಯ ವೆಸ್ಟ್ ಎಂಡ್ ಅಕಾಡೆಮಿ ಎಂಬ ಶಾಲೆಗೆ ಸೇರಿದ. ವಿದ್ಯಾಭ್ಯಾಸದಲ್ಲಿ ಇವನಿಗೆ ಆಸಕ್ತಿ ಕಡಿಮೆ ಎನ್ನಿಸಲಾಗಿ ಇವನ 15ನೆಯ ವಯಸ್ಸಿನಲ್ಲಿ ಶಾಲೆಯನ್ನು ಬಿಡಿಸಿ ಇವನನ್ನು ಬ್ಲೆಯ್ಕಿಯವರ ಕಬ್ಬಿಣ ಕಾರ್ಖಾನೆಯಲ್ಲಿ ಅಭ್ಯಾಸಿ ಎಂಜಿನಿಯರಾಗಿ ಸೇರಿಸಿದರು. ಕೆಲಸ ಚೆನ್ನಾಗಿ ಕಲಿಯಬೇಕೆಂಬ ಅತ್ಯುತ್ಸಾಹವಿದ್ದು ಶ್ರಮವಹಿಸಿ ದುಡಿಯುತ್ತಿದ್ದುದರಿಂದ ಇವನಿಗೆ ತೀವ್ರ ಬೆನ್ನು ನೋವು ಹಾಗೂ ಬಲಗೈ ನಿಶ್ಶಕ್ತಿ ಉಂಟಾದುವು. ಕೆಲಸ ಬಿಡಬೇಕಾಗಿ ಬಂದದ್ದಲ್ಲದೆ ಸುಮಾರು 5 ತಿಂಗಳ ಕಾಲ ಹಾಸಿಗೆಯಲ್ಲೇ ಮಲಗಿರಬೇಕಾಯಿತು. ಇದರಿಂದ ಸ್ವಲ್ಪ ಗುಣವಾದಂತಾದರೂ ಬೆನ್ನು ನೋವು, ಬಲಗೈ ನಿಶ್ಶಕ್ತಿಗಳನ್ನೂ ನಡುವಯಸ್ಸಿನಲ್ಲಿ ಎರಗಿದ ಗಾಟ್ ಎಂಬ ರೋಗದ ಕೀಲುನೋವುಗಳನ್ನೂ ಜೀವಮಾನ ಪರ್ಯಂತ ಈತ ಅನುಭವಿಸಿದ. ಮಲಗಿಯೇ ಇರಬೇಕಾಗಿದ್ದ 5 ತಿಂಗಳುಗಳಲ್ಲೂ ಇವನು ಹೇಗೋ ಕಷ್ಟಪಟ್ಟು ದಿನಕ್ಕೆ 2 ಗಂಟೆಗಳ ಕಾಲ ಮಾರಿಷಾಲ್ ಕಾಲೇಜ್ ಎಂಬಲ್ಲಿ ನಿಸರ್ಗವಿಜ್ಞಾನದ ವ್ಯಾಸಂಗ ಮಾಡಿದ. ಇದು ಇವನ ವೈದ್ಯ ವ್ಯಾಸಂಗಕ್ಕೆ ತಳಹದಿಯಾಯಿತು. ಇದರಿಂದಾಗಿ ಮ್ಯಾನ್‌ಸನ್ ಕಾರ್ಖಾನೆ ಎಂಜಿನಿಯರ್ ಆಗುವ ಆಸೆಯನ್ನು ಬಿಟ್ಟು ವೈದ್ಯವಿದ್ಯೆಯನ್ನು ಕಲಿಯುವುದು ವಿಧಿವಿಹಿತವಾಯಿತು. ಅದರಂತೆ ಈತ ಅಬರ್‌ಡೀನ್ ವಿಶ್ವವಿದ್ಯಾಲಯವನ್ನು ಸೇರಿದ (1860). ವೈದ್ಯಕೀಯ ಪದವಿ ಪಡೆದು (1864) ಲಂಡನ್ನಿನ ಆಸ್ಪತ್ರೆಗಳ ಕಾರ್ಯವಿಧಾನಗಳನ್ನು ತಿಳಿದುಕೊಳ್ಳಲು ಅಲ್ಲಿಗೆ ತೆರಳಿದ. ಆದರೆ ಶೀಘ್ರದಲ್ಲೆ ಡರ್‌ಹ್ಯಾಮಿನಲ್ಲಿ ಮತಿವಿಕಲರ ಆಸ್ಪತ್ರೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡ. ಇಲ್ಲಿ ಇವನು ನಡೆಸಿದ ಅನೇಕ ಮರಣೋತ್ತರ ಪರೀಕ್ಷೆಗಳ ಫಲವಾಗಿ ಮಿದುಳು ರೋಗಗಳಲ್ಲಿ ಮಿದುಳಿಗೆ ರಕ್ತಪೂರೈಕೆ ಮಾಡುವ ಅಪಧಮನಿ ಅನೇಕ ವೇಳೆ ರೋಗ ಪ್ರಕ್ರಿಯೆಗೆ ಈಡಾಗಿರುವುದು ತಿಳಿಯಿತು. ಇದನ್ನು ಕುರಿತು ಒಂದು ಪ್ರೌಢ ಪ್ರಬಂಧವನ್ನು ಬರೆದು ಒಪ್ಪಿಸಿ ಅಬರ್‌ಡೀನಿನ ಎಂ.ಡಿ. ಪದವಿಯನ್ನು ಪಡೆದ (1866).

ಇವನ ಅಣ್ಣ ಚೀನದ ಶಾಂಗ್ಹಾಯ್‌ನಲ್ಲಿ ಕೆಲಸದಲ್ಲಿದ್ದು ಪ್ಯಾಟ್ರಿಕ್ಕನನ್ನೂ ಚೀನಕ್ಕೆ ಬರಲು ಪ್ರೋತ್ಸಾಹಿಸಿದ್ದರಿಂದ ಇವನು ಡರ್‌ಹ್ಯಾಮಿನ ಕೆಲಸ ಬಿಟ್ಟು ಚೀನಕ್ಕೆ ಸೇರಿದ್ದ ಫಾರ್ಮೋಸ ದ್ವೀಪದಲ್ಲಿ ಚೀನೀ ಸರ್ಕಾರದ ನೌಕಾಸುಂಕದ ಇಲಾಖೆಯಲ್ಲಿ ವೈದ್ಯವೃತ್ತಿ ಕೈಗೊಂಡ (1866). ಖಾಸಗಿಯಾಗಿಯೂ ವೈದ್ಯವೃತ್ತಿ ಮಾಡಿ ಚೆನ್ನಾಗಿ ಹಣ ಸಂಪಾದಿಸಿದ. ಇದಲ್ಲದೆ ತನ್ನ ವೈದ್ಯವಿದ್ಯಾಭ್ಯಾಸಕ್ಕಾಗಿ ತಂದೆ ಖರ್ಚು ಮಾಡಿದ್ದ 700 ಪೌಂಡುಗಳನ್ನೂ ತೀರಿಸಿದ. ಆದರೆ ಸ್ಥಳೀಯ ಚೀನೀಯರಿಗೂ ಬಂದರಿಗೆ ಬರುತ್ತಿದ್ದ ಜಪಾನೀ ಹಡಗುಗಳ ನಾವಿಕರಿಗೂ ರಾಜಕೀಯ ವೈಮನಸ್ಯ ಉಂಟಾಗಿ ಅದರಲ್ಲಿ ಈತ ಸಿಕ್ಕಿಹಾಕಿಕೊಂಡದ್ದರಿಂದ ಹಠಾತ್ತಾಗಿ ಫಾರ್ಮೋಸವನ್ನು ಬಿಡಬೇಕಾಗಿ ಬಂದು ಈತ ಚೀನಕ್ಕೆ ಸೇರಿದ್ದ ಅಮಾಯ್ ಎಂಬ ಇನ್ನೊಂದು ದ್ವೀಪಕ್ಕೆ ಬಂದು ಅಲ್ಲಿಯೂ ವೈದ್ಯವೃತ್ತಿಗೆ ಸೇರಿದ. ಫಾರ್ಮೋಸದಲ್ಲೂ ಅಮಾಯ್‌ನಲ್ಲೂ ಆನೆಕಾಲುರೋಗಕ್ಕೆ (ಎಲಿಫೆಂಟಿಯಾಸಿಸ್) ಶಸ್ತ್ರಚಿಕಿತ್ಸೆ ಮಾಡುವುದರಲ್ಲಿ ಸಿದ್ಧಹಸ್ತನೆಂದು ಹೆಸರು ಗಳಿಸಿದ. ಪಾಶ್ಚಾತ್ಯ ವೈದ್ಯರು ವಿಷ ಗುಳಿಗೆಗಳನ್ನು ಕೊಡುತ್ತಾರೆಂದು ಚೀನೀಯರಿಗೆ ಇದ್ದ ಅಪಾರ ಅಪನಂಬಿಕೆಯನ್ನು ಆನೆಕಾಲುರೋಗ ಚಿಕಿತ್ಸೆಯಂಥ ಹಲವು ಪ್ರಸಂಗಗಳಿಂದ ಹೋಗಲಾಡಿಸಿ ಚೀನಿಯರ ವಿಶ್ವಾಸವನ್ನೂ ಗಳಿಸಿದ.

ಈತ 1875ರಲ್ಲಿ ಒಂದು ವರ್ಷ ರಜ ಪಡೆದು ಇಂಗ್ಲೆಂಡ್–ಸ್ಕಾಟ್ಲೆಂಡ್‌ಗಳಲ್ಲಿ ಕಳೆದ. ಆನೆಕಾಲು ರೋಗದ ವಿಷಯವನ್ನು ವಿಶದವಾಗಿ ತಿಳಿದುಕೊಳ್ಳಬೇಕೆಂಬ ಆಸೆ ಇತ್ತು. ಆದರೆ ಹೇಗೆ, ಎಲ್ಲಿ ಎಂಬುದು ಏನೂ ಗೊತ್ತೇ ಆಗದೆ ಕೊನೆಗೆ ಬ್ರಿಟಿಷ್ ಮ್ಯೂಸಿಯಮ್ಮಿನ ಗ್ರಂಥಾಲಯದಿಂದ ಲಭ್ಯವಾದಷ್ಟು ಮಾಹಿತಿ ಸಂಗ್ರಹಿಸಿದ. ಆನೆಕಾಲು ರೋಗಿಗಳ ರಕ್ತದಲ್ಲಿ ಸೂಕ್ಷ್ಮಾಕಾರದ ಫೈಲೇರಿಯ ಎಂಬ ಹುಳುಗಳು ಇರುವುವೆಂಬುದನ್ನು ಹಲವು ವಿಜ್ಞಾನಿಗಳು ವಿವರಿಸಿದ್ದುದು ತಿಳಿಯಿತು. ಆನೆಕಾಲು ರೋಗ ಪ್ರಮುಖವಾಗಿ ವಿಷುವದ್ವೃತ್ತ $10^0$ ಉತ್ತರ ಹಾಗೂ ದಕ್ಷಿಣ ಅಕ್ಷಾಂಶ ಪ್ರದೇಶಗಳಲ್ಲಿ ಕಂಡುಬರುತ್ತದೆಂದೂ ತಿಳಿಯಿತು. ಭಾರತದ ವೈದ್ಯ ಇಲಾಖೆಯ (ಇಂಡಿಯನ್ ಮೆಡಿಕಲ್ ಸರ್ವಿಸ್) ಟಿಮೊತಿ ಲೂಯಿಸ್ ಎಂಬ ಶಸ್ತ್ರ ವೈದ್ಯ ಇಂಥ ಸೂಕ್ಷ್ಮ ಫೈಲೇರಿಯಗಳು ದುಗ್ಧರಸಮೂತ್ರರೋಗಿಗಳ (ಕೈಲ್ಯೂರಿಯ) ರಕ್ತದಲ್ಲೂ ಇರುತ್ತವೆಂದು ತೋರಿಸಿದ್ದನೆಂಬುದೂ (1872) ತಿಳಿಯಿತು. ಮ್ಯಾನ್‌ಸನ್ ಅನಂತರ ಹೆನ್ರಿ ಎಟ್ಟಫೂರ್‌ಬರ್ನ್ ಎಂಬಾಕೆಯನ್ನು ವಿವಾಹವಾಗಿ (21 ಡಿಸೆಂಬರ್ 1875) ಅಮಾಯ್‌ದ್ವೀಪಕ್ಕೆ ಆಕೆಯೊಡನೆ ಹಿಂದಿರುಗಿದ.

ಅಮಾಯ್‌ನಲ್ಲಿ ಪುನಃ ಆನೆಕಾಲು ರೋಗದ ವ್ಯಾಸಂಗವನ್ನು ಈತ ಕೈಗೆತ್ತಿಕೊಂಡ. ರೋಗಿಗಳ ರಕ್ತದಲ್ಲಿ ಸೂಕ್ಷ್ಮ ಫೈಲೇರಿಯ ಹುಳುಗಳಿರುವುದನ್ನು ಸೂಕ್ಷ್ಮದರ್ಶಕದಲ್ಲಿ ಸ್ವತಃ ವೀಕ್ಷಿಸಿದ. ಕೆಲವೊಮ್ಮೆ ಇವು ಆರೋಗ್ಯವಂತರಂತೆಯೇ ಕಾಣಬರುವವರಲ್ಲೂ ಇರುವುದೆಂದು, ಅನೇಕಾಲುರೋಗಿಗಳಲ್ಲಿ ಅನೇಕ ಬಾರಿ ಇವು ಇರುವುದಿಲ್ಲವೆಂದೇ ಭಾಸವಾಗುತ್ತದೆಂದೂ ಇವನಿಗೆ ಅರಿವಾಯಿತು. ಯಥಾರ್ಥವನ್ನು ತಿಳಿಯಲು ಮೂರು ಗಂಟೆಗಳಿಗೆ ಒಂದು ಸಾರಿ ರೋಗಿಯ ರಕ್ತ ಪರೀಕ್ಷೆಮಾಡಿ ನೋಡಬೇಕೆಂಬುದಾಗಿ ಇಬ್ಬರು ವೈದ್ಯಸಹಾಯಕರನ್ನು ನೇಮಿಸಿಕೊಂಡ. ಒಬ್ಬ ಹಗಲಿನಲ್ಲೂ ಮತ್ತೊಬ್ಬ ರಾತ್ರಿಯಲ್ಲೂ ರಕ್ತಪರೀಕ್ಷೆ ಮಾಡುವವರಾದರು. ಜೊತೆಗೆ ಇಬ್ಬರೂ ರೋಗಿಗಳೇ! ಪರಸ್ಪರ ರಕ್ತಪರೀಕ್ಷೆಗಳನ್ನು 3 ಗಂಟೆಗಳಿಗೆ ಒಂದು ಬಾರಿ ಮಾಡಿಕೊಳ್ಳುವಂತೆ ಅವರಿಗೆ ಕಲಿಸಿ ಫಲಿತಾಂಶಗಳನ್ನು ಗಮನಿಸಿದ. ಈ ತನಿಖೆಗಳಿಂದ ಲಕ್ಷಾಂತರ ಸೂಕ್ಷ್ಮ ಫೈಲೇರಿಯ ಹುಳುಗಳು ರಾತ್ರಿ ಹೊತ್ತು ರೋಗಿಗಳ ರಕ್ತದಲ್ಲಿ ಕಂಡುಬರುವುವೆಂದೂ, ಹಗಲು ಹೊತ್ತು ರೋಗಿಯ ದೇಹದಲ್ಲಿ ಎಲ್ಲೋ ಅಡಗಿರುವುವೆಂದೂ ತಿಳಿದುಬಂತು. ಅತ್ಯಧಿಕ ಸಂಖ್ಯೆಯಲ್ಲಿ ಇವು ರಕ್ತಪರಿಚಲನೆಯಲ್ಲಿದ್ದಾಗ ಪರಸ್ಪರ ತೊಡಗಿಸಿಕೊಂಡು ರಕ್ತನಾಳಗಳಲ್ಲಿ ಮಾತ್ರ ಅಲ್ಲದೆ ದುಗ್ಧರಸನಾಳಗಳಲ್ಲೂ ಪರಿಚಲನೆಗೆ ಅಡ್ಡಿ ಮಾಡಬಹುದೆಂದೂ ಅದರಿಂದಲೇ ಊತ ಉಂಟಾಗಿ ಆನೆಕಾಲು ಸ್ಥಿತಿ, ದುಗ್ಧಮೂತ್ರತೆ ಇತ್ಯಾದಿಗಳು ಉಂಟಾಗುವುವೆಂದೂ ಮ್ಯಾನ್‌ಸನ್ ತರ್ಕಿಸಿದ. ಇದು ಸರಿ ಎಂದು ಅನಂತರದ ಪ್ರತ್ಯೇಕ ಸಂಶೋಧನೆಗಳಿಂದ ಬೇರೆ ವಿಜ್ಞಾನಿಗಳು ಸ್ಥಿರಪಡಿಸಿದರು. ತಂಪಾದ ರಾತ್ರಿ ಹೊತ್ತಿನಲ್ಲಿ, ವ್ಯಕ್ತಿ ನಿದ್ರೆ ಮಾಡುತ್ತಿರುವ ಸಮಯದಲ್ಲಿ ಹುಳುಗಳು ರಕ್ತಪರಿಚಲನೆಯಲ್ಲಿ ಕಾಣಬಹುದು. ಜೌಗುಪ್ರದೇಶಗಳ ನಿವಾಸಿಗಳೇ ಹೆಚ್ಚಾಗಿ ರೋಗಕ್ಕೆ ಈಡಾಗುವುದು, ಅಧಿಕ ಮಳೆ ಬೀಳುವ ದಟ್ಟ ಕಾಡುಗಳೂ ಸತ್ತ ಸಸ್ಯಗಳೂ (ಅಂಡರ್‌ಗ್ರೋತ್) ಇರುವ ವಿಷುವದ್ವೃತ್ತಪ್ರದೇಶದಲ್ಲಿ ಈ ರೋಗಗಳು ಹೆಚ್ಚಾಗಿ ಕಂಡುಬರುವುದು, ಇವುಗಳಿಂದ ರಕ್ತವನ್ನು ಹೀರುವ ನಿಶಾಚರ ಕೀಟ–ಬಹುಶಃ ಯಾವುದೋ ಸೊಳ್ಳೆ – ರೋಗ ಹರಡುವುದಕ್ಕೆ ಕಾರಣ ಎಂದು ಮ್ಯಾನ್‌ಸನ್ ಊಹಿಸಿದ. ರೋಗಿಗಳ ರಕ್ತವನ್ನು ಹೀರಿದ್ದ ಸೊಳ್ಳೆಗಳನ್ನು ಸೂಜಿಗಳಿಂದ ಬೆದಕಿ (ಟೀಸ್) ಸೂಕ್ಷ್ಮದರ್ಶಕದ ಮೂಲಕ ನೋಡಿ ಅವುಗಳಲ್ಲಿ ಫೈಲೇರಿಯ ಹುಳುಗಳು ಇರುವುದೆಂದೂ, ಈ ಹುಳುಗಳು ಸೊಳ್ಳೆಯ ದೇಹದಲ್ಲಿ ಸ್ವಲ್ಪ ಮಟ್ಟಿಗೆ ಬೆಳೆಯುವುವೆಂದೂ ವಿಶದಪಡಿಸಿದ (1877). ಸೊಳ್ಳೆಗಳು ನೀರಿನಲ್ಲಿ ಮೊಟ್ಟೆ ಇಟ್ಟ ಬಳಿಕ ಸಾಯುತ್ತವೆ. ಫೈಲೇರಿಯ ಇರುವ ಮೃತಸೊಳ್ಳೆಗಳ ದೇಹದಿಂದ ಫೈಲೇರಿಯಗಳು ಹೊರಬಂದು ನೀರನ್ನು ಸೇರುತ್ತವೆ. ಮನುಷ್ಯ ಆ ನೀರನ್ನು ಕುಡಿಯುವುದರಿಂದಲೊ, ಅದರ ಸಂಪರ್ಕದಿಂದ ಚರ್ಮದ ಮೂಲಕವೋ ಫೈಲೇರಿಯಗಳು ಅವನ ದೇಹವನ್ನು ಹೊಕ್ಕು ವ್ಯಕ್ತಿಯಲ್ಲಿ ರೋಗವನ್ನು ಉಂಟುಮಾಡುತ್ತವೆ ಎಂದು ತಿಳಿಸಿದ. ಈ ಅಭಿಪ್ರಾಯ ತಪ್ಪು ಎಂದು ಅನಂತರ ತಿಳಿದುಬಂದಿದೆ. ರೋಗಿಯನ್ನು ಕಚ್ಚಿದ ಸೊಳ್ಳೆಗಳು ಮತ್ತೆ ಇನ್ನೊಬ್ಬ ವ್ಯಕ್ತಿಯನ್ನು ಕಡಿದಾಗಲೇ ಫೈಲೇರಿಯ ಹುಳುಗಳು ಆ ವ್ಯಕ್ತಿಯ ದೇಹದ ಒಳಹೋಗುವುದೆಂದೂ, ರೋಗ ಹೀಗೆ ಹರಡುವುದೇ ಸರಿ ಎಂದೂ ಈಗ ವ್ಯಕ್ತವಾಗಿದೆ. ಆದರೆ ಮೂಲತಃ ರೋಗಕಾರಕ ಮನುಷ್ಯನಿಂದ ಮತ್ತೊಬ್ಬ ಮನುಷ್ಯನಿಗೆ ಈ ವರ್ಗಾವಣೆ ನಡೆಯಬೇಕಾದರೆ ಸೊಳ್ಳೆಯಂಥ ರಕ್ತಹೀರುವ ಕೀಟದ ಮಧ್ಯಸ್ಥಿಕೆ ಅಗತ್ಯ ಎಂದು ಮ್ಯಾನ್‌ಸನ್ ನಿರೂಪಿಸಿದ್ದು ಒಂದು ಅಪೂರ್ವ ಪ್ರತಿಪಾದನೆಗೆ ಅವಕಾಶ ಮಾಡಿಕೊಟ್ಟಿತು. ವೈದ್ಯ ಪರಿಶೋಧಕರು ಇದನ್ನು ಅನುಮೋದಿಸಿ ವ್ಯಾಸಂಗಗಳನ್ನು ಜರುಗಿಸಿ ಪರೋಪಜೀವಿಕೃತ ರೋಗಪ್ರಸಾರದಲ್ಲಿ ಕೀಟಗಳು ಮತ್ತು ಇತರ ಸಂಧಿಪದಿಗಳು ಮಧ್ಯವರ್ತಿಗಳು ಮಾತ್ರವೇ ಅಲ್ಲದೆ ಮಧ್ಯವರ್ತಿ ಆತಿಥೇಯಗಳೂ (ಇಂಟರ್‌ಮೀಡಿಯಟ್ ಹೋಸ್ಟ್) ಆಗಿರುತ್ತವೆ ಎಂದು ತೋರಿಸಿದ್ದಾರೆ.

ಮಲೇರಿಯ ರೋಗದ ಹರಡುವಿಕೆಗೂ ರಕ್ತಹೀರುವ ಕೀಟವೇ ಪಾತ್ರವಾಗಿರಬೇಕೆಂದೂ ಅದು ಸೊಳ್ಳೆಯೇ ಆಗಿರಬೇಕೆಂದೂ ಈತನ ದೃಢನಂಬಿಕೆಯಾಗಿತ್ತು. ತನ್ನ ನಂಬಿಕೆಯನ್ನು ರೊನಾಲ್ಡ್ ರಾಸ್ ಎಂಬ ವೈದ್ಯನಿಗೆ ಒತ್ತು ಹೇಳಿ ಅವನೂ ನಂಬುವಂತೆ ಮಾಡಿದ್ದರಿಂದ ಮುಂದೆ ರಾಸ್ ಅನಾಫಿಲಿಸ್ ಜಾತಿಯ ಹೆಣ್ಣು ಸೊಳ್ಳೆ ಮಲೇರಿಯಕಾರಕದ ಮಧ್ಯವರ್ತಿ ಆತಿಥೇಯವಾಗಿರುವುದನ್ನು ಆವಿಷ್ಕರಿಸುವಂತಾಗಿ ಅದಕ್ಕಾಗಿ ರಾಸ್ ನೊಬೆಲ್ ಪಾರಿತೋಷಿಕ ಪಡೆಯುವಂತೆ ಆಯಿತು.

ಫೈಲೇರಿಯ ರೋಗದ ಹರಡುವಿಕೆಗೆ ಸೊಳ್ಳೆ ಕಾರಣವೆಂದು ಮ್ಯಾನ್‌ಸನ್ ವಿಶದಪಡಿಸಿದಾಗ (1876) ಅವನಿಗೆ ಇನ್ನೂ ಚಿಕ್ಕವಯಸ್ಸು; ಸೋಂಕುರೋಗಗಳ ವಿಶೇಷಜ್ಞಾನ ಇನ್ನೂ ಪಡೆಯದಿದ್ದ ಸಾಮಾನ್ಯ ವೈದ್ಯನಾಗಿದ್ದ. ಪ್ರಾಯೋಗಿಕ ವ್ಯಾಸಂಗಗಳ ವಿಧಾನಗಳನ್ನು ಅರಿಯದವ; ವಿಷಯ ಪರ್ಯಾಲೋಚನೆ ಹಾಗೂ ಗ್ರಹಣೆಗೆ ಗ್ರಂಥಾಲಯಗಳನ್ನಾಗಲಿ ಇತರ ವೈಜ್ಞಾನಿಕ ಸಂಶೋಧಕರನ್ನಾಗಲಿ ಮೊರೆಹೋಗುವ ಸಂಭವ ದೂರವಾಗಿದ್ದ ಪ್ರದೇಶದಲ್ಲಿದ್ದವ. ತಜ್ಞ ಸಹಾಯಕರೂ ಇಲ್ಲದೆ ಏಕಾಂಗಿಯಾಗಿ ಈತ ಮಾಡಿದ ಸಂಶೋಧನೆಯಿಂದ ರೋಗ ಹರಡುವಿಕೆಯ ವಿಷಯದಲ್ಲಿ ಒಂದು ನೂತನ ಪ್ರತಿಪಾದನೆಯೇ ಹೊರಬಂತು. ಕೀಟಗಳು ಮತ್ತು ಇತರ ಸಂಧಿಪದಿಗಳು ಮನುಷ್ಯರಲ್ಲಿ ರೋಗಕಾರಕಗಳೂ ಆಗಿರಬಹುದಾದ ಪರೋಪಜೀವಿಗಳಿಗೆ ಮಧ್ಯವರ್ತಿ ಆತಿಥೇಯಗಳಾಗಿದ್ದು ಸೋಂಕು ಹರಡುವಿಕೆಯಲ್ಲಿ ಪ್ರಧಾನಪಾತ್ರ ವಹಿಸುವುವು ಎಂಬ ಈ ತತ್ತ್ವಕ್ಕೆ ಮೂಲಪುರುಷ ಮ್ಯಾನ್‌ಸನ್ನನೇ ಎಂದು ಹೇಳುವುದುಂಟು. ಗಹನ ವಿಚಾರಧಾರೆ, ಅಪೂರ್ವಬಗೆಯ ಪರ್ಯಾಲೋಚನೆ, ಪ್ರಯೋಗ ವ್ಯಾಸಂಗಗಳಲ್ಲಿ ಯುಕ್ತ ತಾಳ್ಮೆ ಇವು ಈತನನ್ನು ಆ ಮಟ್ಟಕ್ಕೆ ಏರಿಸಿದುವು. ಇಷ್ಟಾಗಿ ಇವನ ಪರಿಶೋಧನೆ ವ್ಯಾಸಂಗಕ್ಕೆ ಇದ್ದ ಸೌಲಭ್ಯ ಎಂದರೆ ಒಂದು ಸೂಕ್ಷ್ಮದರ್ಶಕ ಮಾತ್ರ.

ಅಮಾಯ್ ದ್ವೀಪದಲ್ಲಿ ಮ್ಯಾನ್‌ಸನ್ನಿನ ಸಂಸಾರ ಬೆಳೆದು ವರಮಾನ ಸಾಲದೇ ಹೋದದ್ದರಿಂದ ಈತ ಅಮಾಯಿನ ಕೆಲಸಕ್ಕೆ ರಾಜೀನಾಮೆ (1883) ಕೊಟ್ಟು ಹಾಂಗ್‌ಕಾಂಗಿಗೆ ಬಂದು ಅಲ್ಲಿ ಖಾಸಗಿ ವೈದ್ಯವೃತ್ತಿ ಕೈಗೊಂಡ. ಸ್ಥಳೀಯ ಪ್ರತಿಭಾವಂತ ತರುಣರಿಗೆ ವೈದ್ಯ ವಿದ್ಯೆ ಕಲಿಸಿದರೆ ಕೆಲವರು ತನಗೇ ಸಹಾಯಕರಾಗಿರಬಹುದೆಂದೂ ಮಿಕ್ಕವರು ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆಸಿ ವೈದ್ಯಸೇವೆ ಮಾಡಬಹುದೆಂದೂ ಯೋಚಿಸಿ ಹಾಂಗ್‌ಕಾಂಗಿನಲ್ಲಿ ಜೇಮ್ಸ್ ಕ್ಯಾಂಟ್ಲಿ ಎಂಬ ಮತ್ತೊಬ್ಬ ವೈದ್ಯನೊಡನೆ ಸೇರಿ ವೈದ್ಯಶಿಕ್ಷಣಶಾಲೆಯೊಂದನ್ನು ತೆರೆದ (1887). ವಾಸ್ತವವಾಗಿ ಈತ ಅಮಾಯ್‌ನಲ್ಲಿದ್ದಾಗಲೂ ತರುಣ ವ್ಯಕ್ತಿಗಳಿಗೆ ಸ್ವತಃ ವೈದ್ಯಕೀಯ ಶಿಕ್ಷಣ ಕೊಟ್ಟು ತನಗೇ ಸಹಾಯಕರಾಗಿರುವಂತೆ ಮಾಡಿಕೊಂಡದ್ದಲ್ಲದೆ ಕೆಲವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ವೈದ್ಯಕೀಯ ನೆರವು ಕೊಡುವಂತೆ ಏರ್ಪಡಿಸಿದ್ದ ಕೂಡ. ಹಾಂಗ್‌ಕಾಂಗಿನಲ್ಲಿ ತೆರೆದಿದ್ದ ವೈದ್ಯಶಾಲೆ ಕಾಲಕ್ರಮದಲ್ಲಿ ಹಾಂಗ್‌ಕಾಂಗ್ ವಿಶ್ವವಿದ್ಯಾಲಯಕ್ಕೆ ಮಾತೃ ಸಂಸ್ಥೆ ಆಯಿತು.

ಮ್ಯಾನ್‌ಸನ್ ಇಂಗ್ಲೆಂಡಿಗೆ ವಾಪಸಾಗಿ (1889) ವಿಶ್ರಾಂತಜೀವನ ನಡೆಸಲು ಉದ್ಯುಕ್ತನಾದ. ಚೀನದಲ್ಲಿ ಠೇವಣಿ ಇಟ್ಟಿದ್ದ ಸ್ವತಃ ಗಳಿಸಿದ ಹಣದ ಮೌಲ್ಯ ಕುಸಿದುಹೋದದ್ದರಿಂದ ವರಮಾನ ಸಾಲದೆ ಪುನಃ ತನ್ನ 46 ನೆಯ ವಯಸ್ಸಿನಲ್ಲಿ ಲಂಡನ್ನಿನಲ್ಲಿ ಖಾಸಗಿ ವೈದ್ಯವೃತ್ತಿಯನ್ನು ಪ್ರಾರಂಭಿಸಬೇಕಾಯಿತು. ಆಗಲೂ ರೋಗಿಗಳ ರಕ್ತದ ಹಾಗೂ ಕೀಟಗಳ ಸೂಕ್ಷ್ಮದರ್ಶಕ ಪರೀಕ್ಷಾ ವ್ಯಾಸಂಗವನ್ನು ಮುಂದುವರಿಸಿದ. ಲಂಡನ್ನಿನ ಎಂ.ಆರ್.ಸಿ.ಪಿ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ (1892) ಅಲ್ಬರ್ಟ್ ಡಾಕ್ ಆಸ್ಪತ್ರೆಯಲ್ಲಿ ವೈದ್ಯನಾಗಿ ನೇಮಕಗೊಂಡ. ಹೆಚ್ಚು ಸಂಖ್ಯೆಯಲ್ಲಿಲ್ಲದಿದ್ದರೂ ಇಲ್ಲಿಗೆ ಪ್ರಪಂಚದ ವಿವಿಧ ಭಾಗಗಳಿಂದ ಬರುತ್ತಿದ್ದ ರೋಗಿಗಳ ಚಿಕಿತ್ಸೆ ಮಾಡುತ್ತ ಕ್ರಮೇಣ ಲಂಡನ್ನಿನ ವೈದ್ಯಕೀಯ ಸಮಾಜದಲ್ಲಿ ಉಷ್ಣವಲಯ ರೋಗಗಳ ಪತ್ತೆ ಹಾಗೂ ಚಿಕಿತ್ಸೆಯಲ್ಲಿ ಸಿದ್ಧಹಸ್ತನೆಂದು ಮಾನ್ಯತೆ ಪಡೆದ. ಅನಂತರ ಈತ ಬ್ರಿಟನ್ನಿನ ಸಾಗರೋತ್ತರ ವಸಾಹತುಗಳ ವೈದ್ಯಕೀಯ ವಿಚಾರಗಳ ಸಲಹೆಗಾರನಾಗಿ ನೇಮಿತನಾದ (1897). 1899 ರಿಂದ ಆಲ್ಬರ್ಟ್ ಡಾಕ್ ಆಸ್ಪತ್ರೆಯಲ್ಲೂ ಮತ್ತಿತರ ಕಡೆಗಳಲ್ಲೂ ಉಷ್ಣವಲಯ ರೋಗಗಳ ಬಗ್ಗೆ ಪಾಠ ಪ್ರವಚನಗಳನ್ನು ನಡೆಸಿದ. ಅದೇ ವರ್ಷ ಈ ರೋಗಗಳ ಬಗ್ಗೆ ವಿಶದವಾದ ಒಂದು ಗ್ರಂಥವನ್ನೂ (ಟೆಕ್ಸ್ಟ್ ಬುಕ್ ಆಫ್ ಟ್ರಾಪಿಕಲ್ ಡಿಸೀಸಸ್) ರಚಿಸಿದ. ಇವನ ಅಳಿಯನೂ ಸ್ವತಃ ಉಷ್ಣವಲಯರೋಗತಜ್ಞನೂ ಆದ ಫಿಲಿಪ್ಸ್ ಮ್ಯಾನ್‌ಸನ್ ಭಾರ್ ಎಂಬವನಿಂದ ಈ ಗ್ರಂಥ ಆಗಿಂದಾಗ್ಗೆ ಪರಿಷ್ಕರಿಸಲ್ಪಟ್ಟು ಅನೇಕ ಆವೃತ್ತಿಗಳನ್ನು ಕಂಡಿದೆ. ಅಲ್ಲದೆ ಇದು ಇಂದಿಗೂ ಉಷ್ಣವಲಯರೋಗಗಳ ಬಗ್ಗೆ ಅಮೂಲ್ಯ ಹಾಗೂ ಪ್ರಮಾಣಗ್ರಂಥ ಎನಿಸಿಕೊಂಡಿದೆ. ಆಲ್ಬರ್ಟ್ ಡಾಕ್ ಆಸ್ಪತ್ರೆಯಲ್ಲಿ ಮ್ಯಾನ್‌ಸನ್ ಪ್ರಾರಂಭಿಸಿದ ಉಷ್ಣವಲಯ ರೋಗವಿದ್ಯಾಲಯ 1920 ರಲ್ಲಿ ರೆಡ್‌ಕ್ರಾಸ್ ಸಂಸ್ಥೆಯಿಂದ ದತ್ತವಾದ ವಿಶಾಲವಾದ ಸ್ವಂತ ಕಟ್ಟಡಕ್ಕೆ ವರ್ಗಾವಣೆಗೊಂಡಿತು. ಇದು ಮುಂದೆ (1929) ಲಂಡನ್ ಸ್ಕೂಲ್ ಅಫ್ ಹೈಜೀಯೀನ್ ಅಂಡ್ ಟ್ರಾಪಿಕಲ್ ಮೆಡಿಸನ್ ಎಂದು ಪುನರ್‌ನಾಮಕರಣಗೊಂಡು ವೈಭವಯುತವಾದ ಬೇರೆ ಸ್ವಂತ ಕಟ್ಟಡಕ್ಕೆ ವರ್ಗಾವಣೆ ಹೊಂದಿ ಪ್ರಸಿದ್ಧವಾಯಿತು.

ಮ್ಯಾನ್‌ಸನ್ 1900 ರಲ್ಲಿ ರಾಯಲ್ ಸೊಸೈಟಿಯ ಸದಸ್ಯನಾಗಿ ಚುನಾಯಿತನಾದ. ಇವನಿಗೆ ಸರ್ ಪದವಿಯನ್ನೂ ನೀಡಿ ಗೌರವಿಸಲಾಯಿತು (1901). ಅನೇಕ ವಿಶ್ವವಿದ್ಯಾಲಯಗಳು ಇವನಿಗೆ ಗೌರವ ಪದವಿಗಳನ್ನು ನೀಡಿದುವು (1901). ಈತ 1914 ರಿಂದ ವಿಶ್ರಾಂತ ಜೀವನ ನಡೆಸಿ 1922 ರ ಏಪ್ರಿಲ್ 9 ರಂದು ಲಂಡನ್ನಿನಲ್ಲಿ ನಿಧನನಾದ. (ಎಸ್.ಆರ್.ಆರ್.)

**ಮ್ಯಾಮತ್:** ಪ್ಲೀಸ್ಟೊಸೀನ್ ಅವಧಿಯಲ್ಲಿ (2,500,000 ವರ್ಷಗಳಿಂದ ಹಿಡಿದು 10,000 ವರ್ಷಗಳ ಹಿಂದೆ) ಜೀವಿಸಿದ್ದ ಒಂದು ಜಾತಿಯ ಆನೆ. ಇದರ ವೈಜ್ಞಾನಿಕ ಹೆಸರು ಮ್ಯಾಮೂತಸ್. ಇದರಲ್ಲಿ ಹಲವಾರು ಬಗೆಗಳಿದ್ದು ಎಲ್ಲವೂ ಪರಿಚಿತವಾಗಿರುವುದು ಪಳೆಯುಳಿಕೆಯ ರೂಪದಲ್ಲಿ ಮಾತ್ರ. ಆದಿಯುಗದ ಮಾನವನಿಗೂ ಇವುಗಳ ಪರಿಚಯವಿತ್ತು. ಅವರ ಬಿಡಾರಗಳಲ್ಲಿ ಅಂದರೆ ಗುಹೆಗಳ ಗೋಡೆಗಳ ಮೇಲೆ ವಿವಿಧ ಚಿತ್ರಗಳಲ್ಲಿ ಈ ಬಗೆಯ ಆನೆ ಹಿಂಡನ್ನು ಕಾಣಬಹುದು. ಪ್ರಾಯಶಃ ಆದಿಮಾನವರೂ ಈ ಆನೆಗಳೂ ಹಿಮಪ್ರಳಯಕ್ಕೆ ಸಿಕ್ಕಿ ಹಿಮಗತವಾಗಿ ಅಸುನೀಗಿರಬೇಕು. ಆದ್ದರಿಂದಲೇ ಇಂದಿಗೂ ಹಿಮತುಂಬಿದ ಕಂದರಗಳಲ್ಲಿ ಮತ್ತು ಹಿಮದ ಭಾರಿ ಬಂಡೆಗಳ ಅಡಿಯಲ್ಲಿ ಬೃಹತ್ ಆನೆಗಳ ಅವಶೇಷಗಳು ದೊರೆಯುತ್ತಿವೆ. ಸುಮಾರು ಮೂವತ್ತು ಸಾವಿರ ವರ್ಷಗಳು ಹಿಮದಲ್ಲಿ ಹುದುಗಿದ್ದ ಆನೆ ಶವಗಳು ಇಂದಿಗೂ ಹಿಮಪ್ರದೇಶದಲ್ಲಿ ಸಂಚರಿಸುವ ನಾಯಿಗಳಿಗೆ ಆಹಾರವಾಗಿ ಬಳಕೆಯಾದ ನಿದರ್ಶನಗಳುಂಟು. ಇವುಗಳ ಪಳೆಯುಳಿಕೆಗಳು ಮೊದಲು ದೊರೆತದ್ದು ಸೈಬೀರಿಯದಲ್ಲಿ.

ಉತ್ತರ ಧ್ರುವದ ಸುತ್ತಲೂ ಆರ್ಕ್‌ಟಿಕ್ ಸಾಗರದ ಅಂಚಿನಿಂದ ಹಿಡಿದು ಯುರೋಪಿನ ದಕ್ಷಿಣದಲ್ಲಿ ಸ್ಪೇನ್, ಇಟಲಿ ದೇಶಗಳಲ್ಲೂ ರಷ್ಯಾದಲ್ಲೂ ಉತ್ತರ ಅಮೆರಿಕದ ಉತ್ತರ ಕ್ಯಾರೊಲಿನ ಮತ್ತು ಕ್ಯಾಲಿಫೋರ್ನಿಯಾಗಳವರೆಗೂ ಇವುಗಳ ಸಂತತಿ ಪ್ರಸರಿಸಿದ್ದಿರಬೇಕೆಂದು ವಿಜ್ಞಾನಿಗಳು ಅನೇಕ ಆಧಾರಗಳ ಮೇಲೆ ಅಭಿಪ್ರಾಯಪಟ್ಟಿದ್ದಾರೆ.

ಬೃಹತ್ ಆನೆ ಎಂಬ ಹೆಸರನ್ನು ಪಡೆದಿದ್ದರೂ ಇವು ಇಂದಿನ ಆನೆಯ ಗಾತ್ರವಿದ್ದುವು. ಪ್ರಾಯಶಃ ಹಿಂಡಿನಲ್ಲಿ ಜೀವಿಸಿದ್ದಿರಬೇಕು. ಇಂದಿನ ಆನೆಗಳಿಗಿಂತ ಇವು ಬಹಶಃ ವಿಭಿನ್ನ. ಕಾರಣ ಮೈಮೇಲೆ ಜೂಲಿನಂಥ ನೀಳವಾದ ಕೆಂಪುಮಿಶ್ರಿತ ಕಂದು ಕೂದಲು

ಅಲ್ಲದೆ ಚರ್ಮದಡಿ ಕೊಬ್ಬು ಹಾಗೂ ಸುಮಾರು ಎಂಟು ಸೆಂಮೀ ದಪ್ಪದ ಕೊಂಬು, ಇದ್ದಿದ್ದರಿಂದ ಕಟುಚಳಿಯನ್ನು ತಡೆದುಕೊಳ್ಳಲು ಸಮರ್ಥವಾಗಿದ್ದುವು.

ಮ್ಯಾಮತ್‌ಗಳ ವಿವಿಧ ಅಂಗರಚನೆಗಳಲ್ಲಿ (ಬಾಹ್ಯ ಮತ್ತು ಒಳರಚನೆ) ವೈವಿಧ್ಯವುಂಟು. ತಲೆ ದೊಡ್ಡದಾಗಿ ಮತ್ತು ಉದ್ದವಾಗಿ ಕೋನಾಕೃತಿಯದಾಗಿತ್ತು. ಈ ತಲೆಗೆ ಹೊಂದಿಕೊಂಡಂತೆ ಕಿರಿದಾದ ಕಿವಿಯ ಅಲೆಗಳು, ಪುಟ್ಟ ಬಾಲ, ಬೆನ್ನಿನ ಮೇಲೆ ಕೊಬ್ಬಿನ ಡುಬ್ಬ, ಎರಡು ಜೊತೆ ಕೋರೆಹಲ್ಲು ಮತ್ತು ಬಾಯಲ್ಲಿ ಭಾರಿ ಗಾತ್ರದ ಹಲ್ಲುಗಳು ಮುಂತಾದುವು. ಶರೀರದ ಒಳಭಾಗವೂ ತುಲನಾತ್ಮಕ ದೃಷ್ಟಿಯಿಂದ ವೈವಿಧ್ಯಮಯವಾಗಿತ್ತು. ಈ ಭಾರಿ ಗಾತ್ರದ ಶರೀರಕ್ಕೆ ಪುಟ್ಟದಾದ ಕಿವಿಯ ಆಲೆಗಳು ಮತ್ತು ಕಿರಿದಾದ ಬಾಲ, ಹೆಚ್ಚಿನ ಪ್ರಮಾಣದಲ್ಲಿ ಮೃದುವಾದ ರಚನೆ ಹಿಮಕ್ಕೆ ತಾಕದಿರಲೆಂಬ ದೃಷ್ಟಿಯಿಂದ ಈ ಮಾರ್ಪಾಟು ಇರಬಹುದು. ಬೆನ್ನಿನ ಡುಬ್ಬ ಮತ್ತು ಚರ್ಮದಡಿಯ ಕೊಬ್ಬು ಹೊರ ವಾತಾವರಣದ ಕೊರೆವ ಚಳಿ ದೇಹದೊಳಕ್ಕೆ ತೂರದಂತೆಯೂ ಮತ್ತು ದೇಹದ ಉಷ್ಣತೆಯನ್ನು ನಿಯಂತ್ರಿಸಲು ಸಹಕಾರಿಯಾಗಿದ್ದುವು. ಡುಬ್ಬ ಇರುವ ಮ್ಯಾಮತ್ ಪಳೆಯುಳಿಕೆ ದೊರೆತಿಲ್ಲ.

ಆದರೆ ಆದಿಮಾನವ ರಚಿಸಿದ ಚಿತ್ರದಲ್ಲಿ ಈ ಭಾಗ ಎದ್ದು ಕಾಣುವುದರಿಂದ ಅವುಗಳಲ್ಲಿ ಈ ಭಾಗ ಇದ್ದಿರಬೇಕು ಎನ್ನುವುದರಲ್ಲಿ ಸಂಶಯವಿಲ್ಲ. ಅಥವಾ ಜೀವಂತ ಆನೆಗಳಲ್ಲಿದ್ದ ಈ ರಚನೆ ಅವು ಸತ್ತ ಮೇಲೆ ಸಾವಿರಾರು ವರ್ಷಗಳ ಹಿಮದ ಒತ್ತಡಕ್ಕೆ ಬಲಿಯಾಗಿ ರೂಪ ವ್ಯತ್ಯಾಸಗೊಂಡಿರಲೂಬಹುದು.

ಮ್ಯಾಮತ್ ಆನೆಗಳ ಕೋರೆಗಳು ಬಹಳ ವಿಚಿತ್ರವಾದುವು. ಏಕಕಾಲದಲ್ಲಿ ಎರಡು ಜೊತೆ ಕೋರೆಗಳು (ಅವುಗಳಲ್ಲಿ ಒಂದು ಜೊತೆ 3 –4 ಮೀ ಉದ್ದದ ಭಾರಿ ಗಾತ್ರದವು) ಮಿತಿಮೀರಿ ಬೆಳೆದು ನೆಲವನ್ನು ತಗುಲಿ ಅನಂತರ ಸುರುಳಿ ಸುತ್ತಿ ಒಂದಕ್ಕೊಂದು ಹೆಣೆದುಕೊಂಡ ಸ್ಥಿತಿಯನ್ನು ಕಾಣಬಹುದು. ದವಡೆಹಲ್ಲುಗಳು ಭಾರಿ ದಪ್ಪ ಆಗಿದ್ದು ಹಿಮಭರಿತ ಗುಡ್ಡಪ್ರದೇಶದಲ್ಲಿ ಬೆಳೆಯುವ ಒರಟಾದ ಸಸ್ಯಗಳನ್ನು ಅಗಿಯಲು ಸಹಾಯಕವಾಗಿದ್ದಿರಬೇಕು. ಇಂದು ದಂತಗಳು ಸಿಗುವ ಪ್ರಮಾಣ ಮತ್ತು ವಿಲೇವಾರಿಯಾಗಿರುವ ದಂತದ ತೂಕ ಮುಂತಾದುವುಗಳನ್ನು ಮನಗಂಡರೆ ಕೆಲವರ ಪ್ರಕಾರ ಅಂದು ಈ ಆನೆಗಳ ಸಂಖ್ಯೆ 40,000ಕ್ಕೂ ಹೆಚ್ಚಿರಬಹುದೆಂದು ಶಂಕಿಸಲಾಗಿದೆ. ಇವುಗಳ ವಿನಾಶಕ್ಕೆ ಬೇಟೆ ಕಾರಣ ಎಂದು ಕೆಲವರು ಅಭಿಪ್ರಾಯ ಪಟ್ಟರೆ ಕೆಲವರು ಹಿಮಪ್ರಳಯ ಎನ್ನುವರು. (ಎ.ಎಸ್.ಸಿ)

**ಮ್ಯಾಲ್‌ಪಿಘಿ, ಮಾರ್ಸೆಲ್ಲೊ:** 1628–94. ಇಟಲಿಯ ಶರೀರ ಕ್ರಿಯಾವಿಜ್ಞಾನಿ. ಅಂಗರಚನಾವಿಜ್ಞಾನದ (ಮೈಕ್ರೊಸ್ಕೋಪಿಕ್ ಅನಾಟಮಿ ಹಿಸ್ಟಾಲಜಿ) ಜನಕನೆಂದು ಪರಿಗಣಿಸಲ್ಪಟ್ಟಿದ್ದಾನೆ. 1628 ಮಾರ್ಚ್ 10ರಂದು ಬೊಲೋನಾ ನಗರದಲ್ಲಿ ಜನನ. ವಿಶ್ವವಿದ್ಯಾಲಯ ವ್ಯಾಸಂಗವನ್ನು ಅಲ್ಲಿಯೇ ಪ್ರಾರಂಭಿಸಿ (1646), ವೈದ್ಯಕೀಯ ವ್ಯಾಸಂಗಕ್ಕೆ ಜಾರಿಕೊಂಡು (1649) ಎಂ.ಡಿ. ಮತ್ತು ಪಿ.ಎಚ್.ಡಿ. ಪದವಿಗಳನ್ನು ಪಡೆದ (1650). ಮುಂದೆ 1656ರಲ್ಲಿ ಪೀಸಾ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಪ್ರಾಧ್ಯಾಪಕನಾಗಿ ನೇಮಿತನಾದ. ಆದರೆ ಆ ನಗರದ ಹವೆ ಒಗ್ಗದೆ 1659ರಲ್ಲಿ ಬೊಲೋನಾಕ್ಕೆ ವಾಪಸಾಗಿ ಅಲ್ಲಿ 1662ರ ತನಕ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಉಪನ್ಯಾಸಕನಾಗಿದ್ದ. ಅನಂತರ ಹೆಸ್ಸೀನ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಮುಖ್ಯ ಪ್ರಾಧ್ಯಾಪಕನಾಗಿ ನೇಮಕಗೊಂಡು ಅಲ್ಲಿಗೆ ತೆರಳಿದ 1666ರಲ್ಲಿ ಪುನಃ ಬೊಲಾನಾಕ್ಕೆ ವಾಪಸಾಗಿ ಅಲ್ಲಿ ಪ್ರಾಯೋಗಿಕ ವೈದ್ಯದ ಪ್ರಾಧ್ಯಾಪಕನಾಗಿ 25 ವರ್ಷ ಸೇವೆ ಸಲ್ಲಿಸಿದ. ಈ ಕಾಲದಲ್ಲಿ ಇವನು ಲಂಡನ್ನಿನ ರಾಯಲ್ ಸೊಸೈಟಿಗೆ ಬೊಲೋನಾ ವಿಶ್ವವಿದ್ಯಾಲಯದ ಅಧಿಕೃತ ಬಾತ್ಮೀದಾರನಾಗಿದ್ದು ನಿಕಟ ಸಂಪರ್ಕ ಪಡೆದಿದ್ದ. ವಾಸ್ತವವಾಗಿ ಇವನು ಬರೆದ ಗ್ರಂಥಗಳು ಹಾಗೂ ಲೇಖನಗಳನ್ನೆಲ್ಲ ರಾಯಲ್ ಸೊಸೈಟಿಯೇ ಪ್ರಕಟಿಸಿದೆ. 1691ರಲ್ಲಿ ಪೋಪ್ 12ನೆಯ ಇನ್ನೊಸೆಂಟಿನ ಮುಖ್ಯ ವೈದ್ಯನಾಗಿ ನೇಮಕಗೊಂಡು ರೋಮಿಗೆ ತೆರಳಿದ. ಮೂರು ವರ್ಷಗಳ ಅನಂತರ 1694 ನವೆಂಬರ್ 29ರಂದು ಇಟಲಿಯ ತನ್ನ ಅಧಿಕೃತ ನಿವಾಸದಲ್ಲೇ ಮೃತನಾದ.

ಸೂಕ್ಷ್ಮದರ್ಶಕವನ್ನು ರೂಢಿಯಾಗಿ ಬಳಸಿ ಅಧ್ಯಯನ ಮಾಡಿದ ಮೊದಲಿಗರಲ್ಲಿ ಮ್ಯಾಲ್‌ಪಿಘಿ ಒಬ್ಬ. ಸಸ್ಯ ಹಾಗೂ ಪ್ರಾಣಿ ಅಂಗಗಳ ಸೂಕ್ಷ್ಮರಚನೆ ನೋಡಿ ಅವುಗಳ ಕ್ರಿಯೆಗಳನ್ನು ಅರ್ಥವತ್ತಾಗಿ ಗ್ರಹಿಸುವುದರಲ್ಲಿ ಚತುರನಾದ. ಫುಪ್ಪುಸಗಳಲ್ಲಿ ಅಪಧಮನಿಯ ಅತ್ಯಂತ ಕಿರಿಕವಲುಗಳು ಅಭಿಧಮನಿಗಳ ಅತ್ಯಂತ ಕಿರಿಕವಲುಗಳಿಗೆ ಹೇಗೋ ಸಂಪರ್ಕಿಸಿರಲೇಬೇಕು, ಈ ರೀತಿ ರಚನೆಯಿಂದಲೇ ಫುಪ್ಪುಸಗಳಿಗೆ ಹರಿದುಹೋದ ರಕ್ತ ಪುನಃ ಹೃದಯಕ್ಕೆ ಬಂದು ಸೇರುತ್ತದೆ ಎಂದು ವಿಲಿಯಮ್ ಹಾರ್ವೆ 1628ರಲ್ಲಿ ಪ್ರತಿಪಾದಿಸಿದ್ದ. ಆದರೆ ಫುಪ್ಪುಸದಲ್ಲಿದ್ದ ಸಂಪರ್ಕ ಯಾವ ರೀತಿಯದು ಎಂದು ಗುರುತಿಸಿರಲಿಲ್ಲ. ಮ್ಯಾಲ್‌ಪಿಘಿ ಸೂಕ್ಷ್ಮದರ್ಶಕದಲ್ಲಿ ಕಪ್ಪೆಯ ಪುಪ್ಪುಸದ ರಚನೆಯನ್ನು ವೀಕ್ಷಿಸುತ್ತಿದ್ದಾಗ ಅತ್ಯಂತ ಕಿರಿನಾಳಗಳ ಜಾಲ ಅಪಧಮನಿಗಳ ಕವಲುಗಳನ್ನೂ ಅಭಿಧಮನಿ ಕವಲುಗಳನ್ನೂ ಜಂಟಿಸುವುದು ಕಂಡುಬಂತು. ಈ ಜಾಲ ಫುಪ್ಪುಸದ ವಾಯು ಬುಡ್ಡೆಗಳನ್ನು ಕೂಡ ಆವರಿಸಿತ್ತು. ಅಪಧಮನಿಗಳನ್ನೂ ಅಭಿಧಮನಿಗಳನ್ನೂ ನೇರವಾಗಿ ಕೂಡಿಸುವ ಇವುಗಳಿಗೆ ಲೋಮನಾಳಗಳು ಅಥವಾ ಕೇಶನಾಳಗಳು (ಕ್ಯಾಪಿಲ್ಲರಿ) ಎಂದು ಹೆಸರಾಯಿತು. ಇವುಗಳ ಪತ್ತೆ 1661ರಲ್ಲಿ ಆಯಿತು. ಅಷ್ಟುಹೊತ್ತಿಗೆ ಹಾರ್ವೆ ಕಾಲವಾಗಿ ನಾಲ್ಕು ವರ್ಷ ಸಂದಿದ್ದುವು. ಅಂತೂ ಅವನು ತರ್ಕಸಿದ್ಧಂತೆ ಅಪಧಮನಿಗಳಿಗೂ ಅಭಿಧಮನಿಗಳಿಗೂ ಕೂಡುನಾಳಗಳಿರುವುದು ಗೋಚರವಾಯಿತು. ಆದರೆ ಇವನಿಗೆ ಸ್ತನಿಗಳಲ್ಲಿ ಇವನ್ನು ಪತ್ತೆ ಮಾಡುವುದಕ್ಕಾಗಲಿಲ್ಲ. ನೈಸರ್ಗಿಕವಾಗಿ ಕಿರಿದರ್ಜೆ ಪ್ರಾಣಿಯಲ್ಲಿರುವ ರಚನೆ ಮೇಲ್ದರ್ಜೆ ಪ್ರಾಣಿಯಲ್ಲಿ ಉತ್ತಮಗೊಂಡಿರದಿದ್ದರೂ ಕನಿಷ್ಠ ಪಕ್ಷ ತದ್ವತ್ತಾಗಿಯಾಗಿಯಾದರೂ ಇರಬೇಕೆಂಬುದು ಮ್ಯಾಲ್‌ಪಿಘಿಯ ತರ್ಕ.

ಈತ ಮೆಸ್ಸೀನದಲ್ಲಿದ್ದಾಗ ಸಾಗರಜೀವಿಗಳ ಅಂಗರಚನೆಯನ್ನು ವ್ಯಾಸಂಗಿಸಿದ. ಪ್ರಾಣಿಗಳಲ್ಲಿ ನಾಲಗೆಯ ಸೂಕ್ಷ್ಮ ರಚನೆ ವಿವರಿಸುತ್ತ ಅವುಗಳ ಚರ್ಮದಲ್ಲಿ ಒರಟು ಮೇಲ್ಪದರವೂ ಇದರ ಅಡಿಯಲ್ಲಿ ಕೋಶಯುಕ್ತ ಮೃದುಪದರವೂ ಇರುವುದನ್ನು ವಿವರಿಸಿದ. ಕೋಶಯುಕ್ತ ಪದರಕ್ಕೆ ಮ್ಯಾಲ್‌ಪಿಘಿಯನ್ ಪದರವೆಂದೇ ಹೆಸರು. ನಾಲಗೆಯ ಮೇಲೆ ಬಗೆಬಗೆಯ ಅತಿ ಸಣ್ಣ ಚಾಚುಗಳಿರುವುದನ್ನೂ ಆದ್ದರಿಂದಲೇ ಅದು ಉಪ್ಪುಕಾಗದದಂತೆ ಒರಟಾಗಿರುವುದೆಂದೂ ವಿವರಿಸಿದ. ಅನೇಕ ಚಾಚುಗಳ ಮೇಲುತುದಿಯಲ್ಲಿ ರಂಧ್ರವಿದ್ದು ಅದರೊಳಗಿನಿಂದ ಆಹಾರ ಪದಾರ್ಥವನ್ನು ಲೀನವಾಗಿಸಿಕೊಂಡಿರುವ ಜೊಲ್ಲು ಇಳಿದು ರುಚಿ ಅನುಭವಕ್ಕೆ ಬರುವುದೆಂದು ಸೂಚಿಸಿದ.

ಮೇದೋಜೀರಕಾಂಗ, ಲಾಲಾಗ್ರಂಥಿ, ವೃಷಣ ಇವುಗಳ ನಾಳಗಳು ಗ್ರಂಥಿಯ ಒಳಗೆ ಹೇಗೆ ಕವಲಾಗಿ ಕೊನೆಗೆ ಗ್ರಂಥಿಯ ಸ್ರಾವಭಾಗಗಳಲ್ಲಿ ಅಂತ್ಯವಾಗುವುವು ಎಂಬುದನ್ನು ವಿವರಿಸಿದ. ಗ್ರಂಥಿಯ ಒಳಕ್ಕೆ ಹೋಗುವ ಅಪಧಮನಿಯ ರಕ್ತದಿಂದ ವಿಶಿಷ್ಟ ಪದಾರ್ಥಗಳು ಬೇರ್ಪಟ್ಟು ಗ್ರಂಥಿಯ ಸ್ರಾವಭಾಗಕ್ಕೆ ಸೇರುವುವೆಂದು ಹೇಳಿದ. ಸ್ರಾವಭಾಗದಲ್ಲಿ ಹೀಗೆ ಸಂಚಯನವಾಗುವ ವಸ್ತುಗಳು ಅಪಧಮನಿ ಕವಲುಗಳ ಮೂಲಕ ಹೊರಬರುವಂತೆ ಆದರೆ ಅಭಿಧಮನಿ ಕವಲುಗಳೊಳಕ್ಕೆ ತೂರಿ ಹೋಗದಂತೆ ಇರುವುದೆಂಬ ತರ್ಕವನ್ನು ಮಂಡಿಸಿದ. ಆದ್ದರಿಂದ ಗ್ರಂಥಿಯಲ್ಲಿ ಸ್ರಾವವಾಗುವ ವಿಧಾನ ರಕ್ತವನ್ನು ಜರಡಿಯಲ್ಲಿ ಸೋಸಿದಂತೆ ಮಾತ್ರ, ಇನ್ನು ಯಾವ ಬಲವಂತಿಕೆಯೂ ಇಲ್ಲ ಎಂದು ಹೇಳಿ ಅಪಧಮನಿಗಳ ಗ್ರಂಥಿಯ ಸ್ರಾವಭಾಗಕ್ಕೂ ಪರಸ್ಪರ ಸಂಪರ್ಕವಿರುವುದರಿಂದ ಇದು ಸಾಧ್ಯವಾಗುವುದೆಂದು ವಿಶದೀಕರಿಸಿದ. ಆದರೆ ಈ ಸಂಪರ್ಕವನ್ನು ಸೂಕ್ಷ್ಮದರ್ಶಕದ ಮೂಲಕ ತೋರಿಸಲು ಸಾಧ್ಯವಾಗಲಿಲ್ಲ. ಮೂತ್ರಜನಕಾಂಗದಲ್ಲಿ ಅಪಧಮನಿ ಕವಲೊಡೆದು ಕೇಶಗುಚ್ಛವಾಗಿ ಅನಂತರ ಅಭಿಧಮನಿಯ ಕವಲುಗಳಾಗುವುದನ್ನೂ ಕೇಶಗುಚ್ಛ ಕವಚಾಚ್ಛಾದಿತವಾಗಿರುವುದನ್ನೂ ಮೂತ್ರಜನಕಾಂಗದಲ್ಲಿ ಲಕ್ಷಗಟ್ಟಲೆ ಇಂಥ ರಚನೆಗಳಿರುವುದನ್ನೂ ಮ್ಯಾಲ್‌ಪಿಘಿ ಈಗಾಗಲೇ ವಿವರಿಸಿದ್ದ. ಮೂತ್ರಜನಕಾಂಗಕ್ಕೆ ವರ್ಣದ್ರವ್ಯವನ್ನು ಚುಚ್ಚುಮದ್ದಾಗಿ ಒಳಹುಗಿಸಿದರೆ ಅದು ಶೀಘ್ರವಾಗಿಯೇ ಅಪಧಮನಿಗಳ ಕವಲಿನಲ್ಲಿಯೂ ಕೋಶಗುಚ್ಛದಲ್ಲಿಯೂ ಮೂತ್ರನಾಳಗಳ ಕವಲುಗಳಲ್ಲಿಯೂ ಕಾಣಬರುವುದೆಂದೂ ಇವುಗಳ ನಡುವೆ ಸಂಪರ್ಕವಿಲ್ಲದಿದ್ದರೆ ಹೀಗಾಗುತ್ತಿರಲಿಲ್ಲವೆಂದೂ ವಿಶದೀಕರಿಸಿದ. ಮೂತ್ರಜನಕಾಂಗದಲ್ಲಿ ಲಕ್ಷಗಟ್ಟಲೆ ಇರುವ ಕವಚ್ಛಾದಿತ ಕೇಶಗುಚ್ಛಗಳಿಗೆ ಮ್ಯಾಲ್‌ಪಿಘಿಯ ಕಣಗಳೆಂದು ಹೆಸರು.

ಈತನ ಇನ್ನೊಂದು ಮುಖ್ಯ ಆವಿಷ್ಕಾರವೆಂದರೆ ಹೃದಯದಲ್ಲಿ ಕೆಲವು ವೇಳೆ ಇರುವುವೆಂದು ಈತ ವಿವರಿಸಿದ ದಪ್ಪ ಮರಳು ಗಾತ್ರದ ಬಿಳಿಯ ರಚನೆಗಳು. ಹೃದಯಮಿಡಿತ ಹಾಗೂ ಉಸಿರಾಟಗಳು ಹಠಾತ್ತನೆ ನಿಂತು ಮೃತಿಹೊಂದಿದ್ದ ವ್ಯಕ್ತಿಗಳಲ್ಲಿಯೇ ವಿಶೇಷವಾಗಿ ಈ ರಚನೆಗಳು ಕಂಡುಬರುತ್ತಿದ್ದುವು. ಇವು ರಕ್ತಗರಣೆಗಳೇ ಇರಬೇಕು ಎಂದು ಮ್ಯಾಲ್‌ಪಿಘಿ ಊಹಿಸಿದ. ನಿಶ್ಚಯ ಮಾಡಿಕೊಳ್ಳಲು ರಕ್ತಗರಣೆಯನ್ನು ನೀರಿನಲ್ಲಿ ಚೆನ್ನಾಗಿ ತೊಳೆದು ನೋಡಿದ. ಗರಣೆ ಬೆಳ್ಳಗಾಯಿತು. ಅಲ್ಲದೆ ಸೂಕ್ಷ್ಮದರ್ಶಕದಲ್ಲಿ ಅದರ ರಚನೆ ಹೃದಯದಲ್ಲಿದ್ದ ಗಂಟುಗಳಂತೆಯೇ ಇತ್ತು. ತೊಳೆದ ನೀರನ್ನೆ ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಅದರಲ್ಲಿ ಕೆಂಪಾದ ಕಣಗಳು (ಇವು ಕೆಂಪುರಕ್ತಕಣಗಳೇ ಆಗಿದ್ದಿರಬೇಕೆಂಬುದು ವ್ಯಕ್ತ) ಕಂಡುಬಂದುವು. ಈ ವ್ಯಾಸಂಗದಿಂದ ಮ್ಯಾಲ್‌ಪಿಘಿ ಹೃದಯದ ಒಳಗೇ ರಕ್ತಗರಣೆ ಕಟ್ಟುವ ಸಂದರ್ಭಗಳ ಪ್ರಥಮ ಆವಿಷ್ಕರ್ತೃವಾದ. ***

# ಯ

**ಯಕೃತ್ ಸಪಾಟಿ (ಲಿವರ್ ಫ್ಲೂಕ್):** ಚಪ್ಪಟೆ ಹುಳುಗಳ ಪ್ಲಾಟಿಹೆಲ್ಮಂತಸ್ ವಂಶಕ್ಕೆ ಮತ್ತು ಕಾರಲು ಹುಳುವಿನ ವರ್ಗಕ್ಕೆ (ಟ್ರೆಮಾಟೊಡ) ಸೇರಿದ ಪರಾವಲಂಬಿ. ಕುರಿ ಇದರ ಪೋಷಕ (ಹೋಸ್ಟ್) ಜೀವಿ. ಕುರಿಯ ಪಿತ್ತಜನಕಾಂಗದ ಪಿತ್ತರಸನಾಳದ ಗೋಡೆಗೆ ಕಚ್ಚಿಕೊಂಡಿರುತ್ತದೆ. ಆಕಳು, ಕುದುರೆ, ಮನುಷ್ಯ ಮೊದಲಾದ ಸ್ತನಿಗಳ ಪಿತ್ತಜನಕಾಂಗದಲ್ಲಿಯೂ ವಾಸಿಸುವುದು ಉಂಟು. ಕುರಿಗಳಲ್ಲಿ ಲಿವರ್‌ರಾಟ್ ಎಂಬ ರೋಗವನ್ನು ಉಂಟುಮಾಡುತ್ತದೆ. ಕುರಿಯ ಕಣ್ಣುಗಳು, ವಸಡುಗಳು ರಕ್ತಹೀನತೆಯಿಂದ ಬಿಳುಪಾಗುವುದು, ಕೆಳದವಡೆಯ ತಳದಲ್ಲಿ ನೀರಿನಿಂದ ತುಂಬಿದ ಚೀಲ ಬೆಳೆಯುವುದು, ದೇಹವು ಕೃಶವಾಗಿ ಬಲಹೀನವಾಗುವುದು ಈ ರೋಗದ ಮುಖ್ಯ ಲಕ್ಷಣಗಳು. ತೀವ್ರತೆ ಹೆಚ್ಚಿದಾಗ ಕುರಿ ಸಾಯುತ್ತದೆ.

ಎಲೆಯಂತೆ ಚಪ್ಪಟೆ ದೇಹದ ಹುಳುವಿನ ಉದ್ದ 2 1/2 ಸೆಂಮೀ, ಅಗಲ ಉದ್ದವನ್ನು ಮೀರದು ಅಥವಾ ಒಂದೂವರೆ ಸೆಂಮೀ. ಅಗಲವಾದ ಮುಂಭಾಗದ ಕೊನೆಯಲ್ಲಿರುವ ತ್ರಿಕೋಣಾಕಾರದ ಭಾಗಕ್ಕೆ ತಲೆಹಾಲೆ ಎಂದು ಹೆಸರು. ತಲೆಹಾಲೆಯ ತುದಿಯಲ್ಲಿ ಹೀರು ಬಟ್ಟಲಿನಿಂದ ಆವೃತವಾದ ಬಾಯಿ ಇದೆ. ಇದಕ್ಕೆ ಸ್ವಲ್ಪ ಹಿಂದೆ ತಳಭಾಗದಲ್ಲಿ ಮತ್ತೊಂದು ದೊಡ್ಡ ಹೀರುಬಟ್ಟಲಿರುವುದು. ಇದರ ನೆರವಿನಿಂದಲೇ ಕಾರಲು ಹುಳು ಪಿತ್ತರಸನಾಳದ ಗೋಡೆಗೆ ಕಚ್ಚಿಕೊಂಡಿರುವುದು. ಈ ಎರಡು ಹೀರುಬಟ್ಟಲುಗಳು ಸ್ನಾಯುಯುಕ್ತವಾಗಿವೆ. ಇವೆರಡು ಹೀರುಬಟ್ಟಲುಗಳ ಮಧ್ಯ ಜನನೇಂದ್ರಿಯ ರಂಧ್ರ ಉಂಟು. ಶರೀರದ ಹಿಂಭಾಗದ ಕೊನೆಯಲ್ಲಿ ಶುದ್ಧೀಕರಣಾಂಗಗಳ ವಿಸರ್ಜನಾ ರಂಧ್ರ ಉಂಟು. ದೇಹದ ಗೋಡೆಯ ಹೊರಭಾಗದಲ್ಲಿರುವ ಹೊರಪದರದಲ್ಲಿ ಹಿಂದಕ್ಕೆ ಚಾಚಿರುವ ಅನೇಕ ಮುಳ್ಳುಗಳಿವೆ. ಪ್ರಾಣಿಯು ತನ್ನ ವಸತಿಯಿಂದ ಜಾರಿ ಬೀಳದಂತೆ ಹಿಡಿಯುವುದು ಈ ಮುಳ್ಳುಗಳ ಕೆಲಸ (ಚಿತ್ರ ನೋಡಿ).




ಜೀರ್ಣಾಂಗ ವ್ಯೂಹ | ವಿಸರ್ಜನಾಂಗ ವ್ಯೂಹ | ಜ್ವಲನ ಕೋಶ

**C,** ಶಿಲಿಕೆ ; **CA,** ಲೋಮನಾಳ ; **EX.p,** ವಿಸರ್ಜನಾ ರಂಧ್ರ ; **IN,** ಕರುಳು
**LE,** ಅಕ್ಷಾಂಶ ಕಾಲುವೆ ; **M,** ಬಾಯಿ ; **N,** ಕೋಶಕೇಂದ್ರ ; **Ph,** ಗಂಟಲು ; **VS,** ಕೆಳ ಹೀರು ತಟ್ಟೆ

ಯಕೃತ್ ಸಪಾಟಿಯು ಒಂದು ದ್ವಿಲಿಂಗಿ. ಆದರೆ ಪರಕೀಯ ಲಿಂಗಾಣು ಸ್ಪರ್ಶ ಜೀವನಚರಿತ್ರೆಯಲ್ಲಿ ಕಂಡುಬರುತ್ತದೆ. ಒಂದು ಸಲಕ್ಕೆ ಸಾವಿರಾರು ಮೊಟ್ಟೆಗಳನ್ನಿಡುವುದು ಈ ಪ್ರಾಣಿಯ ಸ್ವಭಾವ. ಜೌಗುಪ್ರದೇಶದ ಶೈತ್ಯ ವಾತಾವರಣವು ಮೊಟ್ಟೆಗಳ ಬೆಳವಣಿಗೆಗೆ ಅತ್ಯಾವಶ್ಯಕ. ಜೌಗಿಲ್ಲದಿದ್ದರೆ ಮೊಟ್ಟೆಗಳು ಸತ್ತುಹೋಗುತ್ತವೆ. ಮಲದೊಡನೆ ಹೊರಬೀಳುವ ಮೊಟ್ಟೆಗಳಿಂದ ಕೆಲವು ವಾರಗಳಲ್ಲಿ ಒಡೆದು ವಿಚಿತ್ರಾಕಾರದ ಲಾರ್ವ ಹೊರಬೀಳುತ್ತವೆ. ಲಾರ್ವಗಳಿಗೆ ಮಿರಸೀಡಿಯಂ ಎಂದು ಹೆಸರು. ಹೊರಬಿದ್ದ 7–8 ಗಂಟೆಗಳವರೆಗೂ ಮಿರಸೀಡಿಯಂ ಚಟುವಟಿಕೆಯಿಂದ ಚಲಿಸುವುದು. ಇದರ ಭವಿಷ್ಯವು ನಿರ್ದಿಷ್ಟವಾದ ಮಧ್ಯಪೋಷಕ ಜೀವಿಯನ್ನು ಸಂಧಿಸುವುದನ್ನು ಅವಲಂಬಿಸಿರುತ್ತದೆ. ಈ ಅವಧಿಯೊಳಗೆ ಪೋಷಕ ಜೀವಿಯನ್ನು ಸಂಧಿಸದಿದ್ದರೆ ಮಿರಸೀಡಿಯಂ ಆಯಸ್ಸು ಮುಗಿದಂತೆಯೇ. ಲಿಮ್ನಿಯಾ ಜಾತಿಯ ಬಸವನಹುಳು ಇದರ ನಿರ್ದಿಷ್ಟವಾದ ಮಧ್ಯಪೋಷಕಜೀವಿ. ಬಸವನಹುಳುವನ್ನು ಸಂಧಿಸಿದಾಗ ಲಾರ್ವ ಅದರ ದೇಹವನ್ನು ಕೊರೆದು, ಒಳಹೊಕ್ಕು ಶ್ವಾಸಾಂಗದಲ್ಲಿ ನೆಲಸುತ್ತದೆ. ಇಲ್ಲಿ ಅದು ಪರಿವರ್ತನೆಗೊಂಡು ಚೀಲದಂತಿರುವ ಸ್ಪೋರೋಸಿಸ್ಟ್ ಎಂಬ ಲಾರ್ವವಾಗಿ ಪರಿವರ್ತನೆಯಾಗುತ್ತದೆ. ಅನಂತರ ರೇಡಿಯ ಮತ್ತು ಸರ್ಕೇರಿಯ ಎಂಬ ಎರಡು ಲಾರ್ವದ ಹಂತಗಳಿವೆ. ಸರ್ಕೇರಿಯಾವು, ರೇಡಿಯಾದ ದೇಹದೊಳಗೆ ಹುಟ್ಟಿ ಬೆಳೆದು, ಬಲಿತನಂತರ, ರೇಡಿಯಾದ ಜನನದ್ವಾರದ ಮೂಲಕ ಹೊರಬರುತ್ತದೆ. ಕ್ರಮೇಣ ಬಸವನ ಹುಳುವಿನ ದೇಹವನ್ನು ಬೇಧಿಸಿ ಹೊರಬೀಳುವುವು. ಸ್ವಲ್ಪ ಕಾಲ ಬಾಲದ ನೆರವಿನಿಂದ ನೀರಿನಲ್ಲಿ ಈಜುತ್ತಿದ್ದು, 2–3 ಗಂಟೆಗಳನಂತರ ಹುಲ್ಲುಗರಿಯ ಮೇಲೋ ಜಲಸಸ್ಯಗಳ ಎಲೆಯ ಮೇಲೋ ನೆಲೆಸುತ್ತದೆ. ನೆಲಸಿದ ಅನಂತರ ಬಾಲವು ಮಾಯವಾಗುತ್ತದೆ. ಅನಂತರ ದೇಹದ ಸುತ್ತಲು ಲೋಳೆಯಂತಿರುವ ವಸ್ತುವಿನಿಂದಾದ ರಕ್ಷಾಕವಚವು ರೂಪುಗೊಳ್ಳುವುದು. ಹೀಗೆ ರಕ್ಷಣೆ ಪಡೆದ ಸರ್ಕೇರಿಯಾ ಕುರಿಯು ಮೇಯುವಾಗ ಅದರ ಜಠರವನ್ನು ಸೇರುವುದು. ಇದು ಆಕಸ್ಮಿಕ, ಇವು ನೆಲೆಸಿರುವ ಸಸ್ಯವನ್ನು ಕುರಿಗಳೂ ಮೇದರೆ, ಮಾತ್ರ ಸಾಧ್ಯ. ಕುರಿಯ ಜಠರದಲ್ಲಿ ರಕ್ಷಾಕವಚವು ಕರಗಿಹೋಗುತ್ತದೆ. ಬಿಡುಗಡೆಯಾದ ಮರಿ ಕ್ರಮೇಣ ಪಿತ್ತಜನಕಾಂಗವನ್ನು ಸೇರಿ ಸುಮಾರು 6 ವಾರಗಳಲ್ಲಿ ಕಾರಲು ಹುಳುವಾಗಿ ರೂಪುಗೊಳ್ಳುವುದು. ಹೀಗೆ ಇದರ ಜೀವನ ಚಕ್ರವು ಸಾಗುವುದು. (ಎಂ.ಎಂ.ಎಸ್.)

**ಯಕೃತ್ತಿನ ಉರಿಊತ:** ಸಾಧಾರಣವಾಗಿ ವಿಶಿಷ್ಟ ಬಗೆಯ ವೈರಸ್ಸುಗಳ ಸೋಂಕಿನಿಂದ ಉಂಟಾಗುವ ಯಕೃತ್ತಿನ ಉದ್ರಿಕ್ತಸ್ಥಿತಿ ಹಾಗೂ ಊತ (ವೈರಲ್ ಹೆಪಟೈಟಿಸ್). ಸಾಮಾನ್ಯವಾಗಿ ಕೊಳಚೆ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡಬರುವುದು. ಆದರೂ ಈ ರೋಗ ಮಧ್ಯಮವರ್ಗ ಹಾಗೂ ಧನಿಕ ಜನ ನೆಮ್ಮದಿಯಿಂದ ವಾಸಿಸುವ ಚೊಕ್ಕಟವಾದ ಬಡಾವಣೆಗಳಲ್ಲೂ ಕಂಡುಬರುತ್ತದೆ. ರೋಗ ಎರಡು ಬಗೆಯ ವೈರಸ್‌ಗಳಿಂದ ( A ಮತ್ತು B ) ಉಂಟಾಗುತ್ತದೆ. A ಬಗೆಯ ವೈರಸ್ಸಿನ ಸೋಂಕು ಕೊಳಚೆ ಪ್ರದೇಶಗಳಲ್ಲಿ ಸಾಮಾನ್ಯ. ಸಾಧಾರಣವಾಗಿ ಇಪ್ಪತ್ತೈದು ವರ್ಷ ವಯಸ್ಸಿನೊಳಗಿರುವ ವ್ಯಕ್ತಿಗಳಿಗೆ ಅಂಟುತ್ತದೆ. ಮುಖ್ಯವಾಗಿ ಮಲದಿಂದ ಕಲುಷಿತವಾದ ಆಹಾರದ ಬಳಕೆಯಿಂದ ರೋಗ ಹರಡುತ್ತದೆ. ಸೋಂಕು ಅಂಟಿದ 2-6 ವಾರಗಳಷ್ಟು ಹೊದಗು ಕಾಲಾನಂತರ (ಇನ್‌ಕ್ಯುಬೇಷನ್ ಪೀರಿಯಡ್) ಅಲ್ಪ ಜ್ವರದಿಂದ ಕೂಡಿ ರೋಗ ಕಾಣಿಸಿಕೊಳ್ಳುತ್ತದೆ. ಇರಸುಮುರಸು (ಮೆಲೇಸ್) ತಲೆನೋವು, ಓಕರಿಕೆ, ನಿತ್ರಾಣ, ಹೊಟ್ಟೆತೊಳಸು ಇವು ಇತರ ಲಕ್ಷಣಗಳು. ಯಕೃತ್ತಿನ ಗಾತ್ರ ವೃದ್ಧಿಯಾಗಿರುವುದು ವಿಶಿಷ್ಟ ಲಕ್ಷಣ. ನಾಲ್ಕಾರು ದಿವಸಗಳ ತರುವಾಯ ಕಾಮಾಲೆ ತಲೆದೋರುತ್ತದೆ. ಮುಖ ಮತ್ತು ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುವ ರೋಗದ ಈ ಹಂತದಲ್ಲಿ ಮೇಲೆ ಹೇಳಿರುವ ಜ್ವರ ಇತ್ಯಾದಿ ಲಕ್ಷಣಗಳು ಕಡಿಮೆ ಆದರೂ ಮುಂದೆ ಕ್ರಮೇಣ ಊಟ ಸೇರದಿರುವಿಕೆ, ಓಕರಿಕೆ ಮತ್ತು ನಿಶ್ಶಕ್ತಿಗಳು ಹೆಚ್ಚಾಗಿ ವ್ಯಕ್ತಿ ತೀರ ಅಸ್ವಸ್ಥವಾಗುವುದಿದೆ. ಬೆವರು ಮತ್ತು ಮೂತ್ರ ಹಳದಿ ಬಣ್ಣದ್ದಾಗಿ ನಿಧಾನವಾಗಿ ವಾಸಿ ಆಗುತ್ತದೆ. ವ್ಯಕ್ತಿಯ ಆಹಾರ ಅಪೇಕ್ಷೆ, ಜೀರ್ಣಶಕ್ತಿ ಇವು ಕ್ರಮೇಣ ಮಾಮೂಲಿನ ಹಂತಕ್ಕೆ ಬರುತ್ತದೆ. ಹಾಗೆಯೇ ಕಣ್ಣು ಮೈಗಳ ಹಳದಿ ಬಣ್ಣವೂ ನಿಧಾನವಾಗಿ ಮಾಯವಾಗುತ್ತದೆ. ಆದರೆ ಅಪರೂಪವಾಗಿ ಯಕೃತ್ತಿನ ಹಠಾತ್ ನಿಷ್ಕ್ರಿಯೆಯಿಂದ ವ್ಯಕ್ತಿ ಮೃತನಾಗಬಹುದು. ಹೀಗಾಗುವುದು ಶೇ 5 ರೋಗಿಗಳಲ್ಲಿ ಮಾತ್ರ.

B ಬಗೆಯ ವೈರಸ್‌ನಿಂದ ಉಂಟಾಗುವ ಉರಿಊತದಲ್ಲೂ ಇದೇ ಲಕ್ಷಣ ಮತ್ತು ಹಂತಗಳು ಇರುತ್ತದೆ. ಆದರೆ ಹಲವು ಮುಖ್ಯ ವ್ಯತ್ಯಾಸಗಳಿರುವುದನ್ನು ಗಮನಿಸಬೇಕು. ಈ ಬಗೆಯ ವೈರಸ್‌ನ ಸೋಂಕು ಉಂಟಾಗುವುದು ಕಾರಣಾಂತರಗಳಿಂದ ರೋಗಿಯ ರಕ್ತ ಇನ್ನೊಬ್ಬ ವ್ಯಕ್ತಿಯ ದೇಹದ ಒಳಹೊಕ್ಕಾಗ ಮಾತ್ರ (ರಕ್ತ ವರ್ಗಾವಣೆ). ಸಾಕ್ಷಾತ್ ರಕ್ತ ಮಿಶ್ರಣ ಆಗದಿದ್ದರೂ ರೋಗಿಷ್ಠ ರಕ್ತದ ಸಂಪರ್ಕ ಹೊಂದಿದ ಹತ್ಯಾರುಗಳು (ಚುಚ್ಚುಮದ್ದಿನ ಸೂಜಿ, ಚಾಕು, ಕತ್ತರಿ ಇತ್ಯಾದಿ) ಸೋಂಕನ್ನು ಅಂಟಿಸಬಲ್ಲುವು. ಗರ್ಭಿಣಿಸ್ತ್ರೀಯಲ್ಲಿ ಹೊಕ್ಕುಳಬಳ್ಳಿ ಮೂಲಕ ತಾಯಿಯಿಂದ ಸೋಂಕು ಭ್ರೂಣಕ್ಕೆ ತಗಲುವುದಿದೆ. ಸಲಿಂಗ ಮೈಥುನದ ಮೂಲಕ ಸೋಂಕು ಹರಡುವುದು ತಿಳಿದುಬಂದಿದೆ. ಆದರೆ ಮಲ, ಕಲುಷಿತ ನೀರು ಮತ್ತು ಆಹಾರಗಳಿಂದ ಈ ಬಗೆಯ ವೈರಸ್‌ನ ಸೋಂಕು ಹರಡುವುದೆ ಇಲ್ಲ. ಸೋಂಕು ಉಂಟಾದ ಮೇಲೆ 2-4 ತಿಂಗಳುಗಳಷ್ಟು ದೀರ್ಘವಾದ ಇದರ ಹೊದಗು ಕಾಲವಿದೆ. ರೋಗ ಯಾವ ವಯಸ್ಸಿನ ವ್ಯಕ್ತಿಗಾದರೂ ತಗಲುವುದಿದೆ. ಯಾವ ಬಗೆಯ ವೈರಸ್ಸಿನಿಂದ ರೋಗ ಉಂಟಾಗಿದ್ದರೂ ಯಕೃತ್ತಿಗೆ

ತೀವ್ರ ಧಕ್ಕೆ ಆಗಬಹುದು. ಯಕೃತ್ತಿಗೆ ರಕ್ಷಣೆ ಒದಗಿಸುವ ಮತ್ತು ಸುಲಭವಾಗಿ ಜೀರ್ಣಿಸಿ ರಕ್ತಗತವಾಗುವ ಸಕ್ಕರೆ ಪಿಷ್ಟಪದಾರ್ಥಗಳನ್ನು ಅಗತ್ಯವಾಗಿ ಕೊಡಬೇಕು. ಜಿಡ್ಡು ಪದಾರ್ಥಗಳು ಸಾಮಾನ್ಯವಾಗಿ ವರ್ಜ್ಯ.

ಪಿಡುಗು ಕಾಲಗಳಲ್ಲಿ ರೋಗ ಬಾರದಂತೆ ವಿಶಿಷ್ಟ ಲಸಿಕೆಗಳನ್ನು ಚುಚ್ಚುಮದ್ದಾಗಿ ಬಳಸುವುದು ಉತ್ತಮ. ***

**ಯಾಕ್:** ಭಾರತದ ಲಡಾಖ್ ಪ್ರದೇಶ, ಚೀನದ ಟಿಬೆಟ್ ಮತ್ತು ಕ್ಯಾನ್ಸೂ ಪ್ರಾಂತ್ಯಗಳಲ್ಲಿ ವಾಸಿಸುವ ಒಂದು ಬಗೆಯ ಕಾಡೆತ್ತು. ಆರ್ಟಿಯೊಡ್ಯಾಕ್ಟಿಲ ಗಣದ ಬೋವಿಡೆ ಕುಟುಂಬಕ್ಕೆ ಸೇರಿದೆ. ದಾಸ್ ಗ್ರುನಿಯೆನ್ಸ್ ಇದರ ವೈಜ್ಞಾನಿಕ ಹೆಸರು. ದಕ್ಷಿಣ ಭಾರತದಲ್ಲಿ ದೊರೆಯುವ ಕಾಟಿ, ಅಸ್ಸಾಮ್ ಮತ್ತು ಬರ್ಮದಲ್ಲಿ ಸಿಕ್ಕುವ ಗಾಯಲ್ ಹಾಗೂ ಸಾಕುದನಗಳ ಹತ್ತಿರ ಸಂಬಂಧಿ. ಚಮರೀ ಅಥವಾ ಚವರೀ ಮೃಗ ಎಂಬ ಹೆಸರುಗಳಿಂದಲೂ ಪ್ರಸಿದ್ಧವಾಗಿದೆ. ಇದರಲ್ಲಿ ಎರಡು ಬಗೆಗಳಿವೆ. ಒಂದು ಹಿಮಾಲಯದ 6000 ಮೀಗೂ ಎತ್ತರದ ಪರ್ವತಪ್ರದೇಶಗಳಿಗೆ ಸೀಮಿತವಾದ, ನಿಜವಾಗಿಯೂ ವನ್ಯವೆನಿಸುವ ಯಾಕ್. ಇನ್ನೊಂದು ಲಡಾಖ್, ನೇಪಾಳ, ಸಿಕ್ಕಿಮ್ ಪ್ರದೇಶಗಳಲ್ಲಿ 4,200–6000 ಮೀ ಎತ್ತರದ ಭಾಗಗಳಲ್ಲಿ ಸಾಕುಪ್ರಾಣಿಯಾಗಿ ವೃದ್ಧಿಪಡಿಸಲಾದ ಯಾಕ್. ಇವೆರಡೂ ನೋಡಲು ಒಂದೇ ತೆರನಾಗಿವೆಯಾದರೂ ಬಣ್ಣದಲ್ಲಿ ವಿಭಿನ್ನ. ಕಾಡು ಯಾಕ್ ಕಗ್ಗಂದು ಬಣ್ಣದ್ದಾದರೆ, ಸಾಕಿರುವ ಯಾಕ್ ತಿಳಿಗಂದು, ಕಪ್ಪು ಇಲ್ಲವೆ ಮಿಶ್ರ ಬಣ್ಣದ್ದು. ಮೂತಿಯ ತುದಿ ಮಾತ್ರ ಕೊಂಚ ಬಿಳಿಯ ಬಣ್ಣದ್ದಾಗಿರುತ್ತದೆ.

ವಯಸ್ಕ ಗೂಳಿ ಸುಮಾರು 2 ಮೀ ಎತ್ತರ ಇದ್ದು ಸುಮಾರು 545 ಕಿಗ್ರಾಂ ತೂಗುತ್ತದೆ. ಹಣೆಯಿಂದ ಮುಂಚಾಚಿ ಕೊಂಡಿರುವ ಬಲವಾದ ಮತ್ತು ಕಪ್ಪು ಬಣ್ಣದ ಕೊಂಬುಗಳಿವೆ. ಭುಜ, ದೇಹದ ಇಕ್ಕೆಲಗಳು ಮತ್ತು ತೊಡೆಗಳಿಂದ ನೆಲಕ್ಕೆ ತಾಗುವಂತೆ ಇಳಿಬಿದ್ದಿರುವ ಜೂಲುಗಳಿವೆ. ಬಾಲದ ತುದಿಯಲ್ಲಿ ಕೂಡ ಉದ್ದ ಕೂದಲುಗಳ ಗೊಂಡೆ ಇದೆ.

ಬೋವಿಡೆ ಕುಟುಂಬದ ಪ್ರಾಣಿಗಳಲ್ಲೆಲ್ಲಾ ಯಾಕ್ ಒಂದೇ ಅತ್ಯುಗ್ರ ಚಳಿಪ್ರದೇಶಕ್ಕೂ ಶೀತ ಮರುಭೂಮಿ ವಾತಾವರಣಕ್ಕೂ ಬಲು ಚೆನ್ನಾಗಿ ಹೊಂದಿಕೊಂಡಿದೆ. ಕೊರೆವ ಚಳಿ ಪ್ರದೇಶದಲ್ಲಿ ಬೆಳೆಯುವ ಕುರುಚಲೇ ಇದರ ಬದುಕಿಗೆ ಆಧಾರ. ನೀರು ಸಿಕ್ಕದಿದ್ದರೆ ಮಂಜುಗಡ್ಡೆಯನ್ನೇ ತಿಂದು ಬಾಯಾರಿಸಿಕೊಳ್ಳುತ್ತದೆ. ಸಾಕಿದ ದನಕರುಗಳಂತಲ್ಲದೆ ಯಾಕಿನ ಸಗಣಿ ಶುಷ್ಕ ಗೋಲಿಗಳಂತಿರುತ್ತದೆ. ಇದರ ಕೂಗು ಒಂದು ತೆರನ ಗುಟುರು. ಸಣ್ಣ ಹಿಂಡುಗಳಲ್ಲಿ ವಾಸ. ಬಲು ನಾಚಿಕೆ ಸ್ವಭಾವದ ಇವು ಕಣ್ಣಿಗೆ ಬೀಳುವುದೇ ಅಪರೂಪ. ತಮ್ಮ ಅಪಾಯದ ಸುಳಿವನ್ನು ಚುರುಕಾದ ಘ್ರಾಣಶಕ್ತಿಯಿಂದ ತಿಳಿದುಕೊಳ್ಳುತ್ತದೆ. ಸುಮಾರು 9 ತಿಂಗಳ ಗರ್ಭಾವಧಿಯ ತರುವಾಯ ಏಪ್ರಿಲ್ ವೇಳೆಗೆ ಕರು ಹಾಕುತ್ತದೆ.

ಸಾಕಿರುವ ಯಾಕ್ ಹಿಮಾಲಯದ ಉನ್ನತ ಪ್ರದೇಶಗಳ ಹಳ್ಳಿಗರಿಗೆ ಬಲು ಉಪಯುಕ್ತವಾಗಿದೆ. ಗಾಡಿ ಎಳೆಯಲು, ಹೇರು ಹೊರಲು ಬಳಸುವರಲ್ಲದೆ ಇದರ ಮಾಂಸವನ್ನು ಆಹಾರವಾಗಿಯೂ ಚರ್ಮವನ್ನು ಹಲವಾರು ಕೆಲಸಗಳಿಗೂ ಉಪಯೋಗಿಸುವರು. ಹಾಲು ಕುಡಿಯುತ್ತಾರೆ. ಯಾಕ್‌ನ ಕೂದಲಿನಿಂದ ಚವರಿಯನ್ನು ತಯಾರಿಸುವುದಲ್ಲದೆ, ಬಾಲದ ಗೊಂಡೆಯನ್ನು ಉನ್ನತ ಅಧಿಕಾರಿಗಳು, ಧಾರ್ಮಿಕ, ಮುಖಂಡರು ತಮ್ಮ ಸ್ಥಾನದ ಪ್ರತಿಷ್ಠಿತ ಲಾಂಛನವಾಗಿ ಬಳಸುವರು. ***

**ಯಾಸ್:** ಟ್ರಿಪೋನೀಮ ಅಥವಾ ಸ್ಪೈರೋಕೀಟ ಎಂಬ ಏಕಾಣುಗುಂಪಿಗೆ ಸೇರಿದ ಪರ್ಟೆನ್ಯೂಯಿ ಪ್ರಭೇದದ ವಿಷಾಣುವಿನ ಸೋಂಕಿನಿಂದ ಉಂಟಾಗುವ ಒಂದು ಕ್ಷಿಪ್ರ ಸಾಂಕ್ರಾಮಿಕ ರೋಗ. ಪರ್ಯಾಯ ನಾಮ ಫ್ರಾಂಬೀಸಿಯ. ಪ್ರಮುಖವಾಗಿ ಚರ್ಮರೋಗವೇ ಅದರೂ ಲೋಳೆಪೊರೆ, ಮೂಳೆಗಳಿಗೂ ಇದು ಆವರಿಸುವುದುಂಟು. ರೋಗಾಣು ಫರಂಗಿ ರೋಗದ (ಸಿಫಿಲಿಸ್) ರೋಗಾಣುವಿನಂತೆಯೇ ಇರುತ್ತದೆ. ಯಾಸ್ ಬಲುಮಟ್ಟಿಗೆ ಫರಂಗಿ ರೋಗವನ್ನೇ ಹೋಲುತ್ತದೆ. ಆದರೆ ಅದರಂತೆ ಲೈಂಗಿಕ ರೋಗವಲ್ಲ. ಆಫ್ರಿಕ ಮತ್ತು ಅಮೆರಿಕ ಖಂಡಗಳ ಉಷ್ಣವಲಯದ ಪ್ರದೇಶಗಳು, ಪೂರ್ವ ಮತ್ತು ಪಶ್ಚಿಮ ಇಂಡೀಸ್ ದ್ವೀಪಗಳು, ದಕ್ಷಿಣ ಪೆಸಿಫಿಕ್ ದ್ವೀಪಗಳಲ್ಲಿ ಈ ರೋಗ ವ್ಯಾಪಕವಾಗಿ ಕಾಣಬರುತ್ತದೆ. ನೀಗ್ರೋ ಬುಡಕಟ್ಟಿನ ಜನ ಹಾಗೂ ಮಕ್ಕಳಲ್ಲಿ ಈ ರೋಗ ಹೆಚ್ಚು ಸಾಮಾನ್ಯ.

ಸೋಂಕು ತಗಲಿದ ಸುಮಾರು 1–2 ತಿಂಗಳುಗಳಲ್ಲಿ ಸಾಧಾರಣವಾಗಿ ಕಾಲಿನ ಚರ್ಮದ ಮೇಲೆ ತರಚಲಾಗಿ ಕೆಂಪು–ಹಳದಿ ಬಣ್ಣದ ಶಂಕ್ವಾಕಾರದ ಗುಬುಟು ಉದ್ಭವಿಸುತ್ತದೆ. ಇದು ಹುಣ್ಣಾಗಿ ಒಡೆದು ವ್ರಣವಾಗಿ ರಸಿಕೆ ಸುರಿಸುತ್ತದೆ. ರಸಿಕೆಯಿಂದ ಮೈಮೇಲೆ ಇತರ ಭಾಗಗಳಲ್ಲೂ ಅನೇಕಾನೇಕ ಹುಣ್ಣು ವ್ರಣಗಳು ಉಂಟಾಗುವುದು ಸಾಮಾನ್ಯ. ಮೊದಲೇ ಆಗಿರುವ ಗಾಯವೂ ವ್ರಣವೂ ಇಂಥ ಪ್ರಥಮ ಸೋಂಕಿಗಾಗಲಿ ಮರು ಸೋಂಕಿಗಾಗಲಿ ಈಡಾಗುವುದು ಬಲು ಸುಲಭ. ಮರುಸೋಂಕಿಗೆ ಈಡಾದ ಸ್ಥಳದಲ್ಲಿ ಚರ್ಮದ ಮೇಲೆಲ್ಲಾ ಬಿಳಿ ಹಿಟ್ಟು ಉದುರಿಸಿದಂತೆ ಕಾಣಬರುತ್ತದೆ. ಅನಂತರ ಅಲ್ಲಲ್ಲೇ ವಿಶಿಷ್ಟ ಲಕ್ಷಣದ ಹುಣ್ಣುಗಳು ಎದ್ದು ಅವು ವ್ರಣವಾಗಿ ರಸಿಕೆ ಜಿನುಗಿಸಲು ಪ್ರಾರಂಭಿಸುತ್ತವೆ. ಸೋಂಕು ಹೀಗೆ ದೇಹದ ಅನೇಕ ಕಡೆಗಳಿಗೆ ಹರಡುವುದಕ್ಕೆ ರೋಗಿಯ ಬಟ್ಟೆ, ನೊಣ ಇತ್ಯಾದಿ ಕಾರಣ. ಈ ಕಾರಣದಿಂದಲೇ ರೋಗ ಬೇರೆಯವರಿಗೆ ಹರಡುವ ಸಂಭವವೂ ಉಂಟು.

ಮೂಳೆ ಹಾಗೂ ಕೀಲುಗಳ ನೋವು, ನವೆ, ಅಂಗುಲು ವ್ರಣಗಳ ನೋವಿನಿಂದಾಗಿ ಸರಿಯಾಗಿ ನಡೆಯುವುದಕ್ಕಾಗದೆ ನಳ್ಳಿಯಂತೆ ಅಡ್ಡಡ್ಡಾಗಿ ನಡೆಯುವುದು ; ಹಸ್ತದ ಮೇಲಿನ ವ್ರಣದ ನೋವಿನಿಂದಾಗಿ ಸರಿಯಾಗಿ ಕುಳಿತುಕೊಳ್ಳುವುದಕ್ಕೆ ಆಗದಿರುವುದು ಇತ್ಯಾದಿಗಳಿಂದ ರೋಗ ಬಲು ತೊಂದರೆ ಕೊಡುವುದಾದರೂ ಪ್ರಾಣಾಪಾಯವಿರದೆ ಚಿಕಿತ್ಸೆ ಇಲ್ಲದ ಸಂಧರ್ಭದಲ್ಲೂ ಸುಮಾರು 1–2 ವರ್ಷಗಳಲ್ಲಿ ತಾನಾಗಿಯೇ ವಾಸಿಯಾಗುತ್ತದೆ. ಬೇರೆ ಎಡೆಗಳಲ್ಲಿನ ವ್ರಣಗಳು ನೋವನ್ನು ಉಂಟುಮಾಡುವುದಿಲ್ಲ. ಈ ರೋಗ ಫರಂಗಿ ರೋಗದಂತಾದರೂ ಅದು ಬರುವಂತೆ ಆಜನ್ಮವಾಗಿ ಬರದಿರುವಂಥದು. ರೋಗ ಆನುವಂಶಿಕವೂ ಅಲ್ಲ. ಸೋಂಕು ಹಬ್ಬುವಿಕೆ ಲೈಂಗಿಕವಲ್ಲವಾದ್ದರಿಂದ ಮತ್ತು ಕೊಳಕಾಗಿದ್ದು ರಸಿಕೆ ಸಂಪರ್ಕದಿಂದಾಗುವುದರಿಂದ ನಗರಗಳಿಗಿಂತಲೂ ಗ್ರಾಮಾಂತರ ಪ್ರದೇಶಗಳಲ್ಲಿ ಕಾಣಿಸಿ ಕೊಳ್ಳುವುದು ಹೆಚ್ಚು ಸಾಮಾನ್ಯ. ಆದರೂ ರೋಗ ಫರಂಗಿ ರೋಗವಲ್ಲವೆಂದು ನಿರ್ಧರಿಸಲು ರಕ್ತದ ವಿಶೇಷ ಪರೀಕ್ಷೆಮಾಡುವುದು ನಿಷ್ಪ್ರಯೋಜಕ. ಏಕೆಂದರೆ ಈ ಎರಡು ರೋಗಗಳಲ್ಲೂ ಅಂಥ ವಿಶೇಷ ಪರೀಕ್ಷೆಯಿಂದ ತಿಳಿದುಬರುವುದು ಕೇವಲ ಒಂದೇ ತೆರನಾದ ಮಾಹಿತಿ. ಯಾಸ್ ರೋಗವೂ ಫರಂಗಿ ರೋಗದ ಚಿಕಿತ್ಸಕ ಮದ್ದುಗಳಿಗೆ ಸುಲಭವಾಗಿ ಮಣಿಯುತ್ತದೆ. ಮದ್ದಿನಿಂದಾಗಲೀ ತಾನಾಗಿಯೇ ಆಗಲಿ ವಾಸಿ ಆದ ರೋಗ ವ್ಯಕ್ತಿಗೆ ರಕ್ಷಣೆ ಒದಗಿಸುವುದು ಅಷ್ಟಕ್ಕಷ್ಟೆ. ವ್ಯಕ್ತಿ ಮುಂದೆ ಪುನಃ ಹೊಸ ಸೋಂಕಿಗೆ ಈಡಾಗುವುದೂ ತಿಳಿದಿದೆ. ***

**ಯುಗ್ಲೀನ:** ಈ ವರ್ಗದ ಪ್ರಾಣಿಗಳಲ್ಲಿ ಚಾವಟಿಯಂತಿರುವ ಕಶಾಂಗಗಳು (ಫ್ಲಾಜೆಲ್ಲಾ) ಚಲನಾಂಗಗಳು. ಸಸ್ಯ ಮತ್ತು ಪ್ರಾಣಿಗಳ ಲಕ್ಷಣಗಳೆರಡನ್ನು ತೋರುವುದರಿಂದ ಸಸ್ಯ ವಿಜ್ಞಾನಿಗಳು ಸಸ್ಯಗಳೆಂದು, ಪ್ರಾಣಿ ವಿಜ್ಞಾನಿಗಳು ಪ್ರಾಣಿಗಳೆಂದು ವಾದಿಸುತ್ತಾರೆ. ಯುಗ್ಲೀನಾ ಒಂದು ಸ್ವತಂತ್ರ ಸೂಕ್ಷ್ಮಜೀವಿ, ಇದರ ಆಕಾರವನ್ನು ಸೂಕ್ಷ್ಮದರ್ಶಕದಿಂದ ನೋಡಲು ಸಾಧ್ಯ. ಕೆರೆ, ಕೊಳ, ಬಚ್ಚಲು ಹಾಗೂ ವಿಶೇಷವಾಗಿ ಸಾವಯವ ಪದಾರ್ಥಗಳು ಕೊಳೆಯುತ್ತಿರುವ ಸಿಹಿನೀರಿನ ಜಲಾಶಯದಲ್ಲಿ ವಾಸಿಸುತ್ತದೆ. ಕದುರಿನ (ಸ್ಪಿಂಡಲ್) ಆಕಾರವಿದ್ದು ಒಂದು ಕೊನೆಯು ಮೊನಚಾಗಿಯು ಮತ್ತೊಂದು ಕೊನೆಯು ಮೊಂಡಾಗಿಯು ಇರುವುದು. ಮೊಂಡು ಕೊನೆ ಪ್ರಾಣಿಯ ಮುಂದಿನ ಭಾಗ.

ಕೋಶವನ್ನು ಅಂತರ್ಜೀವಕ (ಎಂಡೊಪ್ಲಾಸಂ) ಹಾಗೂ ಬಹಿರ್ಜೀವಕ (ಎಕ್ಟೊಪ್ಲಾಸಂ) ಎಂಬ ಎರಡು ವಲಯಗಳಾಗಿ ವಿಂಗಡಿಸಬಹುದು (ಚಿತ್ರ ನೋಡಿ). ಅಂತರ್ಜೀವಕದಲ್ಲಿ ಕೋಶಕೇಂದ್ರ (ನ್ಯೂಕ್ಲಿಯಸ್) ಹುದುಗಿದೆ. ಕೋಶಕೇಂದ್ರದಲ್ಲಿ ನ್ಯೂಕ್ಲಿಯೋಲಸ್ ಇದೆ. ಬಹಿರ್ಜೀವಕದ ಹೊರಭಾಗವು ಕೊಂಚ ಗಡುಸಾಗಿದ್ದು ಪೆರಿಪ್ಲಾಸ್ಟ್ ಅಥವ ಪೆಲಿಕಲ್ ಎಂದು ಹೆಸರು. ಮೊಂಡಾಗಿರುವ ಮುಂದಿನ ಕೊನೆಯಲ್ಲಿ ಕುಗ್ಗಿದ ಗಣಿಯೊಂದಿರುವುದು, ಇದು ಪ್ರಾಣಿಯ ಕಣಾಂತರ ಗಂಟಲು (ಸೈಟೊಫ್ಯಾರಿಂಕ್ಸ್).

ಕಣಾಂತರಗಂಟಲಿನಿಂದ ಹೊರಬೀಳುವ ಕಶಾಂಗವು ಇದರ ಚಲನಾಂಗ. ಗಂಟಲಿಗೆ ಸೇರಿದಂತೆ; ಅಂತರ್ಜೀವಕದಲ್ಲಿ ಒಂದು ದ್ರವಾಶಯ ಇರುವುದು. ಇದರ ಸುತ್ತಲು ಚಿಕ್ಕ ಸಂಕೋಚನಾವಕಾಶಗಳು ಹರಡಿ ಕೊಂಡಿವೆ. ದ್ರವಾಶಯದ ಹತ್ತಿರ ಕೆಂಪು ಬಣ್ಣದ ಚುಕ್ಕೆಯೊಂದಿರುತ್ತದೆ, ಇದರ ಕೆಂಪುಬಣ್ಣಕ್ಕೆ ಹೀಮ್ಯಾಟೋ ಕ್ರೋಮ್ ಎಂಬ ಬಣ್ಣದ ವಸ್ತುವೇ ಕಾರಣ. ಬೆಳಕಿನ ಕಣಗಳ ಪ್ರಭಾವಕ್ಕೆ ಈಡಾಗುವ ಈ ಕೆಂಪುಚುಕ್ಕೆಗೆ ಕಣ್ಣಿನ ಚುಕ್ಕೆ ಎಂದು ಹೆಸರು. ಸಸ್ಯಗಳ ವಿಶೇಷ ಲಕ್ಷಣವಾದ ಹರಿತ್ತು (ಕ್ಲೋರೋಫಿಲ್) ಒಳಗೊಂಡ ಕ್ರೋಮಾಟೊಫೋರ್ ಎಂಬ ವರ್ಣಕ ಅಂತರ್ಜೀವಕದಲ್ಲಿದೆ. ಇದಲ್ಲದೆ ಪ್ಯಾರಾಮೈಲಂ ಕಾಯಗಳೆಂಬ ಶರ್ಕರಗಳಿಂದ ಆವೃತವಾದ ಪೈರಿನಾಯಿಡ್ ಎಂಬ ಕೋಶಾಂಗವಿದೆ. ಚಾವಟಿಯಂತಿರುವ ಕಶಾಂಗದ ನೆರವಿನಿಂದ ಯುಗ್ಲೀನ ಚಲಿಸುತ್ತದೆ. ದೇಹವನ್ನು ಕುಗ್ಗಿಸಿ, ಅಗಲಿಸುವುದು, ನುಣಿಚಿ ತಿರುಗಿಸುವುದು ಮೊದಲಾದ ಚಲನೆಗಳು ಈ ಪ್ರಾಣಿಯ ವೈಶಿಷ್ಟ್ಯ. ಈ ಬಗೆಯ ಚಲನೆಗಳಿಗೆ ಯುಗ್ಲೀನಾಯಿಡ್ ಚಲನೆ ಎಂದು ಹೆಸರು. ಯುಗ್ಲೀನದ ಉದರ ಪೋಷಣೆ ಸಸ್ಯ ಹಾಗೂ ಪ್ರಾಣಿಗಳೆರಡನ್ನೂ ಹೋಲುತ್ತದೆ. ಅಂತರ್ಜೀವಕದಲ್ಲಿರುವ ಕ್ರೋಮ್ಯಟೊ ಪೋರ್‌ಗಳ ನೆರವಿನಿಂದ ಸಸ್ಯಗಳಂತೆ ಆಹಾರ ತಯಾರಿಸಬಲ್ಲುದು. ಇಂಗಾಲದ ಡಯಾಕ್ಸೈಡ್, ನೀರುಗಳಿಂದ ಶರ್ಕರ ಪದಾರ್ಥಗಳನ್ನು ತಯಾರಿಸಿ ಆಮ್ಲಜನಕವನ್ನು ಹೊರದೂಡುವುದು, ಸುಳಿಯಲ್ಲಿ ಸಿಕ್ಕಿಬೀಳುವ ಸೂಕ್ಷ್ಮ ಜೀವಿಗಳನ್ನು ಕಣಾಂತರ ಗಂಟಲಿನ ಮೂಲಕ ಅಂತರ್ಜೀವಕಂದಕಕ್ಕೆ ತಳ್ಳಿ ಇವನ್ನು ಜೀರ್ಣಿಸಿಕೊಳ್ಳಬಲ್ಲುದು. ಸುತ್ತಲಿರುವ ನೀರಿನಲ್ಲಿ ಲೀನವಾಗಿರುವ ಸಾವಯವ ವಸ್ತುಗಳನ್ನು ಬಹಿರ್ಜೀವಕದ ಮೂಲಕ ಹೀರಿಕೊಳ್ಳುವುದು ಆಹಾರ ದೊರಕಿಸಿಕೊಳ್ಳುವ ಮತ್ತೊಂದು ಮಾರ್ಗ. ತ್ಯಾಜ್ಯ ವಸ್ತುಗಳನ್ನು ದ್ರವಾಶಯದಿಂದ ಕಣಾಂತರ ಗಂಟಲಿನ ಮೂಲಕ ಹೊರಹಾಕುತ್ತದೆ. ನಿರ್ಲಿಂಗ ರೀತಿಯಲ್ಲಿ ಎರಡಾಗಿ ಸೀಳಿ ಸಂತಾನೋತ್ಪತ್ತಿಯಾಗುವುದು ಇದರ ಲಕ್ಷಣ. ಮೊದಲು ಕೋಶಕೇಂದ್ರವು ವಿಭಜನೆಯಾಗುತ್ತದೆ. ಅನಂತರ ನೀಳ ಅಚ್ಚಿಗೆ ಸಮಾಂತರವಾಗಿ ದೇಹ ಸೀಳುವುದು. ಒಂದೊಂದು ಸೀಳು ಪ್ರತ್ಯೇಕ ಯುಗ್ಲೀನ ಆಗಿ ರೂಪುಗೊಳ್ಳುತ್ತದೆ. (ಎಂ.ಎಂ.ಎಸ್.)



ಯುಗ್ಲೀನ

**ಯೂರಿಪ್ಟರಿಡ:** ಆರ್ತ್ರಾಪೊಡ (ಸಂಧಿಪದಿ) ಗುಂಪಿನ ಅರ್ಯಾಕ್ನಿಡ ವರ್ಗಕ್ಕೆ ಸೇರಿದ ಗತವಂಶಿ ಜೀವಿಗಳ ಗಣ. ಸೆಲ್ಯೂರಿಯನ್ ಕಾಲದಲ್ಲಿ ಇವು ಜೀವಿಸಿದ್ದುವೆನ್ನಲಾಗಿದೆ. ತಮ್ಮ ದೇಹದಲ್ಲಿರುವ ಖಂಡಗಳ ಸಂಖ್ಯೆಯಲ್ಲೂ ಜೋಡಣೆಯಲ್ಲೂ ಇವು ಆಧುನಿಕ ಚೇಳುಗಳನ್ನು ಹೋಲುತ್ತವಾದರೂ ಚೇಳುಗಳು ನೆಲದ ಮೇಲೆ ಮತ್ತು ಒಳಗೆ ವಾಸಿಸುವಂಥವು. ಈ ಗುಂಪಿನ ಜೀವಿಗಳು ಜಲವಾಸಿಗಳಾಗಿದ್ದವು.

ಈ ಗಣದಲ್ಲಿ ಯೂರಿಪ್ಟರಿಸ್, ಟೆರಿಗೋಟಸ್, ಸ್ಲಿಮೋನಿಯ ಮತ್ತು ಸ್ಟೈಲನ್ಯೂರ ಎಂಬ ಮುಖ್ಯ ಜಾತಿಗಳುಂಟು. ಆರ್ತ್ರಾಪೊಡ ಗುಂಪಿನ ಇತರ ಪ್ರಾಣಿಗಳಿಗೆ ಹೋಲಿಸಿದರೆ ಈ ಗಣದ ಸದಸ್ಯಗಳೇ ಅತ್ಯಂತ ದೊಡ್ಡ ಗಾತ್ರದವೆನ್ನಲಾಗಿದೆ. ಟೆರಿಗೋಟಸ್ ಸುಮಾರು 2 ಮೀ ಉದ್ದವಿಲತ್ತೆನ್ನಲಾಗಿದೆ.

ದೇಹ ಅನೇಕ ಉಂಗುರ ಅಥವಾ ಖಂಡಗಳಿಂದ ರಚಿತವಾಗಿದ್ದು ಪ್ರೋಸೋಮ (ತಲೆ), ಮೀಸೊಸೋಮ (ಎದೆ) ಮತ್ತು ಮೆಟಸೋಮ (ಕಿಬ್ಬೊಟ್ಟೆ) ಎಂಬ ಮೂರು ಪ್ರಧಾನ ಭಾಗಗಳನ್ನು ಪಡೆದಿದೆ. ತಲೆಯಲ್ಲಿ ಬಾಯಿ, ಸಂಯುಕ್ತ ಹಾಗೂ ಸರಳ ರೀತಿಯ ಕಣ್ಣು, ಆಹಾರವನ್ನು ಹಿಡಿಯಲು ಅನುಕೂಲವಾಗುವ ಚೆಲಿಸೆರಿ, ಕಾಲುಗಳು ಮತ್ತು ಈಜಲು ಅನುಕೂಲವಾಗಿರುವ ದೋಣಿ ಹುಟ್ಟಿನಂಥ ರಚನೆಗಳಿವೆ. ಎದೆ ಭಾಗದಲ್ಲಿ ಜನನೇಂದ್ರಿಯ ಮತ್ತು ಎಲೆಯಾಕಾರದ ಕಿವಿರುಗಳಿವೆ. ಕಿಬ್ಬೊಟ್ಟೆ ಉದ್ದಬಾಲದಂತೆ ಇದ್ದು ತುದಿಯಲ್ಲಿ ಟೆಲ್ಸನ್ ಎಂಬ ಕೊಂಡಿಯಿದೆ. ಯೂರಿಪ್ಟರಿಸ್ ಮತ್ತು ಟೆರಿಗೋಟಸ್ ಜಾತಿಯ ಪ್ರಾಣಿಗಳಲ್ಲಿ ಟೆಲ್ಸನ್ ಈಜುವುದಕ್ಕೂ ಸಮುದ್ರ ತಳದ ಮಣ್ಣನ್ನು ಕೊರೆಯುವುದಕ್ಕೂ ಸಹಾಯಕವಾಗಿತ್ತು.

ಈ ಗುಂಪಿನ ಪ್ರಾಣಿಗಳು ಚೇಳುಗಳ ಪೂರ್ವಜಗಳಾಗಿದ್ದು ಇವುಗಳಿಂದ ಚೇಳುಗಳು ವಿಕಾಸಗೊಂಡವೆನ್ನಲಾಗಿದೆ. (ಡಿ.ಆರ್.)

# ರ

**ರಂಗನತಿಟ್ಟು ಪಕ್ಷಿಧಾಮ:** ಭಾರತದ ಪ್ರಮುಖ ಪಕ್ಷಿಧಾಮಗಳಲ್ಲಿ (ಬರ್ಡ್ ಸ್ಯಾಂಕ್ಚುರೀಸ್) ಇದು ಒಂದು. ಇದು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದೆ. ಶ್ರೀರಂಗಪಟ್ಟಣದ ಪಶ್ಚಿಮಕ್ಕೆ 3 ಕಿಮೀ ದೂರದಲ್ಲೂ, ಮೈಸೂರು ನಗರದ ವಾಯುವ್ಯಕ್ಕೆ ಸು. 18 ಕಿಮೀ ದೂರದಲ್ಲಿದೆ. ಇದು ಕಾವೇರಿ ನದಿಯ ಒಂದು ಚಿಕ್ಕ ದ್ವೀಪ ಸಮೂಹ. ಶ್ರೀರಂಗಪಟ್ಟಣದ ಆದಿದೈವ ಶ್ರೀರಂಗನಾಥಸ್ವಾಮಿಯ ಗೌರವಾರ್ಥ ಪಕ್ಷಿಧಾಮಕ್ಕೆ ಈ ಹೆಸರು ಬಂದಿದೆ. ದ್ವೀಪ ಸಮೂಹ ಸು. 67 ಹೆಕ್ಟೇರು ಪ್ರದೇಶವನ್ನು ಒಳಗೊಂಡಿದೆ. ಕಾವೇರಿ ನದಿ ಇಲ್ಲಿ ಇಬ್ಭಾಗವಾಗಿ ಸು. 4 ಫರ್ಲಾಂಗುಗಳ ದೂರ ಹರಿದು ಮತ್ತೆ ಕೂಡಿಕೊಳ್ಳುತ್ತದೆ. ಹಿಂದಿನ ಮೈಸೂರು ರಾಜ್ಯದ ದೊರೆ ಕಂಠೀರವ ನರಸಿಂಹರಾಜ ಒಡೆಯರ್ ಅವರ ಆಳ್ವಿಕೆಯ (1645–48) ಸಮಯದಲ್ಲಿ, ಕಾವೇರಿ ನದಿಗೆ ಒಂದು ಅಡ್ಡಗಟ್ಟೆ (ಒಡ್ಡು) ನಿರ್ಮಿಸಲಾಗಿ ಉಂಟಾದ ಜಲಾಶಯದ ನಡುವೆ ಸಣ್ಣ ಸಣ್ಣ ಕಿರು ದ್ವೀಪಗಳು ಏರ್ಪಟ್ಟವೆ. ಈ ನದಿ ಸುತ್ತಿನ ಮಧ್ಯದಲ್ಲಿರುವ ಸು. ಒಂದೂವರೆ ಫರ್ಲಾಂಗಿನಷ್ಟು ಅಗಲವಿರುವ, ಸುಣ್ಣಕಲ್ಲಿನ ಭೂಮಿಯೇ ಇಲ್ಲಿನ ಮುಖ್ಯ ದ್ವೀಪ. ಈ ದ್ವೀಪದೊಳಗೆ ಮರಗಳು ವಿರಳವಾಗಿ ಬೆಳೆದಿವೆ. ಜನವಸತಿ ಇಲ್ಲದೆ, ಈ ಪ್ರದೇಶದ ಸುತ್ತಲು ಗದ್ದೆ ಬಯಲುಗಳು ಇದ್ದು, ನದಿಯ ಎರಡು ದಂಡೆಗಳಲ್ಲಿ ಸದಾ ಹಸುರಾಗಿರುವ ವಿವಿಧ ಜಾತಿಯ ಮರಗಿಡಗಳು ಬೆಳೆದಿವೆ.

ಈ ಪಕ್ಷಿಧಾಮದಲ್ಲಿ, ಪಕ್ಷಿಗಳಿಗೆ ಪ್ರಕೃತಿದತ್ತ ರಕ್ಷಣೆ ಮತ್ತು ಆಹಾರ ಎರಡು ಲಭ್ಯವಿರುವುದರಿಂದ, ಪ್ರಪಂಚದ ನಾನಾ ಭಾಗಗಳಿಂದ ಪಕ್ಷಿಗಳು ವಲಸೆ ಬರುತ್ತವೆ. ಪಕ್ಷಿಗಳ ಆಗಮನ, ಗೂಡುಕಟ್ಟುವಿಕೆ, ಮರಿ ಮಾಡುವಿಕೆ, ವಂಶಾಭಿವೃದ್ಧಿಯಂತಹ ಚಟುವಟಿಕೆಗಳನ್ನು ಗಮನಿಸಿದ ಭಾರತದ ಪ್ರಸಿದ್ಧ ಪಕ್ಷಿ ವಿಜ್ಞಾನಿ ಲೇ. ಡಾ. ಸಲೀಂ ಆಲಿ (1896–1987) ಶಿಫಾರಸ್ಸಿನಿಂದ ಈ ಸ್ಥಳ ಪಕ್ಷಿಧಾಮವಾಗಿ 1940ರಲ್ಲಿ ಜನ್ಮ ತಳೆಯಿತು. ಜುಲೈ– ಅಕ್ಟೋಬರ್ ತಿಂಗಳುಗಳ ಅವಧಿಯಲ್ಲಿ ಪಕ್ಷಿಸಂಕುಲ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಇದು ಪಕ್ಷಿಗಳು ಮರಿಮಾಡುವ ಕಾಲ. ಈ ಪಕ್ಷಿಧಾಮದಲ್ಲಿ ಗೊರವಂಕ, ಗಿಳಿ, ಚಮಚಮುಖಿ, ಬುಲ್‌ಬುಲ್, ಕಾಜಾಣ, ಗೀಜಗ, ಸೂರಕ್ಕಿ, ಚಂಬುಕುಟಿಗ, ಮೀಂಚುಳ್ಳಿ, ಗರುಡ, ನೀರುಕಾಗೆ, ಕಳ್ಳಿಪೀರ, ದೇವನಹಕ್ಕಿ, ಕೌಜುಗ, ಜಂಗಲ್ ಬಾಬ್ಲರ್, ರಾಬಿನ್, ಫ್ಲೈಕ್ಯಾಚರ್, ಫ್ಲವರ್‌ಪೆಕರ್, ಕಪ್ಪು ಮತ್ತು ಬಿಳಿ ಐಬಿಸ್, ಕ್ರಾಸ್‌ಬಿಲ್, ಓಪನ್ ಬಿಲ್, ವೈಟ್‌ನೆಕ್ಡ್ ಕ್ರೇನ್, ಬಣ್ಣದ ಕೊಕ್ಕರೆ, ಮುಂತಾದ ವಿವಿಧ ಜಾತಿಯ, ವಿಭಿನ್ನ ಗಾತ್ರದ ಮತ್ತು ಬಣ್ಣ ಬಣ್ಣದ ಪಕ್ಷಿಗಳು ಇವೆ. ನದಿನೀರಿನ ಒಳಗೆ ಇರುವ ಮೊಸಳೆಗಳು ಆಗೊಮ್ಮೆ ಈಗೊಮ್ಮೆ ಬಂಡೆಗಳ ಮೇಲೆ ಬಂದು ಬಿಸಿಲು ಕಾಯಿಸುತ್ತಿರುವ ದೃಶ್ಯ ಸಾಮಾನ್ಯ.

ಇಲ್ಲಿಗೆ ವಲಸೆ ಬರುವ ಪಕ್ಷಿಗಳ ಪೈಕಿ ಕೆಲವು ವರಟೆಗಳು, ಸಿಹಿನೀರಿನಲ್ಲಿರುವ ಟೀಲ್ಸ್ ಜಾತಿಯ ಬಾತು ಮುಖ್ಯ. ಇವು ಮೊಟ್ಟೆಯಿಟ್ಟು ಮರಿಮಾಡುವ ಸ್ಥಳಗಳಾದ ಯುರೋಪ್ ಮತ್ತು ಸೈಬೀರಿಯಗಳಲ್ಲಿ ಶೀತಕಾಲದಲ್ಲಿ ನದಿ, ಸರೋವರಗಳ ನೀರು ಹೆಪ್ಪುಗಟ್ಟುತ್ತವೆ. ಇದರಿಂದ, ಈ ಪಕ್ಷಿಗಳು ಆಹಾರಾನ್ವೇಷಣೆಗೆ ಸಾವಿರಾರು ಕಿಮೀ ದೂರವನ್ನು ಕ್ರಮಿಸಿ ರಂಗನತಿಟ್ಟಿಗೆ ಬಂದು ನೆಲೆಸುತ್ತವೆ. ಉತ್ತರ ಭಾರತದಿಂದ ಫ್ಲೆಮಿಂಗೋ

ಪಕ್ಷಿ ಸಹ ಈ ಧಾಮಕ್ಕೆ ವಲಸೆ ಬರುವ ಬಗ್ಗೆ ತಜ್ಞರು ವರದಿಸಿದ್ದಾರೆ. ಈ ಹಕ್ಕಿಗಳ ತೌರು ಗುಜರಾತಿನ ಕಛ್ ಪ್ರದೇಶ. ಅಫ್ಘಾನಿಸ್ತಾನದ ಉದ್ದನೆ ಬಾಲದ ಹಕ್ಕಿಯು ಇಲ್ಲಿಗೆ ವಲಸೆ ಬರುತ್ತದೆ. ಪರ್ವತಗಳಲ್ಲಿ ವಾಸಿಸುವ ನೀಲಗೃಧ್ರಗಳು ಹಿಮಾಲಯದಿಂದ ರಂಗನತಿಟ್ಟಿಗೆ ಆಗೊಮ್ಮೆ ಈಗೊಮ್ಮೆ ವಲಸೆ ಬರುತ್ತವೆ.

ರಂಗನತಿಟ್ಟಿನಲ್ಲಿ ಗೂಡು ಕಟ್ಟಿರುವ ಬಣ್ಣದ ಕೊಕ್ಕರೆ

ರಂಗನತಿಟ್ಟು ಒಂದು ಪಕ್ಷಿ ಸಂರಕ್ಷಣಾ ಕೇಂದ್ರವಾಗಿದ್ದು ಕರ್ನಾಟಕ ರಾಜ್ಯದ ಅರಣ್ಯ ಇಲಾಖೆ ಮೇಲ್ವಿಚಾರಣೆಗೆ ಒಳಪಟ್ಟಿದೆ. ಇಲ್ಲಿ ಪಕ್ಷಿಬೇಟೆ ನಿಷಿದ್ಧ. ಪಕ್ಷಿವೀಕ್ಷಣೆಗೆಂದು ಬರುವ ಪ್ರವಾಸಿಗಳಿಗೆ ದೋಣಿವಿಹಾರದ ಮೂಲಕ ದ್ವೀಪಗಳ ಬಳಿಗೆ ಹೋಗಿ ಪಕ್ಷಿವೀಕ್ಷಣೆ ಮಾಡಲು ಅವಕಾಶವಿದೆ. ರಂಗನತಿಟ್ಟು ಪಕ್ಷಿಧಾಮಕ್ಕೆ ಉತ್ತಮ ರಸ್ತೆ ಸೌಲಭ್ಯವಿರುವುದರಿಂದ ಪ್ರವಾಸಿಗರಿಗು, ಪಕ್ಷಿ ಛಾಯಾಚಿತ್ರ ಗ್ರಾಹಕರಿಗು, ಇದೊಂದು ಆಕರ್ಷಕ ತಾಣವಾಗಿದೆ.

***

**ರಕ್ತ:** ಮನುಷ್ಯ ಹಾಗೂ ಇನ್ನಿತರ ಕಶೇರುಕಗಳ ದೇಹದಲ್ಲಿಯ ಪ್ರಮುಖ ರಕ್ತನಾಳವ್ಯವಸ್ಥೆಯಲ್ಲಿ (ವಾಸ್ಕುಲರ್ ಸಿಸ್ಟಮ್) ಪರಿಚಲಿಸುವ, ಕೆಂಪುಬಣ್ಣದ ದ್ರವ (ಬ್ಲಡ್). ನೆತ್ತರು, ರುಧಿರ, ಪರ್ಯಾಯನಾಮಗಳು. ಕಾರಣಾಂತರಗಳಿಂದ ದೇಹದ ಒಳಗೆ ಇಲ್ಲವೆ ಹೊರಗೆ ಎಲ್ಲಿ ಗಾಯವಾದರೂ ರಕ್ತ ಹೊರಬರುತ್ತದೆ. ಎಲ್ಲ ಕಶೇರುಕಗಳ ದೇಹದಲ್ಲೂ, ಅನಿಲಿಡ ವಂಶಕ್ಕೆ ಸೇರಿದ ಎರೆಹುಳು, ಜಿಗಣೆ ಮತ್ತು ಇನ್ನಿತರ ಸಮುದ್ರವಾಸಿ ಹುಳುಗಳು ಹಾಗೂ ಅವುಗಳಿಗಿಂತ ಮೇಲ್ದರ್ಜೆಯ ಅಕಶೇರುಕಗಳ ದೇಹದಲ್ಲೂ ರಕ್ತ ಇದೆ. ಕೆಲವು ಹುಳುಗಳಲ್ಲಿ ರಕ್ತ ಮಾಸಲು – ಹಸಿರು ಬಣ್ಣಕ್ಕೂ ಕೆಲವೊಂದು ಚಿಪ್ಪುಪ್ರಾಣಿಗಳು ಹಾಗೂ ಸಂಧಿಪದಿಗಳಲ್ಲಿ ತಿಳಿನೀಲಿ ಬಣ್ಣಕ್ಕೂ ಇರುವುದುಂಟು. ಮನುಷ್ಯನಲ್ಲಿ ರಕ್ತಕಣಗಳೂ (ಸೆಲ್ಸ್) ಹಾಗು ಕಣೀತ್ರಗಳೂ (ಕಿರುತಟ್ಟೆಗಳು; ಪ್ಲೇಟ್‌ಲೆಟ್ಸ್) ರಕ್ತರಸ (ಪ್ಲಾಸ್ಮ)ದಲ್ಲಿ ನಿಲಂಬಿತಗೊಂಡಿವೆ (ಸಸ್ಪೆಂಡೆಡ್). ಈ ದ್ರವ ಕ್ಷಾರೀಯ ಗುಣವುಳ್ಳದ್ದು. ಸಾಪೇಕ್ಷ ಸಾಂದ್ರತೆ 1.050 – 1.060.

ಸ್ಥೂಲ ಪರಿಚಯ: ಸಾಮಾನ್ಯವಾಗಿ ಮನುಷ್ಯರ ದೇಹದಲ್ಲಿ 5 – 6 ಲೀಗಳಷ್ಟು ರಕ್ತ ಇರುತ್ತದೆ. ಈ ವಿಷಯ ಶಿರಶ್ಛೇದನ ಮಾಡಿದ ಅಪರಾಧಿಗಳಲ್ಲಿ ರಕ್ತದ ನೇರ ಅಳತೆಯಿಂದ ಸುಮಾರು 200 ವರ್ಷಗಳಿಗೆ ಹಿಂದೆಯೆ ತಿಳಿದು ಬಂದಿತ್ತು. ವಿವಿಧ ಪ್ರಯೋಗಗಳಿಂದ ಅಪ್ರತ್ಯಕ್ಷವಾಗಿ ಮಾಪನ ಮಾಡಿರುವದರಿಂದ ದೇಹತೂಕದ 1 / 12 ರಷ್ಟು ರಕ್ತ ಇರುವುದೆಂದು ನಿರ್ಧರಿಸಲಾಗಿದೆ. ರಕ್ತಪ್ರಮಾಣ ದೇಹತೂಕವನ್ನು ಅನುಸರಿಸಿರುವುದಕ್ಕಿಂತ ಹೆಚ್ಚು ಕರಾರುವಾಕ್ಕಾಗಿ ದೇಹದ ಮೇಲ್ಮೈ ಅಳತೆಯನ್ನು ಅನುಸರಿಸಿದೆ. ಸ್ತನಿಗಳಲ್ಲೆಲ್ಲ ಸಾಮಾನ್ಯವಾಗಿ ಮನುಷ್ಯನಲ್ಲಿರುವಂತೆ ದೇಹತೂಕದ ಸುಮಾರು 1 / 12 ರಷ್ಟು ರಕ್ತ ಇದೆ. ಪಕ್ಷಿಗಳಲ್ಲಿ ದೇಹತೂಕದ 1 / 10 ರಷ್ಟು, ಮೀನುಗಳಲ್ಲಿ ದೇಹತೂಕದ ಕೇವಲ ಶೇ. 2 – 3 ರಷ್ಟು, ಅವುಗಳ ಮರಿಗಳಲ್ಲಿ (ಲಾರ್ವ) ಶೇ. 40 ರಷ್ಟು ರಕ್ತ ಇರುವುದು. ಅತ್ಯಂತ ಹೆಚ್ಚಾಗಿ ಇರುವುದು ಶಂಖದ ಹುಳು ಜಾತಿಯಲ್ಲಿ. ಇವುಗಳಲ್ಲಿ ದೇಹದ ಘನಗಾತ್ರದ ಶೇ. 90 ಭಾಗ ರಕ್ತವೆ.

ದೇಹದಲ್ಲಿ ರಕ್ತ ಸ್ವಸ್ಥಾನದಲ್ಲಿರುವಾಗ (ಹೃದಯ ಹಾಗೂ ರಕ್ತನಾಳಗಳ ಒಳಗೆ) ಅದು ಸದಾ ದ್ರವರೂಪದಲ್ಲಿದ್ದು ದೇಹದಿಂದ ಹೊರಬಂದ ನಾಲ್ಕಾರು ನಿಮಿಷಗಳಲ್ಲಿ ಗರಣೆ ಕಟ್ಟಿ ಘನೀಕರಿಸುವುದು ಅದರ ಒಂದು ವೈಶಿಷ್ಟ್ಯ. ಗಾಯವಾದಾಗ ರಕ್ತನಾಳಗಳು ಛಿದ್ರಗೊಂಡು ಒಳಗೆ ಹರಿಯುತ್ತಿರುವ ರಕ್ತ ಹೊರಬರುವುದು. ನಾಳಗಳಲ್ಲಿ ರಕ್ತ ಹರಿಯುತ್ತಿರಬೇಕಾದರೆ ಅದು ದ್ರವರೂಪದಿಂದ ಇರಬೇಕಾದುದು ಅಗತ್ಯ. ಏಕೆಂದರೆ ರಕ್ತ ಅಲ್ಲೆ ಗರಣೆ ಕಟ್ಟಿಕೊಳ್ಳುವಂತಿದ್ದರೆ ಅದು ಪ್ರವಹಿಸುವುದಕ್ಕೆ ಅಡಚಣೆ ಆಗುವುದು. ಆದರೆ ಗಾಯವಾಗಿ ನಾಳದಿಂದ ಹೊರಬಂದ ರಕ್ತ ಗರಣೆಗಟ್ಟಿಕೊಳ್ಳಬೇಕಾದುದೆ ಅಪೇಕ್ಷಣೀಯ. ಗರಣೆಯಿಂದ ರಕ್ತನಾಳದ ಗಾಯ ಮುಚ್ಚಿಕೊಂಡು ಮರಣಾಂತಿಕವಾಗಿ ರಕ್ತ ನಷ್ಟವಾಗುವುದು ತಪ್ಪುತ್ತದೆ.

ಪಿಚಕಾರಿಯ ಮೂಲಕ ಮನುಷ್ಯನ ರಕ್ತವನ್ನು ತೆಗೆದು ಒಂದು ಪ್ರನಾಳದಲ್ಲಿಟ್ಟರೆ ಅದು ನಾಲ್ಕರು ನಿಮಿಷಗಳಲ್ಲಿ ಗಟ್ಟಿಯಾಗುತ್ತದೆ. ಆದರೆ ಅದಕ್ಕೆ ಕೊಂಚ ಪೊಟ್ಯಾಷಿಯಮ್ ಅಕ್ಸಲೇಟ್ ಪುಡಿಯನ್ನು ಸೇರಿಸಿದರೆ ರಕ್ತ ದ್ರವರೂಪದಲ್ಲೆ ಇರುತ್ತದೆ. ಪ್ರನಾಳವನ್ನು ಹಾಗೆಯೇ ಇಟ್ಟಿದ್ದರೆ ಸು. 1 / 2 – 1 ಗಂಟೆಯೊಳಗೆ ರಕ್ತ ಅದರ ಅರ್ಧಕ್ಕಿಂತ ಕಡಿಮೆಯಾಗಿ (ಸುಮಾರು 45%) ತಳದ ಕೆಂಪು ಗಷ್ಟಾಗಿಯೂ ಆ ಅರ್ಧಕ್ಕಿಂತ ಹೆಚ್ಚಾಗಿ (ಸುಮಾರು 55%) ಗಷ್ಟಿನ ಮೇಲೆ ತಿಳಿ ಹಳದಿ ಬಣ್ಣದ ದ್ರವವಾಗಿಯೂ ಬೇರ್ಪಡುತ್ತದೆ. ಈ ದ್ರವಕ್ಕೆ ರಕ್ತದ್ರವ (ಪ್ಲಾಸ್ಮ) ಎಂದು ಹೆಸರು. ತಳದ ಗಷ್ಟನ್ನು ಗುಂಡುಸೂಜಿಯ ತಲೆಯಷ್ಟು ತೆಗೆದು 0.9% ಸೋಡಿಯಮ್ ಕ್ಲೋರೈಡ್ ದ್ರಾವಣದ ತೊಟ್ಟಿನಲ್ಲಿಟ್ಟು ಸೂಕ್ಷ್ಮದರ್ಶಕದ ಮೂಲಕ ನೋಡಿದರೆ ವಿಶಿಷ್ಟರಚನೆಯ ಘಟಕಗಳಿಂದಾಗಿರುವುದು (ಫಾರಮ್ಡ್ ಎಲಿಮೆಂಟ್ಸ್) ವ್ಯಕ್ತವಾಗುತ್ತದೆ. ಎಲ್ಲೆಲ್ಲೂ ದುಂಡನೆಯ ಮಾಸಲು ಕೆಂಪುಬಣ್ಣದ ಸಣ್ಣ ಕಣಗಳು ಕಾಣುವುವು. ಇವು ರಕ್ತದ ಕೆಂಪು ಕಣಗಳಾಗಿದ್ದು (ರೆಡ್‌ಬ್ಲಡ್ ಕಾರ್ಪಸಲ್ಸ್ ; ಆರ್‌ಬಿಸಿ) ದೇಹದ ಕೋಶಗಳಿಗೆ ಆಮ್ಲಜನಕವನ್ನು ಒದಗಿಸಿ ಅವುಗಳಿಂದ ಕಾರ್ಬನ್ ಡೈ ಆಕ್ಸೈಡ್‌ನ್ನು ತರುತ್ತವೆ. ಇವುಗಳ ನಡುವೆ ಎಲ್ಲೊ ಅಲ್ಲೊಂದು ಇಲ್ಲೊಂದು ಕೆಂಪು ಕಣಗಳಿಗಿಂತ ಸ್ವಲ್ಪ ದೊಡ್ಡದಾದ ಬಣ್ಣವಿಲ್ಲದ ಕಣಗಳೂ ಕಾಣಿಸುತ್ತವೆ. ಇವು ವರ್ಣರಹಿತ ಕಣಗಳು (ವೈಟ್ ಬ್ಲಡ್ ಕಾರ್ಪಸಲ್ಸ್ ; ಡಬ್ಲ್ಯೂ. ಬಿ. ಸಿ.). ಇವು ಸಾಮಾನ್ಯವಾಗಿ ದೇಹವನ್ನು ವಿಷಾಣುಗಳ ಧಾಳಿಯಿಂದ ರಕ್ಷಿಸುತ್ತವೆ. ಜೊತೆಗೆ ಅಲ್ಲಲ್ಲಿ ಕೆಂಪುಕಣಗಳ 1 / 4 ಭಾಗಕ್ಕಿಂತಲೂ ಕಿರಿದಾಗಿರುವ, ರವೆಯಂಥ ರಚನೆಗಳು ಗುಂಪುಗುಂಪಾಗಿ ಕಾಣಿಸುತ್ತವೆ. ಇವು ರಕ್ತದ ಕಣಿತ್ರಗಳು (ಬ್ಲಡ್ ಪ್ಲೇಟ್ ಲೆಟ್ಸ್). ರಕ್ತಸ್ರಾವಸ್ತಂಭನದಲ್ಲಿ ಇವು ಮುಖ್ಯಪಾತ್ರ ವಹಿಸುತ್ತವೆ. ಮನುಷ್ಯ ದೇಹದ ಒಟ್ಟು ರಕ್ತ ಸುಮಾರು 5 ಲೀಗಳಷ್ಟು, ಇದರಲ್ಲಿ 2.75 ಲೀಗಳಷ್ಟು ರಕ್ತದ್ರವ ಇದೆ. ಇವುಗಳ ಪ್ರಮಾಣದಲ್ಲಿಯ ವ್ಯತ್ಯಾಸ ಅನಾರೋಗ್ಯ ಸ್ಥಿತಿಯ ಸೂಚಕ.

ರಕ್ತನಾಳಗಳಲ್ಲಿ ಇರುವ ರಕ್ತದ್ರವ, ದೇಹದೊಳಗೆ ಎಲ್ಲೆಲ್ಲೂ ಕಂಡೂ ಕಾಣಿಸದಂತೆಯೂ ಇರುವ ಅಂಗಾಂಶದ್ರವ (ಟಿಷ್ಯೂ ಫ್ಲೂಯಿಡ್), ಇವೆರಡರ ನಡುವೆ ವಸ್ತು ವಿನಿಮಯ (ನೀರು, ಅನಿಲಗಳೂ ಸೇರಿದಂತೆ) ನಿರಂತರವೂ ಜರುಗಿ ದೇಹದ ಎಲ್ಲ ಕೋಶಗಳಿಗೂ ಆಹಾರ ಸರಬರಾಜಾಗಿ ಅವುಗಳಿಂದ ತಯಾರಾದ ಉಪಯುಕ್ತ ಹಾಗೂ ವಿಸರ್ಜನವಸ್ತುಗಳು ರಕ್ತದ್ರವವನ್ನು ಸೇರುತ್ತವೆ. ಅಧಿಕ ವಮನ, ಭೇಧಿ, ಅಧಿಕವಾಗಿ ಬೆವರುವಿಕೆ, ಚುಚ್ಚುವುದರ ಮೂಲಕ ದ್ರವದುಂಬಿಕೆ, ಮೂತ್ರ ಪಿಂಡರೋಗ ಇತ್ಯಾದಿಗಳಿಂದ ಅಂಗಾಂಶದ್ರವದ ಮೊತ್ತದಲ್ಲಿ ಹೆಚ್ಚು ಕಡಿಮೆ ಆದಾಗ, ಅನುಗುಣವಾಗಿ ರಕ್ತದ ಘಟಕಗಳಲ್ಲೂ ವ್ಯತ್ಯಾಸ ಕಂಡುಬರುತ್ತದೆ. ಅತಿ ರಕ್ತಸ್ರಾವವಾದಾಗಲೂ ವ್ಯತ್ಯಾಸವಾಗುವುದು ವ್ಯಕ್ತ. ಇಂಥ ವ್ಯತ್ಯಾಸಗಳಿಂದ ರಕ್ತದ ಒತ್ತಡದಲ್ಲಿ ಏರುಪೇರು, ಮತ್ತಿತರ ತೊಂದರೆಗಳೂ ಉಂಟಾಗುತ್ತವೆ. ಆದ್ದರಿಂದ ಒಟ್ಟು ರಕ್ತ ಹಾಗೂ ಘಟಕಗಳ ಘನಗಾತ್ರ ಹೆಚ್ಚುಕಡಿಮೆ ಆಗದಂತೆ ವಿಶಿಷ್ಟ ನಿಯಂತ್ರಣ ಕ್ರಮಗಳು ದೇಹದಲ್ಲಿ ಏರ್ಪಟ್ಟಿವೆ. ನೀರಡಿಕೆ, ಮೂತ್ರೋತ್ಪಾದನೆ ಹಾಗೂ ಅದರ ಘನಸಾಂದ್ರತೆಯಲ್ಲಿ ಹೆಚ್ಚು ಕಡಿಮೆಗಳಾಗುವುದು ಮುಖ್ಯ ನಿಯಂತ್ರಣ ಕ್ರಮಗಳು.

ರಕ್ತಪರಿಚಲನೆ: ಕಶೇರುಕಗಳ ರಕ್ತನಾಳಗಳಲ್ಲಿ ರಕ್ತ ಹರಿಯುತ್ತಲೇ ಇರುವುದಕ್ಕೆ ಕಾರಣ ಕ್ರಮಬದ್ಧವಾಗಿ ಮಿಡಿಯುತ್ತ ರಕ್ತವನ್ನು ರೇಚಿಸುತ್ತಲೇ (ಪಂಪ್) ಇರುವ ಹೃದಯ. ಮನುಷ್ಯನಲ್ಲಿ ಹೃದಯ ಎಂಬುದು ನಿಮಿಷಕ್ಕೆ ಸು. 70 ಬಾರಿ ಮಿಡಿಯುವ, ನಾಲ್ಕು ಕುಹರಗಳ ಒಂದು ರೇಚಕ (ಫೊರ್ ಚೇಂಬರ್ಡ್ ಪಂಪ್). ಮೇಲಿನ ಎರಡು ಕುಹರಗಳು ಎಡಬಲ ಹೃತ್ಕರ್ಣಗಳು (ಏಟ್ರಿಯ) ಹಾಗು ಕೆಳಗಿನ ಕುಹರಗಳು ಎಡ ಮತ್ತು ಬಲ ಹೃತ್ಕುಕ್ಷಿಗಳು. ಫುಪ್ಫುಸಗಳಿಂದ ಮತ್ತು ದೇಹದ ಇತರ ಎಡೆಗಳಿಂದ ದೊಡ್ಡ ರಕ್ತನಾಳಗಳ ಮೂಲಕ ಸತತವಾಗಿ ಹರಿದು ಬಂದು ತುಂಬಿಕೊಳ್ಳುವ ರಕ್ತವನ್ನು ಹೃತ್ಕರ್ಣಗಳು ಹಾಗು ಅಡಿಯಲ್ಲಿ ಇರುವ ಎಡಬಲ ಹೃತ್ಕುಕ್ಷಿಗಳೂ ಏಕಕಾಲಿಕವಾಗಿ ಸಂಕುಚಿಸಿ ತಮ್ಮಿಂದ ಹೊರಡುವ ರಕ್ತನಾಳಗಳೊಳಕ್ಕೆ ರಕ್ತವನ್ನು ತಳ್ಳುತ್ತವೆ. ಬಲಹೃತ್ಕುಕ್ಷಿಯಿಂದ ಹೊರಡುವುದು ಫುಪ್ಫುಸಧಮನಿ (ಪಲ್ಮನರಿ ಆರ್ಟರಿ). ಇದು ತನ್ನ ಎಡಬಲ ಕವಲುಗಳ ಮೂಲಕ ಆಯಾ ಕಡೆಯ ಫುಪ್ಫುಸಗಳಿಗೆ ರಕ್ತವನ್ನು ಒಯ್ಯುತ್ತದೆ. ಅಲ್ಲಿಂದ ಫುಪ್ಫುಸ ಅಭಿಧಮನಿಗಳ (ಪಲ್ಮನರಿ ವೇಯ್ನ್ಸ್) ಮೂಲಕ ರಕ್ತ ಮುರುಳುತ್ತದೆ. ಅಯೋರ್ಟ ಛತ್ರಿಕೋಲಿನ ಹಿಡಿಯಂತೆ ಕಮಾನಾಗಿ ಪ್ರಾರಂಭವಾಗಿ ಬೆನ್ನುಮೂಳೆಯ ಮುಂದೆ ನೇರವಾಗಿ ಸೊಂಟದವರೆಗೆ ಇಳಿದು ಅಲ್ಲಿ ಎರಡು ಕವಲಾಗಿ ಎಡಬಲ

ಕಿಬ್ಬೊಟ್ಟೆ ಭಾಗಗಳಿಗೂ, ಇಳಿಯುತ್ತಿರುವ ನೇರ ಭಾಗದಿಂದ ಉದ್ಭವಿಸುವ ಕವಲುಗಳು ತಲೆ, ಕೈಗಳು, ಎದೆ ಹಾಗೂ ಉದರದ ಎಲ್ಲ ಅಂಗಗಳಿಗೆ ರಕ್ತಪೂರೈಕೆ ಮಾಡುತ್ತವೆ. ದೇಹದ ಕೆಳಭಾಗದಿಂದ ಹಿಂದಿರುಗುವ ರಕ್ತ ಅವನತ ಮಹಾಭಿಧಮನಿ (ಇನ್‌ಫೀರಿಯರ್ ವೀನಕೇವ) ಎಂಬ ದೊಡ್ಡ ರಕ್ತನಾಳದ ಮೂಲಕವೂ ತಲೆ, ಕೈಗಳು ಹಾಗೂ ಮುಂಡದ ಮೇಲು ಭಾಗದಿಂದ ವಾಪಸಾಗುವ ರಕ್ತ ಉನ್ನತ ಮಹಾಭಿದಮನಿ (ಸುಪೀರಿಯರ್ ವೀನಕೇವ) ಎಂಬ ದೊಡ್ಡ ರಕ್ತನಾಳದ ಮೂಲಕವೂ ಬಲಹೃತ್ಕರ್ಣವನ್ನು ಸೇರುತ್ತದೆ. ಬಲಹೃತ್ಕುಕ್ಷಿಗಳ ನಡುವೆ, ಎಡಹೃತ್ಕರ್ಣ ಹೃತ್ಕುಕ್ಷಿಗಳ ನಡುವೆ, ಬಲಹೃತ್ಕುಕ್ಷಿ ಫುಪ್ಫುಸಧಮನಿಗಳ ನಡುವೆ ಮತ್ತು ಎಡಹೃತ್ಕುಕ್ಷಿ ಮಹಾಪಧಮನಿ ನಡುವೆ ಒಮ್ಮುಖವಾಗಿ ಮಾತ್ರ ತೆರೆದುಕೊಳ್ಳುವ ಕವಾಟಗಳಿವೆ (ವಾಲ್ವ್). ಹೃತ್ಕುಕ್ಷಿಗಳಿಂದ ರೇಚಿಸಲ್ಪಟ್ಟ ರಕ್ತ ಫುಪ್ಫುಸಧಮನಿ ಮತ್ತು ಮಹಾಪಧಮನಿಗಳಿಗೆ ಹರಿದುಹೋಗಬಲ್ಲದೇ ವಿನಾ ಆಯಾ ಹೃತ್ಕರ್ಣಗಳಿಗೆ ಹಿಂದಕ್ಕೆ ಹರಿದುಹೋಗಲಾರದು. ಹೃತ್ಕರ್ಣ ಹೃತ್ಕುಕ್ಷಿಗಳ ನಡುವಣ ಕವಾಟಗಳು ಇದಕ್ಕೆ ಆಸ್ಪದ ಕೊಡುವುದಿಲ್ಲ. ಅಂತೆಯೇ ರಕ್ತದಿಂದ ಹಿಗ್ಗಿಸಲ್ಪಟ್ಟಿರುವ ಫುಪ್ಫುಸಧಮನಿ ಮತ್ತು ಮಹಾಪಧಮನಿಗಳು ತಮ್ಮ ಸ್ಥಿತಿಸ್ಥಾಪಕಸಾಮರ್ಥ್ಯದಿಂದ ಸಹಜಸ್ಥಿತಿಗೆ ಬಂದಾಗ ಅವುಗಳೊಳಗಿನ ರಕ್ತ ಆಯಾ ಹೃತ್ಕುಕ್ಷಿಗಳಿಗೆ ಹಿಂದಿರುಗಲು ಅವುಗಳ ನಡುವೆ ಇರುವ ಕವಾಟಗಳು ಅವಕಾಶ ಮಾಡಿಕೊಡುವುದಿಲ್ಲ. ಆದ್ದರಿಂದ ರಕ್ತ ಫುಪ್ಫುಸಧಮನಿಗಳು ಮತ್ತು ಮಹಾಪಧಮನಿಗಳಲ್ಲಿ ಇನ್ನೂ ಮುಂದಕ್ಕೆ ಹರಿದು ಹೋಗಬೇಕು. ಹೀಗೆ ಮುಂದುಮುಂದಕ್ಕೆ ತಳ್ಳಿಸಿಕೊಂಡೇ ರಕ್ತ ಅವುಗಳ ಅಂತ್ಯ ಕವಲುಗಳ ಮೂಲಕ ಕ್ರಮವಾಗಿ ಫುಪ್ಫುಸಗಳ ಮತ್ತು ದೇಹದ ಇತರ ಎಲ್ಲ ಭಾಗಗಳ ಮೂಲೆ ಮೂಲೆಗಳನ್ನೂ ತಲುಪುತ್ತದೆ. ಪ್ರವಾಹ ಮುಂದುವರಿದು ರಕ್ತ ಅಂತಿಮವಾಗಿ ಹೃದಯವನ್ನೇ ಪುನಃ ಸೇರುತ್ತದೆ. ಚಕ್ರಾಕಾರವಾದ ಈ ಚಲನೆಗೆ ರಕ್ತಪರಿಚಲನೆ (ಬ್ಲಡ್ ಸರ್ಕ್ಯುಲೇಷನ್) ಎಂದು ಹೆಸರು. ಇಲ್ಲಿ 2 ಪ್ರದಕ್ಷಿಣೆಗಳನ್ನು ಗಮನಿಸಬಹುದು. ಎಡಹೃತ್ಕುಕ್ಷಿಯಿಂದ ರೇಚಿಸಲ್ಪಟ್ಟ ರಕ್ತ ದೇಹದ ಎಲ್ಲ ಮೂಲೆಗಳಿಗೂ ಪೂರೈಕೆ ಆಗಿ ಮತ್ತೆ ಬಲಹೃತ್ಕರ್ಣವನ್ನು ಸೇರುವುದು ಒಂದು; ಬಲಹೃತ್ಕುಕ್ಷಿಯಿಂದ ರೇಚಿಸಲ್ಪಟ್ಟ ರಕ್ತ ಫುಪ್ಫುಸಗಳಲ್ಲಿ ಮಾತ್ರ ಪರಿಚಲಿಸುತ್ತ ಪುನಃ ಎಡಹೃತ್ಕರ್ಣವನ್ನು ಸೇರುವುದು ಇನ್ನೊಂದು. ಹೃದಯದಿಂದ ಆಚೆಗೆ ರಕ್ತವನ್ನು ಒಯ್ಯುವ ರಕ್ತನಾಳಗಳು ಅಪಧಮನಿಗಳು (ಆರ್ಟರೀಸ್), ದೇಹದ ನಾನಾ ಮೂಲೆಗಳಿಂದಲೂ ರಕ್ತವನ್ನು ವಾಪಸ್ಸು ಹೃದಯಕ್ಕೆ ತರುವ ರಕ್ತನಾಳಗಳು ಅಭಿಧಮನಿಗಳು (ವೇಯ್ನ್ಸ್). ಸಾಧಾರಣವಾಗಿ ಒಂದು ನಿರ್ದಿಷ್ಟ ಅಂಗ ಅಥವಾ ದೇಹ ಭಾಗಕ್ಕೆ ಯುಕ್ತ ಅಪಧಮನಿಯ ಮೂಲಕ ರಕ್ತಪೂರೈಕೆ ಆಗುವುದು. ಅನೇಕ ಕಡೆಗಳಲ್ಲಿ ಒಂದೆ ದೇಹಭಾಗಕ್ಕೆ 2 – 3 ಅಪಧಮನಿಗಳು ರಕ್ತಪೂರೈಕೆ ಮಾಡುವುದೂ ಇದೆ. ಅಪಧಮನಿಯೊಂದು ಪದೆ ಪದೆ ಕವಲಾಗುತ್ತ ಸುಮಾರು 1 ಮಿಮೀ ವ್ಯಾಸದಷ್ಟು ಸಣ್ಣದಾದ ಕಿರಿ ಅಪಧಮನಿಗಳಾಗಿ (ಆರ್ಟರಿಯೋಲ್ಸ್). ರಕ್ತವನ್ನು ನಿರ್ದಿಷ್ಟಕ್ಷೇತ್ರದ ಉದ್ದ, ಅಗಲ ಮತ್ತು ಗಾತ್ರಕ್ಕೂ ತಲುಪಿಸುತ್ತದೆ. ಪ್ರತಿಯೊಂದು ಕಿರಿ ಅಪಧಮನಿ ಮುಂದೆ ಇನ್ನೂ ಸಣ್ಣ ಶಾಖೆಗಳಾಗಿ ಅಂತಿಮವಾಗಿ ಬರೀ ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮರಕ್ತನಾಳಗಳಾಗುತ್ತವೆ. ಇವು ಲೋಮನಾಳಗಳು (ಕ್ಯಾಪಿಲ್ಲರೀಸ್). ಇವೂ ಕವಲೊಡೆಯುವುದಾದರೂ ಕವಲುಗಳು ಸಣ್ಣವಾಗದೆ ಮತ್ತು ಬೇರೆ ಕವಲುಗಳೊಡನೆ ಸೇರಿಕೊಳ್ಳುತ್ತ ಪುನಃ ಒಡೆಯುತ್ತ ಒಂದು ಬಲೆ ಅಥವಾ ಜಾಲರಿಯಂತಾಗುತ್ತದೆ. ಲೋಮನಾಳದ ಜಾಲರಿಗಳು (ಕ್ಯಾಪಿಲ್ಲರಿ ಪ್ಲೆಕ್ಸಸ್ ಅಥವಾ ನೆಟ್‌ವರ್ಕ್) ಆ ಕ್ಷೇತ್ರದ ಕೋಶಗಳೆಲ್ಲದರ ನಿಕಟಸಂಪರ್ಕ ಪಡೆದಿರುತ್ತವೆ. ಲೋಮನಾಳಗಳ ವ್ಯಾಸ ಅತಿ ಕಿರಿದು. ಮಿಮೀ ಸಾವಿರ ಭಾಗಗಳಲ್ಲಿ 3 – 30 ಭಾಗಗಳಷ್ಟಿರಬಹುದು (0.001 ಮಿಮೀ. = 1 ಮೈ) ಇವುಗಳ ಭಿತ್ತಿಯೂ ಅತಿ ತೆಳುವೇ. ಈ ಭಿತ್ತಿಯ ಮೂಲಕ ಲೋಮನಾಳಗಳೊಳಗಿರುವ ರಕ್ತ ಮತ್ತು ಕೋಶಗಳ ಆವರಣ ದ್ರವ (ಇಂಟರ್‌ಸೆಲ್ಯುಲರ್ ಅಥವಾ ಇಂಟರ್‌ಸ್ಪೀಷಿಯಲ್ ಫ್ಲೂಯಿಡ್, ಟಿಷ್ಯೂ ಫ್ಲೂಯಿಡ್) ಇವುಗಳ ನಡುವೆ ವಸ್ತುಗಳ ವಿನಿಮಯ ಜರುಗುತ್ತದೆ.

ಎಡಹೃತ್ಕುಕ್ಷಿಯಿಂದ ಹೊರಬೀಳುವ ರಕ್ತದಲ್ಲಿ ಆಹಾರಾಂಶಗಳು, ಆಮ್ಲಜನಕ ಹಾರ್ಮೋನುಗಳು ಹಾಗು ಮತ್ತಿತರ ಉಪಯುಕ್ತ ವಸ್ತುಗಳೂ ದೇಹದಿಂದ ವಿಸರ್ಜಿತವಾಗಬೇಕಾದ ಯೂರಿಯ ಮುಂತಾದ ವಸ್ತುಗಳೂ ಹೇರಳವಾಗಿ ಇರುತ್ತವೆ. ದೇಹದ ವಿವಿಧ ಭಾಗಗಳಲ್ಲಿ ಮಹಾಪಧಮನಿಯ ಅಂತ್ಯಕಿರಿಗವಲುಗಳಿಂದ ಉದ್ಭವಿಸುವ ಲೋಮನಾಳ ಜಾಲರಿಗಳ ರಕ್ತದಲ್ಲಿಯೂ ಈ ವಸ್ತುಗಳು ಏನೂ ವ್ಯತ್ಯಾಸವಾಗದೆ ಇದ್ದು ದೇಹಕೋಶಗಳಿಗೆಲ್ಲ ಆಹಾರಾಂಶಗಳು ಮತ್ತು ಆಮ್ಲಜನಕ ಸರಬರಾಜಾಗುತ್ತದೆ. ಹಾರ್ಮೋನುಗಳು ಮತ್ತಿತರ ಉಪಯುಕ್ತ ವಸ್ತುಗಳೂ ಹೀಗೆಯೆ ಎಲ್ಲ ಕೋಶಗಳನ್ನು ತಲಪಿದರೂ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಹೀರಲ್ಪಟ್ಟು ಕಾರ್ಯೋನ್ಮುಖವಾಗುತ್ತವೆ. ಇತರ ನಿರ್ದಿಷ್ಟ ಸ್ಥಳಗಳಲ್ಲಿ ಇಂಥ ವಸ್ತುಗಳನ್ನು ರಕ್ತವೇ ಹೀರಿಕೊಳ್ಳುವುದಿದೆ. ಎಲ್ಲೆಡೆಯೂ (ಮೂತ್ರಜನಕಾಂಗಗಳನ್ನು ಬಿಟ್ಟು) ಉತ್ಪತ್ತಿ ಆದ ತ್ಯಾಜ್ಯ ವಸ್ತುಗಳು ರಕ್ತದಿಂದ ಹೀರಲ್ಪಡುತ್ತವೆ. ಹಾಗೆಯೇ ಎಲ್ಲ ಕಡೆಗಳಲ್ಲೂ ಉತ್ಪತ್ತಿ ಆಗುತ್ತಲೇ ಇರುವ ಕಾರ್ಬನ್ ಡೈ ಆಕ್ಸೈಡನ್ನು ಈ ಲೋಮನಾಳ ಜಾಲರಿಗಳ ರಕ್ತ ಹೀರಿಕೊಳ್ಳುತ್ತದೆ. ಲೋಮನಾಳ ಜಾಲರಿಗಳಿಂದ ಹಿಂದಿರುಗುವ ರಕ್ತದಲ್ಲಿ ಆಮ್ಲಜನಕ, ಕಡಿಮೆ ಆಗಿಯೂ ಕಾರ್ಬನ್ ಡೈ ಆಕ್ಸೈಡ್ ಹೆಚ್ಚಾಗಿಯೂ ಹಾಗೆಯೇ ಆಹಾರಾಂಶ ಸ್ವಲ್ಪ ಕಡಿಮೆ ಆಗಿಯೂ ವಿಸರ್ಜಿತ ವಸ್ತುಗಳು ಹೆಚ್ಚಾಗಿಯೂ ಇರುವುವು. ಆದರೆ ಆಹಾರಪಚನ ಕಾಲದಲ್ಲಿ ಕರುಳಿನಿಂದ ಹಿಂದಿರುಗುವ ರಕ್ತ ಆಹಾರಾಂಶಗಳನ್ನು ಹೀರಿಕೊಂಡಿರುವುದರಿಂದ ಅದರಲ್ಲಿ ಆಹಾರಾಂಶ ಮೊದಲಿಗಿಂತಲೂ ಹೆಚ್ಚಾಗಿಯೇ ಇರುವುದು. ಮೂತ್ರಜನಕಾಂಗಗಳಿಂದ ಹಿಂದಿರುಗುವ ರಕ್ತದಲ್ಲಿ ವಿಸರ್ಜನೆ ಆಗತಕ್ಕ ವಸ್ತುಗಳು ಬೇರ್ಪಟ್ಟಿರುವುದರಿಂದ ಅವು ಬಲು ಕಡಿಮೆ ಪ್ರಮಾಣದಲ್ಲಿರುತ್ತವೆ.

ದೇಹದ ಬೇರೆ ಬೇರ ಕಡೆಗಳಲ್ಲಿ ಸಾಮಾನ್ಯವಾಗಿ ಮತ್ತು ವಿಶಿಷ್ಟವಾಗಿ ವಸ್ತುವಿನಿಮಯ ಆದ ಮೇಲೆ ರಕ್ತ ವಾಪಸ್ಸು ಹೃದಯದ ಬಲ ಹೃತ್ಕರ್ಣವನ್ನು ಬಂದುಸೇರುತ್ತದೆ. ಅನಂತರ ಈ ರಕ್ತ ಬಲಹೃತ್ಕುಕ್ಷಿಯ ರೇಚನದಿಂದ ಫುಪ್ಫುಸಗಳಿಗೆ ಚಲಿಸುವುದು. ಫುಪ್ಫುಸಗಳಲ್ಲಿ ಈ ರಕ್ತ ಕಾರ್ಬನ್ ಡೈ ಆಕ್ಸೈಡನ್ನು ಕಳೆದುಕೊಂಡು ಬದಲಾಗಿ ಆಮ್ಲಜನಕವನ್ನು ಹೀರಿಕೊಳ್ಳುತ್ತದೆ. ಇದು ಪುನಃ ಹೃದಯದ ಎಡಭಾಗವನ್ನು ಹೊಕ್ಕು ಪುನಃ ರೇಚಿಸಲ್ಪಟ್ಟು ಮಹಾಪಧಮನಿಯ ಮೂಲಕ ಮುಂದಿನ ಪ್ರದಕ್ಷಿಣೆಯನ್ನು ಪ್ರಾರಂಭಿಸುತ್ತದೆ. ಒಟ್ಟಿನಲ್ಲಿ ಪರಿಚಲಿಸುತ್ತಿರುವ ರಕ್ತದಲ್ಲಿ ಸದಾಕಾಲವೂ ಆಮ್ಲಜನಕ ಕಾರ್ಬನ್ ಡೈ ಆಕ್ಸೈಡ್, ಆಹಾರಾಂಶಗಳು, ವಿಸರ್ಜನವಾಗಬೇಕಾದ ಅಂಶಗಳು, ಹಾರ್ಮೋನುಗಳು ಮತ್ತಿತರ ಉಪಯುಕ್ತ ವಸ್ತುಗಳು ಎಲ್ಲವೂ ಇದ್ದೇ ಇರುತ್ತವೆ. ಆದರೆ, ನಿರ್ದಿಷ್ಟ ಸ್ಥಳಗಳಲ್ಲಿ ಇವು ದೇಹಕೋಶಗಳೊಳಗೆ ಪ್ರವೇಶಿಸಿ ದೇಹಕೋಶಗಳಿಂದ ದತ್ತವಾಗಿ, ಫುಪ್ಫುಸಗಳಲ್ಲಿ ಹೀರಿಕೆ – ಬಿಡುಗಡೆಗಳಾಗಿ, ಮೂತ್ರಜನಕಾಂಗಗಳಲ್ಲಿ ವಿಸರ್ಜಿತವಾಗಿ ಇವುಗಳ ಪ್ರಮಾಣ ಹೆಚ್ಚು ಕಡಿಮೆ ಆಗುತ್ತಲೆ ಇರುತ್ತದೆ. ಈ ವಿನಿಮಯ ಕಾರ್ಯ ರಕ್ತದ ಒಂದು ಪ್ರಮುಖ ಕ್ರಿಯೆ. ಇದು ಜರುಗಲೆಂದೇ ರಕ್ತ ಪರಿಚಲಿಸುತ್ತಲೆ ಇರಬೇಕಾದ ಅಗತ್ಯವಿದೆ. ರಕ್ತಪರಿಚಲನೆಯಿಂದ ದೇಹದ ವಿವಿಧ ಭಾಗಗಳ ಸ್ಥಿತಿಯಲ್ಲಿ ಏರುಪೇರುಗಳು ಸರಿತೂಗಲ್ಪಟ್ಟು ದೇಹ ಸಹಜಸ್ಥಿತಿಗೆ ಮರಳುವುದು ಸಾಧ್ಯ. ದೇಹದ ಉಷ್ಣತೆಯ ಸಮತೋಲ, ದೇಹದ ಸಹಜಪ್ರತ್ಯಾಮ್ಲೀಯತೆಯ (ನಾರ್ಮಲ್ ಆಲ್ಕಲೈನ್ ಕಂಡೀಷನ್ – ಸಾಮಾನ್ಯವಾಗಿ ಇದು pH 7.4 ರಷ್ಟು ಇರುತ್ತದೆ.) ಸಮತೋಲ ಹಾಗು ದೇಹಕೋಶಗಳು, ಕೋಶಾವರಣದ್ರವ ಮತ್ತು ರಕ್ತ ಈ ಮೂರರಲ್ಲಿ ನೀರಿನ ಅಂಶದ ಸಮತೋಲನ ಇವು ಮುಖ್ಯವಾಗಿ ರಕ್ತಪರಿಚಲನೆಯಿಂದಲೇ ಸಾಧಿಲಸುತ್ತವೆ.

ವಿವಿಧ ಪ್ರಾಣಿಗಳಲ್ಲಿ ರಕ್ತದಘನಗಾತ್ರ ಹಾಗೂ ದೇಹದ ಘನಗಾತ್ರವನ್ನು ಪರಸ್ಪರ ಹೋಲಿಸಿದಾಗ ರಕ್ತದ ಪ್ರಮಾಣ ಕಡಿಮೆ ಆಗಿದ್ದರೆ ಅದು ಪ್ರಾಣಿದೇಹದಲ್ಲಿ ವೇಗವಾಗಿ ಪರಿಚಲಿಸುತ್ತಿರಬೇಕೆಂಬುದು ವೇದ್ಯ. ರಕ್ತದ ಘನಗಾತ್ರ ಹೆಚ್ಚಾಗಿಯೇ ಇದ್ದರೆ ಅದು ನಿಧಾನವಾಗಿಯೇ ಪರಿಚಲಿಸುತ್ತ ದೇಹದ ಎಲ್ಲೆಡೆಗಳನ್ನೂ ತಲುಪಲು ಸಾಧ್ಯ. ಹೀಗಾಗಿ ಕೀಟಗಳಲ್ಲಿ (ದೇಹದ 25% ರಕ್ತ) ರಕ್ತದ ಒಂದು ಪ್ರದಕ್ಷಿಣೆಗೆ 30 – 35 ಮಿನಿಟುಗಳೇ ಆಗುತ್ತವೆ. ಆದರೆ ದೇಹತೂಕಕ್ಕೆ ಹೋಲಿಸಿದರೆ ರಕ್ತದ ಪ್ರಮಾಣ ಕಡಿಮೆಯೇ ಆಗಿರುವ (ಸುಮಾರು 8%) ಮನುಷ್ಯರಲ್ಲಿ ಪರಿಚಲನೆಯ ಕಾಲ 20 – 25 ಸೆಕೆಂಡುಗಳಷ್ಟಿರುತ್ತದೆ. ನಾಯಿಗಳಲ್ಲಿ ಪರಿಚಲನೆಯ ಕಾಲ ಸುಮಾರು 16 ಸೆಕೆಂಡುಗಳಷ್ಟೂ, ಮೊಲಗಳಲ್ಲಿ ಕೇವಲ 7.5 ಸೆಕೆಂಡುಗಳಷ್ಟೂ ಎಂಬುದು ತಿಳಿದಿದೆ.

ರಕ್ತಪರಿಚಲನೆಗೆ ಕಾರಣವಾದ ಹೃದಯದ ಮಿಡಿತದ ವೇಗ ಸಾಮಾನ್ಯವಾಗಿ ಪ್ರಾಣಿಯ ಚಟುವಟಿಕೆಯನ್ನು ಅನುಸರಿಸಿದೆ. ಸಾಮಾನ್ಯ ಚಟುವಟಿಕೆಯ ಮನುಷ್ಯರಲ್ಲಿ ಹೃದಯ ಮಿನಿಟಿಗೆ ಸುಮಾರು 70 ಬಾರಿ ಮಿಡಿಯುವುದಾದರೂ ಹೆಚ್ಚಿನ ಚಟುವಟಿಕೆಯದೇ ಮಕ್ಕಳಲ್ಲಿ 80 – 90 ಬಾರಿಗೂ ಮೀರಿದ ಮಿಡಿತದ ವೇಗ ಇರುತ್ತದೆ. ಅಂತೆಯೇ ದೇಹಕ್ರಿಯೆಗಳು ತ್ವರಿತವಾಗಿ ಜರುಗುತ್ತಿರುವ ಕಾಲಗಳಲ್ಲಿ (ಉದಾರಹರಣೆಗೆ ವ್ಯಾಯಾಮ, ಜ್ವರ) ಮಿಡಿತದ ವೇಗ ಹೆಚ್ಚಾಗಿರುತ್ತದೆ. ಬದಲು ತೀರ ಜಡವ್ಯಕ್ತಿಗಳಲ್ಲಿ ಹೃದಯದ ಮಿಡಿತದ ವೇಗ 60ಕ್ಕೂ ಕಡಿಮೆ ಇರಬಹುದು. ಅಂತೆಯೇ ದೀರ್ಘಕಾಲಿಕ ಅಂಗಸಾಧನೆಯಲ್ಲಿ ನಿರತರಾದ ಮಲ್ಲರಲ್ಲಿ ಅವರ ವಿಶ್ರಾಂತಿ ಅವಧಿ ಸಾಪೇಕ್ಷವಾಗಿ ಜಡಾವಧಿಯಾಗಿರುವುದರಿಂದ ಅವರ ಹೃದಯಮಿಡಿತದ ವೇಗವೂ ಸಾಮಾನ್ಯವಾಗಿ 60 ಕ್ಕಿಂತ ಕಡಿಮೆ. ಅತಿ ದೊಡ್ಡ, ಆದರೆ ಮಂದ ಚಟುವಟಿಕೆಯ ತಿಮಿಂಗಿಲದಲ್ಲಿ ಹೃದಯ ಮಿನಿಟಿಗೆ ಕೇವಲ 7 ಬಾರಿ ಮಿಡಿದರೆ. ಆನೆಗಳಲ್ಲಿ ಇದು 46. ಚಟುವಟಿಕೆಯೇ ಪ್ರಧಾನವಾಗಿರುವ ಬೆಕ್ಕಿನಲ್ಲಿ ಹೃದಯಮಿಡಿತದ ವೇಗ ನಿಮಿಷಕ್ಕೆ 240, ಅತ್ಯಂತ ಚಟುವಟಿಕೆಯ ಝೇಂಕಾರ ಪಕ್ಷಿಯಲ್ಲಿ (ಹಮ್ಮಿಂಗ್ ಬರ್ಡ್) ಹೃದಯ ಮಿನಿಟಿಗೆ 1000ಕ್ಕೂ ಮೇಲ್ಪಟ್ಟು ಮಿಡಿಯುತ್ತದೆ.

ಹೀಮೋಗ್ಲಾಬಿನ್: ರಕ್ತದ ಕೆಂಪುಕಣಗಳ ಬಣ್ಣಕ್ಕೂ ಒಟ್ಟು ರಕ್ತ ಕೆಂಪಾಗಿರುವುದಕ್ಕೂ ಕಾರಣ ಹೀಮೋಗ್ಲಾಬಿನ್ ಎಂಬ ಕೆಂಪು ಬಣ್ಣದಪ್ರೋಟೀನ್, ರಕ್ತ ಸಮರ್ಥವಾಗಿ ಆಮ್ಲಜನಕ ಹಾಗು ಕಾರ್ಬನ್ ಡೈ ಆಕ್ಸೈಡ್‌ಗಳನ್ನುನಿರ್ದಿಷ್ಟ ಸ್ಥಳಗಳಿಗೆ ಹೊತ್ತು ಬಿಡುಗಡೆ ಮಾಡುವುದು ಹೀಮೋಗ್ಲಾಬಿನ್ನಿನ ಸ್ವಭಾವದಿಂದಲೇ. 100 ಮಿಲಿಗಳಷ್ಟು ರಕ್ತದಲ್ಲಿ ಅಂದರೆ, ಸು. 45 ಮೀ. ಕಣಗಳಲ್ಲಿ ಸು. 14 ಗ್ರಾ.ಗಳಷ್ಟು ಹೀಮೋಗ್ಲಾಬಿನ್ ಇರುತ್ತದೆ. ಇಷ್ಟೂ ಕೆಂಪುರಕ್ತ ಕಣಗಳ ಒಳಗೆ ಇರುತ್ತದೆ. 100 ಮಿಲಿ.ಗಳಷ್ಟು ರಕ್ತದ್ರವದಲ್ಲಿರುವ ಒಟ್ಟು ಪ್ರೋಟೀನುಗಳು ಸುಮಾರು 8 ಗ್ರಾ ಮಾತ್ರ. ರಕ್ತದ್ರವದಲ್ಲಿ ಇದಕ್ಕಿಂತ ಹೆಚ್ಚು ಪ್ರೋಟೀನ್ ಇರುವುದು ಸಾಧ್ಯವಿಲ್ಲ. ಹಾಗೆ ಹೆಚ್ಚಾಗಿದ್ದರೆ ರಕ್ತದ ಒತ್ತಡ ಹೆಚ್ಚು ಆಗುತ್ತದೆ. ಅಲ್ಲದೆ ನೀರು ಹಾಗೂ ಅದರಲ್ಲಿ ಲೀನವಾಗಿರುವ ಪದಾರ್ಥಗಳು ಅಂಗಾಂಶದ್ರವದೊಡನೆ (ಟಿಷ್ಯೂ ಫ್ಲೂಯಿಡ್) ವಿನಿಮಯವಾಗುವುದರಲ್ಲಿ ಏರುಪೇರು ಉಂಟಾಗುತ್ತದೆ. ಹೀಗಾಗದಿರಲೆಂದೇ ಕಶೇರುಕಗಳಲ್ಲಿ ಹೀಮೋಗ್ಲಾಬಿನ್ ಕೆಂಪುಕಣಗಳ ಒಳಗೇ ಅರ್ಥಾತ್ ವಿನಿಮಯ ಪ್ರಭಾವಬಾಹಿರವಾಗಿ ಇರುತ್ತದೆ. ಅಕಶೇರುಕಗಳಲ್ಲಿ ಹೀಮೋಗ್ಲಾಬಿನ್ ರಕ್ತದ್ರವದಲ್ಲಿ ಇರುವುದು ನಿಜ. ಆದರೆ ವಿನಿಮಯಕ್ಕೆ ಧಕ್ಕೆ ಆಗದಿರುವಷ್ಟು ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಈ ಹಿಂದೆ ತಿಳಿಸಿರುವಂತೆ ಕೆಲವು ಹುಳುಗಳಲ್ಲಿ ರಕ್ತ ತಿಳಿಹಸುರು ಬಣ್ಣ ಇರುವುದಕ್ಕೆ ಕಾರಣ ಅವುಗಳ ರಕ್ತದ್ರವದಲ್ಲಿ ಹೀಮೋಗ್ಲಾಬಿನ್ನಿನ ಬದಲು ಕ್ಲೋರೋಕ್ರುಯೋರಿನ್ ಎಂಬ ಹಸರು ಬಣ್ಣದ ಪ್ರೋಟೀನ್ ಇರುವುದು. ಕ್ಲೋರೋಕ್ರುಯೋರಿನ್ ಅಣುವಿನಲ್ಲಿ ಹೀಮೋಗ್ಲಾಬಿನ್ನಿನಲ್ಲಿಯಂತೆಯೇ ಕಿಂಚಿತ್ತಾಗಿ ಕಬ್ಬಿಣ ಸಂಯೋಜಿತವಾಗಿರುತ್ತದೆ. ಕೆಲವು ಚಿಪ್ಪುಪ್ರಾಣಿಗಳು ಮತ್ತು ನಳ್ಳಿಜಾತಿಯ ಪ್ರಾಣಿಗಳ ರಕ್ತ ತಿಳಿನೀರಿನ ಬಣ್ಣಕ್ಕೆ ಇರುವುದರ ಕಾರಣ ಅವುಗಳ ರಕ್ತದ್ರವದಲ್ಲಿ ಹೀಮೋಸೈಯನಿನ್ ಎಂಬ (ಕಬ್ಬಿಣದ ಬದಲು ಕಿಂಚಿತ್ತಾಗಿ ತಾಮ್ರ ಸಂಯೋಗಿ ಆದ) ಪ್ರೋಟೀನು ಇರುವುದು. (ನೋಡಿ: ಉಸಿರಾಟ)

ರಕ್ತದ ರಚಿತವಸ್ತುಗಳು (ಫಾರ್ಮಡ್ ಎಲಿಮೆಂಟ್ಸ್): ರಕ್ತದ ಕಣಿತ್ರಗಳು (ಕಿರುತಟ್ಟೆಗಳು; ಬ್ಲಡ್ ಪ್ಲೇಟ್‌ಲೆಟ್ಸ್): ಒಂದು ಘನ ಮಿಮೀ. ರಕ್ತದಲ್ಲಿ ಸುಮಾರು 8 ಲಕ್ಷದಷ್ಟು ಇರುವ ಇವು ರಕ್ತಕಣಗಳಲ್ಲೆಲ್ಲ ಅತ್ಯಂತ ಸಣ್ಣವು. ಸು. 2ಮೈ (ಮೈ. = 0.001 ಮಿಮೀ) ವ್ಯಾಸವಿರುವ ಇವುಗಳಲ್ಲಿ ಅಣುಕೇಂದ್ರ ಇರುವುದಿಲ್ಲ. ಬಹುಶಃ ಇವು ಕೆಲವು ವಿಶಿಷ್ಟ ರಾಸಾಯನಿಕಗಳ ಉಗ್ರಾಣಗಳಾಗಿದ್ದು ಛಿದ್ರಣದಿಂದ ಆ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತವೆ. ಮುಖ್ಯ ರಾಸಾಯನಿಕಗಳೆಂದರೆ ಥ್ರಾಂಬೊಪ್ಲಾಸ್ಟಿನ್, ಹಿಸ್ಟಮಿನ್, ಸಿರೋಟೋನಿನ್ ಮತ್ತು ಅಡ್ರೀನಲಿನ್. ರಕ್ತ ಪರಿಚಲಿಸುತ್ತಿರುವಾಗ ಕಣಿತ್ರಗಳು ಬಿಡಿಬಿಡಿಯಾಗಿಯೇ ಇರುವುದಾದರೂ ರಕ್ತದಿಂದ ತೇವವಾಗುವ ಸ್ಥಳದಲ್ಲಿ ಇವು ತಕ್ಷಣ ಒಂದಕ್ಕೊಂದು ಅಂಟಿಕೊಂಡು ಮೇಲೆ ದೊಡ್ಡ ಗುಂಪುಗಳಾಗುತ್ತವೆ. ಶೀಘ್ರದಲ್ಲಿ ಇವು ಛಿದ್ರಿಸಿ ಮೇಲೆ ತಿಳಿಸಿದ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತವೆ. ಥ್ರಾಂಬೋಪ್ಲಾಸ್ಟಿನ್ ಮತ್ತು ಸಿರೋಟೋನಿನ್‌ಗಳು ರಕ್ತಸ್ರಾವಸ್ತಂಭನಕ್ಕೆ ಕಾರಣವಾಗಿರುವ ರಾಸಾಯನಿಕಗಳು. ಆದ್ದರಿಂದ ರಕ್ತದಲ್ಲಿ ಕಣಿತ್ರಗಳ ಸಂಖ್ಯೆ ಕಾರಣಾಂತರಂಗಳಿಂದ ಕಡಿಮೆ ಅದಾಗ ರಕ್ತಸ್ರಾವವಾಗುತ್ತದೆ. ಮುಖ್ಯವಾಗಿ ಚರ್ಮದ ಅಡಿಯಲ್ಲಿ ಆಗುವ ಈ ರಕ್ತಸ್ರಾವಕ್ಕೆ ಪರ್‌ಪ್ಯೂರ್ ಎಂದು ಹೆಸರು. ಕಣಿತ್ರಗಳು ರಕ್ತದಲ್ಲಿ ಪರಿಚಲಿಸುತ್ತಿರುವಾಗಲೂ ನಿರಂತರವಾಗಿ ನಾಶವಾಗುತ್ತಲೇ ಇರುತ್ತವೆ. ಇವುಗಳ ಸರಾಸರಿ ಜೀವಿತಾವಧಿ 4 – 6 ದಿವಸಗಳು ಮಾತ್ರ. ನಾಶವಾಗುತ್ತಲೇ ಇರುವ ಕಣಿತ್ರಗಳ ಬದಲು ಸುಮಾರು ಅಷ್ಟೇ ಸಂಖ್ಯೆಯಲ್ಲಿ ನಿರಂತರವಾಗಿ ಹೊಸ ಕಣಿತ್ರಗಳು ಉದ್ಭವಿಸುವುದರಿಂದ ರಕ್ತದಲ್ಲಿ ಅವುಗಳ ಸಂಖ್ಯಾಬದಲಾವಣೆ ಅಷ್ಟಾಗಿ ಕಂಡುಬರುವುದಿಲ್ಲ. ಮೂಳೆಮಜ್ಜೆ ಹಾಗೂ ಗುಲ್ಮದಲ್ಲಿ ಇರುವ ಬಹುಕೋಶ ಕೇಂದ್ರಗಳಿರುವ ಮತ್ತು ಅಮೀಬದಂಥ, ಚಟುವಟಿಕೆ ತೋರುವ ದೈತ್ಯಕೋಶಗಳ (ಜಯಂಟ್ ಸೆಲ್ಸ್) ಚಾಚುಗಳ ಛಿದ್ರತೆಯಿಂದ ಬಿಡುಗಡೆಯಾದ ಚೂರುಗಳಾಗಿ ಕಣಿತ್ರಗಳು ಉದ್ಭವಿಸುತ್ತವೆ.

ರಕ್ತದ ವರ್ಣರಹಿತ ಕೋಶಗಳು ಅಥವಾ ರಕ್ತದ ಶ್ವೇತಕಣಗಳು (ಡಬ್ಲ್ಯೂಬಿಸಿ) : ನಿಜವಾಗಿ ಇವು ಬೆಳ್ಳಗೆ ಇರುವುದೇ ಇಲ್ಲ. ಅದರೂ ಸೂಕ್ಷ್ಮದರ್ಶಕದ ಮೂಲಕ ರಕ್ತಕಣಗಳನ್ನು ಗುರುತಿಸಿದಾಗಿನಿಂದ (ಸುಮಾರು 400 ವರ್ಷಗಳು). ಇವು ವರ್ಣರಹಿತವಾಗಿರುವುದು ತಿಳಿದಿದ್ದರೂ ಅಂದಿನಿಂದ ಇಂದಿನತನಕವೂ ಇವನ್ನು ಬಿಳಿರಕ್ತಕಣಗಳೆಂದು ಕರೆಯುವುದು ಒಂದು ಅಪ್ರಯೋಗವಾಗೇ (ಮಿಸ್‌ನೋಮರ್) ಉಳಿದುಬಂದಿದೆ.

ವರ್ಣರಹಿತ ಕಣಗಳು ಕೋಶಕೇಂದ್ರವಿರುವ ನಿಜವಾದರಕ್ತಕೋಶಗಳು, ಮತ್ತು ಬೇರೆ ದೈಹಿಕ ಜೀವಂತ ಕೋಶಗಳಲ್ಲಿಯಂತೆಯೇ ಚಯಾಪಚಯ ಕ್ರಿಯೆ ಚುರುಕಾಗಿ ಜರುಗುತ್ತದೆ. ಒಂದು ಘನ ಮಿಮೀ ರಕ್ತದಲ್ಲಿ 6000 ದಿಂದ 10,000 ವರ್ಣರಹಿತ ರಕ್ತಕೋಶಗಳಿರುತ್ತವೆ. ಬೇರೆ ಬೇರೆ ದಿನಗಳಲ್ಲಿ, ದಿನದ ವಿವಿಧ ವೇಳೆಗಳಲ್ಲಿ ಅವುಗಳ ಸಂಖ್ಯೆಯ ಈ ಮಿತಿಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ.

ವರ್ಣರಹಿತ ರಕ್ತಕೋಶಗಳು ದೇಹದಲ್ಲಿ ಸೂಕ್ಷ್ಮಕ್ರಿಮಿಗಳೊಡನೆ ಹೋರಾಡಿ ಅವನ್ನು ನಾಶಮಾಡಿ ಅವುಗಳ ಸೋಂಕಿನ ವಿರುದ್ಧ ದೇಹವನ್ನು ಸಂರಕ್ಷಿಸುತ್ತವೆ. ಇದೇ ರಕ್ತಕಣಗಳ ಮುಖ್ಯಕ್ರಿಯೆ ಮತ್ತು ಅದೇ ಕಾರಣದಿಂದ ಇವುಗಳ ಜೀವಿತಾವಧಿ ಕೆಲವೇ ಗಂಟೆಗಳಿಂದ 3 – 4 ದಿವಸಗಳಿರಬಹುದು. ಹೋರಾಟದಲ್ಲಿ ಈ ಕೋಶಗಳೇ ನಾಶಹೊಂದುವುದೂ ಇದೆ. ನಾಶವಾದ ಕೋಶಗಳು, ಸತ್ತಕ್ರಿಮಿಗಳು, ನಶಿಸಿದ ಸ್ಥಳೀಯ ದೇಹಕೋಶಗಳು, ಇವೆಲ್ಲವೂ ಸೇರಿ ಕೀವು (ಪಸ್) ಎಂದಾಗುತ್ತದೆ. ನಾಶವಾಗುವ ವರ್ಣರಹಿತ ರಕ್ತಕೋಶಗಳ ಬದಲು ಹೊಸ ಕೋಶಗಳು ಹೆಚ್ಚು ಸಂಖ್ಯೆಯಲ್ಲಿಯೇ ಉತ್ಪತ್ತಿ ಆಗುತ್ತಿದ್ದು ಇಂಥ ಕೀವುಯುಕ್ತ ಸೋಂಕುಗಳಿಂದ ವ್ಯಕ್ತಿ ಬಾಧಿತವಾಗಿರುವಾಗ ವರ್ಣರಹಿತ ರಕ್ತಕೋಶಗಳ ಸಂಖ್ಯೆ 15 – 20 ಸಾವಿರದವರೆಗೂ ಏರುವುದು ವಿಶಿಷ್ಟ ಲಕ್ಷಣ. ಆದ್ದರಿಂದ ಕೋಶ್ ಸಂಖ್ಯಾವೃದ್ಧಿಯಾಗಿರುವುದು ಕಂಡುಬಂದರೆ ಅದು ದೇಹದಲ್ಲಿ ಎಲ್ಲೋ ಬಹುಶಃ ಅವ್ಯಕ್ತವಾಗಿಯೇ ಇಂಥ ಪ್ರಸಂಗವಿದೆ ಎಂಬ ತೀರ್ಮಾನಕ್ಕೆ ಬರುವುದಿದೆ. ಈ ಸ್ಥಿತಿಗೆ ವ್ಯತಿರಿಕ್ತವಾಗಿ ವರ್ಣರಹಿತರಕ್ತಕೋಶಗಳ ಸಂಖ್ಯೆ ಕಡಿಮೆ ಆಗುವುದೂ (3 – 4 ಸಾವಿರ) ಕಂಡುಬರುವುದುಂಟು. ಇದು ಆಕ್ರಮಣಕಾರಿ ಕ್ರಿಮಿಗಳ ಮೇಲುಗೈ ಸೂಚನೆ, ಕ್ರಿಮಿಕೃತ ರೋಗದ ತೀವ್ರಾವಸ್ಥೆಯ ಹಾಗೂ ವ್ಯಕ್ತಿ ರೋಗಕ್ಕೆಬಲಿಯಾಗುವ ಸೂಚನೆ. ಕ್ರಿಮಿಗಳನ್ನು ಹೀಗೆ ಕಬಳಿಸಿ ನಾಶಮಾಡುವ ರಕ್ತದ ವರ್ಣರಹಿತಕೋಶಗಳನ್ನು ಕಬಳಿಕ ಕೋಶಗಳು (ಫೇಗೋಸೈಟ್ಸ್) ಎಂದೇ ಕರೆಯಲಾಗಿದೆ. ಕಬಳಿಕಕೋಶಗಳಲ್ಲಿ 2 ವಿಧ: ದೊಡ್ಡ ಕಬಳಿಕಕೋಶಗಳು (ಮ್ಯಾಕ್ರೋಫೆಜಸ್) ಮತ್ತು ಸಣ್ಣ ಕಬಳಿಕಕೋಶಗಳು (ಮೈಕ್ರೋಫೇಜಸ್). ಮ್ಯಾಕ್ರೋಫೇಜಿಗೆ ಮಾನೋಸೈಟ್ ಎಂಬ ಹೆಸರೂ ಇದೆ. ಮೈಕ್ರೋಫೇಜಿಗೆ ಪಾಲಿಮಾರ್ಫೋನ್ಯೂಕ್ಲಿಯರ್ ಕೋಶ (ರೂಢಿಯಾಗಿ ಪಾಲಿಮರ್ಫ್) ಎಂದೂ ಹೆಸರಿದೆ. ಪಾಲಿಮಾರ್ಫ್‌ಗಳಿಗೆ ಮಣಿಯದ ಕ್ರಿಮಿಗಳನ್ನು ಮ್ಯಾಕ್ರೋಫೇಜಗಳು ಕಬಳಿಸುತ್ತವೆ. ಮ್ಯಾಕ್ರೋಫೇಜಗಳು ಸೋಂಕಿನ ವಿಷಾಣುಗಳಷ್ಟನ್ನೇ ಅಲ್ಲದೆ ರಕ್ತಪರಿಚಲನೆಯಲ್ಲಿರುವ ನಿರ್ಜೀವ ಕಣಿತ್ರಗಳನ್ನೂ (ಪಾರ್ಟಿಕ್ಯುಲೇಟೆಡ್ ಮ್ಯಾಟರ್) ಕಬಳಿಸಿ ರಕ್ತಶುದ್ಧಿ ಮಾಡುತ್ತವೆ. ನಿರ್ಜೀವಕಣಗಳು ವಿವಿಧ ದೇಹಕೋಶಗಳ ಅವನತಿಯಿಂದ ಉದ್ಭವಿಸಿದ್ದುವೇ ಆಗಿರಬಹುದು. ರಕ್ತದ ಕೆಂಪುಕಣಗಳ ಅವನತಿಯಿಂದ ಹೊರಬಂದ ಹೀಮೋಗ್ಲಾಬಿನ್ ಎಂಬ ಪ್ರೋಟೀನ್ ವಸ್ತುವಿನ ಕಣಿತ್ರಗಳೂ ಹೀಗೆ ಕಬಳಿಕೆಗೆ ಒಳಗಾಗುತ್ತವೆ.

ಬಿಳಿರಕ್ತಕಣಗಳು

ರಕ್ತದ ವರ್ಣರಹಿತ ಕೋಶಗಳಲ್ಲಿ ಸಾಮಾನ್ಯವಾಗಿ 5 ಬಗೆಗಳನ್ನು ಗುರುತಿಸಲಾಗಿದೆ. ಅತಿತೆಳು ರಕ್ತಲೇಪನವನ್ನು ಗಾಜಿನ ಫಲಕದ ಮೇಲೆ ಪಡೆದು, ಒಣಗಿಸಿ ಅನಂತರ ವಿಶಿಷ್ಟವರ್ಣ ವಸ್ತುಗಳಿಂದ ರಕ್ತಲೇಪನವನ್ನು ಸಂಸ್ಕರಿಸಿ ಒಣಗಿಸಿ ಸೂಕ್ಷ್ಮದರ್ಶಕದ ಮೂಲಕ ವೀಕ್ಷಿಸಲಾಗುತ್ತದೆ. ಹಾಗೆ ವೀಕ್ಷಿಸಿದಾಗ ಎಲ್ಲೆಲ್ಲೂ ಕಂದುಛಾಯೆಯ ಕೆಂಪುರಕ್ತಕಣಗಳೂ ಅವುಗಳ ನಡುವೆ ಅಲ್ಲಲ್ಲಿ ಕೆಂಪು ಮತ್ತು ನೀಲಿವರ್ಣಗಳಿಂದ ರಂಜಿತವಾದ ರಕ್ತಕೋಶಗಳೂ ಹಾಗೂ ಕಣಿತ್ರಗಳ ಗುಂಪುಗಳೂ ಕಂಡುಬರುತ್ತವೆ. ಹೀಗೆ ಕಾಣಿಸುವ ಕೋಶಗಳೇ ರಕ್ತದ ವರ್ಣರಹಿತ ಕೋಶಗಳು. ಇವುಗಳ ಕೋಶಕೇಂದ್ರವೂ ಕೋಶದ್ರವ್ಯದಲ್ಲಿರುವ (ಸೈಟೋಪ್ಲಾಸ್ಮ್) ರವೆಯಂಥ ಘನಪದಾರ್ಥಗಳೂ ವರ್ಣವಸ್ತುಗಳಿಂದ ರಂಜಿತವಾಗಿ ನೀಲಿ ಹಾಗೂ ಕೆಂಪುಬಣ್ಣವುಳ್ಳ ರಚನೆಗಳಾಗಿ ಕಂಡುಬರುವುದರಿಂದ ವರ್ಣರಹಿತ ರಕ್ತಗಳನ್ನು ಗುರುತಿಸಬಹುದು ಹಾಗೂ ವಿಂಗಡಿಸಬಹುದು.

ವರ್ಣರಹಿತ ರಕ್ತಕಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಬಹುದಾದವು ಎಂದರೆ ಪಾಲಿಮಾರ್ಫ್‌ಗಳು. ಇವು ಕೆಂಪುರಕ್ತಕಣಗಳ ಸು. 1.5 ರಷ್ಟು ವ್ಯಾಸ ಹೊಂದಿವೆ (ಅಂದರೆ 9–11 ಮೈ.). ಇವುಗಳ ಕೋಶದ್ರವದಲ್ಲಿ ಕೆಂಪು ನೀಲಿ ಬಣ್ಣದ ನುಚ್ಚಿನಂಥ

ದ್ರವ್ಯ ಹೇರಳವಾಗಿ ಇರುತ್ತದೆ. ಕೋಶಕೇಂದ್ರ ದೇಹದ ಕೋಶಗಳಲ್ಲಿ ಸಾಮಾನ್ಯವಾಗಿ ಇರುವಂತೆ ದುಂಡುಗಿರುವುದಿಲ್ಲ. ಬದಲು ವಿವಿಧ ರೂಪವಾಗಿ ಮತ್ತು 1 – 5 ತುಕ್ಕುಡಗಳು ಒಂದಕ್ಕೊಂದು ಜಂಟಿಸಿದಂತೆ ಇರುತ್ತದೆ. ಕೋಶಕೇಂದ್ರದ ಈ ವೈವಿಧ್ಯವೇ ಈ ರಕ್ತಕೋಶಗಳಿಗೆ ಪಾಲಿಮಾರ್ಫೊ ನ್ಯೂಕ್ಲಿಯರ್ ಸೆಲ್ಸ್ ಎಂದು ಹೆಸರಿರುವುದಕ್ಕೆ ಕಾರಣ. 1 ಘನ ಮಿಮೀ. ರಕ್ತದಲ್ಲಿ 5000 – 7000, ಒಟ್ಟು ವರ್ಣರಹಿತ ಕಣಗಳಲ್ಲಿ 60 – 70% ರಷ್ಟು ಪಾಲಿಮಾರ್ಫ್‌ಗಳಿರುತ್ತವೆ. ಮೂರು ತುಕ್ಕುಡಗಳ ಕೋಶಕೇಂದ್ರವಿರುವ ಪಾಲಿಮಾರ್ಫ್ ನಡುವಯಸ್ಸಿನ ಕೋಶ; 5 ತುಕ್ಕಡಗಳದ್ದು ವೃದ್ಧಕೋಶ; 1 – 2 ತುಕ್ಕುಡಗಳುಳ್ಳದ್ದು ಎಳೆಯ ಪಾಲಿಮಾರ್ಫ್. ಸಾಮಾನ್ಯವಾಗಿ 3 – 4 ತುಕ್ಕುಡಗಳ ಕೋಶಕೇಂದ್ರವಿರುವ ಕೋಶಗಳೆ ಹೆಚ್ಚಾಗಿ (ಒಟ್ಟು ಪಾಲಿಮಾರ್ಫ್‌ಗಳಲ್ಲಿ ಸುಮಾರು 70%) ಇರುತ್ತವೆ. ಐದು ತುಕ್ಕುಡಗಳುಳ್ಳ ಕೋಶಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಾಗ ಪಾಲಿಮಾರ್ಫ್‌ಗಳ ಉತ್ಪತ್ತಿ ಕಡಿಮೆ ಆಗಿದೆಯೆಂದೂ 1 – 2 ತುಕ್ಕುಡಗಳ ಕೋಶಕೇಂದ್ರವಿರುವ ಪಾಲಿಮಾರ್ಫ್‌ಗಳೇ ಹೆಚ್ಚಾಗಿದ್ದಾಗ ಅವುಗಳ ಸಂಖ್ಯಾಭಿವೃದ್ಧಿ ತೀವ್ರಗತಿಯಿಂದ ಆಗುತ್ತಿದೆ ಎಂದೂ ಯಾವ ಸಂದರ್ಭಗಳಲ್ಲಿ ಹೀಗಾಗುವುದೆಂಬುದನ್ನೂ ವಿಶಿಷ್ಟವಾಗಿ ಅರ್ಥೈಸಿದೆ. ಪಾಲಿಮಾರ್ಫ್‌ಗ'ಳಲ್ಲಿಯೇ ಇಂಥ ವಿಂಗಡಣೆ ಮಾಡಿ ಅರಿಯುವ ವಿಧಾನಕ್ಕೆ ಅರ್ನೆತ್ ಕೌಂಟ್ ಎಂದು ಹೆಸರು.

ಸ್ವಲ್ಪ ಹೆಚ್ಚು ಕಡಿಮೆ ಪಾಲಿಮಾರ್ಫಿನದೇ ವ್ಯಾಸದ (ಕೆಂಪುಕಣದ 1 1/2 ಯಷ್ಟು, 10 – 11ಮೈ.) ಇನ್ನೆರಡು ಬಗೆಯ ವರ್ಣರಹಿತ ರಕ್ತಕಣಗಳಿವೆ. ಇಯೋಸಿನೋಫಿಲ್ ಎಂಬ ಬಗೆಯಲ್ಲಿ ಕೋಶಕೇಂದ್ರ 2 – 3 ತುಕ್ಕುಡಗಳಿಂದ ಮಾತ್ರ ಆಗಿರುತ್ತದೆ. ಕೋಶದ್ರವದ ನುಚ್ಚುಕಣಗಳು ವರ್ಣಸಂಸ್ಕಾರವಾದ ಬಳಿಕ ಅಚ್ಚ ಕೆಂಪಗೆ ಕಾಣುತ್ತವೆ. ಒಟ್ಟು ವರ್ಣರಹಿತ ಕಣಗಳಲ್ಲಿ ಇಯೋಸಿನೋಫಿಲ್‌ಗಳು 2 – 4% ನಷ್ಟು ಒಂದು ಘನ ಮಿಮೀ ರಕ್ತದಲ್ಲಿ 150 – 250 ಗಳಷ್ಟು ಇರುತ್ತವೆ. ದೇಹದಲ್ಲಿ ಒಗ್ಗದಿಕೆಯ (ಅಲರ್ಜಿ) ಪ್ರತಿಕ್ರಿಯೆ ಉಂಟಾದಾಗ, ಗೂರಲು, ಎಕ್ಸೀಮ ಮುಂತಾದ ಅಸ್ವಸ್ಥಸ್ಥಿತಿಗಳು ಉಂಟಾದಾಗ ಮತ್ತು ಕರುಳಿನಲ್ಲಿ ಹುಳುಗಳು ಇದ್ದಾಗ ಇಯೋಸಿನೋಫಿಲ್‌ಗಳ ಸಂಖ್ಯೆ ಹೆಚ್ಚಾಗುತ್ತದೆ. ಇಂಥ ಸ್ಥಿತಿಗಳಲ್ಲಿ ಒಂದು ಘನ ಮಿಮೀ. ರಕ್ತದಲ್ಲಿ 600 – 800 ರಷ್ಟು ಒಟ್ಟು ವರ್ಣರಹಿತ ಕಣಗಳಲ್ಲಿ 6 – 8% ನಷ್ಟು ಇಯೋಸಿನೋಫಿಲ್‌ಗಳು ಇರಬಹುದು. ಈ ಸ್ಥಿತಿ ಪತ್ತೆ ಆದಾಗ, ಅಸ್ವಸ್ಥತೆಯನ್ನು ಶಂಕಿಸಬಹುದು. ಸ್ವಲ್ಪ ಚಿಕ್ಕದಾಗಿ, 1 – 2 ಹಾಲೆಗಳು ಮಾತ್ರವಿರುವ ಕೋಶಕೇಂದ್ರ ಉಳ್ಳದ್ದಾಗಿ ಕೋಶದ್ರವದಲ್ಲಿ ಅಲ್ಪವಾಗಿಯೇ ಇರುವ ಮತ್ತು ವರ್ಣಸಂಸ್ಕಾರದಲ್ಲಿ ನೀಲಿಬಣ್ಣ ಪಡೆಯುವ ನುಚ್ಚುದ್ರವ್ಯವಿರುವ ವರ್ಣರಹಿತಕೋಶಗಳಿಗೆ ಬೇಸೋಫಿಲ್‌ಗಳೆಂದು ಹೆಸರು. ಒಟ್ಟು ವರ್ಣರಹಿತ ಕಣಗಳಲ್ಲಿ ಇವುಗಳ ಪ್ರಮಾಣ ಕೇವಲ 0 – 0.5%; ಒಂದು ಘನ ಮಿಮೀ ರಕ್ತದಲ್ಲಿ 0 – 50 ಇಂಥ ಕಣಗಳಿರಬಹುದು. ಯಕೃತ್ತು, ಫುಪ್ಪುಸ, ಮಜ್ಜೆ ಇತ್ಯಾದಿ ಅಂಗಗಳಲ್ಲಿ ಹಲವು ಇಂಥ ರಚನೆಯ ಕಣಗಳು ಇರುತ್ತವೆ. ಇವಕ್ಕೆ ಮಾಸ್ಟ್ ಕೋಶಗಳು ಎಂದು ಹೆಸರು. ಬಹುಶಃ ಇವೂ ರಕ್ತದ ಬೇಸೋಫಿಲ್‌ಗಳೂ ಒಂದೇ ಬಗೆಯ ಆದರೆ ಸ್ಥಿರ ಇಲ್ಲದೇ ಚರಕೋಶಗಳೆಂದು ಹೇಳಲಾಗಿದೆ. ಮಾಸ್ಟ್ ಕೋಶಗಳೂ ಬಹುಶಃ ರಕ್ತದ ಬೇಸೋಫಿಲ್‌ಗಳೂ ಹೆಪಾರಿನ್ ಎಂಬ ರಕ್ತಗರಣ ಪ್ರತಿರೋಧಕವಸ್ತುವನ್ನು ಉತ್ಪಾದಿಸುತ್ತವೆ.

ರಕ್ತದ ಕೆಂಪುಕಣಗಳಷ್ಟೆ ವ್ಯಾಸದ ವರ್ಣರಹಿತ ಕಣಗಳನ್ನು ದುಗ್ಧರಸಕಣಗಳು (ಲಿಂಫೋಸಯಟ್ಸ್) ಎಂದು ಕರೆದಿದೆ. ಇವುಗಳ ಕೋಶಕೇಂದ್ರ ಗುಂಡಗೆ ದೊಡ್ಡದಾಗಿದ್ದು ಕಣವನ್ನು ಹೆಚ್ಚು ಕಡಿಮೆ ಪೂರ್ತ ಅಕ್ರಮಿಸಿರುತ್ತದೆ. ಹೊರಗಿನ ಸ್ತರದಂತೆ ಸ್ವಲ್ಪ ಕೊಂಚವಾಗಿರುವ ಕೋಶದ್ರವದಲ್ಲಿಯೂ ಯಾವ ಬಗೆಯ ನುಚ್ಚುದ್ರವ್ಯವೂ ಇರುವುದಿಲ್ಲ. ದುಗ್ಧರಸಕಣಗಳ ಶೇ ಪ್ರಮಾಣ 20 – 26 ರಷ್ಟು, ಒಂದು ಘನ ಮಿಮೀ ರಕ್ತದಲ್ಲಿ 1500 – 2500 ಕಣಗಳಿರುತ್ತವೆ. ದೀರ್ಘಕಾಲಿಕ ರೋಗಗಳಲ್ಲಿ (ಉದಾಹರಣೆಗೆ ಕ್ಷಯ) ಇವುಗಳ ಸಂಖ್ಯೆ ಹೆಚ್ಚಾಗುವುದಿದೆ (35% ಕ್ಕೂ ಹೆಚ್ಚು, ಒಂದು ಘನ ಮಿಮೀ ರಕ್ತದಲ್ಲಿ 3000 – 6000 ಕೋಶಗಳಷ್ಟು). ಇದೆ ರಚನೆಯ, ಆದರೆ ಇವುಗಳ 1.5 ರಷ್ಟು ವ್ಯಾಸದ ದೊಡ್ಡ ದುಗ್ಧರಸಕಣಗಳಿರುವುದೂ ಉಂಟು.

ಇಲ್ಲಿ ಹೇಳಿರುವ ಮ್ಯಾಕ್ರೋಫೇಜ್‌ಗಳು ಅಥವಾ ಮಾನೋಸೈಟ್‌ಗಳು ರಕ್ತದ ವರ್ಣರಹಿತ ಕಣಗಳ ಪೈಕಿ ಅತಿದೊಡ್ಡವು. ಇವುಗಳ ವ್ಯಾಸ ಸು. 20ಮೈ. ಅಂದರೆ ರಕ್ತದ ಕೆಂಪುಕಣಗಳ 2.5 ರಷ್ಟು. ಇವುಗಳ ಗಾತ್ರಕ್ಕೆ ಹೋಲಿಸಿದರೆ ಕೋಶಕೇಂದ್ರ ಚಿಕ್ಕದೆಂದೇ ಹೇಳಬೇಕು. ಅಲ್ಲದೆ ಕೋಶದ ಮಧ್ಯದಲ್ಲಿರದೆ ಎಲ್ಲೋ ಮೂಲೆಯಲ್ಲಿರುತ್ತದೆ. ಕೋಶದ್ರವ ಹೆಚ್ಚಾಗಿಯೇ ಇರುವುದು. ಅಲ್ಲದೆ ಅದರಲ್ಲಿ ಯಾವ ಬಗೆಯ ನುಚ್ಚುದ್ರವ್ಯಗಳೂ ಸಾಮಾನ್ಯವಾಗಿ ಇರುವುದಿಲ್ಲ. ಮಾನೋಸೈಟ್‌ಗಳ ಶೇಕಡಾವಾರು ಪ್ರಮಾಣ 2 – 3 ರಷ್ಟು; ಒಂದು ಘನ ಮಿಮೀ ರಕ್ತದಲ್ಲಿ 150 – 200 ಇಂಥ ವರ್ಣರಹಿತ ಕೋಶಗಳಿರುತ್ತವೆ.

ಕೆಂಪುಕಣಗಳಲ್ಲಿ ಕೋಶಕೇಂದ್ರವಿಲ್ಲದಿರುವುದು ಸ್ತನಿಗಳಲ್ಲಿ ಮಾತ್ರ. ಮಿಕ್ಕ ಕಶೇರುಕಗಳಲ್ಲಿ ಕೋಶಕೇಂದ್ರ ಇರುವುದಷ್ಟೇ ಅಲ್ಲದೆ ಕಣವೂ ದೊಡ್ಡದಾಗಿರುತ್ತದೆ. ಉಭಯಚರಿಗಳಲ್ಲಿ (ಆಂಫಿಬಿಯ) ಕೆಂಪುಕಣಗಳು ಅಂಡಾಕಾರವಾಗಿದ್ದು ಒಂದು ಘನ ಮಿಮೀ ರಕ್ತದಲ್ಲಿ 40 – 170 ಸಾವಿರ ಕಣಗಳು ಮಾತ್ರವಿರುತ್ತವೆ. ಪಕ್ಷಿಗಳಲ್ಲಿ ಕೆಂಪುಕಣಗಳುಸುಮಾರು 150 ಘನ ಮೈ. ದೊಡ್ಡವು. ಸ್ತನಿಗಳಲ್ಲಿ ಸಾಮಾನ್ಯವಾಗಿ ಕೆಂಪುಕಣದ ಘನ ಮೊತ್ತ ಇದಕ್ಕೂ ಕಡಿಮೆ. ಸ್ತನಿಗಳಲ್ಲಿ ಕೆಂಪುಕಣ ಸಾಮಾನ್ಯವಾಗಿ ಗುಂಡಾಗಿ ಇರುವುದಾದರೂ ಒಂಟೆಗಳಲ್ಲಿ ಇದು ಎಳ್ಳಿನ ಕಾಳಿನಂತೆ ಇರುವುದು. ವ್ಯಾಸ ಸಾಮಾನ್ಯವಾಗಿ ಎಲ್ಲ ಸ್ತನಿಗಳಲ್ಲು 7 – 8 ಮೈ ಗಳಷ್ಟು ಇರುವುದಾದರೂ ಮೇಕೆಗಳಲ್ಲಿ 4 ಮೈ ನಷ್ಟಿರುತ್ತದೆ. ಕಸ್ತೂರಿಮೃಗದಲ್ಲಿ ಇನ್ನೂ ಕಡಿಮೆ (2.5 ಮೈ.). ಕೆಂಪುಕಣದ ವ್ಯಾಸಕ್ಕೂ ದೇಹದ ಗಾತ್ರಕ್ಕೂ ಯಾವುದೆ ಹೋಲಿಕೆ ಇಲ್ಲದಿದ್ದರೂ ಆನೆಗಳಲ್ಲಿ ಇದು ಅತ್ಯಂತ ದೊಡ್ಡದಾಗಿ (8.5 ಮೈ.) ಇರುವುದು.




ಕೆಂಪುಕಣದ ಮುಖ್ಯ ಕ್ರಿಯೆ ಆಮ್ಲಜನಕ ಮತ್ತು ಕಾರ್ಬನ್ ಡೈ ಆಕ್ಸೈಡ್‌ಗಳ ವಾಹಕವಾಗಿ ವರ್ತಿಸುವುದು. ವಾಸ್ತವವಾಗಿ ಇದೊಂದೇ ಕೆಂಪುಕಣದ ಕ್ರಿಯೆ ಎಂದು ಭಾವಿಸಬಹುದಾದಷ್ಟು ಈ ಕ್ರಿಯೆ ಪ್ರಮುಖವಾಗಿದೆ. ಕೆಂಪುಕಣದ ಒಳಗಿರುವ ಹೀಮೋಗ್ಲಾಬಿನ್ ಆಮ್ಲಜನಕ ಮತ್ತು ಕಾರ್ಬನ್ ಡೈ ಆಕ್ಸೈಡುಗಳೆರಡರ ಜೊತೆಯಲ್ಲಿಯೂ ಏಕಕಾಲಿಕವಾಗಿ ಸ್ಥಿರಸಂಯೋಗವಾಗಿರದೆ (ಫರ್ಮ್ಲಿ ಕಂಬೈನ್ಡ್), ಹೀಮೋಗ್ಲಾಬಿನ್ ಮತ್ತು ಈ ಅನಿಲಗಳ ಸಂಯೋಗ ಒಂದು ರೀತಿಯ ಅಳ್ಳಕ ಸಂಯೋಗವಾಗಿರುತ್ತದೆ (ಲೂಸ್ಲಿಕಂಬೈನ್ಡ್), ತತ್ಫಲವಾಗಿ ಹೀಮೋಗ್ಲಾಬಿನ್ ಆಮ್ಲಜನಕದೊಡನಾಗಲಿ ಕಾರ್ಬನ್ ಡೈ ಆಕ್ಸೈಡಿನೊಡನಾಗಲಿ ಅಧಿಕ ಪ್ರಮಾಣದಲ್ಲಿ ಸಂಯೋಜಿತವಾಗಿದ್ದಲ್ಲಿ ಸಂದರ್ಭಾನುಸಾರ ಹೆಚ್ಚುವರಿಯನ್ನು ಬಿಡುಗಡೆ ಮಾಡಿ ಕಡಿಮೆ ಪ್ರಮಾಣ ಅನಿಲವುಳ್ಳ ಸಂಯೋಗವಾಗಿ ಪರಿವರ್ತಿಸಬಹುದು. ಈ ಸಂಯೋಜನೆಯ ಇನ್ನೊಂದು ವೈಶಿಷ್ಟ್ಯ ಎಂದರೆ ಸಂಯೋಗದಲ್ಲಿ ಈ ಎರಡು ಅನಿಲಗಳ ಪರಸ್ಪರ ಪ್ರಮಾಣ. ಹೀಮೋಗ್ಲಾಬಿನ್ ಹೆಚ್ಚು ಆಮ್ಲಜನಕದೊಡನೆ ಸಂಯೋಗವಾಗಿರುವಾಗ ಅದರೊಡನೆ ಕಾರ್ಬನ್ ಡೈ ಆಕ್ಸೈಡ್ ಕಡಿಮೆ ಪ್ರಮಾಣದಲ್ಲಿ ಮಾತ್ರ ಸಂಯೋಗವಾಗಿರಬಲ್ಲದು. ಅರ್ಥಾತ್ ಹೀಮೋಗ್ಲಾಬಿನ್ ಹೆಚ್ಚು ಆಮ್ಲಜನಕವನ್ನು ಹೀರಿಕೊಂಡಾಗ ಅದರೊಡನೆ ಸಂಯೋಜಿಸಿದ್ದ ಕಾರ್ಬನ್ ಡೈ ಆಕ್ಸೈಡಿನ ಹೆಚ್ಚುವರಿ ಬಿಡುಗಡೆ ಆಗುತ್ತದೆ. ಇದಕ್ಕೆ ವಿರುದ್ಧವಾಗಿ ಆಮ್ಲಜನಕವನ್ನು ಹೀಮೋಗ್ಲಾಬಿನ್ ಬಿಡುಗಡೆಮಾಡಿದಾಗ ಅದರೊಡನೆ ಹೆಚ್ಚು ಕಾರ್ಬನ್ ಡೈ ಆಕ್ಸೈಡ್ ಸಂಯೋಗವಾಗುತ್ತದೆ. ಫುಪ್ಪುಸಗಳಲ್ಲಿ ರಕ್ತಹರಿಯುತ್ತಿರುವಾಗ ಹೀಮೋಗ್ಲಾಬಿನ್ ಹೀಗೆ ಆಮ್ಲಜನವನ್ನು ಹೀರಿ ಕಾರ್ಬನ್ ಡೈ ಆಕ್ಸೈಡನ್ನು ಬಿಡುಗಡೆಮಾಡುತ್ತದೆ; ಮತ್ತು ರಕ್ತ ದೇಹದ ಮಿಕ್ಕೆಲ್ಲೆಡೆಗಳಲ್ಲು ಹರಿಯುತ್ತಿರುವಾಗ ಆ ಕಡೆಗಳಲ್ಲೆಲ್ಲ ರಕ್ತ ಆಮ್ಲಜನಕವನ್ನು ಬಿಡುಗಡೆ ಮಾಡುವುದರಿಂದ ಅಲ್ಲೆಲ್ಲ ಉತ್ಪತ್ತಿಯಾಗುತ್ತಲೆ ಇರುವ ಕಾರ್ಬನ್ ಡೈ ಆಕ್ಸೈಡನ್ನು ಹೀರಿಕೊಳ್ಳುತ್ತದೆ.

ರಕ್ತಪರಿಚಲನೆಯಲ್ಲಿ ರಕ್ತಕಣಗಳು ತಮಗಿಂತಲೂ ವ್ಯಾಸ ಕಿರಿದಾಗಿರಬಹುದಾದ ಲೋಮನಾಳಗಳಲ್ಲಿ ನುಸುಳಿಕೊಂಡು ಹೋಗುವುದರಿಂದ, ಕೆಂಪುಕಣಗಳಿಗೆ ಜಖಮ್ ಆದಂತಾಗಿ ಅವು ಕ್ರಮೇಣ ದುರ್ಬಲಗೊಳ್ಳುತ್ತ ಕೊನೆಗೆ ಛಿದ್ರಗೊಂಡು ಚೂರುಚೂರುಗಳಾಗುತ್ತವೆ. ಗಂಟೆ ಗಂಟೆಯೂ ಕೋಟ್ಯಂತರ ಕೆಂಪುಕಣಗಳು ಹೀಗೆ ನಾಶವಾಗುತ್ತಲೇ ಇದ್ದರೂ ಹೀಮೋಗ್ಲಾಬಿನ್ ಯುಕ್ತ ಚೂರುಗಳು ರಕ್ತಪರಿಚಲನೆಯಲ್ಲಿ ಕಂಡುಬರುವುದು ಅಪರೂಪ. ಕಾರಣ ಈ ಚೂರುಗಳು ದೇಹದ ನಾನಾ ಭಾಗಗಳಲ್ಲಿ

(ಮಜ್ಜೆ, ಗುಲ್ಮ, ಯಕೃತ್ತು, ಇತ್ಯಾದಿ) ಇರುವ ದೊಡ್ಡ ಕಬಳಿಕ ಕಣಗಳಿಂದ (ಮ್ಯಾಕ್ರೋಫೇಜೀಸ್) ನಿರಂತರವಾಗಿ ಭಕ್ಷಣವಾಗಿಬಿಡುತ್ತಿರುವುದು. ಈ ಕಣಗಳಲ್ಲಿ ರಕ್ತಕಣ ಚೂರುಗಳು ಪೂರ್ತಿಯಾಗಿ ನಾಶಗೊಳ್ಳುವುದು ಮಾತ್ರವಲ್ಲದೆ ಬಿಡುಗಡೆ ಆದ ಹೀಮೋಗ್ಲಾಬಿನ್ ಬಿಲಿರೂಬಿನ್ ಎಂಬ ಪಿತ್ತರಸವರ್ಣವಾಗಿ ಪರಿವರ್ತಿತವಾಗುತ್ತದೆ ಮತ್ತು ಪಿತ್ತರಸದ ಮೂಲಕ ವಿಸರ್ಜಿತವಾಗುತ್ತದೆ. ಆದ್ದರಿಂದ ಕೆಂಪುಕಣಗಳು ಕಾರಣಾಂತರಗಳಿಂದ ಹೆಚ್ಚಾಗಿದ್ದಾಗ ಒಂದು ವಿಧವಾದ ಕಾಮಾಲೆ (ಜಾಂಡೀಸ್) ತಲೆದೋರಬಹುದು.

ಕೆಂಪುರಕ್ತಕಣಗಳು ಪ್ರತಿ ನಿಮಿಷದಲ್ಲಿ ಕೋಟಿ ಸಂಖ್ಯೆಯಲ್ಲಿ ಹೀಗೆ ನಾಶವಾಗುತ್ತಿದ್ದರೂ ಒಂದು ಘಮಮಿಮೀ ರಕ್ತದಲ್ಲಿ ಅವುಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಾಣಬರುವುದಿಲ್ಲ. ಏಕೆಂದರೆ ನಾಶವಾಗುವ ಕೆಂಪು ಕಣಗಳಿಗೆ ಬದಲಾಗಿ ಅಷ್ಟೇ ಹೊಸಕಣಗಳು ಸತತವಾಗಿ ಉತ್ಪತ್ತಿ ಆಗುತ್ತ ರಕ್ತಪರಿಚಲನೆಗೆ ಸೇರಿಕೊಳ್ಳುತ್ತಿರುತ್ತವೆ. ಹೊಸ ಕೆಂಪುಕಣಗಳು ಉತ್ಪತ್ತಿ ಆಗುವುದು ವಯಸ್ಕರಲ್ಲಿ ಕೆಂಪು ಮಜ್ಜೆಗಳಲ್ಲಿ ಮತ್ತು ಮೇಲ್ತೋಳು ಹಾಗೂ ತೊಡೆಮೂಳೆಗಳ ಮೇಲುಕೊನೆಗಳಲ್ಲಿ ಕಂಡಬರುತ್ತದೆ. ಪೂರ್ಣವಾಗಿ ಬೆಳೆದ ಭ್ರೂಣದಲ್ಲಿ ಮತ್ತು ಸಣ್ಣ ಮಕ್ಕಳಲ್ಲಿ ಎಲ್ಲ ಮೂಳೆಗಳಲ್ಲೂ ಕೆಂಪುಮಜ್ಜೆಯೇ ಇದ್ದು ಅಲ್ಲೆಲ್ಲವೂ ಕೆಂಪುಕಣಗಳ ಉತ್ಪತ್ತಿ ಆಗುತ್ತದೆ. ಉತ್ಪತ್ತಿ ಆಗಿ ಪರಿಚಲನೆಗೆ ಸೇರಿದಂದಿನಿಂದ ಛಿದ್ರವಾಗಿ ನಾಶವಾಗುವ ತನಕ ಕೆಂಪುಕಣದ ಜೀವಿತಾವಧಿ 100 – 120 ದಿನಗಳು.

ಕೆಂಪುಕಣಗಳು ಕೆಂಪುಮಜ್ಜೆಯಲ್ಲಿ ಉತ್ಪತ್ತಿ ಆಗುವುದಕ್ಕೆ ಅವುಗಳ ಸತತ ನಾಶವೇ ಪ್ರಚೋದನೆ ಎಂದು ಹೇಳಲಾಗಿದೆ. ಕೆಂಪುಕಣನಾಶದಿಂದ ರಕ್ತದ ಆಮ್ಲಜನಕ ಭರಣಸಾಮರ್ಥ್ಯ ಕಡಿಮೆ ಆಗುವುದು. ಆಮ್ಲಜನಕ ಕೊರತೆ ಪ್ರಯೋಗಾಲಯದಲ್ಲಿ ಮಾಪಿಸಲು ಸಾಧ್ಯವಿಲ್ಲದಷ್ಟು ಕಡಿಮೆ ಇದ್ದರೂ ಬಹುಶಃ ಆ ಕೊರತೆ ಕೆಂಪುಮಜ್ಜೆಯನ್ನು ಪ್ರಚೋದಿಸಲು ನೈಸರ್ಗಿಕವಾಗಿ ಸಮರ್ಥವಾಗಿರುತ್ತದೆ ಮತ್ತು ಅನುಗುಣವಾಗಿ ಹೊಸ ಕೆಂಪುಕಣಗಳು ಉತ್ಪತ್ತಿ ಆಗುವಂತೆ ಪ್ರಚೋದಿಸುತ್ತದೆ. ದೇಹದಲ್ಲಿ ಕಾರಣಾಂತರಗಳಿಂದ ಆಮ್ಲಜನಕ ಕೊರತೆ ಕಂಡುಬಂದಾಗ ಕೆಂಪು ರಕ್ತಕಣಗಳ ಸಂಖ್ಯೆ ಏರುವುದರಿಂದ (ಒಂದು ಘನ ಮಿಮೀಯಲ್ಲಿ 60 – 65 ಲಕ್ಷ) ಮೇಲಿನ ವಾದ ಸರಿ ಎಂದು ಭಾವಿಸಲಾಗಿದೆ.

ಹೊಸಕೆಂಪುಕಣಗಳು ಉತ್ಪತ್ತಿ ಆಗುತ್ತಿರುವ ಹಂತಗಳಲ್ಲಿ ಅವುಗಳ ಮಾತೃಕೋಶಗಳಲ್ಲಿ ಕೋಶದ್ರವ್ಯವೂ ಕೋಶಕೇಂದ್ರವೂ ಇದ್ದು ಮಾತೃಕೋಶ ವಿಭಜನೆಯಿಂದ ಅಂತಿಮವಾಗಿ ಕೆಂಪುಕಣಗಳು ಫಲಿಸುತ್ತವೆ. ವಿಭಜನೆ ಮತ್ತು ಪರಿವರ್ತನೆಯ ವಿವಿಧ ಹಂತಗಳಲ್ಲಿ ಕ್ರಮೇಣ ಕೋಶದ್ರವ್ಯ ಕಡಿಮೆ ಆಗುತ್ತ ಬದಲು ಹೀಮೋಗ್ಲಾಬಿನ್ ಕಂಡುಬರುತ್ತ ಅಂತಿಮವಾಗಿ ಕೋಶಕೇಂದ್ರವೂ ಮಾಯವಾಗಿ ಕೆಂಪುಕಣ ಫಲಿಸುತ್ತದೆ. ಈ ಘಟನೆಗಳಿಗೆ ಅಗತ್ಯವಾದ ಕಾಲಾವಧಿ 8 – 10 ದಿನಗಳು.

ಈ ಅವಧಿಯಲ್ಲಿ ಹೊಸ ಜೀವಕೋಶದ ಉತ್ಪತ್ತಿ ಆಗಿ ಅದರೊಳಗೆ ಹೀಮೋಗ್ಲಾಬಿನ್ ತುಂಬಿಕೊಳ್ಳಬೇಕು ಅಷ್ಟೇ. ಕೋಶದ್ರವ್ಯದ ಮತ್ತು ಹೀಮೋಗ್ಲಾಬಿನ್ನಿನ ಸಂಯೋಜನೆಗೆ ಮೊದಲುದರ್ಜೆಯ (ಫಸ್ಟ್ ಕ್ಲಾಸ್) ಪ್ರೋಟೀನುಗಳು ಅಗತ್ಯ. ಆದ್ದರಿಂದ ಅವುಗಳ ಪುರೈಕೆ ಅವಶ್ಯಕತೆಗೆ ಅನುಗುಣವಾಗಿರಬೇಕು. ಹೀಮೋಗ್ಲಾಬಿನ್ನಿನಲ್ಲಿ ಕಬ್ಬಿಣದ ಅಂಶ ಇರುವುದರಿಂದ ಕಬ್ಬಿಣದ ಪೂರೈಕೆ ಅವಶ್ಯಕ. ಇವುಗಳಿಗೆ ಆಹಾರದಲ್ಲಿನ ಯುಕ್ತ ಪೌಷ್ಟಿಕಾಂಶಗಳೇ ಮೂಲವಾಗಿರುವುದರಿಂದ ಯುಕ್ತ ಆಹಾರಸೇವನೆ ರಕ್ತಕಣ ಸಂಖ್ಯಾಭಿವೃದ್ಧಿಗೆ ಬಲು ಅಗತ್ಯ. ಈ ಅಂಶಗಳಲ್ಲದೆ ಆಹಾರದಲ್ಲಿ ವೈಟಮಿನ್ $B_{13}$, ವೈಟಮಿನ್ C, ಕಿಂಚಿತ್ ಪ್ರಮಾಣದಲ್ಲಿ ತಾಮ್ರ ಇತ್ಯಾದಿಗಳೂ ಅತ್ಯಗತ್ಯ.

ಈ ಅಂಶಗಳಲ್ಲಿ ಒಂದೊ ಹಲವೊ ಕೊರತೆ ಆದರೆ ಸ್ವಾಭಾವಿಕವಾಗಿಯೇ ಕೆಂಪು ರಕ್ತಕಣಗಳ ಸಂಖ್ಯಾಭಿವೃದ್ಧಿ ಕುಂಠಿತಗೊಳ್ಳುತ್ತದೆ. ಕೆಂಪುರಕ್ತಕಣನಾಶ ಮಾಮೂಲಾಗಿಯೇ ಇರುವುದರಿಂದ ಇಂಥ ಪರಿಸ್ಥಿತಿಯಲ್ಲಿ ದೇಹದಲ್ಲಿ ಕೆಂಪುಕಣಗಳ ಸಂಖ್ಯೆ ಇಳಿಮುಖವಾಗುತ್ತದೆ. ಒಂದು ಘನ ಮಿಮೀ ರಕ್ತದಲ್ಲಿ ಕೇವಲ ಹತ್ತು ಲಕ್ಷ ಕೆಂಪುಕಣಗಳಷ್ಟು ಕಡಿಮೆಯಾಗಬಹುದು. ಇದಕ್ಕೆ ಪಾಂಡುರೋಗ (ಅನೀಮಿಯ) ಎಂದು ಹೆಸರು. ವಿವಿಧ ಘಟಕಗಳ ಕೊರತೆಯಿಂದ ವಿವಿಧ ರೀತಿಯ ಪಾಂಡುರೋಗ ತಲೆದೋರವುದಿದೆ. ತಕ್ಕ ಘಟಕವನ್ನು ಚಿಕಿತ್ಸಕವಾಗಿ ಬಳಸಿ ಪಾಂಡುರೋಗವನ್ನು ನಿವಾರಿಸಬಹುದು.

ರಕ್ತಪರೀಕ್ಷೆ (ನ್ಯಾಯಾಲಯಕ್ಕೆ ಸಂಬಂಧಿಸಿದಂತೆ): ವ್ಯಕ್ತಿ, ಬಟ್ಟೆ, ಸುಟ್ಟ ವಸ್ತುಗಳು, ಆಯುಧಗಳು ಇತ್ಯಾದಿಗಳ ಮೇಲೆ ಕೆಂಪು ಅಥವಾ ಹಸುರು ಕಲೆಗಳಿರಬಹುದು. ಇವು ರಕ್ತಕಲೆಗಳೆ ಆಗಿದ್ದರೆ ಮನುಷ್ಯ ರಕ್ತಕಲೆಗಳೆಂದು ತಿಳಿಯಲು ರಾಸಾಯನಿಕ ಕ್ರಮ, ಸೂಕ್ಷ್ಮದರ್ಶಕ ಪರೀಕ್ಷೆ ಮತ್ತು ರೋಹಿತದರ್ಶಕ (ಸ್ಪೆಕ್ಟ್ರಾಸ್ಕೋಪ್)ಗಳಿಂದ ತನಿಖಿಸಬೇಕಾಗುತ್ತದೆ. ಕಲೆಯ ಸಾರಕ್ಕೆ ಬೆನ್‌ಸಿಡೀನನ್ನೂ ಹೈಡ್ರೋಜನ್ ಪರಾಕ್ಸೈಡನ್ನೂ ಬೆರೆಸಿ ನೀಲಿ ಬಣ್ಣ ಫಲಿಸುತ್ತದೆಯೆ ಎಂದು ನೋಡುವುದು ಮೊದಲನೆಯದು. ಕಲೆಯಸಾರಕ್ಕೆ ಕಿಂಚಿತ್ ಉಪ್ಪನ್ನೂ ಗ್ಲೇಸಿಯಲ್ ಅಸೆಟಿಕ್ ಆಮ್ಲವನ್ನೂ ಗಾಜಿನ ಫಲಕದ ಮೇಲೆಯೇ ಸೇರಿಸಿ ತೆಳುಗಾಜನ್ನು (ಕವರ್ ಗ್ಲಾಸ್) ಮುಚ್ಚಿ ಗುಳ್ಳೆಬರುವ ತನಕವೂ ಕಾಸಿ ಆರಿಸಿ ಸೂಕ್ಷ್ಮದರ್ಶಕದ ಕೆಳಗಿಟ್ಟುನೋಡಿದಾಗ ತುಕ್ಕಿನ ಬಣ್ಣದ ವಿಶಿಷ್ಟ ಆಕಾರದ ಹರಳುಗಳು (ಕ್ರಿಸ್ಟಲ್) ಕಾಣಬರುತ್ತವೆಯೆ ಎಂದುನೋಡುವುದು ಎರಡನೆಯದು. ಕಲೆಯ ಸಾರವನ್ನು ರೋಹಿತದರ್ಶಕದ ಮೂಲಕ ನೊಡುತ್ತ ನೈಸರ್ಗಿಕ ರೋಹಿತದಲ್ಲಿ ಕಾಣುವ D ಮತ್ತು Eಎಂಬ ಗೆರೆಗಳ ಮಧ್ಯೆ ಎರಡು ಹೆಚ್ಚುವರಿ ಮಸುಕು ಗೆರೆಗಳು ಕಾಣಿಸುತ್ತವೆಯೇ ಎಂದು ನೋಡುವುದು ಮೂರನೆಯದು. ಇವೆಲ್ಲ ಕಲೆ ರಕ್ತದ್ದೇ ಎಂದು ಮಾತ್ರ ತಿಳಿಸಬಲ್ಲವು. ಮನುಷ್ಯ ರಕ್ತ ಲಸಿಕೆಯ ಪ್ರತಿವಸ್ತುವಿನ (ಆಂಟಿಬಾಡಿ) ಜೊತೆ ಕಲೆಯ ಸಾರವನ್ನು ಸೇರಿಸಿದಾಗ ಅವು ಬೆರೆಯುವ ಸ್ಥಳದಲ್ಲಿ ಬಗ್ಗಡದಂತೆ ಕಂಡುಬಂದರೆ ಕಲೆಯ ಸಾರ ಮನುಷ್ಯ ರಕ್ತದ್ದೇ ಎಂದು ನಿರ್ಧರಿಸಬಹುದು.

ರಕ್ತಸ್ರಾವ: ಹೃದಯ ಹಾಗೂ ರಕ್ತನಾಳಗಳ ಒಳಗೇ ಪರಿಚಲಿಸುತ್ತಿರುವ ರಕ್ತ ಅವುಗಳ ರೋಗ ಹಾಗೂ ಗಾಯ ವಿಶೇಷಗಳಿಂದ ಹೊರಬರುವಿಕೆ (ಬ್ಲೀಡಿಂಗ್, ಹೆಮೊರೆಜ್). ರಕ್ತ ಹೆಪ್ಪುಗಟ್ಟುವಿಕೆಯಲ್ಲಿ (ಕೊಯಾಗ್ಯುಲೇಷನ್, ಕ್ಲಾಟಿಂಗ್) ಅವ್ಯವಸ್ಥೆ ಉಂಟಾದಾಗಲೂ ರಕ್ತಸ್ರಾವವಾಗಬಹುದು. ಪ್ರಕಾಶಯುತವಾದ ಕೆಂಪುರಕ್ತ ಚಿಮ್ಮಿಚಿಮ್ಮಿ ಹೊರಬರುತ್ತಿದ್ದರೆ ಅದು ಅಪಧಮನಿಯಿಂದ ಆಗುತ್ತಿರುವ ರಕ್ತಸ್ರಾವ (ಆರ್ಟೀರಿಯಲ್ ಬ್ಲೀಡಿಂಗ್). ಸಾಧಾರಣವಾಗಿ ಆಳವಾದ ಗಾಯಗಳಾದಾಗ ಅಪಧಮನಿ ಛಿದ್ರಗೊಳ್ಳುವುದು ಸಾಮಾನ್ಯ. ಪ್ರತಿಯೊಂದು ಸಲವೂ ಹೃದಯ ಮಿಡಿದಾಗ ಹೀಗೆ ರಕ್ತ ಚಿಮ್ಮುತ್ತದೆ. ಮಸುಕು ಕೆಂಪುಬಣ್ಣದ ರಕ್ತ ನಿಧಾನವಾಗಿ ಒಂದೇ ಸಮನೆ ಹರಿದುಬರುತ್ತಿದ್ದರೆ ಅದು ಅಭಿಧಮನಿಯಿಂದ ಆಗುತ್ತಿರುವ ರಕ್ತಸ್ರಾವ (ವೇಯ್ನ್ ಬ್ಲೀಡಿಂಗ್). ಸಾಮಾನ್ಯ ಗಾಯಗಳಲ್ಲಿ ಕಂಡುಬರುವುದು ಇಂಥ ರಕ್ತಸ್ರಾವವೇ. ರಕ್ತ ಹರಿದು ಹೋಗದೆ ಸ್ವಲ್ಪ ಮಾತ್ರ ಜಿನುಗಿ ಹೊರಬರುವುದು ಲೋಮನಾಳಗಳಿಂದ ಆಗುವ ಸ್ರಾವ. ರಕ್ತಸ್ರಾವ ಸಾಮಾನ್ಯವಾಗಿ 5–10 ನಿಮಿಷಗಳಲ್ಲಿ ತಾನಾಗಿಯೇ ನಿಂತುಕೊಳ್ಳಬೇಕಾದುದು ಅಗತ್ಯ. ಏಕೆಂದರೆ ಇಂಥ ರಕ್ತಸ್ರಾವ ತಡೆಯೆ ಇಲ್ಲದೆ ಮುಂದುವರೆದರೆ ಪ್ರಾಣಾಪಾಯ ಸಂಭವಿಸಬಹುದು.

ರಕ್ತಸ್ರಾವ ಕಣ್ಣಿಗೆ ಕಾಣಿಸುವಂತಿರಬಹುದು ಇಲ್ಲವೆ ಕಾಣದಂತಿರಬಹುದು. ಕಣ್ಣಿಗೆ ಕಾಣಿಸದೇ ಇರುವ ರಕ್ತಸ್ರಾವವನ್ನು ವಮನ, ಶ್ಲೇಷ್ಮ, ಮೂತ್ರ, ಮಲ–ಇವುಗಳಲ್ಲಿ ರಕ್ತವಿರುವುದನ್ನೂ ಇಲ್ಲವೇ ಅವು ರಕ್ತದಂತೆ ಕೆಂಪಾಗಿರುವುದನ್ನೂ ನೊಡಿ ಪತ್ತೆ ಮಾಡಬಹುದು. ಮಲವು ಟಾರಿನಂತೆ ಕಪ್ಪಾಗಿದ್ದರೂ ಅನ್ನನಾಳದಲ್ಲಿ ರಕ್ತಸ್ರಾವ ಆಗಿದೆ ಎಂದು ತಿಳಿಯಬೇಕು. ಗುಪ್ತರಕ್ತಸ್ರಾವ ಪತ್ತೆಗೆ ಬಾರದಂಥ ಸಂದರ್ಭಗಳೂ ಇವೆ. ವ್ಯಕ್ತಿ ಬಿಳಿಚಿಕೊಂಡು ತೀವ್ರ ಗತಿಯಿಂದ ನಾಡಿ ಮಿಡಿಯುತ್ತಿರುವುದು– ಇಂಥ ಲಕ್ಷಣಗಳಿಂದ ಗುಪ್ತರಕ್ತಸ್ರಾವನ್ನು ಗುರುತಿಸಬೇಕಾಗುತ್ತದೆ.

ಕಣ್ಣಿಗೆ ಕಾಣಿಸುವ, ತಾನಾಗಿಯೇ ನಿಂತುಕೊಳ್ಳದ ರಕ್ತಸ್ರಾವವನ್ನು ನಿಲ್ಲಿಸಲು ಆ ಸ್ಥಳವನ್ನು ಶುದ್ಧವಾದ ಹೆಬ್ಬೆಟ್ಟಿನಿಂದಲೊ ಅಂಗೈಯಿಂದಲೊ ಭದ್ರವಾಗಿ ಅದುಮಿ ಹಿಡಿದಿರಬೇಕು. ಚಿಮ್ಮುತ್ತ ರಕ್ತ ಹೊರಬರುತ್ತಿದ್ದರೆ ಆ ಸ್ಥಳಕ್ಕೆ ಮೇಲೆ (ಅಂದರೆ ಹೃದಯದ ಕಡೆಗೆ) ಸಿಕ್ಕುವ ನಾಡಿಯನ್ನು ಒತ್ತಿ ಹಿಡಿಯಬೇಕು. 5–10 ನಿಮಿಷಗಳ ಅನಂತರ ನಿಧಾನವಾಗಿ ಒತ್ತಡವನ್ನು ಸಡಿಲಿಸಬಹುದು.

ಸಣ್ಣ ಪುಟ್ಟ ಗಾಯಗಳಿಂದ ಆಗುವ ಯಾವುದೇ ಬಗೆಯ ರಕ್ತಸ್ರಾವದಿಂದ ಆಗುವ ರಕ್ತನಷ್ಟ ಬಲುಕಡಿಮೆ. ಗರಿಷ್ಠ ಎಂದರೆ 5–10 ಮಿೀಗಳಷ್ಟು ಇರಬಹುದು. ಇದರಿಂದ ದೇಹಕ್ಕೆ ಏನೂ ಬಾಧಕವಿಲ್ಲ. ವಾಸ್ತವವಾಗಿ ಒಮ್ಮೆಗೆ 50–100 ಮಿೀಗಳಷ್ಟು ರಕ್ತನಷ್ಟವಾದರೂ ದೇಹಕ್ಕೆ ಏನೂ ತೊಂದರೆ ಆಗದು. ಇನ್ನೂ ಹೆಚ್ಚಿನ ಮೊತ್ತದಲ್ಲಿ ರಕ್ತಸ್ರಾವವಾದರೆ ಅದರಿಂದ ಆಗುವ ತೊಂದರೆಗಳು ರಕ್ತಸ್ರಾವದ ಮೊತ್ತ ಮತ್ತು ವೇಗವನ್ನು ಆಧರಿಸಿದೆ. ಅತೀವ ಸುಸ್ತು, ಸಂಕಟ, ನೀರಡಿಕೆ, ಮೈಬೆವತು ಚಳಿಯಾಗುವುದೂ ರಕ್ತಸ್ರಾವ ಮುಂದುವರಿಯುತ್ತಲೇ ಇದ್ದರೆ ಸುಸ್ತುಧಕ್ಕೆಯೂ ಕಂಡುಬರುತ್ತದೆ. ಸುಸ್ತುಧಕ್ಕೆಗೆ ತಕ್ಷಣ ಚಿಕಿತ್ಸೆ ಒದಗಿಸದಿದ್ದರೆ ಅದರಿಂದಲೆ ಅಂತಿಮವಾಗಿ ಮರಣ ಸಂಭವಿಸಬಹುದು. ಯಾವುದೆ ಸಂದರ್ಭದಲ್ಲೂ ಒಮ್ಮೆಲೆ ಸು. 1 ಲೀನಷ್ಟು ರಕ್ತ ಕಳೆದುಹೋದರೆ ಅಂಥವರನ್ನು ಚಿಕಿತ್ಸಿಸಿದರೂ ಬದುಕುಳಿಸುವುದು ಬಲು ಕಷ್ಟ. ಮಕ್ಕಳಲ್ಲಿ ಇದರ ಕಾಲುಭಾಗ ರಕ್ತನಷ್ಟವೇ ಮಾರಕವಾಗಿ ಪರಿಣಮಿಸುತ್ತದೆ. ರಕ್ತಸ್ರಾವ ಬಲು ನಿಧಾನವಾಗಿ 2–3 ದಿವಸಗಳ ಪರ್ಯಂತ ಆಗುತ್ತಿರುವ ಸಂದರ್ಭಗಳಲ್ಲಿ ಒಟ್ಟು ಇಂತಿಷ್ಟು ರಕ್ತಸ್ರಾವವೇ ಆಗಿದೆ ಎನಿಸಿದರೂ ಬರೀ ರಕ್ತನಷ್ಟವೊಂದರಿಂದಲೇ ಪ್ರಾಣಾಪಾಯ ಇರುವುದಿಲ್ಲ.

ಗಾಯ ಇರುವ ಸ್ಥಳದಲ್ಲಿ ರಕ್ತಹೊರಬಂದ ಕೂಡಲೇ ಅದರಲ್ಲಿರುವ ಲಕ್ಷಾಂತರ ಕಣಿಕ್ರಗಳು (ಪ್ಲೇಟ್‌ಲೆಟ್ಸ್) ಒಂದಕ್ಕೊಂದು ಅಂಟಿಕೊಂಡು ಕಣ್ಣಿಗೆ ಕಾಣಿಸುವಂಥ

ಗುಂಪುಗಳಾಗುತ್ತವೆ ಮತ್ತು ಶೀಘ್ರದಲ್ಲೇ ಅವನತಿ ಹೊಂದುತ್ತವೆ. ಈ ಅವನತಿಯಿಂದ ಅವುಗಳಲ್ಲಿರುವ ಹಲವು ವಿಶಿಷ್ಟ ರಾಸಾಯನಿಕಗಳು ಬಿಡುಗಡೆ ಆಗಿ, ಅವುಗಳಲ್ಲೊಂದಾದ, ಸಿರೋಟೋನಿನ್ ಸ್ಥಳೀಯವಾಗಿ ರಕ್ತನಾಳಗಳ ಮೇಲೆ ವರ್ತಿಸಿ ಸಂಕುಚನದಿಂದ ಅವುಗಳ ವ್ಯಾಸ ಕಿರಿದಾಗುವಂತೆ ಮಾಡುತ್ತದೆ. ಹೀಗೆ ಕಿರಿದಾದ ರಕ್ತನಾಳಗಳು ಒಸರುವ ರಕ್ತ ಗರಣೆ ಕಟ್ಟಿಕೊಂಡು (ಇದಕ್ಕೂ ಸಾಮಾನ್ಯವಾಗಿ ಕಣಿತ್ರಗಳ ಅವನತಿಯೆ ಪ್ರಾರಂಭಿಕ ಕಾರಣ) ನಾಳಕ್ಕೆ ಆಗಿರುವ ಗಾಯವನ್ನು ಮುಚ್ಚಿಬಿಡುತ್ತವೆ. ರಕ್ತಸ್ರಾವವಾದ ಮೇಲೆ ಅಪಧಮನಿಗಳಲ್ಲೂ ಅದಕ್ಕಿಂತಲೂ ದೊಡ್ಡ ಅಭಿಧಮನಿಗಳಲ್ಲಿ ಈ ನೈಸರ್ಗಿಕ ಕ್ರಿಯಾತಂತ್ರದಿಂದ ರಕ್ತಸ್ರಾವ ತಾನಾಗಿಯೇ 5–8 ಮಿನಿಟುಗಳಲ್ಲಿ ನಿಂತುಕೊಳ್ಳುವುದಾದರೂ ಇನ್ನೂ ದೊಡ್ಡ ರಕ್ತನಾಳಗಳಿಂದಾಗುವ ರಕ್ತಸ್ರಾವವನ್ನು ಹೊಲಿದೇ ನಿಲ್ಲಿಸಬೇಕಾಗುತ್ತದೆ.

ಕಣಿತ್ರಗಳ ಸಂಖ್ಯೆ ಕಾರಣಾಂತರಗಳಿಂದ ಕಡಿಮೆ ಆಗಿಹೋಗಿರುವಾಗ ಇಲ್ಲಿ ಹೇಳಿರುವ ಕ್ರಿಯಾತಂತ್ರ ಪರಿಣಾಮಕಾರಿಯಾಗದೆ ರಕ್ತಸ್ರಾವ ನಿಂತುಕೊಳ್ಳಲು ಬಹಳಷ್ಟು ಕಾಲ ಹಿಡಿಯುತ್ತದೆ. ಪರ್‌ಪ್ಯುರ ಎಂಬ ರೋಗದಲ್ಲಿ ಚರ್ಮದ ಅಡಿಯ ಲೋಮನಾಳಗಳು ಅವ್ಯಕ್ತ ಜಖಮ್ಮಿನಿಂದ ಗಾಯಗೊಂಡು ಅತ್ಯಲ್ಪ ಪ್ರಮಾಣದಲ್ಲಿ ರಕ್ತ ಒಸರುವಾಗ ಬಹಳಷ್ಟು ಕಾಲ ಒಸರುತ್ತಲೇ ಇರುವುದರಿಂದ ಚರ್ಮದ ಅಡಿ ರಕ್ತಗಟ್ಟಿ ನೀಲಿ, ಹಸುರು ಇತ್ಯಾದಿ ಬಣ್ಣದ ಕಿರಿ ಹಾಗೂ ಹಿರಿಮಚ್ಚೆಗಳು ಕಾಣಬರುತ್ತವೆ. ಹೀಮೋಫೀಲಿಯ ಎಂಬ ರೋಗದಲ್ಲಿ (ಹೆಂಗಸರಲ್ಲಿ ಅವ್ಯಕ್ತವಾಗಿದ್ದು ಗಂಡಸರಲ್ಲಿ ಮಾತ್ರ ವ್ಯಕ್ತವಾಗಿರುವುದು ಈ ರೋಗದ ವೈಶಿಷ್ಟ್ಯ) ರಕ್ತಗರಣೆಕಟ್ಟಿಕೊಳ್ಳುವುದು ಬಲು ನಿಧಾನ. ಹೀಗಾಗಿ ಗಾಯದಿಂದ ರಕ್ತಸ್ರಾವವಾಗುವುದನ್ನು ರಕ್ತಗರಣೆ ತಕ್ಕಷ್ಟು ಶೀಘ್ರವಾಗಿ ಮುಚ್ಚಿ ಬಿಡುವುದಕ್ಕಾಗುವುದಿಲ್ಲ. ಅಂಥ ಸಂದರ್ಭದಲ್ಲಿ ಸಣ್ಣ ಗಾಯಗಳಿಂದಲೂ ಬಹಳಷ್ಟು ಕಾಲ ರಕ್ತಸ್ರಾವವಾಗುತ್ತಲೇ ಇರುವುದಿದೆ. ಯುಕ್ತ ಕ್ರಮಗಳಿಂದ ಈ ಸ್ಥಿತಿಗಳಲ್ಲಿ ರಕ್ತಸ್ರಾವವಾಗುವುದನ್ನು ನಿಲ್ಲಿಸಬಹುದು.

ಅಗಾಧ ರಕ್ತಸ್ರಾವದಿಂದ ದೇಹದಲ್ಲಿನ ರಕ್ತದ ಘನಗಾತ್ರ (ಬ್ಲಡ್ ವಾಲ್ಯೂಮ್) ಕಡಿಮೆ ಆಗಿ ರಕ್ತದ ಒತ್ತಡ ಕುಸಿದು ದೇಹದ ಎಲ್ಲ ಅಂಗಗಳಿಗೆ ರಕ್ತಪೂರೈಕೆ ಕಡಿಮೆ ಆಗುತ್ತದೆ. ಪ್ರಮುಖ ಅಂಗಗಳಾದ ಮಿದುಳು ಹೃದಯ ಹಾಗೂ ಮೂತ್ರಪಿಂಡಗಳಿಗೆ ಈ ಸಂದರ್ಭದಲ್ಲಿಯೂ ರಕ್ತ ಸಾಕಷ್ಟು ಒದಗುವಂತೆ ದೇಹದಲ್ಲಿ ತಾನಾಗಿಯೇ ವ್ಯವಸ್ಥೆಯಾಗುತ್ತದೆ. ಚರ್ಮ ಅನ್ನನಾಳ, ಗುಲ್ಮ ಇವುಗಳಲ್ಲಿನ ರಕ್ತನಾಳಗಳು ಸಂಕುಚಿಸುವುದರಿಂದ ಅಲ್ಲೆಲ್ಲ ಪೂರೈಕೆ ಆಗುವ ರಕ್ತದಲ್ಲಿ ಉಳಿತಾಯವಾಗಿ ಅಷ್ಟುಮೊತ್ತದ ರಕ್ತ ಈ ಪ್ರಮುಖ ಅಂಗಗಳಿಗೆ ಒದಗುತ್ತದೆ. ಆದರೆ ರಕ್ತಸ್ರಾವ ಮುಂದುವರಿದು ರಕ್ತದ ಒತ್ತಡ ಇನ್ನೂ ಕುಸಿದರೆ ಪ್ರಮುಖ ಅಂಗಗಳಿಗೂ ರಕ್ತಪೂರೈಕೆಯ ಕೊರತೆ ಆಗಿ ಅಲ್ಲೆಲ್ಲ ಆಮ್ಲಜನಕದ ಕೊರತೆ ಉಂಟಾಗಿ ತೀವ್ರ ನಿಶ್ಶಕ್ತಿ ಕಾಣುತ್ತದೆ. ದೇಹದಲ್ಲಿ ಉಳಿದಿರುವ ರಕ್ತದ ಮೊತ್ತ ಇನ್ನೂ ಕಡಿಮೆ ಆಗದಿರಲೆಂದು ಮೂತ್ರೋತ್ಪತ್ತಿ ತಗ್ಗುತ್ತದೆ ಹಾಗು ಬಾಯಿ ಒಣಗುತ್ತದೆ. ಸ್ಥಿತಿ ಇನ್ನೂ ಹದಗೆಟ್ಟರೆ ಸುಸ್ತುದಕ್ಕೆ ಪರಿಣಮಿಸುತ್ತದೆ. ಆದ್ದರಿಂದ ರಕ್ತಸ್ರಾವವಾದ ಬಳಿಕ ಚಿಕಿತ್ಸೆ ಮಾಡಬೇಕಾದರೆ ಕಡಿಮೆ ಬಿದ್ದ ರಕ್ತದ ಮೊತ್ತವನ್ನು ಮಾಮೂಲು ಮಟ್ಟಕ್ಕೆ ಏರಿಸಬೇಕು. ಇದಕ್ಕಾಗಿ ಚುಚ್ಚುಮದ್ದಿನ ರೀತಿ 0.8% ಸೋಡಿಯಮ್ ಕ್ಲೋರೈಡ್ ದ್ರಾವಣ, ಪ್ರೋಟೀನ್ ದ್ರಾವಣ, ರಕ್ತರಸ ಪುಡಿಯ (ಪ್ಲಾಸ್ಮಪೌಡರ್) ದ್ರಾವಣ ಇಲ್ಲವೇ ವ್ಯಕ್ತಿಗೆ ಒಗ್ಗುವ ಇನ್ನೊಬ್ಬರ ರಕ್ತ ಇವನ್ನು ಕೊಡಬೇಕು.

ರಕ್ತ ಗರಣೆಗಟ್ಟುವಿಕೆ: ರಕ್ತ ಹೆಪ್ಪುಗಟ್ಟುವಿಕೆ, ರಕ್ತ ಘನೀಕರಣ ಪರ್ಯಾಯನಾಮಗಳು (ಕ್ಲಾಟಿಂಗ್ ಆಫ್ ಬ್ಲಡ್: ಕೊಯಾಗ್ಯುಲೇಷನ್ ಆಫ್ ಬ್ಲಡ್). ಹೃದಯ ಮತ್ತು ರಕ್ತನಾಳಗಳಲ್ಲಿ ದ್ರವರೂಪದಲ್ಲಿರುವ ರಕ್ತ ಹೊರಬಂದಾಗ ಗರಣೆಗಟ್ಟುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿರುವುವು ಎರಡು. ಮೊದಲನೆಯದು ಹೃದಯ ಹಾಗೂ ರಕ್ತನಾಳಗಳ ಭಿತ್ತಿಯ ಒಳಮೈ ರಕ್ತದಿಂದ ತೋಯದಂಥ ಅತಿ ನುಣುಪು ರಚನೆಯಿಂದ ಆಗಿರುವುದರಿಂದ ರಕ್ತ ಹೆಪ್ಪುಗಟ್ಟದೆ ದ್ರವರೂಪದಲ್ಲೇ ಇರುತ್ತದೆ. ಗಾಯದಿಂದಾಗಿ ರಕ್ತ ಹೊರಬಂದು ಗಾಯಸ್ಥಳವನ್ನು ತೇವಮಾಡುವುದರಿಂದ, ಅದರ ಸ್ವಭಾವ ಬದಲಾವಣೆ ಆಗಿ ಆ ಸ್ಥಳದಲ್ಲಿ ದ್ರವರಕ್ತ ಘನೀಕರಿಸುತ್ತದೆ. ಎರಡನೆಯದು, ದೇಹದಲ್ಲಿ ರಕ್ತ ಚಲಿಸುತ್ತಲೇ ಇರುವುದರಿಂದ ಘನೀಕರಣಕ್ಕೆ ಕಾಲಾವಕಾಶವಿರುವುದಿಲ್ಲ. ರಕ್ತ ಹೊರಬಂದಾಗ ಚಲಿಸದೆ ಸ್ಥಿರವಾಗಿರುವಾಗ ಉರಿಊತ, ಪೆಡಸಣೆ (ಅಧಿರೋಮ) ಮುಂತಾದ ಕಾರಣಗಳಿಂದ ಹೃದಯ ಹಾಗು ರಕ್ತನಾಳಗಳ ಒಳಮೈ ಒರಟಾಗಿ ಅದನ್ನು ರಕ್ತ ಒದ್ದೆ ಮಾಡಬಹುದು. ಜೊತೆಗೆ ಈ ಸ್ಥಿತಿಗಳಲ್ಲಿ ರಕ್ತಪರಿಚಲನೆಗೆ ಅಡ್ಡಿಯಾಗಬಹುದು. ರಕ್ತದಿಂದ ಒದ್ದೆ ಆಗುವ ಪ್ರಕ್ರಿಯೆಯಿಂದ ಆ ತನಕ ತಡೆಹಿಡಿಯಲ್ಪಟ್ಟಿರುವ ಒಂದು ವಿಶಿಷ್ಟ ಕ್ರಿಯಾವಿಧಾನದ ಬಿಡುಗಡೆ ಆದಂತಾಗಿ ರಕ್ತ ನಾಲ್ಕಾರು ನಿಮಿಷಗಳಲ್ಲಿ ಘನೀಕರಿಸುತ್ತದೆ.

ರಕ್ತದಿಂದ ಒದ್ದೆಯಾಗುವ ಸ್ಥಳದಲ್ಲಿ ಮಾತ್ರ ರಕ್ತದ ಕಣಿತ್ರಗಳು (ಕಿರುತಟ್ಟೆಗಳು) ಒಂದಕ್ಕೊಂದು ಅಂಟಿಕೊಂಡು ಸಣ್ಣ ದೊಡ್ಡ ಗುಂಪುಗಳಾಗುತ್ತವೆ ಮತ್ತು ಛಿದ್ರಗೊಂಡು ನಾಶವಾಗಲು ಪ್ರಾರಂಭಿಸುತ್ತವೆ. ಗಾಯದಿಂದ ರಕ್ತನಾಳದ ಮತ್ತು ಸ್ಥಳೀಯ ಇತರ ದೇಹ ಕೋಶಗಳು ನಾಶವಾಗುವುದರಿಂದ ಬಿಡುಗಡೆಯಾದ ವಸ್ತುವೂ (ಇದಕ್ಕೆ ಅಂಗಾಂಶ ಥ್ರಾಂಬೋಪ್ಲಾಸ್ಟಿನ್ ಎಂದು ಹೆಸರು) ರಕ್ತ ಹೆಪ್ಪಾಗುವಿಕೆಯ ವಿಧಾನವನ್ನು ಪ್ರಾರಂಭಿಸಬಲ್ಲದು. ವಿಧಾನ ಹೇಗೇ ಪ್ರಾರಂಭವಾದರೂ ಅನಂತರ ಮುಂದಿನ ಘನೀಕರಣ ಪ್ರಕ್ರಿಯೆಗಳು ತಾವಾಗಿಯೇ ಮುಂದುವರಿದು ಒಂದೆರಡು ನಿಮಷಗಳಲ್ಲಿ ರಕ್ತ ಹೆಪ್ಪುಗಟ್ಟುತ್ತದೆ. ರಕ್ತವನ್ನು ಶೈತ್ಯೀಕರಿಸಿ ಇಟ್ಟರೆ ಗರಣೆ ಕಟ್ಟುವುದು ನಿಧಾನವಾಗಿ ಒಂದೆರಡು ಗಂಟೆಗಳೇ ಆಗಬಹುದು. ರಕ್ತವನ್ನು 56 ಸೆ ನಷ್ಟು ಬೆಚ್ಚಗೆ ಮಾಡಿ ಅನಂತರ ತಣಿಯಲು ಬಿಟ್ಟರೆ ಅಂಥ ರಕ್ತ ಸಾಮಾನ್ಯವಾಗಿ ಗರಣೆಗಟ್ಟುವುದೇ ಇಲ್ಲ. ಹಾಗೆಯೇ ಸೋಡಿಯಮ್ ಸಲ್ಫೇಟ್ ಮುಂತಾದ ತಟಸ್ಥ (ನ್ಯೂಟ್ರಲ್) ಲವಣಗಳನ್ನು ಬೆರಸಿಟ್ಟರೂ ಆ ರಕ್ತ ಗರಣೆ ಕಟ್ಟುವುದಿಲ್ಲ. ರಕ್ತ ಹೆಪ್ಪುಗಟ್ಟುವಿಕೆಯಲ್ಲಿ ಕಿಣ್ವಗಳ ಪಾತ್ರವಿದೆ ಎಂದು ಇವೆರಡು ಪ್ರಯೋಗಗಳಿಂದಲೂ ತಿಳಿಯುತ್ತದೆ. ರಕ್ತಕ್ಕೆ ಸ್ವಲ್ಪ ಪೊಟ್ಯಾಸಿಯಮ್ ಆಕ್ಸಲೇಟ್ ಪುಡಿಯನ್ನೂ (ಇದು ವಿಷ) ಸೋಡಿಯಮ್ ಸಿಟ್ರೇಟ್ ಪುಡಿಯನ್ನೊ ಸೇರಿಸಿದರೂ ರಕ್ತ ಗರಣೆಕಟ್ಟದೆ ದ್ರವವಾಗಿಯೆ ಇರುತ್ತದೆ. ಈ ಪುಡಿಗಳಿಂದ ರಕ್ತದಲ್ಲಿ ನೈಸರ್ಗಿಕವಾಗಿ ಇರುವ ಕ್ಯಾಲ್ಸಿಯಮ್ ಲವಣಗಳು ಕ್ರಿಯಾವೈಫಲ್ಯಗೊಳ್ಳುವುದರಿಂದ ರಕ್ತ ಗರಣೆ ಕಟ್ಟಲಾರದೆಂದು ತಿಳಿದುಬಂದಿದೆ. ಅಂದರೆ ರಕ್ತ ಹೆಪ್ಪು ಗಟ್ಟುವಿಕೆಗೆ (ನೈಸರ್ಗಿಕವಾಗಿ ರಕ್ತದಲ್ಲೆ ಇರುವ) ಕ್ಯಾಲ್ಸಿಯಮ್ ಅಯಾನ್‌ಗಳು ಅಗತ್ಯ.

ಒಂದು ತೊಟ್ಟು ರಕ್ತವನ್ನು ಗಾಜಿನ ಫಲಕದ ಮೇಲೆ ಇಟ್ಟು ಸೂಕ್ಷ್ಮದರ್ಶಕದ ಮೂಲಕ ವೀಕ್ಷಿಸುತ್ತಿದ್ದರೆ, ರಕ್ತದ ಕಣಿತ್ರಗಳು ಅಲ್ಲಲ್ಲಿ ಗುಂಪುಗಳಾಗುವುದನ್ನೂ ಶೀಘ್ರದಲ್ಲೇ ಅವು ನಶಿಸುವುದನ್ನೂ ನೋಡಬಹುದು. ಇಂಥ ಸ್ಥಳಗಳಿಂದ ತೆಳುವಾಗಿ ನೆಟ್ಟಗೆ ಸೂಜಿಯಂತಿರುವ ಎಳೆಗಳು ಉದ್ಭವಿಸಿ ಎಲ್ಲ ದಿಕ್ಕಿನಲ್ಲು ಚಾಚಿಕೊಳ್ಳುವುದನ್ನೂ ಅವು ನೆರೆಗುಂಪುಗಳಿಂದ ಉದ್ಭವಿಸಿದ ಎಳೆಗಳೊಡನೆ ಸೇರಿಕೊಳ್ಳುವುದನ್ನೂ ಶೀಘ್ರದಲ್ಲೇ ಗಮನಿಸಬಹುದು. ಎಳೆಗಳ ಜಾಲರಿಯಲ್ಲಿ ರಕ್ತಕಣಗಳು ಸಿಕ್ಕಿಕೊಂಡಿರುವುದನ್ನೂ ವೀಕ್ಷಿಸಬಹುದು. ಈ ಸಮಯದಲ್ಲಿ ಗಾಜಿನ ಫಲಕವನ್ನು ಅತ್ತಿತ್ತ ಸರಿಸಿದರೆ ರಕ್ತದ ತೊಟ್ಟು ಅಲುಗಾಡದೆ ಗಟ್ಟಿಗೊಂಡುಬಿಟ್ಟಿರುತ್ತದೆ. ಫಲಕವನ್ನು ಇನ್ನೂ 1/2 – 1 ಗಂಟೆ ಹಾಗೆಯೇ ಇಟ್ಟಿದ್ದರೆ ರಕ್ತದ ಹೆಪ್ಪು ಕುಗ್ಗಿ ಸಣ್ಣ ಗಂಟಿನಂತಾಗಿರುವುದೂ ಗಂಟಿನ ಸುತ್ತ ನೀರಿನಂತಿರುವ ದ್ರವ ಒಸರಿರುವುದೂ ಕಾಣಬರುತ್ತದೆ. ಈ ದ್ರವಕ್ಕೆ ರಕ್ತಲಸಿಕೆ (ಸೀರಮ್) ಎಂದು ಹೆಸರು. ಮೇಲಿನ ಪ್ರಯೋಗಕ್ಕೆ ಆಲ್ಕೋಹಾಲಿನಿಂದ ಶುದ್ಧಿಮಾಡಿದ ಬೆರಳನ್ನು ಅದೆ ರೀತಿ ಶುದ್ಧ ಮಾಡಿದ ಸೂಜಿಯಿಂದ ಚುಚ್ಚು ಫಲಕದ ಮೇಲೆ ರಕ್ತದ ತೊಟ್ಟನ್ನು ಪಡೆಯುವುದು ವಾಡಿಕೆ. ಹೀಗೆ ಚುಚ್ಚಿದಾಗ ರಕ್ತ ಹೊರಬಂದಾಗಿನಿಂದ ರಕ್ತದ ಘನೀಕರಣ ಅವಧಿಯನ್ನು (ಕೊಯಾಗ್ಯುಲೇಷನ್ ಟೈಮ್; ಕ್ಲಾಟಿಂಗ್ ಟೈಮ್) ಗೊತ್ತುಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಇದು 4 – 8 ನಿಮಿಷಗಳು. ಇದರಲ್ಲಿ ವ್ಯತ್ಯಾಸವಾದರೆ ಅಪಾಯ. ಕಡಿಮೆ ಆಗಿದ್ದರೆ ದೇಹದ ಒಳಗೇ ರಕ್ತ ಹೆಪ್ಪುಗಟ್ಟಿಕೊಳ್ಳುವ ಸಂಭವದ ಸೂಚನೆ; ಅವಧಿಯನ್ನು ಶಸ್ತ್ರಿಯೆಗೆ ಮುಂಚೆ ನಿರ್ಧಾರಮಾಡಿಕೊಳ್ಳುವುದಿದೆ. ಈ ಅವಧಿಯನ್ನು ನಿರ್ಧರಿಸಲು ಬೇರೆ ಬೇರೆಯ ಹಾಗೂ ನಾಜೂಕಾದ ವಿಧಾನಗಳನ್ನೂ ಅನುಸರಿಸಲಾಗುವುದು.

ರಕ್ತ ಹೆಪ್ಪುಗಟ್ಟುವುದಕ್ಕೆ ಪ್ರಾಥಮಿಕ ಕಾರಣ ರಕ್ತದ ದ್ರವಭಾಗದಲ್ಲಿ (ಪ್ಲಾಸ್ಮ) ಲೀನವಾಗಿರುವ ಫೈಬ್ರಿನೋಜೆನ್ ಎಂಬ ಪ್ರೋಟೀನು (ಸು. 100 ಮಿಲಿ ರಕ್ತದಲ್ಲಿ 0.2 ಗ್ರಾ ನಷ್ಟಿರುತ್ತದೆ) ಫೈಬ್ರಿನ್ ಎಂಬ, ಲೀನವಾಗದ, ಪ್ರೋಟೀನಾಗಿ ರೂಪಾಂತರಗೊಳ್ಳುವುದು. ಹೆಪ್ಪುಗಟ್ಟುತ್ತಿರುವುದನ್ನು ಸೂಕ್ಷ್ಮದರ್ಶಕದ ಕೆಳಗೆ ವೀಕ್ಷಿಸುವಾಗ ಕಾಣಬರುವ ಸೂಜಿಯಂಥ ಎಳೆಗಳೇ ಫೈಬ್ರಿನ್. ರಕ್ತ ಗರಣೆಯ ಗಟ್ಟಿಯಲ್ಲಿ ಫೈಬ್ರಿನ್ ಹಾಗು ರಕ್ತಕಣಗಳೂ (ರಕ್ತದ ರಚಿತವಸ್ತು ಭಾಗ, ಫಾರಮ್ಡ್ ಎಲಿಮೆಂಟ್ಸ್) ಇರುತ್ತವೆ. ಗರಣೆ ಕಟ್ಟಲು ಫೈಬ್ರಿನೋಜೆನ್ ಫೈಬ್ರಿನ್ ಆಗಿ ಪರಿವರ್ತಿತವಾಗುವುದೇ ಮುಖ್ಯ ಕಾರಣವಾಗಿರುವುದರಿಂದ ರಕ್ತವಷ್ಟೇ ಅಲ್ಲದೆ ಬರಿ ರಕ್ತದ್ರವ ಕೂಡ ಗರಣೆ ಕಟ್ಟುವುದು ವ್ಯಕ್ತ.

ಇಲ್ಲಿ ಹೇಳಿರುವ ಪರಿವರ್ತನೆಗೆ ಥ್ರಾಂಬಿನ್ ಎಂಬ ಕಿಣ್ವ ಕಾರಣ. ಇದರ ಜನಕ ವಸ್ತು ಪ್ರೋಥ್ರಾಂಬಿನ್ ಪ್ರೋಟೀನು, ರಕ್ತದಲ್ಲಿ ನೈಸರ್ಗಿಕವಾಗಿ ಆದರೆ ಕಿಂಚಿತ್ತಾಗಿ (0.03%) ಇರುತ್ತದೆ. ಇದು ಥ್ರಾಂಬಿನ್ನಾಗಿ ಪರಿವರ್ತಿತವಾಗಬೇಕಾದರೆ ಥ್ರಾಂಬೊಪ್ಲಾಸ್ಟಿನ್‌ಗಳು ಮತ್ತು ಕ್ಯಾಲ್ಸಿಯಮ್ ಅಯಾನುಗಳು ಅಗತ್ಯ. ರಕ್ತದಲ್ಲಿ ನೈಸರ್ಗಿಕವಾಗಿ ಕ್ಯಾಲ್ಸಿಯಮ್ ಅಯಾನ್‌ಗಳು ಇರುವುದಾದರೂ ಥ್ರಾಂಬೊಪ್ಲಾಸ್ಟಿನ್‌ಗಳು ಇರುವುದಿಲ್ಲ. ಆದ್ದರಿಂದಲೇ ಪರಿಚಲನೆಯಲ್ಲಿ ರಕ್ತ ಗರಣೆಕಟ್ಟುವುದಿಲ್ಲ. ಗಾಯದಿಂದ ಹೊರಬಂದು ಸ್ಥಳವನ್ನು ಒದ್ದೆ ಮಾಡಿದಾಗ ಕಣಿತ್ರ ಹಾಗೂ ನಶಿಸಿದ ದೇಹಕೋಶಗಳಿಂದ ಥ್ರಾಂಬೊಪ್ಲಾಸ್ಟಿನ್‌ಗಳು ಉದ್ಭವವಾಗುವುದರಿಂದ ಹೊರಬಿದ್ದ ರಕ್ತ ಮಾತ್ರವೇ ಗರಣೆ ಕಟ್ಟಬಲ್ಲದು.

ಥ್ರಾಂಬೊಪ್ಲಾಸ್ಟಿನ್‌ಗಳಲ್ಲದೆ ರಕ್ತದ್ರವದಲ್ಲಿ, ದೇಹಕೊಶಗಳ ಲಯದಿಂದ ಇನ್ನೂ ಅನೇಕ ವಸ್ತುಗಳು ಬಿಡುಗಡೆಯಾಗುತ್ತವೆ ಮತ್ತು ರಕ್ತಗರಣೆ ಕಟ್ಟಲು ಇವು ಅತ್ಯಾವಶ್ಯಕ.

ಪತ್ತೆ ಆದ ಹೊಸದರಲ್ಲಿ ವಿವಿಧ ಸಂಶೋಧಕರು ಈ ಘಟಕಗಳಿಗೆ ವಿವಿಧ ಹೆಸರುಗಳನ್ನು ಇಟ್ಟಿದ್ದು ವಿವರಣೆಗಳು ಗೊಂದಲಮಯವಾಗಿದ್ದವು. ಆದ್ದರಿಂದ ಘನೀಕರಣದಲ್ಲಿ ಭಾಗವಹಿಸಿರುವ ಘಟಕಗಳೆಲ್ಲ ಅನುಕ್ರಮವಾಗಿ ಘಟಕ 1, ಘಟಕ 2, ಇತ್ಯಾದಿ ಹೆಸರಿಡಬೇಕೆಂದು ನಿರ್ಧರಿಸಲಾಗಿದೆ (ಕೊಯಾಗ್ಯುಲೇಷನ್ ಫ್ಯಾಕ್ಟರ್ 1,2 ಇತ್ಯಾದಿ). ಇದರಂತೆ ಫೈಬ್ರಿನೋಜೆನ್ ಘಟಕ 1, ಪ್ರೊಥ್ರಾಂಬಿನ್ ಘಟಕ 2, ಥ್ರಾಂಭೋಪ್ಲಾಸ್ಟಿನ್ ಘಟಕ 3, ಕ್ಯಾಲ್ಸಿಯಮ್ ಅಯಾನ್‌ಗಳ ಘಟಕ 4, ಇವು ಮೊದಲಿನಿಂದಲೂ ಗೊತ್ತಿದ್ದಂತೆ ರಕ್ತ ಘನೀಕರಣದಲ್ಲಿ ಭಾಗವಹಿಸುವ ಘಟಕಗಳು, 5 ನೆಯ ಘಟಕ ಅಕ್ಸೆಲರಿನ್ (ತ್ವರಿತಗೊಳಿಸುವ ಗ್ಲಾಬ್ಯುಲಿನ್). ಇದು ರಕ್ತದ್ರವದಲ್ಲಿ ಸಾಮಾನ್ಯವಾಗಿ ಇರುವ ಘಟಕ. ಆದರೆ ಹರಿಯುತ್ತಿರುವ ರಕ್ತದಲ್ಲಿ ಇದು ಜಡಪದಾರ್ಥವಾದ ಪ್ರೊಆಕ್ಸೆಲರಿನ್ ರೂಪದಲ್ಲಿದ್ದು ರಕ್ತ ಘನೀಕರಣ ಸಮಯದಲ್ಲಿ ಚುರುಕುಗೊಂಡು ಅಕ್ಸೆಲರಿನ್ ಆಗುತ್ತದೆ. ಆದ್ದರಿಂದ ಇವೆರಡಕ್ಕೆ ಘಟಕ 5 ಮತ್ತು 6 ಎಂದು ಹೆಸರಿಸಬೇಕೆಂದೂ ಇತ್ತು. ಆದರೆ ಅನಂತರ ರಕ್ತದ್ರವದಲ್ಲಿ ನೈಸರ್ಗಿಕವಾಗಿರುವ 5 ನೆಯ ವಸ್ತುವೇ ಚುರುಕಾಗಿರುವುದೆಂದೂ ಅದೇ 6 ನೆಯ ಘಟಕವಾಗಿ ವರ್ತಿಸುವುದೆಂದೂ ತಿಳಿದುಬಂದು ಪ್ರೊಆಕ್ಸೆಲರಿನ್ ಎಂಬುದೂ 6 ನೆಯ ಘಟಕ ಎಂಬುದು ಕೈಬಿಡಲ್ಪಟ್ಟವು. ಪ್ರಾರಂಭವಾದ ರಕ್ತ ಘನೀಕರಣವನ್ನು 5 ನೆಯ ಘಟಕ ಅತಿತ್ವರಿತವಾಗಿ ಮುಂದುವರಿಯುವಂತೆ ಮಾಡುತ್ತದೆ. ಅಲ್ಲದೆ ಈ ಸಮಯದಲ್ಲಿ ಬಳಕೆಯಾಗುತ್ತದೆ. ಆದ್ದರಿಂದ ಗರಣೆಗಟ್ಟಿಯಲ್ಲಾಗಲಿ ರಕ್ತಲಸಿಕೆಯಲ್ಲಾಗಲಿ ಇದು ಇರುವುದಿಲ್ಲ. ಜೊತೆಗೆ ರಕ್ತವನ್ನು ಬೆಚ್ಚಗೆ ಮಾಡಿದರೆ (56$^0$ ಸೆ.) ಇಲ್ಲವೇ ಸಿಟ್ರೇಟ್ ಸೇರಿಸಿ ಶೈತ್ಯದಲ್ಲಿ ಸ್ವಲ್ಪಹೊತ್ತು ಇಟ್ಟಿದ್ದರೆ ತಾನಾಗಿಯೇ ನಾಶವಾಗಿಬಿಡುತ್ತದೆ. ಆದ್ದರಿಂದ 5 ನೆಯ ಘಟಕಕ್ಕೆ ಅಸ್ಥಾಯಿಘಟಕ (ಲೇಬೈಲ್ ಫ್ಯಾಕ್ಟರ್) ಎಂದೂ ಹೆಸರಿದೆ. ಹೀಗೆ 5 ನೆಯ ಘಟಕ ನಾಶವಾಗಿರುವ ರಕ್ತ ಗರಣೆ ಕಟ್ಟದು. ಆದರೆ ಇದಕ್ಕೆ ತೀರ ಕೊಂಚವೇ ಹೊಸ ರಕ್ತವನ್ನು ಬೆರೆಸಿದರೆ, ಅರ್ಥಾತ್, ಲವಲೇಶದಷ್ಟು 5 ನೆಯ ಘಟಕವನ್ನು ಸೇರಿಸಿದರೆ ಇದೂ ಮಾಮೂಲಿನಂತೆ ಹೆಪ್ಪುಗಟ್ಟಬಲ್ಲದು.

7 ನೆಯ ಘಟಕದ ಮೂಲ ಹೆಸರು ಪ್ರೊಕನ್‌ವರ್‌ಟಿನ್, ಎಸ್, ಪಿ, ಸಿ, ಎ., ಕನ್‌ವರ್‌ಟಿನ್ ಎಂದೆಲ್ಲ ವ್ಯವಹರಿಸುವುದಿತ್ತು. ಇದೂ ರಕ್ತದ್ರವದಲ್ಲಿರುವ ಆದರೆ ಸ್ಥಿರವಾದ ಘಟಕ. 8 ನೆಯ ಘಟಕ ಅಂಟಿ ಹೀಮೋಫೀಲಿಕ್ ಗ್ಲಾಬ್ಯುಲಿನ್ (ಹೀಮೋಫೀಲಿಯ ರೋಗನಿವಾರಕ ಗ್ಲಾಬ್ಯುಲಿನ್; ಎ ಎಚ್ ಜಿ.) ಎಂಬ ಪ್ರೋಟಿನ್ ವಸ್ತು. ಇದು ರಕ್ತದ್ರವದಲ್ಲಿ ಸಹಜವಾಗಿ ಇರುತ್ತದೆ. ಆದರೆ ಹೀಮೋಫೀಲಿಯ ರೋಗಿಗಳಲ್ಲಿ ಇದು ಒಂದು ವಿಶಿಷ್ಟ ರೀತಿಯ ಆನುವಂಶಿಕ ಗುಣವಾಗಿ ಆಜನ್ಮಲೋಪವಾಗಿರುತ್ತದೆ. ಆದ್ದರಿಂದ ಇವರ ರಕ್ತಘನೀಕರಿಸಲಾರದೆ ಅಲ್ಪ ಗಾಯಗಳಿಂದಲೂ ಅಗಾಧವಾಗಿ ಹೆಚ್ಚು ಕಾಲ ರಕ್ತಸ್ರಾವವಾಗುತ್ತಲೇ ಇರುತ್ತದೆ. ಈ ಘಟಕದ ಇರುವಿಕೆಯಿಂದ ವ್ಯಕ್ತಿ ಹೀಮೋಫೀಲಿಯಕ್ಕೆ ಈಡಾಗುವುದಿಲ್ಲವಾದ್ದರಿಂದ ಇದಕ್ಕ ಎ.ಎಚ್.ಜಿ ಎಂದು ಹೆಸರಿಸಿದೆ. ಇದೂ 5 ನೆಯ ಘಟಕದಂತೆ ರಕ್ತಗರಣೆ ಕಟ್ಟಿದಾಗ ನಾಶವಾಗಿ ಹೋಗುತ್ತದೆ. ಆದ್ದರಿಂದ ಘನೀಕರಣಾನಂತರ ವಸ್ತುಗಳಲ್ಲಿ ಇದು ಇರುವುದಿಲ್ಲ.

9 ನೆಯ ಘಟಕಕ್ಕೆ ಕ್ರಿಸ್‌ಮಸ್ ಫ್ಯಾಕ್ಟರ್ ಎಂದಿತ್ತು. ಕ್ರಿಸ್‌ಮಸ್ ಎಂಬ ವ್ಯಕ್ತಿಯಲ್ಲಿ ಈ ಘಟಕ ಹೇಗೋ ಲೋಪವಾಗಿದ್ದು ಹೀಮೋಫೀಲಿಯದಂಥ ರೋಗದ (ಆದರೆ ನಿಜವಾಗಿ ಹೀಮೋಫೀಲಿಯ ಅಲ್ಲದೆ) ಕಾರಣವಾಗಿದ್ದುದೆಂದು ತಿಳಿದು ಬಂದು ಈ ಘಟಕ 10 ನೆಯ ಸ್ಟೂವರ್ಟ್‌ಪ್ರೋವರ್ ಫ್ಯಾಕ್ಟರ್ ಹೆಸರಿದೆ. ಹೀಗೆಯೇ 11, 12, 13, 14ನೆಯ ಘಟಕಗಳ ಆವಿಷ್ಕಾರವೂ ಆಗಿದೆ. ಇವುಗಳೆಲ್ಲ ಪ್ರೊಥ್ರಾಂಬಿನ್ – ಥ್ರಾಂಬೊಪ್ಲಾಸ್ಟಿನ್‌ಗಳನ್ನು ಚುರುಕುಗೊಳಿಸಿ ರಕ್ತ ಬೇಗ ಗರಣೆಗಟ್ಟುವಂತೆ ಮಾಡುವುವು. 5 ನೆಯ ಮತ್ತು 8 ನೆಯ ಘಟಕಗಳನ್ನು ಬಿಟ್ಟು ಮಿಕ್ಕೆಲ್ಲವೂಗರಣೆಯಲ್ಲೊ ರಕ್ತಲಸಿಕೆಯಲ್ಲೋ ಇದ್ದೆ ಇರುವುದರಿಂದ ಅವುಗಳೆಲ್ಲ ಕಿಣ್ವಗಳಂತೆ ವರ್ತಿಸುತ್ತವೆ ಎಂದು ನಿರ್ಧರಿಸಲಾಗಿದೆ. ಒಂದು ಘಟಕ ಇನ್ನೊಂದು ಘಟಕದೊಡನೆ (ಘಟಕದ ಅಂಕಿಗೆ ಅನುಸಾರವಾಗಿ ಅಲ್ಲ) ಒಂದು ಕ್ರಮ ಅನುಸರಿಸಿ ವರ್ತಿಸುತ್ತವೆ. ಇದರಿಂದ ಹೊಸ ವಸ್ತು ಕ್ಷಣಿಕವಾಗಿ ಉತ್ಪನ್ನವಾಗಿ ಅದು ಮತ್ತೊಂದು ಘಟಕದೊಡನೆ ಕ್ರಮಶಃ ವರ್ತಿಸುತ್ತದೆ. ಕೊನೆಗೊ ಥ್ರಾಂಬೊಪ್ಲಾಸ್ಟಿನ್ ಚುರುಕಾಗಿ (ಇದಕ್ಕೆ ಹಲವು ಸೆಕೆಂಡುಗಳು, ಗರಿಷ್ಠ 2 – 3 ಮಿನಿಟುಗಳು ಬೇಕು) ಪ್ರೊಥ್ರಾಂಬಿನನ್ನು ಥ್ರಾಂಬಿನ್ನಾಗಿ ಪರಿವರ್ತಿಸುತ್ತದೆ. ಕೂಡಲೇ ಇದು ಫೈಬ್ರಿನೋಜೆನ್ನನ್ನು ಫೈಬ್ರಿನ್ನಾಗಿ ಮಾಡಿ ರಕ್ತವನ್ನು ಹೆಪ್ಪುಗಟ್ಟಿಸುತ್ತದೆ. ಇವೆಲ್ಲ ಒಟ್ಟು 4 – 6 ನಿಮಿಷಗಳಲ್ಲಿ ಮುಗಿಯುವ ಕ್ರಿಯೆ. ಕಣಿತ್ರದ ಲಯದ ಫಲವಾದ ಥ್ರಾಂಬೊಪ್ಲಾಸ್ಟಿನ್ನಿನ ಚುರುಕುಗೊಳಿಕೆಗೆ 7ನೆಯ ಘಟಕ ಬಿಟ್ಟು ಮಿಕ್ಕೆಲ್ಲವೂ ಅಗತ್ಯವೆಂದೂ ಸಾಮಾನ್ಯ ಕೋಶಲಯದ ಫಲವಾದ ಥ್ರಾಂಬೊಪ್ಲಾಸ್ಟಿನ್ನಿನ ಚುರುಕುಗೊಳಿಕೆಗೆ 8 ಮತ್ತು 9 ನೆಯ ಘಟಕಗಳು ಬೇಕಿಲ್ಲವೆಂದೂ ತಿಳಿದಿದೆ. ಥ್ರಾಂಬೊಪ್ಲಾಸ್ಟಿನ್ನಿನ ಈ ಸಕ್ರಮ ಚುರುಕುಗೊಳಿಕೆಯ ಕೆಲವು ಹಂತಗಳಲ್ಲಿ ಕ್ಯಾಲ್ಸಿಯಮ್ ಅಯಾನುಗಳ ಅಗತ್ಯವಿದೆ ಎಂದೂ ವ್ಯಕ್ತವಾಗಿದೆ.

ರಕ್ತಘನೀಕರಣದಿಂದ ಉದ್ಭವಿಸುವ ರೋಗಗಳು: ವಿವಿಧ ಘಟಕಗಳ ಕೊರತೆಯಿಂದಾಗಿ ರಕ್ತ ಗರಣೆ ಕಟ್ಟುವುದು ತಡವಾಗಬಹುದು. ಗರಣೆ ಕಟ್ಟದೆ ಹೋಗಬಹುದು. ಇದರ ಪರಿಣಾಮ ರಕ್ತಸ್ರಾವ ಹೆಚ್ಚು ಹೊತ್ತು ಮುಂದುವರಿಯುತ್ತದೆ. ಕೊರತೆ ಘಟಕಗಳನ್ನು ಪೂರೈಕೆಮಾಡಿ ಇವುಗಳನ್ನು ಚಿಕಿತ್ಸಿಸಬೇಕು. ಹೀಮೋಫೀಲಿಯ ಮತ್ತು ಕ್ರಿಸ್‌ಮಸ್ ರೋಗಗಳ ವಿಚಾರ ಈ ಹಿಂದೆ ಹೇಳಿದೆ. ಪರ್‌ಪ್ಯುರ ಎಂಬುದು ಇನ್ನೊಂದು ರೋಗ. ಇದರಲ್ಲಿ ರಕ್ತದ ಕಣಿತ್ರಗಳು ಅತಿ ಕಡಿಮೆ ಸಂಖ್ಯೆಯಲ್ಲಿ ಒಂದು (ಘನಮಿಮೀ ರಕ್ತದಲ್ಲಿ 1 ಲಕ್ಷಕ್ಕೂ ಕಡಿಮೆ) ಇರುತ್ತವೆ.

ಕಾರಣಾಂತರಗಳಿಂದ ಪ್ರೋಥ್ರಾಂಬಿನ್ ಕೊರತೆ ತಲೆದೋರುವ ಸ್ಥಿತಿಗಳನ್ನು ವಿಶಿಷ್ಟವಾಗಿ ಗಮನಿಸಬೇಕು. ಸ್ವಾಭಾವಿಕವಾಗಿ ಪ್ರೋಥ್ರಾಂಬಿನ್ ಯಕೃತ್ತಿನಲ್ಲಿ ಉತ್ಪತ್ತಿ ಆಗುವ ಪ್ರೊಟೀನು. ಆದರೆ ಈ ಕ್ರಿಯೆಗೆ K ವೈಟಮಿನ್ನು ಅತ್ಯಗತ್ಯ. K ವೈಟಮಿನ್ನಿನ ಅಭಾವದಿಂದ ಪ್ರೊಥ್ರಾಂಬಿನ್ನಿನ ಉತ್ಪತ್ತಿಗೆ ಧಕ್ಕೆಯಾಗಿ, ರಕ್ತಘನೀಕರಿಸಲಾರದೆ ಗಾಯದಿಂದ ಅತಿಯಾಗಿ ರಕ್ತಸ್ರಾವವಾಗುವುದಿದೆ. ರಕ್ತ ನ್ಯೂನ್ಯತೆಯಿಂದ ಸಾಮಾನ್ಯವಾಗಿ K ವೈಟಮಿನ್ನಿನ ಕೊರತೆ ಉಂಟಾಗುವುದು ಅಪರೂಪವಾದರೂ ಕಾಮಾಲೆ ರೋಗದಲ್ಲಿ ಈ ಕೊರತೆ ಉಂಟಾಗುವುದು ಸಾಮಾನ್ಯ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಕಾಮಾಲೆ ರೋಗದಲ್ಲಿ ಪಿತ್ತರಸ ಕರುಳನ್ನು ಸೇರಲಾರದು. ಪಿತ್ತರಸದ ಅಭಾವಸ್ಥಿತಿಯಲ್ಲಿ ಆಹಾರದಲ್ಲಿರುವ K ವೈಟಮಿನ್ನು ಕರುಳಿನಲ್ಲಿ ರಕ್ತಗತವೇ ಆಗುವುದಿಲ್ಲ. ತತ್ಫಲವಾಗಿ ವೈಟಮಿನ್ ಕೊರತೆ, ಪ್ರೊಥ್ರಾಂಬಿನ್ ಕೊರತೆ ಹಾಗೂ ರಕ್ತ ಘನೀಕರಣದ ಎಡವಟ್ಟುಗಳು ಕಂಡುಬರುತ್ತವೆ.

ಅಪರೂಪವಾಗಿ ರಕ್ತ ಮಾಮೂಲಿಗಿಂತ ಬಲು ಬೇಗನೇ ಗರಣೆ ಕಟ್ಟಿಕೊಳ್ಳುವ ಸ್ವಭಾವದ್ದಾಗಿ ಇರುವ ಸಂಭವವೂ ಇದೆ. ಹೀಗಿದ್ದಾಗ ಹೃದಯ ಹಾಗೂ ರಕ್ತನಾಳಗಳ ಒಳಗೆ ರಕ್ತ ಗರಣೆ ಕಟ್ಟಿಕೊಳ್ಳಬಹುದು. ಆಗ ರಕ್ತಪರಿಚಲನೆಗೆ ಅಡ್ಡಿಯಾಗಿ ಅಂಗಾಂಗಗಳ ರಕ್ತಪೂರೈಕೆಗೆ ಧಕ್ಕೆಯಾಗುತ್ತದೆ. ಗರಣೆಯ ಒಂದು ತುಣುಕು ರಕ್ತಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ದೇಹದಲ್ಲಿ ಎಲ್ಲಿಯೋ ಕಿರಿ ಅಪಧಮನಿ ಒಂದರಲ್ಲಿ ಸಿಕ್ಕಿಕೊಂಡು ಅಲ್ಲಿಂದ ಮುಂದೆ ಹೋಗಲಾರದೆ ಆ ಅಪಧಮನಿಯಲ್ಲಿ ರಕ್ತ ಹೋಗದಂತೆ ತಡೆದುಬಿಡಬಹುದು. ಹೃದಯದಲ್ಲಿ ಈ ರೀತಿ ಆದರೆ ಹೃದಯಾಘಾತವಾಗುತ್ತದೆ. ಮಿದುಳಿನಲ್ಲಿ ಈ ರೀತಿ ಆದರೆ ಪಕ್ಷಾಘಾತ ತಲೆದೋರುತ್ತದೆ. ಈ ಸ್ಥಿತಿಗಳು ಮಾರಕ ಆಗುವ ಸಂಭವ ಗಣನೀಯವಾಗಿಯೆ ಇದೆ. ಬೇರೆ ಸ್ಥಳಗಳಲ್ಲೂ ಇಂಥ ಅಡಚಣೆಯಿಂದ ರಕ್ತಪೂರೈಕೆ ಆಗದ ಭಾಗ ಮೃತವಾಗಬಹುದು. ಇವುಗಳನ್ನು ತಪ್ಪಿಸಬೇಕಾದರೆ ರಕ್ತ ಹೆಪ್ಪುಗಟ್ಟುವ ಸಾಮರ್ಥ್ಯವನ್ನೇ ತಡೆಗಟ್ಟಬೇಕು. ಇದಕ್ಕಾಗಿ ಕ್ಯಾಲ್ಸಿಯಮ್ ಸಿಟ್ರೇಟನ್ನು ಔಷಧವಾಗಿ ಬಳಸುವುದಿದೆ. ಹೆಪಾರಿನ್ ಎಂಬ ರಾಸಾಯನಿಕವನ್ನು ಚುಚ್ಚುಮದ್ದಾಗಿ ಬಳಸಬಹುದು. ಇದು ದೇಹದ ಅನೇಕ ಅಂಗಗಳಲ್ಲಿರುವ ಬಹಶಃ ರಕ್ತದಲ್ಲೂ ಇರುವ ಮಾಸ್ಟ್‌ಕೋಶಗಳಲ್ಲಿ ಉತ್ಪತ್ತಿ ಆಗುತ್ತಿದ್ದು ಕಿಂಚಿತ್ತಾಗಿ ರಕ್ತಕ್ಕೆ ಬಿಡುಗಡೆ ಆಗುತ್ತಿರುವ ರಾಸಾಯನಿಕ. ಕಾರಣಾಂತರಗಳಿಂದ ಪರಿಚಲಿಸುತ್ತಿರುವ ರಕ್ತದಲ್ಲಿ ಆಕಸ್ಮಾತ್ತಾಗಿ ಕೊಂಚ ಥ್ರಾಂಬಿನ್ ಉತ್ಪತ್ತಿ ಆಗಬಹುದು. ಆಗ ಅಲ್ಲೆ ರಕ್ತ ಗರಣೆ ಕಟ್ಟಿಕೊಳ್ಳುವುದನ್ನು ಈ ಹೆಪಾರಿನ್ ತಪ್ಪಿಸುತ್ತದೆ. ದೇಹದಲ್ಲಿ ಸ್ವಾಭಾವಿಕವಾಗಿ ರಕ್ತಗರಣೆ ಕಟ್ಟಿಕೊಳ್ಳದಂತೆ ತಡೆದು, ಪರಿಚಲಿಸುತ್ತಿರುವ ಅನುಕೂಲವಾಗುವಂತೆ ಅದನ್ನು ದ್ರವರೂಪದಲ್ಲೆ ಇರುವಂತೆ ಕಾಪಾಡಲು ಹೆಪಾರಿನ್ನೂ ಒಂದು ಕಾರಣ. ಪರಿಚಲನೆಯಲ್ಲಿ ರಕ್ತ ಗರಣೆಕಟ್ಟಿಕೊಂಡು ಮಾರಕವೇ ಆಗಬಹುದಾದ ತೊಂದರೆಯನ್ನು ನಿವಾರಿಸಲು ಬಳಸುವ ಇನ್ನೊಂದು ಔಷಧ ಡೈಕೊಮಾರಿನ್. ಕೆಟ್ಟುಹೋದ ಹಸುರು ಮೇವಿನಿಂದ ಈ ವಸ್ತುವನ್ನು ಮೊದಲು ಬೇರ್ಪಡಿಸಿದ್ದು ಅನಂತರ ಇದನ್ನು ಸಂಯೋಜಿಸಲಾಗಿದೆ. ಇದನ್ನು ಕೊಟ್ಟಾಗ ದೇಹದಲ್ಲಿ ಪ್ರೊಥ್ರಾಂಬಿನ್ನಿನ ಉತ್ಪತ್ತಿ ಸ್ಥಗಿತವಾಗಿ ಥ್ರಾಂಬಿನ್ನಿನ ಉತ್ಪತ್ತಿ ತತ್ಫಲವಾಗಿ ಸ್ಥಗಿತವಾಗಿ ರಕ್ತ ಗರಣೆ ಕಟ್ಟದಂತೆ ಆಗುತ್ತದೆ. ಡೈಕೊಮಾರಿನನ್ನು ಕೊಟ್ಟಾಗ ಅದು K ವೈಟಮಿನ್ನಿಗೆ ಪ್ರತಿರೋಧಿಯಾಗಿ ವರ್ತಿಸಿ ಪ್ರೊಥ್ರಾಂಬಿನ್ನು ಉತ್ಪತ್ತಿ ಆಗದಂತೆ ಮಾಡುತ್ತದೆ.

ರಕ್ತಸ್ರಾವವಾದಾಗ ಅದು ಘನೀಕರಿಸುವ ಕ್ರಮಕ್ಕೆ ವಿರುದ್ಧವಾಗಿ ರಕ್ತವುಹೃದಯ ರಕ್ತನಾಳಗಳಲ್ಲಿ ಇರುವಾಗ ಅದು ಘನೀಕರಿಸದಂಥ ಕ್ರಮವನ್ನು ಹೆಪಾರಿನ್ ಒದಗಿಸುತ್ತದೆ. ಇದರಿಂದ ವ್ಯಕ್ತಿಯ ಜೀವಿತಕಾಲದಲ್ಲಿ ಬಹುಶಃ ಇವೆರಡು ಕಾರ್ಯಕ್ರಮಗಳೂ ಒಂದಕ್ಕೆ ಅನುಗುಣವಾಗಿ ಇನ್ನೊಂದು ಜರುಗುತ್ತಿರುತ್ತದೆ. ಒಟ್ಟಿನಲ್ಲಿ ಪರಿಚಲಿಸುವ ರಕ್ತ ನಿರಂತವಾಗಿ ದ್ರವರೂಪದಲ್ಲಿ ಇರುವಂಥ ನೈಸರ್ಗಿಕ ಏರ್ಪಾಡಿದೆ. ಹಾಗೂ ಗರಣೆಕಟ್ಟಿದರೆ ಆ ಗರಣೆಯನ್ನು ಕರಗಿಸಿ ಪುನಃ ಅದನ್ನು ದ್ರವವನ್ನಾಗಿ ಮಾಡುವ ಕಾರ್ಯ ಫೈಬ್ರೋಲೈಸಿಸ್. ಆದರೆ ಪರಿಚಲಿಸುತ್ತಿರುವ ರಕ್ತದಲ್ಲಿ ಇದು ಇರುವುದಿಲ್ಲ. ಅಗತ್ಯವಾದಾಗ ಮಾತ್ರ ಉದ್ಭವಿಸುತ್ತದೆ. ಫೈಬ್ರಿನೋಲೈಸಿನ್ನಿನ ಜನಕವಸ್ತು ಪ್ರೋಫೈಬ್ರಿನೊಲೈಸಿನ್ ಅಥವಾ ಪ್ಲಾಸ್ಮಿನೋಜೆನ್ ಎಂಬುದು ರಕ್ತದ್ರವದಲ್ಲಿ ನೈಸರ್ಗಿಕವಾಗಿಯೇ ಇರುವ ವಸ್ತು. ಇದು ಜಡಗರಣೆಯನ್ನು ತಾನೇ

ಕರಗಿಸಲಾರದು. ಅದರ ಫೈಬ್ರಿನೋಕೈನೇಸ್ ಅಥವಾ ಪ್ಲಾಸ್ಮೊಕೈನೇಸ್ ಎಂಬ ಕಿಣ್ವದಿಂದ ಅದು ಫೈಬ್ರಿನೊಲೈಸಿನ್ ಆಗಿ ಪರಿವರ್ತಿತವಾಗುತ್ತದೆ. ತನ್ನ ಸರದಿಯಲ್ಲಿ ಇದು ರಕ್ತಗರಣೆಯನ್ನು ದ್ರವೀಕರಿಸುತ್ತದೆ. ಥ್ರಾಂಬಿನ್ನು ಆಕಸ್ಮಾತ್ತಾಗಿ ಕಿಂಚಿತ್ ಪ್ರಮಾಣದಲ್ಲಿ ಪರಿಚಲಿಸುತ್ತಿರುವ ರಕ್ತದಲ್ಲಿ ಉತ್ಪತ್ತಿ ಆಗುವಂತೆ ಪ್ಲಾಸ್ಮಿನ್ನೂ ಉತ್ಪತ್ತಿ ಆಗುತ್ತದೆ ಮತ್ತು ಥ್ರಾಂಬಿನ್ನಿಗೆ ವಿರೋಧವಾಗಿ ವರ್ತಿಸುತ್ತದೆ. ಇವೆರಡರ ಈ ಪರಸ್ಪರ ವಿರೋಧವೂ ರಕ್ತಪರಿಚಲನೆ ವ್ಯೂಹದಲ್ಲಿ ದ್ರವರೂಪದಲ್ಲಿ ಇರುವುದಕ್ಕೆ ಇನ್ನೊಂದು ಕಾರಣ ಎನಿಸಿದೆ. ರಕ್ತಸ್ರಾವವಾದಾಗ ಅಗಾಧ ಪ್ರಮಾಣದಲ್ಲಿ ಥ್ರಾಂಬಿನ್ನಿನ ಉತ್ಪತ್ತಿ ಆಗುವುದರಿಂದ ಅದು ರಕ್ತ ಹೆಪ್ಪುಗಟ್ಟಿಸುವುದನ್ನು ಹೆಪಾರಿನ್ನಾಗಲಿ ಪ್ಲಾಸ್ಮಿನ್ನಾಗಲಿ ತಡೆಯಲಾರವು.

ರಕ್ತಪಂಗಡಗಳು: ಮನುಷ್ಯರ ಕೆಂಪುರಕ್ತಕಣಗಳಲ್ಲಿ ಅಡಕವಾಗಿರುವ ಅಂಟುಕಾರಕಜನಕಗಳು (ಅಗ್ಲೂಟಿನೋಜೆನ್ಸ್) ಎಂಬ ವಸ್ತುಗಳ ಇರುವಿಕೆ ಅಥವಾ ಇಲ್ಲದಿರುವಿಕೆಯನ್ನು ಅನುಸರಿಸಿ ಎಲ್ಲ ಮಾನವರ ರಕ್ತವನ್ನೂ ವಿವಿಧ ಗುಂಪುಗಳಾಗಿ ವಿಂಗಡಿಸಿ ವಿಶಿಷ್ಟವಾಗಿ ನಾಮಕರಣಮಾಡಿರುವ ವರ್ಗಗಳು (ಬ್ಲಡ್ ಗ್ರೂಪ್ಸ್), ಪರ್ಯಾಯನಾಮ ರಕ್ತಗೋತ್ರ..

ಆಸ್ಟ್ರಿಯ ಸಂಜಾತ ಅಮೆರಿಕನ್ ವಿಜ್ಞಾನಿ ಕಾರ್ಲ್ ಲ್ಯಾಂಡ್‌ಸ್ಟೈನರ್ (1868 – 1943) ಎಂಬವ ಮೊತ್ತಮೊದಲಾಗಿ (ಸು. 1900) ಮನುಷ್ಯರ ಕೆಂಪು ರಕ್ತಕಣಗಳಲ್ಲಿ A , B ಎಂಬ ಎರಡು ಬೇರೆ ಬೇರೆ ಅಂಟುಕಾರಕಜನಕಗಳಿರುವುದನ್ನೂ ಅವುಗಳಿಗೆ ಅನುರೂಪವಾಗಿ ರಕ್ತಲಸಿಕೆಯಲ್ಲಿ (ಸೀರಂ) α ಮತ್ತು β ಎಂಬ ಎರಡು ಅಂಟುಕಾರಕಗಳು (ಅಗ್ಲೂಟಿನಿನ್ಸ್) ಇರುವುದನ್ನು ಗಮನಿಸಿ ಮಾನವರ ರಕ್ತವನ್ನೆಲ್ಲ ನಾಲ್ಕು ಪಂಗಡಗಳಾಗಿ ವಿಂಗಡಿಸಿದ. ರಕ್ತಕಣದಲ್ಲಿ A ಮತ್ತು ಲಸಿಕೆಯಲ್ಲಿ β ವಸ್ತುಗಳಿರುವ, ರಕ್ತಕಣದಲ್ಲಿ B ಮತ್ತು ಲಸಿಕೆಯಲ್ಲಿ α ವಸ್ತುಗಳಿರುವ, ರಕ್ತಕಣದಲ್ಲಿ A ಮತ್ತು B ಎರಡೂ ಇರುವ ಹಾಗೂ ಲಸಿಕೆಯಲ್ಲಿ α ಅಗಲಿ β ಆಗಲಿ ಯಾವುದು ಇರದ ಮತ್ತು ರಕ್ತಕಣದಲ್ಲಿ A ಮತ್ತು B ಆಗಲಿ ಯಾವುದೂ ಇರದ ಲಸಿಕೆಯಲ್ಲಿ α ಮತ್ತು β ಎರಡು ವಸ್ತುಗಳೂ ಇರುವ ನಾಲ್ಕು ಪ್ರತ್ಯೇಕ ಗುಂಪುಗಳಿರುತ್ತವೆಂದು ಲ್ಯಾಂಡ್‌ಸ್ಟೈನರ್ ವಿಶದಪಡಿಸಿದ.

A ಮತ್ತು B ಅಂಟುಕಾರಕಜನಕವಸ್ತುಗಳನ್ನು ಕೆಂಪುರಕ್ತಕಣಗಳಲ್ಲಿ ಮೊದಲು ಪತ್ತೆ ಮಾಡಲಾಯಿತಾದರೂ ವಾಸ್ತವವಾಗಿ ಇವು ದೇಹದ ಇನ್ನೂ ಅನೇಕ ಬಗೆಯ ಕೋಶಗಳಲ್ಲೂ ಕೆಲವು ಸ್ರಾವಗಳಲ್ಲೂ ವ್ಯಕ್ತಿಯ ವೈಯಕ್ತಿಕ ವೈಶಿಷ್ಟ್ಯಗಳಾಗಿ ಇರುತ್ತವೆ. ಲಾಲಾಗ್ರಂಥಿ ಮತ್ತು ಮೇದೋಜೀರಕ ಗ್ರಂಥಿಯಲ್ಲಿ ಹಾಗೂ ಜೊಲ್ಲು ಮತ್ತು ರೇತಸ್ಸಿನಲ್ಲಿ ಇವು ರಕ್ತದಲ್ಲಿರುವುದಕ್ಕಿಂತಲೂ ಹೆಚ್ಚಾಗಿಯೇ ಇರುತ್ತವೆ. ಮೂತ್ರಪಿಂಡ, ಯಕೃತ್ತು ಮತ್ತು ಪುಪ್ಪುಸಗಳಲ್ಲಿ ತಕ್ಕಮಟ್ಟಿಗೂ ವೃಷಣದಲ್ಲಿ ಅಲ್ಪವಾಗಿಯೂ ಹಾಗೆಯೇ ಕಣ್ಣೀರು ಮತ್ತು ಮೂತ್ರದಲ್ಲಿ ಅಲ್ಪಪ್ರಮಾಣದಲ್ಲೂ ಇರುವುದು ಕಂಡಬಂದಿದೆ. ಆದರೆ ಮಿದುಳು – ಮಿದುಳುಬಳ್ಳಿ ದ್ರವದಲ್ಲಿ (ಸೆರಿಬ್ರೊಸ್ಪೈನಲ್ ಫ್ಲೂಯಿಡ್) ಈ ವಸ್ತುಗಳು ಇರುವುದಿಲ್ಲ. ಅಂಟುಕಾರಕಜನಕ ವಸ್ತುಗಳು ಒಂದೂವರೆ ತಿಂಗಳು ಭ್ರೂಣದಲ್ಲಿ ಆನುವಂಶಿಕಗುಣವಾಗಿ ಕಂಡಬಂದು ಉತ್ಪತ್ತಿ ಆಗುತ್ತವೆ. ಆದ್ದರಿಂದ ಇದು ಭ್ರೂಣಾವರಣ ದ್ರವದಲ್ಲು (ಅಮ್ನಿಯಾಟಿಕ್ ಫ್ಲೂಯಿಡ್) ಇರುವುದು ಸ್ಪಷ್ಟ. ವಾಸ್ತವವಾಗಿ ಈ ದ್ರವದಲ್ಲಿ ರಕ್ತಕ್ಕಿಂತಲೂ ಆರು ಪಟ್ಟು ಹೆಚ್ಚಾಗಿಯೇ ಈ ವಸ್ತು ಇರುವುದಿದೆ. ಜನನವಾದ ಬಳಿಕ ವೈಯಕ್ತಿಕ ವೈಶಿಷ್ಟ್ಯವೆನಿಸುವ ಅಂಟುಕಾರಕಜನಕವಸ್ತು ಪ್ರಬುದ್ಧತೆಯ ತನಕವೂ ಹೆಚ್ಚಾಗುತ್ತ ಬಂದು ಅನಂತರ ಜೀವಿತದ ಕೊನೆಯ ತನಕವೂ ಕಡಿಮೆ ಆಗುತ್ತದೆ.

ಅಂಟುಕಾರಕವಸ್ತು ರಕ್ತಲಸಿಕೆಯಲ್ಲಿ ಮಾತ್ರ ಇರುತ್ತದೆ. ಹುಟ್ಟಿದ ಮಕ್ಕಳ ಪೈಕಿ ಶೇಕಡಾ 50 ರಷ್ಟರಲ್ಲಿ ಮಾತ್ರ ಈ ವಸ್ತು ಇದ್ದು ಆನಂತರ ಎಲ್ಲ ಮಕ್ಕಳಲ್ಲು ಕಾಣಬರುತ್ತದೆ. 10 ವರ್ಷಗಳ ತನಕ ಹೆಚ್ಚುತ್ತ ಬಂದು ಅನಂತರ ಕಡಿಮೆ ಆಗುತ್ತದೆ. α ಅಂಟುಕಾರಕ ಅಧಿಕ ಮೊತ್ತದಲ್ಲೂ β ಅಂಟುಕಾರಕ ಈ ಮೊತ್ತದ ಕಾಲುಭಾಗದಷ್ಟು ಮಾತ್ರ ಇರುವುದೂ ಸಾಮಾನ್ಯ. A ಪಂಗಡದ ಕೆಂಪುರಕ್ತಗಳನ್ನು ಅಥವಾ ರಕ್ತಕಣಗಳನ್ನು α ಅಂಟುಕಾರಕವಿರುವ ಲಸಿಕೆಯೊಡನೆ ಮಿಶ್ರಮಾಡಿದರೆ ಕಣಗಳು ಒಂದಕ್ಕೊಂದು ಅಂಟಿಕೊಂಡು ಸಣ್ಣ ದೊಡ್ಡ ಕಣಗುಂಪುಗಳಾಗುತ್ತವೆ. ಇದಕ್ಕೆ ಅಂಟುಕಾರಿಕೆ (ಅಗ್ಲೂಟಿನೇಷನ್) ಎಂದು ಹೆಸರು. ಈ ಗುಂಪಿನ ಕಣಗಳು ಕ್ಷಿಪ್ರವಾಗಿಯೇ ಛಿದ್ರಗೊಂಡು ಕಣಗಳೊಳಗಿನ ಹೀಮೋಗ್ಲಾಬಿನ್ ಹೊರಬರುತ್ತದೆ. ಇದರಂತೆಯೇ B ಪಂಗಡದ ಕಣಗಳನ್ನು B ಅಂಟುಕಾರಕವಿರುವ ಲಸಿಕೆ ನಾಶಮಾಡುತ್ತದೆ. ಆದ್ದರಿಂದಲೇ A ಪಂಗಡದರಲ್ಲಿ α ಅಂಟುಕಾರಕವಿರದೆ β ಅಂಟುಕಾರಕವಿರುವುದು. AB ಪಂಗಡದವರಲ್ಲಿ α ಅಗಲಿ β ಅಗಲಿ ಯಾವುದೇ ಅಂಟುಕಾರಕವಿಲ್ಲದಿರುವುದು ನೈಸರ್ಗಿಕ ಏರ್ಪಾಡು.

A ಅಥವಾ B ಯಾವುದೆ ಅಂಟುಕಾರಕಜನಕವಸ್ತುವೂ ಇರದ, ಆದರೆ α ಮತ್ತು β ಎರಡುಬಗೆ ಅಂಟುಕಾರಕಗಳೂ ಇರುವ ಪಂಗಡವನ್ನು 0 ಪಂಗಡ ಎಂದು ಕರೆದಿದೆ. ಈ ಕಣಗಳಲ್ಲಿ ವಾಸ್ತವವಾಗಿ 0 ಎಂಬ ಅಂಟುಕಾರಕಜನಕವಸ್ತು ಇರುತ್ತದೆ ಎಂದು ಅನಂತರ ತಿಳಿದುಬಂತು. 0 ಅಂಟುಕಾರಕ ಜನಕಕ್ಕೆ ಅನುಗುಣವಾದ ಅಂಟುಕಾರಕ ನೈಸರ್ಗಿಕವಾಗಿ ಇತರ ಪಂಗಡದ ಮಾನವರಲ್ಲಿ ಇರುವುದು ತೀರ ವಿರಳವೆಂದು ತಿಳಿದುಬಂದಿದೆ.

A ಪಂಗಡ ಇಲ್ಲವೆ B ಪಂಗಡದ ರಕ್ತವನ್ನು ಸ್ವಲ್ಪಸ್ವಲ್ಪವಾಗಿ ಅನೇಕಸಲ ಚುಚ್ಚುಮದ್ದಾಗಿ ಕುರಿ, ಮೊಲ ಇತ್ಯಾದಿ ಪ್ರಾಣಿಗಳಿಗೆ ಕೊಟ್ಟರೆ ಕ್ರಮೇಣ ಅವುಗಳ ರಕ್ತಲಸಿಕೆಯಲ್ಲಿ α ಇಲ್ಲವೆ β ಅಂಟುಕಾರಕಗಳು ಉತ್ಪತ್ತಿ ಆಗುವುದು ತಿಳಿದಿದೆ. ಈ ಲಸಿಕೆಗಳನ್ನು ತೆಗೆದಿಟ್ಟುಕೊಂಡು ವ್ಯಕ್ತಿಯ ರಕ್ತಪಂಗಡವನ್ನು ನಿರ್ಧರಿಸಬಹುದು. α ಅಂಟುಕಾರಕವಿರುವ ಲಸಿಕೆಯಿಂದ ಮಾತ್ರ ಅಂಟುಕಾರಿಕೆ ಆದರೆ ಆ ರಕ್ತ A ಪಂಗಡದ್ದೆಂದೂ β ಅಂಟುಕಾರಕವಿರುವ ಲಸಿಕೆಯಿಂದ ಮಾತ್ರ ಅಂಟುಕಾರಿಕೆ ಆದರೆ ಆ ರಕ್ತ B ಪಂಗಡದ್ದೆಂದೂ ಎರಡರಿಂದಲೂ ಅಂಟುಕಾರಿಕೆಗೆ ಒಳಗಾದರೆ AB ಪಂಗಡವೆಂದೂ ಎರಡರಿಂದಲೂ ಆಗಿರದಿದ್ದರೆ ಆ ರಕ್ತ 0 ಪಂಗಡದ್ದೆಂದು ನಿರ್ಧರಿಸಬಹುದು. ಒಂದುತೊಟ್ಟು ರಕ್ತ ಒಂದು ತೊಟ್ಟು ಲಸಿಕೆ ಎರಡನ್ನೂ ಗಾಜಿನ ಫಲಕದ ಮೇಲೆ ಸೇರಿಸಿ ಕದಡಿ ಸೂಕ್ಷ್ಮದರ್ಶಕದ ಮೂಲಕ ನೋಡಿ ಅದರ ಪಂಗಡವನ್ನು ನಿರ್ಧರಿಸುವುದಿದೆ. ಕುರಿ, ಮೊಲ ಇತ್ಯಾದಿ ಪ್ರಾಣಿಗಳಲ್ಲಿ ಈ ಅಂಟುಕಾರಕಗಳ ಉತ್ಪತ್ತಿ ದೇಹದ ಒಳಹೊಗಿಸಿದ ಪರವಸ್ತುವಿಗೆ (ಫಾರಿನ್ ಬಾಡಿ ಆಂಟಿಜೆನ್) ಪ್ರತಿರೋಧಕವಾಗಿ ಪ್ರತಿವಸ್ತು (ಆಂಟಿಬಾಡಿ) ಉತ್ಪತ್ತಿಯಾಗುವಂತೆಯೇ ಇದೆ. ಅದರೆ 0 ಪಂಗಡದ ರಕ್ತಕ್ಕೆ ಅನುಗುಣವಾದ ಅಂಟುಕಾರಕದ ಉತ್ಪತ್ತಿ ಯಶಸ್ವಿ ಆಗಿಲ್ಲ. ಬಹುಶಃ 0 ಅಂಟುಕಾರಕ ಜನಕವಸ್ತು ಪ್ರತಿವಸ್ತುವಿನ ಉತ್ಪತ್ತಿಗೆ ಪ್ರಬಲ ಪ್ರೇರಕವಲ್ಲವೆಂದು ಹೇಳಲಾಗಿದೆ. ಆದ್ದರಿಂದಲೇ 0 ಪಂಗಡದ ಕಣಗಳನ್ನು ಮಿಕ್ಕ ಯಾವುದೇ ರಕ್ತಪಂಗಡದ ವ್ಯಕ್ತಿಗೆ ಪೂರಣಮಾಡಿದರೂ ಸಾಧಾರಣವಾಗಿ ಕ್ಷೇಮ. ಏಕೆಂದರೆ ನೈಸರ್ಗಿಕವಾಗಿ ಅಂಟುಕಾರಕ ಇರುವುದು ಅಪೂರ್ವವಷ್ಟೇ ಅಲ್ಲದೆ ಅಂಥ ರಕ್ತಪೂರಣೆ ಆದ ಬಳಿಕ ಸ್ವೀಕಾರಿಯ ರಕ್ತದಲ್ಲು ಆ ಅಂಟುಕಾರಕದ ಉತ್ಪತ್ತಿ ಆಗುವುದು ತೀರವಿರಳ.

AB ಮತ್ತು 0 ಅಂಟುಕಾರಕಗಳ ಜೊತೆಗೆ ಮನುಷ್ಯರ ರಕ್ತಕಣಗಳಲ್ಲಿ M ಮತ್ತು N ಎಂಬ ಅಂಟುಕಾರಕಜನಕಗಳು ಒಂದೊಂದೆ ಆಗಿಯೊ ಇಲ್ಲವೇ ಎರಡೂ ಒಟ್ಟಾಗಿಯೋ ಇರುತ್ತವೆ. ಇವಕ್ಕೆ ಅನುಗುಣವಾದ ಅಂಟುಕಾರಕಗಳು ನೈಸರ್ಗಿಕವಾಗಿ ಇರುವುದೇ ಇಲ್ಲ ಮತ್ತು ರಕ್ತಪೂರಣೆಯಿಂದ ಹೊಸದಾಗಿ ಉತ್ಪತ್ತಿಯಾಗುವುದೂ ಅತಿವಿರಳ. ಇವಲ್ಲದೆ ಮನುಷ್ಯರ ರಕ್ತ Rh ಧನ ಅಥವಾ Rh ಋಣವಾಗಿರಬಹುದು. ತಾಯಿ ಮತ್ತು ಬೆಳೆಯುತ್ತಿರುವ ಗರ್ಭಸ್ಥ ಶಿಶುವಿನ ರಕ್ತಗಳು ಈ ಬೇರೆ, Rh ಘಟಕಗಳನ್ನು ಹೊಂದಿದ್ದರೆ ಶಿಶುಸತ್ತು ಜನಿಸುವ ಸಂಭವವಿದೆ.

A, B, O, M, N ಮತ್ತು Rh ಅಂಟುಕಾರಕ ಜನಕಗಳಲ್ಲದೆ ಮನುಷ್ಯರ ರಕ್ತದಲ್ಲಿ ಇನ್ನೂ ಬೇರೆ ಬೇರೆ ಅಂಟುಕಾರಕ ಜನಕಗಳಿರಬಹುದು. ಲೆವಿಸ್, ಕೆಲ್, ಡಫ್ಫಿ, ಲೂಥರಾನ್ ಮುಂತಾದ ಇಂಥ ಬೇರೆ ಬೇರೆ ಪಂಗಡಗಳಿವೆ. ಅವೆಲ್ಲವೂ ತೀರ ವಿರಳ ಮತ್ತು ಸಾಮಾನ್ಯವಾಗಿ ಅಗಣನೀಯ ಈ ಎಲ್ಲ ರಕ್ತ ಪ್ರಧಾನ ಆನುವಂಶಿಕ ಗುಣಗಳು (ಡಾಮಿನೆಂಟ್ ಕ್ಯಾರಕ್ಟರ್ಸ್) ಅಂಡಾಣು ಅಥವಾ ರೇತ್ರಾಣು ಅಥವಾ ಎರಡರ ವರ್ಣತಂತುಗಳಲ್ಲಿದ್ದುದೇ ಆದರೆ ಆ ಗುಣಗಳು ಮಕ್ಕಳಿಗೆ ದತ್ತವಾಗುತ್ತವೆ. M ಮತ್ತು N ಪಂಗಡಗಳು ಯಾವಾಗಲೂ A , B ಮತ್ತು Rh ಪಂಗಡಗಳು ಸಂದರ್ಭಾನುಸಾರವಾಗಿಯೂ ಆಸ್ಟ್ರಿಯದ ಜೀವವಿಜ್ಞಾನಿ ಗ್ರಿಗರ್ ಮೆಂಡೆಲ್ (1822 – 84) ಪ್ರತಿಪಾದಿಸಿದ ಆನುವಂಶಿಕ ತತ್ತ್ವಗಳಿಗೆ ಅನುಸಾರವಾಗಿಯೇ ದತ್ತವಾಗುತ್ತವೆ.

ಯಾವಾಗಲೂ ದತ್ತವಾಗಿಯೇ ತೀರುವ M ಮತ್ತು N ಪಂಗಡಗಳು ಮಗುವಿನ ಪಿತೃತ್ವದಲ್ಲಿಯ ವಿವಾದವನ್ನು ತೀರ್ಮಾನಿಸಲು ಉಪಯುಕ್ತವೆನಿಸುತ್ತವೆ. ಮಗು M ಪಂಗಡದ್ದಾಗಿದ್ದರೆ ತಂದೆ N ಪಂಗಡದವನಾಗಿರುವ ಸಂಭವವೇ ಇಲ್ಲ. ಮಗು N ಪಂಗಡದ್ದಾಗಿದ್ದರೆ ತಂದೆ M ಪಂಗಡದವನಾಗಿರಲು ಸಾಧ್ಯವೇ ಇಲ್ಲ. ಅಂತೆಯೇ ಮಗು MN ಪಂಗಡದ್ದಾಗಿದ್ದು ತಾಯಿ M ಪಂಗಡದವಳಾಗಿದ್ದರೆ ತಂದೆ N ಪಂಗಡದವನು ಆಗಿರಲೇಬೇಕು. ಮಗು MN ಪಂಗಡದ್ದಾಗಿದ್ದು ತಾಯಿ N ಪಂಗಡದವಳಾಗಿದ್ದರೆ ತಂದೆಯೂ N ಪಂಗಡಕ್ಕೆ ಸೇರಿದವನಾಗಿರುವುದಿಲ್ಲ. ಇವು ಖಂಡಿತ ಮತ್ತು ನಿರ್ಣಾಯಕ. M ಪಂಗಡದ ಮಗುವಿಗೆ ತಂದೆ ಎಂದು ಆಪಾದನೆ ಹೊತ್ತ ವ್ಯಕ್ತಿ M ಪಂಗಡದವನೂ MN ಪಂಗಡದವನೂ ಆಗಿರಬಹುದು. ಆದರೆ ಆರೋಪಿತವ್ಯಕ್ತಿ M ಅಥವಾ MN ಪಂಗಡದವನು ಆಗಿದ್ದ ಮಾತ್ರಕ್ಕೆ ಆತನೇ ಮಗುವಿನ ತಂದೆ ಆಗಿರಬೇಕೆಂದೇನೂ ಇಲ್ಲ. ಇತರ ಯಾವದೋ M ಅಥವಾ MN ಪಂಗಡದ ವ್ಯಕ್ತಿ ಮಗುವಿನ ತಂದೆ ಆಗಿದ್ದು ಆತ ಬರೀ ಮಿಥ್ಯಾಪವಾದಕ್ಕೆ ಈಡಾಗಿರುವ ಈ ಸಂದರ್ಭ ನಿರ್ಣಾಯಕವಲ್ಲ ಎನ್ನುವುದು ವ್ಯಕ್ತ. ಇದೇ ರೀತಿ A B O ಶ್ರೇಣಿಯಲ್ಲು ವಾದಗ್ರಸ್ತ ಪಿತೃತ್ವದ ಅಸಾಧ್ಯತೆಯನ್ನು ನಿರ್ಣಯಮಾಡಬಹುದು.

A B O ಶ್ರೇಣಿಯ ಪಂಗಡಗಳೂ Rh ಶ್ರೇಣಿಯ ಪಂಗಡವೂ ರಕ್ತಪೂರಣೆಯ ವಿಷಯದಲ್ಲಿ ಪ್ರಾಮುಖ್ಯವಾದವು. ಭಾರತದಲ್ಲಿ ಒಟ್ಟು ಜನಸಂಖ್ಯೆಯಲ್ಲಿ A ರಕ್ತಪಂಗಡಕ್ಕೆ ಸೇರಿದವರು ವಿವಿಧ ಪ್ರಾಂತ್ಯಗಳಲ್ಲಿ 23–25% ಇರುವರೆಂದೂ B ಪಂಗಡಕ್ಕೆ ಸೇರಿದವರು 30–35% ಎಂದೂ O ಪಂಗಡಕ್ಕೆ ಸೇರಿದವರು 33–38% ಎಂದೂ AB ಪಂಗಡದವರು ಕೇವಲ 5–7% ಎಂದೂ ಅಂದಾಜಾಗಿದೆ. ಈ ಪಂಗಡಗಳ ರಕ್ತವನ್ನು ಪದೇ ಪದೇ ಪ್ರಾಣಿಗಳಿಗೆ ಚುಚ್ಚುಮದ್ದಾಗಿಕೊಟ್ಟು ಅವುಗಳಲ್ಲಿ ಅನುಗುಣವಾದ ಪ್ರತಿ M ಅಂಟುಕಾರಕ (ಆ್ಯಂಟಿ M) ಮತ್ತು ಪ್ರತಿ N (ಆ್ಯಂಟಿ N) ಅಂಟುಕಾರಕಗಳಿರುವ ಲಸಿಕೆಯನ್ನು ಸುಲಭವಾಗಿ ಪಡೆಯಬಹುದು. ಈ ಲಸಿಕೆಗಳನ್ನು ಬಳಸಿ ವ್ಯಕ್ತಿ M ಪಂಗಡದವನೇ N ಪಂಗಡದವನೆ ಅಥವಾ MN ಪಂಗಡದವನೆ ಎಂಬುದನ್ನು ನಿಷ್ಕರ್ಷಿಸಬಹುದು.

ರ್ಹೀಸಸ್‌ಕೋತಿ ಎಂಬುದು ಭಾರತದ ಕರ್ನಾಟಕ ರಾಜ್ಯದ ಸಾಮಾನ್ಯ ಕೋತಿ. ಇದರ ರಕ್ತವನ್ನು ಚುಚ್ಚುಮದ್ದಾಗಿ ಮೊಲಕ್ಕೆ ಕೊಟ್ಟು ಅದರ ಲಸಿಕೆಯಲ್ಲಿ ರ್ಹೀಸಸ್‌ಕೋತಿಯ ಕೆಂಪುರಕ್ತಕಣಗಳನ್ನು ಅಂಟಿಸಿ ಗುಂಪುಗೂಡಿಸಿ ನಾಶಮಾಡುವ ಅಂಟುಕಾರಕವನ್ನು ಉತ್ಪತ್ತಿಮಾಡಬಹುದು. ಈ ವಸ್ತುವಿಗೆ Rh ಅಂಟುಕಾರಕ, Rh ಪ್ರತಿವಸ್ತು (Rh ಅಗ್ಲೂಟಿನಿನ್, Rh ಆ್ಯಂಟಿಬಾಡಿ) ಎಂಬ ಹೆಸರುಗಳಿವೆ. ಪ್ರತಿವಸ್ತು ಇರುವ ಲಸಿಕೆಯನ್ನು ಮನುಷ್ಯರ ರಕ್ತಕ್ಕೆ ಸೇರಿಸಿ ನೋಡಿ ಕೆಲವರನ್ನು Rh ಧನಪಂಗಡದವರೆಂದೂ (Rh ಪಾಸಿಟಿವ್) ಹಾಗು ಕೆಲವರನ್ನು Rh ಋಣಪಂಗಡದವರೆಂದೂ (Rh ನೆಗೆಟಿವ್) ವರ್ಗೀಕರಿಸಲಾಯಿತು. ಧನಪಂಗಡದವರಲ್ಲಂತೂ ಹಾಗೂ ಕೆಲವರನ್ನು Rh ಪ್ರತಿವಸ್ತು ಇರಲಾರದು. O ಪಂಗಡದ ರಕ್ತವನ್ನು ಮಿಕ್ಕಪಂಗಡದವರಿಗೆ ಕ್ಷೇಮಕರವಾಗಿಯೇ ಹೇಗೆ ಕೊಡಬಹುದೊ ಹಾಗೆಯೇ Rh ಧನಪಂಗಡದವರ ರಕ್ತವನ್ನು Rh ಋಣಪಂಗಡದವರಿಗೆ ಕೊಟ್ಟರೆ ಕ್ಷೇಮವಾಗಿರುತ್ತದೆ ಎನ್ನಿಸಿತು. ಆದರೆ ಮುಂದಿನ ಅಧ್ಯಯನಗಳಿಂದ Rh ಧನರಕ್ತವನ್ನು Rh ಋಣವ್ಯಕ್ತಿಗೆ ಪೂರಣ ಮಾಡಿದ ಕೂಡಲೆ ಆ ವ್ಯಕ್ತಿಯಲ್ಲಿ ಪ್ರತಿವಸ್ತುವಿನ ಉತ್ಪತ್ತಿ ಪ್ರಾರಂಭವಾಗುತ್ತದೆ ಎಂದು ತಿಳಿಯಿತು. ನೈಸರ್ಗಿಕವಾಗಿ ಹಾಜರಿರದ Rh ಪ್ರತಿವಸ್ತು ಹೀಗೆ ನೂತನವಾಗಿ ಉತ್ಪತ್ತಿ ಆಗಿರುವ ಸಂದರ್ಭದಲ್ಲಿ ಪುನಃ Rh ಧನರಕ್ತವನ್ನು ಕೊಟ್ಟರೆ ಅದು ದೇಹದಲ್ಲಿ ಅಂಟಿಕೊಂಡು ನಾಶವಾಗುವುದೂ ಅದರಿಂದ ಸ್ವೀಕರಿಸಿದವನಿಗೆ ತೊಂದರೆ ಆಗುವುದೂ ಖಂಡಿತ. Rh ಋಣಪಂಗಡದ ಸ್ತ್ರೀ Rh ಧನಪಂಗಡದ ಪುರುಷನನ್ನು ಮದುವೆ ಆಗಿ ಗರ್ಭಧರಿಸಿದರೆ ಗರ್ಭಸ್ಥಭ್ರೂಣ Rh ಧನಪಂಗಡದ್ದೇ ಆಗಿರುವ ಸಂಭವ ಹೆಚ್ಚಾಗಿಯೇ ಇರುತ್ತದೆ. ಭ್ರೂಣದ Rh ಅಂಟುಕಾರಕ ಜನಕ ವಸ್ತು ಜರಾಯುವಿನ ಮೂಲಕ ತಾಯಿಯ ದೇಹಕ್ಕೆ ಸೇರಿ ಆಕೆಯಲ್ಲಿ Rh ಪ್ರತಿವಸ್ತು ಉತ್ಪತ್ತಿ ಆಗುವಂತೆ ಮಾಡುತ್ತದೆ. ಇದಕ್ಕೆ ಮೊದಲೇ ಆ ಸ್ತ್ರೀ Rh ಧನಪಂಗಡದ ರಕ್ತಪೂರಣೆ ಪಡೆದಿದ್ದರೆ ಆಕೆಯಲ್ಲಿ Rh ಅಂಟುಕಾರಕ ಹೆಚ್ಚಾಗಿಯೇ ಇರುವುದು. ಇದು ಸ್ವತಃ ಆಕೆಯ ರಕ್ತಕಣಗಳಿಗೆ ಏನನ್ನೂ ಮಾಡುವುದಿಲ್ಲ. ಏಕೆಂದರೆ ಆ ಕಣಗಳಲ್ಲಿ Rh ಅಂಟುಕಾರಕ ಜನಕವಿರುವುದಿಲ್ಲ.

ರಕ್ತಪೂರಣೆ: ಕಾರಕಣಾಂತರಗಳಿಂದ ವ್ಯಕ್ತಿಯಲ್ಲಿ ರಕ್ತಘಟಕಗಳ ಕೊರತೆ, ಅದರಲ್ಲೂ ಮುಖ್ಯವಾಗಿ ಮುಖ್ಯವಾಗಿ ಕೆಂಪುಕಣಗಳ ಕೊರತೆ ಉಂಟಾದರೆ ಅನ್ಯವ್ಯಕ್ತಿಯ ರಕ್ತವನ್ನು ಚುಚ್ಚುಮದ್ದಿನ ಮೂಲಕ ಕೊಟ್ಟು ಕೊರತೆಯನ್ನು ನೀಗುವಿಕೆ (ಬ್ಲಡ್ ಟ್ರಾನ್ಸ್ ಫ್ಯೂಷನ್). ಸಾಮಾನ್ಯವಾಗಿ ರಕ್ತಪೂರಣವನ್ನು ವ್ಯಕ್ತಿಯ ಅಭಿಧಮನಿಯ ಮೂಲಕ ಮಾಡುವುದಾದರೂ ಕೆಲವೊಮ್ಮೆ ಅಪಧಮನಿಯ ಮೂಲಕ (ತೀವ್ರ ಸುಸ್ತು ಧಕ್ಕೆ ಸ್ಥಿತಿಯಲ್ಲಿ), ಇಲ್ಲವೇ ಉದರದ ಮೂಲಕ (ಗರ್ಭಸ್ಥಶಿಶುವಿನಲ್ಲಿ ರಕ್ತ ಬದಲಾವಣೆ ಮಾಡಬೇಕಾದಾಗ–ಎಕ್ಸ್‌ಚೇಂಜ್ ಟ್ರಾನ್ಸ್‌ಫ್ಯೂಷನ್ ಇನ್ ಫೀಟಸ್) ಮಾಡುವುದೂ ಉಂಟು. ಸಾಧಾರಣ 300–600 ಮಿಲೀಗಳಷ್ಟು ರಕ್ತವನ್ನು ಒಂದೆರಡು ಬಾರಿ ಹೀಗೆ ಕೊಡಬೇಕಾದ ಸಂದರ್ಭಗಳೂ ಇರುತ್ತವೆ. ಜಟಿಲ ಶಸ್ತ್ರಕ್ರಿಯೆಯನ್ನು ಮಾಡುವಾಗ (ಉದಾಹರಣೆಗೆ ಎದೆಯಲ್ಲಿ ಹೃದಯ ಮುಂತಾದವುಗಳ ಮೇಲೆ ಹಾಗೂ ತಲೆಯಲ್ಲಿ ಮಿದುಳಿನ ಮೇಲೆ) ಹಲವಾರು ಗಂಟೆಗಳ ಪರ್ಯಂತ್ ವ್ಯಕ್ತಿಯಲ್ಲಿ ರಕ್ತ ನಷ್ಟವಾಗುವ ಸಂಭವ ಇದೆ. ಆಗ ಈ ಕ್ರಮದಲ್ಲಿ ಅಗಾಧವಾಗಿ ರಕ್ತಪೂರಣೆ ಅಗತ್ಯವಾಗುತ್ತದೆ. ಅಂತೆಯೇ ಪ್ರಸವದ ಸಮಯದಲ್ಲಿ ಮತ್ತು ತೀವ್ರ ಅಪಘಾತಗಳು ಉಂಟಾದ ಕಾಲದಲ್ಲಿ ಹಾಗೂ ಯುದ್ಧರಂಗದಲ್ಲಿ ಗಾಯಾಳುಗಳಿಗೆ ಅಗಾಧಪ್ರಮಾಣದಲ್ಲಿ ರಕ್ತಪೂರಣೆಯ ಆವಶ್ಯಕತೆ ಇರುತ್ತದೆ.

ವ್ಯಕ್ತಿಯ ದೇಹದೊಳಕ್ಕೆ ಸೇರಿಸಿದ ಅನ್ಯರಕ್ತ ವ್ಯಕ್ತಿಗೆ ಒಗ್ಗುವಂತಿದ್ದು ಹಲವಾರು ದಿವಸಗಳಾದರೂ ಅವನಲ್ಲಿ ಮಾಮೂಲು ಕ್ರಿಯೆಗಳನ್ನು ಪೂರೈಸುತ್ತ ಇರಬೇಕು. ವಿಷದ ರಕ್ತಪೂರಣೆಯಿಂದ ವ್ಯಕ್ತಿಗೆ ತೊಂದರೆ ಆಗುವ ಸಂಭವವನ್ನು ಪೂರ್ಣವಾಗಿ ತಪ್ಪಿಸಬೇಕು. ಪ್ರಾಣಿಗಳ ರಕ್ತವನ್ನು ಮನುಷ್ಯರಿಗೆ ಪೂರಣೆ ಮಾಡಕೂಡದು. ಇದು ಮಾರಕ ಎನ್ನುವುದು ತಿಳಿದು ಸುಮಾರು 250 ವರ್ಷಗಳೇ ಸಂದಿದೆ. ಮನುಷ್ಯರ ರಕ್ತವಾದರೂ ಶವದಿಂದ ತೆಗೆದ ರಕ್ತ, ರಜಸ್ರಾವದ ರಕ್ತ, ಪ್ರಸವ ಕಾಲದಲ್ಲಿ ಗರ್ಭಾಶಯದಿಂದ ಮತ್ತು ಮಗುವನ್ನು ಬೇರ್ಪಡಿಸಿದ ಹೊಕ್ಕಳ ಬಳ್ಳಿಯಿಂದ ಬರುವ ರಕ್ತ ಇವನ್ನೂ ಬಳಸುವುದು ನಿಷಿದ್ಧ. ಈ ವಿಷಯಗಳು ಅರಿವಿಗೆ ಬಂದು ಸುಮಾರು ಹಲವಾರು ದಶಕಗಳಾಗಿವೆ. ಹಾಗೆಯೇ ರೋಗಪ್ರಕ್ರಿಯೆಗಳಿಂದ ವಿಷಮಿಸಿರುವ ರಕ್ತವನ್ನೂ ಬಳಸಕೂಡದು. ಏಕೆಂದರೆ ಇಂಥ ರಕ್ತದಲ್ಲಿ ಇರಬಹುದಾದ ವಿಷಾಣುಗಳು ಉದಾಹರಣೆಗಾಗಿ ಹೆಪಟೈಟಸ್ ರೋಗದ ವೈರಸ್ಸು, ಪರಂಗಿರೋಗದ ಏಕಾಣು, ಮಲೇರಿಯ ರೋಗದ ವಿಷಾಣು ಇತ್ಯಾದಿಗಳನ್ನು ರಕ್ತಪೂರಣೆ ಆಗುವ ವ್ಯಕ್ತಿಯ ದೇಹಕ್ಕೆ ಕೈಯಾರ ಸೇರಿಸಿದಂತಾಗಿ ವ್ಯಕ್ತಿಗೆ ಅನುಕೂಲ ಮಾಡುವ ಬದಲು ಬೇರೆ ರೋಗವನ್ನೇ ಕೊಟ್ಟಂತಾಗುತ್ತದೆ. ಏಡ್ಸ್ ವೈರಸ್ಸು ಕೂಡ ರಕ್ತ ಪೂರಣೆ ಇಂದ ವರ್ಗವಾಗಿ ತೊಂದರೆ ಆಗುವ ಸಂಭವ ಉಂಟು. ಇವು ಯಾವುವೂ ಇಲ್ಲದೆ ಆರೋಗ್ಯವಾಗಿರುವ ವ್ಯಕ್ತಿಯ ರಕ್ತವನ್ನೇ ತೆಗೆದು ಇನ್ನೊಬ್ಬ ವ್ಯಕ್ತಿಗೆ ಪೂರಣೆ ಮಾಡಿದರು ಸಹ ಇದು ಯಾವಾಗಲೂ ಅನುಕೂಲವಾಗಿರುತ್ತದೆ ಎಂಬ ನೆಚ್ಚಿಗೆ ಇಲ್ಲ. ಅನಾನುಕೂಲವೂ ಮಾರಕವೂ ಆಗಬಹುದಾದ ಸಂಭವವಿರುವುದರಿಂದ ವ್ಯಕ್ತಿಗೆ ಆರೋಗ್ಯ ಮನುಷ್ಯನ ರಕ್ತಪೂರಣೆಯ ವಿಷಯದಲ್ಲೂ ಎಚ್ಚರಿಕೆ ವಹಿಸಬೇಕಾಗಿದೆ.

ಮನುಷ್ಯರಲ್ಲಿ ಮುಖ್ಯವಾಗಿ Aβ, Bα, ABO ಮತ್ತು Oαβ ಎಂಬ ನಾಲ್ಕು ರಕ್ತ ಪಂಗಡಗಳಿವೆ. A ಪಂಗಡದ ದಾನಿಯಿಂದ ಅದೇ ಪಂಗಡದವರಿಗೂ ಮತ್ತು AB ಪಂಗಡದವರಿಗೂ ರಕ್ತಪೂರಣೆ ಮಾಡಬಹುದು. AB ಪಂಗಡದ ದಾನಿಯಿಂದ AB ಪಂಗಡದ ಸ್ವೀಕಾರಿಗೆ ಮಾತ್ರ ಪೂರಣೆ ಮಾಡಬಹುದು ಮತ್ತು O ಪಂಗಡದ ದಾನಿಯಿಂದ ಯಾರಿಗೆ ಬೇಕಾದರೂ ರಕ್ತಪೂರಣೆ ಮಾಡಬಹುದು. ಇಲ್ಲಿ ದಾನಿಯ ರಕ್ತಲಸಿಕೆ ಸ್ವೀಕಾರಿಯ ರಕ್ತಕಣಗಳನ್ನು ಅಂಟಿಸಿ ನಾಶಪಡಿಸಬಹುದಾದ ಸಂಭವವನ್ನು ಗಣಿಸಿಲ್ಲ. ಸಾಮಾನ್ಯವಾಗಿ ಗಣಿಸಲೂ ಬೇಕಾಗಿಲ್ಲ. ಏಕೆಂದರೆ ಒಮ್ಮೆ ಪೂರಣೆಮಾಡುವಷ್ಟು ರಕ್ತದಲ್ಲಿರುವ ದಾನಿಯ ರಕ್ತಲಸಿಕೆ ಸ್ವೀಕಾರಿಯ ದೇಹದಲ್ಲಿಯ 4 – 5 ಲೀಗಳಷ್ಟು ರಕ್ತದೊಡನೆ ಸೇರಿ ಹೋದಾಗ ಅಳ್ಳಕಗೊಂಡು (ಡೈಲ್ಯುಟೆಡ್) ದುರ್ಬಲವಾಗುತ್ತದೆ. ಇಂಥ ಲಸಿಕೆ ಸ್ವೀಕಾರಿಯ ರಕ್ತಕಣಗಳನ್ನು ಅಂಟಿಸಿ ನಾಶಮಾಡಲು ಸಮರ್ಥ ಆಗಿರುವುದಿಲ್ಲ. ಹಾಗೆ ಅಳ್ಳಕಗೊಂಡರೂ ಅದರ ಪ್ರಾಬಲ್ಯ ಸಾಕಷ್ಟು ತಗ್ಗದೆ ಇರುವ ಸಂಭವ ಅಪರೂಪವಾಗಿ ಇರುತ್ತದೆ. ಆಗ ತೊಂದರೆ ಆಗಬಹುದು.

ರಕ್ತಪೂರಣೆಯ ಸಮಯದಲ್ಲಿ ದಾನಿ ಮತ್ತು ಸ್ವೀಕಾರಿಯ ರಕ್ತಪಂಗಡಗಳು ಮುಂಚೆಯೇ ಗೊತ್ತಿದ್ದರೆ ದಾನಿಯ ಸ್ವೀಕಾರಿಯ ರಕ್ತದೊಡನೆ ಹೊಂದಾಣಿಕೆ ಆಗುವುದೇ ಇಲ್ಲವೇ ಎನ್ನುವುದನ್ನು (ಕಂಪ್ಯಾಟಿಬಲ್ ಇಲ್ಲವೇ ಇನ್‌ಕಂಪ್ಯಾಟಿಬಲ್) ಪತ್ತೆ ಮಾಡುವುದು ಸುಲಭ. ಹೀಗೆ AB ಪಂಗಡದವರಿಗೆ ಯಾರಿಂದ ಬೇಕಾದರೂ ರಕ್ತತೆಗೆದು ತುರ್ತಾಗಿ ಪೂರಣೆ ಮಾಡಬಹುದು. ಹಾಗೆಯೇ 0 ಪಂಗಡದವರ ರಕ್ತವನ್ನು ಯಾರಿಗೆ ಬೇಕಾದರೂ ತುರ್ತಾಗಿ ಪೂರಣೆ ಮಾಡಬಹುದು. ಆದರೆ ಅತಿ ಸಾಮಾನ್ಯವಾಗಿಯೇ ಇರುವ ಪ್ರಸಂಗಗಳೆಂದರೆ ಸ್ವೀಕಾರಿಯ ಪಂಗಡ ಗೊತ್ತಿಲ್ಲದಿರುವುದು. ಹಠತ್ತಾಗಿ ಈ ವ್ಯಕ್ತಿಗೆ ರಕ್ತಪೂರಣೆ ಮಾಡಬೇಕಾದ ಸಂಭವ ಒದಗಬಹುದು. ಹೊಂದಾಣಿಕೆ ಆಗಿರುವ ದಾನಿಯನ್ನು ತಕ್ಷಣ ಪತ್ತೆ ಹಚ್ಚಬೇಕಾದ ಪ್ರಸಂಗ ಬರುತ್ತದೆ. ಅಂಥ ಸಂದರ್ಭದಲ್ಲಿ ಹಾಲಿ ಲಭ್ಯವಾಗಿರುವ ದಾನಿಯ ರಕ್ತದ ಒಂದು ತೊಟ್ಟನ್ನು ಸ್ವೀಕಾರಿಯಲಸಿಕೆಯೊಡನೆ ಗಾಜಿನ ಫಲಕದ ಮೇಲೆ ಸೇರಿಸಿ ಒಂದು ತೊಟ್ಟನ್ನು ಸೂಕ್ಷ್ಮದರ್ಶಕದಲ್ಲಿ ನೋಡಿ ದಾನಿಯ ರಕ್ತಕಣ ಅಂಟಿಕೊಳ್ಳುವುದಿಲ್ಲವೇ ಅರ್ಥಾತ್ ಹೊಂದಾಣಿಕೆ ಇದೆಯೇ ಎಂಬುದನ್ನು ನೋಡಬಹುದು. ಇದಕ್ಕೆ ನೇರ ಹೊಂದಾಣಿಕೆ ಪರೀಕ್ಷೆ (ಡೈರೆಕ್ಟ್ ಮ್ಯಾಚಿಂಗ್) ಎಂದು ಹೆಸರು. ದಾನಿಯ ರಕ್ತಲಸಿಕೆಯನ್ನು ಸ್ವೀಕಾರಿಯ ರಕ್ತದೊಡನೆ ಸೇರಿಸಿ ಅಂಟಿಕೆ ಆಗುತ್ತದೋ ಎಂದು ಪತ್ತೆ ಮಾಡಿಕೊಳ್ಳುವುದು ಪರಸ್ಪರ ಹೊಂದಾಣಿಕೆ ಪರೀಕ್ಷೆ (ಕ್ರಾಸ್ ಮ್ಯಾಚಿಂಗ್). ಪರಸ್ಪರ ಹೊಂದಾಣಿಕೆ ಪರೀಕ್ಷೆಯಿಂದ ನಿರ್ಧರಿಸಿದ ರಕ್ತಪೂರಣೆ ಸಂದೇಹವೇ ಇರದಂಥ ಸುರಕ್ಷತೆಯದು. ಸಮಯವಿದ್ದಾಗ ಇದನ್ನು ಮಾಡುವುದೇ ಒಳ್ಳೆಯದು. ತುರ್ತಾಗಿದ್ದಾಗ ನೇರಹೊಂದಾಣಿಕೆ ಪರೀಕ್ಷೆಯನ್ನು ಮಾತ್ರ ಮಾಡಿ ದಾನಿಯನ್ನು ಆರಿಸಿ ರಕ್ತಪಡೆದು ಸ್ವೀಕಾರಿಗೆ ಆದಷ್ಟು ಬೇಗ ಪೂರಣೆ ಮಾಡಬೇಕಾಗುತ್ತದೆ.

ನ್ಯಾಯಾಲಯದ ತೊಡಕುಗಳು ಬರದಂತಿರಬೇಕಾದರೆ ದಾನಿ ಗಂಡಸಾಗಿದ್ದಲ್ಲಿ 21 ವರ್ಷಕ್ಕೆ ಮೀರಿರುವುದೂ ಹೆಂಗಸು 18 ವರ್ಷಕ್ಕೆ ಮೀರಿರುವುದೂ ಒಳ್ಳೆಯದು. ದಾನಿಯ 100 ಮಿಲೀಗಳಷ್ಟು ರಕ್ತದಲ್ಲಿ 12 ಗ್ರಾಗಳಾದರೂ ಹೀಮೋಗ್ಲಾಬಿನ್ ಇರುವುದು ಅಪೇಕ್ಷಣೀಯ. ಅದಕ್ಕಿಂತಲೂ ಕಡಿಮೆ ಅದರೆ ದಾನಿಗೂ ತೊಂದರೆ ಸ್ವೀಕಾರಿಗೂ ಅನುಕೂಲ ಕಡಿಮೆ. ಹಾಗೆಯೇ 3 ತಿಂಗಳ ಒಳಗೆ ರಕ್ತದಾನ ಮಾಡಿರುವ ವ್ಯಕ್ತಿಯಿಂದ ಪುನಃ ರಕ್ತ ಪಡೆಯಬಾರದು. ಗರ್ಭತಾಳಿರುವ, ಹಾಲೂಡಿಸುತ್ತಿರವ ಇಲ್ಲವೇ

ರಕ್ತಸ್ರಾವವಾಗುತ್ತಿರುವ ಸ್ತ್ರೀಯರೂ ಯೋಗ್ಯದಾನಿಗಳಲ್ಲ. ಅಧಿಕ ರಕ್ತದೊತ್ತಡ ಇಲ್ಲವೆ ಮಧುಮೇಹವಿರುವ ವ್ಯಕ್ತಿಗಳು ರಕ್ತದಾನಮಾಡುವುದು ಬಲುತಪ್ಪು. ಮಧ್ಯಮ ಮೈಕಟ್ಟಿನವರಾದ ಭಾರತೀಯ ದಾನಿಗಳು ಪ್ರತಿಯೊಂದು ಸಲವೂ ೩೦೦–೩೫೦ ಮೀ ಗಳಷ್ಟು ರಕ್ತವನ್ನು ದಾನಮಾಡಬಹುದು. ಕುಳ್ಳದೇಹದ ಜಪಾನಿಯರು ಕೇವಲ ೨೦೦ ಮೀ ಗಳಷ್ಟು ರಕ್ತವನ್ನು, ದೃಢಕಾಯದವರೆನಿಸುವ ಪಾಶ್ಚಾತ್ಯರು ೩೬೦ ಮೀ ಗಳಷ್ಟು ರಕ್ತವನ್ನು ಒಮ್ಮೆಗೆ ದಾನಮಾಡುವುದು ರೂಢಿಯಲ್ಲಿದೆ.

ರಕ್ತಪೂರಣೆಯ ಅನಂತರ ಹೊಂದಾಣಿಕೆ ಆಗಿದ್ದರೆ ಸ್ವೀಕಾರಿಗೆ ಹೆಚ್ಚು ಕಡಿಮೆ ಕೂಡಲೇ ಅನುಕೂಲವಾಗುತ್ತದೆ. ಹೊಂದಾಣಿಕೆ ಆಗದಿದ್ದರೆ, ೫–೧೦ ಮೀಗಳಷ್ಟು ರಕ್ತವನ್ನು ಪೂರಣೆಮಾಡುಷ್ಟರಲ್ಲೆ ಅದರ ಸೂಚನೆಗಳು ಕಂಡಬರುತ್ತವೆ. ಇವನ್ನು ಗಮನಿಸಿ ಕೂಡಲೇ ರಕ್ತಪೂರಣೆಯನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಅನಾಹುತ. ವ್ಯಕ್ತಿಯ ಮುಖದಲ್ಲಿ ಏನೋ ಗಾಬರಿ, ರಕ್ತ ಒಳಹೋಗುತ್ತಿರುವ ಅಭಿಧಮನಿಯ ಉದ್ದಕ್ಕೂ ನೋವು, ಎದೆಯನ್ನು ತಿರುಡಿಯಲ್ಲಿ (ವೈಸ್) ಇರುಕಿಸಿ ಅದುಮಿದಂತಾಗುವುದು, ತ್ವರಿತ ಹಾಗೂ ಶಕ್ತಿಗುಂದಿದ ನಾಡಿ – ಇವು ಇಂಥ ಸೂಚನೆಗಳು. ಶೀಘ್ರದಲ್ಲಿ ವ್ಯಕ್ತಿಯ ರಕ್ತಒತ್ತಡ ಇಳಿದು ವ್ಯಕ್ತಿ ಸುಸ್ತುಧಕ್ಕೆಗೆ ಒಳಗಾಗಿ ಮರಣ ಉಂಟಾಗುತ್ತದೆ. ಶಸ್ತ್ರಕ್ರಿಯೆ ಸಮಯದಲ್ಲಿ ಜ್ಞಾನತಪ್ಪಿಸಿರುವ ವ್ಯಕ್ತಿಗೆ ರಕ್ತಪೂರಣೆಯನ್ನು ಮಾಡುತ್ತಿರುವಾಗ ಹೊಂದಾಣಿಕೆ ಆಗದ ಗುರುತಾಗಿ ಶಸ್ತ್ರಗಾಯಗಳಿಂದ ಹಠಾತ್ತಾಗಿ ರಕ್ತಸ್ರಾವ ಹೆಚ್ಚಾಗುತ್ತದೆ ಮತ್ತು ಆ ರಕ್ತ ಮಸುಕುಗೆಂಪು ಬಣ್ಣದ್ದಾಗಿರುತ್ತದೆ. ಜೊತೆಗೆ ರಕ್ತ ಒತ್ತಡದ ಇಳಿತ, ನಾಡಿಯ ಶಕ್ತಿಗುಂದಿಕೆ ಇವುಗಳಿಂದಲೂ ಅಂಥವ್ಯಕ್ತಿಯಲ್ಲಿ ರಕ್ತಹೊಂದಾಣಿಕೆ ಆಗದೆ ಇರುವುದನ್ನು ಪತ್ತೆ ಮಾಡಿ ಪೂರಣೆಯನ್ನು ತಕ್ಷಣ ನಿಲ್ಲಿಸಿಬಿಡಬೇಕು. ಕೆಲವು ಸಂದರ್ಭಗಳಲ್ಲಿ ರಕ್ತಪೂರಣೆಯ ಸಮಯದಲ್ಲಿ ಹೊಂದಾಣಿಕೆ ಆಗದಿರುವ ಸೂಚನೆಗಳು ಕಂಡುಬರದೆ ಇದ್ದರೂ ನಾಲ್ಕಾರು ದಿವಸಗಳ ಅನಂತರ, ಕೆಲ ಸಮಯ 2 – 3 ವಾರಗಳ ಅನಂತರ ಸ್ವೀಕಾರಿಯ ಮೂತ್ರದಲ್ಲಿ ಹೀಮೋಗ್ಲಾಬಿನ್ ಕಂಡಬಂದು ಅದು ಮಸುಕು ಕೆಂಪಾಗಿರುವುದಿದೆ. ಈ ಹೀಮೋಗ್ಲಾಬಿನ್ನು ಕೆಲವು ಸಂಧರ್ಭಗಳಲ್ಲಿ ಮೂತ್ರಪಿಂಡಗಳ ಕ್ರಿಯೆಗೆ ಧಕ್ಕೆ ಮಾಡಿ ಪ್ರಾಣಾಂತಿಕವೂ ಆಗುವುದಿದೆ. ಕಾಮಾಲೆ ಕಂಡಬರುವುದೂ ಸಾಮಾನ್ಯ.

ಮನುಷ್ಯರೆಲ್ಲ ABO ಪಂಗಡ ಶ್ರೇಣಿಗೆ (ಸೀರೀಸ್) ಸೇರಿರುವಂತೆಯೇ ಕೆಲವರು Rh ಧನಪಂಗಡದವರಾಗಿಯೂ ಮಿಕ್ಕವರು Rh ಋಣಪಂಡದವರಾಗಿಯೂ ಇರುತ್ತಾರೆ. ಇವರಲ್ಲಿ ಸ್ವೀಕಾರಿ Rh ಋಣಪಂಗಡದ ಸ್ತ್ರೀ ಆಗಿರುವಾಗ ರಕ್ತಪೂರಣೆ ಮಾಡುವಾಗ ಇನ್ನಷ್ಟು ಹೆಚ್ಚಿನ ಎಚ್ಚರಿಕೆ ತೆಗೆದುಕೊಳ್ಳಬೇಕಾಗುತ್ತದೆ. ಋಣಪಂಗಡದ ಸ್ತ್ರೀವ್ಯಕ್ತಿಗೆ Rh ಧನಪಂಗಡ ರಕ್ತವನ್ನು ಯಾವ ಸಂದರ್ಭದಲ್ಲಿಯೂ ಪೂರಣೆಮಾಡದಿರುವುದೆ ಉತ್ತಮ. ಮದುವೆಯೇ ಆಗದಿರುವ, ಆಗಿದ್ದರೂ ಪತಿ Rh ಋಣಪಂಗಡದವನಾಗಿರುವ, ಪತಿ Rh ಧನಪಂಗಡಕ್ಕೆ ಸೇರಿದ್ದರೂ ಮಕ್ಕಳೇ ಆಗದಿರುವ ಸಂಭವವೂ Rh ಋಣ ಸ್ತ್ರೀಗೆ Rh ಧನರಕ್ತವನ್ನು ಅತಿತುರ್ತಾದ ಹಾಗೂ ಅದೇ ಮೊತ್ತಮೊದಲ ಸಂದರ್ಭವಾದಲ್ಲಿ ಒಂದು ಸಲ ಮಾತ್ರ ಕ್ಷೇಮವಾಗಿ ಪೂರೈಕೆಮಾಡಬಹುದು. Rh ಋಣಪಂಗಡದ ಗಂಡಿಗೂ ಹೀಗೆಯೇ Rh ಧನಪಂಗಡದ ರಕ್ತವನ್ನು ಒಂದು ಸಲ ಮಾತ್ರ ಕ್ಷೇಮವಾಗಿ ಪೂರಣಮಾಡಬಹುದು. ಇವಲ್ಲದೆ ಬೇರೆ ಸಂದರ್ಭಗಳಲ್ಲಿ Rh ಋಣವ್ಯಕ್ತಿಗೆ ಧನರಕ್ತಪೂರಣೆ ಮಾಡುವುದು ತೊಂದರೆ ಉಂಟುಮಾಡಬಹುದಾದದ್ದೇ ನಿಜ. ಏಕೆಂದರೆ ನೈಸರ್ಗಿಕವಾಗಿ ಯಾವ ವ್ಯಕ್ತಿಯಲ್ಲೂ ಇಲ್ಲದೇ ಇರುವ Rh ಅಂಟುಕಾರಕ (Rh ಆಂಟಿಬಾಡಿ) ಆ ಸಂದರ್ಭಗಳಲೆಲ್ಲ ಅಂಥ ವ್ಯಕ್ತಿಗಳಲ್ಲಿ ಉತ್ಪತ್ತಿ ಆದದ್ದು ಅವರ ರಕ್ತದಲ್ಲಿ ಇದ್ದೇ ಇರುತ್ತದೆ. ಆದ್ದರಿಂದ ೨ನೆಯ ಸಲ Rh ಧನರಕ್ತಪೂರಣೆ ಆದರೆ ಅದರ ಅಂಟುಕಾರಿಕೆ ಆಗಿ ತೊಂದರೆ ಆಗುತ್ತದೆ. Rh ಋಣ ಸ್ತ್ರೀ Rh ಧನ ಅಂಟುಕಾರಿಕೆ ಆಗಿ ತೊಂದರೆ ಆಗುತ್ತದೆ. Rh ಋಣ ಸ್ತ್ರೀಗೆ Rh ಧನ ಗಂಡನಿಂದ ಗರ್ಭತಾಳಿದಾಗ ಭ್ರೂಣ Rh ಧನಪಂಗಡದ್ದೇ ಆಗಿರುತ್ತದೆ. ಅಂಥ ಸಂದರ್ಭದಲ್ಲೂ ಸ್ತ್ರೀಯಲ್ಲಿ ಮುಂಚೆ ಯಾವಾಗಲೂ ಧನರಕ್ತಪೂರಣೆ ಆಗದೇ ಇದ್ದರೂ Rh ಅಂಟುಕಾರಕ ಉತ್ಪತ್ತಿ ಆಗಿರುತ್ತದೆ. ಆದ್ದರಿಂದ ಈಕೆಗೆ ಧನರಕ್ತವನ್ನು ಮೊತ್ತಮೊದಲನೆಯ ಸಲವೇ ಆದರೂ ಕೊಡುವುದು ತೊಂದರೆಯನ್ನು ಆಹ್ವಾನಿಸಿದಂತೆ, ಜೊತೆಗೆ ಈಕೆಯಿಂದ Rh ಅಂಟುಕಾರಕಗಳು ಗರ್ಭಸ್ಥ Rh ಧನ ಭ್ರೂಣಕ್ಕೂ ವರ್ಗಾವಣೆ ಆಗಿ, ಅದು ಸತ್ತೇ ಹುಟ್ಟುವುದೋ ಹುಟ್ಟಿದ ಒಂದು ವಾರದೊಳಗೇ ಸತ್ತು ಹೋಗುವುದೋ ಆಗುತ್ತದೆ. Rh ಹೊಂದಾಣಿಕೆ ಆಗದಿರುವ ಸಂದರ್ಭವನ್ನು ದಾನಿ ಮತ್ತು ಸ್ವೀಕಾರಿಯ ಪರಸ್ಪರ ರಕ್ತಹೊಂದಾಣಿಕೆಯ ಪರೀಕ್ಷೆಯಿಂದ ಸಾಮಾನ್ಯವಾಗಿ ಪತ್ತೆಮಾಡಬಹುದು. Rh ಧನವ್ಯಕ್ತಿಗಳಲ್ಲಿ Rh ಹೊಂದಾಣಿಕೆ ಆಗದೇ ಇರುವ ಸಂಭವವೆ ಇಲ್ಲ ಎನ್ನುವುದನ್ನು ಗ್ರಹಿಸಬೇಕು. ಅದೇ ರಕ್ತವನ್ನು ಎರಡನೆಯ ಸಲ ಪೂರಣೆ ಮಾಡಬೇಕಾದ ಸಂಧರ್ಭದಲ್ಲಿ Rh ಋಣ ವ್ಯಕ್ತಿಯಲ್ಲಿ ಉಂಟಾಗುವ ಸಮಸ್ಯೆಗಳು MN ಶ್ರೇಣಿಗೆ ಸೇರಿದ ರಕ್ತಪಗಂಡದಲ್ಲೂ ಲೂಥೆರಾನ್, ಕೆಲ್ಲಿ, ಡಫ್ಫಿ ಮುಂತಾದ ಶ್ರೇಣಿಗೆ ಸೇರಿದ್ದವರಲ್ಲೂ ಉಂಟಾಗಬಹುದು. ಏಕೆಂದರೆ ಇಂಥ ಎಲ್ಲ ಸಂದರ್ಭಗಳಲ್ಲೂ ನೈಸರ್ಗಿಕವಾಗಿ ಅನುಗುಣ ಅಂಟುಕಾರಕ ಇಲ್ಲದಿದ್ದ ಮೊದಲ ರಕ್ತಪೂರಣೆ ಆದ ಬಳಿಕ ವ್ಯಕ್ತಿಯಲ್ಲಿ ಸಮಸ್ಯೆ ಉತ್ಪತ್ತಿ ಆಗುವ ಸಂಭವವಿದೆ.

ರಕ್ತಪೂರಣೆ ಸಮಯದಲ್ಲಿ ಯುಕ್ತದಾನಿ ತುರ್ತಾಗಿ ದೊರಕುವುದು ಕಷ್ಟ. ಆದ್ದರಿಂದ ಇಂಥ ಸಮಯದಲ್ಲಿ ಹೊಂದಾಣಿಕೆ ಆಗುವ ರಕ್ತವನ್ನು ರಕ್ತಾಗಾರದಿಂದ (ಬ್ಲಡ್ ಬ್ಯಾಂಕ್) ಪಡೆದು ಪೂರಣೆ ಮಾಡುವುದಿದೆ. ರಕ್ತಸಂಗ್ರಹಾಗಾರದಲ್ಲಿ ಸ್ವಪ್ರೇರಣೆಯಿಂದ ಮತ್ತು ಹಣದ ಇಲ್ಲವೇ ಬೇರೆಯ ಪ್ರತಿಫಲಕ್ಕಾಗಿ ಬಂದ ಯುಕ್ತ ವ್ಯಕ್ತಿಗಳಿಂದ ಪಡೆದ ರಕ್ತವನ್ನು ಆ ಕೂಡಲೆ ಯಾವ ಪಂಗಡದ್ದೆಂದು ನಿರ್ಧರಿಸಿ ಅಂಥದೇ ರಕ್ತಶೇಖರಣೆಯ ಪಾತ್ರೆಯಲ್ಲಿ ಸಂಗ್ರಹಿಸಿ ಇಡಲಾಗುತ್ತದೆ. ದಾನಿಯ ಮೊಳಕೈ ಮುಂದಿರುವ ಅಭಿಧಮನಿಯಲ್ಲಿ ಸೂಜಿಚುಚ್ಚಿ ತೊಟ್ಟು ತೊಟ್ಟು ಅಗಿ ಬರುವ ರಕ್ತವನ್ನು ಅದು ಗರಣೆಕಟ್ಟಿಕೊಳ್ಳದಂತೆ ಒಂದು ಪಾತ್ರೆಯಲ್ಲಿರುವ ACD (ಆ್ಯಸಿಡ್ ಸಿಟ್ರೇಟ್‌ಡೆಕ್ಸ್‌ಟ್ರೋಸ್) ದ್ರಾವಣದೊಡನೆ ಮಿಶ್ರಮಾಡಲಾಗುತ್ತದೆ. 100 ಮೀಲಿ ಗಳಷ್ಟು 2% ಡೈಸೋಡೊಯಮ್ ಹೈಡ್ರೋಜನ್ ಸಿಟ್ರೇಟ್ ದ್ರಾವಣಕ್ಕೆ 20 ಮೀ. ಗಳಷ್ಟು 15% ಗ್ಲೂಕೋಸ್ ದ್ರಾವಣವನ್ನು ಸೇರಿಸಿ ACD ಸಮರಕ್ಷಣಾದ್ರಾವಣವನ್ನು ತಯಾರಿಸಿ ಅದಕ್ಕೆ 420 ಮೀಲಿ ಗಳಷ್ಟು ರಕ್ತವನ್ನು ಬೆರಸಿ ಅದನ್ನು $4^0$ C ಯಷ್ಟು ಶೈತ್ಯವಿರುವ ಪೆಟ್ಟಿಗೆಯಲ್ಲಿ ಸಂಗ್ರಹಿಸಿ ಇಟ್ಟಿರಲಾಗುತ್ತದೆ. 14 ದಿವಸಗಳು ಹೀಗೆ ಇಡಲ್ಪಟ್ಟ ರಕ್ತವನ್ನು ಪೂರಣಮಾಡಿದಾಗಲೂ ಮಾರನೆಯ ದಿನ ಅದರ ರಕ್ತಕಣಗಳಲ್ಲಿ 80% ಕಣಗಳು ಸ್ವೀಕಾರಿಯ ದೇಹದಲ್ಲಿ ಕ್ರಿಯಾಶೀಲವಾಗಿರುತ್ತದೆ. ಅನಂತರ ಪ್ರತಿಯೊಂದು ದಿವಸ ಕಳೆದಂತೆಲ್ಲ 1% ನಷ್ಟು ಹೆಚ್ಚು ಕಣಗಳು ನಿಷ್ಕ್ರಿಯಗೊಳ್ಳುತ್ತದೆ. ಅಂದರೆ ಸುಮಾರು ಇನ್ನೂ ಒಂದು ತಿಂಗಳು ಹೀಗೆ ಶೈತ್ಯಾಗಾರದಲ್ಲಿಟ್ಟಿದ್ದ ರಕ್ತವನ್ನು ಪೂರೈಕೆ ಮಾಡಿದರೂ ಸ್ವೀಕಾರಿಗೆ ತಕ್ಕಷ್ಟು ಅನುಕೂಲವಾಗುತ್ತದೆ.

ರಕ್ತಪೂರಣೆಯನ್ನು ರಕ್ತದ ಇನ್ನು ಬೇರೆ ಘಟಕಗಳ ಕೊರತೆಯನ್ನು ನೀಗುವುದಕ್ಕಾಗಿಯೂ ಮಾಡುವುದಿದೆ. ಕೈಕಾಲುಗಳು ಜಜ್ಜಿ ಹೋಗಿರುವ ತೀವ್ರ ಅಪಘಾತಗಳಲ್ಲಿ (ಕ್ರಷ್ಡ್ ಇನ್‌ಜ್ಯುರಿಸ್) ಸುಸ್ತುಧಕ್ಕೆ ಪರಿಸ್ಥಿತಿ ಭೀಕರವಾಗಿರುತ್ತದೆ. ಇದಕ್ಕೆ ಕಾರಣ ಗಾಯಸ್ಥಳದಲ್ಲಿ ರಕ್ತಸ್ರಾವಕ್ಕಿಂತಲೂ ಹೆಚ್ಚಾಗಿ ರಕ್ತದ್ರವ ನಷ್ಟವಾಗುತ್ತಲೇ ಇರುವುದು ಗೊತ್ತಾಗಿದೆ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ರಕ್ತದ್ರವಪೂರಣೆಯೇ ಅತ್ಯುಪಯುಕ್ತ ಕ್ರಮ. ಇದರಿಂದಲೇ ಚಲಿಸುತ್ತಿರುವ ರಕ್ತಪ್ರವಾಹದ ಕೊರತೆಯನ್ನು ಹೋಗಲಾಡಿಸಬೇಕಾಗಿದ್ದು ರಕ್ತಕಣಗಳನ್ನು ಬೇರ್ಪಡಿಸಿ ಪಡೆದ ರಕ್ತದ್ರವವನ್ನು ಬಳಸಲಾಗುತ್ತದೆ. ಹೀಗೆ ಮೊದಲೇ ಪ್ರತ್ಯೇಕಿಸಿ ಘನೀಕರಿಸಿ ಚೂರ್ಣರೂಪದಲ್ಲಿ (ಪ್ಲಾಸ್ಮ ಪೌಡರ್) ರಕ್ತದ್ರವವನ್ನು ಸಂರಕ್ಷಿಸಿಟ್ಟಿರುವುದುಂಟು. ಪೂರಣೆಕಾಲದಲ್ಲಿ ಇವನ್ನು ಯುಕ್ತಪ್ರಮಾಣದ ನೀರಿನಲ್ಲಿ ಕದಡಿ ಚುಚ್ಚುಮದ್ದಾಗಿ ಕೊಡಬೇಕು. ಎಲ್ಲ ಪಂಗಡಗಳ ರಕ್ತವನ್ನೂ ಸೇರಿಸಿ ರಕ್ತದ್ರವದ ಚೂರ್ಣವನ್ನು ಪಡೆಯುತ್ತಾರಾಗಿ ಅದರಲ್ಲಿ ಅಂಟುಕಾರಕಗಳು ಇರುವುದಿಲ್ಲ. ಆದ್ದರಿಂದ ಯಾರಿಗೆ ಬೇಕಾದರೂ ಇದರ ಪೂರಣೆ ಮಾಡಬಹುದು. ವ್ಯಕ್ತಿಯಲ್ಲಿ ವರ್ಣರಹಿತಕಣಗಳ (ಕಲರ್‌ಲೆಸ್ ಕಾರ್ಪಸಲ್ಸ್) ಇಲ್ಲವೇ ಕಣಿತ್ರಗಳ (ಪ್ಲೇಟ್‌ಲೆಟ್ಸ್) ಕೊರತೆ ಇರುವಾಗ ದಾನಿಯ ರಕ್ತದಿಂದ ತಿರುಗಣೆಯ (ಸೆಂಟ್ರಿ ಫ್ಯೂಜ್) ಮೂಲಕ ಇವನ್ನು ಪ್ರತ್ಯೇಕಿಸಿ ಪಡೆದು ಸ್ವೀಕಾರಿಗೆ ಕೊಡುವುದುಂಟು. ಹಿಮೋಫೀಲಿಯ ವ್ಯಾಧಿ ಗ್ರಸ್ಥರು ಅಧಿಕರಕ್ತಸ್ರಾವಿಗಳಾಗಿರುತ್ತಾರೆ (ಬ್ಲಿಡರ್ಸ್). ಇದಕ್ಕೆ ಕಾರಣ ಇವರ ರಕ್ತದಲ್ಲಿ ಆ್ಯಂಟಿಹಿಮೊಫಿಲಿಕ್ ಗ್ಲಾಬ್ಯುಲೀನ್ ಎಂಬ ಪ್ರೋಟೀನ್ ವಸ್ತುವಿನ ಕೊರತೆ ಇರುವುದೇ. ಆದ್ದರಿಂದ ಇವರ ಸ್ಥಿತಿಯ ಚಿಕಿತ್ಸೆಗೆ ಈ ವಸ್ತುವಿನ ಪೂರಣೆ ಮಾಡುವುದೇ ಯುಕ್ತಮಾರ್ಗ. ಆದರೆ ಇದನ್ನು ಆರೋಗ್ಯವಂತರ ರಕ್ತದಿಂದ ಪಡೆಯುವುದು ಕಷ್ಟ ಮತ್ತು ಹೆಚ್ಚಿನ ದುಬಾರಿಯದು ಆಗುತ್ತದೆ. (ಎಸ್.ಆರ್.ಬಿ)

**ರಕ್ತಕಾರಿ ಹುಳು:** ಚಪ್ಪಟೆ ಹುಳುಗಳ (ಪ್ಲಾಟಿಹೆಲ್ಮಿಂತಿಸ್) ವಂಶಕ್ಕೆ ಸೇರಿದ ಪರತಂತ್ರ ಜೀವಿ. ಆಂಗ್ಲ ಭಾಷೆಯಲ್ಲಿ ಬ್ಲಡ್ ಫ್ಲೂಕ್ ಎನ್ನುವರು. ಈ ಹುಳುಗಳು ಮನುಷ್ಯ ಮತ್ತು ಇತರ ಕಶೇರುಕ ಪ್ರಾಣಿಗಳ ರಕ್ತನಾಳಗಳಲ್ಲಿ ಪರತಂತ್ರ ಜೀವನ ಸಾಗಿಸುತ್ತವೆ. ಮನುಷ್ಯರಲ್ಲಿರುವ ರಕ್ತಕಾರಿ ಹುಳುವಿನ ವೈಜ್ಞಾನಿಕ ಹೆಸರು ಸ್ಕಿಸ್ಟೊಸ್ಟೋಮ ಹೆಮಟೋಬಿಯಮ್. ಇನ್ನಿತರ ಕಶೇರುಕಗಳಲ್ಲಿ ಪರತಂತ್ರ ಜೀವಿಗಳಾಗಿರುವ ಸಿ. ಮ್ಯಾನ್ಸೊನಿ, ಸಿ. ನೆಸಾಲಿಸ್, ಸಿ. ಬೊವಿಸ್ ಪ್ರಮುಖವಾದುವು. ಗಂಡು ಮತ್ತು ಹೆಣ್ಣುಗಳ ನಡುವೆ ಸಾಕಷ್ಟು ಭಿನ್ನತೆ ಇದೆ. ಲೈಂಗಿಕ ದ್ವಿರೂಪತೆ (ಸೆಕ್ಷುಯಲ್ ಡೈಮಾರ್ಫಿಸಮ್) ಈ ಪ್ರಭೇದಗಳ ಸಾಮಾನ್ಯ ಗುಣ. ಚಿಕ್ಕ ಗಂಡು ಮತ್ತು ಹೆಣ್ಣು ಹುಳುಗಳು ಬೇರೆಬೇರೆಯಾಗಿದ್ದರೆ, ಪ್ರೌಢ ಗಂಡುಹುಳು ಹೆಣ್ಣನ್ನು ಮೈಮೇಲೆ ಇಟ್ಟುಕೊಂಡು

ಜೊತೆಗೂಡಿರುತ್ತದೆ. ಗಂಡು ಹುಳುವಿನ ದೇಹದ ಮೇಲೆ ತೋಡುರಚನೆ (ಗ್ರೂವ್) ಇದೆ. ಇದಕ್ಕೆ ಕೆನಾಲಿಸ್ ಗೈನೆಕೊಫೊರಸ್ ಎಂದು ಹೆಸರು. ಈ ತೋಡು ರಚನೆಯಲ್ಲಿ ಹೆಣ್ಣುಹುಳು ಅಶ್ರಯ ಪಡೆದು ಗಂಡಿನೊಂದಿಗೆ ಇರುತ್ತದೆ. ಗಂಡು ಹುಳುಗಳು ಚಿಕ್ಕದಾಗಿದ್ದರು ದಷ್ಟಪುಷ್ಟವಾಗಿರುತ್ತವೆ. ಇವುಗಳ ಉದ್ದ 10 – 15 ಸೆಂಮೀ ಅಗಲ 1 ಮಿಮೀ. ಹೀರುತಟ್ಟೆಗಳು (ಸಕರ್ಸ್) ಚೆನ್ನಾಗಿ ಬೆಳೆದಿದ್ದು, ಅವುಗಳಲ್ಲಿ ಸೂಕ್ಷ್ಮ ತೆರನಾದ ಮುಳ್ಳುಗಳಿವೆ. ಈ ಹುಳುಗಳು ಆತಿಥೇಯ ಪ್ರಾಣಿಯ ಚರ್ಮವನ್ನು ಭೇದಿಸಿ ದೇಹದೊಳಕ್ಕೆ ನುಸುಳುತ್ತವೆ.

ಮನುಷ್ಯರಲ್ಲಿ ಸಿ. ಹೆಮಟೊಬಿಯಮ್ ಪರತಂತ್ರಜೀವಿಯಾಗಿದ್ದು ಅಫ್ರಿಕ ಖಂಡದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರೌಢಹುಳುಗಳು ರಕ್ತ ಮೂತ್ರ (ಹೆಮಟ್ಯೂರಿಯ) ರೋಗಕ್ಕೆ ಕಾರಣ. ಹೆಣ್ಣು ಹುಳು ಮೊಟ್ಟೆಗಳನ್ನಿಡುತ್ತವೆ. ಈ ಮೊಟ್ಟೆಗಳು ಮೂತ್ರದ ಮೂಲಕ ಹೊರಬರುತ್ತವೆ. ಮೊಟ್ಟೆಗಳಿಂದ ಹೊರಬಂದ ಮಿರಸಿಡಿಯಮ್ ಡಿಂಬ ಈ ಹುಳುವಿನ ಬೆಳವಣಿಗೆಯ ಒಂದು ಹಂತ. ಈ ಡಿಂಬ ನೀರಿನಲ್ಲಿ ಸ್ವಲ್ಪ ಹೊತ್ತು ಈಜುತ್ತಲಿದ್ದು,




ಸ್ಕಿಸ್ಟೋಸೋಮ ಪ್ರಭೇದದ ಗಂಡು, ಹೆಣ್ಣು

ಮಧ್ಯವರ್ತಿ ಅತಿಥೇಯ ಪ್ರಾಣಿಯಾದ ಬಸವನ ಹುಳುವಿನ ದೇಹದಲ್ಲಿ ಸೇರಿಕೊಳ್ಳುತ್ತದೆ. ಕ್ರಮೇಣ ಮತ್ತಷ್ಟು ಬೆಳೆವಣಿಗೆ ಹೊಂದಿ ಸರ್‌ಕೇರಿಯ ಡಿಂಬದ ರೂಪತಳೆಯುತ್ತದೆ. ಸರ್‌ಕೇರಿಯ ಬಸವನ ಹುಳುವಿನ ದೇಹದಿಂದ ಹೊರಬಂದು, ನೀರಿನಲ್ಲಿ ಈಜುತ್ತಿರುವಾಗ ಮನುಷ್ಯ ದೇಹವನ್ನು ಸ್ಪರ್ಶಿಸಿದರೆ, ಅದು ಚರ್ಮವನ್ನು ಭೇದಿಸಿ ರಕ್ತನಾಳಗಳನ್ನು ಸೇರುತ್ತದೆ. ಭಾರತದಲ್ಲಿ ಸಿ. ಇಂಡಿಕಮ್, ಸಿ. ಸ್ಪಿಂಡಿಯಾಲಿಸ್ ಮತ್ತು ಸಿ. ಬೋವಿಸ್ ರಕ್ತಹುಳುಗಳು ದನಗಳಲ್ಲಿ ಪರತಂತ್ರಜೀವಿಗಳಾಗಿ ವಾಸಿಸುತ್ತವೆ. (ಎಚ್.ಎನ್.ವೈ)

**ರಕ್ತದ ಒತ್ತಡ:** ನಾಳದ ಒಳಗೆ ತುಂಬಿ ಹರಿಯುತ್ತಿರುವ ರಕ್ತ ನಾಳಭಿತ್ತಿಯ ಮೇಲೆ, ರಕ್ತ ಹರಿಯುವ ದಿಶೆಗೆ ಲಂಬನೇರದಲ್ಲಿ ಉಂಟುಮಾಡುವ ಒತ್ತಡ (ಬ್ಲಡ್ ಪ್ರೆಷರ್). ನಾಳಗಳು ತುಂಬಿಕೊಂಡೆ ಇದ್ದು ಮುಂದೆ ಹರಿಯುವುದಕ್ಕೆ ಇರುವ ಅಡಚಣೆಯನ್ನು ನಿವಾರಿಸಿಕೊಂಡು ರಕ್ತ ಹರಿಯುತ್ತಲೆ ಇರುವುದರಿಂದ ಅದು ಯಾವಾಗಲೂ ಒತ್ತಡವನ್ನು ಉಂಟುಮಾಡುವುದು ಸ್ಪಷ್ಟ ರಕ್ತದ ಒತ್ತಡ ಮತ್ತು ಅದರ ಏರುಪೇರುಗಳ ಬಗ್ಗೆ ಪ್ರಸ್ತಾಪಿಸುವಾಗ ಸಾಮಾನ್ಯವಾಗಿ ಅಪಧಮನಿಗಳು ಅದರಲ್ಲೂ ಎಡತೋಳಿನ ಒಳಪಾರ್ಶ್ವದಲ್ಲಿ ನಾಡಿಮಿಡಿತವನ್ನು ಉಂಟುಮಾಡುವ ತೋಳಿನ ಅಪಧಮನಿಯ (ಲೆಫ್ಟ್ ಬ್ರೇಕಿಯಲ್ ಆರ್ಟರಿ) ರಕ್ತದ ಒತ್ತಡವನ್ನು ಗಣಿಸಲಾಗುತ್ತದೆ. ಪ್ರತಿಯೊಂದು ಮಿಡಿತದಲ್ಲೂ ಸುಮಾರು 70 ಮೀಗಳಷ್ಟು ರಕ್ತವನ್ನು ಹೃದಯ ಸಾಕಷ್ಟು ಸಾಮರ್ಥ್ಯದಿಂದ ರೇಚಿಸಿ ಅಪಧಮನಿಯ ವ್ಯೂಹದೊಳಕ್ಕೆ ದೂಡುತ್ತಲೆ ಇರುವುದು. ರಕ್ತನಾಳದಲ್ಲಿ ಕಂಡುಬರುವ ಒತ್ತಡಕ್ಕೆ ಇದು ಒಂದು ಮುಖ್ಯ ಕಾರಣ. ಹೃದಯ ವ್ಯಾಕೋಚಿಸಿರುವಾಗ ಅಂದರೆ ರಕ್ತ ಅಪಧಮನಿ ವ್ಯೂಹದೊಳಕ್ಕೆ ರೇಚಿಸಲ್ಪಡದಿದ್ದಾಗ ಕೂಡ ರಕ್ತದ ಒತ್ತಡ ಇದ್ದೇ ಇರುತ್ತದೆ. ಇದಕ್ಕೆ ಕಾರಣ ಅಪಧಮನಿಗಳ ಸ್ಥಿತಿಸ್ಥಾಪಕ (ಇಲಾಸ್ಟಿಸಿಟಿ) ಸಾಮರ್ಥ್ಯ. ಹೃದಯ ಸಂಕುಚಿಸಿದಾಗ ರೇಚಿಸಲ್ಪಟ್ಟ ರಕ್ತದಿಂದ ಹಿಗ್ಗಿದ ಅಪಧಮನಿಗಳು ಹೃದಯ ವಿಕಸಿಸಿರುವಾಗ ತಮ್ಮ ಸ್ಥಿತಿಸ್ಥಾಪಕ ಸಾಮರ್ಥ್ಯದಿಂದ ಮಾಮೂಲಿನ ಸ್ಥಿತಿಗೆ ಕುಗ್ಗಿಕೊಳ್ಳುತ್ತವೆ. ಹಾಗಾದಾಗ ಅವುಗಳಲ್ಲಿರುವ ರಕ್ತ ಮುಂದೂಡಲ್ಪಡುವುದರಿಂದ ಹೃದಯ ವ್ಯಾಕೋಚಿಸಿರುವಾಗಲೂ ಅಪಧಮನಿಗಳಲ್ಲಿ ರಕ್ತ ಪ್ರವಹಿಸುತ್ತದೆ ಅಲ್ಲದೆ ಒತ್ತಡವನ್ನು ಉಂಟುಮಾಡುತ್ತದೆ. ಈ ತಾಂತ್ರಿಕತೆ (ಮೆಕಾನಿಸಮ್) ಇಲ್ಲದೆ ಹೋಗಿದ್ದರೆ ಅಪಧಮನಿಗಳಲ್ಲಿ ರಕ್ತ ನಿರಂತರವಾಗಿ ಪ್ರವಹಿಸದೆ ಬಿಟ್ಟು ಬಿಟ್ಟು ಪ್ರವಹಿಸಬೇಕಾಗುತ್ತಿತ್ತು ಮತ್ತು ರಕ್ತ ಪ್ರವಾಹವಾಗದ ವೇಳೆ ರಕ್ತದ ಒತ್ತಡವೂ ಬಹುಶಃ ಸೊನ್ನೆ ಆಗಬೇಕಾಗುತ್ತಿತ್ತು.

ಹೃದಯ ಮಿಡಿದು ರಕ್ತವನ್ನು ಅಪಧಮನಿ ವ್ಯೂಹದೊಳಕ್ಕೆ ನುಗ್ಗಿಸುವಾಗ ರಕ್ತದ ಒತ್ತಡ ಹೆಚ್ಚಾಗಿರುತ್ತದೆ ಹಾಗು ಹೃದಯ ವ್ಯಾಕೋಚಿಸುವವಾಗ ರಕ್ತದ ಒತ್ತಡ ಕಡಿಮೆಯಾಗಿರುತ್ತದೆ. ಇವಕ್ಕೆ ಅನುಕ್ರಮವಾಗಿ ಸಿಸ್ಟಾಲಿಕ್ ಒತ್ತಡ ಮತ್ತು ಡೈಯಾಸ್ಟಾಲಿಕ್ ಒತ್ತಡ ಎಂದು ಹೆಸರು. U –ಆಕಾರದ ಕೊಳವೆಯ ಬಾಹುಗಳಲ್ಲಿ ಅರ್ಧಮಟ್ಟಿಗೆ ತುಂಬಿರುವ ಪಾದರಸದ ಮಟ್ಟವ್ಯತ್ಯಾಸ ನಿರ್ಧರಿಸಿ ಒತ್ತಡವನ್ನು ನಮೂದಿಸಲಾಗುವುದು. ಮಧ್ಯವಯಸ್ಕ ಗಂಡರಸಲ್ಲಿ ಸಾಮಾನ್ಯವಾಗಿ ಸಿಸ್ಟಾಲಿಕ್ ಒತ್ತಡ ೧೧೦ ರಿಂದ ೧೩೦ ಮಿಮೀ ಡೈಯಾಸ್ಟಾಲಿಕ್ ಒತ್ತಡ ೭೦ ರಿಂದ ೯೦ ಮಿಮೀ ಇರುತ್ತದೆ. ಹೆಂಗಸರಲ್ಲಿ ಮತ್ತು ಮಕ್ಕಳಲ್ಲಿ ಒತ್ತಡ ಮಟ್ಟ ಹತ್ತಿಪ್ಪತ್ತು ಮಿಮೀಗಳಷ್ಟು ಕಡಿಮೆ ಇರುತ್ತದೆ. ೪೫–೫೦ ವರ್ಷಕ್ಕೆ ಮೀರಿದ ವಯಸ್ಸಿನ ವ್ಯಕ್ತಿಗಳಲ್ಲಿ ಸಿಸ್ಟಾಲಿಕ್ ಒತ್ತಡ ಸಾಮಾನ್ಯವಾಗಿ ಅವರ ವಯಸ್ಸಿಗೆ ನೂರು ಸೇರಿಸಿದರೆ ಎಷ್ಟೋ ಅಷ್ಟು ಮಿಮೀ ಇರುವುದು ಸ್ವಾಭಾವಿಕ. ತೀರ ಇಳಿವಯಸ್ಸಿನಲ್ಲಿ ಈ ಮಟ್ಟ ಪುನಃ ಕಡಿಮೆ ಆಗುತ್ತದೆ. ಆರೋಗ್ಯಸ್ಥಿತಿಯಲ್ಲಿ ಡೈಯಾಸ್ಟಾಲಿಕ್ ಒತ್ತಡ 60 ಮಿಮೀ ಗಿಂತಲೂ ಕಡಿಮೆ ಆಗಿಯೂ ೯೦ ಮಿಮೀ. ಗಿಂತ ಹೆಚ್ಚು ಆಗಿರುವುದಿಲ್ಲ. ಹಾಗೆಯೇ ಸಿಸ್ಟಾಲಿಕ್ ಒತ್ತಡ ೧೦೦ ಮಿಮೀ ಗಿಂತಲೂ ಕಡಿಮೆ ಆಗಿರುವುದಿಲ್ಲ. ಶ್ರಮಕೆಲಸ, ವ್ಯಾಯಾಮಗಳ ವೇಳೆ ಇದು ೨೫೦ ಮಿಮೀಗಿಂತಲೂ ಮೀರಿರಬಹುದು. ರಕ್ತದ ಒತ್ತಡದಲ್ಲಿ ವೈಯಕ್ತಿಕ ವ್ಯತ್ಯಾಸವಿರುವುದರಿಂದ ಹಾಗು ದಿನದ ವಿವಿಧ ಸಮಯಗಳಲ್ಲಿ ರಕ್ತದ ಒತ್ತಡವನ್ನು ಒಂದು ಸಲ ಮಾಪಿಸಿ ಇಷ್ಟೇ ಎಂದು ಹೇಳುವುದು ತಪ್ಪು. ಸಾಧ್ಯವಾದಷ್ಟು ಮಟ್ಟಿಗೂ ವ್ಯಕ್ತಿಯ ಎಡತೋಳನ್ನು ಆತನ ಹೃದಯದ ಮಟ್ಟದಲ್ಲಿಟ್ಟು ರಕ್ತದ ಒತ್ತಡವನ್ನು ಮಾಪಿಸಬೇಕು. ನಾಲ್ಕಾರು ನಿಮಿಷಗಳು ಬಿಟ್ಟು ಇನ್ನೊಂದು ಸಲ ಮತ್ತು ಹೀಗೆಯೇ ಮತ್ತೊಂದು ಸಲ ಮಾಪಿಸಿ ಒತ್ತಡ ಇಷ್ಟೇ ಎಂದು ನಿರ್ಧರಿಸಬೇಕು. ರಕ್ತದ ಒತ್ತಡವನ್ನು ೧೨೦/೮೦ ಮಿಮೀ ೧೩೫/೯೫ ಮಿಮೀ ಇತ್ಯಾದಿಯಾಗಿ ವರದಿ ಮಾಡುವುದು ರೂಢಿ. ಮೊದಲನೆಯ ಸಂಖ್ಯೆ ಸಿಸ್ಟಾಲಿಕ್ ಒತ್ತಡವನ್ನೂ ಎರಡನೆಯ ಸಂಖ್ಯೆ ಡೈಯಾಸ್ಟಾಲಿಕ್ ಒತ್ತಡವನ್ನೂ ಸೂಚಿಸುತ್ತದೆ.

ರಕ್ತ ಒತ್ತಡಮಾಪನೆ: ಪ್ರಾಯೋಗಿಕವಾಗಿ ಪ್ರಾಣಿಗಳ ರಕ್ತನಾಳವನ್ನು ಕೊಯ್ದು ಅದನ್ನು ನೇರವಾಗಿ ಪಾದರಸ ತುಂಬಿದ U ಆಕಾರದ ನಾಳಕ್ಕೆ ಸೇರಿಸಿ ರಕ್ತದ ಒತ್ತಡವನ್ನು ಮಾಪಿಸಬಹುದು. ಆದರೆ ಮನುಷ್ಯರಲ್ಲಿ ರಕ್ತದ ಒತ್ತಡ ಮಾಪನೆಯನ್ನು ರಕ್ತದೊತ್ತಡಮಾಪಕ (ಸ್ಫಿಗ್ಮೊಮ್ಯಾನೋಮೀಟರ್) ಎಂಬ ಸಲಕರಣೆ ಇಂದ ಮಾಡಲಾಗುತ್ತದೆ. ಇದರಲ್ಲಿ ಒಂದು ಒತ್ತಡಮಾಪಕ, ಇನ್ನೊಂದು ಬಟ್ಟೆಯಿಂದ ಆವರಿಸಲ್ಪಟ್ಟ ೧೦ ಸೆಂಮೀ ಅಗಲ ಮತ್ತು 25 ಸೆಂಮೀ ಉದ್ದದ ರಬ್ಬರ್ ಚೀಲ ಇರುತ್ತವೆ. ಚೀಲದಿಂದ ಎರಡು ಕೊಳವೆಗಳು ಹೊರಟು ಒಂದು ಚೀಲವನ್ನು ಒತ್ತಡಮಾಪಕಕ್ಕೆ ಲಗತ್ತಿಸುತ್ತದೆ ಮತ್ತು ಚೀಲದಲ್ಲಿಯ ವಾಯುವಿನ ಒತ್ತಡವನ್ನು ತಿಳಿಸುತ್ತದೆ. ಇನ್ನೊಂದನ್ನು ರಬ್ಬರ್ ಬುರುಡೆಗೆ (ಬಲ್ಬ್) ಲಗತ್ತಿಸಲಾಗಿದೆ. ಈ ಬುರುಡೆಯನ್ನು ಪದೇ ಪದೇ ಅಮುಕುತ್ತ ರಬ್ಬರ್ ಚೀಲಕ್ಕೆ ವಾಯುವನ್ನು ತುಂಬಬಹುದು. ಬುರುಡೆಯಮೂತಿಗೆ ಸೇರಿದಂತೆ ಒಂದು ನಲ್ಲಿ ಇದೆ. ಇದನ್ನು ಬಳಸಿ ಒತ್ತಡವನ್ನು ಕಡಿಮೆ ಮಾಡಬಹುದು.

ರಬ್ಬರ್ ಚೀಲವನ್ನು ವ್ಯಕ್ತಿಯ ಎಡತೋಳಿನ ಸುತ್ತ ಸುತ್ತಿ ಅದನ್ನು ಒತ್ತಡಮಾಪಕಕ್ಕೂ ರಬ್ಬರ್ ಬುರುಡೆಗೂ ಲಗತ್ತಿಸಲಾಗುತ್ತದೆ. ಅನಂತರ ಬುರುಡೆಯನ್ನು ಒತ್ತಿ ಚೀಲದೊಳಗೆ ವಾಯುವನ್ನು ತುಂಬಿ ಎಡಗೈ ಮಣಿಗಂಟಿನಲ್ಲಿ ನಾಡಿಮಿಡಿತ ನಿಂತುಹೋಗುವ ತನಕವೂ ಹೀಗೆ ವಾಯುವನ್ನು ತುಂಬುತ್ತಿರಬೇಕು. ಅನಂತರ ವಾಯುವನ್ನು ನಲ್ಲಿಯ ಮೂಲಕ ನಿಧಾನವಾಗಿ ಹೊರಬಿಡುತ್ತ ಯಾವ ಒತ್ತಡಮಟ್ಟದಲ್ಲಿ ನಾಡಿ ಪುನಃ ಸ್ಪರ್ಶವೇದ್ಯವಾಗುತ್ತದೆ ಎಂಬುದನ್ನು ಒತ್ತಡ ಮಾಪಕದ ಮೂಲಕ ನೋಡಿಕೊಳ್ಳಬೇಕು. ಅನಂತರ ನಲ್ಲಿಯನ್ನೂ ಪೂರ್ತಿಯಾಗಿ ಸಡಿಲಿಸಬೇಕು. ಹೀಗೆ ಎರಡು ಮೂರು ಬಾರಿ ಮಾಡಿ ನಿರ್ಧರಿಸಿದ ಒತ್ತಡಮಟ್ಟವೇ ರಕ್ತದ ಸಿಸ್ಟಾಲಿಕ್ ಒತ್ತಡ ಮಟ್ಟ ಆಗುತ್ತದೆ. ಡೈಯಾಸ್ಟಾಲಿಕ್ ಒತ್ತಡ ಮಟ್ಟವನ್ನೂ ಈ ರೀತಿಯ ನಾಡಿಸ್ಪರ್ಶವಿಧಾನದಿಂದ (ಪ್ಯಾಲ್‌ಪೇಟರಿ ಮೆಥೆಡ್) ಮಾಪಿಸಲು ಸಾಧ್ಯವಿಲ್ಲ. ಇದನ್ನು ಶ್ರವಣ ವಿಧಾನದಿಂದ (ಅಸ್ಕಲ್ ಟೇಟರಿ ಮೆಥೆಡ್) ಮಾಪಿಸಬೇಕು.

ಇದಕ್ಕೆ ಶ್ರವಣನಳಿಕೆ (ಸ್ಟೆಥಾಸ್ಕೋಪ್; ಎದೆದರ್ಶಕ) ಹೆಚ್ಚಿನ ಸಲಕರಣೆಯಾಗಿ ಅಗತ್ಯವಾಗುತ್ತದೆ. ಸ್ಪರ್ಶವಿಧಾನದಂತೆ ಈ ವಿಧಾನದಲ್ಲೂ ಮಣಿಗಂಟಿನಲ್ಲಿ ನಾಡಿ ಮರೆ ಆಗುವ ತನಕ ಚೀಲದ ಒತ್ತಡವನ್ನು ಮೊದಲು ಏರಿಸಲಾಗುತ್ತದೆ. ಅನಂತರ ಶ್ರವಣನಳಿಕೆಯನ್ನು ಎಡಮೊಳಕೈ ಮುಂಭಾಗದಲ್ಲಿ ನಾಡಿ ಸಿಕ್ಕುವ ಸ್ಥಳದಲ್ಲಿಟ್ಟು ಸದ್ದು ಕೇಳುವುದಕ್ಕೆ ಸಿದ್ಧಮಾಡಿಕೊಳ್ಳಬೇಕು. ಅನಂತರ ನಿಧಾನವಾಗಿ ರಬ್ಬರ್ ಚೀಲದ ವಾಯು ಒತ್ತಡವನ್ನು ಕಡಿಮೆ ಮಾಡುತ್ತ ಶ್ರವಣನಳಿಕೆಯ ಮೂಲಕ ಕೇಳಿಬರುವ ಸದ್ದುಗಳನ್ನು ಆಲಿಸಬೇಕು. ನಾಡಿ ಮರೆ ಆಗಿರುವಾಗ ಏನು ಸದ್ದೂ ಕೇಳಿಸುವುದಿಲ್ಲ. ಆದರೆ ಚೀಲದ ಒತ್ತಡವನ್ನು ಕಡಿಮೆ ಮಾಡಿ ನಾಡಿ ಸ್ಪರ್ಶ ವೇದ್ಯವಾಗುವಾಗ ಕಡ್ಡಿಯಿಂದ ಮೇಜನ್ನು ಕುಟ್ಟಿದಂತೆ ಸದ್ದು (ಟ್ಯಾಪಿಂಗ್ ಸೌಂಡ್) ಕೇಳುವುದಕ್ಕೆ ಪ್ರಾರಂಭವಾಗುತ್ತದೆ. ಈ ಒತ್ತಡ ಮಟ್ಟವೇ ಸಿಸ್ಟಾಲಿಕ್ ಒತ್ತಡಮಟ್ಟ. ರಬ್ಬರ್ ಚೀಲದಿಂದ ವಾಯುವನ್ನು ನಿಧಾನವಾಗಿ ಬಿಡುತ್ತ ಬಂದರೆ ಇನ್ನೂ 10–15 ಮಿಮೀ ಗಳಷ್ಟು ಒತ್ತಡ ಇಳಿಯುವ ತನಕವೂ ಕುಟ್ಟುವಂಥ ಶಬ್ದ ಕೇಳಿಬರುತ್ತಿದ್ದು ಕ್ರಮೇಣ ಅದು ಮರ್ಮರವಾದಂತೆ (ಮರ್ಮರ್) ಕೇಳಿಸುತ್ತದೆ. ಇದು ಇನ್ನೂ 10 – 15 ಮಿಮೀ ಒತ್ತಡ ಇಳಿಯುವ ತನಕ ಕೇಳಿಸುತ್ತಿದ್ದು ಸದ್ದು ಇದ್ದಕ್ಕಿದ್ದಂತೆ ಪುನಃ ಜೋರಾಗುತ್ತದೆ (ಲೌಡ್ ಬ್ಯಾಗಿಂಗ್). ಮುಂದೆ ಸದ್ದು ಹಠಾತ್ತಾಗಿ ದನಿಗುಂದಿ (ಮಫಲ್ಡ್) ಎಲ್ಲೋ ದೂರದಿಂದ ಅಸ್ಪಷ್ಟವಾಗಿ ಕೇಳುವಂತಿದ್ದು ಕೊನೆಗೆ ನಿಂತೇಹೋಗುತ್ತದೆ. ಹೀಗೆ ಸದ್ದು ನಿಂತುಹೋದಕ್ಷಣದ ಒತ್ತಡಮಟ್ಟವೆ ಡೈಯಾಸ್ಟಾಲಿಕ್ ಒತ್ತಡಮಟ್ಟ.

ಶ್ರವಣ ನಳಿಕೆ ಹಾಗೂ ಮಾಪಕನ ಶ್ರವಣಸಾಮರ್ಥ್ಯ ಇವುಗಳ ಸೂಕ್ಷ್ಮತೆಯ ವ್ಯತ್ಯಾಸದಿಂದಾಗಿ ಒಬ್ಬೊಬ್ಬ ಮಾಪಕನೂ ನಿರ್ಧರಿಸಿದ ರಕ್ತದ ಒತ್ತಡದ ಮಟ್ಟ 5 – 10 ಮಿಮೀ ನಷ್ಟು ವ್ಯತ್ಯಾಸವಾಗಿರಬಹುದು. ಆದ್ದರಿಂದ ವ್ಯಕ್ತಿಯ ರಕ್ತದ ಒತ್ತಡವನ್ನು ಪದೇ ಪದೇ ಮಾಪಿಸುತ್ತಿರಬೇಕಾದರೆ ಒಂದೇ ಮಾಪಕ, ಒಂದೆ ಸಲಕರಣೆ ಬಳಸಿ ಮಾಪಿಸಬೇಕು. ಈಚೆಗೆ ಕೆಲವಾರು ವರ್ಷಗಳಿಂದ ವೈಯಕ್ತಿಕವಾದ ಇಂಥ ವ್ಯತ್ಯಾಸ ಉಂಟಾಗದಂತೆ ವಿಶಿಷ್ಟ ಎಲೆಕ್ಟ್ರಾನಿಕ್ ರಕ್ತದೊತ್ತಡ ಮಾಪಕಗಳು ತಯಾರಾಗಿವೆ. ಯಾಂತ್ರಿಕವಾಗಿಯೆ ಇವು ಸಿಸ್ಟಾಲಿಕ್ ಹಾಗೂ ಡೈಯಾಸ್ಟಾಲಿಕ್ ಒತ್ತಡಗಳನ್ನು ಸೂಚಿಸುತ್ತವೆ.

ರಕ್ತದ ಒತ್ತಡ ಉಂಟಾಗುವುದಕ್ಕೆ ಕಾರಣಗಳು: ಪ್ರತಿಯೊಂದು ಹೃದಯ ಮಿಡಿತದಲ್ಲೂ ಸುಮಾರು 70 ಮಿಲೀಗಳಷ್ಟು ರಕ್ತ ಈ ಮೊದಲೇ ರಕ್ತದಿಂದ ತುಂಬಿಯೇ ಇರುವ ಅಪಧಮನಿ ವ್ಯೂಹಕ್ಕೆ ನುಗ್ಗುವುದು ಮತ್ತು ಹೃದಯ ವಿಕಸಿಸುತ್ತಿರುವಾಗ ಅಪಧಮನಿಗಳ ಸ್ಥಿತಿಸ್ಥಾಪಕ ಸಾಮರ್ಥ್ಯ ಇವು ಮುಖ್ಯವಾಗಿ ನಾಳಗಳೊಳಗಿನ ರಕ್ತದ ಒತ್ತಡವನ್ನು ಉಂಟುಮಾಡುತ್ತವೆ. ಇದರ ಜೊತೆಗೆ ಬೇರೆ ಕಾರಣಗಳೂ ಇವೆ. ರಕ್ತನಾಳಗಳ ಒಳ ಅವಕಾಶದ ಗಾತ್ರ (ಕೆಪ್ಯಾಸಿಟಿ) ದೇಹದಲ್ಲಿ ಚಲಿಸುತ್ತಿರುವ ರಕ್ತದ ಗಾತ್ರಕ್ಕಿಂತಲೂ (ಸರ್ಕ್ಯುಲೇಟಿಂಗ್ ಬ್ಲಡ್ ವಾಲ್ಯೂಮ್) ಸ್ವಲ್ಪ ಕಡಿಮೆಯಾಗೇ ಇರುವುದರಿಂದ ನಾಳಗಳೊಳಗೆ ತುಂಬಿರುವ ರಕ್ತ ಒತ್ತಡದಿಂದಲೆ ಕೂಡಿರುತ್ತದೆ. ರಕ್ತದ ಪ್ರಮಾಣ ಹೆಚ್ಚಿದರೆ ಈ ಒತ್ತಡವೂ ಹೆಚ್ಚುತ್ತದೆ. ಕಡಿಮೆ ಅದರೆ ರಕ್ತದ ಒತ್ತಡವೂ ಕಡಿಮೆ ಆಗುತ್ತದೆ. ಆದರೆ ಸಾಮಾನ್ಯವಾಗಿ ರಕ್ತಪ್ರಮಾಣದಲ್ಲಿ ಅಂಥ ಏರುಪೇರುಗಳಾಗುವುದಿಲ್ಲವಾದ್ದರಿಂದ ಇದು ರಕ್ತದ ಒತ್ತಡವನ್ನು ಹೆಚ್ಚು ಕಡಿಮೆ ಮಾಡುವ ಸಂಭವವೂ ಕಡಿಮೆ. ರಕ್ತದಂಥ ಸ್ನಿಗ್ಧದ್ರವ ಸಣ್ಣವ್ಯಾಸದ ಕೊಳವೆಯ ಮೂಲಕ ಪ್ರವಹಿಸುವಾಗ ಹೆಚ್ಚಿನ ಅಡ್ಡಿಯನ್ನು ಎದುರಿಸಬೇಕಾಗುತ್ತದೆ. ಅಡ್ಡಿ ಹೆಚ್ಚಿದಷ್ಟು ಹಿಮ್ಮೊಗ ಒತ್ತಡ (ಬ್ಯಾಕ್ ಪ್ರೆಷರ್) ಹೆಚ್ಚಿ ರಕ್ತದ ಒತ್ತಡ ಹೆಚ್ಚಾಗಬಹುದು. ಅಂತೆಯೇ ರಕ್ತಪ್ರವಾಹದ ವೇಗ ಕಡಿಮೆ ಆಗಿ ನಾಳಗಳ ಉದ್ದ ಕಡಿಮೆ ಆಗಿದ್ದರೆ ರಕ್ತದ ಒತ್ತಡ ತಗ್ಗುತ್ತದೆ. ಆದರೆ ಇವೆರಡೂ ವ್ಯಕ್ತಿಯಲ್ಲಿ ಬದಲಾಗವು. ಆದುದರಿಂದ ಇವು ರಕ್ತದ ಒತ್ತಡಕ್ಕೆ ಕಾರಣವಾಗುತ್ತವೆಯೇ ಹೊರತು ಅದರ ಏರುಪೇರಿಗೆ ಕಾರಣವಾಗುವುದಿಲ್ಲ. ಹೀಗೆಯೇ ರಕ್ತದ ಸ್ನಿಗ್ಧತ್ವ (ವಿಸ್ಕಾಸಿಟಿ) ಹೆಚ್ಚಿದಷ್ಟೂ ಕಿರಿನಾಳಗಳಲ್ಲಿ ಆ ದ್ರವ ಪ್ರವಹಿಸುವುದು ಕಷ್ಟ. ಕಾರಣ ಅದರಿಂದ ಉಂಟಾಗುವ ಒತ್ತಡ ಹೆಚ್ಚು. ಸ್ನಿಗ್ಧತ್ವ ಕಡಿಮೆ ಆದಾಗ ಪ್ರವಾಹ ಅಡಚಣೆಯೂ ಕಡಿಮೆ; ಕಾರಣ ಉಂಟಾಗುವ ಒತ್ತಡವೂ ಕಡಿಮೆ. ಆದರೆ ರಕ್ತದ ಸ್ನಿಗ್ಧತ್ವದಲ್ಲಿ ಆರೋಗ್ಯಸ್ಥಿತಿಯಲ್ಲಿಯ ಏರುಪೇರುಗಳು ವಿರಳ. ಸಾಮಾನ್ಯವಾಗಿ ಆರೋಗ್ಯಸ್ಥಿತಿಯಲ್ಲಿ ರಕ್ತದ ಒತ್ತಡದ ಏರಿಕೆ ಅಥವಾ ಕುಸಿತ ಹೆಚ್ಚು ಕಾಲ ಇವಿರುವುದಿಲ್ಲ. ಶೀಘ್ರವಾಗಿಯೇ ಒತ್ತಡ ಮಾಮೂಲು ಘಟ್ಟಕ್ಕೆ ಹಿಂತಿರುಗುತ್ತದೆ. ಇದರ ತಾಂತ್ರಿಕತೆ ಇಷ್ಟೇ. ಹೃದಯದಿಂದ ರಕ್ತರೇಚನೆ ಹೆಚ್ಚಿ ರಕ್ತದ ಒತ್ತಡ ಹೆಚ್ಚಿದಾಗ ಕಿರಿಅಪಧಮನಿಗಳ ವ್ಯಾಸ ದೊಡ್ಡದಾಗಿ ಏರಿದ ಮಟ್ಟ ಇಳಿಯುತ್ತದೆ. ಹೃದಯದಿಂದ ಹೊರದೂಡಲ್ಪಟ್ಟ ರಕ್ತದ ಪ್ರಮಾಣ ಕಡಿಮೆ ಆಗಿ ರಕ್ತದ ಒತ್ತಡ ಕುಸಿದರೆ ಕಿರಿ ಅಪಧಮನಿಗಳು ಸಂಕೋಚನೆಗೊಂಡು ಅವುಗಳ ವ್ಯಾಸ ಇನ್ನೂ ಸಣ್ಣದಾಗಿ ರಕ್ತದ ಒತ್ತಡ ಮಾಮೂಲಿನ ಮಟ್ಟಕ್ಕೆ ಏರುತ್ತದೆ. ಇದು ಮಿದುಳಿನ ಪುಚ್ಛ ಭಾಗವೆನಿಸುವ ಮೆಡುಲ್ಲ ಎಂಬಲ್ಲಿರುವ ನರಕೋಶಕೇಂದ್ರಗಳಿಂದ ಅನೈಚ್ಛಿಕವಾಗಿ (ಇನ್‌ವಾಲಂಟರಿಲಿ) ನೆರವೇರುತ್ತದೆ.

ಸಿಸ್ಟಾಲಿಕ್ ಒತ್ತಡಕ್ಕೂ ಡೈಯಾಸ್ಟಾಲಿಕ್ ಒತ್ತಡಕ್ಕೂ ಇರುವ ವ್ಯತ್ಯಾಸಕ್ಕೆ ಪಲ್ಸ್ ಒತ್ತಡ ಎಂದು ಹೆಸರು. ಇದು ಮುಖ್ಯವಾಗಿ ಹೃದಯ ಎಷ್ಟು ಬಲವಾಗಿ ರಕ್ತವನ್ನು ಅಪಧಮನಿವ್ಯೂಹಕ್ಕೆ ನುಗ್ಗಿಸುತ್ತದೆ ಎನ್ನುವುದನ್ನು ಸೂಚಿಸುತ್ತದೆ.

ರಕ್ತದ ಒತ್ತಡಕ್ಕೆ ಸಂಬಂಧಿಸಿದ ರೋಗಗಳು: ವ್ಯಕ್ತಿಗೆ ಸಹಜವಾಗಿರುವಷ್ಟು ಮಟ್ಟಕ್ಕಿಂತಲೂ ಯಾವಾಗಲೂ ರಕ್ತದ ಒತ್ತಡ ಮಟ್ಟ ಕಡಿಮೆಯಾಗಿಯೋ ಅಥವಾ ಹೆಚ್ಚಾಗಿಯೋ ಇರುವ ಸ್ಥಿತಿಗಳು.

ರಕ್ತದ ಒತ್ತಡ ಕುಸಿತ (ಲೋ ಬ್ಲಡ್ ಪ್ರೆಷರ್): ಹೃದಯದಿಂದ ರೇಚಿಸಲ್ಪಡುವ ರಕ್ತದ ಪ್ರಮಾಣ ಕಡಿಮೆ ಬೀಳುವುದರಿಂದ ಇಲ್ಲವೇ ಅಪಧಮನಿಯ ವ್ಯೂಹದಲ್ಲಿ ರಕ್ತಪ್ರವಾಹಕ್ಕೆ ಅಡಚಣೆ ತಗ್ಗುವುದರಿಂದ ರಕ್ತದ ಒತ್ತಡ ಕುಸಿಯುತ್ತದೆ. ನ್ಯೂಮೋನಿಯಾ, ಟೈ ಫಾಯಿಡ್, ಡಿಫ್ತೀರಿಯ, ಮುಂತಾದ ರೋಗಗಳಲ್ಲಿ ರೋಗ ಕಾರಕದ ವಿಷಗಳಿಂದ ಹೃದಯಕ್ಕೆ ನಂಜಾಗಿ ರಕ್ತದ ಒತ್ತಡ ಕುಸಿಯಬಹುದು. ಕಿರಿ ಅಪಧಮನಿಗಳ ವ್ಯಾಸ ದೊಡ್ಡದಾಗಿ ರಕ್ತದ ಒತ್ತಡದಲ್ಲಿ ಕುಸಿತ ಉಂಟಾಗುವುದು ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ. ಅತಿಯಾದ ಭಯ ಅಥವಾ ಅತಿ ನಾಚಿಕೆಯಂಥ ಭಾವನೋದ್ವೇಗ ಸಂದರ್ಭಗಳಲ್ಲಿ ಕಿರಿಅಪಧಮನಿಗಳು ಹಿಗ್ಗುವುದುಂಟು. ಆದರೆ ಇದು ತಾತ್ಕಾಲಿಕ ಮಾತ್ರ. ಅಡಿಸನ್ನನ ರೋಗದಲ್ಲಿ ಕಿರಿಧಮನಿಗಳು ಹಿಗ್ಗಿರುವ ಸ್ಥಿತಿ ಕಂಡಬರುವುದಿದೆ. ಇದಕ್ಕೆ ಕಾರಣ ಅಡ್ರಿನಲ್ ಗ್ರಂಥಿ ಅವನತಿಯಿಂದಾಗಿ ದೇಹಕ್ಕೆ ಅಡ್ರಿನಲಿನ್ ಎಂಬ ಹಾರ್ಮೋನಿನ ಅಭಾವ ಉಂಟಾಗುವುದು.

ರಕ್ತದ ಒತ್ತಡ ಹಠಾತ್ತಾಗಿ ಕುಸಿದರೆ ತಲೆಸುತ್ತು, ಹೊಟ್ಟೆತೊಳಸು, ಲವಲವಿಕೆ ಇಲ್ಲದಿರುವಿಕೆ ಶೀಘ್ರಸುಸ್ತು, ಮನೋವ್ಯಾಕುಲತೆ, ವಾಕರಿಕೆ, ಚಳಿಚಳಿಯಾಗುವುದು ಕಂಡುಬರುತ್ತದೆ. ಕೊನೆಗೆ ಜ್ಞಾನ ತಪ್ಪುವುದೂ ಉಂಟು. ಇವೆಲ್ಲದರ ಕಾರಣ ಒತ್ತಡ ಕುಸಿತದಿಂದಾಗಿ ಮಿದುಳಿಗೆ ಸಾಕಷ್ಟು ರಕ್ತಪೂರೈಕೆ ಆಗುವುದಿಲ್ಲ. ಆದ್ದರಿಂದ ವ್ಯಕ್ತಿ ಮಲಗಿಕೊಂಡರೆ ಮಿದುಳಿನ ರಕ್ತಪೂರೈಕೆ ಉತ್ತಮಗೊಂಡು ಲಕ್ಷಣಗಳು ತಹಬಂದಿಗೆ ಬರುತ್ತವೆ. ಕೈ ಕಾಲು ನೀವುವಿಕೆ, ಒಳ್ಳೆಯ ಆಹಾರ ನೀಡುವುದು, ಒತ್ತಡ ಕುಸಿತದ ಪರಿಣಾಮಗಳನ್ನು ಎದುರಿಸಬಹುದು.

ಏರಿರುವ ರಕ್ತ ಒತ್ತಡ ಸ್ಥಿತಿ (ರಕ್ತದ ಒತ್ತಡವೇರಿಕೆ, ಹೈ ಬ್ಲಡ್ ಪ್ರೆಷರ್; ಹೈಪರ್ ಪೈಯೀಸಿಯ): ಉದ್ವೇಗ ಅಥವಾ ಅನೇಕ ಕಾರಣಗಳಿಂದ ಈ ಸ್ಥಿತಿ ಉಂಟಾಗುವುದಿದೆ. ಮಲಬದ್ಧತೆ (ಕರುಳಿನಿಂದ ಹೀರಲ್ಪಟ್ಟ ವಿಷಪದಾರ್ಥಗಳಿಂದಾಗಿ), ತಂಬಾಕು, ಮದ್ಯಗಳು ಎರಡನ್ನೂ ಹೆಚ್ಚಾಗಿ ಸೇವಿಸುವುದು, ಮೂತ್ರಪಿಂಡ ಉರಿಯೂತ (ದೇಹದ ವಿಷವಸ್ತುಗಳು ವಿಸರ್ಜನೆ ಆಗದೆ ಉಳಿದುಕೊಳ್ಳುವುದರಿಂದ), ಅಡ್ರಿನಲ್ ಗ್ರಂಥಿಯ ಏರುಮಟ್ಟದ ಕ್ರಿಯೆ, ಅಪಧಮನಿಪೆಡಸಣೆ – ಇವುಗಳಲ್ಲಿ ಕಾಣಬರುವ ರಕ್ತದ ಒತ್ತಡವೇರಿಕೆಗೆ ಆನುಷಂಗಿಕ ನಿವಾರಿಸಿದರೆ ಒತ್ತಡ ಇಳಿಯುತ್ತದೆ. ಆದರೆ ಕಾರಣ ವ್ಯಕ್ತವೇ ಆಗದೆ ರಕ್ತದ ಒತ್ತಡ ಏರಿರುವುದು ತಕ್ಕಮಟ್ಟಿಗೆ ಸಾಮಾನ್ಯವೇ ಆಗಿದೆ. 40 – 45 ವರ್ಷ ಮೀರಿದ ವ್ಯಕ್ತಿಗಳು ಇದಕ್ಕೆ ಬಹಳಷ್ಟು ಈಡಾಗುತ್ತಾರೆ. ಇಂಥ ಒತ್ತಡ ಏರಿಕೆಗೆ ಮೂಲಭೂತ ಒತ್ತಡವೇರಿಕೆ (ಪ್ರೈಮರಿ ಹೈಪರ್ ಟೆನ್ಷನ್, ಎಸ್ಸೆನ್ಷಿಯಲ್ ಹೈಪರ್ ಟೆನ್ಷನ್) ಎಂದು ಹೆಸರು. ಇದರಲ್ಲೂ ಎರಡು ಬಗೆಗಳಿವೆ: ಸೌಮ್ಯ (ಬಿನೈನ್) ಮತ್ತು ಉಗ್ರ (ಮ್ಯಾಲಿಗ್ನೆಂಟ್). ಸಾಮಾನ್ಯವಾಗಿ ಕೆಲಸದ ಒತ್ತಡ (ವರ್ಕ್), ಹೆಂಗಸಿನ ಪೀಡೆ (ವುಮೆನ್), ಮದ್ಯ ಸೇವನೆಯ ಚಟ (ವೈನ್), ಮನಸ್ಸಿನ ಚಿಂತೆ (ವರಿ) ಇವುಗಳಿಂದ ವ್ಯಕ್ತಿ ಇಂಥ ರಕ್ತದ ಒತ್ತಡ ಏರಿಕೆಗೆ ತುತ್ತಾಗುತ್ತಾನೆ.

ಸೌಮ್ಯ ರೀತಿಯ, ಮೂಲಭೂತ ರಕ್ತ ಒತ್ತಡ ಏರಿಕೆಯಲ್ಲಿ ಕಂಡುಬರಬಹುದಾದ ಲಕ್ಷಣಗಳು ಎಂದರೆ ಚಟ್ಟನೆ ಬಂದುಹೋಗುವ ತಲೆಸುತ್ತು, ಮುಂಜಾನೆ ಎರಗುವ ತಲೆನೋವು, ನಿದ್ರಾನಾಶ, ಸುಸ್ತು, ಕಿವಿಯಲ್ಲಿ ಗುಯ್‌ಗುಟ್ಟುವಿಕೆ ಇಂಥವು. ಇವು ರೂಢಿಗತವಾಗಿ ಹೋಗಿರುವ ವ್ಯಕ್ತಿಗೆ ಹೇಳಿಕೊಳ್ಳುವ ತೊಂದರೆಯೆ ಇಲ್ಲವೆನ್ನಿಸಿ, ತಾನು ಆರೋಗ್ಯವಾಗಿಯೆ ಇದ್ದೇನೆ ಎಂಬ ಭಾವನೆ ಇರುತ್ತದೆ. ಆದ್ದರಿಂದ ಬೇರೆ ಯಾವುದೇ ಉದ್ದೇಶಕ್ಕಾಗಿ ರಕ್ತದ ಒತ್ತಡವನ್ನು ಮಾಪಿಸಿದಾಗಲೇ ಇಂಥ ವ್ಯಕ್ತಿಗೆ ಏರಿದ ರಕ್ತದ ಒತ್ತಡವಿರುವುದು ಪತ್ತೆ ಆಗುತ್ತದೆ. ಇಂಥ ಸಂದರ್ಭಗಳು ಬಹಳ ಅಕಸ್ಮಾತ್ತಾಗಿ ರಕ್ತದ ಒತ್ತಡ ಮಾಪನ ಮಾಡುವುದು ತಪ್ಪಿಯೇ ಹೋಗಿದ್ದರೆ ಮೂಗಿನಿಂದ ಆಗಾಗ ರಕ್ತಸ್ರಾವ, ಉಬ್ಬಸ, ದೃಷ್ಟಿಮಾಂದ್ಯ, ರಕ್ತಕಫ, ರಕ್ತಮೂತ್ರ – ಇವುಗಳೇ ಏರಿದ ರಕ್ತ ಒತ್ತಡದಿಂದ ವ್ಯಕ್ತಿ ನರಳುತ್ತಿರಬಹುದೆಂಬುದಕ್ಕೆ ಪ್ರಥಮ ಸೂಚನೆಗಳಾಗಿರಬಹುದು. ಕೆಲವು ಸಂದರ್ಭಗಳಲ್ಲಿ ಮೆದುಳಿನಲ್ಲಿ ಆದ ರಕ್ತಸ್ರಾವದಿಂದ ವ್ಯಕ್ತಿ ಪಕ್ಷಾಘಾತಕ್ಕೆ ಈಡಾಗುವುದು ಪ್ರಥಮಸೂಚನೆ ಆಗಿರಬಹುದು. ಇಂಥ ಸಂಧರ್ಭದಲ್ಲಿ ವ್ಯಕ್ತಿ ಹಠಾತ್ತಾಗಿ ಮೃತನಾಗುವುದಿದ್ದು ಮರಣಕ್ಕೆ ಕಾರಣವೇ ತಿಳಿಯದಂತಿರುವುದೂ ಉಂಟು. ಎದೆನೋವು, ಹೃದಯದ ನೋವು ಇವು ದೀರ್ಘಕಾಲಿಕ ರಕ್ತದ ಒತ್ತಡ ಏರಿಕೆಯ ಸಾಮಾನ್ಯ ಪರಿಣಾಮಗಳು.

ಚಿಕಿತ್ಸೆ: ಕಡಿಮೆ ಆಹಾರ ಸೇವನೆ, ಮಲಬದ್ಧತೆಯ ನಿವಾರಣೆ, ದೇಹಕ್ಕೆ ವಿಶ್ರಾಂತಿ, ಮನಸ್ಸಿಗೆ ಶಾಂತಿ ಇವು ನಾಲ್ಕೂ ರಕ್ತದ ಒತ್ತಡ ಏರಿಕೆಯ ತಡೆ ಮತ್ತು ಇಳಿತಕ್ಕೆ ಬಲುಮುಖ್ಯ ಕ್ರಮಗಳು. ಕಾಫಿ, ಮದ್ಯ, ಮಾಂಸಗಳನ್ನು ಕಡಿಮೆ ಮಾಡುವುದೋ ಬಿಟ್ಟೇಬಿಡುವುದೋ ಒಳ್ಳೆಯದು. ರಕ್ತದ ಒತ್ತಡದ ಏರಿಕೆಗೆ ಸೇವಿಸುವ ಉಪ್ಪು ಸಹಕಾರಿ, ಆದ್ದರಿಂದ ಉಪ್ಪುಸೇವನೆಯನ್ನು ಮೊಟಕು ಮಾಡಬೇಕು. ದೇಹದಲ್ಲಿ ಉಪ್ಪಿನ ಮಟ್ಟ ಹೆಚ್ಚಿಯೇ ರಕ್ತದ ಒತ್ತಡ ಮಟ್ಟಕ್ಕೆ ಕಾರಣವಾಗಿರಬಹುದಾದ್ದರಿಂದ ಉಪ್ಪಿನ ಮಟ್ಟ ದೇಹದಲ್ಲಿ ಕಡಿಮೆ ಆಗುವಂತೆ ಔಷಧಿಗಳನ್ನು ಕೊಡುವುದಿದೆ. ಆದರೆ ಹೀಗೆ ಉಪ್ಪನ್ನು ದೇಹ ಕಳೆದುಕೊಳ್ಳುವಂತೆ ಮಾಡುವಾಗ ಪೊಟ್ಯಾಷಿಯಮ್‌ಲವಣಗಳು ಕಳೆದುಹೋಗಬಹುದು. ಆದ್ದರಿಂದ ಯುಕ್ತ ಎಚ್ಚರಿಕೆ ತೆಗೆದುಕೊಳ್ಳಬೇಕಾದುದು ಅನಿವಾರ್ಯ.

ಅಪಧಮನಿಗಳು ಕುಗ್ಗುವುದನ್ನು ತಪ್ಪಿಸುವ ಔಷಧಿಗಳು, ಅವನ್ನು ವಾಸ್ತವವಾಗಿ ಹಿಗ್ಗಿಸುವ ಔಷಧಿಗಳು ಮನಶ್ಶಾಂತಿಗಾಗಿ ಕೊಡುವ ಔಷಧಿಗಳು ಇವುಗಳನ್ನು ಪ್ರತ್ಯೇಕವಾಗಿಯೋ ಒಟ್ಟಾಗಿಯೋ ಚಿಕಿತ್ಸೆಗೆ ಬಳಸುವುದು ರೂಢಿ. ಆದರೆ ಇವನ್ನೆಲ್ಲ ಬಳಸಿ ಏರಿರುವ ರಕ್ತದ ಒತ್ತಡವನ್ನು ದಿಢೀರೆಂದು ಮಾಮೂಲು ಮಟ್ಟಕ್ಕೆ ಇಳಿಸುವುದಕ್ಕೆ ಪ್ರಯತ್ನಿಸುವುದು ತಪ್ಪು. ವ್ಯಕ್ತಿ ಏರಿದ ರಕ್ತದ ಒತ್ತಡಸ್ಥಿತಿಗೆ ಸ್ವಲ್ಪಮಟ್ಟಿಗೆ ಒಗ್ಗಿಕೊಂಡಿರುತ್ತಾನೆಂಬುದನ್ನು ಗ್ರಹಿಸಿ ಚಿಕಿತ್ಸೆ ಮಾಡುವಾಗ ರಕ್ತದ ಒತ್ತಡ ಮಾಮೂಲಾಗಿ ಇರಬೇಕಾದ ಮಟ್ಟಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಇರುವಂತೆಯೇ ಚಿಕಿತ್ಸೆಯನ್ನು ನಿಯಂತ್ರಿಸಬೇಕು.

ಥಯಾಜಿಡ್ ಮೂತ್ರವರ್ಧಕಗಳು, ಭಿಟಾ ಅಡ್ರಿನೋಗ್ರಾಹಕಗಳ ಪ್ರತಿರೋಧಿಗಳು, ಆಂಜಿಯೊಟೆನ್ಸಿನ್ ಮಾರ್ಪಡಿಸುವ ಕಿಣ್ವದ ಪ್ರತಿಬಂಧಕಗಳು, ಆಂಜಿಯೋಟೆನ್ಸಿನ್ II ಗ್ರಾಹಿಗಳ ಪ್ರತಿಬಂಧಕಗಳು, ಕ್ಯಾಲ್ಸಿಯಂ ವಿರೋಧಿಗಳು, ಇವುಗಳನ್ನು ರಕ್ತದ ಏರೊತ್ತಡದ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಅದರ ಜೊತೆಗೆ ವ್ಯಕ್ತಿಯ ಜೀವನ ಶೈಲಿಯೂ ಬದಲುಗೊಳ್ಳುವುದೂ ಮುಖ್ಯ. ***

**ರಣಹದ್ದು:** ಫಾಲ್ಕನಿಫಾರ್ಮಿಸ್ ಗಣಕ್ಕೆ ಸೇರಿದ ದೊಡ್ಡ ಗಾತ್ರದ ಪಕ್ಷಿ (ವಲ್ಚರ್). ಹದ್ದು, ಗರುಡ, ಗಿಡುಗ ಮುಂತಾದ ಪಕ್ಷಿಗಳ ಹತ್ತಿರ ಸಂಬಂಧಿ. ಜೀವಂತವಿರುವ ಚಿಕ್ಕ ಪುಟ್ಟ ಪ್ರಾಣಿಗಳನ್ನೂ ಸತ್ತಪ್ರಾಣಿಯ ಮಾಂಸವನ್ನೂ ತಿನ್ನುವ ಈ ಪಕ್ಷಿ ಭಯಂಕರವಾಗಿ ಕಂಡರೂ ಪರಿಸರದ ಆಹಾರ ಸರಪಣಿಯಲ್ಲಿ ಮುಖ್ಯಸ್ಥಾನ ಪಡೆದಿದೆ. ರಣಹದ್ದು ಎಂಬ ಸಾಮಾನ್ಯ ಹೆಸರಿನ ಇಪ್ಪತ್ತಕ್ಕೂ ಹೆಚ್ಚು ಪ್ರಭೇದಗಳಿವೆ. ಉಷ್ಣ ಹಾಗೂ ಸಮಶೀತೋಷ್ಣ ವಲಯಗಳಲ್ಲಿ ಕಂಡುಬರುವ ಈ ಪಕ್ಷಿಗಳು ಆಸ್ಟ್ರೇಲಿಯ ಹಾಗೂ ಹಿಂದೂಮಹಾಸಾಗರಗಳ ನಡುವೆ ಇರುವ ಕೆಲವು ದ್ವೀಪಗಳನ್ನು ಹೊರತುಪಡಿಸಿ ಎಲ್ಲ ಭೂಪ್ರದೇಶಗಳಲ್ಲೂ ಕಂಡುಬರುತ್ತವೆ.

ದಪ್ಪತಲೆ, ಉದ್ದವಾದ ನೀಳಕುತ್ತಿಗೆ, ಭಾರವಾದ ದೇಹ ಹಾಗೂ ನೀಳ ಕಾಲುಗಳುಳ್ಳ ಈ ಪಕ್ಷಿಯ ತಲೆ ಹಾಗೂ ಕುತ್ತಿಗೆಯ ಭಾಗದಲ್ಲಿ ಪುಕ್ಕಗಳಿಲ್ಲದಿರುವುದರಿಂದ ಬೋಳಾಗಿ ಕಾಣುತ್ತದೆ. ಬಲವಾದ ಉದ್ದನೆಯ ಕೊಕ್ಕು ಮುಂಭಾಗದಲ್ಲಿ ಕೆಳಕ್ಕೆ ಬಾಗಿಕೊಂಡಿರುತ್ತದೆ. ಕೊಕ್ಕು ಸಾಕಷ್ಟು ಗಟ್ಟಿಯಾಗಿಯೂ ಬಿರುಸಾಗಿಯೂ ಇದ್ದು ಸತ್ತ ಪ್ರಾಣಿಗಳ ಅಸ್ಥಿಪಂಜರದ ಒಳಭಾಗದಿಂದಲೂ ಮಾಂಸವನ್ನು ಕಚ್ಚಿ ಎಳೆಯಲು ಸಹಕಾರಿಯಾಗಿದೆ. ಕಾಲುಗಳು ನೀಳವಾಗಿದ್ದರೂ ಬಿರುಸಾದ ಉಗುರುಗಳಿರುವ ಬೆರಳುಗಳು ಸಾಕಷ್ಟು ಬಲವಾಗಿರುವುದರಿಂದ ಮಾಂಸವನ್ನು ಎಲುಬಿನಿಂದ ಬೇರ್ಪಡಿಸುವುದಕ್ಕೂ ಜೀವಂತಪ್ರಾಣಿಗಳು ತಪ್ಪಿಸಿಕೊಳ್ಳದಂತೆ ಭದ್ರವಾಗಿ ಹಿಡಿಯುವುದಕ್ಕೂ ಸಹಾಯಕವಾಗುತ್ತವೆ. ಕೆಲವು ರಣಹದ್ದುಗಳು ಆಕಾಶದಲ್ಲಿ ಬಹು ಎತ್ತರದಲ್ಲಿ ಹಾರಾಡುತ್ತಿದ್ದರೂ ನೆಲದ ಮೇಲೆ ಓಡಾಡುವ ಚಿಕ್ಕ ಪ್ರಾಣಿಗಳನ್ನು ಪತ್ತೆಹಚ್ಚಬಲ್ಲವು. ಹೀಗೆ ದೃಷ್ಟಿ ಚುರುಕಾಗಿರುವುದರಿಂದ ಹದ್ದಿನ ಕಣ್ಣು ಎಂಬ ನುಡಿ ಪ್ರಚಲಿತವಾಗಿದೆ. ಚಿಕ್ಕ ಕುರಿಮರಿ, ಕೋಳಿ ಮುಂತಾದವುಗಳನ್ನು ಇವು ಸುಲಭವಾಗಿ ಕೊಂಡೊಯ್ಯಬಲ್ಲವು.

ರಣಹದ್ದುಗಳು ವಿಶಾಲವಾದ ಕಲ್ಲುಬಂಡೆಗಳ ಮೇಲೆ ಇಲ್ಲವೆ ಬಯಲು ಪ್ರದೇಶಗಳಲ್ಲಿ ಅಥವಾ ಸಮುದ್ರತೀರದಲ್ಲಿ ಸಮುದ್ರದ ಕಡೆ ಚಾಚಿಕೊಂಡಿರುವ ಕಲ್ಲುಬಂಡೆಗಳ ಮೇಲೆ ಗುಂಪಾಗಿ ಕುಳಿತು ಗಂಟೆಗಟ್ಟಲೆ ಕಾಲಹರಣ ಮಾಡುತ್ತವೆ. ಆಗೊಮ್ಮೆ ಈಗೊಮ್ಮೆ ರೆಕ್ಕೆ ಬಡಿಯುತ್ತ, ಚೀರಾಡುತ್ತ ಅಲ್ಲಿಯೇ ಜಿಗಿದಾಡುತ್ತವೆ. ಯಾವುದಾದರೂ ಒಂದು ಹದ್ದು ದೂರದಲ್ಲೆಲ್ಲೊ ಸತ್ತ ಅಥವಾ ಸಾಯುತ್ತಿರುವ ಪ್ರಾಣಿಯನ್ನು ಕಂಡರೆ ಉಳಿದವುಗಳಿಗೂ ಸೂಚನೆ ನೀಡುತ್ತದೆ. ಆಗ ಇವು ಹಲವಾರು ಮೈಲು ದೂರವಿದ್ದರೂ ಅಲ್ಲಿಗೆ ಹಾರಿ ಆಹಾರವಿರುವ ಸ್ಥಳವನ್ನು ತಲುಪುತ್ತವೆ. ಆಹಾರ ಭಕ್ಷಣೆಯ ಸಮಯದಲ್ಲಿ ಸಾಮಾನ್ಯ ಸಮಾಜಜೀವನದ ನೀತಿಗಳನ್ನು ಪಾಲಿಸುತ್ತವೆ. ಆಹಾರವನ್ನು ಹಂಚಿಕೊಳ್ಳುವಾಗ ದೊಡ್ಡ ಹಾಗೂ ಬಲಶಾಲಿ ಹದ್ದುಗಳಿಗೆ ಸಿಂಹಪಾಲು ದೊರೆಯುತ್ತದೆ. ಕಾಗೆ, ತೋಳ, ಕತ್ತೆಕಿರುಬಗಳಂಥ ಸ್ತನಿಗಳಿಗೂ ಭೋಜನದ ಅವಕಾಶವಿರುತ್ತದೆ.

ಗೂಡುಕಟ್ಟುವ ಪ್ರಭೇದಗಳು ಇತರ ಪ್ರಾಣಿಗಳಿಗೆ ನಿಲುಕದ ಕಲ್ಲುಬಂಡೆ ಅಥವಾ ಎತ್ತರವಾದ ದೈತ್ಯವೃಕ್ಷಗಳ ತುದಿಯಲ್ಲಿ ಗೂಡು ನಿರ್ಮಿಸುತ್ತವೆ. ಒಂದೇ ಕಡೆ ಹಲವು ಗೂಡುಗಳೂ ಇರುವುದುಂಟು. 1–2 ಮೊಟ್ಟೆಯನ್ನಿಟ್ಟು 7–8 ವಾರಗಳ ತನಕ ಕಾವುಕೊಟ್ಟು ಮರಿ ಮಾಡುತ್ತವೆ.

ರಾಜಹದ್ದು (ಕಿಂಗ್ ವಲ್ಚರ್– ಸಾರ್ಕೊರ್‍ಯಾಂಫಸ್ ಪಾಪ) ಎಂಬುದು ಮೆಕ್ಸಿಕೋ, ಮಧ್ಯ ಅಮೆರಿಕ ಹಾಗೂ ಅರ್ಜಂಟೈನಗಳ ನಡುವೆ ಕಾಣದೊರೆಯುವ ಒಂದು ಪ್ರಭೇದ. ವರ್ಣರಂಜಿತವಾಗಿರುವ ಇವುಗಳ ತಲೆ ಹಾಗೂ ಕುತ್ತಿಗೆಯ ಭಾಗಗಳು ಕೆಂಪು, ಹಳದಿ ಅಥವಾ ನೀಲಿ ಬಣ್ಣಗಳಿಂದ ಕೂಡಿರುತ್ತವೆ. ಕಣ್ಣಿನ ಸುತ್ತ ಕೆಂಪುಬಣ್ಣದ ಒಂದು ವೃತ್ತವಿರುತ್ತದೆ. ರೆಕ್ಕೆ ಬಿಚ್ಚಿದಾಗ ಇವು ಸು. 1.7 ಮೀ ಅಗಲವಿರುತ್ತದೆ.

ಕಪ್ಪು ರಣಹದ್ದು (ಈಜಿಫಿಯಸ್ ಮಾನಕಸ್) ಎಂಬುದು ರಣಹದ್ದುಗಳ ಪೈಕಿ ಅತಿ ದೊಡ್ಡದು. ಸು. 100 ಸೆಂಮೀ ಉದ್ದದ ಈ ಪಕ್ಷಿ ರೆಕ್ಕೆ ಬಿಚ್ಚಿದಾಗ 2.7 ಮೀ. ಅಗಲವಿರುತ್ತದೆ. ನಿಯೊಫ್ರೋನ್ ಎಂಬ ಈಜಿಪ್ಷಿಯನ್ ರಣಹದ್ದು ಹದ್ದುಗಳಲ್ಲೆ ಚಿಕ್ಕದು. ಇದರ ಉದ್ದ 60 ಸೆಂಮೀ.

ಪಾಂಡಿಚೆರಿ ರಣಹದ್ದು (ಸಾರ್ಕೊಜಿಪ್ಸ್ ಕ್ಯಾಲ್ವಸ್) ಎಂಬುದು ಭಾರತದಲ್ಲಿ ಕಾಣಸಿಕ್ಕುವ ರಣಹದ್ದು. ಈ ಪ್ರಭೇದ ಪಾಕಿಸ್ತಾನದಿಂದ ಭಾರತವೂ ಸೇರಿದಂತೆ ಮಲೇಷ್ಯದವರೆಗೂ ಹರಡಿದೆ. 75 ಸೆಂಮೀ ಉದ್ದದ ಈ ರಣಹದ್ದು ರೆಕ್ಕೆ ಬಿಚ್ಚಿದಾಗ 2.7 ಮೀ ಅಗಲವಿರುತ್ತದೆ. ಮೇಲ್ಭಾಗದಲ್ಲಿ ಕಪ್ಪು ಬಣ್ಣವಿರುವ ಈ ಪಕ್ಷಿಗಳ ತಳಭಾಗ ಬೂದುಬಣ್ಣದ್ದು. ನಡತೆ ಹಾಗೂ ದೇಹದ ಅಂಗರಚನೆಯಲ್ಲಿ ಇದು ಉಳಿದ ಪ್ರಭೇದಗಳನ್ನು ಹೋಲುತ್ತದೆ.

(ಎಸ್.ಎನ್.ಎಚ್.)

**ರಾಜಷಾಹಿರಸ:** ಜೇನು ಕುಟುಂಬದಲ್ಲಿರುವ ರಾಣಿ ಜೇನ್ನೊಣಗಳು ಉತ್ಪತ್ತಿಮಾಡುವ ರಾಸಾಯನಿಕ ದ್ರವ. ಆಂಗ್ಲ ಭಾಷೆಯಲ್ಲಿ ಕ್ವೀನ್ಸ್ ಸಬ್‌ಸ್ಟೆನ್ಸ್ ಎನ್ನುವರು. ಜೇನ್ನೊಣಗಳ ದವಡೆ (ಮ್ಯಾಂಡಿಬುಲಾರ್ ಗ್ರಂಥಿ)ಗಳಲ್ಲಿರುವ ಹೈಪೋಫ್ಯಾರಿಂಜಿಯಲ್ ಗ್ರಂಥಿಗಳು ಸ್ರವಿಸುತ್ತವೆ. ತಿಳಿ ಬಿಳಿ ಬಣ್ಣದ ರಸದಲ್ಲಿ ಹಳದಿ ಬಣ್ಣದ ಸಣ್ಣಸಣ್ಣ ಕಣಗಳು ಇರುತ್ತವೆ. ರಾಸಾಯನಿಕವಾಗಿ ಇದು 9–ಆಕ್ಸೋಡೆಕ್–ಟ್ರಾನ್ಸ್–2– ಇನೋಯಿಕ್ ಆಮ್ಲ. ರಾಸಾಯನಿಕ ನಾಮ ಪ್ರಭೇದಗಳಿಗನುಗುಣವಾಗಿ ವಿಭಿನ್ನವಾಗಿದೆ. ಸಾಮಾಜಿಕ ಕೀಟಗಳಾದ ಗೆದ್ದಲು, ಕಣಜ, ಇರುವೆ ಕುಟುಂಬದಲ್ಲಿರುವ ರಾಣಿಕೀಟ ಮಾತ್ರ ರಾಜಷಾಹಿರಸವನ್ನು ಉತ್ಪತ್ತಿ ಮಾಡುವ ಸಾಮರ್ಥ್ಯ ಹೊಂದಿದೆ.

ರಾಜಷಾಹಿರಸ ಪೌಷ್ಟಿಕಾಂಶಗಳ ಆಗರ. ಸುಮಾರು ಶೇ. 57–60 ರಷ್ಟು ನೀರಿನಂಶದಿಂದ ಕೂಡಿರುವ ಇದು ಹುಳಿಯಾಗಿರುತ್ತದೆ. ಶೇ 17–45 ಪ್ರೊಟೀನ್, ಶೇ 18–25 ಶರ್ಕರ, ಶೇ 3.5–19 ಪಿಷ್ಟ ಮತ್ತು ಶೇ. 2–3 ಖನಿಜಾಂಶಗಳಿವೆ. ಜೀವಸತ್ವಗಳಾದ (ಮೈಕ್ರೊ–ಗ್ರಾಮ್‌ನಲ್ಲಿ) ಥೈಯಮೀನ್ (1–9), ರೈಬೋಫ್ಲೇವಿನ್ (5–25), ಪ್ಯಾಂಟೊಥಿನೀಕ್ ಆಮ್ಲ (156–265), ಪಿರಿಡೋಕ್ಸಿನ್ (1.1–19.8) ರಾಜಷಾಹಿರಸದಲ್ಲಿವೆ.

ರಾಜಷಾಹಿರಸದ ಉತ್ಪನ್ನ, ಗುಣಮಟ್ಟ ಮತ್ತು ರಾಸಾಯನಿಕಗಳ ಪ್ರಮಾಣ ಪ್ರಭೇದಗಳಿಗನುಗುಣವಾಗಿ ವಿಭಿನ್ನವಾಗಿದೆ. ಇದು ಸಾಮಾಜಿಕ ಕೀಟಗಳ ಕುಟುಂಬದಲ್ಲಿ ಸಮತೆ ಒಗ್ಗಟ್ಟು ಸೃಷ್ಟಿಸುವುದಕ್ಕೆ ಸಹಾಯಕವಾಗಿದೆ. ಕುಟುಂಬದೊಳಗಿನ ವಿವಿಧ ಬಗೆಯ ಸದಸ್ಯರ ಲಿಂಗನಿರ್ಧರಿಸುವುದು ರಾಜಷಾಹಿರಸವೇ. ರಾಣಿಕೀಟದ ನಿರ್ದೇಶನದಂತೆ ಕೆಲಸಗಾರ ಕೀಟಗಳು ಈ ರಾಜಷಾಹಿರಸವನ್ನು ಬೆಳೆಯುವ

ಮರಿಕೀಟಗಳಿಗೆ ಆಹಾರದ ಜೊತೆ ಬೆರೆಸಿ ನೀಡುತ್ತವೆ. ಇದರಿಂದ ಅಗತ್ಯಕ್ಕನುಗುಣವಾಗಿ ಲಿಂಗರಹಿತ ಅಥವಾ ಲಿಂಗಸಹಿತ ಕೀಟಗಳ ಉತ್ಪಾದನೆಯಾಗುವುದು ಸಾಮಾಜಿಕ ಕೀಟಗಳ ಕುಟುಂಬದೊಳಗಿನ ವಿಸ್ಮಯಕರ ಸಂಗತಿ. ಇದು ರಾಜಶಾಹಿರಸದ ಪ್ರಮಾಣವನ್ನು ಅವಲಂಬಿಸಿದೆ.

ವಿಶ್ವದಲ್ಲಿ ಚೀನ ದೇಶವು ರಾಜಷಾಹಿರಸದ ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿದೆ. ಶೇ. 60 ಕ್ಕಿಂತ ಹೆಚ್ಚು ರಾಜಷಾಹಿರಸವನ್ನು ಚೀನಾ ದೇಶವೊಂದೇ ಉತ್ಪತ್ತಿ ಮಾಡುತ್ತದೆ. ಬೇರೆ ಬೇರೆ ದೇಶಗಳಿಗೆ ರಫ್ತು ಮಾಡಿ ಚೀನ ದೇಶವು ಗಣನೀಯ ಪ್ರಮಾಣದ ವಿದೇಶಿ ವಿನಿಮಯ ಗಳಿಸುತ್ತಿದೆ.

ರಾಜಷಾಹಿರಸವು ಶಕ್ತಿ ಭರಿಸುವ ಪೌಷ್ಟಿಕಾಂಶದಿಂದ ಕೂಡಿದ ದ್ರವ್ಯ. ತಾರುಣ್ಯ ಕಾಪಾಡಲು ಶಕ್ತಿವರ್ಧಕ ಟಾನಿಕ್ ಎಂದು ಭಾವಿಸಲಾಗಿದೆ. ವಿಶ್ವದಾದ್ಯಂತ ಆಹಾರ ಮತ್ತು ಜೇನುತುಪ್ಪದ ಜೊತೆ ಉಪಯೋಗಿಸಲಾಗುತ್ತಿದೆ. ಅಲಂಕಾರಿಕ ಪದಾರ್ಥಗಳ ತಯಾರಿಕೆಯಲ್ಲೂ ಸಹ ಉಪಯೋಗಿಸುತ್ತಾರೆ. (ವಿ.ಬಿ.)

**ರಾಜಹಂಸ:** ಸಿಕೋನೈಯಿಫಾರ್ಮಿಸ್ ಗಣದ ಫೀನಿಕಾಪ್ಟರಿಡೆ ಕುಟುಂಬಕ್ಕೆ ಸೇರಿದ ಹಕ್ಕಿ (ಫ್ಲೆಮಿಂಗೊ). ಪಕ್ಷಿವರ್ಗೀಕರಣ ತಜ್ಞರಿಗೆ ಫ್ಲೆಮಿಂಗೊ ಹಕ್ಕಿಯ ವರ್ಗೀಕರಣ ಸವಾಲಾಗಿತ್ತು. ಕೆಲವರು ಇದನ್ನು ಬಾತುಗಳೊಂಗಿದೆ ಸೇರಿಸುವರಾದರೆ ಇನ್ನು ಕೆಲವರು ಇದನ್ನು ಕೋಳಿಗಳ ಸಂಬಂಧಿ ಎಂದು ಬಗೆಯುತ್ತಾರೆ. ಮತ್ತೆ ಕೆಲವರ ಪ್ರಕಾರ ಇದು ಕೊಕ್ಕರೆ, ಕಬ್ಬಾರೆ, ಐಬಿಸುಗಳಿಗೆ ಹೆಚ್ಚು ಹತ್ತಿರವಾಗಿದೆ. ನೀಳಗಾಲು, ಜಾಲಪಾದ, ಉದ್ದಕತ್ತು, ತೆಳುದೇಹ, ದೊಡ್ಡರೆಕ್ಕೆ, ಚಿಕ್ಕಬಾಲ, ಗುಲಾಬಿ, ತಿಳಿಕೆಂಪು ಮತ್ತು ಕಪ್ಪುಗರಿಗಳು – ಇವು ರಾಜಹಂಸಗಳ ಬಾಹ್ಯ ಚಹರೆ. ನೀರಿನಲ್ಲಿ ನಡೆಯಬಲ್ಲವು ಮತ್ತು ಈಜಬಲ್ಲವು. ಉದ್ದ 90 ಸೆಂಮೀ ನಿಂದ 150 ಸೆಂಮೀ.

ರಾಜಹಂಸಗಳು ಗುಂಪಾಗಿ ವಾಸಿಸುವ ಪಕ್ಷಿಗಳು. ಒಂದು ಗುಂಪಿನಲ್ಲಿ ನೂರಾರು ಪಕ್ಷಿಗಳು, ಉದ್ದವಾದ ವಕ್ರಾಕೃತಿಯಲ್ಲಿ ಹಾರುವುದನ್ನು ಅಥವಾ ದಡದಲ್ಲಿ ಹಿಂಡುಹಿಂಡಾಗಿ ನಡೆಯುವುದು ಸಾಮಾನ್ಯ. ಈ ಪಕ್ಷಿಗಳ ಆಹಾರ ಸೇವನೆ ವಿಚಿತ್ರ. ತೀರದಲ್ಲಿ ಓಡಾಡುವಾಗ ಮಣ್ಣು ನೀರಿನಿಂದ ಕೆದಕಿ ತೆಗೆದ ಸಣ್ಣಪುಟ್ಟ ಮೃದ್ವಂಗಿಗಳು ಮತ್ತು ಕಠಿಣಚರ್ಮಿಗಳೇ ಇವುಗಳ ಆಹಾರ. ದೊಡ್ಡ ಹಕ್ಕಿಗಳು ಆಹಾರ, ನೀರು ಹುಡುಕಿಕೊಂಡು ತಮ್ಮ ಗೂಡಿನಿಂದ ಬಹಳ ದೂರ ಹಾರಿಹೋಗುತ್ತವೆ. ಆಹಾರ ಸೇವನೆಗೆ ತಕ್ಕಂತೆ ಕೊಕ್ಕಿನಲ್ಲೂ ಮಾರ್ಪಾಟಾಗಿದೆ. ಜರಡಿಯಂತಿರುವ ಲ್ಯಾಮೆಲ್ಲಾಗಳಿಂದಾದ ಕೊಕ್ಕು ನೀರು ಮತ್ತು ಕೆಸರನ್ನು ಆಹಾರದಿಂದ ಬೇರ್ಪಡಿಸುತ್ತದೆ.

ರಾಜಹಂಸಗಳ ಕಾಲು ದೇಹದ ಗಾತ್ರಕ್ಕೆ ಹೋಲಿಸಿದರೆ ಬಹಳ ಉದ್ದ. ಆದ್ದರಿಂದ ಅವುಗಳ ಕಾಲಿನಿಂದ ಹೆಚ್ಚು ದೇಹದ ಶಾಖ ನಷ್ಟವಾಗುತ್ತದೆ. ಇದನ್ನು ತಡೆಯಲು ಅವುಗಳು ಬಹಳ ಹೊತ್ತು ಒಂದೇ ಕಾಲಿನಲ್ಲಿ ನಿಲ್ಲುತ್ತವೆ ಮತ್ತು ಮಲಗುತ್ತವೆ.

ಜೇಡಿ ಮಣ್ಣಿನ ರೀತಿಯ ಮಣ್ಣಿನ ರಾಶಿಯಿಂದ ಮರಳು ದಂಡೆಯಲ್ಲಿ ಗೂಡು ಕಟ್ಟುತ್ತದೆ. ಗೂಡು ತುದಿ ಕತ್ತರಿಸಿದಂತೆ ಕಾಣುವ ಶಂಕಾಕೃತಿ ಅಥವಾ ಒಂದು ತೆರನ ಬಟ್ಟಲಿನಂತಿರುತ್ತದೆ. ಗೂಡಿನಲ್ಲಿ ಒಂದೇ ಒಂದು ಸುಣ್ಣದಂತೆ ಬೆಳ್ಳಗಿರುವ ಮೊಟ್ಟೆಯನ್ನಿಡುತ್ತದೆ. ಗಂಡು ಮತ್ತು ಹೆಣ್ಣು ಪಕ್ಷಿಗಳೆರಡೂ ಒಂದು ತಿಂಗಳು ಮೊಟ್ಟೆಗೆ ಕಾವು ಕೊಡುವ ಕೆಲಸವನ್ನು ಹಂಚಿಕೊಳ್ಳುತ್ತವೆ. ಕೆಲವು ರಾಜಹಂಸಗಳು ಸಂತಾನೋತ್ಪತ್ತಿ ಮಾಡುವ ಸ್ಥಳ ಹೆಚ್ಚು ಲವಣ ಮತ್ತು ಕ್ಷಾರದಿಂದ ಕೂಡಿರುತ್ತದೆ. ಮೃದುವಾದ, ಬೆಳ್ಳಗಿರುವ, ಚಿಕ್ಕ ಕಾಲುಗಳಿರುವ ಮತ್ತು ನೇರವಾದ ಕೊಕ್ಕಿರುವ ಮರಿಗಳು ಆರು, ಏಳು ದಿನಗಳಲ್ಲಿ ಗೂಡಿನಿಂದ ಹೊರಕ್ಕೆ ಬರುತ್ತವೆ. ಕೆಲವು ರಾಜಹಂಸಗಳು ತಮ್ಮಲ್ಲಿ ಸ್ವಲ್ಪ ಮಟ್ಟಿಗೆ ಪಚನವಾದ ಆಹಾರವನ್ನು ನಿಷ್ಕಾಸ ಮಾಡಿ ಅದನ್ನು ಮರಿಹಕ್ಕಿಗಳಿಗೆ ಉಣಿಸುತ್ತವೆ. ಇನ್ನು ಕೆಲವು ತಮ್ಮ ಜೀರ್ಣಾಂಗವ್ಯೂಹದಲ್ಲಿ ಉತ್ಪತ್ತಿಯಾದ ಹೆಚ್ಚು ಪ್ರೊಟೀನ್‌ಯುಕ್ತ ಕ್ರಾಪ್ ಹಾಲನ್ನು ಮರಿಹಕ್ಕಿಗಳಿಗೆ ಕೊಡುತ್ತವೆ.

ರಾಜಹಂಸಗಳಲ್ಲಿ ನಾಲ್ಕು ಪ್ರಭೇದಗಳುಂಟು: ಅಟ್‌ಲ್ಯಾಂಟಿಕ್ ಮತ್ತು ಕೊಲ್ಲಿ ತೀರಗಳ ಉಷ್ಣ ಮತ್ತು ಉಪೋಷ್ಣ ಅಮೇರಿಕದಲ್ಲಿ ಫೀನಿಕಾಪ್ಟರಸ್ ರೂಬರ್ (ಅಮೇರಿಕಾದ ರಾಜಹಂಸ) ಕಾಣಸಿಗುತ್ತದೆ. ಫೀ.ರೂಬರ್ ಚಿಲಿಯೆನ್ಸಿಸ್ (ಚಿಲಿಯ ರಾಜಹಂಸ) ಇದರಲ್ಲಿ ಇನ್ನೊಂದು ವಿಧ. 2) ಪೂರ್ವ ಮತ್ತು ದಕ್ಷಿಣ ಆಫ್ರಿಕ, ಮಡಗಾಸ್ಕರ್ ಮತ್ತು ಭಾರತದಲ್ಲಿ ಫೀನಿಕೋನೈಯಸ್ ಮೈನರ್ (ಲೆಸ್ಸರ್ ಫ್ಲೆಮಿಂಗೊ) ಎಂಬ ಪ್ರಭೇದವಿದೆ.

ಫೀನಿಕೊಪ್ಯಾರಸ್ ಆಂಡಿನಸ್ (ಆಂಡಿಸ್ ರಾಜಹಂಸ) ಮತ್ತು ಫೀನಿಕೊಪ್ಯಾರಸ್ ಜೇಂಸಿ (ಜೇಮ್ಸ್ ಫ್ಲೆಮಿಂಗೊ) ಪ್ರಭೇದಗಳು ಆಂಡಿಸ್ (ದಕ್ಷಿಣ ಅಮೇರಿಕ) ನಲ್ಲಿ ವಿಸ್ತರಿಸಿವೆ. (ಎಸ್.ಆರ್.ಎಸ್.)

**ರಾಬಿನ್:** ಪಕ್ಷಿಸಂಕುಲದ ಪ್ಯಾಸರೀಫಾರ್ಮಿಸ್ ಗಣಕ್ಕೆ ಸೇರಿದ ಪುಟ್ಟ ಪಕ್ಷಿ. ಈ ಪಕ್ಷಿಗಳಲ್ಲಿ ಹಲವಾರು ಪ್ರಭೇಧಗಳಿವೆ. ಭಾರತದ ರಾಬಿನ್ (ಇಂಡಿಯನ್ ರಾಬಿನ್) ಹೆಚ್ಚು ಕಡಿಮೆ ಗುಬ್ಬಚ್ಚಿಯ ಗಾತ್ರದ್ದು. ಇದರ ವೈಜ್ಞಾನಿಕ ಹೆಸರು ಸ್ಯಾಕ್ಸಿಕೋಲಾಯಿಡೀಸ್ ಪ್ಯೂಲಿಕೇಟ. ಗಂಡುಪಕ್ಷಿಯ ದೇಹದ ಬಣ್ಣ ಕಪ್ಪು. ಮೇಲಕ್ಕೆ ಎತ್ತಿಕೊಂಡಿರುವ ಬಾಲದ ಅಡಿ ಚೆಸ್ಟ್‌ನಟ್ ಕೆಂಪು ಬಣ್ಣ ಇರುತ್ತದೆ. ರೆಕ್ಕೆಗಳ ಮೇಲೆ ಬಿಳಿಯ ಬಣ್ಣದ ಮಚ್ಚೆಗಳಿವೆ. ಸಾಮಾನ್ಯವಾಗಿ ಹುಲ್ಲುಗಾವಲು, ರಸ್ತೆ ಬದಿಯ ಬೇಲಿ, ಪೊದೆಗಳು ಅಥವಾ ಕಲ್ಲುಗಳ ಮೇಲೆ ಕುಳಿತು ಅತ್ತ ಇತ್ತ ತಿರುಗಿ ನೋಡುತ್ತ ಆಹ್ಲಾದಕರ ಸ್ವರಗೈಯ್ಯುತ್ತಿರುತ್ತವೆ. ತೆರೆದ ಬಯಲುಗಾಡುಗಳಲ್ಲಿ ಜೋಡಿಜೋಡಿಯಾಗಿ ಕಾಣಬರುತ್ತವೆ. ಕೀಟ, ಚಿಟ್ಟೆ, ಪತಂಗಗಳು ಇವುಗಳ ಮುಖ್ಯ ಅಹಾರ. ಗೆದ್ದಲು ಹುಳುಗಳೂ ಇವಕ್ಕೆ ಅಹಾರವಾಗುತ್ತವೆ. ಗಂಡಿನ ಹಾಡು ಬಲು ಉಲ್ಲಾಸಮಯವಾಗಿದ್ದು ಪ್ರಣಯಾಚರಣೆಗೆ ಹೆಣ್ಣನ್ನು ಆಹ್ವಾನಿಸುವಂತಿದೆ. ಗಂಡು ಹಾಡುವಾಗ ತನ್ನ ಎದೆಯನ್ನು ಉಬ್ಬಿಸಿಕೊಂಡು, ಹೆದರಿಸುವಂತೆ ತನ್ನ ದೇಹವನ್ನು ಮೇಲಕ್ಕೆ ಎತ್ತುತ್ತ ಬಾಲ ತನ್ನ ಬೆನ್ನಮೇಲೆ ಪೂರ್ತಿಯಾಗಿ ಬರುವಂತೆ ಮಾಡಿಕೊಳ್ಳುತ್ತದೆ. ಸಣ್ಣ ಬಂಡೆಗಳ ತಳಭಾಗ, ಮಣ್ಣಿನ ಪೊಟರೆ, ಬಿಸಾಡಿದ ಡಬ್ಬ, ಮಡಕೆ ಇತ್ಯಾದಿಗಳು ಇರುವೆಡೆಗಳಲ್ಲಿ ಗೂಡು ಕಟ್ಟುತ್ತದೆ. ಹೆಣ್ಣು ಮಿರುಗೆಂಪಿನ ಕಂದುಬಣ್ಣದ ಮಚ್ಚೆ ಇರುವ 2 ರಿಂದ 3 ಮೊಟ್ಟೆಗಳನ್ನು ಇಡುತ್ತದೆ. ಹೆಣ್ಣು ಮೊಟ್ಟೆಗೆ ಕಾವು ಕೊಡುವುದಾದರೆ ಗಂಡು ಇತರ ಕೆಲಸಗಳಲ್ಲಿ ತೊಡಗಿರುತ್ತದೆ. ಮರಿಮಾಡುವ ಕಾಲ ಏಪ್ರಿಲ್‌ನಿಂದ ಜೂನ್ ತಿಂಗಳ ತನಕ. ಭಾರತ ಉಪಖಂಡ ಮತ್ತು ಶ್ರೀಲಂಕಗಳಲ್ಲಿ ಇವು ಕಾಣಸಿಗುತ್ತವೆ.

ಮ್ಯಾಗ್ ಪೈ ರಾಬಿನ್ (ಕಾಪ್ಸಿಕಸ್ ಸೌಲಾರಿಸ್ ಪ್ರಭೇದ) ಎಂಬುದು ಬುಲ್‌ಬುಲ್ ಪಕ್ಷಿ ಗಾತ್ರದ್ದು. ಒಣಗಿರುವ ಹಾಗೂ ಶೈತ್ಯದಿಂದ ಕೂಡಿದ ಎಲೆಗಳು ಉದುರುವ ಕಾಡುಗಳು, ಊರಿನ ಹೊರವಲಯದ ಕಾಡುಗಳು ಹಾಗೂ ಮನುಷ್ಯನ ವಾಸದೆಡೆಗಳಲ್ಲಿ ಕಾಣಸಿಗುತ್ತವೆ. ಗಂಡುಪಕ್ಷಿಯ ಬಣ್ಣ ಕಪ್ಪು ಮತ್ತು ಬಿಳಿ. ಹೆಣ್ಣು ಪಕ್ಷಿಯದು ಬೂದು

ಇಲ್ಲವೆ ಕಂದು ಬಣ್ಣ . ಗಂಡು ಸಾಮಾನ್ಯವಾಗಿ ಬಾಲವನ್ನು ಮೇಲೆತ್ತಿಕೊಂಡಿರುತ್ತದೆ. ಪಕ್ಷಿಗಳು ಮನೆಗಳ ಸಮೀಪದಲ್ಲೇ ಒಂಟಿಯಾಗೊ ಜೋಡಿಯಾಗೊ ಓಡಾಡುತ್ತಿರುತ್ತವೆ. ಗಂಡು ಹೊರಗೆ ಗೋಚರಿಸದಂತೆ ಪೊದರು ಮತ್ತು ಸಸ್ಯಗಳಲ್ಲಿ ಅವಿತುಕೊಂಡು ವಿಲಕ್ಷಣ ಧ್ವನಿಗೈಯುತ್ತದೆ. ಹಾಡುವಾಗ ತನ್ನ ಬಾಲವನ್ನು ಮೇಲಿಂದ ಕೆಳಕ್ಕೂ ಆಡಿಸುತ್ತದೆ. ಮರಿ ಮಾಡುವ ಕಾಲದಲ್ಲಿ ಗಂಡು ಹಕ್ಕಿಗಳು ಒಂದಕ್ಕೊಂದು ಜಗಳವಾಡುವುದುಂಟು. ಮ್ಯಾಗ್‌ಪೈ ರಾಬಿನ್‌ಗಳು ಮುಖ್ಯವಾಗಿ ಕೀಟಾಹಾರಿಗಳು. ಅಪರೂಪಕ್ಕೆ ಚಿಕ್ಕ ಚಿಕ್ಕ ಹಣ್ಣುಗಳನ್ನೂ ತಿನ್ನುವುದುಂಟು. ಬೂರುಗ, ಹಾಲವಾಣದ ಆಕರ್ಷಕ ಕೆಂಪು ಹೂಗಳಲ್ಲಿನ ಮಧು ಇವಕ್ಕೆ ಬಲುಪ್ರಿಯ. ಭಾರತ, ಅಂಡಮಾನ್ ದ್ವೀಪಗಳು ಮತ್ತು ಶ್ರೀಲಂಕಗಳಲ್ಲಿ ಇವು ಕಾಣಬರುತ್ತವೆ.

ಅಮೆರಿಕದ ರಾಬಿನ್ (ಟರ್ಡಸ್ ಮೈಗ್ರಟೋರಿಯಸ್) ಆಕರ್ಷಕ ಬಣ್ಣ ಹೊಂದಿರುವ, ವಲಸೆಗಾರ ಪುಟ್ಟ ಪಕ್ಷಿ. ಇದರ ಉದ್ದ ಸುಮಾರು 25 ಸೆಂಮೀ. ಬೆನ್ನಿನ ಭಾಗ ಕಂದು ಬಣ್ಣದ್ದಾಗಿದೆ. ತಲೆ ಮತ್ತು ಬಾಲಗಳು ಕಪ್ಪಗಿವೆ. ಗಂಟಲು ಬಿಳಿ. ಎದೆಭಾಗ ಕೆಂಪುಬಣ್ಣದಲ್ಲಿರುವುದರಿಂದ ರೆಡ್ ಬ್ರೆಸ್ಟ್ ಎಂಬ ಹೆಸರಿನಿಂದಲೂ ಕರೆಯುವುದಿದೆ. ವಸಂತಋತುವಿನ ಆರಂಭದಲ್ಲಿ ಈ ಪಕ್ಷಿ ವಲಸೆಹೋದ ಸ್ಥಳದಿಂದ ಮರಳಿಬಂದು ತನ್ನ ಮಧುರ ಇಂಚರದಿಂದ ಮುದಗೊಳಿಸುತ್ತದೆ. ಇದಲ್ಲದೆ ಹಾನಿಕಾರಕ ಕೀಟಗಳನ್ನು ನಾಶಗೊಳಿಸುವುದರಿಂದ ಇದೊಂದು ಉಪಯುಕ್ತ ಪಕ್ಷಿಯೆನಿಸಿದೆ. ಹೆಣ್ಣು ಹಸುರುಮಿಶ್ರಿತ ನೀಲವರ್ಣದ ಮೊಟ್ಟೆಗಳನ್ನಿಡುತ್ತದೆ. ಸಾಧಾರಣವಾಗಿ ಮರಿಗಳನ್ನು ಎರಡು ತಂಡಗಳಲ್ಲಿ ಬೆಳೆಸುತ್ತದೆ. ಉತ್ತರ ಅಮೆರಿಕದ ಪಶ್ಚಿಮ, ದಕ್ಷಿಣ ಹಾಗೂ ಈಶಾನ್ಯ ಭಾಗಗಳಲ್ಲಿ ಈ ಪ್ರಭೇದದ ವಿವಿಧ ಭೌಗೋಳಿಕ ರೂಪಗಳು ಕಂಡುಬರುತ್ತವೆ.

ಯುರೇಷಿಯದ ರಾಬಿನ್ ಮಧುರವಾಗಿ ಹಾಡುವ ಪುಟ್ಟ ಪಕ್ಷಿ. ಎರಿಥ್ಯಾಕಸ್ ರುಬೆಕ್ಯುಲ ಇದರ ಶಾಸ್ತ್ರೀಯ ನಾಮ. ಇದನ್ನು ಬ್ರಿಟನ್ನಿನ ರಾಷ್ಟ್ರೀಯ ಪಕ್ಷಿ ಎಂದು ಪರಿಗಣಿಸಲಾಗಿದೆ. 13 ಸೆಂಮೀ ಉದ್ದವಿರುವ ಪುಕ್ಕಗಳಿವೆ. ಗಂಟಲು ಮತ್ತು ಹಣೆಗೆ ಬೂದುಬಣ್ಣದ ಅಂಚು ಇದೆ. ಈ ಪಕ್ಷಿ ತನ್ನ ಚಿಕ್ಕ ಮೊನಚಾದ ಕೊಕ್ಕಿನಿಂದ ಕೀಟ, ಲಾರ್ವ, ಎರೆಹುಳು, ಹಣ್ಣು ಮತ್ತು ಬೀಜಗಳನ್ನು ಎತ್ತಿಕೊಂಡು ತಿನ್ನುತ್ತದೆ. ಬ್ರಿಟನ್ನಿನಲ್ಲಿ ಈ ಪಕ್ಷಿ ಪಟ್ಟಣ, ತೋಟ ಮತ್ತು ಕೃಷಿಭೂಮಿಗಳಲ್ಲಿ ಸರ್ವೇಸಾಮಾನ್ಯವಾಗಿ ಕಾಣಬರುತ್ತದೆ. ತನ್ನ ಸುತ್ತಮುತ್ತಲಿನ ಭೂಪ್ರದೇಶವನ್ನು ಗುರುತಿಸಿಕೊಂಡು ಸೀಮೆಯನ್ನು ಕಾಯ್ದುಕೊಳ್ಳುತ್ತದೆ. ತನ್ನ ಸೀಮೆಯೊಳಗೆ ಬರುವ ಆಗಂತುಕರನ್ನು ತನ್ನ ಹಾಡಿನ ಮೂಲಕ ಎಚ್ಚರಿಸುವುದೂ ಉಂಟು. (ಎಚ್.ಎಸ್.ವೈ)

**ರಾರ್ಕ್ವಲ್:** ಸಿಟೇಸಿಯ ಗಣದ ಬಲೀನಾಪ್ಟರಿಡೆ ಕುಟುಂಬಕ್ಕೆ ಸೇರಿದ ಸಾಗರವಾಸಿ ತಿಮಿಂಗಿಲ. ಬಲೀನಾಪ್ಟರ ಜಾತಿಯ ಫೈಸೆಲಸ್, ಬೋಯಾಲಿಸ್, ಅಕ್ಯೂಟೊರಾಸ್ಟ್ರೇಟ್ ಮತ್ತು ಎಡೆನಿ ಎಂಬ ಪ್ರಭೇದಗಳಿಗೂ ಸಿಬಾಲ್ಡಸ್ ಜಾತಿಯ ಮಸ್ಕ್ಯುಲಸ್ ಪ್ರಭೇದಕ್ಕೂ ಸಾಮಾನ್ಯವಾಗಿ ಈ ಹೆಸರನ್ನು ಅನ್ವಯಿಸುವುದುಂಟು. ಇವುಗಳ ಗಂಟಲು ಮತ್ತು ಎದೆಗಳ ಮೇಲೆ 2.5–5 ಸೆಂಮೀ ಆಳದ 10–1000 ಉದ್ದುದ್ದನೆಯ ಮಡಿಕೆಗಳಂಥ ತೋಡುಗಳುಂಟು. ಇದು ಇವುಗಳ ಬಲು ಮುಖ್ಯ ಲಕ್ಷಣ. ಈ ಮಡಿಕೆಗಳಿಂದಲೇ ಈ ತಿಮಿಂಗಿಲಗಳಿಗೆ ರಾರ್ಕ್ವಲ್ ಎಂದು ಹೆಸರು ಬಂದಿದೆ. ಬಾಯಿ ತೆರೆದಾಗ ಅದರ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಈ ಮಡಿಕೆಗಳು ಹೆಚ್ಚಿಸುತ್ತವೆ. ಇವುಗಳ ಇನ್ನೊಂದು ಮುಖ್ಯ ಲಕ್ಷಣವೆಂದರೆ, ಮರಿಗಳು ಬೆಳೆದು ವಯಸ್ಕಗಳಾಗುತ್ತಿದ್ದಂತೆ ಅವುಗಳ ಬಾಯಲ್ಲಿರುವ ಹಲ್ಲುಗಳು ಉದುರಿ ಹೋಗಿ ಬದಲಿಗೆ ಆಹಾರವನ್ನು ಸೋಸುವ ಸಾಮರ್ಥ್ಯವುಳ್ಳ ಬಲೀನ್ ಎಂಬ ಸೋಸುಕ ರೂಪುಗೊಳ್ಳುವುದು.

ರಾರ್ಕ್ವಲ್‌ಗಳೆಲ್ಲವೂ ದೊಡ್ಡಗಾತ್ರದ ಪ್ರಾಣಿಗಳು. ದೇಹದ ಉದ್ದ 9–20 ಮೀ ಇರುತ್ತದೆ. ದೇಹದ ಆಕಾರ ಈಜಲು ಸಹಾಯಕವಾಗಿರುವಂತೆ ರೂಪಿತವಾಗಿದೆ. ಬಾಯಿಗಿಂತ ಕೊಂಚ ಹಿಂದೆ ದೇಹದ ಎರಡು ಪಾರ್ಶ್ವಗಳಲ್ಲಿ ಎರಡು ಈಜುರೆಕ್ಕೆಗಳೂ ಬೆನ್ನಮೇಲೆ ಒಂದು ಈಜುರೆಕ್ಕೆಯೂ ಇವೆ. ಈಜುವುದರಲ್ಲಿ ಬಲು ನಿಷ್ಣಾತ ಎನಿಸಿರುವ ಈ ತಿಮಿಂಗಿಲಗಳು ತುಂಬ ಶೀಘ್ರಗತಿಯಲ್ಲಿ ಈಜಬಲ್ಲವು; ಗಂಟೆಗೆ 8 ಕಿಮೀ. ವೇಗದಲ್ಲಿ ಈಜುತ್ತವೆ. ಒಂಟೊಂಟಿಯಾಗಿಯೊ ದೊಡ್ಡ ಮಂದೆಗಳಲ್ಲೊ ಈಜುತ್ತ, ಬೆಳಗ್ಗೆ ಮತ್ತು ಸಾಯಂಕಾಲ ಆಹಾರವನ್ನು ಹುಡುಕುತ್ತ ಸಾಗುತ್ತವೆ. ಮುಖ್ಯವಾಗಿ ಸೀಗಡಿಗಳನ್ನು, ಕೋಪಿಪೋಡ ಗುಂಪಿನ ಸಣ್ಣಗಾತ್ರದ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಕೆಲವು ಬಗೆಯವು ಮೀನು, ಷಾರ್ಕ್, ಸ್ಕ್ವಿಡ್ಡು ಮುಂತಾದುವನ್ನೂ ಕಬಳಿಸುತ್ತವೆ.

ಇವುಗಳ ಸಂತಾನ ವೃದ್ಧಿಯ ಕಾಲ ಚಳಿಗಾಲ. ಒಂದು ಸೂಲಿಗೆ ಸಾಮಾನ್ಯವಾಗಿ ಒಂದೇ ಒಂದು ಮರಿ ಹುಟ್ಟುತ್ತದೆ. ಅಪರೂಪಕ್ಕೆ ಅವಳಿಗಳು ಹುಟ್ಟುವುದೂ ಉಂಟು. ಗರ್ಭಾವಸ್ಥೆಯ ಅವಧಿ 10–12 ತಿಂಗಳು; $3^1/_2$ – 4 ವರ್ಷಗಳಲ್ಲಿ ಮರಿಗಳು ಪ್ರಬುದ್ಧವಾಗುತ್ತವೆ.

ಸಿಬಾಲ್ಡಸ್ ಜಾತಿಯ ರಾರ್ಕ್ವಲ್ ತಿಮಿಂಗಿಲಕ್ಕೆ ನೀಲಿ ತಿಮಿಂಗಿಲ ಎಂಬ ಹೆಸರೂ ಇದೆ. ಅತ್ಯಂತ ದೊಡ್ಡ ಗಾತ್ರದ ತಿಮಿಂಗಿಲ ಇದು; ಲಭ್ಯ ಮಾಹಿತಿಯ ಪ್ರಕಾರ ಇದೇ ಅತ್ಯಂತ ಭಾರಿಗಾತ್ರದ ಸ್ತನಿ. ವಯಸ್ಕ ತಿಮಿಂಗಿಲ ಸುಮಾರು 30ಮೀ ಉದ್ದವೂ 110 ಟನ್ ಭಾರವೂ ಇರುತ್ತದೆ.

**ರಾಷ್ಟ್ರೀಯ ಉದ್ಯಾನ:** ರಾಷ್ಟ್ರದ ಪ್ರಾಕೃತಿಕ (ಜೈವಿಕ, ಭೌಗೋಳಿಕ, ಭೂವೈಜ್ಞಾನಿಕ) ಸಂಪನ್ಮೂಲಗಳನ್ನು ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ ಕಾಯಿದೆ ಅಡಿಯಲ್ಲಿ ರಕ್ಷಿತ ಪ್ರದೇಶಗಳೆಂದು ಘೋಷಿಸಿ, ಮೀಸಲಾಗಿರಿಸಿಕೊಂಡಿರುವ ಪ್ರದೇಶ. ಆಂಗ್ಲ ಭಾಷೆಯಲ್ಲಿ ನ್ಯಾಷನಲ್ ಪಾರ್ಕ್ ಎನ್ನುವರು. ಜೈವಿಕ ಸಂಪನ್ಮೂಲಗಳಲ್ಲಿ ಸಸ್ಯವರ್ಗ, ಕಾಡುಗಳು, ವನ್ಯಜೀವಿಗಳು ಸೇರಿವೆ. ಭೌಗೋಳಿಕ, ಮತ್ತು ಭೂವೈಜ್ಞಾನಿಕ ಸಂಪನ್ಮೂಲಗಳಲ್ಲಿ ಕೆರೆ, ನದಿ, ಸಮುದ್ರ, ಬೆಟ್ಟ ಪರ್ವತಗಳು ಸೇರಿವೆ. ಈ ರಾಷ್ಟ್ರೀಯ ಸಂಪನ್ಮೂಲಗಳ ಸಂಪೂರ್ಣ ರಕ್ಷಣೆ ಆಯಾ ದೇಶ, ರಾಜ್ಯ, ಪ್ರಾಂತೀಯ ಸರ್ಕಾರಗಳ ಹೊಣೆ. ಮನರಂಜನೆ, ಶೈಕ್ಷಣಿಕ ಬೆಳವಣಿಗೆ ಹಾಗೂ ವೈಜ್ಞಾನಿಕ ಸಂಶೋಧನೆಗಳಿಗೆ ತೆರೆದ ಬಾಗಿಲಂತಿರುವ ರಾಷ್ಟ್ರೀಯ ಉದ್ಯಾನಗಳ ಆವಶ್ಯಕತೆಯನ್ನು ಪ್ರಪಂಚದ ಬಹುತೇಕ ರಾಷ್ಟ್ರಗಳು ಮನಗಂಡು, ರಾಷ್ಟ್ರೀಯ ಉದ್ಯಾನಗಳನ್ನು ರೂಪಿಸಿ ಕೊಂಡಿವೆ.

ರಾಷ್ಟ್ರೀಯ ಉದ್ಯಾನದ ನಿರ್ವಹಣೆಗೆ ಆಯಾ ರಾಷ್ಟ್ರ ಯುಕ್ತ ನಿಬಂಧನೆಗಳನ್ನು ವಿಧಿಸಿದೆ. ಇಂಥ ಒಂದು ಉದ್ಯಾನ ವಿಶಾಲ ಪ್ರದೇಶವನ್ನು ಆವರಿಸಿಕೊಂಡಿರುತ್ತದೆ. ಅಲ್ಲಿಯ ಗ್ರಾಮ, ಇನ್ನಿತರ ಜನವಸತಿಗಳನ್ನು ಹಾಗೂ ಅಲ್ಲಿಗೆ ಬರುವ ಪ್ರವಾಸಿಗರ ಆವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ಆ ಪ್ರದೇಶದ ಅಭಿವೃದ್ಧಿ ಹಾಗೂ ರಕ್ಷಣಾ ಯೋಜನೆಗಳನ್ನು ನಿರ್ವಹಿಸುತ್ತದೆ. ಕೆಲವೊಂದು ರಾಷ್ಟ್ರೀಯ ಉದ್ಯಾನಗಳಲ್ಲಿ ಅಪೂರ್ವ ಹಾಗೂ ಆದರ್ಶ ಸ್ಥಳಗಳನ್ನು ಗುರುತಿಸಿ ಅವನ್ನು ಅಪ್ಪಟ ಪ್ರಕೃತಿಧಾಮಗಳನ್ನಾಗಿ (ನೇಚರ್ ರಿಸರ್ವ್ಸ್) ರೂಪಿಸಿ, ಅಲ್ಲಿ ಮಾನವ ಹಸ್ತಕ್ಷೇಪವಾಗದಂತೆ ಅವುಗಳ ಪರಿಪೂರ್ಣ ರಕ್ಷಣೆಯ ಭಾರವನ್ನು ಸ್ಥಳೀಯ ಸರ್ಕಾರಗಳು ಹೊತ್ತಿವೆ.

ಪ್ರಪಂಚದ ಮೊತ್ತಮೊದಲನೆಯ ರಾಷ್ಟ್ರೀಯ ಉದ್ಯಾನ ಎಲ್ಲೋ ಸ್ಟೋನ್ ನ್ಯಾಷನಲ್ ಪಾರ್ಕ್ (೧೮೭೨). ಇದು ಅಮೆರಿಕ ಸಂಯುಕ್ತ ಸಂಸ್ಥಾನಗಳ ವ್ಯೋಮಿಂಗ್ ರಾಜ್ಯದಲ್ಲಿ ಈ ಉದ್ಯಾನವನ್ನು ಸ್ಥಾಪಿಸಿತು. ಅನಂತರ ಕೆನಡ (೧೮೮೫) ಮತ್ತು ನ್ಯೂಜ಼ಿಲೆಂಡ್ (೧೮೮೭) ದೇಶಗಳಲ್ಲಿ ಇಂಥ ಉದ್ಯಾನಗಳು ಸ್ಥಾಪನೆಗೊಂಡವು. ೧೯೨೦–೩೦ರ ದಶಕದಲ್ಲಿ ಯುರೋಪ್, ಏಷ್ಯಾ, ಆಫ್ರಿಕ ಖಂಡಗಳ ಅನೇಕ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಉದ್ಯಾನಗಳನ್ನು ಸ್ಥಾಪಿಸಲಾಗಿದೆ.

ಪ್ರಪಂಚದ ಕೆಲವು ರಾಷ್ಟ್ರೀಯ ಉದ್ಯಾನಗಳು

| ರಾಷ್ಟ್ರ | ಹೆಸರು |
|---|---|
| ಅಮೆರಿಕ ಸಂಯುಕ್ತ ಸಂಸ್ಥಾನಗಳು | ಎಲ್ಲೋಸ್ಟೋನ್, ಮ್ಯಾಡ್ರಿನ್ ಐಲೆಂಡ್, ಯೋಸೆಮೈಟ್, ಸಿಕ್ವಾಯ, ನರಲ್ ಗ್ರಾಂಟ್, ಗ್ರ್ಯಾಂಡ್ ಕ್ಯಾನ್ಯಾನ್, ಗ್ರ್ಯಾಂಡ್ ಟೆಟಿನ್ |
| ಕೆನಡ | ಬಾಂಫ್ ಸ್ಟೇಷನ್, ಸೇಂಟ್ ಲಾರೆನ್ಸ್ ಐಲೆಂಡ್ (ಪ್ರಪಂಚದ ಅತ್ಯಂತ ಚಿಕ್ಕ ರಾಷ್ಟ್ರೀಯ ಉದ್ಯಾನ. ವಿಸ್ತಾರ ೨.೫ಚಕಿಮೀ) ವುಡ್ ಬಫೆಲೋ (ಪ್ರಪಂಚದ ಅತ್ಯಂತ ದೊಡ್ಡ ರಾಷ್ಟ್ರೀಯ ಉದ್ಯಾನ. ವಿಸ್ತಾರ ೪೪,೮೦೭ ಚಕಿಮೀ), ಪಾಟರ್‌ಟನ್ ಲೇಕ್ |
| ಇಟಲಿ | ಡಿ ಅಬ್ರುಸೋ |
| ಕಾಂಗೋ | ಆಲ್ಬರ್ಟ್ |
| ದಕ್ಷಿಣ ಆಫ್ರಿಕ | ಕ್ರೂಗರ್ |
| ಮಯನ್ಮಾರ್ (ಬರ್ಮ) | ಕಾಚಿನ್ |
| ಫಿಲಿಪೀನ್ಸ್ | ಮಾಯೋನ್ ವಾಲ್ಕೆನೋ |
| ಶ್ರೀಲಂಕಾ | ವಿಲ್‌ಪಟ್ಟು |
| ಮಲೇಷ್ಯ | ಕಿಂಗ್ ಜಾರ್ಜ್ |
| ಜ್ಯಾಂಬಿಯ | ಕೋಫುಯಿ |

| | |
|---|---|
| ಕೀನ್ಯ | ಅಬರ್‌ಡೇರ್ |
| ಟಾನ್‌ಜಾನಿಯ | ಸೆರೆಂಗೆಟಿ |
| | ಲೇಕ್ ಮನ್ಯಾರ |
| | ಎನ್‌ಗುರೊಡೊಟೊ ಕ್ರೇಟ್ |
| | ಮಿಕುಮಿ |
| | ಹವಾಯಿಯ ಹಕಕಲ |
| ನ್ಯೂಜಿಲೆಂಡ್ | ಉರೆವರ |
| | ಟೊಂಗಾರಿರೋ |
| | ವ್ಹಾಂಗ್‌ನುಯಿ |
| | ಎಗ್ಮಾಂಟ್ |
| | ಎಬೆಲ ಟಾಸ್ಮನ್ |
| | ಮೌಂಟ್ ಆಸ್ಪಿರಿಂಗ್ |

ಈ ರಾಷ್ಟ್ರೀಯ ಉದ್ಯಾನಗಳ ಆಡಳಿತವನ್ನು ಸಾಮಾನ್ಯವಾಗಿ ಆಯಾ ರಾಜ್ಯಗಳ ಅರಣ್ಯ ಇಲಾಖೆಗಳು ನೋಡಿಕೊಳ್ಳುತ್ತವೆ. ಇವು ಪ್ರಾಕೃತಿಕ ರಮಣೀಯ ದೃಶ್ಯಗಳನ್ನೂ, ಬಗೆಬಗೆಯ ವನ್ಯಜೀವಿಗಳನ್ನೂ ಮತ್ತು ಹಲವು ರೀತಿಯ ಗಿಡಮರಗಳನ್ನೂ ಒಳಗೊಂಡಿವೆ. ವಿನಾಶದ ಅಂಚಿನಲ್ಲಿರುವ ಪ್ರಾಣಿಪ್ರಭೇದಗಳನ್ನು (ಎಂಡೇಜರ್ಡ್ ಸ್ಪೀಸೀಸ್) ಸಂರಕ್ಷಿಸುವ ಸಲುವಾಗಿ ವಿಶೇಷ ಯೋಜನೆಗಳನ್ನು ಆಯಾ ಸರ್ಕಾರಗಳು ಹಾಕಿಕೊಂಡಿವೆ. ವನ್ಯಜೀವಿಗಳ ಸಹಜ ನೆಲೆವೀಡಿನ ಸಂರಕ್ಷಣೆ, ವನ್ಯಜೀವಿ ಸಂಖ್ಯೆಯನ್ನು ಕಾಪಾಡುವುದು, ಅವುಗಳ ಸಂತಾನಭಿವೃದ್ಧಿಗೆ ಅವಕಾಶ ಒದಗಿಸುವುದು, ಗಿಡಮರಗಳ ಮತ್ತು ಪ್ರಾಣಿಪ್ರಭೇದಗಳಿಗಾಗಿ ಜೀವಗೋಳರಕ್ಷಿತ ಪ್ರದೇಶಗಳನ್ನು ಏರ್ಪಡಿಸುವುದು, ವನ್ಯಜೀವಿಗಳ ಸಂರಕ್ಷಣೆಗೆ ಯುಕ್ತ ಕಾಯಿದೆಗಳು, ಅಪರೂಪದ ಗಿಡ, ಪ್ರಾಣಿಪ್ರಭೇದ ಮತ್ತು ಅವುಗಳ ಉತ್ಪನ್ನಗಳ ರಫ್ತಿಗೆ ನಿರ್ಬಂಧಗಳನ್ನು ವಿಧಿಸುವುದು, ಶಿಕ್ಷಣದ ಎಲ್ಲ ಹಂತಗಳಲ್ಲಿ ಪರಿಸರ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಉದ್ಯಾನಗಳ ಮೇಲ್ವಿಚಾರಣೆ ಹೊತ್ತಿರುವ ರಾಜ್ಯ ಸರ್ಕಾರಗಳು ಹಮ್ಮಿಕೊಂಡಿವೆ.

ಭಾರತದಲ್ಲಿ ಒಟ್ಟು ೮೦ ರಾಷ್ಟ್ರೀಯ ಉದ್ಯಾನಗಳು ಮತ್ತು ಪಕ್ಷಿಧಾಮಗಳೂ ಸೇರಿದಂತೆ ೫೦೦ ಅಭಯಾರಣ್ಯಗಳು ಇವೆ. ಇವುಗಳಲ್ಲಿ ಪ್ರಮುಖವಾದ ಹಲವನ್ನು ಈ ಮುಂದೆ ಕಾಣಿಸಿದೆ.

| ರಾಜ್ಯ | ಹೆಸರು |
|---|---|
| ಅಸ್ಸಾಮ್ | ಕಾಜಿರಂಗ |
| | ಮಾನಸ್ |
| ಅಂಡಮಾನ್ ದ್ವೀಪ ಸಮುದಾಯ | ಮೌಂಟ್ ಹ್ಯಾರಿಯಟ್ |
| | ಸ್ಯಾಡಲ್ ಪೀಕ್ |
| | ಮೆರೀನ್ |
| ಉತ್ತರ ಪ್ರದೇಶ | ಕಾರ್ಬೆಟ್ |
| | ದೂಧ್ವ |
| | ರಾಜಾಜಿ |
| ಒರಿಸ್ಸ | ಸಿಮ್ಲಿಪಾಲ್ |
| ಕೇರಳ | ಯರವಿಕುಲಂ |
| | ಸೈಲೆಂಟ್ ವ್ಯಾಲಿ |
| | ಪೆರಿಯಾರ್ |
| ಗೋವ | ಭಗವಾನ್ ಮಹಾವೀರ |
| ಗುಜರಾತ್ | ಗಿರ್ |
| | ವೆಲಾವಡರ್ |
| ಜಮ್ಮು ಮತ್ತು ಕಾಶ್ಮೀರ | ಡಾಚ್ಚಿಗಮ್ |
| ಪಶ್ಚಿಮ ಬಂಗಾಲ | ಸುಂದರ್‌ಬನ್ |
| ಬಿಹಾರ | ಹಜಾರಿಬಾಗ್ |
| | ಪಲಾಮ್ |
| ಮಧ್ಯಪ್ರದೇಶ | ಬಂದ್ವಾಘರ್ |
| | ಇಂದ್ರಾವತಿ |
| | ಕನ್ಹಾ |
| | ಸಂಜಯ |
| | ಪೆಂಚ್ |
| ಮಹಾರಾಷ್ಟ್ರ | ತಡೋಬ |
| | ಪೆಂಚ್ |
| ಮಣಿಪುರ | ಕೈಬುಲ್ ಲಾಮ್‌ಜಾವೊ |
| ರಾಜಸ್ತಾನ | ಡೆಸರ್ಟ್ |
| | ಕೆಯೊಲ್ಡೇವ್ ಘಾನಾ |
| | ರಣ್‌ತಂಬೋರ್ |
| | ಸಾರಿಸ್ಕ |
| ಸಿಕ್ಕಿಮ್ | ಕಾಂಚನಗಂಗ |
| ಹಿಮಾಚಲ ಪ್ರದೇಶ | ಗ್ರೇಟ್ ಹಿಮಾಲಯನ್ |

ಕರ್ನಾಟಕದಲ್ಲಿ ಐದು ರಾಷ್ಟ್ರೀಯ ಉದ್ಯಾನಗಳೂ, ಪಕ್ಷಿಧಾಮಗಳೂ ಸೇರಿದಂತೆ ೧೯ ಅಭಯಾರಣ್ಯಗಳಿವೆ. ಅವುಗಳ ಪೈಕಿ ರಾಷ್ಟ್ರೀಯ ಉದ್ಯಾನಗಳನ್ನು ಕುರಿತ ಸಂಕ್ಷಿಪ್ತ ವಿವರಗಳನ್ನು ಈ ಮುಂದೆ ಕೊಟ್ಟಿದೆ.

| ಕ್ರ.ಸಂ. | ಹೆಸರು | ಜಿಲ್ಲೆ ವಿಸ್ತೀರ್ಣ | ಸ್ಥಾಪಿತ ವರ್ಷ | ಸಾಮಾನ್ಯವಾಗಿ ಕಂಡುಬರುವ ವನ್ಯಪ್ರಾಣಿಗಳು |
|---|---|---|---|---|
| ೧ | ಅಣಶಿ | ಉತ್ತರ ಕನ್ನಡ ೨೫೦ ಚಕಿಮೀ | ೧೯೮೭ | ಕಾಡುಹಂದಿ, ಜಿಂಕೆ, ಕಡವೆ (ಸಾಂಬಾರ್), ಕಾಟಿ(ಕಾಡೆಮ್ಮೆ), ಆನೆ, ಚಿರತೆ, ಹುಲಿ, ನರಿ, ಪುನುಗಿನಬೆಕ್ಕು, ಚಿರತೆಬೆಕ್ಕು, ಸೀಳು ನಾಯಿ, ಹಾರುವ ಅಳಿಲು ಇತ್ಯಾದಿ. |
| ೨ | ಕುದುರೆಮುಖ | ದಕ್ಷಿಣ ಕನ್ನಡ ೬೦೦ ಚಕಿಮೀ | ೧೯೮೭ | ಕಾಡುಹಂದಿ, ಜಿಂಕೆ, ಕರಡಿ, ಕಾಡುಕುರಿ, ಕಡವೆ, ಮುಸಿಯ, ಸೀಳುನಾಯಿ, ಕಾಡಮ್ಮೆ, ಚಿರತೆ ಇತ್ಯಾದಿ. |
| ೩ | ಬಂಡೀಪುರ | ಚಾಮರಾಜನಗರ ೮೭೪ ಚ.ಕಿಮೀ | (೧೯೩೧, ೧೯೪೧) ೧೯೭೩, ೧೯೮೫ ವರ್ಷಗಳಲ್ಲಿ ವಿಸ್ತರಣೆ ಗೊಂಡಿದೆ | ಕಾಡುಹಂದಿ, ಕರಡಿ, ಕಾಡುಕುರಿ, ಜಿಂಕೆ, ಸಾಂಬಾರ್, ಸೀಳುನಾಯಿ, ಕಾಡೆಮ್ಮೆ, ಆನೆ, ಚಿರತೆ, ಹುಲಿ, ಕತ್ತೆಕಿರುಬ, ನರಿ, ಮುಸಿಯ, ಹಾರುವ ಅಳಿಲು ಇತ್ಯಾದಿ. |
| ೪ | ಬನ್ನೇರುಘಟ್ಟ | ಬೆಂಗಳೂರು ೧೦೪ ಚಕಿಮೀ | ೧೯೭೪ | ಜಿಂಕೆ, ಸಾಂಬಾರ್, ಕರಡಿ, ಕಾಡುಹಂದಿ, ಕಾಡುಕುರಿ, ಕಾಡೆಮ್ಮೆ, ಆನೆ ಇತ್ಯಾದಿ. |
| 5 | ರಾಜೀವ್‌ಗಾಂಧಿ (ನಾಗರಹೊಳೆ) | ಕೊಡಗು (ಭಾಗಶಃ) ಮೈಸೂರು (ಭಾಗಶಃ) ೬೪೩ ಚಕಿಮೀ | ೧೯೮೩ | ಕರಡಿ, ಕಾಡುಹಂದಿ, ನರಿ, ಜಿಂಕೆ, ಕಾಡುಕುರಿ, ಸೀಳುನಾಯಿ, ಆನೆ, ಕಾಡೆಮ್ಮೆ ಸಾಂಬಾರ್, ಕತ್ತೆಕಿರುಬ, ಮುಸಿಯ, ಮುಂಗಸಿ, ಚಿರತೆ, ಹುಲಿ ಇತ್ಯಾದಿ. |

(ಎ.ಕೆ.)

**ರಾಷ್ಟ್ರೀಯ ಒಂಟೆ ಸಂಶೋಧನಾ ಸಂಸ್ಥೆ:** ಒಂಟೆಗಳ ತಳಿಅಭಿವೃದ್ಧಿ ಮತ್ತು ಜನನಗಳ ಕುರಿತು ಸಂಶೋಧನೆ ನಡೆಸುತ್ತಿರುವ ಸಂಸ್ಥೆ. ರಾಜಸ್ಥಾನದ ಬಿಕಾನೇರ್ ಪಟ್ಟಣದಿಂದ ೧೦ ಕಿಮೀ ದೂರದಲ್ಲಿದೆ. ೧೯೮೪ರ ಜುಲೈ ೫ ರಂದು ಸ್ಥಾಪಿತವಾಯಿತು. ಇದಕ್ಕೆ ಮುಂಚೆ ಬಿಕಾನೇರ್‌ನ ರಾಜಸ್ಥಾನ ಕೃಷಿ ವಿಶ್ವವಿದ್ಯಾಲಯದ ಒಂಟೆ ತಳಿ ಅಭಿವೃದ್ಧಿ ಫಾರಂ ಆಗಿತ್ತು.

ವಿಶ್ವದಲ್ಲಿ ಒಂಟೆಗಳ ಸಂಖ್ಯೆ ೧೯.೩೧ ಮಿಲಿಯನ್. ೧೫.೧೩ ಮಿಲಿಯನ್ ಒಂಟೆಗಳಿರುವ ಆಫ್ರಿಕಾವೇ ಅತಿ ಹೆಚ್ಚು ಒಂಟೆಗಳಿರುವ ಖಂಡ. ಏಷಿಯಾದಲ್ಲಿ ೪.೧ ಮಿಲಿಯನ್ ಒಂಟೆಗಳಿವೆ. ಭಾರತದಲ್ಲಿ ೧.೦೩ ಮಿಲಿಯನ್ ಇದ್ದು, ಜಗತ್ತಿನಲ್ಲಿ ೫ನೆಯ ಸ್ಥಾನದಲ್ಲಿದೆ. ಸೊಮಾಲಿಯ (೬.೨ ಮಿಲಿಯನ್), ಸುಡಾನ್ (೩.೨ ಮಿಲಿಯನ್), ಮಾರಿಷಿಯಾನ (೧.೨ ಮಿಲಿಯನ್) ಹಾಗೂ ಇಥಿಯೋಪಿಯ (೧.೦೭ ಮಿಲಿಯನ್) ಗಳು ಕ್ರಮವಾಗಿ ಒಂದರಿಂದ ನಾಲ್ಕನೇ ಸ್ಥಾನಗಳಲ್ಲಿವೆ.

ಒಂಟೆ ತಳಿಗಳ ಅಭಿವೃದ್ಧಿಗಾಗಿ ಮೂಲಭೂತ ಹಾಗೂ ಅನ್ವಯಿಕ ಸಂಶೋಧನೆಗಳನ್ನು ನಡೆಸುವುದು ಸಂಸ್ಥೆಯ ಉದ್ದೇಶ. ಅತ್ಯುತ್ತಮ ಪ್ರಯೋಗಶಾಲೆಯನ್ನೊಳಗೊಂಡಿದ್ದು ಬಿಕಾನೇರಿ, ಜಲಸ್ಮೈಮೇರಿ, ಹಾಗೂ ಇನ್ನಿತರ ತಳಿಗಳನ್ನು ಅಭಿವೃದ್ಧಿ ಪಡಿಸಿದೆ. ಈ ಕೇಂದ್ರದ ವಿಜ್ಞಾನಿಗಳು ಒಂಟೆಗಳಲ್ಲಿ ತಳಿ ವ್ಯತ್ಯಾಸಗಳನ್ನು ಗುರುತಿಸಿದ್ದು ಜೀನ್ ಮಟ್ಟದಲ್ಲಿ ತಳಿ ಅಭಿವೃದ್ಧಿಗಾಗಿ ಬಳಸುವಲ್ಲಿ ಯಶಸ್ವಿಯಾಗಿದ್ದಾರೆ. ಭ್ರೂಣ ವರ್ಗಾವಣೆ ತಂತ್ರಜ್ಞಾನವನ್ನು ಬಳಸಿ ಕೇಂದ್ರದಲ್ಲಿ ಒಂಟೆಯ ಮರಿ ಪಡೆಯಲಾಗಿದೆ. ನೀರಿನ ಕೊರತೆಯನ್ನು ನೀಗಿಸಿಕೊಂಡು ಅಭಿವೃದ್ಧಿ ಹೊಂದಬಲ್ಲ ತಳಿಯ ಒಂಟೆಗಳನ್ನು ಕುರಿತು ಇಲ್ಲಿ ಅಧ್ಯಯನ ನಡೆದಿದೆ. ಒಂಟೆಯ ಬೆಳವಣಿಗೆಯ ವಿವಿಧ ಹಂತಗಳಾದ ಗರ್ಭಾವಸ್ಥೆ, ಹಾಲುಣಿಸುವ ಹಂತ, ಬೆಳೆಯುವ ಹಂತ, ಹಾಗೂ ಬರ ಪರಿಸ್ಥಿತಿಯಲ್ಲಿ ಅದಕ್ಕೆ ಅವಶ್ಯಕವಿರುವ ಆಹಾರವನ್ನು ಕುರಿತು ಸಂಶೋಧನೆ ನಡೆದಿದೆ. ಆಹಾರವಾಗಿ ಕೊಡಬಲ್ಲ ಸುಲಭವಾಗಿ ದೊರೆಯಬಲ್ಲ ಮೇವನ್ನು ಗುರುತಿಸಿದೆ. ಲಡಾಕ್‌ನ ನ್ಯೊಬ್ರಾ ಕಣಿವೆಯಲ್ಲಿ ಕಂಡುಬರುವ ಬೆನ್ನಿನ ಮೇಲೆ ಎರಡು ಇಳಿ (ಡುಬ್ಬ) ಗಳಿರುವ ಒಂಟೆಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಿದೆ.

ಅಷ್ಟೇ ಅಲ್ಲದೇ ರಾಷ್ಟ್ರೀಯ ಒಂಟೆ ಸಂಶೋಧನಾ ಸಂಸ್ಥೆ ಒಂದು ಆಕರ್ಷಕ ಪ್ರವಾಸಿ ಕೇಂದ್ರವೂ ಆಗಿದ್ದು, ರಾಜ್ಯದ ಪ್ರವಾಸಿ ಸ್ಥಳವೆಂದು ಆ ರಾಜ್ಯದ ನಕ್ಷೆಯಲ್ಲಿ ಗುರುತಿಸಲಾಗಿದೆ. ಇಲ್ಲಿನ ಒಂಟೆ ಮ್ಯೂಸಿಯಂ ಸಂಶೋಧಕರು ಹಾಗೂ ಸಹಸ್ರಾರು ವಿದೇಶೀ ಹಾಗೂ ಭಾರತೀಯ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಕೇಂದ್ರ ವರ್ಷದ ಎಲ್ಲ ದಿನಗಳಲ್ಲಿಯೂ ಮಧ್ಯಾಹ್ನ ೨.೩೦ ರಿಂದ ಸಂಜೆ ೫.೩೦ರವರೆಗೆ ಸಂದರ್ಶಕರಿಗಾಗಿ ತೆರೆದಿರುತ್ತದೆ. ಸ್ಥಳೀಯ ಆಡಳಿತ ಹಾಗೂ ರಾಜಸ್ಥಾನದ ಪ್ರವಾಸೀ ಅಭಿವೃದ್ಧಿ ಕಾರ್ಪೋರೇಶನ್ ಆಯೋಜಿಸಿರುವ ವಿವಿಧ ಮೇಳಗಳು ಹಬ್ಬಗಳು ಹಾಗೂ ಒಂಟೆ ಹಬ್ಬದಲ್ಲಿ ಸಂಸ್ಥೆ ಸಕ್ರಿಯವಾಗಿ ಭಾಗವಹಿಸುತ್ತದೆ. (ಎಸ್.ಎಂ.ಜಿ)

**ರಾಷ್ಟ್ರೀಯ ಪ್ರಯೋಗಾಲಯಗಳು:** ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನಾ ವಿಭಾಗ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗಗಳು. ಔದ್ಯೋಗಿಕ ಪ್ರಗತಿಗೆ ಅಗತ್ಯವಾದ ಸಂಶೋಧನೆ ಮತ್ತು ಮಾದರಿಗಳ ನಿರ್ಮಾಣ ಕಾರ್ಯಗಳನ್ನು ನಡೆಸಲು ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಹಲವಾರು ಪ್ರಯೋಗಾಲಯ ಗಳನ್ನೂ ಸಂಸ್ಥೆ ಮತ್ತು ವಸ್ತುಸಂಗ್ರಹಾಲಯಗಳನ್ನೂ ಸ್ಥಾಪಿಸಿದೆ. ಇವಲ್ಲದೆ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು, ಪರಮಾಣು ಶಕ್ತಿ ವಿಭಾಗ, ಭಾರತೀಯ ಕೃಷಿ ಸಂಶೋಧನಾ ಮಂಡಳಿಗಳು ಆಯಾ ಕ್ಷೇತ್ರಕ್ಕೆ ಅವಶ್ಯಕವಾದ ಪ್ರಯೋಗಾಲಯಗಳನ್ನು ಸ್ಥಾಪಿಸಿವೆ. ಆ ಶ್ರೇಣಿಯ ಕೆಲವು ಸಂಸ್ಥೆಗಳು ಇವು: ಬೋಸ್ ಇನ್‌ಸ್ಟಿಟ್ಯೂಟ್, ಕೊಲ್ಕೊತ, ಸೆಂಟ್ರಲ್ ಡ್ರಗ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಲಕ್ನೊ, ಸೆಂಟರ್ ಫಾರ್‌ಸೆಲ್ಯುಲಾರ್ ಅಂಡ್ ಮಾಲಿಕ್ಯುಲಾರ್ ಬಯಾಲಜಿ, ಹೈದರಾಬಾದ್, ಸೆಂಟರ್ ಫಾರ್ ಡಿಎನ್‌ಎ ಫಿಂಗರ್ ಪ್ರಿಂಟಿಂಗ್, ಹೈದರಾಬಾದ್, ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಜೇಷನ್, ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಬೆಂಗಳೂರು, ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಜೇಷನ್ (ಐಎಸ್‌ಆರ್‌ಓ–ಇಸ್ರೊ) ಬೆಂಗಳೂರು, ಕೊಲ್ಕೊತ, ದೆಹಲಿಗಳಲ್ಲಿರುವ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ (ಐಎಸ್‌ಐ), ಇಂದಿರಾಗಾಂಧಿ ಸೆಂಟರ್ ಫಾರ್ ಅಟಾಮಿಕ್ ರಿಸರ್ಚ್ (ಐಜಿಸಿಎಆರ್), ಜವಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್ (ಜೆಎನ್‌ಸಿಎಎಸ್), ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈಡ್ರಾಲಜಿ, ರೂರ್ಕಿ (ಎನ್‌ಐಎಚ್), ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಬೆಂಗಳೂರು (ಆರ್‌ಆರ್‌ಐ), ಸತ್ಯೇಂದ್ರನಾಥ್ ಬೋಸ್ ನ್ಯಾಷನಲ್ ಸೆಂಟರ್ ಫಾರ್ ಬೇಸಿಕ್ ಸೈನ್ಸಸ್, ಕೊಲ್ಕೊತ (ಎನ್‌ಸಿಬಿಎಸ್), ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಮುಂಬಯಿ, ಬೆಂಗಳೂರು (ಟಿಐಎಫ್‌ಆರ್), ಬಟಾನಿಕಲ್ ಸರ್ವೆ ಆಫ್ ಇಂಡಿಯ (ಬಿಎಸ್‌ಐ), ಕೊಲ್ಕೊತ; ಡಾ.ಬಿ.ಆರ್. ಅಂಬೇಡ್ಕರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಜಲಂಧರ್; ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯ, ಕೊಲ್ಕೊತ; ಇನ್‌ಫರ್ಮೇಷನ್ ಟೆಕ್ನಾಲಜಿ ಅಂಡ್ ಬಯೋಟೆಕ್ನಾಲಜಿ ಡಿಪಾರ್ಟ್‌ಮೆಂಟ್, ಕರ್ನಾಟಕ; ಮೋತಿಲಾಲ್ ನೆಹರೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಅಲಹಾಬಾದ್ (ಎಂಎನ್‌ಎನ್‌ಐಟಿ), ಕರ್ನಾಟಕ, ಕಲ್ಲಿಕೋಟೆ, ದುರ್ಗಾಪುರಗಳಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸರ್ದಾರ್ ವಲ್ಲಭಭಾಯಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸೂರತ್ (ಎಸ್‌ವಿಎನ್‌ಐಟಿ), ಡಿಫೆನ್ಸ್ ಫುಡ್ ರಿಸರ್ಚ್ ಲ್ಯಾಬೊರೇಟರಿ, ಮೈಸೂರು, ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ (ಐಎಎಸ್), ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್ (ಬಿಎಆರ್‌ಸಿ), ಮುಂಬಯಿ, ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸಸ್, ಚೆನ್ನೈ ; ಜುವಾಲಾಜಿಕಲ್ ಸರ್ವೆ ಆಫ್ ಇಂಡಿಯ, ಕೊಲ್ಕೊತ. (ನೋಡಿ: ಪ್ರಾಣಿ ವಿಜ್ಞಾನಕ್ಕೆ ಸಂಬಂಧಿಸಿದ ಸಂಸ್ಥೆಗಳ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ.)

***

**ರಾಸ್, ರೊನಾಲ್ಡ್ (1857–1932) :** ಬ್ರಿಟಿಷ್ ವೈದ್ಯ. ನೊಬೆಲ್ ಪಾರಿತೋಷ್ಟಿಕ ಪುರಸ್ಕೃತ. ಅನಾಫಿಲೀಸ್ ಎಂಬ ಹೆಣ್ಣುಸೊಳ್ಳೆಗಳು ವಂಶಾಭಿವೃದ್ಧಿಗೊಂಡು ವ್ಯಾಪಕ ಮಲೇರಿಯ ರೋಗಕ್ಕೆ ಹೇಗೆ ಕಾರಣವಾಗುತ್ತವೆಂಬುದರ ಬಗ್ಗೆ ವಿಶೇಷ ಅಧ್ಯಯನ ಸಂಶೋಧನೆಗಳನ್ನು ನಡೆಸಿದಾತ. ನೇಪಾಲದ ಅಲ್ಮೋರದಲ್ಲಿ 1857 ಮಾರ್ಚ್ 12ರಂದು ಜನಿಸಿದ. ತಂದೆ ಕ್ಯಾಂಪ್‌ಬೆಲ್ ರಾಸ್. ಅಂದಿನ ಬ್ರಿಟಿಷ್ ಭಾರತದ ಸೇನೆಯಲ್ಲಿ ಮೇಜರ್ ಆಗಿದ್ದ. ಮಗನ ಪ್ರಾಥಮಿಕ ವಿದ್ಯಾಭ್ಯಾಸ ಇಂಗ್ಲಿಷ್ ವಸತಿಶಾಲೆಯಲ್ಲೇ ನಡೆಯಿತು. ಎಂಟುವರ್ಷ ವಯಸ್ಸಾದಾಗ ಇವನನ್ನು ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲಾಯಿತು. ತಂದೆಯ ಇಚ್ಛೆಯಂತೆ ವೈದ್ಯಕೀಯದ ಅಧ್ಯಯನಕ್ಕಾಗಿ ಲಂಡನ್ನಿನ ಸೇಂಟ್ ಬಾರ್ತೊಲೋಮಿಯ ಆಸ್ಪತ್ರೆ ಸೇರಿದ (1874). ಆ ಅಧ್ಯಯನವನ್ನೇನೋ ಕೈಗೆತ್ತಿಕೊಂಡ. ಆದರೆ ಈತನ ಆಸಕ್ತಿ ಇದ್ದದ್ದು ಸಂಗೀತ ಮತ್ತು ಸಾಹಿತ್ಯವಲಯಗಳಲ್ಲಿ. ನಾಟಕಗಳನ್ನೂ ಕವನಗಳನ್ನೂ ಕಥೆಗಳನ್ನೂ ರಚಿಸಿದ. ಕಲೆ ಮತ್ತು ಸಾಹಿತ್ಯಗಳ ಜೊತೆಗೆ ರಾಸನಿಗೆ ಗಣಿತದಲ್ಲೂ ಅಮಿತಾಸಕ್ತಿ ಇತ್ತು. ಸ್ವಂತ ಅಧ್ಯಯನದಿಂದ ಈ ಆಸಕ್ತಿಯನ್ನು ಮೂಡಿಸಿಕೊಂಡಿದ್ದ.



ಲಂಡನ್ನಿನ ರಾಯಲ್ ಕಾಲೇಜ್ ಆಫ್ ಸರ್ಜನ್ಸ್‌ನಿಂದ ವೈದ್ಯಕೀಯದಲ್ಲಿ ಪದವಿ ಪಡೆಯಲು ಶ್ರಮಿಸಿದ (1879), ಆದರೆ ಯಶಸ್ವಿಯಾಗಲಿಲ್ಲ. ಔಷಧಿ ವಿತರಣವಿಜ್ಞಾನದಲ್ಲಿಯೂ ಯಶಸ್ಸು ಕಾಣದಾದ. ಹಡಗೊಂದರಲ್ಲಿ ತಾತ್ಕಾಲಿಕ ವೈದ್ಯಹುದ್ದೆಗೆ ಸೇರಿಕೊಂಡು ತನ್ನ ವ್ಯಾಸಂಗವನ್ನು ಮುಂದುವರಿಸಿದ. ಅದೇ ವಿಷಯದಲ್ಲಿ ಪರೀಕ್ಷೆ ತೆಗೆದುಕೊಂಡು ವೈದ್ಯಪದವಿ ಗಳಿಸಿದ (1881). ಮುಂದೆ ಭಾರತದ ವೈದ್ಯಕೀಯ ಸೇವಾ ವ್ಯವಸ್ಥೆಯಲ್ಲಿ ಸರ್ಜನ್ ಕೆಲಸ ದೊರಕಿ ಅಲ್ಲಿಗೆ ಹಿಂತಿರುಗಿದ. 1881–88ರ ಅವಧಿಯಲ್ಲಿ ಈತ ಭಾರತದ ಮದರಾಸು, ಬೆಂಗಳೂರು ಮತ್ತು ಅಂಡಮಾನ್ ದ್ವೀಪಗಳಲ್ಲಿ ಸೇವೆ ಸಲ್ಲಿಸಿದ. ತನ್ನ ಇತರ ಸಹೋದ್ಯೋಗಿಗಳಂತೆಯೇ ಇವನು ಸಂಶೋಧನ ಪ್ರವೃತ್ತಿಯವನಾಗಿದ್ದ.

ಇವನಿಗೆ ಮಲೇರಿಯ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾದದ್ದು ಬೆಂಗಳೂರಿನಲ್ಲಿ. 1894 ರಲ್ಲಿ ಈ ಬಗ್ಗೆ ಅಧ್ಯಯನ ಸಂಶೋಧನೆಗಳನ್ನು ಮಾಡಿದ. ಸರ್ಕಾರಿ ಸೇವೆಯಲ್ಲಿ ಇದ್ದುದರಿಂದ ಕ್ವೆಟ್ಟ, ಉದಕಮಂಡಲ, ರಂಗೂನ್, ಸಿಕಂದರಾಬಾದ್, ಕಲ್ಕತ್ತಗಳಿಗೆ ಹೋಗಿಯೂ ಕಾರ್ಯನಿರ್ವಹಿಸಬೇಕಾಯಿತು. ಕೆಲಸಮಾಡುವ ಕೈಗಳಿಗೆ ಯುಕ್ತ ರೀತಿಯ ಪ್ರೋತ್ಸಾಹ ದೊರೆಯುವುದು ಕ್ಷೀಣಿಸತೊಡಗಿತು. ರಾಸ್ ಧೃತಿಗೆಡಲಿಲ್ಲ. ಕೆಲವೊಂದು ಸಹೋದ್ಯೋಗಿಗಳ ಟೀಕೆಗಳನ್ನೂ ಎದುರಿಸಬೇಕಾಯಿತು. 1893ರಲ್ಲಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದ. ಜೀವನದಲ್ಲಿ ಉಷ್ಣವಲಯದ ರೋಗಗಳ ಬಗ್ಗೆ ಅಧ್ಯಯನಮಾಡಿ ಖ್ಯಾತನಾಗಿದ್ದ ಪ್ಯಾಟ್ರಿಕ್ ಮ್ಯಾನ್‌ಸನ್ (1844–1922) ಎಂಬವನ ಪ್ರೇರಣೆ ಹಾಗೂ ಉತ್ತೇಜನಗಳಿಂದ ರಾಸನಿಗೆ ಮಲೇರಿಯ ರೋಗ ಹರಡಲು ಕಾರಣವಾಗುವ ಪರಾವಲಂಬಿಯ ಜೀವನಚರಿತ್ರೆ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುವುದು ಸಾಧ್ಯವಾಯಿತು. ಫೈಲೇರಿಯ (ಆನೆಕಾಲು ರೋಗ) ಎಂಬುದು ಸೊಳ್ಳೆಗಳಿಂದ ಹರಡುತ್ತದೆ ಎಂಬುದನ್ನು ಮ್ಯಾನ್‌ಸನ್ ತೋರಿಸಿಕೊಟ್ಟಿದ್ದ. ಸೊಳ್ಳೆ ಮನುಷ್ಯರನ್ನು ಕಚ್ಚಿ ರಕ್ತ ಹೀರಿದಾಗ ಮಲೇರಿಯದ ಪರಾವಲಂಬಿ ಜೀವಿಗಳು ಸೊಳ್ಳೆಯ ದೇಹ ಸೇರಿ ಅವು ಸತ್ತ ಬಳಿಕ ನೀರಿನಲ್ಲಿ ಸೇರುತ್ತವೆ. ಈ ನೀರಿನ ಸೇವನೆಯಿಂದ ವ್ಯಕ್ತಿ ಮಲೇರಿಯ ಕಾಯಿಲೆಗೆ ಈಡಾಗುತ್ತಾನೆ ಎಂದು ಮ್ಯಾನ್‌ಸನ್ ತಿಳಿಸಿದ್ದ. ಈ ವಿಚಾರದಲ್ಲಿ ತನ್ನ ಅಧ್ಯಯನ ಸಂಶೋಧನೆಗಳನ್ನು ಮುಂದುವರಿಸುವ ಸಲುವಾಗಿ ರಾಸ್ 1894 ರಲ್ಲಿ ಭಾರತಕ್ಕೆ ಹಿಂತಿರುಗಿದ. ಸಿಕಂದರಾಬಾದಿನ ಮಿಲಿಟರಿ ಆಸ್ಪತ್ರೆಗೆ ಈತನನ್ನು ವರ್ಗಾಯಿಸಲಾಯಿತು. ಇವನ ಸಂಶೋಧನೆಗಳಿಗೆ

ಸಹೋದ್ಯೋಗಿಗಳಿಂದ ಉತ್ತೇಜನವಾಗಲೀ ಸರ್ಕಾರದಿಂದ ಪ್ರೋತ್ಸಾಹವಾಗಲೀ ದೊರೆಯಲಿಲ್ಲ.

ಜೀವರಾಶಿಯ ಆದಿಮರೂಪ ಎನಿಸಿರುವ ಪ್ರೊಟೊಜೋವದ ಒಂದು ಪ್ರಭೇದ ಪ್ಲಾಸ್ಮೋಡಿಯಮ್. ಇದು ಮಲೇರಿಯ ಕಾರಕ ಎಂಬುದನ್ನು ಫ್ರೆಂಚ್ ವೈದ್ಯ ಚಾರ್ಲ್ಸ್ ಲೆವಿರಾನ್ (1845 – 1922) ಮೊದಲಿಗೆ ಆಲ್ಜೀರಿಯದಲ್ಲಿ ಕಂಡುಕೊಂಡಿದ್ದ (1880). ಮಲೇರಿಯಕ್ಕೆ ಕಾರಣ ಎನಿಸುವ ಈ ಪರಾವಲಂಬಿ ಮನುಷ್ಯನಲ್ಲಿ ಬೆಳವಣಿಗೆ ಹೊಂದಿದರೂ ಅದು ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದು ಹೇಗೆಂಬುದು ನಿಗೂಢವಾಗಿಯೇ ಇತ್ತು. ಸೊಳ್ಳೆ ಈ ಪರಾವಲಂಬಿಯನ್ನು ಹರಡುವ ವಾಹಕವೆಂಬುದು ಆಗಿನ ಊಹೆ ಆಗಿದ್ದರೂ ಅದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿರಲಿಲ್ಲ. ಸೊಳ್ಳೆಗಳು ಮಲೇರಿಯ ರೋಗಿಗಳನ್ನು ಕಚ್ಚುವಂತೆ ಮಾಡಿ, ಬಳಿಕ ಅವನ್ನು ಕೊಂದು ಅವುಗಳ ಜಠರವನ್ನು ತನ್ನಲ್ಲಿದ್ದ ಸೂಕ್ಷ್ಮದರ್ಶಕದ ಮೂಲಕ ಈತ ವೀಕ್ಷಿಸಿ ಪರೀಕ್ಷಿಸುವಲ್ಲಿ ನಿರತನಾದ. ಏತನ್ಮಧ್ಯೆ ಬೆಂಗಳೂರಿನಲ್ಲಿ ಕಾಲರ ಉಪದ್ರವ ತಲೆದೋರಿ ಇವನನ್ನು ಅಲ್ಲಿಗೆ ವರ್ಗಾಯಿಸಲಾಯಿತು. ಎರಡು ವರ್ಷಗಳ ಬಳಿಕ 1897ರಲ್ಲಿ ಪುನಃ ಸಿಕಂದರಾಬಾದಿನ ಬೇಗಂಪೇಟೆ ಆಸ್ಪತ್ರೆಗೆ ಮರಳಿದ. ಸೊಳ್ಳೆಗಳ ಸೋಂಕು ತಗುಲಿದ ವ್ಯಕ್ತಿಯ ರಕ್ತ ಹೀರುವಾಗ ಮಲೇರಿಯ ಪರಾವಲಂಬಿಗಳನ್ನೂ ಹೀರಬೇಕು. ಆ ವೇಳೆಗೆ ಅವು ಗಂಡು ಮತ್ತು ಹೆಣ್ಣು ಮರಿಬೀಜಗಳಾಗಿ ಪರಿವರ್ತನೆಗೊಂಡು ಮನುಷ್ಯನ ರಕ್ತವನ್ನು ಸೇರುತ್ತವೆ. ಮನುಷ್ಯನಲ್ಲಿ ಇವು ಮುಂದೆ ಅನೇಕ ಅಲೈಂಗಿಕ ಜೀವನ ಚಕ್ರಗಳ ಮೂಲಕ ತಮ್ಮ ಸಂಖ್ಯೆಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತವೆ. ಹೀಗೆ ಅವು ತಮ್ಮ ಲೈಂಗಿಕ ಚಕ್ರವನ್ನು ಪೂರೈಸಲು ಮನುಷ್ಯದೇಹದಿಂದ ಹೊರಬರಲೇಬೇಕು. ಸೊಳ್ಳೆ ಹೀರಿದ ರಕ್ತದಲ್ಲಿಯ ಮಲೇರಿಯ ಪರಾವಲಂಬಿ ಲೈಂಗಿಕಚಕ್ರ ಪೂರೈಸಿ ಮತ್ತೆ ಮನುಷ್ಯನಲ್ಲಿ ಸೇರುವುದು ಹೇಗೆ ಎಂಬುದರ ವಿಚಾರವಾಗಿ ಈತ ತನ್ನ ಅಧ್ಯಯನ, ಸಂಶೋಧನೆ ಮುಂದುವರಿಸಿದ. ಮಲೇರಿಯಪೀಡಿತ ರೋಗಿಯೊಬ್ಬನನ್ನು ಕಂದುಬಣ್ಣದ ಸೊಳ್ಳೆಗಳು ಕಚ್ಚುವಂತೆ ಮಾಡಿ ಅದನ್ನು ಕೊಂದು ಅದರ ಜಠರಕೋಶವನ್ನು ಸೂಕ್ಷ್ಮದರ್ಶಕದ ಮೂಲಕ ಅಭ್ಯಸಿಸಿದ. 1897ರ ಆಗಸ್ಟ್ ತಿಂಗಳ ಮೊದಲೆರಡು ವಾರಗಳ ತನಕವೂ ಅಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ. ಮುಂದೆ ಕೆಲವು ದಿವಸಗಳ ಬಳಿಕ ಮತ್ತೆ ಸೊಳ್ಳೆಗಳ ಜಠರಕೋಶವನ್ನು ಈತ ಪರೀಕ್ಷಿಸಿದಾಗ, ಆ ಕೋಶದಲ್ಲಿ ಕಲ್ಲುಹಾಸಿನಂತಿರುವ ಮೇಲ್ಪೊರೆಯ ಭಿತ್ತಿಯಲ್ಲಿ ಸ್ಫುಟವಾಗಿ ಹೆಚ್ಚಿನ ಸಂಖ್ಯೆಯ ಕಪ್ಪು ಚುಕ್ಕಿಗಳು ಕಾಣಿಸಿಕೊಂಡುವು. ಇವು ಸೊಳ್ಳೆಯ ದೇಹದಲ್ಲಿ ಬೆಳೆಯುತ್ತಿರುವ ಮಲೇರಿಯ ಪರಾವಲಂಬಿ ಜೀವಿಗಳು ಎಂಬ ನಿರ್ಧಾರಕ್ಕೆ ಈತ ಬಂದ. ಈ ವಿಶೇಷ ಅಧ್ಯಯನ, ಸಂಶೋಧನೆಗಳಿಗಾಗಿ ಇವನನ್ನು ರಾಯಲ್ ಸೊಸೈಟಿಯ ಫೆಲೋ ಆಗಿ ಆಯ್ಕೆಮಾಡಲಾಯಿತು (1801). ಇದಲ್ಲದೆ ರಾಸನಿಗೆ 1902ರ ನೊಬೆಲ್ ಪಾರಿತೋಷಕವನ್ನು ನೀಡಲಾಯಿತು. ಇಷ್ಟಾದರೂ ಇವನ ಪ್ರಯೋಗಕಾರ್ಯ ಈತನ ಮೇಲಧಿಕಾರಿಗಳಿಗೆ ಅಂಥ ಮಹತ್ತ್ವದ್ದು ಎನಿಸಲಿಲ್ಲ. ಬೇರೆ ಬೇರೆ ಎಡೆಗಳಿಗೆ ಈತನನ್ನು ವರ್ಗ ಮಾಡಿದ್ದರು. ಈತ ಕಲ್ಕತ್ತದಲ್ಲಿದ್ದಾಗ ಪಂಜರದೊಳಗಿಟ್ಟಿರುವ ಹಕ್ಕಿಗಳಲ್ಲೂ ಮಲೇರಿಯ ಕಾಣಿಸಿಕೊಳ್ಳುತ್ತಿದ್ದುದನ್ನು ಪತ್ತೆಮಾಡಿದ. ಈ ಎಲ್ಲ ಸಾಧನೆಗಳಿಗಾಗಿ ರಾಸನಿಗೆ 1911ರಲ್ಲಿ ನೈಟ್‌ಹುಡ್ (ಸರ್) ಪದವಿಯನ್ನು ನೀಡಿ ಗೌರವಿಸಲಾಯಿತು.

ಈತ ಇಂಡಿಯನ್ ವೈದ್ಯಕೀಯ ಸೇವಾ ವ್ಯವಸ್ಥೆಯಿಂದ 1899 ರಲ್ಲಿ ನಿವೃತ್ತನಾದ. ಇದರೊಂದಿಗೆ ಇವನ ಪ್ರಯೋಗಾತ್ಮಕ ಜೀವನವೂ ಕೊನೆಗೊಂಡಿತು. ಇವನ ಆತ್ಮಚರಿತ್ರೆ 'ದಿ ಫೈಟ್ ಫಾರ್ ಲೈಫ್' 1922ರಲ್ಲಿ ಪ್ರಕಟವಾಯಿತು. ತನ್ನ ಜೀವನದ ಉದ್ದಕ್ಕೂ ತನಗೆ ಯಾವ ರೀತಿ ಯುಕ್ತ ಮನ್ನಣೆಯಾಗಲೀ ಸಹಾಯವಾಗಲೀ, ದೊರೆಯಲಿಲ್ಲವೆಂಬುದನ್ನೂ ಈ ಆತ್ಮಚರಿತ್ರೆಯಲ್ಲಿ ತಿಳಿಸಿದ್ದಾನೆ. ಮಲೇರಿಯ ಕುರಿತಂತೆ ಈತನ ಕೆಲಸಗಳು ಬಲು ಫಲಪ್ರದವಾದರೂ ಮೊದಮೊದಲು ಮಲೇರಿಯ ಕಾಯಿಲೆ ಜೌಗುಪ್ರದೇಶಗಳಿಂದ ಹೊರಹೊಮ್ಮುವ, ಫುಪ್ಫುಸಗಳಿಗೂ ಘ್ರಾಣೇಂದ್ರಿಯಕ್ಕೂ ಕೆಡುಕನ್ನು ಉಂಟುಮಾಡುವ ದುರ್ಗಂಧದಿಂದ ಉಂಟಾಗುತ್ತದೆ ಎಂಬ ನಿರಾಧಾರ, ವ್ಯಾಪಕ ನಂಬಿಕೆಯನ್ನು ಈತ ದೂರಮಾಡಬೇಕಾಗಿ ಬಂತು. ಮಲೇರಿಯ ಕುರಿತ ಜನಪ್ರಿಯ ಲೇಖನಗಳನ್ನೂ ಕಿರುಹೊತ್ತಗೆಗಳನ್ನೂ ಪ್ರಕಟಿಸಿದ. ಮಲೇರಿಯ ವಿರುದ್ಧ ಜನಜಾಗೃತಿ ಮೂಡಿಸುವ ಆಂದೋಲನಗಳಲ್ಲೂ ಸ್ವತಃ ಭಾಗವಹಿಸಿದ.

ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಈತ ಮಲೇರಿಯ ಕುರಿತಂತೆ ಯುದ್ಧ ಕಛೇರಿಗೆ ಮಾಹಿತಿ ತಿಳಿಸಿಕೊಡುವ ಸಮಾಲೋಚಕನಾಗಿದ್ದ. ರಾಸನ ಹೆಸರನ್ನು ಚಿರಸ್ಮರಣೀಯವಾಗಿಡುವಂಥ ರಾಸ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಹೈಜೀನ್ ಸಂಸ್ಥೆ ಲಂಡನ್ನಿನಲ್ಲಿ ಸ್ಥಾಪನೆಯಾಗಿ (1926) ಈತ ಅದರ ಪ್ರಥಮ ನಿರ್ದೇಶಕನೂ ಆಗಿದ್ದ. ಈತ ಪ್ರಾಯೋಗಿಕ ವಿಜ್ಞಾನಿ ಮಾತ್ರವಾಗಿರಲಿಲ್ಲ. ಆಗಾಗ್ಗೆ ಕವನಗಳನ್ನೂ ರಚಿಸುತ್ತಿದ್ದ. ಸೊಳ್ಳೆಯ ಜಠರಕೋಶಗಳಲ್ಲಿ ಕಂಡುಬರುವ ಕಂದುಬಣ್ಣದ ಚುಕ್ಕಿಗಳ ಬಗ್ಗೆ ನಡೆಸಿದ ಆವಿಷ್ಕಾರ ಕುರಿತಂತೆ ಎಕ್ಸೈಲ್ ಎಂಬ ನೀಳ್ಗವನ ಬರೆದು ಖ್ಯಾತಿಗಳಿಸಿದ. ಇದಲ್ಲದೆ ಶೀಘ್ರಲಿಪಿಯ ವಿಚಾರದಲ್ಲೂ ಈತ ಬಹಳಷ್ಟು ಕೆಲಸ ಮಾಡಿದ. 1932ರ ಸೆಪ್ಟೆಂಬರ್ 16ರಂದು ಲಂಡನ್ನಿನಲ್ಲಿ ನಿಧನನಾದ. ***

**ರಿಂಕೋಫೊರಸ್ ಫೆರುಜೀನಿಯಸ್:** ಇದು ಗರಿಮರಗಳ ಕೆಂಪು ಮೂತಿಹುಳ. ಇದರ ಬಣ್ಣ ಕಂದು. ಇದಕ್ಕೆ ತಲೆಯ ಮುಂಭಾಗದಲ್ಲಿ ಮೂತಿ ಇದೆ. ಗಂಡುಹುಳದ ಮೂತಿಯ ಮೇಲೆ ಸಣ್ಣ ಕೂದಲುಗಳಿವೆ. ಈ ಕೀಟವು ತೆಂಗು, ಈಚಲು, ಸೆಗೋ ಮರದ ಗರಿಗಳನ್ನು ತಿಂದು ಜೀವಿಸುತ್ತವೆ. ಇದು ಪೀಡೆ ಕೀಟ. ಇದರ ಹಾವಳಿ ತೆಂಗಿನ ಮೇಲೆ ಕಡಿಮೆ. ಆದರೆ, ಈಚಲು ಮರದ ಎಲೆಗಳಿಗೆ ಹೆಚ್ಚು ನಾಶಮಾಡುತ್ತದೆ. ಇವು ಒಣಗಿದ ಮರದಲ್ಲಿ ಇರುತ್ತವೆ. ಈ ಮೂತಿ ಹುಳುವಿನ ವದನಾಂಗಗಳು ಬಲವಾಗಿ ಇಲ್ಲದಿರುವುದರಿಂದ ನೇರವಾಗಿ ನಷ್ಟ ಮಾಡಲಾರವು. ಹೆಣ್ಣು ತನ್ನ ಮೂತಿಯಿಂದ ಮರದ ಮೃದು ಭಾಗದಲ್ಲಿ ರಂಧ್ರಗಳನ್ನು ಮಾಡಿ ಒಂದೊಂದು ಮೊಟ್ಟೆ ಇಡುತ್ತದೆ. ಅದರಿಂದ ಬಂದ ಮರಿಗಳು ಮರದ ಸುಳಿಯನ್ನು ಕೊರೆದು ನಾಶಪಡಿಸುತ್ತವೆ. ಒಂದೇ ಮರದಲ್ಲಿ ಹಲವು ಮರಿಗಳು ಕೊರೆದು ತಿನ್ನುವುದರಿಂದ ಮರಕ್ಕೆ ಹಾನಿಯಾಗುತ್ತದೆ. ಇವು ಮರದ ನಾರಿನಲ್ಲಿ ಗೂಡುಗಳನ್ನು ಮಾಡಿ ಕೋಶಾವಸ್ಥೆಯನ್ನು ಹೊಂದುತ್ತದೆ. ಪ್ರಪಂಚದಲ್ಲಿ ತೆಂಗು ಬೆಳೆಯುವ ಭಾಗಗಳಲ್ಲೆಲ್ಲ ಈ ಮೂತಿಹುಳದ ಕಾಟ ಜಾಸ್ತಿ. (ವಿ.ಎಸ್.ಟಿ.)



**ರೀಯ:** ರ್‍ಯಾಟಿಟೆ ಉಪವರ್ಗ, ರೀಯಫಾರ್ಮಿಸ್ ಗಣ, ರೀಡೆ ಕುಟುಂಬದ ದಕ್ಷಿಣ ಅಮೆರಿಕವಾಸಿ ಹಾರಲಾರದ ಪಕ್ಷಿಗಳ ಸರ್ವನಾಮ. ಎರಡು ಮುಖ್ಯ ಪ್ರಭೇದಗಳು: ಈಶಾನ್ಯ ಬ್ರೆಜಿಲ್‌ನಿಂದ ಅರ್ಜೆಂಟಿನವರೆಗಿನ ಬಯಲು ಪ್ರದೇಶವಾಸಿ ಸಾಮಾನ್ಯ ರೀಯ (ರೀಯ ಅಮೆರಿಕಾನ) ಮತ್ತು ಪೆರುವಿನಿಂದ ದಕ್ಷಿಣಕ್ಕೆ ಪಟಗೋನಿಯವರೆಗಿನ ಭೂಪ್ರದೇಶವಾಸಿ ಡಾರ್ವಿನ್‌ನ ರೀಯ (ಟೆರೋಕ್ನೆಮಿಯ ಪೆನ್ನೇಟ).

ರಿಯಾ

ಇವು ತಮ್ಮ ಸಮೀಪ ಬಂಧುಗಳಾದ ಈಮ್ಯೂ ಮತ್ತು ಉಷ್ಟ್ರಪಕ್ಷಿಗಳಿಗಿಂತ ಗಾತ್ರದಲ್ಲಿ ಸಣ್ಣವು. ಮೂರು ಬೆರಳುಗಳಿರುವ ಉದ್ದನೆಯ ಕಾಲುಗಳು, ಸುಂದರ ಗರಿಗಳ ಅಭಾವ, ಹೆಚ್ಚುಕಡಿಮೆ ಕಂದು ಬಣ್ಣ–ಇವು ರೀಯ ಪಕ್ಷಿಗಳ ವೈಶಿಷ್ಟ್ಯಗಳು. ಸಾಪೇಕ್ಷವಾಗಿ ದೊಡ್ಡಗಾತ್ರದ (ಸು. 120 ಸೆಂಮೀ ಎತ್ತರ, 20 ಕಿಗ್ರಾಂ ತೂಕ) ಸಾಮಾನ್ಯ ರೀಯದ ದೇಹದ ಮೇಲ್ಭಾಗ ಬೂದು, ಕೆಳಭಾಗ ಮಾಸಲುಬಿಳಿ. ಬಿಳಿತುದಿಯ ಕಂದು ಗರಿಗಳು ಸಣ್ಣ ಗಾತ್ರದ ಡಾರ್ವಿನ್‌ನ ರೀಯದ ವೈಶಿಷ್ಟ್ಯ.

ಹುಲ್ಲುಗಾವಲುಗಳಲ್ಲಿ ಸಂಚರಿಸುವ ಜಿಂಕೆ ಮತ್ತು ಗ್ವಾನಾಕೋಗಳ ಗುಂಪುಗಳ ಸಹಚರ್ಯದಲ್ಲಿ ಸರಾಸರಿ 6 ರೀಯ ಪಕ್ಷಿಗಳ ಚಿಕ್ಕಗುಂಪುಗಳು ಇರುವುದು ಸಾಮಾನ್ಯ. ಇವು ಸರ್ವಭಕ್ಷಿಗಳು. ಒಂದು ಗಂಡು ಅನೇಕ ಹೆಣ್ಣುಪಕ್ಷಿಗಳೊಂದಿಗೆ ಕೂಡುತ್ತದೆ. ನೆಲದಲ್ಲಿ ಚಿಕ್ಕ ಕುಳಿ ತೋಡಿ ಒಣಎಲೆ ಹಾಗೂ ಹುಲ್ಲಿನ ಅಸ್ತರಿ ಹಾಕಿ ಗೂಡು ಕಟ್ಟುವ ಹೆಣ್ಣು ಒಂದುಬಾರಿಗೆ ಇಡುವ ಸು. 50 ಮೊಟ್ಟೆಗಳಿಗೆ ಕಾವು ಕೊಡುವ, ಸು. 6 ವಾರಗಳ ಬಳಿಕ ಹೊರಬರುವ ಅಸಹಾಯಕ ಮರಿಗಳನ್ನು ಮತ್ತೂ 6 ವಾರ ಕಾಲ ಸಂರಕ್ಷಿಸುವ ಜವಾಬ್ದಾರಿಗಳನ್ನೂ ಗಂಡು ಪಕ್ಷಿಗಳು ನಿಭಾಯಿಸುತ್ತವೆ. (ಎಚ್.ಎನ್.ವೈ.)

**ರೂಪಪರಿವರ್ತನೆ:** ಮೊಟ್ಟೆಯು, ವಿಶೇಷತಃ ಕೀಟಗಳ ಮೊಟ್ಟೆ, ಲಾರ್ವ, ಪ್ಯೂಪ ಇತ್ಯಾದಿ ಹಂತಗಳನ್ನು ದಾಟಿ ಪ್ರೌಢಾವಸ್ಥೆ ತಲುವುವವರೆಗೆ ಬೆಳೆವಣಿಗೆಯಲ್ಲಾಗುವ ಬದಲಾವಣೆಗಳು. ಹೆಚ್ಚಿನ ಕಶೇರುಕಗಳಲ್ಲಿ ಮೊಟ್ಟೆಯಿಂದ ಹೊರಬರುವ ಮರಿ, ಗಾತ್ರ ಮತ್ತು ಲೈಂಗಿಕ ಪ್ರಬುದ್ಧತೆಯನ್ನು ಹೊರತುಪಡಿಸಿ ಉಳಿದೆಲ್ಲ ಗುಣಗಳಲ್ಲಿ ತಂದೆ–ತಾಯಿಯನ್ನು ಹೋಲುತ್ತದೆ. ಆದರೆ ಕೀಟಗಳ ಮರಿ ಅಥವಾ ಡಿಂಬ (ಲಾರ್ವ) ವು ರೂಪುರೇಶೆಗಳಲ್ಲಿ, ಆಹಾರ ಕ್ರಮದಲ್ಲಿ, ಜೀವನಶೈಲಿಯಲ್ಲಿ ತನ್ನ ಪ್ರಭೇದದ ಪ್ರಬುದ್ಧಾವಸ್ಥೆಗಿಂತ ಭಿನ್ನವಾಗಿರುತ್ತದೆ. ಈ ಕಾರಣದಿಂದ ರೂಪಪರಿವರ್ತನೆ ಅವುಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತದೆ.

ಚಿಟ್ಟೆ ಅಥವಾ ಪತಂಗದ ಜೀವನಚಕ್ರದ ಹಂತಗಳು ಪರಿಪೂರ್ಣ ರೂಪ ಪರಿವರ್ತನೆಗೆ ಉತ್ತಮ ಉದಾಹರಣೆ. ಚಿಟ್ಟೆಯು ಪೂರ್ಣ ಬೆಳೆವಣಿಗೆ ಹೊಂದಿ ಹಾರಾಡುವ ಮೊದಲು ಹಲವು ಹಂತಗಳನ್ನು ದಾಟುತ್ತದೆ. ಲೈಂಗಿಕ ಪ್ರಬುದ್ಧತೆ ಹೊಂದಿದ ಹೆಣ್ಣು ಚಿಟ್ಟೆಯು ಎಲೆಗಳ ಮೇಲೆ ಅಥವಾ ಕೆಳಭಾಗದಲ್ಲಿ ನೂರಾರು ಮೊಟ್ಟೆಗಳನ್ನು ಇಡುತ್ತದೆ. ಕೆಲದಿನಗಳ ಬಳಿಕ ಮೊಟ್ಟೆಯಿಂದ ಸಣ್ಣ ಹುಳುವಿನಂತಹ ಮರಿ (ಲಾರ್ವ) ಹೊರಬರುತ್ತದೆ. ಈ ಹೊಟ್ಟೆ ಬಾಕ ಹುಳು ಕಚ್ಚಿ ತಿನ್ನಲು ಅನುಕೂಲವಾದ ಬಾಯಿಯ ರಚನೆಯನ್ನು ಹೊಂದಿದ್ದು, ಮೊಟ್ಟೆಯಿಟ್ಟಿದ್ದ ಎಲೆಯನ್ನೆ ಆಹಾರವಾಗಿ ತಿನ್ನುತ್ತದೆ. ಒಂದು ದಿನದಲ್ಲಿ ಅದು ತನ್ನ ದೇಹದ ಭಾರದಷ್ಟೇ ಎಲೆಗಳನ್ನು ತಿಂದು ಅರಗಿಸಿಕೊಳ್ಳಬಲ್ಲುದು. ಬೆಳೆವಣಿಗೆಯ ಕಾಲದಲ್ಲಿ ಅದು ಹಲವಾರು ಬಾರಿ ತನ್ನ ದೇಹದ ಮೇಲಿನ ಪೊರೆಯನ್ನು ವಿಸರ್ಜಿಸಿ ಹೊಸದನ್ನು ಬೆಳೆಸಿಕೊಳ್ಳುತ್ತದೆ. ಹೀಗೆ 4–5 ಬಾರಿ ಪೊರೆ ಕಳಚಿ, ಪ್ರೌಢ ಹುಳವಾಗುತ್ತದೆ. ದೇಹದಲ್ಲಿ ಬೆಳೆದ ಗ್ರಂಥಿಗಳಿಂದ, ರೇಷ್ಮೆಯಂತಹ ದಾರವನ್ನು ಸ್ರವಿಸಿ, ತನ್ನ ದೇಹದ ಸುತ್ತ ಭದ್ರವಾದ ಕೋಶವನ್ನು ಸೃಷ್ಟಿಸಿಕೊಳ್ಳುತ್ತದೆ. ಅದರ ಒಳಗೆ ಹುದುಗಿಕೊಂಡು, ಹುಳು ವಿಶ್ರಾಂತಿ ಪಡೆದು. ಅನಂತರ ಪ್ಯೂಪ ಅಥವಾ ಕೋಶಾವಸ್ಥೆ ಸೇರುತ್ತದೆ. ಮೇಲ್ನೋಟಕ್ಕೆ ನಿಶ್ಚಲವಾಗಿ ಕಂಡರೂ, ಕೋಶಾವಸ್ಥೆಯ ಪ್ರಾಣಿಯ ದೇಹದ ಒಳಗೆ ಮಹತ್ತರವಾದ ಜೈವಿಕ ಬದಲಾವಣೆಗಳು ಆಗುತ್ತವೆ. ಹರಿದಾಡುವ ಕೀಟಕ್ಕೆ ಬೇಕಿದ್ದ ಅಂಗಗಳು ನಶಿಸಿ, ಹಾರಾಡುವ ಚಿಟ್ಟೆಗೆ ಅಗತ್ಯವಾದ ರಚನೆಗಳು ಬೆಳೆವಣಿಗೆ ಹೊಂದುತ್ತವೆ. ಅನಂತರ ಕೋಶದಿಂದ ಚಿಟ್ಟೆ ಹೊರಬರುತ್ತದೆ.

ಕಪ್ಪೆಯಂತಹ ಉಭಯಜೀವಿಗಳಲ್ಲಿ ಒಂದು ರೀತಿಯ ಅಪರಿಪೂರ್ಣ ರೂಪಪರಿವರ್ತನೆ ಇದೆ. ಮೊಟ್ಟೆಯಿಂದ ಹೊರಬರುವ ಮೀನಿನಾಕಾರದ ಮರಿಯೇ ಗೊದಮೊಟ್ಟೆ. ಇದು ಸಸ್ಯಾಹಾರಿ. ತನ್ನ ಹೊರಕಿವಿರುಗಳಿಂದ ಉಸಿರಾಡುತ್ತದೆ. ಬಾಲ ಮತ್ತು ಈಜುರೆಕ್ಕೆಗಳ ಸಹಾಯದಿಂದ ಮೀನಿನಂತೆ ಈಜುತ್ತದೆ. ಕಾಲಕ್ರಮೇಣ ಈಜುರೆಕ್ಕೆಗಳು ನಶಿಸಿ, ಕಾಲುಗಳು ಮೂಡುತ್ತವೆ. ಕಿವಿರಿಗೆ ಬದಲಾಗಿ ಶ್ವಾಸಕೋಶದ ಮೂಲಕ ಉಸಿರಾಡುತ್ತದೆ. ಕರುಳು ಮತ್ತು ಬಾಯಿಯ ರಚನೆ ಬದಲಾಗಿ ಮಾಂಸಾಹಾರಕ್ಕೆ ಬೇಕಾದ ಜೀರ್ಣಾಂಗವ್ಯೂಹ ಬೆಳೆಯುತ್ತದೆ. ಬಾಲ ನಶಿಸಿ, ಜಿಗಿಯುವ ಕಪ್ಪೆ ಅವತರಿಸುತ್ತದೆ. ಇಲ್ಲಿ ಕೋಶಾವಸ್ಥೆ ಇಲ್ಲದ ಕಾರಣ ಇದೊಂದು ರೀತಿಯ ಅಪರಿಪೂರ್ಣ ರೂಪಪರಿವರ್ತನೆ ಎನ್ನಬಹುದು.

ಅನೇಕ ಬಗೆಯ ಕೀಟಗಳಲ್ಲಿ, ಮೃದ್ವಂಗಿಗಳಲ್ಲಿ, ಕಂಟಕಚರ್ಮಿಗಳಲ್ಲಿ ಕೂಡಾ ವಿವಿಧ ರೀತಿಯ ರೂಪಪರಿವರ್ತನೆ ಇದೆ. ಹೆಚ್ಚಿನ ಪ್ರಾಣಿಗಳಲ್ಲಿ ರೂಪಪರಿವರ್ತನೆಗೆ ಹಲವು ಗ್ರಂಥಿಗಳ ಅಂತಃಸ್ರಾವದ ಅವಶ್ಯಕತೆ ಇದೆ. ಕೀಟಗಳ ಮೆದುಳಿನ ಕೆಲವು ಕೋಶಗಳು ಸ್ರವಿಸುವ ಮೆದುಳು ಹಾರ್ಮೋನ್ ರೂಪ ಪರಿವರ್ತನೆಯನ್ನು ಆರಂಭಿಸುತ್ತದೆ. ಇದರೊಂದಿಗೆ ಎದೆಯ ಬಾಗದ ಪ್ರೊಥೊರ್ಯಾಸಿಕ್ ಗ್ರಂಥಿಗಳ ಸ್ರಾವ ಹಾಗೂ ಜ್ಯುವೆನೈಲ್ ಹಾರ್ಮೋನು ಕೂಡಾ ರೂಪಪರಿವರ್ತನೆಯಲ್ಲಿ ಪಾಲ್ಗೊಳ್ಳುತ್ತವೆ. ಮೇಲ್ವರ್ಗದ ಪ್ರಾಣಿಗಳಲ್ಲಿ ಥೈರಾಯ್ಡ್ ಗ್ರಂಥಿಯು ಸ್ರವಿಸುವ ಆಯೋಡಿನ್‍ಯುಕ್ತ ಥೈರಾಕ್ಸಿನ್ ಸ್ರಾವವು ರೂಪಪರಿವರ್ತನೆಯನ್ನು ನಿಯಂತ್ರಿಸುತ್ತದೆ. ಗೊದಮೊಟ್ಟೆ ಆಹಾರದಲ್ಲಿನ ಅಯೋಡಿನ್ ಅಂಶವನ್ನು ತೆಗೆದುಹಾಕಿದರೆ ಅದು ಪ್ರೌಢಕಪ್ಪೆಯಾಗಿ ಪರಿವರ್ತನೆ ಹೊಂದಲಾರದು. ಥೈರಾಯ್ಡ್ ಗ್ರಂಥಿಯನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಿದಾಗಲೂ ಇದೇ ಪರಿಣಾಮ ಉಂಟಾಗುತ್ತದೆ. ಇದಕ್ಕೆ ವಿರುದ್ಧವಾಗಿ ಆಹಾರದಲ್ಲಿ ಹೆಚ್ಚಿನ ಅಯೋಡಿನ್ ಅಂಶವು ರೂಪಪರಿವರ್ತನೆಯನ್ನು ವೇಗಗೊಳಿಸಬಲ್ಲುದು. (ಟಿ.ಆರ್.ಎಸ್.)

**ರೇಬಿಸ್:** ಕೆಲವೊಂದು ಸ್ತನಿಗಳಲ್ಲಿ, ಉದಾ: ನಾಯಿ, ಬೆಕ್ಕು, ತೋಳಗಳಲ್ಲಿ ಕಂಡುಬರುವ ಒಂದು ಬಗೆಯ ರೋಗ. ಇದು ವೈರಸ್‍ಕ್ರಿಮಿಯಿಂದ ಉಂಟಾಗುತ್ತದೆ. ಇದನ್ನು ಹುಚ್ಚುನಾಯಿ ರೋಗ ಎನ್ನುವರು. ಇದು ಮನುಷ್ಯರಿಗೂ ವ್ಯಾಪಿಸುತ್ತದೆ. ಇದು ಪ್ರಾಣಿಗಳ ಜೊಲ್ಲಿನ ಸೋಂಕಿನಿಂದ ಹರಡುತ್ತದೆ. ರೋಗಪೀಡಿತ ಪ್ರಾಣಿ ಮನುಷ್ಯನನ್ನು ಕಡಿದಾಗ ಅದರ ಜೊಲ್ಲಿನಲ್ಲಿರುವ ವೈರಾಣುಗಳು ಗಾಯದ ಮೂಲಕ ಮನುಷ್ಯನ ದೇಹವನ್ನು ಪ್ರವೇಶಿಸುತ್ತವೆ. ನಾಯಿ ಬೆಕ್ಕುಗಳಲ್ಲಿ, ವನ್ಯ ಪ್ರಾಣಿಗಳಾದ ಚಿರತೆ, ಕಿರುಬ, ಕೋತಿ, ಮುಂಗಸಿ, ಒಂಟೆ, ಕುದುರೆ, ಹೇಸರಗತ್ತೆ, ಇಲಿಗಳಲ್ಲಿ ಈ ವೈರಸ್‍ನ ಸೋಂಕು ಇರುತ್ತದೆ. ದೇಹದಲ್ಲಿರುವ ರೇಬಿಸ್ ವೈರಸ್ ಪಕ್ವಸ್ಥಿತಿಗೆ ಬರಲು ೫–೭ ದಿವಸಗಳಾಗುತ್ತವೆ. ರೋಗಪೀಡಿತರಲ್ಲಿ ೧೦ ದಿವಸಗಳಿಂದ ೨ ವರ್ಷಗಳತನಕ (ಸಾಮಾನ್ಯವಾಗಿ ೩–೭ ವಾರಗಳಲ್ಲಿ) ಈ ವೈರಸುಗಳಿದ್ದು, ಇದ್ದು ಪಕ್ವ ಗೊಂಡು ರೋಗವನ್ನು ಉಲ್ಬಣಗೊಳಿಸುತ್ತವೆ. ವೈರಾಣುಗಳು ನರಗಳ ಮೂಲಕ ಮಿದುಳು ಸೇರಿ ಅಲ್ಲಿ ವೃದ್ಧಿಯಾಗುತ್ತವೆ. ಬಳಿಕ ಅಲ್ಲಿಂದ ಬಹಿರ್ವಾಹಿ ನರಗಳ ಮೂಲಕ ಲಾಲಾಗ್ರಂಥಿಗಳನ್ನು ಸೇರುತ್ತವೆ.

ರೋಗಲಕ್ಷಣಗಳು: ಪ್ರಾಣಿ ಕಡಿದ ೧–೨ ತಿಂಗಳುಗಳಲ್ಲಿ ರೋಗದ ಚಿಹ್ನೆಗಳು ಮೂಡುತ್ತವೆ. ಹುಚ್ಚುನಾಯಿ ಕಡಿತ ಅತಿ ಅಪಾಯಕಾರಿ. ಇದರ ಸೋಂಕಿನಿಂದ ರೋಗಪೀಡಿತ ಮನುಷ್ಯರಲ್ಲಿ ಅಥವಾ ಪ್ರಾಣಿಗಳಲ್ಲಿ ಕಂಡುಬರುವ ಮುಖ್ಯ ಲಕ್ಷಣಗಳಿವು. ಕಡಿದ ಜಾಗದಲ್ಲಿ ನೋವು ಮತ್ತು ನರಗಳ ಅದಿರಿಕೆ, ನೀರು ಕುಡಿಯಲು ಪ್ರಯತ್ನಿಸಿದಾಗ ಗಂಟಲ ನಾಳದಲ್ಲಿ ನೋವು ಮತ್ತು ಮಾಂಸಖಂಡಗಳ ಸಂಕೋಚನ. ಇದರಿಂದ ರೋಗಿಯಲ್ಲಿ ಜಲಭಯ ಮತ್ತು ವಾಯುಭಯ ಕಂಡುಬರುತ್ತವೆ. ಚಿತ್ತಚಾಂಚಲ್ಯ, ಹದಗೆಟ್ಟ ವರ್ತನೆ, ಅಸ್ಥಿರತೆ ಮುಂತಾದವು ಬಾಧಿಸತೊಡಗುತ್ತವೆ. ಈ ಲಕ್ಷಣಗಳೊಡನೆ ಅಪಸ್ಮಾರ ವ್ಯಾಧಿಯು ಬರಬಹುದು. ಕತ್ತಿನ ಹಿಂಭಾಗದಲ್ಲಿ ಊತ ಕಾಣಿಸಿಕೊಳ್ಳುವುದರಿಂದ ವ್ಯಾಧಿ, ಬಲು ತ್ವರೆಯಿಂದ ಉಲ್ಬಣಿಸುತ್ತದೆ. ಹೆಚ್ಚು ಗಟ್ಟಿ ಮತ್ತು ಅಂಟಂಟಾದ ಜೊಲ್ಲು ಉತ್ಪತ್ತಿಯಾಗುತ್ತದೆ.

ರೇಬಿಸ್ ರೋಗಕ್ಕೆ ತುತ್ತಾದವರ ಲಕ್ಷಣಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಕಡಿದ ಪ್ರಾಣಿಯ ಆರೋಗ್ಯದ ಬಗ್ಗೆಯು ಅತ್ಯಂತ ಎಚ್ಚರ ವಹಿಸಬೇಕು. ರೋಗ ಪೀಡಿತ ಪ್ರಾಣಿ ಸತ್ತಿರಲಿ ಅಥವಾ ಬದುಕಿರಲಿ, ಅದರಲ್ಲಿ ರೇಬಿಸ್ ವೈರಾಣುಗಳು ಇರುವ ಬಗ್ಗೆ ಪರೀಕ್ಷಿಸಿ, ಖಚಿತಪಡಿಸಿಕೊಳ್ಳಬೇಕು. ಈ ಪ್ರಾಣಿಗಳ ಮಿದುಳನ್ನು ಪ್ರತಿ ದೀಪ್ತಿರೋಧ ವಸ್ತು ತಂತ್ರ (ಫ್ಲೂರೋಸೆಂಟ್ ಆ್ಯಂಟಿಬಾಡಿ ಟೆಕ್ನೀಕ್)ದಿಂದ ವ್ಯಾಧಿ ಪರೀಕ್ಷೆಯನ್ನು ಮಾಡಬಹುದು.

ರೋಗ ತಡೆಗಟ್ಟುವಿಕೆ: ಸಾಕು ಪ್ರಾಣಿಗಳಾದ ನಾಯಿ, ಬೆಕ್ಕುಗಳು ಈ ರೋಗಕ್ಕೆ ಬಲಿಯಾಗದಂತೆ ನಿರ್ದಿಷ್ಟ ಅವಧಿಗಳಲ್ಲಿ ಪ್ರತಿರೋಧದ ಚುಚ್ಚುಮದ್ದು ಕೊಡಿಸಿ ರಕ್ಷಿಸ ಬೇಕು. ಈ ಪ್ರಾಣಿಗಳು ಮನುಷ್ಯನನ್ನು ಕಡಿದು ಗಾಯ ಮಾಡದಂತೆ ನೋಡಿಕೊಳ್ಳಬೇಕು. ಅಕಸ್ಮಾತ್ತಾಗಿ ಈ ಪ್ರಾಣಿಗಳು ಕಡಿದಾಗ, ಕಚ್ಚಿಸಿ ಕೊಂಡ ವ್ಯಕ್ತಿಗೆ ಕೆಲವು ರಕ್ಷಣ ಕ್ರಮಗಳನ್ನು ಪಾಲಿಸಲು ಸೂಚಿಸಬೇಕು.

೧. ಪ್ರಾಣಿ ಕಡಿದ ಅಥವಾ ಪರಚಿದ ಎಡೆಗಳಲ್ಲಿರುವ ಕಲ್ಮಷಗಳನ್ನು ಚೆನ್ನಾಗಿ ತೊಳೆದು ಶುಚಿಗೊಳಿಸಬೇಕು. ತೊಳೆದ ಗಾಯದ ಸುತ್ತ ಕಾರ್ಬಾಲಿಕ್ ಆಮ್ಲ ಹಚ್ಚಿ ಅನಂತರ ಅಬ್ಸೊಲ್ಯೂಟ್ ಸ್ಪಿರಿಟ್‍ನಿಂದ ಹೆಚ್ಚಿನ ಕಾರ್ಬಾಲಿಕ್ ಆಮ್ಲವನ್ನು ಲೇಪಿಸಬೇಕು. ಈ ಆಮ್ಲದ ಬದಲಾಗಿ ಅಯೋಡಿನ್‍ನ ಉಪಯೋಗ ಹೆಚ್ಚು ಉಪಯುಕ್ತ. ರೇಬಿಸ್ ನಿರೋಧಕ ರಕ್ತ ಲಸಿಕೆಯನ್ನು (ಆ್ಯಂಟಿಸೀರಮ್) ಕೊಡಬೇಕು. ಜೊತೆಗೆ ಕುದುರೆ ರಕ್ತ ಲಸಿಕೆಯನ್ನು ಕೊಡಬೇಕು. ಪ್ರಾಣಿಗಳಿಂದ ಉಂಟಾದ ಗಾಯಗಳನ್ನು ಹೊಲಿಗೆ ಹಾಕಿ ಮುಚ್ಚಬಾರದು.

೨. ಕಡಿದ ನಾಯಿ, ಬೆಕ್ಕು ಮುಂತಾದ ಪ್ರಾಣಿಗಳನ್ನು ಪತ್ತೆ ಮಾಡಿ, ಪಶುವೈದ್ಯರಿಂದ ಪರೀಕ್ಷೆ ಮಾಡಿಸಬೇಕು. ಅವುಗಳ‌ನ್ನು ೭–೧೦ ದಿವಸ ಕಾಲ ಚೆನ್ನಾಗಿ ಅವಲೋಕಿಸಬೇಕು. ತೋಳ, ನರಿ ಮುಂತಾದ ಕ್ರೂರ ಪ್ರಾಣಿಗಳಾಗಿದ್ದರೆ, ಅವುಗಳ ಮಿದುಳನ್ನು ರೇಬಿಸ್ ವೈರಸ್ ಪರೀಕ್ಷೆಗೆ ಒಳಪಡಿಸಬೇಕು. ಸಾಕು ಪ್ರಾಣಿಯಾಗಿದ್ದರೆ ಅದನ್ನು ೧೦ ದಿವಸ ಕಾಲ ತಪಾಸಣೆ ಮಾಡಬೇಕು. ಅಷ್ಟರಲ್ಲಿ ಅದು ಸತ್ತರೆ ರೋಗಿ ಪೂರ್ಣಾವಧಿ ಚುಚ್ಚುಮದ್ದು ತೆಗೆದುಕೊಳ್ಳಲೇಬೇಕು. (ಎಸ್.ಕೆ.ಎಚ್.)

**ರೇ ಮೀನುಗಳು:** ಕಾಂಡ್ರಿಕ್ತಿಯಿಸ್ ವರ್ಗ, ಎಲ್ಯಾಸ್ಮೊಬ್ರಾಂಕಿ ಉಪವರ್ಗದ ಮೃದ್ವಸ್ಥಿ ಮೀನುಗಳ ಪೈಕಿ ಒಂದು ಗುಂಪಿನ ಮೀನುಗಳಿಗಿರುವ ಸರ್ವನಾಮ. ಸುಮಾರು 425 ಪ್ರಭೇದಗಳಿವೆ. ಉದರಭಾಗದತ್ತ ಬೆನ್ನಿನ ಭಾಗವನ್ನು ಅದುಮಿದಂತೆ ತೋರುವ ಅಗಲವಾದ ಚಪ್ಪಟೆ ದೇಹ, ಮುಂಡದ ಇಕ್ಕೆಲಗಳಲ್ಲಿ ಬಾಲದಿಂದ ತಲೆಯವರೆಗೆ ವಿಸ್ತರಿಸಿರುವ ಎದೆಭಾಗದ (ಪೆಕ್ಟೊರಲ್) ದೊಡ್ಡ ಈಜುರೆಕ್ಕೆಗಳು ಮತ್ತು ವಜ್ರಾಕೃತಿಯನ್ನು ಸರಿಸುಮಾರಾಗಿ ಹೋಲುವ ದೇಹವಿನ್ಯಾಸ–ಇವು ರೇ ಮೀನುಗಳ ವೈಶಿಷ್ಟ್ಯಗಳು. ಪ್ರತಿಯೊಂದು ಪ್ರಭೇದಕ್ಕೂ ಅದರದೇ ಆದ ವೈಶಿಷ್ಟ್ಯವಿದೆ. ದೊಡ್ಡ ಸ್ಪೈರಕಲ್‌ಗಳು (ತಿಮಿಂಗಿಲಗಳ 'ಊದುರಂಧ್ರ'ದಂಥ ರಚನೆ) ಮತ್ತು ಕಣ್ಣುಗಳು ಬೆನ್ನಿನ ಪಾರ್ಶ್ವದಲ್ಲೂ ಕಿರಿದಾದ ಬಾಯಿ ಮತ್ತು ಕಿವಿರು ಸೀಳಿಕೆಗಳು ಉದರಪಾರ್ಶ್ವದಲ್ಲೂ ಇವೆ. ವಸ್ತಿಕುಹರದ (ಪೆಲ್ವಿಕ್) ರೆಕ್ಕೆಗಳು ಸಾಪೇಕ್ಷವಾಗಿ ಚಿಕ್ಕವು. ಗುದದ್ವಾರ ಸಮೀಪದ (ಏನಲ್) ರೆಕ್ಕೆಗಳು ಇಲ್ಲ. ಬಾಲದ ಭಾಗ ಸಪೂರ ಚಾವಟಿಯಂತಿದೆ. ಎದೆಭಾಗದ ಈಜುರೆಕ್ಕೆಗಳ ನೆರವಿನಿಂದ ನಿಧಾನವಾಗಿ ಚಲಿಸುವ ಇವಕ್ಕೆ ಬಾಲವೇ ಚುಕ್ಕಾಣಿ. ಮೃದ್ವಂಗಿ ಮತ್ತು ಕಠಿಣ ಚರ್ಮಿಗಳು ಆಹಾರ. ಈ ಆಹಾರ ಸೇವನೆಗೆ ಅಗತ್ಯವಾದ ಮೊಂಡುಹಲ್ಲುಗಳು ಬಾಯಿಯಲ್ಲಿವೆ. ಬಣ್ಣ ಬದಲಿಸಿ ಕಪಟರೂಪ ಧರಿಸುತ್ತವೆ. ಆಂತರಿಕ ನಿಷೇಚನೆಯ ಮೂಲಕ ಸಂತಾನೋತ್ಪತ್ತಿ. ಇದಕ್ಕೆ ಅಗತ್ಯವಾದ ಸಂರಚನೆ ಗಂಡು ಮೀನುಗಳ ವಸ್ತಿಕುಹರದ ರೆಕ್ಕೆಗಳಲ್ಲಿವೆ. ಮೊಟ್ಟೆ ಇಡುವ ಮತ್ತು ಹೆಣ್ಣಿನ ದೇಹದಲ್ಲಿಯೇ ಮೊಟ್ಟೆಯನ್ನು ಮರಿಮಾಡುವ – ಈ ಎರಡೂ ಬಗೆಯ ಪ್ರಭೇದಗಳಿವೆ.

ಅನೇಕ ರೇ ಮೀನು ಪ್ರಭೇದಗಳ ವಾಸ ತೆಟ್ಟ ಕಡಲ ಸಾಗರ ಭಾಗದಲ್ಲಿ. ಆದರೂ 3000 ಮೀ ಆಳದಲ್ಲಿ ವಾಸಿಸುವವೂ ಇವೆ. ಅಮೆಜಾನ್ ನದಿಯ ಸಿಹಿನೀರಿನಲ್ಲಿ ವಾಸಿಸುವ ಒಂದು ಜಾತಿಯೂ ಇದೆ. ಸಾಗರ ತಳದ ಮಣ್ಣಿನಲ್ಲಿ ಅಡಗಿದ್ದು ಸಮೀಪಿಸಿದ ಭೋಜನೀಯ ಜೀವಿಗಳನ್ನು ಬಲಿ ತೆಗೆದುಕೊಳ್ಳುವ ಪ್ರಭೇದಗಳ ಸಂಖ್ಯೆ ಹೆಚ್ಚು.

ಸಾಗರದ ಮೇಲ್ಭಾಗದಲ್ಲಿ ವಾಸಿಸುವ ಗ್ರೇಟ್ ಮ್ಯಾಂಟ ರೇ(ಮಾಂಟಾ ಬೈರಾಸ್ಟ್ರಿಕಾ), ಬಾಲದ ತುದಿಯ ಚುಚ್ಚುಮುಳ್ಳಿನ ಮೂಲಕ ಶತ್ರುದೇಹಕ್ಕೆ ಮಾರಕ ವಿಷ ಹುಗಿಸಬಲ್ಲ ಸ್ಟಿಂಗ್ ರೇ, ತೀವ್ರ ವಿದ್ಯುದಾಘಾತ ನೀಡುವ ಟಾರ್ಪೆಡೊ ರೇ(ಟಾರ್ಪೆಡೊ, ನಾರ್ಸೈನ್ ಜಾತಿಯವು) ಮಾನವನಿಗೆ ಹೆಚ್ಚು ಪರಿಚಿತ. ಕಡಿಮೆ ಚಪ್ಪಟೆ ವಿನ್ಯಾಸದ ಗಿಟಾರ್ ಮೀನು (ರೈನೊಬ್ಯಾಟಸ್) ಮತ್ತು ಗರಗಸ ಮೀನು (ಪ್ರಿಸ್ಟಿಸ್ ಪೆಕ್ಟಿನೇಟಸ್) ರೇ ಮೀನುಗಳೇ.

(ಪಿ.ಆರ್.ಎನ್.)

**ರೇಷ್ಮೆ (ರೇಷ್ಮೆ ಕೃಷಿ):** ಕೆಲವು ನಿರ್ದಿಷ್ಟ ಕೀಟಗಳ ಲಾರ್ವಗಳು ಕೋಶಾವಸ್ಥೆ ಪ್ರವೇಶಕ್ಕೆ ಮುನ್ನ ಕೋಶಾವರಣ (ಕಕೂನ್) ನಿರ್ಮಿಸಲು ಉತ್ಪಾದಿಸುವ ನಯವಾದ ಎಳೆ. ಆಂಗ್ಲ ಭಾಷೆಯಲ್ಲಿ ಸಿಲ್ಕ್ ಎನ್ನುವರು. ಲೆಪಿಡಾಪ್ಟರ ಗಣದ ಬಾಂಬಿಸಿಡೆ ಕುಟುಂಬದ, ಬಾಂಬಿಕ್ಸ್ ಮೋರಿ ಪತಂಗದ ಲಾರ್ವಗಳು ಉತ್ಪಾದಿಸುವ ಹೊಳಮಳ್ಳ ತಂತು. ಇದರಿಂದ ತಯಾರಿಸುವ ದಾರವೇ ಸಿಲ್ಕ್. ಈ ಲಾರ್ವದ ರೂಢ ನಾಮವೇ ರೇಷ್ಮೆಹುಳು. ರೇಷ್ಮೆಹುಳು ಸಾಕಾಣಿಕೆಯಿಂದ ಮೊದಲ್ಗೊಂಡು ವಸ್ತ್ರ ತಯಾರಿಗೆ ಬೇಕಾದ ರೇಷ್ಮೆ ದಾರ ಉತ್ಪಾದನೆಯವರೆಗಿನ ಒಟ್ಟಾರೆ ಪ್ರಕ್ರಿಯೆಯೇ ರೇಷ್ಮೆಕೃಷಿ (ಸೆರಿಕಲ್ಚರ್). ಇದರಲ್ಲಿ ಹಿಪ್ಪುನೇರಳೆ ಕೃಷಿ, ಮತ್ತು ರೇಷ್ಮೆ ಸಾಕಾಣೆ ಇವೆ.

ಫೈಬ್ರಾಯಿನ್ ಪ್ರೊಟೀನ್ ಮತ್ತು ಸೆರಿಸಿನ್ ಎಂಬ ಗೋಂದಿನಂಥ ಪ್ರೊಟೀನ್‌ಗಳಿಂದ ರೂಪುಗೊಂಡ ನೈಸರ್ಗಿಕ ಪ್ರೊಟೀನ್ ತಂತುವೇ ರೇಷ್ಮೆ. ಬಲು ನಾಜೂಕಾದ ಈ ಎಳೆಗಳು ೩೦೦–೯೦೦ ಮೀ ಉದ್ದವಿರುತ್ತವೆ. ಸ್ವಾಭಾವಿಕ ಹೊಳಪು ಮತ್ತು ಬಿಳಿ ಅಥವಾ ಕೆನೆಬಣ್ಣದ ಕಾಂತಿ ಇವುಗಳ ವೈಶಿಷ್ಟ್ಯ. ೨.೪–೫.೧ ಗ್ರಾಂ/ಡೆನಿಯರ್ ನಾಜೂಕಿನ ಅತ್ಯಂತ ಬಲಯುತ ತಂತುಗಳ ಪೈಕಿ ರೇಷ್ಮೆಯು ಒಂದು. ಒಣಗಿದ್ದಾಗ ಲಂಬನೆಯ (ಎಲಾಂಗೇಶನ್, ಎಲಾಸ್ಟಿಕ್ ರಿಕವರಿ) ವ್ಯಾಪ್ತಿ ಶೇ. ೧೦–೨೫, ಒದ್ದೆಯಾಗಿದ್ದಾಗ ಶೇ. ೩೩–೩೫. ವಸ್ತ್ರ ನೇಯುವ ಮುನ್ನ ಅಥವಾ ಅನಂತರ ರಂಗು ಹಾಕಬಹುದು.

ಒಂದು ವರ್ಷದಲ್ಲಿ ೧, ೨ ಅಥವಾ ಹೆಚ್ಚು ಜೀವನಚಕ್ರ ಪೂರೈಸುವ ಪತಂಗ ತಳಿಗಳಿವೆ. ಇವಕ್ಕೆ ಕ್ರಮವಾಗಿ ಮಾನೋವೋಲ್ಟೈನ್, (ಎಕತಳಿ), ಬೈವೋಲ್ಟೈನ್ (ದ್ವಿತಳಿ) ಮತ್ತು ಮಲ್ಟೀವೋಲ್ಟೈನ್ (ಬಹುತಳಿ)ಗಳೆಂದು ಹೆಸರು. ಪತಂಗ ಪ್ರಭೇದ, ತಳಿಯ ಬಗೆ, ಲಾರ್ವಾಗಳ ಆಹಾರದ ಗುಣ ಮುಂತಾದುವನ್ನು ರೇಷ್ಮೆಯ ಗುಣ ಅವಲಂಬಿಸಿದೆ. ಪತಂಗ ಪ್ರಭೇದವನ್ನಾಧರಿಸಿ ರೇಷ್ಮೆಯನ್ನು ಹೆಸರಿಸುವ ಪದ್ಧತಿ ಇದೆ. ಬಾಂಬಿಕ್ಸ್ ಜಾತಿಯ ಲಾರ್ವಾಗಳ ಆಹಾರ ಹಿಪ್ಪನೇರಳೆ ಎಲೆ. ಬೇರೆ ಸಸ್ಯದ ಎಲೆಗಳನ್ನು ತಿನ್ನುವ ಜಾತಿಗಳಿವೆ. ಉದಾ: ಆಂತೀರಿಯಾ ಪರ್ನಿಯಾ, ಆ. ಮೈಲಿಟ್ಟಾ, ಆ. ರಾಯೆಲಿ (ಟಸ್ಸಾರ ರೇಷ್ಮೆ), ಆ. ಅಸ್ಸಾಮ (ಚಿನ್ನಹಳದಿ ರೇಷ್ಮೆ), ಸಾಮಿಯ ವಾಕೆರಿ (ಒರಟು ದರ್ಜೆಯ ರೇಷ್ಮೆ), ಫಿಲೊಸಾಮಿಯ ರಿಸಿನಿ (ಎರಿ ರೇಷ್ಮೆ). ಇವು ಕಾಡಿನಲ್ಲಿ ದೊರೆಯುವ ಅನೇಕ ಜಾತಿಯ ಮರಗಳ ಎಲೆಗಳನ್ನು ತಿಂದು ರೇಷ್ಮೆ ಗೂಡು ಕಟ್ಟುತ್ತವೆ. ಇವು ಉತ್ಪಾದಿಸುವ ರೇಷ್ಮೆ ತಂಬಾ ಒರಟಾಗಿರುತ್ತದೆ. ಗುಣಮಟ್ಟದಲ್ಲಿ ಬಾಂಬಿಕ್ಸ್ ಮರಿ ಉತ್ಪಾದಿಸುವ ರೇಷ್ಮೆಗಿಂತ ಕೆಳದರ್ಜೆಯದು.

ರೇಷ್ಮೆಯ ಇತಿಹಾಸ: ಪ್ರಾಚೀನ ಮತ್ತು ಅರ್ವಾಚೀನ ತಂತ್ರಗಳ ಸಂಲಯನದಿಂದ ತಯಾರಾಗುತ್ತಿರುವ ಇಂದಿನ ರೇಷ್ಮೆಗೆ ಸು. ೩೦೦೦ ವರ್ಷಗಳ ರೋಚಕ ಇತಿಹಾಸವಿದೆ. ಸು. ಕ್ರಿ. ಪೂ. ೨೭೦೦ ದಲ್ಲಿ ಚೀನಾದಲ್ಲಿ ರೇಷ್ಮೆಯ ಆವಿಷ್ಕಾರವಾದ ಬಗ್ಗೆ ಪುರಾವೆಗಳಿವೆ. ಚೀನಾದ ಖ್ಯಾತ ಚಕ್ರವರ್ತಿ ಹುವಾಂಗ್ ತೈ ಎಂಬಾತನ ಪತ್ನಿ ಸಿ–ಲಿಂಗ್–ಚೈಗೆ ರೇಷ್ಮೆಹುಳುವನ್ನು ಅದು ಉತ್ಪಾದಿಸುವ ದಾರವನ್ನು ಆವಿಷ್ಕರಿಸಿದ ಖ್ಯಾತಿ ಸಲ್ಲುತ್ತದೆ. ರೇಷ್ಮೆಕೃಷಿ ಹಾಗೂ ರೇಷ್ಮೆ ವಸ್ತ್ರ ತಯಾರಿಕೆಯ ವಿಧಾನಗಳ ರೂವಾರಿ ಆಕೆಯೇ ಎನ್ನಲಾಗಿದೆ. ರೇಷ್ಮೆಹುಳುಗಳ ದೇವತೆ ಎಂದು ಆಕೆಯನ್ನು ಚೀನೀಯರು ಪರಿಗಣಿಸುತ್ತಾರೆ. ಜಗತ್ತಿನಾದ್ಯಂತ ಬಲು ಬೇಡಿಕೆ ಇದ್ದ ಅಮೂಲ್ಯ ಪದಾರ್ಥವಾಗಿದ್ದರೂ, ರೇಷ್ಮೆಕೃಷಿಯ ವಿಧಿವಿಧಾನಗಳನ್ನು ಚೀನೀಯರು ಅತಿ ಗೋಪ್ಯವಾಗಿರಿಸಿ ಸು. ೩ನೆ ಶತಮಾನದವರೆಗೂ ರೇಷ್ಮೆಯ ಉತ್ಪಾದನೆ ಹಾಗೂ ಮಾರಾಟದ ಮೇಲೆ ಏಕಸ್ವಾಮ್ಯ ಸಾಧಿಸಿದ್ದರು. ಮೆಡಿಟರೇನಿಯನ್ ಸಾಗರದಿಂದ ಪೂರ್ವ ಚೀನಾದವರೆಗಿನ ಹೆದ್ದಾರಿಯನ್ನು ರೇಷ್ಮೆ ದಾರಿ (ಸಿಲ್ಕ್ ರೂಟ್) ಎಂದು ಹೆಸರಿಸಲು ಇದೇ ಕಾರಣ. ಆ ಶತಮಾನದ ಆದಿ ಭಾಗದಲ್ಲಿ ರೇಷ್ಮೆಕೃಷಿ ಕೊರಿಯದ ಮೂಲಕ ಜಪಾನನ್ನು ತಲಪಿತು. ಅನಂತರ ಭಾರತವನ್ನು ಪ್ರವೇಶಿಸಿತು. ಚೀನಿ ರಾಜಕುಮಾರಿಯೊಬ್ಬಳು ಹಿಪ್ಪನೇರಳೆ ಅಥವಾ ಉಪ್ಪುನೇರಳೆ (ಮಲ್‌ಬೆರಿ) ಗಿಡದ ಬೀಜ ಮತ್ತು ರೇಷ್ಮೆಹುಳುವಿನ ಮೊಟ್ಟೆಯನ್ನು ತನ್ನ ಮುಂಡಾಸಿನಲ್ಲಿ ಅಡಗಿಸಿ ಭಾರತಕ್ಕೆ ತಂದಳು ಎಂದು ೫೨೨ರಲ್ಲಿ ಪರ್ಷಿಯನ್ ಸನ್ಯಾಸಿಗಳು ಮೊಟ್ಟೆಗಳನ್ನು ರೇಷ್ಮೆಕೃಷಿ ರಹಸ್ಯವನ್ನು ರೋಮನ್ ಸಾಮ್ರಾಜ್ಯಕ್ಕೆ ಚೀನಾದಿಂದ ಕದ್ದೊಯ್ದರು ಎಂದು ಪುರಾವೆಗಳಿವೆ. ಅನಂತರ ಯುರೋಪಿನ ಅನೇಕ ರಾಷ್ಟ್ರಗಳಿಗೆ ಹರಡಿದ ರೇಷ್ಮೆಕೃಷಿಯ ವಿಧಿವಿಧಾನಗಳಲ್ಲಿ ಅನೇಕ ಸುಧಾರಣೆಗಳಾಗಿವೆ. ಇಷ್ಟಾದರೂ ಅಮೆರಿಕ ಈ ಕೃಷಿಯಲ್ಲಿ ಸಾಪೇಕ್ಷವಾಗಿ ಯಶಸ್ವಿಯಾಗದಿರುವುದು ವಿಶೇಷ.

ರೇಷ್ಮೆಯ ಬಗ್ಗೆ ಪ್ರಾಚೀನ ಕಾಲದಿಂದಲೂ ಕುತೂಹಲ, ಆಕರ್ಷಣೆಗಳಿದ್ದುವು. ಕ್ರೈಸ್ತರ ಹಳೆಯ ಒಡಂಬಡಿಕೆಯ (ಓಲ್ಡ್ ಟೆಸ್ಟಮೆಂಟ್) ಇಜೀಕ್ ಪುಸ್ತಕದಲ್ಲಿ ರೇಷ್ಮೆಯ ಉಲ್ಲೇಖವಿದೆ. ಅರಿಸ್ಟಾಟಲ್ ಹಿಸ್ಟೋರಿಯ ಅನಿಮಾಲಿಯಮ್ ಕೃತಿಯಲ್ಲಿ ರೇಷ್ಮೆಯ ವಿವರ ನೀಡಿದ್ದಾನೆ. ಕೋಸ್ ದ್ವೀಪದ ಪ್ರಾಚೀನ ಅವಶೇಷಗಳಲ್ಲಿ ಆ ದ್ವೀಪದ ಜನ ರೇಷ್ಮೆಯ ಆಮದಿನಿಂದ ಹೆಣೆದ ಕೊವಿಸ್ಟಿಸ್ ಬಟ್ಟೆಯು ಒಂದಾಗಿದೆ. ಕ್ರಿ.ಶಕೆಯ ಆರಂಭದಲ್ಲಿ ಪೂರ್ವ ದೇಶಗಳಿಂದ ರೋಮ್‌ಗೆ ರೇಷ್ಮೆ ರಫ್ತಾಗುತ್ತಿತ್ತು. ಅದಕ್ಕೆ ಚಿನ್ನದ ಮೌಲ್ಯವಿತ್ತಲ್ಲದೆ ಪುರುಷರು ರೇಷ್ಮೆ ಬಟ್ಟೆ ತೊಟ್ಟರೆ ಅಪಹಾಸ್ಯಕ್ಕೊಳಗಾಗುತ್ತಿದ್ದರು. ರೇಷ್ಮೆ ನಾರಿನಂಥ ಪದಾರ್ಥ, ಮರದ ತೊಗಟೆಯಡಿಯಲ್ಲಿ ಇದು ದೊರಕುತ್ತದೆಂಬ ತಪ್ಪು ತಿಳಿವಳಿಕೆಯು ಪ್ರಾಚೀನ ಕಾಲದಲ್ಲಿತ್ತು. ಎರಡನೆಯ ಶತಮಾನದಲ್ಲಿ ರೇಷ್ಮೆ ಉದ್ಯಮ ಈಜಿಪ್ಟ್, ಸಿರಿಯ, ಪ್ಯಾಲಸ್ತೀನ್‌ಗಳಲ್ಲಿ ಪ್ರವರ್ಧಮಾನಕ್ಕೆ ಬಂತು. ತರುವಾಯ ಪರ್ಷಿಯ, ಬಿಜ಼ಾನ್‌ಟೀಯನ್, ಫ್ರಾನ್ಸ್, ಇಂಗ್ಲೆಂಡ್ ಮುಂತಾದೆಡೆಗಳಲ್ಲಿ ಪ್ರಚಾರ ಪಡೆಯಿತು. ಹದಿನೆಂಟನೆಯ ಶತಮಾನದ ವೇಳೆಗೆ ಅಮೆರಿಕದಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ೧೭೮೩ರಲ್ಲಿ ಸಹಾಯಧನ ನೀಡುವ ಕಾಯಿದೆಯನ್ನು ಜಾರಿಮಾಡಲಾಯಿತು. ೧೮೭೫ರಲ್ಲಿ ಜಪಾನಿ ರೇಷ್ಮೆ ಅತ್ಯುತ್ತಮವೆಂದು ಮಾನ್ಯತೆ ಪಡೆದಿತ್ತು.

ಭಾರತದ ರೇಷ್ಮೆ ಕೃಷಿಯ ಬಗ್ಗೆ ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಉಲ್ಲೇಖಗಳು ದೊರಕುತ್ತವೆ. ಪೌರಾಣಿಕ ಕಥೆಯೊಂದರಲ್ಲಿ ಕ್ರಿ.ಪೂ. ಸು. ೧೪೦ ರಷ್ಟು ಹಿಂದೆ ರೇಷ್ಮೆ ಹುಳುವಿನ ಮೊಟ್ಟೆ ಮತ್ತು ಹಿಪ್ಪು ನೇರಳೆ ಬೀಜಗಳನ್ನು ಖೊಟಾನ್ (ದಕ್ಷಿಣ ಚೀನದ ಒಂದು ಪ್ರಾಂತ)ಗೆ ಸಾಗಿಸಿದುದರ ಉಲ್ಲೇಖವಿದೆ. ಬ್ರಹ್ಮಪುತ್ರ ಮತ್ತು ಗಂಗಾ ನದಿ ಬಯಲುಗಳಲ್ಲಿ ಮೊದಲು ರೇಷ್ಮಕೃಷಿ ನಡೆಯಿತೆಂದು ತರುವಾಯ ಪಶ್ಚಿಮ ಪರ್ಷಿಯ, ಮಧ್ಯ ಏಷ್ಯಾ ದೇಶಗಳಿಗೆ ಹರಡಿತೆಂದು ಹೇಳಲಾಗುತ್ತದೆ.

ಕರ್ನಾಟಕದಲ್ಲಿ ರೇಷ್ಮೆ ಉದ್ಯಮ: ಕರ್ನಾಟಕದಲ್ಲಿ ರೇಷ್ಮೆಉದ್ಯಮದ ಉಗಮವನ್ನು ಖಚಿತವಾಗಿ ನಿರ್ಧರಿಸಲಾಗಿಲ್ಲವಾದರೂ ಕರ್ನಾಟಕದ ಹಿಂದಿನ ರಾಜವಂಶದವರು ರೇಷ್ಮೆಯನ್ನು ವಿಶೇಷವಾಗಿ ಬಳಸುತ್ತಿದ್ದೆಂದು ದಾಖಲೆಗಳು ತಿಳಿಸುತ್ತವೆ. ಈ ದಾಖಲೆಗಳಿಂದ ರೇಷ್ಮೆಯ ಬಳಕೆ ಶತಮಾನಗಳಷ್ಟು ಹಿಂದನದೆಂಬುದು ವೇದ್ಯವಾಗುತ್ತದೆ. ಈ ಉದ್ಯಮವನ್ನು ಕ್ರಮಬದ್ಧವಾಗಿ ಕರ್ನಾಟಕದಲ್ಲಿ ಪ್ರಾರಂಭಿಸಿದವರು ಹೈದರ್ ಅಲಿ ಮತ್ತು ಆತನ ಪುತ್ರ ಟಿಪ್ಪುಸುಲ್ತಾನ್. ಇವರ ಕಾಲದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿದ್ದ ಈ ಉದ್ಯಮ ಕಾಲಾನುಕ್ರಮದಲ್ಲಿ ಇಳಿಮುಖವಾಯಿತು. ಅನಂತರ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಸಕ್ರಿಯ ಪ್ರಯತ್ನದ ಫಲವಾಗಿ ೧೯೧೪ರಲ್ಲಿ ರೇಷ್ಮೆ ಕೃಷಿ ಇಲಾಖೆ ಕಾರ್ಯೋನ್ಮುಖವಾಯಿತು. ಕೃಷಿ ಪ್ರಧಾನವಾದ ಈ

ಉದ್ಯಮ ನಿರುದ್ಯೋಗ ನಿವಾರಣೆಯ ಹಾದಿಯಲ್ಲಿ ಪ್ರಮುಖ ಪಾತ್ರ ವಹಿಸಿದೆಯಲ್ಲದೆ ಗ್ರಾಮಾಂತರ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ದೇಶಕ್ಕೆ ವಿದೇಶಿ ವಿನಿಮಯವನ್ನು ಗಳಿಸಿಕೊಡುತ್ತಿದೆ.

ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಮಲ್ಟಿವೋಲ್ಟೈನ್ ತಳಿಗಳಿಂದ ವರ್ಷದಲ್ಲಿ ಹಲವು ಬೆಳೆಗಳನ್ನು ಪಡೆಯಬಹುದು. ಈ ತಳಿಗೆ ಹಲವಾರು ವಿಶಿಷ್ಟ ಗುಣಗಳಿವೆ. ಅದ್ವಿತೀಯವಾದ ಹೊಳಪು, ನಯ, ನಾಜೂಕು, ಯಾವ ಬಣ್ಣಕ್ಕೇ ಆಗಲಿ ಹೊಂದಿಕೊಳ್ಳುವ ಸ್ವಭಾವ ಹಾಗೂ ರೋಗ ನಿರೋಧಕ ಸಾಮರ್ಥ್ಯದಂತಹ ಇಷ್ಟೆಲ್ಲ ಒಳ್ಳೆಯ ಗುಣಗಳಿದ್ದರೂ, ರೇಷ್ಮೆಯ ಇಳುವರಿ ಒಂದು ಗೂಡಿಗೆ ಕೇವಲ ೨೦೦ ರಿಂದ ೩೦೦ ಗಜಗಳು ಮಾತ್ರ. ರೇಷ್ಮೆ ಬಿಚ್ಚಾಣಿಕೆಯಲ್ಲಿಯು ಹೆಚ್ಚು ದಾರ ನಷ್ಟವಾಗುತ್ತದೆ. ಇದರಿಂದಾಗಿ ಸ್ಥಳೀಯ ತಳಿಗಳನ್ನು ಅಭಿವೃದ್ಧಿಪಡಿಸಿ, ಹೆಚ್ಚು ಪ್ರಮಾಣದಲ್ಲಿ ರೇಷ್ಮೆದಾರವನ್ನು ಪಡೆಯಬೇಕೆಂಬ ಪ್ರಯತ್ನ ನಡೆದು, ಮಿಶ್ರತಳಿಗಳ ಉತ್ಪಾದನೆಗೆ ನಾಂದಿಯಾಯಿತು. ರೋಗರಹಿತವಾದ ಬಿತ್ತನೆ ಮೊಟ್ಟೆಗಳನ್ನು ಪ್ರತ್ಯೇಕಿಸಲು ಪ್ರತಿಯೊಂದು ತಾಯಿಚಿಟ್ಟೆಯನ್ನು ಅರೆದು ಸೂಕ್ಷ್ಮದರ್ಶಕದಲ್ಲಿ ಪ್ಯಾಶ್ಚರ್‌ಸಿಸ್ಟಮ್ ಮಾದರಿಯ ಮೊಟ್ಟೆ ಉತ್ಪಾದನೆಯನ್ನು ತೋರಿಸಿಕೊಟ್ಟವ ಇಟಲಿಯಿಂದ ೧೯೧೩ರಲ್ಲಿ ಭಾರತಕ್ಕೆ ಆಗಮಿಸಿದ್ದ ರೇಷ್ಮೆ ಕೃಷಿ ಪರಿಣತ ಸೈನರ್ ವಾಷಿಂಗ್ಟನ್ ಮಾರಿ ಎಂಬಾತ.

ಮಿಶ್ರತಳಿ ಉತ್ಪಾದನೆಗೆ ಜಪಾನ್, ಇಟಲಿ, ಚೀನಾ ದೇಶದಿಂದ ಉತ್ಕೃಷ್ಟವಾದ ಯುನಿವೋಲ್ಟೈನ್ ಮತ್ತು ಬೈವೋಲ್ಟೈನ್ ತಳಿಗಳನ್ನು ಆಮದು ಮಾಡಿಕೊಳ್ಳಲಾಯಿತು. ಈ ಕಾರ್ಯಕ್ಕಾಗಿ ೧೯೧೯ರಲ್ಲಿ ಜಪಾನಿನ ಯೋನಿಮುರ ಎಂಬ ತಜ್ಞನ ಸೇವೆಯನ್ನು ಪಡೆಯಲಾಯಿತು. ಆಮದು ಮಾಡಿಕೊಂಡ ಯುನಿವೋಲ್ಟೈನ್ ಮತ್ತು ಬೈವೋಲ್ಟೈನ್ ತಳಿಗಳಿಂದ ಉತ್ಪತ್ತಿಯಾದ ಗೂಡುಗಳಲ್ಲಿ ಉತ್ತಮ ದರ್ಜೆಯ ರೇಷ್ಮೆದಾರ ಹೆಚ್ಚು ಪ್ರಮಾಣದಲ್ಲಿದೆ. ಇಂಥ ಗೂಡುಗಳಿಂದ ಬರುವ ಗಂಡು ಪತಂಗವನ್ನು ಸ್ಥಳೀಯ ಮಲ್ಟಿವೋಲ್ಟೈನ್ ಗೂಡಿನಿಂದ ಬರುವ ಹೆಣ್ಣು ಪತಂಗದೊಂದಿಗೆ ಸಂಕರ ಮಾಡಲಾಯಿತು. ಇದರಿಂದ ಉತ್ಪಾದನೆಗೊಂಡ ರೇಷ್ಮೆ ಗೂಡು ಗಣನೀಯವಾಗಿ ಉತ್ತಮ ದರ್ಜೆಯದಾಗಿತ್ತು. ಇದರಿಂದಾಗಿ ಒಳ್ಳೆಯ ಧಾರಣೆಯು ಸಿಕ್ಕಿತಲ್ಲದೆ ರೇಷ್ಮೆ ಬಿಚ್ಚುವವರಿಗೆ ಹಿಂದೆ ಇದ್ದ ನಷ್ಟ ತೊಡಕುಗಳು ಇಲ್ಲವಾದವು. ಮಿಶ್ರತಳಿಗಳನ್ನು ಸಾಕುವುದು ಜನಾದರಣೀಯವಾಯಿತು.

ಮಿಶ್ರತಳಿಗಳಿಗೆ ಬೇಕಾದ ವಿದೇಶಿ ಮತ್ತು ಸ್ವದೇಶಿ ತಳಿಗಳನ್ನು ಬಿತ್ತನೆಗೆ ಒದಗಿಸಿಕೊಳ್ಳುವ ಕ್ರಮ. ಈ ಎರಡು ತಳಿಗಳ ಮೂಲಸಂತತಿಯನ್ನು ಸದೃಢವಾಗಿ, ರೋಗರಹಿತವಾಗಿ, ಬೆಳೆಸಬೇಕಾದುದು ಅಗತ್ಯ. ಇದಕ್ಕಾಗಿ ವಿಶೇಷ ಸೌಲಭ್ಯಗಳು ಬೇಕು. ವೈಜ್ಞಾನಿಕ ರೀತಿಯಲ್ಲಿ ಯೋಗ್ಯ ಮತ್ತು ಹೊಂದಿಕೊಳ್ಳುವ ಹವಾಗುಣದಲ್ಲಿ ಇವುಗಳನ್ನು ಸಾಕಬೇಕು. ಈ ಮೂಲತಳಿಗಳನ್ನು ವೃದ್ಧಿಪಡಿಸಬೇಕಾದುದು ಅಗತ್ಯ ಮತ್ತು ಅನಿವಾರ್ಯ.

ವಿದೇಶಿತಳಿ ಅಭಿವೃದ್ಧಿಗಾಗಿ ಬೆಟ್ಟದ ಮೇಲೆ ಸಾಕಣೆ (ಹಿಲ್ ಅಮಿಲಿಯೋರೇಷನ್): ಈ ಕ್ರಮದಲ್ಲಿ ಸಾಕಿ, ಬೆಳೆಸಿದ ವಿದೇಶಿತಳಿಗಳು ತಮ್ಮ ಮೂಲ ಸ್ವಭಾವದಂತೆಯೇ ವರ್ತಿಸುವುವು. ಅವುಗಳ ಮೂಲ ಸ್ಥಳದ ಹವಾಗುಣವನ್ನು ಬಲುಮಟ್ಟಿಗೆ ಹೋಲುವ ವಾತಾವರಣ ಬೆಟ್ಟಪ್ರದೇಶದಲ್ಲಿ ಇರುವುದನ್ನು ಮನಗಂಡ ಕರ್ನಾಟಕ ಸರ್ಕಾರ, ಸಮುದ್ರಮಟ್ಟದಿಂದ ಸು. ೧,೪೦೦ ಮೀ ಎತ್ತರವಿರುವ ಬಿಳಿಗಿರಿರಂಗನ ಬೆಟ್ಟದಲ್ಲಿ ಒಂದು ಕೃಷಿಕ್ಷೇತ್ರವನ್ನು ಪ್ರಾರಂಭಿಸಿತು. ಇಲ್ಲಿ ಸಾಕಲಾಗುತ್ತಿರುವ ತಳಿಗಳನ್ನು $P_3$ ಪೀಳಿಗೆಯವು ಎಂದು ಕರೆಯಲಾಗುತ್ತದೆ. ಇಲ್ಲಿ ಬೆಳೆದ ಗೂಡುಗಳಿಂದ ಬರುವ ಪತಂಗಗಳನ್ನು ಪರಸ್ಪರ ಸಂಕರ ಮಾಡಿ ಪಡೆಯುವ ಮೊಟ್ಟೆಗಳನ್ನು ಬಯಲು ಪ್ರದೇಶದಲ್ಲಿರುವ ಸರ್ಕಾರಿ ಸ್ವಾಮ್ಯದ ಕೃಷಿ ಕ್ಷೇತ್ರಗಳಲ್ಲಿ ಬಹಳ ಎಚ್ಚರಿಕೆಯಿಂದ ತಾಂತ್ರಿಕ ವಿಧಿವಿಧಾನಗಳನ್ನು ಅನುಸರಿಸಿ ಸ್ಥಳೀಯ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಸಾಕಣೆ ಮಾಡಲಾಗುವುದು. ಈ ಹುಳುಗಳು ಕಟ್ಟಿದ ಗೂಡುಗಳಿಂದ ಹೊರಬರುವ ಚಿಟ್ಟೆಗಳನ್ನು ಸಂಕರಮಾಡಿ, ಇವುಗಳಿಂದ ಪಡೆದ ಮೊಟ್ಟೆಗಳಿಗೆ $P_2$ ಪೀಳಿಗೆ ಎಂದು ಹೆಸರು. ಈ ಮೊಟ್ಟೆಗಳನ್ನು ಇಲಾಖೆಯ ವತಿಯಿಂದ ತರಬೇತಿ ಪಡೆದ, ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿರುವ ಆಯ್ಕೆಮಾಡಲ್ಪಟ್ಟ ಬುದ್ಧಿವಂತ, ಪರಿಣಿತ ರೈತರಿಗೆ ಹಂಚಲಾಗುವುದು. ಈ ರೈತರು ಸಾಕುವ ಹುಳುಗಳಿಂದ ಕಟ್ಟಿದ್ದ ಗೂಡುಗಳು $P_1$ಪೀಳಿಗೆಯವು ಎನಿಸುತ್ತವೆ. ಈ ಗೂಡುಗಳನ್ನೇ ಮಿಶ್ರತಳಿ ತಯಾರಿಕೆಯಲ್ಲಿ ಗಂಡು ಚಿಟ್ಟೆಗಾಗಿ ಉಪಯೋಗಿಸಲಾಗುತ್ತದೆ.

ಈ ಗೂಡುಗಳನ್ನೇ ಮಿಶ್ರತಳಿ ಉತ್ಪಾದನೆಗೆ ಉಪಯೋಗಿಸುವ ವಿದೇಶಿ ತಳಿಯ ಬಣ್ಣ ಬಿಳಿಯದಾಗಿರುವುದರಿಂದ ರೂಢಿಯಲ್ಲಿ ಅದನ್ನು ಬಿಳಿಗೂಡು ಎಂದೇ ಕರೆಯಲಾಗುತ್ತಿದೆ. ಅಧಿಕ ರೇಷ್ಮೆ ಉತ್ಪನ್ನಕ್ಕೆ ಮಿಶ್ರತಳಿ ಉತ್ಪಾದನೆಯೇ ಮೂಲ. ಬಿಳಿಗೂಡಿಗಾಗಿ ಈ ತಳಿಗಳನ್ನು ದ್ವಿಗುಣಗೊಳಿಸಿಕೊಂಡು ಮಿಶ್ರತಳಿ ಉತ್ಪನ್ನದಲ್ಲಿ ಪ್ರಗತಿ ಸಾಧಿಸಲಾಗುತ್ತಿದೆ.

ಮೈಸೂರು ತಳಿ: ಮಿಶ್ರತಳಿಗಳಿಗೆ ಬೇಕಾದ ಮಲ್ಟಿವೋಲ್ಟೈನ್ ಸಂತತಿಯನ್ನು (ಮೈಸೂರು ತಳಿ) ತುಮಕೂರು ಜಿಲ್ಲೆಯ ಕುಣಿಗಲು, ಕೆಂಪಹಳ್ಳಿ, ಹುಲಿಯೂರುದುರ್ಗ, ಹೆಬ್ಬೂರು, ಸಂತೆಮಾವತ್ತೂರುಗಳಲ್ಲಿ, ಬೆಂಗಳೂರು ಜಿಲ್ಲೆಯ ಮಾಗಡಿ, ಬಿಡದಿ, ದೊಡ್ಡಬಳ್ಳಾಪುರಗಳಲ್ಲಿ ಬೆಳೆಸಲಾಗುತ್ತಿದೆ. ಈ ಪ್ರದೇಶದಲ್ಲಿ ಬೇರೆ ಇನ್ನಾವುದೇ ಜಾತಿಯ ರೇಷ್ಮೆ ಹುಳುಗಳನ್ನೂ ಸಾಕಬಾರದೆಂಬ ಕಾನೂನು ಇದೆ. ಸರ್ಕಾರಿ ಮೂಲದಿಂದ ತಯಾರಾದ ಮೊಟ್ಟೆಗಳನ್ನು ಮಾತ್ರವೇ ರೈತರು ಸಾಕಬೇಕು. ತಾಂತ್ರಿಕ ಸಲಹೆ ಸಹಾಯಗಳಿಗಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸರ್ಕಾರಿ ಸ್ವಾಮ್ಯದ ರೇಷ್ಮೆ ಕೃಷಿಕೇತ್ರಗಳಲ್ಲಿ ಒಂದು ತಾಯಿ ಪತಂಗ ಇಟ್ಟ ಮೊಟ್ಟೆಗಳನ್ನು ಪ್ರತ್ಯೇಕವಾಗಿ ಸಾಕಣೆ(ಸೆಲ್ಯೂಲಾರ್ ರೇರಿಂಗ್)ಮಾಡಿ ಇದೇ ರೀತಿ ಮತ್ತೊಂದು ಪತಂಗದ ಮೊಟ್ಟೆಗಳನ್ನು ಪ್ರತ್ಯೇಕವಾಗಿ ಸಾಕಿ ಅವುಗಳ ಗೂಡಿನಿಂದ ಬರುವ ಪತಂಗಗಳನ್ನು ಸಂಕರಣಮಾಡಿ ಮೂಲತಳಿಯನ್ನಾಗಿಟ್ಟು ಅಭಿವೃದ್ಧಿಪಡಿಸಲಾಗುತ್ತಿದೆ. ಸೆಲ್ಯೂಲಾರ್ ರೇರಿಂಗ್‌ನಲ್ಲಿ ಪಡೆದ ಗೂಡುಗಳು ($P_3$ ಪೀಳಿಗೆ) ಮೂಲ ಬಿತ್ತನೆಯೆನಿಸುವುವು. ಹೀಗೆ ಪಡೆಯಲಾದ ಮೊಟ್ಟೆಗಳನ್ನು ಆಯ್ಕೆಮಾಡಲ್ಪಟ್ಟ ಪರಿಣತ ರೈತರ ಮನೆಯಲ್ಲಿ ಅಥವಾ ಸರ್ಕಾರಿ ಸ್ವಾಮ್ಯದಲ್ಲಿರುವ ಹಿಪ್ಪನೇರಳೆ ತೋಟವುಳ್ಳ ಕ್ಷೇತ್ರಗಳಲ್ಲಿ ದ್ವಿಗುಣಗೊಳಿಸಲಾಗುವುದು. ಈ ಗೂಡುಗಳು $P_2$ ಪೀಳಿಗೆಯ ಬಿತ್ತನೆಯೆನಿಸುವುವು. ಈ ಗೂಡುಗಳಿಂದ ಸಿದ್ಧವಾದ ಮೊಟ್ಟೆಗಳನ್ನು ಪರವಾನಿಗೆ ಪಡೆದ ಉಳಿದ ರೈತರು ಸಾಕಣೆ ಮಾಡುತ್ತಾರೆ. ಅಲ್ಲಿಂದ ಉತ್ಪತ್ತಿಯಾಗುವ ಗೂಡುಗಳು $P_1$ಪೀಳಿಗೆಯವು ಎನಿಸುತ್ತವೆ. ಈ ಗೂಡುಗಳನ್ನು ಮಿಶ್ರತಳಿಗೆ ಬೇಕಾಗುವ ತಾಯಿಪತಂಗದ ಉತ್ಪಾದನೆಗೆ ಉಪಯೋಗ ಮಾಡಲಾಗುತ್ತದೆ. ಮೈಸೂರು ತಳಿಯನ್ನುಳಿದು ಬೇರೆ ಇನ್ನಾವ ತಳಿಯನ್ನೂ ಸಾಕದಂತೆ, ಸರ್ಕಾರದವರಿಂದ ಸರಬರಾಜು ಮಾಡಿದ ಮೊಟ್ಟೆಗಳ ವಿನಃ ಬೇರೆ ಇನ್ನಾವ ತಳಿಯನ್ನು ಸಾಕದಂತೆ, ಬೆಳೆದ ಗೂಡುಗಳನ್ನು ಸರ್ಕಾರದ ಅಧಿಕೃತ ಮಾರುಕಟ್ಟೆಗಳಲ್ಲಿ ನಿಯಮಗಳಿಗನುಸಾರವಾಗಿ ಆಜ್ಞೆಪತ್ರ ಪಡೆದವರಿಗೆ ಮಾತ್ರ ಮಾರುವಂತೆ ಬಿತ್ತನೆಗೂಡಿನ ಹಂಚಿಕೆ ಮತ್ತು ಸರಬರಾಜಿನ ನಿಯಂತ್ರಣವನ್ನು ಜಾರಿಗೆ ತಂದಿರುವುದರಿಂದಲೂ, ಬಿತ್ತನೆಕ್ಷೇತ್ರವನ್ನು ಹಲವು ವಲಯಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ವಲಯಕ್ಕೂ ಒಬ್ಬ ಅಧಿಕಾರಿಯನ್ನು ನೇಮಿಸಿರುವುದರಿಂದ ಮಿಶ್ರತಳಿಗೆ ಬೇಕಾದ ತಾಯಿ ಪತಂಗವನ್ನು ಕೊಡುವ, ರೋಗರಹಿತ ಗೂಡುಗಳನ್ನು ಆಯ್ಕೆಮಾಡುವುದು ಬಲು ಸುಲಭವಾಗಿದೆ.

ಕೇಂದ್ರ ಸರ್ಕಾರದ ಪ್ರೋತ್ಸಾಹ: ೧೮೭೫ರಲ್ಲಿ ೨೦ ಲಕ್ಷ ಪೌಂಡು ರೇಷ್ಮೆಯನ್ನು ವಿದೇಶಗಳಿಗೆ ರಫ್ತುಮಾಡುತ್ತಿದ್ದ ಭಾರತದ ರೇಷ್ಮೆ ಉತ್ಪಾದನೆ ಕ್ರಮೇಣ ಕ್ಷೀಣಿಸತೊಡಗಿತ್ತು. ಇದಕ್ಕೆ ಕಾರಣಗಳು ಹಲವು. ಅವುಗಳಲ್ಲಿ ರೇಷ್ಮೆಹುಳುಗಳಿಗೆ ಮಾರಕವಾಗಿ ಕಾಣಿಸಿಕೊಂಡ ಗಂಟುರೋಗದ ಹಾವಳಿ ಮತ್ತು ಸೂಕ್ಷ್ಮಾಣು ರೋಗಗಳು. ರೇಷ್ಮೆಕೃಷಿಯನ್ನು ಮಾರಕರೋಗಗಳಿಂದ ಮುಕ್ತಗೊಳಿಸಿ ಸುದೃಢವಾಗಿ ಬೆಳೆಸಿ ಉಳಿಸಲೆಂದು ಕರ್ನಾಟಕದಲ್ಲಿ ಪ್ರತ್ಯೇಕ ಇಲಾಖೆ ೧೯೧೫ರಲ್ಲಿ ಪ್ರಾರಂಭವಾಯಿತು. ಉತ್ಪಾದನಾ ವೆಚ್ಚಕ್ಕಿಂತ ಅತಿಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕಾದ ಪರಿಸ್ಥಿತಿ ೧೯೨೮ರಲ್ಲಿ ಉದ್ಭವಿಸಿತ್ತು. ರೇಷ್ಮೆ ಮಾರಾಟ ತೀವ್ರ ಪೈಪೋಟಿಗೆ ಒಳಗಾಯಿತು. ಈ ಕೃಷಿಯಲ್ಲಿ ತೊಡಗಿದ್ದವರು ನಷ್ಟ ಅನುಭವಿಸಬೇಕಾಯಿತು. ರಫ್ತು ವ್ಯಾಪಾರ ಸ್ಥಗಿತಗೊಂಡಿತು. ಈ ಸಂದರ್ಭವನ್ನು ಉಪಯೋಗಿಸಿ ಕೂಂಡು ಚೀನಾ ತನ್ನ ರೇಷ್ಮೆಯನ್ನು ಕಡಿಮೆ ದರದಲ್ಲಿ ಭಾರತಕ್ಕೆ ರಫ್ತು ಮಾಡಲು ಪ್ರಾರಂಭ ಮಾಡಿತು. ಜೊತೆಗೆ ಕೃತಕ ರೇಷ್ಮೆಯು ಜನಾದರಣೀಯವಾಯಿತು. ಮೊದಲೇ ದುರವಸ್ಥೆಯಲ್ಲಿದ್ದ ಈ ಉದ್ಯಮಕ್ಕೆ ಮತ್ತಷ್ಟು ಪೆಟ್ಟು ಬಿತ್ತು. ಇದನ್ನು ಮನಗಂಡ ಭಾರತ ಸರ್ಕಾರ ೧೯೩೨ರಲ್ಲಿ ಈ ಕೈಗಾರಿಕೆಯ ರಕ್ಷಣೆಗೆ ಮುಂದಾಯಿತು. ವಿದೇಶಗಳಿಂದ ಆಮದಾಗುತ್ತಿದ್ದ ರೇಷ್ಮೆಯ ಮೇಲೆ ಕರಭಾರ ಹೇರಿತು. ಇದರ ಪರಿಣಾಮವಾಗಿ ಸ್ಥಳೀಯ ರೇಷ್ಮೆಯ ಬೆಲೆ ಚೇತರಿಸಿಕೊಂಡಿತು.

ರೇಷ್ಮೆಕೃಷಿಯನ್ನು ಉತ್ತಮಪಡಿಸಲು ರೂಪುಗೊಂಡ ಸಲಹಾ ಸಮಿತಿ: ಕರ್ನಾಟಕದಲ್ಲಿ ೧೯೫೧ರಲ್ಲಿ ನಡೆದ ರೇಷ್ಮೆ ಕೈಗಾರಿಕೆಯ ವಿಚಾರಗೋಷ್ಠಿಯ ತರುವಾಯ ಈ ಉದ್ಯಮ ಪ್ರಗತಿಪಥದಲ್ಲಿ ಮುಂದೆ ಸಾಗಲು ಅವಕಾಶವಾಯಿತು. ಈ ಉದ್ಯಮದ ವಿವಿಧ ಕ್ಷೇತ್ರಗಳಲ್ಲಿ ದುಡಿದ ಅನುಭವಿಗಳು, ವಿಜ್ಞಾನಿಗಳನ್ನೊಳಗೊಂಡ ಸಮಿತಿ, ರೇಷ್ಮೆ ಕೃಷಿ ಸಂಶೋಧನೆ, ಶಿಕ್ಷಣ, ರೋಗರಹಿತ ಮೊಟ್ಟೆಗಳ ಉತ್ಪಾದನೆ, ರೇಷ್ಮೆಗೂಡಿನ ವಿತರಣೆ ಹತೋಟಿಯನ್ನು ಕಾನೂನಿನ ಕಕ್ಷೆಗೊಳಪಡಿಸುವುದು, ರೇಷ್ಮೆ ವ್ಯಾಪಾರದಲ್ಲಿನ ಅಹಿತಕರ ಬೆಳವಣಿಗೆಗಳನ್ನು ತಪ್ಪಿಸುವುದು, ಮುಂತಾದುವುಗಳನ್ನು ಕುರಿತ ಅನೇಕ ಅಮೂಲ್ಯ ಸಲಹೆಗಳನ್ನು ನೀಡಿತು.

ರೇಷ್ಮೆಕೃಷಿ ಮಾಡುವ ಜಿಲ್ಲೆಗಳು: ರೇಷ್ಮೆ ಉದ್ಯಮ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಿನ ವ್ಯಾಪ್ತಿಯಲ್ಲಿದೆ. ಈ ಉದ್ಯಮವನ್ನು ಧಾರವಾಡ, ಬಿಜಾಪುರ, ಬೆಳಗಾವಿ, ಬಳ್ಳಾರಿ, ರಾಯಚೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಿಗೂ ವಿಸ್ತರಿಸಿದೆ. ಪ್ರಸಕ್ತ ಸ್ಥಿತಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರೇಷ್ಮೆ ಕೃಷಿ

ನಡೆಯುತ್ತಿದೆ. ಈ ಉದ್ಯಮ ಕೃಷಿಪ್ರಧಾನವಾಗಿದ್ದು ಗ್ರಾಮಾಂತರ ಜನಗಳ ಜೀವನಾಧಾರವೆನಿಸಿದೆ.

ಮೈಸೂರು ತಳಿ ಸಾಕಣೆಗೆ ಬೇಕಾಗುವ ದಿವಸಗಳಿಗಿಂತ ಬಹಳ ಕಡಿಮೆ ದಿವಸಗಳೊಳಗೆ ಮಿಶ್ರತಳಿಗಳು ಫಲ ಕೊಡುವುದರಿಂದ ಕಡಿಮೆ ಅವಧಿಯಲ್ಲಿ ಉತ್ತಮ ಗುಣಮಟ್ಟದ, ಹಿಂದಿನ ತಳಿಗಳಿಗಿಂತ ಹೆಚ್ಚು ಬೆಲೆ ತರುವ ಗೂಡುಗಳನ್ನು ಬೆಳೆಯುವುದು ರೇಷ್ಮೆ ಬೆಳೆಗಾರರಿಗೂ, ರೇಷ್ಮೆ ಬಿಚ್ಚುವವರಿಗೂ ಅನುಕೂಲವಾಗಿರುವುದರಿಂದ ಈ ತಳಿಗಳ ಸಾಕಣೆ ಹೆಚ್ಚು ಜನಪ್ರಿಯವಾಗಿದೆ.

ರೇಷ್ಮೆಹುಳು ಸಾಕಣೆಯಲ್ಲಿ ಸುಧಾರಣೆ: ರೇಷ್ಮೆಹುಳುಗಳು ತಮ್ಮ ಲಾರ್ವ ಅವಸ್ಥೆಯಲ್ಲಿ ೪ ಬಾರಿ ಪೊರೆ ಕಳಚುತ್ತವೆ. ಆಗತಾನೆ ಮೊಟ್ಟೆಯಿಂದ ಹೊರಬಂದ ಮರಿಗಳಿಗೆ ರೂಢಿಯಲ್ಲಿ ಚಾಕಿ ಹುಳು ಎಂದು ಪೊರೆ ಕಳಚುವ ಅವಸ್ಥೆಯಲ್ಲಿರುವ ಮರಿಗಳಿಗೆ ಜ್ವರದಲ್ಲಿರುವ ಹುಳು ಎಂದು ಹೆಸರು. ಎಳೆಯ ಹುಳುಗಳನ್ನು ಮೂರನೆಯ ಜ್ವರದವರೆಗೆ ಸಾಕುವ ತನಕ ಬಲು ಎಚ್ಚರಿಕೆ ವಹಿಸಬೇಕಾಗುತ್ತದೆ. ಏಕೆಂದರೆ, ಬೆಳೆ ಸದೃಢವಾಗಿ ಒಳ್ಳೆಯ ಫಲ ನೀಡಬೇಕಾದರೆ, ಎಳೆಯ ವಯಸ್ಸಿನ ಹುಳುಗಳ ಸಾಕಣೆ ಅತಿಮುಖ್ಯ. ಈ ಕಾರಣಕ್ಕಾಗಿಯೇ ಸರ್ಕಾರದ ವತಿಯಿಂದ ಸ್ಥಾಪಿತವಾಗಿರುವ ಚಾಕಿ ಸಾಕಣೆ ಕೇಂದ್ರದಲ್ಲಿ, ರೈತರು ತಂದುಕೊಡುವ ಮೊಟ್ಟೆಗಳನ್ನು ೨–೩ನೆ ಜ್ವರದವರೆಗೆ ಇಲಾಖೆಯ ತಾಂತ್ರಿಕ ಸಿಬ್ಬಂದಿಯ ನೇರ ಉಸ್ತುವಾರಿಯಲ್ಲಿ ಸಾಕಿ ರೈತರಿಗೆ ಕೊಡಲಾಗುವುದು. ವಯಸ್ಸಿಗೆ ಅನುಗುಣವಾಗಿ ಉತ್ತಮ ಸೊಪ್ಪು ಕೊಡುವುದು, ಅವಶ್ಯ ಉಷ್ಣತೆ, ಆರ್ದ್ರತೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅಗತ್ಯ. ಹುಳು ಸಾಕಣೆಯಲ್ಲಿ ಬೇಕಾದ ಉಷ್ಣಾಂಶ ಮತ್ತು ಶೈತ್ಯಾಂಶಗಳ ವಿವರ:

| ಹುಳುವಿನ ಹಂತ | ಉಷ್ಣಾಂಶ ($^0$ಫ್ಯಾ) | ಆರ್ದ್ರತೆ (%) |
|---|---|---|
| ೧ನೆ ಹಂತ | ೭೫–೮೦ | ೮೦–೯೦ |
| ೨ನೆ ಹಂತ | ೭೪–೭೯ | ೮೦–೯೦ |
| ೩ನೆ ಹಂತ | ೭೩–೭೮ | ೮೦ |
| ೪ನೆ ಹಂತ | ೭೨–೭೭ | ೭೦–೭೫ |
| ೫ನೆ ಹಂತ | ೭೦–೭೬ | ೬೫–೭೦ |

ಈಗ ಪ್ರಚಲಿತವಿರುವ ಮಿಶ್ರತಳಿಗಳ ಜೊತೆಗೆ ಹೊಸದಾಗಿ ಬೈವೋಲ್ಟೈನ್ ಮಾದರಿಯ ವಿದೇಶಿ ತಳಿಗಳನ್ನು ಪ್ರಚಾರಕ್ಕೆ ತರಲಾಗಿದೆ. ಈ ತಳಿಗಳ ಮೊಟ್ಟೆಗಳು ಚಾಕಿಯಾಗಲು ೪–೬ ತಿಂಗಳುಗಳು ಬೇಕಾಗುತ್ತದೆ. ಅವುಗಳನ್ನು ಕೃತಕ ರೀತಿಯಲ್ಲಿ ಚಾಕಿಯಾಗುವಂತೆ ಮಾಡಿ ರೈತರಿಗೆ ಹಂಚಲಾಗುತ್ತದೆ. ಇವುಗಳಿಂದ ಬೆಳೆಯುವ ಗೂಡುಗಳು ಶ್ರೇಷ್ಠ ಗುಣಮಟ್ಟದುವು. ಇಳುವರಿ ಆಶಾದಾಯಕವಿದ್ದು, ಪ್ರೋತ್ಸಾಹ ಗಣನೀಯವಾಗಿ ಹೆಚ್ಚುತ್ತಿದೆ.

ರೇಷ್ಮೆ ಉದ್ಯಮದಲ್ಲಿ ದೊರೆಯುವ ಇತರ ಉಪೋತ್ಪನ್ನಗಳು : ೧. ರೇಷ್ಮೆ ಹುಳುಸಾಕಣೆಯಲ್ಲಿ ಬೀಳುವ ಹಿಕ್ಕೆ, ೨. ರೇಷ್ಮೆ ನೂಲು ಬಿಚ್ಚಲು ಉಪಯೋಗಿಸಿದ ನೀರು, ೩. ನೂಲು ಬಿಚ್ಚಿದ ಅನಂತರ ಉಳಿಯುವ ಹುಳುಗಳನ್ನು ಗೊಬ್ಬರವಾಗಿ ಉಪಯೋಗವಾಗುತ್ತಿತ್ತು. ಆದರೆ, ಇಂದು ಇವುಗಳಿಂದ ಎಣ್ಣೆಯನ್ನು, ಪ್ರೋಟೀನನ್ನು ತೆಗೆಯಲಾಗುತ್ತದೆ. ಎಣ್ಣೆಯನ್ನು ಸೋಪು ತಯಾರಿಕೆಯಲ್ಲಿ ಮತ್ತು ಪ್ರೋಟೀನನ್ನು ಕೋಳಿಗಳ ಆಹಾರವಾಗಿ ಬಳಸಲಾಗುತ್ತಿದೆ.

ವಿವಿಧ ರೇಷ್ಮೆ ಬಟ್ಟೆಗಳು: ರೇಷ್ಮೆಯ ವಿವಿಧ ಬಟ್ಟೆಗಳು ಬಹು ಜನರ ಮನಸ್ಸನ್ನು ಸೆಳೆದಿವೆ. ಅವುಗಳಲ್ಲಿ ಟಫ್ಫೇಟ, ಸ್ಯಾಟಿನ್, ಷಿಫಾನ್, ಕ್ರೇಪ್, ಕ್ರೇಪ್–ಡಿ–ಚೈನಿ, ಷನ್‌ತುಂಗ್, ಸುರಾ, ಆರ್ಗಂಜ಼ ಮತ್ತು ಫೈಲಿ ಮುಖ್ಯವಾದುವು.

ಟಫ್ಫೇಟ: ರೇಷ್ಮೆಯ ಬಟ್ಟೆ ಅಥವಾ ನೂಲಿಗೆ ಬಣ್ಣ ಕಟ್ಟಿರುತ್ತಾರೆ. ಇದೊಂದು ಸಾಮಾನ್ಯ ತೂಕವುಳ್ಳ ರೇಷ್ಮೆ ಬಟ್ಟೆ. ಇದು ನಯವಾದ, ದೃಢವಾದ, ಅಪಾರದರ್ಶಕ ಹಾಗೂ ಸ್ವಲ್ಪಮಟ್ಟಿಗೆ ಹೊಳಪುಳ್ಳ ಬಟ್ಟೆ.

ಸ್ಯಾಟಿನ್: ಇದರಲ್ಲಿ ರೇಷ್ಮೆ ಬಟ್ಟೆಗೆ ಅಥವಾ ನೂಲಿಗೆ ಬಣ್ಣ ಕಟ್ಟಿರುತ್ತಾರೆ. ಸಾಮಾನ್ಯವಾಗಿ ಹೆಚ್ಚು ತೂಕವುಳ್ಳದ್ದು, ಹೊಳಪುಳ್ಳದ್ದು, ಹೆಚ್ಚು ನೆರಿಗೆಯುಳ್ಳದ್ದು ಮತ್ತು ದೃಢವಾದದ್ದು.

ಷಿಫಾನ್: ಇದು ಹಗುರ, ಬಟ್ಟೆಗೆ ಬಣ್ಣ ಕಟ್ಟಿರುವ ರೇಷ್ಮೆ ಬಟ್ಟೆ. ಇದು ಅಪಾರದರ್ಶಕವಾದ್ದು. ಸ್ವಲ್ಪ ಹೊಳಪು ಇದ್ದು, ಕಾಳಿನ ಹಾಗೆ ನೇಯ್ಗೆ ಹೊಂದಿರುತ್ತದೆ. ಕೆಲವೊಮ್ಮೆ ಚಿತ್ರ ನಮೂನೆಗಳ ಮುದ್ರಣ ಇದರ ಮೇಲಿರುತ್ತದೆ.

ಕ್ರೇಪ್–ಡಿ–ಚೈನ: ಇದು ಹಗುರವಾಗಿರುತ್ತದೆ. ಬಟ್ಟೆಗೆ ಬಣ್ಣ ಹಾಕಿರುತ್ತಾರೆ. ಅಪಾರದರ್ಶಕ. ನಯವಾದ, ಸ್ವಲ್ಪಮಟ್ಟಿಗೆ ಸುಕ್ಕು ಬರುವ ನೇಯ್ಗೆಯುಳ್ಳ, ಅಂದವಾದ ನೆರಿಗೆಗಳುಳ್ಳ ಬಟ್ಟೆ ಇದು.

ಷನ್‌ತುಂಗ್ : ಈ ಬಟ್ಟೆಗೆ ಬಣ್ಣ ಕಟ್ಟಿರುತ್ತಾರೆ. ಹಗುರ ಅಥವಾ ಸ್ವಲ್ಪ ಭಾರ. ಅಪಾರದರ್ಶಕ, ಸಾಮಾನ್ಯ ಹೊಳಪುಳ್ಳ, ಜೋಡಿ ಗೂಡುಗಳಿಂದಾದ ಅಡ್ಡೆ ಎಳೆಗಳಿಂದ ಆಗಿರುತ್ತದೆ. ನಯವಾದ ನೇಯ್ಗೆಯುಳ್ಳ ಬಹು ಜನಪ್ರಿಯವೆನಿಸಿರುವ ಬಟ್ಟೆ ಇದು.

ಸುರಾ: ಇದರಲ್ಲಿ ಬಟ್ಟೆ ಅಥವಾ ನೂಲಿಗೆ ಬಣ್ಣ ಕೊಟ್ಟಿರುತ್ತಾರೆ. ಅಮೆರಿಕದಲ್ಲಿ ಇದು ಕಂಠವಸ್ತ್ರಗಳನ್ನು (ನೆಕ್‌ಟೈ) ಮಾಡುವ ರೇಷ್ಮೆಯೆಂದೇ ಪ್ರಸಿದ್ಧಿಯಾಗಿದೆ. ಅಪಾರದರ್ಶಕ, ದೃಢವಾದ ನಯನೇಯ್ಗೆಯುಳ್ಳ ವಸ್ತು.

ಆರ್ಗಂಜ಼: ಇದು ಹಗುರವಾಗಿದೆ. ಅಂಟುನೂಲಿಗೆ ಬಣ್ಣ ಕಟ್ಟಿರುತ್ತಾರೆ. ಪಾರದರ್ಶಕ, ಸ್ವಲ್ಪಮಟ್ಟಿಗೆ ಹೊಳಪಿರುತ್ತದೆ. ಬಲೆಯಾಕಾರದ ದೃಢವಾದ, ಗಟ್ಟಿಯಾದ ನೇಯ್ಗೆಯಿರುವ ರೇಷ್ಮೆ.

ಫೈಲಿ: ನೂಲಿಗೆ ಬಣ್ಣಕಟ್ಟಿದ ಸಾಮಾನ್ಯ ಇಲ್ಲವೆ ಭಾರವೆನಿಸುವ ಬಟ್ಟೆ. ಅಪಾರದರ್ಶಕ. ದಪ್ಪಗಿರುವ, ನಯವಾದ, ದೃಢವಾದ ನೇಯ್ಗೆಯುಳ್ಳ ಮತ್ತು ಅಂಚಿನಿಂದ ಅಂಚಿನವರೆಗೆ ಅಡ್ಡಡ್ಡ ಎಳೆಗಳಿರುವ ಬಟ್ಟೆ.

ಭಾರತದಲ್ಲಿ ರೇಷ್ಮೆ ಜನಪ್ರಿಯ. ಇವುಗಳಲ್ಲಿ ಮೈಸೂರು ರೇಷ್ಮೆ, ಬನಾರಸ್ ರೇಷ್ಮೆ, ಕಾಂಜಿವರಂ ರೇಷ್ಮೆ ಮತ್ತು ಮೊಳಕಾಲ್ಮುರು ರೇಷ್ಮೆ ಹೀಗೆ ಹಲವಾರು ರೇಷ್ಮೆಬಗೆಗಳಿವೆ. ಅಂಚಿನ ವಿನ್ಯಾಸ, ಉಪಯೋಗಿಸಿದ ಚಿನ್ನದ ಎಳೆಗಳ ಬೆಲೆ ಇತ್ಯಾದಿಗಳ ಮೇಲೆ ಅವುಗಳ ಮೌಲ್ಯ ನಿರ್ಧಾರವಾಗುತ್ತದೆ. ರೇಷ್ಮೆ ಬಟ್ಟೆಯನ್ನು ಧರಿಸುವುದಕ್ಕೆ ಮಾತ್ರವಲ್ಲದೆ ಇತರ ಸನ್ನಿವೇಶಗಳಲ್ಲಿ ಉಪಯೋಗಿಸುವರು. ೧೯೪೨ರ ತನಕ ರೇಷ್ಮೆಯನ್ನು ಪ್ಯಾರಾಶೂಟ್‌ಗಳ ತಯಾರಿಕೆಯಲ್ಲಿ ಬಳಸುತ್ತಿದ್ದರು. ರೇಷ್ಮೆಯ ನಯ, ರೇಷ್ಮೆಯ ಸ್ಪರ್ಶ ರೇಷ್ಮೆಯ ನಿಜಮೌಲ್ಯವನ್ನು ಸೂಚಿಸುತ್ತದೆ.

ಭಾರತದ ಒಟ್ಟು ರೇಷ್ಮೆ ಉತ್ಪಾದನೆಯಲ್ಲಿ ಶೇ.೮೦ ರಷ್ಟು ರೇಷ್ಮೆಯನ್ನು ಕರ್ನಾಟಕ ರಾಜ್ಯ ಪೂರೈಸುತ್ತಿದೆ.

ಟಸ್ಸಾರ್ ರೇಷ್ಮೆ : ರಾಜ್ಯದ ಶಿರಸಿ, ಧಾರವಾಡ, ಬೆಳಗಾಂ, ಬಿಳಿಗಿರಿ ರಂಗನ ಬೆಟ್ಟ ಹಾಗೂ ರಾಣೆಬೆನ್ನೂರು ಪ್ರಾಂತ್ಯಗಳಲ್ಲಿ ಕರಿ ಮತ್ತು ಬಿಳಿ ಮತ್ತಿಮರಗಳು ಹಾಗೂ ಹಾರ್ಡಿವಿಕಿಯ ಮರಗಳು ಸಮೃದ್ಧಿಯಾಗಿ ಬೆಳೆಯುತ್ತವೆ. ಇವುಗಳ ಎಲೆಗಳು ಟಸ್ಸಾರ್ ಜಾತಿಯ ರೇಷ್ಮೆ ಹುಳುಗಳಿಗೆ ಒಳ್ಳೆಯ ಆಹಾರ. ಇದನ್ನು ಉಪಯೋಗಿಸಿಕೊಂಡು ಟಸ್ಸಾರ್ ರೇಷ್ಮೆ ಬೆಳೆಯನ್ನು ಮಾಡಲಾಗುತ್ತದೆ. ಇದೇ ರೀತಿ, ಮೂಗಾ ರೇಷ್ಮೆಯನ್ನು ಅಸ್ಸಾಂ ರಾಜ್ಯದಲ್ಲಿ ಉತ್ಪತ್ತಿ ಮಾಡಲಾಗುತ್ತದೆ. ಈರಿ ರೇಷ್ಮೆ ಕೃಷಿ ಇತ್ತೀಚಿನ ದಿನಗಳಲ್ಲಿ ಆಂಧ್ರ ಪ್ರದೇಶದಲ್ಲಿ ಬಹು ಜನಪ್ರಿಯ. ಕರ್ನಾಟಕದಲ್ಲಿ ರೇಷ್ಮೆ ಸಂಶೋಧನಾ ಸಂಸ್ಥೆಗಳು ಈರಿ ರೇಷ್ಮೆ ಪತಂಗಗಳು ಉತ್ಪಾದಿಸುವ ರೇಷ್ಮೆಯನ್ನು ಪಡೆಯಲು ಅನೇಕ ವಿದಧಲ್ಲಿ ಸಂಶೋಧನೆಗಳು ನಡೆಯುತ್ತವೆ.

ಮೈಸೂರು ವಿಶ್ವವಿದ್ಯಾಲಯದ ರೇಷ್ಮೆ ಕೃಷಿ ವಿಭಾಗ, ಪ್ರಾಣಿಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ರಾಷ್ಟ್ರೀಯ ರೇಷ್ಮೆ ಸಂಶೋಧನಾ ಸಂಸ್ಥೆ, ಮೈಸೂರು ಮತ್ತು ರಾಜ್ಯ ರೇಷ್ಮೆ ಸಂಶೋಧನಾ ಸಂಸ್ಥೆ, ತಲಘಟ್ಟಪುರ, ಮಂತಾದುವು ರೇಷ್ಮೆ ತಳಿ ಅಭಿವೃದ್ಧಿಗೆ ಶ್ರಮಿಸುತ್ತಿವೆ. (ಟಿ.ಎಂ.ಆರ್.)

**ರೇಷ್ಮೆ ಹುಳು (ರೇಷ್ಮೆ ಪತಂಗ):** ಲೆಪಿಡಾಪ್ಟಿರ ಗಣದ, ಬಾಂಬಿಸಿಡೆ ಕುಟುಂಬದ ಸದಸ್ಯ. ಆಂಗ್ಲ ಭಾಷೆಯಲ್ಲಿ ಸಿಲ್ಕ್ ಮಾತ್ ಎನ್ನುವರು. ವೈಜ್ಞಾನಿಕ ಹೆಸರು ಬಾಂಬಿಕ್ಸ್ ಮೋರಿ. ವಾಣಿಜ್ಯ ರೇಷ್ಮೆಗೆ ಇದು ಮೂಲ. ಬಾಂಬಿಕ್ಸ್ ಮಿಯಾಂಡರ್ಯೆನ ಎಂಬುದು ಇದರ ಪೂರ್ವಜ. ನವುರಾದ ರೇಷ್ಮೆ ಎಳೆಗಳನ್ನು ಸೃಷ್ಟಿಸುವ ಈ ಕೀಟವನ್ನು ಮನುಷ್ಯ ಹಲವು ಶತಮಾನಗಳಿಂದ ತಾನು ವಾಸಿಸುವ ಪ್ರದೇಶದಲ್ಲಿ ಸಾಕಿ, ಬೆಳೆಸಿ, ರೇಷ್ಮೆ ಉತ್ಪತ್ತಿ ಮಾಡುತ್ತಿದ್ದಾನೆ. ಪ್ರಪಂಚದ ವಿವಿಧ ಭಾಗಗಳಲ್ಲಿ ರೇಷ್ಮೆಕೃಷಿ ಹೆಸರುವಾಸಿ.

ಪ್ರೌಢಕೀಟ (ಪತಂಗತ) ದ ರೆಕ್ಕೆಗಳು ೪೦–೫೦ ಮಿಮೀ ಉದ್ದವಾಗಿವೆ. ಮೈ ಮೇಲೆ ಮತ್ತು ರೆಕ್ಕೆಗಳ ಮೇಲೆ ಶಲ್ಕಗಳಿವೆ. ಪತಂಗಗಳು ಪ್ರೌಢಾವಸ್ಥೆಯಲ್ಲಿ ಆಹಾರ ಸೇವಿಸಲಾರವು. ಇವುಗಳ ಹಾರಟ ಮಂದಗತಿಯಲ್ಲಿದೆ. ರಚನೆಯಲ್ಲಿ ಇವು ಇನ್ನಿತರ ಕೀಟಗಳನ್ನು ಹೋಲುತ್ತವೆ. ತಲೆಯ ಮುಂಭಾಗದಲ್ಲಿ ೨ ಕುಡಿಮೀಸೆಗಳಿವೆ. ಗಂಡಿನ ಕುಡಿಮೀಸೆಗಳಲ್ಲಿ, ಹೆಣ್ಣಿನ ಕುಡಿಮೀಸೆಯಲ್ಲಿರುವುದಕ್ಕಿಂತ ಹೆಚ್ಚು ಕವಲುಗಳಿದ್ದು ಕುಂಚದಂತಿವೆ. ಒಂದು ಜೊತೆ ಸಂಕೀರ್ಣ ಕಣ್ಣುಗಳಿವೆ. ವದನಾಂಗಗಳ ಬೆಳವಣಿಗೆ ಅಪೂರ್ಣ. ಗಾತ್ರದಲ್ಲಿ ಹೆಣ್ಣಿಗಿಂತ ಗಂಡು ಚಿಕ್ಕದು. ಗಂಡಿನ ಉದರದ ಹಿಂಭಾಗದಲ್ಲಿ ಎರಡು ಕೊಂಡಿಯಾಕಾರದ ಹಿಡಿಕೆಗಳಿವೆ. ಇವು ಹೆಣ್ಣಿನೊಡನೆ ಮಿಲನಕ್ಕೆ ಸಹಾಯಕ. ಗೂಡಿನಿಂದ ಹೊರಬಂದ ಪತಂಗಗಳು ಕೂಡಲೇ ಪ್ರಣಯವನ್ನಾರಂಭಿಸಿ ಜೊತೆಗೂಡುತ್ತವೆ. ದಿನಪೂರ್ತಿ ಇವು ಸಂಭೋಗ ನಡಸಬಲ್ಲುವು. ಆದರೆ, ಮಾನವ ಸಾಕಣೆ ಕಾಲದಲ್ಲಿ ನಾಲ್ಕು ಗಂಟೆಗಳ ಬಳಿಕ ಅವನ್ನು ಬೇರ್ಪಡಿಸಿ, ಹೆಣ್ಣಿಗೆ ಮೊಟ್ಟೆಯಿಡಲು

ಅವಕಾಶ ಮಾಡಿಕೊಡಲಾಗುತ್ತದೆ. ಗಂಡಿನಿಂದ ಬೇರ್ಪಟ್ಟ ಹೆಣ್ಣು ಪತಂಗ ೪೦೦–೫೦೦ ಮೊಟ್ಟೆಗಳನ್ನಿಡುತ್ತದೆ. ಸು. ೧೦ ದಿನಗಳಲ್ಲಿ ಮೊಟ್ಟೆಯೊಡೆದು ಮರಿಹುಳು (ಲಾರ್ವ) ಹೊರಬರುತ್ತದೆ. ಮೊಟ್ಟೆ ಅವಸ್ಥೆಯಲ್ಲಿ ೨೧–೨೬°ಸೆ. ಉಷ್ಣತೆ ನೀಡಬೇಕು. ಲಾರ್ವ ಈ ಹಂತದಲ್ಲಿ ಅಧಿಕ ಪ್ರಮಾಣದ ಹಿಪ್ಪುನೇರಳೆ ಎಲೆಯನ್ನು ತಿನ್ನುತ್ತದೆ. ಅದು ೩೦–೪೫ ದಿವಸಗಳ ಅವಧಿಯಲ್ಲಿ ೪ ಬಾರಿ ಪೊರೆಕಳಚಿ, ೫ ಹಂತಗಳಲ್ಲಿ ಬೆಳೆದು, ಗರಿಷ್ಠ ೭೫ ಮಿಮೀ ಉದ್ದ ಬೆಳೆಯುತ್ತದೆ. ಲಾರ್ವದ ಉದರದ ತುದಿಯಲ್ಲಿ ತನ್ನದೇ ಬಾಲದ ಕೊಂಡಿ ಇದೆ. ೫ನೆಯ ಹಂತದ ಕೊನೆಯಲ್ಲಿ ಎಲೆ ತಿನ್ನುವುದನ್ನು ನಿಲ್ಲಿಸಿ, ಬಿಳಿ ಅಥವಾ ಹಳದಿ ಅಥವಾ ಹಸಿರು ಬಣ್ಣದ ರೇಷ್ಮೆ ಎಳೆಯಿಂದ ಗೂಡು ಕಟ್ಟಲು ಪ್ರಾರಂಭಿಸುತ್ತದೆ. ರೇಷ್ಮೆ ಎಳೆಯ ಬಣ್ಣ ಪ್ರಭೇದಗಳಿಗನುಗುಣವಾಗಿ ವಿಭಿನ್ನವಾಗಿದೆ. ರೇಷ್ಮೆ ತಿರುಳಿನ ಭಾಗ ಫೈಬ್ರಾಯಿನ್ ಪ್ರೊಟೀನ್‌ನಿಂದ, ಇದರ ಹೊರಕವಚ ಅಂಟಿನಂಥ ಸೆರಸಿನ್ ಪ್ರೊಟೀನಿನಿಂದಲು ರಚಿತವಾಗಿದೆ. ಹುಳುವಿನ ಸೂಕ್ಷ್ಮ ಮತ್ತು ಪ್ರಮುಖವಾದ ಅವಧಿಯಲ್ಲಿ ರೇಷ್ಮೆಗೂಡು (ಕಕೂನ್) ರಕ್ಷಣೆ ಒದಗಿಸುತ್ತದೆ. ಸಾಮಾನ್ಯವಾಗಿ, ರೇಷ್ಮೆ ಎಳೆ ೭೦೦–೧೦೦೦ ಮೀ ಉದ್ದವಾಗಿರುತ್ತದೆ. ರೇಷ್ಮೆ ಗೂಡಿನಲ್ಲಿ ಲಾರ್ವ ೨೫–೨೮ ದಿನಗಳ ಅನಂತರ ಕೋಶವಾಗಿ (ಪ್ಯೂಪ) ಪರಿವರ್ತನೆ ಹೊಂದುತ್ತದೆ. ಈ ಕೋಶ ೧೦–೧೨ ದಿವಸಗಳ ಬಳಿಕ ಪತಂಗವಾಗಿ ರೂಪ ಪರಿವರ್ತನೆಗೊಂಡು, ಸಾಮಾನ್ಯವಾಗಿ ಸೂರ್ಯೋದಯದ ವೇಳೆ ಗೂಡಿನಿಂದ ಹೊರಬರುತ್ತದೆ.




ನೀರಾವಿ ಅಥವಾ ಬಿಸಿಗಾಳಿಯಿಂದ ಗೂಡಿನಲ್ಲಿರುವ ಡಿಂಬವನ್ನು ಸಾಯಿಸಿ ರೇಷ್ಮೆ ಎಳೆಯನ್ನು ಬೇರ್ಪಡಿಸಿ ವಾಣಿಜ್ಯೋಪಯೋಗಕ್ಕೆ ಬಳಸಿ ಕೊಳ್ಳಲಾಗುವುದು. ದೈತ್ಯಾಕಾರದ ರೇಷ್ಮೆಪತಂಗ ಸಾಟುರಿನಿಡೆ ಕುಟುಂಬಕ್ಕೆ ಸೇರಿದೆ. ಈ ಕುಟುಂಬದಲ್ಲಿ ವನ್ಯ ಪತಂಗಗಳಿವೆ. ಉದಾ: ಹಿಪ್ಪುನೇರಳೆ, ಟಸ್ಸಾರ್, ಎರಿ ಮತ್ತು ಮೂಗಾ. ಪ್ರಪಂಚದಲ್ಲಿ ಭಾರತವೊಂದೇ ವನ್ಯ ಮತ್ತು ಹಿಪ್ಪುನೇರಳೆ ಬಗೆಯ ರೇಷ್ಮೆಯನ್ನು ಉತ್ಪಾದಿಸುತ್ತಿದೆ. (ಪಿ.ಆರ್.ಎನ್.)

**ರೈಜೋಪೊಡ:** ಪ್ರೊಟೋಝೋವ ವಂಶದಲ್ಲಿನ ಏಕಕೋಶೀಯ ಜೀವಿಗಳ ೪ ವರ್ಗಗಳಲ್ಲಿ ಒಂದು. ಇವು ವಾಸಿಸುವ ಪರಿಸರ ಹಾಗು ಜೀವನಕ್ರಮವನ್ನು ಆಧರಿಸಿ ಇವುಗಳ ರಚನೆಯಲ್ಲಿ ಹಲವು ಮಾರ್ಪಾಡುಗಳಾಗಿವೆ.

ಈ ವರ್ಗದಲ್ಲಿರುವ ಎಲ್ಲಾ ಜೀವಿಗಳು ಮಿಥ್ಯಾಪಾದಿಗಳು. ಇವನ್ನು ಮಿಥ್ಯಾಪಾದದ ರಚನೆ, ಕೋಶಕೇಂದ್ರಗಳ ಸಂಖ್ಯೆ ಮತ್ತು ಜೀವದ್ರವದ ಸುತ್ತಲಿರುವ ಕವಚ ಮೊದಲಾದವನ್ನು ಗಮನಿಸಿ ೪ ಉಪವರ್ಗಗಳಾಗಿ: ೧. ಲೊಬೊಸ, ೨. ಫೊರಾಮಿನಿಫೆರ, ೩. ಹೀಲಿಯೊಝೋವ, ೪. ರೇಡಿಯೊಲೆರಿಯ ವಿಂಗಡಿಸಿದೆ.

೧. ಲೊಬೊಸ ಅಥವಾ ಅಮಿಬಿಝೋವ: ಇವು ಸಿಹಿನೀರಿನಲ್ಲಿರುವ ಸೂಕ್ಷ್ಮಜೀವಿಗಳು. ಇವಕ್ಕೆ ಚಿಕ್ಕ ಮತ್ತು ಮೊಂಡು ಮಿಥ್ಯಾಪಾದಗಳಿವೆ. ಅಮೀಬ ಮತ್ತು ಪರತಂತ್ರಜೀವಿ ಎಂಟಮೀಬ ಈ ಉಪವರ್ಗಕ್ಕೆ ಸೇರಿವೆ. ಕೆಲವು ಜೀವಿಗಳ ಹೊರಮೈ ಕವಚದಿಂದ ಆವೃತವಾಗಿದೆ. ಈ ಜೀವಿಗಳು ವಿಭಜನೆ ಮೂಲಕ ಪ್ರಜನನ ಕ್ರಿಯೆ ನಡೆಸುತ್ತವೆ. ಉದಾ: ಅಮೀಬ.

೨. ಫೊರಾಮಿನಿಫೆರ: ಇವು ಉಪ್ಪುನೀರಿನಲ್ಲಿ ವಾಸಿಸುವ ಜೀವಿಗಳು. ಇವಕ್ಕೆ ಅನೇಕ ಕವಲುಗಳಿರುವ ಮಿಥ್ಯಾಪಾದಗಳಿವೆ. ಬಿರುಸಾದ ಕವಚಗಳಲ್ಲಿ ಅನೇಕ ರಂಧ್ರಗಳಿದ್ದು, ಇವುಗಳ ಮೂಲಕ ಮಿಥ್ಯಾಪಾದಗಳು ಕೋಶದಿಂದ ಹೊರಕ್ಕೆ ಚಾಚಿಕೊಂಡಿರುತ್ತವೆ. ಪ್ರಜನನ ಕ್ರಿಯೆ ಮುಖ್ಯವಾಗಿ ವಿಭಜನೆಯ ಮೂಲಕ ಜರಗುತ್ತದೆ. ಉದಾ: ಎಲ್‌ಫಿಡಿಯಮ್, ಗ್ಲೋಬಿಜರಿನ.

೩. ಹೀಲಿಯೊಝೋವ: ಸಿಹಿನೀರಿನಲ್ಲಿ ವಾಸಿಸುವ ಈ ಜೀವಿಗಳಿಗೆ ಬಿರುಸಾದ, ಕಿರಣಗಳೋಪಾದಿಯಲ್ಲಿ ಹೊರಚಾಚಿಕೊಂಡಿರುವ ಮಿಥ್ಯಾಪಾದಗಳಿವೆ. ಉದಾ: ಆಕ್ಟಿನೊಫ್ರಿಸ್, ಆಕ್ಟಿನೊಸ್ಫೆರಿಯಮ್.

೪. ರೇಡಿಯೊಲಾರಿಯ: ಇದು ರೈಜೊಪೊಡಗಳಲ್ಲಿರುವ ದೊಡ್ಡ ಗುಂಪು. ಈ ಉಪವರ್ಗದ ಎಲ್ಲ ಜೀವಿಗಳು ಉಪ್ಪು ನೀರಿನಲ್ಲಿ ವಾಸಿಸುತ್ತವೆ. ರಂಧ್ರಗಳಿರುವ ಕೇಂದ್ರ ಕವಚ ಇವುಗಳ ಅತಿ ಮುಖ್ಯಗುಣ. ಈ ಕವಚ ಜೀವದ್ರವವನ್ನು ಒಳ ಮತ್ತು ಹೊರ ಭಾಗಗಳಾಗಿ ವಿಂಗಡಿಸುತ್ತದೆ. ಒಳಭಾಗದಲ್ಲಿ ಕೋಶಕೇಂದ್ರ ಇದೆ. ಕವಚ ಮರಳಿನಿಂದಾಗಿರುವುದರಿಂದ ಈ ವರ್ಗದ ಜೀವಿಗಳ ಪಳೆಯುಳಿಕೆಗಳು ವಿಶ್ವದ ಹಲವೆಡೆ ಪಳೆಯುಳಿಕೆ ತಜ್ಞರು ಗುರುತಿಸಿದ್ದಾರೆ. ಉದಾ: ಆಕ್ಟಿನೊಮ, ಆಕೆಂಥೊಮೆಟ್ರಾ.

(ಎಚ್.ಎನ್.ವೈ.)

**ರೋಗ ಕಾರಣವಿಜ್ಞಾನ:** ರೋಗಮೂಲ ಕುರಿತ ಅಧ್ಯಯನ (ಈಟಿಯಾಲಜಿ). ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕವಾಗಿ ರೋಗರಹಿತ ವಾಗಿರುವ ಸ್ಥಿತಿಯೇ ಆರೋಗ್ಯ. ಇದನ್ನು ಕಾಪಾಡಲು ಪ್ರಾರಂಭ ಹಂತದಲ್ಲಿಯೇ ರೋಗದ ಲಕ್ಷಣಗಳನ್ನು ಅವಲೋಕಿಸಿ, ಕಾರಣಗಳನ್ನು ಅರ್ಥಮಾಡಿಕೊಂಡು, ಕೆಲವು ತಪಾಸಣೆಗಳನ್ನು ನಡೆಸಿ, ಚಿಕಿತ್ಸಾಕ್ರಮಗಳನ್ನು ರೂಪಿಸಬೇಕಾಗುತ್ತದೆ. ರೋಗಗಳು ಶೀಘ್ರವಾಗಿಯೂ ಸಂಪೂರ್ಣವಾಗಿಯೂ ವಾಸಿಯಾಗುವುದು ಬಲು ಮುಖ್ಯ. ಏಕೆಂದರೆ, ದಿನಕಳೆದಂತೆ ಅವು ವರ್ಧಿಸಿ, ದೇಹದ ವಿವಿಧ ಅಂಗೋಪಾಂಗಗಳಿಗೆ ಹರಡಿ ಹಾನಿಮಾಡುವುದಷ್ಟೇ ಅಲ್ಲದೆ, ರೋಗದ ಚಿಹ್ನೆಗಳನ್ನು ಬದಲಾಯಿಸುತ್ತಲೂ ಇರುವುವು. ಭಾಗಶಃ ವಾಸಿಯಾದ ಕಾಯಿಲೆ ಮರುಕಳಿಸುವ ಸಾಧ್ಯತೆಯೂ ಉಂಟು. ಇದರಿಂದ ಕಾಯಿಲೆಯ ತೀವ್ರತೆ ಹೆಚ್ಚಿ, ಸಾವು ನೋವು ಸಂಭವಿಸುವುದು ಮಾತ್ರವಲ್ಲದೆ, ಕೌಟುಂಬಿಕ ಆರ್ಥಿಕ ವ್ಯವಸ್ಥೆಯ ಮೇಲೂ ಬಹಳಷ್ಟು ಪರಿಣಾಮಬೀರುತ್ತದೆ.

ವೈದ್ಯರು ಕಾಯಿಲೆಯ ವಿಶ್ಲೇಷಣೆಯನ್ನು ಹಲವು ಪ್ರಮುಖ ಹಂತಗಳಲ್ಲಿ ಮಾಡುತ್ತಾರೆ. ಮೊದಲನೆಯದು ರೋಗದ ಚರಿತ್ರೆ. ಪ್ರಾರಂಭವಾದ ಬಗೆ, ಚಿಹ್ನೆಗಳು, ಗಂಟೆ/ದಿನಗಳಲ್ಲಿ ಉಂಟಾದ ವ್ಯತ್ಯಾಸಗಳು, ಹೊಸ ತಿರುವುಗಳು, ರೋಗಿಯ ಪ್ರಕಾರ ರೋಗಕ್ಕೆ ಕಾರಣಗಳು, ಪರಿಸರದೊಡನೆ ಸಂಬಂಧ, ದೇಹದ ಬೇರೆಬೇರೆ ಭಾಗಗಳಲ್ಲಿ ಆಗಿರುವ ವ್ಯತ್ಯಯಗಳು, ಹಿಂದೆ ಇದೇ ರೀತಿಯ ಲಕ್ಷಣಗಳು ಕಂಡುಬಂದದ್ದು, ಕುಟುಂಬದ ಸದಸ್ಯರಿಗೆ ಮತ್ತು ಇತರರಿಗೆ ಈ ರೋಗಕ್ಕೆ ಸಂಬಂಧಿಸಿದ ಚಿಹ್ನೆಗಳು ಇದ್ದು ಅವುಗಳ ಬಗ್ಗೆ ಯಾವುದಾದರೂ ಪರೀಕ್ಷೆ ಮಾಡಿಸಿದ್ದರೆ ಆ ಮಾಹಿತಿಗಳನ್ನು ಸಂಗ್ರಹಿಸಿ ಕೂಲಂಕಷವಾಗಿ ವಿಶ್ಲೇಷಣೆ ಮಾಡಲಾಗುತ್ತದೆ. ಮುಂದಿನ ಹಂತ ಚಿಕಿತ್ಸಾಕ್ರಮ.

ಪ್ರತಿಯೊಂದು ಕಾಯಿಲೆಯೂ ತನ್ನದೇ ಆದ ರೋಗ ನಿದಾನವನ್ನು ಅನುಸರಿಸುತ್ತದೆ. ಪ್ರಾರಂಭದ ಬಗೆ, ರೋಗ ಯಾವ ಯಾವ ಅಂಗಗಳಿಗೆ ಸಂಬಂಧಿಸಿದ್ದು ಎಂಬುದರ ಮೇಲೆ ಇದು ನಿರ್ಧಾರವಾಗುತ್ತದೆ. ರೋಗಿಯ ಸಂಪೂರ್ಣ ಪರೀಕ್ಷೆಯಿಂದ ರೋಗದ ಗತಿ, ತೀವ್ರತೆ, ವಿಧಗಳ ಬಗ್ಗೆ ವಿಷಯ ತಿಳಿಯುತ್ತದೆ. ಅದಕ್ಕೆ ತಕ್ಕಂತೆ, ಪ್ರಯೋಗಾಲಯ ಗಳಲ್ಲಿ ರಕ್ತ, ಮಲಮೂತ್ರ, ಕಫ ಪರೀಕ್ಷೆ, ಎಕ್ಸ್‌ಕಿರಣ ಛಾಯಾಚಿತ್ರ, ಅಲ್ಟ್ರಾಸೌಂಡ್, ಸಿ.ಟಿ. ಸ್ಕ್ಯಾನ್, ದೇಹದ ವಿವಿಧ ದ್ರವಗಳ ಪರೀಕ್ಷೆ ಮುಂತಾದ ತಪಾಸಣೆಗಳ ಮೂಲಕ ರೋಗದ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಇವೆಲ್ಲವನ್ನೂ ವಿಶ್ಲೇಷಿಸಿದಾಗ ರೋಗ ಕುರಿತಂತೆ ನಿಖರವಾದ ಒಂದು ಚಿತ್ರಣ ಮೂಡುತ್ತದೆ. ಇವೆಲ್ಲವನ್ನೂ ಆಧರಿಸಿ ಯುಕ್ತ ಚಿಕಿತ್ಸೆಯನ್ನು ಕೈಗೊಳ್ಳಲಾಗುತ್ತದೆ. ಸಾಮಾನ್ಯವಾಗಿ ರೋಗಲಕ್ಷಣ ಮತ್ತು ಪ್ರಯೋಗಾಲಯದ ಪರೀಕ್ಷಾ ವರದಿಗಳ ತಪಾಸಣೆಯಿಂದ ರೋಗಗಳನ್ನು ಸುಲಭವಾಗಿ ಪತ್ತೆ ಹಚ್ಚಬಹುದಾದರೂ ಕೆಲವು ಸಲ ವಿಭಿನ್ನ ಲಕ್ಷಣಗಳಿಂದ ಮತ್ತು ಪರೀಕ್ಷೆಯಲ್ಲಿ ಖಡಾಖಂಡಿತವಲ್ಲದ ವರದಿಯಿಂದ ಹಾಗೂ ಚಿಕಿತ್ಸೆ ಪ್ರಾರಂಭವಾಗಿದ್ದರೆ ಔಷಧಗಳ ಪರಿಣಾಮಗಳಿಂದ ರೋಗದ ಪತ್ತೆ ಕಾರ್ಯ ಕಷ್ಟವಾಗುತ್ತದೆ. ಪೂರ್ಣ ಗುಣವಾಗಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳುವುದು ಬಲು ಮುಖ್ಯ, ಏಕೆಂದರೆ ರೋಗ ಮತ್ತೆ ಉಲ್ಬಣಗೊಳ್ಳುವ ಅಥವಾ ಸ್ವಲ್ಪ ಕಾಲಾನಂತರ ಮರುಕಳಿಸುವ ಸಾಧ್ಯತೆ ಇರಬಹುದು. (ಎಸ್.ಎನ್.ಎಮ್.)

ರೋಗನಿದಾನವಿಜ್ಞಾನ: ದೇಹದ ಅಥವಾ ಮನಸ್ಸಿನ ಅಸ್ವಸ್ಥ ಸ್ಥಿತಿಯ ಸ್ವರೂಪ ಅನ್ವೇಷಿಸುವ ವೈದ್ಯವಿಜ್ಞಾನ ವಿಭಾಗ (ಡಯೋಗ್ನೋಸ್ಟಿಕ್ಸ್). ರೋಗಗಳ ಪ್ರಾರಂಭ ಮತ್ತು ಮುಂದುವರಿಕೆ ಬಗ್ಗೆ ವ್ಯಕ್ತಿಗೆ ಅರಿವು ಅತ್ಯಗತ್ಯ. ಪ್ರತಿಯೊಂದು ಕಾಯಿಲೆಯೂ ತನ್ನದೇ ಆದ ವೇಗದಲ್ಲಿ, ರೀತಿಯಲ್ಲಿ ಸಾಗುತ್ತದೆ. ಇದು ಪ್ರತಿ ವ್ಯಕ್ತಿಯಲ್ಲೂ ಕಾಯಿಲೆಗೆ ತಕ್ಕಂತೆ ಕಾಲ ಕಾಲಕ್ಕೆ ಬದಲಾಗುತ್ತಿರುತ್ತದೆ. ಮುಖ್ಯ ಕಾರಣಗಳು: ತಂದೆ ತಾಯಿಯರಿಂದ ಬಂದ ವಂಶವಾಹಿನಿಗಳು, ನಮ್ಮ ಒಳಗಿನ ಮತ್ತು ಹೊರಗಿನ ಪರಿಸರ, ಮಾನಸಿಕ ಸ್ಥಿತಿ, ಚಿಕಿತ್ಸೆಯ ಪರಿಣಾಮ ಇತ್ಯಾದಿ. ಕೆಲವು ರೋಗಗಳು ಭ್ರೂಣಾವಸ್ಥೆಯಲ್ಲೇ ಪ್ರಾರಂಭವಾಗಿ, ಮಗುವಿನ ಜೊತೆಗೇ ಬೆಳೆಯುತ್ತವೆ. ಸೋಂಕುರೋಗಗಳು ಸೂಕ್ಷ್ಮಜೀವಿಗಳಿಂದ ಉಂಟಾಗುವುದರಿಂದ ರೋಗನಿದಾನವೇ ಬೇರೆ ರೀತಿಯದು. ವಿವಿಧ ಅಂಗೋಪಾಂಗಗಳಿಗೆ ಉಂಟಾಗಿರುವ ಹಾನಿಗೆ ತಕ್ಕಂತೆ ಅವುಗಳ ಕ್ರಿಯೆಗಳಲ್ಲಿ ಬದಲಾವಣೆ ಮಾಡಿ ರೋಗಲಕ್ಷಣಗಳನ್ನು ಉಂಟುಮಾಡುತ್ತದೆ. ಕೆಲವು ರೋಗಗಳು ದೇಹದ ಇತರ ಭಾಗಗಳಿಗೆ ಹರಡುವುದರಿಂದ ಕಾಯಿಲೆಯ ಸಂಪೂರ್ಣ ಮಾಹಿತಿ ಅತ್ಯಗತ್ಯ. ನಾನಾ ಕಾರಣಗಳಿಂದ ಜೀವಕೋಶಗಳ ಕಾರ್ಯವೈಖರಿ, ವಿಭಜನಾ ಸಾಮರ್ಥ್ಯಗಳಲ್ಲಿ ವ್ಯತ್ಯಾಸ ಉಂಟಾಗಿರುವುದರಿಂದ, ಅಂಗಾಂಶಗಳು ಹಾನಿಯಾಗಿ ಕಾಯಿಲೆಗಳು ಪ್ರಾರಂಭವಾಗುತ್ತವೆ. ನಮ್ಮ ದೇಹದಲ್ಲಿರುವ ರೋಗನಿರೋಧಕ ಶಕ್ತಿಗನುಗುಣವಾಗಿ, ರೋಗದ ತೀವ್ರತೆ ಕಂಡು ಬರುತ್ತದೆ. ಕೆಲವು ರೋಗಗಳು ಒಂದೇ ಭಾಗಕ್ಕೆ ಸಂಬಂಧಿಸಿದ್ದರೆ ಮತ್ತೆ ಕೆಲವು ಹಲವಾರು ಅಂಗೋಪಾಂಗಗಳಿಗೆ ತೊಂದರೆ  ಉಂಟುಮಾಡಬಹುದು. ಒಂದೇ ಕಾಯಿಲೆ ಬೇರೆ ಬೇರೆ ಭಾಗಗಳಲ್ಲಿ ವಿವಿಧ ರೀತಿಯ ತೊಂದರೆಗಳಿಗೆ ಕಾರಣವಾಗಬಹುದು. ಪ್ರತಿ ಕಾಯಿಲೆಗೂ ತನ್ನದೇ ಆದ ರೋಗವೈಶಿಷ್ಟ್ಯ ಇದೆ. ಉದಾಹರಣೆಗೆ, ಅರ್ಬುದರೋಗ ಜೀವಕೋಶಗಳ ವಿಭಜನಾ ಕಾರ್ಯದಲ್ಲಿ ಮಾರ್ಪಾಟು ಮಾಡಿ ಅನಿಯಂತ್ರಿತವಾಗಿ ಬೆಳೆದು ಉಪಯೋಗವಿಲ್ಲದ, ಆ ಭಾಗಕ್ಕೆ ಹಾನಿಮಾಡುವ ಒಂದು ಅಂಗಾಂಶದ ಗಂಟಾಗಿ ಮಾರ್ಪಾಡಾಗುತ್ತದೆ. ಅದರ ಬೆಳವಣಿಗೆಗೆ ಸುತ್ತಲಿನ ಆರೋಗ್ಯವಂತ ಅಂಗೋಪಾಂಗಗಳ ಜೀವಕೋಶಗಳೇ ಆಹಾರ. ವೈರಸ್, ಬ್ಯಾಕ್ಟೀರಿಯ, ಬೂಷ್ಟುಗಳ ಸೋಂಕಿನ ಕಥೆಯೂ ಹೀಗೆಯೇ. ಇವುಗಳ ಜೀವನಾಭಿವೃದ್ಧಿಗೆ ಆರೋಗ್ಯವಂತ ಅಂಗಾಂಶಗಳೇ ಬೇಕು. ವಿವಿಧ ಕಾಯಿಲೆಗಳಿಂದ ಹಲವಾರು ರಾಸಾಯನಿಕ ವಸ್ತುಗಳು ಉತ್ಪತ್ತಿಯಾಗಿ, ದೇಹದ ಆಂತರಿಕ ಪರಿಸರದ ಸಮತೋಲದಲ್ಲಿ ವ್ಯತ್ಯಯ ಉಂಟುಮಾಡಿ, ಕ್ರಿಯೆಗಳಲ್ಲಿ ಏರುಪೇರುಂಟಾಗುತ್ತದೆ. ಆದ್ದರಿಂದ ಕಾಯಿಲೆಗೆ ತಕ್ಕಂತೆ, ಅದರ ಹಂತವನ್ನಾಧರಿಸಿ, ಯಾವ ಯಾವ ಅಂಗೋಪಾಂಗಗಳಿಗೆ ಹಾನಿಯಾಗುವ ಸಾಧ್ಯತೆ ಇದೆ ಎನ್ನುವುದನ್ನು ವಿಶ್ಲೇಷಿಸಿ, ತಕ್ಕ ಪರೀಕ್ಷೆಗಳನ್ನು ಕೈಗೊಳ್ಳಬೇಕು. ಇವು ರಕ್ತದಲ್ಲಿಯ ರಕ್ತಕಣಸಂಖ್ಯೆ, ರಾಸಾಯನಿಕ ವಸ್ತುಗಳು (ಸಕ್ಕರೆ, ಜಿಡ್ಡು, ಬಿಲಿರುಬಿನ್, ಯೂರಿಯ, ಕಿಣ್ವಗಳು, ಹಾರ್ಮೋನುಗಳು, ಸಸಾರಜನಕ), ಕ್ರಿಮಿಗಳು, ಮುಂತಾದವುಗಳ ಪರೀಕ್ಷೆ; ಮೂತ್ರದಲ್ಲಿ ರಾಸಾಯನಿಕ ವಸ್ತುಗಳ (ಸಕ್ಕರೆ, ಆಲ್ಬುಮಿನ್, ಸಸಾರಜನಕ) ಪ್ರಮಾಣ, ಅಸಾಧಾರಣ ವಸ್ತುಗಳ ಇರುವಿಕೆ, ಕೆಂಪು ಮತ್ತು ಬಿಳಿ ರಕ್ತಕಣಗಳು, ಬ್ಯಾಕ್ಟೀರಿಯಾಗಳು; ಮಲ, ಕಫ, ವಿವಿಧ ದ್ರವಗಳಲ್ಲಿ ಕ್ರಿಮಿಗಳು, ರಾಸಾಯನಿಕಗಳು;  ಇವುಗಳ ಪರೀಕ್ಷೆಯಿಂದ ರೋಗದ ಕಾರಣ, ಹಂತ, ಬೇರೆ ಬೇರೆ ಭಾಗಗಳಿಗೆ ಆಗಿರುವ ಹಾನಿಯ ಪ್ರಮಾಣ, ಚಿಕಿತ್ಸೆಗೆ ಸಿಕ್ಕಿರುವ ಪ್ರತಿಫಲ ಇತ್ಯಾದಿಯ ಬಗ್ಗೆ ಸಂಪೂರ್ಣ ಮಾಹಿತಿ ದೊರೆಯುತ್ತದೆ. ಇದರಿಂದ ಚಿಕಿತ್ಸೆಯಲ್ಲಿ ಮಾಡಬೇಕಾದ ಬದಲಾವಣೆಗಳು, ಯಾವ ಔಷಧಗಳು ಹೆಚ್ಚು ಪರಿಣಾಮಕಾರಿ ಎಂಬುದನ್ನೂ ನಿರ್ಧರಿಸಬಹುದು. ಕೆಲವೊಮ್ಮೆ ರೋಗದ ಚಿಹ್ನೆಗಳಿಗೂ ಪ್ರಯೋಗಾಲಯದ ವರದಿಗೂ ಹೊಂದಾಣಿಕೆ ಆಗದಿರಬಹುದು. ಈ ವ್ಯತ್ಯಾಸಗಳನ್ನು ವೈದ್ಯ ತನ್ನ ವೈದ್ಯಕೀಯ ಜ್ಞಾನ ಮತ್ತು ಪರಿಣತಿಯ ಸಹಾಯದಿಂದ ವಿಶ್ಲೇಷಿಸಿ ನಿರ್ಧಾರ ಕೈಗೊಳ್ಳುತ್ತಾನೆ. ನಮ್ಮ ಸುತ್ತಲಿನ ಪರಿಸರದ (ಗಾಳಿ, ನೀರು, ಆಹಾರ) ಮಾಲಿನ್ಯದಿಂದ ಹಲವಾರು ಕಾಯಿಲೆಗಳು ತಲೆದೋರುತ್ತವೆ. ಆಗ ನಮ್ಮ ಪರೀಕ್ಷೆಯಲ್ಲದೆ, ಆ ಪರಿಸರದ ಬಗ್ಗೆ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಬೇಕಾಗುತ್ತದೆ ಕೂಡ. ಶಸ್ತ್ರಚಿಕಿತ್ಸೆಯಾದ ಬಳಿಕ ಮತ್ತು ಆ ಕಾಯಿಲೆಯ ಒಂದು ತುಣುಕನ್ನು ವಿಶೇಷವಾಗಿ ಸಂಶ್ಲೇಷಿಸಿ, ಅಧ್ಯಯನ ಮಾಡಿ ರೋಗದ ಬಗ್ಗೆ ಸರಿಯಾದ ಮಾಹಿತಿ ಪಡೆಯಬಹುದು. ಇದರಿಂದ ಒಂದೇ ರೀತಿ ಕಾಣುವ ಹಲವಾರು ಕಾಯಿಲೆಗಳನ್ನು ಬೇರ್ಪಡಿಸಲು ಸಹಾಯಕಾರಿ. ಈ ರೋಗ ನಿದಾನದ ವಿಜ್ಞಾನದಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳು, ಗಣಕ ಯಂತ್ರ ಮಾಹಿತಿ ತಂತ್ರವಿದ್ಯೆ, ಅಂತರಜಾಲ ವ್ಯವಸ್ಥೆ ಮುಂತಾದವು ರೋಗದ ಪತ್ತೆ, ಚಿಕಿತ್ಸೆ ಹಾಗೂ ತಡೆಗಟ್ಟುವಿಕೆಯಲ್ಲಿ ಬಹು ಸಹಾಯಕಾರಿ.

ರೋಗವಿಜ್ಞಾನ: ವೈದ್ಯವಿಜ್ಞಾನದ ಒಂದು ಶಾಖೆ (ಪೆತಾಲಜಿ). ವ್ಯಾಧಿಯ ಮೈದೋರಿಕೆ, ಕಾರಣ ಮತ್ತು ಕ್ರಿಯಾತಂತ್ರಗಳನ್ನು ಕುರಿತ ಶಾಸ್ತ್ರೀಯ ಅಧ್ಯಯನ. ವೈದ್ಯಕೀಯದ ಇತರ ಶಾಖೆಗಳಾದ ಅಂಗರಚನಾವಿಜ್ಞಾನ, ಶರೀರಕ್ರಿಯಾವಿಜ್ಞಾನ, ಸೂಕ್ಷ್ಮಜೀವವಿಜ್ಞಾನ, ಜೀವರಸಾಯನವಿಜ್ಞಾನ ಮತ್ತು ಅಂಗಾಂಶವಿಜ್ಞಾನಗಳಿಂದ ಪಡೆದ ಜ್ಞಾನವನ್ನು ಇಲ್ಲಿ ಬಳಸಿಕೊಳ್ಳುವುದಿದೆ. ರೋಗ ತಲೆದೋರದಂತೆ ಅದನ್ನು ನಿಯಂತ್ರಿಸುವ ಸಂಬಂಧದಲ್ಲಿ ವಿಧಿವಿಧಾನಗಳನ್ನು ರೂಪಿಸಿಕೊಳ್ಳುವ ಪೂರ್ವದಲ್ಲಿ ರೋಗವಿಜ್ಞಾನ ವಿಧಾನದಿಂದ ಪಡೆಯುವ ಮಾಹಿತಿ ಬಲು ಮುಖ್ಯವೆನಿಸುತ್ತದೆ.

ರೋಗವಿಜ್ಞಾನವನ್ನು ಕುರಿತ ಶಾಸ್ತ್ರೀಯ ಅಧ್ಯಯನ ಸುಮಾರು ೧೫೦ ವರ್ಷಗಳಷ್ಟು ಹಿಂದೆಯೇ ಪ್ರಾರಂಭವಾಗಿತ್ತು. ಸೂಕ್ಷ್ಮದರ್ಶಕದ ಉಪಜ್ಞೆಯೊಂದಿಗೆ ವ್ಯಕ್ತಿಯೊಬ್ಬನಲ್ಲಿ ತಲೆದೋರುವ ರೋಗದ ಸಲುವಾಗಿ ಪ್ರಕಟಗೊಳ್ಳುವ ಚಿಹ್ನೆ ಮತ್ತು ಲಕ್ಷಣಗಳನ್ನು ಅವನಲ್ಲಿಯ ಕೋಶೀಯ ಬದಲಾವಣೆಗಳೊಂದಿಗೆ ಸಹಸಂಬಂಧಿಸುವ ಕಾರ್ಯವೂ ನಡೆದುಬಂತು. ಪ್ರಾರಂಭದ ಹಂತಗಳಲ್ಲಿ ರೋಗವಿಜ್ಞಾನ ವಿವರಣಾತ್ಮಕವಾಗಿಯೇ ಇತ್ತಾದರೂ ಕಾಲಕ್ರಮೇಣ ಅದು ನಿಶ್ಚಿತ ವ್ಯಾಖ್ಯೆಯನ್ನು ಪಡೆದುಕೊಂಡು ರೋಗದ ಕಾರಣಗಳನ್ನೂ, ಲಕ್ಷಣಗಳನ್ನೂ ವಿಧಿವತ್ತಾಗಿ ನಿರ್ಣಯಿಸುವ ಹಂತವನ್ನು ತಲುಪಿತು. ಆರಂಭದಲ್ಲಿ ವ್ಯಕ್ತಿಯ ಮರಣಾನಂತರ ಆತನ ಮೃತದೇಹದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಆ ವ್ಯಕ್ತಿಯ ಜೀವಿತಾವಧಿಯಲ್ಲಿ ಕಂಡುಬಂದಿದ್ದ ಕಾಯಿಲೆಯ ಚಿಹ್ನೆಗಳೊಂದಿಗೆ ಸಹಸಂಬಂಧಿಸಿ, ಪರೀಕ್ಷೆ ನಡೆಸುವುದು ರೂಢಿಯಾಗಿತ್ತು. ಸಂಶೋಧನೆ, ಅಧ್ಯಯನಗಳು ಮುಂದುವರಿದಂತೆಲ್ಲ ರೋಗ ಹಾಗೂ ತತ್ಸಂಬಂಧೀ ಕ್ಷೇತ್ರಗಳೆನಿಸುವ ರೋಗಕಾರಣವಿಜ್ಞಾನ (ಈಟಿಯಾಲಜಿ), ಸೂಕ್ಷ್ಮ ದರ್ಶಕೀಯ ಅಂಗಾಂಶ ವಿಜ್ಞಾನ (ಮೈಕ್ರೊಸ್ಕೋಪಿಕ್ ಅನಾಟಮಿ), ಪರಪೀಡಾವಿಜ್ಞಾನ – (ಪ್ಯಾರಾಸೈಟಾಲಜಿ), ಕ್ರಿಯಾತ್ಮಕ ವ್ಯತ್ಯಾಸಗಳು, ರಾಸಾಯನಿಕ ಬದಲಾವಣೆಗಳು ಇಂಥ ಕ್ಷೇತ್ರಗಳಲ್ಲೆ ರೋಗವಿಜ್ಞಾನ ವಿಸ್ತರಣೆಯನ್ನು ಪಡೆಯಿತು. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ರೋಗವಿಜ್ಞಾನಕ್ಕೆ ಸಂಬಂಧಿಸಿದಂತೆ ಈ ಉಪಕ್ರಮವನ್ನು ಸೂಕ್ಷ್ಮಜೀವ ವೈಜ್ಞಾನಿಕ ಪ್ರಕ್ರಮಗಳೊಂದಿಗೆ ಬಳಸಿಕೊಂಡದ್ದರ ಫಲವಾಗಿ ಪ್ರೊಟೊಜ಼ೋವಗಳು, ಬ್ಯಾಕ್ಟೀರಿಯಗಳು, ವೈರಸ್ಸುಗಳು ಮತ್ತು ಬೂಸ್ಟುಗಳು (ಫಂಗೈ) ಮನುಷ್ಯನ ಸಾವಿಗೆ ಕಾರಣವಾಗುವ ಜೈವಿಕಕಾರಕಗಳು ಎಂಬುದು ತಿಳಿದುಬಂತು. ಸೋಂಕುರೋಗಗಳು ಬಹುತೇಕ ವ್ಯಕ್ತಿಗಳನ್ನು ಮರಣಕ್ಕೆ ಈಡುಮಾಡಿವೆ. ಈ ರೋಗಗಳನ್ನು ನಿಯಂತ್ರಿಸಲು ಉತ್ತಮ ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯಕ್ರಮಗಳು ಬಲು ಪ್ರಮುಖ ಪಾತ್ರ ವಹಿಸಿದುವು. ಪ್ರತಿಜೀವಿರೋಧಕಗಳ (ಆ್ಯಂಟಿಬಯೊಟಿಕ್ಸ್) ಉತ್ಪಾದನೆ ಮತ್ತು ಪ್ರತಿರಕ್ಷಣಾತಂತ್ರಗಳು (ಇಮ್ಯುನೈಸೇಶನ್ ಟೆಕ್ನಿಕ್ಸ್) ಇಂಥ ಮಾರಕ ರೋಗಗಳನ್ನು ಬಲುಮಟ್ಟಿಗೆ ನಿಯಂತ್ರಿಸುವುದರಲ್ಲಿ ಸಫಲವಾಗಿವೆ. ಎಲ್ಲ ರೋಗಗಳೂ ತಮ್ಮ ಆಣುವಿಕ ಹಂತದಲ್ಲೇ ಬದಲಾವಣೆಗಳನ್ನು ಪ್ರದರ್ಶಿಸುತ್ತವೆ ಎಂಬುದು ಈಗ ತಿಳಿದುಬಂದಿದೆ. ಕೆಲವೊಂದು ಕಾಯಿಲೆಗಳಲ್ಲಿ ಕಂಡುಬರುವ ಜೀವರಾಸಾಯನಿಕ ಬದಲಾವಣೆಗಳು ಏನು ಎಂಬುದನ್ನು ತಿಳಿದುಕೊಳ್ಳಲು ವಿಜ್ಞಾನಿಗಳು ಶ್ರಮಿಸುತ್ತಿದ್ದಾರೆ.

ರೋಗವಿಜ್ಞಾನದಲ್ಲಿ ಎರಡು ಶಾಖೆಗಳಿವೆ. ಆಸಕ್ತಿ ಅನುಸಾರ ಇವನ್ನು ಅಭ್ಯಸಿಸುವುದಿದೆ; ೧. ರೋಗನಿದಾನ (ಡಯಾಗ್ನೋಸಿಸ್) ಕುರಿತದ್ದು ಚಿಕಿತ್ಸಾರೋಗ ವಿಜ್ಞಾನ (ಕ್ಲಿನಿಕಲ್ ಪೆತಾಲಜಿ). ವೈದ್ಯವಿಜ್ಞಾನದಲ್ಲಿ ಅಧ್ಯಯನ ಸಂಶೋಧನೆಗಳು ಮುಂದುವರಿದಂತೆಲ್ಲ ಶಸ್ತ್ರಚಿಕಿತ್ಸಾರೋಗ ವಿಜ್ಞಾನ, ನರಸಂಬಂಧೀರೋಗವಿಜ್ಞಾನ ಎಂಬ ಉಪಶಾಖೆಗಳು ಏರ್ಪಟ್ಟಿವೆ. ೨. ನಿಯಂತ್ರಿತ ಸನ್ನಿವೇಶಗಳಲ್ಲಿ ರೋಗದ ಕ್ರಿಯಾತಂತ್ರಗಳನ್ನು ಅಧ್ಯಯನ ನಡೆಸುವುದು ಪ್ರಾಯೋಗಿಕ ರೋಗವಿಜ್ಞಾನ. ಸಾಮಾನ್ಯ ರೋಗವಿಜ್ಞಾನ ಎಂಬುದು ಎಲ್ಲ ಕ್ಷೇತ್ರಗಳನ್ನು ಕುರಿತು ಇದೆಯಾದರೂ ಮುಖ್ಯವಾಗಿ ಇದು ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ್ದಾಗಿದೆ.

ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂಡಿಬಂದಿರುವ ಒಂದು ನೂತನ ವಿಭಾಗ ಪರಿಸರೀಯ ರೋಗವಿಜ್ಞಾನ (ಎನ್‌ವಿರಾನ್‌ಮೆಂಟಲ್ ಪೆತಾಲಜಿ). ಇದು ಭೌತ ಮತ್ತು ರಾಸಾಯನಿಕ ಕಾರಕಗಳಿಂದ ಉಂಟಾಗುವ ರೋಗಪ್ರಕ್ರಿಯೆಗಳನ್ನು ಕುರಿತು ಅಧ್ಯಯಿನಿಸುತ್ತದೆ. ಪರಿಸರೀಯ ರೋಗ ವಿಜ್ಞಾನಕ್ಕೆ ಸಂಬಂಧಿಸಿದಂತೆ ಪರಿಸರ ಮಾಲಿನ್ಯದಿಂದ ಉಂಟಾಗುವ ಹೃದಯರೋಗಗಳು, ಅತಿರೋಸ್ಕ್ಲಿರೋಸಿಸ್ ಮತ್ತು ಕ್ಯಾನ್ಸರ್ ಇವೆಲ್ಲ ತಮ್ಮ ಪ್ರಭಾವ ಬೀರುತ್ತವೆ.

ಒಂದು ಸಂಕುಚಿತ ಅರ್ಥದಲ್ಲಿ ಹೇಳುವುದಾದರೆ, ದೇಹದಲ್ಲಿ ಉಂಟಾದ ಗಾಯಗಳಿಗೆ ಜೀವಿ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದರ ಅಧ್ಯಯನವೇ ರೋಗವಿಜ್ಞಾನ. ಗಾಯಕ್ಕೆ ಈಡಾಗಿರುವ ಜೀವಕೋಶಗಳ ಚಟುವಟಿಕೆಗಳು ಗಾಯದ ಸಮೀಪದಲ್ಲೋ ದೇಹದ ಬೇರೆಡೆಗಳಲ್ಲೋ ಪ್ರಕಟವಾಗಬಹುದು. ರೋಗವಿಜ್ಞಾನ ವಿಧಾನಗಳಿಂದ ಮತ್ತು ಕೋಶಗಳಲ್ಲಿ ಕಂಡುಬರುವ ಪ್ರತಿಕ್ರಿಯೆಗಳಿಂದ ರೋಗಕ್ಕೆ ಸಂಬಂಧಿಸಿದ ಫಲಿತಾಂಶಗಳನ್ನು ತಿಳಿಯಬಹುದು. (ಎಸ್.ಎನ್.ಎಮ್.)

**ರೋಟಿಫೇರಾ:** ದೇಹದ, ದ್ವಿಪಾರ್ಶ್ವ ಸಮರೂಪತೆಯ, ದೇಹಾಂತರಾವಕಾಶ ವಿಲ್ಲದ ನವುರಾದ ಶಿಲಿಕೆಗಳುಳ್ಳ ಮತ್ತು ಕಿರೀಟಾಕಾರದ ತಲೆಯುಳ್ಳ ಜಲವಾಸಿ ಅಕಶೇರುಕ

ವಂಶ. ಈ ವಂಶದಲ್ಲಿ ಸು. 2,000 ಪ್ರಭೇದಗಳಿವೆ. ಬಹುತೇಕ ಪ್ರಭೇದಗಳು ಸಿಹಿನೀರಿನಲ್ಲಿ, ಕೆಲವು ಸಮುದ್ರದಲ್ಲಿ ಜೀವಿಸುತ್ತವೆ. ಗಾತ್ರ ತುಂಬಾ ಚಿಕ್ಕದಾಗಿದ್ದು, 50 ರಿಂದ 500 ಮೈಮೀ ಉದ್ದವಿದೆ.

ದೇಹದಲ್ಲಿ ವ್ಯವಸ್ಥಿತವಾದ ಆಹಾರ ಸಾಗಣೆಯ ಸಲಕರಣೆಗಳಿವೆ. ತಲೆಯ ತುದಿಯಲ್ಲಿ ಕರೊನ ಭಾಗವು ಆಹಾರವನ್ನು ಒಟ್ಟುಗೂಡಿಸುತ್ತದೆ. ಕರೊನದ ಸುತ್ತ ಇರುವ ಶಿಲಿಕೆಗಳು ಆಹಾರವನ್ನು ಒಟ್ಟುಗೂಡಿಸಿ, ಬಾಯಿಗೆ ತೂರಲು ಸಹಾಯಕವಾಗಿವೆ. ಶಿಲಿಕೆಗಳ ಬಡಿತದಿಂದ ಇವು ಚಲಿಸುತ್ತವೆ. ಚಲಿಸುವಾಗ ಶಿಲಿಕೆಗಳೆಲ್ಲವೂ ಒಟ್ಟಾಗಿ ಬಡಿಯುವುದರಿಂದ ಚಕ್ರವು ತಿರುಗಿದಂತೆ ಕಾಣುವುದು. ಆದ್ದರಿಂದ ಇವುಗಳನ್ನು ಗಾಲಿ ಪ್ರಾಣಿಗಳು (ವೀಲ್ ಅನಿಮಲ್) ಎಂದು ಕರೆಯಲಾಗುತ್ತದೆ.



**ಪೆಡಾಲಿಯನ್**

ಸ್ವತಂತ್ರವಾಗಿ ಜೀವಿಸುವ ರೋಟಿಫೇರಾಗಳು ಸಾವಯವ ಕಲ್ಮಶ, ಬ್ಯಾಕ್ಟೀರಿಯಾ, ಪ್ರೊಟಿಸ್ಟ್‌ಗಳಂತಹ ಚಿಕ್ಕಚಿಕ್ಕ ಜೀವಿಗಳನ್ನು ತಿನ್ನುತ್ತವೆ. ಕೆಲವು ರೋಟಿಫೇರಾಗಳು ತಳವೂರಿಕೊಂಡು ಒಂದು ನಿರ್ದಿಷ್ಟ ಸ್ಥಳದಲ್ಲಿ ಜೀವಿಸುತ್ತವೆ. ಕೆಲವು ತೆವಳಿಕೊಂಡು, ತೇಲಿಕೊಂಡು, ಅಥವಾ ಈಜಿಕೊಂಡು ಜೀವಿಸುತ್ತವೆ. ಇವು ಏಕಲಿಂಗಿಗಳು. ಆದರೆ ಕೆಲವು ಪ್ರಭೇದಗಳಲ್ಲಿ ಗಂಡು ಜೀವಿಗಳಿಲ್ಲ. ಪ್ರತಿ ಹೆಣ್ಣು ರೋಟಿಫೇರಾ ಜೀವಿತಾವಧಿಯಲ್ಲಿ 8 ರಿಂದ 20 ತತ್ತಿಗಳನ್ನಿಟ್ಟು ವಂಶಾಭಿವೃದ್ಧಿ ಮಾಡುತ್ತದೆ. ಇವುಗಳ ಜೀವಿತಾವಧಿ ಸು. 2 ವಾರಗಳು. (ಕೆ.ಎಸ್.ಡಿ.)

**ರೋಸಾಲಿನ್ ಫ್ರಾಂಕ್‌ಲಿನ್ (1920–1958)**: ಇಂಗ್ಲೀಷ್ ರಸಾಯನ ಶಾಸ್ತ್ರ ವಿಜ್ಞಾನಿ. ಜನನ: 25 ಜುಲೈ 1920, ಲಂಡನ್‌ನಲ್ಲಿ ಕ್ಷ–ಕಿರಣದ ವಕ್ರವಿಯೋಜನೆ ತಂತ್ರಜ್ಞಾನದಿಂದ (ಎಕ್ಸ್‌ರೇ ಡಿಫ್ರಾಕ್ಷನ್) ಡಿಎನ್‌ಎ (ಡಿಆಕ್ಸಿ ರೈಬೋನ್ಯೂಕ್ಲಿಕ್ ಆಸಿಡ್) ಯ ಸೂಕ್ಷ್ಮ ರಚನೆಯನ್ನು ಕಂಡುಹಿಡಿದಳು.

ಚಿಕ್ಕ ವಯಸ್ಸಿನಲ್ಲಿಯೇ ಈ ತಂತ್ರಜ್ಞಾನದಿಂದ ಲಭಿಸಿದ ಆಧರಾಂಶಗಳನ್ನು ವಿಜ್ಞಾನಿಗಳಿಗೆ ಒದಗಿಸಿದ್ದಳು. ಕ್ಷ–ಕಿರಣಗಳ ವಕ್ರ ವಿಯೋಜನೆಯಿಂದ, ಕ್ಷ–ಕಿರಣಗಳು ಪಕ್ಕಕ್ಕೆ ಬಾಗುತ್ತವೆ. ಈ ವಿಧಾನದಿಂದ ಡಿ.ಎನ್.ಎ.ಯು ಕ್ರಮವಾಗಿ ಪುನರಾವರ್ತನೆ ಹೊಂದಿರುವ ಭಾಗಗಳ ಪಡಿಯಚ್ಚಿನಿಂದ ಕೂಡಿರುವುದು ತಿಳಿಯಿತು. ಡಿಎನ್‌ಎ ಸೂಕ್ಷ್ಮ ರಚನೆಯನ್ನು ತಿಳಿಯುವಲ್ಲಿ ರೊಸಾಲಿನ್ ಫ್ರಾಂಕ್‌ಲಿನ್‌ಳ ಕ್ಷ–ಕಿರಣ ವಕ್ರ ವಿಯೋಜನೆ ತಂತ್ರಜ್ಞಾನ ಬಹಳ ಸಹಾಯಕವಾಯಿತು. 1953 ರಲ್ಲಿ ಅಮೇರಿಕದ ಜೀವರಸವಿಜ್ಞಾನಿ ಜೇಮ್ಸ್ ವ್ಯಾಟ್‌ಸನ್ ಮತ್ತು ಇಂಗ್ಲೀಷ್ ಭೌತವಿಜ್ಞಾನಿ ಫ್ರಾನ್ಸಿಸ್ ಕ್ರಿಕ್ ಇಬ್ಬರೂ ಕೂಡಿ ಡಿ.ಎನ್.ಎ. ಸಣ್ಣ ಕಣದ ಪ್ರತಿಕೃತಿ ತಯಾರಿಸಲು ಚಂಡು ಮತ್ತು ಕಡ್ಡಿ (ನಮೂನೆ) ಮಾದರಿಯನ್ನು ತಯಾರು ಮಾಡಿದರು. ಇದಕ್ಕೆ ರೊಸಾಲಿನ್‌ಳ ತಂತ್ರಜ್ಞಾನದಿಂದ ದೊರಕಿದ ಮಾಹಿತಿ ಬಹಳ ಉಪಯೋಗಕ್ಕೆ ಬಂದಿತು. ವಕ್ರ ವಿಯೋಜನೆಯಿಂದ ತಿಳಿದ ಸಮಸೂತ್ರತೆ ಮತ್ತು ಸಮರೂಪತೆ ಇವರಿಬ್ಬರ ಮಾದರಿಯಲ್ಲೂ ರೂಪಿಸಲಾಗಿತ್ತು. ವ್ಯಾಟ್‌ಸನ್ ಮತ್ತು ಕ್ರಿಕ್ ಅವರ ಮಾದರಿಯಲ್ಲಿ ಸಮ ಪ್ರಮಾಣದ ಗ್ವಾನಿನ್ ಮತ್ತು ಸೈಟೋಸಿನ್ ಹಾಗೂ ಅಡೆನೀನ್ ಮತ್ತು ಥೈಮೀನ್ ಇದ್ದುವು. ಡಿಎನ್‌ಎಯ ಸೂಕ್ಷ್ಮರಚನೆಯನ್ನು ಪ್ರತಿಪಾದಿಸಲು ವ್ಯಾಟ್‌ಸನ್ ಹಾಗೂ ಕ್ರಿಕ್ ಅವರಿಗೆ ರೋಸಾಲಿನ್‌ಳ ವಕ್ರ ವಿಯೋಜನೆ ತಂತ್ರಜ್ಞಾನ ಒಂದು ನಿರ್ಣಾಯಕ ನಿಲುವನ್ನು ಕೊಟ್ಟಿತು.

ರೋಸಾಲಿನ್‌ಳ ಡಿಎನ್‌ಎ ಛಾಯಾಚಿತ್ರದ ಮಧ್ಯದಲ್ಲಿ ಎಕ್ಸ್ ಹಾಗೆ ಕಂಡದ್ದು ಒಂದು ಸುರುಳಿಯನ್ನು ಸೂಚಿಸಿದರೆ, ಸುತ್ತಲೂ ಸಮಸೂತ್ರತೆ ಮತ್ತು ಸಮರೂಪತೆಯಿಂದ ಉಪಭಾಗಗಳು ಓರಣವಾಗಿ ಅಳವಡಿಸಿಕೊಂಡಿರುವುದು ಕಾಣಿಸಿತು. ಇನ್ನೂ ಹಲವು ರೀತಿಯ ಸಾಧ್ಯತೆಗಳನ್ನು ಪರಿಶೀಲಿಸಿದ್ದರೂ, ಅವರುಗಳಿಗೆ ಖಚಿತವಾದ ನಿರ್ಧಾರಕ್ಕೆ ರೋಸಾಲಿನ್‌ಳ ಮಾದರಿಯನ್ನು ನೋಡುವವರೆಗೂ ಬರಲಾಗಿರಲಿಲ್ಲ. 16 ಏಪ್ರಿಲ್, 1958ರಂದು ಗರ್ಭಾಶಯದ ಕ್ಯಾನ್ಸರ್‌ನಿಂದ ಮರಣ. ಡಿಎನ್‌ಎಯ ಭೌತಿಕ ರಚನೆ ಕಂಡು ಹಿಡಿದದ್ದಕ್ಕಾಗಿ ವ್ಯಾಟ್ಸನ್ ಮತ್ತು ಕ್ರಿಕ್‌ರಿಗೆ 1963 ರಲ್ಲಿ ನೊಬೆಲ್ ಪ್ರಶಸ್ತಿ ದೊರಕಿತು. ಆದರೆ ರೋಸಾಲಿನ್‌ಗೆ ನೊಬೆಲ್ ಪಾರಿತೋಷಕದಲ್ಲಿ ಪಾಲು ಸಿಕ್ಕಲಿಲ್ಲ. ರೋಸಾಲಿನ್ ಫ್ರಾಂಕ್‌ಲಿನ್ ನಿಜಕ್ಕೂ ಒಬ್ಬ ತೆರೆಮರೆಯಲ್ಲೇ ಕೆಲಸ ಮಾಡಿ ಅಳಿದುಹೋದ ಜೀವಿಜ್ಞಾನಿ. (ಎಸ್.ಎಸ್.)

**ರೋಹು:** ಪ್ರಮುಖ ಕಾರ್ಪ್‌ಮೀನುಗಳ ಪೈಕಿ ಒಂದು. ಲೇಬಿಯೊ ರೋಹಿಟ ಶಾಸ್ತ್ರೀಯ ಹೆಸರು. ಕಾಟ್ಲದಂತೆಯೇ ಸರ್ವವ್ಯಾಪಿ ಎನ್ನಬಹುದು. ಭಾರತದಲ್ಲಿ ಸಿಕ್ಕುವ ಕಾರ್ಪ್ ಮೀನುಗಳಲ್ಲೆಲ್ಲ ಅತ್ಯಂತ ರುಚಿಕರವೆಂದು ಹೆಸರಾಗಿದೆ. ಉತ್ತರ ಭಾರತದ ಎಲ್ಲ ನದಿಗಳಲ್ಲಿಯೂ ವಾಸಿಸುತ್ತದೆ. ಆಂಧ್ರದ ಗೋದಾವರಿ ನದಿಯಲ್ಲಿ ಸ್ವಲ್ಪಮಟ್ಟಿಗೆ ಸಿಕ್ಕುತ್ತದೆ. ಕರ್ನಾಟಕದಲ್ಲಿ ಇತ್ತೀಚೆಗೆ ಇದನ್ನು ಸಾಕುವ ಪ್ರಯತ್ನ ನಡೆದಿದೆ. ದಕ್ಷಿಣ ಭಾರತದ ಬೇರೆ ಯಾವ ನದಿಯಲ್ಲೂ ಸಿಕ್ಕುವುದಿಲ್ಲ. ಇದರ ತಲೆ ಕಾಟ್ಲದ್ದಕ್ಕಿಂತ ಚಿಕ್ಕದು. ಆದರೆ ಅದಕ್ಕಿಂತ ಚೂಪು. ಮೈಮೇಲೆ ಮಾಸಲು ಕೆಂಪು ಬಣ್ಣದ ಹುರುಪೆಗಳಿವೆ. ದೇಹ ಕಾಟ್ಲದ್ದಕ್ಕಿಂತ ಹೆಚ್ಚು ಉದ್ದವಾಗಿದೆ.

ರೋಹು ತಾನು ವಾಸಿಸುವ ನೀರಿನ ಮಧ್ಯ ಮತ್ತು ತಳಭಾಗಗಳಲ್ಲಿರುವ ಆಹಾರವನ್ನು ತೆಗದುಕೊಳ್ಳುತ್ತದೆ. ದೇಹದ ಮುಂಭಾಗದ ತುದಿಯಲ್ಲಿ ಛಿದ್ರವಾದ ತುಟಿ ಇರುವುದರಿಂದ ಆಳವಿಲ್ಲದ ಕೊಳಗಳ ತಳಭಾಗದಲ್ಲಿರುವ ಆಹಾರ ಆರಿಸಲು ಸಹಾಯವಾಗುತ್ತದೆ. ಮರಳು ಮಣ್ಣು, ಕೊಳೆಯುತ್ತಿರುವ ಸಸ್ಯಜನ್ಯವಸ್ತು, ಅತಿಸೂಕ್ಷ್ಮವಾದ ಪಾಚಿ ಮುಂತಾದವು ಈ ಮೀನಿನ ಮೆಚ್ಚಿನ ಆಹಾರ. ಕಾಟ್ಲದಂತೆಯೇ ರೋಹು ಮೀನು ಕೂಡ ನದಿಗಳಲ್ಲಿ ಮುಂಗಾರು ಮಳೆಯ ಕಾಲದಲ್ಲಿ ಮರಿ ಮಾಡುತ್ತದೆ. ಕಾಟ್ಲದ ತತ್ತಿಕೂಟದ ಜೊತೆಗೆ ರೋಹುವಿನ ತತ್ತಿಕೂಟವೂ ಸಿಕ್ಕುತ್ತದೆ. ಪ್ರಮುಖ ಕಾರ್ಪುಗಳ ತತ್ತಿಕೂಟ ಮರಿಗಳಲ್ಲಿ ರೋಹುವಿ ನದೇ ಬಹುಪಾಲು. ಕರ್ನಾಟಕಕ್ಕೆ ಕಳೆದ ಹಲವಾರು ವರ್ಷಗಳಿಂದ ಕೊಲ್ಕತ್ತದಿಂದ ತಂದು ಇದನ್ನು ಸಾಕಲಾಗುತ್ತಿದೆ. ಇದು ಈಗ ಬೀಳಂದೂರು, ಹೇಸರಘಟ್ಟ, ಬೈರಮಂಗಲ, ನೀರಸಾಗರಗಳಿಗೆ ಚೆನ್ನಾಗಿ ಹೆ ೊಂದಿಕೊಂಡಿದೆ. (ಬಿ.ಎನ್.ಬಿ.ಎ.)

**ರ‍್ಯಾಕೂನ್:** ಉತ್ತರ ಅಮೆರಿಕದಲ್ಲಿರುವ ಮಾಂಸಾಹಾರಿ ಸ್ತನಿ. ಕಾರ್ನಿವೊರ ಗಣದ ಪ್ರೋಸೈಯಾನಿಡೆ ಕುಟುಂಬಕ್ಕೆ ಸೇರಿದೆ. ಪ್ರೋಸೈಯಾನ್ ಜಾತಿಯ ಸುಮಾರು ೭ ಪ್ರಭೇದಗಳಿಗೆ ಸಾಮಾನ್ಯವಾಗಿ ಈ ಹೆಸರು ಅನ್ವಯವಾಗುವುದಾದರೂ ಪ್ರಮುಖವಾಗಿ ಈ ಹೆಸರಿನಿಂದ ಪ್ರಸಿದ್ಧವಾಗಿರುವುದು ಪ್ರೋಸೈಯಾನ್ ಲೋಟೊರ್ ಎಂಬುದು ಮಾತ್ರ.

ದೇಹದ ಉದ್ದ ಸುಮಾರು ೪೦–೬೦ ಸೆಂಮೀ. ಭುಜದ ಬಳಿಯ ಎತ್ತರ ೨೦–೩೦ ಸೆಂಮೀ. ತೂಕ ೧.೫–೨.೫ ಕಿಗ್ರಾಂ ಮೈಬಣ್ಣ ಬೂದು. ೨೦–೪೦ ಸೆಂಮೀ ಉದ್ದದ ಬಾಲವಿದೆ. ಮೈಮೇಲೂ ಬಾಲದಲ್ಲೂ ಹುಲುಸಾದ, ಮೃದುವಾದ ತುಪ್ಪುಳಿನಂಥ ಕೂದಲುಗಳಿವೆ. ಬಾಲದಲ್ಲಿ ಕಪ್ಪುಬಣ್ಣದ ೫–೧೦ ಪಟ್ಟೆಗಳಿವೆ. ಮುಸುಡಿ ನಾಯಿಮುಸುಡಿಯಂತೆ ಮುಂಚಾಚಿದೆ. ಮುಖದ ಮೇಲೆ ಕಪ್ಪುಬಣ್ಣದ ಅಡ್ಡ ಪಟ್ಟೆಯುಂಟು. ಕಾಲುಗಳಲ್ಲಿ ಉದ್ದ ಬೆರಳುಗಳೂ ಚೂಪು ನಖಗಳೂ ಇವೆ. ಕೈಗಳನ್ನು ಕೋತಿಗಳು ಬಳಸುವಂತೆಯೇ ಬಲುಸಮರ್ಥವಾಗಿ ಬಳಸಬಲ್ಲುದು.

ರ‍್ಯಾಕೂನ್ ನಿಶಾಚರಿ. ಸಾಮಾನ್ಯವಾಗಿ ಹಗಲಿನಲ್ಲಿ ಮರದ ಪೊಟರೆಗಳಲ್ಲೊ ಕಲ್ಲುಬಂಡೆಗಳ ಸಂದುಗಳಲ್ಲೊ ಮಲಗಿದ್ದು ರಾತ್ರಿ ವೇಳೆ ಬೇಟೆ ಅರಸಿ ಹೊರಡುತ್ತದೆ. ಮರ ಹತ್ತುವುದರಲ್ಲಿ ಅಂತೆಯೇ ನೀರಿನಲ್ಲಿ ಈಜುವುದರಲ್ಲಿ ನಿಷ್ಣಾತ. ಇದು ಎಲ್ಲ

ಬಗೆಯ ಆಹಾರವನ್ನು ತಿನ್ನುತ್ತದಾದರೂ ಜಲಜೀವಿಗಳಾದ ಕಪ್ಪೆ, ಮೀನು, ಸಣ್ಣಪುಟ್ಟ ನೆಲಪ್ರಾಣಿಗಳನ್ನೂ ಇಷ್ಟಪಡುತ್ತದೆ. ಹಲವಾರು ಬಗೆಯ ಕಾಯಿ, ಬೀಜ, ಕಾಳುಗಳನ್ನೂ ತಿನ್ನುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ದಕ್ಷಿಣ ಪ್ರಾಂತ್ಯಗಳಲ್ಲಿ ಕಾಣಸಿಗುವ ರ್‍ಯಾಕೂನ್ ವರ್ಷವಿಡೀ ಚಟುವಟಿಕೆಯಿಂದ ಇರುತ್ತದೆ ಆದರೆ ಉತ್ತರ ಭಾಗದಲ್ಲಿ ಜೀವಿಸುವ ರ್‍ಯಾಕೂನ್ ಜಾತಿ ಚಳಿಗಾಲದಲ್ಲಿ ಶಿಶಿರ ನಿದ್ರಾವಶವಾಗುತ್ತದೆ.

ಇದರ ಸಂತಾನವೃದ್ಧಿಯ ಕಾಲ ಜನವರಿಯಿಂದ ಜೂನ್. ಗರ್ಭಾವಸ್ಥೆಯ ಅವಧಿ ಸುಮಾರು ೬೫ ದಿವಸಗಳು. ಒಂದು ಸೂಲಿಗೆ ೧–೭ ಮರಿ ಹುಟ್ಟುತ್ತವೆ. ಮರಿಗಳು ಸುಮಾರು ೧೦ ವಾರಗಳ ಕಾಲ ತಾಯಿಯೊಡನೆಯೇ ಇದ್ದು ನಿಧಾನವಾಗಿ, ಅಂದರೆ ಒಂದು ವರ್ಷ ವಯಸ್ಸಾಗುವ ವೇಳೆಗೆ ಸ್ವತಂತ್ರವಾಗಿ ಜೀವಿಸತೊಡಗುತ್ತವೆ. ರ್‍ಯಾಕೂನಿನ ಆಯುಸ್ಸು ಸುಮಾರು ೧೦–೧೫ ವರ್ಷಗಳು. ***

**ರ್‍ಯಾಟಿಟೆ:** ಎದೆಯ ಮೂಳೆಯಲ್ಲಿ ದೋಣಿಯಾಕಾರದ ಕೀಲ್‌ಮೂಳೆ ಇಲ್ಲದಿರುವ ಉಷ್ಟ್ರಪಕ್ಷಿ, ಈಮ್ಯು, ಕ್ಯಾಸೋವರಿ ಮತ್ತು ರೀಯ ಪಕ್ಷಿಗಳನ್ನೊಳಗೊಂಡ ಪಕ್ಷಿಗಳ ಉಪಗಣ. ಅನೇಕ ಪಕ್ಷಿವಿಜ್ಞಾನಿಗಳು ಕಿವಿ ಮತ್ತು ನಶಿಸುತ್ತಿರುವ ಮೋಯಾ ಪಕ್ಷಿಗಳನ್ನೂ ಸಹ ಈ ಗುಂಪಿಗೆ ಸೇರಿಸುತ್ತಾರೆ. ಈ ಎಲ್ಲಾ ಜಾತಿಯ ಪಕ್ಷಿಗಳ ಗರಿಗಳ ಅಡ್ಡಎಳೆ (ಬಾರ್ಬ್ಸ್) ಗಳಲ್ಲಿ ಕೊಂಡಿಗಳಿಲ್ಲ. ಕೋರಾಕಾಯಿಡ್ ಮತ್ತು ಸ್ಕಾಪುಲ ಮೂಳೆಗಳು ಸೇರಿಕೊಂಡಿವೆ ಮತ್ತು ಮೊದಲನೆಯ ಕಾಲ್ಬೆರಳು ಕಂಡುಬರುವುದಿಲ್ಲ. ಈ ಗುಂಪು ಡೈನಾಸರಸ್ ಜಾತಿಯ ಸರೀಸೃಪಗಳಿಂದ ಸ್ವತಂತ್ರವಾಗಿ ವಿಕಾಸ ಹೊಂದಿರಬಹುದೆಂದು ವಾದ. ಅಮೇರಿಕೆಯಲ್ಲಿ ಜೀವಿಸುವ ಹಾರಬಲ್ಲ ಟೀನಮಸ್ ಜಾತಿಗೆ ಸೇರಿದ ಪಕ್ಷಿ ಇವುಗಳ ವಂಶಜವಿರಬಹುದು.

ಆಧುನಿಕ ಪಕ್ಷಿ ವಿಂಗಡಣಾವಿಜ್ಞಾನದಂತೆ ಪಕ್ಷಿ ವಿಜ್ಞಾನಿಗಳು ರ್‍ಯಾಟಿಟೆ ಗುಂಪನ್ನು ತೆಗೆದು ಆ ಗುಂಪಿನಲ್ಲಿದ್ದ ಪಕ್ಷಿಗಳನ್ನು ಆರು ಉಪವರ್ಗಗಳಿಗೆ ಸೇರಿಸಿದ್ದಾರೆ.

ರ್‍ಯಾಟಿಟೆ ಗುಂಪಿಗೆ ಸೇರಿದ ಪಕ್ಷಿಗಳ ರಚನೆಯು ಒಂದೇ ರೀತಿಯದಾದರೂ ಅನೇಕ ವ್ಯತ್ಯಾಸಗಳಿವೆ. ಉಷ್ಟ್ರಪಕ್ಷಿಗಳು ಮೈದಾನದಲ್ಲಿ ಸಣ್ಣ ಗುಂಪಿನಲ್ಲಿ ವಾಸಿಸುತ್ತವೆ. ಇವುಗಳನ್ನು ಇತರ ಸಸ್ಯಾಹಾರಿ ಪ್ರಾಣಿಗಳ ಜೊತೆ ನೋಡಬಹುದು. ಇದು ಸಹ ಸಸ್ಯಾಹಾರಿ ಪ್ರಾಣಿ. ಕಾಲೇ ಇವುಗಳ ಮುಖ್ಯ ಆಯುಧ. ಕ್ಯಾಸೊವರಿಗಳು ಕಾಡುಗಳಲ್ಲಿ ವಾಸಿಸುತ್ತವೆ. ಇವುಗಳ ಕಾಲು ಚಿಕ್ಕದಾಗಿದ್ದು ದಪ್ಪ ದೇಹವನ್ನು ಹೊಂದಿರುತ್ತದೆ. ಇವುಗಳೂ ಸಹ ಸಸ್ಯಾಹಾರಿ ಪ್ರಾಣಿಗಳು. ರೀಯಾಗಳು ಮೈದಾನಗಳಲ್ಲಿ ವಾಸಿಸುತ್ತವೆ. ಇವು ಸಂಘಜೀವಿಗಳು. ಇದು ಸಹ ಸಸ್ಯಾಹಾರಿ. ಆದರೆ ಕೆಲವು ಸಾರಿ ಕ್ರಿಮಿ, ಕೀಟಗಳನ್ನು ಸಹ ತಿನ್ನುತ್ತದೆ.

ಕಿವಿ ಪಕ್ಷಿಯು ನ್ಯೂಜಿಲೆಂಡಿನಲ್ಲಿ ಮಾತ್ರ ದೊರಕುತ್ತದೆ. ಇದು ಕೋಳಿಯಷ್ಟು ಗಾತ್ರವನ್ನು ಹೊಂದಿದೆ. ದೃಷ್ಟಿ ಮಂದ. ಆದರೆ ಇದರ ಅಘ್ರಾಣಶಕ್ತಿ ಅಧಿಕ. ಹೆಚ್ಚಾಗಿ ರಾತ್ರಿ ಆಹಾರ ಅರಸಲು ಹೊರಬರುತ್ತದೆ.

ಈ ಗುಂಪಿನ ಪಕ್ಷಿಗಳನ್ನು ರಚನೆಯ ಸಮ್ಮಿಳನದಿಂದ ಬಹಳ ಹಿಂದುಳಿದ ಪಕ್ಷಿಗಳೆಂದೂ ಪಕ್ಷಿ ವಂಶವೃಕ್ಷದ ತಳದಲ್ಲಿರುವುದೆಂದೂ ಪಕ್ಷಿವಿಜ್ಞಾನಗಳ ಅಭಿಪ್ರಾಯ. (ಎಚ್.ಸಿ.ಎಸ್.)

**ರ್ಹೀಸಸ್ ಮಂಗ:** ಪ್ರೈಮೇಟ್ ಗಣ, ಸರ್ಕೊಪಿತಿಸಿಡೆ ಕುಟುಂಬ, ಸರ್ಕೊಪಿತಿಸಿನೆ ಉಪಕುಟುಂಬ, ಮಕಾಕ ಜಾತಿಯ ನಾಲ್ಕು ಪ್ರಭೇದಗಳ ಪೈಕಿ ಒಂದು ಮಂಗ. ವೈಜ್ಞಾನಿಕ ಹೆಸರು, ಮಕಾಕ ಮುಲೇಟ. ದಕ್ಷಿಣ ಮತ್ತು ಆಗ್ನೇಯ ಏಷ್ಯಾವಾಸಿ. ಭಾರತ ಉಪಖಂಡದ ಉತ್ತರ ಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿವೆ.

ಹಳದಿ ಮಿಶ್ರಿತ ಅಥವಾ ಮರಳಿನ ಬಣ್ಣ; ೪೭–೬೪ ಸೆಂಮೀ ಉದ್ದದ ಬಲಿಷ್ಠ ದೇಹ; ೨೦–೩೦ ಸೆಂಮೀ ಉದ್ದದ ಬಾಲ; ೪.೫–೧೧ ಕಿಗ್ರಾಂ ತೂಕ; ಕಿತ್ತಳೆ–ಕೆಂಪು ಬಣ್ಣದ ಕೂದಲು ಇರುವ ಪೃಷ್ಠ ಹಾಗೂ ಒಳತೊಡೆ; ಹಣೆಯಿಂದ ಹಿಮ್ಮುಖವಾಗಿ ಬೆಳೆದಿರುವ ಬೈತಲೆರಹಿತ ತಲೆಗೂದಲು – ಇವು ವಯಸ್ಕ ರ್ಹೀಸಸ್ ಮಂಗದ ವಿಶಿಷ್ಟ ಲಕ್ಷಣಗಳು.



ಬಲಿಷ್ಠ ಗಂಡು ಮಂಗದ ನಾಯಕತ್ವದಲ್ಲಿ ೮–೧೮೦ ಸದಸ್ಯರಿರುವ ಗುಂಪುಗಳಲ್ಲಿ ವಾಸ. ಅಲೆಮಾರೀ ಪ್ರವೃತ್ತಿ. ಅಕ್ಟೋಬರ್–ಡಿಸೆಂಬರ್ ಗಂಡುಹೆಣ್ಣುಗಳು ಕೂಡುವ ಕಾಲ. ಆಹಾರ: ಹಣ್ಣು, ಬೀಜ, ಬೇರು, ಮೂಲಿಕೆ ಮತ್ತು ಚಿಕ್ಕ ಕೀಟಗಳು.

ಹಿಂದು ಮತ್ತು ಬೌದ್ಧರಿಗೆ ಇದು ಪವಿತ್ರ ಪ್ರಾಣಿ ಎಂದೇ, ಭಾರತದಲ್ಲಿ ಮಾನವ ಆವಾಸ ಮತ್ತು ದೇವಾಲಯಗಳ ಆಸುಪಾಸಿನಲ್ಲಿ ಇವು ನೆಲಸಿವೆ.

ದೈಹಿಕ ಪ್ರಕ್ರಿಯೆಗಳಲ್ಲಿ ಮಾನವನನ್ನು ಹೋಲುವುದರಿಂದ ವೈದ್ಯಕೀಯ ಮತ್ತು ಮನೋವೈಜ್ಞಾನಿಕ ಅಧ್ಯಯನಗಳಲ್ಲಿ ಪ್ರಯೋಗಪಶುವಾಗಿ ವ್ಯಾಪಕ ಬಳಕೆ. ಮಾನವನ ಕೆಂಪು ರಕ್ತಕಣಗಳ ಮೇಲ್ಮೈಯಲ್ಲಿರುವ ರ್ಹೀಸಸ್ ಅಂಶ ಎಂಬ ಪ್ರತಿಜನಕಗಳು (ಆಂಟಿಜೆನ್) ರ್ಹೀಸಸ್ ಮಂಗಗಳ ರಕ್ತದಲ್ಲಿ ಮೊದಲು ಪತ್ತೆಯಾಯಿತು. ***

# ಲ

**ಲಗೂನ್:** ಸಮುದ್ರದಲ್ಲಿ ಬದುಕುವ ಕುಟುಕು ಕಣವಂತುಗಳ (ಸಿಲೆಂಟಿರೇಟ) ವಂಶದ ಎಂತೋಝೋವ ವರ್ಗಕ್ಕೆ ಸೇರಿದ ಮೃದುಜೀವಿ. ಈ ಜೀವಿಗಳಲ್ಲಿ ಹಲವಾರು ಪ್ರಭೇದಗಳಿವೆ. ಇವುಗಳಲ್ಲಿ ಕೆಲವು ಪ್ರಭೇದಗಳು ಸಮುದ್ರ ಮಟ್ಟದಿಂದ ಸು. 40 ಮೀ ಆಳದಲ್ಲಿ ಒಟ್ಟಾಗಿ ಕಾಲೋನಿಯನ್ನು ನಿರ್ಮಿಸಿ, ತಮ್ಮ ರಕ್ಷಣೆಗಾಗಿ ಸುಣ್ಣದ ಮನೆಯನ್ನು ಕಟ್ಟುತ್ತವೆ. ವಂಶಾಭಿವೃದ್ಧಿಯಾದಂತೆ ಅವುಗಳ ಸಂಖ್ಯೆ ದುಪ್ಪಟ್ಟಾಗುತ್ತ ಹೋಗಿ ಬೃಹದಾಕಾರದ ದಿಬ್ಬಗಳನ್ನು ನಿರ್ಮಿಸುತ್ತವೆ. ಇವುಗಳನ್ನು ಹವಳ ದಿಬ್ಬಗಳು ಎನ್ನುತ್ತಾರೆ. ದಿಬ್ಬಗಳು ತುದಿಯು ಸಮುದ್ರ ಮಟ್ಟಕ್ಕಿಂತ ಮೇಲೆ ತೂರಿ ಬೆಳೆಯಬಹುದು. ಹೀಗೆ ಅಲ್ಲಲ್ಲಿ ಸುತ್ತಲು ದಿಬ್ಬಗಳು ಬೆಳೆಯುತ್ತಾ ಮಧ್ಯದಲ್ಲಿ ಜಾಗ ಉಳಿದು ಲಗೂನ್ ನಿರ್ಮಾಣವಾಗುತ್ತದೆ. ಅಂದರೆ, ಸಮುದ್ರದಲ್ಲಿ ಹವಳದ ದಿಬ್ಬಗಳು ಸುತ್ತುವರಿದ ಜಲಭಾಗವನ್ನು ಲಗೂನ್ (ಆವೃತ ಜಲಭಾಗ) ಎಂದು ಕರೆಯುತ್ತಾರೆ. ಕನ್ನಡದಲ್ಲಿ ಇದಕ್ಕೆ ಬೂವಿ ಎನ್ನುವರು. ವಿವಿಧ ಭಾಷೆಯಲ್ಲಿ ಬೇರೆ ಬೇರೆ ಹೆಸರುಗಳಿವೆ. ಆದರೆ, ಇದನ್ನು ಲಗೂನ್ ಎಂದು ಎಲ್ಲಾ ಭಾಷೆಗಳಲ್ಲಿ ಕರೆಯುತ್ತಾರೆ. ಲಗೂನ್ ಈ ಪದವು ಲ್ಯಾಟಿನ್ ಭಾಷೆಯ ಲೆಕೂನ ಎನ್ನುವ ಪದದಿಂದ ಹುಟ್ಟಿಕೊಂಡಿದೆ. ಲೆಕುನಾ ಅಂದರೆ ಕೊಳ ಎಂದು ಅರ್ಥ. ಹವಳ ದಿಬ್ಬಗಳಿಂದ ಮಾತ್ರ ಲಗೂನ್ ಉಂಟಾಗುವುದಿಲ್ಲ. ಇದು ಮರಳಿನ ದಂಡೆ ಅಥವಾ ಕೆಸರು ಮಣ್ಣಿನ ಗುಪ್ಪೆಯಿಂದಲು ನಿರ್ಮಿತವಾಗಿರಹುದು. ಹವಳ ದಿಣ್ಣೆಯು ಚಕ್ರಕಾರ ಅಥವಾ ಕುದುರೆಯ ಲಾಳದ ಆಕಾರದಲ್ಲಿ ಬೆಳೆದು, ಮಧ್ಯೆ ಉಂಟಾಗುವ ವಿಶಾಲವಾದ, ಆಳವಿಲ್ಲದ ನೀರಿನ ಪ್ರದೇಶವನ್ನು ಅಟಾಲ್ ಎನ್ನುವರು. ಕೆಲವು ಕಡೆ ಅಟಾಲ್ ಲಗೂನ್‌ನ್ನು ಸುತ್ತುವರಿದಿರುತ್ತದೆ. ಅದು 60 – 80 ಕಿಮೀನಷ್ಟು ವಿಸ್ತಾರವನ್ನು ಹೊಂದಿರುತ್ತದೆ. ಫೆಸಿಫಿಕ್ ಸಾಗರದಲ್ಲಿ ಲಗೂನ್‌ನ್ನು ಸುತ್ತುವರಿದಿರುವ ವಿಶಾಲವಾದ ಅಟಾಲ್‌ಗಳು ಇವೆ. ಇಟಲಿಯಲ್ಲಿರುವ ವೆನಿಸ್ ಎನ್ನುವ ಲಗೂನ್ ಅತ್ಯಂತ ದೊಡ್ಡದು. ಕೃತಕ ಲಗೂನ್‌ಗಳನ್ನು ಉದ್ಯಾನವನಗಳಲ್ಲಿ ನಿರ್ಮಿಸುವರು. (ಪಿ.ಎಸ್.)

**ಲಾಡಿಹುಳು:** ಪ್ಲಾಟಿಹೆಲ್ಮಿಂತೀಸ್ ವಂಶದ ಸ್ಟೋಡ ವರ್ಗದ ಸದಸ್ಯ. ಸು.೧೫೦೦ಕ್ಕೂ ಹೆಚ್ಚು ಪ್ರಭೇದಗಳಿರುವ ಪರೋಪಜೀವಿ ಹುಳುಗಳನ್ನು ಆಂಗ್ಲ ಭಾಷೆಯಲ್ಲಿ ಟೇಪ್‌ವರ್ಮ್ಸ್ ಎನ್ನುವರು. ವಲಯಯುಕ್ತ ಲಾಡಿಯಂಥ ಉದ್ದ ದೇಹವಿರುವ ಪ್ರೌಢಹುಳುಗಳ

ಆವಾಸ ಆತಿಥೇಯ ಕಶೇರುಕಗಳ ಕರುಳು. ತಲೆಯಲ್ಲಿರುವ (ಸ್ಕೋಲೆಕ್ಸ್) ಕೊಕ್ಕೆಗಳ ಸಹಾಯದಿಂದ ಅತಿಥೇಯದ ಕರುಳುಭಿತ್ತಿಗೆ ಕಚ್ಚಿಕೊಂಡು ಹೀರುಬಟ್ಟಲುಗಳಿಂದ (ಸಕ್ಸನ್‌ಕಪ್ಸ್) ನೇರವಾಗಿ ಆಹಾರವನ್ನು ಹೀರುತ್ತವೆ. ಇವಕ್ಕೆ ಕರುಳು ಇಲ್ಲ. ಪ್ರತ್ಯೇಕ ಶ್ವಾಸನಮಂಡಲವಿಲ್ಲ. ಆದರೆ, ಕೋಶೀಯ ಅನಿಲ ವಿನಿಮಯ ವಿಧಾನದ ವಾಯವಿಕ ಮತ್ತು ಅವಾಯವಿಕ ಉಸಿರಾಟ ಸಾಮರ್ಥ್ಯ ಎಲ್ಲ ಊತಕಗಳಿಗಿದೆ. ಜೀವನಚಕ್ರ ಪೂರ್ಣಗೊಳ್ಳಲು ಪ್ರಾಥಮಿಕ ಹಾಗೂ ಒಂದು ಅಥವಾ ಹೆಚ್ಚು ಮಧ್ಯಂತರ ಆತಿಥೇಯ ಜೀವಿಗಳು ಬೇಕು.

ವಯಸ್ಕ ಹುಳುವಿನ ತಲೆಯ ಹಿಂಭಾಗದಲ್ಲಿ ಪ್ರೊಗ್ಲಾಟಿಡುಗಳು ಅರ್ಥಾತ್ ಅಂಡಾಶಯ ಮತ್ತು ವೃಷಣಗಳಿರುವ ವಿಶಿಷ್ಟ ವಲಯಗಳು ಉತ್ಪತ್ತಿಯಾಗುತ್ತವೆ. ಆಗ ಹೊಸ ಪ್ರೊಗ್ಲಾಟಿಡು ಹಳೆಯದನ್ನು ಹಿಂದೆ ತಳ್ಳುತ್ತದೆ. ತತ್ಪರಿಣಾಮವಾಗಿ, ಪ್ರೊಗ್ಲಾಟಿಡ್ ಪಕ್ವವಾಗುವ ವೇಳೆಗೆ ಹುಳುವಿನ ಹಿಂಭಾಗಕ್ಕೆ ತಲಪಿರುವುದು. ಒಂದೇ ಪ್ರೊಗ್ಲಾಟಿಡಿನಲ್ಲಿ ಸ್ವನಿಷೇಚನೆ ಆಗಬಹುದು. ಒಂದೇ ಹುಳುವಿನ ಎರಡು ಪ್ರೊಗ್ಲಾಟಿಡುಗಳ ನಡುವೆ ಅಥವಾ ಎರಡು ಹುಳುಗಳ ನಡುವೆ ಅಡ್ಡನಿಷೇಚನೆ ಆಗಬಹುದು. ಸಾವಿರಾರು ನಿಷೇಚಿತ ಮೊಟ್ಟೆಗಳಿರುವ ಪಕ್ವ ಪ್ರೋಗ್ಲಾಟಿಡ್ ಹುಳುವಿನ ದೇಹದಿಂದ ಕಳಚಿಕೊಂಡು, ಆತಿಥೇಯ ಜೀವಿಯ ಮಲದೊಂದಿಗೆ ಹೊರಬರುವುದು. ಪ್ರೊಗ್ಲಾಟಿಡಿನ ಭಿತ್ತಿ ವಿಘಟಿಸಿ ಮೊಟ್ಟೆಗಳು ಪರಿಸರದಲ್ಲಿ ಚದರುತ್ತವೆ. ಮೊಟ್ಟೆಯೊಳಗೆ ಭ್ರೂಣ ಸ್ವಲ್ಪ ಬೆಳೆದು ವಿಶ್ರಾಂತ ಸ್ಥಿತಿಯಲ್ಲಿರುತ್ತದೆ. ಆಹಾರ ಮುಖೇನ ಮಧ್ಯಂತರ ಆತಿಥೇಯ ಜೀವಿಯ ದೇಹ ಪ್ರವೇಶಿಸುವ ಮೊಟ್ಟೆಯ ಚಿಪ್ಪು ಕರಗಿ, ಭ್ರೂಣ ಹೊರಬಂದು, ರಕ್ತ ಅಥವಾ ದುಗ್ಧರಸ ಪರಿಚಲನ ವ್ಯವಸ್ಥೆಯ ಮೂಲಕ ಸ್ನಾಯು ಊತಕಗಳನ್ನು ತಲಪುತ್ತದೆ. ಅಲ್ಲಿ ಬುಡ್ಡೆಯಾಗಿ (ಸಿಸ್ಟ್) ಸುಪ್ತಾವಸ್ಥೆಯಲ್ಲಿರುವುದು. ಸೋಂಕು ತಗಲಿರುವ ಸ್ನಾಯುವನ್ನು ಹಸಿಯಾಗಿ ಅಥವಾ ಅರೆಬೇಯಿಸಿ ತಿನ್ನುವ ಪ್ರಾಥಮಿಕ ಆತಿಥೇಯದ ದೇಹವನ್ನು ಇದು ಪ್ರವೇಶಿಸುತ್ತದೆ. ಮೊಟ್ಟೆಯ ಚಿಪ್ಪು ಕರಗಿ ಹೊಸ ಪ್ರೌಢಹುಳುವಿನ ತಲೆ ಹೊರಬಂದು ಕರುಳುಭಿತ್ತಿಗೆ ಕಚ್ಚಿಕೊಂಡು ಬೆಳೆಯುತ್ತದೆ. ಹೀಗೆ ಜೀವನಚಕ್ರ ನಡೆಯುತ್ತದೆ.

ಟೀನಿಯ ಸೋಲಿಯಮ್, ಟೀ. ಸ್ಯಾಜಿನೇಟ, ಸುಡೊಫಿಲ್ಲಿಡಿಯನ್, ಡೈಫಿಲೊಬಾತ್ರಿಯಮ್ ಪ್ರಭೇದಗಳು, ಹೈಮಿನೊಲೆಪಿಸ್ ಪ್ರಭೇದಗಳು ಸಿಸ್ಟೋಡ ವರ್ಗದಲ್ಲಿರುವ ರೋಗಕಾಟಗಳಿಗೆ ಮಾನವ ಪ್ರಾಥಮಿಕ ಆತಿಥೇಯ. ನಾಯಿ, ಬೆಕ್ಕು ಮತ್ತು ವಿರಳವಾಗಿ ಮಾನವ ಡೈಪಿಲಿಡಿಯಮ್ ಕ್ಯಾನಿನಮ್ ಪ್ರಭೇದದ ಪ್ರಾಥಮಿಕ ಆತಿಥೇಯಗಳು, ಚಿಗಟ ಅಥವಾ ಹೇನು ಮಧ್ಯಂತರ ಆತಿಥೇಯ. ಎಕೈನೊಕಾಕಸ್, ಟೀನಿಯ ಮಲ್ಟಿಸೆಪ್ಸ್ ಮುಂತಾದುವುಗಳಿಗೆ ಮಾನವ ಮಧ್ಯಂತರ ಆತಿಥೇಯ. ಲಾರ್ವಗಳು ಈ ಆತಿಥೇಯನ ವಿಭಿನ್ನ ಅಂಗವ್ಯವಸ್ಥೆಗಳ ಮೂಲಕ ಪಯಣಿಸಿ ಊತಕಗಳಲ್ಲಿ ನೆಲಸುತ್ತವೆ. ಹೈಮಿನೊಲೆಪಿಸ್ ಪ್ರಭೇದಗಳಿಗೆ ಮತ್ತು ಟೀನಿಯ ಸೋಲಿಯಮಿಗೆ ಮಾತ್ರ ಮಾನವ ಪ್ರಾಥಮಿಕ ಮತ್ತು ಮಧ್ಯಂತರ ಆತಿಥೇಯನಾಗಬಹುದು. ಬಹುತೇಕ ರೋಗಕಾಟಗಳು (ಇನ್‌ಫೆಸ್ಟೇಶನ್ಸ್) ಬಾಹ್ಯ ರೋಗ ಲಕ್ಷಣರಹಿತವಾಗಿರುತ್ತವೆ. ಅವು ಸಾಮಾನ್ಯ ಉದರಬೇನೆ, ತೂಕನಷ್ಟ, ಕ್ಷುಧಾನಾಶ (ಅನೊರೆಕ್ಸಿಯ) ಮುಂತಾದುವು. ಅನಫಿಲ್ಯಾಕ್ಸಿಸ್, ಉರಿಯುತಾನು ಕ್ರಿಯೆಗಳು, ಪೋಷಕಾಂಶ ನ್ಯೂನತೆಗಳು, ಪ್ರಧಾನಾಂಗಗಳ ಮೇಲೆ ಭಾರ ಹೇರಿದ ಅನುಭವ ಮುಂತಾದುವು ತೀವ್ರ ರೋಗಕಾಟದ ಲಕ್ಷಣಗಳು.

ಮಾನವನನ್ನು ಹೆಚ್ಚು ಕಾಡುವ ಲಾಡಿಹುಳುಗಳು: 1. ಟೀನಿಯ ಸ್ಯಾಜಿನೇಟ. ಇದರ ಉದ್ದ 9 ಮೀ 2000 ಪ್ರೋಗ್ಲಾಟಿಡುಗಳನ್ನು ಉತ್ಪತ್ತಿ ಮಾಡುವ ಸಾಮರ್ಥ್ಯವಿದೆ. ದನ ಇದರ ಮಧ್ಯಂತರ ಅತಿಥೇಯ. ಮಲದಲ್ಲಿ ಹುಳುಗಳ ಚೂರುಗಳು ಇರುತ್ತವೆ. ಕರುಳು ಬಾಲ, ಪಿತ್ತ ಮತ್ತು ಮೇದೋಜೀರಕ ನಾಳಗಳಲ್ಲಿ ತಡೆ ಇರುವ ಲಕ್ಷಣ, ಅಧಿಜಠರ ಬೇನೆ (ಎಪಿಗ್ಯಾಸ್ಟ್ರಿಕ್ ಪೇಯ್ನ್), ಅತಿಸಾರ, ತೂಕನಷ್ಟ ಕಾಣಿಸಿಕೊಳ್ಳಬಹುದು. 2. ಟೀನಿಯ ಸೋಲಿಯಮ್. ಹಂದಿ ಇದರ ಮಧ್ಯಂತರ ಆತಿಥೇಯ. ಸಾಮಾನ್ಯವಾಗಿ ರೋಗ ಕಾಟಕ್ಕೆ ಬಾಹ್ಯಲಕ್ಷಣಗಳಿರುವುದಿಲ್ಲ. ಕೆಲವರಲ್ಲಿ ಕರುಳು ಬಾಲ, ಪಿತ್ತ ಮತ್ತು ಮೇದೋಜೀರಕ ನಾಳಗಳಲ್ಲಿ ತಡೆ ಇರುವ ಲಕ್ಷಣ, ಅಧಿಜಠರ ಅಸ್ವಸ್ಥತೆ, ಅತಿ ಹಸಿವು, ತೂಕನಷ್ಟ, ಓಕರಿಕೆ ಕಾಣಿಸಿಕೊಳ್ಳಬಹುದು. 3. ಡೈಬಾತ್ರಿಯೊಸಿಫ್ಯಾಲಸ್ ಲೇಟಸ್. ಇದಕ್ಕೆ 18 ಮೀ ಉದ್ದ ಬೆಳೆಯುವ, 4000 ಪ್ರೊಗ್ಲಾಟಿಡುಗಳನ್ನು ಉತ್ಪತ್ತಿ ಮಾಡುವ ಸಾಮರ್ಥ್ಯ ಇದೆ. ಕೆಲವು ವಲ್ಕವಂತಗಳು, ಮೀನುಗಳು ಮಧ್ಯಂತರ ಆತಿಥೇಯಗಳು. ಕರುಳು ಅಸ್ವಸ್ಥತೆ, ಅತಿಸಾರ, ವಾಂತಿ, ದುರ್ಬಲತೆ, ತೂಕನಷ್ಟ ಸಾಮಾನ್ಯ ಲಕ್ಷಣಗಳು. ಹಾನಿಕರ ರಕ್ತಹೀನತೆಯನ್ನು (ಪರ್ನಿಷಸ್ ಅನೀಮಿಯ) ಹೋಲುವ ನರಸಂಬಂಧಿ ಅಸ್ವಸ್ಥತೆಗಳು (ಉದಾ: ದೇಹ ಸಮತೋಲ ಕಾಯ್ದುಕೊಳ್ಳಲಾಗದಿರುವುದು, ಮನೋವೈಕಲ್ಯ, ಅರೆಲಕ್ವ) ತೀವ್ರ ರೋಗಕಾಟದ ಲಕ್ಷಣಗಳು. 4. ಎಕೈನೊಕಾಕಸ್ ಗ್ರ್ಯಾನುಲೋಸಸ್. ನಾಯಿ ಪ್ರಾಥಮಿಕ ಆತಿಥೇಯ. ಅನೇಕ ಪ್ರಾಣಿಗಳನ್ನು ಮಧ್ಯಂತರ ಆತಿಥೇಯಗಳಾಗಿಸುವ ಸಾಮರ್ಥ್ಯವಿರುವ ಈ ಹುಳು, ವಿಶೇಷತಃ ಸಾಕು ನಾಯಿಯಿಂದ ಮನುಷ್ಯ ದೇಹ ಪ್ರವೇಶಿಸಬಹುದು. ಲಾರ್ವಗಳು ದ್ರವಭರಿತಬುಡ್ಡೆಗಳಾಗುತ್ತವೆ (ಹೈಡೇಟಿಡ್ ಸಿಸ್ಟ್). ಬಳಿಕ ೫–೨೦ ವರ್ಷಗಳ ಅವಧಿಯಲ್ಲಿ ನಿಧಾನವಾಗಿ ವ್ಯಾಕೋಚಿಸುತ್ತವೆ. ವ್ಯಾಕೋಚಿತ ಬುಡ್ಡೆ ಅತಿಮುಖ್ಯ ಅಂಗಗಳ ಪೈಕಿ ಒಂದರ ಮೇಲೆ (ಸಾಮಾನ್ಯವಾಗಿ ಯಕೃತ್ತಿನ ಮೇಲೆ) ಒತ್ತಡ ಹಾಕಿ ತೀವ್ರವೇದನೆ ಅಥವಾ ಸಾವಿಗೆ ಕಾರಣವಾಗಬಹುದು. ಕಾರಣ, ಇದು ಬಲು ಅಪಾಯಕಾರಿ. ತೀವ್ರ ಉದರಬೇನೆ, ಗಾಲ್ ಕಲ್ಲು (ಕೋಲೆಲಿತಿಯಾಸಿಸ್) ಅಥವಾ ಕಾಮಾಲೆ ಅನುಕರಣೆ ಯಕೃತ್ತಿನ ಬಾಧೆಯ ಲಕ್ಷಣಗಳು. ಜ್ವರ, ತುರಿಕೆ (ಪ್ರೂರಿಟಸ್), ಇಯೊಸಿನೊಫಲಿಯ, ಸಂಭವನೀಯ ಮಾರಕ ಅನಫಿಲ್ಯಾಕ್ಸಿಸ್ ಬುಡ್ಡೆ ಒಡೆದದ್ದರ ಅಥವಾ ಸೋರಿದ್ದರ ಲಕ್ಷಣಗಳು. ಕೆಮ್ಮು, ಎದೆನೋವು, ಹೀಮಾಪ್ಟೈಸಿಸ್ ಶ್ವಾಸಕೋಶ ಸಂಬಂಧಿ ಬುಡ್ಡೆ ಒಡೆತದ ಲಕ್ಷಣಗಳು. ರೋಗಕಾಟದ ಆರಂಭಿಕ ಹಂತದಲ್ಲಿ ಯುಕ್ತ ಚಿಕಿತ್ಸೆ ನೀಡಬೇಕಾದದ್ದು ಅನಿವಾರ್ಯ.

(ಎ.ಎಸ್.ಎಚ್ಎ.; ಎಸ್.ಕೆ.ಎಚ್.)

**ಲಿಂಗ ನಿರ್ಧಾರ:** ಪ್ರತಿ ಪ್ರಾಣಿಯ ದೇಹದಲ್ಲಿರುವ ಲಿಂಗಾಣುಗಳಲ್ಲಿನ ಪ್ರಾಣಿಯ ವರ್ಣತಂತುಗಳು ಆಯಾ ಪ್ರಾಣಿಗಳ ಲಿಂಗ ನಿರ್ಧರಿಸುವ ಕ್ರಿಯೆ. ಆಂಗ್ಲ ಭಾಷೆಯಲ್ಲಿ ಸೆಕ್ಸ್ ಡಿಟರ್‌ಮಿನೇಶನ್ ಎನ್ನುವರು. ಲಿಂಗ ನಿರ್ಧಾರದ ಬಗ್ಗೆ ಕ್ರಿ. ಪೂ.355 ರಿಂದ ವರದಿಗಳು ಲಭ್ಯ. ಎರಡು ಲಿಂಗಗಳು ನಿರ್ಧಾರವಾಗಬೇಕಾದರೆ ಸಂಭೋಗ ಸಮಯದಲ್ಲಿ ವೀರ್ಯ ಬಿಸಿಯಾಗಿದ್ದರೆ ಆ ವೀರ್ಯವೂ ಅಂಡಾಣು ಜೊತೆ ಸಂಯೋಗವಾಗಿ ಗಂಡು ಜನಿಸುತ್ತದೆ. ತಣ್ಣಗಿರುವ ವೀರ್ಯ ಅಂಡಾಣುವಿನ ಜೊತೆ ಸಂಯೋಗವಾಗಿ ಹೆಣ್ಣು ಮಗುವಾಗಿ ಜನಿಸುತ್ತದೆ ಎಂದು ಅರಿಸ್ಟಾಟಲ್ ಹೇಳಿದ್ದಾರೆ.

ಇಂದು ಅಣುಜೀವ ವಿಜ್ಞಾನದಲ್ಲಿ ನಡೆದ ಸಂಶೋಧನೆಗಳ ಫಲವಾಗಿ ವೈಜ್ಞಾನಿಕವಾಗಿ ಲಿಂಗ ನಿರ್ಧಾರದ ಬಗ್ಗೆ ತುಂಬಾ ವರದಿಗಳು ಲಭ್ಯವಿದೆ. 1902 ರಲ್ಲಿ ಮೆಕ್‌ಲುಂಗ್ ಎಂಬ ವಿಜ್ಞಾನಿ ಮಿಡಿತೆಗಳ ಗಂಡಿನಲ್ಲಿ ಒಂದು ಎಕ್ಸ್ ವರ್ಣತಂತು ಮಾತ್ರ ಇರುತ್ತದೆ. ವೈ ವರ್ಣತಂತು ಇರುವುದಿಲ್ಲ. ಹೆಣ್ಣುಗಳಲ್ಲಿ ಎರಡು ಎಕ್ಸ್ ವರ್ಣತಂತುಗಳಿರುತ್ತವೆ. ಗಂಡು ಮಿಡತೆಯಲ್ಲಿ ವೀರ್ಯಾಣು ಉದ್ಭವಿಸುವಾಗ ಕೆಲವು ವೀರ್ಯಾಣುಗಳಲ್ಲಿ ಕಾಯವರ್ಣತಂತುಗಳೊಡನೆ ಎಕ್ಸ್ ವರ್ಣ ತಂತುಗಳಿದ್ದರೆ ಇನ್ನೂ ಕೆಲವು ವೀರ್ಯಾಣುಗಳಲ್ಲಿ ಕೇವಲ ಕಾಯವರ್ಣತಂತುಗಳು ಮಾತ್ರ ಇರುತ್ತವೆ. ಗಂಡು ಮಿಡತೆಯಲ್ಲಿರುವ ಒಂದು ಎಕ್ಸ್ ವರ್ಣತಂತುವನ್ನು ಲಿಂಗ ಅಥವಾ ಎಕ್ಸ್ ವರ್ಣತಂತು ಎಂದು ಹೆಸರಿಸಲಾಯಿತು. ಏಕೆಂದರೆ ಈ ಎಕ್ಸ್ ವರ್ಣತಂತುವೆ ಲಿಂಗ ನಿರ್ಧಾರ ಮಾಡುತ್ತದೆ ಎಂದು ಯೋಚಿಸಲಾಗಿತ್ತು. ಈ ಒಂದು ಲಿಂಗ ವರ್ಣತಂತುವಿನ ಸಂಶೋಧನೆಯಿಂದ 'ಲಿಂಗನಿರ್ಧಾರದಲ್ಲಿ ವರ್ಣತಂತುಗಳ ಪ್ರತಿಪಾದನೆ' ಬೆಳೆಯಿತು. ಇತ್ತೀಚಿನ ದಿನಗಳಲ್ಲಿ ಲಿಂಗ ನಿರ್ಧಾರ ಮತ್ತು ತಾರತಮ್ಯಗಳ ಬಗ್ಗೆ ತುಂಬಾ ಅಧ್ಯಯನವಾಗಿದೆ. ಲಿಂಗ ನಿರ್ಧಾರ ಮತ್ತು ತಾರತಮ್ಯಗಳನ್ನು ನಿರ್ಧರಿಸುವ ನಿರ್ದಿಷ್ಟ ಗುಣಾಣುಗಳು ಲಿಂಗ ಮತ್ತು ಕಾಯವರ್ಣತಂತುಗಳಲ್ಲಿ ಇವೆ ಎಂದು ಕಂಡುಹಿಡಿದಿದ್ದಾರೆ. ಲಿಂಗ ನಿರ್ಧಾರದಲ್ಲಿ ವರ್ಣ ತಂತು ಮತ್ತು ಗುಣಾಂಶಗಳ ಕಾರ್ಯಗಳ ಬಗ್ಗೆ ವರದಿಯಾಗಿದೆ.

ಲಿಂಗ ನಿರ್ಧಾರದಲ್ಲಿ ವರ್ಣತಂತುಗಳ ಪ್ರತಿಪಾದನೆಯು ಗಂಡು ಮತ್ತು ಹೆಣ್ಣಿನ ವ್ಯತ್ಯಾಸವೂ ಅವುಗಳು ಹೊಂದಿರುವ ವರ್ಣತಂತುಗಳ ಮೇಲೆ ನಿರ್ಧಾರವಾಗುತ್ತದೆ. ಪ್ರಾಣಿಗಳಲ್ಲಿ ಎರಡು ತರಹದ ವರ್ಣತಂತುಗಳಿವೆ. ಅವುಗಳಲ್ಲಿ ಕಾಯವರ್ಣತಂತುಗಳು (ಸೋಮ್ಯಾಟಿಕ್ ಕ್ರೋಮೋಸೋಮ್ಸ್) ಮೊದಲನೆಯವು. ಇವು ಗಂಡು ಹಾಗೂ ಹೆಣ್ಣುಗಳಲ್ಲಿ ಒಂದೇ ತರಹದಾಗಿರುತ್ತವೆ. ಜೀವಿಯ ಆಕಾರ, ಗುಣ, ಗಾತ್ರ ಮತ್ತು ವರ್ತನೆಗಳನ್ನು ನಿಯಂತ್ರಿಸುವ ಗುಣಾಣುಗಳು ಈ ವರ್ಣತಂತುಗಳಲ್ಲಿರುತ್ತವೆ. ಎರಡನೆಯ ಗುಂಪಿನ ವರ್ಣತಂತುಗಳು ಲಿಂಗ ವರ್ಣ ತಂತುಗಳು (ಸೆಕ್ಸ್ ಕ್ರೋಮೋಸೋಮ್ಸ್). ಇವು ಗಂಡು ಹೆಣ್ಣುಗಳಲ್ಲಿ ವಿಭಿನ್ನವಾಗಿರುತ್ತವೆ. ಮಾನವನಲ್ಲಿರುವ 46 ವರ್ಣತಂತುಗಳ ಪೈಕಿ 44 ಕಾಯ ವರ್ಣತಂತುಗಳು, ಇನ್ನೆರಡು ಲಿಂಗ ವರ್ಣತಂತುಗಳು. ಪುರುಷನಲ್ಲಿ ಲಿಂಗ ವರ್ಣತಂತುಗಳು ಆಕಾರ, ರಚನೆಗಳಲ್ಲಿ ವಿಭಿನ್ನವಾಗಿರುತ್ತವೆ. ಅವುಗಳೆಂದರೆ: ಎಕ್ಸ್ ಮತ್ತು ವೈ ಲಿಂಗವರ್ಣತಂತುಗಳು. ಹೆಣ್ಣಿನಲ್ಲಿ ಎರಡು ಎಕ್ಸ್ ಲಿಂಗ ವರ್ಣತಂತುಗಳಿವೆ.

ಗಂಡಿನಲ್ಲಿ ವೀರ್ಯಾಣು ಉತ್ಪನ್ನವಾಗುವಾಗ ನಡೆಯುವ ಸಂಖ್ಯಾಕ್ಷೀಣ ವಿಭಜನೆಯಿಂದ 22 ಕಾಯ ವರ್ಣತಂತುಗಳು ಮತ್ತು ಎಕ್ಸ್ ವರ್ಣತಂತುವಿರುವ ವೀರ್ಯಾಣುಗಳು, ಹಾಗೂ 22 ಕಾಯವಣ ತಂತುಗಳು ಮತ್ತು ವೈ ವರ್ಣತಂತುಗಳಿಗಿರುವ ವೀರ್ಯಾಣುಗಳು ಸಮಪ್ರಮಾಣದಲ್ಲಿ ಉದ್ಭವಿಸುತ್ತವೆ. ಸ್ತ್ರೀಯರಲ್ಲಿ ಒಂದೇ ಅಂಡಾಣು ಉತ್ಪನ್ನವಾಗುವುದು. ಅಂಡಾಣುವಿನಲ್ಲಿ ಯಾವಾಗಲು 22 ಕಾಯವರ್ಣತಂತುಗಳು

ಹಾಗೂ ಒಂದು ಎಕ್ಸ್ ವರ್ಣತಂತುವಿರುತ್ತದೆ. ಸಂಭೋಗ ಕಾಲದಲ್ಲಿ ವೀರ್ಯಾಣು ಅಂಡಾಣುವಿನೊಡನೆ ಸಂಯೋಗವಾಗುವುದರಿಂದ ಪ್ರಬುದ್ಧ ಜೀವಿಯಲ್ಲಿ ವರ್ಣತಂತುಗಳ ಮೊತ್ತ ಪುನ: 46 ಆಗುತ್ತದೆ. 22 ಕಾಯ ಹಾಗೂ ಎಕ್ಸ್ ವರ್ಣತಂತುವಿರುವ ವೀರ್ಯಾಣು ಅಂಡಾಣುವಿನೊಡನೆ (22ಎ + ಎಕ್ಸ್)ಸಂಯೋಗವಾದರೆ ಜನಿಸುವ ಮಗು ಹೆಣ್ಣಾಗುತ್ತದೆ. ವೈ ವರ್ಣತಂತುವನ್ನು ಹೊಂದಿರುವ ವೀರ್ಯಾಣು ಅಂಡಾಣುವಿನೊಡನೆ ಸಂಯೋಗವಾದರೆ ಜನಿಸುವ ಮಗು ಗಂಡಾಗುತ್ತದೆ. ಮಾನವನಂತೆ ಇತರೆ ಸ್ತನಿಗಳಲ್ಲಿ ಹಾಗೂ ಡ್ರೋಸಾಫಿಲಾ ನೊಣಗಳಲ್ಲಿ ಇದೇ ರೀತಿ ಲಿಂಗ ನಿರ್ಧಾರವಾಗುತ್ತದೆ. ಈ ತರಹದ ಲಿಂಗ ನಿರ್ಧಾರವನ್ನು ಎಕ್ಸ್ ಎಕ್ಸ್: ಎಕ್ಸ್ ವೈ ಎಂದು ಕರೆಯುತ್ತಾರೆ. ಆದರೆ ಮಿಡತೆಗಳಲ್ಲಿನ ಲಿಂಗ ನಿರ್ಧಾರದ ವಿಧಾನವೂ ಎಕ್ಸ್ ಎಕ್ಸ್ : ಎಕ್ಸ್ ಓ ತರಹದಾಗಿದ್ದು, ಅವುಗಳಲ್ಲಿ ವೈ ವರ್ಣತಂತುವೂ ಇಲ್ಲ.

ಪಕ್ಷಿಗಳಲ್ಲಿ, ರೇಷ್ಮೆ ಹುಳುವಿನಲ್ಲಿ, ಚಿಟ್ಟೆ ಪತಂಗಗಳಲ್ಲಿ ಲಿಂಗ ನಿರ್ಧಾರ ಮಾನವನ ಲಿಂಗ ನಿರ್ಧಾರವಾಗುವುದಕ್ಕಿಂತ ಭಿನ್ನ ರೀತಿಯಲ್ಲಿ ನಡೆಯುತ್ತದೆ. ಅವುಗಳಲ್ಲಿ ಹೆಣ್ಣಿನಲ್ಲಿ 2 ಬಗೆಯ ಲಿಂಗವರ್ಣತಂತುಗಳಿರುತ್ತವೆ. ಗಂಡಿನಲ್ಲಿರುವ 2 ವರ್ಣತಂತುಗಳು ಒಂದೇ ಮಾದರಿಯಲ್ಲಿರುತ್ತವೆ. ಹೆಣ್ಣಿನ ಭಿನ್ನ ವರ್ಣ ತಂತುವನ್ನು 'ಡಬ್ಲ್ಯೂ' ವರ್ಣತಂತು ಎನ್ನುತ್ತಾರೆ. ಇನ್ನೊಂದನ್ನು 'ಜೆಡ್' ವರ್ಣತಂತುವೆನ್ನುತ್ತಾರೆ. ಈ ತರಹದ ವಿಧಾನವನ್ನು ಜೆಡ್ ಜೆಡ್ : ಜೆಡ್ ಡಬ್ಲ್ಯೂ ಎಂದು ಕರೆಯುತ್ತಾರೆ.

ಲಿಂಗ ನಿರ್ಧಾರದಲ್ಲಿ ಲಿಂಗ ವರ್ಣತಂತುಗಳ ಪಾತ್ರಗಳೇನು ಎಂಬುದು ಲಿಂಗ ಸಂಲಗ್ನತೆ ಗುಣಾಣುಗಳು ಆನುವಂಶೀಯವಾಗಿ ನಿರ್ಧರಿಸುವ ವಿಂಗಡಣೆ ಪದ್ಧತಿಯನ್ನು ಬಿಟ್ಟು 'ಪರಸ್ಪರ ಅಡಗಿ ಸೀಳಿಕೆ ಪದ್ಧತಿ' ಯನ್ನು ಅನುಸರಿಸುವ ಬಗ್ಗೆ ಸಂಶೋಧನೆಯಿಂದ ವ್ಯಕ್ತವಾಯಿತು. ಸಿ.ಬಿ.ಬ್ರಿಡ್ಜಸ್ ರವರ ಡ್ರೋಸೋಫಿಲಾದ ಮೇಲೆ ನಡೆದ ಪ್ರಯೋಗಗಳ ಪ್ರಕಾರ 2 ಎಕ್ಸ್ ವರ್ಣ ತಂತುಗಳು ಹೆಣ್ಣನ್ನು ಕೊಡುತ್ತವೆ. ಆದರೆ ವೈ ವರ್ಣತಂತು ಗಂಡಿನಲ್ಲಿ ಇದ್ದರೂ ಸಹ ಲಿಂಗ ನಿರ್ಧಾರದಲ್ಲಿ ಅದರ ಪಾತ್ರ ಇಲ್ಲ ಎಂದು ಪ್ರತಿಪಾದಿಸಿದರು. ಲಿಂಗ ವರ್ಣತಂತುಗಳು ಗುಣಾಣುಗಳನ್ನು ಹೊಂದಿದ್ದು, ಆ ಗುಣಾಣುಗಳು ಲಿಂಗ ನಿರ್ಧಾರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅಂತಹವುಗಳನ್ನು 'ಲಿಂಗ ಸಂಲಗ್ನತೆ ಗುಣಾಣುಗಳು' ಎಂದು ಕರೆಯುತ್ತಾರೆ. ಈ ಲಿಂಗ ಸಂಲಗ್ನತೆ ಇದ್ದರೆ ವೈ ಸಂಲಗ್ನತೆ ಎಂದು ಕರೆಯುವರು. ಸಾಮಾನ್ಯವಾಗಿ ವೈ ವರ್ಣತಂತುವೂ ತುಂಬಾ ಕಡಿಮೆ ಸಂಖ್ಯೆಯ ಗುಣಾಣುಗಳನ್ನು ಹೊಂದಿದೆ. ಆದರೆ ಎಕ್ಸ್ ವರ್ಣತಂತುಗಳ ಗುಣಾಣುಗಳ ಸಂಖ್ಯೆಗಳು ಜೀವಿಗಳಲ್ಲಿ ತುಂಬಾ ವ್ಯತ್ಯಾಸದಿಂದ ಕೂಡಿರುತ್ತದೆ. ಆದರೆ ಈ ಗುಣಾಣುಗಳು ಪರಸ್ಪರ ಅಡ್ಡ ಸೀಳಿಕೆ ವಿಧಾನದಿಂದ ವರ್ಗಾವಣೆಯಾಗುತ್ತಾ ಸಾಗುತ್ತದೆ. ಭಿನ್ನ ಲಿಂಗಾಣುಗಳಲ್ಲಿ ಗುಣಾಣುಗಳು ಅರ್ಧಯುಗ್ಮ ಸ್ಥಿತಿಯಲ್ಲಿರುತ್ತವೆ ಹಾಗೂ ಸಮಲಿಂಗಾಣುಗಳಲ್ಲಿ ಗುಣಾಣುಗಳು ಸಮಯುಗ್ಮ ಮತ್ತು ಭಿನ್ನ ಯುಗ್ಮ ಸ್ಥಿತಿಯಲ್ಲಿರುತ್ತವೆ.

ಲಿಂಗ ನಿರ್ಧಾರದಲ್ಲಿ ಸಮತೋಲನಶಾಸ್ತ್ರ

| ಎಕ್ಸ್ ವರ್ಣ ತಂತುಗಳ ಸಂಖ್ಯೆ | ಕಾಯವರ್ಣ ತಂತುಗಳ ಜೊತೆಗಳು | ಎಕ್ಸ್/ಎ ಅನುಪಾತ | ಜೀವಿಗಳ ಲಿಂಗ |
|---|---|---|---|
| 3 | 2 | 1.5 | ದಿವ್ಯಹೆಣ್ಣು (ಸೂಪರ್ ಫೀಮೇಲ್) |
| 4 | 3 | 1.33 | ದಿವ್ಯ ಹೆಣ್ಣು |
| 1 | 1 | 1.00 | ಸಾಮಾನ್ಯ ಹೆಣ್ಣು (ಜನರಲ್ ಫೀಮೇಲ್) |
| 2 | 2 | 1.00 | ಸಾಮಾನ್ಯ ಹೆಣ್ಣು |
| 3 | 3 | 1.00 | ಸಾಮಾನ್ಯ ಹೆಣ್ಣು |
| 4 | 4 | 1.00 | ಸಾಮಾನ್ಯ ಹೆಣ್ಣು |
| 2 | 3 | 0.67 | ಅಂತರಲಿಂಗ |
| 3 | 4 | 0.75 | ಅಂತರಲಿಂಗ |
| 1 | 2 | 0.50 | ಸಾಮಾನ್ಯ ಗಂಡು(ಜನರಲ್ ಮೇಲ್) |
| 2 | 4 | 0.50 | ಸಾಮಾನ್ಯ ಗಂಡು |
| 1 | 3 | 0.33 | ದಿವ್ಯ ಗಂಡು (ಸೂಪರ್ ಮೇಲ್) |

ಬ್ರಿಡ್ಜಸ್‌ರವರು ಲಿಂಗ ನಿರ್ಧಾರದಲ್ಲಿ ವೈ ವರ್ಣತಂತುವಿನ ಪ್ರಾಮುಖ್ಯತೆ ಇಲ್ಲವೆಂದು, ಆದರೆ ಎಕ್ಸ್ ವರ್ಣತಂತುಗಳು ಮತ್ತು ಕಾಯವರ್ಣತಂತುಗಳ ಜೊತೆಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು ತಮ್ಮ ಸಮತೋಲನ ಶಾಸ್ತ್ರದಲ್ಲಿ ವಿವರಿಸಿದ್ದಾರೆ. ಅವರು ಡ್ರಾಸೋಫಿಲಾದಲ್ಲಿ ದ್ವಿಪ್ರತೀಯ ಕಾಯವರ್ಣತಂತುಗಳು ಮತ್ತು 3 ಲಿಂಗ ವರ್ಣತಂತುಗಳು ಸಂಯೋಗ ಹೊಂದಿದ್ದರೆ ದಿವ್ಯ ಹೆಣ್ಣು (ಸೂಪರ್ ಫೀ ಮೇಲ್) ಜನಿಸುವುದೆಂದು, 2 ಲಿಂಗ ವರ್ಣತಂತುಗಳು ಮತ್ತು 3 ಜೊತೆ ಕಾರ್ಯ ವರ್ಣತಂತುಗಳು ಸೇರಿದರೆ ಅಂತರ ಲಿಂಗಗಳಾಗಿ ಪ್ರಾಣಿಗಳು ಜನಿಸುತ್ತವೆ ಎಂಬ ಬಗ್ಗೆ ಕೋಷ್ಟಕದಲ್ಲಿ ತಿಳಿಸಿದೆ. ಈ ಮೇಲಿನ ಅವಲೋಕನಗಳಿಂದ ಬ್ರಿಡ್ಜಸ್ ರವರು 'ಲಿಂಗ ನಿರ್ಧಾರದಲ್ಲಿ ಜೀನ್‌ಗಳ ಸಮತೋಲನಶಾಸ್ತ್ರವನ್ನು ಪ್ರತಿಪಾದಿಸಿದರು. ಆದರ ಪ್ರಕಾರ ಜೀವಿಗಳ ಲಿಂಗ ನಿರ್ಧಾರವೂ ಅವುಗಳಲ್ಲಿನ ಕಾಯವರ್ಣತಂತುಗಳ ಜೊತೆಗಳು ಮತ್ತು ಎಕ್ಸ್ ವರ್ಣತಂತುಗಳ ಸಂಖ್ಯೆಗಳ ಮಧ್ಯದ ಅನುಪಾತದಲ್ಲಿರುತ್ತದೆ. ಕೆಲವು ವರ್ಣತಂತುಗಳ ಸಂಯೋಜನೆ ಮತ್ತು ಡ್ರಾಸೋಫಿಲಾದ ಲಿಂಗಗಳನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ. ಕೋಷ್ಟಕದಲ್ಲಿ ತೋರಿಸುವ ಪ್ರಕಾರ ಎಕ್ಸ್/ಎ ಅನುಪಾತ 1.0 ಆಗಿದ್ದರೆ ಆಗ ಡ್ರೋಸೋಫಿಲಾ ಕೀಟ ಹೆಣ್ಣಾಗಿ, 0.5 ಇದ್ದರೆ ಗಂಡಾಗಿ ಬೆಳೆಯುತ್ತದೆ. ಅನುಪಾತವೂ 1 ಕ್ಕಿಂತ ಹೆಚ್ಚಾಗಿದ್ದರೆ ಆ ಜೀವಿಯು ದಿವ್ಯ ಹೆಣ್ಣಾಗಿ (ಸೂಪರ್ ಫೀಮೇಲ್) 0.5 ಕ್ಕಿಂತ ಕಡಿಮೆ ಇದ್ದರೆ ದಿವ್ಯ ಗಂಡಾಗಿ (ಸೂಪರ್ ಮೇಲ್) ಮತ್ತು 0.5 ಮತ್ತು 1.0 ರ ಮಧ್ಯದ ಅನುಪಾತದಲ್ಲಿದ್ದರೆ ಜೀವಿಯು ಅಂತರ ಲಿಂಗವಾಗಿ ಜನಿಸುತ್ತದೆ. ಕೆಲವು ಸಮಯದಲ್ಲಿ ಡ್ರೋಸೋಫಿಲಾ ದೇಹದಲ್ಲಿ 2 ತರಹದ ಗುಣಗಳನ್ನು ನೋಡಬಹುದು. ಅಂದರೆ ಅರ್ಧಭಾಗದ ದೇಹವು ಹೆಣ್ಣಿನ ಗುಣಗಳನ್ನು ತೋರಿಸಿದ್ದರೆ, ಇನ್ನು ಉಳಿದ ಭಾಗ ಗಂಡಿನ ಗುಣಗಳನ್ನು ಹೊಂದಿರುತ್ತದೆ. ಅಂತಹ ಕೀಟಗಳನ್ನು 'ಗೈನ್ಯಾಂಡ್ರೋಮಾರಫ್ಸ್' ಗಳೆಂದು ಕರೆಯುತ್ತಾರೆ. ಜೀವಿಗಳ ಹೆಣ್ಣಿನ ಯಗ್ಮಗಳಲ್ಲಿ ಭಾಗಗಳಾಗುವ ಸಮಯದಲ್ಲಿ ಒಂದು ಎಕ್ಸ್ ವರ್ಣತಂತುವೂ ಕಳೆದು ಹೋಗುವುದರಿಂದ ಈ ತರಹದ ಗೈನ್ಯಾಂಡ್ರೋಮಾರಫ್ಸ್‌ಗಳು ಬೆಳೆಯುತ್ತವೆ. ಎರಡು ಕೋಶಗಳಾಗಿ ಭಾಗವಾಗಿರುವ ಯುಗ್ಮದ ಹಂತದಲ್ಲಿ ಒಂದು ಕೋಶವೂ 2ಎ+ಎಕ್ಸ್ ಎಕ್ಸ್ ಮತ್ತೊಂದು ಕೋಶವೂ 2ಎ+ಎಕ್ಸ್ ಆಗಿ ಭಾಗಗಳಾಗುತ್ತವೆ. ಈ ಕೋಶಗಳು ಬೆಳವಣಿಗೆಯಾಗುತ್ತಾ ಸಾಗಿ ಈ ಕೋಶಗಳು 2 ರೂಪಗಳಾಗಿ ಒಂದೇ ದೇಹದಲ್ಲಿ ಜೋಡಣೆಯಾಗಿರುತ್ತವೆ. ಒಂದು ಭಾಗದ ಎಕ್ಸ್ / ಎ ಅನುಪಾತವೂ 2ಎ+ಎಕ್ಸ್ ಎಕ್ಸ್ 1.00 ಆಗಿದ್ದು, ಹೆಣ್ಣಾಗಿದ್ದರೆ, ಮತ್ತೊಂದು ಭಾಗವೂ 2ಎ+ಎಕ್ಸ್, 0.5 ಗಂಡಾಗಿ ಇರುತ್ತದೆ. ಈ ಎರಡು ಲಿಂಗದ ಗುಣಗಳುಳ್ಳ ಒಂದೇ ದೇಹದ ಡ್ರೋಸೋಫಿಲಾಗಳು ಬೆಳೆಯುತ್ತವೆ.

ಸಿನೋರ‍್ಯಾಹಾಬ್ಟೀಸ್ ಎಲಿಗನ್ಸ್ ಎಂಬ ಪ್ರಾಣಿ ನಿಮೆಟೋಡ್ ಎಂಬ ವರ್ಗಕ್ಕೆ ಸೇರಿದ್ದು. ಇವು ಎರಡು ತರಹದಲ್ಲಿ ಕಾಣುತ್ತವೆ. ಕೆಲವು ಸ್ವಯಂ ಗರ್ಭಧರಿಸುವ ಉಭಯ ಲಿಂಗದ ಜೀವಿಗಳಾಗಿದ್ದು, ಎರಡು ಎಕ್ಸ್ ವರ್ಣತಂತುಗಳನ್ನು ಮತ್ತು ಒಂದು ಎಕ್ಸ್ ವರ್ಣತಂತುವನ್ನು ಹೊಂದಿರುವ ಗಂಡು ಜೀವಿಯನ್ನು ನೋಡಬಹುದು. ಉಭಯ ಲಿಂಗದ ಪ್ರಾಣಿಯು ಹೆಣ್ಣೆಂದು ನಂಬಿದ್ದು, ಅವುಗಳ ಕಾಯ ಭಾಗವೂ ಜೀವಾಂಕುರ ಭಾಗದ ಜೊತೆ ಮಿಶ್ರವಾಗಿರುತ್ತದೆ. ಇವುಗಳಲ್ಲಿಯೂ ಸಹ ಎಕ್ಸ್/ಎ ಅನುಪಾತದ ಮಾದರಿಯು ಡ್ರೊಸೋಫಿಲಾದಂತೆ ಒಂದೇ ತೆರನಾಗಿದ್ದು, ಆದರೆ ಎಕ್ಸ್/ಎ ಅನುಪಾತವು 0.67 ಗಿಂತ ಕಡಿಮೆಯಾಗಿದ್ದು (0.5 ಡ್ರೊಸೋಫಿಲಾ) ಗಂಡನ್ನು ಕೊಡುತ್ತದೆ ಮತ್ತು 0.75 ಕ್ಕಿಂತ ಜಾಸ್ತಿಯಾಗಿರುವ ಎಕ್ಸ್/ಎ ಅನುಪಾತವು ಉಭಯ ಲಿಂಗವುಳ್ಳ ಜೀವಿಗಳು ಕೊಡುತ್ತವೆ. (ಡ್ರೊಸೋಫಿಲಾ ತರಹದ ಎಕ್ಸ್/ಎ ಅನುಪಾತ 1.0). ಈ ತರಹದ ಅನುಪಾತವೂ ಅವುಗಳ ಕ್ರಿಯೆಯ ಮಟ್ಟವನ್ನು ಪ್ರತಿಯೊಂದರಲ್ಲಿಯೂ ಸಹ ತೋರುತ್ತದೆ. ಈ ಜೀವಿಗಳ ಯುಗ್ಮದಲ್ಲಿ ನಡೆಯುವ ಸರಿಯಾದ ನಿರ್ದಿಷ್ಟವಾದ ಎಕ್ಸ್/ಎ ಅನುಪಾತವನ್ನು ಗಣನೆ ಮಾಡುವ ವಿಧಾನ ಮತ್ತು ಲಿಂಗಗಳ ವಿಭಿನ್ನತೆಯನ್ನು ನಾವು ಇಂದು ಅಣು ಜೀವವಿಜ್ಞಾನ ಅಧ್ಯಯನದ ಮುಖಾಂತರ ತಿಳಿದುಕೊಳ್ಳುತ್ತಿದ್ದೇವೆ.

ಇತ್ತೀಚಿನ ದಿನಗಳಲ್ಲಿ ಸಂಶೋಧನೆಗಳಿಂದ ಎಕ್ಸ್/ಎ ಅನುಪಾತವು ಲಿಂಗ ನಿರ್ಧಾರದ ಸಂಕೇತವನ್ನು ತೋರಿಸುವ ಪ್ರಾಥಮಿಕ ಹಂತವಾಗಿದೆ ಎಂದು ತಿಳಿದುಬರುತ್ತದೆ. ಈ ಅನುಪಾತವೂ ಹಲವು ನಿಯಂತ್ರಕ ಗುಣಾಣುಗಳನ್ನು ಕಾರ್ಯಮಗ್ನ ಸ್ಥಿತಿಯಲ್ಲಿ 3 ಸ್ವತಂತ್ರ್ಯ ವಿಧಾನಗಳಲ್ಲಿ ನಿಯಂತ್ರಿಸುತ್ತವೆ. ಅವುಗಳೆಂದರೆ: (1) ಡೋಸೇಜ್ ಕಾಂಪೇನ್‌ಸೆಶನ್, 2) ಕಾಯ ಲೈಂಗಿಕ ಅಭಿವೃದ್ಧಿ ಮತ್ತು 3) ಜೀವಾಂಕುರ ಲೈಂಗಿಕ ಅಭಿವೃದ್ಧಿ.

ಒಂದು ಲಿಂಗದ ಪೂರ್ಣ ಗುಣಾಣುಗಳ ಕಾರ್ಯ ವಿಧಾನವೂ ಒಂದು ಎಕ್ಸ್ ವರ್ಣತಂತುವಿನಲ್ಲಿ ವ್ಯಕ್ತವಾಗುತ್ತದೆ. ಈ ಭಾವವ್ಯಕ್ತತೆಯೂ ಮತ್ತೊಂದು ಲಿಂಗದ ಎರಡು ಎಕ್ಸ್ ವರ್ಣತಂತುಗಳ ಪೂರ್ಣ ಭಾವವ್ಯಕ್ತತೆಗೆ ಸಮನಾಗಿರುತ್ತದೆ. ಈ ಒಂದು ಪದ್ಧತಿಯನ್ನು ಡೋಸೆಜ್ ಕಾಂಪೇನ್‌ಸೆಶನ್, ಎಂದು ಕರೆಯುತ್ತಾರೆ. ಈ ಪದ್ಧತಿಯನ್ನು ಸಿದ್ಧಾಂತ ಎಂದು ಕರೆಯುತ್ತಾರೆ. ಸ್ತನಿಗಳಲ್ಲಿ ಯಾವ ಕ್ರಿಯೆಗಳಲ್ಲಿಯೂ ಭಾಗಿಯಾಗದ, ಚುರುಕಿಲ್ಲದ ವರ್ಣತಂತುವನ್ನು ಲಿಂಗ ಕ್ರೊಮ್ಯಾಟೀನ್ (ಬಾರ್ ಬಾಡಿ) ಎಂದು ಕರೆಯುತ್ತಾರೆ. ಈ ರೀತಿಯ ಕಾಂಪೇನ್‌ಸೆಶನ್ ಕ್ರಿಯೆಯಲ್ಲಿ ಸೋಲುವಂತಾದರೆ

ಅವುಗಳು ಮರಣವನ್ನುಂಟುಮಾಡುತ್ತವೆ. ಜೀವಾಂಕುರದ ಅಂಗಗಳನ್ನು ಬಿಟ್ಟು ಬೇರೆ ಎಲ್ಲಾ ಅಂಗಾಂಶಗಳಲ್ಲಿ ನಿರ್ದಿಷ್ಟ ಲಿಂಗ ವಿಭಿನ್ನತೆ ಇರುತ್ತದೆ. ಈ ತರಹದ ಬೆಳವಣಿಗೆಯನ್ನು ಕಾಯ ಲೈಂಗಿಕ ಅಭಿವೃದ್ಧಿಯೆಂದು ಕರೆಯುತ್ತಾರೆ. ಜೀವಿಗಳ ಲಿಂಗಾಣುಗಳ ವಿಧಗಳು ಜೀವಾಂಕುರ ಅಂಗಗಳಿಂದ ಮಾಡಲ್ಪಟ್ಟಿದ್ದು, ಹೆಣ್ಣಿನಲ್ಲಿ ಅಂಡಾಣುಗಳು ಮತ್ತು ಗಂಡಿನಲ್ಲಿ ವೀರ್ಯಾಣುಗಳು ಅಥವಾ ಉಭಯ ಲಿಂಗದ ಜೀವಿಗಳು ಎರಡು ಲಿಂಗಾಣುಗಳು ಈ ರೀತಿಯ ಬೆಳವಣಿಗೆಯನ್ನು ಜೀವಾಂಕುರ ಲೈಂಗಿಕ ಅಭಿವೃದ್ಧಿ ಎಂದು ಹೇಳಲಾಗುತ್ತದೆ.

ಡ್ರೊಸೊಫಿಲಾದ ಲಿಂಗ ನಿರ್ಧಾರವೂ ಅವುಗಳಲ್ಲಿರುವ ಎಸ್ ಎಕ್ಸ್ [1] (ಸೆಕ್ಸ್ ಲಿಥಲ್) ಗುಣಾಣುವಿನ ಹಿಡಿತದಲ್ಲಿರುತ್ತದೆ. ಈ ಎಸ್ ಎಕ್ಸ್ [1] ಗುಣಾಣುಗಳು ಸಿಸ್–ಎ ಮತ್ತು ಸಿಸ್–ಬಿ ಮತ್ತು ಬೇರೆ ಗುಣಾಣುಗಳಾದ ಡಿಎ (ಡಾಟರ್ ಲೆಸ್) ಮತ್ತು ಎಸ್ ಎನ್ ಎಫ್ (ಸನ್ಸ್ ಫೈಲ್)ಗಳ ಡೋಸೆಜ್‌ಗಳಿಗೆ ತಕ್ಕಂತೆ ಎಸ್ ಎಕ್ಸ್ [1] ಗುಣಾಣು ಪ್ರತಿಕ್ರಿಯೆ ನೀಡುತ್ತದೆ. ಈ ಎಸ್ ಎಕ್ಸ್ [1] ಗುಣಾಣು ಚುರುಕಾದ, ಪರಿಣಾಮಕಾರಿಯಾದ ಕಾರ್ಯನಿಯಂತ್ರಣದಲ್ಲಿ ನಿರತವಾಗಿದ್ದರೆ, ಆ ಜೀವಿಯು ಹೆಣ್ಣಾಗಿ ಬೆಳೆಯುತ್ತದೆ. ಆ ಎಸ್ ಎಕ್ಸ್ [1] ಗುಣಾಣುವು ಚುರುಕಿಲ್ಲದ ಕಾರ್ಯನಿಯಂತ್ರಣವನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ ಆಗ ಗಂಡು ಡ್ರೋಸೋಫಿಲಾ ಬೆಳೆಯುತ್ತದೆ.

ಮಾನವರಲ್ಲಿ ಲಿಂಗ ನಿರ್ಧಾರ: ಮಾನವ ಮತ್ತು ಕೆಲವು ಸ್ತನಿಗಳಲ್ಲಿ ಎಕ್ಸ್ ಎಕ್ಸ್ : ಎಕ್ಸ್ ವೈ ಪದ್ಧತಿಯಾಗಿದೆ. ಹೆಣ್ಣು ಸಮಲಿಂಗಾಣುವಾಗಿದ್ದು, ಎರಡು ಎಕ್ಸ್ ವರ್ಣತಂತುಗಳನ್ನು ಮತ್ತು ಗಂಡು ಭಿನ್ನ ಲಿಂಗಾಣುವಾಗಿದ್ದು, ಒಂದು ಎಕ್ಸ್ ಮತ್ತು ಒಂದು ವೈ ವರ್ಣತಂತುವನ್ನು ಹೊಂದಿವೆ. ಸಾಮಾನ್ಯವಾಗಿ ಡ್ರೊಸೋಫಿಲಾ ತರಹದಾಗಿದೆ. ಆದರೆ, ಡ್ರೊಸೋಫಿಲಾದಲ್ಲಿ ಎರಡು ಜೊತೆ ಕಾಯ ವರ್ಣತಂತುಗಳು ಮತ್ತು ಒಂದು ಎಕ್ಸ್ ವರ್ಣತಂತು (ಎಕ್ಸ/ಎ ಅನುಪಾತ=0.50) ಹೊಂದಿದ್ದರೆ ಗಂಡು ಕೀಟವಾಗುತ್ತದೆ. ಮಾನವನಲ್ಲಿ ಈ ರೀತಿಯ ಸ್ಥಿತಿಯು ಅಸಮಾನ್ಯವಾಗಿರುತ್ತದೆ. ಈ ಅಸಮಾನ್ಯ ಸ್ಥಿತಿಯನ್ನು ಟರ್ನರ್ಸ್ ಸಿಂಡ್ರೋಮ್ ಎನ್ನುವರು. ಈ ಟರ್ನರ್ಸ್ ಗಳು ಬಂಜೆ ಹೆಣ್ಣುಗಳು ಮತ್ತು ಜೀವಿಯು ಎಕ್ಸ್ ಎಕ್ಸ್ ವೈ (ಎಕ್ಸ್/ಎ ಅನುಪಾತ = 1.0) ಹೊಂದಿದ್ದರೆ ಅದು ಸಾಮಾನ್ಯ ಹೆಣ್ಣು ಡ್ರೊಸಾಫಿಲಾವಾಗಿರುತ್ತದೆ. ಈ ತೆರನಾದ ವರ್ಣತಂತುಗಳ ಸ್ವರೂಪವೂ ಮಾನವರಲ್ಲಿ ಕ್ಲೈನಿಫೆಲ್ಟರ್ಸ್ ಸಿಂಡ್ರೋಮ್ ಆಗಿರುತ್ತದೆ. ಈ ಸಿಂಡ್ರೋಮ್ ಮಾನವರು ಶಾರೀರಕವಾಗಿ ನೋಡಿದರೆ ಗಂಡಿನಂತೆ ಕಂಡರೂ ಹೆಣ್ಣಿನ ಗುಣಗಳನ್ನು ಹೊಂದಿರುತ್ತಾರೆ. ಈ ಮೇಲಿನ ಎಲ್ಲಾ ನಿದರ್ಶನಗಳು ಮಾನವನ ಲಿಂಗ ನಿರ್ಧಾರದಲ್ಲಿ ವೈ ವರ್ಣತಂತುವೂ ಪ್ರಮುಖ ಪಾತ್ರವಹಿಸುತ್ತದೆ ಎಂದು ತಿಳಿಸುತ್ತದೆ. ಡ್ರೊಸೋಫಿಲಾ ಮತ್ತು ಮಾನವನ ವರ್ಣತಂತುಗಳ ಸ್ವರೂಪಗಳು ಒಂದೇ ತೆರನಾಗಿದ್ದರೂ ಸಹ ಅವುಗಳ ಲಿಂಗ ನಿರ್ಧಾರದ ಕ್ರಿಯೆಯು ಈ ಎರಡು ಪ್ರಭೇದಗಳಲ್ಲಿ ವ್ಯತ್ಯಾಸದಿಂದ ಕೂಡಿದೆ.

ಮಾನವರಂತೆ ಇಲಿಗಳಲ್ಲಿಯೂ ಎಕ್ಸ್ ಎಕ್ಸ್ : ಎಕ್ಸ್ ವೈ ತರಹದ ಲಿಂಗ ನಿರ್ಧಾರ ಕ್ರಿಯೆ ಇದೆ. ಇವುಗಳಲ್ಲಿ 2 ಎಕ್ಸ್ ವರ್ಣತಂತುಗಳು ಹೊಂದಿದ್ದರೆ ಹೆಣ್ಣಾಗಿ, ಮತ್ತು ಒಂದು ಎಕ್ಸ್ ಮತ್ತು ಒಂದು ವೈ ವರ್ಣತಂತುಗಳು ಹೊಂದಿದ್ದರೆ ಗಂಡು ಇಲಿಯಾಗಿ ಜನಿಸುತ್ತವೆ. ಆದರೆ ಕೆಲವು ಇಲಿಗಳಲ್ಲಿ ಎಕ್ಸ್ ಎಕ್ಸ್ ಇದ್ದರೆ, ಗಂಡು ಎಂದು ಎಕ್ಸ್ ವೈ ಇದ್ದರೆ ಹೆಣ್ಣು ಇಲಿಗಳೆಂದು ತಿಳಿದುಬಂದಿದೆ. ಇಂತಹ ಇಲಿಗಳನ್ನು ಲಿಂಗ–ವ್ಯತಿರಿಕ್ತ ಇಲಿಗಳೆಂದು ಕರೆಯುತ್ತಾರೆ. ಇಂತಹ ಲಿಂಗ ವ್ಯತಿರಿಕ್ತ ಎಕ್ಸ್ ಎಕ್ಸ್ ಗಂಡುಇಲಿಗಳು ವೈ ವರ್ಣತಂತುವಿನಲ್ಲಿರುವ ಲಿಂಗ ವ್ಯತಿರಿಕ್ತ ಘಟಕ (ಎಸ್ ಎಕ್ಸ್ ಆರ್) ದ ಸಾಗಾಣಿಕೆಯಿಂದ ಉತ್ಪತ್ತಿಯಾಗುತ್ತವೆ. ಇಂತಹ ಗುಣಾಣುಗಳನ್ನು ವೈ ಎಸ್ ಎಕ್ಸ್ ಆರ್ ಎಂದು ಸೂಚಿಸುತ್ತಾರೆ. ಈ ಗುಣಾಣುವೂ ಅಸಾಮಾನ್ಯ ಅಡ್ಡ ಸೀಳಿಕೆ (ಕ್ರಾಸಿಂಗ್ ಓವರ್)ವಿಧಾನದಿಂದ ವೈ ವರ್ಣತಂತುವಿನಿಂದ ಎಕ್ಸ್ ವರ್ಣತಂತುವಿಗೆ ಸಾಗಣೆಯಾಗುತ್ತದೆ. ಈ ಎಸ್ ಎಕ್ಸ್ ಆರ್ ಘಟಕವೂ ಎಕ್ಸ್ ಎಕ್ಸ್ ಗಂಡು ಇಲಿಗಳ ಯಾವುದಾದರೂ ಎರಡು ಎಕ್ಸ್ ವರ್ಣತಂತುಗಳ ಕ್ರೊಮ್ಯಾಟಿಡ್ ಗಳ ತುದಿಯ ಭಾಗದಲ್ಲಿ ಅಡಗಿದೆ ಎಂದು ತಿಳಿದು ಬಂದಿದೆ.

ಸಾಮಾನ್ಯ ಹೆಣ್ಣು ಇಲಿಯನ್ನು ಎಕ್ಸ್ ವೈ ಎಸ್ ಎಕ್ಸ್ ಆರ್ ವಾಹಕ ಗಂಡಿನ ಇಲಿಯ ಜೊತೆ ಸಂಕರಗೊಳಿಸಿದರೆ, ಎಕ್ಸ್ ವೈ ಎಸ್ ಎಕ್ಸ್ ಆರ್ ಗಂಡು (ಲಿಂಗವ್ಯತಿರಿಕ್ತ), ಎಕ್ಸ್ ವೈ ಎಸ್ ಎಕ್ಸ್ ಆರ್ ವಾಹಕ ಗಂಡು ಮತ್ತು ವಾಹಕವಲ್ಲದ ಎಕ್ಸ್ ವೈ ಗಂಡು ಇಲಿಗಳು ಸಿಗುತ್ತವೆ. ಈ ತರಹದ ಲಿಂಗ ವ್ಯತಿರಿಕ್ತ ಸ್ಥಿತಿಯನ್ನು ಹಲವಾರು ಸಮಯದಲ್ಲಿ ಇಲಿಗಳಲ್ಲಿ ದೃಢಪಡಿಸಲಾಗಿದೆ ಮತ್ತು ಈ ಪರಿಸ್ಥಿತಿ ಗೊಂದಲಮಯದಿಂದಲೂ ಕೂಡಿದೆ. ಏಕೆಂದರೆ ಈ ಆನುವಂಶಿಯತೆಯು ಕಾಯವರ್ಣತಂತುಗಳ ಮುಖಾಂತರವೂ ಸಹ ನಡೆದಿದೆ. ಈ ಲಿಂಗ ವ್ಯತಿರಿಕ್ತ ಎಕ್ಸ್ ವೈ ಹೆಣ್ಣುಗಳು ಅಥವಾ ಉಭಯ ಲಿಂಗದ ಇಲಿಗಳು ಉತ್ಪತ್ತಿಯಾಗಬೇಕಾದರೆ ಕಡೇ ಪಕ್ಷ ಎರಡು ಗುಣಾಣುಗಳು ಕಾರಣ ಎಂದು ವರದಿ ಮಾಡಿದ್ದಾರೆ. 1) ಟಿಡಿವೈ ಅಥವಾ ಟೆಸ್ಟೀಸ್ ಡಿಟರ್‌ಮೈನಿಂಗ ಜೀನ್ ಈ ಗುಣಾಣುವೂ ವೈ ವರ್ಣ ತಂತುವಿನ ಕೇಂದ್ರ ಕಣದಲ್ಲಿ ಇದೆ. 2) ಟಿಡಿಎ– [1] ಅಥವಾ ಟೆಸ್ಟೀಸ್ ಡಿಟರ್‌ಮೈನಿಂಗ್ ಆಟೋ– ಸೋಮಲ್ ಜೀನ್. ಈ ಗುಣಾಣುವೂ ಮತ್ತು ಟಿಎಎಸ್ ಗಳು 17ನೇ ವರ್ಣತಂತುವಿನಲ್ಲಿ ಇದೆ ಎಂದು ಈ ಕಾಯ ವರ್ಣತಂತುಗಳು ಲಿಂಗ ವ್ಯತಿರಿಕ್ತವಾಗುವುದಕ್ಕೆ ಕಾರಣವಾಗಿದೆ. ಅದೇ ತರಹ ಟಿಎಫ್ ಎಂ ಗುಣಾಣು ಗಂಡಿನಿಂದ ಹೆಣ್ಣಿಗೆ ವ್ಯತಿರಿಕ್ತವಾಗುವ ಗುಣಾಣು ಸಹ ಇದೆ.

ಮನುಷ್ಯರಲ್ಲಿ 20000 ಗಂಡುಗಳಲ್ಲಿ ಒಬ್ಬ ಹೆಣ್ಣಿನ (ಎಕ್ಸ್ ಎಕ್ಸ್) ವರ್ಣತಂತುಗಳನ್ನು ಮತ್ತು 1,00,000 ಹೆಣ್ಣುಗಳಲ್ಲಿ ಒಬ್ಬ ಗಂಡು (ಎಕ್ಸ್ ವೈ)ವರ್ಣತಂತುಗಳ ಆಕೃತಿಗಳನ್ನು ಹೊಂದಿರುತ್ತಾರೆ. ಈ ಲಿಂಗ (ಎಕ್ಸ್ ಎಕ್ಸ್) ವ್ಯತಿರಿಕ್ತ ಗಂಡುಗಳು ದೊರಕಲು ಎರಡು ಕಾರಣಗಳಿವೆ.

1. ಇಲಿಗಳಲ್ಲಿ ನಡೆಯುವಂತೆ ಮಾನವನಲ್ಲಿಯೂ ಸಹ ಅಸಾಮಾನ್ಯ ಅಡ್ಡ ಸೀಳಿಕೆಯ ಕ್ರಿಯೆಯಲ್ಲಿ ವೈ ವರ್ಣತಂತುವಿನ ಟಿಡಿಎಫ್ ತುಂಡು ಎಕ್ಸ್ ವರ್ಣತಂತುವಿಗೆ ಸಾಗಣಿಯಾಗುವುದರಿಂದ ಮತ್ತು

2. ವೀರ್ಯಾಣು ಅಭಿವೃದ್ಧಿಗೊಳಿಸುವ ನಿಷ್ಕ್ರಿಯ ಗುಣಾಣುಗಳ ಪಥವೂ ವಿಕೃತಗೊಳ್ಳುವುದರಿಂದ ಕೆಲವು (ಎಕ್ಸ್ ಎಕ್ಸ್) ಲಿಂಗ ವ್ಯತಿರಿಕ್ತ ಗಂಡುಗಳಲ್ಲಿ ಡಿಎನ್‌ಎ ಬಂಧಗಳು ವೈ ವರ್ಣತಂತುಗಳಿಂದ ಉತ್ಪತ್ತಿಯಾಗಿದ್ದು ಇವುಗಳು ಮೇಲಿನ ಎರಡು ಕಾರಣಗಳಿಂದ ಉತ್ಪನ್ನವಾದ ಜೀವಿಗಳಾಗಿರುತ್ತವೆ.

ಇನ್ನು ಎಕ್ಸ್ ವೈ ಹೆಣ್ಣುಗಳ 21ನೇ ವರ್ಣತಂತುವೂ ದ್ವಿಗುಣಗೊಳ್ಳುವುದರಿಂದ ಹಾಗೂ ಈ ವರ್ಣತಂತುವೂ ಡಿಎಎಕ್ಸ್ 1 ಎಂಬ ಗುಣಾಣುವನ್ನು ಹೊಂದಿರುವುದರಿಂದ ಉದ್ಭವವಾಗುತ್ತವೆ. ಮತ್ತೊಂದು ಗುಣಾಣು ಜೆಡ್ ಎಫ್ ವೈ (ಜೆಡ್ ಎಫ್ ಅಂದರೆ ಜಿಂಕ್ ಫಿಂಗರ್ ಟ್ರಾನ್ಸ್‌ಸ್ಕಿಪ್ಟಸ್ ಘಟಕ) ವನ್ನು ಮನುಷ್ಯನ ವೈ ವರ್ಣ ತಂತುವಿನಲ್ಲಿ ಸಂಶೋಧಿಸಲಾಗಿದೆ. ಇದರ ಜೊತೆಯಲ್ಲಿ ಟಿ ಡಿ ಎಫ್ ಅನ್ನುವ ಗುಣಾಣು ಸಹ ಲಿಂಗ ವ್ಯತಿರಿಕ್ತ ಎಕ್ಸ್ ಎಕ್ಸ್ ಗಂಡಿನಲ್ಲಿದ್ದು, ಲಿಂಗವ್ಯತಿರಿಕ್ತ ಎಕ್ಸ್ ವೈ ಹೆಣ್ಣಿನಲ್ಲಿ ಇರುವುದಿಲ್ಲ. ಈ ಜೆಡ್ ಎಫ್ ವೈ ಗುಣಾಣುವನ್ನು ಹಲವು ಜೀವಿಗಳಲ್ಲಿ ನೋಡಬಹುದಾಗಿದೆ. ಏಕೆಂದರೆ ಈ ಗುಣಾಣು ಜೀವಿಗಳ ವಿಕಾಸ ಪಥದಿಂದಲೂ ಸಹ ಸಂರಕ್ಷಿಸಲ್ಪಟ್ಟಿದೆ. ಈ ಗುಣಾಣುವಿನ ಪಥವೂ ಎಕ್ಸ್ ಮತ್ತು ಕಾಯ ವರ್ಣತಂತುವಿನ ಜೊತೆ ಅಡ್ಡ ಪ್ರತಿಕ್ರಿಯಿಸುತ್ತದೆ. ಈ ಅನುರೂಪವಾದ ವಲಯವನ್ನು ಜೆಡ್ ಎಫ್ ಎಕ್ಸ್ ಮತ್ತು ಜೆ ಎಫ್ ಎ ಎಂಬ ಪದನಾಮಗಳಿಂದ ಕರೆಯುತ್ತಾರೆ. ನಂತರ ಮತ್ತೊಂದು ಎಸ್ ಆರ್ ವೈ ಗುಣಾಣು ವೈ ವರ್ಣತಂತುವಿನಲ್ಲಿದೆ. ಇದು ಲಿಂಗ ನಿರ್ಧಾರ ಮಾಡುವ ವಲಯ ಎಂದು ಸಂಶೋಧಿಸಲಾಗಿದೆ. ಈ ಗುಣಾಣು ಹಲವು ಟಿಡಿಎಫ್ ಗುಣಗಳನ್ನು ಹೊಂದಿದೆ. ಇದರ ಬಗ್ಗೆ ಹಲವು ಅಧ್ಯಯನಗಳು ನಡೆದು ಎಸ್ ಆರ್ ವೈ ಗುಣಾಣುವಿನಲ್ಲಿ ವಿಕೃತಿ ಉಂಟಾದರೆ ಲಿಂಗ ವ್ಯತಿರಿಕ್ತ ಎಕ್ಸ್ ವೈ ಹೆಣ್ಣುಗಳನ್ನು ನೋಡಬಹುದು. ಆದ್ದರಿಂದ ಗಂಡಿನ ಲಿಂಗ ನಿರ್ಧಾರದಲ್ಲಿ ಎಸ್ ಆರ್ ವೈ ಗುಣಾಣುವಿನ ಪಾತ್ರ ಪ್ರಮುಖವಾಗಿದೆ ಎಂದು ತಿಳಿದುಬರುತ್ತದೆ. ವೃಷಣಗಳ ಬೆಳವಣಿಗೆಯಲ್ಲಿ ಎಸ್ ಆರ್ ವೈ ಗುಣಾಣುಗಳು ಜವಾಬ್ದಾರಿಯುತವಾಗಿವೆ. ಎಸ್ ಆರ್ ವೈ ಗುಣಾಣು ವೈ ವರ್ಣತಂತುವಿನ ಮೇಲೆ ಆಕ್ರಮಿಸಿದ್ದು, ಇದರಲ್ಲಿ 250 ಸಂಕೇತಗಳನ್ನು ನೀಡುವ ಕ್ಷಾರ ಸರಣಿಗಳನ್ನು ಹೊಂದಿದ್ದು, 80 ಆಮೈನೋ ಆಸಿಡ್ ಗಳನ್ನು ಕೊಡುತ್ತವೆ. ಈ 250 ಸಂಕೇತಗಳ ಪ್ರಾಂತವೂ ಎಲ್ಲಾ ಸ್ತನಿಗಳಲ್ಲಿಯೂ ಸಹ ಸಂರಕ್ಷಿಸಲ್ಪಟ್ಟಿದೆ.

ಇತ್ತೀಚೆಗೆ ಮತ್ತೊಂದು ಡಿಎಎಕ್ಸ್ ಐ ಗುಣಾಣು ಮಾನವನಲ್ಲಿ ಮತ್ತು ಡಿ ಎ ಎಕ್ಸ್ ಐ ಗುಣಾಣುವನ್ನು ಇಲಿಯಲ್ಲಿ ಸಂಶೋಧಿಸಲಾಗಿದೆ. ಈ ಡಿ ಎ ಎಕ್ಸ್ ಐ ಗುಣಾಣುವೂ ವೃಷಣಗಳ ಬೆಳವಣಿಗೆಯನ್ನು ಅಡಗಿಸಿ ಅಂಡಾಶಯಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿ ಹೆಣ್ಣು ಲಿಂಗವಾಗಿ ಬೆಳೆಯಲು ಅವಕಾಶ ಮಾಡಿಕೊಡುತ್ತದೆ. ಈ ಮೇಲಿನ ಗುಣಾಣುಗಳನ್ನು ಎಕ್ಸ್ ವೈ ಜೀವಿಗಳಲ್ಲಿರುವ ಚಿಕ್ಕದಾದ ಎಕ್ಸ್ ವರ್ಣತಂತುವಿನ ಒಂದು ಭಾಗವೂ ದ್ವಿಗುಣಗೊಳ್ಳುವುದರಿಂದ, ಅದರ ಜೊತೆಯಿರುವ ಎಸ್ ಆರ್ ವೈ ಗುಣಾಣುವಿನ ನಿರ್ದೇಶನದಂತೆ ಗಂಡು ಜೀವಿಯು ಲಿಂಗ ವ್ಯತಿರಿಕ್ತ ಹೆಣ್ಣಾಗಿ ಮಾರ್ಪಾಡಾಗುತ್ತದೆ. ಈ ಕ್ರಮವನ್ನು ಡೊಸೆಜ್ ಸೂಕ್ಷ್ಮ ಲಿಂಗ ವ್ಯತಿರಿಕ್ತವೆಂದು (ಡಿಎಸ್‌ಎಸ್) ಮತ್ತು ಡಿಎಎಕ್ಸ್‌ಐ ಗುಣಾಣುವೂ ಕೋಶಕೇಂದ್ರ ಪುಷ್ಟೀಕಾರಕ ಸತ್ವಗಳನ್ನು ಗ್ರಹಿಸಲು ಸಂಕೇತಗಳನ್ನು ನೀಡುತ್ತವೆ. ಇದರ ಕ್ರಿಯೆಯಿಂದ ವೃಷಣಗಳ ಬೆಳವಣಿಗೆಯಾಗದಂತೆ ಮತ್ತು ಅಂಡಾಶಯಗಳ ಬೆಳವಣಿಗೆ ಆಗುವಂತೆ ಸಂಕೇತಗಳನ್ನು ವ್ಯಕ್ತಪಡಿಸುತ್ತವೆ. ಇದರಿಂದ ಡಿಎಎಕ್ಸ್ ಐ ಎಂಬುವ ಗುಣಾಣು ಅಂಡಾಶಯಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮನುಷ್ಯರಲ್ಲಿ ಈ ಡಿಎಎಕ್ಸ್ ಐ ಅನ್ನು ಎಹೆಚ್‌ಸಿ ಅಡ್ರಿನಲ್

ಹೈಪೊಪ್ಲಾಸಿಯಾ ಕಾನ್‌ಜೇನ್ಸಿಯ ಮತ್ತು ಅದರ ಅನುರೂಪವಾದ ಇಲಿಯಲ್ಲಿ ಎ ಹೆಚ್ ಸಿ ಹೆಚ್ ಎಂದು ಕರೆಯುತ್ತಾರೆ.

ಇಂದಿನ ಅಣು ಜೀವವಿಜ್ಞಾನದ ಮಟ್ಟದಲ್ಲಿ ಲಿಂಗ ನಿರ್ಧಾರದ ಬಗ್ಗೆ ಅಧ್ಯಯನ ಮಾಡುವುದರಿಂದ ಸಮಗ್ರ ಎಕ್ಸ್ ಮತ್ತು ಐ ವರ್ಣತಂತುಗಳು ಗಂಡು ಮತ್ತು ಹೆಣ್ಣು ಲಿಂಗನಿರ್ಧಾರದಲ್ಲಿ ಭಾಗಿಯಾಗುವುದಿಲ್ಲವೆಂದು ತಿಳಿಸುತ್ತದೆ. ಲಿಂಗ ನಿರ್ಧಾರವನ್ನು ಹತೋಟಿಯಲ್ಲಿಡುವ ದಕ್ಷ 250 ಕ್ಷಾರ ಸರಣಿಗಳ ಉದ್ದದ ಎಸ್ ಆರ್ ವೈ ಗುಣಾಣುವೇ ಮುಖ್ಯವೆಂದು ತಿಳಿದುಬರುತ್ತದೆ. (ಹೆಚ್.ಪಿ.ಜಿ.)

**ಲಿಂಗವಿಭೇದನೆ (ಸೆಕ್ಸ್ ಡಿಫರೆನ್ಷಿಯೇಷನ್):** ಅವಿಭೇದನ ಸ್ಥಿತಿಯಲ್ಲಿರುವ (ಅನ್‌ಡಿಫರೆನ್ಷಿಯೇಟೆಡ್) ಅಂಗಾಂಶದಿಂದ ಗಂಡು ಅಥವಾ ಹೆಣ್ಣು ಪ್ರಾಥಮಿಕ ಮತ್ತು ಆನುಷಂಗಿಕ ಪ್ರಜನನಾಂಗಗಳ ವಿಭೇದನೆ ಮತ್ತು ಬೆಳವಣಿಗೆ. ಸ್ತನಿಗಳಲ್ಲಿ ಲಿಂಗವನ್ನು ಮೂರು ಹಂತಗಳಲ್ಲಿ ಗುರುತಿಸಲಾಗುವುದು. 1) ಫಲಿತ ಅಂಡಾಣುವಿನಲ್ಲಿ ವರ್ಣತಂತುಗಳಿಂದ ನಿರ್ಧಾರವಾದ (ಸೆಕ್ಸ್ ಡಿಟರ್‌ಮಿನೇಷನ್) ವರ್ಣತಂತುಲಿಂಗ (ಕ್ರೋಮೊಸೊಮಲ್ ಸೆಕ್ಸ್), 2) ಭ್ರೂಣದಲ್ಲಿ ಗಂಡು ಅಥವಾ ಹೆಣ್ಣು ಪ್ರಜನನಾಂಗಳ ವಿಭೇದನೆ ಮತ್ತು ಬೆಳವಣಿಗೆ – ಪ್ರಜನನಾಂಗ ಲಿಂಗ (ಗೊನೆಡಲ್ ಸೆಕ್ಸ್) ಹಾಗು 3) ಲೈಂಗಿಕ ಪ್ರೌಢತೆ ಪಡೆದಾಗ ಕಾಣುವ ಬಾಹ್ಯ ಲಕ್ಷಣ ಲಿಂಗ (ಫಿನೊಟಿಪಿಕ್ ಸೆಕ್ಸ್). ಕಶೇರುಕಗಳಲ್ಲಿ ಅಂಡಾಣು–ವೀರ್ಯಾಣುಗಳ ಮಿಲನದಿಂದ ಉಂಟಾದ ಫಲಿತ ಅಂಡಾಣುವಿನಲ್ಲಿ (ಭ್ರೂಣಾಣು, ಯುಗ್ಮಕ) ಲಿಂಗ ನಿರ್ಧಾರವಾದರೂ, ಮುಂದೆ ಭ್ರೂಣದ ಬೆಳವಣಿಗೆಯಲ್ಲಿ, ಹಾರ್ಮೋನ್‌ಗಳ ಪ್ರಭಾವದಿಂದ ಪ್ರಜನನಾಂಗಳ ಬೆಳವಣಿಗೆಯಾಗುತ್ತದೆ. ಮನುಷ್ಯ ಭ್ರೂಣದಲ್ಲಿ ನಿಷೇಚನೆಯಾಗಿ ಎಂಟು ವಾರಗಳ ಅನಂತರ ಪ್ರಜನನಾಂಗಳ ವಿಭೇದನೆಯಾಗುತ್ತದೆ. ವಿವಿಧ ಪ್ರಭೇದಗಳಲ್ಲಿ ಅವುಗಳ ಭ್ರೂಣ ಬೆಳವಣಿಗೆ ಸಮಯಕ್ಕೆ ತಕ್ಕಂತೆ ನಿರ್ಧರಿತ ಸಮಯದಲ್ಲಿ ಲಿಂಗವಿಭೇದನೆಯಾಗುತ್ತದೆ. ಆಲ್‌ಫ್ರೆಡ್ ಜೋಷ್ವ ಎಂಬ ವಿಜ್ಞಾನಿಯು ಮೊದಲಬಾರಿಗೆ ಮೊಲಗಳಲ್ಲಿ ಪ್ರಯೋಗ ಮಾಡಿ, ಸ್ತನಿಗಳಲ್ಲಿ ಅವಿಭೇದನೆ ಸ್ಥಿತಿಯಲ್ಲಿರುವ ಅಂಗಾಂಶದಿಂದ ಗಂಡು ಹಾರ್ಮೋನ್ (ಎಂಡ್ರೊಜನ್) ಪ್ರಚೋದನೆಯಿಂದ ವೃಷಣಗಳು ಬೆಳೆದರೆ, ಯಾವ ಪ್ರಚೋದನೆ ಇಲ್ಲದೆ (ಡಿಫಾಲ್ಟ್ ಡಿಫರೆನ್ಷಿಯೇಶನ್) ಅಂಡಾಶಯ ಬೆಳೆಯುವುದೆಂದು ತೋರಿಸಿದನು. ಆಮೇಲೆ ನಡೆಸಿದ ಪ್ರಯೋಗಗಳೆಲ್ಲವೂ ಈ ಸಿದ್ಧಾಂತವನ್ನು ಪುಷ್ಟೀಕರಿಸಿದವು. ಈ ಪ್ರಯೋಗಗಳಿಂದ ತಿಳಿಯುವುದೇನೆಂದರೆ, ಗಂಡು ಲಿಂಗ ನಿರ್ಧರಿಸುವ ಜೀನ್‌ಗಳು ಕ್ಲುಪ್ತ ಸಮಯದಲ್ಲಿ ಕ್ರಿಯಾಶೀಲವಾಗಿ, ಗಂಡು ಲಿಂಗ ವಿಭೇದನೆಯಾಗುತ್ತದೆ. ಒಂದು ವೇಳೆ ಇಂತಹ ಜೀನ್‌ಗಳು ಫಲಿತ ಅಂಡಾಣುವಿನಲ್ಲಿರದಿದ್ದರೇ ಅಥವಾ ಇದ್ದು ಬೇರಾವುದೆ ಕಾರಣಕ್ಕೆ ಕ್ಲುಪ್ತ ಸಮಯದಲ್ಲಿ ಕ್ರಿಯಾಶೀಲವಾಗದಿದ್ದರೆ, ಅವಿಭೇದನ ಸ್ಥಿತಿಯಲ್ಲಿರುವ ಅಂಗಾಂಶ ಅಂಡಾಶಯವಾಗಿ ಬೆಳೆಯುತ್ತದೆ. ಇತ್ತೀಚಿನ ಸಂಶೋಧನೆಗಳಿಂದ ಗಂಡು ಲಿಂಗವಿಭೇದನೆ ಲೈಂಗಿಕ ವರ್ಣತಂತುವಿನ ಮೇಲಿರುವ ಒಂದು ಜೀನ್ ಸ್ವಿಚ್‌ನಂತೆ ವರ್ತಿಸಿ, ಇತರ ಜೀನ್‌ಗಳನ್ನು ಪ್ರಚೋದಿಸಿ, ಗಂಡು ಹಾರ್ಮೋನ್ ಸ್ರವಿಸುವಂತೆ ಮಾಡಿ, ಗಂಡು ಲಿಂಗ ವಿಭೇದನೆಗೆ ಕಾರಣವಾಗಿದೆ ಎಂದು ತಿಳಿದಿದೆ. ಈ ಜೀನನ್ನು ಮನುಷ್ಯರಲ್ಲಿ SRY ಎಂದು ಇತರ ಸ್ತನಿಗಳಲ್ಲಿ Sry ಎಂದು ಹೆಸರಿಸಲಾಗಿದೆ. ಇದು ವೈ ವರ್ಣತಂತುವಿನಲ್ಲಿದೆ. ಈ ಜೀನ್‌ನ ಕ್ರಿಯೆಯನ್ನು ಪ್ರಾಯೋಗಿಕವಾಗಿ, ಕ್ಲುಪ್ತ ಸಮಯದಲ್ಲಿ ಕ್ರಿಯಾಶೀಲವಾಗುವುದನ್ನು ತಡೆದರೆ, ಹೆಣ್ಣುಲಿಂಗ ವಿಭೇದನೆಯಾಗುವುದು. ಪ್ರಮುಖವಾಗಿ ಎರಡು ಹಾರ್ಮೋನ್‌ಗಳು, ಟೆಸ್ಟೊಸ್ಟಿರಾನ್ ಹಾಗೂ ಆಂಟಿ ಮುಲೆರಿಯನ್ ಹಾರ್ಮೋನ್ ಗಂಡು ಲಿಂಗ ವಿಭೇದನೆಗೆ ಕಾರಣವಾಗಿವೆ. ಟೆಸ್ಟೊಸ್ಟಿರೊನ್ ಗಂಡು ಪ್ರಜನನಾಂಗಗಳ ವಿಭೇದನೆ ಮತ್ತು ಬೆಳವಣಿಗೆ ಪ್ರಚೋದಿಸಿದರೆ, ಆಂಟಿಮುಲೆರಿಯನ್ ಹಾರ್ಮೋನ್ ಮುಲೇರಿಯನ್ ನಾಳಗಳನ್ನು ನಾಶಪಡಿಸಿ, ಹೆಣ್ಣು ಆನುವಂಶಿಕ ಪ್ರಜನನಾಂಗಗಳ ಬೆಳವಣಿಗೆಯನ್ನು ತಡೆಯುತ್ತದೆ. ಹೆಣ್ಣು ಭ್ರೂಣದಲ್ಲಿ ವೈ ವರ್ಣತಂತು ಇರದಿರುವುದರಿಂದ, ಕ್ಲುಪ್ತ ಸಮಯದಲ್ಲಿ ಮೇಲೆ ತಿಳಿಸಿದ ಹಾರ್ಮೋನ್‌ಗಳ ಸ್ರವಿಕೆಯಾಗುವುದಿಲ್ಲ. ಅನಂತರ ಅಂಡಾಶಯ ಮತ್ತು ಇತರ ಅಂಗಗಳ ಬೆಳವಣಿಗೆಗೆ ಬೇಕಾದ ಜೀನ್‌ಗಳು ಕ್ರಿಯಾಶೀಲವಾಗಿ ಅವುಗಳ ಬೆಳವಣಿಗೆಯಾಗುತ್ತದೆ. ಲಿಂಗ ವಿಭೇದನಾಕ್ರಿಯೆಯು ಒಂದು ಸಂಕೀರ್ಣ ಕ್ರಿಯೆಯಾಗಿದ್ದು, ಇದರಲ್ಲಿ ಅಡೆತಡೆಗಳಾದರೆ ಅನೇಕ ತರಹದ ಅಸಮರ್ಪಕ ಲೈಂಗಿಕ ಬೆಳವಣಿಗೆಯಾಗುತ್ತದೆ (ಉದಾ : ಷಂಡತನ). ಸ್ತನಿಗಳಲ್ಲದ ಕೆಲವು ಪ್ರಾಣಿವರ್ಗಗಳಲ್ಲಿ, ಲಿಂಗ ವಿಭೇದನೆ ಕುತೂಹಲಕಾರಿಯಾಗಿದೆ. ಕೆಲವು ಸರೀಸೃಪಗಳಲ್ಲಿ (ಆಮೆ, ಮೊಸಳೆ) ತತ್ತಿಗಳು ಬೆಳೆಯುವಾಗ ಉಷ್ಣತೆ (ಕಾವು–ಉಷ್ಣತೆ, ಇನ್‌ಕ್ಯುಬೇಶನ್ ಟೆಂಪರೇಚರ್) ಅವುಗಳ ಲಿಂಗ ನಿರ್ಧಾರ ಮಾಡುತ್ತದೆ. ಉದಾಹರಣೆಗೆ, ಅಲಿಗೇಟರ್‌ನಲ್ಲಿ ತತ್ತಿಗಳು $30^0$ ಸೆ. ಗಿಂತ ಕಡಿಮೆ ಉಷ್ಣತೆಯಲ್ಲಿ ಬೆಳೆದರೆ ಎಲ್ಲ ತತ್ತಿಗಳು ಹೆಣ್ಣಾಗುವವು. ಇದಕ್ಕೆ ವಿರುದ್ಧವಾಗಿ ಗೂಡಿನ ಉಷ್ಣತಾಮಾನ $33^0$ ಸೆಗಿಂತ ಹೆಚ್ಚಾಗಿದ್ದರೆ ಎಲ್ಲ ತತ್ತಿಗಳು ಗಂಡಾಗುವವು. ಒಂದು ವೇಳೆ 30–$33^0$ ಸೆ ಅಂತರದಲ್ಲಿ ಬೇರೆ, ಬೇರೆ ಉಷ್ಣತಾಮಾನಕ್ಕೆ ತತ್ತಿಗಳನ್ನು ಒಡ್ಡಿದರೆ ಗಂಡು ಮತ್ತು ಹೆಣ್ಣು ವಿವಿಧ ಅನುಪಾತಗಳಲ್ಲಾಗುತ್ತವೆ. ಈ ವಿಧಾನವನ್ನು ಪ್ರಾಣಿಗಳು ತಮ್ಮ ಗುಂಪಿನಲ್ಲಿ ಗಂಡು–ಹೆಣ್ಣಿನ ಅನುಪಾತವನ್ನು ಕಾಯ್ದುಕೊಳ್ಳಲು ಉಪಯೋಗಿಸುತ್ತವೆ. ಅಂದರೆ ಗಂಡು ಸಂತಾನ ಹೆಚ್ಚಾಗಿ ಬೇಕಿದ್ದರೆ, ಗೂಡಿನ ತಾಪಮಾನವನ್ನು ಕೆಲವು ವರ್ತನೆಗಳಿಂದ ಹೆಚ್ಚಿಸುತ್ತವೆ. ಅದೇ ರೀತಿ ಗೂಡಿನ ಉಷ್ಣತೆಯನ್ನು ಕಡಿಮೆಯಾಗಿಸಿ ಹೆಣ್ಣು ಮರಿಗಳನ್ನು ಪಡೆಯುತ್ತಿವೆ. (ಎಚ್.ಎನ್.ವೈ.)

**ಲಿಂಗ ಸಂಲಗ್ನತೆ (ಸೆಕ್ಸ್ ಲಿಂಕೇಜ್) :** ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಲಿಂಗ ಕ್ರೊಮೋಸೋಮುಗಳಲ್ಲಿರುವ ಜೀನ್‌ಗಳ ವರ್ಗಾವಣೆಯಾಗುವ ಪ್ರಕ್ರಿಯೆ. ಲಿಂಗ ಕ್ರೊಮೋಸೋಮುಗಳಲ್ಲಿರುವ ಈ ಜೀನ್‌ಗಳನ್ನು ಲಿಂಗ ಸಂಲಗ್ನತೆ ಜೀನ್‌ಗಳೆಂದು ಕರೆಯುತ್ತಾರೆ. ಬಹಳಷ್ಟು ಜೀವಿಗಳಲ್ಲಿ ಗಂಡು ಒಂದು x ವರ್ಣ ತಂತುವನ್ನೂ ಒಂದು y ವರ್ಣತಂತುವನ್ನೂ ಹೊಂದಿರುತ್ತವೆ. ಆ ಜಾತಿಯ ಹೆಣ್ಣುಗಳಲ್ಲಿ ಎರಡು x ವರ್ಣತಂತುಗಳು ಇರುತ್ತವೆ. ಈ ಲಿಂಗ ನಿರ್ಧಾರಕ ಕ್ರೊಮೋಸೋಮುಗಳು ಲಿಂಗ ನಿರ್ಣಯವನ್ನಲ್ಲದೆ ಬೇರೆ ಗುಣಗಳನ್ನು ಕೂಡಾ ನಿರ್ಧರಿಸುತ್ತವೆ. ಈ ಕ್ರೊಮೋಸೋಮುಗಳಲ್ಲಿನ ಜೀನ್‌ಗಳ ಆನುವಂಶೀಯತೆ ಬೇರೆ ಜೀನ್ ಗಳಿಗಿಂತ ಭಿನ್ನವಾಗಿರುತ್ತದೆ. ಲಿಂಗ ಸಂಲಗ್ನತೆಯುಳ್ಳ ಜೀನ್ ಗಳ ಆನುವಂಶೀಯಕತೆಯು ಮೂರು ರೀತಿಯದಾಗಿರುತ್ತದೆ: 1) ಡೈಜೆನಿಕ್ ವಿಧ 2) ಹೊಲಾಂಡ್ರಿಕ್ ವಿಧ ಮತ್ತು 3) ಹೊಲಾಂಡ್ರಿಕ್–ಡಯಾಂಡ್ರಿಕ್ ವಿಧ

1) ಡೈಜೆನಿಕ್ ವಿಧ: ಈ ವಿಧವು x ಸಂಬಂಧಿತವಾದುದು. ಜೀನ್ x ಕ್ರೋಮೋಜೋಮಿನ ಸಾದೃಶ ಭಾಗದಲ್ಲಿ ಇರುತ್ತದೆ. ಈ ಜೀನ್ ತಾಯಿಯಿಂದ ಮಗನಿಗೆ ವರ್ಗಾವಣೆ ಆಗುತ್ತದೆ. ಆದರೆ ತಂದೆಯಿಂದ ಮಗನಿಗೆ ಆಗುವುದಿಲ್ಲ.

2) ಹೊಲಾಂಡ್ರಿಕ್ ವಿಧ: y ಕ್ರೊಮೋಸೋಮಿನ ಅಸಾದೃಶ ಭಾಗದಲ್ಲಿ ಈ ಜೀನ್ ಇರುತ್ತದೆ. ಇದು ಪೂರ್ಣವಾಗಿ y ಕ್ರೊಮೋಸೋಮಿನೊಂದಿಗೆ ಸಂಲಗ್ನತೆ ಹೊಂದಿರುತ್ತದೆ. ಇವು ತಂದೆಯಿಂದ ಮಗನಿಗೆ ಮತ್ತು ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಾಗುತ್ತದೆ. y ಕ್ರೊಮೋಸೋಮಿನ ಅಸಾದೃಶ ಭಾಗದಲ್ಲಿರುವ ಜೀನ್ ಗಳಿಗೆ ಹೊಲಾಂಡ್ರಿಕ್ ಜೀನ್ ಎನ್ನುವರು.

3) ಹೊಲಾಂಡ್ರಿಕ್ ಮತ್ತು ಡಯಾಂಡ್ರಿಕ್: ಇದು xy ಸಂಲಗ್ನತೆ ಹೊಂದಿದೆ. ಹೆಣ್ಣಗಳಲ್ಲಿರುವ ಒಂದು x ಕ್ರೊಮೊಸೋಮ್ ನೇರವಾಗಿ ಹೆಣ್ಣು ಮಕ್ಕಳಿಗೆ ವರ್ಗಾವಣೆಯಾಗುತ್ತದೆ. ಹಾಗೂ ಇನ್ನೊಂದು x ಕ್ರೊಮೋಸೋಮ್ ನೇರವಾಗಿ ಗಂಡು ಮಕ್ಕಳಿಗೆ ವರ್ಗಾವಣೆಯಾಗುತ್ತದೆ.

ಎಲ್ಲಾ ಲಿಂಗ ಸಂಲಗ್ನತೆ ಹೊಂದಿರುವ ಜೀನ್ ಗಳು, ಪ್ರಬಲ (ಡಾಮಿನೆಂಟ್) ಅಥವಾ ಗೌಣ (ರಿಸೆಸಿವ್) ಆಗಿರಲಿ, ಅವು ಗಂಡಿನ ಪ್ರಕಟ ಲಕ್ಷಣ (ಫಿನೋಟೈಪ್) ವನ್ನು ನಿರ್ಧರಿಸುತ್ತವೆ. ಇಂತಹ ಜೀನ್‌ಗಳಿಗೆ ಹೆಮಿಜೈಗಸ್ ಲಿಂಗ ಸಂಲಗ್ನತೆ ಎನ್ನುತ್ತಾರೆ. ಗಂಡು ಮಕ್ಕಳಿಗೆ ತಮ್ಮ ತಾಯಿಯಿಂದ x ಕ್ರೊಮೋಸೋಮಿನ ಆನುವಂಶೀಯ ಗುಣಗಳು ಬರುತ್ತವೆ. ಆದರೆ ಹೆಣ್ಣು ಮಕ್ಕಳಿಗೆ ತಮ್ಮ ತಂದೆ ತಾಯಿ ಇಬ್ಬರಿಂದಲೂ ಕ್ರೊಮೋಸೋಮುಗಳು ಬರುತ್ತವೆ. x ಸಂಲಗ್ನತೆ ಹೊಂದಿರುವ ಗೌಣ ಜೀನ್ ತಂದೆಯಿಂದ ಮೊಮ್ಮಗನಿಗೆ ಮಗಳ ಮೂಲಕ (ಭಿನ್ನಯುಗ್ಮಜ) ವರ್ಗಾವಣೆಯಾಗುತ್ತದೆ.

ಕುಸುಮ ರೋಗ (ಹಿಮೋಫಿಲಿಯ) ಲಿಂಗ ಸಂಲಗ್ನತೆಯೊಂದು ಉತ್ತಮ ಉದಾಹರಣೆ. ಇಂತಹುದೇ ಆದ ಬೇರೆ ಗುಣಗಳನ್ನು ಸಹ 1900 ರ ಹಿಂದೆಯೇ ಪ್ರಕಟಿಸಲಾಗಿತ್ತು. ಸಂಲಗ್ನತೆಗೆ ಸಂಬಂಧಿಸಿದ ದೃಢವಾದ ಪ್ರಾಯೋಗಿಕ ಸಾಕ್ಷಿಗಳನ್ನು ಮೆಂಡಲ್‌ನ ಆನುವಂಶೀಯತಾ ನಿಯಮಗಳ ಪುನಶೋಧನೆಯ ನಂತರವೇ ಖಚಿತಪಡಿಸಲಾಯಿತು. 1910 ರಲ್ಲಿ ಟಿ.ಎಚ್. ಮಾರ್ಗನ್ ಡ್ರಾಸಾಫಿಲ ಮೆಲನೋಗ್ಯಾಸ್ಟರ್‌ಗೆ ಸಂಬಂಧಿಸಿದ ಲಿಂಗ ಸಂಲಗ್ನತೆಗೆ ಪ್ರಾಯೋಗಿಕ ಸಾಕ್ಷ್ಯವನ್ನು ನೀಡಿದನು. ಸಾಮಾನ್ಯವಾಗಿ ಈ ನೊಣಗಳಿಗೆ ಕೆಂಪು ಕಣ್ಣು ಇರುತ್ತದೆ. ಈ ಗುಣವು x ಕ್ರೊಮೊಸೋಮಿನಲ್ಲಿರುವ ಪ್ರಬಲ ಜೀನ್ ನಿಂದ ಬಂದಿರುತ್ತದೆ. ಈ ಜೀನ್ ವಿಕೃತಿಗೊಂಡಾಗ (ಮ್ಯುಟೇಷನ್) ಬಿಳಿ ಕಣ್ಣಿನ ನೊಣಗಳು ಉತ್ಪತ್ತಿಯಾಗುತ್ತವೆ. ಬಿಳಿ ಕಣ್ಣು ಒಂದು ಗೌಣ ಗುಣ.

ಕೆಂಪು ಕಣ್ಣಿನ ಹೆಣ್ಣು ನೊಣವನ್ನು ಬಿಳಿ ಕಣ್ಣಿನ ನೊಣದೊಂದಿಗೆ ಸಂಕರಗೊಳಿಸಿದಾಗ ಮೂಲ ಸಂತತಿಯ (ಪಿ1) ಗಂಡು ನೊಣದಲ್ಲಿರುವ ಈ ಗುಣವು ಮತ್ತೆ ಎಫ್ 2




ಡ್ರೋಸಾಫಿಲಾ ನೊಣಗಳಲ್ಲಿ ಲಿಂಗ ಸಂಲಗ್ನತೆ. ಬಿಳಿ ಕಣ್ಣಿನ ಗಂಡು ನೋಣವನ್ನು ಕೆಂಪು ಕಣ್ಣಿನ ಹೆಣ್ಣಿನೊಡನೆ ಸಂಕರಗೊಳಿಸಿದರೆ ಎರಡನೇ ಪೀಳಿಗೆಯಲ್ಲಿ ಗಂಡುಗಳ ಪೈಕಿ ಅರ್ಧ ಬಿಳಿ ಕಣ್ಣಿನವಿರುತ್ತವೆ

ಸಂತತಿಯ ಗಂಡು ನೊಣದಲ್ಲಿ ಕಂಡು ಬರುತ್ತದೆ. ಎಫ್ 1 ಸಂತತಿಯಲ್ಲಿ ಲಿಂಗ ಭೇದವಿಲ್ಲದೆ ಎಲ್ಲಾ ನೊಣಗಳಲ್ಲಿಯೂ ಕೆಂಪು ಕಣ್ಣು ಕಂಡು ಬರುತ್ತದೆ. ಆದರೆ ಹೆಣ್ಣು ನೊಣಗಳು ಬಿಳಿ ಕಣ್ಣಿನ ಜೀನ್‌ನ ವಾಹಕಗಳಾಗಿರುತ್ತವೆ. ಇಂತಹ ಹೆಣ್ಣು ನೊಣಗಳನ್ನು ಕೆಂಪು ಕಣ್ಣು ಇರುವ ಗಂಡು ನೊಣಗಳೊಂದಿಗೆ ಸಂಕರಿಸಿದಾಗ 25% ಸಾಮಾನ್ಯ ಕೆಂಪು ಕಣ್ಣಿನ ಹೆಣ್ಣು, 25% ಸಾಮಾನ್ಯ ಕೆಂಪು ಕಣ್ಣಿನ ಗಂಡು, 25% ಕೆಂಪುಕಣ್ಣಿನ ವಾಹಕ ಹೆಣ್ಣು ಹಾಗೂ 25% ಬಿಳಿ ಕಣ್ಣಿನ ಗಂಡುಗಳು ಕಾಣಬರುತ್ತವೆ. ಅಂದರೆ ಮೂಲ ಸಂತತಿಯಲ್ಲಿ ಕಂಡು ಬರುವ ಗುಣವು ಎಫ್ 2 ಗಂಡು ಮಕ್ಕಳಲ್ಲಿ ಕಂಡು ಬರುತ್ತದೆ. ಹೀಗೆ x ಕ್ರೊಮೋಸೋಮಿನೊಂದಿಗೆ ಸಂಲಗ್ನತೆ ಹೊಂದಿರುವ ಗುಣಗಳು ಕ್ರಿಸ್ ಕ್ರಾಸ್ ಆನುವಂಶೀಯತೆಯನ್ನು ತೋರಿಸುತ್ತದೆ.

ಮಾನವನಲ್ಲಿ x ಸಂಲಗ್ನತೆ ಹೊಂದಿರುವ ಗುಣಗಳು: ಇನ್ನೂರಕ್ಕೂ ಹೆಚ್ಚು ಗುಣಗಳು ಲಿಂಗ ಸಂಲಗ್ನತೆ ಹೊಂದಿರುವುದು ಕಂಡು ಬಂದಿದೆ. ಈ ಗುಣಗಳು ಕೂಡಾ ಕ್ರಿಸ್ ಕ್ರಾಸ್ ಆನುವಂಶೀಯಕತೆಯನ್ನು ಹೊಂದಿರುತ್ತವೆ. ಅತ್ಯುತ್ತಮ ನಿದರ್ಶನಗಳೆಂದರೆ ಬಣ್ಣ ಅಂಧತ್ವ ಮತ್ತು ಕುಸುಮರೋಗ (ಹಿಮೋಫೀಲಿಯ).

ಬಣ್ಣ ಅಂಧತ್ವ (ಬಣ್ಣ ಕುರುಡುತನ – ಕಲರ್ ಬ್ಲೈಂಡ್‌ನೆಸ್) ಶಂಕು (ಕೋನ್) ಕೋಶಗಳಲ್ಲಿರುವ ಪ್ರೊಟೀನ್ ಬಣ್ಣಗಳ ಗ್ರಹಿಕೆಗೆ ಕಾರಣವಾಗಿರುತ್ತದೆ. ಕೆಂಪು ಮತ್ತು ಹಸಿರು ಬಣ್ಣಗಳನ್ನು ಗ್ರಹಿಸುವ ಪ್ರೊಟೀನ್ ತಯಾರಿಕೆಗೆ x ಸಂಲಗ್ನಿತ ಜೀನ್ ಕಾರಣ. ನೀಲಿ ಬಣ್ಣವನ್ನು ಗ್ರಹಿಸುವ ಪ್ರೊಟೀನ್ ತಯಾರಿಸುವ ಜೀನ್ ಏಳನೇ ವರ್ಣ ತಂತುವಿನಲ್ಲಿ ಇದೆ. ದೋಷಯುತ ಜೀನ್ ಬಣ್ಣ ಅಂಧತೆಯನ್ನು ಉಂಟು ಮಾಡುತ್ತದೆ. ಈ ಜೀನಿನ ಆನುವಂಶೀಯತೆ ಕೂಡಾ ಡ್ರೋಸೋಫಿಲಾದ ಬಿಳಿ ಕಣ್ಣಿನ ಬಣ್ಣದ ಆನುವಂಶೀಯತೆಯಂತೆಯೇ ಇದೆ.

ಕುಸುಮರೋಗ (ಹೀಮೋಫಿಲಿಯ ಬ್ಲೀಡರ್ಸ್ ಕಾಯಿಲೆ): ಈ ಖಾಯಿಲೆಯ ಆನುವಂಶೀಯತೆ ಕೂಡಾ x ಸಂಲಗ್ನತೆ ಹೊಂದಿರುವ ಜೀನ್ ನಿಂದ ಉಂಟಾಗುತ್ತದೆ. ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳ ವಂಶದಲ್ಲಿ ತುಂಬಾ ಸಾಮಾನ್ಯವಾಗಿತ್ತು. ಹಾಗಾಗಿ ರಾಯಲ್ ಕಾಯಿಲೆಯೆಂದೂ ಹೆಸರು.

ಕೆಲವು x ಸಂಲಗ್ನತೆ ಹೊಂದಿರುವ ಜೀನ್ ಗಳು ಬಹಳ ಮಾರಕ ಕಾಯಿಲೆಗೆ ಕಾರಣವಾಗಿವೆ. ಅಂತಹ ಖಾಯಿಲೆಗಳಲ್ಲಿ ಕನ್ವಲ್ಸಿವ್ ಲೆಷಿ–ನಿಹ್ಯಾಮ್ ರೋಗ ಕೂಡಾ ಒಂದು. ರೋಗಿಗಳು ತಮ್ಮನ್ನು ತಾವು ಊನಗೊಳಿಸಿಕೊಳ್ಳುವ ಸ್ವಭಾವದವರಾಗಿರುತ್ತಾರೆ. ಇದನ್ನು ಹೈಪರ್‌ಯೂರಿಸೀಮಿಯಾ ಎಂದೂ ಕರೆಯಲಾಗುತ್ತದೆ. ಇವರಲ್ಲಿ ಹೈಪೊಕ್ಸಾಂತಿನ್ ಗುವಾನಿನ್ ಫಾಸ್ಫೊರೈಬಿಸಿಲ್ ಟ್ರಾನ್ಸ್‌ಫರೇಸ್ (ಎಚ್‌ಪಿಆರ್‌ಟಿ) ಕಿಣ್ವದ ಕೊರತೆ ಇರುತ್ತದೆ. ಮೂತ್ರದಲ್ಲಿ ಹೆಚ್ಚಿನ ಯೂರಿಕ್ ಆಮ್ಲ, ಬೇಗ ಕೆರಳುವ ಸ್ವಭಾವ, ನಿಶ್ಶಬ್ದ ಸ್ನಾಯುಗಳು, ಇತ್ಯಾದಿ ಈ ರೋಗದ ಲಕ್ಷಣಗಳು. ಇದರಿಂದಾಗಿ ಮಗು ಸಾಮಾನ್ಯವಾಗಿ ಕುಳಿತುಕೊಳ್ಳಲು, ಮಾತನಾಡಲು ಮತ್ತು ನಡೆಯಲು ಸಾಧ್ಯವಾಗುವುದಿಲ್ಲ. ಇಂತಹ ಮಕ್ಕಳಲ್ಲಿ ಕ್ರಮೇಣ ತಮ್ಮನ್ನು ತಾವು ಊನಗೊಳಿಸಿಕೊಳ್ಳುವುದು, ತುಟಿ ಕಚ್ಚುವುದು, ಬೆರಳು ಕಚ್ಚುವುದು, ಹಲ್ಲು ಕಡಿಯುವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕೊನೆಯಲ್ಲಿ ಮೂತ್ರಪಿಂಡಗಳಿಗೆ ಹಾಗೂ ನರಗಳಿಗೆ ಅಪಾಯ ಸಂಭವಿಸುತ್ತದೆ.

ಮಸ್ಕ್ಯುಲಾರ್ ಡಿಸ್ಟ್ರೊಫಿ ಮತ್ತೊಂದು ಲಿಂಗ ಸಂಲಗ್ನತೆ ಹೊಂದಿರುವ ಗೌಣ ಜೀನ್ ರೋಗ. ಈ ಖಾಯಿಲೆಯಲ್ಲಿ ಗಂಡು ಮಗುವಿನ ಸ್ನಾಯುಗಳು ಕ್ಷೀಣವಾಗುತ್ತ ಹೋಗುತ್ತವೆ. ಹದಿ ಹರೆಯದ ವಯಸ್ಸಿನಲ್ಲಿ ಕಾಲು ಮತ್ತು ಭುಜದ ಸ್ನಾಯುಗಳು ಬಿಗಿದು ನಿಶ್ಚೇಷ್ಟಿತವಾಗುತ್ತದೆ. ವಾಹಕ ತಾಯಿಗೆ ಹುಟ್ಟಿದ ಎಲ್ಲಾ ಹೆಣ್ಣು ಮಕ್ಕಳು ರೋಗಮುಕ್ತರಾಗಿರುತ್ತಾರೆ.

ಇದೇ ರೀತಿಯ ಇನ್ನೊಂದು ರೋಗವೆಂದರೆ ಹಂಟರ್ ರೋಗಕೂಟ. ಬುದ್ಧಿಮಾಂದ್ಯತೆ, ಕೋರ್ಸ್ ಲಕ್ಷಣಗಳು ಮತ್ತು ರೋಮಾಧಿಕ್ಯ (ಹಿರ್ಸುಟಿಸಮ್) ಇದರ ಲಕ್ಷಣಗಳು. x ಸಂಲಗ್ನತೆ ಸಾಧಾರಣವಾಗಿ ಗಂಡಸರಿಗೆ ಸೀಮಿತವಾದ ಹಿಂಜರಿಕೆ ಲಕ್ಷಣವುಳ್ಳ ಕಾಯಿಲೆಗೆ ಕಾರಣವಾಗಿರುತ್ತದೆ. ಈ ರೋಗಗಳಿಗೆ ಕಾರಣವಾದ ಗೌಣ ಜೀನ್ x ಕ್ರೊಮೋಸೋಮಿನಲ್ಲಿರುತ್ತದೆ. ಹೆಂಗಸರಲ್ಲಿ ಈ ರೋಗ ಕಾಣಿಸಿಕೊಳ್ಳಬೇಕಾದರೆ ಎರಡೂ x ಕ್ರೊಮೋಸೋಮುಗಳಲ್ಲಿ, ಗೌಣ ಅಲೀಲ್‌ಗಳಿರಬೇಕು. ಆದ್ದರಿಂದ ಇವರಲ್ಲಿ ಇದು ಅಪರೂಪ. ಗಂಡಸರಲ್ಲಿ ಒಂದೇ x ಕ್ರೊಮೋಸೋಮ್ ಇರುವುದರಿಂದ y ಕ್ರೊಮೋಸೋಮಿನಲ್ಲಿ ಈ ರೋಗಗಳಿಗೆ ಅಲೀಲ್ ಇರುವುದಿಲ್ಲವಾದ್ದರಿಂದ ಪ್ರಬಲ ಅಲೀಲ್‌ನ ಗೈರುಹಾಜರಿಯಲ್ಲಿ ಈ ರೋಗಗಳು ಪ್ರಕಟವಾಗುತ್ತವೆ. ಅಂದರೆ, ಒಂದು ಗೌಣ ಅಲೀಲ್ ಇದ್ದರೂ ಕೂಡ ರೋಗಗಳು ಅಭಿವ್ಯಕ್ತವಾಗುತ್ತವೆ.

y ಕ್ರೊಮೋಸೋಮ್ ಸಂಲಗ್ನ ಜೀನ್: ಈ ಜೀನ್ ಗಂಡಸರಲ್ಲಿ ಮಾತ್ರ ಇದ್ದು ತಂದೆಯಿಂದ ಮಗನಿಗೆ ವರ್ಗಾವಣೆಯಾಗುತ್ತದೆ. ಸಾಮಾನ್ಯವಾಗಿ ಕಂಡು ಬರುವ ಅತಿ ಕೂದಲ ಕಿವಿಯಾಲೆ (ಹೈಪರ್ ಟ್ರೈಕೋಸಿಸ್) ಯ ಆನುವಂಶೀಯತೆಗೆ y ಸಂಲಗ್ನ ಜೀನ್ ಕಾರಣ. ಇತ್ತೀಚಿನ ಸಂಶೋಧನೆಯ ಪ್ರಕಾರ ಮಾನವನ y ಕ್ರೊಮೋಸೋಮಿನಲ್ಲಿ ಎರಡು ಜೀನ್ ಗಳನ್ನು ಗುರುತಿಸಲಾಗಿದೆ; ಎಚ್ ವೈ ಜೀನ್ (ಹಿಸ್ಟೊಕಂಪ್ಯಾಟಿಬಿಲಿಟಿ ಜೀನ್) ಮತ್ತು ಟಿಡಿಎಫ್ (ಟೆಸ್ಟಿಸ್ ಡಿಟರ್ಮಿನಿಂಗ್ ಫ್ಯಾಕ್ಟರ್). ಇವುಗಳ ಆನುವಂಶೀಯತೆಯೂ ಇತರ y ಸಂಲಗ್ನ ಜೀನ್‌ಗಳಂತೆ.

ಟಿ.ಎಚ್ ಮಾರ್ಗನ್‌ನ ಪ್ರಯೋಗಗಳ ನಂತರ ಡಾನ್ ಕ್ಯಾಸ್ಟರ್ ಮತ್ತು ರೆನಾರ್ 1906ರಲ್ಲಿ ಲಿಂಗ ಸಂಲಗ್ನತೆ ಹೊಂದಿರುವ ಗುಣಗಳನ್ನು ಚಿಟ್ಟೆ, ಸರೀಸೃಪ ಹಾಗೂ ಹಕ್ಕಿಗಳಲ್ಲಿ ತೋರಿಸಿದ್ದಾರೆ. ಈ ಪ್ರಾಣಿಗಳಲ್ಲಿ ಹೆಣ್ಣು ಒಂದು x ಅಥವಾ ಒಂದೊಂದು x ಮತ್ತು y ಕ್ರೊಮೋಸೋಮುಗಳನ್ನು ಹೊಂದಿರುತ್ತವೆ. ಗಂಡಿನಲ್ಲಿ ಎರಡೂ ಲಿಂಗ ಕ್ರೊಮೋಸೋಮುಗಳು x ತರಹದವು. (ಜೆ.ಎಸ್.ವಿ.)

**ಲಿಂಗಾಣು ಉತ್ಪಾದನೆ (ಗ್ಯಾಮೆಟೋಜೆನಿಸಿಸ್):** ಲೈಂಗಿಕ ಪುನರುತ್ಪತ್ತಿ ಫಲಿಸಲು ಅಂಡಾಶಯ ಹಾಗು ವೃಷಣಗಳಲ್ಲಿ ಲಿಂಗಾಣುಗಳ ಉತ್ಪತ್ತಿ. ಲೈಂಗಿಕ ಪ್ರಜನನಕ್ಕೆ ಬೇಕಾದ ಮುಖ್ಯ ಸಿದ್ಧತೆ – ಲಿಂಗಾಣು ಉತ್ಪಾದನೆ. ಗಂಡು ಹಾಗೂ ಹೆಣ್ಣು ಪ್ರಾಣಿಗಳಲ್ಲಿ ಈ ಕ್ರಿಯೆಯ ಮುಖ್ಯ ಘಟ್ಟಗಳು ಒಂದೇ ಆದರೂ, ಉತ್ಪಾದಿತ ಲಿಂಗಾಣುಗಳ ರಚನೆ, ಗಾತ್ರ, ಕಾರ್ಯ ಎಲ್ಲವೂ ಬೇರೆಯಾಗಿರುತ್ತದೆ. ಜನನೇಂದ್ರಿಯಗಳಲ್ಲಿರುವ ಲಿಂಗಾಣು ಜನಕ ಕೋಶಗಳು ಮೊದಲಿಗೆ ಸಮಭಾಜಕ ವಿಭಜನೆಯಿಂದ (ಮೈಟೊಸಿಸ್) ಸಂಖ್ಯೆಯಲ್ಲಿ ವೃದ್ಧಿಸುತ್ತವೆ. ಅನಂತರ ಈ ಕೋಶಗಳು ಸಂಖ್ಯಾಕ್ಷೀಣ ವಿಭಜನೆಯ (ಮಿಯೊಸಿಸ್) ಮೂಲಕ ಏಕಪ್ರತಿ ವರ್ಣತಂತುಗಳನ್ನು ಹೊಂದಿದ ಲಿಂಗಾಣುಗಳನ್ನು ಉತ್ಪಾದಿಸುತ್ತವೆ.

ಲಿಂಗಾಣು ಉತ್ಪಾದನೆಗೆ ಬೇಕಾದ ಸಂಖ್ಯಾಕ್ಷೀಣ ವಿಭಜನೆ ವರ್ಣತಂತುಗಳ ದ್ವಿಪ್ರತಿ ಹೊಂದಿದ (ಡಿಪ್ಲಾಯ್ಡ್) ಲಿಂಗಾಣು ಜನಕ ಕೋಶಗಳಿಂದ ಆರಂಭವಾಗುತ್ತದೆ. ಸಂಖ್ಯಾಕ್ಷೀಣ ವಿಭಜನೆಯ ಮೊದಲ ಹಂತದ ಮೂಲಕ ಏಕಪ್ರತಿ ವರ್ಣತಂತುಗಳನ್ನು ಹೊಂದಿದ ಮರಿ ಕೋಶಗಳು ಉತ್ಪಾದನೆಯಾಗುತ್ತವೆ (ಊಸೈಟ್/ಸ್ಪರ್ಮಟೊಸೈಟ್). ಇವುಗಳಲ್ಲಿ ಪ್ರತಿಯೊಂದು ಕೋಶವೂ ಎರಡನೇ ಹಂತದ ಸಮಭಾಜಕ ವಿಭಜನೆಯ ಮೂಲಕ ಅಪ್ರಬುದ್ಧ ಲಿಂಗಾಣುವನ್ನು ಉತ್ಪತ್ತಿ ಮಾಡುತ್ತದೆ. (ಊಟಿಡ್/ಸ್ಪರ್ಮಾಟಿಡ್). ಅನಂತರದಲ್ಲಿ ಈ ಲಿಂಗಾಣು ಕೋಶವು ಪ್ರಬುದ್ಧತೆಯನ್ನು ಹೊಂದಿ, ಅನೇಕ ಮಾರ್ಪಾಡುಗಳ ಮೂಲಕ ಲಿಂಗಾಣುಗಳಾಗಿ ಪರಿವರ್ತನೆಯಾಗುತ್ತವೆ.

ವೀರ್ಯಾಣು ಉತ್ಪಾದನೆ : ವೃಷಣದಲ್ಲಿರುವ ವೀರ್ಯಾಣು ನಳಿಕೆಗಳಲ್ಲಿ ವೀರ್ಯಾಣುವಿನ ಉತ್ಪಾದನೆ ಆಗುತ್ತದೆ. ಸ್ತನಿಗಳನ್ನು ಹೊರತುಪಡಿಸಿ ಬೇರೆಲ್ಲಾ ಕಶೇರುಕಗಳಲ್ಲಿ ವೃಷಣಗಳು ದೇಹದ ಒಳಗಡೆಯೇ ಇರುತ್ತವೆ. ಪ್ರತಿ ವೀರ್ಯಾಣು ಜನಕ ನಾಳದ ಅಡ್ಡ ಸೀಳಿಕೆಯಲ್ಲಿ ವೀರ್ಯಾಣು ಉತ್ಪಾದನೆಯ ವಿವಿಧ ಹಂತಗಳನ್ನು ನೋಡಬಹುದು. ಪ್ರತಿ ನಾಳವು ಜರಾಯು ಅನುಲೇಪಕದಿಂದ ಸುತ್ತುವರಿಯಲ್ಪಟ್ಟಿದೆ (ಜರ್ಮಿನಲ್ ಎಪಿಥೇಲಿಯಂ). ಈ ಅನುಲೇಪಕದ ಕೋಶಗಳಿಂದ ಸಮಭಾಜಕ ವಿಭಜನೆಯ ಮೂಲಕ ವೀರ್ಯಾಣು ಜನಕ ಕೋಶಗಳು ಉತ್ಪತ್ತಿಯಾಗುತ್ತವೆ. ಈ ಕೋಶಗಳು ಪುನಃ ಸಮಭಾಜಕ ವಿಭಜನೆಯಿಂದ ಸಂಖ್ಯೆಯಲ್ಲಿ ಹೆಚ್ಚಾಗುತ್ತವೆ. ಈ ಕೋಶಗಳು ವೀರ್ಯಾಣು ಕೋಶಜನನ (ಸ್ಪರ್ಮಟೋಜನಿಸಿಸ್) ಹಾಗೂ ವೀರ್ಯಾಣುಜನನ (ಸ್ಪರ್ಮಿಯೊಜನಿಸಿಸ್) ಎಂಬ ಎರಡು ಹಂತಗಳ ಮೂಲಕ ಚಲಿಸಬಲ್ಲ ವೀರ್ಯಾಣುಗಳನ್ನು ಉತ್ಪಾದಿಸುತ್ತವೆ.

ಮೊದಲಿಗೆ ವೀರ್ಯಾಣುಜನಕ ಕೋಶಗಳು ಗಾತ್ರದಲ್ಲಿ ಬೆಳವಣಿಗೆ ಹೊಂದಿ ಪ್ರೈಮರಿ (ಪ್ರಥಮ ದರ್ಜೆಯ) ಸ್ಪರ್ಮಟೊಸೈಟ್‌ಗಳಾಗುತ್ತವೆ. ಈ ಕೋಶಗಳು ಸಂಖ್ಯಾಕ್ಷೀಣ ವಿಭಜನೆಯ ಮೊದಲನೆಯ ಹಂತದ ಮೂಲಕ ಏಕಪ್ರತಿ ವರ್ಣತಂತುಗಳನ್ನು ಹೊಂದಿದ ಸೆಕೆಂಡರಿ (ದ್ವಿತೀಯ ದರ್ಜೆಯ) ಸ್ಪರ್ಮಟೊಸೈಟ್‌ಗಳನ್ನು ಉತ್ಪಾದಿಸುತ್ತವೆ. ಈ ಕೋಶಗಳಲ್ಲಿ ಪ್ರತಿಯೊಂದೂ ಸಂಖ್ಯಾಕ್ಷೀಣ ವಿಭಜನೆಯ ಎರಡನೆ ಹಂತದ ಮೂಲಕ ಎರಡು ಚಲಿಸಲಾಗದ ಬಾಲವಿಲ್ಲದ, ದುಂಡನೆಯ ವೀರ್ಯಾಣುಕೋಶಗಳನ್ನು ಉತ್ಪಾದಿಸುತ್ತವೆ. ಈವರೆಗಿನ ಕ್ರಿಯೆಯನ್ನು ವೀರ್ಯಾಣುಕೋಶ ಜನನ ಎಂದು ಕರೆಯುತ್ತಾರೆ. ನಂತರದಲ್ಲಿ ವೀರ್ಯಾಣು ಕೋಶಗಳು ತಮ್ಮ ರಚನೆ ಹಾಗೂ ಆಕಾರದಲ್ಲಿ ಬದಲಾವಣೆ ಹೊಂದುತ್ತವೆ. ಈ ಸಮಯದಲ್ಲಿ ಪ್ರತಿ ವೀರ್ಯಾಣು ಕೋಶವೂ ಉದ್ದನೆಯ ಬಾಲವನ್ನು ಹೊಂದಿ ಚಲನಾಶಕ್ತಿಯನ್ನು ಪಡೆದುಕೊಳ್ಳುತ್ತದೆ. ವೀರ್ಯಾಣುವಿನ ತಲೆಯ ಮೇಲೆ ನಿಶೇಚನೆಯ ಸಮಯದಲ್ಲಿ ಅಂಡಾಣುವಿನ ಹೊರಪದರವನ್ನು ಭೇದಿಸಿ ಮುನ್ನುಗ್ಗಲು ಸಹಾಯ ಮಾಡುವ ಕಿಣ್ವಗಳುಳ್ಳ ಆಕ್ರೋಸೋಮ್ ಎಂಬ ಒಂದು ಚೀಲವು ಕಂಡುಬರುತ್ತದೆ.

ಈ ಎಲ್ಲಾ ಬದಲಾವಣೆಯನ್ನು ಒಟ್ಟಾಗಿ ವೀರ್ಯಾಣುಜನನ (ಸ್ಪರ್ಮಿಯೋಜೆನಿಸಿಸ್) ಎಂದು ಕರೆಯುತ್ತಾರೆ. ವೀರ್ಯಾಣುಜನನದ ಕೊನೆಯಲ್ಲಿ ಪ್ರತಿ ವೀರ್ಯಾಣುಜನಕ ಕೋಶವೂ ನಾಲ್ಕು ಒಂದೇ ರೀತಿಯ ಅತಿ ಸಣ್ಣದಾದ, ಉದ್ದವಾದ, ಚಲನೆಯುಳ್ಳ ವೀರ್ಯಾಣುಗಳನ್ನು ಉತ್ಪಾದಿಸುತ್ತದೆ. ವೀರ್ಯಾಣುವು ಏಕಪ್ರತಿ ವರ್ಣತಂತುಗಳನ್ನು ನಿಶೇಚನೆಯ ವೇಳೆಗೆ ಅಂಡಾಣುವಿನೊಳಗೆ ತಂದು ತಲುಪಿಸುವ ಕೆಲಸವನ್ನಷ್ಟೇ ಮಾಡುವುದರಿಂದ ಅದರಲ್ಲಿ ಕೋಶಕೇಂದ್ರ ಮಾತ್ರ ದೊಡ್ಡದಾಗಿರುತ್ತದೆ. ಚಲನೆಯಲ್ಲಿ ಅದಕ್ಕೆ ಬೇಕಾದ ಶಕ್ತಿಯನ್ನು ಉತ್ಪಾದಿಸಲು ಕುತ್ತಿಗೆಯ ಭಾಗದಲ್ಲಿ ಮೈಟೋಕಾಂಡ್ರಿಯಾಗಳಿರುತ್ತವೆ.

ವೀರ್ಯಾಣು ಉತ್ಪಾದನೆ ಹೆಚ್ಚಿನ ಪ್ರಾಣಿಗಳಲ್ಲಿ ಪ್ರಬುದ್ಧತೆಯ ನಂತರ ಸದಾಕಾಲ ನಡೆಯುತ್ತದೆ. ಪರಿಣಾಮವಾಗಿ ಕೋಟ್ಯಾಂತರ ವೀರ್ಯಾಣುಗಳು ಉತ್ಪತ್ತಿಯಾಗುತ್ತವೆ. ಮಾನವನಲ್ಲಿ ವೀರ್ಯಾಣುಜನಕ ಕೋಶಗಳು ಸಂಪೂರ್ಣವಾಗಿ ವೀರ್ಯಾಣುಗಳಾಗಿ ಬೆಳವಣಿಗೆ ಹೊಂದಲು ತಗಲುವ ಸಮಯ 74 ದಿನಗಳು. ಅಂಡಾಣುವಿನೊಂದಿಗೆ ನಿಶೇಚನೆ ಹೊಂದಲು ಒಂದು ಬಾರಿಗೆ ಒಂದೇ ವೀರ್ಯಾಣು ಸಾಕಿದ್ದರೂ, ಒಮ್ಮೆ ವೀರ್ಯಸ್ಖಲನವಾದರೆ ಹೊರಬೀಳುವ ವೀರ್ಯದ್ರವದಲ್ಲಿ ಒಂದು ಮೀನಲ್ಲಿ ಸುಮಾರು 50 ಮಿಲಿಯ ವೀರ್ಯಾಣುಗಳಿರುತ್ತವೆ. ಚಲನೆಯಿಲ್ಲದ ಅಂಡಾಣುವಿನ ಜೊತೆಗೆ ವೀರ್ಯಾಣುವಿನ ಸಂಯೋಗವನ್ನು ಖಾತ್ರಿಗೊಳಿಸಲು ಪ್ರಕೃತಿ ಕೈಗೊಂಡ ಎಚ್ಚರಿಕೆಯ ರೀತಿ ಇದು.

ಅಂಡಾಣು ಉತ್ಪಾದನೆ : ಇದು ಹೆಚ್ಚು ಸಂಕೀರ್ಣವಾದ ಪ್ರಕ್ರಿಯೆ. ಅಂಡಾಣುವು ಕೇವಲ ವಂಶವಾಹಕಗಳನ್ನು ಹೊತ್ತೊಯ್ಯುವ ಭ್ರೂಣದ ಬೆಳವಣಿಗೆಗೆ ಅವಶ್ಯಕವಾದ ಪೋಷಕಾಂಶಗಳನ್ನು ಹೊಂದಿರುವುದೇ ಇದಕ್ಕೆ ಕಾರಣ. ಅಂಡಾಣು ಉತ್ಪಾದನೆಯ ಸಂಖ್ಯಾಕ್ಷೀಣ ವಿಭಜನೆಯಲ್ಲಿ ಉತ್ಪತ್ತಿಯಾಗುವ ಕೋಶಗಳಲ್ಲಿ ಒಂದು ದೊಡ್ಡದಾಗಿ ಕ್ರಿಯಾಶೀಲ ಅಂಡಾಣುವಾಗುತ್ತದೆ ಮತ್ತು ಉಳಿದ ಮೂರು ಕೋಶಗಳು ನಿಷ್ಕ್ರಿಯವಾದ ಧ್ರುವಕಾಯಗಳಾಗಿರುತ್ತವೆ. ಈ ಅಂಡಾಣುಗಳು ವೀರ್ಯಾಣುವಿನೊಂದಿಗೆ ಸಂಯೋಗ ಹೊಂದುವ ಮುಂಚೆ ಎರಡನೇ ವಿಭಜನೆ ಪೂರೈಸುತ್ತವೆ.

ಪ್ರಬುದ್ಧತೆ ಹೊಂದಿದ ಹೆಣ್ಣು ಜೀವಿಯಲ್ಲಿ ಅಂಡಣು ಉತ್ಪಾದನೆ ಸತತವಾಗಿ ಋತುಚಕ್ರವನ್ನಾಧರಿಸಿ ನಡೆಯುತ್ತದೆ. ಮಾನವನಲ್ಲಿ ಇನ್ನೂ ಭ್ರೂಣಾವಸ್ಥೆಯಲ್ಲಿದ್ದಾಗಲೇ ಅಂಡಾಣು ವಿಭಜನೆ ಕಾರ್ಯ ಆರಂಭವಾಗಿ ಹೆಣ್ಣು ಪ್ರಬುದ್ಧತೆ ತಲುಪುವವರೆಗೆ ಅಪೂರ್ಣವಾಗಿರುತ್ತದೆ. ಪ್ರಬುದ್ಧತೆಯ ನಂತರ ಅಂಡಾಣು ಕೂಪಗಳ ಗುಂಪುಗಳು ಒಂದರ ಅನಂತರ ಒಂದರಂತೆ ಬೆಳವಣಿಗೆ ಕ್ರಿಯೆಯನ್ನು ಮುಂದುವರಿಸುತ್ತವೆ. ಗರ್ಭಾಶಯದಲ್ಲಿರುವ ಭ್ರೂಣ ಮೂರು ತಿಂಗಳು ಬೆಳೆದಾಗಲೇ ಅಂಡಾಶಯದ ಹೊರಪದರದಲ್ಲಿರುವ ಅಂಡಾಣುಜನಕ ಕೋಶಗಳು ಸಮಭಾಜಕ ವಿಭಜನೆಯಿಂದ ಪ್ರೈಮರಿ ಊಸೈಟ್‌ಗಳಾಗಿ ಮಾರ್ಪಾಡು ಹೊಂದುತ್ತವೆ. ಜನನ ಸಮಯದಲ್ಲಿ ಈ ಎಲ್ಲಾ ಕೋಶಗಳೂ ಸಂಖ್ಯಾಕ್ಷೀಣ ವಿಭಜನೆಯ ಮೊದಲ ಪ್ರೊಫೇಸ್ ಘಟ್ಟವನ್ನು ತಲುಪಿರುತ್ತವೆ. ಇವು ಮುಂದಿನ ಸೂಚನೆ ದೊರೆಯುವವರೆಗೆ ತಮ್ಮ ಬೆಳವಣಿಗೆಯನ್ನು ವಿಲಂಬಿತಗೊಳಿಸಿರುತ್ತವೆ. ಹಲವಾರು ವರ್ಷಗಳ ಅನಂತರ, ಲೈಂಗಿಕ ಪ್ರಬುದ್ಧತೆಯ ಸಮಯದಲ್ಲಿ ವಿಲಂಬಿತವಾದ ವಿಭಜನೆ ಮತ್ತೆ ಮುಂದುವರಿಯುತ್ತದೆ. ಅಂದರೆ ಪ್ರತಿಋತು ಚಕ್ರದಲ್ಲಿ ಅಂಡ ವಿಸರ್ಜನೆಗಿಂತ ಮೊದಲು ವಿಳಲಂಬಿತವಾದ ಕೋಶ ವಿಭಜಿಸಿ ಪುನಃ ಪ್ರಾರಂಭವಾಗುತ್ತದೆ. ಮೇಲ್ಸ್ತರದ ಕಶೇರುಕಗಳಾದ ಸ್ತನಿಗಳು ಹಾಗೂ ಪಕ್ಷಿಗಳಲ್ಲಿ ಜೀವಿತದ ಆರಂಭದಲ್ಲಿ ಬೆಳೆಯುವ ಅಂಡಾಣು ಜನಕ ಕೋಶಗಳ ಸಂಖ್ಯೆ ನಿರ್ಧರಿತವಾಗಿದ್ದು (ಪ್ರಭೇದಕ್ಕೆ ತಕ್ಕಂತೆ) ಜೀವಿತ ಅವಧಿಯಲ್ಲಿ ವೃದ್ಧಿಯಾಗುವುದಿಲ್ಲ. ಮೀನುಗಳು ಹಾಗೂ ಉಭಯ ಜೀವಿಗಳಲ್ಲಿ ಅಂಡಾಣುಜನಕ ಕೋಶಗಳ ಸಂಖ್ಯಾವೃದ್ಧಿ ಜೀವಿಯ ಪ್ರಬುದ್ಧಾವಸ್ಥೆಯ ಉದ್ದಕ್ಕೂ ಕಂಡುಬರುತ್ತವೆ. ಈ ಪ್ರಾಣಿಗಳಲ್ಲಿ ಪ್ರತಿ ಪ್ರಜನನ ಋತುವಿನಲ್ಲಿಯೂ ಹೊಸ ಅಂಡಾಣುಜನಕ ಕೋಶಗಳು ಉತ್ಪತ್ತಿಯಾಗುತ್ತವೆ. ಕಶೇರುಕಗಳಲ್ಲಿ ಹೆಚ್ಚಿನ ಅಂಡಾಣುಜನಕ ಕೋಶಗಳು ಸಂಖ್ಯಾಕ್ಷೀಣವಿಭಜನೆಯ ಮುಂದಿನ ಹಂತವನ್ನು ಪೂರೈಸದೆ ಅಲ್ಲಿಯೇ ಸೊರಗಿಹೋಗುತ್ತವೆ. ಇವುಗಳನ್ನು ಎಟ್ರೆಟಿಕ್ ಅಂಡಾಣುಕೂಪಗಳೆಂದು ಕರೆಯುತ್ತಾರೆ. ಉದಾಹರಣೆಗೆ ಎರಡು ತಿಂಗಳ ಮಾನವ ಭ್ರೂಣದ ಅಂಡಾಶಯದಲ್ಲಿ ಸುಮಾರು 60,00,000 ಅಂಡಾಣು ಜನಕ ಕೋಶಗಳು ಕಂಡುಬರುತ್ತವೆ. ಭ್ರೂಣದ ಐದನೇ ತಿಂಗಳಲ್ಲಿ ಈ ಸಂಖ್ಯೆ ಏಳು ದಶಲಕ್ಷಗಳಾಗುತ್ತವೆ. ಇವುಗಳಲ್ಲಿ ಬಹುತೇಕ ಕೋಶಗಳು ಸೊರಗಿಹೋಗಿ ಮಗು ಹುಟ್ಟುವ ವೇಳೆಗೆ ಅಂಡಾಶಯದಲ್ಲಿ ಎರಡು ದಶಲಕ್ಷ ಕೋಶಗಳೂ, ಪ್ರಬುದ್ಧತೆಯ ಹೊತ್ತಿಗೆ ಮೂರುಲಕ್ಷ ಹಾಗೂ ಪ್ರತಿ ಋತುಚಕ್ರದಲ್ಲಿ ಒಂದರಂತೆ, ಹೆಣ್ಣಿನ ಸುಮಾರು ನಾಲ್ಕು ದಶಕಗಳ ಲೈಂಗಿಕ ಜೀವಿತದ ಅವಧಿಯಲ್ಲಿ ಕೇವಲ 400 ರಿಂದ 500 ನಿಷೇಚನಕ್ಕೆ ಯೋಗ್ಯವಾದ ಅಂಡಾಣುಗಳ ವಿಸರ್ಜನೆಯಾಗುತ್ತದೆ. ಅಂಡಾಣುಗಳ ಕಾರ್ಯವ್ಯಾಪ್ತಿ ವೀರ್ಯಾಣುಗಳಿಗಿಂತ ವಿಸ್ತೃತವಾದದ್ದು. ಹಾಗಾಗಿ ಅಂಡಾಣುವಿನ ಬೆಳವಣಿಗೆ ಅತಿ ವೇಗವಾಗಿ ನಡೆಯುತ್ತದೆ. ಪಕ್ಷಿಗಳ ಅಂಡಾಣುಗಳು 1 ಮಿಮೀ ವ್ಯಾಸ ಹಾಗೂ 100 ಮಿಗ್ರಾ. ತೂಕದಿಂದ 6 ಸೆಂಮೀ ವ್ಯಾಸ ಮತ್ತು 18–20 ಗ್ರಾ. ತೂಕದವರೆಗೆ ಬೆಳೆಯಲು ತೆಗೆದುಕೊಳ್ಳುವ ಸಮಯ ಕೇವಲ ಒಂಭತ್ತು ದಿವಸಗಳು.

ಸ್ತನಿಗಳ ಅಂಡಾಣು ಉತ್ಪಾದನೆ ಕ್ರಿಯೆ ಎಲ್ಲಾ ಪ್ರಾಣಿಗಳಿಗಿಂತ ಹೆಚ್ಚು ಸಂಕೀರ್ಣವಾಗಿದೆ. ಬೆಳೆಯುವ ಮರಿ ಅಂಡಾಣುಕೋಶ (ಊಸೈಟ್) ಒಂದು ಕನೆಕ್ಟಿವ್ ಅಂಗಾಂಶದ ಕವಚದ ಒಳಗೆ ಬೆಳೆಯುತ್ತದೆ. ಇದನ್ನು ಅಂಡಾಣುಕೂಪ ಎಂದು ಕರೆಯುತ್ತಾರೆ. ಬೆಳವಣಿಗೆ ಮುಂದುವರಿದಂತೆ ಈ ಕೂಪ ದೊಡ್ಡದಾಗುತ್ತಾ ಅದರಲ್ಲಿ ಅವಕಾಶಗಳು ಕಂಡುಬರುತ್ತವೆ. ಅವಕಾಶಗಳಲ್ಲಿ ಲಿಕ್ಕರ್ ಫಾಲಿಕುಲ್ಯೆ ಎಂಬ ದ್ರವ ತುಂಬಿಕೊಳ್ಳುತ್ತದೆ. ದ್ರವ ತುಂಬಿದ ಅವಕಾಶಕ್ಕೆ ಆ್ಯಂಟ್ರಮ್ ಎಂದು ಹೆಸರು. ಸಂಪೂರ್ಣ ಬೆಳೆದ ಕೂಪವನ್ನು ಗ್ರಾಫ್‌ನ ಕೂಪ ಎಂದು ಕರೆಯಲಾಗಿದೆ. ಮರಿ ಅಂಡಾಣುಕೋಶವು ತನ್ನ ಸುತ್ತಲೂ ಇರುವ ಕೆಲವು ಕೂಪ ಕೋಶಗಳ ನಡುವೆ ಇದ್ದು ಈ ಅವಕಾಶದಲ್ಲಿ ನೇತಾಡುತ್ತಿರುತ್ತದೆ. ಋತುಚಕ್ರದ ಮಧ್ಯಭಾಗದಲ್ಲಿ ಪೂರ್ಣ ಬಲಿತ ಗ್ರಾಫ್‌ನ ಕೂಪದಿಂದ ಕೇವಲ ಮರಿ ಅಂಡಾಣುಕೋಶ ಹಾಗೂ ಸುತ್ತಲಿನ ಕೆಲವು ಕೂಪ ಕೋಶಗಳು ಮಾತ್ರ ಬಿಡುಗಡೆ ಹೊಂದುತ್ತವೆ (ಓವುಲೇಷನ್). ಈ ಕ್ರಿಯೆಯ ಅನಂತರ ಅಂಡಾಣುಕೂಪದ ಉಳಿದ ಶೇಷ ಭಾಗ ಹಳದಿ ಬಣ್ಣದ ಕಾರ್ಪಸ್ ಲ್ಯೂಟಿಯಮ್ ಎಂಬ ಕಾಯವಾಗಿ ಮಾರ್ಪಾಡಾಗುತ್ತದೆ. ಹೀಗೆ ಅಂಡಾಶಯದಿಂದ ಹೊರಬಿದ್ದ ಅಂಡಾಣುವು ತನ್ನ ಸಂಖ್ಯಾಕ್ಷೀಣ ವಿಭಜನೆಯ ಎರಡನೆ ಹಂತವನ್ನು ಅಂಡಾಣುವಾಹಕ ನಾಳದಲ್ಲಿ ಮುಂದುವರಿಸುತ್ತದೆ. ಕೆಲವೊಮ್ಮೆ ವೀರ್ಯಾಣು ಅಂಡಾಣುವಿನ ಜೊತೆಗೆ ಸಂಯೋಗಹೊಂದುವ ಸಮಯದಲ್ಲಿ ಈ ವಿಭಜನಾಕಾರ್ಯ ಸಂಪೂರ್ಣವಾಗುತ್ತದೆ. ಪರಿಣಾಮವಾಗಿ ನಿಷೇಚನದ ವೇಳೆಯಲ್ಲಿ ಏಕಪ್ರತಿ ವರ್ಣತಂತುಗಳನ್ನು ಹೊಂದಿದ ಅಂಡಾಣು ಕೋಶಕೇಂದ್ರ ಅದೇ ಪ್ರಕಾರದ ವೀರ್ಯಾಣುಕೋಶ ಕೇಂದ್ರದೊಂದಿಗೆ ವಿಲೀನಗೊಳ್ಳುತ್ತದೆ. (ಟಿ.ಆರ್.ಎಸ್.)

**ಲೆಪಿಡೋಸೈರನ್:** ದಕ್ಷಿಣ ಅಮೆರಿಕದ ಕೆಲವೆಡೆ ಸಿಹಿನೀರಿನಲ್ಲಿ ಜೀವಿಸುವ ಫುಪ್ಫುಸ ಮೀನು. ಲೆಪಿಡೋಸೈರನ್ ಪ್ಯಾರಾಡೋಕ್ಸಾ ಅಮೇಜಾನ್ ಮತ್ತು ಅದರ ಉಪನದಿಗಳಲ್ಲಿ ಸಿಗುತ್ತದೆ. ಪರುಗ್ವೆಯ ಚಾಕೋ ನದಿ ಮತ್ತು ಅದರ ಸುತ್ತುಮುತ್ತಲಿನ ಆಳವಿಲ್ಲದ ಮಣ್ಣು ಮಿಶ್ರಿತ ನೀರಿನ ಮೂಲಗಳಲ್ಲಿ ಇದರ ಸಂಖ್ಯೆ ಜಾಸ್ತಿ. ಅಲ್ಲಿಯ ಜನರು ಇದನ್ನು ಆಹಾರವಾಗಿ ಸೇವಿಸುವರು.

ಇದು ಡಿಪ್ನಾಯಿ ಉಪವರ್ಗದ ಡಿಪ್ನಿಯೂಮ ಸರಣಿಯ ಲೆಪಿಡೋಸೈರನಿಡೆ ಕುಟುಂಬದಲ್ಲಿದೆ. ಸು. 2 ಮೀ ಉದ್ದ ಬೆಳೆಯುತ್ತದೆ. ಇದು ಹೊಟ್ಟೆಬಾಕ ಮಾಂಸಾಹಾರಿ. ಇದರ ಆಹಾರ ಮೀನು, ಮೃದ್ವಂಗಿಗಳು, ಕಠಿಣ ಚರ್ಮಿಗಳು ಹಾಗೂ ಕೆಲವೊಮ್ಮೆ ಸಸ್ಯಗಳು.

ಲೆಪಿಡೋಸೈರನ್‌ನ ಚರ್ಮದ ಮೇಲೆಲ್ಲ ಸಣ್ಣದಾದ ಚಕ್ರ ಶಲ್ಕಗಳಿವೆ. ಗಿಡ್ಡ ಹಾಗೂ ಕಿರಿದಾದ ಒಂದೊಂದು ಜೊತೆ ಭುಜದ ರೆಕ್ಕೆಗಳು, ಸೊಂಟದ ಈಜು ರೆಕ್ಕೆಗಳು ಮತ್ತು ಬಾಲದ ಈಜು ರೆಕ್ಕೆ ಈ ಮೀನಿಗೆ ಈಜಲು ನೆರವಾಗುತ್ತವೆ. ಕೆಲವು ಮೂಳೆ ಮೀನುಗಳಲ್ಲಿರುವಂತೆ ಬಾಲದ ಈಜು ರೆಕ್ಕೆ ಅರ್ಧಚಂದ್ರಾಕಾರದಲ್ಲಿದೆ. ಸ್ಪರ್ಶ ಸಂವೇದನೆಯಲ್ಲಿ ಜೋಡಿ ರೆಕ್ಕೆಗಳ ತುದಿ ಸಹಾಯಕ. ದೃಷ್ಟಿ ಕೊಂಚ ಮಂದವಾಗಿದ್ದರೂ, ವಾಸನೆ ಗ್ರಹಿಕೆ ಮತ್ತು ರುಚಿ ಸಂವೇದನೆ ಅತ್ಯುತ್ತಮವಾಗಿವೆ. ದೇಹದ ಎರಡು ಬದಿಗಳಲ್ಲಿರುವ ಪಾರ್ಶ್ವಸಂವೇದನಾ ವ್ಯವಸ್ಥೆ ನೀರಿನಲ್ಲಾಗುವ ಉಷ್ಣತೆ, ಒತ್ತಡ ಇತ್ಯಾದಿಗಳ ಅತಿ ಸೂಕ್ಷ್ಮ ಬದಲಾವಣೆಗಳನ್ನು ಗ್ರಹಿಸಬಲ್ಲುದು.

ಎಲ್ಲ ಮೀನುಗಳಂತೆ ಲೆಪಿಡೋಸೈರನ್‌ನಲ್ಲಿ ಉಸಿರಾಟ ಕಿವಿರುಗಳ ಮೂಲಕ ನಡೆಯುತ್ತದೆ. ಇವುಗಳಿಗೆ ಮೇಲು ಮುಚ್ಚಳವಿದೆ. ಕಿವಿರುಗಳ ಜೊತೆಗೆ 2 ಫುಪ್ಫುಸಗಳಿವೆ. ಇವು ಜೀರ್ಣಾಂಗವ್ಯೂಹದ ಮೇಲ್ಭಾಗದಲ್ಲಿದ್ದು, ಅನ್ನನಾಳದ ಕೆಳಭಾಗದಲ್ಲಿ ತೆರೆದುಕೊಳ್ಳುತ್ತದೆ. ಇತರ ಭೂಚರಿಗಳಲ್ಲಿರುವಂತೆ ಫುಪ್ಫುಸಗಳಲ್ಲಿ ಅಸಂಖ್ಯಾತ ಆಲ್ವಿಯೋಲೈಗಳಿವೆ. ಉಸಿರಾಟದ ವೇಳೆ ಈ ಮೀನು ನೀರಿನ ಮೇಲ್ಭಾಗಕ್ಕೆ ಈಜುತ್ತ ನೀರಿನ ಮಟ್ಟಕ್ಕೆ ತನ್ನ ಮೂತಿಯನ್ನು ತಾಗಿಸಿ, ಅಗಲವಾಗಿ ಬಾಯಿ ತೆರೆದು, ಗಾಳಿ ಎಳೆದುಕೊಳ್ಳುತ್ತದೆ. ಇದು ಕೊಯೆನಾ ಎಂಬ ರಂಧ್ರದ ಮೂಲಕ ನಾಸಿಕ ಕವಾಟ ಸೇರಿ, ಅಲ್ಲಿಂದ ಫುಪ್ಫುಸದೊಳಕ್ಕೆ ಹೋಗುತ್ತದೆ. ಗಾಳಿಯನ್ನು ಒಳಗೆಳೆದುಕೊಳ್ಳುವ ಸಮಯದಲ್ಲಿ ವಿಚಿತ್ರ ಶಬ್ದ ಹೊರಡುತ್ತದೆ.

ಹೃದಯದಲ್ಲಿ ಅಸಮರ್ಪಕವಾಗಿ ವಿಭಾಗವಾಗಿರುವ ತಲಾ ಒಂದು ಹೃತ್ಕರ್ಣ ಹಾಗೂ ಹೃತ್ಕುಕ್ಷಿ ಇವೆ. ಮೂತ್ರಪಿಂಡಗಳು ಉದ್ದವಾಗಿದ್ದು, ಒಂದೊಂದರಿಂದ ಸು. 2 ಮೀ ಉದ್ದವಿರುವ ಮೂತ್ರನಾಳಗಳಿವೆ.

ಸಂತಾನೋತ್ಪತ್ತಿಯ ವೇಳೆ ಲೆಪಿಡೋಸೈರನ್ ಲಿಂಗ ದ್ವಿರೂಪತೆಯನ್ನು ಪ್ರದರ್ಶಿಸುತ್ತದೆ. ಗಂಡು ಮೀನಿನ ಸೊಂಟದ ಈಜು ರೆಕ್ಕೆಗಳ ಮೇಲೆ ಕುಚ್ಚಿನಂಥ ಶಾಖೆಗಳಿವೆ. ಅವುಗಳಲ್ಲಿರುವ ಸೂಕ್ಷ್ಮ ರಕ್ತನಾಳಗಳು ರಕ್ತದಲ್ಲಿರುವ ಆಮ್ಲಜನಕವನ್ನು ನೀರಿಗೆ ಬಿಡುಗಡೆ ಮಾಡಿ ತನ್ಮೂಲಕ ಬೆಳೆಯುತ್ತಿರುವ ಮರಿಗಳ ಉಸಿರಾಟಕ್ಕೆ ಸಹಾಯ ಮಾಡುತ್ತವೆ. ಗಂಡು ಮತ್ತು ಹೆಣ್ಣು ಮೀನುಗಳೆರಡು ಸೇರಿ ಮಣ್ಣಿನಲ್ಲಿ ಲಂಬವಾದ ಗೂಡನ್ನು ತೋಡುತ್ತವೆ. ಕೆಳಗೆ ಇಳಿದಂತೆ ಈ ಗೂಡು ಕ್ರಮೇಣ ಮಣ್ಣಿನ ಮಟ್ಟಕ್ಕೆ ಸಮಾಂತರವಾಗುತ್ತದೆ. ಹೆಣ್ಣು ಮೀನು ಸು. 5000 ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳನ್ನು ಮತ್ತು ಮರಿಗಳನ್ನು ಕಾಪಾಡುವ ಜವಾಬ್ದಾರಿ ಗಂಡಿನದು. ಸಣ್ಣ ಮರಿಗಳು ಗೋಡೆಯ ಮೇಲೆ ತೆವಳಿಕೊಂಡು ಗೂಡಿನ ಮೇಲ್ಭಾಗದಲ್ಲಿ ತಲೆ ಮೇಲಾಗಿ ಸು. 1 ರಿಂದ 2 ತಿಂಗಳು ಲಂಬವಾಗಿ ಜೋತುಬಿದ್ದು ಕೊಂಡಿರುತ್ತವೆ. ಬೆಳವಣಿಗೆಯ ಮೊದಲೆರಡು ತಿಂಗಳು 4 ಜೊತೆ ಹೊರಕಿವಿರುಗಳ ಮುಖಾಂತರ ಉಸಿರಾಟ ನಡೆಯುತ್ತದೆ. ಕ್ರಮೇಣ ಅವು ನಶಿಸಿ ಒಳಕಿವಿರು ಮತ್ತು ಶ್ವಾಸಕೋಶಗಳು ಉಸಿರಾಟದಲ್ಲಿ ಭಾಗವಹಿಸುತ್ತವೆ.

ಬರಗಾಲ ಮತ್ತು ಬೇಸಗೆಯಲ್ಲಿ ನದಿಯ ನೀರು ಬತ್ತಿದಾಗ ಲೆಪಿಡೋಸೈರನ್ ಮಣ್ಣಿನೊಳಗೆ ಬಿಲ ಕೊರೆದು ಪುನಃ ನೀರಿನ ಮಟ್ಟ ಏರುವ ತನಕ ಅದರಲ್ಲಿಯೇ ತನ್ನ ಬದುಕನ್ನು ಕಳೆಯುತ್ತದೆ. ಇದನ್ನು ಗ್ರೀಷ್ಮ ನಿದ್ರೆ ಅಥವಾ ಗ್ರೀಷ್ಮ ನಿಶ್ಚೇಷ್ಟತೆ ಎನ್ನುತ್ತಾರೆ. ಸ್ನಾಯುಗಳಲ್ಲಿ ಸಂಗ್ರಹವಾಗಿರುವ ಆಹಾರವನ್ನೇ ಈ ಶ್ರಾಯದಲ್ಲಿ ದೇಹದ ಜೈವಿಕ ಕ್ರಿಯೆಗಳಿಗೆ ಉಪಯೋಗಿಸಿಕೊಳ್ಳುತ್ತದೆ. ಸಹಜವಾಗಿಯೇ ದೇಹ ತೂಕದಲ್ಲಾಗುವ ಕ್ಷೀಣತೆಯನ್ನು ಗ್ರೀಷ್ಮ ನಿದ್ರೆ ಕಳೆದ 2 ತಿಂಗಳೊಳಗೆ ಸರಿದೂಗಿಸಿಕೊಳ್ಳುತ್ತದೆ.

ಅಮೆರಿಕದ ಪುಪ್ಪುಸ ಮೀನು ಲೆಪಿಡೋಸೈರನ್‌ನ ಸಂಖ್ಯೆ ಈಗ ತೀರ ಕಡಿಮೆಯಾಗಿದೆ. ಮೀನು ಹಾಗೂ ಉಭಯ ಜೀವಿಗಳೆರಡರ ಲಕ್ಷಣಗಳು ಈ ಮೀನಿಗಿರುವುದರಿಂದ, ಇದಕ್ಕೆ ಪ್ರಾಣಿ ಸಾಮ್ರಾಜ್ಯದಲ್ಲಿ ಒಂದು ವಿಶಿಷ್ಟ ಸ್ಥಾನ ಇದೆ. (ಎ.ಎಸ್.ಎಚ್.ಎ)

**ಲೆಮುರ್:** ಪ್ರೈಮೇಟ್ ಗಣದ ಲೆಮುರಿಡೆ ಕುಟುಂಬಕ್ಕೆ ಸೇರಿದ ಕೆಲವು ವೃಕ್ಷವಾಸಿ ಸ್ತನಿಗಳ ಸಾಮಾನ್ಯ ಹೆಸರು. ನಿಕ್ಟಿಸೆಬಸ್ ಕೌಕಾಂಗ್ (ಸ್ಲೋ ಲೋರಿಸ್), ಲೋರಿಸ್ ಟಾರ್ಡಿಗ್ರೇಡಸ್ (ಸ್ಲೆಂಡರ್ ಲೋರಿಸ್), ಪೆರೊಡಿಕ್ಟಿಕಸ್ ಪೊಟ್ಟೊ, ಗ್ಯಾಲಗೊ ಸೆನೆಗಲೆನ್ಸಿಸ್ (ಸೆನೆಗಲ್ ಬುಶ್ ಬೇಬಿ) ಕೆಲವು ಪ್ರಭೇದಗಳು. ಲೆಮುರ್‌ಗಳು ಸಾಮಾನ್ಯವಾಗಿ ಉತ್ತರ ಮಡಗಾಸ್ಕರ್‌ನಲ್ಲಿ ಕಂಡುಬಂದು ಸಮಶೀತೋಷ್ಣವಲಯದಲ್ಲಿ ವಾಸಿಸುತ್ತವೆ. ದೇಹ 45 ಸೆಂಮೀ ಉದ್ದ. ಬಾಲದ ಉದ್ದ 60 ಸೆಂಮೀ. ತೂಕ ಸುಮಾರು 2 ಕಿಗ್ರಾಂ. ಮೂತಿಯು ನರಿಯ ರೀತಿ ಉದ್ದನೆಯಾಗಿದ್ದು ಹಿಂಬದಿಯ ಕಾಲುಗಳು ಮುಂದಿನ ಕಾಲುಗಳಿಗಿಂತ ಉದ್ದವಾಗಿರುತ್ತವೆ. ಎಲ್ಲಾ ಬೆರಳುಗಳು ಉಗುರಿನಿಂದ ಕೂಡಿರುತ್ತವೆ. ಉದ್ದನೆಯ ಮೃದುವಾದ ಕೂದಲಿನ ಚರ್ಮವಿದೆ. ಕುತ್ತಿಗೆಯಿಂದ ಕಿವಿಯವರೆಗೆ ಉದ್ದನೆಯ ಕೂದಲಿವೆ. ಗಂಡು ಲೆಮುರ್‌ನ ಬಣ್ಣ ಕಪ್ಪು. ಹೆಣ್ಣು ಲೆಮುರ್ ಕೆಂಪಾಗಿರುತ್ತದೆ.

ಮರಗಳೇ ಇವುಗಳ ವಾಸಸ್ಥಾನ. ಒಂದು ಗುಂಪಿನಲ್ಲಿ 4 ರಿಂದ 15 ಲೆಮುರ್‌ಗಳು ಇರುತ್ತವೆ. ಒಂದು ಜಿಗಿತಕ್ಕೆ 8 ಮೀ ಗಳಷ್ಟು ಜಿಗಿಯಬಲ್ಲವು. ಮುಂಜಾನೆ ಮತ್ತು ಸಂಜೆಯ ವೇಳೆ ಬಲು ಚಟುವಟಿಕೆಯಿಂದ ಕೂಡಿದ್ದು ಹಣ್ಣು ಮತ್ತು ಕೀಟಗಳನ್ನು ತಿನ್ನುತ್ತವೆ. ತಮ್ಮದೇ ಆದ ಪ್ರಾಂತ್ಯವನ್ನು ಗುರುತಿಸಿಕೊಳ್ಳುವ ಸ್ವಭಾವದ್ದಾಗಿದ್ದು ಪ್ರಾಂತ್ಯವನ್ನು ಗುರುತಿಸಲು ತಮ್ಮ ಮುಂಗಾಲಿನಿಂದ ಮರ ಹತ್ತಿ ಇತರೆ ವಸ್ತುಗಳನ್ನು ಉಜ್ಜಿ ತೀಡುತ್ತಾ ತಮ್ಮದೇ ಆದ ಗಂಧವನ್ನು ಜೋರಾಗಿ ಬೀರುತ್ತವೆ. ಗುಂಪಿನ ಎಲ್ಲಾ ಲೆಮುರ್‌ಗಳು ಒಮ್ಮೆ ಒಟ್ಟಿಗೆ ಚೀರಿದಾಗ ಅದು ಯಾರನ್ನಾದರೂ ಹೆದರಿಸುವಂತಿರುತ್ತದೆ.

ಲೆಮುರ್‌ಗಳು ತಮ್ಮ ಚರ್ಮದ ಬಗ್ಗೆ ಅತಿಯಾದ ಕಾಳಜಿ ವಹಿಸಿ ಅದನ್ನು ತಮ್ಮ ಉಗುರು ಮತ್ತು ಹಲ್ಲುಗಳಿಂದ ಗಂಟೆಗಟ್ಟಲೆ ಸ್ವಚ್ಛಗೊಳಿಸುತ್ತವೆ. ಇವುಗಳು ದಿನದಲ್ಲಿ ಸುಮಾರು 16 ಗಂಟೆಗಳಷ್ಟು ಕಾಲ ನಿದ್ರಿಸುತ್ತವೆ.

ಹೆಣ್ಣು ಲೆಮುರ್ ಮಾರ್ಚ್–ಜೂನ್ ತಿಂಗಳ ಅವಧಿಯಲ್ಲಿ ಒಮ್ಮೆಗೆ 1 ಮರಿಗೆ ಜನ್ಮ ನೀಡುತ್ತದೆ. ಅದರ ಗರ್ಭಾವಸ್ಥೆಯು ಸುಮಾರು 128 ದಿನಗಳು. ಪ್ರೌಢಾವಸ್ಥೆಗೆ ಬರಲು ಸುಮಾರು 18 ತಿಂಗಳು ಬೇಕಾಗುತ್ತದೆ. ತಾಯಿ ಲೆಮುರ್ ತನ್ನ ಮರಿಗೆ ಸುಮಾರು 6 ತಿಂಗಳ ಕಾಲ ಹಾಲುಣಿಸುತ್ತದೆ. ಮರಿಯು ಸದಾ ತನ್ನ ತಾಯಿಯ ಜೊತೆಯಲ್ಲಿಯೇ ಇದ್ದು ಅದರ ಬೆನ್ನಿಗೆ ಅಪ್ಪಿಕೊಂಡಿರುತ್ತದೆ. (ಬಿ.ವೈ.ಎಸ್.ಕೆ.)

# ವ

**ವನ್ಯಜೀವಿ ಸಂರಕ್ಷಣೆ:** ಕಾಡಿನ ಜೀವವೈವಿಧ್ಯತೆಯ ರಕ್ಷಣೆ (ವೈಲ್ಡ್‌ಲೈಫ್ ಕನ್ಸರ್ವೇಷನ್). ನಮಗೆ ವನ್ಯಜೀವಿಗಳು ಏಕೆ ಬೇಕು? ಅವುಗಳ ಪ್ರಾಮುಖ್ಯತೆ ಏನು? ವಿನಾಶದ ಅಂಚಿನಲ್ಲಿರುವ ಪ್ರಾಣಿಗಳಾವುವು? ಅವುಗಳ ವಿನಾಶದಿಂದಾಗುವ ಪರಿಣಾಮಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರಿಸಿದರೆ ವನ್ಯ ಜೀವಿ ಸಂರಕ್ಷಣೆಯ ಪ್ರಾಮುಖ್ಯತೆ ತಿಳಿಯುತ್ತದೆ. ಭಾರತದಲ್ಲಿ ವನ್ಯ ಜೀವಿಸಂಪತ್ತು ಅಪಾರವಾಗಿದ್ದು, ಅಗಾಧ ಜೀವವೈವಿಧ್ಯತೆಯನ್ನು ಹೊಂದಿದೆ.

ಇತ್ತೀಚಿನ ವರದಿಯ ಪ್ರಕಾರ ಭಾರತದಲ್ಲಿ 4500 ಪ್ರಕಾರದ ಸಸ್ಯಗಳು, 400 ಸ್ತನಿಗಳು, 1260 ಪಕ್ಷಿ ಪ್ರಭೇದಗಳು, 350 ಸರೀಸೃಪಗಳು, 218 ಉಭಯವಾಸಿಗಳು ಮತ್ತು 2,970,000 ಪ್ರಕಾರದ ಕೀಟಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಈಗಾಗಲೇ 600 ಕ್ಕೂ ಮಿಕ್ಕಿ ಪ್ರಭೇದದ ಪ್ರಾಣಿಗಳು ಅಂತಾರಾಷ್ಟ್ರೀಯ ಕೆಂಪು ದಸ್ತಾವೇಜುಗಳಲ್ಲಿ ಸೇರಿಕೊಂಡಿವೆ. ಅನೇಕ ಪ್ರಾಣಿ ಪಕ್ಷಿಗಳು ವಿನಾಶದ ಅಂಚಿನಲ್ಲಿರುವುದರಿಂದ ಇವುಗಳು ಸಂರಕ್ಷಣೆ ತುರ್ತಾಗಿ ಕೈಗೊಳ್ಳಬೇಕಿದೆ. ಸಿಂಗಳೀಕ, ಹನುಮಾನ್ ಮಂಗ ಮತ್ತು ಕೃಷ್ಣಮೃಗಗಳ ಪ್ರಭೇದ ಕೇವಲ ಭಾರತದಲ್ಲಿ ಮಾತ್ರ ಉಳಿದಿವೆ.

ಕೃಷಿ ವಿಸ್ತರಣೆ, ಪಶುಸಂಗೋಪನೆ, ಬೇಟೆಯಾಡುವುದು ಬೆಳೆಗಳ ರಕ್ಷಣೆ ಮತ್ತು ಸಂಶೋಧನಾ ಚಟುವಟಿಕೆಗಳಿಂದಾಗಿ ಭಾರತದಲ್ಲಿನ ವನ್ಯ ಸಂಪತ್ತು ವಿನಾಶವಾಗುತ್ತಿದೆ. ವನ್ಯಜೀವಿಗಳ ಸಂರಕ್ಷಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಭಾರತ ಸ್ವತಂತ್ರವಾದ ಅನಂತರ, ಮೊದಲ ಹೆಜ್ಜೆಯಾಗಿ 1952 ರಲ್ಲಿ ಭಾರತೀಯ ವನ್ಯಜೀವಿ ನಿಗಮವನ್ನು (ಇಂಡಿಯನ್ ಬೋರ್ಡ್ ಫಾರ್ ವೈಲ್ಡ್ ಲೈಫ್) ಸ್ಥಾಪಿಸಲಾಯಿತು. ಇದರ ಅಡಿಯಲ್ಲಿ ಅನೇಕ ಪ್ರಕಾರದ ವನ್ಯಜೀವಿ ಸಂರಕ್ಷಣಾ ಪ್ರವೇಶಗಳನ್ನು ಘೋಷಿಸಲಾಗಿದೆ. ಮೊಟ್ಟ ಮೊದಲ ಬಾರಿಗೆ ಅತೀ ಜಾಗರೂಕತೆಯಿಂದ ವನ್ಯಜೀವಿ ಸಂರಕ್ಷಣಾ ಕಾಯಿದೆಯನ್ನು 1972 ರಲ್ಲಿ ರೂಪಿಸಲಾಯಿತು. ಈ ಕಾಯಿದೆಯ ಅಡಿಯಲ್ಲಿ ವನ್ಯ ಪ್ರಾಣಿಗಳಿಗೆ ರಕ್ಷಣೆ ನೀಡಲಾಗಿದ್ದು, ಯಾವುದೇ ವ್ಯಕ್ತಿ ಪ್ರಾಣಿಗಳನ್ನು ಕೊಲ್ಲುವುದು, ಸೆರೆ ಹಿಡಿಯುವುದು, ವನ್ಯಜೀವಿಗಳ ಮಾಂಸ ಮಾರಾಟ ಮಾಡುವುದು ಸಂರಕ್ಷಿತ ಪ್ರದೇಶಗಳಲ್ಲಿ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ.

ವನ್ಯಜೀವಿ ಸಂರಕ್ಷಣಾ ಜಾಲದ ಅಡಿಯಲ್ಲಿ ಅಂತಾರಾಷ್ಟ್ರೀಯ ನಿಸರ್ಗ ಮತ್ತು ನೈಸರ್ಗಿಕ ಸಂಪತ್ತುಗಳ ಸಂರಕ್ಷಣಾ ಸಂಘದವರು ಈ ಕೆಳಗಿನ 6 ಪ್ರಕಾರದ

ಸಂರಕ್ಷಣಾ ಪ್ರದೇಶಗಳನ್ನು ನಿಯೋಜಿಸಿದ್ದು, ಅವುಗಳಲ್ಲಿ 3 ಪ್ರಕಾರದುವುಗಳನ್ನು ಭಾರತದಲ್ಲಿ ವನ್ಯಜೀವಿ ಸಂರಕ್ಷಣೆಗೆ ಅಳವಡಿಸಿಕೊಳ್ಳಲಾಗಿದೆ. 1) ಕಟ್ಟಾ ನಿಸರ್ಗಧಾಮಗಳು, 2) ರಾಷ್ಟ್ರೀಯ ಉದ್ಯಾನಗಳು, 3) ರಾಷ್ಟ್ರೀಯ ಸ್ಮಾರಕಗಳು, 4) ಜೀವಾವಾಸ ರಕ್ಷಿತ ಪ್ರದೇಶಗಳು, 5) ರಕ್ಷಿತ ಭೂ ಮತ್ತು ಸಮುದ್ರ ಪ್ರದೇಶಗಳು 6) ಜೈವಿಕ ಭಂಡಾರಗಳು.

ಇವುಗಳಲ್ಲಿ ರಾಷ್ಟ್ರೀಯ ಉದ್ಯಾನ (ನ್ಯಾಷನಲ್ ಪಾರ್ಕ್), ಅಭಯಾರಣ್ಯಗಳು (ವೈಲ್ಡ್ ಲೈಫ್ ಸಾನ್ಕ್ಚುರೀಸ್) ಮತ್ತು ಜೈವಿಕ ಭಂಡಾರ ಇವುಗಳನ್ನು ಸಂರಕ್ಷಣಾ ಜಾಲದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇವುಗಳಲ್ಲಿ ವಾಸಿಸುವ ವನ್ಯಜೀವಿಗಳಿಗೆ ವನ್ಯಜೀವಿ ಕಾಯಿದೆ ಅಡಿಯಲ್ಲಿ ರಕ್ಷಣೆ ಒದಗಿಸಲಾಗಿದೆ. (ನೋಡಿ: ರಾಷ್ಟ್ರೀಯ ಉದ್ಯಾನ.)

ಭಾರತದ ಶೇ. 4.5 ಭೂಭಾಗದಲ್ಲಿ 90 ರಾಷ್ಟ್ರೀಯ ಉದ್ಯಾನ, 500 ಅಭಯಾರಣ್ಯ ಮತ್ತು 13 ಜೈವಿಕ ಭಂಡಾರಗಳನ್ನು ಸ್ಥಾಪಿಸಲಾಗಿದೆ. ಕೆಲವು ಅತೀ ವಿನಾಶದ ಅಂಚಿಗೆ ತಲುಪಿರುವ ಪ್ರಾಣಿಗಳಾದ ಹುಲಿ, ಸಿಂಹ, ಆನೆ, ಜಿಂಕೆ ಮತ್ತು ಮೊಸಳೆಗಳಿಗೆ ವಿಶೇಷ ಯೋಜನೆ ಅಡಿಯಲ್ಲಿ ರಕ್ಷಣೆ ನೀಡಲಾಗಿದೆ. ಇಷ್ಟಾಗಿಯೂ ಭಾರತದಲ್ಲಿನ ವನ್ಯಜೀವಿಗಳು ಇನ್ನೂ ಸುರಕ್ಷಿತವಾಗಿಲ್ಲ. ಈಗಲೂ ಶೇ 50 ರಾಷ್ಟ್ರೀಯ ಉದ್ಯಾನ ಮತ್ತು ಶೇ 70 ಅಭಯಾರಣ್ಯಗಳ ಮಧ್ಯಭಾಗದಲ್ಲಿ ಜನವಸತಿ ಇದ್ದು ಅವುಗಳ ರಕ್ಷಣೆಗೆ ತೊಡಕಾಗಿದೆ. (ಬಿ.ಬಿ.ಎಚ್.)

**ವಪೆ (ಡಯಾಫ್ರಮ್):** ಸ್ತನಿಗಳಲ್ಲಿ ಎದೆಗೂಡನ್ನು (ತೊರ್‍ಯಾಕ್ಸ್) ಉದರಭಾಗದಿಂದ ಬೇರ್ಪಡಿಸುವ ಅಂಗ. ಮೆದು ಮೂಳೆ ಸ್ನಾಯುಗಳಿಂದಾಗಿರುವ ರಚನೆ. ದೇಹದೊಳಗೆ ಹೃದಯವನ್ನು ಹೊರತು ಪಡಿಸಿದರೆ ವಪೆಯೇ ಅತಿ ಮುಖ್ಯ ಸ್ನಾಯು. ಮುಂಭಾಗದಲ್ಲಿ ಇದು ಎದೆ, ಎಲುಬು ಹಾಗು ಪಕ್ಕೆಲುಬುಗಳಿಗೆ, ಹಿಂಭಾಗದಲ್ಲಿ ಬೆನ್ನುಹುರಿಗೆ ಅಂಟಿಕೊಂಡಿರುವುದು. ಉಸಿರಾಟದ ಉಚ್ಛ್ವಾಸ–ನಿಶ್ವಾಸ ಕ್ರಿಯೆಯಲ್ಲಿ ಇದರದು ಮಹತ್ವದ ಪಾತ್ರ. ಉಚ್ಛ್ವಾಸದ ವೇಳೆ ವಪೆ ಕುಗ್ಗಿ ಕೆಳಗಿಳಿದು ಎದೆಗೂಡಿನೊಳಗೆ ಅಧಿಕ ಸ್ಥಳಾವಕಾಶ ಒದಗಿಸುತ್ತದೆ. ವಾಯುಪೂರಿತ ಫುಪ್ಫುಸಗಳು ವ್ಯಾಕೋಚಿಸಲು ಇದರಿಂದ ಅನುಕೂಲ. ಅದೇ ರೀತಿ ನಿಶ್ವಾಸದ ವೇಳೆ ವಪೆ ಸಡಿಲವಾಗಿ ಹೊಟ್ಟೆಯ ಒತ್ತಡದಿಂದ ಮೇಲಕ್ಕೆ ನೂಕಲ್ಪಟ್ಟು ಎದೆಗೂಡನ್ನು ಕಿರಿದಾಗಿಸುತ್ತದೆ. ಆಗ ಫುಪ್ಫುಸಗಳಿಂದ ವಾಯು ಸಲೀಸಾಗಿ ನಿರ್ಗಮಿಸುವುದು. ವಪೆಗೆ ಅಪಾಯ ಬಡಿದರೆ ಉಸಿರಾಟ ಏರುಪೇರಾಗುತ್ತದೆ.

ವಪೆಯ ಕಾಯಿಲೆಗಳು: 1. ಅಂತರ್‌ವೃದ್ಧಿ (ಹರ್ನಿಯ): ವಪೆಯ ಅಭಿವರ್ಧನೆಯಲ್ಲಿ ನ್ಯೂನ್ಯತೆ ಉಂಟಾದರೆ ಅಥವಾ ಅದಕ್ಕೆ ಗಾಸಿಯಾದರೆ ಅದರಲ್ಲಿ ರಂಧ್ರ ಉಂಟಾಗಿ ಹೊಟ್ಟೆಯೊಳಗಿನ ಅಂಗಗಳು ಇದರ ಮೂಲಕ ಎದೆಗೂಡಿಗೆ ತೂರಲು ತೊಡಗಿದಾಗ ಈ ಕಾಯಿಲೆ ತಲೆದೋರುತ್ತದೆ. ಪ್ರತಿ 2200 ಜನರಲ್ಲಿ ಒಬ್ಬರಿಗೆ ಈ ಕಾಯಿಲೆ ಬರಬಹುದು. ಇದು ಆಜನ್ಮ ವಪೆಯ ಅಂತರ್‌ವೃದ್ಧಿ. ಮಗುವಿನ ಉಸಿರಾಟಕ್ಕೆ ಇದರಿಂದ ತುಂಬ ತೊಂದರೆ. ತುರ್ತು ಶಸ್ತ್ರಕ್ರಿಯೆ ಅನಿವಾರ್ಯ. ಅಲ್ಲಿಯೂ ಶೇ. 50–60 ಸಾಯಬಹುದು.

2. ಇವೆಂಟ್ರೇಶನ್: ವಪೆ ನಿರ್ದಿಷ್ಟ ಮಟ್ಟಕ್ಕಿಂತ ಮೇಲಕ್ಕಿರುವ ನ್ಯೂನತೆ. ಎಕ್ಸ್‌ಕಿರಣ ಚಿತ್ರದಿಂದ ಇದನ್ನು ಪತ್ತೆ ಮಾಡಬಹುದು. ಯಾವ ರೋಗ ಲಕ್ಷಣಗಳೂ ಪ್ರಕಟವಾಗದಿರಬಹುದು. ಹಾಗೇನಾದರೂ ಕಂಡುಬಂದರೆ ಶಸ್ತ್ರಚಿಕಿತ್ಸೆಯೊಂದೆ ಪರಿಹಾರ.

3. ಕ್ಯಾನ್ಸರ್: ವಪೆ ಕ್ಯಾನ್ಸರ್ ರೋಗಪೀಡಿತವಾಗುವುದುಂಟು. (ಎಸ್.ಕೆ.ಎಚ್.)

**ವರ್ಗೀಕರಣವಿಜ್ಞಾನ:** ಜಗತ್ತಿನಲ್ಲಿರುವ ಎಲ್ಲಾ ಪ್ರಾಣಿಗಳನ್ನು ಶರೀರದ ರೂಪ (ಮಾರ್ಫಾಲಜಿ), ನಡವಳಿಕೆ, ರಾಸಯನಿಕಗಳ ಘಟಕ ಮತ್ತು ಅವುಗಳಿರುವ ಪರಿಸರದ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಈ ಅಧ್ಯಯನವೇ ವರ್ಗೀಕರಣಶಾಸ್ತ್ರ. ಆಂಗ್ಲ ಭಾಷೆಯಲ್ಲಿ ಟೆಕ್ಸಾನಮಿ ಎನ್ನುವರು. ಇದುರವರೆಗೂ, ಒಂದುವರೆ ದಶಲಕ್ಷ ಜೀವಿಗಳನ್ನು ಹೆಸರಿಸಿದ್ದು, ಪ್ರತಿ ವರ್ಷ ಸಾವಿರಕ್ಕೂ ಹೆಚ್ಚು ಹೊಸ ಪ್ರಾಣಿ ಪ್ರಭೇದಗಳನ್ನು ಪಟ್ಟಿಮಾಡಲಾಗಿದೆ.

ವರ್ಗೀಕರಣ ಶಾಸ್ತ್ರದ ಓರೆಗಲ್ಲುಗಳು: ಪುರಾತನ ವರ್ಗೀಕರಣ ಶಾಸ್ತ್ರಜ್ಞರು ಈ ವರ್ಗೀಕರಿಸಿದ ಜೀವಿಗಳನ್ನು ಸ್ಥಿರ ಮತ್ತು ಮಾರ್ಪಾಡುಗೊಳ್ಳದ ಘಟಕಗಳೆಂದು ಪರಿಗಣಿಸಲಾಗಿದ್ದು, ಅವುಗಳಲ್ಲಿ ಉಂಟಾಗುವ ತುಸು ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಅಥವಾ ಈ ರೀತಿಯ ಚಿಕ್ಕಪುಟ್ಟ ಬದಲಾವಣೆಗಳನ್ನು ಅಪಘಾತವೆಂದು ಪರಿಗಣಿಸಿ ಈ ಜೀವಿಗಳನ್ನೆಲ್ಲಾ ಒಂದು ವರ್ಗವೆಂದು ಪರಿಗಣಿಸಲಾಗುತ್ತಿತ್ತು. ಆದರೆ, ಜೀವವಿಕಾಸದ ಪರಿಕಲ್ಪನೆ ಉದ್ಭವದ ಅನಂತರ, ಜೀವಿಗಳು ಸ್ಥಿರ ಘಟಕಗಳಾಗಿರದೆ, ನಿರಂತರವಾಗಿ ವಿಕಾಸಗೊಳ್ಳುತ್ತಲೇ ಇರುತ್ತವೆ. ಇದು, ವರ್ಗೀಕರಣವಿಜ್ಞಾನಿಗಳ ಪರಿಕಲ್ಪನೆಗೆ ಬಂದಾಗ, ವರ್ಗೀಕರಣವಿಜ್ಞಾನವು ತುಸು ಮಾರ್ಪಾಟನ್ನು ಕಂಡುಕೊಂಡಿತು. ಮೊದಲಿಗೆ ಒಂದು ವರ್ಗದ ಜೀವಿಗಳು ಕೆಲವು ನಿರ್ದಿಷ್ಟ ಗುಣಗಳನ್ನು ಹೊಂದಿದ್ದು, ಇವುಗಳನ್ನು ಆಧಾರವಾಗಿಟ್ಟುಕೊಂಡು ಈ ಹೋಲಿಕೆಗಳನ್ನೊಳಗೊಂಡ ಎಲ್ಲಾ ಜೀವಿಗಳನ್ನು ಒಂದು ವರ್ಗಕ್ಕೆ ಸೇರಿಸಲಾಗುತ್ತದೆ. ಆದ್ದರಿಂದ ನಮೂನೆ (ಟೈಪ್) ಜೀವಿಯನ್ನು ವರ್ಗೀಕರಣವಿಜ್ಞಾನಿಗಳು ಮೊದಲು ಹೆಸರಿಸಿ, ಈ ಮಾದರಿ ಜೀವಿಯನ್ನು ವರ್ಗೀಕರಣ ಕೇಂದ್ರದಲ್ಲಿ ಅಥವಾ ಪ್ರಾಣಿಸಂಗ್ರಹಾಲಯದಲ್ಲಿ ಇಡಲಾಗುತ್ತದೆ.

ಮಹಾನ್ ಗ್ರೀಕ್ ತತ್ವಜ್ಞಾನಿ ಹಾಗು ಪ್ರಾಣಿವಿಜ್ಞಾನಿ ಅರಿಸ್ಟಾಟಲ್ ಪ್ರಾಣಿಗಳ ದೇಹ ವಿನ್ಯಾಸದ ಆಧಾರದ ಮೇಲೆ ವಿಂಗಡಿಸಲು ಪ್ರಯತ್ನಿಸಿದ. ವರ್ಗೀಕರಣವಿಜ್ಞಾನದಲ್ಲಿ ಹೆಚ್ಚಿನ ಸಾಧನೆಯನ್ನು ಆಂಗ್ಲ ಪರಿಸರತಜ್ಞ ಜಾನ್ ರೇ (1627–1705) ಕಾಲಮಾನದಲ್ಲಿ ಕಂಡುಕೊಂಡಿತು. ಇವನು ಪ್ರಾಣಿಗಳನ್ನು ದೇಹ ವಿನ್ಯಾಸದ ಆಧಾರದ ಮೇಲೆ ವಿಂಗಡಿಸಿ ಹಲವಾರು ಪ್ರಾಣಿ ಸಂಕುಲಗಳನ್ನು ವರ್ಗೀಕರಿಸಿದನು. ಜಾನ್‌ರೇ ವರ್ಗೀಕರಣ ವಿಧಾನವನ್ನು ಆಧಾರವಾಗಿಟ್ಟುಕೊಂಡು, ಕಾರೋಲಸ್ ಲಿನೆಯಸ್ (1707–1778) ವರ್ಗೀಕರಣವಿಜ್ಞಾನವನ್ನು ನವೀಕರಿಸಿ, ನವ್ಯ ಮಾದರಿಯಲ್ಲಿ ಜೀವಿಗಳನ್ನು ವಿಂಗಡಿಸಿದನು. ಇದರಿಂದ ಪ್ರಪಂಚದ ಹಲವಾರು ವರ್ಗೀಕರಣವಿಜ್ಞಾನಿಗಳ ಸಹಾಯದೊಂದಿಗೆ ಸಾವಿರಾರು ಪ್ರಾಣಿ ಮತ್ತು ಸಸ್ಯಗಳನ್ನು ವರ್ಗೀಕರಿಸಲಾಯಿತು.

ಲಿನೆಯಸ್ ಸಸ್ಯ ಮತ್ತು ಪ್ರಾಣಿಗಳ ದೇಹ ವಿನ್ಯಾಸದ ವಿಭಿನ್ನತೆಗೆ ಹೆಚ್ಚಿನ ಮಹತ್ವ ನೀಡಿದ್ದನು. ಇವನು ಪ್ರಾಣಿಗಳ ಗುಂಪನ್ನು ವರ್ಗಗಳಾಗಿ ವಿಂಗಡಿಸಿ, ಇದರ ಆಧಾರದ ಮೇಲೆ, ಅವುಗಳಿಗೆ ನಿರ್ದಿಷ್ಟ ಹೆಸರುಗಳನ್ನು ನೀಡಿದನು. ಲಿನೆಯಸ್ ವರ್ಗೀಕರಣದಲ್ಲಿ ವಂಶ (ಫೈಲಂ), ವರ್ಗ (ಕ್ಲಾಸ್), ಗಣ (ಆರ್ಡರ್), ಕುಟುಂಬ (ಫ್ಯಾಮಿಲಿ), ಜಾತಿ (ಜೀನಸ್) ಮತ್ತು ಪ್ರಭೇದ (ಸ್ಪೀಶೀಸ್) ಎಂಬ ವಿಂಗಡಣೆ ಮಾಡಿದ. ಈ ವಿಂಗಡನೆಯ ಪ್ರಮುಖ ಘಟಕಗಳನ್ನು ಉಪವಂಶ (ಸಬ್‌ಫೈಲಂ), ಉಪವರ್ಗ (ಸಬ್‌ಕ್ಲಾಸ್), ಉಪಗಣ (ಸಬ್ ಆರ್ಡರ್), ಉಪಕುಟುಂಬ (ಸಬ್ ಫ್ಯಾಮಿಲಿ), ಉಪಜಾತಿ (ಸಬ್‌ಜೀನಸ್) ಮತ್ತು ಉಪಪ್ರಭೇದ (ಸಬ್ ಸ್ಪೀಶೀಸ್) ಎಂದು ಪುನರ್ವಿಂಗಡಿಸಲಾಯಿತು.

ದ್ವಿನಾಮನಾಮಕರಣ: ಪ್ರಾದೇಶಿಕ ಹಾಗೂ ಭಾಷಾ ವ್ಯತ್ಯಾಸಗಳಿಂದಾಗಿ ಒಂದೇ ಜೀವಿಗೆ ಇರುವ ಅನೇಕ ಹೆಸರುಗಳಿಂದ ಉಂಟಾಗುವ ಗೊಂದಲಗಳನ್ನು ತಪ್ಪಿಸುವ ಸಲುವಾಗಿ 'ಎರಡು ಪದಗಳುಳ್ಳ ನಾಮಕರಣ (ಬೈನಾಮಿಯಲ್ ನಾಮನ್‌ಕ್ಲೇಚರ್) ಮಾಡುವಿಕೆ. ಕ್ಯಾರೊಲಸ್ ಲಿನೆಯಸ್ ಎಂಬ ವರ್ಗೀಕರಣ ವಿಜ್ಞಾನಿಯು ಜಾತಿ ಮತ್ತು ಪ್ರಭೇದವನ್ನು ಸೂಚಿಸಲು ಪ್ರತಿಯೊಂದು ಜೀವಿಗೆ ಎರಡು ಹೆಸರುಗಳನ್ನು ನೀಡಿದನು. ಜೀವಿಗಳಿಗೆ 2 ಪದಗಳುಳ್ಳ ವೈಜ್ಞಾನಿಕ ನಾಮಾಂಕಿತವನ್ನು ನೀಡಲು ಈತ ಲ್ಯಾಟಿನ್ ಭಾಷೆಯನ್ನು ಬಳಸಿದ. ಲ್ಯಾಟಿನ್ ಭಾಷೆ ಮೇಧಾವಿಗಳ ಭಾಷೆಯಾಗಿದ್ದು, ಇದನ್ನು ಪ್ರಪಂಚದೆಲ್ಲೆಡೆ ಜನರು ಗ್ರಹಿಸಬಹುದು. ಜಾತಿಯ ಹೆಸರು ಸಾಮಾನ್ಯವಾಗಿ ನಾಮಪದವಾಗಿದ್ದು, ಪ್ರಭೇದದ ಹೆಸರು ಗುಣವಾಚಕವಾಗಿರುತ್ತದೆ. ಉದಾ : ರಾಬಿನ್ ಪಕ್ಷಿಯ ವೈಜ್ಞಾನಿಕ ಹೆಸರು ಟುರ್‌ಡಸ್ ಮೈಗ್ರೆಟೋರಿಯಸ್. ಲ್ಯಾಟಿನ್ ಭಾಷೆಯಲ್ಲಿ ಟುರ್‌ದಸ್ ಎಂದರೆ ಹಾಡುವ (ಥ್ರಶ್), ಮೈಗ್ರೆಟೋರಿಯಸ್ ಎಂದರೆ ವಲಸೆ ಹೋಗುವ ಅರ್ಥವನ್ನು ನೀಡುತ್ತದೆ.

ವರ್ಗೀಕರಣವಿಜ್ಞಾನದ ಮೂಲ ಉದ್ದೇಶ ಎಲ್ಲಾ ಪ್ರಾಣಿಗಳಿಗೂ ಕ್ರಮವಾದ ರೀತಿಯಲ್ಲಿ ಹೆಸರನ್ನು ನೀಡುವುದು. ಪ್ರತಿಯೊಂದು ಪ್ರಾಣಿಯು ನಿರ್ದಿಷ್ಟ, ಸಾಮಾನ್ಯ ಹೆಸರನ್ನು ಹೊಂದಿದ್ದು, ಎಲ್ಲಾ ಭಾಷೆಯ ಜನರಿಗೂ ವರ್ಗೀಕರಣದ ವೈಜ್ಞಾನಿಕ ಹೆಸರಿನಿಂದ ಪ್ರಾಣಿಯ ಚರಿತ್ರೆ ತಿಳಿಯುತ್ತದೆ. ಆದರೆ, ಪ್ರಾಣಿಯ ಸಾಮಾನ್ಯ ಹೆಸರು ವಿವಿಧ ಭಾಷೆಗಳಲ್ಲಿ ಮತ್ತು ವಿವಿಧ ದೇಶ–ಪ್ರದೇಶಗಳಲ್ಲಿ ಹಲವು ರೀತಿಯಲ್ಲಿದ್ದರೂ, ವೈಜ್ಞಾನಿಕ ಹೆಸರು ಮಾತ್ರ ಪ್ರಪಂಚದಾದ್ಯಂತ ಒಂದೇ ಆಗಿರುತ್ತದೆ. ಉದಾ : ಆನೆಯ ವೈಜ್ಞಾನಿಕ ಹೆಸರು ಎಲಿಫಾಸ್ ಮ್ಯಾಕ್ಸಿಮಸ್. ಇದನ್ನು ಹಾಥಿ (ಹಿಂದಿ, ಬೆಂಗಾಲಿ, ಅಸ್ಸಾಮೀಸ್), ಆನೆ (ಕನ್ನಡ), ಯಾನೆ (ತಮಿಳು), ಆನ (ಮಲಯಾಳಂ), ಯೆನುಗು (ತೆಲುಗು) ಎಂಬ ಸ್ಥಳೀಯ ಹೆಸರಿನಿಂದ ಭಾರತ ದೇಶದ ವಿವಿಧ ರಾಜ್ಯಗಳಲ್ಲಿ ಕರೆಯಲ್ಪಟ್ಟರೂ, ಈ ಪ್ರಾಣಿಯ ವೈಜ್ಞಾನಿಕ ಹೆಸರು ಎಲ್ಲೆಡೆ ಒಂದೇ ಆಗಿರುತ್ತದೆ.

ವರ್ಗೀಕರಣವಿಜ್ಞಾನದಲ್ಲಿನ ಗೊಂದಲಗಳನ್ನು ನಿವಾರಿಸುವ ಸಲುವಾಗಿ, 1898 ರಲ್ಲಿ ಒಂದೇ ವಿಧವಾದ ನಿಯಮಗಳನ್ನು ಅನುಸರಿಸಿ ಜೀವಿಗಳ ವರ್ಗೀಕರಣವನ್ನು ಮಾಡಲು ಅಂತಾರಾಷ್ಟ್ರೀಯ ಪ್ರಾಣಿವೈಜ್ಞಾನಿಕ ನಾಮಕರಣ ಆಯೋಗ (ಇಂಟರ್‌ನ್ಯಾಶನಲ್ ಕಮಿಷನ್ ಆಫ್ ಝೂಆಲಜಿಕಲ್ ನಾಮೆನ್‌ಕ್ಲೇಚರ್) ಸ್ಥಾಪಿಸಲಾಯಿತು. ಐಸಿಜೆಡ್‌ಎನ್‌ನ ಮೂಲಭೂತ ವರ್ಗೀಕರಣದ ನಿಯಮಗಳು:

1. ಜೀವಿಗಳ ನಾಮಕರಣದಲ್ಲಿ ಎರಡು ಪದಗಳುಳ್ಳ ಹೆಸರನ್ನು ಲಿನೆಯಸ್‌ನ ವಿವರಣೆಯಂತೆ ಪಾಲಿಸಬೇಕು. ಒಂದು ವೇಳೆ ಪ್ರಾಣಿಗೆ ಮೂರು ಪದಗಳ (ಟ್ರೈನಾಮಿಯಲ್) ಹೆಸರನ್ನು ಉಪ ಪ್ರಭೇದದ ಆಧಾರದ ಮೇಲೆ ನೀಡುವಾಗ, ಲಿನೆಯಸ್ ಪದ್ಧತಿಯನ್ನು ಸ್ವಲ್ಪ ಮಾರ್ಪಡಿಸಬಹುದು.

2. ಜೀವಿಯ ಹೆಸರು ಲ್ಯಾಟಿನ್ ಅಥವಾ ಲ್ಯಾಟಿನ್‌ಗೆ ಮಾರ್ಪಡಿಸಿದ ಭಾಷೆಯಲ್ಲಿರಬೇಕು.

3. ಜಾತಿ ಹೆಸರು ಒಂದು ಪದವಾಗಿದ್ದು, ಏಕವಚನ ಮತ್ತು ಕರ್ತೃಪದವನ್ನು ಬಳಸಿ, ಮೊದಲಿನ ಅಕ್ಷರ ದೊಡ್ಡಕ್ಷರದಲ್ಲಿರಬೇಕು.

4. ಪ್ರಭೇದದ ಹೆಸರು ಒಂದು ಸಮಾಸ ಪದವಾಗಿದ್ದು, ಸಣ್ಣಕ್ಷರದಲ್ಲಿರಬೇಕು ಹಾಗು ಸಾಮಾನ್ಯವಾಗಿ ಈ ಹೆಸರು ಗುಣವಾಚಕವಾಗಿದ್ದು, ಜಾತಿ ಹೆಸರಿನೊಂದಿಗೆ ವ್ಯಾಕರಣ ಹೊಂದಾಣಿಕೆ ಇರಬೇಕು. ಉಪ ಪ್ರಭೇದದ ಹೆಸರು ಸಹ ಸಣ್ಣಕ್ಷರದಲ್ಲಿರಬೇಕು. ಉದಾ : ಪ್ಯಾಂತೆರಾ ಲಿಯೋ (ಸಿಂಹ), ಇಲ್ಲಿ–ಪ್ಯಾಂತೆರಾ (ಜಾತಿ), ಲಿಯೊ (ಪ್ರಭೇದ).

5. ವರ್ಗೀಕರಣವಿಜ್ಞಾನದಲ್ಲಿ ಜಾತಿ ಮತ್ತು ಪ್ರಭೇದದ ಲ್ಯಾಟಿನ್ ಹೆಸರುಗಳನ್ನು ಓರೆ ಅಕ್ಷರಗಳಲ್ಲಿ (ಇಟ್ಯಾಲಿಕ್ಸ್) ನಮೂದಿಸಬೇಕು ಅಥವಾ ಈ ಹೆಸರುಗಳು ನೇರ ಅಕ್ಷರಗಳಲ್ಲಿದ್ದರೆ, ಜಾತಿ ಮತ್ತು ಪ್ರಭೇದದ ಹೆಸರುಗಳನ್ನು ಬೇರೆ ಬೇರೆಯಾಗಿ ಅಡ್ಡಗೆರೆಗಳಲ್ಲಿ ಬರೆಯಬೇಕು. ಉದಾ : ಪ್ಯಾಂತೆರಾ ಟೈಗ್ರಿಸ್ (ಹುಲಿ) ಅಥವಾ ಪ್ಯಾಂಥೆರ ಟೈಗ್ರಿಸ್.

6. ಯಾವುದೇ ಪ್ರಾಣಿಯನ್ನು ಪ್ರಪ್ರಥಮವಾಗಿ ಗುರುತಿಸಿ ಹೆಸರಿಸಿದ ವರ್ಗೀಕರಣವಿಜ್ಞಾನಿಯ ಹೆಸರು ಜಾತಿಯ ಹೆಸರಿನ ಅನಂತರ ನಮೂದಿಸಬಹುದು. ಈ ಹೆಸರನ್ನು ಸಂಕ್ಷಿಪ್ತವಾಗಿ ಬಳಸಬಹುದು. ಉದಾ: ನಿಂಬೆ ಚಿಟ್ಟೆ: ಪ್ಯಾಪಿಲಿಯೋ ಡೆಮೋಲಿಯಸ್ ಲಿನೆಯಸ್ ಅಥವಾ ಪ್ಯಾಪಿಲಿಯೋ ಡೆಮೋಲಿಯಸ್ ಲಿನ್ ಅಥವಾ ಪ್ಯಾಪಿಲಿಯೋ ಡೆಮೋಲಿಯಸ್ ಎಲ್.

7. ವರ್ಗೀಕರಣದಲ್ಲಿ ಮೊದಲು ನೀಡಿದ ಹೆಸರು ಮಾನ್ಯತೆ ಹೊಂದಿದ್ದು, ಇದರ ಪ್ರತಿರೂಪ ಹೆಸರುಗಳನ್ನು ಪರ್ಯಾಯ (ಸಿನಾನಿಮ್) ಹೆಸರುಗಳೆಂದು ಪರಿಗಣಿಸಲಾಗುತ್ತದೆ. ಉದಾ: ಮಾವಿನ ಬೀಜ ಕೊರಕ: ಸ್ಟರ್ನೋಕೀಟಸ್ ಮ್ಯಾಂಜಿಫೆರೆ (ಕ್ರಿಪ್ಟೋರಿಂಕಸ್ ಮ್ಯಾಂಜಿಫೆರೆ).

8. ಒಂದು ಪಕ್ಷದಲ್ಲಿ ಜಾತಿ ಹೆಸರು ಬದಲಾವಣೆಗೊಂಡಾಗ ಅಥವಾ ಒಂದು ಪ್ರಭೇದದ ಪ್ರಾಣಿಯನ್ನು ಹೊಂದಾಣಿಕೆಯಿಲ್ಲದ ಜಾತಿಯಲ್ಲಿ ತಪ್ಪಾಗಿ ಸೇರಿಸಿದರೆ, ಅನಂತರದ ಬದಲಾವಣೆಯಲ್ಲಿ ಮೂಲ ವರ್ಗೀಕರಣವಿಜ್ಞಾನಿಯ ಹೆಸರನ್ನು ಪ್ರಾಣಿಯ ವೈಜ್ಞಾನಿಕ ಹೆಸರಿನ ಅನಂತರ ಆವರಣದಲ್ಲಿ ಇರಿಸಲಾಗುತ್ತದೆ. ಉದಾ : ಮಿಡತೆ ಕಪ್ಪೆಯ ವೈಜ್ಞಾನಿಕ ಹೆಸರು ರಾನ ಗ್ರಿಲ್ಲಸ್ ಲಿ ಕೊಂಟೆಯೆಂದು ನೀಡಲಾಗಿದ್ದು, ಅನಂತರ ಜಾತಿಯ ಬದಲಾವಣೆಯಿಂದಾಗಿ ಈ ಕಪ್ಪೆಯನ್ನು ಅಕ್ರಿಸ್ ಗ್ರಿಲ್ಲಸ್ (ಲಿ ಕೊಂಟೆ) ಎಂದು ನಮೂದಿಸಲಾಯಿತು.

ಕೆಲವು ಪ್ರಾಣಿಗಳ ವರ್ಗೀಕರಣ ನಮೂನೆಯನ್ನು ಪಟ್ಟಿಯಲ್ಲಿ ನೀಡಲಾಗಿದೆ.

| | ಮನುಷ್ಯ | ಗೊರಿಲ್ಲಾ | [illegible] | [illegible] |
|---|---|---|---|---|
| ವಂಶ | ಕಾರ್ಡೇಟಾ | ಕಾರ್ಡೇಟಾ | ಕಾರ್ಡೇಟಾ | [illegible] |
| ಉಪವಂಶ | ಕಶೇರುಕ | ಕಶೇರುಕ | ಕಶೇರುಕ | ಅಕಶೇರುಕ |
| ವರ್ಗ | ಸ್ತನಿ | ಸ್ತನಿ | [illegible] | [illegible] |
| ಉಪವರ್ಗ | ಯೂಥೇರಿಯ | ಯೂಥೇರಿಯ | – | – |
| ಗಣ | ಪ್ರೈಮೇಟ್ಸ್ | ಪ್ರೈಮೇಟ್ಸ್ | [illegible] | [illegible] |
| ಉಪಗಣ | ಆಂತ್ರೋಪಾಯಿಡೆ | ಆಂತ್ರೋಪಾಯಿಡೆ | – | – |
| ಕುಟುಂಬ | ಹೋಮಿನಿಡೆ | [illegible] | [illegible] | [illegible] |
| ಉಪಕುಟುಂಬ | – | – | [illegible] | – |
| ಜಾತಿ | ಹೋಮೋ | ಗೊರಿಲ್ಲಾ | [illegible] | [illegible] |
| ಪ್ರಭೇದ | ಸೇಪಿಯನ್ಸ್ | ಗೊರಿಲ್ಲಾ | [illegible] | [illegible] |
| ಉಪಪ್ರಭೇದ | – | – | [illegible] | – |

(ಎಂ.ಜಿ.ವಿ.)

**ವರ್ಣ ವಿನ್ಯಾಸ:** ಪ್ರಾಣಿ ಪಕ್ಷಿಗಳ ನೈಸರ್ಗಿಕ ಬಣ್ಣ (ಕಲರೇಷನ್). ಪ್ರಪಂಚದಲ್ಲಿ ವರ್ಣ ವಿನ್ಯಾಸ ಪ್ರಕೃತಿದತ್ತವಾದುದು. ಪರಿಸರದಲ್ಲಿನ ವಿವಿಧ ವರ್ಣ ವಿನ್ಯಾಸದ ಪ್ರಾಣಿ, ಪಕ್ಷಿ, ಗಿಡ, ಮರ ಹಾಗೂ ಇತರ ಜೀವ ಜಂತುಗಳು ವೈವಿಧ್ಯತೆಗೆ ಮೆರುಗು ನೀಡಿವೆ. ನಮ್ಮ ಸುತ್ತಮುತ್ತ ಪರಿಸರದಲ್ಲಿ ನಾನಾ ರೂಪದ ವರ್ಣ ವೈವಿಧ್ಯ ಇದಕ್ಕೆ ಕಾರಣ.

ಮಾನವ ಪ್ರಕೃತಿಯಿಂದ ಪ್ರಥಮವಾಗಿ ಕಲಿಯುವುದು ವರ್ಣ ವಿನ್ಯಾಸದ ವೈವಿಧ್ಯತೆಗಳು. ಗಿಡ, ಪ್ರಾಣಿ, ಪಕ್ಷಿಗಳು, ಚಿಟ್ಟೆ, ಪತಂಗಗಳು ವಿವಿಧ ಬಗೆಯ ಬಣ್ಣಗಳನ್ನು ಹೊಂದಿವೆ. ಹುಲಿಗಳಲ್ಲಿ ಕಾಣುವ ವರ್ಣಮಯ ಪಟ್ಟೆ, ಜಿರಾಫೆಯ ಆಕರ್ಷಕ ಜಾಲಾಕಾರದ (ರೆಟಿಕ್ಯುಲೇಟ್) ಚರ್ಮದ ಮೈಬಣ್ಣ, ಹಕ್ಕಿಗಳಲ್ಲಿರುವ ವಿವಿಧ ಬಣ್ಣಗಳ ಗರಿಗಳು, ಮಾನವನನ್ನು ಆಲೋಚಿಸುವಂತೆ ಮಾಡುತ್ತದೆ. ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಹಲವಾರು ವರ್ಷಗಳೇ ಬೇಕಾಯಿತು.

ಇತ್ತೀಚಿನವರೆಗೂ ಜೀವಿಗಳಲ್ಲಿ ವರ್ಣ ವೈವಿಧ್ಯತೆ ಹೇಗೆ ಬಂತು? ಏಕೆ ಬಂತು? ಎಂಬುದು ನಿಗೂಢವಾಗಿತ್ತು. ಈ ರಹಸ್ಯವನ್ನು ಭೇದಿಸುವಲ್ಲಿ ವಿಜ್ಞಾನಿಗಳು ಸಫಲರಾಗಿದ್ದಾರೆ. ಪ್ರಾಣಿ, ಸಸ್ಯ ಹಾಗೂ ಇತರ ಜೀವಿಗಳಲ್ಲಿ ವರ್ಣದ್ರವ್ಯವು ಸಂಚಯಗೊಂಡು ವಿವಿಧ ಬಣ್ಣಗಳಾಗಿ ರೂಪುಗೊಳ್ಳುತದೆ. ಸಸ್ಯಗಳು ತಾವೇ ಬಣ್ಣಗಳನ್ನು ಉತ್ಪಾದಿಸುತ್ತವೆ. ಬಹುತೇಕ ಸಸ್ಯಗಳಲ್ಲಿ ಪತ್ರ ಹರಿತ್ತು ಇದ್ದು, ಅದು ಹಸಿರು ಬಣ್ಣವನ್ನು ಕೊಡುತ್ತದೆ.

ಪ್ರಾಣಿಗಳು ಸಸ್ಯಜನ್ಯ ಆಹಾರದಿಂದ ಬಣ್ಣವನ್ನು ಪಡೆಯುತ್ತವೆ. ಕೆಲವು ಪ್ರಾಣಿಗಳು ತಾವೇ ಉತ್ಪಾದಿಸುತ್ತವೆ. ಪ್ರಾಣಿಗಳಲ್ಲಿ ವಿವಿಧ ತರಹದ ವರ್ಣಕಣಗಳಿದ್ದು, ಇಂತಹ ವರ್ಣಕಣಗಳ ಗುಂಪನ್ನು ಕ್ರೊಮೆಟೋಫೋರ್ ಎನ್ನುತ್ತಾರೆ. ಇದು ಕೊಡುವ ಬಣ್ಣಗಳ ಆಧಾರದ ಮೇಲೆ ಅವುಗಳನ್ನು ಮೆಲನೋಫೋರ್, ಕ್ಸಾಂತೋಫೋರ್, ಎರಿತ್ರೋಫೋರ್ ಎಂದು ವಿಂಗಡಿಸಿದ್ದಾರೆ. ಇಂತಹ ವಿವಿಧ ರೀತಿಯ ಕ್ರೊಮೆಟೋಫೋರ್‌ಗಳಲ್ಲಿ, ಮೆಲಾನಿನ್ ವರ್ಣಕಣವಿರುವ ಮೆಲಾನೋಫೋರ್‌ಗಳು ಪ್ರಾಣಿಗಳಲ್ಲಿ ಇವೆ. ಇದು ಕಪ್ಪು ಅಥವಾ ಕಂದು ಬಣ್ಣಕ್ಕೆ ಕಾರಣ. ಈ ಮೆಲನೋಫೋರ್‌ಗಳು ಹರಡಿದ್ದರೆ, ಅದು ಪ್ರಾಣಿಗಳಿಗೆ ಕಪ್ಪು ಬಣ್ಣವನ್ನೂ, ಒಂದೇ ಕಡೆ ಸಂಚಿತವಾಗಿದ್ದರೆ ನಸು ಬಣ್ಣವನ್ನೂ ನೀಡುವುದು. ಹೊರ ಚರ್ಮದಲ್ಲಿರುವ ವರ್ಣಕಣಗಳು ಹೊರಗಿನ ವರ್ಣ ವಿನ್ಯಾಸಕ್ಕೆ ಮಾತ್ರ ಕಾರಣವಾಗಿವೆ. ಒಳಚರ್ಮದಲ್ಲಿರುವ ಕ್ರೊಮೆಟೋಫೋರ್‌ಗಳು 3 ಪದರಗಳನ್ನು ಹೊಂದಿವೆ. 1) ಕ್ಸಾಂತೋಫೋರ್ – ಸೋಸುವ ಪದರ, 2) ಮೆಲನೋಫೋರ್ – ಹೀರುವ ಪದರ ಹಾಗು 3) ಇರಿಡೋಫೋರ್ – ಪ್ರತಿಫಲಿಸುವ ಪದರ. ಇರಿಡೋಫೋರ್‌ಗಳಲ್ಲಿ ಗ್ವಾನಿನ್ ಎನ್ನುವ ಸ್ಫಟಿಕ ಕಣಗಳಿದ್ದು, ಅದು ಬೆಳಕನ್ನು ವಿವಿಧ ತರಂಗಾಂತರಗಳಲ್ಲಿ ವಕ್ರೀಕರಿಸುತ್ತವೆ. ಇದರಿಂದಾಗಿ ಸಾಚಾ ವರ್ಣಕಣಗಳಿಲ್ಲದಾಗ್ಯೂ, ಅದು ವಿವಿಧ ಬಣ್ಣಗಳನ್ನು ಉಂಟುಮಾಡುತ್ತವೆ. ಉದಾ : ಕೆಲವು ಮೀನುಗಳಲ್ಲಿ ಕಾಣುವ ನೀಲಿ ಬಣ್ಣವು ನೀಲಿ ವರ್ಣಕಣದಿಂದ ಬಂದದ್ದಲ್ಲ, ಬೆಳಕಿನ ಪ್ರತಿಫಲನದಿಂದ ಬಂದದ್ದು. ಜೀವಿಗಳಲ್ಲಿ ವರ್ಣವಿನ್ಯಾಸವು ಮುಖ್ಯವಾಗಿ ಅಂಗಾಂಶಗಳಲ್ಲಿ ವರ್ಣದ್ರವ್ಯಗಳು ಸಂಚಿತಗೊಳ್ಳುವುದರಿಂದ ಅಥವಾ ಬೆಳಗಿನ ಕಿರಣಗಳ ವಕ್ರೀಕರಣ ದೃಷ್ಟಿಕ ಪರಿಣಾಮದಿಂದಾಗಬಹುದು, ಅಥವಾ ಅದು ಎರಡು ಸಮ್ಮಿಳಿತಗೊಳ್ಳುವುದರಿಂದಲೂ ಆಗಬಹುದು. ಸ್ವರೂಪದಲ್ಲಿ ಉಂಟಾಗುವ ಬಣ್ಣ ಬದಲಾವಣೆಗಳು ವರ್ಣಕಣಗಳ ಪ್ರಮಾಣವನ್ನು ಅವಲಂಬಿಸಿರುತ್ತವೆ. ಇಂತಹ ಬಹುತೇಕ ಬದಲಾವಣೆಗಳು ಶಾಶ್ವತವಾಗಿವೆ.

ಪ್ರಾಣಿಗಳಲ್ಲಿ ಏಕೆ ಈ ರೀತಿಯ ವಿವಿಧ ಬಣ್ಣಗಳಿವೆ ಎಂಬುದು ಕುತೂಹಲಕರವಾಗಿದೆ. ಭೂಮಿಯ ಮೇಲಿರುವ ಯಾವುದೇ ಜೀವಿಯು ಪ್ರಥಮವಾಗಿ ಚಿಂತಿಸಬೇಕಾಗಿರುವುದು ಅದರ ಉಳಿವಿನ ಬಗ್ಗೆ ಮತ್ತು ಅದರ ವಂಶವೃಕ್ಷವನ್ನು ಉಳಿಸಿ, ಬೆಳೆಸುವ ಬಗ್ಗೆ. ಈ ಉದ್ದೇಶ ಮನುಷ್ಯರಿಗೆ ಮಾತ್ರ ಸೀಮಿತವಲ್ಲ. ಇತರ ಎಲ್ಲಾ ಜೀವಿಗಳಿಗೆ ಅನ್ವಯಿಸುತ್ತದೆ. ಕಾರಣ, ಅವು ತಮ್ಮ ಅಸ್ತಿತ್ವಕ್ಕಾಗಿ ನಾನಾ ರೀತಿಯಲ್ಲಿ ಹೋರಾಡಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪ್ರಾಣಿಗಳು ಮುಖ್ಯವಾಗಿ ತಮ್ಮ ಮೈಬಣ್ಣವನ್ನು ಬಳಸುತ್ತವೆ. ಆಹಾರ ಸಂಗ್ರಹಿಸುವಾಗ ಅಥವಾ ಶತ್ರುಗಳಿಂದ ರಕ್ಷಿಸಿಕೊಳ್ಳಲು, ಸಂತಾನಾಭಿವೃದ್ಧಿಯ ಪ್ರಕ್ರಿಯೆಯಲ್ಲಿ ಜೊತೆಗಾರ/ಜೊತೆಗಾರ್ತಿಯನ್ನು ಆಕರ್ಷಿಸಲು, ವಿವಿಧ ರೀತಿಯ ವರ್ಣ ವಿನ್ಯಾಸಗಳನ್ನು ತೋರಿಸುತ್ತವೆ. ಅಂತೆಯೇ ಬೇರೆ ಪ್ರಾಣಿಗಳನ್ನು ಬೇಟೆಯಾಡಲು ತಮ್ಮ ದೇಹದ ವರ್ಣ ವೈವಿಧ್ಯತೆಯನ್ನು ಬಳಸುತ್ತವೆ. ಪ್ರಾಣಿಗಳು ಪ್ರಕೃತಿಯಲ್ಲಿ ಸಹಜವಾದ ಆರಿಸುವಿಕೆ (ನ್ಯಾಚುರಲ್ ಸೆಲೆಕ್ಷನ್) ವಿಧಾನದ ಮೂಲಕ ಶಕ್ತಿಶಾಲಿಯಾದ ಜೀವಿಗಳು ಹೇಗೆ ಪರಿಸರಕ್ಕೆ ಹೊಂದಾಣಿಕೆ ಮಾಡಿಕೊಂಡು ಬದುಕುತ್ತವೆ ಎಂದು ಡಾರ್ವಿನ್‌ನ ವಿಕಾಸ ವಾದದಿಂದ ತಿಳಿಯಬಹುದು.

ಪ್ರಾಣಿಗಳು ವರ್ಣವಿನ್ಯಾಸವನ್ನು ಮರೆಮಾಚಿಕೊಳ್ಳಲು, ಬೆದರಿಸಲು, ಪ್ರಕಟಿಸಲು ಅಥವಾ ಇತರ ಪ್ರಾಣಿಗಳನ್ನು ಮೋಸ ಮಾಡಲು ಉಪಯೋಗಿಸುತ್ತವೆ. ವರ್ಣ

ವಿನ್ಯಾಸವನ್ನು ಯಾವುದಕ್ಕೆ, ಯಾವ ರೀತಿಯಲ್ಲಿ ಬಳಸಲ್ಪಡುತ್ತದೆ ಎಂಬುದನ್ನಾಧರಿಸಿ ನಾನಾ ರೀತಿಯಲ್ಲಿ ವಿಂಗಡಿಸಿದ್ದಾರೆ. ಇವುಗಳಲ್ಲಿ 1) ಮರೆಮಾಚುವಿಕೆ (ಕಮೌಫ್ಲೇಜ್), 2) ಎಚ್ಚರಿಕೆಯ ವರ್ಣ ವಿನ್ಯಾಸ (ವಾರ್ನಿಂಗ್ ಕಲರೇಷನ್) ಹಾಗೂ 3) ಅನುಕರಿಸುವಿಕೆ (ಮಿಮಿಕ್ರಿ). ಓರ್ವ ವ್ಯಕ್ತಿ ಕಿತ್ತಳೆಯ ರಾಶಿಯ ಪಕ್ಕದಲ್ಲಿ ಕಿತ್ತಳೆ ವರ್ಣದ ಪೋಷಾಕು ಹಾಕಿ ನಿಂತಿದ್ದರೆ ಥಕ್ಕನೆ ಕಿತ್ತಳೆಯಿಂದ ಆತನನ್ನು ಬೇರ್ಪಡಿಸಿ ಗುರುತಿಸಲು ಸಾಧ್ಯವಾಗಲಿಕ್ಕಿಲ್ಲ. ಇಂತಹ ವರ್ಣವಿನ್ಯಾಸವನ್ನು ಅಗೋಚರಿಸುವ ಕ್ರಿಪ್ಟಿಕ್ ವರ್ಣ ವಿನ್ಯಾಸ ಎನ್ನುತ್ತಾರೆ. ವರ್ಣ ವಿನ್ಯಾಸಗಳಲ್ಲಿ ಮುಖ್ಯವಾದುದು ಪ್ರಾಣಿಗಳು ತಮ್ಮ ಆವರಣಕ್ಕೆ ಸರಿಯಾಗಿ ಬಣ್ಣವನ್ನು ಹೊಂದಾಣಿಕೆ ಮಾಡುವುದು. ಜೀವಿಗಳಿಗೆ ಆಹಾರ ಸಂಪಾದನೆ ಹಾಗು ವೈರಿಗಳಿಂದ ತಪ್ಪಿಸಿಕೊಳ್ಳುವ ಕೆಲಸಗಳು, ಅವುಗಳ ಉಳಿಯುವಿಕೆಗೆ ತುಂಬಾ ಪ್ರಾಮುಖ್ಯ. ಹೀಗೆ ಮರೆಮಾಚಿ, ಬೇಟೆಯಾಡುವುದಕ್ಕೆ ಪ್ರಾಣಿಯ ಮೈಬಣ್ಣ ಅನುಕೂಲವಾಗಿರಬೇಕು. ಅದೇ ರೀತಿ ವೈರಿಗಳಿಂದ ತಪ್ಪಿಸಿಕೊಳ್ಳಲು ಅವುಗಳು ಸೋಗನ್ನು ಹಾಕಬೇಕು. ಪ್ರಾಣಿಗಳು ಇಂತಹ ವಿವಿಧ ರೀತಿಯ ಸೋಗನ್ನು ಹಾಕುತ್ತವೆ. ಋತು ಬದಲಾದಂತೆ ಮೈಬಣ್ಣ ಬದಲಾಯಿಸುವ ಪ್ರಾಣಿಗಳು ಇವೆ. ಡಾರ್ವಿನ್‌ನ ಸಮರ್ಥರ ಉಳಿವು (ಸರ್ವೈವಲ್ ಆಫ್ ಫಿಟ್ಟೆಸ್ಟ್) ನಿಜವಾದ ಅರ್ಥದಲ್ಲಿ ಇದ್ದುದರಲ್ಲೇ ಅತ್ಯುತ್ತಮವಾದ ಕರ್ಮವನ್ನು ಕಡಿಮೆ ಶಕ್ತಿ ಬಳಸಿ ಉಪಯೋಗಿಸುವುದು. ಇದು ಪ್ರಾಣಿಗಳ ನಾನಾ ರೀತಿಯ ಚಟುವಟಿಕೆಗಳಿಗೆ ಸರಿಯಾಗಿ ಅನ್ವಯವಾಗುತ್ತದೆ.

ಪ್ರಾಣಿಗಳಲ್ಲಿ ಮರೆಮಾಚುವಿಕೆ ಎರಡು ಉದ್ದೇಶಗಳಿಗೆ ಬಳಕೆಯಾಗುತ್ತದೆ. ತಮ್ಮನ್ನು ಕೊಳ್ಳೆಹೊಡೆಯುವ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಅಥವಾ ತಮ್ಮ ಬೇಟೆಯು ತಮ್ಮನ್ನು ಗುರುತಿಸದಂತೆ ಮಾಡಿ ಅದನ್ನು ಬೇಟೆಯಾಡುವುದು. ಇಂತಹ ಸಂದರ್ಭದಲ್ಲಿ ಅವುಗಳ ಬಣ್ಣ, ಆವರಣದ ಬಣ್ಣಕ್ಕೆ ಹೊದಿಕೆಯಾಗುವಂತಿದ್ದು, ಕಣ್ಣಿಗೆ ಕಾಣದ್ದು ಮನಸಿಗೂ ಕಾಣದು ಎಂಬ ತತ್ವದ ಆಧಾರದ ಮೇಲೆ ಕೆಲಸ ಮಾಡುತ್ತದೆ. ಕೆಲವು ಕಂಬಳಿಹುಳಗಳು ಗಿಡದ ಕೊಂಬೆಯ ಬಣ್ಣವನ್ನೇ ಹೊಂದಿದ್ದು, ಅವುಗಳು ತಮ್ಮ ವೈರಿ ಪಕ್ಷಿಗಳ ಕಣ್ಣು ತಪ್ಪಿಸುತ್ತವೆ. ಚೇಳು ಮೀನಿನ ದೇಹದ ಬಣ್ಣ ತನ್ನ ಸುತ್ತಲಿರುವ ಹವಳಗಳ ದೇಹವಿನ್ಯಾಸವನ್ನು ಹೋಲುವುದರಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತವೆ.

ಕೆಲವು ಅಳಿಲುಗಳಲ್ಲಿ ಇನ್ನೊಂದು ರೀತಿಯ ಮರೆಮಾಚುವಿಕೆಯನ್ನು ತೋರಿಸುತ್ತವೆ. ಇವುಗಳ ಬೆನ್ನಿನಲ್ಲಿ ಕಡುಬಣ್ಣ ಇದ್ದು, ಹೊಟ್ಟೆಯಡಿಯಲ್ಲಿ ಬಿಳಿಯ ಕೂದಲು ಇರುತ್ತದೆ. ಈ ಅಳಿಲುಗಳು ನೆಲಕ್ಕೆ ಬಂದಾಗ ಮಣ್ಣಿನ ಬಣ್ಣಕ್ಕೆ ಹೊಂದಾಣಿಕೆಯಾಗುತ್ತದೆ ಹಾಗೂ ಮರದ ಮೇಲಿದ್ದಾಗ ಆಕಾಶದಲ್ಲಿನ ಬಿಳಿ ಮೋಡದ ಬಣ್ಣಕ್ಕೆ ಹೋಲಿಕೆಯಾಗಿ, ಈ ಎರಡು ರೀತಿಯಲ್ಲಿ ವೈರಿಗಳ ಕಣ್ಣು ತಪ್ಪಿಸಲು ಸಹಾಯವಾಗುತ್ತದೆ. ಇದನ್ನು ಪ್ರತಿನೆರಳು (ಕೌಂಟರ್ ಶೇಡಿಂಗ್) ಎನ್ನುತ್ತಾರೆ. ಶಾರ್ಕ್ ಮೀನಿನ ದೇಹದ ಕೆಳಬದಿ ಬಿಳಿಯಾಗಿದ್ದು, ಮೇಲ್ಮೈ ಬೂದು ಬಣ್ಣದಿಂದಾಗಿದೆ. ಇದು ತನ್ನ ಆವರಣದಲ್ಲಿರುವ ಸಮುದ್ರದ ನೀರಿನ ನೀಲಿ ಮಿಶ್ರಿತ ಬೂದುಬಣ್ಣಕ್ಕೆ ಸರಿಹೊಂದುತ್ತದೆ. ಕೆಲವು ಪ್ರಾಣಿಗಳ ದೇಹದ ಮೇಲೆ ಇರುವ ಪಟ್ಟೆಗಳು, ಚುಕ್ಕೆಗಳು ಪ್ರಾಣಿಗಳ ದೇಹವನ್ನು ಇಡಿಯಾಗಿ ಗ್ರಹಿಸುವುದಕ್ಕೆ ತಡೆಯಾಗುವುದರಿಂದ ಅವನ್ನು ತಕ್ಷಣ ಗುರುತಿಸಲಾಗುವುದಿಲ್ಲ. ಇದನ್ನು ತಡೆ ಒಡ್ಡುವ ವರ್ಣ ವಿನ್ಯಾಸ (ಡಿಸ್‌ರಪ್ಟಿವ್ ಕಲರೇಷನ್) ಎನ್ನುತ್ತಾರೆ. ಜೀಬ್ರಾದ ಚರ್ಮದ ಮೇಲಿರುವ ಪಟ್ಟೆ ಪ್ರಾಣಿಯ ಇಡೀ ಮೈಯನ್ನು ಸಣ್ಣ ಸಣ್ಣ ವಿಭಾಗಗಳಾಗಿ ವಿಂಗಡಿಸುತ್ತದೆ. ಇದರಿಂದಾಗಿ ಸಿಂಹಗಳು ಇವುಗಳನ್ನು ಕತ್ತಲಿನಲ್ಲಿ ಬೇರೆಯಾಡಲು ಬಂದಾಗ ತಪ್ಪಿಸಲು ಸಹಾಯವಾಗುತ್ತದೆ.

ಕೆಲವು ಪ್ರಾಣಿಗಳು ಕಡುವಾದ ಮೈಬಣ್ಣವನ್ನು ಹೊಂದಿದ್ದು, ನೋಡಿದ ಕೂಡಲೇ ಆ ಪ್ರಾಣಿಯ ಗುರುತು ಸಿಗುವಂತಿರುತ್ತದೆ. ಇದನ್ನು ಮುನ್ಸೂಚನಾ ವರ್ಣ ವಿನ್ಯಾಸ (ವಾರ್ನಿಂಗ್ ಕಲರೇಶನ್) ಎನ್ನುತ್ತಾರೆ. ಇಂತಹ ಅಪಾಯ ಸೂಚಕ ಬಣ್ಣ, ಕೆಲವು ಪ್ರಾಣಿಗಳಲ್ಲಿ ಅವುಗಳ ವಿಷಯುಕ್ತ ಸ್ವಾದದ ಬಗ್ಗೆ ವೈರಿಗಳಿಗೆ ಎಚ್ಚರಿಕೆ ನೀಡುವಂತಿರುತ್ತದೆ. ಆದರೆ, ಅಂತಹ ಬಣ್ಣಗಳು ಕೆಲವೊಮ್ಮೆ ಇತರೆ ಸಂದೇಶ (ಮೆಸ್ಸೇಜ್) ವನ್ನೂ ನೀಡುತ್ತವೆ. ಉದಾ : ಜೇನುನೊಣ ಹಾಗೂ ಕಣಜದ ಹುಳ (ವಾಸ್ಪ್) ಗಳು ಹಳದಿ, ಕಪ್ಪು ಮಿಶ್ರ ಬಣ್ಣ ಹೊಂದಿದ್ದು, ಅವನ್ನು ನೋಡಿದ ಕೂಡಲೇ ವೈರಿಗಳಿಗೆ ಅವುಗಳ ವಿಷತ್ವ (ನಂಜು, ಟಾಕ್ಸಿಸಿಟಿ) ಬಗ್ಗೆ ಹಾಗೂ ಅವುಗಳ ಕೊಂಡಿಯ ಚುಚ್ಚುವಿಕೆಯಿಂದ ಉಂಟುಮಾಡುವ ನೋವಿನ ಬಗ್ಗೆಯು ಎಚ್ಚರಿಕೆಯ ಸಂದೇಶ ನೀಡುತ್ತದೆ.

ಮಿಮಿಕ್ರಿ : ಇದು ಇನ್ನೊಂದು ರೀತಿಯ ಮರೆಯಾಗಿಸುವ ವಿಧಾನ. ಇದು ಪ್ರಾಣಿಗಳಿಗೆ ತಮ್ಮನ್ನು ಕೊಳ್ಳೆಹೊಡೆಯುವ ಪರಭಕ್ಷಕ (ಪ್ರೆಡೇಟರ್) ಪ್ರಾಣಿಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ. ಒಂದು ಪ್ರಭೇದದ ಪ್ರಾಣಿ ಇನ್ನೊಂದರಂತೆ ಕಾಣಿಸಿಕೊಂಡು ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಉದಾ : ಮೊನಾರ್ಕ್ ಹಾಗೂ ವೈಸ್‌ರಾಯ್ ಪತಂಗಗಳು ಬೇರೆ ಬೇರೆ ಪ್ರಭೇದಗಳು. ವೈಸ್‌ರಾಯ್ ಪತಂಗ ಮೊನಾರ್ಕ್‌ನಂತೆ ತನ್ನ ದೇಹದಲ್ಲಿ ವಿಷಕಾರಕ ವಸ್ತುಗಳನ್ನು ಹೊಂದಿಲ್ಲ. ಆದರೆ, ಅದು ಮೊನಾರ್ಕನ್ನು ಹೋಲುವುದರಿಂದ ಅದರ ಹತ್ತಿರ ಪರಭಕ್ಷಕ ಪ್ರಾಣಿಗಳು ಸುಳಿಯುವುದಿಲ್ಲ. ಈ ಮಿಮಿಕ್ರಿಯ ಬಗ್ಗೆ ವಿಜ್ಞಾನಿಗಳು ಬೇರೆ ಬೇರೆ ಸಿದ್ಧಾಂತವನ್ನು ಮಂಡಿಸಿದ್ದಾರೆ. ಬೇಟ್ಸ್‌ನ್ ಎಂಬ ವಿಜ್ಞಾನಿಯ ಪ್ರಕಾರ ವಿಷವಿಲ್ಲದ ಪ್ರಾಣಿ ಪ್ರಭೇದಗಳು ವಿಷವಿರುವ ಪ್ರಾಣಿಗಳ ಬಣ್ಣ, ಆಕಾರವನ್ನು ಹೋಲಿಕೆಯಾಗುವಂತೆ ಅವುಗಳನ್ನು ಅನುಕರಿಸಿ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತವೆ (ಮಿಮಿಕ್ರಿ). ಇದನ್ನು ಬೇಟ್ಸಿಯನ್ ಮಿಮಿಕ್ರಿ ಎನ್ನುತ್ತಾರೆ. ಇದರಲ್ಲಿ ಅನುಕರಿಸುವ ಪ್ರಾಣಿ ಮಾತ್ರ ಪ್ರಯೋಜನ ಪಡೆಯುತ್ತದೆ. ಮುಲ್ಲರ್ ಎಂಬ ವಿಜ್ಞಾನಿಯ ಪ್ರಕಾರ, ಅನುಕರಿಸುವ ಪ್ರಾಣಿ ಹಾಗೂ ಅದು ಯಾವ ಪ್ರಾಣಿಯನ್ನು ಅನುಕರಿಸುತ್ತದೋ (ಮಾಡೆಲ್, ಮಾದರಿ) ಎರಡೂ ಪ್ರಯೋಜನ ಪಡೆಯುತ್ತವೆ. ಇಂತಹ ಸಂದರ್ಭದಲ್ಲಿ ಎರಡೂ ಪ್ರಾಣಿಗಳು ತಿನ್ನಲು ಯೋಗ್ಯವಲ್ಲದ್ದಾಗಿರುತ್ತವೆ. ಇದನ್ನು ಮುಲ್ಲೇರಿಯನ್ ಮಿಮಿಕ್ರಿ ಎನ್ನುತ್ತಾರೆ. ಪ್ರಕೃತಿಯಲ್ಲಿ ಬೇರೆ ಜೀವಿಗಳನ್ನು ಅನುಕರಿಸುವ ಇಂತಹ ಅನೇಕ ಉದಾಹರಣೆಗಳಿವೆ (ನೋಡಿ: ಅನುಕರಣೆ). ವಿಷವಿಲ್ಲದ ಕೆಲವು ಹಾವುಗಳ ದೇಹದ ಬಣ್ಣ ವಿಷಕಾರಕ ಹವಳದ ಹಾವನ್ನು ಹೋಲುವುದರಿಂದ, ಅವು ವೈರಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತವೆ.

ಯಾವುದೇ ಪ್ರಭೇದದ ಜೀವಿಗಳ ಗುಣಲಕ್ಷಣಗಳಲ್ಲಿ ಮುಖ್ಯವಾದುದು ಅವುಗಳ ಬಣ್ಣ. ನವಿಲಿನ ಆಕರ್ಷಕ ಗರಿಗಳಿರಲಿ ಅಥವಾ ಸಮುದ್ರದ ಆಮೆಯ ಮಂದವಾದ ಬಣ್ಣವಿರಲಿ ಅವುಗಳು ಯಾವುದೂ ಆಕಸ್ಮಿಕವಾಗಿ ಒಮ್ಮೆಗೇ ಬಂದಿಲ್ಲ. ಅವುಗಳ ಉಳಿವಿಗಾಗಿ ಎಷ್ಟೋ ವರ್ಷಗಳಿಂದ ವಿಕಾಸಗೊಂಡು ಈಗಿನ ರೂಪ ಪಡೆದಿವೆ. ವರ್ಣ ವಿನ್ಯಾಸವನ್ನು ಪ್ರಾಣಿಗಳು ತಮ್ಮ ರಕ್ಷಣೆಗಲ್ಲದೆ, ಇತರ ಉಪಯೋಗಕ್ಕಾಗಿಯೂ ಬಳಸುತ್ತವೆ. ಮೈ ಬಣ್ಣವನ್ನು ವಿವಿಧ ಪ್ರಭೇದಗಳ ಪ್ರಾಣಿಗಳೊಳಗೆ ಸಂವಹನ (ಕಮ್ಯುನಿಕೇಶನ್) ಕ್ಕಾಗಿಯು ಬಳಸುತ್ತವೆ. ಶತ್ರುಗಳಿಂದ ರಕ್ಷಿಸಿಕೊಳ್ಳಲು, ಪ್ರಭೇದವನ್ನು ಗುರುತಿಸಲು, ಗಂಡು ಹೆಣ್ಣುಗಳ ಗುರುತಿಗೆ, ತಮ್ಮ ಆಹಾರದ ಪ್ರಾಣಿಗಳನ್ನು ಆಕರ್ಷಿಸಲು ಬಳಸುತ್ತವೆ.

ಅನೇಕ ಪ್ರಾಣಿಗಳಲ್ಲಿ ಪ್ರೇಮಯಾಚನೆ (ಕೋರ್ಟ್‌ಶಿಪ್), ಪ್ರಣಯ, ಆನುಷಂಗಿಕ ಲೈಂಗಿಕ ಲಕ್ಷಣ (ಸೆಕೆಂಡರಿ ಸೆಕ್ಸುಅಲ್ ಕಾರೆಕ್ಟರಿಸ್ಟಿಕ್ಸ್) ಕ್ಕಾಗಿ ವರ್ಣ ವಿನ್ಯಾಸವನ್ನು ಬಳಸಲಾಗುತ್ತದೆ. ಡಾರ್ವಿನ್ ಬಹಳ ಹಿಂದೆಯೇ ತನ್ನ ಲಿಂಗ ಆಯ್ಕೆಯ ಸಿದ್ಧಾಂತ (ಥಿಯರಿ) ದಲ್ಲಿ ಈ ವಿಷಯ ತಿಳಿಸಿದ್ದ. ಹೆಣ್ಣನ್ನು ಒಲಿಸಲು ಗಂಡುಗಳಲ್ಲಿ ಆಗುವಂತಹ ಸ್ಪರ್ಧೆ ಮುಖ್ಯವಾಗಿ ಅವುಗಳ ದೇಹದಲ್ಲಿನ ಬಣ್ಣದ ಆಧಾರದ ಮೇಲೆ ಆಗುತ್ತದೆ ಎಂಬುದು ಅವನ ಅಭಿಪ್ರಾಯ. ಗಂಡು ಹಕ್ಕಿಗಳ ಆಕರ್ಷಕ ಬಣ್ಣದ ಗರಿಗಳು (ಫೆದರ್ಸ್) ಹೆಣ್ಣು ಹಕ್ಕಿಯನ್ನು ಆಕರ್ಷಿಸಲು ತುಂಬಾ ಉಪಯೋಗವಾಗುತ್ತದೆ. ಇವುಗಳೆಲ್ಲವುಗಳ ಅಂತಿಮ ಗುರಿ, ಸಂತಾನೋತ್ಪತ್ತಿ ಮಾಡುವುದು ಮತ್ತು ಇದರಿಂದ ತನ್ನ ಪ್ರಭೇದವನ್ನು ಉಳಿಸಿ ಮುಂದುವರಿಸುವುದು. ಆದ್ದರಿಂದ ಪ್ರಾಣಿಗಳ ವರ್ಣ ವಿನ್ಯಾಸ ಈ ಭೂಮಂಡಲದಲ್ಲಿ ಅವುಗಳ ಉಳಿಯುವಿಕೆಗೆ ಅಗತ್ಯ. (ಕೆ.ಕೆ.ವಿ.)

**ವರ್ಲ್ಡ್ ವೈಲ್ಡ್ ಫಂಡ್ ಫಾರ್ ನೇಚರ್:** ವನ್ಯ ಜೀವಿಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿರುವ ಜಾಗತಿಕ ಮಟ್ಟದ ಸರ್ಕಾರೇತರ ಸಂಸ್ಥೆ. ೧೯೬೧ರ ಸೆಪ್ಟೆಂಬರ್ ೧೧ ರಂದು ಸ್ಥಾಪನೆಯಾಯಿತು. ಬ್ರಿಟಿಷ್ ಜೀವವಿಜ್ಞಾನಿ ಸರ್ ಜೆ. ಹಕ್ಸೆಲಿ ಈ ಸಂಸ್ಥೆಯ ಇತಿಹಾಸದಲ್ಲಿ ಪ್ರಮುಖವ್ಯಕ್ತಿ. ಯುನೆಸ್ಕೋದ ಮೊಟ್ಟಮೊದಲ ಡೈರೆಕ್ಟರ್ ಜನರಲ್ ಆಗಿದ್ದ ಹಕ್ಸೆಲಿ ವೈಜ್ಞಾನಿಕ ಸಂಶೋಧನಾ ಆಧಾರಿತ ವನ್ಯಜೀವಿ ಸಂರಕ್ಷಣೆಗಾಗಿ ಜಾಗತಿಕ ಮಟ್ಟದ (ಇಂದಿನ ಇಂಟರ್‌ನ್ಯಾಶನಲ್ ಯೂನಿಯನ್ ಫಾರ್ ಕನ್‌ಸರ್ವೇಶನ್ ಆಫ್ ನೇಚರ್–ಐಯುಸಿಎನ್) ಸಂಘವನ್ನು ಹುಟ್ಟು ಹಾಕಿದ. ೧೯೬೦ರಲ್ಲಿ ವನ್ಯಜೀವಿ ಸಂರಕ್ಷಣೆಯ ನಿಟ್ಟಿನಲ್ಲಿ ಸಲಹೆಗಳನ್ನು ನೀಡಲು ಈಸ್ಟ್ ಆಫ್ರಿಕಾಗೆ ತೆರಳಿದ್ದ ಹಕ್ಸೆಲಿ ಅಲ್ಲಿಂದ ಮರಳಿ ಬಂದ. ಅನಂತರ ಇಂಗ್ಲೆಂಡಿನ ಜನರನ್ನು ಎಚ್ಚರಿಸುವ ಒಂದು ಲೇಖನವನ್ನು ಅಬ್ಸರ್ವರ್ ವಾರ್ತಾ ಪತ್ರಿಕೆಯಲ್ಲಿ ಬರೆದ. ಅದರಲ್ಲಿ ಆತ ವನ್ಯಜೀವಿಗಳ ಬೇಟೆಯನ್ನು ಈಗಿರುವ ಪ್ರಮಾಣದಲ್ಲಿಯೇ ಮುಂದುವರಿಸಿದರೆ ಇನ್ನು ೨೦ ವರ್ಷಗಳಲ್ಲಿ ವನ್ಯಜೀವಿಗಳೇ ಇಲ್ಲವಾಗುತ್ತದೆ ಎಂದು ಬರೆದ. ಪರಿಣಾಮವಾಗಿ ಸಾವಿರಾರು ಜನ ವನ್ಯಜೀವಿಗಳ ಸಂರಕ್ಷಣೆಯಲ್ಲಿ ಕಾಳಜಿಯನ್ನು ತೋರಿಸಿ ಹಕ್ಸೆಲಿಗೆ ಪತ್ರ ಬರೆದರು. ಅವರಲ್ಲಿ ಹಲವಾರು ವ್ಯಾಪಾರಸ್ಥರು

ಈ ಜೀವಿಗಳ ಸಂರಕ್ಷಣೆಗಾಗಿ ಹಣ ಕೂಡಿಸುವ ಯೋಜನೆಯನ್ನು ಸೂಚಿಸಿದರು. ಇವೆಲ್ಲದರ ಪರಿಣಾಮವಾಗಿ ೧೯೬೧ರಲ್ಲಿ ವಿಜ್ಞಾನಿಗಳು, ಪರಿಸರವಾದಿಗಳು ಹಾಗೂ ಪಕ್ಷಿತಜ್ಞರೂ ಐಯುಸಿಎನ್‌ನೊಂದಿಗೆ ಕೆಲಸ ಮಾಡಲು ನಿರ್ಧರಿಸಿ ಜಿನೀವಾ ಸರೋವರದ ಬಳಿಯ ಕಟ್ಟಡದಲ್ಲಿ ಸಂರಕ್ಷಣೆಯ ನಿಟ್ಟಿನಲ್ಲಿ ಜಾಗತಿಕ ಮಟ್ಟದಲ್ಲಿ ಕೆಲಸಮಾಡಲು ಪ್ರಾರಂಭಿಸಿದರು.

ಇದೇ ಸಮಯದಲ್ಲಿ ಲಂಡನ್ನಿನ ಮೃಗಾಲಯಕ್ಕೆ ಬಂದಿದ್ದ ಜಯಂಟ್ ಪಾಂಡಾ ಕರಡಿ ಜನರ ಗಮನವನ್ನು ತನ್ನೆಡೆಗೆ ಸೆಳೆದಿತ್ತು. ಈ ದೊಡ್ಡ ಕೂದಲಿನ ಮುದ್ದು ಕರಡಿ ಲಾಂಛನವಾಗಿ ಆರಿಸಲಾಯಿತು. ಅಧಿಕೃತವಾಗಿ ೧೯೬೧ರ ಜುಲೈ ೧೧ರಂದು ವರ್ಲ್ಡ್ ವೈಲ್ಡ್ ಲೈಫ್ ಫಂಡ್ (ಡಬ್ಲ್ಯೂಡಬ್ಲ್ಯೂಎಫ್) ನೊಂದಣಿಯಾಯಿತು. ಗೈ ಮೌಂಟ್‌ಫೋರ್ಟ್ ಎಂಬಾತ ಇದರ ಸ್ಥಾಪಕ ಟ್ರಸ್ಟಿ.

ಅನಂತರ ಜಗತ್ತಿನ ವಿವಿಧೆಡೆ ಶಾಖೆಗಳನ್ನು ತೆರೆಯಲಾಯಿತು. ವಿವಿಧ ರಾಷ್ಟ್ರಗಳಿಗೆ ವನ್ಯಜೀವಿಗಳ ಸಂರಕ್ಷಣೆಯ ಅಗತ್ಯವನ್ನು ತಿಳಿಸುವ ಕರೆ ಹೋಯಿತು. ಆರಂಭದಿಂದಲೂ ಅಂತಾರಾಷ್ಟ್ರೀಯ ದೇಣಿಗೆಗಳು ಸಂಘವನ್ನು ಶ್ರೀಮಂತಗೊಳಿಸಿದುವು. ಮುಂದೆ ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (ಡಬ್ಲ್ಯೂ ಎಫ್ ಎನ್) ಎಂದು ಪುನರ್ನಾಮಕರಣ ಮಾಡಲಾಯಿತು.

ಇಂದು ಈ ಸಂಸ್ಥೆ ನೂರಾರು ರಾಷ್ಟ್ರಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದ್ದು ವನ್ಯಜೀವಿ ಅಧ್ಯಯನ, ಸಂಶೋಧನೆ ಪರಿಸರ ಸಂರಕ್ಷಣೆ, ಜೈವಿಕ ವೈವಿಧ್ಯ ದಾಖಲಾತಿ ಹಾಗೂ ಪರಿಸರ ನಾಶದ ವಿರುದ್ಧ ಕರೆ ನೀಡುವ, ಜನರಲ್ಲಿ ತಿಳಿವಳಿಕೆಯನ್ನು ಹೆಚ್ಚಿಸುವ ಕಾರ್ಯ ಮಾಡುತ್ತಿದೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ತನ್ನ ಚಲನಚಿತ್ರಗಳು, ತರಬೇತಿಗಳು, ಹಾಗೂ ಸ್ಪರ್ಧೆಗಳ ಮೂಲಕ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಬಗೆಗಿನ ಅರಿವನ್ನು ಮೂಡಿಸುವತ್ತ ಮಹತ್ತರ ಕೊಡುಗೆಯನ್ನು ನೀಡುತ್ತಿದೆ. ಸಂರಕ್ಷಣೆ ಸಂಬಂಧಿಸಿದ ಯೋಜನೆಗಳಿಗೆ, ಸಂಶೋಧನೆಗಳಿಗೆ ಧನ ಸಹಾಯ ನೀಡುತ್ತದೆ. ಭಾರತದಲ್ಲಿ ಹುಲಿಯೋಜನೆಗೆ ಕೂಡಾ ಸಾಕಷ್ಟು ಧನ ಸಹಾಯ ನೀಡಿದೆ. ಸಂಸ್ಥೆಯ ಪ್ರಯತ್ನದಿಂದಾಗಿ ಅಮೇರಿಕದ ಓರಿಕ್ಸ್, ದೈತ್ಯ ಪಾಂಡಾಗಳನ್ನು ಸಂರಕ್ಷಿಸಲು ಸಾಧ್ಯವಾಗಿದೆ. ಐಯುಸಿಎನ್ ಹಾಗೂ ಯುಎನ್‌ಇಪಿಗಳ ಸಹಭಾಗಿತ್ವದೊಂದಿಗೆ ಜಾಗತಿಕ ಸಂರಕ್ಷಣಾ ತಂತ್ರ (ವರ್ಲ್ಡ್ ಕನ್ಸರ್ವೆಷನ್ ಸ್ಟ್ರಾಟಜಿ)ಯನ್ನು ಪ್ರಕಟಿಸಿದೆ. (ಎಸ್.ಎಂ.ಜಿ.)

**ವಲಯವಂತಗಳು:** ವಿಸ್ತಾರವಾದ ದೇಹಾಂತರಾವಕಾಶ (ಸಿಲೋಮ್) ವುಳ್ಳ, ಉಂಗುರಾಕೃತಿಯ ವಲಯ (ಸೆಗಮೆಂಟ್ಸ್) ರಚನೆ ಹೊಂದಿರುವ ಮೃದು ದೇಹಿ ಅಕಶೇರುಕಗಳ ವಂಶ (ಅನೆಲಿಡಾ). ಇವು ಮಣ್ಣು, ಸಿಹಿನೀರು ಮತ್ತು ಸಮುದ್ರ ನೀರಿನಲ್ಲಿ ಜೀವಿಸುತ್ತವೆ. ಇವುಗಳ ಉಗಮ ಮತ್ತು ವಿಕಾಸ ನೀರಿನಲ್ಲಾಯಿತು. ಅನಂತರ, ಮೊದಲಬಾರಿಗೆ ಯಶಸ್ವಿಯಾಗಿ ನೆಲದಮೇಲೆ ವಾಸಿಸತೊಡಗಿದುವು. ದೇಹದ ಹೊರಭಾಗದಲ್ಲಿ ಒಂದೇ ತೆರನಾದ ವಲಯಗಳ ರಚನೆ ಇದ್ದರೂ ದೇಹದ ಒಳಗೆ ಪ್ರತಿ ವಲಯದಲ್ಲೂ ವ್ಯವಸ್ಥಿತವಾದ ಸಂತಾನೋತ್ಪತ್ತಿ ಅಂಗಗಳು, ವಿಸರ್ಜನಾಂಗ, ಜೀರ್ಣಾಂಗಗಳಿವೆ. ಉದಾ: ಎರೆಹುಳು, ನೀರೀಸ್, ಜಿಗಣೆ ಇತ್ಯಾದಿ. ವಲಯವಂತಗಳಲ್ಲಿ 2/3 ರಷ್ಟು ಭಾಗ (ಸು. 8000 ಪ್ರಭೇದಗಳು) ಸಮುದ್ರವಾಸಿಗಳು. ಇನ್ನುಳಿದುವು (ಸು. 3,100 ಪ್ರಭೇದಗಳು) ತೇವಾಂಶವಿರುವ ಮಣ್ಣಿನಲ್ಲಿ ವಾಸಿಸುತ್ತವೆ.

ವಲಯವಂತಗಳ ಕೆಲವು ಮುಖ್ಯಲಕ್ಷಣಗಳು ಹೀಗಿವೆ;

1) ದ್ವಿಪಾರ್ಶ್ವ ಅಂಗಸೌಷ್ಠವವಿದ್ದು, ದೇಹದ ಒಳಗೂ ಮತ್ತು ಹೊರಗೂ ಖಂಡವಿಂಗಡಣೆ ಇದೆ. ಈ ತರಹದ ಖಂಡವಿಂಗಡಣೆ ಇರುವ ರಚನೆಗೆ ಮೆಟಾಮೆರಿಸಮ್ ಎಂದು ಹೆಸರು.

2) ದೇಹಾಂತರಾವಕಾಶ ಚೆನ್ನಾಗಿ ರೂಪುಗೊಂಡಿದ್ದು, ದ್ರವದಿಂದ ತುಂಬಿದೆ.

3) ಕೊಳವೆಯಂಥ ಆಹಾರನಾಳವಿದೆ. ಅದು ಬಾಯಿಂದ ಆರಂಭವಾಗಿ ಆಸನ ದ್ವಾರದಲ್ಲಿ ಕೊನೆಗೊಳ್ಳುತ್ತದೆ.

4) ಉಸಿರಾಟ ತೇವಾಂಶಯುಕ್ತ ಮೃದು ಚರ್ಮ ಮತ್ತು ಕಿವಿರುಗಳಿಂದ ನಡೆಯುತ್ತದೆ.

5) ರಕ್ತ ಎರಿತ್ರೊಕ್ರುಅರಿನ್ ಮತ್ತು ಕ್ಲೋರೊಕ್ರುಅರಿನ್ ವರ್ಣದ್ರವ್ಯಗಳಿರುವುದರಿಂದ ಕೆಂಪಾಗಿದೆ. ರಕ್ತಕಣಗಳೂ ಇವೆ. ರಕ್ತ ಪರಿಚಲನೆಗೆ ವ್ಯವಸ್ಥಿತವಾದ ಕವಲುಗಳು ಮತ್ತು ಕವಾಟಗಳುಳ್ಳ ರಕ್ತನಾಳಗಳಿವೆ.

6) ನರಮಂಡಲದಲ್ಲಿ ತಲೆಯ ಭಾಗದಲ್ಲಿ ಉಂಗುರುದಂತಹ ರಚನೆಯಿದ್ದು ಅದರಿಂದ ಕೆಳಭಾಗದಲ್ಲಿ ಹೊರಡುವ ಎರಡು ನರಹುರಿಗಳಿವೆ. ಪ್ರತಿಖಂಡದಲ್ಲೂ ಒಂದು ಜೊತೆ ನರಮುಡಿಯಿದೆ (ಅನೆಲಿಡಾ ಮಾದರಿ). ಇದು ವಲಯವಂತಗಳ ವೈಶಿಷ್ಟ್ಯ.

7) ಚೆನ್ನಾಗಿ ರೂಪಿತವಾದ ಇಂದ್ರಿಯಾಂಗ, ಸ್ಪರ್ಶಾಂಗಗಳು, ಸಂತುಲನಾಂಗಗಳು (ಸ್ಟ್ಯಾಟೊಸಿಸ್ಟ್) ದ್ಯುತಿಗ್ರಾಹಕಾಂಗಗಳು, ಮಸೂರವುಳ್ಳ ಕಣ್ಣುಗಳು, ಮುಂತಾದುವು ಇವೆ.

8) ಬಹುತೇಕ ವಲಯವಂತಗಳ ದೇಹದ ಕೆಳಭಾಗದಲ್ಲಿ ಚಲನೆಗೆ ಸಹಾಯಕವಾಗುವ ಬಿರುಗೂದಲುಗಳಿವೆ.

9) ಇವು ಉಭಯಲಿಂಗಿಗಳು ಅಥವಾ ಭಿನ್ನಲಿಂಗಿಗಳು. ಬೆಳವಣಿಗೆಯಲ್ಲಿ ಡಿಂಬದ ಹಂತವಿದ್ದು ಅದು ರೂಪಪರಿವರ್ತನೆ ಹೊಂದುತ್ತದೆ. ಕಡಲವಾಸಿಗಳಲ್ಲಿ (ಉದಾ: ನೀರೀಸ್) ಟ್ರೋಕೋಫೋರ್ ಹಂತವಿದೆ. ಕೆಲವು ವಲಯವಂತಗಳಲ್ಲಿ ಬೆಳವಣಿಗೆ ನೇರ.

10) ಲೈಂಗಿಕ ಮತ್ತು ಅಲೈಂಗಿಕ ಮಾದರಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ವಲಯವಂತಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ:

ವರ್ಗ 1: ಕೀಟೋಪೋಡ: ಪ್ಯಾರಾಪೋಡಿಯಾ (ಬಿರುಗೂದಲುಳ್ಳ ಪಾದ)ಗಳಿವೆ. ದೇಹಾಂತರಾವಕಾಶ ವ್ಯಾಪಕವಾಗಿದೆ. ಇದರಲ್ಲಿ ಎರಡು ಉಪವರ್ಗಗಳಿವೆ; ಉಪವರ್ಗ 1 – ಪಾಲಿಕೀಟ: ಇವು ಏಕಲಿಂಗಿ ಸಮುದ್ರ ಜೀವಿಗಳು. ಕಣ್ಣು, ನರಗ್ರಂಥಿಗಳಿರುವ ಸ್ಪಷ್ಟವಾದ ತಲೆ ಇದೆ. ಬೆಳವಣಿಗೆಯಲ್ಲಿ ಟ್ರೋಕೊಫೋರ್ ಡಿಂಬದ ಹಂತವಿದೆ. ಉದಾ: ನೀರೀಸ್.

ಉಪವರ್ಗ: ಆಲಿಗೋಕೀಟ – ಪ್ಯಾರಪೋಡಿಯಗಳಲ್ಲಿ ಬಿರುಗೂದಲುಗಳು ದೇಹಭಿತ್ತಿಯಲ್ಲಿ ಹುದುಗಿವೆ. ನಿರ್ದಿಷ್ಟವಾದ ತಲೆ ಇಲ್ಲ. ಇವು ಉಭಯಲಿಂಗಿಗಳು. ಡಿಂಬಾವಸ್ಥೆ ಇಲ್ಲ. ಖಂಡಗಳು 7 – 900 ರವರೆಗೆ ಇರುತ್ತವೆ. ಉದಾ: ಎರೆಹುಳ.

ವರ್ಗ 2: ಹಿರುಡೀನಿಯ: ಪರತಂತ್ರ ಜೀವಿಗಳು. ಬಿರುಗೂದಲುಗಳಿಲ್ಲ. ಹೀರುತಟ್ಟೆಗಳಿಂದ ಇವುಗಳ ಚಲನೆ. ಸಂಯೋಜಕ ಅಂಗಾಂಶ ಮತ್ತು ಮಾಂಸಖಂಡಗಳು ವಿಸ್ತಾರವಾಗಿ ಬೆಳೆದು ದೇಹಾವಕಾಶ ಕಡಿಮೆ ಇದೆ. ಇವು ಉಭಯಲಿಂಗಿಗಳು. ಡಿಂಬಾವಸ್ಥೆ ಇಲ್ಲ. ಉದಾ: ಜಿಗಣೆಗಳು.

ವರ್ಗ 3: ಆರ್ಕಿಅನ್ನೆಲಿಡ: ದೇಹದ ಹೊರಭಾಗದಲ್ಲಿ ಖಂಡ ವಿಂಗಡಣೆ ಕಾಣುವುದಿಲ್ಲ. ಇದು ಒಳಗಿನ ಲಿಂಗಾಂಗಗಳ ವ್ಯವಸ್ಥೆಗೆ ಮಾತ್ರ ಮೀಸಲಾಗಿದೆ. ಬಿರುಗೂದಲುಗಳಿಲ್ಲ. ಭಿನ್ನ ಲಿಂಗಿಗಳು. ಬೆಳವಣಿಗೆಯಲ್ಲಿ ಟ್ರೋಕೊಫೋರ್ ಡಿಂಬದ ಹಂತವಿದೆ. ಉದಾ: ಪಾಲಿಗಾರ್ಡಿಯಸ್.

ವಲಯವಂತಗಳಲ್ಲಿ ಕೆಲವು ಪ್ರಾಣಿಗಳು ತುಂಬ ಉಪಕಾರಿಯಾಗಿವೆ. ಎರೆಹುಳುಗಳು ವಿಸರ್ಜಿಸುವ ಹಿಕ್ಕೆ (ಎರೆಗೊಬ್ಬರ) ಕೃಷಿಯಲ್ಲಿ ಬಹು ಉಪಯೋಗಿ. ಎರೆಹುಳುಗಳ ಚಟುವಟಿಕೆಯಿಂದ ಭೂಮಿ ಸಡಿಲವಾಗಿ, ಗಾಳಿ, ನೀರು ಚೆನ್ನಾಗಿ ಪ್ರವೇಶಿಸಿ ಮಣ್ಣಿನ ಫಲವತ್ತತೆ ವೃದ್ಧಿಸುತ್ತದೆ. ಜಿಗಣೆಗಳನ್ನು ಗಂತಿ ಕಾಯಿಲೆಯನ್ನು ಗುಣಪಡಿಸುವ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ. ವಿಷದ ಹಾವು ಕಡಿದಾಗ ಆ ಭಾಗದಲ್ಲಿ ಜಿಗಣೆಯನ್ನಿಟ್ಟು ರಕ್ತ ಹೋಗದಂತೆ ತಡೆಗಟ್ಟಿ ವಿಷವೇರುವುದನ್ನು ನಿಲ್ಲಿಸಬಹುದು. (ಕೆ.ಎಸ್.ಡಿ.)

**ವಿಕಾಸವಾದ:** ಜಗತ್ತಿನ ಮತ್ತು ಜೀವಗಳ ಹುಟ್ಟು, ಬೆಳವಣಿಗೆ ಮತ್ತು ಅಂತಿಮ ಸ್ಥಿತಿಯನ್ನು ಕುರಿತ ವಾದ (ಎವಲ್ಯೂಷನ್ ಥಿಯರಿ). ಇದರಲ್ಲಿ ಪ್ರಸಿದ್ಧವಾದುದು ಡಾರ್ವಿನ್‌ನ ಜೀವಿ ವಿಕಾಸವಾದ. ಬಲಿಷ್ಠವಾದುದು ಮಾತ್ರ ಉಳಿಯುತ್ತದೆ; ಉಳಿದುದೆಲ್ಲವೂ ನಿರ್ನಾಮವಾಗುತ್ತದೆ ಎಂಬುದು ಇವನ ವಾದ.

**ವಿಕೃತಿಗಳು:** ಆನುವಂಶೀಯ ಗುಣಗಳನ್ನು ನಿರ್ಧರಿಸುವ ಜೀನ್‌ಗಳ ಮಾರ್ಪಾಡಾಗುವಿಕೆ (ಮುಟೇಷನ್). ಜೀವಿಯ ಪ್ರತಿರೂಪದಲ್ಲಿ ಮಾರ್ಪಾಡಾಗುವುದು ವಿಕೃತಿಯ ನೇರ ಪರಿಣಾಮ. ಜೀವಿಗಳಲ್ಲಿ ವೈವಿಧ್ಯವುಂಟಾಗುವುದಕ್ಕೆ ವಿಕೃತಿಯೂ ಒಂದು ಕಾರಣ. ಹ್ಯೂಗೋ ಡಿ ವ್ರೀಸ್ (1901) ಎಂಬ ವಿಜ್ಞಾನಿ ಈನೋಥೆರಾ ಲಮಾರ್ಕಿಯಾನ ಅಥವಾ ಸಂಜೆಮಲ್ಲಿಗೆ ಸಸ್ಯದಲ್ಲಿ ಕಾಣ ಸಿಗುವಂತಹ ವಿವಿಧತೆಗಳನ್ನು ಕೂಲಂಕಷವಾಗಿ ಅಭ್ಯಸಿಸಿ, ಮೊಟ್ಟ ಮೊದಲಿಗೆ ವಂಶಪಾರಂಪರ್ಯವಾಗಿ ವರ್ಗವಾಗುವ ಇಂತಹ ವಿವಿಧತೆಗಳಿಗೆ ವಿಕೃತಿಗಳು ಎಂದು ಹೆಸರಿಸಿದನು. ಆದರೆ ವಿಕೃತಿಯ ಇತಿಹಾಸವು ಬಹಳ ವರ್ಷಗಳ ಹಿಂದೆಯೇ ಅಂದರೆ 1969 ರಲ್ಲಿ ಸೆತ್ ರೈಟ್ ಎಂಬಾತನಿಂದ ಪ್ರಾರಂಭವಾಯಿತು. ಆತ ತನ್ನ ಕುರಿಮಂದೆಯಲ್ಲಿ ಹೊಸದಾಗಿ ಹುಟ್ಟಿದ ಸಣ್ಣ ಕಾಲಿನ ಕುರಿಯನ್ನು ಗುರುತಿಸಿ, ಆ ತಳಿಗೆ 'ಆಂಕಾನ್' ತಳಿ ಎಂದು ಕರೆದರು. ಚಾರ್ಲಸ್ ಡಾರ್ವಿನ್ ಇಂಥ ವೈವಿಧ್ಯಗಳನ್ನು ಸ್ಪೋರ್ಟ್ಸ್ ಎಂದು ಕರೆದನು. ವಿಕೃತಿಗಳ ಬಗ್ಗೆ ವೈಜ್ಞಾನಿಕ ಮಾಹಿತಿ ದೊರೆತ್ತಿದ್ದು 1910 ರ ನಂತರ, 'ಡ್ರೊಸೋಫಿಲಾ' ಎಂಬ ನೊಣಗಳ ಮೇಲಿನ ಟಿ. ಎಚ್. ಮಾರ್ಗನ್‌ರ್ ಅಭ್ಯಾಸದಿಂದ ಬಂದುದು. ಇದೇ ರೀತಿ, ಬೀಜವಿಲ್ಲದ ದ್ರಾಕ್ಷಿ, ಬೀಜವಿಲ್ಲದ ಪರಂಗಿ, ಕೊಂಬಿಲ್ಲದ ದನ ಮುಂತಾದ ನಾನಾ ಬಗೆಯ ವಿವಿಧತೆಗಳನ್ನು ಪರಿಸರದಲ್ಲಿ ಕಂಡುಕೊಳ್ಳಲಾಯಿತು. ಇಂತಹ ತನ್ನಷ್ಟಕ್ಕೆ ತಾನೇ ಕಾಣಸಿಗುವ ವಿಕೃತಿಗಳಿಗೆ ಸ್ವಾಭಾವಿಕ ವಿಕೃತಿಗಳು ಎಂದು ಕರೆಯಲಾಯಿತು. ಈ ವಿಕೃತಿಗಳು ಜೀವಿಗೆ ಲಾಭದಾಯಕವಾಗಿರಬಹುದು ಅಥವಾ ಅಪಾಯಕಾರಿಯೂ ಆಗಿರಬಹುದು.

ಮೋರ್ಗನ್‌ನ ಶಿಷ್ಯ ಹೆಚ್. ಜೆ. ಮುಲ್ಲರ್ 1920 ನೇ ಇಸವಿಯಲ್ಲಿ, ಡ್ರೋಸೋಫಿಲಾಗಳ ಮೇಲೆ ಅಯನೀಕರಣಗೊಳಿಸುವ ವಿಕಿರಣಗಳನ್ನು ಪ್ರಯೋಗಿಸಿ ಕೃತಕವಾಗಿ ವಿಕೃತಿಗಳನ್ನು (ಕೃತಕ ವಿಕೃತಿಗಳು ಅಥವಾ ಇಂಡ್ಯೂಸ್ಡ್ ಮ್ಯುಟೇಷನ್ಸ್) ಸೃಷ್ಟಿಸಿದನು. ಇದಲ್ಲದೇ ಇವರು ಡ್ರೊಸೋಫಿಲಾದಲ್ಲಿ ಎಷ್ಟರ ಮಟ್ಟಿಗೆ ವಿಕೃತಿಗಳು ಉದ್ಭವವಾಗುತ್ತವೆ ಎಂಬುದನ್ನು ಸಿ ಎಲ್ ಬಿ (ಕ್ರಾಸ್ ಓವರ್ ಸಪ್ರೆಸರ್, ಲೀತಲ್, ಬಾರ್) ಎಂಬ ತಾಂತ್ರಿಕ ಪ್ರಯೋಗಗಳ ಮೂಲಕ ತೋರಿಸಿಕೊಟ್ಟರು. ಇವರ ಪ್ರಕಾರ, ಡ್ರೊಸೋಫಿಲಾದ ಯಾವುದೇ ಜೀನ್ ಒಂದು ಮಿಲಿಯನ್ ಜೀವಕೋಶಗಳಲ್ಲಿ ಒಂದು ಅಥವಾ 40000 ವರ್ಷಗಳಿಗೊಮ್ಮೆ ವಿಕೃತವಾಗುವ ಸಾಧ್ಯತೆಯಿದೆ. ಇಂತಹ ಪ್ರಯೋಗಗಳು ಜೋಳ, ಟೊಮ್ಯಾಟೋ ಮುಂತಾದ ಸಸ್ಯಗಳ ಮೇಲೂ ನಡೆದುವು. ಹಾಲ್ಡೇನ್ ಎಂಬ ವಿಜ್ಞಾನಿಯ ಪ್ರಕಾರ ಮಾನವನ ಜೀನ್ ಡ್ರೊಸೋಫಿಲಾದುವುಗಳಿಗಿಂತ ಸ್ಥಿರವಾದುವುಗಳಾಗಿರುವುದರಿಂದ ಅವುಗಳಲ್ಲಿನ ವಿಕೃತಿಗಳ ದರ ಬಹಳ ಕಡಿಮೆ. ಮಾನವನ ಜೀನ್ ಸು. 250000 ವರ್ಷಗಳವರೆಗೆ ಬದಲಾಗದೆ ಸ್ಥಿರವಾಗಿರುತ್ತದೆ. ಇವರು ಆಸ್ಪತ್ರೆಗಳಲ್ಲಿನ ದಾಖಲೆಗಳಿಂದ, ಚಿಕ್ಕ ಮಕ್ಕಳಲ್ಲಿನ ವಿಕಲ್ಪಗಳಾದ 'ಕಾಂಡ್ರೋ ಡಿಸ್ಟ್ರೋಫಿಕ್ ಡ್ವಾರ್ಫ್ಸ್' ಎಂಬ ನ್ಯೂನ್ಯತೆಯನ್ನು ಅಭ್ಯಸಿಸಿ ಈ ವಿಷಯವನ್ನು ತಿಳಿಯಪಡಿಸಿದ್ದಾರೆ. ವಿಕೃತಿಗಳು, ಉಷ್ಣತೆ ಹಾಗೂ ಜೀವಿಯ ವಯಸ್ಸಿನ ಮೇಲೆ ಅವಲಂಬಿತವಾಗಿದೆ. ಅಲ್ಲದೆ ಬೇರೆ ಬೇರೆ ಜೀನ್‌ಗಳಲ್ಲಿ ವಿಕೃತಿಗಳ ದರ ಬೇರೆ ಬೇರೆಯಾಗಿರುತ್ತದೆ.

ಇಪ್ಪತ್ತು ವರ್ಷಗಳ ನಂತರ ಆರ್‌ಬಾಕ್ ಮತ್ತು ರೋಬ್‌ಸ್‌ನ್‌ರವರು ರಾಸಾಯನಿಕಗಳನ್ನು ಉಪಯೋಗಿಸಿ ವಂಶವಾಹಕಗಳಲ್ಲಿ ಇಂತಹ ವಿಕೃತಿಗಳನ್ನು ಅಭ್ಯಸಿಸಿದ್ದಾರೆ. ಈ ಸಂಶೋಧನೆಗಳು ಬಹು ಮುಖ್ಯವಾಗಿದ್ದು, ವಿಕಿರಣ ತಳಿವಿಜ್ಞಾನ (ರೇಡಿಯೇಷನ್ ಜೆನೆಟಿಕ್ಸ್) ಮತ್ತು ರಾಸಾಯನಿಕ ವಿಕೃತಿ ಜನನ (ಕೆಮಿಕಲ್ ಮ್ಯುಟಾಜೆನೆಸಿಸ್) ಎಂಬ ಹೊಸ ವಿಭಾಗಗಳೇ ಉದಯವಾದುವು. ಈ ರೀತಿಯ ಸಂಶೋಧನೆಗಳಿಗೆ ಎರಡನೇ ಮಹಾಯುದ್ಧದ ಕಾಲದಲ್ಲಿ ಬಹಳ ಪ್ರಾಮುಖ್ಯ ದೊರೆಯಿತು. ಇದರಿಂದಾಗಿ ಹೆಚ್ಚು ಹೆಚ್ಚು ರಾಸಾಯನಿಕಗಳ ಪರೀಕ್ಷೆಗಳು ನಡೆದು, ಅವುಗಳಲ್ಲಿರುವ ಡಿಎನ್‌ಎಯಲ್ಲಿ ವಿಕೃತಿಗಳನ್ನುಂಟುಮಾಡುವ ಗುಣಗಳನ್ನು ಕಂಡುಹಿಡಿಯಲಾಯಿತು. ಇಂತಹ ರಾಸಾಯನಿಕ ವಸ್ತುಗಳು ಪರಿಸರದಲ್ಲಿ ಬಹಳಕಾಲ ಅಳಿಯದೇ ಉಳಿದರೆ, ಇವುಗಳ ದುಷ್ಪರಿಣಾಮ ಜೀವಿಗಳ ಮೇಲೆ ಆಗುತ್ತದೆ. ಇವು ಕೆಲವು, ಜಾತಿಯ ಜೀವಿಗಳ ವಿನಾಶಕ್ಕೂ ಕಾರಣವಾಗುವಂತಹು ಎಂಬುದು ಈಗ ಸ್ಪಷ್ಟವಾಗಿದೆ. ಜೀವಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುವ ಪರಿಸರದಲ್ಲಿರುವ ಇಂತಹ ವಿಕೃತಿಕಾರಕಗಳನ್ನು ಗುರುತಿಸಿ, ಅವುಗಳ ಮೇಲಿನ ಸಂಶೋಧನೆಗೆ ಈಗ ಬಹಳ ಒತ್ತು ಕೊಡಲಾಗುತ್ತಿದೆ.

ವಿಕೃತಿಗಳ ಆವಿಷ್ಕಾರವಾಗಿ ಒಂದು ಶತಮಾನ ಕಳೆದಿದೆ. ಇಡೀ ಶತಮಾನದಲ್ಲಿ ತಳಿ ವಿಜ್ಞಾನಿಗಳು ನಡೆಸಿದ ವಿವಿಧ ಸಂಶೋಧನೆಗಳು ವಿಕೃತಿಗಳ ಬಗೆಗೆ ಹಲವು ಮಾಹಿತಿಗಳನ್ನು ನೀಡಿದುವು. ಜೀವಿಯೊಂದು ವಿಕೃತಿಗೊಂಡರೆ ಅದು ವಿಕಾರ ರೂಪ ಪಡೆಯಬಹುದು, ಅಥವಾ ಅದರ ಚಯಾಪಚಯಕ್ರಿಯೆಯಲ್ಲಿ ಬದಲಾವಣೆಯುಂಟಾಗಬಹುದು. ಕೆಲವು ವಿಕೃತಿಗಳು ಉಪಯುಕ್ತವಾಗಬಹುದು. ಇನ್ನು ಕೆಲವು ಮಾರಕ ವಿಕೃತಿಗಳಾಗಬಹುದು. ವಿಕೃತಿಗಳನ್ನು ಆಯಾ ಜೀನ್‌ಗಳನ್ನು ಅವಲಂಬಿಸಿ ಲಿಂಗ ಸಂಲಗ್ನ (ಸೆಕ್ಸ್ ಲಿಂಕ್ಡ್) ಹಾಗೂ ಕಾಯ ಸಂಲಗ್ನ (ಆಟೋಸೋಮಲ್) ವಿಕೃತಿಗಳೆಂದು ವಿಂಗಡಿಸುತ್ತಾರೆ. ಲಿಂಗ ಸಂಲಗ್ನ ವಿಕೃತಿಗಳು, ಲಿಂಗ ವರ್ಣ ತಂತುಗಳಲ್ಲಿರುವ ಜೀನ್ ವಿಕೃತಿಗಳು, ಕಾಯ ವರ್ಣತಂತುಗಳ ಮೇಲಿನ ಜೀನ್ ವಿಕೃತಿಗೊಂಡರೆ ಅವು ಕಾಯ ಸಂಲಗ್ನ ವಿಕೃತಿಗಳು.

ಸಾಮಾನ್ಯವಾಗಿ ಪ್ರಬಲ ಗುಣಗಳು ಕಾಡು ಮಾದರಿಗಳು (ವೈಲ್ಡ್‌ಟೈಪ್). ಆದರೆ ಇದು ನಿಯಮವೇನಲ್ಲ. ಕೆಲವು ಜೀನ್‌ಗಳ ಕಾಡು ಮಾದರಿಗಳು ದುರ್ಬಲವಾಗಿರುತ್ತವೆ. ಪ್ರಬಲವಾಗಿರುವ ಕಾಡು ಮಾದರಿಯ ಗುಣ ವಿಕೃತಿಗೊಂಡು ದುರ್ಬಲವಾಗಬಹುದು. ಕಾಡು ಮಾದರಿಯಗುಣವೇ ದುರ್ಬಲವಾಗಿದ್ದರೆ ವಿಕೃತಿಯಿಂದ ಅದು ಪ್ರಬಲವಾಗಬಹುದು. ಜೀನ್‌ಗಳು ಹೀಗೆ ವಿಕೃತಿಗೊಂಡಾಗ ವಿವಿಧ ಅಲೀಲ್‌ಗಳು ಸೃಷ್ಟಿಯಾಗುತ್ತವೆ. ಕಾಡು ಮಾದರಿಯೊಂದು ನೈಸರ್ಗಿಕವಾಗಿ ವಿಕೃತಿಗೊಂಡರೆ ಅದನ್ನು ಮುಮ್ಮುಖ ವಿಕೃತಿ ಎನ್ನುತ್ತೇವೆ. ಎಷ್ಟೋ ಮುಮ್ಮುಖ ವಿಕೃತಿಗಳು ನಿಸರ್ಗದಲ್ಲಿ ಆಗಾಗ ಉದಯಿಸುತ್ತಲೇ ಇರುತ್ತವೆ. ಉದಾಹರಣೆಗೆ ಡ್ರೊಸಾಫಿಲಾ ನೊಣದಲ್ಲಿ ಕಣ್ಣಿನ ಬಣ್ಣ ಕೆಂಪು. ಆದರೆ ಕಣ್ಣಿನ ಬಣ್ಣದ ಜೀನ್ ವಿಕೃತಗೊಂಡು ಬಿಳಿ ಅಥವಾ ಕಂದು ಬಣ್ಣವನ್ನು ಪಡೆಯಬಹುದು.

ಒಮ್ಮೆ ವಿಕೃತಗೊಂಡು ಜೀನ್ ಮರಳಿ ಕಾಡು ಮಾದರಿಯಾಗಿ ಬದಲಾವಣೆ ಹೊಂದುವ ಸಾಧ್ಯತೆಯೂ ಇದೆ. ಇಂಥ ವಿಕೃತಿಗಳನ್ನು ತಿರು ವಿಕೃತಿ ಅಥವಾ ಹಿಮ್ಮುಖ ವಿಕೃತಿ ಎಂದು ಕರೆಯುತ್ತಾರೆ. ನೈಸರ್ಗಿಕವಾಗಿ ಒಂದು ಜೀನ್ ವಿಕೃತಗೊಳ್ಳಲು ತೆಗೆದುಕೊಳ್ಳುವ ಕಾಲ ಅಥವಾ ಜೀವಿಗಳ ಸಮೂಹವೊಂದರಲ್ಲಿ ವಿಕೃತಿಗಳ ಪ್ರಮಾಣವನ್ನು ವಿಕೃತಿ ದರ ಎನ್ನುತ್ತಾರೆ. ಕೆಲವು ರಾಸಾಯನಿಕ ವಸ್ತುಗಳಿಂದ ವಿಕಿರಣಗಳಿಂದ ವಿಕೃತಿಗಳುದ್ಭವಿಸುವುದಾದರೂ, ಸಾಮಾನ್ಯ ವಾತಾವರಣದಲ್ಲಿ ಉದ್ಭವಿಸುವ ನೈಸರ್ಗಿಕ ವಿಕೃತಿಗಳಿಗೆ ಮಾತ್ರ ದರವನ್ನು ನಿಶ್ಚಯಿಸುತ್ತಾರೆ. ಉದಾಹರಣೆಗೆ, ಡ್ರೊಸಾಫಿಲಾ ನೊಣಗಳಲ್ಲಿ ಲಿಂಗ ಸಂಲಗ್ನ ಮಾರಕ ವಿಕೃತಿಗಳ ದರ ಶೇ. 0.1 ಎಂದು ನಿರ್ಧರಿಸಲಾಗಿದೆ. ಅಂದರೆ ಒಂದು ಸಾವಿರ ಲಿಂಗಾಣುಗಳು ಉದ್ಭವಿಸಿದರೆ ಅದರಲ್ಲಿ ಒಂದು ಲಿಂಗ ಸಂಲಗ್ನ ಮಾರಕ ವಿಕೃತಿಯನ್ನು ಹೊಂದಿರುತ್ತದೆ ಎಂದು ಅರ್ಥ. ವಿವಿಧ ಜೀನ್‌ಗಳ ವಿಕೃತಿ ದರ ಭಿನ್ನವಾಗಿರುತ್ತದೆ. ಹಾಗೆಯೇ ವಿವಿಧ ಪ್ರಭೇದಗಳಿಗೂ ವಿಕೃತಿಯ ದರದ ವ್ಯತ್ಯಾಸವಿದೆ.

ಮಾನವನಲ್ಲಿ ವಿಕೃತಿಗಳನ್ನು ಗುರುತಿಸುವುದಾಗಲಿ ಅಥವಾ ವಿಕೃತಿ ದರವನ್ನು ನಿಶ್ಚಯಿಸುವುದಾಗಲಿ ಅಷ್ಟು ಸುಲಭವಲ್ಲ. ಕೇವಲ ನೈಸರ್ಗಿಕವಾಗಿ ಉದ್ಭವಿಸುವ ಅದರಲ್ಲಿಯೂ ಹೊರ ರಚನೆಯಲ್ಲಿ ಮಾರ್ಪಾಡು ಉಂಟು ಮಾಡುವಂಥ ವಿಕೃತಿಗಳನ್ನು ಮಾತ್ರ ಗುರುತಿಸಬಹುದು. ಹಾಗೂ ಅವುಗಳ ದರವನ್ನು ನಿಶ್ಚಯಿಸಬಹುದು. ಉಳಿದುವುಗಳನ್ನು ಆಯಾ ವ್ಯಕ್ತಿಯ ವಂಶಾವಳಿಯನ್ನು ಅಭ್ಯಸಿಸಿ $U = 1/n \times X/N$ ಎಂಬ ಸೂತ್ರವನ್ನು ಉಪಯೋಗಿಸಿಕೊಂಡು ಕಂಡು ಹಿಡಿಯುತ್ತಾರೆ. ಈ ಸೂತ್ರದಲ್ಲಿ $U$ ಎಂದರೆ ವಿಕೃತಿಯ ದರ, $X$ ಎಂದರೆ ನಿರ್ದಿಷ್ಟ ಕಾಲದಲ್ಲಿ ಜನಿಸುವ ಎಲ್ಲಾ ಮಕ್ಕಳಲ್ಲಿ ವಿಕೃತಿಯಿರುವವರ ಸಂಖ್ಯೆ, $N$ ಎಂದರೆ ಜನಿಸಿದ ಒಟ್ಟು ಮಕ್ಕಳ ಸಂಖ್ಯೆ, $n$ ಎಂದರೆ ಆಯಾ ಪ್ರಭೇದದಲ್ಲಿರುವ ವರ್ಣ ತಂತುಗಳ ಪ್ರತಿಗಳ ಸಂಖ್ಯೆ.

ಆಸ್ಪತ್ರೆಯೊಂದರಲ್ಲಿ ಒಂದು ವಾರ ಒಂದು ಸಾವಿರ ಮಕ್ಕಳು ಜನಿಸಿವೆ ಎಂದಿಟ್ಟುಕೊಳ್ಳೋಣ. ಅವುಗಳಲ್ಲಿ ಒಂದು ಮಗುವಿನಲ್ಲಿ ವಿಕೃತಿಯಿದ್ದರೆ $X = 1$, $N = 1000$. ಮಾನವನಲ್ಲಿ ವರ್ಣತಂತುಗಳು ದ್ವಿಪ್ರತಿಯಲ್ಲಿರುತ್ತವೆ. ಅಂದರೆ $n = 2$. ಈ ಸಂಖ್ಯೆಗಳನ್ನು ಸೂತ್ರದ ರೂಪದಲ್ಲಿ ಅಳವಡಿಸಿದರೆ $U = 1/2 \times 1/1000$ ಅಥವಾ $U = 1/2000$ ಎಂದಾಯಿತು. ಇದು 0.0005 ಗೆ ಸಮ. ಅಂದರೆ ಆ ಜೀನ್ ವಿಕೃತಿಗೊಳ್ಳಲು 2000 ಸಂತಾನಗಳು ಕಳೆಯಬೇಕು ಎಂದರ್ಥ.

ನೀಲ್ ಮತ್ತು ಫಾಲ್ಸ್ ಎಂಬುವವರು ಇದೇ ಸೂತ್ರವನ್ನು ಬಳಸಿ ರೆಟಿನೋಬ್ಲಾಸ್ಟೋಮ ಎಂಬ ಜೀನ್‌ನ ವಿಕೃತಿಯ ದರವನ್ನು ಕಂಡುಹಿಡಿದರು. ಈ ಜೀನ್ ಇರುವ ವ್ಯಕ್ತಿಗಳಲ್ಲಿ ಕಣ್ಣು ಗುಡ್ಡೆಯ ಮೇಲೆ ಕ್ಯಾನ್ಸರ್ ಬೆಳೆದು ದೃಷ್ಟಿ ಹಾಳಾಗುತ್ತದೆ. 1950ರ ದಶಕದಲ್ಲಿ ಅಮೆರಿಕದ ಮಿಚಿಗನ್ ನಗರದ ಆಸ್ಪತ್ರೆಯಲ್ಲಿ ಜನಿಸಿದ 10,54,948 ಮಕ್ಕಳ ಪೈಕಿ 49 ಶಿಶುಗಳಲ್ಲಿ ಈ ವಿಕೃತಿ ಕಂಡು ಬಂದಿತ್ತು. ಈ ಸೂತ್ರವನ್ನು ಬಳಸಿದರೆ $U = 1/2 \times 49/10,54,948$ ಅಥವಾ ರೆಟಿನೋಬ್ಲಾಸ್ಟೋಮದ ವಿಕೃತಿ ದರ 0.000023. ಇದೇ ಸೂತ್ರವನ್ನಾಧರಿಸಿ ಎಲ್ಲಾ ಜೀವಿಗಳಲ್ಲೂ ವಿಕೃತಿಗಳ ದರವನ್ನು ನಿಶ್ಚಯಿಸಬಹುದು.

ವಿಕೃತಿಗಳ ದರ ಹೆಚ್ಚಾದರೆ ಅದು ಆ ಜೀವಿಯ ವಿಕಾಸಕ್ಕೆ ಪ್ರತಿಕೂಲವಾಗುತ್ತದೆ. ಏಕೆಂದರೆ ಹಲವು ವಿಕೃತಿಗಳು ಮಾರಕ ವಿಕೃತಿಗಳು. ಅಂತೆಯೇ ವಿಕೃತಿಗಳ ದರ ತುಂಬಾ ಕಡಿಮೆಯಾದರೂ ವಿಕಾಸದ ದೃಷ್ಟಿಯಿಂದ ಅಹಿತವೇ! ವಿಕೃತಿಗಳು ಜೀವಿಗಳಲ್ಲಿ ವೈವಿಧ್ಯವುಂಟುಮಾಡುತ್ತವೆ. ನೈಸರ್ಗಿಕವಾಗಿ ಉದ್ಭವಿಸುವ ವಿಕೃತಿಗಳ ಸಂಖ್ಯೆ ಕಡಿಮೆಯಾದರೆ ವೈವಿಧ್ಯಗಳೂ ಕಡಿಮೆಯಾಗುತ್ತವೆ. ವೈವಿಧ್ಯ ನಿಸರ್ಗದಲ್ಲಿ ವಿಕಾಸಕ್ಕೆ ಕಚ್ಚಾವಸ್ತುಗಳಿದ್ದಂತೆ. ವೈವಿಧ್ಯವಿಲ್ಲದ ಜೀವ ಪ್ರಪಂಚದಲ್ಲಿ ನಿಸರ್ಗದ ಆಯ್ಕೆಗೆ ಕಚ್ಚಾ ಸಾಮಗ್ರಿ ಕೊರತೆಯುಂಟಾಗುತ್ತದೆ. ವಾತಾವರಣದಲ್ಲಿ ಏರುಪೇರುಗಳಾದಾಗ ಹೊಂದಿಕೊಳ್ಳಲಾರದೆ ಹಲವು ಪ್ರಭೇದಗಳು ನಶಿಸುತ್ತವೆ. ವೈವಿಧ್ಯಗಳು ಸಾಕಷ್ಟು ಪ್ರಮಾಣದಲ್ಲಿದ್ದರೆ ಇಂಥ ಏರುಪೇರುಗಳನ್ನು ಕೆಲವು ಜೀವಿಗಳಾದರೂ ತಡೆದುಕೊಂಡು ತನ್ಮೂಲಕ ಆ ಪ್ರಭೇದ ನಿಸರ್ಗದ ಆಯ್ಕೆಯಲ್ಲಿ ಜಯಗಳಿಸಿ ಬದುಕುಳಿಯುತ್ತದೆ.

ಜೀನ್ ಎಂದರೆ ಡಿಎನ್‌ಎ ಜೀನ್ ವಿಕೃತಿಗೊಳ್ಳುವುದು ಎಂದರೆ ಡಿಎನ್‌ಎ ಮಾರ್ಪಾಡಾಗುವುದು ಡಿಎನ್‌ಎ ಹೇಗೆ ಮಾರ್ಪಾಡಾಗುತ್ತದೆ ಎಂಬ ಪ್ರಶ್ನೆಗೆ ಉತ್ತರವನ್ನು ವ್ಯಾಟ್ಸನ್, ಕ್ರಿಕ್ ಮತ್ತು ವಿಲ್ಕಿನ್ಸ್‌ರೇ ನೀಡಿದ್ದಾರೆ. ಡಿಎನ್‌ಎ ವಿಭಜನೆಯಾಗುವಾಗ ಅಪರೂಪಕ್ಕೊಮ್ಮೆ ಕ್ಷಾರವನ್ನು ನಡುವೆ ಜಲಜನಕ ಬಂಧವಾಗುವಾಗ ಉಂಟಾಗುವ ವ್ಯತ್ಯಾಸಗಳಿಂದ ವಿಕೃತಿಗಳುಂಟಾಗುತ್ತವೆ. ಅಣುವಿಕ ಮಟ್ಟದಲ್ಲಿ ವಿಕೃತಿ ಎಂದರೆ ಡಿಎನ್‌ಎಯ ಕ್ಷಾರಸರಣಿಯಲ್ಲಿ ಉಂಟಾಗುವ ಬದಲಾವಣೆಗಳು. ಒಮ್ಮೆ ಕ್ಷಾರ ಸರಣಿಯಲ್ಲಿ ಬದಲಾವಣೆಯಾಯಿತೆಂದರೆ ಮುಂದೆ ಅದು ಅವ್ಯಾಹತವಾಗಿ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತದೆ.

ಡಿಎನ್‌ಎಯಲ್ಲಿ ಆಗುವ ಬದಲಾವಣೆಯ ಸ್ವರೂಪವನ್ನು ಅವಲಂಬಿಸಿ ವಿಕೃತಿಗಳನ್ನು ವರ್ಗೀಕರಿಸಬಹುದು. ಇದರಲ್ಲಿ ಎರಡು ವಿಧಗಳಿವೆ. ಮೊದಲನೆಯದು ಕ್ಷಾರ ಬದಲಾವಣೆ (ಬೇಸ್ ಸಬ್‌ಸ್ಟಿಟ್ಯೂಷನ್). ಈ ವಿಕೃತಿಗಳಲ್ಲಿ ಡಿಎನ್‌ಎಯಲ್ಲಿರುವ ಒಂದು ಕ್ಷಾರದ ಸ್ಥಾನದಲ್ಲಿ ಇನ್ನೊಂದು ಸೇರಿಕೊಂಡಿರುತ್ತದೆ. ಎರಡನೆಯದು ಚೌಕಟ್ಟು ಸ್ಥಳಾಂತರ

ವಿಕೃತಿಗಳು (ಫ್ರೇಮ್ ಶಿಫ್ಟ್). ಇವುಗಳಲ್ಲಿ ಕೆಲವು ಕ್ಷಾರಗಳು ಲೋಪವಾಗಿರುತ್ತವೆ ಅಥವಾ ಹೆಚ್ಚು ಕ್ಷಾರ ಸೇರಿಕೊಂಡಿರುತ್ತವೆ.

ಸೂರ್ಯನ ಕಿರಣಗಳಿಂದ ಹರಿದು ಬರುವ ವಿಕಿರಣಗಳನ್ನು ಹಾಗೂ ವಾತಾವರಣದಲ್ಲಿರುವ ಹಲವು ವಿಕೃತಿ ಜನಕ ರಸಾಯನಗಳನ್ನು ಜೀವಿಗಳು ಸೇವಿಸುತ್ತಲೇ ಇರುತ್ತವೆ. ಜೀವಿಗಳಲ್ಲಿ ಇವುಗಳ ಧಾಳಿಯಿಂದ ಪಾರಾಗಲು ಸ್ವಯಂ ರಕ್ಷಣಾ ಶಕ್ತಿ ಹಾಗೂ ಸ್ವಯಂ ದುರಸ್ತಿ ಮಾಡಿಕೊಳ್ಳುವ ಶಕ್ತಿ ಇದೆ. ಆದರೂ ಕೆಲವು ವಿಕೃತಿಗಳು ಇವನ್ನು ದಾಟಿ ಜೀವ ಜಗತ್ತಿನಲ್ಲಿ ಸ್ಥಿರವಾಗಿ ನಿಲ್ಲುತ್ತವೆ. ವಿಕೃತಿಗಳೆಲ್ಲವೂ ಮಾರಕವಲ್ಲ. ಉಪಯುಕ್ತ ವಿಕೃತಿಗಳೂ ಇವೆ. ಉಪಯುಕ್ತ ವಿಕೃತಿಗಳನ್ನು ನಿಸರ್ಗ ಪೋಷಿಸುತ್ತದೆ. ಪ್ರಭೇದವೊಂದರಲ್ಲಿ ವಿಕೃತಿಗಳ ಸಂಗ್ರಹ ಹೆಚ್ಚುತ್ತಿದ್ದಂತೆ ಆ ಪ್ರಭೇದದ ಜೀವಿಗಳಲ್ಲಿ ವೈವಿಧ್ಯವೂ ಹೆಚ್ಚುತ್ತದೆ. ವಾತಾವರಣದಲ್ಲಿ ವೈಪರಿತ್ಯಗಳುಂಟಾದಾಗ ವಿಕೃತ ಜೀವಿಗೆ ಅದನ್ನು ತಡೆದುಕೊಳ್ಳುವ ಶಕ್ತಿ ಇದ್ದರೆ ನಿಸರ್ಗ ಅಂಥ ಜೀವಿಗಳನ್ನು ಬದುಕುಳಿಯಲು ಆಯ್ಕೆ ಮಾಡುತ್ತದೆ. ವೈಪರಿತ್ಯಗಳನ್ನು ತಡೆಯಲಾರದ ಹಾಗೂ ಇನ್ನಿತರ ವಿಕೃತಿಗಳು ನಶಿಸುತ್ತವೆ.

ವಿಶ್ವದಲ್ಲಿ, ಕೃತ್ರಿಮವಾಗಿ ತಯಾರಿಸಿದಂತಹ ರಾಸಾಯನಿಕ ಪದಾರ್ಥಗಳ ಉಪಯುಕ್ತೆ, ಒಂದು ವರ್ಷಕ್ಕೆ ಸು. ನಲವತ್ತು ದಶಲಕ್ಷ ಕಿಗ್ರಾಂಗಳಿಗಿಂತಲೂ ಹೆಚ್ಚಾಗಿರುತ್ತವೆ. ಅದರಲ್ಲೂ ಪ್ಲಾಸ್ಟಿಕ್, ಸುಗಂಧ ದ್ರವ್ಯಗಳು, ಆಹಾರ ಸಂರಕ್ಷಣಾ ಪದಾರ್ಥಗಳು, ಸೌಂದರ್ಯವರ್ಧಕಗಳು ಹಾಗೂ ಔಷಧಿಗಳ ಉಪಯೋಗ ದಿನೇದಿನೆ ಹೆಚ್ಚುತ್ತಿದೆ. ಈ ವಸ್ತುಗಳನ್ನು ಮಾನವನು ನೇರವಾಗಿ ಉಪಯೋಗಿಸುವುದರಿಂದಾಗಿ, ಇವುಗಳ ಪರಿಣಾಮ ನೇರವಾಗಿ ಮಾನವನ ದೇಹದ ಮೇಲೆ ಆಗುತ್ತದೆ. ವರ್ತಮಾನದಲ್ಲಿ ಸುಮಾರು 3.5 ರಿಂದ 4.3 ಮಿಲಿಯನ್‌ಗಟ್ಟಲೆ ರಸಾಯನಿಕ ವಸ್ತುಗಳು ಪರಿಸರವನ್ನು ಪ್ರವೇಶಿಸುತ್ತಿವೆ. ಹಾಗೂ ಅವುಗಳ ಶೇಕಡಾವಾರು ಪ್ರಮಾಣ ಕೆಲವು ದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ. ಪ್ರತೀ ವರ್ಷವೂ ವಿಶ್ವದಲ್ಲಿ 100 ಮಿಲಿಯನ್ ಟನ್‌ಗಳಿಗಿಂತ ಹೆಚ್ಚಾಗಿ ಸಾವಯವ ಪದಾರ್ಥಗಳ ವಿಕ್ರಯವಾಗುತ್ತಿವೆ. ಒಂದು ವರದಿಯ ಪ್ರಕಾರ ಅಮೆರಿಕಾ ಒಂದರಲ್ಲೇ 300 ರಿಂದ 3000 ದಷ್ಟು ಹೊಸ ರಾಸಾಯನಿಕಗಳು ಪ್ರತಿ ವರ್ಷವೂ ಬಿಡುಗಡೆಯಾಗುತ್ತಿವೆ. ಒಂದು ವರ್ಷದಲ್ಲಿ ಇಡೀ ಜಗತ್ತಿನಲ್ಲಿ ಇಂತಹ ಸಾವಿರಾರು ಹೊಸ ರಾಸಾಯನಿಕಗಳು ಬಿಡುಗಡೆಯಾಗುತ್ತವೆ.

ಸಾಮಾನ್ಯವಾಗಿ ವಿಕೃತಿಕಾರಕ (ಮ್ಯುಟಾಜೆನಿಸಿಟಿ) ಪರೀಕ್ಷೆಗಳನ್ನು ಸೂಕ್ಷ್ಮಾಣು ಜೀವಿಗಳಾದ ವಿವಿಧ ರೀತಿಯ ಬ್ಯಾಕ್ಟೀರಿಯಾಗಳು (ಉದಾ: ಸಾಲ್ಮೊನೆಲ್ಲಾ, ಎಶ್ಚಿರಿಷಿಯಾ ಕೋಲಿ ಮತ್ತು ಬ್ಯಾಸಿಲಿಸ್) ಹಾಗೂ ಫಂಗೈ (ಸೆಕ್ಕಾರೋಮೈಸಿಸ್ ಮತ್ತು ಆಸ್ಪರ್ಜಿಲ್ಲಸ್) ಗಳನ್ನು ಉಪಯೋಗಿಸಿಕೊಂಡು ನಡೆಸಲಾಗುತ್ತದೆ. ಏಮ್ಸ್ ಸಾಲ್ಮೋನೆಲ್ಲಾ ಪರೀಕ್ಷೆಯು ವಿಕೃತಿಕಾರಕಗಳನ್ನು ಗುರುತಿಸುವಲ್ಲಿ ಬಹು ಮಹತ್ವದ ಪರೀಕ್ಷೆಯಾಗಿದೆ. ಈ ಪರೀಕ್ಷೆಯು ಸರಳವಾದ, ತ್ವರಿತಗತಿಯ ಹಾಗೂ ಸೂಕ್ಷ್ಮವಾದ ಪರೀಕ್ಷೆಯಾದುದರಿಂದ ಇದನ್ನು ಬಹುವಾಗಿ ಉಪಯೋಗಿಸುತ್ತಾರೆ.

ಡ್ರೊಸೊಫಿಲಾ ಮೆಲನೋಗ್ಯಾಸ್ಟರ್ ಎಂಬ ನೊಣ ಈ ರೀತಿಯ ಪರೀಕ್ಷೆಗಳಿಗೆ ಹೇಳಿ ಮಾಡಿಸಿದಂತಹ ಜೀವಿ. ಡ್ರೊಸೊಫಿಲಾ ಪ್ರಭೇದದಲ್ಲಿರುವ ವಿವಿಧ ರೀತಿಯ ತಳಿಗಳು ಮತ್ತು ಅವುಗಳಲ್ಲಿರುವ ಜೀನ್ ಸಾಂಕೇತಿಕಗಳು ವಿಕೃತಿಕಾರಕ ಪರೀಕ್ಷೆಯಲ್ಲಿ ಬಹಳ ಉಪಯುಕ್ತವಾಗಿವೆ. ಭೌತಿಕ ಮತ್ತು ರಾಸಾಯನಿಕ ವಸ್ತುಗಳಿಂದಾಗುವ ವಿಕೃತಿಗಳ ಬಗೆಗಿನ ಅಧ್ಯಯನ ಹಾಗೂ ಸಂಶೋಧನೆಗಳಿಗೆ ಈ ಪ್ರಭೇದ ಉಪಯೋಗಕರ ಜೀವಿ.

ಭೌತಿಕ ಮತ್ತು ರಾಸಾಯನಿಕ ವಸ್ತುಗಳಿಂದಾಗುವ ಜೀನ್‌ಗಳ ಬದಲಾವಣೆಗಳನ್ನು ಗುರುತಿಸಲು ಡ್ರೊಸೊಫಿಲಾಗಳಲ್ಲಿ ವಿವಿಧ ರೀತಿಯ ಪ್ರಯೋಗಗಳನ್ನು ನಡೆಸಲಾಗುತ್ತದೆ. ಆ ಪ್ರಯೋಗಗಳೆಂದರೆ,

1) ಪ್ರಬಲ ಮಾರಕ ಪರೀಕ್ಷೆ (ಡಾಮಿನೆಂಟ್ ಲೀತಲ್ ಪರೀಕ್ಷೆ).

2) ಲಿಂಗ ಸಂಬಂಧಿ ನಿರ್ಬಲ ಮಾರಕ ಪರೀಕ್ಷೆ (ಸೆಕ್ಸ್ ಲಿಂಕ್ಡ್ ರಿಸೆಸ್ಸಿವ್ ಲೀತಲ್ ಟೆಸ್ಟ್: ಎಸ್‌ಎಲ್‌ಆರ್‌ಎಲ್).

3) 2–3 ನೇ ವರ್ಣತಂತುವಿನ ಭಾಗಗಳ ಅದಲು ಬದಲು ಪರೀಕ್ಷೆ (2–3 ಟ್ರಾನ್ಸ್ಲೋಕೇಷನ್ ಪರೀಕ್ಷೆ).

4) ಎಕ್ಸ್ ಅಥವಾ ವೈ ವರ್ಣತಂತುಗಳ ಕಳೆದು ಹೋಗುವಿಕೆ (ಎಕ್ಸ್ ಅಂಡ್ ವೈ ಕ್ರೊಮೋಸೋಮ್ ಲಾಸ್).

5) ನಿಶ್ಚಿತ ಬಿಂದುವಿನ ಪರೀಕ್ಷೆ (ಸ್ಪೆಸಿಫಿಕ್ ಲೋಕಸ್ ಟೆಸ್ಟ್).

6) ಶರೀರದ ವಿಕೃತಿ ಹಾಗೂ ಪುನರ್ ಸಂಯೋಜನೆ ಪರೀಕ್ಷೆ (ಎಸ್‌ಎಮ್‌ಎಆರ್‌ಟಿ).

ಇಂದು ಮಾನವ ತಾಂತ್ರಿಕವಾಗಿ ಬಹಳ ಮುಂದುವರಿದಿದ್ದಾನೆ. ಪರಿಣಾಮವಾಗಿ ಅನೇಕ ಕಾರ್ಖಾನೆಗಳು ಸ್ಥಾಪಿತವಾಗಿವೆ. ಕೆಲವು ಕಾರ್ಖಾನೆಗಳು ವಿವಿಧ ವಿಕೃತಿ ಜನಕ ರಸಾಯನಗಳನ್ನು ತಯಾರಿಸುತ್ತವೆ. ಇನ್ನು ಕೆಲವು ರಸಾಯನಗಳನ್ನು ತಯಾರಿಸದಿದ್ದರೂ ಅವು ಉಗುಳುವ ಹೊಗೆಯಲ್ಲಿ ಹಾಗೂ ಹೊರ ಹಾಕುವ ಕಲ್ಮಶಗಳಲ್ಲಿ ಹಲವು ರಾಸಾಯನಿಕ ವಿಕೃತಿ ಜನಕಗಳಿರುತ್ತವೆ. ಇಂಥ ರಾಸಾಯನಿಕಗಳನ್ನು ಎಲ್ಲಾ ಜೀವಿಗಳೂ ನೇರವಾಗಿ ಇಲ್ಲವೆ ಅನೇರವಾಗಿ ಸೇವಿಸುತ್ತಿರುತ್ತವೆ. ಇವುಗಳಿಂದ ವಿಕೃತಿಗಳುಂಟಾಗುವ ಸಾಧ್ಯತೆಗಳಿವೆ. ನಿಸರ್ಗ ಮಾರಕ ವಿಕೃತಿಗಳನ್ನು ತನ್ನ ಆಯ್ಕೆಯಲ್ಲಿ ತ್ಯಜಿಸಿ ಅವು ನಶಿಸುವಂತೆ ಮಾಡುತ್ತದೆ. ಮಾನವ ಕುಲ ಉಳಿದ ಜೀವಿಗಳಂತಲ್ಲ. ನಿಸರ್ಗದ ಕೈವಾಡ ಇಲ್ಲಿ ಪೂರ್ತಿ ನಡೆಯುವುದಿಲ್ಲ. ಮಾರಕ ವಿಕೃತಿಗಳು ಮನುಷ್ಯನಲ್ಲಿ ಉದ್ಭವಿಸಿದರೆ ಅವು ತಲತಲಾಂತರವಾಗಿ ಸಾಗುತ್ತವೆ. ಅದರಿಂದ ಔದ್ಯೋಗೀಕರಣ ಸರಿಯಾದ ದಿಸೆಯಲ್ಲಿ ಸಾಗಿದರೆ ಮಾತ್ರ ಮಾನವ ಕಲ್ಯಾಣವಾದೀತು. ಪ್ರತಿಯೊಂದು ಜೀವಿಯಲ್ಲೂ ಹಾಗೂ ಜೀವಕೋಶದಲ್ಲೂ ಡಿಎನ್‌ಎ ಯನ್ನು ಸರಿಪಡಿಸುವ ವ್ಯವಸ್ಥೆ ಅಥವಾ ರಚನೆ ಇದೆ. ಈ ವ್ಯವಸ್ಥೆಗಳು ಬದುಕಿರುವ ಜೀವಕೋಶಗಳಲ್ಲಿ ವಿಕೃತಿಕಾರಕಗಳಿಂದಾದ ವಿಕೃತಿಗಳ ಮತ್ತು ಸ್ವಪ್ರವೃತ್ತಿಯಿಂದಾದ ವಿಕೃತಿಗಳ ಸಂಖ್ಯೆಯನ್ನು ಕಡಿಮೆ ಮಾಡುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಅಲ್ಲದೇ ಇವು ಡಿಎನ್‌ಎ ಯಲ್ಲಿನ ಬದಲಾವಣೆಗಳು ಮತ್ತು ಪರಿಸರದ ಬದಲಾವಣೆಗಳಿಗೆ (ರಾಸಾಯನಿಕಗಳಿಗೆ) ಹೊಂದಿಕೊಳ್ಳುವಂತೆ ಅದರಲ್ಲೂ ಮುಖ್ಯವಾಗಿ ಬದಲಾದ ಡಿಎನ್‌ಎಯ ಪೂರ್ಣತೆಯ ನಿಟ್ಟಿನಲ್ಲಿ ಪಾತ್ರ ವಹಿಸುತ್ತವೆ. ಇವುಗಳಲ್ಲಿ ಫೋಟೋರಿಯಾಕ್ಟಿವೇಷನ್, ಪೋಸ್ಟ್ ರೆಪ್ಲಿಕೇಷನ್ ಸರಿಪಡಿಸುವಿಕೆ, ಬೇಸ್ ಎಕ್ಸಿಷನ್ ಮತ್ತು ನ್ಯೂಕ್ಲಿಯೋಟೈಡ್ ಎಕ್ಸಿಷನ್‌ಗಳನ್ನು ಸರಿಪಡಿಸುವಿಕೆ, ಡಿಎಸ್‌ಬಿ (ಡಬಲ್ ಸ್ಟ್ರಾಂಡ್ ಬ್ರೇಕ್ಸ್) ಹಾಗೂ ಎಸ್‌ಎಸ್‌ಬಿ (ಸಿಂಗಲ್ ಸ್ಟ್ರಾಂಡ್ ಬ್ರೇಕ್ಸ್) ಸರಿಪಡಿಸುವಿಕೆ, ಎಸ್‌ಓಎಸ್ ಹೊಂದಿಕೊಳ್ಳುವ ಪ್ರತಿಕ್ರಿಯೆ ಮುಖ್ಯವಾದುವುಗಳು.

ಹೊಂದಿಕೊಳ್ಳುವ ಪ್ರತಿಕ್ರಿಯೆ: ಸ್ಯಾಮ್‌ಸನ್ ಮತ್ತು ಕೇರ್ನ್ಸ್ (1977) ರವರು ಎ.ಕೋಲಿ ಬ್ಯಾಕ್ಟೀರಿಯಾಗಳನ್ನು ಕಡಿಮೆ ಪ್ರಮಾಣದ ವರ್ಣತಂತು ವಿಚ್ಛೇಧಕಗಳಾದ (ಕ್ಲಾಸ್ಟೋಜನ್‌ಗಳು), ಎಮ್‌ಎನ್‌ಯು ಮತ್ತು ಎಮ್‌ಎಮ್‌ಎನ್‌ಜಿ ಎಂಬ ಅಲ್ಕೈಲೆಟಿಂಗ್ ರಾಸಾಯನಿಕಗಳ ಉಪಚಾರ ಮಾಡುತ್ತಾರೆ. ನಂತರ ಹೆಚ್ಚು ಪ್ರಮಾಣದಲ್ಲಿ ಇವೇ ವಿಚ್ಛೇಧಕಗಳನ್ನು ಬ್ಯಾಕ್ಟೀರಿಯಾಗಳಿಗೆ ಉಪಚರಿಸಿದಾಗ, ಆ ಬ್ಯಾಕ್ಟೀರಿಯಾಗಳು ಈ ಹೆಚ್ಚು ಪ್ರಮಾಣದ ವಿಚ್ಛೇಧಕಗಳ ಬ್ಯಾಕ್ಟೀರಿಯಾಗಳನ್ನು ಕೊಲ್ಲುವ ಪರಿಣಾಮಗಳಿಗೆ ನಿರೋದಶಕ್ತಿಯನ್ನು ತೋರಿಸಿರುತ್ತವೆ. ಇಂತಹ ಪ್ರತಿಕ್ರಿಯೆಗೆ ಇವರು 'ಹೊಂದಾಣಿಕಾ ಪ್ರತಿಕ್ರಿಯೆ' ಎಂಬ ಹೆಸರನ್ನು ಕೊಟ್ಟಿರುತ್ತಾರೆ. ಇದು ಡಿಎನ್‌ಎಯಲ್ಲಿ ಯಾವುದೇ ವಿಕೃತಿಗಳನ್ನು ಇರಗೊಡದಂತಹ ಸರಿಪಡಿಸುವ ವ್ಯವಸ್ಥೆಯಾಗಿದೆ. ಎಸ್‌ಓಎಸ್ ಕೂಡ ಒಂದು ಹೊಂದಾಣಿಕಾ ಪ್ರತಿಕ್ರಿಯೆಯಾಗಿದೆ. ಆದರೆ ಆ ವ್ಯವಸ್ಥೆಯಲ್ಲಿ ಬಹಳ ವಿಕೃತಿಗಳು ಡಿಎನ್‌ಎಯಲ್ಲಿ ಉಳಿದುಬಿಡುತ್ತವೆ.

ರೀಗರ್ ಮತ್ತು ಇತರರು (1982; 1986) ವಿಸಿಯ ಫ್ಯಾಬ ಎಂಬ ಸಸ್ಯದ ಬೇರಿನ ತುದಿಯಲ್ಲಿರುವ ಅಂಕುರ ಜೀವಕೋಶಗಳಿಗೆ ಕಡಿಮೆ ಪ್ರಮಾಣದಲ್ಲಿ ವಿವಿಧ ವರ್ಣತಂತು ವಿಚ್ಛೇದಕಗಳನ್ನು ನೀಡಿದರು. ನಂತರ ಹೆಚ್ಚು ಪ್ರಮಾಣದಲ್ಲಿ ಅದೇ ವರ್ಣತಂತು ವಿಚ್ಛೇಧಕಗಳನ್ನು ನೀಡಿದಾಗ, ಈ ಜೀವಕೋಶಗಳಲ್ಲಿ ವಿಚ್ಛೇದಕಗಳಿಂದ ಉಂಟಾಗಿರುವ ಕ್ರೊಮ್ಯಾಟಿಡ್ ರೀತಿಯ ವರ್ಣತಂತು ದೋಷಗಳು, ಬರೀ ಹೆಚ್ಚು ಪ್ರಮಾಣದ ವಿಚ್ಛೇದಕದ ನೀಡಿದ ಜೀವಕೋಶಗಳಲ್ಲಿ ಉಂಟಾದ ದೋಷಗಳಿಗಿಂತ ಬಹಳ ಕಡಿಮೆ ಸಂಖ್ಯೆಯಲ್ಲಿ ಕಂಡುಬಂತು. ಈ ರೀತಿಯ ಫಲಿತಾಂಶ ಮುಖ್ಯವಾಗಿ ಕಡಿಮೆ ಪ್ರಮಾಣದ ಉಪಚಾರದಿಂದ ಆಗಿರುವ ಡಿಎನ್‌ಎ ಯ ರಕ್ಷಣೆಯನ್ನು ಸೂಚಿಸುತ್ತದೆ. ಈ ಬಗೆಯ ರಕ್ಷಣಾ ವ್ಯವಸ್ಥೆಯನ್ನು ರೀಗರ್ ರವರು ವರ್ಣತಂತು ವಿಚ್ಛೇದನಾ ಹೊಂದಾಣಿಕೆ (ಕ್ಲಾಸ್ಟೋಜೆನಿಕ್ ಅಡಾಪ್ಟೇಷನ್) ಎಂದು ಕರೆದಿದ್ದಾರೆ. ಇದೇ ರೀತಿಯ ಫಲಿತಾಂಶಗಳನ್ನು ಬಾರ್ಲಿಯ ಮೇಲಿನ ಪ್ರಯೋಗಗಳಿಂದ ನಿಕೋಲಾಫ್ ಮತ್ತು ಇತರರು (1985) ಕಂಡುಕೊಂಡಿದ್ದಾರೆ.

ಮಾನವನ ಲಿಂಫೋಸೈಟ್‌ಗಳನ್ನು ಕಡಿಮೆ ಪ್ರಮಾಣದಲ್ಲಿ ವಿಕಿರಣ ಹೊರಸೂಸುವ ಥಯಮಿಡಿನ್‌ಗಳಿಂದ ಉಪಚರಿಸಿ ನಂತರ ಅದೇ ಜೀವಕೋಶಗನ್ನು ಹೆಚ್ಚು ಪ್ರಮಾಣದ ಕ್ಷ – ಕಿರಣಗಳಿಗೆ ಒಳಪಡಿಸಿದಾಗ, ಅವುಗಳು ಕಡಿಮೆ ಸಂಖ್ಯೆಯಲ್ಲಿ ಕ್ರೊಮ್ಯಾಟಿನ್ ರೀತಿಯ ವರ್ಣತಂತು ದೋಷಗಳನ್ನು ಒಳಗೊಂಡಿರುವುದು ಕಂಡುಬಂದಿರುತ್ತವೆ. (ಆಲಿವರಿ ಮತ್ತು ಇತರರು, 1984).

ಇದೇ ತರನಾದ ರಕ್ಷಣಾ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಪಾಯ್ಸಿಲೋಸಿರಸ್ ಪಿಕ್ಟಸ್ ಎಂಬ ಮಿಡತೆ, ಇಲಿ ಮತ್ತು ಮಾನವನ ರಕ್ತದಲ್ಲಿರುವ ಲಿಂಫೋ ಸೈಟ್‌ಗಳ ಮೇಲೆ ವಾಸುದೇವ್ ಹಾಗೂ ಇತರರು ಪ್ರಯೋಗಗಳನ್ನು ಮಾಡಿದ್ದಾರೆ. ಅವರು, ಮೇಲಿನ ಎಲ್ಲಾ ಜೀವಿಗಳು ಹಾಗೂ ಲಿಂಫೋಸೈಟ್‌ಗಳೂ ಸಹ ಹೆಚ್ಚು ಪ್ರಮಾಣದ ವಿಚ್ಛೇಧಕಗಳ ಪರಿಣಾಮಗಳ ವಿರುದ್ಧ ನಿರೋಧಕ ಶಕ್ತಿಯನ್ನು ಹೊಂದಿರುವುದನ್ನು

ಖಚಿತ ಪಡಿಸಿದ್ದಾರೆ. ಇನ್ನೊಂದೆಡೆ, ಇವರು ಕೆಫೀನನ್ನು ಇಎಮ್‌ಎಸ್ ಉಪಚಾರಗಳ ಮಧ್ಯೆ, ಮೊದಲು ಹಾಗೂ ನಂತರ ನೀಡಿದಾಗ, ಜೀವಕೋಶಗಳಲ್ಲಿ ಮತ್ತೂ ಸಹ ಅರ್ಥಾನ್ವಿತವಾಗಿ ವರ್ಣತಂತುಗಳ ವಿಕೃತಿಗಳ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು ತಿಳಿದುಬಂದಿದೆ. ಈ ವರ್ಣತಂತು ವಿಕೃತಿಗಳ ಸಂಖ್ಯೆಯ ಕ್ಷೀಣಿಸುವಿಕೆ, ಹೆಚ್ಚಾಗಿ ಇಎಮ್‌ಎಸ್ ಉಪಚಾರಗಳ ಮೊದಲು ನೀಡಿದ ಕೆಫೀನ್‌ನಿಂದ ಆಗಿದೆ.

ಗುರುಪ್ರಸಾದ್ ಮತ್ತು ವಾಸುದೇವ್‌ರವರು (2001) ಇಲಿಗಳ ಅಸ್ಥಿಮಜ್ಜೆಕೋಶಗಳಲ್ಲಿ, ಇಎಮ್‌ಎಸ್ ನಿಂದಾದ ಹೊಂದಾಣಿಕಾ ಪ್ರತಿಕ್ರಿಯೆಯಲ್ಲಿ ಪಾಲಿ (ಎಡಿಪಿ – ರೈಬೋಸ್) ಪಾಲಿಮರೇಸ್ ಕಿಣ್ವದ ಪಾತ್ರದ ಬಗೆಗಿನ ಪ್ರಯೋಗಗಳನ್ನು, ಈ ಕಿಣ್ವವನ್ನು ಅವರೋಧಿಸುವ ರಾಸಾಯನಿಕಗಳಾದ ನಿಕೋಟಿನಮೈಡ್ ಹಾಗೂ ಬೆಂಜಮೈಡ್‌ಗಳನ್ನು ಉಪಯೋಗಿಸಿ ಅಭ್ಯಸಿಸಿದ್ದಾರೆ. ಇವರು ನಿಕೋಟಿನಮೈಡ್ ಹಾಗೂ ಬೆಂಜಮೈಡ್‌ಗಳು ಸಹ ಇಎಮ್‌ಎಸ್ ಮತ್ತು ಎಮ್‌ಎಮ್‌ಎಸ್ ನಿಂದಾದ ಹೊಂದಾಣಿಕಾ ಪ್ರತಿಕ್ರಿಯೆಯ ಸಾಮರ್ಥ್ಯವನ್ನು ಹೆಚ್ಚಿಸಿರುವುದನ್ನು ತಿಳಿಸಿದ್ದಾರೆ. (ವಿ.ವಿ; ಡಿ.ಜಿ.)

**ವಿಲುಪ್ತ ಪ್ರಾಣಿಗಳು / ಕಣ್ಮರೆಯಾಗಿರುವ ಪ್ರಾಣಿಗಳು:** ಭೂಮಿಯ ಮೇಲೆ ಒಮ್ಮೆ ಬದುಕಿ, ವರ್ಷಗಳವರೆಗೆ ಸಂತಾನವನ್ನು ಬೆಳೆಸಿ ಇದ್ದಕ್ಕಿಂತ ನಾಶವಾದ ಸತತವಾಗಿ ಕನಿಷ್ಠ 50 ವರ್ಷಗಳವರೆಗೂ ಪರಿಸರದಲ್ಲಿ ಕಂಡುಬರದಿದ್ದರೆ, ಅಂಥ ಪ್ರಭೇದವನ್ನು ವಿಲುಪ್ತ ಪ್ರಭೇದ ಎನ್ನುತ್ತಾರೆ. ಡೊಡೋ ಪಕ್ಷಿ, ಯಾತ್ರಿಕ ಪಾರಿವಾಳ ಉದಾಹರಣೆಗಳು. ಚಿರತೆ, ಗುಲಾಬಿ ಶಿರದ ಬಾತುಕೋಳಿ, ಗಿರಿ ಕ್ವೇಲ್‌ಗಳನ್ನು ಕೂಡ ಝೂವಾಲಜಿಕಲ್ ಸರ್ವೆ ಆಫ್ ಇಂಡಿಯಾವು ಭಾರತದಿಂದ ವಿಲುಪ್ತಿಗೊಂಡ ಪ್ರಭೇದಗಳು ಎಂದು ಘೋಷಿಸಿದೆ.

ಪ್ರಭೇದ ವಿಲುಪ್ತತೆ ಮರಳಿಬಾರದ ನಾಶ. ಎಂದರೆ ಆ ಪ್ರಭೇದ ಜೀವಾವಾಸಕ್ಕೆ ಮತ್ತೆಂದೂ ಮರಳಿಬಾರದು. ಎಲ್ಲ ಸಜೀವಿಗಳ ಚರಮಗತಿ ಮರಣ ಹೇಗೋ ಹಾಗೆಯೇ ವಿಲುಪ್ತತೆ ಬಹುತೇಕ ಪ್ರಭೇದಗಳ ಅಂತಿಮ ಗತಿ. ಜೀವವಿಜ್ಞಾನಿಗಳು ಅಭಿಪ್ರಾಯದಂತೆ, ಇಂದಿಗೆ ಲಭ್ಯವಿರುವ ಪ್ರತಿ 2000 ಪ್ರಭೇದಗಳಲ್ಲಿ 1999 ವಿಲುಪ್ತಗೊಂಡಿವೆ. ಭೂಗೋಲದ ಮೇಲೆ ಜೀವಿಗಳು ಕಾಣಿಸಿಕೊಂಡಂದಿನಿಂದಲೂ, ನಿರಂತರವಾಗಿ ಸ್ವಾಭಾವಿಕವಾಗಿ ಪ್ರಭೇದ ವಿಲುಪ್ತತೆ ನಡೆಯುತ್ತಲೇ ಇದೆ. ಭೂ ಚರಿತ್ರೆಯಲ್ಲಿ ಕೆಲ ನಿರ್ದಿಷ್ಟ ಸಂದರ್ಭಗಳಲ್ಲಿ ಸಾಮೂಹಿಕ ವಿನಾಶವೂ ನಡೆದುಹೋಗಿದೆ. ಆದರೆ ಈ ವಿದ್ಯಮಾನವು ಅನೇಕ ಮಿಲಿಯ ವರ್ಷಗಳ ಅವಧಿಯಲ್ಲಿ ನಡೆದದ್ದು. ಈ ಎರಡೂ ಬಗೆಯ ವಿನಾಶಗಳು ಜೈವಿಕ ಅಥವಾ ನೈಸರ್ಗಿಕ ವಿಕೋಪಗಳಿಂದಾಗಿದೆ. ಉದಾಹರಣೆಗೆ, ಕಶೇರುಕಗಳ ಪೂರ್ವಿಕರ ಪಳೆಯುಳಿಕೆಗಳು ಆರ್ಡೋವಿಸಿಯನ್ ಕಾಲದವು. ಸೈಲೂರಿಯನ್ ಮತ್ತು ಡಿವೋನಿಯನ್ (40.5 ರಿಂದ 34.5 ಕೋಟಿ ವರ್ಷ ಹಿಂದೆ) ಕಾಲದಲ್ಲಿ ಇವುಗಳ ಸಂಖ್ಯಾಸರಪಣಿ ಹೆಚ್ಚಿತು. ಇವೇ ಆಸ್ಟ್ರಾಕೋಡರ್ಮ್ಸ್ ಎಂಬ ದವಡೆರಹಿತ ಪ್ರಾಚೀನ ಮೀನುಗಳು. ಇಂದು ಇವು ವಿಲುಪ್ತಗೊಂಡಿವೆ. ಈ ವಿಲುಪ್ತತೆಗೆ ಕಾರಣ ಪರಿಸರ ಸಂಬಂಧಿ ವಿದ್ಯಮಾನಗಳು.

ಇದೇ ರೀತಿ ಕಾರ್ಬೊನಿಫೆರಸ್ ಕಾಲದಲ್ಲಿ ಹಲವಾರು ಶಾರೀರಿಕ ಮಾರ್ಪಾಡುಗಳೊಂದಿಗೆ ಉಭಯವಾಸಿಗಳ ಗುಂಪೊಂದು ಸರೀಸೃಪಗಳಾಗಿ ವಿಕಸಿಸಿದುವು. ದ್ರವಾಂಶವು ಆವಿಯಾಗಿ ಹೊರಹೋಗಲು ಸಾಧ್ಯವಿಲ್ಲದ ಹುರುಪೆಯುಕ್ತ ಚರ್ಮವನ್ನು ವರ್ಧಿಸಿಕೊಂಡ ಇವು ನಿಜವಾದ ಭೂವಾಸಿಗಳಾದುವು. ನೆಲದ ಮೇಲೆ ಕವಚಯುಕ್ತ ಮೊಟ್ಟೆಗಳನ್ನಿರಿಸಿ ಸಂತಾನ ವೃದ್ಧಿಸಲು ಸಮರ್ಥವಾದುವು. ಅನಂತರದ ಸುಮಾರು 20 ಕೋಟಿ ವರ್ಷಗಳ ಕಾಲ ಇವೇ ಜೀವಜಗತ್ತಿನ ಸಾರ್ವಭೌಮಗಳಾಗಿ ಮೆರೆದುವು. ಪ್ರಾಚೀನ ಜೀವಯುಗದ ಅಂತ್ಯ ಎಂದರೆ ಪರ್ಮಿಯನ್ ಕಾಲದಲ್ಲಿ ಭೂಮಿ, ಸಮುದ್ರಗಳ ಸ್ವರೂಪಗಳಲ್ಲಿ ಹಲವಾರು ಬದಲಾವಣೆಗಳಾದುವು. ಪರಿಸರ ಶೀತಮಯವಾಯಿತು. ಬದಲಾದ ಈ ಪರಿಸರ ಗುಣಗಳಿಗೆ ಹೊಂದಿಕೊಳ್ಳಲಾರದ ಹಲವಾರು ಅಕಶೇರುಕಗಳು ನಶಿಸಿಹೋದುವು. ಪರಿಸರಕ್ಕೆ ತಕ್ಕಂತೆ ಹೊಂದಾಣಿಕೆಗಳನ್ನು ರೂಢಿಸಿಕೊಂಡ ಸರೀಸೃಪಗಳು ಪ್ರಬಲಗೊಂಡವು.

ಮಿಸೊಝೋಯಿಕ್ ಯುಗದ ಉದಯದೊಂದಿಗೆ ಸರೀಸೃಪಗಳ ವಿಕಾಸದ ಗತಿ ತೀವ್ರಗೊಂಡಿತು. ಅಂತೆಯೇ ಈ ಯುಗವು ಸರೀಸೃಪಗಳ ಸುವರ್ಣಯುಗ ಎಂದೇ ಖ್ಯಾತವಾಯಿತು. ಸುಮಾರು 10 ಕೋಟಿ ವರ್ಷಗಳ ಹಿಂದೆ ಕ್ರಿಟೇಶಿಯಸ್ ಕಾಲದಲ್ಲಿ ಸರೀಸೃಪಗಳು ವಿಕಾಸದ ಉತ್ತುಂಗ ಶಿಖರವನ್ನು ತಲುಪಿದವು. ಈ ಉನ್ನತ ಸ್ಥಿತಿಯಲ್ಲೇ ಅವು ನಶಿಸಿಹೋದುವು. ದೈತ್ಯ ಸರೀಸೃಪಗಳ ವಿಲುಪ್ತಿ ಜೀವ ಚರಿತ್ರೆಯ ನಿಗೂಢ ರಹಸ್ಯ ಹಾಗೂ ದುರಂತ.

ಒಮ್ಮೆ ವಿಲುಪ್ತಿಗೊಂಡ ಪ್ರಾಣಿಗಳು ಮರಳಿಬಾರವು. ಒಂದಾನೊಂದು ಕಾಲದಲ್ಲಿ ಇವು ಇದ್ದುವೆಂಬುದಕ್ಕೆ ಲಭ್ಯವಿರುವ ಅವುಗಳ ಅವಶೇಷಗಳೇ ಸಾಕ್ಷಿ. ಮೃತ ಪ್ರಾಣಿಗಳ ಈ ಪ್ರಾಚೀನ ಅವಶೇಷಗಳನ್ನು ಪಳೆಯುಳಿಕೆ ಎನ್ನುತ್ತಾರೆ. ಇಡೀ ಜೀವಿ ಅಥವಾ ಅದರ ಒಂದು ಭಾಗ ಇಲ್ಲವೆ ಅದರ ಹೆಜ್ಜೆಯ ಚಿಹ್ನೆ, ವಿಸರ್ಜಕ ಇಂಥವು ಭೂಗರ್ಭದಲ್ಲಿ ಅಡಗಿ, ವಿಶೇಷ ಕಾರಣಗಳಿಂದ ಕೆಡದೆ ಹಾಗೆಯೇ ಉಳಿದು ಪಳೆಯುಳಿಕೆಗಳೆನ್ನಿಸುತ್ತವೆ. ಇದಕ್ಕೆ ದೀರ್ಘ ಕಾಲಾವಧಿ ಬೇಕು. ಸೈಬೀರಿಯದ ಹಿಮದಡಿಯಲ್ಲಿ ಸುಮಾರು ಹತ್ತು ಲಕ್ಷ ವರ್ಷಗಳಿಂದ ಹನ್ನೊಂದು ಸಾವಿರ ವರ್ಷಗಳ ಹಿಂದಿನ ಕಾಲಾವಧಿಯಲ್ಲಿ ಜೀವಿಸಿದ್ದ ಬೃಹತ್ ತುಪ್ಪುಳ ಮ್ಯಾಮತ್‌ಗಳ ಇಡೀ ಪಳೆಯುಳಿಕೆ ಹಾಗೆಯೇ ಉಳಿದಿರುವುದು ಉದಾಹರಣೆ. ಹಿಮಾಚ್ಛಾದಿತ ಪ್ರದೇಶ ಹಾಗೂ ತೈಲಯುತ ನೆಲೆಯಲ್ಲಿ ಇವು ಸ್ವಲ್ಪವೂ ಹಾಳಾಗದೇ ಪಳೆಯುಳಿಕೀಕೃತವಾಗಿದ್ದುವು. ಇವುಗಳ ಮಾಂಸವೂ ಭಕ್ಷಣ ಯೋಗ್ಯವಾಗಿದ್ದಿತು.

ಪ್ರಾಣಿಗಳಲ್ಲಿ ಹತ್ತುಕೋಟಿ ವರ್ಷಗಳ ಹಿಂದಿನ, ಸ್ಪಂಜು ವಂಶದ ಜೀವಿಗಳ ಪಳೆಯುಳಿಕೆ ದೊರಕಿದೆ. ಡೈನೋಸಾರ್ ತತ್ತಿಗಳ ಹಾಗೂ ಲೋಳೆ ಮೀನುಗಳಂಥ ಜೀವಿಗಳ ಪಳೆಯುಳಿಕೆಗಳು ಅಪರೂಪವಾಗಿ ದೊರಕಿವೆ. ಮನುಷ್ಯನ ಅತ್ಯಂತ ಹಿಂದಿನ ಪಳೆಯುಳಿಕೆ ದೊರೆತಿರುವುದು ಆಫ್ರಿಕದ ಟಾಂಗನೀಕದಲ್ಲಿ. ಇದು ಸುಮಾರು 17 1/2 ಲಕ್ಷ ವರ್ಷ ಹಿಂದಿನದು.

ಜೀವ ವಿಲುಪ್ತಿ ನೈಸರ್ಗಿಕ ಜೈವಿಕ ಪ್ರಕ್ರಿಯೆಯಾದಾಗ್ಯೂ, ಇತ್ತೀಚೆಗೆ ಮಾನವನ ಹಸ್ತಕ್ಷೇಪದಿಂದ ವಿಲುಪ್ತಿಯ ಗತಿಯು ತೀವ್ರವಾಗುತ್ತಿದೆ. ಪ್ರಭೇದ ವಿಲುಪ್ತಿ ಮತ್ತು ತನ್ಮೂಲಕ ಜೀವಿ ವೈವಿಧ್ಯನಾಶಕ್ಕೆ ಈ ಕೆಳಗಿನ ಮಾನವ ಸಂಬಂಧಿ ಚಟುವಟಿಕೆಗಳೇ ಕಾರಣ.

* ಕ್ಷಿಪ್ರಗತಿಯಲ್ಲಿ ಜನಸಂಖ್ಯೆಯ ಏರಿಕೆ
* ಸರ್ವ ವಿಧದ ಹೊಸ ವಾಸನೆಲೆಗಳಿಗಾಗಿ ಪರಿಶೋಧನೆ
* ನವ ವಾಸನೆಲೆಯಲ್ಲಿ ಪರಿಸರದ ಜೀವನಾಧಾತ ಗುಣದಲ್ಲಿ ಬದಲಾವಣೆ

ಈ ಕಾರಣಗಳನ್ನೇ ಸವಿವರವಾಗಿ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದೆ.

ಪ್ರಭೇದಗಳ ವಿಲುಪ್ತಿ ಮತ್ತು ಅಪಾಯದ ಮಟ್ಟ ತಲುಪುವಿಕೆಗೆ ಮಾನವನ ಕೊಡುಗೆ.

| [illegible] | [illegible] |
|---|---|
| 1. [illegible] | 1. [illegible] |
| 2. [illegible] | 2. [illegible] |
| 3. [illegible] | 3. [illegible] |
| 4. [illegible] | 4. [illegible] |
| 5. [illegible] | 5. [illegible] |

ಪರಿಸರವೇ ಆಗಲಿ ಅಥವಾ ಮಾನವ ಹಸ್ತಕ್ಷೇಪವೇ ಆಗಲಿ ಅಥವಾ ಇನ್ನಾವುದೇ ಕಾರಣವಿರಲಿ, ವಿಲುಪ್ತ ಪ್ರಭೇದ, ವಿನಾಶದಂಚಿನಲ್ಲಿರುವ ಪ್ರಭೇದ, ಅಪಾಯಕ್ಕೀಡಾಗಿರುವ ಪ್ರಭೇದ, ಅಪರೂಪದ ಪ್ರಭೇದ – ಇವೆಲ್ಲವೂ ಒಟ್ಟಾರೆ ಜೀವಿ ವೈವಿಧ್ಯದ ಅವನತಿಯನ್ನೇ ಪ್ರತಿನಿಧಿಸುತ್ತವೆ. ಏಕೆಂದರೆ ಪ್ರಭೇದಗಳ ಸಂಖ್ಯೆ ಕ್ಷೀಣಿಸಿದಂತೆ ಅಥವಾ ಕಣ್ಮರೆಯಾದಂತೆ, ಅವುಗಳ ಆನುವಂಶೀಯ ವೈವಿಧ್ಯವೂ ಗಣನೀಯವಾಗಿ ಕ್ಷೀಣಿಸುತ್ತದೆ. ವಿಷಾದದ ಸಂಗತಿಯೆಂದರೆ ಜೀವಿಗಳ ದೀರ್ಘಕಾಲದ ಉಳಿವು ಮತ್ತು ವಿಕಾಸ ಆನುವಂಶೀಯ ವೈವಿಧ್ಯವನ್ನೇ ಅವಲಂಬಿಸಿದೆ. ಆದ್ದರಿಂದ ಪ್ರಸಕ್ತ ಲಭ್ಯವಿರುವ ಜೀವಿ ವೈವಿಧ್ಯವನ್ನಾದರೂ ಸಂರಕ್ಷಣೋಪಾಯಗಳಿಂದ ಉಳಿಸಿಕೊಳ್ಳಬೇಕು. ಸಸ್ಯವನ, ಪ್ರಾಣಿವನ, ಜಲಚರ ಸಂಗ್ರಹಾಲಯ ಮತ್ತೂ ಸಂರಕ್ಷಣಾಲಯಗಳಲ್ಲಿ ಜೀವಿ ಸಂದಣಿಗಳನ್ನು ಕಾಪಾಡುವುದರಿಂದ ಜೀವಿ ವೈವಿಧ್ಯವನ್ನು ಉಳಿಸಿಕೊಳ್ಳಬಹುದು.

ಪ್ರಭೇದವೊಂದರ ಸಂಖ್ಯೆ ಗಣನೀಯವಾಗಿ ಕ್ಷೀಣಿಸಿ, ಅದರ ವಾಸನೆಯೂ ಸಾಕಷ್ಟು ಕಡಿಮೆಯಾಗಿ, ಒಂದೊಮ್ಮೆ ಅದನ್ನು ಸಂರಕ್ಷಿಸದ್ದರೆ ಶೀಘ್ರದಲ್ಲೇ ವಿಲುಪ್ತಿಗೊಳ್ಳುವ ಅಪಾಯವಿದ್ದರೆ, ಅಂಥ ಪ್ರಭೇದವನ್ನು ವಿನಾಶದಂಚಿನಲ್ಲಿರುವ ಪ್ರಭೇದ ಎನ್ನುತ್ತಾರೆ. ಉದಾ : ಚುಕ್ಕಿ ಗೂಬೆ, ಆಮೆ, ಕಪ್ಪು ಘೇಂಡಾಮೃಗ, ಡುಗಾಂಗ್, ಕೆಂಪು ಪಾಂಡ, ಹಿಮಚಿರತೆ, ನವಿಲು ಇತ್ಯಾದಿ.

ಅತಿಶೋಷಣೆಯಿಂದಾಗಲಿ ಅಥವಾ ವಾಸನೆಲೆಯ ವಿನಾಶದಿಂದಾಗಲಿ ಪ್ರಭೇದವೊಂದರ ಸಂಖ್ಯಾಸಂದಣಿ ನಿರಂತರವಾಗಿ ಕ್ಷೀಣಿಸುತ್ತಿದ್ದರೆ, ಅಂಥದನ್ನು

ಅಪಾಯಕ್ಕೀಡಾಗಿರುವ ಪ್ರಭೇದ ಎಂದುಕರೆಯುತ್ತಾರೆ. ಪ್ರಭೇದದ ಸದಸ್ಯ ಜೀವಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೂ, ಸುಧಾರಣಾ ಕ್ರಮಗಳನ್ನು ಕೈಗೊಳ್ಳದಿದ್ದರೆ ಅದು ವಿನಾಶದಂಚಿಗೆ ದೂಡಲ್ಪಡಬಹುದು.

ವಿನಾಶದಂಚಿನಲ್ಲಿರುವ ಪ್ರಭೇದ ಅಥವಾ ಅಪಾಯಕ್ಕೀಡಾಗಿರುವ ಪ್ರಭೇದವಲ್ಲದಿದ್ದರೂ, ಈ ಗುಂಪುಗಳಿಗೆ ಸೇರುವ ಅಪಾಯವಿರುವ ಪ್ರಭೇದಗಳಿಗೆ ಅಪರೂಪದ ಪ್ರಭೇದ ಎನ್ನುತ್ತಾರೆ. ಇಂಥ ಪ್ರಭೇದಗಳು ಸಾಮಾನ್ಯವಾಗಿ ಸ್ಥಳೀಯ ಪ್ರಭೇದ (ಎನ್‌ಡೆಮಿಕ್ ಸ್ಪೀಸೀಸ್) ಗಳಾಗಿರುತ್ತವೆ. ಉದಾ : ಪಶ್ಚಿಮ ಘಟ್ಟದ ಸೀತಾಳೆ ಗಿಡಗಳು (ಆರ್ಕಿಡ್ಸ್).

ಕೆಂಪು ಮಾಹಿತಿ ಪುಸ್ತಕಗಳು (ರೆಡ್ ಡೇಟಾ ಬುಕ್ಸ್): ಸ್ವಿಟ್ಸರ್‌ಲ್ಯಾಂಡ್‌ನ ಗ್ಲಾಂಡ್‌ದಲ್ಲಿರುವ ವಿಶ್ವ ಸಂರಕ್ಷಣಾ ಸಂಘ ಒಂದು ಖಾಸಗಿ ಸಂಸ್ಥೆ. ಇದು ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ಅನೇಕ ಜಾಗತಿಕ ಕಾರ್ಯಕ್ರಮಗಳನ್ನು ಸಂಘಟಿಸುತ್ತದೆ. ಪ್ರಪಂಚದಾದ್ಯಂತ ಲಭ್ಯವಿರುವ, ಅಪಾಯಕ್ಕೀಡಾಗಿರುವ ಪ್ರಭೇದಗಳ ಪ್ರಮಾಣವನ್ನು ಸೂಚಿಸುವ ಪಟ್ಟಿಮಾಡುವಿಕೆ, ಅವುಗಳ ಸಂರಕ್ಷಣೆ, ನಾಶ, ಸಂಖ್ಯಾಸಂದಣಿ, ವಾಸನೆಲೆ, ಅಪಾಯಕ್ಕೀಡಾದ ಕಾರಣಗಳು ಇವೇ ಮುಂತಾದ ಮಾಹಿತಿಗಳನ್ನೊಳಗೊಂಡ ಕೆಂಪು ಮಾಹಿತಿ ಪುಸ್ತಕಗಳ ಪ್ರಕಟಣೆಯನ್ನು ಈ ಸಂಸ್ಥೆ ಸಾದರಪಡಿಸುತ್ತದೆ. ಈ ಮಾಹಿತಿ ಪುಸ್ತಕವೇ ಕೆಂಪು ಮಾಹಿತಿ ಪುಸ್ತಕ ಅಥವಾ ರೆಡ್‌ಡೇಟಾ ಬುಕ್. ಇಂಗ್ಲೆಂಡಿನ ಕೇಂಬ್ರಿಡ್ಜ್‌ನಲ್ಲಿರುವ ವಿಶ್ವ ಸಂರಕ್ಷಣಾ ನಿಯಂತ್ರಣಾ ಕೇಂದ್ರ (ವರ್ಲ್ಡ್ ಕನ್ಸರ್‌ವೇಶನ್ ಮಾನಿಟರಿಂಗ್ ಸೆಂಟರ್) ವು ರೆಡ್ ಡೇಟಾ ಪುಸ್ತಕಗಳ ಪ್ರಕಟಣೆಯ ಮೇಲ್ವಿಚಾರಣೆಯನ್ನು ನಡೆಸುತ್ತದೆ. (ಬಿ.ಕೆ.ಎಮ್)

**ವಿಲ್ಕಿನ್ಸ್, ಎಂ.ಎಚ್.ಎಫ್ (1916–2004):** ಡಿಎನ್‌ಎ ದ್ವಿಸುರುಳಿ ಅನ್ವೇಷಣೆಯಲ್ಲಿ ಪ್ರಮುಖ ಪಾತ್ರಧಾರಿ ಬ್ರಿಟಿಷ್ ಭೌತ ವಿಜ್ಞಾನಿ. ಮಾರೀಸ್ ಹುಗ್ ಫೆಡ್‌ರಿಕ್ ವಿಲ್ಕಿನ್ಸ್, ಸಂಕ್ಷಿಪ್ತವಾಗಿ ಮಾರೀಸ್ ವಿಲ್ಕಿನ್ಸ್ 1916 ರ ಡಿಸೆಂಬರ್ 15 ರಂದು ನ್ಯೂಜಿಲೆಂಡ್‌ನ ಪೊಂಗ್ಕಾರೋನಲ್ಲಿ ಜನಿಸಿದ. ಈತನ ಮಾತ–ಪಿತೃಗಳು ಮೂಲತಃ ಐರ್ಲೆಂಡಿನವರು. ತಂದೆ ಈಡ್ಗರ್ ಹೆನ್ರಿ ವಿಲ್ಕಿನ್ಸ್‌ರು ವೈದ್ಯಕೀಯ ಕಾಲೇಜೊಂದರಲ್ಲಿ ವೈದ್ಯರಾಗಿದ್ದರು.

ಆರು ವಯಸ್ಸಿನ ಬಾಲಕ ಮಾರೀಸ್ ವಿಲ್ಕಿನ್ಸ್‌ನನ್ನು ಇಂಗ್ಲೆಂಡಿನ ಬರ್ಮಿಂಗ್‌ಹಾಮ್‌ನ ಎಡ್ವರ್ಡ್ ಶಾಲೆಗೆ ಸೇರಿಸಲಾಯಿತು. ಬಳಿಕ 1938 ರಲ್ಲಿ ಈತ ಕೇಂಬ್ರಿಡ್ಜ್‌ನ ಸೆಂಟ್ ಜಾನ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪದವಿಯನ್ನು ಗಳಿಸಿಕೊಂಡ. ಅನಂತರ ಬರ್ಮಿಂಗ್‌ಹಾಮ್ ವಿಶ್ವವಿದ್ಯಾಲಯದ ಭೌತಶಾಸ್ತ್ರ ಪ್ರಾಧ್ಯಾಪಕ ಡಾ. ಜೆ.ಟಿ. ರಾಂಡಾಲರಿಗೆ ಸಂಶೋಧನಾ ಸಹಾಯಕನಾದ. ಘನವಸ್ತುಗಳ ದೀಪ್ತಿಶೀಲತೆ (ಲ್ಯುಮಿನೆಸೆನ್ಸ್ ಆಫ್ ಸಾಲಿಡ್ಸ್) ಯನ್ನು ಕುರಿತು ಅಧ್ಯಯನ ನಡೆಸಿದ. ರಂಜಕದಲ್ಲಿ ಸೆರೆಹಿಡಿದ ಎಲೆಕ್ಟ್ರಾನುಗಳ ಉಷ್ಣತಾ ಸ್ಥಿರತೆಯನ್ನು ಕುರಿತು ಸಂಶೋಧನೆ ನಡೆಸಿ 1940 ರಲ್ಲಿ ಪಿಎಚ್‌ಡಿ ಪದವಿಯನ್ನು ಪಡೆದುಕೊಂಡ.

ಯುರೇನಿಯಂ ಸಮಸ್ಥಾನಿ (ಐಸೋಟೋಪ್) ಗಳ ಮಾಸ್ ಸ್ಪೆಕ್ಟ್ರೋಗ್ರಾಫ್ ಬೇರ್ಪಡಿಸುವಿಕೆಯನ್ನು ಕುರಿತು ಪ್ರೊ. ಎಂ.ಎಲ್.ಇ. ಒಲಿಫಂಟ್ ಅವರೊಡನೆ ಅಧ್ಯಯನ ನಡೆಸಿದ ಸ್ವಲ್ಪ ಕಾಲದ ನಂತರ ಬರ್ಮಿಂಗ್‌ಹಾಮ್‌ನಿಂದ ಕ್ಯಾಲಿಫೋರ್ನಿಯಕ್ಕೆ ತೆರಳಿ ಅಲ್ಲಿ ಪರಮಾಣು ಬಾಂಬು ತಯಾರಿಕೆಯ ಮ್ಯಾನ್‌ಹಟಾನ್ ಯೋಜನೆಗೆ ಸೇರಿಕೊಂಡ.

ಸ್ಕಾಟ್ಲ್ಯಾಂಡ್‌ನ ಸಂತ ಆಂಡ್ರ್ಯೂಸ್ ವಿಶ್ವವಿದ್ಯಾಲಯದಲ್ಲಿ 1945 ರಿಂದ ಏಳು ವರ್ಷಗಳ ಕಾಲ ಭೌತಶಾಸ್ತ್ರದ ಉಪನ್ಯಾಸಕನಾಗಿ ಕಾರ್ಯ ನಿರ್ವಹಿಸಿದ ಬಳಿಕ, ಅಂದಿಗೆ ನವಜಾತವಾಗಿದ್ದ ಜೀವಭೌತವಿಜ್ಞಾನದಲ್ಲಿ ಸಂಶೋಧನೆಯನ್ನು ಕೈಗೊಂಡು, 1946 ರಲ್ಲಿ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಆಗಿನ್ನೂ ಸ್ಥಾಪಿತವಾಗಿದ್ದ ವೈದ್ಯಕೀಯ ಸಂಶೋಧನಾ ಮಂಡಲಿಯ ಜೀವಭೌತ ವಿಜ್ಞಾನದ ಘಟಕದಲ್ಲಿ ಸೇರಿಕೊಂಡರು. ಪ್ರಪ್ರಥಮವಾಗಿ ಶ್ರವಣಾತೀತ ಶಬ್ದದಲೆಗಳಿಂದ ಉಂಟಾಗುವ ಆನುವಂಶಿಕ ಪರಿಣಾಮಗಳಿಗೆ ಸಂಬಂಧಿಸಿದ ಅಧ್ಯಯನ ಕೈಗೊಂಡ. ಆನಂತರ ಜೀವಶಾಸ್ತ್ರ ಸಂಬಂಧಿತ ಹಲವಾರು ವಿಷಯಗಳನ್ನು ಕುರಿತು ಸಂಶೋಧನೆ ನಡೆಸಿದ. ಅವುಗಳಲ್ಲಿ ಪ್ರಮುಖವಾದುವು : ನ್ಯೂಕ್ಲಿಕ್ ಆಮ್ಲಗಳ ನೇರಳಾತೀತ ಸೂಕ್ಷ್ಮರೋಹಿತ ದ್ಯುತಿಮಾಪಕೀಯ (ಅಲ್ಟ್ರಾವಯಲೆಟ್ ಮೈಕ್ರೊಸ್ಪೆಕ್ಟ್ರೊಮಿಟ್ರಿಕ್) ಅಧ್ಯಯನಕ್ಕಾಗಿ ಪ್ರತಿಫಲನ ಸೂಕ್ಷ್ಮದರ್ಶಕಗಳ ಅಭಿವೃದ್ಧಿ); ಟೊಬ್ಯಾಕೊ ಮೊಸಾಯಿಕ್ ವೈರಾಣುವಿನ ಪ್ಯೂರಿನ್ ಮತ್ತು ಪಿರಮಿಡಿನ್‌ಗಳ ಅಭಿವಿನ್ಯಾಸ ಅಧ್ಯಯನ; ದೃಗ್ಗೋಚರ ಬೆಳಕಿನ ದ್ರವಿಕಾರಕ ಸೂಕ್ಷ್ಮದರ್ಶಕಗಳ (ಇಂಟರ್‌ಫೆರೆನ್ಸ್ ಮೈಕ್ರೊಸ್ಕೋಪ್) ಸಹಾಯದಿಂದ ಟೊಬ್ಯಾಕೊ ಮೊಸಾಯಿಕ್ ವೈರಾಣುಗಳನ್ನು ಕುರಿತ ಹೆಚ್ಚಿನ ಅಧ್ಯಯನ; ಡಿಎನ್‌ಎ ಮತ್ತು ವೈರಾಣು ಶಿರಗಳ ಕ್ಷ–ಕಿರಣ ವಿವರ್ತನೆ (ಎಕ್ಸ್–ರೇ ಡಿಫ್ರಾಕ್ಷನ್) ಅಧ್ಯಯನ, ಡಿಎನ್‌ಎ ಕುರಿತ ಈ ಕ್ಷ–ಕಿರಣ ವಿವರ್ತನೆ ಅಧ್ಯಯನಗಳೇ, ಅದರ ಅಣ್ವಕ ಸಂರಚನೆಯನ್ನು ಬಯಲುಗೊಳಿಸಲು ಸಹಾಯುವಮಾಡಿದ್ದು ಎಂದರೆ ಅತಿಶಯೋಕ್ತಿಯಾಗಲಾರದು. ವ್ಯಾಟ್ಸನ್–ಕ್ರಿಕ್‌ರ ಡಿಎನ್‌ಎ ದ್ವಿ–ಸುರುಳಿ ಮಾದರಿಯ ನಿಖರತೆಯನ್ನು ಸ್ಪಷ್ಟಪಡಿಸಿದ್ದು ಕ್ಷ–ಕಿರಣ ಸಂಬಂಧಿತ ಈ ಅಧ್ಯಯನಗಳೇ!

1950 ರಲ್ಲಿ ವಿಲ್ಕಿನ್ಸನು ವೈದ್ಯಕೀಯ ಸಂಶೋಧನಾ ಮಂಡಳಿಯ ಸಹಾಯಕ ನಿರ್ದೇಶಕರಾದನು. ಕಿಂಗ್ಸ್ ಕಾಲೇಜಿನಲ್ಲಿ ಜೀವಿಭೌತವಿಜ್ಞಾನ ಉಪವಿಭಾಗವೊಂದು ಸ್ಥಾಪಿತವಾಗಲು, ಇವನು ಇಲ್ಲಿ ಗೌರವ ಉಪನ್ಯಾಸಕನಾಗಿಯೂ ಸೇವೆ ಸಲ್ಲಿಸಿದರು.

1959 ರಲ್ಲಿ ಎಫ್.ಆರ್.ಎಸ್. ಆಗಿ ಆಯ್ಕೆಯಾದ ಇವನು, 1960 ರಲ್ಲಿ ಅಮೇರಿಕೆಯ ಪಬ್ಲಿಕ್ ಹೆಲ್ತ್ ಅಸೋಸಿಯೇಶನ್ ನೀಡಿದ ಆಲ್ಬರ್ಟ್ ಲಸ್ಕರ್ ಪಾರಿತೋಷಕವನ್ನು ವ್ಯಾಟ್ಸನ್ ಮತ್ತು ಕ್ರಿಕ್‌ರೊಂದಿಗೆ ಹಂಚಿಕೊಂಡ. 1962 ರಲ್ಲಿ ವ್ಯಾಟ್ಸನ್ ಮತ್ತು ಕ್ರಿಕ್‌ರೊಂದಿಗೆ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಯನ್ನು ಹಂಚಿಕೊಂಡರು.

1959 ರಲ್ಲಿ ಪ್ಯಾಟ್ರಿಸಿಯಾ ಆನ್ ಚಿಡ್ಗೆ ಇವರನ್ನು ವಿವಾಹವಾದರು. ಈ ದಂಪತಿಗಳಿಗೆ ಸಾರಾಃ ಎಂಬ ಮಗಳು ಮತ್ತು ಜಾರ್ಜ್ ಎಂಬ ಮಗನೂ ಜನಿಸಿದರು. ಶಿಲ್ಪಗಳ ಸಂಗ್ರಹ, ತೋಟಗಾರಿಕೆ – ಇವು ಇವನ ಪ್ರಮುಖ ಹವ್ಯಾಸಗಳಾಗಿದ್ದವು.

2004 ರ ಅಕ್ಟೋಬರ್ 5 ರಂದು ಇಂಗ್ಲೆಂಡಿನಲ್ಲಿ ನಿಧನನಾದನು. (ಬಿ.ಕೆ.ಎಂ.)

**ವೀರ್ಯಾಣು:** ಪುರುಷರ ವೀರ್ಯದಲ್ಲಿ (ರೇತಸ್ಸು, ಧಾತು–ಸೀಮೆನ್) ಇರುವ, ಗಂಡು ಲಿಂಗಾಣು (ಸ್ಪರ್ಮಟೊಝೋವ). ಶುಕ್ಲಾಣು, ಶುಕ್ರಾಣು, ರೇತ್ರಾಣು, ಪರ್ಯಾಯನಾಮಗಳು. ವೀರ್ಯಾಣುಗಳು ಪುರುಷ ಪ್ರಜನನಕೋಶವಾದ ವೃಷಣದಲ್ಲಿ (ಟೆಸ್ಟಿಕಲ್) ಉತ್ಪತ್ತಿ ಆಗುತ್ತವೆ. ಒಂದೊಂದು ವೀರ್ಯಾಣುವಿನ ಉದ್ದ ಸುಮಾರು ೫೦–೬೦ ಮೈ. (೧ ಮೈ. = ೧ ಮೀಟರಿನ ಒಂದು ದಶಲಕ್ಷ ಭಾಗ). ತಲೆಭಾಗ ದುಂಡಗೆ ದಪ್ಪವಾಗಿದ್ದು ೫ ಮೈ. ಉದ್ದವಿದ್ದು, ವೀರ್ಯಾಣುವಿನ ಕೇಂದ್ರಭಾಗವಾಗಿದೆ. ಇದಕ್ಕೆ ಸೇರಿದಂತೆ ಕತ್ತು ಮತ್ತು ಬಾಲಭಾಗಗಳಿವೆ. ಕತ್ತಿನ ಉದ್ದ ಸು. ೦.೧ ಮೈ. ಈ ಭಾಗದಲ್ಲಿ ಮೈಟೊಕಾಂಡ್ರಿಯಗಳಿದ್ದು, ವೀರ್ಯಾಣುವಿನ ಈಜುವಿಕೆಗೆ ಅಗತ್ಯವಾದ ಶಕ್ತಿಯನ್ನು ಪೂರೈಸುತ್ತಿವೆ. ಬಾಲದ ಸಹಾಯದಿಂದ ವೀರ್ಯಾಣುಗಳು ಚಲನವಲನಗಳನ್ನು ಪ್ರದರ್ಶಿಸುತ್ತವೆ. ಇವು ಸ್ತ್ರೀ ಜನನೇಂದ್ರಿಯ ನಾಳದೊಳಗೆ ಹೋಗಿ ಅಲ್ಲಿರುವ ಲೋಳೆರಸದಲ್ಲಿ ನಿಮಿಷಕ್ಕೆ ೨–೭ ಮಿಮೀ ದೂರದಲ್ಲಿ ಈಜಿಕೊಂಡು ಹೋಗಿ ಅಂಡಾಣುಗಳನ್ನು ಸಮೀಪಿಸಿ ಅವುಗಳೊಡನೆ ಮಿಲನಗೊಳ್ಳುತ್ತವೆ. ಈ ಕ್ರಿಯೆಗೆ ನಿಷೇಚನೆ ಎಂದು ಹೆಸರು ಒಂದು ಸಂಭೋಗದಲ್ಲಿ ಅನೇಕ ವೀರ್ಯಾಣುಗಳು ಯೋನಿಯನ್ನು ಪ್ರವೇಶಿಸಿದಾಗ ಅಲ್ಲಿ ಅಂಡಾಣುಗಳು ಸಿದ್ಧವಾಗಿದ್ದರೆ ಮಾತ್ರ ನಿಷೇಚನೆ ಜರಗುತ್ತದೆ. ವೀರ್ಯಾಣುಗಳು ಮನುಷ್ಯನ ಲೈಂಗಿಕ ಪ್ರೌಢತೆ ಕಾಲದಿಂದ ಅಂದರೆ, ೧೪–೧೮ನೆಯ ವಯಸ್ಸಿನಿಂದ ೬೦–೬೫ ವಯಸ್ಸಿನ ತನಕವೂ ಉತ್ಪತ್ತಿಯಾಗುತ್ತಿರುತ್ತವೆ. ವೃಷಣದಲ್ಲಿ ಉತ್ಪತ್ತಿಯಾದ ವೀರ್ಯಾಣುಗಳು (ನೋಡಿ ಲಿಂಗಾಣು ಉತ್ಪಾದನೆ) ಎಪಿಡಿಡಿಮಸ್‌ನಲ್ಲಿ ಕಾರ್ಯ ಪ್ರೌಢತೆಯನ್ನು ಪಡೆಯುತ್ತವಲ್ಲದೆ, ಸ್ತ್ರೀ ಜನನಾಂಗಗಳಲ್ಲಿಯೂ ಕೂಡ ಮಾರ್ಪಾಡಾಗಿ, ಅಂಡಾಣುವನ್ನು ನಿಷೇಚಿಸಲು ಯೋಗ್ಯವಾಗುತ್ತವೆ.

ವೃಷಣಗಳಲ್ಲಿ ಅಸಂಖ್ಯಾತ ವೀರ್ಯಾಣುಗಳ ಉತ್ಪತ್ತಿಯಾಗಿ, ಆಯಾ ಪ್ರಾಣಿ ಪ್ರಭೇದಕ್ಕೆ ನಿಗದಿತವಾದ ಸಂಖ್ಯೆಯಲ್ಲಿ ಪ್ರತಿ ಮಿಲಿ ವೀರ್ಯದಲ್ಲಿರುತ್ತವೆ. ವೀರ್ಯಾಣುಗಳ ಸಂಖ್ಯೆ ಬಹಳ ಕಡಿಮೆ ಇದ್ದರೆ (ಸಾಮಾನ್ಯಕ್ಕಿಂತ), ಇಂತಹ ಪ್ರಾಣಿಯ ವೀರ್ಯವು ಅಂಡಾಣುವನ್ನು ನಿಷೇಚಿಸಲು ಅಸಮರ್ಥವಾಗುತ್ತದೆ. ಸ್ಖಲಿತ ವೀರ್ಯದಲ್ಲಿ ಪ್ರತಿಶತ ೮೦ ವೀರ್ಯಾಣುಗಳಲ್ಲಿ ಚಲನೆ ಇದ್ದರೆ ಮಾತ್ರ ನಿಷೇಚನ ಸಾಧ್ಯವಿದೆ. ಪ್ರತಿ ಸ್ತನಿ ಪ್ರಭೇದಕ್ಕೂ ಅದರದೇ ವಿಶಿಷ್ಟ ವೀರ್ಯಾಣುವಿನ ರಚನೆ ಹಾಗು ಅದರಲ್ಲಿರುವ ವರ್ಣತಂತುಗಳ ಸಂಖ್ಯೆ ಇರುತ್ತದೆ. ವೀರ್ಯಾಣುವಿನ ತಲೆಯ ಅಸಹಜ ರಚನೆ ಇದ್ದರೆ (ಅಬ್‌ನಾರ್ಮಲ್ ಷೇಪ್) ಅಂಥ ವಿರ್ಯಾಣುಗಳಿಗೆ ನಿಷೇಚನ ಸಾಮರ್ಥ್ಯವಿರುವುದಿಲ್ಲ. ಇಂಥ ವೀರ್ಯಾಣುಗಳ ಸಂಖ್ಯೆ ವೀರ್ಯದಲ್ಲಿ ಜಾಸ್ತಿಯಾದರೆ ಬಂಜೆತನ ಬರುವ ಸಾಧ್ಯತೆ ಇದೆ. ಹಲವು ಕೀಟನಾಶಕಗಳು ಮತ್ತು ಇತರೆ ವಿಷವಸ್ತುಗಳ (ಟಾಕ್ಸಿನ್) ಸೇವನೆಯಿಂದ ವೀರ್ಯಾಣುಗಳಲ್ಲಿ ಇಂಥ ಮಾರ್ಪಾಡುಗಳಾಗುತ್ತವೆ. ಇತ್ತೀಚಗೆ ಆಶ್ಚರ್ಯಕರವಾಗಿ ಮನುಷ್ಯರ ವೀರ್ಯದಲ್ಲಿ ವೀರ್ಯಾಣುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವುದು ಬೆಳಕಿಗೆ ಬಂದಿದೆ, ಇದು ಆಧುನಿಕ ತಂತ್ರಜ್ಞಾನದಲ್ಲಿ ಬಳಸುತ್ತಿರುವ ವಿವಿಧ ರಾಸಾಯನಿಕಗಳ ಪ್ರಭಾವವಿರಬಹುದು. ***

**ವೈರಸ್‌ಗಳು:** ವೈರಸ್‌ಗಳು ಪ್ರೊಟೀನ್ ಕವಚದಿಂದ ಸುತ್ತುವರಿಯಲ್ಪಟ್ಟ ನ್ಯೂಕ್ಲಿಯಿಕ್ ಆಮ್ಲವನ್ನೊಳಗೊಂಡಿರುವ ಕೋಶರಹಿತ ನಿರ್ಜೀವಿ–ಜೀವಿಗಳ ನಡುವಿನ ಸ್ಥಿತಿಯಲ್ಲಿರುವ ವಸ್ತುಗಳು. ಇವು ಜೀವಕೋಶಗಳಿಗಿಂತಲೂ ಸೂಕ್ಷ್ಮವಾಗಿದ್ದು 0.02 ರಿಂದ 0.03 ಮೈಕ್ರಾನ್‌ಗಳ ಆಸುಪಾಸಿನಲ್ಲಿ ಇವುಗಳ ಅಳತೆಯಿರುವುದು. ಕೋಶಾತೀತ ಸ್ಥಿತಿಯಲ್ಲಿನ ವೈರಸ್ ಕಣಗಳಿಗೆ ವೈರಿಯಾನ್‌ಗಳೆಂದು ಹೆಸರು. ವೈರಿಯಾನ್ ಸ್ಥಿತಿಯಲ್ಲಿ ಇವುಗಳಲ್ಲಿನ ಜೀವದ್ರವ್ಯ ಪರಿಣಾಮವು ಸಂಭವಿಸದೆ ನಿಶ್ಚಲವಾಗಿರುತ್ತವೆ. ಏಕೆಂದರೆ, ಅವುಗಳಲ್ಲಿ ಜೀವದ್ರವ್ಯ ಪರಿಣಾಮದ (ಮೆಟಬಾಲಿಕ್) ಕಾರ್ಯತಂತ್ರವಿರುವುದಿಲ್ಲ. ತಮ್ಮನ್ನು ತಾವೇ ನಿರ್ಮಿಸಿಕೊಳ್ಳಲು ಈ ಆನುವಂಶೀಯ ಘಟಕಗಳು ಜೀವಕೋಶಗಳಿಗೆ ಸೋಂಕು ತಗುಲಿಸಿ ರೈಬೋಸಮ್‌ಗಳು, ರಾಸಾಯನಿಕ ಕಿಣ್ವಗಳು ಮತ್ತು ಅಪಚಯ ಕ್ರಿಯೆಯ (ಕ್ಯಾಟಬಾಲಿಕ್) ಸಾಮರ್ಥ್ಯವನ್ನು ಬಳಸಿಕೊಳ್ಳುತ್ತವೆ. ಬ್ಯಾಕ್ಟೀರಿಯಾ, ಪ್ರಾಣಿ ಹಾಗೂ ಸಸ್ಯ ಜೀವಕೋಶಗಳು ನಿರ್ದಿಷ್ಟ ವೈರಸ್‌ಗಳಿಂದ ಸೋಂಕಿಗೆ ಎಡೆಗೊಡುತ್ತವೆ. ವೈರಸ್‌ಗಳು ಅಂತರ್‌ಕೋಶ ಪರಾವಲಂಬನಕ್ಕೆ ಬದ್ಧವಾಗುತ್ತವೆ.

ವೈರಸ್‌ಗಳು ಪರಜೀವಕೋಶಗಳಲ್ಲಿಯಷ್ಟೆ ಜೈವಿಕ ಕ್ರಿಯೆ ತೋರ್ಪಡಿಸುವ ಸೂಕ್ಷ್ಮಜೀವಿಗಳು. ವೈರಸ್‌ಗಳು ಜೀವಿಗಳಲ್ಲಿ ಒಂದು ವಿಭಿನ್ನವರ್ಗ ಅಂತ ಎಂ.ಡಬ್ಲ್ಯೂ ಬೆಯ್ಜೆರಿಂಕ್ ಎಂಬಾತ (1899) ಗುರುತಿಸಿದ. ವೈರಸ್‌ಗಳು ಸೂಕ್ಷ್ಮದರ್ಶಕಗಳ ನೆರವಿನಿಂದ ಪ್ರತ್ಯೇಕಿಸಲಾಗದಷ್ಟು ಸೂಕ್ಷ್ಮಗಾತ್ರದುವು. ಅಲ್ಲದೆ, ಬ್ಯಾಕ್ಟೀರಿಯಾ ಅಭಿವರ್ಧನೆಗಾಗಿ ಇರುವ ಕೃತಕ ಮಾಧ್ಯಮದಲ್ಲಿ ಅವು ಬೆಳೆಯುವುದಿಲ್ಲ. ಅನೇಕರು ವೈರಸ್‌ಗಳನ್ನು ಬ್ಯಾಕ್ಟೀರಿಯಾದ ಪಥಭ್ರಷ್ಟ ವಿಧಗಳು ಅಂತ ತಿಳಿದಿದ್ದರು. ಮುಂದೆ ಫ್ರೆಡೆರಿಕ್ ಟ್ವೋರ್ಟ್ ಎಂಬ ಸೂಕ್ಷ್ಮಜೀವಿಶಾಸ್ತ್ರಜ್ಞ ವೈರಸ್‌ಗಳು ನಿಜಕ್ಕೂ ಅಪೂರ್ವವಾದುವು ಎಂದು ನಿರೂಪಿಸಲು ಯತ್ನಿಸಿದನು. ರೋಗವಾಹಕ ವೈರಸ್‌ಗಳ ಉಗಮವು ನಿರುಪದ್ರವಿ ಪೂರ್ವಜರಿಂದಾದುದು ಅಂತಲೂ ಅತ ಯೋಚಿಸಿದ. ಇದನ್ನು ನಿರೂಪಿಸಲು ಆತ ಸಿಡುಬಿನ ಚುಚ್ಚುಮದ್ದಿನ ದ್ರವದಲ್ಲಿ ಪೌಷ್ಟಿಕ ಜೀವಾಣುವರ್ಧಕ ಸಾಧನವನ್ನು ಒಳಸೇರಿಸಿದನು. ನಂತರ ಜೀವಾಣುಗಳ ಬೆಳವಣಿಗೆಯನ್ನು ಗಮನಿಸತೊಡಗಿದನು. ಆದರೆ, ಆ ದ್ರವದಲ್ಲಿದ್ದ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ಮಾತ್ರ ನೋಡಲು ಅವನಿಗೆ ಸಾಧ್ಯವಾಯಿತು. ನಂತರ, 1951 ರಲ್ಲಿ ಆತ ಆ ಮಾಧ್ಯಮದಲ್ಲಿ ಬ್ಯಾಕ್ಟೀರಿಯಾ ಮರಣಕ್ಕೆ ಕಾರಣವಾಗುವ ವೈರಸ್ಸನ್ನು ಕಂಡುಹಿಡಿದನು. ಕ್ರಿಯಾಶೀಲ ಬ್ಯಾಕ್ಟೀರಿಯಾ ವೈರಸ್‌ಗಳ ಮೊದಲ ವರದಿಯು ಇದಾಗಿದೆ. ಆದರೆ ಈ ಸಂಶೋಧನೆಯನ್ನು ವ್ಯಾಪಕವಾಗಿ ಅವಗಣಿಸಲಾಯಿತು. ಫೆಲಿಕ್ಸ್ ಡಿ ಗೆರೆಲ್ಲೆ (1953) ಎಂಬುವ ಬ್ಯಾಕ್ಟೀರಿಯೋಫೇಜ್ ಎಂಬ ಬ್ಯಾಕ್ಟೀರಿಯಾ ನಾಶಕ ವೈರಸ್ ವಿಚಾರವನ್ನು ಪ್ರಚುರಪಡಿಸಿದನು. ಇವು ವೈರಸ್‌ಗಳೆಂದು ಅವನು ಅಭಿಪ್ರಾಯಪಟ್ಟನು. ಬ್ಯಾಕ್ಟೀರಿಯಾ ಫೇಜ್ ಸಂಬಂಧದ ಈ ಸಂಶೋಧನೆಗೆ ಪ್ರಾಥಮಿಕ ಪ್ರೇರಣೆಯು ಔಷಧವಾಗಿತ್ತು ಎಂಬುದು ಕುತೂಹಲಕರ. ಟೈಫಸ್ ಜ್ವರ, ಕಾಲರಾ, ಆಂಥ್ರಾಕ್ಸ್ ಮುಂತಾದ ಬ್ಯಾಕ್ಟೀರಿಯಾ ಕಾಯಿಲೆಗಳನ್ನು ಸೂಕ್ತ ಬ್ಯಾಕ್ಟೀರಿಯಾಫೇಜ್‌ಗಳಿಂದ ಚಿಕಿತ್ಸೆ ಮಾಡಬಹುದು ಎಂದಾತ ಯೋಚಿಸಿದ.

1936 ರಲ್ಲಿ ಸೆಟ್ಲೆಸಿಂಜರ್ ಎಂಬಾತ ವೈರಸ್‌ಗಳ ಜೀವರಾಸಾಯನಿಕ ಸಂಯೋಜನೆಯನ್ನು ವಿಶ್ಲೇಷಿಸಿದನು. ಈ ಸಂಶೋಧನೆಯಿಂದ ವೈರಸ್‌ಗಳು, ಮುಖ್ಯವಾಗಿ ಡಿಎನ್‌ಎ ಮತ್ತು ಪ್ರೋಟಿನ್‌ಗಳನ್ನು ಒಳಗೊಂಡಿವೆ ಎಂಬುದು ತಿಳಿದುಬಂತು.

ರಚನೆ: ರಚನೆಯಲ್ಲಿ ವೈರಸ್‌ಗಳು ಜೀವಿಗಳಲ್ಲೆಲ್ಲಾ ಅತ್ಯಂತ ಸರಳವಾದುವು. ವೈರಸ್‌ಗಳ ರಚನೆಯನ್ನು ಅರಿಯಲು ಒಂದು ಬ್ಯಾಕ್ಟೀರಿಯಾಫೇಜ್‌ಅನ್ನು ಮಾದರಿಯಾಗಿ ತೆಗೆದುಕೊಳ್ಳಬಹುದು. ಮೂಲತಃ ನ್ಯೂಕ್ಲಿಯಿಕ್ ಆಮ್ಲವನ್ನು ಆವರಿಸಿರುವ ಪ್ರೊಟೀನ್ ಆವರಣದಿಂದ ಬ್ಯಾಕ್ಟೀರಿಯಾಫೇಜ್ ಸಂಯೋಜನೆಗೊಂಡಿದೆ. ಸೀತಾಳೆ ಸಿಡುಬಿಗೆ ಕಾರಣವಾಗುವಂತಹ ಸ್ರಾವೆ ವೈರಸ್‌ಗಳು ಹೆಚ್ಚು ಸಂಕೀರ್ಣವಾಗಿರಬಹುದು. ಇವುಗಳಲ್ಲಿ ಒಂದಿಷ್ಟು ಕಾರ್ಬೋಹೈಡ್ರೇಟ್ ಮತ್ತು ಪ್ರೊಟೀನ್‌ಗಳಿರಬಹುದು. ಭಕ್ಷಕ ವಿಧದ ವೈರಸ್‌ಗಳೆಂದರೆ ಇ. ಕೊಲಿ–ಟಿ.ಫೇಜ್ ಇವುಗಳಿಗೆ ಟಿ 1 ರಿಂದ ಟಿ 7 ರವರೆಗೆ ಸಂಖ್ಯೆ ಕೊಡಲಾಗಿದೆ. ಟಿ. ಫೇಜ್‌ನ ತಳಿವಸ್ತು ಇರುವ ಪ್ರೊಟೀನಿನ ಶಿರವು ಷಡ್ಭುಜಾಕೃತಿಯ ಒಂದು ಪ್ರಿಸ್ಮಿನಂತಿರುತ್ತದೆ. ಇದೊಂದು ಎರಡು ಅವಯವದ ಡಿಎನ್‌ಎ ಅಣು. ಈ ಅಣು ಎರಡು ಸಮನಾಕ್ಷ ಟೊಳ್ಳು ಕೊಳವೆಗಳಿಂದ ಸಂಯೋಜನೆಗೊಂಡು, ಶಿರಕ್ಕೆ ಸೇರಿರುವ ಒಂದು ಬಾಲವಿದೆ. ಇದೊಂದು ಆಧಾರ ಹಾಳೆಯೊಳಗೆ ಇದೆ. ಈ ಆಧಾರ ಹಾಳೆಯು ಸಾಮಾನ್ಯವಾಗಿ ಆರು ಶಾಖೆಗಳುಳ್ಳ ಬಾಲವಾಗಿರುತ್ತದೆ. ಇದು ಬ್ಯಾಕ್ಟೀರಿಯಾದೊಡನೆ ಸಂಪರ್ಕಿಸುವ ಅಂಗ. ಸಂಪರ್ಕಿಸಿದನಂತರ ಇ.ಕೊಲಿಯೊಂದಿಗೆ ಈ ಬಾಲ ಪ್ರೊಟೀನು ಕೊಳವೆಯ ಮೂಲಕಸಾಗಿ ಬ್ಯಾಕ್ಟೀರಿಯಾದ ಒಳಗೆ ಸಾಗುವ ಫೇಜ್ ಡಿಎನ್‌ಎ ಅಲ್ಲಿ ಪ್ರತಿಗಳಾಗುವುದು. ತದನಂತರ ಹೊಸ ವೈರಸ್ ಸಂತಾನಗಳಾಗಿ ರೂಪುಗೊಳ್ಳುವುದು.




ವೈರಸ್‌ಗಳಲ್ಲಿರುವ ಆನುವಂಶೀಯ ಪದಾರ್ಥಗಳು ದ್ವಿ–ಎಳೆಗೆ ಸೀಮಿತವಲ್ಲ. ಏಕೆಂದರೆ, ಏಕ ಅಥವಾ ದ್ವಿ–ಎಳೆ ಅಣುಗಳು ಆನುವಂಶೀಯ ಪದಾರ್ಥಗಳಾಗಿ ವರ್ತಿಸಬಹುದು. ವೈರಲ್ ಆನುವಂಶೀಯ ಪದಾರ್ಥವು ಕಣದೊಳಗೆ ಇದ್ದು, ಪ್ರೋಟೀನಿನಿಂದ ಆವೃತವಾಗಿರುತ್ತದೆ. ಈ ರಚನೆಯನ್ನು ನ್ಯೂಕ್ಲಿಯೋ ಕ್ಯಾಪ್ಸಿಡ್ ಎನ್ನುತ್ತಾರೆ. ಪ್ರೊಟೀನ್ ಕವಚವು ಅನೇಕ ಪ್ರೊಟೀನ್ ಉಪವಿಭಾಗಗಳನ್ನೊಳಗೊಂಡಿದೆ. ಇದು ನ್ಯೂಕ್ಲಿಯಿಕ್ ಆಮ್ಲದ ಸುತ್ತಲೂ ಸುರುಳಿಯಾಗಿಯೋ, ಅಥವಾ 20 – ಬದಿಗಳನ್ನುಳ್ಳ ಕವಚವಾಗಿಯೋ ರೂಪುಗೊಂಡಿರುತ್ತದೆ. ಅಗತ್ಯಬೀಳುವ ಕ್ಯಾಪ್ಸೋಮರ್‌ಗಳ ಸಂಖ್ಯೆಯನ್ನು ಮಿತಗೊಳಿಸುವ ನಿಟ್ಟಿನಲ್ಲಿ ಈ ವ್ಯವಸ್ಥೆಯು ಜ್ಯಾಮಿತಿಕವಾಗಿ ಅತ್ಯಂತ ಪರಿಣಾಮಕಾರಿ. ಅದೇ ವಿಧವಾದ ಪ್ರೊಟೀನ್ ಉಪವಿಭಾಗಗಳ ನಡುವೆ ಇರಲು, ಪ್ರಭಾವಗೊಳ್ಳಲು ಅವು ಸ್ವಜೋಡಣೆಗೊಳ್ಳಬಹುದು.

ವೈರಸ್‌ಗಳ ಸ್ವಭಾವ: ವೈರಸ್‌ಗಳ ಬಗೆಗಿನ ಯಾವುದೇ ಸಾಮಾನ್ಯ ತೀರ್ಮಾನಕ್ಕೆ ಬರುವ ಮುನ್ನ ಮೂರು ಪ್ರಶ್ನೆಗಳು ಎದುರಾಗುತ್ತವೆ (1) ಸಂಯೋಜನೆ ಮತ್ತು ರಚನಾ ವೈಶಿಷ್ಟ್ಯಗಳಿಗೆ ಸಂಬಂಧಿಸಿದಂತೆ ವೈರಸ್‌ಗಳ ವೈಶಿಷ್ಟ್ಯವೇನು? (2) ವೈರಸ್ ಪ್ರಭಾವದ ಲಕ್ಷಣವೇನು? (3) ವೈರಸ್‌ಗಳಿಗೆ ಜೀವವಿದೆಯೆ?




ರಾಡ್‌ನ ಆಕಾರದಲ್ಲಿರುವ (20 x 300 ನಾನೋಮೀ) ಟುಬ್ಯಾಕೋಮೊಸಾಯಿಕ್ ವೈರಸ್ ಎಂಬುದು (ಟಿಎಂವಿ) ಬಹಳ ಸರಳ ವೈರಸ್‌ಗೆ ಉದಾಹರಣೆ (ಇದು ತಂಬಾಕಿಗೆ ಸೋಂಕುವ ಒಂದು ವೈರಸ್). ಈ ಸಸ್ಯ ವೈರಸ್‌ನ ವಂಶವಾಹಿ ಆರ್‌ಎನ್‌ಎ. ಇದು ಕೂಡ ಪ್ರೊಟೀನ್ ಕೋಶದೊಳಗೆ

ಇರುತ್ತದೆ. ಸಿಡುಬಿನ ವೈರಸ್‌ಗಳು ಇಟ್ಟಿಗೆಯಾಕಾರದಲ್ಲಿರುತ್ತವೆ (230 x 300 ನಾನೋಮೀ) ಇವುಗಳ ಹೊರಗೆ ಲಿಪೊಪ್ರೊಟೀನ್ ಪೊರೆಯೂ, ಒಳಗೆ ಪ್ರೊಟೀನ್ ತಿರುಳೂ ಇರುತ್ತದೆ. ಇದರ ವಂಶವಾಹಿ ಡಿಎನ್‌ಎ. ಜೆಮಿನಿ ವೈರಸ್, ಎಸ್‌ವಿ 40, ಹರ್ಪಿಸ್, ಇನ್‌ಫ್ಲುಎಂಜಾ, ರೌಸ್ ಸಾರ್ಕೋಮಾ ವೈರಸ್ – ಇತ್ಯಾದಿ ವಿವಿಧ ರೀತಿಯ ರಚನೆ ಹಾಗೂ ಆಕಾರಗಳ ವೈರಸ್‌ಗಳೂ ಇವೆ. ಸಾಮಾನ್ಯ ಸೂಕ್ಷ್ಮದರ್ಶಕದಡಿಯಲ್ಲಿ ಕಾಣಿಸದಷ್ಟು ಸೂಕ್ಷ್ಮವಾಗಿರುವ ವೈರಸ್‌ಗಳನ್ನು ಇಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಹಾಯದಿಂದ ನೋಡಬಹುದು. ಸಾಮಾನ್ಯವಾಗಿ ವೈರಸ್‌ಗಳ ಅಳತೆ ಮತ್ತು ಆಕಾರದಲ್ಲಿ ಕ್ರಮಬದ್ಧತೆಯಿದೆ. ಹೊರಹೊದಿಕೆ ಗಡಸಾಗಿಲ್ಲದಿರುವುದರಿಂದ ಕೆಲವು ಪ್ರಾಣಿ ವೈರಸ್‌ಗಳ ಆಕಾರದಲ್ಲಿ ಸ್ವಲ್ಪಮಟ್ಟಿಗಿನ ವ್ಯತ್ಯಾಸ ಕಂಡುಬರಬಹುದು.



1. ವ್ಯಾಕ್ಸಿನಿಯ ವೈರಸ್



2. ಮಂಪ್ಸ್ ವೈರಸ್



ಪಾಕ್ಸ್



ಇನ್‌ಫ್ಲೂಯೆಂಜ ವೈರಸ್

ಪೋಲಿಯೊ ವೈರಸ್



ರೋಟ ವೈರಸ್



ಹರ್ಪಿಸ್

ರಿಟ್ರೊವೈರಸ್

ಅಡಿನೊವೈರಸ್

ಬೇರೆ ಬೇರೆ ಕ್ಯಾಪ್ಸಿಡ್ ರಚನೆಯಲ್ಲಿನ ವೈಶಿಷ್ಟ್ಯಗಳನ್ನು ಅವುಗಳು ನಿರ್ಮಾಣಗೊಂಡ ಪ್ರೊಟೀನ್ ಅಂಶಗಳ ಸಾಮ್ಯ ಹಾಗೂ ಅಸಮತೆಗಳಿಂದಾಗಿ ನಿರ್ಧರಿಸಲಾಗುತ್ತದೆ. ಕ್ಯಾಪ್ಸಿಡ್‌ಗಳಲ್ಲಿ ಸುರುಳಿಯಾಕಾರದ ಹಾಗು ಅಂಡಾಕಾರದ ಕ್ಯಾಪ್ಸಿಡ್ ಎಂದು ಎರಡು ವಿಧಗಳಿವೆ. ಆದ್ದರಿಂದ ಆಕೃತಿಯ ದೃಷ್ಟಿಯಿಂದ ಬೋಳಾದ ಸುರುಳಿಯಾಕಾರದ ಕ್ಯಾಪ್ಸಿಡ್, ಆವರಣ ಸಹಿತದ ಸುರುಳಿಯಾಕಾರದ ಕ್ಯಾಪ್ಸಿಡ್, ತಂತುಮಯ ಹಾಗೂ ಬಾಲಸಹಿತ ಬಹುಮುಖಿ ಹೀಗೆ ನಾಲ್ಕು ಪ್ರಮುಖ ವರ್ಗಗಳನ್ನು ಕಾಣಬಹುದು. ಯುಕಾರ್ಯೋಟ್‌ಗಳಿಗೆ ಸೋಂಕು ಉಂಟುಮಾಡುವ ವೈರಸ್‌ಗಳಿಗೆ ಒಂದು ಹೊರ ಆವರಣವಿರುತ್ತದೆ. ಇದು ಸಾಮಾನ್ಯವಾಗಿ ಮಾರ್ಪಾಡುಗೊಂಡ ಆತಿಥೇಯ ಕೋಶಭಿತ್ತಿ. ಇವು ಅತ್ಯಂತ ಕ್ಲಿಷ್ಟವಾದ ವೈರಸ್‌ಗಳಾಗಿವೆ. ಅಡೆನೋ ವೈರಸ್‌ಗಳು ಮತ್ತು ಎಸ್‌ವಿ 40 ಇವು ಬೋಳು ವೈರಸ್ ರಚನೆಗಳಿಗೆ ಉದಾಹರಣೆ. ಎಸ್‌ವಿ 40 ರ ಡಿಎನ್‌ಎ ಜೆನೋಮ್ ಒಂದು ಅತ್ಯಂತ ಸುರುಳಿಗೊಂಡ ವೃತ್ತಾಕಾರದ ಅಣು. ಇದರ ಕ್ಯಾಪ್ಸಿಡ್ ಒಂದು ಪ್ರಮುಖ ಪ್ರೊಟೀನ್ ಹಾಗೂ ಎರಡು ಸಣ್ಣ ಪ್ರೊಟೀನ್‌ಗಳಿಂದಾಗಿದೆ.

ಇನ್‌ಫ್ಲುಎಂಜಾ ವೈರಸ್‌ನ ಒಳಭಾಗದಲ್ಲಿ ಉದ್ದವಾದ ನ್ಯೂಕ್ಲಿಯೊಕ್ಯಾಪ್ಸಿಡ್ ಸುರುಳಿ ಸುತ್ತಿಕೊಂಡಿರುತ್ತದೆ. ಅದರ ಆವರಣವು 75% ಪ್ರೊಟೀನ್, 18% ಲಿಪಿಡ್ ಮತ್ತು 65% ಕಾರ್ಬೋಹೈಡ್ರೇಟ್‌ಗಳನ್ನೊಳಗೊಂಡಿದೆ. ಇತರ ಪ್ರಮುಖ ಉದಾಹರಣೆಗಳೆಂದರೆ, ನಾಯಿಹುಚ್ಚು, ಗದ್ದಕಟ್ಟು, ಮತ್ತು ಬಾಯಿಹುಣ್ಣಿಗೆ ಕಾರಣವಾಗುವ ಆವರಣಯುಕ್ತ ಸುರುಳಿಯಾಕಾರದ ವೈರಸ್‌ಗಳು. ನಾಯಿಹುಚ್ಚು ರೋಗದ ವೈರಸ್‌ಗಳು ಬುಲೆಟ್ ಆಕಾರದುವು. ಹರ್ಪಿಸ್ ವೈರಸ್, ಏಯ್ಡ್ಸ್ ವೈರಸ್, ರೌಸ್ ಸಾರ್ಕೋಮ ವೈರಸ್, ಡೆಂಗು ವೈರಸ್, ಮಿದುಳು ಜ್ವರದ ವೈರಸ್ ಇತ್ಯಾದಿಗಳಲ್ಲದೆ ಕೆಲವು ಕೀಟಗಳ ಮತ್ತು ರಿಟ್ರೊ ವೈರಸ್‌ಗಳ ನ್ಯೂಕ್ಲಿಯೋ ಕ್ಯಾಪ್ಸಿಡ್ ದಶಭುಜಾಕೃತಿಯವು. ಇವೆಲ್ಲವೂ ಆತಿಥೇಯ ಕೋಶದಿಂದ ಪಡೆದ ಕೋಶ ಪೊರೆಯೊಳಗೆ ಇರುತ್ತವೆ. ಕೆಲವು ವೈರಸ್‌ಗಳಲ್ಲಿ ಪ್ರೊಟೀನ್ ಮುಂಚಾಚಿಕೊಂಡಿರುತ್ತದೆ. ರೋಗನಿರೋಧಕ ದೃಷ್ಟಿಯಿಂದ ಇದು ಮುಖ್ಯ ವಿಚಾರ. ಈ ಪ್ರೊಟೀನುಗಳು, ಆತಿಥೇಯ ಕೋಶದ ರಿಸೆಪ್ಟಾರುಗಳ ಜೊತೆ ಪ್ರತಿಕ್ರಿಯಿಸುವುವು.

ಸಂತಾನೋತ್ಪತ್ತಿ : ವೈರಸ್‌ಗಳು ಎರಡು ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ.

(ಅ) ಸಾಂಕ್ರಾಮಿಕ ಸೋಂಕು: ಇಲ್ಲಿ ಹೊಸ ವೈರಸ್ ಕಣಗಳು ತಯಾರಾಗಿ ಗುಂಪುಕೋಶದಿಂದ ಬಿಡುಗಡೆಗೊಳ್ಳುತ್ತವೆ.

(ಆ) ಗುಂಪುಜೀವ ಕಣವಾಗಿ ವೈರಸ್ ಜೀನೋಮ್ ಪೂರ್ಣಗೊಳ್ಳಬಹುದು, ಹಾಗೂ ಬೆಳೆದಂತೆಲ್ಲಾ ಅದು ಆ ಗುಂಪಿನ ಒಂದು ಭಾಗವಾಗಿ ಅಭಿವೃದ್ಧಿಗೊಳ್ಳಬಹುದು. ಬ್ಯಾಕ್ಟೀರಿಯೋಫೇಜ್‌ಗಳ ಹಾಗು ಪ್ರಾಣಿ ವೈರಸ್‌ಗಳಲ್ಲಿನ ಪರಿವರ್ತನೆಯ ಸಂದರ್ಭದಲ್ಲಿ ಈ ಕ್ರಿಯೆಗೆ ಲೈಸೋಜೆನಿ ಎಂದು ಹೆಸರು.

ಉದಾಹರಣೆಗಳು : 1. ಆರ್‌ಎನ್‌ಎ ವೈರಸ್‌ಗಳು 2. ಲ್ಯಾಂಬ್ಡಾವೈರಸ್‌ಗಳು 3. ಪೋಲಿಯೋ ವೈರಸ್‌ಗಳು 4. ಇನ್‌ಫ್ಲುಎನ್ಜಾ ವೈರಸ್‌ಗಳು 5. ರಿಯೋ ವೈರಸ್‌ಗಳು 6. ಹರ್ಪಿಸ್ ವೈರಸ್‌ಗಳು 7. ಪಾಕ್ಸ್ ವೈರಸ್‌ಗಳು 8. ರಿಟ್ರೊ ವೈರಸ್‌ಗಳು. (ವಿ.ಎ.ವಿ.:ಬಿ.ವೈ.ಎಸ್.ಕೆ)

**ವೈರಿಯಾನ್:** ಯಾವುದೇ ಹಾನಿಯನ್ನುಂಟುಮಾಡದೆ ಆತಿಥೇಯ ಕೋಶಗಳಲ್ಲಿ ಸುಪ್ತಾವಸ್ಥೆಯಲ್ಲಿರುವ ವೈರಸ್‌ನ ಹಂತ. ನ್ಯೂಕ್ಲಿಯಿಕ್ ಆಮ್ಲ (ಡಿಎನ್‌ಎ ಅಥವಾ ಆರ್‌ಎನ್‌ಎ) ಮತ್ತು ಪ್ರೊಟೀನ್‌ನ ಹೊರಕವಚ ಮಾತ್ರ ಇರುತ್ತವೆ. ವೈರಸ್‌ಗಳು ಬ್ಯಾಕ್ಟೀರಿಯಾಗಳಿಗಿಂತ ಸೂಕ್ಷ್ಮವಾದ, ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ಮಾತ್ರ ದರ್ಶಿಸಬಲ್ಲ 0.01 ಮೈಕ್ರಾನ್‌ನಿಂದ 0.3 ಮೈಕ್ರಾನ್‌ನಷ್ಟಿರುವ ಸೂಕ್ಷ್ಮಾಣುಜೀವಿಗಳು. ಡಿಎನ್‌ಎ ಅಥವಾ ಆರ್‌ಎನ್‌ಎ ಹಾಗೂ ಪ್ರೊಟೀನ್ ಹೊದಿಕೆ ಮಾತ್ರ ಇರುವ ವೈರಸ್ಸುಗಳು ಸ್ವತಂತ್ರವಾಗಿ ಬದುಕಲಾರವು. ಜೀವಿ ನಿರ್ಜೀವಿಗಳ ನಡುವೆ ಕೊಂಡಿಯಂತಿರುವ ವೈರಸ್ಸುಗಳು ಆತಿಥೇಯ ಕೋಶದಲ್ಲಿದ್ದಾಗ ಮಾತ್ರ ವಂಶಾಭಿವೃದ್ಧಿಗೆ ತೊಡಗುವುವು. (ನೋಡಿ: ವೈರಸ್)

ಎಲ್ಲಾ ವೈರಸ್‌ಗಳಿಗೂ ವೈರಿಯಾನ್ ಹಂತವಿದೆ. ವೈರಿಯಾನ್‌ನ ಪ್ರೊಟೀನ್ ಹೊರಕವಚಕ್ಕೆ ಕ್ಯಾಪ್ಸಿಡ್ ಎಂದು ಹೆಸರು. ಕ್ಯಾಪ್ಸಿಡ್‌ಗಳಲ್ಲಿ 1) ಐಕೊಸಾಹೆಡ್ರನ್ ಅಥವಾ ವಿಂಶತಿಮುಖಿ 2) ಹೆಲಿಕ್ಸ್ ಅಥವಾ ಸುರುಳಿ ಕ್ಯಾಪ್ಸಿಡ್‌ಗಳೆಂಬ ಎರಡು ವಿಧಗಳಿವೆ. ಐಕೊಸಾಹೆಡ್ರನ್‌ಗಳಲ್ಲಿ ಇಪ್ಪತ್ತು ಮುಖಗಳಿದ್ದು, ಹನ್ನೆರಡು ಶೃಂಗಗಳಿರುತ್ತವೆ. ಹೆಲಿಕ್ಸ್ ಕ್ಯಾಪ್ಸಿಡ್ ಸುರುಳಿಯಾಕಾರದಲ್ಲಿರುತ್ತದೆ. ಕ್ಯಾಪ್ಸೊಮರ್ ಎಂಬ ಪ್ರೊಟೀನ್ ಕಣಗಳು ಕೂಡಿ ಕ್ಯಾಪ್ಸಿಡ್ ತಯಾರಾಗುತ್ತದೆ. ಕ್ಯಾಪ್ಸೊಮರ್‌ಗಳ ಉಪಘಟಕಗಳಿಗೆ ಪ್ರೊಟೊಮರ್ ಎಂದು ಹೆಸರು.

ಸರಳ ವೈರಿಯಾನ್‌ಗಳ ಕ್ಯಾಪ್ಸೊಮರ್‌ಗಳಲ್ಲಿ ಮೂರು ಪ್ರೊಟೊಮರ್ ಇರುವುವು. ಅನಂತರ ಇಪ್ಪತ್ತು ಮುಖಗಳು ಸೇರಿ ಕ್ಯಾಪ್ಸಿಡ್ ಆಗುತ್ತದೆ. ಒಂದು ಕ್ಯಾಪ್ಸಿಡ್‌ನಲ್ಲಿ 60 ಪ್ರೊಟೀನ್‌ಗಳಿರುತ್ತವೆ. ಕೆಲವು ಕ್ಯಾಪ್ಸೊಮರ್‌ಗಳಲ್ಲಿ ಐದು ಅಥವಾ ಆರು ಪ್ರೊಟೊಮರ್‌ಗಳು ಇರುತ್ತದೆ.

ಸುರುಳಿ ಕ್ಯಾಪ್ಸಿಡ್‌ಗಳಲ್ಲಿ ಪ್ರೊಟೊಮರ್ ಮೂಲಘಟಕ. ಕೆಲವು ವೈರಿಯಾನ್‌ಗಳ ಸುತ್ತ ಆತಿಥೇಯ ಕೋಶದತ್ತ ಪೊರೆ ಆವರಿಸಿರುತ್ತದೆ. ವೈರಿಯಾನ್‌ನ ಪ್ರೊಟೀನ್ ಹಾಗೂ ನ್ಯೂಕ್ಲಿಕ್ ಆಮ್ಲಗಳು ಆತಿಥೇಯ ಕೋಶದಲ್ಲಿ ಸಂಶ್ಲೇಷಣೆಯಾಗಿ ವಿವಿಧ ಹಂತಗಳ ಮುಖಾಂತರ ಸಂಯೋಜನೆಗೊಳ್ಳುತ್ತವೆ. ಹೀಗೆ ಸಂಯೋಜನೆಗೊಂಡು ಸೋಂಕುಂಟು ಮಾಡುವ ಮೊದಲಿನ ಹಂತವೇ ವೈರಿಯಾನ್. (ಎಸ್.ಪಿ.ವಿ.)

**ವೈಲ್ಡ್ ಲೈಫ್ ರಿಸರ್ಚ್ ಇನ್‌ಸ್ಟಿಟ್ಯೂಟ್; ಡೆಹರಾಡೂನ್:** ಭಾರತದಲ್ಲಿ ವನ್ಯಜೀವಿ ಸಂಶೋಧನೆಯಲ್ಲಿ ಮುಂಚೂಣಿಯಲ್ಲಿರುವ ಅಗ್ರಗಣ್ಯ ಸಂಸ್ಥೆ (ವನ್ಯ ಜೀವಿ ಸಂಶೋಧನಾ ಸಂಸ್ಥೆ) ಡೆಹರಾಡೂನ್‌ನಲ್ಲಿದೆ. ಸ್ಥಾಪನೆ ೧೯೮೨. ಪರಿಣಾಮಕಾರಿ ಅಧ್ಯಯನವನ್ನು ಕೈಗೊಳ್ಳಲು ವನ್ಯಜೀವಿ ಸಂಶೋಧನೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ೧೯೮೬ರಲ್ಲಿ ಸ್ವಾಯತ್ತತೆಯನ್ನು ನೀಡಲಾಯಿತು.

ಧ್ಯೇಯೋದ್ದೇಶಗಳು: ರಾಷ್ಟ್ರದ ವನ್ಯಜೀವಿ ಸಂಪನ್ಮೂಲಗಳ ಬಗ್ಗೆ ವೈಜ್ಞಾನಿಕ ತಿಳುವಳಿಕೆ ನೀಡುವುದು. ವನ್ಯ ಜೀವಿ ಸಂರಕ್ಷಣೆಯಲ್ಲಿ ತೊಡಗಿರುವ ವಿವಿಧ ಹಂತಗಳ ವ್ಯಕ್ತಿಗಳಿಗೆ ಸಂರಕ್ಷಣೆ ಹಾಗೂ ನಿರ್ವಹಣೆಯ ಬಗೆಗಿನ ತರಬೇತಿ ನೀಡುವುದು. ಭಾರತೀಯ ಪರಿಸ್ಥಿತಿಗೆ ಸೂಕ್ತವಾಗುವಂತಹ ವನ್ಯಜೀವಿ ನಿರ್ವಹಣೆಯ ಬಗೆಗಿನ ಸಂಶೋಧನೆ ಹಾಗೂ ಸಂಶೋಧನಾ ತಂತ್ರಗಳನ್ನು ಅಭಿವೃದ್ಧಿ ಪಡಿಸುವುದು. ವನ್ಯಜೀವಿ ಸಂರಕ್ಷಣಾ ನಿರ್ವಹಣೆಯಲ್ಲಿ ಉದ್ಭವಿಸುವ ವಿವಿಧ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವುದು. ವನ್ಯಜೀವಿ ನಿರ್ವಹಣೆಯಲ್ಲಿ ತೊಡಗಿರುವ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸಂಶೋಧನೆ ಹಾಗೂ ತರಬೇತಿಗಳನ್ನು ಆಯೋಜಿಸುವುದು. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ನಿರ್ವಹಣೆಯಲ್ಲಿ ತೊಡಗಿರುವ ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳಿಗೆ ಹಾಗೂ ವಿಶ್ವವಿದ್ಯಾಲಯಗಳಿಗೆ ಈ ನಿಟ್ಟಿನಲ್ಲಿ ಸಂಪೂರ್ಣ ಮಾಹಿತಿ ಇರುವ ಪದವೀಧರರನ್ನು ಒದಗಿಸುವುದು ಮುಂತಾದುವು. ಇದೊಂದು ವಿಶ್ವವಿದ್ಯಾನಿಲಯ ಮಟ್ಟದ ಸ್ವಾಯುತ್ತ ಸಂಸ್ಥೆ.

ಸಂಸ್ಥೆಯ ಚಟುವಟಿಕೆಗಳು:

೧) ವನ್ಯಜೀವಿ ಜೀವವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ (ಎಂಎಸ್‌ಸಿ)

೨) ಸುರಕ್ಷಿತ ಪ್ರದೇಶಗಳ ನಿರ್ವಹಣೆಯ ತರಬೇತಿ

೩) ಆವಾಸ ಸ್ಥಾಪನೆಗಳ ಅಭಿವೃದ್ಧಿ ಹಾಗೂ ಯೋಜನೆ ತಯಾರಿಕಾ ತರಬೇತಿ.

೪) ಮೃಗಾಲಯ ಹಾಗೂ ಮೃಗಾಲಯಗಳಲ್ಲಿ ಸಂತಾನ ಅಭಿವೃದ್ಧಿ ಪಡಿಸುವ ಕುರಿತು ತರಬೇತಿ.

೫) ಸಂರಕ್ಷಣಾ ಶಿಕ್ಷಣ ಹಾಗೂ ಅನ್ವಯಕಗಳನ್ನು ಕುರಿತು ತರಬೇತಿ

೬) ಸೈನ್ಯ, ಆಡಳಿತ ಹಾಗೂ ಅರಣ್ಯ ಖಾತೆಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿಗಳಿಗೆ ತರಬೇತಿ ನೀಡುವುದು.

೭) ಸಮನ್ವಯ ಅರಣ್ಯ ನಿರ್ವಹಣೆ (ಸಂಶೋಧನೆ, ತರಬೇತಿ ಹಾಗೂ ಸಲಹೆ)

೮) ವನ್ಯಜೀವಿ ಸಂಶೋಧನೆಯ ವಿಸ್ತಾರ.

೯) ಅಂತಾರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಸಹಯೋಗ.

೧೦) ಜೈವಿಕ ವೈವಿಧ್ಯ ಸಂರಕ್ಷಣೆಗಾಗಿ ಭೂಜೀವ ವೈಜ್ಞಾನಿಕ ಮಾದರಿಯನ್ನು ಪ್ರತಿನಿಧಿಸುವ ರಾಷ್ಟ್ರೀಯ ಉದ್ಯಾನಗಳ ಜಾಲವನ್ನು ಸ್ಥಾಪಿಸುವುದು.

೧೧) ರಾಷ್ಟ್ರೀಯ ವನ್ಯಜೀವಿ ಮಾಹಿತಿಯನ್ನು ಒದಗಿಸುವ ಕಂಪ್ಯೂಟರೀಕೃತ ದಾಖಲೆಯ ಸ್ಥಾಪನೆ.

೧೨) ವನ್ಯಜೀವಿ ಸಂಶೋಧನೆಯಲ್ಲಿ ಭೌಗೋಲಿಕ ಮಾಹಿತಿ ವ್ಯವಸ್ಥೆ (GIS) ಹಾಗೂ ಡಿಜಿಟಲ್ ಇಮೇಜ್ ಪ್ರೊಸೆಸ್ಸಿಂಗ್ (DIP) ತಂತ್ರಜ್ಞಾನಗಳನ್ನು ಅಳವಡಿಕೆ.

13) ವನ್ಯ ಜೀವಿ ಆರೋಗ್ಯ ಕುರಿತ ಸಂಶೋಧನೆ ಹಾಗೂ ತರಬೇತಿಯನ್ನು ಒದಗಿಸುವುದು. (ಎಸ್‌ಎಂಜಿ)

**ವ್ಯಾಟ್ಸನ್, ಜೇಮ್ಸ್ ಡೇವಿ(1928):** ತಳಿಗುಣಗಳ ಮೂಲವಸ್ತು ಡಿಎನ್‌ಎಯ ಅಣು ರಚನೆಯನ್ನು ತೋರಿಸಿಕೊಟ್ಟಖ್ಯಾತಿಯ ಅಮೆರಿಕನ್ ಜೀವವಿಜ್ಞಾನಿ. 1928 ರಲ್ಲಿ ಏಪ್ರಿಲ್6 ರಂದು ಇಲ್ಲಿನಾಯ್ಸ್‌ನ ಚಿಕಾಗೊದಲ್ಲಿ ವರ್ತಕ ಜೇಮ್ಸ್ ಡಿ. ವ್ಯಾಟ್ಸನ್ ಮತ್ತು ಜೆನ್ನಿಚೆಲ್ಡಂಪತಿಗಳಿಗೆ ಜನಿಸಿದ. ತಂದೆ ಇಂಗ್ಲೆಂಡಿನವರು ಮತ್ತು ತಾಯಿ ಸ್ಕಾಟ್ಲೆಂಡಿನವರು. ವ್ಯಾಟ್ಸನ್‌ನ ಬಾಲ್ಯ ಮತ್ತು ಪ್ರಾಥಮಿಕ ಶಿಕ್ಷಣ ಚಿಕಾಗೊನಲ್ಲಿಯೇ ಜರುಗಿತು. ಹೊರೆಸ್‌ಮನ್ ಗ್ರಾಮರ್ ಶಾಲೆಯಲ್ಲಿ 8 ವರ್ಷಗಳ ಅಧ್ಯಯನ, ಬಳಿಕ ಸೌತ್‌ಶೋರ್ ಪ್ರೌಢಶಾಲೆಯಲ್ಲಿ ಎರಡು ವರ್ಷಗಳ ಶಿಕ್ಷಣವನ್ನು ಪಡೆದುಕೊಂಡ ವ್ಯಾಟ್ಸನ್ನನಿಗೆ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಬೋಧಕ ಶಿಷ್ಯವೇತನವೊಂದು ದೊರಕಿತು. ಕೇವಲ 15 ರ ಹದಿಹರೆಯದಲ್ಲೇ ವಿಶ್ವವಿದ್ಯಾಲಯದ ಮೆಟ್ಟಿಲನ್ನು ಹತ್ತಿದ್ದ. 1947 ರಲ್ಲಿ ಪ್ರಾಣಿವಿಜ್ಞಾನದಲ್ಲಿ ಸ್ನಾತಕ ಪದವಿಯನ್ನು ಪಡೆದುಕೊಂಡ ಎತನಿಗೆ ಮೊದಲಿಗೆ ಪಕ್ಷಿವಿಜ್ಞಾನದಲ್ಲಿ ಆಸಕ್ತಿ. ಆದರೆ ತನ್ನ ಸ್ನೇಹಿತರಾದ ಎ.ಜೆ. ಮುಲ್ಲರ್ ಮತ್ತು ಟಿ.ಎಂ. ಸೊನೆಬಾರ್ನ್ (ತಳಿವಿಜ್ಞಾನಿಗಳು)ಹಾಗೂ ಇಟಲಿಯ ಸೂಕ್ಷ್ಮಜೀವಿಶಾಸ್ತ್ರಜ್ಞ ಎಸ್.ಈ.ಲೂರಿಯಾ – ಇವರ ಪ್ರಭಾವದಿಂದ ಜೀವರಸಯನಶಾಸ್ತ್ರದಲ್ಲಿ ಆಸಕ್ತಿ ತಳೆದನು. 1950 ರಲ್ಲಿಬ್ಲೂಮಿಂಗ್‌ಟನ್‌ನ ಇಂಡಿಯಾನಾ ವಿಶ್ವವಿದ್ಯಾಲಯದಿಂದ ಪ್ರಾಣಿವಿಜ್ಞಾನದಲ್ಲಿ ಪಿಹೆಚ್‌ಡಿ ಪದವಿಯನ್ನು ಪಡೆದುಕೊಂಡನು. ಈತನ ಸಂಶೋಧನಾ ವಿಷಯ ಬ್ಯಾಕ್ಟೀರಿಯೊಫೇಜುಗಳ ವರ್ಧಿಸುವಿಕೆಯ ಮೇಲೆ ಗಡಸು ಕ್ಷ–-ಕಿರಣಗಳ ಪರಿಣಾಮಗಳು. ಎಸ್.ಈ. ಲೂರಿಯಾ ಈತನ ಮಾರ್ಗದರ್ಶಕರಾಗಿದ್ದರು.

ಸೆಪ್ಟೆಂಬರ್ 1950 ರಿಂದ ಸೆಪ್ಟೆಂಬರ್ 1951 ರ ವರೆಗೆ ಎಂದರೆ, ಒಂದು ವರ್ಷಕಾಲ ಕೂಪನ್‌ಹೆಗನ್‌ನ ರಾಷ್ಟ್ರೀಯ ಸಂಶೋಧನಾ ಮಂಡಳಿಯಲ್ಲಿ ಡಾಕ್ಟರೇಟೋತ್ತರ ಸಂಶೋಧನಾ ವಿದ್ಯಾರ್ಥಿಯಾಗಿ ಕಾರ್ಯನಿರ್ವಹಿಸ್ದರು. ಇಲ್ಲಿಯೂ ಬ್ಯಾಕ್ಟೀರಿಯೋಫೇಜುಗಳನ್ನು ಕುರಿತೇ ಅಧ್ಯಯನ ನಡೆಸಿದರು. 1951 ರಲ್ಲಿ ನೇಪಲ್ಸ್‌ನಲ್ಲಿ ನಡೆದ ವಿಚಾರಸಂಕಿರಣವೊಂದರಲ್ಲಿ,ಮಾರೀಸ್ ವಿಲ್ಕಿನ್ಸ್‌ರು ಉತ್ಪಾದಿಸಿದ್ದ ಹರಳು ರೂಪಿ ಡಿಎನ್‌ಎಯ ಕ್ಷ–ಕಿರಣ ವಿವರ್ತನ ವಿನ್ಯಾಸಗಳನ್ನು ಕಂಡರು. ಅಂದಿನಿಂದ ಇವರ ಸಂಶೋಧನಾಸಕ್ತಿ ಸಂರಚನಾ ಜೀವವಿಜ್ಞಾನದೆಡೆಗೆ ಹೊರಳಿತು. 1952ರ ಅಕ್ಟೋಬರಿನಲ್ಲಿ ಕ್ಯಾವೆಂಡಿಶ್ ಪ್ರಯೋಗಾಲಯದಲ್ಲಿ ಡಿಎನ್‌ಎ ಕುರಿತ ಸಂಶೋಧನೆಗೆ ಕೈಹಾಕಿದರು.

ವ್ಯಾಟ್ಸನ್ ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಸೇರಿಕೊಂಡಾಗ ಅವರಿಗೆ ಭೌತವಿಜ್ಞಾನಿ ಫ್ರಾನ್ಸಿಸ್ ಕ್ರಿಕ್‌ನೊಡನೆ ಕೆಲಸ ಮಾಡುವ ಸೌಭಾಗ್ಯ ಒದಗಿಬಂತು. ವ್ಯಾಟ್ಸನ್ – ಕ್ರಿಕ್‌ರದು ವಿಲಕ್ಷಣ ಜೋಡಿಯೆಂದರೆ ಉತ್ಪ್ರೇಕ್ಷೆಯಾಗಲಾರದು. ವ್ಯಾಟ್ಸನ್ ಮಿತಭಾಷಿಯಾದರೆ ಕ್ರಿಕ್ ಹರಟೆಮಲ್ಲ. ಹಾಸ್ಯಪ್ರವೃತ್ತಿಯವನು. ಇವರಿಬ್ಬರ ನಡುವೆ 12 ವರ್ಷಗಳ ವ್ಯತ್ಯಾಸವಿದ್ದಿತು. ವ್ಯಾಟ್ಸನ್ ತಳಿವಿಜ್ಞಾನಿಯಾದರೆ ಕ್ರಿಕ್ ಭೌತವಿಜ್ಞಾನಿಯಾಗಿದ್ದನು. ತಳಿವಿಜ್ಞಾನಿ–ಭೌತವಿಜ್ಞಾನಿಗಳೀರ್ವರ ಸಮ್ಮಿಶ್ರಿತ ಅಂತರ್ ವಿಷಯಕ ಸಂಶೋಧನೆಯ ಕೂಸೇ ಅಂದಿಗೆ ಮೇಧಾವಿಗಳಿಗೆ ಕಬ್ಬಿಣದ ಕಡಲೆಯಾಗಿದ್ದ ಡಿಎನ್‌ಎ ಜೋಡಿ ಸುರುಳಿಗಳ ಸಂರಚನಾ ಮಾದರಿ ಪ್ರಸ್ತಾಪ. ಆದ್ದರಿಂದಲೇ ಪ್ರಾಯಶಃ ಇಂದಿಗೂ ಡಿಎನ್‌ಎ ಸುರುಳಿಯುಗ್ಮಗಳ ಪೈಕಿ ಒಂದನ್ನು ವ್ಯಾಟ್ಸನ್ ಸುರುಳಿ ಎಂದೂ. ಇನ್ನೊಂದನ್ನು ಕ್ರಿಕ್ ಸುರುಳಿ ಎಂದೂ ಕರೆಯುತ್ತಾರೆ. ಇದು ವ್ಯಾಟ್ಸನ್–ಕ್ರಿಕ್ ಸುರುಳಿಯುಗ್ಮ ಎಂದೇ ಪ್ರಸಿದ್ಧವಾಗಿದೆ.

ವೈದ್ಯ ವಿಜ್ಞಾನ ಮತ್ತು ಶರೀರ ಕ್ರಿಯಾವಿಜ್ಞಾನಕ್ಷೇತ್ರಗಳಲ್ಲಿ ನಡೆಸಿದ ಸಂಶೋಧನೆ ವ್ಯಾಟ್ಸನ್–ಕ್ರಿಕ್ ಮತ್ತು ವಿಲ್ಕಿನ್ಸ್ – ಇವರಿಗೆ 1962 ರಲ್ಲಿ ನೊಬೆಲ್ ಪಾರಿತೋಷಕವನ್ನು ನೀಡಿ ಗೌರವಿಸಲಾಯಿತು.

1953 ರಿಂದ 1955 ರವರೆಗೆ ವ್ಯಾಟ್ಸನ್ ಕ್ಯಾಲಿಫೋರ್ನಿಯಾ ತಾಂತ್ರಿಕ ಸಂಸ್ಥೆಯಲ್ಲಿ ಹಿರಿಯ ಸಂಶೋಧಕನಾಗಿದ್ದನು. ಈ ಅವಧಿಯಲ್ಲಿ ಆತ ಆರ್‌ಎನ್‌ಎ ಅಣುಗಳ ಕ್ಷ–ಕಿರಣ ವಿವರ್ತನೆಗಳನ್ನು ಕುರಿತು ಅಧ್ಯಯನ ನಡೆಸಿದನು. ಅನಂತರ 1955–56 ರಲ್ಲಿ ಪುನಃ ಕ್ಯಾವೆಂಡಿಶ್ ಪ್ರಯೋಗಾಲಯಕ್ಕೆ ಮರಳಿ ಕ್ರಿಕ್‌ನೊಂದಿಗೆ ವೈರಾಣು ಡಿಎನ್‌ಎ ಅಧ್ಯಯನವನ್ನು ಆರಂಭಿಸಿದನು.

ಆನಂತರ 1961 ರವರೆಗೂ ಹಾರ್ವರ್ಡ್ ವಿಶ್ವವಿದ್ಯಾಲಯದ ಜೀವಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪನಾಗಿ ಸೇವೆ ಸಲ್ಲಿಸಿದನು. ಪ್ರೋಟೀನು ಸಂಶ್ಲೇಷಣೆಯಲ್ಲಿ ಆರ್‌ಎನ್‌ಎ ಪಾತ್ರ ಕುರಿತು ಸಂಶೋಧನೆ ನಡೆಸಿದರು.

ನೊಬೆಲ್ ಪಾರಿತೋಷಕವನ್ನು ಹೊರತುಪಡಿಸಿ, ವ್ಯಾಟ್ಸನ್ನನಿಗೆ ಸಂದ ಗೌರವಗಳು ಹಲವಾರು. ಅವುಗಳಲ್ಲಿ ಪ್ರಮುಖವಾದವುಇವು : ಮಸಾಚುಸೆಟ್ಸ್ ಜೆನರಲ್ ಹಾಸ್ಪಿಟಲ್ಜಾನ್ಕೊಲ್ಲಿನ್ಸ್ ವಾರೆನ್ ಪಾರಿತೋಷಕವನ್ನು 1959 ರಲ್ಲಿ ಕ್ರಿಕ್‌ನೊಡನೆ ಹಂಚಿಕೊಂಡನು. 1960 ರಲ್ಲಿ ಕ್ರಿಕ್ ಮತ್ತು ವಿಲ್ಕಿನ್ಸ್‌ರೊಡನೆ ಲಾಸ್ಕರ್ ಮನ್ನಣೆ, ಕ್ರಿಕ್‌ನೊಡನೆ 1962 ರಲ್ಲಿ ರಿಸರ್ಚ್ ಕಾರ್ಪೊರೇಶನ್ ಪಾರಿತೋಷಕ, ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಮತ್ತು ಸೈನ್ಸಸ್ ಸಂಸ್ಥೆಯ ಸದಸ್ಯತ್ವ, ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್‌ನ ಸದಸ್ಯತ್ವ, ಡ್ಯಾನಿಶ್ ಅಕಾಡೆಮಿ ಆಫ್ ಆರ್ಟ್ಸ್ ಮತ್ತು ಸೈನ್ಸಸ್‌ನ ವಿದೇಶಿ ಸದಸ್ಯತ್ವ, ಅಮೆರಿಕ ರಾಷ್ಟ್ರಪತಿಯವರ ವೈಜ್ಞಾನಿಕ ಸಲಹಾ ಸಮಿತಿಯ ಸಂದರ್ಶಕ ಪದವಿ.

1968 ರಲ್ಲಿ ದ ಡಬಲ್‌ಹೆಲಿಕ್ಸ್ ಎಂಬ ಉತ್ಕೃಷ್ಟ ಗ್ರಂಥವನ್ನು ರಚಿಸಿದನು. ಇದೇ ವರ್ಷದಲ್ಲಿಯೇ ಸಿಎಸ್‌ಎಚ್‌ಎಲ್ ದ (ಕೋಲ್ಡ್ ಸ್ಪ್ರಿಂಗ್ ಹಾರ್ಬರ್ ಲ್ಯಾಬೊರೇಟರಿ) ನಿರ್ದೇಶಕರಾಗಿನೇಮಕಗೊಂಡು ಅಲ್ಲಿಯೇ ನೆಲೆಸಿದರು. ಇವರ

ಇತರೇ ಪ್ರತಿಷ್ಠಿತ ಗ್ರಂಥಗಳು : ದ ಮಾಲಿಕ್ಯೂಲರ್ ಬಯಾಲಜಿ ಆಫ್ ದ ಜೀನ್, ಮಾಲಿಕ್ಯೂಲರ್ ಬಯಾಲಜಿ ಆಫ್ ದ ಸೆಲ್, ರಿಕಾಂಬಿನೇಷನ್ ಡಿಎನ್‌ಎ ಮತ್ತು ದ ಸಿಕ್ರೇಟ್ ಆಫ್ ಲೈಫ್ (2003)

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಪ್ರಾಯೋಜಿತ ಮಾನವ ಜಿನೋಮ್ ಯೋಜನೆಯ ಮುಖ್ಯಸ್ಥರಾಗಿ ಇವರು 1988 ರಲ್ಲಿ ನೇಮಕಗೊಂಡರು. 1992 ರ ವರೆಗೆ ಅದಕ್ಕಾಗಿ ಕೆಲಸ ಮಾಡಿದರು. ಜೀನ್ ರೀತ್ಯಾ, ಅಭಿಯಂತ್ರಿಸಿದ ಬೆಳೆಗಳ (ಜೆನೆಟಿಕಲಿ ಮಾಡಿಫೈಡ್ ಕ್ರಾಪ್ಸ್) ಬಳಕೆಯನ್ನು ವ್ಯಾಟ್ಸನ್ನರು ಬಹುವಾಗಿ ಉತ್ತೇಜಿಸಿದರು.

1994 ರಿಂದ ಒಂದು ದಶಕರ ಕಾಲದವರೆಗೆ ಸಿಎಸ್‌ಎಚ್‌ಎಲ್ ದ ಅಧ್ಯಖರಾಗಿ ಕಾರ್ಯನಿರ್ವಹಿಸಿದ ಇವರು ಪ್ರಸಕ್ತ, ನ್ಯೂಯಾರ್ಕ್‌ನ ಇದೇ ಸಂಸ್ಥೆಯ ಕುಲಪತಿಗಳಾಗಿ ಕಾರ್ಯನಿರ್ವಹಿಸುತಿದ್ದಾರೆ. (ಬಿ.ಕೆ.ಎಂ.)

**ವ್ಯಾಲ್ಲೇಸ್, ಆಲ್ಫ್ರೆಡ್ ರಸೆಲ್ (1823–1913)**: ಇಂಗ್ಲೆಂಡಿನ ಪ್ರಕೃತಿ ವಿಜ್ಞಾನಿ, ವಿಕಾಸವಾದಿ, ಭೂಗೋಳತಜ್ಞ, ಮಾನವಶಾಸ್ತ್ರಜ್ಞ, ಸಮಾಜ ವಿಮರ್ಶಕ ಹಾಗೂ ಸಿದ್ಧಾಂತಿ. 1823ರ ಜನವರಿ 8 ರಂದು ಇಂಗ್ಲೆಂಡಿನ ಗ್ವೆಂಟ್ (ಹಿಂದಿನ ಮನ್‌ಮೌತ್ ಶೈರ್) ನಲ್ಲಿ ಜನನ. ತಂದೆ ಥಾಮಸ್ ವೆರಿ ವ್ಯಾಲ್ಲೇಸ್ ಹಾಗೂ ತಾಯಿ ಮೇರಿ ಆನ್ನೆ ಗ್ರೀನೆಲ್. ಇವರದು ಸಾಮಾನ್ಯ ಮಧ್ಯಮ ವರ್ಗದ ಕುಟುಂಬ.ಥಾಮಸ್–ಮೇರಿ ದಂಪತಿಗಳಿಗಿದ್ದ ಒಂಭತ್ತು ಮಕ್ಕಳ ಪೈಕಿ ಈತ ಎಂಟನೆಯವನು ಮತ್ತು ನಾಲ್ಕು ಗಂಡು ಮಕ್ಕಳ ಪೈಕಿ ಮೂರನೆಯವನು. ಜೀವಪ್ರಭೇದಗಳು ಕಾಲಾಂತರದಲ್ಲಿ ಭಿನ್ನವಾಗಿ ಮಾರ್ಪಡುತ್ತವೆನ್ನುವ ವಿಕಾಸವಾದಕ್ಕೆ ಬುನಾದಿ ಹಾಕಿಕೊಟ್ಟ ಡಾರ್ವಿನ್ನನ ಸಮಕಾಲೀನ.

ಆಲ್ಫ್ರೆಡ್ ಬಾಲ್ಯ ಸಂತೋಷವಾಗಿಯೇ ಇತ್ತು. ಆದರೆ ಬಾಲಕ ಆಲ್ಫ್ರೆಡ್‌ನ ಸೌಖ್ಯ ಅಷ್ಟೇನೂ ಸಮಾಧಾನಕರವಾಗಿರಲಿಲ್ಲ. ಹರ್ಟ್‌ಫೋರ್ಡ್‌ನ ಗ್ರಾಮರ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಆಲ್ಫ್ರೆಡ್‌ನಿಗೆ ಶಾಲಾದಿನಗಳು ಶ್ರಮದಾಯಕವಾಗಿದ್ದವು. ಈ ದಿನಗಳಲ್ಲಿ ತಂದೆ ಗ್ರಂಥಪಾಲಕನಾಗಿದ್ದರಿಂದ ಆಲ್ಫ್ರೆಡ್‌ನಿಗೆ ಓದಲು ಹೇರಳ ಪುಸ್ತಕಗಳು ದೊರಕುತ್ತಿದ್ದವು.

ಬಡತನದಿಂದಾಗಿ ಆಲ್ಫ್ರೆಡ್‌ನನ್ನು 1836 ರಲ್ಲಿ ಶಾಲೆ ಬಿಡಿಸಿ ತನ್ನ ಅಣ್ಣನೊಂದಿಗಿರಲು ಲಂಡನ್ನಿಗೆ ಕಳುಹಿಸಲಾಯಿತು. ಇಲ್ಲಿ ಆತನಿಗೆ ಯೊಟೋಪಿಯಾದ ಸಮಾಜತಜ್ಞ ರಾಬರ್ಟ್ ಓವೆನ್‌ನ ಪರಿಚಯವಾಯಿತು. ಆಲ್ಫ್ರೆಡ್‌ನ ಅಣ್ಣ ಆತನನ್ನು ಉದ್ಯಮ ಕೈಗೊಳ್ಳಲು ಪ್ರೇರೇಪಿಸಿದರು. ಗಡಿಯಾರ ತಯಾರಿಕೆ, ಡ್ರಾಫ್ಟಿಂಗ್, ನಕ್ಷೆ–ತಯಾರಿಕೆ, ರೇಖಾಗಣಿತ ಮತ್ತು ತ್ರಿಕೋನಮಿತಿ (ಟ್ರಿಗ್ನೊಮೆಟ್ರಿ) ಕಟ್ಟಡ ವಿನ್ಯಾಸ ಮತ್ತು ನಿರ್ಮಾಣ, ಯಂತ್ರ ವಿಜ್ಞಾನ, ಕೃಷಿ ರಸಾಯನ ಶಾಸ್ತ್ರ – ಇವೇ ಮುಂತಾದ ಹತ್ತು ಹಲವಾರು ಅನುಭವದಿಂದ ಆತ ತನಗೆ ಹೊರಪ್ರಪಂಚದ ಸಮೀಕ್ಷೆಯಲ್ಲಿ ಆಸಕ್ತಿಯಿರುವುದನ್ನು ಕಂಡುಕೊಂಡನು. ಸಸ್ಯವಿಜ್ಞಾನ, ಭೂಗರ್ಭಶಾಸ್ತ್ರ ಮತ್ತು ಖಗೋಳಶಾಸ್ತ್ರಗಳು ಆತನಿಗೆ ಅತಿ ಪ್ರಿಯವಾದವು. 1843 ರಲ್ಲಿ ಲೈಸೆಸ್ಟರ್‌ನಲ್ಲಿ ಅಧ್ಯಾಪಕನಾಗಿ ಸೇರಿಕೊಂಡನು. ಇಲ್ಲಿ ಆತನ ಜ್ಞಾನಭಂಡಾರ ಮತ್ತಷ್ಟು ಹೆಚ್ಚಾಯಿತು. ಪ್ರಕೃತಿ ವಿಜ್ಞಾನ ಮತ್ತು ವರ್ಗೀಕರಣ ವಿಜ್ಞಾನಗಳು ಆತನಲ್ಲಿ ಆಸಕ್ತಿಯನ್ನು ಹುಟ್ಟಿಸಿದುವು.

1848 ರಿಂದ 1862 ವರೆಗೂ ಅಮೇಜಾನ್ ಆಂಡ್ ರಿಯೋ ನೆಗ್ರೊ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು ಅಧ್ಯಯನ ನಡೆಸಿದನು. ರಿಯೋ ನೆಗ್ರೊ ಪ್ರದೇಶದ ನಕಾಶೆಯನ್ನು ತಯಾರಿಸಿದನು. ಅಂತೆಯೇ ಜೀವವಿಕಾಸದ ಕಾರಣಗಳನ್ನು ಹುಡುಕಲು ಮೊದಲಾದನು. 1952 ರ ವೇಳೆಗೆ ಈತ ಸಂಚಾರಿ ಪ್ರಕೃತಿ–ವಿಜ್ಞಾನಿಯೆಂದು ಗುರುತಿಸಲ್ಪಟ್ಟಿದ್ದನು. ಈ ಹಂತದಲ್ಲಿ ಆತ 'ಪಾಮ್ ಟ್ರೀಸ್ ಆಫ್ ದ ಅಮೇಜಾನ್ ಅಂಡ್ ದೇರ್ ಯೂಸಸ್' ಮತ್ತು 'ಎ ನರೇಟಿವ್ ಆಫ್ ಟ್ರಾವೆಲ್ಸ್ ಆನ್ ದ ಅಮೇಜಾನ್ ಅಂಡ್ ರೀಯೊ ನೆಗ್ರೊ' ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಿದನು.

ಅನಂತರ ಇಂಡೋನೇಶಿಯಾದ ಅರ್ಛಿಪೆಲಾಗೊ ಪ್ರದೇಶದಲ್ಲಿ ಸುಮಾರು ಎಂಟು ವರ್ಷಗಳ ಕಾಲ ತನ್ನ ಅಧ್ಯಯನ ಕೈಗೊಂಡನು. ಈ ಅಧ್ಯಯನಗಳ ಫಲವೇ ದ ಮಲಯ್ ಅರ್ಛಿಪೆಲಾಗೊ. 1862 ರಿಂದ 1865 ವರೆಗೆ ಪಕ್ಷಿ ಮತ್ತು ಕೀಟಗಳನ್ನು ಕುರಿತ 16 ಲೇಖನಗಳನ್ನು ಪ್ರಕಟಿಸಿದನು.

ಜೀವಿಗಳ ವೈವಿಧ್ಯತೆಯ ಕಾರಣ ಕುರಿತ ತನ್ನ ಅಭಿಪ್ರಾಯಗಳನ್ನು 'ಆನ್ ದ ಟೆಂಡೆನ್ಸಿ ಆಫ್ ವೆರೈಟೀಸ್ ಟು ಡಿಪಾರ್ಟ್ ಇಂಡೆಫಿನೈಟ್‌ಲಿ ಫ್ರಂ ದ ಒರಿಜಿನಲ್ ಟೈಪ್' (ಜೀವಿ ಬಗೆಗಳು ಮೂಲದಿಂದ ಶಾಶ್ವತವಾಗಿ ದೂರ ಸರಿಯುವ ಪ್ರವೃತ್ತಿಯ ಕುರಿತು) ಎಂಬ ಪ್ರಬಂಧದ ರೂಪದಲ್ಲಿ 1856 ರಲ್ಲಿ ದಾಖಲಿಸಿ ಡಾರ್ವಿನ್‌ಗೆ ರವಾನಿಸಿದ. ಪ್ರಬಂಧದಲ್ಲಿ ವ್ಯಾಲೇಸ್ ತನ್ನ ವಿಚಾರಧಾರೆಯನ್ನೇ ಹೋಲುವ ತತ್ವಗಳನ್ನು ಮಂಡಿಸಿರುವುದನ್ನು ಕಂಡ ಡಾರ್ವಿನ್ ತನ್ನ ತತ್ವಗಳನ್ನು ಸುಪ್ರಸಿದ್ಧ 'ಜೀವಿ ಪ್ರಭೇಧಗಳ ಉಗಮ' ಎಂಬ ಕೃತಿಯಲ್ಲಿ ಪ್ರಕಟಿಸಿದ.

ಡಾರ್ವಿನ್‌ನಂತೆ ನಿಸರ್ಗದ ಆಯ್ಕೆ ಎಂದು ಹೆಸರಿಸದಿದ್ದರೂ, ಡಾರ್ವಿನ್ನನ ತತ್ವಗಳ ಸಾರವನ್ನು ವ್ಯಾಲೇಸ್ ತನ್ನ ಕೃತಿಯಲ್ಲಿ ಮಂಡಿಸಿದ್ದ. ವ್ಯಾಲೇಸ್‌ನ ಈ ಪ್ರಮುಖ ಕೊಡುಗೆಯನ್ನು ಡಾರ್ವಿನ್ ಒಪ್ಪಿಕೊಂಡಿದ್ದರೂ, ಡಾರ್ವಿನ್‌ನ ಕೃತಿ ಎಬ್ಬಿಸಿದ ವಿವಾದದ ಅಲೆಯಲ್ಲಿ ವ್ಯಾಲೇಸ್‌ನ ಕೊಡುಗೆ ಮೂಲೆಗುಂಪಾಯಿತು. ಉತ್ತಮ ಕೊಡುಗೆ ನೀಡಿದ್ದರೂ ಇಪ್ಪತ್ತನೇ ಶತಮಾನದ ಬಹುಪಾಲು ಅವಧಿಗೆ ವ್ಯಾಲೇಸ್ ಜನಮನ್ನಣೆಯಿಂದ ವಂಚಿತ.

ಆಲ್ಫ್ರೆಡ್ ಆನ್ನಿ ಎಂಬ ಸುಸಂಸ್ಕೃತ, ಸುಶಿಕ್ಷಿತ ಕನ್ಯೆಯನ್ನು ವಿವಾಹವಾದನು. ಆನಂತರದ ದಿವಸಗಳಲ್ಲಿ ವ್ಯಾಲೇಸ್ ಸುಮಾರು 150ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದನು. ಈ ಪ್ರಕಟಣೆಗಳಲ್ಲಿ ಪ್ರಬಂಧಗಳು, ಪತ್ರಗಳು, ಅವಲೋಕನಗಳು ಇತ್ಯಾದಿ ಸೇರಿವೆ. ಈ ಪ್ರಕಟಣೆಗಳ ವಿಷಯ ನೈಸರ್ಗಿಕ ಆಯ್ಕೆ, ಭೂಗೋಳೀಯ ವಿತರಣೆ, ಗ್ಲೆಸಿಯಾಲಜಿ.

ಜೀವ ವಿಜ್ಞಾನಕ್ಕೆ ವ್ಯಾಲೇಸ್ ನೀಡಿದ ಮತ್ತೊಂದು ಕೊಡುಗೆ : ಜೈವಿಕ ಭೂಗೋಳ ವಿಜ್ಞಾನ. ವಿಚಿತ್ರ ವಸ್ತುಗಳು ಹಾಗೂ ಪ್ರಾಣಿಗಳ ಸಂಗ್ರಹಕ್ಕಾಗಿ ನಡೆಸಿದ ಪರ್ಯಟನದ ವೇಳೆ ತಾನು ಗಮನಿಸಿದ ಜೀವಿ ಪ್ರಭೇದಗಳು, ವಿಚಿತ್ರಗಳನ್ನು ಕುರಿತ ಪ್ರವಾಸಿ ಲೇಖನಗಳ ರಚನೆ. ಇವುಗಳಲ್ಲಿ ಹಲವು ಅಪರೂಪದ ಜೀವಿಗಳ ಪರಿಚಯವಿತ್ತು. ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಜೀವಿಗಳ ವಿತರಣೆಯಾಗಿದೆ ಎಂಬ ಸತ್ಯವನ್ನು ಇವುಗಳಲ್ಲಿ ದಾಖಲಿಸಿದ . ದಕ್ಷಿಣ ಶಾಂತಸಾಗರದ ನಡುಗಡ್ಡೆಗಳಲ್ಲಿ ಸಮಾನ ಪರಿಸರದಲ್ಲಿ ಸಮಾನ ಗುಣಗಳನ್ನು ತೋರಿಸುವ ಜೀವಿಗಳಿರುವ ಸ್ಥಳಗಳನ್ನು ಜೋಡಿಸುವ ಕಾಲ್ಪನಿಕ ರೇಖೆಯೊಂದನ್ನು ನಿರ್ಮಿಸಿದ. ಇದನ್ನೇ ಇಂದು ವ್ಯಾಲೇಸ್ ರೇಖೆ ಎನ್ನುವರು. ಹೆನ್ರಿ ಬೇಟ್ಸ್ ಜೊತೆಗೂಡಿ ಜೀವಿಗಳಲ್ಲಿ ಅಣಕು ನಡವಳಿಕೆ (ಮಿಮಿಕ್ರಿ) ಕುರಿತು ಪರಿಸರ ವಿಜ್ಞಾನ ಹಾಗೂ ಸಮಾಜ ವಿಜ್ಞಾನದಲ್ಲಿಯೂ ವಿಚಾರಗಳ ಮಂಡನೆ. ಒಟ್ಟು 20 ಪುಸ್ತಕಗಳು ಹಾಗೂ 700 ಪ್ರಬಂಧಗಳ ರಚನೆ. ಜಿಯಾಗ್ರಫಿಕಲ್ ಡಿಸ್ಟ್ರಿಬ್ಯೂಶನ್ ಆಫ್ ಅನಿಮಲ್ಸ್ (ಜೀವಿಗಳ ಭೌಗೋಳಿಕೆ ವಿತರಣೆ) – ಎರಡು ಸಂಪುಟಗಳು (1876) : ಕಾಂಟ್ರಿಬ್ಯೂಷನ್ ಟು ದಿ ಥಿಯರಿ ಆಫ್ ನ್ಯಾಚುರಲ್ ಸೆಲೆಕ್ಷನ್ (ನಿಸರ್ಗದ ಆಯ್ಕೆ ತತ್ವಕ್ಕೆ ಕೊಡುಗೆಗಳು) (1870) : ಡಾರ್ವಿನಿಸಂ – 1889; ಹಾಗೂ ಎರಡು ಸಂಪುಟಗಳಲ್ಲಿ ಬರೆದ ಆತ್ಮಕಥೆ (1905) ಪ್ರಮುಖ ಬರಹಗಳು.

1913 ರ ನವೆಂಬರ್ 7 ರಂದು ಈತ ನಿದ್ರೆಯಲ್ಲೇ ಬ್ರಾಡ್ಸ್‌ಸ್ಟೋನಿನಲ್ಲಿ ಚಿರನಿದ್ರೆಗೆ ಶರಣಾದನು. ಕಾಲವಾದ ವರ್ಷ ಎಂದರೆ 1913 ರಲ್ಲಿ ಸಹ ಈತ ತನ್ನ ಕೊನೆಯ ಎರಡು ಪುಸ್ತಕಗಳನ್ನು ಪ್ರಕಟಿಸಿದನು. ತೊಂಬತ್ತನೇ ವಯಸ್ಸಿನಲ್ಲೂ 4,000 ಪುಟಗಳ ಏಕವಿಷಯಕ ನಿಬಂಧ (ಮೋನೋಗ್ರಾಫ್) ವನ್ನು ರಚಿಸಿದ ಕೀರ್ತಿ ಈತನದು. ವ್ಯಾಲೇಸ್‌ನಿಗೆ ಸಂದ ಹಲವಾರು ಗೌರವಗಳ ಪೈಕಿ ಪ್ರಮುಖವಾದವು ಇವು : 1) 1882 ರಲ್ಲಿ ದುಬ್ಲಿನ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 2) 889 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 3) 1868, 1890 ಹಾಗೂ 1908 ನೇ ವರ್ಷಗಳಲ್ಲಿ ರಾಯಲ್ ಸೊಸೈಟಿಯಿಂದ ಪದಕಗಳು, 4) 1870 ರಲ್ಲಿ ಸೊಸೈಟಿ ಆಫ್ ಜಿಯಾಗ್ರಫಿಯೇಟ್ ನಿಂದ ಪ್ರದಕಗಳು, 5) 1892 ಮತ್ತು 1908 ನೇ ವರ್ಷಗಳಲ್ಲಿ ಲಿನ್ನೆಯನ್ ಸೊಸೈಟಿಯಿಂದ ಪದಕಗಳು ಮತ್ತು 1893 ರಲ್ಲಿ ರಾಯಲ್ ಸೊಸೈಟಿಯ ಸದಸ್ಯತ್ವ. (ಬಿ.ಕೆ.ಎಮ್)

# ಶ

**ಶಂಖ:** ಮೃದ್ವಂಗಿಗಳು ತಮ್ಮ ಶರೀರದ ಸುತ್ತ ರಕ್ಷಣೆಗಾಗಿ ನಿರ್ಮಿಸಿಕೊಂಡ ಕವಚ (ಕಾಂಚ್). ಪ್ರಾಣಿಗಳಲ್ಲಿ ಇದು ಸಾಮಾನ್ಯವಾಗಿ ದೇಹದ ಹೊರಭಾಗದಲ್ಲಿದ್ದು, ಕೆಲವು ಪ್ರಾಣಿಗಳಲ್ಲಿ ದೇಹದ ಒಳಗೂ ಇದೆ. ಆಮೆ, ಬಸವನಹುಳು, ಶಂಖದಹುಳುಗಳಲ್ಲಿ ಶಂಖ ಶರೀರದ ಹೊರಗೂ, ಆಕ್ಟೋಪಸ್, ಸೆಫಿಯಾ, ಸ್ಕ್ವಿಡ್‌ಗಳಲ್ಲಿ ಒಳಗೂ ಇರುತ್ತದೆ. ಹೀಗೆ ಶರೀರದ ಒಳಗಡೆ ಬೆಳೆಯುವ ಶಂಖಕ್ಕೆ ಕಟಲ್ ಬೋನ್ ಎಂದು ಹೆಸರು. ಶಂಖದ ಆಕಾರ, ಬಣ್ಣ, ವೈವಿಧ್ಯ ವಿವಿಧ ಪ್ರಭೇದಗಳಲ್ಲಿ ವಿಭಿನ್ನ. ಕೆಲವು ಪ್ರಾಣಿಗಳಲ್ಲಿ ಶಂಖ ಬಲು ಸುಂದರವಾಗಿದೆ. ವಿಟ್ರಿನೆಲಿಡ್ಸ್, ಕಡಲ ಬಸವನಹುಳು (ಮರೀನ್ ಸ್ನೈಲ್) ಪ್ರಪಂಚದಲ್ಲಿ ಅತಿ ಚಿಕ್ಕ ಶಂಖ ಪಡೆದಿರುವ ಪ್ರಾಣಿ. ೧.೨೯೨ ಮೀ ಉದ್ದ ಹಾಗೂ ೨೩೦ ಕಿಗ್ರಾಂನಷ್ಟು ತೂಕ ವಿರುವ ದೈತ್ಯ ಕ್ಲಾಮ್‌ನ ಶಂಖವೇ ಅತಿ ದೊಡ್ಡದು.




ಗ್ಯಾಸ್ಟ್ರ ಪೋಡ್ ಚಿಪ್ಪು

ಭೂಮಿಯ ಮೇಲೆ ಸು. ಒಂದು ಲಕ್ಷದಷ್ಟು ಮೃದ್ವಂಗಿಗಳಿದ್ದು, ಅವುಗಳಲ್ಲಿಯ ಶಂಖಗಳ ಮೂಲ ಒಂದೇ. ಆದರೆ, ಆಕಾರ, ರಚನೆ, ಚಿತ್ತಾರ, ಹಾಗೂ ವೈಶಿಷ್ಟ್ಯಗಳಲ್ಲಿ ವಿಭಿನ್ನವಾಗಿವೆ. ಸಿಹಿ ನೀರಿನಲ್ಲಿ, ಕಡಲಿನಲ್ಲಿ ಅಥವಾ ನೆಲದಲ್ಲಿ ಕಂಡುಬರುತ್ತವೆ. ಶಂಖದಲ್ಲಿ ೩ ಪದರಗಳು: ಪ್ರಿಸ್‌ಮ್ಯಾಟಿಕ್ ಸ್ತರ ಅಥವಾ ಹೊರಪದರ, ಲ್ಯಾಮೆಲ್ಲಾರ್ ಅಥವಾ ನಡುಪದರ, ನ್ಯಾಕ್ರಿಯಸ್ ಸ್ತರ ಅಥವಾ ಒಳ ಪದರಗಳಿವೆ. ಆದರೆ ಪ್ರಾಚೀನಕಾಲದ ಶಂಖಗಳಲ್ಲಿ ಕೇವಲ ಎರಡೇ ಪದರಗಳಿದ್ದುವಂತೆ. ಪ್ರತಿ ಪದರವು ಹರಳು ಖನಿಜದಿಂದಾಗಿತ್ತು. ಕ್ಯಾಲ್ಸಿಯಮ್ ಕಾರ್ಬೊನೇಟ್ ಹಾಗೂ ಸಾವಯವ ವಸ್ತುಗಳ ಮಿಶ್ರಣ ಇದರ ಘಟಕಗಳು. ಶಂಖಜೀವಿಯಲ್ಲಿ ಅದು ಸೇವಿಸಿದ ಆಹಾರ, ನೀರು, ಮಣ್ಣಿನಲ್ಲಿ ದೊರೆಯುವ ಖನಿಜ ಪದಾರ್ಥಗಳು ಒಗ್ಗೂಡಿ ಶಂಖದ ರಚನೆ ಆಗುತ್ತದೆ. ಶಂಖದ ಕಲಾಕೃತಿ ಮುಖ್ಯವಾಗಿ ಅದರ ಬಣ್ಣ ಮತ್ತು ವಿವಿಧ ರಂಗುಗಳಿಂದ ಮೂಡಿದ ಗೆರೆಗಳನ್ನು ಅವಲಂಬಿಸಿದೆ. ಇಂದು ಅಸ್ತಿತ್ವದಲ್ಲಿರುವ ಮೃದ್ವಂಗಿಗಳನ್ನು (೧) ಗ್ಯಾಸ್ಟ್ರೊಪಾಡ್ ಅಥವಾ ಏಕಭಿತ್ತಿನಿರ್ಮಿತ ಶಂಖಗಳು, (೨) ದ್ವಿಕವಾಟವಿರುವ ಶಂಖ, (೩) ಆಕ್ಟೋಪಸ್ ಮತ್ತು ಸ್ಕ್ವಿಡ್, (೪) ಟೂತ್ ಶೆಲ್ (ಆನೆದಂತ ಹೋಲುವ) ಮತ್ತು (೫) ಕೈಟಾನ್ ಎಂಬ ಐದು ವರ್ಗಗಳಾಗಿ ವಿಂಗಡಿಸಿದೆ. ಇವುಗಳಲ್ಲಿರುವ ಜೀವಿಗಳು ವರ್ಣರಂಜಿತ ಹಾಗೂ ಆಕರ್ಷಕ ಶಂಖಗಳನ್ನು ನಿರ್ಮಿಸುತ್ತವೆ. ಒಳಗಿನ ಜೀವಿ ಬೆಳೆದಂತೆ ಶಂಖವು ಬೆಳೆಯುತ್ತದೆ.

ಬಸವನಹುಳು ಹುಟ್ಟುವಾಗ ಶಂಖದ ಗಾತ್ರ ಕೇವಲ ೩ ಮಿಮೀ ಇದ್ದು, ೬ ತಿಂಗಳಲ್ಲಿ ೧೩–೧೫ ಸೆಂಮೀ ವರೆಗೆ ಬೆಳೆಯುತ್ತದೆ. ಹೀಗೆ ಅದು ೬ ವರ್ಷದ ತನಕ ಬೆಳೆಯಬಹುದು. ಅನೇಕ ಪ್ರಭೇದಗಳಲ್ಲಿ ಶಂಖ ಪ್ರಾರಂಭದಲ್ಲಿ ತ್ವರಿತವಾಗಿ ಬೆಳೆಯುತ್ತ ಮುಂದೆ ನಿಧಾನವಾಗುತ್ತದೆ. ನಿಶ್ಚಿತ ಅವಧಿಯ ತರುವಾಯ ಬೆಳವಣಿಗೆ ನಿಂತುಹೋಗುತ್ತದೆ. ಕೆಲವು ಪ್ರಭೇದಗಳಲ್ಲಿ ಶಂಖ ೧೦೦ ವರ್ಷ ಪರ್ಯಂತವೂ ಬೆಳೆಯುವುದುಂಟು!

ಮೃದ್ವಂಗಿಗಳ ಶರೀರವನ್ನು ಆವರಿಸಿ ಚರ್ಮದ ಪದರವಿದೆ. ಇದಕ್ಕೆ ಮ್ಯಾಂಟಲ್ ಅಥವಾ ಮೇಲಂಗಿ ಎಂದು ಹೆಸರು. ಮ್ಯಾಂಟಲ್‌ನ ಅಂಚಿನಲ್ಲಿ ಅಥವಾ ಮೇಲ್ಭಾಗದಲ್ಲಿರುವ ಕೆಲವು ಕೋಶಗಳು ಶಂಖನಿರ್ಮಾಣಕ್ಕೆ ಅಗತ್ಯ. ಇವು ಕ್ಯಾಲ್ಸಿಯಮ್ ಕಾರ್ಬೊನೇಟ್ ಹಾಗೂ ಇನ್ನಿತರ ಸಾವಯವ ಪದಾರ್ಥಗಳನ್ನು ಸ್ರವಿಸುತ್ತವೆ.

ಶಂಖದ ಶುದ್ಧೀಕರಣ, ಪ್ರದರ್ಶನ ವಿಧಾನ ಹಾಗೂ ಸಂರಕ್ಷಣೆ: ಶಂಖವನ್ನು ಕುದಿಯುವ ನೀರಿನಲ್ಲಿ ೫–೧೦ ನಿಮಿಷಗಳವರೆಗೆ ಕಾಯಿಸಿ, ತಣ್ಣಗಾದ ಮೇಲೆ ಸೂಜಿ ಅಥವಾ ಚೂಪಾದ ಮೊನೆಯಿಂದ ಶರೀರವನ್ನು ಶಂಖದಿಂದ ಬೇರ್ಪಡಿಸಿ, ಸಾಬೂನಿನಲ್ಲಿ ತೊಳೆದು, ಬಿಸಿನೀರಿನಲ್ಲಿ ಆರಿಸಿ, ಅನಂತರ ಮದ್ಯಸಾರದಲ್ಲಿ ಹಲವು ದಿನಗಳ ಕಾಲ ಇರಿಸುವುದರಿಂದ ಶಂಖಗಳು ಹಾಳಾಗುವುದನ್ನು ತಡೆಯಬಹುದು. ಹೀಗೆ ಸಂಗ್ರಹಿಸಿ ಪರಿಷ್ಕರಿಸಿದ ಶಂಖವನ್ನು ದಪ್ಪ ಹಾಳೆ ಅಥವಾ ಹಲಗೆ ಮೇಲೆ ಅಥವಾ ಕೆಳಗೆ ಬಿಗಿಯಾಗಿ ಅಂಟಿಸಿ, ಅಲ್ಲೇ ಕೆಳಗೆ ಅದರ ವೈಜ್ಞಾನಿಕ ಹಾಗೂ ಸಾಮಾನ್ಯ ನಾಮ, ಸಂಗ್ರಹಿಸಿದ ದಿನಾಂಕ, ಸ್ಥಳ, ಸಂಗ್ರಹಕಾರನ ಹೆಸರು ಇತ್ಯಾದಿ ಮಾಹಿತಿಗಳನ್ನು ಆಧಾರಿಸಿ, ಪ್ರದರ್ಶಿಸಬಹುದಾಗಿದೆ. ಇದರಿಂದ ನಮ್ಮಲ್ಲಿ ದೊರೆಯುವಂಥ ಶಂಖಗಳ ವಿಧಗಳು, ಬಗೆಗಳು, ವರ್ಣ ವೈವಿಧ್ಯ, ಆಕೃತಿ, ಶ್ರೀಸಾಮಾನ್ಯನಿಗೂ ತಿಳಿಯಲು ಸಹಾಯವಾಗುತ್ತದೆ.

ಶಂಖಗಳ ಉಪಯೋಗ: ಹಿಂದಿನ ಕಾಲದಲ್ಲಿ ಶಂಖಗಳನ್ನು ಹಣ ಅಥವಾ ನಾಣ್ಯಗಳಾಗಿ ಬಳಸಿದ್ದುಂಟು. ಅವುಗಳ ಪುಡಿ ಬಟ್ಟೆಗಳ ಬಣ್ಣ ತಯಾರಿಸಲು ಉಪಯೋಗವಾಗುತ್ತದೆ. ಸುಮನೋಹರ ಮತ್ತು ಅತಿ ವಿರಳವಾದ ಶಂಖಗಳು ಅದ್ಭುತ ಕಲಾಕೃತಿಗಳ ನಿರ್ಮಾಣದಲ್ಲಿ ಶಂಖರಚನೆಯನ್ನೇ ಹೋಲುವ ಕೆಲವು ಮೃದ್ವಂಗಿ ಪ್ರಭೇದಗಳಿಂದ ದೊರೆಯುವ ಮುತ್ತುಗಳನ್ನು ಆಭರಣ ತಯಾರಿಕೆಯಲ್ಲಿ ಉಪಯೋಗಿಸುವುದುಂಟು. (ನೋಡಿ – ಮುತ್ತು). ಹಲವು ಶಂಖಗಳನ್ನು ಪ್ರಸಾಧನ ಹಾಗೂ ಅಲಂಕಾರೀಕರಣ ವಸ್ತುಗಳ ತಯಾರಿಕೆಯಲ್ಲಿ, ಇನ್ನು ಕೆಲವನ್ನು ಗೃಹಾಲಂಕರಣದಲ್ಲಿ, ಮತ್ತೆ ಕೆಲವನ್ನು ರುಚಿಕರ ಖಾದ್ಯವಸ್ತು, ಔಷಧಿ ತಯಾರಿಕೆಯಲ್ಲಿ ಬಳಸುತ್ತಾರೆ.

ವಿಜ್ಞಾನಿಗಳು ವಿವಿಧ ಶಂಖಗಳನ್ನು ಸಂಶೋಧನೆಯಲ್ಲಿಯು, ಕಡಲಿನಲ್ಲಿ ದೊರೆಯುವ ತೈಲನಿಕ್ಷೇಪಗಳನ್ನು ಪತ್ತೆ ಮಾಡುವ ಕಾರ್ಯದಲ್ಲಿ ಬಳಸಿಕೊಂಡಿದ್ದಾರೆ. ಕೆಲವು ಪ್ರಭೇದಗಳ ಶಂಖಗಳನ್ನು (ಬಲಮುರಿ, ಎಡಮುರಿ) ಭಾರತೀಯರು ಪವಿತ್ರವೆಂದು ಭಾವಿಸಿ ಪೂಜೆಕಾರ್ಯದಲ್ಲಿ ಬಳಸುತ್ತಾರೆ. ನೋಡಿ – ಚಿಪ್ಪುಗಳು ಮತ್ತು ಚಿಪ್ಪುಸಂಗ್ರಹಣೆ.

(ಟಿ.ಎಸ್.ಎಚ್.)

**ಶರೀರ ಕ್ರಿಯಾ ವಿಜ್ಞಾನ:** ಶರೀರದ ಚಟುವಟಿಕೆಗಳ ಭೌತಿಕ ಹಾಗೂ ರಾಸಾಯನಿಕ ಮಟ್ಟದ ಅಧ್ಯಯನ (ಫಿಸಿಯಾಲಜಿ). ಅಥವಾ ಜೀವಿಯ ವಿವಿಧ ಅಂಗಾಂಗ ವ್ಯೂಹಗಳ, ಅಂಗಗಳ, ಅಂಗಾಂಶಗಳ ಅಥವಾ ಕೋಶಗಳ ಭೌತಿಕ ಹಾಗೂ ರಾಸಾಯನಿಕ ಕಾರ್ಯಚಟುವಟಿಕೆಯ ಸಮಗ್ರ ಅಧ್ಯಯನ. ಜೀವಿಗಳೆಲ್ಲವೂ ಕೋಶ ಇಲ್ಲವೇ ಕೋಶ ಸಮೂಹದಿಂದಾಗಿವೆ. ಒಂದೇ ಮೂಲ, ರಚನೆ ಮತ್ತು ಕಾರ್ಯ ನಿರ್ವಹಿಸುವ ಕೋಶಗಳು ಕೂಡಿ ಅಂಗಾಂಶ ಅಥವಾ ಊತಕಗಳಾದರೆ, ಈ ಅಂಗಾಂಶಗಳು ಸೇರಿ ಅಂಗಗಳು, ಅಂಗಗಳು ಸೇರಿ ಅಂಗಾಂಗ ವ್ಯೂಹಗಳಾಗುತ್ತವೆ. ದೇಹದಲ್ಲಿರುವ ಅಂಗವ್ಯೂಹಗಳ ಜಾಲದಿಂದ ಜೀವಿ ತನ್ನ ಜೈವಿಕ ಚಟುವಟಿಕೆಗಳನ್ನು ನಡೆಸಬಲ್ಲುದು. ಉದಾ: ಹೃದಯ

ರಕ್ತನಾಳಗಳು ಸೇರಿ ರಕ್ತಪರಿಚಲನಾಂಗ, ಮೂತ್ರ ಪಿಂಡ, ಮೂತ್ರನಾಳ, ಮೂತ್ರಕೋಶಗಳು ಸೇರಿ ವಿಸರ್ಜನಾಂಗವಾಗುತ್ತದೆ. ಜೀವಿ ಒಂದು ರಾಸಾಯನಿಕ ಕಾರ್ಖಾನೆಯಂತೆ ವರ್ತಿಸುತ್ತದೆ. ಎಲ್ಲ ಜೀವಿಗಳೂ ಆಗಿರುವುದು ಸಂಕೀರ್ಣ ಮೂಲವಸ್ತುಗಳಿಂದ. ಅವುಗಳಲ್ಲಿ ಹೆಚ್ಚು ಭಾಗ ನೀರಾದರೆ ಉಳಿದದ್ದು ಕಾರ್ಬಾನಿಕ ಮತ್ತು ಅಕಾರ್ಬಾನಿಕ ವಸ್ತುಗಳು. ಇವುಗಳಲ್ಲಿ ಕೆಳಗಿನವು ಮುಖ್ಯವಾದವು.

ನೀರು: ಇದು ಜೀವಿಯ ದೇಹದ ಬಹುತೇಕ ಭಾಗವಾಗಿದ್ದು ದ್ರವಸ್ಥಿತಿಯಲ್ಲಿ ಎಲ್ಲ ರಾಸಾಯನಿಕಗಳನ್ನು ತನ್ನಲ್ಲಿ ಕರಗಿಸಿ ಜೈವಿಕ ಕ್ರಿಯೆಗೆ ಅನುವು ಮಾಡಿಕೊಡುತ್ತದೆ.

ಪಿಷ್ಟ: ಶಕ್ತಿಯ ಮೂಲ. ಸರಳ ಸಕ್ಕರೆ ಅಂದರೆ ಗ್ಲೂಕೋಸಿನ ಅಣುಗಳಿಂದಾಗಿವೆ.

ಪ್ರೋಟೀನ್: ದೇಹದ ಚಯಾಪಚಯ ಕಾರ್ಯ ನಿರ್ವಹಣೆಗೆ ಒದಗುವ ಎಲ್ಲ ಕಿಣ್ವಗಳು ಪ್ರೋಟೀನ್‍ಗಳು. ಪೆಪ್ಟೈಡು ಬಂಧಗಳ ಮೂಲಕ ಜೋಡಣೆಯಾದ ಅಮೈನೋ ಆಮ್ಲಗಳ ಸರಪಣಿಗಳಿವು. ದೇಹರಚನೆಯಲ್ಲಿ ಅವುಗಳ ಪಾತ್ರ ಬಹುಮುಖ್ಯ.

ಮೇದಸ್ಸು: ಶಕ್ತಿಯನ್ನು ಸಂಗ್ರಹಿಸಿಟ್ಟುಕೊಳ್ಳುವ ಇಂಗಾಲ ಯುಕ್ತ ರಸಾಯನ. ಚರ್ಮದ ಅಡಿಯಲ್ಲಿ ಮೇದಸ್ಸು ಸಂಗ್ರಹವಾದಾಗ ದೇಹದ ಉಷ್ಣತೆಯ ನಿಯಂತ್ರಣ ಸಾಧ್ಯ.

ಲವಣಗಳು: ಅಂಗಾಂಶಗಳು ಮತ್ತು ಅಂಗಗಳ ಕಾರ್ಯಶೀಲತೆಗೆ ಲವಣಗಳು ಅವಶ್ಯಕ. ಸೋಡಿಯಂ, ಪೊಟ್ಯಾಸಿಯಂ, ಕಬ್ಬಿಣ, ಕ್ಯಾಲ್ಸಿಯಂ, ಮೆಗ್ನೀಸಿಯಂ ಲವಣಗಳ ರೂಪದಲ್ಲೂ, ಕ್ಲೋರೈಡ್, ಕಾರ್ಬೋನೇಟ್, ಫಾಸ್ಫೇಟ್, ಬೈಕಾರ್ಬೋನೇಟ್, ಸಲ್ಫೇಟ್ ರೂಪದಲ್ಲೂ ಇವು ಜೀವಿಗಳಲ್ಲಿ ಇರುತ್ತವೆ.

ಈ ಎಲ್ಲ ರಾಸಾಯನಗಳು ವಿವಿಧ ಜೀವಿಗಳಲ್ಲಿ ವಿವಿಧ ಪ್ರಮಾಣದಲ್ಲಿರುತ್ತವೆ.

ಜೀರ್ಣಕ್ರಿಯೆ: ಜೀವಿಯ ಬೆಳವಣಿಗೆ ಹಾಗೂ ಜೈವಿಕ ಚಟುವಟಿಕೆಗಳಿಗೆ ಶಕ್ತಿ ಬೇಕು. ಈ ಶಕ್ತಿ ಆಹಾರದಿಂದ ದೊರೆಯುತ್ತದೆ. ಸೇವಿಸಿದ ಸಂಕೀರ್ಣ ಆಹಾರವನ್ನು ಸರಳರೂಪವಾಗಿ ಪರಿವರ್ತಿಸಿ ಅದು ದೇಹಗತವಾಗುವಂತೆ ಮಾಡುವ ರಾಸಾಯನಿಕ ಕ್ರಿಯೆಯೇ ಜೀರ್ಣಕ್ರಿಯೆ. ಜೀರ್ಣಾಂಗ ವ್ಯೂಹ ಆಹಾರವನ್ನು ಜೀರ್ಣವಾಗಿಸುತ್ತದೆ. ಕೇವಲ ಕೆಲವು ಪ್ರಾಣಿಗಳನ್ನು ಹೊರತು ಪಡಿಸಿ ಉಳಿದವೆಲ್ಲವೂ ಪರಪೋಷಕೀಯ ಜೀವಿಗಳು. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸ್ವಪೋಷಕೀಯ ಜೀವಿಯನ್ನು ಅವಲಂಬಿಸಿರುತ್ತವೆ. ಜೀವಿ ಯಾವುದೇ ರೀತಿಯಲ್ಲಿ ಆಹಾರವನ್ನು ಸೇವಿಸಲಿ ಅಂತಿಮವಾಗಿ ಅವು ಪಿಷ್ಟ, ಕೊಬ್ಬು ಮತ್ತು ಪ್ರೋಟೀನ್‍ಗಳಾಗಿ ಪರಿವರ್ತಿತವಾಗಬೇಕು.

ದೇಹದಲ್ಲಿ ಆಹಾರ ಯಾಂತ್ರಿಕ ಹಾಗೂ ರಾಸಾಯನಿಕ ಕ್ರಿಯೆಗಳ ಮೂಲಕ ಛಿದ್ರವಾಗಿ ಈ ಸರಳ ವಸ್ತುಗಳು ತಯಾರಾಗುವುವು. ಹಲ್ಲುಗಳು ಯಾಂತ್ರಿಕವಾಗಿ ಸಹಕಾರಿಯಾದರೆ, ಬಾಯಿಯ ಲಾಲಾರಸದ ಕಿಣ್ವಗಳು, ಜಠರದಲ್ಲಿಯ ಆಮ್ಲ ಮತ್ತು ಕಿಣ್ವಗಳು ಕರುಳಿನಲ್ಲಿ ನೀರು ಮತ್ತು ಕಿಣ್ವಗಳು ಪಚನ ಕ್ರಿಯೆಯನ್ನು ರಾಸಾಯನಿಕವಾಗಿ ನಡೆಸುತ್ತವೆ. ಕೆಲ ಜೀವಿಗಳಲ್ಲಿ ದೇಹದ ಹೊರಗೆ, ಆಹಾರ ಸ್ವಲ್ಪ ಜೀರ್ಣವಾಗಿ ಅನಂತರ ಜೀರ್ಣಾಂಗವನ್ನು ಸೇರುತ್ತದೆ. ಮೆಲಕು ಹಾಕುವ ಪ್ರಾಣಿಗಳಲ್ಲಿ ನಾಲ್ಕು ಕೋಣೆಯಾಗಿ ಮಾರ್ಪಟ್ಟಿರುವ ಜಠರ ಈ ಪಚನ ಕ್ರಿಯೆಗೆ ಅನುಕೂಲವನ್ನುಂಟು ಮಾಡುತ್ತದೆ. ದೇಹಗತವಾಗದ, ಪಚನವಾಗದ ಆಹಾರ ತ್ಯಾಜ್ಯವಾಗಿ ಹೊರ ಬರುತ್ತದೆ.

ರಕ್ತ ಪರಿಚಲನೆ: ಆಹಾರ, ಆಮ್ಲಜನಕ ಆಹಾರ, ಆಮ್ಲಜನಕ, ದೇಹದಲ್ಲಿಯೇ ತಯಾರಾಗುವ ಕಿಣ್ವ ಹಾರ್ಮೋನ್‍ಗಳನ್ನು ದೇಹದ ವಿವಿಧ ಭಾಗಗಳಿಗೆ ತಲುಪಿಸುವ ಹಾಗೂ ವಿವಿಧಭಾಗಗಳಿಂದ ಇಂಗಾಲದ ಡೈಯಾಕ್ಸೈಡ್ ಹಾಗೂ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸುವ ಅಂಗಾಂಶವೇ ರಕ್ತ. ಹೃದಯದ ಸಂಕುಚನ– ವ್ಯಾಕೋಚನಗಳಿಂದ ರಕ್ತವು ಶರೀರದ ಎಲ್ಲೆಡೆಗೂ ನಾಳಗಳಲ್ಲಿ ಹರಿಯುತ್ತದೆ. ೭೦–೭೨ ಬಾರಿ ಮಿಡಿಯುವ ಮಾನವನ ಹೃದಯ ನಿಮಿಷಕ್ಕೆ ಸುಮಾರು ೫ ಲೀಟರ್ ರಕ್ತವನ್ನು ನಾಳಗಳಿಗೆ ತಳ್ಳುತ್ತದೆ. ರಕ್ತ ಪರಿಚಲನೆಗೆ ಪರಸ್ಪರ ಸಂಪರ್ಕ ಹೊಂದಿರುವ ಕೊಳವೆಗಳೇ ರಕ್ತನಾಳಗಳು. ವ್ಯಾಸಕ್ಕೆ ಅನುಗುಣವಾಗಿ ಅವುಗಳನ್ನು ಅಪಧಮನಿ, ಅಭಿದಮನಿ ಹಾಗೂ ಲೋಮನಾಳಗಳೆಂದು ಗುರುತಿಸಬಹುದು. ಹೃದಯದಿಂದ ರಕ್ತವನ್ನು ಕೊಂಡೊಯ್ಯುವ ರಕ್ತನಾಳ ದಪ್ಪ ಭಿತ್ತಿಯ ಅಪಧಮನಿ. ರಕ್ತವನ್ನು ಹೃದಯಕ್ಕೆ ತರುವ ರಕ್ತನಾಳಗಳು ಅಭಿಧಮನಿಗಳು. ಇವೆರಡರ ನಡುವೆ ಜಾಲ ಏರ್ಪಡಿಸುವ ನಾಳಗಳು ಲೋಮನಾಳಗಳು. ರಕ್ತನಾಳಗಳಲ್ಲಿ ರಕ್ತವೂ ಹಿಮ್ಮುಖವಾಗಿ ಹರಿಯದಂತೆ ತಡೆಗಟ್ಟಲು ಕವಾಟಗಳಿವೆ.

ಪರಿಚಲನೆಯೊಂದಿಗೆ ರಕ್ತ ದೇಹದ ಉಷ್ಣತೆಯನ್ನೂ, ರೋಗ ನಿರೋಧಕತೆಯನ್ನು ನಿಯಂತ್ರಿಸುತ್ತದೆ. ಉಸಿರಾಟದ ಅಂಗಾಂಗಳು ಹಾಗೂ ಜೈವಿಕ ಚಟುವಟಿಕೆಯನ್ನು ಆಧರಿಸಿ ರಕ್ತ ಪರಿಚಲನೆಯಲ್ಲಿ ವ್ಯತ್ಯಾಸಗಳಿವೆ. ರಕ್ತದಲ್ಲಿರುವ ಕಬ್ಬಿಣಾಂಶವುಳ್ಳ ಹೀಮೋಗ್ಲಾಬಿನ್ ಮತ್ತು ಹೀಮೋ ಎರಿಥ್ರಿನ್ ಎಂಬ ವರ್ಣಕಗಳು ಆಮ್ಲಜನಕದ ಸಾಗಾಣಿಕೆಗೆ ಸಹಕಾರಿ. ಇವು ರಕ್ತಕ್ಕೆ ಕೆಂಪು ಬಣ್ಣ ನೀಡುತ್ತವೆ. ಆದರೆ ಎಲ್ಲ ಜೀವಿಗಳಲ್ಲಿ ರಕ್ತ ಕೆಂಪಾಗಿಲ್ಲ. ಕಠಿಣ ಚರ್ಮಿ ಹಾಗೂ ಮೃದ್ವಂಗಿಗಳಲ್ಲಿ ಹೀಮೋಸಯನಿನ್ ಇರುವುದರಿಂದ ರಕ್ತದ ಬಣ್ಣ ನೀಲಿ. ಕೀಟಗಳಲ್ಲಿ ರಕ್ತ ಬಿಳಿ ಬಣ್ಣದ್ದು, ಉಸಿರಾಟದ ಕ್ರಿಯೆಯಲ್ಲಿ ಸಹಾಯಕವಲ್ಲ.

ಉಸಿರಾಟ ಕ್ರಿಯೆ: ದೇಹಕ್ಕೆ ಆಮ್ಲಜನಕ ಒದಗಿಸುವ ಕ್ರಿಯೆಯೇ ಉಸಿರಾಟ. ಇದಕ್ಕೆ ಸಂಬಂಧಿಸಿದ ಅಂಗವ್ಯೂಹ ಉಸಿರಾಟದ ಅಂಗವ್ಯೂಹ. ಅತ್ಯಂತ ಕೆಳಮಟ್ಟದ ಜೀವಿಯಾದ ಅಮೀಬಾದಿಂದ ಮಾನವನವರೆಗೆ ಎಲ್ಲ ಜೀವಿಗಳಲ್ಲಿ ಉಸಿರಾಡುತ್ತವೆ. ಆದರೆ ಉಸಿರಾಟದ ವಿಧಾನ ಬೇರೆ. ಕೆಳಮಟ್ಟದ ಜೀವಿಗಳಲ್ಲಿ ದೇಹದ ಹೊರೆ ಅಥವಾ ಚರ್ಮದ ಮೂಲಕ, ಕೀಟಗಳಲ್ಲಿ ಶರೀರದ ಎರಡೂ ಭಾಗಗಳಲ್ಲಿ ಇರುವ ರಂಧ್ರಗಳಿಂದ, ಮೀನುಗಳಲ್ಲಿ ಕಿವಿರುಗಳಿಂದ, ಉಭಯವಾಸಿಗಳಿಂದ ಮಾನವನವರೆಗಿನ ಜೀವಿಗಳಲ್ಲಿ ಶ್ವಾಸಕೋಶಗಳಿಂದ ಅನಿಲ ವಿನಿಮಯವಾಗುತ್ತದೆ. ಹಕ್ಕಿಗಳಲ್ಲಿ ಉಸಿರಾಟದ ಸಾಮರ್ಥ್ಯ ಹೆಚ್ಚು. ಉಸಿರು ನಾಳಗಳು ಗಾಳಿಗೂಡುಗಳಾಗಿ ಪರಿವರ್ತನೆಗೊಳ್ಳದೆ ಗಾಳಿ ಚೀಲವಾಗಿ ಮಾರ್ಪಟ್ಟಿದೆ. ಇವು ಅನಿಲ ಸಂಗ್ರಹಕ್ಕೆ ಸಹಕಾರಿ. ಉಸಿರಾಟದ ಮೂಲಕ ದೇಹದ ಒಳಗೆ ತೆಗೆದುಕೊಳ್ಳುವ ಉಬ್ಬಸದ ಗಾಳಿಯಲ್ಲಿ ಶೇ ೨೦.೯೯% ರಷ್ಟು ಆಮ್ಲಜನಕ, ೭೯.೦೩% ರಷ್ಟು ಸಾರಜನಕ ಹಾಗೂ ೦.೦೩% ರಷ್ಟು ಇಂಗಾಲದ ಡೈ ಆಕ್ಸೈಡ್ ಇರುವುದು. ನಿಶ್ವಾಸದ ಗಾಳಿಯಲ್ಲಿ ೧೬.೦% ರಷ್ಟು ಆಮ್ಲಜನಕ, ೭೮.೦% ರಷ್ಟು ಸಾರಜನಕ ಹಾಗೂ ೬%ರಷ್ಟು ನೀರಾವಿ ಹಾಗೂ ಇಂಗಾಲದ ಡೈಆಕ್ಸೈಡ್ ಇರುತ್ತದೆ.

ವಿಸರ್ಜನಾ ಕ್ರಿಯೆ: ದೇಹದಲ್ಲಿ ಸಂಗ್ರಹವಾದ ವಿಸರ್ಜಕಗಳನ್ನು ಹೊರಹಾಕುವುದು ವಿಸರ್ಜನಾ ಕ್ರಿಯೆ. ಕೆಳಮಟ್ಟದ ಜೀವಿಗಳಲ್ಲಿ ಇದೊಂದು ಸರಳಕ್ರಿಯೆ. ಆದರೆ ಕಶೇರುಕಗಳಲ್ಲಿ ಇದಕ್ಕೆಂದೇ ನಿಯಮಿತವಾದ ಮೂತ್ರ ಪಿಂಡಗಳು ಇವೆ. ಪ್ರತಿಯೊಂದು ಮೂತ್ರ ಪಿಂಡದಲ್ಲಿಯೂ ಇರುವ ಸುಮಾರು ಒಂದು ಮಿಲಿಯನ್ ಸೂಕ್ಷ್ಮ ರೂಪಿ ಶೋಧಕಗಳು ರಕ್ತವನ್ನು ನಿರಂತರವಾಗಿ ಶೋಧಿಸುತ್ತವೆ. ಪ್ರತಿಯೊಂದು ಶೋಧಕ ಅಥವಾ ನೆಫ್ರಾನ್ ಒಂದು ನಿಮಿಷಕ್ಕೆ ಸುಮಾರು ೧.೩ ಲೀಟರ್ ರಕ್ತವನ್ನು ಶೋಧಿಸುತ್ತದೆ. ವಿಸರ್ಜಕಗಳು ಅಮೋನಿಯಾ, ಯೂರಿಯಾ ಅಥವಾ ಯೂರಿಕ್ ಆಮ್ಲಗಳಾಗಿ ಹೊರಬರುತ್ತವೆ. ಅಮೋನಿಯವನ್ನು ಹೊರಹಾಕುವ ಜಲವಾಸಿಗಳು ಅಮೋನೋ ಟೆಲಿಕ್, ಯೂರಿಯಾ ಹೊರಹಾಕುವ ಕಶೇರುಕಗಳು (ಮಾನವ) ಯೂರಿಯೋಟೆಲಿಕ್ ಹಾಗೂ ಯೂರಿಕ್ ಆಮ್ಲ ಹೊರ ಹಾಕುವ ಕೀಟಗಳು ಮತ್ತು ಪಕ್ಷಿಗಳು ಯೂರಿಕೋ ಟೆಲಿಕ್‍ಗಳು.

ಪ್ರಚೋದನೆ ಹಾಗೂ ಪ್ರತಿಕ್ರಿಯೆ: ಜೀವಿಗಳು ಪ್ರಚೋದನೆಗಳಿಗೆ ಪ್ರತಿಕ್ರಿಯೆ ಕೊಡುವ ಅಂಗವ್ಯೂಹ ನರಮಂಡಲ. ಕೆಳಹಂತದ ಜೀವಿಗಳಲ್ಲಿ ಕೇವಲ ನರತಂತುಗಳು ಮತ್ತು ನರಜಾಲಕ್ಕೆ ಸೀಮಿತವಾದ ಇದು ಮೇಲುವರ್ಗದ ಜೀವಿಗಳಲ್ಲಿ ಸಂಕೀರ್ಣ ವ್ಯವಸ್ಥೆಯಾಗಿ ಬೆಳೆದಿದೆ. ಸ್ತನಿಗಳಲ್ಲಂತೂ ನರಮಂಡಲವು ವಿಕಾಸದ ಉನ್ನತಮಟ್ಟ ತಲುಪಿದೆ. ನರಮಂಡಲವು ಮಿದುಳು, ಮಿದುಳು ಬಳ್ಳಿ ಮತ್ತು ನರಗಳಿಂದಾಗಿದೆ. ಮಾನವನ ಮಿದುಳು ೧.೫ ಕಿಗ್ರಾಂ ತೂಕವಿರುತ್ತದೆ. ಮಿದುಳಿನಲ್ಲಿ ನರಕೋಶ ಕಾಯಗಳು ಸೇರಿ ಆದ ಹೊರಗಿನ ಪದರ ಮತ್ತು ನರತಂತುಗಳು ಕೂಡಿ ಆದ ಒಳಗಿನ ಪದರವೂ ಇವೆ. ನರಕೋಶ ಕಾಯದ ಹೊರಪದರ ಬೂದು ದ್ರವ್ಯ (ಗ್ರೇ ಮ್ಯಾಟರ್) ಮತ್ತು ಒಳಗಿನದು (ವೈಟ್ ಮ್ಯಾಟರ್). ಹೊರಗಿನ ಪದರವನ್ನು ಸೆರೆಬ್ರಲ್ ಕಾರ್ಟೆಕ್ಸ್ ಅಂದರೆ ಪ್ರಮಸ್ತಿಷ್ಕ ಪದರ ಎಂದು ಕರೆಯಲಾಗುತ್ತದೆ. ಇಲ್ಲಿ ಅನೇಕ ಕೇಂದ್ರಗಳಿವೆ. ನಿರ್ದಿಷ್ಟ ಸಂವೇದಾನಾಂಗ ಗ್ರಹಿಸುವ ಯಾವುದೇ ಪ್ರಚೋದನೆ ಜ್ಞಾನ ವಾಹಿನಿ ನರದ ಮೂಲಕ ಮಿದುಳಿಗೆ ತಲುಪುವುದು. ಸಂದೇಶಕ್ಕೆ ತಕ್ಕಂತೆ ಮಿದುಳು ಕ್ರಿಯಾ ವಾಹಿ ನರಗಳ ಮೂಲಕ ಕಾರ್ಯಕಾರಿ ಅಂಗಾಂಗಳಿಗೆ ಪ್ರತಿಕ್ರಿಯಿಸುತ್ತದೆ. ಮಿದುಳಿನ ಸಹಾಯವಿಲ್ಲದೆಯೇ ನರಹುರಿ (ಸ್ಪೈನಲ್ ಕಾರ್ಡ್)ಯ ಮೂಲಕವೇ ಪ್ರತಿಕ್ರಿಯೆ ನಡೆಯಬಹುದು.

ಇಂದ್ರಿಯಗಳು: ಕಣ್ಣು, ಕಿವಿ, ನಾಲಿಗೆ, ಮೂಗು, ಚರ್ಮ ಇವು ಬೆಳಕು, ಶಬ್ದ, ವಾಸನೆ, ರುಚಿ, ಶಾಖ ಸ್ಪರ್ಶ ಮುಂತಾದ ಸಂವೇದನೆಗಳಿಗೆ ಸ್ಪಂದಿಸುತ್ತವೆ. ಇದಕ್ಕಾಗಿ ಅವುಗಳಲ್ಲಿ ವಿಶೇಷವಾದ ಅರಿವಿನ ಕೋಶಗಳಿವೆ.

ಪ್ರಜನನ: ತನ್ನಂತಹದೇ ಜೀವಿಯನ್ನು ಉತ್ಪಾದಿಸುವುದೇ ಪ್ರಜನನ. ಇದೇ ಜೀವಿಯ ಜೀವನದ ಪರಮೋಚ್ಚ ಉದ್ದೇಶ. ಇದಕ್ಕಾಗಿ ತಾಯಿ ಕೋಶ ಒಂದರಿಂದ ಎರಡಾಗುವ ಅತ್ಯಂತ ಸರಳ ವಿಧಾನದಿಂದ. ಅದಕ್ಕೆಂದೇ ಮೀಸಲಾದ ಅಂಗಾಂಗಳಿಂದ ವಿಶೇಷ ಕೋಶಗಳಲ್ಲಿ ಅವುಗಳಿಂದ ಭ್ರೂಣ ಬೆಳೆಯುವ ಸಂಕೀರ್ಣವಿಧಾನಗಳಿವೆ. ಸಂಪೂರ್ಣವಾಗಿ ಪಕ್ವಗೊಂಡ ಸಂಪೂರ್ಣವಾಗಿ ಜೀವಿ ಲೈಂಗಿಕ ಸಂತಾನೋತ್ಪತ್ತಿಯಲ್ಲಿ ಅಂಡಾಣು ಇಲ್ಲವೇ ವೀರ್ಯಾಣುವನ್ನು ಉತ್ಪತ್ತಿ ಮಾಡುತ್ತದೆ. ಇವೆರಡರ ಸಮ್ಮಿಲನ ದೇಹದ ಒಳಗೆ ಅಥವಾ ಹೊರಗೆ ನಡೆಯುತ್ತದೆ. ದೇಹದ ಒಳಗೆ ನಡೆದಾಗ ಸಾಮಾನ್ಯವಾಗಿ ಮರಿ ತಾಯಿಯ ದೇಹದಲ್ಲಿ ಬೆಳೆಯಬಹುದು ಇಲ್ಲವೇ ಪಕ್ಷಿಗಳಂತೆ ಮೊಟ್ಟೆ ಇಟ್ಟ ನಂತರ

ಮರಿಯಾಗಿ ಹೊರಬರುವುದು. ಈ ಎಲ್ಲ ಕ್ರಿಯೆಗಳೂ ಬದಲಾವಣೆಗಳಾಗುತ್ತವೆ. ಇವೆಲ್ಲವುಗಳ ಸಮಗ್ರ ಅಧ್ಯಯನವೇ ಶರೀರಕ್ರಿಯಾ ವಿಜ್ಞಾನ. (ಎಸ್.ಎಂ.ಜಿ.)

**ಶಲ್ಕ ಕೀಟ (ಸ್ಕೇಲ್ ಇನ್ಸೆಕ್ಟ್):** ಕೀಟಪ್ರಪಂಚದಲ್ಲಿ ಅತಿ ಸಣ್ಣ ಕೀಟಗಳ ಸಾಲಿಗೆ ಸೇರಿದ ಹೆಮಿಪ್ಟಿರ ಗಣದ ಕಾಕ್‌ಸಿಡಿಯ ಕುಟುಂಬದ ಸದಸ್ಯ. ಹೆಮಿಪ್ಟಿರ ಎಂದರೆ ಅರ್ಧ ರೆಕ್ಕೆ ಎಂದರ್ಥ. ಅಂದರೆ ಶಲ್ಕ ಕೀಟಗಳಲ್ಲಿ ಮುಂದಿನರ್ಧ ರೆಕ್ಕೆಯು ತೆಳುವಾಗಿಯೂ, ಉಳಿದ ಇನ್ನರ್ಧಭಾಗ ಗಟ್ಟಿಯಾಗಿಯೂ ಇರುತ್ತದೆ. ಶಲ್ಕ ಕೀಟಗಳ ದೇಹದಿಂದ ಒಂದು ತೆರನಾದ ಜಿಡ್ಡು ಹೊರಹೊಮ್ಮುತ್ತದೆ. ಈ ಜಿಡನ್ನು ತನ್ನ ಆತ್ಮರಕ್ಷಣೆಗೆ ಬಳಸುತ್ತದೆ. ಮನುಷ್ಯ ಇದನ್ನು ಬಣ್ಣ ಮತ್ತು ಅಂಟುಗಳ ತಯಾರಿಕೆಯಲ್ಲಿ ಬಳಸುತ್ತಾನೆ. ಶಲ್ಕಕೀಟಗಳ ಬಾಯಿಯಲ್ಲಿರುವ ವದನಾಂಗಗಳು ಚುಚ್ಚುವ ಮತ್ತು ತೂರುವ ರೀತಿಯಲ್ಲಿವೆ. ಇವು ಉದ್ದನೆಯ ಕೊಳವೆಯಂತಿರುವುದರಿಂದ, ಸಸ್ಯದ ಕಾಂಡದಲ್ಲಿ, ಎಲೆಯಲ್ಲಿನ ಕೋಶಗಳಿಗೆ ಚುಚ್ಚಿ, ಕೋಶದ್ರವ್ಯ ಹೀರುತ್ತವೆ. ಪ್ರಾಣಿಗಳ ರಕ್ತವನ್ನು ಸರಾಗವಾಗಿ ಹೀರಬಲ್ಲವು. ಶಲ್ಕ ಕೀಟಗಳಲ್ಲಿ ಒಂದು ಜೊತೆ ಆಂಟೆನಾಗಳು ಇವೆ. ಕಾಲುಗಳು ತುಂಬಾ ಚಿಕ್ಕವು. ಗಂಡು ಕೀಟಗಳಿಗೆ ರೆಕ್ಕೆಗಳಿದ್ದರೆ, ಹೆಣ್ಣುಕೀಟಕ್ಕೆ ರೆಕ್ಕೆಗಳಿರುವುದಿಲ್ಲ. ಶಲ್ಕ ಕೀಟಗಳನ್ನು 3 ಭಾಗಗಳನ್ನಾಗಿ ವಿಂಗಡಿಸಬಹುದು.

1) ಹೊರಕವಚ ಇರುವಂತಹ / (ಆರ್ಮರ್ಡ್ ಸ್ಕೇಲ್ಸ್) / ಆರ್‌ಮರ್ಡರ್ ಶಲ್ಕಗಳು
2) ಹೊರಕವಚ ಇಲ್ಲದಿರುವಂತಹ ಶಲ್ಕಗಳು ಮತ್ತು
3) ಮಿಗ್ಸ್‌ಲಿ ಬಗ್ಸ್

ಇವುಗಳಲ್ಲಿ ಆರ್‌ಮರ್ಡರ್ ಶಲ್ಕಗಳು ಅಂಟು ದ್ರವವನ್ನು ಸ್ರವಿಸುತ್ತದೆ. ಹೆಣ್ಣುಕೀಟ ಸಸ್ಯದ ಜೀವರಸವನ್ನು ಹೀರಿ ಬದುಕುತ್ತದೆ, ಗಂಡುಕೀಟ ಆಹಾರವನ್ನು ಸೇವಿಸುವುದಿಲ್ಲ. ಆದ್ದರಿಂದ ಸಂತಾನೋತ್ಪತ್ತಿಯಲ್ಲಿ ಪಾಲ್ಗೊಂಡು ಕೇಲವೇ ಕೆಲವು ದಿನದಲ್ಲಿ ಪ್ರಾಣ ಕಳೆದುಕೊಳ್ಳುತ್ತದೆ. ಗಂಡು ಕೀಟ ತನ್ನ ಶಲ್ಕ (ಹೊರಕವಚ) ದಿಂದ ಹೊರಬಂದು ರೆಕ್ಕೆಯನ್ನು ಉಪಯೋಗಿಸಿ ಹೆಣ್ಣು ಕೀಟಕ್ಕಾಗಿ ಹುಡುಕಾಡುತ್ತದೆ. ಸಂತಾನಾಭಿವೃದ್ಧಿಯ ಅನಂತರ, ಹೊರಕವಚ ಇಲ್ಲದ ಶಲ್ಕಗಳು ನಿಂಬೆ ಜಾತಿಯ ಗಿಡಗಳ ಮೇಲ ಗುಂಪುಗುಂಪಾಗಿ ವಾಸಿಸುತ್ತವೆ. ಇವುಗಳ ಜೀವನ ಚಕ್ರದಲ್ಲಿ ಲಾರ್ವಾ ಹಂತವಿದೆ. ಲಾರ್ವಾಗಳು ಅತಿಯಾಗಿ ತಿನ್ನುವ ಹೊಟ್ಟೆಬಾಕಗಳು.

ಈ ಕೀಟಗಳ ನಿಯಂತ್ರಣ ಔಷಧ ಸಿಂಪರಣೆಯಿಂದ ಕಷ್ಟ. ಏಕೆಂದರೆ, ಇವುಗಳು ಬದುಕುವುದು ಎಲೆಗಳ ತಳಭಾಗದಲ್ಲಿ. ಕೀಟಗಳೇ ಆದ ಕಣಜಗಳು (ವಾಸ್ಪ್ಸ್) ಇವುಗಳ ಸ್ವಾಭಾವಿಕ ಶತ್ರುಗಳು. ಇವುಗಳನ್ನು ಬಳಸಿ, ಜೈವಿಕ ವಿಧಾನದ ಮೂಲಕ ಶಲ್ಕ ಕೀಟಗಳ ನಿಯಂತ್ರಣ ಮಾಡಬಹುದು. (ಪಿ.ಆರ್.ಎಸ್.)

**ಶಾರ್ಕ್:** ಮೃದ್ವಸ್ಥಿಮೀನುಗಳ ವರ್ಗಕ್ಕೆ ಸೇರಿದ ಒಂದು ಮೀನು. ಈ ವರ್ಗದಲ್ಲಿ ಸು. ೮೦೦ ಪ್ರಭೇದಗಳಿವೆ. ಆ ಪೈಕಿ ೩೫೦ ಶಾರ್ಕುಗಳು. ಇವುಗಳ ಬಣ್ಣ ಕೆನೆ, ಬೂದು, ಕಂದು, ಹಳದಿ ಅಥವಾ ನೀಲಿ. ದೇಹದ ಮೇಲೆ ಪಟ್ಟೆಗಳು, ಚುಕ್ಕೆಗಳು ಅಥವಾ ಗಂಟಿಗಳು ಇರುವುವು. ಅತ್ಯಂತ ಚಿಕ್ಕ ಶಾರ್ಕ್ ೧೫ ಸೆಂಮೀ. ದೊಡ್ಡದು ೧೫ ಮೀ ಉದ್ದ ಬೆಳೆದಿರುತ್ತದೆ.

ಭಾರತದ ಕರಾವಳಿ ಕಡಲುಗಳಲ್ಲಿ ಶಾರ್ಕನಿಡೆ ಕುಟುಂಬಕ್ಕೆ ಸೇರಿದ ಅನೇಕ ಶಾರ್ಕುಗಳು ವಾಸಿಸುತ್ತವೆ. ಇವುಗಳಲ್ಲಿ ಸ್ಕೊಲಿಯೊಡಾನ್ ಎಂಬ ಜಾತಿ ಮುಖ್ಯವಾದುದು. ಇದರಲ್ಲಿ ೯ ಪ್ರಭೇದಗಳುಂಟು. ಶಾರ್ಕಿನ ದೇಹ ಉರುಳೆಯಾಕಾರದ್ದು. ಎರಡು ತುದಿಗಳೂ ಚೂಪಾಗಿವೆ. ದೇಹವನ್ನು ಶಿರ, ಮುಂಡ ಮತ್ತು ಬಾಲವೆಂದು ಗುರುತಿಸಬಹುದು. ಶಿರದ ಕೆಳ ಪಾರ್ಶ್ವದಲ್ಲಿ ಅರ್ಧಚಂದ್ರಾಕೃತಿಯ ಬಾಯಿ ಹಾಗೂ ಮೂಗಿನ ಹೊಳ್ಳೆಗಳೂ ಮುಂಡದ ಮುಂಪಾರ್ಶ್ವದಲ್ಲಿ ಐದು ಜೋಡಿ ಕಿವಿರುಸೀಳುಗಳೂ ಇವೆ. ಕೆಳಪಾರ್ಶ್ವದಲ್ಲಿ ಗುದದ್ವಾರವಿದೆ. ದೇಹದಲ್ಲಿ ಕಿವಿರು ಸೀಳುಗಳ ಹಿಂದೆ ವಿಶಾಲ ಭುಜದ ಈಜುರೆಕ್ಕೆಗಳೂ ಗುದದ್ವಾರದ ಪಕ್ಕದಲ್ಲಿ ಸೊಂಟದ ಈಜುರೆಕ್ಕೆಗಳೂ ಇವೆ. ಜೊತೆಗೆ ದೇಹದ ಮಧ್ಯಾಕ್ಷದಲ್ಲಿ ಮೂರು ಮಧ್ಯದ ಈಜುರೆಕ್ಕೆಗಳಿವೆ. ಮೇಲಿನ ಪಾರ್ಶ್ವದಲ್ಲಿ ಒಂದು ದೊಡ್ಡ ಮುಂದಿನ ಈಜುರೆಕ್ಕೆ ಮತ್ತು ಬಾಲದ ಬುಡದಲ್ಲಿ ಹಿಂದಿನ ಈಜುರೆಕ್ಕೆಗಳಿವೆ. ಕೆಳಪಾರ್ಶ್ವದಲ್ಲಿ ಒಂದೇ ಈಜುರೆಕ್ಕೆ ಬಾಲದ ಬುಡದಲ್ಲಿದೆ. ಬಾಲದ ಈಜುರೆಕ್ಕೆ ದೊಡ್ಡದಾಗಿದ್ದು ಅದರಲ್ಲಿ ದೊಡ್ಡ ಮೇಲುಭಾಗವೂ ಚಿಕ್ಕ ಕೆಳಭಾಗವೂ ಉಂಟು.

ಚರ್ಮದಲ್ಲಿ ಎರಡು ಪದರಗಳಿವೆ. ಹೊರ ಚರ್ಮದಲ್ಲಿ ಲೋಳೆ ಕೋಶಗಳೂ ಒಳಚರ್ಮದಲ್ಲಿ ಸಂಯೋಜಕ ಅಂಗಾಂಶದ ತಂತುಗಳು, ನರಗಳು ಮತ್ತು ವರ್ಣಕೋಶಗಳೂ ಇವೆ. ಹೊರಚರ್ಮ ಸ್ರವಿಸುವ ಲೋಳೆಯಿಂದಾಗಿ ಶಾರ್ಕಿಗೆ ಬ್ಯಾಕ್ಟೀರಿಯಗಳಿಂದ ರಕ್ಷಣೆ ದೊರೆಯುತ್ತದೆ. ಚರ್ಮದ ಹೊರಭಾಗದಲ್ಲಿ ಸೂಕ್ಷ್ಮವಾದ ಪ್ಲೆಕಾಯಿಡ್ ಮಾದರಿಯ ಹುರುಪೆಗಳಿವೆ. ಒಳಚರ್ಮದಿಂದ ಬೆಳೆಯುವ ಇವು ರಚನೆಯಲ್ಲಿ ಕಶೇರುಕಗಳ ಹಲ್ಲುಗಳನ್ನು ಹೋಲುತ್ತವೆ.

ಎಲ್ಲ ಶಾರ್ಕುಗಳಲ್ಲಿಯೂ ಕಾಂಡ್ರಿನ್ ಎಂಬ ಪ್ರೊಟೀನ್‌ರಚಿತ ಮೃದ್ವಸ್ಥಿ ಅಂಗಾಂಶದ ಅಸ್ಥಿಪಂಜರವಿದೆ. ಇದನ್ನು ಅಕ್ಷದ ಅಸ್ಥಿಪಂಜರ ಹಾಗೂ ಉಪಾಂಗಗಳ ಅಸ್ಥಿಪಂಜರ ಎಂದು ವಿಭಾಗಿಸಬಹುದು. ಇದು ದೇಹಕ್ಕೆ ಆಧಾರ ನೀಡಿ ಈಜಾಟದಲ್ಲಿ ಸಹಾಯಕವಾಗಿದೆ. ದೇಹಕ್ಕೆ ಆಧಾರ ನೀಡುವ ಅಕ್ಷದ ಅಸ್ಥಿಪಂಜರದಲ್ಲಿ ಎರಡು ಭಾಗಗಳಿವೆ; ತಲೆಬುರುಡೆ ಹಾಗೂ ದವಡೆಗಳು ಮೊದಲನೆಯದು, ಬೆನ್ನುಮೂಳೆ ಅಥವಾ ಕಶೇರು ಸ್ತಂಭ ಇನ್ನೊಂದು. ತಲೆಬುರುಡೆ ಟೊಳ್ಳಾಗಿದ್ದು ಒಳಭಾಗದಲ್ಲಿ ಮಿದುಳಿಗೂ ಅದರ ಉಭಯ ಪಾರ್ಶ್ವಗಳಲ್ಲಿ ಘ್ರಾಣೇಂದ್ರಿಯ, ಕಣ್ಣು ಹಾಗೂ ಒಳಕಿವಿಗೂ ಅವಕಾಶವಿದೆ. ಹಿಂದೆ ದೊಡ್ಡರಂಧ್ರವಿದ್ದು ಮಿದುಳುಬಳ್ಳಿ ಅದರ ಮೂಲಕ ಹೊರಬರುತ್ತದೆ. ತಲೆಬುರುಡೆಯ ಕೆಳಭಾಗದಲ್ಲಿ ದವಡೆಗಳಿವೆ. ಬೇಟೆ ಆಡುವಾಗ ಶಾರ್ಕ್ ಬಾಯಿಯನ್ನು ಅಗಲವಾಗಿ ತೆರೆಯಲು ಅನುಕೂಲವಾಗುವಂತೆ ದವಡೆಗಳು ಬುರುಡೆಗೆ ಜೋಡಣೆಗೊಂಡಿವೆ.

ಶಾರ್ಕಿನ ಜೀರ್ಣಾಂಗದಲ್ಲಿ ಅನ್ನನಾಳ ಹಾಗೂ ಗ್ರಂಥಿಗಳಿವೆ. ಬಾಯಿಯಲ್ಲಿ ಮೊನಚಾದ ಹಿಂಬಾಗಿದ ಹಲವಾರು ಹಲ್ಲುಗಳೂ ಇವೆ. ಜಠರದಲ್ಲಿ ಎರಡು ಭಾಗಗಳು: ಮುಂಭಾಗ ಜಠರ ರಸವನ್ನು ಸ್ರವಿಸುತ್ತದೆ, ಹಿಂಭಾಗದಲ್ಲಿ ಉಂಗುರಾಕಾರದ ಸ್ನಾಯುವಿದ್ದು ಇದು ಆಹಾರದ ಕಣಗಳನ್ನು ನಿಧಾನವಾಗಿ ಕರುಳಿಗೆ ಸಾಗಲು ಬಿಡುತ್ತದೆ. ಕರುಳಿನ ಒಳಭಾಗದಲ್ಲಿ ಸುರುಳಿ ಕವಾಟವಿದೆ. ಇದು ಆಹಾರ ಹೀರುವ ಮೇಲ್ಮೈಯನ್ನು ಹೆಚ್ಚಿಸಿ ಕರುಳಿನಲ್ಲಿ ಆಹಾರದ ಶೀಘ್ರ ಚಲನೆಗೆ ಸಹಕಾರಿಯಾಗಿದೆ. ಶಾರ್ಕಿನ ಯಕೃತ್ತು ದೊಡ್ಡದಾಗಿದ್ದು ಪಿತ್ತರಸವನ್ನು ಸ್ರವಿಸುತ್ತದೆ. ಮೇದೋಜೀರಕಾಂಗ ಜೀರ್ಣಕ್ರಿಯೆಗೆ ಅಗತ್ಯವಾದ ಕಿಣ್ವಗಳನ್ನೂ ಹಾರ್ಮೋನುಗಳನ್ನೂ ಸ್ರವಿಸುತ್ತದೆ.

ಶಾರ್ಕಿನ ಉಸಿರಾಟದ ಅಂಗಗಳು ಕಿವಿರುಗಳು. ಗಂಟಲಿನ ಪಾರ್ಶ್ವದಿಂದ ಹೊರಡುವ ಕಿವಿರುಗಳು ಹೊರಭಾಗದಲ್ಲಿ ತೆರೆದಿರುತ್ತವೆ. ಎರಡು ಕಿವಿರುಗಳ ನಡುವೆ ಮಾಂಸದ ಮಡಿಕೆಗಳಿದ್ದು ಅವುಗಳಲ್ಲಿ ರಕ್ತ ಶುದ್ಧವಾಗುತ್ತದೆ. ಉಸಿರಾಡುವಾಗ ಶಾರ್ಕ್ ತನ್ನ ಗಂಟಲಿನ ಪಾರ್ಶ್ವದ ಹಾಗೂ ತಳದ ಭಿತ್ತಿಗಳನ್ನು ಸ್ನಾಯುಗಳಿಂದ ಹಿಗ್ಗಿಸುತ್ತದೆ. ಇದು ನೀರನ್ನು ಒಳಸೆಳೆಯುತ್ತದೆ. ಅನಂತರ ಬಾಯಿ ಮುಚ್ಚಿಕೊಂಡು ಗಂಟಲಿನ ತಳದ ಭಿತ್ತಿಯನ್ನು ಮೇಲೇರಿಸುತ್ತದೆ. ಆಗ ನೀರು ಒತ್ತಡಕ್ಕೆ ಒಳಗಾಗಿ, ಕಿವಿರು ಸೀಳುಗಳ ಮೂಲಕ ಹೊರಕ್ಕೆ ಹರಿಯುತ್ತದೆ. ನೀರಿನಲ್ಲಿ ವಿಲೀನಿಸಿರುವ ಆಮ್ಲಜನಕವನ್ನು ರಕ್ತ ಹೀರಿಕೊಳ್ಳುತ್ತದೆ. ಗಂಡು ಶಾರ್ಕಿನಲ್ಲಿ ಒಂದು ಜೋಡಿ ವೃಷಣಗಳಿವೆ. ಅವು ಮೂತ್ರಪಿಂಡದ ಮುಂಭಾಗದ ಮಾರ್ಪಾಡಿಕೆಗಳು. ಹೆಣ್ಣಿನಲ್ಲಿ ಒಂದು ಅಂಡಾಶಯವಿದ್ದು ಇದು ಸ್ನಾಯುಗಳ ಮೂಲಕ ಅಂಡನಾಳಕ್ಕೆ ಕೂಡಿಕೊಂಡಿರುತ್ತದೆ. ಸಂಭೋಗ ಕ್ರಿಯೆಯಲ್ಲಿ ವೀರ್ಯಾಣುಗಳು ಹೆಣ್ಣಿನ ಮಲಕುಳಿಯ ಒಳಸೇರಿ ತತ್ತಿಗಳೆಡೆಗೆ ಸಾಗುತ್ತವೆ. ತತ್ತಿಗಳಲ್ಲಿ ಬಂಡಾರದ ಪ್ರಮಾಣ ಹೆಚ್ಚಿರುತ್ತದೆ.

ಶಾರ್ಕುಗಳಲ್ಲಿ ಅಂಡೋತ್ಪಾದಕ, ಅಂಡಜೋತ್ಪಾದಕ, ಜೀವೋತ್ಪಾದಕಗಳೆಂಬ ಮೂರೂ ವಿಧಾನಗಳಲ್ಲಿ ಬೆಳವಣಿಗೆ ಆಗುತ್ತದೆ. ಅಂಡೋತ್ಪಾದಕ ಪ್ರಭೇದಗಳಲ್ಲಿ ತಾಯಿ ತತ್ತಿಗಳನ್ನು ಕಡಲ ತಳದಲ್ಲಿರಿಸುತ್ತದೆ. ಇವು ಅಲ್ಲಿಯೇ ಬೆಳೆದು ಮರಿಗಳಾಗುತ್ತವೆ. ಎರಡನೆಯ ಬಗೆಯ ಸಂತಾನೋತ್ಪತ್ತಿಯಲ್ಲಿ ತತ್ತಿಗಳು ತಾಯಿಯ ದೇಹದಲ್ಲೇ ಉಳಿಯುತ್ತವೆ. ಅಲ್ಲಿಯೇ ಇವು ಬೆಳೆದು ಮರಿಗಳಾಗುತ್ತವೆ. ಆದರೆ ಬೆಳವಣಿಗೆಯ ಹಂತದಲ್ಲಿ ತಾಯಿಯಿಂದ ನೇರವಾಗಿ ಆಹಾರ ಪಡೆಯುವುದಿಲ್ಲ. ಜೀವೋತ್ಪಾದಕಗಳಲ್ಲಿ ತತ್ತಿಗಳು ತಾಯಿಯ ದೇಹದಲ್ಲಿಯೇ ಉಳಿಯುತ್ತವೆ ಹಾಗೂ ಭ್ರೂಣ ಬೆಳೆಯುವಾಗ ಜರಾಯು ಪದರಗಳ ಮೂಲಕ ತಾಯಿಯ ಶರೀರದಿಂದ ನೇರವಾಗಿ ಆಹಾರ ಪಡೆಯುತ್ತವೆ. ಇಂಥ ಬಗೆಗಳಲ್ಲಿ ಪೂರ್ಣ ಬೆಳೆದ ಮರಿಗಳು ಹೊರಬರುತ್ತವೆ.

ಶಾರ್ಕಿನ ಶರೀರ ನೀರಿನಲ್ಲಿ ಸುಲಭವಾಗಿ ಈಸಲು ಅನುಕೂಲವಾಗುವಂತೆ ಮಾರ್ಪಾಡಾಗಿದೆ. ಈಜುರೆಕ್ಕೆಯ ಬಡಿತದಿಂದ ಹಾಗೂ ಸ್ನಾಯುಗಳ ಸಂಕುಚನದಿಂದ ಶಾರ್ಕುಗಳು ಚಲಿಸುತ್ತವೆ. ಸ್ನಾಯುಗಳು ಬೆನ್ನೆಲುಬನ್ನು ಆಧಾರವಾಗಿಟ್ಟುಕೊಂಡು ಸಂಕುಚಿಸುತ್ತವೆ. ದೇಹದ ಎಡಬಲಗಳಲ್ಲಿ ಸಂಕುಚನಗಳು ಪರ್ಯಾಯವಾಗಿ ಆಗುತ್ತವೆ. ಅದರಿಂದ ಮೀನು ಒಮ್ಮೆ ಎಡಕ್ಕೆ ಇನ್ನೊಮ್ಮೆ ಬಲಕ್ಕೆ ಸಾಗುತ್ತದೆ. ಗಂಟೆಗೆ ಒಂದರಿಂದ ಒಂದೂಕಾಲು ಕಿಮೀ ದೂರ ಚಲಿಸಬಲ್ಲದು. ಶಾರ್ಕಿನ ಯಕೃತ್ತಿನಲ್ಲಿ ಎಣ್ಣೆ ಹೆಚ್ಚಿನ ಪ್ರಮಾಣದಲ್ಲಿದೆ. ಅದರಿಂದ ದೇಹದ ಅಂಗಾಂಗಗಳ ಸಾಂದ್ರತೆ ನೀರಿಗಿಂತ ಕಡಿಮೆ ಇದ್ದು ದೇಹಕ್ಕೆ ಪ್ಲವನತೆ ಒದಗುತ್ತದೆ. ಆದ್ದರಿಂದ ಶಾರ್ಕ್ ಈಜುವಾಗ ಅತ್ಯಲ್ಪ ಪ್ರಮಾಣದ ಶಕ್ತಿ ಸಾಕಾಗುತ್ತದೆ.

ಶಾರ್ಕ್‌ಗಳು ಒಂಟಿ ಜೀವಿಗಳು. ಸುತ್ತಿಗೆ ತಲೆಯ ಶಾರ್ಕ್‌ನಂಥ (ಸ್ಫಿರ್ನಾ ಜೈಗೆನಾ) ಕೆಲವು ಪ್ರಭೇದಗಳು ಗುಂಪಾಗಿ ಬದುಕುತ್ತವೆ. ಶಾರ್ಕುಗಳು ಈಜುಗಾರರ ಮೇಲೆಯೂ ಸಾಗರವಾಸಿ ಕೆಲವು ದೈತ್ಯಪ್ರಾಣಿಗಳ ಮೇಲೆಯೂ ಆಕ್ರಮಣ ಮಾಡುವುದುಂಟು. ಮರಳು ಶಾರ್ಕ್, ಬಿಳಿಶಾರ್ಕ್, ಮ್ಯಾಕೋಶಾರ್ಕ್(ಇಸ್ಯೂರಸ್ ಗ್ಲಾಕೊ), ತಿಮಿಂಗಿಲ ಶಾರ್ಕ್(ರಿಂಕೊಡಾನ್ ಟೈಪಸ್), ಹುಲಿಶಾರ್ಕ್, ಸುತ್ತಿಗೆ ತಲೆಯ ಶಾರ್ಕ್‌ಗಳು ಮುಖ್ಯ ಬಗೆಯವು. (ಟಿ.ಯು.)

**ಶಿರಪಾದಿ:** ಮೃದ್ವಂಗಿ ವಂಶದ ಒಂದು ವರ್ಗ. ಆಂಗ್ಲಭಾಷೆಯಲ್ಲಿ ಸಿಫೆಲೊಪೋಡಾ ಎನ್ನುವರು. ಇದರಲ್ಲಿ ೬೫೦ ಪ್ರಭೇದಗಳಿವೆ. ಇವು ಸಾಗರವಾಸಿಗಳು ಕಡಲಿನ ಅತ್ಯಂತ ಆಳದ ಪಾತಳಿಯಿಂದ ಮೇಲ್ಭಾಗದ ಸ್ತರಗಳವರೆಗೂ ಹರಡಿವೆ. ಇವು ಎಲ್ಲ ಸಮುದ್ರಗಳಲ್ಲಿ, ಮಹಾಸಾಗರಗಳಲ್ಲಿ ಕಂಡುಬರುತ್ತವೆ. ಗಾತ್ರಗಳಲ್ಲಿ ಅಗಾಧ ವ್ಯತ್ಯಾಸವಿದೆ. ಅತ್ಯಂತ ಚಿಕ್ಕ ಶಿರಪಾದಿ ೨ ಸೆಂಮೀ ಮತ್ತು ದೈತ್ಯ ಸ್ಕ್ವಿಡ್ ೧೮ ಮೀ.

ಶಿರಪಾದಿಯಲ್ಲಿ ತಲೆ ಮತ್ತು ಪಾದ ಒಂದುಗೂಡಿರುವುದರಿಂದ ಈ ಹೆಸರು. ದೇಹದ ಹಿಂಭಾಗದಲ್ಲಿ ಒಳಾಂಗಗಳು ಹಾಗೂ ಚಿಪ್ಪುಗಳಿವೆ. ಪಾದ ಅನೇಕ ತೋಳುಗಳಾಗಿ ವಿಭಾಗಗೊಂಡಿದ್ದು ಇವುಗಳ ಒಳಭಾಗದಲ್ಲಿ ಹೀರುಬಟ್ಟಲುಗಳಿವೆ. ವಿವಿಧ ಪ್ರಭೇದಗಳ ತೋಳುಗಳ ಸಂಖ್ಯೆಯಲ್ಲಿ ವ್ಯತ್ಯಾಸ ಇದೆ. ತಲೆಯ ಎರಡು ಕಡೆ ಉತ್ತಮವಾಗಿ ಬೆಳೆದ ಕಣ್ಣುಗಳು, ಕೆಳಭಾಗದಲ್ಲಿ ಒಂದು ನಳಿಕೆ ಇವೆ.

ಶಿರಪಾದಿಗಳ ಆಕಾರ ವಿಚಿತ್ರ ಶರೀರದ ಎರಡು ಕಡೆ ಒಂದೊಂದು ತ್ರಿಕೋಣಾಕಾರದ ರೆಕ್ಕೆ ಇದೆ. ಚಿಪ್ಪು ಶರೀರದ ಒಳಭಾಗದಲ್ಲಿದೆ. ನಾಟಿಲಸ್ ಎಂಬ ಗಣಕ್ಕೆ ಸೇರುವ ಪ್ರಭೇದಗಳಲ್ಲಿ ಮಾತ್ರ ಚಿಪ್ಪು ಶರೀರದ ಹೊರಭಾಗದಲ್ಲಿದೆ. ಚಿಪ್ಪು ಸುಣ್ಣದಿಂದಾಗಿದೆ. ಇದರ ಒಳಮೈಯಲ್ಲಿ ಮುತ್ತಿನ ಸ್ತರವಿದೆ. ನಾಟಿಲಸ್‌ನಲ್ಲಿ ಹೊರಭಾಗಕ್ಕೂ ಈ ಸ್ತರ ಆವರಿಸಿರುವುದರಿಂದ ಚಿಪ್ಪಿಗೆ ಅಪೂರ್ವ ಸೌಂದರ್ಯ ಬಂದಿದೆ. ಆಕ್ಟೋಪಸ್‌ನಲ್ಲಿ ಚಿಪ್ಪು ನಶಿಸಿದೆ. ಚಿಪ್ಪಿನಲ್ಲಿ ಅನಿಲ ಕೋಣೆಗಳು ತುಂಬಿರುವುದರಿಂದ ಶಿರಪಾದಿ ತೇಲುವುದಕ್ಕೆ ಅನುಕೂಲ.

ಶಿರಪಾದಿಗಳ ನರಮಂಡಲ ಉತ್ತಮವಾಗಿ ವಿಕಾಸಗೊಂಡಿದೆ. ಅಕಶೇರುಕಗಳ ಪೈಕಿ ಇವು ಬುದ್ಧಿವಂತ ಪ್ರಾಣಿಗಳು. ನರವ್ಯೂಹದಲ್ಲಿ ಒಂದು ಜೊತೆ ನರಗ್ರಂಥಿಗಳಿಂದಾದ ಮಿದುಳು, ಅನೇಕ ನರಗ್ರಂಥಿಗಳು, ಕೆಲವು ದೈತ್ಯನರಗಳಿವೆ. ದೈತ್ಯನರಗಳ ಮೂಲಕ ಸಂದೇಶಗಳು ವೇಗವಾಗಿ ಸಾಗುತ್ತವೆ. ಇಂದ್ರಿಯಗಳ ಪೈಕಿ ಕಣ್ಣು ಕಶೇರುಕಗಳಲ್ಲೇ ಉತ್ತಮವಾಗಿ ವಿಕಾಸಗೊಂಡಿದೆ. ನೀರಿನ ಶುದ್ಧತೆಯನ್ನು ಅಳೆಯಲು ಆಸ್ಫೆಡಿಯಮ್ ಎಂಬ ಇಂದ್ರಿಯವು ಗುರುತ್ವಾಕರ್ಷಣ ತಿಳಿದು ಸಮತೋಲನವನ್ನು ನೀಡಲು ಸ್ಟ್ಯಾಟೋಸಿಸ್ಟ್ ಎಂಬ ಇಂದ್ರಿಯ ಇವೆ. (ಟಿ.ಯು.)

**ಶಿಶಿರನಿದ್ರೆ:** ಪರಿಸರದ ತಾಪಮಾನ ಅತಿಕಡಿಮೆ ಇರುವ ಋತುವಿನಲ್ಲಿ (ಚಳಿಗಾಲ), ಕೆಲವು ಚಿಕ್ಕ ಗಾತ್ರದ ಸಮತಾಪಿಗಳು, ತಮ್ಮ ದೇಹದ ತಾಪಮಾನವನ್ನು ನಿರ್ದಿಷ್ಟ ಮಟ್ಟದಲ್ಲಿ ಕಾಯ್ದುಕೊಳ್ಳಲು ಅಸಮರ್ಥವಾಗಿ, ದೀರ್ಘಕಾಲದವರೆಗೆ (ಚಳಿಗಾಲ ಮುಗಿಯುವವರೆಗೆ), ದೇಹದ ತಾಪಮಾನವನ್ನು ಕಡಿಮೆಮಾಡಿ ಯಾವುದೇ ಚಲನವಲನ ತೋರಿಸದೆ, ದೀರ್ಘ ನಿದ್ರಾವಸ್ಥೆಯಲ್ಲಿರುವ, ಆದರೆ ಋತು ಬದಲಾಗಿ ಪರಿಸರದ ತಾಪಮಾನ ಏರುತ್ತಿರುವಾಗ, ದೇಹದ ತಾಪಮಾನವನ್ನು ಹೆಚ್ಚಿಸಿಕೊಂಡು ಅದೇ ಮಟ್ಟದಲ್ಲಿ ಕಾಯ್ದುಕೊಳ್ಳುವ ಸಾಮರ್ಥ್ಯ ಉಳಿಸಿಕೊಂಡಿರುವ ಸ್ಥಿತಿ. ಅಸಮತಾಪಿಗಳ ಹಲವು ಪ್ರಭೇದಗಳೂ ಕೂಡ ದೀರ್ಘನಿದ್ರೆಯಲ್ಲಿದ್ದು ಶೀತಕಾಲವನ್ನು ಕಳೆಯುತ್ತವೆ. ಶೀತಕಾಲೀನ ನಿದ್ರೆ ಪರ್ಯಾಯ ಪದ. ಆಂಗ್ಲ ಭಾಷೆಯಲ್ಲಿ ಹೈಬರ್ನೆಶನ್ ಎಂದು ಹೆಸರು.

ವಾತಾವರಣದ ತಾಪಮಾನದಲ್ಲಿ ತೀವ್ರ ಬದಲಾವಣೆಗಳಾದರೂ ಜೈವಿಕ ಕ್ರಿಯೆಗಳು ಅಡೆತಡೆ ಇಲ್ಲದಂತೆ ಸಾಗಲು, ತಮ್ಮ ದೇಹದ ತಾಪಮಾನವನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿ ಕಾಯ್ದುಕೊಳ್ಳುವ ಪ್ರಾಣಿಗಳೇ ಸಮತಾಪಿಗಳು. ದೇಹದ ಉಷ್ಣತೆಯನ್ನು ಒಂದೇ ಮಟ್ಟದಲ್ಲಿ ಕಾಯ್ದುಕೊಳ್ಳಲು ಅಧಿಕಶಕ್ತಿಯ (ಶಾಖ) ಅವಶ್ಯಕತೆ ಇದ್ದು, ಅದನ್ನು ಪೂರೈಸಲು ಅಧಿಕ ಆಹಾರ ಸೇವನೆಯ ಅಗತ್ಯವಿದೆ. ಆದರೆ ಚಿಕ್ಕ ಗಾತ್ರದ ಸಮತಾಪಿಗಳ ದೇಹದ ಮೇಲ್ಮೈ ದೊಡ್ಡ ಗಾತ್ರದ ಸಮತಾಪಿಗಳಿಗೆ ಹೋಲಿಸಿದರೆ ಹೆಚ್ಚಾಗಿದ್ದು (ದೇಹದ ತೂಕಕ್ಕೆ ಹೋಲಿಸಿದಾಗ) ಅವು ಶಾಖವನ್ನು ಪರಿಸರಕ್ಕೆ ಕಳೆದುಕೊಳ್ಳುತ್ತವೆ. ಕಾರಣ ಚಿಕ್ಕ ಗಾತ್ರದ ಸಮತಾಪಿಗಳು ದೇಹದ ತಾಪಮಾನ ನಿಯಂತ್ರಿಸಲು ಸದಾಕಾಲ ಆಹಾರಸೇವನೆ ಮಾಡಬೇಕಾಗುತ್ತದೆ. ಏಕೆಂದರೆ, ಇವುಗಳ ಚಿಕ್ಕ ಗಾತ್ರದ ದೇಹ ಆಹಾರ ಶೇಖರಣೆಗೆ ಅನುಕೂಲವಾಗಿಲ್ಲ ಮತ್ತು ದೇಹದಿಂದ ಹೆಚ್ಚಿನ ಶಾಖ ಪರಿಸರಕ್ಕೆ ಹರಡುತ್ತಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ದೇಹದ ತಾಪಮಾನವನ್ನು ಹೆಚ್ಚಿಸಿ ಶಾಖೋತ್ಪನ್ನದಿಂದ ಕಾರ್ಯಕೊಳ್ಳುವುದು ಕಷ್ಟ ಸಾಧ್ಯ. ಅದರಲ್ಲೂ ಅತಿಶೀತವಿರುವ ಚಳಿಗಾಲದಲ್ಲಿ ಆಹಾರದ ಲಭ್ಯತೆಯ ಕೊರತೆ ಇದ್ದರೆ, ಈ ಪರಿಸ್ಥಿತಿ ಉಲ್ಬಣಗೊಳ್ಳುತ್ತದೆ. ಕಾರಣ ಚಿಕ್ಕಗಾತ್ರದ ಸಮತಾಪಿಗಳು (ಉದಾ: ಬಾವಲಿ, ಹಮ್ಮಿಂಗ್ ಬರ್ಡ್, ಮುಂತಾದುವು) ಶೀತಕಾಲದಲ್ಲಿ ದೇಹದ ತಾಪಮಾನವನ್ನು ಕಾಯ್ದುಕೊಳ್ಳುವ ಗೊಡವೆಗೆ ಹೋಗದೆ, ಅದನ್ನು ವಾತಾವರಣದ ತಾಪಮಾನಕ್ಕೆ ಹೊಂದಿಸಿಕೊಂಡು (ಅಸಮತಾಪಿಗಳಂತೆ ವರ್ತನೆ) ತಮ್ಮ ಚಲನ–ವಲನ, ಆಹಾರ ಸೇವನೆ, ಪ್ರಜನನ ಮುಂತಾದ ಕಾರ್ಯಗಳನ್ನು ವಿಲಂಬಿತಗೊಳಿಸಿ, ದೀರ್ಘನಿದ್ರಾವಸ್ಥೆಯಲ್ಲಿ ಶೀತಕಾಲವನ್ನು ಕಳೆದು, ವಸಂತ ಋತುವಿನಲ್ಲಿ ಎಚ್ಚೆತ್ತು, ದೇಹದ ಸಾಮಾನ್ಯ ತಾಪಮಾನ ಪಡೆದು, ಸಾಮಾನ್ಯ ಜೀವನಕ್ಕೆ ಮರಳುತ್ತವೆ. ಈ ದೀರ್ಘ ನಿದ್ರೆಯಲ್ಲಿ ದೇಹದ ಉಷ್ಣನಿಯಂತ್ರಣ ವಿಲಂಬಿತವಾಗಿರುತ್ತದೆ, ವಾತಾವರಣದ ತಾಪಮಾನಕ್ಕೆ ಸಮನಾಗಿರುತ್ತದೆ. ಚಯಾಪಚಯದ ಗತಿ, ಉಸಿರಾಟ, ಹೃದಯದ ಬಡಿತಗಳು ಅತಿ ಕಡಿಮೆಯಾಗಿದ್ದು, ಯಾವುದೇ ಪ್ರಚೋದನೆಗೆ ಈ ಪ್ರಾಣಿಗಳು ಪ್ರತಿಕ್ರಿಯಿಸುವುದಿಲ್ಲ. ಆಹಾರ ಸೇವಿಸುವುದಿಲ್ಲ. ಆದರೆ, ಕೇಂದ್ರ ನರಮಂಡಲ ಕ್ರಿಯಾಶೀಲವಾಗಿರುತ್ತದೆ. ಒಂದು ವೇಳೆ ವಾತಾವರಣದ ತಾಪಮಾನ ಅತಿಕಡಿಮೆಯಾಗಿ ದೇಹದ ಉಷ್ಣತೆ ಅತಿ ಕಡಿಮೆಯಾದರೆ, ಕೇಂದ್ರ ನರಮಂಡಲ ಕ್ರಿಯಾಶೀಲತೆ ಕಳೆದುಕೊಂಡು ಸಾವು ಸಂಭವಿಸುವ ಸಾಧ್ಯತೆ ಇದೆ. ಇಂಥ ಸಂದರ್ಭದಲ್ಲಿ ನರಮಂಡಲವನ್ನು ಕ್ರಿಯಾಶೀಲವಾಗಿಸಲು ಎಷ್ಟು ಬೇಕೊ, ಅಷ್ಟು ಶಾಖವನ್ನು ದೇಹದಲ್ಲಿ ಉತ್ಪತ್ತಿಮಾಡಿ ಸಾವನ್ನು ತಪ್ಪಿಸಿಕೊಳ್ಳುತ್ತವೆ. ಅಥವಾ ದೀರ್ಘನಿದ್ರೆಯಿಂದ ಸಂಪೂರ್ಣವಾಗಿ ಎಚ್ಚೆತ್ತು, ದೇಹದ ತಾಪಮಾನವನ್ನು ಹೆಚ್ಚಿಸಿಕೊಳ್ಳುತ್ತವೆ.

ಆಶ್ಚರ್ಯಕರವಾಗಿ ವರ್ಷದ ನಿರ್ದಿಷ್ಟ ಸಮಯದಲ್ಲಿ ಈ ಪ್ರಾಣಿಗಳು ದೀರ್ಘನಿದ್ರಾವಸ್ಥೆಗೆ ಪ್ರವೇಶಿಸುತ್ತವೆ. ಇದು ಹೇಗೆ ಸಾಧ್ಯ ? ಪ್ರಕೃತಿಯಲ್ಲಾಗುವ ದಿನದ ಬೆಳಕಿನ ಅವಧಿಯ (ಫೊಟೊಪಿರಿಯಡ್) ಬದಲಾವಣೆಗಳನ್ನು ಕೇಂದ್ರ ನರಮಂಡಲ ಮತ್ತು ಪೈನಿಯಲ್ ಗ್ರಂಥಿಗಳ ಮುಖಾಂತರ ಅಳತೆ ಮಾಡುವ ಸಾಮರ್ಥ್ಯವನ್ನು ಈ ಪ್ರಾಣಿಗಳು ಹೊಂದಿವೆ. ಕಾರಣ ಋತುಮಾನಕ್ಕೆ ತಕ್ಕಂತೆ ದಿನದ ಬೆಳಕಿನ ಅವಧಿ ಸ್ವಲ್ಪ ಕಡಿಮೆಯಾಗಿರುವಾಗ, ದೀರ್ಘನಿದ್ರೆಗೆ ತಯಾರಿ (ದೇಹದಲ್ಲಿ ಕೊಬ್ಬು ಸಂಗ್ರಹಿಸುವುದು) ನಡೆಸಿ, ಬೆಳಕಿನ ಅವಧಿ ಬಹಳ ಕಡಿಮೆಯಾಗಿ, ಪೂರ್ತಿ ಚಳಿಗಾಲವಿರುವಾದ ಶಿಶಿರ ನಿದ್ರೆಗೆ ಪ್ರವೇಶಿಸುತ್ತವೆ. ಚಳಿಗಾಲ ಕಳೆದು, ವಸಂತ ಋತುವಿನ ಆಗಮನದ ಸೂಚನೆಗಳು ದೊರೆತಾಗ, ಅಂದರೆ ಹೆಚ್ಚುತ್ತಿರುವ ದಿನದ ಬೆಳಕಿನ ಅವಧಿ ಮತ್ತು ಏರುತ್ತಿರುವ ಪರಿಸರದ ಉಷ್ಣತೆಯಲ್ಲಿ ದೀರ್ಘನಿದ್ರೆಯಿಂದ ಎಚ್ಚೆತ್ತು, ದೇಹದಲ್ಲಿ ಹೆಚ್ಚಿನ ಶಾಖವನ್ನು ಉತ್ಪಾದಿಸಿ, ದೇಹದ ನಿರ್ದಿಷ್ಟ ತಾಪಮಾನಕ್ಕೆ ಹಿಂದಿರುಗಿ, ಕ್ರಿಯಾಶೀಲವಾಗುತ್ತವೆ. ಹೆಚ್ಚಿನ ಶಾಖವನ್ನು ಉತ್ಪಾದಿಸಲು ನಡುಕ ಹಾಗೂ ನಡುಕವಿಲ್ಲದ ಶಾಖೋತ್ಪತ್ತಿ ಹಾಗೂ ಕಂದು ಮೇದಸ್ಸಿನ ಉತ್ಕರ್ಷಣ ಕ್ರಿಯೆಗಳನ್ನು ಉಪಯೋಗಿಸುತ್ತವೆ. ಶೀತಕಾಲದ ನಿದ್ರೆಯ ಬಗ್ಗೆ ಹಲವಾರು ವಿಷಯಗಳನ್ನು ಪ್ರಯೋಗಶಾಲೆಗಳಲ್ಲಿ, ಇಂಥ ಪ್ರಾಣಿಗಳ ಮೇಲಿನ ಪ್ರಯೋಗಗಳಿಂದ ಅಭ್ಯಸಿಸಲಾಗಿದೆ. ಈ ಸ್ಥಿತಿಯಲ್ಲಿ ಈ ಪ್ರಾಣಿಗಳು ಅಸಮತಾಪಿಗಳನ್ನು ಹೋಲುತ್ತವೆ. ಈ ಸ್ಥಿತಿಯ ಮುಖ್ಯ ಉದ್ದೇಶ, ದೇಹದ ತಾಪಮಾನ ಕಾಯ್ದುಕೊಳ್ಳಲು ಶಾಖವನ್ನು ಉತ್ಪತ್ತಿಮಾಡಲು ಬಳಸುವ ಇಂಧನದ ಮಿತವ್ಯಯ. ಕಾರಣ, ಈ ಪ್ರಾಣಿಗಳನ್ನು ಪರಿಪೂರ್ಣತೆ ಇಲ್ಲದ ಸಮತಾಪಿಗಳೆಂದು ಕರೆಯದೆ, ವಿಷಮತಾಪಿ (ಹೆಟಿರೊಥರ್ಮ್ಸ್) ಎಂದು ಕರೆಯಲಾಗಿದೆ.

ಅತಿಶೀತ ತಾಪಮಾನವಿರುವ ಸ್ಥಳಗಳಲ್ಲಿ ಯಶಸ್ವಿಯಾಗಿ ಜೀವಿಸಲು ಈ ಸ್ಥಿತಿಯು ಒಂದು ಹೊಂದಾಣಿಕೆ (ಅಡಾಪ್ಟೇಶನ್). ಈ ಸ್ಥಿತಿಯು ಅನೇಕ ಪಕ್ಷಿ ಮತ್ತು ಸ್ತನಿ ಪ್ರಭೇದಗಳಲ್ಲಿ ಕಂಡುಬರುತ್ತದೆ. ಉದಾ : ಸ್ತನಿಗಳು – ರೊಡೆಂಟ್ಸ್, ಹ್ಯಾಮಸ್ಟರ್, ಪಾಕೆಟ್‌ಮೌಸ್, ಕೀಟಭಕ್ಷಕ, ಹೆಡ್ಜ್‌ಹಾಗ್, ಪಿಗ್ಮಿಒಪೊಸಮ್ ಮುಂತಾದವು. ಪಕ್ಷಿಗಳು – ಹಮ್ಮಿಂಗ್‌ಬರ್ಡ್, ಸ್ವಿಫ್ಟ್ಸ್, ಮೌಸ್‌ಬರ್ಡ್ ಮುಂತಾದುವು.

ಅಸಮತಾಪಿಗಳಲ್ಲೂ ಕೂಡ ಅನೇಕ ಪ್ರಭೇದಗಳು (ಉದಾ : ಮೃದ್ವಂಗಿ, ಕಪ್ಪೆ) ಚಳಿಗಾಲದಲ್ಲಿ ದೀರ್ಘ ನಿದ್ರಾವಸ್ಥೆಯನ್ನು ಹೊಂದುತ್ತವೆ. ಋತು ಬದಲಾವಣೆಯಾದಾಗ ತಮ್ಮ ಸಾಮಾನ್ಯ ಜೈವಿಕ ಕ್ರಿಯೆಗಳಿಗೆ ಮರಳುತ್ತವೆ. ಸಮತಾಪಿಗಳ ಶಿಶಿರನಿದ್ರೆಗೆ ಹೋಲಿಸಿದರೆ, ಇವು ಎಚ್ಚೆತ್ತಾಗ, ದೇಹದ ತಾಪಮಾನವನ್ನು ಹೆಚ್ಚಿಸಲು ಮುಖ್ಯವಾಗಿ ಪರಿಸರವನ್ನು ಅವಲಂಬಿಸುತ್ತವೆ. (ಎಚ್.ಎನ್.ವೈ.)

# ಸ

**ಸಂಚಿಹುಳು:** ಲೆಪಿಡಾಪ್ಟರ ಗಣದ ಸೈಕಿಡೆ ಕುಟುಂಬದ ಸದಸ್ಯ. ಚೀಲದ ಹುಳ ಪರ್ಯಾಯನಾಮ. ಆಂಗ್ಲನಾಮ ಬ್ಯಾಗ್ ವರ್ಮ್. ಸೈಕ್ ಹೆಲಿಕ್ಸ್ ವೈಜ್ಞಾನಿಕ ಹೆಸರು. ಕೀಟ ಸಂಕುಲದಲಿರುವ ವಿಚಿತ್ರ ಸ್ವಭಾವದ ಕೀಟ. ತನ್ನ ದೇಹ ರಕ್ಷಣೆಗೆ ಮತ್ತು ದೇಹ ಪರಿವರ್ತನೆ ಮಾಡಿಕೊಳ್ಳಲು ದೇಹದ ಸುತ್ತ ಗೋಣಿ ಚೀಲದಂತಹ ಕೊಳವೆಯಾಕೃತಿಯ ಹೊದಿಕೆಯನ್ನು ಹೆಣೆದುಕೊಳ್ಳುತ್ತದೆ. ಚೀಲದ ಒಳಭಾಗವು ಮೆತ್ತಗಿದ್ದು ಹೊರಭಾಗದಲ್ಲಿ ಸಣ್ಣ ಸಣ್ಣ ಕಡ್ಡಿ, ಜಾಲಿ ಮರದ ಮುಳ್ಳು, ಎಲೆಯ ಚೂರು ಮತ್ತು ಬಿದುರಿನ ಕಡ್ಡಿಯನ್ನು ಸೇರಿಸಿರುವುದರಿಂದ ಒರಟಾಗಿರುತ್ತದೆ. ದೇಹ ರಕ್ಷಣೆಗೆ ಮತ್ತು ಪರಿವರ್ತನೆಗೆ ಈ ಚೀಲ ಅವಶ್ಯಕವಾಗಿದೆ.

ತೆರೆದುಕೊಂಡಿರುವ ಚೀಲದ ಬಾಯಿಯ ಹೊರಗೆ ತಲೆಯನ್ನು ಹಾಕಿ ಎದೆ ಭಾಗದಲ್ಲಿರುವ ಕಾಲುಗಳಿಂದ ಚಲಿಸುತ್ತದೆ. ಚೀಲದೊಳಗೆ ರೆಕ್ಕೆರಹಿತ ಹೆಣ್ಣು ಸಂಚಿಕೀಟ ಪ್ರೌಢಾವಸ್ಥೆಗೆ ಬಂದಾಗ ವಿಶಿಷ್ಟ ರೀತಿಯಲ್ಲಿ ಗಂಡು ಕೀಟದ ಜೊತೆ ರತಿ ಕ್ರೀಡೆ ನಡೆಸಿ, ಸುಗಮವಾಗಿ ಸಂತಾನ ಕೈಗೊಂಡು, ಮೊಟ್ಟೆಯಿಟ್ಟು, ಮರಿಗಳನ್ನು ಮಾಡುತ್ತದೆ. ಮರಿ ಹುಳಗಳು ಆಹಾರ ಹುಡುಕುತ್ತ ಅಲೆದಾಡುತ್ತವೆ. ಅನಂತರ ದೇಹದ ಸುತ್ತ ಚೀಲ ಹೆಣೆದುಕೊಂಡು ಸಣ್ಣ ಸಣ್ಣ ಗಿಡಗಳ ಟೊಂಗೆಗೆ ಅಂಟಿಸಿಕೊಂಡು ಚೀಲ ಸಮೇತ ನೇತಾಡುತ್ತವೆ.

ಚೀಲದ ಹುಳಗಳು ಅನೇಕ ರೀತಿಯಲ್ಲಿ ಮನುಷ್ಯನಿಗೆ ಹಾನಿಕಾರಕಗಳಾಗಿವೆ. ಕೃಷಿ ಭೂಮಿಯಲ್ಲಿರುವ ವಿವಿಧ ಆಹಾರದ ಗಿಡಗಳ ಎಲೆ, ಕಾಂಡವನ್ನು ತಿಂದು ನಾಶಗೊಳಿಸುತ್ತವೆ. ಪರಿಣಾಮ, ಆಹಾರ ಧಾನ್ಯ ಬೆಳೆಗಳಿಂದ ಬರುವ ಇಳುವರಿ, ಧಾನ್ಯದ ಗುಣಮಟ್ಟ ಕಡಿಮೆಯಾಗುತ್ತದೆ. ಈ ಕೀಟಗಳನ್ನು ನಿಯಂತ್ರಿಸಲು ಪರತಂತ್ರ ಕೀಟಗಳಾದ ಹೈಮನಾಪ್ಟರ ಗಣದ ಎನ್‌ಸೈಟ್ರಿಡೆ ಕುಟುಂಬದ ಜಿನೋನ್ ಸಿರ್ರೈಟಸ್ ಕೀಟವನ್ನು ಬಳಸಲಾಗುತ್ತಿದೆ. (ಬಿ.ಎಸ್.)

**ಸಂದಿಪದಿ:** ಪ್ರಾಣಿ ಪ್ರಪಂಚದಲ್ಲಿ ಶೇ. 75 ರಷ್ಟು ಭಾಗವನ್ನು ಸಂದಿಪದಿಗಳು ಆಕ್ರಮಿಸಿವೆ. ಇದು ಅಕಶೇರುಕ ಗುಂಪಿನ ಪ್ರಮುಖ ವಂಶ. ಈ ವಂಶದ ಜೀವಿಗಳು ಭೂಮಿಯ ಮೇಲೆ ಹಲವು ಮಿಲಿಯನ್ ವರ್ಷಗಳ ಹಿಂದೆ, ಅಂದರೆ ಕೆಂಬ್ರಿಯನ್ ಕಾಲದಲ್ಲಿಯೇ ಕಾಣಿಸಿಕೊಂಡುವು. ವಿವಿಧ ಖಂಡಗಳು ಜೋಡಣೆಗೊಂಡು (ಸಂದಿಯುಳ್ಳ) ರಚಿತವಾದ ಕಾಲುಗಳಿರುವುದು ವಂಶದ ವಿಶೇಷ ಗುಣ. ಕಾರಣ, ಇವುಗಳನ್ನು ಸಂದಿಪದಿಗಳೆಂದು ಹೆಸರಿಸಲಾಗಿದೆ. ಈ ಪ್ರಾಣಿಗಳಲ್ಲಿ ಗಟ್ಟಿಯಾದ ಹೊರಕವಚ ಇದೆ. ಈ ಹೊರಕವಚವನ್ನು ಎಕ್ಸೊಸ್ಕೆಲಿಟನ್ ಎನ್ನುವರು. ಈ ಕವಚವು ಚರ್ಮದ ಕೋಶಗಳು ಸ್ರವಿಸುವ ಪ್ರೊಟೀನ್ (ಕೈಟಿನ್)ನಿಂದ ಕೂಡಿದೆ. ಬೆಳವಣಿಗೆಯಾಗುವಾಗ ಆಗಾಗ್ಗೆ ಹೊರಕವಚ ಬಿದ್ದು ಹೊಸಕವಚ ಬೆಳೆಯುತ್ತದೆ. ಈ ಪ್ರಕ್ರಿಯೆಗೆ ಉರ್ಚುವಿಕೆ, ಅಥವಾ ಪೊರೆಕಳಚುವಿಕೆ (ಮೌಲ್‌ಟಿಂಗ್ ಅಥವಾ ಎಕ್‌ಡೈಸಿಸ್) ಎಂದು ಹೆಸರು.

ಪ್ರಸಕ್ತ ಸು. 10 ಮಿಲಿಯನ್ ಸಂದಿಪದಿಗಳಿರಬಹುದೆಂದು ಕೀಟತಜ್ಞರು ಅಂದಾಜಿಸಿದ್ದಾರೆ. ಇವು ಸಮುದ್ರದಾಳದಿಂದ ಬೆಟ್ಟದ ತುದಿಯವರೆಗೂ, ಉಷ್ಣವಲಯದಿಂದ ಸಮಶೀತೋಷ್ಣವಲಯದವರೆಗೂ ವ್ಯಾಪಿಸಿವೆ. ಸಂದಿಪದಿಗಳ ಗಾತ್ರ ಕೆಲವು ಮಿಮೀ ನಿಂದ 12 ಅಡಿಗಳವರೆಗೂ ಇದೆ.

ಸಂದಿಪದಿಗಳನ್ನು ಎರಡು ಪ್ರಮುಖ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೇ ವಿಭಾಗದಲ್ಲಿ ಟ್ರೈಲೋಬೈಟಾಗಳಿವೆ. ಈ ಪ್ರಾಣಿಗಳ ದೇಹ ಚಪ್ಪಟೆಯಾಗಿದ್ದು, ಗೋಲಾಕಾರದಿಂದಾಗಿದೆ. ತಲೆಭಾಗದಲ್ಲಿ ಒಂದು ಕವಚ ಮತ್ತು ದೇಹದಲ್ಲಿ ಕವಚಗಳಿದ್ದು, ಇವೆಲ್ಲವು ಸಮುದ್ರದಲ್ಲಿ ವಾಸಿಸುತ್ತವೆ. ಇವು 2.5 – 10 ಸೆಂಮೀ ಮತ್ತು ಕೆಲವು 76 ಸೆಂಮೀ ಉದ್ದ ಇವೆ. ಇವೆಲ್ಲಾ ಕೆಂಬ್ರಿಯನ್ ಕಾಲದಲ್ಲಿ ಹೆಚ್ಚಾಗಿ ಕಾಣಿಸಿಕೊಂಡು, ಅನಂತರ ನಶಿಸಿದವು (ಎಕ್ಸ್‌ಟಿಂಕ್ಟ್). ಎರಡನೆಯ ವಿಭಾಗ ಮ್ಯಾಂಡಿಬುಲೇಟಾ. ಈ ಗುಂಪಿನ ಪ್ರತಿನಿಧಿಗಳು ಇನ್ನೂ ಜೀವಂತವಾಗಿವೆ. ಈ ಗುಂಪಿನ ಪ್ರಾಣಿಗಳಲ್ಲಿ ಬಾಯಿಯ ವದನಾಂಗಗಳು ಚೆನ್ನಾಗಿ ಬೆಳೆದಿವೆ. ಬಾಯಿಯಲ್ಲಿ ದವಡೆ (ಮ್ಯಾಂಡಿಬಲ್ಸ್ ಅಥವಾ ಜಾಸ್) ಗಳಿವೆ. ಈ ಗುಂಪಿನ ಪ್ರಾಣಿಗಳು ಜಗತ್ತಿನಾದ್ಯಂತ ಹರಡಿದ್ದು ದೇಹರಚನೆಗೆ ತಕ್ಕಂತೆ ಆರು ವರ್ಗಗಳನ್ನಾಗಿ ವಿಂಗಡಿಸಲಾಗಿದೆ.

ವರ್ಗ 1 : ಕ್ರಸ್ಟೇಷಿಯಾ : ಇವಕ್ಕೆ ಕಠಿಣಚರ್ಮಿಗಳೆಂದೂ ಹೆಸರಿದೆ. ಈ ವರ್ಗದ ಸಂದಿಪದಿಗಳು ನೀರಿನಲ್ಲಿ ಜೀವಿಸುತ್ತವೆ. ಇವು ಉಪ್ಪು ನೀರಿನಲ್ಲಿ ಹೆಚ್ಚಾಗಿವೆ. ಉದಾ: ಸೀಗಡಿ, ಏಡಿ, ಬಾರ್ನ್‌ಕಲ್ ಇತ್ಯಾದಿ. ನೀರಿನಲ್ಲಿ ವಾಸಿಸುವ ಕಾರಣ, ಇವುಗಳ ಉಸಿರಾಟ ಕಿವಿರುಗಳ ಮೂಲಕ ನಡೆಯುತ್ತದೆ. ಈ ವರ್ಗದ ಪ್ರಾಣಿಗಳಲ್ಲಿ ಒಂದು ಜೊತೆ ಕುಡಿಮೀಸೆ (ಆಂಟೆನಾ) ಮತ್ತು ಒಂದು ಜೊತೆ ಮ್ಯಾಕ್ಸಿಲೇ, ಕೆಳದವಡೆ ಇದೆ. ಇವೆರಡು ಅಂಗಗಳು ಆಹಾರ ಸಂಗ್ರಹಿಸುವಲ್ಲಿ ಸಹಾಯಕ. ಕ್ರಸ್ಟೇಶಿಯಾಗಳು ಪ್ರಾಣಿಜನ್ಯ, ಸಸ್ಯಜನ್ಯ ಮತ್ತು ಸತ್ತಿರುವ ಆಹಾರ ವಸ್ತುವನ್ನು ತಿಂದು ಬದುಕುತ್ತವೆ. ಇವುಗಳ ದೇಹವನ್ನು ತಲೆ, ಎದೆ ಮತ್ತು ಹೊಟ್ಟೆ (ಉದರ) ಯನ್ನಾಗಿ ವಿಂಗಡಿಸಬಹುದು. ಎದೆಭಾಗದಲ್ಲಿ ಮರಳ ಮೇಲೆ ನಡೆಯಲು ಅನುಕೂಲವಾಗುವಂತಹ ಕಾಲುಗಳಿದ್ದರೆ, ಹೊಟ್ಟೆಭಾಗದಲ್ಲಿ ಈಜುಪಾದಗಳಿವೆ. ಈ ವಿಂಗಡನೆ ಪ್ರಾಣಿಗಳ ಅನುಕೂಲಕ್ಕೆ ತಕ್ಕಂತೆ ಪುನಃ ಮಾರ್ಪಾಡಾಗಿದೆ. ಈ ವರ್ಗದ ಪ್ರಾಣಿಗಳನ್ನು ಮನುಷ್ಯ ಆಹಾರವನ್ನಾಗಿ ಬಳಸುವುದರಿಂದ ಇವುಗಳು ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ವರ್ಗದಲ್ಲಿ ಸು. 40,000 ಪ್ರಭೇದಗಳಿವೆ. ಇವುಗಳ ಹೊರಕವಚ ಕೈಟಿನ್ನಿನ ಬದಲಾಗಿ ಸುಣ್ಣದಂಶ (ಕ್ಯಾಲ್ಸಿಯಂ) ದಿಂದ ಕೂಡಿದೆ.

ವರ್ಗ 2 : ಕೈಲೊಪೊಡಾ : ಈ ವರ್ಗದ ಪ್ರಾಣಿಗಳನ್ನು ಒಟ್ಟಾಗಿ ಸಾವಿರಪಾದಿ ಅಥವಾ ಸಹಸ್ರಪಾದಿಗಳೆನ್ನುತ್ತಾರೆ. ಇವುಗಳಲ್ಲಿ 5,000 ಪ್ರಭೇದಗಳಿವೆ. ಇವೆಲ್ಲವೂ ನೆಲದ ಮೇಲೆ ವಾಸಿಸುವುವು. ಇವುಗಳಲ್ಲಿ ವಿಷದ ಕೊಂಡಿಗಳಿರುವುದು ವಿಶೇಷ. ಈ ಕೊಂಡಿಗಳನ್ನು ತಮ್ಮ ಆತ್ಮರಕ್ಷಣೆಗೆ ಮತ್ತು ಆಹಾರ ಜೀವಿಗಳನ್ನು ಪಡೆಯಲು (ಇತರೆ ಚಿಕ್ಕ ಚಿಕ್ಕ ಸಂದಿಪದಿಗಳನ್ನು ವಿಷದ ಕೊಂಡಿಯಿಂದ ಚುಚ್ಚಿ ಘಾಸಿಗೊಳಿಸಿ) ಹಿಡಿಯುವಲ್ಲಿ ಉಪಯೋಗಿಸುತ್ತವೆ. ಇವುಗಳ ತಲೆಯ ಭಾಗದಲ್ಲಿ ಒಂದು ಜೊತೆ ಆಂಟೆನಾ ಇದೆ. ಬಾಯಿಯಲ್ಲಿ ಒಂದು ಜೊತೆ ಮ್ಯಾಂಡಿಬಲ್ ಮತ್ತು ಎರಡು ಜೊತೆ ಮ್ಯಾಕ್ಸಿಲಾಗಳಿವೆ. ದೇಹದ ಇತರೆ ಭಾಗಗಳು ವಲಯಗಳಾಗಿವೆ. ಪ್ರತಿವಲಯದಲ್ಲಿ ಒಂದು ಜೊತೆ ಕಾಲುಗಳಿವೆ. ಇವು ಶೀತವಲಯ ಹೊರತುಪಡಿಸಿ ಪ್ರಪಂಚದಾದ್ಯಂತ ವ್ಯಾಪಿಸಿವೆ. ಮನೆಯಂಗಳದಲ್ಲಿ ಅಥವಾ ಮನೆಯ ತೇವ ಜಾಗದಲ್ಲಿ ಕಾಣಿಸಿಕೊಳ್ಳುವ ಜರಿ, ಈ ವರ್ಗಕ್ಕೊಂದು ಉತ್ತಮ ಉದಾಹರಣೆ.

ವರ್ಗ 3 : ಡಿಪ್ಲೊಪೊಡಾ : ಈ ವರ್ಗದಲ್ಲಿ 8,000 ಪ್ರಭೇದಗಳಿವೆ. ಇವೆಲ್ಲವೂ ಭೂವಾಸಿಗಳು. ಉಸಿರಾಟಕ್ಕೆ ಟ್ರೇಕಿಯಗಳಿವೆ. ಈ ವರ್ಗದ ಪ್ರಾಣಿಗಳನ್ನು ಸಹಸ್ರಪದಿಗಳು ಎನ್ನುತ್ತಾರೆ. ಉದಾ : ಚಕ್ಕುಲಿ ಹುಳು. ಇವುಗಳ ದೇಹದ ಹೊರಕವಚದಲ್ಲಿರುವ ಗ್ರಂಥಿಗಳಿಂದ ಕೆಟ್ಟ ಘಾಟು ವಾಸನೆ ಹೊರಹೊಮ್ಮುತ್ತದೆ. ಈ ಗ್ರಂಥಿಗಳು ಈ ಪ್ರಾಣಿಗಳ ಆತ್ಮರಕ್ಷಣೆಯಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಇವು ಸಸ್ಯಜನ್ಯ ಆಹಾರ ಸೇವಿಸುತ್ತವೆ.

ವರ್ಗ 4 : ಪೌರಾಪೊಡ : ಇವುಗಳ ದೇಹ ಮೃದುವಾಗಿದ್ದು, ಕೇವಲ 0.5 ರಿಂದ 2 ಮಿಮೀ ಉದ್ದವಾಗಿವೆ. ದೇಹದಲ್ಲಿ 9 ರಿಂದ 11 ವಲಯಗಳಿದ್ದು ಪ್ರತಿ ವಲಯಕ್ಕೆ ಒಂದು ಜೊತೆ ಕಾಲುಗಳಿವೆ. ಇವು ಪ್ರಪಂಚದಾದ್ಯಂತ ಮಣ್ಣಿನಲ್ಲಿ ಜೀವಿಸುವ ಸಂದಿಪದಿಗಳು.

ವರ್ಗ 5 : ಸಿಂಫೈಲಾ : ಈ ವರ್ಗದಲ್ಲಿ 160 ಪ್ರಭೇದಗಳಿವೆ. ಇವು ಅತ್ಯಂತ ವೇಗವಾಗಿ ಓಡುವ ಪ್ರಾಣಿಗಳು. ಕೇವಲ 2.50 ರಿಂದ 10 ಸೆಂಮೀ ಉದ್ದ ಇವೆ. ಇವು ಸಾವಿರಪದಿಗಳನ್ನು ಹೋಲುತ್ತವೆಯಾದರೂ, ಕಾಲುಗಳು ಮಾತ್ರ 12 ಜೊತೆ. ಇವುಗಳು ಸಸ್ಯಜನ್ಯ ಮತ್ತು ಕೊಳೆಯುತ್ತಿರುವ ಆಹಾರವನ್ನು ತಿಂದು ಬದುಕುತ್ತವೆ. ಉದಾ : ಸ್ಕುಟಿಜೆರ, ಇಮ್ಮಾಕ್ಯುಲೇಟಾ ಮುಂತಾದುವು. ಕೆಲವು ಆಹಾರ ಬೆಳೆಯನ್ನು ಆಕ್ರಮಿಸಿ ನಾಶಪಡಿಸುತ್ತವೆ. ಅದರಿಂದ ಪೀಡೆಗಳೆಂದು ಪರಿಗಣಿಸಲಾಗಿದೆ.

ವರ್ಗ 6 : ಇನ್ಸೆಕ್ಟ : ಕೀಟಗಳೆಲ್ಲವೂ ಈ ಗುಂಪಿಗೆ ಸೇರುತ್ತವೆ. ಇಡೀ ವರ್ಗ ವೈವಿಧ್ಯಮಯವಾದುದು. ದೇಹವನ್ನು ತಲೆ, ಎದೆ ಮತ್ತು ಹೊಟ್ಟೆ (ಉದರ) ಯನ್ನಾಗಿ ವಿಂಗಡಿಸಲಾಗಿದೆ. ಎದೆಭಾಗಕ್ಕೆ ಅಂಟಿಕೊಂಡಂತೆ ಒಂದು ಅಥವಾ ಎರಡು ಜೊತೆ ರೆಕ್ಕೆಗಳಿವೆ. ಕೆಲವು ಪ್ರಭೇದದ ಜೀವಿಗಳಿಗೆ ರೆಕ್ಕೆಗಳಿಲ್ಲ. ಇವುಗಳ ಎದೆಭಾಗದಲ್ಲಿ ಮೂರು ವಲಯಗಳಿದ್ದು, ಪ್ರತಿ ವಲಯದಲ್ಲಿ ಒಂದು ಜೊತೆ ಕಾಲುಗಳಿವೆ.

ಸಂಯುಕ್ತ ಕಣ್ಣುಗಳಿರುವುದು (ಕಾಂಪೌಂಡ್-ಐ) ಸಾಮಾನ್ಯ. ಬಹುತೇಕ ಕೀಟಗಳು ನೆಲದ ಮೇಲೆ ವಾಸಿಸುವುದರಿಂದ ತಮ್ಮ ಉಸಿರಾಟಕ್ಕೆ ಟ್ರೇಕಿಯಾಗಳನ್ನು ಬಳಸುತ್ತವೆ. ಕೀಟಗಳ ಆಹಾರ ಪದ್ಧತಿ ವಿವಿಧತೆಯಿಂದ ಕೂಡಿದೆ. ಕೆಲವು ರಕ್ತ ಹೀರುವ ಸೊಳ್ಳೆಗಳಾದರೆ, ಕೆಲವು ಹಣ್ಣಿನ ರಸ, ಹೂವಿನ ಮಕರಂದ ಹೀರುತ್ತವೆ. ಕೆಲವು ಕೀಟಗಳ ಜೀವನಚಕ್ರದಲ್ಲಿ ಲಾರ್ವಾ ಹಂತವಿದೆ. ಈ ಲಾರ್ವಾ ರೂಪಪರಿವರ್ತನೆಗೊಂಡು ಪ್ರೌಢಕೀಟವಾಗಿ ಬೆಳೆಯುತ್ತದೆ. ಕೀಟಪ್ರಪಂಚದಲ್ಲಿ ಕೆಲವು ಕೀಟಗಳಾದ ಜೇನುನೊಣ, ರೇಷ್ಮೆಹುಳು ಮಾನವನಿಗೆ ಉಪಯೋಗಿಗಳಾಗಿವೆ. ಜಿರಲೆ, ಸೊಳ್ಳೆ, ಕಾಯಿಕೊರಕಗಳನ್ನು ಉಪದ್ರವಿ ಕೀಟಗಳೆಂದು ಪರಿಗಣಿಸಲಾಗಿದೆ. ನೋಡಿ: ಕೀಟಗಳು. (ಪಿ.ಆರ್.ಎನ್.)

**ಸಂಯೋಜಕ ಅಂಗಾಂಶ:** ಪ್ರಾಣಿಯ ಮೈಯಲ್ಲಿರುವ ಅಂಗಗಳನ್ನು ಕೂಡಿಸುವ, ಆಧಾರವನ್ನು ಒದಗಿಸುವ ಅಂಗಾಂಶ. ಮಧ್ಯದರ್ಮ (ಮಿಸೊಡರ್ಮ್) ಮೂಲ ಪ್ರಜನನ ಪದರದಿಂದ ಉದ್ಭವಸಿದೆ. ಇವು ಜೀವಾಳದ ಅಂಗಾಂಶಗಳಲ್ಲಿ ಒಂದಕ್ಕೊಂದು ಸಂಬಂಧ ಕಲ್ಪಿಸುತ್ತವೆ. ಮೈಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಹಲ ತೆರನಾಗಿದ್ದರೂ ಅವುಗಳ ಭಾಗಾಂಶಗಳಲ್ಲಿ ಹೋಲಿಕೆಗಳಿವೆ. ರೂಪದಲ್ಲಿ ಏನಾದರೂ ವ್ಯತ್ಯಾಸವಿದ್ದರೆ ಆಯಾ ಭಾಗಗಳ ಕಾರ್ಯಚಟುವಟಿಕೆಯೂ ತಕ್ಕಂತಿರುವುದು.

ಎಲ್ಲ ಅಂಗಗಳಲ್ಲೂ ಸಂಯೋಜಕ ಅಂಗಾಂಶದ ಒಂದು ಕವಚಪೊರೆ(ಕ್ಯಾಪ್ಸ್ಯೂಲ್), ಮಾತೃಕೆ (ಮ್ಯಾಟ್ರಿಕ್ಸ್) ಇರುತ್ತವೆ. ಇಡೀ ಮೈಗೆ ಕಂಕಾಲ(ಸ್ಕೆಲಿಟನ್) ಆಧಾರ ಕೊಡುವುದು. ಸ್ನಾಯುರಜ್ಜುವಿಗೂ (ಟೆಂಡನ್ಸ್) ಸನ್ನೆಗಳಂತಿರುವ ಮೂಳೆಗಳಿಗೆ ಸ್ನಾಯುವಿನ ಕುಗ್ಗುವಿಕೆಯಿಂದ ಯಾಂತ್ರಿಕ ಬಲವನ್ನು ಸಾಗಿಸುವ ಕೂಡಿಸುವ ಅಂಗಾಂಶಗಳೊಂದಿಗೂ ಸ್ನಾಯುಗಳು ನಿಕಟವಾಗಿ ಹತ್ತಿರುತ್ತವೆ. ಮೂಳೆಗಳು ಸನ್ನೆಗಳಾಗಿರುವಂತೆ ಸಂಯೋಜಕ ಅಂಗಾಂಶ ಹಲ ತೆರನಾಗಿ ನೆರವಾಗುತ್ತದೆ; ಕೀಲುಗಳನ್ನು ಒಂದಾಗಿ ಹಿಡಿದಿಡುವ ಅಸ್ಥಿರಜ್ಜುಗಳಾಗಿ (ಲಿಗಮೆಂಟ್ಸ್), ಕೀಲುಗಳ ಮೊಗಗಳ ಮೇಲಿರುವ ಮೆಲ್ಲೆಲುಬಾಗಿ, ಕೀಲಿನ ಪೊಳ್ಳಿನ ಅಂಚುಗಳ ಒಳವರಿಯಾಗಿದ್ದು ಕೀಲು ಸರಾಗವಾಗಿ ಆಡುವಂತೆ ಮಾಡಿ ಪುಷ್ಟಿಗೊಡುವ ಸೈನೋವಿಯಲ್ ಪೊರೆಯಾಗಿ ಸಹಕರಿಸುತ್ತದೆ. ಇದರಲ್ಲಿ ರಕ್ತನಾಳಗಳಿರುತ್ತವೆ. ಅಂಗಾಂಶದ ಜೀವಕೋಶಗಳಿಗೂ ರಕ್ತದ ಹರಿವಿಗೂ ನಡುವೆ ಅದಲು ಬದಲಾಗುವ ಎಲ್ಲ ಪುಷ್ಟಿವಸ್ತುಗಳು, ತ್ಯಾಜ್ಯ ಉತ್ಪನ್ನಗಳೂ ಜೀವಕೋಶಗಳ ನಡುವಣ ಜಾಗಗಳಲ್ಲಿ ಸಾಗಬೇಕು. ಈ ಜಾಗಗಳನ್ನು ತುಂಬಿಕೊಂಡಿದ್ದು ಅವನ್ನು ಪಾಲಿಸುವ ಕೆಲಸ ಸಂಯೋಜಕ ಅಂಗಾಂಶದ್ದು.

ಸಂಯೋಜಕ ಅಂಗಾಂಶದ ಭಾಗಾಂಶಗಳು: ಎಲ್ಲ ಸಂಯೋಜಕ ಅಂಗಾಂಶಗಳಲ್ಲೂ ಜೀವಕೋಶಗಳು, ತಂತುಗಳು ಮತ್ತು ಜೀವಕೋಶಾಂತರ ಮಾತೃಕೆ, ಹೀಗೆ ಮುಖ್ಯವಾಗಿ ಮೂರು ಭಾಗಾಂಶಗಳಿವೆ. ಸಂಯೋಜಕ ಅಂಗಾಂಶಗಳ ಮುಖ್ಯ ಲಕ್ಷಣಗಳಿಗೆ ಹೇರಳವಾದ ತಂತುಗಳೇ ಕಾರಣ. ಇವುಗಳ ರೂಪ, ಇರುವೆಡೆ, ಕಾರ್ಯಚಟುವಟಿಕೆ ಇವುಗಳ ಆಧಾರದ ಮೇಲೆ ಸಂಯೋಜಕ ಅಂಗಾಂಶಗಳನ್ನು ವಿಧವಿಧವಾಗಿ ವರ್ಗೀಕರಿಸಬಹುದು. ತಂತುಗಳ ಹಾಸುಪೊರೆಯಲ್ಲಿ ಸುಣ್ಣದ ಲವಣಗಳು ಬಹಳವಾಗಿರುವುದೇ ಮೂಳೆ ಗಡುಸಾಗಿರಲು ಕಾರಣ. ಗಟ್ಟಿ ತಂತುಗಳ ಹಾಸಿನಲ್ಲಿ ಅಪಾರವಾಗಿ ಹೂತಿರುವ ಜೆಲ್ಲಿ ತೆರನ ವಸ್ತುವಿನಿಂದ ಮೆಲ್ಲೆಲುಬು ಹೇಗೆಂದರೆ ಹಾಗೆ ಬಾಗುವಂತಿರುವುದು. ಹಗ್ಗದಹಾಗೆ ಸೆಳೆ ಬಲವನ್ನು ತಡೆವ ಶಕ್ತಿ ಸ್ನಾಯುರಜ್ಜುವಿಗೆ ಬರಲು ಅದರ ತುಂಬ ದಟ್ಟವಾದ ಕೊಲ್ಲಾಜನ್ (ಬಿಳಿ) ತಂತುಗಳೇ ಕಾರಣ. ಮಾತೃಕೆಯಲ್ಲಿ ಎಲ್ಲೆಲ್ಲೂ ಜೀವಕೋಶ ಹೇರಳವಾಗಿರುತ್ತವೆ. ಆದರೆ ಕೆಲವೆಡೆಗಳಲ್ಲಿ ಜೀವಕೋಶಗಳಿಗಿಂತಲೂ ಮಾತೃಕೆಯೇ ಹೆಚ್ಚಾಗಿರುವುದು. ಬೆಳಕು ಸರಾಗವಾಗಿ ಹಾಯಲು ತಕ್ಕನಾಗಿರುವ, ಕಣ್ಣಿಲ್ಲಿರುವ ಕಾಚದ್ರವ (ವಿಟ್ರಿಯಸ್ ಹ್ಯೂಮರ್) ಇದರ ಒಂದು ಉದಾಹರಣೆ.

ಜೀವಕೋಶಗಳು: ಮೆತ್ತಗಿರುವ ಸಂಯೋಜಕ ಅಂಗಾಂಶದ ಬಲು ವಿಶಿಷ್ಟವಾದ ಕಣಗಳೆಂದರೆ ಫೈಬ್ರೊಬ್ಲಾಸ್ಟ್‌ಗಳು. ಮೈಯಿಂದ ಚಾಚುಗಳು ಹೊರಚಾಚಿಕೊಂಡಿರುವ, ನೀಳವಾದ ದೊಡ್ಡ ಜೀವಕಣಗಳಿವು. ಕೊಲ್ಲಾಜನ್ ಮತ್ತು ಪ್ರತ್ಯಾಸ್ಥ (ಹಳದಿ-ಎಲಾಸ್ಟಿಕ್) ತಂತುಗಳನ್ನು ತಯಾರಿಸುತ್ತದೆ. ಮ್ಯಾಕ್ರೊಫೇಜ್ (ಬೃಹದ್ಭಕ್ಷಿ) ಸಣ್ಣ ಚೂರುಗಳ ಕಲಿಲ (ಕೊಲಾಯ್ಡಲ್) ವಸ್ತುಗಳನ್ನು ಕಬಳಿಸುತ್ತವೆ. ಉರಿತದಂಥ (ಇನ್‌ಫ್ಲಮೇಷನ್) ಕೆಲವು ವಿಶೇಷ ಸಂದರ್ಭಗಳಲ್ಲಿ ಇವೇ ದುಗ್ಧರಸದ(ಲಿಂಫ್) ಜೀವಕಣಗಳು ಇಲ್ಲವೇ ಫೈಬ್ರೊಬ್ಲಾಸ್ಟ್‌ಗಳಾಗುತ್ತವೆಂದು ನಂಬಿಕೆ. ನವಿರು ಜಾಲಕ (ರೆಟಿಕ್ಯುಲಾರ್) ಜೀವಕೋಶಗಳು ಮುಖ್ಯವಾಗಿ ದುಗ್ಧರಸ ಗೆಣ್ಣುಗಳ (ಲಿಂಫ್‌ನೋಡ್ಸ್), ಗುಲ್ಮ (ಸ್ಪ್ಲೀನ್), ಮೂಳೆ ಮಜ್ಜೆಗಳಲ್ಲಿವೆ. ಇವುಗಳು ಸಂಯೋಜಕ ಅಂಗಾಂಶದ ನವುರುಜಾಲಕ ತಂತುಗಳೊಂದಿಗೆ ಇರುತ್ತವೆ. ಇವುಗಳಿಂದ ಮುಂದೆ ಕೆಲವು ರಕ್ತನಾಳಗಳು ವಿಕಾಸವಾಗಬಹುದು. ನವಿರುಜಾಲದ ಒಳಪೊರೆಯ (ರೆಟಿಕ್ಯುಲೊ ಎಂಡೊತೀಲಿಯಲ್) ಜೀವಕೋಶಗಳಾಗಲೂ ಬಹುದು. ನವಿರುಜಾಲದ ಒಳಪೊರೆಯ ಜೀವಕೋಶಗಳು ಗುಲ್ಮ, ಯಕೃತ್ತು, ದುಗ್ಧರಸ ಗಂಟು, ಮೂಳೆ ಮಜ್ಜೆಗಳಲ್ಲಿರುವ ಕೆಲವು ರಕ್ತನಾಳಗಳ ಒಳವರಿ ಪದರಗಳಾಗಿರುತ್ತವೆ. ಇವು ಫ್ಯಾಗೋಸೈಟ್‌ಗಳನ್ನು, ನವಿರುಜಾಲಕ ತಂತುಗಳನ್ನೂ ತಯಾರಿಸುತ್ತವೆ. ಮಾಸ್ಟ್ ಜೀವಕೋಶಗಳು ಹೆಪಾರಿನ್, ಸೆರೊಟೋನಿನ್ ಮತ್ತು ಹಿಸ್ಟಮೈನುಗಳನ್ನು ಸ್ರವಿಸುತ್ತವೆ. ಇಯೊಸಿನೊಫಿಲ್‌ಗಳು ಕೂಡ ಇರುತ್ತವೆ. ಮುಖ್ಯವಾಗಿ ಒಗ್ಗದಿಕೆಯಿಂದ ಏಳುವ ಕೆಲವು ಉರಿತಗಳಲ್ಲಿ ಇವು ಹೆಚ್ಚಾಗಿರುವುವು. ಸಂಯೋಜಕ ಅಂಗಾಂಶಗಳಲ್ಲಿ ಪ್ಲಾಸ್ಮ ಜೀವಕೋಶಗಳಿರುವುದು ಸಾಮಾನ್ಯ. ಪ್ರತಿಕಾಯ (ಆ್ಯಂಟಿಬಾಡಿ) ವಸ್ತುಗಳ ತಯಾರಿಕೆಗೆ ಇವು ಸಂಬಂಧಿಸಿವೆ.

ಕೆಲವು ಸಂಯೋಜಕ ಅಂಗಾಂಶಗಳಲ್ಲಿ ಕೊಬ್ಬಿನ ಜೀವಕೋಶಗಳು ಹೇರಳವಾಗಿರುವುವು. ಕೊಬ್ಬಿನ ದೊಡ್ಡ ಗೋಳಕದ ಸುತ್ತಲೂ ಅಂಚಿನಲ್ಲಿರುವ ನವಿರಾದ ಕೋಶದ್ರವ್ಯದಲ್ಲಿ ಅಪ್ಪಚ್ಚಿಯಾದ ಕೋಶಕೇಂದ್ರ ಇರುವುದು ಇವುಗಳ ವಿಶೇಷ ಗುಣ. ಚಯಾಪಚಯಕ್ಕಾಗಿ(ಮೆಟಬಾಲಿಸಂ) ಬೇಕಾದ ಕೊಬ್ಬಿನ ಆಮ್ಲ ಮತ್ತಿತರ ವಸ್ತುಗಳನ್ನು ಇದು ಒದಗಿಸುವುದು. ಕಣ್ಣುಗುಳಿಗಳ, ಸ್ನಾಯುಗಳ ಮತ್ತು ಅಂಗಗಳ ನಡುವಣ ಜಾಗಗಳಲ್ಲಿ ತುಂಬ ಅಡಕುವ ವಸ್ತು. ಚರ್ಮದ ಕೆಳಗೆ ಹೊರಗಿನ ತಂಪು, ಪೆಟ್ಟುಗಳನ್ನು ಇದು ತಡೆಯುತ್ತದೆ.

ವರ್ಣಕ (ಪಿಗ್ಮೆಂಟ್‌ಡ್) ಜೀವಕೋಶಗಳಲ್ಲಿ ಮೆಲನಿನ್‌ನ ಅಚ್ಚಬೂದು ಬಣ್ಣದ ಸಣ್ಣ ಕಣಗಳು ಇರುತ್ತವೆ. ಚರ್ಮದಲ್ಲಿರುವ ಈ ಜೀವಕಣಗಳಿಗೆ ಮೇಲುಪೊರೆಯಿಂದ ಬಣ್ಣವಸ್ತು ದೊರೆಯಬಹುದು.

ಮೆಲ್ಲೆಲುಬು, ಎಲುಬುಗಳಲ್ಲೂ ಕೂಡಿಸುವ ಅಂಗಾಂಶದ ವಿಶೇಷ ಜೀವಕೋಶಗಳಿರುತ್ತವೆ.

ತಂತುಗಳು: ಇವುಗಳಲ್ಲಿ ಮೂರು ಮುಖ್ಯ ಬಗೆ: ಕೊಲ್ಲಾಜನ್, ನವಿರುಜಾಲಕ, ಪ್ರತ್ಯಾಸ್ಥ ತಂತುಗಳು. ಕೊಲ್ಲಾಜನ್ ತಂತುಗಳು ಸ್ನಾಯುಗಳಲ್ಲಿ ಹೆಚ್ಚು. ಹಸಿಯಾಗಿದ್ದಾಗ ಬೆಳ್ಳಗಿದ್ದು, ಕಿತ್ತರೆ ಹಿಗ್ಗದೆ ಬಲು ಗಡುಸಾಗಿರುತ್ತವೆ. ಕೆಳಚರ್ಮದ (ಡರ್ಮಿಸ್) ಕೂಡಿಸುವ ಅಂಗಾಂಶದಲ್ಲಿ ಇವೇ ಮುಖ್ಯವಾದವು. ಕೊಲ್ಲಾಜನ್ ತಂತುಗಳ ತುಂಬ ಉದ್ದುದ್ದನೆಯ ತಂತು ತಂಡಗಳಿರುತ್ತವೆ. ಬಿಡಿ ತಂತುಗಳು ಕವಲೊಡೆಯವು. ತಂತುಗಳ ಕಟ್ಟುಗಳಲ್ಲಿ ನೀಳ ಪಟ್ಟೆಗಳಿರುವುವು. ಕ್ಷಾರದಲ್ಲಿ ನೆನೆಸಿದರೆ ಇನ್ನೂ ನವಿರಾದ ಎಳೆಗಳನ್ನು ಬಿಡಿಸಬಹುದು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಇವುಗಳಲ್ಲಿ ಇನ್ನೂ ನವಿರಾದ ಎಳೆಗಳಿರುತ್ತವೆ. ಬಿಸಿನೀರಿನಲ್ಲಿ ಕರಗಿದ ಕೊಲ್ಲಾಜನ್ ತಂತುವಿಗೆ ಜಿಲಟಿನ್ ಎಂದು ಹೆಸರು. ಪೆಪ್ಸಿನ್, ಕೆಲವು ಏಕಾಣುಜೀವಿಗಳಿಂದ ತಯಾರಾಗುವ ಕೊಲ್ಲ್ಯಾಜಿನೇಸ್ ಇವುಗಳಿಂದ ಕೊಲ್ಲಾಜನ್ ತಂತುಗಳು ಕರಗುತ್ತವೆ. ಟ್ರಿಪ್ಸಿನ್‌ನಿಂದ ಕರಗದು. ಈ ತಂತುಗಳ ತುಂಬ ಕೊಲ್ಲಾಜನ್ ಎಂಬ ಪ್ರೋಟೀನಿರುವುದು. ಇನ್ನಾವ ಪ್ರೋಟೀನುಗಳಲ್ಲೂ ಇರದ ಅಮೈನೊ ಆಮ್ಲವಾದ ಹೈಡ್ರಾಕ್ಸಿಪ್ರೋಲಿನ್ ಇದರಲ್ಲಿ ಹೇರಳವಾಗಿದೆ. ಈ ಅಮೈನೋ ಆಮ್ಲ ಸುರುಳಿ ಸರಪಣಿಯಂತೆ ಒಂದಕ್ಕೊಂದು ಜೋಡಿಸಿದೆ.

ನವಿರುಜಾಲಕ ತಂತುಗಳು ಕವಲೊಡೆಯುತ್ತ ಒಂದಕ್ಕೊಂದು ಕೂಡಿಕೊಂಡು ಬಲೆಯ ಹಾಗಿರುತ್ತವೆ. ಕೊಲ್ಲಾಜನ್ ತಂತುಗಳ ಹಾಗೆ ಇವು ದ್ವಿವಕ್ರೀಕಾರಕವಲ್ಲ (ಬೈರಿಫ್ರಿಂಜೆಂಟ್). ನವಿರುಜಾಲಕ ಕಣಗಳನ್ನೂ ಪೆಪ್ಸಿನ್, ಕೊಲ್ಲಾಜಿನೇಸ್ ಕರಗಿಸುತ್ತವೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನವಿರುಜಾಲಕ ವಸ್ತು ಅಲ್ಲಲ್ಲಿ ಪದರುಗಳಂತೆ ತೋರುವುದು. ಇವೂ ಪ್ರೋಟೀನುಗಳೇ. ಇವಲ್ಲೂ ಹೈಡ್ರಾಕ್ಸಿಪ್ರೋಲಿನ್ ಅಮೈನೊ ಆಮ್ಲವೇ ಹೆಚ್ಚು. ಬಿಸಿನೀರಿನಲ್ಲಿ ಕರಗಿದರೂ ತಣ್ಣಗಿಸಿದಾಗ ಇದು ಜಿಲಟಿನ್ ಆಗದು.

ಪ್ರತ್ಯಾಸ್ಥ ಹಿಂಪುಟಿಕ ತಂತುಗಳು ಹಳದಿಯಾಗಿರುವುವು. ದೊಡ್ಡ ಧಮನಿಗಳಲ್ಲಿ ಇರುವಂತೆ ಈ ತಂತುಗಳು ಉದ್ದಕ್ಕೆ ತೆಳುವಾಗಿ ಕವಲೊಡೆಯುತ್ತ ತಟ್ಟೆಗಳು ಇಲ್ಲವೆ ತೂತುಗಳಿರುವ ಪೊರೆಗಳಾಗಿರುತ್ತವೆ. ತಂತುಗಳಿರುವುದು ಹೊರಗಾಣದು. ಹಿಡಿದು ಕೀಳದಿದ್ದರೆ ದ್ವಿವಕ್ರೀಕಾರಕವಾಗವು. ಬಿಸಿನೀರು, ಸಾರಕ್ಷಾರ, ಟ್ರಿಪ್ಸಿನ್‌ಗಳಲ್ಲಿ ಕರಗವು. ಮಾಂಸಲಿಯಲ್ಲಿರುವ ಪ್ರತ್ಯಾಸ್ಥ ತಂತು ಎಲಾಸ್ಟೇಸ್‌ನಲ್ಲಿ ಮಾತ್ರ ಕರಗುತ್ತದೆ. ಕರಗಿಸಿದಾಗ ಒಂದಕ್ಕೊಂದು ಹೆಣೆದು ಕೊಂಡು ತಂತು ಎಳೆಗಳು ಕಾಣಬರುತ್ತವೆ. ಇವು ಹುರಿಗಟ್ಟಿ ಇನ್ನೂ ದೊಡ್ಡ ತಂತುಗಳಾಗಿರುವುವು. ಇವುಗಳಲ್ಲಿನ ಪ್ರೋಟೀನೇ ಬೇರೆ ಬಗೆಯದು. ಕೊಬ್ಬೂ ಇದರಲ್ಲಿರುತ್ತದೆ. ಇವು ರಬ್ಬರಿನಂತೆ ಹಿಗ್ಗುತ್ತವೆ. ಘುಪ್ಫುಸ, ರಕ್ತನಾಳದ ಗೋಡೆಗಳು, ಸ್ನಾಯುರಜ್ಜೆಗಳು, ಮೆಲ್ಲೆಲುಬುಗಳು ರಬ್ಬರಿನಂತೆ ಹಿಗ್ಗಲು ಈ ತಂತುಗಳೇ ಕಾರಣ.

ಮಾತೃಕೆ: ಇದು ತಂತುಗಳು, ಜೀವಕಣಗಳ ನಡುವೆ ಅಲ್ಲದೆ ಸುತ್ತಲೂ ಇರುವ ವಸ್ತು. ಮೆಲ್ಲೆಲುಬು, ಹೊಕ್ಕಳು, ಹುರಿಯ ಜೆಲ್ಲಿ, ಕಣ್ಣಿನ ಕಾಚದ್ರವದಲ್ಲೂ ಇದು ಚೆನ್ನಾಗಿ

ಕಾಣುತ್ತದೆ. ಇದರಲ್ಲಿ ಹಯಲ್ಯುರೋನಿಕ್ ಆಮ್ಲದಂತಹ ಲೋಳೆಪಾಲಿಸ್ಯಾಕರೈಡುಗಳಿರುತ್ತವೆ. ಇದನ್ನು ಕರಗಿಸಿ ನೀರಾಗಿಸುವುದು ಹಯಲ್ಯೂರೋನಿಡೇಸ್. ಇದು ಕೆಲವು ಏಕಾಣು ಜೀವಿಗಳು, ವೀರ್ಯಾಣು ಸಾರಕಗಳಲ್ಲಿರುವುದು. ಈ ಸಕ್ಕರೆಯ ದೊಡ್ಡ ಕಣಗಳು, ಪ್ರೋಟೀನು, ಲವಣಗಳಿರುವ ಜಲ್ಲಿಯೇ ಮಾತೃಕೆ.

ಸಂಯೋಜಕ ಅಂಗಾಂಶದ ಬಗೆಗಳು: ಜಾಳಾದ (ಏರಿಯೋಲಾರ್) ಅಂಗಾಂಶ: ವಿರಳವಾಗಿರುವ ಅಲ್ಲಲ್ಲಿರುವ ಕಾಲಿ ಜಾಗಗಳಲ್ಲಿ ಮಾತೃಕೆ ತುಂಬಿದ್ದು, ನಡುವೆ ಜೀವಕೋಶಗಳು, ಕೊಲ್ಲಾಜನ್ ಮತ್ತು ಪ್ರತ್ಯಾಸ್ಥ ತಂತುಗಳು ಇರುವುವು. ಏರಿಯೊಲಾರ್ ಅಂಗಾಂಶ ಬೆಳ್ಳನೆಯ ಅಂಟುವಸ್ತುವಾಗಿ ಅಂಗಗಳ ನಡುವೆ, ರಕ್ತನಾಳಗಳೊಂದಿಗೆ ಅಂಗಗಳ ಒಳಗೂ ಇರುವುದು.



ಕೊಬ್ಬಿನ ಅಂಗಾಂಶ: ವಿರಳವಾಗಿರುವ ಏರಿಯೊಲಾರ್ ಅಂಗಾಂಶದಲ್ಲಿ ಕೊಬ್ಬಿನ ಜೀವಕೋಶಗಳೇ ಹೇರಳವಾಗಿರುವುವು. ಮೈಯಲ್ಲಿ ಕೆಲವೆಡೆಗಳಲ್ಲಿ ಮಾತ್ರ ಹೆಚ್ಚು.

ದಟ್ಟ ತಂತುವಿನ ಅಂಗಾಂಶ: ಕೊಲ್ಲಾಜನ್ ತಂತುಗಳು ಇದರಲ್ಲಿ ದಟ್ಟವಾಗಿ ಅಡಕವಾಗಿದ್ದು, ಕೆಲವು ಪ್ರತ್ಯಾಸ್ಥ ತಂತುಗಳು, ಅವುಗಳೊಂದಿಗಿನ ಫೈಬ್ರೊಬ್ಲಾಸ್ಟ್‌ಗಳು ಇದರಲ್ಲಿ ಇರುತ್ತವೆ. ಸ್ನಾಯುರಜ್ಜೆಯಲ್ಲಿದ್ದ ಹಾಗೆ ಇದರ ತಂತುಗಳು ಉದ್ದುದ್ದವಾಗಿರಬಹುದು. ಕೆಳಚರ್ಮದಲ್ಲೂ, ಕೀಲುಗಳ ಸುತ್ತಲೂ ಇರುವ ಕೀಲುಗವಚಗಳಲ್ಲೂ ಇರುವುದು ಹೀಗೆ. ಮ್ಯಾಕ್ರೋಫೇಜುಗಳು, ಮಿಸೇಂಕೈಮಲ್ ಜೀವಕೋಶಗಳೂ ಇರುತ್ತವೆ.

ಸೈನೋವಿಯಲ್: ಕೀಲುಗಳೊಳಗೆ ಅಂಟುಗಳಿಗೆ ನಿಕಟವಾಗಿ ಅಂಟಿರುವ, ಕೀಲುಗಳ ಸುತ್ತುವರಿದ ಕೊಳವೆಯಂತಿರುವ ಪೊರೆಗಳಿವು. ರಕ್ತನಾಳಗಳಿರುವ ತೆಳುವಾದ ಸಂಯೋಜಕ ಅಂಗಾಂಶ. ಇದರಲ್ಲಿರುವ ಜೀವಕೋಶಗಳು ಹಯಲ್ಯೂರೋನಿಕ್ ಆಮ್ಲ, ಪ್ರೊಟೀನು, ಲವಣಗಳಿರುವ ಮಂದವಾದ ಸೈನೋವಿಯಲ್ ದ್ರವವನ್ನು ಸ್ರವಿಸುತ್ತವೆ. ಕೀಲಿನ ಮೊಗಗಳಿಗೆ ಇವು ಪುಷ್ಟಿ ನೀಡುವುದಲ್ಲದೆ ಮೆತುಚಾಲಕವು (ಲ್ಯೂಬ್ರಿಕೆಂಟ್) ಆಗಿರುವುವು. ಮೂಳೆಗಳ ಮೇಲೆ ಹಾದುಹೋಗುವೆಡೆಗಳಲ್ಲಿ ಸ್ನಾಯುರಜ್ಜೆಗಳ ಸುತ್ತಲೂ ಆವರಿಸಿರುವ ಒರೆಕವಚಗಳು ಕೂಡ ಇಂಥ ಪೊರೆಗಳೆ.

ಮೃದ್ವಸ್ಥಿ (ಮೆಲ್ಲೆಲುಬು) : ಎಷ್ಟು ಒತ್ತಡ ಹೇರಿದರೂ ತಡೆವಷ್ಟು ಬಲವಾಗಿರುವ ರಚನೆ ಇದು. ಇದರಲ್ಲಿ ಮೂರು ಬಗೆ, ಹಯಲೀನ್, ಇಲಾಸ್ಟಿಕ್, ತಂತುಕ(ಫೈಬ್ರಸ್). ಹಯಲೀನ್ ಮೃದ್ವಸ್ಥಿ ಹಾಗೆ ಕಾಣಲು ಜೀವಕೋಶಗಳ ನಡುವೆ ತುಂಬಿರುವ ಭಾಗದ ಗುಣವೇ ಕಾರಣ. ತಂತುವಿನ ಭಾಗವಾದ ಕೊಲ್ಲಾಜನ್ ಬಿಗುವಾಗಿರುವ ಅರೂಪದ ಜೆಲ್‌ನಲ್ಲಿ ಇರುವುದು. ಇದರಲ್ಲಿ ಬಹುಪಾಲು ಕಾಂಡ್ರಾಯ್ಟಿನ್ ಸಲ್ಫೇಟ್. ಈ ರಚನಾಂಶದಲ್ಲಿನ ಬಿಡುತಿಗಳೆಂಬ(ಲ್ಯಾಕ್ಯುನೆ) ತೆರಪುಗಳಲ್ಲಿ ಕಾಂಡ್ರೋಸೈಟ್‌ಗಳು ಇರುವುವು. ಕೀಲುಗಳ ಮೇಲುತಳಗಳ ಹೊರತಾಗಿ ಮೃದ್ವಸ್ಥಿ ಎಲ್ಲಿದ್ದರೂ ಅದನ್ನು ಇಪ್ಪದರಗಳ ಪೆರಿಕಾಂಡ್ರಿಯಮ್ ಆವರಿಸಿರುತ್ತದೆ.

ಬಿಡುತಿಗಳಲ್ಲಿರುವ ಜೀವಕೋಶಗಳ ವಿಭಾಗದಿಂದ ಒಳಗಿಂದಲೂ ಪೆರಿಕಾಂಡ್ರಿಯಮ್‌ನಿಂದ ಹೊಸ ಜೀವಕೋಶಗಳ ಗುಣಿತದಿಂದ ಹೊರಗಿಂದಲೂ ಹೊಸ ಮೃದ್ವಸ್ಥಿ ವಿಕಾಸವಾಗುವುದು. ಬೆನ್ನೆಲುಬಿಗಳ ವಿಕಾಸದಲ್ಲಿ ಎಲುಗಟ್ಟು ಮೊದಲು ಹಯಲೀನ್ ಮೃದ್ವಸ್ಥಿಯಾಗಿ ಕಾಣಿಸುತ್ತದೆ. ಬರುಬರುತ್ತ ಇದು ಮೂಳೆಯಾಗಿದೆ. ಕೀಲುಗಳೊಳಗಿನ ಮೃದ್ವಸ್ಥಿ ಮಾತ್ರ ಮೂಳೆಯಾಗದೆ ಹಯಲೀನ್ ಮೃದ್ವಸ್ಥಿಯಾಗೇ ಇರುವುದು. ಮೃದ್ವಸ್ಥಿಗಳೊಳಗೆ ಎಲ್ಲೂ ರಕ್ತನಾಳಗಳಿರವು. ಆದರೆ ಅವುಗಳ ಜೀವಕೋಶಗಳಿಗೆ ಸಾಗುವ ಪುಷ್ಟಿ ವಸ್ತುಗಳು ಅವುಗಳಿಂದ ಹೊರಬೀಳುವ ತ್ಯಾಜ್ಯ ವಸ್ತುಗಳು ಪೆರಿಕಾಂಡ್ರಿಯಮ್‌ನ ರಕ್ತನಾಳಗಳು ಇಲ್ಲವೆ, ಕೀಲಲ್ಲಿರುವ ದ್ರವದಿಂದ ಪಸರಿಸುವುವು. ಇದರಿಂದಲೇ ಮೃದ್ವಸ್ಥಿಯ ಗಾತ್ರ ಬೆಳವಣಿಗೆಗಳಿಗೆ ಮಿತಿಯಿರುತ್ತದೆ. ವಯಸ್ಸಾದಂತೆಲ್ಲ ಮೃದ್ವಸ್ಥಿಯಲ್ಲಿ ಸುಣ್ಣಗೂಡಿ ಗಡುಸಾಗಬಹುದು. ಕೆಲವು ಬಗೆಯ ಮೀನುಗಳಲ್ಲಿ ಇದು ಸಾಮಾನ್ಯ. ಹೊರಗಿವಿ, ಕಿರುನಾಲಗೆಗಳಲ್ಲಿ ಇರುವಂಥ ಇಲಾಸ್ಟಿಕ್ ಮೃದ್ವಸ್ಥಿಯಲ್ಲಿ ಕೊಲ್ಲಾಜನ್ ತಂತುವಿನೊಂದಿಗೆ ಪ್ರತ್ಯಾಸ್ಥ ತಂತುಗಳೂ ಇರುವುವು.

ತಂತುಕ ಮೃದ್ವಸ್ಥಿಯಲ್ಲಿ ಹಯಲೀನ್ ಮೃದ್ವಸ್ಥಿಗಿಂತಲೂ ಹೆಚ್ಚಾಗಿ ಕೊಲ್ಲಾಜನ್ ತಂತುಗಳಿರುತ್ತವೆ. ಸಾಮಾನ್ಯವಾಗಿ ಒತ್ತಡ, ಎಳೆತಗಳ ನೇರಕ್ಕೆ ಈ ತಂತುಗಳಿರುವುವು. ಇವುಗಳ ನಡುವೆ ಕಾಂಡ್ರೊಸೈಟ್‌ಗಳಿರುತ್ತವೆ. ಮೃದ್ವಸ್ಥಿಗಳಲ್ಲೆಲ್ಲಾ ತೀರಾ ಗಟ್ಟಿಗಿರುವ ಬಗೆ ಇದು. ಬೆನ್ನೆಲುಬುಗಳ ನಡುವಣ ಬಟ್ಟುಗಳು(ಇಂಟರ್‌ವರ್ಟಿಬ್ರಲ್ ಡಿಸ್ಕ್), ಕೀಲು ಮೇಲು ತಳಗಳ ಅಂಚುಗಳು, ಮೂಳೆಗೆ ಸ್ನಾಯುರಜ್ಜೆ ಒಳಸೇರುವೆಡೆಗಳಲ್ಲೂ ಈ ಮೃದ್ವಸ್ಥಿಯಿರುವುದು. (ನೋಡಿ–ಮೃದ್ವಸ್ಥಿ)

ಮೂಳೆ : ತುಂಬಾ ಗಡುಸಾದ ಮಾತೃಕೆಯನ್ನು ಹೊಂದಿದ ಅಂಗಾಂಶ. ಕಶೇರುಕಗಳಲ್ಲಿ ಆಧಾರ ರಚನೆ. ಒಂದು ಆನೆಯ ಭಾರವನ್ನು ಹೊತ್ತು ಮುರಿಯದಿರುವ ಮೂಳೆಗಳಿವೆ. ಬೇರೆ ಮೂಳೆಗಳು ಹಗುರವಾಗಿದ್ದರೂ ಗಡುಸಾಗಿದ್ದು ದೊಡ್ಡ ಹಕ್ಕಿಗಳ ರೆಕ್ಕೆಗಳಿಗೆ ಸಾಕಾದಷ್ಟು ಸನ್ನೆ ಬಲವನ್ನು ನೀಡುವುವು.

ಮೂಳೆಗಳ ಹೊರಭಾಗವಾದ ರಗಟೆ (ಕಾರ್ಟೆಕ್ಸ್) ಸಾಮಾನ್ಯವಾಗಿ ಒತ್ತಾಗಿದ್ದು ಗಡುಸಾಗಿರುತ್ತದೆ. ಒಳಭಾಗವಾದ ಕುಸೂರಿಯಲ್ಲಿ (ಮೆಡುಲ) ಸ್ಪಂಜಿನಂತೆ ಮೆತ್ತಗಿರುವುದೇ ಮಜ್ಜೆ. ಮಜ್ಜೆಯ ತುಂಬುಕೊಳವೆಗಳು, ಫಲಕಗಳು, ಸರಳುಗಳು ಬಲೆಯಂತೆ ಹೆಣೆದಿರುವುವು. ಇವಕ್ಕೆ ಟ್ರಾಬಾಕ್ಯುಲೆ ಎಂದು ಹೆಸರು. ಈ ಬಲೆ ಹೆಣಿಗೆ ಹೆಚ್ಚು ಒತ್ತಡ ಬೀಳುವ ದಿಕ್ಕಿನಲ್ಲಿ ಬಲವಾಗಿರುತ್ತದೆ. ಅಂಗಾಂಶಾಂತರ ವಸ್ತುವಿನಲ್ಲಿರುವ ಸಣ್ಣ ಬಿಡತಿಗಳಲ್ಲಿ ಬಲಿತ ಆಸ್ಟಿಯೋಸೈಟ್‌ಗಳು ಇರುವುವು. ಈ ಬಿಡುತಿಗಳೆಲ್ಲ ಬಲೆ ಹೆಣಿಗೆಯ ಹಾಗೆ ಕೆನಾಲಿಕ್ಯುಲೈಗಳ ಮೂಲಕ ಒಂದಕ್ಕೊಂದು ಸಂಬಂಧಿಸಿರುತ್ತವೆ. ಅಂಚಿನಲ್ಲಿರುವ ಬಿಡತಿಗಳಲ್ಲಿ ಕೆನಾಲಿಕ್ಯುಲೈಗಳು ಟ್ರಾಬಾಕ್ಯುಲೆಗಳ ಮೇಲುತಳದ ತನಕ ಇರುವುವು. ಸಣ್ಣ ಟ್ರಾಬೆಕ್ಯುಲೆಗಳಲ್ಲಿ ರಕ್ತನಾಳಗಳಿಲ್ಲ. ಆವರಿಸಿರುವ ಮಜ್ಜೆಯಲ್ಲಿನ ಅಂಗಾಂಶ ದ್ರವದಲ್ಲಿ ಮುಳುಗಿ ಬಿಡುತಿಗಳಲ್ಲಿರುವ ಆಸ್ಟಿಯೊಸೈಟ್‌ಗಳಿಗೆ ಕೆನಾಲಿಕ್ಯುಲೈ ನಾಳಗಳ ಮೂಲಕ ಪುಷ್ಟಿ ದೊರೆಯುತ್ತದೆ. ಈ ಕೆನಾಲಿಕ್ಯುಲೈಗಳು ಪುಷ್ಟಿವಸ್ತುವನ್ನು ಕೊಂಚ ದೂರ ಮಾತ್ರ ಸಾಗಿಸಬಲ್ಲವಾದ್ದರಿಂದ ರಕ್ತನಾಳಗಳಿಲ್ಲದ ಟ್ರಾಬೆಕ್ಯುಲೆ ಬಹಳ ದಪ್ಪವಾಗಿ ಬೆಳೆಯಲಾರದು. ಇನ್ನೂ ದಪ್ಪವಾಗಿ ಬೆಳೆವವಲ್ಲಿ ರಕ್ತನಾಳಗಳಿರುತ್ತವೆ. ದಟ್ಟನೆಯ ಮೂಳೆಯ ತುಂಬ ಇರುವ ರಕ್ತನಾಳಗಳ ಜೋಡಣೆಗೆ ಹ್ಯಾವರ್ಸಿಯನ್ ಮಂಡಲ ಎಂದು ಹೆಸರು. ಇದು ತೆಳು ಪೊರೆಗಳ ಅಂತರ್‌ವೃತ್ತಗಳಿಂದಾಗಿದೆ. ಇದರ ಸಾಗುನಾಳಗಳ ಗೋಡೆಗಳ ರಚನೆ ಟ್ರಾಬೆಕ್ಯುಲೆಗಳಂತೆಯೇ ಇದೆ.




ಮೂಳೆಯ ಜೀವಕೋಶಗಳ ನಡುವಣ ವಸ್ತುವಿನಲ್ಲಿ ಸುಣ್ಣ ಲವಣಗಳಿರುವ ಅಂಟು ವಸ್ತುವಿನಲ್ಲಿ ಬೆರೆತಿರುವ ಕೊಲ್ಲಾಜನ್ ತಂತುವಿದೆ. ಸುಣ್ಣದ ಲವಣಗಳಲ್ಲಿ ಕ್ಯಾಲ್ಸಿಯಂ ಫಾಸ್ಫೇಟ್ ಮುಖ್ಯ. ಈ ಹರಳುಗಳೊಂದಿಗೆ ಕಾರ್ಬೊನೇಟುಗಳು, ಮೆಗ್ನೀಷಿಯಂ ಲವಣಗಳು ಅಂಟು ವಸ್ತುವಿನಲ್ಲಿವೆ. ಆಸ್ಟಿಯೊಸೈಟ್‌ಗಳು, ತಂತುಗಳು, ಅಂಟುವಸ್ತು, ಫಾಸ್ಫಟೇಸುಗಳನ್ನು ತಯಾರಿಸುತ್ತವೆ. ಅಂಗಾಂಶ ದ್ರವದಲ್ಲಿನ ಸುಣ್ಣ ಧಾತು ಬಿಡಿಯಾದ ಫಾಸ್ಫೇಟಿನೊಂದಿಗೆ ಕೂಡಿ ಕರಗದ ಸುಣ್ಣದ ಫಾಸ್ಫೇಟು ಹರಳುಗಳಾಗುತ್ತವೆ. ಹೀಗೆ

ಸುತ್ತಲೂ ಎಲುಬನ್ನು ಕಟ್ಟಿಕೊಂಡು ಕೆನಾಲಿಕ್ಯುಲೈಗಳಲ್ಲಿ ಆಸ್ಟಿಯೊಸೈಟ್‌ಗಳು ಚಾಚುಗಳನ್ನು ತೂರಿಸಿರುವುವಲ್ಲದೆ ಬಲಿತ ಆಸ್ಟಿಯೊಸೈಟ್‌ಗಳಾಗಿ ಮೂಳೆಯ ರಚನೆಗೆ ಕಾರಣವಾಗಿರುವುವು.

ಮೂಳೆಯ ವಿಕಾಸ ಪೊರೆಯೊಳಗೊ ಮೃದ್ವಸ್ಥಿಯೊಳಗೊ ಮೊಳೆತರೂ ಮೂಲದ ಕ್ರಮ ಮಾತ್ರ ಒಂದೇ ಬಗೆ. ತಲೆಯೋಡಿನಲ್ಲಿ ಪೊರೆಯೊಳಗೆ ಎಲುಬು ಮೊಳೆಯುತ್ತದೆ. ಸಂಯೋಜಕ ಅಂಗಾಂಶದ ಪೊರೆಯೊಳಗಿಂದ ಆಸ್ಟಿಯೊಸೈಟ್‌ಗಳಿದ್ದು ಎಲುಬು ತಯಾರಿಸುವುವು. ಕಂಕಾಲದ ಬಹುಪಾಲು ಮೊದಲಾಗಿ ಮೃದ್ವಸ್ಥಿಯ ಅಡಿಪಾಯದ ಮೇಲೆ ವಿಕಾಸವಾಗುವ ಮೂಳೆಗಳೇ. ಪೆರಿಕಾಂಡ್ರಿಯಮ್‌ನಿಂದ ರಕ್ತನಾಳ ಮೃದ್ವಸ್ಥಿಯೊಳಕ್ಕೆ ನುಗ್ಗಿ ಎಷ್ಟೋ ಬದಲಾವಣೆಗಳಾಗಿ ಮೂಳೆ ವಿಕಾಸವಾಗುವುದು. ಸುಣ್ಣಗೂಡದ ಮೆಲ್ಲೆಲುಬಿನ ಮೇಲೆ ಹೊಸ ಮೂಳೆ ಮೂಡುವುದು. ಗಂಡಸರಲ್ಲಿ ೨೮ನೆಯ ವಯಸ್ಸಿನತನಕ ಮೂಳೆ ತುದಿಗಳು ಬೆಳೆಯುತ್ತಲೇ ಇರುವುವು. ಮೂಳೆ ಕೊನೆಗಳಲ್ಲಿ ಮೊದಲು ಆಚೆ ತುದಿಯಲ್ಲಿ ಹೊಸ ಮೃದ್ವಸ್ಥಿಯಾಗಿ, ಆಮೇಲೆ ಒಳಗಿಂದ ಮೂಳೆಯಾಗುತ್ತಾ ಹೋಗುತ್ತದೆ. ಮೂಳೆಯ ದಪ್ಪನೆಯ ಸುತ್ತಳತೆಯ ಬೆಳೆ ಪೆರಿಕಾಂಡ್ರಿಯಮ್‌ನೊಳಗಿಂದ ಆಗುವುದು. ಮೂಳೆಗಳಲ್ಲಿ ಯಾವಾಗಲೂ ಜೀವವಿರುತ್ತದೆ. ಹೆಚ್ಚಿನ ಚಟುವಟಿಕೆ ಒಳಗೆ ನಡೆಯುತ್ತಿರುವುದು. ಅವು ಸತ್ತ ಕಡ್ಡಿ ತುಂಡುಗಳಲ್ಲ. ಅವುಗಳ ಮೇಲೆ ಬೀಳುವ ಒತ್ತಡಗಳಿಗೆ ತಕ್ಕ ಹಾಗೆ ಮೂಳೆಗಳು ಬೆಳೆಯುತ್ತಲೇ ಇರುವುವು.

ಎಲ್ಲಾ ಮೂಳೆಗಳೂ ಟೊಳ್ಳು. ಅವುಗಳ ಒಳಗಡೆ ಮಜ್ಜೆ ಇರುವುದು. ನೀಳ ಮೂಳೆಗಳಲ್ಲಿ ಕೊಬ್ಬುಗೂಡಿದ ಹಳದಿ ಮಜ್ಜೆ ವಿಕಾಸವಾಗುತ್ತದೆ. ರಕ್ತದ ಕೆಂಪು ಮತ್ತು ಬಿಳಿಯ ಕಣಗಳು ವಿಕಾಸವಾಗುವುದು ಕೆಂಪು ಮಜ್ಜೆಯಲ್ಲಿ. ಇದರೊಂದಿಗೆ ಕೊಂಚ ಕೊಬ್ಬು ಇರುತ್ತದೆ. ನೀಳ ಮೂಳೆಗಳ ತುದಿಗಳು, ಬೆನ್ನೆಲುಬುಗಳು, ಪಕ್ಕೆಲುಬುಗಳು, ಎದೆ ಚಕ್ಕೆಗಳಲ್ಲಿ ಕೆಂಪು ಮಜ್ಜೆ ಇರುತ್ತದೆ. ***

**ಸಂವೇದನಾಂಗ:** ವಾತಾವರಣದಲ್ಲಾಗುವ ಬದಲಾವಣೆಗಳು, ಆಹಾರ ಅಥವಾ ಸಂಗಾತಿ ಸಿಗುವ ಸ್ಥಳ, ವೈರಿಗಳ ಆಕ್ರಮಣ ಮುಂತಾದುವುಗಳನ್ನು ದೇಹಕ್ಕೆ ಅರಿವು ಮಾಡಿಕೊಡುವ ಸಲುವಾಗಿ ಬೆಳೆದ ಕೋಶಾಂಗ, ಕೋಶ ಅಥವಾ ಅಂಗ (ಸೆನ್ಸ್ ಆರ್ಗನ್ಸ್). ವೇದನೆಯನ್ನು ಗುರುತಿಸುವ ಅಂಗಗಳೇ ಸಂವೇದನಾಂಗಗಳು. ವಿವಿಧ ಗುಂಪುಗಳಲ್ಲಿ ಸಂವೇದನಾಂಗಗಳ ರಚನೆ ಮತ್ತು ಆಕಾರಗಳು ವೈವಿಧ್ಯಮಯವಾಗಿವೆ. ಕೋಶದ ವಿವಿಧ ಕೋಶಾಂಗಗಳಷ್ಟು ಸರಳವಾದ ಅಂಗಗಳಿಂದ ಅತ್ಯಂತ ಜಟಿಲವಾದ ರಚನೆಯುಳ್ಳ ವಿಶೇಷ ಸಂವೇದನಾಂಗಗಳೂ ಇವೆ. ಏಕಕೋಶ ಜೀವಿಗಳಾದ ಪ್ರೊಟೋಜೋವದ ಸದಸ್ಯರಲ್ಲಿ ಕೋಶಾಂಗಗಳೇ ಸಂವೇದನಾಂಗಗಳು. ಸ್ಪಂಜುಪ್ರಾಣಿಗಳಲ್ಲಿಯೂ ವಿಶೇಷವಾದ ಸಂವೇದನಾಂಗಗಳ ಬೆಳವಣಿಗೆಯಾಗಿಲ್ಲ.

ಪೂರ್ಣ ಪ್ರಮಾಣದ ಸಂವೇದನಾಂಗಗಳು ಮೊದಲಬಾರಿಗೆ ಸೀಲಂಟರೇಟಾ ವಂಶದಲ್ಲಿ ಕಾಣಿಸಿಕೊಂಡಿವೆ. ಹೊರಚರ್ಮ (ಎಕ್ಟೊಡರ್ಮ್) ಹಾಗೂ ಒಳಚರ್ಮ (ಎಂಡೊಡರ್ಮ್)ಗಳಲ್ಲಿರುವ ಸಂವೇದನಾ ಕೋಶಗಳ ಸಲಾಕೆಯಂಥ ಹೊರಮೈ ಹೊರಗೆ ಚಾಚಿದ್ದು, ಒಳಮೈ ನರಕೋಶಗಳೊಂದಿಗೆ ಬೆಸೆದಿವೆ. ಯಾವುದಾದರೂ ವಸ್ತು ತಾಕಿದರೆ ಇವು ಸ್ಪಂದಿಸುತ್ತವೆ. ಮಸ್ಕಲೊಎಪಿತೀಲಿಯ ಕೋಶಗಳ ಸಹಾಯದಿಂದ ದೇಹವನ್ನು ಸಂಕುಚಿತಗೊಳಿಸುತ್ತವೆ. ಸ್ಪರ್ಶದ ಆವೇಗ ಇತರೆಡೆಗಳಿಗೆ ಹರಿಯುವುದರಿಂದ ಇಡೀ ದೇಹ ಸ್ಪಂದಿಸುತ್ತದೆ. ಉದಾ: ಹೈಡ್ರಾ

ಅಬೊರಲ್ ಸಂವೇದನಾಂಗ: ಟೀನೊಫೋರ ಉಪವಂಶದ ಜೀವಿಗಳ ಸಂವೇದನಾಂಗ. ಬಾಯಿಯ ವಿರುದ್ಧ ತುದಿಯಲ್ಲಿದೆ. ಪಾರದರ್ಶಕ ಬಟ್ಟಲು ಅಥವಾ ಗಂಟೆಯಂತಹ ಸಂಚಿಯಲ್ಲಿ ಸ್ಟ್ಯಾಟೊಲಿತ್ ಅಥವಾ ಲಿತೊಸಿಸ್ಟ್ ಕೋಶಗಳು ತುಂಬಿರುತ್ತವೆ. ಹಲವು ಶಿಲಿಕಾಂಗಗಳ ಬೆಸುಗೆಯಿಂದ ಬಟ್ಟಲು ಅಥವಾ ಗಂಟೆಗಳು ರೂಪುಗೊಂಡಿವೆ. ಸುಣ್ಣಕಲ್ಲಿನಿಂದಾದ ಸ್ಟ್ಯಾಟೊಲಿತ್ ಅಥವಾ ಲಿತೊಸಿಸ್ಟ್‌ಗಳು S ಆಕಾರದ ಶಿಲಿಕಾಂಗಗಳ ಗೊಂಚಲಿನಿಂದಾದ ನಾಲ್ಕು ತೋಲನಕಾರಿ (ಬ್ಯಾಲೆನ್ಸರ್)ಗಳ ಮೂಲಕ ಅಂಟಿಕೊಂಡಿರುತ್ತವೆ. ಪ್ರತಿಯೊಂದು ತೋಲನಕಾರಿಯಿಂದ ಶಿಲಿಕಾಂಗಗಳ ಎರಡು ತೋಡುಗಳು ಹಣಿಗೆತಟ್ಟೆ (ಕೊಂಬ್ ಪ್ಲೇಟ್)ಗಳೆಡೆಗೆ ಸಾಗುತ್ತವೆ. ಅಬೊರಲ್ ಸಂವೇದನಾಂಗಗಳು ನೀರಿನಲ್ಲಿ ಸಮತೋಲನವನ್ನು ಕಾಪಾಡುತ್ತವೆ. ಜೀವಿಯ ಸ್ಥಾನಪಲ್ಲಟದಿಂದಾದ ಗುರುತ್ವಾಕರ್ಷಣ ಸಂಬಂಧಿತ ಒತ್ತಡಗಳನ್ನು ತೋಲನಕಾರಿಗಳ ಮೂಲಕ ಸ್ಟ್ಯಾಟೊಲಿತ್ ಅಥವಾ ಲಿತೊಸಿಸ್ಟ್‌ಗಳು ಅರಿತು ಶಿಲಿಕಾಂಗಗಳ ತೋಡಿನ ಮೂಲಕ ಸಂಬಂಧಿತ ಹಣಿಗೆ ತಟ್ಟೆಗಳಿಗೆ ಚಾಲನೆ ನೀಡುತ್ತವೆ. ತಟ್ಟೆಗಳು ಜೀವಿಯನ್ನು ಸಮಸ್ಥಿತಿಗೆ ತರುತ್ತವೆ. ಉದಾ: ಪ್ಲೂರೊಬ್ರಾಖಿಯ.

ಪ್ರಮಸ್ತಿಷ್ಕ ಕಣ್ಣು (ಸೆರೆಬ್ರಲ್ ಐ): ಅಸ್ಕಾಲ್ಮಿಂತಿಸ್ ವಂಶದ ಬ್ರಾಖಿಯೋನಸ್‌ನಲ್ಲಿರುವ ಸಂವೇದನಾಂಗ. ಕೆಂಪು ವರ್ಣಕದಿಂದಾದ ಮೂರು ಕಣ್ಣುಗಳಿದ್ದು ಮೆದುಳಿನ ಮೇಲ್ಭಾಗದಲ್ಲಿವೆ. ಜೊತೆಗೆ ಸ್ಪರ್ಶ ಸಂವೇದಕಗಂತಿಗಳೂ(ಪ್ಯಾಪಿಲ್ಲೆ) ಇವೆ. ಸಂವೇದನಾ ರೋಮಗಳಿಂದಾದ ಈ ಗಂತಿಗಳಿಗೆ ಪಾಲಿಪ್ ಎಂದೂ ಕರೆಯುವುದುಂಟು. ಒಂದು ಕಣ್ಣು ಮುಂಭಾಗದ ಮೇಲೆ ನಡುವಿನ ಮಧ್ಯೆ ಇದೆ. ಮತ್ತೆರಡು ಅದಕ್ಕಿಂತ ಸ್ವಲ್ಪ ಹಿಂದೆ ಎರಡು ಪಕ್ಕಗಳಲ್ಲಿರುವುವು.

ವಲಯವಂತಗಳ ಪೈಕಿ ಎರೆಹುಳುಗಳಲ್ಲಿ ವಿಶೇಷ ಸಂವೇದನಾಂಗಗಳಿಲ್ಲ. ಚರ್ಮದ ಕೆಲವು ಕೋಶಗಳಿಗೆ ನರ ಸಂಪರ್ಕವಿದ್ದು ಸ್ಪರ್ಶ ಮತ್ತು ಮಣ್ಣಿನ ಮೂಲಕ ಪ್ರವಹಿಸುವ ಕಂಪನಗಳನ್ನು ಗ್ರಹಿಸುತ್ತವೆ. ಪಾಲಿಖೀಟ ವರ್ಗದ ಸದಸ್ಯರಲ್ಲಿ ಬೆರಳಿನಾಕಾರದ ಗ್ರಹಣಾಂಗಗಳು ಅಥವಾ ಸ್ಪರ್ಶಾಂಗಗಳಿವೆ. ಮೂತಿಯ ಮೇಲೆ ಶಿಲಿಕಾಂಗ ಸಹಿತ ಕೋಶಗಳಿರುವ ನೂಕಲ್ ಅಂಗಗಳಿದ್ದು ಅವು ವಾಸನೆಯನ್ನು ಗ್ರಹಿಸುತ್ತವೆ. ಮೂತಿಯ ಮೇಲ್ಭಾಗದಲ್ಲಿ ಹಲವು ಸರಳ ಕಣ್ಣುಗಳಿವೆ. ಕಣ್ಣಿನ ಒಳಭಾಗದಲ್ಲಿ ಜಿಲಾಟಿನ್‌ನಂಥ ಜಿಗಟು ಪದಾರ್ಥದಿಂದಾದ ಮಸೂರವಿದ್ದು ಮೇಲ್ಭಾಗದಲ್ಲಿ ಕನಿನಿಕೆ (ಪ್ಯೂಪಿಲ)ಇದೆ. ಕಣ್ಣು ಬಟ್ಟಲಿನಾಕಾರವಿದ್ದು, ಅದರ ಒಳಪದರದಲ್ಲಿ ವರ್ಣಕಗಳಿಂದ ತುಂಬಿದ ಅಕ್ಷಿಪಟಲದ ಕೋಶಗಳಿವೆ. ಒಳಭಾಗದಲ್ಲಿ ಸರಳುಗಳಂತಿದ್ದು ಹಿಂಭಾಗದಲ್ಲಿ ನರಕ್ಕೆ ಕೂಡಿದೆ. ಮಸೂರದ ಮುಂಭಾಗದಲ್ಲಿ ಪಾರದರ್ಶಕ ಪದರವಿದ್ದು ಅದಕ್ಕೆ ಕಾರ್ನಿಯ ಎಂದು ಹೆಸರಿದೆ.

ಸಂದಿಪದಿಗಳ ಕಠಿಣಚರ್ಮಿಗಳ ವರ್ಗದಲ್ಲಿ ಒಂದು ಜೊತೆ ಕಣ್ಣು ಹಾಗೂ ಸ್ಟ್ಯಾಟೊಸಿಸ್ಟ್‌ಗಳಿವೆ. ಶಿರೋವಕ್ಷದ ಮುಂಭಾಗದಲ್ಲಿ ಆಚೀಚೆ ಚಲಿಸಬಲ್ಲ ಉದ್ದ ಕಾಂಡದ ತುದಿಯಲ್ಲಿ ಹಲವು ಸರಳ ಕಣ್ಣುಳ್ಳ ಸಂಯುಕ್ತಾಕ್ಷಿಗಳಿವೆ. ಸ್ಟಾಟೊಸಿಸ್ಟ್‌ಗಳು ಅಂಟೆನ ಅಥವಾ ಸ್ಪರ್ಶಾಂಗದ ತಳದಲ್ಲಿವೆ. ಸಂವೇದನಾರೋಮಗಳಿಂದ ಕೂಡಿದ ಚೀಲದಲ್ಲಿ ಮಣ್ಣಿನ ಕಣಗಳಿದ್ದು ಸಮತೋಲನವನ್ನು ಕಾಯ್ದುಕೊಳ್ಳುತ್ತವೆ. ಆಂಟೆನ ಹಾಗೂ ಪ್ಲೀಯೊಪಾಡ್‌ಗಳ ಮೇಲಿರುವ ಕೆಲವು ರೋಮಗಳು ಸ್ಪರ್ಶಾಂಗಗಳು. ಓನಿಕೋಫೋರ ವರ್ಗದ ಪೆರಿಪೆಟಸ್‌ನಲ್ಲಿ ಒಂದು ಜೊತೆ ಸರಳ ಕಣ್ಣುಗಳಿರುವುವು. ಚೀಲದಂತಿರುವ ಕಣ್ಣಿನ ನಡುವೆ ಮಸೂರವಿದೆ. ಮಸೂರದ ಮುಂಭಾಗ ಪಾರದರ್ಶಕವಾಗಿದೆ. ಇದೇ ಕಾರ್ನಿಯ. ಹಿಂಭಾಗದ ಕೋಶಗಳಲ್ಲಿ ವರ್ಣಕಗಳಿವೆ. ಒಳಭಾಗದಲ್ಲಿ ಈ ಕೋಶಗಳಿಗೆ ನರ ಸರಬರಾಜು ಇದೆ. ಜಿರಳೆ ಹಾಗೂ ಅನೇಕ ಕೀಟಗಳಲ್ಲಿ ಒಂದು ಜೊತೆ ಸ್ಪರ್ಶಾಂಗ (ಆಂಟೆನ)ಗಳಿವೆ. ಅವು ಸ್ಪರ್ಶ ಹಾಗೂ ವಾಸನೆಗಳನ್ನು ಗುರುತಿಸುತ್ತವೆ. ಮೇಲ್ದುಟಿಯ ಹಾಗೂ ಮಾಕ್ಸಿಲದ ಪಾಲ್ಪಗಳು ಸ್ಪರ್ಶ ಸಂವೇದಕಗಳು.



ಸಂಯುಕ್ತಾಕ್ಷಿ (ಕಂಪೌಂಡ್ ಐ)

ಸಂಯುಕ್ತಾಕ್ಷಿ (ಕಂಪೌಂಡ್ ಐ): ಕೀಟ ಹಾಗೂ ಅನೇಕ ಸಂದಿಪದಿಗಳಲ್ಲಿ ದೃಷ್ಟಿ ಸಂವೇದನಾಂಗ. ಒಮ್ಮಟೀಡಿಯ ಎಂಬ ಹಲವು ಸರಳಕಣ್ಣುಗಳನ್ನೊಳಗೊಂಡಿದೆ. ಸರಳ ಕಣ್ಣಿನ ಹೊರಭಾಗದಿಂದ ಒಳಭಾಗದೆಡೆಗೆ ಕ್ರಮವಾಗಿ, ಕ್ಯುಟಿಕಲ್‌ನಿಂದಾದ ಮಸೂರ, ಮಸೂರವನ್ನು ಸ್ರವಿಸುವ ಹೊರಚರ್ಮದ ಕಾರ್ನಿಯೊಜೆನ್ ಪದರ, ಬೆಳಕನ್ನು ಪ್ರತಿಫಲನಗೊಳಿಸಲು ನಾಲ್ಕು ಹರಳು ಕೋಶಗಳ ಗುಂಪಿನಿಂದಾದ ವಿಟ್ರೆಲ್ಲೆ ಅಥವಾ ಈ ಕೋಶಗಳು ಸ್ರವಿಸಿದ ಶಂಕುವಿನಾಕಾರದ ಹರಳುಗಳು ಹಾಗೂ ಬೆಳಕನ್ನು ಹೀರಿಕೊಂಡು ಪ್ರತಿಫಲನಗೊಳಿಸಬಲ್ಲ ನಾಲ್ಕರಿಂದ ಎಂಟು ಕೋಶಗಳಿರುವ ರೆಟಿನುಲ ಎಂಬ ನಾಲ್ಕು ಭಾಗಗಳಿವೆ ಪ್ರತಿಯೊಂದು ಸರಳಕಣ್ಣಿನ ಸುತ್ತ ಕಪ್ಪು ವರ್ಣಕಗಳಿರುವ ಕೋಶಪದರವು ಸುತ್ತುವರಿದಿರುವುದರಿಂದ ಅದರ ಅಕ್ಷದ ಮೇಲೆ ಬೀಳುವ ಮಂದ ಬೆಳಕಿನ ಕಿರಣಗಳನ್ನೂ ಕೂಡ ರೆಟಿನುಲದ ಮೇಲೆ ಬೀಳುವಂತೆ ಕೇಂದ್ರೀಕರಿಸಿ ಚಿತ್ರವನ್ನು ಮೂಡಿಸುತ್ತದೆ. ಪ್ರತಿಯೊಂದು ಸರಳ ಕಣ್ಣಿನಲ್ಲಿಯೂ ಚಿತ್ರ ಮೂಡುವುದರಿಂದ ಸಂಯುಕ್ತಾಕ್ಷಿಯಲ್ಲಿ ಶಬಲ ಚಿತ್ರವೊಂದು ಮೂಡುತ್ತದೆ. ಮೆದುಳು ಅದನ್ನು ಕ್ರೋಢೀಕರಿಸಿ ವಸ್ತುವನ್ನು ಗುರುತಿಸುತ್ತದೆ. ಸಂಯುಕ್ತಾಕ್ಷಿ ವಸ್ತುಗಳ ಚಲನೆಯನ್ನು ಸುಲಭವಾಗಿ ಗುರುತಿಸುತ್ತದೆ.

ಕೀಟಗಳಲ್ಲಿ ಸಂಯುಕ್ತಾಕ್ಷಿಯೊಂದಿಗೆ ಎರಡು ಅಥವಾ ಹಲವು ಸರಳ ಕಣ್ಣುಗಳೂ ಇರುವುವು. ಇವುಗಳಿಗೆ ಒಸೆಲ್ಲಸ್ (ಬಹುವಚನ=ಒಸೆಲ್ಲೈ) ಎಂದು ಹೆಸರು. ಲಾರ್ವಗಳಲ್ಲಿ ಸರಳ ಕಣ್ಣುಗಳು ಶಿರೋಭಾಗದ ಎಡಬಲಗಳಲ್ಲಿರುವುವು. ಪ್ರೌಢಾವಸ್ಥೆಯಲ್ಲಿ ಮೇಲ್ಭಾಗದಲ್ಲಿರುತ್ತವೆ. ಪ್ರತಿಯೊಂದು ಕಣ್ಣಿನಲ್ಲಿ ಗಾಜಿನಂಥ ಪಾರದರ್ಶಕ ಕ್ಯುಟಿಕಲ್‌ನಿಂದಾದ ಮಸೂರವಿದ್ದು ಅದರ ಹಿಂದೆ ಬಟ್ಟಲಿನಾಕಾರದ ಒಳಚರ್ಮದ ಕೋಶಪದರವಿದೆ. ಮಸೂರದ ಸುತ್ತ ವರ್ಣಕಗಳು ತುಂಬಿದ ಕೋಶಗಳ ಪದರವಿದೆ. ಬಟ್ಟಲಿನ ಸುತ್ತ ಕೋಶಗಳು ವಿಟ್ರೆಯಸ್ ಕಾಯದ ಹಾಗೂ ಕೆಳಭಾಗದ ಕೋಶಗಳು ರೆಟಿನುಲದ ಸ್ವರೂಪವಿದ್ದು, ಎರಡನೆಯವು ಸಂವೇದನ ಸಲಾಕೆಯನ್ನು (ರ್‍ಯಾಬ್ಡೊಮ್) ಸ್ರವಿಸುತ್ತವೆ. ಸರಳ ಕಣ್ಣುಗಳು ಬೆಳಕಿನ ಕಿರಣಗಳನ್ನು ಕೆಲವು ಪ್ರಭೇದಗಳಲ್ಲಿ ಬಣ್ಣಗಳನ್ನೂ ಗುರುತಿಸುತ್ತವೆ.

ಟಿಂಪಾನಲ್ ಅಂಗ: ಕೀಟಗಳಲ್ಲಿ ಧ್ವನಿ ಗ್ರಹಣಕ್ಕೆಂದು ಬೆಳೆವಣಿಗೆಯಾದ ಸಂವೇದನಾಂಗ. ಚಿಮ್ಮಂಡೆ (ಕ್ರಿಕೆಟ್) ಹಾಗೂ ಮಿಡತೆಗಳಲ್ಲಿ ಉತ್ತಮವಾಗಿ ಬೆಳೆದಿದೆ. ಹೊರಭಾಗದಿಂದ ತೆಳುವಾದ ಕ್ಯುಟಿಕಲ್‌ನ ಬಿಗಿ ಪದರವಿದ್ದು ಒಳಭಾಗದಲ್ಲಿ ಗಾಳಿಯ ಚೀಲ ಅಥವಾ ಶ್ವಾಸನಾಳದ ಹಿಗ್ಗಿದ ತುದಿಯಿರುತ್ತದೆ. ಒಳಗೆ ಸಂವೇದಕ ಕೋಶಗಳಿದ್ದು ಅವುಗಳಿಗೆ ನರಗಳ ಸರಬರಾಜು ಇರುತ್ತವೆ. ಮಿಡತೆಗಳಲ್ಲಿ ಈ ಅಂಗ ಉದರದ ಮೊದಲ ಖಂಡದಲ್ಲಿಯೂ ಚಿಮ್ಮಂಡೆಯಲ್ಲಿ ಮೊದಲಕಾಲಿನ ಮೂರನೆಯ ಖಂಡದಲ್ಲೂ ಇರುವುವು.

ಕಾರ್ಡಟೊನಲ್ ಅಂಗ ಅಥವಾ ಸ್ಕೊಲೊಪೆರಿಯ: ಇದೂ ಕೀಟಗಳ ಧ್ವನಿ ಗ್ರಾಹಕ ಅಂಗ. ಸಾಮಾನ್ಯವಾಗಿ ಪ್ರೌಢಕೀಟದ ಉದರಾವಕಾಶದಲ್ಲಿ ಹಾಗೂ ಲಾರ್ವಗಳಲ್ಲಿವೆ. ಅನೇಕ ಕೋಶಗಳು ಸಂವೇದಕ ಕೋಶಗಳಾಗಿ ಮಾರ್ಪಟ್ಟು ಕಂತೆಯಂತೆ ಒಂದುಗೂಡಿರುವುವು. ಇದಕ್ಕೆ ಸ್ಕೊಲೊಫೊರ್ ಎಂದು ಹೆಸರು. ಅದು ಉದರಾವಕಾಶದ ಉದ್ದಗಲಕ್ಕೂ ಚಾಚಿಕೊಂಡಿದ್ದು ಒಳಭಾಗದಲ್ಲಿ ಚರ್ಮಕ್ಕೆ ಅಂಟಿಕೊಂಡಿರುತ್ತವೆ. ಸ್ಕೊಲೊಫೊರ್‌ನ ರಚನೆ ಸಂಕೀರ್ಣವಾಗಿದ್ದು ಸಂವೇದನಾಶೀಲ ಸ್ಕೊಲೊಪೆಲಾ ಎಂಬ ವಿಶೇಷ ಕೋಶಗಳನ್ನೊಳಗೊಂಡಿವೆ. ಅವುಗಳ ತುದಿಯಲ್ಲಿ ನರಸಂಪರ್ಕವಿದೆ. ಹೊರಚರ್ಮದಿಂದ ಸಲಾಕೆಯಂಥ ಅಂಗ ಸ್ಕೊಲೊಫೊರ್‌ನೊಂದಿಗೆ ಸಂಪರ್ಕ ಹೊಂದಿದ್ದು ಅದರ ಸುತ್ತ ದ್ರವತುಂಬಿದ ಕೋಶ ಪದರವು ಆವರಿಸುತ್ತದೆ. ಹೊರಭಾಗದಿಂದ ಟಿಂಪಾನಂಗೆ ಅಪ್ಪಳಿಸುವ ಶಬ್ದದ ತರಂಗಗಳು ಸಲಾಕೆಯನ್ನು ಕಂಪಿಸುವಂತೆ ಮಾಡುತ್ತದೆ. ಕಂಪನವನ್ನು ಸಂವೇದಕ ಕೋಶಗಳು ಗ್ರಹಿಸಿ, ಸ್ಕೆಲೊಪೆಲಾಗಳ ಮೂಲಕ ನರಕೊಶಕ್ಕೆ ತಲುಪಿಸುವುವು. ಕೆಲವು ಕೀಟಗಳಲ್ಲಿ ಸ್ಕೊಲೊಪೆರಿಯವು  ಆಂಟೆನಾದ ಎರಡನೆಯ ಖಂಡದಲ್ಲಿದ್ದು ಅದಕ್ಕೆ ಜಾನ್ಸ್ಟನ್ ಅಂಗವೆಂದು ಹೆಸರಿಸಲಾಗಿದೆ. ಸೊಳ್ಳೆಗಳಲ್ಲಿ ಜಾನ್ಸ್ಟನ್ ಅಂಗ ಉತ್ತಮವಾಗಿ ಬೆಳೆದಿದೆ.

ಮ್ಯಾಕ್ಸಿಲ ಹಾಗೂ ಬಾಯಿಯ ಸುತ್ತ ಇರುವ ಕೆಲವು ಸಂವೇದಕ ರೋಮಗಳು ಸ್ಪರ್ಶಾಂಗಗಳು. ಶರೀರದ ಮೇಲಿರುವ ಎಲ್ಲ ರೋಮಗಳಿಗೂ ಸ್ಪರ್ಶಗ್ರಹಣ ಶಕ್ತಿ ಇದೆ. ಗಂಟಲಿನಲ್ಲಿರುವ ಕೆಲವು ಕೋಶಗಳು ರುಚಿಯನ್ನು ಸವಿಯಲು ಮಾರ್ಪಾಡಾಗಿವೆ. ಈ ಕೋಶಗಳ ಕೆಳಭಾಗದಲ್ಲಿ ನರಸಂಪರ್ಕವಿರುವುದರಿಂದ ಅವಕ್ಕೆ ಸಂವೇದಕ ಗುಣವಿದೆ.

ಜೇಡ ಹಾಗೂ ಚೇಳುಗಳಲ್ಲಿ ಪಾರ್ಶ್ವ ಹಾಗೂ ಮಧ್ಯಕಗಳೆಂಬ ಎರಡು ಬಗೆಯ ಕಣ್ಣುಗಳಿರುವುವು. ಹೊರಚರ್ಮದ ಕುಳಿಗಳಿದ್ದು ಅದರಲ್ಲಿ ಮಸೂರವಿರುವುದು. ಮಸೂರದ ಹಿಂಭಾಗ ಚರ್ಮದ ಕೋಶಗಳು ಸ್ರವಿಸಿದ ಗ್ರಹಣಶೀಲ ಸಲಾಕೆಗಳಿದ್ದು ಅವು ನರಕ್ಕೆ ಜೋಡಿಸಿಕೊಂಡಿವೆ. ಮಧ್ಯ ಕಣ್ಣುಗಳ ರಚನೆ ಸ್ವಲ್ಪ ಸಂಕೀರ್ಣವಾಗಿದೆ.

ಮೃದ್ವಂಗಿಗಳಲ್ಲಿ ಒಂದು ಜೊತೆ ಕಣ್ಣು, ಒಂದು ಜೊತೆ ಸ್ಟಾಟೊಸಿಸ್ಟ್, ಒಂದು ಅಥವಾ ಎರಡು ಜೊತೆ ಆಂಟೆನಾ ಹಾಗೂ ಒಂದು ಆಸ್ಫ್ರೇಡಿಯಂ ಇರುವುವು. ಕಣ್ಣು ಒಮ್ಮಾಟೊಫೊರ್ ಎಂಬ ಮಾಂಸದ ಹಿಡಿಕೆಯ ಮೇಲೆ ಅಥವಾ ಉದರಪಾದಿ (ಗ್ಯಾಸ್ಟ್ರೊಪೊಡ)ಗಳಲ್ಲಿರುವಂತೆ ಆಂಟೆನಾದ ತುದಿಯಲ್ಲಿ ಇದೆ. ವರ್ಣಕಗಳಿಂದ ಕೂಡಿದ ರೆಟಿನ ಕೋಶಗಳುಳ್ಳ ಆಳವಾದ ಅಕ್ಷಿ ಕುಳಿಯಲ್ಲಿ ಕ್ಯುಟಿಕಲ್‌ನಿಂದ ನಿರ್ಮಿತವಾದ ಮಸೂರವಿದೆ. ಮಸೂರದ ಮೇಲ್ಭಾಗದಲ್ಲಿ ಕಾರ್ನಿಯ ಪದರವಿದೆ. ಕೆಳಭಾಗದಲ್ಲಿ ನರದ ಸರಬರಾಜು ಇದೆ. ಮೃದ್ವಂಗಿಗಳ ಕಣ್ಣು ಸಾಕಷ್ಟು ಬೆಳೆವಣಿಗೆಯಾದಂತೆ ಕಂಡರೂ ಅವು ವಸ್ತುಗಳನ್ನು ನೋಡಲಾರವು. ಕೇವಲ ಬೆಳಕಿನ ತೀವ್ರತೆಯನ್ನು ಮಾತ್ರ ಗುರುತಿಸುತ್ತವೆ.

ಶಿರಪಾದಿಗಳಲ್ಲಿ ಕಣ್ಣಿನ ಬೆಳೆವಣಿಗೆ ಗರಿಷ್ಠಮಟ್ಟವನ್ನು ತಲುಪಿದೆ. ಅದನ್ನು ಕಶೇರುಕಗಳ ಕಣ್ಣಿಗೆ ಹೋಲಿಸಬಹುದು. ಶಿರಭಾಗದ ಎಡಬಲಗಳಲ್ಲಿ ಒಂದೊಂದರಂತೆ ಜೊತೆ ಕಣ್ಣುಗಳಿದ್ದು ಅವು ಮೃದ್ವಸ್ಥಿ ಅಥವಾ ಕಾರ್ಟಿಲೇಜ್‌ನಿಂದಾದ ಅಕ್ಷಿಕವಚದೊಳಗೆ ಅಡಕವಾಗಿವೆ. ಕಣ್ಣಿನ ಹೊರಭಾಗದಲ್ಲಿ ಸ್ಕ್ಲೀರಾಟಿಕ್ ಕವಚವಿದೆ. ಮುಂಭಾಗದಲ್ಲಿ ಈ ಪದರವನ್ನು ಪಾಪೆಪೊರೆ ಅಥವಾ ಐರಿಸ್ ಎಂದು ಹೆಸರಿಸಲಾಗುತ್ತದೆ. ಪೊರೆಯ ನಡುವೆ ಚಿಕ್ಕ ರಂಧ್ರ ಕಣ್ಣು ಪಾಪೆ ಇದೆ. ಪಾಪೆಯ ರಂಧ್ರಕ್ಕೆ ಹಿರಿದು ಅಥವಾ ಕಿರಿದಾಗುವ ಸಾಮರ್ಥ್ಯವಿದೆ. ಮಸೂರ ಉತ್ತಮವಾಗಿ ಬೆಳೆದಿದೆ. ಕಣ್ಣುಗುಡ್ಡೆಯ ಹಿಂಭಾಗ ಎರಡು ಅವಕಾಶಗಳಿವೆ. ಮಸೂರದ ಮುಂಭಾಗದ ಅವಕಾಶ ಚಿಕ್ಕದಾಗಿದ್ದು ಅದಕ್ಕೆ ಎಕ್ವಿಯಸ್ ಹ್ಯೂಮರ್ ಎಂಬ ಹೆಸರಿದೆ. ಮಸೂರದ ಹಿಂಭಾಗ ಅಗಲವಾದ ಅವಕಾಶವಿದ್ದು ಅದಕ್ಕೆ ವಿಟ್ರೆಯಸ್ ಹ್ಯೂಮರ್ ಎಂದು ಹೆಸರು. ಎಕ್ವಿಯಸ್ ಹ್ಯೂಮರ್‌ನಲ್ಲಿ ನೀರಿನಂಥ ದ್ರವವೂ, ವಿಟ್ರಿಯಸ್ ಹ್ಯೂಮರ್‌ನಲ್ಲಿ ಪಾಕದಂಥ ದ್ರವವೂ ತುಂಬಿವೆ. ವಿಟ್ರಿಯಸ್ ಹ್ಯೂಮರ್ ಹಿಂಭಾಗ ಅಕ್ಷಿಪಟಲವಿದೆ. ಅಕ್ಷಿಪಟಲದ ಹಿಂಭಾಗ ದೃಷ್ಟಿನರ ಗ್ಯಾಂಗ್ಲಿಯ ಹಾಗೂ ಒಂದು ಗ್ರಂಥಿ ಇವೆ. ಶಿರೋಭಾಗದಲ್ಲಿ ಚರ್ಮದ ಮಡಿಕೆ ಕಣ್ಣಿನ ಮುಂಭಾಗ ಚಾಚಿಕೊಂಡಿದ್ದು ಕಣ್ಣನ್ನು ರಕ್ಷಿಸುತ್ತದೆ. ಅದನ್ನು ಕಣ್ಣಿನರೆಪ್ಪೆ ಎನ್ನಲಾಗುತ್ತದೆ.

ಸ್ಟಾಟೊಸಿಸ್ಟ್‌ಗಳು ಪಾದನರಗ್ಯಾಂಗ್ಲಿಯದ ಮೇಲ್ಭಾಗದಲ್ಲಿರುವುದು. ಪ್ರತಿಯೊಂದು ಸ್ಟಾಟೊಸಿಸ್ಟ್ ಹೊರಚರ್ಮದ ಚೀಲವಾಗಿದ್ದು ಅದರಲ್ಲಿ ಸುಣ್ಣದ ಕಲ್ಲಿನಿಂದೊಡಗೂಡಿದ ಸ್ಟಾಟೊಲಿತ್ ಹಾಗೂ ಒಂದು ಬಗೆಯ ದ್ರವ ಅಡಕವಾಗಿರುತ್ತವೆ. ನರಸರಬರಾಜು ಇದೆ. ಉಳಿದ ಪ್ರಭೇದಗಳಂತೆ ಮೃದ್ವಂಗಿಗಳಲ್ಲಿಯೂ ಸ್ಟಾಟೊಸಿಸ್ಟ್ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ. ಉದರಪಾದಿಗಳ ಸ್ಟಾಟೊಸಿಸ್ಟ್‌ಗಳು ಎಪಿತೀಲಿಯ ಪದರದಿಂದಾಗಿದ್ದು ಅವಕ್ಕೆ ಒಟೊಸಿಸ್ಟ್ ಎಂದು ಹೆಸರಿದೆ. ಇದೂ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ. ಶಿರಪಾದಿಗಳಲ್ಲಿ ಇವು ಗೋಲಾಕಾರದ ಮೃದ್ವಸ್ಥಿಯ ಚೀಲದಲ್ಲಿ ಅಡಕವಾಗಿದ್ದು ಶರೀರಾವಕಾಶದ ಗ್ಯಾಂಗ್ಲಿಯದೊಂದಿಗೆ ಕೂಡಿಕೊಂಡಿವೆ.

ಆಸ್ಫ್ರೇಡಿಯಂ: ಮೃದ್ವಂಗಿಗಳಲ್ಲಿ ಮಾತ್ರ ಕಂಡುಬರುವ ಸಂವೇದನಾಂಗ. ಮ್ಯಾಂಟಲ್ ಅವಕಾಶದ ಒಳದಾರಿಯ ಹತ್ತಿರ ಎಡಭಾಗದ ಮ್ಯಾಂಟಲ್ ಪದರದ ತುದಿಯಿಂದ ಜೋತಾಡುತ್ತಿರುತ್ತದೆ. ಅಂಡಾಕಾರದಲ್ಲಿದ್ದು ಎಪಿತೀಲಿಯದ ಕೋಶಗಳಿಂದಾಗಿದೆ. ಕೆಲವು ಕೋಶಗಳು ಸಂವೇದನ ಕೋಶಗಳಂತೆ ಹಾಗು ಇನ್ನುಳಿದುವು ಗ್ರಂಥಿಗಳಂತೆ ವರ್ತಿಸುತ್ತವೆ. ಮ್ಯಾಂಟಲ್ ಅವಕಾಶವನ್ನು ಪ್ರವೇಶಿಸುವ ಅವಕಾಶವನ್ನು ಪ್ರವೇಶಿಸಿದರೆ ಅದರ ದ್ವಾರವನ್ನು ಹೊರಚರ್ಮದ ಹಾಲೆಗಳಿಂದ ಮುಚ್ಚಿ ನೀರಿನ ಪ್ರವೇಶವನ್ನು ತಡೆಯುತ್ತದೆ.

ಮೃದ್ವಂಗಿಗಳ ತಲೆಯ ಭಾಗದಲ್ಲಿ ಎರಡು ಅಥವಾ ನಾಲ್ಕು ಆಂಟೆನಾ ಅಥವಾ ಸ್ಪರ್ಶಾಂಗಗಳಿರುತ್ತವೆ. ಇವು ಸ್ಪರ್ಶ ಸಂವೇದಕಗಳು. ಉದರಪಾದಿಗಳ ಆಂಟೆನಾದ ಮೇಲೆ ವಾಸನೆಯನ್ನು ಗ್ರಹಿಸುವ ರೈನೊಫೊರ್ ಎಂಬ ಸಂವೇದಕಗಳಿವೆ. ಇವು ವಿಶೇಷವಾಗಿ ಬೆಳೆವಣಿಗೆಯಾದ ಕೋಶಗಳು.

ಕಂಟಕಚರ್ಮಿಗಳಲ್ಲಿ ಸಂವೇದನಾಂಗಗಳು ವಿರಳ. ಹೊರಚರ್ಮದ ತುಂಬೆಲ್ಲ ಸಂವೇದನಾಶಕ್ತಿಯುಳ್ಳ ಕೋಶಗಳಿದ್ದು ಅವು ಸ್ಪರ್ಶವನ್ನು ಗ್ರಹಿಸುತ್ತವೆ. ತೋಳುಗಳ ತುದಿಯಲ್ಲಿರುವ ನರತುದಿಯು ವರ್ಣ ಹಾಗೂ ರೆಟಿನ ಕೋಶಗಳಿಂದ ತುಂಬಿದ ಕುಳಿಗೆ ಸಂಪರ್ಕ ಕಲ್ಪಿಸುತ್ತದೆ. ಇವು ಬೆಳಕನ್ನು ಗ್ರಹಿಸುತ್ತವೆ. ಶರೀರದ ಒಳಭಾಗದ ನೀರ್ಗಾಲುವೆಗಳು, ಅವುಗಳ ತುದಿಯಲ್ಲಿರುವ ಕೊಳವೆಪಾದಗಳಲ್ಲಿರುವ ಕೆಲವು ಕೋಶಗಳು ನೀರಿನ ಲವಣಾಂಶ ಹಾಗೂ ಇತರ ರಸಾಯನಗಳ ಪ್ರಮಾಣವನ್ನು ಗುರುತಿಸಬಲ್ಲುವು.

ಕೆಲವು ಆದಿಕಶೇರುಕಗಳನ್ನು ಹೊರತುಪಡಿಸಿ, ಎಲ್ಲ ಕಶೇರುಕಗಳಲ್ಲಿ ಸಂವೇದನಾಂಗಗಳು ಉತ್ತಮವಾಗಿ ಬೆಳೆದಿವೆ. ವಾಸನೆ, ರುಚಿ, ದೃಷ್ಟಿ, ಶ್ರವಣ, ಸ್ಪರ್ಶಗಳಿಗೆ ಪ್ರತ್ಯೇಕ ಸಂವೇದನಾಂಗಗಳಿವೆ.

ಪಾರ್ಶ್ವರೇಖಾ ಸಂವೇದನಾಂಗ (ಲ್ಯಾಟರಲ್ ಲೈನ್ ಸೆನ್ಸ್‌ಆರ್ಗನ್). ಶರೀರದುದ್ದಕ್ಕೂ ಎರಡು ರೇಖೆಗಳಂತಿದ್ದು ಮೀನುಗಳಲ್ಲಿ ಹಾಗೂ ಜಲವಾಸೀ ಉಭಯಜೀವಿಗಳಲ್ಲಿ ಮಾತ್ರ ಇದೆ. ಶಿರೋಭಾಗದಲ್ಲಿ ಊರ್ಧ್ವ ಕಕ್ಷಕ (ಸುಪ್ರಾ ಆರ್ಬೈಟಲ್), ಅಧೋ ಕಕ್ಷಕ (ಇನ್‌ಫ್ರಾ ಆರ್ಬೈಟಲ್) ಹಾಗೂ ಹೈಯೊಮಾಂಡಿಬುಲಾರ್ ಎಂಬ ಮೂರು ರೇಖೆಗಳಿವೆ. ಚರ್ಮದ ಒಳಭಾಗದಲ್ಲಿ ರೋಮದಂಥ ಸಂವೇದಕ ಕೋಶಗಳಿರುವುವು. ಚಕ್ರಾಸ್ಯಗಳಲ್ಲಿ ರೇಖೆಯು ಹೊರಚರ್ಮದಲ್ಲಿದೆ. ಮೀನುಗಳಲ್ಲಿ ಚರ್ಮದ ಒಳಭಾಗ ಕಾಲುವೆಯಂತಿದ್ದು ಹೊರಭಾಗಕ್ಕೆ ಅಲ್ಲಲ್ಲಿ ದ್ವಾರಗಳಿವೆ. ಏಳು ಮತ್ತು ಹತ್ತನೆಯ ಶಿರನರಗಳೊಂದಿಗೆ ಸಂಪರ್ಕವಿದ್ದು, ಉಚ್ಚ ಕಶೇರುಕಗಳಲ್ಲಿ ಒಳಕಿವಿಗಳಾಗಿ ವಿಕಾಸವಾಗಿವೆ ಎಂಬ ಅಭಿಪ್ರಾಯವಿದೆ.

ವಾಸನಾಗ್ರಹಣಾಂಗ: ಚಕ್ರಾಸ್ಯಗಳನ್ನು ಹೊರತು ಪಡಿಸಿ ಎಲ್ಲ ಕಶೇರುಕಗಳಲ್ಲಿ ಮೂತಿಯ ಮುಂಭಾಗ ಮೂಗಿನ ಹೊಳ್ಳೆಗಳಲ್ಲಿದೆ. ಜೋಡಿಯಾಗಿವೆ. ಚರ್ಮದ ಒಳಮಡಿಕೆಯಿಂದಾದ ಈ ಅಂಗ ಚೀಲದಂತಿದೆ. ಮೂಗಿನ ರಂಧ್ರಗಳ ಮೂಲಕ ಹೊರಸಂಪರ್ಕ ಪಡೆದಿದೆ. ಒಳಭಾಗದಲ್ಲಿ ನರಸಂಕರ್ಪವಿದೆ. ಉಭಯವಾಸಿಗಳು ಹಾಗೂ ನೆಲದ ಮೇಲೆ ವಾಸಿಸುವ ಕಶೇರುಕಗಳಲ್ಲಿ ಒಳನಾಸಿಕದ ಮೂಲಕ ಬಾಯಿಗೆ ಸಂಪರ್ಕವಿದೆ.

ಜಾಕೊಬ್ಸನ್ನನ ಅಂಗ: ಉಭಯಜೀವಿಗಳಲ್ಲಿ ಹಾಗು ಸರೀಸೃಪಗಳಲ್ಲಿ ವಾಸನಾಗ್ರಹಣಾಂಗ. ನಾಸಿಕದ ಗೂಡಿನಿಂದ ಬಾಯಿಯವರೆಗೆ ಚಾಚಿಕೊಂಡಿದೆ.

ಸಂವೇದನಾಕೋಶಗಳನ್ನೊಳಗೊಂಡ ಮೇಲ್ಪದರದ ಎಪಿತೀಲಿಯಮ್ ಒಳಕ್ಕೆ ಸಂಚಿಯಂತೆ ಚಾಚಿಕೊಂಡು ಈ ಅಂಗ ನಿರ್ಮಾಣವಾಗಿದೆ. ಒಳಭಾಗದಲ್ಲಿ ನರಸಂಪರ್ಕವಿದೆ. ಆಹಾರದ ವಾಸನೆಯನ್ನು ಗ್ರಹಿಸುತ್ತದೆ. ಹಾವು, ಹಲ್ಲಿ ಮುಂತಾದ ಸರೀಸೃಪಗಳಲ್ಲಿ ಉತ್ತಮವಾಗಿ ಬೆಳೆದಿದೆ. ಹಾವುಗಳು ಆಗಾಗ ನಾಲಿಗೆಯನ್ನು ಹೊರಹಾಕುವುದರ ಮೂಲಕ ದೂರದಲ್ಲಿರುವ ಆಹಾರದ ವಾಸನಾಕಣಗಳನ್ನು ನಾಲಿಗೆಯ ತುದಿಯಲ್ಲಿ ಅಂಟಿಸಿಕೊಂಡು ಅದನ್ನು ಜಾಕೊಬ್ಸನನ್ನನ ಅಂಗಕ್ಕೆ ತಗುಲಿಸಿದಾಗ ಅವು ವಾಸನೆಯನ್ನು ಗ್ರಹಿಸುತ್ತವೆ. ಮೊಟ್ಟೆಯಿಡುವ ಸ್ತನಿ, ಮಾರ್ಸುಪಿಯಲ್, ಕೀಟಭಕ್ಷಕ ಹಾಗೂ ದಂಶಕಗಳಲ್ಲಿ ಕೂಡ ಬೆಳೆದಿವೆ.

ರುಚಿ ಹಾಗೂ ಸ್ಪರ್ಶಾಂಗಗಳು: ನಾಲಿಗೆಯ ಮೇಲಿನ ಎಪಿತೀಲಿಯಮ್ ಪದರದಲ್ಲಿರುವ ಕೋಶಗಳು ಗುಂಪುಗೂಡಿ ರುಚಿ ಅಂಕುರಗಳಾಗುತ್ತವೆ (ಟೇಸ್ಟ್ ಬಡ್ಸ್). ಒಂಭತ್ತನೆಯ ಶಿರನರದ ಕವಲುಗಳು ರುಚಿಅಂಕುರಗಳೊಡನೆ ಸಂಪರ್ಕ ಪಡೆದಿವೆ. ಸ್ಪರ್ಶಗ್ರಹಣ ಕೋಶಗಳು ಶರೀರದ ಮೇಲೆಲ್ಲಾ ಇವೆ. ಹೊರಚರ್ಮದ ಕೆಲವು ಕೋಶಗಳು ಉಷ್ಣಾಂಶದ ವ್ಯತ್ಯಾಸ, ಅನ್ಯ ವಸ್ತು ಅಥವಾ ಜೀವಿಗಳ ಸ್ಪರ್ಶವನ್ನು ಗ್ರಹಿಸಿ ಸ್ಪಂದಿಸಬಲ್ಲವು. ಈ ಕೋಶಗಳಿಗೆ ನರಹುರಿಯಿಂದ ನರಸರಬರಾಜು ಇದೆ.

ಕಣ್ಣು: ಬೆಳಕನ್ನು ಗ್ರಹಿಸಬಲ್ಲ ದೃಶ್ಯಾಂಗಗಳು. ಜೋಡಿಯಾಗಿವೆ. ಎಲ್ಲ ಕಶೇರುಕಗಳಲ್ಲಿ ಕಣ್ಣಿನ ಸಾಮಾನ್ಯ ರಚನೆ ಒಂದೇ ರೀತಿಯಲ್ಲಿದೆ. ಆಯಾಯ ಜೀವಿಗಳ ದೃಷ್ಟಿ ಸಾಮರ್ಥ್ಯವನ್ನವಲಂಬಿಸಿ ಅಕ್ಷಿಪಟಲದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿವೆ. (ನೋಡಿ:ಕಣ್ಣು)

ಕಿವಿ: ಇವು ಕಶೇರುಕಗಳ ಶ್ರವಣಾಂಗಗಳು. ಜೊಡಿಯಾಗಿವೆ. ಸ್ತನಿಗಳಲ್ಲಿ ಉತ್ತಮವಾಗಿ ಬೆಳೆದಿವೆ. (ನೋಡಿ: ಕಿವಿ) (ಸಿ.ಆರ್.ವಿ.)

**ಸಮತಾಪಿಗಳು:** ಪರಿಸರದ ಉಷ್ಣತೆಯಲ್ಲಿ ತೀವ್ರ ಬದಲಾವಣೆಗಳಾದರೂ, ತಮ್ಮ ದೇಹದ ತಾಪಮಾನವನ್ನು (ಬಾಡಿ ಟೆಂಪರೇಚರ್) ಒಂದು ನಿರ್ದಿಷ್ಟ ಮಟ್ಟದಲ್ಲಿ ಕಾಯ್ದುಕೊಳ್ಳುವ ವಿಶಿಷ್ಟ ಗುಣವನ್ನು ಪಡೆದಿರುವ ಪ್ರಾಣಿಗಳು, ಪಕ್ಷಿ ಮತ್ತು ಸ್ತನಿ ವರ್ಗಗಳು ಈ ಗುಂಪಿಗೆ ಸೇರಿವೆ. ಪ್ರಾಣಿಗಳ ಜೈವಿಕ ಕ್ರಿಯೆಗಳ ಮೇಲೆ ಪ್ರಭಾವ ಬೀರುವ ಪರಿಸರದ ವಿವಿಧ ಅಂಶಗಳಲ್ಲಿ ಉಷ್ಣತೆ ಪ್ರಮುಖವಾದದ್ದು. ಪರಿಸರದ ಉಷ್ಣತೆಯಲ್ಲಾಗುವ ಬದಲಾವಣೆಗಳು ಮುಖ್ಯವಾಗಿ ಚಯಾಪಚಯದ ಗತಿಯ ಮೇಲೆ ಪ್ರಭಾವ ಬೀರಿ ಪ್ರಾಣಿಗಳ ಅಳಿವು-ಉಳಿವುಗಳಿಗೆ ಕಾರಣವಾಗಿವೆ. ಪರಿಸರದ ಉಷ್ಣತೆಯಲ್ಲಾಗುವ ಬದಲಾವಣೆಗಳಿಗೆ ಸಮರ್ಪಕ ಹೊಂದಾಣಿಕೆಗಳಿಲ್ಲದೆ, ಜೀವಿಗಳ ಉಳಿವು ಸಾಧ್ಯವಿಲ್ಲ. ಪರಿಸರದ ತಾಪಮಾನದಲ್ಲಾಗುವ ಬದಲಾವಣೆಗಳಿಗೆ, ಪ್ರಾಣಿಗಳ ಹೊಂದಾಣಿಕೆಗಳಿಗೆ ಅನುಗುಣವಾಗಿ ಪ್ರಾಣಿಗಳನ್ನು ಮುಖ್ಯವಾಗಿ ಎರಡು ವಿಧವಾಗಿ ವಿಂಗಡಿಸಲಾಗಿದೆ. ಪರಿಸರದ ತಾಪಮಾನದಲ್ಲಾಗುವ ಬದಲಾವಣೆಗೆ ತಕ್ಕಂತೆ ತಮ್ಮ ದೇಹದ ತಾಪಮಾನವನ್ನು ಬದಲಾಯಿಸುವ, ಅಸಮತಾಪಿಗಳು (ಅಕಶೇರುಕಗಳು, ಮೀನು, ಉಭಯಚರಿ ಹಾಗೂ ಸರೀಸೃಪಗಳು) ಹಾಗು ಪರಿಸರದ ತಾಪಮಾನದಲ್ಲಿ ಬದಲಾವಣೆಗಳು ಇದ್ದಾಗಲೂ ತಮ್ಮ ದೇಹದ ತಾಪಮಾನವನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿಕಾಯ್ದುಕೊಳ್ಳುವ ಸಮತಾಪಿಗಳು (ಪಕ್ಷಿ ಮತ್ತು ಸ್ತನಿಗಳು). ದೇಹದ ಉಷ್ಣತೆಯನ್ನು ಒಂದೇ ಮಟ್ಟದಲ್ಲಿ ಕಾಯ್ದುಕೊಳ್ಳಲು ಅವಶ್ಯಕವಾದ ಕ್ರಿಯಾತ್ಮಕ ಹಾಗೂ ರಚನಾತ್ಮಕ ಮಾರ್ಪಡುಗಳನ್ನು ಹೊಂದಿರುವುದು ಕಶೇರುಕಗಳ ವಿಕಾಸದಲ್ಲಿಯ ಒಂದು ಪ್ರಮುಖ ಮೈಲಿಗಲ್ಲು. ಈ ವಿಶಿಷ್ಟಗುಣವು ಸಮತಾಪಿಗಳು ಭೂಮಿಯ ಎಲ್ಲ ಭಾಗಗಳಲ್ಲಿ, ಅಂದರೆ ಉಷ್ಣವಲಯದಿಂದ ಶೀತವಲಯದವರೆಗೆ ಪಸರಿಸಿ, ಯಶಸ್ವಿಯಾಗಿ ಜೀವಿಸಲು ಸಹಾಯಕವಾಗಿದೆ.

ಶಾಖ ಶಕ್ತಿಯ ಒಂದು ರೂಪವಾಗಿದ್ದು ಹೆಚ್ಚಿನ ತಾಪಮಾನದ ಸ್ಥಳದಿಂದ ಕಡಿಮೆ ತಾಪಮಾನವಿರುವ ಸ್ಥಳಕ್ಕೆ ಚಲಿಸುತ್ತವೆ. ದೇಹ ಎರಡು ಮೂಲಗಳಿಂದ ಶಾಖವನ್ನು ಪಡೆಯುತ್ತದೆ. ಚಯಾಪಚಯ ಕ್ರಿಯೆಗಳಿಂದ ದೇಹದಲ್ಲಿ ಉತ್ಪತ್ತಿಯಾದ ಶಾಖ ಹಾಗು ಪರಿಸರದಿಂದ (ಮುಖ್ಯವಾಗಿ ಸೂರ್ಯರಶ್ಮಿ) ಪಡೆದ ಶಾಖ (ಪರಿಸರದ ಉಷ್ಣತೆ ದೇಹದ ಉಷ್ಣತೆಗಿಂತ ಜಾಸ್ತಿ ಇರುವಾಗ). ಪರಿಸರದ ತಾಪಮಾನ ದೇಹಕ್ಕಿಂತ ಕಡಿಮೆ ಇದ್ದರೆ ದೇಹವು ಪರಿಸರಕ್ಕೆ ಶಾಖವನ್ನು ಕಳೆದುಕೊಳ್ಳುತ್ತದೆ. ದೇಹದ ತಾಪಮಾನವನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿರಿಸಲು, ಎಷ್ಟು ಬೇಕೊ ಅಷ್ಟೆ ಶಾಖವನ್ನು ದೇಹದಲ್ಲಿ ಉಳಿಸಿಕೊಂಡು, ಹೆಚ್ಚಿನದನ್ನು ಕಳೆದುಕೊಳ್ಳಬೇಕು ಅಥವಾ, ದೇಹದ ತಾಪಮಾನವನ್ನು ನಿರ್ದಿಷ್ಟ ಮಟ್ಟದಲ್ಲಿ ಕಾಯ್ದುಕೊಳ್ಳಲು ಶಾಖದ ಕೊರತೆ ಇದ್ದರೆ, ಅಷ್ಟನ್ನು ದೇಹದಲ್ಲಿ ಉತ್ಪಾದಿಸಬೇಕು. ಈ ತಂತ್ರಗಳಿಂದ ದೇಹದ ಉಷ್ಣತೆಯ ಸಮಸ್ಥಿತಿ ಸಾಧ್ಯವಾಗುವುದು. ಈ ಸ್ಥಿತಿಯನ್ನು ಸಾಧಿಸಲು ವಾತಾವರಣದ ತಾಪಮಾನದಲ್ಲಾಗುವ ಬದಲಾವಣೆಗಳನ್ನು ಗ್ರಹಿಸಲು, ದೇಹದ ಮೇಲ್ಮೈ ಮೇಲೆ ಗ್ರಾಹಿಗಳು (ರಿಸೆಪ್ಟರ್ಸ್), ಹಾಗು ದೇಹದಲ್ಲಿ ಶಾಖದ ಉತ್ಪತ್ತಿಗೆ ಅಥವಾ ಶಾಖದ ನಷ್ಟಕ್ಕೆ ಸಮರ್ಪಕ ಕ್ರಿಯೆಗಳನ್ನು, ಪರಿಸ್ಥಿತಿಗೆ ಅನುಗುಣವಾಗಿ ಪ್ರಚೋದಿಸಲು ಒಂದು ನಿಯಂತ್ರಕದ, ಅವಶ್ಯಕತೆ ಇದೆ. ಈ ಅವಶ್ಯಕತೆಗಳನ್ನು ಪೂರೈಸಲು ಸಮತಾಪಿಗಳ ಶರೀರ ಕ್ರಿಯಾವಿಜ್ಞಾನ ವಿಕಸನ ಹೊಂದಿದೆ. ಸ್ತನಿಗಳಲ್ಲಿ ಮಿದುಳಿನ ಒಂದು ಭಾಗವಾದ ಹೈಪೋಥಲಮಸ್ ದೇಹದ ತಾಪಮಾನದ ನಿಯಂತ್ರಕವಾಗಿ ಕಾರ್ಯ ನಿರ್ವಹಿಸುತ್ತದೆ. ಈ ನಿಯಂತ್ರಕವು ಚರ್ಮದಲ್ಲಿರುವ ಶಾಖಗ್ರಾಹಿಗಳು ಕಳುಹಿಸುವ ಆವೇದನಗಳಿಂದ, ದೇಹದ ಮೇಲ್ಮೈಯಲ್ಲಾಗುವ ಉಷ್ಣತೆಯ ಬದಲಾವಣೆಗಳನ್ನು, ಹಾಗು ಮಿದುಳಿನೊಳಗೆ ಚಲಿಸುತ್ತಿರುವ ರಕ್ತದ ತಾಪಮಾನವನ್ನು ಗ್ರಹಿಸುವುದರ ಮೂಲಕ ದೇಹದ ತಾಪಮಾನದಲ್ಲಾಗುವ ಬದಲಾವಣೆಗಳನ್ನು ಗ್ರಹಿಸುತ್ತದೆ ಮತ್ತು ಪರಿಸ್ಥಿತಿಗನುಗುಣವಾಗಿ ದೇಹದಲ್ಲಿ ಶಾಖೋತ್ಪತ್ತಿ ಅಥವಾ ಶಾಖ ನಷ್ಟಕ್ಕೆ ಕ್ರಿಯೆಗಳನ್ನು ಪ್ರಚೋದಿಸುತ್ತದೆ. ಮನುಷ್ಯರ ಚರ್ಮದಲ್ಲಿ ಸು. 1,50,000 ಶೀತಗ್ರಾಹಿಗಳು ಹಾಗು 16000 ಉಷ್ಣಗ್ರಾಹಿಗಳಿವೆ.

ಹೈಪೊಥಲಮಸ್‌ನಲ್ಲಿ ಎರಡು ತಾಪಮಾನನಿಯಂತ್ರಕ ಕೇಂದ್ರಗಳಲ್ಲಿ ಒಂದು ದೇಹದ ಶಾಖವನ್ನು ಕಳೆದುಕೊಳ್ಳಲು, ಇನ್ನೊಂದು ಶಾಖೋತ್ಪತ್ತಿಯನ್ನು ಹೆಚ್ಚಿಸಲು ಅವಶ್ಯಕವಾದ ಕ್ರಿಯೆಗಳನ್ನು ಪ್ರಚೋದಿಸುತ್ತವೆ. ಪರಿಸರದ ತಾಪಮಾನ, ದೇಹಕ್ಕಿಂತ ಕಡಿಮೆಯಾಗಿದ್ದರೆ, ದೇಹದಿಂದ ಶಾಖವು ಪರಿಸರಕ್ಕೆ ಹರಿಯುವುದರಿಂದ, ದೇಹದ ಉಷ್ಣತೆ ಕಡಿಮೆಯಾಗಿ, ತಾಪಮಾನ ನಿರ್ದಿಷ್ಟ ಮಟ್ಟಕ್ಕಿಂತ ಇಳಿಮುಖವಾಗುವ ಸಂಭವವಿದೆ. ಈ ಪರಿಸ್ಥಿತಿಯಲ್ಲಿ ಚರ್ಮದಲ್ಲಿಯ ಶೀತಗ್ರಾಹಿಗಳು, ಕಡಿಮೆಯಾಗುತ್ತಿರುವ ದೇಹದ ಮೇಲ್ಮೈ ತಾಪಮಾನದಿಂದ ಉದ್ರೇಕ (ಎಕ್ಸೈಟ್) ಗೊಂಡು, ಮಿದುಳಿಗೆ (ಹೈಪೊಥಲಮಸ್) ಆವೇದನಗಳನ್ನು ಕಳುಹಿಸುತ್ತವೆ. ಇದಲ್ಲದೆ ಹೈಪೊಥಲಮಸ್‌ನಲ್ಲಿ ಹರಿಯುತ್ತಿರುವ ರಕ್ತದ ತಾಪಮಾನ ಕಡಿಮೆಯಾಗಿರುವುದನ್ನು ಕೂಡ ಅದು ಗ್ರಹಿಸುತ್ತದೆ. ತಕ್ಷಣ, ಹೈಪೊಥಲಮಸ್‌ನ ಹಿಂದಿನ ತಾಪಮಾನ ನಿಯಂತ್ರಣ ಕೇಂದ್ರ ಕ್ರಿಯಾಶೀಲವಾಗಿ ಹೆಚ್ಚಿನ ಶಾಖೋತ್ಪತ್ತಿಗೆ ಈ ಮುಂದೆ ವಿವರಿಸಿದ ಕ್ರಿಯೆಗಳನ್ನು ಪ್ರಚೋದಿಸುತ್ತದೆ.

1. ದೇಹದ ಶಾಖೋತ್ಪತ್ತಿಯಲ್ಲಿ ಹೆಚ್ಚಳ : ಅನುವೇದನ ನರಮಂಡಲ ಹಾಗು ಕೆಲವು ಹಾರ್ಮೋನ್‌ಗಳ ಸ್ರವಿಕೆಯನ್ನು ಪ್ರಚೋದಿಸಿ ಶಾಖೊತ್ಪತ್ತಿಯನ್ನು ಹೆಚ್ಚಿಸಲಾಗುವುದು. ಅನೈಚ್ಛಿಕ (ನಡುಕ) ಹಾಗು ಐಚ್ಛಿಕ ಸ್ನಾಯುಗಳ ಅಂಕುಚನದಿಂದ ಹೆಚ್ಚಿನ ಶಾಖೊತ್ಪತ್ತಿಯಾಗುತ್ತದೆ.

2. ನಡುಕವಿಲ್ಲದ ಶಾಖೊತ್ಪತ್ತಿ (ನಾನ್‌ಷಿವರಿಂಗ್ ಥರ್ಮೋಜನಿಸಿಸ್) : ದೇಹದ ಇತರ ಅಂಗಾಂಶಗಳಲ್ಲಿ (ಸ್ನಾಯುಗಳನ್ನು ಹೊರತುಪಡಿಸಿ) ಚಯಾಪಚಯದ ವೇಗವರ್ಧನೆಯಾಗಿ ಹೆಚ್ಚಿನ ಶಾಖದ ಉತ್ಪತ್ತಿಯಾಗುತ್ತದೆ. ಹೈಪೊಥಲಮಸ್ ಪ್ರಚೋದನೆಯಿಂದ, ಪಿಟ್ಯುಟರಿ ಗ್ರಂಥಿಯ ಥೈರಾಯಿಡ್ ಪ್ರಚೋದಕ ಹಾರ್ಮೋನಿನ ಹೆಚ್ಚಿನ ಸ್ರವಿಕೆಯಿಂದ ಥೈರಾಯಿಡ್ ಗ್ರಂಥಿ ಪ್ರಭಾವಿತವಾಗಿ, ಹೆಚ್ಚಿನ ಥೈರಾಕ್ಸಿನ್ ಸ್ರವಿಸುತ್ತದೆ. ಥೈರಾಕ್ಸಿನ್ ವಿವಿಧ ಅಂಗಗಳಲ್ಲಿ ಚಯಾಪಚಯದ ವೇಗವನ್ನು ವರ್ಧಿಸಿ ಶಾಖೋತ್ಪತ್ತಿಯನ್ನು ಹೆಚ್ಚಿಸುತ್ತದೆ. ಇದಲ್ಲದೆ ಹೈಪೊಥಲಮಸ್‌ನ ಪ್ರಚೋದನೆಯಿಂದ ಅನುವೇದನ ನರಮಂಡಲ ಕ್ರಿಯಾಶೀಲವಾಗಿ ಅಡ್ರಿನಲ್ ಗ್ರಂಥಿಯಿಂದ ಅಡ್ರಿನಲಿನ್ ಮತ್ತು ನಾರ್‌ಅಡ್ರಿನಲಿನ್ ಹಾರ್ಮೋನ್‌ಗಳನ್ನು ಸ್ರವಿಸುವಂತೆ ಪ್ರಚೋದಿಸುತ್ತದೆ. ಈ ಹಾರ್ಮೋನ್‌ಗಳು ದೇಹದಲ್ಲಿ ಶಾಖೋತ್ಪತ್ತಿ ಜಾಸ್ತಿಯಾಗುವಂತೆ ವಿವಿಧ ರಾಸಾಯನಿಕ ಕ್ರಿಯೆಗಳನ್ನು ಪ್ರಚೋದಿಸುತ್ತವೆ.

ಕೇವಲ ಸ್ತನಿಗಳಲ್ಲಿ ಕಂಡುಬರುವ, ನಾರ ಅಡ್ರಿನಲಿನ್‌ನಿಂದ ಪ್ರಚೋದಿತವಾದ ಅಕಂದು ಮೇದಸ್ಸಿನ (ಬ್ರೌನ್ ಫ್ಯಾಟ) ಉತ್ಕರ್ಷಣ, ಇದಕ್ಕೊಂದು ಉತ್ತಮ ಉದಾಹರಣೆ. ಈ ಕ್ರಿಯೆಯಿಂದ ಅಪಾರವಾದ ಶಾಖದ ಉತ್ಪತ್ತಿಯಾಗಿ, ಅದನ್ನು ಅನೇಕ ಸ್ತನಿಗಳು ಅತಿಯಾದ ಶೀತವಿರುವ ವಾತಾವರಣಕ್ಕೆ ಹೊಂದಿಕೊಳ್ಳಲು ಮತ್ತು ಕೆಲವು ಪ್ರಭೇದಗಳು ಶೀತಕಾಲದ ದೀರ್ಘ ನಿದ್ರೆಯಿಂದ ಎಚ್ಚೆತ್ತಾಗ ದೇಹದ ತಾಪಮಾನವನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸುತ್ತವೆ.

3. ಚರ್ಮಕ್ಕೆ ರಕ್ತಪೂರೈಸುವ ರಕ್ತನಾಳಗಳ ಕುಗ್ಗುವಿಕೆ : ಇದರಿಂದ ದೇಹದ ಮೇಲ್ಮೈಗೆ ರಕ್ತಪರಿಚಲನೆ ಕಡಿಮೆಯಾಗಿ ದೇಹದ ಶಾಖನಾಶ ಕಡಿಮೆಯಾಗುತ್ತದೆ.

ದೇಹದ ತಾಪಮಾನ ಕಡಿಮೆಯಾದಾಗ ಕೇವಲ ಶಾಖೋತ್ಪತ್ತಿಯನ್ನು ಹೆಚ್ಚಿಸಿದರೆ ಸಾಲದು. ಉತ್ಪತ್ತಿಯಾದ ಶಾಖ ಪರಿಸರಕ್ಕೆ ಕಳೆದುಹೋಗದಂತೆ ಸಮರ್ಪಕ ರಚನಾತ್ಮಕ ಮಾರ್ಪಾಡುಗಳ ಅವಶ್ಯಕತೆ ಇದೆ. ಸಮತಾಪಿಗಳಲ್ಲಿ ಶಾಖವನ್ನು ದೇಹದೊಳಗೆ ತಡೆದಿಟ್ಟುಕೊಳ್ಳುವ ವಿಶೇಷ ರಚನೆಗಳು ವಿಕಸನ ಹೊಂದಿವೆ. ಅವು:

1. ತುಪ್ಪುಟ ಮತ್ತು ಗರಿಗಳು : ಇವು ಚರ್ಮದ ಮಾರ್ಪಾಡುಗಳಾಗಿದ್ದು, ಬುಡದಲ್ಲಿ ಗಾಳಿಗುಳ್ಳೆಗಳಿಂದಾದ ಒಂದು ಪದರು ಇದ್ದು, ಶಾಖದ ವಿನಿಮಯಕ್ಕೆ

ತಡೆಗೋಡೆಯಾಗಿದೆ. ಕಾರಣ ದೇಹದಲ್ಲಿ ಉತ್ಪತ್ತಿಯಾದ ಶಾಖ ಪರಿಸರಕ್ಕೆ ಹರಿದುಹೋಗದು. ಶೀತವಲಯದ ಪ್ರಾಣಿಗಳಲ್ಲಿ ಚಳಿಗಾಲದಲ್ಲಿ ತುಪ್ಪುಟ ದಪ್ಪವಾಗಿ, ಈ ಪ್ರಾಣಿಗಳು ಅತಿಶೀತ ಪರಿಸ್ಥಿತಿಯಲ್ಲಿ ಸರಾಗವಾಗಿ ಚಲನ–ವಲನ ತೋರಿಸುತ್ತ ತಮ್ಮ ಜೈವಿಕ ಕ್ರಿಯೆಗಳನ್ನು ಯಾವುದೇ ತಡೆ ಇಲ್ಲದೆ ಪೂರೈಸುತ್ತವೆ.

2. ಚರ್ಮದ ಕೆಳಗಿರುವ ಮೇದಸ್ಸಿನ ಪದರು (ಸಬ್‌ಕ್ಯುಟೆನಿಯಸ್ ಬ್ಲಬರ್): ತಿಮಿಂಗಲಗಳಂತಹ ಜಲಚರ ಪ್ರಾಣಿಗಳ ಚರ್ಮದ ಕೆಳಗೆ ಸು. 50 ಮಿಮೀ ದಪ್ಪನಾದ ಮೇದಸ್ಸಿನ ಪದರವಿದ್ದು, ಸದಾ ಶೀತ ನೀರಿನಲ್ಲಿ ಈಜುತ್ತಿರುವ ಈ ಪ್ರಾಣಿಗಳ ದೇಹದಲ್ಲಿ ಉತ್ಪತ್ತಿಯಾದ ಶಾಖ ದೇಹದಲ್ಲಿಯೆ ಉಳಿಯಲು ಸಾಧ್ಯವಾಗಿದೆ.

3. ರಕ್ತನಾಳಗಳಲ್ಲಿ ಶಾಖ ವಿನಿಮಯ (ಕೌಂಟರ್ ಕರೆಂಟ್ ಹೀಟ್ ಎಕ್ಸ್‌ಚೇಂಜರ್ಸ್) : ಇದೊಂದು ರಕ್ತನಾಳ ವಿಶಿಷ್ಟ ವ್ಯವಸ್ಥೆಯಾಗಿದ್ದು ಹೊರಚರ್ಮದಿಂದ ಬರುವ ಶೀತ ರಕ್ತವುಳ್ಳ ಅಭಿಧಮನಿಗಳು ಚರ್ಮದ ಬುಡದಲ್ಲಿ, ದೇಹದ ಒಳಭಾಗದಿಂದ ಹೆಚ್ಚು ಉಷ್ಣತೆಯುಳ್ಳ ರಕ್ತವನ್ನು ತರುವ ಅಪಧಮನಿಯನ್ನು ಸುತ್ತುವರೆದಿರುತ್ತವೆ. ಇದೇ ಶಾಖ ವಿನಿಮಯ ಸ್ಥಳ. ಇಲ್ಲಿ ಅಭಿಧಮನಿಯ ರಕ್ತಕ್ಕೆ ಅಪಧಮನಿಯ ಶಾಖ ವಿನಿಮಯವಾಗಿ ದೇಹದ ಒಳಭಾಗವನ್ನು ಸೇರುವ ಮುನ್ನ ಅಭಿಧಮನಿಯ ರಕ್ತ ಬಿಸಿಯಾಗುತ್ತದೆ.

ಆದಕಾರಣ, ಹೊರಚರ್ಮದಿಂದ ಬರುವಾಗ ರಕ್ತದ ಉಷ್ಣತೆ ಕಡಿಮೆ ಇದ್ದರೂ ಶಾಖ ವಿನಿಮಯದಿಂದ ಅದು ಬಿಸಿರಕ್ತವಾಗಿ ದೇಹದ ಒಳಭಾಗ ಸೇರುತ್ತದೆ. ಇದರ ವಿರುದ್ಧವಾಗಿ, ದೇಹದ ಒಳಭಾಗದಿಂದ ಬರುವ, ಹೆಚ್ಚಿನ ಉಷ್ಣತೆ ಇರುವ ಅಪಧಮನಿಯ ರಕ್ತ ಚರ್ಮವನ್ನು ಸೇರುವ ಮುನ್ನ ಶಾಖವಿನಿಮಯದಿಂದ ತನ್ನ ಉಷ್ಣತೆಯನ್ನು ಕಳೆದುಕೊಂಡು, ಶೀತರಕ್ತವಾಗಿ ಚರ್ಮವನ್ನು ಸೇರುವುದರಿಂದ, ಚರ್ಮವು ಶೀತವಾಗಿದ್ದು, ದೇಹದ ಶಾಖ ನಷ್ಟ ತಪ್ಪುತ್ತದೆ. ಸಮತಾಪಿಗಳು ಮೇಲೆ ವಿವರಿಸಿದ ವಿವಿಧ ತಂತ್ರಗಳನ್ನು ಉಪಯೋಗಿಸಿಕೊಂಡು, ಶಾಖೋತ್ಪತ್ತಿ ಹೆಚ್ಚಿಸಿ, ಅದನ್ನು ದೇಹದಲ್ಲಿ ಉಳಿಸಿಕೊಂಡು, ಕಡಿಮೆಯಾಗಿರುವ ದೇಹದ ತಾಪವನ್ನು ಹೆಚ್ಚಿಸಿ, ಸಮಸ್ಥಿತಿಯನ್ನು ಕಾಯ್ದುಕೊಳ್ಳುತ್ತವೆ.

ಪರಿಸರದ ತಾಪಮಾನ ದೇಹದ ತಾಪಮಾನಕ್ಕೆ ಸಮನಾಗಿದ್ದರೆ, ಅಥವಾ ಹೆಚ್ಚಿದ್ದರೆ (ಉದಾ : ಬೇಸಿಗೆಯಲ್ಲಿ) ಚಯಾಪಚಯಕ್ರಿಯೆಗಳಿಂದ ಉತ್ಪತ್ತಿಯಾದ ಶಾಖ ದೇಹದ ತಾಪಮಾನವನ್ನು ಹೆಚ್ಚಿಸುವ ಸಂಭವವಿರುತ್ತದೆ. ಏಕೆಂದರೆ, ಸಾಧಾರಣ ಚಯಾಪಚಯದ ಗತಿ (ನಾರ್ಮಲ್ ಮೆಟಬೊಲಿಕ್ ರೇಟ್) ಪ್ರತಿಸಮತಾಪಿ ಪ್ರಭೇದಕ್ಕೆ ನಿರ್ದಿಷ್ಟವಾಗಿದ್ದು, ಅದನ್ನು ಹೆಚ್ಚಿಸಬಹುದೆ ವಿನಃ ಕೆಳಮಟ್ಟಕ್ಕೆ ಇಳಿಸಲಾಗುವುದಿಲ್ಲ. ಕಾರಣ, ವಾತಾವರಣದ ತಾಪಮಾನ, ದೇಹಕ್ಕಿಂತ ಹೆಚ್ಚಿದ್ದರೂ, ದೇಹದಲ್ಲಿ ಶಾಖೋತ್ಪತ್ತಿಯಾಗುತ್ತಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಹೆಚ್ಚಿನ ಶಾಖ ಕಳೆದುಕೊಂಡು ಸಮಸ್ಥಿತಿಯನ್ನು ಸಾಧಿಸುವುದೆ ಸಮತಾಪಿಗಳಿಗಿರುವ ಸವಾಲು. ಚರ್ಮದಲ್ಲಿರುವ ಉಷ್ಣಗ್ರಾಹಿಗಳು (ಹೀಟ್ ರಿಸೆಪ್ಟರ್ಸ್) ಕಳುಹಿಸುವ ಆವೇದನಗಳು ಹಾಗು ಮಿದುಳಿನಲ್ಲಿ ಚಲಿಸುತ್ತಿರುವ ರಕ್ತದ ತಾಪಮಾನಗಳಿಂದ ದೇಹದ ತಾಪಮಾನ ಏರುತ್ತಿರುವುದನ್ನು ಹೈಪೊಥಲಮಸ್‌ನ ಮುಂದಿನ ನಿಯಂತ್ರಕ ಗ್ರಹಿಸಿ, ದೇಹದಿಂದ ಶಾಖ ನಷ್ಟವಾಗುವ ಈ ಮುಂದೆ ವಿವರಿಸಿದ ಕ್ರಿಯೆಗಳನ್ನು ಪ್ರಚೋದಿಸುತ್ತದೆ.

1. ಚರ್ಮದ ರಕ್ತನಾಳಗಳ ಹಿಗ್ಗುವಿಕೆ (ವ್ಯಾಸೊಡೈಲೆಷನ್): ಈ ಕ್ರಿಯೆಯಿಂದ ದೇಹದ ಮೇಲ್ಮೈಗೆ ಹೆಚ್ಚಿನ ರಕ್ತದ ಚಲನೆಯಾಗಿ, ವಿವಿಧ ಬಗೆಗಳಿಂದ (ಸಂವಹನ, ವಿಕಿರಣ ಮತ್ತು ಭಾಷ್ಪೀಕರಣ) ದೇಹದ ಶಾಖವನ್ನು ಕಳೆದುಕೊಳ್ಳಲು ಅನುಕೂಲವಾಗುತ್ತದೆ.

2. ಬೆವರಿನ ಸ್ರವಿಕೆ: ಚರ್ಮದಲ್ಲಿರುವ ಬೆವರು ಗ್ರಂಥಿಗಳು (ಸ್ವೆಟ್ ಗ್ಲಾಂಡ್ಸ್) ಹೆಚ್ಚಿನ ಬೆವರನ್ನು ಸ್ರವಿಸಿ, ಅದರಲ್ಲಿಯ ನೀರು ಚರ್ಮದಲ್ಲಿ ಹರಿಯುತ್ತಿರುವ, ಹೆಚ್ಚಿನ ತಾಪಮಾನ ರಕ್ತದಲ್ಲಿರುವ ಶಾಖದಿಂದ ಬಾಷ್ಪೀಕರಣವಾಗಿ, ದೇಹದ ಶಾಖನಷ್ಟವಾಗಿ, ದೇಹದ ತಾಪಮಾನ ಇಳಿಮುಖವಾಗಿ ಸಮಸ್ಥಿತಿ ತಲುಪುತ್ತದೆ.

3. ಮೇಲುಸಿರು ಸೆಳೆ (ಪ್ಯಾಂಟಿಂಗ್): ಇದು ಮನುಷ್ಯೇತರ ಸ್ತನಿಗಳು (ಉದಾ: ನಾಯಿ) ಉಸಿರಾಟದ ಗತಿಯನ್ನು ಹೆಚ್ಚಿಸಿ, ಅಂದರೆ ಮೇಲುಸಿರಿನ ಸೆಳೆತದಿಂದ ನಿಶ್ವಾಸದ ಗಾಳಿಯನ್ನು ಹೆಚ್ಚಿಸಿ, ದೇಹದ ಹೆಚ್ಚಿನ ಶಾಖವನ್ನು ಕಳೆದುಕೊಳ್ಳುವ ಬಗೆ. ನಿಶ್ವಾಸದ ಗಾಳಿಯಲ್ಲಿ ನೀರಿನ ಆವಿ ಇರುತ್ತದೆ. ಇದು ಶ್ವಾಸಕೋಶಗಳಲ್ಲಿ ನೀರಿನ ಬಾಷ್ಪೀಕರಣದಿಂದ ಉತ್ಪತ್ತಿಯಾಗಿ ನಿಶ್ವಾಸದ ಗಾಳಿಯ ಮುಖಾಂತರ ವಾತಾವರಣವನ್ನು ಸೇರುತ್ತದೆ. ದೇಹದಲ್ಲಿ ಹೆಚ್ಚಿನ ಶಾಖವಿದ್ದಾಗ ಮೇಲುಸಿರನ್ನು ಹೆಚ್ಚಿಸಿ, ನೀರಿನ ಬಾಷ್ಪೀಕರಣವನ್ನು ಹೆಚ್ಚಿಸಿ, ಅನಗತ್ಯವಾದ ಶಾಖವನ್ನು ಈ ಪ್ರಾಣಿಗಳು ಕಳೆದುಕೊಳ್ಳುತ್ತವೆ.

ಈ ಬಗೆಯ ಶಾಖದಲ್ಲಿ ಅತಿವೇಗದಿಂದ ಓಡುವ ಪ್ರಾಣಿಗಳಲ್ಲಿ (ಉದಾ: ಜಿಂಕೆ, ಗೆಝೆಲ್) ದೇಹದ ಇತರ ಭಾಗಗಳು ಹೆಚ್ಚಿನ ಉಷ್ಣತೆ ಹೊಂದಿದ್ದರೂ, ಮಿದುಳನ್ನು ತಂಪಾಗಿಡಲು ಸಹಾಯಕವಾಗಿದೆ. ಈ ಪ್ರಾಣಿಗಳಲ್ಲಿ ಓಡುವಿಕೆಯಿಂದ ಅತಿಶಾಖ ಉತ್ಪನ್ನವಾಗಿ, ಅದು ದೇಹದ ತಾಪಮಾನವನ್ನು ಸಾಮಾನ್ಯ ಮಟ್ಟಕ್ಕಿಂತ 2–3$^0$ ಸೆ. ಹೆಚ್ಚಿಸುತ್ತದೆ. ಮಿದುಳಿನ ತಾಪಮಾನದಲ್ಲಿ ಇಷ್ಟು ವೃದ್ಧಿಯಾದರೆ, ಅದು ಪ್ರಾಣಿಯ ಉಳಿವಿಗೆ ಕಂಟಕವಾಗುತ್ತದೆ. ಈ ಪ್ರಾಣಿಗಳಲ್ಲಿ ತಲೆಬುರುಡೆಯ ಬುಡದಲ್ಲಿ ಮಿದುಳಿಗೆ ರಕ್ತ ಪೂರೈಸುವ ಅಪಧಮನಿಯು ಹಲವಾರು ಸಣ್ಣ ಸಣ್ಣ ನಾಳಗಳಾಗಿ ವಿಭಜಿಸಿ, ಜಾಲಂದ್ರವಾಗಿ, ಅವು ಮತ್ತೆ ಕೂಡಿಕೊಂಡು, ಒಂಟಿನಾಳವಾಗಿ ಮಿದುಳನ್ನು ಸೇರುತ್ತದೆ. ಈ ಜಾಲಂದ್ರ ಮೂಗಿನ ಹೊರಳೆಗಳಿಂದ ಬರುವ ರಕ್ತದಿಂದ ಸುತ್ತುವರೆದಿದೆ. ಮೇಲುಸಿರು ಸೆಳೆತದಿಂದ ಮೂಗಿನ ಹೊರಳೆಗಳಿಂದ ಹಿಂದಿರುಗುವ ರಕ್ತವು ತನ್ನ ಶಾಖವನ್ನು ಕಳೆದುಕೊಂಡು ಶೀತಲವಾಗಿರುತ್ತದೆ. ಈ ರಕ್ತಕ್ಕೆ ಅಭಿಧಮನಿ ಜಾಲಂದ್ರದಲ್ಲಿಯ ಬಿಸಿರಕ್ತದಿಂದ ಶಾಖದ ವಿನಿಮಯವಾಗಿ, ಅಭಿಧಮನಿಯ ರಕ್ತವು ಕಡಿಮೆ ತಾಪಮಾನಕ್ಕೆ ಇಳಿದು, ಮಿದುಳನ್ನು ಸೇರಿ, ಅದರ ತಾಪಮಾನವನ್ನು ದೇಹದ ಇತರ ಭಾಗಗಳಿಗಿಂತ ಕೆಳಮಟ್ಟದಲ್ಲಿಡಲು ಸಹಾಯಕವಾಗಿದೆ. ಇಂತಹ ವ್ಯವಸ್ಥೆ ಇರದಿದ್ದರೆ, ಅತಿ ವೇಗದಿಂದ ಓಡುವ ಪ್ರಾಣಿಗಳಲ್ಲಿ ಮಿದುಳಿನ ತಾಪಮಾನವು (ಓಡುತ್ತಿರುವಾಗ) ಸಹನೆಯ ಮಟ್ಟ (ಟಾಲರೆನ್ಸ್ ಲಿಮಿಟ್) ಮೀರಿ ಸಾವು ಸಂಭವಿಸಬಹುದಿತ್ತು.

ಅತಿಯಾದ ಪರಿಸರದ ತಾಪಮಾನ ಹಾಗು ನೀರಿನ ಅಭಾವಗಳಿರುವ ಮರುಭೂಮಿಗಳು ಸಮತಾಪಿಗಳ ತಾಪಮಾನ ನಿಯಂತ್ರಣಕ್ಕೆ ಸವಾಲಾಗಿವೆ. ಏಕೆಂದರೆ ಪರಿಸರದ ತಾಪಮಾನ ದೇಹಕ್ಕಿಂತ ಜಾಸ್ತಿಯಾಗಿರುವಾಗ, ದೇಹದಿಂದ ನೀರಿನ ಬಾಷ್ಪೀಕರಣ ಮಾತ್ರ ದೇಹದ ಹೆಚ್ಚಿನ ಶಾಖವನ್ನು ಕಳೆದುಕೊಳ್ಳಲು ಉಪಯುಕ್ತಮಾರ್ಗವಾಗಿದ್ದು, ಕುಡಿಯುವ ನೀರಿನ ಅಭಾವವಿದ್ದರೆ, ಈ ತಂತ್ರವನ್ನು ಉಪಯೋಗಿಸಿ ಹೆಚ್ಚಿನ ಶಾಖವನ್ನು ಕಳೆದುಕೊಳ್ಳಲಾಗುವುದಿಲ್ಲ. ಮರುಭೂಮಿಯ ಪರಿಸರಕ್ಕೆ ಅತ್ಯುತ್ತಮವಾಗಿ ಹೊಂದಿಕೊಂಡಿರುವ ಒಂಟೆ, ಈ ಸಮಸ್ಯೆಯನ್ನು ಯಶಸ್ವಿಯಾಗಿ ಪರಿಹರಿಸಿಕೊಂಡಿದೆ. ಹಗಲಿನಲ್ಲಿ ವಾತಾವರಣದ ತಾಪಮಾನ ಹೆಚ್ಚಿರುವಾಗ, ಒಂಟೆಯು ನೀರನ್ನು ಬಾಷ್ಪೀಕರಿಸದೆ, ಹೆಚ್ಚಿನ ಶಾಖವನ್ನು ದೇಹದಲ್ಲಿ ಶೇಖರಿಸುತ್ತದೆ. ಒಂಟೆಯ ದೇಹದ ಗಾತ್ರ ದೊಡ್ಡದಾಗಿರುವುದರಿಂದ, ತಾಪಮಾನವನ್ನು ಹೆಚ್ಚಿಸುವುದರಿಂದ ಅಪಾರ ಶಾಖವನ್ನು ದೇಹದಲ್ಲಿ ಶೇಖರಿಸಬಹುದು. ದೇಹದ ತಾಪಮಾನದಲ್ಲಿಯ ಈ ಹೆಚ್ಚಳ ದೇಹದ ಒಳಿತಿಗೆ ಅಷ್ಟೇನೂ ಕಂಟಕವಲ್ಲ. ಒಂದು ವೇಳೆ ಇಷ್ಟು ಶಾಖವನ್ನು ಒಂಟೆ ನೀರಿನ ಬಾಷ್ಪೀಕರಣದಿಂದ ಕಳೆದುಕೊಂಡರೆ, ನೀರಿನ ಸೇವನೆ ಅತ್ಯವಶ್ಯಕ. ಆದರೆ, ಸಾಯಂಕಾಲ ಮತ್ತು ರಾತ್ರಿ ವೇಳೆ ಪರಿಸರದ ತಾಪಮಾನ ಕಡಿಮೆಯಾದಾಗ, ನೀರಿನ ವೆಚ್ಚವಿಲ್ಲದೆ, ಸಂವಹನ (ಕಂಡಕ್ಷನ್) ಮತ್ತು ವಿಕಿರಣ (ರೇಡಿಯೇಶನ್) ಗಳ ಮೂಲಕ, ಶೇಖರವಾಗಿದ್ದ ಶಾಖವನ್ನು ಕಳೆದುಕೊಂಡು ತನ್ನ ದೇಹದ ಸಾಮಾನ್ಯ ತಾಪಮಾನಕ್ಕೆ ಹಿಂದಿರುಗುತ್ತದೆ. ಈ ತಂತ್ರದಿಂದ ಒಂಟೆಯು ದೇಹದ ಉಷ್ಣತೆಯ ನಿಯಂತ್ರಣ ಮತ್ತು ನೀರಿನ ಉಳಿತಾಯ ಎರಡನ್ನು ಸಾಧಿಸಿ ಮರುಭೂಮಿಯಲ್ಲಿ ನೀರು ಕುಡಿಯದೇ ಕೆಲವು ದಿನ ಪ್ರಯಾಣಿಸುತ್ತದೆ. ಇದೇ ಪರಿಸರದಲ್ಲಿ ಗಂಟೆಗೊಮ್ಮೆ ನೀರು ಕುಡಿಯದಿದ್ದರೆ ಮನುಷ್ಯ ಬದುಕಲು ಸಾಧ್ಯವಿಲ್ಲ. ನೀರು ಕುಡಿಯದೆ ಕೆಲವು ದಿನಗಳಾದ ಮೇಲೆ ನೀರು ದೊರೆತಾಗ, ಒಂಟೆ ತನ್ನ ದೇಹದ ತೂಕದ 1/3 ಭಾಗಕ್ಕೆ ಸಮನಾದಷ್ಟು (ಸು. 200 ಲೀ) ನೀರನ್ನು ಕುಡಿದು ನಿರ್ಜಲವಾದ (ಡಿಹೈಡ್ರೇಟೆಡ್) ಕೋಶಗಳು ಸಾಮಾನ್ಯ ಸ್ಥಿತಿಗೆ (ಹೈಡ್ರೇಟೆಡ್) ಮರಳುವಂತೆ ಮಾಡುತ್ತದೆ. ಆದರೆ, ದೇಹದಲ್ಲಿ ನೀರನ್ನು ಶೇಖರಿಸಿಟ್ಟುಕೊಳ್ಳುವಂತೆ ಒಂಟೆಯ ದೇಹದೊಳಗೆ ಯಾವುದೇ ವಿಶೇಷ ರಚನೆಗಳಿಲ್ಲ.

ಕೆಲವು ಚಿಕ್ಕ ಗಾತ್ರದ ಸ್ತನಿಗಳೂ ಮರುಭೂಮಿಯಲ್ಲಿ ಜೀವಿಸಿದ್ದು, ಅವು ಒಂಟೆಯ ಹಾಗೆ ದೇಹದ ಶಾಖವನ್ನು ಶೇಖರಿಸಲು ಸಾಧ್ಯವಿಲ್ಲ. ಏಕೆಂದರೆ ದೇಹದ ಗಾತ್ರ ಚಿಕ್ಕದಾಗಿರುವುದರಿಂದ ಹೆಚ್ಚಿನ ಶಾಖವನ್ನು ಶೇಖರಿಸಲಾಗುವುದಿಲ್ಲ. ಕಾರಣ ಇವು ಹಗಲಿನಲ್ಲಿ ಕ್ರಿಯಾಶೀಲವಾಗಿದ್ದರೆ, ತಾಪಮಾನವನ್ನು ಸಮಸ್ಥಿತಿಯಲ್ಲಿಡಲು, ನೀರನ್ನು ಬಾಷ್ಪೀಕರಿಸಬೇಕಾಗುತ್ತದೆ. ಆದರೆ ನೀರಿನ ಅಭಾವವಿರುವಾಗ, ಈ ತಂತ್ರವನ್ನು ಉಪಯೋಗಿಸುವ ಹಾಗಿಲ್ಲ. ಕಾರಣ ಇಂಥ ಪ್ರಾಣಿಗಳು ಹಗಲಿನಲ್ಲಿ ತಮ್ಮ ಭೂಗತ ಬಿಲಗಳಲ್ಲಿ (ಕಡಿಮೆ ತಾಪಮಾನ) ಅಡಗಿಕೊಂಡು, ರಾತ್ರಿ ಹೊತ್ತು ಪರಿಸರದ ಉಷ್ಣತೆ ಕಡಿಮೆ ಇರುವಾಗ, ಹೊರಗಡೆ ಬಂದು, ಕ್ರಿಯಾಶೀಲವಾಗಿ ತಮ್ಮ ಜೈವಿಕ ಅಗತ್ಯಗಳನ್ನು ಪೂರೈಸಿಕೊಳ್ಳುತ್ತವೆ. (ಎಚ್.ಎನ್.ವೈ.)

**ಸಮಪಾದಿ:** ಸಂದಿಪದಿ ವಂಶದ ಸಮಪಾದವುಳ್ಳ ಜೀವಿಗಳು. ಇವು ಮಲಕೋಸ್ಟ್ರೇಕ ವರ್ಗದ ಸದಸ್ಯರು. ಮನುಷ್ಯನ ಕೂದಲಿಗೂ, ಚರ್ಮಕ್ಕೂ ಹತ್ತುವ ಹೇನುಗಳು ಪರೋಪಜೀವಿಗಳು. ಕೆಲವು ಮರದ ಸಂದುಗಳಲ್ಲಿ, ಕಲ್ಲಿನ ಬಿರುಕುಗಳಲ್ಲಿ ವಾಸಿಸುತ್ತವೆ. ಕೆಲವು ಕಡಿಮೆ ಆಳದ ನೀರಿನಲ್ಲಿ, ನಿರ್ಮಲ ನೀರಿನಲ್ಲಿರುವ ಜೊಂಡು, ಸಸ್ಯಗಳ ಪೊರೆಗಳಲ್ಲಿ ಮತ್ತು ಸಮುದ್ರದಲ್ಲಿ ಕೊಳೆಯುವ ಸಸ್ಯಗಳ ಮಧ್ಯೆ ಬೆಳೆಯುತ್ತವೆ. ಸಮುದ್ರದಲ್ಲಿರುವ ಪ್ರಾಣಿಗಳು 3 ಮಿಮೀ ಉದ್ದವಿರುತ್ತವೆ.

ಹಿಂದಿನ ಏಳುಭಾಗಗಳು ಬಿಡಿಯಾಗಿರುತ್ತವೆ. ಉದರದ ಮೇಲಿರುವ 3 ಭಾಗಗಳು ಚಿಕ್ಕವಾಗಿದ್ದು, ಒಂದಾಗಿ ಸೇರಿರುತ್ತವೆ. ಇವುಗಳಲ್ಲಿ ಮೈಕಟ್ಟಿನ ಪಕ್ಕ ವಿಸ್ತರಣೆಯಾಗಿದೆ. ಕಣ್ಣುಗಳು ಸರಳ ಸಂಯುಕ್ತವಾಗಿವೆ. ಬಿಗಿಯಾಗಿರುವ ವಕ್ಷಸ್ಥಳದ ಉಪಾಂಗಗಳು ದವಡೆಯ ಎಲುಬಿನಂತೆ ಮಾರ್ಪಾಡಾಗಿವೆ.

ಜೀರ್ಣಾಂಗಗಳು ಉದರಕ್ಕೆ ವಿಸ್ತರಿಸಿವೆ. ಇವು ಹೃದಯವಿಲ್ಲದ ಪ್ರಾಣಿಗಳು. ಜನನೇಂದ್ರಿಯಗಳು ವಿಭಿನ್ನವಾಗಿವೆ. ಜನನೇಂದ್ರಿಯ ಗ್ರಂಥಿಗಳಿಂದ ಉತ್ಪತ್ತಿಯಾದ ಪದಾರ್ಥಗಳು ಒಂದು ಕೇಂದ್ರ ನಾಳಕ್ಕೆ ಸಾಗುತ್ತವೆ. ಮೊಟ್ಟೆಗಳು ರಕ್ತನಾಳಗಳಲ್ಲಿ ಬೆಳೆದು, ಅನಂತರ ರೂಪಾಂತರ ಹೊಂದುತ್ತವೆ. ಸಣ್ಣ ಮರಿಗಳು ವಿಚಿತ್ರವಾದ ಹುಳುಗಳಂತಿರುತ್ತವೆ. ಇವು ರಕ್ತದ ಚೀಲದಲ್ಲಿರುತ್ತವೆ. ಪೂರ್ಣ ಬೆಳವಣಿಗೆಯ ಅನಂತರ ಬೇರೆಯಾಗುತ್ತವೆ. (ಎಸ್.ಕೆ.ಎಚ್.)

**ಸಮಸ್ಥಿತಿ:** ಬಾಹ್ಯ ಪರಿಸರದಲ್ಲಿಯ ಬದಲಾವಣೆಗಳು ಆಂತರಿಕ ಪರಿಸರದ ಮೇಲೆ ಪರಿಣಾಮ ಬೀರಿ ಆಂತರಿಕ ಪರಿಸರದ ಅಸಮತೋಲನವಾದಾಗ ಸಮರ್ಪಕ ಪರಿಹಾರೋಪಾಯಗಳಿಂದ ಆಂತರಿಕ ಪರಿಸರದ ಸಮತೋಲನವನ್ನು ಕಾಯ್ದುಕೊಳ್ಳುವ ಕ್ರಿಯೆ (ಹೋಮಿಯೋಸ್ಟಾಸಿಸ್). ದೇಹದಲ್ಲಿರುವ ಅಂಗಾಂಶಗಳು ಹಾಗೂ ಜೀವಕೋಶಗಳು ಆರೋಗ್ಯ ಮತ್ತು ಉತ್ತಮ ಸ್ಥಿತಿಯಲ್ಲಿ ಕಾರ್ಯನಿರ್ವಹಿಸಲು ಅವುಗಳ ಸುತ್ತಲೂ ಇರುವ ದೇಹ ದ್ರವವು ಕಾರಣವಾಗಿರುತ್ತದೆ. ಅದರಲ್ಲಿಯ ಉಷ್ಣತೆ, ಪಿ.ಎಚ್, ಸೋಡಿಯಂ, ಪೊಟ್ಯಾಸಿಯಂ, ಮೆಗ್ನೀಶಿಯಂನಂಥ ಲವಣಾಂಶಗಳು, ಹಾರ್ಮೋನು, ಇವುಗಳ ಪ್ರಮಾಣದಲ್ಲಿ ಹೆಚ್ಚು-ಕಡಿಮೆಯಾದಲ್ಲಿ, ದೇಹಕ್ರಿಯೆಯಲ್ಲೂ ವ್ಯತ್ಯಯ ಉಂಟಾಗುತ್ತದೆ. ಈ ಸಮತೋಲನದ ಮಹತ್ವವನ್ನು ಕ್ಲಾಡ್ ಬರ್ನಾರ್ಡ್ ಎಂಬ ಫ್ರೆಂಚ್ ವಿಜ್ಞಾನಿ 19ನೆಯ ಶತಮಾನದಲ್ಲಿಯೆ ಊಹಿಸಿದ್ದ. ಅನಂತರ ಅಮೆರಿಕಾದ ವಾಲ್ಟರ್ ಬ್ರಾಡ್‌ಫೋರ್ಡ್ ಕೆನನ್ ಎಂಬ ಶರೀರ ಶಾಸ್ತ್ರಜ್ಞ 20ನೆಯ ಶತಮಾನದ ಪೂರ್ವದಲ್ಲಿ ಈ ತತ್ವವನ್ನು ಸಮಸ್ಥಿತಿ (ಹೋಮಿಯಾಸ್ಟೆಸಿಸ್) ಎಂದು ಹೆಸರಿಸಿದ. ಜೀವಿಯ ಉಳಿವಿಗೆ ಇದು ಅತ್ಯವಶ್ಯಕವಾಗಿದೆ.

ಆಂತರಿಕ ಪರಿಸರ ಕದಲಿಸುವಂಥ ಅನೇಕ ಕ್ರಿಯೆಗಳು ಪ್ರತಿನಿತ್ಯ ನಡೆಯುತ್ತಲೇ ಇರುತ್ತವೆ. ಉದಾಹರಣೆಗಾಗಿ ಸಿಹಿಪದಾರ್ಥವನ್ನು ತಿಂದಾದಮೇಲೆ ರಕ್ತ ಸಕ್ಕರೆ ಗ್ಲುಕೋಸ್ ಪ್ರಮಾಣದ ಹೆಚ್ಚಳ, ಬಹಳಷ್ಟು ಬೆವರಿದಾಗ ಶರೀರದಲ್ಲಿರುವ ಸೋಡಿಯಂ ಲವಣಾಂಶದ ಇಳಿಕೆ, ಅಧಿಕ ದೇಹ ಶ್ರಮದಿಂದ ದೇಹದಲ್ಲಿ ಅಧಿಕ ಶಾಖೋತ್ಪತ್ತಿ, ಮುಂತಾದವು. ಇಂತಹ ವ್ಯತ್ಯಯಗಳು ಒದಗಿದಾಗ ಸಮರ್ಪನ ಪರಿಹಾರೋಪಾಯಗಳಿಂದ ದೇಹವು ತನ್ನ ಅಂತಃ ಪರಿಸರವನ್ನು ಒಂದೇ ಮಟ್ಟದಲ್ಲಿ ಕಾಯ್ದುಕೊಳ್ಳುವುದೇ ಸಮಸ್ಥಿತಿ.

ಒಂದೆರಡು ಉದಾಹರಣೆಗಳೊಂದಿಗೆ ಈ ಕ್ರಿಯೆಯನ್ನು ವಿವರಿಸಬಹುದು. ಬಾಹ್ಯ ಪರಿಸರದಲ್ಲಿ ಉಷ್ಣತೆ ಹೆಚ್ಚಿದಾಗ, ಶಾಖ ದೇಹಕ್ಕೆ ಹರಡಿ ದೇಹದ ಉಷ್ಣತಾಮಾನ ಹೆಚ್ಚಾಗುತ್ತದೆ. ಆಗ ಮೆದುಳಿನ ಭಾಗವಾದ ಹೈಪೊತೆಲಮಸ್, ಏರುತ್ತಿರುವ ದೇಹದ ಉಷ್ಣತೆಯನ್ನು ಅದರಲ್ಲಿ ಹರಿಯುತ್ತಿರುವ ರಕ್ತದ ಉಷ್ಣತೆಯಲ್ಲಾಗುವ ಬದಲಾವಣೆಗಳಿಂದ ಹಾಗು ಉಷ್ಣತೆ ಗ್ರಾಹಕ (ಥರ್ಮೊರಿಸೆಪ್ಟರ್ಸ್) ಗಳು ಕಳುಹಿಸುವ ಆವೇದನೆಗಳಿಂದ ಗ್ರಹಿಸಿ, ದೇಹದ ಉಷ್ಣತೆಯನ್ನು ಇಳಿಸಲು ಸಮರ್ಪಕ ಕ್ರಿಯೆಗಳನ್ನು ಪ್ರಚೋದಿಸುತ್ತದೆ. ಆಗ, ಸ್ವೇದಗ್ರಂಥಿಗಳಿಂದ ಬೆವರು ಉತ್ಪನ್ನವಾಗಿ ಅದರಲ್ಲಿರುವ ನೀರಿನ ಬಾಷ್ಪೀಕರಣದಿಂದ, ಹೆಚ್ಚಿನ ದೇಹದ ಶಾಖವು ಕಳೆದುಹೋಗಿ, ಉಷ್ಣತೆ ಸಮಸ್ಥಿತಿಗೆ ಮರಳುತ್ತದೆ. ಪರಿಸರದ ಉಷ್ಣತೆ ಬಹಳ ಕಡಿಮೆಯಾದಾಗ, ದೇಹ ಶಾಖವನ್ನು ವಾತಾವರಣಕ್ಕೆ ಕಳೆದುಕೊಂಡು, ದೇಹದ ಉಷ್ಣತಾಮಾನ ಕೆಳಮಟ್ಟಕ್ಕಿಳಿದಾಗ, ಹೈಪೊಥೆಲಮಸ್ ಕೆಲವು ಹಾರ್ಮೋನುಗಳ ಮೂಲಕ ದೇಹದಲ್ಲಿ ಶಾಖೋತ್ಪತ್ತಿಯನ್ನು ಪ್ರಚೋದಿಸಿ, ದೇಹದ ಉಶ್ಣತಾಮಾನವನ್ನು ಏರಿಸಿ, ಸಾಮಾನ್ಯ ಸ್ಥಿತಿಗೆ (ನಾರ್ಮಲ್) ಮರುಕಳಿಸುವಂತೆ ಮಾಡುತ್ತದೆ. ಇದೆ ದೇಹದ ತಾಪಮಾನದ ಸಮಸ್ಥಿತಿ ಕ್ರಿಯೆ.

ಊಟವಾದ ಅನಂತರ ರಕ್ತದ ಗ್ಲೂಕೋಸ್ ಪ್ರಮಾಣ ಹೆಚ್ಚಾದಾಗ, ಲೆಂಗರ್‌ಹೆನ್ಸನ ಪುಟ್ಟದ್ವೀಪಗಳು ಇದನ್ನು ಗ್ರಹಿಸಿ, ಇನ್ಸುಲಿನ್ ಸ್ರವಿಸುತ್ತದೆ. ಇನ್ಸುಲಿನ್, ಗ್ಲುಕೋಸ್ ವಿವಿಧ ಕೋಶಗಳನ್ನು ಪ್ರವೇಶಿಸುವಂತೆ, ಹಾಗು ಯಕೃತ್ತಿನಲ್ಲಿ ಗ್ಲೈಕೂಜನ್ ಆಗಿ ಅದರ ಪರಿವರ್ತನೆಗೆ ಪ್ರಚೋದಿಸಿ ರಕ್ತದ ಗ್ಲೂಕೋಸ್ ಪ್ರಮಾಣವನ್ನು ತಗ್ಗಿಸುವುದರಿಂದ ರಕ್ತದ ಗ್ಲೂಕೋಸ್ ಮಟ್ಟ ಸಾಮಾನ್ಯ ಮಟ್ಟಕ್ಕೆ ಮರಳುತ್ತದೆ. ಇದರ ವಿರುದ್ಧವಾಗಿ, ಉಪವಾಸದಿಂದ ರಕ್ತದ ಗ್ಲುಕೋಸ್ ಪ್ರಮಾಣ ತಗ್ಗಿ, ಪ್ರಾಣಾಂತಿಕ ಅಪಾಯವಿರುವಾಗ, ಲೆಂಗರ್‌ಹೆನ್ಸನ ಪುಟ್ಟದ್ವೀಪಗಳು ಗ್ಲೂಕೊಗಾನ್ ಹಾರ್ಮೋನನ್ನು ಸ್ರವಿಸುತ್ತವೆ. ಅದು ಯಕೃತ್ತಿನಲ್ಲಿ ಶೇಖರಣೆಯಾದ ಗ್ಲೈಕೋಜನನನ್ನು ಗ್ಲುಕೋಸ್ ಆಗಿ ಪರಿವರ್ತಿಸಿ, ರಕ್ತಕ್ಕೆ ಸೇರ್ಪಡೆಯಾಗುವಂತೆ ಮಾಡಿ, ರಕ್ತದ ಗ್ಲೂಕೋಸ್ ಪ್ರಮಾಣ ಹೆಚ್ಚಿಸಿ ಸಾಮಾನ್ಯ ಮಟ್ಟಕ್ಕೆ ಮರುಳಿಸುತ್ತದೆ. ಇಂಥ ಹಲವಾರು ಸಮಸ್ಥಿತಿ ಕಾಯ್ದುಕೊಳ್ಳುವ ವಿಧಾನಗಳು ದೇಹದಲ್ಲಿದ್ದು ಅಂತಃಪರಿಸರ ಸಮತೋಲನದಲ್ಲಿರುತ್ತದೆ.

(ಎಸ್.ಬಿ.ಪಿ.)

**ಸಮುದ್ರದ ಹೂಳು:** ಸಮುದ್ರದ ತಳದಲ್ಲಿ ಪ್ರಾಚೀನ ಕಾಲದಿಂದಲೂ ಇರುವ ಆದಿಮ ಪ್ರಾಣಿಗಳ ಹೊರಕವಚ ಮತ್ತು ಚಿಪ್ಪಿನಿಂದ ಸಂಚಯವಾಗಿರುವ ವಸ್ತು. (ಊಝುಗಳು). ಸಮುದ್ರ ತಳದ ಮೂರನೇ ಒಂದು ಭಾಗ (800 ಮಿಲಿಯ ಚಕಿಮೀ.) ಈ ಹೂಳಿನಿಂದ ಆವೃತವಾಗಿದೆ. ಸಾವಿರಾರು ಅಡಿಗಳಿಗಿಂತ ಹೆಚ್ಚಾಗಿ ಪದರ ಪದರವಾಗಿ ಹರಡಿದೆ.

ಪ್ರೊಟೋಜೊವಾ ವಂಶ, ಸಾರ್ಕೊಡೀನ ವರ್ಗದ ರೇಡಿಯೋಲೇರಿಯ ಮತ್ತು ಫೊರಾಮಿನಿಫೆರ ಗಣಕ್ಕೆ ಸೇರಿದ ಸೂಕ್ಷ್ಮ ಏಕಕೋಶ ಜೀವಿಗಳಿಂದ ಆಗಿದೆ. ಪ್ರಾಯಶಃ ಭೂಮಿಯ ಮೇಲೆ ದೊರೆಯುವ ಅತ್ಯಂತ ಹಳೆಯ ಪಳೆಯುಳಿಕೆಗಳು. ಆದರೂ ಈಗಿರುವ ಪ್ರಾಣಿಗಳೊಂದಿಗೆ ಏಕರೂಪ ಸಾದೃಶ್ಯವನ್ನು ಹೊಂದಿವೆ. ಕೆಲವಂತೂ ಬದಲಾವಣೆಯನ್ನು ಹೊಂದದೆ ಹಾಗೆಯೇ ಉಳಿದುಕೊಂಡು ಬಂದಿವೆ. ಈಗಿರುವ ಫೊರಾಮಿನಿಫೆರಗಳು 50 ಮಿಮೀ ವ್ಯಾಸ ಹೊಂದಿದ್ದರೆ ಅನಾದಿಕಾಲದ ಫೊರಾಮಿನಿಫೆರಗಳು 100 ಮಿಮೀ ಗಿಂತ ಹೆಚ್ಚಾದ ವ್ಯಾಸವನ್ನು ಹೊಂದಿವೆ.

ಕೋಟ್ಯಾಂತರ ವರ್ಷಗಳಿಂದ ಈ ಸೂಕ್ಷ್ಮಜೀವಿಗಳ ಹೊರಕವಚ ಮತ್ತು ಚಿಪ್ಪು ಸತತವಾಗಿ ಮುಳುಗಿ ಸಿಲಿಕ ಮತ್ತು ಕ್ಯಾಲ್ಸಿಯಂ ವಸ್ತುವಿನಿಂದಾದ ವಿಶಿಷ್ಟ ರೀತಿಯ ಹೂಳಾಗಿ ಸಂಚಯವಾಗಿವೆ. ರೇಡಿಯೋಲೇರಿಯಗಳ ಚಿಪ್ಪು ಸಿಲಿಕ ವಸ್ತುವಿನಿಂದಾಗಿದ್ದರೆ ಗ್ಲೋಬಿಜರೈನದ ಚಿಪ್ಪು ಕ್ಯಾಲ್ಸಿಯಂ ಸಂಯುಕ್ತ ವಸ್ತುವಿನಿಂದಾಗಿರುತ್ತದೆ. ಸಿಲಿಕ ಚಿಪ್ಪುಗಳು ನೀರಿನಲ್ಲಿ ಕಡಿಮೆ ಕರಗಿದರೆ ಕ್ಯಾಲ್ಸಿಯಂ ಸಮುದ್ರದ ನೀರಿನಲ್ಲಿ ಕರಗಿ, ಸಂಯೋಗವಾಗಿ, ಸುಣ್ಣವಾಗಿ ಮಾರ್ಪಾಟು ಹೊಂದುತ್ತದೆ. ಆದರೂ ಈ ಚಿಪ್ಪು ಹೊರಕವಚಗಳು ತಮ್ಮ ರೂಪವನ್ನು ಕಳೆದುಕೊಳ್ಳುವುದಿಲ್ಲ. ರೇಡಿಯೋಲೇರಿಯಗಳಿಂದಾದ ಹೂಳು ಪೆಸಿಫಿಕ್ ಮತ್ತು ಹಿಂದೂ ಮಹಾಸಾಗರದಲ್ಲಿ 4500 - 6000 ಮೀ ಆಳದಲ್ಲಿ, ಸುಮಾರು 30-50 ಮಿಲಿಯ ಚಕಿಮೀ ಹಬ್ಬಿದೆ. ಕೆಲವು ಸಂದರ್ಭಗಳಲ್ಲಿ ಈ ಹೂಳು ಗಟ್ಟಿಯಾಗಿ ಚೆಸ್ಟ್ ಶಿಲೆಗಳಾಗಿ ಮಾರ್ಪಾಟು ಹೊಂದುತ್ತದೆ. ಸಮುದ್ರದ ಈ ಹೂಳು ಫೊರಾಮಿನಿಫೆರ ಮತ್ತು ರೇಡಿಯೋಲೇರಿಯಗಳ ಚಿಪ್ಪಲ್ಲದೆ ಡಯಾಟಂ ಸಸ್ಯದ ಅವಶೇಷಗಳಿಂದಲೂ ಆಗಿರುತ್ತದೆ. ಈ ರೀತಿಯ ಸಸ್ಯಜನ್ಯ ಹೂಳು ಉತ್ತರ ಸಮುದ್ರದ ತಳದಲ್ಲಿ ಸುಮಾರು 20 ಮಿಲಿಯ ಚಕಿಮೀ. ಗಳಷ್ಟು ಪ್ರದೇಶವನ್ನು ಆವರಿಸಿದೆ.

ಒಂದು ಗ್ರಾಂ ಸಮುದ್ರದ ಹೂಳಿನಲ್ಲಿ ಸುಮಾರು 50 ಸಾವಿರದಷ್ಟು ಫೊರಾಮಿನಿಫೆರ ಚಿಪ್ಪುಗಳಿರುತ್ತವೆ. ಅಲೆಗಳ ಹೊಡೆತ, ನೀರಿನ ಚಲನೆ ಮತ್ತು ಒತ್ತಡಕ್ಕೆ ಸಿಗುವುದರಿಂದ ಇವು ಸಮುದ್ರದ ಮೇಲಿಂದ ಸಾವಿರಾರು ಅಡಿ ಆಳಕ್ಕೆ ತಲುಪಲು ತುಂಬಾ ಸಮಯ ಬೇಕು. ಫೊರಾಮಿನಿಫೆರ ಹೂಳು ಸಮುದ್ರದ ತಳದಲ್ಲಿ ಸಂಗ್ರಹವಾಗಿ ಕ್ರಮೇಣ ಸೀಮೇಸುಣ್ಣದ ನಿಕ್ಷೇಪಗಳಾಗುತ್ತದೆ. ಈ ನಿಕ್ಷೇಪಗಳು ಭೂಮಿಯ ಚಲನೆ, ಒಳಭಾಗದ ಕಾರ್ಯಚಟುವಟಿಕೆಯ ಫಲವಾಗಿ ಭೂಮಿಯ ಮೇಲ್ಭಾಗಕ್ಕೆ ಬಂದು ಸೀಮೇಸುಣ್ಣದ ಬೆಟ್ಟಗಳಾಗುತ್ತವೆ. ಈ ಹೂಳನ್ನು ಟೂತ್‌ಪೇಸ್ಟ್ ಮುಂತಾದ ಶೃಂಗಾರ ಸಾಮಗ್ರಿಗಳ ತಯಾರಿಕೆಯಲ್ಲಿ ಮೂಲವಸ್ತುವಾಗಿಯೂ ಉಪಯೋಗಿಸುತ್ತಾರೆ. ಜೈವಿಕ ವಸ್ತುಗಳ ಸಂಚಯನ, ಸಂಗ್ರಹ ಮತ್ತು ಭೂಮಿಯ ಗರ್ಭದಲ್ಲಿ ಅವು ಹೊಂದುವ ಮಾರ್ಪಾಡಿನ ಫಲವಾಗಿ ಪೆಟ್ರೋಲಿಯಂ ಉತ್ಪತ್ತಿಯಾಗುತ್ತದೆ. ಈ ಪೆಟ್ರೋಲಿಯಂ ನಿಕ್ಷೇಪಗಳ ಜೊತೆಯಲ್ಲಿ ರೇಡಿಯೋಲೇರಿಯ ಮತ್ತು ಫೊರಾಮಿನಿಫೆರ ಜಾತಿಯ ಹಲವಾರು ನಿರ್ದಿಷ್ಟ ಪ್ರಭೇದಗಳಿರುವುದರಿಂದ ಅವು ಪೆಟ್ರೋಲಿಯಂ ಎಣ್ಣೆಯ ನಿಕ್ಷೇಪಗಳನ್ನು ಗುರುತಿಸಲು ಸಹಾಯಮಾಡುತ್ತವೆ. ನಮ್ಮ ಬಳಕೆಗೆ ಬೇಕಾಗುವ ಸೀಮೇಸುಣ್ಣ ಮತ್ತು ಇತರ ವಸ್ತುಗಳಿಗೆ ಮೂಲ - ಈ ಸಾಗರದ ಹೂಳು. (ಸಿ.ಎಂ.ಎಸ್.)

**ಸರೀಸೃಪಗಳು:** ಕಶೇರುಕಗಳ ಒಂದು ವರ್ಗ. ಸರೀಸೃಪಗಳ ವಿಕಾಸ ದ್ವಿಚರಿಗಳಿಂದ. 25 ಕೋಟಿ ವರ್ಷಗಳ ಹಿಂದೆ ಪೇಲಿಯೋಜೋಯಿಕ್ ಯುಗದ ಕೊನೆಯ ಕಲ್ಪದಲ್ಲಿ ಉಗಮ. ಆರಂಭ ಸರಳ. ಆದರೆ ಮುಂದೆ ಆ ವರ್ಗದಿಂದ ಸರ್ವತೋಮುಖವಾಗಿ ವಿಕಸಿಸಿದ ಉಪವರ್ಗ, ಗಣ, ಕುಟುಂಬ ಮತ್ತು ಜಾತಿಗಳು ಅವುಗಳ ದೇಹರಚನೆಯ ವೈಶಿಷ್ಟ್ಯ, ಮಿಕ್ಕೆಲ್ಲ ಪ್ರಾಣಿಗಳಿಗಿಂತ ಭಿನ್ನವಾದ ಬೃಹದಾಕಾರ, ಇವು ಸೃಷ್ಟಿಯಲ್ಲೇ ಬಲು ಕುತೂಹಲಕಾರಿ ಘಟನೆಗಳು. ಸರೀಸೃಪಗಳು ಬಾಳಿ ಮೆರೆದ ಮೀಸೊಜೋಯಿಕ್ ಯುಗದಲ್ಲಿ (225-65 ದಶಲಕ್ಷ ವರ್ಷ ಪ್ರಾಚೀನಾವಧಿ) ಸಕಲ ಭೂಪ್ರದೇಶವನ್ನೂ ಆಕ್ರಮಿಸಿದ್ದವು. ನದಿಗಳು, ಸರೋವರಗಳು, ವಾಯುಮಂಡಲ ಇವೆಲ್ಲವೂ ಸರೀಸೃಪಗಳ ಆವಾಸಸ್ಥಾನಗಳಾಗಿದ್ದುವು. ಕೆಲವು ಸಸ್ಯಾಹಾರಿಗಳಾದರೆ ಮತ್ತೆ ಕೆಲವು ಅತಿಕ್ರೂರಿಗಳಾದ ಮಾಂಸಾಹಾರಿಗಳು. ಮಾಂಸಾಹಾರಿಗಳ ಹಾವಳಿಯನ್ನು ತಡೆಯಲಾರದೆ ಆತ್ಮ ಸಂರಕ್ಷಣೆಗಾಗಿ ಚಿತ್ರವಿಚಿತ್ರವಾದ ರಕ್ಷಾಕವಚಗಳನ್ನು ಬೆಳೆಸಿಕೊಂಡ ಸರೀಸೃಪಗಳು ಕೆಲವಾದರೆ, ಪುಷ್ಕಳವಾಗಿ ಬೆಳೆದಿದ್ದ ಸಸ್ಯವರ್ಗವನ್ನು ತಿಂದು ಕೊಬ್ಬಿ ಬೃಹದಾಕಾರವಾಗಿ ಬೆಳೆದವು ಮತ್ತೆ ಕೆಲವು. ಕೆಲವು ದ್ವಿಪಾದಿಗಳಾದರೆ ಮತ್ತೆ ಕೆಲವು ಚತುಷ್ಪಾದಿಗಳು.



ಸ್ಟೆಗೊಸಾರಸ್ ಅಂಗುಲೇಟಸ್ ಜೀವಿಯ ಅಸ್ಥಿ ಪಂಜರ

ಭೂಮಿಯ ಮೇಲೆ ವೇಗವಾದ ಚಲನೆಗೆ ದೇಹದ ರಚನೆಯನ್ನು ಅಳವಡಿಸಿಕೊಂಡವು ಕೆಲವಾದರೆ ಮತ್ತೆ ಕೆಲವು ನೀರಿನಲ್ಲಿ ಈಜಲು, ಗಾಳಿಯಲ್ಲಿ ಹಾರಾಡಲು ಅನುಕೂಲಿಸುವಂತೆ ದೇಹವನ್ನು ಹೊಂದಿಸಿಕೊಂಡಂಥವು. ಈ ರೀತಿ ಬಹು ಶಾಖೋಪಶಾಖೆಯಾಗಿ ವಿಸ್ತರಿಸುತ್ತಿದ್ದ ಸರೀಸೃಪದ ಕಾಂಡದಿಂದಲೇ ಇಂದಿನ ಸ್ತನಿ ಪ್ರಾಣಿಗಳು, ಪಕ್ಷಿಗಳ ಶಾಖೆಗಳೂ ವಿಕಸಿಸಿವೆ. ದೇಹ ರಚನೆಯ ವೈಶಿಷ್ಟ್ಯದೊಂದಿಗೆ ಸಂಖ್ಯಾಪ್ರಾಬಲ್ಯವೂ ಸೇರಿ ಇವು ಪ್ರಪಂಚದ ಮೂಲೆಮೂಲೆಗಳಲ್ಲೂ ವ್ಯಾಪಿಸಿ ನಿರಂಕುಶಪ್ರಭುಗಳಾಗಿ ಮೆರೆದ ಕಾಲ ಸರೀಸೃಪಗಳ ಸುವರ್ಣಯುಗ. ವಿಸ್ಮಯ ಹುಟ್ಟಿಸುವಂಥ ಬೃಹದಾಕಾರದ ಅನೇಕಾನೇಕ ಸರೀಸೃಪಗಳು ನಿಸರ್ಗದ ಹೊಡೆತ, ಬದಲಾವಣೆಗಳೊಂದಿಗೆ ಹೆಜ್ಜೆಯಿಡಲಾಗದೆ ಅಳಿದುಹೋದವು. ಅತಿಪರಾಕ್ರಮಿಗಳು ಗತವಂಶಿಗಳಾದವು. ಈ ಭವ್ಯ ಪೂರ್ವಜರ ಸಂತತಿಗೆ ಸೇರಿದ್ದು ಇಂದಿಗೂ ಉಳಿದಿರುವ ಸರೀಸೃಪಗಳು ಕೇವಲ ಕೆಲವೇ ಆದರೂ ಅವು ಸಾಕಷ್ಟು ಕುತೂಹಲಕಾರಿಗಳಾಗಿವೆ.

ಉರಗ, ಪಕ್ಷಿ ಮತ್ತು ಸ್ತನಿ ಪ್ರಾಣಿಗಳ ಒಟ್ಟು ಹೆಸರು ಆಮ್ನಿಯೋಟ. ಈ ವರ್ಗಗಳ ಪ್ರಾಣಿಗಳ ಭ್ರೂಣಗಳನ್ನು ಆವರಿಸಿ ಆಮ್ನಿಯಾನ್ ಮತ್ತು ಅಲಂಟಾಯ್ಸ್ ಎಂಬ ಎರಡು ಮುಖ್ಯ ಭ್ರೂಣ ಪಟಲಗಳಿವೆ. ಮೊದಲಿನದು ಭ್ರೂಣಕ್ಕೆ ಒಂದು ಕೃತಕ ಜಲಾಶಯವನ್ನು ಒದಗಿಸುವುದು; ಎರಡನೆಯದು ಅದರ ಉಸಿರಾಟಕ್ಕೆ ನೆರವಾಗುತ್ತದೆ. ದ್ವಿಚರಿಗಳಿಂದ ಆಮ್ನಿಯೋಟ ವಿಕಸಿಸಿತು. ಇದರ ಕಾಂಡದಿಂದ ಎರಡು ಕಾಂಡಗಳು ಮುಖ್ಯವಾಗಿ ಕವಲೊಡೆದುವು: 1. ಥೀರಾಪ್ಸಿಡ: ಸರೀಸೃಪವರ್ಗದ ಸೈನಾಪ್ಸಿಡ ಉಪವರ್ಗದ ಗಣ. ಈ ಶಾಖೆಯಿಂದ ಸ್ತನಿ ಪ್ರಾಣಿಗಳ ಲಕ್ಷಣಗಳಿದ್ದ ಸರೀಸೃಪಗಳು ಮತ್ತು ಸ್ತನಿ ಪ್ರಾಣಿಗಳೂ ವಿಕಸಿಸಿದವು. 2. ಸೌರಾಪ್ಸಿಡ: ಈ ಶಾಖೆಯಿಂದ ಸರೀಸೃಪಗಳು ಮತ್ತು ಪಕ್ಷಿಗಳು ರೂಪುಗೊಂಡವು.

ಸರೀಸೃಪ ವರ್ಗದ ಪ್ರಾಣಿಗಳಿಗೆ ಈ ಕೆಳಗಿನ ವಿಶಿಷ್ಟ ಗುಣಲಕ್ಷಣಗಳಿವೆ: 1. ಅವು ಶೀತರಕ್ತದ ಪ್ರಾಣಿಗಳು ಮತ್ತು ಹೆಚ್ಚಿನವು ಭೂವಾಸಿ ಚತುಷ್ಪಾದಿಗಳು. 2. ದೇಹದ ಹೊರಹೊದಿಕೆಯಲ್ಲಿ ಹೊರಚರ್ಮದಿಂದಾದ, ರಕ್ಷಣೆ ಕೊಡುವ ಗಟ್ಟಿಯಾದ ಹುರುಪೆಗಳಿವೆ. 3. ಕೆಲವಲ್ಲಿ ಹುರುಪೆಗಳ ಕೆಳಗೆ ಗಟ್ಟಿಯಾದ ಮೂಳೆತಟ್ಟೆಗಳು ರೂಪುಗೊಂಡಿರುತ್ತವೆ. 4. ಹುರುಪೆಗಳಿಲ್ಲದಿದ್ದರೆ ಹೊರಚರ್ಮ ಗಟ್ಟಿಯಾದ ಚಿಪ್ಪುಗಳ ಹೊದಿಕೆಯಂತಿರುವುದು. 5. ಚರ್ಮಗಳಲ್ಲಿ ಗ್ರಂಥಿಗಳು ಇಲ್ಲ. 6. ಎರಡು ಜೊತೆ ಕಾಲುಗಳಿರುವುವು. 7. ಬಲವಾದ ಕಶೇರುಮಣಿಗಳು, ಚೆನ್ನಾಗಿ ಬೆಳೆದ ಎದೆಯ ಮೂಳೆ, ಕಡೆಯ ಪಕ್ಷ ಎರಡು ಪಕ್ಕೆಲುಬುಗಳು, ದಪ್ಪವಾದ ಭುಜಪಟ್ಟಿ ಮತ್ತು ಸೊಂಟಪಟ್ಟಿಗಳು ಮತ್ತು ಐದು ಬೆರಳುಗಳುಳ್ಳ ಬಲವಾದ ಎರಡು ಜೊತೆ ಕೈಕಾಲುಗಳು ಇವಿಷ್ಟರಿಂದ ಕೂಡಿದ ದೃಢರಚನೆಯ ಅಸ್ಥಿಪಂಜರವಿದೆ. 8. ರೂಪವೈವಿಧ್ಯವಿರುವ ತಲೆಬುರುಡೆ ಮೊದಲನೆಯ ಅಟ್ಲಾಸ್ ಕಶೇರುಮಣಿಗೆ ಒಂದೇ ಒಂದು ಎಲುವಿನ ಗೋಳದಿಂದ (ಕಾಂಡೈಲ್) ಸೇರಿದೆ. 9. ಸಾಮಾನ್ಯವಾಗಿ ಹಲ್ಲುಗಳು ಸರಳ ಮತ್ತು ಮೊನಚಾಗಿರುತ್ತವೆ. ಅವು ಆಹಾರಾಭ್ಯಾಸಕ್ಕೆ ತಕ್ಕಂತೆ ಮಾರ್ಪಾಡಾಗಿರುತ್ತವೆ. 10. ಶ್ವಾಸಕೋಶಗಳು ಉಸಿರಾಟದ ಅಂಗಗಳು. ಕಿವಿರುಗಳ ಸುಳಿವೇ ಇಲ್ಲ. ಶ್ವಾಸೋಚ್ಛ್ವಾಸ ಕ್ರಿಯೆ ಪಕ್ಕೆಲುಬುಗಳ ಚಲನೆಯಿಂದ ನಡೆಯುತ್ತದೆ. 11. ಹೃತ್ಕುಕ್ಷಿ ಎರಡು ಅಪೂರ್ಣ ಭಾಗಗಳಾಗಿ ವಿಂಗಡಣೆಗೊಂಡಿದೆ. ಮೊಸಳೆಗಳ ಜಾತಿಯಲ್ಲಿ ಮಾತ್ರ ಇದು ಪೂರ್ಣವಾಗಿ ಎಡ ಮತ್ತು ಬಲಹೃತ್ಕುಕ್ಷಿಗಳಾಗಿ ಕಾಣುತ್ತದೆ. 12. ಮಿದುಳಿನ ಉತ್ತಮಮಸ್ತಿಷ್ಕದ ಗೋಳಗಳು ದ್ವಿಚರಿಗಳಿಗಿಂತ ಹೆಚ್ಚು ಕ್ರಿಯಾಪೂರ್ಣವಾಗಿವೆ. ಹಾವುಗಳ ಹೊರತು ಮಿಕ್ಕ ಸರೀಸೃಪಗಳಲ್ಲಿ ಹನ್ನೆರಡು ಜೊತೆ ಮಿದುಳಿನ ನರಗಳಿವೆ(ಕ್ರೇನಿಯಲ್ ನರ್ವ್ಸ್). 13. ಜೀರ್ಣಾಂಗದ ಕೊಳವೆ, ಶುದ್ಧೀಕರಣಾಂಗ ಮತ್ತು ಜನನೇಂದ್ರಿಯಗಳು ಒಟ್ಟುಗೂಡಿ ಕ್ಲೋಯಕ ಎಂಬ ರಂಧ್ರದಿಂದ ಹೊರತೆರೆಯುತ್ತವೆ. 14. ಸುಣ್ಣದ ಚಿಪ್ಪಿನಿಂದ ರಕ್ಷಿತವಾದ ದಪ್ಪವಾದ ಮೊಟ್ಟೆಗಳನ್ನಿಡುತ್ತವೆ. ಇವುಗಳಲ್ಲಿ ಭ್ರೂಣದ ಬೆಳವಣಿಗೆಗೆ ಬೇಕಾದ ತತ್ತಿಯ ಹಳದಿ ಬಂಡಾರ (ಯೋಕ್) ಹೆಚ್ಚು ಪ್ರಮಾಣದಲ್ಲಿರುವುದು. 15. ಭ್ರೂಣವನ್ನು ಎರಡು ಗರ್ಭಸಂರಕ್ಷಣಾ ಪಟಲಗಳು (ಆಮ್ನಿಯಾನ್ ಮತ್ತು ಅಲಂಟಾಯ್ಸ್) ಆವರಿಸಿವೆ.

ಸರೀಸೃಪಗಳ ತಲೆಬುರುಡೆಗಳ ಅಭ್ಯಾಸದಿಂದ ಈ ವರ್ಗದ ವಿಕಾಸಹಂತಗಳನ್ನು ಅರ್ಥಮಾಡಿಕೊಳ್ಳಬಹುದು. ತಲೆಬುರುಡೆ ಎರಡು ಮುಖ್ಯ ಕೆಲಸಗಳನ್ನು ಸಾಧಿಸುತ್ತದೆ.: 1. ಜ್ಞಾನೇಂದ್ರಿಯಗಳ ರಕ್ಷಣೆ: 2. ಕೆಳದವಡೆಯ ಚಲನೆಗೆ ಸಹಾಯವಾದ ಮಾಂಸಖಂಡಗಳನ್ನೂ, ಬುರುಡೆಯನ್ನು ಬೆನ್ನಲುಬಿಗೆ ಸೇರಿಸುವ ಮಾಂಸಖಂಡಗಳನ್ನೂ ಬಂಧಿಸಿಡುವುದು. ಮಿದುಳು ಚಿಕ್ಕದಾಗಿರುವುದರಿಂದ ಬುರುಡೆಯ ಗಾತ್ರ ಚಿಕ್ಕದು. ಆದರ ಕಪಾಲಪ್ರದೇಶದ ಮೂಳೆಗಳು ದವಡೆಗಳ ಯಶಸ್ವಿ ಚಲನೆಯನ್ನು ಉಂಟುಮಾಡುವ ಮಾಂಸಖಂಡಗಳ ಅಳವಡಿಕೆಗೆ ಸ್ಥಳಾವಕಾಶ ಕೊಟ್ಟು ಬಲಿಷ್ಠವಾಗಿರಬೇಕು. ಜೊತೆಯಲ್ಲಿ ಹಗುರವಾಗಿರಲೂ ಬೇಕು. ಈ ಕಾರಣದಿಂದಲೇ, ಬುರುಡೆಯ ಚಾವಣಿ ಮತ್ತು ಪಾರ್ಶ್ವಗಳ ಕೆಲವು ಮೂಳೆಗಳು ಬಲಿಷ್ಠವಾಗಿ ಜೋಡಣೆಗೊಂಡಿದ್ದರೂ ಅವುಗಳ ಮಧ್ಯೆ ಕೆಲವು ಬೃಹದ್ರಂಧ್ರಗಳು (ಟೆಂಪೊರಲ್ ಫೋಸ್ಸಾ) ಇರುವಂತೆ ಏರ್ಪಾಡಾಗಿದೆ. ಬೃಹದ್ರಂಧ್ರಗಳು ಮಾಂಸಖಂಡಗಳ ಅಳವಡಿಕೆಗೆ ಸ್ಥಳಾವಕಾಶ ಮಾಡಿ ಕೊಟ್ಟುವಲ್ಲದೆ ಬುರುಡೆ ಹಗುರವಾಗುವಂತೆಯೂ ಮಾಡಿದುವು.

ತಲೆಬುರುಡೆಯ ಕಪಾಲಭಾಗದ ಎಲುಬುಗಳ ರಚನೆ ಮತ್ತು ಅಲ್ಲಿರುವ ಬೃಹದ್ರಂಧ್ರಗಳ ಆಧಾರದ ಮೇಲೆ ಸರೀಸೃಪಗಳನ್ನು ವರ್ಗೀಕರಿಸುವುದು ವಾಡಿಕೆ. ಆದಿ ಸರೀಸೃಪಗಳ ಕಪಾಲದ ಎಲುಬುಗಳು ಒತ್ತಾಗಿ ಜೋಡಿಕೊಂಡಿದ್ದುವು. ಆಹಾರವನ್ನು ಅಗಿಯಲು ಕೆಳದವಡೆಯ ಚಲನೆ ಅನಿವಾರ್ಯವಾದಾಗ ಅದರ ಚಲನೆಗೆ ಸಹಾಯಕಾರಿಯಾದ ಮಾಂಸಖಂಡಗಳು ವಿಕಸಿಸಿದುವು. ಇವುಗಳ ಸಂಕುಚನೆ ಮತ್ತು ವಿಕಸನೆಗೆ ಅನುಕೂಲವಾಗುವಂತೆ ಕಪಾಲದ ಎರಡು ಪಕ್ಕಗಳ ಎಲುಬುಗಳ ಜೋಡಣೆಯಲ್ಲಿ ಮಾರ್ಪಾಡಾಗಿ ಒಂದೊಂದು ಪಾರ್ಶ್ವದಲ್ಲೂ ಒಂದು ಅಥವಾ ಎರಡು ಬೃಹದ್ರಂಧ್ರಗಳು ಕಾಣಿಸಿಕೊಂಡುವು. ಈ ವಿಕಸನವನ್ನು ಗಮನಿಸಿ ಸರೀಸೃಪ ವರ್ಗವನ್ನು ಆರು ಉಪವರ್ಗಗಳಾಗಿ ವರ್ಗೀಕರಿಸಿದೆ: ಅನಾಪ್ಸಿಡ, ಸೈನಾಪ್ಸಿಡ, ಯೂರ್ಯಾಪ್ಸಿಡ, ಲೆಪಿಡೋಸಾರಿಯ, ಆರ್ಕಿಯೋಸಾರಿಯ, ಪ್ಯಾರಾಪ್ಸಿಡ.

ಅನಾಪ್ಸಿಡ ಉಪವರ್ಗ: ಕಪಾಲದಲ್ಲಿ ರಂಧ್ರವಿಲ್ಲದ ಸರೀಸೃಪಗಳು. ಆದಿಯಲ್ಲಿ ಕಾಣಿಸಿಕೊಂಡವು. ಇವುಗಳ ಕಪಾಲದ ಎಲುಬುಗಳು ಎಲ್ಲೆಡೆಯಲ್ಲೂ ಒತ್ತಾಗಿ ಜೋಡಿಕೊಂಡಿದ್ದು ದ್ವಿಚರಿಗಳ ಕಪಾಲವನ್ನು ಹೋಲುತ್ತಿದ್ದುವು. ಈ ಉಪವರ್ಗದ ಒಂದು ಗಣ ಅಳಿದುಹೋದ ಕಾಟಿಲೋಸಾರಿಯ. ಆದಿ ಸರೀಸೃಪಗಳು. ಇವು ಪರ್ಮಿಯನ್ ಕಲ್ಪದ (280—225 ದಶಲಕ್ಷ ವರ್ಷ ಪ್ರಾಚೀನ) ಆದಿ ಭಾಗದಲ್ಲಿ ಕಾಣಿಸಿಕೊಂಡು ಟ್ರಯಾಸಿಕ್ ಕಲ್ಪದ (225—190 ದಶಲಕ್ಷ ವರ್ಷ ಪ್ರಚೀನ)ವರೆಗೆ ಬಾಳಿದುವು. ಇನ್ನೊಂದು ಗಣ ಕಿಲೋನಿಯ. ಆಮೆಗಳು ಮತ್ತು ಕಡಲಾಮೆಗಳು ಈ ಗಣದವು. ಟ್ರಯಾಸಿಕ್ ಕಲ್ಪದಲ್ಲಿ ಕಾಣಿಸಿಕೊಂಡ ಇವು ಇಂದಿನವರೆಗೂ ಬಾಳಿವೆ.

ಸೈನಾಪ್ಸಿಡ ಉಪವರ್ಗ: ಕಪಾಲದ ಎರಡು ಪಕ್ಕಗಳಲ್ಲೂ ಒಂದೊಂದು ಬೃಹದ್ರಂಧ್ರ ಇದೆ. ಎರಡು ಗಣಗಳಿವೆ: ಪೆಲಿಕೋಸಾರಿಯ ಮತ್ತು ಥೀರಾಪ್ಸಿಡ. ಪೆಲಿಕೋಸಾರಿಯಗಳು ಕಾಟಿಲೋಸಾರಿಯಗಳೊಡನೆ ಬಾಳಿದುವು. ಇದಕ್ಕಿಂತ ಹೆಚ್ಚು ಪರಿಷ್ಕರಿಸಿದ ಗಣ ಥೀರಾಪ್ಸಿಡ. ಇವು ಪರ್ಮಿಯನ್ ಕಲ್ಪದ ಮಧ್ಯಭಾಗದಲ್ಲಿ ಕಾಣಿಸಿಕೊಂಡು ಜುರಾಸಿಕ್ ಕಲ್ಪದ (190—135 ದಶಲಕ್ಷ ವರ್ಷ. ಪ್ರಾಚೀನ)ವರೆಗೆ ಬಾಳಿದುವು. ಈ ಗಣದ ಅನೇಕ ಗುಂಪುಗಳಲ್ಲಿ ಸ್ತನಿ ಪ್ರಾಣಿಗಳ ಕಪಾಲದ ಲಕ್ಷಣಗಳು ಮಜಲು ಮಜಲಾಗಿ ಕಾಣಿಸಿಕೊಂಡವು.

ಯೂರ್ಯಾಪ್ಸಿಡ ಉಪವರ್ಗ: ಬೃಹದ್ರಂಧ್ರ ಒಂದೇ, ಸ್ಥಾನ ಬೇರೆ. ಇದರಲ್ಲಿ ಹಲವಾರು ದ್ವಿಚರಿಗಳು ಸೇರಿವೆ. ಪ್ರೋಟೊರೋಸಾರಿಯ ಮತ್ತು ಸೌರಾಪ್ಟರಿಜಿಯ ಗಣಗಳು ಈ ಉಪವರ್ಗದವು. (ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ.)

ಲೆಪಿಡೊಸಾರಿಯ ಮತ್ತು ಆರ್ಕಿಯೋಸಾರಿಯ ಉಪವರ್ಗಗಳು: ಒಟ್ಟು ಹೆಸರು ಡೈಆಪ್ಸಿಡ ಉಪವವರ್ಗ. ಸರೀಸೃಪ ಕಾಂಡದ ಮಧ್ಯಶಾಖೆಯೆಂದೂ ಇದರ ಎರಡು ಮುಖ್ಯ ಉಪಶಾಖೆಗಳು ಲೆಪಿಡೋಸಾರಿಯ ಮತ್ತು ಆರ್ಕಿಯೋಸಾರಿಯಗಳೆಂದೂ ಪರಿಗಣಿಸಲಾಗಿದೆ. ಕಪಾಲದ ಒಂದೊಂದು ಪಕ್ಕದಲ್ಲಿಯೂ ಎರಡು ಬೃಹದ್‌ರಂಧ್ರಗಳಿದ್ದು ಆದ್ದರಿಂದಲೇ ಡೈಆಪ್ಸಿಡ ಎಂಬ ಹೆಸರು. ಲೆಪಿಡೊಸಾರಿಯ ಉಪವರ್ಗದಲ್ಲಿ ಮೂರು ಗಣಗಳಿವೆ: ಯೂಸೊಕಿಯ, ರ್‍ಹಿಂಕೋಸೆಫಾಲಿಯ ಮತ್ತು ಸ್ಕ್ವಾಮಾಟ. ಮೊದಲು ರೂಪುಗೊಂಡದ್ದು ಯೂಸೊಕಿಯ ಗಣ. ಚಿಕ್ಕ ಪ್ರಾಣಿ. ನೋಡಲು ಹಲ್ಲಿಯಂತೆ. ಗುಣಲಕ್ಷಣಗಳೂ ಬಹುಶಃ ಅದರಂತೆಯೇ ಇದ್ದಿರಬಹುದು. ಟ್ರಯಾಸಿಕ್ ಕಲ್ಪದಲ್ಲಿ ಮೈದಳೆದ ರ್‍ಹಿಂಕೋಸೆಫಾಲಿಯ ಗಣದ ಜೀವಂತ ಪಳೆಯುಳಿಕೆಯೇ ನ್ಯೂಜಿಲ್ಯಾಂಡಿನ ಟಾಟೆರಾ (ಸ್ಫಿನೊಡಾನ್). ಉಳಿದ ಎಲ್ಲ ಪ್ರಭೇದಗಳೂ ಸ್ಕ್ವಾಮಾಟಕ್ಕೆ ಸೇರಿವೆ. ಹಲ್ಲಿ ಮತ್ತು ಹಾವುಗಳು ಇದರಲ್ಲಿ ಯಶಸ್ವಿಯಾಗಿ ಬದುಕಿ, ಬೆಳೆದು, ಬಾಳಿದ ಪ್ರಾಣಿಗಳು.(ನೋಡಿ—ಹಲ್ಲಿ;ಹಾವು)

ಆರ್ಕಿಯೋಸಾರಿಯದ ಆದಿ ಗಣ ಥೀಕೋಡಾಂಶಿಯ. ಇದರ ಕೆಲವು ಪ್ರಭೇದಗಳ ಕಪಾಲ ರಚನೆ ಇಂದಿನ ಪಕ್ಷಿಗಳ ಕಪಾಲವನ್ನು ಹೋಲುತ್ತಿತ್ತು. ಥೀಕೋಡಾಂಟ್ ಎಂದರೆ ಗುಣಿಗಳಲ್ಲಿ ಜೋಡಣೆಗೊಂಡ ಹಲ್ಲುಗಳು ಎಂದರ್ಥ. ಆರ್ಕಿಯೋಸಾರಿಯ ಉಪವರ್ಗದ ಕ್ರೊಕೊಡೀಲಿಯ ಗಣಕ್ಕೆ ಮೊಸಳೆಗಳೂ ಮತ್ತು ನೆಗಳೆಗಳು ಸೇರಿವೆ. ಜುರಾಸಿಕ್ ಕಲ್ಪದ ಆದಿಭಾಗದಲ್ಲಿ ಕಾಣಿಸಿಕೊಂಡ ಈ ಗಣ ಇಲ್ಲಿಯವರೆಗೆ ಬಾಳಿದೆ. ಭೂಮಿಯಿಂದ ನೀರಿಗೆ ಹಿಂತಿರುಗಿದ ಸರೀಸೃಪಗಳಲ್ಲಿ ಇದೂ ಒಂದು. ಇತರ ಸರೀಸೃಪಗಳಿಗಿರುವಂತ ಶ್ವಾಸಕೋಶವೇ ಇದರ ಶ್ವಾಸಾಂಗ. ಆರ್ಕಿಯೋಸಾರಿಯದ ಮತ್ತೆರಡು ಪ್ರಮುಖ ಗಣಗಳು



ಟ್ರೈಸೆರಟಾಪ್ಸ್ ಸ್ಪಾರ್ಸ್ಸ್‌ಪ್ ಜೀವಿಯು ಅಸ್ಥಿ ಪಂಜರ

ಸೌರಿಶ್ಚಿಯ ಮತ್ತು ಆರ್ನಿತಿಶ್ಚಿಯ. ಸೌರಿಶ್ಚಿಯ ಗಣ ಟ್ರಯಾಸಿಕ್ ಕಲ್ಪದ ಅಂತ್ಯ ಬಾಗದಿಂದ ಕ್ರಿಟೇಷಿಯಸ್ ಕಲ್ಪದ ಅಂತ್ಯದವರೆಗೂ ಬಾಳಿದರೆ ಆರ್ನಿತಿಶ್ಚಿಯ ಗಣ ಜುರಾಸಿಕ್ ಕಲ್ಪದ ಮಧ್ಯಭಾಗದಿಂದ ಕ್ರಿಟೇಷಿಯಸ್ ಕಲ್ಪದ ಅಂತ್ಯದವರೆಗೆ ಬಾಳಿತು. ಇವೆರಡು ಗಣಗಳ ಕುಟುಂಬಗಳನ್ನು ಒಂದಾಗಿ ಪರಿಗಣಿಸಿ ದೈತ್ಯೋರಗಗಳು ಅಥವಾ ಹೆಗ್ಗೋಳಿಗಗಳು (ಡೈನೋಸಾರ್‍ಸ್) ಎಂದು ಕರೆಯಲಾಗಿತ್ತು. ಆದರೆ ಈ ಎರಡು ಗಣಗಳು ಥಿಕೋಡಾಂಶಿಯ ಗಣದಿಂದ ಪ್ರತ್ಯೇಕವಾಗಿ ವಿಕಸಿಸಿದಂಥವು ಎಂದು ಹೇಳಲಾಗಿದೆ.

ಸೌರಿಶ್ಚಿಯ ಗಣದಲ್ಲಿ ಹಲ್ಲಿಯಲ್ಲಿರುವಂಥ ಸೊಂಟಪಟ್ಟಿ ಇದ್ದುದರಿಂದ ಆ ಸರೀಸೃಪಗಳನ್ನು ಹಲ್ಲಿ ನಡುಗಟ್ಟಿನ ದೈತ್ಯೋರಗಗಳು (ಲಿಜರ್ಡ್‌ಹಿಪ್ಡ್ ಡೈನೋಸಾರ್‍ಸ್) ಎಂದೂ ಆರ್ನಿತಿಶ್ಚಿಯ ಗಣದಲ್ಲಿ ಪಕ್ಷಿಗಳ ವಿಕಸನಕ್ಕೆ ಅನುಕೂಲವಾದ ಸೊಂಟಪಟ್ಟಿ ಇದ್ದುದರಿಂದ ಅವನ್ನು ಪಕ್ಷಿಗಳ ಸೊಂಟಪಟ್ಟಿಯ ದೈತ್ಯೋರಗಗಳು ಎಂದೂ ಕರೆಯಲಾಗಿದೆ.

ಕೆಲವು ಸೌರಿಶ್ಚಿಯಗಳು ಚತುಷ್ಪಾದಿಗಳಾಗಿ ಬೃಹದಾಕಾರವಾಗಿ ಬೆಳೆದು ಸಸ್ಯಾಹಾರಿಗಳಾದುವು. ದ್ವಿಪಾದಿಗಳು ಮಾಂಸಾಹಾರಿಗಳಾದುವು. ಆರ್ನಿತಿಶ್ಚಿಯದ ಕುಟುಂಬದವು ದ್ವಿಪಾದಿಗಳಾದರೂ ಮಾಂಸಾಹಾರಿಗಳಾಗಲಿಲ್ಲ. ಆರ್ಕಿಯೋಸಾರಿಯದ ಐದನೆಯ ಗಣ ಟಿರೋಸಾರಿಯ. ಇದು ಜುರಾಸಿಕ್ ಕಲ್ಪದ ಆದಿಭಾಗದಲ್ಲಿ ಕಾಣಿಸಿಕೊಂಡು ಕ್ರಿಟೇಷಿಯಸ್ ಕಲ್ಪದವರೆಗೂ ಬಾಳಿತು.



ಸ್ಫಿನೊಡಾನ್

ಪ್ಯಾರಪ್ಸಿಡ ಉಪವರ್ಗ: ಈವರೆಗೆ ಪ್ರೋಟೋಸಾರಿಯ, ಪ್ಲಿಸಿಯೋಸಾರಿಯ ಮತ್ತು ಇಕ್ತಿಯೋಸಾರಿಯ ಗಣಗಳನ್ನೊಳಗೊಂಡಿದೆ. ಅನಾಪ್ಸಿಡ ಸರೀಸೃಪಗಳಂತೆ ಕಪಾಲದ ಪ್ರತಿಯೊಂದು ಪಾರ್ಶ್ವದಲ್ಲಿ ಒಂದು ರಂಧ್ರವಿದ್ದರೂ ಆ ರಂಧ್ರದ ಎಲುಬಿನ ಆಯಕಟ್ಟುಗಳು ಬೇರೆಯಾಗಿದ್ದುವು. ಇದರಿಂದ ಇವನ್ನು ಪ್ಯಾರಾಪ್ಸಿಡ ಸರೀಸೃಪಗಳು ಎಂದು ಕರೆಯಲಾಗಿದೆ.

ಟ್ರಯಾಸಿಕ್ ಕಲ್ಪದ ಮಧ್ಯಭಾಗದಲ್ಲಿ ಭೂಮಿಯಿಂದ ಸಮುದ್ರಕ್ಕೆ ಮರಳಿದ ಈ ಗಣಗಳ ಪ್ರಾಣಿಗಳು ತಮ್ಮ ದೇಹರಚನೆಯನ್ನು ಮತ್ಸ್ಯವರ್ಗದ ಪ್ರಾಣಿಗಳಂತೆ ರೂಪಿಸಿಕೊಂಡವು. ಇವುಗಳಲ್ಲಿ ಹೆಚ್ಚು ಪರಿಷ್ಕರಿಸಿದ ಕುಟುಂಬಗಳು ಬಾಲದ ಸಹಾಯದಿಂದ ಚಲನೆ, ಬೆನ್ನಿನ ರೆಕ್ಕೆ ಮತ್ತು ನಾಲ್ಕು ಕಾಲುಗಳಿಂದ ದೇಹದ ಸಮತೋಲನವನ್ನು ಕಾಪಾಡಿಕೊಳ್ಳುವ ಶಕ್ತಿ ಪಡೆದಿದ್ದುವು. ಇವು ಮೀನನ್ನು ಹೆಚ್ಚು ಹೋಲುತ್ತಿದ್ದವು.

ಅಳಿದ ಸರೀಸೃಪಗಳು: ಮಧ್ಯ ಜೀವಯುಗದಲ್ಲಿ ಮೆರೆದ ಅಸಂಖ್ಯಾತ ಸರೀಸೃಪಗಳಲ್ಲಿ 90% ನಶಿಸಿಹೋದುವೆಂದು ಹೇಳಬಹುದು. ಇವುಗಳಲ್ಲಿ ಬಹಳ ಮುಖ್ಯವಾದುವು—ಭೂಮಿಯ ದೈತ್ಯೋರಗಗಳು (ಡೈನೋಸಾರ್‍ಸ್), ತಿಮಿಂಗಲವನ್ನು ಹೋಲುತ್ತಿದ್ದ ಜಲವಾಸಿಗಳಾದ ಮತ್ಸ್ಯೋರಗಗಳು (ನೋಡಿ—ಇಕ್ತಿಯೋಸಾರ್‍ಸ್) ಮತ್ತು ವಾಯುಮಂಡಲವನ್ನು ಆಕ್ರಮಿಸಿದ ಪಕ್ಷಿಗಳನ್ನು ಹೋಲುತ್ತಿದ್ದ ಹಾರುವ ಟೀರೊಡ್ಯಾಕ್ಟೈಲ ಸರೀಸೃಪಗಳು. ಕಾಟಿಲೋಸಾರಿಯ ಗಣದ ಸರೀಸೃಪಗಳು ಅತ್ಯಂತ ಆದಿಯಲ್ಲಿ ಪ್ರಾರಂಭವಾದುವು. ಇವು ಹೋಲುತ್ತಿದ್ದುದು ಹೆಚ್ಚಾಗಿ ದ್ವಿಚರಿಗಳನ್ನು. ಉದರದ ಮೇಲೆ ಚಲಿಸುವ ಪ್ರಾಣಿಗಳು. ಇವುಗಳ ಕಪಾಲ ದ್ವಿಚರಿಗಳ ಕಪಾಲಕ್ಕಿಂತ ಹೆಚ್ಚು ಪರಿಷ್ಕಾರಗೊಂಡಿತ್ತು. ಮೇಲ್ಛಾವಣಿಯ ಎಲುಬುಗಳೂ (ರೂಟ್ ಬೋನ್ಸ್) ಪೂರ್ಣವಾಗಿದ್ದುವು. ಸುಮಾರು ೩೦–೨೧೦ ಸೆಂಮೀ ವರೆಗೆ ಬೆಳೆದುವು. ಸೈಮೂರಿಯ ಕುಟುಂಬ ಕಾಟಿಲೋಸಾರಿಯ ಗಣದಲ್ಲಿ ಅತ್ಯಂತ ಪುರಾತನವಾದದ್ದು. ಬಹುಶಃ ೩೦ ಕೋಟಿ ವರ್ಷಗಳ ಹಿಂದೆ ಕಾಣಿಸಿಕೊಂಡಿತು. ಇದರ ಅನೇಕ ಪಳೆಯುಳಿಕೆಗಳು ಉತ್ತರ ಅಮೆರಿಕ, ರಷ್ಯ ಮತ್ತು ಆಫ್ರಿಕಗಳಲ್ಲಿ ಸಿಕ್ಕಿರುವುದರಿಂದ ಆ ಪ್ರದೇಶಗಳಲ್ಲಿ ಇವು ಹೇರಳವಾಗಿದ್ದುವೆಂದು ಹೇಳಬಹುದು. ಸೈಮೂರಿಯ ದ್ವಿಚರಿಗಳನ್ನು ಹೋಲುತ್ತಿತ್ತು. ಅದರ ಬಾಯಲ್ಲಿ ಮೊನಚಾದ ಹಲ್ಲುಗಳಿದ್ದುವು. ಕಾಟಿಲೋಸಾರಿಯ ಗಣದಿಂದ ಮುಂದಕ್ಕೆ ಬಹುಶಃ ಸ್ಪಷ್ಟವಾದ ಎರಡು ಕವಲುಗಳು ಕಾಣಿಸಿಕೊಂಡವು: ಕಾಪ್ಟೋರ್‍ಹೈನಸ್, ಡೈಡ್ಯಾಕ್ಟೋಮಾರ್ಫ. ಮೊದಲಿನ ಕುಟುಂಬದ ಪ್ರಾಣಿಗಳಲ್ಲಿ ಮುಂದೆ ವಿಕಸಿಸಿದ ಸೈನಾಪ್ಸಿಡ ಸರೀಸೃಪಗಳ ಕೆಲವು ಲಕ್ಷಣಗಳಿದ್ದುವು. ಎರಡನೆಯವುಗಳಲ್ಲಿ ಡೈಆಪ್ಸಿಡ ಸರೀಸೃಪಗಳ ಕಡೆಗೆ ವಿಕಸನಗೊಳ್ಳುವ ಸ್ಪಷ್ಟ ಲಕ್ಷಣಗಳಿದ್ದುವು.

ಸೈನಾಪ್ಸಿಡ ಸರೀಸೃಪಗಳ ಆದಿಗಣ ಪೆಲಿಕೋಸಾರಿಯ. ಇದು ಪರ್ಮಿಯನ್ ಕಲ್ಪದ ಆದಿಭಾಗದಲ್ಲಿ ಕಾಣಿಸಿಕೊಂಡಿತು (೨೮೫ ದಶಲಕ್ಷವರ್ಷ ಪ್ರಾಚೀನ ಕಾಲ). ಇದರಲ್ಲಿ ಡೈಮೆಟ್ರೊಡಾನ್ ಎಂಬ ಜಾತಿ ಬಹಳ ಮುಖ್ಯವಾದದ್ದು. ಇದಕ್ಕೆ ಎದೆಗೂಡಿತ್ತು. ಪ್ರಾಣಿಯ ಉದ್ದ ೩–೩.೬೫ ಮೀ. ಬೆನ್ನೆಲುಬಿನ ಮುಳ್ಳುಗಳು ಬಹಳ ಉದ್ದವಾಗಿದ್ದುವು. ಅವನ್ನು ಚರ್ಮ ಆವರಿಸಿ ನೋಡಲು ಹಡಗಿನ ಪಟದಂತೆ ಕಾಣಿಸುತ್ತಿತ್ತು. ಪ್ರಾಣಿಯ ಕಾಲುಗಳು ಮಾತ್ರ ಚಿಕ್ಕವಾಗಿಯೇ ಇದ್ದುವು. ಅನಂತರ ವಿಕಸಿಸಿದ ಪೆಲಿಕೋಸಾರಿಯ ಗಣದ ಪ್ರಾಣಿಗಳ ಹಲ್ಲಿನ ರಚನೆಯಲ್ಲಿ ಕ್ರಮೇಣ ರೂಪಭೇದ ಕಂಡುಬರಲು ಪ್ರಾರಂಭಿಸಿತು.

ಸೈನಾಪ್ಸಿಡ ಸರೀಸೃಪಗಳ ಎರಡನೆಯ ಗಣ ಪರ್ಮಿಯನ್ ಕಲ್ಪದ ಮಧ್ಯಭಾಗದಲ್ಲಿ ಕಾಣಿಸಿಕೊಂಡ ಥೀರೋಡಾಂಶಿಯ ಅಥವಾ ಥೀರಾಪ್ಸಿಡ. ಹೆಚ್ಚು ಪರಿಷ್ಕರಿಸಿದ ಈ

## ಜೂರಾಸಿಕ್ ಮತ್ತು ಕ್ರಿಟೇಷಿಯಸ್ ಕಲ್ಪಗಳ ದೈತ್ಯೋರಗಗಳು



ಸ್ಟೆಗೊಸಾರ್



ಆಂಕೈಲೊಸಾರ್



ಥೀರೊಪೊಡ



ಆರ್ನಿತೋಪೊಡ

ಸೆರಾಟಾಪ್ಸಿಯನ್

ಸೌರೊಪೊಡ

ಗಣದ ಸರೀಸೃಪಗಳು ಇಂದಿನ ಸ್ತನಿಗಳ ಪೂರ್ವಜರು. ಅವುಗಳ ಪಳೆಯುಳಿಕೆಗಳು ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ರಷ್ಯಗಳಲ್ಲಿ ಕಾಣಿಸಿಕೊಂಡಿವೆ. ಅನೇಕವು ಮಾಂಸಾಹಾರಿ ಅಥವಾ ಕೀಟಾಹಾರಿಗಳಾಗಿದ್ದುವು. ಕೆಲವು ಸಸ್ಯಾಹಾರಿಗಳು ಇದ್ದಿರಬಹುದು. ಒಂದಡಿ ಉದ್ದದ ಜಾತಿಯಿಂದ ಇಂದಿನ ಸಿಂಹದ ಗಾತ್ರದವರೆಗೆ ಬೆಳೆದ ಅನೇಕ ಜಾತಿಗಳಿದ್ದವು. ಹಲ್ಲುಗಳಲ್ಲಿ ಬಾಚೀಹಲ್ಲು, ಕೋರೆಹಲ್ಲು ಮತ್ತು ದವಡೆಹಲ್ಲುಗಳೆಂಬ ರೂಪಭೇದಗಳೂ ಕಾಣಿಸಿಕೊಂಡವು. ಕ್ರಮೇಣ ಕಪಾಲದ ಎಲುಬುಗಳ ಸಂಖ್ಯೆ ಕಡಿಮೆಯಾಗುತ್ತಾ ಸ್ತನಿ ಕಪಾಲರಚನೆಯಂತೆ ರೂಪುಗೊಂಡವು. ಭುಜಪಟ್ಟಿ ಮತ್ತು ಸೊಂಟಪಟ್ಟಿಗಳು ರಚನೆಯಲ್ಲಿ ಸ್ತನಿಗಳಿಗಿರುವಂತೆಯೇ ರೂಪುಗೊಂಡುವು. ಟ್ರಯಾಸಿಕ್ ಕಲ್ಪದ ಅಂತ್ಯಭಾಗದ ವೇಳೆಗೆ ಸ್ತನಿಗಳನ್ನು ಹೋಲುವ ಸರೀಸೃಪಗಳು ಕಾಣಿಸಿಕೊಂಡುವು. ಇವು ಯಾವುವೂ ಇಂದು ಉಳಿದಿಲ್ಲ.

ಕಾಟಿಲೋಸಾರಿಯ ಗಣದ ಪ್ರತ್ಯೇಕವಾದ ಕವಲಿನಿಂದ ವಿಕಸಿಸಿದ ಸರೀಸೃಪಗಳ ಚರಿತ್ರೆ ಬೇರೆಯೇ ಇದೆ. ಅವು ಡೈಆಪ್ಸಿಡ ಸರೀಸೃಪಗಳು. ಇವುಗಳಲ್ಲಿ ಥಿಕೋಡಾಂಶಿಯ ಗಣದ ಸರೀಸೃಪಗಳು ಬಹಳ ಮುಖ್ಯವಾದುವು. ಇವು ಮಾಂಸಾಹಾರಿಗಳು. ಸಾಲ್ಟೋಪಸ್ ಎಂಬ ಜೀವಿ ಈ ಗಣದ ಒಂದು ವಿಶಿಷ್ಟ ಮಾದರಿ. ಬಹಳ ಬಲಿಷ್ಠವೂ ಉದ್ದವೂ ಆಗಿದ್ದ ಹಿಂಗಾಲುಗಳು ಓಡಲು ಸಹಕರಿಸಿದರೆ ಮೊಟಕಾದ ಮುಂಗಾಲುಗಳು ಆಹಾರವನ್ನು ಬಾಚಿಕೊಳ್ಳಲೂ ಹಿಡಿದುಕೊಳ್ಳಲೂ ಕೈಗಳಂತೆ ಸಹಾಯಕವಾಗಿದ್ದುವು. ದೇಹ ಹಲ್ಲಿಯ ದೇಹದಂತೆ. ತಲೆ ಮೊಸಳೆಯಂತೆ. ಉದ್ದವಾದ ಬಾಲವೂ ಇತ್ತು. ಇಂಥ ಪ್ರಾಣಿಗಳೇ ಮುಂದೆ ಕಾಣಿಸಿಕೊಂಡ ದೈತ್ಯೋರಗ ಮತ್ತು ವಾಯುಮಂಡಲದ ಟಿರೋಡ್ಯಾಕ್ಟೈಲ್ ಸರೀಸೃಪಗಳ ಪೂರ್ವಜರಾಗಿರಬೇಕು. ಥಿಕೊಡಾಂಶಿಯದ ಒಂದು ಉಪಗಣ ಫೈಟೋಸಾರ್ಸ್. ಇವು ಪೂರ್ವಜರಂತೆ ನಾಲ್ಕು ಕಾಲುಗಳ ಮೇಲೆ ನಡೆಯುವವು. ಇಂದಿನ ಮೊಸಳೆಗಳನ್ನು ಹೋಲುತ್ತಿದ್ದುವು. ಉದ್ದ ೭.೫ ಮೀ. ಫೈಟೋಸಾರ್ಸ್ ನೀರಿನಲ್ಲಿ ಅತ್ಯಂತ ಕ್ರೂರ ಪ್ರಾಣಿಗಳು. ಮೊಸಳೆಗಳಲ್ಲಿ ನಾಸಿಕರಂಧ್ರಗಳು ತಲೆಯ ಮೇಲ್ಭಾಗದಲ್ಲಿದ್ದುವು.

ಥೀಕೋಡಾಂಟ್ ಗಣದಿಂದ ಎರಡು ಸ್ಪಷ್ಟವಾದ ಶಾಖೆಗಳು ಉದ್ಭವಿಸಿದುವು. ಆ ಶಾಖೆಗಳ ವಿಂಗಡಣೆಗೆ ಮುಖ್ಯ ಆಧಾರವೆಂದರೆ ಅವುಗಳ ಸೊಂಟಪಟ್ಟಿಯ ರಚನೆ ಮತ್ತು ವ್ಯತ್ಯಾಸ. ಒಂದು ಶಾಖೆ ಹಲ್ಲಿಗಳ ಸೊಂಟಪಟ್ಟಿಯುಳ್ಳ ಸೌರಿಶ್ಚಿಯ ಗಣ, ಮತ್ತೊಂದು ಶಾಖೆ ಪಕ್ಷಿಗಳ ಸೊಂಟಪಟ್ಟಿಯುಳ್ಳ ಆರ್ನಿತಿಶ್ಚಿಯ ಗಣ. ಈ ಎರಡು ಗಣದ ಜೀವಿಗಳನ್ನೂ ಒಟ್ಟಾಗಿ ಡೈನೋಸಾರಿಯ ಎಂಬ ಗಣಕ್ಕೆ ಜೋಡಿಸಿ ಅವನ್ನು ಡೈನೋಸಾರ್ಸ್ ಎಂದು ಕರೆಯಲಾಗಿತ್ತು. ಆದರೆ ಆ ಎರಡು ಶಾಖೆಗಳ ಜೀವಿಗಳ ಕಪಾಲ ಮತ್ತು ಸೊಂಟಪಟ್ಟಿಯ ರಚನೆಗಳಲ್ಲಿ ವ್ಯತ್ಯಾಸವಿದ್ದುವು.

ಡೈನೊಸಾರುಗಳು: ಇವನ್ನು ಸಾಮಾನ್ಯವಾಗಿ ನಾಲ್ಕು ಉಪಗಣಗಳಾಗಿ ವಿಂಗಡಿಸಬಹುದು. ೧. ಮಾಂಸಾಹಾರಿ ದ್ವಿಪಾದಿ ಡೈನೊಸಾರುಗಳು ಅಥವಾ ಥೀರೊಪೊಡ. ೨. ಬೃಹದಾಕಾರದ ಚತುಷ್ಪಾದಿ ದೈತ್ಯೋರಗಗಳು ಅಥವಾ ಸೌರೊಪೊಡ. ೩. ಬೃಹದಾಕಾರದ ದ್ವಿಪಾದಿ ದೈತ್ಯೋರಗಗಳು ಅಥವಾ ಆರ್ನಿತೋಪೊಡ. ೪. ಕವಚಧಾರಿಯಾದ ದೈತ್ಯೋರಗಗಳು. ಥೀರೊಪೊಡ ಮತ್ತು ಸೌರೊಪೊಡಗಳನ್ನು ಸೌರಿಶ್ಚಿಯ ಗಣಕ್ಕೆ ಸೇರಿಸಿದೆ. ಮಿಕ್ಕ ಎರಡು ಬಗೆಗಳನ್ನು ಆರ್ನಿತಿಶ್ಚಿಯ ಗಣಕ್ಕೆ ಸೇರಿಸಿದೆ. ಇವೆರಡೂ ದ್ವಿಪಾದಿಗಳು. ಆದರೆ ಮಾಂಸಾಹಾರಿ ಥೀರೊಪೊಡಗಳಿಗೂ ಮತ್ತು ಸಸ್ಯಾಹಾರಿ ಆರ್ನಿತೋಪೊಡಗಳಿಗೂ ಯಾವ ಹತ್ತಿರದ ಸಂಬಂಧವೂ ಇರುವುದಿಲ್ಲ. ಅವು ಎರಡು ನಿರ್ದಿಷ್ಟ ಗಣಗಳಿಗೆ ಸೇರಿವೆ.

ಎಷ್ಟು ಜಾತಿಯ ದೈತ್ಯೋರಗಗಳಿದ್ದುವೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಇದುವರೆಗೆ ದೊರೆತಿರುವ ಪಳೆಯುಳಿಕೆಗಳು ನೂರಾರು ಬಗೆಯವು. ಅವುಗಳ ಸಂಖ್ಯೆ ಬಹುಶಃ ೫.೦೦೦ ಜಾತಿಗಳಿಗೂ ಹೆಚ್ಚು ಇತ್ತೆಂದು ಹೇಳಬಹುದು. ಪಳೆಯುಳಿಕೆಗಳು, ಇಂದಿನ ಸರೀಸೃಪಗಳ ರಚನೆ ಮತ್ತು ಸ್ವಭಾವ ಇವುಗಳ ಆಧಾರದ ಮೇಲೆ ನಾವು ದೈತ್ಯೋರಗಗಳ ವಿಷಯವಾಗಿ ಊಹಿಸಬಹುದು. ವಸ್ತುಸಂಗ್ರಹಾಲಯಗಳ ಕಲಾಕಾರರು ದೈತ್ಯೋರಗಗಳ ಮಾದರಿಗಳನ್ನು ವೈಜ್ಞಾನಿಕ ಸಂಶೋಧನೆಗಳ ಮೇಲೆ ಆಧರಿಸಿ ರಚಿಸಿದ್ದಾರೆ. ಪ್ರಾರಂಭದಲ್ಲಿ ಕಾಣಿಸಿಕೊಂಡ ದೈತ್ಯೋರಗಗಳು ೬೦–೯೦ ಸೆಂಮೀ ಗಳಷ್ಟು ಚಿಕ್ಕದಾಗಿದ್ದರೂ ಅವು ದ್ವಿಪಾದಿಗಳು. ಅತಿವೇಗವಾಗಿ ಚಲಿಸಿ ಇತರ ಸಣ್ಣ ಸಣ್ಣ ಸರೀಸೃಪಗಳನ್ನು ಬೇಟೆಯಾಡಿ ತಿನ್ನುತ್ತಿದ್ದುವು. ಜೀವನ ಸಂಗ್ರಾಮದಲ್ಲಿ ಗೆದ್ದ ದೈತ್ಯೋರಗಗಳು ಸರ್ವತೋಮುಖವಾಗಿ ವಿಕಸಿಸಲು ಪ್ರಾರಂಭಿಸಿದುವು.

ಸೌರಿಶ್ಚಿಯ ಗಣದ ದೈತ್ಯೋರಗಗಳು: ಈ ಗಣದ ಎರಡು ಗಣಗಳಲ್ಲಿ ಒಂದು ದ್ವಿಪಾದಿ ಮಾಂಸಾಹಾರಿ ಥೀರೊಪೊಡಗಳು; ಮತ್ತೊಂದು ಸಸ್ಯಾಹಾರಿ ಸೌರೊಪೊಡಗಳು. ಮೊದಲಿನವು ಆದಿ ಅಥವಾ ಪುರಾತನವಾದ ಡೈನೊಸಾರುಗಳೆಂದು ಪ್ರಸಿದ್ಧವಾಗಿವೆ. ಇವು ತಮ್ಮ ಪೂರ್ವಜರಂತೆ ದ್ವಿಪಾದಿಗಳಾಗಿ ಮಾಂಸಾಹಾರಿಗಳಾಗಿದ್ದುವು. ಇವುಗಳಲ್ಲಿ ಅಲ್ಲೋಸಾರಸ್ ಜಾತಿ ಮತ್ತು ಟೈರಾನೊಸಾರಸ್ ಕುಲಗಳು ಬಹಳ ಸಮೃದ್ಧಿಯಾಗಿ ಬೆಳೆದುವು. ಅವೆಲ್ಲವೂ ರಾಕ್ಷಸ ಪ್ರವೃತ್ತಿಯ ಅತಿ ಬಲಿಷ್ಠವಾದ ಮಾಂಸಾಹಾರಿ ದೈತ್ಯೋರಗಗಳು. ಇತರ ಸರೀಸೃಪಗಳಿಗೆ ಇವು ಅತಿ ಉಪದ್ರವಕಾರಿಗಳಾಗಿದ್ದುವು. ಅಲ್ಲೋಸಾರಸ್ ಕುಲದ ಪ್ರಾಣಿಗಳ ಉದ್ದ ೯–೧೫ ಮೀ. ಅವಕ್ಕೆ ಘನ ಮತ್ತು ತೂಕವಾದ ಮೂಳೆಗಳಿದ್ದುದರಿಂದ ಒಟ್ಟು ತೂಕ ಹಲವಾರು ಟನ್ನಿನಷ್ಟೇ ಇತ್ತು. ಈ ಗಾತ್ರಕ್ಕೆ ಹೋಲಿಸುವಾಗ ಅದರ ತಲೆ ಸ್ವಲ್ಪ ಚಿಕ್ಕದೆನಿಸಿದರೂ ವಾಸ್ತವವಾಗಿ ಅದು ಇತರ ಸರೀಸೃಪಗಳ ತಲೆಗಿಂತ ದೊಡ್ಡದಾಗಿತ್ತು. ಬಲವಾದ ದವಡೆ, ಉದ್ದ ಮತ್ತು ಮೊನಚಾದ ಹಲ್ಲುಗಳು, ಕೈಯ್ಯ ಮೊದಲ ಮೂರು ಬೆರಳುಗಳಲ್ಲಿ ಅಗಲ ಮತ್ತು ಚೂಪು ನಖಗಳು, ಸ್ಥೂಲ ಶರೀರವನ್ನು ಹೊರಲು ಬಲಿಷ್ಠವಾದ ದಪ್ಪಕಾಲುಗಳು–ಈ ಪ್ರಾಣಿಯ ವೈಶಿಷ್ಟ್ಯ. ಇವು ದೈತ್ಯೋರಗಗಳನ್ನು ನಿರ್ಲಕ್ಷ್ಯದಿಂದ ಕೊಂದು ತಿನ್ನುತ್ತಿದ್ದುವು. ಇದುವರೆಗೆ ಜೀವಿಸಿದ ಮಾಂಸಾಹಾರಿಗಳಲ್ಲೆಲ್ಲ ಅತ್ಯಂತ ಭೀಕರ ಮತ್ತು ಬಲಿಷ್ಠ ಪ್ರಾಣಿಯೆಂದರೆ ಮುಂದೆ ಕೆಲವು ಕೋಟಿ ವರ್ಷಗಳ ತರುವಾಯ ಕಾಣಿಸಿಕೊಂಡ ಟೈರಾನೊಸಾರ್ ಅಥವಾ ಕ್ರೂರೋರಗ. ಹಲ್ಲಿಗಳ ನಿರಂಕುಶ ಪ್ರಭು ಎಂದು ಈ ಶಬ್ದದ ಅರ್ಥ. ಇದು ಅಲ್ಲೋಸಾರನ್ನು ಹೋಲುತ್ತಿತ್ತು. ಇದರ ಉದ್ದ ತಲೆಯಿಂದ ಬಾಲದವರೆಗೆ ೧೫ ಮೀ. ತೂಕ ೮೦೦೦–೧೦೦೦೦ ಕಿಗ್ರಾಂ. ಇದು ನಿಂತಾಗ ೫.೫–೬ ಮೀ ಎತ್ತರವಾಗಿತ್ತು. ದೈತ್ಯೋರಗಗಳಿಗೂ ಇದು ಮೃತ್ಯುಪ್ರಾಯವಾಗಿತ್ತು. ಇಂದಿನ ಉಷ್ಟ್ರ ಪಕ್ಷಿಯನ್ನು ಹೋಲುವ ದೈತ್ಯೋರಗಗಳೂ ಕೂಡ ಥೀರೊಪೊಡ ಉಪಗಣಕ್ಕೆ ಸೇರಿದವು. ಅವುಗಳಲ್ಲಿ ಓವಿರಾಪ್ಟರ್ ಎಂಬ ಜೀವಿ ಸಾಧುಪ್ರಾಣಿಯಾಗಿತ್ತು. ಇತರ ಉರಗಗಳ ಮೊಟ್ಟೆಗಳನ್ನು ಕದ್ದು ತಿನ್ನುತ್ತಿದ್ದರಿಂದ ಅದಕ್ಕೆ ಎಗ್‌ಸ್ಟೀಲರ್ ಎಂಬ ಹೆಸರು ಇತ್ತು.

ಸೌರಪೋಡ ಉಪಗಣದ ದೈತ್ಯೋರಗಗಳು ಭೂತಾಕಾರವಾಗಿ ಬೆಳೆದುವು. ಇವುಗಳಲ್ಲಿ ಮುಖ್ಯವಾದ ಜಾತಿಗಳು ಬ್ರಾಂಟೋಸಾರಸ್, ಬ್ರೇಕಿಯೋಸಾರಸ್ ಮತ್ತು ಡಿಪ್ಲೋಡಾಕಸ್. ಎಲ್ಲಾ ಸಸ್ಯಾಹಾರಿಗಳು. ಬ್ರಾಂಟೋಸಾರಸ್ ಅಂದರೆ ಗುಡುಗುಹಲ್ಲಿ. ಉದ್ದ ತಲೆಯಿಂದ ಬಾಲದವರೆಗೆ ೨೧–೨೪ ಮೀ. ಬಾಲದಷ್ಟೇ ಉದ್ದವಾದ ಬಳುಕುವ ಕತ್ತು ಇದಕ್ಕಿತ್ತು. ಸುಮಾರು ೬೦,೦೦೦ ಕಿಗ್ರಾಂ ತೂಕದ ಈ ಪ್ರಾಣಿ ಬಹುಶಃ ಆರು ಆನೆಗಳ ಗಾತ್ರಕ್ಕೆ ಸಮವಾಗಿತ್ತು. ಆದರೆ ಅತಿ ಚಿಕ್ಕದಾದ ತಲೆ, ನಿರ್ಬಲವಾದ ದವಡೆ ಮತ್ತು ಹಲ್ಲುಗಳು ಅದರ ಭೂತಾಕೃತಿಗೆ ಸ್ವಲ್ಪವೂ ತಾಳೆಯಾಗುತ್ತಿರಲಿಲ್ಲ. ನೀರಿನಲ್ಲಿನ ಮೃದು ಸಸ್ಯಗಳನ್ನು ತಿನ್ನಲು ಮಾತ್ರ ಆ ಹಲ್ಲುಗಳು ಸಹಕಾರಿಯಾಗಿದ್ದುವು. ಮಾಂಸಾಹಾರಿಗಳಿಂದ ತಪ್ಪಿಸಿಕೊಳ್ಳಲು ಇವು ನೀರಿಗೆ ಹೋಗುತ್ತಿದ್ದಿರಬಹುದು. ಇವುಗಳ ಅವಶೇಷಗಳು ಉತ್ತರ ಅಮೆರಿಕದಲ್ಲಿ ಸಿಕ್ಕಿವೆ. ಅಮೆರಿಕದ ಪಳೆಯುಳಿಕೆಗಳ ತಜ್ಞನಾದ ಆರ್.ಬಿ.ಬರ್ಡ್ ಮತ್ತು ಅತನ ವಿದ್ಯಾರ್ಥಿಗಳು ಸೌರಾಪೊಡದ ಕಾಲಿನ ಗುರುತುಗಳಿರುವ ಶಿಲೆಗಳನ್ನು ಕಂಡುಹಿಡಿದರು. ಅದೇ ಸ್ಥಳದಲ್ಲಿ ಮಾಂಸಾಹಾರಿ ಥೀರೊಪೊಡಗಳ ಮೂರು ಬೆರಳಿನ ಕಾಲು ಗುರುತುಗಳುಳ್ಳ ಕಲ್ಲುಗಳೂ ದೊರೆತುವು. ಇದರಿಂದ ಮಾಂಸಾಹಾರಿ ಟೈರಾನೋಸಾರುಗಳು ಈ ಸಸ್ಯಾಹಾರಿಗಳನ್ನು ಅಟ್ಟಿಸಿಕೊಂಡು ಹೋಗಿ ಬೇಟೆಯಾಡುತ್ತಿದ್ದಿರಬೇಕೆಂಬ ತೀರ್ಮಾನಕ್ಕೆ ಬಂದರು. ದೈತ್ಯೋರಗಗಳಲ್ಲೆಲ್ಲ ಬ್ರೇಕಿಯೋಸಾರಸ್ ಅತಿ ದೊಡ್ಡದು ಮತ್ತು ತೂಕವಾದದ್ದು. ಇದರ ತೂಕ ಸುಮರು ೨,೦೦,೦೦೦ ಕಿಗ್ರಾಂ ಇದ್ದಿರಬಹುದು. ಮಾಂಸಹಾರಿಗಳಿಂದ ತಪ್ಪಿಸಿಕೊಳ್ಳುವುದಿರಲಿ, ತಮ್ಮ ದೇಹವನ್ನು ಭೂಮಿಯಮೇಲೆ ಎಳೆಯುವುದೂ ಇವುಗಳಿಗೆ ಪ್ರಯಾಸಕರ. ದೇಹದ ತೂಕವನ್ನು ಕಡಿಮೆಮಾಡಿಕೊಳ್ಳಲು ತಮ್ಮ ಜೀವಮಾನದ ಹೆಚ್ಚುಭಾಗವನ್ನು ಇವು ನೀರಿನಲ್ಲೇ ಕಳೆಯುತ್ತಿದ್ದುವು. ಆಳವಾದ ನೀರಿಗೆ ಇಳಿದರೂ ಉದ್ದವಾದ ಮುಂಗಾಲುಗಳ ಮತ್ತು ಕತ್ತಿನ ನೆರವಿನಿಂದ ತಮ್ಮ ತಲೆಯನ್ನು ನೀರಿನ ಮೇಲೆ ಎತ್ತಿಟ್ಟುಕೊಳ್ಳುತ್ತಿದ್ದುವು. ತಲೆಯ ಮೇಲ್ಭಾಗದಲ್ಲಿ ಒಂದು ಗುಮ್ಮಟದಂಥ ಪ್ರದೇಶವಿತ್ತು. ಅದರಲ್ಲಿ ನಾಸಿಕ ರಂಧ್ರಗಳಿದ್ದುವು. ನೀರಿನಲ್ಲಿ ಅಡಗಿದ್ದರೂ ರಂಧ್ರಗಳ ನೆರವಿನಿಂದ ಉಸಿರಾಡಲು ಸಾಧ್ಯವಾಗುತ್ತಿತ್ತು. ೨೬.೫ ಮೀ ಉದ್ದವಿದ್ದ ಡಿಪ್ಲೋಡಾಕಸುಗಳು ತಮ್ಮ ಇತರ ಸಂಬಂಧಿಗಳಿಗಿಂತ ಕೃಶ ಮತ್ತು ಹಗುರ. ಮಿದುಳು ಬಲು ಕಿರಿದು. ಸೊಂಟಪಟ್ಟಿಯ ಭಾಗದಲ್ಲಿ ಕಾಲುಗಳಿಗೆ ಹೋಗುವ ಮಿದುಳುಬಳ್ಳಿಯ ನರಗಳು ಒಟ್ಟುಗೂಡಿ ಮಿದುಳಿಗಿಂತ ಅನೇಕಪಾಲು ದೊಡ್ಡದಾದ ನರಗಳ ವಸ್ತುವನ್ನು ನಿರ್ಮಿಸಿದ್ದುವು. ಇವನ್ನು ಎರಡನೆಯ ಮಿದುಳು ಎಂದು ಕರೆಯಬಹುದು. ಇದಕ್ಕೆ ಜ್ಞಾನವಾಹಕ ಗ್ರಹಣಶಕ್ತಿ (ಸೆನ್ಸರಿ ಪರ್‌ಸೆಪ್ಷನ್) ಇರದಿದ್ದರೂ ಸ್ಥೂಲವಾದ ಹಿಂಗಾಲುಗಳ ಚಲನೆಗೆ ಸಹಾಯಕವಾಗಿದ್ದಿರಬಹುದು. ಸೌರೊಪೊಡ ದೈತ್ಯೋರಗಗಳು ನೀರಿನಲ್ಲಿ ಆಸರೆ ಪಡೆಯದಿದ್ದರೆ ಅಲ್ಲೋಸಾರ್ ಮತ್ತು ಟೈರಾನೋಸಾರುಗಳ ಕ್ರೌರ್ಯಕ್ಕೆ ಸುಲಭವಾಗಿ ಬಲಿಯಾಗುತ್ತಿದ್ದುವು. ಕೋಟ್ಯಾಂತರ ವರ್ಷಗಳ ಅನಂತರ ಭೂಮಿಯ ಮೇಲಿನ ನೀರು ಬತ್ತುತ್ತಾ ಬಂದಂತೆ ಇವುಗಳ ಜೀವನ ಕಷ್ಟವಾಗುತ್ತ ಬಂದು ಭೂಮಿಯ ಮೇಲೆ ಜೀವಿಸಲಾರದೆ ಹೋದುವು.

ಪಕ್ಷಿಸೊಂಟಪಟ್ಟಿಯ ಆರ್ನಿತಿಶ್ಚಿಯ ಗಣದ ದೈತ್ಯೋರಗಗಳು: ಸ್ಟೀಗೋಸಾರಸ್ ಗಣದ ಸಸ್ಯಾಹಾರಿ ಮತ್ತು ಚತುಷ್ಪಾದಿ. ಬೆನ್ನಿನ ಮೇಲೆ ತಲೆಯಿಂದ ಬಾಲದವರೆಗೆ ಹಾಳೆಹಾಳೆಯಾಗಿ ಎದ್ದುನಿಂತ ಒಂದು ಸಾಲು ಚಿಪ್ಪುಗಳು ಮತ್ತು ಬಾಲದ ಮೆಲೆ ಇದ್ದ ನಾಲ್ಕು ದೊಡ್ಡ ಸಲಾಕಿಗಳಂಥ ಮುಳ್ಳುಗಳೂ ಆತ್ಮಸಂರಕ್ಷಣೆಯ ಸಾಧನವಾಗಿದ್ದುವು. ಆಂಕೈಲೋಸಾರಸಿನ ೬ ಮೀ ಉದ್ದದ ದೇಹವನ್ನು ಸಂಪೂರ್ಣವಾಗಿ ರಕ್ಷಣಾಕವಚಗಳು ಮುಚ್ಚಿದ್ದುವು. ಮುಳ್ಳುಗಳಿಂದ ಕೂಡಿದ ಬಲಿಷ್ಠವಾದ ಬಾಲ ಅದರ ಒಂದು ಪ್ರಬಲ ಆಯುಧ. ಕಾಂಪ್ಸೋಸಾರಸ್ ತಮ್ಮ ಪೂರ್ವಜರಾದ ಥೀಕೊಡಾಂಟುಗಳಂತೆ ದ್ವಿಪಾದಿಗಳು. ಇವು ಅನಂತರ ಕಾಣಿಸಿಕೊಂಡ ಬಾತು ಕೊಕ್ಕಿನ ಮೂತಿಯ (ಡಕ್‌ಬಿಲ್ಡ್ ಡೈನೋಸಾರ್ಸ್) ದೈತ್ಯೋರಗಗಳ ಪೂರ್ವಜಗಳು. ೧೨ ಮೀ ಉದ್ದದ ಅನಾಟೊಸಾರಸ್ ಇಂಥ ಒಂದು ಬಾತುಕೊಕ್ಕಿನ ದೈತ್ಯೋರಗ. ಅದರ ಮುಸುಡು ಬಾತುಕೋಳಿಯ ಕೊಕ್ಕಿನಂತಿತ್ತು. ಪ್ರತಿಯೊಂದು ಸಾಲಿನಲ್ಲೂ ನೂರಾರು ಹಲ್ಲುಗಳಿದ್ದುವು. ಬಹುಶಃ ಕಾಂಪ್ಸೋಸಾರಸಿನಿಂದ ವಿಕಸಿಸಿದ ಇಗ್ವಾನೋಡಾನ್, ೭.೫–೯ ಮೀ ವರೆಗೆ ಬೆಳೆದ ದ್ವಿಪಾದಿ ಸಸ್ಯಾಹಾರಿ ದೈತ್ಯೋರಗ. ಇದರ ಪಳೆಯುಳಿಕೆಗಳು ಮೊದಲು ದೊರೆತದ್ದು ಇಂಗ್ಲೆಂಡಿನಲ್ಲಿ. ಅನಂತರ ೧೮೭೮ರಲ್ಲಿ ಬೆಲ್ಜಿಯಂನ ಕಲ್ಲಿದ್ದಲ ಗಣಿಯಲ್ಲಿ ೩೦ ಪೂರ್ಣ ಪಳೆಯುಳಿಕೆಗಳು ಸಿಕ್ಕಿವೆ. ಸಸ್ಯಾಹಾರಿಯಾದರೂ ಈ ದ್ವಿಪಾದಿಗೆ ಹರಿತವಾದ ಹೆಬ್ಬೆರಳಿನ ತುದಿಯಲ್ಲಿದ್ದ ಚೂಪಾದ ಮುಳ್ಳು ರಕ್ಷಣಾಯುಧವಾಗಿತ್ತು. ಕೊಂಬಿನ ದೈತ್ಯೋರಗಗಳಲ್ಲಿ ಇಂದಿನ ಘೇಂಡಾಮೃಗವನ್ನು ಹೋಲುತ್ತಿದ್ದ ಟ್ರೈಸೆರಟಾಪ್ಸ್ ಬಹಳ ಮುಖ್ಯವಾದದ್ದು. ಉತ್ತರ ಅಮೆರಿಕದಲ್ಲಿ ಹೇರಳವಾಗಿತ್ತು. ಇದರ ತಲೆಯ ಅಗಲ ೨ ಮೀ ಗಳಷ್ಟು. ಆತ್ಮಸಂರಕ್ಷಣೆಗೆ ಸಾಧನವಾಗಿ ಮೂರು ಕೊಂಬುಗಳಿದ್ದವು. ೯೦ ಸೆಂಮೀ ಉದ್ದದ ಎರಡು ಕೊಂಬುಗಳು ಎರಡು ಕಣ್ಣುಗಳ ಮೇಲೆ, ಮತ್ತೊಂದು ಸ್ವಲ್ಪ ಚಿಕ್ಕದು ಮೂಗಿನ ಮೇಲೆ. ಬಹುಶಃ ಅಲ್ಲೋಸಾರ್ಸ್ ಮತ್ತು ಟೈರಾನೋಸಾರಿನಂಥ ಭೀಕರ ಮಾಂಸಾಹಾರಿಗಳೊಡನೆ ಸೆಣಸಿ, ಕಾದಾಡಿ ಕೆಲವು ವೇಳೆ ಜಯಶಾಲಿಯಾದ ದೈತ್ಯೋರಗವೆಂದರೆ ಟ್ರೈಸೆರಟಾಪ್ಸ್ ಎಂದು ಊಹಿಸಲಾಗಿದೆ.



ಥೀಕೋಡಾಂಟಿನ ಸಾಲ್ಟೋಪಸ್‌ನಂತಹ ಕೆಲವು ಜೀವಿಗಳು ಬಹುಶಃ ವಾಯು ಮಂಡಲವನ್ನು ಆಕ್ರಮಿಸಲು ತೊಡಗಿದುವು. ಅವುಗಳಿಂದ ವಿಕಸಿಸಿದ ಗಣ ಟೀರೊಡ್ಯಾಕ್ಟೈಲ ಅಥವಾ ಪಕ್ಷಾಂಗುಲೀಯ. ಇದು ಜುರಾಸಿಕ್ ಮತ್ತು ಕ್ರಿಟೇಷಿಯಸ್ ಕಲ್ಪಗಳಲ್ಲಿ ಹೇರಳವಾಗಿತ್ತು. ಇದರ ಮುಂಗಾಲುಗಳು ಇಂದಿನ ಬಾವಲಿಗಳಿಗಿರುವಂತೆ ರೆಕ್ಕೆಗಳಾಗಿ ರೂಪಗೊಂಡಿತ್ತು. ಆದರೆ ಪುಕ್ಕಗಳಲ್ಲಿರಲಿಲ್ಲ. ಬಾಲ ಬಹಳ ಉದ್ದ. ತುದಿ ಮೀನಿನ ಈಜುರೆಕ್ಕೆಯಂತೆ. ಇದನ್ನು ವಾಯುಮಂಡಲದ ಹಾರುವ ಪೆಡಂಭೂತ ಎಂದು ಕರೆಯುವರು. ಮಾಂಸಾಹಾರಿ ಪ್ರಾಣಿ. ಇದರಲ್ಲಿ ಮೊದಮೊದಲು ವಿಕಸಿಸಿದುವು ಕೇವಲ ಗುಬ್ಬಚ್ಚಿಯಷ್ಟು ಚಿಕ್ಕದಾಗಿದ್ದುವು. ಉದ್ದವಾದ ದವಡೆ, ಅದರ ತುಂಬ ಹಲ್ಲುಗಳು. ನೋಡಲು ಅಸಹ್ಯವಾಗಿದ್ದುವು. ಕ್ರಮೇಣ ಇವುಗಳ ಗಾತ್ರ ಇಂದಿನ ಪುಟ್ಟ ವಿಮಾನದಷ್ಟು ಬೆಳೆಯಿತು. ಅತಿ ದೊಡ್ಡದಾದ ಜೀವಿ. ರೆಕ್ಕೆಗಳನ್ನು ಹರಡಿದಾಗ ಅದು ಸುಮಾರು ೮.೫ ಮೀ ಗಳಷ್ಟು ಅಗಲವಾಗಿ ವ್ಯಾಪಿಸುತ್ತಿತ್ತು. ರ್‍ಯಾಂಪೋರ್‍ಹಿಂಕಾಯ್ಡಿಯ ಎಂಬ ಜಾತಿಯ ರ್‍ಯಾಂಪೋರ್‍ಹಿಂಕಸ್ ಮತ್ತು ಡೈಮಾರೊಡಾನ್ ಎಂಬುವ ಹಾರುವ ಜಾತಿಗಳಿಗೆ ಉದ್ದನೆಯ ಬಾಲವಿತ್ತು. ಅದರ ತುದಿ ಮೀನಿನ ಈಜುರೆಕ್ಕೆಯಂತಿತ್ತು. ಟೀರೊಡ್ಯಾಕ್ಟೈಲಾಯ್ಡಿಯ ಎಂಬ ಜಾತಿಯ ಜೀವಿಗಳಲ್ಲಿ ಬಾಲ ಮೊಟಕು. ಅದೇ ಜಾತಿಯ ಟೀರೊಡ್ಯಾಕ್ಟೈಲಸ್ ಪ್ರಭೇದದ ಸರೀಸೃಪಗಳಿಗೆ ಹಲ್ಲುಗಳಿರಲಿಲ್ಲ.

ಭೂಮಿಯ ಮೇಲೆ ಬಾಳುತ್ತಿದ್ದ ಮಹಾಕ್ರೂರಿ ದೈತ್ಯೋರಗಗಳ ಉಪದ್ರವವನ್ನು ತಾಳಲಾರದೆ ಕೆಲವು ಸರೀಸೃಪಗಳು ತಮ್ಮ ಪೂರ್ವಜರಂತೆ ಪುನಃ ನೀರಿಗೆ ಮರಳಿರಬಹುದು. ಇವೇ ಮತ್ಸ್ಯೋರಗಗಳು. ಜಲಜೀವನಕ್ಕೆ ಹೆಚ್ಚು ಪರಿಣಾಮಕಾರಿಯಾಗಿ ತಮ್ಮ ದೇಹವನ್ನು ಅಳವಡಿಸಿಕೊಂಡ ಇವನ್ನು ಎರಡು ಗಣಗಳಿಗೆ ಸೇರಿಸಲಾಗಿದೆ. ಅವು ಪ್ಲಿಸಿಯೋಸಾರಿಯ ಮತ್ತು ಇಕ್ತಿಯೋಸಾರಿಯ. ಈ ಎರಡು ಗಣಗಳ ಜೀವಿಗಳ ಕಪಾಲದಲ್ಲಿ ಪ್ರತಿಯೊಂದು ಪಾರ್ಶ್ವದಲ್ಲೂ ಸೈನಾಪ್ಸಿಡದಂತೆ ಒಂದೊಂದು ಬೃಹದ್ರಂಧ್ರವಿದ್ದರೂ ಅದರ ಎಲುಬಿನ ಆಯಕಟ್ಟಿನಲ್ಲಿ ವ್ಯತ್ಯಾಸವಿದ್ದುದರಿಂದ ಅದನ್ನು ಸೈನಾಪ್ಸಿಡಕ್ಕೆ ಸೇರಿಸಲಾಗುವುದಿಲ್ಲ. ಇವನ್ನು ಪ್ಯಾರಾಪ್ಸಿಡ ಸರೀಸೃಪಗಳೆಂದು ಪರಿಗಣಿಸಲಾಗಿದೆ. ಇದೇ ಕಾರಣಕ್ಕಾಗಿ ನೆಲದ ಮೇಲೆ ವಾಸಿಸುತ್ತಿದ್ದ ಚಿಕ್ಕ ಹಲ್ಲಿಯಂಥ ದೇಹದ ಅರಿಯೋಸೆಲಿಸನ್ನು ಒಳಗೊಂಡ ಪ್ರೋಟೋಸಾರಿಯ ಗಣವನ್ನು ಪ್ಯಾರಾಪ್ಸಿಡ ಉಪವರ್ಗಕ್ಕೆ ಸೇರಿಸಲಾಗಿದೆ. ಕಾಟಿಲೋಸಾರಿಯದಿಂದ ವಿಕಸಿಸಿದ ಡೈಆಪ್ಸಿಡ ಶಾಖೆಯಿಂದ ಆದಿಯಲ್ಲೇ ಕವಲಾಗಿ ಇವು ವಿಕಸಿಸಿರಬಹುದು ಎಂದು ಊಹಿಸಿದೆ. ಸಮುದ್ರವಾಸಿಗಳಾದ ಪ್ಲಿಸಿಯೋಸಾರಿಯ ಮತ್ತು ಇಕ್ತಿಯೋಸಾರಿಯ ಗಣಗಳ ಮತ್ಸ್ಯೋರಗಗಳ ವಂಶಜರು ಪ್ರೋಟೋಸಾರಿಯ ಗಣದ ಜೀವಿಗಳು ಎಂದೂ ಊಹಿಸಲಾಗಿದೆ. ಮತ್ಸ್ಯೋರಗಗಳಲ್ಲಿ ಕೆಲವು ದ್ವಿಚರಿಗಳಾಗಿದ್ದುವು. ಅವನ್ನು ಸೌರಾಪ್ಟೆರಿಜಿಯ ಎಂಬ ಗಣಕ್ಕೆ ಸೇರಿಸಿದೆ. ಪ್ಲಿಸಿಯೋಸಾರಿಯಕ್ಕೆ ಆಮೆಯಂಥ ದೇಹ, ಉದ್ದವಾದ ಕತ್ತು, ದೇಹದ ಗಾತ್ರಕ್ಕೆ ಸ್ವಲ್ಪವೂ ಹೊಂದದ ಚಿಕ್ಕತಲೆ ಮತ್ತು ಮೊಟಕಾದ ಬಾಲಗಳಿದ್ದುವು. ಕಾಲುಗಳು ಈಜಲು ಸಹಾಯಕವಾಗಿ ಜಾಲಪಾದಗಳಾಗಿ ರೂಪಾಂತರಗೊಂಡಿದ್ದವು. ಕೆಲವು ಜಾತಿಗಳು ೧೨ ಮೀ ಗಳಷ್ಟು ಉದ್ದ ಬೆಳದಿದ್ದುವು. ಇಕ್ತಿಯೋಸಾರಿಯ ಗಣದ ಮತ್ಸ್ಯೋರಗಗಳು ಜಲವಾಸಕ್ಕೆ ಇನ್ನಷ್ಟು ಚೆನ್ನಾಗಿ ಹೊಂದಿಕೊಂಡು ಟ್ರಯಾಸಿಕ್ ಕಲ್ಪದಿಂದ ಜುರಾಸಿಕ್ ಕಲ್ಪದವರೆಗೆ ಬಾಳಿದವು. ಇವು ಮೀನನ್ನು ಹೋಲುತ್ತಿದ್ದವು. ಉದ್ದ ೯–೧೨ ಮೀ ಗಳಷ್ಟು. ಇಂಗ್ಲೆಂಡ್ ದೇಶದ ಒಬ್ಬ ಬಾಲಕಿಗೆ ಇದರ ಒಂದು ಪಳೆಯುಳಿಕೆ ೧೮೧೧ರಲ್ಲಿ ಸಿಕ್ಕಿತು. ಇಂಥವು ಈಚೆಗೆ ಭೂಮಿಯ ಎಲ್ಲ ಭಾಗಗಳಲ್ಲೂ ದೊರೆತಿವೆ. ಈ ಕಾರಣದಿಂದಲೇ ಇವು ಆ ಯುಗದಲ್ಲಿ ಸಮುದ್ರದಲ್ಲಿ ಹೇರಳವಾಗಿ ಲೀಲಾಜಾಲವಾಗಿ ಬಾಳಿರಬೇಕು ಎಂದು ಊಹಿಸಲಾಗಿದೆ.

ಹೀಗೆ ಭೂಮಿಯ ಮೇಲಿನ ದೈತ್ಯೋರಗಗಳು, ಸಮುದ್ರದ ಪೈಶಾಚಿಕ ಮತ್ಸ್ಯೋರಗಗಳು ಮತ್ತು ವಾಯುಮಂಡಲದ ಪೆಡಂಭೂತಗಳು—ಈ ಪ್ರಾಣಿಗಳಿಂದ ತುಂಬಿದ ಭೂಮಂಡಲ ಅತಿ ಭಯಂಕರವೂ ಅದ್ಭುತವೂ ಇದ್ದಿರಬೇಕು. ಆದರೆ ೧೨ ಕೋಟಿ ವರ್ಷಗಳ ಕಾಲ ಸತತವಾಗಿ ನಿರಂಕುಶ ಪ್ರಭುಗಳಾಗಿ ಮೆರೆದ ಈ ಮಹಾಪ್ರಾಣಿಗಳು ಮುಂದೊಂದು ದಿವಸ ನಿಶ್ಶೇಷವಾದುವು. ಇದಕ್ಕೆ ಕಾರಣಗಳು ಇನ್ನೂ ನಿಗೂಢ. ಈ ವಿಷಯದ ಬಗ್ಗೆ ವಿಜ್ಞಾನಿಗಳು ಊಹಾಪೋಹಗಳನ್ನು ಮಾಡುತ್ತಲೇ ಇದ್ದಾರೆ. ವಾತಾವರಣದಲ್ಲಿ ಬದಲಾವಣೆಯಾಗುತ್ತ ಬಂತು; ಗಾಳಿ ತಂಪಾಗಿ ಶೀತಲಗಾಳಿ ಬೀಸಲು ಪ್ರಾರಂಭಿಸಿತು; ಕ್ರಮೇಣ ಜೌಗುಪ್ರದೇಶಗಳು ಬತ್ತುತ್ತ ಬಂದುವು; ಅನೇಕ ಹೊಸವರ್ಗದ ಸಸ್ಯಗಳು ಕಾಣಿಸಿಕೊಂಡವು; ಶೀತರಕ್ತದ ಸರೀಸೃಪಗಳಲ್ಲಿ ಅನೇಕ ಪ್ರಭೇದಗಳು, ಅದರಲ್ಲೂ ದೈತ್ಯೋರಗ, ಮತ್ಸ್ಯೋರಗ ಮತ್ತು ಹಾರುವ ಪೆಡಂಭೂತಗಳು ಈ ಶೀತಲ ಹವೆಯನ್ನು ತಾಳಲಾರದೆ ಗತಿಸಿಹೋಗಿರಬಹುದು; ಸಮುದ್ರದ ಶೈತ್ಯವೂ ಹೆಚ್ಚಿ ಮತ್ಸ್ಯೋರಗಗಳು ಅವಸಾನಗೊಂಡುವು; ಸಸ್ಯಾಹಾರಿ ದೈತ್ಯೋರಗಗಳಿಗೆ ಹೊಸಬಗೆಯ ಸಸ್ಯಾಹಾರ ಒಗ್ಗಲಿಲ್ಲ; ಹೀಗೆ ಉಂಟಾದ ಆಹಾರಾಭಾವದಿಂದ ಅವು ಮಡಿದಿರಬಹುದು; ಅದರ ಪರಿಣಾಮವಾಗಿ ಅವನ್ನು ತಿಂದು ಜೀವಿಸುತ್ತಿದ್ದ ಮಾಂಸಾಹಾರೀ ದೈತ್ಯೋರಗಗಳಿಗೂ ಆಹಾರದ ಕೊರತೆ ಪ್ರಾರಂಭವಾಯಿತು; ಇದರಿಂದ ಕ್ರಮೇಣ ಅವೂ ಅವಸಾನ ಹೊಂದಿರಬಹುದು ಎಂಬುದು ಒಂದು ವಾದ.

ಸ್ವೀಕಾರಾರ್ಹವಾದ ಇನ್ನೊಂದು ತರ್ಕಸರಣಿ ಇದೆ. ಈ ದೈತ್ಯಜೀವಿಗಳಿಗೆ ತಮ್ಮ ಭೂತಾಕಾರದ ಮೊಟ್ಟೆಗಳನ್ನು ಯಾವ ಮರೆಯಲ್ಲಾಗಲಿ ಅಥವಾ ರಕ್ಷಣೆಯಲ್ಲಾಗಲಿ ಇಡಲು ಸಾಧ್ಯವಾಗುತ್ತಿರಲಿಲ್ಲ. ನೆಲದ ಮೇಲೆಯೇ ಅವನ್ನು ಇಡುತ್ತಿದ್ದುವು. ಚಿಕ್ಕ ಸರೀಸೃಪಗಳೂ ಮತ್ತು ಆ ವೇಳೆಗೆ ವಿಕಸಿಸುತ್ತಿದ್ದ ಆದಿ ಸ್ತನಿಗಳೂ ಈ ಮೊಟ್ಟೆಗಳನ್ನು ನಾಶಪಡಿಸಿರಬಹುದು. ಡಾಕ್ಟರ್ ಮೋರಿಯವರ ಊಹೆಯಂತೆ ಒಂದು ಬಗೆಯ ಅಸಾಧಾರಣವಾದ ಸಾಂಕ್ರಾಮಿಕ ಜಾಡ್ಯಕ್ಕೆ ಈ ದೈತ್ಯೋರಗಗಳು ಬಲಿಯಾಗಿ ನಿಶ್ಶೇಷವಾಗಿ ಅಳಿದವು; ಸಾಂಕ್ರಾಮಿಕ ರೋಗಗಳನ್ನುಂಟುಮಾಡುವ ಜೀವಾಣುಗಳು ಪ್ರಾರಂಭದಲ್ಲಿ ಸ್ವತಂತ್ರ ಜೀವಿಗಳಾಗಿದ್ದು ಸರೀಸೃಪಗಳು ಉನ್ನತ ಸ್ಥಿತಿಗೆ ತಲಪುವ ವೇಳೆಗೆ ಬಹುಶಃ ಪರತಂತ್ರಜೀವಿಗಳಾಗಿ ಪರಿಣಮಿಸಿ ಈ ದೈತ್ಯೋರಗಗಳ ವಿಪತ್ತಿಗೆ ಕಾರಣಗಳಾಗಿರಬಹುದು ಎಂಬುದು ಅವರ ವಾದ. ಇದು ನಿಜವಾದ ಪಕ್ಷದಲ್ಲಿ ಇತರ ಸರೀಸೃಪ ಮತ್ತು ಅನೇಕ ಇತರ ವರ್ಗದ ಪ್ರಾಣಿಗಳು ಈ ಆಪತ್ತಿನಿಂದ ಹೇಗೆ ಪಾರಾದುವು ಎಂಬುದು ಪ್ರಶ್ನೆ. ಈ ಎಲ್ಲಾ ವಿಪತ್ತುಗಳು ಇದ್ದರೂ ಅವನ್ನು ಎದುರಿಸಿ ಉಳಿದಿರುವ ಸಣ್ಣ ಸಣ್ಣ ಸರೀಸೃಪಗಳನ್ನು

ಗಮನಿಸಿದರೆ ದೈತ್ಯೋರಗಗಳ ವಿನಾಶಕ್ಕೆ ಕಾರಣ ಇಂಥಾದ್ದೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಮೇಲೆ ಹೇಳಿದ ಎಲ್ಲ ಊಹೆಗಳ ಮೊತ್ತ ಇದ್ದರೂ ಇರಬಹುದು.

ದೈತ್ಯೋರಗಗಳ ವಿಷಯವಾಗಿ ಊಹಾಪೋಹಗಳಲ್ಲದೆ ಕೆಲವು ತಪ್ಪು ಕಲ್ಪನೆಗಳೂ ಇರುವುದುಂಟು. ಮೊದಲನೆಯದಾಗಿ ದೈತ್ಯೋರಗ ಒಂದು ಬೃಹದ್ ಸ್ವರೂಪದ ಸರೀಸೃಪ ಮಾತ್ರ ಎಂದು. ಕೇವಲ ಕೋಳಿ ಮರಿಯಷ್ಟು ಚಿಕ್ಕದಾದ ದೈತ್ಯೋರಗವೂ ಕೂಡ ಇದ್ದದಲ್ಲದೇ ಅನೇಕ ದೈತ್ಯೋರಗಗಳ ಉದ್ದ ೧.೮–೨.೫ ಮೀ. ವರೆಗೆ ಮಾತ್ರ ಇತ್ತು. ಎರಡನೆಯ ತಪ್ಪು ಕಲ್ಪನೆ ಕೆಲವು ಚಿತ್ರಕಾರರ ಕಾಲ್ಪನಿಕ ಚಿತ್ರಗಳಿಂದ ಮೂಡಿದೆ. ಆದಿಮಾನವ ದೈತ್ಯೋರಗಗಳ ಎದುರು ಹೋರಾಡುತ್ತಿರುವ ಚಿತ್ರಗಳು ಅನೇಕ ಇವೆ. ಏಳು ಕೋಟಿ ವರ್ಷಗಳ ಹಿಂದೆಯೇ ದೈತ್ಯೋರಗಗಳು ಕಣ್ಮರೆಯಾದುವು. ಆ ವೇಳೆಗೆ ಮಾನವ ಇನ್ನೂ ವಿಕಸಿಸಿಯೇ ಇರಲಿಲ್ಲ. ಮಾನವನ ಹತ್ತಿರದ ಪೂರ್ವಜರು ಕೇವಲ ೧೦ ಲಕ್ಷ ವರ್ಷಗಳ ಹಿಂದೆ ಇದ್ದಿರಬಹುದು ಎಂದು ಊಹಿಸಲಾಗಿದೆ.

ಇಂದು ಉಳಿದಿರುವ ಸರೀಸೃಪಗಳು: ಇವನ್ನು ನಾಲ್ಕು ಮುಖ್ಯ ಗಣಗಳಿಗೆ ಸೇರಿಸಲಾಗಿದೆ–ಕ್ರೋಕೊಡಿಲಿಯ ರ್‍ಹಿಂಕೋಸೆಫಾಲಿಯ, ಸ್ಕ್ವಾಮಾಟ, ಕೀಲೋನಿಯ.

ಕ್ರೋಕೊಡಿಲಿಯ ಗಣ: ಡೈಆಪ್ಸಿಡ ಸರೀಸೃಪಗಳ ಆರ್ಕಿಸೌರಿಯ ಉಪವರ್ಗಕ್ಕೆ ಸೇರಿದೆ. ನೆಗಳೆಗಳು, ಮೊಸಳೆಗಳು ಈ ಗಣದ ಪ್ರಾಣಿಗಳು. ಕ್ರಾಕಡಿಲಿಯದ ಪಳೆಯುಳಿಕೆಗಳು ಮಧ್ಯ ಜೀವಯುಗದ ಜುರಾಸಿಕ್ ಮತ್ತು ಕ್ರಿಟೇಷಿಯಸ್ ಕಲ್ಪಗಳ ಶಿಲೆಗಳಲ್ಲಿ ಸಿಕ್ಕಿವೆ. ಇವು ಜುರಾಸಿಕ್ ಕಲ್ಪದ ಆರಂಭದಲ್ಲಿ ವಿಕಸಿಸಿ ಇಲ್ಲಿಯವರೆಗೂ ಬಾಳಿ ಬೆಳೆದಿವೆ. ಶೀತಲ ನೀರಿರುವಲ್ಲಿ ಕಾಣಿಸವು. ಅನಾದಿಕಾಲದಲ್ಲಿ ಮೊಸಳೆಗಳು ಪ್ರಪಂಚದ ಎಲ್ಲ ಭಾಗಗಳಲ್ಲೂ ಹರಡಿದ್ದುವು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯ ಇದೆ. ಇಂಗ್ಲೆಂಡ್ ದೇಶದಲ್ಲಿ ಈಗ ಮೊಸಳೆಗಳ ಗಣ ಇಲ್ಲದಿದ್ದರೂ ಹಿಂದೆ ಇತ್ತು ಎಂಬುದಕ್ಕೆ ಸಾಕ್ಷಿಯಾಗಿ ಅದರ ಪಳಯುಳಿಕೆಗಳು ಸಿಕ್ಕಿವೆ. ಆಫ್ರಿಕ, ಬ್ರೆಜಿಲ್ ಮತ್ತು ದಕ್ಷಿಣ ಏಷ್ಯದ ನದಿ, ಜೌಗು ಪ್ರದೇಶಗಳಲ್ಲೂ ಅವು ಸಮೃದ್ಧಿಯಾಗಿ ಬಾಳಿವೆ. ಅದರಲ್ಲೂ ಆಫ್ರಿಕದ ನದಿಗಳಲ್ಲಿಯೂ ದಕ್ಷಿಣ ಅಮೆರಿಕದ ಅಮೆಜ಼ಾನ್ ನದಿಗಳಲ್ಲಿಯೂ ಮೊಸಳೆಗಳ ಹಿಂಡುಗಳನ್ನು ವಿಪುಲವಾಗಿ ಕಾಣಬಹುದು. ಸಮಶೀತೋಷ್ಣವಲಯದ ಅನೇಕ ಪ್ರದೇಶಗಳಲ್ಲಿಯೂ ಚೀನ, ಆಸ್ಟ್ರೇಲಿಯ ಮತ್ತು ಮಧ್ಯ ಅಮೆರಿಕಗಳಲ್ಲೂ ಇವು ಸಾಕಷ್ಟು ಸಂಖ್ಯೆಯಲ್ಲಿವೆ.

ಮೊಸಳೆಗಳಲ್ಲಿ ನಾಲ್ಕು ಪ್ರಭೇದಗಳಿವೆ: ೧. ಉತ್ತರ ಅಮೆರಿಕ ಮತ್ತು ವೆಸ್ಟಿಂಡೀಸಿನ ಕೈಮನ್, ೨. ಉತ್ತರ ಅಮೆರಿಕದ ಮತ್ತು ಚೀನದ ನದಿಗಳಲ್ಲಿರುವ ಅಲಿಗೇಟರ್ ಅಥವಾ ನೆಗಳೆಗಳು, ೩. ಭಾರತ, ಆಸ್ಟ್ರೇಲಿಯ ಮತ್ತು ಆಫ್ರಿಕಗಳ ಮೊಸಳೆ (ಕ್ರೋಕೊಡೈಲಸ್), ೪. ಭಾರತದ ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳಲ್ಲಿ ವಾಸಿಸುವ ಗೇವಿಯಾಲ್ ಅಥವ ಘರಿಯಾಲುಗಳು. ಗೇವಿಯಾಲುಗಳ ಮುಸುಡು ಪಕ್ಷಿಯ ಕೊಕ್ಕಿನ ಆಕಾರದಲ್ಲಿದೆ. ಇದು ಬಲು ಉದ್ದ. ಮೊಸಳೆಗಳ ತಲೆ ತ್ರಿಕೋನಾಕಾರವಾಗಿದೆ. ಮುಸುಡಿನ ಮುಂಭಾಗ ಚೂಪು. ಕೈಮನ್ನುಗಳ ತಲೆ ಹೆಚ್ಚು ಗುಂಡಾಕಾರವಾಗಿದೆ. ಮುಸುಡು ಮೊಂಡಾದ ತ್ರಿಕೋನಾಕರದಲ್ಲಿದೆ. ನೆಗಳೆಗಳಲ್ಲಿ ಎರಡು ಉಪಪ್ರಭೇದಗಳಿವೆ; ಒಂದರ ವಾಸ ಅಮೆರಿಕದ ನದಿಗಳಲ್ಲಿ, ಇನ್ನೊಂದರದು ಚೀನ ದೇಶದ ನದಿಗಳಲ್ಲಿ. ಭಾರತ ದೇಶದಲ್ಲಿರುವ ಮೊಸಳೆಗಳ ಪ್ರಭೇದಗಳು ಕ್ರೋಕೊಡೈಲಸ್ ಪೊರೋಸಸ್ ಮತ್ತು ಕ್ರೋಕೊಡೈಲಸ್ ಪಲೂಸ್ಟ್ರಿಸ್. ಇವು ನದೀ ಮುಖಗಳಲ್ಲಿನ ಜೌಗುಪ್ರದೇಶಗಳಲ್ಲಿವೆ. ಗೇವಿಯಾಲ್ ಪ್ರಭೇದದ ಗೆವಿಯಾಲಿಸ್ ಗ್ಯಾಂಜೆಟಿಕಸ್ ಎಂಬುದು ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳಲ್ಲಿವೆ. ಉಪ್ಪಿನ ಜೌಗು ಪ್ರದೇಶಗಳಲ್ಲಿ ವಾಸಿಸುವ ಮೊಸಳೆಗಳನ್ನು ಅಳಿವೆ ಮೊಸಳೆಗಳು (ಎಶ್ಚುರೈನ್ ಕ್ರೋಕೊಡೈಲ್ಸ್) ಎಂದು ಕರೆಯುವುದು ವಾಡಿಕೆ. ಭಾರತ, ಸಿಲೋನ್, ದಕ್ಷಿಣ ಚೀನ ಮತ್ತು ಉತ್ತರ ಆಸ್ಟ್ರೇಲಿಯ ದೇಶಗಳಲ್ಲಿ ಇವು ವ್ಯಾಪಿಸಿವೆ. ಇವು ಅತಿಕ್ರೂರಿ ಮೊಸಳೆಗಳು.

ಕೈಮನ್ ಮತ್ತು ನೆಗಳೆಗಳು ಒಂದನ್ನೊಂದು ಬಹುವಾಗಿ ಹೋಲುತ್ತವೆ. ಅವೆರಡೂ ಮಾಂಸಾಹಾರಿ ಪ್ರಾಣಿಗಳು. ನದಿಯ ನೀರು ಬತ್ತಿದಂತೆ ಸಮುದ್ರಕ್ಕೆ ವಲಸೆ ಹೋಗುವ ಈ ಪ್ರಾಣಿಗಳು ನೀರು ಹೆಚ್ಚು ಬತ್ತದೆ ಇರುವ ಸಮಯಗಳಲ್ಲಿ ನೀರಿನ ತಳಭಾಗದ ಮಣ್ಣಿನಲ್ಲಿಯೇ ಹುದುಗಿಕೊಂಡಿದ್ದು ಪುನಃ ನೀರಿಗಾಗಿ ಕಾಯಬಲ್ಲುವು. ಮೊಸಳೆಗಳಿಗೆ ಹಿಂಗಾಲುಗಳಲ್ಲಿ ಅರ್ಧ ಜಾಲಪಾದವಿದ್ದರೆ ನೆಗಳೆಗಳಿಗೆ ಪೂರ್ಣ ಜಾಲಪಾದವಿದೆ. ಮೊಸಳೆಗ'ಳಿಗೆ ಉಪ್ಪಿನ ಜೌಗು ಪ್ರದೇಶಗಳೇ ಹೆಚ್ಚು ಇಷ್ಟ. ಕೆಲವು ವೇಳೆ ಸಮುದ್ರಕ್ಕೂ ಈಜಿಕೊಂಡು ಹೋಗುತ್ತವೆ. ಆದರೆ ನೆಗಳೆಗಳಿಗೆ ಸಿಹಿನೀರೇ ಹೆಚ್ಚು ಪ್ರಿಯವಾದದ್ದು. ಸಾಮಾನ್ಯವಾಗಿ ನೆಗಳೆಗಳು ನಿರುಪದ್ರವಿಗಳು. ಭಾರತದ ಕ್ರೋಕೊಡೈಲಸ್ ಪೊರೋಸಸ್ ಮತ್ತು ಮಲೇಶಿಯ, ಆಫ್ರಿಕಗಳ ಕ್ರೊಕೊಡೈಲಸ್ ಕ್ರೋಟಕಸ್‌ಗಳಿಂದ ಮನುಷ್ಯನ ಪ್ರಾಣಕ್ಕೆ ಹಾನಿ ಅಪಾರ. ನೀರನ್ನು ಕುಡಿಯಲು ಬರುವ ಕಾಡುಕೋಣ, ದನಕರುಗಳು, ಕುದುರೆಗಳು ಮತ್ತು ಸ್ನಾನಕ್ಕಾಗಿ ಇಳಿಯುವ ಜನರು ಈ ನರಭಕ್ಷಕಗಳಿಗೆ ಬಲಿಯಾಗಿರುವ ಸಂದರ್ಭಗಳು ಸಾವಿರಾರು. ಗೇವಿಯಾಲ್, ನೆಗಳೆ, ಮೊಸಳೆ ಇವುಗಳ ಕೆಲವು ಪ್ರಭೇದಗಳು ನೀರಿನಲ್ಲಿರುವ ಮೀನು, ಕಡಲಾಮೆ, ಹಕ್ಕಿ, ಏಡಿ ಮುಂತಾದುವನ್ನು ತಿಂದು ಜೀವಿಸುತ್ತವೆ. ನೀರಿನಲ್ಲಿದ್ದಾಗ ಇವು ಅತಿ ಭಯಂಕರಿಗಳು. ಆದರೆ ನೆಲದ ಮೇಲೆ ಬಿದ್ದಾಗ ಏನೂ ಕೈಲಾಗದವು.

ದೊಡ್ಡ ನದೀಮುಖಗಳ ಜೌಗುಪ್ರದೇಶಗಳಲ್ಲಿ ವಾಸಿಸುವ ಮೊಸಳೆಗಳು (ಅಳಿವೆ ಮೊಸಳೆಗಳು) ಬಹಳ ಹಳೆಯ ಬುಡಕಟ್ಟಿಗೆ ಸೇರಿದಂಥವು. ಇವು ಸುಮಾರು ೯ ಮೀ ಉದ್ದ ಬೆಳೆಯಬಲ್ಲವು. ಆಯುರ್ಮಾನ ೨೦೦ ವರ್ಷಗಳೇ ಇರಬಹುದು. ೬ ಮೀ ಉದ್ದದ ಗೇವಿಯಾಲ್ ಜಾತಿ ಮೊಸಳೆಗಳ ಪೂರ್ವಜರು ಸುಮಾರು ೧೮ ಮೀ ಉದ್ದ ಬೆಳೆಯುತ್ತಿದ್ದುವೆಂದು ಊಹಿಸಲಾಗಿದೆ. ಅವುಗಳ ನಾಲ್ಕು ಕಾಲುಗಳು ಭೂಮಿಯಮೇಲೆ ಮತ್ತು ನೀರಿನ ತಳದಲ್ಲಿ ನಡೆಯಲು ಸಹಕಾರಿಯಾಗಿವೆ. ಆದರೆ ನೀರಿನಲ್ಲಿ ಈಜಲು ಸಹಾಯಕವಾಗಿಲ್ಲ. ಈಜುವಾಗ ಕಾಲುಗಳನ್ನು ದೇಹದ ಪಕ್ಕಕ್ಕೆ ಒತ್ತಿಡುತ್ತವೆ. ಜಾಲಪಾದವಿರುವ ಹಿಂಗಾಲುಗಳು ಮತ್ತು ಬಲಿಷ್ಠವಾದ ದೊಡ್ಡ ಬಾಲ ಈ ಪ್ರಾಣಿಗೆ ನೀರಿನಲ್ಲಿ ಸಮತೋಲದಿಂದ ನಿಧಾನವಾಗಿ ಚಲಿಸಲು ಸಹಕಾರಿಗಳು. ಬೇರೆ ಪ್ರಾಣಿಗಳನ್ನು ಬಡಿದು, ನುಚ್ಚು ನೂರು ಮಾಡಲು ಬಾಲವನ್ನು ಖಡ್ಗಾಯುಧದಂತೆ ಉಪಯೋಗಿಸಿಕೊಳ್ಳುವುದಿದೆ. ಇದರ ತಲೆ ಸದೃಢವಾದ ಎಲುಬುಗಳಿಂದ ಕೂಡಿದೆ. ಆದರೂ ಮಿದುಳಿನ ಗಾತ್ರ ಬಲು ಚಿಕ್ಕದು. ಎಲುಬು ತಟ್ಟೆಗಳಿಂದಾದ ಹುರುಪೆಗಳ ಕವಚ ಈ ಪ್ರಾಣಿಗಳ ವಿಶೇಷ ಲಕ್ಷಣ. ಸಾಮಾನ್ಯ ಆಯುಧಗಳು ಕವಚವನ್ನು ಭೇದಿಸಿ, ದೇಹವನ್ನು ನಾಟಲಾರವು. ಅದರ ಕಠಿನ ಕಶೇರುಮಣಿಗಳು ಭದ್ರವಾಗಿ ಜೋಡಿಕೊಂಡಿರುವುದರಿಂದ ಮೊಸಳೆಗೆ ಮನುಷ್ಯರೂ ಪ್ರಾಣಿಗಳೂ ಅದರ ಈ ದೌರ್ಬಲ್ಯವನ್ನು ತಮ್ಮ ಆತ್ಮರಕ್ಷಣೆಗೋಸ್ಕರ ಚೆನ್ನಾಗಿ ಬಳಸಿಕೊಳ್ಳುವುದಿದೆ. ಮೊಸಳೆಯ ಎದುರಿನಿಂದ ಫಕ್ಕನೆ ಮಗ್ಗುಲಿಗೆ ಜಾರುವುದೊಂದೇ ಕ್ಷಿಪ್ರ ಉಪಾಯ. ಮೊಸಳೆಯಲ್ಲಿ ಇರುವ ಅತಿ ಸಾಮರ್ಥ್ಯದ ಎರಡು ದವಡೆಗಳು, ಅವುಗಳ ತುಂಬ ಇರುವ ಎರಡು ಸಾಲು ಬಲವಾದ ಮತ್ತು ಚೂಪಾದ ಹಲ್ಲುಗಳು ಇವು. ಇದರ ಮುಸುಡನ್ನು ಅತಿ ಭಯಾನಕವದ ಶಸ್ತ್ರಾಗಾರವನ್ನಾಗಿ ಮಾಡಿವೆ. ಕಣ್ಣುಗಳು ಮತ್ತು ನಾಸಿಕ ರಂಧ್ರಗಳು ತಲೆಯ ಒಂದು ಉಬ್ಬಿದ ಭಾಗದಲ್ಲಿವೆ. ಪ್ರತಿಯೊಂದು ಕಣ್ಣಿನ ಹಿಂದೆಯೂ ಕಿವಿಯ ರಂಧ್ರವಿದೆ. ಇದನ್ನು ಮುಚ್ಚಿ ತೆರೆಯಬಲ್ಲ ಎಲುಬಿನ ಕವಾಟವಿದೆ. ನಾಸಿಕರಂಧ್ರಗಳಿಗೂ ಕವಾಟದ ವ್ಯವಸ್ಥೆಯಿದೆ. ಒಳನಾಸಿಕ ರಂಧ್ರಗಳು ಗಂಟಲಿನ ಮೇಲ್ಭಾಗದಲ್ಲಿವೆ. ಮೊಸಳೆ ನೀರಿನಲ್ಲಿ ಮುಳುಗಿದಾಗ ನಾಸಿಕ ರಂಧ್ರಗಳು ಸ್ವಲ್ಪ ನೀರಿನ ಮೇಲ್ಮಟ್ಟದಲ್ಲಿರುತ್ತವೆ. ಆಗ ಶ್ವಾಸರಂಧ್ರದ ಭಾಗ ಮುಂದಕ್ಕೆ ಚಾಚಿ ಒಳಗಿನ ನಾಸಿಕರಂಧ್ರಕ್ಕೆ ಅಂಟಿಕೊಳ್ಳುತ್ತದೆ. ಇದರಿಂದ ಹೊರಗಿನಿಂದ ಗಾಳಿ ಸತತವಾಗಿ ಶ್ವಾಸಕೋಶಗಳೊಳಗೆ ಹೋಗಲು ಸಹಾಯಕವಾಗುವುದು. ನೀರಿನ ಮೇಲೆ ತಲೆಯಿಟ್ಟಾಗ ಮಾತ್ರ ನಾಸಿಕರಂಧ್ರಗಳು ತೆರೆಯುತ್ತವೆ. ನೀರಿನಲ್ಲಿ ಮುಳುಗಿದ್ದರೂ ತೆರೆದ ಬಾಯಿಯ ಮೂಲಕ ನೀರು ನುಗ್ಗಲು ಅವಕಾಶವಿಲ್ಲ. ಸದಾ ನೀರಿನಲ್ಲಿ ಮುಳಿಗಿಕೊಂಡೇ ಮೊಸಳೆ ಜೀವಿಸಿರಲಾರದು. ಕೆಲವು ವೇಳೆ ಅದು ನೀರಿನಲ್ಲಿ ಅಡಗಿರಬಹುದು. ಆದರೆ ಹೆಚ್ಚು ವೇಳೆಯನ್ನು ಬಂಡೆಗಳು ಮತ್ತು ದಡಗಳ ಮೇಲೆ ಕಳೆಯುತ್ತದೆ. ಬಿಸಿಲಿನ ಅಲ್ಪ ಶಾಖ ಅದಕ್ಕೆ ಬಹಳ ಹಿತಕರ.

ಮೊಸಳೆಯ ಜಠರದ ಒಳಭಾಗ ಬಲವಾದ ಮಂಸಖಂಡಗಳಿಂದ ರಚನೆಗೊಂಡಿದೆ. ಇದಲ್ಲದೆ ಈ ಭಾಗದಲ್ಲಿ ಒಂದು ಅಂಗುಲದಷ್ಟು ದಪ್ಪದ ಹಲವಾರು ಕಲ್ಲುಗಳೂ ಇವೆ. ಹೃದಯದಲ್ಲಿ ಹೃತ್ಕುಕ್ಷಿ ಪೂರ್ಣವಾಗಿ ಎಡ ಮತ್ತು ಬಲಭಾಗಗಳಾಗಿ ವಿಭಾಗವಾಗಿದೆ. ಇದು ಶುದ್ಧ ಮತ್ತು ಅಶುದ್ಧ ರಕ್ತಗಳನ್ನು ಬೇರ್ಪಡಿಸಲು ಸಹಕಾರಿ. ಆದರೂ ಪ್ರತಿಯೊಂದು ಹೃತ್ಕುಕ್ಷಿಯಿಂದ ಹೊರಡುವ ಒಂದೊಂದು ಮಹಾ ಅಪಧಮನಿ ಕಮಾನು ಹೃದಯದ ಹಿಂಭಾಗದಲ್ಲಿ ಒಂದುಗೂಡಿ ಊರ್ಧ್ವ ಮಹಾ ಅಪಧಮನಿ (ಅಯೋರ್ಟ) ರಕ್ತನಾಳಗಳಾಗುವುದರಿಂದ ಶುದ್ಧ ಮತ್ತು ಅಶುದ್ಧ ರಕ್ತಗಳು ಬೆರೆತು ದೇಹದ ಎಲ್ಲಾ ಭಾಗಕ್ಕೆ ಮಿಶ್ರ ರಕ್ತ ಹರಿಯುತ್ತದೆ. ಮೊಸಳೆಯ ಪ್ರತಿಯೊಂದು ಶ್ವಾಸಕೋಶವೂ ಸ್ತನಿ ಪ್ರಾಣಿಗಳಲ್ಲಿರುವಂತೆ ಎರಡು ಪ್ಲೂರಾ ಪೊರೆಗಳಿಂದ ಆವರಿಸಲ್ಪಟ್ಟಿದೆ. ಕೆಳದವಡೆಯ ಅಂಚಿನಲ್ಲಿ ಮತ್ತು ಕ್ಲೋಯಕ ರಂಧ್ರದ ಅಕ್ಕಪಕ್ಕಗಳಲ್ಲಿ ಚರ್ಮದ ಗ್ರಂಥಿಗಳಿವೆ. ಇವು ಹೊರಚೆಲ್ಲುವ ದ್ರವದ ವಾಸನೆ ಕಸ್ತೂರಿಯಂತೆ. ಸಂತಾನೋತ್ಪತ್ತಿಯ ಕಾಲದಲ್ಲಿ ಇದರ ಉತ್ಪತ್ತಿ ಹೆಚ್ಚು. ಇತರ ಪ್ರಾಣಿಗಳನ್ನು ಬೇಟೆಯಾಡುವಾಗಲೂ ಈ ದ್ರವ ಹೆಚ್ಚು ಉತ್ಪತ್ತಿಯಾಗುವುದು ಕಂಡುಬಂದಿದೆ.

ಮೊಸಳೆಗಳು ಅಂಡಜಗಳು. ಒಂದು ಬಾರಿಗೆ ೨೦–೧೦೦ ಮೊಟ್ಟೆಗಳನ್ನಿಡುವುವು. ಬೇಸಿಗೆ ಸಮೀಪಿಸಿದಂತೆ ಕೆಲವು ಜಾತಿಯ ಮೊಸಳೆಗಳು ನೀರಿನ ತಳದ ಮರಳಿನಲ್ಲಿ ಗುಣಿಗಳನ್ನು ತೋಡಿ ಮೊಟ್ಟೆಗಳನ್ನಿಟ್ಟು ಅನಂತರ ಮರಳು, ಸೊಪ್ಪು ಸೌದೆಗಳಿಂದ ಗುಣಿಗಳನ್ನು ಮುಚ್ಚುತ್ತವೆ. ಇದರಿಂದ ಮೊಟ್ಟೆಗಳ ಬೆಳವಣಿಗೆಗೆ ಬೇಕಾದ ಶಾಖ

ದೊರೆಯುವುದು. ಹೆಣ್ಣು ಮೊಸಳೆ ಆ ಜಾಗವನ್ನು ಕಾಯುವುದಲ್ಲದೆ ಕೆಲವು ವೇಳೆ ಮೊಟ್ಟೆಗಳು ಒಡೆದು ಮರಿಗಳಾಗುವವರೆಗೆ ಅಲ್ಲಿ ಅಜ್ಞಾತವಾಸ ಸಹ ಮಾಡಬಲ್ಲುದು. ಎರಡು ತಿಂಗಳುಗಳ ಅವಧಿಯಲ್ಲಿ ಮೊಟ್ಟೆಗಳು ಬಲಿತು ಒಳಗಿರುವ ಮರಿಗಳು ಕತ್ತರಿಸುವ ಅಯುಧವನ್ನು ಹೋಲುವ ತಮ್ಮ ಮೂತಿಯ ತುದಿಯಿಂದ ಮೊಟ್ಟೆಯ ಚಿಪ್ಪನ್ನು ಒಡೆದು ಹೊರಬರುತ್ತವೆ. ಆಗ ತಾಯಿ ಮೊಸಳೆ ಅವನ್ನು ನೀರಿನೆಡೆಗೆ ಕರೆದೊಯ್ಯುತ್ತದೆ. (ನೋಡಿ–ಆಲಿಗೇಟರ್, ಮೊಸಳೆ).

ರ್ಹಿಂಕೋಸೆಫಾಲಿಯ ಗಣ: ಇದು ಡೈಆಪ್ಸಿಡದ ಇನ್ನೊಂದು ಗಣ. ಬಲು ಪುರತನವಾದದ್ದು. ಉಳಿದಿರುವ ಒಂದೇ ಪ್ರಭೇದ ಸ್ಫಿನೊಡಾನ್ ಪಂಕ್ಟೇಟಸ್ (ಟಟಾರ). ಬಾಲ್ಯಾವಸ್ಥೆಯಲ್ಲಿ ಮೇಲ್ದವಡೆ, ಕೆಳದವಡೆಗಳಲ್ಲಲ್ಲದೆ ಮೇಲಿನ ವಸಡಿನಲ್ಲೂ ಹಲ್ಲುಗಳಿರುತ್ತವೆ. ಪ್ರಾಣಿ ಬೆಳೆದಂತೆ ಕ್ರಮೇಣ ಹಲ್ಲುಗಳು ಸವೆದು ಪ್ರೌಢವಾಗುವುದರಲ್ಲಿ ಎಲ್ಲ ಹಲ್ಲುಗಳನ್ನೂ ಕಳೆದುಕೊಳ್ಳುತ್ತದೆ. ಇದರಿಂದಲೇ ಕೊಕ್ಕಿನಗೌಳಿ ಎಂದು ಇದನ್ನು ಕರೆಯುತ್ತಾರೆ. ತಲೆಯ ಮೇಲ್ಭಾಗದಲ್ಲಿ ಮೂರನೆಯ ಕಣ್ಣಿದೆ. ಅದು ಈಗ ಕೆಲಸಮಾಡದಿದ್ದರೂ ಹಿಂದಿನ ಅಳಿದ ಸರೀಸೃಪಗಳ ಬುರುಡೆಯಲ್ಲಿ ಈ ರೀತಿಯ ಕಣ್ಣಿದ್ದು ಮಿಕ್ಕೆರಡು ಕಣ್ಣುಗಳೊಡನೆ ಸಹಕರಿಸುತ್ತಿದ್ದಿರಬಹುದೆಂಬ ಊಹೆಗೆ ಬೆಂಬಲ ನೀಡುತ್ತದೆ. ಈ ಪ್ರಾಣಿ ಕೋಟ್ಯಾಂತರ ವರ್ಷಗಳಿಂದ ಬಾಳಿದೆ. ಅಂದಿನಿಂದ ಇಂದಿನವೆಗೂ ಯಾವ ಬದಲಾವಣೆಯೂ ಆಗಿಲ್ಲ.

ಸ್ಕ್ವಾಮಾಟ ಗಣ: ಡೈಆಪ್ಸಿಡ ಉರಗಗಳ ಲೆಪಿಡೊಸಾರಿಯ ಉಪವರ್ಗಕ್ಕೆ ಸೇರಿದೆ. ಸ್ಕ್ವಾಮಾಟವನ್ನು ಎರಡು ಉಪಗಣಗಳಾಗಿ ವಿಭಾಗಿಸಿದೆ– ಲ್ಯಾಸರ್‌ಟೀಲಿಯ ಮತ್ತು ಒಫಿಡಿಯ.

ಲ್ಯಾಸರ್‌ಟೀಲಿಯ ಉಪಗಣದಲ್ಲಿ ಹಲ್ಲಿಗಳು, ಊಸರವಳ್ಳಿ, ಗೆಕೊ(ಮನೆಯ ಹಲ್ಲಿ)., ಓತಿ ಮುಂತಾದುವು ಇವೆ. ಇವನ್ನು ಈ ಕೆಳಗಿನ ವಂಶಗಳಾಗಿ ವಿಭಾಗಿಸಿದೆ.: ೧. ಗೆಕೊನಿಡೆ, ೨. ಆಂಫಿಸ್ಬೀನಿಡೆ, ೩. ಕಮೆಲಿಯೊಂಟಿಡೆ, ೪. ಸಿನ್‌ಸಿಡೆ, ೫. ಲ್ಯಾಸರ್ಟಿಡೆ, ೬. ಆಂಗ್ವಿಡೆ, ೭. ವೆರಾನಿಡೆ.

ಈ ಉಪಗಣಗಳ ಪ್ರಾಣಿಗಳ ಲಕ್ಷಣಗಳು ಹೀಗಿವೆ: ದೇಹ ಪೂರ್ಣವಾಗಿ ಹುರುಪೆಗಳಿಂದ ಆವೃತವಾಗಿದೆ. ಬಹಳಷ್ಟವಲ್ಲಿ ಹಿಂಗಾಲು ಮತ್ತು ಮುಂಗಾಲುಗಳು ಚೆನ್ನಾಗಿ ಬೆಳೆದಿವೆ. ಎದೆಯಲ್ಲಿ ಎದೆಯ ಮೂಳೆ ಇದೆ. ಬೆನ್ನೆಲುಬಿನ ಕಶೇರುಮಣಿಗಳ ಸಂಖ್ಯೆಯಲ್ಲಿ ಹೆಚ್ಚುಕಡಿಮೆ ಇದೆ. ಕಶೇರುಮಣಿಗಳನ್ನು ಬೆನ್ನುಲುಬಿನ ಕತ್ತಿನಭಾಗ (ಸರ್ವೈಕಲ್), ಎದೆಯಭಾಗ (ತೊರಾಸಿಕ್), ಉದರಭಾಗ (ಲಂಬಾರ್), ಕಟಿಭಾಗ(ಸೇಕ್ರಲ್) ಮತ್ತು ಬಾಲದ ಭಾಗಗಳಾಗಿ (ಕಾಡಲ್) ವಿಂಗಡಿಸಬಹುದು. ಎದೆಯ ಮೂಳೆಗಳ ಸಂಖ್ಯೆ ಹೆಚ್ಚು. ಕತ್ತಿನ ಮಣಿಗಳು ಎದೆಯ ಪಕ್ಕೆಲುಬುಗಳನ್ನೂ ಹೊಂದಿವೆ. ಇದರ ಬಾಯಿಯನ್ನು ಹಾವಿನ ಬಾಯಿಯಂತೆ ಅಗಲಿಸಲು ಸಾಧ್ಯವಿಲ್ಲ. ಹೊರಕಿವಿಯ ರಂಧ್ರಗಳೂ ಚಲಿಸಬಲ್ಲ ಕಣ್ಣಿನ ಗುಡ್ಡೆಗಳೂ ಇವೆ. ಕೆಲವು ಬಾಲದ ಭಾಗವನ್ನು ಸುಲಭವಾಗಿ ಬೇರ್ಪಡಿಸಿಕೊಳ್ಳಬಲ್ಲುವು. ಕತ್ತರಿಸಿದ ಬಾಲ ಮತ್ತು ಕಾಲುಗಳ ಭಾಗಗಳನ್ನು ಪುನಃ ಸೃಷ್ಟಿಸಿಕೊಳ್ಳಬಲ್ಲುವು. ಲಾಲಾಗ್ರಂಥಿಗಳು ಬಾಯಿಯ ಕೆಳಭಾಗದಲ್ಲಿವೆ. ಶ್ವಾಸಕೋಶಗಳು ಉದ್ದ ಮತ್ತು ಅಂಡಾಕಾರವಾಗಿವೆ. ಶ್ವಾಸೋಚ್ಛ್ವಾಸಕ್ರಿಯೆ ಪಕ್ಕೆಲುಬುಗಳ ನೆರವಿನಿಂದ ನಡೆಯುವುದು. ಊಸರವಳ್ಳಿ ಮತ್ತು ಗೆಕೋಗಳಲ್ಲಿ ಶ್ವಾಸಕೋಶಗಳು ಗಾಳಿಯ ಚೀಲಗಳಾಗಿ ವಿಸ್ತರಿಸಿವೆ. ಇವು ಪಕ್ಷಿಗಳ ಶ್ವಾಸಕೋಶಗಳೊಳಗಿನ ಗಾಳಿಯ ಗೂಡುಗಳನ್ನು ಸೂಚಿಸುತ್ತವೆ. (ನೋಡಿ—ಇಗ್ವಾನ; ಇಗ್ವಾನೋಡಾನ್: ಉಡ: ಊಸರವಳ್ಳಿ: ಓತಿ).

ಹಾವುಗಳನ್ನು ಒಫಿಡಿಯ ಉಪಗಣಕ್ಕೆ ಸೇರಿಸಲಾಗಿದೆ. ಈ ಪ್ರಾಣಿಗಳನ್ನು ಚಲನಾಂಗಗಳಿಲ್ಲದ ಸ್ಕ್ವಾಮಾಟ ಎಂದು ಕರೆಯುವುದುಂಟು. ಒಫಿಡಿಯವನ್ನು ಒಂದು ಗಣವೆಂದೇ ಕರೆಯುವುದೂ ಇದೆ. ಒಫಿಡಿಯ ಉಪಗಣದ ಪ್ರಾಣಿಗಳ ಲಕ್ಷಣಗಳು ಹೀಗಿವೆ: ಚರ್ಮ ಹುರುಪೆಗಳಿಂದ ಆವೃತವಾಗಿದೆ. ಹೊರಚರ್ಮದ ಭಾಗ ಪದೇ ಪದೇ ಕಳಚಲ್ಪಡುವುದು (ಪೊರೆ ಬಿಡುವುದು) ವರ್ಷಕ್ಕೆ ೫–೬ಸಲ ಪೊರೆ ಬಿಡಬಲ್ಲ ಹಾವುಗಳೂ ಉಂಟು. ಬಾಯಿ ವಿಶಾಲವಾಗಿ ಹಿಗ್ಗುವಂತಿದೆ. ಕಣ್ಣಿಗೆ ರೆಪ್ಪೆಯಿಲ್ಲ. ಬದಲು ಪಾರದರ್ಶಕ ಹುರುಪೆಯುಂಟು. ಇದೂ ಪೊರೆ ಬಿಡುವಾಗ ಬಿದ್ದು ಹೋಗಿ ಹೊಸ ಹುರುಪೆ ಬೆಳೆಯುತ್ತದೆ. ಹೊರಕಿವಿಯಾಗಲಿ ಕಿವಿಯ ತಮಟೆಯಾಗಲಿ ಇಲ್ಲದಿದದ್ದ'ರೂ ಸಹ ಒಳಕಿವಿಯುಂಟು. ಮುಂದೂಡಬಲ್ಲ ಮತ್ತು ಹಿಂದಕ್ಕೆ ಎಳೆದುಕೊಳ್ಳಬಹುದಾದ ತುದಿಸೀಳಿದ ನಾಲಗೆ ಹಾವಿನ ವಿಶೇಷವಾದ ಸ್ಪರ್ಶೇಂದ್ರಿಯ. ಸ್ವತಃ ಮೂಸಿನೋಡದಿದದ್ದರೂ ವಾಸನೆಯಿರುವ ಕಣಗಳನ್ನು ಬಾಯಿಯೊಳಕ್ಕೆ ಎಳೆದುಕೊಂಡು ಘ್ರಾಣೇಂದ್ರಿಯಗಳ ಸಂಪರ್ಕ ಹೊಂದುವಂತೆ ಮಾಡುತ್ತದೆ. ಯಾವ ಅನುಬಂಧಗಳೂ (ಅಪೆಂಡೇಜಸ್) ಇಲ್ಲದ ಇದರ ದೇಹ ಹಗ್ಗದಂತಿದ್ದು ಉದ್ದವಾಗಿದೆ. ರುಂಡ, ಮುಂಡ, ಬಾಲಗಳಿಗೆ ಪರಸ್ಪರ ನಿರ್ದಿಷ್ಟವಾದ ಎಲ್ಲೆಗಳು ಇಲ್ಲ. ಕೊರಕಲು ಹಳ್ಳಗಳಲ್ಲಿ, ಕಲ್ಲುಗಳ ಸಂಧಿಯಲ್ಲಿ ಚಲಿಸಲು ಸಹಕರಿಸುವ ದೇಹ ಹೊಂದಿದೆ. ಕಿರಿದಾದ, ಉದ್ದವಾದ, ದೇಹಕ್ಕೆ ಅನುಗುಣವಾಗಿ ಒಳಭಾಗದ ಅಂಗಗಳೂ ಕೂಡ ಬದಲಾವಣೆಗಳನ್ನು ಹೊಂದಿವೆ. ಸಾಮಾನ್ಯವಾಗಿ ಒಂದು ಶ್ವಾಸಕೋಶ, ಅದರಲ್ಲೂ ಎಡಶ್ವಾಸಕೋಶ ಮತ್ತೊಂದಕ್ಕಿಂತ ಬಹಳ ಕಿರಿದು. ಕೆಲವು ವೇಳೆ ಒಂದೇ ಒಂದು ಶ್ವಾಸಕೋಶ ಇರುವುದೂ ಉಂಟು. ಪಿತ್ತಕೋಶ ಬಲು ಉದ್ದ. ಮೂತ್ರಪಿಂಡಗಳು ಎದುರುಬದಿರಾಗಿರುವುದಿಲ್ಲ. ಬೆನ್ನೆಲುಬಿನ ಕಶೇರುಮಣಿಗಳ ಸಂಖ್ಯೆ ಬಲು ಹೆಚ್ಚು. ಪ್ರತಿಯೊಂದು ಕಶೇರುಮಣಿಗೂ ಒಂದು ಜೊತೆ ಪಕ್ಕೆಲುಬು ಜೋಡಿಸಲ್ಪಟ್ಟಿರುವುದರಿಂದ ಪಕ್ಕೆಲುಬುಗಳ ಸಂಖ್ಯೆಯೂ ಹೆಚ್ಚು. ಉದರಭಾಗದಲ್ಲಿ ಅಗಲವಾದ ಉದರ ಫಲಕಗಳಿವೆ. ಈ ಫಲಕಗಳು ಚಾವಣಿಯ ಹೆಂಚುಗಳಂತೆ ಜೋಡಿಸಲ್ಪಟ್ಟಿವೆ. ಪ್ರತಿಯೊಂದು ಫಲಕಕ್ಕೂ ಅದರ ಮುಂಭಾಗದಲ್ಲಿ ಒಂದೊಂದು ಜೊತೆ ಪಕ್ಕೆಲುಬು ಸ್ನಾಯುಗಳ ಸಹಾಯದಿಂದ ಚಲಿಸುವ ರೀತಿಯಲ್ಲಿ ಸೇರಿಸಲ್ಪಟ್ಟಿವೆ. ಇದರಿಂದ ಎದೆಯ ಗೂಡು ಮಾಯವಾಗಿದೆ. ಒಂದೇ ಪಾರ್ಶ್ವದ ಅನುಕ್ರಮವಾದ ಪಕ್ಕೆಲುಬುಗಳ ನಡುವೆ ಇರುವ ಸ್ನಾಯುಗಳ (ಇಂಟರ್‌ಕಾಸ್ಟಲ್ ಮಸಲ್ಸ್) ಸಂಕುಚನೆ, ವಿಕಸನೆಗಳಿಂದ ಪಕ್ಕೆಲುಬುಗಳು ಚಲಿಸಲು ಪ್ರಾರಂಭಿಸುತ್ತದೆ. ಪಕ್ಕೆಲುಬುಗಳು ಮುಂದಕ್ಕೆ ಸರಿದಾಗ ಫಲಕದ ಮುಂದಿನ ಅಂಚು ನೆಲದ ಏರುತಗ್ಗುಗಳನ್ನು ಬಿಗಿಯಾಗಿ ಅಪ್ಪಿಕೊಳ್ಳುವುದು. ಅನಂತರ ಸ್ನಾಯುಗಳ ಸಂಕುಚನೆ ಮತ್ತು ವಿಕಸನೆಗಳಿಂದ ದೇಹದ ಹಿಂಬಾಗ ಮುಂದಕ್ಕೆ ಎಳೆಯಲ್ಪಡುವುದು. ಈ ಚಲನೆಗೆ ಬಾಲವೂ ಸಹಾಯ ಮಾಡುತ್ತದೆ. ಉದರ ಫಲಕಗಳ ಚಲನೆಯ ವೈಚಿತ್ರ್ಯವೇ ಅದು ಡೊಂಕುಡೊಂಕಾ'ಗಿ ಹರಿಯಲು ಕಾರಣ. ಮರಹತ್ತುವ ಹಾವುಗಳಲ್ಲಿ ಉದರ ಫಲಕಗಳು ದೋಣಿಯ ತಳಭಾಗದಂತೆ ಜೋಡಿಸಲ್ಪಟ್ಟಿರುತ್ತವೆ. ಇದರಿಂದಲೇ ಅವು ನೇರವಾಗಿ ಮರವನ್ನು ಹತ್ತಬಲ್ಲವು. ನೀರಿನಲ್ಲಿ ವಾಸಿಸುವ ಹಾವುಗಳಿಗೆ ಉದರಫಲಕಗಳ ಅಗತ್ಯವಿಲ್ಲ.

ತನ್ನ ದೇಹದ ಗಾತ್ರಕ್ಕಿಂತಲೂ ದೊಡ್ಡ ಗಾತ್ರದ ಪ್ರಾಣಿಗಳನ್ನು ಹಾವು ನುಂಗಬಲ್ಲದು. ಇದರ ಗುಟ್ಟು ಅದರ ದೇಹದ ಅಸ್ಥಿಪಂಜರದ ಜೋಡಣೆಯಲ್ಲಿದೆ. ಆಹಾರವನ್ನು ನುಂಗಲು ದೇಹರಚನೆಯಲ್ಲಿರುವ ಹೊಂದಿಕೆಗಳು ಹೀಗಿವೆ: ೧. ದವಡೆಯ ಮೂಳೆಗಳ ಅಂಚಿನಲ್ಲಿ ಮೂರು ಪಂಕ್ತಿಯ ಅನೇಕ ಚೂಪಾದ ಮತ್ತು ಹಿಮ್ಮುಖವಾಗಿ ಬಗ್ಗಿರುವ ಹಲ್ಲುಗಳಿವೆ. ೨. ಈ ಹಲ್ಲುಗಳು ಮುರಿದರೆ ಹೊಸ ಹಲ್ಲುಗಳು ಹುಟ್ಟುತ್ತವೆ. ೩. ಕೆಳದವಡೆ ನೇರವಾಗಿ ಮೇಲ್ದವಡೆಗೆ ಜೋಡಿಕೊಂಡಿಲ್ಲ. ಬದಲು ತಲೆಯ ಬುರುಡೆಗೆ ಅಂಟಿರುವ ಕ್ವಾಡ್ರೇಟ್ ಮೂಳೆಗೆ ಜೋಡಿಕೊಂಡಿದೆ. ಈ ಜೋಡಣೆಯಿಂದ ದವಡೆ ಕೆಳಕ್ಕೂ ಮುಂದಕ್ಕೂ ಚಲಿಸಿ ಬಾಯಿಯ ಮುಂಭಾಗದಷ್ಟೇ ಅಗಲವಾಗಿ ಹಿಂಭಾಗದಲ್ಲಿಯೂ ತೆರೆಯಬಲ್ಲುದು. ೪ ಕೆಳದವಡೆಯ ಎರಡು ಭಾಗಗಳು ಮುಂಭಾಗದಲ್ಲಿ ಸೇರಿಲ್ಲ: ಆದರೆ ಸ್ಥಿತಿಸ್ಥಾಪಕಶಕ್ತಿಯುಳ್ಳ ಅಸ್ಥಿಬಂಧದ ತಂತುವಿನಿಂದ (ಲಿಗಮೆಂಟ್) ಜೋಡಣೆಗೊಂಡಿದೆ. ಇದರಿಂದ ಕೆಳದವಡೆಯ ಎರಡು ಭಾಗಗಳೂ ಪರ್ಯಾಯವಾಗಿ ಹಿಂದಕ್ಕೂ ಮುಂದಕ್ಕೂ ಚಲಿಸಬಲ್ಲುವು. ೫. ಆಹಾರವನ್ನು ನುಂಗುವಾಗ ಕೆಳದವಡೆಯ ಒಂದು ಭಾಗವನ್ನು ಮೊದಲು ಮುಂದಕ್ಕೆ ಚಾಚಿ ಬೇಟೆಯ ಪ್ರಾಣಿಯ ದೇಹವನ್ನು ಬಲವಾಗಿ ಹಿಡಿದು ಬಾಯಿಯೊಳಕ್ಕೆ ಎಳೆಯುತ್ತದೆ. ಅಷ್ಟರಲ್ಲಿ ದವಡೆಯ ಮತ್ತೊಂದು ಬಾಗವನ್ನು ಮುಂದಕ್ಕೆ ಎಸೆದು ಪ್ರಾಣಿಯ ಮತ್ತೊಂದು ಭಾಗವನ್ನು ಹಿಡಿಯುತ್ತದೆ. ೬. ಉಸಿರಾಟದ ಕ್ರಮದಲ್ಲಿ ಮಾರ್ಪಾಡುಗಳಾಗಿವೆ: ದೊಡ್ಡ ಪ್ರಾಣಿಯನ್ನು ನುಂಗಲು ಸ್ವಲ್ಪ ಸಮಯ ಹಿಡಿಯುವುದರಿಂದ ಆ ವೇಳೆಯಲ್ಲಿ ನಾಸಿಕ ರಂಧ್ರಗಳ ಮೂಲಕ ಗಾಳಿ ಪ್ರವೇಶಿಸಲು ಸಾಧ್ಯವಾಗದೆ. ಉಸಿರಾಟಕ್ಕೆ ತೊಂದರೆಯಾಗಬಹುದು. ಆದ್ದರಿಂದ ಇಂಥ ಸಂದರ್ಭಗಳಲ್ಲಿ ಶ್ವಾಸನಾಳದ ರಂಧ್ರವನ್ನು ಕೆಳದವಡೆಯ ಎರಡು ಭಾಗಗಳ ಮಧ್ಯೆ ನೂಕಿ ಗಾಳಿಯನ್ನು ನೇರವಾಗಿ ಶ್ವಾಸಕೋಶದೊಳಕ್ಕೆ ತೆಗೆದುಕೊಳ್ಳುತ್ತದೆ. ೭. ಗಂಟಲು, ಅನ್ನನಾಳ ಮತ್ತು ಜಠರಗಳು ಮಿತಿಮೀರಿ ಹಿಗ್ಗಬಲ್ಲವು. ಅವುಗಳಿಗೆ ವಿಶೇಷ ಸ್ಥಿತಿ ಸ್ಥಾಪಕಶಕ್ತಿ ಇದೆ. ಅಷ್ಟು ಹೆಚ್ಚು ಪರಿಮಾಣದ ಆಹಾರವನ್ನು ಅರಗಿಸಿಕೊಳ್ಳಲು ಸಹಾಯಕವಾಗುವಂತೆ ಜೀರ್ಣರಸಗಳು ಅತಿ ತೀಕ್ಷ್ಣವಾಗಿವೆ. ೮. ಎದೆಯ ಮೂಳೆ, ಭುಜ ಮತ್ತು ಸೊಂಟಪಟ್ಟಿಗಳು ಇಲ್ಲ. ಅಲ್ಲದೆ ಸುಲಭವಾಗಿ ಬಾಗುವಂಥ ಪಕ್ಕೆಲುಬುಗಳು ಇವೆ. ಈ ಅಸ್ಥಿಪಂಜರದ ರಚನೆಯಿಂದ ದೇಹ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೂ ಹಿಗ್ಗಬಲ್ಲುದು. ೯. ಆಹಾರವನ್ನು ನುಂಗುವಾಗ ತನ್ನ ಮೃದುವಾದ ತೆಳುವಾದ ಸೀಳಿರುವ ನಾಲಗೆಯನ್ನು ಹಿಂದಿರುವ ರಕ್ಷಾಕವಚದೊಳಕ್ಕೆ ಎಳೆದುಕೊಳ್ಳುವ ಸಾಮರ್ಥ್ಯವಿದೆ.

ಹಾವುಗಳು ದೀರ್ಘಕಾಲ ಆಹಾರವಿಲ್ಲದೆ ಜೀವಿಸಬಲ್ಲುವು. ಅದರಲ್ಲೂ ಸೆರೆಯಲ್ಲಿಟ್ಟ ಹಾವುಗಳಿಗೆ ಹಸಿವೆಯ ತೀಕ್ಷ್ಣತೆ ಬಲು ಕಡಿಮೆ. ನ್ಯೂಯಾರ್ಕಿನ ಪ್ರಾಣಿ ರಕ್ಷಣಾ ಉದ್ಯಾನಕ್ಕೆ ತಂದಿದ್ದ ದೈತ್ಯ ಹೆಬ್ಬಾವೊಂದು ಎರಡು ವರ್ಷಗಳ ದೀರ್ಘ ಕಾಲ

ನಿರಶನದಲ್ಲಿದ್ದುದರ ನಿದರ್ಶನವಿದೆ. ಚಳಿಗಾಲದಲ್ಲಿ ಹಾವುಗಳು ಆಹಾರವಿಲ್ಲದೆ ದೀರ್ಘನಿದ್ರೆಯಲ್ಲಿರಬಲ್ಲವು.

ವಿಷದ ಹಾವುಗಳಲ್ಲಿ ಲಾಲಾಗ್ರಂಥಿಗಳು ಅತ್ಯಂತ ಮಾರಕವಾದ ವಿಷವನ್ನು ಉತ್ಪತ್ತಿ ಮಾಡಬಲ್ಲ ಗ್ರಂಥಿಗಳು. ಮೇಲ್ದವಡೆಯ ಎರಡು ಪಕ್ಕಗಳಲ್ಲೂ ಚೀಲಗಳಂತೆ ಕಾಣುವ ಎರಡು ವಿಷದ ಗ್ರಂಥಿಗಳಿವೆ. ಇವುಗಳಿಗೆ ಸೇರಿರುವಂತೆ ಬಾಗಿರುವ ವಿಷದ ಹಲ್ಲುಗಳಿವೆ. ಇವುಗಳ ಉದ್ದಕ್ಕೂ ಮೇಲ್ಭಾಗದಲ್ಲಾಗಲಿ ಒಳಗಾಗಲಿ ಕಾಲುವೆ ಇದೆ. ಬಗ್ಗಿ ನಿಂತಿರುವ ಈ ಹಲ್ಲುಗಳು ಬೇಟೆಯ ಪ್ರಾಣಿ ಸಿಕ್ಕಾಗ ನೇರವಾಗಿ ನಿಂತು ಅದಕ್ಕೆ ಹೊಡೆಯುವುದು. ಇದರಿಂದ ಮೇಲ್ದವಡೆಯ ಎಲುಬುಗಳು ಚಲಿಸಿ ವಿಷದ ಚೀಲವನ್ನು ಒತ್ತುತ್ತವೆ. ಕೂಡಲೆ ಕಾಲುವೆಯ ಮೂಲಕ ವಿಷ ಪ್ರಾಣಿಯ ಮಾಂಸಖಂಡದೊಳಗೆ ನುಗ್ಗುತ್ತದೆ. ವಿಷ ರಕ್ತ ಪ್ರವಾಹವನ್ನು ಸೇರಿ ನರವ್ಯೂಹ, ಹೃದಯ ಮತ್ತು ಶ್ವಾಸಾಂಗಗಳನ್ನು ದುರ್ಬಲಗೊಳಿಸಿ ಕ್ರಮೇಣ ಪ್ರಾಣಿಯ ಸಾವಿಗೆ ಕಾರಣವಾಗುತ್ತದೆ.

ಕೀಲೋನಿಯ ಗಣ: ಅನಾಪ್ಸಿಡ ಸರೀಸೃಪಗಳ ಒಂದು ಗಣ. ಭೂಮಿಯ ಮತ್ತು ಸಿಹಿನೀರಿನ ಆಮೆಗಳನ್ನೂ ಸಮುದ್ರದ ಕಡಲಾಮೆಗಳನ್ನೂ ಇದಕ್ಕೆ ಸೇರಿಸಿದೆ. ಈಗ ಉಳಿದಿರುವ ಸರೀಸೃಪಗಳ ಪೈಕಿ ಬಹಳ ಪ್ರಾಚೀನವಾದ ಪ್ರಾಣಿಗಳು. ಇವು ಅನಾಪ್ಸಿಡದ ಯಾವ ಶಾಖೆಯಿಂದ ವಿಕಸಿಸಿದವು ಮತ್ತು ಇವುಗಳ ಪೂರ್ವಜರು ಯಾರು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಕಪಾಲದ ಎಲುಬುಗಳಲ್ಲಿ ರಂಧ್ರವಿಲ್ಲದೆ ಒತ್ತಾಗಿ ಜೋಡಿಸಿರುವುದು ಆದಿ ಸರೀಸೃಪಗಳ ಒಂದು ಲಕ್ಷಣ. ಈ ಕಾರಣದಿಂದಲೇ ಇದರ ಪೂರ್ವಜರು ೨೦ ಕೋಟಿ ವರ್ಷಗಳ ಹಿಂದೆ, ಅಂದರೆ ದೈತ್ಯೋರಗಗಳು ಕಾಣಿಸುವ ಮೊದಲೇ ಭೂಮಿಯ ಮೇಲೆ ಜನಿಸಿರಬಹುದು ಎಂದು ಅನೇಕರ ಅಭಿಪ್ರಾಯ. ೧೫ ಕೋಟಿ ವರ್ಷಗಳಿಂದ ಆಮೆಯ ಕುಲ ಹೆಚ್ಚು ಬದಲಾವಣೆ ಇಲ್ಲದೆ ಬದುಕಿದೆ. ಈ ದೀರ್ಘಕಾಲದ ಉಳಿವಿಗೆ ಬಹುಶಃ ಆಮೆಯ ವಿಶಿಷ್ಟವಾದ ಅಸ್ಥಿಪಂಜರವೇ ಒಂದು ಕಾರಣವಿರಬಹುದು. (ನೋಡಿ—ಆಮೆ; ಕಡಲಾಮೆ).

ಭೂಮಿಯ ಆಮೆಗಳನ್ನು ಟಾರ್ಟಾಯಿಸ್ ಎಂದೂ ಗಟ್ಟಿಚಿಪ್ಪಿನ ಸಿಹಿ ನೀರಿನ ಆಮೆಗಳನ್ನು ಟೆರ್ರಾಪಿನ್ ಎಂದೂ ಸಮುದ್ರದಲ್ಲಿ ಮತ್ತು ಸಮುದ್ರದ ತೀರದಲ್ಲಿ ವಾಸಿಸುವ ಆಮೆಗಳನ್ನು ಟರ್ಟಲ್ಸ್ ಅಥವಾ ಕಡಲಾಮೆಗಳೆಂದೂ ಸರೀಸೃಪ ವಿಜ್ಞಾನಿ ಡಾ.ರೇಮಾಂಡ್ ಡಿಟ್‌ಮಾರ್ಸ್ ವರ್ಗೀಕರಿಸಿದ್ದಾನೆ.

ಒಟ್ಟಾರೆ, ಸರೀಸೃಪಗಳು ಕಶೇರುಕಗಳ ಗುಂಪಿನ ಮಧ್ಯದಲ್ಲಿವೆ. ಕಣ್ಮರೆಯಾದ ಕೆಲವು ಆದಿ ಸರೀಸೃಪಗಳು ಹಲವು ಆದಿ ದ್ವಿಚರಿಗಳಿಗೆ ನಿಕಟ ಸಂಬಂಧವನ್ನು ತೋರಿಸುತ್ತವೆ; ಮತ್ತೆ ಕೆಲವು ಸರೀಸೃಪಗಳಲ್ಲಿರುವ ಗುಣಲಕ್ಷಣಗಳೂ ಪುನಃ ಪಕ್ಷಿಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಂಡಿರುವುದರಿಂದ ಪಕ್ಷಿಗಳು ಆದಿ ಥೀಕೋಡಾಂಟ್ ಸರೀಸೃಪ ಕಾಂಡದಿಂದ ವಿಕಸಿಸಿದವು ಎಂಬ ವಾದವನ್ನು ಸಮರ್ಥಿಸುತ್ತವೆ; ಸ್ತನಿಗಳು ಕೂಡ ಸರೀಸೃಪ ಕಾಂಡದ ಹೆಚ್ಚು ಮುಂದುವರಿದ ಆದಿಭಾಗದ ಥೀರಾಪ್ಸಿಡ್ ಕ್ರಮದಿಂದ ವಿಕಸಿಸಿದವು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ.

ಆಸ್‌ಬಾರ್ನ್ ಎಂಬ ವಿಜ್ಞಾನಿ ಮೊದಲಬಾರಿಗೆ ಹೊಂದಾಣಿಕೆಯ ವಿಕಿರಣ (ಅಡಾಪ್ಟಿವ್ ರೇಡಿಯೇಷನ್) ಎಂಬ ನಿಯಮವನ್ನು ಸರೀಸೃಪವರ್ಗದ ಪ್ರಾಣಿಗಳ ವಿಕಸನದ ಆಧಾರದ ಮೇಲೆ ಪ್ರತಿಪಾದಿಸಿದ್ದ. ಆದಿ ಸರೀಸೃಪಗಳು ಜೀವನ ಸಂಗ್ರಾಮದಲ್ಲಿ ಗೆದ್ದು ಬದುಕಲು ಅನೇಕ ಮಾರ್ಗಗಳನ್ನು ಹಿಡಿದವು. ಟೀರೋಸಾರುಗಳಂಥವು ವಾಯುಮಂಡಲದ ಜೀವನಕ್ಕೂ ಇಕ್ತಿಯೋಸಾರಿನಂಥವು ಜಲಜೀವನಕ್ಕೂ ಸೌರಪೋಡ ದೈತ್ಯೋರಗಗಳಂಥವು ದ್ವಿಚರಿ ಜೀವನಕ್ಕೂ ಹಾವಿನಂಥ ಕೆಲವು ಬಿಲ ಮತ್ತು ಕೊರಕಲುಗಳ ಜೀವನಕ್ಕೂ ಮತ್ತೆ ಕೆಲವು ವೃಕ್ಷ ಜೀವನಕ್ಕೂ ತಕ್ಕಂತೆ ದೇಹವನ್ನು ಅಳವಡಿಸಿಕೊಂಡವು. ಇವೆಲ್ಲ ಸಂದರ್ಭಗಳಲ್ಲೂ ಉಂಟಾಗಿರುವ ಮಾರ್ಪಾಡುಗಳು ಆ ಪ್ರಾಣಿಯ ಸಂಬಂಧವಾದುದು ಎಂಬುದು ಒಂದು ಗಮನಾರ್ಹವಾದ ವಿಷಯ.

***

**ಸರೀಸೃಪ ವಿಜ್ಞಾನ (ಹರ್ಪಿಟಾಲಜಿ):** ಕಶೇರುಕಗಳಿಗೆ ಸೇರಿರುವ, ಚತುಷ್ಪಾದಿಗಳಾದ ಸರೀಸೃಪಗಳ ಉದ್ಭವ ಹಾಗು ವಿಕಾಸ, ವೈವಿಧ್ಯ, ವಿತರಣೆ, ಜೀವನಕ್ರಮ, ಪ್ರಜನನ ವೈಖರಿ, ದೇಹದ ರಚನೆ ಹಾಗು ಕಾರ್ಯ, ಜೈವಿಕ ಮತ್ತು ಅಜೈವಿಕ ಪರಿಸರದೊಂದಿಗೆ ಹೊಂದಾಣಿಕೆ ಮುಂತಾದ, ಎಲ್ಲ ವಿಷಯಗಳ ಅಧ್ಯಯನ. ಮಿಸೊರೊಯಿಕ್ ಕಾಲವನ್ನು ಸರೀಸೃಪಗಳ ಸುವರ್ಣಯುಗವೆಂದು ಕರೆಯಲಾಗಿದೆ. ಅದಕ್ಕೂ ಮೊದಲು ಸ್ವಲ್ಪ ಸಂಖ್ಯೆಯಲ್ಲಿದ್ದ ಸರೀಸೃಪಗಳು, ಈ ಕಾಲದಲ್ಲಿ ವಿಕಾಸಹೊಂದಿ, ನೆಲ, ನೀರು ಮತ್ತು ಗಾಳಿಯಲ್ಲೂ ಕೂಡ ವಾಸಿಸುತ್ತಿದ್ದುವಲ್ಲದೆ, ಕೆಲವು ಪ್ರಭೇದಗಳು ದೈತ್ಯ ಗಾತ್ರದಿಂದಾಗಿ (ಡೈನೊಸಾರ್ಸ್), ಭೂಮಿಯ ಮೇಲಿನ ಎಲ್ಲ ಪ್ರಾಣಿಗಳಿಗಿಂತ ಮೇಲುಗೈ ಸಾಧಿಸಿದ್ದವು. ಆದರೆ, ಕಾಲಕ್ರಮದಲ್ಲಿ, ಈ ದೈತ್ಯಗಾತ್ರದ ಸರೀಸೃಪಗಳು, ನಶಿಸಿ, ಕೆಲವು ಚಿಕ್ಕಗಾತ್ರದ ಸರೀಸೃಪ ಪ್ರಭೇದಗಳು ಉಳಿದುಕೊಂಡು, ಕಶೇರುಕಗಳ ಮುಂದಿನ ವಿಕಾಸಕ್ಕೆ ನಾಂದಿಹಾಕಿದುವು. ಕಶೇರುಕಗಳ ವಿಕಾಸದಲ್ಲಿ ಸರೀಸೃಪಗಳು ಅತ್ಯಂತ ಮಹತ್ವದ ಗುಂಪಾಗಿದ್ದು, ಒಂದು ಕಡೆಗೆ ಪಕ್ಷಿಗಳ ಇನ್ನೊಂದು ಕಡೆಗೆ ಸ್ತನಿಗಳ ವಿಕಾಸಕ್ಕೆ ಮೂಲವಾಗಿವೆ. ಇದಲ್ಲದೆ ಸರೀಸೃಪಗಳು ಮೊಟ್ಟಮೊದಲಬಾರಿಗೆ ಭೂಮಿಯ ಮೇಲೆ ತಮ್ಮ ಎಲ್ಲ ಜೀವನಕ್ರಮ ಪೂರೈಸಬಲ್ಲ, ಯಶಸ್ವಿ ಕಶೇರುಕಗಳೆಂಬ ಹೆಗ್ಗಳಿಕೆ ಪಡೆದಿವೆ.

ಸರೀಸೃಪಗಳ ಭ್ರೂಣಗಳು ಆಮ್ನಿಯಾನ್ ಎಂಬ ದ್ರವಯುಕ್ತ ಕೋಶದಿಂದ ಆಚ್ಛಾದಿತವಾಗಿರುವುದರಿಂದ, ಇವುಗಳನ್ನು ಕಶೇರುಕಗಳ ಆಮ್ನಿಯೋಟ ಗುಂಪಿಗೆ ಸೇರಿಸಲಾಗಿದೆ. ಒಣ ಗ್ರಂಥಿ ರಹಿತ ಚರ್ಮ, ಪೂರ್ತಿಯಲುಬಿನಿಂದಾದ ಒಳ ಅಸ್ಥಿಪಂಜರ, ಫುಪ್ಪುಸಗಳಿಂದ ಉಸಿರಾಟ, ಹೃದಯದಲ್ಲಿ ನಾಲ್ಕು ಕವಾಟಗಳು (ಎರಡು ಅಪೂರ್ಣವಾಗಿ ಪ್ರತ್ಯೇಕಿಸಿವೆ), ತಲೆ ಬುರುಡೆಯಿಂದ ಹೊರಡುವ 12 ನರಗಳು, ಮೆಟನೆಫ್ರಿಕ್ ಮೂತ್ರಪಿಂಡಗಳು ಹಾಗು ದೇಹದೊಳಗೆ ಅಂಡಾಣು–ವೀರ್ಯಾಣು ನಿಷೇಚನ ಇವು ಸರೀಸೃಪಗಳ ಸಾಮಾನ್ಯ ಲಕ್ಷಣಗಳು.

ಸರೀಸೃಪಗಳನ್ನು ಅನಾಪ್ಸಿಡ, ಪ್ಯಾರಾಪ್ಸಿಡ, ಡಯಾಪ್ಸಿಡ ಮತ್ತು ಸೈನಾಪ್ಸಿಡ ಎಂಬ ನಾಲ್ಕು ಉಪವರ್ಗಗಳಾಗಿ ವಿಂಗಡಿಸಲಾಗಿದೆ. ಮೂಲ ಸರೀಸೃಪಗಳಿಂದ ಹಲವಾರು ಕವಲುಗಳಾಗಿ ಬೇರೆ, ಬೇರೆ ಪರಿಸರಗಳಲ್ಲಿ ಯಶಸ್ವಿಯಾಗಿ ಜೀವಿಸಲು ಹೊಂದಾಣಿಕೆಗಳನ್ನು ಬೆಳೆಸಿಕೊಂಡವು. ನಶಿಸಿಹೋದ ಹಾಗು ಜೀವಿತವಿರುವ ಆಧುನಿಕ ಸರೀಸೃಪಗಳಲ್ಲಿ, ನೀರಿನಲ್ಲಿ, ಗಾಳಿಯಲ್ಲಿ ಮತ್ತು ನೆಲದ ಮೇಲೆ ಯಶಸ್ವಿಯಾಗಿ ಜೀವಿಸಲು ಅವಶ್ಯಕವಾದ ಹೊಂದಾಣಿಕೆ ಮಾರ್ಪಾಡುಗಳನ್ನು ಕಾಣುತ್ತೇವೆ. ಜೀವಿಸಿರುವ ಸರೀಸೃಪಗಳಲ್ಲಿ ಸ್ಫಿನೊಡಾನ್, ಹಾವುಗಳು, ಹಲ್ಲಿಗಳು, ಹಾವುರಾಣಿ, ಆಮೆ, ಮೊಸಳೆ ಇವು ಪ್ರಮುಖವಾದ ಪ್ರಭೇದಗಳು. ಸರೀಸೃಪಗಳು ಕಶೇರುಕಗಳ ವಿಕಾಸದಲ್ಲಿ ನೆಲದ ಮೇಲಿನ ವಾತಾವರಣಕ್ಕೆ ಸಂಪೂರ್ಣ ಹೊಂದಿಕೊಂಡ ಪ್ರಾಣಿಗಳು. ನೆಲದ ಮೇಲಿನ ಜೀವನಕ್ಕೆ ಪ್ರಮುಖವಾಗಿ ಎರಡು ಸಮಸ್ಯೆಗಳು. ಒಂದು ತೀವ್ರವಾಗಿ ಬದಲಾಗುವ (ಸಮುದ್ರಕ್ಕೆ ಹೋಲಿಸಿದಾಗ) ವಾತಾವರಣದ ಉಷ್ಣತಾಮಾನ ಹಾಗು ನೆಲದ ಮೇಲೆ ಒಣ ಹವೆ ಮತ್ತು ಸೂರ್ಯರಶ್ಮಿಯಿಂದ ತತ್ತಿಗಳು ಒಣಗಿಹೋಗುವುದು. ಎರಡನ್ನೂ ಸರೀಸೃಪಗಳು ಯಶಸ್ವಿಯಾಗಿ ಎದುರಿಸಿ ಪರಿಹಾರ ಕಂಡುಕೊಂಡವು. ಬದಲಾಗುತ್ತಿರುವ ಉಷ್ಣತೆಗೆ ಹೊಂದಿಕೊಳ್ಳಲು ವಿವಿಧ ವರ್ತನೆಗಳನ್ನು ಬೆಳೆಸಿಕೊಂಡಿವೆ. ಉದಾ : ಸೂರ್ಯನ ಕಿರಣಗಳಿಗೆ ನೇರವಾಗಿ ಮೈಯೊಡ್ಡಿ, ದೇಹದ ಉಷ್ಣತೆಯನ್ನು ಹೆಚ್ಚಿಸಿಕೊಂಡು, ಕಡಿಮೆ ಉಷ್ಣತೆ ಇರುವ ವಾತಾವರಣದಲ್ಲಿಯೂ ಕೂಡ ಕ್ರಿಯಾಶೀಲವಾಗಿರುವುದು. ಇದಲ್ಲದೆ ಹಲವು ರಚನಾತ್ಮಕ ಮತ್ತು ಕ್ರಿಯಾತ್ಮಕ ಮಾರ್ಪಾಡುಗಳಿಂದ ಬದಲಾಗುವ ವಾತಾವರಣದ ಉಷ್ಣತೆಯ ದುಷ್ಪರಿಣಾಮಗಳನ್ನು ಕುಂಠಿತಗೊಳಿಸಿವೆ. ಸರೀಸೃಪಗಳಲ್ಲಿ ಕ್ಲೈಡೊಯಿಕ್ ಎಂಬ ವಿಶೇಷ ರಚನೆಯುಳ್ಳ ತತ್ತಿಗಳ ವಿಕಸನವಾಯಿತು. ಈ ತತ್ತಿಗಳು ಹೊರಗಿನ ಯಾವುದೇ ವಸ್ತುವನ್ನು ಒಳಗೆ ಪ್ರವೇಶಿಸದಂತೆ ತಡೆಯುವ ಪೆಟ್ಟಿಗೆಗಳಾಗಿದ್ದು, ಒಳಗಡೆ ದ್ರವ ಹೊಂದಿದ್ದು ಅಲ್ಲಿ ಭ್ರೂಣದ ಬೆಳವಣಿಗೆಯಾಗುತ್ತದೆ. ತತ್ತಿಗಳ ವಿಶೇಷ ಕವಚವು ಸೂರ್ಯರಶ್ಮಿಯಿಂದ ಒಳಗಡೆಯ ದ್ರವ ಒಣಗದಂತೆ ರಕ್ಷಿಸುತ್ತದೆ. ಇದಲ್ಲದೆ ಕೆಲವು ವಿಶಿಷ್ಟ ವರ್ತನೆಗಳಿಂದ ತತ್ತಿಗಳನ್ನು ನೆಲದಲ್ಲಿ ಹೂತುಹಾಕಿ, ಇಲ್ಲವಾದರೆ ತರಗೆಲೆಗಳಿಂದ ಮುಚ್ಚಿ ಶತ್ರುಗಳಿಂದ ಮತ್ತು ವಾತಾವರಣದ ಬದಲಾವಣೆಗಳಿಂದ ತತ್ತಿಗಳನ್ನು ರಕ್ಷಿಸುತ್ತವೆ. ಕೆಲವು ಪ್ರಭೇದಗಳು, ತತ್ತಿಗಳನ್ನು, ಇನ್ನು ಕೆಲವು ಮರಿಗಳನ್ನು ದೇಹದಲ್ಲಿಯೇ ಉಳಿಸಿಕೊಂಡು ರಕ್ಷಿಸುತ್ತವೆ. ಯಶಸ್ವಿ ಪ್ರಜನನಕ್ರಿಯೆಗಾಗಿ ಹಲವಾರು ಮಾರ್ಗಗಳನ್ನು ಅಳವಡಿಸಿಕೊಂಡಿವೆ. ವರ್ಷದ ಅತ್ಯುತ್ತಮ ವಾತಾವರಣ ಇರುವ ಕಾಲದಲ್ಲಿ ವೀರ್ಯಾಣು ಮತ್ತು ಅಂಡಾಣುಗಳನ್ನು ಉತ್ಪಾದಿಸಿ, ಸಂಭೋಗ ನಡೆಸಲು ವಾರ್ಷಿಕ ಪ್ರಜನನ ಚಕ್ರವಿದೆ. ಹೆಣ್ಣಿನ ಅಂಡನಾಳದಲ್ಲಿ ವೀರ್ಯಾಣುಗಳನ್ನು ಶೇಖರಿಸಿ, ಸಂಭೋಗದಿಂದ ಗಂಡಿನಿಂದ ಪಡೆದ ವೀರ್ಯಾಣುಗಳನ್ನು ಅವಶ್ಯಕತೆಗೆ ತಕ್ಕಂತೆ ನಿಷೇಚನಕ್ಕೆ ಬಳಸಿಕೊಳ್ಳುವ ವಿಶಿಷ್ಟ ಉಪಾಯವನ್ನು ಒತ್ತಿ, ಆಮೆಗಳು ಬೆಳೆಸಿಕೊಂಡಿವೆ. ಕೆಲವು ಸರೀಸೃಪಗಳಲ್ಲಿ ಲಿಂಗವಿಭೇದನೆ ಕೂಡ ಕುತೂಹಲಕರ. ತತ್ತಿಗಳಿದ್ದ ಗೂಡಿನ ಉಷ್ಣತೆಯನ್ನು ಬದಲಾಯಿಸಿ, ಪಿತ್ರಗಳು ಹೆಣ್ಣು ಅಥವಾ ಗಂಡು ಮರಿಗಳನ್ನು ಪಡೆಯುತ್ತವೆ. ಈ ವಿಧಾನದಿಂದ ಗುಂಪಿನಲ್ಲಿ ಗಂಡು–ಹೆಣ್ಣುಗಳ ಅನುಪಾತವನ್ನು ಕಾಪಾಡಿಕೊಳ್ಳಲಾಗುವುದು. ಸರೀಸೃಪಗಳ ಇಂತಹ ಕುತೂಹಲಕಾರಿ ಜೈವಿಕ ಕ್ರಿಯೆಗಳ ಅಧ್ಯಯನ ಜಗತ್ತಿನಾದ್ಯಂತ ನಡೆಯುತ್ತಿದೆ.

(ಎಚ್.ಎನ್.ವೈ)

**ಸಹಸ್ರಪಾದಿ:** ಬಹು ಸಂಖ್ಯೆಯ ಪಾದಗಳನ್ನು ಹೊಂದಿರುವ ಸಂದಿಪದಿಗಳು. ಇವು ಸಂದಿಪದಿ ವಂಶದ ಡಿಪ್ಲೋಪೋಡ ವರ್ಗದಲ್ಲಿನ ಬಹುಪಾದಿಗಳ ಗುಂಪಿಗೆ

ಸೇರಿವೆ. ಪ್ರಪಂಚದಾದ್ಯಂತ ಇವೆ. ಹೆಚ್ಚಿನ ಪ್ರಭೇದಗಳು ಉಷ್ಣವಲಯಗಳಲ್ಲಿ ವಾಸಿಸುತ್ತವೆ. ದೇಹ ಉದ್ದವಾಗಿದ್ದು, ಉರುಳೆಯಾಕಾರದಲ್ಲಿದೆ. ಇವು ಸುರುಳಿಯಂತೆ ಸುತ್ತಿಕೊಳ್ಳುತ್ತವೆ. ದೇಹದಲ್ಲಿ ಸ್ಪಷ್ಟವಾದ ತಲೆ ಮತ್ತು ಮುಂಡ ಇದೆ. ಮುಂಡದಲ್ಲಿ ಪ್ರಭೇದವನ್ನು ಅವಲಂಬಿಸಿ 11 ರಿಂದ 100 ಅಥವಾ ಇನ್ನು ಹೆಚ್ಚು ಖಂಡಗಳು ಇರುತ್ತವೆ. ಇವುಗಳ ಗಾತ್ರ 2 ಮಿಮೀ. 20 ಸೆಂಮೀ ಉದ್ದ. ಸು. 110 ಜೊತೆ ಕಾಲುಗಳಿರುತ್ತವೆ. ಕೆಲವು ಮುಂಭಾಗದ ಮತ್ತು ಹಿಂಭಾಗದ ಖಂಡಗಳನ್ನು ಬಿಟ್ಟು ಪ್ರತಿಯೊಂದು ಖಂಡದಲ್ಲೂ ಎರಡು ಜೊತೆ ಕಾಲುಗಳಿರುತ್ತವೆ. ಆದ ಕಾರಣ ಡಿಪ್ಲೋಪೋಡಗಳೆಂದು ಕರೆಯುವರು. ದೇಹದ ಒಳಗೆ ಪ್ರತಿಯೊಂದು ಖಂಡದಲ್ಲಿ 2 ಜೊತೆ ನರಗಳು ಮತ್ತು 2 ಜೊತೆ ಹೃದಯ, ಆಸ್ಟಿಯ ಇವೆ.

ತಲೆಯಲ್ಲಿ ಕುಡಿಮೀಸೆಗಳು ಅಥವಾ ಸ್ಪರ್ಶತಂತು ಇವೆ. ಇದು ಚಿಕ್ಕದಾಗಿದ್ದು, 7 ಸಂದುಗಳಿಂದಾಗಿವೆ. ಬಾಯಿಯಲ್ಲಿ ದವಡೆಗಳು (ತಳದ ಎರಡು ಭಾಗ ಮತ್ತು ತುದಿಯ ಭಾಗದಲ್ಲಿ ಚಲಿಸುವ ಹಲ್ಲುಗಳು ಮತ್ತು ಚರ್ಮಕಾಂಗಗಳ ಜೊತೆಗೆ ಹಲ್ಲುಗಳಿರುವ ಏಣು) ಮತ್ತು ಮ್ಯಾಕ್ಸಿಲ ಇದೆ. ಎರಡು ಕಡೆಯ ಮ್ಯಾಕ್ಸಿಲ ಸೇರಿ ಮಧ್ಯದಲ್ಲಿ ನ್ಯಾತೊಕೈಲೇರಿಯಂ ಎಂಬ ಅಂಗ ಬೆಳೆದಿದೆ.

ಮುಂಡದಲ್ಲಿ ಅನೇಕ ಖಂಡಗಳಿವೆ. ಪ್ರತಿಯೊಂದು ಖಂಡದಲ್ಲಿ ಬಾಗಿದ ಟರ್ಗಂ, ಕಿರಿದಾದ ಸ್ಟರ್ನಂ ಮತ್ತು ಎರಡು ಪಾರ್ಶ್ವದಲ್ಲಿ ಪ್ಲೂರಲ್ ತಟ್ಟೆಗಳಿರುತ್ತವೆ. ಎರಡು ಪ್ಲೂರಲ್ ತಟ್ಟೆ, ಸ್ಟರ್ನಂ ಜೊತೆಗೂಡಿ ನಿರಂತರವಾದ ಸುರುಳಿಯಾಗಿದೆ. ಮುಂಡದ ಖಂಡಗಳಲ್ಲಿ ಒಂದು ಜೊತೆ ಕಾಲು ಇದೆ. 4ನೆ ಖಂಡದಲ್ಲಿ ಕಾಲಿಲ್ಲ. ಉಳಿದ ಖಂಡಗಳಲ್ಲಿ 2 ಜೊತೆ ಕಾಲುಗಳಿವೆ. ಗಂಡು ಸಹಸ್ರಪಾದಿಯ 7ನೆ ಖಂಡದಲ್ಲಿಯೂ ಕಾಲಿರುವುದಿಲ್ಲ, ಬದಲಾಗಿ ಒಂದು ಜೊತೆ ಆನುಷಂಗಿಕ ಸಂಭೋಗಾಂಗ ಇವೆ. ಪ್ರತಿಯೊಂದು ಕಾಲಿನಲ್ಲಿ 6 ಖಂಡಗಳಿದ್ದು, ತುದಿಯಲ್ಲಿ ಉಗುರು ಇದೆ.

ಬಾಯಿಯ ಭಾಗಗಳು, ಒಂದು ಜೊತೆ ದೊಡ್ಡ ದವಡೆ ಮತ್ತು ಒಂದು ಜೊತೆ ಮ್ಯಾಕ್ಸಿಲ. ಇವುಗಳಲ್ಲಿ ವಿಷ ಉಗುರುಗಳು ಇಲ್ಲ. ಕೆಲವು ಡಿಪ್ಲೋಪೋಡ್‍ಗಳು ಕುರುಡಾಗಿದ್ದರೆ ಇನ್ನು ಕೆಲವಕ್ಕೆ ಸರಳವಾದ ಕಣ್ಣು(ಆಸಿಲೈ) ಇರುತ್ತದೆ. ಇದರ ಹೊರ ಪದರ ಕ್ಯಾಲ್ಸಿಯಮ್ ಲವಣಗಳಿಂದ ಗಟ್ಟಿಯಾಗಿದೆ.

ಆಸನದ್ವಾರದ ಹಿಂಭಾಗದ ಕೊನೆಯ ಖಂಡದಲ್ಲಿ (ಟೆಲ್ಸನ್) ಇದೆ. ಆಸನದ್ವಾರದ ಖಂಡ ಉಳಿದ ಖಂಡಗಳಿಗಿಂತ ದೊಡ್ಡದಾಗಿದೆ. ಜೀರ್ಣಾಂಗವ್ಯೂಹ ನೇರವಾದ ನಾಳದಂತಿದೆ. ಶ್ವಾಸನನಾಳ ವ್ಯೂಹ ಅಪರಿಮಿತವಾಗಿದೆ. ಆದರೆ ಹೆಚ್ಚು ಕವಲುಗಳಿಲ್ಲ. ವಿಸರ್ಜನಾಂಗಗಳು 2 ರಿಂದ 4 ಇವೆ. ಇವುಗಳನ್ನು ಮ್ಯಾಲ್ಪಿಗಿಯನ್ ನಳಿಕೆಗಳು ಎನ್ನುವರು. ನರವ್ಯೂಹ, ಪ್ರತಿಯೊಂದು ಖಂಡದಲ್ಲಿರುವ ಎರಡು ನರಗಂಟುಗಳನ್ನು ಒಳಗೊಂಡಿದೆ.

ಇವು ಭಿನ್ನ ಲಿಂಗಗಳು. ಜೋಡಿ ಜನನ ಗ್ರಂಥಿಗಳಿಗಿಲ್ಲ. ಗೋನೋಡಕ್ಟ್ ಎರಡು ಕವಲುಗಳಾಗಿ ಸಾಗಿ ಮುಂದುಗಡೆ ಎರಡನೆ ಮತ್ತು ಮೂರನೆ ಖಂಡಗಳ ಮಧ್ಯೆ ತೆರೆದಿದೆ. ಗಂಡು ಪ್ರಾಣಿಯಲ್ಲಿ ಒಂದು ಜೊತೆ ನಾಳದ ರೀತಿಯ ವೃಷಣವಿರುತ್ತದೆ, ಆದರೆ, ಹೆಣ್ಣಿನಲ್ಲಿ ಒಂದು ಉದ್ದ ನಾಳದ ರೀತಿಯ ಅಂಡಾಶಯವಿರುತ್ತದೆ. ಗಂಡಿನಲ್ಲಿ ಮೊದಲ ಕಾಲು ಸಂಭೋಗಕ್ಕೆ ಮಾರ್ಪಡಾಗಿರುತ್ತದೆ. 7ನೆ ಖಂಡದಲ್ಲಿ ಆನುಷಂಗಿಕ ಸಂಭೋಗದ ಅಂಗ ಇದೆ. ಇದು ವೀರ್ಯವನ್ನು ವರ್ಗಾಯಿಸಲು ಸಹಾಯ ಮಾಡುತ್ತದೆ. ವೀರ್ಯ ವರ್ಗಾವಣೆ ಪರೋಕ್ಷವಾಗಿರುತ್ತದೆ. ಗೋನೋಪೊರ್ 3ನೇ ಖಂಡದ ಅಧೋಭಾಗದ ಮಧ್ಯದಲ್ಲಿ ತೆರೆದಿದೆ. ಗರ್ಭಧಾರಣೆ ದೇಹದ ಒಳಗೆ ಆಗುತ್ತದೆ.

ಮೊಟ್ಟೆಯೊಳಗಿನಿಂದ ಹೊರ ಬಂದ ಮರಿ ದೇಹದಲ್ಲಿ ಆರು ಖಂಡಗಳು (ಮೆಟಮಿಯರ್) ಮತ್ತು ಮೂರು ಜೊತೆ ಕಾಲುಗಳು ಇದ್ದು, ರೆಕ್ಕೆರಹಿತ ಕೀಟದ ರೀತಿ ಕಾಣುತ್ತದೆ.

ಸಹಸ್ರಪಾದಿಗಳು ಜಡ ಸ್ವಭಾವದ, ಅಂಜುಬುರುಕ ಮತ್ತು ಗೌಪ್ಯ ಜೀವಿಗಳು. ಇವು ಶತ್ರುಗಳಿಂದ ದೂರ ಸರಿದು, ಕತ್ತಲೆ ಅಥವಾ ತೇವ ಪ್ರದೇಶಗಳಲ್ಲಿ ಅಡಗಿಕೊಳ್ಳುತ್ತವೆ. ಉದಾ: ಕಲ್ಲು, ಮರದ ದಿಮ್ಮಿ ಅಥವಾ ಮರದ ಕಾಂಡಗಳ ಕೆಳಗೆ ಅಥವಾ ಕೊಳೆಯುತ್ತಿರುವ ಎಲೆ ಅಥವಾ ಮರದಲ್ಲಿ ಅಡಗಿಕೊಳ್ಳುತ್ತವೆ. ಸ್ಪೈರೊಸ್ಟ್ರೆಪ್ಟಸ್ ಸತ್ತ ಮತ್ತು ಕೊಳೆಯುತ್ತಿರುವ ಜೀವಿಗಳ ಮಧ್ಯ ವಾಸಿಸುತ್ತದೆ. ಇದು ತಮ್ಮ ಕಾಲ್ಬೆರಳುಗಳನ್ನು ಉಪಯೋಗಿಸದೆ ನಡೆಯುತ್ತದೆ. ತುಂಬ ಕಾಲುಗಳಿದ್ದರೂ, ಇದರ ಚಲನೆ ಬಹಳ ನಿಧಾನ. ಇದನ್ನು ಮುಟ್ಟಿದರೆ ಸುರುಳಿ ಸುತ್ತಿಕೊಳ್ಳುತ್ತದೆ. ಆಗ ಗಟ್ಟಿಯಾದ ಮೇಲಿನ ಮೇಲ್ಮೈಭಾಗ ತೆರೆದಿರುತ್ತದೆ. ಆದರೆ, ಕಾಲು ಮತ್ತು ಕೆಳಗಿನ ಮೃದು ಭಾಗಗಳನ್ನು ರಕ್ಷಿಸುತ್ತದೆ.

ಹೆಚ್ಚಿನ ಪ್ರಭೇದಗಳಲ್ಲಿ ದೇಹದ ಪಾಶ್ವದಲ್ಲಿ ದುರ್ಗಂಧ ಗ್ರಂಥಿಗಳಿವೆ. ಇವು ದುರ್ಗಂಧಪೂರಿತ ದ್ರವವನ್ನು ಸ್ರವಿಸುತ್ತವೆ. ಈ ವಾಸನೆಯ ತೀಕ್ಷ್ಣತೆಗೆ ಕೆಲವು ಕೀಟಗಳು ಸಾಯುತ್ತವೆ. ಈ ಆಕ್ರಮಣಕಾರಿ ದ್ರವದಲ್ಲಿ ಹೈಡ್ರೋಸೈನಿಕ್ ಆಮ್ಲ, ಅಯೋಡಿನ್ ಮತ್ತು ಕ್ವಿನೋನ್ ಇರುವುದರಿಂದ ಇದು ಅಹಿತಕರವಾಗಿರುತ್ತದೆ.

ಸಹಸ್ರಪಾದಿಗಳು ಸಸ್ಯಹಾರಿಗಳು ಅಥವಾ ಕೊಳೆತಿನಿಗಳು. ಇವುಗಳ ಆಹಾರ ಕೊಳೆಯುತ್ತಿರುವ ವಸ್ತುಗಳು. ಕೆಲವು ಸಸ್ಯಗಳ ಬೇರನ್ನು ತಿಂದು, ನಷ್ಟ ಉಂಟು ಮಾಡುತ್ತವೆ.

ಸು. 8000 ಕ್ಕಿಂತ ಹೆಚ್ಚು ಸಹಸ್ರಪಾದಿಗಳ ಪ್ರಭೇದಗಳನ್ನು ವಿವರಿಸಲಾಗಿದೆ. ಅವನ್ನು ಗೋನೋಪಾಡ್ ರಚನೆ, ಖಂಡಗಳ ವಿಧಗಳು, ಅನುಷಂಗಿಕಾಂಗಳು ಮತ್ತು ವದನಾಂಗಗಳ ಭಾಗಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ.

(ಎಸ್.ಆರ್.ಎಸ್.)

**ಸಾಂಕ್ರಾಮಿಕ ರೋಗವಿಜ್ಞಾನ:** ಜನಸಮಷ್ಟಿಯಲ್ಲಿ ಹಬ್ಬಿರುವ ರೋಗಗಳ ಕಾರಣ, ಅವು ಹರಡುವ ಪರಿ, ಅವುಗಳ ನಿವಾರಣೋಪಾಯ, ಚಿಕಿತ್ಸಾಕ್ರಮ ಮುಂತಾದ ಜನಾರೋಗ್ಯ ಸಂಬಂಧೀ ವಿಷಯಗಳನ್ನು ಸಮಗ್ರವಾಗಿಯೂ ಕೂಲಂಕಷವಾಗಿಯೂ ಅಧ್ಯಯನ ಮಾಡುವ ವೈದ್ಯವಿಜ್ಞಾನದ ಶಾಖೆ (ಎಪಿಡೆಮಿಯಾಲಜಿ). ರೋಗಗಳು ಮರುಕಳಿಸುವ ಆವೃತ್ತಿ (ಫ್ರೀಕ್ವೆನ್ಸಿ), ವಿತರಣೆ (ಡಿಸ್ಟ್ರಿಬ್ಯೂಶನ್) ಮತ್ತು ನಿರ್ಣಾಯಕಗಳು (ಡಿಟರ್ಮಿನೆಂಟ್ಸ್) ಎಂಬ ಮೂರು ಪೂರಕ ಅಂಶಗಳನ್ನು ಇದರಲ್ಲಿ ಅಭ್ಯಸಿಸಲಾಗುತ್ತದೆ. ಜನಸಂಖ್ಯಾಸಾಂದ್ರತೆ, ವಿತರಣೆ, ಸರಾಸರಿ ಆಯುರ್ನಿರೀಕ್ಷೆ ಮುಂತಾದವುಗಳ ಸಂಖ್ಯಾಕಲನೀಯ ಅಧ್ಯಯನ (ಸ್ಟ್ಯಾಟಿಸ್ಟಿಕಲ್ ಸ್ಟಡಿ) ಇಲ್ಲಿ ಅವಶ್ಯ. ಜನತೆಗೆ ಯುಕ್ತ ವೈದ್ಯಕೀಯ ಸಹಾಯ ವಿಸ್ತರಿಸುವ ಸಲುವಾಗಿ ಸರ್ಕಾರ ತನ್ನ ನೀತಿ ರೂಪಿಸುವಲ್ಲಿ ಈ ಅಧ್ಯಯನ ಬಲು ಉಪಯುಕ್ತ.

ಆ್ಯಡಮ್ ಮತ್ತು ಈವ್ "ನಿಷಿದ್ಧ ಫಲ" ಸೇವಿಸಲು ತೊಡಗಿದಾಗಲೇ ಸಾಂಕ್ರಾಮಿಕರೋಗವಿಜ್ಞಾನ ರೂಪುಗೊಂಡಿತೆಂಬ ಪ್ರತೀತಿ ಉಂಟು. ಅಂದರೆ ಚಿಂತನಶೀಲ ಮಾನವನ ಉಗಮದೊಂದಿಗೇ ಈ ವಿಜ್ಞಾನ ವಿಭಾಗ ಮೈದಳೆಯಿತೆಂದು ಭಾವಿಸಬಹುದು. ಮುಂದೆ ೧೯ನೆಯ ಶತಮಾನದಲ್ಲಿ ಜಾನ್ ಸ್ನೋ (೧೮೧೩–೫೮) ಎಂಬ ಇಂಗ್ಲಿಷ್ ವೈದ್ಯ ಕಾಲರಾ ಪಿಡುಗಿನ ಆಕರ ಶೋಧನೆಯಲ್ಲಿ ತೊಡಗಿ ಅದನ್ನು ಪತ್ತೆಹಚ್ಚಿದಾಗ ಸಾಂಕ್ರಾಮಿಕ ರೋಗವಿಜ್ಞಾನಕ್ಕೆ ಭವ್ಯ ವೈಜ್ಞಾನಿಕ ಅಸ್ತಿಭಾರ ಲಭಿಸಿತು: ಕಲುಷಿತ ಜಲಸೇವನೆಯೇ ಈ ಪಿಡುಗಿನ ಮೂಲ ಎಂದು ಆತ ಶೋಧಿಸಿದ.

ಮುಂದೆ ಫುಪ್ಫುಸಗಳ ಕ್ಯಾನ್ಸರಿಗೂ ತಂಬಾಕು ಸೇವನೆಗೂ ಇರಬಹುದಾದ ಸಂಬಂಧವನ್ನು ಬ್ರಿಟಿಷ್ ವೈದ್ಯರು ಅನುಮಾನಿಸಿ ಈ ನಿಟ್ಟಿನಲ್ಲಿ ಸಾಕಷ್ಟು ಮಾಹಿತಿ ಸಂಗ್ರಹಿಸಿದರು. ಇದು ನಿಜವೆಂದು ಸಾಬೀತಾದಾಗ (೧೯೫೦) ಸಾಂಕ್ರಾಮಿಕ ರೋಗವಿಜ್ಞಾನಕ್ಕೆ ಹೆಚ್ಚಿನ ಒತ್ತಾಸೆ ದೊರೆಯಿತು. ತರುವಾಯದ ವರ್ಷಗಳಲ್ಲಿ ನಡೆಸಿದ ವ್ಯವಸ್ಥಿತ ಅಧ್ಯಯನ ರೋಗಗಳಲ್ಲಿ ನಾಲ್ಕು ವರ್ಗಗಳನ್ನು ಗುರುತಿಸಿದೆ: ೧. ನಿರ್ದಿಷ್ಟ ಜನಸಮಷ್ಟಿಯಲ್ಲಿ ಸ್ಥಳಿಕವಾಗಿ ಕಾಣಿಸಿಕೊಳ್ಳುವವು ಸ್ಥಳಿಕವ್ಯಾಧಿಗಳು (ಎಂಡೆಮಿಕ್); ೨. ಅಲ್ಲಿ ಇಲ್ಲಿ ಆಗ ಈಗ ಪ್ರಕಟವಾಗುವ ಆಕಸ್ಮಿಕ ವ್ಯಾಧಿಗಳು (ಸ್ಪೊರೇಡಿಕ್); ೩. ಒಟ್ಟಾಗಿ ಸಾಕಷ್ಟು ವಿಸ್ತಾರದಲ್ಲಿ ಹರಡುವ ಪಿಡುಗು (ಎಪಿಡೆಮಿಕ್); ೪. ಅಂತರದೇಶೀಯವಾಗಿ ವ್ಯಾಪಿಸುವಂಥ ಖಂಡಾಂತರ ಪಿಡುಗು (ಪ್ಯಾಂಡೆಮಿಕ್).

ವ್ಯಾಧಿಪ್ರಕಾರ ಯಾವುದೇ ಇರಲಿ, ಅದನ್ನು ನಿವಾರಿಸಲು ದ್ವಿವಿಧ ಪ್ರತಿರೋಧ ಅಗತ್ಯ: ರೋಗಗ್ರಸ್ತರ ಚಿಕಿತ್ಸೆ ಮತ್ತು ಉಪಚಾರ, ಜೊತೆಯಲ್ಲೇ ರೋಗಮೂಲವನ್ನು ಶೋಧಿಸಿ ಅದರ ಉಚ್ಚಾಟನೆ. (ಸಿ.ಎಸ್.ಕೆ.)

**ಸಾಕುಪ್ರಾಣಿಗಳು:** ಮಾನವ ತನ್ನ ಆಹಾರಕ್ಕೆ, ಕೃಷಿಗೆ, ರಕ್ಷಣೆಗೆ, ಹವ್ಯಾಸಕ್ಕೆ ಮುದ್ದಿನ ಸಂಗಾತಿಯಾಗಿ ಸಾಕಿದ ಪ್ರಾಣಿಗಳು. ದನ, ಎಮ್ಮೆ, ಎತ್ತು, ಕುರಿ, ಮೇಕೆ, ಹಂದಿ, ನಾಯಿ ಮುಂತಾದುವುಗಳು ಸಾಮಾನ್ಯ ಸಾಕುಪ್ರಾಣಿಗಳು. ಸುಮಾರು 20,000 ವರ್ಷಗಳ ಹಿಂದೆ ಯೂರೋಪು ಮತ್ತು ಏಷ್ಯಾ ಖಂಡದ ದಟ್ಟವಾದ ಕಾಡುಗಳಲ್ಲಿ ಅಧಿಕವಾಗಿದ್ದ ಕಾಡೆಮ್ಮೆಗಳಂಥ ಪ್ರಾಣಿಗಳನ್ನು ಆದಿಮಾನವರ ಹಾಗೂ ತೋಳಗಳ ಗುಂಪು ಆಹಾರಕ್ಕಾಗಿ ಬೇಟೆಯಾಡುತ್ತಿದ್ದವು. ಮೊದಲು ಆಹಾರಕ್ಕಾಗಿ ಪ್ರತ್ಯೇಕವಾಗಿ ಆಕ್ರಮಣ ನಡೆಸುತ್ತಿದ್ದ ಈ ಗುಂಪುಗಳು ಕ್ರಮೇಣ ಒಟ್ಟಾಗಿ ಆಕ್ರಮಣ ನಡೆಸಿದರೆ ಹೆಚ್ಚು ಲಾಭದಾಯಕ ಎಂಬುದನ್ನು ಮನಗಂಡವು. ಮಾನವನಲ್ಲಿನ ಆಯುಧಗಳು ತೋಳಗಳಿಗೆ ಪರಿಣಾಮಕಾರಿ ಎನಿಸಿದರೆ ತೋಳಗಳ ಆಕ್ರಮಣಶೀಲ

ಪ್ರವೃತ್ತಿ, ಹಿಂಬಾಲಿಸುವ ವೇಗ ಮಾನವನಿಗೆ ವರದಾನವಾದವು. ಹೀಗೆ ಒಟ್ಟಿಗೆ ಆಕ್ರಮಣ ನಡೆಸತೊಡಗಿದ ಗುಂಪುಗಳು ಜೊತೆಯಲ್ಲೇ ಜೀವಿಸತೊಡಗಿದವು. ಈ ತೋಳಗಳಿಂದಲೇ ಅಭಿವೃದ್ಧಿಹೊಂದಿದ ನಾಯಿಗಳು ಮಾನವನ ಅತ್ಯಂತ ಆಪ್ತ ಸಂಗಾತಿಗಳಾದವು.

ಮಾನವ ಮತ್ತು ನಾಯಿಗಳ ಸಂಬಂಧದ ಅತಿ ಪ್ರಾಚೀನ ಪುರಾವೆಯೆಂದರೆ ಮಧ್ಯ ಇರಾಕಿನ ಗುಹೆಯೊಂದರಲ್ಲಿ ದೊರಕಿದ ಒಂದು ತಲೆಬುರುಡೆ. ಈ ತಲೆಬುರುಡೆ ತೋಳಕ್ಕಿಂತ ಚಿಕ್ಕ ದವಡೆ ಹಾಗೂ ಹಲ್ಲುಗಳನ್ನು ಹೊಂದಿದ್ದು ಸು. 12 ಸಾವಿರ ವರ್ಷ ಹಿಂದಿನದೆಂದು ಅಂದಾಜು ಮಾಡಲಾಗಿದೆ. ತೋಳಗಳು ಪರಿವರ್ತನೆಗೊಂಡು ನಾಯಿಗಳಾಗಿ ರೂಪುಗೊಳ್ಳುತ್ತಿದ್ದ ಕುರುಹು ಅದು. ಮಾನವ ತನಗೆ ಬೇಕಾದ ಗುಣಲಕ್ಷಣಗಳುಳ್ಳ ಪ್ರಾಣಿಗಳನ್ನೇ ಆಯ್ಕೆ ಮಾಡಿಕೊಂಡು ಸಾಕುತ್ತಿದ್ದುದರಿಂದ ಮಾನವನ ಅಪೇಕ್ಷೆಯ ಗುಣಲಕ್ಷಣಗಳೇ ಅವನ ಸಾಕುಪ್ರಾಣಿಗಳಲ್ಲಿ ಬೆಳೆದು ಬಂದವು. ಕುರಿಗಳ ಹಿಂಡಿನಲ್ಲಿ ಕಾವಲು ಕೆಲಸ ನಿರ್ವಹಿಸುವ ನಾಯಿ ಬೇಗನೆ ಗುರುತಿಸಲು ಬಿಳಿಯ ಬಣ್ಣದ್ದಾಗಿರಬೇಕಾಯಿತು. ಹೊರಗಿನ ಗುಂಪುಗಳ ಸದಸ್ಯರಿಂದ ರಕ್ಷಣೆಗಾಗಿ ಸಾಕಿದ ನಾಯಿ ಧುತ್ತನೆ ಮೇಲೇರಿ ಆಕ್ರಮಣ ನಡೆಸಬೇಕಾದ್ದರಿಂದ ದೈತ್ಯಗಾತ್ರದ್ದಾಗಿ, ಕಪ್ಪು ಬಣ್ಣದ್ದಾಗಿರಬೇಕಾಯಿತು. ರೋಮನ್ ಹೆಂಗಸರಲ್ಲಿ ನಾಯಿಯ ದೇಹದ ಬಿಸಿ ತಮ್ಮ ಹೊಟ್ಟೆನೋವನ್ನು ಗುಣಪಡಿಸುತ್ತದೆಂಬ ಬಲವಾದ ನಂಬಿಕೆಯಿದ್ದುದರಿಂದ ತೊಡೆಯ ಮೇಲೇ ಇರಿಸಿಕೊಳ್ಳಲು ಹಾಗೂ ಮುದ್ದಿನ ನಾಯಿಗಳನ್ನು ಎತ್ತಿಕೊಳ್ಳಲು ಅವು ಚಿಕ್ಕಗಾತ್ರದ್ದಾಗಿರಬೇಕಾಯಿತು. ಹೀಗೆ ಮಾನವನಿಗೆ ಬೇಕಾದ ಗಾತ್ರ, ಬಣ್ಣ, ಮೈಯ ರಚನೆಗಳೇ ಮುಂದಿನ ಪೀಳಿಗೆಗಳಲ್ಲಿ ಮುಂದುವರೆದು, ಅನೇಕ ಗಾತ್ರದ, ಬಣ್ಣದ, ವಿವಿಧ ತಳಿಗಳಾಗಿ ರೂಪುಗೊಂಡವು.

ಎಲ್ಲಾ ಸಾಕುಪ್ರಾಣಿಗಳಲ್ಲಿ ಅತ್ಯಂತ ಪ್ರೀತಿಪಾತ್ರವಾದುದು ನಾಯಿ. ಅದರ ಸ್ನೇಹಭಾವ, ಮಾನವನೊಂದಿಗೆ ಇರುವ ಸಹಜ ಆಕರ್ಷಣೆ, ಸಹಕರಿಸುವ ಮನೋಭಾವ, ಮುದಗೊಳಿಸುವ ವರ್ತನೆ ಪ್ರಾಯಶಃ ಮಾನವ ನಾಯಿಯನ್ನು ತನ್ನ ಪ್ರೀತಿಪಾತ್ರ ಸಂಗಾತಿ ಪ್ರಾಣಿಯನ್ನಾಗಿ ಆರಿಸಿರುವುದಕ್ಕೆ ಕಾರಣಗಳಿರಬೇಕು. ಮೊದಲು ಬೇಟೆಗೆ ನಾಯಿಯನ್ನು ಪೋಷಿಸುತ್ತಾ ಬಂದ ಮಾನವ ತನ್ನ ರಕ್ಷಣೆಗಾಗಿ, ಕುರಿ, ದನಗಳನ್ನು ಕಾವಲು ಕಾಯಲು, ಕೊನೆಗೆ ಒಂಟಿತನದ ಬೇಸರ ನೀಗಲು ಸಂಗಾತಿಯಾಗಿ ನಾಯಿಗಳನ್ನು ಸಾಕುತ್ತಾ ಬಂದ. ಇಂದು ನಾಯಿಗಳನ್ನು ಅನೇಕ ಉದ್ದೇಶಗಳಿಗಾಗಿ



ಸಾಕು ನಾಯಿ

ಸಾಕಲಾಗುತ್ತಿದೆ. ಅವುಗಳ ವಾಸನೆ ಗ್ರಹಿಸುವ, ಮಾನವರು ಕೇಳದಂಥ ಶಬ್ದಗಳನ್ನು ಕೇಳಬಲ್ಲ ಅದ್ಭುತ, ವಿಶಿಷ್ಟ ಶಕ್ತಿಯನ್ನು ಉಪಯೋಗಿಸಿಕೊಂಡು ಕಳ್ಳರನ್ನು, ಕೊಲೆಗಾರರನ್ನು ಹಿಡಿಯಲು, ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆಯನ್ನು ಕಂಡುಹಿಡಿಯಲು, ಸ್ಫೋಟಕ ವಸ್ತುಗಳನ್ನು ಪತ್ತೆಹಚ್ಚಲು, ಕಳೆದುಹೋದವರನ್ನು ರಕ್ಷಿಸಲು, ಮಿಲಿಟರಿಯಲ್ಲಿ ವೈರಿಗಳ ಸುಳಿವು ನೀಡಲು, ಕುರುಡರಿಗೆ ಮಾರ್ಗದರ್ಶನ ಮಾಡುವ ಗೈಡ್ ನಾಯಿಗಳನ್ನಾಗಿ ಉಪಯೋಗಿಸಲಾಗುತ್ತಿದೆ.

ವಿವಿಧ ಜಾತಿಯ ನಾಯಿಗಳನ್ನು ಅನೇಕ ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಅಮೆರಿಕ ಕೆನೆಲ್ ಕ್ಲಬ್‌ನ ವರ್ಗೀಕರಣ ಒಂದು ತರವಾದರೆ ಬ್ರಿಟಿಷ್ ಕೆನೆಲ್ ಕ್ಲಬ್‌ನವರ ವಿಂಗಡಣೆ ಭಿನ್ನವಾಗಿದೆ. ಆದರೆ ಸ್ಥೂಲವಾಗಿ, ಸರಳವಾಗಿ ನಾಯಿಗಳನ್ನು ಈ ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು.

1. ಕೆಲಸಗಾರ ನಾಯಿಗಳು: ಆಲ್ಸೇಷಿಯನ್ (ಜರ್ಮನ್ ಷೆಫರ್ಡ್), ಡಾಬರ್‌ಮನ್, ಬಾಕ್ಸರ್, ಬುಲ್‌ಡಾಗ್, ಗ್ರೇಟ್‌ಡೇನ್, ಡಾಲ್‌ಮೇಷಿಯನ್, ಕಾಲಿ, ಬುಲ್‌ಮಾಸ್ಟಿಫ್, ಸೇಂಟ್ ಬರ್ನಾಡ್ ಮುಂತಾದುವುಗಳು.

2. ಬೇಟೆ ನಾಯಿಗಳು: ಲ್ಯಾಬ್ರಡಾರ್ ರಿಟ್ರೀವರ್, ಮುಧೋಳ್ ಹೌಂಡ್, ಆಫ್ಘನ್ ಹೌಂಡ್, ಗೋಲ್ಡನ್ ರಿಟ್ರೀವರ್, ಸಲುಕಿ, ಡ್ಯಾಷೂಂಡ್, ಕಾಕರ್ ಸ್ಪೇನಿಯಲ್, ಫಾಕ್ಸ್ ಟೆರಿಯರ್, ಐರಿಷ್ ಸೆಟ್ಟರ್, ಬ್ಯೂಗಲ್ ಮುಂತಾದುವುಗಳು.

3. ಮುದ್ದು ನಾಯಿಗಳು: ಪಾಮೋರೇನಿಯನ್, ಲಾಸಾ ಆಪ್ಸೋ, ಸ್ಪಿಟ್ಜ್, ಪೆಕಿನೀಸ್, ಪೂಡಲ್ ಮುಂತಾದುವುಗಳು.

ಜರ್ಮನ್ ಷೆಪರ್ಡ್

ಜರ್ಮನ್ ಷೆಫರ್ಡ್ : ಹೆಸರೇ ಸೂಚಿಸುವಂತೆ ಜರ್ಮನ್ ಮೂಲದ, ಜಗತ್ತಿನಲ್ಲೆಡೆ ಅತ್ಯಂತ ಜನಪ್ರಿಯವಾಗಿರುವ ನಾಯಿ. ಆಲ್ಸೇಷಿಯನ್ ಪರ್ಯಾಯ ನಾಮ. ಕಾವಲುಗಾರನಾಗಿ ಅತ್ಯಂತ ಪ್ರಾಮಾಣಿಕವಾಗಿ, ಎಚ್ಚರಿಕೆಯಿಂದ ಕಾಯುವ ಇದು ನಿಷ್ಠೆಗೆ ಹೆಸರುವಾಸಿಯಾಗಿದೆ. ವಾಸನಾಗ್ರಹಣ ಶಕ್ತಿ ಅದ್ಭುತವಾಗಿರುವ ಇದು ಗಂಭೀರ ಸ್ವಭಾವದ್ದಾಗಿದೆ. ಪ್ರೀತಿಯಿಂದ ನೋಡಿಕೊಂಡ ತನ್ನ ಒಡೆಯನಿಗಾಗಿ ಪ್ರಾಣವನ್ನೂ ಕೊಡುವ ನಿಷ್ಠೆಯುಳ್ಳ ಇದು ಪೋಲೀಸ್ ಇಲಾಖೆಯ ಮೆಚ್ಚಿನ ನಾಯಿ.

ಡಾಬರ್‌ಮನ್ ಸಹ ಜರ್ಮನ್ ಮೂಲದ ನಾಯಿ. ಬಹಳ ಬುದ್ಧಿವಂತ, ಉತ್ತಮ ಕಾವಲುಗಾರ ನಾಯಿ. ಚುರುಕುತನ ಹಾಗೂ ಸಾಹಸ ಪ್ರವೃತ್ತಿಯಿಂದ ಇದು ಜನಪ್ರಿಯವಾದರೂ ಶೀಘ್ರಕೋಪಿ ಹಾಗು ಸ್ವಲ್ಪಮಟ್ಟಿಗೆ ಉಗ್ರಸ್ವಭಾವದ್ದು.

ಲ್ಯಾಬ್ರಡಾರ್ ರಿಟ್ರೀವರ್ ಇಂಗ್ಲೆಂಡ್ ಮೂಲದ ಉತ್ತಮ ಬೇಟೆ ನಾಯಿ. ಅದ್ಭುತ ವಾಸನಾಗ್ರಹಣ ಶಕ್ತಿಯಿಂದ ಪೋಲೀಸ್ ಇಲಾಖೆಯಲ್ಲಿ ಮಾದಕ ದ್ರವ್ಯಗಳನ್ನು, ಸ್ಫೋಟಕಗಳನ್ನು ಗುರುತಿಸಲು ಬಳಕೆಯಾಗುತ್ತಿದೆ. ತಾಳ್ಮೆಗೆ ಹೆಸರುವಾಸಿಯಾದ, ಅತ್ಯಂತ ಹೊಂದಾಣಿಕೆ ಮನೋಭಾವದ, ಅದರಲ್ಲೂ ಮಕ್ಕಳಿಗೆ ಚೆನ್ನಾಗಿ ಹೊಂದಿಕೊಳ್ಳುವ ಇದು ಮಕ್ಕಳ ಎಲ್ಲಾ ಚೇಷ್ಟೆಗಳನ್ನೂ ಸಹಿಸಿಕೊಳ್ಳುತ್ತದಲ್ಲದೆ ಅವರೊಡನೆಯೇ ಇರಲು ಇಷ್ಟಪಡುತ್ತದೆ.

ಮುಧೋಳ್ ಹೌಂಡ್ ಕರ್ನಾಟಕದ ಹೆಮ್ಮೆಯ ತಳಿ. ಅತ್ಯಂತ ಚಾಣಾಕ್ಷ ಬೇಟೆಗಾರನಾದ ಇದರ ದೈಹಿಕ ರಚನೆ ವಿಶಿಷ್ಟವಾಗಿದೆ. ಉದ್ದವಾದ ಮುಖ, ಅಗಲವಾದ ಎದೆ, ಕಿರಿದಾದ ಸೊಂಟ, ಬಲಿಷ್ಠವಾದ ಕಾಲುಗಳನ್ನು ಹೊಂದಿರುವ ಮುಧೋಳ್ ಗಾಳಿಯನ್ನು ಸೀಳಿಕೊಂಡು ವೇಗವಾಗಿ ಓಡಬಲ್ಲುದು. ತನ್ನ ಒಡೆಯನಿಗೆ ಆತ್ಮೀಯವಾಗಿ ಹೊಂದಿಕೊಳ್ಳುವ, ವಿಧೇಯವಾಗಿರುವ ಮುಧೋಳ್ ಹೌಂಡ್ ಇತ್ತೀಚಿನ ದಿನಗಳಲ್ಲಿ ದೇಶವಿದೇಶದ ನಾಯಿ ಪ್ರಿಯರನ್ನು ಆಕರ್ಷಿಸಿದೆ.

ಪಾಮೊರೇನಿಯನ್ ಪುಟ್ಟ ಮುದ್ದಿನ ನಾಯಿ. ಬಹಳ ಜನಪ್ರಿಯವಾದ ನಾಯಿ. ತನ್ನ ಆಕರ್ಷಕ ರೇಷಿಮೆಯಂಥ ಕೂದಲಿನಿಂದ, ಕಪ್ಪು ಬಣ್ಣದ ಕಣ್ಣುಗಳಿಂದ ನೋಡಿದವರನ್ನು ತಟ್ಟನೆ ಸೆಳೆಯುವ ಇದು ಜರ್ಮನ್ ಮೂಲದ್ದು. ಬುದ್ಧಿವಂತ ಪ್ರಾಣಿಯಾದ ಇದು ಆತ್ಮೀಯವಾಗಿ ಮಕ್ಕಳಂತೆ ಮನೆಯಲ್ಲಿ ಓಡಾಡಿಕೊಂಡಿರುವುದರಿಂದ ಅನೇಕ ಕುಟುಂಬಗಳ ಸದಸ್ಯನೇ ಆಗಿದೆ.

ನಾಯಿಗಳು ಮಾನವನ ಅತ್ಯುತ್ತಮ ಸಂಗಾತಿಗಳಾಗಬಲ್ಲವು. ನಾಯಿ ತನ್ನ ಮುಗ್ಧ ವರ್ತನೆಗಳಿಂದ ಮುದ ನೀಡುತ್ತದೆ. ಮಗುವಿನ ಬಾಲ್ಯಲೀಲೆಗಳಂಥ ಮುಗ್ಧ ಚಟುವಟಿಕೆಗಳನ್ನು ತಮ್ಮ ಜೀವಿತದ ಕೊನೆಯವರೆಗೂ ಉಳಿಸಿಕೊಳ್ಳುತ್ತವೆ. ಆದ್ದರಿಂದಲೇ ನಾಯಿಗಳನ್ನು ಪರ್ಪೆಚುಯಲ್ ಬೇಬೀಸ್ ಎಂದು ಕರೆಯುತ್ತಾರೆ.

ಕ್ರಿಸ್ತಪೂರ್ವ 3000 ವರ್ಷಗಳ ಹಿಂದೆ ಬೆಕ್ಕುಗಳನ್ನು ಸಾಕಲು ಮಾನವ ಪ್ರಾರಂಭಿಸಿದ. ಆದರೆ ನಾಯಿಗಳಂತೆ ಬೆಕ್ಕುಗಳು ಸಂಪೂರ್ಣ ಮಾನವನನ್ನು ಅವಲಂಬಿಸುವುದಿಲ್ಲ. ಸಾಕಿದ ಮಾನವರ ಬೆಂಬಲ, ಆಶ್ರಯ ಅನಿರೀಕ್ಷಿತವಾಗಿ ತಪ್ಪಿಹೋದರೆ ನಾಯಿಗಳು ಕೊರಗಿ, ಕೊರಗಿ ಅನೇಕ ವೇಳೆ ಪ್ರಾಣವನ್ನೂ ಬಿಟ್ಟ ಉದಾಹರಣೆಗಳಿದ್ದರೆ ಬೆಕ್ಕುಗಳು ತಪ್ಪಿದ ಆಶ್ರಯದ ಬಗ್ಗೆ ಚಿಂತಿಸದೆ, ಸ್ವತಂತ್ರವಾಗಿ ಬದುಕಬಲ್ಲವು.

ಈಜಿಪ್ಟಿನ ಕೆಲವು ದೇವಾಲಯಗಳಲ್ಲಿ ಬೆಕ್ಕನ್ನು ಪೂಜಿಸಲಾಗುತ್ತದೆ. ಹೆಚ್ಚುಕಡಿಮೆ ಎಲ್ಲಾ ದೇಶದ ಜಾನಪದ ಕಥೆಗಳಲ್ಲಿ ಈ ಬೆಕ್ಕು ಮಾಟಗಾತಿಯರ ಅಚ್ಚುಮೆಚ್ಚಿನ ಸಂಗಾತಿಗಳಾಗಿ ಒಂದು ರೀತಿಯ ನಿಗೂಢತೆಯನ್ನು ಉಳಿಸಿಕೊಂಡಿವೆ. ನಮ್ಮಲ್ಲಿ

ಅನೇಕರು ಮುದ್ದಿಗಾಗಿ ಬೆಕ್ಕುಗಳನ್ನು ಸಾಕುತ್ತಿದ್ದಾರೆ. ನಾಯಿಗಳಂತೆಯೇ ಕೆಲವು ಬೆಕ್ಕುಗಳು ಮಾನವನಿಗೆ ಹೊಂದಿಕೊಂಡು, ಅವನ ಒಂಟಿತನವನ್ನು ನೀಗಬಲ್ಲವು.

ಅಲೆಮಾರಿಯಾಗಿದ್ದ ಮಾನವ ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ ಒಂದೆಡೆ ನೆಲೆ ನಿಂತು ವಾಸಿಸತೊಡಗಿದ ಅನಂತರ ದನ, ಎಮ್ಮೆ, ಕುರಿ, ಮೇಕೆ, ಹಂದಿ ಮುಂತಾದುವುಗಳನ್ನು ಸಾಕಲು ಪ್ರಾರಂಭಿಸಿದ. ಒಂದೆಡೆ ವಾಸಿಸಿದ ಅನಂತರ ಬೇಟೆಗಾಗಿ ಹೆಚ್ಚು ದೂರ ಹೋಗಿ ಬರುವುದು ದುಸ್ತರವಾಗತೊಡಗಿತು. ಜೊತೆಗೆ ಬೇಟೆ ದೊರಕುವ ಅನಿಶ್ಚಿತತೆ. ಬೇಟೆ ಸಿಕ್ಕರೆ ಉಂಟು, ಇಲ್ಲದಿದ್ದರೆ ಇಲ್ಲ. ಮೇಲಾಗಿ, ಸಿಕ್ಕ ಬೇಟೆ ಹೆಚ್ಚಾದರೆ ಮರುದಿನಕ್ಕೆ ಹಳೆಯದಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಮಾನವ ತಾಜಾ ಮಾಂಸದ ಆಸೆಗಾಗಿ ಬೇಟೆಯನ್ನು ಸೆರೆಹಿಡಿದು ತನಗೆ ಬೇಕಾದಾಗ ವಧಿಸಲು ಪ್ರಾರಂಭಿಸಿದನೆಂದು ಊಹಿಸಬಹುದು. ಇದರಿಂದ ಅವನಿಗೆ ಬೇಕಾದಾಗ ತಾಜಾ ಮಾಂಸ ದೊರಕಿತಲ್ಲದೆ ಅವುಗಳ ಉತ್ಪನ್ನಗಳಾದ ಹಾಲು, ಉಣ್ಣೆಯ ಜೊತೆಗೆ ಕೃಷಿ ಪ್ರಾರಂಭಿಸಿದ್ದ ಅವನಿಗೆ ತನ್ನ ಕ್ಷೇತ್ರಕ್ಕೆ ಗೊಬ್ಬರ ದೊರಕತೊಡಗಿದವು. ಸತ್ತ ಪ್ರಾಣಿಗಳ ಚರ್ಮ ಉಡುಪುಗಳನ್ನು ಮಾಡಿಕೊಳ್ಳಲು ಉಪಯೋಗವಾಯಿತು. ಅವುಗಳ ಚೂಪಾದ ಕೊಂಬಿನಿಂದ, ಮೂಳೆಯಿಂದ ಆಯುಧ ತಯಾರಿಕೆ ಸುಲಭವಾಯಿತು.

ಮೊದಲು ಚೀನದಲ್ಲಿ ಹಂದಿಗಳನ್ನು ಸಾಕಲಾರಂಭಿಸಿದರೆ ಮಧ್ಯ ಏಷ್ಯಾದಲ್ಲಿ ದನಗಳನ್ನು ಸಾಕಲಾಯಿತು. ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ತನ್ನ ಕೃಷಿ ಕೆಲಸದ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಮಾನವ ಎತ್ತುಗಳನ್ನು ಸಾಕಿ ಉಳಲು ಪ್ರಾರಂಭಿಸಿದ. ಮೊದಲು ಜಾರುವ ಹಿಮಗಾಡಿಗಳನ್ನೆಳೆಯಲು, ಉರುಳುವ ಗಾಲಿಯ ಉಪಯೋಗ ಕಂಡುಕೊಂಡಮೇಲೆ ಸಾಮಾನು ಸರಂಜಾಮುಗಳನ್ನು ಸಾಗಿಸಲು ಎತ್ತುಗಳು ಬಳಕೆಯಾದವು.



ಹಂದಿ

ನೂರಾರು ವರ್ಷಗಳ ನಿರಂತರ ಆಯ್ಕೆ ಪ್ರಕ್ರಿಯೆಯಿಂದ ರೈತರು ಅನೇಕ ಉತ್ಕೃಷ್ಟ ತಳಿಗಳನ್ನು ರೂಪಿಸಿದ್ದಾರೆ. ಅವುಗಳಲ್ಲಿ ವ್ಯವಸಾಯ ಯೋಗ್ಯ ತಳಿಗಳು ಕೆಲವಾದರೆ ಕೆಲವು ಕೃಷಿ ಕೆಲಸದ ಜೊತೆಗೆ ಹೆಚ್ಚು ಹಾಲು ಕೊಡುವ ಉದ್ದೇಶಕ್ಕೂ ಉಪಯೋಗಿಸಬಹುದಾದ ತಳಿಗಳು. ನಮ್ಮ ದೇಶದಲ್ಲಿ ಸುಮಾರು 30 ಉತ್ಕೃಷ್ಟ ದನದ ತಳಿಗಳು ಹಾಗೂ 9 ಎಮ್ಮೆಯ ತಳಿಗಳಿವೆ. ಅವುಗಳಲ್ಲಿ ನಮ್ಮ ಕರ್ನಾಟಕದ ಅಮೃತಮಹಲ್, ಹಳ್ಳೀಕಾರ್, ಕೃಷ್ಣವ್ಯಾಲಿ, ಬಿಲಾರ್ ಮುಂತಾದವುಗಳು ವ್ಯವಸಾಯಕ್ಕೆ, ಸರಕು ಸಾಗಣೆಗೆ ಹೇಳಿಮಾಡಿಸಿದಂಥ ತಳಿಗಳು. ಅಮೃತಮಹಲ್ ಎತ್ತುಗಳು ಅನೇಕ ಯುದ್ಧಗಳಲ್ಲಿಯೂ ಕೂಡ ಭಾಗವಹಿಸಿ ಜಯಶಾಲಿಗಳಾಗಿರುವ ಇತಿಹಾಸವಿದೆ.

ಇಂದಿಗೂ ಭಾರತದ ಶೇ. 60 ರಷ್ಟು ಭೂಮಿಯ ಉಳುಮೆ ಈ ಎತ್ತುಗಳಿಂದಲೇ ಆಗುತ್ತಿದೆ. ಚಿಕ್ಕ ಹಿಡುವಳಿಗಳಲ್ಲಿ, ಕೇವಲ ಒಂದೆರಡು ಕಿಮೀ ದೂರದ ಉತ್ಪನ್ನಗಳ ಸಾಗಣೆಗೆ ಹಾಗೂ ಬೇರೆ ಸಾಗಾಣಿಕೆ ವ್ಯವಸ್ಥೆ ಕಾರ್ಯಸಾಧುವಲ್ಲದ ಕಡೆಗಳಲ್ಲಿ ಕೇವಲ ಎತ್ತುಗಳು ಮಾತ್ರವೇ ಉಪಯೋಗವಾಗಬಲ್ಲುವು. ವಾಸ್ತವವಾಗಿ ಇಂದು ಭಾರತದಲ್ಲಿ ಎತ್ತುಗಳು ಸಾಗಿಸುತ್ತಿರುವ ಕೃಷಿ ಉತ್ಪನ್ನಗಳು ಭಾರತದ ಎಲ್ಲಾ ರೈಲುಗಳು ಸಾಗಿಸುವ ಪ್ರಮಾಣಕ್ಕಿಂತ ಅಧಿಕ! ಅಮೃತಮಹಲ್ ವಿಜಯನಗರ ಸಾಮ್ರಾಜ್ಯ ಅಭಿವೃದ್ಧಿಪಡಿಸಿದ ತಳಿ. ನಂತರ ಮೈಸೂರು ಮಹಾರಾಜರಾದ ಚಿಕ್ಕದೇವರಾಯ ಒಡೆಯರ್ ಅವರು ಪ್ರೋತ್ಸಾಹ ನೀಡಿ, ಅಮೃತಮಹಲ್ ದನಗಳ ಅಭಿವೃದ್ಧಿಗಾಗಿ ನಾಲ್ಕು ಲಕ್ಷ ಎಕರೆಗಳಷ್ಟು ವಿಸ್ತಾರವಾದ 240 ಕಾವಲುಗಳನ್ನು ಕಾದಿರಿಸಿದರು. ಅನಂತರ ಬಂದ ಹೈದರ್ ಅಲಿ ಹಾಗು ಟಿಪ್ಪೂಸುಲ್ತಾನ್ ಹಳ್ಳಿಕಾರ್, ಹಾಗಲವಾಡಿ ಹಾಗೂ ಚಿತ್ರದುರ್ಗ ಎಂಬ ಮೂರು ಪ್ರಭೇದಗಳಲ್ಲಿ ಹಂಚಿಹೋಗಿದ್ದ ಈ ತಳಿಯ ರಾಸುಗಳಿಗೆ ಅಮೃತಮಹಲ್ ಎಂದು ನಾಮಕರಣ ಮಾಡಿ ಪ್ರಚಲಿತಗೊಳಿಸಿದರು. ಇವುಗಳ ಚುರುಕು ಬುದ್ಧಿಯನ್ನು ಗಮನಿಸಿದ ಹೈದರ್ ಅಲಿ ಯುದ್ಧಭೂಮಿಯಲ್ಲಿ ವೇಗವಾಗಿ ಯುದ್ಧ ಸಾಮಗ್ರಿಗಳನ್ನು ಸಾಗಿಸಲು ಉಪಯೋಗಿಸಿ ಜಯ ಸಾಧಿಸಿದ.

ಹಾಲು ಉತ್ಪಾದನೆಗೆ ಹೆಸರುವಾಸಿಯಾದ ತಳಿಗಳಲ್ಲಿ ಸಿಂಧಿ, ಸಹಿವಾಲ್, ಹರಿಯಾಣ, ತಾರ್‌ಪಾರ್ಕರ್, ಗಿರ್, ಕಾಂಕ್ರೆಜ್ ಮತ್ತು ಓಂಗೋಲ್ ಮುಖ್ಯವಾದುವುಗಳು. ಇವುಗಳಲ್ಲಿ ಕೆಲವು ತಳಿಗಳನ್ನು ಉಪಯೋಗಿಸಿಕೊಂಡು ವಿದೇಶಗಳಲ್ಲಿಯೂ ಕೂಡ ಸ್ಥಳೀಯ ತಳಿಗಳ ಅಭಿವೃದ್ಧಿ ಸಾಧಿಸಲಾಗಿದೆ. ಸ್ವಿಟ್ಜರ್‌ಲೆಂಡ್‌ನ ಬ್ರೌನ್ ಸ್ವಿಸ್, ಜಮೈಕಾದ ಮೌಂಟ್ ಹೋಪ್ ಎನ್ನುವ ಹಾಲಿನ ತಳಿಗಳನ್ನು ನಮ್ಮ ದೇಶದ ಸಿಂಧಿ ತಳಿಯನ್ನು ಆಧರಿಸಿ ಅಭಿವೃದ್ಧಿಪಡಿಸಲಾಗಿದೆ. ದಕ್ಷಿಣ ಅಮೆರಿಕಾದ ಸ್ಯಾಂಟಾ ಜಟ್ರೋಡಿಸ್, ಆಸ್ಟ್ರೇಲಿಯಾದ ಬ್ರಾಂಗಸ್ ತಳಿಗಳಿಗೆ ನಮ್ಮ ಓಂಗೋಲ್ ತಳಿಯೇ ಮೂಲವಾಗಿದೆ.

ಮಲೆನಾಡು ಪ್ರದೇಶದಲ್ಲಿ ಮಾತ್ರ ಕಂಡುಬರುವ ಗಿಡ್ಡಜಾತಿಯ ವಿಶಿಷ್ಟ ಜಾನುವಾರು ತಳಿ ಮಲೆನಾಡು ಗಿಡ್ಡ. ಚಿಕ್ಕಮಗಳೂರು, ದಕ್ಷಿಣಕನ್ನಡ, ಉಡುಪಿ, ಹಾಸನ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಮಲೆನಾಡು ತಾಲ್ಲೂಕುಗಳಲ್ಲಿ ಇವು ವ್ಯಾಪಿಸಿವೆ. ಕೇವಲ ಒಂದು ಮೀ ಎತ್ತರವಿರುವ ಮಲೆನಾಡು ಗಿಡ್ಡಗಳು ಅತ್ಯಂತ ಕಷ್ಟಸಹಿಷ್ಣುಗಳು. ಸುರಿಯುವ ಮಳೆಯಲ್ಲಿ, ಉರಿಯುವ ಬಿಸಿಲಲ್ಲಿ, ಕೊರೆಯುವ ಚಳಿಯಲ್ಲಿ ನಿರಾತಂಕವಾಗಿ ಕಾಡಿಗೆ ಹೋಗಿ ಮೇದು ಬರುವ ಇವುಗಳ ರೋಗನಿರೋಧಕ ಶಕ್ತಿ ಅನನ್ಯ. ಇವುಗಳ ಸಾಕಾಣಿಕಾ ವೆಚ್ಚ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಮಲೆನಾಡಿನ ವಿಶಿಷ್ಟ ಕಾಡಿನಸೊಪ್ಪು ಹಾಸಿರುವ ಕೊಟ್ಟಿಗೆಗಳಲ್ಲಿ ವಾಸಿಸುತ್ತ ಉತ್ಕೃಷ್ಟ ಸಾವಯವ ಗೊಬ್ಬರವನ್ನು ಉತ್ಪಾದಿಸುತ್ತವೆ.

ಎಮ್ಮೆಗಳು ಅತ್ಯಂತ ನಿಕೃಷ್ಟ ಆಹಾರವನ್ನು ತಿಂದು ಹಸುಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಹಾಲನ್ನಾಗಿ ಪರಿವರ್ತಿಸುವ ಅದ್ಭುತ ಕ್ಷಮತೆ ಹೊಂದಿವೆ. ಇವುಗಳ ರೋಗ ನಿರೋಧಕ ಶಕ್ತಿ ಅಧಿಕವಾಗಿದ್ದು ಹಸುಗಳಂತೆ ಅದರಲ್ಲೂ ವಿದೇಶಿ ತಳಿಗಳಂತೆ ಮೇಲಿಂದ ಮೇಲೆ ರೋಗಗಳಿಂದ ನರಳುವುದಿಲ್ಲ.

ವಿಶ್ವದಲ್ಲಿರುವ ಎಮ್ಮೆಗಳ ಪೈಕಿ ಶೇ. 53 ರಷ್ಟು ಎಮ್ಮೆಗಳು ನಮ್ಮ ದೇಶದಲ್ಲೇ ಇವೆ. ವಾಸ್ತವವಾಗಿ ಸಿಂಧೂ ಮತ್ತು ಗಂಗಾ ನದಿಯ ಪ್ರದೇಶಗಳೇ ಎಮ್ಮೆಗಳ ಮೂಲಸ್ಥಾನ. ಆನಂತರ ಇವು ಏಷ್ಯಾದ ಇತರೆ ಕಡೆ ವ್ಯಾಪಿಸಿದವು. ಸುಮಾರು ಐದು ಸಾವಿರ ವರ್ಷಗಳ ಹಿಂದೆಯೇ ಎಮ್ಮೆಗಳನ್ನು ಸಿಂಧೂ ಕಣಿವೆಗಳಲ್ಲಿ ಸಾಕಲಾಗುತ್ತಿತ್ತು. ಇವುಗಳಲ್ಲಿ ಎರಡು ವಿಧ.

1. ಜೌಗು ಪ್ರದೇಶದ ಎಮ್ಮೆಗಳು: ಜೌಗು ಪ್ರದೇಶಗಳಲ್ಲಿ ವ್ಯವಸಾಯದ ಕೆಲಸಗಳಿಗೆ ವಿಶೇಷವಾಗಿ ಭತ್ತದ ಗದ್ದೆಗಳಲ್ಲಿ ಕೆಲಸ ಮಾಡಲು ಇವುಗಳನ್ನು ಉಪಯೋಗಿಸಲಾಗುತ್ತದೆ. ಇವುಗಳ ಹಾಲಿನ ಉತ್ಪಾದನೆ ಕಡಿಮೆ. ಇವುಗಳಲ್ಲಿ ಯಾವುದೇ ನಿರ್ದಿಷ್ಟವಾದ ತಳಿಗಳಿಲ್ಲ.

2. ನದಿತೀರದ ಎಮ್ಮೆಗಳು : ಸ್ವಾದಿಷ್ಟವಾದ ಹಾಲು ಕರೆಯುವ ತಳಿಗಳು. ಸೂರ್ತಿ, ಜಾಫರಬಾದಿ ಹಾಗು ಮೆಹಸಾನ ಗುಜರಾತಿನ ತಳಿಗಳು. ಉತ್ತರ ಪ್ರದೇಶ ದೇಶದಲ್ಲೇ ಹೆಚ್ಚು ಎಮ್ಮೆಗಳನ್ನು ಹೊಂದಿದ್ದು ಭಡಾವರಿ ಮತ್ತು ತರೈ ಇಲ್ಲಿನ ಮುಖ್ಯ ತಳಿಗಳು. ನಾಗಪುರಿ (ಮರಾಠವಾಡ), ಪಂಡರಾಪುರಿ, ಜೀರಂಗಿ, ಮಂಡ, ಕಾಲಹಂದಿ ಮತ್ತು ಸಬಲ್‌ಪುರಿ ಎಮ್ಮೆಗಳು ಮಧ್ಯಪ್ರದೇಶ ಹಾಗೂ ಸುತ್ತಮುತ್ತಲಿನ ರಾಜ್ಯಗಳಲ್ಲಿ ಕಂಡುಬರುತ್ತವೆ. ಸೂರ್ತಿ, ಮುರ್ರಾ, ತೋಡ ಹಾಗೂ ನಮ್ಮ ದಕ್ಷಿಣಕನ್ನಡದ ಕೆನರಾ ಎಮ್ಮೆಗಳೂ ಇತರೆ ಮುಖ್ಯ ತಳಿಗಳು. ಎಮ್ಮೆಗಳನ್ನು ಸಾಕುವುದು ಮಿಶ್ರತಳಿ ಹಸುಗಳನ್ನು ಸಾಕುವುದಕ್ಕಿಂತ ಸುಲಭವಾದ್ದರಿಂದ ಗ್ರಾಮಾಂತರ ಪ್ರದೇಶಗಳ ಸಣ್ಣ ರೈತರು ಎಮ್ಮೆಗಳನ್ನೇ ಸಾಕಲು ಬಯಸುತ್ತಾರೆ.

ಹಾಲು ಉತ್ಪಾದನೆಗೆ ಹೆಸರಾಗಿರುವ ವಿದೇಶಿ ತಳಿಗಳೆಂದರೆ ಹಾಲೆಂಡಿನ ಹಾಲ್‌ಸ್ಟೀನ್ ಫ್ರೀಷಿಯನ್ ಹಾಗೂ ಅಮೇರಿಕದ ಜೆರ್ಸಿ. ಇವುಗಳು ಹೆಚ್ಚು ಹಾಲು ಕೊಡುತ್ತವಾದರೂ ರೋಗನಿರೋಧಕ ಶಕ್ತಿ ಕಡಿಮೆ. ಆದ್ದರಿಂದ ಮೇಲಿಂದ ಮೇಲೆ ಕಾಯಿಲೆಯಿಂದ ನರಳುವುದರಿಂದ ಹಾಲಿನ ಉತ್ಪಾದನಾ ವೆಚ್ಚ ಗಣನೀಯವಾಗಿ ಏರುತ್ತದೆ. ಈ ತಳಿಗಳ ಹೋರಿಯ ವೀರ್ಯವನ್ನು ನಮ್ಮ ಸ್ಥಳೀಯ ಹಸುಗಳಿಗೆ

ಕೃತಕ ಗರ್ಭಧಾರಣೆ ಮಾಡಿಸಿ ಮಿಶ್ರತಳಿಗಳನ್ನು ಪಡೆಯಲಾಗುತ್ತಿದೆ. ಮಿಶ್ರತಳಿಗಳು ಸ್ಥಳೀಯ ತಳಿಗಳ ರೋಗನಿರೋಧಕ ಶಕ್ತಿಯನ್ನು ಉಳಿಸಿಕೊಂಡು ವಿದೇಶಿ ತಳಿಗಳಂತೆ



ತಾರ್‌ಪಾರ್ಕರ್



ಸಹಿವಾಲ್



ಜಾಫರ್‌ಬಾದಿ ಎಮ್ಮೆ

ಹೆಚ್ಚು ಹಾಲು ಕೊಡುತ್ತವೆ. ಹಾಲ್‌ಸ್ಟೀನ್ ಫ್ರಿಷಿಯನ್ ಅತ್ಯಂತ ಹೆಚ್ಚು ಹಾಲು ಕೊಡುತ್ತದೆ. ಆದರೆ ಹಾಲಿನಲ್ಲಿ ಜಿಡ್ಡಿನಾಂಶ ಕಡಿಮೆ. ಜೆರ್ಸಿಯ ಹಾಲಿನಲ್ಲಿ ಜಿಡ್ಡಿನಾಂಶ ಅಧಿಕವಾಗಿರುತ್ತದೆ. ಮಿಶ್ರತಳಿಗಳಲ್ಲಿ ವಿದೇಶಿ ರಕ್ತದ ಪ್ರಮಾಣ ಶೇ 62.5 ಕ್ಕಿಂತ ಹೆಚ್ಚಾಗದಂತೆ ನೋಡಿಕೊಂಡರೆ ಹೆಚ್ಚು ಲಾಭದಾಯಕ. ಇದಕ್ಕಿಂತ ಪ್ರಮಾಣ ಹೆಚ್ಚಾದರೆ ರೋಗ ನಿರೋಧಕ ಶಕ್ತಿ ಕಡಿಮೆಯಾಗುವುದರಿಂದ ಚಿಕಿತ್ಸಾವೆಚ್ಚ ಹೆಚ್ಚಾಗಿ ಹೈನುಗಾರಿಕೆ ಲಾಭದಾಯಕವಾಗಲಾರದು.

ಕುರಿ: (ನೋಡಿ: ಬಂಡೂರು ಕುರಿ)

ಮೇಕೆ (ಆಡು) : ಬಯಲು ಪ್ರದೇಶಗಳಲ್ಲಿ ಬಹು ಮುಖ್ಯವಾದ ಸಾಕು ಪ್ರಾಣಿ. ಪ್ರೀತಿಯಿಂದ ಸಾಕಿದಲ್ಲಿ ಮಾನವನಿಗೆ ಆತ್ಮೀಯವಾಗಿ ಹೊಂದಿಕೊಳ್ಳುತ್ತದೆ. ಮಾಂಸ ಹಾಗೂ ಹಾಲಿಗಾಗಿಯೂ ಜನಪ್ರಿಯವಾಗಿದೆ. ಗಾಂಧಿಯವರಿಗೆ ಆಡಿನ ಹಾಲು ಇಷ್ಟವಾಗಿತ್ತು. ಎಲ್ಲಾ ಬಗೆಯ ಸೊಪ್ಪನ್ನೂ ತಿನ್ನುವುದರಿಂದ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಗಾದೆಯೇ ಪ್ರಚಲಿತದಲ್ಲಿದೆ. ಇವುಗಳಲ್ಲಿ ಮುಖ್ಯವಾದ ತಳಿಗಳು ಡೆಕ್ಕನಿ, ಉಸ್ಮಾನಾಬಾದಿ, ಮಲಬಾರಿ ಹಾಗೂ ಬಿದರಿ. ಕೆಲವು ಹೆಚ್ಚು ಹಾಲು ಕೊಡುವ ವಿದೇಶಿ ತಳಿಗಳಾದ ಟೋಗನ್ ಬರ್ಗ್, ಸಾನನ್ ಹಾಗು ಆಲ್ಪೈನ್ ಉಪಯೋಗಿಸಿ ಮಿಶ್ರತಳಿ ಆಡುಗಳನ್ನು ಉತ್ಪಾದಿಸಿಕೊಳ್ಳಬಹುದು.



ಹಂದಿ: (ನೋಡಿ: ಹಂದಿ)

ಕತ್ತೆ : ನಿಕೃಷ್ಟ ಆಹಾರವನ್ನು ತಿಂದು, ಬರಗಾಲದಲ್ಲೂ ಬದುಕಬಲ್ಲ ಭಾರ ಹೊರುವ ವಿಶಿಷ್ಟ ಪ್ರಾಣಿ. ಸರಕು ಸಾಗಣೆಗೆ ವ್ಯಾಪಕವಾಗಿ ಉಪಯೋಗಿಸಲಾಗುತ್ತಿದೆ. ಕೃಷಿ ಕೆಲಸಕ್ಕೂ ಉಪಯೋಗಿಸಬಹುದಾಗಿದೆ. ಎತ್ತಿಗಿಂತ ಅಗ್ಗವಾಗಿರುವ ಇದನ್ನು ಕೃಷಿಗೆ ತೊಡಗಿಸುವುದು ಸುಲಭ. ಹೆಣ್ಣುಮಕ್ಕಳೇ ಹಿಡಿದಾಡಬಹುದಾದ್ದರಿಂದ ಕೆಲವು ದೇಶಗಳಲ್ಲಿ, ವಿಶೇಷವಾಗಿ ಆಫ್ರಿಕದಲ್ಲಿ ಕೃಷಿಯಲ್ಲಿ ತೊಡಗಿರುವ ಹೆಣ್ಣುಮಕ್ಕಳ ಮೆಚ್ಚಿನ ಪ್ರಾಣಿಯಾಗಿದೆ.

ಕತ್ತೆಯ ಹಾಲು ಸಕ್ಕರೆ ಮತ್ತು ಸಸಾರಜನಕದ ವಿಷಯದಲ್ಲಿ ಮಾನವರ ಹಾಲಿಗೆ ಅತ್ಯಂತ ಸಮೀಪವಾಗಿದೆ. ಇದರಲ್ಲಿ ಅನೇಕ ಔಷಧೀಯ ಗುಣಗಳಿರುವ ಬಗ್ಗೆ ಚರಕ ಸಂಹಿತೆ, ಶುಶ್ರುತ ಸಂಹಿತೆ ಮತ್ತು ದ್ರವ್ಯ ಗುಣಾದರ್ಶಗಳಲ್ಲಿ ಉಲ್ಲೇಖಗಳಿದ್ದು ಇತ್ತೀಚೆಗೆ ಸಂಶೋಧನೆಗಳು ನಡೆದು ದೃಢಪಟ್ಟಿದೆ ಕೂಡಾ. ಕತ್ತೆಯ ಹಾಲಿನಲ್ಲಿ ಎ, ಬಿ, ಸಿ, ಡಿ ಹಾಗೂ ಇ ಜೀವಸತ್ವಗಳಿವೆ. ವಯಸ್ಸಾದಂತೆ ಚರ್ಮ ಸುಕ್ಕುಗಟ್ಟುವುದನ್ನು ತಡೆಯುವ, ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಅಲ್ಲದೆ ಕ್ಯಾನ್ಸರ್ ತಡೆಗಟ್ಟುವ ಗುಣಗಳಿವೆ.

ಭಾರತದಿಂದಲೇ ಕತ್ತೆಯ ಹಾಲಿನ ಔಷಧೀಯ ಗುಣಗಳ ಬಗೆಗಿನ ಮಾಹಿತಿ ಪ್ರಾಚೀನ ಈಜಿಪ್ಟ್ ಹಾಗೂ ರೋಮ್ ದೇಶಗಳನ್ನು ತಲುಪಿತ್ತು. ಈಜಿಪ್ಟ್ ದೇಶದ ರಾಣಿ ಕ್ಲಿಯೋಪಾತ್ರಾಳು ಕತ್ತೆಯ ಹಾಲಿನಲ್ಲಿ ಸ್ನಾನ ಮಾಡುತ್ತಿದ್ದುದೇ ಅವಳ ಅಪ್ರತಿಮ ಸೌಂದರ್ಯದ ಗುಟ್ಟಾಗಿತ್ತು ಎಂಬುದನ್ನು ಈಗ ವಿಜ್ಞಾನಿಗಳು ಹೊರಗೆಡವಿದ್ದಾರೆ!

ನಮ್ಮ ದೇಶದಲ್ಲಿ ಸಾಕುಪ್ರಾಣಿಗಳು ಕೃಷಿಯ ಬೆನ್ನೆಲುಬಾಗಿವೆ. ಸಣ್ಣರೈತರು, ಭೂರಹಿತರು, ಕೃಷಿಕಾರ್ಮಿಕರು ಪ್ರಾಣಿಗಳನ್ನು ಸಾಕಿಯೇ ಜೀವನ ಸಾಗಿಸುತ್ತಿದ್ದು ಸಾಕುಪ್ರಾಣಿಗಳು ಬಡವರ ಏಕೈಕ ಆಶಾಕಿರಣವಾಗಿವೆ. (ಎಸ್.ಬಿ.ಆರ್.)

**ಸಾಗರಕೃಷಿ:** ಸಾಗರ ಜೀವಿಗಳನ್ನು ಅವುಗಳ ನೈಸರ್ಗಿಕ ಪರಿಸರದಲ್ಲಿ ಕೃಷಿಮಾಡುವ ವಿಧಾನ. ಉದಾ: ಉಪ್ಪುನೀರಿನ ಕೊಳ ಮತ್ತು ಹರಿಯುವ ಉಪ್ಪು ನೀರಿನಲ್ಲಿ ಜೀವಿಗಳನ್ನು ಕೃತಕವಾಗಿ ಬೆಳೆಯುವುದೇ ಸಾಗರ ಕೃಷಿ. ಸಾಗರಕೃಷಿಯನ್ನು ಸಾವಿರಾರು ವರ್ಷಗಳಿಂದ ಮಾಡುತ್ತಾ ಬಂದಿದ್ದಾರೆ. ಬಹಳಷ್ಟು ಸಾಗರ ಜೀವಿಗಳನ್ನು ವಿವಿಧ ಕಾರಣಕ್ಕಾಗಿ ಆಯಾ ಪ್ರಭೇದಗಳ ನೈಸರ್ಗಿಕ ವಾಸಸ್ಥಾನಗಳ ಸನಿಹದಲ್ಲಿ ಬೆಳೆಸಲಾಗುತ್ತದೆ. ಉದಾ: ಫ್ರಾನ್ಸ್‌ನಲ್ಲಿ ಕಪ್ಪೆಚಿಪ್ಪು (ಅಯಿಸ್ಟರ್), ಜಪಾನಿನಲ್ಲಿ ಮುತ್ತಿನ ಸಿಂಪೆ (ಪರ್ಲ್ ಅಯಿಸ್ಟರ್) ಮತ್ತು ಸಮುದ್ರ ಪಾಚಿ (ಸೀ ವೀಡ್), ಸ್ಕಾಟ್‌ಲೆಂಡನಲ್ಲಿ ಕಾಡ್ ಮೀನು, ಪಶ್ಚಿಮ ಪೆಸಿಫಿಕ್‌ನಲ್ಲಿ ಸೀ ಬಾಸ್ ಇತ್ಯಾದಿ. ಆದರೆ, ಇತ್ತೀಚಿನ ದಿನಗಳಲ್ಲಿ ವಿಶ್ವದ ಬಹಳಷ್ಟು ದೇಶಗಳಲ್ಲಿ ಹೆಚ್ಚುತ್ತಿರುವ ಸಾರಜನಕಯುಕ್ತ ಪದಾರ್ಥಗಳ ಬೇಡಿಕೆಯನ್ನು ಪೂರೈಸುವ ದೃಷ್ಟಿಯಿಂದ ಸಾಗರ ಕೃಷಿಯನ್ನು ಒಂದು ಮಹತ್ವದ ಚಟುವಟಿಕೆಯನ್ನಾಗಿಸಲಾಗಿದೆ. ಈಗ ವಾಣಿಜ್ಯದ ದೃಷ್ಟಿಯಿಂದ ಕೃಷಿ ಮಾಡುವ ಸಾಗರ ಜೀವಿಗಳಲ್ಲಿ ಮುಖ್ಯವಾದವು: ಸಮುದ್ರ ಪಾಚಿ (ಸೀ ವೀಡ್), ಸೀಗಡಿ, ಹಸಿರು ಮತ್ತು ಕಂದು ಬಣ್ಣದ ಮಸ್ಸೆಲ್, ಕಪ್ಪೆಚಿಪ್ಪು, ಬಳಚು (ಕ್ಲಾಮ್), ಸಾಲ್ಮನ್, ಈಲ್, ಸೀಬಾಸ್, ಸಮುದ್ರ ಸವತೆ (ಸೀ ಕುಕುಂಬರ್), ಏಡಿ (ಮಡ್ ಕ್ರಾಬ್), ಹಾಗು ಲಾಬ್‌ಸ್ಟರ್. ಇವುಗಳನ್ನು ಬೆಳೆಸುವ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಸಾಗರ ಕೃಷಿಯನ್ನು ಆಹಾರ, ಆಭರಣ, ಐಸ್‌ಕ್ರೀಂ ಮತ್ತು ಸೌಂದರ್ಯವರ್ಧಕಗಳ (ಕಾಸ್ಮೆಟಿಕ್ಸ್)ಲ್ಲಿ ಬಳಸುವ ಆಲ್ಜಿನ್ ಮತ್ತು ಇತ್ತೀಚಿನ ದಿನಗಳಲ್ಲಿ ಔಷಧಗಳಿಗಾಗಿ ಕೈಗೊಳ್ಳುತ್ತಾರೆ. ವಿಶ್ವಸಂಸ್ಥೆಯ ಅಂಗವಾದ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ, 2000) 1998 ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ವಿಶ್ವದಾದ್ಯಂತ ಸು. 20 ಮಿಲಿಯಟನ್ ಸಂಪನ್ಮೂಲಗಳನ್ನು ಸಾಗರಕೃಷಿಯಿಂದ ಪಡೆಯಲಾಯಿತು. ಇದರ ಬೆಲೆ 19.2 ಮಿಲಿಯ ಪೌಂಡ್ (ಸು.710 ದಶಲಕ್ಷ ರೂ) ಎನ್ನಲಾಗಿದೆ. ಪ್ರತಿ ವರ್ಷ ಪ್ರತಿಶತ 8 ರಿಂದ 9 ರಂತೆ ಸಾಗರ ಕೃಷಿಯ ವೃದ್ಧಿಯಾಗುತ್ತಿದೆ. ನಿರಂತರ ಹೆಚ್ಚಿನ ಪ್ರಮಾಣದ ಸಾರಜನಯುಕ್ತ ಆಹಾರ (ಪ್ರೊಟೀನ್) ಲಭ್ಯವಾಗುವಂತೆ ಮಾಡುವುದು ಮತ್ತು ಸ್ಥಳೀಯ ಜನರ ಆರ್ಥಿಕ ಸ್ಥಿತಿ ಉತ್ತಮಗೊಳಿಸುವುದು ಇದರ ಉದ್ದೇಶ.

ಹೆಚ್ಚಿದ ಬೇಡಿಕೆ ಪೂರೈಸುವ ಸಲುವಾಗಿ ನೈಸರ್ಗಿಕವಾಗಿ ಲಭ್ಯವಾದ ಸಂಪನ್ಮೂಲಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊರತೆಗೆಯುವುದರಿಂದ ಸಂಪನ್ಮೂಲಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಿದೆ. ಸಾಗರ ಕೃಷಿ, ಸಂಪನ್ಮೂಲಗಳ ನಾಶವನ್ನು ತಡೆಗಟ್ಟಿ ಆಯ್ದ ಜೀವಿಗಳ ಬೇಡಿಕೆಯನ್ನು ಪೂರೈಸುವ ಒಂದು ಬದಲಿ ವ್ಯವಸ್ಥೆ. ಮೊದಲು ಜಪಾನಿನಲ್ಲಿ ಮೊಟ್ಟೆಯಿಂದ ಹೊರಬಂದ ಮೀನಿನ ಮರಿಗಳನ್ನು ಚಿಕ್ಕ ಕಣ್ಣಿನ ಬಲೆಯನ್ನು ಬಳಸಿ ಸಮುದ್ರ ತೀರದ ಪ್ರದೇಶದ ನೀರಿನಲ್ಲಿ ಸಂಗ್ರಹಿಸಿ, ಆಹಾರ ನೀಡಿ, ಬೆಳೆಸಿ, ಸ್ವಲ್ಪ ದೊಡ್ಡದಾದ ಮೇಲೆ ಸಮುದ್ರದಲ್ಲಿ ಬಿಟ್ಟು ಅಲ್ಲಿನ ಸಂಪನ್ಮೂಲಗಳ ಅಭಿವೃದ್ಧಿಮಾಡುವ ಪದ್ಧತಿ ಆರಂಭಿಸಲಾಯಿತು. ಇದಕ್ಕೆ ಸೀ ರನ್‌ಚಿಂಗ್ ಎಂದು ಹೆಸರು. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ದೇಶಗಳಲ್ಲಿ ಕಡಲ ತೀರದ ಮತ್ತು ಹಿನ್ನೀರಿನ, ಉಪ್ಪುನೀರಿನ ಪ್ರದೇಶಗಳಲ್ಲಿ ನಿರಂತರವಾಗಿ ಕ್ಷೀಣಿಸುತ್ತಿರುವ ಸಂಪನ್ಮೂಲಗಳನ್ನು ಸುಸ್ಥಿರಗೊಳಿಸುವ ಸಲುವಾಗಿ ವ್ಯವಸ್ಥಿತವಾಗಿ ಬೆಳೆಸಿದ ಮರಿಗಳನ್ನು ನೀರಿನಲ್ಲಿ ಬಿಡಲಾಗುತ್ತಿದೆ.

ಸಾಗರ ಕೃಷಿಯಲ್ಲಿ 4 ವಿಧಗಳಿವೆ. 1) ಸಮುದ್ರದಲ್ಲಿ ತೇಲುವ ಪಂಜರ (ಕೇಜ್) ಮತ್ತು ತೆಪ್ಪ (ರಾಫ್ಟ್) ಬಳಸಿ ಜೀವಿಗಳನ್ನು ಸಾಕುವುದು. 2) ತೀರದ ಆಳವಲ್ಲದ ಸುರಕ್ಷಿತ ಪ್ರದೇಶಗಳಲ್ಲಿ ಬಲೆ ಅಥವಾ ಬೇಲಿ ಮಾಡಿ ಜೀವಿಗಳನ್ನು ಹಿಡಿದಿಡುವುದು. 3) ತೀರದ ಭೂಪ್ರದೇಶದಲ್ಲಿ ಕೊಳ ನಿರ್ಮಿಸಿ ಉಪ್ಪುನೀರನ್ನು ಸಂಗ್ರಹಿಸಿ ಜೀವಿಗಳನ್ನು ಬೆಳೆಸುವುದು. 4) ಸಮುದ್ರ ತೀರದಲ್ಲಿ ಸಿಮೆಂಟಿನ ಟ್ಯಾಂಕ್ ನಿರ್ಮಿಸಿ ನಿರಂತರ ನೀರನ್ನು ಹರಿಬಿಟ್ಟು ಜೀವಿಗಳನ್ನು ಬೆಳೆಸುವುದು. ಕಳೆದ ಸು. 3 ದಶಕಗಳಿಂದ ಅಳಿವೆಯಲ್ಲಿ ಮತ್ತು ಹಿನ್ನೀರಿನ ಪ್ರದೇಶಗಳಲ್ಲಿ ಸಿಹಿ ನೀರು ಮಿಶ್ರಿತ ಉಪ್ಪು ನೀರಿನಲ್ಲಿ (ಬ್ರಾಕಿಶ್ ವಾಟರ್) ಸೀಗಡಿ ಕೃಷಿ ಆರಂಭಿಸಿದ ಅನಂತರ ಭಾರತವು ಸಾಗರೋತ್ಪನ್ನಗಳ ರಫ್ತಿನಿಂದ ವಿದೇಶಿ ವಿನಿಮಯ ಸಂಪಾದನೆಯನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿತು. ಸಾಗರ ಕೃಷಿಯಿಂದಾಗಿ ಕರಾವಳಿ ತೀರದ ಮಧ್ಯಮ ಮತ್ತು ಬಡತನ ರೇಖೆಗಿಂತ ಕೆಳಗಿರುವ ಜನ ಪಟ್ಟಣಗಳಿಗೆ ಉದ್ಯೋಗ ಹುಡುಕಿ ಹೋಗುವುದನ್ನು ಕಡಿಮೆ ಮಾಡಿ ಸ್ಥಳೀಯವಾಗಿ ತಮ್ಮ ಮೂಲ ಉದ್ಯೋಗ ಉಳಿಸಿಕೊಂಡು ಹೋಗುವುದು ಸಾಧ್ಯವಾಗಿದೆ.

ಭಾರತದಲ್ಲಿ ಕಡಲ ತೀರದಲ್ಲಿ ಸಾಗರ ಕೃಷಿ ನಡೆಯುತ್ತಿದೆ. ಹೆಚ್ಚಿನ ಮೀನುಗಾರಿಕೆ ಸಾಗರ ತೀರದಲ್ಲೇ ನಡೆಯುವುದರಿಂದ ಮೀನುಗಾರರು ಮತ್ತು ಸಾಗರ ಕೃಷಿಕರ ನಡುವೆ ಸಮರ್ಪಕ ಹೊಂದಾಣಿಕೆ ಸಾಧ್ಯವಾಗಿದೆ. ಲಾಭದಾಯಕವಾಗಬಲ್ಲ ಪಾಚಿಗೆ (ಸೀ ವೀಡ್) ನಮ್ಮಲ್ಲಿ ಸಾಕಷ್ಟು ಬೇಡಿಕೆ ಇಲ್ಲದಿರುವುದು, ಲಾಭದಾಯಕವಾಗಿ ಇವನ್ನು ಬೆಳೆಸುವ ತಂತ್ರಜ್ಞಾನ ಲಭ್ಯವಿಲ್ಲದ್ದರಿಂದ ಸಾಗರ ಕೃಷಿ ಭಾರತದಲ್ಲಿ ಇನ್ನೂ ಸಾಕಷ್ಟು ಅಭಿವೃದ್ಧಿ ಆಗಬೇಕಿದೆ. ಇತ್ತೀಚಿನ ದಿನಗಳಲ್ಲಿ, ಸೀ ಬಾಸ್, ಕೆಸರಿನ ಏಡಿ (ಮಡ್ ಕ್ರಾಬ್), ಹಸಿರು ಮಸ್ಸೆಲ್ ಮತ್ತು ಮುತ್ತಿನ ಸಿಂಪೆ ಕೃಷಿಯಲ್ಲಿ ಸಾಕಷ್ಟು ಅಭಿವೃದ್ಧಿಯಾಗುತ್ತಿದೆ. ಭಾರತದಲ್ಲಿ ಸಾಗರೋತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರವು ಸಾಗರ ಕೃಷಿ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ್ದು, ವಿವಿಧ ಸಂಶೋಧನಾ ಸಂಸ್ಥೆಗಳ ಮತ್ತು ಆಸಕ್ತರ ನೆರವಿನಿಂದ ಈಗಾಗಲೇ ಸೀಗಡಿ ಕೃಷಿಯನ್ನು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ್ದು, ಇತ್ತೀಚಿನ ದಿನಗಳಲ್ಲಿ ಮುತ್ತಿನ ಸಿಂಪೆ, ಹಸಿರು ಮಸ್ಸೆಲ್, ಸೀ ಬಾಸ್ ಇತ್ಯಾದಿ ಬೇಡಿಕೆಯಲ್ಲಿರುವ ಸಾಗರ ಜೀವಿಗಳನ್ನು ಬೆಳೆಸಲಾಗುತ್ತಿದೆ. ಸಮುದ್ರ ಪಾಚಿಯನ್ನು ಬೆಳೆಸುವ ಯತ್ನ ನಡೆದಿದೆ.

ಹೀಗಿದ್ದರೂ ಸಾಗರ ಕೃಷಿಯನ್ನು ಉದ್ಯಮಿಕ ಪ್ರಮಾಣದಲ್ಲಿ ಹೆಚ್ಚಿಸಿದರೆ ಇದರಿಂದ ಸಾಗರ ಮತ್ತು ಕಡಲ ತೀರದ ಜೀವವೈವಿಧ್ಯತೆಗೆ ಬಹಳಷ್ಟು ರೀತಿಯಲ್ಲಿ ಅಪಾಯ ಉಂಟಾಗಬಹುದು. ಉದಾ : ವಿಶಾಲ ಪ್ರಮಾಣದಲ್ಲಿ ನೈಸರ್ಗಿಕ ಜೀವ ವಾಸಗಳ ನಾಶ ಮತ್ತು ಅವನತಿ ಹಾಗೂ ಪೋಷಕಾಂಶಗಳ ಕೊರತೆ ಒಂದೆಡೆಯಾದರೆ ವಿವಿಧ ಬಳಸಿದ ಔಷಧಿಗಳ ವ್ಯತಿರಿಕ್ತ ಪರಿಣಾಮ, ತ್ಯಾಜ್ಯ, ನವತಂತ್ರಜ್ಞಾನ ಬಳಕೆಯಿಂದ ತಯಾರಿಸಿದ ಅಪರಿಚಿತ ತಳಿಯನ್ನು ಪರಿಚಯಿಸುವುದು, ವಿವಿಧ ಸ್ಥಳೀಯ ತಳಿಗಳಿಗೆ ರೋಗಗಳ ಪಸರಿಸುವಿಕೆ ಹೀಗೆ ಹಲವಾರು ಒತ್ತಡಗಳಿಂದ ಜೀವವೈವಿಧ್ಯದ ನಾಶ ಹಾಗೂ ಸ್ಥಳಾಂತರ ಸಾಧ್ಯವಿದೆ. ಜೀವವೈವಿಧ್ಯ ಕಾನೂನನ್ನು ದೇಶವು ಜಾರಿಯಲ್ಲಿ ತಂದಿರುವುದರಿಂದ ಸಾಗರ ಕೃಷಿಯ ಅಭಿವೃದ್ಧಿಯ ಜೊತೆಗೆ ಜೀವವೈವಿಧ್ಯ ಸಂರಕ್ಷಣೆಯ ಕಾಳಜಿ ಸೇರಿದರೆ ಸುಸ್ಥಿರ ಅಭಿವೃದ್ಧಿ ಸಾಧ್ಯ. (ವಿ.ಎನ್.ಎನ್)

**ಸಾಗರ ಜೀವವಿಜ್ಞಾನ:** ಸಮುದ್ರ, ಮಹಾಸಾಗರ ಮತ್ತು ಇನ್ನುಳಿದ ಉಪ್ಪಿನಂಶವುಳ್ಳ ಪ್ರದೇಶಗಳಾದ ನದಿಮುಖಜ ಪ್ರದೇಶ (ಅಳಿವೆ) ಹಾಗೂ ತೇವ ಭೂಪ್ರದೇಶಗಳ ಜೀವಿಗಳು ಮತ್ತು ಅವುಗಳ ಪರಿಸರ ಅಧ್ಯಯನಕ್ಕೆ ಸೀಮಿತವಾದ ವಿಜ್ಞಾನದ ಶಾಖೆ. ಜೀವವಿಜ್ಞಾನ ಅತಿಸೂಕ್ಷ್ಮ ಜೀವಿಗಳಿಂದ ಹಿಡಿದು ಬೃಹದಾಕಾರದ ಜೀವಿಗಳವರೆಗಿನ ಎಲ್ಲ ಜೀವಿಗಳ ಅಧ್ಯಯನವೂ ಇದರಲ್ಲಿ ಸೇರಿದೆ. ಸಾಗರ ಜೀವವಿಜ್ಞಾನ ಅಧ್ಯಯನಕ್ಕೆ ಹಲವಾರು ಪ್ರಾಯೋಗಿಕ ಕಾರಣಗಳಿವೆ. ಸಮುದ್ರ ಜೀವಿಗಳು ವಿಶಾಲವಾದ ಸಂಪನ್ಮೂಲಗಳ ಆಗರವಾಗಿದ್ದು ಅವು ಆಹಾರ, ಔಷಧಿ ಮತ್ತು ವಿವಿಧ ಮೂಲ ವಸ್ತುಗ್ಗಳನ್ನು ಒದಗಿಸುವುದಲ್ಲದೆ ಮನೋರಂಜನೆ ಮತ್ತು ಪ್ರವಾಸೋದ್ಯಮಗಳಿಗೆ ವಿಶ್ವದಾದ್ಯಂತ ಬೆಂಬಲ ಒದಗಿಸುತ್ತವೆ. ನಮ್ಮ ಗ್ರಹದ ನಿಜವಾದ ಗುಣಧರ್ಮ ಅರಿಯಬೇಕಾದರೆ ಸಾಗರ ಜೀವವಿಜ್ಞಾನದ ಅಧ್ಯಯನ ಅತಿ ಮಹತ್ವದ್ದಾಗಿದೆ. ನಮಗೆ ಅತಿ ಅವಶ್ಯವಾದ ಆಮ್ಲಜನಕವನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಗರ ಜೀವಿಗಳೇ ಉತ್ಪಾದಿಸುವುದರಿಂದ ಭೂಮಂಡಲದ ವಾತಾವರಣವನ್ನು ನಿಯಂತ್ರಿಸುವಲ್ಲಿ ಸಾಗರ ಜೀವವಿಜ್ಞಾನ ಮಹತ್ವದ ವಿಜ್ಞಾನವಾಗಿದೆ.

ಸಾಗರವು ಅತ್ಯಂತ ವಿಶಾಲವಾಗಿದ್ದು ಬಹಳಷ್ಟು ವಿಚಿತ್ರ ಮತ್ತು ಅದ್ಭುತ ಜೀವಿಗಳು ಅಲ್ಲಿ ವಾಸಿಸುತ್ತವೆ. ಅತ್ಯುತ್ತಮ ಸೂಕ್ಷ್ಮದರ್ಶಕದಿಂದ ಮಾತ್ರ ನೋಡಲು ಸಾಧ್ಯವಾಗುವ ಸೂಕ್ಷ್ಮ ಜೀವಿಗಳಾದ ಬ್ಯಾಕ್ಟೀರಿಯದಿಂದ ಹಿಡಿದು 30 ಮೀ. ಗಳಿಗಿಂತ ಹೆಚ್ಚು ಬೃಹತ್ ಜೀವಿಗಳಾದ ತಿಮಿಂಗಲಗಳು ಸಾಗರವನ್ನು ತಮ್ಮ ವಾಸಸ್ಥಾನಗಳನ್ನಾಗಿಸಿಕೊಂಡಿವೆ. ಸಾಗರ ಜೀವವಿಜ್ಞಾನವು ಸಾಗರ ತೆರೆಯಿಂದ ಸಿಡಿಯುವ ಹವೆಯಲ್ಲಿನ ಅತಿ ಸಣ್ಣ ನೀರಿನ ಹನಿ ಹಿಡಿದುಕೊಳ್ಳಬಹುದಾದ ಜೀವಿಗಳಿಂದ ಸಾಗರದ ಸುಮಾರು 10,000 ಮೀಟರ್ ಆಳದ ಕಣಿವೆಯಲ್ಲಿಯವರೆಗಿನ ಎಲ್ಲ ಜೀವಾವಾಸಗಳ ಅಧ್ಯಯನವಾಗಿದೆ. ಪ್ರಮುಖ ಜೀವಾವಾಸಗಳೆಂದರೆ ಹವಳದ ಕಣಿವೆಗಳು, ಸಾಗರ ಪಾಚಿ ಅರಣ್ಯಗಳು, ಕಡಲ ತೀರದ ಉಸುಕಿನ, ಕಲ್ಲುಬಂಡೆಯ ರಾಡಿಯ ತೀರಗಳು, ನದಿ ಅಳಿವೆಗಳು, ನಡುಸಮುದ್ರದಲ್ಲಿ ತೇಲುವ ಮತ್ತು ಈಸುವ ಪ್ರಾಣಿಸೆಲೆಗಳು, ಸಮುದ್ರ ತಳದಲ್ಲಿ ಓಡಾಡುವ ಪ್ರಾಣಿಗಳು ಸಮುದ್ರದಾಳದಲ್ಲಿ ನೆಲೆಸಿರುವ ಜೀವಿಗಳು ಹೀಗೆ ಹಲವಾರು. ಭೂಮಂಡಲದಲ್ಲಿ ಅತಿಹೆಚ್ಚು ಜೀವಿಗಳು ಸಾಗರದಲ್ಲಿದ್ದರೂ ಸರಿಯಾಗಿ ಎಷ್ಟಿವೆ ಎಂದು ಹೇಳುವುದು ಇಂದಿಗೂ ಸಾಧ್ಯವಿಲ್ಲ. ಇವುಗಳಲ್ಲಿ ಬಹಳಷ್ಟು ಮಾನವನ ಆರ್ಥಿಕ ದೃಷ್ಟಿಯಿಂದ ಮಹತ್ವದ್ದಾಗಿವೆ. ಹೆಚ್ಚಿನವನ್ನು ಆಹಾರವಾಗಿ ಬಳಸಿದರೆ ಕೆಲವನ್ನು ಔಷಧಿ ಮತ್ತು ಇತರೆ ಉಪಯುಕ್ತ ವಸ್ತುಗಳನ್ನು ಪಡೆಯಲು ಸಂಗ್ರಹಿಸುತ್ತಾರೆ.

ಸಾಗರ ಜೀವವಿಜ್ಞಾನದ ಅಧ್ಯಯನದಲ್ಲಿ ಹಲವಾರು ಮೂಲ ವಿಷಯಗಳ ಅಧ್ಯಯನ ಸೇರಿರುತ್ತವೆ. ಅವೆಂದರೆ ಖಗೋಲವಿಜ್ಞಾನ (ಅಸ್ಟ್ರಾನಮಿ), ಜೈವಿಕ

ಸಾಗರವಿಜ್ಞಾನ (ಬಯಾಲಜಿಕಲ್ ಓಷನೋಗ್ರಫಿ), ಜೀವಕೋಶ ವಿಜ್ಞಾನ (ಸೆಲ್ ಬಯಾಲಜಿ), ರಸಾಯನ ಸಾಗರವಿಜ್ಞಾನ (ಕೆಮಿಕಲ್ ಓಷನೋಗ್ರಫಿ), ಪರಿಸರವಿಜ್ಞಾನ (ಎಕಾಲಜಿ), ಭೂಗರ್ಭವಿಜ್ಞಾನ (ಜಿಯಾಲಜಿ), ಹವಾಮಾನವಿಜ್ಞಾನ (ಮಿಟಿರಿಯಾಲಜಿ), ಅಣುಜೀವವಿಜ್ಞಾನ (ಮಾಲಿಕ್ಯುಲರ್ ಬಯಾಲಜಿ), ಭೌತಸಾಗರವಿಜ್ಞಾನ (ಫಿಸಿಕಲ್ ಓಷನೋಗ್ರಫಿ), ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ, ತಳಿವಿಜ್ಞಾನ (ಜೆನೆಟಿಕ್ಸ್), ಮೀನುಗಾರಿಕಾ ವಿಜ್ಞಾನ (ಫಿಶರಿ ಸೈನ್ಸ್), ಮಾನವಶಾಸ್ತ್ರ (ಆಂಥ್ರೊಪಾಲಜಿ), ಅರ್ಥಶಾಸ್ತ್ರ (ಎಕನಾಮಿಕ್ಸ್), ಕಾನೂನು, ಇತ್ಯಾದಿ.

ಸಾವಿರಾರು ವರ್ಷಗಳಿಂದ ಸಾಗರ ಜೀವಿಗಳು ಮಾನವನನ್ನು ಆಕರ್ಷಿಸುತ್ತಲೇ ಬಂದಿವೆ. ಸಾಗರ ಜೀವವಿಜ್ಞಾನ ಅಧ್ಯಯನಕ್ಕೆ ಒಂದು ಮಹತ್ವದ ಕಾರಣವೆಂದರೆ ನಾವಿರುವ ಜಗತ್ತಿನ ನಮ್ಮ ಸುತ್ತಲಿನ ಜೀವಿಗಳನ್ನು ಅರಿಯುವುದು. ಸಾಗರವು ವಿಶ್ವದ ಪ್ರತಿಶತ 71 ಭಾಗ ಆವರಿಸಿದ್ದರೂ ವಿಜ್ಞಾನಿಗಳ ಅಂದಾಜಿನ ಪ್ರಕಾರ ಇಲ್ಲಿಯವರೆಗೆ ಈ ಜೀವಿಗಳ ಬಗ್ಗೆ ಕೇವಲ 5 ಪ್ರತಿಶತದಷ್ಟು ಮಾತ್ರ ನಮಗೆ ತಿಳಿದಿದೆ. ಆದ್ದರಿಂದ ಈ ಗ್ರಹದ ಜೀವನಾಧಾರವಾದ ಸಾಗರ ಪರಿಸರ ಮತ್ತು ಜೀವಿಗಳ ಬಗ್ಗೆ ಹೆಚ್ಚಿನ ಅರಿವು ಪಡೆಯುವುದು ಅವಶ್ಯವಾಗಿದೆ. ಉದಾಹರಣೆಗೆ, ಸಾಗರಗಳ ಆರೋಗ್ಯ ಕಾಪಾಡಲು ಪರಿಸರದಲ್ಲಿನ ಬದಲಾವಣೆ, ಮಾಲಿನ್ಯ, ಹವಳದ ಬಂಡೆಗಳು, ಹೊರದೇಶದ ತಳಿಗಳ ಪ್ರವೇಶಗಳ (ಬಯೋಇನ್ವೇಷನ್) ಬಗ್ಗೆ ಅಧ್ಯಯನದ ಅವಶ್ಯಕತೆ ಇದೆ. ಮಾನವನ ಆರೋಗ್ಯದ ದೃಷ್ಟಿಯಿಂದ ಹವೆಯ ಗುಣಧರ್ಮ, ಇಂಗಾಲದ ಡೈಆಕ್ಸೈಡ್ ಪರಿಣಾಮ ಕಡಿಮೆ ಮಾಡುವಲ್ಲಿ ಸಾಗರ ಜೀವಿಗಳ ಪಾತ್ರದತ್ತ ಗಮನ ಹರಿಸಲಾಗುತ್ತಿದೆ. ಸುಸ್ಥಿರತೆ ಮತ್ತು ಜೀವವೈವಿಧ್ಯದ ಸಂರಕ್ಷಣೆಗಾಗಿ ಮೀನುಗಾರಿಕೆ ನಿಯಂತ್ರಣ, ಅಪಾಯದಂಚಿನಲ್ಲಿರುವ ತಳಿಗಳನ್ನು ಗುರುತಿಸುವುದು ಮತ್ತು ರಕ್ಷಿಸುವುದು, ಆಹಾರ ಸರಪಳಿ ಮತ್ತು ಮಾಲಿನ್ಯದ ಪರಿಣಾಮ ಇತ್ಯಾದಿಗಳ ಅಧ್ಯಯನ, ಸಂಶೋಧನ ಅಭಿವೃದ್ಧಿ ಮತ್ತು ಬದಲಿ ಸಂಪನ್ಮೂಲಗಳ ಶೋಧನೆ, ಔಷಧಿ, ಬದಲಿ ಇಂಧನ, ಇಂಧನಮೂಲಗಳ ಶೋಧ ಹೀಗೆ ಹಲವಾರು ರಂಗಗಳು ಸಾಗರ ಜೀವವಿಜ್ಞಾನದ ಅಧ್ಯಯನದ ಅವಿಭಾಜ್ಯ ಅಂಗಗಳಾಗಿವೆ.

ಹಿಂದೊಂದು ಕಾಲದಲ್ಲಿ ಅಸಾಧ್ಯವಾದ ಸಾಗರ ಅಂತರಾಳ ಶೋಧನೆ ಇತ್ತೀಚಿನ ದಿನಗಳಲ್ಲಿ ಹೊಸ ತಂತ್ರಜ್ಞಾನ ಬಳಕೆಯಿಂದ ಸಾಧ್ಯವಾಗಿದೆ. ಬಲೆಯನ್ನು ವಿವಿಧ ಆಳಗಳಲ್ಲಿ ಯಾಂತ್ರಿಕ ದೋಣಿಯಿಂದ ಎಳೆದು ವಿವಿಧ ಜೀವಿಗಳ ಚಲನವಲನ ಮತ್ತು ಲಭ್ಯತೆಯ ಅಧ್ಯಯನ ಮಾಡಲಾಗುತ್ತದೆ. ಅತಿ ಚಿಕ್ಕ ಕಣ್ಣಿನ ಬಲೆ ಹೆಣೆದು ಎಳೆದು ಸಮುದ್ರದಲ್ಲಿನ ತೇಲಾಡುವ ಸೂಕ್ಷ್ಮ ಜೀವಿಗಳ (ಪ್ಲಾಂಕ್‌ಟನ್) ಅಧ್ಯಯನ ಮತ್ತು ಅವುಗಳ ಉಳಿದ ಜೀವಿಗಳ ನಡುವಿನ ಸಂಬಂಧ ಅಧ್ಯಯನ ಸಾಧ್ಯವಾಗಿದೆ. ಸಮುದ್ರದ ನೀರಿನ ಮತ್ತು ಸಮುದ್ರತಲದಲ್ಲಿನ ರಾಡಿ ಮಣ್ಣನ್ನು (ಸೆಡಿಮೆಂಟ್ಸ್) ಪ್ರಯೋಗಾಲಯದಲ್ಲಿ ಬೆಳೆಸಿ ಅಲ್ಲಿರುವ ಅಣುಜೀವಿಗಳ ಅಧ್ಯಯನ ಮಾಡಿ ಅವುಗಳಿಂದ ಜೀವಿಗಳ ಮೂಲ, ವಿಕಾಸ, ಮಾನವನಿಗೆ ಅವಶ್ಯಕ ಔಷಧಿಗಳಿಗಾಗಿ ಸಂಶೋಧನೆ ನಡೆಸಲಾಗುತ್ತಿದೆ. ದೂರದಿಂದ ನಿಯಂತ್ರಿಸಬಹುದಾದ ವಾಹನಗಳನ್ನು ಸಮುದ್ರದಾಳಕ್ಕೆ ಕಳಿಸಿ, ಯಂತ್ರಮಾನವನ ಸಹಾಯದಿಂದ ಸಮುದ್ರತಳದಲ್ಲಿ ನಡೆಯುವ ಪರಿವರ್ತನೆಗಳನ್ನು ವೀಕ್ಷಿಸಿ, ಅಪಾಯದ ಮುನ್ಸೂಚನೆ ಪಡೆಯಬಹುದು ಹಾಗೂ ನಿರಂತರ ಪಡೆಯಬಹುದಾದ ಚಿತ್ರಗಳ ಸಹಾಯದಿಂದ ಅಲ್ಲಿನ ಜೀವಿಗಳು, ಪರಿಸರ, ಜೀವಿಗಳ ನಡವಳಿಕೆ ಮತ್ತು ಅವುಗಳ ಸಹಾಯದಿಂದ ಜೀವವಿಕಾಸದ ವಿಧಾನ ಅರಿಯಬಹುದಾಗಿದೆ. ಸಮುದ್ರ ತಲದಲ್ಲಿ ಕೃತಕ ಜೀವಾವಾಸ ನಿರ್ಮಿಸಿ ಸಂಶೋಧನೆ ಕೈಗೊಳ್ಳಬಹುದು. ಹೊಸ ಯಂತ್ರಗಳ ಬಳಕೆಯಿಂದ ಆಳ ಸಮುದ್ರದಲ್ಲಿನ ಜೀವಿಗಳ ನಡವಳಿಕೆ ಅಧ್ಯಯನ ಮಾಡಬಹುದಾಗಿದೆ. ಸಮುದ್ರದಾಳದ ಮಣ್ಣಿನಲ್ಲಿ ಹುದುಗಿದ್ದ ಪಳೆಯುಳಿಕೆಗಳನ್ನು ಹುಡುಕಿ ತೆಗೆದು ಜೀವವಿಕಾಸದ ತಪ್ಪಿರುವ ಕೊಂಡಿಗಳನ್ನು ಹುಡುಕಲಾಗುತ್ತಿದೆ. ಬಾಹ್ಯಾಕಾಶದಲ್ಲಿನ ಉಪಗ್ರಹಗಳ ಸಹಾಯದಿಂದ ಸಾಗರದಾಳದ ಉಷ್ಣತೆ, ಬಣ್ಣದಲ್ಲಿನ ಬದಲಾವಣೆ, ನೀರಿನ ಪ್ರವಾಹದ ಚಲನವಲನ, ಅವುಗಳ ಪ್ರಮಾಣ, ಮಾಲಿನ್ಯ ಪ್ರಮಾಣ, ಹವಾಮಾನದಲ್ಲಿನ ಒತ್ತಡದಲ್ಲಿನ ಬದಲಾವಣೆ, ನೈಸರ್ಗಿಕ ಪ್ರಕೋಪಗಳ ಮುನ್ಸೂಚನೆ ಇತ್ಯಾದಿ, ಹೀಗೆ ಹಲವು ವಿಷಯಗಳ ಅಧ್ಯಯನ ಸಾಧ್ಯ. ಸಾಗರಜೀವವಿಜ್ಞಾನ ಒಂದು ವಿಶಾಲ ವಿಜ್ಞಾನವಾಗಿದ್ದು ಇತ್ತೀಚಿನ ದಿನಗಳಲ್ಲಿ ವಿಶ್ವದ ವಿಜ್ಞಾನಿಗಳು ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ.

(ವಿ.ಎನ್.ಎನ್.)

**ಸಾಗರವಾಸಿ ಪ್ರಾಣಿಗಳು:** ಸಮುದ್ರ ಮಹಾಸಾರಗಳಲ್ಲಿ ವಾಸಿಸುವ ಪ್ರಾಣಿ ಸಂಕುಲ. ಭೂಮಿಯ ಶೇ. 75 ಭಾಗ ಜಲಾವೃತವಾಗಿದ್ದು ಅದರ 95 ಭಾಗ ಸಮುದ್ರ ಮಹಾಸಾಗರಳಿವೆ. ಸಾಗರದಲ್ಲಿ ಬಹಳಷ್ಟು ಪ್ರಾಣಿಗಳು ವಾಸಿಸುತ್ತವೆ. ಉದಾ: ಏಡಿಗಳು, ಹಲವು ಜಾತಿಯ ಮೀನುಗಳು, ತಿಮಿಂಗಲಗಳು, ಜೆಲ್ಲಿಫಿಶ್, ಹವಳ (ಕೋರಲ್).

ಸಾಗರ ಜೀವಿಗಳನ್ನು ಪ್ರಮುಖವಾಗಿ ಸೂಕ್ಷ್ಮ ಜೀವಿಗಳು, ಪ್ರಾಣಿಗಳು ಮತ್ತು ಸಸ್ಯಗಳೆಂಬ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಅಣುಜೀವಿಗಳು, ವೈರಸ್, ಕಣ್ಯೆಕಜೀವಿಗಳು ಮತ್ತು ಪಾಚಿಗಳು ಸೂಕ್ಷ್ಮ ಜೀವಿಗಳು. ಸಾಗರದ ಜೈವಿಕ ವ್ಯವಸ್ಥೆಯಲ್ಲಿ ಅಣುಜೀವಿಗಳು ಪ್ರಮುಖ ಸ್ಥಾನ ಹೊಂದಿವೆ. ಅವು ಸಮುದ್ರದಲ್ಲಿನ ಜೀವರಾಶಿಯ ಪ್ರತಿಶತ 98 ರಷ್ಟಿವೆ. ಅಲ್ಲದೇ ಆಹಾರ ಚಕ್ರದಲ್ಲಿ ಪ್ರಾಥಮಿಕ ಹಂತದ ಪರಿಸರ ವ್ಯವಸ್ಥೆಯಲ್ಲಿ ಆಹಾರೋತ್ಪನ್ನ ಸಾಮರ್ಥ್ಯವನ್ನು ಹೊಂದಿದೆ. ಅನೇಕ ಸೂಕ್ಷ್ಮ ಜೀವಿಗಳು ಆರ್ಥಿಕ ಸೂಕ್ಷ್ಮ ಜೀವಿಗಳು ಆರ್ಥಿಕ ಮಹತ್ವ ಪಡೆದಿವೆ.

ಮೀನುಗಳು ಸಾಗರವಾಸಿ ಪ್ರಾಣಿಗಳಲ್ಲಿ ಮುಖ್ಯವಾದುವು. ಮೀನುಗಾರಿಕೆಯು ಮಾನವನ ವಿಕಾಸದ ಜೊತೆಗೆ ಬೆಳೆದು ಬಂದ ಒಂದು ಜೀವನೋಪಾಯವಾಗಿದೆ. ಬೆಳೆಯುತ್ತಿರುವ ಸಸಾರಜನಕಯುಕ್ತ ಪದಾರ್ಥಗಳ ಬೇಡಿಕೆಯನ್ನು ಪೂರೈಸುವ ಸಲುವಾಗಿ ಸಾಗರ ಮೀನುಗಾರಿಕೆಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಜೀವವೈವಿಧ್ಯದ ದೃಷ್ಟಿಯಿಂದ ಸಾಗರ ಪರಿಸರ ಅಪೂರ್ವವಾದುದು. ಅತ್ಯಂತ ಸುಂದರ, ಬಣ್ಣ ಬಣ್ಣದ ಮೀನುಗಳ ನೆಲೆಯಾಗಿದೆ. ಅವುಗಳ ಜೀವಾವಾಸ, ಆಹಾರ ಪಡೆಯುವ ವಿಧಾನ, ಸಂತಾನೋತ್ಪತ್ತಿ ಮತ್ತು ಶತ್ರುಗಳಿಂದ ರಕ್ಷಣೆಗಾಗಿ ಆಕಾರ, ರೂಪ, ಬಣ್ಣ ಮತ್ತು ನಡವಳಿಕೆಯಲ್ಲಿ ವೈವಿಧ್ಯವನ್ನು ಕಾಣುತ್ತೇವೆ. ಹೀಗಾಗಿ ಸಾಗರದಾಳದಲ್ಲಿ ಈ ಜೀವಿಗಳನ್ನು ನೋಡುವುದೇ ಒಂದು ಅನುಭವ. ನಿರಂತರ ಹೊಸ ತಳಿಗಳ ಶೋಧ ನಡೆದಿದ್ದರೂ ತಳಿಗಳ ಸಂಖ್ಯೆ 25,000 ಕ್ಕೂ ಹೆಚ್ಚಿವೆಯೆನ್ನಲಾಗಿದೆ. ಅವುಗಳ ಆಕಾರ, ವೈವಿಧ್ಯತೆ, ವಿಕಾಸಗಳ ಅಧ್ಯಯನ ಒಂದೆಡೆಯಾದರೆ ಉಪಯುಕ್ತ ತಳಿಗಳ ಕೃಷಿ ಯತ್ನ ಇನ್ನೊಂದೆಡೆ. ಹೀಗೆ ಸಾಗರ ಜೀವಿಗಳಲ್ಲಿ ಮೀನುಗಳು ಹೆಚ್ಚಿನ ಜನರನ್ನು ತಮ್ಮೆಡೆ ಆಕರ್ಷಿಸುತ್ತವೆ.

ಸಾಮಾನ್ಯವಾಗಿ ಸಾಗರದ ಜೀವಿಗಳನ್ನು ಮೀನುಗಳೆನ್ನುವುದು ರೂಢಿ. ಆದರೆ ಮೀನುಗಳು ಬೆನ್ನೆಲುಬುಳ್ಳ ಪ್ರಾಣಿಗಳಾಗಿದ್ದು ಈಜುರೆಕ್ಕೆ ಮತ್ತು ಕಿವಿರು ಹೊಂದಿರುತ್ತವೆ. ಆಹಾರವಾಗಿ ಬಳಸುವ ಏಡಿ, ಸೀಗಡಿ, ಬಳಚು ಇತ್ಯಾದಿ ಪ್ರಾಣಿಗಳನ್ನು ಮತ್ತು ನಕ್ಷತ್ರ ಮೀನು, ಜೆಲ್ಲಿ ಫಿಶ್ ಗಳನ್ನು ಸಹ ಮೀನುಗಳೆಂದು ಕರೆಯುವುದು. ಮೀನುಗಳು ತಮ್ಮ ದೇಹದ ಮಾಂಸಖಂಡ ಬಳಸಿ ಬಹಳಷ್ಟು ದೂರ ಸಂಚರಿಸಬಲ್ಲವು. ಬ್ಲೂ ಟ್ಯುನಾ ಮೀನು ಗಂಟೆಗೆ 90 ಕಿಮೀ ವೇಗದಲ್ಲಿ ಚಲಿಸಿದರೆ ಕುದುರೆ ಮೀನು ಅತಿ ನಿಧಾನವಾಗಿ ಅಂದರೆ ಗಂಟೆಗೆ 2 ಕಿಮೀ ಮೈಲಿ ವೇಗದಲ್ಲಿ ಚಲಿಸುತ್ತವೆ.

ಮೀನುಗಳಲ್ಲಿ ಕೆಲವು ತಳಿಗಳು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಜೊತೆಗೂಡಿ ಆಹಾರ ಹುಡುಕುತ್ತ ಸದಾ ಅಲೆಯುತ್ತಿರುತ್ತವೆ. ಕರ್ನಾಟಕದ ಕರಾವಳಿಯಲ್ಲಿ ಬಂಗಡೆ (ಮ್ಯಾಕೆರೆಲ್) ಮತ್ತು ತಾರಲೆ (ಸಾರ್ಡಿನ್) ಈ ಜಾತಿಗೆ ಸೇರಿದವಾಗಿದ್ದು ಅವು ಮೀನುಗಾರರ ಆರ್ಥಿಕ ವ್ಯವಸ್ಥೆಯ ತಳಹದಿಯಾಗಿವೆ. ಅಂತೆಯೇ ಕರ್ನಾಟಕ ಕರಾವಳಿ ತೀರವನ್ನು ಬಂಗುಡೆ ತೀರ ಎಂದು ಕರೆಯುವುದು ವಾಡಿಕೆ. ಇದೇ ರೀತಿ ಮಹಾರಾಷ್ಟ್ರದಲ್ಲಿ ಬಾಂಬೆ ಡಕ್, ಲಕ್ಷದ್ವೀಪದಲ್ಲಿ ಟ್ಯುನಾ ಬಹಳ ಮುಖ್ಯ ಮೀನುಗಳು. ಕೆಲವು ಮೀನುಗಳು ಸಂತಾನೋತ್ಪತ್ತಿಗಾಗಿ ಸಮುದ್ರದಿಂದ ಸಾವಿರಾರು ಮೈಲಿ ದೂರದ ನದಿ ಉಗಮ ಸ್ಥಾನಗಳಿಗೆ ವಲಸೆ ಹೋಗುತ್ತವೆ. ಅವುಗಳಲ್ಲಿ ಸಾಲ್ಮನ್ ಮತ್ತು ಈಲ್ ಪ್ರಮುಖ, ಅಲ್ಲದೆ ಕೆಲವು ಮೀನುಗಳು ಅಳಿವೆ ಪ್ರದೇಶಗಳಿಗಾಗಿ ಸಾಗಿ ಮೊಟ್ಟೆ ಇಡುತ್ತವೆ. ಇಲ್ಲಿ ಮರಿಗಳು ಬೆಳೆದು ಪುನಹ ಸಮುದ್ರ ಸೇರುತ್ತವೆ. ಅಂತೆಯೇ ಅಳಿವೆ ಮತ್ತು ಹಿನ್ನೀರಿನ ಪ್ರದೇಶವನ್ನು ಮೀನುಗಳ ಬಾಲವಾಡಿ (ನರ್ಸರಿ) ಎಂದು ಕರೆಯಲಾಗುತ್ತದೆ. ಶಾರ್ಕ್ ಮತ್ತು ರೇ ಮೀನುಗಳು ಮರಿಗಳಿಗೆ ನೇರವಾಗಿ ಜನ್ಮ ನೀಡುತ್ತವೆ. ಕುದುರೆ ಮೀನು ತನ್ನ ಮರಿಗಳನ್ನು ಕಾಂಗರೂನಂತೆ ಹೊಟ್ಟೆಯ ಚೀಲದಲ್ಲಿ ಇಟ್ಟು ಬೆಳೆಸುತ್ತವೆ. ಕೆಲವು ಮೀನುಗಳು ಮೊಟ್ಟೆಯನ್ನು ಬಾಯಲ್ಲಿ ಇಟ್ಟು ರಕ್ಷಿಸಿದರೆ ಇನ್ನು ಕೆಲವು ಗೂಡು ಮಾಡಿ ಮೊಟ್ಟೆ ಇಟ್ಟು ಕಾಯುತ್ತಿರುತ್ತವೆ. ಈ ರೀತಿ ಹಲವು ವೈವಿಧ್ಯಗಳು ಸಾಗರಜೀವಿಗಳ ಎಲ್ಲ ಪಂಗಡಗಳಲ್ಲೂ ಇವೆ.

ಸಾಗರ ಸೌಂದರ್ಯ ಹೆಚ್ಚಿಸುವ ಜೀವಿಗಳಲ್ಲೇ ಅತಿ ಮುಖ್ಯವಾದವು ಹವಳದ ಬಂಡೆ ಮತ್ತು ಕಣಿವೆಗಳು. ವಿಶಾಲವಾದ ಹವಳದ ಕಣಿವೆಗಳು ಭೂಪ್ರದೇಶವನ್ನು ನೈಸರ್ಗಿಕ ಪ್ರಕೋಪದಿಂದ ರಕ್ಷಿಸುತ್ತವೆ ಅಷ್ಟೇ ಅಲ್ಲ, ಅವು ವಿವಿಧ ಸಾಗರ ಜೀವಿಗಳಿಗೆ ನೆಲೆ ನೀಡುತ್ತವೆ. ಸಾವಿರಾರು ವರ್ಷಗಳವರೆಗೆ ಸೂಕ್ಷ್ಮ ಕುಟುಕುಕಣವಂತಗಳು ನಿರ್ಮಿಸಿದ ವಿಶಾಲ ಬಂಡೆಗಳಿವು. ಇವುಗಳಲ್ಲಿ ಬಹಳಷ್ಟು ಅತಿ ಸೂಕ್ಷ್ಮ ಜೀವಿಗಳಾಗಿದ್ದು ಅವನ್ನು ನಾವು ಮುಟ್ಟಿದರೂ ಸಾಯುತ್ತವೆ ಮತ್ತು ಬಂಡೆಗಳನ್ನು ಬಿಟ್ಟು ಹೋಗುತ್ತವೆ. ಮಾಲಿನ್ಯ, ಹವಳದ ಬಂಡೆಗಳನ್ನು ವಿವಿಧ ಕಾರಣಗಳಿಗಾಗಿ ಉಪಯೋಗಿಸುವುದು, ಪ್ರವಾಸೋದ್ಯಮದಿಂದಾಗುವ ಅಡಚಣೆ ಹೀಗೆ ಹಲವು ಕಾರಣಗಳಿಂದ ಹವಳದ ಬಂಡೆ

ಮತ್ತು ಅಲ್ಲಿ ವಾಸಿಸುವ ಜೀವಿಗಳು ಅಪಾಯ ಎದುರಿಸುತ್ತಿವೆ. ಆಸ್ಟ್ರೇಲಿಯಾ ಖಂಡದ ಪೂರ್ವಭಾಗದಲ್ಲಿನ ದಿ ಗ್ರೇಟ್ ಬ್ಯಾರಿಯರ್ ರೀಫ್ ಸುಮಾರು 1500 ಮೈಲಿಗಳಷ್ಟು ಉದ್ದವಾಗಿದ್ದು ನೈಸರ್ಗಿಕ ಪ್ರಕೋಪಗಳಿಂದ ಈ ರಾಷ್ಟ್ರವನ್ನು ರಕ್ಷಿಸುತ್ತಿವೆ.

ಭರತ ಮತ್ತು ಇಳಿತ ರೇಖೆಗಳ ನಡುವಿನ ಪ್ರದೇಶದಲ್ಲಿ. ಹಲವು ಜೀವಾವಾಸಗಳಿವೆ. ಈ ಪ್ರದೇಶದಲ್ಲೂ ಜೀವಿಗಳು ವೈವಿಧ್ಯಮಯವಾಗಿವೆ. ಹಲವು ರೀತಿಯ ಏಡಿಗಳು ಇಲ್ಲಿವೆ. ಅಲ್ಲದೆ ವಿವಿಧ ಬಣ್ಣಗಳ ಕಪ್ಪೆಚಿಪ್ಪುಗಳನ್ನು ಕಾಣಬಹುದು. ಕಲ್ಲು ಬಂಡೆಗಳ ಪ್ರದೇಶಗಳಲ್ಲಿ ಸಮುದ್ರ ಸವತೆ, ನಕ್ಷತ್ರ ಮೀನು, ಅಷ್ಟಪಾದಿ, ಕುಟುಕು ಕಣವಂತಗಳು, ಸ್ಪಂಜುಗಳು ಹೀಗೆ ಜೀವಿಗಳ ಸಮುದಾಯವೇ ಇಲ್ಲಿದೆ. ಸಾಗರ ಜೀವಿಗಳ ಅಧ್ಯಯನ ಮಾಡ ಬಯಸುವ ಪ್ರಾಣಿವಿಜ್ಞಾನ ವಿದ್ಯಾರ್ಥಿಗಳಿಗೆ ಈ ಪ್ರದೇಶ ಒಂದು ಸ್ವರ್ಗವಿದ್ದಂತೆ. ಇಲ್ಲಿಂದ ಸ್ವಲ್ಪ ಮುಂದೆ ಆಳವಲ್ಲದ ನೀರಿನಲ್ಲಿ ಮೀನುಗಾರರ ಬಲೆಯಲ್ಲಿ ಮೀನುಗಳ ಜೊತೆಗೆ ಬಹಳಷ್ಟು ಸಾಗರಜೀವಿಗಳನ್ನು ಕಾಣಬಹುದು. ಅವುಗಳಲ್ಲೊಂದು ಜೆಲ್ಲಿ ಫ಼ಿಶ್. ಇವು ಛತ್ರಿಯಾಕಾರದವಾಗಿದ್ದು ತಮ್ಮಲ್ಲಿ ಸಾಕಷ್ಟು ವಿಷವುಳ್ಳ ಜೀವಕೋಶ (ನಿಮಟೊಸಿಸ್ಟ್) ಹೊಂದಿರುತ್ತವೆ. ಆಸ್ಟ್ರೇಲಿಯಾದ ಕರಾವಳಿಯಲ್ಲಿ ಇವು ಮಾನವರನ್ನು ಕೊಂದ ಘಟನೆಗಳಿವೆ. ಸಾಗರತೀರದಲ್ಲಿ ಸಮುದ್ರಸ್ನಾನ ಮಾಡಬಯಸುವವರು ಈ ಪ್ರಾಣಿಯ ಬಗ್ಗೆ ಎಚ್ಚರದಿಂದ ಇರಬೇಕಾಗಿದೆ.

ಸಾಗರದ ಮಾನವನ ಅತೀ ಸಮೀಪದ ಸಂಬಂಧಿಗಳೂ ಮತ್ತು ಬುದ್ಧಿವಂತ ಪ್ರಾಣಿಗಳೆಂದರೆ ಡಾಲ್ಫಿನ್ (ಹಂದಿ ಮೀನುಗಳು), ತಿಮಿಂಗಿಲಗಳು, ಸೀಲ್, ಸೀ ಲೈನ್ ಇತ್ಯಾದಿ ನೀಲ ತಿಮಿಂಗಲು (ಬ್ಲೂ ವೇಲ್) ವಿಶ್ವದಲ್ಲಿರುವ ಜೀವಿಗಳಲ್ಲೇ ಅತಿ ಬೃಹದಾಕಾರವಾಗಿದ್ದು ಅವು ಸುಮಾರು 35 ಮೀ ಉದ್ದಕ್ಕೆ ಬೆಳೆದು ಅಂದಾಜು 200 ಟನ್ ಅಂದರೆ 50 ಆನೆಗಳ ತೂಕ ಇವೆ ಇವು ಸಾಗರ ಸ್ತನಿಗಳು. ಇವು ಬೃಹದಾಕರದಲ್ಲಿ ಬೆಳೆದು ಹಲವಾರು ಬದಲಾವಣೆಗಳಿಂದ ನೀರಿನಲ್ಲಿ ಬದುಕುತ್ತಿವೆ ಮತ್ತು ಈಗ ಅಪಾಯದಂಚಿನಲ್ಲಿವೆ. ಇನ್ನೊಂದು ಅಪಾಯ ಎದುರಿಸುತ್ತಿರುವ ಪ್ರಾಣಿಯೆಂದರೆ ಕಡಲಾಮೆ. ಸಾಗರದಲ್ಲಿರುವ ಅತ್ಯಂತ ಪುರಾತನ ಪ್ರಾಣಿಗಳಾದ ಕಡಲಾಮೆಗಳನ್ನು ಮಾನವನು ಮೊಟ್ಟೆ, ಮಾಂಸ ಚಿಪ್ಪುಗಳಿಗಾಗಿ ಕೊಲ್ಲುವುದರಿಂದ ಮತ್ತು ಅವು ಮೊಟ್ಟೆ ಇಡುವ ಪ್ರದೇಶಗಳ ನಾಶದಿಂದ ಅವು ವಿನಾಶದಂಚಿಗೆ ಸಾಗಿವೆ. ಹಸಿರು ಕಡಲಾಮೆ ಮೊಟ್ಟೆ ಇಡಲು ಸುಮಾರು 24,000 ಕಿಮೀ ದೂರ ಸಂಚರಿಸುತ್ತದೆ. ಪೆಂಗ್ವಿನ್, ಸೀ ಗಲ್ ನಂತ ಹಕ್ಕಿಗಳು, ಅತ್ಯಂತ ವಿಷಕಾರಕ ಹಾವುಗಳು, ಸಮುದ್ರ ಮೊಸಳೆ ಸಹ ಸಾಗರವನ್ನು ತಮ್ಮ ವಾಸ ಸ್ಥಾನವನ್ನಾಗಿಸಿಕೊಂಡಿವೆ.

ಅಸಾಧ್ಯ ಒತ್ತಡ, ಕತ್ತಲೆ, ಕನಿಷ್ಠ ಉಷ್ಣತೆ, ಆಹಾರದ ವಿರಳತೆ ಹೀಗೆ ಹಲವು ಅಡಚಣೆಗಳ ನಡುವೆಯೂ, ಆಳ ಸಮುದ್ರದಲ್ಲಿ ವಿಚಿತ್ರ ಪ್ರಾಣಿಗಳು ವಾಸಿಸುತ್ತವೆ. ಜೈವಿಕ ಪ್ರಕಾಶ ನಿರ್ಮಿಸಿ ಬೇಟೆಯಾಡುವುದು, ವಿಶಾಲ ಬಾಯಿ ಹೊಂದಿ ತಮಗಿಂತ ದೊಡ್ಡ ಪ್ರಾಣಿ ಹಿಡಿದು ತಿನ್ನುವುದು, ಹಲವಾರು ತಿಂಗಳು ಆಹಾರವಿಲ್ಲದೇ ಬದುಕುವುದು ಇಲ್ಲಿನ ಜೀವಿಗಳ ವೈಶಿಷ್ಟ. ಹೀಗೆ ಸಾಗರವು ಕಣ್ಯೆಕ ಜೀವಿಗಳಿಂದ ಸ್ತನಿಯವರೆಗೆ ಬಹುತೇಕ ಎಲ್ಲ ಜಾತಿಯ ಪ್ರಾಣಿಗಳನ್ನು ತನ್ನ ಮಡಿಲಲ್ಲಿ ಅನಾದಿ ಕಾಲದಿಂದಲೂ ರಕ್ಷಿಸುತ್ತಿದೆ. (ವಿ.ಎನ್.ಎನ್.)

**ಸಾಮಾಜಿಕ ಕೀಟಗಳು:** ವ್ಯವಸ್ಥಿತವಾದ ಸಾಮಾಜಿಕ (ಸಂಘ) ಜೀವನ ನಡೆಸುವ ಕೀಟಗಳು. ಕೀಟಸಂಕುಲದ ಐಸೋಪ್ಟರ ಮತ್ತು ಹೈಮನಾಪ್ಟರ ಗಣಕ್ಕೆ ಸೇರಿವೆ. ಹೈಮನಾಪ್ಟರ ಗಣದಲ್ಲಿ 1,30,000 ಪ್ರಭೇದಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಏಪಿಸ್ ಜಾತಿಯ ಮತ್ತು ವೆಸ್ಪಾ (ವೆಸ್ಪಾಯ್ಡಿಯ) ಜಾತಿಯ ಕೀಟಗಳು ಸಾಮಾಜಿಕ ಜೀವನಕ್ಕೆ ಹೆಸರಾಗಿವೆ.

ಇವುಗಳ ದೇಹ ಮೂರು ಭಾಗಗಳಿಂದಾಗಿದೆ– ತಲೆ, ಎದೆ ಮತ್ತು ಉದರ. ತಲೆಯಲ್ಲಿ ಒಂದು ಜೊತೆ ಕುಡಿಮೀಸೆಗಳಿವೆ. ಕಣ್ಣು ತುಂಬಾ ದೊಡ್ಡದು ಮತ್ತು ಮುಂದಲೆಯ ಪಾರ್ಶ್ವ (ಎಡ ಮತ್ತು ಬಲ) ಭಾಗದಲ್ಲಿವೆ. ಹರಿತವಾದ ದವಡೆಗಳು, ಸಸ್ಯಗಳಿಂದ ಕೋಶರಸ ಅಥವಾ ಹೂವಿನ ಮಕರಂದ ಹೀರಲು ಅನುಕೂಲವಾಗುವಂತಹ ಬಾಯಿಯ ವದನಾಂಗಗಳಿವೆ. ಎದೆ ಭಾಗದಲ್ಲಿ ಪ್ರೋತೊರ‍್ಯಾಕ್ಸ್, ಮೀಸೋತೊರ‍್ಯಾಕ್ಸ್ ಮತ್ತು ಮೇಟತೊರ‍್ಯಾಕ್ಸ್‌ಗಳೆಂಬ ಮೂರು ಖಂಡಗಳಿವೆ. ಪ್ರತಿ ಖಂಡದಲ್ಲಿ ಒಂದು ಜೊತೆ ಕಾಲುಗಳಿವೆ. ಎರಡು ಜೊತೆ ಪಾರದರ್ಶಕ ಅಥವಾ ಮಿತಪಾರದರ್ಶಕ ರೆಕ್ಕೆಗಳಿವೆ. ಮುಂದಿನ ರೆಕ್ಕೆಗಳು ಗಾತ್ರದಲ್ಲಿ ಹಿಂದಿನ ರೆಕ್ಕೆಗಳಿಗಿಂತ ಚಿಕ್ಕವು. ಹಿಂಬದಿಯ ಕಾಲುಗಳು ವಿಶೇಷವಾಗಿ ಕೆಲವು ಪ್ರಭೇದದ ಕೀಟಗಳಲ್ಲಿ (ಉದಾ: ಜೇನ್ನೊಣ) ಮಾರ್ಪಾಡಾಗಿವೆ. ಉದರದ ಭಾಗವು 9 ರಿಂದ 11 ಖಂಡಗಳಿಂದಾಗಿದೆ. ಆದರೆ, ಸ್ಪಷ್ಟವಾಗಿ 7 ರಿಂದ 8 ಅಥವಾ 9 ಖಂಡಗಳು ಕಾಣಿಸುತ್ತವೆ. ಉದರದ ತುದಿಯಲ್ಲಿ ಮೊನಚಾದ ಮುಳ್ಳು ವಿಷಗ್ರಂಥಿಯ ಜೊತೆ ಇದೆ.

ಸಾಮಾಜಿಕ ಕೀಟಗಳಲ್ಲಿ ರೂಪ ವೈವಿಧ್ಯತೆ (ಪಾಲಿಮಾರ್ಫಿಸಂ) ಉಂಟು. ಪ್ರತಿ ಕುಟುಂಬದಲ್ಲಿ ವಿವಿಧಾಕಾರದ ಸದಸ್ಯ ಕೀಟಗಳಿವೆ. ಗಂಡು ಮತ್ತು ಹೆಣ್ಣು ಕೀಟಗಳು ಸಂತಾನೋತ್ಪತ್ತಿಯಲ್ಲಿ ಭಾಗವಹಿಸುತ್ತವೆ. ಇದಲ್ಲದೆ ಕೆಲಸಗಾರ, ಸೈನಿಕ, ವೀಕ್ಷಕ (ಅಲ್ಯೆಟರ್), ಆಹಾರ ಸಂಗ್ರಾಹಕ (ಪೊರೇಜರ್) ಇತ್ಯಾದಿ ಬಗೆಯ ಬಂಜೆ ಕೀಟಗಳಿವೆ. ಇವು ಜೀವನ ಪೂರ್ತಿ ಸೇವಕರಂತೆ ಹೆಣ್ಣು (ರಾಣಿ) ಕೀಟ ನಿರ್ದೇಶಿಸಿದ ಕೆಲಸಗಳನ್ನು ನಿರ್ವಹಿಸುತ್ತವೆ. ಸಾಮಾಜಿಕ ಕೀಟಗಳ ಬಹುತೇಕ ಕುಟುಂಬದಲ್ಲಿ ಹೆಣ್ಣು ಕೀಟವೇ ಸರ್ವ ನಿಯಂತ್ರಕಿ.

ಕೀಟಗಳ ಸಾಮಾಜಿಕ ಜೀವನದಲ್ಲಿ ಹಲವು ವಿಶೇಷ ಗುಣಗಳಿವೆ;

1. ವಯಸ್ಸಿಗನುಗುಣವಾಗಿ ನಿರ್ವಹಿಸುವ ಕೆಲಸ ಮತ್ತು ವಿವಿಧ ಬಗೆಯ ಸದಸ್ಯರಿಗೆ ವ್ಯವಸ್ಥಿತವಾಗಿ ಕೆಲಸದ ಹಂಚಿಕೆ (ಡಿವಿಷನ್ ಆಫ್ ಲೇಬರ್).
2. ಹೆಣ್ಣು (ರಾಣಿ) ಕೀಟದ ಮುಖಂಡತ್ವ (ಫೀಮೇಲ್ ಡಾಮಿನೇಟೆಡ್ ಫ್ಯಾಮಿಲಿ)
3. ಹೆಣ್ಣು (ರಾಣಿ) ಕೀಟದಲ್ಲಿ ಉದರದ ಮಾರ್ಪಾಟು (ಫಿಸಿಯೊಗ್ಯಾಸ್ಟ್ರಿಸಿಟಿ).
4. ಹೆಣ್ಣು (ರಾಣಿ) ಕೀಟದ ಭಾರೀ ಸಂತಾನ ಸಾಮರ್ಥ್ಯ.
5. ಪ್ರತಿ ಕುಟುಂಬದಲ್ಲಿ ಫಲವತ್ತಾದ ಒಂದೇ ಹೆಣ್ಣು (ರಾಣಿ) ಕೀಟಕ್ಕೆ ವಾಸಿಸಲು ಅವಕಾಶ ಮತ್ತು ಮೊಟ್ಟೆಗಳನ್ನಿಡುವ ಅಧಿಕಾರ.
6. ಗಂಡು ಮತ್ತು ಹೆಣ್ಣು ಕೀಟಗಳಿಗೆ ಮಾತ್ರ ಸೀಮಿತವಾದ ಸಂತಾನ ಕ್ರಿಯೆ.
7. ವಿವಿಧ ಕೆಲಸ ನಿರ್ವಹಿಸಲು ಬೃಹತ್ ಸಂಖ್ಯೆಯ ಲಿಂಗರಹಿತ (ಬಂಜೆ) ಕೀಟಗಳ ಸೃಷ್ಟಿ.
8. ಅಗತ್ಯಕ್ಕನುಗುಣವಾಗಿ ಹೆಣ್ಣು (ರಾಣಿ) ಕೀಟದ ಕಾಮ ತೃಷೆ ಈಡೇರಿಸಲು ಬೇಕಾಗುವ ಗಂಡು ಕೀಟಗಳನ್ನು ಗೂಡಿನಲ್ಲಿ ಕಾಪಾಡುವುದು (ಉದಾ : ಗೆದ್ದಲು ಕುಟುಂಬದಲ್ಲಿ ಒಂದು ಅಥವಾ ಎರಡು, ಜೇನ್ನೊಣಗಳ ಕುಟುಂಬದಲ್ಲಿ ಹಲವು ಗಂಡು (ಡ್ರೋನ್ಸ್) ಕೀಟಗಳು; ಇರುವೆ ಮತ್ತು ಕಣಜ ಕೀಟಗಳಲ್ಲಿ ಸಹ ನೂರಾರು ಗಂಡು ಕೀಟಗಳು).
9. ಬಹು ಸಂಖ್ಯೆಯ ಸದಸ್ಯರೊಳಗೆ ಒಗ್ಗಟ್ಟನ್ನು ಕಾಪಾಡಲು ರಾಸಾಯನಿಕ ದ್ರವ್ಯ (ಫಿರೊಮೋನ್ಸ್) ಸ್ರವಿಸುವ ಗುಣ ಕೆಲಸಗಾರ ಮತ್ತು ಸೈನಿಕ ಕೀಟಗಳಿಗೆ ಸೀಮಿತ.
10. ಲಿಂಗರಹಿತ ಕೀಟಗಳ ಸೃಷ್ಟಿಗೆ ರಾಸಾಯನಿಕ ದ್ರವ್ಯ (ಕ್ವೀನ್ ಸಬ್‌ಸ್ಟೆನ್ಸ್) ಸ್ರವಿಸುವ ಗುಣ ರಾಣಿ ಕೀಟಗಳಿಗೆ ಸೀಮಿತ.
11. ವಿವಿಧ ಸದಸ್ಯರ ದೇಹದಲ್ಲಿ ಮಾರ್ಪಾಡು.
12. ಅಗತ್ಯಕ್ಕನುಗುಣವಾಗಿ ಲಿಂಗರಹಿತ ಮತ್ತು ಲಿಂಗವುಳ್ಳ ಕೀಟಗಳ ಸೃಷ್ಟಿ.

ಈ ಎಲ್ಲಾ ಗುಣ ವಿಶೇಷತೆಗಳು ಎಲ್ಲಾ ಸಾಮಾಜಿಕ ಕೀಟಗಳಲ್ಲಿ ಒಂದೇ ತರಹವಿಲ್ಲ. ಸೂಕ್ಷ್ಮ ರೀತಿಯಲ್ಲಿ ಕೆಲವು ವಿಭಿನ್ನತೆಗಳಿವೆ. ಈ ವಿಭಿನ್ನತೆ ಪ್ರಭೇದ ಮತ್ತು ಜಾತಿಗನುಗುಣವಾಗಿದೆ.

ಸಾಮಾಜಿಕ ಕೀಟಗಳಲ್ಲಿರುವ ರಾಸಾಯನಿಕ ಸಂಜ್ಞೆಗಳು: ಕುಟುಂಬದೊಳಗಿರುವ ಸಹಸ್ರಾರು ಸದಸ್ಯರ ನಡುವೆ ಒಗ್ಗಟ್ಟನ್ನು ಕಾಪಾಡಲು ಈ ಕೀಟಗಳು ರಾಸಾಯನಿಕ ದ್ರವ್ಯಗಳನ್ನು ಸ್ರವಿಸುತ್ತವೆ. ಇವುಗಳನ್ನು ಫಿರೊಮೋನ್‌ಗಳು ಎನ್ನುವರು. ಕೆಲಸಗಾರ ಕೀಟಗಳ ಉದರದ ತುದಿಯಲ್ಲಿರುವ ನಸ್ನೋವ್ ಗ್ರಂಥಿಯಿಂದ ಫಿರೊಮೋನ್ ಸ್ರವಿಸಲ್ಪಡುತ್ತದೆ. ಈ ರಾಸಾಯನಿಕ ದ್ರವ್ಯವು ಆಹಾರ ಇರುವಿಕೆ ಬಗ್ಗೆ ಸೂಚಿಸುತ್ತದೆ. ಉದಾ: ಜೇನ್ನೊಣಗಳಲ್ಲಿ ಆಹಾರ ಇರುವ ದೂರ, ಪ್ರಮಾಣ ಮತ್ತು ಗುಣಮಟ್ಟದ ಬಗ್ಗೆ ಕೆಲಸಗಾರ ಕೀಟಗಳು ಆಹಾರ ಸಂಗ್ರಾಹಕ ಜೇನ್ನೊಣಗಳಿಗೆ ಈ ರಾಸಾಯನಿಕ ದ್ರವ್ಯದ ಸಂಜ್ಞೆಯ ಮೂಲಕ ತಿಳಿಸುತ್ತವೆ.

ರಾಣಿ ಕೀಟ ಪ್ರಥಮ ಮಿಲನ ಹೊಂದಲು ತನ್ನ ದವಡೆಗಳಲ್ಲಿರುವ ಮ್ಯಾಂಡಿಬುಲಾರ್ ಗ್ರಂಥಿಯಿಂದ ರಾಸಾಯನಿಕ ದ್ರವ ಪಸರಿಸಿ ಗಂಡು ಕೀಟವನ್ನು ಆಕರ್ಷಿಸುತ್ತದೆ. ಇದೇ ಗ್ರಂಥಿ ಸ್ರವಿಸುವ ಇನ್ನೊಂದು ರಾಸಾಯನಿಕ ದ್ರವವಾದ ಕ್ವೀನ್ಸ್ ಸಬ್‌ಸ್ಟೆನ್ಸ್‌ಅನ್ನು ಸೇವಿಸಿದ ಕೆಲಸಗಾರ ಕೀಟಗಳ ಲಿಂಗಾಣುಗಳ ಬೆಳವಣಿಗೆ ಕುಂಠಿತವಾಗುತ್ತದೆ. ಕೆಲಸಗಾರ ಕೀಟಗಳ ಮ್ಯಾಂಡಿಬುಲಾರ್ ಗ್ರಂಥಿಗಳು ಸ್ರವಿಸುವ ಫಿರೊಮೋನ್ ಯಾವುದಾದರೂ ತೊಂದರೆ ಬಂದಾಗ ಅಥವಾ ಶತ್ರುಗಳ ಆಕ್ರಮಣ ನಡೆದಾಗ ಕುಟುಂಬದ ಸದಸ್ಯರ ರಕ್ಷಣೆ ಮಾಡಲು ಎಲ್ಲಾ ಸದಸ್ಯ ಕೀಟಗಳನ್ನು

ಎಚ್ಚರಿಸಿ ಶತ್ರುಗಳ ವಿರುದ್ಧ ಹೋರಾಡಲು ಹುರಿದುಂಬಿಸುತ್ತದೆ. ಈ ರೀತಿ ರಾಸಾಯನಿಕ ಸಂಜ್ಞೆಗಳ ಮೂಲಕ ವೈರಿಗಳ ಅತಿಕ್ರಮಣ ತಡೆಯುತ್ತದೆ.

ಗೆದ್ದಲುಗಳಲ್ಲಿ ಸಾಮಾಜಿಕ ಜೀವನ: ಗೆದ್ದಲುಗಳು ಐಸೋಪ್ಟರ ಗಣದ ಟರ್‌ಮೈಟಿಡೆ ಕುಟುಂಬಕ್ಕೆ ಸೇರಿವೆ. ಪೆಲಿಯೋಜೊಯಿಕ್ ಯುಗದಲ್ಲಿ ಬದುಕಿದ್ದ ಕ್ರಿಪ್ಟೋಸಿರ್ಕಸ್ ಪಂಕ್ಚುಲೇಟಸ್ ಕೀಟ ಗೆದ್ದಲುಗಳ ಪೂರ್ವಜ. ಜಗತ್ತಿನಲ್ಲಿ ಸುಮಾರು 2300 ಕ್ಕಿಂತ ಹೆಚ್ಚು ಗೆದ್ದಲುಗಳ ಪ್ರಭೇದಗಳಿವೆ. ರೂನವಾಲ್ ಮತ್ತು ವರ್ಮ (1977) ಭಾರತ ಉಪಖಂಡದಲ್ಲಿ ಸುಮಾರು 22 ಪ್ರಭೇದಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಟರ್‌ಮೈಟಿನೆ, ಎಪಿಟರ್‌ಮೈಟಿನೆ, ಮ್ಯಾಕ್ರೊಟರ್‌ಮೈಟಿನೆ ಉಪಕುಟುಂಬದ ಸದಸ್ಯರುಗಳ ಬಗ್ಗೆ, ಅವುಗಳ ಸಾಮಾಜಿಕ ಜೀವನದ ಬಗ್ಗೆ ಆಳವಾದ ಅಧ್ಯಯನ ಮಾಡಲಾಗಿದೆ.

ಈಗ್ಗೆ ಇನ್ನೂರೈವತ್ತು ದಶಲಕ್ಷ ವರ್ಷಗಳಿಂದ ಭೂಮಿಯ ಮೇಲೆ ವಿಕಾಸ ಹೊಂದಿ, ಯಶಸ್ವಿಯಾಗಿ ಬದುಕಿ ಸಾಮಾಜಿಕ ಜೀವನ ನಡೆಸುವ ಗೆದ್ದಲುಗಳು ಸಂಘ ಜೀವಿಗಳು. ಇವುಗಳನ್ನು ಗೌಪ್ಯ ಜೀವನ (ಕ್ರಿಪ್ಟೊಬಯೋಟಿಕ್ ಜೀವನ) ದ ರುವಾರಿಗಳು ಎನ್ನುವರು. ಇವು ಶ್ವೇತ ವರ್ಣದವು. ದೇಹ ಮೃದುವಾಗಿರುವುದರಿಂದ ಬಿಳಿ ಇರುವೆಗಳೆನ್ನುವರು.

ಪ್ರತಿ ಗೆದ್ದಲು ಕುಟುಂಬದಲ್ಲಿ ಒಂದು ರಾಣಿ ಗೆದ್ದಲು ಇರುತ್ತದೆ. ಇಡೀ ಕುಟುಂಬದ ಅಳಿವು-ಉಳಿವು ಈ ರಾಣಿ ಗೆದ್ದಲಿನ ಮೇಲೆ ಅವಲಂಬಿತವಾಗಿದೆ. ಲಕ್ಷಾಂತರ ಸಂಖ್ಯೆಯ ಸದಸ್ಯ ಗೆದ್ದಲುಗಳು ಒಂದು ಕುಟುಂಬದಲ್ಲಿರುತ್ತವೆ. ಇಂತಹ ಬೃಹತ್ ಕುಟುಂಬದಲ್ಲಿ ರಾಣಿ ಗೆದ್ದಲು (ಹೆಣ್ಣು) ಮತ್ತು ರಾಜ ಗೆದ್ದಲು (ಗಂಡು)ಗಳೇ ಪ್ರಧಾನವಾಗಿರುತ್ತವೆ. ಹೆಣ್ಣುಗೆದ್ದಲು ಕುಟುಂಬದ ಸದಸ್ಯರೆಲ್ಲರಿಗಿಂತ ದೊಡ್ಡದು. ಗಂಡು ಗೆದ್ದಲು ಸುಮಾರು 1.50 ರಿಂದ 3 ಮಿಮೀ ಅಗಲ ಮತ್ತು 6.5 ರಿಂದ 7. ಮಿಮೀ ಉದ್ದದ ದೇಹ ಹೊಂದಿದೆ. ಹೆಣ್ಣು ಗೆದ್ದಲು ಬೆಳೆದು ಪ್ರಾಯಕ್ಕೆ ಬಂದಮೇಲೆ ಗಂಡು ಗೆದ್ದಲಿನ ಜೊತೆ ಪ್ರಣಯ ನೃತ್ಯ (ನಪ್ಷಿಯಲ್ ಫ್ಲೈಟ್) ಮಾಡಿ ಅನಂತರ ಮಿಲನ ಹೊಂದುತ್ತದೆ. ರೆಕ್ಕೆ ಕಳಚಿ ತೇವಾಂಶಯುಕ್ತ ಮಣ್ಣಿನಲ್ಲಿ ಗಂಡು ಮತ್ತು ಹೆಣ್ಣು ಗೆದ್ದಲುಗಳು ಮೊದಲು ಸಣ್ಣಗೂಡು ಕಟ್ಟುತ್ತವೆ. ಹೆಣ್ಣು ಗೆದ್ದಲು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತದೆ. ಗೆದ್ದಲು ಮರಿಗಳು ಬೆಳೆದ ಮೇಲೆ ಗೂಡು ನಿರ್ಮಿಸುವ, ಆಹಾರ ಹುಡುಕುವ ಪ್ರಕ್ರಿಯೆಗಳಿಗೆ ಹೆಣ್ಣುಗೆದ್ದಲು ಮಾರ್ಗದರ್ಶನ ನೀಡುತ್ತದೆ. ಅನಂತರ, ಹೆಣ್ಣು (ರಾಣಿ) ಗೆದ್ದಲು ತನ್ನ ದೇಹದ ಉದರದ ಗಾತ್ರವನ್ನು ಹೆಚ್ಚಿಸಿಕೊಳ್ಳುತ್ತದೆ. ಈ ಕ್ರಿಯೆಗೆ ಫಿಸಿಯೋಗ್ಯಾಸ್ಟ್ರಿಸಿಟಿ ಎನ್ನುವರು. ಮಾಂಸದ ಮುದ್ದೆಯಂತಿರುವ ರಾಣಿಗೆದ್ದಲು ಮೊಟ್ಟೆಯಿಡುವ ಯಂತ್ರವಾಗಿ ಮಾರ್ಪಾಡುಗೊಳ್ಳುತ್ತದೆ. ಪ್ರತಿದಿನ ಕನಿಷ್ಠ 3 ಸಾವಿರ ಮೊಟ್ಟೆಗಳನ್ನಿಡುತ್ತಾ ಗೂಡಿನಲ್ಲಿ ಸದಸ್ಯರ ಸಂಖ್ಯೆ ವೃದ್ಧಿಸುತ್ತದೆ. ಈ ರೀತಿ ತನ್ನ ಜೀವಿತಾವಧಿಯಲ್ಲಿ ಲಕ್ಷಾಂತರ ಮೊಟ್ಟೆಗಳನ್ನಿಟ್ಟು ಬೃಹತ್ ಕುಟುಂಬದ ಉದಯಕ್ಕೆ ಕಾರಣವಾಗುತ್ತದೆ. ಮೊಟ್ಟೆಗಳಿಂದ ಕೆಲಸಗಾರ ಮತ್ತು ಸೈನಿಕ ಗೆದ್ದಲುಗಳು ಹುಟ್ಟುತ್ತವೆ. ಇವುಗಳ ಸಂಖ್ಯೆ ಕುಟುಂಬದ ಅವಶ್ಯಕತೆ ಮತ್ತು ರಾಣಿ ಗೆದ್ದಲಿನ ನಿಯಂತ್ರಣಕ್ಕೊಳಪಟ್ಟಿದೆ.

ಕೆಲಸಗಾರ ಗೆದ್ದಲು ಮತ್ತು ಸೈನಿಕ ಗೆದ್ದಲುಗಳು ಬಂಜೆ ಕೀಟಗಳು. ಕುಟುಂಬದ ಹಲವು ಕೆಲಸಗಳನ್ನು ಮಾಡುವ ಮೂಲಕ ಯಶಸ್ವಿ ಸಾಮಾಜಿಕ ಜೀವನಕ್ಕೆ ಕಾರಣವಾಗಿವೆ. ಕೆಲಸಗಾರ ಗೆದ್ದಲುಗಳು 4 ರಿಂದ 5 ಮಿಮೀ ಉದ್ದ ಮತ್ತು 1.5 ರಿಂದ 2 ಮಿಮೀ ಅಗಲವಾದ ದೇಹ ಹೊಂದಿವೆ. ಇವು ಕುಟುಂಬದ ಕುಶಲ ಕರ್ಮಿಗಳು.

ಗೆದ್ದಲುಗೂಡು (ಹುತ್ತ): ಆಂಗ್ಲ ಭಾಷೆಯಲ್ಲಿ ಟರ್‌ಮೈಟೋರಿಯಂ ಅಥವಾ ಮೌಂಡ್ ಎನ್ನುವರು. ಇದು ಗೆದ್ದಲುಗಳ ವಾಸಕ್ಕೆಂದು ಮಣ್ಣಿನಿಂದ ನಿರ್ಮಿಸಿದ ಭದ್ರಕೋಟೆ. ಸೂಕ್ಷ್ಮ ಮಣ್ಣಿನ ಕಣಗಳನ್ನು ಕೆಲಸಗಾರ ಗೆದ್ದಲುಗಳು ತಮ್ಮ ಜೊಲ್ಲಿನಲ್ಲಿ ಕಲಸಿ, ಕಾಂಕ್ರೀಟ್‌ನಂತೆ ಮಾಡಿ ಹುತ್ತ ಕಟ್ಟುತ್ತವೆ. ಹುತ್ತದ ವಿನ್ಯಾಸ ಅದ್ಭುತವಾಗಿದೆ. ಸುಮಾರು 3-4.5 ಮೀ ಉದ್ದ ಮತ್ತು ಅಗಲ, 1 ಮೀ ಆಳದಿಂದ ಹುತ್ತ ದೊಡ್ಡದಾಗಿರುತ್ತದೆ. ಪ್ರಭೇದಕ್ಕನುಗುಣವಾಗಿ ಹುತ್ತದ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ. ಕೆಲವು ಪ್ರಭೇದದ ಗೆದ್ದಲುಗಳು ಕಟ್ಟುವ ಹುತ್ತಗಳ ಬಾಹ್ಯ ವಿನ್ಯಾಸ ವಿಭಿನ್ನವಾಗಿದೆ. ಎತ್ತರದ ಗೋಪುರಗಳಂತೆ, ತೆರೆದಿಟ್ಟ ಕೊಡೆಗಳಂತೆ, ಬಹು ಮಹಡಿಗಳ ಕಟ್ಟಡದಂತೆ, ತೆಳ್ಳನೆಯ ಗೋಡೆಯಂತೆ ಇರುತ್ತದೆ. ಆಂತರ್ಯದಲ್ಲಿ ಸೂಕ್ಷ್ಮರಂಧ್ರಗಳನ್ನೊಳಗೊಂಡ ಸುರಂಗಮಾರ್ಗ (ಗ್ಯಾಲರಿಗಳು) ಗಳಿದ್ದು ಇವು ಅವಶ್ಯಕ ವಾತಾವರಣ ಕಾಪಾಡಲು ಸಹಾಯಕವಾಗಿರುತ್ತವೆ. ಗೂಡಿನೊಳಗೆ $25^0$-$28^0$ ಸೆ ಉಷ್ಣಾಂಶ, ಶೇ. 96-99 ತೇವಾಂಶ ಮತ್ತು ಪ್ರಾಣವಾಯು ವರ್ಷದ ಎಲ್ಲಾ ಋತುಗಳಲ್ಲಿ ಒಂದೆ ಪರಿಮಿತಿಯಲ್ಲಿರುವಂತೆ ಗೂಡನ್ನು ಕಟ್ಟುತ್ತವೆ. ಬಿಸಿ ಗಾಳಿ ಹೊರ ಹೋಗಲು, ಶುದ್ಧಗಾಳಿ ಪ್ರವೇಶಿಸಲು, ಶತ್ರು ಜೀವಿಗಳಿಂದ ರಕ್ಷಣೆ ಪಡೆಯಲು, ಅಸಂಖ್ಯಾತ ಸದಸ್ಯರನ್ನು ಸರಿಯಾಗಿ ಕಾಪಾಡಲು ಬೇಕಾದ ಸ್ಥಳಾವಕಾಶ ಮುಂತಾದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಭದ್ರವಾದ ಮಣ್ಣಿನ ಗೂಡನ್ನು ಕಟ್ಟುವುದು ಕೆಲಸಗಾರ ಗೆದ್ದಲುಗಳ ಜವಾಬ್ದಾರಿ. ಆದುದರಿಂದ ಕೆಲಸಗಾರ ಗೆದ್ದಲುಗಳನ್ನು ಕೀಟತಜ್ಞರು ಕೀಟಲೋಕದ ತಾಂತ್ರಿಕ ಅಭಯಂತರ ರೆನ್ನುವರು.



ಗೆದ್ದಲುಗೂಡಿನ ಸೀಳು ನೋಟ

ಕುಟುಂಬದೊಳಗೆ ಜೀವಿಸುವ ವಿವಿಧ ವಯಸ್ಸಿನ ಸದಸ್ಯರ ಅಗತ್ಯಕ್ಕನುಗುಣವಾಗಿ ಮತ್ತು ಆಹಾರ ಶೇಖರಣೆಗೆಂದು ಪ್ರತ್ಯೇಕವಾದ ಕೋಣೆಗಳನ್ನು ಗೂಡಿನಲ್ಲಿ ಕಾಣಬಹುದು. ಮರಿ ಸಾಕಣೆ ಕೋಣೆ (ಬ್ರೂಡಿಂಗ್ ಛೇಂಬರ್), ಆಹಾರ ದಾಸ್ತಾನಿನ ಭಾಗ - ಶಿಲೀಂಧ್ರ ತೋಟ (ಫಂಗಸ್ ಗಾರ್ಡನ್) ಮತ್ತು ರಾಜ (ಗಂಡು) ಮತ್ತು ರಾಣಿ (ಹೆಣ್ಣು) ಗೆದ್ದಲುಗಳ ಕೋಣೆ - ಅಂತಃಪುರ (ರಾಯಲ್ ಛೇಂಬರ್) ಗೂಡಿನಲ್ಲಿರುತ್ತವೆ. ರಾಯಲ್ ಛೇಂಬರ್ 2.3 ರಿಂದ 2.5 ಸೆಂಮೀ ದೊಡ್ಡದು. ಗೂಡಿನ ಎಲ್ಲಾ ಭಾಗಗಳಿಂದ ಸುರಂಗ ಮಾರ್ಗದ ಮುಖಾಂತರ ಸಂಚರಿಸಲು ಮುಕ್ತ.

ಗೆದ್ದಲುಗಳ ಆದರ್ಶ ಕುಟುಂಬದ ಹಾಗೂ ಸಾಮಾಜಿಕ ಜೀವನದ ಯಶಸ್ಸಿಗೆ ಹಲವು ಕಾರಣಗಳಿವೆ. ಈ ಕೀಟಗಳ ಮುಂದಲೆಯ ಭಾಗದಲ್ಲಿರುವ ಕುಡಿಮೀಸೆ ಸಾಮಾಜಿಕ ಜೀವನ ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇದು ಅತ್ಯುತ್ತಮ ಮಾರ್ಗದರ್ಶನ ನೀಡುವ ಪ್ರೇರಕ. ದೇಹದಿಂದ ವಸರುವ ರಾಸಾಯನಿಕ ದ್ರವ (ಫಿರೊಮೋನ್)ವನ್ನು ಗ್ರಹಿಸಿ, ಕುಡಿಮೀಸೆಯ ಸಹಾಯದಿಂದ ಸಂಜ್ಞೆಯ ಮೂಲಕ ಗೆದ್ದಲುಗಳು ಕೆಲಸ ಕಾರ್ಯಗಳನ್ನು ಕೈಗೊಳ್ಳುತ್ತವೆ. ಕೆಲಸಗಾರ ಕೀಟಗಳ ಉದರದ ತುದಿಯಲ್ಲಿರುವ ನಸ್ನೋವ್ ಗ್ರಂಥಿಯೂ ಸಹ ಫಿರೋಮೋನ್‌ಗಳನ್ನು ವಸರಿಸುತ್ತದೆ. ರಾಣಿ ಗೆದ್ದಲು ಸ್ರವಿಸುವ ಕ್ವೀನ್ ಸೆಂಟ್ (9-ಆಕ್ಸೋ ಡೆಕೊನಿಕ್ ಆಮ್ಲ) ಕೆಲಸಗಾರ ಮತ್ತು ಸೈನಿಕ ಗೆದ್ದಲುಗಳ ಜನನಾಂಗಗಳ ಬೆಳವಣಿಗೆಯನ್ನು ನಿಯಂತ್ರಿಸಿ, ಅವುಗಳನ್ನು ಬಂಜೆ ಕೀಟಗಳನ್ನಾಗಿಸುತ್ತದೆ. ಇದರಿಂದ ಈ ಕೀಟಗಳು ತಮ್ಮ ಜೀವನದುದ್ದಕ್ಕೂ ಸಂತಾನ ಹೊರತುಪಡಿಸಿ ಇತರೆ ಕೆಲಸಗಳಲ್ಲಿ ಭಾಗವಹಿಸುತ್ತವೆ.

ಗೆದ್ದಲು ಕುಟುಂಬದಲ್ಲಿ ಕೆಲಸಗಾರ ಗೆದ್ದಲುಗಳ ಸಂಖ್ಯೆ ಹೆಚ್ಚು. ಶೇ. 75 ರಿಂದ 80 ರಷ್ಟಿರುತ್ತದೆ. ಹೆಸರಿಗೆ ತಕ್ಕಂತೆ ಗೂಡಿನ ಎಲ್ಲಾ ಕೆಲಸ ಮಾಡುತ್ತವೆ. ಇವುಗಳ ಕೆಲಸದ ಚಟುವಟಿಕೆ ವಯಸ್ಸಿಗನುಗುಣವಾಗಿದೆ. ರಾಣಿ-ರಾಜ ಗೆದ್ದಲು ವಾಸಿಸುವ ರಾಯಲ್ ಛೇಂಬರ್‌ನಿಂದ ಮೊಟ್ಟೆಗಳನ್ನು ಶುಶ್ರೂಷ ಕೋಣೆಗೆ ಹೊತ್ತು

ತರುತ್ತವೆ. ಶುಶ್ರೂಷ ಕೋಣೆಯಲ್ಲಿ ಬೆಳೆಯುತ್ತಿರುವ ಮೊಟ್ಟೆಗಳ ಮತ್ತು ಮರಿ ಗೆದ್ದಲುಗಳ ಆರೈಕೆ ಮಾಡುತ್ತವೆ. ರಾಣಿ ಮತ್ತು ರಾಜ ಗೆದ್ದಲುಗಳಿಗೆ ಆಹಾರ ಪೂರೈಸುತ್ತವೆ. ಗೂಡಿನಿಂದ ಹೊರಗೆ ಹೋಗಿ ಸೆಲ್ಯುಲೋಸ್‌ಯುಕ್ತ ಪದಾರ್ಥವನ್ನು



ರೆಕ್ಕೆಯುಳ್ಳ ಗಂಡು

ತಂದು ಆಹಾರ ಶೇಖರಿಸುವ ಕೋಣೆಯಲ್ಲಿಡುತ್ತವೆ. ಆಹಾರ ಶೇಖರಣೆ ಕೋಣೆ (ಫಂಗಸ್ ಗಾರ್ಡನ್) ಯಲ್ಲಿ ಶಿಲೀಂಧ್ರಗಳನ್ನು ಬೆಳೆಸಿ, ಅದರಲ್ಲಿ ಆಹಾರ ಕೆಡದಂತೆ ಬಹುದಿನಗಳವರೆಗೆ ಶೇಖರಿಸುತ್ತವೆ. ಶತ್ರುಗಳಿಂದ ಗೂಡು ಹಾನಿಯಾದಾಗ ಗೂಡಿನ ರಿಪೇರಿ ಕೆಲಸ ಮತ್ತು ಗೂಡಿನೊಳಗೆ ಸ್ವಚ್ಛತೆ ಕಾಪಾಡುವುದು ಈ ಕೆಲಸಗಾರ ಗೆದ್ದಲುಗಳೇ. ವಯಸ್ಸಿಗನುಗುಣವಾಗಿ ಈ ಕೀಟಗಳು ಕೈಗೊಳ್ಳುವ ಕೆಲಸ ಕೀಟ ಜಗತ್ತಿನಲ್ಲೇ ಅದ್ಭುತವಾಗಿದೆ.

ಸಿಪಾಯಿ ಗೆದ್ದಲು ನೀಳವಾದ ದೇಹ ಹೊಂದಿದ್ದು ಕೆಲಸಗಾರ ಗೆದ್ದಲುಗಳಿಗಿಂತ ದೊಡ್ಡದು. ಇದು ಶ್ವೇತವರ್ಣದಿಂದ ಕೂಡಿದ ಬಂಜೆ ಕೀಟ. ಇದಕ್ಕೆ ಹರಿತವಾದ, ಗಟ್ಟಿಯಾದ ದವಡೆಗಳಿವೆ. ಇದರ ಕೆಲಸ ಕುಟುಂಬದ ರಕ್ಷಣೆ. ಮುಂದಲೆಯಲ್ಲಿರುವ ಫ್ರಾಂಟಲ್ ಗ್ರಂಥಿಗಳಿಂದ ಫಾರ್ಮಿಕ್ ಆಮ್ಲ ವಸರಿಸುತ್ತದೆ. ಇದರಿಂದ ಶತ್ರು ಕೀಟಗಳಿಂದ ಗೆದ್ದಲುಗಳನ್ನು ರಕ್ಷಿಸುತ್ತದೆ. ಕುಟುಂಬದೊಳಗೆ ಪ್ರವೇಶಿಸುವ ಬೇರೆ ಪ್ರಭೇದದ ಕೀಟಗಳನ್ನು ನಿಯಂತ್ರಿಸುತ್ತದೆ. ಶತ್ರು ಕೀಟ, ಪ್ರಾಣಿ, ಪಕ್ಷಿಗಳಿಂದ ಆಪತ್ತು ಬಂದಾಗ ರಾಸಾಯನಿಕ ದ್ರವವನ್ನು ಸ್ರವಿಸುವ ಮೂಲಕ ತಮ್ಮದೇ ಆದಂತಹ ಸಂಜ್ಞೆಯ ಮುಖಾಂತರ ಗೂಡಿನಲ್ಲಿನ ಎಲ್ಲಾ ನಿವಾಸಿಗಳಿಗೂ ವೈರಿಗಳ ಆಕ್ರಮಣದ ಬಗ್ಗೆ ತಿಳಿಸುತ್ತದೆ. ಶತ್ರುಗಳೆದುರು ಹೋರಾಡಲು ಹುರಿದುಂಬಿಸುತ್ತದೆ. ಸೈನಿಕ ಗೆದ್ದಲುಗಳು ಗುಂಪುಗುಂಪಾಗಿ ಶತ್ರುಗಳ ಮೇಲೆ ಆಕ್ರಮಣ ಮಾಡಿ, ವೈರಿಗಳನ್ನು ಗೂಡಿನಿಂದ ಹೊರಗೆ ಹಾಕಲು ಯತ್ನಿಸುತ್ತವೆ. ಹೀಗೆ ಸದಾ ಚಟುವಟಿಕೆಯಿಂದ ಕೂಡಿದ ವಿವಿಧ ಸದಸ್ಯರನ್ನೊಳಗೊಂಡ ಗೆದ್ದಲುಗಳ ಬದುಕು ಬಾಹ್ಯ ಪ್ರಪಂಚದ ಗಮನಕ್ಕೆ ಬಾರದ ಗೌಪ್ಯವಾದ ಸಾಮಾಜಿಕ ಜೀವನ.

ಜೇನ್ನೊಣಗಳಲ್ಲಿ ಸಾಮಾಜಿಕ ಜೀವನ: ಜೇನ್ನೊಣಗಳು ಸಂದಿಪದಿ ವಂಶದ ಹೈಮನಾಪ್ಟರ ಗಣದ ಏಪಿಡೆ ಕುಟುಂಬಕ್ಕೆ ಸೇರಿವೆ. ಏಪಿಸ್ ಜಾತಿಗೆ ಸೇರಿಸಲಾಗಿದೆ. 20 ಸಾವಿರಕ್ಕಿಂತ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಸಾಮಾಜಿಕ ಜೀವನ ನಡೆಸುವ ಸಾಕು–ಜೇನು ಕೀಟಗಳು (ಉದಾ: ಏಪಿಸ್ ಸಿರಾನ, ಏಪಿಸ್ ಇಂಡಿಕ, ಏಪಿಸ್ ಮೆಲ್ಲಿಫೆರ ಮತ್ತು ಏಪಿಸ್ ಫ್ಲೋರಿಯ) ಮತ್ತು ವನ್ಯ ಜೇನು ಕೀಟಗಳು (ಉದಾ: ಏಪಿಸ್ ಡಾರ್‌ಸೇಟ) ಪ್ರಮುಖವಾದವು. (ನೋಡಿ: ಜೇನ್ನೊಣ, ಹೆಜ್ಜೇನು)

ಇರುವೆಗಳಲ್ಲಿ ಸಾಮಾಜಿಕ ಜೀವನ: ಗೌಲ್ಡ್ ಮತ್ತು ಬೊಲ್ಟನ್ (1988) ವಿಜ್ಞಾನಿಗಳ ಪ್ರಕಾರ ವಿಶ್ವದಲ್ಲಿ 15 ಸಾವಿರಕ್ಕೂ ಹೆಚ್ಚು ಬಗೆಯ ಪ್ರಭೇದಗಳಿವೆ. ಮೈಬಣ್ಣಕ್ಕನುಗುಣವಾಗಿ ಕೆಂಪು, ಕರಿ, ಬಿಳಿ ಇರುವೆಗಳೆಂದು ಮತ್ತು ಜೇನು ಇರುವೆಗಳೆಂದು ವಿಂಗಡಿಸಿದ್ದಾರೆ. ಕೆಲವು ಪ್ರಭೇದದ ಇರುವೆಗಳು ಭೂವಾಸಿಗಳಾಗಿದ್ದರೆ (ಉದಾ: ಕೆಂಪು ಮತ್ತು ಕರಿ ಇರುವೆಗಳು) ಕೆಲವು ಮರದ ರೆಂಬೆ–ಕೊಂಬೆಗಳಲ್ಲಿ ಗೂಡು ಕಟ್ಟಿಕೊಂಡು ವಾಸಿಸುತ್ತವೆ. ಹೈಮನಾಪ್ಟರ ಗಣದ ಫಾರ್‌ಮೀಸಿಡೆ ಕುಟುಂಬದ ಇರುವೆಗಳು ಸಾಮಾಜಿಕ ಜೀವನಕ್ಕೆ ಹೆಸರಾಗಿವೆ. ಇವುಗಳ ದೇಹರಚನೆ ವೈವಿಧ್ಯಮಯವಾಗಿದೆ. ದೇಹವು ನಾನಾಬಗೆಯ ಬಣ್ಣದಿಂದ ಕೂಡಿದ್ದು ರೆಕ್ಕೆಗಳನ್ನು ಹೊಂದಿಲ್ಲ. ಪೂರ್ಣ ಜೀವಿತಾವಧಿಯಲ್ಲಿ ಅಲ್ಪಕಾಲದ ಪ್ರೌಢಾವಸ್ಥೆಯ ಸಮಯದಲ್ಲಿ ಕೆಲವು ಪ್ರಭೇದದ ಇರುವೆಗಳು ರೆಕ್ಕೆಗಳನ್ನು ಹೊಂದಿರುತ್ತವೆ. ಪ್ರಾಯಕ್ಕೆ ಬಂದ ಗಂಡು ಮತ್ತು ಹೆಣ್ಣುಗಳು ಪ್ರಣಯವಾಡಿ, ಸಂಭೋಗಿಸಿದನಂತರ ರೆಕ್ಕೆಗಳನ್ನು ಕಳಚಿಕೊಂಡು ರೆಕ್ಕೆರಹಿತವಾಗುತ್ತವೆ. ಗೂಡಿನೊಳಗೆ ಅನೇಕ ಬಗೆಯ, ವಿವಿಧ ದೇಹಾಕೃತಿ ಹೊಂದಿರುವ ಇರುವೆಗಳಿವೆ.

ಜೇನು ಇರುವೆ: ಇದರ ವೈಜ್ಞಾನಿಕ ಹೆಸರು ಮಿಮಿಕೊಸಿಸ್ಟಸ್ ಹಾರ್ಟೆಡಿಯೊರಮ್. ಫಾರ್‌ಮೀಸಿಡೆ ಕುಟುಂಬದಲ್ಲಿ ವಿಚಿತ್ರ ದೇಹ ರಚನೆಗೆ ಹೆಸರಾಗಿದೆ. ತಲೆ, ಎದೆ ಭಾಗವು ಸಾಮಾನ್ಯವಾಗಿದ್ದು ಉದರ ಭಾಗ ತುಂಬಾ ದೊಡ್ಡದಾಗಿರುತ್ತದೆ. ಹೊರ ಕವಚವು ರಬ್ಬರಿನಂತೆ ಹಿಗ್ಗುವುದರಿಂದ ಹೊಟ್ಟೆಯ ಸುತ್ತಳತೆ ದೈತ್ಯಾಕಾರವಾಗಿದೆ. ಪರಿಸರದಲ್ಲಿನ ವಿವಿಧ ಜಾತಿಯ ಸಸ್ಯಗಳಲ್ಲಿ ದೊರೆಯುವ ಮಧು ಮತ್ತು ಮಕರಂದವನ್ನು ಹೀರಿ ಬದುಕುತ್ತದೆ. ಮಧುವನ್ನು ಬೃಹತ್ ಗಾತ್ರದ ಹೊಟ್ಟೆಯಲ್ಲಿ ಶೇಖರಿಸಿಡುವುದರಿಂದ ಇದನ್ನು ಜೇನು ಇರುವೆ ಎನ್ನುವರು. ಈ ಜಾತಿಯಲ್ಲಿ ಕೆಲವು ಕೆಲಸಗಾರ ಇರುವೆಗಳು ಈ ರೀತಿಯ ಮಾರ್ಪಾಡು ಮಾಡಿಕೊಂಡು ಆಹಾರ ಶೇಖರಿಸುತ್ತವೆ. ತಮ್ಮ ದೇಹದಲ್ಲಿರುವ ಮಧುವನ್ನು ಇತರೆ ಸದಸ್ಯರಿಗೆ ಆಹಾರವನ್ನಾಗಿ ನೀಡುತ್ತವೆ. ಇನ್ನುಳಿದ ಸದಸ್ಯರಾದ ಗಂಡು, ಹೆಣ್ಣು ಮತ್ತು ಸಿಪಾಯಿ ಇರುವೆಗಳು ಒಟ್ಟಿಗೆ ಸೇರಿ ಸಾಮಾಜಿಕ ಜೀವನ ನಡೆಸುತ್ತವೆ.

ಕ್ರಮಟೊಗ್ಯಾಸ್ಟರ್ ಪ್ರಭೇದದ ಇರುವೆ: ಇದು ಮರದ ರೆಂಬೆ, ಕೊಂಬೆಗಳ ಮೇಲೆ ಗೂಡುಕಟ್ಟಿ ಸಾಮಾಜಿಕ ಜೀವನ ನಡೆಸುತ್ತದೆ. ಮರದ ತೊಗಟೆ, ಎಲೆ ಅಥವಾ ಸೂಕ್ಷ್ಮ ಮಣ್ಣಿನ ಕಣಗಳನ್ನು ತನ್ನ ಜೊಲ್ಲು ರಸದ ಜೊತೆ ಬೆರೆಸಿ, ಗಟ್ಟಿಯಾದ ತಟ್ಟೆಯಾಕೃತಿಯ ಬಿಲ್ಲೆಗಳನ್ನು ಮಾಡುತ್ತದೆ. ದುಂಡಾದ, ಮೊಟ್ಟೆಯಾಕಾರದ ಅಥವಾ ತಟ್ಟೆಯಾಕೃತಿಯ ಗೂಡಿನ ಹೊರ ಮೈಮೇಲೆ ಈ ಬಿಲ್ಲೆಗಳನ್ನು ಬೆಸೆದು, ಗೂಡಿನ ಗೋಡೆಯನ್ನು ಭದ್ರವಾಗಿಸುತ್ತದೆ. ಈ ಗೂಡಿನಲ್ಲಿ ವಿವಿಧ ಸದಸ್ಯರನ್ನೊಳಗೊಂಡು ವಿವಿಧ ಕೋಣೆಗಳನ್ನು ನಿರ್ಮಿಸಿಕೊಂಡು ಸಾಮಾಜಿಕ ಜೀವನ ನಡೆಸುತ್ತದೆ.

ಕೆಂಪು ಇರುವೆ : ಇದು ಓಯಿಕೊಫಿಲ್ಲ ಜಾತಿಗೆ ಸೇರಿದ ಇರುವೆ. ಮರದ ಎಲೆಗಳನ್ನು ತುಂಡರಿಸಿ, ರೇಷ್ಮೆ ದಾರದಂತಹ ಗಟ್ಟಿಯಾದ ಎಳೆಯಿಂದ ತುಂಡರಿಸಿದ ಎಲೆಗಳನ್ನು ಸೇರಿಸಿ ಗೂಡು ಕಟ್ಟಿಕೊಂಡು ಸಾಮಾಜಿಕ ಜೀವನ ನಡೆಸುತ್ತದೆ. ಸಾಮಾನ್ಯವಾಗಿ ಈ ಕೀಟವನ್ನು ಕೆಂಜಿಗ ಎನ್ನುವರು. ಇದರ ಗೂಡಿನಲ್ಲಿ ಗಂಡು, ಹೆಣ್ಣು (ಲಿಂಗವುಳ್ಳವು) ಮತ್ತು ಬಂಜೆ (ಕೆಲಸಗಾರ) ಕೀಟಗಳಿವೆ. ಅದೇ ರೀತಿ ಮಿರ್ಮಿಕೋಫೈಟ್ಸ್, ಸುಡೋಮಿರ್‌ಮೀಕ್ಸ್ ಇರುವೆಗಳು ಸಹ ಸಾಮಾಜಿಕ ಜೀವನ ನಡೆಸುತ್ತವೆ. ಇವುಗಳನ್ನು ಇರುವೆ ಸಸ್ಯಗಳೆನ್ನುವರು. ಕಾರಣ ಅಕೇಶಿಯ ಪ್ರಭೇದದ ಸಸ್ಯದ ಜೊತೆ ಇವುಗಳು ಗಾಢ ಸಂಬಂಧ ಹೊಂದಿವೆ. ಪರಸ್ಪರ ಸಹಬಾಳ್ವೆ ನಡೆಸುವುದರಿಂದ ಈ ಹೆಸರು.

ಕಣಜಗಳಲ್ಲಿ ಸಾಮಾಜಿಕ ಬದುಕು: ಕಣಜಗಳು ಹೈಮನಾಪ್ಟರ ಗಣದ ವೆಸ್ಪಿಡೆ ಕುಟುಂಬಕ್ಕೆ ಸೇರಿವೆ. 2400 ಪ್ರಭೇದಗಳನ್ನು ಗುರುತಿಸಲಾಗಿದೆ. ಈ ಕುಟುಂಬದ ಪೊಲಿಸ್ಟಿನೆ ಮತ್ತು ವೆಸ್ಪಿನೆ ಉಪಕುಟುಬದ ಕಣಜಗಳು ಸಾಮಾಜಿಕ ಜೀವನ ನಡೆಸುವ ಕೀಟಗಳು.

ಪೊಲಿಸ್ಟಿನೆ ಉಪಕುಟುಂಬದ ಕಣಜಗಳನ್ನು ಪೇಪರ್ ವ್ಯಾಸ್ಪ್‌ಗಳೆನ್ನುವರು. ವೆಸ್ಪಿನೆ ಉಪಕುಟುಂಬದಲ್ಲಿ ಹಳದಿ ಜಾಕೆಟ್ ವರ್ಣದ ಮತ್ತು ಹಾರ್ನೆಟ್ ಕಣಜಗಳಿವೆ.

ಇವು ಮರದ ಮೇಲೆ ಬೃಹತ್ ಗಾತ್ರದ ಗೂಡು ಕಟ್ಟಿ ಸಂಘ ಜೀವನ ನಡೆಸುತ್ತವೆ. ಒಂದು ಕುಟುಂಬದಲ್ಲಿ 1,00,000 ಕ್ಕಿಂತ ಹೆಚ್ಚು ಕಣಜ ಕೀಟಗಳಿರುತ್ತವೆ. ಮರದ ತೊಗಟೆಯನ್ನು ಕೊರೆದು, ತುಂಡರಿಸಿ, ದವಡೆಯಲ್ಲಿರಿಸಿಕೊಂಡು ಅಗಿಯುತ್ತವೆ. ಮರದ ತೊಗಟೆ ನುಣ್ಣಗೆ ಪುಡಿಯಾದಮೇಲೆ ಜೊಲ್ಲಿನೊಂದಿಗೆ ಬೆರೆಸಿ, ಜಿಗುಟಾದ ಕಾಗದದ ಉಂಡೆಯಿಂದ ಷಟ್‌ಭುಜಾಕೃತಿಯ ಕೋಶಗಳನ್ನು ರೂಪಿಸುತ್ತವೆ. ಈ ರೀತಿ ಷಡ್ಭುಜಾಕೃತಿಯ ಕೋಶಗಳನ್ನು ವ್ಯವಸ್ಥಿತವಾಗಿ ಅಂಟಿಸುತ್ತಾ ವೃತ್ತಾಕಾರದ ಸಾಲು ಪಂಕ್ತಿಯಲ್ಲಿ ಕೋಶಗಳನ್ನು ಜೋಡಿಸುತ್ತಾ ಅನೇಕ ಕೋಶಗಳ ಅಂತಸ್ತುಗಳನ್ನು ನಿರ್ಮಿಸುತ್ತವೆ. ಗೂಡಿನ ದ್ವಾರ ಯಾವಾಗಲೂ ಕೆಳಮುಖವಾಗಿರುತ್ತದೆ. ಮಳೆಯ ನೀರು ಗೂಡಿನೊಳಕ್ಕೆ ಹೋಗದಂತೆ ನಿಗಾ ವಹಿಸುತ್ತವೆ. ಬೇಸಿಗೆಯಲ್ಲಿ ಗೂಡಿನೊಳಗೆ ಮತ್ತು ಮೇಲೆ ನೀರು ಚಿಮುಕಿಸಿ ಏರುತ್ತಿರುವ ಉಷ್ಣಾಂಶವನ್ನು $30^0$ ಸೆ. ಗೆ ನಿಯಂತ್ರಿಸುತ್ತವೆ. ಚಳಿಗಾಲದಲ್ಲಿ ದೇಹದ ಬಿಸಿ ಹೆಚ್ಚಿಸಿ ಗೂಡಿನೊಳಗೆ ಬೆಚ್ಚನೆಯ

ವಾತಾವರಣ ಸೃಷ್ಟಿಸುತ್ತವೆ. ಇವುಗಳ ಗೂಡು ಮುಷ್ಟಿಗಾತ್ರದಿಂದ ಹಿಡಿದು ಒಂದು ಮೀ. ಉದ್ದದ ಕೊಂಬಿನಾಕಾರದಲ್ಲಿರುತ್ತದೆ. ಕೆಲವು ಪ್ರಭೇದದ ಕಣಜಗಳು ಚಿಕ್ಕದಾದ ಮಡಿಕೆ ಆಕೃತಿಯ ಗೂಡನ್ನು ಕಟ್ಟುತ್ತವೆ. ಉದಾ : ಕುಂಭಕಣಜ (ಪಾಟರ್ ವಾಸ್ಪ್). ಇವು ಸಾಮಾಜಿಕ ಕೀಟಗಳಲ್ಲ! ಸಾಮಾಜಿಕ ಕಣಜಗಳು ಮರ–ಗಿಡಗಳ ಮೇಲೆ ಸೆಲ್ಯೂಲೋಸ್‌ನಂತಹ ಪದಾರ್ಥ ಉಪಯೋಗಿಸಿ ಗೂಡು ನಿರ್ಮಿಸುತ್ತವೆ. (ಬಿ.ಎಸ್.)

**ಸಿಂಹ:** ಸ್ತನಿ ವರ್ಗದ ಐದು 'ಗರ್ಜಿಸುವ ಬೆಕ್ಕು'ಗಳ ಪೈಕಿ ಒಂದು ಪ್ರಮುಖ ಪ್ರಾಣಿ (ಲಯನ್). ಹುಲಿ, ಚಿರತೆ, ಹಿಮಚಿರತೆ ಹಾಗೂ ಅಮೆರಿಕದಲ್ಲಿ ಕಂಡುಬರುವ ಮಚ್ಚೆಯುಳ್ಳ ಜ್ಯಾಗ್ವಾರ್ ಉಳಿದ ನಾಲ್ಕು. ಪ್ಯಾಂಥೆರಾ ಲಿಯೊ ಇದರ ಶಾಸ್ತ್ರೀಯ ನಾಮ. ಸಿಂಹವನ್ನು ವನರಾಜ, ವನ್ಯಪ್ರಾಣಿಗಳ ರಾಜ ಎಂದು ಕರೆಯುತ್ತಾರೆ. ಅನಾದಿಕಾಲದಿಂದಲೂ ಇದನ್ನು ವನ್ಯಜೀವಿಯೆಂದೇ ಪರಿಗಣಿಸಲಾಗಿದೆ. ಹಿಂದೆ ಆಫ್ರಿಕ, ಯುರೋಪ್ ಹಾಗೂ ಏಷ್ಯಾಖಂಡಗಳ ಹಲವಾರು ಕಡೆ ಸಿಂಹಗಳು ವಾಸಿಸುತ್ತಿದ್ದರೂ ಇಂದು ಇವು ಮುಖ್ಯವಾಗಿ ಆಫ್ರಿಕದ ಸಹಾರ ಪ್ರದೇಶದ ದಕ್ಷಿಣ ಭಾಗ ಹಾಗೂ ಏಷ್ಯಾದ ಕೆಲವೇ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತವೆ. ಭಾರತದ ಗುಜರಾತ್ ರಾಜ್ಯದ ಗಿರ್ ರಾಷ್ಟ್ರೀಯ ಅಭಯಾರಣ್ಯದಲ್ಲಿ ಇವನ್ನು ಸಂರಕ್ಷಿಸಲಾಗುತ್ತಿದೆ. ಇದು ಉಷ್ಣವಲಯದಲ್ಲಿ ಕಂಡುಬಂದರೂ ಇವುಗಳ ಉಗಮ ಸಮಶೀತೋಷ್ಣವಲಯದಲ್ಲಿ ಆಗಿತ್ತೆಂದು ದಾಖಲೆಗಳು ತಿಳಿಸುತ್ತವೆ.

ಸಿಂಹದ ದೇಹ ಬಲಿಷ್ಠ ಮತ್ತು ದಷ್ಟಪುಷ್ಟ. ನೀಳಕಾಯಕವಾಗಿರುವುದರಿಂದ. ಕಾಡಿನಲ್ಲಿ ನಿಶ್ಯಬ್ದವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಬಲ್ಲುದು. ಪ್ರೌಢಾವಸ್ಥೆಯಲ್ಲಿ ಇದರ ತೂಕ ಸು. ೨೧೦ ಕಿಗ್ರಾಂ. ೩ ಮೀ ಉದ್ದ, ೯೦ ಸೆಂಮೀ ಎತ್ತರ ಬೆಳೆಯುತ್ತದೆ. ಸಾಮಾನ್ಯವಾಗಿ ಹೆಣ್ಣು ಸಿಂಹ ಗಾತ್ರದಲ್ಲಿ ಗಂಡಿಗಿಂತ ಸ್ವಲ್ಪ ಚಿಕ್ಕದಾಗಿರುತ್ತದೆ. (ಸು. ೭೫ ಸೆಂ.ಮೀ ಎತ್ತರ, ೧೮೦ ಕಿಗ್ರಾಂ ತೂಕ). ಗಂಡು ಸಿಂಹದ ಕುತ್ತಿಗೆ ಮೇಲೆ ಉದ್ದ ಕೂದಲು (ಕೇಸರ) ಇರುವುದರಿಂದ ಅದು ಭಯಾನಕವಾಗಿ ಕಾಣುತ್ತದೆ. ಅಲ್ಲದೇ ಹುಲಿಗಿಂತ ದೊಡ್ಡ ಗಾತ್ರದ್ದಾಗಿ ಭಾಸವಾಗುತ್ತದೆ. ಸಿಂಹದ ಮೈಯ ಬಣ್ಣ ಮರಳಿನಂತೆ ತಿಳಿಹಳದಿಯಿಂದ ಗಾಢಕಂದಿನವರೆಗೆ ಇದೆ. ಕಿವಿಗಳು ಕಪ್ಪಾಗಿದ್ದು, ತೆಳ್ಳನೆಯ ತುಪ್ಪುಳ ಮೈಯನ್ನು ಆವರಿಸಿವೆ. ಬಾಲ ಉದ್ದವಿದ್ದು ತುದಿಯಲ್ಲಿ ಕೂದಲಿನ ಒಂದು ಗುಚ್ಛವಿದೆ. ಇದರ ಬಣ್ಣ ಮೈ ಬಣ್ಣಕ್ಕಿಂತ ಗಾಢ ಕಂದು. ಮುಂಗಾಲುಗಳು ಬಲಿಷ್ಠ. ಹುಲಿಯ ಕಾಲುಗಳಿಗೆ ಹೋಲಿಸಬಹುದು. ಸಿಂಹ ಜ಼ೀಬ್ರಾದಂಥ ಪ್ರಾಣಿಯನ್ನು ತನ್ನ ಪಂಜದ ಒಂದೇ ಹೊಡೆತದಿಂದ ಕೊಲ್ಲಬಲ್ಲುದು. ಸಿಂಹವೂ ಬೆಕ್ಕಿನಂತೆ ತನ್ನ ಅಂಗಾಲಿನ ಉಗುರುಗಳನ್ನು ಹೊರಕ್ಕೆ ಚಾಚಬಲ್ಲುದು. ಹುಲಿಯಂತೆ ಜಿಗಿಯುವುದು. ಸಿಂಹ ಸು. ೩ ಮೀ ಎತ್ತರ ಮತ್ತು ೧೧ ಮೀ ಉದ್ದ ಜಿಗಿದ ದಾಖಲೆ ಉಂಟು. ಬಾಲ್ಯಾವಸ್ಥೆಯಲ್ಲಿ ಸಿಂಹ ಮರ ಏರಬಲ್ಲುದು. ಪ್ರಾಯಸ್ಥ ಸಿಂಹದ ಜಗ್ಗು (ಎಳೆತದ) ಬಲ ಸು. ೧೦ ವ್ಯಕ್ತಿಗಳ ಒಟ್ಟು ಜಗ್ಗುಬಲಕ್ಕೆ ಸಮಾನ.

ಸಿಂಹಗಳಲ್ಲಿಯ ಕೇಸರದ ವಿನ್ಯಾಸವೂ ವಿಭಿನ್ನ. ಕೆಲವೊಂದರಲ್ಲಿ ಅದು ಕೇವಲ ಮುಖದ ಅಂಚಿನಲ್ಲಷ್ಟೆ ಕಂಡುಬರಬಹುದು, ಮುಖವನ್ನು ಸಂಪೂರ್ಣವಾಗಿ ಆವರಿಸಿರಬಹುದು ಅಥವಾ ಕೇಸರವೇ ಇಲ್ಲದಿರಬಹುದು. ಅಲ್ಲದೇ ಕೆಲವೊಮ್ಮೆ ಈ ಕೇಸರ ತಲೆಯ ಮೇಲುಭಾಗ, ಕುತ್ತಿಗೆಯ ಕೆಳಭಾಗವನ್ನು ಆವರಿಸಬಹುದು. ಕೆಲವು ಸಿಂಹಗಳಲ್ಲಿ ಕೇಸರದ ಹೊರತುದಿ ಗಾಢ ಬಣ್ಣದ್ದಾಗಿದ್ದು, ಸಿಂಹಕ್ಕೆ ಗಾಂಭೀರ್ಯ ನೀಡುತ್ತದೆ. ಪ್ರಾಣಿಸಂಗ್ರಹಾಲಯದ ಪರಿಸರದಲ್ಲಿಯ ಸಿಂಹಕ್ಕೆ ನೈಸರ್ಗಿಕ ಸಿಂಹದಂತೆ ಮುಳ್ಳು, ಪೊದೆ, ಕುರುಚಲು ಪ್ರದೇಶಗಳಲ್ಲಿ ದೂರ ಸಾಗಬೇಕಿಲ್ಲವಾದ್ದರಿಂದಲೂ ತನ್ನ ಆಶ್ರಯ ಸ್ಥಾನದಲ್ಲಿ ಸಂಗಾತಿಯನ್ನೂ ಪಡೆಯನ್ನೂ ರಕ್ಷಿಸಲೂ ಇತರ ಸಿಂಹಗಳೊಡನೆ ಕಾದಾಡಬೇಕಾದ ಪರಿಸ್ಥಿತಿ ಇಲ್ಲದ್ದರಿಂದಲೂ ಅದರ ಕೇಸರ ಉದ್ದವಾಗಿರುವುದು.

ಸಿಂಹದ ಅಸ್ಥಿಪಂಜರ 'ಬೆಕ್ಕು'ಗಳಂತೆಯೇ ಇದೆ. ತಲೆಬುರಡೆ ಮಾತ್ರ ಹುಲಿಯದಕ್ಕಿಂತಲೂ ದೊಡ್ಡದು. ಕಣ್ಣುಗಳ ಬಣ್ಣ ಹಳದಿ, ದುಂಡಗಿನ ಕಣ್ಣುಗೊಂಬೆ. ಆದರೆ ಇತರ ಬೆಕ್ಕಿನ ಜಾತಿಯ ಪ್ರಾಣಿಗಳಲ್ಲಿ, ಈ ಕಣ್ಣು ಗೊಂಬೆಯಲ್ಲಿ ಒಂದು ಸೀಳಿನಂತೆ ಬಿಂಬವಿರುವುದು. ಸಿಂಹದ ದವಡೆ ಮೂಳೆಗಳು ಬಲಿಷ್ಠ, ದೃಢವಾಗಿವೆ. ನಾಲಗೆಯ ಮೇಲೆ ಚಿಕ್ಕಚಿಕ್ಕ ಗುಳ್ಳೆಯ ಆಕಾರಗಳಿವೆ. ಮಾಂಸ ಅಥವಾ ರಕ್ತ ನೆಕ್ಕಲು ಇವು ಸಹಕಾರಿ.

ಸಿಂಹಕ್ಕೆ ಯಾವುದೇ ನಿರ್ದಿಷ್ಟ ಪ್ರಜನನ ಪ್ರಾಯವಿಲ್ಲ. ಆದ್ದರಿಂದ ಅದು ವರ್ಷ ಪೂರ್ತಿ ಸಂತಾನಾಭಿವೃದ್ಧಿ ನಡೆಸಬಲ್ಲುದು. ಸಿಂಹದಲ್ಲಿ ಗರ್ಭಧಾರಣಾವಧಿ ಸು. ೧೦೫ ದಿವಸಗಳು. ಇದರ ಕೊನೆಯಲ್ಲಿ ೨ ಅಥವಾ ೩ ಮರಿಗಳನ್ನು ಈಯುತ್ತದೆ. ಕೆಲವೊಮ್ಮೆ ೬ ಮರಿಗಳೂ ಹುಟ್ಟುವುದುಂಟು. ನೈಸರ್ಗಿಕವಾಗಿ ಸಿಂಹ ೨ ವರ್ಷಗಳಿಗೊಮ್ಮೆ ಗರ್ಭಧರಿಸುತ್ತದೆ. ಪ್ರಾಣಿ ಸಂಗ್ರಹಾಲಯದಲ್ಲಿ ಪ್ರತಿವರ್ಷವೂ ಗರ್ಭ ಧರಿಸಬಲ್ಲುದು.

ಮರಿ ಹುಟ್ಟುವಾಗ ಅದರ ಉದ್ದ ಸು. ೩೦ ಸೆಂಮೀ. ತೂಕ ೫೦೦ ಗ್ರಾಂ. ಪೂರ್ಣ ತುಪ್ಪುಳವಿರುವುದು. ಮೈಮೇಲೆ ಬೂದು ಬಣ್ಣದ ಚುಕ್ಕೆಗಳಿರುವುವು. ಬಾಲ ದಪ್ಪವಿದ್ದರೂ ಅದರ ತುದಿಯಲ್ಲಿ ರೋಮಗುಚ್ಛ ಇರುವುದಿಲ್ಲ. ಹುಟ್ಟಿ ಸು. ೨ ವಾರ ಪರ್ಯಂತ ಪೂರ್ಣಪ್ರಮಾಣದ ದೃಷ್ಟಿ ಬೆಳೆದಿರುವುದಿಲ್ಲ. ಹುಟ್ಟುವಾಗ ಮರಿಯ ಕಣ್ಣುಗಳು ಬೆಕ್ಕಿನಂತೆ ಮುಚ್ಚಿರುತ್ತವೆಯೇ ಇಲ್ಲವೇ ಎಂಬುದು ಸಂಶಯಾಸ್ಪದ. ಸು. ೩ ವಾರಗಳಲ್ಲಿ ಹಲ್ಲು ಮೊಳೆತು ಬೆಳೆಯಲಾರಂಭಿಸುತ್ತದೆ. ಸು. ೬ ತಿಂಗಳ ತನಕ ತಾಯಿಯ ರಕ್ಷಣೆಯಲ್ಲೇ ಬೆಳೆದು, ತರುವಾಯ ತಾಯಿಯೊಂದಿಗೆ ಮರಿಗಳೂ ಬೇಟೆಯಾಡಲು ಪ್ರಾರಂಭಿಸುವುವು. ಸು. ೧ ೧/೨–೨ ವರ್ಷ ವಯಸ್ಸಿನ ಸಿಂಹಗಳು ಸ್ವತಂತ್ರವಾಗಿ ಜೀವಿಸಬಲ್ಲುವು. ೩–೪ ವರ್ಷ ಪ್ರಾಯದವು ಪ್ರೌಢಾವಸ್ಥೆಗೆ ಬಂದು ಸಂತಾನೋತ್ಪತ್ತಿಗೆ ಅಣಿಯಾಗುತ್ತವೆ. ನೈಸರ್ಗಿಕವಾಗಿ ಕಾಡಿನಲ್ಲಿ ಸಿಂಹಗಳು ೧೦ ವರ್ಷ ಕಾಲ ಬಾಳುತ್ತವೆ. ಪ್ರಾಣಿಸಂಗ್ರಹಾಲಯದಲ್ಲಿ ಈ ಅವಧಿ ೨೫ ವರ್ಷಗಳ ತನಕವೂ ವ್ಯಾಪಿಸಬಹುದು.



ಯಾವುದೇ ಪ್ರಾಣಿಯನ್ನು ಕೊಂದೊಡನೆ ಸಿಂಹ ಮೊದಲಿಗೆ ಅದರ ಕರುಳನ್ನು ತಿನ್ನತೊಡಗುವುದು. ಕರುಳಿನಲ್ಲಿ ಅರೆಜೀರ್ಣವಾದ ಸಸ್ಯಾಹಾರವಿರುವುದರಿಂದ ಸಿಂಹಕ್ಕೆ ಅವಶ್ಯವಾದ ಜೀವಸತ್ತ್ವ ಒದಗುವುದೆಂಬುದು ಗಮನಾರ್ಹ. ಕರುಳನ್ನು ಕಬಳಿಸಿದ ಬಳಿಕ, ಸಿಂಹ ತನ್ನ ಬೇಟೆಯ ಪೃಷ್ಠಭಾಗದ ಮಾಂಸಯುಕ್ತ ಭಾಗವನ್ನು ಮುಕ್ಕುತ್ತದೆ. ಬೇಟೆಯಾಡುವಾಗ ಸಿಂಹ ಮುಖ್ಯವಾಗಿ ತನ್ನ ಮುಂಗಾಲಿನ ಪಂಜದಿಂದ ಹೊಡೆದು ಅಥವಾ ಮುಂಗಾಲಿನಲ್ಲಿರುವ ಮೊನಚು ಉಗುರುಗಳಿಂದ ಬೇಟೆಯ ಮೂಗಿನ ಹೊಳ್ಳೆಗಳನ್ನು ಸೀಳಿ, ಕತ್ತು ಕೊಯ್ದು ಅದನ್ನು ಸಾಯಿಸುತ್ತದೆ. ಸಿಂಹ ಸದಾ ತನ್ನ ಬೇಟೆಯನ್ನು ನೆಲಕ್ಕೆ ಕೆಡವಿ ಕೊಲ್ಲುವ ವಿಧಾನವನ್ನೇ ಅನುಸರಿಸುತ್ತದೆ. ಇದಕ್ಕಾಗಿ ಅದು ಬೇಟೆಯ ಬೆನ್ನಟ್ಟಿ ಅದರ ಹಿಂಭಾಗ ಹಿಡಿದು, ನೆಲಕ್ಕೆ ಬೀಳಿಸಿ ಮುಂದಿನ ಕಾರ್ಯಕ್ಕೆ ಸಿದ್ಧವಾಗುತ್ತದೆ. ಕಿರಿಯ ಸಿಂಹಗಳು ಈ ಎಲ್ಲ ತಂತ್ರಗಳಲ್ಲಿಯೂ ನೆರವಾಗುತ್ತವೆ. ಬೇಟೆಯಲ್ಲಿ ಪ್ರಮುಖ ಪಾತ್ರವಹಿಸುವುದು ಸಾಮಾನ್ಯವಾಗಿ ಹೆಣ್ಣು ಸಿಂಹಗಳೇ. ಜ಼ೀಬ್ರಾ, ಜಿಂಕೆ, ಜಿರಾಫೆ, ಕಾಡುಕೋಣಗಳನ್ನು ಸಿಂಹ ಇಷ್ಟಪಡುತ್ತದೆ. ಇವು ದೊರಕದ ಸಮಯದಲ್ಲಿ ಕೀಟಗಳನ್ನೂ ಮೀನುಗಳನ್ನೂ ತಿನ್ನಬಲ್ಲುದು.

ಸಿಂಹ ಒಂದು ಸಂಘ ಜೀವಿ. ಸಾಮಾನ್ಯವಾಗಿ, ಒಂದು ಗುಂಪಿನಲ್ಲಿ ಒಂದು ಗಂಡು, ಒಂದು ಅಥವಾ ಎರಡು ಹೆಣ್ಣುಸಿಂಹಗಳು ಹಾಗೂ ಮರಿಗಳಿರುತ್ತವೆ. ಕೆಲವೊಮ್ಮೆ ಎರಡು ಗುಂಪುಗಳು ಒಂದಾಗಿ ಬಾಳುವುದೂ ಉಂಟು. ಗುಂಪಿನ ನಾಯಕಪಟ್ಟ ದೈಹಿಕ ತ್ರಾಣದಿಂದಲೇ ಲಭಿಸುವುದಾಗಿದೆ. ಯಾವುದೇ ಒಂದು ಗುಂಪಿನ ನಾಯಕ ಮುದಿಯಾದರೆ ಅಥವಾ ಗುಂಪಿಗೆ ಬೇಡವಾದರೆ ಆ ಸಿಂಹ ಎಳೆ ಸಿಂಹಗಳ ಜೊತೆ ಸೇರಿಕೊಳ್ಳುವುದು.

ಸಿಂಹದ ಬಗೆಗಿನ ಬಹಳಷ್ಟು ಮಾಹಿತಿ ಊಹಾಪೋಹ. ಅದನ್ನು ಮರುಭೂಮಿಯ ಪಳಗಿದ ನಿವಾಸಿ, ಕಾಡಿನ ರಾಜನೆಂದು ಕರೆದರೂ ನಿಜವಾಗಿ ಅದು ದಟ್ಟ ಕಾಡಿನಲ್ಲಿ ವಾಸಿಸುವುದಿಲ್ಲ, ಕುರುಚಲು ಮತ್ತು ಪೊದೆಗಳಿಂದ ತುಂಬಿರುವ ಪ್ರದೇಶಗಳಲ್ಲಿ ಕಂಡುಬರುತ್ತದೆ. ಅದೇ ರೀತಿ ಬೇಟೆಯಾಡುವ ಮುನ್ನ ಸಿಂಹ ಗರ್ಜಿಸಿ ಎದುರಾಳಿಗೆ ತನ್ನ ಬರುವಿಕೆಯನ್ನು ತಿಳಿಸುತ್ತದೆಂದು ಹೇಳಿದರೂ ಇದು ವಾಸ್ತವ ಸಂಗತಿ ಅಲ್ಲ.

ಇತರ ‘ಗರ್ಜಿಸುವ ಬೆಕ್ಕು’ಗಳಿಗಿಂತ ಅಧಿಕವಾಗಿ ಸಿಂಹ ಗರ್ಜಿಸಿದರೂ ಇದು ತನ್ನ ಆಡಳಿತ ಪ್ರದೇಶವನ್ನು ಇತರ ಪ್ರಾಣಿಗಳಿಗೆ ತಿಳಿಯಲೋಸುಗ ಊದುವ ಕಹಳೆ ಮಾತ್ರ! ನಾಯಕ ಸಿಂಹ ತನ್ನ ಪರಿವಾರದೊಂದಿಗೆ ಒಂದೆಡೆಯಿಂದ ಇನ್ನೊಂದೆಡೆಗೆ ತೆರಳುವಾಗ, ಸಂಗಾತಿಯನ್ನು ಮೆಚ್ಚಿಸಲು ಬಯಸಿದಾಗ, ಮರಿಗಳೊಂದಿಗೆ ಆಡುತ್ತಿರುವಾಗ, ಇಲ್ಲವೇ ಜಗಳಕ್ಕೆ ಅಣಿಗೊಳ್ಳುತ್ತಿರುವಾಗ ಬೇರೆ ಬೇರೆ ತೆರನಾಗಿ ಗರ್ಜಿಸುತ್ತದೆ. ಸಿಂಹ ಸ್ವಂತ ವಲಯದೊಳಗೆ ದಿನಕ್ಕೆ ಸು. ೫ ಕಿಮೀ ನಡೆದಾಡುತ್ತದೆ. ಅಗತ್ಯವಾದರೆ ಒಂದೇ ರಾತ್ರಿ ೪೮ ಕಿಮೀ ದೂರವನ್ನೂ ಕ್ರಮಿಸುವುದುಂಟು. ಓಡುತ್ತಿರುವಾಗಲೇ ದಿಕ್ಕನ್ನು ಬದಲಾಯಿಸುವುದರಲ್ಲಿ ಸಿಂಹ ಬಲು ನಿಸ್ಸೀಮ.

ತಳಿವಿಜ್ಞಾನಿಗಳು ಸಿಂಹ ಮತ್ತು ಹುಲಿಗಳನ್ನು ಒಂದುಗೂಡಿಸಿ ‘ಲೈಗರ್’ ಹಾಗೂ ಚಿರತೆ ಮತ್ತು ಸಿಂಹಗಳನ್ನು ಒಂದುಗೂಡಿಸಿ ‘ಲೈಪೋನ್’ ಎಂಬ ಮಿಶ್ರ ತಳಿ ಸೃಷ್ಟಿಸಿದ್ದಾರೆ.

ಪರಿಸರ ಮಾಲಿನ್ಯ, ಕಾನನದ ಸತತ ನಿರ್ಮೂಲನೆ, ಮಾನವನ ನೀತಿರಹಿತ ತಪ್ಪು ನಡುವಳಿಕೆ, ಸಿಂಹದ ಬಗೆಗಿನ ಮಿಥ್ಯಾರೋಪಗಳಿಂದ ಸಿಂಹಗಳ ಪರಿಸರ ನಾಶವಾಗತೊಡಗಿದೆ. ಇದಲ್ಲದೇ ಸಿಂಹಗಳನ್ನು ಸರ್ಕಸ್, ಪ್ರಾಣಿಸಂಗ್ರಹಾಯಲಗಳಲ್ಲಿ ಬಳಸುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅವನ್ನು ಸೆರೆ ಹಿಡಿಯುತ್ತಿದ್ದಾರೆ. ಹೀಗಾಗಿ ಅವುಗಳ ಸಂಖ್ಯೆ ಗಣನೀಯವಾಗಿ ಇಳಿಮೊಗವಾಗಿದೆ. ಇದರಿಂದಾಗಿ ಕೇಪ್ ಸಿಂಹ, ಬಾರ್ಬರಿ ಸಿಂಹಗಳ ತಳಿ ಸಂಪೂರ್ಣ ನಿರ್ನಾಮವಾಗಿದೆ. ಏಷ್ಯಾದ ಸಿಂಹ ಅಭ್ಯಯಾರಣ್ಯಗಳಲ್ಲಿ ಸ್ವಲ್ಪಮಟ್ಟಿಗೆ ಸುರಕ್ಷಿತವಾಗಿವೆ. (ಐ.ಕೆ.ಪಿ)

**ಸಿಟೇಸಿಯ:** ಕೂದಲು ಮತ್ತು ಹಿಂಗಾಲುಗಳಿಲ್ಲದ ನೀರಿನಲ್ಲಿ ವಾಸಿಸುವ ಸ್ತನಿಗಳ ಒಂದು ದೊಡ್ಡ ಗಣ. ಈ ಪದವು ಗ್ರೀಕ್‌ನ ಕಿಟೋಸ್ ಎನ್ನುವ ಪದದಿಂದ ಹುಟ್ಟಿಕೊಂಡಿದೆ. ಗ್ರೀಕ್ ಭಾಷೆಯಲ್ಲಿ ಕಿಟೋಸ್ ಎಂದರೆ ತಿಮಿಂಗಿಲ ಎಂದು. ತಿಮಿಂಗಿಲಗಳು, ಡಾಲ್ಫಿನ್ ಮತ್ತು ಕಡಲಹಂದಿ ಈ ಗಣಕ್ಕೆ ಸೇರುತ್ತವೆ. ಮೀನುಗಳಂತೆ ಕಾಣುವ ಈ ಜಲಪ್ರಾಣಿಗಳು ಮೀನುಗಳಲ್ಲ. 1758 ರಲ್ಲಿ ಸ್ವೀಡನ್ ದೇಶದ ವರ್ಗೀಕರಣ ವಿಜ್ಞಾನಿ ಲಿನ್ನೆಯಸ್ ಇವುಗಳನ್ನು ಸ್ತನಿಗಳೆಂದು ಗುರುತಿಸುವವರೆಗೂ ಈ ಜಲಪ್ರಾಣಿಗಳನ್ನು ಮೀನುಗಳೆಂದೆ ತಿಳಿಯಲಾಗಿತ್ತು.

ಜಲಚರಿಗಳಾಗಿರುವುದರಿಂದ ನೆಲದ ಮೇಲೆ ಜೀವಿಸುವ ಸ್ತನಿಗಳಿಗಿಂತ ಸಾಗರದಲ್ಲಿ ಯಶಸ್ವಿ ಬದುಕು ಸಾಗಿಸಲು ಬೇಕಾದಂತಹ ವಿಶೇಷವಾದ ಗುಣಲಕ್ಷಣಗಳನ್ನು ಹೊಂದಿವೆ. ದೇಹವು ಮೀನಿನ ಆಕಾರ ಹೊಂದಿದ್ದು ಮುಂಭಾಗದ ಅವಯವಗಳು ದೋಣಿಯ ಹುಟ್ಟಿನ (ಪ್ಯಾಡಲ್) ರಚನೆಯಂತಿರುವ ಈಜು ಅಂಗಗಳಾಗಿ ಮತ್ತು ಹಿಂಗಾಲುಗಳು ಬಾನಿಗೆ ಮುಖ ಮಾಡಿರುವ ಚಪ್ಪಟೆಯಾಕಾರದ ಫ್ಲಿಪ್ಪರ್‌ಗಳಾಗಿ ಮಾರ್ಪಾಟು ಹೊಂದಿವೆ. ಒಟ್ಟಾರೆಯಾಗಿ ಇವುಗಳ ಆಕೃತಿ ಮತ್ತು ಅವಯವಗಳು ಸಾಗರದಲ್ಲಿ ರಭಸವಾಗಿ ಸಂಚರಿಸಲು ಸಹಾಯಕವಾಗುತ್ತದೆ. ಇತರ ಎಲ್ಲ ಸ್ತನಿಗಳಿಗಿರುವಂತೆ ದೇಹದ ಉಷ್ಣತೆಯನ್ನು ಸ್ಥಿರಸ್ಥಿತಿಯಲ್ಲಿಡಲು ಸಹಾಯಕವಾಗುವ ಕೂದಲಿನ ಹೊದಿಕೆಯಿರುವುದಿಲ್ಲ. ಆದರೆ, ಅವುಗಳ ಬಾಯಿಯ ಬಳಿ ಬಿರುಸಾದ ಕೂದಲಿನಂತಹ ರಚನೆಯಿರುತ್ತದೆ. ಚರ್ಮದ ಕೆಳಗೆ ತಿಮಿಮೇದಸ್ಸು (ಬ್ಲಬ್ಬರ್) ಎನ್ನುವ ಪದರದಿಂದ ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳುತ್ತವೆ. ಜಲಚರ ಪ್ರಾಣಿಗಳಾದರೂ ಮೀನುಗಳಂತೆ ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ಉಸಿರಾಡುವುದಿಲ್ಲ. ಬದಲಾಗಿ ಗಾಳಿಯಲ್ಲಿರುವ ಆಮ್ಲಜನಕವನ್ನು ಉಸಿರಾಡುತ್ತವೆ. ಹಾಗಾಗಿ ಅವುಗಳು ನೀರಿನ ಮೇಲ್ಭಾಗಕ್ಕೆ ಬಂದು ಗಾಳಿಯನ್ನು ಒಳಗೆಳೆದುಕೊಳ್ಳುತ್ತವೆ. ಈ ಕಾರಣಕ್ಕಾಗಿ ಅವುಗಳು ಸಮುದ್ರದ ಅತೀ ಆಳದಲ್ಲಿ ಜೀವಿಸುವುದಿಲ್ಲ. ಸಾಕಷ್ಟು ಗಾಳಿಯನ್ನು ತೆಗೆದುಕೊಳ್ಳಲು ತಲೆಯ ಮೇಲ್ಭಾಗದಲ್ಲಿ ಊದುತೂತುಗಳ (ಬ್ಲೋಹೋಲ್) ನ್ನು ಹೊಂದಿರುತ್ತವೆ.

ಸಿಟೇಸಿಯಾ ಗಣವನ್ನು ಮುಖ್ಯವಾಗಿ 2 ಉಪಗಣಗಳಾಗಿ ವಿಂಗಡಿಸಲಾಗಿದೆ:

1) ಮಿಸ್ಟಿಸಿಟಿ: ದಂತರಹಿತ ತಿಮಿಂಗಿಲಗಳು. ಬೃಹದಾಕಾರದ ತಿಮಿಂಗಿಲಗಳಾದ ರೈಟ್ ತಿಮಿಂಗಿಲ, ಬೂದು ತಿಮಿಂಗಿಲ, ನೀಲಿ ತಿಮಿಂಗಿಲ, ಹಂಪ್‌ಬ್ಯಾಕ್ ತಿಮಿಂಗಿಲ ಮತ್ತು ರಾಕ್ಕ್ವಲ್ಸ್ ಈ ಉಪಗಣಕ್ಕೆ ಸೇರುತ್ತವೆ. ಇವು ಹಲ್ಲುಗಳನ್ನು ಹೊಂದಿರುವುದಿಲ್ಲ. ಹಲ್ಲುಗಳ ಸ್ಥಾನದಲ್ಲಿ ತಿಮಿಮೂಳೆ (ಬೆಲೀನ್) ಎನ್ನುವ ಗಡುಸಾದ ರಚನೆಯಿದೆ. ಇದು ಆಹಾರವನ್ನು ಸೋಸಲು ಜರಡಿಯಂತೆ ಕೂಡ ಸಹಾಯಕವಾಗುತ್ತದೆ. ದೈತ್ಯ ತಿಮಿಂಗಿಲಗಳು ದೊಡ್ಡದೊಡ್ಡ ಹಡಗುಗಳನ್ನು ನುಂಗುತ್ತವೆ ಎನ್ನುವ ನಂಬಿಕೆ ಸುಳ್ಳು. ಗಾತ್ರದಲ್ಲಿ ಇವುಗಳು ಬೃಹದಾಕಾರವಾಗಿದ್ದರೂ ಚಿಕ್ಕಪುಟ್ಟ ಮೀನುಗಳ ಗುಂಪನ್ನು, ತೇಲುವ ಸೂಕ್ಷ್ಮಜೀವಿಗಳನ್ನು (ಪ್ಲಾಂಕ್ಟನ್) ಮತ್ತು ಅಕಶೇರುಕ ಪ್ರಾಣಿಗಳನ್ನು ಹಿಡಿದು ತಿನ್ನುತ್ತವೆ.

2) ಒಡಾಂಟೊಸಿಟಿ: ದಂತಯುಕ್ತ ತಿಮಿಂಗಿಲಗಳ ಉಪಗಣ. ದೊಡ್ಡದೊಡ್ಡ ಮೀನುಗಳನ್ನು, ಸ್ಕ್ವಿಡ್‌ಗಳನ್ನು ಹಿಡಿದು ತಿನ್ನುತ್ತವೆ. ಈ ಉಪಗಣದಲ್ಲಿ ಬರುವ ಸಿಟೇಸಿಯಗಳು; ಬಿಳಿ ತಿಮಿಂಗಿಲ, ಸ್ಪರ್ಮ್ ತಿಮಿಂಗಿಲ, ಬಾಟಲ್ ನೋಸ್ ತಿಮಿಂಗಿಲ, ಡಾಲ್ಫಿನ್ ಮತ್ತು ಕಡಲಹಂದಿ.




ಸಿಟೇಸಿಯ ಗಣದಲ್ಲಿ ಆರ್ಕಿಯೋಸಿಟಿ ಎನ್ನುವ ಇನ್ನೊಂದು ಉಪಗಣವೂ ಇದೆ. ಈ ಉಪಗಣದಲ್ಲಿ ಮಿಲಿಯನ್ ವರ್ಷಗಳ ಹಿಂದೆ (ಇಯೊಸಿನ್ ಕಾಲದಲ್ಲಿ) ಬದುಕಿದ್ದ ಮತ್ತು ಈಗ ಅವುಗಳ ಪಳೆಯುಳಿಕೆಗಳು ಮಾತ್ರ ಇರುವ ಸಿಟೇಸಿಯಗಳು ಸೇರಿವೆ. ಈ ಪಳೆಯುಳಿಕೆಗಳು ಸಿಟೇಸಿಯಗಳ ಉಗಮ ಮತ್ತು ವಿಕಾಸದ ಬಗ್ಗೆ ಅನೇಕ ಕುರುಹು ಹಾಗೂ ಮಾಹಿತಿಗಳನ್ನು ನೀಡುತ್ತವೆ.

ಸಿಟೇಸಿಯಗಳನ್ನು ಮುಖ್ಯವಾಗಿ ತಿಮಿಂಗಿಲಗಳನ್ನು ಅವುಗಳ ಮಾಂಸ, ಬಲೀನ್ ಮತ್ತು ಮೇದಸ್ಸುಗಳಿಗಾಗಿ ಬೇಟೆಯಾಡುತ್ತಾರೆ. ಹೀಗಾಗಿ ಕೆಲವು ತಿಮಿಂಗಿಲಗಳ ಪ್ರಭೇದಗಳು ವಿನಾಶದಂಚಿನಲ್ಲಿವೆ. ಈ ಕಾರಣಕ್ಕಾಗಿ ಇವುಗಳ ಬೇಟೆಯನ್ನು ನಿಷೇಧಿಸಲಾಗಿದೆ. ಮಾತ್ರವಲ್ಲ, ವೈಜ್ಞಾನಿಕ ಸಂಶೋಧನೆ ಅಥವಾ ಇನ್ಯಾವುದೇ ಉಪಯೋಗಕ್ಕಾಗಿ ಸಿಟೇಸಿಯಗಳ ಬೇಟೆಯನ್ನು ನಿರ್ಬಂಧಿಸಲಾಗಿದೆ. (ಪಿ.ಎನ್.)

**ಸೀಲ್:** ಕಾರ್ನಿವೋರ ಗಣಕ್ಕೆ ಸೇರಿದ ಬೃಹದಾಕಾರದ ಜಲಚರ ಸ್ತನಿಗಳು. ಇವುಗಳ ನಾಲ್ಕೂ ಪಾದಗಳು ಸಂಪೂರ್ಣವಾಗಿ ಫ್ಲಿಪ್ಪರ್‌ಗಳಾಗಿ ಪರಿವರ್ತನೆಗೊಂಡಿವೆ. ಸೀಲ್‌ಗಳ ಗುಂಪಿನಲ್ಲಿ ಮೂರು ಬಗೆಯ ಕುಟುಂಬಗಳಿವೆ. ಟ್ರೂ ಸೀಲ್ (ಫೋಸಿಡೆ ಕುಟುಂಬ), ಇಯರ್ಡ್ ಸೀಲು (ಒಟ್ಟರೈಯಿಡೆ ಕುಟುಂಬ) ಮತ್ತು ವಾಲ್‌ರಸ್ (ಓಡೊಬೇನಿಡೆ ಕುಟುಂಬ).



ಹಾರ್ಬರ್ ಸೀಲು

ಟ್ರೂಸೀಲ್‌ಗಳಿಗೆ ಹೊರಕಿವಿಗಳಿಲ್ಲ. ಫೋಕಾ ವಿಟ್ಯುಲೀನ್ ಉದಾಹರಣೆ. ಫ್ಲಿಪ್ಪರ್‌ಗಳು ಚಿಕ್ಕದಾಗಿವೆ. ಆದರೆ ಇವುಗಳನ್ನು ಭೂಮಿಯ ಮೇಲೆ ನಡೆಯಲು ಉಪಯೋಗಿಸಲು ಸಾಧ್ಯವಿಲ್ಲ. ದೇಹ 1–6.5 ಮೀ ಉದ್ದ. ಸಂತಾನೋತ್ಪತ್ತಿಯ ಸಮಯದಲ್ಲಿ ಸಮುದ್ರ ದಂಡೆಗೆ ಬರುತ್ತವೆ. 8–12 ತಿಂಗಳ ಗರ್ಭಾವಸ್ಥೆಯ ಅನಂತರ ಹೆಣ್ಣು ಒಂದು ಮರಿಯನ್ನು ಈಯುತ್ತದೆ. ಇಯರ್ಡ್ ಸೀಲ್‌ಗಳಿಗೆ ಸಣ್ಣದಾದ ಹೊರಕಿವಿಗಳಿರುತ್ತವೆ. ದೇಹವನ್ನು ಭೂಮಿಯ ಮೇಲಿಂದ ಫ್ಲಿಪ್ಪರ್‌ಗಳ ಸಹಾಯದಿಂದ ಮೇಲೆತ್ತಬಹುದು. ಸಂತಾನೋತ್ಪತ್ತಿಯ ಕಾರ್ಯದಲ್ಲಿ ಇವುಗಳು ಗುಂಪಿನಲ್ಲಿರುತ್ತವೆ. ದಪ್ಪ ಶರೀರವುಳ್ಳ ವಾಲ್‌ರಸ್‌ಗಳ ದೇಹವು ಸುಕ್ಕಾದ ಚರ್ಮವನ್ನು ಹೊಂದಿದೆ.

ಉದಾ: ಒಡೊಬಿನಸ್ ರೋಸ್ಮಾರಸ್ ಅದ್ವಿತೀಯ ದಂತವನ್ನು ಹೊಂದಿರುತ್ತದೆ. ಬಾಲವು ಸಂಪೂರ್ಣವಾಗಿ ಮಾಯವಾಗಿದೆ. ಫ್ಲಿಪ್ಪರ್‌ಗಳ ಜೊತೆಗೆ ದೇಹವೂ ಸಂಕುಚಿತವಾಗಿದೆ. ಒಳ್ಳೆಯ ಈಜುಗಾರ. ಗಂಡು ಸುಮಾರು 2.2 ಮೀ ಉದ್ದ ಮತ್ತು 1250 ಕಿಗ್ರಾಂ ಭಾರವಿದೆ.

ಇಯರ್ಡ್ ಸೀಲುಗಳ ಗುಂಪಿಗೆ ಸೇರುವ ಸಮುದ್ರ ಸಿಂಹಗಳು ಅತ್ಯಂತ ವೇಗವಾಗಿ ಈಜುವ ಸೀಲ್‌ಗಳೆಂದು ಪರಿಗಣಿಸಲಾಗಿದೆ. ಗಂಟೆಗೆ 65 ಕಿಮೀ ವೇಗವಾಗಿ ದೂರವನ್ನು ಕ್ರಮಿಸುತ್ತವೆ. ಸೀಲ್‌ಗಳು ಆಮ್ಲಜನಕವನ್ನು ತಮ್ಮ ದೇಹದಲ್ಲಿ ಸಂಗ್ರಹಿಸಿಕೊಂಡು ಆಳವಾದ ನೀರಿನಲ್ಲಿ ಹೆಚ್ಚು ಸಮಯ ಇರಬಲ್ಲುವು. ಚರ್ಮದ ಕೆಳಭಾಗದಲ್ಲಿ ಬ್ಲಬರ್ (ಕೊಬ್ಬಿನ ಪದರ) ಇದೆ. ಈ ಬ್ಲಬರ್ ಸೀಲ್‌ಗಳನ್ನು ಚಳಿಯಿಂದ ರಕ್ಷಿಸುತ್ತದೆ. ಆಹಾರಾಭಾವದ ಸಮಯದಲ್ಲಿ ಶಕ್ತಿಯನ್ನು ಒದಗಿಸುತ್ತದೆ. ನವಜಾತ ಸೀಲ್‌ಗಳಿಗೆ ಬ್ಲಬರ್ ಇಲ್ಲ. ಆದರೆ ದೇಹದ ಮೇಲೆ ತುಪ್ಪುಳವಿದ್ದು ಶೀತದಿಂದ ರಕ್ಷಣೆಯನ್ನು ಒದಗಿಸುತ್ತದೆ. ಸಾಮಾನ್ಯವಾಗಿ ಇವುಗಳು ತಣ್ಣನೆಯ ನೀರಿನಲ್ಲಿ, ಆರ್ಕ್‌ಟಿಕ್ ಹಾಗೂ ಅಂಟಾರ್ಕ್‌ಟಿಕ್‌ನಲ್ಲಿ ಜೀವಿಸುತ್ತವೆ. ಹಲವು ಟ್ರೂ ಸೀಲ್‌ಗಳು ವರ್ಷದಲ್ಲಿ ಹೆಚ್ಚು ಸಮಯ ಹಿಮದ ಕೆಳಗಡೆ ವಾಸಿಸುತ್ತವೆ.

ಸೀಲ್ ಪ್ರಾಣಿಯ ಹಾಲು ಅತ್ಯಂತ ಪೌಷ್ಟಿಕಾಂಶಗಳು ಹಾಗೂ ಕೊಬ್ಬಿನಿಂದ ಕೂಡಿದೆ. ಮೀನುಗಳು, ಪೆಂಗ್ವಿನ್ ಸಾಧಾರಣವಾಗಿ ಇವುಗಳ ಆಹಾರ. ಸತ್ತ ತಿಮಿಂಗಿಲಗಳನ್ನೂ ತಿನ್ನುವುದುಂಟು. (ಆರ್.ಎಸ್.)

**ಸೂಕ್ಷ್ಮಜೀವಿವಿಜ್ಞಾನ:** ಸೂಕ್ಷ್ಮದರ್ಶಕದ ಮೂಲಕ ಮಾತ್ರ ವೀಕ್ಷಿಸಬಹುದಾದ ಜೀವಿಗಳ ವೈಜ್ಞಾನಿಕ ಅಧ್ಯಯನ (ಮೈಕ್ರೊಬಯಾಲಜಿ). ಲೀವನ್‌ಹಾಕ್ (೧೬೩೨–೧೭೨೩) ಸೂಕ್ಷ್ಮದರ್ಶಕದ ಪ್ರಥಮ ಉಪಜ್ಞೆಕಾರ (ಇನ್ವೆಂಟರ್) ಅಲ್ಲ, ಆದರೆ ತಾನು ರಚಿಸಿದ ಈ ಯಂತ್ರದ ಮೂಲಕ ಸೂಕ್ಷ್ಮಜೀವಿಗಳನ್ನು (ಇವು ಏಕಕೋಶ ಜೀವಿಗಳು) ದರ್ಶಿಸಿದ ಮೊದಲಿಗ (೧೬೭೭). ಸೂಕ್ಷ್ಮಜೀವಿ ವಿಜ್ಞಾನದ ಉಗಮ ಹೀಗಾಯಿತು. ಮುಂದಿನ ದಿನಗಳಲ್ಲಿ ರಾಬರ್ಟ್ ಕಾಚ್ (೧೮೪೩–೧೯೧೦), ಲೂಯಿ ಪಾಸ್ತರ್ (೧೮೨೨–೯೫) ಮೊದಲಾದವರು ಈ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಅಪಾರ. ಸೂಕ್ಷ್ಮಜೀವಿಗಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಿದೆ:

೧. ಆರ್ಕೀಯ: ಈ ವರ್ಗದ ಸೂಕ್ಷ್ಮಜೀವಿಗಳಲ್ಲಿ ಕೋಶ ಕೇಂದ್ರವಾಗಲಿ (ನ್ಯೂಕ್ಲಿಯಸ್) ಮೈಟೊಕಾಂಡ್ರಿಯಾವಾಗಲೀ ಇರುವುದಿಲ್ಲ. ವರ್ಣತಂತು (ಕ್ರೊಮೋಸೋಮ್) ಮತ್ತು ರೈಬೋಸೋಮ್ ಮಾತ್ರ ಇರುವುವು. ಈ ಗುಂಪಿನ ಕೆಲವು ಜೀವಿಗಳು ಮೀಥೇನನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಮಿಥೆನೊಜೇನ್ಸ್ ಎಂದು ಹೆಸರು. ಇದೇ ರೀತಿ ಉಪ್ಪಿನ ಅಂಶ ಹೆಚ್ಚು ಇರುವೆಡೆ ಬೆಳೆಯುವ ಆರ್ಕೀಯಗಳಿಗೆ ಹ್ಯಾಲೊಫೈಟ್‌ಗಳೆಂದು ಹೆಸರು.

೨. ಬ್ಯಾಕ್ಟೀರಿಯ: ಗಾಳಿ, ಮಣ್ಣು ಮತ್ತು ನೀರು ಇಲ್ಲೆಲ್ಲ ಕಂಡು ಬರುವ ಜೀವಿಗಳಿವು. ಏಕಕೋಶಿಗಳು. ವಿವಿಧ ಆಕಾರಗಳಿವೆ: ಸುರುಳಿ, ಹುರುಳಿಬೀಜ, ಕೊಳವೆ, ದಂಡ (ಬ್ಯಾಸಿಲ್ಲಸ್) ಇತ್ಯಾದಿ. ಇವುಗಳಿಗೆ ಚಲಿಸಲು ಸಹಾಯಕವಾಗುವ ಚಾವಟಿಯಂಥ ಚಲನಾಂಗಗಳಿವೆ. ಬ್ಯಾಕ್ಟೀರಿಯಗಳು ಸಾಮಾನ್ಯವಾಗಿ ನಿರ್ಲಿಂಗರೀತಿಯ ಸಂತಾನೋತ್ಪತ್ತಿಯಿಂದ ವೃದ್ಧಿಯಾಗುತ್ತವೆ. ಉದಾಹರಣೆಗೆ ಎಶ್ಚರೀಷಿಯ ಕೋಲಿ ಅಡ್ಡವಿಭಜನೆಯಿಂದ ಪ್ರತಿ ೩೦ ಮಿನಿಟುಗಳಲ್ಲಿ ದ್ವಿಗುಣಗೊಳ್ಳುತ್ತದೆ. ವಾಯುಮಂಡಲದ ವೈಪರೀತ್ಯಗಳಿಂದ ಪಾರಾಗುವ ಸಲುವಾಗಿ ದಂಡಾಕಾರದ ಬ್ಯಾಕ್ಟೀರಿಯ ಕೋಶಗಳ ಒಳಗೆ ಗಟ್ಟಿ ಪೊರೆ ರೂಪುಗೊಳ್ಳುತ್ತದೆ. ಇಂಥವಕ್ಕೆ ಸ್ಪೋರ್‌ಗಳೆಂದು ಹೆಸರು. ಹಿತಕರ ಪರಿಸರ ಒದಗಿದಾಗ ಇವು ಮೊಳೆತು ಬ್ಯಾಕ್ಟೀರಿಯಗಳು ಮೈದಳೆಯುತ್ತವೆ.

ಬ್ಯಾಕ್ಟೀರಿಯ ಗುಂಪಿನಲ್ಲಿ ಸೈಯನೊಬ್ಯಾಕ್ಟೀರಿಯ ಎಂಬ ಮತ್ತೊಂದು ಸಣ್ಣ ವರ್ಗವಿದೆ. ಇವುಗಳಲ್ಲಿ ಕೋಶಗಳನ್ನು ಸುತ್ತುವರಿದಿರುವ ಗಟ್ಟಿ ಬಹುಪೊರೆಯ ಗೋಡೆಯಿದೆ. ಕೋಶಭಿತ್ತಿಯ ಸುತ್ತಲೂ ಜಿಲಾಟಿನಸ್ ಕವಚ ಉಂಟು. ಕೋಶದ್ರವ್ಯದಲ್ಲಿ ಥೈಲಾಕಾಯಿಡ್‌ಗಳೆಂಬ ಚೀಲಗಳೂ ಫೈಕೊಸೈಯನಿನ್ ಮತ್ತು ಫೈಕೊಎರಿಥ್ರಿನ್ ಎಂಬ ವರ್ಣದ್ರವ್ಯಗಳೂ ಇವೆ. ವಿವಿಧ ಬ್ಯಾಕ್ಟೀರಿಯಗಳು ಮಾನವನಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡುತ್ತವೆ. ಮತ್ತೆ ಕೆಲವು ಸಾಂಕ್ರಾಮಿಕ ರೋಗಕಾರಕಗಳೂ ಹೌದು (ಬ್ಯಾಕ್ಟೀರಿಯ ನೋಡಿ).

೩. ಪ್ರೊಟಿಸ್ಟ: ಈ ಗುಂಪಿಗೆ ಪ್ರೋಟೊಜೋವಗಳು, ಶೈವಲಗಳು, ನೀರಿನಲ್ಲಿಯ ಶಿಲೀಂಧ್ರಗಳು ಮತ್ತು ಸ್ಲೈಮ್‌ಮೋಲ್ಡ್ ಸೇರಿವೆ.

ಪ್ರೋಟೊಜೋವ: ಕೋಶೀಯ ಹಂತದಲ್ಲಿರುವ ಏಕಕೋಶ ಜೀವಿಗಳು ಅಥವಾ ಗುಂಪಾಗಿ, ಸ್ವತಂತ್ರವಾಗಿ ಬದುಕುವ ಏಕಕೋಶ ಜೀವಿಗಳು. ಚಲನಾಂಗಗಳನ್ನು ಆಧರಿಸಿ ನಾಲ್ಕು ಮುಖ್ಯ ವರ್ಗಗಳಾಗಿ ವಿಂಗಡಿಸಲಾಗಿದೆ: ಕೋಶದ್ರವ್ಯದ ಮಿಥ್ಯಾಪಾದಗಳ ಮೂಲಕ ಚಲಿಸುವ ಜೀವಿಗಳು ಸಾರ್ಕೊಡೈನಾ ಅಥವಾ ರೈಜೊಪೊಡ, ಉದ್ದ ಕಶಾಂಗಗಳ ಮೂಲಕ ಚಲಿಸುವವು ಮ್ಯಾಸ್ಟಿಗೊಫೊರ, ಸೀಲಿಯ ಅಥವಾ ಶಿಲಿಕಾಂಗಗಳ ಮೂಲಕ ಚಲಿಸುವವು ಸೀಲಿಯೋಫೊರ, ಮಿಥ್ಯಾಪಾದಗಳು ಅಥವಾ ಶಿಲಿಕಾಂಗಗಳೆರಡೂ ಇರುವ, ಚಲನೆಯಿಲ್ಲದ ಜೀವಿಗಳು ಸ್ಪೊರೊಜೋವ. ಅತ್ಯಂತ ಸರಳಜೀವಿಗಳಾದ ಅಮೀಬಗಳು ಸಮುದ್ರದಲ್ಲಿ ವಾಸಿಸುವ ಫೊರಾಮಿನಿಫೆರ, ರೇಡಿಯೊಲೇರಿಯ, ಹೀಲಿಯೋಜೋವಗಳು ರೈಜೊಪೊಡ ವರ್ಗಕ್ಕೆ ಸೇರುತ್ತವೆ. ಕೆಲವು ಸ್ತನಿಗಳಲ್ಲಿ ಭೇದಿ ಉಂಟುಮಾಡುವ ಎಂಟಮೀಬ ಕೂಡ ಇದೇ ವರ್ಗಕ್ಕೆ ಸೇರುತ್ತದೆ. ಸಿಹಿನೀರಿನಲ್ಲಿ ವಾಸಿಸುವ ಯುಗ್ಲಿನಾ, ಅನೇಕ ಸ್ತನಿ ಹಾಗೂ ಕಶೇರುಕಗಳಲ್ಲಿ ಹಾಗೂ ಮಾನವನಲ್ಲಿ ನಿದ್ರಾಜ್ವರ ಉಂಟುಮಾಡುವ ಟ್ರಿಪಾನೊಸೋಮಗಳು, ಭೇದಿ ಉಂಟುಮಾಡುವ ಜಿಯಾರ್ಡಿಯಗಳು, ಸಮುದ್ರದಲ್ಲಿ ಜೈವಿಕ ಪ್ರಜ್ವಲನೆಯ ಮೂಲಕ ಮಿನುಗುವ ಡೈನೊಫ್ಲಾಜಿಲ್ಲೆಟಗಳೂ ಮಾಸ್ಟಿಗೊಫೊರವರ್ಗಕ್ಕೆ ಸೇರುತ್ತವೆ. ಮಲೇರಿಯ ಉಂಟುಮಾಡುವ ಪ್ಲಾಸ್ಮೊಡಿಯಮ್, ತಲೆಶೂಲೆ, ಉದರಶೂಲೆ ತರಿಸುವ ಅನೇಕ ಪ್ರಭೇದಗಳು, ರೇಷ್ಮೆ ಕೀಟಗಳಲ್ಲಿ ಉಂಟಾಗುವ ಪೆಬ್ರಿನ್‌ರೋಗಕಾರಕ ನೋಸಿಮಾ ಮುಂತಾದವು ಸ್ಪೊರೊಜೋವ ವರ್ಗಕ್ಕೆ ಸೇರುತ್ತವೆ. ಶಿಲಿಕಾಂಗಗಳಿರುವ ಪ್ಯಾರಾಮೀಸಿಯಮ್, ವರ್ಟಿಸೆಲಗಳು ಸೀಲಿಯೋಫೊರ ವರ್ಗಕ್ಕೆ ಸೇರುತ್ತವೆ. ಪ್ರೊಟೊಜೋವಾಗಳು ಸರಳ ಜೀವಿಗಳಾಗಿದ್ದು ಅವುಗಳ ಕೋಶದಲ್ಲಿ ಒಂದು ಅಥವಾ ಎರಡು ಕೋಶಕೇಂದ್ರಗಳು ಹಾಗೂ ಇನ್ನುಳಿದ ಕೋಶಾಂಗಗಳಿರುತ್ತವೆ. ಸಾಮಾನ್ಯವಾಗಿ ಇವುಗಳಲ್ಲಿ ವರ್ಣಕಗಳಿರುವುದಿಲ್ಲ. ಅನೇಕ ಪ್ರಭೇದಗಳಲ್ಲಿ ನಿರ್ಲಿಂಗ ಪ್ರಜನನವನ್ನು ಮಾತ್ರ ಕಾಣುತ್ತೇವೆ. ಕೆಲವು ಪ್ರಭೇದಗಳಲ್ಲಿ ಲೈಂಗಿಕ ಪ್ರಜನನವಿದ್ದರೂ ಅದರ ವಿಧಾನ ಸರಳವಾಗಿಯೇ ಇರುತ್ತದೆ. ಮಾನವನಲ್ಲಿ ಹಾಗೂ ಇತರ ಪ್ರಾಣಿಗಳಲ್ಲಿ ರೋಗ ಉಂಟುಮಾಡುವ ಸೂಕ್ಷ್ಮಜೀವಿಗಳನ್ನೊಳಗೊಂಡ ಈ ಗುಂಪು ಸೂಕ್ಷ್ಮಜೀವಿಪ್ರಪಂಚದಲ್ಲಿ ಮುಖ್ಯವಾದುದು (ಪ್ರೋಟೊಜೋವಾ ನೋಡಿ).

೪. ಶಿಲೀಂಧ್ರಗಳು: ಕೊಳೆತ ತರಕಾರಿ, ಹಳೆಯ ಬ್ರೆಡ್, ಹಸಿಕಾಳುಗಳು, ಆಹಾರ ಕೆಡಿಸುವ ಹಾಗೂ ಚರ್ಮರೋಗವುಂಟುಮಾಡುವ ಬೂಷ್ಟುಗಳೆಲ್ಲವೂ ಶಿಲೀಂಧ್ರಗಳು. ಇವು ಹರಿತ್ತಿಲ್ಲದ ಸಾವಯವ ಪದಾರ್ಥಗಳನ್ನು ಆಧರಿಸಿ ಬೆಳೆಯುವ ಪರಾವಲಂಬಿಜೀವಿಗಳ ಗುಂಪು. ಇವುಗಳಲ್ಲಿ ೧,೨೦,೦೦೦ ಪ್ರಭೇದಗಳಿವೆ. ಇವನ್ನು ಐದು ಗುಂಪುಗಳಾಗಿ ವಿಂಗಡಿಸಬಹುದು. ಗೋಜಲಾದ ದಾರಗಳ ಗಂಟಿನಂಥ ಶಿಲೀಂಧ್ರಗಳ ಸಂಕೀರ್ಣಕ್ಕೆ ಮೈಸಿಲಿಯಮ್ ಎಂದು ಹೆಸರು. ಅವುಗಳಲ್ಲಿರುವ ಬಿಡಿದಾರಗಳಿಗೆ ಹೈಫೆ ಎಂದು ಹೆಸರು. ಬೇರು, ಎಲೆ, ಕಾಂಡಗಳಂಥ ಯಾವುದೇ ಭಾಗಗಳಿರುವುದಿಲ್ಲ. ನಿರ್ಲಿಂಗ ಅಥವಾ ಲಿಂಗವಿಧಾನದಲ್ಲಿ ಅಥವಾ ಉಭಯ ವಿಧಾನಗಳಿಂದ ಇವು ಸಂತಾನೋತ್ಪತ್ತಿ ಮಾಡುತ್ತವೆ.

ಶಿಲೀಂಧ್ರಗಳು ಜೈವಿಕತಂತ್ರವಿದ್ಯೆಯಲ್ಲಿ ಹೆಚ್ಚು ಬಳಕೆಯಾಗುತ್ತಿವೆ. ಸಸ್ಯರೋಗಗಳನ್ನು ನಿಯಂತ್ರಿಸಲು ಇವನ್ನು ಬಳಸಲಾಗುತ್ತಿದೆ. ವೈದ್ಯಕೀಯ ರಂಗದಲ್ಲಿ ಶ್ವಾಸಕೋಶಗಳ ಸ್ಪರ್‌ಜಿಲ್ಲೋಸಿಸ್ ನಿಯಂತ್ರಿಸಲು ಇವುಗಳ ಉಪಯೋಗವಿದೆ. ಹಾಗೆಯೇ ಶಿಲೀಂಧ್ರಗಳನ್ನು ರೊಚ್ಚುನೀರಿನಲ್ಲಿ ಫಾಸ್‌ಫೇಟ್ ಮತ್ತು ಅಮೋನಿಯ ಎಂಬ ರಾಸಾಯನಿಕ ವಸ್ತುಗಳನ್ನು ಬೇರ್ಪಡಿಸಲು ಬಳಸಲಾಗುತ್ತದೆ. ಕೈಗಾರಿಕಾರಂಗದಲ್ಲಿ ಉತ್ಪತ್ತಿಯಾಗುವ ನಿರುಪಯೋಗಿ ವಸ್ತುಗಳ ನಿರ್ಮೂಲನಕ್ಕೆ ಇವು ಸಹಾಯಕವಾಗುತ್ತವೆ. ಶೇ. ೯೦ರಷ್ಟು ಮರಗಿಡಗಳಲ್ಲಿ ಶಿಲೀಂಧ್ರದ ಬೇರುಗಳು ಕಾಣಸಿಗುತ್ತವೆ. ಇವುಗಳಿಗೆ ಮೈಕೊರೈಜಗಳೆಂದು ಹೆಸರು. ಮೈಕೊರೈಜಗಳಲ್ಲಿ ಎರಡು ವಿಧಗಳಿವೆ–ಎಂಡೋಮೈಕೊರೈಜ ಮತ್ತು ಎಕ್ಟೊಮೈಕೊರೈಜ. ಮೊದಲನೆಯದು ಬೇರುಗಳ ಒಳಹೊಕ್ಕು ಜೀವನ ಮಾಡುತ್ತದೆ, ಎರಡನೆಯದು ಬೇರಿನ ಹೊರಭಾಗದಲ್ಲಿ ಕವಚದಂತಿರುತ್ತದೆ. ಇವು ಸಸ್ಯಗಳಿಗೆ ಬಹು ಪ್ರಯೋಜನಕಾರಿಗಳಾಗಿ ಕೆಲಸ ನಿರ್ವಹಿಸುತ್ತವೆ.

ಸೂಕ್ಷ್ಮಜೀವಿವಿಜ್ಞಾನದಲ್ಲಿ ಪ್ರಧಾನವಾಗಿ ನಾಲ್ಕು ಶಾಖೆಗಳಿವೆ.

೧. ಕೈಗಾರಿಕಾ ಸೂಕ್ಷ್ಮಜೀವಿವಿಜ್ಞಾನ: ಕೈಗಾರಿಕಾ ಮಟ್ಟದಲ್ಲಿ ಬಳಕೆ ಯಾಗುವ ಸೂಕ್ಷ್ಮಜೀವಿಗಳನ್ನು ಗುರುತಿಸುವುದು, ಅವುಗಳ ರಚನೆ, ಕ್ರಿಯಾವಿಧಾನ, ಅವನ್ನು ಕೈಗಾರಿಕಾಮಟ್ಟದಲ್ಲಿ ಬಳಸಿಕೊಳ್ಳುವ ತಂತ್ರವನ್ನು ಅಧ್ಯಯನ ಮಾಡುವುದು ಮುಂತಾದವೆಲ್ಲವೂ ಈ ವಿಭಾಗದ ಪರಿಧಿಯಲ್ಲಿ ಬರುತ್ತವೆ. ಇದರಲ್ಲಿ ಮದ್ಯ, ವಿವಿಧ ಕಿಣ್ವಗಳು, ಅಮೈನೊ ಆಮ್ಲಗಳು, ಬ್ರೆಡ್ ಮುಂತಾದುವುಗಳ ತಯಾರಿಕೆಯಲ್ಲಿ ಬಳಸಲಾಗುವ ಸೂಕ್ಷ್ಮಜೀವಿಗಳು ಹಾಗೂ ತಯಾರಿಕೆಯ ತಂತ್ರ ಇವನ್ನು ಅಧ್ಯಯನ ಮಾಡಲಾಗುತ್ತದೆ.

೨. ಆಹಾರ ಮತ್ತು ಹೈನು ಸೂಕ್ಷ್ಮಜೀವಿವಿಜ್ಞಾನ: ಆಹಾರ ತಯಾರಿಕೆಯಲ್ಲಿ ಬಳಕೆಯಾಗುವ ಸೂಕ್ಷ್ಮಜೀವಿಗಳು, ನಾವು ಸೇವಿಸುವ ಆಹಾರದೊಡನೆ ಬೆರೆತು ಶರೀರವನ್ನು ಹೊಕ್ಕು ರೋಗವುಂಟುಮಾಡುವ ಸೂಕ್ಷ್ಮ ಜೀವಿಗಳು, ಶೇಖರಿಸಿಟ್ಟ ಆಹಾರವನ್ನು

ಹಾಳುಗೆಡಿಸುವ ಸೂಕ್ಷ್ಮಜೀವಿಗಳು, ಹಾಲಿನಿಂದ ತಯಾರಾಗುವ ಪದಾರ್ಥಗಳಲ್ಲಿ ಕಂಡುಬರುವ ಸೂಕ್ಷ್ಮಾಣುಗಳನ್ನು ಕುರಿತ ಅಧ್ಯಯನಗಳು ಈ ವಿಭಾಗಕ್ಕೆ ಸೇರುತ್ತವೆ.

೩. ಜಲಸೂಕ್ಷ್ಮಜೀವಿವಿಜ್ಞಾನ: ನೀರಿನಲ್ಲಿ ವಾಸಿಸುವ ಸೂಕ್ಷ್ಮಜೀವಿಗಳು, ಅವುಗಳಿಂದ ಮಾನವನಿಗೆ ಹಾಗೂ ಇತರ ಪ್ರಾಣಿಗಳಿಗೆ ತಗಲುವ ರೋಗಗಳು ಮುಂತಾದುವುಗಳ ಬಗ್ಗೆ ಈ ವಿಭಾಗದಲ್ಲಿ ಅಧ್ಯಯನ ಮಾಡಲಾಗುತ್ತದೆ.

೪. ವೈದ್ಯಕೀಯ ಸೂಕ್ಷ್ಮಜೀವಿವಿಜ್ಞಾನ ಮಾನವನಲ್ಲಿ ರೋಗ ಉಂಟುಮಾಡುವ ಸೂಕ್ಷ್ಮಜೀವಿಗಳ ರಚನೆ, ಕಾರ್ಯವಿಧಾನ, ಹರಡುವಿಕೆ, ರೋಗ ಚಿಕಿತ್ಸಾವಿಧಾನ ಮುಂತಾದುವುಗಳನ್ನು ಅಧ್ಯಯನ ಮಾಡುತ್ತದೆ. ಸೂಕ್ಷ್ಮಜೀವಿಗಳ ರಚನೆಯಂಥ ಸರಳ ಅಧ್ಯಯನದಿಂದ ಆರಂಭವಾದ ಈ ಸೂಕ್ಷ್ಮಜೀವಿವಿಜ್ಞಾನ ಇಂದು ಬೆಳೆದು ಹೆಮ್ಮರವಾಗಿದೆ.

(ಟಿ.ಎಂ.ಆರ್.)

**ಸೂಕ್ಷ್ಮದರ್ಶಕ:** ಅತಿ ಸಣ್ಣ ವಸ್ತುಗಳ ಅಥವಾ ವಸ್ತುಗಳ ಅತಿ ಸೂಕ್ಷ್ಮ ವಿವರಗಳ ವರ್ಧಿತ ಬಿಂಬ ಉತ್ಪಾದಿಸಬಲ್ಲ ಸಾಧನ (ಮೈಕ್ರಸ್ಕೋಪ್). ದ್ಯುತಿ, ಧ್ವನಿ ಅಥವಾ ಎಲೆಕ್ಟ್ರಾನಿಕ್ ವಿಧಾನಗಳಿಂದ ಬಿಂಬೋತ್ಪತ್ತಿ, ನೇರವಾಗಿ ಅಥವಾ ಎಲೆಕ್ಟ್ರಾನಿಕ್ ಸಂಸ್ಕರಣೆಗೊಳಪಡಿಸಿ ಅಥವಾ ಎರಡರ ಯುಕ್ತ ಸಂಯೋಜನೆಯಿಂದ ಉತ್ಪಾದಿತ ಬಿಂಬದ ವೀಕ್ಷಣೆ, ನೇರವಾಗಿ ವಸ್ತುವಿನ ಬಿಂಬೋತ್ಪಾದನೆ ಆಗಬಹುದು; ವಸ್ತುವಿನ ಕ್ರಮ ವೀಕ್ಷಣೆಯಿಂದಲೂ (ಸ್ಕ್ಯಾನ್) ಬಿಂಬ ನಿರ್ಮಾಣವೂ ಆಗಬಹುದು. ವಸ್ತುವಿನ ಎಷ್ಟು ಪಟ್ಟು ವರ್ಧಿತ ಬಿಂಬವನ್ನು ಸೂಕ್ಷ್ಮದರ್ಶಕ ಉತ್ಪಾದಿಸಬಲ್ಲುದು ಎಂಬುದನ್ನು ಸೂಚಿಸುವ ಸಂಖ್ಯೆ ಅದರ ವರ್ಧನ ಸಾಮರ್ಥ್ಯ (ಮ್ಯಾಗ್ನಿಫೈಯಿಂಗ್ ಪವರ್). ಇದೊಂದು ಏಕಮಾನವಿಲ್ಲದ ನಿಷ್ಪತ್ತಿ. ವೀಕ್ಷಿಸಬಹುದಾದ ಸೂಕ್ಷ್ಮವಿವರದ ಗಾತ್ರದ ಅಳತೆಯೇ ಅದರ ಪೃಥಕ್ಕರಣ ಸಾಮರ್ಥ್ಯ (ರಿಸಾಲ್ವಿಂಗ್ ಪವರ್). ರೇಖೀಯ ಏಕಮಾನದಲ್ಲಿ (ಸಾಮಾನ್ಯವಾಗಿ ಮಿಮೀ ಗಳಲ್ಲಿ) ಇದನ್ನು ಸೂಚಿಸುವುದು ವಾಡಿಕೆ.

ದೃಗ್ಸೂಕ್ಷ್ಮದರ್ಶಕಗಳು (ಆಪ್ಟಿಕಲ್ ಮೈಕ್ರೊಸ್ಕೋಪ್ಸ್): ವಸ್ತುವಿನ ವರ್ಧಿತ ಬಿಂಬೋತ್ಪಾದನೆಗೆ ದೃಶ್ಯ ಬೆಳಕನ್ನು ಉಪಯೋಗಿಸುವ ಸೂಕ್ಷ್ಮದರ್ಶಕಗಳು. ಇವುಗಳ ಬಳಕೆ ವ್ಯಾಪಕ. ಅಲ್ಪ ನಾಭಿಯುದ್ದದ ದ್ವಿಪೀನ ಮಸೂರವೇ ಸರಳ ಸೂಕ್ಷ್ಮದರ್ಶಕ. ೧–೧೦ ವ್ಯಾಪ್ತಿಯ ವರ್ಧನ ಸಾಮರ್ಥ್ಯವುಳ್ಳ ಇವುಗಳಿಂದ ಸು. ೦.೦೧ಮಿಮೀ ವರೆಗಿನ ಪೃಥಕ್ಕರಣ ಸಾಧ್ಯ. ಆದರೂ ಒಂದಕ್ಕಿಂತ ಹೆಚ್ಚು ಮಸೂರಗಳುಳ್ಳ ಸಂಯುಕ್ತ ಸೂಕ್ಷ್ಮದರ್ಶಕಗಳ ಬಳಕೆ ಸಾರ್ವತ್ರಿಕ. ೨.೫–೧೦೦೦ ವ್ಯಾಪ್ತಿಯ ವರ್ಧನ ಸಾಮರ್ಥ್ಯವುಳ್ಳ ಇವು ೦.೦೧–೦.೦೦೦೨ ಮಿಮೀ ಪೃಥಕ್ಕರಣ ಒದಗಿಸಬಲ್ಲುವು.

ವಸ್ತುಕ (ಆಬ್‌ಜೆಕ್ಟಿವ್) ಮತ್ತು ನೇತ್ರಕ (ಐ ಪೀಸ್) ಎಂಬ ಎರಡು ಮಸೂರ ವ್ಯವಸ್ಥೆಗಳು ವಿರುದ್ಧ ತುದಿಗಳಲ್ಲಿರುವ ಕೊಳವೆ ಸಂಯಕ್ತ ಸೂಕ್ಷ್ಮದರ್ಶಕದ ಪ್ರಧಾನ ಘಟಕ. ಕನಿಷ್ಠ ಎರಡು ಮಸೂರಗಳ ಸಂಯೋಜಿತ ಘಟಕ ವಸ್ತು. ವೀಕ್ಷಿತ ವಸ್ತುವಿನ ವರ್ಧಿತ ನಿಜ ಬಿಂಬೋತ್ಪಾದನೆ ಇದರ ಕಾರ್ಯ. ನಿಜ ಬಿಂಬದ ವರ್ಧಿತ ಮಿಥ್ಯ ಬಿಂಬೋತ್ಪಾದನೆ ನೇತ್ರಕದ ಕಾರ್ಯ. ಒಂದು ನೇತ್ರಕವುಳ್ಳದ್ದು ಏಕನೇತ್ರೀಯ (ಮಾನಾಕ್ಯುಲರ್), ಎರಡು ಉಳ್ಳದ್ದು ದ್ವಿನೇತ್ರೀಯ (ಬೈನಾಕ್ಯುಲರ್) ಸೂಕ್ಷ್ಮದರ್ಶಕ. ಎರಡೂ ಮಸೂರ ವ್ಯವಸ್ಥೆಗಳ ನಾಭಿಯುದ್ದಗಳು ಸೂಕ್ಷ್ಮದರ್ಶಕದ ವರ್ಧನ ಸಾಮರ್ಥ್ಯದ ನಿರ್ಧಾರಕಗಳು. ವೀಕ್ಷಿಸಬೇಕಾದ ವಸ್ತುವನ್ನು ಸ್ಥಿರವಾಗಿ ಹಿಡಿದಿಡಬಲ್ಲ ವೇದಿಕೆ, ಮಸೂರ ವ್ಯವಸ್ಥೆಗಳುಳ್ಳ ಕೊಳವೆಯನ್ನು ಹಿಂದಕ್ಕೂ ಮುಂದಕ್ಕೂ ಚಲಿಸುವ ವ್ಯವಸ್ಥೆಯೂ ಉಂಟು. ಗಾಜಿನ ತೆಳು ಫಲಕದ ಮೇಲೆ ನಮೂನೆಯನ್ನಿಟ್ಟು ಅದರ ಮೂಲಕ ಬೆಳಕನ್ನು ಹಾಯಿಸಿ ವೀಕ್ಷಿಸುವದು ಸಾಮಾನ್ಯ. ಇದಕ್ಕಾಗಿ, ನಮೂನೆಯತ್ತ ಬೆಳಕನ್ನು ಬೀರಬಲ್ಲ ವ್ಯವಸ್ಥೆಯೂ ಉಂಟು. ವರ್ಧಿತ ಬಿಂಬದ ಛಾಯಾಚಿತ್ರ ಪಡೆಯಲು ನೆರವಾಗುವ ಕ್ಯಾಮೆರವನ್ನು ನೇತ್ರಕದೊಂದಿಗೆ ಸಂಯೋಜಿಸಿರುವ ಸೂಕ್ಷ್ಮದರ್ಶಕಗಳಿವೆ. ಸಂಶೋಧಕರು ಬಳಸುವ ಸೂಕ್ಷ್ಮದರ್ಶಕಗಳಲ್ಲಿ ಮೈಕ್ರೊಮೀಟರ್ ತಿರುಪುಗಳ ನೆರವಿನಿಂದ ವೇದಿಕೆಯನ್ನು ಚಲಿಸುವ ಮತ್ತು ಆವರ್ತಿಸುವ ವ್ಯವಸ್ಥೆಯೊಂದಿಗೆ ಮೂರು ಅಥವಾ ಹೆಚ್ಚು ವಸ್ತುಕಗಳಿರುತ್ತವೆ.

ವಿಶೇಷೋದ್ದೇಶ ದೃಗ್ಸೂಕ್ಷ್ಮದರ್ಶಕಗಳು: ವಿಶಿಷ್ಟ ಲಕ್ಷಣಗಳಿರುವ ಸೂಕ್ಷ್ಮದರ್ಶಕಗಳು. ಉದಾ: ೧. ಘನರೂಪದರ್ಶಿ (ಸ್ಟೀರಿಯೊಸ್ಕೋಪಿಕ್) ಸೂಕ್ಷ್ಮದರ್ಶಕ: ಮೂರು ಆಯಾಮಗಳುಳ್ಳ ಬಿಂಬೋತ್ಪಾದನೆಗಾಗಿ ಏಕಕಾಲದಲ್ಲಿ ಒಂದು ನಮೂನೆಯನ್ನು ನಾಭಿಸ್ಥಗೊಳಿಸಬಲ್ಲ ಎರಡು ಅಲ್ಪ ಸಾಮರ್ಥ್ಯದ ಸೂಕ್ಷ್ಮದರ್ಶಕಗಳ ಸಂಯೋಜನೆ. ೨. ಅತಿನೇರಳೆ ಸೂಕ್ಷ್ಮದರ್ಶಕ: ರೋಹಿತದ ಅತಿನೇರಳೆ ಭಾಗದ ಅಲೆಯುದ್ದಗಳನ್ನು ಉಪಯೋಗಿಸುತ್ತದೆ. ಬೆಣಚು, ಫ್ಲೂರೈಟ್ ಅಥವಾ ಅಲ್ಯೂಮಿನೀಕೃತ ದರ್ಪಣದ ದೃಕ್‌ಘಟಕಗಳಿರುತ್ತವೆ. ಸ್ಫುರದೀಪ್ತಿ ಛಾಯಾಚಿತ್ರೀಕರಣ ಅಥವಾ ಎಲೆಕ್ಟ್ರಾನಿಕ್ ಕ್ರಮವೀಕ್ಷಣೆಯ ನೆರವಿನಿಂದ ದೃಶ್ಯ ಬಿಂಬೋತ್ಪಾದನೆ. ವೈದ್ಯವಿಜ್ಞಾನ ಸಂಶೋಧನೆಗಳಲ್ಲಿ ಬಳಕೆ. ೩. ಶಿಲಾವರ್ಣನ (ಪೆಟ್ರೊಗ್ರ್ಯಾಫಿಕ್) ಸೂಕ್ಷ್ಮದರ್ಶಕ: ಅಗ್ನಿ ಮತ್ತು ರೂಪಾಂತರಿತಶಿಲೆಗಳಲ್ಲಿ ಖನಿಜ ಘಟಕಗಳನ್ನು ಗುರುತಿಸಲು ಮತ್ತು ಅವುಗಳ ಪ್ರಮಾಣ ಅಂದಾಜಿಸಲು ಬಳಕೆ. ನಿಕಲ್ ಅಶ್ರಗ ಅಥವಾ ಇತರ ಯಾವುದಾದರೂ ಸಾಧನದಿಂದ ಧ್ರುವೀಕರಿಸಿದ ಬೆಳಕಿನಲ್ಲಿ ನಮೂನೆಯ ಪರೀಕ್ಷೆ. ಇನ್ನೊಂದು ನಿಕಲ್ ಅಶ್ರಗ ಅಥವಾ ವಿಶ್ಲೇಷಕದ ನೆರವಿನಿಂದ ನಮೂನೆಯಿಂದಾದ ಧ್ರುವೀಕರಣದ ಮತ್ತು ಆವರ್ತಿಸುವ ವೇದಿಕೆಯ ನೆರವಿನಿಂದ ಧ್ರುವೀಕರಣ ಬದಲಾವಣೆಯ ನಿರ್ಧಾರ. ೪. ಕಪ್ಪುಕ್ಷೇತ್ರ (ಡಾರ್ಕ್ ಫೀಲ್ಡ್) ಸೂಕ್ಷ್ಮದರ್ಶಕ: ನಮೂನೆಯ ಮೇಲೆ ಕೇಂದ್ರೀಕೃತವಾಗುವ ಅತಿ ತೀವ್ರ ಬೆಳಕಿನ ಟೊಳ್ಳು ಶಂಕುವಿನಿಂದ ದೀಪನ ವ್ಯವಸ್ಥೆ. ವಸ್ತುಕದ ದೃಶ್ಯಕ್ಷೇತ್ರವು ಶಂಕುವಿನ ಕಪ್ಪು ಟೊಳ್ಳು ಭಾಗದಲ್ಲಿದ್ದು ವಸ್ತು ಚದುರಿಸಿದ ಬೆಳಕನ್ನು ಮಾತ್ರ ಗ್ರಹಿಸುತ್ತದೆ. ತತ್ಪರಿಣಾಮವಾಗಿ, ವೀಕ್ಷಿತ ಅತಿಸೂಕ್ಷ್ಮ ಭಾಗಗಳು ಕಪ್ಪು ಹಿನ್ನೆಲೆಯಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತವೆ. ಪ್ರಸಾಮಾನ್ಯ ದೀಪನದಲ್ಲಿ ವೀಕ್ಷಿಸಲಾಗದಷ್ಟು ಪುಟ್ಟ ವಸ್ತುಗಳ ಮತ್ತು ಅನಭಿರಂಜಿತ (ಅನ್‌ಸ್ಟೇಯ್ನ್ಡ್) ಪಾರಕ ಜೈವಿಕ ವಸ್ತುಗಳ ವೀಕ್ಷಣೆಗೆ ಈ ಸೂಕ್ಷ್ಮದರ್ಶಕ ಉಪಯುಕ್ತ. ೫. ಪ್ರಾವಸ್ಥೆ (ಫೇಸ್) ಸೂಕ್ಷ್ಮದರ್ಶಕ: ಇದರ ದೀಪನ ವ್ಯವಸ್ಥೆಯೂ ಬೆಳಕಿನ ಟೊಳ್ಳು ಶಂಕುವೇ ಇದಕ್ಕೂ ದೀಪನ ವ್ಯವಸ್ಥೆ. ಬೆಳಕಿನ ಶಂಕು ಕಿರಿದಾಗಿದ್ದು ವಸ್ತುಕದ ದೃಶ್ಯಕ್ಷೇತ್ರವನ್ನು ಪ್ರವೇಶಿಸುವುದು ಇದರ ಒಂದು ವಿಶೇಷತೆ. ಬೆಳಕಿನ ತೀವ್ರತೆಯನ್ನು ಕಡಿಮೆ ಮಾಡಿ ಅಲೆಯುದ್ದದ ¼ ಭಾಗದಷ್ಟು ಪ್ರಾವಸ್ಥೆ ಪಲ್ಲಟನ (ಶಿಫ್ಟ್) ಉಂಟುಮಾಡುವ ಉಂಗುರಾಕೃತಿಯ ಸಾಧನವೊಂದು ವಸ್ತುಕದಲ್ಲಿ ಇರುವುದು ಇನ್ನೊಂದು ವಿಶೇಷತೆ. ಇಂಥ ದೀಪನ ವ್ಯವಸ್ಥೆ ಪಾರಕ ವಸ್ತುವಿನ ವಕ್ರೀಭವನಾಂಕವನ್ನು ಅತ್ಯಲ್ಪ ಪ್ರಮಾಣದಲ್ಲಿ ಬದಲಿಸಿ ತನ್ಮೂಲಕ ಅದು ದೃಗ್ಗೋಚರವಾಗುವಂತೆ ಮಾಡುತ್ತದೆ. ಜೀವಂತ ಊತಕಗಳ ವೀಕ್ಷಣೆಗೆ ಇದು ಉಪಯುಕ್ತ. ೬. ಸಮೀಪ ಕ್ಷೇತ್ರ (ನಿಯರ್ ಫೀಲ್ಡ್) ಸೂಕ್ಷ್ಮದರ್ಶಕ: ದೀಪಿಸುವ ಬೆಳಕಿನ ಅಲೆಯುದ್ದಕ್ಕಿಂತ ಕೊಂಚ ಚಿಕ್ಕದಾದ ವಿವರಗಳನ್ನು ವೀಕ್ಷಿಸಲು ಉಪಯುಕ್ತ.

ಸಂನಾಭೀ (ಕನ್‌ಫೋಕಲ್) ಸೂಕ್ಷ್ಮದರ್ಶಕ: ಲೇಸರ್ ಬೆಳಕಿನ ಉಪಯೋಗ ಇದರ ವಿಶಿಷ್ಟತೆ. ಕ್ರಮಲೋಕಿಸುವ ದರ್ಪಣಗಳನ್ನು ಉಪಯೋಗಿಸಿ ಲೇಸರ್ ಬೆಳಕಿನಿಂದ ನಮೂನೆಯನ್ನು ಅಡ್ಡಡ್ಡಲಾಗಿ ಕ್ರಮಲೋಕಿಸಿ ಅಂಕಾತ್ಮಕ (ಡಿಜಿಟಲ್) ಗಣಕದ ಪರದೆಯ ಮೇಲೆ ಬಿಂಬ ಮೂಡಿಸುತ್ತದೆ. ಪ್ರತಿಫಲನ ಅಥವಾ ಪ್ರತಿ ದೀಪ್ತಿಯಿಂದ ದಪ್ಪನೆಯ ನಮೂನೆಗಳನ್ನು ಸಪಾಟಾದ ತೆಳು ದೃಕ್‌ಹಲ್ಲೆಗಳಾಗಿ ಛೇದಿಸಬಲ್ಲುದು. ದೃಷ್ಟಿರೇಖೆಗೆ ಸಮಾಂತರದಲ್ಲಿರುವ, ಸಮತಲದಲ್ಲಿರುವ ನಮೂನೆ ಹಲ್ಲೆಗಳನ್ನೂ ವೀಕ್ಷಿಸಬಲ್ಲುದು. ಅತ್ಯುಚ್ಚ ಪೃಥಕ್ಕರಣವುಳ್ಳ ೩ ಆಯಾಮಗಳ ಬಿಂಬ ಸೃಷ್ಟಿಸುತ್ತದೆ.

ಎಲೆಕ್ಟ್ರಾನ್ ಸೂಕ್ಷ್ಮದರ್ಶಕ: ದೃಶ್ಯ ಬೆಳಕಿನ ಅಲೆಯುದ್ದದಿಂದಾಗಿ ದೃಗ್ಸೂಕ್ಷ್ಮದರ್ಶಕದ ವರ್ಧನ ಸಾಮರ್ಥ್ಯಕ್ಕೆ ಮೇಲ್ಮಿತಿ ಉಂಟು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳು ವಸ್ತುವನ್ನು ಎಲೆಕ್ಟ್ರಾನುಗಳಿಂದ 'ಬೆಳಗುತ್ತವೆ'. ಎಲೆಕ್ಟ್ರಾನುಗಳ ಅಲೆಯುದ್ದ ದೃಶ್ಯಬೆಳಕಿನ ಅಲೆಯುದ್ದಕ್ಕಿಂತ ಬಹುಪಟ್ಟು ಕಡಿಮೆ (ದೃಶ್ಯ ಬೆಳಕಿನ ಅತ್ಯಂತ ಕಡಿಮೆ ಅಲೆಯುದ್ದ ಸು. ೪೦೦೦ ಆಂಗ್‌ಸ್ಟ್ರಾಮ್. ಈ ಸೂಕ್ಷ್ಮದರ್ಶಕದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಎಲೆಕ್ಟ್ರಾನುಗಳ ಅಲೆಯುದ್ದವಾದರೋ ಸು. ೦.೫ ಆಂಗ್‌ಸ್ಟ್ರಾಮ್). ಎಂದೇ, ಅವು ದೃಶ್ಯಬೆಳಕಿನಿಂದ ಪೃಥಕ್ಕರಿಸಲಾಗದ ಅತಿ ಸೂಕ್ಷ್ಮ ವಿವರಗಳನ್ನು ಪೃಥಕ್ಕರಿಸಬಲ್ಲವು.

ಎಲೆಕ್ಟ್ರಾನುಗಳನ್ನು ಉತ್ಸರ್ಜಿಸುವ ಎಲೆಕ್ಟ್ರಾನ್ ಕೋವಿ, ಅವನ್ನು ನಿರ್ದೇಶಿಸಿ ನಾಭೀಕರಿಸಬಲ್ಲ ಕಾಂತಕ್ಷೇತ್ರಗಳು, ಅತ್ಯುಚ್ಚ ನಿರ್ವಾತ ಕೊಳವೆ, ಎಲೆಕ್ಟ್ರಾನುಗಳು ಉತ್ಪಾದಿಸುವ ಬಿಂಬವನ್ನು ದಾಖಲಿಸಿ ಪ್ರದರ್ಶಿಸುವ ವ್ಯವಸ್ಥೆ – ಇವು ಎಲ್ಲ ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳ ಮೂಲ ಘಟಕಗಳು.

ಮೂಲತಃ ಎರಡು ಬಗೆಯ ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳಿವೆ. ೧. ಪ್ರೇಷಣೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕ: ಎಲೆಕ್ಟ್ರಾನ್ ಮೂಲ ನಮೂನೆಯನ್ನು ತಾಕಿದಾಗ ಕೆಲವು ಎಲೆಕ್ಟ್ರಾನುಗಳು ಪುಟಿದು ಎತ್ತೆತ್ತಲೋ ಹೋಗುತ್ತವೆ. ಕೆಲವನ್ನು ನಮೂನೆ ಅಪಶೋಷಿಸುತ್ತದೆ. ಉಳಿದವು ನಮೂನೆಯ ಮೂಲಕ ಹಾಯ್ದು ಅದರ ವರ್ಧಿತ ಬಿಂಬವನ್ನು ರೂಪಿಸುತ್ತವೆ.

ಈ ಸೂಕ್ಷ್ಮದರ್ಶಕದಲ್ಲಿ ನಮೂನೆಯ ಅತ್ಯಂತ ತೆಳು ಹಾಲೆಯನ್ನು ಮಾತ್ರ ವೀಕ್ಷಿಸಬಹುದು (ಪ್ರಸಾಮಾನ್ಯವಾಗಿ ಕೆಲವು ಸಹಸ್ರ ಆಂಗ್‌ಸ್ಟ್ರಾಮ್‌ಗಿಂತ ದಪ್ಪವಿರಕೂಡದು). ನಮೂನೆಯ ಮತ್ತೊಂದು ಪಾರ್ಶ್ವದಲ್ಲಿ ಇರುವ ಫೋಟೋಗ್ರಾಫಿಕ್ ಫಲಕ ಅಥವಾ ಪ್ರತಿದೀಪ್ತಿ ಪರದೆಯ ಮೇಲೆ ವರ್ಧಿತ ಬಿಂಬ ದಾಖಲಾಗುತ್ತದೆ. ನಮೂನೆಯ ಒಂದು ಮಿಲಿಯ ಪಟ್ಟು ವರ್ಧಿತ ಬಿಂಬ ಪಡೆಯಬಹುದು. ೨. ಕ್ರಮಲೋಕಿಸುವ ಎಲೆಕ್ಟ್ರಾನ್ ಸೂಕ್ಷ್ಮದರ್ಶಕ: ಬಿಗಿಯಾಗಿ ನಾಭೀಕರಿಸಿದ ಎಲೆಕ್ಟ್ರಾನ್ ದೂಲ ನಮೂನೆಯ ಮೇಲ್ಮೈಯನ್ನು ಕೊಂಚಕೊಂಚವಾಗಿ ಕ್ರಮಲೋಕಿಸಿ ಅದರ ಮೂರು ಆಯಾಮಗಳ ವರ್ಧಿತ ಬಿಂಬ ಮೂಡಿಸುತ್ತದೆ. ಇದರಲ್ಲಿ ನಮೂನೆ ತೆಳುವಾಗಿರಲೇ ಬೇಕೆಂದಿಲ್ಲ. ಸು. ೧೦೦,೦೦೦ ಪಟ್ಟು ವರ್ಧಿತ ಬಿಂಬ ಉತ್ಪಾದಿಸಬಲ್ಲುದು.

ಇವಲ್ಲದೆ ಕ್ರಮಲೋಕಿಸುವ ಪ್ರೇಷಣೆ ಸೂಕ್ಷ್ಮದರ್ಶಕ, ಎಲೆಕ್ಟ್ರಾನ್ ಶೋಧಕ (ಪ್ರೋಬ್) ಸೂಕ್ಷ್ಮವಿಶ್ಲೇಷಕ ಎಂಬ ವಿಶೇಷೋದ್ದೇಶ ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳೂ ಉಂಟು. ಮೊದಲನೆಯದು ನಮೂನೆಯಲ್ಲಿರುವ ಪ್ರತಿಯೊಂದು ಪರಮಾಣುವನ್ನೂ ಪೃಥಕ್ಕರಿಸಬಲ್ಲದು. ಎರಡನೆಯದು ನಮೂನೆಯ ರಾಸಾಯನಿಕ ಸಂರಚನೆಯ ಮಾಹಿತಿಯನ್ನೂ ಒದಗಿಸಬಲ್ಲದು.

ಕ್ರಮಲೋಕಿಸುವ ಶೋಧಕ ಸೂಕ್ಷ್ಮದರ್ಶಕ: ಇದು ಒಂದು ಪರಮಾಣು ಗಾತ್ರದಷ್ಟು ಮೊನಚು ತುದಿಯ ಲೋಹ ಶೋಧಕದ ನೆರವಿನಿಂದ ನಮೂನೆಯ ಮೇಲ್ಮೈಯನ್ನು ಕ್ರಮಲೋಕಿಸಿ ಪರಮಾಣು ಅಥವಾ ಅಣು ಜಾಲದ ೩ ಆಯಾಮದ ಬಿಂಬೋತ್ಪತ್ತಿ ಮಾಡುತ್ತದೆ. ಕ್ರಮಲೋಕಿಸುವ ಸುರಂಗಕೊರೆಯುವ (ಸ್ಕ್ಯಾನಿಂಗ್ ಟನೆಲಿಂಗ್) ಸೂಕ್ಷ್ಮದರ್ಶಕ ಮತ್ತು ಪರಮಾಣವಿಕ ಬಲ ಸೂಕ್ಷ್ಮದರ್ಶಕ ಇದರ ಎರಡು ಪ್ರಭೇದಗಳು.

ಸೂಕ್ಷ್ಮದರ್ಶಕ ವಿಕಸನದ ಕಾಲರೇಖೆ: ಅಜ್ಞಾತ ವ್ಯಕ್ತಿಯಿಂದ 'ಓದುವ ಕಲ್ಲು' ಎಂಬ ಹೆಸರಿನ ಗಾಜಿನಗೋಲದ ಶೋಧ (ಸು. ಕ್ರಿ.ಶ ೧೦೦೦). ಸ್ಯಾಲ್ವಿನೊ ಡಿ ಆರ್ಮೆಟೆ ಎಂಬಾತನಿಂದ ಧಾರಣಯೋಗ್ಯ ಕನ್ನಡಕಗಳ ಶೋಧ (ಸು. ೧೨೮೪). ಝಕಾರಿಯಾಸ್ ಜಾನ್‌ಸೆನ್ ಮತ್ತು ಹ್ಯಾನ್ಸ್ ಜಾನ್ಸೆನ್‌ರಿಂದ (೧೫೯೦) ಮಸೂರಗಳನ್ನು ಯುಕ್ತ ಜೋಡಣೆಯುಳ್ಳ ಕೊಳವೆಯ ಮೂಲಕ ವಸ್ತುಗಳನ್ನು ನೋಡಿದರೆ ಅವು ದೊಡ್ಡದಾಗಿ ಕಾಣುತ್ತವೆ ಎಂಬ ಸಂಶೋಧನೆ. ರಾಬರ್ಟ್ ಹುಕ್ (೧೬೩೫–೧೭೦೩) ಸರಳ ಸೂಕ್ಷ್ಮದರ್ಶಕದಿಂದ ಮರದ ಕಾರ್ಕ್‌ನ ಹಾಲೆ ವೀಕ್ಷಿಸಿದ್ದು (೧೬೬೫). ಆಂಟನ್ ವಾನ್ ಲೀವೆನ್‌ಹುಕ್ (೧೬೩೨–೧೭೨೩) ಮೊದಲನೆಯ ಸರಳ ಸೂಕ್ಷ್ಮದರ್ಶಕ ನಿರ್ಮಿಸಿದ್ದು (೧೬೭೪). ವರ್ಣವಿಪಥನ ಪ್ರಮಾಣ ಕಡಿಮೆ ಮಾಡುವುದು ಮುಂತಾದ ಅನೇಕ ತಾಂತ್ರಿಕ ಸುಧಾರಣೆಗಳಿಂದಾಗಿ ವಿಜ್ಞಾನಿಗಳಿಂದ ಸೂಕ್ಷ್ಮದರ್ಶಕಕ್ಕೆ ಮಾನ್ಯತೆ (೧೮ನೆಯ ಶತಮಾನ). ಅನೇಕ ದುರ್ಬಲ ಮಸೂರಗಳ ಯುಕ್ತ ಸಂಯೋಜನೆಯಿಂದ ಗೋಳಿಯ ವಿಪಥನದ ಪ್ರಮಾಣ ಕಡಿಮೆ ಮಾಡಬಹುದೆಂದು ಜೋಸೆಫ್ ಜ್ಯಾಕ್ಸನ್ ಲಿಸ್ಟರ್ (೧೭೮೬–೧೮೬೯) ಸಾಧಿಸಿ ತೋರಿಸಿದ್ದು (೧೮೩೦). ಅರ್ನೆಸ್ಟ್ ಅಬ್ಬೆ (೧೮೪೦–೧೯೦೫) ಎಂಬಾತನಿಂದ ಗರಿಷ್ಠ ಪೃಥಕ್ಕರಣ ಸಾಧಿಸಲು ನೆರವಾಗುವ 'ಅಬ್ಬೆ ಸೈನ್ ಕಂಡೀಶನ್' ಎಂಬ ಗಣಿತೀಯ ಸೂತ್ರದ ಆವಿಷ್ಕಾರ (೧೮೭೨). ರಸಾಯನವಿಜ್ಞಾನ ನೊಬೆಲ್ ಪ್ರಶಸ್ತಿ ವಿಜೇತ (೧೯೨೫) ರಿಚರ್ಡ್ ಸಿಗ್ಮಾಂಡಿಯಿಂದ (೧೮೬೫–೧೯೨೯) ಬೆಳಕಿನ ಅಲೆಯುದ್ದಕ್ಕಿಂತ ಚಿಕ್ಕ ವಸ್ತುಗಳನ್ನು ಅಧ್ಯಯಿಸಬಲ್ಲ ಅಧಿಸೂಕ್ಷ್ಮದರ್ಶಕದ ನಿರ್ಮಾಣ (೧೯೦೩). ಭೌತವಿಜ್ಞಾನ ನೊಬೆಲ್ ಪ್ರಶಸ್ತಿ ವಿಜೇತ (೧೯೫೩) ಫ್ರಿಟ್ಸ್ ಝೆರ್ನೈಕ್‌ನಿಂದ (೧೮೮೮–೧೯೬೬) ಪ್ರಾವಸ್ಥೆ ವೈದೃಶ್ಯ ಸೂಕ್ಷ್ಮದರ್ಶಕದ ಉಪಜ್ಞೆ (೧೯೩೨). ಭೌತವಿಜ್ಞಾನ ನೊಬೆಲ್ ಪ್ರಶಸ್ತಿ ವಿಜೇತ (೧೯೮೬) ಅರ್ನೆಸ್ಟ್ ರುಸ್ಕ (೧೯೦೬–೧೯೮೮) ಮತ್ತು ಸಹವರ್ತಿಗಳಿಂದ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಉಪಜ್ಞೆ (೧೯೩೧). ಭೌತವಿಜ್ಞಾನ ನೊಬೆಲ್ ಪ್ರಶಸ್ತಿ ವಿಜೇತರಾದ (೧೯೮೬) ಜೆರ್ಡ್ ಬಿನ್ನಿಗ್ (ಜ. ೧೯೪೭) ಮತ್ತು ಹೆಯಿನ್‌ರಿಚ್ ರ್‍ಹೋರೆರ್‌ರಿಂದ (ಜ.೧೯೩೩) ಕ್ರಮಲೋಕಿಸುವ ಸುರಂಗಕೊರೆಯುವ ಸೂಕ್ಷ್ಮದರ್ಶಕದ ಉಪಜ್ಞೆ (೧೯೮೧) ಸೂಕ್ಷ್ಮದರ್ಶಕ ವಿಕಸನದ ಮೈಲುಗಲ್ಲುಗಳು. *

**ಸೂಕ್ಷ್ಮಮಾಪಕ:** ಅತ್ಯಂತ ಕಿರಿಯ ಅಂತರಗಳನ್ನು, ಕೋನಗಳನ್ನು ಅಥವಾ ಅತಿದೂರದಲ್ಲಿರುವ ಕಾಯಗಳ ನಡುವಿನ ಅಂತರವನ್ನು ನಿಷ್ಕೃಷ್ಟವಾಗಿ ಅಳೆಯುವ ಉಪಕರಣ (ಮೈಕ್ರೊಮೀಟರ್). ಮಾನವನ ದೃಷ್ಟಿಗೆ ಗೋಚರಿಸದ ಸೂಕ್ಷ್ಮ ವಸ್ತುಗಳನ್ನೂ ಜೀವಿಗಳನ್ನೂ ಅಳೆಯಬಹುದಾಗಿದೆ. ವೇದಿಕೆ ಸೂಕ್ಷ್ಮಮಾಪಕ ಹಾಗೂ ನೇತ್ರಕ ಸೂಕ್ಷ್ಮ ಮಾಪಕಗಳೆಂಬ ಎರಡು ಬಿಡಿ ಭಾಗಗಳಿವೆ. ನೇತ್ರಕ ಸೂಕ್ಷ್ಮ ಮಾಪಕವು ವೃತ್ತಾಕಾರದ ಗಾಜಿನ ತುಣುಕಿನಂತೆಯೂ, ವೇದಿಕೆ ಸೂಕ್ಷ್ಮಮಾಪಕವು ಆಯಾತಾಕಾರದ ಗಾಜಿನ ಹಲಗೆಯಂತೆಯೂ ಇರುವುವು. ಇವುಗಳ ನಡುವೆ ಸೂಕ್ಷ್ಮವಾದ ಪಾರದರ್ಶಕ ಅಳತೆ ಪಟ್ಟಿಗಳಿವೆ. ನೇತ್ರಕ ಸೂಕ್ಷ್ಮ ಮಾಪಕವನ್ನು ಸೂಕ್ಷ್ಮದರ್ಶಕದ ನೇತ್ರಕದಲ್ಲಿ ಅಳವಡಿಸಬಹುದು. ವೇದಿಕೆ ಸೂಕ್ಷ್ಮ ಮಾಪಕವನ್ನು ಸೂಕ್ಷ್ಮದರ್ಶಕ ವೇದಿಕೆಯ ಮೇಲಿಟ್ಟು ಅಳೆಯಬೇಕಾಗುತ್ತದೆ.

ವೇದಿಕೆ ಸೂಕ್ಷ್ಮಮಾಪಕ ವಸ್ತುವಿನ ನೈಜ ಅಳತೆಯನ್ನು ಸೂಚಿಸುವುದು. ಆದರೆ ವಸ್ತುವನ್ನು ಸೂಕ್ಷ್ಮದರ್ಶಕದಲ್ಲಿ ನೋಡುವಾಗ ಜೊತೆಯಲ್ಲಿಯೇ ವೇದಿಕೆ ಸೂಕ್ಷ್ಮ ಮಾಪಕವನ್ನಿರಿಸಲಾಗುವುದಿಲ್ಲ. ಅದರಿಂದ ಯಾವುದೇ ವಸ್ತುವಿನ ಉದ್ದಗಲವನ್ನು ಅಳೆಯುವ ಮೊದಲು ನೇತ್ರಕ ಹಾಗೂ ವೇದಿಕೆ ಸೂಕ್ಷ್ಮ ಮಾಪಕಗಳ ಅಳತೆಯನ್ನು ಕ್ರಮಾಂಕನಗೊಳಿಸಬೇಕು. ಈ ಎರಡೂ ಸೂಕ್ಷ್ಮಮಾಪಕಗಳನ್ನು ಸೂಕ್ಷ್ಮದರ್ಶಕಕ್ಕೆ ಅಳವಡಿಸಿ ವೇದಿಕೆ ಸೂಕ್ಷ್ಮಮಾಪಕದ ಗುರುತುಗಳನ್ನು ನೇತ್ರಕದ ಅಳತೆ ಪಟ್ಟಿಯೊಂದಿಗೆ ಹೋಲಿಸಿ ಸಮೀಕರಿಸಿಟ್ಟುಕೊಳ್ಳಬೇಕು. ಈಗ ವೇದಿಕೆಯಿಂದ ವೇದಿಕೆ ಸೂಕ್ಷ್ಮಮಾಪಕವನ್ನು ತೆಗೆದು ವಸ್ತುವನ್ನಿರಿಸಿ ನೇತ್ರಕ ಸೂಕ್ಷ್ಮ ಮಾಪಕದಿಂದ ಅಳೆಯುಬೇಕು. ಅನಂತರ ನೇತ್ರಕ ಸೂಕ್ಷ್ಮಮಾಪಕದ ಮೌಲ್ಯವನ್ನು ವೇದಿಕೆ ಸೂಕ್ಷ್ಮಮಾಪಕದೊಡನೆ ತಾಳೆ ಹಾಕಿ ಸೂಕ್ಷ್ಮವಸ್ತುವಿನ ನೈಜ ಅಳತೆಯನ್ನು ಕಂಡು ಹಿಡಿಯಬಹುದು. (ಎಸ್.ಎನ್.ಎಚ್.)

**ಸೈಕ್ಲೊಸ್ಟೋಮ್‌ಗಳು:** ಕಾರ್ಡೇಟ ವಂಶ, ಕಶೇರುಕಗಳ ಉಪವಂಶದ ಸೈಕ್ಲೋಸ್ಟೊಮಾಟ ವರ್ಗಕ್ಕೆ ಸೇರಿದ ಪ್ರಾಣಿಗಳಿರುವ ಹೆಸರು. ಚಕ್ರಾಕಾರದ ಬಾಯಿಯುಳ್ಳ (ಸೈಕ್ಲೊಸ್ = ಚಕ್ರಾಕಾರದ, ಸ್ಟೋಮ = ಬಾಯಿ) ಪ್ರಾಣಿಗಳು. ಈ ವರ್ಗಗಳನ್ನು ಎರಡು ಗಣಗಳಾಗಿ ವಿಂಗಡಿಸಲಾಗಿದೆ : 1) ಪೆಟ್ರೊಮೈಝಾನ್ಟಿಯಾ ಮತ್ತು 2) ಮಿಕ್ಸಿನಾಯ್ಡಿಯ.

ಮಿಕ್ಸಿನಾಯ್ಡಿಯ ಗಣದಲ್ಲಿ ಮಿಕ್ಸಿನ್ ಅಥವಾ ಹ್ಯಾಗ್ ಮೀನುಗಳಿಗೆ ಸ್ಥಾನ ಕಲ್ಪಿಸಲಾಗಿದೆ. ಡೆಲ್ಲೊಸ್ಟೋಮ ಕೂಡ ಇದೇ ಗಣದ ಮತ್ತೊಂದು ಜೀವಿ. ಪೆಟ್ರೊಮೈಝಾನ್ಟಿಯ ಗಣದಲ್ಲಿ ಪೆಟ್ರೊಮೈಝಾನ್ ಅಥವಾ ಲ್ಯಾಂಪ್ರೆಗಳನ್ನು ಸೇರಿಸಲಾಗಿದೆ. ಉತ್ತರ ಅಮೆರಿಕ ಒಂದರಲ್ಲಿಯೇ ಸುಮಾರು 9–10 ಸೈಕ್ಲೊಸ್ಟೋಮ್ ಪ್ರಭೇದಗಳನ್ನು ಗುರ್ತಿಸಲಾಗಿದೆ. ದೇಹವು ಈಲ್ ಮೀನಿನಂತಿದೆ. ಇಕ್ಕೆಲಗಳಲ್ಲಿ ಚಪ್ಪಟೆಯಾಗಿದೆ. ಬಾಯಿಯು ಚಕ್ರಾಕಾರವಾಗಿದ್ದು ಸದಾ ತೆರೆದಿರುವಂತಿರುತ್ತದೆ. ಚರ್ಮವು ಮೃದುವಾಗಿದ್ದು ಹುರುಪೆಗಳಿರುವುದಿಲ್ಲ. ಅಂತರ್ಕಂಕಾಲ ಮೃದ್ವಸ್ಥಿಯಿಂದ ಕೂಡಿದ್ದು ಯಾವುದೇ ಮೂಳೆಗಳಿರುವುದಿಲ್ಲ. 6–14 ಆಂತರಿಕ ಕಿವಿರುಗಳಿದ್ದು ಉಸಿರಾಟದಲ್ಲಿ ಸಹಕರಿಸುತ್ತವೆ. ಇವು ದವಡೆರಹಿತ ಅರೆ ಪರಾವಲಂಬಿ ಪ್ರಾಣಿಗಳು. ಆಸ್ಟ್ರಕೊಡರ್ಮಿ ವರ್ಗದ ಬೇರೆ ಬೇರೆ ಗಣಗಳ ಜೀವಿಗಳಿಂದ ಮಿಕ್ಸಿನಾಯ್ಡ್‌ಗಳು ಮತ್ತು ಪೆಟ್ರೊಮೈಜಾನ್‌ಗಳು ವಿಕಾಸಗೊಂಡಿವೆ. ಆ ಕಾರಣದಿಂದಾಗಿಯೇ ಇವುಗಳ ರಚನೆಯಲ್ಲಿ ವ್ಯತ್ಯಾಸಗಳನ್ನು ಕಾಣಬಹುದು.

ಬಹುತೇಕ ಲ್ಯಾಂಪ್ರೆಗಳು ದೊಡ್ಡ ಮೀನುಗಳ ದೇಹಕ್ಕೆ ತಮ್ಮ ಹೀರು ಬಾಯಿಯಿಂದ ಅಂಟಿಕೊಂಡು ತಮ್ಮ ನಾಲಿಗೆಯ ಮೇಲಿರುವ ಚೂಪಾದ ಹಲ್ಲುಗಳಿಂದ ಮೀನುಗಳ ಮಾಂಸಖಂಡಗಳನ್ನು ಹರಿದು ಸಣ್ಣ ಸಣ್ಣ ಚೂರುಗಳನ್ನಾಗಿಸುತ್ತವೆ. ಮಿಕ್ಸಿನಾಯ್ಡ್‌ಗಳು ಇನ್ನೂ ವಿಧ್ವಂಸಕಾರಿಯಾಗಿದ್ದು ಮೀನುಗಳ ದೇಹವನ್ನೇ ಕೊರೆದು, ಒಳಪ್ರವೇಶಿಸಿ ಅವುಗಳ ಮೂಳೆ ಮತ್ತು ಹೊರಕವಚವನ್ನು ಹೊರತುಪಡಿಸಿ ಮಿಕ್ಕೆಲ್ಲಾ ಅಂಗಾಂಗಗಳನ್ನು ತಿಂದುಹಾಕುತ್ತವೆ. ಈ ಕಾರಣದಿಂದಾಗಿಯೇ ಇವುಗಳಿಂದ ದೊಡ್ಡ ದೊಡ್ಡ ಮೀನುಗಳಿಗೂ ಹಾಗು ಮತ್ಸ್ಯೋದ್ಯಮಕ್ಕೂ ಬಾರೀ ಅಪಾಯ. ಸೈಕ್ಲೊಸ್ಟೋಮ್‌ಗಳಲ್ಲಿ ಹೆಚ್ಚು ಅಧ್ಯಯನ ನಡೆಸಲಾಗಿರುವ ಲ್ಯಾಂಪ್ರೆ, ಮಿಕ್ಸಿನ್ ಮತ್ತು ಡೆಲ್ಲೊಸ್ಟೋಮಗಳ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ.

ಲ್ಯಾಂಪ್ರೆಗಳು: ಉತ್ತರ ಅಮೆರಿಕ, ಯೂರೋಪ್, ಪಶ್ಚಿಮ ಆಫ್ರಿಕ, ಜಪಾನ್, ಚಿಲಿ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮತ್ತು ಟಾಸ್ಮೇನಿಯ ದೇಶಗಳ ಸಮುದ್ರಗಳಲ್ಲಿ ಹಾಗು ಕೆಲವು ಪ್ರಭೇದಗಳು ಸಿಹಿನೀರಿನಲ್ಲಿ ವಾಸಿಸುತ್ತವೆ. 70–75 ಸೆಂಮೀ. ಉದ್ದವಿರುವ ಲ್ಯಾಂಪ್ರೆಗಳ ಬೆನ್ನಿನ ಮೇಲ್ಭಾಗವು ಕಪ್ಪಗಿದ್ದು ಹೊಟ್ಟೆಯ ಭಾಗ ಮೃದು ಹಾಗೂ ಹುರುಪೆ ರಹಿತವಾಗಿದೆ. ದೇಹದ ಮುಂಭಾಗದಲ್ಲಿ ಚಕ್ರಾಕಾರದ ಬಾಯಿಯಿದ್ದು ಮುಳ್ಳಿನಂತಹ ಚೂಪಾದ ಹಲ್ಲುಗಳಿವೆ. ತಲೆಯ ಎರಡೂ ಪಕ್ಕದಲ್ಲಿ ಕಣ್ಣುಗಳಿವೆ. ಅವುಗಳ ಹಿಂದೆಯೇ ಕಿವಿರುಗಳ ತೆರವು ಇವೆ. ದೇಹದ ಕೊನೆಯ ಭಾಗ ಗುದದ್ವಾರವನ್ನು ಹೊಂದಿದ್ದು ಚಪ್ಪಟೆಯಾಗಿರುವುದರಿಂದ ಚಲನೆಯಲ್ಲಿ ಸಹಕರಿಸುತ್ತದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಸಮುದ್ರದಿಂದ ನದಿಯ ಕಡೆಗೆ ವಲಸೆ ಬರುತ್ತವೆ. ಫಲಿತ ಮೊಟ್ಟೆಗಳಿಂದ ಹೊರಬರುವ ಮರಿಯನ್ನು ಅಮ್ಮೊಸೀಟ್ ಲಾರ್ವ ಎನ್ನುತ್ತಾರೆ. 3–4 ವರ್ಷ ಲಾರ್ವ ಹಂತದಲ್ಲಿಯೇ ಉಳಿಯುವ ಇವು ರೂಪಾಂತರದ ನಂತರ ಪ್ರೌಢಾವಸ್ಥೆಯನ್ನು ತಲುಪುತ್ತವೆ.

ಮಿಕ್ಸಿನ್: ಹ್ಯಾಗ್ ಮೀನುಗಳೆಂದೂ ಕರೆಯುತ್ತಾರೆ. ಹೆಚ್ಚಾಗಿ ಸಮುದ್ರದ ತಳದಲ್ಲಿ ಹುದುಗಿರುತ್ತವೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳಲ್ಲಿ ಹಾಗೂ ಅಮೇರಿಕ, ಚಿಲಿ, ಜಪಾನ್‌ನ ಸಮುದ್ರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಚರ್ಮವು ಹೆಚ್ಚು

ಸುಕ್ಕುಸುಕ್ಕಾಗಿದ್ದು ಲೋಳೆ ಸ್ರಾವಕ ಗ್ರಂಥಿಗಳಿಂದ ಕೂಡಿದೆ. ದೇಹ ಈಲ್‌ನಂತೆ. 6 ಜೊತೆ ಕಿವಿರುಗಳಿವೆ. ದೇಹದ ಮಧ್ಯಭಾಗದಿಂದ ಬಾಲದ ತುದಿಯವರೆಗೂ ಒಂದು ಈಜುರೆಕ್ಕೆ ಇದೆ. ಸಾಮಾನ್ಯವಾಗಿ ಗಾಯಗೊಂಡಿರುವ ಅಥವಾ ಸತ್ತ ಮೀನುಗಳ ದೇಹ ಪ್ರವೇಶಿಸುವುದರ ಮುಖಾಂತರ ಅವುಗಳ ಮಾಂಸ ಭಕ್ಷಿಸುತ್ತವೆ. ಇವು ಉಭಯಲಿಂಗಿಗಳು. ಮೊಟ್ಟೆಯಿಂದ ಹೊರಬರುವ ಮರಿಗಳು ನೇರವಾಗಿ ಪ್ರೌಢಾವಸ್ಥೆ ತಲುಪುತ್ತವೆ.



ಡೆಲ್ಲೊಸ್ಟೋಮ (ಎಪ್ಟಾಟ್ರೆಟಸ್): ಇವುಗಳನ್ನೂ ಹ್ಯಾಗ್ ಮೀನುಗಳೆಂದೇ ಕರೆಯುತ್ತಾರೆ. ಸು. 1 ಮೀ ಉದ್ದದ ಇವು ಉತ್ತರ ಮತ್ತು ದಕ್ಷಿಣ ಅಮೆರಿಕದ ಪೆಸಿಫಿಕ್ ಸಮುದ್ರ ಕರಾವಳಿಯಲ್ಲಿ ಕಂಡುಬರುತ್ತವೆ. ಕಿವಿರುಗಳ ಸಂಖ್ಯೆಯಲ್ಲಿ ಪ್ರಭೇದಗಳಿಗನುಗುಣವಾಗಿ ವ್ಯತ್ಯಾಸವಿರುತ್ತದೆ. ಭಾಗಶಃ ಮಿಕ್ಸಿನ್‌ಗಳನ್ನೇ ಹೋಲುವ ಇವುಗಳ ಜೀವನ ಕ್ರಮವೂ ಅವುಗಳಂತೆಯೇ. (ಎಸ್.ಪಿ.ವಿ.)

**ಸೈನೊಸೆಫಾಲಸ್:** ಡರ್ಮಾಪ್ಟರ ಗಣದ ಸೈನೊಸೆಫಾಲಿಡೆ ಕುಟುಂಬಕ್ಕೆ ಸೇರಿದ ಸ್ತನಿಯ ಒಂದು ಜಾತಿ. ಎರಡು ಪ್ರಭೇದಗಳನ್ನು ಗುರ್ತಿಸಲಾಗಿದೆ; ಸೈನೊಸೆಫಾಲಸ್ ವೊಲಾನ್ಸ್ (ಕೊಲುಗೊಸ್) ಮತ್ತು ಸೈನೊಸೆಫಾಲಸ್ ವೆರಿಗೇಟಸ್ (ಹಾರುವ ಮಲಯನ್ ಲೆಮುರ್). ಈ ಜೀವಿಗಳ ಪಳೆಯುಳಿಕೆಗಳು ಮಧ್ಯ ಪೇಲಿಯೋಸೀನ್‌ನಿಂದ ಇಯೋಸೀನ್ ಕಾಲಗಳಲ್ಲಿ ಇರುವುದನ್ನು ಪತ್ತೆಹಚ್ಚಲಾಗಿದೆ.

ಹಾರುವ ಮಲಯನ್ ಲೆಮುರ್‌ಗಳೆಂದು ಕರೆಯಲ್ಪಟ್ಟರೂ ಇವುಗಳು ಹಾರುವುದಿಲ್ಲ. ಲೆಮುರ್‌ಗಳ ಬಹಳಷ್ಟು ಲಕ್ಷಣಗಳೂ ಇಲ್ಲ. ಒಂದು ಮರದಿಂದ ಇನ್ನೊಂದು ಮರಕ್ಕೆ ಸಾಗುವಾಗ ತಮ್ಮ ಪೆಟಾಜಿಯಮ್ (ಚರ್ಮದ ವಿಸ್ತೃತ ಭಾಗ) ದ ಸಹಾಯದಿಂದ ಗಾಳಿಯಲ್ಲಿ ತೇಲುವುದರಿಂದ ಮತ್ತು ಲೆಮುರ್ ಪ್ರಾಣಿಯನ್ನು ಹೋಲುವುದರಿಂದ ಈ ಹೆಸರು. ಥೈಲೆಂಡ್, ಸುಮಾತ್ರ, ಮಲಯ, ಜಾವ, ದಕ್ಷಿಣ ಫಿಲಿಪ್ಪೈನ್ಸ್ ಮುಂತಾದ ದ್ವೀಪಸಮೂಹಗಳಲ್ಲಿ ವಿಸ್ತರಿಸಿವೆ. ಸಂಪೂರ್ಣ ವೃಕ್ಷವಾಸಿಗಳಾದ ಇವು ತೆಂಗು, ಬಾಳೆ ಮತ್ತು ತಾಳೆಯ ತೋಟಗಳಲ್ಲಿ ಹೆಚ್ಚು ಕಾಣಸಿಗುತ್ತವೆ.

ದೇಹದ ಉದ್ದ ಸುಮಾರು 33–42 ಸೆಂಮೀ. ತೂಕ 1–1.75 ಕಿಗ್ರಾಂ. ಬಾಲವೇ ಸುಮಾರು 17–23 ಸೆಂಮೀ ಉದ್ದವಿದೆ. ಪೆಟಾಜಿಯಮ್ ಕುತ್ತಿಗೆ, ಕೈ ಮತ್ತು ಕಾಲುಗಳ ನಡುವೆ ಹರಡಿಕೊಂಡಿರುವುದರಿಂದ ಗಾಳಿಯಲ್ಲಿ ತೇಲಲು ಸಹಾಯಕವಾಗಿದೆ. ಮುಂಗಾಲು ಮತ್ತು ಹಿಂಗಾಲುಗಳ ಬೆರಳುಗಳ ಉಗುರು ಬಲಿಷ್ಠವಾಗಿದ್ದು ಹಿಂದಕ್ಕೆ ಬಾಗಿವೆ. ತುಪ್ಪಳವು ಕಂದು ಬಣ್ಣದ್ದಾಗಿದ್ದು ಅಲ್ಲಲ್ಲಿ ಬಿಳಿ ಚುಕ್ಕೆಗಳಿಂದ ಕೂಡಿದೆ. ಸೈನೊಸೆಫಾಲಸ್‌ನ ಕೆಳದವಡೆಯ ಬಾಚಿಹಲ್ಲುಗಳು ಲೆಮುರ್‌ಗಳಲ್ಲಿರುವಂತೆ ಬಾಚಣಿಗೆಯಂತಿವೆ. ಇವು ನಿಶಾಚರಿಗಳು. ಬಹುತೇಕ ಒಂಟಿಯಾಗಿ, ಒಮ್ಮೊಮ್ಮೆ ಎರಡು ಪ್ರಾಣಿಗಳ ಗುಂಪುಗಳಾಗಿ ಜೀವಿಸುತ್ತವೆ. ಬೆಳಗಿನ ಹೊತ್ತು ಮರದ ಪೊಟರೆಗಳಲ್ಲಿ, ಮರದ ಕಾಂಡದ ಮೇಲೆ ವಿಶ್ರಮಿಸುತ್ತವೆ. ಮುಸ್ಸಂಜೆಯಾಗುತ್ತಿದ್ದಂತೆಯೇ ಮರವನ್ನೇರುವ ಇವು, ಹೂವು, ಹಣ್ಣು, ಚಿಗುರು ಎಲೆಗಳನ್ನು ತಿನ್ನುತ್ತವೆ. ಸಂಪೂರ್ಣ ಸಸ್ಯಾಹಾರಿಗಳಾಗಿದ್ದು ಜೀರ್ಣಾಂಗವು ಈ ಆಹಾರ ಪದ್ಧತಿಗನುಗುಣವಾಗಿ ವಿಕಾಸಗೊಂಡಿದೆ.

ಆಹಾರವನ್ನು ಹುಡುಕುವಾಗ ತಮ್ಮ ಮುಂಗಾಲು ಮತ್ತು ಹಿಂಗಾಲುಗಳನ್ನು ಚಾಚಿ, ಪೆಟಾಜಿಯಮ್ ಅನ್ನು ಬಳಸಿ, ಗಾಳಿಯಲ್ಲಿ ತೇಲುತ್ತಾ ಒಂದು ಮರದಿಂದ ಮತ್ತೊಂದು ಮರಕ್ಕೆ ಜಿಗಿಯುತ್ತವೆ. ಸಾಧಾರಣ 50–70 ಮೀ ದೂರ ಜಿಗಿಯುತ್ತವೆ 136 ಮೀ ನಷ್ಟು ಉದ್ದದ ಜಿಗಿತವನ್ನೂ ಇವುಗಳಲ್ಲಿ ದಾಖಲಿಸಲಾಗಿದೆ.

ಇವುಗಳ ಪೆಟಾಜಿಯಂ ಮತ್ತು ಬೆರಳುಗಳಲ್ಲಿನ ಉಗುರುಗಳ ಹಿಂಬಾಗುವಿಕೆಯಿಂದಾಗಿ ಚಲನೆ ಅಷ್ಟು ಸಮರ್ಪಕವಾಗಿರುವುದಿಲ್ಲ. ಈ ಉಗುರುಗಳಿಂದಾಗಿಯೇ ಪ್ರಾಣಿಯು ತಲೆಕೆಳಗಾಗಿ ಬಾವಲಿಯಂತೆ ನೇತುಹಾಕಿಕೊಂಡು ಮರದ ಕೊಂಬೆಗಳಲ್ಲಿ ಚಲಿಸುತ್ತವೆ. ಗಂಡುಗಳು ಒಂದನ್ನೊಂದು ಸಹಿಸದ ಕಾರಣ ಸಾಮಾನ್ಯವಾಗಿ ಒಟ್ಟಿಗೆ ಕಂಡುಬರುವುದಿಲ್ಲ. ಗಂಡು, ಹೆಣ್ಣುಗಳ ಮಿಲನದ ನಂತರ ಸುಮಾರು 60 ದಿನಗಳ ಗರ್ಭಾವಸ್ಥೆಯ ತರುವಾಯ ಹೆಣ್ಣು ಒಂದು ಮರಿಗೆ ಜನ್ಮ ನೀಡುತ್ತದೆ.

ಬಾಳೆ, ತೆಂಗು ಮುಂತಾದ ತೋಟಗಳಲ್ಲಿ ಹೂವು, ಹಣ್ಣುಗಳನ್ನು ತಿನ್ನುವುದರಿಂದ ಇವುಗಳು ಸಾಮಾನ್ಯವಾಗಿ ಕೊಲ್ಲಲ್ಪಡುತ್ತವೆ. ಹಾಗೆಯೇ ಅದರ ಮಾಂಸ ಮತ್ತು ತುಪ್ಪಳಕ್ಕಾಗಿಯೂ ಕೆಲವೆಡೆ ಇವುಗಳ ನಿರಂತರ ಬೇಟೆಯಾಗುತ್ತಿದೆ. (ಎಸ್.ಪಿ.ವಿ.)

**ಸೈಲೂರಿಯನ್ ಸ್ತೋಮಗಳು:** ಸು.೩೯೫ ದಶಲಕ್ಷ ವರ್ಷ ಮತ್ತು ೪೪೦–೪೩೦ ದಶಲಕ್ಷ ವರ್ಷ ಪ್ರಾಚೀನದ ನಡುವಿನ ಕಾಲಾವಧಿಗೆ ಸೇರಿದ ಶಿಲಾವ್ಯವಸ್ಥೆ (ಸೈಲೂರಿಯನ್ ಸಿಸ್ಟಮ್). ಇದಕ್ಕೆ ಸೈಲೂರಿಯನ್ ಸ್ತೋಮಗಳೆಂದು ಹೆಸರಿಟ್ಟವನು ಖ್ಯಾತ ಮರ್ಚಿಸನ್ ಎಂಬ ಭೂವಿಜ್ಞಾನಿ (೧೮೩೫). ಈತ ಈಗಿನ ಆರ್ಡೊವೀಸಿಯನ್ ಸ್ತೋಮವನ್ನೂ ಇದರೊಡನೆ ಸೇರಿಸಿದ್ದ. ಆರ್ಡೊವೀಸಿಯನ್ ಸ್ತೋಮವನ್ನು ಬೇರ್ಪಡಿಸಿದ ಅನಂತರ, ಉಳಿದ ಉತ್ತರಾರ್ಧಕ್ಕೆ ಮಾತ್ರ ಸೈಲೂರಿಯನ್ ಸ್ತೋಮ ಎಂದು ಹೆಸರಾಯಿತು. ಸ್ವೀಡನ್ ಮತ್ತು ಯುರೋಪ್ ಖಂಡಭಾಗಗಳಲ್ಲಿ ಈ ಸ್ತೋಮಗಳಿಗೆ ಗೊಟ್‌ಲ್ಯಾಂಡಿಯನ್ ಸ್ತೋಮಗಳು ಎಂಬ ಹೆಸರಿದೆ.

ಇಂಗ್ಲೆಂಡಿನ ವೇಲ್ಸ್ ಮತ್ತು ಷ್ರೋಪ್‌ಷೈರ್ ಪ್ರದೇಶಗಳಲ್ಲಿ ಸೈಲೂರಿಯನ್ ಸ್ತೋಮ ಆರ್ಡೊವೀಸಿಯನ್ ಸ್ತೋಮದ ಮೇಲೂ ಹಳೆಕೆಂಪು ಮರಳು ಶಿಲಾವರ್ಗದ ಕೆಳಗೂ ನಿಕ್ಷೇಪಗೊಂಡಿದೆ. ಮರ್ಚಿಸನ್ ಈ ಸ್ತೋಮದ ಜೀವಪರಂಪರೆಯನ್ನು ನಿರ್ಧರಿಸಿದ. ಇದೇ ಜೀವಪರಂಪರೆಯನ್ನು ಸರಿದೂಗುವ ಜೀವ್ಯವಶೇಷಗಳಿರುವ ಇತರ ಶಿಲಾಸ್ತೋಮಗಳು ಪ್ರಪಂಚದ ಬೇರೆ ಭಾಗಗಳಲ್ಲಿಯೂ ಇರುವುದು ಪರಿಶೋಧನೆಗಳಿಂದ ವ್ಯಕ್ತವಾಗಿದೆ. ಇಂಥವು ಎಲ್ಲೇ ಇರಲಿ, ಇವುಗಳ ಶಿಲಾಸಂಯೋಜನೆ, ಉತ್ಪತ್ತಿವಿಧಾನ ಮತ್ತು ಕೆಳಗಿನ ಮತ್ತು ಮೇಲಿನ ಶಿಲಾಸ್ತೋಮಗಳ ನಡುವಿನ ಸಂಪರ್ಕ ಇವೆಲ್ಲವನ್ನೂ ಸೈಲೂರಿಯನ್ ಸ್ತೋಮಗಳೆಂದೇ ಹೆಸರಿಸಲಾಗಿದೆ.

ಯುರೋಪ್: ಆರ್ಡೊವೀಸಿಯನ್ ಕಾಲದ ಅನಂತರ ಬ್ರಿಟಿಷ್ ದ್ವೀಪಗಳಲ್ಲಿ ಭೂಚಲನೆಯಾಯಿತು. ಇದರ ಪರಿಣಾಮವಾಗಿ ಅಗಾಧಪ್ರಮಾಣದ ಶಿಲಾರಸ ಹೊರಹೊಮ್ಮಿತು. ಈ ಪ್ರಕೃತಿ ಚಟುವಟಿಕೆಗಳ ಅನಂತರ ಆರ್ಡೊವೀಸಿಯನ್ ಕಾಲದಲ್ಲಿದ್ದ ವಾತಾವರಣ ಮತ್ತೆ ಉಂಟಾಯಿತು. ಸೈಲೂರಿಯನ್ ಕಾಲದ ನಿಕ್ಷೇಪ ಪ್ರದೇಶ ವೇಲ್ಸ್‌ನಿಂದ ಈಶಾನ್ಯಾಭಿಮುಖವಾಗಿ ಸ್ಕ್ಯಾಂಡಿನೇವಿಯದವರೆಗೆ ವಿಸ್ತರಿಸಿತ್ತು; ಪೂರ್ವಾಭಿಮುಖವಾಗಿ ಗೊಟ್‌ಲ್ಯಾಂಡ್ ಅಥವಾ ಪೂರ್ವಬಾಲ್ಟಿಕ್‌ವರೆಗೂ ವ್ಯಾಪಿಸಿತ್ತು. ಇವುಗಳ ಮೂರು ಮುಖಗಳು ಹೀಗಿವೆ : ೧. ಗ್ರ್ಯಾಪ್ಟೊಲೈಟ್ ಅವಶೇಷಗಳಿಂದ ಕೂಡಿದ ಆಳನಿಕ್ಷೇಪ (ಜೇಡುಶಿಲೆಗಳು ಮತ್ತು ಪ್ಲ್ಯಾಗಿ ಮರಳು ಶಿಲೆಗಳು), ೨. ಚಿಪ್ಪುಗಳಿಂದ ಕೂಡಿದ ತೀರನಿಕ್ಷೇಪ (ನೊರಜು ಸುಣ್ಣಶಿಲೆ ಮತ್ತು ಸುಣ್ಣಮಿಶ್ರ ಜೇಡುಶಿಲೆಗಳು), ೩. ಹವಳಗಳು ಮತ್ತು ಸ್ಟ್ರೊಮಟೊಮೊರಾಯ್ಡ್ ಸುಣ್ಣಶಿಲೆಗಳು ಮತ್ತು ಡಾಲೊಮೈಟ್‌ಗಳನ್ನು ಹೊಂದಿರುವ ಮಧ್ಯಪ್ರದೇಶ ನಿಕ್ಷೇಪಗಳು.

ಗ್ರ್ಯಾಪ್ಟೊಲೈಟ್‌ನಿಂದ ಕೂಡಿದ ಜೇಡುಶಿಲಾನಿಕ್ಷೇಪಕ್ಕೂ ಚಿಪ್ಪುಗಳಿಂದ ಕೂಡಿದ ಸುಣ್ಣ ಶಿಲಾನಿಕ್ಷೇಪಕ್ಕೂ ಇರುವ ವ್ಯತ್ಯಾಸ ಹೆಚ್ಚು. ಇದು ಸೈಲೂರಿಯನ್ ಸ್ತೋಮದ ಕೆಳಭಾಗದಲ್ಲಿ ಬಲು ಸ್ಪಷ್ಟವಾಗಿಯೂ ಮಧ್ಯ ಮತ್ತು ಮೇಲ್ಭಾಗಗಳಲ್ಲಿ ಸ್ವಲ್ಪಮಾತ್ರವೂ ಕಂಡುಬರುತ್ತದೆ. ಕೆಲವು ಪ್ರದೇಶಗಳಲ್ಲಿ ಅತಿಯಾದ ಉಷ್ಣದಿಂದ ಅಲ್ಲಿಯ ನೀರು ಆವಿಯಾಗುವು ದರ ಮೂಲಕ ಉಪ್ಪು ಮತ್ತು ಜಿಪ್ಸಮ್‌ಗಳು ನಿಕ್ಷೇಪಗೊಂಡಿವೆ. ವಿಶಾಲ ಸರೋವರಗಳು ಮತ್ತು ಇತರ ಭೂಜಲಾಶಯಗಳಲ್ಲಿ ಭೂಜಲನಿಕ್ಷೇಪ ರೂಪುಗೊಂಡಿದೆ. ಇವೆಲ್ಲ ಸೈಲೂರಿಯನ್ ಸ್ತೋಮಗಳ ವೈಶಿಷ್ಟ್ಯ.

ಸೈಲೂರಿಯನ್ ಕಾಲದ ಅಂತ್ಯದಲ್ಲಿ ಬೃಹತ್ ಭೂಚಲನೆ ಆಯಿತು. ಕೇಂಬ್ರಿಯನ್–ಆರ್ಡೊವೀಸಿಯನ್–ಸೈಲೂರಿಯನ್ ಸ್ತೋಮಗಳು ಈ ಭೂಚಲನೆಗೆ ಈಡಾಗಿ ಕೆಲೆಡೋನಿಯನ್ ಪರ್ವತಶ್ರೇಣಿಗಳಾಗಿ ಮೇಲೆತ್ತಲ್ಪಟ್ಟಿವೆ. ಕೆಲೆಡೋನಿಯನ್ ಪರ್ವತಗಳು ಈಶಾನ್ಯಾಭಿಮುಖವಾಗಿ ಸ್ಕಾಂಡಿನೇವಿಯದವರೆಗೆ ಹಬ್ಬಿವೆ. ಇವುಗಳ ಒಂದು ಶಾಖೆ ಉತ್ತರ ಫ್ರಾನ್ಸ್, ದಕ್ಷಿಣ ಜರ್ಮನಿಯ ಮೂಲಕ ಆಸ್ಟ್ರಿಯದ ಉತ್ತರದವರೆಗೆ ಹಬ್ಬಿದೆ. ಚೆಕೊಸ್ಲೊವಾಕಿಯದಲ್ಲಿರುವ ಬಹೀಮಿಯನ್ ಶಿಲಾಪರಂಪರೆ ಕೂಡ ಸೈಲೂರಿಯನ್ ಸ್ತೋಮವೇ. ಇದು ಗ್ರ್ಯಾಪ್ಟೊಲೈಟುಗಳಿಂದ ಕೂಡಿದ ಜೇಡು ಶಿಲಾನಿಕ್ಷೇಪ.

ಉತ್ತರ ಅಮೆರಿಕ : ಸೈಲೂರಿಯನ್ ಕಾಲದ ಆದಿಯಲ್ಲಿ ಉತ್ತರ ಅಮೆರಿಕದ ಭೂಭಾಗವೆಲ್ಲ ಕೆಳಮಟ್ಟದ ಮೈದಾನ ಪ್ರದೇಶವಾಗಿತ್ತು. ಅಪಲೇಶಿಯನ್ ಪರ್ವತಗಳು

ಮಾತ್ರ ಎದ್ದು ಕಾಣುತ್ತಿದ್ದುವು. ಭೂಸಮತೋಲದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಇಡೀ ಭೂಭಾಗವೆಲ್ಲ ಸಾಗರಾಕ್ರಮಣಕ್ಕೆ ತುತ್ತಾಗುವ ಸ್ಥಿತಿ ಅದಾಗಿತ್ತು. ಅಪಲೇಶಿಯನ್ ನಿಕ್ಷೇಪಪ್ರದೇಶ, ಕಾರ್ಡಿಲೆರಾನ್ ನಿಕ್ಷೇಪಪ್ರದೇಶ ಮತ್ತು ಅವರೆಡರ ಮಧ್ಯದ ಭೂಭಾಗಗಳು ಸೈಲೂರಿಯನ್ ಕಾಲದಲ್ಲಿ ಸಾಗರಗಳಿಂದ ಆಕ್ರಮಿಸಲ್ಪಟ್ಟಿದ್ದುವು. ಸೈಲೂರಿಯನ್ ಶಿಲಾಪರಂಪರೆಯಲ್ಲಿ ಎರಡು ಅನನುರೂಪ್ಯತೆಗಳು ಕಂಡುಬರುತ್ತವೆ. ಇವು ಸಾಗರಗಳ ನಿರ್ಗಮನ ಮತ್ತು ಪುನರಾಗಮನಗಳನ್ನು ಸೂಚಿಸುತ್ತವೆ. ಪ್ರತಿ ಪುನರಾಗಮನದೊಡನೆ ಬಂದ ಜೀವರಾಶಿ ಹಿಂದಿನ ಜೀವರಾಶಿಗಳಿಗಿಂತಲೂ ಭಿನ್ನ.

ಸೈಲೂರಿಯನ್ ಸ್ತೋಮದ ಕೆಳಭಾಗ ಪೆನ್ಸಿಲ್ವೇನಿಯದಿಂದ ಅಲಬಾಮದವರೆಗೆ ಸು. ೩೦೫ ಮೀ ದಪ್ಪದ ಮರಳು ಶಿಲೆಗಳಿಂದ ಆಗಿದೆ. ಇವಕ್ಕೆ ಮೆಡಿನ ಮರಳುಶಿಲೆಗಳೆಂದು ಹೆಸರು. ಇವು ನವಅಪಲೇಶಿಯನ್ ಪರ್ವತಗಳಾಗಿ ಹೊರಹೊಮ್ಮಿವೆ. ಮೆಡಿನ ಮರಳುಶಿಲೆ ಸಂಪೂರ್ಣವಾಗಿ ಜೀವ್ಯವಶೇಷರಹಿತವಾಗಿದೆ. ಅದು ಸಮುದ್ರಮಟ್ಟಕ್ಕಿಂತಲೂ ಎತ್ತರಪ್ರದೇಶದಲ್ಲಿ ನಿಕ್ಷೇಪಗೊಂಡಿತೆಂಬುದಕ್ಕೆ ಆಧಾರಗಳಿವೆ. ಪಶ್ಚಿಮಕ್ಕೆ ಹೋದಂತೆ ಇದು ಸಾಗರಜನಿತ ಜೇಡುಶಿಲೆಯೊಡನೆಯೂ, ಜೇಡುಶಿಲೆ ಸುಣ್ಣಶಿಲೆಯೊಡನೆಯೂ ಬೆರೆಯುತ್ತದೆ. ಮೆಡಿನ ಮರಳುಶಿಲೆಯ ನಿಕ್ಷೇಪಾನಂತರ ಸಾಗರಗಳ ನಿರ್ಗಮನವಾಯಿತು. ಅಲ್ಪಕಾಲಾವಧಿಯ ಅನಂತರ ಮತ್ತೆ ಸಾಗರಗಳ ಪುನರಾಕ್ರಮಣವಾಯಿತು. ಹೆಚ್ಚು ಭಾಗಗಳು ಸಾಗರದ ಅಡಿ ಸೇರಿದುವು. ಉತ್ತರದಿಂದ ಪೆಸಿಫಿಕ್ ಸಾಗರ ಕೆನಡದ ವಿಶಾಲ ಭೂಭಾಗವನ್ನು ಆಕ್ರಮಿಸಿಕೊಂಡು ಕಾರ್ಡಿಲೆರಾನ್ ನಿಕ್ಷೇಪದ ಪ್ರದೇಶದವರೆಗೆ ವ್ಯಾಪಿಸಿತು.

ಸೈಲೂರಿಯನ್ ಸ್ತೋಮದ ಮಧ್ಯಭಾಗ ನಯಾಗರ ಜಲಪಾತ ಪ್ರದೇಶದಲ್ಲಿ ಬಲು ಚೆನ್ನಾಗಿ ರೂಪುಗೊಂಡಿದೆಯಾದ್ದರಿಂದ ಅದನ್ನು ನಯಾಗರ ಶಿಲಾಶ್ರೇಣಿ ಎಂದು ಹೆಸರಿಸಲಾಗಿದೆ. ಈ ಸ್ತೋಮ ವಾಯವ್ಯಕ್ಕೆ ಅಯೋವದವರೆಗೂ ಪಶ್ಚಿಮಕ್ಕೆ ಟೆಕ್ಸಾಸ್ ಮತ್ತು ಓಕ್ಲಹಾಮದವರೆಗೂ ಹಬ್ಬಿದೆ. ಇದು ಏಕರೀತಿಯ ಶಿಲಾಸಂಯೋಜನೆ ಮತ್ತು ಜೀವ್ಯವಶೇಷಗಳಿಂದ ಕೂಡಿದೆ. ಆದ್ದರಿಂದ ಈ ಪ್ರದೇಶಗಳೆಲ್ಲ ಒಂದೇ ಸಾಗರದಡಿ ಇದ್ದುವೆಂದು ತಿಳಿಯಲಾಗಿದೆ. ಈ ಸಾಗರಕ್ಕೆ ಉತ್ತರ ಆರ್ಕ್‌ಟಿಕ್ ಸಮುದ್ರದೊಡನೆ ಸಂಪರ್ಕವಿತ್ತು. ಕ್ವಿಬೆಕ್, ನ್ಯೂಬ್ರನ್ಸ್‌ವಿಕ್ ಮತ್ತು ಮೈನ್ ಪ್ರದೇಶಗಳು ಜ್ವಾಲಾಮುಖಿಗಳ ಕಾರ್ಯಾಚರಣೆಗೆ ಈಡಾಗಿ ಅಲ್ಲಿ ಸು. ೧೨೨೦ಮೀ ಮಂದದ ಬಸಾಲ್ಟ್ ಶಿಲೆ ರೂಪುಗೊಂಡಿತು. ಈ ಶಿಲಾಶ್ರೇಣಿಯಲ್ಲಿ ಜೇಡು ಮತ್ತು ಸುಣ್ಣ ನಿಕ್ಷೇಪಗಳೇ ಹೆಚ್ಚಾಗಿರುವುದರಿಂದ, ಆ ಹೊತ್ತಿಗೆ ಅಪಲೇಶಿಯನ್ ಪರ್ವತಗಳು ಬಲುಮಟ್ಟಿಗೆ ಸವೆದು ಹೋಗಿರಬೇಕೆಂದು ಊಹಿಸಲಾಗಿದೆ. ನಯಾಗರ ಶಿಲಾಶ್ರೇಣಿ ಅನೇಕ ಅದುರುಗಳಿಗೆ ಬೀಡಾಗಿದೆ. ಈ ಶ್ರೇಣಿ ನಿಕ್ಷೇಪಗೊಂಡ ಮೇಲೆ ಅಪಲೇಶಿಯನ್ ಪ್ರದೇಶದ ಕೆಲವು ಭಾಗಗಳು ಮತ್ತು ಸರೋವರ ಪ್ರದೇಶಗಳು ಉಳಿದು ಇತರ ಭಾಗಗಳಿಂದ ಸಾಗರಗಳು ಹಿಂಜರಿದುವು. ನ್ಯೂಯಾರ್ಕ್, ಮಿಶಿಗನ್ ಪ್ರದೇಶಗಳಲ್ಲಿ ಅತಿಯಾದ ಉಷ್ಣ ವಾತಾವರಣದಿಂದ ಉಪ್ಪು ಮತ್ತು ಜಿಪ್ಸಮ್ ನಿಕ್ಷೇಪಗೊಂಡಿವೆ. ಸೈಲೂರಿಯನ್ ಸುಣ್ಣ ನಿಕ್ಷೇಪ ಮತ್ತು ಡಾಲೊಮೈಟ್‌ಗಳು ಸಂಚಯನಗೊಂಡಿವೆ. ಇವುಗಳಲ್ಲಿಯ ಜೀವ್ಯವಶೇಷಗಳು ಎಂದರೆ ಲವಣಯುಕ್ತ ನೀರಿನಲ್ಲಿ ವಾಸಿಸುವ ಪ್ರಾಣಿಗಳು. ಈ ಪೈಕಿ ಯೂರಿಪ್ಟರಿಸ್ ಒಂದು. ಸೈಲೂರಿಯನ್ ಯುಗ ಯಾವ ಭೂಚಲನೆಯೂ ಉಂಟಾಗದೆ ಶಾಂತರೀತಿಯಲ್ಲಿ ಕೊನೆಗೊಂಡಿತು.

ಭಾರತ : ಸ್ಪಿಟಿ ಪ್ರದೇಶದಲ್ಲಿ ಸೈಲೂರಿಯನ್ ಸ್ತೋಮ ಆರ್ಡೊವೀಸಿಯನ್ ಸ್ತೋಮದ ಮೇಲೆ ಅನುರೂಪ ಸಂಪರ್ಕ ಹೊಂದಿ ನಿಕ್ಷೇಪಗೊಂಡಿದೆ. ಈ ಸ್ತೋಮದಲ್ಲಿ ವಿಶೇಷವಾಗಿ ಹವಳ ಮತ್ತು ಬ್ರ್ಯಾಕಿಯೊಪೊಡ ಗುಂಪಿನ ಅವಶೇಷಗಳಿವೆ. ಮೇಲ್ಭಾಗದಲ್ಲಿ ಬೆಣಚುಶಿಲಾ ಸಮುದಾಯವಿದೆ. ಇವಕ್ಕೆ ಮ್ಯೂತ್‌ಬೆಣಚುಶಿಲೆಗಳೆಂದು ಹೆಸರು. ಇದರ ಕೆಳಭಾಗ ಸೈಲೂರಿಯನ್ ಕಾಲಕ್ಕೆ ಸೇರಿದ್ದು.

ಕಾಶ್ಮೀರ ಪ್ರದೇಶದ ಲಿಡಾರ್ ಕಣಿವೆಯಲ್ಲಿಯೂ ಸೈಲೂರಿಯನ್ ಸ್ತೋಮ ಆಂಟಿಕ್ಲೈನ್ ರೂಪದಲ್ಲಿ ಹೊರಕಾಣುತ್ತದೆ. ಇದು ಮರಳುಮಿಶ್ರಿತ ಜೇಡುಶಿಲೆ ಮತ್ತು ಹಳದಿ ಸುಣ್ಣಶಿಲೆಗಳಿಂದ ಕೂಡಿ ಶಿಲಾಸಂಯೋಜನೆಯಲ್ಲಿ ಕೇಂಬ್ರಿಯನ್, ಆರ್ಡೊವೀಸಿಯನ್ ಸ್ತೋಮಗಳನ್ನು ಹೋಲುತ್ತದೆ. ಇವುಗಳಲ್ಲಿ ಹೇರಳ ಜೀವ್ಯವಶೇಷಗಳಿರುವುದರಿಂದ ಇವನ್ನು ಗುರುತಿಸುವುದು ಸುಲಭ. ಭಾರತದಲ್ಲಿ ಈ ಕಾಲದ ಜೀವರಾಶಿ ಉತ್ಕೃಷ್ಟ ರೀತಿಯಲ್ಲಿ ರಕ್ಷಿಸಲ್ಪಟ್ಟಿರುವ ಕೆಲವೇ ಪ್ರದೇಶಗಳ ಪೈಕಿ ಇದೂ ಒಂದು. ಆರ್ತಿನ್, ಸ್ಟ್ರೋಪೊಮಿನ ಎಂಬ ಬ್ರೇಕಿಯೋಪೋಡ್‌ಗಳು, ಹವಳಗಳು ಮತ್ತು ಕ್ರೈನಾಯಿಡ್‌ಗಳು ಈ ಸ್ತೋಮಗಳಲ್ಲಿಯ ಪ್ರಮುಖ ಜೀವ್ಯವಶೇಷಗಳು.

ಸೈಲೂರಿಯನ್ ಕಾಲದ ಜೀವರಾಶಿ: ಸೈಲೂರಿಯನ್ ಜೀವರಾಶಿಯಾದರೂ ಆರ್ಡೊವೀಸಿಯನ್ ಜೀವರಾಶಿಯ ನೇರಸಂತತಿ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇವೆರಡರ ಮಧ್ಯೆ ಇರುವ ವ್ಯತ್ಯಾಸ ಎಂದರೆ ಆರ್ಡೊವೀಸಿಯನ್ ಕಾಲದಲ್ಲಿ ಪ್ರಭಾವ ಗಳಿಸಿದ್ದ ಜೀವಿವರ್ಗಗಳು ಸೈಲೂರಿಯನ್ ಕಾಲದಲ್ಲಿ ಅವನತಿಯ ಹಾದಿ ಹಿಡಿದುವು. ಆ ಕಾಲದಲ್ಲಿ ಅಪ್ರಮುಖವೆನಿಸಿದ್ದ ಜೀವಿವರ್ಗಗಳು ಶೀಘ್ರವಾಗಿ ಉನ್ನತಿಹೊಂದಿ ಪ್ರಭಾವಸ್ಥಾನ ಗಳಿಸಿವೆ. ಈ ವ್ಯತ್ಯಾಸ ಪ್ರಭಾವಜೀವಿ ವರ್ಗಗಳ ಸಂಖ್ಯಾ ಪ್ರಮಾಣ ಮತ್ತು ಅವುಗಳೊಳಗಣ ವಿಕಾಸಮಟ್ಟಕ್ಕೆ ಸೀಮಿತಗೊಂಡಿದೆ.

ಗ್ರ್ಯಾಪ್ಟೊಲೈಟ್‌ಗಳಲ್ಲಿ ಈ ಅವನತಿ ಎದ್ದು ಕಾಣುತ್ತದೆ. ಆರ್ಡೊವೀಸಿಯನ್ ಗ್ರ್ಯಾಪ್ಟೊಲೈಟ್‌ಗಳ ಪೈಕಿ ಕ್ಲೈಮಕೊಗ್ರ್ಯಾಪ್ಟಸ್ ಮತ್ತು ಡಿಪ್ಲೊಗ್ರ್ಯಾಪ್ಟಸ್ ಎಂಬ ಎರಡು ಜಾತಿಗಳು ಮಾತ್ರ ಸೈಲೂರಿಯನ್‌ನಲ್ಲಿ ಉಳಿದುಕೊಂಡಿವೆ. ಅವು ವೇಲಿಂಟಿಯನ್ ಶಿಲಾಶ್ರೇಣಿಯಲ್ಲಿ ಮಾತ್ರ ಇವೆ. ಹೀಗಿದ್ದರೂ ಗ್ರ್ಯಾಪ್ಟೊಲೈಟ್‌ಗಳು ಸೈಲೂರಿಯನ್ ಕಾಲದಲ್ಲಿ ಎಲ್ಲ ಪ್ರಾಣಿಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲೇ ಇದ್ದುವು. ಅವೆಲ್ಲ ಮಾನೊಗ್ರ್ಯಾಪ್ಟಸ್ ಜಾತಿಗೆ ಸೇರಿದವು. ಅಮೆರಿಕದಲ್ಲಿ ಮಾನೊಗ್ರ್ಯಾಪ್ಟಸ್‌ಗಳು ಕೆಲವು ಶಿಲಾಪಾದಗಳಲ್ಲಿ ಮಾತ್ರ ಕಾಣಸಿಗುತ್ತವೆ. ಇಂಡಿಯದ ಸ್ತೋಮಗಳಲ್ಲಿ ಇವು ಇಲ್ಲವೇ ಇಲ್ಲವೆಂದು ಹೇಳಲಾಗಿದ್ದರೂ ಕೆಲವೆಡೆ ಗ್ರ್ಯಾಪ್ಟೊಲೈಟ್‌ಗಳಿರುವುದಾಗಿ ಹೇಳಲಾಗಿದೆ. ಮಾನೊಗ್ರ್ಯಾಪ್ಟಸ್‌ನ ಅನೇಕ ಅಲ್ಪಾವಧಿಯ ಪ್ರಕಾರಗಳು ಉದ್ಭವಗೊಂಡಿರುವುದರಿಂದ, ಅವು ಸೈಲೂರಿಯನ್ ಸ್ತೋಮಗಳನ್ನು ಅನೇಕ ಶಿಲಾಪಾದಗಳಾಗಿ ವಿಭಜಿಸಲು ಸಹಕಾರಿಯಾಗಿವೆ.

ಹವಳಗಳು ಅಭಿವೃದ್ಧಿಗೊಂಡು ಪ್ರಭಾವ ಬೀರುವಂತಾದುವು. ಅವುಗಳಲ್ಲಿ ಜೇನುಗೂಡಿನಂತಿರುವ ಫೇವೊಸೈಟಿಸ್, ಸರಪಣಿಯಂತಿರುವ ಹ್ಯಾಲಿಸೈಟಿಸ್ ಮತ್ತು ಕೊಳವೆಯಂತಿರುವ ಸಿರಿಂಗೊಪೋರ ಮುಖ್ಯ. ಇವೆಲ್ಲ ವಂಶನಷ್ಟಹೊಂದಿದ ಟ್ಯಾಬುಲೇಟ ಹವಳ ಶಾಖೆಗೆ ಸೇರಿದವು. ರೊಗೋಸ ಹವಳಗಳ ಆಕಾರ ಬಟ್ಟಲಿನಂತೆ. ಗ್ರ್ಯಾಪ್ಟೊಲೈಟ್‌ಗಳನ್ನು ಬಿಟ್ಟರೆ ಹವಳ ಮತ್ತು ಸ್ಟ್ರೊಮಟೊಪೊರಾಯಿಡ್‌ಗಳೇ ಅಧಿಕ ಸಂಖ್ಯೆಯಲ್ಲಿದ್ದುವು. ಬ್ರಯೊಝೋವಗಳು ಅಲ್ಲಲ್ಲಿ ಬೀಡು ಬಿಟ್ಟಿದ್ದುವು.

ಬ್ರೇಕಿಯೊಪೋಡಗಳು ತಮ್ಮ ಪ್ರಭಾವಸ್ಥಾನ ಉಳಿಸಿಕೊಂಡುವು. ಕೀಲುಬ್ರೇಕಿಯೊಪೋಡಗಳು ಹೆಚ್ಚುತ್ತ ಬಂದುವು. ಪೆಂಟಮೀರಸ್ ಮತ್ತು ಕಾಂಕಿಡಿಯಮ್ ಅಧಿಕ ಸಂಖ್ಯೆಯಲ್ಲಿ ಇದ್ದುವು. ಸ್ಪಿರಿಫೆರ ಮತ್ತು ರಿಂಕೋನೆಲ್ಲಗಳೂ ಕಾಣಿಸಿಕೊಂಡುವು. ಟ್ರೈಲೋಬೈಟ್‌ಗಳು ಕೂಡ ಹೇರಳವಾಗಿದ್ದುವು. ಟ್ರೈಸ್ಟೊಕ್ಲಿಯಸ್ ಮತ್ತು ಅಸಪಸ್ ಜಾತಿಗಳು ಗತವಂಶಿಗಳಾದುವು. ಕೇಲಿಮೀನ್ ಮತ್ತು ಫೆಕಾಪ್ಸ್‌ಗಳು ಈ ಕಾಲದ ವಿಶಿಷ್ಟ ಜಾತಿಗಳು. ಟ್ರೈಲೊಬೈಟ್‌ಗಳು ಬಲು ಹೆಚ್ಚಾಗಿ ವಿಕಾಸಗೊಂಡಿದ್ದುವು. ಅನಂತರ ಅವುಗಳ ಅವನತಿಯ ಚಿಹ್ನೆಗಳೂ ಕಾಣಿಸಿಕೊಂಡುವು. ಕೆಲವು ಜಾತಿಯ ಟ್ರೈಲೊಬೈಟ್‌ಗಳು(ಖೈರೂರಸ್) ಮೈತುಂಬ ಮುಳ್ಳುಗಳನ್ನು ಬೆಳೆಸಿಕೊಂಡು ಭಯಂಕರ ರೂಪ ತಾಳಿದುವು. ಆಸ್ಟ್ರಕೋಡಗಳೂ ಹೇರಳವಾಗಿದ್ದುವು. ಸಾಗರಚೇಳುಗಳು ಇದ್ದಕ್ಕಿದ್ದಂತೆ ಹೆಚ್ಚಿ ಕೊನೆಗೆ ಗತವಂಶಿಗಳಾದುವು. ಯೂರಿಪ್ಟರಿಸ್ ಮತ್ತು ಟೆರಿಗೋಟಸ್ ಆ ಕಾಲದ ಬಲು ದೊಡ್ಡ ಸಾಗರ ಚೇಳುಗಳು. ಇತರ ಚೇಳುಗಳೂ ಇದ್ದುವು.

ಆಸ್ಟ್ರೇಲಿಯ, ಇಂಗ್ಲೆಂಡ್ ಮತ್ತು ಗೋಟ್‌ಲ್ಯಾಂಡ್ ದೇಶಗಳ ಸೈಲೂರಿಯನ್ ಸ್ತೋಮಗಳಲ್ಲಿ ಸಸ್ಯಾವಶೇಷಗಳು ಸಿಕ್ಕಿವೆ. ಇವನ್ನು ಭೂಸಸ್ಯಗಳೆಂದು ಪರಿಗಣಿಸಲಾಗಿದೆ. ಈ ಸ್ತೋಮಗಳಲ್ಲಿ ಆಸ್ಟ್ರಕೊಡರ್ಮ ಮತ್ಸ್ಯಗಳ ಅವಶೇಷಗಳಿರುವುದೂ ವರದಿಯಾಗಿದೆ.

(ಡಿ.ಆರ್.)

**ಸ್ಟೀರಾಯ್ಡ್:** ವಿಶಿಷ್ಟ ಅಣುರಚನೆ ಹೊಂದಿರುವ ಹಾಗು ಜೈವಿಕ ಕ್ರಿಯೆಗಳ ಮೇಲೆ ಮಹತ್ವದ ಪ್ರಭಾವ ಬೀರುವ ರಾಸಾಯನಿಕಗಳ ಗುಂಪು. ಇವುಗಳ ಮೂಲರಚನೆಯಲ್ಲಿ ಒಂದು ಚಕ್ರವಿದೆ. (ಸೈಕ್ಲೊಪೆಂಟೆನೊಪರಹೈಡ್ರೊಫಿನಾಂಥ್ರಿನ್) ಇವುಗಳು ಸ್ಟಿರಾಲ್ ಎಂಬ ಗುಂಪಿಗೆ ಸೇರಿದ, ಒಂದು ಬಗೆಯ ಮೇದಸ್ಸಿನಿಂದ ಉತ್ಪತ್ತಿಯಾಗುತ್ತವೆ.

ಕಶೇರುಕ ಪ್ರಾಣಿಗಳಲ್ಲಿ ಮುಖ್ಯವಾಗಿ ಜೈವಿಕ ಪ್ರಭಾವ ಬೀರುವ ಎರಡು ಬಗೆಯ ಸ್ಟೀರಾಯ್ಡಗಳಿವೆ. ಅವು ಜನನಾಂಗಗಳು ಉತ್ಪತ್ತಿ ಮಾಡಿ ಸ್ರವಿಸುವ ಲೈಂಗಿಕ ಸ್ಟೀರಾಯಿಡ್ಸ್ ಹಾಗೂ ಎಡ್ರಿನಲ್ ಗ್ರಂಥಿಯ ತೊಗಟೆ ಸ್ರವಿಸುವ ಕಾರ್ಟಿಕೊಸ್ಟಿರಾಯಿಡ್. ಇದಲ್ಲದೆ ಜರಾಯು ಕೂಡ ಈ ಎರಡು ಬಗೆಯ ಸ್ಟೀರಾಯ್ಡಗಳನ್ನು ಸ್ರವಿಸುತ್ತದೆ. ಈ ಎಲ್ಲಾ ಸ್ಟೀರಾಯ್ಡಗಳ ಉತ್ಪತ್ತಿ ಕೊಲೆಸ್ಟ್ರಾಲ್‌ನಿಂದ ಪ್ರಾರಂಭವಾಗಿ, ಹಲವಾರು ಕಿಣ್ವಗಳಿಂದ ಪ್ರಚೋದಿಸಲ್ಪಟ್ಟ ರಾಸಾಯನಿಕ ಕ್ರಿಯೆಗಳ ಮೂಲಕ, ಅಂಡಾಶಯದಲ್ಲಿ ಪ್ರೊಜೆಸ್ಟಿರಾನ್ ಹಾಗು ಎಸ್ಟ್ರೋಜನ್, ವೃಷಣದಲ್ಲಿ ಟೆಸ್ಟೊಸ್ಟಿರಾನ್ ಉತ್ಪತ್ತಿಯಾಗಿ, ಸ್ರವಿಕೆಯಿಂದ ರಕ್ತ ಪರಿಚಲನೆಯಿಂದ ವಿವಿಧ ಅಂಗಾಂಶಗಳನ್ನು ಸೇರಿ ಅವುಗಳ ಮೇಲೆ ಪ್ರಭಾವ ಬೀರುತ್ತವೆ.

ಇವು, ಚಿಕ್ಕ ಅಣುಗಳಾಗಿರುವುದರಿಂದ ಮತ್ತು ಕೋಶ ಪೊರೆ ಕೊಬ್ಬಿನಿಂದಾಗಿರುವುದರಿಂದ ಸರಳವಾಗಿ ಕೋಶಪೊರೆಯನ್ನು ದಾಟಿ, ಕೋಶದೊಳಕ್ಕೆ ಹೊಕ್ಕು ತಮ್ಮ ಗ್ರಾಹಿಗಳನ್ನು ಸೇರಿಕೊಳ್ಳುತ್ತವೆ. ಆಮೇಲೆ ಹಾರ್ಮೊನು+ಗ್ರಾಹಿ ಸಂಯುಕ್ತವು ಕೋಶ ಕೇಂದ್ರವನ್ನು ಹೊಕ್ಕು, ಅಲ್ಲಿ ಜೀನುಗಳ ಜೊತೆ ಸಂಪರ್ಕಿಸಿ, ಆಯಾ ಸ್ಟೀರಾಯ್ಡ್‌ಗಳಿಗೆ ನಿಗದಿತವಾಗಿರುವ ಪ್ರೋಟೀನುಗಳ ಉತ್ಪತ್ತಿಗೆ ಕಾರಣವಾಗುತ್ತವೆ. ದೇಹದಲ್ಲಿರುವ ಪ್ರತಿ

ಕೋಶವು ಎಲ್ಲ ಸ್ಟೀರಾಯ್ಡ್‌ಗಳಿಗೆ ಸ್ಪಂದಿಸುವುದಿಲ್ಲ. ಯಾವುದೇ ಕೋಶದೊಳಗೆ, ಯಾವ ಸ್ಟೀರಾಯ್ಡ್‌ಗೆ ಗ್ರಾಹಿ ಇದೆಯೊ, ಅದೇ ಸ್ಟೀರಾಯ್ಡ್‌ಗೆ ಮಾತ್ರ ಆ ಕೋಶ ಸ್ಪಂದಿಸುತ್ತದೆ. ಸ್ಟೀರಾಯ್ಡ್‌ಗಳ ಕೆಲಸ ಪೂರೈಸಿದ ಮೇಲೆ, ರಾಸಾಯನಿಕ ಕ್ರಿಯೆಗಳ ಮೂಲಕ, ಮುಖ್ಯವಾಗಿ ಯಕೃತ್ತಿನಲ್ಲಿ ಒಡೆಯಲ್ಪಟ್ಟು, ತಾಜ್ಯವಸ್ತುಗಳಾಗಿ ಮೂತ್ರದ ಮೂಲಕ ವಿಸರ್ಜಿತವಾಗುತ್ತವೆ. ಎಲ್ಲ ಸ್ಟೀರಾಯ್ಡ್‌ಗಳನ್ನು ಈಗ ಕೃತ್ರಿಮವಾಗಿ (ಸಿಂಥೆಟಿಕ್) ಉತ್ಪಾದಿಸಿ, ಅನೇಕ ರೋಗಗಳ ಚಿಕಿತ್ಸೆಗೆ ಹಾಗು ಸಂತಾನ ನಿಯಂತ್ರಣಕ್ಕೆ ಬಳಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ನೋಡಿ–ಆಂಡ್ರೊಜನ್, ಎಸ್ಟ್ರೊಜನ್, ಪ್ರೊಜೆಸ್ಟಿರಾನ್, ಎಡ್ರಿನಲ್ ಗ್ರಂಥಿಗಳು. (ಎಚ್.ಎನ್.ವೈ.)

**ಸ್ತನಗ್ರಂಥಿ:** ಸ್ತನಿಗಳ ದೇಹದಲ್ಲಿ ಹಾಲನ್ನು ಉತ್ಪಾದಿಸುವ ಅಥವಾ ಸ್ರವಿಸುವ ವಿಶೇಷ ಗ್ರಂಥಿಗಳು (ಮ್ಯಾಮ್ಮರಿ ಗ್ಲ್ಯಾಂಡ್). ಇದರಿಂದ ಹಾಲು ಹೊರಬರುವ ದೇಹಭಾಗಕ್ಕೆ ಮೊಲೆ (ಮನುಷ್ಯರಲ್ಲಿ) ಅಥವಾ ಕೆಚ್ಚಲು (ಪ್ರಾಣಿಗಳಲ್ಲಿ) ಎಂದು ಹೆಸರು. ಸ್ತನಗಳು ಪುರುಷರಿಗೂ ಸ್ತ್ರೀಯರಿಗೂ ಇರುವುವು. ಆದರೆ ಸ್ತನಗ್ರಂಥಿಗಳಿರುವುದು ಸ್ತ್ರೀಯರಲ್ಲಿ ಮಾತ್ರ. ಅವರು ಪ್ರಾಯಕ್ಕೆ ಬಂದಾಗ ಪೂರ್ಣಪ್ರಮಾಣದ ಬೆಳವಣಿಗೆ ಕಾಣುತ್ತದೆ. ಮುಂದೆ ಋತುಬಂಧವಾದಾಗ (ಮೆನೊಪಾಸ್) ಅವು ಕುಗ್ಗುತ್ತವೆ. ಮಗುವಿನ ಅಥವಾ ಶಿಶುಪ್ರಾಣಿಯ ಮೊದಲ ಆಹಾರವೇ ತಾಯಿಯ ಮೊಲೆಹಾಲು — ಇದು ನಿಸರ್ಗವಿತ್ತಿರುವ ಒಂದು ವರ.

ಮುಖ್ಯವಾಗಿ ಹಸು ಮತ್ತು ಎಮ್ಮೆಗಳಲ್ಲಿ ಅಧಿಕ ಪ್ರಮಾಣದ ಮೊಲೆಹಾಲು ಉತ್ಪನ್ನವಾಗುವುದು. ಆದಿಕಾಲದಿಂದಲೂ ಮಾನವ ಈ ಹಾಲನ್ನು ಕರೆದು (ಹಿಂಡಿ) ತನ್ನ ಆಹಾರವಾಗಿ ಬಳಸುತ್ತಿದ್ದಾನೆ. ಹೈನುಗಾರಿಕೆ ಒಂದು ಉದ್ಯಮವೇ ಆಗಿದೆ. ದೇಹದ ಇತರ ಭಾಗಗಳಂತೆ ಸ್ತನಗ್ರಂಥಿಯೂ ಬಳಲುವುದುಂಟು. ಅದನ್ನು ಕೀವು, ಉರಿಯೂತ, ಕುರು, ಕ್ಷಯ, ಕ್ಯಾನ್ಸರ್ ಮುಂತಾದವು ಬಾಧಿಸುವುದು ವಿರಳವಲ್ಲ. (ಎಸ್.ಕೆ.ಎಚ್.)

**ಸ್ತನಿ:** ಶೈಶವಾವಸ್ಥೆಯಲ್ಲಿರುವ ತನ್ನ ಮರಿಗಳಿಗೆ ಹಾಲುಣಿಸುವ ಸಲುವಾಗಿ ಸ್ತನಗ್ರಂಥಿಗಳಿರುವ ಕಶೇರುಕಗಳ ಯಾವುದೇ ಗುಂಪು (ಮ್ಯಾಮಲ್). ಸ್ತನ ಗ್ರಂಥಿಗಳು ಹೆಣ್ಣಿನಲ್ಲಿ ಮಾತ್ರ ಕ್ರಿಯಾಶೀಲ. ಬೆಳವಣಿಗೆಯ ಒಂದಲ್ಲ ಒಂದು ಹಂತದಲ್ಲಿ ಸ್ತನಿಗಳ ದೇಹ ಕೇಶಯುಕ್ತವಾಗಿರುವುದು ಇನ್ನೊಂದು ಲಕ್ಷಣ. ಸ್ತನಿ ವರ್ಗಕ್ಕೆ ಸೇರಿದ ತಿಮಿಂಗಿಲಗಳ ಪ್ರೌಢಾವಸ್ಥೆಯಲ್ಲಿ ಕೂದಲು ಇರದಿದ್ದರೂ ಭ್ರೂಣಹಂತದಲ್ಲಿ ಅದು ಇದ್ದೇ ಇರುತ್ತದೆ. ಮಾನವನೂ ಸೇರಿದಂತೆ ಹಲವಾರು ಸಾಕುಪ್ರಾಣಿಗಳು ಸ್ತನಿವರ್ಗಕ್ಕೆ ಸೇರಿವೆ. ಕೆಲವು ಜಲಚರ ಪ್ರಭೇದಗಳನ್ನು ಹೊರತುಪಡಿಸಿದರೆ ಸ್ತನಿಗಳೆಲ್ಲವೂ ಸಮತಾಪಿ (ವಾರ್ಮ್‌ಬ್ಲಡೆಡ್) ಚತುಷ್ಪಾದಿಗಳು.

ಸ್ತನಿಗಳಲ್ಲಿ ಸು. ೪೦೦೦ ಪ್ರಭೇದಗಳಿವೆ. ಆ ಪೈಕಿ ಸು. ೩,೦೦೦ ದ್ವಂಸಕ ಪ್ರಾಣಿಗಳು. ಭೂಮಿಯಲ್ಲಿರುವ ಪ್ರಾಣಿ ಪ್ರಭೇದಗಳ ಸಂಖ್ಯೆ ಸು. ೭,೫೦,೦೦೦. ಇಲ್ಲಿಯೂ ಸಂದಿಪದಿ, ಕೀಟ, ಮೃದ್ವಂಗಿ ಮುಂತಾದವುಗಳ ಜೊತೆ ಹೋಲಿಸಿದರೆ ಸ್ತನಿಗಳ ಸಂಖ್ಯೆ ತೀರ ಕಡಿಮೆ. ಇನ್ನು ಇತರ ಅಕಶೇರುಕಗಳು ಸ್ತನಿಗಳಿಗಿಂತ ೧೦–೧೫ ಪಟ್ಟು ಅಧಿಕವಾಗಿವೆ.

ಸ್ತನಿಗಳ ಗಾತ್ರದಲ್ಲಿ ಬಹಳ ವ್ಯತ್ಯಾಸಗಳಿವೆ. ಕೇವಲ ಕೆಲವು ಗ್ರಾಮ್ ತೂಕದ ಇಲಿಯಂಥ ಪ್ರಾಣಿಯಿಂದ ಹಿಡಿದು ಸು. ೧೫೦ ಟನ್ ಭಾರದ ನೀಲಿ ತಿಮಿಂಗಿಲಗಳೂ ಈ ವರ್ಗದಲ್ಲಿ ಸೇರಿವೆ. ಜೊತೆಗೆ ಸ್ತನಿಗಳ ವಿಶಿಷ್ಟ ದೇಹ ಪ್ರಕೃತಿ, ಚಲನವಲನ, ಜೀವನಶೈಲಿಗಳಿಂದಾಗಿ ಅವು ಇಂದು ಜಗತ್ತಿನ ಎಲ್ಲಡೆಯೂ ಪಸರಿಸಿವೆ. ಅವುಗಳ ಗಣನೀಯ ಸಂಖ್ಯೆ ಹಾಗೂ ಮಾನವ ಇದೇ ವರ್ಗಕ್ಕೆ ಸೇರಿದವನಾದ್ದರಿಂದ ಇಡೀ ಪ್ರಾಣಿಪ್ರಪಂಚದಲ್ಲಿ ಸ್ತನಿಗಳಿಗೆ ವಿಶಿಷ್ಟ ಸ್ಥಾನಮಾನವಿದೆ.

ಮರಿಗಳು ಜನಿಸಿ ಸಾಕಷ್ಟು ಕಾಲ ಸ್ತನ್ಯಪಾನ ಮಾಡುವುದರಿಂದ, ಆ ಅವಕಾಶ ತಾಯಿ ಅವುಗಳಿಗೆ ಜೀವನಶೈಲಿ ಕಲಿಸಲು ಉಪಯುಕ್ತವಾಗುತ್ತದೆ. ಹೀಗಾಗಿ ಸ್ತನಿಗಳಲ್ಲಿ ಎದ್ದುಕಾಣುವ ಹಲ ಬಗೆಯ ವರ್ತನೆಗಳು ಇತರ ಪ್ರಾಣಿಗಳಲ್ಲಿ ಕಂಡುಬರುವುದಿಲ್ಲ.

ಸ್ತನಿಗಳ ಉಗಮ ಸು.೧೮೦–೨೨೦ ದಶಲಕ್ಷ ವರ್ಷಗಳ ಹಿಂದೆ ಆಗಿರಬಹುದೆಂದು ಅಂದಾಜು. ಸಣ್ಣದೇಹ, ಚುರುಕು ನಡೆ, ವಿಶಿಷ್ಟ ಹಲ್ಲು ಹಾಗೂ ಕಾಲುಗಳಿದ್ದ ಥಿರಾಪ್ಸಿಡ್ ಎಂಬ ಸರೀಸೃಪ ಸ್ತನಿಗಳ ಪೂರ್ವಜ ಆಗಿರಬೇಕು. ದೈತ್ಯೋರಗಗಳಾದ ಡೈನೊಸಾರಸ್‌ಗಳಿದ್ದ ಜುರಾಸಿಕ್ ಕಾಲದಲ್ಲಿಯೇ (ಸು. ೨೫೦ ದಶಲಕ್ಷ ವರ್ಷಗಳ ಹಿಂದೆ) ಸ್ತನಿಗಳಿದ್ದರೂ ದೈತ್ಯೋರಗಗಳು ನಿರ್ನಾಮವಾದ ಬಳಿಕವಷ್ಟೆ, ಅಂದರೆ ಸು. ೭೦ ದಶಲಕ್ಷ ವರ್ಷಗಳ ಹಿಂದಿನಿಂದ ಇಂದಿನತನಕ ಭೂಮಿಯ ಮೇಲೆ ಸ್ತನಿಗಳೇ ಅಧಿಪತ್ಯ ನಡೆಸುತ್ತಿವೆ.

ಸ್ತನಿಗಳ ಮುಖ್ಯ ಲಕ್ಷಣಗಳು :

೧. ಸ್ತನಗ್ರಂಥಿಗಳು : ಗಂಡು ಹಾಗೂ ಹೆಣ್ಣು ಸ್ತನಿಗಳ ಉದರ ಭಾಗದಲ್ಲಿ (ಎದೆ, ಹೊಟ್ಟೆ ಅಥವಾ ಕಿಬ್ಬೊಟ್ಟೆ) ಇವು ಕಂಡುಬಂದರೂ ಕೇವಲ ಹೆಣ್ಣಿನಲ್ಲಷ್ಟೆ ಕಾರ್ಯನಿರತ. ಮರಿ ಹುಟ್ಟಿದ ಬಳಿಕವಷ್ಟೆ ಇವುಗಳಲ್ಲಿ ಹಾಲಿನ ಉತ್ಪಾದನೆ ಆರಂಭವಾಗುತ್ತದೆ. ಹಾಲನ್ನು ಸೇವಿಸಿ ಮರಿಗಳು ಬೆಳೆಯುತ್ತವೆ. ಸ್ತನ ಗ್ರಂಥಿಗಳು ಮೂಲತಃ ಸ್ವೇದ ಗ್ರಂಥಿಗಳಾಗಿದ್ದು, ಕೆಲವೊಂದು ದೈಹಿಕ ಬದಲಾವಣೆಗಳಿಂದಾಗಿ ಹಾಲನ್ನು ಉತ್ಪಾದಿಸುತ್ತವೆ.

ಹೊಟ್ಟೆ ಚೀಲವುಳ್ಳ ಸ್ತನಿಗಳ (ಉದಾ: ಕಾಂಗರೂ) ಹಾಗೂ ಗರ್ಭವೇಷ್ಟನ ಸ್ತನಿಗಳ ಸ್ತನಗಳಿಗೆ ತೊಟ್ಟು ಇದೆ. ಮರಿ ಈ ತೊಟ್ಟನ್ನು ತನ್ನ ಬಾಯಿಯಲ್ಲಿರಿಸಿ, ಚೀಪಿ ತಾಯಿಯ ಹಾಲು ಹೀರುತ್ತದೆ. ಮೊಟ್ಟೆಯಿಡುವ ಸ್ತನಿಗಳಲ್ಲಿ ತೊಟ್ಟು ಇರುವುದಿಲ್ಲ. ಹಾಗಾಗಿ, ಸ್ರವಿಸಿದ ಹಾಲು ನೇರವಾಗಿ ತಾಯಿಯ ಹೊಟ್ಟೆ ಕೆಳಗೆ ಹರಿದು, ಅಲ್ಲಿಯ ತಗ್ಗಿನಲ್ಲಿ ಶೇಖರಗೊಳ್ಳುತ್ತದೆ. ಶಿಶುಜನನದ ವೇಳೆ ಹೆಣ್ಣಿನ ಸ್ತನಗ್ರಂಥಿಗಳಲ್ಲಿ ಹಾಲಿನ ಉತ್ಪಾದನೆ ಮುಂತಾದುವನ್ನು ಹಾರ್ಮೋನುಗಳು ನಿಯಂತ್ರಿಸುತ್ತವೆ. ಗಂಡು ಸ್ತನಿಗಳ ಗ್ರಂಥಿಗಳು ನಿಷ್ಕ್ರಿಯವಾಗಿರುತ್ತವೆ.

೨. ಕೂದಲು : ಎಲ್ಲ ಸ್ತನಿಗಳಲ್ಲೂ ಬೆಳವಣಿಗೆಯ ಒಂದಲ್ಲ ಒಂದು ಹಂತದಲ್ಲಿ ಕೂದಲಿರುವುದು. ತಿಮಿಂಗಿಲಗಳಲ್ಲಾದರೋ ಬಾಲ್ಯಾವಸ್ಥೆಯಲ್ಲಿ ಮಾತ್ರ ಗಂಟಲು ಭಾಗದಲ್ಲಿ ಕೂದಲಿದ್ದು, ಪ್ರೌಢಾವಸ್ಥೆಯಲ್ಲಿ ಅದು ಮರೆಯಾಗುತ್ತದೆ. ಪ್ರತಿಯೊಂದು ಕೂದಲೂ ಜೀವಕೋಶದ ದೀರ್ಘೀಕೃತ ನಾಳ. ಇದು ವಾಯುಪೂರಿತವಾಗಿದ್ದು ಚರ್ಮದ ರೋಮಕೂಪದಿಂದ ಬೆಳೆಯುತ್ತದೆ. ಈ ಕೂಪ ನಿರ್ದಿಷ್ಟ ಕೋನದಲ್ಲಿರುವುದರಿಂದ ಕೂದಲಿನ ಬೆಳವಣಿಗೆಯೂ ಅದೇ ದಿಶೆಯಲ್ಲಿ ಆಗುತ್ತದೆ. ವಾಸ್ತವವಾಗಿ ಕೂಪಗಳಲ್ಲಿ ಸ್ವೇದ ಗ್ರಂಥಿಗಳಿದ್ದು ಇವು ಕೆಲವೊಂದು ಸ್ತನಿಗಳಲ್ಲಿ ಎಣ್ಣೆಯಂಥ ಪದಾರ್ಥವನ್ನು ಸ್ರವಿಸುತ್ತವೆ. ಇದು ಕೂದಲನ್ನು ನವುರಾಗಿಸುತ್ತದೆ. ಜೊತೆಗೆ ಸ್ತನಿಗಳಿಗೆ ಚಳಿ ತಡೆಯಲು ಮತ್ತು ದೇಹೋಷ್ಣತೆ ಕಾಪಾಡಲು ನೆರವಾಗುತ್ತದೆ ಕೂಡ.

೩. ಸಮತಾಪಿತ್ವ (ವಾರ್ಮ್‌ಬ್ಲಡೆಡ್‌ನೆಸ್) : ಹಲವಾರು ಅಕಶೇರುಕಗಳಲ್ಲಿಯ ರಕ್ತದ ಉಷ್ಣತೆ, ಹೊರಗಿನ ವಾತಾವರಣದ ಉಷ್ಣತೆಗೆ ಅನುಗುಣವಾಗಿ ಬದಲಾಗುತ್ತದೆ. ಆದರೆ ಸ್ತನಿಗಳದು ಬದಲಾಗದು – ಈ ಗುಣವೇ ಸಮತಾಪಿತ್ವ. ಎಂಥ ಚಳಿಗಾಲದಲ್ಲೂ ಸ್ತನಿಗಳ ದೇಹೋಷ್ಣತೆ ನಿಯತವಾಗಿರುತ್ತದೆ. ಇದು ಅವುಗಳ ರಕ್ತ ಪರಿಚಲನೆಗೂ ದೈಹಿಕ ಚಟುವಟಿಕೆಗಳಿಗೂ ಬಹಳಷ್ಟು ಪ್ರಯೋಜನಕಾರಿ, ನಿಜ. ಆದರೆ ಪರಿಸರದ ತಾಪ ವೈಪರೀತ್ಯಗಳ ಜೊತೆ ಸ್ತನಿಗಳು ದೇಹೋಷ್ಣತೆಯನ್ನು ನಿಭಾಯಿಸಲು ಅಸಫಲವಾದಾಗ ಶಿಶಿರಸುಪ್ತಿಗೆ (ಹೈಬರ್ನೇಶನ್) ಶರಣಾಗುತ್ತವೆ. ಈ ಅವಧಿಯಲ್ಲಿ ಇವುಗಳ ಎಲ್ಲ ಚಟುವಟಿಕೆಗಳೂ ಮೊಟಕಾಗುತ್ತವೆ, ಕೇವಲ ಜೀವಿಸಿರಲು ಬೇಕಾದ ದೈಹಿಕ ಚಟುವಟಿಕೆಗಳು ನಡೆಯುತ್ತಿರುತ್ತವೆ. ಅದೇ ರೀತಿ ಬೇಸಗೆಯಲ್ಲಿ, ವಾತಾವರಣದ ತಾಪಮಾನ ಅಧಿಕವಾಗಿದ್ದಲ್ಲಿ, ತಮ್ಮ ದೇಹವನ್ನು ತಂಪಾಗಿರಿಸಲು ಈ ಪ್ರಾಣಿಗಳು ಬೆವರುತ್ತವೆ ಮತ್ತು ಇವುಗಳ ಬಾಯಿಯಿಂದ ಜೊಲ್ಲು ಸುರಿಯುತ್ತದೆ.

೪. ನಾಲ್ಕು ಕವಾಟಗಳ ಹೃದಯ : ಸ್ತನಿಗಳ ಹೃದಯದಲ್ಲಿ ಎರಡು ಹೃತ್ಕರ್ಣ ಹಾಗೂ ಎರಡು ಹೃತ್ಕುಕ್ಷಿಗಳಿವೆ. ಹೀಗಾಗಿ ಘುಪ್ಪುಸಗಳಿಗೆ ಹಾಗೂ ದೇಹದ ಇತರ ಭಾಗಗಳಿಗೆ ಶುದ್ಧ ಹಾಗೂ ಅಶುದ್ಧರಕ್ತ ಬೇರೆ ಬೇರೆಯಾಗಿ ಹರಿಯುತ್ತವೆ.

೫. ದೊಡ್ಡ ಮಿದುಳು : ಎಲ್ಲ ಸ್ತನಿಗಳ ಮಿದುಳೂ ಬೇರೆ ಪ್ರಾಣಿಗಳವುಗಳದ್ದಕ್ಕಿಂತ ದೊಡ್ಡದಾಗಿರುತ್ತದೆ. ಅಲ್ಲಿಯೂ ಮುಖ್ಯವಾಗಿ ಕೋತಿ ಜಾತಿಯ ಸ್ತನಿಗಳ ಮಿದುಳು ಚೆನ್ನಾಗಿ ಬೆಳೆದಿರುತ್ತದೆ. ಇದು ಪ್ರಾಣಿಗೆ ಹೆಚ್ಚಿನ ಬುದ್ಧಿಮತ್ತೆಯನ್ನು ಒದಗಿಸುವುದಲ್ಲದೇ ಬದಲಾಗುತ್ತಿರುವ ಪರಿಸರಕ್ಕೆ ಅನುಗುಣವಾಗಿ ಹೊಂದಾಣಿಕೆ ಮಾಡಲು ಸಹಕಾರಿಯಾಗುತ್ತದೆ. ಮಿದುಳಿನಲ್ಲಿ ಅನೇಕ ಕಂದಕಗಳೂ ದಿಬ್ಬಗಳೂ ಇರುವುವು. ಆದ್ದರಿಂದ ಮಿದುಳಿನ ಪಾತಳಿಯ ವಿಸ್ತಾರ ಉಳಿದೆಲ್ಲ ಪ್ರಾಣಿಗಳದ್ದಕ್ಕಿಂತ ಹೆಚ್ಚಾಗಿರುತ್ತದೆ.

೬. ಕುತ್ತಿಗೆಯ ಕಶೇರು ಮಣಿಗಳು : ಒಂದೆರಡು ಪ್ರಭೇದಗಳನ್ನು ಹೊರತುಪಡಿಸಿ ಉಳಿದೆಲ್ಲ ಸ್ತನಿಗಳ ಕುತ್ತಿಗೆಯಲ್ಲಿ ಸರ್ವೇಸಾಮಾನ್ಯವಾಗಿ ೭ ಕಶೇರುಮಣಿಗಳಿರುವುವು. ಉದ್ದ ಕುತ್ತಿಗೆಯ ಜಿರಾಫೆಯಾಗಲೀ ಕುತ್ತಿಗೆಯೇ ಇಲ್ಲದ ಇಲಿಯಾಗಲೀ ಎರಡರಲ್ಲೂ ೭ ಕುತ್ತಿಗೆ ಕಶೇರುಮಣಿಗಳಿರುವುವು.

೭. ಎದೆಗಾಪು : ಸ್ತನಿಗಳ ಎದೆಗಾಪು ವಿಶೇಷವಾಗಿ ನಿರ್ಮಿತವಾಗಿದೆ. ಎದೆಗೂಡಿನ ಎಲುಬುಗಳು ಬೆನ್ನುಹುರಿಗೆ ಜೋಡಿಗೊಂಡಿವೆ. ಈ ಎದೆಗಾಪು ಸ್ತನಿಗಳ ಪ್ರಮುಖ ಭಾಗಗಳಾದ ಹೃದಯ, ಘುಪ್ಪುಸ ಇತ್ಯಾದಿಗಳ ಸುರಕ್ಷತೆಯ ಕವಚ ಕೂಡ. ಇದಕ್ಕೆ ಹೊಂದಿಕೊಂಡಂತೆ ಸ್ನಾಯುಗಳಿಂದಾದ ವಪೆ ಇದೆ. ಉಸಿರಾಟದಲ್ಲಿ ಇದು ಬಹಳಷ್ಟು ಸಹಕಾರಿ.

೮. ಹಲ್ಲು : ಸ್ತನಿಗಳಲ್ಲಿ ಬಾಚಿಹಲ್ಲು, ಕೋರೆಹಲ್ಲು, ದವಡೆಹಲ್ಲು ಇತ್ಯಾದಿ ವಿವಿಧ ರೀತಿಯ ಹಲ್ಲುಗಳಿರುವುದರಿಂದ, ಅವು ವಿವಿಧ ರೀತಿಯ ಆಹಾರ ಸೇವಿಸಬಹುದಾಗಿವೆ. ಕೆಲವೊಂದು ಪ್ರಾಣಿಗಳಲ್ಲಿ ಹಲ್ಲುಗಳು ಹುಟ್ಟಿದಾಗಿನಿಂದ ಸಾಯುವತನಕ ನಿರಂತರ ಬೆಳೆಯುತ್ತಲೇ ಇದ್ದರೆ, ಇನ್ನಿತರ ಪ್ರಾಣಿಗಳಲ್ಲಿ ಅವು ಹಲವು ಬಾರಿ ಬಿದ್ದು ಹೊಸ ಹಲ್ಲುಗಳು ಮೊಳೆಯುತ್ತವೆ. ಇನ್ನೂ ಹಲವು ಪ್ರಾಣಿಗಳಲ್ಲಿ ಹಲ್ಲಿನ ಸಂಖ್ಯೆ ಇಂತಿಷ್ಟೇ

ಎಂಬುದಿಲ್ಲ. ಪ್ರಾಣಿ ಬೆಳೆದ ಹಾಗೆ ಹಲ್ಲಿನ ಸಂಖ್ಯೆಯೂ ಬೆಳೆಯುತ್ತಲೇ ಇರುವುದು. ಆದರೆ ಸ್ತನಿಗಳಲ್ಲಿ ಸಾಮಾನ್ಯವಾಗಿ ತಮ್ಮ ಅಗತ್ಯಗಳಿಗನುಗುಣವಾಗಿ ಕೇವಲ ಎರಡು ಬಾರಿ ಹಲ್ಲುಗಳು ಬರುತ್ತವೆ : ಬಾಲ್ಯಾವಸ್ಥೆಯಲ್ಲಿ ಅಸ್ಥಾಯೀ ಹಾಲುಹಲ್ಲುಗಳು, ಪ್ರೌಢಾವಸ್ಥೆಯಲ್ಲಿ ಅವು ಉದುರಿ ಹೋಗಿ ಶಾಶ್ವತ ಹಲ್ಲುಗಳು.

ಸ್ತನಿಗಳ ಅಂಗೋಪಾಂಗಗಳು ತೀವ್ರ ಹಾಗೂ ನಿರಂತರ ಚಲನೆಯಲ್ಲಿರಲು ಸಹಕಾರಿ. ಇವುಗಳ ದೈಹಿಕ ಚಲನೆಗೆ ಅನುಗುಣವಾಗಿ ಅತ್ಯಂತ ಸುಧಾರಿತ ಮಾದರಿ ಕಾಲುಗಳು, ಸುವ್ಯವಸ್ಥಿತ ರೀತಿಯಲ್ಲಿ ಜೀವದ್ರವ್ಯದ ವಿಭಜನೆ, ದೇಹಕ್ಕೆ ಹೊದಿಸಿದಂತಿರುವ ಕೂದಲುಗಳು, ಆಹಾರ ಹಾಗೂ ವಾಯುನಾಳದ ವಿಂಗಡಣೆ, ಮರಿಗಳ ಲಾಲನೆ ಪಾಲನೆ, ವಿವಿಧ ರೀತಿಯ ಕ್ಲಿಷ್ಟಕರ ನಡವಳಿಕೆ, ಮನಃಪರಿಸ್ಥಿತಿ, ಹೆಚ್ಚಿನ ಆಯುಷ್ಯ, ಕುಂಠಿತಗೊಂಡ ಭ್ರೂಣಗಳ ಸಂಖ್ಯೆ ಇತ್ಯಾದಿ ಇವೆ. ಹೀಗಾಗಿ ಸ್ತನಿಗಳು ಎಲ್ಲ ವಿಧದ ಪರಿಸರಗಳಲ್ಲಿ ವಾಸಿಸಬಲ್ಲುವು. ಅಲ್ಲದೆ ಯಾವುದೇ ತೊಂದರೆಯಿಲ್ಲದೆ ತಮ್ಮ ಸಂತಾನಾಭಿವೃದ್ಧಿಯನ್ನು ಕೂಡ ನಿರಂತರವಾಗಿ ಸಾಧಿಸಿಕೊಳ್ಳಬಲ್ಲುವು. ಇಂದು ಜೀವಂತವಿರುವ ಸ್ತನಿಗಳ ವರ್ಗೀಕರಣ ಸುಲಭಸಾಧ್ಯವಾದರೂ ವಿಲುಪ್ತವಾದವನ್ನು (ಎಕ್ಸ್‌ಟಿಂಕ್ಟ್) ಕೂಡ ಗಮನಿಸಿದರೆ ಹಲವಾರು ವಿಚಾರಗಳಿಗೆ ಸರಿಯಾದ ಉತ್ತರ ದೊರೆಯುವುದಿಲ್ಲ ಎಂದೇ ಇವುಗಳ ಸಮಗ್ರ ವರ್ಗೀಕರಣ ಕಷ್ಟಸಾಧ್ಯ.

ಮಾನವ ತನ್ನ ಅಶನ, ವಸನ, ವಸತಿ ಹಾಗೂ ಇತರ ವಸ್ತುಗಳಿಗಾಗಿ ಸ್ತನಿಗಳನ್ನು ಬಹಪ್ಪು ಅವಲಂಬಿಸಿದ್ದಾನೆ. ಪಳಗಿಸಿದ ಸ್ತನಿಗಳು ಮಾನವನ ಸರಕು ಹೊರುವುವೇ ಅಲ್ಲದೆ, ಅವನ ಸಂಚಾರ ಸಾಧನವಾಗಿಯೂ ಉಪಯೋಗವಾಗುತ್ತವೆ. ಇವು ಅವನ ಸಂಗಾತಿಯಾಗಿಯೂ ಇರಬಲ್ಲವು. ಹಲವಾರು ದೊಡ್ಡಗಾತ್ರದ ಸ್ತನಿಗಳು ತಮ್ಮ ಆಹಾರ, ವಿಹಾರ ಹಾಗೂ ಅಸ್ತಿತ್ವಕ್ಕೆ ಮಾನವನೊಂದಿಗೆ ಸ್ಪರ್ಧಿಸಿ, ಸೋತು ವಿಲುಪ್ತವಾಗಿ ಹೋಗಿವೆ. ಇಂದು ಸಹ ಹಲವಾರು ಬಲಿಷ್ಠ ದೊಡ್ಡಗಾತ್ರದ ಸ್ತನಿಗಳು ಪ್ರಾಣಿ ಸಂಗ್ರಹಾಲಯದಂಥ ತೆರೆಮರೆಯಲ್ಲಿವೆ. ಇನ್ನು ಹಲವು ಸ್ತನಿಗಳು ಮಾನವನ ಬೇಟೆ ಹಾಗೂ ಪರಿಸರನಾಶದಿಂದ ವಿಲುಪ್ತವಾಗುವ ಅಂಚು ತಲಪಿವೆ. (ಐ.ಕೆ.ಪಿ)

**ಸ್ಪಂಜು ಪ್ರಾಣಿಗಳು:** ಅಕಶೇರುಕಗಳ ಒಂದು ವಂಶ(ಸ್ಪಾಂಜಸ್) ಇವು ಜಡ ಪ್ರಾಣಿಗಳು ಮತ್ತು ಜಲವಾಸಿಗಳು. ಹೆಚ್ಚಿನವು ಸಮುದ್ರದಲ್ಲಿವೆ, ಕೆಲವು ಮಾತ್ರ ಸಿಹಿನೀರಿನಲ್ಲಿ ವಾಸಿಸುತ್ತವೆ. ಒಂಟಿಯಾಗಿ ಅಥವಾ ಗುಂಪಾಗಿರುತ್ತವೆ. ಬಹುಕೋಶ ಜೀವಿಗಳು. ಇಪ್ಪದರ ಜೀವಿಗಳಾಗಿದ್ದು (ಡಿಪ್ಲೊಬ್ಲಾಸ್ಟಿಕ್) ಸಡಿಲವಾದ ಮತ್ತು ಭಿನ್ನವಾದ ಎರಡು ಚರ್ಮ ಪದರವಿರುತ್ತದೆ. ನಡುವೆ ಸಡಿಲವಾಗಿ ಜೋಡಣೆಯಾಗಿರುವ ನಿರ್ಜೀವ ಮಾತೃಕೆ (ಮೀಸೆಂಕೈಮ್) ಇದೆ.

ನಿರ್ದಿಷ್ಟವಾದ ಅಂಗಾಂಶ ಅಂಗ ಅಥವಾ ಅಂಗವ್ಯೂಹವಿರುವುದಿಲ್ಲ. ಇನ್ನೂ ಕೋಶೀಯ ಹಂತದಲ್ಲಿಯೇ ಇವೆ (ಸೆಲ್ಯುಲಾರ್ ಗ್ರೇಡ್). ಆಕಾರದಲ್ಲಿ ತುಂಬಾ ವ್ಯತ್ಯಾಸಗಳಿವೆ. ಕೆಲವೇ ಪ್ರಭೇದಗಳಿಗೆ ನಿರ್ದಿಷ್ಟ ಆಕಾರವಿದೆ. ಉಳಿದುವು ಸಸ್ಯಗಳಂತಿರುವುವು. ದೇಹದಲ್ಲಿ ತ್ರಿಜ್ಯ ಸೌಷ್ಠವ ಅಥವಾ ಅಸಮಪಾರ್ಶ್ವತೆಯಿದೆ. ದೇಹದ ಮೇಲ್ಮೈಯಲ್ಲೆಲ್ಲಾ ಅನೇಕ ಸೂಕ್ಷ್ಮವಾದ ಆಸ್ಟಿಯಗಳೆಂಬ ರಂಧ್ರಗಳಿರುತ್ತವೆ. ಆಸ್ಟಿಯ ಮುಖಾಂತರ ನೀರಿನ ಹರಿವು ದೇಹದೊಳಕ್ಕೆ ಹೋಗಿ, ನಾಳವ್ಯೂಹದಲ್ಲಿ ಪರಿಚಲಿಸಿ, ಒಂದು ಅಥವಾ ಎರಡು ಆಸ್ಕುಲಾಗಳೆಂಬ ದೊಡ್ಡ ರಂಧ್ರಗಳ ಮುಖಾಂತರ ಹೊರಹೋಗುತ್ತದೆ. ದೊಡ್ಡ ರಂಧ್ರವಾದ ಆಸ್ಕುಲ ಬೇರೆ ಪ್ರಾಣಿಗಳಿಗೆ ವ್ಯತಿರಿಕ್ತವಾಗಿ ಬಹಿಕ್ಷೇಪಣಕ್ಕೆ ಸಹಾಯ ಮಾಡುತ್ತದೆಯೆ ಹೊರತು ಪ್ರಾಶನಕ್ಕಲ್ಲ.

ದೇಹದ ಒಳಗಿನ ಕೆಲವು ಸ್ಥಳಗಳಲ್ಲಿ ಅಥವಾ ಪೂರ್ಣವಾಗಿ ವಿಶೇಷವಾದ ಕಶಾಂಗಿಕಂಠಕೋಶ (ಫ್ಲಾಜೆಲ್ಲೆಟೆಡ್ ಕಾಲರ್ ಸೆಲ್ಸ್) ಗಳಿರುವುವು. ಈ ಕೋಶಗಳಿಗೆ ಕೊಯನೊಸೈಟುಗಳೆಂದು ಹೆಸರು. ಬಹುಕಣ ಜೀವಿಗಳ ಪೈಕಿ ಸ್ಪಂಜುಗಳಲ್ಲಿ ಮಾತ್ರ ಈ ಕೋಶಗಳು ಕಾಣಬರುತ್ತವೆ. ಈ ಕೋಶಗಳ ಕಶಾಂಗಗಳ ಸತತ ಬಡಿತದಿಂದ ಉಂಟಾಗುವ ನೀರಿನ ಪರಿಚಲನೆ ಮೂಲಕ ಆಹಾರ ಮತ್ತು ಆಮ್ಲಜನಕ ಸೇವನೆ ನಡೆಯುತ್ತದೆ. ವಿಸರ್ಜಕ ಹಾಗೂ ಅಂಡಾಣುಗಳು ಈ ಜಲ ಪರಿಚಲನೆಯ ಮೂಲಕ ಹೊರ ಹೋಗುತ್ತವೆ.

ಬಾಯಿ ಮತ್ತು ಜೀರ್ಣಾಂಗ ಕುಳಿ ಇಲ್ಲ. ಜಲಪರಿಚಲನೆಯ ಮೂಲಕ ಶರೀರವನ್ನು ಪ್ರವೇಶಿಸುವ ಸೂಕ್ಷ್ಮ ಪ್ರಾಣಿಗಳನ್ನು ಮತ್ತು ಸಸ್ಯಗಳನ್ನು ಕೊಯನೊಸೈಟುಗಳು ಸೇವಿಸುತ್ತವೆ. ಅಮೀಬಾ ರೀತಿ, ಜೀರ್ಣಕ್ರಿಯೆ ಪೂರ್ಣವಾಗಿ ಅಂತರ್ಜೀವಕೋಶೀಯವಾಗಿರುತ್ತದೆ ( ಇಂಟ್ರಸೆಲ್ಯುಲರ್.)

ಮೀಸೆಂಕೈಮ್ ನಲ್ಲಿ ಸೂಕ್ಷ್ಮವಾದ ಸೂಚ್ಯಂಗಗಳಿರುವ (ಸ್ಪಿಕ್ಯೂಲ್ಸ್) ಅಂತರಸ್ಥಿಪಂಜರವಿದೆ. ಬೇರೆಯಾದ ಸ್ಫಟಿಕೀಯ, ಸುಣ್ಣಯುಕ್ತ, ಸಿಲಿಕ ಯುಕ್ತ ಪ್ರೋಟೀನುಯುಕ್ತ, ಸ್ಪಾಂಜಿನ ನಾರುಯುಕ್ತ ಅಥವಾ ಪ್ರೋಟೀನ್ ಹಾಗೂ ಸ್ಪಂಜಿನ್ ಎರಡರಿಂದಲೂ ಕೂಡಿದ ಸೂಚ್ಯಂಗಗಳು ಮಾತೃಕೆಯಲ್ಲಿ ಹಾಗೂ ಕೆಲವೊಮ್ಮೆ ಹೊರ ಹಾಗೂ ಒಳಚರ್ಮದಲ್ಲಿ ಹರಡಿವೆ.

ನರ ಮತ್ತು ಇಂದ್ರಿಯ ಜೀವಕೋಶಗಳು ಇಲ್ಲವೇ ಇಲ್ಲ. ಜೀವಕೋಶಗಳು ಸ್ವತಂತ್ರವಾಗಿರುವುದರಿಂದ ದೇಹದ ಒಂದು ಕಡೆ ಪ್ರಚೋದನೆಯಾದಾಗ ಸಂವೇದನೆ (ಇಂಪಲ್ಸ್) ಮತ್ತೊಂದು ಭಾಗಕ್ಕೆ ಜೀವಕೋಶಗಳ ಮೂಲಕ ತುಂಬಾ ನಿಧಾನವಾಗಿ ಸಾಗುತ್ತದೆ. ಪ್ರೌಢಜೀವಿಗಳಲ್ಲಿ ಚಲನಶಕ್ತಿ ಇಲ್ಲ. ಆದರೆ ಲಾರ್ವ ಸ್ವತಂತ್ರವಾಗಿ ಈಜಬಲ್ಲವು.

ನಿರ್ಲಿಂಗ ವಿಧಗಳಾದ ಅಂಕುರಣ ಮತ್ತು ಜೆಮ್ಯೂಲ್‌ನಿಂದ ಹಾಗೂ ಲೈಂಗಿಕ ವಿಧದಿಂದ ಪ್ರಜನನವಾಗುತ್ತದೆ. ಲೈಂಗಿಕ ವಿಧದಲ್ಲಿ, ಆರ್ಕಿಯೊಸೈಟನಿಂದ ಅಂಡಾಣು ಮತ್ತು ವೀರ್ಯಾಣುಗಳು ಉತ್ಪತ್ತಿಯಾಗುತ್ತವೆ, ವಿಶೇಷವಾದ ಜನನಗ್ರಂಥಿಗಳಿಲ್ಲ. ನಿಷೇಚನೆ ಆಂತರಿಕವಾದುದು. ಯುಗ್ಮ (ಜೈಗೋಟ್) ದ ವಿಭಜನೆ ಸಮಭಾಜಕವಾಗಿ ನಡೆಯುತ್ತದೆ. ಬೆಳವಣಿಗೆ ಅ ನೇರ. ಭ್ರೂಣ ಬೆಳೆದು ಚಟುವಟಿಕೆಯಿಂದ ಈಜುವ ಶಿಲಿಕಾಂಗಗಳುಳ್ಳ ಲಾರ್ವಗಳಾಗಿ ಸ್ಪಂಜಿನಿಂದ ಹೊರಬರುತ್ತವೆ. ಸ್ವಲ್ಪ ಸಮಯ ಈಜಿ ಕೊನೆಗೊಂದು ಕಡೆ ಅಂಟಿಕೊಂಡು ರೂಪಾಂತರಗೊಂಡು ಸಸ್ಯಗಳಂತಿರುವ ಪ್ರೌಢ ಹಂತವನ್ನು ತಲುಪುತ್ತವೆ. ಲಾರ್ವಗಳಲ್ಲಿ ಆಂಫಿಬ್ಲಾ ಸ್ಟುವಲ ಮತ್ತು ಪ್ಯಾರೆಂಕೈಮುಲ ಎಂಬ ಎರಡು ಬಗೆಗಳಿವೆ.

ವರ್ಗೀಕರಣ: ಈ ವಂಶದಲ್ಲಿ ಸುಮಾರು 1400 ಜಾತಿಗಳ 10,000 ಜೀವಂತ ಮತ್ತು ಜೀವ್ಯವಶೇಷವಾಗಿರುವ ಪ್ರಭೇದಗಳಿವೆ. ಒಳಾಸ್ಥಿಪಂಜರ ಅಥವಾ ಸೂಚ್ಯಂಗಗಳ ಆಧಾರದಿಂದ ಇವನ್ನು 3 ವರ್ಗ ಮತ್ತು 12 ಗಣಗಳಾಗಿ ವಿಂಗಡಿಸಲಾಗಿದೆ.

ವರ್ಗ 1: ಕ್ಯಾಲ್ಕೇರಿಯ ಅಥವಾ ಕ್ಯಾಲ್ಸಿಸ್ಪಂಜಿಯ; ಎಲ್ಲ ಸಮುದ್ರ ಜೀವಿಗಳು. ಆಳವಿಲ್ಲದ ಕಡಲುಗಳಲ್ಲಿ ಕಾಣ ಸಿಗುವುವು, ರಚನೆ ಸರಳವಾಗಿದೆ ಅಸ್ಥಿಪಂಜರದಲ್ಲಿ ಕಾರ್ಬನೇಟಿನ ಸುಣ್ಣದಿಂದಾದ ಪ್ರತ್ಯೇಕವಾದ ಸೂಚ್ಯಾಂಗಗಳಿವೆ. ಉದಾಹರಣೆಗಳು: ಲ್ಯೂಕೊಸೊಲೆನಿಯ., ಕ್ಲ್ಯಾತ್‌ರೈನ, ಸೈಕಾನ್ (ನೋಡಿ:ಕ್ಯಾಲ್ಕೇರಿಯ)

ವರ್ಗ 2: ಹೆಕ್ಸಕ್ಟಿನೆಲಿಡಾ ಅಥವಾ ಹೈಲೊಸ್ಪಂಜಿಯೆ: ಆಳವಿರುವ ಸಮುದ್ರದ ಪ್ರಭೇದಗಳು. ಆರು ಕಿರಣಗಳು ಅಥವಾ ತ್ರಿಭುಜಗಳಿರುವ ಸಿಲಿಕಯುಕ್ತ ಸೂಚ್ಯಾಂಗಗಳಿವೆ. ಒಂಟಿ ಅಥವಾ ಗುಂಪಾಗಿರುವುವು. ಉದಾ:ಯಪ್ಲೆಕ್ಟೆಲ್ಲಾ, ಹ್ಯಾಲೋನೀಮ ಮುಂತಾದುವು.

ವರ್ಗ 3: ಡಿಮೊಸ್ಪಂಜಿಯೆ: ಸಾಮಾನ್ಯವಾಗಿ ಸಮುದ್ರಜೀವಿಗಳು. ಕೆಲವು ಮಾತ್ರ ಸಿಹಿನೀರಿನಲ್ಲೂ ಕಾಣಸಿಗುವುವು. ಸಿಲಿಕಯುಕ್ತ ಅಥವಾ ಸ್ಪಂಜಿನ ನಾರು ಅಥವಾ ಎರಡೂ ಇರುವ ಅಸ್ಥಿಪಂಜರ ಅಥವಾ ಯಾವುದೂ ಇಲ್ಲದಿರುವುದೇ ಇವುಗಳ ವಿಶೇಷ. ಉದಾಹರಣೆಗಳು: ಸ್ಪಂಜಿಲ್ಲ, ಕ್ಲಿಯೊನ ಮುಂತಾದವು. (ಎಸ್.ಆರ್.ಎಸ್)

**ಸ್ಫೀನೊಡಾನ್**: ನ್ಯೂಜಿಲೆಂಡಿನಲ್ಲಿ ಮಾತ್ರ ಕಂಡುಬರುವ, ರಿಂಕೊಸಿಫಾಲಿಯ ಗಣದ ಸರೀಸೃಪ. ಟುವಟಾರ ಪರ್ಯಾಯ ನಾಮ. ಪ್ರಾಗ್ಜೀವ ವಿಜ್ಞಾನದ ಪ್ರಕಾರ ಪುರಾತನ ಕಾಲದಲ್ಲಿ ಈ ಗಣದ ಅನೇಕ ಪ್ರಭೇದಗಳು ಭೂಮಿಯ ವಿವಿಧ

ಭಾಗಗಳಲ್ಲಿ ಹಂಚಿದ್ದು, ಪ್ರತಿಕೂಲ ಪರಿಸ್ಥಿತಿಯಿಂದಾಗಿ ಎಲ್ಲವೂ ವಿನಾಶವಾಗಿ ಸ್ಫೀನೊಡಾನ್ ಪಂಕ್ಟೇಟಸ್ ಎಂಬ ಪ್ರಭೇದ ಮಾತ್ರ ನ್ಯೂಜಿಲೆಂಡಿನ ಉತ್ತರದ ಕೆಲವು ದ್ವೀಪಗಳಲ್ಲಿ ಉಳಿದಿದೆ. ಎತ್ತರದ ದಿನ್ನೆಗಳು, ಕುರುಚಲು ಕಾಡುಗಳಲ್ಲಿ ಇಂದು

ವಿರಳವಾಗಿ ಕಂಡುಬರುತ್ತದೆ. ವಿಕಾಸದಲ್ಲಿ ಹೆಚ್ಚು ಮಾರ್ಪಾಡಾಗದೆ ಪುರಾತನ ಗುಣಗಳನ್ನು ಉಳಿಸಿಕೊಂಡು ಇನ್ನೂ ಬದುಕುಳಿದಿರುವ ಈ ಪ್ರಭೇದವನ್ನು ಜೀವಂತ ಪಳೆಯುಳಿಕೆ ಎನ್ನುವರು.

ನೋಡಲು ಅರ್ಧ ಓತಿಯಂತೆ ಇನ್ನರ್ಧ ಮೊಸಳೆಯಂತೆ ಗೋಚರಿಸುತ್ತದೆ. ಗಂಡು ಟುವಟಾರದ ಉದ್ದ ತಲೆಯಿಂದ ಬಾಲದವರೆಗೆ 60 ಸೆಂಮೀ ಹೆಣ್ಣು 40 ಸೆಂಮೀ ಗಂಡಿನ ತೂಕ ಒಂದು ಕಿಗ್ರಾಂ; ಹೆಣ್ಣಿನ ತೂಕ ಅರ್ಧ ಕಿಗ್ರಾಂ ಶರೀರದ ಮೇಲ್ಭಾಗ ತಿಳಿ ಹಸಿರು ಅಥವಾ ಬೂದು ಬಣ್ಣ, ನಡುವೆ ಬಿಳಿ ಅಥವಾ ಹಳದಿ ಚುಕ್ಕೆಗಳಿರುವುವು. ಬೆನ್ನ ಮೇಲೆ ತಲೆಯಿಂದ ಬಾಲದವರೆಗೆ ಒಂದು ಸಾಲು ಗೋಪುರಾಕಾರದ ಮುಳ್ಳುಗಳಿರುವುದರಿಂದ ಟುವಟಾರ ಎಂಬ ಹೆಸರು ಅನ್ವರ್ಥವಾಗಿದೆ. ನ್ಯೂಜಿಲೆಂಡಿನ ಮವೋರಿ ಜನಾಂಗದವರ ಭಾಷೆಯಲ್ಲಿ ಟುವಟಾರ ಎಂದರೆ ಬೆನ್ನ ಮೇಲಿನ ಗೋಪುರ ಎಂದರ್ಥ. ಟುವಟಾರಗಳ ತಲೆಬುರುಡೆಯ ರಚನೆ ಉಳಿದ ಸರೀಸೃಪಗಳಿಗಿಂತ ಸ್ವಲ್ಪ ಭಿನ್ನ. ದವಡೆಯ ಎಲುಬು ಬಾಯಿಯ ಒಳ ಅಂಚಿನಲ್ಲಿ ಗರಗಸದಂತೆ ಮಾರ್ಪಾಡಾಗಿವೆ. ಇವೇ ಟುವಟಾರದ ಹಲ್ಲುಗಳು. ನೆತ್ತಿಯ ಮೇಲಿರುವ ಪೈನಿಯಲ್ ಗ್ರಂಥಿ ಉತ್ತಮವಾಗಿ ಬೆಳೆದಿದೆ. ಮೂರನೆಯ ಕಣ್ಣಿನಂತಿರುವ ಈ ಗ್ರಂಥಿ ಎಳೆಯ ಟುವಟಾರದಲ್ಲಿ ನಿಚ್ಚಳವಾಗಿ ಕಾಣುವುದು. ಇದು ಅರ್ಧ ಸೆಂಮೀ ವ್ಯಾಸವಿದ್ದು ಕಣ್ಣಿನಲ್ಲಿರುವಂತೆ ಪುಟ್ಟ ಮಸೂರ ಹಾಗೂ ಅಕ್ಷಿಪಟಗಳಿರುತ್ತವೆ. ಅದರ ಕೆಳಭಾಗದಲ್ಲಿರುವ ನರ ಮೆದುಳನ್ನು ಸೇರುತ್ತದೆ.

ಟುವಟಾರ ನಿಶಾಚರಿ ಪ್ರಾಣಿ. ಹಗಲಿನಲ್ಲಿ ಬಂಡೆಗಳ ಕೆಳಭಾಗದಲ್ಲಿ, ತಾನೇ ಕೊರೆದ ಬಿಲಗಳಲ್ಲಿ ಅಥವಾ ಬೇರೆ ಪ್ರಾಣಿಗಳು ಬಿಟ್ಟುಹೋದ ಬಿಲಗಳಲ್ಲಿ ವಾಸಿಸುತ್ತವೆ. ಕೀಟ, ಹಲ್ಲಿ, ಪುಟ್ಟ ಕಡಲ ಹಕ್ಕಿ ಹಾಗೂ ಅವುಗಳ ಮೊಟ್ಟೆ ಆಹಾರ. ಜನವರಿ ತಿಂಗಳು ಪ್ರಣಯಕ್ಕೆ ಪ್ರಶಸ್ತವಾದ ಸಮಯ. ಮುಂದೆ ಹತ್ತು ತಿಂಗಳ ಅನಂತರ ಅಂದರೆ ವಸಂತ ಕಾಲದಲ್ಲಿ ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಬೆಳವಣಿಗೆ ನಿಧಾನ. ಹದಿನೈದು ತಿಂಗಳು ತಗಲುತ್ತದೆ. ಮರಿಗಳು ವಿಶೇಷವಾಗಿ ಬೆಳೆದ ಮೊಟ್ಟೆಹಲ್ಲುಗಳಿಂದ ಹೊರಕವಚವನ್ನು ಕೊರೆದು ಹೊರಬರುತ್ತವೆ. ಇಪ್ಪತ್ತು ವರ್ಷಗಳ ಬೆಳವಣಿಗೆಯ ಅನಂತರ ಪ್ರಬುದ್ಧವಾಗುತ್ತವೆ. ಇವು ದೀರ್ಘಾಯುಷಿಗಳು, ನೂರು ವರ್ಷಗಳಿಗಿಂತ ಹೆಚ್ಚು ಕಾಲ ಬದುಕುತ್ತವೆ. ಬೆಳವಣಿಗೆ ನಿಧಾನವಾಗಿರುವುದರಿಂದ ಹಾಗೂ ನಾವಿಕರೊಂದಿಗೆ ಆಗಮಿಸಿದ ವಿದೇಶೀ ಪ್ರಾಣಿಗಳ ಆಕ್ರಮಣದಿಂದ ಇವುಗಳ ನಾಶವಾಗುತ್ತಿದೆ. ಆದುದರಿಂದ 1895 ರಿಂದ ನಶಿಸುತ್ತಿರುವ ಪ್ರಾಣಿಗಳ ಗುಂಪಿಗೆ ಸೇರಿಸಲಾಗಿದೆ. (ಆರ್.ಎಸ್;ಬಿ.ಪಿ)

**ಸ್ವರೇಡಿಯೋ ಲೇಖ ಪ್ರಕ್ರಿಯೆ:** ನಿರ್ದಿಷ್ಟ ಪದಾರ್ಥದ ಮೇಲೆ ಸಂಗ್ರಹಣೆಗೊಂಡ ರೇಡಿಯೋ ಐಸೋಟೋಪುಗಳ ಪ್ರಸರಣ ಮತ್ತು ಮೌಲ್ಯವನ್ನು ತಿಳಿಯ ಪಡಿಸುವ ವಿಧಾನ (ಆಟೊರೇಡಿಯೊಗ್ರಫಿ). ಈ ವಿಧಾನವನ್ನು 1867ರಲ್ಲಿ ನೈಪ್ಸಿಡೆ ವಿಕ್ಟರ್ ಕಂಡು ಹಿಡಿದ. ಈತ ಯುರೇನಿಯಂ ನೈಟ್ರೇಟ್ ಮತ್ತು ಯುರೇನಿಯಂ ಟ್ರಿಟ್ರೇಟ್‌ಗಳಿಂದ ಬೆಳ್ಳಿಯ ಕ್ಲೋರೈಡ್ ಮತ್ತು ಬೆಳ್ಳಿಯ ಐಯೊಡೈಡ್ ಎಮಲ್ಶನ್‌ಗಳ ಮೇಲೆ ಮೂಲವಸ್ತುಗಳನ್ನು ಗಮನಿಸಿದನು. ಬೇರೆ ಬೇರೆ ರೇಡಿಯೊ ಆಕ್ಟೀವ್ ಮೂಲವಸ್ತುಗಳನ್ನು ಆಟೊ ರೇಡಿಯೋಗ್ರಫಿಯಲ್ಲಿ ಉಪಯೋಗಿಸಬಹುದು. ಈ ಕ್ರಿಯೆಯನ್ನು ಸೂಕ್ಷ್ಮಜೀವಿಗಳು, ಸಸ್ಯಗಳು ಮತ್ತು ಪ್ರಾಣಿಗಳ ಮೇಲೆ ಪ್ರಯೋಗಿಸಬಹುದು. ಈ ಮೊದಲೇ ಆಟೊರೇಡಿಯೋಗ್ರಫಿಯನ್ನು ಬಿಕ್ವರೆಲ್ 1869ರಲ್ಲಿ ಎಮಲ್ಶನ್ ಮತ್ತು ಯುರೇನಿಯಂ ನೈಟ್ರೇಟ್ ನಡುವಣ ಮಿಂದ ಕಾಗದ ಮಂಕಾಗುವುದರ ಮುಖಾಂತರ ನೋಡಿದ್ದ. 1924ರಲ್ಲಿ ಈ ವಿಧಾನವನ್ನು ಜೈವಿಕ ಪ್ರಯೋಗಗಳಲ್ಲಿ, ಅದರಲ್ಲೂ ಟ್ರೇಸ್[131] ಐ ಯ ಥೈರಾಯ್ಡ್ ಮತ್ತು ಇತರ ಅಂಗಾಂಶಗಳ ಸಂಬಂಧದಲ್ಲಿ ಬಳಸಲಾಯಿತು. 1950ರಲ್ಲಿ ಈ ತಂತ್ರದ ಪ್ರಕ್ರಿಯೆಯ ವ್ಯಾಪಕತೆಯನ್ನು ಹೆಚ್ಚಿಸಲಾಯಿತು. 1977ರಲ್ಲಿ $^{14}$ಸಿ ಎಂಬ ಐಯಡೊಯಾಂಟಿ ಪೈರೈನ್ ನಿಂದ ಮೆದುಳು ರಕ್ತ ಚಲನೆಯನ್ನು ನಿಖರವಾಗಿ ಅಳೆಯುವುದನ್ನು ಅರಿಯಲಾಯಿತು. ಇತ್ತೀಚೆಗೆ, ಈ ವಿಧಾನದಿಂದ ಪ್ರೊಟೀನ್‌ಗಳಲ್ಲಿನ ಅಮೈನೋ ಆಮ್ಲದ ಅಳತೆ ಪ್ರಮಾಣವನ್ನು ನೋಡಲಾಯಿತು. ಈಗಿನ ದಿನಗಳಲ್ಲಿ ಲೈಗಾಂಡ್ ಬೈಂಡಿಂಗ್ ಮತ್ತು ಔಷಧ ಪ್ರಕ್ರಿಯೆಗಳ ಪ್ರಮಾಣ ಅಳೆಯಲು ಉಪಯೋಗಿಸಲಾಗುತ್ತಿದೆ.

ಈ ಸ್ವರೇಡಿಯೋ ಲೇಖ ಪ್ರಕ್ರಿಯೆಯ ಸಾಮಾನ್ಯ ವಿಧಾನವು ಹೇಗೆಂದರೆ ಮಾದರಿ ವಸ್ತು ಅನ್ನು ಛಾಯಾಚಿತ್ರಣ ಕಾಗದ (ಫೋಟೋಗ್ರಾಫಿಕ್ ಫಿಲಂ) ದಲ್ಲಿ ಅಂದರೆ ಅದರಲ್ಲಿಯೂ ತಳ, ಛಾಯಾಚಿತ್ರ ಸೂಕ್ಷ್ಮತೆಯ ಲೇಪ ಮತ್ತು ಛಾಯಾಚಿತ್ರ ಸೂಕ್ಷ್ಮವಲ್ಲದ ಜಿಲಾಟಿನ್ ಎಂಬ ರಕ್ಷಾಕವಚದೊಳಗಿಡಲಾಗುತ್ತದೆ. ಈ ಲೇಪನದ ಪದರವು ಬೆಳ್ಳಿಯ ಹ್ಯಾಲೈಡ್ ಕಣಗಳು ಮತ್ತು ಜಿಲಾಟಿನ್‌ನಿಂದ ಕೂಡಿರುತ್ತದೆ. ಬ್ರೊಮಿನ್ ಐಯೊಡೈಡ್ ಬೆಳ್ಳಿಯ ಹಾಲೈಡ್ ಹರಳುಗಳಿಂದ ಕೂಡಿದ್ದು ಛಾಯಾಚಿತ್ರ ಸೂಕ್ಷ್ಮತೆ ಹೊಂದಿರುತ್ತದೆ. ಬೇರೆ ಬೇರೆ ಪ್ರಖರತೆಗೆ ತಕ್ಕಂತೆ ಬೆಳ್ಳಿಯ ಕಣಗಳನ್ನು ಉಪಯೋಗಿಸಲಾಗುತ್ತದೆ. ಮಾದರಿ ಅಂಗಾಂಶಗಳಿಂದ ಹೊರ ಹೊಮ್ಮುವ ರೇಡಿಯಮ್ ಅಥವ ತುಂಡು ಬೆಳ್ಳಿಯ ಲೋಹದ ಗರಣಿ ಲೇಪನದಿಂದ ತಿಳಿಯಬಹುದಾಗಿದೆ. ಛಾಯಾಚಿತ್ರಣ ಬೆಳವಣಿಗೆಯಿಂದ ಬೆಳ್ಳಿಯ ಕಣಗಳಾಗಿ ಬೆಳವಣಿಗೆಯಲ್ಲದ ಬೆಳ್ಳಿಯ ಹ್ಯಾಲೈಡ್‌ಅನ್ನು ನಿಯಂತ್ರಿಸುತ್ತದೆ. ಬೆಳ್ಳಿಯ ಕಣಗಳ ಬೆಳವಣಿಗೆ ರೂಪವು ರೇಡಿಯೊಲೇಬಲ್ ಪದಾರ್ಥಗಳ ಆ ಮಾದರಿಯಲ್ಲಿ ಎಷ್ಟಿದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಸ್ವರೇಡಿಯೋ ಲೇಖ ಪ್ರಕ್ರಿಯೆಯು ವಿಶಾಲ ಅಂತರದ ಬಾಹ್ಯ ರೂಪ ಹೊಂದಿರುತ್ತದೆ. ಅಂದರೆ ಸೂಕ್ಷ್ಮ ಸ್ವರೇಡಿಯೋ ಲೇಖ ಪ್ರಕ್ರಿಯೆ ಮತ್ತು ಮ್ಯಾಕ್ರೊ ಸ್ವರೇಡಿಯೊ ಲೇಖ ಪ್ರಕ್ರಿಯೆಯಾಗಿರುತ್ತದೆ. ಸೂಕ್ಷ್ಮ ಸ್ವರೇಡಿಯೋ ಲೇಖ ಪ್ರಕ್ರಿಯೆಯು 0.54 ಮೈಮಿ ಪ್ರಖರತೆ ಹೊಂದಿರುತ್ತದೆ. ಇದನ್ನು ಜೀವಕೋಶಗಳಲ್ಲಿ ಅಥವಾ ನಡುವೆ ಇರುವ ಸೂಕ್ಷ್ಮಧಾತುಗಳ (ಟ್ರೇಸರ್ಸ್) ಇರುವಿಕೆಯನ್ನು ತಿಳಿಯಲು ಉಪಯೋಗಿಸಲಾಗುತ್ತದೆ. ಮ್ಯಾಕ್ರೋ ರೇಡಿಯೋಗ್ರಫಿಯು 50 ಮೈಮಿ ಪ್ರಖರತೆ ಹೊಂದಿದ್ದು ಇದನ್ನು ಅಂಗಾಂಶಗಳ ನಡುವಣ ಪ್ರಬಲತೆಯನ್ನು ತಿಳಿಯಲು ಉಪಯೋಗಿಸಲಾಗುತ್ತದೆ.

ಸೂಕ್ಷ್ಮಸ್ವರೇಡಿಯೋ ಲೇಖ ಪ್ರಕ್ರಿಯೆಯಲ್ಲಿ ತೇವ ಮತ್ತು ಒಣ ವಿಧಾನವೆಂಬ ಎರಡು ವಿಧಗಳಿವೆ. ತೇವ ವಿಧಾನದಲ್ಲಿ ಮಾದರಿಯನ್ನು ದ್ರವಲೇಪನದಲ್ಲಿ ಮುಳುಗಿಸಲಾಗುತ್ತದೆ. ಒಣ ವಿಧಾನದಲ್ಲಿ ಮಾದರಿಯನ್ನು ತೀವ್ರವಾಗಿ ಶೀತಲೀಕರಣಗೊಳಿಸಿ ನಂತರ ಒಣಹಾಕಲಾಗುತ್ತದೆ. ತೇವ ವಿಧಾನವು ಒಣ ವಿಧಾನಕ್ಕಿಂತ ಹೆಚ್ಚು ಬಳಕೆಯಲ್ಲಿದೆ. ಒಣ ವಿಧಾನ ತುಂಬಾ ಕ್ಲಿಷ್ಟವಾದ್ದರಿಂದ ಅದು ಅಷ್ಟು ಬಳಕೆಯಲ್ಲಿಲ್ಲ. ಇತ್ತೀಚೆಗೆ ಅಂಕಿತ ಸ್ವರೇಡಿಯೋ ಲೇಖ ಪ್ರಕ್ರಿಯೆ ಇದ್ದು ಇಲ್ಲಿನ ರಚನಾ ರೂಪ ರೇಡಿಯೋ ಅಂಕಿತ ಹೊಂದಿರುವುದರಿಂದ ಇದು ಲೇಪನಕ್ಕಿಂತ ಚೆನ್ನಾಗಿದ್ದು ಜೀವರಸಾಯನವಿಜ್ಞಾನ, ಔಷದ ವಿಜ್ಞಾನ, ನ್ಯೂಕ್ಲಿಯರ್ ಔಷಧಿ ಮತ್ತು ರೇಡಿಯೋ ಥೆರಪಿಯಲ್ಲಿ ಉಪಯೋಗಿಸಲಾಗುತ್ತದೆ. (ಓ.ಎಲ್.ಎಸ್.)

# ಹ

**ಹಂದಿ:** ಎಲ್ಲಾ ಬಗೆಯ ಆಹಾರ ಪದಾರ್ಥಗಳನ್ನೂ – ಧಾನ್ಯ, ಗೆಡ್ಡೆಗೆಣಸು, ವ್ಯರ್ಥ ತರಕಾರಿ, ಹೋಟೆಲ್, ಹಾಸ್ಟೆಲ್ ಹಾಗೂ ಮಾಂಸದಂಗಡಿಯ ತ್ಯಾಜ್ಯ, ಒಣಮೀನು, ಕಾಕಂಬಿ, ಹುಲ್ಲು ಇತ್ಯಾದಿ ತಿಂದು ಕೊಬ್ಬಿ ಬೆಳೆಯಬಲ್ಲ ವಿಶಿಷ್ಟ ಸಾಕು ಪ್ರಾಣಿ. ಆರ್ಟಿಯೋಡ್ಯಾಕ್ಟೀಲ ಗಣ, ಸೂಯಿಡೆ ಕುಟುಂಬದ ಸೂಸ್ ಜಾತಿಗೆ ಸೇರಿದೆ. ಎಲ್ಲ ಬಗೆಯ ಹವಾಮಾನಕ್ಕೂ ಹೊಂದಿಕೊಳ್ಳುವ ಆನುವಂಶೀಯ ಗುಣ ಹೊಂದಿರುವ ಹಂದಿ ತನ್ನ ತೂಕದ ಶೇ 72 ರಿಂದ 74 ರಷ್ಟು ಉತ್ಕೃಷ್ಟವಾದ ಮಾಂಸವನ್ನು ಕೊಡುತ್ತದೆ. ಇದರ ಕೂದಲಿನಿಂದ ಬ್ರಷ್‌ಗಳನ್ನು, ಗ್ರಂಥಿಗಳಿಂದ ಔಷಧಿಗಳನ್ನು, ಗೊರಸಿನಿಂದ ಗೋಂದನ್ನು, ಕೊಬ್ಬಿನಿಂದ ಮೇಣದ ಬತ್ತಿಗಳನ್ನು ಉತ್ಪಾದಿಸಲಾಗುತ್ತದೆ. ಇದರ ಗೊಬ್ಬರ ಭೂಮಿಯ ಫಲವಂತಿಕೆಯನ್ನು ಹೆಚ್ಚಿಸುತ್ತದೆ. ಬೇರೆ ಪ್ರಾಣಿಗಳಿಗೆ ಹೋಲಿಸಿದರೆ ಪ್ರತಿಶತ ಹೆಚ್ಚು ಮಾನವನ ಸೇವನೆಗೆ ಯೋಗ್ಯವಾದ ಮಾಂಸದ ಇಳುವರಿ ನೀಡುವ ಹಂದಿ ಬಡವರ, ಆರ್ಥಿಕವಾಗಿ ಹಿಂದುಳಿದವರ ಮೆಚ್ಚಿನ ಬಹು ಉಪಯೋಗಿ ಸಾಕುಪ್ರಾಣಿ. ತಾನು ತಿನ್ನುವ ಪ್ರತಿ ಮೂರು ಕಿಗ್ರಾಂ. ಆಹಾರವನ್ನು ಒಂದು ಕಿಗ್ರಾಂ. ಮಾಂಸವನ್ನಾಗಿ ಪರಿವರ್ತಿಸುವ ಅಗಾಧ ಸಾಮರ್ಥ್ಯವನ್ನು ಹೊಂದಿದೆ. ಶೀಘ್ರ ಬೆಳವಣಿಗೆಗೆ ಹೆಸರುವಾಸಿಯಾಗಿದೆ. ಬೇಗನೇ ಪ್ರಾಯಕ್ಕೆ

ಬರುವುದಲ್ಲದೆ ಒಮ್ಮೆಗೆ 10 ರಿಂದ 12 ರಂತೆ ವರ್ಷಕ್ಕೆ ಎರಡು ಬಾರಿ ಮರಿಗಳನ್ನು ಹಾಕುತ್ತದೆ.

ಸ್ಥಳೀಯ ತಳಿ ಗಾತ್ರದಲ್ಲಿ ತುಂಬಾ ಚಿಕ್ಕದಾಗಿದ್ದು ಸಾಮಾನ್ಯವಾಗಿ ಕಪ್ಪು ಬಣ್ಣದ್ದಾಗಿರುತ್ತದೆ. ಹೆಚ್ಚಿನ ಲಾಭ ತಂದುಕೊಡಲಾರದು. ವಿದೇಶಿ ತಳಿಯನ್ನು ಮಾಂಸದ ಉತ್ಪಾದನೆಗೆ ವಿಶೇಷವಾಗಿ ರೂಪಿಸಿರುವುದರಿಂದ ಬೇಗನೆ ಬೆಳೆಯುತ್ತದೆ. ಸಾಮಾನ್ಯವಾಗಿ 80 ಕಿಗ್ರಾಂ. ತೂಕ ತಲುಪಲು 4–5 ತಿಂಗಳು ತೆಗೆದುಕೊಳ್ಳುತ್ತದೆ. ವಿದೇಶಿ ತಳಿಗಳಲ್ಲಿ ಇಂಗ್ಲೆಂಡಿನ ಯಾರ್ಕ್‌ಷೈರ್, ಸ್ಯಾಡಲ್‌ಬ್ಯಾಕ್ ಮತ್ತು ಹ್ಯಾಂಪ್‌ಷೈರ್ ಹಾಗು ಡೆನ್ಮಾರ್ಕಿನ ಲ್ಯಾಂಡ್‌ರೇಸ್ ತಳಿಗಳು ತುಂಬಾ ಜನಪ್ರಿಯ.

ಆರು ತಿಂಗಳಲ್ಲಿ ಪ್ರೌಢಾವಸ್ಥೆಗೆ ಬರುವ ಹಂದಿಗಳನ್ನು ಸಾಮಾನ್ಯವಾಗಿ ಎಂಟು ತಿಂಗಳಲ್ಲಿ ತಳಿ ಸಂವರ್ಧನೆಗಾಗಿ ಗಂಡಿನೊಡನೆ ಬಿಡಲಾಗುತ್ತದೆ. 80 ರಿಂದ 90 ಕಿಗ್ರಾಂ. ತೂಕ ತಲುಪಿದೊಡನೆ ವಯಸ್ಸನ್ನು ಪರಿಗಣಿಸದೆ ಸಂವರ್ಧನೆಗೆ ಉಪಯೋಗಿಸಬಹುದು. ಸುಮಾರು ಎರಡೂವರೆ ದಿನ ಬೆದೆಯಲ್ಲಿರುತ್ತದೆ. ಗರ್ಭಾವಧಿ 115 ದಿನಗಳು. ಆರು ತಿಂಗಳಿಗೊಮ್ಮೆ ವರ್ಷಕ್ಕೆ ಎರಡು ಬಾರಿ ಮರಿಗಳನ್ನು ಹಾಕುತ್ತದೆ. ತಳಿವರ್ಧನೆಗೆ 20 ರಿಂದ 30 ಹೆಣ್ಣು ಹಂದಿಗಳಿಗೆ ಒಂದು ಗಂಡು ಹಂದಿ ಬೇಕಾಗುತ್ತದೆ. ನಾಲ್ಕು ವರ್ಷಗಳ ಉಪಯೋಗದ ಅನಂತರ ಇವುಗಳನ್ನು ಆಹಾರಕ್ಕಾಗಿ ವಧಿಸಿ ಬೇರೆ ಹಂದಿಗಳನ್ನು ತಳಿ ಸಂವರ್ಧನೆಗಾಗಿ ಉಪಯೋಗಿಸಲಾಗುತ್ತದೆ. ಕೇವಲ ಮಾಂಸಕ್ಕಾಗಿಯೇ ಸಾಕಿದ ಹಂದಿಗಳನ್ನು 4 ತಿಂಗಳವರೆಗೆ ಕೊಬ್ಬಿಸಿ ವಧಿಸಲಾಗುತ್ತದೆ. ಎರಡರಿಂದ ಮೂರು ತಿಂಗಳು ಹಾಲುಕುಡಿಸುವ ತಾಯಿ ಹಂದಿಗಳು ಮರಿಗಳನ್ನು ಪ್ರತ್ಯೇಕಿಸಿದೊಡನೆ ಕೇವಲ ಹತ್ತು ದಿನಗಳಲ್ಲೇ ಬೆದೆಗೆ ಬಂದು ಗರ್ಭಧರಿಸಲು ತಯಾರಾಗಿಬಿಡುತ್ತವೆ.

ಹೆಚ್ಚು ಮರಿಗಳನ್ನು ಹಾಕುವುದರಿಂದ ಮರಿಗಳನ್ನು ನೋಡಿಕೊಳ್ಳುವಾಗ ಜಾಗರೂಕತೆ ಅವಶ್ಯಕ. ಸಾಮಾನ್ಯವಾಗಿ ಹೆಣ್ಣು ಹಂದಿಗೆ 12 ರಿಂದ 14 ಮೊಲೆತೊಟ್ಟುಗಳಿರುತ್ತವೆ. ತಳಿ ಸಂವರ್ಧನೆಗೆ ಆಯ್ಕೆ ಮಾಡುವಾಗ ಗರಿಷ್ಠ ಮೊಲೆತೊಟ್ಟುಗಳಿರುವ ಹಂದಿಯನ್ನೇ ಆಯ್ಕೆಮಾಡಿಕೊಳ್ಳಬೇಕು. ಮೊಲೆತೊಟ್ಟಿಗಿಂತ ಮರಿಗಳ ಸಂಖ್ಯೆ ಜಾಸ್ತಿ ಇದ್ದರೆ ಮರಿಗಳಿಗೆ ಹಾಲು ಸಿಗದೆ ಇರುವ ಸಂಭವವಿದ್ದು ಮರಿಗಳು ಸಾವನ್ನಪ್ಪಲೂಬಹುದು. ಮರಿಗಳ ಚೂಪಾದ ಹಲ್ಲಿನಿಂದ ತಾಯಿಯ ಮೊಲೆಗೆ ಗಾಯವಾಗುವ ಸಾಧ್ಯತೆಯಿದೆ. ಈ ಬಗ್ಗೆ ಹಾಗೂ ಮರಿಗಳು ತಾಯಿಯ ಅಡಿ ಸಿಕ್ಕು ಅಪಾಯಕ್ಕೀಡಾಗುವ ಬಗ್ಗೆ ಕಾಳಜಿ ವಹಿಸಬೇಕು.

ಹಂದಿಗಳು ರಕ್ತಹೀನತೆಯಿಂದ ಮತ್ತು ಜಂತುಹುಳುವಿನ ಬಾಧೆಯಿಂದ ನರಳುವುದು ಸರ್ವೇ ಸಾಮಾನ್ಯ. ರಕ್ತಹೀನತೆಯನ್ನು ತಡೆಯಲು ಹಾಗೂ ಜಂತುಹುಳುವಿನ ಬಾಧೆ ನಿವಾರಿಸಲು ಸೂಕ್ತ ಚಿಕಿತ್ಸೆ ಅಗತ್ಯ. ಅಲ್ಲದೆ ಅವು ಗಂಟಲುಬೇನೆ, ಕಾಲುಬಾಯಿಜ್ವರ, ಹಂದಿ ಸಿಡುಬು, ನೆಗಡಿ ರೋಗಗಳಿಗೆ ತುತ್ತಾಗುವುದರಿಂದ ಇವುಗಳು ಬಾರದಂತೆ ಸೂಕ್ತ ಚುಚ್ಚುಮದ್ದು ಕೊಡಿಸಬೇಕಾಗುತ್ತದೆ. ಜೊತೆಗೆ ಹೊರಪರಾವಲಂಬಿಗಳಾದ ಉಣ್ಣೆ, ಹೇನು, ಚಿಗಟಗಳ ನಿಯಂತ್ರಣಕ್ಕೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಿದುಳುಜ್ವರದ ವೈರಾಣುಗಳು ಹಂದಿಗಳಲ್ಲಿ ಅಭಿವೃದ್ಧಿಹೊಂದಿ, ಸೊಳ್ಳೆಗಳ ಮುಖಾಂತರ ಮಾನವರನ್ನು ತಲುಪುತ್ತದೆ. ಆದ್ದರಿಂದ ಹಂದಿಮನೆಯನ್ನು ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸೊಳ್ಳೆಗಳಿಲ್ಲದಂತೆ ಸಾಧ್ಯವಾದಷ್ಟು ಸ್ವಚ್ಛವಾಗಿಟ್ಟುಕೊಳ್ಳಬೇಕು.

(ಎಸ್.ಬಿ.ಆರ್.)

**ಹಣ್ಣುನೊಣಗಳು :** ಹಣ್ಣುನೊಣಗಳು (ಆರ್ಥೋಪೊಡಾ) ಸಂದಿಪದಿ ವಂಶದ ಕೀಟ ವರ್ಗದ ಡಿಪ್ಟೆರಾ ಗಣದ ಟೆಫ್ರಿಟಿಡೆ ಕುಟುಂಬದ ಸದಸ್ಯರು. ಫ್ರೂಟ್ ಫ್ಲೈಸ್ ಪರ್ಯಾಯ ಹೆಸರು. ಸಾಮಾನ್ಯವಾಗಿ ದೊಡ್ಡ ಹಣ್ಣು ನೊಣ ಎಂದೂ ಹೆಸರಿಸಲಾಗಿದೆ. ಈ ಕುಟುಂಬದಲ್ಲಿ 1500 ಜಾತಿಗಳಿವೆ. ಹಣ್ಣಿನ ಮೇಲೆ ಬೆಳೆಯುವ ಈಸ್ಟನ್ನು ಆಹಾರವಾಗಿ ಉಪಯೋಗಿಸುತ್ತವೆ. ಕೊಳೆಯುತ್ತಿರುವ ಹಣ್ಣುಗಳು ಇವುಗಳಿಗೆ ಪ್ರಿಯ ಆಹಾರ. ಇವು ಹಣ್ಣುಗಳಿಗೆ ಹಾನಿ ಉಂಟುಮಾಡುತ್ತವೆ. ಜೀವನ ಚಕ್ರದಲ್ಲಿ ಲಾರ್ವದ ಬೆಳವಣಿಗೆ ಸಂಪೂರ್ಣವಾಗಿ ಹಣ್ಣನ್ನೇ ಅವಲಂಬಿಸಿರುವುದರಿಂದ ಹಣ್ಣು ಬೆಳೆಗಳನ್ನು ನಾಶಮಾಡುತ್ತವೆ.

ಬ್ಯಾಕ್ಟ್ರೊಸೆರಾ ಜಾತಿಯ ಹಣ್ಣು ನೊಣಗಳ ಬಗ್ಗೆ ಹೆಚ್ಚು ಸಂಶೋಧನೆ ನಡೆಯುತ್ತಿದೆ. ಡಾಕಸ್ ಸೆರಟಟೈಟಿಸ್ ಹಣ್ಣು ನೊಣಗಳು ವಿವಿಧ ಹಣ್ಣು ಬೆಳೆಗಳನ್ನು ನಾಶಮಾಡುವುವು. ಇವು ವಿವಿಧ ದೇಶಗಳಲ್ಲಿ ಹರಡಿವೆ. ಉದಾ : ಸೆರ್ಟೆಟಿಸ್ ಕಪಿಟ್ಟಟಾ ನೊಣಗಳು ಪೀಚ್, ಪಿಯರ್ಸ್, ಕಿತ್ತಳೆ ಹಾಗೂ ಎಪ್ರಿಕಾಟ್ ಹಣ್ಣಿನ ಬೆಳೆಯನ್ನು ನಾಶಮಾಡುತ್ತವೆ. ಇವುಗಳಿಗೆ ಮೆಡಿಟರೇನಿಯನ್ ಹಣ್ಣುನೊಣಗಳೆಂದು ಹೆಸರು. ಈ ನೊಣಗಳು ಆಫ್ರಿಕಾ, ಹವಾಯಿ, ಬರ್ಮುಡಾ ದ್ವೀಪಗಳು ಮತ್ತು ದಕ್ಷಿಣ ಅಮೆರಿಕಾ ದೇಶಗಳಲ್ಲಿ ಹರಡಿವೆ. ಡಾಕಸ್ ಸಿಲೆಯೇಟಸ್ ಇಥಿಯೋಪಿಯನ್ ಹಣ್ಣು ನೊಣ. ಆಫ್ರಿಕಾದಲ್ಲಿ ಹೆಚ್ಚು ಕಂಡುಬರುತ್ತದೆ. ಈ ನೊಣಗಳು ಕುಕುರ್‌ಬೀಟ ಕುಟುಂಬಕ್ಕೆ ಸೇರಿದ ಹಣ್ಣುಗಳ ಮೇಲೆ ವಾಸಿಸುತ್ತದೆ. ಉದಾ : ಕಲ್ಲಂಗಡಿ, ಕರಬುಜ, ಸಿಹಿಕುಂಬಳ ಹಣ್ಣು. ಈ ಕೀಟಗಳನ್ನು ಕೀಟನಾಶಕಗಳನ್ನು ಸಿಂಪಡಿಸಿ ನಿಯಂತ್ರಿಸುವರು. ಬ್ಯಾಕ್ಟರೋಸೆರಾ ಜಾತಿಯಲ್ಲಿ ಹಲವು ಪ್ರಭೇದಗಳು ವಿವಿಧ ಹಣ್ಣುಗಳ ಮೇಲೆ ಆಶ್ರಯಿಸಿವೆ. ಉದಾ : ಬ್ಯಾಕ್ಟರೋಸೆರಾ ಅಲೆ, ನೊಣಗಳು ಆಲಿವ್ ಹಣ್ಣುಗಳನ್ನು ಕೊರೆದು, ಅವುಗಳೊ ವಾಸಿಸುತ್ತವೆ. ಆಲಿವ್ ವಾಣಿಜ್ಯ ಬೆಳೆಯಾಗಿರುವುದರಿಂದ ಇಟಲಿ ಹಾಗೂ ಗ್ರೀಕ್ ದೇಶಗಳಲ್ಲಿ ಇದರ ಉತ್ಪಾದನೆ ಶೇ. 30 ರಷ್ಟು ಕಡಿಮೆಯಾಗಿ ಅವು ನಷ್ಟ ಅನುಭವಿಸುತ್ತಿವೆ. ಈ ನೊಣಗಳು ಮೆಡಿಟರೇನಿಯನ್ ಬೇಸಿನ್, ದಕ್ಷಿಣ ಆಫ್ರಿಕಾ, ಕ್ಯಾಸರಿ ದ್ವೀಪಗಳು, ಭಾರತ, ಪಶ್ಚಿಮ ಏಷ್ಯಾ ಮುಂತಾದ ದೇಶಗಳಲ್ಲೂ ಕಾಣಸಿಗುತ್ತವೆ.

ಹಣ್ಣು ನೊಣಗಳಲ್ಲಿ ಹೆಣ್ಣು, ಗಂಡಿಗಿಂತ ಗಾತ್ರದಲ್ಲಿ ದೊಡ್ಡದು. ಹೆಣ್ಣು ನೊಣಗಳು ಸು. 5 ಮಿಮೀ ಇರುತ್ತವೆ. ಅವುಗಳ ರೆಕ್ಕೆಗಳು ಸು. 10 ಮಿಮೀ ಉದ್ದ ಚಾಚಿರುತ್ತವೆ. ರೆಕ್ಕೆಗಳು ಪಾರದರ್ಶಕವಾಗಿದ್ದು, ಕಪ್ಪು, ಕಾಫಿ ಬಣ್ಣದ ಪಟ್ಟಿಗಳು ಅಥವಾ ಚುಕ್ಕೆಗಳಿರುತ್ತವೆ. ದೇಹವನ್ನು ತಲೆ ಹಾಗೂ ಹೊಟ್ಟೆ (ಉದರ) ಎಂಬ ಎರಡು ಭಾಗವಾಗಿ ಗುರುತಿಸಬಹುದು. ಪ್ರಭೇದಗಳಿಗನುಗುಣವಾಗಿ, ವಿವಿಧ ಜಾತಿಗಳಲ್ಲಿ ಸ್ವಲ್ಪ ಬಣ್ಣ ವ್ಯತ್ಯಾಸಗಳಿವೆ. ಉದಾ : ಬ್ಯಾಕ್ಟೆರೋಸಿಕಾ ನೊಣದ ಎದೆಯಭಾಗ ಕಪಾಗಿದ್ದು, ಬೆಳ್ಳಿಯ ಹೊಳಪು (ಸಿಲ್ವರ್ ಪ್ಯೂಬ್ ಸೆನ್ಸ್) ಹಾಗೂ ಮೂರು ಸಣ್ಣ ಕಪ್ಪು ಗೆರೆಗಳಿವೆ. ಭುಜದ ಬಣ್ಣ ಹಳದಿಯಾಗಿರುತ್ತದೆ. ಹೊಟ್ಟೆ (ಉದರ) ಭಾಗವು ಕಪ್ಪಗಿದ್ದು ಬೂದು ಹೊಳಪು ಇದೆ. ಉದರದ ತುದಿಯಲ್ಲಿ ಮೊಟ್ಟೆಯಿಡುವ ಅಂಗ ಒವಿಪಾಸಿಟರ್ ಇದೆ. ಅದು ತುಂಬಾ ಉದ್ದವಾಗಿದ್ದು, ಕವಚವನ್ನು ಹೊಂದಿದೆ. ಇದು ಹಣ್ಣುಗಳಲ್ಲಿ ರಂಧ್ರ ಮಾಡಿ ಒಳಗೆ ಮೊಟ್ಟೆ ಇಡುತ್ತವೆ. ಹೆಣ್ಣು ನೊಣಗಳು ಒಂದು ಹಣ್ಣಿಗೆ ಒಂದು ಮೊಟ್ಟೆಯಂತೆ ತನ್ನ ಜೀವಾವಧಿಯಲ್ಲಿ ಸು. 200 ಮೊಟ್ಟೆಗಳನ್ನಿಡುತ್ತವೆ. ಹೊರಬಂದ ಲಾರ್ವ (ಮೆಗಾಟ್) ಗಳಿಗೆ ಕಾಲುಗಳಿರುವುದಿಲ್ಲ. ಅವು ಹಣ್ಣಿನ ಒಳಭಾಗವನ್ನೆಲ್ಲಾ ತಿಂದು ಆ ಹಣ್ಣುಗಳು ಕೆಳಗೆ ಬೀಳುವಂತೆ ಮಾಡುತ್ತವೆ. ಅವುಗಳ ಮೊಟ್ಟೆ, ಲಾರ್ವ ಹಾಗು ಪ್ಯೂಪಾಗಳ ಅವಧಿ ಕ್ರಮವಾಗಿ 2, 4 ಹಾಗು 10 ರಿಂದ 14 ದಿನಗಳ ಅವಧಿಯದಾಗಿದೆ. ಅನಂತರ ಪ್ರೌಢ ನೊಣ ಹಣ್ಣಿನಿಂದ ಹೊರಗೆ ಬಂದು, ಗಂಡು ಹೆಣ್ಣಿನ ಮಿಲನದ ಅನಂತರ ಹಣ್ಣಿನ ಮೇಲೆ ಮೊಟ್ಟೆ ಇಡುತ್ತದೆ. ಈ ರೀತಿ ಜೀವನ ಚಕ್ರ ಮುಂದುವರೆಯುತ್ತದೆ. ಈ ನೊಣಗಳ ನಿಯಂತ್ರಣ ಅವಶ್ಯವಾಗಿದೆ. ಇವನ್ನು ನಿಯಂತ್ರಿಸಲು ಕೀಟನಾಶಕಗಳ ಸಿಂಪಡಣೆ ಮಾಡಲಾಗುತ್ತದೆ. ವಿಕಿರಣ (ರೇಡಿಯೇಷನ್) 8–12 ಕೆ ರಾಡ್ ನ್ನು ಉಪಯೋಗಿಸಿ ಗಂಡು ನೊಣಗಳನ್ನು ನಿರ್ವೀರ್ಯಗೊಳಿಸಿ ಈ ನೊಣಗಳ ಸಂಖ್ಯಾಭಿವೃದ್ಧಿ ನಿಯಂತ್ರಿಸಲಾಗುತ್ತದೆ. ಸಿಂಥೆಟಿಕ್ ಫೆರಮೋನ್‌ಗಳನ್ನು ಬಳಸಿ ಸಹ ಈ ನೊಣಗಳ ನಿಯಂತ್ರಣ ಮಾಡಲಾಗುತ್ತದೆ. (ವಿ.ಎಸ್.)

**ಹಲ್ಲಿ:** ಸ್ಕ್ವಾಮೇಟ ಗಣದ ಗೆಕ್ಕೊನಿಡೆ ಕುಟುಂಬಕ್ಕೆ ಸೇರಿದ ಕೆಲವು ಸರೀಸೃಪಗಳಿಗಿರುವ ಸಾಮಾನ್ಯ ಹೆಸರು (ಗೆಕ್ಕೊ). ಉಷ್ಣವಲಯದಲ್ಲೆಲ್ಲಾ ಹರಡಿದೆ. ಭಾರತ, ದಕ್ಷಿಣ ಯೂರೋಪು, ಏಷ್ಯ, ಆಫ್ರಿಕ ಮತ್ತು ಅಮೆರಿಕಗಳಲ್ಲಿ 140 ಕ್ಕೂ ಹೆಚ್ಚು ಪ್ರಭೇದಗಳು ಕಂಡುಬರುತ್ತವೆ. ಗೆಕೊ ಗೆಕೊ, ಫೆಲ್ಸುಮೊ ವಿನ್ಸೋನಿ, ಥಿಕಾಡ್ಯಾಕ್ಟೈಲಸ್ ರ್‍ಯಾಪಿಕಾಡಸ್, ಟರಂಟೊಲ ಮ್ಯಾರ್ರಿಟಾನಿಕ ಇವುಗಳಲ್ಲಿ ಕೆಲವು. ಅತಿ ಸಣ್ಣದಾದ ಹಲ್ಲಿಯ ಉದ್ದ 4 ಸೆಂಮೀ. ಟೋಕೆ ಹಲ್ಲಿ ಉಳಿದೆಲ್ಲವುದಕ್ಕಿಂತ ದೊಡ್ಡದು. ಸುಮಾರು 35 ಸೆಂಮೀ ಉದ್ದವಿದೆ.

ಮನೆಯ ಗೋಡೆಯ ಮೇಲೆಲ್ಲಾ ಹರಿದಾಡುವ ಸಾಮಾನ್ಯ ಹಲ್ಲಿಯ ವೈಜ್ಞಾನಿಕ ನಾಮ ಹೆಮಿಡ್ಯಾಕ್ಟೈಲಸ್ ಟರ್ಸಿಯಸ್. ಉದ್ದ ಸು. 10–12 ಸೆಂಮೀ. ತಲೆ ಗಿಡ್ಡ, ಮೂತಿ ಕೊಂಚ ಚೂಪು, ಬೆರಳುಗಳಲ್ಲಿ ನಖಗಳಿವೆ. ಅಷ್ಟೇ ಅಲ್ಲದೆ ಗೋಡೆಯ ಮೇಲೆ ಹರಿದಾಡಲು ಸಹಕರಿಸುವ ಅಂಟುತಟ್ಟೆಗಳೂ (ಅಡೆಸಿವ್ ಡಿಸ್ಕ್) ಇವೆ. ದೇಹದ ಮೇಲ್ಭಾಗ ಹಳದಿ ಮಿಶ್ರಿತ ಕಂದು. ಉದರ ಭಾಗ ಮಾಸಲು ಬಣ್ಣದ್ದು. ದೇಹ ಹುರುಪೆಗಳಿಂದ ಆವೃತವಾಗಿದೆ. ಬಾಲದ ಬುಡ ಕೊಂಚ ಉಬ್ಬಿಕೊಂಡಿದೆ. ಕಣ್ಣುಗಳು ಚಲಿಸುವ ರೆಪ್ಪೆಗಳಿಂದ ರಕ್ಷಿಸಲ್ಪಟ್ಟಿವೆ. ಕಶೇರುಕಮಣಿಗಳು ಆಂಫಿಸೀಲಸ್ ರೀತಿಯವು. ಇದು ಮಾಂಸಾಹಾರಿ. ಹುಳುಹುಪ್ಪಟೆಗಳು, ಕೀಟಗಳು, ಜೇಡಗಳು ಇತ್ಯಾದಿ ಇದರ ಆಹಾರ ಪ್ರಾಣಿಗಳು. ಶತ್ರುಗಳೆದುರಾದಾಗ ತನ್ನ ಬಾಲವನ್ನು

ಕಡಿದುಕೊಳ್ಳುತ್ತದೆ (ಸ್ವಾಂಗೋಚ್ಛೇದನ–ಆಟೋಟೋಮಿ). ಶತ್ರುವಿನ ಗಮನವನ್ನು ತನ್ನಿಂದ ದೂರ ಸೆಳೆಯಲು ಈ ಪ್ರವೃತ್ತಿಯಿರಬೇಕು.

ಫೋಟೋ ಫ್ರೇಮಿನ ಹಿಂದೆಯೋ ಸಂಧಿಗಳಲ್ಲೊ ಸುಮಾರು 0.5–1 ಸೆಂ ಮೀ ವ್ಯಾಸದ ದುಂಡಾದ ಬಿಳಿಯ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯೊಡೆದು ಮರಿ ಹೊರಬರಲು ತಿಂಗಳುಗಳೇ ಬೇಕು. (ಎಸ್.ಕೆ.ಎಚ್.)

**ಹವಳ:** ಇದು ಸಮುದ್ರದಲ್ಲಿ ವಾಸಿಸುವ ಮೃದುವಾದ ಜೀವಿ. ಇದು ಕುಟುಕು ಕಣವಂತ (ನಿಡರಿಯಾ/ಸಿಲಿಯಂಟೆರೇಟಾ) ವಂಶದ ಅಂತೋಜೋವ ವರ್ಗಕ್ಕೆ ಸೇರಿದೆ. ಈ ವರ್ಗದಲ್ಲಿ ಒಟ್ಟು 6 ಗಣಗಳಿದ್ದು, ಹಲವಾರು ಬಗೆಯ ಪ್ರಭೇದಗಳಿವೆ. ಈ ಜೀವಿಗಳು ಅನೇಕ ವಿಶೇಷತೆಗಳನ್ನು ಹೊಂದಿವೆ. ಅದರಲ್ಲಿ ಬಹುಮುಖ್ಯವಾದುದು, ಇವುಗಳಿಂದ ಸುಣ್ಣದಲ್ಲಿ ನಿರ್ಮಿತವಾಗುವ ಬೃಹದಾಕಾರದ ಹವಳ ಬಂಡೆಗಳು ಮತ್ತು ದಿಬ್ಬಗಳು. ಆದರೆ, ಹವಳದ ಎಲ್ಲಾ ಪ್ರಭೇದಗಳು ದಿಬ್ಬ/ಗೋಡೆಯನ್ನು ನಿರ್ಮಿಸುವುದಿಲ್ಲ. ಸಮುದ್ರ ಮಟ್ಟದಿಂದ 50 ಮೀ ಆಳದಲ್ಲಿ ಹಲವಾರು ಪ್ರಭೇದಗಳಿವೆ, ಅವುಗಳು ಒಂಟಿಯಾಗಿ ಬದುಕುವ ಜೀವಿಗಳು ಮತ್ತು ದಿಬ್ಬಗಳನ್ನು ನಿರ್ಮಿಸುವ ಸಾಮರ್ಥ್ಯವಿಲ್ಲದುವು. ಫಂಜಿಯ, ಕ್ಯಾರಿಫಿಲ್ಲಿಯ, ಬೆಲೆನೊಫೈಲ್ಯ ಇವುಗಳೆಲ್ಲ ಒಂಟಿಯಾಗಿ ಜೀವಿಸುವ ಹವಳ ಜೀವಿಗಳು. ವಸಾಹತು (ಕಾಲನಿ) ಮತ್ತು ದಿಬ್ಬಗಳನ್ನು ನಿರ್ಮಿಸುವ ಓಕುಲಿನಾ, ಫೆವಿಯ, ಮಾಡ್ರೆಪೋರ, ಟುಬಿಪೋರ, ಗಾರ್‌ಗೋನಿಯ ಮುಖ್ಯವಾದ ಹವಳ ಜೀವಿಗಳು.

ದಿಬ್ಬಗಳನ್ನು ನಿರ್ಮಿಸುವ ಹವಳಗಳು ಬಹುರೂಪಿಗಳು. ಇವು ವಿವಿಧ ಬಣ್ಣ ಹಾಗೂ ಆಕಾರ ಹೊಂದಿವೆ. ಜಿಂಕೆಯ ಕೊಂಬು, ಅಣಬೆ, ಮಿದುಳು, ಗಿಡ, ಬೀಸಣಿಕೆ, ನಳಿಕೆಯಂತ ಆಕಾರಗಳನ್ನು ಹೊಂದಿವೆ. ಇವು ಲೈಂಗಿಕ ಮತ್ತು ಅಲೈಂಗಿಕ ವಿಧಾನಗಳಲ್ಲಿ ವಂಶಾಭಿವೃದ್ಧಿಯನ್ನು ಮಾಡುತ್ತವೆ. ಹೀಗಾಗಿ, ಬಹುಬೇಗನೆ ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಂಡು ವಸಾಹತುಗಳನ್ನು ನಿರ್ಮಿಸುತ್ತವೆ. ಅಲೈಂಗಿಕ ವಿಧಾನದಲ್ಲಿ ಪೂರ್ತಿ ಬೆಳೆದ ಜೀವಿಗಳಿಂದ ಮೊಳಕೆಗಳು ಹೊರಡುತ್ತವೆ. ಕಾಲಕ್ರಮದಲ್ಲಿ ಈ ಮೊಳಕೆಗಳು ಬೇರ್ಪಟ್ಟು ಹೊಸಜೀವಿಗಳಾಗಿ ಬೆಳೆಯುತ್ತವೆ. ಜೀವನ ಚಕ್ರದ ಮೊದಲ ಹಂತದಲ್ಲಿ ಸ್ವತಂತ್ರವಾಗಿ ಈಜಾಡುವ ಪ್ಲಾನುಲಾ ಲಾರ್ವ ಇದೆ. ನೆಲೆಸಲು ಯೋಗ್ಯವಾದ ಸ್ಥಳ ಸಿಕ್ಕಾಗ, ಅಲ್ಲಿಯೇ ತಳವೂರಿ ವಸಾಹತು ಕಟ್ಟಲು ಪ್ರಾರಂಭಿಸುತ್ತವೆ. ಒಮ್ಮೆ ತಳವೂರಿದ ಮೇಲೆ ಇವು ಮತ್ತೆ ಈಜುವುದಿಲ್ಲ. ಈ ಹಂತದಲ್ಲಿ ಅವುಗಳನ್ನು ಪಾಲಿಪ್ ಎಂದು ಕರೆಯಲಾಗುತ್ತದೆ. ತಮ್ಮ ದೇಹದಿಂದಲೇ ಸ್ರವಿಸುವ ಅಂಟು ಪದಾರ್ಥದ ಮೂಲಕ ಕಲ್ಲಿಗೆ ಅಂಟಿಕೊಂಡು ತಳವೂರುತ್ತದೆ. ಅನಂತರ ಸುಣ್ಣವನ್ನು (ಕ್ಯಾಲ್ಸಿಯಂ ಕಾರ್ಬೊನೇಟ್) ಸ್ರವಿಸಿ ದೇಹದ ಸುತ್ತ ಕವಚವನ್ನು ನಿರ್ಮಿಸಿಕೊಳ್ಳುತ್ತದೆ. ದ್ರವರೂಪದಲ್ಲಿರುವ ಈ ಸುಣ್ಣವು ಗಟ್ಟಿಯಾಗಿ ಶಿಲೆಯಂತಾಗುತ್ತದೆ. ಹೀಗೆ ವಂಶಾಭಿವೃದ್ಧಿಯಾದಂತೆ ಒಂದಕ್ಕೊಂದು ತಾಗಿಕೊಂಡು ಶಿಲೆಗಳನ್ನು ನಿರ್ಮಿಸುತ್ತಾ ಕೊನೆಗೆ ಒಂದು ದೊಡ್ಡ ಕಲ್ಲಿನ ಬಂಡೆಯಂತಾಗುತ್ತದೆ. ಇದು ಹೀಗೆಯೇ ಮುಂದುವರಿದು, ಕೆಲವು ವರ್ಷಗಳಲ್ಲಿ ಒಂದು ದ್ವೀಪವೇ ನಿರ್ಮಾಣವಾಗುತ್ತದೆ. ವಸಾಹತನ್ನು ಸ್ಥಾಪಿಸಲು ಆಯ್ಕೆ ಮಾಡಿಕೊಳ್ಳುವ ಸ್ಥಳವು ವಿಶಿಷ್ಟವಾಗಿದೆ. ಆಳವು 40 ಮೀ ಹೆಚ್ಚು ಇರಬಾರದು, ಮತ್ತು ಸಾಕಷ್ಟು ಸೂರ್ಯನ ಕಿರಣಗಳು ತಲುಪುವಂತಿರಬೇಕು, ಉಷ್ಣತೆಯು $20^0$ ರಿಂದ $28^0$ ಸೆ ಇರಬೇಕು. ಏಕೆಂದರೆ, ಈ ಜೀವಿಗಳು ಜೂಕ್ಸ್ಯಾಂಥೆಲ್ಲೆ ಎನ್ನುವ ದ್ಯುತಿಸಂಶ್ಲೇಷಣೆ ಕ್ರಿಯೆಯ ಸಾಮರ್ಥ್ಯವಿರುವ ಪಾಚಿ ಸಸ್ಯಗಳೊಂದಿಗೆ ಸಹಜೀವನವನ್ನು ನಡೆಸುತ್ತವೆ. ಆಹಾರಕ್ಕಾಗಿ ಇವು ಈ ಪಾಚಿ ಸಸ್ಯಗಳನ್ನು ಅವಲಂಬಿಸಿವೆ. ಜೊತೆಗೆ ಚಿಕ್ಕ ಮೀನುಗಳು, ತೇಲುಜೀವಿಗಳು, ಇತರ ಜಲಚರ ಜೀವಿಗಳನ್ನು ತಿಂದು ಬದುಕುತ್ತವೆ. ಬಾಯಿಯ ಸುತ್ತವಿರುವ ವಿಶೇಷವಾದ ಗ್ರಹಣಾಂಗಗಳ (ಟೆಂಟಾಕಲ್ಸ್) ಮೂಲಕ ಆಹಾರವನ್ನು ಕಬಳಿಸುತ್ತವೆ. ಇವುಗಳು ನಿಶಾಚರಿಗಳು. ರಾತ್ರಿ ಸಮಯದಲ್ಲಿ ಚಟುವಟಿಕೆಯಿಂದಿರುತ್ತವೆ. ಹವಳಜೀವಿಗಳಿಗೂ ಶತ್ರುಗಳಿವೆ. ನಿಸರ್ಗದ ಆಹಾರ ಸರಪಳಿಯ ನಿಯಮದಂತೆ, ಇವು ಬೇರೆ ಜೀವಿಗಳಿಗೆ ತುತ್ತಾಗುತ್ತವೆ. ಚಿಟ್ಟೆಮೀನು, ಗಿಳಿಮೀನು, ನಕ್ಷತ್ರಮೀನುಗಳು ಇವುಗಳನ್ನು ತಿನ್ನುತ್ತವೆ. ಕ್ರಿಮಿಗಳು ಮತ್ತು ಶಂಖಹುಳುಗಳು ಹವಳಗಳನ್ನು ಕೊರೆದು ನಾಶಮಾಡುತ್ತವೆ. ಇವುಗಳಿಗೆ ಮಿದುಳು ಇಲ್ಲ, ಆದರೆ ಸರಳವಾದ ಒಂದು ನರವ್ಯೂಹವನ್ನು ಹೊಂದಿದ್ದು, ಅದು ಬಾಯಿಯಿಂದ ಗ್ರಹಣಾಂಗಗಳವರೆಗೆ ವಿಸ್ತರಿಸಿಕೊಂಡಿದೆ. ಈ ಜೀವಿಗಳ ವಸಾಹತು ಹತ್ತಾರು ವರ್ಷಗಳಿಂದ ಶತಮಾನಗಳ ತನಕ ಬದುಕಿರುತ್ತದೆ.

ಹವಳ ಜೀವಿಗಳು ಉಷ್ಣವಲಯದಿಂದ ಧ್ರುವ ಪ್ರದೇಶದವರೆಗೆ ಪ್ರಪಂಚದ ಎಲ್ಲ ಸಮುದ್ರಗಳಲ್ಲಿ ಹರಡಿಕೊಂಡಿವೆ. ಆದರೆ, ಪಶ್ಚಿಮ ಅಟ್ಲಾಂಟಿಕ್ ಸಮುದ್ರ (ಬರ್ಮುಡ, ಬಹಾಮಸ್, ಕೆರಿಬಿಯನ್ ದ್ವೀಪ, ಫ್ಲೋರಿಡ, ಗಲ್ಫ್ ಆಫ್ ಮೆಕ್ಸಿಕೊ) ಮತ್ತು ಇಂಡೋಪೆಸಿಫಿಕ್ ಸಾಗರಗಳಲ್ಲಿ ಇವುಗಳ ಕಾಲೋನಿ ಮತ್ತು ದಿಬ್ಬಗಳು ಹೇರಳವಾಗಿ ಕಂಡುಬರುತ್ತವೆ.

ಹವಳಗಳನ್ನು ಪರಿಸರ ಸ್ನೇಹಿ ಸಮೂಹ ಎನ್ನಲಾಗುತ್ತದೆ. ಏಕೆಂದರೆ, ಹಸಿರುಮನೆ ಪರಿಣಾಮಕ್ಕೆ (ಗ್ಲೋಬಲ್ ವಾರ್ಮಿಂಗ್) ಕಾರಣವಾಗುವ ಇಂಗಾಲದ ಡೈಆಕ್ಸೈಡನ್ನು ಮರುಚಕ್ರೀಕರಣಗೊಳಿಸಿ, ವಾತಾವರಣದಲ್ಲಿ ಅದರ ಪ್ರಮಾಣವನ್ನು ಕಡಿಮೆ ಮಾಡುತ್ತವೆ. ಇವು ನಿರ್ಮಿಸಿದ ಸುಣ್ಣದ ದಿಬ್ಬದ ಮೇಲೆ ಅನೇಕ ಸಸ್ಯಗಳು ಬೆಳೆಯುತ್ತವೆ ಮತ್ತು ಹಲವು ಸಮುದ್ರ ಪ್ರಾಣಿಗಳಿಗೆ ಆಶ್ರಯ ತಾಣವಾಗುತ್ತದೆ. ಈ ಎಲ್ಲ ಜೀವಿಗಳ ಪರಸ್ಪರ ಅವಲಂಬಿಕೆಯಿಂದ ಅಲ್ಲಿಯೇ ಒಂದು ಪರಿಸರ ವ್ಯವಸ್ಥೆ (ಎಕೊಸಿಸ್ಟಂ) ನಿರ್ಮಾಣವಾಗುತ್ತದೆ. ಇತ್ತೀಚಿನ ಸಂಶೋಧನೆಗಳಿಂದ, ಕ್ಯಾನ್ಸರ್ ಕಾಯಿಲೆಯನ್ನು ಗುಣಪಡಿಸುವಂತಹ ಔಷಧಿ, ಮತ್ತು ಅತಿನೇರಳೆ (ಅಲ್ಟ್ರಾವಯೋಲೆಟ್) ಕಿರಣಗಳನ್ನು ತಡೆಹಿಡಿಯುವ ರಾಸಾಯನಿಕವನ್ನು ಇವುಗಳಿಂದ ಪಡೆಯಬಹುದೆಂದು ಕಂಡುಹಿಡಿಯಲಾಗಿದೆ. ಅವಘಡಕ್ಕೆ ಸಿಲುಕಿ ದೇಹದ ಮೂಳೆಯು ತೀವ್ರವಾಗಿ ಹಾನಿಗೊಳಗಾದಾಗ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಲು ಇವುಗಳ ಅಸ್ಥಿಪಂಜರಗಳನ್ನು ಉಪಯೋಗಿಸಲಾಗುತ್ತಿದೆ. ಬೃಹದಾಕಾರದ ಹವಳ–ದಿಬ್ಬಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಪರಿಸರದಲ್ಲಿ ಮಾನವ ವಹಿವಾಟಿನಿಂದ ವನ್ಯಜೀವಿಗಳಿಗೆ ಅಪಾಯವಿರುವಂತೆ, ಈ ಜೀವಿಗಳೂ ಮಾನವರಿಂದ ಅಪಾಯವನ್ನು ಎದುರಿಸುತ್ತಿವೆ. ಕಾರ್ಖಾನೆ ತ್ಯಾಜ್ಯ, ನಗರದ ಕೊಳಚೆ, ಕ್ರಿಮಿನಾಶಕ ಹಾಗೂ ಇನ್ನಿತರ ಕೃಷಿ ತ್ಯಾಜ್ಯಗಳಿಂದ ಸಮುದ್ರವು ಮಲಿನವಾಗಿ ಹವಳ ಜೀವಿಗಳಿಗೆ ವಿಷಮಯವಾಗುತ್ತದೆ. ಡೈನಾಮೇಟ್ ಬಳಸಿ ಮೀನು ಹಿಡಿಯುವುದರಿಂದ ಹವಳದ ವಸಾಹತುಗಳು ನಾಶವಾಗುತ್ತವೆ. 1986 ರಿಂದ 1991 ರವರೆಗೆ ಈ ತರಹದ ವಿನಾಶಕಾರಕ ಮೀನುಗಾರಿಕೆಯಿಂದಾಗಿ ಫಿಲಿಫಿನ್ಸ್ ಸಮುದ್ರದಲ್ಲಿರುವ ಹವಳದ ಕಾಲನಿಗಳು ಸಂಪೂರ್ಣ ನಾಶಗೊಂಡಿವೆ. ಹಾಗಾಗಿ ಇವುಗಳ ಸಂರಕ್ಷಣೆಯ ಹೊಣೆಯು ಮಾನವನ ಮೇಲೆ ಇದೆ. ಸಮುದ್ರದಲ್ಲಿ ಸಂರಕ್ಷಿತ ಪ್ರದೇಶಗಳನ್ನು ಸ್ಥಾಪಿಸುವ ಮೂಲಕ ಅವುಗಳನ್ನು ರಕ್ಷಿಸಬಹುದು. ಈ ನಿಟ್ಟಿನಲ್ಲಿ ಆಸ್ಟ್ರೇಲಿಯಾದಲ್ಲಿ ದಿ ಗ್ರೇಟ್ ಬ್ಯಾರಿಯರ್ ರೀಫ್ ಮೆರೈನ್ ಪಾರ್ಕನ್ನು 1975 ರಲ್ಲಿ ಸ್ಥಾಪಿಸಲಾಯಿತು. ಹವಾಯಿ, ಗಾಂ, ಫ್ಲೋರಿಡ ಮುಂತಾದ ಕಡೆಗಳಲ್ಲಿ ಹವಳಗಳನ್ನು ಸಂಗ್ರಹಿಸುವ ಚಟುವಟಿಕೆಯನ್ನು ನಿರ್ಬಂಧಿಸಲಾಗಿದೆ. (ಪಿ.ಎನ್.)

ವಿವಿಧ ಬಗೆಯ ಹವಳಗಳು



**ಹವಳ ದಿಬ್ಬ:** ಕುಟುಕು ಕಣವಂತಗಳ (ಸಿಲಿಂಟರೇಟ) ವಂಶದ ಆ್ಯಂತೋಜೋವ ವರ್ಗಕ್ಕೆ ಸೇರುವ ವಸಾಹತು (ಕಲೋನಿಯಲ್) ಹವಳ–ಹುಳುಗಳ ಸುಣ್ಣದ ಅಸ್ಥಿಪಂಜರಗಳು ನೂರಾರು ವರ್ಷಗಳಿಂದ ಸಮುದ್ರ ತಳದಲ್ಲಿ ಶೇಖರಣೆಗೊಂಡು ನಿರ್ಮಾಣವಾಗಿರುವ ದಿಣ್ಣೆಯಂತಹ ರಚನೆ. ಮುಖ್ಯವಾಗಿ ಮ್ಯಾಡ್ರಿಪೋರೇರಿಯ ಗಣಕ್ಕೆ ಸೇರುವ ಹವಳಜೀವಿಗಳು ದಿಬ್ಬದ ಉಗಮ ಮತ್ತು ವಿಸ್ತರಣೆಯಲ್ಲಿ ಬಹುಮುಖ್ಯ ಪಾತ್ರವಹಿಸುವುದರಿಂದ ಇದನ್ನು ಹವಳ ದಿಬ್ಬ ಎಂದು ಕರೆಯಲಾಗುತ್ತದೆ. ಹವಳ ದಿಬ್ಬಗಳ ವಿಸ್ತರಣೆ ಹಾಗೂ ದಿಬ್ಬಗಳಲ್ಲಿರುವ ಗುಹೆ, ಪದರುಗಳು, ಗುಳಿಗಳಂತಹ ವಿಶೇಷ ರಚನೆಯ ನಿರ್ಮಾಣದಲ್ಲಿ ಇತರ ಹಲವಾರು ಸಮುದ್ರ ಪ್ರಾಣಿಗಳು (ಮೃದ್ವಂಗಿಗಳು, ಕ್ಲಾಮ್ಸ್, ಟ್ಯೂಬ್‌ವರ್ಮ್) ಭಾಗವಹಿಸುತ್ತವೆ. ಸಮುದ್ರತಳದಲ್ಲಿ ಸೂರ್ಯನ ಬೆಳಕು ಪ್ರವೇಶಿಸುವ ವಲಯದಲ್ಲಿ, ಅಂದರೆ ಸಮುದ್ರ ಮಟ್ಟದಿಂದ ಸುಮಾರು 10 ರಿಂದ 60 ಮೀ ಆಳದವರೆಗೆ ಮಾತ್ರ ಹವಳ ದಿಬ್ಬಗಳು ರೂಪುಗೊಳ್ಳುತ್ತವೆ; ಏಕೆಂದರೆ ದಿಬ್ಬಗಳನ್ನು ನಿರ್ಮಿಸುವ ಹವಳ ಹುಳುಗಳು ದ್ಯುತಿ ಸಂಶ್ಲೇಷಣೆಕ್ರಿಯೆ ನಡೆಸುವ ಚಲನಶೀಲ ಏಕಕೋಶ ಜೀವಿಗಳು (ಜೂಕ್ಸಾಂತಲ್ಲೆ) ಮತ್ತು ಪಾಚಿಸಸ್ಯಗಳೊಂದಿಗೆ ಸಹಜೀವನವನ್ನು ನಡೆಸುತ್ತವೆ. ಜಲಚರಗಳನ್ನು ತಿಂದು ಬದುಕುವ ಹವಳ ಮರಿಗಳು (ಪಾಲಿಪ್ಸ್) ತಮ್ಮ ಮೃದುದೇಹದ ರಕ್ಷಣೆಗಾಗಿ ಸುಣ್ಣದಿಂದ – (ಕ್ಯಾಲ್ಸಿಯಂ ಕಾರ್ಬೋನೇಟ್) ಗಡುಸಾದ ಕವಚಗಳನ್ನು ಕಟ್ಟಿಕೊಳ್ಳುತ್ತವೆ. ಹವಳ ಜೀವಿಯ ವೇಗವಾಗಿ ವಂಶಾಭಿವೃದ್ಧಿಯಾಗುವುದರಿಂದ ಮತ್ತು ಸಾಮೂಹಿಕವಾಗಿ ಒಂದು ಕಡೆ ಬದುಕುವುದರಿಂದ ಅವುಗಳ ಸಂಖ್ಯೆ ದ್ವಿಗುಣಗೊಳ್ಳುತ್ತಾ ಹೋಗುತ್ತದೆ. ಹಾಗೆಯೇ ವರ್ಷಗಳುರುಳಿದಂತೆ ಅವುಗಳಿಂದ ತಯಾರಾದ ಅಸ್ಥಿಪಂಜರವೂ ಗುಪ್ಪೆಗುಪ್ಪೆಯಾಗಿ ಶೇಖರಣೆಗೊಳ್ಳುತ್ತಾ ಹೋಗಿ ಬಂಡೆಯಂತಹ ದಿಬ್ಬವು ನಿರ್ಮಾಣವಾಗುತ್ತದೆ. ಈ ದಿಬ್ಬಗಳು ಎಷ್ಟೊಂದು ಗಡುಸಾಗಿರುತ್ತವೆಂದರೆ ಹವಳಬಂಡೆಗಳಿಗೆ ಡಿಕ್ಕಿ ಹೊಡೆದ ಉಕ್ಕಿನ ಹಡಗೂ ಕೂಡ ಚೂರಾಗಬಹುದು.

ಹವಳ ದಿಬ್ಬಗಳ ನಿರ್ಮಾಣ ನಿಧಾನವಾಗಿ, ಅಂದರೆ ವರ್ಷಕ್ಕೆ 10 ರಿಂದ 50 ಮಿಮೀ ನಷ್ಟು ವೇಗದಲ್ಲಿ ವಿಸ್ತರಣೆಯಾಗುತ್ತದೆ. ನೂರಾರು ಮೈಲುಗಳ ತನಕ ವಿಸ್ತಾರಗೊಳ್ಳುತ್ತ ಹೋಗಿ ಕಾಲಕ್ರಮದಲ್ಲಿ ಹವಳ ದ್ವೀಪಗಳೇ ನಿರ್ಮಾಣವಾಗುವುದು ಪ್ರಕೃತಿಯ ಒಂದು ವಿಸ್ಮಯವೇ ಸರಿ. ಈಗಿರುವ ಹವಳ ದಿಬ್ಬ ಮತ್ತು ದ್ವೀಪಗಳ ನಿರ್ಮಾಣವಾಗಲು ಸಾವಿರಾರು ವರ್ಷಗಳೇ ತಗುಲಿದ್ದು ಕೋಟ್ಯಾನುಕೋಟಿ ಹವಳಜೀವಿಗಳ ಕೊಡುಗೆ ಇದೆ.

ಹವಳ ದಿಬ್ಬಗಳ ಆಕಾರದ ಆಧಾರದ ಮೇಲೆ ಮೂರು ವಿಧಗಳು ಇವೆ: 1) ಬ್ಯಾರಿಯರ್ ರೀಫ್ (ಹವಳ ಗೋಡೆ): ಒಂದು ಚಿಕ್ಕ ದ್ವೀಪದ ಸುತ್ತ ಸ್ವಲ್ಪ ದೂರದಲ್ಲಿ ಬೇಲಿಯಂತೆ ಬೆಳೆದ ಹವಳದ ದಿಬ್ಬಗಳ ಸಾಲನ್ನು ಹವಳದ ಗೋಡೆ ಎನ್ನಲಾಗುತ್ತದೆ. ಆಸ್ಟ್ರೇಲಿಯಾದ ಉತ್ತರ–ಈಶಾನ್ಯ ಸಮುದ್ರದಲ್ಲಿರುವ ದಿ ಗ್ರೇಟ್ ಬ್ಯಾರಿಯರ್ ರೀಫ್ 1920 ಕಿಮೀ ಉದ್ದ ಮತ್ತು 80 ಕಿಮೀ ಅಗಲವಿದ್ದು ಅತ್ಯಂತ ದೊಡ್ಡದಾದ ಹವಳ ದಿಬ್ಬ ಎನ್ನಿಸಿಕೊಂಡಿದೆ. 2) ಫ್ರಿಂಜಿಂಗ್ ರೀಫ್: ಕಡಲತೀರದಿಂದ ಸುಮಾರು 400 ಮೀ ತನಕ ವಿಸ್ತರಿಸಿ ಸಮುದ್ರದೊಳಗೆ ಚಾಚಿರುತ್ತದೆ. 3) ಅಟಾಲ್: ಸುತ್ತಲೂ ಚಕ್ರಾಕಾರವಾಗಿ ಬೆಳೆದು ಮಧ್ಯೆ ಆಳವಿಲ್ಲದ ನೀರನ್ನೊಳಗೊಂಡ (ಲಗೂನ್) ಮೇಲಕ್ಕೆ ತೋರುವ ಭೂಭಾಗದ ಹವಳದಿನ್ನೆಗೆ ಅಟಾಲ್ ಎನ್ನುತ್ತಾರೆ. ಅಟಾಲ್‌ಗಳು ಮುಳುಗಿರುವ ಅಗ್ನಿಪರ್ವತದ ಸುತ್ತಲೂ ನಿರ್ಮಾಣವಾಗುತ್ತವೆ. ಸಮುದ್ರ ಪ್ರಯಾಣ ಮಾಡುವಾಗ ಚಂಡಮಾರುತ, ಬಿರುಗಾಳಿ ಎದ್ದ ಸಂದರ್ಭದಲ್ಲಿ ಅಟಾಲ್‌ಗಳು ಹಡಗುಗಳಿಗೆ ಒಳ್ಳೆಯ ಆಶ್ರಯ ತಾಣವಾಗುತ್ತವೆ.

ಹವಳ ದಿಬ್ಬಗಳಲ್ಲಿ ಬಗೆ ಬಗೆಯ, ಒಂದಕ್ಕೊಂದು ಅವಲಂಬಿತವಾಗಿರುವ ಜೀವಿಗಳ ಸಮುದಾಯಗಳು ವಾಸವಾಗಿ ಅಲ್ಲಿಯೇ ಒಂದು ಜೀವಪರಿಸರವ್ಯೂಹ ನಿರ್ಮಾಣಗಾವುತ್ತದೆ. ದಿಬ್ಬಗಳಲ್ಲಿ ಸ್ಪಂಜುಜೀವಿಗಳು, ಏಡಿ, ಶಂಬುಕ, ಚಿಕ್ಕ ಚಿಕ್ಕ ಮೀನುಗಳು, ಕ್ರಿಮಿಗಳು, ಕ್ಲಾಮ್ಸ್, ಕಡಲ ಚಿಳ್ಳೆ (ಸೀ ಅರ್ಚಿನ್) ಹೀಗೆ ಅನೇಕ ಗುಂಪು ಸೇರುವ ನೂರಾರು ಪ್ರಭೇದಗಳು ವಾಸಿಸುತ್ತವೆ. ಮಾತ್ರವಲ್ಲ, ಹವಳದ ಬಂಡೆಯ ಮೇಲೆ ಸಸ್ಯಗಳು ಬೆಳೆಯಬಲ್ಲುವು. ತೇಲಿಬಂದ ತೆಂಗಿನಕಾಯಿ ಇಲ್ಲಿ ಮೊಳಕೆಯೊಡೆದು ಸಸಿಯಾಗಿ ದಟ್ಟವಾದ ತೋಟಗಳೇ ನಿರ್ಮಾಣಗೊಂಡ ದೃಷ್ಟಾಂತಗಳಿವೆ. ಕೆಲವು ಹವಳ ದ್ವೀಪಗಳಲ್ಲಿ ಜನವಾಸವೂ ಇದೆ.

ಹವಳ ದಿಬ್ಬದ ಉದ್ಭವವು ಹೇಗೆ ಆಯಿತು ಎನ್ನುವ ಪ್ರಶ್ನೆ ಇಂದಿಗೂ ವಿಜ್ಞಾನಕ್ಕೆ ಒಂದು ಸವಾಲು. ಅವುಗಳ ಉದ್ಭವವನ್ನು ವಿವರಿಸುವ ಹಲವು ಸಿದ್ಧಾಂತಗಳಿವೆ. ಅದರಲ್ಲಿ ಮುಖ್ಯವಾಗಿ ಡಾರ್ವಿನ್ ಡಾನಾ ಸಬ್ಸಿಡೆನ್ಸ್ ಸಿದ್ಧಾಂತ; ಈ ವಾದದ ಪ್ರಕಾರ ಒಂದು ದ್ವೀಪದ ಅಂಚಿನಲ್ಲಿ ದಿಬ್ಬಗಳ ಉಗಮವಾಗಿ, ಆ ದ್ವೀಪಗಳೂ ಕಾಲಕ್ರಮದಲ್ಲಿ ನಿಧಾನವಾಗಿ ಮುಳುಗಿದಂತೆ ಹವಳ–ಗೋಡೆಯಾಗಿಯೂ ಮತ್ತು ಆ ದ್ವೀಪ ನೀರಡಿಯಲ್ಲಿ ಸೇರಿದಂತೆ ಅಟಾಲ್ ಆಗಿಯೂ ಮಾರ್ಪಾಡಾಗುತ್ತವೆ. ಸೆಂಪರ್–ಮರ್ರೆ ಸಲ್ಯೂಷನ್ ಸಿದ್ಧಾಂತ, ಡೇಲಿ ಗ್ಲೇಷಿಯಲ್ ಕಂಟ್ರೋಲ್ ಸಿದ್ಧಾಂತ, ಸಬ್‌ಮರ್ಜ್‌ಡ್ ಬ್ಯಾಂಕ್ ಸಿದ್ಧಾಂತ ದಿಬ್ಬಗಳ ಉಗಮವನ್ನು ವಿವರಿಸುವ ಇತರ ಸಿದ್ಧಾಂತಗಳು.

ದಿಬ್ಬಗಳು ಉಷ್ಣವಲಯದ ಸಮುದ್ರಗಳಲ್ಲಿ ಹೆಚ್ಚು. ಫ್ಲಾರಿಡ, ಬಹಾಮ, ಬರ್ಮುಡ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

ಎಷ್ಟೇ ಗಡುಸಾಗಿದ್ದರೂ ಹವಳ ದಿಬ್ಬಗಳಿಗೂ ಅಪಾಯವಿದೆ; ನಕ್ಷತ್ರ ಮೀನುಗಳು ದಿಬ್ಬಗಳನ್ನು ಕೊರೆದು ಹಾಳುಮಾಡುತ್ತವೆ. ಆದರೆ ಹವಳಜೀವಿಗಳಿಗೆ ಹಾಗೂ ದಿಬ್ಬಗಳಿಗೆ ಅತಿ ಹೆಚ್ಚು ಅಪಾಯವಿರುವುದು ಮಾನವನಿಂದ. ಪರಿಸರ ಮಾಲಿನ್ಯ, ಮುಖ್ಯವಾಗಿ ಜಲಮಾಲಿನ್ಯ ಮತ್ತು ಭೂವಾತಾವರಣದ ಬಿಸಿಯೇರುವಿಕೆ (ಗ್ಲೋಬಲ್ ವಾರ್ಮಿಂಗ್), ಸಾಗರ ತೈಲಾನ್ವೇಷಣೆಯಂತಹ ಚಟುವಟಿಕೆಗಳಿಂದ ಹವಳಜೀವಿಗಳು ಸಂಚಕಾರವನ್ನು ಎದುರಿಸುತ್ತಿವೆ. ಆಸ್ಟ್ರೇಲಿಯ ಸರಕಾರ 1979 ರಲ್ಲಿ ಗ್ರೇಟ್ ಬ್ಯಾರಿಯರ್ ರೀಫ್‌ನ ಸಂರಕ್ಷಣೆಗಾಗಿ ಅದನ್ನು ಬ್ಯಾರಿಯರ್ ರೀಫ್ ಮೆರೈನ್ ಪಾರ್ಕ್ ಎಂದು ಘೋಷಿಸಿದೆ. ಡಬ್ಲ್ಯುಡಬ್ಲ್ಯುಎಫ್ ಎನ್ನುವ ಅಂತಾರಾಷ್ಟ್ರೀಯ ವನ್ಯಜೀವಿ ಸಂರಕ್ಷಣಾ ಸಂಸ್ಥೆಯು ಹವಳ ಪ್ರಭೇದ ಹಾಗು ದಿಬ್ಬಗಳನ್ನು ಸಂರಕ್ಷಿಸುವತ್ತ ಹಲವಾರು ಕ್ರಮಗಳನ್ನು ಕೈಗೊಂಡಿದೆ. (ಪಿ.ಎನ್.)

**ಹಳದಿ ಜ್ವರ:** ಈಡಿಸ್ ಈಜಿಪ್ಟಿ ಸೊಳ್ಳೆಗಳಿಂದ ಹರಡಲ್ಪಡುವ ವೈರಸ್ ರೋಗ. ಆಫ್ರಿಕಾ, ಅಮೆರಿಕಾ ಖಂಡಗಳಲ್ಲಿ ವಿಶೇಷವಾಗಿ ಕಾಣಬರುತ್ತದೆ. ಯೆಲ್ಲೋ ಫೀವರ್ ಎಂದು ಇಂಗ್ಲೀಷಿನಲ್ಲಿ ಕರೆಯಲಾಗುವ ಕಾಯಿಲೆಯು ಆಫ್ರಿಕಾ ಖಂಡದಲ್ಲಿ ಮೊದಲಿಗೆ ಕಾಣಿಸಿಕೊಂಡಿತು. 16ನೇ ಶತಮಾನದಲ್ಲಿ ಗುಲಾಮರ ವ್ಯಾಪಾರದೊಡನೆ – ರೋಗವಾಹಕ ಸೊಳ್ಳೆಗಳ ಮೂಲಕ ಈ ಕಾಯಿಲೆಯು ಆಧುನಿಕ ಜಗತ್ತಿಗೆ ಕಾಲಿರಿಸಿತು. 1947 ರಲ್ಲಿ ಬಾರ್‌ಬಡೋಸ್‌ನಲ್ಲಿ ಈ ಸಾಂಕ್ರಾಮಿಕ ರೋಗದಿಂದ 6000 ಮರಣಗಳಾದವು. 27,000 ಆಂಗ್ಲರಲ್ಲಿ 20,000 ಜನರು ಕಪ್ಪುವಾಂತಿ (ಬ್ಲಾಕ್ ವಾಮಿಟ್) ಎಂಬ ಸಾಂಕ್ರಾಮಿಕ ರೋಗಕ್ಕೆ ತುತ್ತಾದರು. ಅವರು ಮೆಕ್ಸಿಕೋ ಮತ್ತು ಪೆರು ದೇಶಗಳನ್ನು ಗೆಲ್ಲಲು ಹೋದಾಗ 1941 ರಲ್ಲಿ ಈ ಅನಾಹುತವು ಸಂಭವಿಸಿತು.

ಫ್ರೆಂಚರು 1802 ರಲ್ಲಿ ಮಿಸಿಸಿಪ್ಪಿ ಕಣಿವೆಯನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದಾಗ 33,000 ಜನರಲ್ಲಿ 29,000 ಜನರು ಈ ಹಳದಿ ಜ್ವರಕ್ಕೆ ಬಲಿಯಾದರು. ದಕ್ಷಿಣ ಅಮೆರಿಕದ ಕರಾವಳಿ ನಗರಗಳನ್ನು ಗಂಭೀರ ಸಾಂಕ್ರಾಮಿಕ ರೋಗಗಳು ಆಕ್ರಮಿಸಿದವು. ಅಲ್ಲದೆ, ಅಮೆರಿಕೆಯ ನ್ಯೂಯಾರ್ಕ್ ನಗರದವರೆಗೂ ಇದರ ಆರ್ಭಟ ಮುಂದುವರಿಯಿತು.

1878 ರಲ್ಲಿ ಈ ಹಳದಿ ಜ್ವರವು ಅಮೆರಿಕೆಯ 100 ನಗರಗಳಲ್ಲಿ ಕಾಣಿಸಿಕೊಂಡು ಸುಮಾರು 20,000 ಜನರ ಸಾವಿಗೆ ಕಾರಣವಾಯಿತು. ಈ ಜ್ವರದ ರೋಗಾಣು ಹಾಗೂ ನಗರದ ಸೊಳ್ಳೆಗಳು ಯೂರೋಪ್‌ಅನ್ನೂ ಆಕ್ರಮಿಸಿದುವು. ಈ ಆಕ್ರಮಣದಿಂದಾಗಿ ಪೋರ್ಚುಗಲ್, ಫ್ರಾನ್ಸ್ ಮತ್ತು ಇಟಲಿಯ ರೇವು ಪಟ್ಟಣಗಳು ಭಾರೀ ಹಾನಿಗೀಡಾದವು. ಈ ಜ್ವರ ಹಾಗೂ ಮಲೇರಿಯಾಗಳ ಕಾರಣದಿಂದಾಗಿ ಪನಾಮಾ ಕಾಲುವೆಯ ಕೆಲಸಗಳನ್ನು ಪೂರ್ಣಗೊಳಿಸುವ ಉಮೇದೇ ಫ್ರೆಂಚರಿಗೆ ಇಲ್ಲವಾಯಿತು. ಇತ್ತೀಚೆಗೆ, ಪಶ್ಚಿಮ ಆಫ್ರಿಕಾ, ದಕ್ಷಿಣ ಅಮೆರಿಕೆಯ ಕರಾವಳಿ ಪಟ್ಟಣಗಳು ಹಾಗೂ ಯುಎಸ್‌ಎ ಗಳಲ್ಲಿ ತೀವ್ರ ಸ್ವರೂಪದ ಸಾಂಕ್ರಾಮಿಕ ರೋಗವು ತಲೆದೋರಿದೆ.

16ನೇ ಶತಮಾನದಲ್ಲೇ ಪ್ರಥಮವಾಗಿ ಈ ಹಳದಿ ಜ್ವರವನ್ನು ಮನುಷ್ಯರಲ್ಲಿ ಗುರುತಿಸಲಾಯಿತಾದರೂ, 1900 ರಲ್ಲಿ ಕ್ಯೂಬಾದಲ್ಲಿ ಮೇಜರ್ ವಾಲ್ಟರ್ ರೀಡ್ ಎಂಬುವರು ಸೊಳ್ಳೆಗಳಿಂದ ಈ ಜ್ವರವು ಪ್ರಸರಣಗೊಳ್ಳುತ್ತದೆಂಬ ವಿಚಾರವನ್ನು ತೋರಿಸಿಕೊಟ್ಟರು. ಆಮೇಲೆ 27 ವರ್ಷಗಳ ತರುವಾಯ ರಾಕ್‌ಫೆಲ್ಲರ್ ಫೌಂಡೇಶನ್‌ನ ವೆಸ್ಟ್ ಆಫ್ರಿಕಾ ಯೆಲ್ಲೋ ಫೀವರ್ ಕಮಿಷನ್ ಈ ಜ್ವರದ ರೋಗಾಣುಗಳನ್ನು ಗುರುತಿಸಿತು.

ಪ್ರಸರಣ: ಹಳದಿ ಜ್ವರವು ದಕ್ಷಿಣ ಅಮೆರಿಕ ಹಾಗೂ ಆಫ್ರಿಕಾದ ಉಷ್ಣವಲಯ ಪ್ರದೇಶಗಳಲ್ಲಿ ಸಾಮಾನ್ಯ. ಆದರೆ, ಏಷ್ಯಾ ಖಂಡದಲ್ಲಿ ಈವರೆಗೂ ಇದು ಕಾಣಿಸಿಕೊಂಡಿಲ್ಲ. ಕಾರಣ ಗೊತ್ತಿಲ್ಲ. ಮೊನಾತ್ (1988) ಎಂಬುವರು ಕೆಳಕಾಣಿಸಿರುವ ಕಾರಣಗಳನ್ನು ಊಹಿಸಿದ್ದಾರೆ. 1) ಭೌಗೋಳಿಕ ಪರಿಸ್ಥಿತಿ, ಜನಾಂಗದ ಸ್ಥಿತಿ ಹಾಗೂ ಪರಿಸರದ ಪ್ರಭಾವಗಳು ಹಳದಿ ಜ್ವರದ ರೋಗಾಣುಗಳು ಆಫ್ರಿಕಾದಿಂದ ಏಷ್ಯಾಕ್ಕೆ ಹೋಗಲು ತಡೆಯಾಗಿರಬಹುದು. 2) ಡೆಂಗ್ಯು ವೈರಾಣು ಅಥವಾ ಇತರ

ಸಂಬಂಧಿತ ವೈರಾಣುಗಳಿಗೆ ಮನುಷ್ಯನು ಗುರಿಯಾಗುವುದರಿಂದ ರೋಗ ನಿರೋಧಕ ಅಡ್ಡರಕ್ಷಣೆಯು ದೊರೆತು ಹಳದಿ ಜ್ವರದ ರೋಗಾಣುವಿನ ಬಾಧೆ ಉಂಟಾಗದು; 3) ಈಡೆಸ್ ಈಜಿಪ್ಟಿ ಏಷ್ಯಾ ತಳಿಗಳು ಆಫ್ರಿಕಾ ಹಾಗೂ ದಕ್ಷಿಣ ಅಮೇರಿಕೆಯ ತಳಿಗಳಂತೆ ಹಳದಿ ಜ್ವರದ ರೋಗಾಣುಗಳನ್ನು ಪಸರಿಸುವುದಿಲ್ಲ.

ಅಸಂಖ್ಯಾತ ಕಶೇರುಕ ಪ್ರಾಣಿಗಳು – ಮುಖ್ಯವಾಗಿ ಸ್ತನಿ ಪ್ರಾಣಿಗಳು ಹಳದಿ ಜ್ವರದ ರೋಗಾಣುಗಳಿಗೆ ಆಶ್ರಯ ನೀಡುತ್ತವೆ. ಆರಂಭದಲ್ಲಿ, ತಲೆನೋವು, ಪಿತ್ತ ಪ್ರಕೋಪ, ಆಲಸ್ಯ ಮತ್ತು ವಾತ – ಈ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಜೊತೆಗೆ ಜ್ವರ, ವಾಂತಿ, ಮೇಲುಹೊಟ್ಟೆ ನೋವು ತೋರಬಹುದು. ಅತಿ ಸುಸ್ತು, ನಿರ್ಜಲಗೊಳ್ಳುವಿಕೆ ಹಾಗೂ ತೀವ್ರ ಕಾಮಾಲೆಗಳೂ ಜೊತೆಯಾಗಿರುತ್ತವೆ. ಇಷ್ಟಲ್ಲದೆ ಪಿತ್ತಕೋಶದ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. ಅಲ್ಲದೆ, ರಕ್ತಸ್ರಾವದ ಲಕ್ಷಣಗಳು, ಮೂತ್ರಪಿಂಡ ಮತ್ತು ಪಿತ್ತಕೋಶಗಳು ಕೆಲಸ ಮಾಡಲಾಗದ ಸ್ಥಿತಿಗೆ ಬರಬಹುದು. ಇವೆಲ್ಲ ಹಳದಿ ಜ್ವರದ ಲಕ್ಷಣಗಳು.

ಈ ರೋಗವು ಮುಖ್ಯವಾಗಿ ಈಡೆಸ್ ಈಜಿಪ್ಟಿಯಿಂದಲೂ, ಇತರ ಈಡೆಸ್ ಸೊಳ್ಳೆಗಳಿಂದಲೂ ಹರಡುತ್ತದೆ. ಕಡು ವರ್ಣದ ಅರಣ್ಯ ತಳಿಯ ಸೊಳ್ಳೆಗಳು ಮರಗಳ ರಂಧ್ರಗಳೊಳಗೆ ಸಂತಾನಾಭಿವೃದ್ಧಿ ಮಾಡುತ್ತವೆ. ಹಳೆಯ ಟೈರು, ಹೂ ಕುಂಡಗಳು, ನೀರಿನ ಹೂಜಿಗಳು, ಒಡೆದ ಮಡಕೆಗಳು – ಇತ್ಯಾದಿ ನೀರು ನಿಂತೆಡೆ ಈ ಜೀವಿಗಳು ಸಂತಾನಾಭಿವೃದ್ಧಿ ಮಾಡುತ್ತವೆ. ಈ ವಿಧದವುಗಳನ್ನು ಮನೆ ಸೊಳ್ಳೆಗಳೆನ್ನಬಹುದು. ಇವುಗಳಿಗೂ ಹಳದಿ ಜ್ವರಕ್ಕೂ ಸಾಮಾನ್ಯವಾಗಿ ಸಂಬಂಧವಿರುತ್ತದೆ.

ಆಫ್ರಿಕಾದ ಉಷ್ಣವಲಯ ಪ್ರದೇಶಗಳಲ್ಲಿ ಮೂರು ಭಿನ್ನರೀತಿಯ ಪ್ರಸರಣಾ ಆವರ್ತಗಳು ಉಂಟಾಗುತ್ತವೆಂದು ಗಮನಿಸಲಾಗಿದೆ.

1) ಅರಣ್ಯ ಆವರ್ತ : ಈಡಿಸ್ ಆಫ್ರಿಕಾನಸ್ ಎಂಬುದು ರೋಗವಾಹಕ ಸೊಳ್ಳೆ. ಇವುಗಳು ಮಂಗಗಳನ್ನಾಶ್ರಯಿಸಿರುತ್ತವೆ. ವಿವಿಧ ಉದ್ದೇಶಗಳಿಗಾಗಿ ಜನರು ಕಾಡಿಗೆ ಹೋದಾಗ ಸೋಂಕು ತಗುಲಿದ ಸೊಳ್ಳೆಗಳು ಅವರನ್ನು ಕಚ್ಚಬಹುದು. ಸೋಂಕುತಗುಲಿದ ಮನುಷ್ಯ ನಗರ ಪ್ರದೇಶಗಳಿಗೆ ರೋಗಾಣುಗಳನ್ನು ಸಾಗಿಸುತ್ತಾನೆ.
2). ತೇವಯುಕ್ತ ಸವನ್ನಾ ಆವರ್ತ : ಇಲ್ಲಿ ಈಡಿಸ್ ವಿಟ್ಟಾಟಸ್ ಸೇರಿದಂತೆ ಬಹಳಷ್ಟು ರೋಗವಾಹಕಗಳು ಒಳಗೊಳ್ಳುತ್ತವೆ. ಮಾನವೇತರ ಸ್ತನಿಗಳು ಹೆಚ್ಚು ಹೆಚ್ಚಾಗಿ ಈ ರೋಗವಾಹಕಗಳಿಗೆ ಆಶ್ರಯವೀಯುತ್ತವೆ. ಇಲ್ಲಿ ಕೂಡ ಸೋಂಕಿಗೊಳಗಾದ ಮನುಷ್ಯನಿಂದ ರೋಗಾಣು ನಗರ ಪ್ರದೇಶಗಳಿಗೆ ಹರಡುತ್ತದೆ.
3). ನಗರ ಸಾಂಕ್ರಾಮಿಕ ರೋಗದ ಆವರ್ತ : ಆಫ್ರಿಕಾದ ಶುಷ್ಕ ಪ್ರದೇಶಗಳಲ್ಲಿ ಜನರು ಮಣ್ಣಿನ ಜಾಡಿಗಳಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಈಡಿಸ್ ಈಜಿಪ್ಟಿ ಸೊಳ್ಳೆಗಳಿಗೆ ಸಂತಾನಾಭಿವೃದ್ಧಿ ಮಾಡಲು ಇದರಿಂದ ಅನುಕೂಲವಾಗುತ್ತದೆ. ಹಳ್ಳಿಗಳ ಹೊರಗಡೆ ಹಳದಿ ಜ್ವರದ ರೋಗಾಣುಗಳಿಂದ ಪೀಡಿತರಾದ ಜನರು ನಗರದಲ್ಲಿ ಸಾಂಕ್ರಾಮಿಕ ರೋಗದ ಹರಡುವಿಕೆಗೆ ಕಾರಣವಾಗಬಲ್ಲರು.

ನಿಯಂತ್ರಣ: ವನ್ಯ ರೋಗಾಣುವಿರುವ ಜೀವಂತ ಹಳದಿಜ್ವರದ ಲಸಿಕೆಯೊಂದನ್ನು ಫ್ರಾನ್ಸ್‌ನಲ್ಲಿ (1930) ಅಭಿವೃದ್ಧಿ ಪಡಿಸಲಾಯಿತು. ಆದರೆ, ಈ ಲಸಿಕೆಯನ್ನು ಮುಂದುವರಿಸಲಿಲ್ಲ. ಲಸಿಕೆ ಹಾಕಿದ ಅನಂತರದಲ್ಲಿ ಮಿದುಳಿಗೆ ಸಂಭವಿಸಬಹುದಾದ ಅಪಾಯವೇ ಇದಕ್ಕೆ ಕಾರಣ. ಅನಂತರ ಥೈಇಲರ್ ಮತ್ತು ಸ್ಮಿತ್ (1937) ಎಂಬಿಬ್ಬರು ಇನ್ನೊಂದು ವಿಧದ ಲಸಿಕೆಯನ್ನು ಅಭಿವೃದ್ಧಿಪಡಿಸಿದರು. ಇದನ್ನು 17ಡಿ ಎಂದು ಕರೆದರು. ಈ ವಿಧಾನದಲ್ಲಿ ಹಳದಿ ಜ್ವರದ ರೋಗಾಣುಗಳನ್ನು ಕೋಶಕೃಷಿ ವಿಧಾನದಲ್ಲಿ ಬಲಗುಂದುವಂತೆ ಮಾಡಲಾಗುತ್ತದೆ. ಇದು ಬಹಳ ಪರಿಣಾಮಕಾರಿಯಾದ ಲಸಿಕೆ ಎಂದು ಕಂಡುಬಂದಿದೆ. 35 ವರ್ಷಗಳಷ್ಟು ದೀರ್ಘಾವಧಿಯವರೆಗೂ ರೋಗನಿರೋಧಕ ಶಕ್ತಿಯನ್ನು ಈ ಲಸಿಕೆಯು ಶರೀರದಲ್ಲಿ ಉಂಟುಮಾಡುತ್ತದೆ. ರೋಗಬಾರದಂತೆ ತಡೆಯಲು, ರೋಗ ನಿರೋಧಕ ಶಕ್ತಿಯನ್ನು ಶರೀರದಲ್ಲಿ ಉಂಟುಮಾಡಲು ಸಹ ಇದನ್ನು ಬಳಸಬಹುದು. ಇದು ಈ ವಿಚಾರದಲ್ಲಿ ಸಹ ಪರಿಣಾಮಕಾರಿ. ವಿದೇಶ ಸಂಚಾರ ಕೈಗೊಳ್ಳುವ ಭಾರತೀಯರಿಗಂತೂ ಈ ರೀತಿಯ ಲಸಿಕೆಯನ್ನು ಹಾಕಿಸಿಕೊಂಡ ಬಗೆಗಿನ ಪ್ರಮಾಣಪತ್ರ ಅಗತ್ಯ. ಈ ಲಸಿಕೆಯ ಪೂರೈಕೆಯು ಕಡಿಮೆಯಿರುವ ಕಾರಣ ಸಮಸ್ಯೆಯುಂಟಾಗಿದೆ. ಅಲ್ಲದೆ, ಲಸಿಕೆಯ ಅಗತ್ಯವೆಷ್ಟಿದೆ ಎಂಬುದನ್ನು ಮೊದಲೇ ನಿರ್ಧರಿಸುವುದು ಕಷ್ಟಕರವಾಗಿರುವುದರ ಜೊತೆಗೆ ದಾಸ್ತಾನು ಮಾಡುವ ಅನುಕೂಲಗಳ ಕೊರತೆಯಿರುವುದು ಕೂಡ ಈ ಸಮಸ್ಯೆಗೆ ಕಾರಣವಾಗಿದೆ. ಇಲ್ಲಿ ನಿಯಂತ್ರಣವು ಹೆಚ್ಚು ಪರಿಣಾಮಕಾರಿಯಾಗಿಲ್ಲ. ಸೊಳ್ಳೆಗಳ ಸಂತಾನಾಭಿವೃದ್ಧಿಗೆ ಎಲ್ಲೆಲ್ಲೂ ಅನುಕೂಲಗಳಿರುವುದೇ ಇದಕ್ಕೆ ಪ್ರಮುಖ ಕಾರಣ. (ವಿ.ಎ.ವಿ.;ಬಿ.ವೈ.ಎಸ್.ಕೆ.)

**ಹಾರುವ ಅಳಿಲು:** ಮಧ್ಯ ಹಾಗು ಪೂರ್ವ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಮಧ್ಯ ಅಮೆರಿಕದ ಕಾಡುಗಳಲ್ಲಿ ಕಂಡುಬರುವ ಒಂದು ಸ್ತನಿ. ಉಷ್ಣವಲಯ ಮತ್ತು ಮಿತ ಉಷ್ಣವಲಯದ ಕಾಡುಗಳಲ್ಲಿ ವ್ಯಾಪಿಸಿದೆ. ಗ್ಲಾಕೊಮಿಸ್ ವೋಲನ್ಸ್, ಗ್ಲಾ. ಸೇಬ್ರಿನಸ್, ಮುಂತಾದ 37 ಪ್ರಭೇದಗಳಿವೆ. ಗಂಡು ಸುಮಾರು 25 ಸೆಂಮೀ ಉದ್ದವಿದ್ದು ಒಟ್ಟು 22 ಹಲ್ಲುಗಳಿರುತ್ತವೆ. ಕಣ್ಣುಗಳು ದೊಡ್ಡವು. ಬೆನ್ನಿನ ಭಾಗದ ಹೊದಿಕೆಯು ಮೃದುವಾದ ರೇಶ್ಮೆಯಂತಹ ತೆಳುಕೆಂಪು ಇಲ್ಲವೆ ಕಂದು ಬಣ್ಣದ ಕೂದಲಿನಿಂದ ಕೂಡಿರುತ್ತದೆ. ಕೆಳಭಾಗದ ಬಣ್ಣ ಬಿಳಿ ಅಥವಾ ಹಳದಿ ಮಿಶ್ರಿತ ಬಿಳಿ. ಬಾಲವು ಚಪ್ಪಟೆಯಾಗಿದ್ದು ನೋಡಲು ಪಕ್ಷಿಯ ಗರಿಯಂತೆ ಇದೆ. ಮುಂಗಾಲು ಮತ್ತು ಹಿಂಗಾಲುಗಳ ನಡುವೆ ಕೂದಲುಳ್ಳ ರೆಕ್ಕೆಯಂತಿರುವ ತೆಳುವಾದ ಚರ್ಮವಿದೆ. ಇದರ ಸಹಾಯದಿಂದ ಗಾಳಿಯಲ್ಲಿ ಹಾರಲು ಅಥವಾ ತೇಲಲು ಸಾಧ್ಯ. ಮರದಿಂದ ಮರಕ್ಕೆ ಹಾರುತ್ತಾ ಒಂದು ಜಿಗಿತಕ್ಕೆ 9 ಮೀ ದೂರ ಕ್ರಮಿಸಬಲ್ಲದು.

ಹಾರುವ ಅಳಿಲು ರಾತ್ರಿಯ ವೇಳೆಯಲ್ಲಿ ಮಾತ್ರ ಚಟುವಟಿಕೆಯಿಂದ ಕೂಡಿದ್ದು ಉಳಿದ ಸಮಯದಲ್ಲಿ ಮರ ಅಳಿಲು, ಮರಕುಟಿಕ ಅಥವಾ ಇತರೆ ಪಕ್ಷಿಗಳ ಬಿಲಗಳು ಅಥವಾ ಮರದ ಪೊಟರೆಗಳಲ್ಲಿ ವಿಶ್ರಮಿಸುತ್ತದೆ. ಪೊಟರೆಗಳ ಒಳಭಾಗ ಮೃದುವಾದ ತೊಗಟೆ, ಮಾಸ್, ಶಿಲಾವಲ್ಕಗಳು ಮತ್ತು ಮೃದುಗರಿಗಳಿಂದ ಕೂಡಿರುತ್ತದೆ. ಹಣ್ಣು, ಎಲೆ, ಕೀಟ, ಪಕ್ಷಿಗಳ ಮೊಟ್ಟೆ ಮತ್ತು ಸಣ್ಣ ಪ್ರಾಣಿಗಳು ಇದರ ಆಹಾರ.

ಮರಿಗಳಾಗಿದ್ದಾಗ ಹೊರತುಪಡಿಸಿ ಉಳಿದ ಸಮಯದಲ್ಲಿ ಸ್ವಾವಲಂಬಿ. ಹೆಚ್ಚು ಆಹಾರ ಸಿಗುವ ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತದೆ. ಚಳಿಗಾಲದಲ್ಲಿ ಚಟುವಟಿಕೆಯಿಂದಿರದಿದ್ದರೂ ಶಿಶಿರ ನಿದ್ರೆಗೆ ಹೋಗುವುದಿಲ್ಲ. ಫೆಬ್ರವರಿಯಿಂದ ಮಾರ್ಚ್ ತಿಂಗಳುಗಳಲ್ಲಿ ವಂಶ ವೃದ್ಧಿಯ ಕ್ರಿಯೆಯಲ್ಲಿ ತೊಡಗುತ್ತದೆ. ಗರ್ಭಾವಸ್ಥೆ 40 ದಿನಗಳಾಗಿದ್ದು ಹೆಣ್ಣು ಒಮ್ಮೆಗೆ 2 ರಿಂದ 6 ಮರಿಗಳನ್ನು ಹಾಕುತ್ತದೆ.
(ಬಿ.ವೈ.ಎಸ್.ಕೆ.)

**ಹಾರುವ ಓತಿ:** ಇದು ಕಶೇರುಕ ಗುಂಪಿನ ಉರಗ ವರ್ಗದ ಅಗಾಮಿಡೆ ಕುಟುಂಬದ ಸದಸ್ಯ. ಡ್ರಾಕೋ ಜಾತಿಯ ಈ ಹಲ್ಲಿಗಳು ಆಗ್ನೇಯ ಏಷ್ಯಾದ ಉಷ್ಣವಲಯ ಕಾಡುಗಳಲ್ಲಿವೆ. 15 ಪ್ರಭೇದಗಳಿವೆ. ಇವುಗಳ ಉದ್ದ 20 ಸೆಂಮೀ.

ಹಾರುವ ಓತಿ

ದೇಹದ ಎರಡು ಬದಿಗಳಲ್ಲಿ ತೆಳುವಾದ ರೆಕ್ಕೆಯಂತಹ ಚರ್ಮದ ಪೊರೆಗಳು ಹೊರಕ್ಕೆ ಚಾಚಿವೆ. ಈ ರೆಕ್ಕೆಗಳು ಶರೀರದಿಂದ ಹೊರಚಾಚಿರುವ 5 ಅಥವಾ 7 ಪಕ್ಕೆಲುಬುಗಳ ಆಧಾರವನ್ನು ಪಡೆದಿವೆ. ಈ ರೆಕ್ಕೆಗಳ ಸಹಾಯದಿಂದ ಒಂದು ಮೀ ದೂರ ಗಾಳಿಯಲ್ಲಿ ಹಾರುತ್ತವೆ. ರೆಕ್ಕೆಗಳು ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿವೆ. ಕೆಲವೊಮ್ಮೆ ಪಟ್ಟೆಗಳಿಂದಲೋ, ಬೊಟ್ಟುಗಳಿಂದಲೋ ಕೂಡಿರುತ್ತವೆ. ಆದರೆ, ಅವು ಮಡಚಿಕೊಂಡಾಗ ಹಸಿರು ಮಿಶ್ರಿತ ಮಾಸಲು ಹಳದಿ ಬಣ್ಣದಿಂದಿರುತ್ತವೆ. ಪ್ರಣಯಕಾಲದಲ್ಲಿ ಗಂಡು ಹಲ್ಲಿಗಳು ವಿವಿಧ ವರ್ಣದ

ರೆಕ್ಕೆಗಳನ್ನು ಹರಡಿಕೊಂಡು ಹೆಣ್ಣು ಹಲ್ಲಿಗಳನ್ನು ಆಕರ್ಷಿಸುತ್ತವೆ. ಕತ್ತಿನ ಸಮೀಪ ಹಾರುವ ಹಲ್ಲಿಗಳಿಗೆ ಕೃಶವಾದ ಕಾಲುಗಳಿವೆ. ದೇಹದ ಹಿಂಬದಿಯಲ್ಲಿ ಬಾಲ ಇದೆ. ವರ್ಣಮಯ ಗಂಟಲು ಚೀಲ ಇದೆ. ಈ ಚೀಲವು ಹೆಣ್ಣಿಗೆ ನೀಲಬಣ್ಣದಿಂದಲೂ, ಗಂಡಿಗೆ ಹಳದಿ ಮಿಶ್ರಿತ ಕಿತ್ತಳೆ ಬಣ್ಣದ ಜೊತೆ ನೀಲಿ ಬೊಟ್ಟುಗಳಿಂದ ಕೂಡಿದೆ. ಇವು ಮರಗಳ ಮೇಲೆ ಜೀವಿಸುತ್ತವೆ. ಅಪರೂಪಕ್ಕೆ ನೆಲಕ್ಕಿಳಿಯುತ್ತವೆ. ಇವುಗಳ ಆಹಾರ ಮರದಲ್ಲಿ ವಾಸಿಸುವ ಇರುವೆಗಳು. (ಬಿ.ವೈ.ಎಸ್.)

**ಹಾರುವ ನರಿ:** ಸ್ತನಿಗಳ ವರ್ಗಕ್ಕೆ ಸೇರಿದ ಹಾರುವ ಬಾವಲಿಗಿರುವ ಹೆಸರು. ಟೆರೋಪಸ್ ಪೋಲಿಯೋಸೆಫಾಲಸ್ ವೈಜ್ಞಾನಿಕ ಹೆಸರು. ಕೈರಾಪ್ಟರಾ ಗಣದ ಮೆಗಾಕೈರಾಪ್ಟರ ಉಪಗಣಕ್ಕೆ ಸೇರಿದೆ. ದೇಹದ ಗಾತ್ರ ಇತರೆ ಬಾವಲಿಗಳಿಗಿಂತ ದೊಡ್ಡದಾಗಿದ್ದು 40 ಸೆಂಮೀ ನಷ್ಟು ಉದ್ದವಾಗಿರುತ್ತದೆ. ಚರ್ಮದ ಹೊದಿಕೆ ರೆಕ್ಕೆಯಂತೆ ಮಾರ್ಪಾಟಾಗಿದ್ದು 1.5 ಮೀ ನಷ್ಟು ಅಗಲವಾಗಿ ಹರಡಿಕೊಳ್ಳುತ್ತದೆ. ಇದಕ್ಕೆ ಪೆಟಾಜಿಯಂ ಎಂದು ಹೆಸರು. ಇದರಿಂದಲೇ ಹೆಚ್ಚು ದೂರದವರೆಗೆ ಹಾರುವ ಸಾಮರ್ಥ್ಯವಿರುತ್ತದೆ. ಪೆಟಾಜಿಯಂ ಪದರವು ದೇಹ ಹಾಗೂ ಕಾಲಿನ ನಡುವೆ ಕೊಡೆಯಾಕಾರದಲ್ಲಿ ಹರಡಿದ್ದು ಮುಂಗಾಲುಗಳ 2, 3, 4 ಹಾಗೂ 5 ನೆಯ ಬೆರಳುಗಳು ರೆಕ್ಕೆಗಳಿಗೆ ಆಧಾರವಾಗಿರುತ್ತವೆ. 1 ಮತ್ತು 2 ನೇಯ ಬೆರಳುಗಳಂತೂ ಕೊಂಡಿಯಾಕಾರದಲ್ಲಿ ಮಾರ್ಪಾಟಾಗಿ ಮರದ ರೆಂಬೆ–ಕೊಂಬೆಗಳಿಗೆ ಸುಲಭವಾಗಿ ತೂಗಿಹಾಕಿಕೊಳ್ಳಲು ಸಹಕರಿಸುತ್ತವೆ. ದೇಹ ಕಂದು ಬಣ್ಣದ ತುಪ್ಪಳದಿಂದ ಕೂಡಿದ್ದು ಮೂತಿಯು ನರಿಯು ಮೂತಿಯನ್ನೇ ಹೋಲುವುದರಿಂದ ಹಾರುವ ನರಿ ಎಂದು ಕರೆಯುತ್ತಾರೆ. ಉತ್ತರಾರ್ಧ ಆಸ್ಟ್ರೇಲಿಯ ಮತ್ತು ದಕ್ಷಿಣಾರ್ಧ ಏಷ್ಯಾ ಖಂಡ, ಉಷ್ಣವಲಯದ ಮಳೆಗಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ನಿಶಾಚರಿ. ಎತ್ತರದ ಮರಗಳ ಕೊಂಬೆಗಳಿಗೆ ತಲೆಕೆಳಕಾಗಿ ತೂಗುಹಾಕಿಕೊಂಡಿರುತ್ತದೆ. ಸಸ್ಯಾಹಾರಿಗಳಾಗಿದ್ದು, ಹಣ್ಣು, ಹೂ, ಹೂವಿನ ಪರಾಗ ಹಾಗೂ ಜೇನನ್ನು ಆಹಾರವಾಗಿ ಸೇವಿಸುತ್ತದೆ. ಇದಕ್ಕಾಗಿಯೇ ನಾಲಿಗೆ ಉದ್ದವಾಗಿ ಮಾರ್ಪಾಟಾಗಿರುವುದರ ಜೊತೆಯಲ್ಲಿ ಸಸ್ಯಗಳಲ್ಲಿ ಪರಾಗಸ್ಪರ್ಶ, ಹಣ್ಣು ಹಾಗೂ ಬೀಜವನ್ನು ಬೇರೆ ಪ್ರದೇಶಕ್ಕೆ ಕೊಂಡೊಯ್ದು ಅವುಗಳ ಸಂತತಿಯನ್ನು ಪಸರಿಸುವುದರಲ್ಲಿ ಸಹಕರಿಸುತ್ತದೆ. ಆಹಾರ ಹುಡುಕುವ ವೇಳೆಯಲ್ಲಿ ಇತರೆ ಬಾವಲಿಗಳಂತೆ ಪ್ರತಿಧ್ವನಿಯಿಂದ ಸ್ಥಾನನಿರ್ಣಯ ಮಾಡದೆ ಸಂಪೂರ್ಣವಾಗಿ ಕಣ್ಣಿನ ದೃಷ್ಟಿಯನ್ನು ಬಳಸಿಕೊಳ್ಳುತ್ತದೆ. ವಂಶಾಭಿವೃದ್ಧಿಯ ಸಮಯದಲ್ಲಿ ಗಂಡು ಹೆಣ್ಣನ್ನು ಆಕರ್ಷಿಸಲು ದೊಡ್ಡ ಧ್ವನಿಯಲ್ಲಿ ರಾಗ ಮಾಡುತ್ತಾ ಮರದ ಎಲೆ–ಕೊನೆಗಳಿಂದ ಅದರ ಬೆನ್ನಿನ ಭಾಗವನ್ನು ಸ್ಪರ್ಷಿಸುತ್ತದೆ. ಇದರಿಂದ ಪುಳಕಿತಗೊಂಡ ಹೆಣ್ಣು ಬಾವಲಿ ಅದರ ಕರೆಗೆ ಓಗೊಟ್ಟು ಮುಂದಿನ ಚಟುವಟಿಕೆಗೆ ಸಜ್ಜಾಗುತ್ತದೆ.



ಹಾರುವ ನರಿ
(ಬಾವಲಿ)

ಹಣ್ಣಿನ ತೋಟಗಳಿಗೆ ಲಗ್ಗೆಯಿಟ್ಟು ಬೆಳೆಯನ್ನು ನಾಶಪಡಿಸುವುದರ ಮೂಲಕ ಮಾನವನಿಗೆ ಹಾನಿಕಾರಕವಾಗಿದೆ. ಹೆಚ್ಚಾಗಿ ಗುಂಪಿನಲ್ಲಿ ವಾಸಿಸುವ ಈ ಹಾರುವ ನರಿಗಳಲ್ಲಿನ ವಿಧಗಳೆಂದರೆ;

1) ಕೆಂಪು ಕುಬ್ಜದ ಹಾರುವ ನರಿ (ಲಿಟಲ್ ರೆಡ್ ಫ್ಲೈಯಿಂಗ್ ಫಾಕ್ಸ್)

2) ಕಪ್ಪು ಬಣ್ಣದ ಹಾರುವನರಿ (ಬ್ಲಾಕ್ ಫ್ಲೈಯಿಂಗ್ ಫಾಕ್ಸ್)

3) ಕನ್ನಡಕಧರಿಸಿದಂತೆ ಕಾಣುವ ಹಾರುವ ನರಿ (ಸ್ಪೆಕ್ಟಾಕಲ್ಡ್ ಫ್ಲೈಯಿಂಗ್ ಫಾಕ್ಸ್)

4) ಬೂದುಬಣ್ಣ ತಲೆಯ ಹಾರುವ ನರಿ (ಗ್ರೇ ಹೆಡೆಡ್ ಫ್ಲೈಯಿಂಗ್ ಫಾಕ್ಸ್)

(ಟಿ.ಎಸ್.ಎಚ್.)

**ಹಾರ್ಮೋನು:** ಅಂತಃಸ್ರಾವಕ ಗ್ರಂಥಿಗಳು ಸ್ರವಿಸುವ, ರಕ್ತ ಪರಿಚಲನೆಯ ಮೂಲಕ, ತಮ್ಮ ಗುರಿ (ಟಾರಗೆಟ್) ಅಂಗ/ಅಂಗಾಂಶಗಳನ್ನು ತಲುಪಿ, ಅವುಗಳಲ್ಲಿರುವ ಗ್ರಾಹಿಗಳೊಂದಿಗೆ ಸಂಯೋಜನೆ ಹೊಂದಿ, ಜೈವಿಕ ಕ್ರಿಯೆಗಳನ್ನು ಪ್ರಚೋದಿಸುವ ರಾಸಾಯನಿಕ ದೂತಗಳು. ಅಪವಾದವಾಗಿ ಕೆಲವು ಅಂತಃಸ್ರಾವಕವಲ್ಲದ ಅಂಗಾಂಶಗಳು ಹಾರ್ಮೋನ್ ಸ್ರವಿಸುತ್ತವೆ.

ಹಾರ್ಮೋನು ಎಂಬ ಪದವನ್ನು 1905 ರಲ್ಲಿ ಸ್ಟರ್ಲಿಂಗ್ ಎಂಬ ಬ್ರಿಟಿಷ್ ಶರೀರ ಕ್ರಿಯಾ ವಿಜ್ಞಾನಿ ಬಳಸಿದನು. ಇದು ಗ್ರೀಕ್ ಭಾಷೆಯ ಹಾರ್ಮೋನ್ ಎಂಬ ಪದದಿಂದ ಬಂದಿದೆ. ಹಾರ್ಮೋನುಗಳು ಅತಿಕಡಿಮೆ ಪ್ರಮಾಣದಲ್ಲಿ ಉತ್ಪತ್ತಿಯಾಗುವದರಿಂದ ರಕ್ತದಲ್ಲಿ ಅವುಗಳ ಸಾರೀಕರಣ (ಕಾನ್‌ಸೆಂಟ್ರೇಶನ್) ಸಾಮಾನ್ಯವಾಗಿ ತುಂಬಾ ಕಡಿಮೆ. ಹಾರ್ಮೋನುಗಳ ಮುಖ್ಯ ಗುಣಗಳೆಂದರೆ: 1) ರಕ್ತದ ಮೂಲಕ ಪರಿಚಲಿಸಿ (ಮತ್ತು ಜೀವಕೋಶಗಳ ನಡುವಿನ ಅಂತರ ಅಂಗಾಂಶ ದ್ರವದ ಮೂಲಕ ಸಾಗಿ) ದೇಹದ ಎಲ್ಲ ಅಂಗಾಂಶಗಳನ್ನು ಮತ್ತು ಅಂಗಗಳನ್ನು ತಲುಪುತ್ತವೆ. 2) ಹಾರ್ಮೋನುಗಳು ಎಲ್ಲಿ ಉತ್ಪತ್ತಿಯಾಗುತ್ತವೆಯೋ ಅಲ್ಲಿ ತಮ್ಮ ಕಾರ್ಯನಿರ್ವಹಿಸದೆ, ಸ್ರವಿಸಿದ ಸ್ಥಳದಿಂದ ದೂರಸಾಗಿ, ಅಲ್ಲಿ ನಿರ್ದಿಷ್ಟ ಅಂಗಭಾಗಗಳ ಮೇಲೆ ತಮ್ಮ ಪ್ರಭಾವ ಬೀರುತ್ತವೆ. ಈ ಅಂಗಾಂಶ ಅಥವಾ ಅಂಗಗಳನ್ನು ಗುರಿ (ಟಾರ್ಗೆಟ್) ಅಂಗಾಂಶಗಳು ಅಥವಾ ಅಂಗಗಳೆನ್ನುತ್ತಾರೆ. ಟಾರ್ಗೆಟ್ ಅಂಗವು ಇನ್ನೊಂದು ನಿರ್ನಾಳ ಗ್ರಂಥಿಯಾಗಿರಬಹುದು ಅಥವಾ ಮೂಳೆ ಅಥವಾ ಮೂತ್ರಪಿಂಡಗಳಂತಹ ಬೇರೆ ಅಂಗವಾಗಿರಬಹುದು. 3) ಒಂದು ಹಾರ್ಮೋನು ಒಂದು ಗುರಿ ಅಂಗಾಂಶದ ಮೇಲೆ ಅನೇಕ ಪರಿಣಾಮಗಳನ್ನುಂಟುಮಾಡಬಹುದು ಅಥವಾ ಅನೇಕ ಗುರಿ ಅಂಗಾಂಶಗಳ ಮೇಲೆ ಪ್ರಭಾವ ಬೀರಬಹುದು. 4) ಇವು ಸರಿಯಾದ ಕಾಲದಲ್ಲಿ ಗೊತ್ತಾದ ಪ್ರಮಾಣದಲ್ಲಿ ಉತ್ಪತ್ತಿ ಹಾಗು ಬಿಡುಗಡೆಯಾಗಿ ಬೆಳವಣಿಗೆ, ಪುನರುತ್ಪಾದನೆ, ಸಂತಾನೋತ್ಪತ್ತಿ, ಪೋಷಕಾಂಶಗಳ ಬಳಕೆ, ವರ್ಣದ್ರವ್ಯದ ಹರಡುವಿಕೆ, ಪೊರೆಕಳಚುವಿಕೆ, ಚಯಾಪಚಯ ಕ್ರಿಯೆಯ ವೇಗ ಮುಂತಾದ ಅನೇಕ ವೈವಿಧ್ಯಮಯ ಕ್ರಿಯೆಗಳನ್ನು ನಿಯಂತ್ರಿಸುತ್ತವೆ. 5) ಹಾರ್ಮೋನುಗಳ ಸ್ರವಿಕೆಯಲ್ಲಿ ಹೆಚ್ಚು ಅಥವಾ ಕಡಿಮೆಯಾದರೆ ದೇಹದ ಭಾಗಗಳ ಹೊಂದಾಣಿಕೆಯಲ್ಲಿ ಅವ್ಯವಸ್ಥೆಯಾಗಿ ವ್ಯಾಧಿಯಲ್ಲಿ ಪರ್ಯವಸಾನವಾಗುತ್ತದೆ. 6) ತಿಳಿದಿರುವ ಎಲ್ಲಾ ಹಾರ್ಮೋನುಗಳ 4 ವಿವಿಧ ರಾಸಾಯನಿಕ ಗುಂಪುಗಳಿವೆ. ಅ) ಸ್ಟೀರಾಯಿಡ್‌ಗಳು ಆ) ಅಮೈನೋ ಆಮ್ಲಗಳಿಂದ ಉತ್ಪತ್ತಿಯಾದವು ಇ) ಪೆಪ್ಟೈಡ್‌ಗಳು ಅಥವಾ ಪ್ರೊಟೀನುಗಳು ಈ) ಕೊಬ್ಬು ಆಮ್ಲದದಿಂದ ಉತ್ಪತ್ತಿಯಾದವುಗಳು. 7) ಹೆಚ್ಚಿನ ಹಾರ್ಮೋನ್‌ಗಳ ಕಾರ್ಯಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಹೈಪೊಥೆಲಾಮಸ್ (ಮಿದುಳಿನ ಭಾಗ) ನಿಯಂತ್ರಿಸಿ, ನರ ಮತ್ತು ಅಂತಃಸ್ರಾವಕ ವ್ಯೂಹಗಳ ಕೊಂಡಿಯಾಗಿದೆ.

ಹಾರ್ಮೋನು ಎಂಬ ಪದವನ್ನು ಒಂದಕ್ಕೊಂದು ಸಂಬಂಧವಿಲ್ಲದ ಹೆಚ್ಚು ವೈವಿಧ್ಯ (ವ್ಯತ್ಯಾಸ) ತೋರುವ ಪದಾರ್ಥಗಳಿಗೆ ಬಹುಶಃ ತುಂಬಾ ಸ್ವೇಚ್ಛೆಯಾಗಿ ಬಳಸಲಾಗಿದೆ. ಗಾಯಗೊಂಡ ಅಂಗಾಂಶಗಳಿಂದ ಹೊರಬರುವ ಕಾರಕ ಅಥವಾ ನಿಯೋಗಿ (ಏಜೆಂಟ್ಸ್) ಗಳನ್ನು ಗಾಯ ಹಾರ್ಮೋನುಗಳು, ಸಸ್ಯಗಳಲ್ಲಿನ ಬೆಳವಣಿಗೆಯ ವಸ್ತುಗಳನ್ನು ಫೈಟೊ ಹಾರ್ಮೋನುಗಳು, ನರಗಳ (ನರಜೀವಕೋಶಗಳ) ತುದಿಯಿಂದ ಬಿಡುಗಡೆಯಾಗುವ ಕಾರಕಗಳನ್ನು ನರ ಹಾರ್ಮೋನುಗಳು (ನ್ಯೂರೊಹಾರ್ಮೋನು) ಎಂದು ಪರಿಗಣಿಸಲಾಗಿದೆ. ಸುತ್ತಲ ಪರಿಸರಕ್ಕೆ ಬಿಡುಗಡೆಯಾಗುವ ಮತ್ತು ಒಂದೇ ಪ್ರಭೇದಕ್ಕೆ ಸೇರಿದ ಬೇರೆ ವ್ಯಕ್ತಿಗಳ ನಡೆವಳಿಕೆಗಳ ಮೇಲೆ ಪ್ರಭಾವ ಬೀರುವ ರಾಸಾಯನಿಕ ಕಾರಕಗಳನ್ನು ಸಾಮಾಜಿಕ ಹಾರ್ಮೋನುಗಳು (ಸೋಶಿಯಲ್ ಹಾರ್ಮೋನ್ಸ್) ಎಂದು ಕೆಲವರು ಬಳಸಿದ್ದಾರೆ.

ಕಶೇರುಕಗಳಲ್ಲಿ ಕಂಡುಬರುವ ಅಂತಃಸ್ರಾವಕ ಗ್ರಂಥಿಗಳೆಂದರೆ, ಪಿಟ್ಯುಟರಿ, ಥೈರಾಯಿಡ್, ಪ್ಯಾರಥೈರಾಯಿಡ್‌ಗಳು, ಅಡ್ರಿನಲ್ ಗ್ರಂಥಿಗಳು, ಪ್ರಜನನಾಂಗಗಳು, ಅಂತಃಸ್ರಾವಕ ಮೇದೋಜೀರಕ ಗ್ರಂಥಿ, ಹಾಗು ಹಾರ್ಮೋನು ಉತ್ಪತ್ತಿಮಾಡುವ ಜೀರ್ಣಾಂಗ ನಾಳದ ಭಾಗ. ಸ್ತನಿಗಳಲ್ಲಿ ಜರಾಯು (ಪ್ಲಾಸೆಂಟ) ಹಾಗು ನರ ಅಂತಃಸ್ರಾವಕಗಳು ಅಲ್ಲದೆ ಸಾಮಾನ್ಯಕೋಶಗಳಲ್ಲಿ ಕೂಡ ಸ್ಥಳೀಯ ಹಾರ್ಮೋನು (ಉದಾ : ಪ್ರೊಸ್ಟಾಗ್ಲಾಂಡಿನ್) ಗಳು ಉತ್ಪತ್ತಿಯಾಗುತ್ತವೆ.

ಹಾರ್ಮೋನುಗಳ ಅನ್ವೇಷಣೆಯ ಅನಂತರ ಮೊದಲಿನ ಹಲವು ದಶಕಗಳಲ್ಲಿ ಅಂಗಗಳ / ದೈಹಿಕ ಕ್ರಿಯೆಗಳ ಮೇಲೆ ಅವುಗಳ ಪ್ರಭಾವ ಹಾಗು ದೇಹದ ವಿವಿಧ ಭಾಗಗಳ ಕಾರ್ಯಗಳಲ್ಲಿ ಸಂಯೋಜನೆ ಮತ್ತು ಸಮಸ್ಥಿತಿ ಕಾಪಾಡುವಲ್ಲಿ ಅವುಗಳ ಪಾತ್ರದ ಬಗ್ಗೆ ವಿಶದವಾದ ಸಂಶೋಧನೆಗಳು ನಡೆದು, ಸಾಕಷ್ಟು ಮಾಹಿತಿಯ

ಸಂಗ್ರಹಿಸಲಾಯಿತು. ಇತ್ತೀಚಿನ ದಶಕಗಳಲ್ಲಿ ಜೀವಕೋಶದೊಳಕ್ಕೆ ಹಾಗು ಜೀನುಗಳ ಮೇಲೆ ಹಾರ್ಮೋನುಗಳ ಪ್ರಭಾವಗಳ ಬಗ್ಗೆ ಸಂಶೋಧನೆಗಳಾಗಿವೆ. ಇವುಗಳ ಫಲವಾಗಿ ಅನೇಕ ರೋಗಗಳ ಚಿಕಿತ್ಸೆಗೆ ಅನುಕೂಲವಾಗಿದೆ. ನೋಡಿ: ಅಂತಃಸ್ರಾವಕ ವಿಜ್ಞಾನ, ಅಂತಃಸ್ರಾವಕ ಗ್ರಂಥಿಗಳು, ಪಿಟ್ಯುಟರಿ ಥೈರಾಯಿಡ್, ಪ್ಯಾರಾಥೈರಾಯಿಡ್, ಅಡ್ರೀನಲ್ ಗ್ರಂಥಿ, ಅಂಡಾಶಯ, ವೃಷಣ, ಹೈಪೊಥಿಲಮಸ್, ಮೇದೋಜಿರಕ ಗ್ರಂಥಿ, ಇನ್ಸುಲಿನ್. (ಎಚ್.ಎಚ್.ಎಸ್.)

**ಹಾರ್ವೆ, ವಿಲಿಯಂ (1578–1657):** ದೇಹದಲ್ಲಿ ರಕ್ತ ಪರಿಚಲನೆಯಾಗುತ್ತದೆಂದು ತಿಳಿಸಿದ ಜೀವ ವಿಜ್ಞಾನಿ. ಏಪ್ರಿಲ್ 1, 1578 ರಲ್ಲಿ ಇಂಗ್ಲೆಂಡಿನ ಫೋಕ್ ಸ್ಟೋನ್ ಕೆಂಟ್ ನಲ್ಲಿ ಜನನ. ವಿದ್ಯಾಭ್ಯಾಸ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಆಯಿತು. ಮುಂದೆ ಆ ಕಾಲದಲ್ಲಿ ಹೆಚ್ಚಿನ ಖ್ಯಾತಿಗಳಿಸಿದ ಇಟಲಿಯ ಪಾಡುವ ವೈದ್ಯಕೀಯ ವಿದ್ಯಾ ಮಂದಿರದಲ್ಲಿ ವೈದ್ಯಕೀಯ ಪದವಿಯನ್ನು (1602) ಪಡೆದ. ಇಂಗ್ಲೆಂಡಿಗೆ ಮರಳಿ ಸೈಂಟ್ ಬಾರ್ತೆಲ್ಮಿನಿಸ್ ಆಸ್ಪತ್ರೆಯಲ್ಲಿ ವೈದ್ಯನಾಗಿ ಸೇವೆ.

ಪ್ರಾಚೀನ ಈಜಿಪ್ಷಿಯನರು ರಕ್ತನಾಳಗಳಲ್ಲಿ ಗಾಳಿಯ ಸಾಗಾಟ ನಡೆಯುತ್ತದೆ ಎಂದು ಭಾವಿಸಿದ್ದರು. ಹೀಗಾಗಿ ಆಂಗ್ಲ ಭಾಷೆಯ 'ಆರ್ಟರೀಸ್' ಎಂಬ ನಾಮಾಂಕಿತ ರಕ್ತನಾಳಗಳಿಗೆ ದೊರಕಿತು. ರೋಮ್ ದೇಶದ ವೈದ್ಯ ವಿಜ್ಞಾನಿ ಗೇಲಿನ್ (ಎಡಿ.138–201) ಎರಡನೆಯ ಶತಮಾನದಲ್ಲಿ, ರಕ್ತನಾಳಗಳಲ್ಲಿ ಗಾಳಿಯಿರುವುದಿಲ್ಲ, ಇದರಲ್ಲಿ ರಕ್ತ ತುಂಬಿರುತ್ತದೆ, ಎಂಬ ವಿಚಾರವನ್ನು, ಮಂಗಗಳ ಅಂಗ ವಿಚ್ಛೇದನೆಯಿಂದ ತಿಳಿದುಕೊಂಡನು. ಆದರೆ ಗೇಲಿನನ ಊಹೆಯ ಪ್ರಕಾರ, ನಾವು ತಿಂದ ಆಹಾರ ವಸ್ತುಗಳು ಹೊಟ್ಟೆಯಿಂದ (ಸ್ಟಮಕ್) ಪಿತ್ತಜನಕಾಂಗ (ಲಿವರ್) ವನ್ನು ಸೇರಿ ಅಲ್ಲಿ ರಕ್ತವಾಗಿ ರೂಪುಗೊಳ್ಳುತ್ತದೆ ಎಂದಾಗಿತ್ತು. ರಕ್ತನಾಳಗಳಲ್ಲಿ ರಕ್ತವು ಹಿಂದಕ್ಕೂ ಮುಂದಕ್ಕೂ ಚಲಿಸುತ್ತದೆ ಎಂದು ಗೇಲಿನನು ಭಾವಿಸಿದ್ದನು. ಹಾರ್ವೆ ತನ್ನ ಪೂರ್ವಜರ ಭಾವನೆಗಳಿಂದ ಪ್ರಭಾವಿತನಾಗದೆ, ಹೃದಯದ ನೈಜ್ಯ ಕಾರ್ಯಕಲಾಪಗಳ ವೈಖರಿಯನ್ನು ಹಾಗೂ ರಕ್ತ ಪರಿಚಲನೆಯ ವಿಧಿ ವಿಧಾನಗಳನ್ನು ತಿಳಿಯುವುದರಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿದನು. ಇದಕ್ಕಾಗಿ ಹಾರ್ವೆ ಹಲವು ಪ್ರಯೋಗಗಳನ್ನು ನಡೆಸಿ ಹಾಗೂ ಹಲವು ಪ್ರಾಣಿಗಳನ್ನು ಸಿಗಿದು ಅವುಗಳ ಹೃದಯದ ರಚನಾ ವಿನ್ಯಾಸ, ರಕ್ತಪರಿಚಲನೆಯ ರೀತಿ ನೀತಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಲೆ ಹಾಕಿದನು. ಓರ್ವ ಕ್ರಿಯಾಶೀಲ ವಿಜ್ಞಾನಿಯಾಗಿ, ಬಸವನಹುಳು (ಸ್ನೈಲ್), ಮೀನು, ಕಪ್ಪೆ ಹಾಗೂ ಹಲವು ಸ್ತನಿಗಳಲ್ಲಿ ರಕ್ತವು ರಕ್ತನಾಳಗಳಲ್ಲಿ ಹೇಗೆ ಚಲಿಸುತ್ತದೆ ಎಂಬ ವಿಚಾರವನ್ನು ಪ್ರಯೋಗಗಳ ಮೂಲಕ ಕಂಡುಕೊಂಡನು. ಹಾರ್ವೆಯು ರಕ್ತ ಪರಿಚಲನೆಯ ಬಗ್ಗೆ ಹಲವು ಪ್ರಯೋಗಗಳ ಆಧಾರದಲ್ಲಿ ಕೊಟ್ಟ ಮಹತ್ತರದ ಹಲವಾರು ವಿವರಣೆಗಳು, ಗೇಲಿನನ ಅಭಿಪ್ರಾಯಗಳನ್ನು ಬುಡಮೇಲು ಮಾಡಿದುವು. ರಕ್ತಪರಿಚಲನೆಯ ಬಗ್ಗೆ ಹಾರ್ವೆ ಬರೆದ ಡಿಮೋಟು ಕಾರ್ಡಿಸ್ (1628) ಎಂಬ ಗ್ರಂಥ ವೈದ್ಯಕೀಯ ಇತಿಹಾಸದಲ್ಲೇ ಮಹತ್ ಕೃತಿಯೆಂದು ಪ್ರಸಿದ್ಧಿಯಾಗಿದೆ.

ರಕ್ತದ ಪರಿಚಲನೆಯಲ್ಲಿ ಹೃದಯವು ಕೇಂದ್ರ ಬಿಂದುವಾಗಿದೆ. ಹೃದಯದ ಬಡಿತ, ರಕ್ತವು ರಕ್ತನಾಳಗಳಲ್ಲಿ ಕ್ರಮಬದ್ಧವಾಗಿ ಹರಿಯುವಂತೆ ಮಾಡುತ್ತದೆ. ನಾಡಿ ಮಿಡಿತ (ಪಲ್ಸ್) ಗಳಿಗೆ ಈ ತರಂಗಗಳೇ ಕಾರಣ ಎಂದು ಪ್ರಯೋಗಗಳ ಮೂಲಕ ಕಂಡು ಕೊಂಡನು. ಹೃದಯ ಹಾಗೂ ರಕ್ತ ನಾಳಗಳಲ್ಲಿರುವ ಕವಾಟ ಒಂದೇ ಬದಿಗೆ ತೆರೆದುಕೊಂಡು, ದೇಹದಲ್ಲಿ ರಕ್ತವು ಕ್ರಮಬದ್ಧವಾಗಿ ಹರಿಯುವಂತೆ ಸಹಾಯ ಮಾಡುತ್ತದೆ ಎಂಬುದನ್ನು ಹಾರ್ವೆ ತೋರಿಸಿಕೊಟ್ಟನು.

ಹೃದಯಕ್ಕೆ ರಕ್ತವನ್ನು ಕೊಂಡೊಯ್ಯುವ ಅಪಧಮನಿ (ವೈನ್ಸ್) ಯನ್ನು ಬಲವಾಗಿ ಅದುಮಿ ಹಿಡಿದಲ್ಲಿ ಹೃದಯಕ್ಕೆ ದೂರವಾಗಿರುವ ಅಪಧಮನಿಗಳು ಉಬ್ಬಿಕೊಳ್ಳುತ್ತವೆ ಹಾಗೂ ಹೃದಯದಿಂದ ದೇಹದ ಭಾಗಗಳಿಗೆ ರಕ್ತವನ್ನು ಸಾಗಿಸುವ ಅಭಿಧಮನಿ (ಆರ್ಟಸಿರೀಸ್) ಗಳನ್ನು ಒತ್ತಿ ಹಿಡಿದಾಗ ಹೃದಯದ ಬಳಿಯಿರುವ ಧಮನಿಗಳು ಉಬ್ಬಿಕೊಳ್ಳುತ್ತವೆ ಎಂಬುದನ್ನು ಪ್ರಯೋಗಗಳ ಮೂಲಕ ಹಾರ್ವೆ ಕಂಡು ಹಿಡಿದನು.

ಹಾರ್ವೆಯು ರಕ್ತ ಪರಿಚಲನೆಯ ಬಗ್ಗೆ ಹಲವಾರು ಮಹತ್ವದ ವಿಚಾರವನ್ನು ಸರಿಯಾಗಿ ತಿಳಿದಿದ್ದನಾದರೂ, ತಪ್ಪಾಗಿ ಹೃದಯವು ರಕ್ತವನ್ನು ಬಿಸಿ ಮಾಡುತ್ತದೆ ಹಾಗೂ ಶ್ವಾಸಕೋಶಗಳು ರಕ್ತವನ್ನು ತಣ್ಣಗೆ ಮಾಡಲು ಹಾಗೂ ರಕ್ತದ ಉಷ್ಣತೆಯನ್ನು ಸ್ತಿಮಿತದಲ್ಲಿರಿಸಲು ಸಹಾಯಮಾಡುತ್ತವೆ ಎಂದು ಊಹಿಸಿದ್ದನು.

ಹಾರ್ವೆಗೆ ಪ್ರಾಣಿಗಳ ಬೆಳವಣಿಗೆ, ಉಸಿರಾಟ, ಸಂತಾನೋತ್ಪತ್ತಿ, ಇತ್ಯಾದಿ ಹಲವಾರು ಜೀವಿ ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿಯಿದ್ದಿತು. ಆತನ ನಿಜವಾದ ಪ್ರತಿಭೆಯನ್ನು ಅಂದಿನ ಜನತೆ ಆತನ ಜೀವಿತ ಕಾಲಾವಧಿಯಲ್ಲಿ ಗುರುತಿಸಲಾರದೆ ಹೋಯಿತು. ತನ್ನ ಕೊನೆಗಾಲವನ್ನು ಏಕಾಂತದಲ್ಲಿ ಕಳೆದು, ಜೂನ್ 3, 1657 ರಲ್ಲಿ, ತನ್ನ 80ನೆಯ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದನು. ಹಾರ್ವೆ ರಕ್ತಪರಿಚಲನೆಯ ಬಗ್ಗೆ ವ್ಯಕ್ತಪಡಿಸಿದ ಹೆಚ್ಚಿನ ವಿಚಾರ ಇಂದಿಗೂ ವೈದ್ಯಕೀಯ ರಂಗದಲ್ಲಿ ಮಹತ್ವವನ್ನು ಪಡೆದಿದೆ.

(ಬಿ.ಆರ್.ಸಿ.ಆರ್.)

**ಹಾಲು:** ಪ್ರಕೃತಿ ಸ್ತನಿಗಳಿಗೆ ನೀಡಿದ ಅಮೂಲ್ಯ ಕೊಡುಗೆ. ಸಾಕು ಪ್ರಾಣಿಗಳ ಕೆಚ್ಚಲು ಅಥವಾ ಮನುಷ್ಯನ ಸ್ತನಗಳು ಅತ್ಯಂತ ವ್ಯವಸ್ಥಿತವಾಗಿ ರೂಪಗೊಂಡ ಹಾಲು ಉತ್ಪಾದಿಸುವ ವಿಶೇಷ ಗ್ರಂಥಿಗಳನ್ನೊಳಗೊಂಡಿವೆ. ಈ ಗ್ರಂಥಿಗಳು ಸ್ರವಿಸುವ ಬಿಳಿ ದ್ರವವೇ ಹಾಲು. ಹಾಲನ್ನು ಅಮೃತಕ್ಕೆ ಹೋಲಿಸುತ್ತಾರೆ. ವಿವಿಧ ಸ್ತನಿಗಳ ಎದೆ ಹಾಲು ಒಂದೆ ತೆರನಾಗಿರುವುದಿಲ್ಲ. ಹಾಲಿನಲ್ಲಿರುವ ಸತ್ವಗಳು, ಬಣ್ಣ ಮತ್ತು ರುಚಿಗಳು ತಳಿ, ವಯಸ್ಸು ಮತ್ತು ಹಾಲು ನೀಡುವ ಹಂತಕ್ಕನುಗುಣವಾಗಿ ವಿಭಿನ್ನವಾಗಿವೆ.

ಹಾಲುಸ್ರವಿಸುವಗ್ರಂಥಿಗಳು: ಹಾಲು ಉತ್ಪಾದಕ ಗ್ರಂಥಿಗಳು ದ್ರಾಕ್ಷಿಹಣ್ಣಿನ ಗೊಂಚಲಿನಂತಿವೆ. ಸುವ್ಯವಸ್ಥಿತವಾದ ರಕ್ತ ಪರಿಚಲನಾ ವ್ಯವಸ್ಥೆ ಹೊಂದಿರುವ ಈ ಗ್ರಂಥಿಗಳು ಹಾಲು ಉತ್ಪಾದಿಸಲು ಬೇಕಾದ ರಾಸಾಯನಿಕ ಅಂಶಗಳನ್ನು ರಕ್ತದ ಮೂಲಕ ಪಡೆಯುತ್ತವೆ. ಮೆದುಳು ನೀಡುವ ಸೂಚನೆಯ ಮೇರೆಗೆ ಗ್ರಂಥಿಗಳು ಪ್ರಚೋದಿತವಾಗಿ, ಹನಿ–ಹನಿಯಾಗಿ ಹಾಲನ್ನು ಜಿನುಗಿಸಲು ಆರಂಭಿಸುತ್ತವೆ. ದ್ರಾಕ್ಷಿ ಹಣ್ಣಿನಂತಿರುವ ಗ್ರಂಥಿಗಳಿಂದ ಜಿನುಗಿದ ಹಾಲು, ಕಿರಿದಾದ ನಾಳಗಳ ಮೂಲಕ ಹರಿದು, ಮೊಲೆ ತೊಟ್ಟಿನ ತುದಿಗೆ ಬರುತ್ತದೆ. ಉಬ್ಬಿದ, ವಿವಿಧ ಗಾತ್ರದ ಕೆಚ್ಚಲು ಅಥವಾ ಮೊಲೆ ಸಾಕಷ್ಟು ಕೊಬ್ಬಿನ ಜೊತೆ ಸೂಕ್ಷ್ಮವಾದ ನಾಳಗಳು ಮತ್ತು ಹಾಲು ಉತ್ಪಾದಿಸುವ ಗ್ರಂಥಿಗಳನ್ನೊಳಗೊಂಡ ವಿಶೇಷ ಅಂಗವಾಗಿದೆ.

ಸ್ತನಿಗಳಿಗೆ ಹುಟ್ಟಿದ ನವಜಾತ ಕರು / ಮಗುವಿಗೆ ತನ್ನ ತಾಯಿಯ ಹಾಲೇ ಜೀವದ್ರವ್ಯ. ಇದರಲ್ಲಿ ಹಸುಳೆ / ಕರುವಿನ ಬೆಳವಣಿಗೆಗೆ ಬೇಕಾದ ಪೋಷಕಾಂಶಗಳಿರುವವು. ಮಗು / ಕರು ಮೊಲೆ ತೊಟ್ಟನ್ನು ಚೀಪುತ್ತಿದ್ದಂತೆ, ಗ್ರಂಥಿಗಳಿಂದ ಹನಿ–ಹನಿಯಾಗಿ ಹಾಲು, ಮೊಲೆ ತೊಟ್ಟಿನ ಮೂಲಕ ಮಗು / ಕರು ಹೊಟ್ಟೆ ಸೇರುತ್ತದೆ. ಮಗು / ಕರು ಮೊಲೆ ಚೀಪುವಾಗ ಉಂಟಾಗುವ ಸಂವೇದನಾ ಪ್ರಚೋದನೆ ಮೆದುಳನ್ನು ತಲುಪುತ್ತದೆ. ಆಗ, ಮೆದುಳು ಹಾಲು ಉತ್ಪಾದನೆಗೆ ಸಂಬಂಧಿಸಿದ ಗ್ರಂಥಿಗಳನ್ನು ಪ್ರಚೋದಿಸಿ, ಹೆಚ್ಚು–ಹೆಚ್ಚು ಹಾಲು ಉತ್ಪಾದನೆ ಮಾಡಿಸುತ್ತದೆ.

ಕೊಲೆಸ್ಟ್ರಮ್ : ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಮೇಕೆ, ಕುರಿ ಈದ ತರುವಾಯ ಅಥವಾ ಹೆರಿಗೆಯ ಅನಂತರ ಮೊದಲೆರಡು ದಿನ ಮೊಲೆಯ ತೊಟ್ಟಿನಿಂದ ಹಳದಿ ಬಣ್ಣದ ಮಂದಹಾಲು ಉತ್ಪತ್ತಿಯಾಗುತ್ತದೆ. ಈ ಹಾಲಿನಲ್ಲಿ ಸಾಮಾನ್ಯ ಹಾಲಿನಲ್ಲಿರುವುದಕ್ಕಿಂತ ಅಧಿಕ ಪ್ರಮಾಣದ (5 ರಿಂದ 7 ಪಟ್ಟು ಜಾಸ್ತಿ) ಗ್ಲೋಬುಲಿನ್ ಮತ್ತು ಕೇಸಿನ್‌ಗಳಿರುತ್ತವೆ. ವೈಜ್ಞಾನಿಕವಾಗಿ ಈ ಹಾಲನ್ನು ಕೊಲೆಸ್ಟ್ರಮ್ ಎನ್ನುವರು. ಗ್ರಾಮೀಣ ಪ್ರದೇಶದಲ್ಲಿ ಕೊಲೆಸ್ಟ್ರಮ್ ಗಿಣ್ಣಿನ ಹಾಲೆಂದೆ ಪ್ರಖ್ಯಾತವಾಗಿದೆ. ಕೊಲೆಸ್ಟ್ರಮ್ ಪೋಷಕಾಂಶಗಳ ಆಗರ. ಶರ್ಕರ, ಪಿಷ್ಟ ಪ್ರೋಟೀನ್ಸ್, ಜೀವಸತ್ವಗಳು ಸಾಕಷ್ಟು ಪ್ರಮಾಣದಲ್ಲಿವೆ. ಇದರ ಜೊತೆಗೆ ಕೊಲೆಸ್ಟ್ರಮ್‌ನಲ್ಲಿ ರೋಗನಿರೋಧಕಗಳು ಹೆಚ್ಚಾಗಿರುವುದರಿಂದ, ಬೆಳೆಯುವ ಕರು / ಮಗುವಿಗೆ ಅತ್ಯವಶ್ಯಕವಾದ ರೋಗ ನಿರೋಧಕ ಶಕ್ತಿ ಬರುತ್ತದೆ. ಮೂಳೆ ಮತ್ತು ಹಲ್ಲುಗಳ ಬೆಳವಣಿಗೆಗೆ ಪೂರಕವಾಗುವಷ್ಟು ಲವಣಗಳು ಸಹ ಕೊಲೆಸ್ಟ್ರಮ್‌ನಲ್ಲಿವೆ.

ಹಾಲು ರಾಸಾಯನಿಕಗಳ ಆಗರ ಮತ್ತು ಉತ್ಕೃಷ್ಟ ಮಟ್ಟದ ಸಸಾರಜನಕದ ಭಂಡಾರ. ಶೇ. 87.5 ರಷ್ಟು ನೀರು, ಶೇ 5 ರ ಶರ್ಕರ (ಲ್ಯಾಕ್ಟೋಸ್), ಶೇ. 3.6 ರ ಪಿಷ್ಟ, ಪ್ರೋಟೀನ್ (ಶೇ. 2.5), ಆಲ್ಬುಮಿನ್ ಮತ್ತು ಗ್ಲೋಬುಲಿನ್ (ಶೇ. 0.7), ಖನಿಜಾಂಶಗಳು (ಶೇ. 0.7) ಮತ್ತು ಜೀವ ಸತ್ವಗಳು ಹಾಲಿನಲ್ಲಿವೆ. ಹಾಲಿನ ಸಾಪೇಕ್ಷ ಸಾಂದ್ರತೆ 1.035 ಮತ್ತು ರಸಸಾರ 6.7 ರಿಂದ 6.9. ಹಾಲಿನಲ್ಲಿ ಹಲವು ಉಪಯುಕ್ತ ಜೀವಾಣುಗಳಿವೆ. ಉದಾ: ಲ್ಯಾಕ್ಟೊಬಾಸಿಲೈ, ಗ್ರಾಂ ಧನ ಬ್ಯಾಕ್ಟೀರಿಯ, ಗ್ರಾಂ ಋಣ ಬ್ಯಾಕ್ಟೀರಿಯ ಇತ್ಯಾದಿ. ಈ ಎಲ್ಲಾ ಸತ್ವಗಳ ಜೊತೆಗೆ ರೋಗನಿರೋಧಕ ಸತ್ವಗಳು ಸಹ ಹಾಲಿನಲ್ಲಿವೆ. ದೇಹದ ವಿವಿಧ ಅಂಗಾಂಗಗಳ ಬೆಳವಣಿಗೆಗೆ ಬೇಕಾಗುವ ಪ್ರೊಟೀನ್‌ಗಳು, ಸೋಡಿಯಂ, ರಂಜಕ, ಗಂಧಕ, ಮ್ಯಾಗ್ನೀಷಿಯಂ, ಮ್ಯಾಂಗನೀಸ್ ಮತ್ತು ಕ್ಯಾಲ್ಸಿಯಂನಂತಹ ಉಪಯುಕ್ತ ಲವಣಾಂಶಗಳು ಹಾಲಿನಲ್ಲಿರುವುದರಿಂದ, ಪ್ರತಿ 100 ಮಿಲಿ ಹಾಲಿನ ಸೇವನೆಯಿಂದ 48 ರಿಂದ 67 ಕ್ಯಾಲೋರಿ ಶಕ್ತಿ ಪಡೆಯಬಹುದು. ಆದಕಾರಣ, ಹಾಲನ್ನು ಪರಿಪೂರ್ಣ ಆಹಾರವೆಂದು ತಜ್ಞರು ಪರಿಗಣಿಸಿದ್ದಾರೆ.

ಹಸು ಮತ್ತು ಎಮ್ಮೆಯ ಹಾಲಿನಲ್ಲಿ ಪ್ರೋಟೀನ್‌ಗಳಾದ ಕೇಸಿನ್ ಮತ್ತು ಗ್ಲೋಬುಲಿನ್‌ಗಳು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ, ಮನುಷ್ಯನ ಎದೆಹಾಲಿಗಿಂತ

ಈ ಪ್ರಾಣಿಗಳ ಹಾಲು ಮಂದವಾಗಿರುತ್ತದೆ. ಎಮ್ಮೆಯ ಹಾಲಿನಲ್ಲಿ ಕೊಬ್ಬಿನ ಅಂಶ ಹಸುವಿನ ಹಾಲಿಗಿಂತ ಎರಡು ಪಟ್ಟು ಹೆಚ್ಚಾಗಿರುತ್ತದೆ. ಕಾರಣ, ತಳಿಗಳಿಗನುಗುಣವಾಗಿ ಹಾಲಿನ ಸಾಪೇಕ್ಷ ಸಾಂದ್ರತೆ ಸಹ ವಿಭಿನ್ನವಾಗಿರುತ್ತದೆ.

ಹಾಲಿನ ಉತ್ಪನ್ನಗಳು : ಹಾಲು ಬಹುಬಗೆಯ ಉಪ ಉತ್ಪನ್ನಗಳಿಗೆ ಪ್ರಮುಖ ಮೂಲದ್ರವ್ಯ. ಗೀಬಿನ ಹಾಲಿನಿಂದ ಗಿಣ್ಣನ್ನು ತಯಾರಿಸಬಹುದು. ಹಾಲನ್ನು ಕಾಯಿಸಿ, ತಣ್ಣಗಾಗಿಸಿ, ಸ್ವಲ್ಪ ಹುಳಿಯನ್ನು ಸೇರಿಸಿ, ಮೊಸರನ್ನು ಉತ್ಪಾದಿಸಬಹುದು. ಮೊಸರಿನಿಂದ ಮಜ್ಜಿಗೆ, ಮಜ್ಜಿಗೆ ತಯಾರಿಸುವಾಗ ಬೆಣ್ಣೆ, ಬೆಣ್ಣೆಯಿಂದ ತುಪ್ಪ ಮುಂತಾದ ಉಪ ಉತ್ಪನ್ನಗಳನ್ನು ತಯಾರಿಸಬಹುದು. ಹಾಲಿನಿಂದ ಪನ್ನೀರು, ಕೋವಾ, ಐಸ್‌ಕ್ರೀಂ, ಪೇಡಾದಂತಹ ರುಚಿಕರ ಆಹಾರವನ್ನು ತಯಾರಿಸಬಹುದು. ಹಾಲಿನಿಂದಾದ ಉಪ ಉತ್ಪನ್ನಗಳನ್ನು ಬೇಕರಿ ಕ್ಷೇತ್ರದಲ್ಲಿ ಉಪಯೋಗಿಸಲಾಗುತ್ತದೆ.

ಭಾರತವು ವಿಶ್ವ ಹಾಲು ಉತ್ಪಾದನೆಯಲ್ಲಿ ಅಗ್ರ ಸ್ಥಾನದಲ್ಲಿದೆ. ಹಾಲು ಉತ್ಪನ್ನದ ಬೆನ್ನೆಲಬು ಹೈನುಗಾರಿಕೆ. ಹೆಚ್ಚಿನ ಹಾಲು ನೀಡುವ ಹಸು /ಎಮ್ಮೆ ತಳಿಗಳನ್ನು ಭಾರತದ ಬಹುತೇಕ ಹಳ್ಳಿಗಳಲ್ಲಿ ಸಾಕಲಾಗುತ್ತದೆ. ಪರಿಣಾಮ ಲಕ್ಷಾಂತರ ಜನರಿಗೆ ಈ ಸಾಕುಪ್ರಾಣಿಗಳ ಪಾಲನೆ ಜೀವನಾಧಾರವಾಗಿದೆ. ಹಾಲಿನಿಂದ ಹಾಲಿನ ಪುಡಿ ತಯಾರಿಸುವ ಘಟಕಗಳು ಕಾರ್ಯನಿರತವಾಗಿವೆ. (ವಿ.ಬಿ.)

**ಹಾಲೋ ಸೆಫಾಲೈ:** ಮತ್ಸ್ಯ ಉಚ್ಚವರ್ಗ, ಎಲಾಸ್ಮೊಬ್ರಾಂಖಿ ವರ್ಗ ಬ್ರಾಡಿಯೊಡಾಂಟಿ ಉಪವರ್ಗದ ಗಣ. ಜುರಾಸಿಕ್ ಅಥವಾ ಟ್ರಯಾಸಿಕ್ ಅವಧಿಯಲ್ಲಿ ಉದಯವಾಗಿ ಡಿವೊನಿಯನ್‌ನಲ್ಲಿ ವಿಕಾಸವಾದ ಯುಬ್ರಾಡಿಯೊಡಾಂಟಿಗಳ ಸ್ಥಾನವನ್ನು ಆಕ್ರಮಿಸಿ ಈ ಗಣದ ಇಲಿ ಮೀನು (ರ್‍ಯಾಟ್ ಫಿಷ್), ಕೈಮೆರಾ, ಪ್ರೇತ ಶಾರ್ಕ್ (ಗೋಸ್ಟ್ ಶಾರ್ಕ್) ಮತ್ತು ಮೊಲಮೀನು (ರ್‍ಯಾಬಿಟ್ ಫಿಷ್) ಗಳು ಮಾತ್ರ ಜೀವಂತವಾಗಿವೆ. ಇವು ಮೃದ್ವಸ್ಥಿ ಮೀನುಗಳು (ಕಾಂಡ್ರಿಕ್ತಸ್). ಸಂಪೂರ್ಣ ಅಸ್ಥಿಪಂಜರ ಮದ್ವಸ್ಥಿಯಿಂದಾಗಿದೆ. ಮೂಳೆಗಳಲ್ಲಿ ಕ್ಯಾಲ್ಸಿಯಂ ಲವಣದ ಅಸ್ಥೀಕರಣವಿಲ್ಲ. ಹಲ್ಲುಗಳು ದವಡೆಗೆ ಬೆಸದುಕೊಂಡಿರುವುದಿಲ್ಲ. ಮೃದ್ವಸ್ಥಿ ಕ್ಯಾಲ್ಸಿಯಂ ಫಾಸ್ಫೇಟ್‌ನ ಸಂಚಯನದಿಂದ ಬಲವಾಗಿರುತ್ತದೆ. ಉಳಿದ ಮೀನುಗಳಲ್ಲಿರುವಂತೆ ಮೂಳೆಗಳಿಂದಾದ ದೇಹ ಕವಚವಾಗಲಿ, ತಟ್ಟೆಗಳಾಗಲಿ, ಹುರುಪುಗಳಾಗಲಿ ಇಲ್ಲ. ಬದಲಾಗಿ ಚರ್ಮದಲ್ಲಿಯೇ ಬೆಸದುಕೊಂಡಿರುವ ಮುಳ್ಳಿನಂತಹ ಡೆಂಟಿಕಲ್‌ಗಳಿವೆ.

ಕೈಮೆರಾದ ಮುಖ ಇಲಿಯ ಮುಖವನ್ನು ಹೋಲುವುದರಿಂದ ಅವನ್ನು ಇಲಿಮೀನು (ರ್‍ಯಾಟ್ ಫಿಷ್) ಗಳೆಂದು ಕರೆಯಲಾಗುತ್ತದೆ. ಇವುಗಳಿಗೆ ಶ್ರವಣಶಕ್ತಿ ಬೇರೆ ಮೀನುಗಳಿಗಿಂತ ಕಡಿಮೆಯಾದರೂ ಸುತ್ತಲಿನ ನೀರಿನಲ್ಲಿಯ ಚಲನೆಯನ್ನು ತಿಳಿಯಬಲ್ಲ ಪಾರ್ಶ್ವಗೆರೆಯ ಸಂವೇದನಾಂಗ (ಲ್ಯಾಟರಲ್ ಲೈನ್) ಗಳಿಂದ ತೊಂದರೆಯನ್ನು ಅಥವಾ ಬೇಟೆಯನ್ನು ಗುರುತಿಸಬಲ್ಲುವು. ಮೊಟ್ಟೆಗಳು ಉದ್ದನೆಯ ಚೀಲದಾಕಾರದ ಸಂಚಿಯಲ್ಲಿ ಸುರಕ್ಷಿತವಾಗಿದ್ದು, ಅದರ ಉದ್ದನೆಯ ಬಾಲದಂತಹ ಅಂಗದ ಮೂಲಕ ಸಾಗರದ ತಳದ ಮರಳಿನಲ್ಲಿ ಹೂತಿರುತ್ತದೆ.

ಹಾಲೊಸೆಫಾಲೈ ಮೀನುಗಳ ವಿಕಾಸದಲ್ಲಿ ಅತ್ಯಂತ ಕೆಳಹಂತದವೆಂದೂ ಅದಕ್ಕಾಗಿಯೇ ಇವುಗಳ ಮೂಳೆಗಳು ಮೃದ್ವಸ್ಥಿಯಿಂದಾಗಿವೆಯೆಂದೂ ಹಿಂದೆ ಭಾವಿಸಲಾಗಿತ್ತು. ಆದರೆ ಇವುಗಳ ಪೂರ್ವಜರು ವಿಕಾಸವಾದ ಡೆವೊನಿಯನ್‌ಗಿಂತ ಹಿಂದೆ ಅಂದರೆ ಆರ್ಡೊವಿಸಿಯನ್ ಮತ್ತು ಸೆಲ್ಯೂರಿಯನ್ ಅವಧಿಯಲ್ಲಿ ಮೂಳೆಗಳಿಂದಾದ ಅಸ್ಥಿಪಂಜರವುಳ್ಳ ಮೀನುಗಳು ಇದ್ದುವು ಎಂದು ಅಧ್ಯಯನಗಳು ತಿಳಿಸಿವೆ. (ಎಸ್.ಎಂ.ಜಿ)

**ಹಾಲ್ಡೇನ್, ಜಾನ್ ಬರ್ಟನ್ ಸ್ಯಾಂಡರ್‌ಸನ್ (1992–1964)** ಪ್ರಸ್ತನೆಯ ಶತಮಾನದ ಪ್ರಸಿದ್ಧ ಇಂಗ್ಲೆಂಡ್ ಸಂಜಾತ ಭಾರತೀಯ ಜೀವ ವಿಜ್ಞಾನಿ. ನವೆಂಬರ 5, 1982 ರಲ್ಲಿ ಹೆಸರಾಂತ ಶರೀರ ವಿಜ್ಞಾನಿ (ಫಿಸಿಯಾಲಜಿಸ್ಟ್) ಜಾನ್ ಸ್ಕಾಟ್ ಹಾಲ್ಡೇನನ ಮಗನಾಗಿ ಇಂಗ್ಲೆಂಡಿನ ಆಕ್ಸ್‌ಫರ್ಡ್‌ನಲ್ಲಿ ಜನನ. ವಿದ್ಯಾಭ್ಯಾಸ ಏಟನ್ ಹಾಗೂ ಆಕ್ಸಾಫರ್ಡ ವಿಶ್ವವಿದ್ಯಾಲಯ. ಈತನಿಗೆ ಚಿಕ್ಕ ವಯಸ್ಸಿನಲ್ಲಿ ತಂದೆಯಿಂದ ವೈಜ್ಞಾನಿಕ ಸಂಶೋಧನಾ ವಿಚಾರಗಳ ಬಗ್ಗೆ ಹೆಚ್ಚಿನ ತರಬೇತಿ ದೊರಕಿತು. ಹಾಲ್ಡೇನ್, ಮಾನವ ಉಸಿರಾಟ ಶರೀರ ವಿಜ್ಞಾನದ ಬಗೆಗಿನ ಸಂಶೋಧನೆಯಲ್ಲಿ ತನ್ನ ತಂದೆ ನಡೆಸುತ್ತಿರುವ ಕಾರ್ಯಕಲಾಪಗಳಲ್ಲಿ ಆಸಕ್ತಿಯಿಂದ ಭಾಗವಹಿಸಿ ಹೆಚ್ಚಿನ ಅನುಭವವನ್ನು ಪಡೆದನು. ವಿದ್ಯಾರ್ಥಿಯಾಗಿರುವಾಗಲೇ ಹಾಲ್ಡೇನ್, ಇಲಿ ಗಿನಿಪಿಗ್‌ಗಳ ಸಂತಾನಾಭಿವೃದ್ಧಿ ವಿಚಾರದಲ್ಲಿ ಹಲವು ಪ್ರಯೋಗಗಳನ್ನು ನಡೆಸಿದನು. ಬಾಲ್ಯದಿಂದಲೂ ಈತನಿಗೆ ವಿಭಿನ್ನ ಜೀವವಿಜ್ಞಾನ ವಿಷಯಗಳಲ್ಲಿ ಹೆಚ್ಚು ಆಸಕ್ತಿಯಿದ್ದಿತು. ಶರೀರ ವಿಜ್ಞಾನ, ಜೀವೋತ್ಪತ್ತಿ, ಜನಪ್ರಿಯ ವಿಜ್ಞಾನ ಸಾಹಿತ್ಯ ಇತ್ಯಾದಿಗಳನ್ನು ತನ್ನ ಕಾರ್ಯಕ್ಷೇತ್ರವಾಗಿಟ್ಟುಕೊಂಡು ದುಡಿಯಲು ಹಾಲ್ಡೇನ್ ಮುಂದಾಗುತ್ತಿದ್ದ. ಈತನಿಗೆ ಹೆಚ್ಚಾಗಿ ಸ್ತನಿಗಳ ತಳಿ ವಿಜ್ಞಾನದಲ್ಲಿ ಸಂಶೋಧನೆಗಳನ್ನು ಮಾಡುವುದರಲ್ಲಿ ವಿಶೇಷ ಆಸಕ್ತಿ.

ಹಾಲ್ಡೇನ್ ಮೊದಲನೆಯ ಮಹಾಯುದ್ಧಕಾಲದಲ್ಲಿ ಸಕ್ರಿಯವಾಗಿ ಪಾಲುಗೊಂಡು, ಸೈನ್ಯಾಧಿಕಾರಿಯಾಗಿ ಆಸಕ್ತಿಯಿಂದ ಸೆಣಸಾಡಿ, ಭಾಗವಹಿಸಿ, ಕೊನೆಗೆ ಗಾಯಾಳುವಾಗಿ ಸೈನ್ಯವನ್ನು ತೊರೆದು, ಮರಳಿ ವೈಜ್ಞಾನಿಕ ವಿಚಾರ ರಂಗದಲ್ಲಿ ಕಾರ್ಯನಿರತನಾದನು. ಜೀವರಾಸಾಯನಿಕ ವಿಜ್ಞಾನ (ಬಯೋಕೆಮಿಸ್ಟ್ರಿ)ದ ಅಧ್ಯಾಪಕನಾಗಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಕೆಲಸ (1923–1925). ಮುಂದೆ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಬಯೊಮೆಟ್ರಿಕ್ಸ್, ಜೀವ ಸಂಹಿತಿ ಗಣಿತದಲ್ಲಿ ಪ್ರಾಧ್ಯಾಪಕನಾಗಿ ಸೇವೆ (1937–1957) ಸಲ್ಲಿಸಿದ ಈ ಕಾಲದಲ್ಲಿ ರಾಜಕೀಯದಲ್ಲೂ ಆಸಕ್ತಿ. ಬ್ರಿಟಿಷ್ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯನಾಗಿ ಕೆಲಸ. ರಾಜಕೀಯ ವಿಷಯದಲ್ಲಿ ಹಲವಾರು ಭಾಷಣಗಳನ್ನು ಮಾಡಿದುದಲ್ಲದೆ, ಹಲವು ಪುಸ್ತಕಗಳನ್ನು ರಚಿಸಿದ. 1938 ರಲ್ಲಿ ಲಂಡನ್‌ನಲ್ಲಿ ದಿ ಮಾರ್ಕ್ಸಿಸ್ಟ್ ಫಿಲಾಸಫಿ ಅಂಡ್ ದಿ ಸೈನ್ಸಸ್ ಎಂಬ ಪುಸ್ತಕದಲ್ಲಿ ಈತನ ಹಲವು ಭಾಷಣಗಳು ಅಚ್ಚಾದವು. ಹಾಲ್ಡೇನ್ ಹಲವು ಕಾದಂಬರಿ ಹಾಗೂ ಪದ್ಯ ಕವಿತೆಗಳನ್ನು ಕೂಡಾ ಬರೆದಿದ್ದಾನೆ. ಮಾನವ ತಳಿವಿಜ್ಞಾನ, ಮಾನವ ಶರೀರ ಕ್ರಿಯಾ ವಿಜ್ಞಾನ, ವಿಶ್ವ ಸೃಷ್ಟಿ ಹಗೂ ವಿಶ್ವವಿಕಾಸ ಇತ್ಯಾದಿ ವಿಚಾರಗಳಲ್ಲೂ ಹಾಲ್ಡೇನ್ ತನ್ನ ಸೇವೆ ಸಲ್ಲಿಸಿದ್ದಾನೆ. ಬಹುಮುಖ ಪ್ರತಿಭಾವಂತ ಹಾಲ್ಡೇನ್ ಬರೆದ ಹಲವಾರು ಪುಸ್ತಕಗಳಲ್ಲಿ ಎನ್ ಜೈಮ್ಸ್ (1930)ಹಾಗೂ ದಿ ಕಾಸಸ್ ಆಫ್ ಎವೊಲ್ಯುಶನ್ (1932), ಉತ್ಕೃಷ್ಟ ವೈಜ್ಞಾನಿಕ ಬರಹಗಳಾಗಿವೆ. ಮಾನವ ಶರೀರ ವಿಚಾರದಲ್ಲಿ ಸ್ವಯಂ ತನ್ನ ಮೇಲೆ ಪ್ರಯೋಗಗಳನ್ನು ಮಾಡಲು ಹಿಂಜರಿದವನಲ್ಲ. ಹಾಲ್ಡೇನ್ ಅಪಾರ ತಿಳಿವಳಿಕೆ, ವಿಶ್ಲೇಷಣಾತ್ಮಕ ಆಲೋಚನಾಶಕ್ತಿ, ಧೀಮಂತ ಬರವಣಿಗೆ, ಇತ್ಯಾದಿಗಳು ಆತನ ಹಲ ಅನ್ವೇಷಣೆಗಳಿಗೆ ಕಳೆಗೊಟ್ಟು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾದರಿಯಾಗಿವೆ.

ರಾಜಕೀಯ ರಂಗದಲ್ಲಿ 1930 ರಲ್ಲಿ ತಾನು ಮಾರ್ಕ್ಸ್‌ವಾದಿ ಎಂದು ಘೋಷಿಸಿದನಾದರೂ, ಮುಂದೆ ಕೆಲ ಕಾಲದ ನಂತರ ಹಾಲ್ಡೇನ್ ಕಮ್ಯೂನಿಸಂ ಅನ್ನು ತೊರೆದನು. ಹಾಲ್ಡೇನನಿಗೆ 1957 ರ ಕಾಲದಲ್ಲಿ ಅಂದಿನ ಬ್ರಿಟನ್ನಿನ ಕೆಲ ರಾಜಕೀಯ ವಿಚಾರ, ರಾಜನೀತಿಗಳು ಸರಿತೋರಲಿಲ್ಲ. ಹೀಗಾಗಿ ಇದನ್ನು ಆತ ಧೈರ್ಯದಿಂದ ಪ್ರತಿಭಟಿಸಿದುದಲ್ಲದೆ, ತನ್ನ ಮಾತೃ ಭೂಮಿಯಾದ ಇಂಗ್ಲೆಂಡನ್ನು ತೊರೆದು ಭಾರತಕ್ಕೆ ವಲಸೆ ಬಂದು, ಇಲ್ಲಿನ ಪೌರತ್ವವನ್ನು ಪಡೆದನು. ಭಾರತದಲ್ಲಿ ಜೀವ ವಿಜ್ಞಾನ ವಿಚಾರಗಳಲ್ಲಿ ದುಬಾರಿಯಿಲ್ಲದೆ, ಕಡಿಮೆ ಖರ್ಚಿನಲ್ಲಿ ಹಲವಾರು ಮಹತ್ವದ ಸಂಶೋಧನೆಗಳನ್ನು ಮಾಡುವ ಮಹತ್ತರ ಉದ್ದೇಶ ಹಾಲ್ಡೇನ್ ನಲ್ಲಿದ್ದಿತು. ಹಾಲ್ಡೇನ್ ಓರಿಸ್ಸಾದ ಭುವನೇಶ್ವರದಲ್ಲಿ ತಳಿ ವಿಜ್ಞಾನ ಶಾಸ್ತ್ರ ಹಾಗೂ ಬಯೋಟ್ರಿಕ್ಸ್ ಪ್ರಯೋಗ ಶಾಲೆಗಳ ಮುಖ್ಯಸ್ಥನಾಗಿ ಕಾರ್ಯವೆಸಗಿದನು. ಕೊನೆಗೆ ಡಿಸೆಂಬರ್ 1, 1964 ರಲ್ಲಿ ಭುವನೇಶ್ವರದಲ್ಲಿ ವಿಧಿವಶನಾದನು. (ಬಿ.ಆರ್.ಸಿ.ಆರ್.)

**ಹಾವು:** ವರ್ಟಿಬ್ರೇಟಾ ವಿಭಾಗ (ಕಶೇರುಕ), ರೆಪ್ಟಿಲೀಯಾ ವರ್ಗ, ಸ್ಕ್ವಾಮೇಟ್ ಗಣ, ಒಫಿಡಿಯ ಉಪಗಣಕ್ಕೆ ಸೇರಿರುವ ಪ್ರಾಣಿ (ಸ್ನೇಕ್). ಉರಗ ಪರ್ಯಾಯನಾಮ. ನೆಲದ ಮೇಲೆ ಹರಿದಾಡುತ್ತ, ಹೊರಳುತ್ತ ಅಂಕುಡೊಂಕಾಗಿ ಚಲಿಸುವ, ಬಿಲವಾಸೀ ಜೀವನಕ್ಕೆ ಮಾರ್ಪಾಡುಗೊಂಡು ವಿಕಾಸವಾಗಿರುವ ಕಶೇರುಕಗಳ ಒಂದು ಗುಂಪು. ಹಾವಿನ ಶರೀರ ಉರುಳೆ ಆಕಾರದಲ್ಲಿದೆ. ಉದ್ದ 12 ಸೆಂಮೀ–10ಮೀ ವರೆಗೂ ಇರುವುದು. ಮಣ್ಣುಹಾವು, ಇಮ್ಮಡಿಗನ ಹಾವು ಕೇವಲ 12–15 ಸೆಂಮೀ ಉದ್ದವಿದ್ದರೆ ನಾಗರ ಹಾವು 160–175 ಸೆಂಮೀ ವರೆಗೂ ಬೆಳೆಯುತ್ತದೆ. ಹೆಬ್ಬಾವಂತೂ 6–7 ಮೀ ಉದ್ದ ಬೆಳೆಯಬಲ್ಲುದು. ದಕ್ಷಿಣ ಆಫ್ರಿಕದಲ್ಲಿ ವಾಸಿಸುವ ಅನಕೊಂಡಾಗಳು 10 ಮೀಟರಿಗಿಂತಲೂ ಹೆಚ್ಚು ಉದ್ದವಿರುತ್ತವೆ. ಧ್ರುವ ಪ್ರದೇಶಗಳನ್ನು ಹೊರತುಪಡಿಸಿ ಇನ್ನುಳಿದ ಭೂಭಾಗದ ಎಲ್ಲ ಪ್ರದೇಶಗಳಲ್ಲೂ ಹಾವುಗಳಿವೆ. ಆದರೆ ನಿರ್ದಿಷ್ಟ ಪ್ರಭೇದಗಳು ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ವಾಸಿಸುತ್ತವೆ. ಉಷ್ಣವಲಯದಲ್ಲಿ ಹಾವುಗಳ ಸಂಖ್ಯೆ ಹೆಚ್ಚು. ವಿವಿಧ ಜಾತಿಯ ಹಾವುಗಳು ಇಲ್ಲಿವೆ. ಸಮಭಾಜಕವೃತ್ತದಿಂದ ದಕ್ಷಿಣ ಅಥವಾ ಉತ್ತರಕ್ಕೆ ದೂರ ಸರಿದಂತೆ ಉರಗ ಪ್ರಭೇದಗಳ ಸಂಖ್ಯೆ ಕಡಿಮೆಯಾಗುತ್ತದೆ. ಇಡೀ ಭೂಮಂಡಲದ ಮೇಲೆ 2800ಕ್ಕೂ ಹೆಚ್ಚು ಪ್ರಭೇದಗಳಿವೆ ಎಂದು ಅಂದಾಜಿದೆ. ಆದರೂ ನ್ಯೂಜಿಲೆಂಡ್ ಮತ್ತು ಹವಾಯಿ ದ್ವೀಪಗಳಲ್ಲಿ ಹಾವುಗಳಿಲ್ಲವೆಂಬುದು ಗಮನಾರ್ಹ.

ದಟ್ಟಕಾಡು, ಹುಲ್ಲುಗಾವಲು, ಮರಳುಗಾಡುಗಳಲ್ಲಿ ಬಿಲ, ಪೊಟರೆ, ತರಗೆಲೆಗಳ ರಾಶಿ, ಹುಲ್ಲುಗಾವಲು, ಮರಗಳ ಪೊದರು, ಸಿಹಿನೀರಿನ ಕೊಳ, ಕೆರೆ, ನದಿ ಮುಂತಾದೆಡೆ

ವಾಸಿಸುವ ವಿವಿಧ ಪ್ರಭೇದದ ಹಾವುಗಳನ್ನು ಕಾಣಬಹುದು. ಸಿಹಿನೀರಿನಲ್ಲಿ ವಾಸಿಸುವ ಹಾವುಗಳೆಲ್ಲವೂ ವಿಷರಹಿತ ನಿರುಪದ್ರವಿ ಪ್ರಾಣಿಗಳು. ಸಮುದ್ರ ಮಹಾಸಾಗರಗಳಲ್ಲಿ ವಾಸಿಸುವ ಹಾವುಗಳು ಬಲು ವಿಷಯುಕ್ತ.

ಹಾವುಗಳ ಬಣ್ಣ ವರ್ಣರಂಜಿತ ಮತ್ತು ವೈವಿಧ್ಯಮಯ. ಮೇಲ್ಭಾಗದಲ್ಲಿ ಕಪ್ಪು, ಕಂದು, ಹಳದಿ ಅಥವಾ ಗೋದಿ ಬಣ್ಣ, ಕೆಳಭಾಗದಲ್ಲಿ ಬಿಳಿ ಇಲ್ಲವೆ ತಿಳಿಹಳದಿ ಬಣ್ಣ. ಕೆಲ ಹಾವುಗಳ ಬಣ್ಣ ಅವು ವಾಸಿಸುವ ಪರಿಸರದ ಬಣ್ಣವನ್ನೇ ಹೋಲುತ್ತದೆ. ಗಿಡಗಳ ಪೊದೆಯಲ್ಲಿ ವಾಸಿಸುವ ಹಸುರುಹಾವು, ಕುಳಿಮಂಡಲ ಹಾವುಗಳ ಬಣ್ಣ ಹಸುರು; ಮರಳಿನ ಇಲ್ಲವೆ ಒಣಗಿದ ತರಗೆಲೆಗಳ ಬಣ್ಣದ ಹಾವುಗಳೂ ಇವೆ. ಕಪ್ಪು, ಕೆಂಪು, ಹಳದಿ ಅಥವಾ ಬಿಳಿ ಪಟ್ಟೆಗಳು, ಅಥವಾ ವಿವಿಧ ವರ್ಣದ ಉಂಗುರಗಳು ಶರೀರದ ತುಂಬೆಲ್ಲ ಆವರಿಸಿ ನೋಡುಗರನ್ನು ರಂಜಿಸುವ ಬಣ್ಣದ ಹಾವುಗಳೂ ಇವೆ.

ಶರೀರರಚನೆ: ಹಾವಿನ ಶರೀರದ ಹೊರಭಾಗದಲ್ಲಿ ಕೈ, ಕಾಲುಗಳಂಥ ಯಾವುದೇ ಅಂಗಗಳಿರುವುದಿಲ್ಲ. ಆದ್ದರಿಂದ ಅದು ನೆಲದಮೇಲೆ ಉದರ ಅಥವಾ ಕೆಳಭಾಗದಿಂದ ತೆವಳುತ್ತ ಮುಂದೆ ಸಾಗುತ್ತದೆ. ಕೈಕಾಲುಗಳಿಲ್ಲದಿದ್ದರೂ ಬೆನ್ನುಮೂಳೆ, ಪಕ್ಕೆಲುಬುಗಳು ವಿಭಿನ್ನವಾಗಿ ಮಾರ್ಪಾಡಾಗಿರುವುದರಿಂದ, ಶರೀರದ ಮುಂದಿನ ಅರ್ಧಭಾಗವನ್ನು ನೆಲದಿಂದ ಮೇಲಕ್ಕೆ ಎತ್ತಬಲ್ಲವು. ದೂರದಿಂದ ನೋಡಲು ನುಣುಪಾದ ಮಿರಿಮಿರಿ ಮಿಂಚುವ ಶರೀರವಿದ್ದಂತೆ ಕಂಡರೂ ಶರೀರದ ತುಂಬೆಲ್ಲ ಹೊರಚರ್ಮದಿಂದ ಬೆಳೆದ ವಿವಿಧ ಆಕಾರದ ಹೊರಪುಗಳಿರುತ್ತವೆ. ಬೆಳವಣಿಗೆಯಿಲ್ಲದ ಹೊರಚರ್ಮದ ಭಾಗವನ್ನು ಆಗಾಗ್ಗೆ ಕಳಚಿ ಹಾವು ಹೊಸ ಚರ್ಮವನ್ನು ಪಡೆಯುತ್ತದೆ. ಇದನ್ನು ಪೊರೆ ಕಳಚುವುದು ಅಥವಾ ಉರ್ಚುವುದು ಎನ್ನುತ್ತಾರೆ. ಹಾವು ವರ್ಷಕ್ಕೆ ಮೂರುನಾಲ್ಕು ಬಾರಿಯಾದರೂ ಪೊರೆ ಉರ್ಚುತ್ತದೆ. ಬಳಿಕ ಬೆಳೆಯುವ ಚರ್ಮ ಹಳೆಯ ಚರ್ಮಕ್ಕಿಂತ ತುಸು ವಿಸ್ತಾರವಿರುವುದರಿಂದ ಮತ್ತೆ ಶರೀರದ ಒಳಭಾಗದ ಅಂಗಗಳು ಬೆಳೆಯಲು ಅವಕಾಶವಾಗುತ್ತದೆ.



ಕಟ್ಟು ಹಾವು

ಹಾವಿನ ರೆಪ್ಪೆಗಳು ಒಂದಕ್ಕೊಂದು ಕೂಡಿಕೊಂಡಿರುತ್ತವೆ. ಅವು ಅಲುಗಾಡುವುದಿಲ್ಲ. ಕಣ್ಣಿನ ಹೊರಭಾಗದಲ್ಲಿ ಪಾರದರ್ಶಕ ಟೊಪ್ಪಿಯಂತಿರುವ ವಸ್ತು ಆವರಿಸಿರುತ್ತದೆ. ಎಂದೇ ಹಾವು ಸದಾ ಕಣ್ಣು ತೆರೆದಿರುವಂತೆ ಭಾಸವಾಗುತ್ತದೆ. ಹೀಗಾಗಿ ಹಾವು ನಿದ್ರಿಸುತ್ತಿದೆಯೇ ಎಚ್ಚರದಿಂದಿದೆಯೇ ಎಂಬುದು ತಿಳಿಯುವುದಿಲ್ಲ. ಹಾವುಗಳ ದೃಷ್ಟಿ ಮಂದ. ಮುಂದಿರುವ ವಸ್ತುಗಳನ್ನು ಸರಿಯಾಗಿ ಗುರುತಿಸಲಾರವು. ಹೊರಕಿವಿಗಳಿಲ್ಲ. ಕಿವಿತಮಟೆಯೂ ಇಲ್ಲ. ಕೇವಲ ಒಳಕಿವಿ ಮಾತ್ರ ಇರುತ್ತದೆ. ಆದ್ದರಿಂದ ಹಾವುಗಳಿಗೆ ಗಾಳಿಯ ಮೂಲಕ ಪ್ರಸಾರವಾಗುವ ಯಾವ ಶಬ್ದವೂ ಕೇಳಿಸಲಾರದು. ಭೂಮಿಮೇಲುಂಟಾಗುವ ಕಂಪನಗಳನ್ನು ಅವು ಗ್ರಹಿಸಬಲ್ಲವು.

ಹಾವಿನ ಶರೀರವನ್ನು ತಲೆ, ಮುಂಡ ಹಾಗೂ ಬಾಲ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಸಾಮಾನ್ಯವಾಗಿ ತಲೆ ತ್ರಿಕೋಣಾಕಾರವಾಗಿದ್ದು ಅದರ ಮುಂಭಾಗ ಚೂಪಾಗಿರುತ್ತದೆ. ಹಲವು ಪ್ರಭೇದಗಳಲ್ಲಿ ಮುಂಭಾಗ ಅರ್ಧವೃತ್ತಾಕಾರದಲ್ಲಿ ಬಾಗಿದೆ. ತಲೆಯ ಭಾಗ ಶರೀರದ ಉಳಿದ ಭಾಗಕ್ಕಿಂತ ಸ್ವಲ್ಪ ದಪ್ಪ. ರುಂಡ ಮತ್ತು ಬಾಲದ ಭಾಗಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿಲ್ಲ. ಆದರೆ ಗುದದ್ವಾರದ ಹಿಂಭಾಗವನ್ನು ಬಾಲವೆಂದು ಹೇಳುತ್ತೇವೆ. ಶರೀರದ ಹಿಂಭಾಗಕ್ಕೆ ಸರಿದಂತೆ ಬಹುತೇಕ ಹಾವುಗಳ ಬಾಲದ ಗಾತ್ರ ಕಡಿಮೆಯಾಗುತ್ತ ತುದಿ ಚಿಕ್ಕದಾಗಿರುತ್ತದೆ. ಇಮ್ಮಡಿಗನ ಹಾವಿನ ಬಾಲ ಮೊಂಡು. ಸಾಗರವಾಸೀ ಹಾವುಗಳ ಬಾಲದ ತುದಿ ಮೇಲಿನಿಂದ ಕೆಳಭಾಗಕ್ಕೆ ಚಪ್ಪಟೆಯಾಗಿರುತ್ತದೆ.

ಹಾವಿನ ಮೇಲ್ದವಡೆಯ ಮೂಳೆಗಳು ಕೆಳದವಡೆಯ ಮೂಳೆಗಳೊಂದಿಗೆ ಸ್ವತಂತ್ರವಾಗಿ ಚಲಿಸುವಂತೆ ಕೂಡಿಕೊಂಡಿರುತ್ತವೆ. ಇದರೊಂದಿಗೆ ದವಡೆಯ ಮಾಂಸಖಂಡಗಳು ಸಂಪೂರ್ಣ ಹಿಗ್ಗಿ ಮತ್ತು ಕುಗ್ಗಬಲ್ಲವಾದ್ದರಿಂದ ಹಾವುಗಳು ಅಗಲವಾಗಿ ಬಾಯಿ ತೆರೆಯಬಲ್ಲವು. ದವಡೆಗಳು ಸಂಪೂರ್ಣ ತೆರೆದಾಗ ಅವುಗಳ ನಡುವೆ $150^0$–$180^0$ ಕೋನ ಏರ್ಪಡುತ್ತದೆ. ಹೀಗಾಗಿ ತನ್ನ ಶರೀರದ ವ್ಯಾಸಕ್ಕಿಂತ ಹೆಚ್ಚು ಗಾತ್ರವುಳ್ಳ ಆಹಾರವನ್ನು ನುಂಗಬಲ್ಲುದು.

ಹಾವಿನ ನಾಲಗೆ ಉದ್ದವಿದ್ದು ಮುಂಭಾಗದಲ್ಲಿ ಸೀಳುಗಳಿವೆ. ಮೇಲ್ತುಟಿ ಪುಟ್ಟ ಕಮಾನಿನಾಕಾರದಲ್ಲಿದ್ದು ಬಾಯಿ ಮುಚ್ಚಿಕೊಂಡಾಗ ಚಿಕ್ಕ ರಂಧ್ರವೇರ್ಪಡುತ್ತದೆ. ಈ ರಂಧ್ರದ ಮೂಲಕ ಹಾವು ಆಗಾಗ ನಾಲಗೆಯನ್ನು ಹೊರಚಾಚುತ್ತಿರುತ್ತದೆ. ಎರಡು ಸೀಳುಗಳು ಪ್ರತ್ಯೇಕವಾಗಿರುವಂತೆ ಕಾಣುವುದರಿಂದ ಹಾವಿಗೆ ಎರಡು ನಾಲಗೆಗಳಿವೆ ಎಂದು ಭಾವಿಸಲಾಗುತ್ತದೆ. ಬಾಯಿಯ ಒಳಭಾಗದಲ್ಲಿರುವ ನಾಲಗೆಯ ಸುತ್ತ ಚರ್ಮದ ಹೊದಿಕೆಯುಂಟು. ಮೇಲ್ದವಡೆಯಲ್ಲಿ ಎರಡು ಪುಟ್ಟ ಕುಳಿಗಳಿವೆ: ಅದರ ಹೆಸರು ಜಾಕೊಬ್ಸನ್‌ನ ಅಂಗ. ನಾಲಗೆಯು ಈ ಅಂಗಕ್ಕೆ ಪುಟ್ಟಕಣಗಳನ್ನು ತಲುಪಿಸುತ್ತದೆ. ಆಗ ಇದು ವಾಸನೆಯನ್ನು ಗ್ರಹಿಸುತ್ತದೆ. ಹೀಗೆ ಹಾವಿನ ನಾಲಗೆ ವಾಸನೆಯನ್ನು ಗ್ರಹಿಸುವುದರ ಮೂಲಕ ಜ್ಞಾನೇಂದ್ರಿಯದಂತೆ ಕೆಲಸ ನಿರ್ವಹಿಸುತ್ತದೆ. ವಾತಾವರಣದ ಏರಿಳಿತವನ್ನು ಕೂಡ ನಾಲಗೆ ಗ್ರಹಿಸಬಲ್ಲುದು.

ಬಾಯಿಯ ಹೊರತಾಗಿ ಹಾವಿನ ಶರೀರದ ಮೇಲಿರುವ ರಂಧ್ರಗಳೆಂದರೆ, ಬಾಯಿಯ ಮೇಲ್ಭಾಗದಲ್ಲಿರುವ ಒಂದು ಜೊತೆ ನೊಸಲು (ನಾಸ್ಟ್ರಿಲ್) ಮತ್ತು ಒಡಲಿನ ಕೆಳಭಾಗದಲ್ಲಿ ಬಾಲ ಭಾಗ ಮುಂದಕ್ಕೆ ಅಡ್ಡವಾಗಿರುವ ಗುದದ್ವಾರ. ಶ್ವಾಸೋಚ್ಛ್ವಾಸ ನೊಸಲಿನ ಮೂಲಕ ನಡೆಯುತ್ತದೆ. ಅನ್ನನಾಳ, ವಿಸರ್ಜನನಾಳ ಲಿಂಗನಾಳಗಳೆಲ್ಲವೂ ದೊಡ್ಡಕರುಳಿನ ಹಿಂಭಾಗದಲ್ಲಿ ಅಂದರೆ ಗುದದ್ವಾರದ ಜೊತೆಯಲ್ಲಿಯೇ ಹೊರಕ್ಕೆ ತೆರೆದಿರುತ್ತವೆ.

ಹಾವಿಗೆ ಸುಮಾರು 300 ಬೆನ್ನುಮೂಳೆಗಳಿವೆ. ಇವುಗಳ ರಚನೆ ಆಧರಿಸಿ ಕುತ್ತಿಗೆ, ಶರೀರ ಹಾಗೂ ಬಾಲ ಭಾಗದ ಮೂಳೆಗಳೆಂದು ಗುರುತಿಸಲಾಗುತ್ತದೆ. ಶರೀರದ ಕೆಳಭಾಗದಲ್ಲಿರುವ ಅಗಲ ಹೊರಪುಗಳನ್ನು (ತಟ್ಟೆ) ಎಣಿಸಿ ಬೆನ್ನೆಲುಬಿನ ಮೂಳೆಗಳ ಸಂಖ್ಯೆಯನ್ನು ಅಂದಾಜು ಮಾಡಬಹುದು. ಏಕೆಂದರೆ ಹೊರಗಿನ ಒಂದು ತಟ್ಟೆಗೆ ಸಮವಾಗಿ ಬೆನ್ನೆಲುಬಿನಲ್ಲಿ ಒಂದು ಎಲುಬು ಇರುವುದು. ಈ ಎಲುಬುಗಳು ಒಂದಕ್ಕೊಂದು ನಯವಾಗಿ ಕೂಡಿಕೊಂಡಿರುವುದರಿಂದ ಹಾವು ಚಲಿಸುವಾಗ ಬೆನ್ನೆಲುಬು ಸುಲಭವಾಗಿ ಬಾಗಬಲ್ಲುದು. ಬೆನ್ನೆಲುಬಿನ ಮೂಳೆಯ ಎರಡೂ ಪಕ್ಕಗಳಲ್ಲಿ ಪಕ್ಕೆಲುಬುಗಳಿವೆ. ಆದರೆ ಮಾನವನನ್ನೊಳಗೊಂಡಂತೆ ಸ್ತನಿಗಳಲ್ಲಿ ಕಂಡುಬರುವ ಎದೆಮೂಳೆ (ಸ್ಟರ್ನಮ್) ಇರುವುದಿಲ್ಲ. ಇಲಾಪಡೆ ಎಂಬ ಕುಟುಂಬಕ್ಕೆ ಸೇರುವ ನಾಗರಹಾವು, ಕಾಳಿಂಗಸರ್ಪ ಹಾಗೂ ಹವಳಸರ್ಪ ಮುಂತಾದುವು ತಲೆಭಾಗದ ಪಕ್ಕೆಲುಬುಗಳನ್ನು ವಿಶಾಲವಾಗಿ ಹೊರಚಾಚುವುದರಿಂದ ಹೆಡೆ ಅಗಲವಾಗಿ ತೆರೆದುಕೊಳ್ಳುತ್ತದೆ.

ಪಕ್ಕೆಲುಬುಗಳು ಎಡಬಲಗಳಲ್ಲಿ ಚರ್ಮಕ್ಕೆ ತೀರ ನಿಕಟವಾಗಿ ಮಾಂಸಖಂಡಗಳೊಂದಿಗೆ ಬಂಧಿಸಿಕೊಂಡಿರುತ್ತವೆ. ಹಾವು ಚಲಿಸುವಾಗ ಪಕ್ಕೆಲುಬುಗಳ ತುದಿಗಳು ನೆಲಕ್ಕೆ ಒತ್ತುವುದರಿಂದ ಚಲನೆಗೆ ಆಸರೆ ಸಿಕ್ಕಂತಾಗುತ್ತದೆ. ಆದ್ದರಿಂದ ಹಾವು ಪಕ್ಕೆಲುಬುಗಳಿಂದ ತೆವಳುತ್ತದೆ ಎಂಬ ಹೇಳಿಕೆ ಪ್ರಚಲಿತವಾಗಿದೆ.

ಹಾವಿನ ಮೇಲ್ದವಡೆಯ ಮುಂಭಾಗದಲ್ಲಿ ಹಲ್ಲುಗಳಿಲ್ಲ. ಅಲ್ಲಿಯ ಎರಡೂ ಕಡೆ ಮತ್ತು ಕೆಳದವಡೆಯಲ್ಲಿ ಸಾಲಾಗಿ ಶಂಕುವಿನಾಕಾರದ ಚೂಪಾದ ಹಲ್ಲುಗಳಿವೆ. ರಚನೆಯಲ್ಲಿ ಎಲ್ಲ ಹಲ್ಲುಗಳೂ ಒಂದೇ ರೀತಿಯಲ್ಲಿವೆ. ಇವು ಎರೆಪ್ರಾಣಿ ತಪ್ಪಿಸಿಕೊಳ್ಳದಂತೆ ಹಿಡಿಯಲು ಸಹಾಯಕವಾಗುತ್ತವೆ. ಆದರೆ ಎರೆಯನ್ನು ಅಗಿಯುವುದಕ್ಕೆ ಅಥವಾ ಜೀರ್ಣಿಸಿಕೊಳ್ಳುವುದಕ್ಕೆ ಇವು ನೆರವಾಗವು. ವಿಷಯುಕ್ತ ಹಾವುಗಳಲ್ಲಿ ಮೇಲ್ದವಡೆಯ ಮುಂಭಾಗದ ಎರಡು ಹಲ್ಲುಗಳೂ ಮಾರ್ಪಾಡಾಗಿ ವಿಷದ ಹಲ್ಲುಗಳಾಗುತ್ತವೆ.

ಶ್ವಾಸನಾಳದ ದ್ವಾರ ನಾಲಗೆಯ ಹಿಂಭಾಗದಲ್ಲಿದೆ. ಹಾವು ಆಹಾರವನ್ನು ನುಂಗಿದೊಡನೆ ಈ ದ್ವಾರ ಮುಂದಕ್ಕೆ ಚಾಚಿಕೊಳ್ಳುವುದರಿಂದ ಬಾಯಿತುಂಬ ಆಹಾರ ನುಂಗಿದರೂ ಉಸಿರಾಟಕ್ಕೆ ತೊಂದರೆಯಾಗದು. ಶ್ವಾಸನಾಳ ಉದ್ದವಾಗಿದೆ. ಇದರ ಹಿಂಭಾಗದಲ್ಲಿ ಎರಡು ಅಸಮಾನ ಗಾತ್ರದ ಶ್ವಾಸಕೋಶಗಳಿವೆ. ಎಡಭಾಗದ ಶ್ವಾಸಕೋಶ ಅಪೂರ್ಣವಾಗಿ ಬೆಳೆದಿದ್ದು ಚಿಕ್ಕದಾಗಿರುತ್ತದೆ. ಉದ್ದ ಉರುಳೆ ಆಕಾರದ, ಯಾವುದೇ ಹೊರ ಅಂಗಗಳಿಲ್ಲದ ಶರೀರಕ್ಕೆ ತಕ್ಕಂತೆ ಶರೀರದ ಒಳ ಅಂಗಗಳೂ ಮಾರ್ಪಾಡಾಗಿರುತ್ತವೆ. ಉಳಿದ ಕಶೇರುಕಗಳಲ್ಲಿಯಂತೆ ಕೈಕಾಲುಗಳ ಮೂಳೆಯಾಗಲೀ ಮಾಂಸಖಂಡಗಳಾಗಲೀ ಬೆಳೆದಿರುವುದಿಲ್ಲ. ಈ ಭಾಗಕ್ಕೆ ಸಂಬಂಧಿಸಿದ ರಕ್ತನಾಳಗಳೂ ಇರುವುದಿಲ್ಲ. ಆದರೆ ಹಾವು ದ್ವಿಪಾದಿಗಳಿಂದ ಉದ್ಭವಿಸಿದುವು ಎನ್ನುವುದಕ್ಕೆ ಕೆಲವು ಪುರಾವೆಗಳು ದೊರೆಯುತ್ತವೆ. ಚರ್ಮದ ಹೊರಪುಗಳು, ಅಂಗರಚನೆಯ ಜೊತೆ, ಹೆಬ್ಬಾವು, ಬೋವಾ ಮುಂತಾದ ಪ್ರಭೇದಗಳಲ್ಲಿ ಸೊಂಟದ ಮೂಳೆಯಂಥ ಮೂಳೆಗಳಿವೆ. ಇವು ಹಾವು ಚತುಷ್ಪಾದಿಗಳಿಂದ ವಿಕಾಸಗೊಂಡವು ಎಂಬುದಕ್ಕೆ ದಾಖಲೆ ಒದಗಿಸುತ್ತವೆ.

ಹಾವಿನ ಹೃದಯ ಎಡಹೃತ್ಕರಣ, ಬಲಹೃತ್ಕರಣ, ಎಡಹೃತ್ಕುಕ್ಷಿ ಮತ್ತು ಬಲಹೃತ್ಕುಕ್ಷಿಗಳೆಂಬ ನಾಲ್ಕು ಕೋಣೆಗಳಾಗಿ ಬೇರ್ಪಟ್ಟಿದೆ. ಆದರೆ ಎಡಹೃತ್ಕುಕ್ಷಿ ಮತ್ತು ಬಲಹೃತ್ಕುಕ್ಷಿಗಳ ನಡುವಿನ ಪದರ ಅಪೂರ್ಣವಾಗಿ ಬೆಳವಣಿಗೆಯಾಗುವುದರಿಂದ ಶುದ್ಧ ಮತ್ತು ಅಶುದ್ಧ ರಕ್ತಗಳೂ ಮಿಶ್ರವಾಗುತ್ತಿರುತ್ತವೆ. ಮೂತ್ರಜನಕಾಂಗಗಳ ಲಿಂಗಾಂಗಗಳ ಬಲಭಾಗದಲ್ಲಿ ಮಾತ್ರ ಪೂರ್ಣ ಬೆಳೆದಿದ್ದು ಎಡಭಾಗದಲ್ಲಿ ಮಾತ್ರ ಅಪೂರ್ಣ ಬೆಳವಣಿಗೆಗೊಂಡಿವೆ.

ರಚನೆಯಲ್ಲಿ ಹಾವಿನ ಮಿದುಳಿನ ರಚನೆ ಸರಳವಾಗಿದ್ದು ಇನ್ನಿತರ ಸರೀಸೃಪಗಳ ಮಿದುಳನ್ನೇ ಹೋಲುತ್ತದೆ. ವಿಕಾಸದ ಹಾದಿಯಲ್ಲಿ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಎಂದೇ ಹಾವಿಗೆ ವಿವೇಚನೆಯಾಗಲೀ ಸ್ಮರಣಶಕ್ತಿಯಾಗಲೀ ಇಲ್ಲ. "ಹಾವಿನ ದ್ವೇಷ ಹನ್ನೆರಡು ವರ್ಷ" ಎಂಬ ನುಡಿ ಸತ್ಯವಲ್ಲ. ಕೇವಲ ಕಾಕತಾಳೀಯ. ಹಾವು ಘಟನೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲಾರದು.

ಜೀವನಕ್ರಮ: ಹಾವು ಚಲಿಸುವಾಗ ಸಾಮಾನ್ಯವಾಗಿ ಶರೀರದ ಕೆಳಭಾಗದಲ್ಲಿರುವ ಅಗಲವಾದ ತಟ್ಟೆಗಳು ಮುಂಭಾಗಕ್ಕೆ ಚಲಿಸಿ ಹಿಂಭಾಗ ನೆಲಕ್ಕೆ ಒತ್ತುತ್ತವೆ. ಒಂದಾದ ನಂತರ ಇನ್ನೊಂದು ತಟ್ಟೆ ಈ ರೀತಿ ಚಲಿಸಿದಾಗ ಹಾವು ಮುಂದಕ್ಕೆ ಸರಿಯುತ್ತದೆ. ಚಲನವೇಗ ಹೆಚ್ಚಾದಂತೆ ಶರೀರ ಎರಡೂ ಕಡೆ ಬಾಗುತ್ತದೆ. ಜೊತೆಗೆ ತಟ್ಟೆಗಳ ವೇಗವೂ ಏರುತ್ತದೆ. ಒಡಲು ಬಾಗುವುದರಿಂದ ಪಕ್ಕೆಲುಬುಗಳೂ ನೆಲಕ್ಕೆ ತಾಗಿ ಚಲನೆಗೆ ಇನ್ನಷ್ಟು ವೇಗ ದೊರೆಯುತ್ತದೆ. ಹಾವು ಅಂಕುಡೊಂಕಾಗಿ ವೇಗವಾಗಿ ಮುಂದೆ ಚಲಿಸುತ್ತದೆ. ಆದರೆ ನುಣುಪಾದ ಸ್ಥಳಗಳಲ್ಲಿ ಸುಲಭವಾಗಿ ಚಲಿಸಲಾರದು.

ಬೋವಾ ಮತ್ತು ಹೆಬ್ಬಾವುಗಳು ಚಲಿಸುವ ವಿಧಾನವೇ ಬೇರೆ. ಇವು ಇತರ ಹಾವುಗಳಂತಲ್ಲದೇ ನೇರವಾಗಿ ಚಲಿಸುತ್ತವೆ. ಶರೀರದ ಕೆಳಭಾಗದಲ್ಲಿರುವ ಅಗಲ ತಟ್ಟೆಗಳ ಹಿಂಭಾಗವನ್ನು ನೆಲಕ್ಕೆ ಬಿಗಿಯಾಗಿ ಒತ್ತುತ್ತವೆ. ಮುಂಭಾಗವನ್ನು ಮುಂದಕ್ಕೆ ಚಾಚುತ್ತವೆ. ಬಳಿಕ ಹಿಂಭಾಗದ ಹಿಡಿತವನ್ನು ಸಡಿಲಗೊಳಿಸಿ ಮುಂದಕ್ಕೆಳೆದುಕೊಳ್ಳುತ್ತವೆ. ಎಲ್ಲ ತಟ್ಟೆಗಳಲ್ಲೂ ಒಂದಾದನಂತರ ಒಂದರಂತೆ ಕ್ರಮವಾಗಿ ಈ ಕ್ರಿಯೆ ನಡೆಯುವುದರಿಂದ ಹಾವು ಮುಂದಕ್ಕೆ ಹರಿಯುತ್ತದೆ. ಪಕ್ಕೆಲುಬುಗಳ ಅಥವಾ ಮಾಂಸಖಂಡಗಳ ಪಾತ್ರ ಏನೂ ಇಲ್ಲ.

ಹಾವು ನೀರಿನಲ್ಲಿ ಈಜಬಲ್ಲುದು. ಸಿಹಿನೀರುವಾಸೀ ಹಾವಿಗೆ ಈಜಲು ಯಾವುದೇ ವಿಶೇಷ ಅಂಗ ಇಲ್ಲವಾದರೂ ಮಾಂಸಖಂಡಗಳ ಚಲನೆಯಿಂದ ಲೀಲಾಜಾಲವಾಗಿ ಈಜುತ್ತದೆ. ಸಾಗರವಾಸೀ ಹಾವಿನ ಬಾಲ ಚಪ್ಪಟೆ. ಈ ಹಾವು ಮೀನುಗಾರ ದೋಣಿ ನಡೆಸುವ ಹುಟ್ಟಿನಂತೆ ನೀರನ್ನು ಹಿಂದಕ್ಕೆ ತಳ್ಳುವುದರಿಂದ ಮುಂದಕ್ಕೆ ಚಲಿಸುತ್ತದೆ.

ಕೆಲವು ಹಾವುಗಳು ಮರ ಏರಿ ಹಕ್ಕಿಗಳ ಗೂಡು ಹುಡುಕಿ, ಅಲ್ಲಿರುವ ಮೊಟ್ಟೆ ಹಾಗೂ ಮರಿಗಳನ್ನು ತಿಂದು ಬದುಕುತ್ತವೆ. ಕೆಲವು ಪ್ರಭೇದಗಳು ಮರದಲ್ಲಿಯ ಪೊಟರೆಗಳಲ್ಲಿ ಅಥವಾ ಮರದ ಕೊಂಬೆಗಳಿಗೆ ಸುತ್ತಿಕೊಂಡು ತಮ್ಮ ಬದುಕು ಸಾಗಿಸುತ್ತವೆ. ಇನ್ನು ಕೆಲವು ಬಾಲದಿಂದ ಕೊಂಬೆಯನ್ನು ಸುತ್ತಿ ಬಿಗಿಯಾಗಿ ಹಿಡಿದು ಸುತ್ತಮುತ್ತ ಹಾರಾಡುವ ಪಕ್ಷಿಗಳನ್ನು ಒಮ್ಮೆಲೆ ಜಿಗಿದು ಹಿಡಿದು ತಿನ್ನುತ್ತವೆ. ಕೆಲವು ಪ್ರಭೇದಗಳು ಸುಲಭವಾಗಿ ಮರವನ್ನೇರಿ, ಮತ್ತೆ ಮರದಿಂದ ಲೀಲಜಾಲವಾಗಿ ಕೆಳಗೆ ಜಿಗಿಯಬಲ್ಲವು.

ಇಲಿ, ಹೆಗ್ಗಣಗಳಂಥ ಪುಟ್ಟ ಸ್ತನಿಗಳು, ಪಕ್ಷಿಗಳು, ಸರೀಸೃಪಗಳು, ಕಪ್ಪೆ, ಮೀನುಗಳು, ಕೀಟಗಳು ಇತ್ಯಾದಿ ಹಾವಿನ ಆಹಾರ. ಕೆಲವು ಹಾವುಗಳು ವಿವಿಧ ಪ್ರಾಣಿ, ಪಕ್ಷಿಗಳ ಮೊಟ್ಟೆಗಳನ್ನು ತಿನ್ನುತ್ತವೆ. ಸಸ್ಯಾಹಾರೀ ಹಾವು ಇಲ್ಲವೇ ಇಲ್ಲ. ಹಾವಿನ ಹಲ್ಲುಗಳು ಮೊನಚಾಗಿದ್ದು ಸ್ವಲ್ಪ ಹಿಂದಕ್ಕೆ ಬಾಗಿರುತ್ತವೆ. ಎರೆ ಜಂತುವನ್ನು ವೇಗವಾಗಿ ಅಟ್ಟಿಸಿಕೊಂಡು ಹೋಗಿ ಬಾಯಲ್ಲಿ ಕಚ್ಚಿ ಹಿಡಿಯುತ್ತವೆ. ವಿಷಯುಕ್ತ ಹಾವುಗಳಾದರೆ, ವಿಷವನ್ನು ಚುಚ್ಚಿ ಎರೆಯನ್ನು ನಿಷ್ಕ್ರಿಯಗೊಳಿಸಿ ತರುವಾಯ ನುಂಗುತ್ತದೆ. ಮೊನಚಾದ ಹಲ್ಲುಗಳ ನಡುವೆ ಪ್ರಾಣಿ ಸಿಕ್ಕಿಕೊಂಡರೆ ಅದು ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಲ್ಲುಗಳು ಆಹಾರವನ್ನು ಅಗಿಯಲು ಯಾವುದೇ ರೀತಿ ಸಹಾಯಕವಾಗಿಲ್ಲ. ಇಡೀ ಪ್ರಾಣಿಯನ್ನೇ ನುಂಗಿ ನಿಧಾನವಾಗಿ ಗಂಟಲಿನ ಮೂಲಕ ಅನ್ನನಾಳಕ್ಕೆ ಸಾಗಿಸುತ್ತದೆ. ಶರೀರದ ಮುಂಭಾಗದ ಮಾಂಸಖಂಡಗಳು ವ್ಯಾಕೋಚಿಸಿ ಮತ್ತು ಸಂಕೋಚಿಸಿ ಆಹಾರವನ್ನು ಒಳಗೆ ತಳ್ಳುತ್ತವೆ. ಹೆಬ್ಬಾವು ಬೋವಾಗಳಂಥ ಹಾವುಗಳು ವೈರಿಯ ಸುತ್ತ ಬಿಗಿಯಾಗಿ ಸುತ್ತಿಕೊಂಡು ಅವನ್ನು ನಜ್ಜುಗುಜ್ಜಾಗಿಸಿ ಉಸಿರುಕಟ್ಟಿಸಿ ಸಾಯಿಸಿ ಮತ್ತೆ ನುಂಗುತ್ತವೆ. ಹಾವುಗಳ ಜಠರ ಗ್ರಂಥಿಗಳು ಸ್ರವಿಸುವ ಜಠರದ್ರವಗಳು ತೀಕ್ಷ್ಣವಾಗಿದ್ದು ಕೂದಲು, ಉಗುರು ಮತ್ತು ಪಕ್ಷಿಗಳ ಪುಕ್ಕಗಳನ್ನು ಹೊರತುಪಡಿಸಿ ಇನ್ನೆಲ್ಲ ವಸ್ತುಗಳನ್ನು ಜೀರ್ಣಿಸಬಲ್ಲುವು.

ಬಹುತೇಕ ಹಾವುಗಳು ಸದ್ದುಮಾಡುವುದಿಲ್ಲ. ನಿಶ್ಶಬ್ದವಾಗಿ ಮಲಗಿರುತ್ತವೆ ಅಥವಾ ಹರಿದಾಡುತ್ತಿರುತ್ತವೆ. ತರಗೆಲೆಗಳ ನಡುವೆ ಸರಿಯುವಾಗ ಕೆಲವೊಮ್ಮೆ ಸದ್ದು ಹೊರಡುತ್ತದೆ. ಅವು ವಿಷಜಂತುಗಳಾದ್ದರಿಂದ ಒಮ್ಮೆಲೇ ಅವನ್ನು ಕಂಡಾಗ ಭಯ ಹುಟ್ಟುತ್ತದೆ. ನಾಗರಹಾವು, ಕಾಳಿಂಗಸರ್ಪದಂಥ ಕೆಲವು ಹಾವುಗಳು ಶ್ವಾಸನಾಳದ ದ್ವಾರವನ್ನು ಕುಗ್ಗಿಸಿ ಉಸಿರು ಬಿಟ್ಟಾಗ ಬುಸ್ ಎಂಬ ಶಬ್ದ ಕೇಳಿಸುತ್ತದೆ. ಉತ್ತರ ಅಮೆರಿಕದಲ್ಲಿ ಕಂಡುಬರುವ ಬುಡುಬುಡಿಕೆ ಹಾವುಗಳು ಬಾಲದ ತುದಿಯನ್ನು ಅಲ್ಲಾಡಿಸಿದಾಗ ಬುಡಬುಡಿಕೆಯ ಶಬ್ದದಂಥ ಶಬ್ದ ಹೊರಡುತ್ತದೆ.

ಹಾವುಗಳ ಪ್ರಣಯಕೇಳಿ ಭಯಾನಕವಾಗಿರುತ್ತದೆ. ಗಂಡುಹೆಣ್ಣುಗಳು ಒಂದುಗೂಡಿ ಒಂದಕ್ಕೊಂದು ಹೆಣೆದುಕೊಳ್ಳುತ್ತ, ನೆಲಕ್ಕೆ ಹೊಸೆಯುತ್ತ, ತಲೆಎತ್ತಿ ಒಂದಕ್ಕೊಂದು ತಲೆಯ ಮೇಲೆ ತಲೆಯಿಟ್ಟು ಪ್ರಣಯನೃತ್ಯವಾಡುತ್ತವೆ. ಮುಂದೆ ಗಂಡುಹೆಣ್ಣುಗಳ ಮಿಲನವಾಗುತ್ತದೆ. ನಾಗರಹಾವು-ಕೇರೆಹಾವು ಒಂದುಗೂಡಿ ಪ್ರಣಯಕೇಳಿಯಾಡುತ್ತವೆ, ಆ ಮೈಥುನ ಕ್ರಿಯೆಯನ್ನು ನೋಡಬಾರದು ಎಂಬ ನಂಬಿಕೆ ಇದೆ. ನಿಜಸಂಗತಿ ಎಂದರೆ ನಾಗರಹಾವು (ಕೋಬ್ರ) ಮತ್ತು ಕೇರೆಹಾವು (ರ್‍ಯಾಟ್ ಸ್ನೇಕ್) ಬೇರೆಬೇರೆ ಪ್ರಭೇದದ ಹಾವುಗಳು. ಯಾವುದೇ ಜೀವಿಯಲ್ಲಿ ಭಿನ್ನ ಪ್ರಭೇದದ ಪ್ರಾಣಿಗಳ ನಡುವೆ ಪ್ರಣಯ ಕ್ರಿಯೆ ನಡೆಯುವುದಿಲ್ಲ. ಪ್ರಣಯಕೇಳಿಯಾಡುವಾಗ ಹಾವುಗಳು ಅತ್ಯಂತ ಚುರುಕಾಗಿದ್ದು ಅಡೆತಡೆಯನ್ನು ಸಹಿಸಲಾರವು. ಇಂಥ ವೇಳೆ ಆ ಬಳಿ ಸುಳಿಯುವುದು ಅಪಾಯಕ್ಕೆ ಆಹ್ವಾನ.

ಹಾವುಗಳು ಸಾಮಾನ್ಯವಾಗಿ ಮೊಟ್ಟೆಯಿಡುವ ಪ್ರಾಣಿಗಳು. ಕೆಲವು ಪ್ರಭೇದಗಳು ಒಣ ಎಲೆಗಳ ನಡುವೆ ಮೊಟ್ಟೆಯಿಡುತ್ತವೆ. ಅಲ್ಲಿಯ ಶಾಖದಿಂದ ಮೊಟ್ಟೆಗಳು ಬೆಳೆದು ಮರಿಗಳು ಹೊರಬರುತ್ತವೆ. ಇನ್ನು ಕೆಲ ಹಾವುಗಳು ಕಲ್ಲು ಪೊಟರೆಗಳ ನಡುವೆ ಮೊಟ್ಟೆಯಿಟ್ಟು ಅವು ಬೆಳೆದು ಮರಿ ಹೊರಬರುವ ತನಕ ಕಾಯುತ್ತವೆ. ಹೆಬ್ಬಾವುಗಳಂಥ ಕೆಲವು ಹಾವುಗಳು ಸುರುಳಿಸುತ್ತಿಕೊಂಡು ಅದರ ನಡುವೆ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಕೆಲವು ಪ್ರಭೇದಗಳಲ್ಲಿ ಮೊಟ್ಟೆ ತಾಯಿಯ ಶರೀರದಿಂದ ಹೊರಬೀಳುವ ಹೊತ್ತಿಗೆ ಸಾಕಷ್ಟು ಬೆಳವಣಿಗೆಯಾಗಿರುವುದರಿಂದ ಮೊಟ್ಟೆಯಿಟ್ಟ ಕೆಲವೇ ಗಂಟೆಗಳಲ್ಲಿ ಮರಿಗಳು ಹೊರಬರುತ್ತವೆ. ನಾಗರಹಾವುಗಳಲ್ಲಿ ಪ್ರಣಯಾನಂತರ ಗಂಡುಹೆಣ್ಣುಗಳು ಜೊತೆಯಲ್ಲಿಯೇ ವಾಸಿಸುತ್ತವೆ. ಪುಟ್ಟ ಕುಳಿಯೊಂದನ್ನು ನಿರ್ಮಿಸಿ ಅದರಲ್ಲಿ ಹೆಣ್ಣು ಮೊಟ್ಟೆಯಿಡುತ್ತದೆ. ತರುವಾಯ ಗಂಡು ಹೆಣ್ಣುಗಳು ಸರದಿಯಲ್ಲಿ ಮೊಟ್ಟೆಗಳನ್ನು ಕಾಯ್ದು ಕಾವುಕೊಟ್ಟು ಮರಿಮಾಡುತ್ತವೆ.



ಹಸಿರು ಹಾವು

ಮೊಟ್ಟೆಯಿಂದ ಬೆಳೆದು ಹೊರಬರುತ್ತಿದ್ದಂತೆ ಮರಿಗಳು ಸ್ವತಂತ್ರವಾಗಿ ಬದುಕಬಲ್ಲುವು. ತಾವೇ ಸ್ವತಃ ಆಹಾರ ಹುಡುಕಿ ನುಂಗಬಲ್ಲುವು. ಆದ್ದರಿಂದ ಮೊಟ್ಟೆಯಿಂದ ಮರಿ

ಹೊರಬಿದ್ದ ಕೆಲವೇ ಸಮಯದಲ್ಲಿ ತಂದೆ ತಾಯಿಯರು ಪ್ರತ್ಯೇಕವಾಗಿ ಮರಿಗಳನ್ನು ಬಿಟ್ಟು ಹೊರಡುತ್ತವೆ. ಮರಿಗಳೂ ಎರಡು ವರ್ಷಗಳ ತನಕ ಬೆಳೆದು ಪ್ರಬುದ್ಧವಾಗುತ್ತವೆ. ಹಾವುಗಳ ಆಯಸ್ಸು, 20ರಿಂದ 30 ವರ್ಷಗಳೆಂದು ಅಂದಾಜು.

ಹಾವು ಸಾಧಾರಣವಾಗಿ ಬಿಲವಾಸಿ. ಆದರೆ ಸ್ವತಃ ಅದೇ ಬಿಲ ಕೊರೆಯಲಾರದು. ಇತರ ಪ್ರಾಣಿಗಳು ಕೊರೆದ ಬಿಲದಲ್ಲಿ ಅಥವಾ ನೈಸರ್ಗಿಕ ಪೊಟರೆ, ಸಂದುಗಳಲ್ಲಿ ವಾಸಿಸುತ್ತದೆ. ಕೆಲವು ಹಾವುಗಳೂ ಗೆದ್ದಲಿನ ಹುತ್ತವನ್ನು ಆಕ್ರಮಿಸಿ, ಹುತ್ತದೊಳಗಿರುವ ಗೆದ್ದಲುಗಳನ್ನು ತಿನ್ನುತ್ತವೆ.

ಕಪ್ಪೆ, ಮೀನು, ಹಾಗೂ ಇನ್ನಿತರ ಸರೀಸೃಪಗಳಂತೆ ಹಾವು ಕೂಡ ಅಸಮತಾಪಿ (ಕೋಲ್ಡ್ ಬ್ಲಡೆಡ್) ಪ್ರಾಣಿ. ವಾತಾವರಣದ ಉಷ್ಣತೆಯಲ್ಲಿ ಏರಿಳಿತವಾದಂತೆ ಅವುಗಳ ದೇಹೋಷ್ಣತೆಯಲ್ಲೂ ಏರಿಳಿತವಾಗುತ್ತದೆ. ಅತಿ ಚಳಿ ಅಥವಾ ಅತಿ ಉಷ್ಣವನ್ನು ಹಾವು ತಡೆದುಕೊಳ್ಳಲಾರದು. ಆದ್ದರಿಂದ ಚಳಿಗಾಲದ ಎಳೆಬಿಸಿಲಿಗೆ ಆಗಾಗ್ಗೆ ಮೈಯೊಡ್ಡಿ ಮಲಗಿರುವುದುಂಟು. ಅಂತೆಯೇ ಬೇಸಗೆಯಲ್ಲಿ ಹಗಲುವೇಳೆ ಬಿಲಗಳಲ್ಲಿದ್ದು ರಾತ್ರಿ ಬಿಲದಿಂದ ಹೊರಬರುತ್ತದೆ.

ಕೆಲವು ಹಾವುಗಳು ವಿಷಯುಕ್ತವಾಗಿರುವುದರಿಂದ ಸರ್ಪಾಸ್ತ್ರದಂಥ ಬಾಣವನ್ನು ಕಲ್ಪಿಸಲಾಗಿದೆ. ಹಾವಿನ ನೀಳಶರೀರವನ್ನು ಬಾಣವಾಗಿ ಕಲ್ಪಿಸಿ ಅದರ ವಿಷದ ಹಲ್ಲನ್ನು ಬಾಣದ ಚೂಪಾದ ಅಲುಗಿನಂತೆ ಹೋಲಿಕೆ ನೀಡಲಾಗುತ್ತದೆ.

ವಿಷಗ್ರಂಥಿ: ವಿಷದ ಹಾವುಗಳ ತಲೆಯ ಎರಡೂ ಪಕ್ಕದಲ್ಲಿ ಒಂದೊಂದರಂತೆ ವಿಷ ಸ್ರವಿಸುವ ಒಂದು ಜೊತೆ ಗ್ರಂಥಿ ಇದೆ. ಕಣ್ಣಿನ ಕೆಳಭಾಗ ಹಾಗೂ ಮೇಲ್ದವಡೆಗಳ ನಡುಭಾಗದಲ್ಲಿ ಇವುಗಳ ನೆಲೆ. ಗ್ರಂಥಿಯ ಮುಂಭಾಗದಲ್ಲಿ ನಾಳವಿದ್ದು ಬಾಯಿಯ ಭಾಗದಲ್ಲಿ ವಿಷದ ಹಲ್ಲಿಗೆ ಜೋಡಿಸಿಕೊಂಡಿರುತ್ತದೆ. ವಿಷದ ಹಲ್ಲುಗಳು ಉಳಿದ ಹಲ್ಲುಗಳಿಗಿಂತ ದೊಡ್ಡವು ಮತ್ತು ಚೂಪು. ಕೆಲವು ಹಾವುಗಳಲ್ಲಿ ವಿಷದ ಹಲ್ಲುಗಳು ಕೊಳವೆಯಂತಿರಬಹುದು, ಇನ್ನು ಕೆಲವು ಹಾವುಗಳಲ್ಲಿ ಒಂದು ಕಡೆ ತೆರೆದಿದ್ದು ಕಮಾನಿನಂತಿರಬಹುದು. ಆದ್ದರಿಂದ ಕೆಲವು ಪರಿಣತರು ಕಡಿತದ ಗಾಯ ನೋಡಿಯೇ ಕಚ್ಚಿದ ಹಾವಿನ ಪ್ರಭೇದ ಊಹಿಸಬಲ್ಲರು.

ಹಾವಿನ ವಿಷದ ಗ್ರಂಥಿಗಳೆಂದರೆ ಮಾರ್ಪಾಡಾಗಿರುವ ಜೊಲ್ಲು ಗ್ರಂಥಿಗಳು. ವಿಷರಹಿತ ಹಾವುಗಳಲ್ಲಿ ಇವುಗಳ ಬೆಳವಣಿಗೆ ಅಪೂರ್ಣ ಅಥವಾ ಬೆಳವಣಿಗೆಯೇ ಇಲ್ಲ.

ಕೆಲವು ಹಾವುಗಳಲ್ಲಿ ವಿಷಗ್ರಂಥಿ ಹಲ್ಲಿಗೆ ಕೂಡಿಕೊಂಡಿರುವುದಿಲ್ಲ. ಗ್ರಂಥಿ ಸ್ರವಿಸಿದ ವಿಷ ಬಾಯಿಯಲ್ಲಿಯೇ ಸೋರಿ ಎಂಜಲು ದ್ರವದೊಡನೆ ಸೇರಿ ತೀಕ್ಷ್ಣತೆಯನ್ನು ಕಳೆದುಕೊಳ್ಳುತ್ತದೆ. ಈ ಹಾವು ಕಚ್ಚಿದರೂ ವಿಷ ವೈರಿಯ ಶರೀರ ಸೇರುವುದಿಲ್ಲ. ಇನ್ನು ಕೆಲವು ಪ್ರಭೇದದ ಹಾವುಗಳಲ್ಲಿ ವಿಷದ ಹಲ್ಲು ಮೇಲಿನ ವಸಡಿಗಿಂತ ಹಿಂಭಾಗದಲ್ಲಿರುತ್ತವೆ. ಹಲ್ಲಿನ ಸುತ್ತ ಒಂದು ಹೊದಿಕೆಯಿದ್ದು ವಿಷನಾಳ ಈ ಹೊದಿಕೆಯಲ್ಲಿ ತೆರೆದಿರುತ್ತದೆ. ವಿಷಗ್ರಂಥಿ ಸ್ರವಿಸಿ ವಿಷ ಎಂಜಲು ದ್ರವದೊಡನೆ ಮಿಶ್ರವಾಗುವುದಿಲ್ಲ. ಹೀಗಾಗಿ ಈ ಹಾವು ಕಚ್ಚಿದಾಗ ವಿಷ ವೈರಿಯ ಶರೀರದೊಳಗೆ ಸೇರಲಾರದು. ಇಂಥ ಹಾವುಗಳಿಂದಲೂ ಅಪಾಯವಾಗಲಾರದು.

ಮೂರನೆಯ ವರ್ಗದ ಹಾವುಗಳಲ್ಲಿ ವಿಷದ ಹಲ್ಲುಗಳು ಮೇಲ್ದವಡೆಯ ಮುಂಭಾಗದಲ್ಲಿಯೇ ಇರುತ್ತವೆ. ವಿಷಗ್ರಂಥಿಯ ನಾಳ ಈ ಹಲ್ಲಿನ ಕೆಳಭಾಗದಲ್ಲಿ ಕೂಡಿಕೊಂಡಿರುತ್ತದೆ. ಈ ಹಲ್ಲುಗಳನ್ನು ಕಿತ್ತರೆ, ಕೆಲವೇ ದಿನಗಳಲ್ಲಿ ಅವುಗಳ ಪಕ್ಕದ ಹಲ್ಲುಗಳೂ ವಿಷದ ಹಲ್ಲುಗಳಾಗಿ ಮಾರ್ಪಡುತ್ತವೆ. ಈ ಹಾವುಗಳು ಕಡಿದಾಗ ಹಲ್ಲು ನೇರವಾಗಿ ವೈರಿಯ ಶರೀರಕ್ಕೆ ಚುಚ್ಚಿಕೊಳ್ಳುತ್ತವೆ. ತಲೆಯ ಭಾಗದ ಮಾಂಸಖಂಡಗಳು ಸಂಕೋಚಿಸಿದಾಗ ವಿಷ ವೈರಿಯ ಶರೀರದೊಳಗೆ ಇಳಿಯುತ್ತದೆ. ಕೆಲವು ಹಾವುಗಳಲ್ಲಿಯಂತೂ ವಿಷದ ಹಲ್ಲುಗಳು ಸಿರಿಂಜಿನ ಸೂಜಿಯಂತೆ ಮೊನಚಾಗಿರುತ್ತವೆ. ಹಾವು ಕಚ್ಚುವಾಗ ಅಗಲವಾಗಿ ಬಾಯಿತೆರೆಯುತ್ತದೆ. ಆಗ ವಿಷದ ಹಲ್ಲುಗಳು ಮುಂದಕ್ಕೆ ಬಾಗುತ್ತವೆ. ತಲೆಯನ್ನು ಮುಂದಕ್ಕೆ ಬಾಗಿಸಿ ಹಾವು ವೈರಿಯ ಶರೀರದೊಳಗೆ ಹಲ್ಲನ್ನು ಚುಚ್ಚುತ್ತದೆ. ಅನಂತರ $90^0$ ಕೋನದಲ್ಲಿ ತಲೆಯನ್ನು ಬಗ್ಗಿಸುತ್ತದೆ. ಆಗ ದವಡೆಯ ಹಿಂಭಾಗದ ಮಾಂಸಖಂಡಗಳು ಸಂಕೋಚಿಸುತ್ತವೆ. ಜೊತೆಗೆ ಮೂಳೆಯೂ ಒತ್ತುವುದರಿಂದ ವಿಷ ವೈರಿಯ ಶರೀರದೊಳಕ್ಕಿಳಿಯುತ್ತದೆ.

ಹಾವಿನ ವಿಷ: ಹಾವಿನ ವಿಷ ಗ್ರಂಥಿಯಿಂದ ಹೊರಬೀಳುವಾಗ ವರ್ಣರಹಿತ ದ್ರವದಂತೆ ಇರುವುದು. ಗ್ರಂಥಿಯಿಂದ ಹೊರಬಿದ್ದು ವಾತಾವರಣದಲ್ಲಿ ಗಾಳಿಯೊಡನೆ ಕೂಡಿದ ಸ್ವಲ್ಪ ಸಮಯದಲ್ಲೆ, ಹೆಪ್ಪುಗಟ್ಟಿ ಸಕ್ಕರೆ ಹರಳಿನಂತಾಗುತ್ತದೆ. ಇದು ಹಲವು ರಾಸಾಯನಿಕಗಳ ಮಿಶ್ರಣ, ಪ್ರೋಟೀನ್ ಮುಖ್ಯ ಘಟಕ.

ಕೆಲವು ಹಾವುಗಳ ವಿಷ ರಕ್ತವನ್ನು ಹೆಪ್ಪುಗಟ್ಟಿಸುವ ರಾಸಾಯನಿಕಗಳಿಂದ ಕೂಡಿದ್ದರೆ, ಕೆಲವು ರಕ್ತದಲ್ಲಿರುವ ಕೆಂಪು ರಕ್ತಕಣಗಳನ್ನು ಧ್ವಂಸಗೊಳಿಸುತ್ತವೆ. ಮಂಡಲಹಾವಿನ ವಿಷ ಇಂಥ ಗುಣವುಳ್ಳದ್ದು. ಇನ್ನು ಕೆಲವು ರಕ್ತನಾಳಗಳ ಒಳಭಾಗವನ್ನು ಛಿದ್ರಗೊಳಿಸುತ್ತವೆ. ಇಂಥ ವಿಷಗಳನ್ನು ಹೀಮೋಟಾಕ್ಸಿನ್ ಎನ್ನುತ್ತಾರೆ. ಕೆಲವು ಜಾತಿಯ ಹಾವುಗಳ ವಿಷ ನರಮಂಡಲವನ್ನು ಹಾಳುಗೆಡಿಸುತ್ತವೆ ಮತ್ತೆ ಕೆಲವು ಮಾಂಸಖಂಡಗಳನ್ನು ಛಿದ್ರಗೊಳಿಸುತ್ತವೆ. ಈ ಹಾವುಗಳ ಕಡಿತದ ಪರಿಣಾಮ ಒಡನೆ ತಿಳಿಯದಿದ್ದರೂ ನಿಧಾನವಾಗಿ ಮಾಂಸಖಂಡಗಳು ತಮ್ಮ ಕ್ರಿಯೆ ನಿಲ್ಲಿಸುತ್ತವೆ. ಕೊಳಕುಮಂಡಲ ಎಂಬ ಹಾವಿನ ಕಡಿತಕ್ಕೊಳಗಾದವರ ಮಾಂಸಖಂಡಗಳು ನಿಧಾನವಾಗಿ ಛಿದ್ರಗೊಂಡು ಕೊಳೆಯಲಾರಂಭಿಸುತ್ತದೆ.

ಹಾವು ಕಡಿತದ ಪರಿಣಾಮವೂ ಹಾವಿನ ವಿಷದಂತೆಯೇ ಭಿನ್ನ. ನಾಗರಹಾವು, ಕಾಳಿಂಗಸರ್ಪ ಮುಂತಾದ ಹಾವುಗಳ ಕಡಿತದಿಂದ, ಕಡಿತದ ಸ್ಥಳದಲ್ಲಿ ಸ್ವಲ್ಪ ಊತ ಕಾಣಿಸಿಕೊಳ್ಳುತ್ತದೆ. ಬೆವರುವಿಕೆ, ಚಳಿಯಂತೆ ನಡುಕ, ಕಾಣಿಸಿಕೊಳ್ಳುತ್ತದೆ. ಗಂಟಲು ಒಣಗುವುದು, ನಾಲಗೆಯ ಚಲನೆ ನಿಲ್ಲುವುದು, ಶ್ವಾಸೋಚ್ಛ್ವಾಸಗಳು ಏರಪೇರಾಗಿ ಉಸಿರಾಟದ ತೊಂದರೆ ಕಾಣಿಸಿಕೊಳ್ಳುವುದು. ಹೃದಯದ ಮಾಂಸಖಂಡಗಳು ಶಿಥಿಲಗೊಂಡು ಎದೆಬಡಿತದ ಗತಿ ಬದಲಾಗುವುದು ಇತ್ಯಾದಿ. ಕನ್ನಡಿ ಹಾವು, ಬುಡುಬುಡಿಕೆ ಹಾವುಗಳ ಕಡಿತದಿಂದ ವಿಪರೀತ ನೋವುಂಟಾಗುತ್ತದೆ. ಕಡಿತದ ಸ್ಥಳ ಊದಿಕೊಳ್ಳುತ್ತದೆ. ಬೆವರುವಿಕೆ ಹೆಚ್ಚಾಗುತ್ತದೆ. ರಕ್ತದ ಒತ್ತಡ ಕಡಿಮೆಯಾಗುತ್ತದೆ. ನಂತರ ಹೃದಯ ಶ್ವಾಸಕೋಶಗಳು ಕ್ರಿಯಾಹೀನವಾಗುತ್ತವೆ.

ಚಿಕಿತ್ಸೆ: ರೆಡ್‌ಕ್ರಾಸ್ ಸಂಸ್ಥೆಯ ಸಲಹೆಯ ಪ್ರಕಾರ ಮೊದಲು ಗಾಯವನ್ನು ಸೋಪಿನ ನೀರಿನಲ್ಲಿ ತೊಳೆಯಬೇಕು. ಹಾವು ಕಡಿದ ಅಂಗವನ್ನು ಹೆಚ್ಚು ಅಲುಗಾಡದಂತೆ ಕೂಡಲೇ ಆಸ್ಪತ್ರೆಗೆ ಸಾಗಿಸಬೇಕು. ಒಂದುವೇಳೆ ಅರ್ಧಗಂಟೆಯ ಮೊದಲು ಹಾವು ಕಡಿತಕ್ಕೊಳಗಾದ ವ್ಯಕ್ತಿಗೆ ವೈದ್ಯಕೀಯ ನೆರವು ದೊರೆಯುವ ಸಾಧ್ಯತೆ ಇಲ್ಲವಾದರೆ, ಗಾಯದಿಂದ 5 ಸೆಂಮೀ ಮೇಲ್ಭಾಗದಲ್ಲಿ ಗಟ್ಟಿಯಾದ ದಾರ ಅಥವಾ ಬ್ಯಾಂಡೇಜ್ ಪಟ್ಟಿಯನ್ನು ಕಟ್ಟಬೇಕು. ಆದರೆ ಪಟ್ಟಿಯನ್ನು ತುಂಬಾ ಬಿಗಿಯಾಗಿ ಕಟ್ಟಬಾರದು. ನಂತರ ಹೀರುಯಂತ್ರ ಅಥವಾ ಬಾಯಿಯ ಮೂಲಕ ಗಾಯದ ರಕ್ತವನ್ನು ಹೀರಿ ತೆಗೆಯಬೇಕು. ನಂತರ ವೈದ್ಯಕೀಯ ನೆರವು ಪಡೆಯಬೇಕು. ವೈದ್ಯಕೀಯ ನೆರವು ದೊರೆಯುವುದು ಇನ್ನಷ್ಟು ತಡವಾದರೆ ಗಾಯವನ್ನು ಅಯೋಡಿನ್ ದ್ರಾವಣದಲ್ಲಿ ಅಥವಾ ಆಲ್ಕೊಹಾಲ್‌ನಿಂದ ತೊಳೆದು ಗಾಯದ ಮೇಲೆ 'ಎಪ್ಸಮ್' ಅಥವಾ ಉಪ್ಪನ್ನು ಲೇಪಿಸಬೇಕು. ಅನಂತರ ಗಾಯದ ಮೇಲ್ಭಾಗದಲ್ಲಿ ಪಟ್ಟಿ ಕಟ್ಟಿ ಪ್ರತಿ ಅರ್ಧಗಂಟೆಗೊಮ್ಮೆ ರಕ್ತಹೀರಿ ತೆಗೆಯಬೇಕು, ಸಾಧ್ಯವಾದಷ್ಟು ನೀರು ಕುಡಿಸುತ್ತಿರಬೇಕು. ಮಾದಕವಸ್ತು ಅಥವಾ ಮತ್ತು ಬರಿಸುವ ಯಾವುದೇ ಪಾನೀಯವನ್ನು ಕುಡಿಯಬಾರದು.

ಹಾವಿನ ಕಡಿತಕ್ಕೆ ಮುಖ್ಯ ಚಿಕಿತ್ಸೆ ಪ್ರತಿವಿಷ. ಆದರೆ ಕೆಲವು ವೈದ್ಯರು ಕಡಿತದ ತೀವ್ರತೆಯನ್ನು ಮೊದಲು ಗ್ರಹಿಸಿ ಅನಂತರ ಚಿಕಿತ್ಸೆ ನೀಡುತ್ತಾರೆ. ಅಗತ್ಯವಿದ್ದರೆ ಮಾತ್ರ ಪ್ರತಿವಿಷವನ್ನು ನೀಡುತ್ತಾರೆ. ಕಡಿತಕ್ಕೊಳಗಾದ ವ್ಯಕ್ತಿಗೆ ಅದನ್ನು ಚುಚ್ಚುಮದ್ದಿನ ರೂಪದಲ್ಲಿ ನೀಡಲಾಗುತ್ತದೆ. ಕಡಿದ ಹಾವಿನ ಪ್ರಭೇದ, ಶರೀರದಲ್ಲಿ ಸೇರಿರಬಹುದಾದ ವಿಷದ ಪ್ರಮಾಣ ಮುಂತಾದುವುಗಳನ್ನು ಅವಲಂಬಿಸಿ, ನೀಡಬೇಕಾದ ಪ್ರತಿವಿಷ ಹಾಗೂ ಅದರ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ. ಪ್ರತಿವಿಷವು ಹಾವಿನ ವಿಷದೊಂದಿಗೆ ಕೂಡಿದಾಗ ವಿಷ ಕ್ರಿಯಾಹೀನವಾಗುತ್ತದೆ.

ಕೆಲವು ವೈದ್ಯರು ಪ್ರತಿವಿಷವನ್ನು ತಕ್ಷಣ ಚುಚ್ಚದೆ ವ್ಯಕ್ತಿಯನ್ನು ಕೂಲಂಕಷವಾಗಿ ಪರೀಕ್ಷಿಸಿ, ಆತನ ಸ್ಥಿತಿಯನ್ನು ಅರಿತು ನಂತರ ಚಿಕಿತ್ಸೆಯ ವಿಧಾನ ನಿರ್ಧರಿಸುತ್ತಾರೆ. ವಿಷದ ತೀಕ್ಷ್ಣತೆ ಕಡಿಮೆಯಿರುವ ಪ್ರಭೇದ ಅಥವಾ ಅತ್ಯಲ್ಪ ಪ್ರಮಾಣದ ವಿಷ ಶರೀರ ಸೇರಿದರೆ ಪ್ರತಿವಿಷದ ಅಗತ್ಯವಿರುವುದಿಲ್ಲ. ವ್ಯಕ್ತಿಯ ಶರೀರದಲ್ಲಿ ವಿಷದ ಪ್ರಮಾಣವನ್ನು ತಡೆಯುವ ನಿರೋಧಕಶಕ್ತಿಯಲ್ಲಿಯೂ ವ್ಯತ್ಯಾಸವಿರುತ್ತದೆ. ಕೆಲವರಿಗೆ ಅತ್ಯಲ್ಪ ಪ್ರಮಾಣದ ವಿಷವೂ ಮಾರಕವಾಗಬಹುದು. ಇನ್ನು ಕೆಲವರಿಗೆ ಗಣನೀಯ ಪ್ರಮಾಣದ ವಿಷ ಶರೀರವನ್ನು ಸೇರಿದರೂ ಅದನ್ನು ತಡೆದುಕೊಳ್ಳುವ ಶಕ್ತಿ ಇರುತ್ತದೆ. ಈ ನಿರೋಧಕಶಕ್ತಿ ಆನುವಂಶೀಯವಾಗಿ ಬರುತ್ತದೆ ಎಂದು ಹೇಳಲಾಗಿದೆ. ಪ್ರತಿವಿಷವನ್ನು ನೀಡಿದರೂ ಇದಕ್ಕೆ ಮೊದಲು ಆದ ಬದಲಾವಣೆಗಳು ತಕ್ಷಣ ಕಡಿಮೆಯಾಗಲಾರದು. ವೈದ್ಯರು ಈ ವಿಷಯಗಳೆಲ್ಲವನ್ನೂ ಗಮನದಲ್ಲಿಟ್ಟಿರಬೇಕು.

ವಿಷದ ಹಾವುಗಳನ್ನು ಅವುಗಳ ಕೆಲವು ಶಾರೀರಿಕ ಗುಣಗಳನ್ನು ಪರೀಕ್ಷಿಸಿ ಗುರುತಿಸಬಹುದು. ಭಾರತದಲ್ಲಿ ವಾಸಿಸುವ ಹಾವುಗಳ ಪೈಕಿ ನಾಗರಹಾವು, ಕಟ್ಟುಹಾವು, ಕಾಳಿಂಗಸರ್ಪ, ಕುಳಿಮಂಡಲ, ಕುಬ್ಜಮಂಡಲ, ರಸಲ್ಲನ ಮಂಡಲ (ರಸ್ಸೆಲ್ಸ್ ವೈಪರ್) ಹಾಗೂ ಸಾಗರವಾಸೀ ಹಾವುಗಳು ವಿಷದ ಹಾವುಗಳು, ಬುಡುಬುಡುಕೆ ಹಾವು, ಕನ್ನಡಿ ಹಾವು, ಹವಳದ ಹಾವು ಮುಂತಾದುವು ಯೂರೋಪ್, ಅಮೇರಿಕ ಖಂಡಗಳಲ್ಲಿರುವ ವಿಷದ ಹಾವುಗಳು.

ಹಾವುಗಳ ಉಪಯೋಗ: ಕೆಲವು ಹಾವುಗಳು ವಿಷಯುಕ್ತ ಪ್ರಾಣಿಗಳೇನೋ ನಿಜ. ಇವು ಕಚ್ಚಿದರೆ ಮಾವನನಿಗಷ್ಟೇ ಅಲ್ಲದೆ ಉಳಿದ ಪ್ರಾಣಿಗಳಿಗೂ ಜೀವಹಾನಿಯಾಗುತ್ತದೆ. ಸಾಕುಪ್ರಾಣಿಗಳಾದ ಹಸು, ಕುರಿ ಮುಂತಾದುವೂ ಹಾವಿನ ಕಡಿತದಿಂದ ಸಾಯುತ್ತವೆ. ಆದರೂ ಇದಿಷ್ಟೇ ಕಾರಣದಿಂದ ಹಾವುಗಳೆಲ್ಲವೂ ಹಾನಿಕಾರಕ ಎಂದು ಪರಿಗಣಿಸಬಾರದು. ವಿಷರಹಿತ ಹಾಗೂ ವಿಷಯುಕ್ತ ಹಾವು ಎಲ್ಲವುಗಳಿಂದಲೂ ನಮಗೆ ಸಾಕಷ್ಟು ಉಪಯೋಗಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ಹಾವಿನ ಚರ್ಮ. ತೆಳುವಾದ ಹಾಗೂ ಗಟ್ಟಿಯಾದ ಹಾವಿನ ಚರ್ಮಕ್ಕೆ ವಿದೇಶದಲ್ಲಿ ಬಹಳ ಬೇಡಿಕೆ ಇದೆ. ಹಾವಿನ ಚರ್ಮದಿಂದ ನಾವು ಧರಿಸುವ ಸೊಂಟದ ಪಟ್ಟಿ (ಬೆಲ್ಟ್) ಹಾಗೂ ಹೆಣ್ಣುಮಕ್ಕಳ ಜಂಬದ ಚೀಲ (ವ್ಯಾನಿಟಿಬ್ಯಾಗ್) ಮುಂತಾದುವನ್ನು ತಯಾರಿಸುತ್ತಾರೆ. ಪರಿಸರದ ಸಮತೋಲ ಸಾಧಿಸುವಲ್ಲಿ ಹಾವುಗಳ ಪಾತ್ರ ಬಲು ಮುಖ್ಯ. ಇಲಿ, ಹೆಗ್ಗಣ, ಕೀಟ ಮುಂತಾದುವನ್ನು ಹಾವುಗಳು ನುಂಗಿ ನಮ್ಮ ದವಸ ಧಾನ್ಯಗಳಿಗೆ ಉಂಟಾಗುವ ಹಾನಿಯನ್ನು ಕಡಿಮೆಗೊಳಿಸುತ್ತವೆ. ಹೀಗೆ ಪರಿಸರವ್ಯೂಹದಲ್ಲಿ ಹಾವುಗಳು ಮಹತ್ವದ ಸ್ಥಾನ ವಹಿಸುತ್ತವೆ. ಆಫ್ರಿಕ, ಚೀನದಂಥ ರಾಷ್ಟ್ರಗಳಲ್ಲಿ ಕೆಲವು ಪ್ರಭೇದದ ಹಾವುಗಳ ಮಾಂಸವನ್ನು ತಿನ್ನುತ್ತಾರೆ. ಹಾವುಗಳನ್ನು ತಿಂದು ಬದುಕುವ ಜೀವಿಗಳೂ ಇರುವುದರಿಂದ ನಿಸರ್ಗದ ಆಹಾರ ಸರಪಣಿಯಲ್ಲಿ ಹಾವುಗಳೂ ಮುಖ್ಯಸ್ಥಾನ ವಹಿಸುತ್ತವೆ. ಹಾವಿನ ವಿಷದಲ್ಲಿ ಫಾಸ್ಫೊಡೈಯೆಸ್ಟಿರೇಸ್ ಎಂಬ ಕಿಣ್ವವಿದೆ. ಇದನ್ನು ಕೆಲವು ಸರಳ ರಾಸಾಯನಿಕ ಕ್ರಿಯೆಗಳಿಂದ ಬೇರ್ಪಡಿಸಬಹುದು. ಈ ಕಿಣ್ವ ಜೀವಿಗಳ ಆನುವಂಶೀಯತೆಗೆ ಕಾರಣವಾಗುವ ಜೈವಿಕ ವಸ್ತು ಡಿ.ಎನ್.ಎ.ಯ ತಂತುಗಳನ್ನು ಬೇರ್ಪಡಿಸುತ್ತದೆ. ಇದನ್ನು ಬಳಸಿ ಡಿ.ಎನ್.ಎ.ಯ ರಚನೆ ಹಾಗೂ ಕಾರ್ಯವಿಧಾನಗಳನ್ನು ಅರಿಯಲು ಸಾಧ್ಯವಾಗಿದೆ. ನರಕೋಶಗಳನ್ನು ನಿಷ್ಕ್ರಿಯಗೊಳಿಸುವ ವಿಷವನ್ನು ಬಳಸಿ ಪಾರ್ಶ್ವವಾಯು ಅಥವಾ ನರಮಂಡಲ ಸಂಬಂಧೀ ರೋಗಗಳಿಗೆ ಔಷಧಿ ತಯಾರಿಸಲಾಗುತ್ತದೆ. ವೈಜ್ಞಾನಿಕವಾಗಿ ಈ ಪ್ರಯತ್ನ ಇನ್ನೂ ಸಫಲವಾಗಿಲ್ಲದಿದ್ದರೂ ಕೆಲವು ಸ್ಥಳೀಯ ವೈದ್ಯಪದ್ಧತಿಯಲ್ಲಿ ಈ ತಂತ್ರ ಬಳಕೆಯಲ್ಲಿದೆ. ವಿಷದ ಘಟಕವಾದ ಆ್ಯಂಕ್ರೊಡ್ ಎಂಬ ವಸ್ತುವನ್ನು ಬೇರ್ಪಡಿಸಿ ಅದನ್ನು ನರರೋಗ ಚಿಕಿತ್ಸೆಗೆ ಬಳಸುವ ಪ್ರಯತ್ನವೂ ನಡೆಯುತ್ತಿದೆ. ಕ್ರೀಡಾಪಟುಗಳ ಕಾಲಿನ ಅಥವಾ ಶರೀರದ ಕೆಲವು ಮಾಂಸಖಂಡಗಳು ಆಟದ ಒತ್ತಡದಿಂದ ಕ್ರಿಯಾಹೀನವಾಗುತ್ತವೆ. ಆಫ್ರಿಕದೇಶದ ಕೆಲವು ಹಾವುಗಳ ವಿಷದಿಂದ ಇಂಥ ರೋಗಗಳಿಗೆ ಚಿಕಿತ್ಸೆ ನಡೆಸಲಾಗುತ್ತದೆ.

ಹಾವುಗಳ ವರ್ಗೀಕರಣ: ಹಾವುಗಳ ಶರೀರದ ಹೊರರಚನೆ, ತಲೆ-ಬಾಲಗಳ ರಚನೆ, ಹೊರಪು-ತಟ್ಟೆ-ಕವಚಗಳ ಸ್ಥಿತಿ, ವಿಷದ ಹಲ್ಲುಗಳು ಮುಂತಾದುವುಗಳ ಆಧಾರದ ಮೇಲೆ ಇವುಗಳನ್ನು ಹಲವು ಕುಟುಂಬಗಳಾಗಿ ವಿಂಗಡಿಸಿದೆ:

1. ಟಿಫ್ಲೊಪಿಡೆ: ಈ ಕುಟುಂಬಕ್ಕೆ ಸೇರಿದ ಹಾವುಗಳನ್ನು ಕುರುಡುಹಾವು ಅಥವಾ ಹುಳುಹಾವುಗಳೆನ್ನುತ್ತಾರೆ. ಇವು ಉದ್ದವಾಗಿ ಎರೆಹುಳುವಿನಾಕಾರದಲ್ಲಿದ್ದು ಶರೀರದ ತುಂಬೆಲ್ಲ ಒಂದೇ ಮಾದರಿಯ ಹೊರಪುಗಳಿವೆ. ತಲೆ ಹಾಗೂ ಬಾಲಗಳೆರಡೂ ಮೊಂಡು. ಗಾತ್ರ ಚಿಕ್ಕದಾಗಿದ್ದರೂ ತಲೆಬುರುಡೆ ಮಾತ್ರ ಗಟ್ಟಿ, ಎಂದೇ ಇವು ಸುಲಭವಾಗಿ ನೆಲ ಕೊರೆದು ಕುಳಿ ನಿರ್ಮಿಸಬಲ್ಲುವು. ಹಲ್ಲುಗಳು ಮೇಲ್ದವಡೆಗೆ ಮಾತ್ರ ಸೀಮಿತವಾಗಿದ್ದು ಕೆಳದವಡೆಯಲ್ಲಿ ವಸಡು ಮಾತ್ರ ಇರುವುದು. ಕಾಲುಗಳು ಇಲ್ಲ. ಶರೀರದ ಒಳಭಾಗದಲ್ಲಿ ಸೊಂಟದ ಮೂಳೆಗಳೂ ಹಿಂಗಾಲಿನ ತೊಡೆಯ ಭಾಗದ ಮೂಳೆಗಳೂ ಇವೆ. ಆದ್ದರಿಂದ ಹಾವುಗಳೆಲ್ಲ ಇವೇ ಮೊದಲು ವಿಕಾಸವಾದುವು ಎಂದು ನಂಬಲಾಗಿದೆ. ಗೆದ್ದಲು, ನೆಲದೊಳಗೆ ವಾಸಿಸುವ ಕೀಟಗಳು, ಎರೆಹುಳುಗಳು ಮುಂತಾದುವು ಇವುಗಳ ಆಹಾರ ವಿಷರಹಿತವಾದ ಈ ಹಾವುಗಳು ಉಷ್ಣವಲಯದಲ್ಲಿ ಮಾತ್ರ ಬದುಕುತ್ತವೆ. ಟಿಫ್ಲೊಪ್ಸ್ ಬ್ರಾಮಿನಿಸ್ ಎಂಬುದು ಇದರ ಮುಖ್ಯ ಪ್ರಭೇದ.

2. ಗ್ಲಾಕೋನಿಡೆ: ಈ ಕುಟುಂಬದ ಹಾವುಗಳು ಶರೀರ ರಚನೆಯಲ್ಲಿ ಟಿಫ್ಲೊಪಡೆಯನ್ನೇ ಹೋಲುತ್ತವೆ. ಆದರೆ ಎರಡೂ ದವಡೆಗಳಲ್ಲಿ ಹಲ್ಲುಗಳಿರುತ್ತವೆ. ಇವೂ ವಿಷರಹಿತ ಹಾವುಗಳು. ಲೆಪ್ಟೋಫ್ಲ್ಯಾಪ್ಸ್ ಎಂಬುದು ಈ ಕುಟುಂಬದ ಮುಖ್ಯ ಪ್ರಭೇದ.

3. ಯೂರೊಪೆಲ್ಟಿಡೆ: ಇವು ನೆಲವನ್ನು ಕೊರೆಯಬಲ್ಲ ಹಾವುಗಳು. ಬಾಲ ಗಿಡ್ಡ ಮತ್ತು ಮೊಂಡಾಗಿರುತ್ತದೆ. ಶರೀರದ ಸುತ್ತ ವಿಭಿನ್ನ ಹೊರಪುಗಳಿವೆ. ಮೇಲ್ದವಡೆ ಕೆಳದವಡೆಗಳೆರಡರಲ್ಲೂ ಹಲ್ಲುಗಳುಂಟು. ಬೆಟ್ಟಗುಡ್ಡಗಳಲ್ಲಿ ಹಾಗೂ ಎತ್ತರ ಪ್ರದೇಶಗಳಲ್ಲಿ ಇವುಗಳ ವಾಸ. ಯೂರೊಪೆಲ್ಟಿಸ್, ರೈನೊಪೆಲ್ಟಿಸ್ ಮುಂತಾದುವು ಈ ಕುಟುಂಬಕ್ಕೆ ಸೇರುವ ಮುಖ್ಯ ಪ್ರಭೇದಗಳು.

4. ಬೋವಿಡೆ: ಇವು ಆಹಾರ ಪ್ರಾಣಿಯನ್ನು ಹಿಡಿದು ಅದನ್ನು ಬಿಗಿಯಾಗಿ ಸುತ್ತಿ ನಜ್ಜುಗುಜ್ಜಾಗಿಸಿ ಅನಂತರ ನುಂಗುತ್ತವೆ. ಮೊಟ್ಟೆಯಿಟ್ಟ ಕೆಲವೇ ನಿಮಿಷಗಳಲ್ಲಿ ಮರಿಗಳು ಹೊರಬರುತ್ತವೆ. ಮೊಟ್ಟೆಯಿಂದ ಆಗತಾನೇ ಹೊರಬಂದ ಮರಿಯ ಉದ್ದ 30 ಸೆಂಮೀ. ಗುದದ್ವಾರದ ಎರಡೂ ಕಡೆ ಮಟ್ಟ ಉಂಗುರದಾಕಾರದ ಎರಡು ಅಂಗಗಳಿವೆ. ಶರೀರದ ಒಳಭಾಗದಲ್ಲಿಯೇ ಇರುವ ಕಾಲಿನ ಭಾಗದ ಮೂಳೆಗಳೊಡನೆ ಕೂಡಿಕೊಂಡಿರುತ್ತವೆ. ದಕ್ಷಿಣ ಅಮೆರಿಕದ ಅಮೆಜಾನ್ ನದಿಯ ಕೊಳ್ಳಗಳಲ್ಲಿ ವಾಸಿಸುವ ಅನಕೊಂಡಾಗಳು, ದಕ್ಷಿಣ ಆಫ್ರಿಕ, ಅಮೆರಿಕ ಮುಂತಾದ ಉಷ್ಣವಲಯದ ಕಾಡುಗಳಲ್ಲಿ ವಾಸಿಸುವ ಬೋವಾಗಳು ಮುಖ್ಯ ಪ್ರಭೇದಗಳು.

5. ಪೈತೊನಿಡೆ: ಹೆಬ್ಬಾವುಗಳೆಲ್ಲವೂ ಈ ಕುಟುಂಬಕ್ಕೆ ಸೇರಿವೆ. ಅಮೆರಿಕದ ಕಾಡುಗಳಲ್ಲಿ ಅನಕೊಂಡಾಗಳಿರುವಂತೆ ಆಫ್ರಿಕ ಮತ್ತು ಏಷ್ಯ ಖಂಡದ ಕಾಡುಗಳಲ್ಲಿ ಹೆಬ್ಬಾವುಗಳಿರುತ್ತವೆ. ಇದುವರೆಗೆ ದಾಖಲಾದ ಅತಿದೊಡ್ಡ ಹೆಬ್ಬಾವೆಂದರೆ ದಕ್ಷಿಣ ಆಫ್ರಿಕದಲ್ಲಿ ಗುರುತಿಸಲಾದ 9 ಮೀ ಉದ್ದದ ಹೆಬ್ಬಾವು. ಹೆಬ್ಬಾವುಗಳು ರಚನೆಯಲ್ಲಿ ಬೋವಾಗಳಂತೆಯೇ ಇರುತ್ತವೆ. ಆದರೆ ಇವು ಮೊಟ್ಟೆಯಿಟ್ಟು ಕೆಲ ಕಾಲ ಕಾವು ಕೊಟ್ಟಾಗ ಮರಿಗಳು ಹೊರಬರುತ್ತವೆ. ಇವು ಕೂಡ ವಿಷರಹಿತ ಹಾವುಗಳು. ಪೈತಾನ್ ಮಾಲೂರಸ್ ಎಂಬುದು ಭಾರತದಲ್ಲಿ ವಾಸಿಸುವ ಪ್ರಭೇದ. ಇದು 4.5ರಿಂದ 6 ಮೀ ಉದ್ದ ಬೆಳೆಯುತ್ತದೆ. ಸುಮಾತ್ರ, ಬೋರ್ನಿಯೋ, ಜಾವಾಗಳಲ್ಲಿರುವ ಹೆಬ್ಬಾವುಗಳು ಆಹಾರ ನುಂಗಿ ದಟ್ಟ ಅರಣ್ಯಗಳಲ್ಲಿ ಮರದ ಕೊರಡಿನಂತೆ ಹಲವಾರು ದಿನ ಪರ್ಯಂತ ಬಿದ್ದುಕೊಂಡಿರುತ್ತವೆ.

6. ಕೋಲುಬ್ರಿಡೆ: ಇದು ಹಾವುಗಳ ಅತಿದೊಡ್ಡ ಕುಟುಂಬ. ಈ ಕುಟುಂಬದಲ್ಲಿ 300 ಗುಂಪುಗಳೂ 2500 ಪ್ರಭೇದಗಳೂ ಇವೆ. ಇವುಗಳ ಹಲ್ಲುಗಳು ಚೂಪಾಗಿವೆ. ಎಲ್ಲ ಹಲ್ಲುಗಳೂ ಒಂದೇ ಅಳತೆಯವು. ವಿಷಗ್ರಂಥಿ ಹಾಗೂ ನಾಳಗಳಿರುತ್ತವೆ. ನಾಳ ಹಲ್ಲುಗಳ ಹಿಂಭಾಗದಲ್ಲಿಯೇ ತೆರೆದಿರುವುದರಿಂದ ಇವುಗಳ ಕಡಿತ ಮಾರಕವಲ್ಲ. ಇವು ಸಾಕಷ್ಟು ಗಾತ್ರ ಬೆಳೆಯುತ್ತವೆ. ಬರ್ಮಾ (ಮಯನ್ಮಾರ್), ಮಲಯಗಳಲ್ಲಿ ವಾಸಿಸುವ ಪ್ರಭೇದಗಳು 3.5ರಿಂದ 4 ಮೀ ಉದ್ದ ಬೆಳೆಯುತ್ತವೆ. ಭಾರತದಲ್ಲಿರುವ ಕೇರೆಹಾವು ಪ್ಟೈಯಾಸ್ ಎಂಬ ಪ್ರಭೇದಕ್ಕೆ ಸೇರುತ್ತದೆ. ಇದು ಬಲು ಚುರುಕು ಹಾಗೂ ಬಲು ವೇಗವಾಗಿ ಓಡಬಲ್ಲದು. ಇದರ ಶರೀರದ ಮೇಲ್ಭಾಗ ಕಪ್ಪು. ಸುಲಭವಾಗಿ ಮರವನ್ನೇರಿ ಅಲ್ಲಿ ಪಕ್ಷಿಗಳ ಗೂಡುಗಳಲ್ಲಿರುವ ಮೊಟ್ಟೆ, ಮರಿಗಳನ್ನು ತಿನ್ನುತ್ತದೆ. ಹಳ್ಳಿಗಳಲ್ಲಿ ಮನೆಯ ಒಳಹೊಕ್ಕು ಕೋಳಿಮರಿಗಳನ್ನು ಕದ್ದು ತಿನ್ನುತ್ತವೆ. ಕೇರೆಹಾವು ಇಲಿ ಹೆಗ್ಗಣಗಳ ಬಿಲ ಹೊಕ್ಕು ಅವನ್ನು ಹಿಡಿದು ನುಂಗುತ್ತದೆ.

7. ಇಲಾಪಿಡೆ: ಈ ಕುಟುಂಬಕ್ಕೆ ಸೇರುವ ಎಲ್ಲ ಹಾವುಗಳೂ ವಿಷಯುಕ್ತ. ಇದರಲ್ಲಿ ಸು. 180 ಪ್ರಭೇದಗಳಿವೆ. ಈ ಪೈಕಿ ಕೆಲವು ಪ್ರಭೇದಗಳ ವಿಷ ಅತಿ ತೀಕ್ಷ್ಣ. ಇವು ತೀವ್ರ ಅಪಾಯಕಾರಿ. ನಾಗರಹಾವು (ಸರ್ಪ), ಕಾಳಿಂಗಸರ್ಪ, ಕಟ್ಟುಹಾವು ಈ ಕುಟುಂಬದ ಮುಖ್ಯ ಜಾತಿಗಳು. ಈ ಮೂರೂ ಜಾತಿಯ ಹಾವುಗಳೂ ಭಾರತದಲ್ಲಿ ಕಂಡುಬರುತ್ತವೆ.

8. ಹೈಡ್ರೊಫಿನೆ: ಮಹಾಸಾಗರಗಳಲ್ಲಿ ಹಾಗೂ ಸಮುದ್ರಗಳಲ್ಲಿ ವಾಸಿಸುವ ಎಲ್ಲ ಹಾವುಗಳನ್ನೂ ಈ ಕುಟುಂಬಕ್ಕೆ ಸೇರಿಸಿದೆ. ಇವು ಸಾಮಾನ್ಯ ಗಾತ್ರದವು. ಬಾಲ ಮೇಲಿನಿಂದ ಕೆಳಭಾಗದ ಕಡೆಗೆ ಚಪ್ಪಟೆಯಾಗಿದೆ. ಇವು ತಮ್ಮ ನೊಸಲನ್ನು ಅದರ ಸುತ್ತ ಇರುವ ಚರ್ಮದ ಕವಾಟದಿಂದ (ಮುಚ್ಚಳ) ಮುಚ್ಚಿಕೊಂಡು ನೀರಿನ ಒಳಭಾಗದಲ್ಲಿ ಈಜಬಲ್ಲವು. ಮೇಲ್ಭಾಗದಿಂದ ನೀರಿನೊಳಗೆ ಜಿಗಿಯಬಲ್ಲವು. ಸಾಗರವಾಸೀ ಮೀನುಗಳು ಇವುಗಳ ಆಹಾರ. ಅತ್ಯಂತ ತೀಕ್ಷ್ಣ ವಿಷವುಳ್ಳ ಹಾವುಗಳಾದರೂ ಇವು ಮನುಷ್ಯರನ್ನು ಕಚ್ಚುವ ಸಾಧ್ಯತೆ ಕಡಿಮೆ.

9. ವೈಪರಿಡೆ: ಮಂಡಲದ ಹಾವುಗಳು ಈ ಕುಟುಂಬಕ್ಕೆ ಸೇರುತ್ತವೆ. ಇವುಗಳ ಗಾತ್ರದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಕೆಲವು ಪ್ರಭೇದಗಳು ಕೇವಲ 40-45 ಸೆಂಮೀ ಉದ್ದವಿದ್ದರೆ ಇನ್ನು ಕೆಲವು 7 ಮೀ. ಗಿಂತಲೂ ಉದ್ದವಾಗಿರುವುವು. ಗಾತ್ರ ಉಳಿದ ಹಾವುಗಳಿಗಿಂತ ದೊಡ್ಡದು. ಬಾಲ ತುಂಬ ಚಿಕ್ಕದು. ಇವೂ ವಿಷಯುಕ್ತವಾದವು. ಆಕ್ರಮಣಕಾರಿಗಳಲ್ಲದ ಹಾಗೂ ಸೋಮಾರಿಯಾದ ಇವುಗಳಿಂದ ಕಚ್ಚಿಸಿಕೊಂಡು ಸಾಯುವ ಪ್ರಮೇಯ ಕಡಿಮೆ. ಸಾಮಾನ್ಯವಾಗಿ ಒಣ ಪ್ರದೇಶಗಳಲ್ಲಿ ವಾಸಿಸುತ್ತವೆ. ಆದರೆ ಕಡುಚಳಿ ಅಥವಾ ಅತಿಸೆಕೆ ತಡೆಯಲಾರವು. ಚಳಿಗಾಲದಲ್ಲಿ ಕಲ್ಲುಬಂಡೆಗಳ ಕೆಳಗೆ ಅಥವಾ ಪೊಟರೆಗಳಲ್ಲಿ ತೆರಳಿ ಶಿಶಿರ ನಿದ್ರಾಮಗ್ನವಾಗುತ್ತವೆ. ಇದು ಚಳಿಯನ್ನು ತಡೆಯಲು ಪ್ರಾಣಿಗಳು ಅನುಸರಿಸುವ ಒಂದು ಹೊಂದಾಣಿಕೆ. ಈ ವೇಳೆ ಹಲವಾರು ದಿನಪರ್ಯಂತ ಆಹಾರ ಅಥವಾ ಚಲನೆ ನಿಲ್ಲಿಸಿ ಸುಮ್ಮನೆ ಬಿದ್ದುಕೊಂಡಿರುತ್ತವೆ. ಶರೀರದಲ್ಲಿ ಸಂಗ್ರಹವಾಗಿರುವ ಕೊಬ್ಬನ್ನು ಉಪಯೋಗಿಸಿಕೊಂಡು ಬದುಕುತ್ತವೆ. ಚಳಿ ಕಡಿಮೆಯಾದಾಗ ನಿಧಾನವಾಗಿ ಹೊರಬಂದು ಎಳೆಬಿಸಿಲಿಗೆ ಮೈಯೊಡ್ಡಿ ಸ್ವಲ್ಪ ಕಾಲಾನಂತರ ಪುನಃ ಕ್ರಿಯಾಶೀಲವಾಗುತ್ತವೆ. ಬೇಸಗೆಯ ಬೇಗೆ ಹೆಚ್ಚಾಯಿತೆಂದರೆ ಅವು ಜವುಗು ಪ್ರದೇಶಗಳೆಡೆಗೆ ತೆರಳುತ್ತವೆ. ಮಂಡಲದ ಹಾವುಗಳು ಭೂಭಾಗದ ಎಲ್ಲ ಕಡೆಗಳಲ್ಲೂ

ಇವೆ. ಭಾರತದಲ್ಲಿ ರಸೆಲ್ಲನ ಮಂಡಲ, ಕುಳಿಮಂಡಲ, ಕುಬ್ಜಮಂಡಲ ಎಂಬ ಮೂರು ವಿಧ ಮುಖ್ಯವಾದವು.

10. ಕ್ರೊಟಲಿಡೆ: ಬುಡುಬುಡಿಕೆ ಹಾವುಗಳು ಈ ಕುಟುಂಬಕ್ಕೆ ಸೇರಿದವು. ದಕ್ಷಿಣ ಮತ್ತು ಉತ್ತರ ಅಮೆರಿಕಗಳಲ್ಲಿ ಹೆಚ್ಚಾಗಿ ಕಂಡುಬರುವ ಇವನ್ನು ಕೆಲವು ತಜ್ಞರು ಮಂಡಲದ ಹಾವುಗಳೆಂದೇ ಪರಿಗಣಿಸುತ್ತಾರೆ. ಮಂಡಲದ ಹಾವುಗಳಲ್ಲಿರುವಂತೆ ಕಣ್ಣು ಮತ್ತು ನೊಸಲಿನ ನಡುವೆ ಜ್ಞಾನವಾಹಿ ಕುಳಿಗಳಿವೆ. ಬಾಲದ ಭಾಗದಲ್ಲಿ ಕೆಲವು ಹೊರಪುಗಳು ಉಂಗುರದಂತೆ ಮಾರ್ಪಾಡಾಗಿದ್ದು ಒಂದರ ಹಿಂದೆ ಒಂದರಂತೆ ಜೋಡಿಸಿಕೊಂಡಿರುತ್ತವೆ. ಒಳಭಾಗದಲ್ಲಿ ಇವು ಚರ್ಮಕ್ಕೆ ಅಂಟಿಕೊಂಡಿದ್ದು ಆ ಭಾಗದ ಮಾಸಖಂಡಗಳ ಅದಿರಿಕೆಯಿಂದ ಇವು ಒಂದಕ್ಕೊಂದು ತಗಲುತ್ತವೆ. ಕೊನೆಯ ಹೊರಪು ಗೋಪುರದ ಆಕಾರದಲ್ಲಿದೆ. ಉಂಗುರಗಳು ಉಜ್ಜಿದಾಗ ಅಥವಾ ಯಾವುದಾದರೂ ಭಾಗಕ್ಕೆ ತಗಲಿದಾಗ ಬುಡುಬುಡಿಕೆಯ ಶಬ್ದ ಹೊರಡುತ್ತದೆ. ಆದ್ದರಿಂದ ಇವನ್ನು ಬುಡುಬುಡಿಕೆ ಹಾವುಗಳೆಂದೇ (ರ್‍ಯಾಟಲ್ ಸ್ನೇಕ್) ಕರೆಯುತ್ತಾರೆ. ಈ ಶಬ್ದದ ಮೂಲಕ ಇವು ಪ್ರಣಯಕ್ಕೆ ಸಂಗಾತಿಯನ್ನು ಕರೆಯುತ್ತವೆ ಮತ್ತು ಇದರ ಮೂಲಕವೇ ವೈರಿಗಳಿಗೆ ತಮ್ಮ ಇರುವಿಕೆಯನ್ನು ತಿಳಿಸಿ ಎಚ್ಚರಿಸುತ್ತವೆ. ಭಾರತದಲ್ಲಿ ಬುಡುಬುಡಿಕೆ ಹಾವುಗಳಿಲ್ಲ. ಅಮೆರಿಕದ ಹೊರತಾಗಿ ಸೈಬೀರಿಯ ಹಾಗೂ ಮಲೇಶಿಯಗಳಲ್ಲಿ ಕೆಲವು ಪ್ರಭೇದಗಳಿವೆ. (ಎಸ್.ಎನ್.ಎಚ್.)

**ಹಾವು ಮೀನು:** ಹಾವಿನಂಥ ಉದ್ದ ದೇಹವುಳ್ಳ ಕಡಲವಾಸಿ ಕಶೇರುಕ (ಈಲ್). ಪಾದರಹಿತವಾದ ಹಾವು ಮೀನುಗಳನ್ನು 'ಅಪೋಡಸ್' ಎಂದೂ ಕರೆಯುತ್ತಾರೆ. ಅಂಗ್ವಿಲಿಫಾರ್ಮಿಸ್ ಗುಂಪಿಗೆ ಸೇರಿದ 500 ಕ್ಕಿಂತಲೂ ಹೆಚ್ಚಿನ ಈ ಮೀನುಗಳು ವಿಭಿನ್ನ ಜಾತಿಯವುಗಳಿವೆ. ಇವುಗಳಲ್ಲಿ 1) ಅಂಗ್ವಿಲಿಡೆ, ಮುಳುಗು ಮೀನುಗಳು 2) ಮ್ಯುರೀಸಿಡೆ, ಮೆರೇ ಹಾವು ಮೀನುಗಳು 3) ಮ್ಯೂರೀನಿ ಸಾಸಿಡಿ ಕಡಲು ಮುಳುಗು ಮೀನುಗಳು; ಹಾಗೂ 4) ಆಫಿಕ್ತಿಯಿಡೆ, ಹಾವು ಬತ್ತಿ ಮೀನುಗಳು ಪ್ರಮುಖವಾದುವು.

ಹಾವು ಮೀನುಗಳಿಗೆ ನೀರಿನಲ್ಲಿರುವ ಆಮ್ಲಜನಕವನ್ನು ಪಡೆಯಲು ಜಲಶ್ವಾಸಾಂಗವಾಗಿ ಕಿವಿರುಗಳಿರುತ್ತವೆಯಾದರೂ ಕೆಲವು ವಿಚಾರಗಳಲ್ಲಿ ಇವು ಇತರೆ ಮೀನುಗಳಿಗಿಂತ ವಿಭಿನ್ನವಾಗಿವೆ. ಮೀನುಗಳಲ್ಲಿ ಚರ್ಮವನ್ನು ರಕ್ಷಿಸಲು ಹೆಂಚು ಹೊದಿಸಿದಂತೆ ಒಂದರ ಮೇಲೊಂದು ಜೋಡಣೆಯಿರುವ ಕೊಂಬು ಪದಾರ್ಥದಿಂದಾದ ತೆಳುಫಲಕಗಳ ಹೊರಪೆಗಳು ಹೆಚ್ಚಿನ ಹಾವು ಮೀನುಗಳಲ್ಲಿ ಕಂಡು ಬರುವುದಿಲ್ಲ. ಕೆಲವೇ ಹಾವು ಮೀನುಗಳಲ್ಲಿ ಮಾತ್ರ ಅತಿ ಚಿಕ್ಕದಾದ ಸೈಕ್ಲಾಯ್ಡ್ ಹೊರಪೆಗಳಿರುತ್ತವೆ. ಹಾವು ಮೀನುಗಳ ಚರ್ಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶ್ಲೇಷ್ಮಗ್ರಂಥಿಗಳಿರುತ್ತವೆ. ಇವುಗಳಿಂದ ಹೊರಸೂಸುವ ಲೋಳೆ ಪದಾರ್ಥದಿಂದಾಗಿ ಹಾವು ಮೀನು ಸುಲಭವಾಗಿ ಜಾರಿ ನುಣುಚಿಕೊಂಡು ಚಲಿಸುತ್ತದೆ.

ಹಾವು ಮೀನುಗಳಲ್ಲಿ ಈಜು ರೆಕ್ಕೆಗಳು ಇತರ ಮೀನುಗಳಿಗಿಂತ ವಿಭಿನ್ನ. ಸೊಂಟದ ಈಜುರೆಕ್ಕೆಗಳು ಇರುವುದಿಲ್ಲ. ಮುಂಭಾಗದ ಈಜುರೆಕ್ಕೆಗಳು ಕೆಲವು ಹಾವು ಮೀನುಗಳಿರುತ್ತವೆ. ದೇಹದ ಮಧ್ಯಭಾಗ, ಹಿಂಬದಿಯ ಹಾಗೂ ಬಾಲದ ಈಜುರೆಕ್ಕೆಗಳೆಲ್ಲವು ಕೂಡಿಕೊಂಡು ಸೆರಗಿನ ಅಂಚಿನಂತೆ ಆಗಿ ನೀರಿನಲ್ಲಿ ಸುಲಭವಾಗಿ ಮುಂದೂಡಿಕೊಂಡು ಚಲಿಸಲು ಸಹಾಯಕವಾಗಿದೆ.

ಹಾವುಮೀನುಗಳಲ್ಲಿ ಬಣ್ಣ ವೈವಿಧ್ಯಮಯ. ಆಳ ಸಮುದ್ರದಲ್ಲಿ ಬದುಕುವ, ಹಾಗೂ ಸಿಹಿನೀರಿನ ಹಾವು ಮೀನುಗಳು ಹೆಚ್ಚಾಗಿ ಬೂದು, ಇಲ್ಲವೇ ಕಂದು ಬಣ್ಣದ್ದಾಗಿವೆ. ಉಷ್ಣವಲಯದ ಕಡಲ ತೀರದ ಹಾವು ಮೀನುಗಳು ಹಸಿರು ಇಲ್ಲವೇ, ತಿಳಿ ಕಂದು ಬಣ್ಣದವು. ಕೆಲವು ಹಾವು ಮೀನುಗಳ ದೇಹದ ಮೇಲೆ ವಿಭಿನ್ನ ಆಕಾರದ ಆಕರ್ಷಕ ಬಣ್ಣದ ಚುಕ್ಕೆ ಇಲ್ಲವೇ ಪಟ್ಟಿಗಳಿರುತ್ತವೆ. ಹಲವು ಹಾವು ಮೀನುಗಳು ತಮ್ಮ ಮೈಬಣ್ಣವನ್ನು ಬದಲಿಸಬಲ್ಲುವು.

ಹೆಚ್ಚಿನ ಹಾವು ಮೀನುಗಳು ಮಾಂಸಭಕ್ಷಕ. ಕೆಲವು ಮಾತ್ರ ಕೊಳೆ ಭಕ್ಷಕಗಳು. ಕೆಲವು ಹಾವು ಮೀನುಗಳು ಸಿಹಿ ನೀರಲ್ಲಿ ವಾಸಿಸುತ್ತವೆಯಾದರೂ, ತಮ್ಮ ಜೀವಿತ ಕಾಲದ ಕೆಲವಂಶವನ್ನು ಕಡಲಲ್ಲಿ ಕಳೆಯುತ್ತವೆ. ಸಂತಾನೋತ್ಪತ್ತಿಗಾಗಿ ಮೊಟ್ಟೆಗಳನ್ನಿಡಲು ಎಲ್ಲಾ ಹಾವು ಮೀನುಗಳು ಉಪ್ಪು ನೀರಿಗೆ ಹೊಂದಿಕೊಂಡಿವೆ. ವಲಸೆ ಹೋಗುವ ಸ್ವಭಾವ ಹೆಚ್ಚಿನ ಹಾವು ಮೀನುಗಳಲ್ಲಿ ಕಂಡು ಬರುತ್ತದೆ. ಕೆಲವು ತರದ ಹಾವು ಮೀನುಗಳಲ್ಲಿ ವಿದ್ಯುತ್ತನ್ನು ಉತ್ಪಾದಿಸುವ ಎರಡು ವಿದ್ಯುದಂಗಗಳಿರುತ್ತವೆ. ಹಾವು ಮೀನುಗಳು ನಿಶಾಚರಿ.

ಸಿಹಿನೀರಿನಲ್ಲಿ ಕಂಡು ಬರುವ ಹಾವು ಮೀನುಗಳಲ್ಲಿ ಅಂಗ್ವಿಲಾ ವಲಸೆ ಹೋಗುವುದಕ್ಕೆ ಹೆಸರುವಾಸಿಯಾದುವು. ಅಂಗ್ವಿಲಾ ಮೊಟ್ಟೆಗಳನ್ನಿಡಲು ನದಿಗಳನ್ನು ದಾಟಿ ಸಾವಿರಾರು ಮೈಲುಗಳಷ್ಟು ದೂರದ ಕಡಲಿನ ನಡುವೆ ವಲಸೆಹೋಗುವುವು. ಉತ್ತಮವಾದ ಸ್ಥಳದಲ್ಲಿ ಮೊಟ್ಟೆಯಿಟ್ಟು ಸಾಯುತ್ತದೆ. ಮೊಟ್ಟೆಯಿಂದ ಹೊರಬಂದ ಡಿಂಬಗಳು ರೂಪಪರಿವರ್ತನೆಗೊಂಡು, ಪ್ರೌಢಾವಸ್ಥೆ ತಲುಪುವುವು. (ಬಿ.ಆರ್.ಆರ್)

ಹಾವು ಮೀನುಗಳಲ್ಲಿ ಈ ಕೆಳಗಿನವು ಮುಖ್ಯವಾದುವು. ಓಫಿಯಿಕ್‌ತಿಡೆ ಕುಟುಂಬದ ಸ್ನೇಕ್ ಮತ್ತು ವರ್ಮ ಹಾವು ಮೀನುಗಳು ಹೆಚ್ಚು ವಿಕಾಸವಾಗಿರುವ ಬಿಲ ತೋಡುವ ಮೀನುಗಳು. ಇವುಗಳಿಗೆ ಉದ್ದ ಮತ್ತು ಚೂಪಾದ ಮೂತಿ ಉಂಟು. ತೋಳಿನ ಈಜುರೆಕ್ಕೆಗಳು ಚಿಕ್ಕದಾಗಿರುತ್ತವೆ ಅಥವಾ ಇರುವುದೇ ಇಲ್ಲ. ಕಿವಿರು ರಂಧ್ರಗಳು ಚಿಕ್ಕವು. ಹುರುಪೆಯ ಹೊದಿಕೆ ಇಲ್ಲ. ಕೆಲವು ಪ್ರಭೇದಗಳಲ್ಲಿ ಬಾಲದ ಈಜು ರೆಕ್ಕೆ ಬದಲಾಗಿ ಚೂಪಾದ ಬಾಲವಿರುತ್ತದೆ. ಬಾಲದ ತುದಿಯಿಂದ ಮರಳು, ಮಣ್ಣಿನಲ್ಲಿ ಬಿಲ ತೋಡಬಲ್ಲುವು.

ಹೆಟೊರೊಕಾಂಗ್ರಿನೆ ಉಪಕುಟುಂಬದ ಗಾರ್ಡನ್ ಹಾವು ಮೀನುಗಳು ನೀಳವಾಗಿರುತ್ತವೆ. ಉದ್ದ 30 ರಿಂದ 50 ಸೆಂಮೀ. ಕಣ್ಣುಗಳು ದೊಡ್ಡದಾಗಿವೆ. ಉಷ್ಣವಲಯದ ಸಮುದ್ರದ ಮರಳಿನಲ್ಲಿ ಕಾಣಸಿಗುವುವು. ರಾತ್ರಿಯ ವೇಳೆ ಮರಳಿನಲ್ಲಿ ಹುದುಗಿದ್ದು ಬೆಳಗಿನ ವೇಳೆ ಬಿಲದಿಂದ 30–60 ಸೆಂಮೀ ಮೇಲೆ ಬರುತ್ತವೆ. ನೀರಿನಲ್ಲಿರುವ ತೇಲು ಜೀವಿಗಳು ಇವುಗಳ ಆಹಾರ. ಮ್ಯಾಕಿನಿಡೆ ಕುಟುಂಬದ ಮೊರೇ ಹಾವು ಮೀನುಗಳಲ್ಲಿ ಹುರುಪೆಯಿಲ್ಲ, ಆದರೆ ದಪ್ಪ ಚರ್ಮವಿರುತ್ತದೆ. ಜೊತೆಯಾದ ಈಜು ರೆಕ್ಕೆಗಳಿಲ್ಲ. ಕಿವಿರು ರಂಧ್ರಗಳು ಚಿಕ್ಕವು. ಬೆನ್ನಿನ ರೆಕ್ಕೆ ಮತ್ತು ಆಸನದ ರೆಕ್ಕೆ ಬಾಲದ ರೆಕ್ಕೆಯೊಡನೆ ಕೂಡಿವೆ. ಶುದ್ಧವಾದ ರೀಫ್ ನೀರಿನಲ್ಲಿ ವಾಸಿಸುತ್ತವೆ. ಉದ್ದ 3 ರಿಂದ 3.7 ಮೀ. ದಕ್ಷಿಣದ ಉಷ್ಣವಲಯ. ದಕ್ಷಿಣ ಕ್ಯಾಲಿಫೋರ್ನಿಯ ಮತ್ತು ಉತ್ತರ ಗಲ್ಫ್‌ನ ಮೆಕ್ಸಿಕೊಗಳಲ್ಲಿ ಕಾಣಸಿಗುವುವು. ಅಂಗ್ವಿಲಿಡೆ ಮತ್ತು ಕಾಂಗ್ರಿಡೆ ಕುಟುಂಬದ ಸಿಹಿನೀರಿನ ಹಾವು ಮೀನುಗಳಲ್ಲಿ ಚೆನ್ನಾಗಿ ಬೆಳೆದ ತೋಳಿನ ಈಜು ರೆಕ್ಕೆಗಳು ಮತ್ತು ಚಿಕ್ಕ ಹುರುಪೆಗಳು ಇರುತ್ತವೆ. ಇವು ಬದುಕಿನ ಹೆಚ್ಚು ಸಮಯವನ್ನು ಸಿಹಿ ನೀರಿನಲ್ಲಿಯೆ ಕಳೆಯುವುವಾದರೂ ಮೊಟ್ಟೆಯಿಡಲು ಸಮುದ್ರಕ್ಕೆ ಬರುತ್ತವೆ. ಸಿಹಿ ನೀರಿನ ಹಾವು ಮೀನುಗಳಲ್ಲಿ 16 ಪ್ರಭೇದಗಳಿವೆ.

ಸಾಗರವಾಸಿ ಕಾಂಗರ್‌ಗಳಲ್ಲಿ ಕಾಂಗರ್ ಕಾಂಗರ್ ಮುಖ್ಯವಾದುವು. ಕಲ್ಲುಗಳಿಂದಾವೃತ ಕಡಲ ತೀರಗಳಲ್ಲಿ ಕಂಡು ಬರುತ್ತವೆ. ಕಲ್ಲಿನಿಂದ ಕೂಡಿದ ಕಡಲ ತೀರದ ಹಾವು ಮೀನುಗಳಲ್ಲೆಲ್ಲಾ ಇವು ದೊಡ್ಡವು. ಉದ್ದ 2 ಮೀ ಮತ್ತು ತೂಕ 35 ಗ್ರಾಂ. ಕೆಲವು ಅಸಾಧಾರಣವಾದ ಕಾಂಗರ್‌ಗಳು 100 ಕಿಗ್ರಾಂ ಇರುವುದುಂಟು.



ಗಲ್‌ಪರ್ ಅಥವಾ ಸ್ವಾಲೋಅರ್ ಹಾವು ಮೀನು (ಸ್ಯಾಕೊಫ್ಯಾರಿಂಕ್ಸ್ ಹ್ಯಾರಿಸೋನಿ) 3000 ಮೀ ಆಳದಲ್ಲಿ ಇರುತ್ತದೆ. ಇದರ ಉದ್ದ 2 ಮೀ. ದೊಡ್ಡ ದವಡೆಗಳು, ಚೂಪಾದ ಹಲ್ಲುಗಳು ಮತ್ತು ದೊಡ್ಡ ಹಿಗ್ಗಬಹುದಾದ ಹೊಟ್ಟೆ ಇವೆ. ತನ್ನ ಗಾತ್ರಕ್ಕಿಂತ ದೊಡ್ಡದಾದ ಪ್ರಾಣಿಗಳನ್ನು ತಿನ್ನಬಲ್ಲುದು. ಆಹಾರವನ್ನು ನುಂಗಲು ದವಡೆಗಳನ್ನು ಸೀಸಾ ರೀತಿಯಲ್ಲಿ ಚಲಿಸುತ್ತದೆ.

ಆಂಗ್ವಿಲಾ ರೊಸ್ಟ್ರಟಾ ಅಮೆರಿಕಾದ ಹಾವು ಮೀನು. ಆಂಗ್ವಿಲ ಜಪೊನಿಕಾ ಜಪಾನಿನ ಹಾವು ಮೀನು ಮತ್ತು ಪಿಸೊಡನಾಪ್ಸಿಸ್ ಬೊರೊ ಭಾರತದ ಹಾವು ಮೀನು.

ಯೂರೋಪಿನ ಮತ್ತು ಅಮೆರಿಕಾದ ಹಾವು ಮೀನುಗಳಿಗೆ ಅಸಾಧಾರಣವಾದ ವಲಸೆ ಹೋಗುವ ಶಕ್ತಿಯಿದೆ 10 ವರ್ಷವಾದಾಗ ಅವುಗಳ ಮೇಲ್ಭಾಗದ ಬಣ್ಣ ಕಪ್ಪು ಮತ್ತು ಕೆಳಭಾಗದಲ್ಲಿ ಬೆಳ್ಳಿಯ ಬಿಳಿ ಬಣ್ಣವಿರುತ್ತದೆ. ಸಾಕಷ್ಟು ದಪ್ಪವಾದ ನಂತರ ಅವು ತಿನ್ನುವುದನ್ನು ನಿಲ್ಲಿಸಿ, ಸಮುದ್ರದ ಕಡೆ ವಲಸೆ ಹೋಗಲು ಪ್ರಾರಂಭಿಸುತ್ತವೆ. ಈ ವಲಸೆಗೆ ಸುಮಾರು ಒಂದು ವರ್ಷಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ. ಹಾವು ಮೀನುಗಳು 400 ರಿಂದ 700 ಮೀ ಆಳದಲ್ಲಿ ಮೊಟ್ಟೆ ಇಡುತ್ತವೆ. ಪ್ರತಿಯೊಂದು

ಹೆಣ್ಣು ಸುಮಾರು 20 ಮಿಲಿಯನ್, ಸ್ವತಂತ್ರವಾಗಿ ತೇಲುವ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆ ಇಟ್ಟ ನಂತರ ಅವು ಸಾಯುತ್ತವೆ. ಈ ಮೊಟ್ಟೆಗಳಿಂದ ಹೊರಬೀಳುವ ಮರಿಗಳು ಸಾವಕಾಶವಾಗಿ ಪುನ: ವಲಸೆ ಹೊರಟು ಸುಮಾರು 3–4 ವರ್ಷಗಳಲ್ಲಿ, ನದಿಗಳನ್ನು ಸೇರುತ್ತವೆ. ಈ ಪ್ರವಾಸದ ಅವಧಿಯಲ್ಲಿ ಮರಿಗಳು ರೂಪಪರಿವರ್ತನೆಯಾಗಿ ಪ್ರೌಢಜೀವಿಗಳಾವುವು. (ಎಸ್.ಆರ್.ಎಸ್)

**ಹೀಮೋಗ್ಲಾಬಿನ್:** ಕಶೇರುಕಗಳ ರಕ್ತದಲ್ಲಿರುವ (ಕೆಂಪುರಕ್ತಕಣ) ಆಮ್ಲಜನಕವನ್ನು ಎಲ್ಲ ಕೋಶಗಳಿಗೆ ಸಾಗಿಸುವ, ಉಸಿರಾಟದ ಒಂದು ವರ್ಣದ್ರವ್ಯ. ಹೀಮೋಗ್ಲಾಬಿನ್ ಒಂದು ದೊಡ್ಡ ಹೀಮೋಪ್ರೊಟೀನು ಗುಂಪಿನ ಸದಸ್ಯ. ಈ ಗುಂಪು ಸೈಟೊಕ್ರೋಮುಗಳನ್ನೊಳಗೊಂಡಿದೆ. ಅನೇಕ ವಿಧದ ಜೀವಕೋಶಗಳ ಮತ್ತು ಕೆಟಲೈಸ್ ಹಾಗೂ ಪರ್‌ಆಕ್ಸೈಡೇಸ್ ನಂತಹ ಪ್ರಮುಖ ಕಿಣ್ವಗಳ ಒಳಗೆ ಇವು ಪ್ರಮುಖ ವರ್ಗಾವಣಾ ನಿಯೋಗಿಗಳಾಗಿ ಕಾರ್ಯನಿರ್ವಹಿಸುತ್ತವೆ. ಹೀಮೋಗ್ಲಾಬಿನ್ ರಾಸಾಯನಿಕವಾಗಿ ಸಸ್ಯಗಳಲ್ಲಿರುವ ಕ್ಲೋರೋಫಿಲ್ ಎಂಬ ಹಸಿರು ವರ್ಣದ್ರವ್ಯಕ್ಕೆ ಸಂಬಂಧ ತೋರುತ್ತದೆ. ಕ್ಲೋರೋಫಿಲ್ (ಹಸಿರು ವರ್ಣದ್ರವ್ಯ) ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ವಿಶೇಷ ಪಾತ್ರವಹಿಸುತ್ತದೆ. ಲೆಗ್ಯುಮೊಗ್ಲಾಬಿನ್ ಎಂಬ ಕೆಂಪು ವರ್ಣದ್ರವ್ಯವು ಲೆಗ್ಯುಮ ಸಸ್ಯಗಳ ಬೇರಿನ ಗಂಟುಗಳಲ್ಲಿ ಕಂಡುಬರುತ್ತದೆ. ಈ ವರ್ಣದ್ರವ್ಯವು ಸಾರಜನಕ ಅನಿಲವನ್ನು ಸ್ವಸ್ಥಾನದಲ್ಲಿ ಬಂಧಿಸಿಡಲು ನೆರವಾಗುತ್ತದೆ. ಇದನ್ನು ಬ್ಯಾಕ್ಟೀರಿಯಾಗಳಲ್ಲಿಯು ವರದಿ ಮಾಡಿದ್ದಾರೆ. ಕೆಲವು ಮಾಯವಂತ ಹುಳುಗಳಲ್ಲಿ ಹೀಮೊಗ್ಲಾಬಿನ್ ಸೀಲೋಮ್ (ದೇಹಾವಕಾಶ) ದೊಳಗಿರುವ ಸೀಲೋಮಿಕ್ ಜೀವಕೋಶಗಳಲ್ಲಿ ಮತ್ತು ದುಗ್ಧರಸಗಳಲ್ಲಿದ್ದು, ಹೆಚ್ಚುವರಿ ಆಮ್ಲಜನಕವಾಹಕವಾಗಿ ಕೆಲಸಮಾಡುತ್ತವೆ. ಹೀಮೊಗ್ಲಾಬಿನ್ ವರ್ಣದ್ರವ್ಯವು ಹೆಚ್ಚಾಗಿ ಕೆಂಪುರಕ್ತಕಣಗಳಲ್ಲಿದ್ದು ರಕ್ತಕ್ಕೆ ಕೆಂಪುಬಣ್ಣ ಕೊಡುತ್ತದೆ. ಕೆಲವು ಅಕಶೇರುಕಗಳಲ್ಲಿ ಇದು ಪ್ಲಾಸ್ಮಾದಲ್ಲಿ ಕರಗಿರುತ್ತದೆ. ವಿವಿಧ ಪ್ರಾಣಿಗಳ ರಕ್ತದ ಹಿಮೋಗ್ಲಾಬಿನ್ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಮನುಷ್ಯನ ಪ್ರತಿ 10 ಸಿಸಿ ರಕ್ತದಲ್ಲಿ ಸುಮಾತು 14 ಗ್ರಾ.ಂಗಳಷ್ಟು ಹೀಮೋಗ್ಲಾಬಿನ್ ಇರುತ್ತದೆ.

ಹೀಮೋಗ್ಲಾಬಿನ್ ಅಣುವಿನಲ್ಲಿ ಕಬ್ಬಿಣ, ಒಂದು ಫಾರ್‌ಫೈರಿನ್ ರೀತಿಯ ಉಂಗುರ ಮತ್ತು ಗ್ಲೋಬಿನ್ ಎಂಬ ಪ್ರೊಟೀನು ಭಾಗ ಇವೆ. ಹೀಮೋಗ್ಲಾಬಿನ್‌ನಲ್ಲಿನ ಕಬ್ಬಿಣ ಮತ್ತು ಫಾರ್‌ಫೈರಿನ್ ಉಂಗುರ ಎರಡೂ ಸೇರಿ ಹೀಮ್ ಎಂದು ಕರೆಯುವ ಒಂದು ಸಂಯುಕ್ತ ವಸ್ತುವಾಗಿದೆ. ಹೀಮೊಗ್ಲಾಬಿನ್‌ನಲ್ಲಿ ನಾಲ್ಕು ಹೀಮ್‌ಗಳಿದ್ದು ಅವು ಗ್ಲೋಬಿನ್ ಪ್ರೊಟೀನಿಗೆ ಅಂಟಿಕೊಂಡಿವೆ. ಫಾರ್‌ಫೈನ್ ನಾಲ್ಕು ಪೈರೊಲಿಕ್ ನ್ಯೂಕ್ಲಿಯಸ್‌ಗಳಿಂದಾಗಿದೆ. ಪ್ರತಿಯೊಂದು 5 ಸದಸ್ಯರ ಉಂಗುರ. ಈ ಉಂಗುರದಲ್ಲಿ 4 ಕಾರ್ಬನ್ (ಇಂಗಾಲ) ಮತ್ತು 1 ನೈಟ್ರೊಜನ್ (ಸಾರಜನಕ) ಪರಮಾಣುಗಳಿವೆ. ಫಾರ್‌ಫೈನ್ ಖಂಡಭಾಗವು ಹೀಮೋಗ್ಲೋಬಿನ್‌ಗೆ ಅದರ ವರ್ಣದ್ರವ್ಯದ ಲಕ್ಷಣಗಳನ್ನೊದಗಿಸುತ್ತದೆ. ಕಬ್ಬಿಣವು ಪೈರೋಲ್ ಉಂಗುರದ 4 ನೈಟ್ರೋಜನ್ ಪರಮಾಣುಗಳು ಮತ್ತು ಗ್ಲೋಬಿನ್‌ನ ಕೆಲವು ನಿರ್ಧಾರವಾದ ಅಮೈನೊ ಆಮ್ಲಗಳಿಂದ ಹಿಡಿದಿಡಲ್ಪಟ್ಟಿದೆ.

ಗ್ಲೋಬಿನ್ ಒಂದು ಸಂಯುಕ್ತ ಪ್ರೊಟೀನು. ಇದರಲ್ಲಿ ಅಮೈನೊ ಆಮ್ಲಗಳ ಜೋಡಣೆಯಿಂದಾದ 4 ಪೆಪ್ಟೈಡ್ ಸರಪಣಿಗಳಿವೆ. ಇವು ಎರಡು ಅವಳಿ ಜೊತೆಗಳಿಂದಾಗಿವೆ. ಅವೆಂದರೆ ಆಲ್ಫಾ-ಸರಪಣಿಗಳು ಮತ್ತು ಬೀಟಾ-ಸರಪಣಿಗಳು. ಎಲ್ಲಾ ಪ್ರೊಟೀನುಗಳಂತೆಯೇ, ಈ ಪಾಲಿಪೆಪ್ಟೈಡ್ ಸರಪಣಿಗಳು ಅನೇಕ ವಿವಿಧ ಅಮೈನೊ ಆಮ್ಲಗಳ ಅನುಕ್ರಮ ಶ್ರೇಣಿಯಿಂದಾಗಿದೆ. ಇವು ಒಂದು ನಿರ್ದಿಷ್ಟ ನಿರಂತರ ಶ್ರೇಣಿಯಲ್ಲಿ ಜೋಡಿಸಿವೆ. ಅಮೈನೋ ಆಮ್ಲಗಳಿಂದಾದ ಪಾಲಿಪೆಪ್ಟೈಡ್ ಸರಪಣಿಯ ಅನುಕ್ರಮ ಸರಣಿ (ಶ್ರೇಣಿ) ಯು ಪ್ರಭೇದದಿಂದ ಪ್ರಭೇದಕ್ಕೆ ವ್ಯತ್ಯಾಸ ತೋರುತ್ತದೆ ಒಂದೊಂದು ಪ್ರಭೇದದೊಳಗೂ ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬರುತ್ತದೆ.

ದೇಹದ ಎಲ್ಲಾ ಅಂಗಾಂಶಗಳಿಗೆ ಸಾಗಿಸಲ್ಪಟ್ಟ ಆಮ್ಲಜನಕದಲ್ಲಿ ಶೇ. 98.6 ರಷ್ಟು ಹೀಮೋಗ್ಲಾಬಿನ್ ಸಾಗಿಸುತ್ತದೆ. ಉಳಿದದ್ದನ್ನು ರಕ್ತದ್ರವ (ಪ್ಲಾಸ್ಮ) ಸಾಗಿಸುತ್ತದೆ. ಉಚ್ಛ್ವಾಸದಿಂದ ಘುಪ್ಪುಸ (ಶ್ವಾಸಕೋಶ) ಕ್ಕೆ ಬಂದ ಆಮ್ಲಜನಕವು ಘುಪ್ಪುಸಗಳಲ್ಲಿರುವ ವಾಯುಕೋಶಗಳ ಒಳ ಅವರಣದ ಮೂಲಕ, ಅನಂತರ ಸಣ್ಣರಕ್ತನಾಳಗಳೊಳಗಿರುವ ರಕ್ತವನ್ನು ತಲುಪುತ್ತದೆ, ಅಲ್ಲಿಂದ ಆಮ್ಲಜನಕವು ಕೆಂಪುರಕ್ತ ಕಣವನ್ನು ತಲುಪುತ್ತದೆ. ಕೆಂಪು ರಕ್ತಕಣದಲ್ಲಿರುವ ಹೀಮೋಗ್ಲಾಬಿನ್ ಆಮ್ಲಜನಕವನ್ನು ಪಡೆದು ಅದು ಆಕ್ಸಿ ಹೀಮೋಗ್ಲಾಬಿನ್ ಆಗುತ್ತದೆ. ಈ ಕ್ರಿಯೆ ಎರಡು ಕಾರಣಗಳಿಂದಾಗಿ ನಡೆಯುತ್ತದೆ. ಒಂದು ಹೀಮೋಗ್ಲಾಬಿನ್‌ಗೆ ಆಮ್ಲಜನಕದ ಕಡೆಗೆ ಹೆಚ್ಚು ಒಲವು ಮತ್ತು ಎರಡನೆಯದು ಕೆಂಪುರಕ್ತಕಣಗಳಲ್ಲಿ ಹೆಚ್ಚು ಆಮ್ಲಜನಕವಿರದಿರುವುದು. ಇದು ಪ್ರಬುದ್ಧ ಮನುಷ್ಯನಲ್ಲಿ ಪ್ರತಿದಿನ ಸು. 6 ಲೀನಷ್ಟು ಆಮ್ಲಜನಕವನ್ನು ಕೊಂಡೊಯ್ಯುತ್ತದೆ.

ಆಕ್ಸಿಹಿಮೋಗ್ಲಾಬಿನ್ ಒಳಗೊಂಡಿರುವ ರಕ್ತವು ಅಂಗಾಂಶಗಳಿಗೆ ತಲುಪಿದಾಗ, ಅಲ್ಲಿ ಆಮ್ಲಜನಕದ ಪ್ರಮಾಣ, ಅದರ ರಕ್ತದ ಪ್ರಮಾಣಕ್ಕಿಂತ ಬಹಳ ಕಡಿಮೆ ಇರುವುದರಿಂದ ಪ್ರಸರಣ ಕ್ರಿಯೆಯ ಮೂಲಕ ಆಕ್ಸಿಹಿಮೋಗ್ಲಾಬಿನ್‌ನಲ್ಲಿರುವ ಆಮ್ಲಜನಕವು, ಅಂಗಾಂಶಗಳನ್ನು ಸೇರುತ್ತದೆ. ಇದರಿಂದ ರಕ್ತದಲ್ಲಿರುವ ಆಕ್ಸಿಹಿಮೊಗ್ಲಾಬಿನ್, ಹಿಮೊಗ್ಲಾಬಿನ್‌ಗೆ ಪರಿವರ್ತನೆಯಾಗಿ, ರಕ್ತವು ಪುನಃ ಘುಪ್ಪುಸಗಳಿಗೆ ಬಂದಾಗ ಮತ್ತೆ ಆಮ್ಲಜನಕದೊಂದಿಗೆ ಬೆರೆತು, ಆಕ್ಸಿಹಿಮೊಗ್ಲಾಬಿನ್ ಆಗಿ, ಈ ಮೊದಲು ವಿವರಿಸಿದ ಕ್ರಿಯೆಯ ಪುನಾರಾವರ್ತನೆಯಾಗುವುದರ ಮೂಲಕ ಅಂಗಾಂಶಗಳು ಸತತವಾಗಿ ಆಮ್ಲಜನಕವನ್ನು ಪಡೆಯುತ್ತವೆ.

ಜೀವಕೋಶಗಳಿಗೆ ತಲುಪಿದ ಆಮ್ಲಜನಕ ಉತ್ಕರ್ಷಣಾ ರಾಸಾಯನಿಕ ಕ್ರಿಯೆಗಳಲ್ಲಿ ಭಾಗವಹಿಸಿ ಶಕ್ತಿಯನ್ನು ಉತ್ಪತ್ತಿಮಾಡುತ್ತದೆ (ಬಿಡುಗಡೆ). ಹೀಮೊಗ್ಲಾಬಿನ್‌ನ ಸ್ವಲ್ಪ ಭಾಗ ಕಾರ್ಬನ್ ಡೈಆಕ್ಸೈಡ್‌ನೊಂದಿಗೆ ಒಂದಾಗಿ ಕಾರ್ಬನ್‌ಡೈಆಕ್ಸೈಡನ್ನು ಅಂಗಾಂಶಗಳಿಂದ ಪುಪ್ಪುಸಗಳಿಗೆ ಸಾಗಿಸಿ, ನಿಶ್ವಾಸದ ಮೂಲಕ ಅದರ ವಿಸರ್ಜನೆಗೆ ಸಹಾಯಕವಾಗಿದೆ. ಇದಲ್ಲದೆ ದೇಹದ ಆಮ್ಲ-ಕ್ಷಾರ (ಆಸಿಡ್ ಬೇಸ್) ಸಮತೋಲನವನ್ನು ಕಾಪಾಡುವಲ್ಲಿಯೂ ಹಿಮೋಗ್ಲಾಬಿನ್ ನೆರವಾಗುತ್ತದೆ.

ಹಿಮೋಗ್ಲಾಬಿನ್ ಕೆಂಪು ರಕ್ತಕಣಗಳಲ್ಲಿ ಉತ್ಪತ್ತಿಯಾಗುತ್ತದೆ. ಈ ಕೆಂಪುರಕ್ತಕಣಗಳು ಮೂಳೆ ಮಜ್ಜೆಯಲಿ (ಬೋನ್ ಮ್ಯಾರ್ರೊ) ಆದಿಯ ಜೀವಕೋಶಗಳಿಂದ ಬೆಳೆದು ಪಕ್ವವಾಗಿರುತ್ತವೆ. ಕೆಲ ಅವಶ್ಯಕ ಪೋಷಕ ವಸ್ತುಗಳ ಕೊರತೆಯಿಂದ ಸಾಕಷ್ಟು ಸಂಖ್ಯೆಯ ಕೆಂಪುರಕ್ತಕಣಗಳ ಮತ್ತು ಸಾಕಷ್ಟು ಪ್ರಮಾಣದ ಹೀಮೋಗ್ಲಾಬಿನ್ ಉತ್ಪಾದನೆ ಆಗುವುದಿಲ್ಲ.

ರಕ್ತದಲ್ಲಿಯ ಹೀಮೋಗ್ಲಾಬಿನ್ ಮತ್ತು ಕೆಂಪುರಕ್ತಕಣಗಳ ಕೊರತೆಯನ್ನು ಅಶಕ್ತತೆ (ಅನೀಮಿಯಾ) ಎಂದು ಕರೆಯಲಾಗಿದೆ. ಮನುಷ್ಯನಲ್ಲಿ ಅನೇಕ ರೀತಿಯ ಅನೀಮಿಯಾಗಳಿವೆ. ಅವುಗಳಲ್ಲಿ ಅತಿ ಸಾಮಾನ್ಯವಾದದ್ದು ಆಗಾಗ್ಗೆ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುವ ಹೈಪೊಕ್ರೋಮಿಕ್ ಮೈಕ್ರೊಸೈಟಿಕ್ ಅನೀಮಿಯ. ಈ ಅನೀಮಿಯ ಆಹಾರದಲ್ಲಿ ಕಬ್ಬಿಣದ ಕೊರತೆಯಿಂದಾಗಿ ಉಂಟಾಗುತ್ತದೆ. ಇದರ ಲಕ್ಷಣಗಳು ಕೆಂಪುರಕ್ತಕಣಗಳಲ್ಲಿ ಅತಿ ಕಡಿಮೆ ಹೀಮೋಗ್ಲಾಬಿನ್ ಅಂಶ ಮತ್ತು ಕೆಂಪುರಕ್ತ ಕಣಗಳು ಅಸಹಜವಾಗಿ ಚಿಕ್ಕದಾಗಿರುವುದು. ಹೀಮೊಗ್ಲಾಬಿನ್‌ನ ಉತ್ಪಾದನೆಯಲ್ಲಿ ಆನುವಂಶೀಯ (ವಿಪರೀತವಾಗಿ) ಅಡಚಣೆಗಳಾದರೂ ಅನಿಮಿಯಾ ಕಾಣಿಸಿಕೊಳ್ಳುತ್ತದೆ. ಯಾವುದೇ ರೀತಿಯ ಅನೀಮಿಯವಾದರೂ, ಹೀಮೋಗ್ಲಾಬಿನ್ ಅಭಾವ ಸಾಕಷ್ಟು ಆಮ್ಲಜನಕವನ್ನು ಘುಪ್ಪುಸಗಳಿಂದ ಅಂಗಾಂಶಗಳಿಗೆ ಸಾಗಿಸುವ ಪ್ರಮಾಣದಲ್ಲಿ ಗಣನೀಯವಾಗಿ ಕಡಿಮೆಯಾಗುತ್ತದೆ.

ಅತಿಕಡಿಮೆ ಆಮ್ಲಜನಕವಿರುವ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿಗಳ ರಕ್ತದಲ್ಲಿ ಸಮುದ್ರ ಮಟ್ಟದಲ್ಲಿ ವಾಸಿಸುವ ವ್ಯಕ್ತಿಗಳ ರಕ್ತದಲ್ಲಿರುವುದಕ್ಕಿಂತ ಹೆಚ್ಚು, ಹೀಮೋಗ್ಲೋಬಿನ್ ಅಂಶವಿರುತ್ತದೆ.

ಮನುಷ್ಯನ ಕೆಂಪುರಕ್ತಕಣಗಳ ಆಯಸ್ಸು ಸು. 120 ದಿನಗಳು ಮಾತ್ರ. ಕೆಂಪು ರಕ್ತಕಣಗಳಿಗೆ ವಯಸ್ಸಾದಂತೆ, ಅವುಗಳನ್ನು ದೇಹದ ರೆಟಿಕ್ಯುಲೋ ಎಂಡೋತೀಲಿಯಲ್ ಜೀವಕೋಶಗಳು ಪಡೆದುಕೊಳ್ಳುತ್ತವೆ. ಅಲ್ಲಿ ಹೀಮೊಗ್ಲಾಬಿನ್ ನಾಶವಾಗುತ್ತದೆ. ಅದರ ಕಬ್ಬಿಣಾಂಶವು ಹೊಸ ಹೀಮೋಗ್ಲಾಬಿನ್ ತಯಾರಿಕೆಯಲ್ಲಿ ಉಪಯೋಗವಾಗುತ್ತದೆ.

ಹೀಮೊಗ್ಲಾಬಿನ್‌ನ ರಾಸಾಯನಿಕ ರಚನೆಯ ಅಭ್ಯಾಸವು ಮನುಷ್ಯನ ಆನುವಂಶೀಯತೆ ಮತ್ತು ತಳಿಶಾಸ್ತ್ರದ ಉಪಯೋಗ ಹಾಗೂ ದೇಹದ ಪ್ರೊಟೀನು ರಚನೆಗಳ ನಡುವಿನ ಪರಸ್ಪರ ಸಂಬಂಧದ ಮುಖ್ಯ ಮಾಹಿತಿಯನ್ನು ಒದಗಿಸಿದೆ. ವಿವಿಧ ಹೀಮೋಗ್ಲಾಬಿನ್‌ಗಳಲ್ಲಿ ಕಂಡುಬರುವ ರಾಸಾಯನಿಕ ವ್ಯತ್ಯಾಸಗಳು ಹೀಮೊಗ್ಲಾಬಿನ್ ಅಣುವಿನ ಗ್ಲಾಬಿನ್ ಪ್ರೊಟೀನು ಭಾಗದ ರಚನೆಯ ವ್ಯತ್ಯಾಸದಿಂದಾಗಿವೆ.

ನವಜಾತ ಶಿಶುವಿನ ಹೀಮೋಗ್ಲಾಬಿನ್ ಪ್ರಬುದ್ಧ ಮನುಷ್ಯನ ಹೀಮೋಗ್ಲಾಬಿನ್‌ನಿಂದ ಬೇರೆಯಾಗಿರುತ್ತದೆ. ಮಗುವಿನ ಹೀಮೊಗ್ಲಾಬಿನ್‌ನಲ್ಲಿ ಪ್ರಬುದ್ಧ ಮನುಷ್ಯನ ಹೀಮೊಗ್ಲಾಬಿನ್‌ನಲ್ಲಿರುವ ಬೀಟಾ-ಸರಣಿಯ ಬದಲಾಗಿ ಗಾಮಾ-ಸರಪಣಿ ಎಂದು ಕರೆಯುವ ಪೂರ್ತಿ ಬೇರೆಯಾದ ಪಾಲಿಪೆಪ್ಟೈಡ್ ಸರಪಣಿಯಿರುತ್ತದೆ. ಮಗು ಹುಟ್ಟಿದ ಮೊದಲ 4 ತಿಂಗಳಲ್ಲಿ ಮಗುವಿನ ಹೀಮೊಗ್ಲಾಬಿನ್ ಪ್ರಬುದ್ಧ ಮನುಷ್ಯನಲ್ಲಿರುವ ರೀತಿಯ ಹೀಮೊಗ್ಲಾಬಿನ್ ಆಗಿ ಕ್ರಮೇಣ ಬದಲಾಗುತ್ತದೆ.

ಮನುಷ್ಯನಲ್ಲಿ ಕಾಣಬರುವ ಕಾಯಿಲೆಗಳನ್ನು ವಿವರಿಸಲು ಮಾತ್ರವಲ್ಲದೆ. ಸಂತತಿಯ (ರೆಶಿಯಲ್) ಪರಸ್ಪರ ಸಂಬಂಧ ಮತ್ತು ಜನರ ಬೆಳವಣಿಗೆಯನ್ನು ಹೆಚ್ಚಾಗಿ ಅರ್ಥಮಾಡಿಕೊಳ್ಳಲು ಕೂಡ ಮನುಷ್ಯನ ಹೀಮೊಗ್ಲಾಬಿನ್‌ಗಳ ವಿಂಗಡಣೆಯ ಅಭ್ಯಾಸವು ಮುಖ್ಯವಾಗಿದೆ. (ಎಚ್.ಎಚ್.ಎಸ್.)

**ಹುಂಜ / ಕೋಳಿ:** ಆಕರ್ಷಕ ಜುಟ್ಟಿನಿಂದ, ಕುತ್ತಿಗೆಯ ಬಳಿ ಜೋತಾಡುವ ವ್ಯಾಟಲ್‌ಗಳಿಂದ ನೋಡಲು ಸುಂದರವಾಗಿರುವ ಗಂಡು ಕೋಳಿಗಳು. ಗತ್ತಿನ ಪ್ರಾಣಿಗಳು. ಗ್ಯಾಲಸ್ ಜಾತಿಗೆ ಸೇರಿವೆ.

ಕೋಳಿ ಸಾಕಣೆ ರೈತ ಪ್ರಧಾನವಾದ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೇ ಪ್ರಾರಭವಾಗಿದೆ. ಕಡಿಮೆ ಆಹಾರ, ಸ್ಥಳಾವಕಾಶ ಸಾಕಾಗುವುದರಿಂದ ಕೋಳಿಗಳನ್ನು ಎಲ್ಲಾ ಸಣ್ಣರೈತರು, ಭೂರಹಿತ ಕೃಷಿಕಾರ್ಮಿಕರೂ ಸಾಕಬಹುದಾಗಿದೆ. ಕೃಷಿ ತ್ಯಾಜ್ಯ ಧಾನ್ಯಗಳನ್ನು ತಿಂದು ಉತ್ಕೃಷ್ಟವಾದ, ಪೌಷ್ಟಿಕಾಂಶಭರಿತ ರುಚಿಕರ ಮಾಂಸವನ್ನು, ಮೊಟ್ಟೆಯನ್ನು ನೀಡುವ ಕೋಳಿಗಳನ್ನು ಮನೆಯ ಹಿತ್ತಲಿನಲ್ಲೇ ಸಾಕಬಹುದು. ಇವುಗಳನ್ನು ಮಾಂಸಕ್ಕಾಗಿ, ಮೊಟ್ಟೆಗಾಗಿ, ಹವ್ಯಾಸಕ್ಕಾಗಿ, ಜೂಜಿಗಾಗಿಯೂ ಸಾಕಲಾಗುತ್ತದೆ. ಹೆಚ್ಚುತ್ತಿರುವ ವಿದೇಶಿ ಬೇಡಿಕೆಯಿಂದಾಗಿ ಕೋಳಿ ಸಾಕಣೆ ಇಂದು ಉದ್ಯಮದ ಸ್ವರೂಪ ಪಡೆದಿದೆ.

ಮಾಂಸಕ್ಕಾಗಿ ಸಾಕುವ ಕೋಳಿಗಳನ್ನು (ಬ್ರಾಯ್ಲರ್‌ಗಳು) ಮಾಂಸ ಉತ್ಪಾದನೆಗಾಗಿಯೇ ಅಭಿವೃದ್ಧಿಪಡಿಸಲಾಗಿದೆ. ಇವು ಗಾತ್ರದಲ್ಲಿ ದೊಡ್ಡವು. ಎದೆ ಮತ್ತು ತೊಡೆಗಳು ಹೆಚ್ಚು ಮಾಂಸಲವಾಗಿವೆ. ಮಾಂಸ ಮೃದುವಾಗಿದ್ದು, ರುಚಿಕರವಾಗಿದೆ. ಅತ್ಯಂತ ವೇಗವಾಗಿ ಬೆಳೆದು ತೂಕ ಹೆಚ್ಚಿಸಿಕೊಳ್ಳುತ್ತವೆ. ತಾವು ತಿಂದ ಪ್ರತಿ ಕಿಗ್ರಾಂ ಆಹಾರವನ್ನು ಅರ್ಧ ಕಿಗ್ರಾಂ ಮಾಂಸವನ್ನಾಗಿ ಪರಿವರ್ತಿಸುತ್ತವೆ. ಆರು ವಾರಗಳ ನಂತರ ಇವುಗಳನ್ನು ಮಾಂಸಕ್ಕಾಗಿ ವಧಿಸಲಾಗುತ್ತದೆ. ಅಲ್ಲಿಯವರೆಗೆ ಸುಮಾರು 3.5 ಕಿಗ್ರಾಂ ಆಹಾರ ತಿಂದು 1.6–1.8 ಕಿಗ್ರಾಂ ಗಳವರೆಗೆ ಮಾಂಸವನ್ನು ನೀಡುತ್ತವೆ. ಕಾಬ್, ರಾಸ್, ಹಬ್ಬರ್ಡ್, ಅನಕ್–40, ಅನಕ್–2000, ಕೆಗ್‌ಬ್ರೊ, ಸ್ಟಾರ್‌ಬ್ರೊ, ಐಬಿಟಿ–83, ಲೋಮ್ಯಾನ್, ಯುಬ್ರು ಮುಂತಾದುವುಗಳು ಮುಖ್ಯವಾದ ತಳಿಗಳು.



ಮೊಟ್ಟೆಕೋಳಿಗಳನ್ನು (ಲೇಯರ್ಸ್) ಅಧಿಕ ಮೊಟ್ಟೆ ಉತ್ಪಾದನೆಗಾಗಿ ಅಭಿವೃದ್ಧಿಪಡಿಸಲಾಗಿದೆ. ಇವುಗಳ ಗಾತ್ರ ಚಿಕ್ಕದು. ತಿನ್ನುವ ಆಹಾರವೂ ಕಡಿಮೆ. ಆದರೆ ದೊಡ್ಡ ದೊಡ್ಡ ಮೊಟ್ಟೆಗಳನ್ನು ಕೊಡುತ್ತವೆ. ತಿನ್ನುವ ಆಹಾರದ ಹೆಚ್ಚು ಭಾಗವನ್ನು ಮೊಟ್ಟೆ ಇಡಲೇ ಉಪಯೋಗಿಸುತ್ತವೆ. ಹದಿನೆಂಟರಿಂದ ಇಪ್ಪತ್ತು ವಾರದಿಂದ ಮೊಟ್ಟೆ ಕೊಡಲು ಪ್ರಾರಂಭಿಸುತ್ತವೆ. ವರ್ಷಕ್ಕೆ ಸುಮಾರು 210 ರಿಂದ 320 ಮೊಟ್ಟೆ ಕೊಡಬಲ್ಲವು. ತಿಂದ ಪ್ರತಿ 1.5 ಕಿಗ್ರಾಂ. ಆಹಾರ ಹನ್ನೆರಡು ಮೊಟ್ಟೆಗಳನ್ನು ನೀಡಬಲ್ಲದು. ಡಿಕಾಲ್ಬ್, ರಾಣೀಶೇವರ್, ಮೈಚಿಕ್ಸ್, ಬೊವಾನ್ಸ್–300, ಬಿವಿ–300, ಕಿಸ್ಟೋನ್, ಪೂನಾಪರ್ಲ್, ಎಚ್ ಎಚ್ –280, ಹೈಸೆಕ್ಸ್, ಹೈಲೈನ್ ಮುಂತಾದವುಗಳು ಮುಖ್ಯವಾದ ತಳಿಗಳು.

ವಿವಿಧೋದ್ದೇಶದ ಕೋಳಿಗಳನ್ನು ಮಾಂಸಕ್ಕಾಗಿ ಹಾಗೂ ಮೊಟ್ಟೆಗಾಗಿ ಎರಡಕ್ಕೂ ಸಾಕಬಹುದು. ಮಾಂಸಕ್ಕಾಗಿ ಸಾಕುವ ಕೋಳಿಗಳು ಹೆಚ್ಚು ಮೊಟ್ಟೆಗಳನ್ನು ಕೊಡುವುದಿಲ್ಲ. ಅದೇ ರೀತಿ ಮೊಟ್ಟೆ ಕೋಳಿಗಳು ಹೆಚ್ಚು ಮಾಂಸ ಕೊಡಲಾರವು. ವಿವಿಧೋದ್ದೇಶದ ಕೋಳಿಗಳನ್ನು ಅಧಿಕ ಮೊಟ್ಟೆಗಳನ್ನು ಹಾಗೂ ಹೆಚ್ಚು ಮಾಂಸವನ್ನು ಕೊಡುವ ಎರಡೂ ಗುಣಗಳನ್ನು ಸೇರಿಸಿ ಅಭಿವೃದ್ಧಿಪಡಿಸಲಾಗಿದೆ. ಇವು ಕೆಲವು ಕಾಲ ಮೊಟ್ಟೆಗಳನ್ನು ಕೊಡುತ್ತವೆ. ನಂತರ ಮೊಟ್ಟೆ ಉತ್ಪಾದನೆ ಕಡಿಮೆಯಾಗಿ ಮೈಯಲ್ಲಿ ಮಾಂಸ, ಕೊಬ್ಬು ಕೂಡಿಸಿಕೊಂಡು ಮಾಂಸದ ಕೋಳಿಗಳಾಗಿ ಬೆಳೆಯುತ್ತವೆ. ಮೊದಲು ಇವುಗಳಿಂದ ಮೊಟ್ಟೆಗಳನ್ನು ಪಡೆದುಕೊಂಡು, ನಂತರ ಮಾಂಸಕ್ಕಾಗಿ ವಧಿಸಲಾಗುತ್ತದೆ. ಪ್ರಮುಖ ವಿವಿಧೋದ್ದೇಶದ ಕೋಳಿ ತಳಿಗಳೆಂದರೆ ರೋಡ್ ಐಲ್ಯಾಂಡ್ ರೆಡ್, ಪ್ಲೈಮೋತ್‌ರಾಕ್, ನ್ಯೂಹ್ಯಾಂಪ್‌ಶೈರ್, ಆಸ್ಟ್ರಲಾಪ್ ಮುಂತಾದವು.

ಗಿರಿರಾಜ ಕೋಳಿಯನ್ನು ಬೆಂಗಳೂರಿನ ಪಶುವೈದ್ಯಕೀಯ ಕಾಲೇಜಿನಲ್ಲಿ ಹಲವು ತಳಿಗಳ ಸಂಸ್ಕರಣದಿಂದ ಅಭಿವೃದ್ಧಿಪಡಿಸಲಾಗಿದೆ. ಇದು ಅಧಿಕ ಮೊಟ್ಟೆಗಳನ್ನು ಹಾಗು ರುಚಿಕರವಾದ ಮೃದು ಮಾಂಸವನ್ನು ನೀಡಬಲ್ಲುದು. ನೋಡಲು ನಾಟಿ ಕೋಳಿಯಂತೆ ವಿವಿಧ ಬಣ್ಣಗಳಿಂದ ಆಕರ್ಷಕವಾಗಿರುವ ಇದು ಎಲ್ಲಾ ಹವಾಮಾನಕ್ಕೂ ಹೊಂದಿಕೊಂಡು ಬೆಳೆಯುತ್ತದೆ. ಇದರ ರೋಗನಿರೋಧಕ ಶಕ್ತಿ ಅಧಿಕ. ಹೆಚ್ಚಿನ, ವಿಶೇಷ ವ್ಯವಸ್ಥೆಗಳಿಲ್ಲದೆ ಮನೆಯ ಹಿತ್ತಲಿನಲ್ಲೇ ನಾಟಿ ಕೋಳಿಗಳಂತೆಯೇ ಸಾಕಬಹುದಾದ್ದರಿಂದ ಅತ್ಯಂತ ಜನಪ್ರಿಯವಾಗಿದೆ. ನಾಟಿ ಕೋಳಿಗಳಿಗಿಂತ ಮೂರು ಪಟ್ಟು ಹೆಚ್ಚು ಮಾಂಸವನ್ನೂ ಎರಡು ಪಟ್ಟು ಹೆಚ್ಚು ಮೊಟ್ಟೆಯನ್ನೂ ಕೊಡುತ್ತದೆ.

ಹುಂಜದ ಸಂಪರ್ಕವಿಲ್ಲದ ಕೋಳಿ ಇಡುವ ಮೊಟ್ಟೆ ಮರಿಯಾಗುವುದಿಲ್ಲ. ಆದ್ದರಿಂದ ಇಂಥ ಮೊಟ್ಟೆ ಹಾಲಿನಂತೆ ಪ್ರಾಣಿಜನ್ಯ ಉತ್ಪನ್ನವೇ ಹೊರತು ಮಾಂಸಾಹಾರವಲ್ಲವೆಂದು ಹೇಳಬಹುದು.

ಹುಂಜಗಳ ಕಾಳಗ ಕೆಲವು ಪ್ರದೇಶಗಳಲ್ಲಿ ಅತ್ಯಂತ ಜನಪ್ರಿಯ ಜನಪದ ಕ್ರೀಡೆ. ಈ ಪುಟ್ಟ ಹುಂಜಗಳ ಕಾಳಗ ನೋಡಲು, ಜೂಜಾಡಲು ದೂರ ಪ್ರದೇಶಗಳಿಂದಲೂ ಜನ ಸೇರುತ್ತಾರೆ. ಒಮ್ಮೆ ಪಂದ್ಯಕ್ಕೆ ಬಿಟ್ಟರೆ ತಮಗಾದ ಗಾಯವನ್ನೂ ಲೆಕ್ಕಿಸದೆ ಎದುರಾಳಿಯ ಮೇಲೆ ಆಕ್ರಮಣ ಮಾಡುವ ಇದು ತುಂಬಾ ಚುರುಕು ಸ್ವಭಾವದವು. ಕಾಳಗಕ್ಕಾಗಿಯೇ ವಿಶೇಷ ತಳಿಗಳು ರೂಪುಗೊಂಡಿವೆ.

ಕೆಲವು ಕಡೆ ಪಂದ್ಯಾಟ ಕ್ರೂರವಾಗಿರುತ್ತಿದ್ದುದೂ ಉಂಟು. ಹುಂಜಗಳ ಕಾಲಿಗೆ ಚಿಕ್ಕ ಕತ್ತಿಯನ್ನು ಕಟ್ಟಿ ಕಾದಾಟಕ್ಕೆ ಬಿಡುತ್ತಿದ್ದುದರಿಂದ ಕಾಲಿನಿಂದ ಹೊಡೆದಾಗ ಎದುರಾಳಿಯಿಂದ ರಕ್ತ ಸುರಿಯುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಇದು ಕಡಿಮೆಯಾಗಿದೆ.

ಹುಂಜಗಳು ಮನೆಯ ಸುತ್ತಮುತ್ತಲಿನ ಪ್ರದೇಶದ ಹುಳು ಹುಪ್ಪಟೆಗಳಿಂದ ರಕ್ಷಿಸುತ್ತವೆ. ಚಿಕ್ಕ ಚಿಕ್ಕ ಹಾವಿನ ಮರಿಗಳನ್ನೂ ಝರಿಗಳನ್ನೂ ಮನೆಯ ಒಳಗೆ ಬರಲು ಬಿಡದೆ ಸಾಯಿಸಿ ಬಿಡುವುದೂ ಉಂಟು. ಇನ್ನು ಬೆಳಗಿನ ಹುಂಜದ ಕೂಗು ಜಗತ್ಪ್ರಸಿದ್ಧ. ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಈ ಹುಂಜವೇ ಬೆಳಿಗ್ಗೆ ಬೇಗ ಏಳಲು ಅಲಾರಂ ಇದ್ದಂತೆ. (ಎಸ್.ಬಿ.ಆರ್.)

**ಹುಟ್ಟುಮರ (ಅನಾಪ್ಲಾಸಿಯಾ):** ಜೀವಕೋಶಗಳು ಪುನರ್‌ವಿಭೇದನೆ ಹೊಂದಿ ಭ್ರೂಣದ ಜೀವಕೋಶಗಳಂತೆ ಮಾರ್ಪಾಡಾಗುವಿಕೆ. ಕ್ಯಾನ್ಸರ್ ರೋಗಕ್ಕೆ ಇದನ್ನು ಹೋಲಿಸಬಹುದು. ಪುನರ್ ವಿಭೇದನೆಯ ಮಟ್ಟ ಕ್ಯಾನ್ಸರ್ ಹುಣ್ಣಿನ ಕೊನೆಯ ಹಂತಗಳಿಗೆ ಸರಿಸಮನಾಗಿರುತ್ತದೆ. (ಎಸ್.ಎನ್.ಎಚ್.)

**ಹುಲಿ:** ಪಂಥೇರಾ ಟೈಗ್ರಿಸ್ ಪ್ರಭೇದದ ಸ್ತನಿ ಗುಂಪಿನ ಫೆಲಿಡೆ ಕುಟುಂಬದ ಸದಸ್ಯ (ಟೈಗರ್). ಇದು ಕಾರ್ನಿವೊರಾ ಗಣಕ್ಕೆ ಸೇರಿದ ಮಾಂಸಾಹಾರಿ ಪ್ರಾಣಿ. ಉಷ್ಣವಲಯ ವಾಸಿ. ಭೂಖಂಡದ ಯುರೇಷ್ಯ ಭಾಗದಲ್ಲಿ ಹುಲಿ ಸಂತತಿ ಮೊದಲು ಉಗಮಗೊಂಡು ಅನಂತರ, ದಕ್ಷಿಣ ಭಾಗದ ಕಡೆ ಹರಡಿದ ಬಗ್ಗೆ ಉಲ್ಲೇಖಗಳಿವೆ. ಏಷ್ಯ ಖಂಡದ ವೈವಿಧ್ಯಮಯ ಭೂಪರಿಸರವು ನಾನಾ ಪ್ರಭೇದದ ಹುಲಿಗಳ ಆಶ್ರಯ ತಾಣ. ಬಾಲಿ, ಕ್ಯಾಸ್ಪಿಯನ್, ಜಾವ, ಸೈಬೀರಿಯ, ಸುಮಾತ್ರ, ಚೀನ, ಕಾರ್ಬೆಟ್ ಮತ್ತು ಬಂಗಾಲ ಎಂಬ ಪ್ರಭೇದದ ಹುಲಿಗಳು ೨೦ನೆಯ ಶತಮಾನದಲ್ಲಿ ಜೀವಿಸುತ್ತಿದ್ದುದರ ಬಗ್ಗೆ ವೈಜ್ಞಾನಿಕ ಪುರಾವೆಗಳಿವೆ. ಬಾಲಿ, ಕ್ಯಾಸ್ಪಿಯನ್ ಮತ್ತು ಜಾವ ಪ್ರಭೇದದ ಹುಲಿಗಳು ಇಂದು ಕಣ್ಮರೆಯಾಗಿವೆ. ಚೀನ ಮತ್ತು ಸೈಬೀರಿಯ ಪ್ರಭೇದದ ಹುಲಿಗಳು ವಿನಾಶದ ಅಂಚಿನಲ್ಲಿವೆ. ಸುಮಾತ್ರ, ಕಾರ್ಬೆಟ್ ಮತ್ತು ಬಂಗಾಲ ಪ್ರಭೇದದ ಹುಲಿಗಳು ವನ್ಯ ಪ್ರದೇಶದಲ್ಲಿ ವಾಸಿಸುತ್ತಿವೆ.

ತಜ್ಞರ ವರದಿಗಳ ಪ್ರಕಾರ ೨೦ನೆಯ ಶತಮಾನದ ಆರಂಭದಲ್ಲಿ ಭಾರತವೊಂದರಲ್ಲೇ ಸು. ೪೦ ಸಾವಿರಕ್ಕಿಂತ ಹೆಚ್ಚು ಹುಲಿಗಳಿದ್ದವು. ಈ ಕಾರಣದಿಂದ ಭಾರತವನ್ನು 'ದಿ ಲ್ಯಾಂಡ್ ಆಫ್ ದಿ ಟೈಗರ್ಸ್' ಎಂದು ಪಾಶ್ಚಿಮಾತ್ಯರು ಕರೆದರು. ಕಳೆದ ಶತಮಾನದ ಅಂತ್ಯದಲ್ಲಿ ಬಂಗಾಲ ಹುಲಿ ಸಂಖ್ಯೆ ಒಂದು ಲಕ್ಷಕ್ಕಿಂತ ಹೆಚ್ಚು ಇದ್ದವೆಂದು ವರದಿಗಳಿವೆ.

ಮಾನವನಿಗೆ ಪುರಾತನ ಕಾಲದಿಂದ ಚಿರಪರಿಚಿತವಾಗಿರುವ ಈ ಬಲಶಾಲಿ ಮಾರ್ಜಾಲ ಸಂಬಂಧಿಯ ಇರುವಿಕೆ ಪರಿಸರ ಸ್ವಾಸ್ಥ್ಯದ ಸಂಕೇತ.

ದೇಹ ರಚನೆ ಮತ್ತು ಗಾತ್ರ : ಹುಲಿಯ ದೇಹದ ಗಾತ್ರ, ಮೈಬಣ್ಣ ಮತ್ತು ದೇಹದ ಮೇಲಿರುವ ಕಪ್ಪನೆಯ ಅಡ್ಡ ಪಟ್ಟಿಗಳು ಪ್ರಭೇದಕ್ಕನುಗುಣವಾಗಿ ವಿಭಿನ್ನವಾಗಿರುತ್ತವೆ. ಈ ವಿಭಿನ್ನತೆ ಸ್ಥಳೀಯ ವಾತಾವರಣಕ್ಕನುಗುಣವಾಗಿರುವುದು ವಿಶೇಷ. ಭೂಖಂಡದ ಉತ್ತರ

ಭಾಗದಲ್ಲಿ ವಾಸಿಸುವ ಹುಲಿ ಪ್ರಭೇದಗಳಿಗಿಂತ ಸಾಮಾನ್ಯವಾಗಿ ದಕ್ಷಿಣ ಭಾಗದಲ್ಲಿ ವಾಸಿಸುವ ಹುಲಿಗಳ ದೇಹ ಗಾತ್ರ ಚಿಕ್ಕದಾಗಿದ್ದು, ಮೈಬಣ್ಣ ಹೊಳೆಯುತ್ತಿರುತ್ತದೆ. ಹೆಣ್ಣಿಗಿಂತ ಗಂಡು ಹುಲಿ ದೇಹಗಾತ್ರದಲ್ಲಿ ದೊಡ್ಡದು. ಗಂಡು ಹುಲಿಯ ಎತ್ತರ ೧ ಮೀ, ಉದ್ದ ೨.೨ ಮೀ, ತೂಕ ಸುಮಾರು ೧೬೦–೨೩೦ ಕಿಗ್ರಾಂ. ಕೆಲವು ಪ್ರಭೇದದ ಹುಲಿಗಳು ೨೯೦ ಕಿಗ್ರಾಂಗಿಂತ ಹೆಚ್ಚು ತೂಕವಿರುತ್ತವೆ.



ಸಂತಾನಾಭಿವೃದ್ಧಿ : ಹುಲಿಗಳು ವರ್ಷಕ್ಕೊಮ್ಮೆ ಸಂತಾನಾಭಿವೃದ್ಧಿ ನಡೆಸುತ್ತವೆ. ಗರ್ಭಾವಧಿಯ ಕಾಲ ೧೧೩ ದಿನಗಳು ಹೆಣ್ಣು ಹುಲಿ ಒಮ್ಮೆಗೆ ೨–೩ ಮರಿಗಳಿಗೆ ಜನ್ಮ ನೀಡುತ್ತದೆ. ಕೆಲವೊಮ್ಮೆ ೫–೬ ಮರಿಗಳಿಗೆ ಜನ್ಮ ನೀಡಿದ ವರದಿಗಳೂ ಇವೆ. ಹೆಣ್ಣು ಹುಲಿ ತನ್ನ ಮರಿಗಳನ್ನು ಅವು ಬೆಳೆದು ದೊಡ್ಡವಾಗುವವರೆಗೆ ಜೋಪಾನವಾಗಿ ನೋಡಿಕೊಳ್ಳುತ್ತದೆ. ಮರಿಗಳು ಎರಡು ವರ್ಷ ಪ್ರಾಯದವಾದಾಗ ಸ್ವತಃ ಬೇಟೆಮಾಡಿ ಆಹಾರ ಸಂಗ್ರಹಿಸಲು ಕಲಿಯುತ್ತವೆ. ಅನಂತರ ಸ್ವತಂತ್ರವಾಗಿ ಜೀವಿಸ ತೊಡಗುತ್ತವೆ. ವನ್ಯ ಪ್ರದೇಶದಲ್ಲಿ ಸ್ವಚ್ಛಂದವಾಗಿ ಬದುಕುವ ಹುಲಿಗಳ ಆಯುರ್ಮಾನ ಸುಮಾರು ೧೧ ವರ್ಷಗಳು.

ಹುಲಿ ಶಿಕಾರಿ : ೧೯ ಮತ್ತು ೨೦ನೆಯ ಶತಮಾನದ ಆದಿಭಾಗದಲ್ಲಿ ಹುಲಿ ಶಿಕಾರಿ ಭಾರತದಲ್ಲಿ ಅತ್ಯಂತ ಪ್ರತಿಷ್ಠೆಯ ರಾಜಕ್ರೀಡೆಯಾಗಿತ್ತು. ಮಹಾರಾಜರ ಪೌರುಷವನ್ನು ಶಿಕಾರಿ ಮಾಡಿದ ಹುಲಿಗಳ ಸಂಖ್ಯೆಯ ಮೇಲೆ ಅಳೆಯಲಾಗುತ್ತಿತ್ತು. ಬ್ರಿಟಿಷ್ ಭಾರತದಲ್ಲಿ ಹುಲಿಗಳನ್ನು ಭಾರಿ ಪ್ರಮಾಣದಲ್ಲಿ ಶಿಕಾರಿ ಮಾಡಿದ ಬಗ್ಗೆ ವರದಿಗಳಿವೆ. ಇದರ ಪರಿಣಾಮ ಹುಲಿ ಸಂತತಿ ಕ್ಷೀಣಿಸುತ್ತ ಬಂತು. ಅನಿಯಂತ್ರಿತ ಹುಲಿ ಶಿಕಾರಿ ಯಿಂದ ೧೯೩೦ರ ದಶಕದಲ್ಲಿ ಹುಲಿಗಳ ಸಂಖ್ಯೆ ಭಾರತದಲ್ಲಿ ಕೇವಲ ೪೨ ಸಾವಿರಕ್ಕೆ ಕುಸಿಯಿತು. ೧೯೬೦–೭೦ರ ದಶಕದಲ್ಲಿ ನಡೆದ ಹುಲಿಗಳ ಬೇಟೆಯ ಪರಿಣಾಮವಾಗಿ ಸಂಖ್ಯೆ ಕೇವಲ ೨೬೦೦ಕ್ಕೆ ಕುಸಿಯಿತು. ಪ್ರಾಣಿ–ಪರಿಸರ ತಜ್ಞರು ಸರ್ಕಾರದ ಮೇಲೆ ಹೇರಿದ ಒತ್ತಡದ ಪರಿಣಾಮವಾಗಿ ಭಾರತ ಸರ್ಕಾರ ೧೯೭೨ರಲ್ಲಿ ಹುಲಿಯನ್ನು ರಾಷ್ಟ್ರ ಪ್ರಾಣಿಯನ್ನಾಗಿ ಘೋಷಿಸಿ, ಹುಲಿ ಶಿಕಾರಿಯನ್ನು ನಿಷೇಧಿಸಿತು. ಇದರ ಫಲವಾಗಿ, ೧೯೭೨ರ ಅನಂತರದ ದಿನಗಳಲ್ಲಿ ಹುಲಿಗಳ ಸಂಖ್ಯೆ ಭಾರತದಲ್ಲಿ ವೃದ್ಧಿಯಾಯಿತು.

ಹುಲಿ ಯೋಜನೆ ಮತ್ತು ಸಂರಕ್ಷಣೆ : ೧೯೭೨ರಲ್ಲಿ ವನ್ಯಜೀವಿಗಳನ್ನು ಕಾಪಾಡುವ ಕಾಯ್ದೆ ಹಾಗೂ ಯೋಜನೆಯನ್ನು ಭಾರತದಲ್ಲಿ ಜಾರಿಗೊಳಿಸಲಾಯಿತು. ಈ ಕಾಯ್ದೆ ಅನ್ವಯ ಹುಲಿಯನ್ನು ಹಿಡಿದು ಪಳಗಿಸುವುದು, ಗುಂಡಿಟ್ಟು ಕೊಲ್ಲುವುದು ಚರ್ಮಕ್ಕಾಗಿ, ಮಾಂಸಕ್ಕಾಗಿ, ಇನ್ನಿತರೆ ಅಂಗಾಂಗಗಳಿಗಾಗಿ ಕೊಲ್ಲುವುದನ್ನು ನಿಷೇಧಿಸಲಾಗಿದೆ. ಹುಲಿ ಯೋಜನೆಯಲ್ಲಿ ಹುಲಿಗಳ ಗಣತಿ, ಸಂರಕ್ಷಣೆ ಹಾಗೂ ಸಂಶೋಧನೆಗೆ ಪ್ರಾಶಸ್ತ್ಯ ನೀಡಲಾಗಿದೆ.

ವಿಶ್ವ ವನ್ಯಪ್ರಾಣಿ ನಿಧಿಯ ನೆರವಿನೊಂದಿಗೆ ಹುಲಿಯೋಜನೆ (ಪ್ರಾಜೆಕ್ಟ್ ಟೈಗರ್) ಎಂಬ ಯೋಜನೆಯನ್ನು ೧೯೭೩ ಏಪ್ರಿಲ್ ೧ರಂದು ಕಾರ್ಯಗತಗೊಳಿಸಲಾಯಿತು. ಪ್ರಪ್ರಥಮವಾಗಿ ಭಾರತದಲ್ಲಿ ಪಶ್ಚಿಮ ಬಂಗಾಲದ ಬುಕ್ಸಾ ಎಂಬಲ್ಲಿ ಹುಲಿ ಯೋಜನೆ ಜಾರಿಗೊಂಡು ತದನಂತರ ಉತ್ತರ ಪ್ರದೇಶದ ಕಾರ್ಬೆಟ್ ಅಭಯಾರಣ್ಯ, ಮಧ್ಯ ಪ್ರದೇಶದ ಕಾನಾ ಮತ್ತು ಇಂದ್ರಾವತಿ ಅಭಯಾರಣ್ಯ, ಪಶ್ಚಿಮ ಬಂಗಾಲದ ಸುಂದರ ಬನ ಅಭಯಾರಣ್ಯ, ರಾಜಸ್ತಾನದ ಸಾರಿಸ್ಕ ಮತ್ತು ರಣತಂದೂರ್ ಅಭಯಾರಣ್ಯ, ಕರ್ನಾಟಕದ ಬಂಡೀಪುರ, ನಾಗರಹೊಳೆ ಮತ್ತು ಭದ್ರಾ ಅಭಯಾರಣ್ಯ, ಕೇರಳದ ಪೆರಿಯಾರ್ ಅಭಯಾರಣ್ಯ, ಬಿಹಾರದ ಪಾಲಂ ಅಭಯಾರಣ್ಯ, ಆಂಧ್ರ ಪ್ರದೇಶದ ನಾಗಾರ್ಜುನ ಅಭಯಾರಣ್ಯ, ಅರುಣಾಚಲ ಪ್ರದೇಶದ ನಾಮದಫ, ಒರಿಸ್ಸದ ಸಿಮಿಲಿಪಾಲ್ ಮತ್ತು ಮಹಾರಾಷ್ಟ್ರದಲ್ಲಿರುವ ಮೇಲ್‌ಘಾಟ್ ಅಭಯಾರಣ್ಯಗಳಲ್ಲಿ ಕಾರ್ಯಗತಗೊಂಡಿತು. ಈ ಹುಲಿ ಯೋಜನೆಯ ಅನುಷ್ಠಾನದ ಪರಿಣಾಮವಾಗಿ ಭಾರತದಲ್ಲಿ ಹುಲಿಗಳ ಸಂಖ್ಯೆ ಸು.೩೭೫೦ ಹೆಚ್ಚಾಗಿದೆ.

(ಬಿ.ಎಸ್.)

**ಹೃದಯ (ಹಾರ್ಟ್):** ದೇಹದ ವಿವಿಧ ಭಾಗಗಳಿಗೆ ರಕ್ತನಾಳಗಳ ಮೂಲಕ ರಕ್ತವನ್ನು ರೇಚಿಸುವ (ಪಂಪ್) ಜೀವಿಯ ಉಳಿವಿಗೆ ಅನಿವಾರ್ಯವಾದ, ಅಗಾಧ ಕ್ರಿಯಾಶೀಲತೆಯ, ಸ್ನಾಯುಪೂರಿತ ಅಂಗ. ದೇಹಕ್ಕೆ ಅಗತ್ಯವಾದ ಎಲ್ಲ ಪದಾರ್ಥಗಳ ಸಾಗಣೆ ಪರಿಚಲನವ್ಯೂಹದ ಮೂಲಕ ನಡೆಯುತ್ತದೆ. ಏಕಕೋಶ ಜೀವಿಗಳಲ್ಲಿ ಈ ಎಲ್ಲ ಪದಾರ್ಥಗಳ ಸಾಕಣೆ ಜೀವದ್ರವ್ಯದ ಚಲನೆಯ ಮೂಲಕ ಜೀವಕೋಶದೊಳಗೆ ನಡೆದರೆ, ಬೃಹತ್ ಬಹುಕೋಶಜೀವಿಗಳಲ್ಲಿ ಪದಾರ್ಥಗಳ ಸಾಗಣೆ ಹೆಚ್ಚು ವಿಸ್ತಾರವಾದ ರಕ್ತ, ರಕ್ತನಾಳ ಮತ್ತು ಹೃದಯವನ್ನೊಳಗೊಂಡಿರುವ ಸಾಗಾಣಿಕಾ (ಸಾರಿಗೆ) ವ್ಯೂಹದ ಮೂಲಕ ಜರುಗುತ್ತದೆ.

ಹೃದಯವು ಅಕಶೇರುಕಗಳಲ್ಲಿ ದೇಹದ ಡಾರ್ಸಲ್ ಅಥವಾ ಮೇಲ್ಭಾಗದಲ್ಲಿದ್ದರೆ ಕಶೇರುಕಗಳಲ್ಲಿ ದೇಹದ ವೆಂಟ್ರಲ್ ಅಥವಾ ತಳಭಾಗದಲ್ಲಿರುತ್ತದೆ. ಮನುಷ್ಯನ ಹೃದಯವು ಅವನ ಕೈ ಮುಷ್ಟಿಯ ಗಾತ್ರದಷ್ಟಿದೆ. ಇವು 12 ಸೆಂಮೀ ಉದ್ದ, 8 ಸೆಂಮೀ ಅಗಲ (ಅದರ ಕೆಳಭಾಗದಲ್ಲಿ) ಮತ್ತು ಸುಮಾರು 6 ಸೆಂಮೀ ದಪ್ಪವಿದೆ. ಇದರ ತೂಕ ಸುಮಾರು 250 ರಿಂದ 350 ಗ್ರಾಂನಷ್ಟಿದೆ. ಹೃದಯವು ಎರಡು ಶ್ವಾಸಕೋಶಗಳ ನಡುವೆ, ಎದೆಯ ಎಲುಬಿನ ಹಿಂಭಾಗದಲ್ಲಿ, ಹಾಗೂ ವಪೆಯ ಮೇಲ್ಭಾಗದಲ್ಲಿ ಎದೆಯ ಗೂಡಿನ ಒಳಗಿದೆ. ಹೃದಯದ 2/3 ಭಾಗ ಎದೆಯ ಮಧ್ಯಭಾಗದ ಎಡಕ್ಕಿದೆ ಮತ್ತು ಅದರ ತುದಿಭಾಗವು ಎಡಕ್ಕೆ ಸ್ವಲ್ಪ ತಿರುಗಿದೆ. ಹೃದಯವನ್ನು ಎರಡು ಪದರಗಳಿಂದಾದ ಪೆರಿಕಾರ್ಡಿಯಂ ಎಂಬ ಚೀಲದಂತ ಪೊರೆಯು ಆವರಿಸಿದೆ. ಪೆರಿಕಾರ್ಡಿಯಂನ ಹೊರಪದರವು ನಾರಿನ (ಫೈಬ್ರಸ್) ಅಂಗಾಂಶದಿಂದಾಗಿದೆ. ಇದು ಪೆರೈಟಲ್ ಪದರು. ಪೆರಿಕಾರ್ಡಿಯಂನ ಒಳಗಿನ ದ್ರಾವಾವೃತ ಪದರವನ್ನು ಅಂಗಾಂಗ ಪದರ ಅಥವಾ ಎಪಿಕಾರ್ಡಿಯಂ ಎನ್ನಲಾಗಿದೆ. ಈ ಎರಡು ಪದರಗಳ ನಡುವೆ ಪೆರಿಕಾರ್ಡಿಯಲ್ ಸ್ಥಳಾವಕಾಶವಿದ್ದು, ಅದು 50 ಮಿಲೀ.ನಷ್ಟು ಪೆರಿಕಾರ್ಡಿಯಲ್ ದ್ರವದಿಂದ ತುಂಬಿದೆ. ಈ ದ್ರವವು ಎಣ್ಣೆಯಂತೆ ವರ್ತಿಸಿ ಹೃದಯವನ್ನು ಮೃದುವಾಗಿರಿಸಿ, ಘರ್ಷಣೆಯನ್ನು ಕಡಿಮೆಮಾಡಿ, ಸುಲಭವಾಗಿ ಹೃದಯವು ಬಡಿಯಲು ನೆರವಾಗುತ್ತದೆ. (ನೋಡಿ: ಹೃದಯದ ಅಂಗರಚನೆ)

ಹೃದಯದ ಭಿತ್ತಿಯಲ್ಲಿ ಮೂರು ಪದರಗಳಿವೆ. ಅವುಗಳೆಂದರೆ, ಹೊರಪದರವಾದ ಎಪಿಕಾರ್ಡಿಯಂ, ಮಧ್ಯದ, ಹೆಚ್ಚು ಸ್ನಾಯುಗಳಿಂದಾದ ಮಯೋಕಾರ್ಡಿಯಂ ಮತ್ತು ಒಳಗಿನ ಎಂಡೋಕಾರ್ಡಿಯಂ. ನಿಜವಾಗಿಯೂ ಎಪಿಕಾರ್ಡಿಯಂ ಪೆರಿಕಾರ್ಡಿಯಂನ ಒಳಗಿನ ಅಂಗಾಂಗ ಪದರ. ಹೃದಯದ ಬಲಭಾಗವು (ಬಲ ಹೃತ್ಕರಣ ಮತ್ತು ಬಲಹೃತ್ಕುಕ್ಷಿಗಳು) ಅಶುದ್ಧ ರಕ್ತದಿಂದ, ಎಡಭಾಗವು (ಎಡ ಹೃತ್ಕರಣ ಮತ್ತು ಎಡ ಹೃತ್ಕುಕ್ಷಿಗಳು) ಶುದ್ಧ ರಕ್ತದಿಂದ ತುಂಬಿರುತ್ತವೆ. ಶುದ್ಧ ಮತ್ತು ಅಶುದ್ಧ ರಕ್ತಗಳು ಹೃದಯದಲ್ಲಿ ಯಾವಾಗಲೂ ಮಿಶ್ರವಾಗುವುದಿಲ್ಲ. ಏಕೆಂದರೆ ಎಡ ಮತ್ತು ಬಲ ಭಾಗಗಳು ನಡುಹೃತ್ಕರಣ ಮತ್ತು ನಡುಹೃತ್ಕುಕ್ಷಿ ತಡಿಕೆಗಳಿಂದ ಬೇರ್ಪಟ್ಟಿರುತ್ತವೆ.

ಹೃದಯದಲ್ಲಿ ವಿಶೇಷ ಪರಿಣಿತಿಯನ್ನು ಪಡೆದ ಸ್ನಾಯು ಅಂಗಾಂಶವಿದ್ದು, ಅದನ್ನು ಪೆಸ್ ಮೇಕರ್ ಎನ್ನುತ್ತಾರೆ. ಇಲ್ಲಿಂದ ಹೃದಯ ಬಡಿತದ ಗತಿ ಆರಂಭವಾಗುತ್ತದೆ. ಇಂತಹ ಹೃದಯವನ್ನು ಮಯೋಜನಿಕ್ ಹೃದಯ ಎನ್ನುತ್ತಾರೆ. ಮನುಷ್ಯನ ಹೃದಯ, ಎಲ್ಲಾ ಕಶೇರುಕ ಪ್ರಾಣಿಗಳ ಹೃದಯ ಮತ್ತು ಮೃದ್ವಂಗಿಗಳ ವಿನಹ ಅಕಶೇರುಕಗಳ ಹೃದಯವು ನ್ಯೂರೊಜನಿಕ್ ಹೃದಯ, ಅಂದರೆ ಪೇಸ್‌ಮೇಕರ್ ನರಮುಡಿ ಜೀವಕೋಶಗಳಿಂದಾದ ಗಂಟು, ಇದರಿಂದ ಹೃದಯದ ಬಡಿತ ಆರಂಭವಾಗುತ್ತದೆ.

ಮನುಷ್ಯನ ಹೃದಯವು ಒಂದು ನಿಮಿಷಕ್ಕೆ 60–80 ಸಾರಿ ಬಡಿಯುತ್ತದೆ. ಸಹಜವಾಗಿ ಹೃದಯ ಬಡಿತದ ವೇಗ ಸುಮಾರು ಒಂದು ನಿಮಿಷಕ್ಕೆ 72 ಬಾರಿ ಬಡಿಯುತ್ತದೆ. ಹೃದಯದಲ್ಲಿರುವ ಕವಾಟಗಳು ಮುಚ್ಚಿದಾಗ ಹೃದಯದಿಂದ ಶಬ್ದಗಳು ಉತ್ಪತ್ತಿಯಾಗುತ್ತವೆ. ಆ ಶಬ್ದಗಳೇ ಲಬ್–ಡಬ್ ಲಬ್–ಡಬ್. ಲಬ್ ಶಬ್ದವು ಹೃತ್ಕರಣ–ಹೃತ್ಕುಕ್ಷಿ ಕವಾಟಗಳ ಮುಚ್ಚುವಿಕೆಯಿಂದ ಉತ್ಪತ್ತಿಯಾಗುತ್ತದೆ. ಇದು ಹೃದಯದ ಮೊದಲನೇ ಶಬ್ದ, ಇದು ಎತ್ತರ ಸ್ವರದ ಮತ್ತು ದೀರ್ಘಕಾಲದ ಶಬ್ದ.

ಎರಡನೇ ಹೃದಯದ ಶಬ್ದ ಡಬ್ ಎನ್ನುವುದು. ಇದು ಅರ್ಧಚಂದ್ರಾಕಾರದ ಕವಾಟಗಳು ಮುಚ್ಚಿದಾಗ ಉಂಟಾಗುವ ಶಬ್ದ. ಇದು ಸಣ್ಣಸ್ವರದ ಮತ್ತು ಕಡಿಮೆ ಅವಧಿಯ ಶಬ್ದ. ಈ ಶಬ್ದಗಳನ್ನು ಸ್ಟೆತಾಸ್ಕೋಪ್ ಮೂಲಕ ವೈದ್ಯರು ಗ್ರಹಿಸುತ್ತಾರೆ.

ಹೃದಯದ ಸ್ನಾಯುಗಳಲ್ಲಾಗುವ ಲಯಬದ್ಧ (ರಿದಮಿಕ್) ಆಕುಂಚನ ಮತ್ತು ವಿಸರಣಗಳು ರಕ್ತವನ್ನು ರಕ್ತನಾಳಗಳಲ್ಲಿ ರೇಚಿಸಲು ಸಾಧ್ಯವಾಗಿದೆ. ಹೃದಯದ ಸ್ನಾಯುಗಳು ಯಾವುದೇ ಪ್ರಚೋದನೆ ಇಲ್ಲದೆ, ಒಂದಾದ ಮೇಲೊಂದರಂತೆ ಆಕುಂಚನದ ಅಲೆಗಳನ್ನು ಹೊರಡಿಸುತ್ತವೆ. ಬಲಹೃತ್ಕರ್ಣದ ಕೆಲವು ಸ್ನಾಯುಗಳು ಹಾಗು ನರಗಳ ಕೊನೆಯಿಂದಾಗಿರುವ ಒಂದು ವಿಶಿಷ್ಟ ರಚನೆ ಸೈನೊಏಟ್ರಿಯಲ್ ನೋಡ್. ಇದು ಆಕುಂಚನವನ್ನು ಪ್ರಾರಂಭಿಸಲು ಹೃದಯದ ಸ್ನಾಯುಗಳಿಗೆ ಪ್ರಚೋದಿಸುವುದರಿಂದ ಇದನ್ನು ಪೇಸ್‌ಮೇಕರ್ ಎಂದು ಕರೆಯಲಾಗಿದೆ. ಈ ಪ್ರಚೋದನೆ ಇಂದ ಹೃದಯದ ಬಲಭಾಗದಿಂದ ಎಡತುದಿಯವರೆಗೆ ಆಕುಂಚನದ ಅಲೆ ಪಸರಿಸುತ್ತದೆ. ಒಂದು ಪ್ರಚೋದನೆಯಿಂದ ಸ್ನಾಯುಗಳು ಅಕುಂಚನವಾಗುತ್ತಿರುವಾಗ, ಇನ್ನೊಂದು ಪ್ರಚೋದನೆ ಪ್ರತಿಕ್ರಿಯೆ ತೋರಿಸುವುದಿಲ್ಲ. ಆಕುಂಚನ ತೋರಿದ ಸ್ನಾಯುಗಳು ಅಕುಂಚನದ ಅಲೆಯನ್ನು ತಮ್ಮಮುಂದಿನ ಸ್ನಾಯುಗಳಿಗೆ ವರ್ಗಾಯಿಸಿ ತಾವು ಪ್ರಸರಣ ಹೊಂದುತ್ತವೆ. ಒಂದು ಆಕುಂಚನದ ಅಲೆ ಪೂರ್ತಿಯಾದ ಮೇಲೆ ಇನ್ನೊಂದು ಅಲೆ, ಬಲಹೃತ್ಕರ್ಣದಿಂದ ಪ್ರಾರಂಭವಾಗುತ್ತದೆ. ಈ ತೆರನಾಗಿ ಒಂದಾದ ಮೇಲೆ ಇನ್ನೊಂದರಂತೆ ಆಕುಂಚನ – ಪ್ರಸರಣದ ಅಲೆಗಳು ಹೃದಯದ ಸ್ನಾಯುಗಳಲ್ಲಿ ಚಕ್ರಾಕಾರವಾಗಿ ಕಂಡುಬರುವುದರಿಂದ, ಈ ಕ್ರಿಯೆಯನ್ನು ಹೃದಯದ ಚಕ್ರ (ಕಾರ್ಡಿಯಾಕ್ ಸೈಕಲ್) ಎಂದು ಕರೆಯೊಲಾಗಿದೆ. ಎರಡು ಆಕುಂಚನ ಅಲೆಗಳ ಮಧ್ಯೆ ಸ್ವಲ್ಪಕಾಲಾವಕಾಶವಿದ್ದು (ಮಿ ಸೆಕೆಂಡುಗಳಲ್ಲಿ), ಆಗ ಸ್ನಾಯುಗಳು ಚೇತರಿಸಿ ಕೊಳ್ಳುತ್ತವೆ. ಈ ವಿಶಿಷ್ಟ ಗುಣದಿಂದ ಹೃದಯದ ಸ್ನಾಯುಗಳು ದೇಹದ ಇತರ ಸ್ನಾಯುಗಳಂತೆ, ಸತತ ಆಕುಂಚನ ಕ್ರಿಯೆಯಿಂದ ಶಕ್ತಿ ಗುಂದುವುದಿಲ್ಲ (ಫೆಟಿಗ್). ಒಂದು ಜೀವಿಯ ಭ್ರೂಣೀಯ ಬೆಳವಣಿಗೆಯಲ್ಲಿ ಪ್ರಾರಂಭವಾದ ಹೃದಯದ ಬಡಿತ (ಲಯಬದ್ಧವಾದ ಆಕುಂಚನ – ಪ್ರಸರಣಗಳಿಂದ ಉಂಟಾದ) ವ್ಯಕ್ತಿ ಸಾಯುವವರೆಗೆ ಅವ್ಯಾಹತವಾಗಿ ಕೇಳಿಬರುತ್ತದೆ. ಸ್ನಾಯುಗಳ ಆಕುಂಚನ ವಿದ್ಯುತ್ ಕ್ರಿಯೆ ಆದುದರಿಂದ ಒಂದು ಸ್ನಾಯುವಿನಿಂದ ಇನ್ನೊಂದು ಸ್ನಾಯುವಿಗೆ ಪಸರಿಸುತ್ತದೆ. ಆಕುಂಚನ – ಪ್ರಸರಣದಿಂದಾಗುವ ವಿದ್ಯುತ್ ಕ್ರಿಯೆಯ ಬದಲಾವಣೆಗಳನ್ನು ಎಲೆಕ್ಟ್ರೊಕಾರ್ಡಿಯೊಗ್ರಾಂ (ಇಸಿಜಿ) ಮೂಲಕ ದಾಖಲಿಸಬಹುದು. ಹೃದಯದಲ್ಲಿಯ ತೊಂದರೆಗಳಿಂದ ದಾಖಲೆಯಲ್ಲಿ ವ್ಯತ್ಯಾಸಗಳು (ಆರೋಗ್ಯವಂತ ಹೃದಯಕ್ಕೆ ಹೋಲಿಸಿದರೆ) ಕಂಡುಬರುವುದರಿಂದ ಹೃದಯದ ತೊಂದರೆಗಳನ್ನು ಗುರುತಿಸಲು ವೈದ್ಯರಿಗೆ ಸಹಾಯವಾಗುತ್ತದೆ.

ಸಾಮಾನ್ಯಗತಿಯಲ್ಲಾಗುವ (ನಾರ್ಮಲ್ ರೇಟ್) ಹೃದಯದ ಬಡಿತಕ್ಕೆ ಯಾವುದೇ, ಪ್ರಚೋದನೆ ಬೇಕಿಲ್ಲವಾದರೂ ನರಮಂಡಲ ಮತ್ತು ರಾಸಾಯನಿ (ಹಾರ್ಮೋನ್) ಪ್ರಚೋದನೆಗಳು ಹೃದಯ ಬಡಿತದ ವೇಗ ಹೆಚ್ಚು ಅಥವಾ ಕಡಿಮೆ ಮಾಡಬಹುದು. ಮೆದುಳಿನಲ್ಲಿ ಹೃದಯದ ಬಡಿತವನ್ನು ನಿಯಂತ್ರಿಸುವ ಎರಡು ಕೇಂದ್ರಗಳಿದ್ದು, ಒಂದು ಹೃದಯದ ಬಡಿತವನ್ನು ಹೆಚ್ಚುವಂತೆ ಹಾಗು ಇನ್ನೊಂದು ಕಡಿಮೆಯಾಗುವಂತೆ ಪ್ರಚೋದಿಸುತ್ತವೆ. ಅನುವೇದನ ನರಮಂಡಲ ಹಾಗು ಅರೆ ಅನವೇದನ ನರಮಂಡಲದ ನರ ತಂತುಗಳ ಮೂಲಕ ಮಿದುಳು ಹೃದಯವನ್ನು ಸಂಪರ್ಕಿಸಿ ಅದರ ವೇಗವನ್ನು ನಿಯಂತ್ರಿಸುತ್ತದೆ. ಅನುವೇದನ ನರಗಳು ಹೃದಯದ ಬಡಿತವನ್ನು ಹೆಚ್ಚಿಸಿದರೆ, ಅರೆ ಅನುವೇದನ ನರಗಳು ಕಡಿಮೆಗೊಳಿಸುತ್ತವೆ. ಇದಲ್ಲದೆ ಎಡ್ರಿನಲ್ ಗ್ರಂಥಿ ಸ್ರವಿಸುವ ಎಡ್ರಿನಾಲಿನ (ಹಾರ್ಮೋನ್) ಹೃದಯದ ಬಡಿತದ ವೇಗವನ್ನು ಹೆಚ್ಚಿಸುತ್ತದೆ, ಹೃದಯದ ಬಡಿತದ ವೇಗ ಹೆಚ್ಚಾದಾಗ, ಅಂಗಾಂಶಗಳಿಗೆ ಹೆಚ್ಚಿನ ರಕ್ತಪರಿಚಲನೆಯಾಗಿ, ಆಮ್ಲಜನಕ ಮತ್ತು ಪೋಷಾಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುತ್ತದೆ. ಕಾರಣ ದೇಹವು ಯಾವುದೇ ತುರ್ತುಪರಿಸ್ಥಿತಿ (ಎಮರ್ಜೆನ್ಸಿ) ಅಥವಾ ಒತ್ತಡ (ಸ್ಟ್ರೆಸ್) ಎದುರಿಸುವಾಗ, ಹೃದಯಕ್ಕೆ ನರ ಮತ್ತು ರಾಸಾಯನಿಕ ಪ್ರಚೋದನೆಗಳು, ಜೀವಿಯ ಉಳಿಯುವಿಕೆಗೆ ಅವಶ್ಯಕ. ಇವಲ್ಲದೆ ಕೆಲವು ಉದ್ವೇಗದ ಸನ್ನಿವೇಶಗಳು ಉದಾ: ಸಿಟ್ಟು, ಅಪಮಾನ, ನಾಚಿಕೆ, ಅಸಹನೆ, ಅತಿಸಂತೋಷ ಮುಂತಾದುವುಗಳಿಂದ ಮಿದುಳಿನ ಮಖಾಂತರ ಹೃದಯದ ಬಡಿತದಲ್ಲಿ ಏರುಪೇರಾಗುತ್ತದೆ.

ಬೆಳೆವಣಿಗೆಯಲ್ಲಿ ಮೊದಲು ಕಾಣಿಸಿಕೊಂಡ ಹೃದಯವು ನೇರ ನಾಳದಂತಿದ್ದು ಮುಂಭಾಗದಲ್ಲಿ ಗಂಟಲಿನ ತಳಭಾಗಕ್ಕೆ ಮತ್ತು ಹಿಂಭಾಗದಲ್ಲಿ ಯಕೃತ್ತಿಗೆ ಸೇರಿಕೊಂಡಿರುತ್ತದೆ. ಅನಂತರ ಒಡನೆಯೇ ಉದ್ದನಾಗಿ, ಎಸ್–ಆಕಾರದಲ್ಲಿ ಬಾಗಿ ನಂತರ 4 ಭಾಗಗಳಾಗಿ ಭಿನ್ನವಾಗುತ್ತದೆ. ಅವೆಂದರೆ 1) ಹಿಂಭಾಗದ ಭಾಗ ಸೈನಸ್ ವಿನೋಸಸ್ 2) ಸೈನಸ್ ವಿನೋಸಸ್‌ನ ಮುಂದೆ ಹೃತ್ಕರಣ 3) ಹೃತ್ಕರಣ ಮುಂಭಾಗ ಹೃತ್ಕುಕ್ಷಿ 4) ಅತಿ ಮುಂಭಾಗದ ಬಲ್ಬಸ್ ಕಾರ್ಡಿಸ್, ಬಲ್ಬಸ್ ಕಾರ್ಡಿಸ್ ತನ್ನ ಒಳಗಡೆ ಸಂಕೀರ್ಣ ರಚನೆಗಳು ಕಾಣಿಸಿಕೊಂಡಿದ್ದರಿಂದ, ಅದು ಮಾರ್ಪಟ್ಟು ಟ್ರಂಕಸ್ ಆರ್ಟೀರಿಯೋಸಸ್ ಆಗುತ್ತದೆ. ಇದು ವೆಂಟ್ರಲ್ ಮಹಾಪಧಮನಿಯಾಗಿ ಮುಂದುವರಿಯುತ್ತದೆ. ಅನಂತರದ ಹಂತದ ಬೆಳೆವಣಿಗೆಯಲ್ಲಿ ನಡುತಡಿಕೆಯು ಹೃತ್ಕರಣವನ್ನು ಎರಡಾಗಿ ವಿಭಜಿಸುತ್ತದೆ. ದೇಹದ ವಿವಿಧ ಭಾಗಗಳಿಂದ ಅಶುದ್ಧ ರಕ್ತವು ಸೈನಸ್ ವಿನೋಸಸ್‌ಗೆ ಹರಿಯುತ್ತದೆ. ಸೈನಸ್ ವಿನೋಸಸ್ ಹೃತ್ಕರಣಕ್ಕೆ ತೆರೆಯುತ್ತದೆ. ಹೃತ್ಕರಣವು ಹೃತ್ಕುಕ್ಷಿಗೆ, ಅನಂತರ ಹೃತ್ಕುಕ್ಷಿಯು ಕೋನಸ್ ಆರ್ಟೀರಿಯೋಸಸ್‌ಗೆ ತೆರೆಯುತ್ತದೆ. ಕೋನಸ್ ಆರ್ಟೀರಿಯೋಸಸ್ ವೆಂಟ್ರಲ್ ಮಹಾಪಧಮನಿಯಾಗಿ ಮುಂದುವರಿಯುತ್ತದೆ. ಹೃತ್ಕರಣ–ಹೃತ್ಕುಕ್ಷಿಗೆ ತೆರೆಯುವ ತೆರಪಿನ ಬಳಿ ಕವಾಟಗಳಿವೆ ಅಲ್ಲದೆ ಕೋನಸ್ ಆರ್ಟೀರಿಯೋಸಿಸ್ ಒಳಭಾಗದಲ್ಲಿಯೂ ಕೆಲವು ಕವಾಟಗಳಿವೆ.

ಹೃತ್ಕರಣ ಮತ್ತು ಹೃತ್ಕುಕ್ಷಿಗಳು ಕಶೇರುಕಗಳ ಹೃದಯದ ಬೆಳೆವಣಿಗೆಯಲ್ಲಿ ಶಾಶ್ವತವಾಗಿ ಉಳಿಯುವ ಕೋಣೆಗಳು. ಇವು ಅನಂತರ ಒಂದೊಂದೂ ಎರಡಾಗಿ ವಿಭಜನೆಯಾಗುತ್ತವೆ. ಆದರೆ ಸೈನಸ್ ವಿನೋಸಸ್ ಮತ್ತು ಕೋನಸ್ ಆರ್ಟೀರಿಯೋಸಸ್‌ಗಳು ಶಾಶ್ವತ ಕೋಣೆಗಳಲ್ಲ. ಉನ್ನತ ಕಶೇರುಕಗಳಲ್ಲಿ ಸೈನಸ್ ವಿನೋಸಸ್ ಹೃತ್ಕರಣದೊಂದಿಗೆ ಸೇರಿ ಕಣ್ಮರೆಯಾಗುತ್ತದೆ. ಹಾಗೆಯೇ ಕೋನಸ್ ಆರ್ಟೀರಿಯೋಸಸ್‌ನ ಬುಡದ ಭಾಗವು ಹೃತ್ಕುಕ್ಷಿಯೊಂದಿಗೆ ಸೇರುತ್ತದೆ. ಆದರೆ ಅದರ ತುದಿ ಭಾಗವು ಇಬ್ಭಾಗವಾಗುತ್ತದೆ. ಇದರಿಂದಾಗಿ ವಿವಿಧ ಕಶೇರುಕ ವರ್ಗದ ಪ್ರಾಣಿಗಳಲ್ಲಿ ಹೃದಯದ ಕೋಣೆಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

(ಎಚ್.ಎಚ್.ಎಸ್.)

**ಹೃದಯದ ಅಂಗರಚನೆ:** ಹೃದಯ ಸ್ನಾಯು (ಕಾರ್ಡಿಯಕ್ ಮಸಲ್) ಎಂಬ ವಿಶೇಷ ಸ್ನಾಯುವಿನಿಂದ ನಿರ್ಮಿತವಾದ ದೇಹದ ಸಮಸ್ತ ಭಾಗಗಳಲ್ಲೂ ಸದಾ ರಕ್ತ ಪರಿಚಲನೆ ಇರುವಂತೆ ಮಡುವ ಅಂಗ ಹೃದಯ. ಇದರ ಸ್ಥಾನ ಎದೆಯಲ್ಲಿ (ನಿಖರವಾಗಿ ಮೂಳೆಗಳಿಂದ ರಚಿತವಾದ ಎದೆಗೂಡಿನ ಒಳಗೆ), ಎರಡು ಘುಪ್ಪುಸಗಳ ನಡುವೆ, ಎಡ ಘುಪ್ಪುಸ ಕೊಂಚ ಮರೆಮಾಡಿದಂತೆ, ಮುಂಭಾಗಕ್ಕೆ ಎಡಕ್ಕೆ ಓರೆಯಾಗಿ ವಪೆಯ ಮೇಲೆ. ಹೃದಯದ 2/3 ಭಾಗ ದೇಹದ ಮಧ್ಯರೇಖೆಯ ಎಡಕ್ಕೂ 1/3 ಭಾಗ ಬಲಕ್ಕೂ ವ್ಯಾಪಿಸಿದೆ. ಇಡೀ ಹೃದಯ ಮಾವಿನಕಾಯಿಯ ಆಕಾರವಾಗಿದ್ದು ಕೈಮುಷ್ಟಿಗಿಂತಲೂ ಕೊಂಚ ದೊಡ್ಡದಾಗಿರುತ್ತದೆ. ವಯಸ್ಕರಲ್ಲಿ ಇದರ ತೂಕ ಸುಮಾರು 300 ಗ್ರಾ.ಂ ಮಕ್ಕಳಲ್ಲಿ ಅದು, ಅವರ ಮೈ ತೂಕಕ್ಕೆ ಹೋಲಿಸಿದರೆ, ಹೆಚ್ಚು ತೂಕವಾಗಿರುತ್ತದೆ. 25 ದಿನಗಳ ಗರ್ಭಾವಸ್ಥೆಯಲ್ಲಿ ಪ್ರಾರಂಭವಾಗುವ ಹೃದಯದ ಬಡಿತ, ಜೀವಮಾನ ಪರ್ಯಂತ ಬಡಿಯುತ್ತಲೇ ಇರುತ್ತದೆ. ಗರ್ಭಾವಸ್ಥೆಯಲ್ಲಿ ಬಡಿತದ ದರ ಮಿನಿಟಿಗೆ 130-140 ; ಹುಟ್ಟಿದ ತರುಣದಲ್ಲಿ ಅದು 90-100 ಆಗಿ, ಬಾಲ್ಯಾವಸ್ಥೆಯಲ್ಲಿ ಕ್ರಮೇಣ ಕಡಿಮೆಯಾಗುತ್ತ ಯೌವನದಿಂದಾಚೆಗೆ ಮಿನಿಟಿಗೆ ಸುಮಾರು 72 ಆಗುತ್ತದೆ. ಹೃದಯದ ಸುತ್ತ (ಬುಡದ ಹೊರತಾಗಿ) ಕವಚದ ಹಾಗೆ ಹೃದಯದ ಹೊರಪೊರೆ(ಪೆರಿಕಾರ್ಡಿಯಂ) ಉಂಟು. ವಾಸ್ತವವಾಗಿ ಇದು ಮೂರು ಪದರಗಳಿಂದಾಗಿದೆ. ಹೊರಪದರ ಗಡಸು, ಉಳಿದೆರಡು ನುಣುಪು. ಈ ಎರಡು ಪದರಗಳಲ್ಲಿ ಹೊರಗಿನದು ಗಡಸು ಪದರಕ್ಕೆ ಅಂಟಿಕೊಂಡಿದೆ. ಒಳಗಿನದು ಹೃದಯದ ಹೊರಪದರವಾಗಿದೆ. ಇವೆರಡು ಪದರಗಳ ನಡುವೆ ಕೀಲೆಣ್ಣೆಯಂತೆ ನುಣುಪಿಸುವ ಬಹುಸ್ವಲ್ಪ ದ್ರವವಿದ್ದು, ಇದರಿಂದ ಹೃದಯ ತಿಕ್ಕಾಟವಿಲ್ಲದೆ ಹಿಗ್ಗುವುದಕ್ಕೂ ಕುಗ್ಗುವುದಕ್ಕೂ ಸಾಧ್ಯವಾಗಿದೆ.

ಮುಂದಿನಿಂದ ನೋಡಿದರೆ ಹೃದಯದ ಬಲಗಡೆ ಅಂಚು ಎದೆಮೂಳೆಯ (ಸ್ಟರ್ನಂ) ಬಲ ಅಂಚಿನಿಂದ ಒಂದು ಬೆರಳಗಲ ಬಲಕ್ಕಿರುತ್ತದೆ. ಹಾಗೆಯೇ ಎಡ ಅಂಚು ಎದೆಮೂಳೆಯ ಎಡ ಅಂಚಿಗಿಂತ ಒಂದು ಬೆರಳಗಲ ಎಡಕ್ಕಿರುತ್ತದೆ. ಹೃದಯದ ಎಡಬಲಭಾಗಗಳಲ್ಲಿ ರಕ್ತವನ್ನುಪಡೆಯಲು ಒಂದೊಂದು ಹೃತ್ಕರ್ಣ (ಏಟ್ರಿಯಂ) ರಕ್ತವನ್ನು ಹೊರತಳ್ಳಲು ಒಂದು ಹೃತ್ಕುಕ್ಷಿ (ವೆಂಟ್ರಿಕಲ್) ಹೀಗೆ ನಾಲ್ಕು ಕೋಶಗಳಿವೆ. (ಚಿತ್ರ1). ಹೃತ್ಕರ್ಣಗಳಿಗೂ ಹೃತ್ಕುಕ್ಷಿಗಳಿಗೂ ನಡುವೆ ಆಳವಾದ ರೇಖೆ ಉಂಟು. ಈ ರೇಖೆಯಲ್ಲಿ ಕೊಬ್ಬು ತುಂಬಿದ್ದು ಹೃದಯಕ್ಕೆ ಆಮ್ಲಜನಕಯುಕ್ತ ರಕ್ತವನ್ನು ಭಾಗಶಃ ಒದಗಿಸುವ ಬಲಹೃದಯ ಅಪಧಮನಿ (ರೈಟ್ ಕರೋನರಿ ಆರ್ಟರಿ) ಇರುತ್ತದೆ. ಎರಡು ಹೃತ್ಕುಕ್ಷಿಗಳ ನಡುವೆಯೂ ಒಂದು ರೇಖೆ ಇದೆ. ಈ ರೇಖೆಯಲ್ಲಿ ಎಡಹೃದಯ ಅಪಧಮನಿಯ ಒಂದು ಮುಖ್ಯ ಶಾಖೆ ಉಂಟು. ಎರಡು ಹೃತ್ಕರ್ಣಗಳನ್ನು ಪ್ರತ್ಯೇಕಿಸುವ ಯಾವ ಗುರುತು ಹೊರಗಿನಿಂದ ಕಾಣಿಸುವುದಿಲ್ಲ. ಏಕೆಂದರೆ ಆ ಸ್ಥಳ ಘುಪ್ಪುಸ ಧಮನಿ (ಪಲ್ಮನರಿ

ಆರ್ಟರಿ) ಮತ್ತು ಮಹಾಪಧಮನಿಯ ಆರೋಹಣ ಭಾಗಗಳಿಂದ (ಅಸೆಂಡಿಂಗ್ ಪಾರ್ಟ್ ಆಫ್ ದಿ ಅಯೋರ್ಟ) ಮರೆಮಾಡಲ್ಪಟ್ಟಿವೆ. ಹೃದಯದ ತುತ್ತತುದಿ ಎಡ ಹೃತ್ಕುಕ್ಷಿಯ ಕೆಳಮೂತಿಯಾಗಿದ್ದು ಎದೆಯ ಎಡಗಡೆ 5-6 ನೆಯ ಪಕ್ಕೆಲುಬುಗಳ ನಡುವೆ ಇರುತ್ತದೆ. ರೋಗದಿಂದ ಹೃದಯ ವಿಕಾರವಾದಾಗ ಅಥವಾ ದೊಡ್ಡದಾದಾಗ ಇದು ಜಾಗವನ್ನು ಬದಲಾಯಿಸಿರುತ್ತದೆ. ಎದೆಮೂಲೆಯ ಹಿಂದೆ ಕಾಣುವ ಹೃದಯದ ಬಲ ಅಂಚು ಬಲ ಹೃತ್ಕರ್ಣದಿಂದಲೂ ಎಡ ಅಂಚು ವಿಶೇಷವಾಗಿ ಎಡ ಹೃತ್ಕುಕ್ಷಿ ಮತ್ತು ಸ್ವಲ್ಪ ಮಾತ್ರ ಎಡ ಹೃತ್ಕರ್ಣದಿಂದಲೂ ಆಗಿದೆ. ಹೃದಯದ ಕೆಳ ಅಂಚು ಇದರಿಂದಲೇ ಆಗಿದೆ. ಹೃದಯ ತಳ ಹಿಮ್ಮುಖವಾಗಿರುತ್ತದೆ. ಇದು ಎದೆಪ್ರದೇಶದ 5 ನೆಯ ಬೆನ್ನಮೂಳೆಯಿಂದ 8 ನೆಯ ಬೆನ್ನು ಮೂಳೆವರೆಗೆ (ತೊರ್ಯಾಸಿಕ್ ವರ್ಟಿಬ್ರ) ಪಸರಿಸಿದೆ. ಇದಕ್ಕೂ ಬೆನ್ನು ಮೂಳೆಗೂ ನಡುವೆ ಮಹಾಪಧಮನಿಯ ಭಾಗವೂ ಅನ್ನನಾಳವೂ ಇರುತ್ತದೆ. ಈ ಭಾಗ ಬಹುವಾಗಿ ಎಡ ಹೃತ್ಕರ್ಣದಿಂದಾಗಿದ್ದು ಇಲ್ಲಿ ಬಲಗಡೆಯಿಂದ 2 ಫುಪ್ಫುಸ ಅಭಿಧಮನಿಗಳು ಬಂದು ಎಡಹೃತ್ಕರ್ಣವನ್ನು ಸೇರುತ್ತವೆ. ಇವು ಆಮ್ಲಜನಕಯುಕ್ತ ರಕ್ತವನ್ನು ಫುಪ್ಫುಸಗಳಿಂದ ಎಡಹೃತ್ಕರ್ಣಕ್ಕೆ ಒಯ್ಯುತ್ತವೆ. ವಪೆಗೆ ತಗುಲಿದ ಹಾಗಿರುವ ಹೃದಯದ ಭಾಗ 2/3 ರಷ್ಟು ಎಡಹೃತ್ಕುಕ್ಷಿಯಿಂದಲೂ 1/3 ರಷ್ಟು ಬಲಹೃತ್ಕುಕ್ಷಿಯಿಂದಲೂ ಆಗಿದೆ. ವಪೆ ಹೃದಯವನ್ನು ಯಕೃತ್ತಿನ ಎಡಭಾಗ ಮತ್ತು ಜಠರದಿಂದ ಪ್ರತ್ಯೇಕಿಸುತ್ತದೆ.

ಬಲಪಕ್ಕದಿಂದ ನೋಡಿದರೆ ಬಲಹೃತ್ಕುಕ್ಷಿಗೂ ಬೆನ್ನಮೂಳೆಗೂ ನಡುವೆ ಬಲ ಹೃತ್ಕರ್ಣ ಕಾಣಿಸುತ್ತದೆ. ತಲೆ ತೋಳುಗಳು ಮತ್ತು ಎದೆಯ ಮೇಲುಭಾಗದಿಂದ ಆಮ್ಲಜನಕ ವಿರಳರಕ್ತವನ್ನು ತರುವ ಉನ್ನತಮಹಾಭಿಧಮನಿ (ಸುಪೀರಿಯರ್ ವೀನಕೇವ) ಬಲ ಹೃತ್ಕರ್ಣದ ಮೇಲಿನ ಭಾಗಕ್ಕೆ ತೆರೆದುಕೊಳ್ಳುತ್ತದೆ. ಹೀಗೆಯೇ ದೇಹದಲ್ಲಿ ಉಳಿದ ಭಾಗಗಳಿಂದ ರಕ್ತವನ್ನು ತರುವ ಅವನತಮಹಾಭಿಧಮನಿ (ಇನ್ಫೀರಿಯರ್ ವೀನಕೇವ) ಕೆಳಗಿನಿಂದ ವಪೆಯಲ್ಲಿ ತೂರಿ ಬಲಹೃತ್ಕರ್ಣದ ಕೆಳಭಾಗದಲ್ಲಿ ತೆರೆದುಕೊಳ್ಳುತ್ತದೆ.



ಹೃದಯದ ಲಂಬಸೀಳಿಕೆ

ಕವಾಟವಿರುವ ಹೃದಯದ ಮಹಾಭಿಧಮನಿ (ಕರೋನರಿ ಸೈನಸ್) ಇಡೀ ಹೃದಯದ ಸ್ನಾಯುಗಳಿಂದ ಬರುವ ಆಕ್ಸಿಜನ್ ವಿರಳರಕ್ತವನ್ನು ಬಲಹೃತ್ಕರ್ಣಕ್ಕೆ ತಲುಪಿಸುತ್ತದೆ. ಬಲಹೃತ್ಕರ್ಣದ ಉನ್ನತ ಮಹಾಭಿಧಮನಿ ಸೇರುವ ಕಡೆ ಸೈನೊ ಏಟ್ರಿಯಲ್ ಗಿಣ್ಣು ಮತ್ತು ಹೃದಯದ ಮಹಾಭಿಧಮನಿಯ ಹತ್ತಿರ ಏಟ್ರಿಯೊವೆಂಟ್ರಿಕ್ಯುಲರ್ ಗಿಣ್ಣು ಎಂಬ ಎರಡು ವಿಶಿಷ್ಟ ಮಾಂಸದ ಗಂಟುಗಳು ಬಲಹೃತ್ಕರ್ಣದ ಮಾಂಸಭಿತ್ತಿಯಲ್ಲಿ ಹುದುಗಿಕೊಂಡಿರುತ್ತವೆ. ಇವುಗಳ ಸ್ವಯಂ ಪ್ರಚೋದಿತ ಕಾರ್ಯಕ್ರಮದಿಂದ ಹೃದಯ ನಿಯತವಾದ ತಾಳಕ್ರಮದಲ್ಲಿರುತ್ತದೆ. ಬಲಹೃತ್ಕರ್ಣದ ಹಿಂದಕ್ಕೂ ಎಡಕ್ಕೂ ಎಡಹೃತ್ಕರ್ಣ ಉಂಟು. ಹೀಗಿರುವುದು ಎರಡು ಹೃತ್ಕರ್ಣಗಳನ್ನು ವಿಭಾಗಿಸುವ ನಡುವಣ ತಡಿಕೆ ಓರೆಯಾಗಿರುವುದರ ಪರಿಣಾಮ. ಭ್ರೂಣಾವಸ್ಥೆಯಲ್ಲಿ ತಡಿಕೆಯಲ್ಲಿ ಅಂಡಾಕಾರದ ಕಂಡಿ (ಫೊರಾಮನ್ ಓವಾಲೀ) ಇದ್ದು ಅದು ಅವನತಮಹಾಭಿಧಮನಿಯಿಂದ ಬಲಹೃತ್ಕರ್ಣವನ್ನು ತಲುಪಿದ ರಕ್ತವನ್ನು ಕೂಡಲೇ ಎಡಹೃತ್ಕರ್ಣಕ್ಕೆ ಹೋಗಗೊಡುತ್ತದೆ. ರಕ್ತದ ಚಲನೆಯನ್ನು ಈ ರೀತಿ ನಿಯಂತ್ರಿಸಲು ಅವನತಮಹಾಭಿಧಮನಿಯ ಬಾಯಲ್ಲಿ ಯೂಸ್ಟೇಕಿಯಸ್ಸನ ಕವಾಟಗಳಿರುತ್ತದೆ. ಜನನವಾದ ಮೇಲೆ ಎರಡು ಹೃತ್ಕರ್ಣಗಳ ಒಳಪೊರೆಗಳೂ ಅಂಡಾಕಾರದ ಕಂಡಿಯನ್ನು ಮುಚ್ಚಿ ತಡಿಕೆಯಲ್ಲಿ ಒಂದು ತಗ್ಗು ಮಾತ್ರ ಇರುವಂತೆ ಕಾಣುತ್ತದೆ. ಯೂಸ್ಟೇಕಿಯಸ್ಸನ ಕವಾಟಗಳ ಉಳಿಕೆಗಳೂ ಅವನತಮಹಾಭಿಧಮನಿಯ ಬಾಯ ಸುತ್ತ ಕಾಣಬರುತ್ತದೆ. ಹೃದಯದ ಮಿಕ್ಕ ಎಲ್ಲ ಕೋಶಗಳಂತೆ ಬಲಹೃತ್ಕರ್ಣದ ಒಳಗೆ ಕೂಡ ನುಣುಪಾದ ಪೊರೆ ಇದ್ದರೂ ಆ ಪೊರೆಯ ಒಳಗೆ ಇರುವ ಸ್ನಾಯು ತಂತುಗಳ ವಿನ್ಯಾಸದಿಂದ ಅದು ಜುಂಗುಜುಂಗಾಗಿರುವುದು.

ಬಲಹೃತ್ಕರ್ಣದಿಂದ ಬಲಹೃತ್ಕುಕ್ಷಿಗೆ ರಕ್ತ ಇವುಗಳ ನಡುವೆ ಇರುವ ದ್ವಾರದ ಮೂಲಕ ಹರಿದು ತುಂಬಿಕೊಳ್ಳುತ್ತದೆ. ಬಲಹೃತ್ಕರ್ಣ ಸಂಕುಚಿಸಿದಾಗ ಬಲಹೃತ್ಕುಕ್ಷಿ ಪೂರ್ಣವಾಗಿ ತುಂಬಿಕೊಳ್ಳುತ್ತದೆ. ಬಲಹೃತ್ಕರ್ಣಹೃತ್ಕುಕ್ಷಿಗಳ ನಡುವಿನ ಈ ದ್ವಾರದಲ್ಲಿ ತ್ರಿದಳ ಕವಾಟ (ಟ್ರೈಕಸ್ಪಿಡ್ ವಾಲ್ವ) ಉಂಟು. ಇದು ಬಲ ಹೃತ್ಕರ್ಣದಿಂದ ಬಲಹೃತ್ಕುಕ್ಷಿಗೆ ರಕ್ತ ಹರಿಯಲು ಅವಕಾಶ ಮಾಡಿಕೊಡುತ್ತದಾದರೂ ಬಲಹೃತ್ಕುಕ್ಷಿ ಸಂಕುಚಿಸಿದಾಗ ಇದರ ಮೂರು ದಳಗಳೂ ತೇಲಿ ಸಂಪರ್ಕಗೊಂಡು ದ್ವಾರ ಮುಚ್ಚಿಕೊಳ್ಳುವುದರಿಂದ ರಕ್ತ ಪುನಃ ಹೃತ್ಕರ್ಣಕ್ಕೆ ಬರದಂತೆ ತಡೆಯುತ್ತದೆ. ಕವಾಟದ ದಳಗಳ ಕೆಳಗಿನ ಕುಚ್ಚುಕುಚ್ಚಾದ ಅಂಚುಗಳು ಕಾರ್ಡೆಟೆಂಡಿನೆ ಎಂಬ ತಂತುಗಳಿಂದ ಬಲ ಹೃತ್ಕುಕ್ಷಿಯ ಒಳಗಿರುವ ಬೆರಳಿನೋಪಾದಿಯ ಸ್ನಾಯುಗಳ ಗುದಿಗೆ ಸೇರಿಸಲ್ಪಟ್ಟಿರುವುದರಿಂದ ಕವಾಟ ಮುಚ್ಚಿಕೊಂಡಾಗ ದಳಗಳು ದೃಢವಾಗಿದ್ದು ರಕ್ತದ ವಾಪಸಾತಿಯ ತಡೆಯನ್ನು ಯಶಸ್ವಿಯಾಗಿ ನೆರವೇರಿಸುತ್ತದೆ. ಬಲಹೃತ್ಕುಕ್ಷಿಯಿಂದ ರಕ್ತ ಫುಪ್ಫುಸ ಅಪಧಮನಿಯೊಳಕ್ಕೆ ನೂಕಲ್ಪಡುತ್ತದೆ. ಈ ಅಪಧಮನಿಯ ಪ್ರಾರಂಭದಲ್ಲಿ ಮೂರು ಅರೆಚಂದ್ರಾಕಾರ ದಳಗಳುಳ್ಳ ಅರೆಚಂದ್ರಾಕಾರ ಕವಾಟವಿದ್ದು ಹೃತ್ಕುಕ್ಷಿ ಸಂಕುಚಿಸಿದಾಗ ವಾಟ್ಸಾಲ್ವನ ಸೈನಸ್‌ಗಳೆಂಬ ಸಣ್ಣ ಪೊಟರೆಗಳೊಳಕ್ಕೆ ಬರಿದಾದ ದಳಗಳು ತಳ್ಳಲ್ಪಟ್ಟು ರಕ್ತ ಅಪಧಮನಿಯೊಳಗೆ ಹೋಗಲು ಅವಕಾಶಮಾಡಿಕೊಡುತ್ತದೆ. ಹೃತ್ಕುಕ್ಷಿಯ ವಿಕಾಸ (ರಿಲ್ಯಾಕ್ಸೇಷನ್) ಪ್ರಾರಂಭವಾದಾಗ ಕವಾಟದ ದಳಗಳಲ್ಲಿ ರಕ್ತತುಂಬಿ ಅವು ಹಿಂದಕ್ಕೆ ಬಿದ್ದು ಅಪಧಮನಿಯನ್ನು ಅಡ್ಡಕಟ್ಟಿ ರಕ್ತ ಪುನಃ ಹೃತ್ಕುಕ್ಷಿಯೊಳಗೆ ಹೋಗದಂತೆ ತಡೆಯುತ್ತದೆ. ಫುಪ್ಫುಸಗಳಿಂದ ರಕ್ತ ಎರಡು ಫುಪ್ಫುಸಭಿಧಮನಿಗಳ ಮೂಲಕ ಎಡಹೃತ್ಕರ್ಣಕ್ಕೆ ಬಂದು ಸೇರುತ್ತದೆ. ಎಡಹೃತ್ಕರ್ಣದಿಂದ ರಕ್ತ ಎಡಹೃತ್ಕುಕ್ಷಿಗೆ, ಇವೆರಡರ ನಡುವಣ ದ್ವಾರದ ಮೂಲಕ ಹರಿದು ತುಂಬಿಕೊಳ್ಳುತ್ತದೆ. ಬಲಭಾಗದಲ್ಲಿನಂತೆ ಈ ದ್ವಾರದಲ್ಲೂ ಕವಾಟ ಉಂಟು. ಆದರೆ ಇದರಲ್ಲಿ ಎರಡು ದಳಗಳು ಮಾತ್ರ ಇರುವುದರಿಂದ ಇದನ್ನು ದ್ವಿದಳಕವಾಟವೆಂದು ಕರೆಯಲಾಗಿದೆ. ಇದಕ್ಕೆ ಮೈಟ್ರಲ್ ಕವಾಟವೆಂದು ಕೂಡ ಹೆಸರುಂಟು. ಈ ಕವಾಟ ಸಹ ಎಡಹೃತ್ಕರ್ಣ ಸಂಕುಚಿಸುವಾಗಲೂ ತೆರೆದುಕೊಂಡಿದ್ದು ಎಡಹೃತ್ಕುಕ್ಷಿ ಸಂಪೂರ್ಣವಾಗಿ ತುಂಬಿ ಅದರ ಸಂಕುಚನೆ ಪ್ರಾರಂಭವಾದಾಗ ಇದರ ಎರಡು ದಳಗಳೂ ತೇಲಿ ಸಂಪರ್ಕಗೊಂಡು ದ್ವಾರ ಮುಚ್ಚಿಕೊಂಡು ಹೃತ್ಕರ್ಣಕ್ಕೆ ರಕ್ತದ ವಾಪಸಾತಿಯನ್ನು ತಡೆಯುತ್ತದೆ. ಈ ದಳಗಳ ಕುಚ್ಚುಕುಚ್ಚಾದ ಅಂಚು ತಂತುಗಳಿಂದ ಎಡಹೃತ್ಕುಕ್ಷಿಯ ಒಳಗಿರುವ ಬೆರಳಿನೋಪಾದಿಯ ಸ್ನಾಯುಗಳ ತುದಿಗೆ ಸೇರಿಕೊಂಡಿರುವುದರಿಂದ ದೃಢಗೊಳಿಸಲ್ಪಟ್ಟು ರಕ್ತದ ತಡೆ ಯಶಸ್ವಿಯಾಗಿರುತ್ತದೆ. ಎಡಹೃತ್ಕುಕ್ಷಿಯ ಸಂಕುಚನದಿಂದ ರಕ್ತ ಮಹಾಪಧಮನಿಗೆ (ಅಯೋರ್ಟ) ನುಗ್ಗುತ್ತದೆ. ಮಹಾಧಮನಿಯ ಪ್ರಾರಂಭದಲ್ಲೂ ಅರೆಚಂದ್ರಾಕಾರ ಕವಾಟವಿದ್ದು ಎಡಹೃತ್ಕುಕ್ಷಿಯ ವಿಕಾಸ ಪ್ರಾರಂಭವಾದಾಗ ಅಪಧಮನಿಯಿಂದ ರಕ್ತದ ಹಿನ್ನುಗ್ಗುವಿಕೆಯನ್ನು ಅದು ತಡೆಯುತ್ತದೆ. ರಕ್ತ ಮಹಾಪಧಮನಿಯ ಮೂಲಕ ಮುಂದೆ ಹರಿದು ದೇಹದ ಎಲ್ಲ ಕಡೆಗಳಿಗೂ ಪೂರೈಸಲ್ಪಡುತ್ತದೆ. ಹೃದಯಕ್ಕೇ ರಕ್ತವನ್ನು ಪೂರೈಸುವ ಎಡ, ಬಲ ಎಂಬ ಎರಡು ಹೃದಯದ ಅಪಧಮನಿಗಳು ಮಹಾಪಧಮನಿಯ ಪ್ರಾರಂಭದ ಕವಲುಗಳು ಎಡಬಲ ಹೃತ್ಕುಕ್ಷಿಗಳ ನಡುವೆ ಇರುವ ತಡಿಕೆಯೂ ಸ್ವಲ್ಪ ಮಟ್ಟಿಗೆ ಓರೆಯಾಗಿರುವುದರಿಂದ ಬಲ ಹೃತ್ಕುಕ್ಷಿ ಸ್ವಲ್ಪ ಮುಂದಕ್ಕೂ ಎಡಹೃತ್ಕುಕ್ಷಿ ಸ್ವಲ್ಪ ಹಿಂದಕ್ಕೂ ಇವೆ. ಈ ತಡಿಕೆ ಕೆಳಭಾಗದಲ್ಲಿ ಸ್ನಾಯುರಹಿತವಾಗಿ ತೆಳ್ಳಗೂ ಇದೆ. ಅಲ್ಲದೆ ತಡಿಕೆ ಬಲಗಡೆಗೆ ಡೊಂಕಾಗಿ ಉಬ್ಬಿಕೊಂಡಿರುವುದರಿಂದ ಹೃತ್ಕುಕ್ಷಿಗಳ ನೇರದಲ್ಲಿ ಹೃದಯವನ್ನು ಅಡ್ಡವಾಗಿ ಛೇದಿಸಿದರೆ ಬಲಹೃತ್ಕುಕ್ಷಿ ಅರ್ಧಚಂದ್ರಾಕಾರವಾಗಿದ್ದು ಗುಂಡಗಿರುವ ಎಡಹೃತ್ಕುಕ್ಷಿಯನ್ನು ಆವರಿಸಿದಂತೆ ಕಾಣುವುದು. ಹಾಗೆಯೇ ಎಡಹೃತ್ಕುಕ್ಷಿಯ ಭಿತ್ತಿ ಬಲಹೃತ್ಕುಕ್ಷಿಯ ಭಿತ್ತಿಗಿಂತ ಬಹು ದಪ್ಪವಾಗಿರುವುದಾಗಿ ಕಾಣುವುದು. ಹೃತ್ಕರ್ಣಗಳ ಭಿತ್ತಿ ಹೃತ್ಕುಕ್ಷಿಯ ಭಿತ್ತಿಗಿಂತಲೂ ತೆಳುವಾಗಿರುತ್ತದೆ. ಹೃತ್ಕರ್ಣ ಹೃತ್ಕುಕ್ಷಿಗಳ ತಡಿಕೆಗಳು ಹೃದಯದ ಎಡಬಲ ಭಾಗಗಳನ್ನು ನೇರ ಸಂಪರ್ಕವಿಲ್ಲದಂತೆ ಪ್ರತ್ಯೇಕಿಸುತ್ತವೆ.

ಹೃತ್ಕರ್ಣ ಹೃತ್ಕುಕ್ಷಿಗಳ ನಡುವೆ ಯಾವ ನೇರವಾದ ಸಂಬಂಧ ಇಲ್ಲ. ಹೃತ್ಕರ್ಣಗಳು ಕುಗ್ಗಿ ಪುನಃ ಹಿಗ್ಗುವುದಕ್ಕೆ ಪ್ರಾರಂಭಿಸಿದ ಮೇಲೆಯೇ ಹೃತ್ಕುಕ್ಷಿಗಳು ಕುಗ್ಗುವುದಕ್ಕೆ ಪ್ರಾರಂಭಿಸುತ್ತವೆ. ಈ ನಿಯಂತ್ರಣ ಕ್ರಮ ಮೇಲೆ ಹೇಳಿದಂತೆ ಸೈನೋ ಏಟ್ರಿಯಲ್ ಗಿಣ್ಣಿನಲಿ ಹೃದಯದ ಬಡಿತಕ್ಕೆ ಸ್ವಯಂಪ್ರಚೋದನೆಯಾಗುತ್ತದೆ. ಇದು ಎರಡು ಹೃತ್ಕರ್ಣಗಳನ್ನೂ ಒಟ್ಟಿಗೆ ಸಂಕುಚಿಸಿ ಜೊತೆಗೆ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣನ್ನು ಪ್ರಚೋದಿಸುತ್ತದೆ. ಅಲ್ಲಿಂದ ಪ್ರಚೋದನೆ ಹಿಸ್ಸನ ಬೊಂತೆ (ಬಂಡಲ್ ಆಫ್ ಹಿಸ್) ಎಂಬ ಅವ್ಯಕ್ತವಾದ ವಿಶೇಷ ಸ್ನಾಯುಗಳ ಪಟ್ಟಿಯ ಮೂಲಕ ಮುಂದುವರಿಯುತ್ತದೆ. ಹಿಸ್ಸನ ಬೊಂತೆ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣಿನಿಂದ ಪ್ರಾರಂಭವಾಗಿ ಹೃತ್ಕುಕ್ಷಿಗಳ ನಡುವಿನ

ತಡಿಕೆಯ ಮೇಲುಭಾಗವನ್ನು ಸೇರುತ್ತದೆ ಅಲ್ಲಿ ಎರಡು ಕವಲಾಗಿ ತಡಿಕೆಯ ಎಡಬಲ ಮೈಮೇಲೆ ಮುಂದುವರಿದು ಹೃದಯದ ತುದಿಯನ್ನು ಸೇರುತ್ತದೆ. ಅಲ್ಲಿಂದ ಹೃತ್ಕುಕ್ಷಿಗಳ ಎಡ ಬಲ ಅಂಚುಗಳಲ್ಲಿ ಕ್ರಮಿಸುತ್ತ ಅನೇಕ ಎಳೆಗಳಾಗಿ ಹೃದಯದ ಸ್ನಾಯುವಿನ ಜೀವಕಣಗಳೊಡನೆ ವಿಲೀನವಾಗುತ್ತದೆ. ಇದರಿಂದ ಸ್ನಾಯುಗಳೆಲ್ಲ ಹೊಂದಿಕೊಂಡು ಚೋದನೆಗೆ ಈಡಾಗುವಂತೆ ನೆರವಾಗುತ್ತದೆ ಮತ್ತು ಎರಡು ಹೃತ್ಕರ್ಣಗಳು ಒಟ್ಟಿಗೇ ಸಂಕುಚಿಸಿದ ಮೇಲೆ ಸುಮಾರು 0.1 ಸೆಕೆಂಡು ತಡೆದು ಹೃತ್ಕುಕ್ಷಿಗಳೂ ಒಟ್ಟಿಗೇ ಸಂಕುಚಿಸುವುದಕ್ಕೆ ಸಾಧ್ಯವಾಗಿವೆ.

ಹೃದಯಕ್ಕೆ ಪೂರೈಕೆಯಾಗುವ ನರಗಳಲ್ಲಿ ಉಪಾನುವೇದನ (ಪ್ಯಾರಾಸಿಂಪತೆಟಿಕ್) ನರವಾದ ವೇಗಸ್ ನರವೂ ಕೊರಳು ಮತ್ತು ಎದೆಯ ಮೇಲ್ಗಡೆಯ ನರಗಂಟುಗಳಿಂದ (ಗ್ಯಾಂಗ್ಲಿಯ) ಬರುವ ಅನುವೇದನೆ ನರಕವಲುಗಳೂ ಇವೆ. ಇವು ಹೃದಯದ ಮೇಲ್ಮೈಯಲ್ಲಿ ಮತ್ತು ಆಳದಲ್ಲಿ ಹೆಣಿಲುಗಳಾಗಿರುತ್ತವೆ. ಈ ನರಗಳು ಹೃದಯದ ಬಡಿತವನ್ನು ನಿಯಂತ್ರಿಸುತ್ತವೆ.

ಪ್ರಾಣಿಗಳಲ್ಲಿ ಹೃದಯದ ರಚನೆ : ತೀರ ಪ್ರಾಥಮಿಕ ದರ್ಜೆಯ ಪ್ರಾಣಿಗಳನ್ನು (ಉದಾಹರಣೆಗೆ ಏಕಾಣು ಜೀವಿಗಳು) ಬಿಟ್ಟು ಇತರ ಎಲ್ಲ ಪ್ರಾಣಿಗಳಿಗೂ ಎರೆಹುಳುಗಳನ್ನೂ ಒಳಗೊಂಡಂತೆ ಅಕಶೇರುಕಗಳಿಗೆ ಸಹ ಹೃದಯ ಉಂಟು. ಪ್ರಾಣಿ ದೇಹದಲ್ಲಿ ರಕ್ತಪರಿಚಲನೆಯ ನಿರಂತರತೆಯನ್ನು ಕೂಡಿಟ್ಟುಕೊಳ್ಳುವುದೇ ಇದು ನಿರ್ವಹಿಸುವ ಕ್ರಿಯೇ. ಕಶೇರುಕಗಳಲ್ಲಿ ಹೃದಯದ ವಿಕಾಸವನ್ನು ಈ ಮುಂದೆ ವಿವರಿಸಿದೆ.

ಪ್ರಪ್ರಥಮವಾಗಿ ಮಾಂಸಲವಾದ ಒಂದು ಹೃದಯ ಆದಿ ಕಶೇರುಕಗಳಲ್ಲಿ ಕಾಣಿಸಿಕೊಂಡಿದೆ. ಚಕ್ರಾಸ್ಯಮೀನುಗಳ್ಲಿ ಬಹಳ ಸರಳವಾದ ಮತ್ತು ಮೂಲ ರಚನೆಯನ್ನು ತೋರುವ ಹೃದಯವನ್ನು ಕಾಣಬಹುದು. ಇದರಲ್ಲಿ ನಾಲ್ಕು ಕೋಣೆಗಳಿದ್ದರೂ ಪ್ರಮುಖವಾದುವು ಎರಡು ಮಾತ್ರ–ಹೃತ್ಕರ್ಣ ಮತ್ತು ಹೃತ್ಕುಕ್ಷಿ. ಹೃತ್ಕರ್ಣ ತೆಳುಭಿತ್ತಿಯ ಕೋಣೆ. ದೇಹದ ನಾನಾಭಾಗಗಳಿಂದ ಬರುವ ಮಲಿನ ರಕ್ತ ಮೊದಲು ಈ ಭಾಗಕ್ಕೆ ಬರುತ್ತದೆ. ಹೀಗೆ ರಕ್ತವನ್ನು ಸಂಗ್ರಹಿಸಿ ತಂದು ಹೃತ್ಕರ್ಣಕ್ಕೆ ಸೇರಿಸುವ ಕ್ರಿಯೆಯಲ್ಲಿ ಸೈನಸ್ ವಿನೋಸಸ್ ಎಂಬ ಇನ್ನೊಂದು ಕೋಣೆ ಪಾತ್ರವಹಿಸುತ್ತದೆ. ಹೃತ್ಕರ್ಣದಿಂದ ರಕ್ತ ಮಾಂಸಲವಾದ ಹೃತ್ಕುಕ್ಷಿಗೆ ಹೋಗುತ್ತದೆ. ಅಲ್ಲಿಂದ ಕೋನಸ್ ಎಂಬ ಇನ್ನೊಂದು ಕೋಣೆಯ ಮೂಲಕ ದೇಹದ ವಿವಿಧ ಭಾಗಗಳಿಗೆ ಹರಿಯುತ್ತದೆ. ಹೃದಯದ ಸುತ್ತ ಸೀಲೋಮಿನಿಂದ ಉದ್ಭವಿಸಿದ ಪೆರಿಕಾರ್ಡಿಯಂ ಎಂಬ ಆವರಣವಿದೆ. ಇದನ್ನು ತೆಳುವಾದ ಭಿತ್ತಿಯೊಂದು ಸುತ್ತುವರೆದಿದೆ. ಪೆರಿಕಾರ್ಡಿಯಮ್‌ನಲ್ಲಿ ಮೃದು ಚಾಲಕದಂತೆ ವರ್ತಿಸುವ ದ್ರವ ಉಂಟು.

ಪ್ರಾಣಿಯ ಬೆಳೆವಣಿಗೆಯ ಕಾಲದಲ್ಲಿ ಹೃದಯ ಮೂಲತಃ ಒಂದು ರಕ್ತನಾಳದಿಂದ ಆರಂಭವಾಗುತ್ತದೆ. ಈ ರಕ್ತನಾಳ S–ಆಕಾರದಲ್ಲಿ ಬಾಗಿ ವಿವಿಧ ಕೋಣೆಗಳಾಗಿ ವಿಭಾಗವಾಗಿ ಸಮರ್ಥವಾದ ಪ್ರಬುದ್ಧ ಹೃದಯವಾಗಿ ರೂಪುಗೊಳ್ಳುತ್ತದೆ.

ಮೀನುಗಳಲ್ಲಿ ಮೇಲೆ ತಿಳಿಸಿದ ನಾಲ್ಕು ಕೋಣೆಗಳೂ ಇದ್ದು ಕೇವಲ ಮಲಿನ ರಕ್ತ ಮಾತ್ರ ಹೃದಯಕ್ಕೆ ಬರುತ್ತದೆ. ಇದಕ್ಕೆ ಮಲಿನ ರಕ್ತದ ಹೃದಯ ಎಂದು ಹೆಸರು. ಮೀನುಗಳಲ್ಲಿ ಏಕ ರಕ್ತಾಭಿಸರಣೆ ಮಾತ್ರ ಕಂಡುಬರುತ್ತದೆ. ಸೈನಸ್ ವಿನೋಸಸ್ ಮತ್ತು ಹೃತ್ಕರ್ಣ ಮಧ್ಯ ತೆಳುವಾದ ಅಪೂರ್ಣ ಮಾಂಸಲ ಭಿತ್ತಿ ಇದೆ. ಇವೆರಡರ ನಡುವೆ ಇರುವ ದ್ವಾರದಲ್ಲಿ ಕವಾಟಗಳಿವೆ. ಸ್ವಲ್ಪ ಒತ್ತಡದಿಂದಲೆ ರಕ್ತ ಹೃತ್ಕರ್ಣದಿಂದ ಹೃತ್ಕುಕ್ಷಿಗೆ ಹರಿಯುತ್ತದೆ. ಹೃತ್ಕುಕ್ಷಿಯ ಮುಂದೆ ಕೋನಸ್ ಆರ್ಟಿಯೋಸಸ್ ಕೋಣೆ ವೆಂಟ್ರಲ್ ಅಯೋರ್ಟ (ವೆಂಟ್ರಲ್ ಮಹಾಪಧಮನಿ) ಅಥವಾ ಬಲ್ಬಸ್ ಆರ್ಟಿರಿಯೋಸಸ್‌ಗೆ ತೆರೆಯುವುದು. ಬಲ್ಬಸ್ ಆರ್ಟಿರಿಯೋಸಸ್ ಟೀಲಿಯಾಸ್ಟ ಮೀನುಗಳ್ಲಿ ಮಾತ್ರ ಇವೆ. ಆದ್ದರಿಂದ ಈ ಮೀನುಗಳಲ್ಲಿ ಕೋನಸ್ ಮತ್ತು ಅದರಲ್ಲಿನ ಕವಾಟಗಳು ಕಣ್ಮರೆಯಾಗಿವೆ. ಅಪೂರ್ಣ ಅಡ್ಡ ಭಿತ್ತಿಯೊಂದು ಹೃತ್ಕರ್ಣವನ್ನು ವಿಭಾಗಿಸಿವೆ. ಇದರ ಎಡಭಾಗ ಬಲಭಾಗಕ್ಕಿಂತ ಚಿಕ್ಕದು. ಇಲ್ಲಿಗೆ ಈಜುಕೋಶದಿಂದ ಬಂದ ರಕ್ತ ಸೇರುತ್ತದೆ. ಈ ದೃಷ್ಟಿಯಿಂದ ಫುಪ್ಪುಸ ಮೀನುಗಳ ಹೃದಯ ಯೂರೊಡಿಲ್ ದ್ವಿಚರಿಗಳ ಹೃದಯವನ್ನು ಹೋಲುತ್ತದೆ.

ದ್ವಿಚರಿಗಳ ಹೃದಯದ ರಚನೆ ಮೀನುಗಳ ಹೃದಯದ ರಚನೆಗಿಂತ ಮುಂದುವರಿದಿದೆ. ದ್ವಿಚರಿಗಳಲ್ಲಿನ ಹೃದಯದಲ್ಲಿ 3 ಪ್ರಧಾನ ಕೋಣೆಗಳನ್ನು ನೋಡಬಹುದು. ಹೃತ್ಕರ್ಣ ಪೂರ್ಣ ಅಡ್ಡ ಭಿತ್ತಿಯಿಂದ ಎರಡು ಭಾಗವಾಗಿದ್ದು ಎಡಭಾಗಕ್ಕೆ ಶ್ವಾಸಕೋಶಗಳಿಂದಲೂ ಬಲಭಾಗಕ್ಕೆ ದೇಹದ ಮಿಕ್ಕ ಭಾಗಗಳಿಂದಲೂ ರಕ್ತ ಬಂದು ಸೇರುತ್ತದೆ. ಕಿವಿರುಗಳುಳ್ಳ ಯೂರೊಡಿಲ್ ದ್ವಿಚರಿಗಳಲ್ಲಿ ಶ್ವಾಸಕೋಶಗಳು ಕೃಶವಾಗಿದ್ದರೂ ಹೃತ್ಕರ್ಣ ಮಾತ್ರ ಎರಡು ಭಾಗಗಳನ್ನು ಪಡೆದೇ ಇದೆ. ಕೋನಸ್ ಸರಳವಾಗಿದೆ. ಸುರುಳಿ ಕವಾಟವಿಲ್ಲ ಬಲ್ಬಸ್ ಆರ್ಟಿರಿಯೋಸಸ್ ಅಯೋರ್ಟದ ಬುಡದಲ್ಲಿದೆ. ದ್ವಿಚರಿಗಳ ಹೃದಯ ಮೀನುಗಳ ಹೃದಯದಂತೆ ಬರಿಯ ಮಲಿನ ರಕ್ತದ ಹೃದಯವಲ್ಲ. ದೇಹದ ಭಾಗಗಳಿಂದ ರಕ್ತವನ್ನು ಸಂಗ್ರಹಿಸಿ ಶುದ್ಧೀಕರಣಕ್ಕಾಗಿ ಫುಪ್ಪುಸಗಳಿಗೆ ಕಳುಹಿಸಿ, ಫುಪ್ಪುಸಗಳಿಂದ ಆಮ್ಲಜನಕವನ್ನು ಹೊತ್ತು ತಂದ ರಕ್ತವನ್ನು ದೇಹದ ವಿವಿಧ ಭಾಗಗಳಿಗೆ ಹಂಚುವುದು. ಆದ್ದರಿಂದ ಇವುಗಳಲ್ಲಿ ದ್ವಿರಕ್ತಾಭಿಸರಣೆ ಇದೆ.

ಕಪ್ಪೆ ಮತ್ತು ನೆಲಗಪ್ಪೆಗಳ ಹೃದಯ ಮಿಕ್ಕ ದ್ವಿಚರಿಗಳ ಹೃದಯಕ್ಕಿಂತ ರಚನೆಯಲ್ಲಿ ಹೆಚ್ಚು ಮುಂದುವರಿದಿದೆ. ಕಪ್ಪೆಯಲ್ಲಿ ಇರುವ ಹೃತ್ಕರ್ಣದ ಅಡ್ಡ ಭಿತ್ತಿ ಹೃತ್ಕರ್ಣವನ್ನು ಬಲ ಮತ್ತು ಎಡ ಹೃತ್ಕರ್ಣಗಳೆಂಬ ಎರಡು ಭಾಗ ಮಾಡುತ್ತದೆ. ಹೃತ್ಕರ್ಣದ ಕೆಳಗೆ ಹೃತ್ಕುಕ್ಷಿಯಿದೆ. ಇದು ದಪ್ಪ ಮಾಂಸಲ ಭಿತ್ತಿಯಿಂದಾದುದು. ಹೃದಯದ ಬೆನ್ನುಭಾಗದಲ್ಲಿರುವ ಸೈನಸ್ ವಿನೋಸಸ್ ಬಲ ಹೃತ್ಕರ್ಣ ಸೈನು ಅರಿಕ್ಯುಲಾರ್ ಕವಾಟವಿದೆ. ಇದು ಇರುವುದರಿಂದ ರಕ್ತ ಸೈನಸ್ ವಿನೋಸಸ್‌ನಿಂದ ಹೃತ್ಕರ್ಣಕ್ಕೆ ಮಾತ್ರ ಹರಿಯಲು ಸಾಧ್ಯ. ಸೈನಸ್ ವಿನೋಸಸ್ ಕೋಣೆಗೆ ಮೂರು ಅಭಿಧಮನಿಗಳು ಬಂದು ಸೇರುತ್ತವೆ. ಮುಂಭಾಗದಿಂದ ಎಡ ಮತ್ತು ಬಲ ಉನ್ನತ ಮಹಾಭಿಧಮನಿಗಳು (ಸುಪೀರಿಯರ್ ವೀನಕೇವ) ಮತ್ತು ಹಿಂಭಾಗದಿಂದ ಅವನತಮಹಾಭಿಧಮನಿಯೂ (ಇನ್ಫೀರಿಯರ್ ವೀನಕೇವ) ಸೇರುತ್ತದೆ. ಎಡಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿ ತೆರೆಯುತ್ತದೆ. ಹೃತ್ಕರ್ಣಗಳೆರಡೂ ಹೃತ್ಕುಕ್ಷಿಗೆ ಆರಿಕ್ಯುಲೊ ವೆಂಟ್ರಿಕ್ಯುಲಾರ್ ರಂಧ್ರದ ಮೂಲಕ ತೆರೆಯುತ್ತವೆ. ಈ ರಂಧ್ರವನ್ನು ಪಟಲಗಳಂತೆ ಇರುವ ಎರಡು ಆರಿಕ್ಯುಲೋ ವೆಂಟ್ರಿಕ್ಯುಲಾರ್ ಕವಾಟಗಳು ಮುಚ್ಚುತ್ತವೆ. ಕವಾಟದ ಮಡಿಕೆಗಳು ತಂತುಸ್ತಂಭಗಳಿಗೆ ಕಾರ್ಡ ಟೆಂಡಿನೆ ಎಂದು ಹೆಸರು. ಹೃತ್ಕುಕ್ಷಿಯ ಬುಡದ ಬಲಭಾಗದಿಂದ ಟ್ರಂಕಸ್ ಆರ್ಟೀರಿಯೋಸಸ್ ಎಂಬ ಅಪಧಮನಿ ಹೊರಡುತ್ತದೆ. ಟ್ರಂಕಸ್ ಬುಡಭಾಗವನ್ನು ಕೋನಸ್ ಆರ್ಟೀರಿಯೋಸಸ್ ಅಥವಾ ಪೈಲ್ಯಾಂಜಿಯಂ ಎಂದು ತುದಿ ಭಾಗವನ್ನು ಬಲ್ಬಸ್ ಅಥವಾ ಸೈನಾಂಜಿಯಂ ಭಾಗವೆಂದೂ ಕರೆಯಲಾಗುತ್ತದೆ. ಕೋನಸ್ ಹೃತ್ಕುಕ್ಷಿಯನ್ನು ಸೇರುವ ಸ್ಥಳದಲ್ಲಿ ಮೂರು ಅರ್ಧಚಂದ್ರಾಕಾರದ ಕವಾಟಗಳಿವೆ. ಕೋನಸ್ ಮತ್ತು ಬಲ್ಬಸ್ ಭಾಗಗಳ ನಡುವೆಯೂ ನಾಲ್ಕು ಕವಾಟಗಳಿವೆ. ಕೋನಸ್‌ನಲ್ಲಿ ಉದ್ದವಾದ, ಸುರುಳಿ ಸುತ್ತಿದ ಹಾಗೂ ಓರೆಯಾದ ಕವಾಟ ಉಂಟು. ಈ ಕವಾಟ ಕೋನಸನ್ನು ಅಸಮರ್ಪಕವಾದ ಎರಡು ಭಾಗಗಳನ್ನಾಗಿ ವಿಭಾಗಿಸುತ್ತದೆ. ಬಲಭಾಗಕ್ಕೆ ಕೇವಮ್ ಆಯೋರ್ಟಿಕಂ ಎಂದೂ ಎಡಭಾಗಕ್ಕೆ ಕೇವಮ್ ಪಲ್ಮೊಕ್ಯುಟೇನಿಯಂ ಎಂದೂ ಹೆಸರು. ಟ್ರಂಕಸ್ ಆರ್ಟೀರಿಯೋಸಸ್ ಎರಡು ಕವಲಾಗುತ್ತದೆ. ಪ್ರತಿಯೊಂದು ಕವಲೂ ಮತ್ತೆ ಮೂರು ಕವಲುಗಳಾಗಿ ಒಡೆಯುತ್ತದೆ. ಇವೇ ಕರೋಟಿಡ್, ಸಿಸ್ಟಮಿಕ್ ಮತ್ತು ಪಲ್ಮೊಕುಟೇನಿಯಸ್ ಅಪಧಮನಿಗಳು. ಸರೀಸೃಪಗಳ ಹೃದಯದಲ್ಲಿ ಹೃತ್ಕರ್ಣ ಎರಡು ವಿಭಾಗವಾಗಿದೆ. ಪ್ರಪ್ರಥಮವಾಗಿ ಹೃತ್ಕುಕ್ಷಿಯಲ್ಲಿ ಅಪೂರ್ಣ ಅಡ್ಡ ಭಿತ್ತಿಯೊಂದು ಕಾಣಿಸಿಕೊಳ್ಳುತ್ತದೆ. ಇದರಿಂದಾಗಿ ಹೃತ್ಕುಕ್ಷಿ ಅಪೂರ್ಣವಾಗಿ ಬಲ ಮತ್ತು ಎಡಭಾಗಗಳಾಗಿ ವಿಭಾಗವಾಗಿದೆ. ಅಯೋರ್ಟ ಮತ್ತು ಕೋನಸ್‌ಗಳು ಬುಡಭಾಗದಲ್ಲೇ ಬೇರೆಯಾಗುವುದರಿಂದ ಪಲ್ಮನರಿ ಅಪಧಮನಿ ಹೃದಯದಿಂದ ಪ್ರತ್ಯೇಕ ಧಮನಿಯಾಗಿಯೇ ಹೊರಡುತ್ತದೆ. ಆಯೋರ್ಟದ ಎರಡು ಕವಲುಗಳು ಕೋನಸಿನ ಬುಡದಲ್ಲೇ ಬೇರೆಯಾಗುತ್ತವೆ. ಆದ್ದರಿಂದ ಮೂರು ಅಪಧಮನಿಗಳು ಹೃದಯದಿಂದಲೇ ಹೊರಡುತ್ತವೆ. ಎಲ್ಲ ಅಪಧಮನಿಗಳ ಬುಡದಲ್ಲಿ ಕವಾಟಗಳಿವೆ. ಸೈನಸ್ ವಿನೋಸಸ್ ಸಣ್ಣದಾಗಿದೆ. ಇದು ಬಲ ಹೃತ್ಕರ್ಣದ ಹತ್ತಿರವಿದ್ದು ಅದಕ್ಕೆ ತಾಗಿಕೊಂಡಿದೆ.

ಸಾಮಾನ್ಯವಾಗಿ ಕಾಣಬರುವ ಸರೀಸೃಪ ಓತಿಕೇತದ ಹೃದಯದಲ್ಲೂ ಮೇಲೆ ತಿಳಿಸಿದ ರಚನೆಯೇ ಕಂಡುಬರುತ್ತದೆ. ಪೂರ್ಣವಾದ ಅಂತರ ಭಿತ್ತಿಯಿಂದಾಗಿ ಹೃತ್ಕುಕ್ಷಿ ಎರಡು ಭಾಗಗಳಾಗಿ ವಿಭಾಗವಾಗಿರುವುದರಿಂದ ಹೃದಯದಲ್ಲಿ ಒಟ್ಟು ನಾಲ್ಕು ಕೋಣೆಗಳಿವೆ. ಸೈನಸ್ ವಿನೋಸಸ್ ಸಣ್ಣದಾಗಿದೆ. ಈ ಕೋಣೆಗೆ ಮೂರು ಪ್ರಧಾನ ಅಭಿಧಮನಿಗಳು ಮಲಿನ ರಕ್ತವನ್ನು ತರುತ್ತವೆ. ಸೈನಸ್ ವಿನೋಸಸ್ ಬಲಹೃತ್ಕರ್ಣಕ್ಕೆ ಒಂದು ರಂಧ್ರದ ಮೂಲಕ ತೆರೆಯುತ್ತದೆ. ಈ ರಂಧ್ರವನ್ನು ಸೈನು ಆರಿಕ್ಯುಲಾರ್ ಕವಾಟ ಕಾಪಾಡುತ್ತದೆ. ಎಡ ಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿ ತೆರೆಯುತ್ತದೆ. ಇದು ಫುಪ್ಪುಸಗಳಿಂದ ಶುದ್ಧರಕ್ತವನ್ನು ತರುತ್ತದೆ. ಎರಡು ಹೃತ್ಕರ್ಣಗಳಿಂದಲೂ ಹೃತ್ಕುಕ್ಷಿಗಳಿಗೆ ರಕ್ತ ಬೇರೆ ಬೇರೆಯಾಗಿಯೇ ಹರಿಯುತ್ತದೆ. ಹೃತ್ಕುಕ್ಷಿ ಬಲವಾದ ದಪ್ಪ ಸ್ಪಂಜಿನ ಮಾಂಸಲ ಭಿತ್ತಿಯಿಂದಾಗಿದೆ. ಬಲಹೃತ್ಕರ್ಣ ಮತ್ತು ಬಲ ಹೃತ್ಕುಕ್ಷಿಗಳಲ್ಲಿ ಮಲಿನರಕ್ತವೂ ಎಡಹೃತ್ಕರ್ಣ ಮತ್ತು ಹೃತ್ಕುಕ್ಷಿಗಳಲ್ಲಿ ಆಮ್ಲಜನಕಯುಕ್ತ ರಕ್ತವೂ (ಶುದ್ಧರಕ್ತ) ಇರುತ್ತದೆ. ಹೃತ್ಕುಕ್ಷಿಯ ಅಂತರ ಭಿತ್ತಿ ಅಪೂರ್ಣವಾಗಿದ್ದರೂ ಸಾಧಾರಣವಾಗಿ ಮಲಿನ ರಕ್ತ ಮತ್ತು ಶುದ್ಧರಕ್ತಗಳು ಬೆರೆಯುವುದಿಲ್ಲ. ಟ್ರಂಕಸ್ ಆರ್ಟೀರಿಯೋಸಸ್ ಬುಡದಲ್ಲೇ ಕವಲೊಡೆದಿರುವುದರಿಂದ ಎಲ್ಲ ಮಹಾಪಧಮನಿಗಳು ಬಲ ಮತ್ತು ಎಡ ಸಿಸ್ಟಮಿಕ್ ಮತ್ತು ಪಲ್ಮನರಿ ಅಪಧಮನಿಗಳು

ಹೃತ್ಕುಕ್ಷಿಯಿಂದಲೇ ಹೊರಡುತ್ತವೆ. ಇವೆಲ್ಲವೂ ಸಂಯೋಜಿತ ಅಂಗಕೋಶದಿಂದ ಆವೃತವಾಗಿವೆ. ಪಲ್ಮನರಿ ಅಪಧಮನಿಯೂ ಬಲಹೃತ್ಕುಕ್ಷಿಯ ಮೇಲ್ಭಾಗದಿಂದ ಹುಟ್ಟುತ್ತದೆ. ಬಲ ಸಿಸ್ಟಮಿಕ್ ಅಪಧಮನಿ ಎಡ ಹೃತ್ಕುಕ್ಷಿಯಿಂದಲೂ ಎಡ ಸಿಸ್ಟಮಿಕ್ ಅಪಧಮನಿ ಬಲ ಹೃತ್ಕುಕ್ಷಿಯಿಂದಲೂ ಹುಟ್ಟುತ್ತವೆ. ಈ ಎರಡು ಸಿಸ್ಟಮಿಕ್ ಅಪಧಮನಿಗಳು ಮುಂಭಾಗಕ್ಕೆ ಹೋಗುವಾಗ ಒಂದರ ಮೇಲೊಂದು ಅಡ್ಡಹಾಯುವುದರಿಂದ ಟ್ರಂಕಸ್ ಆರ್ಟೀರಿಯೋಸಸ್ ಸ್ವಲ್ಪ ತಿರುಚಿಕೊಂಡಿದೆ. ಇದರಿಂದ ಇವುಗಳ ಹಾದಿ ಬೇರೆಯಾಗಿದೆ. ಅಂದರೆ ಬಲ ಸಿಸ್ಟಮಿಕ್ ಎಡಗಡೆಗೂ ಎಡ ಸಿಸ್ಟಮಿಕ್ ಬಲಗಡೆಗೂ ಹೋಗುತ್ತವೆ. ಅಪಧಮನಿಗಳ ಬುಡಗಳಲ್ಲಿ ಒಂದು ಜೋಡಿ ಅರ್ಧಚಂದ್ರಾಕಾರದ ಕವಾಟಗಳಿವೆ. ಎಡ ಸಿಸ್ಟಮಿಕ್ ಅಪಧಮನಿ ಅಪೂರ್ಣ ಅಂತರ ಭಿತ್ತಿಯ ಮುಂಭಾಗದಲ್ಲೇ ಇರುತ್ತದೆ. ಅಪಧಮನಿಯಲ್ಲಿ ಮಲಿನ ಮತ್ತು ಶುದ್ಧರಕ್ತಗಳು ಬೆರೆತು ಹರಿಯುತ್ತವೆ.

ಇನ್ನೂ ಹೆಚ್ಚಾಗಿ ಮುಂದುವರಿದ ಹೃದಯದ ರಚನೆಯನ್ನು ಮೊಸಳೆಗಳಲ್ಲಿ ಕಾಣಬಹುದು. ಇಲ್ಲಿ ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳು ಪೂರ್ಣವಾಗಿ ಬಲ ಮತ್ತು ಎಡ ಭಾಗಗಳಾಗಿ ವಿಭಾಗವಾಗಿದೆ. ಎಡ ಸಿಸ್ಟಮಿಕ್ ಅಪಧಮನಿ ಬಲ ಹೃತ್ಕುಕ್ಷಿಯಿಂದ ಹೊರಡುವುದರಿಂದ ಮಲಿನ ರಕ್ತವನ್ನು ಒಯ್ಯುತ್ತದೆ. ಶುದ್ಧ ರಕ್ತವನ್ನು ಹೊತ್ತ ಬಲ ಸಿಸ್ಟಮಿಕ್ ಮಹಾಪಧಮನಿ ಎಡ ಹೃತ್ಕುಕ್ಷಿಯಿಂದ ಹೊರಡುತ್ತದೆ. ಈ ಎರಡು ಸಿಸ್ಟಮಿಕ್ ಅಪಧಮನಿಗಳಿಗು ಅವುಗಳ ಬುಡದಲ್ಲಿರುವ ವೆನಿಸ್ಸ ರಂಧ್ರ ಸಂಬಂಧ ಕಲ್ಪಿಸುತ್ತದೆ. ಒತ್ತಡ ಹೆಚ್ಚಾಗಿರುವ ಎಡಹೃತ್ಕುಕ್ಷಿ ಸಂಕುಚಿಸಿದಾಗ ಎಡ ಸಿಸ್ಟಮಿಕ್ ಅಪಧಮನಿಗೆ ಸ್ವಲ್ಪ ಆಮ್ಲಜನಕಯುಕ್ತ ರಕ್ತ ಸೇರುವುದು. ಅದೂ ಅಲ್ಲದೆ ಮೊಸಳೆ ನೀರಿಗೆ ಧುಮುಕಿದಾಗ ಬಲ ಹೃತ್ಕುಕ್ಷಿಯಲ್ಲಿ ಒತ್ತಡ ಹೆಚ್ಚಾಗಿ ರಕ್ತ ವೆನಿಸ್ಸ ರಂಧ್ರದ ಮೂಲಕ ಬಲದಿಂದ ಎಡಭಾಗಕ್ಕೆ ಹರಿಯುವುದು.

ಪಕ್ಷಿಗಳ ಹೃದಯದಲ್ಲಿ ಖಚಿತವಾದ ನಾಲ್ಕು ಕೋಣೆಗಳಿವೆ. ಶುದ್ಧ ಮತ್ತು ಮಲಿನ ರಕ್ತದ ಮಿಶ್ರಣಕ್ಕೆ ಯಾವುದೇ ಅವಕಾಶವೂ ಇಲ್ಲ. ಸೈನಸ್ ವಿನೋಸಸ್ ಇಲ್ಲವೆಂದೇ ಹೇಳಬಹುದು. ಇದರ ಬಹುತೇಕ ಭಾಗ ಬಲಹೃತ್ಕರ್ಣದಲ್ಲಿ ಸೇರಿಹೋಗಿದೆ. ಬಲ ಹೃತ್ಕುಕ್ಷಿಯನ್ನು ಸ್ವಲ್ಪ ಸುತ್ತುವರಿದಿದ್ದು ರಕ್ತವನ್ನು ಪಲ್ಮನರಿ ಅಪಧಮನಿಗೆ ಕಳುಹಿಸುತ್ತದೆ. ಎಡಹೃತ್ಕುಕ್ಷಿಯ ದ್ವಾರ ತೆಳುವಾದ ಕವಾಟದಿಂದ ರಕ್ಷಿತವಾಗಿದೆ. ಈ ಕವಾಟದ ಪದರಗಳು ಹೃತ್ಕುಕ್ಷಿಯ ಗೋಡೆಗೆ ತಂತುಸ್ತಂಭಗಳಿಂದ ಅಂಟಿಕೊಂಡಿವೆ. ಬಲಹೃತ್ಕರ್ಣ ಹೃತ್ಕುಕ್ಷಿಯ ಮಧ್ಯೆ ಇರುವ ಕವಾಟ ಅಗಲವಾದ ಮಾಂಸಲ ಪದರದಿಂದ ಕೂಡಿದೆ. ಬಲ ಹೃತ್ಕರ್ಣಕ್ಕೆ ಉನ್ನತ ಮತ್ತು ಅವನತ ಅಭಿಧಮನಿಗಳೂ ಎಡ ಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿಯೂ ಬಂದು ಸೇರುತ್ತವೆ. ಪಲ್ಮನರಿ ಅಪಧಮನಿ ಬಲಹೃತ್ಕುಕ್ಷಿಯಿಂದಲೂ ಅಯೋರ್ಟಿಕ್ ಮಹಾಪಧಮನಿ ಎಡಹೃತ್ಕುಕ್ಷಿಯಿಂದಲೂ ಹೊರಡುತ್ತವೆ. ಮೂರು ಅರ್ಧಚಂದ್ರಾಕೃತಿಯ ಕವಾಟಗಳು ಪಲ್ಮನರಿ ಅಪಧಮನಿ ಮತ್ತು ಬಲಹೃತ್ಕುಕ್ಷಿಯ ಮಧ್ಯೆಯೂ ಮತ್ತು ಎಡಹೃತ್ಕುಕ್ಷಿ ಮತ್ತು ಮಹಾಪಧಮನಿಯ ಮಧ್ಯೆಯೂ ಇವೆ. ಪಕ್ಷಿಗಳಲ್ಲಿ ಬಲ ಅಯೋಟಿಕ್ ಅಪಧಮನಿ (ಸಿಸ್ಟಮಿಕ್) ಮಾತ್ರ ಇದೆ. ಎಡ ಸಿಸ್ಟಮಿಕ್ ಅಪಧಮನಿ ಇಲ್ಲ. ಪಕ್ಷಿಗಳ ಹೃದಯ ಬಹು ವಿಶಿಷ್ಟವಾದರೂ ಇದು ಸರೀಸೃಪ ಮಾದರಿಯ ಹೃದಯದಿಂದ ಮಾರ್ಪಾಡಾದುದೆಂದು ಹೇಳಲಾಗಿದೆ.

ಸ್ತನಿಗಳ ಹೃದಯದಲ್ಲಿಯೂ ನಾಲ್ಕು ಪ್ರಮುಖ ಕೋಣೆಗಳಿವೆ. ಇದು ಪಕ್ಷಿಗಳ ಹೃದಯದಷ್ಟೇ ಸಮರ್ಥವಾದುದು. ಹೃತ್ಕರ್ಣದ ಅಂತರಪಟಲ ಮತ್ತು ಹೃತ್ಕುಕ್ಷಿಯ ಅಂತರ್ಪಟಲಗಳು ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳನ್ನು ಎರಡೆರಡು ಭಾಗಗಳನ್ನಾಗಿ ಮಾಡಿವೆ. ಆದ್ದರಿಂದ ಮಲಿನ ರಕ್ತ ಶುದ್ಧ ರಕ್ತದೊಡನೆ ಮಿಶ್ರವಾಗುವುದಿಲ್ಲ. ಸೈನಸ್ ವಿನೋಸಸ್ ಕೋಣೆ ಶೇಷ ಮಾತ್ರವೂ ಇಲ್ಲದೆ ಬಲ ಹೃತ್ಕರ್ಣದೊಡನೆ ಸೇರಿಹೋಗಿದೆ. ಕೋನಸ್ ಕೂಡ ಇಲ್ಲ. ಇದು ಪಲ್ಮನರಿ ಅಯೋರ್ಟಾ ಮತ್ತು ಸಿಸ್ಟಮಿಕ್ ಮಹಾಪಧಮನಿಗಳಾಗಿ ಪರಿವರ್ತಿತವಾಗಿದೆ. ಬಲಹೃತ್ಕರ್ಣ ಭಿತ್ತಿಯಲ್ಲಿ ಪದವರ್ಧಕ (ಪೇಸ್‌ಮೇಕರ್) ಅಥವಾ ಸೈನು ಆರಿಕ್ಯುಲಾರ್ ಗೆಣ್ಣಿನ ರಚನೆ ಇದೆ. ಇದು ಸೈನಸ್ ವಿನೋಸಸ್‌ನ ಅಂಗಾಂಶ. ಹೃತ್ಕರ್ಣಗಳು ಸುಲಭವಾಗಿ ಹಿಗ್ಗಬಲ್ಲುವು. ರಕ್ತ ನುಗ್ಗಿದಾಗ ಅದರ ಒತ್ತಡವನ್ನು ಸಮರ್ಪಕವಾಗಿ ಹತೋಟಿಯಲ್ಲಿಟ್ಟುಕೊಳ್ಳುತ್ತವೆ. ಹೃತ್ಕರ್ಣಗಳು ಹೃತ್ಕುಕ್ಷಿಗೆ ತೆರೆಯುವ ಬಳಿ ಜೇಬಿನ ರೀತಿಯ ಕವಾಟಗಳಿವೆ. ಎಡಹೃತ್ಕರ್ಣ ಮತ್ತು ಹೃತ್ಕುಕ್ಷಿಗಳ ನಡುವಣ ದ್ವಾರವನ್ನು ಎರಡು ಪದರಗಳ ಕವಾಟ ರಕ್ಷಿಸುತ್ತದೆ. ಇದೇ ಬೈಕಸ್ಪಿಡ್ ಕವಾಟ (ಮಿಟ್ರಲ್ ಕವಾಟ ಅಥವಾ ದ್ವೈವಲನ). ಬಲ ಹೃತ್ಕರ್ಣ ಮತ್ತು ಬಲ ಹೃತ್ಕುಕ್ಷಿಗಳ ನಡುವಣ ದ್ವಾರದಲ್ಲಿ ಮೂರು ಪದರಗಳ ಕವಾಟವಿದ್ದು ಇದಕ್ಕೆ ಟ್ರೈಕಸ್ಪಿಡ್ ಕವಾಟವೆಂದು(ತ್ರೈವಲನ) ಎಂದು ಹೆಸರು. ಈ ಕವಾಟದ ಅಂಚುಗಳು ಹೃತ್ಕುಕ್ಷಿಯ ಏಣುಗಳಿಗೆ ಅಸ್ಥಿರಜ್ಜಿನ ಹುರಿಗಳಿಂದ ಅಂಟಿಕೊಂಡಿವೆ. ಇವೇ ಕಾರ್ಡಾ ಟೆಂಡಿನ ಕವಾಟಗಳು. ಇವು ರಕ್ತ ಹೃತ್ಕರ್ಣದಿಂದ ಹೃತ್ಕುಕ್ಷಿಗೆ ಮಾತ್ರ ಹರಿಯಲು ಬಿಡುತ್ತವೆ. ವಾಪಸು ಹೋಗಲು ಬಿಡುವುದಿಲ್ಲ. ಎಡ ಹೃತ್ಕುಕ್ಷಿಯ ಮುಂಭಾಗದಿಂದ ಸಿಸ್ಟಮಿಕ್ ಅಯೋರ್ಟಾ ಹೊರಡುತ್ತದೆ. ಪಲ್ಮನರಿ ಅಪಧಮನಿ ಬಲ ಹೃತ್ಕುಕ್ಷಿಯಿಂದ ಹೊರಟು ಎರಡು ಕವಲಾಗಿ ಒಂದೊಂದು ಕವಲೂ ಫುಪ್ಫುಸಕ್ಕೆ ಹೋಗುತ್ತದೆ. ಈ ಅಪಧಮನಿಗಳ ಬುಡಗಳಲ್ಲಿ ಮೂರು ಕವಾಟಗಳಿವೆ. ಇವು ರಕ್ತ ವಾಪಸ್ಸು ಬರದ ಹಾಗೆ ತಡೆಯುತ್ತವೆ. ಸ್ತನಿಗಳಲ್ಲಿ ಎಡ ಸಿಸ್ಟಮಿಕ್ ಮಹಾಪಧಮನಿ ಮಾತ್ರ ಉಂಟು. (ಎನ್.ವಿ.ಎ.)

**ಹೆಗ್ಗಣ (ಬ್ಯಾಂಡಿಕೂಟ್):** ಸ್ತನಿಗಳ, ಮೂಷಕಗಳ ಜಾತಿಗೆ ಸೇರಿದ, ಉದ್ದನೆಯ ಮೂತಿಹೊಂದಿದ ಪ್ರಾಣಿ. ದೇಹವು 30 ರಿಂದ 80 ಸೆಂಮೀ. ಗಳಷ್ಟು ಉದ್ದವಾಗಿದ್ದು, ಬಾಲವೇ 10 ರಿಂದ 30 ಸೆಂಮೀ. ಗಳಷ್ಟಿರುತ್ತದೆ. ಇವುಗಳ ದೇಹ ಕೂದಲುಗಳಿಂದ ಕೂಡಿದ್ದು, ಹಿಂಗಾಲುಗಳು ಉದ್ದವಾಗಿಯೂ, ಮುಂಗಾಲುಗಳು ಕುಬ್ಜವಾಗಿಯೂ ಇರುತ್ತವೆ. ಈ ಹೆಗ್ಗಣ ಜಾತಿಯಲ್ಲಿ ಕಂಡುಬರುವ ವಿವಿಧ ಪ್ರಭೇದಗಳು ಪ್ರಾಣಿಗಳ ಗಾತ್ರದಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ. ಹೆಗ್ಗಣಗಳು ಭೂಮಿಯ ಮೇಲೆ ವಾಸಿಸುತ್ತ, ಏಕಾಂತ ಜೀವನಕ್ಕೆ ಹೊಂದಿಕೊಂಡಿರುತ್ತದೆ. ಇತರೇ ಚೀಲ ಹೊಂದಿದ ಸ್ತನಿಗಳಂತೆ, ಬೆಳೆಯುವ ಭ್ರೂಣವನ್ನು ಇರಿಸಿಕೊಳ್ಳಲು, ಚೀಲದಾಕಾರದ ಅಂಗವನ್ನು ಹೊಂದಿರುವುದು. ಇದರ ವಿಶೇಷತೆ ಈ ಅಂಗವು ಗರ್ಭಾಶಯ ಗೋಡೆಗೆ ಅಂಟಿಕೊಂಡಿದ್ದು, ಭ್ರೂಣಕ್ಕೆ ಬೇಕಾದಂತಹ ಆಹಾರ ಹಾಗೂ ಪೌಷ್ಠಿಕಾಂಶವನ್ನು ತಾಯಿಯಿಂದ ವರ್ಗಾಯಿಸಲು ಸಹಕರಿಸುತ್ತದೆ. ಹಾಗೆಯೇ, ಚೀಲದ ಆಕಾರ ಹಾಗೂ ರಚನೆಯಲ್ಲಿ, ಒಂದು ಪ್ರಭೇದದಿಂದ ಮತ್ತೊಂದು ಪ್ರಭೇದಕ್ಕೆ ವ್ಯತ್ಯಾಸವಿರುತ್ತದೆ.

ಪರ್‌ಮೆಲೀಮಾರ್ಫಿಯ ಗಣವನ್ನು ಎರಡು ಕುಟುಂಬಗಳಲ್ಲಿ ವಿಂಗಡಿಸಿದಾಗ, ಕುಬ್ಜವಾದ ಕಾಲುಗಳನ್ನು ಹೊಂದಿರುವ ಹೆಗ್ಗಣಗಳು ಸಸ್ಯಾಹಾರಿಗಳಾಗಿದ್ದು, ಉದ್ದನೆಯ ಕಾಲುಗಳುಳ್ಳ ಹೆಗ್ಗಣಗಳು, ಮಾಂಸಾಹಾರಿಗಳಾಗಿರುವು. ಮಾಂಸಾಹಾರಿಗಳು ಪೊದರುಗಳಲ್ಲಿನ ಇರುವೆ ಹಾಗೂ ಚಿಕ್ಕ ಕೀಟಗಳನ್ನು ಸೇವಿಸುತ್ತದೆ.

ಪರ್‌ಮೆಲೀಮಾರ್ಫಿಯಾ ಗಣದ, ಪರ್‌ಮೆಲಿಡೇ ಕುಟುಂಬದಲ್ಲಿ ಈ ಮುಂದೆ ತೋರಿಸಿದಂತೆ ಒಟ್ಟು ಎಂಟು ಪ್ರಭೇದಗಳಿವೆ.

1) ಪಾಶ್ಚಾತ್ಯ ಗೆರೆಗಳುಳ್ಳ ಬ್ಯಾಂಡಿಕೂಟ್ (ವೆಸ್ಟರ್ನ್ ಬಾರ್ಡ್ ಬ್ಯಾಂಡಿಕೂಟ್, ಪೆರಮಿಸ್ ಚೌಗನ್‌ವಿಲ್ಲೆ), 2) ಪೌರ್ವಾತ್ಯ ಗೆರೆಗಳುಳ್ಳ ಬ್ಯಾಂಡಿಕೂಟ್(ಈಸ್ಟರ್ನ್ ಬಾರ್ಡ್ ಬ್ಯಾಂಡಿಕೂಟ್, ಪೆರಮಿಲಸ್ ಗುನ್ನಿ), 3) ಉದ್ದನೆ ಮೂಗಿನ ಬ್ಯಾಂಡಿಕೂಟ್ (ಪೆರ್‌ಮಲಿಸ ನಸುಟ, ಲಾಂಗ್ ನೋಸ್ಡ ಬ್ಯಾಂಡಿಕೂಟ್), 4) ಮರುಭೂಮಿಯ ಬ್ಯಾಂಡಿಕೂಟ್ (ಡೆಸರ್ಟ್ ಬ್ಯಾಂಡಿಕೂಟ್, ಪೆರಮೆಲೆಸ್ ಎರೆಮಿಯಾನ್), 5) ಬಂಗಾರದ ಬ್ಯಾಂಡಿಕೂಟ್ (ಗೋಲ್ಡನ ಬ್ಯಾಂಡಿಕೂಟ್, ಐಸೂಡೊನ್ ಅರೆಟಸ್), 6) ಉತ್ತರದ ಕಂದು ಬ್ಯಾಂಡಿಕೂಟ್ (ನಾರ್ದನ್ ಬ್ರೌನ್ ಬ್ಯಾಂಡಿಕೂಟ್, ಐಸೊಡಾನ ಮ್ಯಕ್ರೊರಸ್), 7) ದಕ್ಷಿಣದ ಕಂದು ಬಂಡೀಕೂಟ್ (ಸದರ್ನ್ ಬ್ರೌನ್ ಬ್ಯಾಂಡಿಕೂಟ್, ಐಸೊಡಾನ್ ಒಬೆಸುಲಸ್), 8) ಹಂದಿ ಕಾಲಿನ ಬ್ಯಾಂಡೀಕೂಟ್ ( ಪಿಗ್ ಫೂಟೆಡ್ ಬ್ಯಾಂಡಿಕೂಟ್, ಕೈರೊಪಿಸ್ ಕಾಡೆಟಸ್)

ಇವುಗಳಲ್ಲಿ ಮರುಭೂಮಿಯ ಹೆಗ್ಗಣ ಹಾಗೂ ಹಂದಿ ಕಾಲಿನ ಹೆಗ್ಗಣಗಳು ಈಗಾಗಲೇ ನಶಿಸಿ ಹೋಗಿವೆ.

ಮೇಲಿನ ಎಲ್ಲ ಪ್ರಭೇದಗಳಲ್ಲಿ, ಬಂಗಾರದ ಬ್ಯಾಂಡೀಕೂಟ್‌ಗಳು ಹೆಸರಾದುವು. ಇವುಗಳು ತೂಕದಲ್ಲಿ 260 ರಿಂದ 655 ಗ್ರಾಂ ಗಳಷ್ಟು ತೂಗುತ್ತವೆ. ಹೆಚ್ಚಾಗಿ ಮರುಭೂಮಿ ಹಾಗೂ ಹುಲ್ಲುಗಾವಲಿನ ಪೊದೆಗಳಲ್ಲಿ ವಾಸಿಸುವಂತಹ ಈ ಜೀವಿಗಳು, ನಿಶಾಚರಿಗಳಾಗಿದ್ದು ಅಲ್ಲಿ ಸಿಗುವಂತಹ ಗೆದ್ದಲು ಹುಳುಗಳು, ಇರುವೆ, ಚಿಟ್ಟೆ, ಸಣ್ಣಕೀಟ ಹಾಗೂ ಚಿಕ್ಕ ಗಾತ್ರದ

ಸರೀಸೃಪಗಳನ್ನು ಸೇವಿಸುತ್ತದೆ. ಸಸ್ಯಹಾರಿಗಳಾದರೆ, ಮರದ ಎಲೆ, ಹಾಗೂ ಹಕ್ಕಿ ಗೂಡಿನ ಅಂಚಿನಲ್ಲಿ ಇದ್ದುಕೊಂಡು, ಎಲೆಯ ಕೊನೆ, ಹಣ್ಣು, ಬೇರು ಇತ್ಯಾದಿ ತಿಂದು ಜೀವಿಸುತ್ತವೆ.

ಇವುಗಳ ಸಂತತಿ ಕ್ಷೀಣಿಸಲು ಕಾರಣ, ಬೆಂಕಿ ಆಕಸ್ಮಿಕ ಹಾಗೂ ಇತರೆ, ಪ್ರಾಣಿಗಳಿಗೆ ಹೆಗ್ಗಣ ಆಹಾರವಾಗುವುದರಿಂದ, ಕೆಲವು ಪ್ರಭೇದಗಳ ಸಂತತಿ ಅಳಿವಿನ ಅಂಚನ್ನು ಸಹ ತಲುಪಿವೆ. (ಟಿ.ಎಸ್.ಹೆಚ್.)

**ಹೆಜ್ಜೇನು:** ಹೈಮನಾಪ್ಟರ ಗಣದ ಏಪಿಡೆ ಕುಟುಂಬದ ಸದಸ್ಯ. ಏಪಿಡೆ ಕುಟುಂಬದಲ್ಲಿ ಏಪಿಸ್ ಜಾತಿಯ ಹಲವು ಜೇನು ಪ್ರಭೇದಗಳಿವೆ. ಅವುಗಳಲ್ಲಿ ಏಪಿಸ್ ಡಾರ್ಸೇಟ ಪ್ರಭೇದದ ಜೇನ್ನೊಣವನ್ನು ಸಾಮಾನ್ಯವಾಗಿ ಹೆಜ್ಜೇನು (ಜೈನ್ಟ್ ಹನಿ ಬೀ) ಎನ್ನುವರು. ವಿವಿಧ ಪ್ರಾಂತ್ಯಕ್ಕನುಗುಣವಾಗಿ ಹೆಜ್ಜೇನಿಗೆ ಹಲವು ಹೆಸರುಗಳುಂಟು. ಬಂಡೆಜೇನು, ವನ್ಯ ಜೇನು, ದೊಡ್ಡಜೇನು ಎಂದು ಸಹ ಗ್ರಾಮೀಣ ಪ್ರದೇಶದಲ್ಲಿ ಕರೆಯುತ್ತಾರೆ.

ಹೆಜ್ಜೇನು ಮಾನವ ನಿರ್ಮಿತ ಸಾಕಣೆ ಪ್ರದೇಶದಲ್ಲಿ ಗೂಡುಕಟ್ಟಲು ಇಚ್ಛಿಸುವುದಿಲ್ಲ. ವನ್ಯ ಪ್ರದೇಶಗಳಲ್ಲಿನ ಬೃಹತ್ ಮರಗಳ ರೆಂಬೆ–ಕೊಂಬೆಗಳಲ್ಲಿ, ದೊಡ್ಡ–ದೊಡ್ಡ ಬಂಡೆಗಳ ಸಂಧಿ–ಗೊಂದಿಯಲ್ಲಿ ವಾಸಕ್ಕೆಂದು ಬೃಹದಕಾರದ ಗೂಡು ಕಟ್ಟಿಕೊಂಡು ಸಾಮಾಜಿಕ ಜೀವನ ನಡೆಸುತ್ತದೆ. ಗಾತ್ರದಲ್ಲಿ 20 ಮಿಮೀ ಉದ್ದ ಮತ್ತು 4–5 ಮಿಮೀ ಅಗಲವಾದ ದೇಹ ಹೊಂದಿದ್ದು ಭಾರಿ ಪ್ರಮಾಣದ ಜೇನು ತುಪ್ಪ ಉತ್ಪತ್ತಿ ಮಾಡುವಲ್ಲಿ ಅಗ್ರಸ್ಥಾನ ಪಡೆದಿದೆ.

ಹೆಜ್ಜೇನು ಕುಟುಂಬದಲ್ಲಿ ಬೃಹತ್ ದೇಹಿ ಹೆಣ್ಣು (ರಾಣಿ) ಜೇನ್ನೊಣ, ಮಧ್ಯಮ ಗಾತ್ರದ ಗಂಡು ನೊಣಗಳು (200 ರಿಂದ 400) ಮತ್ತು ಸಹಸ್ರಾರು ಸಂಖ್ಯೆಯಲ್ಲಿ ಕೆಲಸಗಾರ ನೊಣಗಳಿರುತ್ತವೆ. ರಾಣಿ ನೊಣದ ಉದರದ ತುದಿಯಲ್ಲಿರುವ ಮೊನಚಾದ ಮುಳ್ಳು ಮೊಟ್ಟೆಯಿಡಲು ಕೊಳವೆಯಂತೆ ಮಾರ್ಪಾಡಾಗಿರುತ್ತದೆ. ಗಂಡು ನೊಣಗಳು ಮುಳ್ಳನ್ನು ಹೊಂದಿರುವುದಿಲ್ಲ. ಆದರೆ, ಕೆಲಸಗಾರ ನೊಣಗಳು ತಮ್ಮ ಉದರದ ತುದಿಯಲ್ಲಿ ವಿಷಪೂರಿತ, ಮೊನಚಾದ ಮುಳ್ಳು ಹೊಂದಿರುತ್ತವೆ. ರಾಣಿನೊಣ ಹೆಜ್ಜೇನು ಕುಟುಂಬದ ಜನನಿ, ನಿಯಂತ್ರಕಿ, ಸೂತ್ರಧಾರಿ ಮತ್ತು ಕುಟುಂಬದ ಸದಸ್ಯರ ಸಂಖ್ಯೆಯನ್ನು ವೃದ್ಧಿಸುವ ಸಂತಾನಲಕ್ಷ್ಮಿ. ತನ್ನ ಜೀವಿತಾವಧಿಯಲ್ಲಿ ಲಕ್ಷಾಂತರ ಮೊಟ್ಟೆಗಳನ್ನಿಟ್ಟು ಜೇನು ಕುಟುಂಬದ ಗಾತ್ರವನ್ನು ಹೆಚ್ಚಿಸುತ್ತದೆ. ಗಂಡುನೊಣಗಳ ಕೆಲಸ ಬರಿ ಸಂತಾನದಲ್ಲಿ ಸಹಕರಿಸುವುದು. ಕೆಲಸಗಾರ ನೊಣಗಳು ವೈವಿಧ್ಯಮಯ ಮಕರಂದವನ್ನು ವಿವಿಧ ಗಿಡ, ಸಸ್ಯ, ಮರಗಳ ಹೂಗಳಿಂದ ಪ್ರತಿದಿನ ಸಂಗ್ರಹಿಸುತ್ತವೆ. ಪರಾಗಕಣಗಳನ್ನೂ ಶೇಖರಿಸುತ್ತವೆ. ದೇಹದ ಹೊಟ್ಟೆಯ ಕೆಳಭಾಗದಲ್ಲಿರುವ ಮೇಣಗ್ರಂಥಿಗಳಿಂದ ಮೇಣ ವಸರಿಸಿ, ಈ ಮೇಣದಿಂದ ಗೂಡು ಕಟ್ಟುತ್ತವೆ. ಜೇನುಗೂಡಿನಲ್ಲಿ ರಾಣಿವಾಸಕ್ಕೆ, ಗಂಡುನೊಣಗಳಿಗೆ, ಮೊಟ್ಟೆ–ಮರಿಗಳಿಗೆ ಮತ್ತು ಆಹಾರ (ಉದಾ: ಜೇನುತುಪ್ಪ ಮತ್ತು ಪರಾಗ ಕಣ) ಸಂಗ್ರಹಿಸಲೆಂದು ಪ್ರತ್ಯೇಕ ಕೋಣೆಗಳನ್ನು ನಿರ್ಮಿಸುತ್ತವೆ. ಈ ರೀತಿ ವಿವಿಧ ಕೆಲಸಗಳಿಗೆ ಹೆಸರುವಾಸಿಯಾಗಿರುವ ಕೆಲಸಗಾರ ನೊಣಗಳನ್ನು ಕೀಟಲೋಕದ ಕರ್ಮವೀರರೆನ್ನುವರು.

ಜೇನ್ನೊಣದ ಪ್ರಭೇದದಲ್ಲೇ ಹೆಜ್ಜೇನು ಅತಿ ಹೆಚ್ಚು ಪ್ರಮಾಣದ ಜೇನುತುಪ್ಪ ಉತ್ಪಾದಿಸುವ ಕೀಟವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಾನವ ನಿರ್ಮಿತ ಕೃಷಿ ಭೂಮಿಯಲ್ಲಿ, ವನ್ಯ ಕಾಡುಗಳಲ್ಲಿ ಬೆಳೆಯುವ ಹಲವಾರು ಸಸ್ಯ ಪ್ರಭೇದಗಳ ಪರಾಗಸ್ಪರ್ಶ ಕ್ರಿಯೆಗೆ ಸಹಕರಿಸಿ ಸಂತಾನಭಿವೃದ್ಧಿಗೆ ಸಹಾಯ ಮಾಡುತ್ತದೆ. ಮನುಕುಲಕ್ಕೆ ಉಪಯುಕ್ತವಾದಂತಹ ಸಿಹಿಜೇನು (ಮಧು), ಪರಾಗಕಣ, ರಾಜಷಾಹಿರಸ, ಜೇನುಮೇಣ, ಪ್ರೋಪೋಲಿಸ್ ನಂತಹ ಪದಾರ್ಥಗಳನ್ನು ನೀಡುವ ಮೂಲಕ ಮಾನವನಿಗೆ ಉಪಕಾರಿಯಾಗಿದೆ. ಜೇನು ಉತ್ಪಾದನೆಯಲ್ಲಿ ಶೇ. 81–90 ರಷ್ಟು ಜೇನು ಹೆಜ್ಜೇನುಗಳಿಂದ ಉತ್ಪಾದನೆಯಾಗುವುದು. (ಬಿ.ಎಸ್.)

**ಹೆಬ್ಬಾವು:** ಕಶೇರುಕಗಳ (ಕಾರ್ಡೇಟಾ) ಸರೀಸೃಪ ವರ್ಗದ ಪೈಥಾನಿಡೆ ಕುಟುಂಬಕ್ಕೆ ಸೇರುವ ದೈತ್ಯ ಉರಗ. ಜಡ ಸ್ವಭಾವದ ವಿಷರಹಿತವಾದ ಈ ಹಾವಿಗೆ ಅಜಗರ ಎಂಬ ಹೆಸರೂ ಇದೆ. ಈ ಕುಟುಂಬದಲ್ಲಿ ಪೈಥಾನ್ ಮೋಲೂರಸ್ (ಬಂಡೆ ಹೆಬ್ಬಾವು) ಹಾಗೂ ಪೈಥಾನ್ ರೆಟಿಕುಲೇಟಸ್ (ರಾಜ ಹೆಬ್ಬಾವು ಅಥವಾ ರೀಗಲ್ ಪೈಥಾನ್) ಎಂಬ ಎರಡು ಪ್ರಭೇದಗಳಿವೆ. ಬಂಡೆ ಹೆಬ್ಬಾವು ಭಾರತದ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತದೆ. ರಾಜ ಹೆಬ್ಬಾವು ಅಂಡಮಾನ್ ದ್ವೀಪಗಳಲ್ಲಿ, ಇಂಡೋನೇಶಿಯ, ಮಲಯ, ಮಯನ್ಮಾರ್, ಸಿಂಗಪೂರ್ ಮುಂತಾದ ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ಹರಡಿದೆ. ಹರಿದ್ವರ್ಣದ ಅಥವಾ ಕುರುಚಲು ಕಾಡುಗಳಲ್ಲಿ, ನೀರಿನ ಸಮೀಪ ಇಲ್ಲವೆ ಜವುಗು ಭೂಮಿಗಳಲ್ಲಿ; ಬಂಡೆಗಳ ನಡುವೆ, ಗುಹೆಗಳಲ್ಲಿ, ಮರದ ಪೊಟರೆಗಳಲ್ಲಿಯೂ ವಾಸಿಸುತ್ತವೆ.

ಬಂಡೆ ಹೆಬ್ಬಾವಿನ ಸರಾಸರಿ ಉದ್ದ 3 ಮೀ. 6 ಮೀ. ಉದ್ದದ ಹೆಬ್ಬಾವನ್ನೂ ಕಂಡವರಿದ್ದಾರೆ. ಶರೀರದ ವ್ಯಾಸ, 30–50 ಸೆಂ.ಮೀ. ರಾಜ ಹೆಬ್ಬಾವು 10 ಮೀ. ಉದ್ದ ಬೆಳೆಯಬಲ್ಲುದು. ಶರೀರದ ಬಹುಭಾಗ ಒಂದೇ ವ್ಯಾಸವಿದ್ದು ಬಾಲ ಇದ್ದಕ್ಕಿದ್ದಂತೆ ಕೃಶವಾಗಿದೆ. ಗುದದ್ವಾರದ ಸಮೀಪ ಒಂದು ಜೊತೆ ಅನವತ ಕಾಲುಗಳಿರುವುವು. ಶರೀರದ ಮೇಲ್ಭಾಗದಲ್ಲಿ ಆಳಕಂದು ಬಣ್ಣವಿದ್ದು ಕಪ್ಪುಬಣ್ಣದ ಗುರುತುಗಳು ಆವರಿಸಿರುತ್ತವೆ. ರಾಜ ಹೆಬ್ಬಾವಿನ ಶರೀರದ ಮೇಲೆ ಬಲೆಯಂತಹ ಗುರುತುಗಳಿರುತ್ತವೆ. ಶರೀರದ ಕೆಳಭಾಗದಲ್ಲಿ ಕೆನೆ ಬಣ್ಣವಿರುವುದು. ಹಗಲಿನಲ್ಲಿ ಇವು ನಿದ್ರಿಸುತ್ತ ಇಲ್ಲವೆ ಬಿಸಿಲಿಗೆ ಮೈಯೊಡ್ಡಿ ಮಲಗಿದ್ದು ರಾತ್ರಿವೇಳೆ ಆಹಾರ ಹುಡುಕುತ್ತ ನಿಧಾನವಾಗಿ ಸಂಚರಿಸುತ್ತಿರುತ್ತವೆ. ಇಲಿ, ಹೆಗ್ಗಣ, ನರಿ, ತೋಳ, ಪುಟ್ಟ ಜಿಂಕೆ ಮುಂತಾದ ಚಿಕ್ಕ ಸ್ತನಿಗಳು, ಪಕ್ಷಿಗಳು ಅಥವಾ ಬಿಸಿರಕ್ತದ ಯಾವುದೇ ಪ್ರಾಣಿ ಇದರ ಆಹಾರ. ಕುರಿ, ಕರುಗಳನ್ನೂ, ಮಕ್ಕಳನ್ನೂ ಕಬಳಿಸಿದ ದಾಖಲೆಗಳಿವೆ. ಆಹಾರ ನುಂಗಿದ ನಂತರ ಹಲವು ವಾರ, ತಿಂಗಳುಗಳವರೆಗೆ ಉಪವಾಸವಿರಬಲ್ಲುವು.

ಹೆಣ್ಣು ಒಮ್ಮೆ ಬಾತುಕೋಳಿ ಮೊಟ್ಟೆಯ ಗಾತ್ರದ 100 ಮೊಟ್ಟೆಯಿಡುತ್ತದೆ. ಮೊಟ್ಟೆಯಿಡುವ ಅವಧಿ ಮಾರ್ಚ್‌ನಿಂದ ಜೂನ್. ತಾಯಿ ಮೊಟ್ಟೆಗಳನ್ನು ಸುತ್ತಿಹಿಡಿದು ಕಾವು ಕೊಡುತ್ತದೆ. 60–80 ದಿನಗಳಲ್ಲಿ ಮರಿಗಳು ಹೊರಬರುತ್ತವೆ. ಚರ್ಮ, ಮಾಂಸಗಳಿಗಾಗಿ, ಮೂಢನಂಬಿಕೆಗಳಿಂದ ಹೆಬ್ಬಾವುಗಳನ್ನು ಕೊಲ್ಲಲಾಗುತ್ತಿದೆ. ರಕ್ಷಣೆಯ ಅಗತ್ಯವಿರುವುದರಿಂದ ಇವುಗಳನ್ನು ವಿನಾಶದ ಅಂಚಿನಲ್ಲಿರುವ ಜೀವಿಗಳ ಪಟ್ಟಿಗೆ ಸೇರಿಸಲಾಗಿದೆ. (ಎಸ್.ಎನ್.ಹೆಚ್.)

**ಹೆಬ್ಬಕ್ಕಿ:** ಕೊಕ್ಕರೆ ಮತ್ತು ರೇಲ್ಸ್ ಹಕ್ಕಿಗಳ ಲಕ್ಷಣವುಳ್ಳ ಗ್ರೂಯಿಫಾರ್ಮಿಸ್ ಗಣದಲ್ಲಿ ಸೇರಿಸುವ ಓಟಿಡ್ಸ್ ಉಪಗಣ, ಓಟಿಡಿಡೆ ಕುಟುಂಬದ ಮಧ್ಯಮ ಮತ್ತು ದೊಡ್ಡಗಾತ್ರದ ಗೇಮ್‌ಹಕ್ಕಿಗಳ ಸಾಮಾನ್ಯ ಹೆಸರು. ಈ ಕುಟುಂಬವು ಪ್ರಾಚೀನ ಪ್ರಪಂಚಕ್ಕೆ (ಓಲ್ಡ್ ವರ್ಲ್ಡ್) ಸೀಮಿತವಾಗಿದ್ದು ಸು. 11 ಜಾತಿ ಮತ್ತು 23 ಪ್ರಭೇದಗಳನ್ನು ಹೊಂದಿದೆ. ಗೊತ್ತಿರುವಂತೆ ಶ್ರೇಷ್ಠ ದೊಡ್ಡ ಹೆಬ್ಬಕ್ಕೆ ಎಂದರೆ ಓಟಿಸ್ ಟಾರ್ಡ. ಅತಿದೊಡ್ಡ ಯೂರೋಪಿನ ನೆಲವಾಸಿ ಪಕ್ಷಿ. ಗಂಡು ಹೆಬ್ಬಕ್ಕಗಳ ಉದ್ದ 1.3 ಮೀ. ರೆಕ್ಕೆಯ ಹರವು 2.5 ಮೀ. 15 ಕಿಗ್ರಾಂ ತೂಕವಿರುತ್ತವೆ. ಮಧ್ಯ ಮತ್ತು ದಕ್ಷಿಣ ಯುರೋಪಿನಿಂದ ಮಧ್ಯ ಏಷ್ಯ ಮತ್ತು ಮಂಚೂರಿಯದ ಧಾನ್ಯಗಳ ಹೊಲಗಳಲ್ಲಿ (ಗೋಧಿಯ ಹೊಲಗಳಲ್ಲಿ) ಮತ್ತು ವಿಶಾಲ ಬಯಲು ಪ್ರದೇಶಗಳಲ್ಲಿ ಕಂಡು ಬರುತ್ತದೆ. ದೇಹದ ಮೇಲೆ ಕಪ್ಪು ಮತ್ತು ಕಂದು ಪಟ್ಟಿಗಳಿವೆ. ತಳಭಾಗ ಬೂದು ಮಿಶ್ರಿತ ಬಿಳಿಯಾಗಿದೆ. ಗಂಡು ಮತ್ತು ಹೆಣ್ಣುಗಳ ದೇಹದ ಬಣ್ಣ ಒಂದೇ ತೆರನಾಗಿದೆ. ಗಂಡು ದೃಢಕಾಯದ್ದಾಗಿದ್ದು ಅದರ ಕೊಕ್ಕಿನ ಬುಡದಲ್ಲಿ ಬಿಳಿಯ ಮೋಟು ಗಡಸು ಗರಿಗಳಿವೆ. ಸ್ವಭಾವತಹ ಅತಿ ಜಾಗರೂಕ ಪಕ್ಷಿ.

ಸಮೀಪಿಸುವುದಾಗಲಿ ಹಿಡಿಯುವುದಾಗಲಿ ಬಲುಕಷ್ಟ. ಅಪಾಯ ಬಂದಾಗ ವೇಗವಾಗಿ ಓಡಿ ತಪ್ಪಿಸಿಕೊಳ್ಳುತ್ತದೆ. ಇದರ ಪ್ರಣಯಾಚರಣೆ ವಸಂತಕಾಲದಲ್ಲಿ ನಡೆಯುತ್ತದೆ ಮತ್ತು

ವಿಶೇಷ ಲಕ್ಷಣಗಳನ್ನು ಪ್ರಣಯಾಚರಣೆಯ ಕಾಲದಲ್ಲಿ ಪ್ರದರ್ಶಿಸುತ್ತದೆ. ಗಂಡು ಹಕ್ಕಿಯ ತಲೆಯು ಹಿಂದಕ್ಕೆ ಬಾಗಿ ಮೇಲಕ್ಕೆತ್ತಿದ ಬಾಲವನ್ನು ಬಹುಮಟ್ಟಿಗೆ ಮುಟ್ಟುತ್ತದೆ. ಬಿಳಿಯ ರೆಕ್ಕೆಯ ಗರಿಗಳನ್ನು ಪ್ರದರ್ಶಿಸುತ್ತದೆ. ಗಂಟಲಿನ ಚೀಲವು ಉಬ್ಬಿರುತ್ತದೆ. ಹೆಣ್ಣು ಕಂದು ಬಣ್ಣದ ಮಬ್ಬು ಹಳದಿ ಛಾಯೆಯ 2–3 ಮೊಟ್ಟೆಗಳನ್ನಿಡುತ್ತದೆ. ಆಳವಿಲ್ಲದ ನೀರಿನ ಜಾಗದಲ್ಲಿ ಮಣ್ಣನ್ನು ತೆಗೆದು ಗುಂಡಿಮಾಡಿ, ಅದರಲ್ಲಿ ಮೊಟ್ಟೆಗಳನ್ನಿಟ್ಟು, ಅವನ್ನು ಹಸಿರು ಎಲೆಕಾಂಡಗಳಿಂದ ಮುಚ್ಚಿ ಮರೆಮಾಡಿ ರಕ್ಷಿಸುತ್ತದೆ.

ಸಣ್ಣ ಹೆಬ್ಬೆಕ್ಕ ಓಟಿಸ್ ಟೆಟ್ರಾಕ್ಸ್ ಪಶ್ಚಿಮ ಯುರೋಪು ಮತ್ತು ಮೊರಾಕೊದಿಂದ ಆಫ್ಘಾನಿಸ್ಥಾನದುದ್ದಕ್ಕೂ ಕಂಡುಬರುತ್ತದೆ. ದಕ್ಷಿಣ ಆಫ್ರಿಕಾದ ಹೆಬ್ಬೆಕ್ಕಗಳು ಪಾವ್ ಜಾತಿಗೆ ಸೇರಿದ್ದು ಇದರಲ್ಲಿ ದೊಡ್ಡದೆಂದರೆ ದೊಡ್ಡ ಪಾವ್. ಕೋರಿಯೋಟಿಸ್ ಕೋರಿ, ಕೋರಿಯೋಟಿಸ್ ಅರಾಬ್ಸ್, ಮೊರಾಕೊ ಮತ್ತು ಸಹರಾದ ದಕ್ಷಿಣಭಾಗದ ಉತ್ತರ ಉಷ್ಣವಲಯದ ಆಫ್ರಿಕದಲ್ಲಿ ಕಂಡುಬರುತ್ತವೆ. ಕೋರಿಯೋಟಿಸ್ ಆಸ್ಟ್ರೆಲಿಸ್ ಆಸ್ಟ್ರೇಲಿಯದಲ್ಲಿ ಕಂಡುಬರುತ್ತದೆ. ಇದನ್ನು ಅಲ್ಲಿ ಟರ್ಕಿ ಎಂದು ಕರೆಯುತ್ತಾರೆ. ಕೊ.ನೈಗ್ರಿಪೆಸ್ ಭಾರತದ ವಾಯುವ್ಯ ಭಾಗದಲ್ಲಿ ವ್ಯಾಪಿಸಿದೆ. ಭಾರತದಲ್ಲೆಲ್ಲ ಸಾಮಾನ್ಯವಾಗಿ ಕಂಡುಬರುವ ಸ್ಪಿಯೊಟೈಡಿಸ್ ಇಂಡಿಕ, ಪೂರ್ವ ಭಾರತದಿಂದ ಇಂಡೊ–ಚೀನದ ವರೆಗೆ ಕಂಡುಬರುವ ಹೌಬರೊಪ್ಸಿಸ್ ಬೆಂಗಾಲೆನ್ಸಿಸ್, ಉತ್ತರ ಆಫ್ರಿಕ ಮತ್ತು ಏಷ್ಯದ ನೈರುತ್ಯ ಪ್ರದೇಶದ ಮರಳುಗಾಡು ಮತ್ತು ಎತ್ತರದ ಪ್ರಸ್ಥಭೂಮಿಗಳಲ್ಲಿನ ಕ್ಲಾಮಿಡೋಟಿಸ್ ಅಂಡುಲೇಟ ಇತರ ಪ್ರಭೇದಗಳು. (ಎಚ್.ಎಚ್.ಎಸ್.)

**ಹೆಬ್ಬೆಕ್ಕು:** ಕಾರ್ನಿವೊರ ಗಣದ ಮಾಂಸಾಹಾರಿ ಸ್ತನಿ (ಲಿಂಕ್ಸ್). ಮೋಟುಬಾಲ, ಉದ್ದನೆಯ ಕಾಲುಗಳು, ದೊಡ್ಡದಾಗಿರುವ ಮುಂಗಾಲುಗಳು (ಪಂಜು) ಶಿಖೆ ಕುಚ್ಚಿನಂತಿರುವ ಕಿವಿಗಳು ಮತ್ತು ಅಗಲವಾದ ಮೋಟು ತಲೆಗಳ ಮಧ್ಯ ಗಾತ್ರದ ಅನೇಕ ಬೆಕ್ಕುಗಳ ಜಾತಿ. ಸಾಮಾನ್ಯ ಹೆಸರು, ಹೆಬ್ಬೆಕ್ಕು. ಹೆಬ್ಬೆಕ್ಕಿನ ಪ್ರತಿಯೊಂದು ಮೇಲ್ದವಡೆಯಲ್ಲಿ ಎರಡು ಮುಂದವಡೆ ಹಲ್ಲುಗಳಿವೆ. ಆದರೆ ಮಾದರಿ ಬೆಕ್ಕುಗಳಲ್ಲಿ ಮೂರು ಮುಂದವಡೆ ಹಲ್ಲುಗಳಿವೆ. ಹೆಬ್ಬೆಕ್ಕುಗಳಲ್ಲಿ ಎರಡು ಸ್ಪಷ್ಟವಾದ ವಿಧಗಳಿವೆ. ಒಂದು ಉತ್ತರದ ಹೆಬ್ಬೆಕ್ಕು (ಫೆಲಿಸ್ ಲಿಂಕ್ಸ) ಮಧ್ಯ ಹಾಗೂ ಉತ್ತರ ಯುರೋಪಿನಲ್ಲಿ ಕಾಣಸಿಗುತ್ತದೆ. ಫೆಲಿಸ್ ಕಾರಾಕಲ್ ಆಫ್ರಿಕ ಹಾಗೂ ಭಾರತದ ವಿವಿಧ ಭಾಗಗಳಲ್ಲಿದೆ. ಉತ್ತರದ ಅಮೆರಿಕಾದ ಲಿಂಕ್ಸ ಕೆನಡೆನ್ಸಿಸ್ ಮತ್ತು ಇನ್ನೊಂದು ಬೇ ಹೆಬ್ಬೆಕ್ಕು ಅಮೆರಿಕಾದ ಎಲ್.ರುಫಸ್ ಅಮೆರಿಕಾ ಮತ್ತು ಕೆನಡಾಗಳಲ್ಲಿವೆ. ಕಾಡಿನಲ್ಲಿ ವಾಸಿಸುವ ಉತ್ತರದ ಹೆಬ್ಬೆಕ್ಕಿಗೆ ಅತಿದೊಡ್ಡ ಮುಂಗಾಲುಗಳು ಮತ್ತು ಪಾದಗಳಲ್ಲಿ ಕೂದಲಿರುವುದಲ್ಲದೆ, ಇತರ ಮೈಹೊದಿಕೆಯು ಒಂದು ರೀತಿಯ ಬಣ್ಣದ ಚುಕ್ಕಿಗಳಿರುವ ಕಂದು ಹಳದಿ ಬಣ್ಣದಿಂದ ಕೆನೆ ಬಣ್ಣದಾಗಿದ್ದು ಬಾಲದ ತುದಿಯ ಕಪ್ಪಾಗಿದೆ. ಚಳಿಗಾಲದಲ್ಲಿ ಇದರ ತುಪ್ಪಳವು ಹೆಚ್ಚು ದಟ್ಟವಾಗಿದ್ದು ಮೃದುವಾಗಿರುತ್ತದೆ. ಕೂದಲುಗಳು 4 ಅಂಗುಲ ಉದ್ದವಾಗಿದ್ದು ವಸ್ತ್ರಗಳ ಅಲಂಕಾರಿಕ ಪರಿಕರಗಳಾಗಿ ಬಳಸಲಾಗುತ್ತದೆ. ಯುರೇಸಿಯದ ಪ್ರಭೇದಗಳು ದಕ್ಷಿಣದ ಕಡೆ ಮಧ್ಯ ಯುರೋಪ್, ತುರ್ಕಿಸ್ಥಾನ ಮತ್ತು ಟಿಬೆಟ್‌ಗಳಲ್ಲಿ ಕಂಡು ಬರುತ್ತವೆ. ಕೆನಡಾದ ಹೆಬ್ಬೆಕ್ಕು ಮುಂಚೆ ದಕ್ಷಿಣದ ಕಡೆಗೆ ಸಂಯುಕ್ತ ಸಂಸ್ಥಾನದ ಉತ್ತರದ ಶ್ರೇಣಿಗಳವರೆಗೆ ಮತ್ತು ಅದಕ್ಕೂ ಮುಂದೆ ಪರ್ವತ ಶ್ರೇಣಿಗಳಲ್ಲಿ ಹರಡಿದ್ದ ಈ ಹೆಬ್ಬೆಕ್ಕು, ಈಗ ಅಲ್ಲಿ ವಿರಳವಾಗಿವೆ. ಹೆಬ್ಬೆಕ್ಕು ಸಣ್ಣ ಸ್ತನಿಗಳನ್ನು ಹಾಗೂ ಜಿಂಕೆ ಮರಿಗಳನ್ನು ಕೂಡ ಆಹಾರವಾಗಿ ತಿನ್ನುತ್ತದೆ. ಉತ್ತರದ ಭಾಗಗಳಲ್ಲಿ ಇದು ಹಿಮಗೆಡ್ಡೆಯ ಮೇಲಿನ ಮೊಲಗಳನ್ನು (ಸ್ನೊ ಶು ರ್‍ಯಾಬಿಟ್) ಹೆಚ್ಚಾಗಿ ಆಹಾರಕ್ಕಾಗಿ ಅವಲಂಬಿಸಿದೆ. ಮಾರ್ಚ್ ತಿಂಗಳಲ್ಲಿ ಸಂತಾನೋತ್ಪತ್ತಿ ಮಾಡುವುವು. ಇವು ನಿಶಾಚರಿಗಳು ಮತ್ತು ಅತಿ ಹೆಚ್ಚು ನಾಚಿಕೆಯ ಸ್ವಭಾವದುವು.

ಬಾಬ್ ಬೆಕ್ಕು ದಕ್ಷಿಣ ಕೆನಡಾದಿಂದ ಟೆಹುನ್ ಟೆಫೆರ್ ಇಸ್ತಮಸ್‌ನ ವರೆಗೆ ಕಂಡುಬರುತ್ತವೆ. ಮೋಟು ಕಿವಿಕುಚ್ಚುಗಳು ಮತ್ತು ಪುಟ್ಟ ದೇಹವಿರುವ ಈ ಹೆಬ್ಬೆಕ್ಕು ಉಳಿದುವುಗಳಿಗಿಂತ ಭಿನ್ನವಾಗಿದೆ. ಈ ಬೆಕ್ಕಿನ ತುಪ್ಪುಳು ಬಣ್ಣ ಮತ್ತು ದಪ್ಪ ಅದು ವಾಸಿಸುವ ಸ್ಥಳಕ್ಕನುಗುಣವಾಗಿ ಬದಲಾಗುತ್ತದೆ. ಇದರ ಚರ್ಮವು ಸ್ವಲ್ಪಮಟ್ಟಿಗೆ ಪುಡಿಪುಡಿಯಾಗುವುದರಿಂದ ವ್ಯಾಪಾರದ ದೃಷ್ಟಿಯಲ್ಲಿ ಇದರ ಚರ್ಮದ ಬೆಲೆ ಉತ್ತರದ ಹೆಬ್ಬೆಕ್ಕುಗಳ ತುಪ್ಪಳದ (ಚರ್ಮದ) ಬೆಲೆಗಿಂತ ಕಡಿಮೆ. ಬಾಬ್ ಬೆಕ್ಕು ದಟ್ಟ ಕಾಡುಗಳಲ್ಲಿ ಅಥವಾ ಮರಳುಗಾಡಿನಲ್ಲಿ ನಿರಂತರವಾಗಿ ವಾಸಿಸುತ್ತದೆ.

(ಎಚ್.ಎಚ್.ಎಸ್.)

**ಹೆರಿಂಗ್:** ಕ್ಲೂಪಿಫಾರ್ಮಿಸ್ ಕುಟುಂಬದ ಸದಸ್ಯ. ಇದರ ವೈಜ್ಞಾನಿಕ ಹೆಸರು ಕ್ಲೂಪಿಯ ಹೆರೆಂಗಸ್. ಇದನ್ನು ಮೂಳೆಮೀನು ಎನ್ನುವರು. ಮತ್ಸ್ಯೋದ್ಯಮದಲ್ಲಿ ಮುಖ್ಯ ಸ್ಥಾನ ಪಡೆದಿರುವ ಈ ಮೀನು ಮೆಡಿಟರೇನಿಯನ್‌ಗೆ ಹೊರತಾಗಿ ಎಲ್ಲ ಸಮುದ್ರ – ಮಹಾಸಾಗರಗಳಲ್ಲಿ ವಾಸಿಸುತ್ತದೆ. ಅರಬ್ಬೀ ಸಮುದ್ರ, ಬಂಗಾಲ ಉಪಸಾಗರ ಹಾಗೂ ಹಿಂದೂ ಮಹಾಸಾಗರಗಳ ಭಾರತದ ತೀರಪ್ರದೇಶಗಳಲ್ಲಿ ಕೂಡ ಹೇರಳವಾಗಿ ದೊರೆಯುತ್ತವೆ. ಶರೀರದ ಉದ್ದ ಸು. 30 ಸೆಂಮೀ. ಉತ್ತರದ ಸಮುದ್ರಗಳಲ್ಲಿ 60 ಸೆಂಮೀ ಉದ್ದದವರೆಗೂ ಬೆಳೆಯುತ್ತವೆ.

ಶರೀರದ ಮೇಲ್ಭಾಗದ ಬಣ್ಣ ಹಸಿರು ಮಿಶ್ರಿತ ಬಿಳಿ ಅಥವಾ ಕೆನೆ. ಪಾರ್ಶ್ವದಲ್ಲಿ ಬೆಳ್ಳಿಯ ಬಣ್ಣವಿದೆ. ದಟ್ಟ ಹಸಿರು ವರ್ಣದ ವಿಧಗಳಿವೆ. ಶರೀರವು ಉದ್ದವಾಗಿದ್ದು, ಮೂತಿ ಸ್ವಲ್ಪ ಮೇಲಕ್ಕೆ ಬಾಗಿದೆ. ತಲೆಯನ್ನು ಹೊರತುಪಡಿಸಿ ಶರೀರವಿಡೀ, ತೆಳುವಾದ ರಜತವರ್ಣದ ಹೊರಪುಗಳು ಆವರಿಸಿವೆ. ಬೆನ್ನ ಮೇಲೆ ಹಾಗೂ ಕೆಳಭಾಗದಲ್ಲಿ ಒಂದೊಂದು ಈಜುರೆಕ್ಕೆಗಳಿವೆ. ಹೊರಭಾಗದಲ್ಲಿ ಮುಳ್ಳುಗಳಿರುವುದಿಲ್ಲ. ಹಲ್ಲುಗಳು ಚಿಕ್ಕದಾಗಿವೆ. ಕಿವಿರು ತೆರೆದಿರುತ್ತದೆ. ಶರೀರದ ಕೆಳಭಾಗವು ಸ್ವಲ್ಪ ಅಗಲವಾಗಿದ್ದು, ಅಗಲವಾದ ತಟ್ಟೆಗಳಿಂದಾವೃತವಾಗಿದೆ. ಕಠಿಣಚರ್ಮಿಗಳು ಹಾಗೂ ಇನ್ನಿತರ ತೇಲು ಜೀವಿಗಳು ಇವುಗಳ ಆಹಾರ.

ಹವಾಮಾನವನ್ನವಲಂಬಿಸಿ ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಮೊಟ್ಟೆಯಿಡುತ್ತವೆ. ಒಂದು ಹೆಣ್ಣು ಒಮ್ಮೆ 20,000 – 150,000 ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳ ಸುತ್ತ ಅಂಟು ಪದಾರ್ಥವಿರುವುದರಿಂದ ನೀರಿನ ಒಳಭಾಗದಲ್ಲಿ ಬಂಡೆ ಅಥವಾ ಜಲಸಸ್ಯಗಳಿಗೆ ಅಂಟಿಕೊಳ್ಳುತ್ತವೆ. ಎರಡು ವಾರಗಳಲ್ಲಿ ಮರಿಗಳು ಹೊರಬರುತ್ತವೆ. 3–4 ವರ್ಷಗಳಲ್ಲಿ ಬೆಳೆದು ಪ್ರಬುದ್ಧವಾಗುತ್ತವೆ. ಜೀವಾವಧಿ ಸು. 10 ವರ್ಷಗಳು. ಇದು ವಲಸೆಗಾರ ಮೀನು. ಲಕ್ಷಾಂತರ ಮೀನುಗಳು ಗುಂಪಾಗಿ ಈಜುತ್ತಿರುತ್ತವೆ. ಮೀನುಗಾರರು ಸಮುದ್ರದ ಮೇಲ್ಭಾಗದಲ್ಲಿ ಹಾರಾಡುತ್ತಿರುವ ಕಡಲಹಕ್ಕಿಗಳ ಚಲನವಲನಗಳನ್ನು ಗಮನಿಸಿ ಹೆರಿಂಗ್ ಮೀನುಗಳ ಗುಂಪುಗಳಿರುವುದನ್ನು ಗುರುತಿಸಿ ಬಲೆ ಹಾಕುವರು. ಪ್ರತಿವರ್ಷ 2–3 ದಶಲಕ್ಷ ಮೆಟ್ರಿಕ್ ಟನ್ನುಗಳಷ್ಟು ಹೆರಿಂಗ್ ಮೀನುಗಳನ್ನು ಹಿಡಿಯಲಾಗುತ್ತದೆ.

(ಎಸ್.ಎನ್.ಹೆಚ್.)

**ಹೇನು:** ಕೀಟ ವರ್ಗದಲ್ಲಿನ ವಿವಿಧ ಗಣಗಳಾದ ಸೈಫನ್‌ಕುಲೇಟ, ಮ್ಯಾಲ್ಲೊಫಾಗ ಮತ್ತು ಸೊಕ್ಟೆರದ ವಿವಿಧ ಜಾತಿಯ ರೆಕ್ಕೆ ರಹಿತ ಕೀಟಗಳ ಸಾಮಾನ್ಯ ಹೆಸರು. ಇವುಗಳಲ್ಲಿ ಮೂರು ವಿಧಗಳು: 1) ಪುಸ್ತಕದ ಹೇನು ಮತ್ತು ತೊಗಟೆ ಹೇನು, 2) ಕಚ್ಚುವ ಹೇನು, 3) ಹೀರುವ ಹೇನು.





**1. ಪ್ಥೈರಿಸ್ ಪ್ಯುಬಿಸ್ 2. ಪೆಡಿಕ್ಯುಲಸ್ ಹ್ಯೂಮನಸ್**

1. ಪುಸ್ತಕ ಹೇನು ಮತ್ತು ತೊಗಟೆ ಹೇನುಗಳು: ಸೊಕ್ಟೇರ ಗಣದ ಸದಸ್ಯ ಕೀಟಗಳು. ಉದಾ: ಲೈಪೊಸೆಲಿಸ್. ಸೂಕ್ಷ್ಮದೇಹಿಕೀಟಗಳು. 1 ಮಿಮೀ ಉದ್ದದ ದೇಹ

ಹೊಂದಿದ್ದು ಬಿಳಿ ಬಣ್ಣ ಅಥವಾ ತಿಳಿವರ್ಣದಿಂದ ಕೂಡಿವೆ. ಸೊಕ್ಟಟೇರ ಗಣದಲ್ಲಿ ಸುಮಾರು 2000 ಪ್ರಭೇದಗಳಿದ್ದು ಬಹುತೇಕ ಹೇನುಗಳು ಹಾನಿಕಾರಕಗಳಾಗಿವೆ. ಟೀ, ಸಿಂಕೋನಾ, ರಬ್ಬರ್ ಸಸ್ಯಗಳ ಭಾಗಗಳನ್ನು ತಿನ್ನುವ ಮೂಲಕ ಹಾನಿ ಉಂಟುಮಾಡುತ್ತವೆ. ಪುಸ್ತಕದ ಹೇನು ಜನನಿಬಿಡ ಸ್ಥಳದಲ್ಲಿ ವಾಸಿಸುತ್ತದೆ.

2. ಕಚ್ಚುವ ಹೇನುಗಳು: ಇವು ಮ್ಯಾಲ್ಲಫಾಗ ಗಣದವು. ಸುಮಾರು 2800 ಪ್ರಭೇದಗಳಿವೆ. ಪಕ್ಷಿಹೇನುಗಳೆಂದು ಸಹ ಕರೆಯುವರು. ಇವೂ ಕೂಡ ಸೂಕ್ಷ್ಮ ದೇಹಿಗಳಾಗಿದ್ದು ಪರತಂತ್ರ ಜೀವಿಗಳಾಗಿವೆ. ಸ್ತನಿಗಳ ಚರ್ಮದ ಮೇಲೆ, ಪಕ್ಷಿಗಳ ರೆಕ್ಕೆ – ಪುಕ್ಕಗಳ ಮಧ್ಯ ಮತ್ತು ನಾಯಿ ದೇಹದ ಮೇಲೆ ಸಾಮಾನ್ಯವಾಗಿ ವಾಸಿಸುತ್ತವೆ. ಲೈಪುರಸ್ ಜಾತಿ ಪಕ್ಷಿಹೇನು ಟ್ರೈಕೊಡೆಕ್ಟೀಸ್ ಕ್ಯಾನಿಸ್ ಪ್ರಭೇದ ನಾಯಿಯಲ್ಲಿ ಪರತಂತ್ರ ಜೀವಿ. ಮೆನೊಪೊನೆ ಗ್ಯಾಲಿನೆಯನ್ನು ಕೋಳಿ ಹೇನೆಂದು ಕರೆಯುವರು.

ಈ ಹೇನುಗಳು ಚರ್ಮ, ಗರಿ, ರೆಕ್ಕೆ ಮತ್ತು ದೇಹದ ಇನ್ನಿತರ ಅಂಗಾಂಗಳನ್ನು ಕಚ್ಚಿ ರಕ್ತ ಹೀರುತ್ತವೆ. ಇದರಿಂದ ಕೆರೆತ, ಗಾಯ ಉಂಟಾಗಿ ತೊಂದರೆಯಾಗುತ್ತದೆ. ಚರ್ಮದ ಮೇಲಿನ ಕೂದಲು ಅಥವಾ ರೆಕ್ಕೆ–ಪುಕ್ಕದ ಮಧ್ಯ ಮೊಟ್ಟೆಯಿಟ್ಟು ಮರಿಮಾಡಿ ಸಂತತಿ ಮುಂದುವರೆಸುತ್ತವೆ.

3. ಹೀರುವ ಹೇನುಗಳು: ಸೈಫನ್‌ಕುಲೇಟ ಗಣಕ್ಕೆ ಸೇರಿವೆ. ಸುಮಾರು 300 ಪ್ರಭೇದಗಳಿವೆ ಖಾಯಂ ಪರತಂತ್ರ ಜೀವಿಗಳು. ಸ್ತನಿಗಳು ಇವುಗಳಿಗೆ ಆಶ್ರಯ ನೀಡಿ ವಾಹಕಗಳಾಗಿವೆ. ಕೊರೆಯುವ ಮತ್ತು ಹೀರುವ ಅಂಗಗಳನ್ನು ಹೊಂದಿದ್ದು ರಕ್ತ ಹೀರುವ ಕೀಟಗಳಾಗಿವೆ. ಉದಾ: ಹೆಮಟೋಪಿನಸ್ ಅಸಿನಿ (ಕುದುರೆ ಹೇನು), ಹೆ.ಇಕ್ಟಿಸ್ಟ್ರೆನಸ್ (ಹಸು ಹೇನು), ಹೆ.ಸುಹಿಸ್ (ಹಂದಿ ಹೇನು), ಹೆ.ಟ್ಯುಬರ್‌ಕ್ಯುಲೇಟಸ್ (ಎಮ್ಮೆ ಹೇನು), ಪೆಡಿಕ್ಯುಲಸ್ ಹ್ಯುಮನಸ್ (ಮನುಷ್ಯನ ಹೇನು), ಪ್ತೈರಿಸ್ ಪ್ಯುಬಿಸ್ (ಏಡಿ ಹೇನು), ಇತ್ಯಾದಿ.

ಪ್ರಾಣಿಹೇನುಗಳು ರೆಕ್ಕೆರಹಿತ ಕೀಟಗಳು. ದೇಹವನ್ನು ದಪ್ಪನೆಯ ಚರ್ಮದ ಹೊದಿಕೆಯಿಂದ ರಕ್ಷಿಸಿಕೊಂಡಿವೆ. ಗಾತ್ರ 1 ಮಿಮೀ. ಮಾನವನ ಬಟ್ಟೆ, ಚರ್ಮ, ತಲೆಭಾಗ, ಕಂಕುಳ ಮತ್ತು ಜನನೇಂದ್ರಿಯದ ಸಂಧಿಗಳಲ್ಲಿರುವ ಕೂದಲಿನಲ್ಲಿ ವಾಸಿಸುತ್ತವೆ. ತಲೆಕೂದಲುಗಳ ಬುಡದಲ್ಲಿ ಮೊಟ್ಟೆ ಇಡುತ್ತವೆ. ಕುಂಭದಾಕೃತಿಯ ತೆಳುವಾದ ಪೊರೆಯಂತಿರುವ ಚೀಲದಲ್ಲಿ ಮೊಟ್ಟೆ ಇಟ್ಟು ಮರಿಮಾಡುತ್ತವೆ. ಮನುಷ್ಯನಿಗೆ ಅನೇಕ ತರಹದ ಕಾಯಿಲೆಗಳನ್ನು ಉಂಟುಮಾಡುತ್ತವೆ. ಒಬ್ಬರಿಂದ ಮತ್ತೊಬ್ಬರಿಗೆ ಕಾಯಿಲೆ ಹರಡುವ ವಾಹಕಗಳಾಗಿವೆ. (ಎಸ್.ಎಂ.)

**ಹೇಸರಗತ್ತೆ:** ಕುದುರೆ ಮತ್ತು ಕತ್ತೆಗಳ ಸಂಕರದಿಂದ ಜನ್ಮತಾಳಿದ ತಳಿ. ಅತ್ಯಂತ ತಾಳ್ಮೆಯ, ಕಷ್ಟಸಹಿಷ್ಣುವಾದ ಹಾಗೂ ಬುದ್ಧಿವಂತ ಪ್ರಾಣಿ. ಇಂಗ್ಲಿಷಿನಲ್ಲಿ ಹೆಣ್ಣು ಕತ್ತೆ ಮತ್ತು ಗಂಡು ಕುದುರೆಗೆ ಜನಿಸಿದ ಹೇಸರಗತ್ತೆಯನ್ನು ಹಿನ್ನಿ ಎಂದೂ ಹೆಣ್ಣು ಕುದುರೆ ಮತ್ತು ಗಂಡು ಕತ್ತೆಗೆ ಜನಿಸಿದಲ್ಲಿ ಮ್ಯೂಲ್ ಎಂದೂ ಕರೆಯುತ್ತಾರೆ. ಕನ್ನಡದಲ್ಲಿ ಎರಡಕ್ಕೂ ಹೇಸರಗತ್ತೆಯೆಂದೇ ಕರೆಯುತ್ತಾರೆ. ಗಂಡಾಗಲೀ ಹೆಣ್ಣಾಗಲೀ ಬಂಜೆಯಾಗಿಯೇ ಹುಟ್ಟುತ್ತವೆ. ಸಂತಾನಾಭಿವೃದ್ಧಿ ಮಾಡಲಾರವು. ಹಾಗಾಗಿ ಹೇಸರಗತ್ತೆಗಳು ಬೇಕೆಂದರೆ ಕುದುರೆ ಮತ್ತು ಕತ್ತೆಗಳ ಎರಡು ತಂಡವನ್ನೇ ಇಟ್ಟುಕೊಳ್ಳಬೇಕಾಗುತ್ತದೆ.

ಹೇಸರಗತ್ತೆಯ ಕಿವಿಗಳು ಕತ್ತೆಯ ಕಿವಿಗಳಿಗಿಂತ ಚಿಕ್ಕವು, ಕುದುರೆಯ ಕಿವಿಗಳಿಗಿಂತ ದೊಡ್ಡವು. ಸಾಮಾನ್ಯವಾಗಿ ತಲೆ, ಕಾಲುಗಳು, ಹಿಂಭಾಗ ಮತ್ತು ಗೊರಸು ಕತ್ತೆಯ ತರದಿದ್ದರೆ ಗಾತ್ರ, ಮಾಂಸಖಂಡಗಳು, ಕುತ್ತಿಗೆಯ ಮೇಲಿನ ಕೂದಲು ಹಾಗೂ ವೇಗ ಕುದುರೆಯನ್ನು ಹೋಲುತ್ತವೆ. ಕುತ್ತಿಗೆ ನೇರವಾಗಿದೆ. ಧ್ವನಿ ಹೆಚ್ಚು ಕಡಿಮೆ ಕತ್ತೆಯಂತೆಯೇ ಎನ್ನಿಸಿದರೂ ವಿಶಿಷ್ಟವಾಗಿದೆ. ಬಣ್ಣ ಕತ್ತೆಯಂತೆ ಅಥವಾ ಕುದುರೆಯಂತೆ ಇರಬಹುದು. ಒಮ್ಮೊಮ್ಮೆ ಎರಡರ ಮಿಶ್ರಣವೂ ಇರಬಹುದು.

ಹೇಸರಗತ್ತೆಗಳು ಬಹು ಉಪಯೋಗಿ ಪ್ರಾಣಿಗಳು. ಬಲಿಷ್ಠವಾಗಿದ್ದು, ಕಷ್ಟಸಹಿಷ್ಣುಗಳಾಗಿವೆ. ಕುದುರೆಗಳಂತೆ ಉದ್ರೇಕಗೊಳ್ಳುವುದಿಲ್ಲ. ಸರಕು ಸಾಗಣೆಗೆ, ಸವಾರಿಗೆ ಹೀಗೆ ನಮ್ಮ ಅವಶ್ಯಕತೆಗನುಗುಣವಾಗಿ ಬೇರೆ ಬೇರೆ ತಳಿಯ ಕುದುರೆಗಳನ್ನು ಉಪಯೋಗಿಸಿ, ಬೇಕಾದ ಗುಣಲಕ್ಷಣಗಳುಳ್ಳ ಹೇಸರಗತ್ತೆಗಳನ್ನು ಪಡೆಯಬಹುದು. ವಾಸ್ತವವಾಗಿ ಸಂಕರದ ಪರಿಣಾಮವಾಗಿ ಹೇಸರಗತ್ತೆಗಳು ಕುದುರೆಗಳಿಗಿಂತಲೂ ಬಲಶಾಲಿಗಳು. ಹೆಚ್ಚು ಭಾರ ಹೊರಬಲ್ಲವು. ಕುದುರೆಗಳಿಗಿಂತ ಎತ್ತರ ಜಿಗಿಯಬಲ್ಲವು. ನಾಲ್ಕು ಅಡಿಯ ಹೇಸರಗತ್ತೆ ಆರು ಅಡಿ ಎತ್ತರ ಜಿಗಿಯಬಲ್ಲದು!

ಹಿಂದಿನ ಕಾಲದಲ್ಲಿ ಹೇಸರಗತ್ತೆಗಳನ್ನು ಸರಕು ಸಾಗಣೆಗೆ, ಯುದ್ಧಭೂಮಿಗೆ ಫಿರಂಗಿಗಳನ್ನೆಳೆಯಲು ವ್ಯಾಪಕವಾಗಿ ಉಪಯೋಗಿಸುತ್ತಿದ್ದರು. ಟ್ರ್ಯಾಕ್ಟರ್‌ಗಳು ಬಂದ ನಂತರ ಹೇಸರಗತ್ತೆಗಳು ನಿರ್ಲಕ್ಷ್ಯಕ್ಕೆ ಒಳಗಾದರೂ ಇತ್ತೀಚೆಗೆ ಮತ್ತೆ ಆಸಕ್ತಿ ಹೆಚ್ಚಾಗುತ್ತಿದೆ. ಇಂದಿಗೂ ಗುಡ್ಡಗಾಡು ಪ್ರದೇಶಗಳಲ್ಲಿ ಇವು ಏಕೈಕ ಸಾಗಣೆ ಸಾಧನಗಳಾಗಿವೆ.

(ಎಸ್.ಬಿ.ಆರ್.)

**ಹೈಪೊಥಾಲಮಸ್:** ಮಿದುಳಿನ ಮಧ್ಯಭಾಗದಲ್ಲಿದ್ದು ಮಿದುಳಿನ ಅರ್ಧಗೋಳಗಳ ಮತ್ತು ಕಾಂಡದ ಚಟುವಟಿಕೆಗಳಲ್ಲಿ ಸಾಮರಸ್ಯವನ್ನು ಕಲ್ಪಿಸಿ ಅವುಗಳ ನಡುವೆ ಸಂಪರ್ಕ ಉಂಟುಮಾಡುವ ಪ್ರಮುಖ ಅಂಗ. ಪಿಟ್ಯುಟರಿ ಗ್ರಂಥಿಯ ತೊಟ್ಟು ಇದರ ಮಧ್ಯೆ ಅಂಟಿಕೊಂಡಿದೆ. ಇದರಲ್ಲಿ ನರತಂತುಗಳೂ ನರಕಣಗಳೂ ಇವೆ. ನರಕಣಗಳ ಗುಂಪುಗಳಿಗೂ ಮಿದುಳಿನ ಇತರ ಭಾಗಗಳಿಗೂ ಬಹಳ ನರತಂತುಗಳ ಸಂಬಂಧಗಳುಂಟು. ಪಿಟ್ಯುಟರಿಯ ಮುಂಭಾಗದ ರಸಗಳು ಮುಖ್ಯವಾಗಿ ದೇಹದ, ಜನನಾಂಗಗಳ, ಉಪವೃಕ್ಕ (ಅಡ್ರಿನಲ್ ಕಾರ್ಟೆಕ್ಸ್) ಮತ್ತು ಥೈರಾಯ್ಡ್ ಗ್ರಂಥಿಗಳ ಬೆಳವಣಿಗೆಗೆ ಬೇಕಾದವು. ಅದೇ ಗ್ರಂಥಿಯ ಹಿಂಭಾಗ ಮೂತ್ರ ಜನನಾಂಗಗಳ ಕೆಲಸವನ್ನು ತಗ್ಗಿಸುವ ಹಾಗೂ ಗರ್ಭಕೋಶವನ್ನು ಹಿಂಡುವಂತೆ ಮಾಡುವ (ಪ್ರಸವ ಚೋದಕ) ರಸಗಳನ್ನು ಉತ್ಪಾದಿಸುತ್ತದೆ. ಪಿಟ್ಯುಟರಿ ಗ್ರಂಥಿಯ ಚಟುವಟಿಕೆಯನ್ನು ನಿಯಂತ್ರಿಸುವ ರಾಸಾಯನಿಕ ಪದಾರ್ಥಗಳನ್ನು ಹೈಪೊಥಾಲಮಸ್‌ನ ಕೆಲವು ನರಕಣಗಳು ಸ್ರವಿಸುವುವು. ಇದರ ಕೆಲವು ಭಾಗಗಳ ರೋಗಗಳಿಂದ ಹಸಿವು, ಸ್ಥೂಲತ್ವ ಉಂಟಾಗಬಹುದು ಮತ್ತು ಇತರ ಕೆಲವು ಭಾಗಗಳ ರೋಗಗಳಿಂದ ಹಸಿವೆ ಇಲ್ಲದಂತಾಗಿ ದೇಹ ಕ್ಷೀಣಿಸಬಹುದು. ರಕ್ತದ ಒತ್ತಡ, ಜಠರ ಕೋಶ ಮತ್ತು ಕರುಳುಗಳ ಚಟುವಟಿಕೆ, ಪಾಪೆಗಳು ಅರಳುವುದು ಇತ್ಯಾದಿಗಳನ್ನು ಕ್ರಮಪಡಿಸುವುದರಲ್ಲೂ ಮನಸ್ಸಿನ ಉದ್ವೇಗ ಸ್ಥಿತಿಗಳಲ್ಲಿ ಆಗುವ ಸ್ವಯಂಚಾಲಿತ ಲಕ್ಷಣಗಳನ್ನು ಪ್ರಚೋದಿಸುವುದರಲ್ಲೂ ಹೈಪೊಥಾಲಮಸ್‌ನ ಪ್ರಭಾವವಿದೆ. ಕೋಪ ಮತ್ತು ಭಯಗಳ ಉದ್ವೇಗಗಳಲ್ಲಿ ಆಗುವ ದೇಹದ ಚರ್ಯೆಗಳನ್ನು ಉಂಟುಮಾಡುವುದರಲ್ಲಿ ಸಹ ಅದರ ಪಾತ್ರ ಉಂಟು. ಅರಿವು ಸರಿಯಾಗಿರುವಂತೆ ಇಂದ್ರಿಯಕ್ರಿಯಾದಿ ವಿಭಾಗಗಳೊಡನೆ ಮಿದುಳಿನ ಉಚ್ಚಭಾಗ ಕೆಲಸ ಮಾಡುವ ಮಟ್ಟವನ್ನು ನಿಷ್ಕರ್ಷಿಸುವ ಮಿದುಳಿನ ಜಾಲಭಾಗವಿದೆ (ರೆಟಿಕ್ಯುಲರ್ ಫಾರ್ಮೇಶನ್). ಇದರ ಮೇಲ್ತುದಿಯಲ್ಲಿ ಹೈಪೊಥಾಲಮಸ್ ಇದ್ದು ಇದು ಮಿದುಳಿನ ಚಟುವಟಿಕೆಗಳಲ್ಲಿ ಸ್ವಲ್ಪಮಟ್ಟಿಗೆ ಕೇಂದ್ರಸ್ಥಾನವನ್ನು ಪಡೆದಿದೆ. ಅರಿವಿಗೆ ಬರದ ಒಳ ಅಂಗಚಟುವಟಿಕೆಗಳ ನಿಯಂತ್ರಣ ಕೇಂದ್ರ ಹೈಪೊಥಾಲಮಸ್. ಆದ್ದರಿಂದ ಮನಸ್ಸಿನ ಉದ್ವೇಗದಿಂದ ಒಳ ಅಂಗಗಳ ಮೇಲೆ ಪರಿಣಾಮವಾಗಲು ಅವಕಾಶ ಉಂಟು. ಉದಾಹರಣೆಗೆ, ದು:ಖವಾದಾಗ ಹೊಟ್ಟೆಯಲ್ಲಿ ಸಂಕಟವಾಗುತ್ತದೆ. ವಾಸನೆಗೆ ಸಂಬಂಧಿಸಿದ ಮಿದುಳ ಭಾಗಗಳೊಡನೆ ಹಾಗೂ ಪ್ರಾಣಿವಿಕಾಸದಲ್ಲಿ ಇತ್ತೀಚೆಗೆ (ಸುಮಾರು ೩ ಕೋಟಿ ವರ್ಷಗಳಿಂದೀಚೆಗೆ) ಬೆಳೆದ ಮಿದುಳು ಭಾಗಗಳ ಕೆಲಸಗಳಲ್ಲಿ ಹೈಪೊಥಾಲಮಸ್‌ಗೆ ಸಂಬಂಧ ಉಂಟು. ಇಚ್ಛೆಗೆ ಒಳಪಡದ ಸ್ವಯಂಚಾಲಿತ ಚಟುವಟಿಕೆ, ಅಂತ:ಸ್ರಾವಕ ಗ್ರಂಥಿಗಳ ಚಟುವಟಿಕೆ ಮತ್ತು ಭಾವೋದ್ವೇಗಗಳ ವಿಕಾರಗಳಲ್ಲಿ ಬಹುವ್ಯಾಪ್ತಿಯಿರುವ ನರತಂತುಗಳ ಕ್ರಿಯಾಜಾಲಗಳಲ್ಲಿ ಮಿದುಳಿನ ಈ ಭಾಗ ಪಾತ್ರವಹಿಸುತ್ತದೆ.

ಅರಿವಿನ ಮಟ್ಟದಲ್ಲಿ ನಡೆಯದ ಸ್ವಯಂಚಾಲಿತ ಒಳ ಅಂಗಗಳ ಚಟುವಟಿಕೆಗಳ ನಿಯಂತ್ರಣಕೇಂದ್ರನಾಡಿಯೇ ಹೈಪೊಥಾಲಮಸ್ ಎಂದು ಷೆರಿಂಗ್ಟನ್ ಕರೆದ. ಇದರ ಚೋದನೆಯಿಂದ ಮೂತ್ರಕೋಶ ಸಂಕೋಚನ, ಮಲವಿಸರ್ಜನೆ, ಹೃದಯದ ಬಡಿತದ ಏರುಪೇರು ಇತ್ಯಾದಿಯಾಗಬಹುದು. ಇದರ ಮೇಲ್ಮಧ್ಯ ಭಾಗದ ಚೋದನೆಯಿಂದ ಅಡ್ರಿನಲ್ ಗ್ರಂಥಿ ಅಡ್ರಿನಲಿನ್ ಎಂಬ ರಸವನ್ನು ರಕ್ತದೊಳಕ್ಕೆ ಹೆಚ್ಚಾಗಿ ಸುರಿದು, ಗುಂಡಿಗೆ ಬಡಿತ ಮತ್ತು ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆ. ಅದರ ಹಿಂಭಾಗದ ನಾಶದಿಂದ ದೀರ್ಘನಿದ್ರೆ

ಬರುತ್ತದೆ. ಮತ್ತೊಂದು ಭಾಗದ ಚೋದನೆಯಿಂದ ಜಾಗರಣೆಯುಂಟಾಗುತ್ತದೆ. ಹೀಗೆಯೇ ಮಗದೊಂದು ಭಾಗ ಕಾಮಪ್ರವೃತ್ತಿಯನ್ನು ನಿಯಂತ್ರಿಸುತ್ತದೆ. ಪ್ರಾಣಿಗಳ ತಲೆಯರೆಯ ಮೇಲೆ ಕೆಲವು ಪ್ರಯೋಗಗಳನ್ನು ಮಾಡಿದರೆ ಹೆಣ್ಣಿನ ನಡತೆ ಗಂಡಿಗೆ ಬರುವುದು, ಗಂಡಿನ ನಡತೆ ಹೆಣ್ಣಿಗೆ ಬರುವುದು. ಹೀಗೆಯೇ ಮಾತೃ ಅಥವಾ ಪಿತೃವಾತ್ಸಲ್ಯದಲ್ಲೂ ವ್ಯತ್ಯಾಸವಾಗಬಹುದು. ಹೈಪೊಥಾಲಮಸ್ ದೇಹದ ಉಷ್ಣತೆ ಮತ್ತು ನೀರಿನ ಪ್ರಮಾಣಗಳನ್ನು ಸಹ ನಿಯಂತ್ರಿಸುತ್ತದೆ. (ಎಂ.ಡಿ.)

**ಹೊಂಗಣ್ಣ ಬಾತು:** ಆನ್ಸರಿಫಾರ್ಮಿಸ್ ಗಣದ ಅನಾಟಿಡೇ ಕುಟುಂಬಕ್ಕೆ ಸೇರುವ ಜಲಪಕ್ಷಿ. ಈ ಗುಂಪಿನಲ್ಲಿ ಕನಿಷ್ಠ ಐದು ಪ್ರಭೇದಗಳಿವೆ. ಕ್ಲಂಗುಲಾ ವಲ್ಗಾರಿಸ್ ಪ್ರಭೇದವನ್ನು ಸಾಮಾನ್ಯ ಹೊಂಗಣ್ಣ ಬಾತು ಎಂದೂ, ಘುಲಿಗುಲಾ ಕ್ಲಂಗುಲ ಎಂಬ ಪ್ರಭೇದವನ್ನು ಹೊಂಗಣ್ಣ ಬಾತು ಎಂದು ಗುರುತಿಸುವರು. ಕಣ್ಣು ಪಾಪೆ ಹೊಳೆಯುವ ಹಳದಿ ಬಣ್ಣವಿರುವುದರಿಂದ ಈ ಹೆಸರು ಬಂದಿದೆ. ಶರೀರದ ಉದ್ದ ಸು. 50 ಸೆ.ಮೀ. ಹೆಣ್ಣು ಸ್ವಲ್ಪ ಚಿಕ್ಕದು. ಲೈಂಗಿಕ ದ್ವಿರೂಪತೆ ತುಂಬ ಸಾಮಾನ್ಯ. ಶರೀರದ ಮೇಲ್ಭಾಗದ ಬಣ್ಣ ಕಪ್ಪು, ಕೆಳಭಾಗದ ಬಣ್ಣ ಬಿಳಿ. ಕೊಕ್ಕು ಮತ್ತು ಕಣ್ಣುಗಳ ನಡುವೆ ಬಿಳಿಯ ಬಣ್ಣದ ಚುಕ್ಕೆ ಇರುವುದು. ತಲೆಯ ಭಾಗ ಮಿನುಗು ಹಸಿರು ಬಣ್ಣ. ಬಾಲದ ಭಾಗವೂ ಕಪ್ಪು ಬಣ್ಣವಿರುತ್ತದೆ. ಕಾಲು ಹಾಗೂ ಪಾದಗಳ ಬಣ್ಣ ಹಳದಿ. ಹೆಣ್ಣು ಹಕ್ಕಿಗಳ ತಲೆ ಚಾಕೊಲೇಟ್ ಕಂದು ಬಣ್ಣವಿರುತ್ತದೆ. ರೆಕ್ಕೆಯ ಮೇಲ್ಭಾಗವೂ ಸ್ವಲ್ಪ ಕಂದು ಬಣ್ಣವಿರುತ್ತದೆ. ಕೆನಡಾ, ಉತ್ತರ ಅಮೇರಿಕಾದ ಅಲಾಸ್ಕ, ಮಿನೆಸೋಟ, ಮಿಚಿಗನ್ ಮುಂತಾದ ಪ್ರದೇಶಗಳ ಕಾಡುಗಳಲ್ಲಿ ಕಂಡುಬರುತ್ತವೆ. ಕಾಡಿನ ನಡುವಿನ ಕೊಳ, ಸರೋವರಗಳಲ್ಲಿರುವ ಮೀನು, ಕಠಿಣಚರ್ಮಿಗಳು ವಿವಿಧ ಅಕಶೇರುಕಗಳನ್ನು ತಿಂದು ಜೀವಿಸುತ್ತವೆ. ಇವು ಬಹಳ ಕಪಟಿಗಳು, ದಂಡೆಯ ಮೇಲೆ ನಿಧಾನವಾಗಿ ಚಲಿಸುತ್ತಿದ್ದು, ಹಿಡಿಯ ಹೋದರೆ ಸನಿಹಕ್ಕೆ ಹೋಗುವವರೆಗೆ ಸುಮ್ಮನಿದ್ದು ಸಮೀಪಿಸಿದೊಡನೆ ಇದ್ದಕ್ಕಿದ್ದಂತೆ ಹಾರುತ್ತವೆ. ಕೊಳ ಸರೋವರಗಳ ಸಮೀಪ ಮರಗಳ ಪೊಟರೆಗಳಲ್ಲಿ, ಮರಕುಟಿಗಗಳು ಬಿಟ್ಟು ಹೋದ ಕುಳಿಗಳಲ್ಲಿ ವಾಸಿಸುತ್ತವೆ. ಗೂಡಿನಲ್ಲಿ ಸುಮಾರು 8 ಅಥವಾ 9 ಮೊಟ್ಟೆಗಳಿರುತ್ತವೆ. ಇವು ವಲಸೆಗಾರ ಪಕ್ಷಿಗಳು. ಹಾರಾಟದ ವೇಗ 150 ಕಿ.ಮೀ. ಚಳಿಗಾಲದಲ್ಲಿ ಅಟ್ಲಾಂಟಿಕ್ ಹಾಗೂ ಪೆಸಿಫಿಕ್ ಮಹಾಸಾಗರಗಳ ತೀರ ಪ್ರದೇಶಗಳ ವರೆಗೆ ವಲಸೆ ಹೋಗುವುವು. ವಲಸೆ ಹೋದಾಗ ಆಹಾರಕ್ಕಾಗಿ ಸಮುದ್ರದ ತೀರ, ಅಳಿವೆಗಳು ಹಾಗೂ ಸಿಹಿನೀರಿನ ಕೊಳಸರೊವರಗಳನ್ನು ಅವಲಂಬಿಸುತ್ತವೆ. (ಎಸ್.ಎನ್.ಹೆಚ್.)

**ಹೊಕ್ಕುಳ ಬಳ್ಳಿ (ಅಂಬಲಿಕಲ್ ಕಾರ್ಡ್):** ಬೆಳೆಯುತ್ತಿರುವ ಭ್ರೂಣಶಿಶುವಿನ ಹಾಗೂ ಜರಾಯು (ಪ್ಲೆಸಂಟ) ವಿನ ಮಧ್ಯೆ ಸಂಪರ್ಕ ಕಲ್ಪಿಸಿ, ಶಿಶುವಿಗೆ ಆಮ್ಲಜನಕ, ಆಹಾರ ವಸ್ತುಗಳು ಹಾಗೂ ಪೋಷಕಾಂಶಗಳು ದೊರೆತು ತ್ಯಾಜ್ಯವಸ್ತುಗಳ ನಿರ್ಮೂಲನಕ್ಕೆ ಸಹಾಯಕವಾಗಿರುವ ಮುಖ್ಯವಾಗಿ ರಕ್ತನಾಳಗಳಿಂದಾದ ರಚನೆ.

ಗರ್ಭನಾಳದ ಕೊನೆಯ ಭಾಗದಲ್ಲಿ ಅಂಡ ಮತ್ತು ವೀರ್ಯಾಣುಗಳ ಮಿಲನದಿಂದ ಉಂಟಾದ ಯುಗ್ಮಜ, ಮುಂದೆ ಗರ್ಭಕೋಶಕ್ಕೆ ಸಾಗಿ, ಅಲ್ಲಿ ತನ್ನ ನೆಲೆಯನ್ನು ಸ್ಥಾಪಿಸಿ, ತಾಯಿಯ ದೇಹದಿಂದ ಸಕಲ ರಕ್ಷಣೆ ಹಾಗೂ ಪೋಷಣೆಗಳನ್ನು ಪಡೆದು, ಭ್ರೂಣಶಿಶುವಾಗಿ ಬೆಳೆಯುತ್ತದೆ. ಭ್ರೂಣಶಿಶು ತಾಯಿಯ ಗರ್ಭಕೋಶದಲ್ಲಿ ಬೆಳೆದು, ತಾಯಿಯ ದೇಹದಿಂದ ಹೊರಬರುವ ತನಕದ, ಮಗುವಿನ ಜನ್ಮಪೂರ್ವದ ಬದುಕಿಗೆ, ಮಾಸು– ಜೀವಸೇತುವಾಗಿ ಪಾತ್ರವಹಿಸಿ, ಹೆರಿಗೆಯ ಅನಂತರ ಹಲ ಸ್ತನಿಗಳಲ್ಲಿ ಕಸವಾಗಿ ಹೊರತಳ್ಳಲ್ಪಡುತ್ತದೆ. ಮಾಸು ಒಂದು ತರಹದ ತೆರೆಯಿದ್ದಂತೆ ಅದರ ಒಂದು ಪಕ್ಕದಲ್ಲಿ ತಾಯಿಯ ರಕ್ತ ಹರಿಯುತ್ತಿದ್ದರೆ, ಇನ್ನೊಂದು ಪಕ್ಕದಲ್ಲಿ ಭ್ರೂಣಶಿಶುವಿನ ರಕ್ತ ಹರಿಯುತ್ತಿರುತ್ತದೆಯಾದರೂ ಇವುಗಳಿಗೆ ನೇರ ಸಂಪರ್ಕವಿರುವುದಿಲ್ಲ.

ಭ್ರೂಣಶಿಶು ತಾಯಿಯ ಗರ್ಭಕೋಶದಲ್ಲಿ ಸರಾಗವಾಗಿ ಚಲಿಸುತ್ತ, ಮಾಸುವಿನಿಂದ, ಆಹಾರವಸ್ತು, ಆಮ್ಲಜನಕವನ್ನು ಸುಲಭವಾಗಿ ಪಡೆಯಲು, ಹಾಗೂ ವಿಸರ್ಜನಾ ಪದಾರ್ಥಗಳನ್ನು ಹೊರ ಹಾಕಲು, ಭ್ರೂಣಶಿಶುವಿನ ಹೊಕ್ಕುಳದಿಂದ, ಮಾಸಿಗೆ ನೇರ ಸಂಪರ್ಕ ಕಲ್ಪಿಸಲು ಹೊಕ್ಕುಳ ಬಳ್ಳಿಯಿದೆ. ಹಳದಿ ಭಂಡಾರ ಚೀಲದ (ಯೊಕಸ್ಯಾಕ್) ಬುಡ (ಸ್ಟಾಕ್) ಹಾಗೂ ಅದಕ್ಕೆ ಸರಿಸಮಾನವಾಗಿರುವ ಅಲಂಟಾಯಿಸ್ ಮತ್ತು ಅದರೊಳಗಿನ ರಕ್ತನಾಳಗಳು ಸೇರಿ ಹೊಕ್ಕುಳ ಬಳ್ಳಿಯಾಗುತ್ತದೆ. ಹೊಕ್ಕುಳ ಬಳ್ಳಿ ಭ್ರೂಣಶಿಶುವಿನ ನಾಭಿಯಿಂದ ಮುಂಚಾಚಿರುವ ಉದ್ದವಾದ ದಾರದಂತಹ ಭಾಗ ಹೊಕ್ಕುಳಬಳ್ಳಿಯೊಳಗೆ ಇರುವ ರಕ್ತನಾಳಗಳು ಭ್ರೂಣಶಿಶುವಿನ ಮತ್ತು ಮಾಸಿನ ಮಧ್ಯೆ ಉತ್ತಮ ಸಂಪರ್ಕ ಕಲ್ಪಿಸುತ್ತವೆ. ಹೊಕ್ಕುಳ ಬಳ್ಳಿಯಲ್ಲಿ ಎರಡು ಅಭಿಧಮನಿ ಹಾಗೂ ಒಂದು ಅಪಧಮನಿ ಇರುತ್ತವೆ. ಈ ರಕ್ತನಾಳಗಳನ್ನು ಸುತ್ತುವರಿದು ಜಿನುಗುವ ವಾರ್‌ಟೆನ್ಸ್‌ಜೆಲ್ಲಿ ಎಂಬ ಪದಾರ್ಥವಿರುತ್ತದೆ. ಅಪಧಮನಿ ಶುದ್ಧರಕ್ತವನ್ನು ಭ್ರೂಣಶಿಶುವಿಗೆ ಸಾಗಿಸಿದರೆ, ಅಭಿಧಮನಿಗಳು ಮಲಿನ ರಕ್ತವನ್ನು ಮಾಸಿನತ್ತ ತರುತ್ತವೆ. ಮೊಲ, ದನ, ಕುದುರೆ, ಕುರಿ, ಇತ್ಯಾದಿ ಸ್ತನಿಗಳ ಹೊಕ್ಕಳ ಬಳ್ಳಿಯಲ್ಲಿ, ಉಂಗುರದಾಕಾರದ ಒಂದು ಸಂಕೋಚಕ ಸ್ನಾಯು ಇರುತ್ತದೆ. ಆದರೆ ಇಂತಹ ಸಂಕೋಚಕ ಸ್ನಾಯು, ಮಾನವ, ನಾಯಿ, ಬೆಕ್ಕು, ಇಲಿ, ಇತ್ಯಾದಿ. ಸ್ತನಿಗಳಲ್ಲಿ ಕಂಡುಬರುವುದಿಲ್ಲ. ತಾಯಿಯ ದೇಹದಿಂದ ಶಿಶು ಹೊರಬರುವಾಗ, ಭ್ರೂಣಶಿಶುವಿನ ಹೊಕ್ಕುಳದಿಂದ ಮಾಸಿಗೆ ಕಲ್ಪಿಸುವ ನೇರ ಸಂಪರ್ಕದ ಹೊಕ್ಕುಳ ಬಳ್ಳಿ ಕಡಿದು ಹೋಗುತ್ತದೆ. ಹೆರಿಗೆಯ ಕಾಲದಲ್ಲಿ ಪ್ರಸೂತಿಗೆ ಸಹಾಯ ಮಾಡುವ ವ್ಯಕ್ತಿ ಹೊಕ್ಕುಳ ಬಳ್ಳಿಯನ್ನು ಕತ್ತರಿಸುತ್ತಾರೆ. (ಬಿ.ಆರ್.ಸಿ.ಆರ್.)

**ಹೊಮ್ಮೀನು:** ಸಿಪ್ರಿನಿಡೆ ಕುಟುಂಬದ ಕಾರಾಸ್ಸಿಯಸ್ ಆರೆಟಸ್ ಪ್ರಭೇದದ ಅಲಂಕಾರಿಕ ಮೂಳೆಮೀನು. ಕೊಳ, ಕೆರೆ, ಹೊಂಡಗಳು ಇವುಗಳ ವಾಸಸ್ಥಾನವಾದರೂ, ಮತ್ಸ್ಯಾಗಾರಗಳಲ್ಲಿ–ಅಕ್ವೇರಿಯಂಗಳಲ್ಲಿ ಬೆಳೆಸಲಾಗುತ್ತದೆ. ಪೂರ್ವ ಏಷ್ಯಾ ಇದರ ಮೂಲಸ್ಥಾನ. ಬಹುಶಃ ಕ್ರಿ.ಶ. 960–1279ರ ಸಮಯದಲ್ಲಿ ಚೈನಾ ದೇಶದಲ್ಲಿ ಇವುಗಳನ್ನು ಸಾಕುವುದು ಪ್ರಾರಂಭವಾಯಿತು. ಈಗ ಉಳಿದ ಪ್ರದೇಶಗಳಲ್ಲಿಯೂ ಸಾಕಲಾಗುತ್ತದೆ. ಕೃತಕ ಪರಿಸರದಲ್ಲಿ 5 ರಿಂದ 10 ಸೆಂಮೀ ಬೆಳೆಯುವ ಮೀನುಗಳು ನಿಸರ್ಗದಲ್ಲಿ 30 ಸೆಂಮೀಗಳ ವರೆಗೆ ಬೆಳೆಯಬಲ್ಲುವು.

ಮೂಲತಳಿಯ ಶರೀರದ ಬಣ್ಣ ಹಸಿರುಗಂದು ಅಥವಾ ಬೂದು. ಮೇಲ್ಭಾಗದಲ್ಲಿ ಒಂದು, ಕೆಳಭಾಗದಲ್ಲಿ ಒಂದು ಈಜುರೆಕ್ಕೆಗಳು ಮಾತ್ರ ಇರುವುವು. ಬಾಲದ ಈಜುರೆಕ್ಕೆಯಲ್ಲಿ ಎರಡು ಬಾಹುಗಳಿವೆ. ಶತಮಾನಗಳಿಂದ ವಿವಿಧ ಬಗೆಯ ಸಂಕರಗಳ ಮೂಲಕ 125ಕ್ಕೂ ಹೆಚ್ಚು ಹೊಸತಳಿಗಳನ್ನು ಆವಿಷ್ಕರಿಸಲಾಗಿದೆ. ಕಪ್ಪು, ಬಿಳಿ, ಬಂಗಾರದ ಹಳದಿ ವರ್ಣ ಅಥವಾ ಚುಕ್ಕೆಗಳುಳ್ಳ ತಳಿಗಳಿವೆ. ಮೂರು ಹಾಲೆಯ ಈಜುರೆಕ್ಕೆಯುಳ್ಳ, ಹೆಡೆಯಿರುವ, ಹೊರಚಾಚಿರುವ ಕಣ್ಣುಗಳುಳ್ಳ ವಿಧಗಳೂ ಇವೆ. ಹೊಮ್ಮೀನು ಮಿಶ್ರಾಹಾರಿ. ಕಠಿಣಚರ್ಮಿಗಳು, ಜಲಸಸ್ಯಗಳು ಇದರ ಆಹಾರ. ಮತ್ಸ್ಯಾಗಾರಗಳಲ್ಲಿ ಸೊಳ್ಳೆಗಳ ಲಾರ್ವ, ಧಾನ್ಯ ಹಾಗೂ ಇತರ ಆಹಾರಗಳನ್ನೂ ನೀಡಬಹುದು. ಪ್ರಣಯದ ಸಮಯದಲ್ಲಿ ಆಕರ್ಷಕ ಬಣ್ಣ ಪಡೆಯುತ್ತವೆ. ಹೆಣ್ಣಿನ ಹೊಟ್ಟೆ ಉಬ್ಬುತ್ತದೆ. ಗಂಡು ಮೀನುಗಳ ಕಿವಿರು, ಬೆನ್ನು ಹಾಗೂ ಈಜುರೆಕ್ಕೆಗಳ ಮೇಲೆ ಗಂತಿಗಳು ಬೆಳೆಯುತ್ತವೆ. ಬೇಸಿಗೆಯಲ್ಲಿ ಪ್ರಣಯ ನಡೆದು ಮೊಟ್ಟೆಯಿಡುತ್ತವೆ. ಮೊಟ್ಟೆಗಳು ಜಲಸಸ್ಯಗಳಿಗೆ ಅಂಟಿಕೊಂಡು ಬೆಳೆದು ಮರಿಗಳು ಹೊರಬರುತ್ತವೆ. ಜೀವಿತಾವಧಿ ಸುಮಾರು 10 ವರ್ಷ. ಅಕ್ವೇರಿಯಗಳಲ್ಲಿ 25 ವರ್ಷ ಬದುಕಿದ ದಾಖಲೆಗಳಿವೆ. (ಎಸ್.ಎನ್.ಹೆಚ್.)

**ಹೊರ ಅಸ್ಥಿಪಂಜರ:** ಪ್ರಾಣಿಗಳಿಗೆ ಆಧಾರ ಮತ್ತು ಆಕಾರವನ್ನು ನೀಡುವ ರಚನೆ. ಆಂಗ್ಲ ಭಾಷೆಯಲ್ಲಿ ಎಕ್ಸೋಸ್ಕೆಲಿಟನ್ ಎನ್ನುವರು. ಅಸ್ಥಿ ಪಂಜರದಲ್ಲಿ ಮೂರು ವಿಧಗಳಿವೆ. 1. ಹೊರ ಅಸ್ಥಿಪಂಜರ 2. ಒಳ ಅಸ್ಥಿಪಂಜರ 3. ದ್ರವಾಧಾರಿತ ಅಸ್ಥಿಪಂಜರ. ಸಂದಿಪದಿಗಳು, ಚಿಪ್ಪುಮೀನು ಮತ್ತು ಮೃದ್ವಂಗಿಗಳಲ್ಲಿ ಹೊರ ಅಸ್ಥಿಪಂಜರ ಇದೆ. ಮೃದ್ವಂಗಿಗಳು ಸುಣ್ಣದ ಹೊರ ಚಿಪ್ಪನ್ನು ಹೊಂದಿದ್ದು, ಇವು ಬೆಳೆದಂತೆಲ್ಲಾ ಚಿಪ್ಪಿನ ಆಕಾರದಲ್ಲಿ ಬದಲಾವಣೆಯಿಲ್ಲದೆ, ವ್ಯಾಸವು ಹೆಚ್ಚಾಗುತ್ತದೆ. ಸಂದಿಪದಿಗಳು ತಮ್ಮ ದೇಹದ ಬೆಳವಣಿಗೆಗಾಗಿ ಹೊರ ಅಸ್ಥಿಪಂಜರವನ್ನು ಪೊರೆಬಿಡುವುದರ (ಮೌಲ್ಟಿಂಗ್) ಮೂಲಕ ತ್ಯಜಿಸಿ, ಹೊಸ ಹೊರ ಅಸ್ಥಿಪಂಜರವನ್ನು ಹೊಂದುತ್ತವೆ. ಈ ಹೊಸ ಅಸ್ಥಿಪಂಜರವು ಆರಂಭದ ಕೆಲ ಕಾಲ (1–2 ಘಂಟೆ) ಮೃದುವಾಗಿದ್ದು, ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಈ ಸಮಯದಲ್ಲಿ ಕೀಟಗಳು ಗಾಳಿ ಅಥವ ನೀರನ್ನು (ಉದಾ:ಜಲಚರಗಳಲ್ಲಿ) ಸೇವಿಸುವುದರ ಮೂಲಕ ತಮ್ಮ ಬೆಳವಣಿಗೆಯ ಸಾಮರ್ಥ್ಯಕ್ಕನುಗುಣವಾಗಿ ಹಿಗ್ಗಿಸಿಕೊಂಡು ಒಳಾಂಗಗಳ ಬೆಳವಣಿಗೆಗೆ ಬೇಕಾದ ಸ್ಥಳಾವಕಾಶವನ್ನು ಮಾಡಿಕೊಳ್ಳುತ್ತವೆ.

ಕೀಟಗಳಲ್ಲಿ ಚರ್ಮದ ಹೊದಿಕೆಯು ಹೊರ ಅಸ್ಥಿಪಂಜರವಾಗಿದ್ದು, ಉಪಯುಕ್ತ ಕೆಲಸಗಳಲ್ಲಿ ಭಾಗಿಯಾಗಿದೆ.

1. ಕೀಟದ ಬಾಹ್ಯರಚನೆ, ಒಳ ಅಂಗಗಳ ರಕ್ಷಣೆ ಮತ್ತು ಭಕ್ಷಕಪ್ರಾಣಿಗಳಿಂದ ರಕ್ಷಿಸುವಲ್ಲಿ ಮುಖ್ಯವಾದ ಪಾತ್ರವಹಿಸುತ್ತದೆ.

2. ರೋಗಾಣುಗಳು, ಪರಾವಲಂಬಿಗಳು ಮತ್ತು ಕೀಟನಾಶಕಗಳ ಪ್ರವೇಶವನ್ನು ನಿಯಂತ್ರಿಸುತ್ತದೆ.

3. ಹೊರಪೊರೆಯ ಮೂಲಕ ನೀರು ಆವಿಯಾಗುವುದನ್ನು ತಡೆಯುತ್ತದೆ.

4. ಜ್ಞಾನೇಂದ್ರಿಯಗಳು ಹೊರಪೊರೆಯ ಮೂಲಕ ತಮ್ಮ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುತ್ತದೆ.

5. ದೇಹಕ್ಕೆ ಸ್ಪಷ್ಟಾಕಾರವನ್ನು ನೀಡುತ್ತದೆ ಉದಾ: ಕುಳಿಗಳು, ಮುಳ್ಳುಗಳು, ಏಣುಗಳು, ಇತ್ಯಾದಿ.

6. ದೇಹಕ್ಕೆ ವರ್ಣವೈವಿಧ್ಯವನ್ನು ನೀಡಿ ವೈರಿಗಳಿಂದ ರಕ್ಷಣೆ ನೀಡುತ್ತದೆ.

7. ಅನುಷಂಗಿಕ ಲೈಂಗಿಕ ಗುಣಲಕ್ಷಣಗಳನ್ನು ಹೊಂದುವಂತೆ ಮಾಡುತ್ತದೆ.

8. ಹೊರ ಅಂಗಗಳ ಚಲನೆಗೆ ಅನುವಾಗಲು ಸ್ಥಿತಿಸ್ಥಾಪಕತ್ವವನ್ನು ನೀಡುತ್ತದೆ.

9. ಸ್ನಾಯುಗಳು ದೇಹಕ್ಕೆ ಜೋಡಣೆಯಾಗಲು ಸ್ಥಳಾವಕಾಶ ಮಾಡಿಕೊಡುತ್ತದೆ.

ಚರ್ಮದ ಹೊದಿಕೆಯು;

1. ತಳಹಳದಿ ಸೂಕ್ಷ್ಮ ಚರ್ಮ (ಬೇಸ್‌ಮೆಂಟ್ ಮೆಂಬ್ರೇನ್). 2. ಹೊರಚರ್ಮದ ಪದರ (ಎಪಿಡರ್ಮಲ್ ಲೇಯರ್), 3. ಹೊರಪೊರೆ (ಕುಟಿಕಲ್) ಗಳಿಂದಾಗಿದೆ.

1. ತಳಹಳದಿ ಸೂಕ್ಷ್ಮಚರ್ಮ: ತಳಹದಿ ಸೂಕ್ಷ್ಮ ಚರ್ಮವು ರೂಪರಹಿತವಾದ ಮ್ಯೂಕೊಪಾಲಿಸ್ಯಾಕರೈಡ್ ಮತ್ತು ಕೊಲ್ಲಾಜೆನ್ ತಂತುಗಳಿಂದಾದ, ಆಧಾರ ನೀಡುವ ದ್ವಿಪದರದ ಹೊದಿಕೆಯಾಗಿದೆ. ಇದು ಅವಿಚ್ಛಿನ್ನವಾದ ಹೊದಿಕೆಯಾಗಿದೆ ಮತ್ತು ಸ್ನಾಯುಗಳು ಅಂಟಿಕೊಳ್ಳುವ ಸ್ಥಳಗಳಲ್ಲಿ ಸಾರ್ಕೋಲೆಮ್ಮದ ಜೊತೆ ಸೇರಿದೆ. ಇದು ಕೋಶರಹಿತವಾದ, ಅತಿ ತೆಳುವಾದ (1 ಮೈಕ್ರಾನ್‌ಗಿಂತ ಕಡಿಮೆ) ಪದರ. ಇದು ಹೊರಚರ್ಮದ ಪದರಕ್ಕೆ ಆಧಾರವಾಗಿದೆ ಮತ್ತು ಹೀಮೋಸಿಲನ್ನು ಚರ್ಮದ ಹೊದಿಕೆಯಿಂದ ಬೇರ್ಪಡಿಸುವುದಲ್ಲದೆ, ಅಂಗಗಳಿಂದ ಮತ್ತು ಅಂಗಗಳೊಳಗೆ ಅಣುಗಳ ಚಲನೆಯನ್ನು ನಿಯಂತ್ರಿಸುತ್ತದೆ. ಹೊರಚರ್ಮದ ಪದರವು ತಳಹದಿ ಸೂಕ್ಷ್ಮ ಚರ್ಮವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಪದರವು ರಕ್ತದಲ್ಲಿರುವ ರಕ್ತಕಣಗಳಿಂದ ಸ್ರವಿಸಲ್ಪಡುವ ಬಗ್ಗೆ ತಿಳಿಯಲಾಗಿದೆ.

2. ಹೊರಚರ್ಮದ ಪದರ: ಇದು ಕೀಟಗಳ ದೇಹದ ಹೊರಪದರವಾಗಿದೆ. ಇದರಲ್ಲಿರುವ ಕೋಶಗಳ ಸಂಖ್ಯೆಯು ಕೀಟಗಳ ವಂಶದಿಂದ ವಂಶಕ್ಕೆ ಮತ್ತು ಒಂದೇ ಕೀಟ ಶರೀರದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬದಲಾಗುತ್ತದೆ. ಈ ಹೊರಚರ್ಮವು ಪ್ರಾಥಮಿಕವಾಗಿ ಏಕ ಪದರದ ಲಾಲಾಚರ್ಮದ ಹೊರಪೊರೆಯಿಂದ ಸ್ರವಿಲ್ಪಟ್ಟ ಅಂಗಾಂಶ. ಈ ಪದರವು ಒಂದು ವಿಶಿಷ್ಟ ರೀತಿಯಲ್ಲಿ ಜೋಡಿಸಲ್ಪಟ್ಟಿದೆ. ಅಂದರೆ, ಕೋಶಗಳ ಮೇಲ್ತುದಿಯು ಹೊರಪೊರೆಯ ಕಡೆಗೂ ಮತ್ತು ಕೆಳಭಾಗವು ತಳಹದಿ ಸೂಕ್ಷ್ಮಚರ್ಮದ ಕಡೆಗೂ ಅಭಿಮುಖವಾಗಿದೆ. ಇದು ಹೊರಪೊರೆಯನ್ನು ಎರಡು ಪೊರೆಬಿಡುವ ಕ್ರಿಯೆಗಳ ನಡುವೆ ಸ್ರವಿಸುವುದಲ್ಲದೆ, ಸರಿಯಾಗಿ ವ್ಯವಸ್ಥೆಗೊಳಿಸುತ್ತದೆ. ಕೆಲವೊಂದು ಹೊರಚರ್ಮದ ಕೋಶಗಳು ವಿಶಿಷ್ಟ ರೀತಿಯಲ್ಲಿ ಜ್ಞಾನೇಂದ್ರಿಯಗಳು ಅಥವಾ ರಸಗ್ರಂಥಿಗಳಾಗಿ ರೂಪುಗೊಂಡಿವೆ. ಕೆಲವೊಂದು ಕೀಟಗಳಲ್ಲಿ ಈ ರಸಗ್ರಂಥಿಗಳ ಸ್ರಾವವು ವಿವಿಧ ಕೋಶಗಳ ನಡುವಿನ ಮಾಹಿತಿ ವಿನಿಮಯ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

3. ಹೊರಪೊರೆ: ಇದು ಹೊರಪದರದ ಸ್ರವಿಕೆ. ಕೆಲವೊಮ್ಮೆ ದಿನನಿತ್ಯ, ಪೊರೆಬಿಡುವಾಗ ಸಂಪೂರ್ಣವಾಗಿ ಬದಲಾಗುತ್ತದೆ. ಇದು ದೇಹದ ಸಂಪೂರ್ಣ ಹೊರಭಾಗವನ್ನು ಆವರಿಸುವುದಲ್ಲದೆ, ಹೊರಚರ್ಮದ ತಗ್ಗು (ಇನ್ವ್ಯಾಜಿನೇಷನ್) ಗಳಾದ ಜಠರದ ಮುಂಭಾಗ, ಹಿಂಭಾಗ ಮತ್ತು ಉಸಿರುನಾಳದ ಒಳಪದರವಾಗಿ ಆವರಿಸಿಕೊಂಡಿದೆ. ಈ ಹೊರಪೊರೆಯು ಚರ್ಮದ ಹೊದಿಕೆಯಲ್ಲಿಯೇ ಅತಿ ಕ್ಲಿಷ್ಟವಾದ ಭಾಗ. ಇದರಲ್ಲಿ ಒಳಭಾಗವು (ಮುಂಚಿನ ಹೊರಪೊರೆ – ಪ್ರೊಕುಟಿಕಲ್) 200 ಮೈಮೀ ದಪ್ಪವಿದೆ. ಇದು ಕೈಟಿನ್‌ನಿಂದಾಗಿದ್ದು ಹೊರಪೊರೆಯ ಬಹುಭಾಗವಾಗಿದೆ. ಹೊರಭಾಗವು (ಮೇಲ್ಭಾಗದ ಹೊರಪೊರೆ – ಎಪಿಕುಟಿಕಲ್) 1–4 ಮೈಮೀ ದಪ್ಪವಿದೆ. ಕೈಟಿನ್ ಹೊಂದಿಲ್ಲದ, ಅತಿ ತೆಳುವಾದ ಹೊರಗಿನ ಮೇಲು ಹೊರಪೊರೆಯಾಗಿದೆ.

ಕೈಟಿನ್ ಹೊಂದಿರುವ ಹೊರಪೊರೆಯನ್ನು ಹೊರಚರ್ಮದ ಪದರವು ಮೊದಲು ಸ್ರವಿಸಿದಾಗ, ಆದನ್ನು ಮುಂಚಿನ ಹೊರಪೊರೆ ಎಂದು ಕರೆಯುತ್ತಾರೆ. ಕಾಲಾನಂತರದಲ್ಲಿ ಹೊರಭಾಗವು ಕುಂದಿಹೋಗುತ್ತಾ, ಹೊರಭಾಗದ ಹೊರಪೊರೆಯಾಗುತ್ತದೆ. ಆದರೆ ನಾಶವಾಗದ ಒಳಭಾಗವನ್ನು, ಒಳಭಾಗದ ಹೊರಪೊರೆ ಎಂದೂ, ಇವೆರಡರ ನಡುವೆ ಗಟ್ಟಿಯಾದ, ಪೂರ್ತಿ ಕುಂದಿಹೋಗದ ಹೊರಪೊರೆಯನ್ನು ಮಧ್ಯಭಾಗದ ಹೊರಪೊರೆ ಎಂದೂ ಹೆಸರಿಸಲಾಗಿದೆ.

ಹೊರಚರ್ಮದ ಮೇಲ್ಭಾಗದಲ್ಲಿ ಮುಂಚಿನ ಹೊರಪೊರೆ ಇದೆ. ಹೊರಚರ್ಮದಲ್ಲಿ ಕೈಟಿನ್‌ನ ಸೂಕ್ಷ್ಮತಂತುಗಳು, ಸಾರಜನಕದ ಅಚ್ಚುಗಳಿಂದ ಸುತ್ತುವರೆದ ತಂತುಗಳಿದ್ದು ಇದರ ಸಂಯೋಜನೆಯು ಕೀಟದಿಂದ ಕೀಟಕ್ಕೆ ಮತ್ತು ಕೀಟಶರೀರದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬದಲಾಗುತ್ತದೆ. ಕೈಟಿನ್ ಒಂದು ಬಹು ಶರ್ಕರಾಕಲ್ಪವಾಗಿದ್ದು, ಇದು ಬಹುಮಟ್ಟಿನ ಎನ್–ಅಸಿಟೈಲ್‌ಗ್ಲೂಕೋಸಮೈನ್‌ನಿಂದಾಗಿದೆ. ಸ್ವಲ್ಪ ಪ್ರಮಾಣದ ಗ್ಲೂಕೋಸಮೈನ್ ಸಹ ಇದೆ.

ದೇಹದ ಕೆಲವು ಭಾಗಗಳಲ್ಲಿ ಮುಂಚಿನ ಹೊರಪೊರೆಯು, ಗಟ್ಟಿಯಾದ ಹೊರಭಾಗದ ಹೊರಪದರ ಮತ್ತು ಮೃದುವಾದ ಒಳಭಾಗದ ಹೊರಪದರ ಎಂದು ಎರಡು ಸ್ತರಗಳಾಗುತ್ತವೆ.

ಮೇಲ್ಭಾಗದ ಹೊರಪೊರೆಯು ರಾಸಾಯನಿಕ ಕ್ರಿಯೆಯನ್ನು ಒಳಗೊಂಡಿದ್ದು ಇದನ್ನು ಸ್ಕ್ಲೀರೋಟೈಜೇಷನ್ ಎನ್ನುತ್ತಾರೆ. ಇದು ಪ್ರತಿಸಲ ಪೊರೆಬಿಟ್ಟ 1–2 ಘಂಟೆಗಳಲ್ಲಿ ಆಗುತ್ತದೆ. ಸ್ಕ್ಲೀರೋಟೈಜೇಷನ್ ಆಗುವಾಗ ಪ್ರತಿ ಸಾರಜನಕದ ಅಣುವು ಕ್ವಿನೋನ್ ಸಂಯುಕ್ತದೊಡನೆ ಸಂಯೋಜನೆ ಹೊಂದುತ್ತದೆ. ಈ ಪ್ರಕ್ರಿಯೆಯು ಸಾರಜನಕದ ಅಚ್ಚನ್ನು ಗಟ್ಟಿಗೊಳಿಸಿ, ಘನವಾದ ತಟ್ಟೆಗಳನ್ನು ಸೃಷ್ಟಿಸುತ್ತದೆ. ಇವೇ ಹೊರ ಅಸ್ಥಿಪಂಜರದ ಸ್ಕ್ಲೀರೈಟ್‌ಗಳು. ಎಲ್ಲಿ ರೆಸಿಲಿನ್ (ಸ್ಥಿತಿಸ್ಥಾಪಕತ್ವ ಇರುವ ಸಸಾರಜನಕ) ಹೆಚ್ಚಿನ ಸಾಂದ್ರತೆಯಲ್ಲಿರುತ್ತದೊ, ಅಲ್ಲಿ ಕ್ವಿನೋನ್ ಸಾರಜನಕದೊಂದಿಗೆ ಸಂಯೋಜನೆ ಹೊಂದುವುದಿಲ್ಲ. ಈ ಭಾಗಗಳು ಮೃದುವಾಗಿದ್ದು, ಸ್ಥಿತಿಸ್ಥಾಪಕ ಗುಣವನ್ನು ಹೊಂದಿದ್ದು, ಘನಗಟ್ಟಿಯಾದ ಹೊರಭಾಗದ ಹೊರಪದರವನ್ನು ಹೊಂದುವುದಿಲ್ಲ.

ಮೇಲ್ಭಾಗದ ಹೊರಪೊರೆಯು ಅತಿ ತೆಳುವಾಗಿದ್ದು (4 ಮೈಕ್ರಾನ್ ದಪ್ಪ), ಹೊರಪೊರೆಯ ಅತಿ ಹೊರಗಿನ ಪದರವಾಗಿದೆ. ಇದು ಹೊರಚರ್ಮದ ಕೋಶಗಳಿಂದ ಸ್ರವಿಸಲ್ಪಟ್ಟಿದ್ದು, 4 ಪದರಗಳಿಂದ ಮಾಡಲ್ಪಟ್ಟಿದೆ.

1. ಒಳಗಿನ ಮೇಲ್ಭಾಗದ ಹೊರಪೊರೆ – ಅತಿ ದಪ್ಪವಾಗಿದೆ.

2. ಹೊರಗಿನ ಮೇಲ್ಭಾಗದ ಹೊರಪೊರೆ – ಇದನ್ನು ಕ್ಯುಟಿಕ್ಯುಲಿನ್ ಪದರ ಎನ್ನುವರು. ಇದು ಕಂದಿಹೋಗದ ಲಿಪೊಸಾರಜನಕಗಳು ಮತ್ತು ಫ್ಯಾಟಿ ಆಮ್ಲ ಸರಗಳು, ಸಸಾರಜನಕ – ಪಾಲಿಫೀನೈಲ್‌ನಲ್ಲಿ ಹೂತುಹೋದ ಸಂಕೀರ್ಣದ ಸ್ತರ. ಈ ಸ್ತರವು ಪೊರೆಬಿಡುವುದಕ್ಕೆ ಮೊದಲು ಹೊರಪೊರೆಯ ಅತಿ ಹೆಚ್ಚಿನ ವಿಕಸನವನ್ನು ನಿರ್ಧರಿಸುತ್ತದೆ.

3. ಮೇಣದ ಪದರ – ಮೇಣದ ಅಣುಗಳು ಏಕಪದರವಾಗಿ ಅಭಿಮುಖವಾಗಿರುವ ಪದರವಾಗಿದ್ದು, ಕ್ಯುಟಿಕ್ಯುಲಿನ್ ಪದರದ ಮೇಲ್ಭಾಗದಲ್ಲಿದೆ. ಈ ಪದರವು ಹೊರಚರ್ಮದ ಕೋಶಗಳು ಸ್ರವಿಸಿ, ರಂಧ್ರನಾಳದ ಮೂಲಕ ಸಾಗಿಸಿದ ಲಿಪಿಡ್ ನಿಂದ ತಯಾರಾಗಿದೆ. ಇದು ಮುಖ್ಯವಾಗಿ ಕೀಟಶರೀರದಿಂದ ಮತ್ತು ಕೀಟಶರೀರದೊಳಕ್ಕೆ ನೀರಿನ ಚಲನೆಯ ಬಂಧಕವಾಗಿ ಕೆಲಸ ಮಾಡುತ್ತದೆ.

4. ಸೀಮೆಂಟ್ ಪದರ – ಇದು ಚರ್ಮದ ರಸಗ್ರಂಥಿಯ ಸ್ರಾವದಿಂದ ಉತ್ಪತ್ತಿಯಾಗಿದ್ದು, ರಸಗ್ರಂಥಿ ನಾಳದ ಮೂಲಕ ಮೇಲ್ಭಾಗಕ್ಕೆ ಸಾಗಿದೆ. ಈ ಸೀಮೆಂಟ್ ಪದರವು, ಮೇಣದ ಪದರವನ್ನು ರೋಗಾಣುಗಳಿಂದ, ಭಕ್ಷಕಗಳಿಂದ, ಕೀಟನಾಶಕಗಳಿಂದ ಹಾನಿಯಾಗದಂತೆ ರಕ್ಷಿಸುತ್ತದೆ. (ಎಸ್.ಎನ್.ಎಚ್.)



ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಶ್ವಕೋಶ

## ಸಂಪುಟ ಒಂದು

**ಅ** ಕನ್ನಡ ವರ್ಣಮಾಲೆಯ ಮೊದಲನೆಯ ಅಕ್ಷರವಾದ ಅಕಾರದ ಅತ್ಯಂತ ಹಳೆಯ ರೂಪವನ್ನು ಪ್ರ.ಶ.ಪೂ. 3 ನೆಯ ಶತಮಾನದ ಅಶೋಕನ ಬ್ರಾಹ್ಮೀ ಲಿಪಿಯ ಶಾಸನಗಳಲ್ಲಿ ಕಾಣಬಹುದು. ಆ ಕಾಲದ ಬ್ರಾಹ್ಮೀಲಿಪಿಯಿಂದ ಆಕಾರವು ವಿಕಾಸಹೊಂದಿ ಇಂದಿನ ರೂಪವನ್ನು ತಾಳಿತೆಂಬುದನ್ನು ಗಮನಿಸಬೇಕು. ಅಶೋಕನ ಬ್ರಾಹ್ಮೀಲಿಪಿಯಲ್ಲಿ ಇದು ಮೂರು ರೇಖೆಗಳಿಂದ ಕೂಡಿದ್ದು ಈಗಿನ ರೂಪಕ್ಕಿಂತ ಭಿನ್ನವಾಗಿ ಕಾಣುತ್ತದೆ. ಪ್ರ.ಶ.2ನೆಯ ಶತವಾನದ ಸಾತವಾಹನರ ಬ್ರಾಹ್ಮೀಲಿಪಿಯಲ್ಲಿ ಕಂಡುಬರುವ ಕೆಲವು ಬದಲಾವಣೆಗಳು ಗಮನಾರ್ಹ. ಅಕ್ಷರದ ಕೆಳತುದಿಗಳು ಬಾಗುತ್ತವೆ. ಮೇಲ್ಭಾಗದಲ್ಲಿ ತ್ರಿಕೋನಾಕಾರದ ತುದಿಗಳು ಕಾಣಬರುತ್ತವೆ. ಪ್ರ.ಶ. 5ನೆಯ ಶತಮಾನದ ಕದಂಬರ ಲಿಪಿಯಲ್ಲಿ ಚೌಕಾಕಾರದ ತಲೆಕಟ್ಟನ್ನು ಗಮನಿಸಬಹುದು. ಮುಂದಿನ ಶತಮಾನದ ಬಾದಾಮಿಚಳುಕ್ಯರ ಶಾಸನಗಳಲ್ಲಿ ಇದು ಅಗಲವಾಗಿ ಈಗಿನ ರೂಪಕ್ಕೆ ದಾರಿಮಾಡಿಕೊಡುತ್ತದೆ. ಪ್ರ.ಶ.9ನೆಯ ಶತಮಾನದ ರಾಷ್ಟ್ರಕೂಟರ ಶಾಸನಗಳಲ್ಲಿ ಪ್ರತ್ಯೇಕ ರೇಖೆಗಳು ಮಾಯವಾಗಿ ತುದಿಯಿಂದ ಕೊನೆಯವರೆಗೂ ವೃತ್ತಾಕಾರದ ಒಂದೇ ರೇಖೆಯು ಉಂಟಾಗುತ್ತದೆ. ಇದು ಈಗಿನ ರೂಪಕ್ಕೆ ಅತ್ಯಂತ ಸಮೀಪದ್ದಾಗಿ ಕಾಣುತ್ತದೆ. ಇದೇ ರೂಪ ಸ್ಥಿರಗೊಂಡು ಮುಂದಿನ ಶತಮಾನಗಳಲ್ಲಿ ಇನ್ನೂ ಗುಂಡಗಾಗಿ ಈಗಿನ ರೂಪವನ್ನು ಪ್ರ.ಶ 18ನೆಯ ಶತಮಾನದಲ್ಲಿ ತಾಳುತ್ತದೆ. (ಎ.ವಿ.ಎನ್.)



ಅಶೋಕ ಪ್ರ.ಶ.ಪೂ. 3ನೆಯ ಶತಮಾನ
ಸಾತವಾಹನ 2ನೆಯ ಶತಮಾನ
ಕದಂಬ 5ನೆಯ ಶತಮಾನ
ಗಂಗ 6ನೆಯ ಶತಮಾನ
ಬಾದಾಮಿಚಳುಕ್ಯ 6ನೆಯ ಶತಮಾನ
ರಾಷ್ಟ್ರಕೂಟ 6ನೆಯ ಶತಮಾನ
ಕಲ್ಯಾಣಿಚಾಳುಕ್ಯ 11ನೆಯ ಶತಮಾನ
ಹೊಯ್ಸಳ 13ನೆಯ ಶತಮಾನ
ವಿಜಯನಗರ 15ನೆಯ ಶತಮಾನ
ಮೈಸೂರು ಅರಸರು 18ನೆಯ ಶತಮಾನ

ಕನ್ನಡ ವರ್ಣಮಾಲೆಯ ಈ ಮೊದಲನೆಯ ಅಕ್ಷರ ಎರಡು ಹ್ರಸ್ವ ಸ್ವರಧ್ವನಿಗಳನ್ನು ಸೂಚಿಸುತ್ತದೆ. ಒಂದು, ಸಾಮಾನ್ಯವಾದ ವಿವೃತ ಮಧ್ಯ ಅಗೋಲ ಸ್ವರ; ಇನ್ನೊಂದು, ಕೆಲವರ ಉಚ್ಚಾರದಲ್ಲಿ ಕಂಡುಬರುವ ಮಧ್ಯ-ಮಧ್ಯ ಅಗೋಲ ಸ್ವರ. ಇವು ಎರಡಕ್ಕೂ ಇರುವ ವ್ಯತ್ಯಾಸವನ್ನು ಅತ್ತೆ(ಅವಳು ನನ್ನ ಅತ್ತೆ'; ದುಃಖದಿಂದ ನಾನು 'ಅತ್ತೆ'), ತಂದೆ (ಅವರು ನನ್ನ 'ತಂದೆ'; ಅಂಗಡಿಯಿಂದ 'ತಂದೆ') ಮೊದಲಾದ ಪದಗಳ ಉಚ್ಚಾರದಲ್ಲಿ ಗಮನಿಸಬಹುದು. (ಎಚ್.ಎಂ.ಎನ್.)

**ಅಂಕಗಣಿತ :** 1. ನಾಗರಿಕತೆಯ ಬೆಳವಣಿಗೆಗೆ ಅನಾದಿಕಾಲದಿಂದಲೂ ಅಂಕಗಣಿತ ಅತ್ಯಾವಶ್ಯಕವಾಗಿದ್ದಿತೆಂಬುದು ಸ್ಪಷ್ಟವಾಗಿಯೇ ಇದೆ. ಎಲ್ಲಾ ಜನಾಂಗಗಳ ಪೂರ್ವಿಕರು ಇದಕ್ಕಾಗಿ ಬಹಳ ಶ್ರಮಿಸಿರಬೇಕು. ಅಂಕಗಣಿತದ ತಳಹದಿಯಾಗಿ, ಪದಾರ್ಥಗಳನ್ನು ಎಣಿಸುವ ವಿಧಾನವಾಗಿ, ಸಂಖ್ಯೆಗಳು ಬೆಳೆದು ಬಂದು ಅವುಗಳನ್ನು ಕೂಡುವ, ಕಳೆಯುವ, ಗುಣಿಸುವ ಇತ್ಯಾದಿ ಪರಿಕರ್ಮಗಳು ಹುಟ್ಟಿಕೊಂಡವು. ಈಗ ವಿದ್ಯಾಭ್ಯಾಸದ ಆರಂಭದಲ್ಲಿಯೇ ಪ್ರಾಥಮಿಕ ಶಾಲೆಗೆ ಹೋಗುವ ಬಾಲಕ ಬಾಲಿಕೆಯರು ಇವನ್ನೆಲ್ಲಾ ಕಲಿಯುವುದರಿಂದ ಈ ಶಾಸ್ತ್ರವು ಕೇವಲ ಸ್ವಾಭಾವಿಕವೆಂದು ಸುಲಭವೆಂದು ಭಾವನೆ ಬರಬಹುದು. ಆದರೆ ಪ್ರಾಚೀನ ಕಾಲದಲ್ಲಿ ಸೂಕ್ತವಾದ ಒಂದು ಸಂಖ್ಯಾಕ್ರಮವಿಲ್ಲದೆ ಅನೇಕ ಜನಾಂಗಗಳು ಬಹಳ ಕಷ್ಟಪಟ್ಟುವು ಎಂಬುದು ಚಾರಿತ್ರಿಕ ವಿಷಯ. ಪ್ರಾಚೀನ ಗ್ರೀಕರು I, II, III, IV, V, ……X, L, C ಮುಂತಾದ ಚಿಹ್ನೆಗಳಿಂದಲೇ ಸಂಕಲನ ಗುಣಾಕಾರಗಳನ್ನು ಮಾಡುತ್ತಿದ್ದರು ಎಂದೂ ಅದರ ದೆಸೆಯಿಂದ ಅವರು ಕೆಲವು ಗಣಿತ ಶಾಖೆಗಳಲ್ಲಿ ಬಹಳ ಹಿಂದೆ ಬಿದ್ದಿದ್ದರು ಎಂದೂ ತಿಳಿದುಬಂದಿದೆ. ಸೊನ್ನೆಯ ಕಲ್ಪನೆಯೂ ಅದರ ಚಿಹ್ನೆಯೂ ಅದರ ಉಪಯೋಗವೂ ಸ್ವಲ್ಪ ತಡವಾಗಿಯೇ ಬಂದವು.

ಈಗ ಎಲ್ಲೆಲ್ಲಿಯೂ ಬಳಕೆಯಲ್ಲಿರುವ ಸಂಖ್ಯಾಕ್ರಮಕ್ಕೆ ದಾಶಮಿಕ ಸಂಖ್ಯಾಕ್ರಮ ಎಂದು ಹೆಸರು. ಯಾವ ಪೂರ್ಣಾಂಕ ಸಂಖ್ಯೆಯನ್ನೇ ಆಗಲಿ ಹತ್ತು ಚಿಹ್ನೆಗಳಿಂದ ಸ್ಪಷ್ಟಪಡಿಸಲಾಗುತ್ತದೆ. ಸೊನ್ನೆ, ಒಂದು, ಎರಡು. . . . .ಒಂಬತ್ತು ಎಂಬ ಹೆಸರುಗಳುಳ್ಳ ಈ ಚಿಹ್ನೆಗಳು ಇದೇ ಹೆಸರಿನ ಸಂಖ್ಯೆಗಳನ್ನು ಸೂಚಿಸುತ್ತವೆ. ಒಂದೇ ಚಿಹ್ನೆಯು ಅದರ ಸ್ಥಾನಕ್ಕನುಗುಣವಾಗಿ ಬೆಲೆಯಲ್ಲಿ ಮಾರ್ಪಾಡು ಹೊಂದುವುದೇ ಈ ಕ್ರಮದಲ್ಲಿರುವ ತತ್ತ್ವ. 9999 ಎಂಬ ಸಂಖ್ಯೆಯಲ್ಲಿ 9 ಎಂಬ ಚಿಹ್ನೆಯು ಬಲದಿಂದ ಎಡಕ್ಕೆ ಕ್ರಮವಾಗಿ

ಒಂಬತ್ತು, ತೊಂಬತ್ತು, ಒಂಬೈನೂರು, ಒಂಬತ್ತು ಸಾವಿರ ಎಂಬ ಬೆಲೆಗಳನ್ನು ಪಡೆದಿದೆ. ಎಂದರೆ ಈ ಸಂಖ್ಯೆ ಒಂಬತ್ತು ಸಾವಿರ + ಒಂಬೈನೂರು+ ತೊಂಬತ್ತು+ ಒಂಬತ್ತು. 760500 ಎಂಬ ಸಂಖ್ಯೆಯಲ್ಲಿ ಬಲಗಡೆ ಕಡೆಯಲ್ಲಿರುವ ಸಂಖ್ಯೆ ಮಾತ್ರ ಸೊನ್ನೆ. ಉಳಿದ ಅದೇ ಚಿಹ್ನೆಯವು ಸೊನ್ನೆಗಳಲ್ಲ. ಬಲದಿಂದ ಎರಡನೆಯ ಸ್ಥಾನದಲ್ಲಿರುವ 0 ಗೆ ಹತ್ತು ಎಂಬ ಬೆಲೆಯೂ, ನಾಲ್ಕನೆಯ ಸ್ಥಾನದಲ್ಲಿರುವ 0 ಗೆ ಸಾವಿರ ಎಂಬ ಬೆಲೆಯೂ ಇದೆ. ಸಂಖ್ಯೆಯು ಏಳು ಲಕ್ಷ + ಆರು ಹತ್ತು ಸಾವಿರ + ಐದು ನೂರು. ಈ ವಿಧಾನವನ್ನು ಪ್ರತಿಯೊಬ್ಬನೂ ಬಾಲ್ಯದಿಂದಲೇ ಕಲಿತಿರುವನಾದ್ದರಿಂದ ಇನ್ನೂ ಹೆಚ್ಚು ವಿವರಣೆ ಅನಾವಶ್ಯಕ. ಈ ವಿಧಾನ ಭಾರತದಲ್ಲಿ ಹುಟ್ಟಿ ಬೆಳೆದುದಾಗಿ ಭಾರತೀಯ ಸಂಖ್ಯಾ ವಿಧಾನ ಎನ್ನಿಸಿಕೊಂಡಿದೆ. 7ನೆಯ ಶತಮಾನದ ವೇಳೆಗೆ ಸಿರಿಯನ್ನರು, ಅರಬ್ಬರು ಈ ದೇಶಕ್ಕೆ ಬಂದು ಇದನ್ನು ಕಲಿತು ಅವರ ದೇಶಗಳಲ್ಲೂ ಕಾಲಕ್ರಮದಲ್ಲಿ ಯುರೋಪಿನ ದೇಶಗಳಲ್ಲೂ ಪ್ರಚಾರಕ್ಕೆ ತಂದರು. ಭಾರತದಲ್ಲಿ ಅತ್ಯಂತ ಪುರಾತನ ಗ್ರಂಥಗಳಾದ ವೇದಗಳಲ್ಲಿಯೂ ರಾಮಾಯಣದಲ್ಲಿಯೂ ದಾಶಮಿಕ ಸಂಖ್ಯಾಕ್ರಮ ಕಂಡುಬರುತ್ತದೆ. ಹತ್ತರ ಘಾತ(ಪವರ್) ಗಳಾದ ಲಕ್ಷ, ಕೋಟಿ, ಅರ್ಬುದ ಮುಂತಾದ ಬಹುದೊಡ್ಡ ಸಂಖ್ಯೆಗಳು ಈ ಗ್ರಂಥಗಳಲ್ಲೂ ಇತರ ಹಿಂದಿನ ಗ್ರಂಥಗಳಲ್ಲೂ ಕಂಡುಬರುತ್ತವೆ. ಸಂಖ್ಯೆಗಳಿಗೆ ಉಪಯೋಗಿಸುವ ಚಿಹ್ನೆಗಳು ಭಾಷೆಗನುಗುಣವಾಗಿ ವ್ಯತ್ಯಾಸವನ್ನು ಪಡೆಯುತ್ತವೆ. ಪ್ರಾಚೀನ ಸಂಸ್ಕೃತದಲ್ಲಿರುವ ಹಾಗೂ ಕನ್ನಡ ಮುಂತಾದ ಭಾರತದ ದೇಶಭಾಷೆಗಳಲ್ಲಿರುವ ಚಿಹ್ನೆಗಳಲ್ಲಿ ಸ್ವಲ್ಪಮಟ್ಟಿಗೆ ಹೋಲಿಕೆ ಇದೆ. ಇಂಗ್ಲಿಷಿನಲ್ಲಿರುವ ರೋಮನ್ ಲಿಪಿಯಲ್ಲಿ ಬಹಳ ವ್ಯತ್ಯಾಸವಾಗಿದೆ.

ಮನುಷ್ಯನ ಕೈಬೆರಳುಗಳು ಹತ್ತಾಗಿರುವುದರಿಂದ ದಾಶಮಿಕ ಸಂಖ್ಯಾಕ್ರಮವು ಸ್ವಾಭಾವಿಕವಾಗಿ ಹುಟ್ಟಿತೆಂದು ಸಾಮಾನ್ಯವಾದ ನಂಬಿಕೆ ಇದೆ. ಆದರೆ ಒಂದು, ಎರಡು ಮುಂತಾಗಿ ಬೆರಳುಗಳನ್ನು ಎಣಿಸಿದರೆ ಹತ್ತನೆಯ ಬೆರಳಿಗೆ ಪ್ರತ್ಯೇಕ ಚಿಹ್ನೆ ಇಲ್ಲ. ಎರಡು ಚಿಹ್ನೆಗಳಿಂದ (10) ಅದನ್ನು ತಿಳಿಸುತ್ತೇವೆಂಬುದನ್ನೂ ಸೊನ್ನೆ ಎಂಬ ಬೇರೊಂದು ಭಾವನೆಯನ್ನು ಪಡೆದಿರುವುದನ್ನೂ ಗಮನಿಸಬೇಕು. ಶೂನ್ಯ ಎಂಬ ಭಾವನೆಗೆ ಒಂದು ಅಸ್ತಿತ್ವವನ್ನೂ ಬೆಲೆಯನ್ನೂ ಕೊಟ್ಟು ಅದನ್ನು ಸಂಖ್ಯಾಕ್ರಮಕ್ಕೆ ಅಳವಡಿಸಿ ಯಾವ ಸಂಖ್ಯೆಯನ್ನೇ ಆಗಲಿ ನಿರ್ದಿಷ್ಟವಾದ ರೀತಿಯಲ್ಲಿ ಸೂಚಿಸುವ ವಿಧಾನವು ದಾಶಮಿಕ ಸಂಖ್ಯಾಕ್ರಮದ ಒಂದು ವೈಶಿಷ್ಟ್ಯ, ಹಿರಿಮೆ. ಗಣಿತದ ಪಾಠಗಳಲ್ಲಿ ಕಲಿಯುವ ಮೊಟ್ಟಮೊದಲನೆಯ ವಿಷಯ ಇದಾಗಿರುವುದರಿಂದ, ಇದರ ಹಿರಿಮೆಯನ್ನು ನಾವು ಮನಗಾಣದೆಯೋ ಅಲ್ಪವೆಂದೋ ಭಾವಿಸುವುದುಂಟು. ಸೊನ್ನೆಯನ್ನೂ ಅಂಕಿಗಳನ್ನೂ ಸೃಷ್ಟಿಸಿ, ಗಣಿತ ಎಂಬ ವಿಜ್ಞಾನಕ್ಕೆ ತಳಹದಿ ಹಾಕಿಕೊಟ್ಟವನು– ಅವನು ಮಾನವನೋ, ದೇವರೋ– ಇಡೀ ನಾಗರಿಕ ಜನಾಂಗಗಳ ಕೃತಜ್ಞತೆಗೆ ಪಾತ್ರನಾಗಿದ್ದಾನೆ.

2. ಸಂಖ್ಯೆಗಳನ್ನು ಗುರುತಿಸುವ ವಿಧಾನವು ಸ್ಥಿರಪಟ್ಟ ಮೇಲೆ, ಅವುಗಳ ಮೇಲೆ ಪರಿಕರ್ಮಗಳನ್ನು ಮಾಡುವ ವಿಧಾನಗಳೂ ಏರ್ಪಟ್ಟವು. ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಎಂಬವು ನಾಲ್ಕು ಪರಿಕರ್ಮಗಳು. ಗಣಿತವು ಬೆಳೆದ ಮೇಲೆ ವರ್ಗಮೂಲ, ಘನಮೂಲ ಎಂಬ ಇನ್ನೆರಡು ಪರಿಕರ್ಮಗಳ ಪ್ರಯೋಗವು ಕಂಡುಬರುತ್ತದೆ. ಮೊದಲಿನ ನಾಲ್ಕು ಪರಿಕರ್ಮಗಳಿಗೆ ಇರುವ **+, –, x, ÷** ಎಂಬ ಚಿಹ್ನೆಗಳು ಈಚಿನವು; ಪಾಶ್ಚಾತ್ಯರಿಂದ ಬಂದವು. ಪೂರ್ವದಲ್ಲಿ ಸಂದರ್ಭವನ್ನರಿತುಕೊಂಡು ಸಂಖ್ಯೆಗಳನ್ನು ಒಂದರ ಕೆಳಗೆ ಒಂದನ್ನು ಬರೆದೋ, ಒಂದರ ಪಕ್ಕದಲ್ಲಿ ಒಂದನ್ನು ಬರೆದೋ ಪರಿಕರ್ಮಗಳನ್ನು ಸ್ಪಷ್ಟವಾದ ಚಿಹ್ನೆಗಳಿಲ್ಲದೆಯೇ ಮಾಡುತ್ತಿದ್ದರು. ಸ್ಥಾನಕ್ಕನುಗುಣವಾಗಿ ಅಂಕಿಗಳಿಗೆ ಬೆಲೆಯಿರುವುದನ್ನು ಗಮನಿಸಿ, ಪರಿಕರ್ಮಗಳನ್ನು ಮಾಡುವ ವಿಧಾನಗಳು ಹೇಗೆ ರೂಪುಗೊಂಡವು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಸುಲಭ. ಒಂದೆರಡು ಉದಾಹರಣೆಗಳು ಸಾಕು :

463ರಲ್ಲಿ 174ನ್ನು ಕಳೆಯಬೇಕು

463 = 400 + 60 + 3 = 400 + 50 + 13

174 = 100 + 70 + 4 = 100 + 70 + 4

ಆದ್ದರಿಂದ ಕಡೆಯಲ್ಲಿ 9 ಬರುತ್ತದೆ

ಅನಂತರ,

$$\frac{300 + 150}{100 + 70}$$

200 + 80 ಆದ್ದರಿಂದ ಉತ್ತರ 289.

165 X 38 = (100 + 60 + 5) X (30 + 8)

8 ರಿಂದ ಮೊದಲು ಗುಣಿಸಿದರೆ 800

480

40

ಒಟ್ಟು 1320

3 ರಿಂದ ಗುಣಿಸಿದರೆ 300

180

15

495

30 ರಿಂದ ಗುಣಿಸುವುದು ಎಂದರೆ ಇದರ ಹತ್ತರಷ್ಟು = 4950

∴ 1320

4950

=

6270

ರೂಢಿಯಲ್ಲಿ ಎರಡನೆಯ ಸಾಲಿನಲ್ಲಿ ೦ ಯನ್ನು ಬರೆಯದೆ, ಒಂದು ಸ್ಥಾನವನ್ನು ಬಿಟ್ಟು ಬರೆಯುವುದೆಂದು ಹೇಳುತ್ತೇವೆ.

ಇದರ ತತ್ತ್ವವನ್ನು ಅರಿತ ಮೇಲೆ ಗುಣಕದಲ್ಲಿನ ಸಂಖ್ಯೆಗಳನ್ನು ಬಲದಿಂದ ಎಡಕ್ಕೆ ತೆಗೆದುಕೊಂಡು, ಎಡದಿಂದ ಬಲಕ್ಕೆ ತೆಗೆದುಕೊಂಡು ಸಹ ಗುಣಾಕಾರವನ್ನು ಮಾಡಬಹುದು

496 × 387

1488(00)

3968(0)

347 2

19195 2

ಭಾಗಾಕಾರವು ಗುಣಾಕಾರದ ಪ್ರತಿಲೋಮಕ್ರಿಯೆ (ಇನ್‌ವರ್ಸ್ ಪ್ರೋಸೆಸ್). ಈ ಭಾವನೆಯಿಂದಲೇ, ಇದರ ವಿಧಾನವು ಬೆಳೆದುಬಂದಿರಬೇಕು. ಉದಾಹರಣೆಗೆ :

381 ÷ 7. ಯಾವ ಸಂಖ್ಯೆಯನ್ನು 7 ರಿಂದ ಗುಣಿಸಿದರೆ, 381 ಬರುತ್ತದೆ? 7 × 5 = 35 ಆದ್ದರಿಂದ, 7 × 50 = 350. ಆದುದರಿಂದ 381 = 350 + 31 ಎಂದು ಬರೆದು 350 ÷ 7 = 50 ಆಗುತ್ತದೆ. ಅನಂತರ 7 × 4 = 28 ಆದ್ದರಿಂದ 31÷7= 4, ಮೂರು ಮಿಗುತ್ತದೆ.

∴ 381 ÷ 7 = (50 + 4) + 3 ಶೇಷ.

ಭಾಗಾಕಾರದ ತತ್ತ್ವವನ್ನು ಬೀಜಗಣಿತದ ಭಾಷೆಯಲ್ಲಿ ತಿಳಿಸುವುದಾದರೆ ಯಾವುದೇ ಎರಡು ಪೂರ್ಣಾಂಕ $a$, $b$ ಗಳಿಗೆ $(b>0)$, $a=bq+r, 0< r<b$ ಆಗಿರುವಂತೆ ಪೂರ್ಣಾಂಕಗಳು $q$ ಮತ್ತು $r$ ಏಕೈಕವಾಗಿರುತ್ತವೆ. ಆಧುನಿಕ ಪ್ರೌಢಗಣಿತದಲ್ಲಿ ಇದಕ್ಕೆ ನಿಖರವಾದ ಸಾಧನೆಯನ್ನು ಕೊಟ್ಟು, ಇದನ್ನು ಯೂಕ್ಲಿಡನ ಅಲ್ಗೋರಿದಮ್ ಎಂದು ಕರೆಯುತ್ತಾರೆ. ಸಾಮಾನ್ಯ ಅಂಕಗಣಿತದಲ್ಲಿ, ಇದನ್ನು ನಮ್ಮ ಅಂತರ್ಬೋಧೆಗೆ ಸ್ಪಷ್ಟವೆಂದು ಭಾವಿಸುವರು.

ಭಾಗಾಕಾರ ಕ್ರಮಕ್ಕೆ ಒಂದು ವಿನಾಯಿತಿ ಇರುವುದನ್ನು ಗಮನಿಸಿ. ಸೊನ್ನೆಯಿಂದ ಭಾಗಿಸಲಾಗುವುದಿಲ್ಲ. ವ್ಯವಕಲನದಲ್ಲಿ ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆಯುತ್ತೇವೆ. ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಯನ್ನು ಕಳೆಯಲು ಋಣಸಂಖ್ಯೆಗಳು ಬೇಕಾಗುತ್ತವೆ. ಋಣಸಂಖ್ಯೆ ಬೀಜಗಣಿತದ ಭಾವನೆಯಾದ್ದರಿಂದ, ಅಂಕಗಣಿತದಲ್ಲಿ ಇದನ್ನು ಉಪಯೋಗಿಸುವ ವಾಡಿಕೆ ಇಲ್ಲ.

**3**. ಭಾಗಾಕಾರದಲ್ಲಿ, ಶೇಷ $r$ ಸೊನ್ನೆಯಾದರೆ, a ಯನ್ನು ನಿಶ್ಶೇಷವಾಗಿ ಭಾಗಿಸುತ್ತದೆ ಎಂದೂ $a$ ಯ ಅಪವರ್ತನ $b$ ಎಂದೂ ಹೇಳುತ್ತೇವೆ.

ಉದಾಹರಣೆಗೆ: 15ಕ್ಕೆ 5 ಅಪವರ್ತನ; 24ಕ್ಕೆ 2, 3, 4, 8, 12 ಇವು.

ಸುಲಭವಾದ ಸಂದರ್ಭಗಳಲ್ಲಿ ಕೊಟ್ಟ ಸಂಖ್ಯೆಗೆ ಅಪವರ್ತನಗಳನ್ನು ಸಾಮಾನ್ಯ ಮಗ್ಗಿ ಕೋಷ್ಟಕಗಳಿಂದ ಪಡೆಯಬಹುದು.

| | |
|---|---|
| 2 | 4620 |
| 2 | 2310 |
| 3 | 1155 |
| 5 | 385 |
| 7 | 77 |
| | 11 |

∴ 4620 = 2 × 2 × 3 × 5 × 7 × 11

ಸಂಖ್ಯೆಯು ಸುಲಭವಾಗಿ ಈ ರೀತಿ ಮಗ್ಗಿ ಕೋಷ್ಟಕಗಳಿಗೆ ಅಳವಡದೆ ಇರಬಹುದು. ಉದಾ: 5293 = 67 x 79. ಕೊಟ್ಟ ಸಂಖ್ಯೆಯ ವರ್ಗ ಮೂಲದತನಕ ಯಾವ ಸಂಖ್ಯೆಯಿಂದ ಅದು ನಿಶ್ಶೇಷವಾಗಿ ಭಾಜಿತವಾಗುತ್ತದೆ ಎಂದು ಪರೀಕ್ಷೆ ಮಾಡುತ್ತ ಅಪವರ್ತನಗಳನ್ನು ಪಡೆಯಬೇಕಾಗುತ್ತದೆ.

ಸಂಖ್ಯೆಗೆ 1 ಮತ್ತು ಅದೇ ಸಂಖ್ಯೆಯ ಹೊರತು ಬೇರೆ ಅಪವರ್ತನಗಳೇ ಇಲ್ಲದಿರಬಹುದು. ಉದಾ: 37, 101. ಇಂಥ ಸಂಖ್ಯೆಗಳನ್ನು ಅವಿಭಾಜ್ಯ ಸಂಖ್ಯೆಗಳು (ಪ್ರೈಮ್ ನಂಬರ್ಸ್) ಎಂದು ಕರೆಯುತ್ತೇವೆ. ಲಕ್ಷದವರೆಗಿರುವ ನಿರಪವರ್ತನ ಸಂಖ್ಯೆಗಳ ಕೋಷ್ಟಕಗಳು ಇವೆ. ಕೆಳಗಿನವು ಎರಡು ಮುಖ್ಯ ಪ್ರಮೇಯಗಳು.

(1). ಅವಿಭಾಜ್ಯ ಸಂಖ್ಯೆಗಳು ಅನಂತವಾಗಿವೆ.

(2) a,b, c,……. ಅವಿಭಾಜ್ಯ ಸಂಖ್ಯೆಗಳಾದರೆ, ಯಾವುದೇ ಸಂಖ್ಯೆ N ನ್ನು $N=a^{\alpha} b^{\beta} c^{\gamma}$……………………(α,β,γ,.......ಪೂರ್ಣಾಂಕಗಳು) ಎಂಬ ರೂಪದಲ್ಲಿ ಒಂದೇ ವಿಧದಲ್ಲಿ ಅಪವರ್ತಿಸಬಹುದು.

ಪ್ರ.ಶ.ಪೂ.ಸು. 300 ರಲ್ಲಿ ಬದುಕಿದ್ದ ಗ್ರೀಸ್ ದೇಶದ ಯೂಕ್ಲಿಡ್ ಎಂಬಾತನು ಇವನ್ನು ತಿಳಿಸಿದನು. ಮೊದಲನೆಯ ಪ್ರಮೇಯಕ್ಕೆ ಆತನು ಕೊಟ್ಟ ಸಾಧನೆಯು ಹ್ರಸ್ವವೂ ಸುಂದರವೂ ಆಗಿದೆ. ಗ್ರೀಕರ ಅದ್ಭುತ ತಾರ್ಕಿಕ ಬುದ್ಧಿಗೆ ಇವು ನಿದರ್ಶನಗಳಾಗಿವೆ.

ಅವಿಭಾಜ್ಯ ಸಂಖ್ಯೆಗಳು ಜೋಡಿಜೋಡಿಯಾಗಿ (ನಡುವೆ 2 ವ್ಯತ್ಯಾಸವಿರುವಂತೆ) ಅನಂತವಾಗಿ ಸಿಕ್ಕುತ್ತವೆ ಎಂಬುದು ಇನ್ನೊಂದು ಪ್ರಮೇಯ. ಉದಾ:(5, 7),(11,13), (17, 19), (101, 103), ಇತ್ಯಾದಿ.

ಈ ಪ್ರಮೇಯಕ್ಕೆ ಸಾಧನೆಯನ್ನು ಇದುವರೆಗೆ ಯಾರೂ ನೀಡಿಲ್ಲ.

4. ಒಂದು ಸಂಖ್ಯೆಯನ್ನು ಒಂದು ದತ್ತಸಂಖ್ಯೆಯು ಭಾಗಿಸುವುದೇ ಎಂಬುದಕ್ಕೆ ಸುಲಭ ಸಂದರ್ಭಗಳಲ್ಲಿ ಕೆಲವು ಪರೀಕ್ಷೆಗಳು ಏರ್ಪಟ್ಟಿವೆ. ಇವು ಅಂಕಗಣಿತದಲ್ಲಿ ಬಹಳ ಉಪಯುಕ್ತವಾಗುತ್ತವೆ.

i. ಸಂಖ್ಯೆಯ ಅಂಕಿಗಳ ಮೊತ್ತವು 3 ರಿಂದ ಭಾಜಿತವಾದರೆ, ಸಂಖ್ಯೆಯೂ 3 ರಿಂದ ಭಾಜಿತ. ಉದಾ :48913527. ಅಂಕಿಗಳ ಮೊತ್ತ 39 ಆದ್ದರಿಂದ ಸಂಖ್ಯೆಯೂ 3 ರಿಂದ ಭಾಜಿತವಾಗುತ್ತದೆ.

ii. ಇಂಥದೇ ನಿಯಮ 9ಕ್ಕೂ ಇದೆ. ಅಂಕಿಗಳ ಮೊತ್ತ 9 ರಿಂದ ಭಾಜಿತವಾದರೆ, ಸಂಖ್ಯೆಯೂ 9 ರಿಂದ ಭಾಜಿತ. ಉದಾ: 5688, ಅಂಕಿಗಳ ಮೊತ್ತ 27. ಸಂಖ್ಯೆ 9 ರಿಂದ ಭಾಜಿತವಾಗಿದೆ.

iii. ಸಂಖ್ಯೆಯ ಬಲಗಡೆಯಿಂದ ಮೊದಲನೆಯ ಅಂಕಿ 2 ರಿಂದ ಭಾಜಿತವಾದರೆ, ಸಂಖ್ಯೆಯೂ 2 ರಿಂದ ಭಾಜಿತ. ಎಂದರೆ ಸಂಖ್ಯೆಯ ಮೊದಲನೆಯ ಅಂಕಿ (ಬಿಡಿಸ್ಥಾನದ್ದು)0, 2, 4, 6, 8 ಆಗಿರಬೇಕು. ಇಂಥ ಸಂಖ್ಯೆಯನ್ನು ಸಮಸಂಖ್ಯೆ ಎನ್ನುತ್ತೇವೆ. ಇದು ಅಲ್ಲದಿದ್ದರೆ ವಿಷಮ ಅಥವಾ ಬೆಸಸಂಖ್ಯೆ ಎನ್ನುತ್ತೇವೆ.

iv. ಸಂಖ್ಯೆಯ ಬಿಡಿ, ಹತ್ತರ ಸಂಖ್ಯೆಗಳು ಒಟ್ಟುಗೂಡಿ 4 ರಿಂದ ಭಾಜಿತವಾದರೆ, ಸಂಖ್ಯೆಯೂ 4 ರಿಂದ ಭಾಜಿತ; ಬಿಡಿ, ಹತ್ತು, ನೂರರ ಸಂಖ್ಯೆಗಳು ಒಟ್ಟುಗೂಡಿ 8 ರಿಂದ ಭಾಜಿತವಾದರೆ, ಸಂಖ್ಯೆಯೂ 8 ರಿಂದ ಭಾಜಿತ. ಉದಾ: 9748. ಇಲ್ಲಿ 48 ಎಂಬುದು 4 ರಿಂದ ಭಾಜಿತ. ಆದ್ದರಿಂದ ಸಂಖ್ಯೆಯೂ 4 ರಿಂದ ಭಾಜಿತ. ಆದರೆ 748, 8 ರಿಂದ ಭಾಜಿತವಲ್ಲ. ಆದ್ದರಿಂದ ಸಂಖ್ಯೆಯೂ 8 ರಿಂದ ಭಾಜಿತವಲ್ಲ. 9744, 1000 ಇವು 8 ರಿಂದ ಭಾಜಿತ.

v. ಸಂಖ್ಯೆಯು 5 ರಿಂದ ಭಾಜಿತವಾಗಲು, ಮೊದಲ (ಬಿಡಿ ಸ್ಥಾನದ್ದು) ಸಂಖ್ಯೆ 5 ಇಲ್ಲವೇ 0 ಇರಬೇಕು.

vi. ಬಿಡಿ ಸಂಖ್ಯೆಯಿಂದ. ಒಂದು ಬಿಟ್ಟು ಒಂದು ತೆಗೆದುಕೊಂಡುಬರುವ ಅಂಕಿಗಳ ಮೊತ್ತದಿಂದ ಉಳಿದ ಅಂಕಿಗಳ ಮೊತ್ತವನ್ನು ಕಳೆದು ಬರುವ ಸಂಖ್ಯೆಯು 11 ರಿಂದ ಭಾಜಿತವಾದರೆ, ದತ್ತ ಸಂಖ್ಯೆಯೂ 11 ರಿಂದ ಭಾಜಿತವಾಗುತ್ತದೆ.

ಉದಾ: 8 3 5 4 5 ಇಲ್ಲಿ 5 + 5 + 8 = 18. 4 + 3 = 7. 18 – 7 =11. ಆದ್ದರಿಂದ 11 ಎಂಬುದು ಅಪವರ್ತನ.

1 0 1 2 5 4 5 6. ಇಲ್ಲಿ 6 + 4 + 2 + 0 = 12; 5 + 5 + 1 + 1 = 12. 12 - 12 = 0. ಆದ್ದರಿಂದ 11 ಎಂಬುದು ಅಪವರ್ತನ.

ಇನ್ನೂ ಉಳಿದ ಸಂಖ್ಯೆಗಳಿಗೆ ಒಂದೆರಡು ಪರೀಕ್ಷೆಗಳಿವೆ. ಇವುಗಳ ಉಪಯೋಗ ಅಷ್ಟು ಹೆಚ್ಚಾಗಿಲ್ಲ.

5. ಎರಡು ಅಥವಾ ಅಧಿಕ ದತ್ತಸಂಖ್ಯೆಗಳೆಲ್ಲವನ್ನೂ ಭಾಜಿಸತಕ್ಕ ಅತ್ಯಧಿಕ ಅಪವರ್ತನಕ್ಕೆ ಅವುಗಳ ಮಹತ್ತಮ ಸಾಮಾನ್ಯ ಅಪವರ್ತನ (ಮ.ಸಾ.ಅ) ಎಂದು ಹೆಸರು. ದತ್ತಸಂಖ್ಯೆಗಳು ಅಪವರ್ತನವಾಗಿರುವ ಕನಿಷ್ಠ ಸಂಖ್ಯೆಗೆ ಅವುಗಳ ಲಘುತಮ ಸಾಮಾನ್ಯ ಅಪವರ್ತ್ಯ (ಲ.ಸಾ.ಅ) ಎಂದು ಹೆಸರು.

ಸಂಖ್ಯೆಗಳ ಅಪವರ್ತನಗಳು ಸುಲಭವಾಗಿ ದೊರಕುವುದಿದ್ದರೆ, ಮ.ಸಾ.ಅ ಮತ್ತು ಲ.ಸಾ.ಅ ಒಡನೆಯೇ ದೊರಕುತ್ತವೆ.

ಉದಾ: 41580 = 2. 2. 3. 3. 3. 5. 7. 11

18018 = 2. 3. 3. 7. 11. 13

ಮ. ಸಾ. ಅ = 2. 3. 3. 7. 11 = 1386

ಲ. ಸಾ. ಅ = 2.2.3. 3. 3. 5. 7. 11. 13 = 540540

ಅಂಕಗಣಿತದ ಸುಲಭ ಪಾಠಗಳಲ್ಲಿ ಬಳಕೆಯಲ್ಲಿರುವ ಲ.ಸಾ.ಅ ಕ್ರಮವು ಈ ತತ್ತ್ವವನ್ನೇ ಒಳಗೊಂಡಿದೆ. ಯಾವುದೇ ಹಂತದಲ್ಲಿ, ದತ್ತಸಂಖ್ಯೆಗಳಲ್ಲಿಯೇ ಒಂದು ಮತ್ತೊಂದರ ಅಪವರ್ತನವಾದರೆ, ಚಿಕ್ಕದನ್ನು ಹೊಡೆದುಹಾಕುವ ವಿಧಾನವೂ ಈ ತತ್ತ್ವವನ್ನೇ ಅವಲಂಬಿಸಿದೆ.

ಉದಾ: 2, 3, 8, 14, 98 ಇವುಗಳ ಲ. ಸಾ. ಅ ಬೇಕು ಅನ್ನೋಣ.

2 ಎನ್ನುವುದು 8 ರ ಅಪವರ್ತನವಾಗಿರುವುದರಿಂದ 2 ನ್ನು ಹೊಡೆದುಹಾಕಿ, ಉಳಿದುವನ್ನು 2 ರಿಂದ ಭಾಗಿಸುತ್ತೇವೆ. ಭಾಜಿತವಾಗದಿದ್ದರೆ, ಸಂಖ್ಯೆಯನ್ನು ಹಾಗೆಯೇ ಮುಂದಕ್ಕೆ ಬರೆಯುತ್ತೇವೆ.

| | |
|---|---|
| 2 | 2, 3, 8, 14, 98 |
| | 3, 4, 7, 49 |

ಇಲ್ಲಿ 7 ಎನ್ನುವುದು 49ರ ಅಪವರ್ತನ. ಆದ್ದರಿಂದ 7ನ್ನು ಹೊಡೆದುಹಾಕುತ್ತೇವೆ. ಹೀಗೆಯೇ ಮುಂದುವರಿಸುತ್ತೇವೆ. ಈ ಲೆಕ್ಕದಲ್ಲಿ ಲ.ಸಾ.ಅ. 2.3.4.7.49 = 8232.

ಅಪವರ್ತನಗಳು ಸುಲಭವಾಗಿ ದೊರಕದಿದ್ದರೆ, ಎರಡು ಸಂಖ್ಯೆಗಳ ಮ.ಸಾ.ಅ ವನ್ನು ಅಲ್ಗೊರಿದಮ್(ಭಾಗಾಹಾರ) ತತ್ತ್ವವನ್ನು ಪುನಃ ಪುನಃ ಪ್ರಯೋಗಿಸಿ ಪಡೆಯಬೇಕಾಗುತ್ತದೆ. ಹಿಂದೆ ತಿಳಿಸಿರುವ $a = bq_1+r_1$ ಎಂಬ ಸಮೀಕರಣದಲ್ಲಿ, a, b ಗಳ ಯಾವುದೇ ಸಾಮಾನ್ಯ ಅಪವರ್ತನವು $r_1$ ಅನ್ನೂ ಭಾಗಿಸುತ್ತದೆ. ಆದ್ದರಿಂದ a, b ಗಳ ಮ.ಸಾ.ಅ.ವು b, $r_1$ ಗಳಿಗೂ ಮ.ಸಾ.ಅ. ಆಗುತ್ತದೆ. ಈಗ ಭಾಗಾಹಾರ ವಿಧಿಯಿಂದ $b = q_2r_1+r_2$ ಎಂಬುದನ್ನು ಪಡೆದರೆ, b, $r_1$ ಗಳ ಮ.ಸಾ.ಅ $r_1,r_2$ ಗಳಿಗೂ ಮ.ಸಾ.ಅ ಆಗುತ್ತದೆ. ಹೀಗೆಯೇ ಮುಂದುವರಿಸಿದರೆ $r_1, r_2$ ಕ್ರಮೇಣ ಸಣ್ಣವಾಗುವುದರಿಂದ, ಒಂದು ಹಂತದಲ್ಲಿ $r_n$ ಸೊನ್ನೆಯಾಗುವುದು. ಆಗ a, b ಗಳ ಮ.ಸಾ.ಅ $r_{n-1}$ ಈಗ.. $r_{n-1}$=1 ಆದರೆ, ಮ.ಸಾ.ಅ 1 ಎಂದಾಗುತ್ತದೆ. ಎಂದರೆ ಸಂಖ್ಯೆಗಳಿಗೆ 1ರ ಹೊರತು ಸಾಮಾನ್ಯ ಅಪವರ್ತನವಿಲ್ಲ. ಇಂಥ ಉದಾಹರಣೆಗಳು ಅಂಕಗಣಿತ ಪಠ್ಯಪುಸ್ತಕಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಎರಡೇ ಸಂಖ್ಯೆಗಳಿರುವಾಗ, ಅವುಗಳ ಲ.ಸಾ.ಅ ಮತ್ತು ಮ.ಸಾ.ಅ. ಗಳ ಗುಣಲಬ್ಧವು ಸಂಖ್ಯೆಗಳ ಗುಣಲಬ್ಧಕ್ಕೆ ಸಮ. ಲ.ಸಾ.ಅ. ವನ್ನು ಸುಲಭವಾಗಿ ಪಡೆಯಲು ಆಗದಿದ್ದರೆ, ಈ ಪ್ರಮೇಯವನ್ನು ಉಪಯೋಗಿಸಬೇಕಾಗುತ್ತದೆ.

ಉದಾ: 5135 ಮತ್ತು 7643 ಗಳ ಲ.ಸಾ.ಅ. ವನ್ನು ಪಡೆಯುವ ರೀತಿ: ಇವುಗಳ ಮ.ಸಾ.ಅ 79. ಆದ್ದರಿಂದ ಲ.ಸಾ.ಅ

$$\frac{5135 \times 7643}{79} = 7643 \times 65 = 496795.$$

6. ವರ್ಗಮೂಲ : ಯಾವುದೇ ಸಂಖ್ಯೆಯನ್ನು ಅದರಿಂದಲೇ ಗುಣಿಸಿದರೆ ಬರುವ ಗುಣಲಬ್ಧಕ್ಕೆ ಆ ಸಂಖ್ಯೆಯ ವರ್ಗವೆಂದು ಹೆಸರು. ಈ ಸಂಖ್ಯೆಯು ಗುಣಲಬ್ಧದ ವರ್ಗಮೂಲ. 2 x 2 = 4 ಆದ್ದರಿಂದ, 4 ರ ವರ್ಗಮೂಲ 2. ಹೀಗೆಯೇ 81ರ ವರ್ಗಮೂಲ 9, 225 ರ ವರ್ಗಮೂಲ 15. ಯಾವುದೇ ಸಂಖ್ಯೆಯು ಒಂದು ಪೂರ್ಣಾಂಕದ ವರ್ಗವಾಗದಿರಬಹುದು. ಆಗ ವರ್ಗಮೂಲವು ಪೂರ್ಣಾಂಕವಲ್ಲ. ಹೀಗೆ 8, 15, 19 ಮುಂತಾದ ಸಂಖ್ಯೆಗಳಿಗೆ ಪೂರ್ಣಾಂಕವರ್ಗಮೂಲಗಳಿಲ್ಲ.

ವರ್ಗಮೂಲವನ್ನು ಪಡೆಯುವ ವಿಧಾನಕ್ಕೆ ಒಂದು ಉದಾಹರಣೆ :

ದತ್ತ ಸಂಖ್ಯೆ 6 9 1 6 9 ಇದರ ಮೇಲೆ ಬಲಗಡೆಯಿಂದ ಒಂದು ಅಂಕಿಯನ್ನು ಬಿಟ್ಟು ಇನ್ನೊಂದರ ಮೇಲೆ ಚುಕ್ಕಿಯನ್ನಿಡುವೆವು. ಈಗ 6ರ ವರ್ಗಮೂಲ 2ಕ್ಕೂ 3ಕ್ಕೂ ನಡುವೆ ಇದೆ. ಬಲಗಡೆಯಲ್ಲಿರುವ ಆವರಣದೊಳಗೆ 2 ನ್ನೂ ಎಡಗಡೆಯಲ್ಲಿರುವ ಆವರಣದಲ್ಲಿ 2 ನ್ನೂ ಬರೆಯುತ್ತೇವೆ. ಭಾಗಾಹಾರಕ್ರಮದಂತೆ ಭಾಗಿಸಿ, ಬರುವ ಶೇಷ 2ಕ್ಕೆ ಮುಂದಿನ ಎರಡು ಅಂಕಿಗಳನ್ನು ತೆಗೆದುಕೊಂಡರೆ, 291 ಬರುತ್ತದೆ. ಬಲಗಡೆಯ ಆವರಣದಲ್ಲಿನ 2 ನ್ನು ದ್ವಿಗುಣಿಸಿ, ಎಡಗಡೆ 4 ಬರೆಯುತ್ತೇವೆ. ಈಗ ಎಡಗಡೆಯ ಆವರಣದಲ್ಲಿ 4 ರ ಮುಂದೆ ಯಾವ ಸಂಖ್ಯೆಯನ್ನು ಇಟ್ಟು ಅದೇ ಸಂಖ್ಯೆಯನ್ನು ಬಲಗಡೆಯ ಆವರಣದಲ್ಲಿ 2 ರ ಮುಂದೆಯೂ ಇಟ್ಟು ಗುಣಿಸಿದರೆ, 291 ರಿಂದ ಕಳೆಯಲು ಸಾಧ್ಯ. ಅಂಥ ಗರಿಷ್ಠ ಸಂಖ್ಯೆ ಯಾವುದು ನೋಡಬೇಕು. 46 x 6 = 276 ಆದ್ದರಿಂದ, ವರ್ಗಮೂಲದ ಎರಡನೆಯ ಅಂಕ 6. ಹೀಗೆಯೇ ಮುಂದುವರಿಸಬೇಕು.

(i)

| | |
|---|---|
| 2 | 6 1 6 9 (263 |
| | 4 |
| 2 x 2=4 | 291 |
| 46 | 276 |
| 6 | 1569 |
| 26x2=52 | 1569 |
| 523 | . . . . |

(ii)

| | |
|---|---|
| 3 | 140625 (375 |
| 3 x 2 = 6 | 9 |
| 67 | 506 |
| 7 | 469 |
| 37 x 2=74 | 3725 |
| 745 | 3725 |
| | . . . . |

ಆದ್ದರಿಂದ
69169 ರ ವರ್ಗಮೂಲ: 263

ಆದ್ದರಿಂದ
140625 ರ ವರ್ಗಮೂಲ : 375

ಈ ವಿಧಾನದ ಹಿನ್ನೆಲೆಯು

$(a + b + c + . . . )^2 = a^2 + 2ab + b^2 + 2ac + c^2 + 2abc + . . . .$

ಎಂಬ ಬೀಜಗಣಿತದ ಸೂತ್ರವಾಗಿರುತ್ತದೆ.

**7. ಭಿನ್ನರಾಶಿಗಳು :** ಪೂರ್ಣಾಂಕಗಳನ್ನು ಕುರಿತ ಗಣಿತವು ಸಂಕ್ಷಿಪ್ತವಾಗಿ ನಿರೂಪಿಸಲ್ಪಟ್ಟಿದೆ. ಭಿನ್ನರಾಶಿಗಳ ಭಾವನೆಯು ಸಹಜವಾಗಿಯೇ ಉದ್ಭವಿಸುತ್ತದೆ. ಒಂದು ವಸ್ತುವನ್ನು ಮೂರು ಭಾಗ ಮಾಡಿದರೆ, ಪ್ರತಿಭಾಗವೂ ವಸ್ತುವಿನ ಮೂರನೆಯ ಒಂದು ಭಾಗವೆಂದೂ ಎರಡು ವಸ್ತುಗಳನ್ನು ಏಳು ತುಂಡು ಮಾಡಿದರೆ ಪ್ರತಿಭಾಗವೂ ಒಂದು ವಸ್ತುವಿನ ಎರಡನೆಯ ಏಳು ಭಾಗವೆಂದೂ ಹೆಸರಿಡುತ್ತೇವೆ. ಈ ಭಾಗಗಳನ್ನು $^1/_3$, $^2/_7$ಅಥವಾ $^2/_7$ ಎಂದು ಬರೆಯುತ್ತೇವೆ. ಮೂರು ಹಣ್ಣುಗಳನ್ನು ಇಬ್ಬರಿಗೆ ಹಂಚಲು, ಪ್ರತಿ ಒಬ್ಬನಿಗೂ $^2/_3$ ಹಣ್ಣುಗಳು ದೊರಕುತ್ತವೆ. ವಿಭಾಗಗಳನ್ನು ನಿರೂಪಿಸುವ ಇಂಥ ಸಂಖ್ಯೆಗಳಿಗೆ ಭಿನ್ನರಾಶಿಗಳೆಂದು ಹೆಸರು. ಮೇಲುಗಡೆ ಇರುವ ಸಂಖ್ಯೆಗೆ ಅಂಶ ಎಂದೂ ಕೆಳಗಡೆಯ ಸಂಖ್ಯೆಗೆ ಛೇದ ಎಂದೂ ಹೆಸರು. ಅಂಶವನ್ನು ಛೇದದಿಂದ ವಿಭಾಗಿಸುವುದೇ ಭಿನ್ನರಾಶಿಯ ಸ್ವರೂಪ. ಅಂಶವು ಛೇದಕ್ಕಿಂತ ಕಡಿಮೆ ಇದ್ದರೆ, ಅದು ಶುದ್ಧ ಭಿನ್ನರಾಶಿ, ಇಲ್ಲದಿದ್ದರೆ ಅದು ಮಿಶ್ರ ಭಿನ್ನರಾಶಿ. ಕಡಿಮೆ ಏಕೆಂದರೆ ಆಗ ಭಾಗಾಹಾರ ಕ್ರಮದಿಂದ ಒಂದು ಪೂರ್ಣಾಂಕವನ್ನೂ ಒಂದು ಶುದ್ಧ ಭಿನ್ನರಾಶಿಯನ್ನೂ ಪಡೆಯಬಹುದು. ಉದಾ: $\frac{13}{5}=\frac{10+3}{5}=2+\frac{3}{5}$. ಇದನ್ನು ಎಂದು ಬರೆಯುತ್ತೇವೆ. $= 2\frac{3}{5}$

ಭಿನ್ನರಾಶಿಗಳ ಮೇಲಣ ಲೆಕ್ಕಗಳನ್ನು ಪ್ರತಿಯೊಬ್ಬನೂ ಪ್ರಾಥಮಿಕ ಶಾಲಾಮಟ್ಟದಲ್ಲೇ ಅಭ್ಯಾಸ ಮಾಡಿರುತ್ತಾನೆ. ಆ ಲೆಕ್ಕಗಳನ್ನು ಮಾಡತಕ್ಕ ವಿಧಾನಗಳು ಈ ಕೆಲವು ತತ್ತ್ವಗಳ ಆಧಾರದ ಮೇಲೆ ರಚಿತವಾಗಿವೆ.

ಯಾವುದೇ ಎರಡು ಸಂಖ್ಯೆಗಳನ್ನು ಕೂಡುವಾಗ ಅಥವಾ ಗುಣಿಸುವಾಗ ಅವನ್ನು ಯಾವ ಕ್ರಮದಲ್ಲಿ ಬೇಕಾದರೂ ತೆಗೆದುಕೊಳ್ಳಬಹುದು ಎಂಬುದು ನಮ್ಮ ಅಂತರ್ಬೋಧೆಯಿಂದ ತಿಳಿಯತಕ್ಕ ತತ್ತ್ವ. ಉದಾ : $2 + 3 = 3 + 2$, $3\times 4$, $4\times 3$. ಇವನ್ನು ಭಿನ್ನರಾಶಿಗಳಿಗೂ ಅನ್ವಯಿಸಬಹುದು.

ಉದಾ: $\frac{3}{4}\times\frac{5}{6}=\frac{5}{6}\times\frac{3}{4}$.

ಈ ತತ್ತ್ವಕ್ಕೆ ಪರಿವರ್ತನ ತತ್ತ್ವ (ಕಾಮ್ಯುಟೇಟಿವ್ ಪ್ರಾಪರ್ಟಿ) ಎಂದು ಹೆಸರು. ಪ್ರೌಢಬೀಜಗಣಿತದಲ್ಲಿ ಕೆಲವು ಸ್ವತಸ್ಸಿದ್ಧ ಪ್ರಮಾಣಗಳ ಸಹಾಯದಿಂದ, ಈ ತತ್ತ್ವವನ್ನು ನಿಖರವಾಗಿ ಸಾಧಿಸುತ್ತಾರೆ. ಅಂಕಗಣಿತದಲ್ಲಿ ಇದರ ಸತ್ಯತೆಯನ್ನು ಸ್ವಭಾವಸಿದ್ಧವೆಂದು ಅಂಗೀಕರಿಸುತ್ತೇವೆ. ಇದರಂತೆಯೇ ಗುಣಾಕಾರ ಭಾಗಾಹಾರ ಪರಿಕರ್ಮಗಳನ್ನೂ ಯಾವ ಕ್ರಮದಲ್ಲಿ ಬೇಕಾದರೂ ಮಾಡಬಹುದೆಂದು ಅಂಗೀಕರಿಸುತ್ತೇವೆ. 8ನ್ನು 5 ರಿಂದ ಗುಣಿಸಿ 2 ರಿಂದ ಭಾಗಿಸುವುದೂ 8 ನ್ನು 2 ರಿಂದ ಭಾಗಿಸಿ ಅನಂತರ 5 ರಿಂದ ಗುಣಿಸುವುದೂ ಒಂದೇ ಫಲಿತಾಂಶವನ್ನು ಕೊಡುತ್ತದೆ. ಇದರಂತೆ, ಭಿನ್ನರಾಶಿಯು ಒಂದು ಭಾಗಾಹಾರ ವಿಧಾನವಾದುದರಿಂದ,

$\frac{a}{b}\times\frac{c}{d}=\frac{(a\times c)}{(b\times d)}$ ಆಗುತ್ತದೆ. $\frac{3}{4}\times\frac{5}{6}=\frac{3\times 5}{4\times 6}$

ಆದ್ದರಿಂದ, $\frac{a}{b}\times\frac{k}{k}=\frac{ak}{bk}$ ವಿಲೋಮವಾಗಿ $\frac{ak}{bk}=\frac{a}{b}\times\frac{k}{k}=\frac{a}{b}\times 1=\frac{a}{b}$

ಭಿನ್ನರಾಶಿಯ ಅಂಶ ಛೇದಗಳಿಗೆ ಸಾಮಾನ್ಯವಾಗಿರುವ ಯಾವುದೇ ಅಪವರ್ತನವನ್ನು ತೆಗೆದುಹಾಕಬಹುದು. ಉದಾ: $\frac{27}{36}=\frac{3\times 9}{4\times 9}=\frac{3}{4}$.

ಇದು ಭಿನ್ನರಾಶಿಯನ್ನು ಸುಲಭರೂಪಕ್ಕೆ ತರುವ ವಿಧಾನ.

ಭಿನ್ನರಾಶಿಗಳ ಸಂಕಲನ ವ್ಯವಕಲನಗಳು ಈ ತತ್ತ್ವವನ್ನವಲಂಬಿಸಿವೆ.

ಉದಾ: $\frac{3}{4}+\frac{5}{2}-\frac{7}{2}$. ಛೇದಗಳ ಲ.ಸಾ.ಅ. 20

ಆದ್ದರಿಂದ $\frac{3}{4}=\frac{3\times 5}{4\times 5}=\frac{15}{20},\frac{5}{2}=\frac{50}{20},\frac{7}{5}=\frac{28}{20}$

ಎಂದು ಬರೆದು, $\frac{3}{4}+\frac{5}{2}-\frac{7}{5}=\frac{15+20-28}{20}=\frac{37}{20}=1\frac{17}{20}$ ಎಂದಾಗುತ್ತದೆ.

ಗುಣಾಕಾರ ನಿಯಮವನ್ನು ಈ ಮೊದಲೇ ತಿಳಿಸಲಾಗಿದೆ. ಸಾಮಾನ್ಯ ಅಪವರ್ತನಗಳನ್ನು ಯಾವ ಹಂತದಲ್ಲಿ ಬೇಕಾದರೂ ಹೊಡೆದುಹಾಕಬಹುದು.

ಉದಾ: $\frac{3}{5}\times\frac{10}{27}\times 3\frac{3}{5}=\frac{3}{5}\times\frac{10}{27}\times\frac{18}{5}=\frac{3\times 10\times 18}{5\times 27\times 5}$.

ಇಲ್ಲಿ $\frac{10}{5}$ ರಲ್ಲಿ ಅಂಶಕ್ಕೂ ಛೇದಕ್ಕೂ 5 ಸಾಮಾನ್ಯ ಅಪವರ್ತನ, $\frac{18}{27}$ ರಲ್ಲಿ 9 ಸಾಮಾನ್ಯ ಅಪವರ್ತನ.

ಇವನ್ನು ಹೊಡೆದುಹಾಕುವ ಕ್ರಮವನ್ನು ಅಂಕಗಣಿತ ಪುಸ್ತಕಗಳಲ್ಲಿ ಆಯಾ ಸಂಖ್ಯೆಗಳಿಂದ (ಅಪವರ್ತನಗಳಿಂದ) ಭಾಗಿಸಿ ತೋರಿಸುತ್ತಾರೆ.

ಹೀಗೆ, $\frac{3x\overset{2}{10}\ x\overset{2}{18}}{\underset{1}{5}\ x\underset{3}{27}\ x5}=\frac{3x2x2}{1x3x5}=\frac{4}{5}$

ಭಾಗಾಕಾರವು ಗುಣಾಕಾರದ ಪ್ರತಿಲೋಮ ಕ್ರಿಯೆ. ಎರಡು ಸಂಖ್ಯೆಗಳ ಗುಣಲಬ್ಧವು 1 ಆದರೆ, ಅವು ಪರಸ್ಪರ ಪ್ರತಿಲೋಮವಾಗಿರುತ್ತವೆ. ಹೀಗೆಯೇ $(2,\frac{1}{2}),(7,\frac{1}{7})$ ಪರಸ್ಪರ ಪ್ರತಿಲೋಮಗಳು. ಇದರಂತೆ $\left(\frac{c}{d},\frac{d}{c}\right)$ಪ್ರತಿಲೋಮಗಳಾಗಿರುತ್ತವೆ.

ಏಕೆಂದರೆ $\frac{c}{d}\times\frac{d}{c}=\frac{c\times d}{d\times c}=1$ ಆದ್ದರಿಂದ $\frac{a}{b}\div\frac{c}{d}=\frac{a}{b}\times\frac{d}{c}=\frac{ad}{bc}$. ಭಿನ್ನರಾಶಿಗಳ ಭಾಗಾಕಾರದ ತತ್ತ್ವವೇ ಇದು. $^2/_3 \div {}^4/_7 = {}^2/_3 \times {}^7/_2 = {}^7/_6$

**ವರ್ಗಮೂಲ :** ಭಿನ್ನರಾಶಿಯ ವರ್ಗಮೂಲ ಪಡೆಯಲು, ಅಂಶ ಮತ್ತು ಛೇದಗಳ ವರ್ಗಮೂಲಗಳನ್ನು ಪ್ರತ್ಯೇಕವಾಗಿ ಪಡೆದು ಅವುಗಳನ್ನು ವರ್ಗಮೂಲದ ಅಂಶ ಮತ್ತು ಛೇದಗಳನ್ನಾಗಿ ತೆಗೆದುಕೊಳ್ಳಬೇಕು. ಉದಾ: $— = \frac{1}{2}\cdot\sqrt{2\frac{46}{49}}=\sqrt{\frac{144}{49}}=\frac{12}{7}$.ಇದರ ಸಮರ್ಥನೆ ಸುಲಭ. = ಆದ್ದರಿಂದ $\frac{144}{9}$ ರ ವರ್ಗಮೂಲ $\frac{12}{7}$ .

**8. ದಶಮಾಂಶಗಳು (ಡೆಸಿಮಲ್ಸ್) :** ದಾಶಮಿಕ ಸಂಖ್ಯಾಕ್ರಮವನ್ನು ಪೂರ್ಣಾಂಕಗಳಿಗೆ ಬಲದಿಂದ ಎಡಕ್ಕೆ ಉಪಯೋಗಿಸುವಂತೆ, ಇದೇ ಕ್ರಮವನ್ನು ಬಿಡಿ ಸಂಖ್ಯೆಯ ಬಲಕ್ಕೆ ಉಪಯೋಗಿಸಿ, ಅಂಕಿಗಳನ್ನು ಹತ್ತರ, ನೂರರ, ಸಾವಿರದ, ಇತ್ಯಾದಿ ಭಾಗಗಳನ್ನಾಗಿ ವಿಭಾಗ ಮಾಡುವ ವಿಧಾನಕ್ಕೆ ದಶಮಾಂಶಪದ್ಧತಿ ಎಂದು ಹೆಸರು.

ಉದಾ : $2905\cdot 4871=(2\times 1000)+(9\times 100)+(0\times 10)+5+\frac{4}{10}+\frac{8}{100}+\frac{7}{1000}+\frac{1}{10000}$.

ಇದರ ದಶಮಾಂಶಭಾಗವಾದ $0\cdot 4871$ ಎಂಬುದು ಎಂಬ ಭಿನ್ನರಾಶಿ, ಅಥವಾ $\frac{4871}{10000}$ ವಿಲೋಮವಾಗಿ, ಭಿನ್ನರಾಶಿಗಳನ್ನು ದಶಮಾಂಶರೂಪದಲ್ಲಿ ಬರೆಯಬಹುದು. ಉದಾ : $\frac{3}{8}=\frac{3\times 1000}{8\times 1000}=\left(3\times\frac{1000}{8}\right)\times\frac{1}{1000}$.

$\frac{375}{1000}=\frac{3}{10}+\frac{7}{100}+\frac{5}{1000}=0\cdot 375$ ಅಂಕಗಣಿತ ಪುಸ್ತಕಗಳಲ್ಲಿ ಇದನ್ನು ತಿಳಿಸುವ ಭಾಗಾಕಾರ ಕ್ರಮದ ಹಿನ್ನೆಲೆಯು ಸ್ಪಷ್ಟವಾಗುತ್ತದೆ.

ದಶಮಾಂಶಕ್ರಮದಲ್ಲಿ ಹತ್ತರ ಕೋಷ್ಟಕ ಮಾತ್ರ ಬೇಕಾಗುವುದರಿಂದ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಪರಿಕರ್ಮಗಳು ಸುಲಭರೂಪವನ್ನು ತಾಳುತ್ತವೆ. ಈ ಸೌಲಭ್ಯವು ವ್ಯವಹಾರಗಳಿಗಾಗಿ ಉಪಯೋಗಿಸಲ್ಪಟ್ಟು, ಈಗ ದಶಮಾಂಶ ಕ್ರಮವನ್ನು ಅಳತೆಗಳಿಗೂ ಹಣಕ್ಕೂ ಉಪಯೋಗಿಸುತ್ತಿದ್ದಾರೆ. 8 ರೂ 42 ಪೈಸೆ ಎಂಬುದನ್ನು 8.42 ರೂ ಎಂಬುದಾಗಿಯೂ 3 ಕಿ.ಗ್ರಾ. 60 ಗ್ರಾಂ ಎಂಬುದನ್ನು 3.6 ಕಿ.ಗ್ರಾ. ಇತ್ಯಾದಿಯಾಗಿಯೂ ಸೂಚಿಸುತ್ತಾರೆ.

ಭಿನ್ನರಾಶಿಗಳನ್ನು ದಶಮಾಂಶಗಳನ್ನಾಗಿ ಪರಿವರ್ತನೆ ಮಾಡುವ ವಿಧಾನವನ್ನು ತಿಳಿಸುತ್ತ ಒಂದು ಉದಾಹರಣೆಯನ್ನು ಮಾತ್ರ ಮೇಲೆ ಕೊಡಲಾಗಿದೆ. ಅನೇಕ ಸಂದರ್ಭಗಳಲ್ಲಿ, ದಶಮಾಂಶಸಂಖ್ಯೆಗಳು ಅನಂತವಾಗಿ ಬರಬಹುದು. ಉದಾ :1/3 = 0.3333. . . . ಹೀಗೆ ಅನಂತದವರೆಗೆ. ಇದನ್ನು ಸಂಕ್ಷೇಪವಾಗಿ 0.3 ಎಂದು ಗುರ್ತಿಸುತ್ತೇವೆ. ಹೀಗೆಯೇ 2.567 = 2.567567567567. . . .567 ಅಂಕಿಗಳು ಅದೇ ಕ್ರಮದಲ್ಲಿ ಪುನರಾವರ್ತಿತವಾಗುತ್ತವೆ. ಇಂಥ ಸಂಖ್ಯೆಗಳನ್ನು ಆವರ್ತಕ ದಶಮಾಂಶಗಳು(ರೆಕರಿಂಗ್ ಡೆಸಿಮಲ್ಸ್) ಎನ್ನುತ್ತೇವೆ. ಆವರ್ತಕವಲ್ಲದಿದ್ದರೆ, ಅದು ಪರ್ಯಾಪ್ತ (ಟರ್ಮಿನೇಟಿಂಗ್) ಆಗಿರುತ್ತದೆ.

ಯಾವ ಭಿನ್ನರಾಶಿಯನ್ನೇ ಆಗಲಿ ಪರ್ಯಾಪ್ತ ಇಲ್ಲವೇ ಆವರ್ತಕ ದಶಮಾಂಶವನ್ನಾಗಿ ಬರೆಯಲು ಸಾಧ್ಯವೆಂಬುದು ಬೀಜಗಣಿತದಿಂದ ತಿಳಿಯುತ್ತದೆ.

ಇನ್ನು ಆವರ್ತಕ ದಶಮಾಂಶವನ್ನು ಭಿನ್ನರಾಶಿಯ ರೂಪಕ್ಕೆ ತರುವ ಕ್ರಮ ಕೆಳಗಿನ ಉದಾಹರಣೆಗಳಿಂದ ತಿಳಿಯುತ್ತದೆ.

i. $0\cdot\dot{3}=\frac{3}{10-1}=\frac{3}{9}=\frac{1}{3}$ ii. $2\cdot 4\ddot{5}$ ಎಂದರೆ $2\cdot 454545.....$

iii. $2\cdot 12\dot{5}\dot{7}=2\cdot 12575757.........$ಇಲ್ಲಿ 0.12 ಆವರ್ತಕವಲ್ಲ.

ಇದು $= 2+\frac{1257-12}{10000-100} = 2\frac{1245}{9900} = 2\frac{83}{660}$

ಇಲ್ಲಿರುವ ತತ್ತ್ವವನ್ನು ಬೀಜಗಣಿತದ ಸಹಾಯದಿಂದ ಅರಿಯಬೇಕಾಗಿರುವುದರಿಂದ ಇದನ್ನು ಇಲ್ಲಿ ವಿಸ್ತರಿಸಿಲ್ಲ.

9. ಶಾಲಾಮಟ್ಟದ ಅಂಕಗಣಿತ ಪುಸ್ತಕಗಳಲ್ಲಿ ಮೇಲೆ ತಿಳಿಸಿರುವ ಅಂಕಗಣಿತದ ವಿಧಾನಗಳನ್ನು ನಾನಾ ವ್ಯಾವಹಾರಿಕ ಲೆಕ್ಕಗಳಿಗೆ ಪ್ರಯೋಗಿಸುತ್ತಾರೆ. ತ್ರೈರಾಶಿ, ಬಡ್ಡಿ ಲೆಕ್ಕಗಳು, ಚದರಳತೆ, ಕಾಲ ಮತ್ತು ಕೆಲಸ, ಮುಂತಾದ ಹಲವಾರು ವ್ಯಾವಹಾರಿಕ ಪ್ರಶ್ನೆಗಳಲ್ಲೂ ಇದರ ಬಳಕೆ ಇದೆ. ಇವನ್ನೆಲ್ಲ ವ್ಯಾವಹಾರಿಕ ಗಣಿತ (ಅಪ್ಲೈಡ್ ಅರಿತ್ಮೆಟಿಕ್) ಎಂದು ಕರೆಯಬಹುದು. ಇವುಗಳಲ್ಲಿ ಕಂಡುಬರುವ ಒಂದೆರಡು ತತ್ತ್ವಗಳು ಮಾತ್ರ ಇಲ್ಲಿ ಸಂಕ್ಷೇಪವಾಗಿ ನಿರೂಪಿತವಾಗಿವೆ.

ನಿಷ್ಪತ್ತಿ ಮತ್ತು ಪರಿಮಾಣ (ರೇಷ್ಯೊ ಅಂಡ್ ಪ್ರೊಪೋರ್ಷನ್) : ಎರಡು ಸಂಖ್ಯೆಗಳಿಂದ ಉಂಟಾಗುವ ಭಿನ್ನರಾಶಿಯನ್ನು ಅವುಗಳ ನಿಷ್ಪತ್ತಿ ಎಂದೂ ಕರೆಯಬಹುದು. 2/3 ಭಿನ್ನರಾಶಿಯನ್ನು ಈಗ 2 : 3 ಎಂದು ಬರೆಯುತ್ತೇವೆ. ನಿಷ್ಪತ್ತಿ ಎಂಬ ಪದವನ್ನು ಸಂಖ್ಯೆಗಳಿಗೆ ಮಾತ್ರವೇ ಅಲ್ಲದೆ ಒಂದೇ ಜಾತಿಯ ವಸ್ತುಗಳಿಗೂ ಉಪಯೋಗಿಸಬಹುದು. 3 ಕುರಿಗಳು : 5 ಕುರಿಗಳು =3/5; 2.12 ಕಿ.ಗ್ರಾ : 3.35 ಕಿ.ಗ್ರಾ. = 212 : 335

ಎರಡು ನಿಷ್ಪತ್ತಿಗಳು ಒಂದೇ ಆದರೆ, ಅವುಗಳನ್ನೊಳಗೊಂಡ ಸಂಖ್ಯೆಗಳು ಒಂದೇ ಪ್ರಮಾಣದಲ್ಲಿವೆ (ಇನ್ ಪ್ರೊಪೋರ್ಷನ್) ಎನ್ನುತ್ತೇವೆ. ಉದಾ : 2/3 = 8/12. ಆದ್ದರಿಂದ 2 : 3 = 8 : 12. ಇದನ್ನು 2 : 3 :: 8 : 12 ಎಂದು ಬರೆಯುವುದುಂಟು. ಈ ನಾಲ್ಕು ಸಂಖ್ಯೆಗಳಲ್ಲಿ ಯಾವುದಾದರೂ ಮೂರು ಸಂಖ್ಯೆಗಳು ತಿಳಿದಿದ್ದರೆ, ನಾಲ್ಕನೆಯದನ್ನು ಸುಲಭವಾಗಿ ಪಡೆಯಬಹುದು. ತ್ರೈರಾಶಿಯ ಹಿನ್ನೆಲೆಯಲ್ಲಿರುವ ತತ್ತ್ವವೇ ಇದು. ಉದಾ : 2 ವಸ್ತುಗಳಿಗೆ 3 ರೂ. ಬೆಲೆ ಆದರೆ 8 ವಸ್ತುಗಳಿಗೆ ಬೆಲೆ ಏನು ?

2 : 3 = 8 : ?

ಉತ್ತರ 12.

ಕೆಲವು ಸಂದರ್ಭಗಳಲ್ಲಿ ಪ್ರತಿಲೋಮ ಪ್ರಮಾಣವನ್ನು ಉಪಯೋಗಿಸಬೇಕಾಗುತ್ತದೆ. ಉದಾ : ಒಂದು ಡಬ್ಬದಲ್ಲಿರುವ ಆಹಾರವು ಇಬ್ಬರಿಗೆ ಮೂರು ದಿನಗಳಿಗೆ ಸಾಕಾದರೆ, 6 ಮಂದಿಗೆ ಎಷ್ಟು ದಿನಕ್ಕೆ ಸಾಕಾಗುತ್ತದೆ ?

ಇಲ್ಲಿ 2 : 6 = ? : 3

ಉತ್ತರ 1.

**ಚದರಳತೆ, ಘನ ಅಳತೆ :** ವಾಸ್ತವವಾಗಿ, ಇವು ರೇಖಾಗಣಿತದ ವಿಷಯಗಳು. ಒಂದು ಪದಾರ್ಥದ ಮೇಲ್ಮೈಯ ಅಳತೆಯನ್ನು ಅದರ ಸಲೆ ಅಥವಾ ಕ್ಷೇತ್ರಫಲ ಎನ್ನುತ್ತೇವೆ. ಆಯಾಕಾರದ ವಸ್ತುವಿನ ಕ್ಷೇತ್ರಫಲ = ಉದ್ದ × ಅಗಲ. ಹೀಗೆಯೇ ಒಂದು ವಸ್ತುವು ಒಳಗೊಳ್ಳುವ ಪ್ರದೇಶವನ್ನು ಅದರ ಘನಫಲದಿಂದ ತಿಳಿಯುತ್ತೇವೆ. ಪೆಟ್ಟಿಗೆಯ ಆಕಾರದಲ್ಲಿರುವ ವಸ್ತುವಿನ ಘನಫಲ = ಉದ್ದ × ಅಗಲ × ಎತ್ತರ.

ಉದ್ದ ಅಗಲಗಳನ್ನು ನಿರೂಪಿಸಲು ಯಾವ ಅಳತೆಯ ಮಾನ (ಯೂನಿಟ್) ವನ್ನು ಉಪಯೋಗಿಸುತ್ತೇವೆಯೊ ಅದಕ್ಕನುರೂಪವಾದ ಮಾನವನ್ನು ಚದರಳತೆ, ಘನ ಅಳತೆಗಳಿಗೆ ಉಪಯೋಗಿಸಬೇಕು. ಉದಾ : ಅಳತೆಯ ಮಾನವು ಅಂಗುಲವಾದರೆ, ಚದರಳತೆಯಲ್ಲಿ ಚದರ ಅಂಗುಲ, ಘನ ಅಳತೆಯಲ್ಲಿ ಘನಅಂಗುಲ ಬರುತ್ತವೆ. ಒಂದು ಮೈಲಿ ಉದ್ದ, ಒಂದು ಮೈಲಿ ಅಗಲ ಇರುವ ಕ್ಷೇತ್ರಫಲ ಒಂದು ಚದರ ಮೈಲಿ ಎಂದಾಗುತ್ತದೆ. 1 ಮೀಟರ್ 100 ಸೆಂಟಿಮೀಟರ್‌ಗೆ ಸಮನಾದ್ದರಿಂದ, 1 ಚದರ ಮೀಟರ್ = 100 × 100 ಚ. ಸೆಂ. ಮೀ. 1 ಅಡಿ = 12 ಅಂಗುಲ, 1 ಚದರ ಅಡಿ = 12 × 12 ಚದರ ಅಂಗುಲ. 1 ಘನ ಅಡಿ = 12 × 12 × 12 ಘನ ಅಂಗುಲ.

(ಎ.ವಿ.ಎನ್)

**ಅಂಕನ ಮಾನಗಳು :** ಈಗಿನ ದಶಮಾಂಶ ಪದ್ಧತಿಯ ರಚನೆಗೆ ಮೊದಲು, ಅನೇಕ ಬೇರೆ ಬೇರೆ ಸಂಖ್ಯಾಪದ್ಧತಿಗಳು (ಅಂಕನ) ಪ್ರಪಂಚದ ಹಲವಾರು ದೇಶಗಳಲ್ಲಿ ಉಪಯೋಗದಲ್ಲಿದ್ದವು. ಎರಡನ್ನು ಒಂದು ಜೋಡಿ ಎಂದು ಪರಿಗಣಿಸಿ ಐದನ್ನು ಎರಡು ಜೋಡಿ ಮತ್ತು ಒಂದು ಎಂದು ಕರೆಯುವುದು ಒಂದು ಕ್ರಮ. ಹತ್ತು ಎಂಬುದನ್ನು ಒಂದು ಮಾನವಾಗಿಟ್ಟುಕೊಳ್ಳುವುದು ಮತ್ತೊಂದು ಕ್ರಮ. ಇದಕ್ಕೆ ಕಾರಣವೇನೆಂದರೆ, ಮನುಷ್ಯರು ಬಹಳ ಹಿಂದಿನಿಂದಲೂ ಎಣಿಕೆ ಮಾಡುವ ಕಾರ್ಯಕ್ಕೆ ತಮ್ಮ ಕೈಯಲ್ಲಿರುವ ಹತ್ತು ಬೆರಳುಗಳನ್ನು ಉಪಯೋಗಿಸುತ್ತಿದ್ದರು. ಹೀಗೆ ಜೋಡಿ ಜೋಡಿಗಳಲ್ಲಿ ಮತ್ತು ಹತ್ತು ಹತ್ತುಗಳಲ್ಲಿ ಎಣಿಸುವ ಕ್ರಮಗಳು ಅತಿ ಪ್ರಾಚೀನವಾದಂತಹವು. ಬಹಳ ಹಿಂದೆ ರೂಢಿಯಲ್ಲಿದ್ದ ಕೆಲವು ಅಂಕನ ಮಾನಗಳನ್ನು (ಸ್ಕೇಲ್ಸ್ ಆಫ್ ನೋಟೇಷನ್) ಕೆಳಗೆ ಕೊಟ್ಟಿದೆ:

**1.** ಮೊಹೆಂಜೋದಾರೊ ಶಾಸನಗಳಲ್ಲಿ, ಒಂದರಿಂದ ಹದಿಮೂರರ ವರೆಗಿನ ಸಂಖ್ಯೆಗಳನ್ನು ಹೀಗೆ ಬರೆಯಲಾಗಿದೆ.

I, II, III, IIII, IIIII ಮುಂತಾಗಿ.

**2.** ಈಜಿಪ್ಟ್‌ನಲ್ಲಿ ಪ್ರ.ಶ.ಪೂ. 3400 ರಲ್ಲಿ ಈ ಪದ್ಧತಿಯನ್ನು ಉಪಯೋಗಿಸಲಾಗುತ್ತಿತ್ತು.

1 2 3 ಮುಂತಾಗಿ 10; 12; 20; 100

I II III ^; II ^; ^ ^; 2

**3.** ಯು ಕೆಟಾನ್ (ದಕ್ಷಿಣ ಅಮೆರಿಕ) ನ ಮಾಯ ಜನರು ಈ ಪದ್ಧತಿಯನ್ನು ಅನುಸರಿಸುತ್ತಿದ್ದರು :

1, 2 , 3 ;, 5 ;, 7 ;, 10 ;, 12 ;, 15 ಇತ್ಯಾದಿ

. .. ... ; –; .. ; = ; .. ; ≡

**4. ರೋಮನ್ನರ ಪದ್ಧತಿ :** ಐದು ಎಂಬುದಕ್ಕೆ ಕೈಯ ಆಕೃತಿಯನ್ನೊ ಅಥವಾ ಹೆಬ್ಬೆರಳು ಮತ್ತು ತೋರುಬೆರಳಿನ ನಡುವಿನ ಸ್ಥಳವನ್ನು ಹೋಲುವ ಚಿಹ್ನೆಯನ್ನೊ ಬಳಸಲಾಗಿದೆ.

ಉದಾ : 1. IV 5-1 = 4, ಹೀಗೆಯೆ IX = 10-1 = 9

VI 5+1= 6, ಹೀಗೆಯೆ XI = 10+1 = 11

1, 2, 3, 4, 5, 6, 7, 8, 9, 10, 11, 15, 20.

I, II, III, IV, V, VI, VII, VIII, IX, X, XI, XV, XX,

40, 50, 60, 100, 1000 ಇತ್ಯಾದಿ

XL, L, LX, C, M.

ಉದಾ :2. ಒಂದು ಸಾವಿರದ ಇನ್ನೂರ ಎಂಬತ್ತೊಂಬತ್ತನ್ನು ಈ ಪದ್ಧತಿಯಲ್ಲಿ MCCLXXXIX ಎಂದು ಬರೆಯಲಾಗುವುದು.

ಈ ಪದ್ಧತಿಯಲ್ಲಿ ಸಂಕಲನ ಗುಣಾಕಾರ ಮುಂತಾದುವುಗಳನ್ನು ನಡೆಸಬೇಕಾದರೆ ಆಗುವ ತೊಂದರೆಯನ್ನು ನಾವೇ ಊಹಿಸಿಕೊಳ್ಳಬಹುದು.

**5**. ಖರೋಷ್ಠಿ ಸಂಖ್ಯೆಗಳು ಭಾರತದಲ್ಲಿ ಉಪಯೋಗದಲ್ಲಿದ್ದುವು. ಈ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು.

1, 2, 3, 4, 5, 6, 8, 10,

I, II, III, +, IX, IIX, XX, 7,

20, 40, 70, 100, 200

3, 33, 7333, æ| æ|| ಇತ್ಯಾದಿ.

ಈ ಲಿಪಿಯಲ್ಲಿ 284 ಎನ್ನುವುದನ್ನು +3333æ|| ಎಂದು ಬರೆಯಲಾಗುತ್ತಿತ್ತು.

**6 ಬ್ರಾಹ್ಮೀಸಂಖ್ಯೆಗಳು :** ಇವೂ ಭಾರತದಲ್ಲಿ ಉಪಯೋಗದಲ್ಲಿದ್ದುವು.




ಇತ್ಯಾದಿ.

ಈ ಲಿಪಿಯಲ್ಲಿ 284 ಅನ್ನುವುದನ್ನು ಎಂದು ಬರೆಯಬಹುದು.

ಈ ಲಿಪಿಯಲ್ಲಿ ಬರವಣಿಗೆಯು ಎಡದಿಂದ ಬಲಕ್ಕೆ ಹೋಗುವುದು. ಒಂದರಿಂದ ಒಂಬತ್ತರವರೆಗಿನ ಈಗಿನ ಸಂಖ್ಯಾಚಿಹ್ನೆಗಳು ಈ ಹಿಂದೂಅಕ್ಷರಗಳಿಂದ ಉತ್ಪತ್ತಿಯಾಗಿವೆ.

**7 ದಶಮಾಂಶ ಪದ್ಧತಿ :** ಇದು ಮೂರನೆಯ ಮತ್ತು ಅತಿ ಮುಖ್ಯವಾದ ಹಿಂದೂ ಪದ್ಧತಿಯಾಗಿದೆ. ಈ ಪದ್ಧತಿಯಲ್ಲಿ ಅಂಕಗಳೆಂದು ಕರೆಯಲ್ಪಡುವ ಕೇವಲ ಹತ್ತು ಚಿಹ್ನೆಗಳಿವೆ. ಈ ಹತ್ತು ಚಿಹ್ನೆಗಳು ಒಂದರಿಂದ ಒಂಬತ್ತರವರೆಗಿನ ಸಂಖ್ಯೆಗಳನ್ನೂ ಮತ್ತು ಸೊನ್ನೆಯನ್ನೂ ಸೂಚಿಸುತ್ತವೆ. ಸೊನ್ನೆಯನ್ನು (ಶೂನ್ಯ) ಸೂಚಿಸುವ ಹತ್ತನೇ ಚಿಹ್ನೆಯು ಈ ಪದ್ಧತಿಯ ಗಮನಾರ್ಹವಾದ ವೈಶಿಷ್ಟ್ಯವಾಗಿರುವುದು.

1, 2, 3, 4, 5, 6, 7, 8, 9, 0.

ಈ ಹತ್ತು ಚಿಹ್ನೆಗಳ ಸ್ಥಾನ ಮತ್ತು ಬೆಲೆಗಳ ಅಭಿಪ್ರಾಯವನ್ನು ಬಳಸಿ ಎಷ್ಟು ದೊಡ್ಡ ಸಂಖ್ಯೆಯನ್ನಾದರೂ ಬಹಳ ಸುಲಭವಾಗಿ ಬರೆಯಬಹುದು.

ಹೇಗೆಂದರೆ : 222 = 2.100 + 2.10 + 2

305 = 3.100 + 0.10 + 5 ಇತ್ಯಾದಿ

ಮೊದಲ ಉದಾಹರಣೆಯಲ್ಲಿ ಒಂದೇ ಚಿಹ್ನೆಯಾದ 2 ಎನ್ನುವುದು ಅದರ ಸ್ಥಾನಕ್ಕೆ ಅನುರೂಪವಾಗಿ 2,20 ಅಥವಾ 200ನ್ನು ಸೂಚಿಸುತ್ತದೆ. ಇಲ್ಲಿ 2 ಎಂಬ ಚಿಹ್ನೆಯನ್ನು ಬೇರೆ ಬೇರೆ ಸ್ಥಾನದಲ್ಲಿರಿಸಿದರೆ ಬೇರೆ ಬೇರೆ ಸಂಖ್ಯೆಗಳು ಆಗುತ್ತವೆ. 1969 ಎಂಬಲ್ಲಿ ಬಲದಿಂದ ಎಡಕ್ಕೆ ಅನುಕ್ರಮವಾಗಿ ಆಯಾ ಸಂಖ್ಯೆಯ ಸ್ಥಾನ ಏಕ, ದಶಕ, ಶತಕ, ಸಹಸ್ರ ಎಂದಾಗುತ್ತದೆ.

**8. ದ್ವಾದಶ ಪದ್ಧತಿ :** ಈ ಪದ್ಧತಿಯು ದಶಮಾಂಶ ಪದ್ಧತಿಗಿಂತಲೂ ಕೆಲವು ನಿಶ್ಚಿತ ಅನುಕೂಲಗಳನ್ನು ಪಡೆದಿರುವುದೆಂದು ಕೆಲವು ಗಣಿತಶಾಸ್ತ್ರಜ್ಞರು ಸೂಚಿಸಿರುವರು. ಈ ಪದ್ಧತಿಯ ಮಾನವು ಹನ್ನೆರಡು. ಸಂಖ್ಯೆ 12 ಎನ್ನುವುದು 2, 3, 4 ಮತ್ತು 6 ರಿಂದ ಭಾಗಿಸಲ್ಪಡುತ್ತದೆ. ಆದರೆ ಸಂಖ್ಯೆ 10 ಎನ್ನುವುದು 2 ಮತ್ತು 5 ರಿಂದ ಭಾಗಿಸಲ್ಪಡುತ್ತದೆ. ಒಂದರಿಂದ ಹನ್ನೊಂದರವರೆಗಿನ ಸಂಖ್ಯೆಗೆ ಹನ್ನೊಂದು ಚಿಹ್ನೆಗಳನ್ನು ಮತ್ತು ಸೊನ್ನೆಗೊಂದು ಚಿಹ್ನೆಯನ್ನು ಸೂಚಿಸಿ ಈ ಪದ್ಧತಿಯಲ್ಲಿ 35 ಎನ್ನುವುದು 3.10+5 ಎಂದಾಗುತ್ತದೆ. ಹಾಗೆಯೇ 235 ಎನ್ನುವುದು $2.12^2+3.12+5$ ಎಂದಾಗುತ್ತದೆ. ಭಾರತದಲ್ಲಿ ಅಳತೆಯ ಕಾರ್ಯಗಳಿಗೆ ಅಕ್ಷರಕ್ರಮ ಪದ್ಧತಿಯಲ್ಲಿ ಸಂಖ್ಯೆಗಳನ್ನು ಸೂಚಿಸಲು ಅಕ್ಷರಗಳನ್ನು ಬಳಸಲಾಗುವುದು.

i. ಪದಸಂಖ್ಯೆಗಳು : ಈ ಪದ್ಧತಿಯಲ್ಲಿ ಸಂಖ್ಯೆಗಳನ್ನು ವಸ್ತುಗಳ ಹೆಸರುಗಳಿಂದ ಸೂಚಿಸಲಾಗುವುದು.

ಸೂರ್ಯ, ಭೂಮಿ ಮುಂತಾದವುಗಳಿಂದ ಒಂದು ಎಂಬ ಸಂಖ್ಯೆಯನ್ನೂ ಕೈಗಳು,ಕಣ್ಣುಗಳೂ ಇತ್ಯಾದಿ ಜೋಡಿ ವಸ್ತುಗಳಿಂದ ಎರಡು ಎಂಬ ಸಂಖ್ಯೆಯನ್ನೂ ಸೂಚಿಸಬಹುದು. ಹೀಗೆಯೇ ಮುಂದುವರಿಯಬಹುದು. ವೇದರಾಮಕುಟುಂಬಾದಿ ಎಂದರೆ 1234. ಇದನ್ನು ಬಲದಿಂದ ಎಡಕ್ಕೆ ಓದಿದಾಗ, (ಅಂಕಾನಾ ವಾಮತೋಗತಿಃ ಎಂಬ ಸೂತ್ರದ ಪ್ರಕಾರ) ಆದಿ ಎನ್ನುವುದು ಒಂದನ್ನೂ ಕುಟುಂಬ(ಗಂಡ ಹೆಂಡತಿ) ಎನ್ನುವುದು ಎರಡನ್ನೂ ರಾಮ ಎನ್ನುವುದು (ಪರಶುರಾಮ, ಶ್ರೀರಾಮ, ಬಲರಾಮ) ಮೂರನ್ನೂ ವೇದ (ಚತುರ್ವೇದಗಳು) ಎನ್ನುವುದು ನಾಲ್ಕನ್ನೂ ಸೂಚಿಸುತ್ತವೆ.

ii. ಕಟಪಯಾದ್ರಿಕ್ರಮ : ಈ ಕ್ರಮದಲ್ಲಿ ಸಂಸ್ಕೃತದ ವ್ಯಂಜನಾಕ್ಷರಗಳು ಒಂದರಿಂದ ಒಂಬತ್ತರವರೆಗಿನ ಸಂಖ್ಯೆಗಳನ್ನು ಮತ್ತು ಸೊನ್ನೆಯನ್ನು ಸೂಚಿಸಲು ಉಪಯೋಗಿಸಲ್ಪಡುತ್ತವೆ. ಒಂದು ಸಂಖ್ಯಾ ಗಡಿಯಾರವನ್ನು ತಯಾರಿಸಲು ಉಪಯೋಗಿಸಿದ ಸಂಯೋಜಿತ ಸ್ವರಗಳಿಗೆ ಅರ್ಥವಿಲ್ಲ. ಸಂಯೋಜಿತ ವ್ಯಂಜನಗಳಲ್ಲಿ ಕಡೆಯದೊಂದಕ್ಕೆ ಮಾತ್ರ ಸಂಖ್ಯಾಭಾವವಿರುವುದು. ಸಂಖ್ಯಾಗಡಿಯಾರಗಳನ್ನು ತಯಾರಿಸಲು ಬಲದಿಂದ ಎಡಕ್ಕೆ ಹೋಗುವ ವಿಧಾನವೊಂದನ್ನು ಉಪಯೋಗಿಸುವರು. ಈ ಪದ್ಧತಿಯಲ್ಲಿ ಪ್ರತಿ ಮನುಷ್ಯನ ಹೆಸರಿಗೂ ಸಂಖ್ಯಾಭಾವವಿರುವುದು.

ಸಂಖ್ಯಾಗಡಿಯಾರ

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| ಕ | ಖ | ಗ | ಘ | ಙ | ಚ | ಛ | ಜ | ಝ | ಞ |
| ಟ | ಠ | ಡ | ಢ | ಣ | ತ | ಥ | ದ | ಧ | ನ |
| ಪ | ಫ | ಬ | ಭ | ಮ | – | – | – | – | – |
| ಯ | ರ | ಲ | ವ | ಶ | ಷ | ಸ | ಹ | – | – |

ಉದಾ : ಶಶಿಕಲಾ – 3155

ಚಿನ್ಮಯೀ – 156

ಮನೋರಮ – 52105 ಮುಂತಾದವು

ಗ್ರೀಕರೂ ಅವರ ಸಂಖ್ಯೆಗಳನ್ನು ಸೂಚಿಸಲು ಅಕ್ಷರಗಳನ್ನು ಉಪಯೋಗಿಸುತ್ತಿದ್ದರು:

α ಎಂದರೆ ಒಂದು,

â ಎಂದರೆ ಎರಡು,

γ ಎಂದರೆ ಮೂರು – ಇತ್ಯಾದಿ (ಎಲ್.ಎನ್.ಸಿ.)

**ಅಂಕಪಾಶ ಮತ್ತು ವಿಕಲ್ಪ :** $a_1, a_2\ a_3\ \ldots\ldots a_n$ ಎನ್ನುವ n ವಿವಿಧ ವಸ್ತುಗಳು ದತ್ತವಾಗಿರಲಿ. ಇವುಗಳಿಂದ $r\ (r \le n)$ ವಸ್ತುಗಳನ್ನು ಒಂದು ಸಲಕ್ಕೆ ಆರಿಸಬೇಕು; ಹೀಗೆ ಆರಿಸುವಾಗ ಆ r ವಸ್ತುಗಳು ಅಳವಡಿಕೆಯಾಗುವ ಕ್ರಮವನ್ನು ಮರೆಯಬಾರದು. ಇಂಥ ಆಯ್ಕೆಯನ್ನು ಎಷ್ಟು ವಿಧದಲ್ಲಿ ಮಾಡಬಹುದು? ಇದಕ್ಕೆ ಉತ್ತರ ನೀಡುವ ಸಂಖ್ಯೆಯ ಹೆಸರು ಅಂಕಪಾಶ (ಪರ್ಮುಟೇಷನ್) ಅಥವಾ ಕ್ರಮಯೋಜನೆ ಅಥವಾ ಕ್ರಮಚಯ. ಈ ಸಂಖ್ಯೆಯನ್ನು ${}_np_r$ ಎಂಬ ಸಂಕೇತದಿಂದ ಸೂಚಿಸಲಾಗುವುದು. n ದತ್ತವಸ್ತುಗಳಿಂದ ಒಂದೊಂದು ಸಲ ವಸ್ತುಗಳನ್ನು ಆರಿಸಿದಾಗ ದೊರೆಯುವ ಅಂಕಪಾಶವೇ ${}_np_r$. r ಸಂಖ್ಯೆಯು n ಗಿಂತ ದೊಡ್ಡ ಸಂಖ್ಯೆಯಾಗುವುದು ಅಸಾಧ್ಯ.

$a_1\ a_2\ a_3$, ಎನ್ನುವ ಮೂರು ವಸ್ತುಗಳಿಂದ ಮೂರು ವಸ್ತುಗಳನ್ನು ಆರಿಸಿದಾಗ ದೊರೆಯುವ ಅಂಕಪಾಶದ ಸಂಖ್ಯೆ 6. ($a_1\ a_2\ a_3$, $a_1\ a_3\ a_2$, $a_2\ a_3\ a_1$, $a_2\ a_3\ a_1$, $a_2\ a_1\ a_3$ ಮತ್ತು $a_3\ a_2\ a_1$)

$$\therefore\ {}_3P_3 = 6 = 3\times 2\times 1$$

ಇದೇ ರೀತಿ ನಾಲ್ಕು ವಸ್ತುಗಳಿಂದ ನಾಲ್ಕು ವಸ್ತುಗಳನ್ನು ಆರಿಸಿ ದೊರೆಯುವ ಅಂಕಪಾಶದ ಸಂಖ್ಯೆ

$${}_4P_4 = 24 = 4\times 3\times 2\times 1$$

ಆದ್ದರಿಂದ n ವಸ್ತುಗಳಿಂದ n ವಸ್ತುಗಳನ್ನು ಆರಿಸಿದಾಗ ದೊರೆಯುವ ಅಂಕಪಾಶದ ಸಂಖ್ಯೆ

${}_nP_n = n(n-1)(n-2)\cdots 3.2.1 = n!$ (! ಇದನ್ನು ಫ್ಯಾಕ್ಟೋರಿಯಲ್ ಎಂದು ಓದಬೇಕು. ಸಂಕ್ಷೇಪವಾಗಿ 1 ರಿಂದ n ವರೆಗಿನ ಸ್ವಾಭಾವಿಕ ಸಂಖ್ಯೆಗಳ ಗುಣಲಬ್ಧವನ್ನು n! ಎಂದು ಸೂಚಿಸಿದೆ).

$${}_nP_r = n(n-1)(n-2)\cdots(n-r+1)$$

ಎಂದು ಗಣಿತಶಾಸ್ತ್ರದಿಂದ ತಿಳಿಯಬಹುದು.

$${}_nP_r = \frac{n(n-1)(n-2)\cdots(n-r+1)(n-r)\ldots\ 3.2.1}{(n-r)\cdots 3.2.1}$$

$= \frac{n!}{(n-r)!}$ ಎಂದೂ ಬರೆಯಬಹುದು .

$$\therefore\ {}_nP_n = \frac{n!}{(n-n)!} = \frac{n!}{0!} = n!$$

ಇಲ್ಲಿ 0 ! ಎಂಬುದನ್ನು 1 ಎಂದು ಪರಿಗಣಿಸುತ್ತೇವೆ.

$${}_nP_r = n.\ {}_{n-1}P_{r-1}$$

$${}_nP_r = (n-r+1).\ {}_nP_{r-1}$$

ಇವುಗಳನ್ನು ಸುಲಭವಾಗಿ ಸಾಧಿಸಬಹುದು.

ದತ್ತ n ವಸ್ತುಗಳಲ್ಲಿ ಒಂದು ಜಾತಿಗೆ ಸೇರಿದ n ವಸ್ತುಗಳು ಸದೃಶವಾಗಿಯೂ ಎರಡನೆಯ ಜಾತಿಗೆ ಸೇರಿದ $n_2$ ವಸ್ತುಗಳು ಸದೃಶವಾಗಿಯೂ . . . . . . . . ಹೀಗೆ

$${}_nC_r = \frac{{}_nP_r}{r!} = \frac{n!}{r!(n-r)!}$$

m ನೇ ಜಾತಿಗೆ ಸೇರಿದ $n_m$ ವಸ್ತುಗಳು ಸದೃಶವಾಗಿಯೂ ಇದ್ದರೆ

$(n = n_1 + n_2 + n_3 + \ldots\ldots + n_m)$ ಈ ಎಲ್ಲಾ n ವಸ್ತುಗಳನ್ನೂ ಬಳಸಿದಾಗ ದೊರೆಯುವ ಅಂಕಪಾಶಗಳ ಒಟ್ಟು ಸಂಖ್ಯೆ

$$\frac{n!}{n_1!\,n_2!\cdots n_m!}$$

ಆಗುವುದು. ಪ್ರತಿಯೊಂದು ವಸ್ತುವನ್ನು ಎಷ್ಟು ಸಲ ಬೇಕಾದರೂ ಪುನರಾವರ್ತಿಸ ಬಹುದಾದಲ್ಲಿ n ವಸ್ತುಗಳಿಂದ ದೊರೆಯುವ r ಅಂಕಪಾಶಗಳ ಒಟ್ಟು ಸಂಖ್ಯೆಯು $n^1$ ಆಗುವುದು.

ವಸ್ತುಗಳನ್ನು ಒಂದು ವೃತ್ತಪರಿಧಿಯ ಸುತ್ತ ಇಟ್ಟಾಗ ಒದಗುವ ಪ್ರತಿಯೊಂದು ಅಂಕಪಾಶವನ್ನು ವರ್ತುಳಾಂಕಪಾಶ(ಸರ್ಕ್ಯುಲರ್ ಪರ್ಮುಟೇಷನ್ಸ್) ಎಂದು ಕರೆಯುತ್ತಾರೆ. n ವಸ್ತುಗಳ ವರ್ತುಳಾಂಕಪಾಶಗಳ ಒಟ್ಟು ಸಂಖ್ಯೆ (n-1)! ಇದನ್ನು $|\underline{n-1}$ ಎಂತಲೂ ಬರೆಯುತ್ತಾರೆ.

ಪ್ರದಕ್ಷಿಣ ಮತ್ತು ಅಪ್ರದಕ್ಷಿಣವಾಗಿ ಜೋಡಿಸಿದ ವ್ಯವಸ್ಥೆಗಳನ್ನು ಒಂದೇ ಎಂದು ಭಾವಿಸಿದಲ್ಲಿ . n ವಸ್ತುಗಳ ವರ್ತುಳಾಂಕಪಾಶಗಳ ಸಂಖ್ಯೆಯು 1/2 $|n-1$ ಆಗುವುದು.

ಆಯ್ಕೆ ನಡೆಯುವ ಕ್ರಮಕ್ಕೆ ಗಮನ ಕೊಡದೆಯೆ ವಸ್ತುಗಳನ್ನು ಆರಿಸುವ ಒಂದು ಕಾರ್ಯಕ್ಕೆ ವಿಕಲ್ಪ (ಕಾಂಬಿನೇಷನ್) ವೆಂದು ಹೆಸರು. ಉದಾ : a,b,c ಎಂಬ ಮೂರು ವಸ್ತುಗಳನ್ನು ಗಮನಿಸಿದರೆ abc, acb, bac, bca, cab ಮತ್ತು cba – ಇವುಗಳೇ ವಿವಿಧ ವಿಕಲ್ಪಗಳು ಎಂದು ತಿಳಿಯುತ್ತದೆ. ಅಂದರೆ ಒಂದೊಂದು ಸಲಕ್ಕೆ ಮೂರರಂತೆ ಆರು ಬಗೆಯಾಗಿ ಆಯ್ಕೆಯನ್ನು ಮಾಡಬಹುದು.

ಒಂದು ಸಲಕ್ಕೆ n ವಸ್ತುಗಳನ್ನು ತೆಗೆದುಕೊಂಡರೆ n ವಸ್ತುಗಳ r ವಿಕಲ್ಪಗಳ ಒಟ್ಟು ಸಂಖ್ಯೆಯನ್ನು ${}_nc_r$ ಎಂದು ಸೂಚಿಸುತ್ತಾರೆ. r ವಿಕಲ್ಪ ಮತ್ತು r ಅಂಕಪಾಶಗಳಿಗೆ ಇರುವ ಸಂಬಂಧವನ್ನು

$${}_nP_r = {}_nC_r\ .r!$$

ಎಂದೂ ಸೂಚಿಸಬಹುದು.

ಇದರಿಂದಾಗಿ

ವಿಶೇಷವಾಗಿ $_nC_1 = n, _nC_0 = _nC_n = 1$

$_nC_r = _{n-1}C_r + _{n-1}C_{r-1}$

ಎಂದು ಬರೆಯುತ್ತಾರೆ.

ಒಂದು ಸಲಕ್ಕೆ ಎಷ್ಟಾದರೂ ವಸ್ತುಗಳನ್ನು ತೆಗೆದುಕೊಂಡಲ್ಲಿ n ವಿವಿಧ ವಸ್ತುಗಳ ವಿಕಲ್ಪಗಳ ಒಟ್ಟು ಸಂಖ್ಯೆ $= \sum_{r=1}^{n} {_nC_r} = 2^n - 1.$

n ವಸ್ತುಗಳಲ್ಲಿ $P_1$ ವಸ್ತುಗಳೆಲ್ಲ ಮೊದಲನೆಯ ಬಗೆಯವು. $p_2$ ವಸ್ತುಗಳೆಲ್ಲ ಎರಡನೆಯ ಬಗೆಯವು. ಇತ್ಯಾದಿ. ಹೀಗೆ ಆದಾಗ, ಮತ್ತು

$p_1 + p_2 + p_3 . . . . + p_m$ = n ಆಯ್ಕೆಗಳ ಒಟ್ಟು ಸಂಖ್ಯೆ

$= (p_1 + 1) (p_2 + 1) . . . . . (p_m + 1) - 1.$

n ಸರಿಸಂಖ್ಯೆಯಾಗಿದ್ದರೆ, $r = \frac{n}{2}$ ಆದಾಗ, $_nC_r$ ಎನ್ನುವುದೇ ಅತಿ ದೊಡ್ಡದಾಗುತ್ತದೆ.

n ಬೆಸಸಂಖ್ಯೆಯಾಗಿದ್ದರೆ, $r = \frac{n-1}{2}$ ಅಥವಾ $\frac{n+1}{2}$ ಆದಾಗ, $_nC_r$ ಅತಿ ದೊಡ್ಡದಾದ ಹಾಗೂ ಸಮನಾಗಿರುವ ಎರಡು

ಬೆಲೆಗಳನ್ನು ಪಡೆಯುತ್ತದೆ. n = 3 ಆದಾಗ $_nC_r$ ನ ಬೆಲೆಗಳು 1, 3, 3, 1 ಆಗುತ್ತದೆ. n =4 ಆದಾಗ $_nC_r$ ನ ಬೆಲೆಗಳು 1, 4, 6, 4, 1 ಆಗುತ್ತದೆ. ಹೀಗೆಯೇ ಇದು ಮುಂದುವರಿಯುತ್ತದೆ. (ಎಲ್.ಎನ್.ಸಿ.)

**ಅಂಕಾರ :** ಟರ್ಕಿಯ ಹಾಗೂ ಅಂಕಾರ ಪ್ರಾಂತದ ರಾಜಧಾನಿ. ಸಮುದ್ರಮಟ್ಟಕ್ಕೆ 1020ಮೀ ಎತ್ತರದಲ್ಲಿ 150ಮೀ ಎತ್ತರವಿರುವ ಕಲ್ಲುಬಂಡೆಗಳ ಬೆಟ್ಟದ ಮೇಲಿದೆ. ಜನಸಂಖ್ಯೆ 2984,099 (1997). ಇಲ್ಲಿ ಖಂಡಾಂತರ ವಾಯುಗುಣವಿದೆ. ಸಮುದ್ರದಿಂದ ದೂರವಿರುವುದರಿಂದಲೇ ಈ ಪಟ್ಟಣವನ್ನು ಅಂದಿನ ರಾಷ್ಟ್ರಾಧ್ಯಕ್ಷ ಕೆಮಾಲ್ ಅಟಾಟರ್ಕ್ ಎಂಬುವನು ರಾಜಧಾನಿಯನ್ನಾಗಿ ಮಾಡಿಕೊಂಡು, ಹಿಂದೆ ಇದ್ದ ಅಂಗೊರಾ ಎಂಬ ಹೆಸರನ್ನು 1923 ರಲ್ಲಿ ಅಂಕಾರ ಎಂದು ಬದಲಾಯಿಸಿದನು. ಆಧುನಿಕ ಟರ್ಕಿಯ ಪ್ರಭಾವ ಪಟ್ಟಣದ ಕೆಲವು ಕಡೆ ಕಂಡುಬರುತ್ತದೆ. ಪಟ್ಟಣದ ಹಳೆಯ ಭಾಗದಲ್ಲಿ ಒಂದು ಕೋಟೆಯಿದ್ದು ಅದರೊಳಗಡೆ ಒಂದು ಒಳಕೋಟೆ ಮತ್ತು ಒಂದು ಬಿಳಿಯ ಗೋಪುರವಿದೆ. ಕೋಟೆಯ ಹೊರಭಾಗ ಪಾಳು ಬಿದ್ದಿದೆ. ಈ ಭಾಗದಲ್ಲಿ ವಾಸಮಾಡುವ ಜನರ ಸಂಖ್ಯೆ ಅಲ್ಪ. ಇಲ್ಲಿನ ಚಿಕ್ಕಚಿಕ್ಕ ಹಾಗೂ ವಕ್ರವಕ್ರವಾಗಿರುವ ಬೀದಿಗಳ ಎಡಬಲಗಳಲ್ಲಿ ಮಣ್ಣಿನ ಇಟ್ಟಿಗೆ, ಮರ ಹಾಗೂ ಹೆಂಚುಗಳನ್ನು ಉಪಯೋಗಿಸಿ ರಚಿಸಲಾದ ಹಳೆಯ ಮನೆಗಳಿವೆ. ಇಲ್ಲಿ ಒಂದು ಪೇಟೆಯೂ ಮತ್ತು ರಾಷ್ಟ್ರೀಯ ಸಮಾರಂಭಗಳು ಜರುಗುವ ಉಲಸ್ ಎಂಬ ಹೆಸರಿನ ಚೌಕವೂ ಇವೆ. ಪಟ್ಟಣದ ಉತ್ತರ ಭಾಗದ ಪ್ರದೇಶಕ್ಕೆ ಆಧುನಿಕತೆಯ ಪ್ರಭಾವ ಹೆಚ್ಚಾಗಿ ಬೀಳದಿದ್ದು, ಅಲ್ಲಿ ಅನೇಕ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ. ಬೆಟ್ಟದ ಮೇಲಿನಿಂದ ನೋಡಿದರೆ 1953ರಲ್ಲಿ ಪೂರ್ಣಗೊಂಡ ಅಟಾಟರ್ಕನ ಸಮಾಧಿ ಪ್ರಧಾನವಾಗಿ ಕಾಣಿಸುತ್ತದೆ. ದೂರದಲ್ಲಿ ಕಾಣಿಸುವ ಇತರ ಸ್ಮಾರಕಗಳೆಂದರೆ–ವಿಕ್ಟರಿ ಸ್ಮಾರಕ, ಕಾನ್ಫಿಡೆನ್ಸ್ ಸ್ಮಾರಕ – ಇತ್ಯಾದಿ. ಈಗಿನ ಅಧ್ಯಕ್ಷರ ನಿವಾಸದ ಮುಂಭಾಗದಲ್ಲಿರುವ ಅಟಾಟರ್ಕನ ನಿವಾಸ ಈಗ ಒಂದು ವಸ್ತು ಸಂಗ್ರಹಾಲಯವಾಗಿದೆ. ಅಂಕಾರದಲ್ಲಿ ಒಂದು ವಿಶ್ವವಿದ್ಯಾಲಯ, ಒಂದು ರಾಷ್ಟ್ರೀಯ ಪುಸ್ತಕ ಭಂಡಾರ, ರಾಜ್ಯದ ಆರ್ಥಿಕ ನೆರವಿನಿಂದ ನಡೆಯುತ್ತಿರುವ ಒಂದು ರಂಗಮಂಟಪ ಮತ್ತು ಆಧುನಿಕ ರೇಡಿಯೋ ಕೇಂದ್ರ ಇವೆ. ಇಲ್ಲಿರುವ ಕಾಲೇಜು ಬಹಳ ದೊಡ್ಡದಾಗಿದೆ. ಜೆನ್‌ಕ್ಲಿಕ್ ಪಾರ್ಕ್ ಎಂಬ ಉದ್ಯಾನವನ ಬಹಳ ಸುಂದರವಾಗಿದೆ. ಕುದುರೆ ಜೂಜಿನ ಮೈದಾನ ಹಾಗೂ ಎರಡು ಕ್ರೀಡಾಂಗಣಗಳಿವೆ. ಪಟ್ಟಣದ ಉತ್ತರಕ್ಕೆ 13 ಕಿಮೀ. ದೂರದಲ್ಲಿರುವ ಕ್ಯುಬೆಕ್ ಡ್ಯಾಂ ಎಂಬುದು ಒಂದು ಪ್ರವಾಸೀ ಕೇಂದ್ರವಾಗಿದೆ. ಅಂಕಾರದಿಂದ ಇಸ್ತಾನ್‌ಬುಲ್, ಇಜ್‌ಮೀರ್ ಮತ್ತು ಅದಾನ ಪಟ್ಟಣಗಳಿಗೆ ರೈಲಿನ ಸೌಲಭ್ಯವಿದೆ. ಇಲ್ಲಿಂದ 26 ಕಿ.ಮೀ ದೂರವಿರುವ ಈಸೆನ್‌ಬೋಗ ಎಂಬುದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. ಪಟ್ಟಣದ ಹೊರವಲಯದಲ್ಲಿ ಜಮಖಾನೆ, ಜೇನುತುಪ್ಪ ಮತ್ತು ಪೇರು ಜಾತಿಯ ಹಣ್ಣಿನ ಉತ್ಪನ್ನಗಳು ಮುಂತಾದ ಕೈಗಾರಿಕೆಗಳು ಕಂಡುಬರುತ್ತವೆ. (ಎಂ.ಎಸ್.; ಎಸ್.ಆರ್.ಪಿ.)

**ಅಂಕಿಅಂಶಗಳು :** ನಮ್ಮ ನಿತ್ಯಜೀವನದಲ್ಲಿ ಅಂಕಿಗಳನ್ನೂ ಸಂಖ್ಯಾತ್ಮಕ ವಿವರಣೆಗಳನ್ನೂ ಬಳಸಿ ಹಲವಾರು ವಿಷಯಗಳನ್ನು ಚರ್ಚಿಸುತ್ತೇವೆ. ಅನಿಯಮಿತವಾದ ಅನೇಕ ಕಾರಣಗಳಿಂದ ಬದಲಾಯಿಸುತ್ತಿರುವ ಪರಿಮಾಣಗಳಿಗೆ ಅಂಕಿಅಂಶಗಳು ಎನ್ನುವುದು ರೂಢಿ. ಉದಾಹರಣೆಗೆ, ಒಂದು ನಗರದ ಜನಸಂಖ್ಯೆಯು ವರ್ಷ ವರ್ಷಕ್ಕೂ ಬದಲಾಗುತ್ತಿರುತ್ತದೆ. ಈ ಸಂಖ್ಯಾಸಮೂಹವನ್ನು ಜನಸಂಖ್ಯೆಯ ಅಂಕಿ ಅಂಶಗಳು ಎನ್ನುತ್ತೇವೆ. ಒಂದು ರಾಜ್ಯದಲ್ಲಿ ಉತ್ಪತ್ತಿಯಾಗುವ ಬೆಳೆಗಳ ಪ್ರಮಾಣ, ನಮ್ಮ ದೇಶದಿಂದ ಹೊರ ದೇಶಗಳಿಗೆ ರಫ್ತು ಮಾಡಲಾಗುವ ಸರಕುಗಳ ಬೆಲೆ, ಧಾರಣೆವಾಸಿಯ ಮಟ್ಟ, ತೆರಿಗೆಗಳಿಂದ ಬರುವ ರಾಷ್ಟ್ರವರಮಾನ, ಕಾರ್ಖಾನೆಗಳಲ್ಲಿ ಕೆಲಸಮಾಡುವ ಕಾರ್ಮಿಕರ ಸಂಖ್ಯೆ, ಅವರಲ್ಲಿ ಗೈರುಹಾಜರಾಗುವವರ ಸಂಖ್ಯೆ, ಒಂದು ನಗರದಲ್ಲಿನ ಹುಟ್ಟು ಸಾವುಗಳ ಮಾಹಿತಿ, ಒಬ್ಬ ಮನುಷ್ಯನ ರಕ್ತದಲ್ಲಿರುವ ಕೆಂಪು ರಕ್ತಾಣುಗಳು, ಒಂದು ಪ್ರದೇಶದಲ್ಲಿ ಬೀಳುವ ಮಳೆಯ ಮಾನ, ಕುಟುಂಬ ಯೋಜನಾಪದ್ಧತಿಯನ್ನು ಪಾಲಿಸುವವರ ಸಂಖ್ಯೆ, ರೈಲಿನಲ್ಲಿ ಪ್ರಯಾಣ ಮಾಡುವವರ ಸಂಖ್ಯೆ, ಪ್ರಯಾಣಿಕರಿಂದ ಬರುವ ಒಟ್ಟು ವರಮಾನ, ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ, ದನಗಳ ಎಣಿಕೆ, ಹಾಲು ಬೆಣ್ಣೆಯ ಉತ್ಪತ್ತಿ ಮತ್ತು ಸರಬರಾಯಿ, ಬ್ಯಾಂಕುಗಳಲ್ಲಿ ಇಟ್ಟಿರುವ ಠೇವಣಿಯ ಒಟ್ಟು ಧನ, ಒಬ್ಬ ವರ್ತಕನ ಗೋದಾಮಿನಲ್ಲಿರುವ ಸಕ್ಕರೆ ಮೂಟೆಗಳ ದಾಸ್ತಾನು– ಇವೇ ಮುಂತಾದವುಗಳನ್ನು ಕುರಿತ, ಸಮಯ ಸಮಯಕ್ಕೆ ಬದಲಾಗುತ್ತಿರುವ ಅಂಕಿಗಳಲ್ಲಿ ನಿರೂಪಿಸಲಾಗುವ ಮಾಹಿತಿಗಳ ಸಮೂಹಕ್ಕೆ ಅಥವಾ ಪಟ್ಟಿಗೆ ಸಾಮಾನ್ಯವಾಗಿ ಅಂಕಿಅಂಶಗಳು ಎನ್ನುತ್ತೇವೆ. ಕಾಲ ದೇಶ ವರ್ತಮಾನಕ್ಕನುಸಾರವಾಗಿ ಇವು ಬದಲಾವಣೆ ಹೊಂದುವುವಾಗಿದ್ದರೆ ಮಾತ್ರ ಅಂಕಿಅಂಶಗಳ ವ್ಯಾಖ್ಯೆಯೊಳಗೆ ಸೇರುತ್ತವೆ.

ಬೆಂಗಳೂರಿನಿಂದ ಮದರಾಸಿಗೆ 355 ಕಿಮೀಗಳು, ಎವರೆಸ್ಟ್ ಶಿಖರದ ಎತ್ತರ 29,002′ ಒಂದು ವರ್ಷಕ್ಕೆ 12 ತಿಂಗಳು, ಒಂದು ರೂಪಾಯಿಗೆ 100 ಪೈಸೆಗಳು– ಇವೇ ಮುಂತಾದ ಸಂಖ್ಯಾತ್ಮಕ ವಿವರಣೆಗಳು ಅಂಕಿಅಂಶಗಳಾಗಲಾರವು. ರೈಲ್ವೆ ಕಂಪನಿಯ ವೇಳಾಪತ್ರಿಕೆಯಲ್ಲಿ (ಗೈಡು) ಅಂಕಿಗಳು ಸಾಲು ಸಾಲಾಗಿ ತುಂಬಿವೆ. ಆದರೆ, ಅವು ಅಂಕಿಅಂಶಗಳೆನಿಸುವುದಿಲ್ಲ. ಅನಿಶ್ಚಿತವಾದ ಹಲವಾರು ಕಾರಣಗಳಿಂದಾಗಿ ಪೂರ್ವ ನಿರ್ದಿಷ್ಟವಲ್ಲದ ಫಲಗಳನ್ನೊಳಗೊಂಡ ಸಂಖ್ಯಾತ್ಮಕ ಮಾಹಿತಿಗಳನ್ನೇ ಅಂಕಿಅಂಶಗಳೆನ್ನುತ್ತೇವೆ. ಇಂಥ ಅಂಕಿಅಂಶಗಳನ್ನು ಶೇಖರಿಸಿ, ಅವುಗಳನ್ನು ವರ್ಗೀಕರಿಸಿ ಅವಕ್ಕೆ ಕಾರಣಗಳು ಏನಿರಬಹುದು ಎಂದು ಊಹಿಸಿ ಪರೀಕ್ಷಣ ಮಾಡಿ, ನಿರ್ದಿಷ್ಟ ಫಲಾಪೇಕ್ಷೆಗೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳಬೇಕು, ಯಾವ ಸಾಧನೆಗಳು ಸಂಭವನೀಯ ಎಂದು ಮುಂತಾಗಿ ಕೂಲಂಕಷವಾಗಿ ಪರಿಶೀಲನೆ ಮಾಡುವ ಶಾಸ್ತ್ರಕ್ಕೆ ಅಂಕಿಅಂಶಶಾಸ್ತ್ರ ಎಂದು ಹೆಸರು. ಇದನ್ನು ಸಂಖ್ಯಾಶಾಸ್ತ್ರ ಎಂಬ ಹೆಸರಿನಿಂದ ಕರೆಯುವುದು ಹೆಚ್ಚು ರೂಢಿ. ಸಂಖ್ಯಾಶಾಸ್ತ್ರ ಬಹಳವಾಗಿ ಅಭಿವೃದ್ಧಿ ಹೊಂದಿದೆ. ಈಗ ಇದು ಹೆಚ್ಚು ವ್ಯಾಪಕವಾಗಿದೆ. ಅಂದರೆ ಈ ಶಾಸ್ತ್ರದಲ್ಲಿ ಪ್ರತಿಪಾದಿತವಾದ ತತ್ವಗಳೂ ಸಿದ್ಧಾಂತಗಳೂ ವಿಶಿಷ್ಟ ತಂತ್ರಗಳೂ ವಿಜ್ಞಾನದ ಎಲ್ಲ ವಿಭಾಗಗಳಲ್ಲೂ ಪ್ರಯೋಗಿಸಲಾಗುತ್ತದೆ. ಉದಾ: ಅರ್ಥಶಾಸ್ತ್ರ, ಅರ್ಥಮಿತಿ, ವ್ಯಾಪಾರ, ವಿಮೆ, ಜೀವವಿಜ್ಞಾನ, ವೈದ್ಯವಿಜ್ಞಾನ, ಜನಗಣನಶಾಸ್ತ್ರ, ಕೃಷಿವಿಜ್ಞಾನ, ಶಿಕ್ಷಣ, ಮನಶ್ಶಾಸ್ತ್ರ, ಯಂತ್ರವಿಜ್ಞಾನ, ಸಮಾಜಶಾಸ್ತ್ರ, ಖಗೋಳವಿಜ್ಞಾನ, ಭೂಗೋಳ, ಭೌತವಿಜ್ಞಾನ, ರಸಾಯನ ವಿಜ್ಞಾನ, ಭಾಷಾವಿಜ್ಞಾನ ಮುಂತಾದ ಶಾಸ್ತ್ರಗಳಲ್ಲೆಲ್ಲ ಸಂಖ್ಯಾಶಾಸ್ತ್ರ ಕ್ರಮಗಳನ್ನು ಬಳಸುತ್ತಾರೆ. ಅಂಕಿಅಂಶಗಳನ್ನು ಹಸನುಮಾಡಿ, ಸಂಖ್ಯಾ ತಂತ್ರಗಳನ್ನು ಪ್ರಯೋಗಿಸಿ ತರ್ಕಸಮ್ಮತವಾದ ಅನುಮಾನಗಳನ್ನು ಸ್ಥಾಪಿಸುವುದು ಸಂಖ್ಯಾಶಾಸ್ತ್ರದ ಕಾರ್ಯವಾಗಿರುವುದು. (ಎಂ.ವಿ.ಜೆ.)

**ಅಂಕಿಗಳು :** ಅಕ್ಷರಗಳಂತೆಯೇ ಅಂಕಿಗಳಿಗೂ ಒಂದು ದೊಡ್ಡ ಇತಿಹಾಸವಿದೆ. ಪ್ರಪಂಚದ ಎಲ್ಲ ಬರವಣಿಗೆಗಳ ಅಂಕಿಗಳೂ ಒಂದಲ್ಲ ಒಂದು ಮೂಲ ಅಂಕಿಯಿಂದ ಬೆಳೆದವು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಈ ಮೂಲ ಅಂಕಿ ಯಾವುದು ಎನ್ನುವ ವಿಚಾರದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಮಾನವನು ಪ್ರಾಚೀನಕಾಲದಲ್ಲಿ ಎಣಿಕೆ ಮಾಡಲು ತನ್ನ ಬೆರಳುಗಳನ್ನು ಉಪಯೋಗಿಸುತ್ತಿದ್ದನು. ಅಕ್ಷರ ವಿಕಾಸವಾದ ಮೇಲೆ



ಅಂಕಿಗಳನ್ನು ಬರೆಯಲು ಬೆರಳುಗಳಂತೆ ಉದ್ದನೆಯ ರೇಖೆಗಳನ್ನು ಬರೆಯಲು ಪ್ರಾರಂಭಿಸಿದನೆಂದು ಸಿಕ್ಕಿರುವ ಮಾಹಿತಿಗಳಿಂದ ವ್ಯಕ್ತವಾಗುತ್ತದೆ. ಇದುವರೆಗೂ ಉಪಲಬ್ಧವಾಗಿರುವ ಅತ್ಯಂತ ಪ್ರಾಚೀನ ಅಂಕಿಗಳು ಈಜಿಪ್ಟಿನ ಹೈರೋಗ್ಲಿಫಿಕ್ ಬರವಣಿಗೆಯಲ್ಲಿ ಕಾಣಬರುತ್ತವೆ. (ಪ್ರ.ಶ.ಪೂ.ಸು 3500). ಹೈರೋಗ್ಲಿಫಿಕ್‌ನಲ್ಲಿ ಒಂದರಿಂದ ಒಂಬತ್ತರವರೆಗಿನ ಸಂಖ್ಯೆಗಳನ್ನು ಲಂಬರೇಖೆಗಳಿಂದ ಸೂಚಿಸುತ್ತಿದ್ದರು. ಒಂದು ಎನ್ನುವುದಕ್ಕೆ ಒಂದು ರೇಖೆ, ಎರಡು ಎನ್ನುವ ಅಂಕಿಗೆ ಎರಡು ರೇಖೆಗಳು, ಇತ್ಯಾದಿ. ಅದೇ ರೀತಿಯಲ್ಲಿ ಒಂಬತ್ತನ್ನು ಬರೆಯಲು ಮೂರು ಗೆರೆಗಳನ್ನು ಮೂರು ಸಾಲುಗಳಲ್ಲಿ ಒಂದರ ಕೆಳಗೆ ಒಂದರಂತೆ ಬರೆಯುತ್ತಿದ್ದರು..

ಹತ್ತು ಎಂಬ ಸಂಖ್ಯೆಯನ್ನು ತಲೆಕಟ್ಟಿಲ್ಲದ ಗ ಎಂಬ ಕನ್ನಡದ ಅಕ್ಷರದಂತೆ (∩) ಬರೆಯುತ್ತಿದ್ದರು. ಹನ್ನೆರಡು, ಹದಿನಾಲ್ಕು ಮುಂತಾದ ಅಂಕಿಗಳನ್ನು ಬರೆಯಲು ಹತ್ತರ ಚಿಹ್ನೆಯನ್ನು ಮತ್ತು ಲಂಬರೇಖೆಗಳನ್ನು ಸೇರಿಸಿ (।।∩, ।।।।∩) ಬರೆಯುತ್ತಿದ್ದರು. ಇಪ್ಪತ್ತು, ಮೂವತ್ತು, ಮುಂತಾದುವನ್ನು ಬರೆಯಲು ಹತ್ತರ ಚಿಹ್ನೆಗಳನ್ನು (∩∩,∩∩∩) ಸೇರಿಸುತ್ತಿದ್ದರು. ಅಂದರೆ ಇಪ್ಪತ್ತಕ್ಕೆ ಹತ್ತರ ಎರಡು ಚಿಹ್ನೆ, ಮೂವತ್ತಕ್ಕೆ ಮೂರು ಚಿಹ್ನೆಗಳು ಇತ್ಯಾದಿ.

ಕ್ಯೂನಿಫಾರಂ (ಬೆಣೆಲಿಪಿ) ಬರೆವಣಿಗೆಯಲ್ಲಿಯೂ ನಾವು ಹೈರೋಗ್ಲಿಫಿಕ್‌ನಲ್ಲಿರುವಂತೆಯೇ ಚಿಹ್ನೆಗಳನ್ನು ಕಾಣುತ್ತೇವೆ. ಇದರಲ್ಲಿ ಒಂದು ಎಂಬ ಅಂಕಿಯನ್ನು ಬಾಣದ ತುದಿಯ ಗುರುತಿನಿಂದ (>) ಸೂಚಿಸುತ್ತಿದ್ದರು. ಅದು ಕೆಳಮುಖವಾಗಿದ್ದರೆ (V) ಅದರ ಮೌಲ್ಯ 1 ; 60 ; 3600; ಅಥವಾ ಸಾಮಾನ್ಯವಾಗಿ $60^n$ ಎಂದಿರುತ್ತಿತ್ತು. ಅದರ ತುದಿಯು ಬಲಭಾಗಕ್ಕಿದ್ದರೆ (>) ಅದು ಹತ್ತು ಎನ್ನುವ ಅಂಕಿಯಾಗುತ್ತಿದ್ದಿತು. ಈ ಚಿಹ್ನೆ $10 \times 60^n$ನ್ನೂ ಸೂಚಿಸುತ್ತಿದ್ದಿತು. ಈ ಎರಡು ಚಿಹ್ನೆಗಳನ್ನು ಕೂಡಿಸಿ ದೊಡ್ಡ ದೊಡ್ಡ ಸಂಖ್ಯೆಗಳನ್ನು ಬರೆಯುತ್ತಿದ್ದರು.

ಗ್ರೀಕ್ ಬರೆವಣಿಗೆಯಲ್ಲಿ ಪದದ ಮೊದಲನೆಯ ಅಕ್ಷರವನ್ನು ಅದೇ ಅಂಕಿಯ ಸಂಕೇತವಾಗಿ ಬಳಸಲಾಗುತ್ತಿದ್ದಿತು. ಪೆಂಟೆ, ಡೆಕ, ಹೆಕ್ಟಾನ್ ಮುಂತಾದ ಪದಗಳ ಗ್ರೀಕ್ ಲಿಪಿಯ ಮೊದಲನೆಯ ಅಕ್ಷರಗಳೇ ಐದು, ಹತ್ತು, ನೂರು ಮುಂತಾದ ಅಂಕಿಗಳಾಗಿದ್ದವು. ಐವತ್ತು ಎಂದು ಬರೆಯಲು ಪೆಂಟೆ ಮತ್ತು ಡೆಕ ಸಂಜ್ಞೆಗಳನ್ನು ಸೇರಿಸುತ್ತಿದ್ದರು. ಪ್ರ.ಶ.ಪೂ.ಮೂರನೆಯ



ಶತಮಾನದಲ್ಲಿ ಗ್ರೀಸ್‌ನಲ್ಲಿ ಇನ್ನೂ ಒಂದು ಅಂಕವಿನ್ಯಾಸವನ್ನು ಕಾಣುತ್ತೇವೆ. ಅದರ ಪ್ರಕಾರ ಗ್ರೀಕ್ ವರ್ಣಮಾಲೆಯ ಪ್ರತಿಯೊಂದು ಅಕ್ಷರಕ್ಕೂ ಒಂದೊಂದು ಮೌಲ್ಯವನ್ನು ಕೊಡಲಾಗಿದ್ದಿತು. ಮೊದಲನೆಯ ಒಂಬತ್ತು ಅಕ್ಷರಗಳು ಒಂದರಿಂದ ಒಂಬತ್ತರವರೆಗಿನ ಅಂಕಿಗಳನ್ನೂ, ಅನಂತರದ ಒಂಬತ್ತು ಅಕ್ಷರಗಳು ಹತ್ತು, ಇಪ್ಪತ್ತು, ಮೂವತ್ತು ಇತ್ಯಾದಿಗಳನ್ನೂ, ಕೊನೆಯ ಒಂಬತ್ತು ಅಕ್ಷರಗಳು ನೂರು, ಇನ್ನೂರು, ಮುನ್ನೂರು, ಮುಂತಾದ ಮೌಲ್ಯಗಳನ್ನು ಸೂಚಿಸುತ್ತಿದ್ದವು. ಇದಕ್ಕಾಗಿ ಗ್ರೀಕ್ ವರ್ಣಮಾಲೆಯ 24 ಅಕ್ಷರಗಳಿಗೆ ಮೂರು ಹೊಸ ಅಕ್ಷರಗಳನ್ನು ಸೇರಿಸಿ 27 ಸಂಕೇತಗಳನ್ನು ಮಾಡಲಾಗಿದ್ದಿತು.

ರೋಮನ್ ಅಂಕಿಗಳು ಬಹು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದು, ಇಂದಿಗೂ ಉಪಯೋಗಿಸಲ್ಪಡುತ್ತಿವೆ. ಇವುಗಳಲ್ಲಿ ನಾಲ್ಕೈದು ಸಂಕೇತಗಳನ್ನು ಮಾತ್ರ ಉಪಯೋಗಿಸಲಾಗಿದ್ದು, ಇವುಗಳನ್ನು ವಿವಿಧ ರೀತಿಯಲ್ಲಿ ಸೇರಿಸಿ ಬರೆಯುವುದರಿಂದ ಮಿಕ್ಕ ಅಂಕಿಗಳು ಉಂಟಾಗುತ್ತವೆ. ಆದುದರಿಂದ ಈ ವಿಧಾನವು ಬಹಳ ಸರಳವಾಗಿದೆಯೆಂದೂ ಸುಲಭವಾಗಿ ಗುರುತಿಸಲು ಅನುಕೂಲವಾಗಿದೆಯೆಂದೂ ಹೇಳಬಹುದು. ಪ್ರ.ಶ.ಪೂ 3ನೆಯ ಶತಮಾನದಲ್ಲಿ ಈ ಅಂಕಿಗಳು ಬಳಕೆಯಲ್ಲಿದ್ದರೂ ಆ ಕಾಲಕ್ಕಿಂತ ಇವು ಎಷ್ಟು ಹಿಂದಿನವು ಎಂದು ಹೇಳಲು ಆಧಾರಗಳು ದೊರಕಿಲ್ಲ. ರೋಮನ್ ಅಂಕಿಗಳು ಹೈರೋಗ್ಲಿಫಿಕ್ ಎಂದು ಹೇಳಲು ಆಧಾರಗಳು ದೊರಕಿಲ್ಲ. ರೋಮನ್ ಅಂಕಿಗಳು ಹೈರೋಗ್ಲಿಫಿಕ್ ಅಂಕಿಗಳಿಂದ ಉಗಮವಾದವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಹೀಬ್ರೂ ಬರೆವಣಿಗೆಯಲ್ಲಿ ವರ್ಣಮಾಲೆಯ ಅಕ್ಷರಗಳೇ ಅಂಕಿಗಳನ್ನು ಸೂಚಿಸಲು ಉಪಯೋಗಿಸಲ್ಪಡುತ್ತಿದ್ದುವು. ಅಮೆರಿಕದ ಮಾಯಾ ಸಂಸ್ಕೃತಿಯಲ್ಲಿ ಒಂದು ಬಿಂದುವು ಒಂದು ಎಂಬ ಅಂಕಿಯನ್ನೂ ಎರಡು ಬಿಂದುಗಳು ಎರಡು ಎನ್ನುವ ಅಂಕಿಯನ್ನೂ ಒಂದು ಅಡ್ಡಗೆರೆಯು ಐದು ಎಂಬ ಅಂಕಿಯನ್ನೂ ಸೂಚಿಸುತ್ತಿದ್ದುವು. ಇವುಗಳನ್ನು ವಿವಿಧ ರೀತಿಯಲ್ಲಿ ಸೇರಿಸುವುದರಿಂದ ದೊಡ್ಡ ಮೌಲ್ಯದ ಅಂಕಿಗಳನ್ನು ಬರೆಯುತ್ತಿದ್ದರು. ಎರಡು ಅಡ್ಡಗೀರು ( = ) ಗಳನ್ನು ಬರೆಯುವುದರಿಂದ ಹತ್ತು ಎಂಬ ಅಂಕಿಯಾದರೆ, ಅದರ ಮೇಲೆ ಎರಡು ಬಿಂದುಗಳನ್ನು (≒)ಸೇರಿಸಿದರೆ ಹನ್ನೆರಡು ಎಂಬ ಅಂಕಿಯಾಗುತ್ತಿದ್ದಿತು.

ಭಾರತೀಯರು ಪ್ರಾಚೀನ ಕಾಲದಿಂದಲೂ ಗಣಿತಶಾಸ್ತ್ರದಲ್ಲಿ ಬಹಳ ಮುಂದುವರೆದಿದ್ದರೆಂದೂ ದಶಮಾಂಶ ಪದ್ಧತಿ ಮತ್ತು ಸೊನ್ನೆಯನ್ನು ಕಂಡುಹಿಡಿದವರೆಂದೂ ಖ್ಯಾತರಾಗಿದ್ದಾರೆ.

ಸಿಂಧೂ ನಾಗರಿಕತೆಯ ಲಿಪಿಯು ಇನ್ನೂ ಗೋಪ್ಯಲಿಪಿಯಾಗಿಯೇ ಉಳಿದಿರುವುದರಿಂದ ಆ ಕಾಲದ ಅಂಕಿಗಳ ವಿಚಾರದಲ್ಲಿ ನಮಗೆ ಏನೇನೂ ತಿಳಿದಿಲ್ಲ. ಅನಂತರದ ಅಶೋಕನ ಕಾಲದ ಬ್ರಾಹ್ಮೀಲಿಪಿಯ ಶಾಸನಗಳಲ್ಲಿ ಒಂದು, ನಾಲ್ಕು ಮತ್ತು ಆರು ಎಂಬ ಅಂಕಿಗಳ ಉಲ್ಲೇಖವನ್ನು ಕಾಣುತ್ತೇವೆ. ಆಮೇಲೆ ಆಳಿದ ಶಾತವಾಹನರ ಶಾಸನಗಳಲ್ಲಿ ಒಂದರಿಂದ ಒಂಬತ್ತರವರೆಗಿನ ಎಲ್ಲ ಸಂಖ್ಯೆಗಳನ್ನೂ ನೋಡುತ್ತೇವೆ. ಈ ಸಂಖ್ಯೆಗಳು ಕಾಲಕ್ರಮೇಣ ವಿಕಾಸ ಹೊಂದಿ ಭಾರತದ ದೇವನಾಗರಿ ಮತ್ತು ಇತರ ಪ್ರಾಂತೀಯ ಭಾಷೆಗಳ ಅಂಕಿಗಳಾಗಿ ಪರಿವರ್ತಿತವಾದುವು. ಅಂದರೆ ಭಾರತೀಯ ಅಂಕಿಗಳಿಗೆಲ್ಲ ಬ್ರಾಹ್ಮೀಅಂಕಿಗಳೇ ಮೂಲ.

ಕನ್ನಡದ ಅಕ್ಷರಗಳಂತೆಯೇ ಕನ್ನಡದ ಅಂಕಿಗಳೂ ಅಶೋಕನ ಕಾಲದ ಬ್ರಾಹ್ಮೀ ಅಂಕಿಗಳಿಂದಲೇ ಉಗಮವಾದುವು. ಈ ವಿಕಾಸವನ್ನು ಗಮನಿಸಲು ಬಾದಾಮಿ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣಿಚಾಳುಕ್ಯ, ಹೊಯ್ಸಳ, ವಿಜಯನಗರ, ಮೈಸೂರು ಅರಸರು– ಮುಂತಾದ ಕಾಲದ ಸಂಖ್ಯೆಗಳನ್ನು ಬಹು ಉಪಯುಕ್ತವಾದ ಹಂತಗಳನ್ನಾಗಿ ತೆಗೆದುಕೊಳ್ಳಬಹುದು.

ಅಶೋಕನ ಕಾಲದಲ್ಲಿ ಒಂದು ಎಂಬ ಸಂಖ್ಯೆ ಒಂದು ಸಣ್ಣ ಗೆರೆಯಿಂದ ಸೂಚಿಸಲ್ಪಡುತ್ತಿದ್ದಿತು. ರಾಷ್ಟ್ರಕೂಟರ ಕಾಲದಲ್ಲಿ ಈ ರೇಖೆಯು ಕಮಾನಿನಂತೆ ಬಾಗಿ, ಕಲ್ಯಾಣಿಚಾಳುಕ್ಯರ ಕಾಲದಲ್ಲಿ ಈಗಿರುವಂತೆಯೇ ಗುಂಡನೆಯ ರೂಪವನ್ನು ತಾಳಿತು. ಅಶೋಕನ ಕಾಲದ ಎರಡು ಎಂಬ ಸಂಖ್ಯೆಯ ರೂಪವು ನಮಗೆ ದೊರಕಿಲ್ಲವಾದರೂ ಸಾತವಾಹನರ ಕಾಲದಲ್ಲಿ ಇದು ಎರಡು ಅಡ್ಡ ರೇಖೆಗಳಿಂದ ಸೂಚಿತವಾಗುತ್ತಿದ್ದಿತು. ಕಾಲಕ್ರಮೇಣ ಈ ಎರಡು ರೇಖೆಗಳೂ ಬಲಭಾಗದಲ್ಲಿ ಸೇರಿಕೊಂಡು ಕೊಂಡಿಯಾಕಾರವನ್ನು ತಾಳಿ, ಎಡಭಾಗ ಸ್ವಲ್ಪ ಲಂಬವಾಯಿತು.

ಸಾತವಾಹನರ ಕಾಲದಲ್ಲಿ ಮೂರು ಎಂಬ ಅಂಕಿ ಮೂರು ಅಡ್ಡಗೆರೆಗಳನ್ನು ಒಳಗೊಂಡಿದ್ದಿತು. ಅನಂತರ ಈ ಮೂರು ರೇಖೆಗಳೂ ಒಂದಕ್ಕೊಂದು ಸೇರಿಕೊಂಡು ಡೊಂಕಾಗುತ್ತಾ ಬಂದುವು. ಅಶೋಕನ ಕಾಲದ ನಾಲ್ಕು ಎಂಬ ಸಂಖ್ಯೆಯ ರೂಪವು ಬ್ರಾಹ್ಮೀಲಿಪಿಯ ಕ ಎಂಬ ಅಕ್ಷರದಂತೆ ಇದ್ದು, ಬಾದಾಮಿ ಚಳುಕ್ಯರ ಕಾಲದಲ್ಲಿ ಎಡಭಾಗದ ಮೇಲಿನ ಮತ್ತು ಕೆಳಗಿನ ರೇಖೆಗಳು ದುಂಡಗಾಗುವ ಪ್ರವೃತ್ತಿಯನ್ನು ವ್ಯಕ್ತಪಡಿಸುತ್ತವೆ. ರಾಷ್ಟ್ರಕೂಟರ ಕಾಲದಲ್ಲಿ ಇನ್ನೂ ಗುಂಡಗಾಗಿ ಈಗಿನ ರೂಪಕ್ಕೆ ಸಮೀಪವಾಗುತ್ತದೆ. ಸಾತವಾಹನರ ಕಾಲದಲ್ಲಿ ಐದು ಎಂಬ ಅಂಕಿ ಎರಡು ರೂಪಗಳಲ್ಲಿ ದೊರೆಯುತ್ತದೆ. ಬಾದಾಮಿ ಚಳುಕ್ಯರ ಕಾಲದಲ್ಲಿ ಇದು ಗಮನಾರ್ಹವಾದ ಬದಲಾವಣೆಗಳನ್ನು ಹೊಂದುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಎರಡು ಕೊಂಡಿಗಳಂತೆ ಆಗುತ್ತದೆ. ಅಶೋಕನ ಕಾಲದ ಆರು ಎಂಬ ಸಂಖ್ಯೆ ಈಗಿನ ಸಂಖ್ಯೆಗೆ ಬಹು ಸಮೀಪವಾಗಿಯೇ ತೋರುತ್ತದೆ. ಸಾತವಾಹನರ ಕಾಲದಲ್ಲಿ ಏಳು ಎಂಬ ಸಂಖ್ಯೆ ಬ್ರಾಹ್ಮೀಲಿಪಿಯ ಖ ಎಂಬ ಅಕ್ಷರದಂತೆ ಇದೆ. ಕಾಲಕ್ರಮೇಣ ಅಗಲವು ಹೆಚ್ಚಾಗಿ ಈಗಿರುವ ರೂಪವನ್ನು ತಾಳುತ್ತದೆ. ಸಾತವಾಹನರ ಕಾಲದ ಎಂಟು ಎಂಬ ಸಂಖ್ಯೆ ಮೇಲೆ ಮತ್ತು ಕೆಳಗೆ ಒಂದೊಂದು ಕೊಂಡಿಯುಳ್ಳ ಲಂಬರೇಖೆಯಾಗಿದೆ. ಹೊಯ್ಸಳರ ಕಾಲದಲ್ಲಿ ಮೇಲ್ಭಾಗದ ಖಂಡವೃತ್ತವು ಮಾಯವಾಗಿ ಲಂಬರೇಖೆಯು ಬಲಗಡೆಗೆ ಬಾಗುತ್ತದೆ. ಇದೇ ರೂಪವೇ ಆಮೇಲೆ ಮುಂದುವರಿಯುತ್ತದೆ. ಶಾತವಾಹನರ ಕಾಲದಲ್ಲಿ ಒಂಬತ್ತು ಎಂಬ ಸಂಖ್ಯೆಯು ಈಗಿನ ಪ್ರಶ್ನಾರ್ಥಕ ಚಿಹ್ನೆಯಂತೆ ಕಾಣುತ್ತದೆ. ಕಲ್ಯಾಣಿಚಾಳುಕ್ಯರ ಕಾಲದಲ್ಲಿ ಈಗಿನ ರೂಪಕ್ಕೆ ಸಮೀಪವರ್ತಿಯಾದ ರೂಪವನ್ನು ತಾಳುತ್ತದೆ. ಅಲ್ಲಿಂದ ಮುಂದೆ ಇದೇ ರೂಪವೇ ಮುಂದುವರಿಯುತ್ತದೆ. ಸೊನ್ನೆ ಎಂಬ ಸಂಖ್ಯೆ ಅಶೋಕನ ಕಾಲದಿಂದ ಇಂದಿನವರೆಗೂ ಯಾವ ಬದಲಾವಣೆಯೂ ಇಲ್ಲದೆ ಮುಂದುವರಿಯುತ್ತಾ ಇರುವುದನ್ನು ಗಮನಿಸಬೇಕು. ಕನ್ನಡ ಸಂಖ್ಯೆಗಳ ವಿಕಾಸವನ್ನು ಈ ಹಿಂದಿನ ಚಿತ್ರವು ಸ್ಪಷ್ಟಗೊಳಿಸುತ್ತದೆ. (ಎ.ವಿ.ಎನ್.)

**ಅಂಕಿಗಳು (ಇತಿಹಾಸ)** : ಸಂಖ್ಯೆಗಳನ್ನು ಬರೆಯಲು ಉಪಯೋಗಿಸುವ ಚಿಹ್ನೆಗಳಿಗೆ ಅಂಕಿಗಳು (ಡಿಜಿಟ್ಸ್) ಎಂದು ಹೆಸರು. ಅಂಕಿಗಳು ಯಾವ ಯಾವ ದೇಶಗಳಲ್ಲಿ ಯಾವ ಯಾವ ರೂಪಗಳನ್ನು ತಾಳಿ ಬೆಳೆದವು, ಯಾವಾಗ ಆರಂಭವಾದುವು ಎಂಬ ವಿಷಯ ಕುತೂಹಲಕಾರಿಯಾಗಿದೆ.

ಪ್ರಪಂಚದ ಆದ್ಯಂತವೂ ಈಗ ದಾಶಮಿಕಸಂಖ್ಯಾಕ್ರಮದಲ್ಲಿ ಎಲ್ಲ ಸಂಖ್ಯೆಗಳನ್ನೂ ಬರೆಯುವುದು ರೂಢಿಯಲ್ಲಿದೆ. ಗಣಿತದ ಪರಿಕರ್ಮಗಳಿಗೆ ಸಹಾಯಕವಾಗಿದ್ದು ಅತಿಸುಲಭವಾಗಿರುವುದೇ ಇದರ ಶ್ರೇಷ್ಠತೆಗೆ ಕಾರಣ. ಈ ಕ್ರಮದಲ್ಲಿ ಒಂದು, ಎರಡು ಮುಂತಾಗಿ ಒಂಬತ್ತರವರೆಗಿರುವ ಸಂಖ್ಯೆಗಳಿಗೆ ಆಯಾ ಭಾಷಾಲಿಪಿಯಂತೆ ಚಿಹ್ನೆಗಳನ್ನು ಕೊಟ್ಟು, ಯಾವ ಸಂಖ್ಯೆಯೂ ಇಲ್ಲ ಎಂಬ ಶೂನ್ಯಭಾವನೆಗೂ ಒಂದು ಚಿಹ್ನೆಯನ್ನು ಕೊಟ್ಟು ಅದನ್ನು ಸೊನ್ನೆ ಎಂದು ಕರೆಯುತ್ತಾರೆ. ಈ ಹತ್ತು ಚಿಹ್ನೆಗಳಿಗೆ ಸ್ಥಾನಾನುಗುಣವಾಗಿ ಹತ್ತರ ಗುಣಕಗಳಲ್ಲಿ ಬೆಲೆಗಳನ್ನು ಕೊಟ್ಟು ಯಾವುದೇ ಸಂಖ್ಯೆಯನ್ನಾದರೂ ಈ ಚಿಹ್ನೆಗಳಿಂದ ಸಂಶಯರಹಿತವಾದ ರೀತಿಯಲ್ಲಿ ಬರೆಯಬಹುದೆಂಬುದೇ ದಾಶಮಿಕಕ್ರಮದ ಸ್ವರೂಪ. ಇವುಗಳ ಪೈಕಿ ಒಂದರಿಂದ ಒಂಬತ್ತರವರೆಗಿನ ಅಂಕಗಳು ಮೊದಲು ಜಾರಿಗೆ ಬಂದುವು ಎಂದೂ, ಸೊನ್ನೆಯ ಭಾವನೆಯೂ ಅದರ ಚಿಹ್ನೆಯ ಉಪಯೋಗಗಳೂ ತಡವಾಗಿ ಹುಟ್ಟಿದುವು ಎಂದೂ, ಪಾಶ್ಚಾತ್ಯರವಾದ. ದಾಶಮಿಕ ಸಂಖ್ಯಾಕ್ರಮದ ಸೃಷ್ಟಿಯು 4ನೆಯ ಶತಮಾನದ ವೇಳೆಗೆ ಆರಂಭವಾಗಿರಬಹುದೆಂದು ಹೇಳುತ್ತಾರೆ. ಭಾರತೀಯ ಇತಿಹಾಸ ಪುರಾಣಾದಿಗಳನ್ನು ಓದಿ ನಂಬುವವರಿಗೂ ಭಾರತದ ನಾಗರಿಕತೆ ಎಷ್ಟರಮಟ್ಟಿಗೆ ಇದ್ದಿರಬೇಕು ಎಂದು ಈ ಗ್ರಂಥಗಳಿಂದ ವಿಮರ್ಶಿಸುವವರಿಗೂ ಮೇಲಿನ ಹೇಳಿಕೆಯನ್ನು ಸ್ವೀಕರಿಸುವುದು ಸಾಧ್ಯವಾಗದು.

ಅರೇಬಿಯ ದೇಶದ ಚರಿತ್ರಕಾರರಲ್ಲಿ ಒಬ್ಬನಾದ ಅಬುಲ್‌ಹಸನ್ ಆಲ್‌ಮಸೂದಿ ಭಾರತದಲ್ಲೆಲ್ಲಾ ಸಂಚಾರಮಾಡಿ ತನ್ನ ಗ್ರಂಥದಲ್ಲಿ (ಪ್ರಶ. 943) ಈ ರೀತಿ ಬರೆದಿಟ್ಟಿರುವನು: ಸೃಷ್ಟಿಕರ್ತ ಬ್ರಹ್ಮನ ಆಜ್ಞೆಯಂತೆ ಋಷಿಗಳ ಸಮ್ಮೇಳನವೊಂದು ಒಂಬತ್ತು ಅಂಕಿಗಳನ್ನು ಹಿಂದೂಗಳ ಖಗೋಳಶಾಸ್ತ್ರವನ್ನು ಹಾಗೂ ಇತರ ಶಾಸ್ತ್ರಗಳನ್ನು ಸೃಷ್ಟಿಸಿತು ಭಾರತದ ಅತ್ಯಂತ ಪ್ರಾಚೀನಗ್ರಂಥಗಳಲ್ಲೊಂದಾದ ಯಜುರ್ವೇದಸಂಹಿತೆ (ವಾಜಸನೇಯಿ)ಯಲ್ಲಿ ಕೆಳಕಂಡ ಸಂಖ್ಯೆಗಳ ಪಟ್ಟಿ ದೊರಕುತ್ತದೆ. ಏಕ, ದಶ, ಶತ, ಸಹಸ್ರ, ಅಯುತ, ನಿಯುತ, ಪ್ರಯುತ, ಅರ್ಬುದ, ನ್ಯರ್ಬುದ, ಸಮುದ್ರ, ಮಧ್ಯ, ಅಂತ, ಪರಾರ್ಧ. ಪ್ರತಿಸಂಖ್ಯೆಯು ಹಿಂದಣ ಸಂಖ್ಯೆಯ ಹತ್ತರಷ್ಟು. ತೈತ್ತಿರೀಯ ಸಂಹಿತೆಯಲ್ಲೂ ಇದೇ ಪಟ್ಟಿಯಿದೆ. ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಇತರ ವೇದಭಾಗಗಳಲ್ಲಿ ಇದೇ ಪಟ್ಟಿಯಿದ್ದು ಮುಂದುವರಿಸಲ್ಪಟ್ಟಿದೆ. ದಶಗುಣೋತ್ತರಸಂಜ್ಞಾ ಎಂಬ ಹೆಸರು ಈ ಪಟ್ಟಿಗೆ ಸಮಂಜಸವಾಗಿಯೇ ಇದೆ.

ರಾಮಾಯಣದಲ್ಲಿ ಬಹು ದೊಡ್ಡ ಸಂಖ್ಯೆಗಳು ನಿರೂಪಿತವಾಗಿವೆ. ರಾವಣನ ಕಡೆಯ ಚಾರನೊಬ್ಬ ಕಪಿಸೈನ್ಯದ ಸಂಖ್ಯೆಯನ್ನು ವಿವರಿಸುತ್ತ, ಆ ಸಂಖ್ಯಾಕ್ರಮವನ್ನೂ ತಿಳಿಸುತ್ತಾನೆ. ಲಕ್ಷ, ಕೋಟಿ, ಶಂಖ, ಮಹಾಶಂಖ ಮುಂತಾಗಿ ಸಂಖ್ಯಾಕ್ರಮವು ಮಹೌಘದವರೆಗೂ ಹೋಗಿದೆ. ಮಧ್ಯೆ ಮಧ್ಯೆ ಬರುವ ಎಲ್ಲ ಸಂಖ್ಯೆಗಳನ್ನೂ ಇಲ್ಲಿ ಹೇಳಿಲ್ಲ. ಆಧುನಿಕ ಸಂಕೇತದಲ್ಲಿ ಒಂದು ಮಹೌಘ = $10^{55}$ (ಒಂದರ ಮುಂದೆ 55 ಸೊನ್ನೆಗಳು). ಕಪಿಸೈನ್ಯದ ಸಂಖ್ಯೆ $16^{22}$ ಕ್ಕೆ ಮೇಲ್ಪಟ್ಟು. ಈ ದೊಡ್ಡ ಸಂಖ್ಯೆಗಳಲ್ಲದೆ, ರಾಮಾಯಣದಲ್ಲಿ ಹನ್ನೆರಡು, ಹದಿನಾಲ್ಕು, ಹದಿನಾರು, ಮೂವತ್ತು, ನಲವತ್ತು, ನೂರು, ಮುನ್ನೂರೈವತ್ತು ಮುಂತಾದ ಸಂಖ್ಯೆಗಳು ಹೇರಳವಾಗಿ ಬರುತ್ತವೆ.

ವೇದಗಳಲ್ಲಿಯೂ ರಾಮಾಯಣದಲ್ಲಿಯೂ ಕಾಣಬರುವ ದಾಶಮಿಕ ಸಂಖ್ಯಾಕ್ರಮದ ಸ್ಪಷ್ಟ ತಿಳಿವಳಿಕೆಗೆ ಇಷ್ಟು ನಿದರ್ಶನ ಸಾಕು. ಹೀಗಿರುವಾಗ 4ನೆಯ ಶತಮಾನದವರೆಗೆ ಈ ಕ್ರಮವು ಇರಲಿಲ್ಲ. ಸೊನ್ನೆಯೆಂಬುದು ಇನ್ನೂ ತಡವಾಗಿ ಬಂದಿತು ಎಂಬ ಚರಿತ್ರೆಯ ಉಲ್ಲೇಖವನ್ನು ನಂಬುವುದು ಸುಲಭವಲ್ಲ.

ವೇದಗಳಲ್ಲಿ ತಿಳಿಸಲ್ಪಟ್ಟಿರುವ ಯಜ್ಞಯಾಗಾದಿ ವಿಧಾನಗಳಿಗೆ ಅಗ್ನಿವೇದಿಕೆಗಳನ್ನು ಖಚಿತವಾದ ರೂಪ ಅಳತೆಗಳಿಗೆ ಸರಿಯಾಗಿ ನಿರ್ಮಿಸಬೇಕಾಗಿತ್ತು. ಈ ರಚನಾ ಕ್ರಮಗಳು ಶುಲ್ವಸೂತ್ರಗಳೆಂಬ ಗ್ರಂಥದಲ್ಲಿ ಉಕ್ತವಾಗಿವೆ. ಇದರಲ್ಲಿ ಕಂಡುಬರುವ ಗಣಿತದ ಮಟ್ಟವೂ ಸ್ವರೂಪವೂ ಆಶ್ಚರ್ಯಕರವಾಗಿದೆ. 2ರ ವರ್ಗಮೂಲವನ್ನು ಪಡೆಯಲು, ಬೋಧಾಯನ ಆಪಸ್ತಂಬ ಕಾತ್ಯಾಯನ ಶುಲ್ವಸೂತ್ರಗಳಲ್ಲಿ ಕೆಳಗಿನ ಸೂತ್ರವನ್ನು ತಿಳಿಸಲಾಗಿದೆ.

ಸಮಸ್ಯ ದ್ವಿಕರಣೀ ಪ್ರಮಾಣಂ ತೃತೀಯೇನ ವರ್ಧಯೇತ್ ತಚ್ಚತುರ್ಥೇನಾತ ಚತುಸ್ತ್ರಿಂಶೋನೇನ ಸವಿಶೇಷತಃ(ಆಪಸ್ತಂಬ). ಆಧುನಿಕ ಭಾಷೆಯಲ್ಲಿ,

$$\sqrt{2} = 1 + \frac{1}{3} + \frac{1}{3\cdot 4} - \frac{1}{3\cdot 4\cdot 34}$$

ಇದು ಹೇಗೆ ಬಂತು, ವರ್ಗಮೂಲದ ಭಾವನೆ ಆಗ ಇತ್ತೆ, ಇದು ಸನ್ನಿಹಿತ ಬೆಲೆ (ಅಪ್ರಾಕ್ಸಿಮೇಟ್ ವ್ಯಾಲ್ಯು) ಮಾತ್ರ ಅಲ್ಲವೆ– ಎಂಬ ವಿಚಾರ ಈಗ ಬೇಡ. ಮೂರು ನಾಲ್ಕು ಮೂವತ್ತನಾಲ್ಕು ಎಂಬ ಸಂಖ್ಯೆಗಳನ್ನೂ ಊನ ಕಳೆಯುವಿಕೆ ಎಂಬ ಪರಿಕರ್ಮವನ್ನೂ ಗಮನಿಸಿದರೆ ಸಾಕು.

ಶುಲ್ವಸೂತ್ರಗಳ ಕಾಲ ಪ್ರ.ಶ.ಪೂ. 800. ಈ ಸಮಯದಲ್ಲಿ ದಾಶಮಿಕ ಸಂಖ್ಯಾಕ್ರಮವೂ ಭಿನ್ನರಾಶಿಗಳೂ ಅವುಗಳ ಸಂಕಲನ ವ್ಯವಕಲನವೂ ಇದ್ದುವು.

ಅಶ್ವಮೇಧಿಕೀ ವೇದಿಕೆಯು ತ್ರಾಪಿಜ್ಯದ ಆಕೃತಿಯಲ್ಲಿ $24\sqrt{2}, 30\sqrt{2}$ ಪ್ರಕ್ರಮಗಳಷ್ಟು ಶಿರ, ಪಾದಗಳನ್ನೂ $36\sqrt{2}$ಲಂಬವನ್ನೂ ಹೊಂದಿತ್ತು. ಕ್ಷೇತ್ರಫಲವನ್ನು 1944 ಪ್ರಕ್ರಮಗಳು (ಚದರ) ಎಂದು ಸರಿಯಾಗಿ ಕೊಟ್ಟಿದೆ. ಇದಕ್ಕೆ ಕ್ಷೇತ್ರಫಲದ ಸೂತ್ರವೂ ಸಂಕಲನ ಗುಣಾಕಾರಗಳೂ ಆವಶ್ಯಕ.

ಜೈನಧರ್ಮದಲ್ಲಿ ಗಣಿತಕ್ಕೆ ಹೆಚ್ಚು ಪ್ರಾಧಾನ್ಯವಿದ್ದು, ಅವರ ಧರ್ಮಗ್ರಂಥಗಳ ಒಂದು ಭಾಗಕ್ಕೆ 'ಗಣಿತಾನುಯೋಗ' ವೆಂದು ಹೆಸರು. ಆ ಧರ್ಮ ಗ್ರಂಥಗಳಲ್ಲಿ ಬಹು ಪುರಾತನವಾದ ಸೂರ್ಯಪ್ರಜ್ಞಪ್ತಿ, ಜಂಬೂದ್ವೀಪಪ್ರಜ್ಞಪ್ತಿ (ಪ್ರ.ಶ.ಪೂ 500) ಎಂಬ ಗ್ರಂಥಗಳಂತೆ, ಭೂಮಿಯು ಲಕ್ಷಯೋಜನ ವ್ಯಾಸವುಳ್ಳ ಒಂದು ವೃತ್ತ. ಪೂರ್ವ ಪಶ್ಚಿಮವಾಗಿ ಹಬ್ಬಿರುವ ಆರು ಪರ್ವತ ಶ್ರೇಣಿಗಳು ವೃತ್ತವನ್ನು ಏಳಾಗಿ ವಿಭಾಗಿಸಿವೆ. ಭೂಮಿಯ ಪರಿಧಿ ಮೂರು ಲಕ್ಷ ಹದಿನಾರು ಸಾವಿರದ ಇನ್ನೂರ ಇಪ್ಪತೇಳು ಯೋಜನ, ಮೂರು ಗವ್ಯೂತಿ, ನೂರಿಪ್ಪತ್ತೆಂಟು ಧನುಸ್ಸು, $13\frac{1}{2}$ ಅಡಿಗಳಿಗಿಂತ ಸ್ವಲ್ಪ ಅಧಿಕ ಎಂದು ಈ ಗ್ರಂಥಗಳಲ್ಲಿ ತಿಳಿಸಿದ್ದಾರೆ. ವೃತ್ತದ ಪರಿಧಿ $\pi d$ ($d$ =ವ್ಯಾಸ) ಎಂಬ ಸೂತ್ರದಿಂದ $\pi =$ û10 ಎಂದು ತೆಗೆದುಕೊಂಡು ಇದನ್ನು ಪಡೆದಿರಬೇಕು. ಇಲ್ಲಿ ಉಪಯೋಗಿಸಿರುವ ಕೋಷ್ಟಕ : 1 ಯೋಜನ = 4 ಗವ್ಯೂತಿ, 1 ಗವ್ಯೂತಿ = 2000 ಧನುಸ್ಸು, 1 ಧನು = 100 ಅಂಗುಲ. 10ರ ವರ್ಗಮೂಲವನ್ನು 13 ದಶಮಾಂಶಸ್ಥಾನಗಳವರೆಗೂ ಸರಿಯಾಗಿ ಪಡೆದಿದ್ದರೆಂದು ಇದರಿಂದ ತಿಳಿಯಬಹುದಾಗಿದೆ. ವೃತ್ತಕ್ಕೆ ಸಂಬಂಧಿಸಿದ ಇತರ ಅನೇಕ ವಿಷಯಗಳೂ ಅಂಕಿಗಳೂ ಈ ಗ್ರಂಥಗಳಲ್ಲಿ ದೊರಕುತ್ತವೆ. ಜೈನಮತ ಹುಟ್ಟುವ ವೇಳೆಗೆ ಅಂಕಗಣಿತ, ರೇಖಾಗಣಿತಗಳು ಅಭಿವೃದ್ಧಿ ಸ್ಥಿತಿಯಲ್ಲಿದ್ದುವೆಂಬುದಕ್ಕೆ ಈ ದೃಷ್ಟಾಂತಗಳೇ ಸಾಕು,

ಸಾರಾಂಶ ಇಷ್ಟು : ದಾಶಮಿಕ ಸಂಖ್ಯಾಕ್ರಮವೂ ಅದರ ತಳಹದಿಯ ಮೇಲೆ ಬೆಳೆದು ಬಂದ ಅಂಕಗಣಿತವೂ ಬಹು ಹಿಂದಿನ ಕಾಲದಿಂದಲೇ ಭಾರತದಲ್ಲಿ ಕಂಡುಬರುತ್ತವೆ. ಈ ಕಾಲ ಯಾವುದು ಎಂಬುದು ವೇದಗಳ, ರಾಮಾಯಣದ, ಕಾಲ ಯಾವುದು ಎಂಬ ಪ್ರಶ್ನೆಯನ್ನವಲಂಬಿಸಿದೆ. ಇಲ್ಲಿ ಇದರ ಚರ್ಚೆ ಅನಾವಶ್ಯಕ. ಅಲ್ಲಲ್ಲೇ ಸಿಕ್ಕಿದ ಶಿಲಾಶಾಸನಗಳ, ಮೊಹೆಂಜೊದಾರೊ ಹರಪ್ಪ ಉತ್ಖನನಗಳಲ್ಲಿ ದೊರೆತ ಅವಶೇಷಗಳ ಅಪರಿಪೂರ್ಣಜ್ಞಾನದ ಆಧಾರಗಳ ಮೇಲೆ ನಿರ್ಧಾರಮಾಡಿ, ದಾಶಮಿಕ ಸಂಖ್ಯಾಕ್ರಮವು ಈಚೀಚಿನದು, ಕ್ರಿಸ್ತಜನನಕ್ಕೆ ಮುಂಚೆಯಂತೂ ಇರಲೇ ಇಲ್ಲ ಎಂದು ತೀರ್ಮಾನಿಸುವುದು ಸರಿಯಲ್ಲವೆನಿಸುತ್ತದೆ.

ದಾಶಮಿಕ ಕ್ರಮದ ಜೊತೆಯಲ್ಲೇ ಇತರ ಕ್ರಮಗಳೂ ಇದ್ದಿರಬಹುದು. ಇದ್ದುವು ಎಂದೇ ಹೇಳಬಹುದು. ಎಲ್ಲ ಶಾಸ್ತ್ರಾರ್ಥ ವಿಷಯಗಳನ್ನೂ ಪದ್ಯ ರೂಪದಲ್ಲೇ ಬರೆದಿಡುವುದು ಪದ್ಧತಿಯಾಗಿದ್ದುದರಿಂದ ಸಂಖ್ಯೆಗಳನ್ನು ಪದ್ಯಕ್ಕೆ ಅಳವಡಿಸಿಕೊಳ್ಳುವುದಕ್ಕೆ ಶಬ್ದಸಂಖ್ಯೆಗಳು, ಅಕ್ಷರಸಂಖ್ಯೆಗಳು ಮುಂತಾದ ಉಪಾಯಗಳನ್ನು ಕಲ್ಪಿಸಿಕೊಂಡಿದ್ದರು. ದೇವನಾಗರಿಲಿಪಿಯ ವರ್ಗೀಯವ್ಯಂಜನಗಳಿಗೆ 1 - 25 ರ ವರೆಗೂ ಅವರ್ಗೀಯ ವ್ಯಂಜನಗಳಿಗೆ 30,40 ಇತ್ಯಾದಿಯಾಗಿಯೂ ಬೆಲೆಗಳನ್ನು ಕೊಟ್ಟು ಸ್ವರಗಳಿಗೆ 10ರ ಗುಣಕಗಳನ್ನು ಕೊಡುವುದು ಒಂದು ಕ್ರಮವಾಗಿತ್ತು. ಇದರಂತೆ, ಖ್ಯ=ಖ + ಯ = 2 + 30 = 32. ಖ್ಯು = ಖ+ಯ+ಉ = 32000 ಇತ್ಯಾದಿ. ಅಕ್ಷರಸಂಖ್ಯೆಗಳಿಗೆ ಕನ್ನಡ ವ್ಯಾಕರಣದಲ್ಲೇ ಉದಾಹರಣೆಗಳಿವೆ. ಶರ ಕುಸುಮ ಭೋಗ ಭಾಮಿನಿ।ಪರಿವರ್ಧಿನಿ ವಾರ್ಧಿಕಂಗಳೆಂಬಾರುತೆರಂ॥ ಕರಿದಶರವಿ ಮನುರಾಜರ್ 1 ಬರೆ ವಿಂಶತಿ ಮಾತ್ರೆಯಿಂದೆ ಷಟ್ಪದಿ ಮೆರೆಗುಂ॥ ಇಲ್ಲಿ ಕರಿ = 8, ರವಿ = 12, ಮನು=14, ರಾಜ=16.

ಪದ್ಯ ರಚನೆಯ ಅನುಕೂಲಕ್ಕಾಗಿ ಕಲ್ಪಿಸಿಕೊಂಡ ಈ ವಿಧಾನಗಳು ದಾಶಮಿಕ ಸಂಖ್ಯಾಕ್ರಮವಿಲ್ಲದಿದ್ದುದಕ್ಕೆ ಸಾಕ್ಷಿ ಎಂದು ವಾದಿಸುವುದರಲ್ಲಿ ಅರ್ಥವಿಲ್ಲ.

ಅಂಕಿಗಳಿಗೆ ನಾನಾ ಭಾಷೆಗಳಲ್ಲಿ ಲಿಪಿಗಳು ಬೆಳೆದು ಬಂದ ಚರಿತ್ರೆಯು ಪ್ರಾಕ್ತನ ಶಾಸ್ತ್ರಕ್ಕೆ(ಆರ್ಕಿಯಾಲಜಿ) ಸಂಬಂಧಿಸಿದ್ದು. ಹಿಂದಿನ ಕಾಲದಿಂದಲೂ ಖರೋಷ್ಠಿ, ಬ್ರಾಹ್ಮೀ ಎಂಬ ಲಿಪಿಗಳಿದ್ದುವೆಂದೂ ಫೀನೀಷಿಯ, ಈಜಿಪ್ಟ್ ಮುಂತಾದ ದೇಶಗಳಲ್ಲಿ ಬೇರೆ ಬೇರೆ ಲಿಪಿಗಳಿದ್ದುವೆಂದೂ ಕಾಲಾನುಗುಣಕ್ಕೆ ತಕ್ಕಂತೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಭಾಷೆಗಳು ಬೆಳೆದಂತೆಲ್ಲ ಅಂಕಿಗಳ ಲಿಪಿಗಳೂ ಒಂದು ಸ್ಥಿರ ರೂಪಕ್ಕೆ ಕ್ರೋಡೀಕೃತವಾದುವೆಂದೂ ಹೇಳಬಹುದು. ಭಾರತದ ಪ್ರಾಚೀನ ಭಾಷೆಯಾದ ದೇವನಾಗರಿ ಅಂಕಲಿಪಿಗೂ ಆಧುನಿಕ ಭಾಷೆಗಳಾದ ಬಂಗಾಳಿ, ಗುಜರಾತಿ, ತೆಲುಗು, ಕನ್ನಡ ಮುಂತಾದ (ತಮಿಳನ್ನು ಹೊರತು ಪಡಿಸಿ) ಭಾಷೆಗಳ ಅಂಕಲಿಪಿಗೂ ಕ್ರಮ ಕ್ರಮವಾಗಿ ಹೋಲಿಕೆಗಳನ್ನು ಕಾಣಬಹುದು. ಇಂಗ್ಲಿಷ್ ಅಥವಾ ಲ್ಯಾಟಿನ್ ಲಿಪಿಯ 0, 1, 2, 3, 4 ಎಂಬುವಕ್ಕೂ ದೇವನಾಗರೀ ಅಥವಾ ಭಾರತದ ಇತರ ಭಾಷೆಗಳ ಲಿಪಿಗೂ ಹೋಲಿಕೆ ಬಹುಮಟ್ಟಿಗೆ ಇದೆ. ಉಳಿದ ಅಂಕಿಗಳಿಗೆ ಇಲ್ಲ. ಹಲವಾರು ಸಂಸ್ಕೃತಿಗಳು ಕಲೆತು ಭಾಷೆಯೂ ಭಾಷಾಲಿಪಿಯೂ ಬೆಳೆದು ಬಂದು ಏಕತೆಯನ್ನು ಹಾಗೆಯೇ ಭಿನ್ನತೆಗಳನ್ನು ತಾಳಿರುವುದು ಸ್ವಾಭಾವಿಕವೇ. (ಸಿ.ಎನ್.ಎಸ್.)

**ಅಂಕುರತ್ವರಣ :** ಸಸ್ಯಗಳ ಬೆಳವಣಿಗೆಯ ಆವಶ್ಯಕತೆಗಳಲ್ಲಿ ಉಷ್ಣತೆ ಬಹು ಮುಖ್ಯವಾದುದು; ದ್ಯುತಿಸಂಶ್ಲೇಷಣೆ (ಫೋಟೊಸಿಂತೆಸಿಸ್), ಉಸಿರಾಡುವಿಕೆ, ನೀರು ಮತ್ತು ಲವಣಗಳನ್ನು ಬೇರುಗಳ ಮುಖಾಂತರ ಹೀರುವುದು, ಇತ್ಯಾದಿ ಶರೀರದ ಕ್ರಿಯೆಗಳಿಗೂ ಉಷ್ಣತೆ ಆವಶ್ಯಕ; ಇವುಗಳ ಪೈಕಿ ಯಾವುದಾದರೂ ಬದಲಾವಣೆ ಕಂಡುಬಂದರೆ ಒಟ್ಟಿನಲ್ಲಿ ಬೆಳವಣಿಗೆಯ ಮೇಲೆ ಪರಿಣಾಮವಾಗುತ್ತದೆ. ಹೂ ಬಿಡುವುದಕ್ಕೆ ಬೆಳಕು ಮತ್ತು ಉಷ್ಣತೆ ಮುಖ್ಯವಾಗಿ ಬೇಕು. ಉಷ್ಣತೆಗೆ ಅನುಗುಣವಾಗಿ ಕೆಲವು ಸಸ್ಯಗಳು ತಗ್ಗಿದ ಉಷ್ಣತೆಗಳಲ್ಲೂ ಕೆಲವು ಸಸ್ಯಗಳು ಅಧಿಕ ಉಷ್ಣತೆಗಳಲ್ಲೂ ಮತ್ತೆ ಕೆಲವು ಸಸ್ಯಗಳು ಮಧ್ಯಸ್ಥಿತಿಯ ಉಷ್ಣತೆಗಳಲ್ಲೂ ಇನ್ನು ಕೆಲವು ಸಸ್ಯಗಳು ಬಹು ವ್ಯಾಪ್ತಿಯ ಉಷ್ಣತೆಗಳಲ್ಲೂ ಸ್ವಾಭಾವಿಕವಾಗಿ ಹೂ ಬಿಡುತ್ತವೆ. ಹೂ ಬಿಡುವಿಕೆಯ ಮೇಲೆ ತಗ್ಗಿದ ಉಷ್ಣತೆಯ ಪ್ರಭಾವವೇನು ಎಂಬುದನ್ನು ಸುಮಾರು ಒಂದು ಶತಮಾನದಿಂದಲೂ ವಿಜ್ಞಾನಿಗಳು ಪರಿಶೀಲಿಸುತ್ತಿದ್ದಾರೆ. ಕೆಲವು ಜಾತಿಯ ಸಸ್ಯಗಳ ಮೊಗ್ಗುಗಳು, ಎಲೆಗಳು ಅಥವಾ ಮೊಳಕೆಗಳನ್ನು ತಗ್ಗಿದ ಉಷ್ಣತೆಯಲ್ಲಿ ಬೆಳೆಸಿದರೆ ಅವು ಸ್ವಾಭಾವಿಕವಾಗಿ ಹೂ ಬಿಡುವುದಕ್ಕಿಂತ ಮುಂಚೆಯೇ ಹೂ ಬಿಡುತ್ತವೆ; ಹೀಗೆ ಕಾಲಕ್ಕೆ ಮೊದಲೇ ಹೂ ಬಿಡಿಸುವ ವಿಧಾನಕ್ಕೆ ಅಂಕುರತ್ವರಣ (ವರ್ನಲೈಜೇಷನ್) ಎಂದು ಹೆಸರು. ಇದನ್ನು ವಾಸಂತೀಕರಣವೆಂದೂ ಕರೆಯುತ್ತಾರೆ.

ಹೂಬಿಡುವಿಕೆಯ ಮೇಲೆ ತಗ್ಗಿದ ಉಷ್ಣತೆಯ ಪ್ರಭಾವವನ್ನು ಮೊದಲು ಸಂಶೋಧಿಸಿದವನು ಅಮೆರಿಕ ಸಂಯುಕ್ತಸಂಸ್ಥಾನದ ಕ್ಲಿಪರ್ಟ್ (1857) ಎಂಬ ವಿಜ್ಞಾನಿ. ಈ ವಿಚಾರವಾಗಿ ಸಂಶೋಧನೆ ಮಾಡಿದವರಲ್ಲಿ ಇಂಗ್ಲೆಂಡಿನ ಪರ್ವಿಸ್ ಮತ್ತು ಜರ್ಮನಿಯ ಕ್ಲೆಬ್ಸ್ ಮತ್ತು ಗ್ಯಾಸ್ನರ್ ಕೂಡ ಸೇರಿದ್ದಾರೆ. ಆದರೆ ಅದನ್ನು ವಿಶೇಷವಾಗಿ ಅಧ್ಯಯನ ಮಾಡಿದವನು ರಷ್ಯದೇಶದ ಲೈಸೆಂಕೋ ಎಂಬ ವಿಜ್ಞಾನಿ. ಅಂಕುರತ್ವರಣ ಎಂಬ ಪದವನ್ನು ಮೊದಲ ಬಾರಿಗೆ (1928) ಉಪಯೋಗಿಸಿದವನೂ ಈತನೇ. ಈತ ಮುಖ್ಯವಾಗಿ ಗೋದಿ ಸಸ್ಯದ ಮೇಲೆ ಸಂಶೋಧನೆ ನಡೆಸಿದನು.

ರಷ್ಯ ದೇಶದಲ್ಲಿ ಗೋದಿ ಬಹು ಮುಖ್ಯ ಬೆಳೆ. ಇದರಲ್ಲಿ ಎರಡು ತಳಿಗಳಿವೆ–ವಸಂತ ಋತುವಿನ ತಳಿ ಮತ್ತು ಚಳಿಗಾಲದ ತಳಿ. ಚಳಿಗಾಲದ ತಳಿ ವಸಂತ ಋತುವಿನ ತಳಿಗಿಂತ ಉತ್ತಮವಾಗಿದ್ದು ಹೆಚ್ಚು ಕಾಳುಗಳನ್ನು ಬಿಡುತ್ತದೆ. ಚಳಿಗಾಲದ ತಳಿಯನ್ನು ಶರತ್ಕಾಲದಲ್ಲಿ ಬಿತ್ತನೆ ಮಾಡಿದರೆ ಮುಂದಿನ ವರ್ಷದ ಬೇಸಗೆಯಲ್ಲಿ ಕೊಯಿಲು ಮಾಡಬಹುದು. ಅಂದರೆ ಅದಕ್ಕೆ ಚಳಿಗಾಲದ ತಗ್ಗಿದ ಉಷ್ಣತೆಯ ಆವಶ್ಯಕತೆಯಿರುತ್ತದೆ. ವಸಂತಋತುವಿನ ತಳಿಯನ್ನು ವಸಂತ ಋತುವಿನಲ್ಲಿ ಬಿತ್ತನೆ ಮಾಡಿದರೆ ಅದೇ ವರ್ಷದ ಶರತ್ಕಾಲದಲ್ಲಿ ಕೊಯಿಲು ಮಾಡಬಹುದು. ಆದುದರಿಂದ ಈ ತಳಿಗೆ ಚಳಿಗಾಲದ ತಗ್ಗಿದ ಉಷ್ಣತೆಯ ಆವಶ್ಯಕತೆಯಿರುವುದಿಲ್ಲ. ರಷ್ಯ ದೇಶದಲ್ಲಿ ಚಳಿಗಾಲದಲ್ಲಿ ವಿಪರೀತ ಚಳಿ ಇರುವುದರಿಂದ ಅನೇಕ ವೇಳೆ ಚಳಿಗಾಲದ ತಳಿಗಳು ಅತ್ಯಂತ ಚಳಿಗೆ ಸಿಕ್ಕಿ ನಾಶವಾಗುತ್ತಿದ್ದವು. ಲೈಸೆಂಕೋ ಚಳಿಗಾಲದ ತಳಿಯನ್ನು ವಸಂತ ಋತುವಿನ ತಳಿಯನ್ನಾಗಿ ಪರಿವರ್ತಿಸಲು ಪ್ರಯತ್ನಮಾಡಿ ಅದರಲ್ಲಿ ಸಂಪೂರ್ಣವಾಗಿ ಜಯಶೀಲನಾದನು. ಚಳಿಗಾಲದ ತಳಿಯನ್ನು ಬೀಜಗಳು ಮೊಳೆಯುತ್ತಿರುವಾಗ ಸುಮಾರು 2.5° – 3.5° ಸೆ. ಉಷ್ಣಾಂಶದಲ್ಲಿ 38 ದಿನಗಳ ಕಾಲ ಚಿಕಿತ್ಸೆ ಮಾಡಿದನು. ಚಿಕಿತ್ಸೆಮಾಡಿದ ಬೀಜಗಳನ್ನು ವಸಂತ ಋತುವಿನಲ್ಲಿ ಬಿತ್ತನೆ ಮಾಡಿದಾಗ ಅವು ಅದೇ ವರ್ಷ ಶರತ್ಕಾಲದಲ್ಲೇ ಕೊಯಿಲಿಗೆ ಬಂದುವು. ಅಂದರೆ ಚಳಿಗಾಲದ ತಳಿ ತಗ್ಗಿದ ಉಷ್ಣತೆಯ ಚಿಕಿತ್ಸೆಯಿಂದ ವಸಂತ ಋತುವಿನ ತಳಿಯಾಗಿ ಪರಿವರ್ತಿತವಾಯಿತು. ಇದೇ ರೀತಿ ಚಳಿಗಾಲದ ಜವೆಗೋದಿಯ ತಳಿಯ ಮೊಳೆಯುತ್ತಿರುವ ಬೀಜಗಳನ್ನು 2.5° – 3.5° ಸೆ. ಉಷ್ಣಾಂಶದಲ್ಲಿ 28 ದಿನಗಳ ಕಾಲ ಚಿಕಿತ್ಸೆ ಮಾಡಿ ಅದನ್ನು ವಸಂತ ಋತುವಿನ ತಳಿಯಾಗಿ ಮಾರ್ಪಡಿಸಿದನು. ಈ ಕ್ರಮದಿಂದ ಚಳಿಗಾಲದ ಗೋದಿಯ ತಳಿ ಮತ್ತು ಜವೆಗೋದಿ ಸ್ವಾಭಾವಿಕವಾಗಿ ಅತ್ಯಂತ ಚಳಿಗೆ ಸಿಕ್ಕಿ ನಾಶವಾಗುತ್ತಿದ್ದುದು ತಪ್ಪಿದಂತಾಯಿತು. ಈ ತತ್ತ್ವವನ್ನು ರಷ್ಯದಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ.

ಭಾರತದಲ್ಲೂ ಈ ತತ್ತ್ವವನ್ನು ಬತ್ತ, ಗೋದಿ ಮತ್ತು ಇತರ ಧಾನ್ಯಗಳ ಮೇಲೆ ಪ್ರಯೋಗಿಸಿದ್ದಾರೆ. ಅಂಕುರತ್ವರಣದ ಸಹಾಯದಿಂದ ಭಾರತದಂಥ ದೇಶಗಳಲ್ಲಿ ಪ್ರವಾಹಗಳಿಗೆ ಮತ್ತು ಅನಾವೃಷ್ಟಿಗೆ ಸಿಕ್ಕಿ ಬೆಳೆಗಳು ನಾಶವಾಗುವುದನ್ನು ತಪ್ಪಿಸಬಹುದು.

ಅಂಕುರತ್ವರಣದ ಚಿಕಿತ್ಸೆಗೆ ಸಾಮಾನ್ಯವಾಗಿ 4°–17° ಸೆ. ಉಷ್ಣತೆ ಬೇಕು. ಉಷ್ಣತೆಯ ಪ್ರಮಾಣ ಮತ್ತು ಚಿಕಿತ್ಸೆಗೆ ಬೇಕಾಗುವ ಕಾಲ ಬೇರೆ ಬೇರೆ ಸಸ್ಯಗಳಲ್ಲಿ ಬೇರೆ ಬೇರೆಯಾಗಿರಬಹುದು. ರೈ ಸಸ್ಯದಲ್ಲಿ ತಗ್ಗಿದ ಉಷ್ಣತೆಯ ಚಿಕಿತ್ಸೆ ಹೆಚ್ಚಾದಂತೆ ಬಿತ್ತನೆ ಮಾಡುವುದಕ್ಕೂ ಮತ್ತು ಕೊಯಿಲು ಮಾಡುವುದಕ್ಕೂ ಮಧ್ಯೆ ಇರುವ ಕಾಲವು ಕಡಿಮೆಯಾಗುತ್ತದೆ.

ಒಂದು ಸಾರಿ ತಗ್ಗಿದ ಉಷ್ಣತೆಯಿಂದ ಚಿಕಿತ್ಸೆ ಮಾಡಿದಮೇಲೆ ಆ ಭಾಗವನ್ನು ಅಧಿಕ ಉಷ್ಣತೆಯಿಂದ ಎಂದರೆ ಸು. 35° ಸೆ. ನಿಂದ ಚಿಕಿತ್ಸೆ ಮಾಡಿದರೆ (ಕೆಲವು ವೇಳೆ ಇಂಥ ಚಿಕಿತ್ಸೆಯನ್ನು ಒಂದೇ ಒಂದು ದಿವಸ ಮಾಡಿದರೂ ಸಾಕು) ತಗ್ಗಿದ ಉಷ್ಣತೆಯ ಪ್ರಭಾವ ತಪ್ಪಿ ಹೋಗುತ್ತದೆ. ಇದಕ್ಕೆ ಡೀವರ್ನಲೈಸೇಷನ್ ಎಂದು ಹೆಸರು. ಹೀಗೆ ಮಾಡಿದ ಭಾಗವನ್ನು ಮತ್ತೆ ತಗ್ಗಿದ ಉಷ್ಣತೆಯಿಂದ ಚಿಕಿತ್ಸೆ ಮಾಡಿದರೆ ಅದು ಮತ್ತೆ ಮೊದಲಿನಂತೆ ಆಗುತ್ತದೆ. ಎಂದರೆ ಅಂಕುರತ್ವರಣದ ಪ್ರಭಾವಕ್ಕೆ ಒಳಗಾಗುತ್ತದೆ. ಇದಕ್ಕೆ ರೀವರ್ನಲೈಸೇಷನ್ ಎಂದು ಹೆಸರು.

ಇತ್ತೀಚಿನ ಸಂಶೋಧನೆಗಳಲ್ಲಿ ಅಂಕುರತ್ವರಣದ ತತ್ತ್ವವನ್ನು ಅನೇಕ ಸಸ್ಯಗಳ ಮೇಲೆ ಉಪಯೋಗಿಸಿದ್ದಾರೆ. ಅಂಥ ಸಸ್ಯಗಳಲ್ಲಿ ಬಹು ಮುಖ್ಯವಾಗಿ ಪ್ರಯೋಗಗಳಿಗೆ ಒಳಗಾಗಿರುವ ಸಸ್ಯಗಳೆಂದರೆ ಹಯೋಸ್ಕೈಯಮಸ್ ನೈಗರ್ ಮತ್ತು ಸಿಕೇಲ್ ಸೀರಿಯೇಲ್ ಮುಖ್ಯವಾದವು. ಗಿಡಗಳ ತುದಿಯಲ್ಲಿರುವಂಥ ವರ್ಧನಾಂಗಗಳು (ಏಪಿಕಲ್ ಮೆರಿಸ್ಟೆಮ್ಸ್) ಮತ್ತು ಎಳೆಯ ಎಲೆಗಳು–ಎಂದರೆ ವಿಭಜನೆಯಾಗುತ್ತಿರುವ ಜೀವಕಣಗಳುಳ್ಳ ಪ್ರದೇಶಗಳು, ಅಂಕುರತ್ವರಣವನ್ನು ಅಂಗೀಕರಿಸುವ ಸ್ಥಾನಗಳು. ಈ ಚಿಕಿತ್ಸೆಯನ್ನು ಬೇರೆ ಬೇರೆ ಸಸ್ಯಗಳಲ್ಲಿ ಬೇರೆ ಬೇರೆ ಹಂತಗಳಲ್ಲಿ ಕೊಡಬೇಕಾಗುವುದು. ಧಾನ್ಯಗಳಲ್ಲಿ ಬರೀ ಭ್ರೂಣಕ್ಕೆ ಉಪಚಾರ ಮಾಡಿದರೆ ಸಾಕು; ಇಡೀ ಗಿಡವನ್ನು ಚಿಕಿತ್ಸೆಗೆ ಗುರಿಪಡಿಸಬೇಕಾಗಿಲ್ಲ. ಮತ್ತೆ ಕೆಲವು ಸಸ್ಯಗಳಲ್ಲಿ ಇಡೀ ಸಸ್ಯಗಳು ಬೀಜಗಳಂತೆಯೇ ಚಿಕಿತ್ಸೆಗೆ ಹೊಂದಿಕೊಳ್ಳುತ್ತವೆ. ಅರಬಿಡಾಪ್‌ಸಿಸ್ ತ್ಯಾಲೈನ ಸಸ್ಯವು ಈ ಗುಂಪಿಗೆ ಸೇರಿದೆ. ದ್ವೈವಾರ್ಷಿಕ ತಳಿಯ ಹೆನ್ಬೇನ್ ಸಸ್ಯದಲ್ಲಿ ಚಿಕಿತ್ಸೆಯನ್ನು ಸಸ್ಯವು ಎಲೆಗಳನ್ನು ಬಿಟ್ಟ ಮೇಲೆ ಮಾಡಿದರೆ ಪ್ರಯೋಜನವಾಗುತ್ತದೆ. ಸಸ್ಯಕ್ಕೆ ಕೊನೆಯ ಪಕ್ಷ 10 ದಿನಗಳಾದರೂ ವಯಸ್ಸಾಗಿರಬೇಕು. ಈ ಗಿಡದ ಬೀಜಕ್ಕೇ ಆಗಲಿ ಭ್ರೂಣಕ್ಕೇ ಆಗಲಿ ಉಪಚಾರ ಮಾಡಿದರೆ ಅದು ಪರಿಣಾಮಕಾರಿಯೆನಿಸುವುದಿಲ್ಲ.

ಅಂಕುರತ್ವರಣಕ್ಕೆ ತಗ್ಗಿದ ಉಷ್ಣತೆಯ ಜೊತೆಗೆ ನೀರು, ಆಕ್ಸಿಜನ್ ಮತ್ತು ಪಿಷ್ಟ ಪದಾರ್ಥಗಳ ಗುಂಪಿಗೆ ಸೇರಿದ ಆಹಾರಗಳಂಥ ಕೆಲವು ಸಹಾಯಕ ಅಂಶಗಳು ಬೇಕು.

ಒಣಗಿದ ಬೀಜಗಳನ್ನು ತಗ್ಗಿದ ಉಷ್ಣತೆಯಿಂದ ಚಿಕಿತ್ಸೆ ಮಾಡುವುದಕ್ಕಾಗುವುದಿಲ್ಲ. ಬೀಜಗಳು ನಿರ್ದಿಷ್ಟ ಪ್ರಮಾಣದಲ್ಲಿ ನೀರನ್ನು ಹೀರಿಕೊಂಡ ಮೇಲೇ ಇದು ಸಾಧ್ಯ. ಅಲ್ಲದೆ ಆಕ್ಸಿಜನ್ನಿನ ಅವಶ್ಯಕತೆ ಸ್ವಲ್ಪವಿದ್ದರೂ ಅದು ಬೇಕೇಬೇಕು. ಉದಾಹರಣೆಗೆ ಕಾಳುಗಳನ್ನು ಅಪ್ಪಟ ನೈಟ್ರೊಜನ್ ವಾತಾವರಣದಲ್ಲಿಟ್ಟು ಅವಕ್ಕೆ ಸಾಕಾದಷ್ಟು ನೀರನ್ನು ಒದಗಿಸಿದರೂ ಅವು ತಗ್ಗಿದ ಉಷ್ಣತೆಯ ಚಿಕಿತ್ಸೆಗೆ ಒಳಗಾಗುವುದಿಲ್ಲ. ಜೊತೆಗೆ ಉಷ್ಣತೆಯ ಚಿಕಿತ್ಸೆ ಯಶಸ್ವಿಯಾಗಬೇಕಾದರೆ ಸಸ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪಿಷ್ಟ ಪದಾರ್ಥಗಳ ಗುಂಪಿಗೆ ಸೇರಿದ ಆಹಾರಗಳೂ ಇರಬೇಕು.

ನೀರು, ಆಕ್ಸಿಜನ್ ಮತ್ತು ಪಿಷ್ಟ ಪದಾರ್ಥಗಳ ಗುಂಪಿಗೆ ಸೇರಿದ ಆಹಾರಗಳು ಉಸಿರಾಡುವಿಕೆಗೂ ಅಗತ್ಯವಾಗಿರುವುದರಿಂದ ಅಂಕುರತ್ವರಣಕ್ಕೂ ಉಸಿರಾಡುವಿಕೆಗೂ ನಿಕಟ ಸಂಬಂಧವಿದೆಯೆಂದು ಪರಿಗಣಿಸಬಹುದು.

ಅಂಕುರತ್ವರಣವು ಸಸ್ಯವನ್ನು ಹೂ ಬಿಡುವಂತೆ ಪ್ರಚೋದಿಸುವುದಿಲ್ಲ; ಆದರೆ ಅದನ್ನು ಹೂ ಬಿಡುವುದಕ್ಕೆ ಸಿದ್ಧಮಾಡುತ್ತದೆ. ಹೂ ಬಿಡುವುದಕ್ಕೆ ಫ್ಲಾರಿಜನ್ ಎಂಬ ಹಾರ್ಮೋನು ಆವಶ್ಯಕವೆಂದು ಈಚೆಗೆ ತಿಳಿದುಬಂದಿದೆ. ಈ ಹಾರ್ಮೋನು ಕಾಂಡದ ತುದಿಯಲ್ಲಿ ಉತ್ಪತ್ತಿಯಾಗಿ ಕಾಂಡದ ತುದಿಯು ಹೂ ಆಗಿ ಪರಿವರ್ತನೆಯಾಗುವುದಕ್ಕೆ ಸಹಾಯ ಮಾಡುತ್ತದೆ. ಹಯೋಸ್ಕೈಯಮಸ್ ನೈಗರ್ ಸಸ್ಯದಲ್ಲಿ ನಡೆಸಲಾದ ಕೃಷಿ ಪ್ರಯೋಗಗಳಿಂದ ವರ್ನಲಿನ್ ಎಂಬ ಮತ್ತೊಂದು ಹಾರ್ಮೋನು ಇದೆಯೆಂದೂ ತಿಳಿದುಬಂದಿದೆ. ಕೆಲವು ಪ್ರಯೋಗಗಳಲ್ಲಿ ತಗ್ಗಿದ ಉಷ್ಣತೆಯ ಚಿಕಿತ್ಸೆಗೆ ಬದಲಾಗಿ ಗಿಬರೆಲಿನ್ ಗುಂಪಿನ ಹಾರ್ಮೋನುಗಳ ಚಿಕಿತ್ಸೆ ಮಾಡಬಹುದು. ಉದಾಹರಣೆಗೆ ಮೈಯೋಸೋಟಸ್ ಅಲ್ಪೆಸ್ಟ್ರಿಸ್ ಸಸ್ಯವು ಹೂ ಬಿಡುವುದಕ್ಕೆ ತಗ್ಗಿದ ಉಷ್ಣತೆ ಅಗತ್ಯ. ಆದರೆ ಇದಕ್ಕೆ ಗಿಬರೆಲಿನ್ A7 ಅಥವಾ A1 ಚಿಕಿತ್ಸೆ ಮಾಡಿದರೆ ಈ ಸಸ್ಯವು ತಗ್ಗಿದ ಉಷ್ಣತೆಯ ಸಹಾಯವಿಲ್ಲದೆಯೇ ಹೂ ಬಿಡುತ್ತದೆ. A7 ಎಂಬುದು A1 ಕ್ಕಿಂತ ಪ್ರಬಲವಾದುದು. ಇದರಿಂದ ಅಂಕುರತ್ವರಣಕ್ಕೂ ಗಿಬರೆಲಿನ್ ಗುಂಪಿನ ಹಾರ್ಮೋನುಗಳಿಗೂ ಸಂಬಂಧವಿದೆ ಎಂದು ತಿಳಿಯಬಹುದು.

ಅಂಕುರತ್ವರಣದ ಲಕ್ಷಣ, ಪ್ರಭಾವ, ಪರಿಣಾಮ, ವಿಧಾನ– ಇವೆಲ್ಲಾ ಗೊತ್ತಾಗಿದ್ದರೂ ಅದಕ್ಕೆ ಸಂಬಂಧಪಟ್ಟ ಜೀವರಸಾಯನ ಕ್ರಿಯೆಗಳ ವಿಚಾರವಾಗಿ ಇನ್ನೂ ಹೆಚ್ಚಿನ ಸಂಶೋಧನೆಗಳು ಆಗಬೇಕಾಗಿದೆ. ಅಂಕುರತ್ವರಣದ ಮೇಲೆ ಪ್ರಭಾವ ಬೀರಿರುವ ಫ್ಲಾರಿಜನ್, ವರ್ನಲಿನ್ ಮತ್ತು ಗಿಬರೆಲಿನ್ ಹಾರ್ಮೋನುಗಳ ಪಾತ್ರ ಏನು ಮತ್ತು ಅವು ಹೇಗೆ ವರ್ತಿಸುತ್ತವೆ ಎಂಬುದು ಇನ್ನೂ ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಆದರೆ ವಿಜ್ಞಾನದ ಈಗಿನ ಪ್ರಗತಿಯನ್ನು ಗಮನಿಸಿದರೆ ಆ ಸಮಸ್ಯೆಗಳಿಗೆ ಬಹುಬೇಗ ಪರಿಹಾರ ದೊರಕಬಹುದು ಎಂದು ಹೇಳಬಹುದು. (ಎಂ.ಎಸ್.)

**ಅಂಕುಶ ಕಪಾಲಿ :** ಮುಳ್ಳು ತಲೆಯ ಈ ಪ್ರಾಣಿಗಳು (ಅಕ್ಯಾಂತೋಸಿಫ್ಯಾಲ) ಗುಂಪಿಗೆ ಸೇರಿದ ಪರತಂತ್ರ ಜೀವಿಗಳು, ಪ್ರೌಢಾವಸ್ಥೆಯಲ್ಲಿ ಮೀನು, ಹಕ್ಕಿ ಮತ್ತು ಸಸ್ತನಿಗಳ ಕರುಳಿನಲ್ಲಿಯೂ ಡಿಂಬಾವಸ್ಥೆಯಲ್ಲಿ (ಲಾರ್ವಾ) ಸಂಧಿಪದಿಗಳ ದೇಹದಲ್ಲಿಯೂ ವಾಸಿಸುತ್ತವೆ. ಇವುಗಳ ದೇಹದ ಮುಂಭಾಗದಲ್ಲಿ ಒಂದು ಸೊಂಡಿಲು ಇರುತ್ತದೆ. ಅದರ ಮೇಲೆ ಹಿಮ್ಮುಖವಾಗಿ ಬಾಗಿದ ಮುಳ್ಳುಗಳಿರುತ್ತವೆ. ಆದ್ದರಿಂದಲೇ ಈ ಗುಂಪಿನ ಪ್ರಾಣಿಗಳಿಗೆ ಮುಳ್ಳುತಲೆಯ ಪ್ರಾಣಿಗಳೆಂದು ಹೆಸರು. ಆಶ್ರಯ ಜೀವಿಯಿಂದ ಹೊರಕ್ಕೆ ತೆಗೆದಾಗ ಇವು ದುಂಡಗೆ ಸೆಟೆದುಕೊಳ್ಳುತ್ತವೆ.

ಅಂಕುಶ ಕಪಾಲಿಗಳ ದೇಹವನ್ನು, ಚೂಪಾದ ಮುಳ್ಳುಗಳಿಂದ ಕೂಡಿದ ಸೊಂಡಿಲು, ಕತ್ತು ಮತ್ತು ಮುಂಡ ಎಂದು ಮೂರು ಭಾಗವಾಗಿ ವಿಂಗಡಿಸಬಹುದು. ಸೊಂಡಿಲಿನ ಮೇಲೆ ಕ್ರಮವಾಗಿ, ಹಿಂದಕ್ಕೆ ಬಾಗಿದ ಮುಳ್ಳುಗಳು ಹರಡಿವೆ. ಸೊಂಡಿಲು ಒಂದು ಕೋಶದೊಳಗೆ ಹುದುಗಿದೆ. ಈ ಪ್ರಾಣಿಯು ಸ್ನಾಯುಗಳ ಸಹಾಯದಿಂದ ಸೊಂಡಿಲನ್ನು ಕೋಶದೊಳಕ್ಕೆ ಎಳೆದುಕೊಳ್ಳುತ್ತದೆ, ಮತ್ತು ಹೊರಕ್ಕೆ ತಳ್ಳುತ್ತದೆ. ದೇಹ ದುಂಡಾಗಿ ಅಥವಾ ಚಪ್ಪಟೆಯಾಗಿರುತ್ತದೆ. ವಲಯಗಳಾಗಿ ವಿಭಾಗವಾಗಿಲ್ಲ. ಹಿಗ್ಗಲೂಬಹುದು, ಕುಗ್ಗಲೂಬಹುದು. ಹೊರಭಾಗದಲ್ಲಿ ಒಂದು ತೆಳುವಾದ ರಕ್ಷಣಾ ಪೊರೆ(ಕ್ಯೂಟಿಕಲ್)




**ಚಿತ್ರ 1. ಗಂಡು**

1. ಹಿಂದಕ್ಕೆ ಬಾಗಿರುವ ಮುಳ್ಳು. 2. ಸೊಂಡಿಲು. 3. ನರಮುಡಿ. 4. ಗುಂಡಾದ ಬೀಜಗಳು. 5. ಸಿಮೆಂಟ್ ಗ್ರಂಥಿ. 6. ಸಿಮೆಂಟ್ ಸಂಗ್ರಹಾಲಯ. 7. ಬರ್ಸ. 8. ಸಿರ್ರಸ್ 9. ಮಧ್ಯಾವಕಾಶ. 10. ಸ್ನಾಯು. 11. ಲೆಮ್ನಿಸ್ಕೈ




**ಚಿತ್ರ 2. ಹೆಣ್ಣು**

1. ಲಿಗಮೆಂಟ್. 2. ತತ್ತಿ. 3. ಭ್ರೂಣ. 4. ಯೋನಿಮಾರ್ಗ

ಇದೆ. ಇದು ಹೊರಚರ್ಮದಿಂದ ರೂಪುಗೊಂಡಿದೆ. ಇದರ ಕೆಳಗೆ ಒಳಚರ್ಮವೂ ಒಳಭಾಗದ ಮಾಂಸ ಪದರಗಳೂ ಇವೆ. ಕತ್ತಿನಲ್ಲಿ ಒಳಚರ್ಮದಿಂದ ರೂಪುಗೊಂಡ ಲಾಡಿಯಂತಿರುವ ಎರಡು ಲೆಮ್‌ನಿಸ್ಕೈ ಎಂಬುವು ಇದೆ, ಇವು ದೇಹದ ದೇಹಾಂತರಾವಕಾಶದವರೆಗೂ ಪಸರಿಸಿರುತ್ತದೆ. ಸೊಂಡಿಲಿನಿಂದ ಎರಡು ಸ್ನಾಯುಗಳು ದೇಹದ ಕೊನೆಯವರೆಗೂ ಚಾಚಿವೆ. ಈ ಜೀವಿಗಳಲ್ಲಿ ಜೀರ್ಣಾಂಗಗಳಿಲ್ಲ. ಡಿಂಭ ಮತ್ತು ಪ್ರೌಢಾವಸ್ಥೆಯಲ್ಲಿ ಇವು ಆಹಾರವನ್ನು ಪೋಷಕ ಜೀವಿಯ ಕರುಳಿನಿಂದ ನೇರವಾಗಿ ಹೀರುತ್ತವೆ. ಇವುಗಳಲ್ಲಿ ರಕ್ತ ಪರಿಚಲನೆಯ ಅಂಗಗಳಾಗಲಿ, ಶ್ವಾಸಾಂಗಗಳಾಗಲಿ ಇಲ್ಲ. ಶುದ್ಧೀಕರಣಾಂಗಗಳು ಕೇವಲ ಎರಡು ಕವಲೊಡೆದ ನೆಫ್ರೀಡಿಯಗಳ ರೂಪದಲ್ಲಿದೆ. ಸೊಂಡಿಲಿನಲ್ಲಿರುವ ನರಮುಡಿಯಿಂದ ಎರಡು ನರಗಳು ದೇಹದ ಎರಡು ಪಕ್ಕದಲ್ಲಿಯೂ ಸಾಗುತ್ತವೆ.

ಗಂಡು ಹೆಣ್ಣಿಗಿಂತ ದೊಡ್ಡದು. ಗಂಡಿನಲ್ಲಿ ಗುಂಡಾದ ಎರಡು ವೃಷಣಗಳಿವೆ. ಇವು ಸ್ನಾಯುಗಳ ನಡುವೆ ಬೆಳೆದಿರುತ್ತವೆ. ಹಿಂಭಾಗಕ್ಕೆ ಒಂದು ನಾಳ ಹೊರಟಿದೆ. ಕೊನೆಯಲ್ಲಿ ಒಂದು ಚೀಲವಿದೆ. ಗಂಡಿನಲ್ಲಿ ಆರರಿಂದ ಎಂಟರವರೆಗೆ ಅಂಟು ದ್ರವವನ್ನು ಸ್ರವಿಸುವ ಸಿಮೆಂಟ್ ಗ್ರಂಥಿಗಳಿವೆ. ಹೆಣ್ಣಿನಲ್ಲಿ, ಮರಿಯಾಗಿದ್ದಾಗ ಮಾತ್ರ, ಅಂಡಾಶಯವು ಚೆಂಡಿನಂತಿರುತ್ತದೆ. ಇದು ಸ್ನಾಯುಗಳ ಮೇಲೆ ಬೆಳೆದಿರುತ್ತದೆ. ಮುಂದೆ ದೇಹಾಂತರಾವ ಕಾಶವೆಲ್ಲ ಅಂಡಗಳಿಂದ ತುಂಬುತ್ತದೆ. ಗರ್ಭಾಂಕುರವಾಗುವುದು ಅಲ್ಲಿಯೆ. ಗರ್ಭಕಟ್ಟಿದ ಅನಂತರ ಮೊಟ್ಟೆ ಗೋಳಾಕಾರವನ್ನೋ, ಕದಿರಾನಾಕಾರವನ್ನೋ ತಾಳುತ್ತದೆ. ಮೊಟ್ಟೆಗಳಿಗೆ ಮೂರು ನಾಲ್ಕು ಕವಚಗಳಿರುತ್ತವೆ. ದೇಹದಿಂದ ಹೊರಗೆ ಬರುವಷ್ಟರಲ್ಲಿ ಭ್ರೂಣ ಸಾಕಷ್ಟು ಬೆಳೆದಿರುತ್ತದೆ. ಅನಂತರ ಭ್ರೂಣಸಹಿತವಾದ ಮೊಟ್ಟೆಗಳು ಪೋಷಕ ಪ್ರಾಣಿಯ ಮಲದೊಂದಿಗೆ ಹೊರಕ್ಕೆ ಬರುತ್ತವೆ. ವಾತಾವರಣದ ವೈಪರೀತ್ಯವನ್ನು ತಡೆಯುವುದಕ್ಕಾಗಿಯೇ ಇವಕ್ಕೆ ರಕ್ಷಣಾಕವಚವಿರುವುದು. ಮಧ್ಯವರ್ತಿ ಸಂಧಿಪದಿಗಳು ಇಂಥ ಮೊಟ್ಟೆಯನ್ನು ನುಂಗಿದರೆ ಮಾತ್ರ ಇದರ ಜೀವನಚಕ್ರ ಮುಂದುವರಿಯುತ್ತದೆ. ಮುಂದೆ ಮೊಟ್ಟೆಯನ್ನು ನುಂಗಿದ ಸಂಧಿಪದಿಯನ್ನು ಯಾವುದಾದರೂ ಕಶೇರುಕವು ತಿಂದರೆ, ಈ ಉಪಜೀವಿ ಕಶೇರುಕದ ಕರುಳನ್ನು ಸೇರಿ ದೊಡ್ಡದಾಗುತ್ತದೆ. ಅಲ್ಲಿ, ತನ್ನ ಸೊಂಡಿಲಿನಿಂದ ಪೋಷಕ ಜೀವಿಯ ಕರುಳಿಗೆ ಅಂಟಿಕೊಳ್ಳುತ್ತದೆ.

ಹಿಂದೆ ಈ ಅಂಕುಶ ಕಪಾಲಿಯನ್ನು ದುಂಡು ಹುಳುಗಳ (ನೆಮಟೋಡ್ಸ್) ವಂಶದ ಜೊತೆಗೆ ಸೇರಿಸಿದ್ದರು. ರಚನೆ ಜೀವನ ಚರಿತ್ರೆಗಳ ಪೂರ್ಣ ಪರಿಚಯವಾದ ಮೇಲೆ ವಾನ್ ಕ್ಲೀವನ್ (1948) ಇದನ್ನು ಪ್ರತ್ಯೇಕ ವಂಶವೆಂದು ಪರಿಗಣಿಸಿದ. (ಸಿ.ಎಂ.ಎಸ್.)

**ಅಂಕೋಲ:** ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಶಿರಸಿ, ದಕ್ಷಿಣದಲ್ಲಿ ಕುಮಟ, ಉತ್ತರದಲ್ಲಿ ಕಾರವಾರ ಮತ್ತು ಯಲ್ಲಾಪುರ ತಾಲ್ಲೂಕುಗಳು ಈ ತಾಲ್ಲೂಕನ್ನು ಸುತ್ತುವರೆದಿವೆ. ಬೇಲೆಕೇರಿ, ಬಾಳಲೆ ಮತ್ತು ಭಾಸಗೋಡ ಇದರ ಹೋಬಳಿಗಳು. ತಾಲ್ಲೂಕಿನಲ್ಲಿ 86 ಗ್ರಾಮಗಳಿವೆ. ವಿಸ್ತೀರ್ಣ 971 ಚ.ಕಿಮೀ. ಜನಸಂಖ್ಯೆ 1,01,540.

ತಾಲ್ಲೂಕಿನ ತೀರಪ್ರದೇಶ ಮರಳು ಭೂಮಿ. ಉಳಿದ ಭೂಭಾಗ ಕೆಂಪು ಜಂಬುಮಣ್ಣಿನಿಂದ ಕೂಡಿದೆ. ಮಳೆ ಹೆಚ್ಚು. ವಾರ್ಷಿಕ ಸರಾಸರಿ 3,405ಮಿಮೀ. ಬೇಡ್ತಿ ಅಥವಾ ಗಂಗಾವಳಿ ನದಿ ಈ ತಾಲ್ಲೂಕಿನ ಮಧ್ಯದಲ್ಲಿ ಈಶಾನ್ಯದಿಂದ ನೈಋತ್ಯಕ್ಕೆ ಹರಿದು ಅಂಕೋಲದ ದಕ್ಷಿಣದಲ್ಲಿ ಅರಬ್ಬಿ ಸಮುದ್ರಕ್ಕೆ ಸೇರುವುದು. ಅಂಕೋಲದ ಬಳಿ ಅಂಕೋಲ ನದಿ ಇದೆ. ಇದರ ಪೂರ್ವ ಭಾಗವನ್ನು ಶಂಕದ ಹೊಳೆ ಎಂದು ಕರೆಯುತ್ತಾರೆ. ಇದರ ಉತ್ತರದಲ್ಲಿ ಬೇಲೆಕೇರಿ ನದಿ ಹರಿಯುವುದು. ಈ ನದಿಗಳು ತಾಲ್ಲೂಕಿನ ಬಹುತೇಕ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಹರಿಯುವುದರಿಂದ ನೀರಾವರಿಗೆ ಹೆಚ್ಚು ಉಪಯುಕ್ತವಾಗಿಲ್ಲ. ಮಳೆನೀರಿನಿಂದ ಆಬಾದಾಗುವ ಅನೇಕ ತೋಟ ಗದ್ದೆಗಳಿವೆ. ಇಲ್ಲಿರುವ ಕೆಲವು ಬಾವಿಗಳಿಂದಲೂ ವ್ಯವಸಾಯಕ್ಕೆ ನೀರು ಒದಗುತ್ತದೆ. ಬತ್ತ, ಅಡಕೆ ಇಲ್ಲಿಯ ಮುಖ್ಯ ಬೆಳೆಗಳು. ತಾಲ್ಲೂಕಿನ ತೀರ ಪದೇಶ ಬಿಟ್ಟು ಅದರ ಪಕ್ಕದಲ್ಲೆ ಸಾಗುವ ಸುಮಾರು 5ರಿಂದ 8ಕಿಮೀ ಅಗಲದ ಒಳನಾಡ ಪದೇಶ ಬತ್ತದ ಗದ್ದೆಗಳಿಂದ, ಮಾವಿನ ತೋಪುಗಳಿಂದ ಗೇರು ಹಲಸು ಮತ್ತು ಇತರ ಫಲವೃಕ್ಷಗಳಿಂದ ಕೂಡಿದೆ. ಇದರ ಪಕ್ಕದ ಸಣ್ಣ ಗುಡ್ಡಪ್ರದೇಶದಲ್ಲಿ ಹುಲ್ಲು ಬೆಳೆಯುತ್ತದೆ. ಇವುಗಳ ಪೂರ್ವಕ್ಕೆ ಎತ್ತರವಾದ ದಟ್ಟ ಕಾಡುಗಳಿಂದ ಕೂಡಿದ ಬೆಟ್ಟ ಪದೇಶವಿದೆ. ಒಟ್ಟು 75,374 ಹೆಕ್ಟೇರ್ ಅರಣ್ಯ ಪದೇಶವಿದೆ. ಇಲ್ಲಿನ ಕಾಡುಗಳಲ್ಲಿ ಬೆಲೆಬಾಳುವ ಮತ್ತಿ, ಹೊನ್ನೆ, ನಂದಿ ಮುಂತಾದ ಮರಗಳು ಬೆಳೆಯುತ್ತವೆ. ತೀರಪದೇಶದಲ್ಲಿ ತೆಂಗಿನ ಮರಗಳಿವೆ. ಇಲ್ಲಿನ ಕೆಲವು ಗ್ರಾಮಗಳು ಆರೋಗ್ಯದಾಯಕವೆಂದು ಪರಿಗಣಿತವಾಗಿವೆ. ಗಂಗಾವಳಿ ನದಿಯಲ್ಲಿ ಕೆಲವು ಕಿಮೀ ದೂರ ಸಣ್ಣ ದೋಣಿಗಳ ಸಂಚಾರ ಉಂಟು.

ಕಾರವಾರ, ಹೊನ್ನಾವರ, ಮಂಗಳೂರುಗಳೊಡನೆ ಈ ತಾಲ್ಲೂಕು ಸಂಪರ್ಕ ಹೊಂದಿದೆ. ಅಂಕೋಲ ಪಟ್ಟಣದ ಉತ್ತರಕ್ಕೆ 8ಕಿಮೀ ದೂರದಲ್ಲಿರುವ ಅವರ್ಸೆ ಗ್ರಾಮದಲ್ಲಿ ಕಾತ್ಯಾಯಿನಿ ದೇವಾಲಯವಿದೆ. ಇಲ್ಲಿಯ ವಿಗ್ರಹ ಸಮುದ್ರದಲ್ಲಿ ದೊರೆತದ್ದೆಂದು ಪ್ರತೀತಿಯುಂಟು. ನವರಾತ್ರಿಯ ಒಂಬತ್ತು ದಿನಗಳೂ ಇಲ್ಲಿ ಜಾತ್ರೆ ನಡೆಯುವುದು. ಅಂಕೋಲದ ಉತ್ತರಕ್ಕೆ ಸುಮಾರು 6ಕಿಮೀ ದೂರದಲ್ಲಿ ಬೇಲೆಕೇರಿ ನದಿಯ ದಡದಲ್ಲಿರುವ ಬಂದರು, ಬೇಲೆಕೇರಿ ಗ್ರಾಮ. ಇದೊಂದು ಆರೋಗ್ಯಧಾಮವೆಂದು ಪ್ರಸಿದ್ಧವಾಗಿದೆ. ಅಂಕೋಲದ ದಕ್ಷಿಣಕ್ಕೆ 8ಕಿಮೀ ದೂರದಲ್ಲಿರುವ ಗಂಗಾವಳಿ ಗ್ರಾಮ ಗಂಗಾವಳಿ ನದಿಯ ದಡದಲ್ಲಿದೆ. ಇಲ್ಲಿರುವ ಗಂಗೆ ದೇವಾಲಯ ಪ್ರಸಿದ್ಧ. ಗಂಗಾಷ್ಟಮಿಯಂದು ಇಲ್ಲಿ ಜಾತ್ರೆ

**ಮಹಾಮಾಯ ದೇವಾಲಯ**

ನಡೆಯುವುದು. ಗಂಗಾವಳಿ ಗ್ರಾಮಕ್ಕೆದುರಾಗಿ ನದಿಯ ಉತ್ತರ ದಂಡೆಯ ಮೇಲೆ ಪ್ರಕೃತಿ ಸೌಂದರ್ಯದಿಂದ ಕೂಡಿದ ಮಂಜುಗುಣಿ ಗ್ರಾಮವಿದೆ.

ಈ ತಾಲ್ಲೂಕಿನ ಆಡಳಿತ ಕೇಂದ್ರ ಅಂಕೋಲ. ಜನಸಂಖ್ಯೆ 14,306. ಕಾರವಾರಕ್ಕೆ ಆಗ್ನೇಯದಲ್ಲಿ 24ಕಿಮೀ ದೂರದಲ್ಲಿ ಸಮುದ್ರತೀರದಿಂದ ಸುಮಾರು 3ಕಿಮೀ ಅಂತರದಲ್ಲಿದೆ. ಇಲ್ಲಿಯ ಜನರ ಮುಖ್ಯ ಉದ್ಯೋಗ ವ್ಯವಸಾಯ, ವ್ಯಾಪಾರ ಮತ್ತು ಕೂಲಿಯ ದುಡಿಮೆ. ಅಂಕೋಲಪಟ್ಟಣ ಮುಂಬಯಿ ಮತ್ತು ಹುಬ್ಬಳ್ಳಿಯಿಂದ ಬರುವ ವಸ್ತುಗಳ ಮಾರುಕಟ್ಟೆ. ಅಕ್ಕಿ, ತೆಂಗು, ಅಡಕೆ, ಹೊಗೆಸೊಪ್ಪು ಮುಂತಾದವುಗಳ ವ್ಯಾಪಾರವೂ ನಡೆಯುವುದು.

ಅಂಕೋಲ ಒಂದು ಐತಿಹಾಸಿಕ ಸ್ಥಳ. ಪಟ್ಟಣದ ಪೂರ್ವಕ್ಕೆ ಸ್ವಲ್ಪ ಎತ್ತರದಲ್ಲಿ ವೃತ್ತಾಕಾರವಾದ ಶಿಥಿಲ ಕೋಟೆಯಿದೆ. ಸುಮಾರು 548ಮೀ ಸುತ್ತಳತೆಯುಳ್ಳ ಈ ಕೋಟೆಯ ಸುತ್ತ 4ಮೀ ಅಗಲ 4ಮೀ ಆಳದ ಕಂದಕವಿದೆ. ಇದನ್ನು ಬಳಸಿ ಮಾವು, ಗೋಡಂಬಿ, ಹಲಸು ಮುಂತಾದ ಫಲವೃಕ್ಷಗಳನ್ನು ಬೆಳೆಸಲಾಗಿದೆ. ಈ ಕೋಟೆಯನ್ನು ಸೋದೆಯ ದೊರೆ ಅಂಕೋಲದಲ್ಲಿ ವಾಸವಾಗಿದ್ದ ತನ್ನ ಪ್ರೇಯಸಿಗಾಗಿ ಕಟ್ಟಿಸಿದನೆಂದು ಪ್ರತೀತಿ. ಇಲ್ಲಿ ಮಹಾಮಾಯ, ಆರ್ಯದುರ್ಗಾ, ಕುಂಡೋದರಿ, ಶಾಂತಾದುರ್ಗಾ, ಕಾಳಮ್ಮ, ದತ್ತಾತ್ರೇಯ ಮೊದಲಾದ ದೇವಾಲಯಗಳಿವೆ. ಮಹಾಮಾಯ ಮತ್ತು ಕುಂಡೋದರಿ ದೇವಾಲಯಗಳು 16ನೆಯ ಶತಮಾನದಲ್ಲಿ ನಿರ್ಮಾಣಗೊಂಡವು. ಇಲ್ಲಿಯ ಕೋಟೇಶ್ವರ ಅಥವಾ ರುದ್ರೇಶ್ವರ ದೇವಾಲಯದ ಹತ್ತಿರ ಒಂದು ಕೊಳವೂ ಒಂದು ರೋಮನ್ ಕೆಥೊಲಿಕ್ ಇಗರ್ಜಿಯೂ ಇವೆ. 1540ರ ಸುಮಾರಿನಲ್ಲಿ ಈ ಊರು ಪೋರ್ಚುಗೀಸರ ವಶದಲ್ಲಿತ್ತು. ಆ ಕಾಲದಲ್ಲಿ ಅಂಕೋಲದ ಮೂಲಕ ಖನಿಜ ಮತ್ತು ಬಟ್ಟೆಗಳ ವ್ಯಾಪಾರ ನಡೆಯುತ್ತಿತ್ತು. 1567ರಲ್ಲಿ ವೆನಿಸ್ಸಿನ ಪ್ರಸಿದ್ಧ ವ್ಯಾಪಾರಿಯಾದ ಸೀಸರ್ ಫ್ರೆಡರಿಕ್ ಅಂಕೋಲಕ್ಕೆ ಭೇಟಿಕೊಟ್ಟಿದ್ದ.ಬಿಜಾಪುರದ ರಾಜಪ್ರತಿನಿಧಿಯಾಗಿದ್ದ ಷರೀಫ್–ಉಚಲ್–ಮುಲ್ಕ್ 16ನೆಯ ಶತಮಾನದ ಕೊನೆಯಲ್ಲಿ ಅಂಕೋಲವನ್ನು ಆಡಳಿತ ಕೇಂದ್ರವನ್ನಾಗಿಮಾಡಿಕೊಂಡಿದ್ದ. 1676ರಲ್ಲಿ ಶಿವಾಜಿಯ ಸೇನೆ ಅಂಕೋಲದ ಅರ್ಧಭಾಗ ವನ್ನು ನಾಶಗೊಳಿಸಿತು. 1730ರಲ್ಲಿ ಅಂಕೋಲ ಸೋದೆ ರಾಜ್ಯದ ಬಂದರಾಗಿತ್ತೆಂದು ಹ್ಯಾಮಿಲ್ಟನ್ನನ ಬರೆವಣಿಗೆಯಲ್ಲಿ ಉಲ್ಲೇಖವಿದೆ. ಅಂಕೋಲ ಮೊದಲು ಕುಮಟ ತಾಲ್ಲೂಕಿನ ಭಾಗವಾಗಿತ್ತು. 1880ರಲ್ಲಿ ಇದನ್ನು ಪ್ರತ್ಯೇಕ ತಾಲ್ಲೂಕನ್ನಾಗಿ ಮಾಡಲಾಯಿತು. *

**ಅಂಕೋಲೆ :** ಒಂದು ಔಷಧ ಸಸ್ಯ. ಅಲಾಂಜಿಯಮ್ ಸಾಲ್ವಿಫೋಲಿಯಮ್ ಇದರ ವೈಜ್ಞಾನಿಕ ಹೆಸರು. ಇದಕ್ಕೆ ಅಂಕೋತವೆಂಬ ಹೆಸರೂ ಇದೆ. ಅಲಾಂಜಿಯೇಸೀ ಕುಟುಂಬಕ್ಕೆ ಸೇರಿದೆ. ಇದು ಒಂದು ಪೊದೆ ಸಸ್ಯ. ಎಲ್ಲ ಬಗೆಯ ಹವೆಯಲ್ಲೂ ಮಣ್ಣಿನಲ್ಲೂ ಬೆಳೆಯುತ್ತದೆ. ಗಿಡವು ಬೇಸಗೆಯಲ್ಲಿ ಎಲೆ ಉದುರುವ ಬಗೆಯದು (ಡೆಸಿಡ್ಯುವಸ್). ಆದರೆ ಸಾಮಾನ್ಯವಾಗಿ ಎಲ್ಲ ಕಾಲದಲ್ಲೂ ಎಲೆಗಳನ್ನು ಹೊಂದಿರುತ್ತದೆ. ಹಳೆ ಎಲೆಗಳು ಉದುರುವುದಕ್ಕಿಂತ ಮುಂಚಿತವಾಗಿಯೇ ಹೊಸ ಚಿಗುರು ಕಾಣಿಸಿಕೊಳ್ಳುತ್ತದೆ. ಅನೇಕ ವೇಳೆ ಎಲೆಗಳ ಕಕ್ಷಗಳಲ್ಲಿ ಮುಳ್ಳುಗಳಿರುತ್ತವೆ. ಇವು ಚೂಪು, ಮತ್ತು ಬಹು ಗಟ್ಟಿ. ಚಕ್ಕೆ ತುಂಬ ತೆಳು: ಕಾಂಡದಿಂದ ಸುಲಭವಾಗಿ ಬೇರ್ಪಡಿಸಬಹುದು. ಹೂಗಳು ಬಿಳಿಬಣ್ಣದವು; ಸುವಾಸನಾಯುಕ್ತ, ಹಣ್ಣುಗಳು ಆಲದಹಣ್ಣಿನ ಗಾತ್ರದವಾಗಿದ್ದು ಕೆಂಪುಬಣ್ಣಕ್ಕಿರುತ್ತವೆ. ಚಳ್ಳೆಹಣ್ಣಿನಂತೆ ಒಳಗಡೆ ತಿರುಳು ಬಹು ನುಣುಪು. ಬೀಜ ಕಾಫಿ ಬೀಜದಂತೆ ಗಟ್ಟಿ.

ಬೀಜದಿಂದ ಎಣ್ಣೆಯನ್ನು ತೆಗೆದು ಔಷಧಿಗೆ ಮತ್ತು ದೀಪ ಉರಿಸುವುದಕ್ಕೆ ಉಪಯೋಗಿಸುತ್ತಾರೆ. ಬೇರಿನಿಂದ ಬಟ್ಟಿ ಇಳಿಸಿ ಪಡೆಯುವ ಆಸವವನ್ನು ಔಷಧಿಗೆ ಉಪಯೋಗಿಸುವುದೂ ಉಂಟು. ಗಿಡಕ್ಕೆ ಮುಳ್ಳಿರುವುದರಿಂದ ಬೇಲಿಯಲ್ಲಿ ಬೆಳೆಸಲು ಉಪಯುಕ್ತ ಮರ ವ್ಯವಸಾಯದ ಮುಟ್ಟುಗಳನ್ನು ತಯಾರಿಸಲು ಬರುತ್ತದೆ.

ಅಂಕೋಲೆಯ ಕೋಲನ್ನು ಹಿಡಿದು ತಿರುಗಾಡಿದಲ್ಲಿ ಪೀಡೆ ಪಿಶಾಚಿಗಳ ಭಯವಿರುವುದಿಲ್ಲವೆಂಬುದು ಹಿಂದಿನಿಂದ ಕೆಲವು ವರ್ಗದ ಜನರಲ್ಲಿರುವ ಒಂದು ನಂಬಿಕೆ. (ಜಿ.ಬಿ.;ಎಸ್)

**ಅಂಗಡಿ :** ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಒಂದು ಹಳ್ಳಿ. ಘಟ್ಟದಿಂದ ಕರಾವಳಿಗೆ ಹೋಗುವ ಮಾರ್ಗದ ಮಧ್ಯದಲ್ಲಿರುವ ಈ ಸ್ಥಳದಲ್ಲಿದ್ದ ಅಂಗಡಿಗಳಿಂದಾಗಿ ಇದಕ್ಕೆ ಈ ಹೆಸರು ಬಂದಿದೆಯೆಂದು ಊಹಿಸಲಾಗಿದೆ. 11–12ನೆಯ ಶತಮಾನದ ಶಾಸನಗಳಲ್ಲಿ ಇದನ್ನು ಸೊಸವೂರು ಎಂದು ಕರೆದಿದೆ. ಬುಕ್ಕರಾಯನ ಕಾಲದಲ್ಲೂ (1359) ಇದೇ ಹೆಸರಿತ್ತು. ಆದರೆ ಅಚ್ಯುತರಾಯನ ಕಾಲದ ಹೊತ್ತಿಗೆ (1539) ಅಂಗಡಿ ಎಂಬ ಹೆಸರು ಪ್ರಚಾರಕ್ಕೆ ಬಂದಿತ್ತು. ವಿಷ್ಣುವರ್ಧನನ ಕಾಲದ ಶಶಪುರ, ಶಶಕಪುರ ಎಂಬ ಹೆಸರುಗಳೂ ಈ ಊರನ್ನೇ ನಿರ್ದೇಶಿಸುತ್ತವೆ.

ಈ ಸೊಸವೂರು ಹೊಯ್ಸಳರ ಮೂಲಸ್ಥಾನವಾಗಿತ್ತು. ಸಳ (**ನೋಡಿ**) ಇಲ್ಲಿ ಹುಲಿಯನ್ನು ಕೊಂದು ಹೊಯ್ಸಳ ವಂಶದ ಹೆಸರಿಗೆ ಕಾರಣನಾದ ಎಂದು ಅನೇಕ ಶಾಸನಗಳು ತಿಳಿಸುತ್ತವೆ. ನೃಪಕಾಮ ಸೊಸವೂರಿನಿಂದ ಆಳುತ್ತಿದ್ದ. ಇವನ ಮಗ ವಿನಯಾದಿತ್ಯ ತನ್ನ ರಾಜಧಾನಿಯನ್ನು ದೋರಸಮುದ್ರಕ್ಕೆ ಬದಲಾಯಿಸಿದಂತೆ ತೋರುತ್ತದೆ. ಮುಂದೆ ಬಂದ ಹಲವು ಹೊಯ್ಸಳ ಅರಸರು ತಮ್ಮ ಪೂರ್ವಜರ ಹುಟ್ಟೂರಾದ ಅಂಗಡಿಗೆ ಹೋಗಿ ಬರುತ್ತಿದ್ದರೆಂದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಹೊಯ್ಸಳರ ಕುಲದೇವತೆಯಾದ ವಾಸಂತಿಕಾ ದೇವಿಯೇ ಇಲ್ಲಿನ ಮುಖ್ಯ ದೇವತೆಯಾದ ವಸಂತಮ್ಮ ಎಂದು ಹೇಳಲಾಗಿದೆ. ಅನೇಕ ಜೈನಯತಿಗಳು ಇಲ್ಲಿದ್ದು ಬಸದಿಗಳನ್ನು ಕಟ್ಟಿಸಿದ್ದರೆಂಬುದಕ್ಕೂ ಶಾಸನಾಧಾರಗಳಿವೆ. ಅಂಗಡಿಯ ಪಕ್ಕದಲ್ಲಿರುವ ಉಗ್ಗೇಹಳ್ಳಿಯಲ್ಲಿ ಕೋಟೆಹರವೆಂಬ ಪ್ರದೇಶವಿದೆ. ಇಲ್ಲಿರುವ ಒಂದು ಶಾಸನ ರಾಚಮಲ್ಲಪೆರ್ಮಾನಡಿಕಾಮ ಹೊಯ್ಸಳನ ಕಾಲದ್ದು.

ಇಲ್ಲಿರುವ ವಾಸಂತಿಕಾ ಗುಡಿ ಹೆಂಚು ಹೊದಿಸಿರುವ ಈಚಿನ ಕಟ್ಟಡ. ಒಳಗೆ ಐದು ದೇವಿಯರ ಮೃಣ್ಮೂರ್ತಿಗಳಿವೆ. ಅವಕ್ಕೆ ಪಂಚಮುಖ ಅಥವಾ ತ್ರಿಮುಖಗಳಿವೆ. ಅವು ಶಕ್ತಿದೇವತೆಗಳಿಗೆ ವಿಶಿಷ್ಟವಾದ ಆಯುಧಗಳನ್ನು ಹಿಡಿದಿವೆ. ಇಲ್ಲಿ ಸು.10–11ನೆಯ ಶತಮಾನದ

ಹೊಯ್ಸಳ ದೇವಾಲಯ

ಎರಡು ಜೈನಬಸದಿಗಳ ಅವಶೇಷಗಳುಂಟು. ಇಲ್ಲಿರುವ ಕೇಶವ, ವೀರಭದ್ರ ಮತ್ತು ಶಿವ ದೇವಾಲಯಗಳೂ ಶಿಥಿಲವಾಗಿವೆ. ಕೇಶವ ದೇವಾಲಯದ ಮೂರ್ತಿ ಒಂದು ಉತ್ತಮ ಹೊಯ್ಸಳ ಶಿಲ್ಪ. (ಎಂ.ಎಚ್.)

**ಅಂಗರಚನಾವಿಜ್ಞಾನ :** ಅಂಗರಚನಾವಿಜ್ಞಾನ, ಒಟ್ಟಾರೆ ಲೇಖನದಲ್ಲಿ ಆಕಾರ ರಚನೆಗಳನ್ನು ಕುರಿತ ಜೀವವಿಜ್ಞಾನದ ಈ ಶಾಖೆಯಲ್ಲಿನ ಸೂತ್ರಗಳ ಸಮೀಕ್ಷೆಯಿದೆ. ಮಾನವನೂ ಸೇರಿದಂತೆ ಉನ್ನತ ಕಶೇರುಕಗಳ ವಿಶಿಷ್ಟರಚನೆಯ ಯೋಜನೆಯೂ ಅಲ್ಲದೆ, ಅಂಗರಚನಾವಿಜ್ಞಾನದ ಚರಿತ್ರೆಯನ್ನೂ ವಿಭಾಗಗಳನ್ನೂ ಅಲ್ಲಿ ಅಡಕವಾಗಿ ಕೊಟ್ಟಿದೆ. ಇದಕ್ಕೆ ತೀರ ಹತ್ತಿರ ಸಂಬಂಧದ ಸಸ್ಯಶಾಸ್ತ್ರಗಳ ರಚನೆಯ ಕ್ಷೇತ್ರವನ್ನು ಸಸ್ಯಗಳು ಮತ್ತು ಸಸ್ಯಶಾಸ್ತ್ರದಲ್ಲಿ ಕೊಟ್ಟಿದೆ. ಇದರ ಮುಖ್ಯ ವಿಭಾಗಗಳು ಸಸ್ಯಶಾಸ್ತ್ರ (ಲೇಖನಗಳು) ಎಂಬಲ್ಲಿ ಸೂಚಿತವಾಗಿವೆ.

ಅಂಗರಚನಾವಿಜ್ಞಾನ, ತುಲನಾತ್ಮಕದಲ್ಲಿ ಜೀವವಿಕಾಸದ ಕಲ್ಪನೆಗೆ ಮೂಲವಸ್ತುವನ್ನು ಒದಗಿಸಿ ಅದನ್ನು ಆಧಾರಗೊಳಿಸಲು ಅಪಾರ ಪುರಾವೆಗಳನ್ನು ಈಚೆಗೆ ಇತ್ತಿರುವ ಅಂಗರಚನಾವಿಜ್ಞಾನದ ಶಾಖೆಯ ಚರ್ಚೆ ಇದೆ. ಸಜಾತೀಯತಾವಿಜ್ಞಾನ (ಹೋಮಾಲಜಿ)ದಲ್ಲಿ ವಿಕಾಸ ತತ್ತ್ವಕ್ಕೆ ಅನ್ವಯಿಸುವ ಪ್ರಾಣಿಗಳ ರಚನೆಯ ಮುಖ್ಯ ಹೋಲಿಕೆಗಳು, ಸದೃಶಜೀವಿಗಳೆನಿಸಿಕೊಂಡ ಇತರ ಪ್ರಾಣಿಗಳಲ್ಲಿ ಕಾಣುವ ಮೇಲು ಮೇಲಿನ ಹೋಲಿಕೆಗಳು ಪ್ರತಿಪಾದಿತವಾಗಿವೆ. ವಿಕಾಸದ ಫಲವಾಗಿರುವ ಆಕಾರ ರಚನೆಯ ಚರ್ಚೆಗಳು ಮಾನವಶಾಸ್ತ್ರ; ಜೀವವಿಜ್ಞಾನ; ವಿಕಾಸ, ಜೈವಿಕ; ಮಾನವನ ವಿಕಾಸ; ನಷ್ಟವಂಶ ಜೀವಿಶಾಸ್ತ್ರ; ಸಸ್ಯ ಪ್ರಾಣಿಗಳ ರೂಪಗಳನ್ನು ವಿಂಗಡಿಸಲು ಬಳಸಿರುವ ವಿಧಾನಗಳನ್ನು ವಿವರಿಸುವ ವರ್ಗೀಕರಣ ಜೀವವಿಜ್ಞಾನದಲ್ಲೂ (ಟ್ಯಾಕ್ಸಾನಮಿ) ಇವೆ. ಅಂಗರಚನಾವಿಜ್ಞಾನ (ಮಿಣಿದರ್ಶಕ)ದಲ್ಲಿ ಜೀವಿಗಳ ಅಂಗಗಳ ಮತ್ತು ಅವುಗಳ ಕಟ್ಟಡದ ತುಂಡುಗಳಾಗಿರುವ ಪುಟಾಣಿ ಜೀವಕಣಗಳ ರಚನೆಯನ್ನೂ ರಚನಾವಿನ್ಯಾಸವನ್ನೂ ಚರ್ಚಿಸಿದೆ. ಮೊದಲಿನ ಒರಟು ಉಪಕರಣಗಳ ಕಾಲದಿಂದ, ಅಣುಗಳ ಇಲ್ಲವೇ ಇನ್ನೂ ಚಿಕ್ಕ ವಸ್ತುಗಳ(ವೈರಸ್) ಕೆಲವು ಗೊತ್ತಾದ ಮಾದರಿಗಳನ್ನೂ ಕಣ್ಣಿಗೆ ಕಾಣುವಂತೆ ಮಾಡಬಲ್ಲಂಥ ಶಕ್ತಿಯುತ ವಿದ್ಯುದಂಶಸೂಕ್ಷ್ಮದರ್ಶಕ (ಎಲೆಕ್ಟ್ರಾನ್ ಮೈಕ್ರೊಸ್ಕೋಪ್) ದ ಯುಗದ ತನಕ ಈ ವಿಜ್ಞಾನದಲ್ಲಿನ ಬೆಳೆವಣಿಗೆಯನ್ನೂ ವಿವರಿಸಿದೆ.

ಜೀವಿಗಳ ಎಲ್ಲ ರೂಪಗಳ ಭೌತಿಕ ಮೂಲ ವಸ್ತುವಾದ ಜೀವದ್ರವ್ಯ (ಪ್ರೋಟೊಪ್ಲಾಸ್ಮ್) ಜೀವಕಣದ ರಚನೆಯಲ್ಲಿ ಕಿರಿಕಿರಿಯ ಚೂರುಗಳಾಗಿ ಹೊಂದಿಕೊಳ್ಳುವ ಓರಣವನ್ನು ಜೀವಕಣದಲ್ಲಿ ಹೇಳಿದೆ. ಈ ಜೀವಕಣಗಳ ತಂಡಗಳಿಂದಾಗುವ ಅಂಗಾಂಶದ ಮಾದರಿಗಳನ್ನು ಅಂಗಾಂಶ ವಿಜ್ಞಾನದಲ್ಲಿ ವರ್ಣಿಸಿದೆ. ಅಂಡ ಫಲವಂತವಾದಾಗಿನಿಂದ ಹುಟ್ಟಿ ಹೊರಬರುವ ತನಕ ಆಗುವ ಬೆಳವಣಿಗೆಯ ಅಂಗರಚನೆಯನ್ನು ಅಂಡವಿಜ್ಞಾನ ಮತ್ತು ಬೆಳವಣಿಗೆ, ಪ್ರಾಣಿಯದಲ್ಲಿ ಚರ್ಚಿಸಿದೆ. ಅಂಗರಚನಾಶಾಸ್ತ್ರ, ಒಟ್ಟಾರೆಯಲ್ಲಿ ಅಡಕವಾಗಿ ಕೊಟ್ಟಿರುವ, ಮುಪ್ಪಿನಕಾಲದಲ್ಲಿ ಅಂಗರಚನೆಯಲ್ಲಿ ಕಾಣುವ ಬದಲಾಣೆಗಳನ್ನು ಮುಪ್ಪುವಿಜ್ಞಾನ (ಜೆರಾಂಟಾಲಜಿ) ಮತ್ತು ಕೆಳವವಿಜ್ಞಾನ (ಜೆರಿಯಾಟ್ರಿಕ್ಸ್)ದಲ್ಲಿ ವಿವರಿಸಿದೆ. ಕೃತಕ ಸಾಧನಗಳಿಂದ ಮೈಯ ಭಾಗಗಳಿಗೆ ಬದಲಿ ಜೋಡಿಸುವುದು ನ್ಯೂನತಾಪೂರಣ ವಿಜ್ಞಾನದಲ್ಲಿದೆ. ಕಸಿ ಮಾಡುವಿಕೆ, ಅಂಗಾಂಶದ ಮತ್ತು ಅಂಗದ, ಇದೇ ವಿಚಾರವನ್ನೇ ಕುರಿತದ್ದು.

ಅಂಗರಚನಾವಿಜ್ಞಾನ ಶರೀರಕ್ರಿಯಾವಿಜ್ಞಾನಗಳ ನಡುವಣ ವ್ಯತ್ಯಾಸ ಬಹುಮಟ್ಟಿಗೆ ಒತ್ತಿ ಹೇಳುವುದರಲ್ಲಿ ಇರುವ ವಿಚಾರವಿಷ್ಟೆ. ತೋಳು, ಕಣ್ಣು, ಕೈ ಇಲ್ಲವೇ ಒಂದು ಒಳಗಣ ಅಂಗ ಯಾವುದನ್ನೇ ಆಗಲಿ, ಆ ಅಂಗಗಳೊಂದಿಗೆ ವಿಕಾಸಗೊಂಡಿರುವ ನಿಜಕೆಲಸಗಳನ್ನು ಸೂಚಿಸದೆಯೆ ಅದರ ಆಕಾರ ರಚನೆಗಳ ಪೂರ್ಣ ವಿವರಣೆ ಹೇಗೂ ಅಸಾಧ್ಯ. ಆದ್ದರಿಂದಲೇ ಶರೀರಕ್ರಿಯಾವಿಜ್ಞಾನ (ಲೇಖನಗಳು) ವನ್ನು ನೋಡಬೇಕು.

ಮಾನವನ ಮೈಯ ಅಂಗ, ಅಂಗಭಾಗಗಳ ರಚನೆಯನ್ನು ಚರ್ಚಿಸಿರುವ ಅನೇಕ ಲೇಖನಗಳ ಉದಾಹರಣೆಗಳಿವು: ಜಠರಗರುಳಿನ ನಾಳಿ; ಧಮನಿಗಳು(ಆರ್ಟರಿ), ಎಲುಬು; ಮಿದುಳು; ರಕ್ತಸುತ್ತಾಟದ ಮಂಡಲ; ಕೂಡಿಸುವ ಮತ್ತು ಆನಿಸುವ ಅಂಗಾಂಶಗಳು; ಕಣ್ಣು, ಮಾನವನ; ಗುಂಡಿಗೆಯ ಅಂಗರಚನೆ, ಕೀಲುಗಳು, ತಂತುಗಟ್ಟುಗಳು; ಈಲಿ; ಹಾಲುರಸ; ಹಾಲುರಸಮಂಡಲ; ನರ; ನರಮಂಡಲ; ವಾಸನಿಕ ಮಂಡಲ; ಸಂತಾನೋತ್ಪತ್ತಿ ಮಂಡಲ; ಉಸಿರಾಟದ ಮಂಡಲದ ಅಂಗರಚನೆ; ಎಲುಗಟ್ಟು, ಬೆನ್ನೆಲುಬಿಯ; ತಲೆಬುರುಡೆ; ಬೆನ್ನುಹುರಿ; ಮೂತ್ರದ ಮಂಡಲ; ಸಿರಗಳು.

ಮೈಯ ಅಂಗಭಾಗಗಳಿಗೆ ಸಂಬಂಧಿಸಿದ ಹೆಚ್ಚಿನ ವಿಚಾರಗಳು ಅವವುಗಳಿಗೆ ಸಂಬಂಧಿಸಿದ ಲೇಖನಗಳಲ್ಲಿವೆ. ಕೈಯ ಲೇಖನದಲ್ಲಿರುವ ಚರ್ಚೆಯೊಂದಿಗೆ, ಎಲುಬು; ಕೀಲುಗಳು; ತಂತುಪಟ್ಟಿಗಳು ಲೇಖನಗಳಲ್ಲಿನ ಭಾಗಗಳನ್ನೂ ಸೇರಿಸಿಕೊಳ್ಳಬೇಕು. ಮಾಂಸಲಿಯ(ಪ್ಯಾನ್‌ಕ್ರಿಯಾಸ್) ವಿಚಾರ ಇನ್ನೊಂದು ಉದಾಹರಣೆ. ಈ ಅಂಗದ ಮುಖ್ಯ ಚರ್ಚೆ ಮಾಂಸಲಿಯಲ್ಲಿ ಇದ್ದರೂ ಅದರ ಸಂಬಂಧಕ ವಿಚಾರಗಳನ್ನು ಬೇರೆಡೆಗಳಲ್ಲೂ ಕೊಟ್ಟಿದೆ. ಜಠರಗರುಳಿನ ನಾಳಿಯ ರೋಗಗಳು; ಸಿಹಿಮೂತ್ರ; ಪಚನ; ಇನ್ಸುಲಿನ್; ನಿರ್ನಾಳಗ್ರಂಥಿ ಕಾರ್ಯವಿಜ್ಞಾನ; ಚೋದನಿಕಗಳು; ಪಿಂಡವಿಜ್ಞಾನ ಮತ್ತು ಬೆಳವಣಿಗೆ, ಪ್ರಾಣಿಯ ಬಹುಪಾಲು ಮುಖ್ಯ ಲೇಖನಗಳನ್ನು ಮೊದಲಿಕಗಳಾಗಿ ಇಟ್ಟುಕೊಂಡು ಮುಂದಿನ ಓದಿಗೆ ಮಿಕ್ಕವನ್ನು ನೋಡಬಹುದು. ಒಂದು ವಿಷಯದ ಸಮೀಕ್ಷೆಯ ಲೇಖನವಾಗೇ ಅಲ್ಲದೆ ಸಂಬಂಧಕ ಬರಹಗಳ ಗೊತ್ತಾದ ವಿಭಾಗಗಳಿಗೂ ಮೈಯಲ್ಲಿನ ಯಾವುದೇ ಭಾಗದ ಪೂರ್ಣ ವಿಷಯಗಳಿಗೂ ವಿಷಯಸೂಚಿ ಕೈಪಿಡಿ.

ಅಂಗರಚನಾಶಾಸ್ತ್ರದಲ್ಲಿನ ಅನೇಕ ಮುಂದಾಳುಗಳ ಸಾಧನೆಯನ್ನು ಜೀವನ ಚರಿತ್ರೆಯ ಲೇಖನಗಳಲ್ಲಿ ಕಾಣಬಹುದು. ವೈದ್ಯವಿದ್ಯೆ ಮತ್ತು ಶಸ್ತ್ರವೈದ್ಯ (ಲೇಖನಗಳು) ದಲ್ಲಿ ಇನ್ನಷ್ಟು ಕುತೂಹಲಕರ ವಿಷಯಗಳನ್ನು ಓದಬಹುದು.

ಪ್ರಪಂಚದಲ್ಲಿ ಇನ್ನೆಲ್ಲೂ ಅಂಗರಚನೆಯ ಅಂಗಕ್ರಿಯೆಗಳ ಕಲ್ಪನೆಯ ವಾಸನೆಯೇ ಇಲ್ಲದಿದ್ದಾಗ, ಪ್ರಾಚೀನ ಭಾರತದಲ್ಲಿ ಎಲ್ಲೆಲ್ಲೂ ಪ್ರಚಲಿತವಾಗಿದ್ದ ಆಯುರ್ವೇದದಲ್ಲಿ ಹೇಳಿರುವ ಅಂಗರಚನೆಗಳ ತಿಳಿವಳಿಕೆಯನ್ನು ಅಂಗರಚನಾವಿಜ್ಞಾನ, ಆಯುರ್ವೇದದಲ್ಲಿ ವಿಜ್ಞಾನ ಎಂಬ ಲೇಖನದಲ್ಲಿ ಕೊಟ್ಟಿದೆ. ಇಂದಿನ ವೈಜ್ಞಾನಿಕ ವೈದ್ಯದಲ್ಲಿ ಇರುವುದಕ್ಕೂ ಚೆನ್ನಾದ ಹೋಲಿಕೆಗಳು ಇಲ್ಲಿ ಬಹಳ ಇರುವುದನ್ನೂ ಗಮನಿಸಬಹುದು.

**ಅಂಗರಚನಾವಿಜ್ಞಾನ, ಒಟ್ಟಾರೆ :** ಈಗ ಬದುಕಿರುವ ಅಲ್ಲದೆ ಹಿಂದೆ ಬದುಕಿದ್ದ ಗಿಡಮರಗಳನ್ನೂ ಪ್ರಾಣಿಗಳನ್ನೂ ಒಟ್ಟಾಗಿ ವಿವರಿಸುವ ಜೀವವಿಜ್ಞಾನದ ಒಂದು ಭಾಗ ಅಂಗರಚನಾವಿಜ್ಞಾನ (ಅನಾಟಮಿ). ಇದು ಜೀವಿಯ ಕಾರ್ಯವಿಧಾನಗಳನ್ನೂ ಅವುಗಳ ಅರ್ಥವನ್ನೂ ತಿಳಿಯುವುದರ ಮೂಲಕ ಜೀವದ ಗುಣ ಲಕ್ಷಣಗಳನ್ನರಿಯಲು ಯತ್ನಿಸುತ್ತದೆ. ಜೀವವಿಜ್ಞಾನದ ಆಕೃತಿರಚನಾವಿಜ್ಞಾನ (ಮಾರ್ಫಾಲಜಿ) ಭಾಗಗಳಲ್ಲಿ ಅಂಗರಚನಾವಿಜ್ಞಾನವೂ ಒಂದು. ಜೀವಿಗಳ ರಚನೆಯ ವಿವರಗಳನ್ನೂ ಇದು ತರ್ಕಬದ್ಧವಾಗಿ ತಿಳಿಸುವುದು. ನಮ್ಮ ಎಲ್ಲ ಚಟುವಟಿಕೆಗಳಿಗೂ ರಚನೆ ಮಿತಿಯಾಗಿ ಇರುವುದರಿಂದಲೂ ನಮ್ಮ ಪೂರ್ವಿಕರು ಯಾರೆಂದೂ ಅವರು ಮಾಡಿದ್ದನ್ನೂ ಇದು ಹೇಳುವುದರಿಂದ, ಇದು ಎಲ್ಲರಿಗೂ ಆಸಕ್ತಿ ಹುಟ್ಟಿಸುವಂತಿದೆ. ಮಿಣಿದರ್ಶಕದ ಅಂಗರಚನಾಶಾಸ್ತ್ರ ಬೇರೆ ಲೇಖನದಲ್ಲಿ ಇರುವುದರಿಂದ, ಇಲ್ಲಿ ಒಟ್ಟಾರೆ ಅಂಗರಚನಾಶಾಸ್ತ್ರವನ್ನು ಮಾತ್ರ ಹೇಳಿದೆ **(ನೋಡಿ– ಅಂಗರಚನಾವಿಜ್ಞಾನ, ಸೂಕ್ಷ್ಮ ದರ್ಶಕದ)**.

ಗಿಡಮರಗಳ ಅಂಗರಚನೆಯನ್ನು ಸಸ್ಯವಿಜ್ಞಾನ ಲೇಖನಗಳಲ್ಲಿ ವಿವರಿಸಿದೆ. ಪ್ರಾಣಿಗಳ ಅಂಗರಚನೆಯ ಮೇಲೆ ಅದು ಹೆಚ್ಚಿನ ಬೆಳಕು ಚೆಲ್ಲಿದೆ. ಅರಿಸ್ಟಾಟಲನ ಶಿಷ್ಯನಾಗಿ, ಹಿಂಬಾಲಕನಾಗಿದ್ದ ಸಸ್ಯವಿಜ್ಞಾನಿ ಥಿಯೊಫ್ರಾಸ್ಟಸ್ (ಪ್ರ.ಶ.ಪೂ 287) ಅನಾಟಮಿ ಪದವನ್ನು ವಿಜ್ಞಾನದ ಪಟ್ಟಿಗೆ ಸೇರಿಸಿದ.

ಹೊರಗಿಂದ ಮೇಲೆಕಾಣುವ ರೂಪವನ್ನು ತಿಳಿಯಬಹುದೇ ಹೊರತು ಒಳಗಿನ ರಚನೆಯನ್ನಲ್ಲ. ಒಳಗಿರುವುದನ್ನು ಕೊಯ್ದು ಬಿಡಿಸುವುದನ್ನೇ ಅನಾಟಮಿ ಎಂದವನು ಥಿಯೊಫ್ರಾಸ್ಟಸ್, ಈ ಅನಾಟಮಿ ಪದ ಎರಡು ತೆರನಾಗಿ ಸರಿಯಲ್ಲ. ಮೊದಲಾಗಿ, ಹೆಣಗಳನ್ನು ಮಾತ್ರ ಕೊಯ್ದು ಬಿಡಿಸಬಹುದು. ಆದರೆ ಅಂಗರಚನಾವಿಜ್ಞಾನದ ಉದ್ದೇಶ ಬದುಕಿರುವ ಮೈಯಲ್ಲಿರುವುದನ್ನು ಅರಿಯುವುದು. ಈ ದಿಶೆಯ ಸಾಧನೆಗೊಂದು ದಾರಿ ಮಾತ್ರವಿದು. ಎರಡನೆಯದಾಗಿ ದೇಹರಚನೆಯ ವಿವರಗಳನ್ನು ತಿಳಿಯಲು ಅಂಗರಚನಾವಿಜ್ಞಾನ ಬಳಸುವ ಹಲವು ತಂತ್ರಗಳಲ್ಲಿ ಇದೂ ಒಂದಷ್ಟೆ. ಆದ್ದರಿಂದ ಈ ವಿಜ್ಞಾನಕ್ಕೆ ಅನಾಟಮಿ ಎನ್ನುವುದಕ್ಕಿಂತಲೂ ಮಾರ್ಫಾಲಜಿ ಎನ್ನುವುದೇ ಲೇಸು. ಆದರೆ ರಚನೆಯೊಂದಿಗೆ ನಿಜಕೆಲಸಗಳನ್ನು ಲೆಕ್ಕಿಸದೆ ಜೀವಿಗಳ ರೂಪ ರಚನೆಗಳ ಹೋಲಿಕೆಯನ್ನು ಅಭ್ಯಸಿಸುವ ಜೀವವಿಜ್ಞಾನದ ಎಲ್ಲ ಶಾಖೆಗಳನ್ನೂ ಸೂಚಿಸಲು ಆಕೃತಿರಚನಾವಿಜ್ಞಾನ (ಮಾರ್ಫಾಲಜಿ)ಪದ ಬಳಕೆಯಲ್ಲಿದೆ. ಇಲ್ಲಿ ಈ ಪದವನ್ನು ಶರೀರ ವಿಜ್ಞಾನಕ್ಕೆ ಬಳಸಿದೆ **(ನೋಡಿ– ಜೀವವಿಜ್ಞಾನ)**. ಇದೂ ಅಲ್ಲದೆ ಮಾರ್ಫಾಲಜಿಗೆ ಇನ್ನೊಂದು ಅಡಕವಾದ ಅರ್ಥವಿದೆ. ಒಂದು ಜೀವಿಯ ಸಾಮಾನ್ಯ ರೂಪವನ್ನೂ ಭಾಗಗಳ ಜೋಡಣೆಯನ್ನು ಭಾಗಗಳಿಗೂ ಇಡೀ ಜೀವಿಗೂ ಇರುವ ಸಂಬಂಧವನ್ನು ವಿಶಿಷ್ಟವಾಗಿ ಅಭ್ಯಸಿಸುವುದನ್ನೂ ಸೂಚಿಸುತ್ತದೆ.

**ವಿಭಾಗಗಳು** – ವಿಶೇಷ ವಿಚಾರಗಳಿಗೆ ತಕ್ಕಂತೆ ಅಂಗ ರಚನಾವಿಜ್ಞಾನ ವಿಂಗಡವಾಗಿದೆ.

1. ಪ್ರಾಣಿಸಂಕುಲದ ಭಾಗದಲ್ಲಿ, (ಮಾನವನ ಅಂಗರಚನೆಯೊಂದಿಗೆ) ಜಾತಿಗಳ ಅಂಗರಚನೆ, ತುಲನಾತ್ಮಕ ಅಂಗರಚನೆ. ನಷ್ಟವಂಶಜೀವಿಶಾಸ್ತ್ರ (ಅಳಿದ ಪ್ರಾಣಿಗಳ ಅಂಗರಚನೆ);

2. ಪ್ರಾಣಿಗಳ ವಯಸ್ಸಿಗೆ ಸಂಬಂಧಿಸಿದಂತೆ–ಪಿಂಡವಿಜ್ಞಾನ, ತುಲನಾತ್ಮಕ ಪಿಂಡವಿಜ್ಞಾನ, ಮುಪ್ಪುಗಾಲದ ಅಂಗರಚನೆ (ನೋಡಿ– ಮುಪ್ಪುಶಾಸ್ತ್ರ)

3. ತಿಳಿಯುವ ವಿಧಾನದಲ್ಲಿ – ಒಟ್ಟಾರೆ ಮತ್ತು ಸೂಕ್ಷ್ಮದರ್ಶಕದ ಅಂಗರಚನಾವಿಜ್ಞಾನ, ವಿಕಿರಣಚಿತ್ರಕ ಅಂಗರಚನೆ, ಮಾನವ ಮಾಪನ;

4. ವಿಶಿಷ್ಟ ಭಾಗಗಳನ್ನು ಕುರಿತ ತಿಳಿವಳಿಕೆಯಲ್ಲಿ – ಅಂಗಾಂಶವಿಜ್ಞಾನ (ಕಣಜಾಲಶಾಸ್ತ್ರ) ಅಂಗಾಂಶಜನನ, ಅಂಗಾಂಶಸಂವರ್ಧನ, ಅವಯವವಿಜ್ಞಾನ, (ನಿಜಕೆಲಸಗಳೊಂದಿಗೆ ಅಂಗಗಳ ಮಂಡಲಗಳನ್ನು ಕುರಿತ) ಮಂಡಲ–ರೀತಿಯ ಅಂಗರಚನಾವಿಜ್ಞಾನ, ಗೊತ್ತಾದ ಭಾಗಗಳ ಎಡೆಚಿತ್ರಕ ಅಂಗರಚನಾವಿಜ್ಞಾನ;

5. ವಿಶೇಷ ವಿಷಯಗಳನ್ನು ಕುರಿತ ವರ್ಣನಾತ್ಮಕ ಅಂಗರಚನಾವಿಜ್ಞಾನ, ಮಾರ್ಫಾಲಜಿ (ರಚನಾವಿಧಾನದ ನಿಯಮಗಳು), ಶಸ್ತ್ರವೈದ್ಯದ ಅಂಗರಚನಾವಿಜ್ಞಾನ, ಜನಾಂಗಗಳ ಅಂಗರಚನಾವಿಜ್ಞಾನ (ಭೌತಿಕ ಮಾನವಶಾಸ್ತ್ರ), **(ನೋಡಿ– ಮಾನವಶಾಸ್ತ್ರ)** ನಿಸರ್ಗದಲ್ಲಿ ಇಂಥ ವಿಭಾಗಗಳು ಇಲ್ಲದಿದ್ದರೂ ಶಾಸ್ತ್ರೀಯ ಅಭ್ಯಾಸಕ್ಕೆ ಇವು ಅನುಕೂಲ. ನಿಸರ್ಗದ ಎಲ್ಲ ನಿಯಮಗಳೂ ನಮ್ಮ ರಚನೆ ಮತ್ತು ಕಾರ್ಯವಿಧಾನಗಳಲ್ಲಿ ಸಮರಸವಾಗಿ ನೆರವಾಗುತ್ತವೆ. ಇಲ್ಲಿ ವಿವರಿಸುವ ಒಟ್ಟಾರೆ ಮಾನವನ ಅಂಗರಚನಾವಿಜ್ಞಾನವಲ್ಲದೆ, ಬೇರೆ ವಿಭಾಗಗಳಿಗೆ ವಿಶೇಷ ಲೇಖನಗಳಿವೆ.

**(ನೋಡಿ– ಜಠರ–ಕರುಳಿನ–ನಾಳಿ; ರಕ್ತ ಸುತ್ತಾಟದ ಮಂಡಲ; ಸ್ನಾಯು ಮತ್ತು ಸ್ನಾಯುಮಂಡಲ; ನರಮಂಡಲ; ಎಲುಗಟ್ಟು, ಬೆನ್ನೆಲುಬಿಯ ಮತ್ತು ಮಿದುಳು; ಕಿವಿಯ ಅಂಗರಚನೆ; ಹೃದಯದ–ಅಂಗರಚನೆ)**

**ರಚನೆಯ ಸಾಮಾನ್ಯ ನಕಾಶೆ**

ಮಾನವನ ಮತ್ತು ಉನ್ನತ ಬೆನ್ನೆಲುಬಿಗಳ ಮೈಗಳಲ್ಲಿ ಒಂದೇ ರೀತಿಯ ನಕಾಶೆ ಕಾಣುವುದೆಂದು ತುಲನಾತ್ಮಕ ಅಂಗರಚನಾವಿಜ್ಞಾನದ ವಿಜ್ಞಾನಿಗಳೂ ತುಲನಾತ್ಮಕ ಪಿಂಡವಿಜ್ಞಾನಿಗಳೂ ತೋರಿರುವರು. ಬೆಳೆದ ಪ್ರಾಣಿಗಳಲ್ಲಿ, ಇದು ಮೈ (ಎದೆಗೂಡು, ಹೊಟ್ಟೆ) ಭಾಗದಲ್ಲೂ ಪಿಂಡಗಳಲ್ಲಿ ಅಷ್ಟು ಒಂದುಗೂಡಿಲ್ಲದ್ದರಿಂದ ಇನ್ನೂ ಚೆನ್ನಾಗಿ ಎದ್ದು ಕಾಣುವುದು.



**ಚಿತ್ರ 1. ಬೆನ್ನೆಲುಬಿಯ ದೇಹದ ಸಾಮಾನ್ಯ ಹಂಚಿಕೆ ಪಿಂಡದ ಮೊಟ್ಟಮೊದಲ ಇರವಿನಲ್ಲಿದ್ದಂತೆ ಬಲಗಡೆಯ ಭಾಗ ಎಡಗಡೆಯಲ್ಲಿನದಕ್ಕಿಂತ ಹೆಚ್ಚು ಬೆಳೆದಿರುವಂತೆ ತೋರಿದೆ**
**1. ಗಂಟಲ್ಕುಳಿ. 2. ನಡುನನೆ ಪಿಂಡಖಂಡಗಳು. 3. ನರದ ಕೊಳವೆ. 4. ನಡುನನೆ ಚರ್ಮ ಚೀಲ. 10. ನಾಲಗೆ 11. ಬಾಯಿ. 12. ಮೇಲ್ಚರ್ಮ. 13. ಕಣ್ಣು. 14. ಮಿದುಳು**

ತಲೆ ಕಡೆಯಲ್ಲಿ ತೆರೆದುಕೊಂಡು ಇನ್ನೊಂದೆಡೆ ಚೂಪಾಗಿರುವ ಮೈಗೋಡೆ ಉರುಳೆಯಂತಿದೆ. ಒಂದು ಸರಳೂ ಎರಡು ಕೊಳವೆಗಳೂ ಉರುಳೆಯುದ್ದಕ್ಕೂ ಇವೆ. ಕೊಳವೆಗಳಲ್ಲಿ ಒಂದು ನರದ ಕೊಳವೆ ಸರಳಿನ ಬೆನ್ನಕಡೆಯೂ ಇನ್ನೊಂದು ಆಹಾರನಾಳ, ಹೊಟ್ಟೆ ಕಡೆಯೂ ಇವೆ. ಇದಕ್ಕೂ ಸ್ವಲ್ಪ ಹೊಟ್ಟೆ ಮಟ್ಟದ ಕೆಳಗೆ ಪಕ್ಕಗಳಿಂದ ಮುಂದುಗಡೆ ಎರಡು, ಹಿಂದುಗಡೆ ಎರಡರಂತೆ ನಾಲ್ಕು ಅವಯವಗಳು ಹೊರಬೆಳೆಯುತ್ತವೆ. ನರದ ಕೊಳವೆ ಸಮಾಚಾರ ಪಡೆಯುವುದಕ್ಕೂ ಆಹಾರನಾಳ ಆಹಾರವನ್ನು ತೆಗೆದುಕೊಳ್ಳುವುದಕ್ಕೂ

ಉರುಳೆಯ ತೆರೆದೆಡೆಯ ಮೇಲುಗಡೆ ಚಾಚಿಕೊಳ್ಳುತ್ತವೆ. ನರದ ನಾಳ ಆಮೇಲೆ ಮುಚ್ಚಿಕೊಳ್ಳುತ್ತದೆ. ಇದೆಲ್ಲವನ್ನೂ ಒಂದು ತೆಳುಪೊರೆ ಮೇಲ್ಚರ್ಮ (ಎಪಿಡರ್ಮಿಸ್) ಮುಚ್ಚಿರುವುದು. ಬೆಳೆಯುವ ಪಿಂಡದ ಸರಳ ಹಂತಗಳನ್ನು ಹೋಲಿಸುವ ಅನುಕೂಲಕ್ಕಾಗಿ, ಎಡದಲ್ಲಿ ಮುಂಚಿನದನ್ನೂ ಬಲದಲ್ಲಿ ಆಮೇಲಿನದನ್ನೂ ರೇಖಾಚಿತ್ರದಲ್ಲಿ ತೋರಿಸಿದೆ. ನಿಜವಾಗಿ, ಯಾವ ಒಂದು ಹೊತ್ತಿನಲ್ಲಾದರೂ ಸರಿಯೆ, ಇವು ಇಕ್ಕಡೆಗಳಲ್ಲೂ ಒಂದೇ ಹಂತದಲ್ಲಿರುತ್ತವೆ.

**ಇದರಲ್ಲಿನ ಮುಖ್ಯ ಭಾಗಗಳು :** 1. ಸುತ್ತುವರಿದ ಮೇಲ್ಚರ್ಮದ ಪೊರೆ (ಪಿಂಡದಲ್ಲಿ ಹೊರನನೆ ಚರ್ಮ–ಎಕ್ಟೊಡರ್ಮ್); 2. ಬೆನ್ನಕಡೆಯ ನರದ ನಾಳ; 3.ಸುತ್ತಲೂ ಬೆನ್ನೆಲುಬುಗಳ ಮೈ ಬೆಳೆವುದರ ನಡುವೆ ಇರುವ ಆನಿಸುವ ಸರಳು (ಪಿಂಡದಲ್ಲಿ ಬೆಂಬೀವು ನೋಟೊ ಕಾರ್ಡ್);4 ಜಠರಕರುಳುಗಳ ಒಳವರಿಯಾಗುವ ಒಡಲೆಡೆಯ ಆಹಾರನಾಳ (ಪಿಂಡದಲ್ಲಿ ಒಳನನೆ ಚರ್ಮ–ಎಂಟೊಡರ್ಮ್); 5.ನಡುವಣ ಮುದ್ದೆ (ಪಿಂಡದಲ್ಲಿ ನಡುನನೆ ಚರ್ಮ–ಮೀಸೊಡರ್ಮ್; 6 ನಡುನನೆ ಚರ್ಮದಿಂದ ಬಂದ ನಡುಜಾಗಗಳನ್ನು ತುಂಬುವ ದ್ರವದಂಥ ಅಂಗಾಂಶ (ಪಿಂಡದಲ್ಲಿ ನಡುವೆ ಇರುವ ಮೀಸೆಂಕೈಮ್) ಈ ಆರರಲ್ಲಿ ಒಂದು ಇಲ್ಲವೇ ಹೆಚ್ಚು ಭಾಗಗಳಿಂದ ಮೈಯಲ್ಲಿನ ಅಂಗಭಾಗಗಳೆಲ್ಲ ಆಗುತ್ತವೆ.

ಎರಡು ಪಕ್ಕಗಳಲ್ಲೂ ಬೆನ್ನಕಡೆಯಿಂದ ಒಡಲೆಡೆಗುಂಟ ನಡುನನೆ ಚರ್ಮವೇ ಬಹುವಾಗಿರುತ್ತದೆ. ಒಂದೊಂದು ಪಕ್ಕದಲ್ಲೂ ಸೀಳಿನಂಥ ತೆರಪು ಇರುವುದರಿಂದ ಇದು ಪೊಳ್ಳಾಗಿರುವುದು. ಇವೇ ಎಡದ, ಬಲದ, ಮೈಪೊಳ್ಳುಗಳು (ಕ್ಯಾವಿಟೀಸ್) ಬೆನ್ನಕಡೆಯ ಭಾಗ ತತ್ಕಾಲದ್ದು; ಒಡಲೆಡೆಯದು ಶಾಶ್ವತದ್ದು. ಮುಂದೆ ಇದೇ ಎರಡು ಅಳ್ಳೆಪೊರೆಯ (ಪ್ಲೂರ) ಪೊಳ್ಳುಗಳೂ ಹೊರ ಪೊರೆಯ (ಪೆರಿಟೋನಿಯಂ) ಪೊಳ್ಳು, ಹೃದಯ ಸುತ್ತುಪೊರೆಯ (ಪೆರಿಕಾರ್ಡಿಯಂ) ಪೊಳ್ಳೂ ಆಗುತ್ತದೆ. ಬೆನ್ನ ಕಡೆಯ ನಡುನನೆ ಚರ್ಮ ಒಡಲೆಡೆಯ ನಡುನನೆ ಚರ್ಮದಿಂದ ಬೇರೆಯಾಗಿ, ಒಂದೊಂದು ಪಕ್ಕದಲ್ಲೂ 31 ಇರುವಂತೆ ಸಾಲು ದಿಂಡುಗಳ ಸರಣಿಯಂತೆ ತುಂಡರಿಸುತ್ತದೆ. ಇವೇ ನಡುನನೆ ಚರ್ಮದ ತುಂಡುಗಳು (ಸೆಗ್ಮೆಂಟ್ಸ್). ಬೆಂಬೀವಿನ ಸುತ್ತಲೂ ಇವು ಬೆನ್ನು, ಹೊಟ್ಟೆ, ಕೇಂದ್ರಗಳ ಕಡೆಗಳಿಗೂ ಮೇಲ್ಚರ್ಮದ ಪೊರೆಯ ಕಡೆಗೂ ಬೆಳೆಯುತ್ತವೆ. ಎಲುಬುಗಳು, ಸ್ನಾಯುಗಳು ಚರ್ಮದ ತಳದ ಚಕ್ಕಳದಂಥ ಭಾಗವೂ ಇವುಗಳಿಂದಲೇ ಆಗುವುದು. ಬೆನ್ನಕಡೆ ಇವು ಬೆನ್ನು ಹುರಿಯನ್ನು ಕಾಪಿಡಲು ಎಲುಬಿನ ಕಮಾನುಗಳಾಗಿ, ಒಡಲಕಡೆ ಆಹಾರನಾಳವೂ ಹೃದಯವನ್ನು ಕಾಪಿಡುವ ಪಕ್ಕೆಲುಬುಗಳೂ ಆಗುತ್ತವೆ. ಹೀಗೆ ಮೈಯ ಹೆಚ್ಚಿನ ತೂಕವಿರುವ ಮೈಗೋಡೆ ಅವಯವಗಳು ಇವುಗಳಿಂದ ಆಗುತ್ತವೆ. ಕೊರಳು, ಮುಂಡಗಳಲ್ಲಿ ಮೈ ತುಂಡು ತುಂಡಾಗಿ ಇರುವಂತೆ ಕಾಣುತ್ತದೆ. ಇದರಂತೆ ಬೆನ್ನುಹುರಿಯೂ ತುಂಡಾಗಿರುವುದು. ಒಡಲೆಡೆಯ ನಡುನನೆ ಚರ್ಮ ಇಷ್ಟು ದೊಡ್ಡದಲ್ಲ; ಆಹಾರನಾಳವಾಗಿ ಮಾತ್ರ ಉಳಿದು, ಎಂದಿಗೂ ತುಂಡಾಗದೆ, ಜಠರ, ಕರುಳು ಮೊದಲಾದುವುಗಳ ಒಂದೇ ಸಮನಾಗಿರುವ ಸ್ನಾಯು ಪದರವಾಗೂ ಮೈಯ ಎರಡು ಪೊಳ್ಳುಗಳ ಒಳವರಿಯಾಗೂ ನುಣುಪಾದ ಹೊಳೆವ ಜಾರುವ ಅಳ್ಳೆಪೊರೆ, ಹೊರಪೊರೆಗಳೂ ಆಗುತ್ತವೆ. ನಡುರಚನಾಂಶದಿಂದ ರಕ್ತದ, ಹಾಲುರಸದ ನಾಳಗಳೂ ಹೃದಯ, ಕೂಡಿಸುವ ಅಂಗಾಂಶಗಳ ಬಿಡಿ ಜೀವಕಣಗಳೂ ಆಗುತ್ತವೆ.




**ಚಿತ್ರ 2. ಮುಚ್ಚಿಕೊಳ್ಳದೆ ತೆಳುವಾಗಿರುವ ಪಿಂಡದ ಪದರಗಳು, ಮೇಲ್ಚರ್ಮ, ನಡು ಮತ್ತು ಒಳನನೆ ಚರ್ಮಗಳನ್ನೂ ಮುಚ್ಚಿಕೊಳ್ಳುತ್ತಿರುವ ನರದ ಕೊಳವೆಯನ್ನೂ ನೋಡಿ (ಚಿತ್ರ 1 ರಲ್ಲಿ ತೋರಿಸಿರುವ ಅವಸ್ಥೆಗಿಂತ ಮೊದಲು)**

**1.ಮೇಲ್ಚರ್ಮ, 2. ನರದ ಕೊಳವೆ. 3. ಬೆನ್ನುಕಡೆಯ ನಡುನನೆ ಚರ್ಮ. 4. ಪೊಳ್ಳು, 5. ಹೊಟ್ಟೆಕಡೆಯ ನಡುನನೆ ಚರ್ಮ 6. ಒಳನನೆ ಚರ್ಮ. 7. ಬಿಂಬೀವು. 8. ನಡು ರಚನಾಂಶ.**

ತೀರ ಮೊದಲ ಹಂತದಲ್ಲೇ ಹೊರನನೆ ಚರ್ಮದಿಂದ ನರದನಾಳ ರೂಪುಗೊಳ್ಳುತ್ತದೆ. ಮೊದಲು ಇದು ಬೆನ್ನಕಡೆ ನಡುಗೆರೆಯುದ್ದಕ್ಕೂ ಕುಸಿದುಬಿದ್ದು ಕಾಲುವೆಯಂತಾಗುತ್ತದೆ. ಆಮೇಲೆ ಬೆನ್ನಕಡೆ ಇದು ಮುಚ್ಚಿಕೊಂಡು, ಹೊರನನೆಚರ್ಮದಿಂದ ಬೇರೆಯಾದ ಕೊಳವೆಯಾಗುತ್ತದೆ. ಉರುಳೆಯ ತೆರೆದ ಕೊನೆಯ ಮೇಲೆ ತಲೆಯ ಕಡೆ ಚಾಚಿಕೊಂಡು ದಪ್ಪನಾಗಿ ಬೆಳೆದು ಮಿದುಳಾಗುತ್ತದೆ. ಮೇಲ್ಚರ್ಮಕ್ಕೂ ಇದಕ್ಕೂ ನಡುವೆ ಬೆನ್ನಕಡೆಯ ನಡುನನೆಚರ್ಮ ಅಡ್ಡವಾಗಿ ಬೆಳೆಯುತ್ತದೆ.

ಈ ಉರುಳೆಯಂತಿರುವ ಮೈಯ ಮುಂಗೊನೆ ಮುಂದೆ ಒಡಲೆಡೆಯಲ್ಲಿ ನಾಲಿಗೆಯಾಗಿಯೂ ಬೆನ್ನಕಡೆ ಮಿದುಳ ಸುತ್ತಲ ತಲೆಬುರುಡೆ, ಕಿವಿಗಳು ಕಣ್ಣುಗಳಾಗಿಯೂ ಬೆಳೆವುದು. ಕಣ್ಣುಗಳಿಗಿಯೂ ನಾಲಗೆಗೂ ನಡುವೆ ಜಾಗವಿದೆ. ಇವುಗಳ ನಡುವಣ ಮೇಲ್ಚರ್ಮ ಆಳವಾಗಿ ಸ್ವಲ್ಪಮಟ್ಟಿಗೆ ತುಂಬಿ ಆಹಾರನಾಳವನ್ನು ಕೂಡುತ್ತದೆ. ಇದೇ ಬಾಯ ಒಳವರಿ

ತಲೆಕಡೆಯಲ್ಲಿ ಆಹಾರನಾಳ ಬೆಂಬೀವಿನ ತುದಿಯಾಚೆ ಮೈಗೋಡೆಯ ಮೇಲಾಯದ ಮೇಲೆ ಚಾಚಿ ಮಿದುಳಿನ ಮುಂದೆಯೂ ಕೆಳಗೂ ಮೇಲ್ಚರ್ಮದ ಕುಳಿಯನ್ನು ಕೂಡುತ್ತದೆ. ಈ ಮೇಲ್ಚರ್ಮದ ಕುಳಿಯಿಂದ ಹಲ್ಲುಗಳೂ ಬಾಯ ಒಳವರಿಯ ಬಹುಪಾಲೂ ಆಗುತ್ತವೆ. ಆಹಾರನಾಳದ ಮೇಲಿನ ಕೊನೆಯಿಂದ ಕಿವಿರಿನ ಸೀಳುಗಂಡಿಗಳು ಕಿವಿರಿನ ಕಮಾನುಗಳೊಂದಿಗಿನ ಗಂಟಲ್ಕುಳಿಯೂ (ಫ್ಯಾರಿಂಕ್ಸ್) ದನಿನಾಳ, ಉಸಿರ್ನಾಳ, ಪುಪ್ಪುಸಗಳೂ ಆಗುತ್ತವೆ. ಮಿದುಳಿನ ನಡುವಿನ ಕೆಳಗೆ ಬೆಂಬೀವು ತಲೆಕಡೆಯಲ್ಲಿ ಮೊಂಡು ಮುದ್ದೆಯಾಗಿರುವುದು.

ಬಾಲದೆಡೆ, ವಯಸ್ಕನಲ್ಲಿ ನರದ ನಾಳ ಸೊಂಟದ ಮೊದಲನೆಯ ಬೆನ್ನೆಲುಬಿನ ಹತ್ತಿರ (ಪಿಂಡಗಳಲ್ಲಿ ಇನ್ನೂ ದೂರ) ಕೊನೆಗೊಳ್ಳುತ್ತದೆ. ಬೆಂಬೀವೂ ನಡುನನೆ ಚರ್ಮದ ಪಿಂಡಖಂಡಗಳೂ ಬಾಲದ ಕೊನೆಯ ತನಕ (ಮಾನವನಲ್ಲಿ ಕಾಕ್ಸಿಕ್ಸ್ ಎಲುಬು) ಇರುವುವು. ಒಡಲೆಡೆಯ ಮೈಗೋಡೆ ಬೆನ್ನಕಡೆಯದನ್ನು ಈ ಎಲುಬಿನ ಬಳಿ ಕೂಡಿಕೊಂಡು ಮೈಪೊಳ್ಳುಗಳನ್ನು ಕೊನೆಗೊಳಿಸುತ್ತದೆ. ತೀರ ಹಿಂದುಳಿದವನ್ನು ಬಿಟ್ಟರೆ ಎಲ್ಲ ಸಸ್ತನಿಗಳಲ್ಲೂ ಬಾಲದೆಡೆಯ ಆಹಾರನಾಳ ಉದ್ದುದ್ದನಾಗಿ ಮುಂದುಗಡೆಯ ಹಿಂದುಗಡೆಯ ಎರಡು ಕೊಳವೆಗಳಾಗುವುದು; ಮುಂದುಗಡೆಯ ಕೊಳವೆ ಕಂಕೋಶವೂ (ಬ್ಲಾಡರ್) ಮೂತ್ರನಾಳವೂ (ಯೂರೆತ್ರ) ಮೇಲ್ಚರ್ಮದ ಕುಳಿಯನ್ನು ಅದು ಕೂಡುವೆಡೆಯ ಯೋನಿಯ ನಾಳಕೋಶದ (ವೆಸ್ಟಿಬ್ಯೂಲ್) ಒಳವರಿಯೂ ಆಗುವುದು; ಹಿಂದುಗಡೆಯ (ಬೆನ್ನಕಡೆಯ) ಕೊಳವೆ ನೆಟ್ಟಗರುಳಾಗಿ (ರೆಕ್ಟಮ್), ಮೇಲ್ಚರ್ಮದ ಇನ್ನೊಂದು ಕುಳಿಯನ್ನು (ಗುದ) ಕೂಡಿಕೊಂಡು ಕಾಕ್ಸಿಕ್ಸ್‌ನ ಸದ್ಯ ಮುಂದುಗಡೆ ಕೊನೆಗೊಳ್ಳುವುದು.

ರಚನಾವಿಧಾನದ ಒಮ್ಮಾನ (ಯೂನಿಟ್) ಗಳೆಂದರೆ **ಜೀವಕಣಗಳು** ಬದುಕಿರುವ ಒಂದೊಂದು ಜೀವಕಣವೂ ಮೊದಲಿದ್ದ ಜೀವಕಣ ಎರಡಾಗುವುದರಿಂದ ಬರುತ್ತದೆ. ತನ್ನ ಜೀವವನ್ನೂ ಗುಣಲಕ್ಷಣಗಳನ್ನೂ ಅದರಿಂದಲೇ ಪಡೆಯುತ್ತದೆ. ಬದುಕಿರುವ ಜೀವಕಣಗಳನ್ನು ಸಾಯಿಸಬಹುದು; ಅವು ಮುಂದೆ ಸಾಯಬಹುದು. ಹಿಂದೆ ಸತ್ತಿಲ್ಲ. ಬದುಕಿರುವ ಯಾವ ಜೀವಿಯಲ್ಲೇ ಆಗಲಿ ಈಗ ಬದುಕಿರುವ ಎಲ್ಲ ಜೀವಕಣಗಳೂ ಭೂಮಿಯ ಮೇಲೆ ಬದುಕಿದ್ದ ಮೊದಮೊದಲ ಜೀವಕಣಗಳಿಂದ ಒಂದೇ ಸಮನೆ ಒಡೆಯದ ಸರಣಿಯಲ್ಲಿ ಬಂದಿವೆ.

**ಸ್ತನಿಗಳಲ್ಲಿ ಆಗುವ ರಚನಾವಿಧಾನದ ಬದಲಾವಣೆಗಳು:** ಹಾಲೂಡಿಸುವುದೂ ಹೊರಗೆ ಬದುಕುಳಿವಂತೆ ಆಗುವತನಕ ಬಹುಕಾಲ ಗರ್ಭದಲ್ಲಿ ಪಾಲಿಸುವುದೂ ಉಳಿದವುಗಳೊಂದಿಗೆ ಸಸ್ತನಿಗಳಲ್ಲಿ ಹೊಸದಾಗಿ ಬಂದಿರುವ ಎರಡು ಲಕ್ಷಣಗಳು. ಹಾಲೂಡಲು, ಬಾಯಿ, ಮೂಗು ಬೇರೆಯಾಗುವುದು ಬಹು ಮುಖ್ಯ. ಉಸಿರಾಡುತ್ತಿರುವಾಗಲೂ ಆಹಾರ ನುಂಗಲು ಮುಚ್ಚುವ ಸಣ್ಣಗಂಟಲೂ ಇದರೊಂದಿಗೆ ಸುಮ್ಮನೆ ನುಂಗದೆ ಅರೆಯುವ ಹಲ್ಲು (ಮೋಲಾರ್)ಗಳಿಂದ ಆಹಾರವನ್ನು ಅಗಿಯುವುದೂ ಅಲ್ಲದೆ ಅಲುಗಾಡದ ತೂತಿರದ ಗಟ್ಟಿ ಅಂಗುಳೂ ಬೇಕಾದುವು. ಹೀಗೆ ಗರ್ಭದಲ್ಲಿ ಬೆಳೆದ ಪಿಂಡಗೂಸು ಹುಟ್ಟಿದಾಗ ದೊಡ್ಡದಾಗಿತ್ತು. ದೊಡ್ಡ ಪ್ರಾಣಿಗಳೆಲ್ಲ ಸಸ್ತನಿಗಳು. ಮೊಟ್ಟೆಯಿಂದ ಬಂದವು ಇಷ್ಟು ದೊಡ್ಡವಾಗಲು ಸಾಧ್ಯವಿಲ್ಲ. ಹೆರಿಗೆಯ ಸಾಗುದಾರಿಗಳು ಸಣ್ಣಗೆ ಇದ್ದುದರಿಂದ, ಹೆರಿಗೆಯಲ್ಲಿ ತಾಯಿ ಒಡಲಲ್ಲಿನ ಒತ್ತಡ ಏರಬೇಕಿತ್ತು. ಈ ಒತ್ತಡದಿಂದ ರಕ್ತವನ್ನು ಒತ್ತಿ ತಳ್ಳುವ ಹೃದಯಕ್ಕೂ ಉಸಿರಾಟಕ್ಕೂ ಪೀಕಲಾಟ ಆಗುತ್ತಿತ್ತು. ಇದಕ್ಕಾಗಿ ಎದೆಗೆ ಹೋಗಬಿಡದೆ ಒಡಲಲ್ಲಿ ಮಾತ್ರ ಒತ್ತಿ ಒತ್ತಡವನ್ನು ಏರಿಸುವ ವಪೆ ನಡುವೆ ಹುಟ್ಟಿಕೊಂಡಿತು. ಈ ಯೋಜನೆಯಿಂದ ವಪೆಯ ತಳದಲ್ಲಿರುವ ಜಠರಕ್ಕೂ ಮೇಲಿರುವ ಬಾಯಿಗೂ ಸಂಬಂಧ ಕಲ್ಪಿಸುವ ಅನ್ನನಾಳ ವಿಕಾಸದಲ್ಲಿ ಉದ್ದಸಾಗಿತು.

**ನೆಟ್ಟನಿಲುವಿನಿಂದಾದ ಬದಲಾವಣೆಗಳು :** ಮಾನವನ ವಿಶೇಷ ಗುಣವಾದ ಈ ನಿಲುವು ಹಿಂಗಾಲುಗಳು ಸಮಕೋನದಲ್ಲಿ ಬಾಗಿದ್ದರಿಂದಲೇ ಆಗಿಲ್ಲ; ಇದಕ್ಕೆ ಮೈಯ ಅನೇಕ ಭಾಗಗಳಲ್ಲೂ ಹೆಚ್ಚಿನ ಬದಲಾವಣೆಗಳು ಆಗಬೇಕಾಯಿತು. ಎಲ್ಲ ಕೀಲುಗಳಲ್ಲೂ ವಿಶೇಷವಾಗಿ ಬೆನ್ನುಗಂಬದಲ್ಲಿ ವ್ಯತ್ಯಾಸಗಳಾಗಿ, ಗುರುತ್ವದ ಎಳೆತದ ಕೇಂದ್ರ ಎಡೆ ಬಿಟ್ಟು ಕದಲಿತು. ಬೆನ್ನೆಲುಬುಗಳೆಲ್ಲ ಊರೆಕಂಬದಂತೆ ಒಟ್ಟುಗೂಡಿ, ಬೆನ್ನೆಲುಬುಗಳ ನಡುವಣ ದಪ್ಪಬಟ್ಟು (ಡಿಸ್ಕ್)ಗಳು ಕೊಂಕನ್ನೂ ಪುಟಿತವನ್ನೂ (ಇಲ್ಯಾಸ್ಟಿಸಿಟಿ) ಕೊಟ್ಟುವು. ಧಕ್ಕೆಗಳ ಪೆಟ್ಟನ್ನು ಈ ಬಟ್ಟುಗಳು ತಗ್ಗಿಸುತ್ತವೆ. ಒಂದೊಂದರ ನಡುವೆಯೂ ಇರುವ ಮೆತು ನಡುಬೀಜ (ನ್ಯೂಕ್ಲಿಯಸ್) ದೊಡ್ಡ ಹರಳುಗಲ್ಲಿನಂತಿದ್ದು ಇಡೀ ಕಂಬ ಸರಾಗವಾಗಿ ಆಡಲು ನೆರವಾಗುತ್ತದೆ. ಕೊರಳಿನಲ್ಲೂ ಸೊಂಟದಲ್ಲೂ ಬಾಗುತ್ತದೆ. ಹಾಗೇ ಸೊಂಟದ

ಭಾಗ ಚಿಂಪಾಂಜಿಗಳಲ್ಲಿ ಒಟ್ಟು ಉದ್ದದ 27% ಇದ್ದುದು ಗಂಡಸರಲ್ಲಿ 32% ರಷ್ಟು ಉದ್ದ ಸಾಗಿದೆ. ಇದರಿಂದ ಬಹುಮಟ್ಟಿಗೆ ಅಲ್ಲಾಡದಂತಿರುವ ಎದೆಗೂಡಿನ, ಅದರೊಂದಿಗಿನ ಕೈಗಳ, ಇರವನ್ನೂ ಬದಲಿಸಲು ಅನುಕೂಲ.

ಓಡಾಟದಲ್ಲಿ ನಾಲ್ಕು ಕಾಲುಗಳ ಮೇಲಿನ ಭಾರ ಎರಡರ ಮೇಲೆ ಬಿತ್ತು. ಇದರಿಂದ ಪಾದಗಳಲ್ಲಿ ಹಲವಾರು ಬದಲಾವಣೆಗಳಾದುವು. ಹಿಮ್ಮಡಿಗಳು ಕಮಾನುಗಳು, ಗಟ್ಟಿ ಮೂಳೆಗಳು, ಬಿಲ್ಲಿನ ನಾರಿನಂತಿರುವ ಬಲವಾದ ಸ್ನಾಯುಗಳು ಇತರ ಪ್ರಾಣಿಗಳಲ್ಲಿ ಇಲ್ಲದ ವಿಶೇಷ ರೀತಿಯಾಗಿ ಮನುಷ್ಯ ಎರಡೇ ಕಾಲುಗಳ ಮೇಲೆ ಓಡಲು, ಹಾರಲು, ದುಮುಕಲು, ಭಾರ ಹೊರಲು ಪಾದಗಳನ್ನು ಬಾಗಿಸುವ ಬಲವಾದ ಸನ್ನೆಗಳಂತಾಗಿವೆ. ಮೈ ನೆಟ್ಟಗೇ ಇರಬೇಕಾದರೆ ಸ್ನಾಯುಗಳು ಬಿಗುವಾಗಿರಬೇಕು. ಕೀಲುಗಳು ಮುದುರಿಕೊಳ್ಳದಂತೆ ತಡೆಯಲೂ ಇದು ಮುಖ್ಯ. ಬೀಳದಂತೆ ಇರಿಸುವ, ಆ ಕೀಲಿನಲ್ಲಿ ಬೇಡದ ಅಲುಗಾಟ ತಪ್ಪಿಸುವ, ಸೊಂಟ ಕೀಲಿನ ಸುತ್ತಲಿನ ಮೋಟು (ಮತ್ತಿತರ) ಸ್ನಾಯುಗಳು ಬಲು ಸೂಕ್ಷ್ಮವಾಗೂ ತಂತಾನಾಗಿ ಅರಿವಿಗೆ ಬರದೆ ಆಗುವುದಂತೂ ಇನ್ನೂ ಮುಖ್ಯ. ಈ ಸ್ನಾಯುಗಳ ಕೆಲಸ ಇನಿತು ತಪ್ಪಿದರೂ ಕೆಳಗುರುಳಬೇಕಾಗುವುದು.

ನಾಲ್ಕುಕಾಲಿನ ಪ್ರಾಣಿಗಳ ಎದೆ, ಹೊಟ್ಟೆಗಳ ಅಂಗಗಳಿಗಿರುವ ಆಧಾರವೇ ಬೇರೆ ರೀತಿ, ನೆಟ್ಟಗೆ ನಿಲ್ಲುವ ಮನುಷ್ಯನಲ್ಲಿ ಇರುವುದೇ ಬೇರೆ ರೀತಿ. ಆ ಪ್ರಾಣಿಗಳಲ್ಲಿ ಅಂಗಗಳು ಸಡಿಲವಾಗಿ ಆಡುತ್ತ ಅವುಗಳ ಭಾರವೆಲ್ಲ ಹೊಟ್ಟೆಯ ಕೆಳಗೋಡೆಯ ಮೇಲೆ ಬೀಳುತ್ತದೆ. ಮಾನವನಲ್ಲಿ ಬಹಳ ಅಂಗಗಳು ಹೀಗೆ ಆಡದೆ ಹಿಂದಿನ ಭಿತ್ತಿಗೆ ಅಂಟಿವೆ. ಕರುಳುಗಳ ನಡುಪೊರೆ (ಮೆಸೆಂಟರಿ) ಹೊಟ್ಟೆಯ ಹಿಂಗಡೆಯ ಗೋಡೆಗೆ ತಗುಲಿಕೊಂಡಿತು. ಇಷ್ಟಾದರೂ ಹೊಟ್ಟೆಯ ಕೆಳಭಾಗದಲ್ಲಿ ಮುಂದಣ ಗೋಡೆ ಮತ್ತು ಕಿಗ್ಗುಳಿಯ (ಪೆಲ್ವಿಸ್) ವಪೆಯ ಮೇಲೆ ಬಹುಮಟ್ಟಿಗೆ ಈ ಭಾರವೆಲ್ಲ ಬೀಳುವುದು. ಗಜ್ಜಲಿನಲ್ಲಿ ಈ ಗೋಡೆ ಬಲಗೊಂಡಿದ್ದರೂ ಇದರ ಮೂಲಕ ಬೂರುಗಳು (ಹರ್ನಿಯ) ತೂರುತ್ತವೆ. ತನ್ನ ನೆಟ್ಟನಿಲುವಿಗೆ ಮಾನವ ತೆರಬೇಕಾದ ಬೆಲೆಯಿದು. ಬಲವಿರದ ಕಿಗ್ಗುಳಿಯ ವಪೆಯ ಊರೆಯಾಗಿ ದೊಡ್ಡ ತೊಡೆಯ ಸ್ನಾಯುವಿನ ಒಳ ಅಂಚು ಬಂದು ಅದರ ತಳಕ್ಕೆ ಕುಂಡೆಲುಬು ನೆಟ್ಟಗಿರುಳ ಕೊಬ್ಬನ್ನು (ಇಸ್ಕಿಯೊರೆಕ್ಟಲ್ ಫ್ಯಾಟ್) ಒತ್ತಿ ಹಿಡಿಯುತ್ತದೆ.

ಮಾನವನ ಉಸಿರಾಟದ ಉಪಾಯವೇ ಬದಲಾಗಿದೆ. ಪ್ರಾಣಿಗಳಲ್ಲಿದ್ದಂತೆ ಮೈ ಭಾರ ಬೀಳದೆ ಹೆಗಲು ಮೂಳೆಗಳಿಗೆ ನೆಲದ ಆಸರೆ ತಪ್ಪಿತು. ಹೀಗಾಗಿ ನಾಲ್ಕು ಕಾಲಿನ ಪ್ರಾಣಿಗಳಲ್ಲಿ ಇದ್ದಂತೆ ಉಸಿರೆಳೆತಕ್ಕೆ ಇದನ್ನು ನೆಚ್ಚಿಕೊಳ್ಳುವಂತಿಲ್ಲ. ಇದರ ಬದಲಾಗಿ ಉಸಿರೆಳೆತಕ್ಕೇ ಇದು ಹೆಣಭಾರದಂಥ ಅಡಚಣೆ. ತಲೆಯ ಕೆಲವು ದೊಡ್ಡ ಸ್ನಾಯುಗಳು ಇದನ್ನು ಎತ್ತಿ ಹಿಡಿಯಬೇಕಾಗಿದೆ. ನಾಲ್ಕು ಕಾಲಿನ ಪ್ರಾಣಿಗಳಲ್ಲಿ ಪಕ್ಕಗಳಲ್ಲಿ ಆದಂತೆ ಎದೆಗೂಡು ಮಾನವನಲ್ಲಿ ಹಿಂದೆಮುಂದೆ ಚಪ್ಪಟೆಯಾಗುತ್ತದೆ. ರಕ್ತ ಸುತ್ತಾಟದ ಮಂಡಲದಲ್ಲಿ ಅಗಾಧ ಬದಲಾವಣೆಗಳಾಗುತ್ತವೆ. ಮೀನುಗಳಲ್ಲಿ ಹೃದಯದ ಮೈಯಲ್ಲಿ ತೀರ ಕೆಳಗಡೆ ಇರುತ್ತದೆ. ರಕ್ತವನ್ನು ಹೃದಯ ಮೇಲಕ್ಕೆ ತಳ್ಳಿದ ಮೇಲೆ ರಕ್ತ ಭಾರದಿಂದ ತಾನಾಗಿ ಕೆಳಕ್ಕೆ ಹರಿಯುತ್ತದೆ. ನೆಲದ ಮೇಲಿನ ಪ್ರಾಣಿಗಳಿಗೆ ಅಡ್ಡಾಡಲು ಕಾಲುಗಳು ಬೇಕು. ತೀರ ಕೆಳಗಿನ ಭಾಗಗಳಿಗಿಂತ ಮೇಲಕ್ಕೆ ಇವು ಹೃದಯವನ್ನು ಎತ್ತರಿಸುತ್ತವೆ. ಕೇವಲ ಭಾರದಿಂದಲೇ ರಕ್ತ ಇನ್ನು ಹೃದಯಕ್ಕೆ ಹಿಂದಿರುಗುವಂತಿಲ್ಲ. ಜಿರಾಫೆ, ಆನೆಗಳನ್ನು ಬಿಟ್ಟರೆ, ಬದುಕಿರುವ ಇನ್ನಾವ ಪ್ರಾಣಿಯಲ್ಲೂ ಇರದಷ್ಟು ಮೇಲಕ್ಕೆ (ನೆಲದಿಂದ) ಮಾನವನ ನೆಟ್ಟನಿಲುವು ಗುಂಡಿಗೆಯನ್ನು ಎತ್ತುತ್ತದೆ. ರಕ್ತ ಹಿಂದಿರುಗುವುದಕ್ಕೆ ಕಷ್ಟ. ಭಾರದಿಂದ ರಕ್ತ ಕೆಳಕ್ಕೆ ಹರಿವುದನ್ನೂ ತಡೆಯಲು ಕಾಲುಗಳ ಸಿರಗಳಲ್ಲಿ (ವೇನ್ಸ್) ಅಲ್ಲಲ್ಲಿ ಕವಾಟಗಳು ಬೇಕಾದಷ್ಟಿವೆ. ಆದರೂ ವಯಸ್ಸಾದವರಲ್ಲಿ ಕೊಂಕುನಾಳ (ವೆರಿಕೋಸ್) ಸಿರಗಳು ಕಾಣಿಸಿಕೊಳ್ಳುವುದು ಅಪರೂಪವಲ್ಲ. ಅನೇಕಾನೇಕ ಚಟುವಟಿಕೆಗಳಲ್ಲಿ ತಾವಿನ ರಕ್ತ ಪೂರೈಕೆಯ ಅನುವೇದನ (ಸಿಂಪತೆಟಿಕ್) ನರಗಳ ಮೂಲಕ ಹಿಗ್ಗು ಕುಗ್ಗುಗಳಿಂದ ರಕ್ತನಾಳಗಳು ತಂತಾನಾಗಿ ಹೊಂದಿಕೊಳ್ಳಲು ಮೈಯಲ್ಲಿ ಎಲ್ಲೆಲ್ಲೂ ಬದಲಾವಣೆಗಳಾಗಬೇಕು.

**ಮುಪ್ಪಿನೊಂದಿಗೆ ಆಗುವ ಬದಲಾವಣೆಗಳು:** ಬದುಕಿರುವ ಕಾಲ ಹೆಚ್ಚಾದ್ದರಿಂದ ಜನರಲ್ಲಿ ನಡು ವಯಸ್ಸು ದಾಟಿದವರೇ ಹೆಚ್ಚು. ಆದರೂ ಮಾನವನ ಮೈಮೇಲೆ ಕಾಲದ ಹೆಜ್ಜೆ ಗುರುತುಗಳು ಒಬ್ಬೊಬ್ಬರಲ್ಲೂ ಒಂದೇ ವಯಸ್ಸಿನಲ್ಲಿ ಬೀಳವು. ಇತರರು 55ರಲ್ಲಿ ಎಷ್ಟರಮಟ್ಟಿಗೆ ಗಟ್ಟಿಮುಟ್ಟಾಗಿ ಇರುವರೋ ಕೆಲವರು ಅಷ್ಟೇ ಚೆನ್ನಾಗಿ 75ರಲ್ಲೂ ಇರುವರು.

ಚರ್ಮ ಬಲು ಚೆನ್ನಾಗಿ ಖಚಿತವಾಗಿ ವಯಸ್ಸನ್ನು ತೋರುತ್ತದೆ. ಹಸುಗೂಸಿನ ಮೆತುವಾದ ನಯವಾದ ಮಕಮಲ್ಲಿನಂಥ ಕೆಂಪಿನ ಚರ್ಮ, ಬರುಬರುತ್ತ ಗಡುಸಾಗಿ ಸುಕ್ಕುಗಟ್ಟಿ ಮುದಿಯಾಗಿ ಸುಂಡರಿಸಿಕೊಂಡು ಒಣಕಲ ತೊಗಲಾಗುತ್ತದೆ. ಬೇರೆ ಕೂದಲು ಉಳಿದು ಬೆಳೆವುದಾದರೂ ತಲೆಗೂದಲು ನರೆತು ಉದುರಿಹೋಗುತ್ತದೆ. ಗಾಯಗಳು ಮಾಯಲು ಹೆಚ್ಚು ಕಾಲ ತೆಗೆದುಕೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ 10 ವರ್ಷದ ವಯಸ್ಸಿನವರ ಐದರಷ್ಟು ಹೆಚ್ಚುಕಾಲ 60 ವರ್ಷ ವಯಸ್ಸಿನಲ್ಲಿ ಹಿಡಿಯಬಹುದು. 40ರ ಅನಂತರ ಮಿದುಳು ಸ್ವಲ್ಪ ಕಿರಿದಾಗಿ 75ರ ಅನಂತರ ವಿಶೇಷವಾಗಿ ಹಣೆಯ, ಕಪಾಲದರೆಯ (ಪೆರೈಟಲ್) ಹಾಲೆಗಳಲ್ಲಿ (ಲೋಬ್ಸ್) ಚೆನ್ನಾಗಿ ಮುದುರಿಕೊಳ್ಳುತ್ತದೆ. ಬೆನ್ನೆಲುವಿನ ನರಗಳಲ್ಲಿನ ಅರಿವಿನ ತಂತುಗಳು ಕಡಿಮೆಯಾಗುತ್ತವೆ; ನರಗಂಟಿನ ಜೀವಕಣಗಳು ಬಣ್ಣವೇರಿ, ಕೆಲವು ಸಾಯುತ್ತವೆ. ಕಿವಿಯಲ್ಲಿ ಕೆಲವು ನರಜೀವಕಣಗಳೂ ತಂತುಗಳೂ ಹಾಳಾಗುವುದರಿಂದ ಕೀರಲು ಸ್ವರ ಕೇಳುವ ಬಲ ಕುಂದುವುದು. ಕಣ್ಣಿನ ಮಸೂರ (ಲೆನ್ಸ್) ಹಿರಿಕಿರಿದಾಗುವ ಬಲ ಕಳೆದುಕೊಳ್ಳುತ್ತದೆ.

ಮೂಳೆಗಳು ಹಗುರಾಗಿ ಲಡ್ಡಾಗುತ್ತವೆ. ಸುಲಭವಾಗಿ ಮುರಿಯುವಂತಿದ್ದು ನುಗ್ಗುನುರಿಯುವಂತಿರುತ್ತವೆ. ಹೊಸದಾಗಿ ಬೆಳೆಯುವುದಕ್ಕಿಂತಲೂ ಹಾಳಾಗುವುದೇ ಹೆಚ್ಚು. ಅವುಗಳಲ್ಲಿನ ಸುಣ್ಣ ಹೊರಬಿದ್ದು ಧಮನಿಗಳು, ಮೆಲ್ಲೆಲುಬುಗಳು (ಕಾರ್ಟಿಲೇಜಸ್), ತಂತುಗಟ್ಟುಗಳು (ಲಿಗಮೆಂಟ್ಸ್) ಸ್ನಾಯುಗಳು ತಗುಲಿಕೊಳ್ಳುವ ಕಂಡರಗಳಲ್ಲೂ (ಟೆಂಡನ್ಸ್) ಸೇರಿಕೊಳ್ಳುತ್ತವೆ. ಕೀಲುಗಳಲ್ಲಿ ಮೂಳೆಯ ತುದಿಯನ್ನು ಮುಚ್ಚಿರುವ ಮೆಲ್ಲೆಲುಬು ತೆಳುವಾಗಿ, ಕೆಲವೇಳೆ ಅಲ್ಲಲ್ಲಿ ಇಲ್ಲದಂತೆ ಆದಾಗ ಮೂಳೆ ಮೂಳೆಗೆ ನೇರವಾಗಿ ತಾಕಿ ಹಳೆಯ ಕೀಲುಗಳು ಕಿರ್ರೆನ್ನುತ್ತ ಉರಿಯುತ್ತವೆ. ಸ್ನಾಯುಬಲ ಕುಗ್ಗಿದರೂ ಎಲ್ಲರಲ್ಲೂ ಒಂದೇ ಪ್ರಮಾಣದಲ್ಲಿರುವುದಿಲ್ಲ.

ಹಳೆಯ ರಬ್ಬರಿನಂತಿರುವ ಅಂಗಾಂಶ ಪುಟಿಸದಂತಾಗುವುದು, ಮೈಯಲ್ಲಿ ಎಂದಿಗೂ ವಿಶ್ರಾಂತಿ ಪಡೆಯದೆ ದುಡಿವ ಒಂದೇ ಒಂದು ಅಂಗಾಂಶವಿದು. ಚರ್ಮದಲ್ಲಿ ಗಾಯದ ಇರಿತವಾದರೆ ಇದು ಗಾಯದ ಬಾಯಿ ತೆರೆಯುವಂತೆ ಮಾಡುತ್ತದೆ. ಧಮನಿಗಳಲ್ಲಿ ಎಂದೂ ಇರುವ ರಕ್ತದ ಒತ್ತಡವನ್ನು ಎದುರಿಸುತ್ತದೆ. ಕೂಡಿಸುವ ಅಂಗಾಂಶಗಳಲ್ಲಿ ಒಂದೊಂದು ಬಾರಿ ಚಲನೆಯಾದಾಗಲೂ ಅವನ್ನು ಎಂದಿನ ಆರಾಮದ ಸ್ಥಿತಿಗೆ ಇದು ತರುತ್ತದೆ. ಆದ್ದರಿಂದ ಇದು ಬೇಗನೆ ಸವೆದು ಹೋಗುತ್ತದೆ. ಕೆಲವು ಮನೆತನಗಳಲ್ಲಿ 45ಕ್ಕೂ ಕೆಲವಲ್ಲಿ 90ಕ್ಕೂ ಹೀಗಾಗುತ್ತದೆ. ಅವುಗಳ ಗೋಡೆಗಳಲ್ಲಿನ ರಬ್ಬರಿನಂಥ ಅಂಗಾಂಶಗಳು ಕೆಡುವುದರಿಂದ ಪುಪ್ಪುಸಗಳಲ್ಲಿನ ಗಾಳಿಗೂಡುಗಳು ಹಿಗ್ಗುತ್ತವೆ; ಪುಪ್ಪುಸಗಳು ಉಬ್ಬಿ ಕೊಳ್ಳುತ್ತವೆ. ಸ್ಥಿತಿಸ್ಥಾಪಕ ಶಕ್ತಿಯುಳ್ಳ ಅಂಗಾಂಶ 25ನೆಯ ವಯಸ್ಸಿನಲ್ಲಿ ಬಲು ಚೆನ್ನಾಗಿರುತ್ತದೆ. ಮುಪ್ಪಿನಲ್ಲಿ ನಾಶವಾದರೆ ಮತ್ತೆ ಸರಿಹೋಗದು. ಧಮನಿಗಳು ನಾರಾಗಿ ಪೆಡಸು ಗಟ್ಟುತ್ತವೆ. ಪುಟಿವ ಗುಣ ತಗ್ಗುವುದರಿಂದ ಹಿಗ್ಗದ ಕೊಳವೆಯಾಗುತ್ತವೆ. ಅವುಗಳ ಒಳವರಿಯಲ್ಲಿ, ತರುಣರಲ್ಲೇ ಕಾಣಿಸಿಕೊಳ್ಳುವ ಹಳದಿಯ ಕೊಬ್ಬಿನ ಚುಕ್ಕೆಗಳು ಮುಪ್ಪಿನಲ್ಲಿ ಯಾವಾಗಲೂ ಇರುತ್ತವೆ. ನಡುವಯಸ್ಸು ದಾಟಿದ ಮೇಲೆ ಲಿಂಫಾಯ್ಡ್ ಅಂಗಾಂಶ ಕುಗ್ಗಿಹೋಗುತ್ತದೆ. ಗ್ರಂಥಿಗಳಲ್ಲಿ ತಿರುಳಿನ ಅಂಶ (ಪ್ಯಾರಂಕೈಮ) ಮುದುರಿಕೊಳ್ಳುವುದು. ಜೀವದ್ರವ್ಯ (ಪ್ರೋಟೊಪ್ಲಾಸ್ಮ್) ಇನ್ನೂ ಜಡವಾದಂತೆ ತೋರುವುದು.



ಚಿತ್ರ 3. ಆಹಾರ ನಾಳದ ಎರಡು ಪದರಗಳ ಪೊಳ್ಳುಗಳು ಒಳವರಿಯಾಗುವ ರೀತಿ.
1. ಮೇಲ್ಚರ್ಮ. 2. ನಡುರಚನೆಯ ಅಂಶ. 3. ಬೆನ್ನುಕಡೆಯ ನಡುನನೆಚರ್ಮ. 4. ಹೊಟ್ಟೆ ಕಡೆಯ ನಡುನನೆಚರ್ಮದ ಪೊಳ್ಳು. 9. ಜನನಗ್ರಂಥಿ ಕುಡಿ. 10. ಮೂತ್ರಪಿಂಡದ ಕುಡಿ. 11. ಮಿದುಳುಬಳ್ಳಿಯ ನರ. 12. ನರದ ಕೊಳವೆ

ಸವೆದ ಅಂಗಗಳು ನೇರ್ಪಡುವುದು ಅಪರೂಪ. ಒಂದು ವೇಳೆ ನೇರ್ಪಟ್ಟರೂ ಬಹು ನಿಧಾನ. ಅಲ್ಲದೆ ಮೊದಲಿದ್ದುದರ ಬದಲಾಗಿ ಬೇರೆ ಅಂಗಾಂಶದಿಂದ ಆ ಕೆಲಸ ಆಗಬೇಕಾಗುತ್ತದೆ (ಮೆಟಪ್ಲೇಸಿಯ). ಚರ್ಮ, ಈಲಿ (ಪಿತ್ತಜನಕಾಂಗ), ಮೂತ್ರಪಿಂಡ, ನರಗಂಟುಗಳು, ಕೇಂದ್ರನರಮಂಡಲದ ಜೀವಕಣಗಳಲ್ಲೂ ಇನ್ನಷ್ಟು ಬಣ್ಣವೇರುವುದು. ಜೀವಕಣಗಳು ಒಡೆದೆರಡಾಗಲು ಹಳೆಯ ಮುದಿ ಅಂಗಾಂಶಗಳು ಹೊಂದಿಕೊಳ್ಳಲಾರವು. ಆದ್ದರಿಂದ ಮುಪ್ಪಿನಲ್ಲಿ ರಕ್ಷಣೆಯ ಒಂದು ಅಂಶವೇ ಕಡಿಮೆಯಾಗುತ್ತದೆ.

ಮುಪ್ಪಿನ ಈ ಕ್ರಮಗತಿಗಳು ಬೆಳವಣಿಗೆಯ ಕ್ರಮಗತಿಗಳಷ್ಟೇ ಸಹಜ. ಅವುಗಳಲ್ಲಿ ಕೆಲವಂತೂ ಹುಟ್ಟುವ ಮುನ್ನವೇ ಮಾನವ ಪಿಂಡದಲ್ಲಿ ಕಾಣಿಸಿಕೊಳ್ಳುತ್ತವೆ. ವಿಕಾಸದಲ್ಲಿ ಮೊದಲ ರೂಪಗಳಲ್ಲಿ ನಿಜಕೆಲಸಕ್ಕಾಗಿ ಇರುವ ಅನೇಕ ರಚನೆಗಳು ಮುದುರಿಕೊಂಡು, ರೂಪವ್ಯತ್ಯಾಸ ಹೊಂದುತ್ತವೆ ಇಲ್ಲವೆ ಹೊಸ ರಚನೆಗಳಿಗೆ ಎಡೆಗೊಡುತ್ತವೆ. ಮುಮ್ಮೂತ್ರಪಿಂಡ (ಪ್ರೋನೆಫ್ರಾಸ್) ಹೋಯಿತು; ನಡುಮೂತ್ರಪಿಂಡ ಬದಲಾಯಿತು. ಮಾನವ ಪಿಂಡಗಳಲ್ಲಿ ಈ ಮುದುರಿಕೆಗಳು (ಇನ್ವೊಲ್ಯೂಷನ್ಸ್) ಆಗುತ್ತವೆ. ರಕ್ತದ ಸಾಗುನಾಳ (ಡಕ್ಟಸ್ ಆರ್ಟೀರಿಯೋಸಸ್) ಹುಟ್ಟುವಾಗಲೂ ತಾರುಣ್ಯದಲ್ಲಿ ತೈಮಸ್ ಗ್ರಂಥಿಯೂ ಇಲ್ಲವಾಗುತ್ತವೆ. ವಯಸ್ಸು ಕಳೆದಂತೆಲ್ಲ ಮುದುರಿಕೆಗಳು ಇನ್ನಷ್ಟು ಹೆಚ್ಚಾಗುತ್ತ ಹೋಗುತ್ತವೆ.

ಒಂದೊಂದು ತೆರನ ಜೀವಕಣದ ದೇಹರಚನೆಯ ಬಾಳುವೆಯ ಅವಧಿಯೂ ಬೇರೆ ಬೇರೆ. ನರ, ಸ್ನಾಯು ಜೀವಕಣಗಳು ಬದುಕಿರುವತನಕ ಇರುವುದರಿಂದ ಅವನ್ನು ಹೊಸಕಣಗಳಿಂದ ಬದಲಿಸಬೇಕಾಗಿಲ್ಲ. ತಲೆಗೂದಲುಗಳು ಕೆಲವು ವರ್ಷ

ಮಾತ್ರ ಬಾಳುತ್ತವೆ. ಇಡೀ ಮೈಯ ಬಾಳುವೆ ಒಂದೊಂದು ಜಾತಿಯಲ್ಲೂ ಬೇರೆ ಬೇರೆ. ಮಾನವನ ಮೈ ಬಾಳಬಹುದಾದ ಕಾಲ 100 ವರ್ಷಗಳೆಂದು ಪರಿಗಣಿಸಲಾಗಿದೆ; ಒಂದು ಕೋಟಿ ವರ್ಷಗಳ ಹಿಂದೆ ಇರಬಹುದೇನೋ, ನವತಮಯುಗದ (ಪ್ಲಿಯೋಸೀನ್) ಮಾನವನ ಪೂರ್ವಿಕರಿಂದ (ಗೊರಿಲ್ಲಾದಂತಿರುವ ನರವಾನರರು–ಥ್ರೊಪಾಯಿಡ್) ಈ ವಯಸ್ಸನ್ನು ನಿರ್ಧರಿಸಿದಂತೆ ತೋರುತ್ತದೆ.

ಮುಪ್ಪು, ಮುದುರಿಕೆ, ಸಾವುಗಳಿಗೆ ವಿಜ್ಞಾನ ಸೂಚಿಸುವ ಕೆಲವು ಕಾರಣಗಳು ಹೀಗಿವೆ: ಅಂಗಾಂಶ ಪೋಷಣೆ ಇಲ್ಲದಾಗುವುದು; ಕರುಳಿಂದಲೋ ಹವೆಯಲ್ಲೋ ಹೀರಿ ಬಂದ ಕೆಡುಕಿನ ಪದಾರ್ಥಗಳೋ ಕಸರಿನ ಉತ್ಪನ್ನಗಳೋ ಕೂಡುತ್ತಾ ಹೋಗುವುದು; ಚೋದನಿಕಗಳು (ಹಾರ್ಮೋನ್ಸ್) ಒಂದಕ್ಕೊಂದು ಹೊಂದಿ ಕೆಲಸ ಮಾಡುವುದರ ಫಲ ಇಲ್ಲದಾಗುವುದು. 12ನೆಯ ವರ್ಷದ ಅನಂತರ ಆಮ್ಲಜನಕದ ಬಳಕೆ ಬರುಬರುತ್ತ ತಗ್ಗುವುದು. ಇಲ್ಲವೇ ಈ ಕಾರಣಗಳೆಲ್ಲ ಒಟ್ಟಾಗಿ ಒದಗುವುದು. ಇವೆಲ್ಲವೂ ತಮ್ಮ ಕೈಲಾದಷ್ಟು ಕೆಲಸ ಮಾಡುತ್ತೆಂಬುದರಲ್ಲಿ ಅನುಮಾನವಿಲ್ಲ,

### ಆಕಾರ ಮತ್ತು ಗಾತ್ರ

ಮಾನವನ ಅಖಂಡ ಜೀವನದಲ್ಲಿ ಸಾಮಾನ್ಯವಾಗಿ ಒಂಬತ್ತು ಹಂತಗಳನ್ನು ರಚನಾವಿಜ್ಞಾನಿಗಳು ಗುರುತಿಸುವರು. ಮೈಯ ರೂಪ ಹಂತ ಹಂತಕ್ಕೂ ಬದಲಾಯಿಸುತ್ತಿರುತ್ತದೆ. ಈ ಯಾವ ಹಂತಗಳಲ್ಲೂ ಆಕಾರ ಸ್ಥಾಯಿಯಾಗಿರುವುದಿಲ್ಲ. ಪರಿಸರದೊಂದಿಗೆ ಚಟುವಟಿಕೆಯಿಂದ ಪ್ರತಿಕ್ರಿಯೆ ತೋರುತ್ತಲೇ ಇರುತ್ತದೆ. ಹುಟ್ಟುವ ಮುಂಚೆ ಸ್ವಲ್ಪವೂ ಹುಟ್ಟಿದ ಮೇಲೆ ಬಹುವಾಗೂ ಅಂಥ ಪ್ರತಿಕ್ರಿಯೆ ಜೀವನದಲ್ಲಿ ಇರುವುದು. ಪರಿಸರದೊಂದಿಗಿನ ಕ್ರಿಯೆ ಪ್ರತಿಕ್ರಿಯೆಗಳಿಂದ ಅಲ್ಲಲ್ಲಿ ಸ್ಥಳೀಯ ಬದಲಾವಣೆಗಳಾದರೂ ಮೈಯ ಆಳದ ದಡುಗಟ್ಟುಗಳು (ಫೇಶಿಯ) ಅವುಗಳ ಸಾಮಾನ್ಯ ಆಕಾರಗಳನ್ನು ಉಳಿಸಿಕೊಂಡಿರುವುವು.

ಇಡೀ ಮೈಯ, ಅದರ ಭಾಗಗಳ ಆಕಾರ ಗಾತ್ರಗಳು ವಂಶಾನುಗತ. ಇಂದಿನ ಸ್ಥಿತಿಗಳ ಪರಿಣಾಮಗಳು ಹಳೆಯ ಹೊಂದಾಣಿಕೆಗಳನ್ನು ಹೆಚ್ಚು ಕಡಿಮೆ ಮಾಡುತ್ತವೆ. ಹೀಗೆ ದೇಹಕ್ಕೆ ಸಿದ್ಧಿಸುವ ಹೊಸ ಆಕಾರ ಇಂದಿನ ನವೀನ ಜೀವನಕ್ಕೆ ಎಂದಿಗೂ ಪ್ರಶಸ್ತವಾಗಿ ಹೊಂದಿಕೊಳ್ಳಲಾರದು. ಆದರೂ ಶಕ್ತಿಯನ್ನು ತೀರ ಕಡಿಮೆ ಪೋಲಾಗಿಸಿ ಜೀವನವನ್ನು ಉಳಿಸಿಕೊಳ್ಳಲು ಸಾಕಾಗುವಷ್ಟರ ಅಗತ್ಯಗಳನ್ನು ಇದು ಪೂರೈಸುತ್ತದೆ.

ಒಳಗಿನ ಅಲ್ಲದೆ ಪರಿಸರದ ಬಲಗಳು ಒಂದುಗೂಡಿ ನವತಮ ಯುಗದಲ್ಲಿ ಆಕಾರ ಗಾತ್ರಗಳೆರಡೂ ನಿರ್ಧರವಾದುವು. ಒಳಗಿನ ಬಲಗಳಲ್ಲಿ ವಂಶಪಾರಂಪರ್ಯವಾಗಿ ಬಂದ ಗುಣಧರ್ಮಗಳೂ ಬೆಳೆವ ಇಚ್ಛೆಯೂ ಮುಖ್ಯ. ಬಾಹ್ಯಪರಿಕರಗಳಲ್ಲಿ ಗುರುತ್ವಾಕರ್ಷಣೆಯೂ ಒಂದು ಮುಖ್ಯ ಅಂಶ. ನೆಲದ ಮೇಲೆ ಅಡ್ಡಾಡುವ ಪ್ರಾಣಿಗಳ ದೇಹಗಳನ್ನು ಗುರುತ್ವಾಕರ್ಷಣೆ ನೆಲದ ಕಡೆಗೆಳೆದು ಅದಕ್ಕೆ ಸಮ ಮಟ್ಟದಲ್ಲಿ ಇಟ್ಟಿತು; ಒಂದು ಭಾಗ ಮೇಲೂ ಒಂದು ಭಾಗ ಕೆಳಗೂ ಇರುವಂತೆ ಮಾಡಿತು. ಇದರಿಂದ ಬೆನ್ನ ಕಡೆ, ಒಡಲಕಡೆ ಎಂದು ಎರಡು ಭಾಗಗಳಾದುವು. ಅವಯವಗಳು ಕೆಳಪಕ್ಕಕ್ಕೆ ಇರುವಂತಾದುವು. ಪ್ರಾಣಿಗಳೂ ಒಂದು ಕೊನೆಯನ್ನು ಮುಂದಿಟ್ಟುಕೊಂಡು ನಡೆದುದರಿಂದ ತಲೆ ಬಾಲಗಳು ವಿಕಾಸಗೊಂಡುವು. ತಲೆಯ ತುದಿಯೇ ಮೊದಲು ಪರಿಸರದ ಸಂಪರ್ಕಕ್ಕೊಳಗಾದ್ದರಿಂದ ಅರಿವಿನ ಅಂಗಗಳು (ಪಂಚೇಂದ್ರಿಯಗಳು) ಬೆಳೆದುವು. ವೇಗವಾಗಿ ಚಲಿಸುವ ಪ್ರಾಣಿಗಳ ಇಕ್ಕೆಲಗಳೂ ಸಮರೂಪದಲ್ಲಿ ಇರುವಂತಾಯಿತು.

ಬೆನ್ನೆಲುಬಿಗಳಲ್ಲಿ ಸಾಮಾನ್ಯವಾಗಿರುವ ಆಕಾರದ ಈ ಲಕ್ಷಣಗಳಿಗೆ ಭೂ ಗುರುತ್ವಾಕರ್ಷಣೆ ಬಲು ಮುಖ್ಯಕಾರಣ ಆಗಿದ್ದುದೇ ಅಲ್ಲದೆ ಅದರ ಗಾತ್ರದ ಮೇಲೂ ಹೆಚ್ಚು ಪ್ರಭಾವ ಬೀರಿತ್ತು. ತನ್ನ ಪರಿಸರಕ್ಕೆ ಚೆನ್ನಾಗಿ ಹೊಂದಿಕೊಂಡಿರುವ ಒಂದು ಚಿಕ್ಕ ಪ್ರಾಣಿಯ ಆಕಾರ ತನ್ನ ಉದ್ದವನ್ನು ಇಮ್ಮಡಿಸಿದರೆ, ಅದರ ಮೇಲ್ಮೈ ನಾಲ್ಕರಷ್ಟೂ ಅದರ ತೂಕ ಎಂಟರಷ್ಟೂ ಆಗುವುದು. ಗುರುತ್ವಾಕರ್ಷಣೆ ನೀರು ಗಾಳಿಗಳ ಪ್ರತಿ ಘರ್ಷಣೆಯ ದೃಷ್ಟಿಯಿಂದ ಪರಿಮಾಣದಲ್ಲಿ ಅಂಥ ಬದಲಾವಣೆಯಿಂದ ಪ್ರಾಣಿಗೆ ತೀರ ತೊಂದರೆ.

ಮೈಭಾಗಗಳ ಒಂದಕ್ಕೊಂದರ ಗಾತ್ರದ ಮೇಲೂ ಗುರುತ್ವಾಕರ್ಷಣದ ಪ್ರಭಾವವಿದೆ; ಆಂಫಿಯೋಕ್ಸಸ್ ಪ್ರಾಣಿಗೆ ಕರುಳು ನೆಟ್ಟಗಿರುವುದರಿಂದ ಮೋಟಾಗಿದೆ. ಪ್ರಾಣಿಗಳು ಉದ್ದವಾದಂತೆಲ್ಲ ಇನ್ನೂ ಉದ್ದನಾಗಿರುವ ಕರುಳು ಸುರುಳಿಗಟ್ಟುತ್ತದೆ. ಈ ಪ್ರಾಣಿಯ ಉದ್ದ ಹತ್ತುಪಟ್ಟಾಗಿ ಆಕಾರ ಇದ್ದಂತೇ ಇದ್ದರೆ, ಆಹಾರ ಹೀರಿಕೊಳ್ಳುವ ಮೇಲ್ಮೈ 100 ರಷ್ಟು ಹೆಚ್ಚಿದರೂ ತೂಕ 1000 ದಷ್ಟು ಹೆಚ್ಚುವುದು. ಹೀಗೆ ಇನ್ನೂ ಹೆಚ್ಚಿನ ತೂಕದ ಮೈಗೆ ಪೋಷಣಾಂಶಗಳನ್ನು ಒದಗಿಸಲು ಮೈಗಿಂತಲೂ ಕರುಳು ಇನ್ನಷ್ಟು ಉದ್ದವಾಗಿರಬೇಕು. ಅಂದರೆ ಸುರುಳಿಯಾಗಬೇಕು. ಮಾನವನ ಆಹಾರನಾಳ, ಅದರ ಬಾಯಿ, ಗುದಗಳ ನಡುವಣ ನೇರಗೆರೆಯ 12 ಪಟ್ಟು ಉದ್ದವಾಗಿದೆ.

ಹೀಗೆ ಆಕಾರವನ್ನು ಗುರುತ್ವಾಕರ್ಷಣೆ ನಿರ್ಧರಿಸಿದರೂ ಮುಖ್ಯವಾಗಿ ಹೆಚ್ಚು ತೂಕದ ಪ್ರಾಣಿಗಳ ಮೇಲೇ ಇದರ ಪ್ರಭಾವ ಹೆಚ್ಚು. ಬೆಳವಣಿಗೆ ಬಲು ಚುರುಕಾಗಿರುವ ಪಿಂಡದ ಮೊದಲ ಹಂತಗಳಲ್ಲಿ, ಅದರ ಮೈ ಬಲು ಪುಟ್ಟದಾಗಿರುವುದರಿಂದ ಗುರುತ್ವಾಕರ್ಷಣೆ ಪೂರ್ಣಪ್ರಭಾವ ಬೀರಲಾರದು. ಅಲ್ಲದೆ ಅದು ತೇಲಾಡುತ್ತಿರುತ್ತದೆ. ಆ ಪುಟಾಣಿ ಮುದ್ದೆಗಳಲ್ಲಿ ಲೋಮನಾಳತೆ, ಅಂಟಿಕೆ, ಮೇಲ್ಮೈತುಯ್ತ, ಮೇಲ್ಮಂದೈಕೆ (ಅಡ್ಸಾರ್ಪ್‌ಷನ್) ವಿದ್ಯುತ್‌ಹೊರೆ (ಛಾರ್ಜ್), ರಾಸಾಯನಿಕ ಕ್ರಿಯೆಗಳಂಥ ಇತರ ಅಣುನಡುವಣ ಅಂಶಗಳು ಇನ್ನೂ ಪ್ರಭಾವಕಾರಿಗಳು ವ್ಯವಸ್ಥೆಗೊಳ್ಳುತ್ತಿರುವ ಆ ಹಂತದಲ್ಲಿ ನಡೆಯುತ್ತಿರುವ ಒಳಗಣ ಮತ್ತು ಹೊರಗೆ ಕ್ರಿಯಾಕಾರಣಗಳಿವು. ವಂಶಾನುಕ್ರಮವಾಗಿ ಬಂದ ಗುಣಲಕ್ಷಣಗಳೊಂದಿಗೆ ಇವು ಸಹಕರಿಸುತ್ತವೆ. ಪಿಂಡದ ಮೊಟ್ಟಮೊದಲ ಹಂತಗಳಲ್ಲಿ ಪ್ರಭಾವ ಬೀರುವ ಅನೇಕ ಹಿಂದಣವೂ ನಿರ್ಧಾರಕಗಳೂ ಆದ ಅಂಶಗಳು ಈಚೆಗೆ ಗೊತ್ತಾಗಿವೆ. ಸ್ಪಿಮನ್ನನ ವ್ಯವಸ್ಥಾಪಕಗಳೂ ನೀಡ್ಹಾಂನ ಆಕೃತಿಸಂಬಂಧಿಯಾದ ಚೋದನಿಕಗಳೂ ಅವುಗಳಲ್ಲಿ ಕೆಲವು.

### ಶರೀರ ಕ್ರಿಯಾವಿಜ್ಞಾನ ಮತ್ತು ಅಂಗರಚನಾವಿಜ್ಞಾನ

ವಿಶ್ವವಿದ್ಯಾಲಯಗಳಲ್ಲಿ ಎಷ್ಟೋ ಕಾಲದಿಂದಲೂ ಶರೀರಕ್ರಿಯಾವಿಜ್ಞಾನವೂ ಅಂಗರಚನಾವಿಜ್ಞಾನವೂ ಒಂದಾಗಿದ್ದವು. ಬರ್ಲಿನ್ನಿನಲ್ಲಿ ಒಂದೇ ಕಾಲದಲ್ಲಿ ಇವೆರಡಕ್ಕೂ ಯೋಹಾನ್ನೀಸ್ ಮ್ಯೂಲರ್ ಪ್ರಾಧ್ಯಾಪಕನಾಗಿದ್ದ. ಆಮೇಲೆ ಬರುಬರುತ್ತ ಕಲಿಕೆಯ ಅನುಕೂಲಕ್ಕಾಗಿ ಇವು ಬೇರ್ಪಟ್ಟವು. ನಿಸರ್ಗದಲ್ಲಂತೂ ಅಂಗರಚನೆಯೆಲ್ಲ ಅಂಕ ಕ್ರಿಯಾತ್ಮಕವೇ. ಏಕೆಂದರೆ ರಚನೆಯಿರದೆ ಕೆಲಸವಿಲ್ಲ, ಕ್ರಿಯೆಯಿಲ್ಲದೆ ರಚನೆಯಿಲ್ಲ.

1940ರ ಅನಂತರ ಆಕೃತಿರಚನಾವಿಜ್ಞಾನದ ಹೊಸ ಕಲ್ಪನೆಯೊಂದು ಹುಟ್ಟಿಕೊಂಡಿತು. ಸಣ್ಣ ಪ್ರಾಣಿಗಳ ಮೈಗಳು ಮತ್ತವುಗಳ ಭಾಗಗಳ (ಪಿಂಡಗಳು ಜೀವಕಣಗಳು) ಆಕಾರ, ರಚನೆಗಳ ಸಂಶೋಧನೆಗಳಿಂದ ಅವು ಜೀವರಾಸಾಯನಿಕ ಪ್ರಭಾವಗಳಿಗೆ ಹೆಚ್ಚು ಈಡಾಗುತ್ತವೆಂದು ತಿಳಿಯಿತು. ಆಕೃತಿಸಂಬಂಧಿಗಳಾದ ಚೋದನಿಕಗಳು ಬಹುವಾಗಿ ಜೀವರಾಸಾಯನಿಕ ಗುಣದವೇ ಆಗಿದ್ದು, ಪಿಂಡದ ಬೆಳವಣಿಗೆಯಲ್ಲಿನ ಆಕಾರ ವ್ಯತ್ಯಾಸಗಳಲ್ಲಿ ಅನೇಕ ಕಾರಣಗಳೋ ನಿರ್ಧಾರಕಗಳೋ ಆಗಿವೆ. ಮಿಣಿರೂಪಗಳ ಅಂಗರಚನೆಯ ಅಭ್ಯಾಸದ ತಿಳಿವಳಿಕೆಯನ್ನು ಕಣ್ಣಿಗೆ ಕಾಣುವ ಬೆಳಕಿಗೂ ಆಚೆ ವಿಸ್ತರಿಸಿ, ವಿಶೇಷವಾಗಿ ಮಾನವ ರಚನೆಯಲ್ಲಿರುವ ದೊಡ್ಡ ಪ್ರೋಟೀನು ಅಣುಗಳಂಥ ಜೈವಿಕ ಅಣುಗಳ ರಚನೆಗೂ ಅನ್ವಯಿಸಲಾಗಿದೆ.

### ಅಂಗರಚನಾವಿಜ್ಞಾನದ ಚರಿತ್ರೆ

ಅಂಗರಚನಾವಿಜ್ಞಾನದ ಬೆಳವಣಿಗೆಯ ಚರಿತ್ರೆಯನ್ನು ಸರಿಯಾಗಿ ಬೇರೆಬೇರೆ ಸರಿನೆಲೆ ಹಿಡಿತಗಳಿರುವ ನಾಲ್ಕು ಕಾಲಗಳಾಗಿ ವಿಭಾಗಿಸಬಹುದು: 1.ಆಂಡ್ರಿಯಾಸ್ ವೆಸೇಲಿಯಸ್ (1543) ತೀರ ವೈಜ್ಞಾನಿಕ ಕೊಯ್ದುಬಿಡಿಕೆ ಜಾರಿಗೆ ಬರುವ ತನಕ (ಕುರುಡು ನಂಬುಗೆಗಳ ಕಾಲ): 2. ವಿಲಿಯಂ ಹಾರ್ವೆ (1628) ವೈಜ್ಞಾನಿಕ ಶರೀರ ಕ್ರಿಯಾಶಾಸ್ತ್ರ ಪ್ರಾರಂಭವಾಗುವವರೆಗೆ: 3.ಚಾರಲ್ಸ್ ಡಾರ್ವಿನ್ (1859) ಜೀವಿಗಳಲ್ಲಿನ ಪರಸ್ಪರ ಸಂಬಂಧಗಳನ್ನು ಸ್ಥಾಪಿಸುವ ತನಕ; 4.ಡಾರ್ವಿನನ ಅನಂತರ.

1. **ವೆಸೇಲಿಯಸ್ಸನ ವೈಜ್ಞಾನಿಕ ಕೊಯ್ದುಬಿಡಿಕೆ ಜಾರಿಗೆ ಬರುವ ತನಕ (1543)– ಅಂಗರಚನಾವಿಜ್ಞಾನವೇ ಗೊತ್ತಿಲ್ಲದಿದ್ದ ಕಾಲ.** ಯುರೋಪಿನಲ್ಲಿ ಹಿಂದಿನ ವಿಜ್ಞಾನಿಗಳಲ್ಲಿ ಯಾರೂ ಮಾನವನ ಹೆಣವನ್ನು ಕೊಯ್ದು ಬಿಡಿಸಲಿಲ್ಲ. ಹೆಣವೆಂದರೆ ಆಗ ಮೂಢಭಾವನೆ, ಭಯಭಕ್ತಿ ಇದ್ದುವು. ಭೂತಗಳು ಎಲ್ಲೆಲ್ಲೂ ಇವೆ. ಸತ್ತವನ ಭೂತ ಅದು ತೊರೆದ ಮನೆ ಬಳಿಯೇ ಸುಳಿದಾಡುವುದೆಂದು ಜನರ ನಂಬುಗೆ. ಸತ್ತಮೇಲಿನ ಜೀವನದಲ್ಲಿ ಅಪಾರ ನಂಬಿಕೆಯಿತ್ತು. ಹೆಣಗಳು ಕೆಲವೇಳೆ ಬದುಕಿ ಏಳುವ ಅನುಮಾನ ಬೇರೆ. ಇದರಿಂದ ಹೂತ, ನೀರಲ್ಲಿ ಮುಳುಗಿದ ಹೆಣಗಳ ಕೊಳೆತ ಭಾಗಗಳು ಬೇರೆಬೇರೆಯಾಗುವುದು ಯೋಚನೆಗಿಟ್ಟುಕೊಳ್ಳುತ್ತಿತ್ತು. ತಾಲ್ಮಡ್ಡನ ಬರೆಹಗಳಲ್ಲಿನ ಲಜ್‌ಮೂಳೆ ಅಥವಾ ಪುನರುಜ್ಜೀವನದ ಮೂಳೆ ಎನ್ನುವುದು ಪಾವನಿ (ಸ್ಯಾಕ್ರಮ್) ಇರಬಹುದು. ಸತ್ತಾಗ ಬೇರೆಯಾದ ಅಣುಗಳು ಇದರ ಸುತ್ತಲೂ ಒಂದುಗೂಡಿ ಹೆಣ ಏಳುವುದೆಂದಿದೆ. ಹೆಣ ಕೊಯ್ಯುವುದನ್ನು ಮುಸ್ಲಿಂ ಕ್ರೈಸ್ತ ಮತಗಳು ಒಪ್ಪಿರಲಿಲ್ಲ.

ಆದರೆ ಮೈಯ ನಿಜವಾದ ತಿಳಿವಳಿಕೆ ಶಸ್ತ್ರವೈದ್ಯರಿಗೆ ಜೀವಾಳವಾಗಿತ್ತು. ಕುತೂಹಲಿಗಳಾದ ಎಲ್ಲರಿಗೂ ಅದು ಬೇಕಿತ್ತು. ಮಮ್ಮಿಗಳನ್ನು ತಯಾರಿಸುವಾಗ ಧೂಪಲೇಪಿಗರು ತುಸು ಅಂಗರಚನೆ ತಿಳಿದರು. ಹೀಗೆಯೇ ಗಾಯ ಚಿಕಿತ್ಸೆ ಮಾಡುತ್ತಿದ್ದ ಶಸ್ತ್ರವೈದ್ಯರೂ ಕೊಂಚ ಅರಿತರು. ಎಡ್ವಿನ್ ಸ್ಮಿತ್ ಎಂಬಾತನಿಗೆ ಸಿಕ್ಕಿದ ಶಸ್ತ್ರವೈದ್ಯದ ಆಪುಕರಡಿನಲ್ಲಿ (ಪ್ಯಾಪೈರಸ್, ಪ್ರ.ಶ.ಪೂ.3000–2500) ತಲೆ, ಮಿದುಳುಗಳ ರಚನೆಯನ್ನು ಸ್ವಲ್ಪ ಹೇಳಿದೆ. ಎಬರ್ಸನ ಆಪುಕರಡಿನಲ್ಲಿ (ಪ್ರ.ಶ.ಪೂ 1600) ಇನ್ನಷ್ಟು ವಿಚಾರಗಳಿವೆ. ಹಳೆಗಾಲದ ತಿಳಿವು ಶೋಚನೀಯವಾಗಿ ಗೊತ್ತುಗುರಿ ಇಲ್ಲದಿತ್ತು.

ಹಿಪಾಕ್ರೆಟೀಸ್, ಅರಿಸ್ಟಾಟಲ್–ಎಬರ್ಸ್ ಕರಡು ಬರೆದು 1000 ವರ್ಷಗಳಾದ ಮೇಲೆ ಈಗ್ಗೆ 2000 ವರ್ಷಗಳ ಹಿಂದೆ ಮಹಾ ವೈದ್ಯ ಹಿಪಾಕ್ರೆಟೀಸ್ (ಪ್ರ.ಶ.ಪೂ.460–377) ಇದ್ದ. ಅಂಗರಚನೆಯ ಕೆಲವು ಬರೆಹಗಳು ಅವನು ಬರೆದವೆಂದು ಅನುಮಾನಿಸಿದ್ದರೂ ಅವನು ಹೆಣ ಕೊಯ್ದುದಕ್ಕೆ ಯಾವ ದಾಖಲೆಯೂ ಸಿಕ್ಕಿಲ್ಲ. ಅರಿಸ್ಟಾಟಲನೂ (ಪ್ರ.ಶ.ಪೂ 384–322) ಅಷ್ಟೆ. ಬುದ್ಧಿಯ ನೆಲೆ ಗುಂಡಿಗೆಯಲ್ಲಿದೆ ಎಂದು ಇಬ್ಬರೂ ನಂಬಿದ್ದರು.

ಅರಿಸ್ಟಾಟಲ್ ಪ್ರಾಣಿಗಳನ್ನು ಪರೀಕ್ಷೆಮಾಡಿ ತುಲನಾತ್ಮಕ ಅಂಗರಚನಾಶಾಸ್ತ್ರದ ಪ್ರಾಧ್ಯಾಪಕನಾಗಿದ್ದ. ಪ್ರಾಣಿಗಳ ರಚನೆಗಳ ಹೋಲಿಕೆಯಿಂದ, ಕೆಳಜಾತಿಯಿಂದ ಮೇಲಿನದಕ್ಕೆ ಏರುವ ಒಂದು ನಿಸರ್ಗ ಸೋಪಾನವನ್ನು ಅವನು ತಯಾರಿಸಿದ; ನಿಸರ್ಗ ರಚನೆಯಲ್ಲಿ

ಒಂದೇ ಯೋಜನೆ ಇರುವುದನ್ನೂ ಗುರುತಿಸಿದ. ಮುಂದೆ ಇದೇ ವಿಕಾಸವಾದದ ತಳಹದಿ ಆಯಿತು. ಅರಿಸ್ಟಾಟಲಿಗೆ ಇದು ಕಾಣದಿದ್ದರೂ ಅವನ ಹೆಗಲೇರಿದ ಚಾರಲ್ಸ್ ಡಾರ್ವಿನ್ನನಿಗೆ ಕಂಡಿತು. "ಲಿನೀಯಸ್ ಕೂವಿಯರ್ ಇಬ್ಬರೂ ನನ್ನ ದೇವತೆಗಳಾಗಿದ್ದರು. ಆದರೆ ಮುದುಕ ಅರಿಸ್ಟಾಟಲನ ಮುಂದೆ ಅವರು ಶಾಲಾಬಾಲಕರಂತೆ ಇದ್ದರು" ಎಂದಿದ್ದಾನೆ ಡಾರ್ವಿನ್.

ಹೆರೋಫಿಲಸ್ ಇರಾಸ್ಟ್ರೇಟಸ್–ಅರಿಸ್ಟಾಟಲನೂ ಅವನಿಗೆ ಆಶ್ರಯವಿತ್ತಿದ್ದ ಅಲೆಗ್ಸಾಂಡರ್ ಮಹಾಶಯನೂ ಸತ್ತ ಸು. 40 ವರ್ಷಗಳ ಬಳಿಕ ಈಜಿಪ್ಟಿನ ಟಾಲಮಿ ರಾಜರು ಕೊಯ್ಬಿಡಿಸಲು ಉತ್ತೇಜಿಸಿದರು. ಗ್ರೀಕ್ ಅಂಗರಚನಾ ಪಟುಗಳಲ್ಲಿ ಹಿರಿಯನಾಗಿದ್ದ ಹೆರೋಫಿಲಸ್ (ಪ್ರ.ಶ.ಪೂ 300) ಅಲೆಗ್ಸಾಂಡ್ರಿಯಾದಲ್ಲಿ ಕಾಣಿಸಿಕೊಂಡ. ಅವನಿಗೆ ಮುಂಚೆ ಅಂಗರಚನಾವಿಜ್ಞಾನವೆಂದರೆ ವಿವರಗಳಿಂದ ಬರೀ ಊಹೆಗಳ ಕಂತೆ ಆಗಿತ್ತು. ಮೊದಲಬಾರಿ ಮಾನವನ ಹೆಣವನ್ನೂ ಕೊಯ್ಬಿಡಿಸಿ ಬಹುಮಟ್ಟಿಗೆ ಮೊದಮೊದಲಾಗಿ



ಬೆನ್ನುಮೂಳೆಗಳು, ಎದೆಗೂಡು, ಹೆಗಲೆಲುಬು, ಕಿಳ್ಗುಳಿ ಮೂಳೆಗಳ ಎಲುಗಟ್ಟು.

ಕಂಡುದನ್ನು ಮಾತ್ರ ವರ್ಣಿಸಿದ. ಮಿದುಳನ್ನೂ ಪರೀಕ್ಷಿಸಿ ಅದನ್ನು ನರಮಂಡಲದ ಕೇಂದ್ರ, ಬುದ್ಧಿಯ ಪೀಠ ಎಂದು ಅರಿತ. ಚಾಲಕ (ಮೋಟಾರ್) ನರಗಳು, ಅರಿವಿನ (ಸೆನ್ಸರಿ) ನರಗಳು ಬೇರೆಬೇರೆ ಎಂದು ವಿಂಗಡಿಸಿ ಮಹಾಧಮನಿ (ಅಯೋರ್ಟ) ಮತ್ತಿತರ ಧಮನಿಗಳಲ್ಲಿ ಇರುವುದು ಗಾಳಿಯಲ್ಲ, ರಕ್ತ ಎಂದು ತೋರಿಸಿ,ಹಾರ್ವೆಯ ಸಮಕಾಲೀನ ಗೆಸ್ಪಾರೊ ಅಸೆಲ್ಲಿ (1622) ಕಂಡುಹಿಡಿದ. ಕರುಳಿನ ಹಾಲುರಸದ ನಾಳಗಳಾದ ಹಾಲುನಾಳಗಳನ್ನೂ (ಲ್ಯಾಕ್ಟೀಲ್ಸ್) ವಿವರಿಸಿದ. ದುರಾರ್ಗರುಳನ್ನು (ಡುಯೊಡಿನಮ್) ವಿವರಿಸಿ ಇವನೇ ಹೆಸರಿಟ್ಟ. ಇವನ ಅಂಗರಚನಾಶಾಸ್ತ್ರದ ವಿಚಾರವನ್ನು ಕುರಿತ ಪುಸ್ತಕ ಕಳೆದುಹೋಗದೆ ಇದ್ದಿದ್ದರೆ ಕೂಲಂಕಷವಾಗಿ ವೈಜ್ಞಾನಿಕವಾಗಿ ಕೊಯ್ಬಿಡಿಸಿ ವಿವರಿಸಿದ ಮಾನವನ ದೇಹರಚನೆಯ ಸ್ವಲ್ಪ ವಿವರಗಳಿಗೂ ಪ್ರಪಂಚ 1800 ವರ್ಷ ಕಾಯಬೇಕಿರಲಿಲ್ಲ.

ಇರಾಸಿಸ್ಟ್ರೇಟಸ್ (ಪ್ರ.ಶ.ಪೂ 300) ಸಮಕಾಲೀನನಾದರೂ ಕಿರಿಯವ. ರಕ್ತನಾಳಗಳಲ್ಲಿ ಗಾಳಿ ಇಲ್ಲವೇ ಜೀವಾಳದ ಭೂತ ತುಂಬಿದೆ ಎಂದು ಅವನ ನಂಬಿಕೆ. ಅವನ ಅಭಿಪ್ರಾಯದಲ್ಲಿ ಧಮನಿಗಳು, ಸಿರಗಳು, ನರಗಳು ಎಲ್ಲವೂ ಕೊಳವೆಗಳೇ. ಕಣ್ಣಿಗೆ ಕಾಣದಿದ್ದರೂ ಮೈತುಂಬ ತೀರ ಸಣ್ಣ ಕೊಳವೆಗಳೇ ತುಂಬಿವೆಯೆಂದು ಅವನ ಸಿದ್ಧಾಂತ. ಧಮನಿಗಳ, ಸಿರಗಳ ಕೊನೆಯ ಶಾಖೆಗಳು ಇನ್ನೂ ಕಿರಿಯ ಕೊಳವೆಗಳಿಂದ ಕೂಡಿವೆಯೆಂದು ಅವನು ಊಹಿಸಿದ್ದರಿಂದ ರಕ್ತ ಸುತ್ತಾಟದ ಕಲ್ಪನೆ ಅವನಿಗೆ ಆಗಿದ್ದಿರಬಹುದು. ಹೃದಯವೇ ರಕ್ತನಾಳಗಳ ಕೇಂದ್ರ, ಈಲಿಯಲ್ಲವೆಂದು ಮೊದಲಾಗಿ ಕಂಡವನಿವನು. ಹೃದಯದ ಕವಾಟಗಳನ್ನು ವರ್ಣಿಸಿ ಮೂರ್ದಳದ್ದಕ್ಕೆ ಟ್ರೈಕಸ್ಪಿಡ್ ಎಂದನು. ಹಿಪ್ಪೊಕ್ರೇಟೀಸನಂತೆ, ಇವನೂ ಉಸಿರ್ನಾಳವನ್ನು ಒರಟು ಗಾಳಿಗೊಳವೆ (ಆರ್ಟೀರಿಯ ಟ್ರಾಕಿಯ) ಎಂದು ಭಾವಿಸಿದ.

ಮೇರಿನಸ್ ಮತ್ತು ಗ್ಯಾಲೆನ್–ಇರಾಸಿಸ್ಟ್ರೇಟಸ್ ಸತ್ತ 300 ವರ್ಷಗಳ ಅನಂತರ ಮುಖ್ಯ ಗುರು ಮೇರಿನಸ್ (ಪ್ರ.ಶ.ವ 110) ಅಲೆಗ್ಸಾಂಡ್ರಿಯದಲ್ಲಿದ್ದ. ಇವನು ಬರೆದ ಗ್ರಂಥ ಕಳೆದುಹೋಗಿದೆ. ಇವನ ವ್ಯಕ್ತಿತ್ವ ಪಾಠಪ್ರವಚನಗಳ ಪ್ರಭಾವ ಇವನಾದ ಮೇಲೆ ಬಂದ ಇವನ ನಾಲ್ವರು ಶಿಷ್ಯರಿಂದ ಪಸರಿಸಿ ಗ್ಯಾಲೆನ್ನಿಗೂ (130–200) ತಿಳಿವಿನ ಬೆಳಕು ಹರಿಯಿತು.

ರೋಮ್ ನಗರದಲ್ಲಿ 164ರಿಂದ 199ರ ವರೆಗೆ ವೈದ್ಯವೃತ್ತಿ ನಡೆಸುತ್ತಿದ್ದ ಏಷ್ಯದ ಗ್ರೀಕನಾಗಿದ್ದ, ಗ್ಯಾಲೆನ್. ಏಷ್ಯ ಮೈನರಿನಲ್ಲಿ ಪರ್ಗಮಮ್‌ನಲ್ಲಿ ಹುಟ್ಟಿ ಮಾರ್ಕಸ್ ಅರೀಲಿಯಸ್ಸನ ಆಸ್ಥಾನದಲ್ಲಿದ್ದ (161–180). ಪ್ರತಿಭೆ, ವಿದ್ಯೆ, ಸಂಪತ್ತು, ಕಾರ್ಯಸಾಧನೆಯ ಶಕ್ತಿ, ವಿಶ್ವಾಸ, ಜಗಳಗಂಟತನ ಈ ಗುಣಗಳೆಲ್ಲ ಈತನಲ್ಲಿ ಇದ್ದುವು. ಚಕ್ರವರ್ತಿಗಳು, ಪರದೇಶದ ರಾಯಭಾರಿಗಳು, ಇವನ ರೋಗಿಗಳು. ಬರೆವಂತೆ, ಭಾಷಣ ಮಾಡುವಂತೆ ಇವರು ಇವನನ್ನು ಹುರಿದುಂಬಿಸಿದರು. ಈತ ಬರೆದ ಕೆಲವು ಗ್ರಂಥಗಳು ಬೆಂಕಿಯಲ್ಲಿ ಹಾಳಾದುವು. ಆದರೂ ಅಂಗರಚನಾಶಾಸ್ತ್ರದ 59 ಪುಸ್ತಕಗಳು ಉಳಿದಿವೆ. ಅವುಗಳಲ್ಲಿ ವಿವಾದಾಸ್ಪದವಾದವೂ ಹೊಗಳಿಕೆಯ ವಿಷಯಗಳೂ ತುಂಬಿವೆ. ಇವನ ಹೆಸರಿನ ಉಲ್ಲೇಖವೂ ಉಳಿಯಲಿಲ್ಲ, ಖಚಿತವಾಗಿಲ್ಲ. ತರ್ಕವಿಲ್ಲದೆ ವಿಚಿತ್ರವಾಗಿ ಇವನು ಪಟ್ಟು ಹಿಡಿದಿದ್ದ ಎರಡು ವಾದಗಳು ಇವನ ಗ್ರಂಥಗಳಲ್ಲಿವೆ. ಗಾಳಿ (ನ್ಯೂಮ), ಚೈತನ್ಯಗಳ ಹಳೆಯ ಕಲ್ಪನೆಯೇ ಮೊದಲಿನದು. ಉಸಿರಿನೊಡನೆ ಒಳಸೇರುವ ವಿಶ್ವಜೀವವೇ (ಕಾಸ್ಮಿಕ್ ಲೈಫ್) ಗಾಳಿ. ಚೈತನ್ಯಗಳು (ಸ್ಪಿರಿಟ್ಸ್) ಮೂರು : ಈಲಿಯಲ್ಲಿ ಸಹಜವಾಗಿರುವುದು ಒಂದು, ಹೃದಯದಲ್ಲಿನ ಜೀವಾಳ ಸ್ವರೂಪದಲ್ಲಿ ಇರುವುದಿನ್ನೊಂದು, ಮೂರನೆಯದು ಪ್ರಾಣಿಸಂಬಂಧವಾಗಿ (ಬುದ್ಧಿಯ) ಮಿದುಳಿನಲ್ಲಿರುವುದು. ಇಲ್ಲಿಂದ ಇವು ಅಲೆಗಳಂತೆ ಇಲ್ಲವೆ ಉಸಿರಿನ ಅಥವಾ ಸಮುದ್ರದ ಅಲೆಗಳ ಉಬ್ಬರವಿಳಿತಗಳಂತೆ ನರಗಳ, ಧಮನಿಗಳ, ಮೂಲಕ ಸಾಗುತ್ತಿವೆ. ಮೈಯ ಒಂದೊಂದು ರಚನೆಯೂ ಅದರ ಬಳಕೆಗೆ ಸರಿಯಾಗಿ ಹೊಂದಿಕೊಳ್ಳುವಂತೆ. ಒಬ್ಬ ಸೃಷ್ಟಿಕರ್ತನೇ ನಿರ್ಮಿಸಿದನೆಂಬ ಅವನದೇ ಆದ ಅಭಿಪ್ರಾಯ ಎರಡನೆಯದು. ಮೊದಲಿನ ಸಿದ್ಧಾಂತದಿಂದ ರಕ್ತದ ಸುತ್ತಾಟವನ್ನೇ ಯೋಚಿಸುವಂತಿರಲಿಲ್ಲ. ಚುಚ್ಚುಮದ್ದುಗಳೇ ಅವನಿಗೆ ಗೊತ್ತಿರಲಿಲ್ಲ. ಈ ಸಿದ್ಧಾಂತದಂತೆ, ಹೃದಯದ ಗುಂಡಿಗುಣಿಗಳ (ವೆಂಟ್ರಿಕಲ್ಸ್) ನಡುವೆ ಸಾಗುನಾಳಗಳು ಇರಬೇಕಾಯಿತು. ಯಾವ ಪ್ರಾಣಿಯಲ್ಲೂ ಅವನು ನೋಡದಿದ್ದರೂ ಅವನ್ನು ವರ್ಣಿಸಿದ. ರಚನೆ, ನಿಜಕೆಲಸಗಳ ವಿಚಾರವಾಗಿ ಅವನಿಗೆ ಎಲ್ಲವೂ ಗೊತ್ತಿದೆಯಾಗಿ ಯಾವ ಸಂಗತಿಯನ್ನಾದರೂ ಅವನು ವಿವರಿಸಬಲ್ಲನೆಂದು ಹಠವಾದಿಗಳಾದ ಮತಸಿದ್ಧಾಂತಿಗಳು ನಂಬಿದ್ದರು.

ಅಂಗರಚನೆಯ, ಮುಖ್ಯವಾಗಿ ಮೂಳೆ, ಕೀಲುಗಳ ವಿಷಯಗಳಲ್ಲಿ ಬಹುಪಾಲು ಅವನು ಮೇರಿನಸ್ಸನಿಂದ ಕಲಿತಿದ್ದ. ಉಳಿದ ವಿವರಗಳಿಗೆ ಉತ್ತರ ಆಫ್ರಿಕದಲ್ಲಿ ಹಿಂದಿದ್ದ ಬಾರ್ಬರಿ ದೇಶದ ಬಾಲವಿರದ ಕಪಿ, ಹಂದಿ, ಎತ್ತುಗಳ ಅಂಗರಚನೆಗಳನ್ನೇ ಮಾನವನದೆಂದು ಮುಂದಿಟ್ಟ. ಆತ್ಮಸಂಯಮವೇ ಮುಖ್ಯ ಗುರಿಯುಳ್ಳ ಕ್ರೈಸ್ತರಿಗೂ ಹೊಸ ಕ್ರೈಸ್ತಮತದವರಿಗೂ ಇವನ ಸಿದ್ಧಾಂತ ಹಿಡಿಸಿದ್ದರಿಂದ ರಾಜ್ಯದ ಮತಾಧಿಕಾರದ ಬೆಂಬಲ ದೊರಕಿತು. ಇದರಿಂದ ಇತರರ ಗ್ರಂಥಗಳು ಹಾಳಾದರೂ ಇವನ ಗ್ರಂಥಗಳು ಕೆಡದೆ ಉಳಿದುವು. ಗ್ಯಾಲೆನ್ನನ ಬೋಧನೆಯಲ್ಲಿ ಯಾರಿಗೂ ತಪ್ಪು ಕಾಣದ್ದರಿಂದ ಅವನು ಹೇಳಿದ್ದೇ ವೇದವಾಕ್ಯಗಳಾಗಿ ಇನ್ನು ಕಲಿಯುವುದು ಏನೂ ಇಲ್ಲ ಎನಿಸಿತು. ಹೊಸ ವಿಚಾರಗಳನ್ನು ಕಾಣಲೂ ಅವಕಾಶವಾಗಲಿಲ್ಲ.

ಅದುವರೆಗಿನ ಗ್ರೀಕ್ ಅಂಗರಚನಾಗ್ರಂಥಗಳಲ್ಲಿದ್ದ ವಿಷಯಗಳನ್ನು ಒಂದುಗೂಡಿಸಿ ಕ್ರಮಪಡಿಸಿದ್ದೇ ತಿಳಿವಿಗೆ ಗ್ಯಾಲೆನ್ನನಿಂದಾದ ಸೇವೆ. ಆದರೆ ಕಂತೆ ಪುರಾಣಗಳ ಅಂಗರಚನೆಯನ್ನು ಅಧಿಕಾರಯುತವಾಗಿ ಸ್ಥಾಪಿಸಿದ್ದೇ ಅವನಿಂದಾದ ಕೆಡುಕು.

ನಡುಗಾಲ–ಗ್ರೀಕರ ವಿಜ್ಞಾನ ಉನ್ನತಿಗೇರಿದ್ದ ಗ್ಯಾಲೆನ್ನನ ಕಾಲವನ್ನು ಯುರೋಪಿನವರಿಗೆ ಇಷ್ಟವಾದ ಭಾರತದ ಬೇಸಗೆ ಎಂದು ವರ್ಣಿಸಲಾಗಿದೆ. ಅವನ ಬಳಿಕ ಬಹಳ ಕಾಲ ವಿಜ್ಞಾನವಾಗಿ ಅಂಗರಚನಾಶಾಸ್ತ್ರ ಮೂಲೆಗೆ ಬಿತ್ತು. 12 ಶತಮಾನಗಳ ಕಾಲ ಅರಬ್ಬರು ತಿಳಿವಳಿಕೆಯನ್ನು ಅಷ್ಟೂ ಇಷ್ಟೂ ಉಳಿಸಿಟ್ಟರು. 640ರಲ್ಲಿ ಅವರು ಅಲೆಗ್ಸಾಂಡ್ರಿಯವನ್ನು ವಶಪಡಿಸಿಕೊಂಡಾಗ, ಅಲ್ಲಿದ್ದ ಈಜಿನಾದ ಪಾಲ್ ಅವರಿಗೆ ಗ್ಯಾಲೆನ್ನನ ಅಂಗರಚನಾಶಾಸ್ತ್ರವನ್ನು ಕಲಿಸಿದ. ಸಿರಿಯ, ಸಿಸ್ಟೋರಿಯ ದೇಶಗಳವರು, ಕ್ರಿಸ್ತರು, ಯೆಹೂದ್ಯರು, ಅರಬ್ಬಿಗೆ ಅನುವಾದಿಸಿದ ವ್ಯಾಖ್ಯಾನಗಳ ಮೂಲಕವೂ ಗ್ರೀಕ್ ವಿಜ್ಞಾನವನ್ನು ಓದಿಕೊಂಡರು. ಮುಖ್ಯವಾಗಿ ಇವೆಲ್ಲ ಅರಬ್ಬೀ ಬಣ್ಣ ಪಡೆದುಕೊಂಡ ಅರಿಸ್ಟಾಟಲ್, ಗ್ಯಾಲೆನ್ನರ ತತ್ತ್ವಗಳೇ. ಬಹಳ ಮುಖ್ಯವಾದ ವ್ಯಾಖ್ಯಾನಗಳನ್ನು ರೇಜಿಸ್, ಅಲಿಅಬ್ಬಾಸ್,

ಅವಿಸೆನ್ನ ಇವರು ಮಾಡಿದ್ದರು. ಅವಿಸೆನ್ನನವು ಬಹಳ ಪ್ರಸಿದ್ಧವಾದುವು. 1000ದಲ್ಲಿ ಪ್ರಕಟವಾದ ವೈದ್ಯವೇದ ಎಂದು ಖ್ಯಾತವಾದ ಅವಿಸೆನ್ನನ ದಿ ಕ್ಯಾನನ್ ಆಫ್ ಮೆಡಿಸನ್‌ನಲ್ಲಿ ಪ್ರಾಣಿಗಳಿಂದ ತಿಳಿದುಬರುವ ಹಾಗೂ ಹೊಸ ಕಣ್ಣರಿಕೆಯಿಂದ ಎಂದಿಗೂ ಒರೆಹಚ್ಚಿ ನೋಡಿದರೆ ಎರಡು ಮೂರು ಕೈ ದಾಟಿಬಂದ ಅಂಗರಚನಾಶಾಸ್ತ್ರ ವಿಚಾರಗಳೇ ತುಂಬಿದ್ದವು. ಅರಬ್ಬೀ ದೇಶಗಳಲ್ಲಿ ಎಲ್ಲೆಲ್ಲೂ ಈಜಿಪ್ಟ್, ಆಫ್ರಿಕ ಮೂಲಕ ಸ್ಪೇನ್‌ವರೆಗೂ ಇದು ಹಬ್ಬಿತು.

ಕೊನೆಯಲ್ಲಿ ಅರಬ್ಬಿ ಬರೆಹಗಳಿಗೆ ಆಧಾರಗಳಾಗಿದ್ದ ಗ್ರೀಕ್ ಗ್ರಂಥಗಳು ದೊರಕಿದವು. ಅವುಗಳಿಂದ ನಿಸರ್ಗದ ವಿಚಿತ್ರಗಳನ್ನು ತಿಳಿಯಲು ಜನರು ಮೊದಲಾದರು. ಆದರೆ ಮೊದಮೊದಲು ಪುಸ್ತಕಗಳನ್ನು ಓದಿದರೇ ಹೊರತು ಪ್ರಕೃತಿಯನ್ನೇ ನೇರವಾಗಿ ನೋಡಲಿಲ್ಲ. ಕ್ರೈಸ್ತಮತೋಪದೇಶಗಳಿಂದ ಗ್ಯಾಲೆನ್, ಅರಿಸ್ಟಾಟಲರೇ ಆಧಾರ ಪುರುಷರಾದರು. ಅವರ ಗ್ರಂಥಗಳೇ ಜನರಿಗೆ ವೇದ ಸಮಾನ ಆಗಿದ್ದುದರಿಂದ ನಿಜವಾದ ನಿಸರ್ಗವನ್ನು ಕಣ್ಣಿನಿಂದ ಕಾಣದೆ ಆ ಗ್ರಂಥಗಳ ಮೇಲೆ ಒಣ ಊಹೆ, ಟೀಕೆ ಟಿಪ್ಪಣಿಗಳನ್ನು ಕೇವಲ ತಾತ್ವಿಕ ಜಿಜ್ಞಾಸೆಯ ರೂಪದಲ್ಲಿ ಬರೆದರು. ಕೆಲವು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯೇ ಬೇಡವೆಂದರು. ಗ್ಯಾಲೆನ್ನನ ಅಭಿಪ್ರಾಯಗಳಿಗೆ ಎದುರಾಡಿದ ವೈದ್ಯರು ಶಿಕ್ಷೆಗೊಳಗಾದರು. ಆದರೂ ಅಂಗರಚನೆಯಲ್ಲಿ ಸ್ವಲ್ಪ ಕುತೂಹಲವೇನೋ ಇತ್ತು. ತಲೆತೆಗೆದ ಅಪರಾಧಿಗಳ ಹೆಣಗಳನ್ನು ಬೀದಿಗಳಲ್ಲಿ ಕೊಯ್ದು ಬಿಡಿಸಿ ಜನರಿಗೆ ಅಂಗರಚನೆಯನ್ನು ತೋರಿಸಲು ಅಪ್ಪಣೆ ದೊರೆಯಿತು. ಆ ಕಾಲದಲ್ಲಿ ಗ್ಯಾಲೆನ್ನನ ಪುಸ್ತಕ ಓದುವುದೇ ಅನಾಟಮಿ ಎನ್ನಿಸಿತು. ಬಳಸಿದ್ದ ಹೆಸರುಗಳಲ್ಲಿ ಅರೆಪಾಲು ಅರಬ್ಬಿಯವು, ವೈದ್ಯ ಪ್ರಾಧ್ಯಾಪಕ ಶಾಸ್ತ್ರೋಕ್ತವಾಗಿ ಅಧ್ಯಕ್ಷನಾಗುತ್ತಿದ್ದ. ಎತ್ತರದ ಕುರ್ಚಿಯಲ್ಲಿ ಕುಳಿತು ಗ್ಯಾಲೆನ್ನನ ಪುಸ್ತಕದ ಅನುವಾದವನ್ನು ಓದುತ್ತಿದ್ದ. ಪುಸ್ತಕ ಓದಿದಂತೆಲ್ಲ ಹೆಣದಲ್ಲಿ ತಾಳೆ ನೋಡಲು ಆಳೊಬ್ಬ ಇರುತ್ತಿದ್ದ. ಪುಸ್ತಕದಲ್ಲಿ ತಪ್ಪಿದ್ದರೂ ಅವನು ಇಲ್ಲದ ಅವಯವಗಳನ್ನು ತೋರಲು ಯತ್ನಿಸಿ ಪೆಚ್ಚಾಗುತ್ತಿದ್ದ. ಇಷ್ಟಕ್ಕೆಲ್ಲಾ ಹೆಚ್ಚು ಹೊತ್ತು ಹಿಡಿಯುತ್ತಿತ್ತು. ನೆರೆದವರಿಗೆ ತಿಂಡಿ ಹಂಚುತ್ತಿದ್ದರು.

ಅನುಮಾನಾಸ್ಪದವಾದ ಮರಣ ಪ್ರಕರಣಗಳಲ್ಲಿ ನ್ಯಾಯಾಲಯಗಳು ಹೆಣದ ಪರೀಕ್ಷೆಗೆ ಅಪ್ಪಣೆ ಪಡೆಯುತ್ತಿದ್ದುವು. ಬೊಲೋನದಲ್ಲಿ ವೈದ್ಯಪ್ರಾಧ್ಯಾಪಕನಾಗಿದ್ದ ಮಾಂಡಿನಸ್ ಕೆಲವು ಶವಪರೀಕ್ಷೆಗಳನ್ನು ಮಾಡಿ ಅನತೋಮಿಯ ಎಂಬ 40 ಪುಟಗಳ ಸಣ್ಣಕ್ಷರಗಳ ಶವಪರೀಕ್ಷೆ ಕೈಪಿಡಿಯೊಂದನ್ನು (1316) ಪ್ರಕಟಿಸಿದ.

ಮೈಯಲ್ಲಿ ಇದ್ದದ್ದು ತೋರಲು ಹೊರಟ ಕಲಾವಿದರು ಅಂಗರಚನಾವಿಜ್ಞಾನದ ಅಭ್ಯಾಸಕ್ಕೆ ಒತ್ತಾಸೆ ಕೊಟ್ಟರು. ಲಿಯೊನಾರ್ಡೊ ಡ ವಿಂಚಿ (1452–1519), ಅಲ್‌ಬ್ರೆಕ್ಟ್ ಡ್ಯೂರರ್ (1471–1528), ಮೈಕೆಲೇಂಜೆಲೊ (1475–1564), ರ್‍ಯಾಫೆಲ್ (1483–1520) ಮೊದಲಾದ ಕಲಾವಿದರು ಹೆಣಗಳನ್ನು ಕೊಯ್ದು ಬಿಡಿಸಿದರು. ಮೇಲ್ಮೈ ಅಳತೆಗಳು, ಸ್ನಾಯುಗಳ ಸಮಕಟ್ಟು ರಚನೆಗಳೊಂದಿಗೆ ಲಿಯೊನಾರ್ಡೊ ಕಲಾದೃಷ್ಟಿಯಿಂದ ತನ್ನ ವಿಶ್ಲೇಷಣೆಯನ್ನು ಆರಂಭಿಸಿದರೂ ಹೃದಯ, ಮಿದುಳು, ಆಹಾರನಾಳ, ಪಿಂಡಗೂಸು–ಇತ್ಯಾದಿಗಳನ್ನು ವೀಕ್ಷಿಸಿದ್ದು ಮಾತ್ರ ಕಲೆಗಾರನಾಗಲ್ಲ. ಆಗ್ಗೆ ಪೋಪನಾಗಿದ್ದ 10ನೆಯ ಲಿಯೊ ಅವನನ್ನು ತಡೆವ ತನಕ ಲಿಯೊನಾರ್ಡೊ ಅಂಗರಚನಾಶಾಸ್ತ್ರಜ್ಞನಾಗಿ 30 ಹೆಣಗಳನ್ನು ಕೊಯ್ದು ಬಿಡಿಸಿದ್ದಲ್ಲದೆ 750ಕ್ಕೂ ಹೆಚ್ಚಾಗಿ ಅಂಗರಚನೆಯ ಚಿತ್ರಗಳನ್ನೂ 120 ಟಿಪ್ಪಣಿ ಪುಸ್ತಕಗಳನ್ನೂ ಬರೆದ. ಒಟ್ಟಿನಲ್ಲಿ ಅವನು ಸತ್ತಮೇಲೆ ಅನೇಕ ಶತಮಾನಗಳ ಕಾಲ ರಚಿತವಾದ ಗ್ರಂಥಗಳಿಗಿಂತ ಹರವು, ಖಚಿತತೆ, ಚೆಲುವುಗಳಲ್ಲಿ ಲಿಯೊನಾರ್ಡೊವಿನ ಗ್ರಂಥಗಳೇ ಮಿಗಿಲಾಗಿವೆ. ಅವನು ಹೊಸದಾಗಿ ಕಂಡುಹಿಡಿದ ಅಂಶಗಳದ್ದೇ ದೊಡ್ಡಪಟ್ಟಿಯಾಗುತ್ತದೆ. ಅವನ ಆನಂತರ ಬಂದ ಅಂಗರಚನಾವಿಜ್ಞಾನಿಗಳು ಅವನ್ನೆಲ್ಲ ಮತ್ತೆ ಕಂಡು ಹಿಡಿದರು. ಲಿಯೊನಾರ್ಡೊ ತನ್ನ ಶೋಧನೆಗೆ ಹೆಚ್ಚಾಗಿ ನೆಚ್ಚಿದ್ದು ಪುಸ್ತಕಗಳಿಗಿಂತಲೂ ನಿಸರ್ಗವನ್ನೇ.

ಅನೇಕ ವಿದ್ಯೆಗಳಲ್ಲಿ ಲಿಯೊನಾರ್ಡೊವಿನ ಅದ್ಭುತ ಸಾಧನೆಗಳು ಅವನ ಸಮಕಾಲೀನರ ಮೆಚ್ಚುಗೆ, ಗೌರವಗಳನ್ನು ಸಂಪಾದಿಸಿದುವು. ಅವನ ಚೇತನ ಪ್ರಭಾವಗಳು ಅಂಗರಚನಾಶಾಸ್ತ್ರದ ಉದ್ಧಾರಕನಾದ ವೆಸೇಲಿಯಸ್ಸಿಗೆ ದಾರಿ ತೋರಿದುವು. ಲಿಯೊನಾರ್ಡೊ ಸತ್ತ 24 ವರ್ಷಗಳಾದಮೇಲೆ ಆತ ತನ್ನ ಒಂದು ಉದ್ಗ್ರಂಥವನ್ನು ಪ್ರಕಟಿಸಿದ.

2. **(ಹಾರ್ವೆ ವೈಜ್ಞಾನಿಕ ಶರೀರಕ್ರಿಯಾಶಾಸ್ತ್ರವನ್ನು ಬಳಕೆಗೆ ತರುವವರೆಗೆ (1628)– ವೆಸೇಲಿಯಸ್** (1514–64)– (ಆಂಡ್ರಿಯಾಸ್ ವೈಟಿಂಗ್) ರೈನ್ ನದಿಯ ದಡದಲ್ಲಿನ ವಸೆಲ್ ಎಂಬಲ್ಲಿ ಹೆಸರಾದ ಮನೆತನವೊಂದರಲ್ಲಿ ಹುಟ್ಟಿದ್ದರಿಂದ ಅವನ ಹೆಸರು ವೆಸೇಲಿಯಸ್ ಎಂದಾಯಿತು. 19 ವರ್ಷಗಳ ವಯಸ್ಸಿಗೇ (1533) ಅವನು ಪ್ಯಾರಿಸ್ಸಿನ ವಿಶ್ವವಿದ್ಯಾಲಯಕ್ಕೆ ಹೋಗಿ, ಆ ಕಾಲಕ್ಕೆ ಬಲು ಜನಪ್ರಿಯನಾಗಿದ್ದ ಸಿಲ್ವಿಯಸ್ಸನ ಬಳಿ ವೈದ್ಯಶಾಸ್ತ್ರ ಕಲಿತ. ಗ್ಯಾಲೆನ್ ಬರೆದುದನ್ನು ತನ್ನ ಪಾಠಗಳಲ್ಲಿ ಸಿಲ್ವಿಯಸ್ ಸ್ಪಷ್ಟವಾಗಿ ಮಾತಿನ ಚತುರತೆಯಿಂದ ಹೇಳುತ್ತಿದ್ದುದರಿಂದ ಕಲಿಯುವವರು ಪ್ಯಾರಿಸ್ಸಿನಲ್ಲಿ ನೆರೆದರು. ಔಷಧಶಾಸ್ತ್ರ ಪ್ರಾಧ್ಯಾಪಕನಾಗಿದ್ದರೂ ಅವನು ಅಂಗರಚನಾಶಾಸ್ತ್ರದ ಪಾಠಗಳನ್ನು ಹೇಳುತ್ತಿದ್ದ. ದೇಹ ಮತ್ತು ಅದರ ರಚನೆಯನ್ನು ತಿಳಿಯುವುದಕ್ಕಿಂತಲೂ ಎಷ್ಟೋ ಚೆನ್ನಾಗಿ ಗ್ಯಾಲೆನ್ ಬರೆದುದನ್ನು ಅವನು ಹೇಗೂ ಬಲ್ಲವನಾಗಿದ್ದುದರಿಂದ ಗ್ಯಾಲೆನ್ ವರ್ಣಿಸಿದ ರಚನೆಗಳು ತೋರುಗನಿಗೆ ಹೆಣದಲ್ಲಿ ತೋರಸಿಗುತ್ತಿರಲಿಲ್ಲ. ಸಿಲ್ವಿಯಸ್ಸಿಗೂ ಅಷ್ಟೆ. ಅವನ ಸಹಪಾಠಿ ಮೈಕೇಲ್ ಸರ್ವಿಟಸ್ಸನೊಡನೆ, ವೆಸೇಲಿಯಸ್ ಹೆಣಗಳನ್ನು ಕೊಯ್ದಿಬಿಡಿಸಿ ಆ ಮಹಾಪ್ರಾಧ್ಯಾಪಕನಿಗೇ ತೋರಿಸುತ್ತಿದ್ದ. ಅದು ಅಂದು ಯಾರೂ ಮಾಡಬಾರದ ಅಪರಾಧ.

ಅಂಗರಚನಾವಿಜ್ಞಾನದಲ್ಲಿ ತನಗಿರುವ ಪರಿಜ್ಞಾನ ಮತ್ತು ಆಸಕ್ತಿ ತನ್ನ ಗುರುಗಳಾರಲ್ಲಿಯೂ ಇಲ್ಲದ್ದನ್ನು ಕಂಡು ವೆಸೇಲಿಯಸ್ ಆ ಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಲು ನಿರ್ಧರಿಸಿದ. 22ನೆಯ ವಯಸ್ಸಿನಲ್ಲಿ ವೆನಿಸ್ಸಿಗೆ ತೆರಳಿದ. ಒಂದು ವರ್ಷದಲ್ಲೇ ವೈದ್ಯ ಪದವಿ ಪಡೆದ. ಅಲ್ಲಿ ಅಂಗರಚನಾವಿಜ್ಞಾನ, ಶಸ್ತ್ರವೈದ್ಯಗಳಲ್ಲಿ ತಿಳಿವು ಚತುರತೆಗಳಿಗೆ ಹೆಸರು ಪಡೆದು, ಪಡುವ ವಿಶ್ವವಿದ್ಯಾಲಯದಲ್ಲಿ ಇವೆರಡೂ ಶಾಸ್ತ್ರಗಳ ಪ್ರಾಧ್ಯಾಪಕನಾದ (1537). ಆಗಿನ ವಿಶ್ವವಿದ್ಯಾಲಯಗಳಲ್ಲಿ ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾಗಿ ಸಂಬಳ ಪಡೆದವರಲ್ಲಿ ಅವನೇ ಮೊದಲಿಗ. ಹೆಣಗಳನ್ನು ಅವನೇ ಕೊಯ್ದು ಬಿಡಿಸುತ್ತಿದ್ದ. ಯಾಂತ್ರಿಕ ಚತುರತೆಯಲ್ಲೂ ಕಲಿಸುವುದರಲ್ಲೂ ಆತ ಗಟ್ಟಿಗ. ಗ್ಯಾಲೆನ್ನನ ಗ್ರಂಥಗಳ ಪುಟಗಳ ಅಂಚುಗಳಲ್ಲಿ ತಪ್ಪುಗಳನ್ನೆಲ್ಲ ಗುರುತಿಸಿದ.

ಕಲಿತವರು, ಎಲ್ಲ ಇಲಾಖೆಗಳ ಪ್ರಾಧ್ಯಾಪಕರು, ಕಲಾವಿದರು, ಪಡುವ ವೆನಿಸ್ಸುಗಳ ಮಹನೀಯರು, ಅಧಿಕಾರಿಗಳು, ಕ್ರೈಸ್ತಪುರೋಹಿತರು ಹೀಗೆ ಎಲ್ಲರೂ ಅವನ ಉಪನ್ಯಾಸಗಳಿಗೆ ಬರುತ್ತಿದ್ದರು. 1540ರಲ್ಲಿ ಬೊಲೊನದಲ್ಲಿ ಮಾನವನ ಮತ್ತು ಬಾಲವಿಲ್ಲದ ಕಪಿಯ ಎಲುಗಟ್ಟುಗಳನ್ನು ಅಕ್ಕಪಕ್ಕದಲ್ಲಿರಿಸಿ, ತೋರಿಸಿದ. ಮಾನವನಲ್ಲಿ ತಪ್ಪಾಗಿದ್ದ ಗ್ಯಾಲೆನ್ನನ ಬೋಧನೆ ಕಪಿಯಲ್ಲಿ ಸರಿಯಾಗಿದ್ದುದು ವೆಸೇಲಿಯಸ್ಸಿಗೆ ಮನದಟ್ಟಾಯಿತು. ಇದರಿಂದ ತಾನೇ ಹೆಣಗಳನ್ನು ಕೊಯ್ದಿಡಿಸಿ ತಯಾರಿಸಬಹುದಾದ ಒಳ್ಳೆಯ ಚಿತ್ರಗಳೊಡನೆ ಮಾನವನ ಅಂಗರಚನಾಶಾಸ್ತ್ರದ ಹೊಸ ಪಾಠವನ್ನು ತಯಾರಿಸಬೇಕೆಂದು ನಿರ್ಧರಿಸಿದ. 3 ವರ್ಷಗಳ ಕಾಲ ಒಂದೇ ಸಮನೆ ಹೆಣಗಳನ್ನು ಕೊಯ್ದು ಬಿಡಿಸಿ, ಕುರಿತು ಬರೆದು, ಚಿತ್ರಗಳನ್ನೂ ಬಿಡಿಸಿದ. ತನ್ನ ದೇಶಿಗ ಗೆಳೆಯನೂ ಇಟಲಿಯ ಉತ್ತಮ ಕಲೆಗಾರರಲ್ಲಿ ಒಬ್ಬನೂ ಟಿಷಿಯನ್ನನ ಶಿಷ್ಯನೂ ಆಗಿದ್ದ ಜಾನ್ ಡಿ ಕಲ್ಕಾರನನ್ನು ಚಿತ್ರಗಳನ್ನೂ ಮರದಚ್ಚುಗಳನ್ನೂ ಮಾಡಲು ನಿಯಮಿಸಿಕೊಂಡಿದ್ದ. ಎಲುಗಟ್ಟಿನ ಚಿತ್ರಗಳನ್ನು ಕಲ್ಕಾರನೂ ಸ್ನಾಯುಗಳನ್ನು ವೆಸೇಲಿಯಸ್ಸನೂ ಬರೆದಿರಬಹುದು. ದೇಹದ ಹಲವಾರು ಭಂಗಿಗಳು, ದೈನಂದಿನ ಜೀವನದ ಸಹಜ ಪರಿಸರಗಳಲ್ಲಿ ಎದ್ದುಕಾಣುವಂತೆ ಇವನು ಅನೇಕ ಚಿತ್ರಗಳನ್ನು ಬರೆದಿದ್ದಾನೆ. ಇಟಲಿಯ ಕಲೆಗಾರರು ಅಧಿಕಾರಯುತ ಒಪ್ಪಿಗೆಯನ್ನು ಪಡೆಯುತ್ತಿದ್ದುದರಿಂದ ವೆಸೇಲಿಯಸ್ಸನ ಕೆಲಸಕ್ಕಾಗಿ ಕೆಲವು ಹೆಣಗಳು ಮಾತ್ರ ಸಿಗುತ್ತಿದ್ದುವು. ಬದುಕಿರುವ ಮಾನವನಲ್ಲಿ ವೆಸೇಲಿಯಸ್ಸಿಗೆ ಹೆಚ್ಚಿನ ಆಸಕ್ತಿ.

ಹ್ಯುಮಾನಿ ಕಾರ್ಪೊರಿಸ್ ಫ್ಯಾಬ್ರಿಕ (ಮಾನವನ ಮೈಯ ರಚನೆ) ಎಂಬ ಇವನ ಪುಸ್ತಕ ಜನರ ಮೆಚ್ಚುಗೆ ಪಡೆಯಿತು. ಮೊದಲಬಾರಿ ಅಂದವಾದ ಖಚಿತವಾದ ಚಿತ್ರಗಳಲ್ಲಿ ಗಂಡಸರು ತಮ್ಮ ಮೈಗಳ ರಚನೆಯನ್ನು ಕಾಣುವಂತಾದರು. ಇಷ್ಟಾದರೂ ಪ್ರಚಂಡ ಹಾಗೂ ತೀವ್ರವಾದ ಟೀಕೆಗಳು ಬಾರದಿರಲಿಲ್ಲ. ತಮ್ಮ ಹೆಸರು ಕೆಡುವುದೆಂದು ಅನೇಕ ವೈದ್ಯರೂ ಅಂಗರಚನಾಪಟುಗಳೂ ಇವನಿಗೆ ಎದುರುಬಿದ್ದರು. ಅವರೆಲ್ಲ ಎಷ್ಟೋ ಕಾಲದಿಂದಲೂ ಗ್ಯಾಲೆನ್ನನಿಗೆ ಪಾಠ ಹೇಳಿದ್ದರು. ಸಿಲ್ವಿಯಸ್ ಈ ಚಿತ್ರಗಳನ್ನು ಅಲ್ಲಗಳೆದ. ಪಡುವದಲ್ಲಿ ವಸೇಲಿಯಸ್ ಬಳಿ ಕಲಿಯುತ್ತಿದ್ದ ರಿಯಾಲ್ಡೊ ಕೊಲೊಂಬೊ ಕೂಡ ಜಠರ ತೊರಳೆಗಳ (ಸ್ಪ್ಲೀನ್) ನಡುವಣ ನಾಳದಂಥ ಮುಖ್ಯ ವಿಚಾರವನ್ನೇ ಕೈಬಿಟ್ಟಿದೆಯೆಂದು ಹೀಗಳೆದ. ಅದನ್ನು ಹೆಣದಲ್ಲಿ ತೋರಿಸುವಂತೆ ವೆಸೇಲಿಯಸ್ ಅವನಿಗೆ ಸವಾಲು ಹಾಕಿದ. ಬಹಿರಂಗವಾಗಿ ಹೆಣ ಕೊಯ್ದಿಡಿಸುವುದಾಗಿ ಪ್ರಕಟಿಸಿ, ತಾನು ಹೇಳಿರುವುದನ್ನು ತಪ್ಪು ಎನ್ನುವವರನ್ನೆಲ್ಲ ಬನ್ನಿರೆಂದು ಕರೆದ. ಗುಂಪು ಸೇರಿತು. ಕೊಲೊಂಬೊಗೆ ತಾನು ಹೇಳಿದ ನಾಳ ತೋರಿಸಲಾಗಲಿಲ್ಲ. ತನ್ನ ತಪ್ಪುಗಳನ್ನು ತೋರಿಸಿರೆಂದು ಬೇಡಿದರೂ ತಮ್ಮ ನಾಲಗೆಗಳು ಕತ್ತರಿಸಿದಂತೆ ಉಳಿದವರೆಲ್ಲ ತೆಪ್ಪಗಿದ್ದರೆಂದು ವೆಸೇಲಿಯಸ್ ಹೇಳಿದ್ದಾನೆ.

ಇಷ್ಟೆಲ್ಲ ನಡೆದ ಮೇಲೆ ಎದೆಗುಂದಿದವನಾಗಿ ವೆಸೇಲಿಯಸ್ ಅಂಗರಚನಾವಿಜ್ಞಾನದ ಗೊಡವೆ ತೊರೆದ. ಅಂಚುಗಳಲ್ಲಿ ಟಿಪ್ಪಣಿಗಳನ್ನು ಗುರುತಿಸಿದ್ದ ಗ್ಯಾಲೆನ್ ಗ್ರಂಥ, ತನ್ನ ದೊಡ್ಡ ಅಂಗರಚನಾವಿಜ್ಞಾನದ ಟೀಕಾಸಂಪುಟವೂ ಸೇರಿದಂತೆ ತನ್ನಲ್ಲಿದ್ದ ಎಲ್ಲವನ್ನೂ ಸುಟ್ಟು ಹಾಕಿದ. ಮೊದಲು 5ನೆಯ ಚಾರಲ್ಸ್ ಬಳಿ. ಆಮೇಲೆ ಸ್ಪೇನಿನ ಇಮ್ಮಡಿ ಫಿಲಿಪ್ ಬಳಿ ಅವನು ಆಸ್ಥಾನ ವೈದ್ಯನಾಗಿದ್ದ. 1563ರಲ್ಲಿ ಜೆರೂಸಲೆಮ್ಮಿಗೆ ಯಾತ್ರೆ ಹೋದ. ಪಡುವದಲ್ಲಿ ತಾನು ಹಿಂದೆ ಇದ್ದ ಜಾಗಕ್ಕೆ ಹಿಂದಿರುಗಲು ಕರೆ ಬಂದಿತು. ಮತ್ತೆ ಉತ್ಸುಕನಾಗಿ ಮರಳುವಾಗ, ಅವನಿದ್ದ ಹಡಗು ಮುಳುಗಿ, ಜಾಂಟೆ ದ್ವೀಪದಲ್ಲಿ ಹೊಟ್ಟೆ ಬಟ್ಟೆಗಿಲ್ಲದೆ ಸತ್ತ.

ವೆಸೇಲಿಯಸ್ಸನ ಕೆಲಸ ಚೆನ್ನಾಗಿತ್ತು. ನಿಜಾಂಶಗಳಿಂದ ತುಂಬಿದ್ದರಿಂದ ಅವನ ಕೃತಿ ಯಶಸ್ವಿಯಾಯಿತು. ಅಂಗರಚನಾವಿಜ್ಞಾನದ ಮೊದಲನೆಯ ನಿಜವಾದ ಪಠ್ಯಪುಸ್ತಕವದು. ಅದು ಅಷ್ಟೇ ಆಗಿರಲಿಲ್ಲ. ಅವನ ಫ್ಯಾಬ್ರಿಕ ಗ್ರಂಥ ಪ್ರಕಟಣೆಯಿಂದ ವೈದ್ಯ ವಿಜ್ಞಾನವೇ ನವೀನ ಕಾಲಕ್ಕೆ ಕಾಲಿಟ್ಟಿತು.

ಪಡುವದಲ್ಲಿ ಸಂಶೋಧನೆಯ ಕಾಲ– ವೆಸೇಲಿಯಸ್ ಪಡುವ ಬಿಟ್ಟ ಅನಂತರ (ಸು.1546) ಅವನ ಪೀಠಕ್ಕೆ ಒಬ್ಬರಾದಮೇಲೊಬ್ಬರಂತೆ 1625ರ ವರೆಗೆ ಐವರು ಮಾನ್ಯ ಅಂಗರಚನಾಶಾಸ್ತ್ರಜ್ಞರು ವೆಸೇಲಿಯಸ್ಸನ ನೆರವಿಗಾಗಿ ಬಂದರು. ಅವನಲ್ಲೇ ತಪ್ಪು ಕಾಣುತ್ತಿದ್ದ ರಿಯಾಲ್ಡೊ ಕೊಲೊಂಬೊ (1516–59) ಇವರಲ್ಲಿ ಮೊದಲನೆಯವನು. ಆದರೆ ಇವನು ವೆಸೇಲಿಯಸ್ಸನ ವಿಧಾನಗಳನ್ನು ಹಿಡಿದು ರಸಿಕೆಯ ಪೊರೆಗಳು, ಕಣ್ಣು, ಪುಪ್ಫುಸಗಳ ತಿಳಿವಳಿಕೆಯನ್ನು ಹೆಚ್ಚಿಸಿದ.

ಮೊಡೀನಾದ ಕ್ರೈಸ್ತ ಧರ್ಮಾಧಿಕಾರಿ ಗೇಬ್ರಿಯೆಲ್ಲೊ ಫೆಲ್ಲೋಪಿಯಸ್ (1523–62) ಆಮೇಲೆ ಬಂದವನು. ಇವನೂ ವೆಸೇಲಿಯಸ್ಸನ ನೆರವಿಗಾಗಿದ್ದವನೇ. ವೆಸೇಲಿಯಸ್ಸನಲ್ಲಿ ಅವನು ನಿಷ್ಠೆ, ಮೆಚ್ಚುಗೆ, ವಿಶ್ವಾಸಗಳನ್ನು ಇರಿಸಿದ್ದ. ಅವನ ಶಿಷ್ಯರೂ ಸಂಗಾತಿಗಳೂ ಅವನಲ್ಲಿ ಅದೇ ರೀತಿಯಲ್ಲಿದ್ದರು. ಈತ 39ರ ವಯಸ್ಸಿಗೆ ಸತ್ತರೂ ಅಂಗರಚನಾವಿಜ್ಞಾನದ ನಮ್ಮ ತಿಳಿವಿಗೆ ಶಾಶ್ವತ ಮೌಲ್ಯವುಳ್ಳ ಮತ್ತಷ್ಟನ್ನು ಸೇರಿಸಿದ. ಖಚಿತತೆಯೇ ಇವನಲ್ಲಿ ಗುರುತಿಸುವಂತಿದ್ದ ಗುಣ. ಗರ್ಭಕೋಶದ ನಾಳಗಳೂ ಕಪಾಲದರೆಮೂಳೆಯ ಮೂಲಕ ಮೊಗದ ನರವನ್ನು ಸಾಗಿಸುವ ಕಾಲುವೆಯೂ ಇನ್ನೂ ಇವನ ಹೆಸರನ್ನು ಹೊತ್ತಿವೆ. ಇವನ ಶಿಷ್ಯರಲ್ಲಿ ಇಬ್ಬರಾದ ವೋಲ್ಚರ್ ಕಾಯ್ಟರ್, ಫೆಬ್ರಿಸಿಯಸ್ ಹಿರಿಯ ಅಂಗರಚನಾಶಾಸ್ತ್ರಜ್ಞರಾದರು. ಅವನ ಜಾಗಕ್ಕೆ ಎರಡನೆಯವನು ಬಂದ.

ಹೈರಾನಿಮಸ್ ಫೆಬ್ರಿಸಿಯಸ್ (ಸು.1533–1619) ವೆಸೇಲಿಯಸ್ಸನ ಸ್ಥಾನಕ್ಕೆ ಬಂದವರಲ್ಲಿ ಮೂರನೆಯವ. ಗೌರವಸ್ಥ ಸಾಹುಕಾರ ಮನೆತನದವ. 50 ವರ್ಷಗಳ ಕಾಲ (1562–1613) ಪಡುವದಲ್ಲಿ ಅಂಗರಚನಾವಿಜ್ಞಾನ ಪ್ರಾಧ್ಯಾಪಕನಾಗಿದ್ದ, ಅವನ ಅನೇಕ ಪ್ರಕಾಶನಗಳಲ್ಲಿ ಅಂಗರಚನಾವಿಜ್ಞಾನ, ಪಿಂಡವಿಜ್ಞಾನ, ಶರೀರಕ್ರಿಯಾವಿಜ್ಞಾನಗಳೂ ಸೇರಿವೆ. ಕೆತ್ತಿದ ತಾಮ್ರದ ತಗಡುಗಳಿಂದ ಮಾಡಿದ ಬಲು ಒಳ್ಳೆಯ ಚಿತ್ರಗಳು ಅವುಗಳಲ್ಲಿದ್ದು, ಅವನು ಉನ್ನತ ಅಂಗರಚನಾಶಾಸ್ತ್ರಜ್ಞರ ಸರಣಿಗೆ ಸೇರಿದ್ದನ್ನು ಪುಷ್ಟೀಕರಿಸುತ್ತವೆ. ಅವನ ಅಪೆರ ಆಮ್ನಿಯ ಪುಸ್ತಕವನ್ನು ಲೆಡೆನ್ನಿನ ಬರ್ನಾರ್ಡ್ ಆಲ್ಬಿನಸ್ ಮತ್ತೆ ಮುದ್ರಿಸಿದ (1738).

ತನ್ನ ದೀರ್ಘ ಜೀವಮಾನದಲ್ಲಿ ಆತ ಅತಿ ಹೆಚ್ಚಿನ ಪ್ರಸಿದ್ಧಿ ಪಡೆದ. ಅದು ಇಂದಿಗೂ ಕುಗ್ಗಿಲ್ಲ. ಗೆಲಿಲಿಯೊ ಅವನನ್ನು ತನ್ನ ವೈದ್ಯನನ್ನಾಗಿ ಆರಿಸಿಕೊಂಡ. ರಾಜಮಾನ್ಯತೆಯೂ (1608) ಸಂದಿತು. ವಿಲಿಯಂ ಹಾರ್ವೆ ಅವನ ಮನೆಯಲ್ಲೇ ಇದ್ದುಕೊಂಡು, ಅವನೊಂದಿಗೆ ರಕ್ತ ಪರಿಚಲನೆ, ಪಿಂಡಶಾಸ್ತ್ರಗಳನ್ನು ಅಭ್ಯಸಿಸಿದ.

ಜೂಲಿಯಸ್ ಕೆಸೀರಿಯೊನನ್ನು (ಕೆಸೀರಿಯಸ್, 1552–1616) ತನ್ನ ಉತ್ತರಾಧಿಕಾರಿಯಾಗಿ ಫೆಬ್ರಿಸಿಯಸ್ ನೇಮಿಸಿದ್ದ. ಫೆಬ್ರಿಸಿಯಸ್ಸನ ಹತ್ತಿರ ಅವನು ಮನೆಯ ಆಳಾಗಿ, ಶಿಷ್ಯನಾಗಿ, ಕೊನೆಗೆ ನೆರವಿಗನಾಗಿದ್ದು, ಅಂಗರಚನಾಶಾಸ್ತ್ರದ ಅವನ ಕಾಲದ ಎಲ್ಲ ತಂತ್ರಗಳಲ್ಲೂ ನಿಪುಣನಾಗಿದ್ದ. ತಗಡಿನಲ್ಲಿ ಕೊರೆದ ಅವನ ಅನೇಕ ಚಿತ್ರಗಳನ್ನು ಅವನು ಸತ್ತಮೇಲೆ ಅವನ ಉತ್ತರಾಧಿಕಾರಿ ಸ್ಪೈಗೀಲಿಯಸ್ ಪ್ರಕಟಿಸಿದ. ಈ ಚಿತ್ರಗಳಲ್ಲಿ 22 ದನಿಯ ಅಂಗಗಳವೂ 12 ಕಿವಿಯವೂ ಸೇರಿ ಒಟ್ಟು 98 ಇದ್ದುವು.

ಏಡ್ರಿಯನ್ ವ್ಯಾನ್ ಡರ್ ಸ್ಪೀಗೆಲ್ (1578–1625)–ಪಡುವದಲ್ಲಿ ವೆಸೇಲಿಯಸ್ ಮೊದಲಾದ ಆರು ದೊಡ್ಡ ಪಂಡಿತರಲ್ಲಿ ಕಡೆಯವನು. ಕೆಸೀರಿಯಸ್ ಬಿಟ್ಟ ಜಾಗಕ್ಕೆ ಇವನು 1618ರಲ್ಲಿ ಬಂದ. ವೆಸೇಲಿಯಸ್, ಕಲ್ಕಾರರಂತೆ ಇವನೂ ಬೆಲ್ಜಿಯಮ್ಮಿನವನೇ. 1627ರಲ್ಲಿ ಪ್ರಕಟವಾದ ಅವನ ಪುಸ್ತಕದಲ್ಲಿ ಕೆಸೀರಿಯಸ್ ಬರೆದ ಸೊಗಸಾದ ಚಿತ್ರಗಳಿವೆ. ಅವನ ಸಂಶೋಧನೆಗಳಲ್ಲಿ ಮುಖ್ಯವಾದುವು ಬೆನ್ನುಗಂಬದ, ಒಳಾಂಗಗಳ ಸ್ನಾಯುಗಳು. ಈಲಿಯ ಹಿಂಭಾಗದಲ್ಲಿ ನಾಲಗೆಯಂತಿರುವ ಭಾಗಕ್ಕೆ ಈಗಲೂ ಸ್ಪೈಗೀಲಿಯನ್ನನ ಹಾಲೆ ಎಂದಿದೆ. ಈತ ಅಂಗಗಳ ಹಳೆಯ ಹೆಸರುಗಳನ್ನು ತಿದ್ದಿದ. ಹೆಣಗಳು ಕೊಳೆಯದಂತೆ ಮಾಡಲು ಆಗ ಇನ್ನೂ ಗೊತ್ತಿರದಿದ್ದುದರಿಂದ, ಅವನ್ನು ಮುಟ್ಟಿ ಪರೀಕ್ಷಿಸುತ್ತಿರುವಾಗ, ರಕ್ತದಲ್ಲಿ ವಿಷಕ್ರಿಮಿಗಳು ಸೇರಿ ನಂಜಾಗಿ, 47ರ ವಯಸ್ಸಿಗೇ ಸತ್ತ. ಹೆಣ ಕೊಯ್ಯುವವರಲ್ಲಿ ಅನೇಕರು ಹೀಗೆ ಸಾಯುವುದು ಪ್ಯಾಶ್ಚರ್ ಕಾಲದ ತನಕ ತಪ್ಪಲಿಲ್ಲ. 1537ರಿಂದ ಅಂಗರಚನಾವಿಜ್ಞಾನ ಶೋಧನೆಯಲ್ಲಿ 88 ವರ್ಷಗಳ ಕಾಲ ಪಡುವ ಪಡೆದಿದ್ದ ಅಗ್ರಸ್ಥಾನ ಸ್ಪೈಗೀಲಿಯಸ್ಸನ ಅನಂತರ ಹೋಯಿತು. ಪಡುವದ ಅಂಗರಚನಾವಿಜ್ಞಾನವನ್ನು ಬಿಟ್ಟರೆ ಆಗ ಬೇರೆ ಯಾವುದೂ ಇರಲಿಲ್ಲ.

ಇಟಲಿ ಮತ್ತು ಯುರೋಪಿನ ಇತರ ಪ್ರಯೋಗಾಲಯಗಳು–ಬೊಲೊನದಲ್ಲಿ ಜಕೊಪೊ ಬೆರೆಂಗಾರಿಯೊ ಡ ಕಾರ್ಪಿ (1530),ಹುಳುತೆರ ಕರುಳವಾಲ (ವರ್ಮಿಫಾರ್ಮ್ ಅಪೆಂಡಿಕ್ಸ್), ಓಮೊಗ್ಗು (ತೈಮಸ್) ಗ್ರಂಥಿಯ ತಿಳಿವಳಿಕೆಯನ್ನು ಹೆಚ್ಚಿಸಿದ. ಗಿಯುಲಿಯೊ ಅರಾಂಜಿಯೊ (ಅರಾಂಟಿಯಸ್, 1520–89) ಹೃದಯವನ್ನು ಕೊಯ್ದಿಬಿಡಿಸಿ ನೋಡಿದ; ಮಹಾಧಮನಿ ಕವಾಟಗಳ ಅಂಚುಗಳ ನಡುವೆ ಇರುವ ಕಿರಿಗಂಟುಗಳಿಗೆ ಅವನ ಹೆಸರು ಉಳಿದಿದೆ (ಅರಾಂಟಿಯಸ್ಸನ ಗಂಟುಗಳು). ಕಾಸ್ಪಾಂಜೊ ವೆರೊಲಿ (1543–75) ಮಿದುಳನ್ನು ವರ್ಣಿಸಿದ. ಅದರ ಒಂದು ಭಾಗಕ್ಕೆ ವೆರೋಲಿಯ ನರಸೇತು (ಪಾನ್ಸ್) ಎನ್ನುವ ಹೆಸರು ಇನ್ನೂ ಇದೆ.

ರೋಮಿನಲ್ಲಿ ಬಾರ್ತಲೊಮಿಯೊ ಯುಸ್ಟೇಷಿಯೊ (ಯುಸ್ಟೇಷಿಯಸ್, 1524–74) ಅನೇಕ ಶೋಧನೆಗಳನ್ನು ಮಾಡಿದ. ಮರಣಾನಂತರ ಅವನ ಅಂಗರಚನೆಯ ಪುಸ್ತಕದ (ಟೇಬುಲೆ ಅನಟಾಮಿಕೆ) ಚಿತ್ರಗಳಿಂದ ಹೆಚ್ಚು ಪ್ರಸಿದ್ಧಿಯಾದ. ಇವುಗಳಲ್ಲಿ ಅವನೇ ಪ್ರಕಟಿಸಿದ್ದು ಎಂಟು ಮಾತ್ರ. ಇನ್ನೂ ಮೊದಲೇ ಮುಗಿಸಿದ್ದರೂ ಅವನು ಸತ್ತು 140 ವರ್ಷಗಳ ತನಕ (1714) ಇತರ 38 ಚಿತ್ರಗಳು ಬೆಳಕು ಕಾಣಲಿಲ್ಲ. ಆ ಚಿತ್ರಗಳನ್ನೆಲ್ಲ ಅವನೇ ಬರೆದಿದ್ದ. ಚಿತ್ರಗಳ ಅಚ್ಚುಗಳನ್ನು ಮರದ ಬದಲು ತಾಮ್ರದ ತಗಡುಗಳಿಂದ ಮಾಡಿಸಿದ ಮೊದಲಿಗರಲ್ಲಿ ಅವನೊಬ್ಬ. ವಿವರಗಳ ಖಚಿತತೆಯಲ್ಲಿ ಅವನ ಚಿತ್ರಗಳು ವೆಸೇಲಿಯಸ್ಸನವನ್ನು ಮೀರಿಸಿವೆ. ಅವನು ಮೊಟ್ಟಮೊದಲು ಕೊಟ್ಟ ಖಚಿತ ತಿಳಿವಳಿಕೆಯ ರಚನಾಂಶಗಳ ಪಟ್ಟಿ ದೊಡ್ಡದೇ. ಗಂಟಲು ಕಿವಿಗಳ ನಡುವಣ ಆಲಿಕೆಯ ಕೊಳವೆಗೆ (ಯುಸ್ಟೇಷಿಯನ್ ಸಾಗುನಾಳ) ಈಗಲೂ ಅವನ ಹೆಸರಿದೆ. ಅನುವೇದನ (ಸಿಂಪತೆಟಿಕ್) ನರಮಂಡಲದ ಚಿತ್ರಗಳು ಎಂದಿಗಿಂತಲೂ ಹೆಚ್ಚು ಅಮೋಘವಾಗಿ ಬಂದಿವೆ. ಬೇರೆಬೇರೆ ಮೈಗಳಲ್ಲಿನ ರಚನಾವೈವಿಧ್ಯವನ್ನು ಅವನೇ ಮೊದಲು ತೋರಿಸಿದ.

ಅವನ ಚಿತ್ರಗಳು ಸಿದ್ಧವಾದಾಗಲೇ ಪ್ರಕಟವಾಗಿದ್ದಿದ್ದರೆ ಅಂಗರಚನಾಶಾಸ್ತ್ರದ ಮುನ್ನಡೆ ಒಂದು ಶತಮಾನದ ಮುಂಚೆಯೇ ಆಗುತ್ತಿತ್ತು. ಅಂಗರಚನಾವಿಜ್ಞಾನದ ಇಬ್ಬರು ಜನಕರಲ್ಲಿ ಒಬ್ಬನಾಗಿ ವೆಸೇಲಿಯಸ್ಸನ ಪಕ್ಕದಲ್ಲಿ ನ್ಯಾಯವಾಗೇ ಇವನೂ ಇರುತ್ತಿದ್ದನೇನೋ!

ಫ್ರಾನ್ಸಿನಲ್ಲಿ ಯಾಕೊಬಸ್ ಸಿಲ್ವಿಯಸ್ (ಜಾಕ್ವಿ ಡುಬಾಯ್, 1478–1555) ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿದ್ದ. ಕೆಲಕಾಲ ವೆಸೇಲಿಯಸ್ಸನ ಗುರುವಾಗಿದ್ದ. ಈತ ತಲೆಮೂಳೆಗಳ ತಿಳಿವಳಿಕೆ ಸ್ವಲ್ಪ ಹೆಚ್ಚಿಸಿದ. ಅಂಗರಚನೆಯ ಪಾರಿಭಾಷಿಕ ಪದವೃಂದವನ್ನು ನಿಜವಾಗಿ ಸುಧಾರಿಸಿದ.

1543ರಲ್ಲಿ ಪ್ರಕಟವಾದಾಗ ವೆಸೇಲಿಯಸ್ಸನ ಫಾಬ್ರಿಕದ ಮೇಲೆ ಉದ್ದೇಶರಹಿತ ಟೀಕೆಗಳನ್ನು ಮಾಡಿ ಹೆಸರು ಕೆಡಿಸಿಕೊಂಡ. ಗ್ಯಾಲೆನ್ ಭಕ್ತನಾದ ಅವನು, ಗ್ಯಾಲೆನ್ನನ ಕಾಲದಲ್ಲಿದ್ದ ಅಂಗರಚನೆ ಈಗ ಬದಲಾಗಿದೆ ಎಂದ. ಹಿಂದೆ ಬಹಳ ಬಾಗಿದ್ದ ತೊಡೆ ಮೂಳೆ ತನ್ನ ಕಾಲಕ್ಕೆ ಬಿಗಿ ಷರಾಯಿಯ ಬಳಕೆಯಿಂದ ನೆಟ್ಟಗಾಯಿತೆಂದು ಗ್ಯಾಲೆನ್ ವರ್ಣಿಸಿದ ಪುರಾತನ ವೀರರ ಕೆಚ್ಚೆದೆಯಲ್ಲಿ 8 ಮೂಳೆಗಳು ಇದ್ದುವು. ಆದರೆ 1543ರ ಹೀನಕಾಲದ ಸೊಣಕಲ ಎದೆಗೆ ಒಂದೇ ಮೂಳೆ ಸಾಕಾಗಿದೆಯೆಂದ. ವೆಸೇಲಿಯಸ್ಸನ ಹೆಸರನ್ನು ಅಪಾರ್ಥ ಬರುವಂತೆ ತಿರುಚಿ ವೆಸಾನಸ್ (ಹುಚ್ಚ) ಅಂದ.

ಸ್ವಿಟ್ಜರ್ಲೆಂಡಿನಲ್ಲಿ ಬಾಸೆಲ್ ನಗರದ ಫೆಲಿಕ್ಸ್ ಪ್ಲಾಟರ್ (1536–1614) ಈಗಿನ ತಿಳಿವಳಿಕೆಗೆ ತಳಪಾಯದಂತಿರುವ, ಕಣ್ಣಿನ ಮೇಲೆ ಅತ್ಯುತ್ತಮ ಪ್ರಬಂಧ ಬರೆದ.

ಸ್ಪೇನ್ ದೇಶದ ಅರಗಾನ್ ನಗರದ ಮೈಕೇಲ್ ಸರ್ವಿಟಸ್ (1511–53) ತಿಳಿದವನು, ಶಕ್ತ, ಧರ್ಮಾತ್ಮ, ಪ್ಯಾರಿಸ್ಸಿನಲ್ಲಿ ವೆಸೇಲಿಯಸ್ಸನ ಗೆಳೆಯನಾಗಿದ್ದ. ಪುಪ್ಫುಸದ ರಕ್ತ ಪರಿಚಲನೆಯನ್ನು ಮೊಟ್ಟಮೊದಲಿಗೆ ಖಚಿತವಾಗಿ ತನ್ನ ಪುಸ್ತಕದಲ್ಲಿ (1553) ವಿವರಿಸಿದ. ಹೆಚ್ಚುಕಾಲ ಬದುಕಿದ್ದಿದ್ದರೆ ಹಾರ್ವೆ ತೋರಿಸಿಕೊಡುವುದಕ್ಕೆ 70 ವರ್ಷಗಳ ಮೊದಲೇ ಮೈಯಲ್ಲಿನ ರಕ್ತ ಹೃದಯದಿಂದ ಹೊರಟು ಮತ್ತೆ ಅಲ್ಲಿಗೇ ಬರುತ್ತಿದ್ದುದನ್ನು ಈತ ತೋರುತ್ತಿದ್ದ ಎನ್ನಿಸುತ್ತದೆ. ಅನನ್ಯ ಕ್ರಿಸ್ತಭಕ್ತನಾಗಿ ತನ್ನದೇ ಆದ ಧಾರ್ಮಿಕ ಪ್ರಪಂಚವೊಂದನ್ನು ಕಲ್ಪಿಸಿಕೊಂಡಿದ್ದರೂ ಕ್ರಿಸ್ತ ತ್ರಿಮೂರ್ತಿಗಳ ಸಂಬಂಧದ ಕೆಲವು ತತ್ವಗಳನ್ನು ಒಪ್ಪದ್ದರಿಂದ ಮಠಾಧಿಕಾರಿಗಳೊಂದಿಗೆ ವೈಮನಸ್ಯ ಬೆಳೆದು ಕಾಲ್ವಿನ್ ಮತ್ತವನ ಸಂಗಾತಿಗಳು ಅವನನ್ನು ಸಜೀವವಾಗಿ ಸುಟ್ಟರು.

ಇಂಗ್ಲೆಂಡಿನ ತಾಮಸ್ ವಿಕರಿ (1548) ಮಾನವನ ಮೈಯ ಅಂಗರಚನಾಶಾಸ್ತ್ರದ ಪುಸ್ತಿಕೆಯನ್ನು ಪ್ರಕಟಿಸಿದ. ಇದು ಇಂಗ್ಲಿಷಿನಲ್ಲಿ ಅಂಗರಚನಾಶಾಸ್ತ್ರದ ಮೇಲಿನ ಮೊಟ್ಟಮೊದಲ ಪುಸ್ತಕವಿರಬಹುದು. ವೈದ್ಯರ ಕಾಲೇಜಿನವರು ಅಂಗರಚನಾಶಾಸ್ತ್ರದಲ್ಲಿ ಪಾಠ ಹೇಳುವ ಹುದ್ದೆಯನ್ನು ಹೊಸದಾಗಿ ಕಲ್ಪಿಸಿ (1651). ಎರಡು ವರ್ಷಗಳಲ್ಲಿ ಲಂಡನ್ನಿನ ನೈಟ್ ರೈಡರ್ ಬೀದಿಯಲ್ಲಿ ಅಂಗರಚನಾವಿಜ್ಞಾನದ ಸಭಾಮಂದಿರ ಕಟ್ಟಿದರು. ಮೊದಲನೆಯವನಾಗಿ ಆ ಹುದ್ದೆಗೆ ನೇಮಕನಾದವ ವಿಲಿಯಂ ಹಾರ್ವೆ.

ವಿಲಿಯಂ ಹಾರ್ವೆ (1578–1657) 4 ವರ್ಷ ಪಡುವದಲ್ಲಿ ಫೆಬ್ರಿಸಿಯಸ್ಸನೊಂದಿಗೆ ಇದ್ದು ಇಂಗ್ಲೆಂಡಿಗೆ ಹಿಂದಿರುಗುವಾಗಲೇ ತನ್ನ ಜೀವಮಾನದ ಎರಡು ಸಮಸ್ಯೆಗಳಾದ ರಕ್ತ ಪರಿಚಲನೆ, ಪಿಂಡ ವಿಕಾಸಗಳಲ್ಲಿ ಆಸಕ್ತನಾಗಿದ್ದ.

ಗ್ಯಾಲೆನ್, ಅರಿಸ್ಟಾಟಲರನ್ನು ಗೌರವಿಸುತ್ತಿದ್ದರೂ ಅವನು ಅವರನ್ನು ಪೂಜಿಸುತ್ತಿರಲಿಲ್ಲ. ಅಂದು ಪ್ರಚಾರದಲ್ಲಿದ್ದ ಹೃದಯದ ವಿಚಾರವನ್ನೆಲ್ಲ ಅಭ್ಯಾಸಮಾಡಿ, ಮೊಟ್ಟಮೊದಲಾಗಿ ತಾನೇ ಹೃದಯವನ್ನು ಕೊಯ್ದು ಇನ್ನಷ್ಟು ತಿಳಿವಳಿಕೆಯನ್ನೂ ಕಲೆಹಾಕಿದ. ಎಲ್ಲಕ್ಕೂ ಮುಖ್ಯವಾಗಿ ಇನ್ನಾರಿಂದಲೂ ಆಗಿರದಷ್ಟು ನಿಜಸಂಗತಿಗಳನ್ನು ಕೂಡಿಸಿದ. ಇದರಿಂದ ಹೃದಯದ ಬಡಿತ, ನಾಡಿ, ರಕ್ತಸುರಿಕೆ ಇತ್ಯಾದಿ ಅರ್ಥವಾಗದ ಬಿಡಿ ವಿಷಯಗಳ ಮೂಲದಲ್ಲಿರುವ ಸಾಮಾನ್ಯ ಸೂತ್ರಗಳನ್ನು ಕಂಡ. ಅಂದರೆ ಹೃದಯ ಒತ್ತಳಿದ ರಕ್ತ ಮೈಯಲ್ಲೆಲ್ಲ ನಾಳಗಳಲ್ಲಿ ಸಾಗಿ ಮತ್ತೆ ಅಲ್ಲಿಗೇ ಮರಳುವುದೆಂಬ ಈ ಮೂಲಸೂತ್ರ ಅಂಗರಚನಾಶಾಸ್ತ್ರ, ಶರೀರಕ್ರಿಯಾಶಾಸ್ತ್ರಗಳಲ್ಲಿ ಮುಂದಿನ ಶೋಧನೆಗೂ ಆಮೇಲಿನ ಚಿಂತನೆಗಳಿಗೂ ಅಡಿಗಲ್ಲಾಯಿತು.

ಶರೀರಕ್ರಿಯಾಶಾಸ್ತ್ರಜ್ಞರು ಅವನನ್ನು ಶರೀರಕ್ರಿಯಾವಿಜ್ಞಾನದವನು ಎನ್ನುವರು. ಅಂಗರಚನಾಶಾಸ್ತ್ರಜ್ಞರು ತಮ್ಮವನೆನ್ನುವರು. ಅವನು ಎರಡೂ ಆಗಿದ್ದ. ಏಕೆಂದರೆ ಇವೆರಡರ ನಡುವಣ ಭೇದ ಕೃತಕ. ರಚನೆಯನ್ನು ಕುರಿತು ಬರೆದ ತನ್ನ ಪುಸ್ತಕವನ್ನು ಹೃದಯದ ನಿಜವಾದ ರಚನೆಯ ವ್ಯಾಖ್ಯಾನ ಎಂದು ಕರೆದುದರಿಂದ ಅವನು ಅಂಗರಚನಾಶಾಸ್ತ್ರಜ್ಞ ಎನ್ನಲು ಪ್ರಮಾಣ ಸಿಕ್ಕಿದಂತಾಯಿತು.

ದೊಡ್ಡ ಕಾಂಡಗಳೂ ಕೊಂಬೆಗಳೂ ಇರುವ ಧಮನಿಗಳನ್ನೂ ಸಿರಗಳನ್ನೂ ಹಿಪಾಕ್ರೆಟೀಸ್ ಎರಡು ಮರಗಳಿಗೆ ಹೋಲಿಸಿದ್ದ. ಇತರರರೊಂದಿಗೆ ಹಾರ್ವೆ ಕೂಡ ಅವೆರಡನ್ನೂ ನೋಡಿ, ದ್ರವವಾಗಿರುವ ರಕ್ತ ಅಂತೂ ಹೇಗೋ ಧಮನಿಗಳ ಕಿರಿಯ ಶಾಖೆಗಳಿಂದ ಸಿರಗಳ ಕಿರಿಯ ರಕ್ತನಾಳಗಳಿಗೆ ಸಾಗುತ್ತವೆಂದ. ಜೀವಸಾರ ಒಂದು ಮರದ ಕೊಂಬೆಗಳಲ್ಲಿ ಏರಿ, ಅಡ್ಡಹಾಯ್ದು ದೂರದ ಮತ್ತೊಂದು ಮರದ ಕೊಂಬೆಗಳಿಂದ ಕೆಳಕ್ಕೆ ಇಳಿಯುತ್ತದೆ ಎಂದ ಹಾಗಾಯಿತೆಂದು ಹಲವರು ಇದನ್ನು ಟೀಕಿಸಿದರು. ಒಂದುಗೂಡಿಸುವ ಲೋಮನಾಳಗಳನ್ನು ಹುಡುಕಾಡುವುದರಲ್ಲೆ ಹಾರ್ವೆ ಉಳಿದ ತನ್ನ ಆಯುಸ್ಸೆಲ್ಲ ಕಳೆದ. ಅವನೆಂದಿಗೂ ಕಾಣದಿದ್ದರೂ ಅವು ಇದ್ದಿರಬೇಕೆಂದ. ನಿಜವಾಗೂ ಮೈಯಲ್ಲಿ ಧಮನಿಗಳ ಸಿರಗಳ ಈ ಎರಡೂ ಮರಗಳ ಕೊನೆಕುಡಿಗಳನ್ನು ಕೂಡಿಸುವ ಜಾಲರಚನೆ ಅಪಾರವಾಗಿದೆ. ಕೇವಲ ಸ್ನಾಯುಗಳಲ್ಲೇ ಇವು 6000 ಕೋಟಿ ತುಂಬಿವೆ. ರಕ್ತದ ಪರಿಚಲನೆಯ ಮೇಲೆ ತನ್ನ ಪ್ರಬಂಧವನ್ನು ಹಾರ್ವೆ ಪ್ರಕಟಿಸಿದಾಗಲೆ (1628), ನಿಜವಾಗಿಯೂ ಆ ಜಾಲರಚನೆಯನ್ನು ಮುಂದೆ ಕಂಡ ವ್ಯಕ್ತಿಯೊಬ್ಬ ಇಟಲಿಯಲ್ಲಿ ಹುಟ್ಟಿದ. ಹಾರ್ವೆ ಸತ್ತು (1657) 4 ವರ್ಷಗಳಾದ ಮೇಲೆ, 32 ವರ್ಷದ ಮಾರ್ಸೆಲ್ಲೊ ಮಾಲ್ಪಿಘಿಯೆಂಬುವ ಆ ವ್ಯಕ್ತಿ ಬೊಲೊನ ಬಳಿಯ ಒಂದು ಬೆಟ್ಟದ ತಪ್ಪಲಿನಲ್ಲಿ ನಿಂತು ಇಟಲಿಯ ಸಂಜೆಗೆಂಪಿಗೆದುರಾಗಿ ಕಪ್ಪೆಯ ಪುಪ್ಪುಸದ ಒಂದು ಚೂರನ್ನು ಹಿಡಿದು ಪರೀಕ್ಷೆ ಮಾಡುತ್ತಿದ್ದ. ಧಮನಿಗಳ, ಸಿರಗಳ ಕೊನೆಕುಡಿಗಳನ್ನು ಆಗ ಅವನು ಕಣ್ಣಾರೆ ಕಂಡ. ರಕ್ತ ತುಂಬಿರುವ ಪುಟಾಣಿ ಲೋಮನಾಳಗಳು ಈ ಕುಡಿಗಳನ್ನು ಒಂದುಗೂಡಿಸುವುದನ್ನೂ ಮೊಟ್ಟಮೊದಲಿಗೆ ಭೂತಗನ್ನಡಿಯ ಸಹಾಯದಿಂದ ಕಂಡ.

3. **(ಜೀವಿಗಳೆಲ್ಲದರ ಹಂಚಿಕೆಯಲ್ಲಿನ ಏಕತೆಯನ್ನು ಚಾರಲ್ಸ್ ಡಾರ್ವಿನ್ ತೋರುವ ತನಕ (1859)–ಕ್ರೋಡೀಕರಣ, ಚಿತ್ರೀಕರಣ, ಬೋಧನೆಗಳ ಕಾಲ.** ಹಾರ್ವೆಯ ಅನಂತರದ ಶತಮಾನ ಮಿಣಿದರ್ಶಕ ಅಂಗರಚನಾವಿಜ್ಞಾನ ಪಿಂಡಶಾಸ್ತ್ರಗಳ ಔನ್ನತ್ಯದ ಕಾಲ. ಈ ಕಾಲದಲ್ಲಿ ವಿಜ್ಞಾನ ಹಾಗೂ ತತ್ತ್ವ ಸಂಘಗಳ ಸ್ಥಾಪನೆ: ಆಧಾರ ಗ್ರಂಥಗಳು, ಚಿತ್ರಪಟ ಪುಸ್ತಕಗಳು (ಅಟ್ಲಾಸುಗಳು) ಹೆಚ್ಚಾಗಿ ಅಚ್ಚಾಗಿ ಅಂಗಗಳ ಪ್ರದರ್ಶನಾಲಯಗಳ ಬೆಳೆವಣಿಗೆ, ಮುಖ್ಯವಾಗಿ ಶಸ್ತ್ರವೈದ್ಯರಿಂದ ತಿಳಿವಳಿಕೆಯಲ್ಲಿನ ಮುನ್ನಡೆಗಳು: ಅಂಗರಚನಾಶಾಸ್ತ್ರದ ವಿಶೇಷ ಶಾಲೆಗಳ ಸ್ಥಾಪನೆ; ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಅಂಗರಚನಾಶಾಸ್ತ್ರದ ಕೆಲಸದ ಆರಂಭ; ಅಂಗರಚನಾಶಾಸ್ತ್ರದ ಕಾನೂನುಗಳು ಜಾರಿಗೆ ಬಂದುದು ಹೀಗೆ ಮಾನವ ಒಟ್ಟಾರೆ ಅಂಗರಚನಾಶಾಸ್ತ್ರದ ಅನೇಕಾನೇಕ ಮುಖ್ಯಾಂಶಗಳು ರೂಪುಗೊಂಡವು.

ಮಹಾಗ್ರಂಥಗಳು – ಚರಿತ್ರಾರ್ಹವಾದ ವೆಸೇಲಿಯಸ್ಸನ ಫಾಬ್ರಿಕದ ಅನಂತರ, ಪಡುವದ ಇನ್ನೊಬ್ಬ ಸ್ಪೈಗೀಲಿಯಸ್ಸನ ಪುಸ್ತಕ (1627)ಹೊರಬಂದಿತು. ಇಟಲಿಯವರ ಸಾಧನೆಯಿಂದ ಕಟ್ಟಾಸಕ್ತಿ ಹುಟ್ಟಿ ಬೆಳೆದದ್ದರಿಂದ ಪಶ್ಚಿಮ ಯುರೋಪಿನಲ್ಲಿ ಎಲ್ಲೆಲ್ಲೂ ಅಂಗರಚನಾಶಾಸ್ತ್ರದ ಶೋಧನೆ ನಡೆದು ವಿಶೇಷ ವಿಷಯಗಳ ಅನೇಕ ಬರಹಗಳು ವರದಿಯಾದವು. ಇದೇ ಕಾಲದಲ್ಲಿ ಸ್ಥಾಪಿತವಾದ ವಿಜ್ಞಾನಸಂಘಗಳಿಗೂ ಇದೇ ತೆರನ ಕೃತಿಗಳು ಬಂದುವು. ಹೀಗೆ ಪ್ರಕಟವಾದ ಎಲ್ಲವನ್ನೂ ಒಂದುಗೂಡಿಸಬೇಕಿತ್ತು. ಹಲವಾರು ದೇಶಗಳಲ್ಲಿ ದೊರೆಯುವ ತಿಳಿವಳಿಕೆ ಎಲ್ಲವನ್ನೂ ಅಚ್ಚುಕಟ್ಟಾಗಿ ಜೋಡಿಸಿರುವ ಆಧಾರಗ್ರಂಥಗಳು ಕಾಣಿಸಿಕೊಂಡವು.

ಮಾನವನ ಒಟ್ಟಾರೆ ಅಂಗರಚನಾಶಾಸ್ತ್ರದಲ್ಲಿ ಶೋಧನೆಗಳು: ಶಸ್ತ್ರವೈದ್ಯರಿಗೆ ಅಂಗರಚನಾಶಾಸ್ತ್ರ ಹೆಚ್ಚಾಗಿ ಬೇಕಾಗಿ ಅವರ ಶೋಧನೆಗಳು ಹೆಚ್ಚಾದುವು. ಅರಿವಳಿಕೆಯ ವಿಷಯ ಗೊತ್ತಾಗುವ ಮುಂಚಿನ ಕಾಲದಲ್ಲಿ ಶಸ್ತ್ರಕ್ರಿಯೆಯನ್ನು ಬಲುಬೇಗ ಮುಗಿಸಬೇಕಿತ್ತು. ಇದಕ್ಕಾಗಿ ಅಂಗಗಳ ರಚನೆ, ಸಂಬಂಧಗಳ ವಿವರವಾದ ಖಚಿತ ತಿಳಿವಳಿಕೆ ಬೇಕಾಯಿತು. ಶಸ್ತ್ರಕ್ರಿಯೆ ಹೆಚ್ಚಾಗಿ ಆಗುವ ಬಾಯಿ, ಕುತ್ತಿಗೆ, ಗಜ್ಜಲು, ಮುಂಗುದಾಣಗಳ (ಪೆರಿನಿಯಂ) ಹೊಸ ಮಿತಿಮೀರಿದ ವಿವರವಾದ ವರ್ಣನೆ, ಪರಿಭಾಷೆಯ ಕ್ರಮಗಳು ಹೆಚ್ಚಿಕೊಂಡವು.

ಕೆಲವು ವೇಳೆ ಸ್ಪರ್ಧೆಯಿಂದ ಅಹಿತ ಪರಿಣಾಮಗಳು ಆಗುತ್ತಿದ್ದವು. ಜೆ.ಜಿ.ವರ್ಸುಂಗನೂ ಅವನ ಸಂಗಾತಿಯೂ ಮಾಂಸಲಿಯ (ಮೇದೋಜೀರಕ) ಸಾಗುನಾಳವನ್ನು ಕಂಡುಹಿಡಿದರು. 1642ರಲ್ಲಿ ಇದನ್ನು ವರದಿ ಮಾಡಿದವನು ವರ್ಸುಂಗ್. ಆಮೇಲೆ ಅವನ ಕೊಲೆ ಆಯಿತು; ಅಸೂಯೆ ಕಾರಣವಾಗಿ ಅವನ ಸಂಗಾತಿಯೇ ಆ ಕೆಲಸ ಮಾಡಿರಬೇಕೆಂಬ ಸಂಶಯವೂ ಎದ್ದಿತು. ಸ್ವೀಡನ್ನಿನ ಓ ರುಡ್ಬೆಕ್ಕನೂ (1651), ಡೆನ್ಮಾರ್ಕಿನ ಟಿ.ಬಾರ್ತೊಲಿನಸ್ಸನೂ (1652), ಬೇರೆಬೇರೆಯಾಗಿ ಹಾಲು ರಸಮಂಡಲವನ್ನೂ ಕತ್ತಿನ ಸಿರಗಳಲ್ಲಿ ಅದು ಕೊನೆಗೊಳ್ಳುವುದನ್ನೂ ಕಂಡುಹಿಡಿದರು. ಅವರ ಕೆಲಸ ಮೆಚ್ಚುವಂತಿದ್ದರೂ ಯಾರು ಮೊದಲು ಕಂಡರೆಂಬ ವಿವಾದ ಕಹಿಯಾಗಿತ್ತು. ಎಷ್ಟೋ ಕಾಲದಿಂದಲೂ ಪ್ರಕಟವಾಗದಿದ್ದ, ಯುಸ್ಟೇಷಿಯನ್ನನ ತಗಡು ಚಿತ್ರಗಳು ಈ ನಿಜಸಂಗತಿಗಳನ್ನು ಸುಮಾರು ಒಂದು ಶತಮಾನದ ಮುಂಚೆಯೇ ತೋರಿಸಿದ್ದರಿಂದ ಇವೆಲ್ಲ ಅಸೂಯೆಗಳಿಗೂ ಬುಡವಿಲ್ಲದಂತಾಯಿತು.

ಅಂಗರಚನಾವಿಜ್ಞಾನದ ಶಾಲೆಗಳು–ಈ ಕಾಲದಲ್ಲಿ ಯುರೋಪಿನ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಶಸ್ತ್ರವೈದ್ಯದೊಂದಿಗೋ ವೈದ್ಯಶಾಸ್ತ್ರದೊಂದಿಗೋ ಅಂಗರಚನಾವಿಜ್ಞಾನವನ್ನೂ ಹೇಳುತ್ತಿದ್ದರು. ಆದರೆ ಇಂಗ್ಲೆಂಡಿನ ದಿಕ್ಕಿಲ್ಲದ ಹಸುಳೆಯಂಥ ಜೀವಶಾಸ್ತ್ರಕ್ಕೆ ಜಡವಾಗಿದ್ದ ವಿಶ್ವವಿದ್ಯಾಲಯಗಳು ನಿಧಾನವಾಗಿ ಮನ್ನಣೆಕೊಟ್ಟುವು. ಅಂಗರಚನಾವಿಜ್ಞಾನ ವಿಶ್ವವಿದ್ಯಾಲಯಗಳ ಹೊರಗೇ ಹುಟ್ಟಿ ಬೆಳೆಯಿತು. ಶಸ್ತ್ರವೈದ್ಯರು ಬಯಲು ಶಾಲೆಗಳನ್ನು ಸ್ಥಾಪಿಸಿದರು. ಜನರಿಗೆ ಒಳ್ಳೆಯ ವೈದ್ಯಸೇವೆ ಸಲ್ಲಬೇಕಾದರೆ, ವೈದ್ಯರೂ ವೈದ್ಯ ಕಲಿವವರೂ ಅಂಗರಚನಾವಿಜ್ಞಾನವನ್ನು ಇನ್ನೂ ಚೆನ್ನಾಗಿ ಅರಿತಿರಬೇಕೆಂದು ಮನದಟ್ಟಾಯಿತು. ಲಂಡನ್ನಿನ ಗ್ರೇಟ್ ವಿಂಡ್‌ಮಿಲ್ ಬೀದಿಯಲ್ಲಿ ವಿಲಿಯಂ ಹಂಟರ್ ತನ್ನ ಖರ್ಚಿನಲ್ಲೇ ಹೆಸರಾದ ಶಾಲೆಯನ್ನು ಸ್ಥಾಪಿಸಿದ (1770). ತಾನೇ ತಯಾರಿಸಿದ ಅಂಗಗಳ ಪ್ರದರ್ಶನ, ಹೆಣ ಕೊಯ್ಯಬಿಡಿಸುವ ಕೋಣೆಗಳು, ಅರ್ಧ ಚಂದ್ರಾಕಾರದ ರಂಗವೂ ಅವನ ವಾಸದ ಮನೆಯೂ ಅದರಲ್ಲಿದ್ದುವು. ಶಾಲೆಗಾಗಿ ಅದರಲ್ಲೇ ವಾಸಿಸಿದ್ದ. 13 ವರ್ಷಗಳ ಅನಂತರ ಅವನು ಸಾಯುವ ಕಾಲಕ್ಕೆ ಅವನ ಪ್ರದರ್ಶನಾಲಯಕ್ಕೆ 100,000 ಪೌಂಡುಗಳನ್ನು ಖರ್ಚುಮಾಡಿದ್ದ. ಅವನು, ಅವನಿಗಿಂತ ಇನ್ನೂ ಹೆಸರಾದ ಅವನ ತಮ್ಮ ಜಾನ್ ಹಂಟರ್, ಅಲ್ಲದೆ ವಿಲಿಯಮ್ ಹ್ಯೂಸನ್ ಈ ಮೂವರೂ ಕೂಡಿ ಅಲ್ಲಿ ಪಾಠಹೇಳಿ, ಹೆಣ ಕೊಯ್ದುಬಿಡಿಸುವಾಗ ಉಸ್ತುವಾರಿ ನೋಡಿಕೊಂಡು ವಿಶೇಷ ಸಮಸ್ಯೆಗಳ ಶೋಧನೆಗೆ ಕೈಹಾಕುವಂತೆ ಅನೇಕರನ್ನು ಹುರಿದುಂಬಿಸಿದರು. 63 ವರ್ಷಗಳು ನಡೆದ ಆ ಶಾಲೆ ಇಂಗ್ಲಿಷ್ ಮಾತನಾಡುವವರ ಪ್ರಪಂಚದಲ್ಲಿ ಎಲ್ಲೆಲ್ಲೂ ಅಂಗರಚನಾಶಾಸ್ತ್ರದ ಪಾಠ ಪ್ರವಚನಗಳನ್ನು ಬೆಳೆಸುವುದರಲ್ಲಿ ಮುಖ್ಯಪಾತ್ರ ವಹಿಸಿತು.

ಆ ಶಾಲೆಯ ಮೊದಲ ದಿನಗಳಲ್ಲಿ ಹ್ಯೂಸನ್ನನ ಪರಮ ಗೆಳೆಯನಾದ ಬೆಂಜಮಿನ್ ಫ್ರಾಂಕ್ಲಿನ್ ಆಗಾಗ ಅಲ್ಲಿಗೆ ಬರುತ್ತಿದ್ದ. ಕೆಲಸದ ಮಧ್ಯೆ ವಿಷಕ್ರಿಮಿಗಳಿಂದ ನಂಜಾಗಿ ಹ್ಯೂಸನ್ ಸತ್ತಾಗ, ಅವನ ಹೆಂಡತಿ ಮಕ್ಕಳನ್ನು ಫಿಲಡೆಲ್ಫಿಯಾದಲ್ಲಿ ನೆಲೆಸಲು ಫ್ರಾಂಕ್ಲಿನ್ ಒತ್ತಾಯಮಾಡಿ ಕಳುಹಿಸಿದ. ಆ ಪೀಳಿಗೆಯವರಲ್ಲಿ ಕೆಲವರು ಅಲ್ಲಿ ವೈದ್ಯರಾಗಿ ಹೆಸರಾದರು. ಇದೇ ತೆರನ ಶಾಲೆಗಳು ಅಲ್ಲೂ ತೆರೆದವು. 1828ರ ಹೊತ್ತಿಗೆ 7 ಖಾಸಗಿಯಾಗೂ 4 ಆಸ್ಪತ್ರೆಗಳಲ್ಲೂ ಅಂಗರಚನಾಶಾಸ್ತ್ರದ ಶಾಲೆಗಳು ಲಂಡನ್ನಿನಲ್ಲಿದ್ದುವು.

ಆ ವೇಳೆಗೆ ಎಡಿನ್‌ಬರೊ ವಿಶ್ವವಿದ್ಯಾನಿಲಯದಲ್ಲಿ ಅಂಗರಚನಾಶಾಸ್ತ್ರದ ಪಾಠ ನಡೆಯುತ್ತಿತ್ತು. 126 ವರ್ಷಗಳ ಕಾಲ (1720–1846) ಅಲೆಗ್ಸಾಂಡರ್ ಮನ್ರೋಗಳು (ಅಪ್ಪ, ಮಗ, ಮೊಮ್ಮಗ) ಒಬ್ಬರಾದಮೇಲೊಬ್ಬರು ಪ್ರಾಧ್ಯಾಪಕರಾದರು. 12,800 ವಿದ್ಯಾರ್ಥಿಗಳಿದ್ದ ಎಡಿನ್‌ಬರೊ ಒಂದು ವೈದ್ಯಶಾಸ್ತ್ರ ಶಿಕ್ಷಣದ ಮಹಾಕೇಂದ್ರವಾಯಿತು. ಹೆಸರಾಂತ ಸೋದರರಾದ ಜಾನ್ ಬೆಲ್, ಚಾರಲ್ಸ್ ಬೆಲ್ ಇವರು ಹೇಳುತ್ತಿದ್ದ ಬಯಲು ಶಾಲೆ ಒಂದಿತ್ತು. ಇಲ್ಲಿ ಅಂದಿನಿಂದಲೂ ಹೆಸರಾಗಿರುವಂತೆ, ಹೆಣ ಕೊಯ್ದುಬಿಡಿಸುವ ರೀತಿಗೆ, ಅಚ್ಚುಕಟ್ಟಾದ ತಾಂತ್ರಿಕ ಖಚಿತತೆಗಳ ಹೆಗ್ಗುಣಗಳೂ ಕೂಡಿಕೊಂಡವು.

ವಿಲಿಯಂ ಹಂಟರನ ಪ್ರದರ್ಶನಾಲಯ ಗ್ಲಾಸ್ಗೊ ನಗರಕ್ಕೆ ದತ್ತಿ ಆಯಿತು. ಈಚಿನವರೆಗೂ ಅದು ಆಸಕ್ತರ ಕೇಂದ್ರ ಎನಿಸಿತ್ತು. ಆಮೇಲೆ ಜಾನ್ ತನ್ನ ಅಣ್ಣನಿಂದ ಬೇರೆಯಾಗಿ ತನ್ನದೇ ಒಂದು ಪ್ರಸಿದ್ಧ ಪ್ರದರ್ಶನಾಲಯವನ್ನು ಜೋಡಿಸಿದ. ಲಂಡನ್ನಿನ ರಾಯಲ್ ಕಾಲೇಜ್ ಆಫ್ ಸರ್ಜನ್ನಿನ ಅತ್ಯಮೂಲ್ಯ ಹಾಗೂ ಉಪಯುಕ್ತ ಆಸ್ತಿಗಳಲ್ಲಿ ಒಂದಾಗಿ ಅದು ಈಗಲೂ ಇದೆ.

ಅಂಗರಚನಾವಿಜ್ಞಾನದ ಕಾಯಿದೆಗಳು – ಅಂಗರಚನಾವಿಜ್ಞಾನದ ಕಲಿಕೆಗಾಗಿ ಶಾಲೆಗಳಿಗೆ ಹೆಣಗಳು ಬೇಕಾದುವು. ಅವನ್ನು ಒದಗಿಸಲು ನ್ಯಾಯಾಂಗದಲ್ಲಿ ಹವಣಿಲ್ಲದ್ದರಿಂದ ಹೆಣಗಳನ್ನು ಗುಟ್ಟಾಗಿ ಪಡೆಯುತ್ತಿದ್ದರು. ಸಮಾಧಿಗಳಿಂದ ಅಗೆದು ತರುವವರಿಂದ ಶಾಲೆಗಳು ಕೊಳ್ಳುತ್ತಿದ್ದವು. ಇದರಿಂದ ಬಹಳ ಅವಾಂತರವಾಯಿತು. ಕೊನೆಗೆ 1827ರಲ್ಲಿ ಬರ್ಕ್ ಮತ್ತು ಹೇರ್ ಎಂಬ ಅಪರಾಧಿಗಳ ದುಷ್ಕರ್ಮಗಳು ಹೊರಬಿದ್ದುವು. ಇವರು ದಿಕ್ಕಿಲ್ಲದವರನ್ನು ಸಾಯಿಸಿ ಹೆಣಗಳನ್ನು ಶಾಲೆಗಳಿಗೆ ಮಾರುತ್ತಿದ್ದರು. ಇದರಿಂದಾಗಿ ಎಷ್ಟೋ ಕಾಲದಿಂದ ವೈದ್ಯವಿದ್ಯಾಸಕ್ತರಾದ ಮುಂದಾಳುಗಳು ಒತ್ತಾಯಿಸುತ್ತಿದ್ದ ಬ್ರಿಟಿಷ್ ಅಂಗರಚನಾವಿಜ್ಞಾನದ ಕಾಯಿದೆ (1832) ಜಾರಿಗೆ ಬಂದಿತು. ಇದರಿಂದ ವಾರಸುದಾರರಿಲ್ಲದ ಹೆಣಗಳನ್ನು ವಿಶೇಷ ಅಪ್ಪಣೆ ಪಡೆದ ಉಪಾಧ್ಯಾಯರು ಬಳಸಲು ಅವಕಾಶ ಸಿಕ್ಕಿತು. ಮಸಾಚುಸೆಟ್ಸಿನ ನ್ಯಾಯ ವಿಧಾಯಕ ಸಭೆ ಒಪ್ಪಿದ (1831) ಇದೇ ತೆರನ ಕಾಯಿದೆಯ ಮೇಲ್ಪಂಕ್ತಿಯನ್ನು ಬೇಗನೆ ಅಮೆರಿಕದ ಇತರ ಸಂಸ್ಥಾನಗಳೂ ಅನುಸರಿಸುವಂತಾಯಿತು.

ಅಮೆರಿಕದಲ್ಲಿ ಒಟ್ಟಾರೆ ಅಂಗರಚನಾವಿಜ್ಞಾನ–ಅಮೆರಿಕದಲ್ಲಿ ಅಂಗರಚನಾವಿಜ್ಞಾನ ಹಳೆಯ ಬ್ರಿಟಿಷ್ ಶಾಲೆಗಳ, ಅಂದರೆ ಮೊದಲು ಎಡಿನ್‌ಬರೋದ ಮನ್ರೋಗಳ, ಆಮೇಲೆ ಲಂಡನ್ನಿನ ಹಂಟರರ ಸಂಪ್ರದಾಯಗಳನ್ನೇ ಹಿಡಿಯಿತು. ಸುಮಾರು 1730ರಲ್ಲಿ ಥಾಮಸ್

ಕ್ಯಾಡ್ವಾಲಾಡರ್ ಫಿಲಡೆಲ್ಫಿಯದಲ್ಲಿ ಅಂಗರಚನಾವಿಜ್ಞಾನದ ಒಂದು ಖಾಸಗಿ ಶಾಲೆ ತೆರೆದ. ಅವನು ಚೆಸೆಲ್ಡೆನ್ನನ ಶಿಷ್ಯ. 1750ರ ದಶಕದಲ್ಲಿ ನ್ಯೂಯಾರ್ಕಿನಲ್ಲಿ ಒಂದು ಶಾಲೆಯಿತ್ತು. ಲಂಡನ್ನಿನಲ್ಲಿದ್ದ ಸ್ಕಾಟ್ಲೆಂಡಿನ ಸೋದರರಾದ ಹಂಟರುಗಳ ಮನೆತನದ ಇನ್ನೊಬ್ಬ ವಿಲಿಯಂ ಹಂಟರ್ ನ್ಯೂಪೋರ್ಟ್ ನಗರದಲ್ಲಿ ಹೆಣಗಳನ್ನು ಕೊಯ್ದುಬಿಡಿಸಿ ತೋರಿಸುತ್ತಾ ಬಂದ.

ವಿಲಿಯಂ ಷಿಪ್ಪೆನ್, ಜಾನ್ ಮೋರ್ಗನ್ ಎಂಬಿಬ್ಬರು ತರುಣರು (1765) ಕೆಲ ಕಾಲದ ಅನಂತರ ಅದೇ ವಿಶ್ವವಿದ್ಯಾನಿಲಯವಾದ ಪೆನ್ಸಿಲ್ವೇನಿಯ ಕಾಲೇಜಿಗೆ ಸೇರಿದಂತೆ ಒಂದು ವೈದ್ಯಶಾಲೆ ಹೊಂದಿಸಿದರು., ಇವರು ಮೊದಲ ಮನ್ರೊ, ಹಂಟರುಗಳ ಶಿಷ್ಯರು. ಷಿಪ್ಪೆನ್ ಅಂಗರಚನಾವಿಜ್ಞಾನ, ಶಸ್ತ್ರವೈದ್ಯ, ಹೆರಿಗೆ ಶಾಸ್ತ್ರಗಳ ಪ್ರಾಧ್ಯಾಪಕನಾಗಿದ್ದ. ಹೆಣದ ಭಾಗಗಳನ್ನು ಕೆಡದಂತಿಡುವ ವಿಧಾನದ ಮೇಲೆ ಪ್ರಬಂಧವನ್ನು ಮೋರ್ಗನ್ ಬರೆದ. ಹೀಗೆ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಿದ ವೈದ್ಯಶಾಲೆಯಿಂದ ಫಿಲಡೆಲ್ಫಿಯ ಆ ಕಾಲದಲ್ಲಿ ಅಮೆರಿಕದ ವೈದ್ಯ ಕೇಂದ್ರವಾಯಿತು. ಅಲ್ಲಿ ಅಂಗರಚನಾವಿಜ್ಞಾನ ಪ್ರಾಧ್ಯಾಪಕನಾಗಿದ್ದ ಕ್ಯಾಸ್ಪಾರ್ ವಿಸ್ಟಾರ್ (1808–18) ಒಂದು ಪಠ್ಯಪುಸ್ತಕವನ್ನು ಬರೆದು, ಒಂದು ಪ್ರದರ್ಶನಾಲಯವನ್ನೂ ನಿರ್ಮಿಸಿದ. ಮುಂಗಾಲಿನ ಬಿಗುಪ (ಟೆನ್ಸಾರ್ ಟಾರ್ಸಿ) ಸ್ನಾಯುವನ್ನು ವರ್ಣಿಸಿ, ಮಾದರಿ ಪಠ್ಯಪುಸ್ತಕ ಒಂದನ್ನು ಬರೆದ ಪ್ರಾಧ್ಯಾಪಕ ವಿಲಿಯಂ ಹಾರ್ನರ್ (1831–53) ಆ ಆಲಯವನ್ನು ವಿಸ್ತರಿಸಿದ.

ನ್ಯೂಯಾರ್ಕ್ ನಗರದಲ್ಲಿ ಕಿಂಗ್ಸ್ ಕಾಲೇಜಿಗೆ (ಆಮೇಲೆ ಕೊಲಂಬಿಯ ವಿಶ್ವ ವಿದ್ಯಾನಿಲಯ) ಸೇರಿದಂತೆ 2 ನೆಯ ವೈದ್ಯಶಾಲೆ ಆಯಿತು. ಬ್ರಿಟನ್ನಿನಲ್ಲಿ ಆದಂತೆ ಈ ಎರಡು ಶಾಲೆಗಳ ಅಂಗರಚನಾಶಾಸ್ತ್ರ ವಿಭಾಗಗಳಲ್ಲೂ ಹೆಣಗಳು ಸಿಗುವುದು ಕಷ್ಟವಾಯಿತು. ಸ್ಮಶಾನಗಳಲ್ಲಾದ ಕಳವುಗಳಿಂದ ರೊಚ್ಚಿಗೆದ್ದ ಜನ ಫಿಲಡೆಲ್ಫಿಯದಲ್ಲಿ ಷಿಪ್ಪೆನ್ನನ ಮನೆಗೆ ನುಗ್ಗಿ, ಕಿಂಗ್ಸ್ ಕಾಲೇಜಿಗೆ ದಾಳಿಯಿಟ್ಟರು.

ಮಸಾಚುಸೆಟ್ಸಿನ ಕೇಂಬ್ರಿಡ್ಜ್‌ನಲ್ಲಿನ ಹಾರ್ವರ್ಡ್ ಕಾಲೇಜಿನಲ್ಲಿ ಅಂಗರಚನಾವಿಜ್ಞಾನ ವಿಭಾಗ ಬಂದಿತು (1782). ಅಲ್ಲಿ ಅಂಗರಚನಾಶಾಸ್ತ್ರ, ಶಸ್ತ್ರವೈದ್ಯಗಳ ಪ್ರಾಧ್ಯಾಪಕನಾಗಿದ್ದ ಜಾನ್ ವಾರೆನ್ ಬಳಿ 20 ವಿದ್ಯಾರ್ಥಿಗಳಿದ್ದರು. ಅವರೆಲ್ಲರಿಗೂ ಕೊಯ್ದುಬಿಡಿಸಲು ಒಂದು ಅಧ್ಯಯನಕ್ಕೆ ಒಂದೇ ಹೆಣ ಸಿಗುತ್ತಿತ್ತು. ಹಿರಿಯ ಆಲಿವರ್ ವೆಂಡೆಲ್ ಹೋಮ್ಸ್ (1847) ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾದ. ಇವನು ಅಮೆರಿಕದ ಅಂಗರಚನಾಶಾಸ್ತ್ರದ ಗುರುಗಳಲ್ಲಿ ಗಟ್ಟಿಗನಾಗಿ ಶಿಷ್ಯಪ್ರಿಯನಾದ. ಇವನೊಬ್ಬ ಕವಿ. ಬಾಣಂತಿನಂಜಿನ ಕಾರಣವನ್ನು ತೋರಿದ ಐ.ಪಿ.ಸೆಮ್ಮೆಲ್‌ವಿಸ್‌ನ ಅಮೆರಿಕದ ದೂತನಾಗಿದ್ದ. ಅಮೆರಿಕದ ಡಾರ್ಟ್‌ಮತ್, ವರ್ಜಿನಿಯ ವಿಶ್ವವಿದ್ಯಾಲಯಗಳಲ್ಲಿ ಬೇಗನೆ ಅಂಗರಚನಾಶಾಸ್ತ್ರ ವಿಭಾಗಗಳು ಹುಟ್ಟಿದುವು. ಫಿಲಡೆಲ್ಫಿಯದಲ್ಲಿ ಜೆಫರ್ಸನ್ ವೈದ್ಯ ಕಾಲೇಜಾಯಿತು (1825). ಲಂಡನ್ನಿನ ಜಿ.ಎಸ್.ಪ್ಯಾಟಿಸನ್ ಅದರಲ್ಲೊಬ್ಬ ಅಂಗರಚನಾವಿಜ್ಞಾನದ ಪ್ರಾಧ್ಯಾಪಕ. ಫಿಲಡೆಲ್ಫಿಯದ ಮೂರನೆಯ ಕಾಲೇಜು ಹುಟ್ಟಿ (1839), ಎಸ್.ಜಿ.ಮಾರ್ಟನ್ ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾದ. ಅಮೆರಿಕದ ಬೇರೆಬೇರೆ ಜನಾಂಗಗಳ ತಲೆಬುರುಡೆಗಳನ್ನು ಬಲು ಚೆನ್ನಾಗಿ ಶೋಧನೆ ಮಾಡಿ 'ಅಮೆರಿಕದ ತಲೆಬುರುಡೆಗಳು' ಎಂಬ ಪ್ರಬಂಧವನ್ನು 1839ರಲ್ಲೇ ಬರೆದ. ಅಂಗರಚನಾವಿಜ್ಞಾನದ ಸಚಿತ್ರ ಪುಸ್ತಕವನ್ನೂ ಪ್ರಕಟಿಸಿದ (1849).

ಅಮೆರಿಕದಲ್ಲಿ ಅಂಗರಚನಾವಿಜ್ಞಾನದ ಪಾಠಕ್ರಮದಲ್ಲೂ ಹೆಣ ಕೊಯ್ದುಬಿಡಿಸುವ ಅಭ್ಯಾಸಗಳಲ್ಲೂ ಕೆಲಸ ಚೆನ್ನಾಗಿ ನಡೆಯುತ್ತಿದ್ದರೂ ಆ ಶಾಸ್ತ್ರಕ್ಕೆ ಸಂಬಂಧಿಸಿದ ಜ್ಞಾನ ಕೇವಲ ಸ್ವಲ್ಪವೇ ಹೆಚ್ಚಿತು. ಪ್ರಯೋಗಶಾಲೆಯ ಶಿಸ್ತಿಗೆ ಪ್ರಾಮುಖ್ಯ ಇತರ ವಿಷಯಗಳಲ್ಲಿ ಬರುವುದಕ್ಕಿಂತ ಒಂದು ಶತಮಾನಕ್ಕೆ ಮೊದಲೇ ಈ ವಿಭಾಗದಲ್ಲಿತ್ತು.

**4 (ಡಾರ್ವಿನ್ ಅನಂತರ)– ಜೀವಿಗಳ ಅಂಗರಚನಾವಿಜ್ಞಾನದ ಕಾಲ:** ಹಿಂದೊಮ್ಮೆ ಇದ್ದ ಜೀವಿಯಿಂದಲೇ ಮಿಕ್ಕ ಎಲ್ಲ ಜೀವಿಗಳೂ ಬಂದುವು ಎಂದರೆ ಹಿಂದೆ ಬದುಕಿದ್ದ ಪ್ರಾಣಿಜಾತಿಪ್ರಭೇದಗಳಿಂದಲೇ ಇಂದಿನ ಪ್ರಾಣಿಜಾತಿಪ್ರಭೇದಗಳು ಹುಟ್ಟಿದುವೆಂದು ಡಾರ್ವಿನ್ (1859) ಹೇಳುವಲ್ಲಿ ಜೀವಿಗಳ ಏಕತೆ ಸ್ಪಷ್ಟವಾಗಿದೆ. ಇದು ಅವನ ಆರಿಜಿನ್ ಆಫ್ ಸ್ಪೀಷೀಸ್ (ಜೀವಿಪ್ರಭೇದಗಳ ಉಗಮ) ಪುಸ್ತಕದ ಮುಖ್ಯಾಂಶ. ಒಂದೊಂದು ಜೀವಿಯೂ ಅದರ ಅವತಾರಗಳಲ್ಲಿ ಒಂದಾಗಿರುವುದರಿಂದ, ಎಲ್ಲ ಜೀವಿಗಳೂ ಒಂದಕ್ಕೊಂದರ ಹೋಲಿಕೆಗಳನ್ನು ಪಡೆದಿವೆ. ಮಾನವೇತರ ಪ್ರಾಣಿಗಳ ಆಕಾರ, ರಚನೆ, ವಿಕಾಸ ಸುತ್ತಣ ಸನ್ನಿವೇಶಗಳ ಬದಲಾವಣೆಗಳಿಗೆ ಆಗುವ ಪ್ರತಿಕ್ರಿಯೆಗಳನ್ನು ಪ್ರಯೋಗಾಲಯದಲ್ಲಿ ಅರಿತರೆ ಅದೇ ತಿಳಿವಳಿಕೆ ಮನುಷ್ಯನಿಗೂ ಬಹುಮಟ್ಟಿಗೆ ಅನ್ವಯಿಸಬಹುದು.

ಜೀವಶಾಸ್ತ್ರದ ಚರಿತ್ರೆಯಲ್ಲಿ ಇದೇ ಅತಿದೊಡ್ಡ ಸಾಮಾನ್ಯೀಕರಣ (ಜನರಲೈಸೇಷನ್); ಸಾಮಾನ್ಯ ಮೂಲತತ್ವ ತಿಳಿಯಲು ನೆರವಾಗುವ ಘಟನೆ. ಜೀವಶಾಸ್ತ್ರ ವಿಭಾಗಗಳಲ್ಲೂ ಎಲ್ಲೆಲ್ಲೂ ಕ್ರಾಂತಿ ಎಬ್ಬಿಸಿತು. ಹಿಂದೆಯೇ, ಅರಿಸ್ಟಾಟಲ್ ತೋರಿದ ಜೀವನಸೋಪಾನವೂ ಎಲ್ಲ ಜೀವಿಗಳೂ ಅಂಡಾಣುವಿನಿಂದಲೇ ಆಗುತ್ತವೆಂಬ ಹಾರ್ವೆ ಸೂತ್ರವೂ ಇದೇ ಮೂಲತತ್ವವನ್ನು ಮುನ್ಸೂಚಿಸಿದ್ದುವು. ಪ್ರಾಣಿಗಳ ಸಾದೃಶ್ಯ ನೋಡುವ ಅಂಗರಚನಾಶಾಸ್ತ್ರಜ್ಞರೂ ನಷ್ಟವಂಶಜೀವಿ ಶಾಸ್ತ್ರಜ್ಞರೂ ಇದನ್ನೇ ಸೂಚಿಸುವ ಸಂಗತಿಗಳನ್ನು ಕಲೆಹಾಕಿದ್ದರೂ ಇವನ್ನೆಲ್ಲ ಒಂದುಗೂಡಿಸಿ ಆನುವಂಶಿಕ ಮೂಲತತ್ವ, ಪ್ರಾಣಿಗಳ ಒಳ ಸಂಬಂಧ–ಇವನ್ನು ಕಾಣಲು ಡಾರ್ವಿನ್ನನ ಒಗ್ಗೂಡಿಸುವ ಮಹಾ ಬುದ್ಧಿಶಕ್ತಿಗೆ ಸಾಧ್ಯವಾಯಿತು. ಈ ಕಲ್ಪನೆ, ನಿದರ್ಶನಗಳು ಅಂಗರಚನಾವಿಜ್ಞಾನದ ಸಂಗತಿಗಳನ್ನು ಆಧರಿಸಿದ್ದುವು. ಎಲ್ಲ ಜೀವರಾಶಿಗಳ ರಚನೆಯ ಏಕತೆಯನ್ನು ಜನ ನಿಧಾನವಾಗಿ ತಿಳಿದರಲ್ಲದೆ ಒಪ್ಪುವುದಕ್ಕೆ ಬಹಳ ಕಾಲ ಬೇಕಾಯಿತು.'ವಿಕಾಸ' ಪದವನ್ನು ಡಾರ್ವಿನ್ ಕೂಡ ಬಳಸಲಿಲ್ಲವಂತೆ. ಆದರೆ ಇದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. 19ನೆಯ ಶತಮಾನ ಕೊನೆಗೊಳ್ಳುವ ಮೊದಲೇ ವಿಕಾಸವಾದವನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿದ್ದರು. ಇದರಿಂದ ಮಾನವನ ಅಂಗರಚನಾವಿಜ್ಞಾನ, ಪ್ರಾಣಿ ಗಿಡಮರಗಳ ಅಂಗರಚನಾವಿಜ್ಞಾನಗಳೊಂದಿಗೆ ಕೂಡಿತು. ಅಂಗರಚನಾವಿಜ್ಞಾನದ ಆಧಾರದ ಮೇಲೆ, ಎಲ್ಲ ಜೀವಶಾಸ್ತ್ರಗಳ ಶೋಧನಾರಂಗ ಹರಡಿತು. ಮಾನವನ ಅಂಗರಚನಾವಿಜ್ಞಾನಕ್ಕೆ ಇದರಿಂದ ಒಂದು ಹೊಸ ದೆಸೆ ಸಿಕ್ಕಿತು. ಮಾನವಹೆಣಗಳಿಗೇ ಮಿತಿಗೊಳ್ಳದೆ ಪ್ರಯೋಗಗಳು ಸಾಧ್ಯವಿಲ್ಲದ್ದರಿಂದ, ಒಂದಿಗೇ ಬಾಳುವ ಅಂಥದೇ ಜೀವನ ನಡೆಸುವ ಪ್ರಾಣಿಗಳ ಮೇಲೆ ಪ್ರಯೋಗ ನಡೆಸಲಾಯಿತು. ಸರಳ ರಚನೆಯ ಜೀವಿಗಳು ಕೂಡ ಮಾನವನ ವಿಚಾರಗಳನ್ನು ತಿಳಿಸಿಕೊಟ್ಟಿವೆ. ಉದಾಹರಣೆಗೆ, ಹಣ್ಣುನೊಣಗಳ ಕ್ರೋಮೊಸೋಮ್‌ಗಳ ಅಧ್ಯಯನವೂ ಬಟಾಣಿ ಗಿಡಗಳಲ್ಲಿ ಬೆರಕೆ ಜಾತಿಗಳ ಮೇಲೆ ಯೋಹಾನಿಸ್ ಗ್ರಿಗೊರ್ ಮೆಂಡೆಲ್ ನಡೆಸಿದ ಪ್ರಯೋಗಗಳೂ ಪೀಳಿಗೆಗಳಲ್ಲಿ ಕೆಲವು ಗುಣಗಳು ಸಾಗಿ ಬರುವುದನ್ನು ಚೆನ್ನಾಗಿ ತೋರಿಸಿದುವು. ಮನುಷ್ಯನಲ್ಲಿ ಆರೋಗ್ಯದಲ್ಲೂ ರೋಗದಲ್ಲೂ ವ್ಯತ್ಯಾಸಗೊಳ್ಳುವ ಜೀವರಹಸ್ಯಗಳನ್ನು ತಿಳಿಯಲು ಹಿಂದುಳಿದ ಗುಂಪಿನ ಸಸ್ತನಿಗಳ ಪರಿಶೀಲನೆ ಅನುಕೂಲಿಸಿತು.

ಸಾಮಗ್ರಿ ಹೇರಳವಾಗಿದ್ದು, ಬದುಕಿರುವುದರ ಮೇಲೆ ಪ್ರಯೋಗ ಸಾಧ್ಯವಿರುವ, ಪ್ರಾಣಿಯ ಅಂಗರಚನಾವಿಜ್ಞಾನದ ಇನ್ನೂ ವಿಶಾಲವಾದ, ಇನ್ನೂ ಫಲಭರಿತ ಕ್ಷೇತ್ರಗಳಿಗೆ, ಆಕಾರ ರಚನೆ, ಬೆಳೆವಣಿಗೆ, ವಿಕಾಸಗಳ ಅಂಗರಚನೆಯಲ್ಲಿನ ಶೋಧನೆಗಳು ಕಾಲಿಡುತ್ತಿದ್ದರೂ ವೈದ್ಯಶಾಲೆಗಳಲ್ಲೂ ಪ್ರಾಣಿಶಾಸ್ತ್ರ, ಜೀವಮಾಪನಶಾಸ್ತ್ರ ಮತ್ತಿತರ ಸಂಬಂಧಿಸಿದ ಶಾಸ್ತ್ರಗಳ ಪ್ರಯೋಗಾಲಯಗಳಲ್ಲೂ ಒಟ್ಟಾರೆ ಮಾನವನ ಅಂಗರಚನಾವಿಜ್ಞಾನದ ಕೆಲಸ ಮುಂದುವರಿಯಿತು.

ಹೆಚ್ಚಿನ ತಿಳಿವಳಿಕೆಗಾಗಿ ವೈದ್ಯಶಾಲೆಗಳಲ್ಲಿ ಹೆಣ ಕೊಯ್ದುಬಿಡಿಸಲೇಬೇಕು. ಶತಮಾನಗಳಿಂದಲೂ ಕೊಯ್ದುಬಿಡಿಕೆ ಅಪಾಯಕರವಾಗಿತ್ತು; ಈಗ ಇದು ಅಪಾಯವಿಲ್ಲದೆ, ಚೊಕ್ಕವಾಗಿ ಆಗುತ್ತದೆ. ಸೋಂಕುಗಳ ಕಾರಣಗಳನ್ನು ಲೂಯಿ ಪಾಶ್ಚರ್ ತೋರಿದ ಮೇಲೆ, 1869ರಲ್ಲಿ ಆರಂಭವಾದ ಜೋಸೆಫ್ ಲಿಸ್ಟರನ ನಂಜುರೋಧಕ (ಆಂಟಿಸೆಪ್ಟಿಕ್) ಚಳವಳಿಯ ಅನಂತರ, ನಿರಪಾಯಕರವಾಗಿ, ಕೊಳೆಯದೆ ಇರುವಂತೆ, ಹೆಣಗಳ ರಕ್ತನಾಳಗಳೊಳಕ್ಕೆ ಸಾಮಾನ್ಯವಾಗಿ ಕಾರ್ಬಾಲಿಕ್ ಆಮ್ಲದ ಇಲ್ಲವೇ ಫಾರ್ಮಲಿನ್ನಿನ ದ್ರಾವಣಗಳಂಥ ನಂಜುರೋಧಕಗಳನ್ನು ಚುಚ್ಚಿ ಹೊಗಿಸುವುದು ಜಾರಿಗೆ ಬಂದಿತು. ಮಿಣಿದರ್ಶಕದ ಅಂಗರಚನಾವಿಜ್ಞಾನದ ತಿಳಿವಿನ ಆರ್ಜನೆ ಅಗತ್ಯವಾಗಿ (ದುರದೃಷ್ಟವಶಾತ್) ಇತರ ಪ್ರಯೋಗಾಲಯಗಳಲ್ಲಿ ನಡೆಯುತ್ತಿತ್ತಷ್ಟೆ. ಅದನ್ನು ಹೆಣಗಳ ಕೊಯ್ದುಬಿಡಿಕೆಯಿಂದ ತಿಳಿದುಬಂದ ವಿಚಾರಗಳೊಡನೆಯೂ ಪಾತ ಕೋಣೆಯೊಳಗಿನ ವಿಶೇಷ ತಯಾರಿಕೆಯವುಗಳೊಂದಿಗೂ ಹೋಲಿಸಿ ನೋಡಲಾಯಿತು. ನೀರ್ಗಲ್ಲಾಗಿಸುವುದು, ಅಡ್ಡ ಕೊಯ್ತಗಳೊಂದಿಗೆ ಫಾರ್ಮಲಿನ್ನಿನಲ್ಲಿ ಗಡುಸುಗಟ್ಟಿಸುವುದರಿಂದ ಕೊಯ್ದುಬಿಡಿಸಿದರೂ ಭಾಗಗಳ ಆಕಾರ, ಒಂದಕ್ಕೊಂದರ ಸಂಬಂಧಗಳು ಕೆಡದಿದ್ದುವು. ಹೆಣ ಕೊಯ್ಯುವುದರಿಂದ ಮಿದುಳು ಮತ್ತಿತರೆಲ್ಲ ಒಳಗಿನ ಅಂಗಗಳ ಪರಸ್ಪರ ಸಂಬಂಧ ಮತ್ತು ಅವುಗಳಿಗೂ ಮೇಲ್ಮೈಗೂ ಇರುವ ಸಂಬಂಧಗಳನ್ನು ಹೆಣಗಳಲ್ಲಿ ಕಂಡುಬರುವ ರೀತಿಯಿಂದ ಗುರುತಿಸಲಾಯಿತು. ಆದರೆ ಇವೆಲ್ಲದರಿಂದ ನಿಜವಾದ ಉದ್ದೇಶ ಕೈಗೂಡದೆ ಉಳಿಯಿತು. ಒಟ್ಟಾರೆ ಅಂಗರಚನಾಶಾಸ್ತ್ರದ ಉದ್ದೇಶ ಸುಮ್ಮನೆ ಒಳ ಅಂಗಗಳ ನಕಾಸೆಗಳನ್ನು ಕಳೇಬರದ ಮೈಮೇಲೆ ಗುರುತಿಸುವುದಷ್ಟೇ ಅಲ್ಲ, ಬದುಕಿರುವ ಜೀವಿಯನ್ನು ತಿಳಿಯುವ ದಿಸೆಯಲ್ಲಿ ಅದೊಂದು ಹೆಜ್ಜೆ ಮಾತ್ರ. 20ನೆಯ ಶತಮಾನದಲ್ಲಿ ಹೆಣಗಳ ಪರೀಕ್ಷೆಗಿಂತ ಜೀವಿಯ ಪರೀಕ್ಷೆಯೇ ಮುಖ್ಯವಾಯಿತು. ಪಳೆಯುಳಿಕೆಗಳ, ಮಿಣಿದರ್ಶಕದ ತಯಾರಿಕೆಗಳ, ಸಂಶೋಧನೆ ಹೆಣಗಳ ಪರೀಕ್ಷೆಯೇ ಆಗಿದೆ. ಆದರೆ ಬದುಕಿರುವ ಜೀವಿಗಳ ಪರೀಕ್ಷೆಯಲ್ಲಿ ರಚನೆಯ ಜೊತೆಗೆ ಚಟುವಟಿಕೆಯೂ ಸೇರಿದೆ. ಇದರಲ್ಲಿ ಕಾಲದ ಅಂಶವೂ ಸೇರುವುದು. ಸೂಸುಮಿರುದರ್ಶನದಿಂದ (ಫ್ಲೂರೋಸ್ಕೋಪಿ) ಒಳಗಿನ ಅಂಗಗಳನ್ನು ಕಾಣಬಹುದು. ಕಂಡಿದ್ದನ್ನು ಚಲನಚಿತ್ರಗಳು ಗುರುತಿಸುತ್ತವೆ. ರೇಡಿಯೊ ಚಿತ್ರಗಳಿಂದ (ರೇಡಿಯೋಗ್ರಾಫ್) ಆರೋಗ್ಯ, ಅನಾರೋಗ್ಯಗಳಲ್ಲಿ ಕಾಲಕಾಲಕ್ಕೆ ಆಗುವ ವ್ಯತ್ಯಾಸಗಳನ್ನೂ ತಿಳಿಯಬಹುದು.

ನಾಲ್ಕು ವರ್ಷದ ವೈದ್ಯ ವಿದ್ಯೆಯ ವ್ಯಾಸಂಗದಲ್ಲಿ ಒಟ್ಟಾರೆ ಅಂಗರಚನಾಶಾಸ್ತ್ರಕ್ಕೆ ಹಂಚಿ ಬಂದ ಅಭ್ಯಾಸ ಕಾಲ 20ನೆಯ ಶತಮಾನದಲ್ಲಿ ಬರುಬರುತ್ತ (ನ್ಯಾಯವಾಗೇ) ಕಡಿಮೆ ಆಯಿತು. ಚಿಕಿತ್ಸೆಗೆ ಬೇಕೇಬೇಕಿರುವ ಇತರ ವಿಜ್ಞಾನಗಳು ಅಧಿಕವಾಗಿ ಮತ್ತು ಬೇಗನೆ ಬೆಳೆದುವು. ಇದರಿಂದ ವೈದ್ಯವಿದ್ಯೆಯ ವ್ಯಾಸಂಗದಲ್ಲಿ ಅಂಗರಚನಾಶಾಸ್ತ್ರದ ಪಾಠಗಳಲ್ಲಿ ಒಂದು ತೊಡಕು ಎದ್ದಿತು. ಇದನ್ನು ಬಿಡಿಸುವ ಯತ್ನಗಳು ಮುಖ್ಯವಾಗಿ ಎರಡು ದಿಸೆಗಳಲ್ಲಿ ನಡೆದಿವೆ. ಮೊದಲಾಗಿ, ರೋಗ ಚಿಕಿತ್ಸೆಯಲ್ಲಿ ಈಗ ಬೇಕೇಬೇಕು ಎಂದಿರುವವನ್ನು ಅಗತ್ಯ ವ್ಯಾಸಂಗದಲ್ಲಿ ಒತ್ತಿ ಹೇಳುವುದು. ಎರಡನೆಯದಾಗಿ, ವ್ಯಾಸಂಗದ ಇತರ

ಪಠ್ಯಭಾಗಗಳೊಡನೆ ಇದನ್ನು ಸರಿಹೊಂದಿಸುವುದು. ಈಗಿನ ಪಠ್ಯಪುಸ್ತಕಗಳು ಗಾತ್ರದಿಂದಲೂ ಮಹಾಗ್ರಂಥಗಳು. ಜೆ.ಸಿ.ಬಿ ಗ್ರಾಂಟ್, ಮೆಯ್ನ್‌ಲ್ಯಾಂಡ್ ಮತ್ತಿತರರು ಆದಷ್ಟೂ ಅಡಕವಾದ ಚಿಕ್ಕ ಪುಸ್ತಕಗಳನ್ನು ವೈದ್ಯ ಕಲಿವವರಿಗಾಗಿ ಬರೆದಿದ್ದಾರೆ.

ಹೆಣದ ಕೊಯ್ಯಿಡಿಕೆ ವೈದ್ಯ ವಿದ್ಯೆಯಲ್ಲಿ ಮೂಲವೂ ಬಲು ಮುಖ್ಯವೂ ಆಗಿರಬೇಕಿದ್ದರೂ ಅಂಗರಚನಾವಿಜ್ಞಾನದ ಕೆಲಸದಲ್ಲಿ ಇದರ ಪಾತ್ರ ತೀರ ಕಿರಿದು. ಪರಿಸರದ ಪ್ರಭಾವಗಳಿಗೆ ಜೀವಿಗಳಲ್ಲಾಗುವ ಪ್ರತಿಕ್ರಿಯೆ, ರಚನೆ, ಆಕಾರಗಳೇ ನಿಜವಾದ ವ್ಯಾಸಂಗ. ಜೀವಿಯ ಮೇಲಣ ಪ್ರಭಾವಗಳನ್ನು ಮುಖ್ಯವಾಗಿ ಭೌತಿಕ, ರಾಸಾಯನಿಕ ವಿಜ್ಞಾನಗಳು ತೋರುತ್ತವೆ. ಈ ವಿಜ್ಞಾನಗಳು 20ನೆಯ ಶತಮಾನದ ನಡುವೆ ಎಷ್ಟೊಂದು ಬೆಳೆದಿವೆಯೆಂದರೆ, ಜೀವಿಯ ಹುಟ್ಟುಗುಣವನ್ನೂ ನಮ್ಮ ವಿಶ್ವಕ್ಕೂ ಜೀವಿಗಳಿಗೂ ಇರುವ ಸಂಬಂಧವನ್ನೂ ತಿಳಿಯಲು ನಾವು ಮಾಡುತ್ತಿರುವ ಪ್ರಯತ್ನ ಕೇವಲ ಪ್ರಥಮ ಪಾಠದ್ದಾಗಿ ತೋರುತ್ತದೆ.

ಜೀವಶಾಸ್ತ್ರದಲ್ಲೆಲ್ಲ ಹೊಸ ಮನೋಧರ್ಮ ಇದೆ. ಒಟ್ಟಾರೆ ಮಾನವ ಅಂಗರಚನಾವಿಜ್ಞಾನದಲ್ಲಿನ ಶೋಧನೆ ಬಹುಮಟ್ಟಿಗೆ ಮುಗಿದಂತಿದೆ. ಹಿಪ್ಪೊಕ್ರೆಟೀಸನಿಂದ ಹಿಡಿದು ಎಡಿನ್‌ಬರೊ ಅಂಗರಚನಾವಿಜ್ಞಾನ ಪ್ರಾಧ್ಯಾಪಕ ಡಿ.ಜೆ.ಕನಿಂಗ್‌ಹ್ಯಾಮ್‌ನ (19ನೆಯ ಶತಮಾನದಲ್ಲಿ ಈತ ರಚಿಸಿದ ಕೈಪಿಡಿ ಇನ್ನೂ ಬಳಕೆಯಲ್ಲಿದೆ) ತನಕ ಕಂಡುಬಂದಿರುವ ನಿಜಸಂಗತಿಗಳೆಲ್ಲ ಆಧಾರಗ್ರಂಥಗಳಲ್ಲಿವೆ. ಈಗ ನಮಗೆ ಎಲ್ಲ ಗೊತ್ತಿದೆ. ಇಲ್ಲವೆ ಪೂರ್ತಿ ತಿಳಿಯುವ ದಾರಿಯಲ್ಲಿ ಇರುವೆವು ಎಂಬ ಧೋರಣೆ ಸಾಮಾನ್ಯವಾದರೂ ಇದು ವಿಜ್ಞಾನದ ಎಲ್ಲ ಯುಗಗಳಲ್ಲೂ ಕೆಡುಕಿನದೇ ಆಗಿದೆ. ಅಂಗರಚನಾವಿಜ್ಞಾನದ ಕಾರ್ಯಕಲಾಪಗಳು ಈಗ ಹೊಸ ದಾರಿಗಳಲ್ಲಿ ನಡೆಯುತ್ತಿವೆ. ಹಳೆಯ ವಿಧಾನಗಳೂ ಹಳೆಯ ಸರಳ ಸಲಕರಣೆಗಳೂ ಈಗ ಏನೇನೂ ಸಾಲವು. ಹಳೆಯ ಕಾಲದ ಹೆಣ ಕೊಯ್ಯಿಡಿಸುವ ಕೊಠಡಿಗಳ, ಪಾಠ ಹೇಳುವ ಕೋಣೆಗಳ ಜೊತೆಗೆ ಈಗ ವಿಶ್ವವಿದ್ಯಾನಿಲಯಗಳ ಪ್ರಯೋಗಾಲಯಗಳೂ ಸೇರಿವೆ. ಇಲ್ಲಿ ಎಲ್ಲ ಬಗೆಯ ಪ್ರಾಣಿಗಳ ಮೇಲೂ ಅನೇಕ ತಂತ್ರಗಳಿಂದ ಅಧ್ಯಯನ ನಡೆಯುತ್ತಿದೆ. ಹಲವಾರು ವಿಭಾಗಗಳಲ್ಲಿ ಶೋಧನೆಗಾಗಿ ಜಾಗವನ್ನೂ ಸಲಕರಣೆಗಳನ್ನೂ ಇನ್ನೂ ಹಿರಿಯ ವಿಶ್ವವಿದ್ಯಾನಿಲಯದ ಇಲಾಖೆಗಳೂ ಅಂಗರಚನಾಶಾಸ್ತ್ರದ ಸಂಸ್ಥೆಗಳೂ ಒದಗಿಸುತ್ತಿವೆ; ಮಿಣಿದರ್ಶಕದ ಅಂಗರಚನಾಶಾಸ್ತ್ರದಲ್ಲಿ, ವಿದ್ಯುದಂಶಮಿಣಿದರ್ಶಕ (ಎಲೆಕ್ಟ್ರಾನ್ ಮೈಕ್ರೊಸ್ಕೋಪ್); ಜೀವಕಣಶಾಸ್ತ್ರಕ್ಕೆ (ಸೈಟೋಲಜಿ) ಬೇಕಾಗುವ ಅತಿವೇಗದ ಗಿರಿಗಿರಿಕೆಗಳು (ಸೆಂಟ್ರಿಫ್ಯೂಜ್‌ಗಳು), ದ್ರವರೂಪದ ಗಾಳಿಯಲ್ಲಿ ಸರಕ್ಕನೆ ನೀರ್ಗಲ್ಲಂತೆ ಗಡಸಾಗಿಸಲೂ ಅಂಗಾಂಶಗಳ ಅಲ್ಲದೆ ಜೀವಕಣಗಳ ಕಿರೀಕಿರಿಯ ವಿಭಾಗಗಳ ವಿಕಿರಣತೆಗೂ ಬೇಕಾಗುವ ಉಪಕರಣಗಳು; ಅಂಗಾಂಶದ ಕೃಷಿ (ಟಿಷ್ಯೂ ಕಲ್ಚರ್); ಪಿಂಡಶಾಸ್ತ್ರದಲ್ಲಿ, ಸುಲಭವಾಗಿ ದೊರೆಯದ ಬೆಲೆಯುಳ್ಳ ಬೇರೆಬೇರೆ ವಯಸ್ಸಿನ ಮಾನವ ಪಿಂಡಗಳನ್ನು ಜೋಪಾನಿಸಿಡುವ ಭದ್ರ ಪೆಟ್ಟಿಗೆಗಳು, ಅಲ್ಲದೆ ಚೋದನಿಕಗಳು ಮತ್ತಿತರ ರಾಸಾಯನಿಕಗಳಿಂದ ಪ್ರಯೋಗಗಳಿಗಾಗಿ ಮಾಡಿಕೊಂಡಿರುವ ಅನುಕೂಲಗಳು, ಸೂಸುಮಿರುದರ್ಶನ (ಕ್ಷ–ಕಿರಣಗಳನ್ನೂ ತೀರಿದ ನೀಲಿಕಿರಣಗಳನ್ನೂ ಸೂಸುಮಿರುಗಿಸುವ ಸಾಧನ); ನರಮಂಡಲಶಾಸ್ತ್ರ (ನ್ಯೂರಾಲಜಿ); ಜಲಚರ, ಭೂಚರ ಪ್ರಾಣಿಗಳನ್ನು ಪ್ರಯೋಗಗಳಿಗಾಗಿ ಸಾಕುವ ಕೊಳಗಳು, ಕೋಣೆಗಳು; ಕ್ರಿಮಿಗಳು ಒಳಸೇರದಂತಿರುವ ಸಲಕರಣೆಗಳಿರುವ ಶಸ್ತ್ರಕ್ರಿಯಾಮಂದಿರಗಳು– ಇವೆಲ್ಲ ವಿಭಾಗಗಳಲ್ಲಿನ ಚಟುವಟಿಕೆಗಳು ಆಕಾರ, ರಚನೆ, ವಂಶಾನುಗತ ಗುಣರೀತಿಗಳು, ಬೆಳವಣಿಗೆಗಳ ಮೇಲೆ ಬೆಳಕು ಚೆಲ್ಲುತ್ತಿವೆ.

**ಪಾರಿಭಾಷಿಕ ನಾಮಾನುಕ್ರಮ**

ಎಲ್ಲ ದೇಶಗಳಲ್ಲೂ ಮೈಭಾಗಗಳಿಗೆ ಸರಿಯಾದ ಒಂದೇ ತೆರನ ಹೆಸರುಗಳನ್ನು ಕೊಡುವುದು ಕಷ್ಟ. ಏಕೆಂದರೆ ಅಂಗರಚನಾಶಾಸ್ತ್ರ ಬಹಳ ದೊಡ್ಡದು. ಅಂಗಭಾಗಗಳ ಅಂಕಿಯೂ ಅಷ್ಟೇ ಹಿರಿದು. ಅಲ್ಲದೆ, ಅಂಗರಚನಾಶಾಸ್ತ್ರಜ್ಞರ ವ್ಯಕ್ತಿತ್ವವೂ ನುಡಿಗಳೂ ಬೇರೆಬೇರೆ. 1895ರಲ್ಲಿ ಒಟ್ಟಾರೆ ಅಂಗರಚನಾಶಾಸ್ತ್ರ ವಿಭಾಗದಲ್ಲಿ ಸ್ಪಷ್ಟತೆ, ಒಕ್ಕಟ್ಟುಗಳು ಸದ್ಯಕ್ಕೆ ಬಂದುವು. 1920 ರಿಂದ ಬೇರೆಬೇರೆ ದೇಶಗಳಲ್ಲಿ ಅಂಗರಚನಾ ಶಾಸ್ತ್ರದ ಪಾರಿಭಾಷಿಕ ನಾಮಾನುಕ್ರಮದಲ್ಲಿ (ನಾಮೆನ್‌ಕ್ಲೇಚರ್)ಹೊಂದಾಣಿಕೆ ತಗ್ಗುತ್ತಿದೆ.

ಅಂಗರಚನೆಯ ಪರಿಶೋಧನೆ ಇಂಡೊ–ಯುರೋಪಿಯನ್ ಭಾಷೆಗಳಾಡುವ ಜನರಲ್ಲಿ ಹೆಚ್ಚು. ಇವರ ಹಿಂದಿನವರು ಬಹುಕಾಲದ ಹಿಂದೆ ಒಂದೇ ಬುಡಕಟ್ಟಿಗೆ ಸೇರಿದ್ದು, ಒಂದೇ ಪುರಾತನ ಭಾಷೆ ಬಳಸುತ್ತಿದ್ದರಂತೆ. ಬರವಣಿಗೆ ಬಳಕೆಗೆ ಬರುವ ಹೊತ್ತಿಗೆ ಈ ಬುಡಕಟ್ಟಿನವರು ಚದರಿದರು. ಇವರ ಪ್ರಾಚೀನ ಲಿಪಿಯ ಬರೆಹಗಳಿಂದ ಭಾಷಾಶಾಸ್ತ್ರಜ್ಞರು ಹಳೆಗಾಲದ, ಲಿಪಿಯಿಲ್ಲದೆ ಮಾರ್ಪಟ್ಟ ಆ ಮೂಲಭಾಷೆಯ ಪದಗಳನ್ನು ಊಹಿಸಿ ಮರುಜೋಡಿಸಿದ್ದಾರೆ.

ಕಾರ್ಲ್ ಡಿ ಬುಕ್ ರಚಿಸಿದ (1949) ಮುಖ್ಯ ಇಂಡೊ–ಯುರೋಪಿಯನ್ ಭಾಷೆಗಳ ಆರಿಸಿದ ಸಮಶಬ್ದಗಳ ನಿಘಂಟಿನಲ್ಲಿ ಅಂಥ ಪದಗಳು ಅನೇಕ ಇವೆ. ಅಂಗರಚನಾಶಾಸ್ತ್ರಸಂಬಂಧದ ಕೆಲವನ್ನು ಆರಿಸಿ ಇಲ್ಲಿ ಕೊಟ್ಟಿದೆ: esen (ಅಸೃಕ್, ರಕ್ತ); ost (ಅಸ್ಥಿ, ಎಲುಬು), ok (ಅಕ್ಷಿ, ಕಣ್ಣು); bhru (ಭ್ರೂ, ಹುಬ್ಬು); aus (ಕಿವಿ); nas (ನಾಸಿಕ, ಮೂಗು);os (ಆಸನ, ಬಾಯಿ); dnghwa (ಜಿಹ್ವಾ, ನಾಲಗೆ); dont (ದಂತ, ಹಲ್ಲು); gel (ಗಂಟಲು); genu (ಜಾನು, ಮಂಡಿ, ಗದ್ದ); omesos (ಅಂಸ, ಹೆಗಲು, ತೋಳ್ಮೂಳೆ); armos (ತೋಳು); el (ಮೊಳಕೈ); deig (ಬೆರಳು); kerd (ಗುಂಡಿಗೆ); ped (ಪಾದ, ಅಡಿ); onogh (ನಖ, ಉಗುರು)–ಇವೆಲ್ಲ ಅಂಗರಚನಾವಿಜ್ಞಾನದ ನಾಮಾನುಕ್ರಮದ ಮೂಲಪದಗಳು.

ಶಸ್ತ್ರವೈದ್ಯರೂ ವೈದ್ಯರೂ ಹುಟ್ಟಿಕೊಂಡಾಗ ಅಂಗರಚನೆಯ ಹೆಸರುಗಳಲ್ಲಿ ಬಲು ಆಸಕ್ತರಾಗಿದ್ದರು. ಹಿಪ್ಪೊಕ್ರೆಟೀಸ್ ಸ್ಥಾಪಿಸಿದ ಕೋವ ಪಂಥದ (ಪ್ರ.ಶ.ಪೂ 500–400) ಗ್ರೀಕ್ ವೈದ್ಯರು ಈಗಲೂ ಬಳಕೆಯಲ್ಲಿರುವ ಕೆಲವು ಹೆಸರುಗಳನ್ನಿತ್ತರು. raphe (ಹೊಲಿಗೆ), symphysis (ಕೂಡೇಣು), arthron (ಕೀಲು), diarthrosis (ಚರಗೀಲುವೆ) synarthrosis (ಕೀಲ್ಗೂಡಿಕೆ), brachium (ತೋಳು), olecranon (ಮೊಣಕೊನೆ), cubition (ಮೊಣಕೈ), colon (ಹೆಗ್ಗರುಳು), aorta (ಮಹಾಧಮನಿ)–ಈ ಪದಗಳು ಅರಿಸ್ಟಾಟಲ್ ಕೊಟ್ಟುವು. ಇದೇ aorta ಪದವನ್ನು ಹಿಪ್ಪೊಕ್ರೆಟೀಸ್ ಉಸಿರ್ನಾಳಕ್ಕೆ ಹೇಳಿದ್ದ, duodenum (ದುರಾರ್ಗರುಳು) ಎಂದರೆ ಹನ್ನೆರಡು ಬೆರಳಗಲದ ಅಂಗ, choroid (ಕಣ್ಣರಾಯು), calamus, scriptorius (ಬರೆವ ಜೊನ್ನಾಳಿಕೆ)–ಈ ಪದಗಳು ಅಲೆಗ್ಸಾಂಡ್ರಿಯ ಮತದಿಂದ (ಪ್ರ.ಶ.ಪೂ 300–250) ಬಂದವು. ಗ್ರೀಕರ ಪೂರ್ವಜರಾದ ಕ್ರೀಟನ್ (ಮಿನೋಅನ್) ಜನರು ಬಳಸುತ್ತಿದ್ದ ತಾವರೆ ಎಲೆಯಂತಿದ್ದ ಗುರಾಣಿಯ ಕಲ್ಪನೆಯನ್ನು ಗ್ರೀಕರು thyroid (ಗುರಾಣಿಕ) ಗ್ರಂಥಿಯ ಹೆಸರಿಗೆ ಅಳವಡಿಸಿಕೊಂಡರು.

ಗ್ರೀಸ್, ಈಜಿಪ್ಟ್‌ಗಳಲ್ಲಿ ಪ್ರ.ಶ.ಪೂ.250ರ ಅನಂತರ ಯುದ್ಧಗಳೂ ರಾಜಕೀಯಗಳೂ ಅಂಗರಚನಾ ಶಾಸ್ತ್ರದ ಮುಂದಿನ ಬೆಳೆವಣಿಗೆಯನ್ನು ಬಹುವಾಗಿ ತಡೆದುವು. ಪ್ರ.ಶ.ವ. 30ರ ಹೊತ್ತಿಗೆ ರೋಮ್ ಪ್ರಬಲ ರಾಷ್ಟ್ರವಾಗಿ ಬಂದಾಗ ಔಲಸ್ ಕಾರ್ನೀಲಿಯಸ್ ಸೆಲ್ಸಸ್ ಒಂದು ವಿಶ್ವಕೋಶ ಸಂಗ್ರಹಿಸಿದ. ಅದರ ಅಂಗರಚನಾ ಶಾಸ್ತ್ರ ವಿಭಾಗ ಹಿಂದಿನ 3 ಶತಕಗಳಲ್ಲಿ ಅಲ್ಲಷ್ಟು ಇಲ್ಲಷ್ಟು ಆದ ಕೆಲಸದ ಫಲಗಳನ್ನು ಕೂಡಹಾಕಿ, ಸೊಗಸಾದ ಲ್ಯಾಟಿನ್ ನುಡಿಯಲ್ಲಿ ತಿಳಿಸುತ್ತದೆ. ಅದರಿಂದ ಬಂದ ಇಂದಿನ ಹೆಸರುಗಳಿವು: abdomen (ಉದರ, ಒಡಲು), anus (ಆಸನ, ಗುದ), cartilage (ಮೆಲ್ಲೆಲುಬು), humerus (ತೋಳ್ಮೂಳೆ), occiput (ಹಿಂದಲೆ), patella (ಮಂಡಿಚಿಪ್ಪು), radius (ಆರೆಲುಬು), scrotum (ಬೀಜಚೀಲ, ತರುಡುಚೀಲ), tibia (ಕಣಕಾಲೆ), uterus (ಗರ್ಭಕೋಶ), ventriculus (ಜಠರ, ಅನ್ನಕೋಶ), vertebra (ಬೆನ್ನೆಲುಬು)–ಹೀಗೆ ಇನ್ನೂ ಇವೆ.

ರೋಮಿನ ಅಂಗರಚನಾಶಾಸ್ತ್ರಜ್ಞರಲ್ಲಿ ಉತ್ತಮನಾಗಿದ್ದವ, ಚಕ್ರವರ್ತಿಯ ವೈದ್ಯ ಗ್ಯಾಲೆನ್. ಇವನು ಕೊಟ್ಟ ಹೆಸರುಗಳಲ್ಲಿ ಅಚ್ಚುಕಟ್ಟಿಲ್ಲ. ಅವುಗಳಲ್ಲಿ ಯದ್ವಾತದ್ವವಾಗಿ ಗಲಿಬಿಲಿ ಹಿಡಿಸುವಂಥವೇ ಹೆಚ್ಚು. ಒಂದೇ ಅಂಗಭಾಗಕ್ಕೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟು, ಅವುಗಳಲ್ಲಿ ಅನೇಕವನ್ನು ಗುರುತಿಸಲು ಅಂಕಿಗಳನ್ನು ಬಳಸಲಾಗಿದೆ. ಹೀಗೆಲ್ಲ ಆಗಾಗ್ಗೆ ಇವನು ಎಚ್ಚರಗೇಡಿಯಾಗಿದ್ದರೂ ಅವನಿಟ್ಟ ಹೆಸರುಗಳಲ್ಲಿ ಹಲವಾರು ಈಗಲೂ ರೂಢಿಯಲ್ಲಿವೆ: anastomosis (ಅಡ್ಡಗೂಡಣೆ), carotid (ತಲೆಗೊರಳ), epididymus (ತರುಡ ಮೇಲ್ನಾಳ), glottis (ದನಿಗುಂಡಿ, ದನಿತಂತು), hyaloid (ಗಾಜಂದ), meconium (ಮೊದಲಿಸಿ), pancreas (ಮಾಂಸಲಿ), peritoneum (ಹೊರಬಿಗಿಪೊರೆ), psoas (ಟೊಂಕಣ), ureter (ಮೂತ್ರಕನಾಳ), zygoma (ನೂಗೆಲುಬು)–ಬಹುಮಟ್ಟಿಗೆ ಇವು ಗ್ರೀಕ್ ಮೂಲದವು.

ಗಾಲೆನ್ನನ ಸಮಕಾಲೀನ ಜೂಲಿಯಸ್ ಪೊಲಕ್ಸ್ (139–192) ಪದಲಕ್ಷಣಗಳು, ವಿವರಣೆ, ಅವತರಣಗಳಿರುವ ಒಂದು ಶಬ್ದಕೋಶವನ್ನು ಬರೆದ. amnion (ಉಲ್ಬ), antihelix (ಕಿವಿಯಾಲೆ), atlas (ಊರೆಲು, ಎಲುಮೇರು), axis (ಅಚ್ಚೆಲುಬು), clitoris (ಹೆಂಬುಲ್ಲಿ), cricoid (ಉಂಗುರಂದ), epistropheus (ತಿರುಗಣಿಕ), gastrocnemius (ಕಾಲ್ಕಂಡ), tragus (ಆಡುಳ್ಳಿ), trochanter (ತಿರುಗಾಲಿ) – ಇವೆಲ್ಲ ಅವನ ಪದಗಳು.

ಗ್ಯಾಲೆನ್ನನ ಅನಂತರ ಒದಗಿದ ಸಾವಿರ ವರ್ಷಗಳಿಗೂ ಮಿಗಿಲಾದ ಕುರುಡುಗಾಲದಲ್ಲಿ ಅರಬ್ಬಿ, ಹೀಬ್ರೂ ಅನುವಾದಗಳಲ್ಲಿ ಮಾತ್ರ ಹಳೆಯ ತಿಳಿವಳಿಕೆ ಉಳಿದಿತ್ತು. ಗ್ರೀಕ್ ಮೂಲಗ್ರಂಥಗಳು ಕಳೆದುಹೋಗದಿದ್ದರೂ ವಿದ್ಯೆಗಳ ಪುನರುದ್ಧಾರ ಕಾಲದ ತನಕ ಯಾರಿಗೂ ಅವು ಸಿಗಲೂ ಇಲ್ಲ, ಅಚ್ಚಾಗಲೂ ಇಲ್ಲ. 13ನೆಯ ಶತಕದಲ್ಲಿ ಅಚ್ಚುಹಾಕುವುದು ರೂಢಿಗೆ ಬಂದಮೇಲೆ ಮುದ್ರಿತ ಪುಸ್ತಕಗಳು ಹೊರಬಂದು ಜನಜಾಗೃತಿಗೆ ನೆರವಾದುವು. ಆ ಕಾಳಯುಗಗಳಲ್ಲಿ ವೈದ್ಯವಿದ್ಯೆ, ಅಂಗರಚನಾ ಶಾಸ್ತ್ರಗಳಲ್ಲಿ ಅರಬ್ಬಿ ಪದಗಳೇ ಉಳಿದಿದ್ದುವು. ಯೆಹೂದಿ ಅನುವಾದಕರು ಹೀಬ್ರೂ ಹೆಸರುಗಳನ್ನು ಬಳಸಿದರು. ತನ್ನ ಮೊದಲನೆಯ ಪ್ರಕಟಣೆಯಲ್ಲಿ ವೆಸೇಲಿಯಸ್ ಕೆಲವು ಅರಬ್ಬಿ, ಹೀಬ್ರೂ ಹೆಸರುಗಳನ್ನೂ ಹೀಬ್ರೂ ಅಕ್ಷರಗಳನ್ನೂ ಬಳಸಿದ್ದ; ಇಂದಿನ ನಾಮಾನುಕ್ರಮದಲ್ಲಿ ಕೆಲವು ಅರಬ್ಬಿ ಪದಗಳು ಈಗಲೂ ಉಳಿದಿವೆ; nucha (ಹೆಗ್ಗತ್ತು, ಕುಂಕೆ), basilic (ತಳಾಳದ), cephalic (ಕಪಾಲದ, ತಲೆಯ), duramater (ದರಕುಪೊರೆ), pia mater (ಎಳಸುಪೊರೆ), saphena (ಅವಿತಿಗ), Atlas (ಎಲುಮೇರು), alveolus (ಹಲ್ಗೂಡು, ಗಾಳಿಗೂಡು), choana

(ಸಾಗಾಲಕಿ), mitral (ಸೀಸಕದ) –ಈ ಪದಗಳು ವೆಸೇಲಿಯಸ್ ಕೊಟ್ಟವು. ಪ್ಯಾರಿಸ್ಸಿನ ಸಿಲ್ವಿಯಸ್ಸನಿಂದ corpus callosum (ಅಡ್ಡಸೇರ ದಿಂಡು), ಅಲ್ಲದೆ ಸ್ನಾಯುಗಳ, ರಕ್ತನಾಳಗಳ ಹಲವಾರು ಹೆಸರುಗಳು ಬಂದವು. ತಿಯೊಫ್ರಾಸ್ಟಸ್ ಪ್ಯಾರಸೆಲ್ಸಸ್ಸನ (1493–1541) ವಿಚಿತ್ರ ವ್ಯಸನಮಯ ಮನದಿಂದ synovia (ಕೀಲೋಳು) ಹುಟ್ಟಿತು.

ಅಚ್ಚುಹಾಕುವುದು ಬಂದಮೇಲೆ ಅಂಗರಚನಾಶಾಸ್ತ್ರದ ಹೆಸರುಗಳ ಬಳಕೆ ಹರಡಿಕೊಂಡಿತು. ಆದರೆ ಒಬ್ಬ ಬಳಸಿದ್ದನ್ನು ಇನ್ನೊಬ್ಬ ಬಳಸುತ್ತಿರಲಿಲ್ಲ. ಅಂಗರಚನಾಶಾಸ್ತ್ರದ ಪ್ರಯೋಗಾಲಯಗಳಲ್ಲಿನ ಆಸಕ್ತ ಚಟುವಟಿಕೆಗಳಿಂದ ತಿಳಿವಳಿಕೆ ಬಹುವಾಗಿ ಹೆಚ್ಚಿ ಹೆಸರುಗಳು ಮತ್ತಷ್ಟು ಹೆಚ್ಚಿದುವು. ಒಬ್ಬೊಬ್ಬ ಬರೆಹಗಾರನೂ ತನ್ನದೇ ಆದ ವಿಶೇಷ ರೀತಿಯಲ್ಲಿ ಸಾಮಾನ್ಯವಾಗಿ ಲ್ಯಾಟಿನ್ ಅಚ್ಚಿನಲ್ಲಿ ನಾಮಾನುಕ್ರಮಗಳನ್ನು ಬಳಸುತ್ತಿದ್ದುದರಿಂದ, ಸುಮಾರು ಅರೆಲಕ್ಷ ಪದಗಳು ರಾಶಿಗೂಡಿದವು. ಕೆಲವು ಸಸ್ಯಶಾಸ್ತ್ರದಿಂದ ಬಂದುವು; ಬಾದಾಮಿ (amygdala ಮೆಂಡಿಕೆ), ಜೀವದ ಮರ (arbor vitae ಮರಗವಲು, ಮರಮಡಿಕೆ), ಆಡು (tragus ಆಡುಳ್ಳಿ), ಮೇಕೆ (hircus ಕೊಂಕುಳ್ಗೂದಲು), ಸಮುದ್ರ ಕುದುರೆ (hippocampus ಕಡಲ್ಗಟ್ಟು)–ಇವು ಪ್ರಾಣಿಶಾಸ್ತ್ರದಿಂದ ಬಂದುವು. ಹಲವು ಪದಗಳು ಮೂಲಾರ್ಥವನ್ನು ಬಿಟ್ಟು ತೀರ ಬೇರೆಯಾಗಿ ಬಳಕೆಯಲ್ಲಿವೆ: ಸ್ನಾಯುವಿಗೆ musculus (ಸಣ್ಣ ಇಲಿ), ಧಮನಿಗೆ arteria (ಗಾಳಿಧಾರಕ), ನರಕ್ಕೆ nervus (ಬಿಲ್ಲಿನ ನಾಣು), ಪಾವನಿಗೆ sacrum (ಪಾವನ), ಕಿರುಗ್ರಂಥಿಗೆ glandula (ಕಿರುಓಕ್ಕಾಯಿ) ಇತ್ಯಾದಿ.

ಸ್ನಾಯುಗಳಿಗೂ ಚಿಟ್ಟಿಲಿಗಳಿಗೂ ಇರುವ ಸಂಬಂಧದಿಂದ ಸ್ನಾಯುವಿನ ಹೆಸರು (muscle) ಬಂದಿರಬಹುದು. ಶಿಲಾಯುಗದ ಯಾರೋ ಒಬ್ಬ ಬೇಟೆಗಾರ ಕೊಂದ ಪ್ರಾಣಿಯ ಚರ್ಮ ಸುಲಿಯುತ್ತಿರುವಾಗ ಕೈ ತಿವಿದುದರಿಂದ ಕೆಲವು ಉದ್ದನೆಯ ಸ್ನಾಯುಗಳಲ್ಲಿ ಎದ್ದ ಕುಗ್ಗಿತದ ಅಲೆಗಳನ್ನು ನೋಡಿ, ಒಳಗೆ ಸಣ್ಣ ಇಲಿಗಳಿವೆ ಎಂದು ಶಂಕಿಸಿರಬಹುದು. ಇದನ್ನೇ ಇನ್ನೊಬ್ಬ ಚಿಕ್ಕ ಹಲ್ಲಿ ಎಂದ. ಇಟಲಿಯ ಬಿಸಿಲು ಬೀಳುವ ಗೋಡೆಗಳ ಮೇಲೆ ಹೊಳೆದಾಡುವ ಚಿಕ್ಕ ಹಲ್ಲಿಗೆ lacertus ಹೆಸರಿದೆ. ಸ್ನಾಯುವಿಗೆ ಇದೂ ಒಂದು ಹೆಸರು. ಈಗಲೂ ಇತ್ತಲೆಗ (ಬೈಸೆಪ್ಸ್) ಸ್ನಾಯುವಿನ ಒಂದು ಭಾಗಕ್ಕೆ lacertus ಎಂದಿದೆ. ಸತ್ತವರು ಪಾವನಮೂಳೆಯ ಸುತ್ತ ಅಣುಗೂಡಿಕೊಂಡು ಬದುಕುವರು ಎನ್ನುವ ರಬ್ಬಿನಿಯ ಧಾರ್ಮಿಕ ಸಾಹಿತ್ಯದ ಮಹತ್ವದಿಂದ ಪಾವನ, ಮಹಾ ಎಂಬರ್ಥ ಬರುವಂತೆ ಗ್ರೀಕ್ ಪದದ ಹೆಸರಾಗಿ sacrum ಬಂದಿರಬೇಕು.

ಬಳಕೆಯಲ್ಲಿರುವ ಹೆಸರುಗಳ ಉದ್ದನೆಯ ಪಟ್ಟಿಯಲ್ಲಿ ದಂತಕಥೆ, ಮತ, ಬಂಡುಮಾತು, ತಮಾಷೆ ಎಲ್ಲವೂ ಸೇರಿವೆ. ಗ್ರೀಕ್ ಪುರಾಣದ ಅಮಾನ್‌ನಿಂದ cornuammonis (ಜ್ಯೂಪಿಟರನ ಕೋಡು), tendo achilles (ಅಕಿಲಸನ ಕಂಡರ), iris (ಕಾಮನಬಿಲ್ಲು, ಕನೀನಿಕೆ, ಪಾಪೆಪೊರೆ), hymen (ಮದುವೆ ದೇವತೆ, ಯೋನಿಪೊರೆ), mons veneris (ರತಿಯ ದಿಮ್ಮು) ಬಂದಿದೆ. ಕ್ರಿಸ್ತಮತದ ಪುರಾಣದಲ್ಲಿ, morsus diaboli (ದೆವ್ವದ ಕಡಿತ, ಗರ್ಭನಾಳ ತುದಿ), pomum Adami (ಆದಮನ ಸೇವು, ಗಂಟಲಮಣಿ), musculus religiosus (ಭಕ್ತಿಪರವಶತೆಯಿಂದ ಎಂಬಂತೆ ಕಣ್ಣನ್ನು ಕೆಳಗೆ ತಿರುಗಿಸುವ ಸ್ನಾಯು), lyra davidus (ದೇವಿಡ್ಡನ ಕಿನ್ನರಿಯಂಥ ಮಿದುಳಿನ ಭಾಗ), psalterium (ಕಿನ್ನರಿಯಂಥ ಮಿದುಳಿನ ಭಾಗ) ಇವೆ. ಬಂಡುಮಾತುಗಳಲ್ಲಿ, ನರಮಂಡಲದ ಕಷ್ಟತರವಾದ ವ್ಯಾಸಂಗ ಎಳೆಯರಿಗೆ ಸ್ವಾರಸ್ಯ ಹುಟ್ಟಿಸಲೂ ನೆನಪಿಗಾಗೂ ಮಿದುಳಿನ ಕೆಲವು ಭಾಗಗಳಿಗೆ mamillary (ಮೊಲೆಯಂಥ), nates (ಪಿರ್ರೆಗಳು) ಇತ್ಯಾದಿ ಹೆಸರುಗಳು ಬಂದುವೆಂದು ಇಟಲಿಯ ಒಬ್ಬ ಅಂಗರಚನಾಶಾಸ್ತ್ರಜ್ಞ ಬರೆದಿದ್ದಾನೆ. ಹಾಸ್ಯ ಶಬ್ದಗಳಲ್ಲಿ, ಇತ್ತ ಬಾರೆಂದು ಕಣ್ಣುಹೊರಳಿಸುವ ಸ್ನಾಯು musculus amatorius, ಮುತ್ತಿಡುವ ಸ್ನಾಯು, musculus osculatorius, ದೀನತೆ ತೋರುವಂತೆ ಕಣ್ಣನ್ನು ಕೆಳಮುಖಮಾಡಿಸುವ ಸ್ನಾಯು, musculus humilis. ಗಮನಿಸುವಾಗ ಕಿವಿಯನ್ನು ನೆಟ್ಟಗೆ ಮಾಡಿಸುವ (ಕುದುರೆ) ಸ್ನಾಯು, musculus attentionis, ನಿದ್ದೆಗಾಗಿ ಕಣ್ಣು ಮುಚ್ಚಿಸುವ ಸ್ನಾಯು musculus dormitator ಇವೆಲ್ಲಾ ಇವೆ.

**ಕುತೂಹಲಕರ ಹೆಸರುಗಳ ಮೂಲ:** ಮೂಳೆಗಳು: ಮೊದಲಿಗೆ astragalus (ಬೆನ್ಮೂಳೆ), talus (taxillus) (ಕುದುರೆ ಕಾಲಿನ ಹರಡಿನ ಮೂಳೆ)– ಈ ಮೂಳೆಗಳಿಂದ ರೋಮಿನ ಯೋಧರು ಪಗಡೆಯ ದಾಳಗಳನ್ನು ತಯಾರಿಸುತ್ತಿದ್ದರು. ಹೀಗೆ astragalus ಗೆ ಹೀನಾರ್ಥ ಬಂದು ಬೆನ್ಮೂಳೆಯಾಗಿದ್ದುದು ಜಾರಿ ಹರಡೆಲುಬಿನ ಅರ್ಥ ಪಡೆಯಿತು. ಕೋಗಿಲೆಯ ಕೊಕ್ಕಿನಂತಿರುವುದನ್ನು ಕೊಕ್ಸಿಕ್ಸ್ (ಕೋಕೆಲು) ಮೂಳೆ ಸೂಚಿಸುತ್ತದೆ. ಕಾಗೆಯ ಕೊಕ್ಕಿನಂತೆ (korone) ಇರುವುದರಿಂದ coronoid (ಕೊಕ್ಕಂದ) ಆಯಿತು. ಬಿಲ್ಲಿನ ತುದಿಯಲ್ಲಿ ಹುರಿಯನ್ನು ಹಿಡಿದು ಕಟ್ಟುವ ಕೊಕ್ಕಿಗೂ ಗ್ರೀಕರು ಇದೇ ಹೆಸರಿಟ್ಟಿದ್ದರು.

**ಸ್ನಾಯುಗಳು:** ಹಡಗಿನ ಕಂಬ ಹತ್ತಲು ನಾವಿಕನಿಗೆ ನೆರವಾಗುವ ಸ್ನಾಯು musculus naviticus (ನಾವಿಕನ ಸ್ನಾಯು); ಗಾಳಿಪಟ ಇಲ್ಲವೇ ಕ್ರೈಸ್ತ ಜೋಗಿಯ ಕುಂಚಿಯನ್ನು ಹೋಲುವ, ಬೆನ್ನಿನಲ್ಲಿರುವ ಎರಡು ಸ್ನಾಯುಗಳಲ್ಲೊಂದು musculus cucullaris; ಚಿಪ್ಪಿಗ (sartor) ಬೆಂಚಿನ ಮೇಲೆ ಕತ್ತರಿಯಂತೆ ಕಾಲುಗಳನ್ನಿರಿಸಿ ಕೂರಲು ನೆರವಾಗುವ ಸ್ನಾಯು (sartorius).

ಒಳಾಂಗಗಳು – ಬಾಯಿ (stoma) ಪದದಿಂದ ಜಠರ (stomach) ಆಗಿದೆ. ಪ್ರಾಣಿಗಳ ಕರುಳುಗಳಿಂದ ಬಿಲ್ಲಿನ ಹುರಿಯನ್ನು ಮಾಡುತ್ತಿದ್ದುದರಿಂದ, ಗ್ರೀಕರು ಕರುಳುಗಳನ್ನು chorde (ಹುರಿ) ಎನ್ನುತ್ತಿದ್ದರು. ಇದರಿಂದಲೇ spinal cord (ಬೆನ್ನುಹುರಿ), notochord (ಬೆಂಬೀವು), spermatic cord (ರೇತು ನಾಳ) ಆದುವು. ಈಗಲೂ ಒಳಾಂಗಗಳ ಹೊಲಿಗೆಗೆ ಶಸ್ತ್ರವೈದ್ಯ ಬಳಸುವ ಪ್ರಾಣಿ ಕರುಳಿಂದಾದ ಹುರಿಗೆ catgut (ಬೀವು) ಎಂದಿದೆ. ಕೊಂಕಾಗಿ ಮುರಿಗೆಯಾಗಿರುವ ಸಣ್ಣಕರುಳಿನ ಕೊನೆಯ ಭಾಗ ileum (ಮುರಿಗರುಳು) ಆಗಿದೆ.

ಬೈಬಲ್ಲಿನಲ್ಲಿ ಕರುಣೆಯ ಕರುಳುಗಳು ಎಂದಿದೆ. ನಮ್ಮ ಮನೋಭಾವವನ್ನು ತೋರಿಸಲು ಅನುವಾಗುವ ಸ್ನಾಯುಗಳೆಲ್ಲ ಗಂಟಲುಕುಳಿ ಭಾಗದ ಆಹಾರನಾಳದಿಂದಾದುವು. ನಮ್ಮ ಮನಸ್ಸು ಮೊಗಚರ್ಯೆಗಳಿಗೂ ಒಳಾಂಗಗಳಿಗೂ ನಾವು ತಿಳಿದಿರುವುದಕ್ಕಿಂತಲೂ ನಾವು ಒಪ್ಪುವುದಕ್ಕಿಂತಲೂ ಹೆಚ್ಚು ನೇರದ ಸಂಬಂಧವಿದೆ. pancreas (pan creas ಎಲ್ಲ ಮಾಂಸ; ಮಾಂಸಲಿ)ಗೆ ಸಿಹಿ ರೊಟ್ಟಿ (sweet bread) ಎಂಬ ಇಂಗ್ಲಿಷ್ ಹೆಸರೂ ಉಂಟು. ಮೇದೋಜೀರಕವೆಂದಿದ್ದ ಈ ಗ್ರಂಥಿಯಲ್ಲಿ ಕೂಡಿಸುವ ಅಂಗಾಂಶ ಅಷ್ಟಾಗಿ ಇಲ್ಲದ್ದರಿಂದ ತಿನ್ನುವವರಿಗೆ ಅದು ಮೆತುವಾಗಿ ಚೆನ್ನಾಗಿರುವುದು.

ರಕ್ತನಾಳಗಳು–ಇಂದಿನ ಧಮನಿ (artery) ಹಿಂದೆ ಗಾಳಿಧಾರಕ ಆಗಿತ್ತು. ಸತ್ತಮೇಲೆ ರಕ್ತವೆಲ್ಲ ಸಿರಗಳಲ್ಲಿ (veins) ತುಂಬಿರುವುದರಿಂದ, ಧಮನಿಗಳು ಮುದುರದೆ ಗಾಳಿ ತುಂಬಿರುವುದರಿಂದ ಧಮನಿಗಳಿಗೆ ಮೊದಲು ಆ ಹೆಸರಾಯಿತು. ಇದರಂತೆ, ಉಸಿರ್ನಾಳಕ್ಕೆ arteria tracheia (ಒರಟು ಗಾಳಿಕೊಳವೆ) ಎಂದು ಹೆಸರಿಟ್ಟವನು ಹಿಪ್ಪೊಕ್ರೆಟೀಸ್. ಅದೇ ಈಗ ಕೇವಲ trachea (ಒರಟು; ಉಸಿರ್ನಾಳ) ಆಗಿ ಉಳಿದಿದೆ. ಈಗಲಾದರೂ ಗಾಳಿಯನ್ನು ನಿಜವಾಗೂ ಸಾಗಿಸುವ ಒಂದೇ ಒಂದು ಗಾಳಿಕೊಳವೆಯನ್ನು artery ಎನ್ನದೆ ಹಾಗೆ ಗಾಳಿ ಸಾಗಿಸದಿರುವ ಎಲ್ಲ ಕೊಳವೆಗಳಿಗೂ ಆ ಹೆಸರೇ ಉಳಿದಿದೆ. ಕತ್ತಿನಲ್ಲಿರುವ ದೊಡ್ಡ ಧಮನಿಯನ್ನು ಒತ್ತಿ ಹಿಡಿವುದರಿಂದ ರೋಗಿಗೆ ಮತ್ತು ಬರುತ್ತಿತ್ತು. ಅಂಥ ನಾಳಗಳಿಗೆ ಗ್ಯಾಲೆನ್ carotid (ತಲೆಗೊರಳ) ಎಂದು ಹೆಸರಿಟ್ಟ. ಇದೇ ತೆರನಾಗಿ ಇವನ್ನು ನಿದ್ದೆ ಬರಿಸುವವೆಂದು ತಿಳಿದು ವೆಸೇಲಿಯಸ್ arteria somnifera (ನಿದ್ದೆಕಾರಕ ಧಮನಿಗಳು) ಎಂದು ಹೆಸರಿಟ್ಟ. ಹಾಗೆ vena cava (ಸಿರ ಕೊಳ್ಳ) ಎನ್ನುವುದನ್ನು ಬರಿದಾದ ಸಿರ ಎನ್ನುವುದು ತಪ್ಪು. ಇದು ಗ್ಯಾಲೆನ್ನನ ಅನುವಾದ. ಗ್ಯಾಲೆನ್ನನ ಅರ್ಥದಲ್ಲಿ koilos ಎಂದರೆ ಬರಿದು. ಆದರೆ ಇದಕ್ಕೆ ಒಳಾಂಗದ ಪೊಳ್ಳೆಂದೂ ಅರ್ಥವಿದೆ. ಇದರಂತೆ upper koilos (ಎದೆಗೂಡು), lower koilos (ಒಡಲು) ಎನ್ನುತ್ತಿದ್ದರು. ಈ ಪದಗಳಿಂದ ಎದೆಗೂಡಿನ ದೊಡ್ಡ ಸಿರಕ್ಕೆ Superior Vena Cava (ಮೇಲಿನ ಸಿರಕೊಳ್ಳ) ಎಂದೂ ಹೊಟ್ಟೆಯದಕ್ಕೆ Inferior Vena Cava (ಕೆಳಗಿನ ಸಿರಕೊಳ್ಳ) ಎಂತಲೂ ಗ್ಯಾಲೆನ್ ಹೆಸರಿಟ್ಟ.

Basilic (ತಳಾಳದ), cephalic (ಕಪಾಲದ, ತಲೆಯ) ಪದಗಳು ಅರಬ್ಬರಿಂದ ಬಂದುವು. Al-basilik ಅಂದರೆ ಮೈಯ ನಡುಗಡೆಯದು ಎಂತಲೂ al-kifal ಎಂದರೆ ಪಕ್ಕದ್ದೆಂದೂ ಅರ್ಥ, ಅರಬ್ಬಿಯಲ್ಲಿ, ಕ್ರೆಮೋನದ ಜೆರಾರ್ಡ್ ಸಂನ್ಯಾಸಿ ಇವನ್ನು ಲ್ಯಾಟಿನ್ನಿಗಿಳಿಸುವಾಗ basilik ಅಂದರೆ ರಾಜನ, ಆಳುವ ಎಂಬರ್ಥ ಕೊಟ್ಟ. ಇದರಿಂದ ಮಧ್ಯಕಾಲದ ವೈದ್ಯರು ಎಡ basilik ಸಿರ ತೊರಳೆ (ಪ್ಲೀಹ)ಯದರ, ಬಲಗಡೆಯದು ಈಲಿಯದರ (ಲಿವರ್) ಎಡಬಲಗಳ cephalic ಸಿರಗಳು ಕಪಾಲದ ನಿಜಗೆಲಸಗಳಿಗಾಗಿ ಪೋಷಿಸುತ್ತವೆ ಎಂದುಕೊಂಡರು. ರಕ್ತ ಹೆಚ್ಚಿದರೆ ರೋಗವೆಂಬ ತಪ್ಪುನಂಬಿಕೆಯಿಂದ ರೋಗವಿರುವ ಆಯಾ ಭಾಗಗಳ ಈ ಮೇಲಿನ ಸಿರಗಳಿಂದ ರಕ್ತವನ್ನು ರೋಗಿಗಳಲ್ಲಿ ತೆಗೆದು ಹಾಕುತ್ತಿದ್ದರು. ಈ ಗೊಂದಲಗಳೆಲ್ಲ ಪದಗಳನ್ನು ಅರಬ್ಬಿಯಿಂದ ತಪ್ಪಾಗಿ ಲ್ಯಾಟಿನ್ನಿಗೆ ತಂದುದರ ಫಲ. Ana stoma (ಬಾಯಿಂದ ಬಾಯಿಗೆ)ಗಳಿಂದ anastomosis (ಅಡ್ಡಗೂಡಣೆ) ಪದ ಹುಟ್ಟಿದರೂ ಇದನ್ನೇ ಮುತ್ತಿಕ್ಕುವುದು ಎಂದು ತಪ್ಪು ತಿಳಿದಿದ್ದುದೂ ಉಂಟು. ರಕ್ತನಾಳದಿಂದ ರಕ್ತ ತೆಗೆಯಲು ತೂತು ಮಾಡುವುದಕ್ಕೂ ಇರಾಸಿಸ್ಟ್ರೇಟಸ್ ಇದೇ ಪದ ಬಳಸುತ್ತಿದ್ದ.

ನರಗಳು – ಗ್ರೀಕಿನ neuron ಪದದ ರೂಪಾಂತರವಾಗಿ nervus (ನರ) ಲ್ಯಾಟಿನ್ ಪದವಿದೆ. ಇದರ ಹಳೆಯ ಅರ್ಥ ಬಿಲ್ಲಿನ ಹುರಿ ಎಂದಿತ್ತು. ಹಿಪಾಕ್ರೆಟೀಸ್ ಮತ್ತಿತರರು ಹುಚ್ಚುಹುಚ್ಚಾಗಿ ದಾರಗಳಂತಿರುವ, ನರ, ಕಂಡರ, ಸ್ನಾಯು, ಕೊನೆಗೆ ಸಾಗುನಾಳಗಳನ್ನೂ ಇದೇ ಹೆಸರಿನಿಂದ ಕರೆದರು.

**ದೇಸೀ ಭಾಷೆಗಳ ಬಳಕೆ :** ಸಾಧಾರಣವಾಗಿ ಅಂಗರಚನಾಶಾಸ್ತ್ರದ ಹೆಸರುಗಳೆಲ್ಲ ಲ್ಯಾಟಿನ್ನಿನಲ್ಲಿವೆ. ರೋಗಗಳ ಹೆಸರುಗಳು ಗ್ರೀಕಿನವು; ಲ್ಯಾಟಿನ್ನಿನ pulmon (ಪುಪ್ಪುಸ)ನಿಂದ ಅದರ ರೋಗ pneumonia (ಪುಪ್ಪುಸುರಿತ)ಕ್ಕೆ ಗ್ರೀಕ್ ಹೆಸರು; ಹೀಗೆ ಲ್ಯಾಟಿನ್ನಿನ musculus ನ (ಸ್ನಾಯು) ರೋಗ ಗ್ರೀಕಿನ myositis (ಸ್ನಾಯುರಿತ) ಆಯಿತು. ಈ ಸೂತ್ರಕ್ಕೆ ಅಪವಾದವೇ ಇಲ್ಲವೆನ್ನಬಹುದು. ಯುರೋಪಿನ ಎಲ್ಲ ದೇಶಗಳಲ್ಲೂ ವೈದ್ಯವಿಜ್ಞಾನದ ಭಾಷೆಯಾಗಿ ಲ್ಯಾಟಿನ್ನೇ ಎಷ್ಟುಕಾಲ ಜಾರಿಯಲ್ಲಿ ಇತ್ತೆನ್ನುವುದಂತೂ ಸೋಜಿಗವೇ.

ಹಾರ್ವೆ, ತಾಮಸ್, ವಿಲ್ಲಸ್, ತಾಮಸ್ ಸಿಡೆನ್‌ಹ್ಯಾಂ ಎಲ್ಲರೂ ಲ್ಯಾಟಿನ್ನಿನಲ್ಲೇ ಬರೆದರು. ಆದರೆ 1770ರಲ್ಲಿ ವಿಲಿಯಂ ಹಂಟರ್ ಅಚ್ಚುಮಾಡಿಸಿದ ಚಿತ್ರಪಟಗಳ ಪುಸ್ತಕದಲ್ಲಿ ಲ್ಯಾಟಿನ್, ಇಂಗ್ಲಿಷ್ ವರಸೆಗಳು ಎರಡೂ ಅಕ್ಕಪಕ್ಕದಲ್ಲಿದ್ದುವು. ಸುಮಾರು 1800ರ ಹೊತ್ತಿಗೆ ಯೂರೋಪಿನ ದೇಸೀ ಭಾಷೆಗಳಿಗೆ ಲ್ಯಾಟಿನ್ ಜಾಗಬಿಟ್ಟುಕೊಡಲು ಆರಂಭಿಸಿತು. ವಿಯನ್ನದಲ್ಲಿ ಮಾತ್ರ 1859ರ ವರೆಗೂ ಕೆಲವು ವೈದ್ಯ ಪಾಠಗಳು ಲ್ಯಾಟಿನ್ನಿನಲ್ಲೇ ನಡೆಯುತ್ತಿದ್ದುವು.

**ಅಂಗರಚನಾವಿಜ್ಞಾನದ ನಾಮಾನುಕ್ರಮದ ಸುಧಾರಣೆ :** 19ನೆಯ ಶತಕದ ಕೊನೆಕೊನೆಗೆ ಅಗಾಧ ಪ್ರಮಾಣದಲ್ಲಿ ಬೆಳೆದ ಹೆಸರುಗಳಿಂದಾದ ಗಲಿಬಿಲಿ ತಡೆಯಲಾರದಂತಾಯಿತು. ಕೆಲವೇಳೆ ವೈದ್ಯಶಬ್ದಕೋಶಗಳಲ್ಲಿ ಒಂದೇ ಪದಕ್ಕೆ 20 ಸಮಪದಗಳು ಇರುತ್ತಿದ್ದುವು. ಬೇರೆಬೇರೆ ದೇಶಗಳಲ್ಲಿ ಶಾಲೆಗಳಲ್ಲಿ ಬೇರೆಬೇರೆ ಅರ್ಥವಿರುವ 50,000ಕ್ಕೂ ಮಿಗಿಲಾಗಿ ಹೆಸರುಗಳು ಯುರೋಪಿನಲ್ಲೂ ಅಮೆರಿಕದಲ್ಲೂ ಇದ್ದುವು. ಕಲಿವವರಿಗೆ ಇದರಿಂದ ಗಲಿಬಿಲಿಯಾಯಿತು, ಮುದ್ರಣಕ್ಕೂ ತೊಡಕಾಯಿತು. ಅಂಗರಚನಾವಿಜ್ಞಾನದಲ್ಲೇ ಅಲ್ಲದೆ ಎಲ್ಲ ವೈದ್ಯವಿಜ್ಞಾನಗಳಲ್ಲೂ ಶೋಧನೆಗಳ ಫಲಗಳ ತಿಳಿವಳಿಕೆ ಹರಡಲು ಅಡ್ಡಿ ಆಯಿತು.

ಜರ್ಮನ್ ಭಾಷೆಯ ಹೆಸರುಗಳು ವಾಕ್ಯದಷ್ಟು ಉದ್ದುದ್ದವಾಗಿರುತ್ತವೆ. wurmfortsatzentzundung ಹುಳುವಿನಂತಿರುವ ಅಂಗದ ಉರಿತ (appendicites- ಕರುಳವಾಳುರಿತ); zwolffingerdarmgeschwur ಹನ್ನೆರಡು ಬೆರಳುಗಳ ಉದ್ದವಿರುವ ಕರುಳಿನ ಹುಣ್ಣು (duodenal ulcer ದುರಾರ್ಗರುಳ ಹುಣ್ಣು). 1887 ರಲ್ಲಿ ಜರ್ಮನಿಯ ಅಂಗರಚನಾವಿಜ್ಞಾನದ ಸಂಘ ಇಂಥ ಹೆಸರುಗಳನ್ನು ಸುಧಾರಿಸುವ ಕೆಲಸಕ್ಕಿಳಿಯಿತು. 1889ರಲ್ಲಿ ನೇಮಕವಾದ ನಿಯೋಗ 6 ವರ್ಷಗಳ ಕಾಲ ಬಿಡುವಿಲ್ಲದೆ ದುಡಿಯಿತು. ಇತರ ದೇಶಗಳ ಅಂಗರಚನಾವಿಜ್ಞಾನ ಪಟುಗಳ ನೆರವನ್ನೂ ಕೋರಿತು. ಜರ್ಮನಿಯಲ್ಲಿ ಹೀಗೆ ತಯಾರಾದ ಪಟ್ಟಿಯನ್ನು ಬ್ರಿಟಿಷರ ಬಳಕೆಗೆ ಹೊಂದಿಸಲು, ಗ್ರೇಟ್ ಬ್ರಿಟನ್ನಿನ ಅಂಗರಚನಾವಿಜ್ಞಾನದ ಸಂಘ ಒಂದು ವಿಶೇಷ ನಿಯೋಗವನ್ನು ನೇಮಿಸಿತು (1893). ಅಮೆರಿಕದ ಅಂಗರಚನಾಶಾಸ್ತ್ರಜ್ಞರ ಇದೇ ತೆರನ ಒಂದು ಸಮಿತಿ ಇದನ್ನು ಪರಿಶೀಲಿಸಿ ಒಂದು ಪಟ್ಟಿ ತಯಾರಿಸಿತು (1890).

ವಿಜ್ಞಾನಿಗಳ ಹೆಸರುಗಳನ್ನು ಅಂಗಗಳ ರಚನಾಭಾಗಗಳಿಗೆ ಇಡುವುದರಲ್ಲಿ ಒಮ್ಮತವಿರಲಿಲ್ಲ. ಇದರಿಂದ ಚರಿತ್ರೆಯ ನಿಟ್ಟಿನಿಂದ ಅನ್ಯಾಯಕ್ಕೆ ಎಡೆಯಾಗುತ್ತದೆಂಬ ಶಂಕೆಯಿದೆ. ಹೀಗೇ ಇಬ್ಬರು ಸಿಲ್ವಿಯಸ್‌ರಲ್ಲಿ ಒಬ್ಬ ಹುಟ್ಟುವ ಎಷ್ಟೋ ಮೊದಲೇ ಸಿಲ್ವಿಯಸ್‌ನ ನೀರ್ನಾಳದ (aquaduct of sylvius) ಹೆಸರಿತ್ತು; ವಿಲ್ಲಿಸ್ಸನ ಸುತ್ತನ್ನು (circle of Willis) ಕೆಸ್ಸೇರಿಯಸ್ ವಿವರಿಸಿದ್ದ; ಅದೇ ತಾಮಸ್ ವಿಲ್ಲಿಸ್ಸಿಗಾಗಿ ಎಡ್ಮಂಡ್ ಕಿಂಗ್ ಅದನ್ನು ಕೊಯ್ದಿಡಿಸಿದ್ದ; ವಿಶ್ವಾಸ ಗೌರವಗಳೊಂದಿಗೆ ಭಾಷೆಯಲ್ಲಿ ಬಲವಾಗಿ ನೆಲೆಗೊಳಿಸಿರುವಂಥ 103 ಶಾಸ್ತ್ರಜ್ಞರ 146 ಹೆಸರುಗಳನ್ನು ಮಾತ್ರ ಉಳಿಸಿಕೊಳ್ಳಲು ಕೊನೆಯ ತೀರ್ಮಾನವಾಯಿತು.

ಅಂಗಾಂಶ ಮತ್ತು ತುಲನಾತ್ಮಕ ಅಂಗರಚನಾವಿಜ್ಞಾನದ ಹೆಸರುಗಳ ತಿದ್ದುಪಡಿ ಆಗಲಿಲ್ಲ. ಆದರೆ ಪಿಂಡಶಾಸ್ತ್ರದ ಕೆಲವು ಹೆಸರುಗಳನ್ನು ಕೊಡಲಾಯಿತು. ನಿಸರ್ಗದಲ್ಲಿರುವಂತೆ ವರ್ಣಿಸುವಾಗ, ಇರಬೇಕಾದ ಮೈಭಂಗಿಯ (anatomical position) ಮೇಲೆ ಹೆಚ್ಚು ಚರ್ಚೆ ಆಯಿತು. ನಿಂತಿರುವಾಗ ಹಿಂದುಗಡೆ ಇರುವ ಭಾಗಗಳೇ ಅಂಗಾತನಾಗಿ ಮಲಗಿದಾಗ ತಳಗಡೆ ಆಗುವುವು. ಬೋರಲಾದಾಗ ಮೇಲಾಗುವುವು. ಹಿಂದೆ, ಮುಂದೆ, ಮೇಲೆ ಕೆಳಗೆ ಎನ್ನಲು ಎಲ್ಲ ದೇಶಗಳಲ್ಲೂ ಮೈಯ ಒಂದು ಗೊತ್ತಾದ ನಿಲುವನ್ನು ನಿರ್ಧರಿಸಬೇಕಾಯಿತು. ಅಂಗರಚನಾವಿಜ್ಞಾನದ ವರ್ಣನೆಯಲ್ಲಿ ತಕ್ಕನಾದ ಸಂಬಂಧಸೂಚಕ ಅವ್ಯಯಗಳ ಬಳಕೆ ಹೆಚ್ಚು, ಅಷ್ಟೇ ಮುಖ್ಯ. ಮೈ ನೆಟ್ಟಗೆ ನಿಂತು, ಅಂಗೈಗಳು ಮುಂದೆ ತೋರುವಂತೆ, ತೋಳುಗಳು ಮೈ ಪಕ್ಕದಲ್ಲೇ ಇರುವುದು ಮೂಲ ನಿಲುವು ಎಂದು ನಿರ್ಧಾರವಾಯಿತು. ಮುಂದೋಳು, ಕೈಗಳಲ್ಲಿ ಮುಂದೆ ಹಿಂದೆ ಎನ್ನುವ ಬದಲಾಗಿ ಅಂಗೈಯ (volar) ಬೆಂಗಡೆಯ, (dorsal) ಎಂದು, ಹೀಗೇ ಪಾದದಲ್ಲೂ ಮೇಲೆ ಕೆಳಗೆ ಎನ್ನುವುದರ ಬದಲು ಅಂಗಾಲಿನ (plantar), ಬೆಂಗಡೆಯ (dorsal) ಎಂದಾದವು.

ಸ್ವಿಟ್ಜರ್ಲೆಂಡಿನ ಬಾಸೆಲ್ ನಗರದಲ್ಲಿ ನಡೆದ (1895) ಜರ್ಮನ್ ಸಂಘದ ಕೂಟದಲ್ಲಿ ಪೂರ್ಣಗೊಂಡ ಪಟ್ಟಿ ಒಪ್ಪಿಗೆಯಾಗಿ ಅಂಗರಚನಾವಿಜ್ಞಾನದ ಬಾಸೆಲ್ ನಾಮಾನುಕ್ರಮ ಪ್ರಕಟವಾಯಿತು. 50,000 ಹೆಸರುಗಳಿದ್ದುದ್ದನ್ನು ರೂಢಿಯಲ್ಲಿದ್ದವುಗಳಲ್ಲಿ ಉತ್ತಮವಾದ ಯೋಗ್ಯವಾದ 5,528 ಹೆಸರುಗಳಿಗೆ ಇಳಿಸಿತು. ಗ್ರೇಟ್ ಬ್ರಿಟನ್, ಐರ್ಲೆಂಡ್, ಅಮೆರಿಕಗಳಲ್ಲಿ, ಜಪಾನೀ ಜರ್ಮನ್ ಮಾತಾಡುವ ಇತರ ದೇಶಗಳಲ್ಲಿ, ಇದು ಜಾರಿಗೆ ಬಂದಿತು. ಮೊದಲ ಮಹಾಯುದ್ಧದ ಆನಂತರ ಇದಕ್ಕೆ ಜರ್ಮನರ ಪಟ್ಟಿಯೆಂದು ಹೆಸರಿಟ್ಟು ಕೆಲವು ಯುರೋಪ್ ದೇಶಗಳವರು ತಮ್ಮ ಭಾಷೆಗಳ ಹೆಸರುಗಳನ್ನು ಬದಲು ಸೇರಿಸಲು ಯತ್ನಿಸಿದರು. ಆದರೆ ಜರ್ಮನ್ ಅಂಗರಚನಾವಿಜ್ಞಾನದ ಸಂಘ ಅಂಗರಚನಾವಿಜ್ಞಾನದ್ದಾಗಿತ್ತೇ ಹೊರತು ಕೇವಲ ಜರ್ಮನರದಾಗಿರಲಿಲ್ಲ. ಅಲ್ಲದೆ ಆ ಸಂಘದ ಸದಸ್ಯರಾಗಿ 1895ರಲ್ಲೇ 145 ಜರ್ಮನರೂ ಇತರ ಹತ್ತು ದೇಶಗಳ 129 ಜರ್ಮನೇತರರೂ ಇದ್ದರು.

40 ವರ್ಷಗಳ ಅನಂತರ ಕೇವಲ ವೈಜ್ಞಾನಿಕ ಕಾರಣಗಳಿಂದ ಇದನ್ನು ತಿದ್ದಬೇಕಾಯಿತು. ಆ ಹೊತ್ತಿಗೆ ಈ ವಿಭಾಗದ ಕೆಲವು ಭಾಗಗಳು ಬೆಳೆದು ಕೆಲವಂತೂ ರೂಪಾಂತರಿಸಿದ್ದುವು. ಬಾಸೆಲ್ ನಾಮಾನುಕ್ರಮ ಸಾಲದೆ ಬೀಳುವಷ್ಟು ನರಶಾಸ್ತ್ರ (ನ್ಯೂರಾಲಜಿ) ಬಹಳ ಬೆಳೆದಿತ್ತು. ಗ್ರೇಟ್ ಬ್ರಿಟನ್ನಿನ ಅಂಗರಚನಾವಿಜ್ಞಾನದ ಸಂಘ ಬರ್ಮಿಂಗ್ಹ್ಯಾಮಿನಲ್ಲಿ ಸೇರಿ (1933) ಆಂಗ್ಲೀಕರಣ ಮಾಡಿದ ಹೆಸರುಗಳನ್ನೊಳಗೊಂಡ ಬ್ರಿಟಿಷ್ ಪರಿಷ್ಕರಣ ಒಂದನ್ನು ತಯಾರಿಸಿತು. ಮಿಲಾನಿನಲ್ಲಿ ಸೇರಿದ (1936) ಅಂತಾರಾಷ್ಟ್ರೀಯ ಅಂಗರಚನಾಶಾಸ್ತ್ರ ಕೂಟವೊಂದು ಅಂತಾರಾಷ್ಟ್ರೀಯ ಅಂಗರಚನಾವಿಜ್ಞಾನದ ನಾಮಾನುಕ್ರಮ ಸಮಿತಿಯನ್ನು ರಚಿಸಿತು. ಮತ್ತೆ 1939ರಲ್ಲಿ ಲಂಡನ್ನಿನಲ್ಲಿ ಕೂಡಲಿರುವ ಕೂಟದಲ್ಲಿ ಇದರ ವರದಿ ಒಪ್ಪಿಸಬೇಕಿತ್ತು. ಈ ಸಮಿತಿಗೆ ನೆರವಾಗಲು ಅಮೆರಿಕದ ಅಂಗರಚನಾಶಾಸ್ತ್ರಜ್ಞರ ಸಂಘವೂ ಒಂದು ಸಮಿತಿಯನ್ನು ನಿಯಮಿಸಿತು; ಆ ಕೂಟಕ್ಕಾಗಿ ಇದು ಕಳುಹಿಸಿದ 57 ಪುಟಗಳ ವರದಿ, ಸೂಚನೆಗಳು ಪ್ರಕಟವಾಗಲೇ ಇಲ್ಲ; ಬಹುಶಃ ಎರಡನೆಯ ಮಹಾಯುದ್ಧದಲ್ಲಿ ಅದು ಹಾಳಾಗಿರಬೇಕು. 1936–37ರಲ್ಲಿ ಎಲ್ಲಕ್ಕೂ ಮೂಲವಾದ ಜರ್ಮನ್ ಅಂಗರಚನಾಶಾಸ್ತ್ರಜ್ಞರ ಸಂಘ ಜೀನದಲ್ಲಿ ಸೇರಿ ಜೀನ ಅಂಗರಚನಾವಿಜ್ಞಾನದ ನಾಮಾನುಕ್ರಮ ಎಂಬ ಇನ್ನೊಂದು ಪಟ್ಟಿಯನ್ನು ಜಾರಿಗೆ ತಂದಿತ್ತು.

ಯುದ್ಧಗಳ ಬಿಕ್ಕಟ್ಟಿನಿಂದ ಅಂತಾರಾಷ್ಟ್ರೀಯ ಅಂಗರಚನಾಶಾಸ್ತ್ರದ ನಾಮಾನುಕ್ರಮದ ಸಮಿತಿಯ ವರದಿಯನ್ನು ಪರಿಶೀಲಿಸಲು, 1936ರ ಅನಂತರ ಅಂಗರಚನಾಶಾಸ್ತ್ರಜ್ಞರು ಕೂಡಲಾಗಲಿಲ್ಲ. ಇದರಿಂದ ಅಧ್ಯಯನ, ಶೋಧನೆಗಳಿಗೆ ಬೇಕಿದ್ದ, ಅಂತಾರಾಷ್ಟ್ರೀಯ ನಾಮಾನುಕ್ರಮ ಹಾಗೂ ತನ್ಮೂಲಕ ಸಂಶೋಧನಾರಂಗದಲ್ಲಿ ಒದಗಬಹುದಾಗಿದ್ದ ವಿಶ್ವ ಸಹಕಾರಗಳು ದಕ್ಕಲಿಲ್ಲ.

ಆಕ್ಸ್‌ಫರ್ಡಿನಲ್ಲಿ ನಡೆದ (1950)5ನೆಯ ಅಂತಾರಾಷ್ಟ್ರೀಯ ಕೂಟದಲ್ಲಿ, ಅಂತಾರಾಷ್ಟ್ರೀಯ ಅಂಗರಚನಾವಿಜ್ಞಾನದ ನಾಮಾನುಕ್ರಮ ಸಮಿತಿ ನೇಮಕವಾಯಿತು. ಅನೇಕ ದೇಶಗಳ ಪ್ರತಿನಿಧಿಗಳಿದ್ದ ಈ ಸಮಿತಿ ಅಂತಾರಾಷ್ಟ್ರೀಯ ಅಂಗರಚನಾವಿಜ್ಞಾನದ ನಾಮಾನುಕ್ರಮ ತಯಾರಿಸಲು ಮೂಲ ಸೂತ್ರಗಳಾಗಿ ಈ ಕೆಳಗಿನ ಏಳು ನಿಯಮಗಳನ್ನು ಒಪ್ಪಿತು:

1. ಅಪರೂಪವಾದುವನ್ನು ಬಿಟ್ಟು, ಒಂದೊಂದು ರಚನೆಗೂ ಸರಿಯಾದ ಒಂದೇ ಪದವಿರಬೇಕು.

2. ಅಧಿಕೃತ ಪಟ್ಟಿಯಲ್ಲಿ ಪದಗಳು ಲ್ಯಾಟಿನ್ನಿನಲ್ಲಿದ್ದು, ಪಾಠ ಹೇಳಲು ಆಯಾ ದೇಶಗಳವರು ಅಧಿಕೃತ ಲ್ಯಾಟಿನ್ ಪದಗಳನ್ನು ತಮ್ಮ ದೇಸೀನುಡಿಗೆ ಬೇಕಾದರೆ ಅನುವಾದಿಸಿಕೊಳ್ಳಬಹುದು.

3. ಪದಗಳು ಸಾಧ್ಯವಾದ ಮಟ್ಟಿಗೆ ಪುಟ್ಟವಾಗಿ ಸರಳವಾಗಿರಬೇಕು.

4. ಮೊದಲಾಗಿ ಪದಗಳು ಗುಣಲಕ್ಷಣಗಳನ್ನು ನೆನಪಿಸುವ ಚಿಹ್ನೆಗಳಾಗಿರಬೇಕು; ಆದರೂ ತಿಳಿವು, ವಿವರ ಇದ್ದರೆ ಒಳ್ಳೆಯದು.

5. ಸಂಬಂಧಿಸಿದಂತೆ ಒಂದೇ ಜಾಗದಲ್ಲಿರುವ ರಚನೆಗಳಿಗೆಲ್ಲ ಒಂದೇ ತೆರನ ಹೆಸರಿರಬೇಕು; ಗಜ್ಜಲಿನ ಧಮನಿ, ಗಜ್ಜಲಿನ ಸಿರ, ಗಜ್ಜಲಿನ ತಂತುಗಟ್ಟು–ಹೀಗೆ.

6. ವ್ಯತ್ಯಾಸದೋರುವ ಗುಣವಾಚಕಗಳು ಸಾಮಾನ್ಯವಾಗಿ ಎದುರುಬದುರು ಪದಗಳಾಗಿರಬೇಕು; ದೊಡ್ಡ, ಸಣ್ಣ; ಮೇಲ್ಮೈಯ, ಆಳದ; ಹೊರ, ಒಳ; ಮೇಲಿನ, ಕೆಳಗಿನ–ಹೀಗೆ.

7. ಒಟ್ಟಾರೆ ಇಲ್ಲವೆ ಮಿಣಿದರ್ಶಕದ ಅಂಗರಚನಾವಿಜ್ಞಾನದ ಅಧಿಕೃತ ನಾಮಾನುಕ್ರಮದಲ್ಲಿ ವಿಜ್ಞಾನಿಗಳ ಹೆಸರುಗಳನ್ನು ಕೈಬಿಡಬೇಕು.

ಈ ಸಮಿತಿ 1955ರಲ್ಲಿ ಪ್ಯಾರಿಸ್ಸಿನಲ್ಲಿ 6ನೆಯ ಅಂತಾರಾಷ್ಟ್ರೀಯ ಅಂಗರಚನಾಶಾಸ್ತ್ರದ ಕೂಟಕ್ಕೆ ಬಾಸೆಲ್ ನಾಮಾನುಕ್ರಮದ ಒಂದು ಪರಿಷ್ಕರಣವನ್ನು ಅರ್ಪಿಸಿತು. ಇದರಲ್ಲಿ ಬ್ರಿಟಿಷ್ ಪರಿಷ್ಕರಣವೂ ಜೀನ ಪಟ್ಟಿಯಲ್ಲಿ ಇದ್ದ ಅನೇಕ ಪದಗಳನ್ನು ಸೇರಿಸಿತ್ತು. ಕೂಟದಿಂದ ಈ ಪರಿಷ್ಕರಣಕ್ಕೆ ಒಪ್ಪಿಗೆ ದೊರೆತು, ಪ್ಯಾರಿಸ್ಸಿನ ಅಂಗರಚನಾವಿಜ್ಞಾನದ ನಾಮಾನುಕ್ರಮವೆಂದು ಹೆಸರು ಪಡೆಯಿತು. 1960ರಲ್ಲಿ ನ್ಯೂಯಾರ್ಕಿನಲ್ಲಿ ಕೂಡಿದ ಕೂಟ ಕೆಲವು ಹೊಸ ಹೆಸರುಗಳನ್ನು ಸೇರಿಸಿ ಹಳೆಯವನ್ನು ತಿದ್ದಿತು.

**ಅಂಗರಚನಾವಿಜ್ಞಾನದಲ್ಲಿ ಕ್ಷ–ಕಿರಣಗಳ ಬಳಕೆ**

ರೋಗಿಯ ಚಿಕಿತ್ಸೆಯಲ್ಲಿ ಕ್ಷ–ಕಿರಣಗಳ ಬಳಕೆ ಹೆಚ್ಚಾಗಿದ್ದರೂ ಅಂಗರಚನಾಶಾಸ್ತ್ರದಲ್ಲಿ ಹೆಣದ ಕೊಯ್ದಿಡಿಕೆಯೇ ಈಗಲೂ ಮುಂದೂ ಇರುವ, ಇರಲೇಬಹುದಾದ, ದಾರಿ, ಸೂಸುಮಿರುದರ್ಶನವೂ (ಫ್ಲೂರೊಸ್ಕೋಪಿ) ವಿಕಿರಣ ಚಿತ್ರಣವೂ (ರೇಡಿಯೊಗ್ರಫಿ) ಎರಡನೆಯವಾದರೂ ಬೆಲೆಯುಳ್ಳ ಕರಣಗಳು.

ಹೆಣಗಳಿಂದ ತೆಗೆದ ವಸ್ತುಗಳ ಕ್ಷ–ಕಿರಣಚಿತ್ರ ಇಲ್ಲವೇ ವಿಕಿರಣಚಿತ್ರ (ರೇಡಿಯೋಗ್ರಾಫ್) ಗಳಿಂದ ಇತರ ರೀತಿಗಳಲ್ಲಿ ಸಿಗದ ತಿಳಿವು ದೊರೆಯುತ್ತದೆ. ಆದರೆ ಬದುಕಿರುವವರ (ಮನುಷ್ಯ, ಪ್ರಾಣಿ) ಅಂಗರಚನೆ ತಿಳಿಯುವುದರಲ್ಲೇ ಕ್ಷ–ಕಿರಣಗಳಿಂದ ಹೆಚ್ಚು ಪ್ರಯೋಜನ.

ಹಿಮಕ್ಕಿಂತಲೂ ತಣ್ಣಗಾಗಿಸಿ, ಗಡಸುಗಟ್ಟಿಸಿದ, ದೊಡ್ಡದಾಗಿ ದಪ್ಪಗೆ ಕೊಯ್ದ ಹೆಣದ ಹೋಳುಗಳನ್ನು ತಣ್ಣಗಿರುವಂತೆಯೇ ಒಂದೇ ಸಮನೆ ನೀರು ಕಳೆದರೆ ಕ್ಷ–ಕಿರಣ ಚಿತ್ರಗಳಲ್ಲಿ ಸ್ನಾಯುಗಳ ಒಂದೊಂದೂ ಕಂತೆಯ ನಡುವೆ ಗಾಳಿ ಸೇರಿಕೊಳ್ಳುವುದರಿಂದ ತುಸು ಬಿಡಿಯಾಗಿ ಚೆನ್ನಾಗಿ ಎದ್ದು ಕಾಣುತ್ತವೆ. ತೆಳುವಾಗಿ ಉದ್ದುದ್ದವಾಗಿ ಕತ್ತರಿಸಿದ ಉದ್ದನೆಯ ಮೂಳೆಗಳ ಭಾಗಗಳ ವಿಕಿರಣಚಿತ್ರಗಳಲ್ಲಿ, ಬೇರಾವ ಬಗೆಯಿಂದಲೂ ತೋರದಷ್ಟು ರಚನೆಯ ವಿವರಗಳು ಕಾಣುತ್ತವೆ. ಹೆಚ್ಚು ಮಾಂಸವಿದ್ದು ಪಾರದರ್ಶಕವಾಗಿ (ಟ್ರಾನ್ಸ್‌ಪೇರೆಂಟ್) ಮಾಡಲಾಗದ ಅಂಗಭಾಗಗಳಲ್ಲಿನ ಮೂಳೆಗಳು ಬೆಳೆವುದನ್ನು ಕಾಣಲು ವಿಕಿರಣಚಿತ್ರಣವೇ ಆರಿಸಿದ ವಿಧಾನ.

ಮಂಡಿಯಂಥ ಒಂದು ಕೀಲಿನ ಸುತ್ತಲೂ ಇರುವ ದಿಂಚೀಲಗಳು (ಬರ್ಸ) ಇರುವ ಜಾಗಗಳ ಅಳತೆಗಳನ್ನು ಕಂಡುಕೊಳ್ಳಲು ಅವುಗಳೊಳಗೆ ಗಾಳಿ ತುಂಬಿ ವಿಕಿರಣ ಚಿತ್ರಗಳನ್ನು ತೆಗೆವುದೊಂದು ಒಳ್ಳೆಯ ವಿಧಾನ. ಅಂಗಗಳಲ್ಲಿನ ರಕ್ತನಾಳಗಳ ತೀರ ಸಣ್ಣ ಶಾಖೆಗಳನ್ನು ಬಿಡಿಸಿ ನೋಡುವುದು ಕಷ್ಟ. ಇದಕ್ಕೆ ಮೊದಲು ಆ ರಕ್ತನಾಳಗಳಲ್ಲಿ ಜೆಲಟಿನ್,ಗ್ಲಿಸರೀನ್, ಸೀಸದ ಲವಣಗಳ ಮಿಶ್ರಣವನ್ನು ತುಂಬಿದ ಅನಂತರ ಘನದರ್ಶಕ (ಸ್ಟೀರಿಯೋಸ್ಕೋಪಿಕ್) ವಿಕಿರಣಚಿತ್ರಗಳನ್ನು ತೆಗೆದರೆ ಹಾಗೆ ಕೊಯ್ದಿಡಿಸಲು ಸಹಾಯಕ. ಹೆಣದ ಹಾಲುರಸನಾಳಗಳಲ್ಲಿ, ವಿಕಿರಣಚಿತ್ರದಲ್ಲಿ ನೆರಳಾಗಿಸುವ ಪಾದರಸದಂಥ ದ್ರವವನ್ನು ಒಂದು ಗೊತ್ತಾದ ವಿಧಾನದಿಂದ ತುಂಬಿ, ವಿಕಿರಣ ಚಿತ್ರಗಳಲ್ಲಿ ಅವನ್ನು ತೋರಿಸಬಹುದು.

ಬದುಕಿರುವವರಲ್ಲಿ ಅಂಗಗಳಿರುವ ಜಾಗ, ಗಾತ್ರ, ಆಕಾರ, ಆಗುವ ವ್ಯತ್ಯಾಸಗಳನ್ನು ತೋರುವುದು ಅಂಗರಚನಾವಿಜ್ಞಾನದಲ್ಲಿ ಕ್ಷ–ಕಿರಣಗಳ ಮುಖ್ಯ ಪಾತ್ರಗಳಲ್ಲಿ ಒಂದು. ಆಗತಾನೆ ಸತ್ತಿರುವ ಹೆಣದಲ್ಲಿ ಕೂಡ ಅಂಗಗಳ ಈ ಲಕ್ಷಣಗಳು ಬದಲಾಗುತ್ತವೆ. ಕೊಳೆಯದಂತೆ ಮಾಡಲು ರಕ್ತನಾಳಗಳಲ್ಲಿ ನಂಜುರೋಧಕ ದ್ರವಗಳನ್ನು ತುಂಬಿ ಕೊಯ್ದಿಡಿಸಲು ಸಿದ್ಧಮಾಡುವಷ್ಟರಲ್ಲಿ ಜೀವಂತ ಸ್ಥಿತಿಗಿಂತ ಅಂಗಗಳು ಇನ್ನಷ್ಟು ಬದಲಾಗಿರುತ್ತವೆ.

ಅಂಗಕ್ರಿಯೆಗಳ ಪರೀಕ್ಷೆಯಲ್ಲೂ ಕ್ಷ–ಕಿರಣಗಳ ಬಳಕೆ ಅಷ್ಟೇ ಮುಖ್ಯ. ಹಿಂದಿನ ಕಾಲದಲ್ಲಿ ಕ್ರಿಯಾತ್ಮಕ (ಫಂಕ್ಷನಲ್) ಅಂಗರಚನಾವಿಜ್ಞಾನದ ಅಧ್ಯಯನ ಬಹುಮಟ್ಟಿಗೆ ಹೆಣಗಳಲ್ಲಿನ ರಚನೆಗಳ ಸಂಬಂಧಗಳಿಂದಲೂ ಬದುಕಿರುವವರ ಹೊರ ಮೈ ಪರೀಕ್ಷೆಯಿಂದಲೂ ನಡೆಯುತ್ತಿತ್ತು. ಆದರೆ, ಮೈಯಲ್ಲಿನ ನಿಜಗೆಲಸಗಳನ್ನು ಹೆಚ್ಚು ಹೆಚ್ಚಾಗಿ, ಸೂಸುಮಿರುದರ್ಶಕದ ಪರದೆಯ ಮೇಲೋ ಕ್ಷ–ಕಿರಣ ಚಲನಚಿತ್ರಗಳಲ್ಲೋ ನೇರವಾಗಿ ತಿಳಿವುದರಿಂದ, ಹೆಚ್ಚುಹೆಚ್ಚು ಹಳೆಯ ಅನುಮಾನಗಳು ಅಪೂರ್ಣ ಎನ್ನಿಸುತ್ತಿವೆ. ಉಸಿರಾಡುವಾಗ ಎದೆ ಗೋಡೆಯ, ವಪೆಗಳ ಒಂದೊಂದರ ಪಾತ್ರ, ನುಂಗುವುದರ ಯಾಂತ್ರಿಕತೆ, ಗುಂಡಿಗೆಯ ಚಕ್ರದಲ್ಲಿ (ಕಾರ್ಡಿಯಾಕ್ ಸೈಕಲ್) ಗುಂಡಿಗೆಯ ಗಾತ್ರ, ಆಕಾರಗಳ ವ್ಯತ್ಯಾಸಗಳು–ಇವೆಲ್ಲ ಸಮಸ್ಯೆಗಳಲ್ಲೂ ವಿಕಿರಣಶಾಸ್ತ್ರ (ರೇಡಿಯಾಲಜಿ) ತೀರ ನೇರವಾಗಿ ದಾರಿ ತೋರುತ್ತಲಿದೆ. ಹೆಗಲು, ಬೆನ್ನುಮೂಳೆಗಳಂಥ ರಚನೆಗಳಲ್ಲಿನ ಕೀಲುಗಳಲ್ಲಿ ಆಗುವ ವ್ಯತ್ಯಾಸಗಳಿಗೂ ಸ್ನಾಯುಗಳ ನಿಜಗೆಲಸಕ್ಕೂ ಇರುವ ಸಂಬಂಧವನ್ನು ಬಿಡಿದೋರಲೂ ಕ್ಷ–ಕಿರಣಗಳನ್ನು ಬಳಸಬಹುದು.

ಸಂಶೋಧನೆಯ ವಸ್ತುಗಳನ್ನು ಹೆಚ್ಚಿಸಲೂ ಆರಿಸಿಕೊಳ್ಳಲೂ ಅಂಗರಚನಾಶಾಸ್ತ್ರಜ್ಞನಿಗೆ ಕ್ಷ–ಕಿರಣಗಳು ನೆರವಾಗುತ್ತವೆ. ಸಂದರ್ಭ ಎಷ್ಟೇ ಚೆನ್ನಾಗಿದ್ದರೂ ಹೆಣಗಳು ಸಿಕ್ಕುವುದು ಕಷ್ಟ. ಸಿಕ್ಕ ಹೆಣಗಳೂ ಸಾಮಾನ್ಯವಾಗಿ ವಯಸ್ಸಾದ ರೋಗಿಷ್ಟ ಗಂಡಸರವು ಆಗಿರುವುದರಿಂದ, ಸರಿವಯಸ್ಸಿನವರ ವಿಚಾರವೇ ಅಷ್ಟಾಗಿ ತಿಳಿವಿಗೆ ಬರುವುದಿಲ್ಲ. ಆದರೂ ಗರ್ಭದ ಪಿಂಡದಿಂದ ಹಿಡಿದು ಎಲ್ಲ ವಯಸ್ಸುಗಳವರೆಗೆ ಹೆಣ್ಣು ಗಂಡುಗಳ ಕೆಲವು ಅಂಗರಚನಾವಿಚಾರಗಳನ್ನು ವಿಕಿರಣಕ್ರಮದಿಂದ ತಿಳಿಯಲು ಸಾಧ್ಯ.

ಕ್ಷ–ಕಿರಣಗಳಿಂದ ಬೆಳಕಿಗೆ ಬಂದ ಅಂಗರಚನಾ ವಿಷಯಗಳ ಮಾದರಿಗಳಿವು: ಬೆಳೆಯುವ ಅಂಗಗಳ ರೂಪದಲ್ಲಿ ಆಗುವ ವಿಕಾರಗಳು, ಒಬ್ಬೊಬ್ಬರಲ್ಲಿನ ವ್ಯತ್ಯಾಸಗಳು, ಎಲುಗಟ್ಟು (ಸ್ಕೆಲಿಟನ್), ಅಂಗಗಳು, ರಕ್ತನಾಳಗಳ ನಿಜಗೆಲಸ ಅಲ್ಲದೆ ವಯಸ್ಸಿನಿಂದಾಗುವ ಬದಲಾವಣೆಗಳ ಗಣನೆ; ಮೈಕಟ್ಟು, ಬದಲಾಗುವ ಮೈ ವಿನ್ಯಾಸಗಳಿಗೂ ಅಂಗಾಂಗಗಳಿರುವ ಸ್ಥಿತಿಗೂ ಇರುವ ಸಂಬಂಧದ ತಿಳಿವಳಿಕೆ; ಕಿಳ್ಗುಳಿಯ (ಪೆಲ್ವಿಕ್) ಮೂಳೆಗಳು ತೋರುವ ಲಿಂಗಭೇದಗಳೇ ಅಲ್ಲದೆ, ಹೆಂಗಸಿನ ಕಿಳ್ಗುಳಿಯ ರೂಪ, ಅಳತೆಗಳ ವ್ಯತ್ಯಾಸದಿಂದ ಹೆರಿಗೆಯ ಮೇಲಾಗುವ ಪರಿಣಾಮಗಳು. (ಎಂ.ಡಿ)

### ಶ್ರವಣಾತೀತ (ಅಲ್ಟ್ರಾಸೌಂಡ್)

ಶಬ್ದತರಂಗಗಳಲ್ಲಿ ಎರಡು ವಿಧ. ಒಂದು ಕೇಳಿಸುವಂತಹದ್ದು. ಇನ್ನೊಂದು ಕೇಳಿಸಲಾರದಂತಹದ್ದು. 20,000 ಹರ್ಟ್ಜ್ (ಪ್ರತಿಸೆಕೆಂಡಿನ ಆವರ್ತಸಂಖ್ಯೆ) ಕ್ಕಿಂತ ಹೆಚ್ಚಿನ ಶಬ್ದ ತರಂಗಗಳು ಮಾನವನ ಕಿವಿಗೆ ಗ್ರಹಣವಾಗುವುದಿಲ್ಲವಾದುದರಿಂದ ಅವುಗಳಿಗೆ ಶ್ರವಣಾತೀತವೆನ್ನುತ್ತಾರೆ. ಶ್ರವಣಾತೀತ ತರಂಗಗಳನ್ನು ಬಹಳ ಹಿಂದೆಯೇ ಗುರುತಿಸಿದ್ದಾರೆ. 1912ರಲ್ಲಿ ಉತ್ತರ ಅಟ್ಲಾಂಟಿಕ್ ಸಮುದ್ರದಲ್ಲಿ ಮುಳುಗಿದ 'ಟೈಟಾನಿಕ ಹಡಗನ್ನು ಪತ್ತೆ ಹಚ್ಚಲು ಶ್ರವಣಾತೀತ ಪದ್ಧತಿಯಲ್ಲಿ ಮಾಡಿದ ಪ್ರಯತ್ನ ಸಫಲವಾಗಲಿಲ್ಲ. 1980ರ ಎರಡನೇ ಮಹಾಯುದ್ಧದಲ್ಲಿ ಸಮುದ್ರದಾಳದ ಸಬ್ಮರೀನ್‌ಗಳನ್ನು ಹುಡುಕಲು ಶ್ರವಣಾತೀತ ತರಂಗಗಳಿಂ ಸಹಾಯಕವಾಯಿತು. ಶ್ರವಣಾತೀತ ತರಂಗಗಳಿಂದ ಮಾನವದೇಹದ ಒಳಾಂಗಗಳ ಚಿತ್ರವಿನ್ಯಾಸ ಪಡೆದು ವೈದ್ಯಕ್ಷೇತ್ರದಲ್ಲಿ 1960ರಿಂದ ರೋಗ ನಿದಾನ ಮತ್ತು ಚಿಕಿತ್ಸೆಯಲ್ಲಿ ಮಹತ್ವದ ಪಾತ್ರ ಪ್ರಾರಂಭವಾಯಿತು.

ಶರೀರದೊಳಗಿನ ಅಂಗಾಂಗಗಳ ಚಿತ್ರವಿನ್ಯಾಸ ಶ್ರವಣಾತೀತದಿಂದ ಪಡೆಯಲು 1 ರಿಂದ 20 ಮೆಗಾಹರ್ಟ್ಜ್ ಆವರ್ತನ ತರಂಗಗಳನ್ನು ಬಳಸುತ್ತಾರೆ. ಪಿಜೋವಿದ್ಯುತ್ ಹರಳುಗಳಿಂದ ಶ್ರವಣಾತೀತ ತರಂಗಗಳನ್ನು ರಚಿಸಲು ಸಾಧ್ಯವಿದೆ. ವಿದ್ಯುತ್ ತರಂಗದಿಂದಾಗಿ ಪಿಜೋ ಹರಳುಗಳು ತಮ್ಮ ರೂಪ ಬದಲಾಯಿಸಿ ತರಂಗಗಳನ್ನು ನಿರ್ಮಿಸುತ್ತವೆ. ದೇಹದೊಳಾಂಗಗಳಲ್ಲಿರುವ ದ್ರವದ ಮೂಲಕ ಈ ತರಂಗಗಳು ಹಾದುಹೋಗುತ್ತವೆ. ದ್ರವದ ಹಿನ್ನೆಲೆಯಲ್ಲಿ ಅಂಗಾಂಗಗಳ ವಿನ್ಯಾಸವನ್ನು ಕಂಪ್ಯೂಟರ್ ಪರದೆಯ ಮೇಲೆ ಮೂಡಿಸುತ್ತಾರೆ. ಹೃದಯ, ರಕ್ತನಾಳ, ಮೂತ್ರಪಿಂಡ, ಮೂತ್ರನಾಳ, ಮೂತ್ರಕೋಶ, ಗರ್ಭ, ಗರ್ಭದೊಳಗಿನ ಪಿಂಡ, ಯಕೃತ್ತು, ಗುಲ್ಮಗಳ ಅಧ್ಯಯನದಲ್ಲಿ ಶ್ರವಣಾತೀತ ಅತ್ಯಂತ ಸಹಾಯಕಾರಿಯಾಗಿದೆ. ಶ್ರವಣಾತೀತ ತರಂಗಗಳು ಗಾಳಿಯುಮೂಲಕ ಹಾದುಹೋಗುವುದಿಲ್ಲವಾದುದರಿಂದ ಪುಪ್ಪುಸಗಳ ವಿನ್ಯಾಸಪಡೆಯಲು ಆಗುವುದಿಲ್ಲ. ಆದರೆ ಮೊಲೆಗಳೊಳಗಿನದ್ದನ್ನು ಶ್ರವಣಾತೀತದಿಂದ ತಿಳಿದುಕೊಳ್ಳಲು ಸಾಧ್ಯವಾಗಿದೆ. ಶ್ರವಣಾತೀತ ತರಂಗಗಳಿಂದ ಯಾವ ವಿಕರಣತೆಯ ಅಥವಾ ಇನ್ನಾವುದೇ ಅಡ್ಡಪರಿಣಾಮಗಳ ಭಯವಿಲ್ಲ, ಮೂತ್ರಾಂಗದೊಳಗಿರುವ ಹರಳು, ಗರ್ಭದ, ಗರ್ಭಪಿಂಡದ ನ್ಯೂನತೆಗಳು, ಯಕೃತ್ತಿನಲ್ಲಿರುವ ಕೀವು, ಗಂಟು ಹೀಗೆ ಒಳಾಂಗಗಳ ರೋಗ ನಿದಾನದಲ್ಲಿ ಶ್ರವಣಾತೀತ ತರಂಗಗಳು ಮಹತ್ವದ ಪಾತ್ರವಹಿಸುತ್ತಿವೆ. ಇದು ವೈದ್ಯವಿಜ್ಞಾನಕ್ಕೊಂದು ಅನುಪಮವಾದ ಸಾಧನವಾಗಿದೆ.

### ಕಾಂತೀಯ ಅನುರಣನ ಚಿತ್ರ (ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್ )

1952ರಲ್ಲಿ ಬ್ಲೋಲ್ಜ್ ಮತ್ತು ಪುರ್‌ಸೆಲ್‌ರು ಕಾಂತೀಯ ಅನುರಣನ ಗುಣಲಕ್ಷಣಗಳನ್ನು ಕಂಡುಹಿಡಿದದ್ದಕ್ಕಾಗಿ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ಪಡೆದರು. 1977ರಲ್ಲಿ ಮಾನ್ಸ್‌ಫೀಲ್ಡ್ ಮತ್ತು ವಾಟರ್‌ಬರ್ ಈರ್ವರೂ ಕಾಂತೀಯ ಅನುರಣನೆಯಿಂದ ದೇಹದ ಒಳಾಂಗಗಳ, ಮೂಳೆಗಳ, ಎಲ್ಲ ಊತಕಗಳ ಚಿತ್ರ ತೆಗೆಯುವುದನ್ನು ಕಂಡುಹಿಡಿದು 2002ರ ವೈದ್ಯಕೀಯ ಸಂಶೋಧನೆಯ ನೊಬೆಲ್ ಪ್ರಶಸ್ತಿಗೆ ಭಾಜನರಾದರು. ಅತ್ಯಂತ ಶ್ರದ್ಧೆಯಿಂದ ನಿಯಂತ್ರಣಕ್ಕೊಳಪಡಿಸಿದ ಕಾಂತೀಯ ಕ್ಷೇತ್ರದ ಪರಿಸರದಲ್ಲಿ ವಿಕಿರಣ–ಆವರ್ತನೆಯ ವಿಕಿರಣತೆ (ರೇಡಿಯೋ ಫ್ರೀಕ್ವೆನ್ಸಿ ರೇಡಿಯೇಷನ್) ಯಿಂದ ಒಳಾಂಗಗಳ ಸೂಕ್ಷ್ಮತೆ ತಿಳಿಸುವ ಚಿತ್ರಗಳನ್ನು ಯಾವುದೇ ಸಮತಲ (ಪ್ಲೇನ್) ದಲ್ಲಿ ಪಡೆಯಬಹುದು. ದೇಹಕ್ಕೆ ವಿಕಿರಣತೆಯ ಅನಿಷ್ಟ ಭಯವಿಲ್ಲದೆ ಒಳಾಂಗಗಳ ಚಿತ್ರ ಪಡೆಯುವುದು ಕಾಂತೀಯ ಅನುರಣನೆಯ ವಿಶಿಷ್ಟತೆಯಾಗಿದೆ.

ನಮ್ಮ ದೇಹದಲ್ಲಿ ಹೈಡ್ರೋಜನ್ ಅಣುಗಳು ಹೇರಳವಾಗಿವೆ. ಹೈಡ್ರೋಜನ್ ಅಣುಗಳು ಕಾಂತೀಯ ಅನುರಣನೆಯ ಚಿತ್ರ ತೆಗೆಯುವಾಗ ಸಣ್ಣ ಸಣ್ಣ ಆಯಸ್ಕಾಂತದಂತೆ ವರ್ತಿಸುತ್ತವೆ. 0.2 ರಿಂದ 2 ತೇತ್ಸಾ ಯಂತ್ರಗಳನ್ನು ಒಳಾಂಗಗಳ ಚಿತ್ರ ಪಡೆಯಲು ಉಪಯೋಗಿಸುತ್ತಾರೆ. ನೇರ, ಮಗ್ಗುಲ, ವಕ್ರ ಹೀಗೆ ಯಾವುದೇ ಸಮತಲದ ಚಿತ್ರಗಳನ್ನು ಯಾವುದೇ ನಿರ್ದಿಷ್ಟ ಆಳದಲ್ಲಿ ಪಡೆಯಬಹುದು. ಮಿದುಳಿನೊಳಗಣ ಅತೀ ಸಣ್ಣ ಅಳಿಗೊಳಪ (ಇನ್‌ಫ್ರಾಕ್ಟ್) ಬೆನ್ನು ಮೂಳೆ, ಮೂಳೆಗಳ ನಡುವಿನ ತಟ್ಟೆ, ಬೆನ್ನುಹುರಿ, ನರಗಳ, ಹೃದಯದ ಒಳಾಂಗಗಳ ಸ್ಪಷ್ಟ ಚಿತ್ರ ಎಂ.ಆರ್.ಐದಿಂದ ಪಡೆಯಬಹುದು. ಎಕ್ಸ್‌ರೇ ಚಿತ್ರದಲ್ಲಾಗಲಿ, ಸಿ.ಟಿ. ಸ್ಕ್ಯಾನ್ ಚಿತ್ರದಲ್ಲಾಗಲಿ, ಶ್ರವಣಾತೀತದಿಂದಾಗಲಿ ಕಂಡುಹಿಡಿಯಲು ಸಾಧ್ಯವಾಗದುದನ್ನು ಕಾಂತೀಯ ಅನುರಣಿಯ ಚಿತ್ರದಲ್ಲಿ ಪಡೆಯಬಹುದು. 1980ರಲ್ಲಿ ಪ್ರಾರಂಭವಾದ ಇದರ ಬಳಕೆ 2002ರಷ್ಟರಲ್ಲಿ ಸುಮಾರು ಆರುಕೋಟಿ ಚಿತ್ರಗಳನ್ನು ತೆಗೆದು ಪರೀಕ್ಷಿಸಿರುವುದು ಇದರ ಉಪಯುಕ್ತತೆಗೆ ನಿದರ್ಶನವಾಗಿದೆ. (ಎಸ್.ಸಿ.ಡಿ)

**ಅಂಗರಚನಾವಿಜ್ಞಾನ (ಆಯುರ್ವೇದದಲ್ಲಿ) :** ಸಿಂಧೂನದಿ ಕಣಿವೆಯ (ಹರಪ್ಪ, ಮೊಹೆಂಜೋದಾರೊ, ಚನ್ಹುದಾರೊ) ಸಂಸ್ಕೃತಿ ಪ್ರ.ಶ.ಪೂ 1500ರ ಹೊತ್ತಿಗೆ ಅನಿರ್ದಿಷ್ಟ ಕಾರಣದಿಂದ ಹೇಳಹೆಸರಿಲ್ಲದೆ ನಿರ್ನಾಮವಾಯಿತೆಂದು ಚರಿತ್ರಕಾರರ ಮತ. ಅಲ್ಲಿ ದೊರೆತ ಲಿಪಿಗಳನ್ನು ಖಚಿತವಾಣಿ ಓದಲಿಕ್ಕಾಗಿಲ್ಲವಾದುದರಿಂದ ಅದರ ಕಾಲ ವೇದಗಳಿಗಿಂತಲೂ ಹಿಂದಿನದೆನ್ನುವರು. ವೇದಗಳ ಕಾಲ ಪ್ರ.ಶ.ಪೂ 1200 ರಿಂದ 800ರವರೆಗೆ ಎಂದು ನಿರ್ಣಯವಾಗಿದೆ. ಋಗ್ವೇದಕ್ಕಿಂತಲೂ ಹಳೆಯದಾದ ಅಥರ್ವವೇದಕ್ಕೂ ಹರಪ್ಪ ಸಂಸ್ಕೃತಿಗೂ ಸಂಬಂಧಗಳು ಕಾಣುತ್ತವೆ. ಅಥರ್ವ ಎಂದರೆ ಪೂಜಾರಿವೈದ್ಯ. ಇವನು ಮಂತ್ರಗಳನ್ನು ತಿಳಿದಿದ್ದ. ರಾಜನಿಗೂ ಬುದ್ಧಿವಾದ ಹೇಳುವವನಿದ್ದ. ಅಥರ್ವಣದಲ್ಲಿ ಸ್ವಾಸ್ಥ್ಯಾನ, ಬಲಿ, ಮಂಗಳ ಹೋಮ, ನಿಯಮ, ಪ್ರಾಯಶ್ಚಿತ್ತ, ಉಪವಾಸ ಮತ್ತು ಮಂತ್ರಗಳಿವೆ. ಅದರಲ್ಲಿ ಮೂಳೆಗಳು ಮತ್ತಿತರ ಅಂಗಗಳ ವಿಚಾರಗಳಿವೆ. ಪ್ರಾಣ, ಅಪಾನ, ವ್ಯಾನ, ಸಮಾನಗಳೆಂದು ನಾಲ್ಕು ವಾಯುಗಳನ್ನು ಹೇಳಲಾಗಿದೆ. ಓಜಸ್ಸು ಕೊಡಲು ಅಗ್ನಿಯ ಪ್ರಾರ್ಥನೆಯಿದೆ. ಧಮನಿ, ಸಿರ, ಸ್ನಾಯುಗಳ ವಿಚಾರಗಳಿವೆ.

ಬ್ರಾಹ್ಮಣಗಳ, ಉಪನಿಷತ್ತುಗಳ ಕಾಲ ಪ್ರ.ಶ.ಪೂ. 800–600. ಗೋಪಥ ಬ್ರಾಹ್ಮಣವು ಅಥರ್ವದ ಬ್ರಾಹ್ಮಣ. ಇದಾದ ಮೇಲೆ ಛಾಂದೋಗ್ಯ ಉಪನಿಷತ್ತು ಸಿದ್ಧವಾಯಿತು. ಬ್ರಾಹ್ಮಣ ಉಪನಿಷತ್ತುಗಳಲ್ಲಿ ಆಯುರ್ವೇದದ ಮಾತಿಲ್ಲ. ಸರ್ಪವೇದ, ಪಿಶಾಚವೇದ, ಅಸುರವೇದಗಳು ಮಾತ್ರ ಉಪವೇದಗಳೆಂದು ಗೋಪಥ ಬ್ರಾಹ್ಮಣದಲ್ಲಿದೆ. ಅಥರ್ವದಲ್ಲಿ ಮಂತ್ರಗಳು, ಯಂತ್ರ(ತಾಯಿತಿ)ಗಳು, ಕಾಯಕಲ್ಪ, ರಸಾಯನ ಮತ್ತು ವಾಜೀಕರಣಗಳಿವೆ. ಹಿಂದೂ ತತ್ವಜ್ಞಾನ ಪ್ರ.ಶ.ಪೂ 600ರ ವರೆಗೆ ಬೆಳೆಯದೆ ಆಮೇಲೆ ಪ್ರ.ಶ.ಪೂ.100ರ ವರೆಗೆ ಚೆನ್ನಾಗಿ ಬೆಳೆದು ಸಾಂಖ್ಯ, ಯೋಗ, ನ್ಯಾಯವೈಶೇಷಿಕ, ಮೀಮಾಂಸ ಮತ್ತು ವೇದಾಂತಗಳನ್ನೊಳಗೊಂಡಿತು. ಅದು ಸನಾತನ ಧರ್ಮಿಗಳ ಜ್ಞಾನವೃದ್ಧಿಯ ಕಾಲ.

ಪ್ರ.ಶ.ಪೂ. 600ರ ಹೊತ್ತಿಗೆ ತಂತ್ರಗಳ ಕಾಲ ಹೋಗಿ ಸಂಹಿತೆಗಳ ಕಾಲ ಆರಂಭವಾಗಿ ಆಯುರ್ವೇದ ರೂಪುಗೊಂಡು ಮತಗಳಿಂದ ಮತ ಬೇರೆಯಾಯಿತು. ಸಂಹಿತೆಗಳಲ್ಲಿ ಹಳೆಯವು ಸುಶ್ರುತ, ಚರಕ, ಭೇಲ. ಭೇಲಸಂಹಿತೆಯ ಮೂಲರೂಪ ಇನ್ನೂ ಸಿಕ್ಕಿಲ್ಲ. ಬೌದ್ಧ ಜಾತಕಗಳ ಪ್ರಕಾರ ಬುದ್ಧನ ಕಾಲದಲ್ಲಿ ಅಂದರೆ ಪ್ರ.ಶ.ಪೂ 6ನೆಯ ಶತಮಾನದಲ್ಲಿ, ಕಾಶಿ ಮತ್ತು ತಕ್ಷಶಿಲೆಗಳಲ್ಲಿ ಎರಡು ವಿದ್ಯಾಕೇಂದ್ರಗಳಿದ್ದು, ಕಾಶಿಯಲ್ಲಿ ಧನ್ವಂತರಿಯೂ ತಕ್ಷಶಿಲೆಯಲ್ಲಿ ಆತ್ರೇಯ ಋಷಿಯೂ ಇದ್ದಂತೆ ತಿಳಿದುಬರುತ್ತದೆ.

ಧನ್ವಂತರಿ ತನ್ನ ಗುರುವೆಂದು ಸುಶ್ರುತ ಮಹರ್ಷಿಯೂ ಆತ್ರೇಯ ತನ್ನ ಗುರುವೆಂದು ಚರಕನೂ ಬರೆದಿದ್ದಾರೆ. ಇವರ ಕಾಲ ಪ್ರ.ಶ.ಪೂ. 600 ರಿಂದ ಪ್ರ.ಶ. 200 ರ ಒಳಗೆ ಎಂದು ನಿಶ್ಚಯಿಸಲಾಗಿದೆ. ಚರಕ ಕಾನಿಷ್ಕನ ಕಾಲದಲ್ಲಿದ್ದುದಕ್ಕೆ ಕೆಲವು ನಿದರ್ಶನಗಳಿವೆ. ಆದರೆ ಕಾನಿಷ್ಕನ ಕಾಲವೇ ನಿರ್ಧಾರವಿಲ್ಲ (ಪ್ರ.ಶ.ಪೂ. 52 ರಿಂದ ಪ್ರ.ಶ. 123). ಮೂಲ ಗ್ರಂಥಗಳು ಜೀರ್ಣಗೊಂಡಂತೆ ಕಾಲ ಕಾಲಕ್ಕೆ ಬೇರೆ ಬೇರೆಯವರು ಪರಿಷ್ಕರಿಸಿ ಬರೆದಾಗ ತಾವು ಕಲಿತುದನ್ನೂ ಸೇರಿಸಿರುವುದರಿಂದ ಕಾಲ ನಿರ್ಣಯ ಕಷ್ಟ. ಈಗಿರುವ ಸುಶ್ರುತ ಸಂಹಿತೆಯಲ್ಲಿ ಕೊನೆಯಲ್ಲಿರುವ ಉತ್ತರ ತಂತ್ರ ಮೂಲ ಸುಶ್ರುತ ಬರೆದುದಲ್ಲ; ಪರಿಷ್ಕರಿಸುವಾಗ ಬೌದ್ಧ ಸಂನ್ಯಾಸಿ ನಾಗಾರ್ಜುನ ಉತ್ತರ ತಂತ್ರವನ್ನು ಸೇರಿಸಿದ್ದಾನೆಂದು ಕೆಲವರ ಅಭಿಪ್ರಾಯ.

ಪ್ರಾಚೀನ ಭಾರತದ ಜ್ಞಾನವೃದ್ಧಿಯನ್ನೊಳಗೊಂಡ ಅತ್ಯುತ್ತಮ ಗ್ರಂಥ ಚರಕ ಸಂಹಿತೆ ಎಂದು ಜಿಮ್ಮರ್ ಬರೆದಿದ್ದಾನೆ. ಆದರೆ ಅದರಲ್ಲಿ ಔಷಧ ಚಿಕಿತ್ಸೆ ಹಾಗೂ ನ್ಯಾಯ, ವೈಶೇಷಿಕ ಮತ್ತು ಸಾಂಖ್ಯ ತತ್ತ್ವಗಳಿದ್ದು ದೇಹಶಾಸ್ತ್ರಕ್ಕೆ ಹೆಚ್ಚು ಮನ್ನಣೆ ಕೊಟ್ಟಿಲ್ಲ.

ಪುರಾಣಗಳಲ್ಲಿ ಬ್ರಹ್ಮನೇ ಆಯುರ್ವೇದಕ್ಕೆ ಮೂಲ ಎಂದಿದೆ. ಬ್ರಹ್ಮ ಸಂಹಿತೆಯಲ್ಲಿ ಕೊಂಬು, ಜಿಗಣೆ, ಹರಿತ ಆಯುಧಗಳ ಬಳಕೆಯನ್ನು ಮೊದಲ ಬಾರಿ ವೈದ್ಯದಲ್ಲಿ ಸೇರಿಸಿದಂತಿದೆ. ಆಯುರ್ವೇದವನ್ನು ಪ್ರಜಾಪತಿ ದಕ್ಷನಿಗೆ ಬ್ರಹ್ಮ ಉಪದೇಶಿಸಿದ. ದಕ್ಷನಿಂದ ಅಶ್ವಿನೀ ಕುಮಾರರೂ ಇವರಿಂದ ಇಂದ್ರನೂ ಕಲಿತರು. ಅಥರ್ವ ಮತ್ತು ಯಜುರ್ವೇದಗಳಲ್ಲಿ ಔಷಧ ಮತ್ತು ಆರೋಗ್ಯಗಳಿಗೆ ಇಂದ್ರನನ್ನು ಪ್ರಾರ್ಥಿಸಲಾಗಿದೆ. ಭರದ್ವಾಜ, ಧನ್ವಂತರಿ ಮತ್ತು ಅತ್ರಿಮಹರ್ಷಿಗಳಿಗೆ ಇಂದ್ರ ಉಪದೇಶವನ್ನು ನೀಡಿದ. ಅತ್ರಿಯ ಮಗ ಅತ್ರೇಯ ತಕ್ಷಶಿಲೆಯಲ್ಲಿ ಇದ್ದಿರಬಹುದು. ಅತ್ರೇಯನಿಂದ ಕಲಿತ ಅಗ್ನಿವೇಶನು ಅಗ್ನಿವೇಶಸಂಹಿತೆಯನ್ನು ರಚಿಸಿ, ಕೆಲಕಾಲಾನಂತರ ಇದನ್ನು ಚರಕ ಪರಿಷ್ಕರಿಸಿದನೆಂದು ಪ್ರತೀತಿ. ಭರದ್ವಾಜನಿಂದ ಧನ್ವಂತರಿ ಕಲಿತಿರಬಹುದು. ಅಮೃತಮಂಥನದಲ್ಲಿ ಧನ್ವಂತರಿ ಹುಟ್ಟಿ ಲೋಕಕ್ಕೆ ಅಮೃತವನ್ನು ತಂದನೆಂದು ಮಹಾಭಾರತದಲ್ಲಿ ಹೇಳಿದೆ. ಧನ್ವಂತರಿಯೇ ಕಾಶಿರಾಜನಾಗಿದ್ದ ದಿವೋದಾಸನೆಂದೂ ಹೇಳಲಾಗಿದೆ. ಕಾಶಿರಾಜೇನ ಭಗವತಾಧನ್ವಂತರಿಣೋಪದಿಷ್ಟಂ ತಚ್ಛಿಷ್ಯೇಣ ವಿಶ್ವಾಮಿತ್ರ ಸುತೇನ ಸುಶ್ರುತೇನ ವಿರಚಿತಂ ಎಂದು ಸುಶ್ರುತನ ಮೂಲ ಗ್ರಂಥದಲ್ಲಿದೆ.

ವೇದಗಳ ಕಾಲದಲ್ಲಿ ಮೊದಲ ವೈದ್ಯ ಸಮ್ಮೇಳನ ನಡೆಯಿತೆಂದು ಚರಕಸಂಹಿತೆಯಲ್ಲಿದೆ. ಅಂಗೀರಸ, ಜಮದಗ್ನಿ, ವಸಿಷ್ಠ, ಕಶ್ಯಪ, ಭೃಗು, ಅತ್ರೇಯ, ನಾರದ, ಅಗಸ್ತ್ಯ, ಭರದ್ವಾಜ, ವಿಶ್ವಾಮಿತ್ರ, ಚ್ಯವನ ಇತ್ಯಾದಿ 50ಕ್ಕೂ ಹೆಚ್ಚು ಋಷಿಗಳು ಸೇರಿದ್ದರು. ಇಂದ್ರನಿಂದ ವೈದ್ಯಜ್ಞಾನವನ್ನು ತರಬೇಕೆಂದು ನಿರ್ಣಯವಾಗಿ ಭರದ್ವಾಜ ಇಂದ್ರನಲ್ಲಿಗೆ ಹೋಗಲು ಮುಂದಾಗಿ, ವೈದ್ಯಜ್ಞಾನವನ್ನು ತಂದ.

ಚರಕಸಂಹಿತೆಯಲ್ಲಿ ಅಂಗರಚನಾವಿಜ್ಞಾನ, ಶಸ್ತ್ರವೈದ್ಯಗಳ ವಿಚಾರ ಹೆಚ್ಚಿಲ್ಲ. ಔಷಧ, ಶಸ್ತ್ರ, ಶಾಸ್ತ್ರಗಳೆರಡನ್ನೂ ವೈದ್ಯ ವಿದ್ಯಾರ್ಥಿ ಕಲಿಯಬೇಕೆಂದು ಸುಶ್ರುತ, ಚರಕಸಂಹಿತೆಗಳಲ್ಲಿದೆ.

ಅಂಗರಚನಾವಿಜ್ಞಾನ ವಿಚಾರ ಸುಶ್ರುತ ಸಂಹಿತೆಯಲ್ಲಿದ್ದಷ್ಟು ಇನ್ನಾವ ಆಯುರ್ವೇದ ಗ್ರಂಥದಲ್ಲೂ ಇಲ್ಲ.

ಪ್ರಾಚೀನ ಹಿಂದೂಗಳ ಅಂಗರಚನಾವಿಜ್ಞಾನ ಇಲ್ಲದ ಅಂಗಗಳನ್ನು ಎಣಿಸುವುದು ಎಂದು ಗ್ಯಾರಿಸನ್ನನೂ 5 ಮತ್ತು 7 ಅಂಕಿಗಳನ್ನು ಪದೇ ಪದೇ ಬಳಸುವುದು ಎಂದು ನಾಯ್ಬರ್ಗರ್ ಹೇಳಿದ್ದರೂ ಪ್ರ.ಶ.ಪೂ.600ಕ್ಕೂ ಹಳೆಯದಾಗಿರಬಹುದಾದ ಅಷ್ಟು ಹಿಂದಿನ ಕಾಲದ ತಿಳಿವಳಿಕೆ ವಿಶಾಲವಾಗಿ ತಪ್ಪಿಲ್ಲದಿರುವುದು ಆಶ್ಚರ್ಯಕರವೆಂದು ಎ.ಎಫ್.ರಡಾಲ್ಫ್ ಹಾರ್ನ್ಲ್ ಹೇಳಿದ್ದಾನೆ.

ಆಯುರ್ವೇದ ಗ್ರಂಥಗಳನ್ನು ಪರಿಶೀಲಿಸಿದ ಪಾಶ್ಚಾತ್ಯ ಚರಿತ್ರಕಾರರಲ್ಲಿ ಹಲವರಿಗೆ ತಮ್ಮ ಯುರೋಪಿನ ಚರಿತ್ರೆ ಹೆಚ್ಚು ಗೊತ್ತಿದ್ದುದರಿಂದ ಹಿಂದುಗಳು ಗ್ರೀಕರಿಂದಲೇ ಹೆಚ್ಚು ಕಲಿತಿರಬಹುದು ಎಂದು ಶಂಕಿಸಿದರು. ಆದರೆ ಪುರಾತನ ಹಿಂದುಗಳ ಶವಪರೀಕ್ಷೆಯ ವಿಧಾನ ಗ್ರೀಕರಿಗೆ ಗೊತ್ತಿರಲಿಲ್ಲ. ಅಷ್ಟೇ ಅಲ್ಲದೆ ಗ್ರೀಕರ ವೈದ್ಯ ಹುಟ್ಟುವ ಮೊದಲೇ ಧನ್ವಂತರಿ ಆತ್ರೇಯರಿದ್ದರು. ಯುರೋಪಿನಲ್ಲಿದ್ದ ಶಸ್ತ್ರವೈದ್ಯಕ್ಕಿಂತ ಹಿಂದೂ ಶಸ್ತ್ರವೈದ್ಯ ವಿಶೇಷ ರೀತಿಯಲ್ಲಿ ಬಹಳ ಮುಂದುವರೆದಿತ್ತು. ಅಲೆಗ್ಸಾಂಡರ್ ಚಕ್ರವರ್ತಿ ಭಾರತದ ಮೇಲೆ ದಾಳಿಯಿಟ್ಟರೂ ನೆಲೆಯೂರದೆ ಹಿಂತಿರುಗಿದನು. ಚಂದ್ರಗುಪ್ತ ಮೌರ್ಯ ಮ್ಯಾಸಿಡೋನಿಯ ಪಡೆಗಳನ್ನು ಪಂಜಾಬಿನಿಂದ ಅಟ್ಟಿದ್ದರಿಂದ ಗ್ರೀಕರ ಪ್ರಭಾವವೇನಾದರೂ ಇದ್ದಿದ್ದರೆ ಹೆಚ್ಚು ದಿನ ಉಳಿಯಲಿಲ್ಲವೆಂದು ಪ್ರಸಿದ್ಧ ಚರಿತ್ರಕಾರ ವಿನ್ಸೆಂಟ್ ಸ್ಮಿತ್ ಬರೆದಿದ್ದಾನೆ. ಅಲೆಕ್ಸಾಂಡರನ ಅನುಯಾಯಿಗಳು ಹಿಂದಿರುಗುವಾಗ ಕೆಲವು ಹಿಂದೂ ವೈದ್ಯರನ್ನು ಗ್ರೀಸಿಗೆ ಕರೆದುಕೊಂಡು ಹೋದರೆಂದು ಕೆಲವರು ಬರೆದಿದ್ದಾರೆ. ಪ್ರ.ಶ.ಪೂ.400ರ ಹೊತ್ತಿಗೆ ಕ್ಟೆಸಿಯಾಸ್‌ನೂ ಪ್ರ.ಶ.ಪೂ 300ರ ಹೊತ್ತಿಗೆ ಮೆಗಾಸ್ತನೀಸ್‌ನೂ ಭಾರತದಲ್ಲಿದ್ದ ಯವನ ವೈದ್ಯರು. ಧನ್ವಂತರಿ ವೈದ್ಯದಲ್ಲಿರುವ ತೂಕ, ಅಳತೆಗಳು ಮಗಧ, ಕಳಿಂಗ ದೇಶಗಳಲ್ಲಿದ್ದವೇ ಆದ್ದರಿಂದ ಧನ್ವಂತರಿಯ ಶಿಷ್ಯ ಪರಂಪರೆಯ ಮೇಲೆ ಯವನರ ಪ್ರಭಾವಕ್ಕೆ ಆಸ್ಪದವಿರಲಿಲ್ಲವೆಂದು ವೀಬರ್ ಬರೆದಿದ್ದಾನೆ. ಖಗೋಳವಿಜ್ಞಾನದಲ್ಲಿ ಯವನರಿಂದ ಕಲಿತುದನ್ನೆಲ್ಲ ಹಿಂದೂ ಖಗೋಳ ವಿಜ್ಞಾನಿಗಳು ಬರಹದಲ್ಲಿ ಒಪ್ಪಿಕೊಂಡಿರುವುದರಿಂದ ಯವನರಿಂದ ವೈದ್ಯ ವಿದ್ಯೆಯನ್ನು ಕಲಿತಿದ್ದರೆ ಅದನ್ನೂ ಹಿಂದೂ ವೈದ್ಯರು ಒಪ್ಪಿರುತ್ತಿದ್ದರೆಂದು ಸರ್ ವಿಲಿಯಂ ಜೋನ್ ಬರೆದಿದ್ದಾನೆ. ಇನ್ನೂ ಹೆಚ್ಚಾಗಿ, ಗ್ರೀಕ್ ವೈದ್ಯವಿಜ್ಞಾನಕ್ಕೂ ಹಿಂದೂ ವೈದ್ಯವಿಜ್ಞಾನಕ್ಕೂ ಬಹಳ ವ್ಯತ್ಯಾಸಗಳಿವೆ. ಭಾರತದಲ್ಲಿ ಬೆಳೆಯುವ ಏಲಕ್ಕಿ, ಮೆಣಸು ಮುಂತಾದುವು ಗ್ರೀಕ್ ವೈದ್ಯದಲ್ಲೂ ಇರುವುದಲ್ಲದೆ, ಕೆಲವು ಸಂಸ್ಕೃತದ ಹೆಸರುಗಳ ಅಪಭ್ರಂಶಗಳೂ ಇವೆ.

ಚರಕ, ಭೇಲ ಸಂಹಿತೆಗಳು ಅಷ್ಟಾಂಗ ಆಯುರ್ವೇದದ ಸಂಪ್ರದಾಯದಲ್ಲಿವೆ. ಸೂತ್ರ, ನಿದಾನ, ವಿಮಾನ, ಶಾರೀರ, ಇಂದ್ರ್ಯ, ಚಿಕಿತ್ಸೆ, ಕಲ್ಪ, ಸಿದ್ಧ–ಇವು ಅಷ್ಟಾಂಗಗಳು. ಆಚಾರ್ಯ ವಾಗ್ಭಟ ಸುಮಾರು 650ರಲ್ಲಿ ಅಷ್ಟಾಂಗ ಹೃದಯವನ್ನು ಬರೆದ. ಸುಶ್ರುತಸಂಹಿತೆ, ಚರಕಸಂಹಿತೆ, ಅಷ್ಟಾಂಗ ಹೃದಯಗಳು ಆಯುರ್ವೇದದ ಬೃಹತ್ತ್ರಯಿಗಳೆಂದು ಹೆಸರಾಗಿವೆ.

ನಿದಾನೇ ಮಾಧವಃ ಶ್ರೇಷ್ಠಃ ಸೂತ್ರಸ್ಥಾನೇ ತು ವಾಗ್ಭಟಃ।
ಶಾರೀರೇ ಸುಶ್ರುತಃ ಪ್ರೋಕ್ತೋ ಚರಕಸ್ತು ಚಿಕಿತ್ಸಿತೇ॥

ಶಾರೀರಕ್ಕೆ ಸುಶ್ರುತನೇ ಶ್ರೇಷ್ಠನೆಂದಿದೆ. ಸುಶ್ರುತ ಸಂಹಿತೆಯಲ್ಲಿ ಸೂತ್ರಸ್ಥಾನ, ನಿದಾನಸ್ಥಾನ, ಶಾರೀರಸ್ಥಾನ, ಚಿಕಿತ್ಸಸ್ಥಾನ, ಕಲ್ಪಸ್ಥಾನ ಮತ್ತು ಉತ್ತರ ತಂತ್ರಗಳಿವೆ. ಶಾರೀರಸ್ಥಾನವೇ ಅಂಗರಚನಾವಿಜ್ಞಾನವನ್ನು ಕುರಿತದ್ದು. ಇದರಲ್ಲಿ ಸರ್ವಭೂತಚಿಂತಾಶಾರೀರ, ಶುಕ್ರಶೋಣಿತಶುದ್ಧಿಶಾರೀರ, ಗರ್ಭಾವಕ್ರಾಂತಿ ಶಾರೀರ ಶರೀರಸಂಖ್ಯಾವ್ಯಾಕರಣಶಾರೀರ ಸಿರಾವ್ಯಧ ವಿಧಿಶಾರೀರ, ಧಮನೀ ವ್ಯಾಕರಣ ಶಾರೀರ ಗರ್ಭಿಣೀವಾಕರಣ ಶಾರೀರ, ಗರ್ಭವ್ಯಾಕರಣಶಾರೀರ, ಮುಂತಾದ ಅಧ್ಯಾಯಗಳಿವೆ. ಇವುಗಳಲ್ಲಿ ಐದನೆಯದಾದ ಶರೀರಸಂಖ್ಯಾವ್ಯಾಕರಣಶಾರೀರದಲ್ಲಿ ಅಂಗರಚನಾವಿಜ್ಞಾನದ ವಿಚಾರಗಳು ಹೆಚ್ಚಾಗಿವೆ. ಇದರ ಕೊನೆಯಲ್ಲಿರುವ 50 ಮತ್ತು 51ನೆಯ ಶ್ಲೋಕಗಳಲ್ಲಿನ ಅರ್ಥ: ದೇಹದಲ್ಲಿ ಸೂಕ್ಷ್ಮವಾದುವನ್ನು ಜ್ಞಾನ ಮತ್ತು ತಪಸ್ಸಿನ ಕಣ್ಣುಗಳಿಂದಲೂ ನೋಡಬೇಕು. ಶರೀರವಿಜ್ಞಾನದಲ್ಲಿ ಪ್ರತ್ಯಕ್ಷ ನೋಡಿ ಅರ್ಥ ಮಾಡಿಕೊಂಡವನೇ ವಿಶಾರದ; ನೋಡಿ ಕೇಳಿದ್ದರಿಂದ ಸಂದೇಹ ಕಳೆಯುತ್ತದೆ. ಶರೀರದ ಭಾಗಗಳನ್ನು ಈ ರೀತಿ ಕಣ್ಣಿನಿಂದ ನೋಡಲು ಗ್ರೀಕ್ ವೈದ್ಯರಲ್ಲಿ ಪ್ರಾಶಸ್ತ್ಯವಿರಲಿಲ್ಲ. ಶಲ್ಯತಂತ್ರಜ್ಞಾನ ಬೇಕಾದವನು ಚೆನ್ನಾಗಿ ಶೋಧಿಸಿ ನೋಡಬೇಕು ಎಂದು 47ನೆಯ ಶ್ಲೋಕದಲ್ಲಿದೆ. 49ನೆಯ ಸೂತ್ರ ಶವವನ್ನು ಪರೀಕ್ಷಿಸುವ ರೀತಿಯನ್ನು ತಿಳಿಯಹೇಳುತ್ತದೆ.

ಎಲ್ಲ ಪೂರ್ಣವಾಗಿರುವ, ವಿಷದಿಂದ ಸಾಯದ, ಹೆಚ್ಚು ಕಾಲ ವ್ಯಾಧಿಪೀಡಿತನಾಗದಿದ್ದ, ಮುಪ್ಪಾಗದ, ಕರುಳಿನಿಂದ ಮಲವನ್ನು ತೆಗೆದ, ಪುರುಷನ ದೇಹವನ್ನು ತೊಗಟೆ, ಕುಶ ಇತ್ಯಾದಿ ಹುಲ್ಲುಗಳಿಂದ ಸುತ್ತಿ ಭದ್ರವಾದ ಪಂಜರದಲ್ಲಿ ಕಟ್ಟಿ ಒಂದು ನದಿಯ ಗೋಪ್ಯವಾದ ಸ್ಥಳದಲ್ಲಿಟ್ಟು ಏಳು ರಾತ್ರಿಗಳು ಕೊಳೆತಮೇಲೆ ಉಶೀರ ಎಂಬ ಸುಗಂಧವಾದ ಬೇರು, ಎಳೆಯ ಬಿದಿರು ಮತ್ತು ಬಲ್ವಜ ಎಂಬ ಹುಲ್ಲಿನಿಂದ ಕೂರ್ಚ(ಪೊರಕೆ)ವನ್ನು ಮಾಡಿಕೊಂಡು ಮೆಲ್ಲಮೆಲ್ಲಗೆ ಎಬ್ಬುತ್ತ ಚರ್ಮಾದಿ ಸಮಸ್ತವನ್ನೂ ಹೊರಗೆ ಮತ್ತು ಒಳಗೆ ಇರುವ ಅಂಗ ಪ್ರತ್ಯಂಗ ವಿಶೇಷಗಳನ್ನೂ ಯಥೋಕ್ತವಾಗಿ ಕಣ್ಣುಗಳಿಂದ ಲಕ್ಷಿಸಬೇಕು,

ಹೀಗೆ ದೇಹದ ಭಾಗಗಳನ್ನು ಕಣ್ಣಿನಿಂದ ಅರ್ಥ ಮಾಡಿಕೊಂಡರೆ ವಿದ್ಯಾರ್ಥಿ ವಿಶಾರದನಾಗುವನೆಂಬುದಕ್ಕೆ ಪ್ರಾಮುಖ್ಯವಿದ್ದಾಗಲೂ ಸುಶ್ರುತನ ತರುವಾಯ ಕಾಲಕ್ರಮೇಣ ಈ ಶವಪರೀಕ್ಷಾ ವಿಧಾನ ಮೂಲೆಗೆ ಬಿತ್ತು. ಚರಕಸಂಹಿತೆಯಲ್ಲೇ ಈ ವಿಧಾನ ಹೇಳಿಲ್ಲ. ಈ ಅಭ್ಯಾಸ ತಪ್ಪಿದುದಕ್ಕೆ ಹಲವು ಕಾರಣಗಳನ್ನು ಕೊಡಲಾಗಿದೆ. ಧನ್ವಂತರಿ ಆತ್ರೇಯಾದಿಗಳು ಹೇಳಿದುದೆಲ್ಲ ವೇದ ಸಮಾನವೆಂದೂ ಇನ್ನು ಹೆಚ್ಚು ತಿಳಿಯಲು ಏನೂ ಇಲ್ಲವೆಂದೂ ಪ್ರಸಕ್ತಕಾಲದ ಆಯುರ್ವೇದ ವಿದ್ವಾಂಸರು ಅಸಹ್ಯವಾದ ಶವಪರೀಕ್ಷೆಯ ಗೊಡವೆಗೆ ಹೋಗಲಿಲ್ಲ. ಶಸ್ತ್ರವೈದ್ಯವೇ ಹೀನವಾದ ಕಸಬು ಎಂದು ಜನಾಭಿಪ್ರಾಯ ಹುಟ್ಟಿದುದರಿಂದ ಉತ್ತಮ

ವರ್ಣದವರು ಶಸ್ತ್ರಚಿಕಿತ್ಸೆಯ ಗೋಜಿಗೆ ಹೋಗಲಿಲ್ಲ. ಶಸ್ತ್ರವೈದ್ಯವನ್ನು ಮಾಡುತ್ತಿದ್ದವರು ಕೀಳು ಜಾತಿಯವರಾದರು. ವೈದ್ಯ ಗಟ್ಟಿಗನಾದರೆ ತನ್ನ ಬುದ್ಧಿಶಕ್ತಿಯಿಂದಲೇ ರೋಗದ ಚಿಹ್ನೆಗಳನ್ನು ಅರಿತು ಔಷಧ ಕೊಡುವುದರಿಂದ ರೋಗ ಗುಣವಾಗುತ್ತದೆ. ಆದ್ದರಿಂದ ಶಸ್ತ್ರಚಿಕಿತ್ಸೆಯೇ ಬೇಡ. ಶವಪರೀಕ್ಷೆ ಮಾಡಿದರೂ ಅದರಲ್ಲಿ ತಿಳಿಯುವುದೇನಿದೆ ಎಂಬ ಭಾವನೆ ಹುಟ್ಟಿತು. ಪಾತ್ರವನ್ನರಿತು ಗಟ್ಟಿಗನಾದವನಿಗೆ ವಿದ್ಯಾದಾನ ಮಾಡಬೇಕು. ಇಲ್ಲದಿದ್ದರೆ ಜನರಿಗೆ ಕೆಡುಕಾಗುವುದು ಎನ್ನುವ ಸೂತ್ರದಿಂದ ಹಲವು ವಿದ್ವಾಂಸರು ಸುಗುಣಿಗಳೂ ಬುದ್ಧಿಶಕ್ತಿವಂತರೂ ಆದ ಶಿಷ್ಯರನ್ನು ಕಾಣದೆ, ತಮ್ಮ ವಿದ್ಯೆಯನ್ನು ಸರಿಯಾಗಿ ದಾನ ಮಾಡಲಾಗಲಿಲ್ಲ. ಇದರಿಂದ ಬಹಳ ವೈದ್ಯರಹಸ್ಯಗಳು ಹಾಳಾದಂತಿವೆ. ಸನಾತನ ಪದ್ಧತಿಯಲ್ಲಿ ಪ್ರಾಣಿಯಾಗಗಳು, ಪ್ರಾಣಿಬಲಿ ಮುಂತಾದುವು ವಾಡಿಕೆಯಲ್ಲಿದ್ದುವು. ಬೌದ್ಧ, ಜೈನ ಮತಗಳಿಂದ ಸನಾತನಧರ್ಮ ಅಳಿದುಹೋಗುವಂತಾಗಿ ಪ್ರಾಣಿಬಲಿಯ ಜೊತೆಯಲ್ಲಿ ಶವಪರೀಕ್ಷೆಯೂ ನಿಂತಿರಬಹುದು.

ಸುಶ್ರುತನ ವಿಧಾನದಲ್ಲಿ ಕೊಳೆತ ಹೆಣದ ಭಾಗಗಳನ್ನು ನೋಡುತ್ತಿದ್ದುದರಿಂದ ಕೊಳೆತು ನೀರಾಗುತ್ತಿದ್ದ ಒಳಾಂಗಗಳ ವಿಚಾರ ಹೆಚ್ಚಾಗಿರಲಿಲ್ಲ.

ಸುಶ್ರುತಸಂಹಿತೆಯ ಶಾರೀರಸ್ಥಾನದಲ್ಲಿರುವ ಅಂಗರಚನಾವಿಜ್ಞಾನದ ಅಂಶಗಳು ಹೀಗಿವೆ:

**ಪಂಚಭೂತಗಳು** – ವಾಯು, ತೇಜಸ್ಸು, ಅಪ್ಪು, ಪೃಥಿವೀ, ಆಕಾಶ, (ಇವುಗಳಿಂದ ದೇಹವಾಗಿದೆ)

**ಷಡಂಗಗಳು** – 4 ಶಾಖೆಗಳಾದ ಕೈ ಕಾಲುಗಳು, 1 ಮಧ್ಯ(ಮುಂಡ ಅಥವಾ ಕೋಷ್ಠ), 1 ತಲೆ.

**ಪ್ರತ್ಯಂಗಗಳು** – ಮಸ್ತಕ, ಉದರ, ಪೃಷ್ಠ(ಬೆನ್ನು), ನಾಭಿ, ಲಲಾಟ, ಮೂಗು, ಗಡ್ಡ, (ಚಿಬುಕ), ಬಸ್ತಿ (ಮೂತ್ರಾಶಯ), ಕತ್ತು – ಇವು ಒಂದೊಂದು. ಕಿವಿ, ಕಣ್ಣು, ಹುಬ್ಬು, ನಿತಂಬ, ಮೊಣಕಾಲು, ಮೊಳಕೈ, ತೋಳು, ತೊಡೆ – ಇವು ಎರಡೆರಡು, ಬೆರಳುಗಳು 20, ಸ್ರೋತಗಳು 22.

**ಸಂಖ್ಯೆಗಳು** – ಚರ್ಮಗಳು 7, ಕಲೆಗಳು 7, ಆಶಯಗಳು 7, ಧಾತುಗಳು 7, ಸಿರಗಳು 700, ಪೇಶಿಗಳು 500, ಸ್ನಾಯುಗಳು 900, ಮೂಳೆಗಳು 300, ಸಂಧಿ(ಕೀಲು)ಗಳು 210, ಮರ್ಮಗಳು 107, ಧಮನಿಗಳು 24, ದೋಷಗಳು 3, ಮಲಗಳು 3, ಸ್ರೋತಗಳು 9, ಕಂಡರಗಳು 16, ಜಾಲಗಳು 16, ಕೂರ್ಚಗಳು 6, ರಜ್ಜುಗಳು 6, ಸೇವನಿಗಳು 7, ಸಂಘಾತಗಳು 14, ಸೀಮಂತಗಳು 14, ಯೋಗವಾಹ ಸ್ರೋತಗಳು 22, ಅಂತ್ರ (ಕರುಳು) ಗಳು 2.

**ಆಶಯಗಳು** – ವಾತ, ಪಿತ್ತ, ಶ್ಲೇಷ್ಮ, ರಕ್ತ, ಆಮ, ಪಕ್ವ, ಗರ್ಭ.

**ಕರುಳುಗಳು** – ಗಂಡಸರಲ್ಲಿ $3^1/_2$ ಮೊಳ (ವ್ಯಾಮ) ಹೆಂಗಸರಲ್ಲಿ 3 ಮೊಳ.

**ಮೂಳೆಗಳು** – ಸುಶ್ರುತ ಸಂಹಿತೆಯಲ್ಲಿ ಇತರ ವಿಚಾರಗಳಿಗಿಂತ ಮೂಳೆಗಳ ವಿಚಾರ ಹೆಚ್ಚು ಸರಿಯಾಗಿದೆ. ಮೂಳೆಗಳು ಕೊಳೆತು ಹಾಳಾಗದೇ ಇರುವುದೇ ಇದಕ್ಕೆ ಕಾರಣವಿರಬಹುದು. ಮೂಳೆಗಳು 360 ಎಂದು ವೇದವಾದಿಗಳು ಹೇಳುತ್ತಾರೆ. ಶಲ್ಯತಂತ್ರದಲ್ಲಿರುವುದು ಮುನ್ನೂರೇ. ಅವು ಶಾಖೆಗಳಲ್ಲಿ 120, ಮುಂಡದಲ್ಲಿ 117, ತಲೆಕತ್ತುಗಳಲ್ಲಿ 63 ಇವೆ.

ಒಂದೊಂದು ಬೆರಳಲ್ಲಿ 3 ರಂತೆ 15, ಹರಡಿನಲ್ಲಿ 10, ಪಾರ್ಷ್ಣಿ (ಹಿಮ್ಮಡಿ)ಯಲ್ಲಿ 1, ಜಂಘ (ಮುಂಗಾಲು)ದಲ್ಲಿ 2 (ಟಿಬಿಯ, ಫಿಬುಲ), ಮಂಡಿ(ಜಾನು)ಯಲ್ಲಿ 1 (ಪಟೆಲ್ಲ), ತೊಡೆಯಲ್ಲಿ 1(ಫೀಮರ್)– ಈ ರೀತಿ ಒಂದು ಶಾಖೆಯಲ್ಲಿ 30ರಂತೆ 4ರಲ್ಲಿ 120: ಶ್ರೋಣಿ(ಪೆಲ್ವಿಸ್)ಯಲ್ಲಿ 5, ಗುದ 1((ಕಾಕ್ಸಿಕ್ಸ್), ಭಗ 1(ಪ್ಯೂಬಿಸ್) ನಿತಂಬ 1, ತ್ರಿಕ 1(ಸ್ಯಾಕ್ರಮ್); ಒಂದು ಪಾರ್ಶ್ವದಲ್ಲಿ 36ರಂತೆ(12 ರಿಬ್ಬುಗಳು, 12 ಕಾರ್ಟಿಲೇಜುಗಳು, 12 ಟ್ರಾನ್ಸ್‌ವರ್ಸ್ ಪ್ರೋಸೆಸ್ಸುಗಳು) ಎರಡೂ ಕಡೆ 72, ಬೆನ್ನಿನಲ್ಲಿ 30, ಉರಸ್ಸಿನಲ್ಲಿ (ಎದೆ) 8, ಅಂಸಫಲಕ (ಭುಜ)ಗಳಲ್ಲಿ 2, ಕತ್ತಿನಲ್ಲಿ 9, ಕಂಠನಾಡಿ (ಶ್ವಾಸನಾಳ)ಯಲ್ಲಿ 4, ಹನು (ಕೆಳದವಡೆ)ವಿನಲ್ಲಿ 2, ದಂತಗಳು 32, ಮೂಗಿನಲ್ಲಿ 3, ಅಂಗುಳ (ತಾಲು)ದಲ್ಲಿ 1, ಗಂಡಕರ್ಣ ಶಂಖಗಳಲ್ಲಿ ಒಂದೊಂದರಂತೆ ಎರಡು ಕಡೆ 6, ತಲೆಯಲ್ಲಿ 6.

ಚರಕ ಸಂಹಿತೆಯಲ್ಲಿ ಕೊಟ್ಟಿರುವ 300 ಮೂಳೆಗಳ ಪಟ್ಟಿ ಹೀಗಿದೆ: ದಂತ 32, ದಂತೋಲೂಖಲ (ಹಲ್ಲುಗೂಡುಗಳು) 32, ನಖ 20, ಬೆರಳುಮೂಳೆ 60, ಪಾಣಿಪಾದಶಲಾಕಾ (ಅಂಗಾಲು ಅಂಗೈ ಮೂಳೆಗಳು)20, ಪಾಣಿಪಾದಶಲಾಕಾಧಿಷ್ಠಾನ 4, ಪಾರ್ಷ್ಣಿ 2, ಪಾದಗುಲ್ಫ 4, ಮಣಿಕ(ಕೈಮಣಿ) 2, ಅರತ್ನಿ 4(ಮುಂಗೈ ಮೂಳೆಗಳು), ಜಂಘ 4, ಜಾನುಕಾಪಾಲಿಕ(ಮಂಡಿಚಿಪ್ಪು) 2, ಊರುನಲಕ (ತೊಡೆಮೂಳೆ) 2, ಬಾಹುನಲಕ (ತೋಳುಮೂಳೆ) 2, ಅಂಸ(ಭುಜ) 2, ಅಂಸಫಲಕ (ಸ್ಕ್ಯಾಪುಲ) 2, ಅಕ್ಷಕ (ಕ್ಲ್ಯಾವಿಕಲ್) 2, ಜತ್ರು (ಶ್ವಾಸನಾಳ) 1, ಅಂಗುಳ(ತಾಲು) 2, ನಿತಂಬ 2, ಭಗಾಸ್ಥಿ 1, ಬೆನ್ನು 45, ಕತ್ತು 15, ಉರಸ್ಸು 14, ಪಕ್ಕೆಲುಬುಗಳು (ಪರ್ಶುಕ) 24, ಸ್ಥಾಲಕಾ (ಪಕ್ಕೆಲುಬುಗಳ ಕತ್ತುಗಳು ?) 24, ಸ್ಥಾಲಕಾರ್ಬುದ (ಪಕ್ಕೆಲುಬುಗಳ ಗಂಟುಗಳು?) 24, ಹನ್ವಸ್ಥಿ (ಕೆಳದವಡೆ ಎಲುಬು) 1, ಹನುಮೂಲಬಂಧನ (?)2, ನಾಸಿಕ 1, ಗಂಡಕೂಟ 1, ಲಲಾಟ 1, ಶೃಂಗ (ಕಣತಲೆ) 2, ಶಿರಃಕಾಲ 4.

ಕೊಳೆತ ದೇಹದ ಮೂಳೆಗಳಲ್ಲಿ ಕೆಲವು ಒಂದಕ್ಕೊಂದು ಅಂಟಿರುವುದರಿಂದಲೂ ಚಿಕ್ಕವಯಸ್ಸಿನಲ್ಲಿ ಹೆಚ್ಚಾಗಿರುವುದರಿಂದಲೂ ಕೆಲವರು ದಂತಗಳನ್ನು ಮಾತ್ರ ಕೆಲವರು ಹಲ್ಲುಗೂಡು ಮತ್ತು ಉಗುರುಗಳನ್ನೂ ಸೇರಿಸಿದ್ದರಿಂದಲೂ ಮೂಳೆಗಳ ಅಂಕಿಗಳು ಒಂದೇ ಸಮನಾಗಿಲ್ಲ. ಇವನ್ನು ಬಿಟ್ಟು ಒಟ್ಟಿನಲ್ಲಿ ನೋಡುವುದಾದರೆ, ಹಿಂದಿನ ಹಿಂದೂ ವೈದ್ಯರ ಸಂಖ್ಯಾಜ್ಞಾನ ಹೆಚ್ಚು ಕಡಿಮೆ ಈಗಿನದಷ್ಟೇ ಇದ್ದಿತೆಂದು ಹಾರ್ನ್ಲೆ ಮೆಚ್ಚಿದ್ದಾನೆ.

ಈಗಿನ ಅಂಗರಚನಾವಿಜ್ಞಾನದ ಪ್ರಕಾರ ದೇಹದಲ್ಲಿ ಮೂಳೆಗಳು ಒಟ್ಟು 206 : ಮೇಲಿನ ಅವಯವದಲ್ಲಿ ಒಟ್ಟು 32– ಒಂದೊಂದು ಬೆರಳಲ್ಲಿ 3 ರಂತೆ (ಹೆಬ್ಬೆರಳಲ್ಲಿ 2) 14, ಅಂಗೈಯಲ್ಲಿ 5, ಮಣಿಕಟ್ಟು 8, ಮುಂಗೈಯಲ್ಲಿ 2, ತೋಳಿನಲ್ಲಿ 1, ಅಕ್ಷಕ (ಕಾಲರ್‌ಬೋನ್) 1, ಅಂಸಫಲಕ 1, ಕೆಳಶಾಖೆಯಲ್ಲಿ ಒಟ್ಟು 31– ಬೆರಳುಗಳಲ್ಲಿ 14, ಅಂಗಾಲಿನಲ್ಲಿ 5, ಹರಡಿನಲ್ಲಿ 7, ಮುಂಗಾಲಿನಲ್ಲಿ 2, ಮಂಡಿಚಿಪ್ಪು 1, ತೊಡೆಮೂಳೆ 1, ಶ್ರೋಣಿ ಫಲಕ 1 , ಹೀಗೆ 4 ಶಾಖೆಗಳಲ್ಲಿ ಒಟ್ಟು 126, ಬೆನ್ನುಮೂಳೆ 24, ತ್ರಿಕಾಸ್ಥಿ 1, ಗುದಾಸ್ಥಿ 1, ಪಕ್ಕೆಲುಬು 24, ಎದೆಚಕ್ಕೆ (ಸ್ಟೆರ್ನಮ್) 1, ಹೀಗೆ ಮುಂಡದಲ್ಲಿ 51, ಹಲ್ಲುಗಳನ್ನು ಬಿಟ್ಟು ತಲೆಯಲ್ಲಿ 29 ಮೂಳೆಗಳು.

**ಸುಶ್ರುತ ಮೂಳೆಗಳಲ್ಲಿ ಐದು ವಿಧಗಳೆಂದಿದ್ದಾನೆ :** ಕಪಾಲ (ಚಪ್ಪಟೆ), ರುಚಕ (ಹಲ್ಲಿನಂತೆ ಚೂಪಾದ), ತರುಣ (ಮೆತು ಉಸಿರ್ನಾಳದಲ್ಲಿರುವ ಮೆಲ್ಲೆಲುಬುಗಳಂಥ), ವಲಯ(ಪಕ್ಕೆಲುಬಿನಂತೆ ಬಾಗಿರುವ), ನಲಕ (ತೋಳು ತೊಡೆ ಮೂಳೆಗಳಂತೆ ಕೊಳವೆಯಂತಿರುವ), ಈ ತಿಳಿವಳಿಕೆ ಹೆಚ್ಚು ಕಡಿಮೆ ಈಗಿನದರೊಡನೆ ಹೊಂದಿಕೊಳ್ಳುತ್ತದೆ.

**ಸಂಧಿ (ಕೀಲು)ಗಳು :** ಮೈಯಲ್ಲಿ 200 ಕೀಲುಗಳಿವೆ ಎಂದು ಚರಕ ಹೇಳಿದ್ದಾನೆ. ಸುಶ್ರುತನ ಪ್ರಕಾರ 210 ಕೀಲುಗಳು. ಅವನು ಬರೆದಿರುವುದು ಈಗಿನ ತಿಳಿವಿಗೆ ಹೆಚ್ಚು ಕಡಿಮೆ ಸರಿಹೋಗುತ್ತದೆ. ಶಾಖೆಗಳಲ್ಲಿ 68, ಮುಂಡದಲ್ಲಿ 59, ತಲೆ ಕತ್ತುಗಳಲ್ಲಿ 83, ಕೀಲುಗಳಲ್ಲಿ ಆಕಾರದ ಪ್ರಕಾರ 8 ವಿಧಗಳಿವೆ: i.ಕೋರ (ಬಾಗಿಲ ಕೀಲಿನಂತೆ) ಉದಾ : ಬೆರಳು, ಮೊಳಕೈ, ಮಂಡಿ. ii.ಉಲೂಖಲ (ಒರಳು ರುಬ್ಬುಗುಂಡಿನಂತೆ), ಉದಾ: ಕಂಕುಳು, ಸೊಂಟ, ಹಲ್ಲು. iii ಸಾಮುದ್ಗ (ಬಟ್ಟಲಿನಂತೆ). ಉದಾ : ಅಂಸಪೀಠ, ಗುದಾಸ್ಥಿ, ಭಗಾಸ್ಥಿ, iv. ಪ್ರತರ (ತೊಲೆಯಂಥ) ಉದಾ :ಬೆನ್ನುಮೂಳೆ, v ತುನ್ನಸೇವನಿ(ಹೊಲಿಗೆಯಂಥ). ಉದಾ : ತಲೆಮೂಳೆಗಳ ನಡುವಿರುವ ಕೀಲುಗಳು. vi ವಾಯಸತುಂಡ (ಕಾಗೆ ಮೂತಿಯಂತಿರುವ) ಉದಾ: ದವಡೆ. vii ಮಂಡಲ (ಗುಂಡಗಿರುವ). ಉದಾ: ಶ್ವಾಸನಾಳ. viii ಶಂಖಾವರ್ತ (ಶಂಖದ ಸುರುಳಿಯಂತಿರುವ) ಉದಾ : ಕಿವಿ, ಮೂಗು., (ಉದಾಹರಣೆಗಳು ಸುಶ್ರುತನವು). ಈ ವರ್ಗೀಕರಣವು ಒಪ್ಪಬಹುದಾದದ್ದು.

ಅಸ್ಥಿ ಸಂಘಾತಗಳು 14– ಎರಡಕ್ಕಿಂತ ಹೆಚ್ಚು ಮೂಳೆಗಳು ಸಂಧಿಯಾಗಿರುವುದು, ಈ ವರ್ಣನೆಯೂ ಸಮಂಜಸವಾಗಿದೆ.

**ಪೇಶಿಗಳು (ಮಾಂಸಖಂಡಗಳು) 500:** ಆದರೆ ಅವನ್ನು ಎಣಿಸಲಾಗುವುದಿಲ್ಲ ಎಂದು ಚರಕನು ಬರೆದಿದ್ದಾನೆ. ಸುಶ್ರುತನು ಹೆಚ್ಚು ವಿವರಗಳನ್ನು ಕೊಟ್ಟಿದ್ದಾನೆ. ಪೇಶಿಗಳು 500, ಇವುಗಳಲ್ಲಿ ಶಾಖೆಗಳಲ್ಲಿ 400, ಮುಂಡದಲ್ಲಿ 64, ತಲೆ ಕತ್ತುಗಳಲ್ಲಿ 34. ಪರೀಕ್ಷೆಗೆ ಕೊಳೆತ ಹೆಣಗಳನ್ನೇ ಉಪಯೋಗಿಸುತ್ತಿದ್ದುದರಿಂದ ಇರುವ ಪೇಶಿಗಳು ಎಣಿಕೆಗೆ ಸಿಗದೆ, ಇಲ್ಲಿ ಪೇಶಿಗಳ ಎಣಿಕೆ ಕೇವಲ ಊಹೆಯದೇ ಎಂಬ ಸಂಶಯಕ್ಕೆ ಕಾರಣವಾಗಿದೆ. ಈಗಿನ ಜ್ಞಾನದ ಪ್ರಕಾರ ಪೇಶಿಗಳು 513, ಕೆಳಶಾಖೆಗಳಲ್ಲಿ 114, ಮೇಲುಶಾಖೆಗಳಲ್ಲಿ 112, ಮುಂಡದಲ್ಲಿ 81 ಮತ್ತು ತಲೆ ಕತ್ತುಗಳಲ್ಲಿ 176. ಇವುಗಳಲ್ಲಿ ಬಹು ಸಣ್ಣವೂ ಸೇರಿವೆ. ನಾಲಗೆಯಲ್ಲಿ ಒಂದೇ ಪೇಶಿಯೆಂದು ಹಿಂದಿನವರು ಹೇಳಿದ್ದರೆ ಈಗಿನ ಪ್ರಕಾರ 17.

**ಸ್ನಾಯುಗಳು (ಲಿಗಮೆಂಟ್ಸ್?) 900:** 4 ಶಾಖೆಗಳಲ್ಲಿ 600, ಮುಂಡದಲ್ಲಿ 230, ಕತ್ತು ತಲೆಗಳಲ್ಲಿ 70, ಸ್ನಾಯೂಶ್ಚತುರ್ವಿಧಾ–ಪ್ರತಾನವತ್ (ಶಾಖೆಗಳಿರುವ ಮೊಳಕೆಯ ಹಾಗೆ), ವೃತ್ತ (ಚಕ್ರದ ಹಾಗೆ), ಪೃಥ್ವ(ಅಗಲ), ಷಿಶುರಾ (ತೂತುಗಳಿರುವ), ಹಲಗೆಗಳಿಂದಾದ ದೋಣಿಯು ಹೇಗೆ ಬಹು ಬಂಧನ (ಹಗ್ಗ ಇತ್ಯಾದಿ)ಗಳಿಂದ ಭಾರವನ್ನು ತಡೆಯಬಲ್ಲುದೋ ಹಾಗೆಯೇ ಮನುಷ್ಯನಲ್ಲೂ ಸ್ನಾಯುಗಳು ಸೇರಿ ದೇಹಕ್ಕೆ ಇಂಥ ಬಿಗಿ ಬಂದಿವೆ ಎಂಬುದು 33 ನೆಯ ಶ್ಲೋಕದ ಅರ್ಥ. ಈ ತಿಳಿವಳಿಕೆ ಈಗಿನ ಶಾಸ್ತ್ರಜ್ಞಾನಕ್ಕೆ ಸರಿದೊರೆಯಾಗದಿದ್ದರೂ ಒಪ್ಪುವಂಥಾದ್ದಾಗಿದೆ.

**ಕಂಡರಗಳು (ಟೆಂಡನ್ಸ್) 16:** ಪಾದಗಳಲ್ಲಿ 4, ಹಸ್ತಗಳಲ್ಲಿ 4, ಕತ್ತಿನಲ್ಲಿ 4, ಬೆನ್ನಿನಲ್ಲಿ 4. ಇವು ಹಸ್ತಪಾದಗಳಲ್ಲಿ ಉಗುರುಗಳವರೆಗೆ ಹೋಗುತ್ತವೆಂಬುದನ್ನು ಒಪ್ಪಬಹುದು. ಕತ್ತಿನಲ್ಲಿರುವುವು ಹೃದಯವನ್ನು ಬಂಧಿಸಿ ಮೇಢ್ರದವರೆಗೂ ಹೋಗುತ್ತವೆ ಎಂಬುದನ್ನು ಒಪ್ಪುವಹಾಗಿಲ್ಲ. ದೊಡ್ಡ ನರಗಳನ್ನೂ ಕಂಡರಗಳೆಂದು ಕರೆಯಲಾಗಿದೆ.

**ಮಾಂಸಸಿರಾಸ್ನಾಯ್ವಸ್ಥಿಜಾಲಗಳು 4 :** ಮಣಿಬಂಧ ಗುಲ್ಫಗಳಲ್ಲಿ ಪರಸ್ಪರ ಗವಾಕ್ಷಿಗಳ ಹಾಗಿವೆ ಎಂದು ಬರೆಯಲಾಗಿದೆ.

**ಸೀಮಂತಗಳು 15:** ಇವು ಅಸ್ಥಿಸಂಘಾತಗಳು.

**ಧಮನಿಗಳು 24:** ಹೊಕ್ಕುಳ ಮೇಲಕ್ಕೆ 10, ಕೆಳಕ್ಕೆ 10, ಅಡ್ಡಡ್ಡ 4. ಮೇಲಿನ 10 ಧಮನಿಗಳು 30 ಶಾಖೆಗಳನ್ನು ಕೊಡುತ್ತವೆ. ವಾತಕ್ಕೆ 2, ಪಿತ್ತಕ್ಕೆ 2, ಕಫಕ್ಕೆ 2, ಶೋಣಿತಕ್ಕೆ 2, ರುಚಿಗೆ 2, ಶಬ್ದಕ್ಕೆ 2, ರೂಪಕ್ಕೆ 2, ರಸಕ್ಕೆ 2, ವಾಸನೆಗೆ 2, ಮಾತಿನ ಅಂಗಗಳಿಗೆ 2, ಕೂಗುವುದಕ್ಕೆ 2, ನಿದ್ದೆಗೆ 2, ಎಚ್ಚರಕ್ಕೆ 2, ಕಣ್ಣೀರಿಗೆ 2, ಸ್ತ್ರೀಯರಲ್ಲಿ ಹಾಲಿಗೆ 2, ಪುರುಷರಲ್ಲಿ ವೀರ್ಯಕ್ಕೆ 2. ಇದೇ ರೀತಿ ಮಿಕ್ಕ ಧಮನಿಗಳು. ಇವು ಈಗಿನ ಜ್ಞಾನದೊಡನೆ ಹೊಂದಿಕೊಳ್ಳುವುದಿಲ್ಲ.

**ಸಿರಗಳು 700:** ಮೂಲದಲ್ಲಿರುವುವು 40, ವಾತಕ್ಕೆ 10, ಪಿತ್ತಕ್ಕೆ 10, ಕಫಕ್ಕೆ 10, ರಕ್ತಕ್ಕೆ 10, ಇವುಗಳಲ್ಲಿ ಪ್ರತಿ ಹತ್ತೂ 175 ಶಾಖೆಗಳಾಗುತ್ತವೆ. 175 ವಾತಸಿರಗಳಲ್ಲಿ ಒಂದೊಂದು ಕಾಲಲ್ಲಿ 25, ತೋಳಲ್ಲಿ 25, ಕೋಷ್ಟದಲ್ಲಿ 34, ತಲೆಕತ್ತುಗಳಲ್ಲಿ 41. ಇದೇ ರೀತಿ ಪಿತ್ತ, ಕಫ, ರಕ್ತಸಿರಗಳು.

**ಸ್ರೋತಗಳು 22:** ಇವು ಹೃದಯದಿಂದ ದೇಹದ ಎಲ್ಲ ಭಾಗಗಳಿಗೆ ಪ್ರಾಣ(ಉಸಿರು) ಆಹಾರ, ನೀರು, ರಸ, ರಕ್ತ, ಪೇಶಿ, ಕೊಬ್ಬು, ಮೂತ್ರ, ಮಲ, ವೀರ್ಯ ಮತ್ತು ರಜಸ್ಸುಗಳನ್ನು ಒಯ್ಯುತ್ತವೆ.

ಧಮನಿ, ಸಿರ ಮತ್ತು ಸ್ರೋತಗಳ ಸಮಸ್ಯೆಯು ಒಂದು ಒಗಟೆ ಎಂದು ಬಿ.ಸೀಲ್ ಬರೆದಿದ್ದಾರೆ. ಇವು ಕೊಳವೆಗಳು, ಈಗಿನ ಶರೀರವಿಜ್ಞಾನದಲ್ಲಿ ಇವಕ್ಕೆ ಸ್ಥಾನವಿಲ್ಲ. ವಾತ, ಪಿತ್ತ, ಕಫಗಳೆಂಬ ತ್ರಿದೋಷಗಳ ಸಿದ್ಧಾಂತಕ್ಕೆ ಸರಿಯಾಗಿ ಇವನ್ನು ವರ್ಣಿಸಲಾಗಿದೆ. ಇವುಗಳ ಜೊತೆಗೆ ಅಥರ್ವವೇದದಲ್ಲಿ ಹೀರ, ಸ್ನಾವ ಮತ್ತು ನಾಡಿಗಳೂ ಇವೆ. ದೊಡ್ಡ ನಾಡಿಗಳು ಧಮನಿಗಳು, ಸಣ್ಣಗಿರುವವು ಸಿರಗಳು, ಅತಿ ಸಣ್ಣಗಿರುವವು ಸ್ನಾವಗಳು ಇರಬಹುದೆಂದು ದಾಸಗುಪ್ತ ಅವರು ಬರೆದಿದ್ದಾರೆ.

**ಹೃದಯ (ಗುಂಡಿಗೆ):** ಅಥರ್ವವೇದದಲ್ಲಿ ಹೃದಯವನ್ನು 9 ಬಾಗಿಲುಗಳಿರುವ ಕಮಲಕ್ಕೆ ಹೋಲಿಸಲಾಗಿದೆ. ಈ ರೀತಿ ಕಮಲಕ್ಕೆ ಹೋಲಿಸುವುದು ಆಯುರ್ವೇದ ಗ್ರಂಥಗಳಲ್ಲಿ ಸಾಮಾನ್ಯ, ಸುಶ್ರುತಶಾರೀರದ 4ನೆಯ ಅಧ್ಯಾಯದಲ್ಲಿ ಕೆಳಮುಖವಾಗಿ ಕಮಲದಂತಿರುವ ಹೃದಯ ಜಾಗೃತವಾಗಿ ವಿಕಸಿತವಾಗುತ್ತದೆ ಎಂದಿದೆ.

ಯಕೃತ್ ಮತ್ತು ಪ್ಲೀಹಗಳನ್ನು ಪ್ರವೇಶಿಸಿ ರಸ ಕೆಂಪಾಗುತ್ತದೆ. ದೇಹಿಗಳ ಶರೀರದಲ್ಲಿರುವ ತೇಜಸ್ಸು ಮತ್ತು ಅಪ್ಪುಗಳಿಂದ ರಂಜಿತವಾಗಿ ಪ್ರಸನ್ನಗೊಂಡುದು ರಕ್ತ.

**ಒಳ ಅಂಗಗಳು :** ಅಥರ್ವವೇದದಲ್ಲಿ ಹೃದಯ, ಶ್ವಾಸಕೋಶ, ಪಿತ್ತಕೋಶ, ವೃಕ್ಕ(ಮೂತ್ರಜನಕಾಂಗ), ಯಕೃತ್, ಪ್ಲೀಹ, ಜಠರ, ಕ್ಷುದ್ರಾಂತ್ರ (ಸಣ್ಣ ಕರುಳು), ಸ್ಥೂಲಾಂತ್ರ (ದೊಡ್ಡ ಕರುಳು), ಗುದ, ಉದರ, ಹೊಕ್ಕುಳು ಇವುಗಳ ವಿಚಾರಗಳಿವೆ. ಕ್ಲೋಮ ಎಂದರೆ ಬಲಶ್ವಾಸಕೋಶ ಮತ್ತು ಯಕೃತ್, ಪುಪ್ಪುಸ ಎಂದರೆ ಎಡಶ್ವಾಸಕೋಶ ಮತ್ತು ಪ್ಲೀಹ. ಕರುಳು ಪುರುಷರಲ್ಲಿ 3½ ಮೊಳ. ಸ್ತ್ರೀಯರಲ್ಲಿ 3 ಮೊಳ.

ದೊಡ್ಡ ಕರುಳಿನ ಕೊನೆಯ 5" ಭಾಗ ಗುದ. ಅದರಲ್ಲಿ ½" ಬಿಟ್ಟು 3 ವಲಯಾಕಾರದ ಮಡಿಕೆಗಳಿವೆ. ಇವು ಪ್ರವಾಹಣೀ ವಿಸರ್ಜನೀ ಮತ್ತು ಸಂವರಣೀ. ಗುದದ ಕೆಳ ಕೊನೆಯಲ್ಲಿ ಗುದೋಷ್ಠ (ತುಟಿ)ವಿದೆ. ಈ ವಿವರ ಸಮಂಜಸವಾಗಿದೆ.

ಆಮಾಶಯ ಎಂದರೆ ಜಠರ. ಪಕ್ವಾಶಯ ಎಂದರೆ ಕರುಳು. ಬಸ್ತಿಯಲ್ಲಿ ಮೂತ್ರಾಶಯವಿದೆ. ಗರ್ಭಾಶಯ ರೋಹಿತ ಮೀನಿನ ಮೂತಿಯಂತಿದೆ. ಮಿಕ್ಕ ಆಶಯಗಳನ್ನು (ವಾತ, ಪಿತ್ತ ಇತ್ಯಾದಿ)ಆಧುನಿಕ ಜ್ಞಾನದ ಪ್ರಕಾರ ನಿರ್ಣಯಿಸುವುದು ಕಷ್ಟ. ಕೊಳೆತ ದೇಹದ ಪರೀಕ್ಷೆಯಿಂದ ಮುಖ್ಯವಾದ ಒಳ ಅಂಗಗಳ ವರ್ಣನೆಯೇ ಇಲ್ಲದಂತಾಗಿದೆ. ಇರುವ ವರ್ಣನೆ ವಾತ ಪಿತ್ತ ಮುಂತಾದುವುಗಳ ಸೂತ್ರಗಳಿಗೆ ಸರಿಯಾಗಿದೆ ಎಂದು ಮಾತ್ರ ಹೇಳಬಹುದು.

**ಮರ್ಮಗಳು 107:** ಇವುಗಳ ವರ್ಣನೆ ಶಲ್ಯತಂತ್ರದ ಅರ್ಥದಷ್ಟಿದೆ. ಇವು ಸ್ನಾಯು, ಸಿರ, ಪೇಶಿ, ಮೂಳೆ ಮತ್ತು ಕೀಲುಗಳು ಸೇರುವ ಸ್ಥಳಗಳು. ಶಸ್ತ್ರ ಚಿಕಿತ್ಸೆಯಲ್ಲಿ ಕತ್ತಿ ಮುಂತಾದ ಶಲ್ಯಗಳು ಇವನ್ನು ಸೋಕಿದರೆ ಅಪಾಯ ಎಂದು ಹೇಳಲಾಗಿದೆ.

ಸುಶ್ರುತ ಆ ಕಾಲದಲ್ಲಿ ಶಲ್ಯತಂತ್ರದಲ್ಲಿ ಪ್ರಸಿದ್ಧನಾಗಿದ್ದನು. ಅದಕ್ಕೋಸ್ಕರವೇ ಅವನು ಶಾರೀರಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿದ್ದಂತೆ ಕಾಣುತ್ತದೆ. ಅವನ ತರುವಾಯ ಶಲ್ಯತಂತ್ರದಲ್ಲಿ ಅವನಷ್ಟು ಯಾರೂ ಪ್ರವೀಣರಾಗಿದ್ದಂತಿಲ್ಲ. ಶಲ್ಯದಿಂದ ಮಾಡುವುದನ್ನು ಔಷಧತಂತ್ರದಿಂದಲೇ ಸಾಧಿಸಬಹುದೆಂಬ ನಂಬಿಕೆ ಹುಟ್ಟಿದ್ದು ಇದಕ್ಕೆ ಕಾರಣವಾಗಿರಬಹುದು. ಶಲ್ಯತಂತ್ರಕ್ಕೆ ಪ್ರಾಶಸ್ತ್ಯ ಕಡಿಮೆಯಾದಾಗ ಶಾರೀರದ ಆವಶ್ಯಕತೆಯೂ ಕಡಿಮೆಯಾಗಿ ಅದು ಮುಂದಕ್ಕೆ ಬೆಳೆದಿಲ್ಲವೆಂದು ಕಾಣುತ್ತದೆ.

ನರಮಂಡಲದ ವಿಚಾರ ಸುಶ್ರುತಸಂಹಿತೆಯಲ್ಲೂ ಇತರ ಆಯುರ್ವೇದ ಗ್ರಂಥಗಳಲ್ಲೂ ಇಲ್ಲ ಎನ್ನಬಹುದು. ಮಿದುಳಿನ ಆಕಾರ, ಗಾತ್ರ ಇತ್ಯಾದಿಗಳೂ ಇಲ್ಲ. ಕಳೆದ 50 ವರ್ಷಗಳಿಂದ ಮಿದುಳು ಬೆನ್ನುಹುರಿ ನರಗಳ ವಿಚಾರಗಳೇ ಬೃಹತ್‌ವಿಜ್ಞಾನವಾಗಿ ಬೆಳೆಯುತ್ತಿದೆ. (ಎಂ.ಡಿ.)

**ಅಂಗರಚನಾವಿಜ್ಞಾನ, ತುಲನಾತ್ಮಕ :** ಇದು ಪ್ರಾಣಿಶಾಸ್ತ್ರದ ಶಾಖೆಗಳಲ್ಲಿ ಒಂದು. ವಿವಿಧ ಗುಂಪಿನ ಪ್ರಾಣಿಗಳ ಅಂಗರಚನೆಯನ್ನು ಅಧ್ಯಯನಮಾಡಿ ಅವುಗಳಲ್ಲಿ ಪರಸ್ಪರ ಹೋಲಿಕೆಯನ್ನು ತರುವುದೇ ಈ ವಿಜ್ಞಾನದ ಪ್ರಧಾನ ಉದ್ದೇಶ. ಪ್ರಾಣಿವಿಜ್ಞಾನಿಗಳು ಪ್ರಾಣಿಗಳನ್ನು ಅವುಗಳ ವಿಶಿಷ್ಟಲಕ್ಷಣಗಳ ಆಧಾರದ ಮೇಲೆ ಹತ್ತಿರ ಸಂಬಂಧವಿರುವುದನ್ನು ಗುಂಪುಗೂಡಿಸಿ ವರ್ಗೀಕರಿಸಿದ್ದಾರೆ. ಕ್ರಿಮಿಕೀಟಾದಿಗಳಿಂದ ಕೂಡಿದ ಬೆನ್ನೆಲುಬಿಲ್ಲದ (ಅಕಶೇರುಕ) ಪ್ರಾಣಿಗಳಲ್ಲಿ ಸಾಮ್ಯಕ್ಕಿಂತ ವೈಷಮ್ಯಗಳೇ ಹೆಚ್ಚು. ಆದರೂ ಒಂದು ವಂಶದ ಪ್ರಾಣಿಗಳಲ್ಲಿ ಹಲವು ಸಾಮ್ಯಗಳನ್ನು ಕಾಣಬಹುದು. ಉದಾಹರಣೆಗೆ ಸಂಧಿಪದಿಗಳಲ್ಲಿ ಸಖಂಡದೇಹ, ಕೈಟಿನ್ನಿನ ಕವಚ, ಪ್ರತಿ ಖಂಡದಲ್ಲೂ ಒಂದೊಂದು ಜೊತೆ ಕೀಲುಗಳಿಂದ ಕೂಡಿದ ಉಪಾಂಗಗಳು, ಅಧರದ ಜೋಡಿ ನರಹುರಿ – ಮೊದಲಾದ ಗುಣಲಕ್ಷಣಗಳು ಸಮಾನವಾಗಿವೆ. ಅಲ್ಲದೆ ಎರೆಹುಳು, ಜಿಗಣೆಗಳನ್ನೊಳಗೊಂಡ ವಲಯವಂತ ಪ್ರಾಣಿಗಳಲ್ಲಿ,




**ಕಶೇರುಕಗಳ ಎಲುಬುಗಳ ಹೋಲಿಕೆ**

I. ಹಲ್ಲಿ, II. ಕಪ್ಪೆ (ನಡೆಯಲು), III. ಪಕ್ಷಿ, IV. ಬಾವಲಿ (ಹಾರಲು), V. ಮನುಷ್ಯ (ಹಿಡಿಯಲು), VI. ಕುರಿ, VII. ಕುದುರೆ (ಓಡಲು), VIII. ಮೋಲ್ (ಅಗೆಯಲು), IX. ತಿಮಿಂಗಿಲ (ಈಜಲು).

ಕೆಲವು ಮೃದ್ವಂಗಿಗಳಲ್ಲಿ ಅಧರದ ಜೋಡಿ ನರಹುರಿಗಳಲ್ಲಿ ಸಾಮ್ಯವನ್ನು ಕಾಣಬಹುದು. ಆದರೆ ಮೀನು,ಕಪ್ಪೆಗಳನ್ನೊಳಗೊಂಡ ದ್ವಿಚರಿಗಳಾದ ಆಮೆ, ಹಲ್ಲಿ, ಹಾವು, ಮೊಸಳೆಗಳನ್ನೊಳಗೊಂಡ ಸರೀಸೃಪ, ಪಕ್ಷಿ ಮತ್ತು ಸಸ್ತನಿಗಳಲ್ಲಿ ಪ್ರತಿಯೊಂದು ಅಂಗಮಂಡಲದಲ್ಲಿಯೂ ವಿಚಾರಸಮ್ಮತವಾದ ಸಾಮ್ಯವನ್ನು ಕಾಣುತ್ತೇವೆ; ಅಂಗಮಂಡಲದಲ್ಲುಂಟಾಗಿರುವ ವಿಕಾಸಗತಿಯನ್ನು ನೋಡುತ್ತೇವೆ. ಈ ಕಾರಣದಿಂದಲೇ ವಿಕಾಸವಾದಿಗಳು ತಮ್ಮ ವಾದವನ್ನು ಪ್ರತಿಪಾದಿಸುವುದಕ್ಕೆ ಅಂಗರಚನಾತ್ಮಕ ಸಾಕ್ಷ್ಯಾಧಾರಗಳನ್ನು ಮುಂದಿಡುತ್ತಾರೆ.

ಆಂದ್ರೆ ವೆಸೇಲಿಯಸ್ಸನು 1543ರಲ್ಲಿ ಮಾನವನ ದೇಹವನ್ನು ವಿಚ್ಛೇದಿಸಿ, ಅಂಗರಚನೆಯ ಬಗ್ಗೆ ವಿವರಣೆಗಳನ್ನು ನೀಡಿದ ಹನ್ನೆರಡು ವರ್ಷಗಳಮೇಲೆ, ಫ್ರಾನ್ಸಿನ ಪಿಯೇರ್ ಬೆಲೋನ್ (1517–64) ಎಂಬ ಪ್ರಾಣವಿಜ್ಞಾನಿ ಪಕ್ಷಿ ಮತ್ತು ಮಾನವನ ಅಸ್ಥಿಪಂಜರದ ಎಲುಬುಗಳನ್ನು ಒಂದರ ಪಕ್ಕದಲ್ಲಿ ಮತ್ತೊಂದನ್ನಿಟ್ಟು ಅಧ್ಯಯನಮಾಡಿ, ವಿವಿಧ ಎಲುಬುಗಳು ಒಂದೇ ಬಗೆಯಲ್ಲಿ ಅಳವಟ್ಟಿರುವುದನ್ನು ಮೊದಲಬಾರಿಗೆ ತೋರಿಸಿದ. ಅವನ ಕಾಲದಿಂದ ಪ್ರಾರಂಭವಾದ ಈ ಶಾಸ್ತ್ರವನ್ನು ಗೊಯೆತೆ, ಓಕೆನ್ ಮೊದಲಾದವರು ತಾತ್ವಿಕ ಹಾಗೂ ವಿವರಣಾತ್ಮಕವಾಗಿ 19ನೆಯ ಶತಮಾನದವರೆಗೂ ಬೆಳೆಸಿಕೊಂಡು ಬಂದರು. ಈ ಶಾಸ್ತ್ರವು

ಕೊನೆಗೆ ಚಾರ್ಲ್ಸ್ ಡಾರ್ವಿನ್ನನ ಆರಿಜಿನ್ ಆಫ್ ಸ್ಪೀಷೀಸ್(1859) ಎಂಬ ಗ್ರಂಥದ ಪ್ರಕಟಣೆಯಾದ ಮೇಲೆ ಜೀವವಿಕಾಸಾಧ್ಯಯನದಲ್ಲಿ ಗಣ್ಯಸ್ಥಾನವನ್ನು ಪಡೆಯಿತು.ಈ ಕ್ಷೇತ್ರದಲ್ಲಿ ರೋಬರ್ಟ್ ವೀಡರ್‍ಷೀಮ್ ಎಂಬುವನ ಕೊಡುಗೆ ಕಳಶಪ್ರಾಯವಾಗಿದೆ.

ಕಶೇರುಕದ ಯಾವ ಅಂಗಮಂಡಲವನ್ನೇ ತೆಗೆದುಕೊಂಡರೂ ಅದು ಒಂದು ನಿರ್ದಿಷ್ಟ ಮೂಲ ರಚನೆಯ ಮೇಲೆ ಆಧಾರಿತವಾಗಿರುವಂತಿದೆ. ಆದರೆ ಜೀವನದ ಚಟುವಟಿಕೆ, ಕಾರ್ಯನಿರ್ವಹಣೆಗೆ ತಕ್ಕಂತೆ ಅಂಗಗಳಲ್ಲಿ ಮಾರ್ಪಾಟಾಗಿರಬಹುದು ಅಥವಾ ಅಂಗದ ಕೆಲವು ಭಾಗಗಳು ನಶಿಸಿಹೋಗಿರಬಹುದು. ಬಾವಲಿ, ಪಕ್ಷಿ ಮತ್ತು ಗತಕಾಲದ ಟೆರೋಡಾಕ್ಟೈಲ ಎಂಬ ಹಾರುವ ಸರೀಸೃಪಗಳ ರೆಕ್ಕೆಯಲ್ಲೂ ರೆಕ್ಕೆಯ ಎಲುಬುಗಳ ವಿನ್ಯಾಸದಲ್ಲೂ ಸಾಮ್ಯವಿದೆ. ಅವೆಲ್ಲವೂ ಮೂಲಭೂತವಾದ ಭೂಚರ ಕಶೇರುಕದ ಮುಂದೋಳಿನ ಎಲುಬುಗಳ ವಿನ್ಯಾಸದ ಮಾರ್ಪಾಟೆಂಬುದನ್ನು ಸೂಚಿಸುವಂತಿದೆ. ಆದರೆ ಕೀಟದ ರೆಕ್ಕೆಗಳು ಕಾರ್ಯನಿರ್ವಹಣೆಯಲ್ಲಿ ಪಕ್ಷಿಯಂತೆ ಹಾರಲು ನೆರವಾಗುತ್ತವೆಯೇ ವಿನಾ ರೆಕ್ಕೆಯ ರಚನೆಯಲ್ಲಿ ಅಣುಮಾತ್ರವೂ ಹೋಲಿಕೆ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ಜೀವನದ ಕಾರ್ಯಚಟುವಟಿಕೆಗಳಿಗೆ ತಕ್ಕಂತೆ ನಡಿಗೆಗೆ (ಕಪ್ಪೆ, ಹಲ್ಲಿ, ಮೊಸಳೆ ಇತ್ಯಾದಿ), ಓಡುವುದಕ್ಕೆ (ನಾಯಿ, ಕುದುರೆ ಇತ್ಯಾದಿ), ಹಾರುವುದಕ್ಕೆ (ಪಕ್ಷಿ,ಬಾವಲಿ), ಈಜುವುದಕ್ಕೆ (ತಿಮಿಂಗಿಲ ಮೊದಲಾದುವು), ಅಗೆಯುವುದಕ್ಕೆ (ಪೋಲ್ ಇತ್ಯಾದಿ), ಹಿಡಿಯುವುದಕ್ಕೆ (ನರವಾನರ, ಮಂಗ ಮೊದಲಾದುವು), ನೆರವಾಗುವ ಎಲುಬುಗಳ ರಚನೆಯಲ್ಲಿ ಸ್ವಲ್ಪ ಮಾರ್ಪಾಟಾಗಿದ್ದರೂ ಮೂಲಭೂತ ಎಲುಬುಗಳ ವಿನ್ಯಾಸದಲ್ಲಿ ಮಾರ್ಪಾಟು ಕಂಡುಬರುವುದಿಲ್ಲ.

ಆದರೆ ಇಂದಿನ ಮಾನವನ ಮುಂದೋಳು ಮತ್ತು ಕುದುರೆಯ ಮುಂಗಾಲುಗಳ ಎಲುಬುಗಳಲ್ಲಿ ಕೆಲವು ಸಾಮ್ಯಗಳಿವೆ. ಕೆಲವು ಎಲುಬುಗಳು ಮಾರ್ಪಾಟಾಗಿವೆಯಲ್ಲದೆ ಹಲವು ಮೂಳೆಗಳು ಲೋಪವಾಗಿವೆ. ಇಂಥ ಮಾರ್ಪಾಟು ಮತ್ತು ಲೋಪಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಇಂದಿನ ಕುದುರೆಗಳ ಪೂರ್ವೇತಿಹಾಸವನ್ನು ಅಧ್ಯಯನ ಮಾಡಬೇಕು. ಲುಪ್ತಜೀವಿ ಕುದುರೆಗಳಲ್ಲಿ ಕ್ರಮಕ್ರಮವಾಗಿ ಮುಂಗಾಲು ಹಿಂಗಾಲುಗಳ

ಬೆರಳುಗಳ ಎಲುಬುಗಳು ನಶಿಸಿ ಕೊನೆಗೆ ಒಂದೇ ಬೆರಳು ಪ್ರಮುಖವಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು.

ಪಳೆಯುಳಿಕೆಗಳ ಅಧ್ಯಯನದಿಂದ ಕಠಿಣಾಂಗಗಳ ಹೋಲಿಕೆಯನ್ನು ಅಧ್ಯಯನ ಮಾಡಬಹುದೇ ವಿನಾ ಮೃದ್ವಂಗಿಗಳ ರಚನೆಯ ಸಾಮ್ಯವನ್ನು ಕಂಡುಹಿಡಿಯುವುದ ಕ್ಕಾಗುವುದಿಲ್ಲ. ಅಂಥ ಸಾಮ್ಯವನ್ನು ಕಾಣಬೇಕಾದರೆ ಭ್ರೂಣಗಳ ಅಧ್ಯಯನ ಮಾಡಬೇಕು. ಭ್ರೂಣವಿಜ್ಞಾನದ ಅಧ್ಯಯನದಿಂದ ಅಂಗರಚನೆಗಳ ಸಾಮ್ಯವನ್ನು ಪರೀಕ್ಷಿಸಿದರೆ ಸಾಮ್ಯ ಮತ್ತು ವಿಕಾಸಗಳನ್ನು ಕಾಣಬಹುದು; ಹೃದಯ, ಮಿದುಳು ಮೊದಲಾದ ಮೃದ್ವಂಗಗಳ ವಿಕಾಸವನ್ನು ವಿವರಿಸಬಹುದು. ಅಲ್ಲದೆ ಮೀನು, ಕಪ್ಪೆ, ಸರೀಸೃಪ, ಪಕ್ಷಿಗಳಲ್ಲಿ ಕಪಾಲ ಮತ್ತು ದವಡೆಗಳನ್ನು ಕೂಡಿಸಲು ಎರಡು ಕೀಲು ಎಲುಬುಗಳು ತಮ್ಮ ಮೂಲ ಕರ್ತವ್ಯವನ್ನು ಕಳೆದುಕೊಂಡು ಸಸ್ತನಿಯಲ್ಲಿ ಅವು ಹೇಗೆ ಧ್ವನಿತರಂಗಗಳನ್ನು ಕಿವಿ ತಮಟೆಯಿಂದ ಒಳಕಿವಿಗೆ ಸಾಗಿಸುವ ಎಲುಬು ಸರಪಳಿಯಾಗಿ ಮಾರ್ಪಟ್ಟು ಬೇರೆಯ ಕೆಲಸವನ್ನು ಮಾಡುತ್ತವೆ ಎಂದು ತೋರಿಸಬಹುದು. (ಬಿ.ಎನ್.ಬಿ.)

**ಅಂಗರಚನಾವಿಜ್ಞಾನ, ಸೂಕ್ಷ್ಮದರ್ಶಕದ :** ಈ ಭಾಗದಲ್ಲಿ ಯಾವುದಾದರೂ ತೆರನ ಮಸೂರ (ಲೆನ್ಸ್) ವಿನ್ಯಾಸದ ಮೂಲಕ ಮಾತ್ರ ಪಡೆಯಬಹುದಾದ ತಿಳಿವಳಿಕೆಯಿದೆ. ಅಲ್ಲದೆ ಇದು ಜೀವವಿಜ್ಞಾನದ ಮಿತಿಯೊಳಗಿದೆ. ಅಂಗಗಳ, ಜೀವಿಗಳ ಭಾಗಗಳ ನವುರಾದ ರಚನೆಯನ್ನು ಕುರಿತ ವಿಷಯಗಳನ್ನು ಬಿಡಿಬಿಡಿಯಾಗಿ ಪರೀಕ್ಷಿಸಿ, ಮರುಜೋಡಿಸುವುದೇ ಇದರ ಮುಖ್ಯ ಕೆಲಸ. ಒಂದಾಗಿ ಹೊಂದಿಕೊಂಡಿರುವ ನಿರ್ಜೀವ ಪದಾರ್ಥಗಳ ಒಳರಚನೆಯನ್ನೂ ಸೇರಿಸಿಕೊಂಡು, ಸೂಕ್ಷ್ಮದರ್ಶಕದ ಅಂಗರಚನಾವಿಜ್ಞಾನದ ಕಲ್ಪನೆಯನ್ನು ಹಿಗ್ಗಿಸುವುದು ಸಾಧ್ಯ. ಅಷ್ಟೇ ಏನು, ಶಿಲಾಶಾಸ್ತ್ರ (ಪೆಟ್ರಾಲಜಿ), ಲೋಹವಿಜ್ಞಾನಗಳು ಎಷ್ಟೋ ಕಾಲದಿಂದಲೂ ಕಲ್ಲುಗಳ, ಲೋಹಗಳ ಸಂಯೋಗ, ಜೋಡಣೆಗಳನ್ನು ಚೆನ್ನಾಗಿ ತಿಳಿಯಲು ಸೂಕ್ಷ್ಮದರ್ಶಕವನ್ನು ಬಳಸುತ್ತಲೇ ಇವೆ. ಈ ಹಲತೆರನ ವಿಧಾನಗಳನ್ನು ಯತ್ನಗಳನ್ನು ಇನ್ನೂ ಸಾಮಾನ್ಯ ಕ್ರಮವಾದ ಸೂಕ್ಷ್ಮದರ್ಶನದಲ್ಲಿ (ಮೈಕ್ರೊಸ್ಕೊಪಿ) ಕಾಣಬಹುದು. ದೂಳು, ಒಂಟಿ ಜೀವಕಣದ ಪ್ರಾಣಿಗಳು, ಬೀಜಕಣಗಳು (ಸ್ಪೋರ್ಸ್), ಪರಾಗ ಕಣಗಳು. ಇಂಥವೆಲ್ಲದರ ಪರೀಕ್ಷೆ ಸೂಕ್ಷ್ಮದರ್ಶಕದಲ್ಲೇ ಸೇರುವುದರಲ್ಲಿ ಅನುಮಾನವಿಲ್ಲ. ಈ ಕೆಲಸ ಸೂಕ್ಷ್ಮದರ್ಶಕದ ಅಂಗರಚನಾವಿಜ್ಞಾನದಿಂದ ಸದ್ಯ ಹೊರಗೆ ಉಳಿಯಬೇಕು. ಏಕೆಂದರೆ ಭಾಗಾಂಶ ಮಂಡಲಗಳನ್ನು ತೋರುವ ಇನ್ನೂ ದೊಡ್ಡ ವ್ಯವಸ್ಥಾ ಕ್ರಮ ಇದರಲ್ಲಿ ಪರೀಕ್ಷೆಗೀಡಾಗುತ್ತದೆ. ನಿಜವಾಗಿ, ಸೂಕ್ಷ್ಮದರ್ಶಕದ ಅಂಗರಚನಾವಿಜ್ಞಾನ ಎನ್ನುವುದಕ್ಕೆ ಎರಡು ಅರ್ಥಗಳಿವೆ: ಸಾಮಾನ್ಯ ಬಳಕೆಯಲ್ಲಿ, ವಿಜ್ಞಾನ ವಿಭಾಗಗಳಾದ ಜೀವಕಣವಿಜ್ಞಾನ (ಜೀವಕಣ ರಚನೆ), ಅಂಗಾಂಶವಿಜ್ಞಾನ (ಅಂಗಾಂಶ ರಚನೆ), ಅಂಗವಿಜ್ಞಾನ (ಅಂಗಗಳ ಜೋಡಣೆ)ಗಳಂಥ, ಹಲವಾರು ವಿಭಾಗಗಳು ಒಂದುಗೂಡಿವೆ; ಆದರೆ ಅಂಗವಿಜ್ಞಾನ ಎನ್ನುವುದಕ್ಕೆ ಸಮನಾಗಿಯೂ ಸೂಕ್ಷ್ಮದರ್ಶಕದ ಅಂಗರಚನಾವಿಜ್ಞಾನದ ಬಳಕೆ ಇದೆ. ಇಡೀ ಪ್ರಾಣಿಗಳಲ್ಲಿ ದೊಡ್ಡ ದೊಡ್ಡ ಭಾಗಗಳನ್ನು ಕೊಯ್ದು ಬಿಡಿಸಿ ತೋರಲು ಚೂರಿ ಚಿಮುಟಗಳನ್ನು ಬಳಸುವಂತೆ, ಅಂಗವಿಜ್ಞಾನದಲ್ಲೂ ಅಂಗಗಳನ್ನೂ ಅವುಗಳ ಬೇರೆ ಬೇರೆ ಭಾಗಗಳನ್ನೂ ಸೂಕ್ಷ್ಮದರ್ಶಕ ಕಣ್ಣಿಗೆ ಬಿಡಿಯಾಗಿ ತೋರುತ್ತದೆ. ಪ್ರಾಣಿಕೋಟಿ, ಸಸ್ಯಕೋಟಿ ಎರಡರಲ್ಲೂ ಜೀವಕಣವಿಜ್ಞಾನ ಒಂದೇ. ಅವುಗಳ ಅಂಗಾಂಶ ವಿಜ್ಞಾನವೂ ಅಂಗವಿಜ್ಞಾನವೂ ಬೇರೆ ಬೇರೆ ಆದರೂ ಒಂದಕ್ಕೊಂದು ಸಮಾನಾಂತರದಲ್ಲಿವೆ. ಇವೆರಡು ವಿಚಾರಗಳಲ್ಲೂ ಗಿಡಮರಗಳ ರಚನೆಯೇ ಸರಳ. ಯಾವಾಗಲೂ ಒಟ್ಟಾರೆ ಅಂಗರಚನಾವಿಜ್ಞಾನಕ್ಕೆ ಎದುರಾದ, ಸಾಮಾನ್ಯವಾಗಿ ಉನ್ನತ ಪ್ರಾಣಿಗಳನ್ನು ಅದರಲ್ಲೂ ಬಹುವಾಗಿ ಮಾನವ, ಸಸ್ತನಿಗಳನ್ನು ಕುರಿತ ವಿಜ್ಞಾನವೇ ಮಿಣಿದರ್ಶಕದ ಅಂಗರಚನಾವಿಜ್ಞಾನ, ಆಕಾರ ರಚನೆಗಳ ಬೆಳೆವಣಿಗೆಯನ್ನು ತೋರುವುದು ಪಿಂಡಶಾಸ್ತ್ರ; ಬೆಳೆದಿರುವವರ ಅಂಗರಚನಾವಿಜ್ಞಾನ ಇರುವಂತೆ, ಆಕೃತಿರಚನಾವಿಜ್ಞಾನ (ಮಾರ್ಫಾಲಜಿ) ವಿಜ್ಞಾನದ ಇನ್ನೂ ದೊಡ್ಡ ವಿಭಾಗಗಳಲ್ಲಿ ಒಂದು.

**ಸೂಕ್ಷ್ಮದರ್ಶನ ವಿಜ್ಞಾನದ ಹುಟ್ಟು :** ಸರಳವಾದ ಮಸೂರ ಬಿಂಬಗಳನ್ನು ದೊಡ್ಡದಾಗಿ ತೋರುವುದನ್ನು ಕಂಡುಹಿಡಿದುದು ತೀರ ಪುರಾತನ ಕಥೆ. ನೀರಿನ ತೊಟ್ಟುಗಳ, ಬೀಜದ ರೂಪದ, ತಿಳಿಯಾದ ಹಳುಕುಗಳ ಈ ಗುಣವನ್ನು ಪುರಾತನರು ಕಂಡಿರಬಹುದು. ಸರಳ ಮಸೂರದ ಪ್ರಭಾವವನ್ನು ಅನುಮಾನವಿಲ್ಲದೆ ಗುರುತಿಸಿದವನು ಸೆನೆಕ (ಪ್ರ.ಶ.ಪೂ. 4–ಪ್ರ.ಶ.65) ಇರಬಹುದು. ಆದರೆ ಅಂಥ ಸಲಕರಣೆಯಿಂದ ಕಂಡ ಕಿರುಜೀವಿಗಳನ್ನಾಗಲೀ, ನಿಸರ್ಗದ ಇತರ ಸೋಜಿಗಗಳನ್ನಾಗಲಿ ಯಾವ ಪುರಾತನ ಬರೆಹಗಳಲ್ಲೂ ಗುರುತಿಸಿಲ್ಲ. 17ನೆಯ ಶತಮಾನದ ನಡುಗಾಲದ ತನಕ, ಹಿಂದೆಂದೂ ಯಾರೂ ಕಂಡಿರದಿದ್ದ ಕಿರಿಕಿರಿಯ ಲಕ್ಷಣಗಳನ್ನು ಕಂಡುಹಿಡಿದು, ತಿಳಿವಳಿಕೆ ಹೆಚ್ಚಿಸುವುದರಲ್ಲಿ ಸೂಕ್ಷ್ಮದರ್ಶಕದ ಪಾತ್ರ ತಿಳಿದಿರಲಿಲ್ಲ. ಆ ಶತಮಾನದ ಕೊನೆಯರ್ಧದಲ್ಲಿ ಸರಳ ಮಸೂರಗಳನ್ನು ಇಟ್ಟುಕೊಂಡು ಮೂವರು ಮೊದಲಿಗ ಸೂಕ್ಷ್ಮದರ್ಶಕಗಳು ಕಂಡಿದ್ದನ್ನು ಚೆನ್ನಾಗಿ ನೋಡಿ ಖಚಿತವಾಗಿ ವರ್ಣಿಸುವುದರಲ್ಲಿ ಮಾದರಿ ಆಗಿದ್ದಾರೆ. ಶರೀರಕ್ರಿಯಾವಿಜ್ಞಾನ ಅಂಗರಚನಾವಿಜ್ಞಾನಗಳಿಗೆ ಹಿರಿಯ ಕೊಡುಗೆಗಳನ್ನು ಕೊಟ್ಟವರಲ್ಲಿ ಮೊದಲಿಗನೆಂದರೆ ಮಾರ್ಸೆಲ್ಲೊ ಮಾಲ್ಪಿಘಿ. ಅವನು ತೋರಿಸಿಕೊಟ್ಟ ಸಾಧನೆಗಳು ಹಲವಾರು: ಗಾಳಿಗೂಡುಗಳು ರಕ್ತದಿಂದ ಒಂದು ತೆಳುಪೊರೆಯಿಂದ ಬೇರ್ಪಟ್ಟಿರುವ ಪುಪ್ಪುಸಗಳ ರಚನೆ; ಲೋಮನಾಳಗಳಲ್ಲಿ ರಕ್ತದ ಹರಿವು; ಮೇಲ್ಚರ್ಮದ (ಎಪಿಡರ್ಮಿಸ್) ಮೊಳೆಯುವ (ಮಾಲ್ಪಿಘಿಯ) ಪದರ; ಮೂತ್ರಪಿಂಡದ (ಮಾಲ್ಪಿಘಿಯ) ಗೋಲಕಗಳು (ಕಾರ್ಪಸಲ್ಸ್); ತೊರಳೆಯ (ಮಾಲ್ಪಿಘಿಯ) ಕಿಗ್ಗಂಟುಗಳು (ಸ್ಲೀನಿಕ್ ನಾಡ್ಯೂಲ್ಸ್) ನಾಲಗೆಯ ಚೂಚುಕಗಳ ಲಕ್ಷಣಗಳು, ಜಾನ್ ಸ್ವಾಮರ್ಡಾಮ್ ಅಂತೂ ತನ್ನ ವಿಪರೀತ ಕೆಲಸದಲ್ಲಿ ತಾನೇ ಬಲಿಯಾದ. ಈ ಮೂವರಲ್ಲಿ ವಿಮರ್ಶಿಸಿ ವಿವರವಾಗಿ ನೋಡಿದವನೆಂದರೆ ಇವನೇ. ಇವನ ಕೆಲಸವೆಲ್ಲ ಬಹುವಾಗಿ ಕೀಟಗಳ ಜೀವನದ ಕಿರಿಯ ರಚನೆಗಳನ್ನು ಬಿಡಿಸುವುದಾಗಿದ್ದರೂ ರಕ್ತಕಣಗಳನ್ನು ಕಂಡು ವಿವರಿಸಿದವರಲ್ಲಿ ಇವನೇ ಮೊದಲಿಗ. ಅಂಟಾನ್ ವ್ಯಾನ್‍ಲ್ಯೂವೆನ್‍ಹಾಕ್ ಕೊನೆಯ ಪಕ್ಷ 270 ಅಡ್ಡಳತೆಯಷ್ಟಾದರೂ ದೊಡ್ಡದಾಗಿಸಬಲ್ಲ ಸರಳ ಮಸೂರಗಳನ್ನು ತಯಾರಿಸುತ್ತಿದ್ದ. ಕಿರಿಧಮನಿಗಳಿಗೂ (ಆರ್ಟೀರಿಯೋಲ್ಸ್), ಕಿರಿಸಿರಗಳಿಗೂ (ವೆನ್ಯೂಲ್ಸ್) ನಡುವೆ ಲೋಮನಾಳಗಳ ಜೋಡಣೆಯ ರಚನೆಯನ್ನು ಮೊಟ್ಟಮೊದಲು ಮುಖ್ಯವಾಗಿ ತೋರಿಸಿದ್ದೂ ಅವನ ಇತರ ಅನೇಕ ಸೂಕ್ಷ್ಮದರ್ಶಕ ಕಣ್ಣರಿಕೆಗಳಲ್ಲಿ ಸೇರಿದೆ. ಹೀಗೆ ರಕ್ತದ ಸುತ್ತಾಟದ ಕಲ್ಪನೆಯಲ್ಲಿ ವಿಲಿಯಂ ಹಾರ್ವೆಗೇ ತೋರಲು ಕೈಲಾಗದಿದ್ದುದನ್ನು ಇವನು ಕಣ್ಣಿಗೆ ಕಟ್ಟುವಂತೆ ತೋರಿಸಿಕೊಟ್ಟ. ಕೆಂಪು ರಕ್ತಕಣಗಳ ವಿಚಾರವಾಗಿನ ಸ್ವಾಮರ್ಡಾಮಿನ ಕಣ್ಣರಿಕೆಗಳನ್ನು ಮುಂದುವರೆಸಿ, ಉರಗಗಳ ಹೊರತಾಗಿ ಎಲ್ಲ ಬೆನ್ನೆಲುಬಿ ತಂಡಗಳಿಗೂ ಅನ್ವಯಿಸಿದ. ಎಲುಗಟ್ಟಿನ (ಸ್ಕೆಲಿಟಲ್) ಸ್ನಾಯುಗಳಲ್ಲಿ ಅಡ್ಡ ಪಟ್ಟೆಗಳಿರುವುದು; ಹೃದಯದ ಸ್ನಾಯುವಿನ ಕವಲೊಡೆದ ಲಕ್ಷಣ; ಹರಳಿನಂತಿರುವ ಕಣ್ಣಿನ ಮಸೂರದ ರಚನೆ, ಬಾಸೆಗಳು(ಸಿಲಿಯ) ಇರುವೆಡೆ ಮತ್ತು ಅವುಗಳ ಕೆಲಸ, ಸಸ್ತನಿಗಳ ರೇತುಕಣಗಳ (ಸ್ಪರ್ಮಟೊಜ಼ೋವ) ರೂಪ–ಇವೆಲ್ಲ ಅಂಗರಚನೆಗೆ ಸಂಬಂಧಿಸಿದ ಅವನ ಇತರ ಶೋಧನೆಗಳು.

16ನೆಯ ಶತಮಾನದ ಕೊನೆಯಲ್ಲಿ ಸಂಯುಕ್ತ ಸೂಕ್ಷ್ಮದರ್ಶಕದ ಆವಿರ್ಭಾವವಾಗಿ ತ್ತಾದರೂ ಲ್ಯೂವೆನ್‍ಹಾಕ್‍ನಂಥವನು ಬಳಸುತ್ತಿದ್ದಂಥ ಸರಳ ಸಾಧನಗಳಿಗಿಂತಲೂ ಎಷ್ಟೋ ಕಾಲ ಕೀಳಾಗಿತ್ತು. ಇನ್ನೂ ಒಳ್ಳೆಯ ಸಂಯುಕ್ತ ಸೂಕ್ಷ್ಮದರ್ಶಕ ತಯಾರಾಗಲು ವಸ್ತು (ಆಬ್ಜೆಕ್ಟಿವ್) ಮಸೂರದ ವಿನ್ಯಾಸ ಇನ್ನೂ ಚೆನ್ನಾಗಬೇಕಿತ್ತು. ಈ ದಿಸೆಯಲ್ಲಿ ತುಸು ಮುನ್ನಡೆ ಕಾಣಬೇಕಾದರೆ ಎರಡು ಶತಮಾನಗಳೇ ಹಿಡಿದವು. ಆದರೆ 1830 ರಿಂದಾಚೆ ಸುಧಾರಣೆ ಒಂದರ ಮೇಲೊಂದು ಆಗುತ್ತ ಬಂದು, 1886ರಲ್ಲಿ ಬಣ್ಣವೊಡೆಯದ (ಆ್ಯಕ್ರೊಮ್ಯಾಟಿಕ್) ವಸ್ತುಮಸೂರವನ್ನೂ ಕೊರೆ ತುಂಬುವ ಕಣ್ಣಮಸೂರವನ್ನೂ ತಯಾರಿಸಿದ ಮೇಲೆ ಸಂಯುಕ್ತ ಸೂಕ್ಷ್ಮದರ್ಶಕ ಅದರ ಅತ್ಯುನ್ನತ ಪರಿಣತಿಯನ್ನು ಪಡೆಯಿತು. ಸಾಧಾರಣವಾಗಿ ಜೀವಕಣದ ರಚನೆಯ ಅರ್ಥ ಹೇಳುವುದಕ್ಕಾಗಿಯೆ ಇದನ್ನು ಬಳಸಿಕೊಳ್ಳಲಾಗುತ್ತಿದೆ.

**ಜೀವರಸದ ನೆಲೆಗಾಣ್ಕೆ:** ಜೀವಕಣಗಳು, ಅಂಗಾಂಶಗಳು ಪರಿಶೀಲಿಸಬೇಕಾದರೂ ಜೀವಿಯ ಭೌತಿಕ ತಳಪಾಯವನ್ನು ಪ್ರತಿನಿಧಿಸುವ ಪಾಕದಂತಿರುವ (ಜೆಲ್ಲಿ) ಸಜೀವ ಪದಾರ್ಥವೇ ಜೀವರಸ(ಪ್ರೋಟೋಪ್ಲಾಸ್ಮ್) ಎಂಬ ಕಲ್ಪನೆ ಆಧಾರಭೂತ. ಹಿಂದೆಯೇ ಅಮೀಬ (ಚಲ್ಕಣ) ಸೂಕ್ಷ್ಮಜೀವಿಯಲ್ಲೂ ಕೆಲವು ಅನುಕೂಲವಾದ ಗಿಡಮರಗಳ ಜೀವಕಣಗಳಲ್ಲೂ ಜೀವರಸವನ್ನು ಕಂಡಿದ್ದರೂ ಪ್ರಾಣಿ ಜೀವಕಣಗಳ ಪುರಾತನ ಜಿಬ್ಬನ್ನು (ಸ್ಲೈಮ್) ಶೋಧನೆ ಮಾಡಿ, ವಿವರಿಸಿದವನು ಫೆಲಿಕ್ಸ್ ಡುಜಾರ್ಡಿನ್. ಕೋಳಿ(ಆಲ್ಬುಮಿನ್) ಯಂಥ ಇತರ ಜಿಗುಟಾದ ವಸ್ತುಗಳಿಂದ ಬೇರೆಯಾಗಿರುವುದನ್ನು ತೋರಲು ಇದಕ್ಕೆ ಮಾಂಸಕ(ಸಾರ್ಕೋಡ್) ಎಂದು ಹೆಸರಿಟ್ಟ. ಹಲವಾರು ವರ್ಷಗಳ ಅನಂತರ ಗಿಡಗಳ ಜೀವಕಣಗಳಲ್ಲಿನ ಇನ್ನೂ ಜಿಗುಟಾದ ಪಾಕದಂಥ ವಸ್ತುವನ್ನು, ಇನ್ನೂ ಒಳಗಿರುವ ನೀರಿನಂತಿರುವ ಜೀವಕಣದ ಗಿಡರಸದಿಂದ ಬೇರೆಯಾಗಿ ಗುರುತಿಸಿ, ಜೊಹಾನ್ನಿಸ್ ಪುರ್ಕಿನೆ (1787–1869) ಮೊದಲೇ ಸೂಚಿಸಿದ್ದ ಜೀವರಸ(ಪ್ರೋಟೊಪ್ಲಾಸ್ಮ್) ಪದವನ್ನು ಹ್ಯೂಗೊ ಫಾನ್ ಮೋಲ್ ಸಾಮಾನ್ಯ ಬಳಕೆಗೆ ತಂದ. ಪ್ರಾಣಿವಿಜ್ಞಾನಿಗಳ ಮಾಂಸಕವೂ ಸಸ್ಯವಿಜ್ಞಾನಿಗಳ ಜೀವರಸವೂ ಒಂದೇ ವಸ್ತು ಎಂದು ಹಲವಾರು ಕೆಲಸಗಾರರು ತಿಳಿಯುತ್ತ ಬಂದರು. ಆದರೂ ಕೀಳು ರೂಪಗಳಲ್ಲೂ ಉನ್ನತ ರೂಪಗಳಲ್ಲೂ ಪ್ರಾಣಿಗಳಲ್ಲೂ ಗಿಡಮರಗಳಲ್ಲೂ ಇರುವ ಜೀವರಸವೆಲ್ಲ ಒಂದೇ ಎನ್ನುವುದನ್ನು ಯಾವ ಅನುಮಾನವೂ ಇಲ್ಲದಂತೆ ಮ್ಯಾಕ್ಸ್ ಜೊಹಾನ್ ಷೂಲ್ಜ಼ ತೋರಿಸಬೇಕಾಯಿತು. ಹೀಗೆ 1840ರ ಎರಡು ದಶಕಗಳಂತೂ ಜೀವವಿಜ್ಞಾನದ ಭಾವೀ ಬೆಳೆವಣಿಗೆಯ ದೃಷ್ಟಿಯಿಂದ ಬಲು ಮುಖ್ಯ. ಏಕೆಂದರೆ ಜೀವರಸದ ರಚನೆ ಮತ್ತು ಕೆಲಸಗಳ ನಿಜ ಸ್ವರೂಪವನ್ನರಿಯುವುದೇ ಜೀವವಿಜ್ಞಾನದ ತಿಳಿವಿಗೆ ಅಡಿಗಲ್ಲು. ಇದೇ ಕಾಲದಲ್ಲಿ ಈ ಕಲ್ಪನೆಯ ಸತ್ಯ ಎಲ್ಲರಿಗೂ ಚೆನ್ನಾಗಿ ಮನದಟ್ಟಾಯಿತು. ಜೀವಿಸಿರುವ ಜೀವಾಣುಗಳ ಮೂಲಭೂತ ವಸ್ತುವೇ ಜೀವರಸವೆಂದು ವಿವರಿಸಬಹುದು. ಇದರಲ್ಲಿ ಜೀವಾಳದ ಎಲ್ಲ ಕ್ರಿಯೆಗಳೂ ತೋರಿಬರುತ್ತವೆ. ಇದರಿಂದಲೇ ಒಡೆಯುವ ಎಲ್ಲ ರಾಸಾಯನಿಕ ಬದಲಾವಣೆಗಳ ಗುಣಸ್ಥಾನವಿದು. ಭೌತಿಕವಾಗಿ ಈ ಜೋಲಂಟಿನ ಸಮ್ಮಿಶ್ರ (ಕಲಾಯಿಡಲ್ ಕಾಂಪ್ಲೆಕ್ಸ್) ಬಣ್ಣವಿರದ, ಆಚೆಗಾಣದ, ಜಿಗುಟಿನ, ಮೆತ್ತನೆಯ, ನೀರಿನಂಥ, ಪಾಕದಂಥ ಅರೆದ್ರವ.

**ಜೀವಿಯ ಏಕಮಾನವಾಗಿ (ಯೂನಿಟ್) ಜೀವಕಣದ ನೆಲೆಗಾಣ್ಕೆ :** ಬದುಕಿರುವ ಜೀವಿಗಳ ರಚನೆಯ ಬಿಡಿ ಪರೀಕ್ಷೆಯನ್ನು ಬುದ್ಧಿವಂತಿಕೆಯಿಂದ ಮುಂದುವರಿಸಿ ಸರಿಯಾಗಿ ಅರ್ಥ ಹೇಳುವ ಮೊದಲು ಇನ್ನೂ ಒಂದು ಅಭಿಪ್ರಾಯವನ್ನು ಸ್ಥಾಪಿಸಬೇಕಾಯಿತು. ಅವೇ ಜೀವರಸದ ಏಕಮಾನದ ತುಂಡುಗಳು: ಅಲ್ಲದೆ ಇವನ್ನು ಎಲ್ಲ ಅಂಗಾಂಶಗಳೂ ಅಂಗಗಳ ರಚನೆಗೂ ಅಡಿಪಾಯವಾಗಿ ಗಣಿಸುವ ಕಲ್ಪನೆಯಿದು. ಪ್ರಾಣಿಗಳು ಗಿಡಮರಗಳು ಎರಡಕ್ಕೂ ಮೂಲಸತ್ಯವಾಗಿ ಗಟ್ಟಿಯಾಗಿ ನೆಲೆಗೊಳ್ಳುವುದರ ಮುಂಚೆ ಸದ್ಯ ಕಣ್ಣರಿಕೆಯಿಂದ ಪಡೆದು ಬಂದ ಜೀವಕೋಶದ ಈ ಯೋಜನೆ ಸರಿಸುಮಾರು 2 ಶತಮಾನಗಳ ಕಾಲ ಇನ್ನೂ ಊಹೆಯಮಟ್ಟದಲ್ಲೇ ಇತ್ತು. ಹಿಂದಿನ ಕಾಲದ ಬೇರೆ ಬೇರೆ ಲಕ್ಷಕರು ಅವುಗಳ ನಿಜವಾದ ಅರ್ಥವೇ ಗೊತ್ತಿರದೆ ಜೀವಕೋಶಗಳನ್ನು ನೋಡಿ ಚಿತ್ರಗಳಲ್ಲಿ ಗುರುತಿಸಿದರು. 2000 ವರ್ಷಗಳ ಮುಂಚೆಯೇ ಅರಿಸ್ಟಾಟಲ್ ಕೇವಲ ತರ್ಕದಿಂದಲೇ ಇಂಥ ಕಾಲ್ಪನಿಕ ಸಿದ್ಧಾಂತವನ್ನೇ ನಿರೂಪಿಸಿದ್ದ. 17ನೆಯ ಶತಮಾನದಲ್ಲಿ ರಾಬರ್ಟ್ ಹೂಕ್ ನಿರ್ಜೀವ (ಬೆಂಡು) ತೆಳು ಬಿರಡೆ ಚೂರನ್ನು ಪರೀಕ್ಷಿಸಿ, ಅಷ್ಟು ಕ್ರಮವಾಗಿ ಇಲ್ಲದಿದ್ದರೂ ಜೇನುಗೂಡಿನಂತೆ ಇದ್ದು ಸಣ್ಣ ಪೆಟ್ಟಿಗೆಗಳು ಇಲ್ಲವೇ ಕೋಣೆಗಳು (ಸೆಲ್ಸ್), ಇವೆಯೆಂದು ವರ್ಣಿಸಿದ. ಜೀವಕೋಶಗಳನ್ನು ಮೊಟ್ಟಮೊದಲು ತೋರಿಸಿದ ಚಿತ್ರಗಳು ಅವನವೇ. ಆದರೆ ಅವನು ಕಂಡು ಒತ್ತಿ ಹೇಳಿದ್ದು ಎದ್ದು ಕಾಣುವ ಸೆಲ್ಯುಲೋಸಿದ ಜೀವಕೋಶ ಗೋಡೆಗಳು. ಗೋಡೆಗಳಿರುವ ಬರಿದಾದ ಕೋಣೆಯ ಕಲ್ಪನೆಯಿಂದಲೇ ಜೀವಕೋಶ (ಸೆಲ್) ಪದ ಹುಟ್ಟಿದ್ದು. ಕೆಲವೇ ವರ್ಷಗಳಲ್ಲಿ ಹಲವರು ಜೀವಕೋಶವಾದ ಅಡಿಪಾಯ ಆಗಲೇ ನೆಲೆಗೊಂಡಿತು ಎನ್ನುವಷ್ಟರ ಮಟ್ಟಿಗೆ ಸಮಕಾಲೀನರು ಗಿಡಮರಗಳ ಜೀವಕೋಶ ಕಟ್ಟಡವನ್ನು ಅನುಮಾನವಿಲ್ಲದಂತೆ ಚೆನ್ನಾಗಿ ಚಿತ್ರಗಳಲ್ಲಿ ತೋರಿಸಿದ್ದರು. ಆದರೆ ಈ ಚಿತ್ರಗಳೆಲ್ಲ ಕೇವಲ ಗಿಡಗಳ ನೆಯ್ಗೆಯ ಖಚಿತವಾದ ದಾಖಲೆಗಳಂತೆ ಇದ್ದುವು. ತಾನು ಚಿತ್ರಿಸಿದ ಪೆಟ್ಟಿಗೆಗಳು ಬಿಡಿಸಬಹುದಾದ ಚರ್ಮಚೀಲಗಳು (ಯೂಟ್ರಿಕಲ್ಸ್) ಒಂದುಗೂಡಿ ಗಿಡದ ಅಂಗಾಂಶವಾಗಿ ಇರುವುದು ಎಂದು ಮಾಲ್ಪಿಘಿ ತಿಳಿಸಿದ್ದು ನಿಜಾಂಶಕ್ಕೆ ತೀರ ಹತ್ತಿರವಾಗಿದೆ. ಆದರೆ ಜೀವಿಗಳ ಸರಿಜೋಡಿಸಿರುವ ರಚನೆಯಲ್ಲಿ ಎಲ್ಲೆಲ್ಲೂ ಇಂಥವೇ ಇವೆಯೆಂಬ ಸಮಗ್ರ ಕಲ್ಪನೆ ಅವನಿಗೆ ಹೊಳೆಯಲ್ಲಿಲ್ಲ. ಕೊನೆಗೆ, ಶತಮಾನದ ಅನಂತರ, ಎಲ್ಲವೂ ಮೊದಲೇ ರೂಪಿತವಾಗೇ ಹುಟ್ಟುವವೆಂಬ ಕಲ್ಪನೆಯನ್ನು ಸುಳ್ಳಾಗಿಸಿದ ಸಿ.ಎಫ್.ವುಲ್ಫ್ (1733–94) ಒಂದೊಂದು ಅಂಗವೂ ಮೊದಲು, ಅವ್ಯವಸ್ಥಿತ ಜಿಗುಟಿನ ದ್ರವ ಆಗಿರುತ್ತದೆ. ಈ ದ್ರವದಿಂದಲೇ ಆಮೇಲೆ ಜೀವಕೋಶಗಳಾಗುವ ಪೊಳ್ಳುಗಳು ನಿರ್ಮಾಣವಾಗುತ್ತವೆಯೆಂದು ವಿವರಿಸಿದ. ಒಂದು ಜೀವಿಯ ಇಲ್ಲವೆ ಗಿಡದ ಮೊದಮೊದಲು ಬೆಳೆವ ಅಂಗಗಳಲ್ಲಿ ಈ ಕ್ರಮಗತಿ ಒಂದೇ ತೆರನೆಂದೂ ಹೇಳಿದ.

ವುಲ್ಫ್‌ನ ಅನಂತರ ಸರಿಸುಮಾರು ಶತಮಾನಕಾಲ ಜೀವಿಗಳೂ ಗಿಡಗಳೂ ಗೋಳಕಗಳಿಂದಲೂ (ಗ್ಲೋಬ್ಯೂಲ್) ರೂಪವಿಲ್ಲದ ವಸ್ತುವಿನಿಂದಲೂ ಆಗಿವೆಯೆಂಬ ಜನಪ್ರಿಯ ಕಲ್ಪನೆ ಉಳಿದಿತ್ತು. ಆಗ ವರ್ಣಿಸಿದ್ದ ಗೋಳಕಗಳನ್ನು ಅನಂತರದ ಬರೆಹಗಾರರು ವಿವರಿಸಿದ ನ್ಯೂಕ್ಲಿಯೇಟೆಡ್ ಜೀವಕೋಶಗಳೆಂದು ಈಗ ಗುರುತಿಸಬಹುದು. ಗಿಡಗಳ ಜೀವಕೋಶಗಳಲ್ಲಿ ರಾಬರ್ಟ್ ಬ್ರೌನ್(1773–1858) ನ್ಯೂಕ್ಲಿಯಸ್ಸನ್ನು ಕಂಡುಹಿಡಿದುದು ಕೊನೆಯದಾಗಿ ತೃಪ್ತಿಕರ ಜೀವಕೋಶ ಸಿದ್ಧಾಂತದ ನುಡಿವಳಿಕೆಗೆ ಒಂದು ಮುಖ್ಯ ಮೊದಲ ಹೆಜ್ಜೆ. 1838ರಲ್ಲಿ ಇಬ್ಬರು ಗೆಳೆಯರು ಬೇರೆಬೇರೆಯಾಗಿ ದುಡಿದು ಒಂದೇ ತೀರ್ಮಾನಕ್ಕೆ ಬಂದುದಂತೂ ಸೋಜಿಗವೇ. ಎಂ.ಜೆ.ಷ್ಲೀಡೆನ್ (1804–81) ಒಬ್ಬ ಸಸ್ಯವಿಜ್ಞಾನಿ, ಥಿಯೊಡಾರ್ ಷ್ವಾನ್ ಅಂಗರಚನಾವಿಜ್ಞಾನಿ. ತಾವಿಬ್ಬರೂ ಕಂಡುಹಿಡಿದಿರುವುದು ಒಂದೇ ತೆರನಾಗಿ ಇರುವುದನ್ನು ಅಕಸ್ಮಾತ್ತಾಗಿ ಕಂಡುಕೊಂಡರು. ಆದರೂ ಎಲ್ಲ ವಿಚಾರಗಳೂ ಸೇರಿದ ಜೀವಕೋಶ ಸಿದ್ಧಾಂತವನ್ನು ರೂಪಿಸಿದ ಷ್ವಾನನದೇ ಹಿರಿಯ ಪಾತ್ರವಾಗಿತ್ತು. ಇದರ ಹಿಂದಿನ ಕಾಲದಲ್ಲಿ, ಗಿಡಗಳ, ಜೀವಿಗಳ ಅಂಗಾಂಶಗಳಲ್ಲಿ ಜೀಕೋಶಗಳು ಆಕಸ್ಮಿಕಗಳೆಂಬ ಭಾವನೆ ಇತ್ತು. ಆದರೆ ಆ ಕಾಲಕ್ಕೆ ಜೀವ ಕೋಶದ ಹುಟ್ಟುಗುಣವೇ ಯಾರಿಗೂ ಗೊತ್ತಿರಲಿಲ್ಲ. ಜೀವಿಯ ರಚನೆಯಲ್ಲಿ ಅದೊಂದು ಮೂಲಾಂಶವೆಂದು ಯಾರೂ ಗಣಿಸಿರಲಿಲ್ಲ. ಇದರ ಎದುರಾಗಿ ಷ್ವಾನ್ ಅಭಿಪ್ರಾಯದಲ್ಲಿ ಎಲ್ಲ ಅಂಗಾಂಶಗಳೂ ಮೂಲಾಂಶಗಳಾಗಿ ಜೀವಕೋಶಗಳಿವೆ ಎಂದಿತ್ತು. ಹೀಗೆ ಮೂಲವಾಗಿ ಜೀವಕೋಶದ ಸೂತ್ರವನ್ನು ನಿರೂಪಿಸಿದ್ದು, ಸಮರ್ಪಕವಾಗಿರಲೂ ಇಲ್ಲ, ನಿಜಸಂಗತಿಗಳಲ್ಲೇ ತಪ್ಪುಗಳಿದ್ದುವು. ಬರಿದಾದ ಪೊಳ್ಳಿನ ಸುತ್ತ ಇರುವ ಜೀವಕೋಶದ ಗೋಡೆಯೇ ಅಷ್ಟು ಮುಖ್ಯವಲ್ಲವೆಂದೂ ನ್ಯೂಕ್ಲಿಯಸ್ ಇರುವ ಜೀವರಸದ ಒಳಗಿನ ಮುದ್ದೆ ಜೀವಕೋಶದ ಮೂಲಭಾಗವೆಂದೂ ಅದರ ಜೀವಾಳದ ಎಲ್ಲ ಚಟುವಟಿಕೆಗಳೂ ಒಳಗಡೆಯೇ ಆಗುವುದರಿಂದ ಜೀವಕೋಶ ರಚನೆಯ ಘಟಕವೇ ಅಲ್ಲದೆ, ನಿಜಗೆಲಸದ ಘಟಕವೂ ಅದೇ ಎಂದೂ ಹೆತ್ತವರ ಅಂಗ ಜೀಕೋಶಗಳು ಒಂದುಗೂಡಿದ ಮೇಲೆ, ಹುಟ್ಟು ಗುಣಿತವಾಗಿ, ಹೊಸ ಜೀವಿಯ ಹುಟ್ಟಿಗೆ ಕಾರಣವಾಗುವುದೆಂದೂ ಹಿಂದೆ ಸೂಚಿಸಿದ್ದ ವಿಧಾನದಿಂದ ಬೇರೆಯಾದ ರೀತಿಯಲ್ಲಿ ಜೀವಕೋಶಗಳು ಎರಡೆರಡಾಗುತ್ತ ಹೆಚ್ಚಾಗುವುದೆಂದೂ ತಲೆಮಾರಿನ ಗುಣಗಳು ಸಂತತಿಯಲ್ಲಿ ಹರಿವುದರಲ್ಲಿ ನ್ಯೂಕ್ಲಿಯಸಿನ ಪಾತ್ರ ಹಿರಿದೆಂದೂ ಇತರ ಕೆಲವು ಶೋಧಕರು ಆಮೇಲೆ ತೋರಿಸಿಕೊಟ್ಟರು. ಹೀಗೆ ತಿದ್ದಿದ ಸಿದ್ಧಾಂತ ಜೀವವಿಜ್ಞಾನದ ಮೂಲ ಸತ್ಯವಾಗಿ ಈಗ ಬಲವಾಗಿ ನೆಲೆಗೊಂಡಿದೆ. ಇದರ ಕಲ್ಪನೆಯನ್ನು ಈಗ ಜೀವಕೋಶದ ಸಿದ್ಧಾಂತವಾಗಿ ಗಣಿಸಬಹುದು. ಇಷ್ಟೆಲ್ಲ ನಿರ್ಧಾರವಾದಮೇಲೆ ಜೀವಕೋಶದ ಮಿತಿಗೊಳಿಸುವ ಪೊರೆಯೊಳಗಿರುವ, ಜೀವರಸದ ಬಿಡಿಯಾದ ಪುಟಾಣಿ ರಾಸಿಯದು; ಜೀವಕೋಶದ ಅಂಗಗಳಾಗಿ ವರ್ತಿಸುವ ಬದುಕಿರುವ ತಂತಾನಾಗಿ ಶಾಶ್ವತಗೊಳಿಸುವ ವಿಶೇಷಕಗಳೇ ಅಲ್ಲದೆ, ಜೀವಕೋಶವೇ ಕಲ್ಪಿಸಿದ ಇಲ್ಲವೇ ನುಂಗಿಹಿಡಿದ ಬದುಕಿರದ ಪದಾರ್ಥಗಳೂ ಇದರ ಜೀವರಸದಲ್ಲಿ ಇರುತ್ತವೆ; ತಲೆಮಾರಿನಿಂದ ಬರುವ ಗುಣ ವಿಶೇಷಗಳ ಸಾಗಣೆಯ ಯಾಂತ್ರಿಕತೆಗೆ ಕಾರಣವಾದ, ಗೊತ್ತಾದ ಜಾಗದಷ್ಟು ದೂರದಲ್ಲಿರುವ ಜೀನ್‌ಗಳು ಇರುವ ದಾರದಂಥ ಕ್ರೋಮೋಸೋಮ್ಸ್‌ಗಳು ಇದರ ನ್ಯೂಕ್ಲಿಯಸಿನಲ್ಲಿ ಇರುತ್ತವೆ.

**ಅಂಗಾಂಶವಿಜ್ಞಾನದ ಹುಟ್ಟು:** ಅಪೂರ್ವವಾಗಿ ಸೂಕ್ಷ್ಮದರ್ಶಕವನ್ನೇ ಬಳಸದಿದ್ದರೂ ತುಂಬ ವಿಶಾಲವಾಗಿ ಅಭ್ಯಾಸ ಮಾಡಿದ ಮೇರಿ ಎಫ್.ಎಕ್ಸ್.ಬಿಷಾಟ್ (1771–1802) ನನ್ನು ಅಂಗಾಂಶಗಳ ಕಿರೀಕಿರಿಯ ಅಂಗರಚನೆಯನ್ನು ವಿವರಿಸುವ ವಿಜ್ಞಾನದ ಸ್ಥಾಪಕ ಎನ್ನಬಹುದು. ಮೈಯಲ್ಲಿನ ಅಂಗಗಳಾಗಲು ಬೇರೆಬೇರೆ ಜೋಡಣೆಗಳಲ್ಲಿ ಪಾಲುಗೊಳ್ಳುವ 21 ಬಗೆಯ ಅಂಗಾಂಶಗಳನ್ನು ಇವನು ಗುರುತಿಸಿದ. ಇದಕ್ಕೂ ಹೆಚ್ಚು ಮುಖ್ಯವಾಗಿದ್ದ ಇವನು ಕಲ್ಪಿಸಿದ ವಿಚಾರಣೆಯ ವಿಧಾನ. ಅಲ್ಲದೆ ಶರೀರಕ್ರಿಯಾವಿಜ್ಞಾನ ರೋಗವಿಜ್ಞಾನ ಎರಡರೊಂದಿಗೂ ಸಂಬಂಧಿಸಿದಂತೆ ಅಂಗಾಂಶವಿಜ್ಞಾನ ಅಧ್ಯಯನಕ್ಕೆ ಅವನಿತ್ತ ಕ್ರಮಬದ್ಧ ದುಡಿಮೆ. ಇದರಿಂದ ಅಂಗಾಂಶಗಳ ಅಂಗಗಳ ಕಿರುಗಾತ್ರದ ರಚನೆಯಲ್ಲಿನ ಹೊಸ ಶೋಧನೆಗಳಿಗೆ ಅಪಾರ ನೆರವೂ ಉತ್ತೇಜನವೂ ದೊರಕಿದುವು.

ಅಂಗಾಂಶವಿಜ್ಞಾನದಲ್ಲಿ ಬಿಷಾಟ್ ಅನಂತರ ಬಂದವರಲ್ಲಿ ಬಲು ಹೆಸರಾಗಿದ್ದ ಎ.ಫಾನ್ ಕೊಲ್ಲಿಕರ್ (1817–1905). ಪಿಂಡವಿಜ್ಞಾನದಲ್ಲೂ ಅಷ್ಟೇ ಹೆಸರು ಪಡೆದಿದ್ದ. ನರಮಂಡಲ, ಅರಿವಿನ ಅಂಗಗಳ ವಿಭಾಗಗಳಲ್ಲಿ ವಿಶೇಷಜ್ಞನಾಗಿದ್ದ. ಸ್ಯಾಂಷಿಯಾಗೊ ರೇಮನ್ ವೈ ಕಹಾಲ್‌ನ (Santiago Ramon y Cajal) ಸಮಕ್ಕೆ ಬಂದವರಿಲ್ಲ. ಎಲ್ಲ ಪ್ರಾಣಿವರ್ಗಗಳ ಜೀವಕೋಶಗಳಲ್ಲಿ ಅಂಗಾಂಶಗಳಲ್ಲಿ ರಚನೆಯ ಹೋಲಿಕೆಗಳು ಅನೇಕ ಇವೆ.

ಜೀವಕೋಶಗಳ, ಅಂಗಾಂಶಗಳ ಕಿರೀಕಿರಿಯ ಅಂಗರಚನೆಯ ವಿವರಗಳನ್ನು ಜೀವಕಣವಿಜ್ಞಾನ ಮತ್ತು ಅಂಗಾಂಶವಿಜ್ಞಾನದ ಲೇಖನಗಳಲ್ಲಿ ಕೊಟ್ಟಿದೆ. ಅಂಗಗಳ, ಅಂಗವಿನ್ಯಾಸಗಳ ರಚನೆಯನ್ನು ಆಯಾ ಭಾಗಗಳ ಲೇಖನಗಳಲ್ಲಿ ತಿಳಿಸಿದೆ. ಹೀಗೇ, ಬೆಳೆವಣಿಗೆ, ಲಿಂಗನಿರ್ಧಾರ, ತಲೆಮಾರುಗಳಿಗೂ ಸೂಕ್ಷ್ಮದರ್ಶಕರಚನೆಗೂ ಇರುವ

ಸಂಬಂಧಗಳನ್ನು ಪಿಂಡವಿಜ್ಞಾನ ಮತ್ತು ಬೆಳವಣಿಗೆ, ಪ್ರಾಣಿಯ; ತಳಿವಿಜ್ಞಾನ, ಮಾನವನ ಲೇಖನಗಳಲ್ಲೂ ಕಾಣಬಹುದು. ಉಪಯುಕ್ತ ವಿಚಾರಗಳನ್ನು ತಿಳಿಯಲು ಹಳೆಯ, ಹೊಸ ವಿಧಾನಗಳನ್ನು ಚರ್ಚಿಸುವುದು ಉಳಿದಿದೆ.

**ಸೂಕ್ಷ್ಮದರ್ಶಕಗಳು ಮತ್ತು ಬಳಸುವ ತಂತ್ರಗಳು :** ಸಾಮಾನ್ಯ ಹೊಳೆವ ಬೆಳಕಿನ ಬೆಲದ (ಫೀಲ್ಡ್) ಸೂಕ್ಷ್ಮದರ್ಶಕ ಚೆನ್ನಾಗಿಯೇ ಸುಮಾರು 1200 ವ್ಯಾಸಗಳಷ್ಟು ದೊಡ್ಡದಾಗಿರುತ್ತದೆ. ತೂರ ಬಿಡುವ, ಆಚೆಗಾಣಿಕ (ಟ್ರಾನ್ಸ್‌ಪೇರೆಂಟ್) ವಸ್ತುಗಳು. ಅವುಗಳಲ್ಲಿರುವ ಪಾರದರ್ಶಕ ಹೆಚ್ಚಿಸಿ ಕಣ್ಣಿಗೆ ಕಾಣುವಂತೆ ಮಾಡುವ ವಿಧಾನಕ್ಕೆ ಸರಿಹಂತ ಭೇದಗಾಣಿಕ (ಫೇಸ್ ಕಾನ್ಟ್ರಾಸ್ಟ್) ಎಂದು ಹೆಸರಿದೆ. ಪದಾರ್ಥಗಳಲ್ಲಿ ಜೋಡಿ ವಕ್ರೀಭವನ(ಡಬಲ್ ರಿಫ್ರಾಕ್ಷನ್) ವನ್ನು ಕಂಡುಹಿಡಿದು ಕಣ್ಣಿಗೆ ಕಾಣದಷ್ಟು ಕಿರಿದಾಗಿರುವ ಕೋಶಗಳ ನಿಲುವೋರೆಯನ್ನು(ಓರಿಯಂಟೇಷನ್) ತೋರಿಸುವ ನಿಕೊಲ್ ಅಶ್ರಗಗಳ (ಪ್ರಿಸಮ್ಸ್) ಬಳಕೆಗೆ ಧ್ರುವೀಕರಣ (ಪೋಲರೈಸೇಷನ್) ಎಂದಿದೆ. ಅತಿನೇರಳೆ (ಅಲ್ಟ್ರಾವಯಲೆಟ್) ವಿಕಿರಣತೆಯಲ್ಲಿ ಸೂಸುಮಿರುಗಣೆ (ಫ್ಲೂರೊಸೆನ್ಸ್) ಆಗಬಹುದು. ಆಗ ವಸ್ತುಗಳು ಬೇರೆ ಬೇರೆ ಬಣ್ಣಗಳ ಮತ್ತು ಗುಣಗಳ, ಕಾಣಿಸುವ ಬೆಳಕನ್ನು ಸೂಸಿಬಿಡುತ್ತವೆ. ಕತ್ತಲ ಬೆಲದ ಸೂಕ್ಷ್ಮದರ್ಶಕದಲ್ಲಿ ಬಲವಾದ ಓರೆಯಾದ ಬೆಳಗಣೆ (ಇಲ್ಯೂಮಿನೇಷನ್) ಬಳಕೆಯಾಗುವುದು. ವಸ್ತುಮಸೂರವನ್ನು ಹೊಗುವ ಬೆಳಕು ಮರುಬಿಂಬವಾಗಿ ಬರುವುದರಿಂದ, ಹೊಳೆವ ಬೆಳಕಿನಲ್ಲಿ ನೇರವಾಗಿ ಕಾಣಿಸದಷ್ಟು ಸಣ್ಣ ಕೋಶಗಳು ಇರುವುದನ್ನೂ ತೋರಿಸಬಹುದು. ಕಣ್ಣಿಗೆ ಕಾಣದ ವಿಕಿರಣತೆಯ ಬಳಕೆಯೂ ಕೈಗೂಡಿರುವುದರಿಂದ ಅದಕ್ಕೆ ತಕ್ಕಂತೆ ಈಡಾಗಿಸಿದ ಫಲಕದ ಮೇಲೆ ಬಿಂಬಗಳನ್ನು ಗುರುತಿಸಬಹುದು. ಇದರಂತೆ ಅತಿನೇರಳೆ ಕಿರಣಗಳು, ಬೆಣಕಲ್ಲಿನ ಮಸೂರಗಳು ಸಾಮಾನ್ಯ ಕಣ್ಣಿಗೆ ಕಾಣುವ ಬೆಳಕಿನ ಎರಡರಷ್ಟು (0.0001 ಮಿಮೀ) ಬಿಡಿಸಿ ತೋರುತ್ತವೆ. ವಿದ್ಯುದಂಶ (ಎಲೆಕ್ಟ್ರಾನ್) ಸೂಕ್ಷ್ಮದರ್ಶಕದಲ್ಲಿ ಬೆಳಕಿಗೆ ಬದಲಾಗಿ ವಿದ್ಯುದಂಶಕಿರಣಗಳ ಸರಳುಗಳಿವೆ. ವಿದ್ಯುತ್ಕಾಂತದ (ಎಲೆಕ್ಟ್ರೊಮ್ಯಾಗ್ನೆಟಿಕ್) ಬೆಲಗಳು ಮಸೂರಗಳ ಬದಲಾಗಿವೆ. ಕೊನೆಯ ಬಿಂಬ ಸೂಸುಮಿರುಗುವ ಪರದೆಯ ಮೇಲೆ ಕಾಣಬರುವುದರಿಂದ ಚಿತ್ರ ಹಿಡಿಯಬಹುದು. ಈ ವಿಧಾನಗಳಿಂದ ಬಳಸಬಹುದಾದ 50,000 ದಷ್ಟರ ಇಲ್ಲವೇ ಇನ್ನೂ ಹೆಚ್ಚಿನ ವ್ಯಾಸಗಳ ಬಿಂಬವನ್ನು ಪಡೆಯಬಹುದು; ಬಿಡಿದೋರುವ ಬಲವನ್ನು 0.000001 ಮಿಮೀ ವರೆಗೂ ತಳ್ಳಬಹುದು. ಇಲ್ಲಿನಯವರೆಗೆ ಒಳಹೊಗಲಾಗದು ಎಂದಿದ್ದ ವಿವರಗಳನ್ನೂ ತೋರಿಸಲು ಎಲೆಕ್ಟ್ರಾನ್ ಸೂಕ್ಷ್ಮದರ್ಶನ ಮೆಚ್ಚಿನ ತಂತ್ರ.

**ಬದುಕಿರುವ ಅಂಗಾಂಶ ಕಣ್ಣರಿಕೆ :** ಗೊದಮೊಟ್ಟೆಯ (ಟ್ಯಾಡ್‌ಪೋಲ್) ಬಾಲದಂಥ ಕೆಲವು ಇದ್ದಂತಿರುವ ಪ್ರಾಣಿಗಳಲ್ಲಿ ನೇರವಾದ ಕಣ್ಣರಿಕೆ ಸಾಧ್ಯ. ನಿಜಗೆಲಸದಲ್ಲಿರುವ ಅಂಗಗಳ ಒಳಗಡೆಗೆ ತಂಪು ಬೆಳಕನ್ನು ಬಿಡಲು ಬೆಣಕಲ್ಲು ಕಂಬಿ(ಕ್ವಾರ್ಟ್ಸ್ ರಾಡ್) ಬೆಳಗಣೆಯನ್ನು ಬಳಸಬಹುದು. ಕುಂದಿಲಿಯ ಕಿವಿಯೊಳಗೆ ಗಾಜಿನ ಕಿಂಡಿಗಳನ್ನು ಇರಿಸಿ ಎಷ್ಟು ಕಾಲವಾದರೂ ಅಲ್ಲೇ ಬಿಟ್ಟಿರಬಹುದು. ಜೀವಕೋಶಗಳನ್ನು ಬೇರ್ಡಿಗೆಯಲು, ಕತ್ತರಿಸಲು, ಹರಿಯಲು, ಹಿಗ್ಗಿಸಿ ಕೀಳಲೂ ತೀರ ತೆಳುವಾದ ಸೂಜಿಗಳನ್ನೂ ಇಲ್ಲವೇ ಚುಚ್ಚಿ ಹೊಗಿಸಲು, ಜೀವಕೋಶದ ಒಳ ವಸ್ತುವನ್ನು ಹೀರಲು ಲೋಮನಾಳ ಕೊಳವೆಗಳನ್ನೂ ಮಿಣಿಕೈವಾಡಿಕೆ (ಮೈಕ್ರೊಮ್ಯಾನಿಪ್ಯುಲೇಷನ್) (ನೋಡಿ) ಬಳಸುತ್ತದೆ. ಕೊನೆ ಮೊದಲಿಲ್ಲದಂತೆ ಅಂಗಾಂಶಗಳನ್ನು ರಕ್ತರಸದಲ್ಲಿ ತಳಿಯೆಬ್ಬಿಸಬಹುದು. ನಿಧಾನ ಚಲನೆಯಲ್ಲೋ ಹೊತ್ತು ಕಳೆದೋ ಸೂಕ್ಷ್ಮದರ್ಶಕದ ಮೂಲಕ ತೆಗೆದ ಚಲನ ಚಿತ್ರಗಳು, ಹೀಗೆ ಮಾಡದಿದ್ದರೆ ಗೊತ್ತೇ ಆಗದಿರುವಂಥ ಚಲನೆಯನ್ನು ತೋರಬಲ್ಲುವು. ಬದುಕಿರುವ ಜೀವಕೋಶಗಳು ವಿಷಕರವಲ್ಲದ ಬಣ್ಣಗಳನ್ನು ತೆಗೆದುಕೊಂಡು ಇರಿಸಿಕೊಂಡಾಗ ಜೀವಾಳದ ಬಣ್ಣ ಏರುವುದು ಕಂಡುಬರುತ್ತದೆ.

**ಸತ್ತ ಅಂಗಾಂಶಗಳ ಕಣ್ಣರಿಕೆ :** ಸ್ವಲ್ಪವೂ ಬದಲಾಗದಂತೆ, ಅದನ್ನು ಕರಗದಂತೆ ಮಾಡಿ, ಮುಂದೆ ಬಣ್ಣವೇರಿಸಲು ಆಸಗವನ್ನು (ಅಫಿನಿಟಿ) ಹೆಚ್ಚಿಸಿ ಜೀವರಸವನ್ನು ಕೆಡದಂತಿರಿಸುವ ಕ್ರಮಗತಿಯೇ ಊರಿಗೆ(ಫಿಕ್ಸೇಷನ್). ಊರಿಸುವ ಕಾರಕಗಳಾಗಿ(ಫಿಕ್ಸಿಂಗ್ ಏಜೆಂಟ್ಸ್) ಬಲು ಸಾಮಾನ್ಯವಾಗಿ ರಾಸಾಯನಿಕ ದ್ರಾವಣಗಳು ಬಳಕೆಯಾಗುತ್ತವೆ. ಆದರೂ ಅಂಗಾಂಶವನ್ನು ಐಸೊಪೆಂಟೇನಿನಲ್ಲಿ ನೀರ್ಗಲ್ಲಾಗಿಸಿ, 170 ಸೆಲ್ಸಿಯಸಿಗೆ. ತಣ್ಣಗೆ ಕೊರೆಯಿಸಿ, ನಿರ್ವಾತದಲ್ಲಿ (ವ್ಯಾಕ್ಯೂಮ್) ನೀರ್ಗಳೆಯುವ ನೀರ್ಗಲ್ಲಾಗಿಸಿ ಒಣಗಿಸುವ ತಂತ್ರದಿಂದ ಅಂಗಾಂಶಗಳು ಅಷ್ಟಾಗಿ ಬದಲಾಗವು.

ಹುಗಿತಕ್ಕಾಗಿ (ಎಂಬೆಡಿಂಗ್) ಊರಿಸಿದ ಅಂಗಾಂಶವನ್ನು ಮದ್ಯಸಾರದಲ್ಲಿ ನೀರ್ಗಳೆದು, ಗಡಸುಗಟ್ಟಿಸಿ, ಮದ್ಯಸಾರ ಹುಗಿವ ನಡುವರ್ತಿಗಳು (ಎಂಬೆಡಿಂಗ್ ಮೀಡಿಯಂ) ಎರಡರಲ್ಲೂ ಕರಗುವ ರಾಸಾಯನಿಕ ಒಂದರಲ್ಲಿ ತಿಳಿಗೊಳಿಸಿ, ಪ್ಯಾರಾಫಿನ್ ಇಲ್ಲವೆ ನೈಟ್ರೊ ಸೆಲ್ಯುಲೋಸಿನ ಗಟ್ಟಿ ತುಂಡಿನಲ್ಲಿ ಅಂಗಾಂಶವನ್ನು ಹುದುಗಿಡಬೇಕು. ಯಂತ್ರದಲ್ಲಿನ ಕೊಯ್ತ (ಸೆಕ್ಷನಿಂಗ್)ದಿಂದ ತುಂಡಿನಲ್ಲಿರಿಸಿದ ಅಂಗಾಂಶದ ತೆಳುವಾದ ಚೂರುಗಳು (ಸಾಮಾನ್ಯವಾಗಿ 0.003–0.01 ಮಿ.ಮೀ) ಬರುತ್ತವೆ. ಇವನ್ನು ಜಾರುಗಾಜಿಗೆ (ಗ್ಲಾಸ್ ಸ್ಲೈಡ್) ಅಂಟಿಸಿ, ಹುಗಿವ ನಡುವರ್ತಿಯನ್ನು ಕರಗಿಸಿ ತೆಗೆಯಬೇಕು. ಹಲತೆರ ಬಣ್ಣವೇರಿಕೆಯಿಂದ ಬೇರೆಬೇರೆ ಅಂಗಾಂಶ ಭಾಗಗಳು ಕಂಡುಬರುತ್ತವೆ.

**ವಿವಿಧ ತಂತ್ರಗಳು:** ಅಂಗಾಂಶದ ಚೂರುಗಳನ್ನು ಕಿತ್ತು ಬಿಡಿಸಿ ಹರಡುವುದರಿಂದ ಅವನ್ನು ಹಸಿಯದರಲ್ಲೊ ಮೇಲಿನ ಜೀವಾಳದ ಬಣ್ಣವೇರಿಸಿದ ಮೇಲೋ ಪರೀಕ್ಷಿಸಲು ಅವಕಾಶವಾಗುತ್ತದೆ. ಮೆತುವೂರಿಗೆಯಿಂದ (ಮ್ಯಾಸಿರೇಷನ್) ಹಿಡಿದಿರುವ ವಸ್ತು ಮೆತುವಾಗುವುದರಿಂದ, ಜೀವಕೋಶಗಳು, ಗ್ರಂಥಿ ತಂಡಗಳೇ ಮೊದಲಾದುವನ್ನು ಬೇರೆ ತೆಗೆಯಲು ಅನುಕೂಲ. ಅಂಗಾಂಶದ ಚೂರುಗಳ ಮಿಣಿ ಬೂದಿಯುರಿಸುವುದರಿಂದ (ಮೈಕ್ರೊ ಇನ್ಸಿನರೇಷನ್) ತೀರ ನವುರಾದ, ರಚನೆಯ ವಿವರಗಳನ್ನು ಉಳಿಸಿಕೊಳ್ಳುವ ಬೂದಿಯನ್ನೂ ಹಿಂದೆ ಬಿಡುತ್ತದೆ. ಇದರಿಂದ ಖನಿಜಗಳು ಎಲ್ಲೆಲ್ಲಿವೆ ಎಂದು ತಿಳಿಯಬಹುದು. ಗಿರಿಗಿರಿಕೆಯಲ್ಲಿ (ಸೆಂಟ್ರಿಫ್ಯೂಜ್) ಸುತ್ತಿಸುವುದರಿಂದ, ಎಡೆ ತಪ್ಪಿದ ಜೀವಕೋಶ ಭಾಗಗಳ ಹೋಲಿಕೆಯ ತೂಕಗಳೂ ಗಾತ್ರವೂ ಗೊತ್ತಾಗುತ್ತವೆ.

ವಿಕಿರಣ ಚಿತ್ರಣ (ರೇಡಿಯೊ ಆಟೊಗ್ರಫಿ)ದಲ್ಲಿ ಒಂದು ಅಂಗಾಂಶದಲ್ಲಿ ಸುಳುವಿಡಿಕ ಸಮತಾವಿಗಳು (ಐಸೊಟೋಪ್) ಒಂದೆಡೆ ಕೂಡಿರುವುದನ್ನು ತೋರಿಸುವುದಲ್ಲದೆ, ಅಲ್ಲಿ ಉಳಿದಿದ್ದ ಕಾಲದ ವಿಚಾರವನ್ನೂ ತಿಳಿಸುತ್ತದೆ. ಇದಕ್ಕೆ ತಾಕಿಸಿ ಇಟ್ಟಾಗ ಫೋಟೋಗ್ರಫಿಕ್ ಎಮಲ್ಷನ್ ಮೇಲೆ ವಿಕಿರಣಶೀಲಧಾತುಗಳು (ರೇಡಿಯೊ–ಆಕ್ಟಿವ್ ಎಲಿಮೆಂಟ್ಸ್) ವರ್ತಿಸು ವುದರಿಂದ ಅಂಗಾಂಶಗಳಿಗೆ ಹೋಲಿಸಿದಂತೆ ಅವು ಖಚಿತವಾಗಿ ಎಲ್ಲಿವೆ ಎಂಬುದನ್ನು ಗುರುತಿಸುತ್ತವೆ. ಗೊತ್ತಾದ ಎಡೆಗಳಲ್ಲಿ ಗುಣಾತ್ಮಕ ಬಿಡಿಪರೀಕ್ಷಕ ವಿಧಾನಗಳಿಂದ ಆಗುವ ಸೂಕ್ಷ್ಮ ರಾಸಾಯನಿಕ (ಮೈಕ್ರೊ ಕೆಮಿಕಲ್) ಪರೀಕ್ಷೆ ಸಾಧ್ಯವಿದೆ. ಇದರಿಂದ ಎಷ್ಟೋ ಜೈವಿಕ ಸಂಯುಕ್ತಗಳೂ ಇನ್ನೂ ಹೆಚ್ಚಾಗಿ ಅಜೈವಿಕದವೂ ಬೇಕಾದಷ್ಟು ಎನ್‌ಜೈಮ್‌ಗಳೂ ಗುರುತು ಸಿಕ್ಕಿ. ಸರಿಯಾದ ಪರೀಕ್ಷೆಗಳಿಂದ ಅವಿರುವ ಎಡೆಯನ್ನೂ ಗುರುತಿಸಬಹುದು. ಈ ದಿಸೆಯಲ್ಲಿ ಹೆಚ್ಚಿನ ಮುನ್ನಡೆಯಾಗುತ್ತ ಒಂದು ವಿಜ್ಞಾನ ವಿಭಾಗವಾದ ಅಂಗಾಂಶ ರಸಾಯನಶಾಸ್ತ್ರವೇ (ಹಿಸ್ಟೊಕೆಮಿಸ್ಟ್ರಿ) ಹುಟ್ಟಿಕೊಂಡು ಬೆಳೆಯುತ್ತಿದೆ. (ಡಿ.ಎಸ್.ಎಸ್.)

## ಅಂಗರಾಗಗಳು, ಅಂಗರಾಗವಿಜ್ಞಾನ

**ಅಂಗರಾಗಗಳು, ಅಂಗರಾಗವಿಜ್ಞಾನ :** ಗಮನ ಸೆಳೆವಂತೆ ಮೈಕಾಂತಿಯನ್ನು ಹೆಚ್ಚಿಸುವ ವಸ್ತುಗಳು (ಕಾಸ್ಮೆಟಿಕ್ಸ್). ಇದರ ಆನ್ವಯಿಕ ಮುಖವೇ ಅಂಗರಾಗವಿಜ್ಞಾನ. ಆರೋಗ್ಯ, ಸೌಂದರ್ಯ ಎರಡನ್ನೂ ವರ್ಧಿಸುತ್ತಾದ್ದರಿಂದ ಇದು ದೊಡ್ಡ ಕೈಗಾರಿಕೆಯಾಗಿ ಬೆಳೆದಿದೆ. ಇದರ ಚಾರಿತ್ರಿಕ ಹಾಗೂ ವೈಜ್ಞಾನಿಕ ವಿಚಾರಗಳನ್ನು ಪರಿಶೀಲಿಸುವುದೇ ಅಂಗರಾಗವಿಜ್ಞಾನ್ನದ ಉದ್ದೇಶ.

**ಚರಿತ್ರೆಯ ಹಿನ್ನೆಲೆ :** ಅಂಗರಾಗಗಳು ಮೊದಲು ಚೀನಾದಲ್ಲಿ ಹುಟ್ಟಿರಬಹುದು. ಆದರೂ ತೀರ ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಅಂಗರಾಗವಸ್ತುಗಳ ಮೂಲ ದಾಖಲೆಗಳಿಗಾಗಿ ಈಜಿಪ್ಟಿನ ಕಡೆ ತಿರುಗಲೇಬೇಕು. ಪ್ರ.ಶ.ಪೂ. 3000ರ ಸುಮಾರಿನಲ್ಲಿ, ಸತ್ತ ದೊರೆಗಳೊಡನೆ ಸುಖಸಂಪತ್ತಿನ ವಸ್ತುಗಳನ್ನೂ ಹೂಳುತ್ತಿದ್ದರು. ಇವುಗಳೊಂದಿಗೆ ಅಲಂಕಾರ ವಸ್ತುಗಳೂ ಮುಲಾಮುಗಳೂ ಇದ್ದುದು ಗೊತ್ತಾಗಿದೆ. ಸುವಾಸನಾವಸ್ತುಗಳೂ ಇದ್ದುವೆಂದು ಅವನ್ನು ತೆಗೆದಾಗ ಕಂಡವರು ಹೇಳುತ್ತಾರೆ. ಈಜಿಪ್ಟಿನ ಇತರ ಸ್ಮಾರಕಗಳು ಗೋರಿಗಳು ಪುರಾತನ ಈಜಿಪ್ಟಿನವರು ಅಂಗರಾಗವಸ್ತುಗಳಲ್ಲಿ ಇಡುತ್ತಿದ್ದ ಆಸಕ್ತಿಯನ್ನು ತೋರುತ್ತವೆ.

ಸ್ನಾನದ ತೊಟ್ಟಿಯನ್ನು ಮೊದಲು ಬಳಸಿದವರು ಪುರಾತನ ಈಜಿಪ್ಟಿಗರಿರಬಹುದು. ಆಮೇಲೆ ಗ್ರೀಕರೂ ರೋಮನ್ನರೂ ಇದನ್ನೇ ರೂಢಿಗೆ ತಂದರು. ಮೈತೊಳೆದುಕೊಂಡಮೇಲೆ ಸುವಾಸನೆಯ ಎಣ್ಣೆಗಳು, ಮುಲಾಮುಗಳನ್ನು, ಚರ್ಮ ತಂಪಾಗಿ ನುಣುಪಾಗಿ ಬಣ್ಣವೇರುವಂತೆ ಹಚ್ಚುತ್ತಿದ್ದರು. ಕಚ್ಚಾ ಬಣ್ಣಗಳನ್ನು ಪೂಸಿಕೊಂಡು ಈಜಿಪ್ಟಿನ ಹೆಂಗಸರು ಅಲಂಕರಿಸಿಕೊಳ್ಳುತ್ತಿದ್ದರು. ಕ್ಲಿಯೊಪಾತ್ರಳ ಕಾಲದಲ್ಲಿ ಇದು ವಿಪರೀತವಾಗಿತ್ತು. ಈಜಿಪ್ಟಿನ ಗೋರಿಗಳಲ್ಲೂ ಕಂಡುಬಂದಂತೆ, ಕಣ್ಣಿನ ಅಲಂಕಾರಕ್ಕೆ ಹೆಚ್ಚು ಗಮನ ಕೊಡುತ್ತಿದ್ದರು. ಕಣ್ಣಿನ ಕೆಳಗೆ (ಭಿತ್ತಿಚಿತ್ರಗಳಲ್ಲಿರುವಂತೆ) ಹಸುರನ್ನೂ ರೆಪ್ಪೆ, ಎವೆಗಳು, ಹುಬ್ಬುಗಳಿಗೆ ಆಂಟಿಮನಿ ಸಲ್ಫೈಡಿನಿಂದ ಮಾಡಿದ ಕಾಡಿಗೆ ಕಪ್ಪನ್ನೂ ದಂತದ ಕಡ್ಡಿಗಳಿಂದ ಹಚ್ಚುತ್ತಿದ್ದರು. ಬೆರಳಿನ ಉಗುರುಗಳಿಗೂ ಅಂಗೈ ಅಂಗಾಲುಗಳಿಗೂ ಗೋರಂಟಿ ಬಣ್ಣ ಹಚ್ಚುತ್ತಿದ್ದರು. ಅಂದಿನ ಬಾಚಣಿಗೆ, ಲೋಹಗನ್ನಡಿಗಳು ಈಗಲೂ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿವೆ. ಯೆಹೂದ್ಯ ಹೆಂಗಸರು ಅಂಗರಾಗಗಳನ್ನೂ ಬಳಸುತ್ತಿದ್ದರೆಂದು ಬೈಬಲ್ಲಿನಲ್ಲಿ ಹೇಳಿದೆ. ಕುರಾನಿನಲ್ಲೂ ಸುವಾಸನಾದ್ರವ್ಯಗಳ ವಿಚಾರವಿದೆ.

ಮೊದಮೊದಲು ರೋಮನ್ನರು ತಾವು ಹೇಗೆ ಕಾಣುತ್ತಿದ್ದೇವೆಂಬ ವಿಚಾರವಾಗಿ ಅಷ್ಟಾಗಿ ಚಿಂತಿಸುತ್ತಿರಲಿಲ್ಲ. ಗ್ರೀಕರೊಂದಿಗೆ ಸೇರಿದಾಗ ಅವರಿಗೂ ಅಲಂಕಾರದಲ್ಲಿ ಆಸಕ್ತಿ ಹುಟ್ಟಿತು. ನೀರೊ ಚಕ್ರವರ್ತಿಯಾಗುವ ಹೊತ್ತಿಗೆ (ಪ್ರ.ಶ. 54) ಅಂಗರಾಗಗಳೂ ಪರಿಮಳಗಳೂ ಹೆಚ್ಚಾಗಿ ಗಮನ ಸೆಳೆದಿದ್ದುವು. ನೀರೊ ಕೂಡ ಬೇಕಾದಷ್ಟು ಲೇಪನಗಳನ್ನು ಹಚ್ಚಿಕೊಳ್ಳುತ್ತಿದ್ದ. ಮಹಾರಾಣಿಯಂತೂ ಕೃತಕ ಅಲಂಕಾರಗಳನ್ನು ಗುಟ್ಟಾಗಿಡುತ್ತಿರಲಿಲ್ಲ. ಚರ್ಮಕ್ಕೆ ಬಿಳಿಬಣ್ಣ ಬರಲು ವೈಟ್‌ಲೆಡ್, ಸೀಮೆಸುಣ್ಣ; ಕಣ್ಣಿಗೂ ರೆಪ್ಪೆಗೂದಲಿಗೂ ಕಾಡಿಗೆ ಕಪ್ಪು; ಕೆನ್ನೆ, ತುಟಿಗಳಿಗೆ ಕೆಂಪು ಮತ್ತು ಒಂದು ತೆರನ ರೋಮನಾಶಕ; ಮೊಡಮೆಗಳು ದದ್ದುಗಳಿಗೆ ಜವೆಗೋದಿ ಹಿಟ್ಟು, ಬೆಣ್ಣೆ; ಹಲ್ಲನ್ನು ತಿಕ್ಕಿ ಬೆಳಗಿಸಲು ಪ್ಯೂಮಿಸ್ ಕಲ್ಲು–ಮುಂತಾದುವು ಬಳಕೆಯಲ್ಲಿದ್ದುವು. ಮಿತಿಮೀರಿದ ಅಲಂಕಾರ

ಮಾಡಿಕೊಳ್ಳುತ್ತಿದ್ದ ರೋಮನ್ ಆಸ್ಥಾನದ ಸುಂದರಿಯರು ಗಾಲ್‌ನಿಂದ ತರಿಸಿದ ಸಾಬೂನಿನಿಂದ ಕೂದಲ ಬಣ್ಣ ತೆಗೆಯುತ್ತಿದ್ದರು. ರೋಮನ್ನರು ತಮ್ಮ ಪರಿಮಳಗಳನ್ನೂ ಅಂಗರಾಗವಸ್ತುಗಳನ್ನೂ ಮನಸೆಳೆವ ಅಲಂಕರಿಸಿದ ಭರಣಿಗಳಲ್ಲಿ ತುಂಬಿಸುತ್ತಿದ್ದರು. ಬಾದಾಮಿ, ಗುಲಾಬಿಯಂಥ ಪರಿಮಳವಿರುವ ಮುಲಾಮುಗಳು, ಹೂವುಗಳು, ಏಲಕ್ಕಿ ಲವಂಗ ಮೊದಲಾದುವು, ಗೋಂದು– ಇವನ್ನು ಆಲಿವ್ ಎಣ್ಣೆ, ಎಳ್ಳೆಣ್ಣೆಗಳಲ್ಲಿ ಕರಗಿಸಿದ್ದ ತೈಲದ ಮುಲಾಮುಗಳು, ಹುಡಿಗಳು–ಹೀಗೆ 3 ಬಗೆಯ ದ್ರವ್ಯಗಳು ಉಪಯೋಗದಲ್ಲಿದ್ದುವು.

ಅಂಗರಾಗಗಳ ಬಳಕೆ ಬ್ರಿಟನ್ನಿನಲ್ಲೂ ಎಷ್ಟೋ ಕಾಲದಿಂದ ಇದ್ದರೂ ಪೂರ್ವ ದೇಶಗಳಿಂದ ಬಂದ ಅಲಂಕಾರ ವಸ್ತುಗಳು ಒಂದನೆಯ ಎಲಿಜಬೆತ್ ರಾಣಿಯ ಕಾಲಕ್ಕೆ ಜನಪ್ರಿಯವಾಗಿದ್ದುವು. ಮಲಗುವ ಮನೆಗಳ ಪರಿಕರಗಳಲ್ಲಿ ಪರಿಮಳದ ಪೆಟ್ಟಿಗೆಯೂ ಮುಖ್ಯವಾಗಿತ್ತು. ಎಲಿಜಬೆತ್ತಳ ಕಾಲದಲ್ಲಿ ಮೈಕಾಂತಿಯನ್ನು ಹೆಚ್ಚಿಸಿಕೊಳ್ಳಲು, ಚೆನ್ನಾಗಿ ಬೆವರುವಂತೆ ತುಂಬ ಸುಡುವ ನೀರಿನ ಸ್ನಾನಮಾಡಿ, ಮೊಗ ಕೆಂಪೇರುವಂತೆ ಚೆನ್ನಾಗಿ ಸಾರಾಯಿಯಲ್ಲಿ ತೊಳೆಯುವ ಉಪಾಯವಿತ್ತು. ಇದು ಸಾಧ್ಯವಿಲ್ಲದ ಎಳೆಯರು ಹಾಲಿನಲ್ಲಿ ಮಿಂದು ಏಳುತ್ತಿದ್ದರು. ಆಮೇಲೆ ಕೆಲಕಾಲ ಕೂದಲಿಗೆ ಪುಡಿ ಹಾಕುತ್ತಿದ್ದರು. 18ನೆಯ ಶತಮಾನದ ಹೊತ್ತಿಗೆ ಅಂಗರಾಗಗಳ ಬಳಕೆ ಎಲ್ಲರಲ್ಲೂ ಎಷ್ಟು ಹೆಚ್ಚಿತ್ತೆಂದರೆ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ (1770) ಒಂದು ಕಾಯಿದೆಯನ್ನೇ ತಂದರು. ಅಂಗರಾಗಗಳಿಂದ ಅಲಂಕರಿಸಿಕೊಂಡು ಮನಸೆಳೆದು ಮದುವೆಯಾದರೆ ಅದು ಮದುವೆ ಎನ್ನಿಸುವುದಿಲ್ಲ ಎಂದಿದೆ, ಆ ಕಾಯಿದೆಯಲ್ಲಿ. ಇದೇ ಕಾನೂನನ್ನು ಅಮೆರಿಕದ ಪೆನ್ಸಿಲ್ವೇನಿಯ ಸಂಸ್ಥಾನದಲ್ಲೂ ಜಾರಿಗೆ ತಂದರು. ಬಹುಮಟ್ಟಿಗೆ ಅಮೆರಿಕದ ಕಾಲೋನಿಗಳಲ್ಲೆಲ್ಲ ಹೀಗೆ ಅಂಗರಾಗಗಳನ್ನು ಹೊರಕಾಣುವಂತೆ ಹಚ್ಚುವುದನ್ನು ಯಾರೂ ಒಪ್ಪಲಿಲ್ಲ.

ಇಟಲಿ, ಫ್ರಾನ್ಸ್, ಸ್ಪೇನ್‌ಗಳಲ್ಲೂ ಅಂಗರಾಗಗಳು ಜನಪ್ರಿಯವಾಗಿದ್ದುವು. 13ನೆಯ ಲೂಯಿಯ ರಾಣಿ ಆಸ್ಟ್ರಿಯದ ಸುಂದರಿ ಆ್ಯನ್ ಬಹಳ ಬಳಸುತ್ತಿದ್ದಳು. ವೆನಿಲ್ಲ, ಕೆಕಾವೊ ಕೆನೆಗಳೂ(ಕ್ರೀಮ್ಸ್) ಬಾದಾಮಿಸರಿಯೂ (ಪೇಸ್ಟ್) ಸ್ಪೇನಿನಿಂದ ಆಮದಾಗಿ ಬರುತ್ತಿದ್ದುವು. ಆಸ್ಥಾನದ ಹೆಂಗಸರ ಚರ್ಮವನ್ನು ಬಿಳಿಚಿಸಲು ಇವನ್ನೆಲ್ಲ ಹಚ್ಚುತ್ತಿದ್ದರು. ಒಂದನೆಯ ನೆಪೋಲಿಯನ್ ತನ್ನ ಕಾಲದ ಈ ಮೋಜುಗಳಿಗೆ ಒಳಗಾಗಿದ್ದ. ಜೋಸೆಫೀನ್ ಮಹಾರಾಣಿ ಮಾರ್ಟಿನಿಕ್ ಊರಿನಿಂದ ಅಂಗರಾಗಗಳನ್ನು ತರಿಸಿ ಯಾವಾಗಲೂ ಬಳಸುತ್ತಿದ್ದಳು. ಈ ಕಾಲದಲ್ಲೆ ಫ್ರೆಂಚರು ಪರಿಮಳಗಳ, ಅಂಗರಾಗಸಾಧನಗಳ, ಶಾಸ್ತ್ರೀಯ ತಯಾರಿಕೆಯನ್ನು ಪ್ರಾರಂಭಿಸಿದರು.

ಯುರೋಪಿನಲ್ಲಿ ಆದದ್ದೆಲ್ಲ ಅಮೆರಿಕದಲ್ಲೂ ಮಾರ್ದನಿಸಿತು. ಅಮೆರಿಕದ ಕಾಡುಜನರು ಮೈಗೆ ಬಳಿದುಕೊಳ್ಳುತ್ತಿದ್ದ ಬಣ್ಣಗಳು, ಕೊಬ್ಬುಗಳು, ಎಣ್ಣೆಗಳು ಪರಿಚಯವಾಗಿದ್ದರೂ ವಲಸೆ ಬಂದವರಿಗೆ ಇವು ಹಿಡಿಸಲಿಲ್ಲ. ಆಮೇಲೆ ಅಂಗರಾಗ ಬಳಕೆ ಒಂದೊಂದು ಸಂಸ್ಥಾನದಲ್ಲಿ ಒಂದೊಂದು ಬಗೆಯಾಗಿತ್ತು. ಉತ್ತರದವರು ಬಳಸಲೇಕೂಡದೆಂದರೆ ಫ್ರೆಂಚರು ಹೆಚ್ಚಾಗಿದ್ದ ದಕ್ಷಿಣದವರು ಹೇರಳವಾಗಿ ಬಳಸುತ್ತಿದ್ದರು. ವಿಕ್ಟೋರಿಯ ಕಾಲದಲ್ಲಿ, ಅಂಗರಾಗಗಳ ಬಳಕೆ ಅನಾಗರಿಕವೆಂಬ ಭಾವನೆ ಅಮೆರಿಕಕ್ಕೂ ಹರಡಿತ್ತು. ಆದರೆ ಅಂಗರಾಗಗಳನ್ನು ಉತ್ತಮಗೊಳಿಸಿ ತಯಾರಿಸುವುದರಲ್ಲಿ ಫ್ರಾನ್ಸ್ ಮುಂದಾಯಿತು. ಇಂಗ್ಲೆಂಡು ಅಮೆರಿಕಗಳಲ್ಲಿ ಜನಪ್ರಿಯವಾಗುವ ಎಷ್ಟೋ ಮುಂಚಿನಿಂದಲೂ ಫ್ರಾನ್ಸಿನ ಹೆಂಗಸರು ಮೊಗವನ್ನು ತಿದ್ದಿಕಾಂತಿಗೊಳಿಸುವ ಅಂಗರಾಗಗಳನ್ನು ಬಳಸುತ್ತಿದ್ದರು. ಒಂದನೆಯ ಮಹಾಯುದ್ಧ ಮುಗಿಯುವ ತನಕ ಹೀಗೆ ಇತ್ತು. ಬರುಬರುತ್ತ ಇವು ಎಲ್ಲೆಲ್ಲೂ ಜನಪ್ರಿಯವಾದುವು. ಈಗ ಅಂಗರಾಗಗಳ ಜನಪ್ರಿಯ ಬ್ರಾಂಡುಗಳ ಪೈಪೋಟಿಯ ಯುಗವನ್ನೇ ನಾವು ಕಾಣುತ್ತಿದ್ದೇವೆ. ಪ್ಯಾರಿಸ್‌ನಗರ ಫ್ಯಾಷನ್ ಪ್ರಪಂಚದ ಕೇಂದ್ರಬಿಂದುವಾಗಿದೆ. *

**ಅಂಗರು :** ಅಂಗದೇಶದ ನಿವಾಸಿಗಳು. ಈ ದೇಶ ಸ್ಥೂಲವಾಗಿ ಈಗಿನ ಬಿಹಾರ ರಾಜ್ಯದಲ್ಲಿನ ಭಾಗಲಪುರ, ಮಾಂಘೀರ್ ಜಿಲ್ಲೆಗಳನ್ನೊಳಗೊಂಡಿತ್ತು.

ಅಂಗರ ಉಲ್ಲೇಖ ಮೊಟ್ಟಮೊದಲಿಗೆ ಅಥರ್ವವೇದದಲ್ಲಿ ಸಿಗುತ್ತದೆ. ಆ ಪ್ರಕಾರ ಇವರು ಆರ್ಯಜನಾಂಗಕ್ಕೆ ಸೇರದೆ, ಅಲ್ಲಿಯ ಮೂಲನಿವಾಸಿಗಳಾಗಿರಬೇಕೆಂದು ಊಹಿಸಲಾಗಿದೆ. ಸಂತಾಲ ಜನರಲ್ಲಿ ಪ್ರಚುರವಿದ್ದ ಐತಿಹ್ಯಗಳಿಂದಲೂ ಇದು ಸಮರ್ಥನೆಗೊಂಡಿದೆ. ಬೌಧಾಯನ ಧರ್ಮಸೂತ್ರದಲ್ಲಿ ಅಂಗರು ಮಿಶ್ರಜನಾಂಗ (ಸಂಕೀರ್ಣಯೋನಯಃ) ಎಂದು ಹೇಳಿರುವುದಲ್ಲದೆ ಈ ದೇಶಕ್ಕೆ ಹೋಗಿ ಬಂದವರು ಶುದ್ಧಿಗಾಗಿ ಪುನಸ್ತೋಮ ಮತ್ತು ಸರ್ವಪೃಷ್ಠಗಳೆಂಬ ಯಜ್ಞಗಳನ್ನು ಮಾಡಬೇಕೆಂದು ವಿಧಿಸಲಾಗಿದೆ. ಈ ಜನಾಂಗದಲ್ಲಿ ಮೃತದೇಹಗಳನ್ನು ತ್ಯಜಿಸುವ ಮತ್ತು ಹೆಂಡತಿ ಮಕ್ಕಳನ್ನು ಮಾರಿಕೊಳ್ಳುವ ಪದ್ಧತಿ ಪ್ರಚಲಿತವಿತ್ತೆಂದು ಮಹಾಭಾರತದಿಂದ ತಿಳಿದುಬರುತ್ತದೆ.

ಪರಶಿವನ ಕೋಪಕ್ಕೆ ಅಂಜಿ ಕಾಮ ಓಡಿಹೋಗಿ ಈ ದೇಶದಲ್ಲಿ ದೇಹ (ಅಂಗ)ವನ್ನು ವಿಸರ್ಜಿಸಿದುದರಿಂದ ಈ ದೇಶಕ್ಕೆ ಅಂಗವೆಂಬ ಹೆಸರು ಬಂದಿತೆಂಬ ಕಥೆ ರಾಮಾಯಣದಲ್ಲಿದೆ. ಆದರೆ ಯಯಾತಿಯ ವಂಶಜನಾದ ಬಲಿಗೂ ಮತ್ತು ಅವನ ಪತ್ನಿ ಸುದೇಷ್ಣೆಗೂ ಅಂಗ, ವಂಗ, ಕಳಿಂಗ, ಪುಂಡ್ರ, ಸುಹ್ಮ ಎಂಬ ಐವರು ಮಕ್ಕಳಿದ್ದು ಅವರು ತಮ್ಮ ತಮ್ಮ ಹೆಸರಿನಲ್ಲಿ ರಾಜ್ಯಗಳನ್ನು ಸ್ಥಾಪಿಸಿದರೆಂಬ ಐತಿಹ್ಯ ಮಹಾಭಾರತ ಮತ್ತು ಪುರಾಣಗಳಲ್ಲಿ ದೊರಕುತ್ತದೆ. ರೋಮಪಾದನೆಂಬುವನು ಈ ದೇಶದ ಅರಸನಾಗಿದ್ದನೆಂದು ರಾಮಾಯಣದಲ್ಲಿ ಹೇಳಿದೆ. ಮಹಾಭಾರತದ ಕಾಲಕ್ಕೆ ಇದು ಕೌರವರ ರಾಜ್ಯದಲ್ಲಿ ಸೇರಿದ್ದು, ಕರ್ಣ ಇದರ ಅಧಿಪತಿಯಾಗಿದ್ದ.

ಪ್ರಶ.ಪೂ. 6ನೆಯ ಶತಮಾನದಲ್ಲಿ ಅಂಗವು 16 ಮಹಾರಾಷ್ಟ್ರ (ಮಹಾಜನಪದ)ಗಳಲ್ಲಿ ಒಂದಾಗಿದ್ದಿತು. ಮುಂದೆ ಇದರ ನೆರೆಯ ರಾಜ್ಯವಾದ ಮಗಧದೇಶದ ಅರಸು ಬಿಂಬಸಾರ ಇದನ್ನು ಗೆದ್ದ. ಆಮೇಲೆ ಇದು ಮೌರ್ಯಸಾಮ್ರಾಜ್ಯದ ಭಾಗವಾಯಿತು. ಬಾದಾಮಿಯ ಚಳುಕ್ಯರು, ಸೇವುಣರು, ಹೊಯ್ಸಳರು ಮುಂತಾದ ಅರಸರ ಶಾಸನಗಳಲ್ಲಿ ಇವರು ಇತರ ದೇಶಗಳ ಜೊತೆಗೆ ಅಂಗದೇಶವನ್ನು ಜಯಿಸಿದ ಉಲ್ಲೇಖಗಳು ಹೇರಳವಾಗಿ ದೊರೆಯುತ್ತವೆ. ಇದರಿಂದ ಅಂಗವು ಬಹು ಪೂರ್ವಕಾಲದಿಂದ ಮಧ್ಯಯುಗದವರೆಗೂ ಪ್ರಸಿದ್ಧವಾದ ದೇಶವಾಗಿದ್ದಿತು. ಚಂಪಾನಗರ ಇದರ ರಾಜಧಾನಿ. (ಎಸ್.ಆರ್.)

**ಅಂಗ, ಲಿಂಗ :** ವೀರಶೈವ ದರ್ಶನದಲ್ಲಿ ಕಾಣಬರುವ ಬಹು ಮುಖ್ಯವಾದ ಪಾರಿಭಾಷಿಕ ಪದಗಳು. ಅಂಗ ಎಂದರೆ ಜೀವ, ಲಿಂಗ ಎಂದರೆ ಶಿವ. ಜೀವಾತ್ಮ ಮತ್ತು ಪರಮಾತ್ಮರ ಐಕ್ಯ ಎಂದು ವೇದಾಂತಿಗಳು ಹೇಳುವ ಮಾತನ್ನು ಲಿಂಗಾಂಗ ಸಾಮರಸ್ಯ ಎಂದು ವೀರಶೈವರು ಹೇಳುತ್ತಾರೆ. (ಬಿ.ಎಸ್.)

**ಅಂಗಸಾಧನೆ :** ಅಂಗಸೌಷ್ಠವ ಹೆಚ್ಚಿಸಿಕೊಳ್ಳಲು ಮಾಡುವ ಸಾಧನೆ ಎಂಬುದು ಸಾಮಾನ್ಯ ಅರ್ಥ. ಅಂಗಸಾಧನೆ ಎಂದರೆ ಮಾನವ ದೇಹದ ಸ್ನಾಯು ಹಾಗೂ ಅಂಗಾಂಗಗಳನ್ನು, ಅವರವರ ವಯೋಮಾನ, ದೇಹಶಕ್ತಿ ಮುಂತಾದ ಅಗತ್ಯಗಳನ್ನರಿತು, ಒಂದು ರೀತಿ, ಒಂದು ಕ್ರಮದಲ್ಲಿ ವಿಶಿಷ್ಟವಾದ ಚಟುವಟಿಕೆ, ಕವಾಯತು, ಉಪಕರಣ ಹಾಗೂ ಕ್ರೀಡೆಗಳಿಂದ ದೇಹವನ್ನು ಸದೃಢಪಡಿಸಿಕೊಂಡು ತನ್ಮೂಲಕ ಆಯುರಾರೋಗ್ಯ ಸಾಧಿಸಿಕೊಳ್ಳುವ ಬಗೆ. ಅಂಗಸಾಧನೆ ಹಾಗೂ ವ್ಯಾಯಾಮ ಎಂಬ ಪದಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸಿದರೂ ಅವುಗಳ ರೂಪ ರೀತಿಯಲ್ಲಿ ಭೇದವಿದೆ. ಆದರೂ ಅಂಗಸಾಧನೆಗೆ ವ್ಯಾಯಾಮ ಬೇಕು.

ದೇಹದಾರ್ಢ್ಯ ಸ್ಪರ್ಧೆಗೆ ದೇಹವನ್ನು ಅಣಿಗೊಳಿಸಲು ಅನುಸರಿಸುವ ವಿಧಾನವೂ ಅಂಗಸಾಧನೆ. ವಿವಿಧ ಸ್ನಾಯುಗಳಿಗೆ ತರಬೇತಿ ನೀಡಿ ಅವುಗಳನ್ನು ಪ್ರದರ್ಶಿಸಲಾಗುತ್ತದೆ. ಜಿಮ್ನಾಸ್ಟಿಕ್ಸ್ ಸ್ಪರ್ಧೆಗಳಿಗೆ ಸಹ ಅಂಗಸಾಧನೆ ಎನ್ನಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಅಂಗಸಾಧನೆಗಾಗಿ ಅನೇಕ ಜಿಮ್‌ಗಳು ತಲೆ ಎತ್ತಿವೆ. ಹಿಂದಿನ ಕಾಲದಲ್ಲಿ ಗರಡಿಮನೆಗಳಿದ್ದವು. ಇದರ ರೂಪ ರೀತಿಗಳು ಭಿನ್ನವಾಗಿದ್ದರೂ ಸಹ ವ್ಯಕ್ತಿಯ ದೈಹಿಕ ಅರ್ಹತೆಗೆ ಅವಶ್ಯವಾಗಿವೆ.

ವ್ಯಾಯಾಮ ವ್ಯಕ್ತಿಯನ್ನು ಮಾನಸಿಕವಾಗಿಯೂ ಸುಸ್ಥಿಯಲ್ಲಿಡಬಲ್ಲದು. ದೈಹಿಕ ಹಾಗೂ ಮಾನಸಿಕವಾಗಿ ಸದೃಢ ವ್ಯಕ್ತಿಗಳು ದೇಶದ ಸಂಪತ್ತು. ಇಂಥವರಿಂದ ಒಳ್ಳೆಯ ಸಮಾಜ ಸಾಧ್ಯ. ನಾವು ಈ ದಿಶೆಯಲ್ಲಿ ಒಳ್ಳೆಯವರಾದರೆ ಮುಂದಿನ ಪೀಳಿಗೆಯನ್ನು ಬಲಿಷ್ಠವಾಗಿ ಬೆಳೆಸಬಹುದು. ಕ್ರೀಡಾ ಚಟುವಟಿಕೆ ಹಾಗೂ ವ್ಯಾಯಾಮ ಎಲ್ಲರಿಗೂ ಮುದ ನೀಡಬಲ್ಲದು.

ಮಕ್ಕಳು ಆಟದಿಂದ ಉಲ್ಲಸಿತರಾಗುವುದನ್ನು ಕಾಣುತ್ತೇವೆ. ಒಂದು ಮಗು ಒಂಟಿಯಾಗಿದ್ದು ಸಿಡುಕಿನಿಂದ ಕೂಡಿದ್ದರೆ, ಅದನ್ನು ಉಳಿದ ಮಕ್ಕಳೊಂದಿಗೆ ಬಿಟ್ಟರೆ, ಬೆರೆತು ಆಟವಾಡಿದರೆ ಅವರ ಸ್ವಭಾವದಲ್ಲಿ ನಿಶ್ಚಿತ ಬದಲಾವಣೆ ಸಾಧ್ಯ. ಮಕ್ಕಳ ಇಂಥ ಕತೆಗಳು ನಿತ್ಯ ಜೀವನದಲ್ಲಿ ಸಾಕಷ್ಟಿವೆ. ಇದೆಲ್ಲ ವ್ಯಾಯಾಮದ ಪರಿಣಾಮದ ದ್ಯೋತಕ.

ವ್ಯಾಯಾಮ ಅಥವಾ ಅಂಗ ಸಾಧನೆ ದೇಹಾರೋಗ್ಯದ ಮೇಲೆ ಪ್ರಭಾವ ಬೀರುವ ಸಂಗತಿ ಬೆಳಕಿನಷ್ಟು ನಿಚ್ಚಳ. ಬೆವರು ಸುರಿಸಿದ ನಂತರ ಸಿಗುವ ಊಟದ ರುಚಿ ದೇಹವನ್ನು ಆರೋಗ್ಯವಾಗಿಟ್ಟೇ ಇಡುತ್ತದೆ. ದಣಿದ ಸ್ನಾಯುಗಳ ರೋದನ ಒಳ್ಳೆಯ ವಿಶ್ರಾಂತಿ ನೀಡುತ್ತದೆ.

ಕ್ರಮವಾದ ಅಂಗಸಾಧನೆಯಲ್ಲಿ ತೊಡಗಿದವನ ಬದುಕು ಕ್ರಿಯಾತ್ಮಕವಾಗಿರುತ್ತದೆ. ಇಂಥವರು ಧೂಮ್ರಪಾನ, ಗುಟ್ಕಾ ಮುಂತಾದ ಮಾದಕ ವ್ಯಸನಗಳಿಂದ ದೂರವಿರುತ್ತಾನೆ. ಸದೃಢವಾದ ದೇಹ ಹಾನಿಕಾರಕ ರೋಗದಿಂದ ದೂರವಿರುತ್ತದೆ ಎಂಬುದು ಸಂಶೋಧನೆಯಿಂದ ದೃಢಪಟ್ಟಿದೆ. ರಷ್ಯ ದೇಶದ ಕಾರ್ಖಾನೆಗಳಲ್ಲಿ ಕಾರ್ಯ ಪ್ರಾರಂಭಕ್ಕೆ ಮುನ್ನ 10–15 ನಿಮಿಷ ಸಾಮೂಹಿಕ ವ್ಯಾಯಾಮ ಮಾಡಿಸುತ್ತಾರೆ. ಇದರಿಂದಾಗಿ ಅಪಘಾತಗಳ ಸಂಖ್ಯೆ ಗಣನೀಯವಾಗಿ ಇಳಿದಿದ್ದಲ್ಲದೆ ಕಾರ್ಖಾನೆಯ ಉತ್ಪನ್ನದಲ್ಲಿ ಹೆಚ್ಚಳವಾದದ್ದು ಕಂಡುಬಂದಿದೆ. ಅಂದರೆ ವ್ಯಕ್ತಿಯ ಅರ್ಹತೆಯನ್ನು ಇದು ಹೆಚ್ಚಿಸುತ್ತದೆ.

ಪ್ರತಿ ವ್ಯಕ್ತಿಯ ಬದುಕು ಅವನ ದೈಹಿಕ ಅರ್ಹತೆಯನ್ನವಲಂಬಿಸಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇದು ಹೆಚ್ಚಿನ ಪ್ರಾಮುಖ್ಯ ಪಡೆದಿದೆ. ಹಾಗಿದ್ದರೆ ಈ ಅರ್ಹತೆ ಎಂದರೇನು? ಅರ್ಹತೆಯು ಜೀವನ ನಡೆಸಲು ಇರುವ ಸಿದ್ಧತೆ ಹಾಗೂ ಯೋಗ್ಯತೆ. ಸುತ್ತಲಿನ ಪರಿಸರದ ಬೇಡಿಕೆಗೆ ತಕ್ಕಂತೆ ತಮ್ಮನ್ನು ತಾವು ಹೊಂದಿಸಿಕೊಂಡು ಹೋಗುವ ಸಾಮರ್ಥ್ಯಕ್ಕೆ ಅರ್ಹತೆ ಎನ್ನುವರು. ಈ ಸಾಮರ್ಥ್ಯವು ಒಬ್ಬ ವ್ಯಕ್ತಿಯ ದೈಹಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಹಾಗೂ ನೈತಿಕ ಮೊದಲಾದ ಎಲ್ಲ ಅಂಶಗಳನ್ನು ಒಳಗೊಂಡಿದೆ.

ಅರ್ಹತೆ ಅಖಂಡವಾದದ್ದು. ಆದ್ದರಿಂದ ಇದು ದೈಹಿಕ ದೃಢತೆ, ಮಾನಸಿಕ ಹಾಗೂ ಭಾವನಾತ್ಮಕ ಸ್ಥಿರತೆ, ಸಾಮಾಜಿಕ ಸಾಮರಸ್ಯ, ಗರಿಷ್ಠ ಸೇವೆ ಹಾಗೂ ಸೃಜನ ಶೀಲತೆಗಳನ್ನು ಒಳಗೊಂಡಿರುತ್ತದೆ.

ದೈಹಿಕ ಅರ್ಹತೆ ಒಬ್ಬನ ಒಟ್ಟು ಅರ್ಹತೆಯ ಒಂದು ಭಾಗ ಮಾತ್ರವಾಗಿದ್ದರೂ ಸಹ ಇದು ಬಹಳ ಮುಖ್ಯವಾದದ್ದಾಗಿದೆ. ದೈಹಿಕ ಅರ್ಹತೆಗೆ ಬೇಕಾದ ಮೂಲ ಸಂಗತಿಗಳೆಂದರೆ–ಬಲ, ಕಷ್ಟ ಸಹಿಷ್ಣುತೆ, ಮೈಮೃದುತ್ವ, ಚಪಲತೆ, ವೇಗ, ಸ್ಫೋಟಕ ಶಕ್ತಿ, ಖಚಿತತೆ ಹಾಗೂ ಪ್ರತಿಕ್ರಿಯಾತ್ಮಕತೆ. ಇವೆಲ್ಲವುಗಳನ್ನು ಹಂತ ಹಂತವಾದ ವ್ಯಾಯಾಮಗಳಿಂದ ಮಾತ್ರ ರೂಢಿಸಿಕೊಳ್ಳಲು ಸಾಧ್ಯ.



ಮಲ್ಲಕಂಬದ ಅಭ್ಯಾಸದಲ್ಲಿರುವ ಕುಸ್ತಿಪಟು

ಇಂದಿನ ಯಾಂತ್ರೀಕೃತ ಜೀವನದಲ್ಲಿ ಒತ್ತಡಗಳು ಬಹಳವಲ್ಲದೆ, ಕಲುಷಿತ ವಾತಾವರಣದಿಂದಾಗಿ ಕಾಯಿಲೆಗಳು ನೂರೆಂಟು. ಮನುಷ್ಯ ಔಷಧಿಗಳ ಬಲದಿಂದಲೇ ಜೀವಿಸಬೇಕಾದ ಅನಿವಾರ್ಯತೆಯುಂಟಾಗಿದೆ. ಹೀಗಾಗಿ ಅರ್ಹತೆ ಜೊತೆಗೆ ಆರೋಗ್ಯವೂ ಮುಖ್ಯವಾಗಿದೆ. ಆದರೆ, ದೇಹಕ್ಕೆ ಸಹಜವಾಗಿ ಸಿಗಬೇಕಾದಷ್ಟು ವ್ಯಾಯಾಮದ ಕಡೆಗೂ ಗಮನ ಕೊಡಲಾರದಷ್ಟು ಜಂಜಾಟದಲ್ಲಿದ್ದಾನೆ. ಸಾಕಷ್ಟು ವ್ಯಾಯಾಮದ ಮೂಲಕ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯ ಸಾಧ್ಯ. ಇವೆರಡಕ್ಕೂ ಉತ್ತಮ ಸಂಕಲ್ಪ, ಶ್ರದ್ಧೆ, ನಿಕೃಷ್ಟ ಪಥ, ಏಕಾಗ್ರತೆ ಅವಶ್ಯ. ಮಾನವ ಸ್ವಸಾಮರ್ಥ್ಯದಿಂದ ಆರೋಗ್ಯ ಭಾಗ್ಯವನ್ನು ಪಡೆಯ ಬೇಕಾಗುತ್ತದೆ. ಆರೋಗ್ಯವಿದ್ದಲ್ಲಿ ಮಾತ್ರ ಜೀವನದ ಸುಖ–ಲಾಭವನ್ನು ಅನುಭವಿಸಬಹುದು. ಅನುಕೂಲಕರ ಸಂದರ್ಭಗಳು ತಾವಾಗಿಯೇ ಒದಗಿ ಬರುತ್ತವೆ. ಆಗ ಜೀವನ ಆತಂಕವಿಲ್ಲದ ವಿಶಾಲ ನದಿಯಂತೆ ಶಾಂತವೂ, ಆನಂದದಾಯಿಯೂ ಆಗಬಲ್ಲದು.

ಮಾನವನ ಕಾರ್ಯಸಾಮರ್ಥ್ಯ ಅವನ ಆಮ್ಲಜನಕದ ಬಳಕೆಯನ್ನು ಅವಲಂಬಿಸಿದೆ. ಇದರ ಗರಿಷ್ಠ ಮಟ್ಟದ ಬಳಕೆ 20ನೇ ವಯಸ್ಸಿನಲ್ಲಿ. ನಂತರ ವಯಸ್ಸಾದಂತೆ ಕ್ರಮೇಣ ಇದರ ಮಟ್ಟವೂ ಕಡಿಮೆಯಾಗುತ್ತದೆ. ಆದರೆ ದಿನನಿತ್ಯದ ವ್ಯಾಯಾಮದಿಂದ ಈ ಆಮ್ಲಜನಕದ ಹೀರುವಿಕೆಯ ಪ್ರಮಾಣವನ್ನು ಶೇಕಡಾ 20–30 ರಷ್ಟು ಹೆಚ್ಚಿಸಬಹುದು.

ಸು. 35 ವರ್ಷ ವಯಸ್ಸಿನ ಅನಂತರ ಹೃದಯದ ಕಾರ್ಯಸಾಮರ್ಥ್ಯ ಕ್ರಮೇಣ ಕುಗ್ಗಲಾರಂಭಿಸುತ್ತದೆ. ವ್ಯಾಯಾಮ ಹಾಗೂ ಅಂಗ ಸಾಧನೆಯ ಮೂಲಕ ಇದನ್ನು ಕೆಲಮಟ್ಟಿಗೆ ತಡೆಗಟ್ಟಬಹುದು. 45ನೆಯ ವಯಸ್ಸಿನ ಅನಂತರ ಮೂಳೆಗಳು ಪೆಡಸಾಗುತ್ತ ಹೋಗುತ್ತವೆ. ಕೀಲು ಹಾಗೂ ಸಂದುಗಳ ತೊಂದರೆ ಪ್ರಾರಂಭ. ಮಣಿಶಿರ (ಬೆನ್ನುಮೂಳೆ) ಮೃದುತ್ವ ಕಳೆದುಕೊಳ್ಳುತ್ತ ಹೋಗುವುದೇ ವೃದ್ಧಾಪ್ಯ. ವ್ಯಕ್ತಿ ಸತತವಾದ ವ್ಯಾಯಾಮದಿಂದ ಇಂಥ ನ್ಯೂನತೆಗಳನ್ನು ಮೀರಬಲ್ಲ.

ಇನ್ನು ಮಧುಮೇಹ (ಸಕ್ಕರೆ ಕಾಯಿಲೆ) ರೋಗಿಗಳ ಸಂಖ್ಯೆ ತೀವ್ರವಾಗಿ ಬೆಳೆಯುತ್ತಿದೆ. ಇದರ ಜೊತೆಗೆ ರಕ್ತದೊತ್ತಡ, ಹೃದಯದ ಕಾಯಿಲೆಗಳೂ ಸಾಮಾನ್ಯವಾಗುತ್ತಲಿವೆ. ಆಮ್ಲೀಯತೆ, ವಾಯುಪ್ರಕೋಪ ಸೇರಿಕೊಳ್ಳುತ್ತವೆ. ಇವೆಲ್ಲವೂ ದೈಹಿಕ ಶ್ರಮವಿಲ್ಲದರ ಪರಿಣಾಮ. ಮೊದಲಿನಿಂದಲೂ ಯೋಗ್ಯ ವ್ಯಾಯಾಮವನ್ನು ರೂಢಿಸಿಕೊಂಡರೆ ಇಂಥ ಎಲ್ಲ ರೋಗಗಳಿಂದ ದೂರವಿರಬಹುದು. ವೈದ್ಯರು ಔಷಧದ ಜೊತೆಗೆ ವ್ಯಾಯಾಮವನ್ನು ಅನುಸರಿಸುವಂತೆ ಹೇಳುತ್ತಲಿದ್ದಾರೆ.

ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ಶರೀರದಲ್ಲಿನ ಅಗ್ನಿಶಕ್ತಿದಾಯಿಗಳಾದ ಗ್ರಂಥಿಸಾರಗಳು ಯಾವ ಕಾರಣದಿಂದಲೋ ಕಡಿಮೆಯಾಗುತ್ತ, ಅಪರೂಪವಾಗಿ ಶುದ್ಧ ವಾತಪ್ರಕೃತಿಯ ಮನುಷ್ಯನೂ ತೀರ ಕಫ ಪ್ರಕೃತಿಯವನಾಗಿಬಿಡುತ್ತಾನೆ. ಬೊಜ್ಜು ಬೆಳೆಯುತ್ತದೆ. ಇವನ ಜೀವನದ್ರವ ಪರಿವರ್ತನ ಶಕ್ತಿ (ಬೇಸಿಕ್ ಮೆಟಾಬಾಲಿಕ್ ರೇಟ್) ಸಾಧಾರಣ 55 ಇದ್ದದ್ದು ಕಡಿಮೆಯಾಗುತ್ತ ಬಂದು ಹೀಗಾಗುತ್ತದೆ. ಮನುಷ್ಯ ಏನೇನೂ ಕೆಲಸ ಮಾಡದೇ ಸುಮ್ಮನೆ ಕುಳಿತಿದ್ದರೂ, ಸುಮ್ಮನೆ ಮಲಗಿದ್ದರೂ ಒಂದು ಗಂಟೆಗೆ ಅವನು ಸಾಮಾನ್ಯವಾಗಿ 55 ಕ್ಯಾಲರಿ ಶಕ್ತಿಯನ್ನು ಉಪಯೋಗಿಸುತ್ತಾನೆ. ಇದು 50 ಆದರೆ ಕಡಿಮೆಯಾಯಿತು. 60 ಆದರೆ ಹೆಚ್ಚೇ ಆಯಿತು. ಇದೆಲ್ಲವನ್ನು ಪರಿಗಣಿಸಿ, ಹೆಚ್ಚು ಕಡಿಮೆಯಾಗದಂತೆ ಆರೋಗ್ಯಪೂರ್ಣವಾಗಿರಲು ಸೂಕ್ತ ವ್ಯಾಯಾಮವೇ ಮದ್ದು.

ಬೇಗ ಮಲಗಿ ಬೇಗ ಏಳುವುದು ನಮ್ಮ ಸಂಸ್ಕೃತಿ. ಬೆಳಗಾಗೆದ್ದು ಐಹಿಕ ಕಾರ್ಯಕ್ರಮ ಮುಗಿದ ಅನಂತರ ಧ್ಯಾನ, ಯೋಗಾಸನ, ಪ್ರಾಣಾಯಾಮ, ವಾಯುವಿಹಾರ, ಓಡುವುದು, ನಡೆದಾಡುವುದು, ಆಟ ಮುಂತಾದ ಯಾವುದೇ ಚಟುವಟಿಕೆಯೂ ವ್ಯಾಯಾಮವೇ. ಇದೇ ಅಂಗಸಾಧನೆ ಕೂಡ. (ಎನ್.ಎಸ್.ಪಿ)

**ಅಂಗಸ್ಥಲಗಳು :** ವೀರಶೈವ ಧರ್ಮದಲ್ಲಿ ಮೋಕ್ಷವನ್ನು ಬಯಸುವ ಜೀವನು ಅಥವಾ ಅಂಗನು ನೂರೊಂದು ಸ್ಥಲಗಳ ಆಚರಣೆಗಳನ್ನು ನಡೆಸಬೇಕಾಗುತ್ತದೆ. ಇದನ್ನು ಏಕೋತ್ತರಶತಸ್ಥಲ ಎಂದು ಕರೆಯಲಾಗಿದೆ. ಈ ವಿಷಯವನ್ನು ಸಿದ್ಧಾಂತಶಿಖಾಮಣಿ, ಗಣಭಾಷ್ಯರತ್ನಮಾಲೆ, ಮುಂತಾದ ಗ್ರಂಥಗಳಲ್ಲಿ ಹೇಳಲಾಗಿದೆ. ಅಂಗಸ್ಥಲಗಳು 44, ಲಿಂಗಸ್ಥಲಗಳು 57. ಅಂಗಸ್ಥಲಗಳ ವಿವರ ಹೀಗಿದೆ – ಪಿಂಡ; ಪಿಂಡಜ್ಞಾನ; ಸಂಸಾರಹೇಯ; ಗುರುಕಾರುಣ್ಯ; ಲಿಂಗಧಾರಣ; ವಿಭೂತಿ; ರುದ್ರಾಕ್ಷ; ಮಂತ್ರ; ಭಕ್ತಮಾರ್ಗಕ್ರಿಯಾ; ಉಭಯ; ಗುರುಲಿಂಗಜಂಗಮ (ತ್ರಿವಿಧ ಸಂಪತ್ತಿ);ಗುರುಲಿಂಗಜಂಗಮ ಪ್ರಸಾದ (ಚತುರ್ವಿಧ ಸಾರಾಯ); ಉಪಾಧಿಮಾಟ; ನಿರುಪಾಧಿಮಾಟ; ಸಹಜಮಾಟ; ಮಾಹೇಶ್ವರ; ಲಿಂಗನಿಷ್ಠೆ; ಪೂರ್ವಾಶ್ರಯನಿರಸನ; ವಾಗದ್ವೈತ ನಿರಸನ; ಆಹ್ವಾನನಿರಸನ; ಅಷ್ಟತನುಮೂರ್ತಿ ನಿರಸನ; ಸರ್ವಗತ ನಿರಸನ; ಶಿವಜಗನ್ಮಯ; ಭಕ್ತದೇಹಿಕಲಿಂಗ; ಪ್ರಸಾದಿ; ಗುರುಮಹಾತ್ಮೆ; ಪ್ರಸಾದಮಹಾತ್ಮೆ; ಪ್ರಾಣಲಿಂಗಿ; ಪ್ರಾಣಲಿಂಗಾರ್ಚನೆ; ಶಿವಯೋಗ ಸಮಾಧಿ; ಅಂಗ–ಲಿಂಗ; ಲಿಂಗನಿಜ; ಶರಣ; ತಾಮಸ; ನಿರಸನ; ನಿರ್ದೇಶ; ಶೀಲಸಂಪಾದನೆ; ಐಕ್ಯಸ್ಥಲ; ಏಕಭಾಜನ; ಸಹಭೋಜನ; ಸರ್ವಾಚಾರಸಂಪತ್ತಿ. (ಬಿ.ಎಸ್.)

**ಅಂಗಳದಲ್ಲಿನ ವರ್ಗಾವಣೆ :** ಸ್ಥಳದಲ್ಲಿಯೆ ಖರೀದಿಮಾಡುವವನಿಗೇ ನೇರವಾಗಿ ಪದಾರ್ಥಗಳನ್ನು ಒದಗಿಸುವುದು. ಸಾಕ್ಷಾತ್ ಮಾರುಕಟ್ಟೆಯಲ್ಲಿಯೇ ನಡೆಯುವ ಸ್ಥಳವ್ಯವಹಾರಗಳಲ್ಲಿ ಮಾತ್ರ ಈ ರೀತಿಯ ವರ್ಗಾವಣೆ ನಡೆಯುತ್ತದೆ. ನಿರ್ದಿಷ್ಟ ವಸ್ತುವಿನ ನಿರ್ದಿಷ್ಟ ಪ್ರಮಾಣಕ್ಕೆ ಮಾತ್ರ ವರ್ಗಾವಣೆಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತದೆ. ಇದು ಉತ್ಪಾದಕರ ಮತ್ತು ಸರಕು ವ್ಯಾಪಾರಿಗಳ ಆ ಕ್ಷಣದ ಅಗತ್ಯಗಳನ್ನು ಪೂರೈಸುತ್ತದೆ. ಇಂಥ ವರ್ಗಾವಣೆಗಳು ಹೆಚ್ಚುತ್ತಿರುವುದು ಸ್ಥಳಪೇಟೆಯ ಬೆಳವಣಿಗೆಯನ್ನೇ ಅಲ್ಲದೆ ಮುಂಮಾರಿಕೆ ಪೇಟೆಯ ಪ್ರಗತಿಯನ್ನೂ ಸೂಚಿಸುತ್ತದೆ. (ಸಿ.ಸಿ.ಪಿ.)

**ಅಂಗಳದ ವ್ಯಾಪಾರ :** ಷೇರು ಪೇಟೆಗಳಲ್ಲಿ ವ್ಯವಹಾರದಲ್ಲಿರುವ ವಿವಿಧ ವ್ಯಾಪಾರ ವಿಧಾನಗಳಲ್ಲಿ ಒಂದು (ಫ್ಲೋರ್ ಟ್ರೇಡ್)

ಅಂಗಳದ ವ್ಯಾಪಾರಿ (ಕೊರಡಿಯ ವ್ಯಾಪಾರಿ) ತನ್ನ ಲೆಕ್ಕದಲ್ಲಿಯೇ ಲಾಭದಾಸೆಯಿಂದ ಷೇರುಗಳನ್ನು ಕೊಳ್ಳುತ್ತಾನೆ; ಮಾರುತ್ತಾನೆ. ಇವನು ಇತರ ಸದಸ್ಯರಿಗಾಗಲಿ, ಸದಸ್ಯೇತರರಿಗಾಗಲಿ, ವ್ಯವಹಾರ ಮಾಡುವುದಿಲ್ಲ. ಇವನ ವ್ಯವಹಾರ ಲಂಡನ್ ಷೇರು ವಿನಿಮಯಕೇಂದ್ರದ ಸ್ವಂತವ್ಯಾಪಾರಿಯ ಅಥವಾ ಮುಂಬೈ ವಿನಿಮಯ ಕೇಂದ್ರದ ತರವಣಿವಾಲನ ರೀತಿಯದು. ಆದರೆ ಅವರಂತೆ ಇವನು ಯಾವ ಒಂದೇ ಬಂಡವಾಳಪತ್ರದ ವ್ಯಾಪಾರದಲ್ಲಿ ನಿರತನಾಗುವುದಿಲ್ಲ. ಯಾವ ಪತ್ರಗಳಲ್ಲಿ ಚುರುಕು ವ್ಯವಹಾರಗಳಾಗಬಹುದೆಂಬ ಸೂಚನೆ ಕಂಡುಬರುವುದೋ ಅವುಗಳಲ್ಲಿ ಮಾತ್ರವೇ ವ್ಯವಹರಿಸುತ್ತಾನೆ.

ಅಂಗಳದ ವ್ಯಾಪಾರಿಗೆ ಸಾಮಾನ್ಯವಾಗಿ ತನ್ನದೇ ಆದ ಕಾರ್ಯಾಲಯವಿರುವುದಿಲ್ಲ. ಸರಕಿನ ಮಾರಾಟಕ್ಕಾಗಿಯೂ ವ್ಯವಹಾರಕ್ಕಾಗಿಯೂ ನಾಮಪತ್ರ ಶುಲ್ಕ ಕೊಟ್ಟು ಒಂದು ಕೋಣೆಯನ್ನು ಬಾಡಿಗೆಗೆ ಹಿಡಿಯುತ್ತಾನೆ. ಸ್ವಲ್ಪ ಲಾಭ ಸಿಕ್ಕರೂ ಅವನು ಬಿಡುವುದಿಲ್ಲ. ಸ್ವಲ್ಪ ನಷ್ಟವಾಗುವಂತಿದ್ದರೂ ಜಾಗರೂಕತೆಯಿಂದ ಅದನ್ನು ನಿವಾರಿಸಿಕೊಳ್ಳುತ್ತಾನೆ. ಬೆಲೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಾದರೂ ಅವುಗಳ ಮೇಲೆ ವ್ಯವಹಾರ ನಡೆಸುವುದರಿಂದಲೂ ದೊಡ್ಡ ದೊಡ್ಡ ವ್ಯಾಪಾರ ಒಪ್ಪಂದಗಳನ್ನು ಬೇಗ ಬೇಗ ನಿರ್ವಹಿಸಿ, ಸರಕುಗಳನ್ನು ಕೊಂಡು ಮಾರುವುದರಿಂದಲೂ ಅವನು ತನ್ನ ಈ ಉದ್ದೇಶವನ್ನು ಸಾಧಿಸಿಕೊಳ್ಳುವನು. ಕೊಳ್ಳುವ ಅಥವಾ ಮಾರುವ ಯಾವ ವ್ಯವಹಾರವನ್ನೂ ಅರ್ಧಂಬರ್ಧ ಮಾಡದ ರೀತಿಯಲ್ಲಿ ಪ್ರತಿ ದಿನವೂ ಆತ ತನ್ನ ವ್ಯಾಪಾರವನ್ನು ಪೂರೈಸುವನು. ನಷ್ಟ ತಪ್ಪಿಸುವ ಆದೇಶಗಳ ಸೂಚನೆಗಳನ್ನನುಸರಿಸಿ ಬಹು ಎಚ್ಚರಿಕೆಯಿಂದ ವ್ಯವಹರಿಸಿ, ಕೈ ಖಾಲಿಮಾಡಿ ಕೊಂಡು, ಪೇಟೆ ಮುಚ್ಚುವ ಮುನ್ನವೇ ಅಲ್ಲಿಂದ ಹೊರಡುತ್ತಾನೆ.

ಅಂಗಳದ ವ್ಯಾಪಾರಿ ಇರುವುದರಿಂದ ಪೇಟೆಯು ಅವಿಚ್ಛಿನ್ನವಾಗಿ ನಡೆಯುವುದಕ್ಕೂ ಸವಾಲು ಬೆಲೆಗೂ ಕೊಡಲೊಪ್ಪಿದ ಬೆಲೆಗೂ ನಡುವಣ ಅಂತರವನ್ನು ಕಡಿಮೆ ಮಾಡುವುದರ ಮೂಲಕ ದಿನದಿನದ ವ್ಯಾಪಾರಾವಧಿಯಲ್ಲಿ ಗಂಟೆ ಗಂಟೆಗೂ ಬೆಲೆಯನ್ನು ಸ್ಥಿರಗೊಳಿಸುವುದಕ್ಕೂ ಸಹಾಯಕವಾಗಿದೆ. ಆದರೆ ವಿಶೇಷ ಸಂದರ್ಭಗಳಲ್ಲಿ ಈ ವ್ಯಾಪಾರಿಗಳ ವ್ಯವಹಾರಗಳಿಂದ ಏರಿಳಿತಗಳು ಕಡಿಮೆಯಾಗಿ ಸ್ಥಿರತೆ ಏರ್ಪಡುವ ಬದಲು ಅವುಗಳ ಅಂತರಗಳು ಹೆಚ್ಚಬಹುದು.

ಆದರೆ ಇವನು ಬಹುಕಾಲ ತೇಜಿ ಅಥವಾ ಮಂದಿ ವ್ಯಾಪಾರಿಯಾಗಿರುವುದಿಲ್ಲ. ಆದ್ದರಿಂದ ಇವನ ವ್ಯವಹಾರ ತೀಕ್ಷ್ಣವಾಗಿರುವುದಿಲ್ಲ. ಪೇಟೆಯ ವ್ಯವಹಾರಗಳನ್ನು ಸ್ಥಿರಗೊಳಿಸುವ ಕಾರ್ಯಭಾರವೂ ಅಷ್ಟೇನೂ ಮುಖ್ಯವಲ್ಲ. ಏಕೆಂದರೆ ಈ ವ್ಯಾಪಾರಿ ಪೇಟೆಯ ಪ್ರವೃತ್ತಿಗೆ ವಿರುದ್ಧವಾದ ದಿಕ್ಕಿನಲ್ಲಿ ಕೇವಲ ಮೂರನೆಯ ಒಂದು ಭಾಗದಷ್ಟು ಕಾಲದಲ್ಲಿ ಮಾತ್ರ ವ್ಯವಹರಿಸುತ್ತಾನೆ. ಏನಾದರಾಗಲಿ, ಈ ವ್ಯಾಪಾರದ ನಿರ್ವಹಣೆ ಬೇಗಬೇಗ ಪೂರೈಸುವುದರಿಂದ ಉದ್ದಿಷ್ಟ ಪರಿಣಾಮ ಉಂಟಾಗುತ್ತದೆ (**ನೋಡಿ – ಷೇರುಪೇಟೆ**).

(ಎನ್.ವಿ.)

**ಅಂಗಾಂಶಕೃಷಿ :** ಸಸ್ಯದೇಹದಿಂದ ಬೇರ್ಪಡಿಸಿದ ವಿವಿಧ ಕೋಶಗಳನ್ನು ಮತ್ತು ಅಂಗಾಂಶಗಳನ್ನು ಕ್ರಿಮಿ ಶುದ್ಧಸ್ಥಿತಿಗಳಲ್ಲಿ(ಗಾಜಿನ ಸೀಸೆಗಳಲ್ಲಿ), ಕೃತಕವರ್ಧನಮಾಧ್ಯಮಗಳ ಮೇಲೆ ಬೆಳೆಸುವ ಪ್ರಯೋಗಗಳಿಗೆ ಕೋಶ ಮತ್ತು ಅಂಗಾಂಶ ಕೃಷಿ/ವ್ಯವಸಾಯ (ಟಿಶ್ಯೂಕಲ್ಚರ್) ಎಂದು ಹೆಸರು. ಶ್ಲೀಡನ್ ಮತ್ತು ಶ್ವಾನ್ ಎಂಬುವರು ಪ್ರತಿಪಾದಿಸಿದ ಜೀವಕೋಶ ಸಿದ್ಧಾಂತದ ಪ್ರಕಾರ (ಸೆಲ್ ಥಿಯರಿ) ಸಸ್ಯ ಮತ್ತು ಪ್ರಾಣಿ ದೇಹಗಳು ಜೀವಕೋಶಗಳಿಂದ ಮಾಡಲ್ಪಟ್ಟಿರುವುದಲ್ಲದೆ ಪ್ರತಿಜೀವಕೋಶವೂ ಸ್ವತಂತ್ರವಾಗಿ ತುಂಬುಜೀವನ ನಡೆಸಬಲ್ಲ ಸಾಮರ್ಥ್ಯವಿರುವ ಸ್ವಂತ ಅಸ್ತಿತ್ವವುಳ್ಳ ವಸ್ತುಗಳೆಂದು ಪರಿಗಣಿಸಲ್ಪಟ್ಟಿವೆ.

ಜೀವಕೋಶಸಿದ್ಧಾಂತದ ಬಗ್ಗೆ 1. ಸಸ್ಯ ಮತ್ತು ಪ್ರಾಣಿದೇಹಗಳು ಒಂದೇ ರೀತಿಯ ಗುಣವಿಶೇಷಗಳನ್ನು ಹೊಂದಿರುವ ಕೋಶಗಳಿಂದಾದ ಸಮೂಹ. 2. ಸ್ವತಂತ್ರಕೋಶಗಳು ಸಸ್ಯ ಮತ್ತು ಪ್ರಾಣಿದೇಹಗಳ ರಚನೆ ಮತ್ತು ನಿಯಮಿತ ಕಾರ್ಯಗಳಲ್ಲಿ ತಮ್ಮ ಪೂರ್ಣಸಾಮರ್ಥ್ಯವನ್ನು ಕಳೆದುಕೊಂಡಮೇಲೆ ಪುನಃ ಆ ಸಾಮರ್ಥ್ಯವನ್ನು ಪಡೆಯಲು ಸಾಧ್ಯವಿಲ್ಲ ಎಂಬ ಮುಖ್ಯವಾದ ಅಭಿಪ್ರಾಯಗಳಿವೆ. ಇವುಗಳ ಬಗ್ಗೆ ನಿರ್ದಿಷ್ಟವಾದ ಸತ್ಯಾಂಶಗಳನ್ನು ತಿಳಿದರೆ ಸಸ್ಯ ಮತ್ತು ಪ್ರಾಣಿದೇಹಗಳ ರೂಪರಚನೆ ಮತ್ತು ಕಾರ್ಯಗಳಲ್ಲಿ ಕೋಶಗಳ ಮಹತ್ವವನ್ನು ತಿಳಿಯುವುದು ಸಾಧ್ಯವೆಂದು ವಿಜ್ಞಾನಿಗಳ ಅಭಿಮತ. ಸಸ್ಯ ಮತ್ತು ಪ್ರಾಣಿಗಳನ್ನು ಅವುಗಳ ಕೋಶ ಸ್ಥಿತಿಗಳಲ್ಲಿ ಅಭ್ಯಸಿಸಿದರೆ ಅವುಗಳ ಮೂಲರಚನೆ ಮತ್ತು ಕಾರ್ಯಗಳನ್ನು ತಿಳಿಯಬಹುದು. ಆದ್ದರಿಂದ ಕೋಶ ಮತ್ತು ಅಂಗಾಂಶಗಳನ್ನು ಅವುಗಳ ನಿಯಮಿತ ಪರಿಸರಗಳಿಂದ ಬೇರ್ಪಡಿಸಿ, ಕೃತಕವಾಗಿ ಬೆಳೆಸಿ ಅವುಗಳ ಪೂರ್ಣಸಾಮರ್ಥ್ಯಗಳನ್ನು ತಿಳಿಯುವ ಅಭ್ಯಾಸಗಳಲ್ಲಿ ಕೋಶ ಮತ್ತು ಅಂಗಾಂಶ ವ್ಯವಸಾಯ ಪ್ರಯೋಗಗಳು ಉತ್ತಮ ತಂತ್ರಗಳೆನಿಸಿಕೊಂಡಿವೆ.

ಈ ದಿಸೆಯಲ್ಲಿ ಮೊದಲು ವೋಕ್ಟಿಂಗ್ ಎಂಬ ವಿಜ್ಞಾನಿ ಕೆಲವು ಅಂಗಾಂಶ ಕೃಷಿ ಪ್ರಯೋಗಗಳನ್ನು ನಡೆಸಿ ಜೀವಿಯ ಎಲ್ಲ ಜೀವಕ್ರಿಯೆಗಳು ರೂಪ ಪ್ರಭೇದನ ಶಕ್ತಿಯಿಂದ (ಮಾರ್ಫೊಜೆನೆಟಿಕ್) ರೂಪಿಸಲ್ಪಟ್ಟಿರುತ್ತವೆ ಎಂದು ಪ್ರತಿಪಾದಿಸಿದ.

1902 ರಲ್ಲಿ ಜರ್ಮನ್ ಸಸ್ಯವಿಜ್ಞಾನಿ ಹೇಬರ್‌ಲ್ಯಾಂಟ್ ಎಂಬಾತ ಕೋಶದ ಪೂರ್ಣ ಸಾಮರ್ಥ್ಯದ ಬಗ್ಗೆ ಮುಖ್ಯವಾದ ಪ್ರತಿಪಾದನೆಗಳನ್ನು ಪರೀಕ್ಷಿಸಲು ಅನೇಕ ಪ್ರಯೋಗಗಳನ್ನು ನಡೆಸಿದ. ಕೇವಲ ಒಂದೇ ಒಂದು ಜೀವ ಕೋಶ, ಭ್ರೂಣದ ಎಲ್ಲ ಗುಣ ವಿಶೇಷಗಳನ್ನು ಹೊಂದಿದ್ದು ನಿಯಮಿತ ವಾತಾವರಣಗಳಲ್ಲಿ ಅದು ತನ್ನ ಪೂರ್ಣಸಾಮರ್ಥ್ಯವನ್ನು ತೋರಬಹುದು ಎಂದು ಪ್ರತಿಪಾದಿಸಿದ. ಪ್ರಾಯೋಗಿಕವಾಗಿ ಸಾಧಿಸಲಾಗದಿದ್ದರೂ ಈ ತತ್ತ್ವ ಕೋಶ ಸಿದ್ಧಾಂತದ ಹಾಗೂ ಜೀವಶಾಸ್ತ್ರದ ಮುಖ್ಯ ಆಧಾರೋಕ್ತಿಗಳಲ್ಲಿ ಒಂದಾಗಿದೆ.

ಹಿಲ್ಡಬ್ರಾಂಟ್ ತನ್ನ ಪ್ರಯೋಗಗಳಲ್ಲಿ ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ಭಾಗವಹಿಸುವ ಕೋಶಗಳ ಸಂವರ್ಧನೆಯನ್ನು ಕೈಗೊಂಡ. ಅವುಗಳು ಪೂರ್ಣ ಪ್ರಭೇದನಹೊಂದಿದ ಕೋಶಗಳಾಗಿರುವುದರಿಂದ ಈ ಪ್ರಯೋಗಗಳಲ್ಲಿ ಆತ ಯಶಸ್ವಿಯಾಗಲಿಲ್ಲ. 1921ರಲ್ಲಿ ಮೊಲಿಯಾರ್ಡ್ ಎಂಬ ವಿಜ್ಞಾನಿ ಸಸ್ಯ ಭ್ರೂಣದ ಸಂವರ್ಧನೆಯ ಪ್ರಯೋಗಗಳಲ್ಲಿಯೂ ಕೊಟೆ ಮತ್ತು ರಾಬಿನ್ಸ್ ಎಂಬುವರು ಬೇರುತುದಿ ಭಾಗಗಳನ್ನು ಕೃತಕವಾಗಿ ಬೆಳೆಸುವ ಪ್ರಯೋಗಗಳಲ್ಲಿಯೂ ಯಶಸ್ವಿಗಳಾದರು.



ಅಂಗಾಂಶ ಕೃಷಿ

1. ಪೆಲರ್‌ಗೋನಿಯಂ ಹಾರ್ಟೋರಂ ಸಸ್ಯದ ಕಾಂಡದ ಉರುಳೆಗಳನ್ನು 0.1 ಮಿಗ್ರಾಂ. ಎನ್.ಎ.ಎ. ಮತ್ತು 2 ಮಿಗ್ರಾಂ. ಕೈನೆಟಿನ್ ಮತ್ತು ಮಾಲ್ಟ್ ಸಾರಗಳಿಂದ ಸುಧಾರಿಸಿದ ಕೃತಕವರ್ಧನ ಮಾಧ್ಯಮದ ಮೇಲೆ ಬೆಳೆಸಿರುವುದು. ವಯಸ್ಸು 18 ದಿನಗಳು.
2. ಕಾಂಡದ ಭಾಗಗಳನ್ನು ವರ್ಧನಮಾಧ್ಯಮದ ಮೇಲೆ ಬೆಳೆಸಿರುವುದು. ವಯಸ್ಸು 33 ದಿನಗಳು.
3. ಪೆಲೆರ್‌ಗೋನಿಯಂ ಹಾರ್ಟೋರಂ ಸಸ್ಯದ ಅಪ್ರಭೇದನ ಅಂಗಾಂಶಮಾಧ್ಯಮ ಸಂಯೋಜನೆ; 1 ಮಿಗ್ರಾಂ, ಎನ್.ಎ.ಎ. ಮತ್ತು 2 ಮಿಗ್ರಾಂ. ಕೈನೆಟಿನ್ – ಒಂದು ಲೀಟರಿನಲ್ಲಿ.
4. ಪೆಲೆರ್‌ಗೋನಿಯಂ ಹಾರ್ಟೋರಂ ಸಸ್ಯದ ಅಪ್ರಭೇದನ ಅಂಗಾಂಶ ಬೇರುಗಳು ಮತ್ತು ಬೇರುರೋಮಗಳಾಗಿ ಪ್ರಭೇದನ ಹೊಂದಿರುವುದು.
5. ಹಲಸಂದೆ ಸಸ್ಯದ ಮೂಲಕಾಂಡವನ್ನು ಕೃತಕ ಮಾಧ್ಯಮದ ಮೇಲೆ ಬೆಳೆಸಿದಾಗ, ಪ್ರಭೇದನ ಹೊಂದಿರುವ ಸಸ್ಯ.

ಅಂಗಾಂಶ ಕೃಷಿಯ ಪ್ರಯೋಗಗಳು ವೈಜ್ಞಾನಿಕವಾಗಿ ಪ್ರಾರಂಭವಾದದ್ದು 1934ರ ಸುಮಾರಿನಲ್ಲಿ. 1939ರಲ್ಲಿ ವ್ಹೈಟ್, ಗಾತರೆ ಮತ್ತು ನೋಬೆಕೊರ್ಟ್ ಎಂಬ ವಿಜ್ಞಾನಿಗಳು ಗಜ್ಜರಿ, (ಕ್ಯಾರಟ್) ಹೊಗೆಸೊಪ್ಪು, ಟೊಮೆಟೊ ಇತ್ಯಾದಿ ಸಸ್ಯಗಳ ವಿವಿಧ ಭಾಗಗಳನ್ನು ಇಂಡೋಲ್ ಅಸಿಟಿಕ್ ಆಮ್ಲವನ್ನು ಒಳಗೊಂಡ ಕೃತಕವರ್ಧನಮಾಧ್ಯಮಗಳ ಮೇಲೆ, ಕ್ರಿಮಿಶುದ್ಧ ಸ್ಥಿತಿಗಳಲ್ಲಿ ಅನೇಕ ವರ್ಷಗಳಿಂದ ಸತತವಾಗಿ ಯಶಸ್ವಿಯಾಗಿ ಬೆಳೆಸಿರುತ್ತಾರೆ. ಈ ಪ್ರಯೋಗಗಳಿಂದ ಅಂಗಾಂಶಕೃಷಿ ವೈಜ್ಞಾನಿಕ ರೀತಿಯಲ್ಲಿ ಬಳಕೆಗೆ ಬರುವಂತಾಯಿತು. ಅನಂತರ ನಡೆದ ಪ್ರಯೋಗಗಳಲ್ಲಿ ಗಜ್ಜರಿ, ಹೊಗೆಸೊಪ್ಪು, ಸೂರ್ಯಕಾಂತಿ, ಆಲೂಗೆಡ್ಡೆ, ಆರ್ಟಿಚೋಕ್ ಇತ್ಯಾದಿ ಸಸ್ಯಗಳಲ್ಲದೆ, ಸಸ್ಯವ್ರಣಗ್ರಂಥಿಗಳು (ಪ್ಲಾಂಟ್‌ಗಾಲ್ಸ್) ಕೀಟವ್ರಣ ಗ್ರಂಥಿಗಳು (ಇನ್ಸೆಕ್ಟ್‌ಗಾಲ್ಸ್) ಇತ್ಯಾದಿಗಳು ಸಹ ಉಪಯೋಗಿಸಲ್ಪಟ್ಟಿವೆ. ಅಲ್ಲದೆ ಸಸ್ಯ ದೇಹದಿಂದ ಬೇರ್ಪಡಿಸಿದ ಕೋಶವ್ಯೂಹಗಳು,ಕಾಂಡ ಮತ್ತು ಬೇರುಗಳ ಅಂಗಾಂಶ, ಅಂಗಾಂಶ ಭ್ರೂಣ (ಕೇಂಬಿಯಲ್ ಟಿಷ್ಯೂಸ್) ಇತ್ಯಾದಿ ಭಾಗಗಳನ್ನು ಕೃತಕರೀತಿಯಲ್ಲಿ ಬಳಸಲಾಗಿದೆ.

**ಪ್ರಾಯೋಗಿಕ ವಸ್ತುಗಳು :** ಅಂಗಾಂಶಕೃಷಿ ಪ್ರಯೋಗಗಳಲ್ಲಿ ಉಪಯೋಗಿಸುವ ಸಸ್ಯದ ಅಂಗಾಂಗಗಳ ಕೋಶಗಳು ಜೀವಂತವಾಗಿದ್ದು ಬೆಳೆಯುವ ಗುಣವನ್ನು ಹೊಂದಿರಬೇಕು. ಇಂಥ ಕೋಶಗಳು ಪೂರ್ಣವಾಗಿ ಬೆಳೆದು ಮಾರ್ಪಾಟು ಹೊಂದಿ ಅಂಗಾಂಶಗಳಾಗಿ ಪರಿಣಾಮಗೊಳ್ಳುವುವು.

**1. ಮೂಲವರ್ಧನ ಅಂಗಾಂಶಗಳು(ಮೆರಿಸ್ಟೆಮ್) :** ಬೇರು ಮತ್ತು ಕಾಂಡದ ತುದಿಗಳು ಪಾರ್ಶ್ವಸಂವರ್ಧನ ಅಂಗಾಂಶ (ಲ್ಯಾಟರಲ್ ಕೇಂಬಿಯಮ್) ಮೊಗ್ಗುಗಳು ಮತ್ತು ಕೆಲವು ಹುಲ್ಲು ಗಿಡಗಳಲ್ಲಿ ಕಂಡುಬರುವ ಮೂಲಅಂಗಾಂಶಗಳ ಮಧ್ಯಭಾಗಗಳು. 2. ಆನುಷಂಗಿಕ; ಪ್ಯಾರೆಂಕಿಮ, ಫೆಲ್ಲೋಜನ್ ಇತ್ಯಾದಿ ಅಂಗಾಂಶಗಳು ಅವಿರತವಾಗಿ

ಬೆಳೆಯಲಾರವು ಎಂದು ತಿಳಿದುಬಂದಿದೆ. 3. ತೊಗಟೆಯ ಪ್ಯಾರೆಂಕಿಮ ಭ್ರೂಣಾಹಾರಂಗಾಂಶ ಭ್ರೂಣಾವರಣಕೋಶಜಾಲ (ನ್ಯೂಸೆಲಸ್) ಇತ್ಯಾದಿಗಳು. 4. ಸಸ್ಯರೋಮಗಳು, ಆಹಾರಸಂಗ್ರಹಣ ಸ್ಕ್ಲೀರೆಂಕಿಮ ಇತ್ಯಾದಿಗಳು ಈ ಅಂಗಾಂಶಗಳ ಸಂವರ್ಧನೆ ಕಷ್ಟವಾಗಿರುವುದೆಂದು ತಿಳಿದುಬಂದಿದೆ.

ಕೃತಕವರ್ಧನಮಾಧ್ಯಮಗಳ ತಯಾರಿಕೆ ಅಂಗಾಂಶ ಕೃಷಿಯ ಪ್ರಯೋಗಗಳಲ್ಲಿ ಮುಖ್ಯವಾದುದು. ಈ ದಿಶೆಯಲ್ಲಿ ವೈಟ್, ಗಾತರೆ, ಟೋರಿ ಎಂಬ ವಿಜ್ಞಾನಿಗಳು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಮೂಲ ಮಾಧ್ಯಮದಲ್ಲಿ ಕಾರ್ಬನ್ ಅಂಶ ಮತ್ತು ಖನಿಜಾಂಶಗಳು ಕೆಲವು ಮಾನಗಳಲ್ಲಿ ಉಪಯೋಗಿಸಲ್ಪಡುವುವು. ಮೂಲಮಾಧ್ಯಮಗಳಿಗೆ ಅನ್ನಾಂಗಗಳನ್ನು (ವೈಟಮಿನ್ಸ್), ಚೋದಕ ವಸ್ತುಗಳನ್ನು, (ಸ್ಟಿಮ್ಯೂಲೆಂಟ್ಸ್) ಸಸ್ಯಸಾರಗಳು, ಈಸ್ಟ್‌ಸಾರ, ಎಳನೀರು, ಕ್ಷೀರಸಾರ, ಕೇಸಿಯಿನ್ ಹೈಡ್ರೊಲೈಸೇಟ್ ಮುಂತಾದುವುಗಳನ್ನು ನಿಯಮಿತ ಮಾನಗಳಲ್ಲಿ ಬೆರೆಸಿ ಸುಧಾರಿತ ಮಾಧ್ಯಮಗಳನ್ನು ತಯಾರಿಸುತ್ತಾರೆ. ಮಾಧ್ಯಮಗಳಲ್ಲಿ ದ್ರವರೂಪ ಮತ್ತು ಘನರೂಪ ಎಂದು ಎರಡು ವಿಧಗಳಿವೆ. ಸಕ್ಕರೆ (ಸುಕ್ರೋಸ್) ಮುಖ್ಯವಾದ ಕಾರ್ಬನ್ ಅಂಶವಾಗಿದೆ. ಸಾರಜನಕ ಮತ್ತು ಖನಿಜಾಂಶಗಳು ಅಜೈವಿಕ ಸ್ಥಿತಿಗಳಲ್ಲಿ ಉಪಯೋಗಿಸಲ್ಪಡುವುವು. ಚೋದಕ ವಸ್ತುಗಳು ಅಂಗಾಂಶಗಳ ಪೂರ್ಣ ಬೆಳವಣಿಗೆಗೂ ಮತ್ತು ಅಂಗಪ್ರಭೇದನಗಳಿಗೂ ಸಹಾಯಕವಾಗುವುವು. ಸಸ್ಯಚೋದಕ ವಸ್ತುಗಳಲ್ಲಿ ಆಕ್ಸಿನ್‌ಗಳು ಕೈನೆಟಿಕ್ ಮತ್ತು ಪ್ಯೂರಿನ್‌ಗಳು ಮತ್ತು ಜಿಬ್ಬೆರೆಲಿನ್‌ಗಳು ಮುಖ್ಯ ಪ್ರವರ್ಧಕವಸ್ತುಗಳೆಂದು ತಿಳಿದುಬಂದಿದೆ. ಅಲ್ಲದೆ ಕೆಲವು ಜೈವಿಕ ಆಮ್ಲಗಳು ಹಾಗೂ ವರ್ಧನನಿರೋಧಕ ವಸ್ತುಗಳು ಕೂಡ ಅಂಗಾಂಶಕೃಷಿಯಲ್ಲಿ ಪಾತ್ರವಹಿಸುತ್ತವೆ. ಚೋದಕ ವಸ್ತುಗಳ ಮತ್ತು ಇತರ ಮುಖ್ಯ ಅಂಶಗಳ ಸಮನ್ವಯದಿಂದ ಅಂಗಾಂಶಗಳ ಪೂರ್ಣ ಬೆಳವಣಿಗೆ ಮತ್ತು ಪ್ರಭೇದನಗಳು ಉಂಟಾಗುವುವೆಂದು ಅಂಗಾಂಶಕೃಷಿ ಪ್ರಯೋಗಗಳಿಂದ ತಿಳಿದುಬಂದಿದೆ. ಕೃತಕ ಮಾಧ್ಯಮಗಳಲ್ಲಿ ನೈಸರ್ಗಿಕ ಅಥವಾ ಕೃತಕ ಆಕ್ಸಿನ್‌ಗಳ ಉಪಯೋಗದಿಂದ ಬೇರುಗಳ ಮತ್ತು ಕೋಶಗಳ ಬೆಳವಣಿಗೆಯನ್ನು ಕೈನೆಟಿನ್ ಉಪಯೋಗದಿಂದ ಕೋಶಗಳ ವಿಭಜನೆ ಮತ್ತು ಮೊಗ್ಗುಗಳ ಉತ್ಪಾದನೆಗಳನ್ನು ಉಂಟುಮಾಡಬಹುದು. ಕೃತಕ ಚೋದಕಗಳು ಅನೇಕವಿದ್ದು ನ್ಯಾಫ್ಥಲೀನ್ ಅಸಿಟಿಕ್ ಆಸಿಡ್, 2,4–ಡೈಕ್ಲೊರೊಫಿನಾಕ್ಸಿ ಅಸಿಟಿಕ್ ಆಸಿಡ್, ಜಿಬ್ಬೆರೆಲಿನ್ ಇತ್ಯಾದಿ ವಸ್ತುಗಳನ್ನು ಉಪಯೋಗಿಸಲಾಗುವುದು. ನೈಸರ್ಗಿಕವಾಗಿ ಸಸ್ಯದೇಹದಲ್ಲಿ ಉತ್ಪತ್ತಿಯಾಗುವ ಇಂಡೋಲ್ ಅಸಿಟಿಕ್ ಆಸಿಡ್ ಎಂಬ ಚೋದಕ ಆಕ್ಸಿನ್ನನ್ನು ಕೃತಕ ರೀತಿಯಲ್ಲಿ ಉಪಯೋಗಿಸುವುದರಿಂದ ಕೋಶ ಮತ್ತು ಅಂಗಾಂಶಗಳ ಬೆಳವಣಿಗೆ ಸಾಧ್ಯವಾಗುವುದು.

ಕೃತಕವರ್ಧನ ಮಾಧ್ಯಮಗಳ ತಯಾರಿಕೆಯಲ್ಲಿ ಕೆಲವು ಪ್ರಮುಖ ಸಂಯೋಜನೆಗಳಿವೆ. ಇವುಗಳಲ್ಲಿ ಅನೇಕ ಪ್ರಮುಖ ಮತ್ತು ಗೌಣ ಖನಿಜಮೂಲಾಂಶಗಳನ್ನು ಲವಣರೂಪದಲ್ಲಿ ಉಪಯೋಗಿಸುತ್ತಾರೆ(ಪಟ್ಟಿ 1) ಈ ಮೂಲ ಮಾಧ್ಯಮಗಳನ್ನು ಹಿಂದೆ ತಿಳಿಸಿದಂತೆ ಅನೇಕ ರೀತಿಗಳಲ್ಲಿ ಸುಧಾರಿಸಬಹುದು. (ಪಟ್ಟಿ 2)

## ಪಟ್ಟಿ 1

### ಅಜೈವಿಕ ಮೂಲ ಮಾಧ್ಯಮಗಳ ಸಂಯೋಜನೆಗಳು

| ಖನಿಜಮೂಲಾಂಶಗಳು | | | 1943 | 1942 | 1953 | 1957 |
|---|---|---|---|---|---|---|
| | | | [illegible] | [illegible] | [illegible] | [illegible] |
| | | | ಲೀಟರ್ ನೀರಿನಲ್ಲಿ – ಗ್ರಾಂಗಳು | | | |
| 1. | ಪೊಟಾಸಿಯಂ ಕ್ಲೋರೈಡ್ | KCl | 65 | . . . | 750 | 60 |
| 2. | ಕ್ಯಾಲ್ಸಿಯಂ ಕ್ಲೋರೈಡ್ | $CaCl_2.2H_2O$ | . . . | . . . | 75 | . . . |
| 3. | ಪೊಟಾಸಿಯಂ ನೈಟ್ರೇಟ್ | $KNO_3$ | 80 | 125 | . . . | 85 |
| 4. | ಕ್ಯಾಲ್ಸಿಯಂ ನೈಟ್ರೇಟ್ | $Ca(NO_3)_2.4H_2O$ | 300 | 500 | . . . | 240 |
| 5. | ಸೋಡಿಯಂ ನೈಟ್ರೇಟ್ | $NaNO_3$ | . . . | . . . | 600 | . . . |
| 6. | ಮೆಗ್ನೀಸಿಯಂ ಸಲ್ಫೇಟ್ | $MgSO_4.7H_2O$ | 720 | 125 | 250 | 40 |
| 7. | ಸೋಡಿಯಂ ಸಲ್ಫೇಟ್ | $NaSO_4$ | 200 | . . . | . . . | . . . |
| 8. | ಪೊಟಾಸಿಯಂ ಡೈ ಹೈಡ್ರೋಜನ್ ಫಾಸ್ಫೇಟ್ | $KH_2PO_4$ | . . . | 125 | . . . | 20 |
| 9. | ಸೋಡಿಯಂ ಡೈ ಹೈಡ್ರೋಜನ್ ಫಾಸ್ಫೇಟ್ | $Na_2H_2PO_4.H_2O$ | 16.5 | . . . | 125 | . . . |
| 10. | ಫೆರಿಕ್ ಸಲ್ಫೇಟ್ | $Fe_2(SO_4)_3$ | 2.5 | 50 | . . . | . . . |
| 11. | ಫೆರಿಕ್ ಕ್ಲೋರೈಡ್ | $FeCl_3.6H_2O$ | . . . | . . . | 1 | 2.5 |
| 12. | ಮ್ಯಾಂಗನೀಸ್ ಸಲ್ಫೇಟ್ | $MnSO_4.4H_2O$ | 7 | 3 | 0.1 | 4.5 |
| 13. | ಝಿಂಕ್ ಸಲ್ಫೇಟ್ | $ZnSO_4.7H_2O$ | 3 | 0.18 | 1 | 1.5 |
| 14. | ಬೋರಿಕ್ ಆ್ಯಸಿಡ್ | $H_3BO_3$ | 1.5 | 0.05 | 1 | 1.5 |
| 15. | ಪೊಟಾಸಿಯಂ ಐಯೊಡೈಡ್ | KI | 0.75 | 0.50.01. . . | | |
| 16. | ಕಾಪರ್ ಸಲ್ಫೇಟ್ | $CuSO_4.5H_2O$ | 0,001 | 0.05 | 0.03 | 0.04 |
| 17. | ಮೊಲಿಬ್ಡಿನಂ ಟ್ರೈಆಕ್ಸೈಡ್ | Mo $O_3$ | 0.0001 | . . . | . . . | . . . |
| 18. | ಸೋಡಿಯಂ ಮೊಲಿಬ್ಡೇಟ್ | $Na_2MoO_2.2H_2O$ | . . . | . . . | . . . | 0.25 |
| 19. | ಅಲ್ಯುಮಿನಿಯಂ ಕ್ಲೋರೈಡ್ | Al $Cl_3$ | . . . | . . . | 0.03 | . . . |
| 20. | ನಿಕ್ಕಲ್ ಸಲ್ಫೇಟ್ | $NiSO_4$ | . . . | 0.05 | . . . | . . . |
| 21. | ನಿಕ್ಕಲ್ ಕ್ಲೋರೈಡ್ | $NiCl_2.6H_2O$ | . . . | . . . | 0.03 | . . . |
| 22. | ಕೋಬಾಲ್ಟ್ ಕ್ಲೋರೈಡ್ | Co $Cl_3$ | . . . | 0.05 | . . . | . . . |
| 23. | ಬೆರಿಲಿಯಂ ಸಲ್ಫೇಟ್ | $BeSO_4$ | . . . | 0.1 | . . . | . . . |
| 24. | ಟೈಟೇನಿಯಂ ಸಲ್ಫೇಟ್ | Ti $(SO_4)_3$ | . . . | 0.2 | . . . | . . . |
| 25. | ಸಲ್ಫೂರಿಕ್ ಆಮ್ಲ | $H_2SO_4$ | . . . | 1 | . . . | . . . |

## ಪಟ್ಟಿ 2

### ವೈಟರ ಸುಧಾರಿತ ಮೂಲಮಾಧ್ಯಮದ ಸಂಯೋಜನೆ

| | ಖನಿಜಮೂಲಾಂಶಗಳ ಲವಣಗಳು | | | ಗ್ರಾಂಗಳು 1 ಲೀಟರ್ ನೀರಿನಲ್ಲಿ |
|---|---|---|---|---|
| 1. | ಕ್ಯಾಲ್ಸಿಯಂ ನೈಟ್ರೇಟ್ | ... | $Ca(NO_3).H_2O$ | 20.122 |
| 2. | ಪೊಟಾಸಿಯಂ ನೈಟ್ರೇಟ್ | ... | $KNO_3$ | 16.00 |
| 3. | ಅಮೋನಿಯಂ ನೈಟ್ರೈಟ್ | ... | $NH_4NO_3$ | 80.00 |
| 4. | ಝಿಂಕ್ ಸಲ್ಫೇಟ್ | ... | $ZnSO_4.7H_2O$ | 0.54 |
| 5. | ಮೆಗ್ನೀಸಿಯಂ ಸಲ್ಫೇಟ್ | ... | $MgSO_4.7H_2O$ | 14.40 |
| 6. | ಮ್ಯಾಂಗನೀಸ್ ಸಲ್ಫೇಟ್ | ... | $MnSO_4H_2O$ | 0.985 |
| 7. | ಪೊಟಾಸಿಯಂ ಐಯೊಡೈಡ್ | ... | KI | 0.15 |
| 8. | ಬೋರಿಕ್ ಆಸಿಡ್ | ... | $H_3Bo_3$ | 0.32 |
| 9. | ಪೊಟಾಸಿಯಂ ಕ್ಲೋರೈಡ್ | ... | KCl | 13.00 |
| 10. | ಪೋ.ಡೈ.ಹೈಡ್ರೋಜನ್ ಫಾಸ್ಫೇಟ್ | ... | $KH_2PO_4$ | 7.5 |
| 11. | ನಿಕೋಟಿನಿಕ್ ಆ್ಯಸಿಡ್ | ... | Nicotinic acid | 100 (ಮಿಲಿ ಗ್ರಾಂಗಳು) |
| 12. | ತಯಮಿನ್ ಹೈಡ್ರೋ ಕ್ಲೋರೈಡ್ | ... | Thiamine HCl | 20 (ಮಿಲಿ ಗ್ರಾಂಗಳು) |
| 13. | ಗ್ಲೈಸಿನ್ | ... | Glycine | 400 ಮಿಲಿಗ್ರಾಂಗಳು |
| 14 | ಪಿರಾಡಾಕ್ಸಿನ್ ಹೈಡ್ರೋಕ್ಲೋರೈಡ್ | ... | Pyrodoxine HCl | 100 ಮಿಲಿಗ್ರಾಂಗಳು |

15. ಫೆರಿಕ್ ಕ್ಲೋರೈಡ್ ... $FeCl_3$ 27 ಗ್ರಾಂಗಳು
16. ಎಥಿಲಿನ್ ಡೈ ... EDTA(Versene)37.2 ಗ್ರಾಂಗಳು
ಆಮ್ಮೆನೋ ಟೆಟ್ರಾ ಅಸಿಟಿಕ್ ಆಸಿಡ್ (ವರ್ಸೀನ್)

ಮಾಧ್ಯಮಗಳ ತಯಾರಿಕೆಯಲ್ಲಿ ಯಾವಾಗಲೂ ಪೈರೆಕ್ಸ್ ಗಾಜಿನ ಬಟ್ಟಿಯಂತ್ರಗಳಲ್ಲಿ ಶುದ್ಧೀಕರಿಸಿದ ನೀರನ್ನು ಉಪಯೋಗಿಸಬೇಕು. ಇದರಿಂದ ಖನಿಜಮೂಲಾಂಶಗಳು ಕೆಡುವುದಿಲ್ಲ. ನಿಯಮಿತ ಮಾನಗಳಲ್ಲಿ ಖನಿಜಮೂಲಾಂಶಗಳನ್ನು ನೀರಿನಲ್ಲಿ ಕರಗಿಸಿ ದ್ರಾವಣಗಳನ್ನು ತಯಾರಿಸಬೇಕು. ಕಬ್ಬಿಣದ ಅಂಶವನ್ನು ಫೆರಿಕ್ ರೂಪದಲ್ಲಿ ಉಪಯೋಗಿಸುವ ವಾಡಿಕೆಯಿದ್ದು, ಫೆರಿಕ್ ಈಥೈಲೀನ್ ಅಮ್ಮೆನೊ ಟೆಟ್ರ ಅಸಿಟಿಕ್ ಆಸಿಡ್ (Fe EDTA) ಯೋಜನೆಯಲ್ಲಿ ಉತ್ತಮ ಫಲಿತಾಂಶಗಳನ್ನು ಕೊಡುತ್ತದೆ. ಸಾಮಾನ್ಯವಾಗಿ ಮೂಲಮಾಧ್ಯಮದಲ್ಲಿ ಶೇ.2 ಸಕ್ಕರೆಯನ್ನು ಬೆರಕೆ ಮಾಡಿರುತ್ತಾರೆ. ಈ ರೀತಿಯಲ್ಲಿ ತಯಾರಿಸಿದ ದ್ರವರೂಪದ ಮಾಧ್ಯಮಗಳಿಗೆ ಶೇ.0.8 ರಿಂದ ಶೇ.1 ಅಗಾರ್-ಅಗಾರ್ ಎಂಬ ಸಸ್ಯಪಿಷ್ಟವನ್ನು ಬೆರೆಸುವುದರಿಂದ ಘನರೂಪದ ಮಾಧ್ಯಮಗಳನ್ನು ತಯಾರಿಸಬಹುದು. ಮೂಲಮಾಧ್ಯಮಗಳಿಗೆ ಚೋದಕ ವಸ್ತುಗಳು ಕ್ಷೀರಸಾರ ಇತ್ಯಾದಿ ವಸ್ತುಸಾರಗಳನ್ನು ನಿಯಮಿತ ಮಾನಗಳಲ್ಲಿ ಬೆರೆಸಿ, ಮಾಧ್ಯಮಗಳ ಆಮ್ಲಕ್ಷಾರತ್ವವನ್ನು (pH) ನಿಯಮಿತ ಪ್ರಮಾಣಗಳಲ್ಲಿ ಸ್ಥಿರೀಕರಿಸಬೇಕು. ಸಾಮಾನ್ಯವಾಗಿ $5.5 \pm 0.2$ ಪ್ರಮಾಣದ ಆಮ್ಲಕ್ಷಾರತ್ವ ಸಸ್ಯದ ಜೀವಕ್ರಿಯೆಗಳಿಗೆ ಸಹಾಯಕವಾಗಿರುವುದು. ಮಾಧ್ಯಮಗಳನ್ನು ಸ್ವಚ್ಛ ಪೈರೆಕ್ಸ್ ಸೀಸೆಗಳಲ್ಲಿ ನಿಯಮಿತ ಪ್ರಮಾಣಗಳಲ್ಲಿ ತುಂಬಿ ಶಾಖವನ್ನು ತಡೆದುಕೊಳ್ಳುವಂಥ ಹತ್ತಿ, ಮಸ್ಲಿನ್ ಅಥವಾ ಅಲ್ಯೂಮಿನಿಯಮ್ ತೆಳುಪದರಗಳಿಂದ ಮುಚ್ಚಿ ಕ್ರಿಮಿಶುದ್ಧಿಯಂತ್ರದಲ್ಲಿಟ್ಟು ಶುದ್ಧೀಕರಿಸಬೇಕು. ಈ ರೀತಿ ಶುದ್ಧೀಕರಿಸಿದ ಮಾಧ್ಯಮಗಳನ್ನು ಸ್ವಚ್ಛವಾದ ಸ್ಥಳಗಳಲ್ಲಿ ಶೇಖರಿಸಿ, ಪ್ರಯೋಗಗಳಲ್ಲಿ ಉಪಯೋಗಿಸಬೇಕು.

ಸಂವರ್ಧನಪ್ರಯೋಗಶಾಲೆಗಳನ್ನು ಯಾವಾಗಲೂ ಸ್ವಚ್ಛವಾಗಿ ಇಟ್ಟಿರಲು ಅತಿನೇರಳೆ (ಅಲ್ಟ್ರಾವಯೊಲೆಟ್) ಕಿರಣ ದೀಪಗಳನ್ನು ಉಪಯೋಗಿಸಬೇಕು. ಪ್ರಯೋಗಶಾಲೆಯ ವಾತಾವರಣ ಸದಾ ಸ್ವಚ್ಛವಾಗಿರಬೇಕಲ್ಲದೆ ನಿಯಮಿತ ಶಾಖ ಬೆಳಕು ಮತ್ತು ಆರ್ದ್ರಸ್ಥಿತಿಗಳನ್ನು ಹೊಂದಿರಬೇಕು.

ಪ್ರಯೋಗಗಳಲ್ಲಿ ಉಪಯೋಗಿಸುವ ಸಸ್ಯಭಾಗಗಳನ್ನು ಕ್ಲೋರಿನ್ ನೀರು ಅಥವಾ ಮದ್ಯಸಾರದಲ್ಲಿ ತೊಳೆದು, ಅನಂತರ ಬಹು ಶುದ್ಧ ನೀರಿನಲ್ಲಿ ಮತ್ತೆ ತೊಳೆದು ಉಪಯೋಗಿಸಬೇಕು.

**ಬೇರು ಅಂಗಾಂಶದ ಸಂವರ್ಧನೆ :** ಕ್ರಿಮಿಶುದ್ಧ ಸ್ಥಿತಿಗಳಲ್ಲಿ ಬೆಳೆಸಿದ ಮೊಳಕೆಗಳ ಬೇರುತುದಿಗಳನ್ನು ಕತ್ತರಿಸಿ, ಕೃತಕಮಾಧ್ಯಮಗಳಲ್ಲಿ ಬೆಳೆಸಬಹುದು. ಸಾಮಾನ್ಯವಾಗಿ ದ್ರವರೂಪಮಾಧ್ಯಮಗಳನ್ನು ಉಪಯೋಗಿಸುವ ಈ ಪ್ರಯೋಗಗಳಲ್ಲಿ, ಗಾಜಿನ ಸೀಸೆಗಳನ್ನು ನಿರಂತರವಾಗಿ ಅಲುಗಾಡಿಸುವುದರ ಮೂಲಕ ಅಂಗಾಂಶಗಳಿಗೆ ಗಾಳಿಯನ್ನು ಸರಬರಾಜು ಮಾಡಬೇಕಾಗುವುದು. ಯೀಸ್ಟ್ ಸಾರದಲ್ಲಿರುವ ಬಿ ಅನ್ನಾಂಗಗಳಾದ ತಯಮಿನ್ ಮತ್ತು ನಿಕೋಟಿನಿಕ್ ಆಮ್ಲಗಳು ಬೇರುಗಳ ನಿರಂತರ ಬೆಳವಣಿಗೆ ಹಾಗೂ ಕವಲುಬೇರುಗಳ ಉತ್ಪಾದನೆಗೆ ಅವಶ್ಯಕವಾಗಿರುವುದರಿಂದ ಸಾಮಾನ್ಯವಾಗಿ ಈ ಪ್ರಯೋಗಗಳಲ್ಲಿ ಮೂಲಮಾಧ್ಯಮದ ಜೊತೆಗೆ ಯೀಸ್ಟ್ ಸಾರವನ್ನು ಉಪಯೋಗಿಸುತ್ತಾರೆ. ಅಲ್ಲದೆ ಆಕ್ಸಿನ್‌ಗಳು ಕೂಡ ಬೇರುಕವಲುಗಳ ಉತ್ಪಾದನೆಯನ್ನು ಹೆಚ್ಚಿಸುತ್ತವೆ. ಸಾಮಾನ್ಯವಾಗಿ ಬೇರುಅಂಗಾಂಶಗಳ ಬೆಳವಣಿಗೆಯನ್ನು ಬೆಳಕು ತಡೆಯುವುದರಿಂದ ಕತ್ತಲಿನಲ್ಲಿ ಅವುಗಳ ಬೆಳವಣಿಗೆ ಹೆಚ್ಚಾಗಿರುತ್ತದೆ. ಮಾರ್ನಿಂಗ್ ಗ್ಲೋರಿ ಸಸ್ಯದ ಬೇರುಗಳ ಅಂಗಾಂಶ ಸಂವರ್ಧನೆಯಲ್ಲಿ ಕೈನಿಟಿನ್ನಿನ ಉಪಯೋಗದಿಂದಲೂ ಆಕ್ಸಿನ್‌ಗಳ ಅಭಾವದಿಂದಲೂ ಬೇರುಗಳಲ್ಲಿ ಮೊಗ್ಗುಗಳ ಉತ್ಪಾದನೆ ಕಂಡುಬಂದಿದೆ (ಸಾಮಾನ್ಯವಾಗಿ ಬೇರುತುದಿಯ ಅಂಗಾಂಶಗಳ ರೂಪಪ್ರಭೇದನಸಾಮರ್ಥ್ಯ ಕಾಂಡದ ಅಂಗಾಂಶಗಳ ಸಾಮರ್ಥ್ಯಕ್ಕಿಂತ ಕಡಿಮೆಯಾಗಿರುವುದು) ಟೊಮೆಟೊ ಸಸ್ಯದ ಬೇರುಗಳನ್ನು ವಿಜ್ಞಾನಿಗಳನ್ನು 25 ವರ್ಷಕ್ಕೂ ಹೆಚ್ಚುಕಾಲ ಬೆಳೆಸಿರುತ್ತಾರೆ.

**ಕಾಂಡದ ಅಂಗಾಂಶಗಳ ಸಂವರ್ಧನೆ:** ಬೇರುತುದಿಗಳಂತೆಯೆ, ಸಸ್ಯಗಳಿಂದ ಬೇರ್ಪಡಿಸಿದ ಕಾಂಡದ ಅಂಗಾಂಶಗಳು ಕೃತಕಮಾಧ್ಯಮಗಳ ಮೇಲೆ ಬೆಳೆಯುತ್ತವೆ. ಸ್ವಂತವಾಗಿ ಪುಷ್ಟಿಗೊಳ್ಳಬಲ್ಲ ಕಾಂಡದ ಅಂಗಾಂಶಗಳನ್ನು ಬೆಳಕಿನಲ್ಲಿ ಬೆಳೆಸಿದಾಗ ಅವುಗಳು ಆಹಾರೋತ್ಪಾದಕ ಶಕ್ತಿಯನ್ನು ಪಡೆಯುವುದರಿಂದ ಕೆಲವು ಕಾಲ ಅವು ಕೃತಕ ಮಾಧ್ಯಮಗಳ ಮೂಲಕ ಸರಬರಾಜು ಮಾಡುವ ಸಕ್ಕರೆಯ ಅಂಶವನ್ನು ಅವಲಂಬಿಸಬೇಕಾಗಿರುವುದಿಲ್ಲ. ಕಾಂಡ ಅಂಗಾಂಶಗಳ ಸಂವರ್ಧನೆಗಳಲ್ಲಿ ಚೋದಕ ವಸ್ತುಗಳ ಕೆಳಮುಖ ಸಾಗಾಣಿಕೆಯಿಂದಾಗಿ ಅವುಗಳ ಕೆಳಭಾಗಗಳಲ್ಲಿ ಬೇರುಗಳ ಉತ್ಪಾದನೆಯುಂಟಾಗುತ್ತದೆ.

ಬೆಳಕು ಮತ್ತು ಕೃತಕ ಚೋದಕ ವಸ್ತುಗಳು ಈ ಬೇರುಗಳ ಉತ್ಪಾದನೆ ಮತ್ತು ಬೆಳವಣಿಗೆಗಳನ್ನು ತಡೆಯಬಹುದು. ಕಾಂಡ-ಅಂಗಾಂಶಗಳ ಸಂವರ್ಧನೆಯಲ್ಲಿ ಕೆಲವು ಬಾರಿ ಚೋದಕ ವಸ್ತುಗಳ ಉಪಯೋಗದಿಂದ ಮೊಗ್ಗುಗಳ ಅಂಗಾಂಶವನ್ನು ಬೇರುಗಳ ಅಂಗಾಂಶವನ್ನು ಉತ್ಪಾದಿಸಬಹುದು; ಅಲ್ಲದೆ ಸಾಮಾನ್ಯವಾಗಿ ಗಡಸುಗಟ್ಟಿದ ಅಂಗಾಂಶವನ್ನು ಕೂಡ ಬೆಳೆಸಬಹುದು.

**ಎಲೆ ಅಂಗಾಂಶಗಳ ಕೃಷಿ :** ಕೈನೆಟಿನ್ ಆಧಾರಿತ ಮಾಧ್ಯಮಗಳ ಮೇಲೆ ಎಲೆಗಳ ಅಂಗಾಂಶಗಳನ್ನು ಬೆಳೆಸಬಹುದು. ಆಫ್ರಿಕದ ವಯೊಲೆಟ್ ಸಸ್ಯದ ಎಲೆ ತೊಟ್ಟುಗಳು, ಬೇರು ಹಾಗೂ ಕಾಂಡದ ಅಂಗಾಂಶಗಳನ್ನು ಉತ್ಪಾದಿಸಲಾಗಿದೆ.

**ಗಡಸುಗಟ್ಟಿದ (ಅಪ್ರಭೇದನ) ಅಂಗಾಂಶ :** ಸಸ್ಯದ ಮೃದುಭಾಗಗಳಿಂದ, ನಿರಂತರವಾಗಿ, ಗಡಸುಗೊಂಡು ಬೆಳೆಯುವ ಕೋಶಜಾಲಗಳಿಗೆ ಈ ಹೆಸರಿದೆ. ಈ ಅಂಗಾಂಶಗಳನ್ನು ಆಕ್ಸಿನ್ ಆಧಾರಿತ ಮಾಧ್ಯಮಗಳ ಮೇಲೆ ಬೆಳೆಸಿ ಬೇರುಅಂಗಾಂಶಗಳನ್ನು ಪಡೆಯಬಹುದು. ಆಕ್ಸಿನ್ ಕೈನೆಟಿನ್‌ಗಳ ಸಮನ್ವಯದಿಂದ ಅಪ್ರಭೇದನ ಅಂಗಾಂಶಗಳ ನಿರಂತರ ವ್ಯವಸಾಯ ಹಾಗೂ ಪ್ರಭೇದನಗಳು ಸಾಧ್ಯವಾಗುತ್ತವೆ. ಹುರುಳಿ ಜಾತಿಯ ಸಸ್ಯಗಳಲ್ಲಿ ಕಾಣಬರುವ ಬೇರುಗ್ರಂಥಿಗಳು ಕೆಲವು ಸಸ್ಯಗಳಲ್ಲಿ ಕಾಣಬರುವ ವ್ರಣಗ್ರಂಥಿಗಳು-ಇತ್ಯಾದಿಗಳು ಅಪ್ರಭೇದನ ಅಂಗಾಂಶಗಳಾಗಿರುವುವು. ಕೆಲವು ಬಾರಿ ಈ ಕೆಲವು ಅಂಗಾಂಶಗಳು ರೂಪವ್ಯತ್ಯಾಸವನ್ನು ಸಹ ಹೊಂದುತ್ತವೆ.

ಅಪ್ರಭೇದನ ಅಂಗಾಂಶಗಳಲ್ಲಿ ಕೋಶಗಳ ವಿಭಜನೆ, ಪ್ರಸರಣ ಹಾಗೂ ಪ್ರಭೇದನಗಳು ಬಹಳವಾಗಿ ವ್ಯತ್ಯಾಸವಾಗುವುದರಿಂದ ಅವುಗಳ ಬೆಳವಣಿಗೆಯನ್ನು ಅಳೆಯಲು ಕಷ್ಟವಾಗುತ್ತದೆ. ಈ ಅಂಗಾಂಶಗಳಲ್ಲಿ ಕೆಲವು ಸುಲಭವಾಗಿ ಪುಡಿಯಾಗುವ ಕೋಶಜಾಲಗಳಿಂದ ಕೂಡಿರುವುವು. ಇವುಗಳನ್ನು ದ್ರವರೂಪ ಮಾಧ್ಯಮಗಳ ಮೇಲೆ ಬೆಳೆಸಬಹುದು. ಚೋದಕವಸ್ತುಗಳ ಉಪಯೋಗದಿಂದ ಇವುಗಳ ಬೆಳವಣಿಗೆಯಲ್ಲಿ ಅನೇಕ ವೈವಿಧ್ಯವನ್ನು ತರಬಹುದು. ಈ ರೀತಿಯಲ್ಲಿ ಅನೇಕ ಕೋಶತಳಿಗಳನ್ನು ಬೆಳೆಸಬಹುದು. ಈ ಅಂಗಾಂಶಗಳ ಬೆಳವಣಿಗೆಯನ್ನು ಅವುಗಳ ಸಾರ (ಫ್ರೆಷ್) ತೂಕ ಮತ್ತು ನಿಸ್ಸಾರ (ಡ್ರೈ) ತೂಕಗಳಿಂದ ಅಳೆಯುವುದು ಸುಲಭ.

**ಪುಷ್ಪಾಂಗ ಕೃಷಿ :** ಪರಾಗ, ಪರಾಗಕೋಶ, ಮೊಗ್ಗುಗಳು, ಅಂಡಾಶಯ ಇತ್ಯಾದಿ ಭಾಗಗಳನ್ನು ಕೃತಕಮಾಧ್ಯಮಗಳ ಮೇಲೆ ಬೆಳೆಸಬಹುದು. ಚೋದಕ ವಸ್ತುಗಳ (ಉದಾ: ಐ.ಎ.ಎ. ಮತ್ತು ಜಿಬ್ಬೆರೆಲಿನ್) ಅಭಾವದಿಂದ ಈ ಅಂಗಾಂಶಗಳ ಬೆಳವಣಿಗೆ ಮತ್ತು ವಿಸ್ತರಣೆ ನಿಲ್ಲಬಹುದಾದ ಸಂಭವಗಳುಂಟು. ನಿಟ್ಷ್‌ರ (1951) ಪ್ರಯೋಗಗಳಲ್ಲಿ ಪರಾಗಾರ್ಪಿತ ಹೂಗಳನ್ನು ದ್ರವ ಮತ್ತು ಘನರೂಪ ಮಾಧ್ಯಮಗಳ ಮೇಲೆ ಬೆಳೆಸಿ ಬೀಜ ಮತ್ತು ಹಣ್ಣುಗಳನ್ನು ಪಡೆದಿದ್ದಾರೆ. ಚೋದಕ ವಸ್ತುಗಳ ಉಪಯೋಗಗಳಿಂದ ಬೀಜರಹಿತ ಹಣ್ಣುಗಳನ್ನು ಬೆಳೆಸಬಹುದು. ಆಕ್ಸಿನ್‌ಗಳು, ಟೊಮೆಟೊ ಹಣ್ಣಿನ ರಸ ಮತ್ತು ಜಿಬ್ಬೆರೆಲಿನ್‌ಗಳು ಈ ಪ್ರಯೋಗಗಳಲ್ಲಿ ಪರಾಗಸ್ಪರ್ಶವಾಗದ ಅಂಡಾಶಯಗಳ ಬೆಳವಣಿಗೆ ಮತ್ತು ಹಣ್ಣುಗಳ ವಿಸ್ತರಣೆಗಳನ್ನು ಉಂಟುಮಾಡುತ್ತವೆ. ಭ್ರೂಣಾಹಾರ ಅಂಗಾಂಶವನ್ನು ಕೃತಕಮಾಧ್ಯಮಗಳ ಮೇಲೆ ಬೆಳೆಸಬಹುದು. ಮೆಕ್ಕೆಜೋಳ ಲೋಲಿಯಮ್, ಸೌತೆಕಾಯಿ ಬೀಜಗಳ ಭ್ರೂಣಾಹಾರ ಅಂಗಾಂಶಗಳನ್ನು ಯೀಸ್ಟ್‌ಸಾರ, ಎಳನೀರು, ಸಸ್ಯಸಾರ ಇತ್ಯಾದಿಗಳಿಂದ ಸುಧಾರಿತ ಮಾಧ್ಯಮಗಳ ಮೇಲೆ ನಿರಂತರವಾಗಿ ಬೆಳೆಸಿದ್ದಾರೆ. ಈ ಅಂಗಾಂಶ ಕೆಲವು ಸಾರಿ ಭ್ರೂಣಾಂಗಗಳನ್ನು ಉತ್ಪಾದಿಸುವುದು.

**ಭ್ರೂಣ ಮತ್ತು ಭ್ರೂಣಾಂಗಗಳ ಕೃಷಿ :** ಭ್ರೂಣ ಮತ್ತು ಭ್ರೂಣಾಂಗಗಳ ಸಂವರ್ಧನೆ ಭ್ರೂಣಶಾಸ್ತ್ರದ ಮುನ್ನಡೆಗೆ ಸಹಾಯಕವಾಗಿದೆ. ಅನೇಕ ಸಸ್ಯಗಳ ಭ್ರೂಣಗಳನ್ನು ಮತ್ತು ಭ್ರೂಣಾಂಗಗಳನ್ನು ಕೃತಕಮಾಧ್ಯಮಗಳ ಮೇಲೆ ಬೆಳೆಸಬಹುದು. ಹತ್ತಿ, ದತ್ತೂರಿ, ಸಾಸುವೆ-ಇತ್ಯಾದಿ ಸಸ್ಯಗಳ ಭ್ರೂಣಗಳನ್ನು ಬೆಳೆಸಿದಾಗ, ಭ್ರೂಣದ ಬೆಳವಣಿಗೆಯ ವಿಷಯದಲ್ಲಿ ಅನೇಕ ಅಂಶಗಳು ತಿಳಿಯಬಂದವು. ಸಾಮಾನ್ಯವಾಗಿ ಬಲಿತ ಭ್ರೂಣಗಳು ಸಾರಜನಕವನ್ನು ನೈಟ್ರೇಟ್ ರೂಪದಲ್ಲಿಯೂ ಎಳೆಯ ಭ್ರೂಣಗಳು ಅಮ್ಮೆನೊ ಆಮ್ಲಗಳ ರೂಪದಲ್ಲಿಯೂ ಉಪಯೋಗಿಸಿಕೊಳ್ಳುವವೆಂದು ತಿಳಿದಿದೆ. ಅಲ್ಲದೆ ಬಿ ಅನ್ನಾಂಶದ ಅವಶ್ಯಕತೆ ಕಂಡುಬಂದಿದೆ. ಆಕ್ಸಿನ್‌ಗಳು, ಕೈನೆಟಿನ್, ಮತ್ತು ಜಿಬ್ಬೆರೆಲಿನ್‌ಗಳ ಸಮನ್ವಯದಿಂದಲೂ ಎಳನೀರು, ಯೀಸ್ಟ್‌ಸಾರ ಮತ್ತು ಸಸ್ಯಸಾರಗಳ ಉಪಯೋಗದಿಂದಲೂ ಭ್ರೂಣ, ಭ್ರೂಣಾಂಗಗಳ ಕೃಷಿ ಹೆಚ್ಚು ಪರಿಣಾಮಕಾರಿಯಾಗುವುದೆಂದೂ ಸಸ್ಯಸಾರಗಳಲ್ಲಿ ಭ್ರೂಣವರ್ಧನಾಂಶಗಳಿರುವುವೆಂದೂ ತಿಳಿದುಬಂದಿದೆ.

ಬೀಜಗಳಿಂದ ಎಳೆತಾದ ಭ್ರೂಣಗಳನ್ನು ಬೇರ್ಪಡಿಸಿ ಬೆಳೆಸುವ ಪ್ರಯೋಗಗಳು ಕಷ್ಟ.. ಈ ದಿಶೆಯಲ್ಲಿ ಪಿ. ಮಹೇಶ್ವರಿಯವರು (1964) ಯಶಸ್ವೀ ಪ್ರಯೋಗಗಳನ್ನು ನಡೆಸಿದ್ದರು. ಈ ಪ್ರಯೋಗಗಳಿಂದ ಪರಾಗಗಳ ಮೊಳೆಯುವಿಕೆ, ಅಂಡಾಶಯಗಳ ವ್ಯವಸಾಯ ಇತ್ಯಾದಿಗಳನ್ನು ಕೃತಕವಾಗಿ ಉಂಟುಮಾಡುವ ಸಾಧ್ಯತೆ ಕಂಡುಬಂದಿದೆ. ಭ್ರೂಣಗಳ ಬೆಳವಣಿಗೆಯಲ್ಲಿ ಭ್ರೂಣಾಹಾರ ಅಂಗಾಂಶದ ಅವಶ್ಯಕತೆ ಮುಖ್ಯವಾಗಿದೆ. ಭ್ರೂಣಕೋಶದ ಹೊರಭಾಗದಲ್ಲಿರುವ ನ್ಯೂಸೆಲಸ್ ಕೋಶಗಳು ಸಹ ಭ್ರೂಣಕೋಶಾಂಶಗಳನ್ನು ಉತ್ಪಾದಿಸುವ ಸಂಭವ ಉಂಟು.

ಭ್ರೂಣಕೋಶಗಳು ಸಂವರ್ಧನ ಸ್ಥಿತಿಗಳಲ್ಲಿ ಕೆಲವು ಬಾರಿ ಅನಿರೀಕ್ಷಿತ (ಅಡ್ವೆಂಟಿಷಸ್) ಭ್ರೂಣಗಳನ್ನು ಮತ್ತು ಅಪ್ರಭೇದನ ಅಂಗಾಂಶಗಳನ್ನು ಉತ್ಪಾದಿಸುವ ಸಾಧ್ಯತೆಗಳುಂಟು. ಬದನಿಕೆ ಸಸ್ಯದಲ್ಲಿ ನಡೆಸಿದ ಪ್ರಯೋಗಗಳಲ್ಲಿ ಭ್ರೂಣಗಳು ಮೂಲ ಭ್ರೂಣಕೋಶಗಳನ್ನು ಉತ್ಪಾದಿಸುವುದು ಕಂಡುಬಂದಿದೆ.

**ಕೋಶ ಮತ್ತು ಕೋಶಸಮೂಹ ಕೃಷಿ :** ಅಂಗಾಂಶಗಳಿಂದ ಬೇರ್ಪಡಿಸಿದ ಕೋಶಗಳ ಸಂವರ್ಧನೆಯು ಅಂಗಾಂಗಗಳ ಬೆಳವಣಿಗೆ ಮತ್ತು ಅಂಗಪ್ರಭೇದನಗಳ ಅನೇಕ ಸಮಸ್ಯೆಗಳಿಗೆ ಪರಿಹಾರ ಮಾರ್ಗವಾಗಿದೆ. ಯಾಂತ್ರಿಕವಾಗಿ ಅಥವಾ ಕಿಣ್ವಗಳ (ಎನ್‌ಝೈಮ್) ಸಹಾಯದಿಂದ ಬೇರ್ಪಡಿಸಿದ ಕೋಶಗಳು ಸ್ವತಂತ್ರವಾಗಿ ಬೆಳೆಯಲು ಅಸಮರ್ಥವಾಗಿರುವುವು. ಆದ್ದರಿಂದ ಅವುಗಳ ಪರಿಸರದಲ್ಲಿ ಕೋಶಜಾಲಗಳನ್ನು ಬೆಳೆಸಿದಲ್ಲಿ, ಕೋಶಗಳು ಪೂರ್ಣವಾಗಿ ಬೆಳೆಯುವ ಸಂಭವ ಉಂಟು. ಈ ರೀತಿಯಲ್ಲಿ ಬೆಳೆದ ಕೋಶಗಳು ಪುನರ್ವ್ಯವಸಾಯಗಳಿಂದ ಪೂರ್ಣವಾಗಿ ಬೆಳೆದು ಅಂಗಪ್ರಭೇದನ ಸಾಮರ್ಥ್ಯಗಳನ್ನು ಪಡೆಯಬಹುದು. ಉದಾ : ಕಾರ್ನೆಲ್ ವಿಶ್ವವಿದ್ಯಾನಿಲಯದ ಸ್ಟೀವರ್ಡ್ ಎಂಬ ವಿಜ್ಞಾನಿ ಕ್ಯಾರೆಟ್ ಸಸ್ಯದ ಕೋಶಗಳಲ್ಲಿ ನಡೆಸಿದ ಈ ಪ್ರಯೋಗಗಳಲ್ಲಿ ಯಶಸ್ವಿಯಾಗಿದ್ದಾನೆ. ಏಕಕೋಶಗಳ ಕೃಷಿ ಬಹು ಕಷ್ಟಸಾಧ್ಯವಲ್ಲದೆ ಅನೇಕ ಸಸ್ಯಗಳಲ್ಲಿ ಅಸಾಧ್ಯವೂ ಆಗಿರಬಹುದು. ಏಕಕೋಶಗಳು ಮತ್ತು ಕೋಶಜಾಲಗಳ (ಕೋಶಾಂಗ) ಸಂಬಂಧ ಸಮಸ್ಯಾತ್ಮಕವಾಗಿರುವುದಲ್ಲದೆ, ಅವುಗಳ ಬೆಳವಣಿಗೆ ಮತ್ತು ಅಂಗಪ್ರಭೇದನಗಳಿಗೆ ಅವಶ್ಯಕವಾದ ನೈಸರ್ಗಿಕ ಮತ್ತು ಕೃತಕ ವಸ್ತುಗಳ ಬಗ್ಗೆ ಹೆಚ್ಚು ಅಂಶಗಳು ತಿಳಿದುಬಂದಿಲ್ಲ.

ಈಚಿನ ಪ್ರಯೋಗಗಳಲ್ಲಿ (1958ರಿಂದ 1964)–ಮ್ಯೂರ್ (1954), ಹಿಲ್ಡೆಬ್ರಾಂಟ್ (1954), ರಯಿಕರ್ (1954), ಟೋರಿ (1957), ಜೋನ್ಸ್ (1960), ಸ್ಟೀವರ್ಡ್ (1963) ಮುಂತಾದ ವಿಜ್ಞಾನಿಗಳು ಏಕಕೋಶಗಳ ಸಂವರ್ಧನೆಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

**ಅಂಗಾಂಶ ಸಂವರ್ಧನೆಯ ಪ್ರಯೋಗಗಳ ಉಪಯೋಗಗಳು :** ಜೀವ ವಿಜ್ಞಾನದ ಮುನ್ನಡೆಯಲ್ಲಿ ಮೂರು ಮುಖ್ಯ ಹಂತಗಳಿವೆ. 1. ಪ್ರಯೋಗತಂತ್ರದ ವಿಸ್ತರಣೆ ಮತ್ತು ಪೂರ್ಣತೆ. 2. ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಾಯೋಗಿಕ ತಂತ್ರಗಳ ಉಪಯೋಗ. 3. ಮುಂದಿನ ಸಮಸ್ಯೆಗಳಲ್ಲಿ ಪ್ರಾಯೋಗಿಕ ತಂತ್ರಗಳ ಸೂತ್ರೀಕರಣ. ಅಂಗಾಂಶಸಂವರ್ಧನೆಯ ಪ್ರಯೋಗಗಳು ಈ ಮೇಲಿನ ಮೂರು ಹಂತಗಳಲ್ಲಿಯೂ ಉಪಯುಕ್ತವಾಗಿರುವುದರಿಂದ ಈಚಿನ ಅನೇಕ ಜೀವವಿಜ್ಞಾನ ಸಮಸ್ಯೆಗಳಲ್ಲಿ ಇವನ್ನು ಬಳಸಿಕೊಳ್ಳಲಾಗುತ್ತಿದೆ. ಮುಖ್ಯವಾಗಿ ಪೋಷಕ ವಸ್ತುಗಳ ಸಮಸ್ಯೆಗಳು, ಜೈವಿಕ ಕ್ರಿಯೆಗಳ ಸಮಸ್ಯೆಗಳು, ಚೋದಕವಸ್ತುಗಳು, ರೂಪಪ್ರಭೇದನ, ರೋಗಲಕ್ಷಣಶಾಸ್ತ್ರ (ಪೆಥಾಲಜಿ) ಮತ್ತು ತಳಿಶಾಸ್ತ್ರ (ಜೆನೆಟಿಕ್ಸ್)–ಇವುಗಳ ಬಗ್ಗೆ ಅಭ್ಯಸಿಸಲು ಇವು ಉಪಯುಕ್ತವಾಗಿವೆ.

**1. ಪೋಷಕ ವಸ್ತುಗಳು :** ಸಸ್ಯಜೀವನಕ್ಕೆ ಮುಖ್ಯವಾಗಿ 15–16 ಪೋಷಕಾಂಶಗಳು ಬೇಕು. ಇವುಗಳಲ್ಲಿ ಕೆಲವು ಖನಿಜಾಂಶರೂಪದಲ್ಲಿಯೂ ಮತ್ತೆ ಕೆಲವು ಸಂಯುಕ್ತಸ್ಥಿತಿಯಲ್ಲಿಯೂ ಬೇಕಾಗುವುವು. ಪ್ರಾಣಿ ಮತ್ತು ಸಸ್ಯದೇಹಗಳ ಪೋಷಕಾಂಶಗಳು ಮುಖ್ಯವಾಗಿ ಒಂದೇ ರೀತಿಯವಾಗಿದ್ದರೂ ಅವುಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಸಂವರ್ಧನಪ್ರಯೋಗಗಳಿಂದ ತಿಳಿದುಕೊಳ್ಳಬಹುದು. ಸಸ್ಯಜೀವನಕ್ಕೆ ಬೇಕಾದ ಜೈವಿಕಪೋಷಕಾಂಶಗಳು ಸುಲಭ ರೀತಿಯದ್ದಾಗಿರುವುವು. ಸಸ್ಯಕೋಶಗಳು ಸಕ್ಕರೆ, ತಯಮಿನ್ ಪಿರಡಾಕ್ಸಿನ್ ಅಂಶಗಳ ಸಾನ್ನಿಧ್ಯದಲ್ಲಿ ಅಜೈವಿಕ ನೈಟ್ರೈಟ್ ಅಂಶಗಳನ್ನು ಎಲ್ಲ ತರವಾದ ಜೈವಿಕ ಅಮೈನೋ ಆಮ್ಲಗಳಾಗಿ ಪರಿವರ್ತಿಸಿ ಅವುಗಳಿಂದ ಪ್ರೋಟೀನುಗಳನ್ನು ಉತ್ಪಾದಿಸುತ್ತವೆ. ಆದರೆ ಪ್ರಾಣಿದೇಹದ ಕೋಶಗಳು ಈ ಗುಣವನ್ನು ಹೊಂದಿರುವುದಿಲ್ಲವಾದುದರಿಂದ ಅವುಗಳಿಗೆ ಅಗತ್ಯ (ಎಸೆನ್ಷಿಯಲ್) ಅಮೈನೋ ಆಮ್ಲಗಳನ್ನು ನೇರವಾಗಿ ಒದಗಿಸಬೇಕಾಗುವುದು. ಸಸ್ಯದೇಹದ ಮತ್ತು ಪ್ರಾಣಿದೇಹದ ಕೋಶಗಳ ಜೀವಕ್ರಿಯೆಗಳು ಮತ್ತು ಇತರ ಅನೇಕ ವಿಷಯಗಳ ಅಭ್ಯಾಸಕ್ಕೆ ಅಂಗಸಂವರ್ಧನಪ್ರಯೋಗಗಳು ಹೆಚ್ಚು ಉಪಯುಕ್ತವಾಗಿರುತ್ತವೆ.

**2. ಜೈವಿಕಕ್ರಿಯೆಗಳು :** ಕೋಶಗಳ ಉಸಿರಾಟ, ಕಿಣ್ವಗಳ ಅಧ್ಯಯನ ಇತ್ಯಾದಿ ಪ್ರಮುಖ ಜೈವಿಕಕ್ರಿಯೆಗಳ ಅಭ್ಯಾಸದಲ್ಲಿ ಕೋಶಜಾಲಗಳ ಸಂವರ್ಧನೆ ಮತ್ತು ಉಪಯೋಗಗಳು ಮುಖ್ಯವಾದುವು. ಸ್ಟ್ರೀಟ್ (1950) ಎಂಬ ವಿಜ್ಞಾನಿ ಬೇರು ಅಂಗಾಂಶಗಳ ಸಂವರ್ಧನೆಯ ಪ್ರಯೋಗಗಳಲ್ಲಿ, ಫಾಸ್‌ಫಾರಿಲೇಷನ್ ಕ್ರಿಯೆಯನ್ನು ಸ್ಪಷ್ಟಪಡಿಸಿದ್ದಾನೆ. ಡಾಸನ್ (1942) ಸಸ್ಯದ ಎಲೆಗಳಲ್ಲಿ ಶೇಖರವಾಗುವ ನಿಕೋಟಿನ್ ವಿಟಮಿನ್ ಬೇರುಗಳಲ್ಲಿ ಉತ್ಪತ್ತಿಯಾಗುವುದೆಂದು ಸಂವರ್ಧನ ಪ್ರಯೋಗಗಳಿಂದ ತೋರಿಸಿದ್ದಾನೆ. ಜೈವಿಕಕ್ರಿಯೆಗಳ ಅಭ್ಯಾಸದಲ್ಲಿ ಅನೇಕ ವಿಜ್ಞಾನಿಗಳು ಅಂಗಾಂಶಸಂವರ್ಧನೆಯ ಪ್ರಯೋಗಗಳನ್ನು ನಡೆಸಿದ್ದರೂ ಈ ದಿಶೆಯಲ್ಲಿ ಹೆಚ್ಚು ಸಂಶೋಧನೆಗಳನ್ನು ನಡೆಸಬೇಕಾದ ಅವಶ್ಯಕತೆ ಇದೆ.

**3. ಚೋದಕವಸ್ತುಗಳು :** ಸಸ್ಯ ಚೋದಕವಸ್ತುಗಳು ಅನೇಕವಿರಬಹುದಾದರೂ ಅವುಗಳ ನೈಸರ್ಗಿಕ ತಯಾರಿಕೆಯ ವಿಷಯದಲ್ಲಿ ಹೆಚ್ಚು ಅಭ್ಯಾಸ ನಡೆಯಬೇಕಾಗಿದೆ. ಚೋದಕವಸ್ತುಗಳು ಸಾಮಾನ್ಯವಾಗಿ ರೂಪಪ್ರಭೇದನ ಸಮಸ್ಯೆಗಳಲ್ಲಿ ಹೊಂದಿಕೊಂಡಿವೆ. ಫಾನ್ ಓವರ್‌ಬೀಕ್ (1939) ಎಂಬ ವಿಜ್ಞಾನಿ ಬೇರು ಅಂಗಾಂಶಗಳಲ್ಲಿಯೂ ವೈಟ್, ಬ್ರಾನ್ (1942), ಡಿರೋಪ್ (1947,48), ಗಾತರೆ ಮತ್ತು ಕುಲೇಶ್ವ ಎಂಬ ವಿಜ್ಞಾನಿಗಳು ಅಪ್ರಭೇದನಅಂಗಾಂಶಗಳಲ್ಲಿಯೂ ವ್ರಣಗ್ರಂಥಿಗಳಲ್ಲಿಯೂ ಚೋದಕವಸ್ತುಗಳ ತಯಾರಿಕೆಯನ್ನು ತೋರಿಸಿದ್ದಾರೆ. ಪ್ರಾಣಿದೇಹದ ಚೋದಕವಸ್ತುಗಳ ಬಗ್ಗೆ ಅನೇಕ ಪ್ರಯೋಗಗಳು ನಡೆದಿರುವುದಲ್ಲದೆ ಅವುಗಳಲ್ಲಿ ಅಂಗಾಂಶಸಂವರ್ಧನೆಯ ಪ್ರಯೋಗಗಳು ಹೆಚ್ಚಾಗಿ ಬಳಸಲ್ಪಟ್ಟಿವೆ.

ಅಂಗಾಂಶ ಕೃಷಿಯಿಂದ ಕೈನೆಟಿನ್ (1955–56); ಝಿಯಾಟಿನ್ (1965–66) ಮತ್ತು ಇತರ ಚೋದಕ ವಸ್ತುಗಳನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಹಾಗೆಯೇ ಡೈಫೀನೈಲ್ ಯುರಿಯ, ಮೈಯೊ ಇನಾಸಿಟಾಲ್ ಮತ್ತು ರೈಬೈಟಾಲ್ ಎಂಬ ಪ್ರವರ್ಧಕ ವಸ್ತುಗಳನ್ನು ಅಂಗಾಂಶವ್ಯವಸಾಯ ಸಸ್ಯಶಾಸ್ತ್ರಕ್ಕೆ ದೊರಕಿಸಿಕೊಟ್ಟಿದೆ.

**4. ರೂಪಪ್ರಭೇದನ ಸಮಸ್ಯೆಗಳು (ಮಾರ್ಫೋಜೆನೆಸಿಸ್) :** ಅಂಗಾಂಶಕೃಷಿ ಪ್ರಯೋಗಗಳು ಸಸ್ಯದೇಹದ ರೂಪ, ಕಾರ್ಯಗಳ ಬಗ್ಗೆ ಅತಿ ಮಹತ್ವದ ಅಂಶಗಳನ್ನು ತಿಳಿಯಲು ಸಹಾಯಕವಾಗಿವೆ. ಸಸ್ಯದ ಅಂಗಾಂಶಗಳಲ್ಲಿ ನಡೆಯುವ ರೂಪಪ್ರಭೇದನಗಳ ಎಲ್ಲ ಹಂತಗಳಲ್ಲಿಯೂ ಚೋದಕವಸ್ತುಗಳು ಪ್ರಮುಖಪಾತ್ರ ವಹಿಸುವುದೆಂದು ಈ ಪ್ರಯೋಗಗಳಿಂದ ತಿಳಿದುಬಂದಿದೆ.

ಸಸ್ಯದೇಹಗಳು ಬೆಳಕು ಕತ್ತಲುಗಳ ಕಡೆ ಬಾಗುವುದರಲ್ಲಿ ಆಕ್ಸಿನ್‌ಗಳ ಪಾತ್ರ ಮುಖ್ಯವಾದುದೆಂದು ಅನೇಕ ವರ್ಷಗಳ ಹಿಂದೆಯೇ ತಿಳಿದಿತ್ತು. ಬೇರುಗಳ ಮತ್ತು ಮೊಗ್ಗುಗಳ ಉತ್ಪಾದನೆಯಲ್ಲಿಯೂ ಎಲೆಗಳ ಉದುರುವಿಕೆಯಲ್ಲಿಯೂ ವರ್ಧಕ ಅಂಗಾಂಶಗಳ ಬೆಳವಣಿಗೆ ಮತ್ತು ರೆಂಬೆಗಳ ನಿಯಮಿತ ಬೆಳವಣಿಗೆಗಳಲ್ಲಿಯೂ ಬೇರುಗ್ರಂಥಿಗಳ ಉತ್ಪತ್ತಿ ಮತ್ತು ವ್ರಣಗ್ರಂಥಿಗಳ ಉತ್ಪತ್ತಿಯಲ್ಲಿಯೂ ಚೋದಕ ವಸ್ತುಗಳ ಪಾತ್ರ ತಿಳಿದುಬಂದಿದೆ. ಅಂಗಗಳ ರೂಪಗಳು ನಿಯಮಿತವಾಗಿ ಪ್ರಭೇದನಗಳನ್ನು ಹೊಂದುವ ಬಗ್ಗೆ ಅಭ್ಯಾಸ ಮಾಡಲು ಅಂಗಾಂಶಸಂವರ್ಧನ ಪ್ರಯೋಗಗಳು ಹೆಚ್ಚು ಉಪಯುಕ್ತವಾಗಿವೆ. ಕೋಶಗಳನ್ನು ಮತ್ತು ಅಪ್ರಭೇದಅಂಗಾಂಶಗಳನ್ನು ಉಪಯೋಗಿಸಿ, ಅವುಗಳು ಚೋದಕವಸ್ತುಗಳಿಂದ ಉತ್ತೇಜಿತವಾಗುವುದನ್ನೂ ಅದರಿಂದ ಉತ್ಪತ್ತಿಯಾಗುವ ಅಂಗಾಂಶಗಳ ಪ್ರಭೇದನಗಳನ್ನು ತಿಳಿಯಲು ಅನೇಕ ಪ್ರಯತ್ನಗಳು ನಡೆಯುತ್ತಿವೆ. ಆಕ್ಸಿನ್, ಕೈನೆಟಿನ್, ಫಾಸ್ಫೇಟ್, ಅಡೆನೀನ್, ಸಕ್ಕರೆ, ಪಿಷ್ಟಾಂಶ–ಇತ್ಯಾದಿಗಳು ರೂಪಪ್ರಭೇದನ ಕಾರ್ಯದಲ್ಲಿ ಹೇಗೆ ಉಪಯೋಗವಾಗುವುವು ಮತ್ತು ಅವುಗಳ ಪರಸ್ಪರ ಸಂಬಂಧವಾವುದು ಎಂಬುದನ್ನು ತಿಳಿಯಲು ಸ್ಕೂಗ್ ಮತ್ತಿತರ ವಿಜ್ಞಾನಿಗಳು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ.

**5. ರೋಗಲಕ್ಷಣವಿಜ್ಞಾನ :** ಸಸ್ಯದ ಅನೇಕ ರೋಗಗಳನ್ನು ಕೋಶಗಳ ಸ್ಥಿತಿ ಅಥವಾ ಹಂತಗಳಲ್ಲಿ ಅಭ್ಯಸಿಸಬಹುದು. ಶಿಲೀಂಧ್ರಗಳು ಸಸ್ಯಕೋಶಗಳಲ್ಲಿ ಮತ್ತು ಅಂಗಾಂಶಗಳಲ್ಲಿ ನಡೆಸುವ ಪರತಂತ್ರಜೀವನದಿಂದ ಸಸ್ಯ ಅನೇಕ ರೋಗಗಳಿಗೆ ತುತ್ತಾಗುವುದೆಂದು ತಿಳಿದಿದೆ. ಮೊರೆಲ್ (1944–48) ಹಾಟ್‌ಸನ್ (1953) ಮತ್ತು ಇತರ ವಿಜ್ಞಾನಿಗಳು ಈ ವಿಷಯಗಳಲ್ಲಿ ಅಂಗಾಂಶಕೃಷಿ ಪ್ರಯೋಗಗಳನ್ನು ಉಪಯೋಗಿಸಿದ್ದಾರೆ. ಪರತಂತ್ರಜೀವಿಯು ಕೋಶದಲ್ಲಿ ನಡೆಯುವ ಜೈವಿಕಕ್ರಿಯೆಗಳಲ್ಲಿ ಯಾವ ವ್ಯತ್ಯಾಸಗಳನ್ನು ಉಂಟುಮಾಡುವುದು ಮತ್ತು ಅವುಗಳಿಂದ ಉತ್ಪತ್ತಿಯಾಗುವ ವಿಷ ಪದಾರ್ಥಗಳು (ಟಾಕ್ಸಿನ್ಸ್) ಕೋಶಗಳ ಮೇಲೆ ಯಾವ ಪರಿಣಾಮಗಳನ್ನು ಉಂಟುಮಾಡಬಹುದು ಎಂಬ ಸಮಸ್ಯೆಗಳನ್ನು ಅಭ್ಯಾಸ ಮಾಡಲು ಅಂಗಾಂಶಕೃಷಿ ಅತಿ ಅವಶ್ಯಕ ತಂತ್ರವಾಗಿದೆ. ಅಲ್ಲದೆ ವೈರಸ್‌ಗಳು, ವ್ರಣರೋಗ (ಕ್ಯಾನ್ಸರ್) ವಿಷಕ್ರಿಮಿಗಳು (ಬ್ಯಾಕ್ಟೀರಿಯ) ಮತ್ತು ಕೋಶ ಅಥವಾ ಅಂಗಾಂಶಗಳ ಸಂಬಂಧದಲ್ಲಿ ಅನೇಕ ಅಂಶಗಳು ಈ ಪ್ರಯೋಗಗಳಿಂದ ಬೆಳಕಿಗೆ ಬಂದಿವೆ.

**ಅನುವಂಶೀಯ ಸಮಸ್ಯೆಗಳು :** ಸಸ್ಯ ಮತ್ತು ಪ್ರಾಣಿಗಳ ಅನುವಂಶೀಯತೆಯಲ್ಲಿ ಮುಖ್ಯವಾದ ಬಂಜೆತನ ಮತ್ತು ಅಡ್ಡತಳಿ ತಯಾರಿಕೆಗಳ ಅಭ್ಯಾಸಗಳಲ್ಲಿ ಅಂಗಾಂಶಕೃಷಿ ಪ್ರಯೋಗಗಳು ಬಹಳ ಉಪಯುಕ್ತವಾಗಿರುವುವು. ಕೋಶಗಳ ಬರಡುತನದಿಂದ ಅಡ್ಡತಳಿ ಪ್ರಯೋಗಗಳು ವಿಫಲವಾಗುವುವು. ಭ್ರೂಣಕೋಶ ಫಲಯುತವಾಗಿದ್ದರೂ ಭ್ರೂಣದ ಆಹಾರಅಂಗಾಂಶಗಳು ಬೆಳೆಯದಿರುವುದರಿಂದ ಉತ್ತಮ ತಳಿಗಳು ನಾಶಹೊಂದುವುವು. ಅಂಗಾಂಶಕೃಷಿ ಪ್ರಯೋಗಗಳ ತಂತ್ರದಿಂದ ಭ್ರೂಣಗಳನ್ನು ಬೀಜದಿಂದ ಹೊರತೆಗೆದು ಕೃತಕವಾಗಿ ಬೆಳೆಸಿ, ಫಲವತ್ತಾದ ಬೀಜಗಳನ್ನು ಪಡೆಯುವ ಸಾಧ್ಯತೆಗಳುಂಟು. ದಿ. ಮಹೇಶ್ವರಿ ಮತ್ತು ಇತರ ವಿಜ್ಞಾನಿಗಳು ಈ ದಿಶೆಯಲ್ಲಿ ಪ್ರಯೋಗಗಳನ್ನು ನಡೆಸಿ ಯಶಸ್ವಿಯಾಗಿದ್ದಾರೆ. ಅಲ್ಲದೆ ಈ ಪ್ರಯೋಗಗಳಿಂದ ಅಡ್ಡತಳಿಯೆಬ್ಬಿಕೆಯ ವಿಷಯದಲ್ಲಿ ಅನೇಕ ಅಂಶಗಳನ್ನು ತಿಳಿಯಬಹುದಾಗಿದೆ. ಕೋಶ ಮತ್ತು ಕೋಶಜಾಲಗಳನ್ನು ಕೃತಕವಾಗಿ ಸಂವರ್ಧನೆ ಮಾಡಿ ಅವುಗಳ ವರ್ಣತಂತು (ಕ್ರೋಮೋಸೋಮ್)ಗಳ ಪ್ರಾಮುಖ್ಯದ ಬಗ್ಗೆಯೂ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು. ಈ ಪ್ರಯೋಗಗಳಿಂದ ಅನೇಕ ಸಸ್ಯ, ಪ್ರಾಣಿ ಹಾಗೂ ಮನುಷ್ಯ ದೇಹದ ಕೋಶಗಳು ಮತ್ತು ಕ್ರೋಮೋಸೋಮ್‌ಗಳು–ಇವುಗಳ ಬಗ್ಗೆ ಮಹತ್ವದ ಅಂಶಗಳು ತಿಳಿದುಬಂದಿದೆ.

ಅಂಗಾಂಶಕೃಷಿ ಪ್ರಯೋಗಗಳು ಇಂದಿನ ಜೀವ ವಿಜ್ಞಾನದ ಅಭ್ಯಾಸಗಳಲ್ಲಿ ಮುಖ್ಯವಾದ ತಂತ್ರಗಳಾಗಿವೆ. ಮುಂದೆ ಈ ಪ್ರಯೋಗಗಳಿಂದ ಅನೇಕ ಮಹತ್ವದ ಅಂಶಗಳು ತಿಳಿದುಬರುವುವೆಂಬುದಕ್ಕೆ ಇಂದಿನವರೆಗೆ ಈ ಪ್ರಯೋಗಗಳಿಂದಾಗಿರುವ ಉಪಯೋಗಗಳು ಪ್ರಮಾಣವಾಗಿವೆ.

**(ಆರ್.ಎನ್.; ವೈ.ಆರ್.ಎನ್)**

**ಅಂಗಾಂಶಪರೀಕ್ಷೆ :** ಎಲೆಕಾಂಡಗಳನ್ನು ಸುಲಭವಾದ ರಾಸಾಯನಿಕಕ್ರಿಯೆಯಿಂದ ಪರೀಕ್ಷಿಸಿ ಅವುಗಳಲ್ಲಿನ ಪೋಷಕಾಂಶಗಳ ಆಧಾರದ ಮೇಲೆ ಗೊಬ್ಬರ ಸರಬರಾಜು ಮಾಡುವ ಇತ್ತೀಚಿನ ಕ್ರಮ (ಟಿಷ್ಯೂ ಟೆಸ್ಟ್). ಸಸ್ಯಗಳ ಸಮರ್ಪಕವಾದ ಬೆಳವಣಿಗೆಗೆ ಹದವಾದ ಪೋಷಕಗಳ ಪೂರೈಕೆ ಅಗತ್ಯ. ಯಾವುದೇ ಕಾರಣದಿಂದ ಅದಕ್ಕೆ ಕೊರತೆಯಾದಾಗ ಅವುಗಳ ಬೆಳವಣಿಗೆ ಕುಂಠಿತವಾಗುತ್ತದೆ. ಎಲೆ ಕಾಂಡಗಳಲ್ಲಿ ಇರಬೇಕಾದ ಆರೋಗ್ಯದ್ಯೋತಕವಾದ ಅಚ್ಚ ದಟ್ಟ ಹಸಿರು ಹೋಗಿ ಅನೇಕ ಹೊಸ ಚಿಹ್ನೆಗಳು ತಲೆದೋರುತ್ತವೆ. ಇವುಗಳ ರೂಪರೇಷೆಗಳು, ವಿಶಿಷ್ಟಲಕ್ಷಣ–ಮುಂತಾದವು ಕೊರತೆ ಇರುವ ಪೋಷಕ ಮತ್ತಿತರ ಅಂಶಗಳಿಗೆ ಸಂಬಂಧಿಸಿರುತ್ತವೆ. ಈಗ ಸುಮಾರು ಅರ್ಧ ಶತಮಾನದ ಹಿಂದೆ ಕೃಷಿವಿಜ್ಞಾನಿಗಳು ಮಣ್ಣಿನ ಪರೀಕ್ಷೆಯಿಂದ ಪೋಷಕಗಳ ಮೊತ್ತವನ್ನು ಕಂಡುಕೊಂಡು ಗೊಬ್ಬರ ಕೊಟ್ಟು, ಕೊರತೆಯನ್ನು ನಿವಾರಿಸುವ ಪ್ರಯತ್ನ ಮಾಡಿದರು. ಪರೀಕ್ಷೆಯಿಂದ ಹೊರಬಂದ ಪೋಷಕಾಂಶಗಳನ್ನು ಗಣನೆಯಲ್ಲಿಟ್ಟುಕೊಂಡು ಮಾಡುವ ಗೊಬ್ಬರಸರಬರಾಜಿಗೆ ಅನೇಕ ಸಲ ಪ್ರತಿಫಲ ಬಾರದಿರುವುದು ಕಂಡು ಬಂದಿತು. ಹಾಗೆಯೆ, ಸಸ್ಯಗಳ ರಾಸಾಯನಿಕ ವಿಶ್ಲೇಷಣೆ ಮಾಡಿ, ಪೋಷಕಗಳ ಆವಶ್ಯಕ ಮಟ್ಟವನ್ನು ನಿರ್ಧಾರ ಮಾಡುವ ಕಾರ್ಯ ಪೂರ್ಣ ಯಶಸ್ವಿಯಾಗಲಿಲ್ಲ. ಭೂಮಿಯ ಫಲಶಕ್ತಿಯನ್ನು ಮತ್ತು ಅದರಲ್ಲಿ ಒಂದು ಜಾತಿಯ ಬೆಳೆಗೆ ಬೇಕಾದ ಪೋಷಕಗಳ ಮೊತ್ತವನ್ನು ನಿರ್ಧಾರ ಮಾಡಲು ಅದೇ ಸ್ಥಳದಲ್ಲಿ ಬೆಳೆಗಳನ್ನು ಬೆಳೆಸಿ ಮಾಡುವ ಪ್ರಯೋಗವೇ ಶ್ರೇಷ್ಠ. ಇತ್ತೀಚೆಗೆ, ಮಣ್ಣನ್ನು ಪರೀಕ್ಷಾಲಯಗಳಲ್ಲಿ ಕ್ಷಿಪ್ರಪರೀಕ್ಷೆಗೆ ಒಳಪಡಿಸಿ ಅವುಗಳಲ್ಲಿ ಇರಬಹುದಾದ ಹಾಗೂ ಸಸ್ಯಕ್ಕೆ ಒದಗುವಂಥ ಪೋಷಕಗಳನ್ನು ಕಂಡುಕೊಳ್ಳುವ ಕಾರ್ಯಕ್ರಮ ವ್ಯಾಪಕವಾಗಿ ಬಳಕೆಗೆ ಬರುತ್ತಿವೆ.

ಪೋಷಣೆ ಸಮರ್ಪಕವಾಗಿದ್ದಾಗ ಪ್ರಾಣಿಗಳಂತೆಯೇ ಸಸ್ಯಗಳು ಸಮೃದ್ಧವಾಗಿ ಬೆಳೆಯುತ್ತವೆ. ಪೋಷಕಗಳನ್ನು ಧಾರಾಳವಾಗಿ ಹೀರಿಕೊಳ್ಳುವುದರಿಂದ ಸಸ್ಯದ ವಿವಿಧ ಭಾಗಗಳಲ್ಲಿ ಪೋಷಕಗಳ ಅಂಶ ಸಾಕಷ್ಟು ಮಟ್ಟದಲ್ಲಿ ಇರುವುದು ಸಾಧ್ಯ. ಈ ಅಂಗಗಳನ್ನು ಪರೀಕ್ಷಿಸಿದರೆ. ಅಲ್ಲಿ ಸುಲಭವಾಗಿ ಕರಗುವ ರೂಪದಲ್ಲಿ ಪೋಷಕಾಂಶಗಳು ಇರುವುದು ಕಂಡು ಬರುತ್ತದೆ. ಈ ರೀತಿಯ ಪರೀಕ್ಷೆಯ ಆಧಾರದ ಮೇಲೆ ಸಸ್ಯಕ್ಕೆ ಯಾವುದೇ ಒಂದು ಪೋಷಕವಸ್ತು ಸಾಕಷ್ಟು ಮಟ್ಟದಲ್ಲಿ ದೊರೆಯುತ್ತಿದೆಯೇ ಇಲ್ಲವೇ ಎಂಬ ಅಂಶ ಖಚಿತವಾಗಿ ಎಂಥ ಗೊಬ್ಬರ ಕೊಡಬೇಕೆಂಬ ಪ್ರಶ್ನೆಯ ಪರಿಶೀಲನೆಗೆ ಸ್ವಲ್ಪ ನೆರವಾಗಬಹುದು.

ಕ್ಷಿಪ್ರ ಅಂಗಾಂಶಪರೀಕ್ಷೆ, ಅಥವಾ ಸಸ್ಯರಸವಿಶ್ಲೇಷಣೆ ಪೋಷಣೆಯಲ್ಲಿ ಕಂಡು ಬರಬಹುದಾದ ಅವ್ಯವಸ್ಥೆಯ ನಿರ್ಣಯಕ್ಕೆ ಸಹಾಯಕ. ಇಂಥ ಪರೀಕ್ಷೆಗಳು, ಸಸ್ಯಪೋಷಕಗಳಲ್ಲಿ ಇರಬಹುದಾದ ಕೊರತೆಯನ್ನು ಸೂಚಿಸುತ್ತವಷ್ಟೆ ಕೊರತೆಯ ತೀವ್ರತೆಯ ವಿಷಯದಲ್ಲಿ ಅಂಥ ನಿಖರವಾದ ಮಾಹಿತಿ ಏನೂ ದೊರೆಯುವುದಿಲ್ಲ.

ಒಂದು ಪೋಷಕವಸ್ತುವಿನ ಕೊರತೆಯಿದ್ದಾಗ, ಸಸ್ಯರಸದಲ್ಲಿ ಇದರ ಕರಗಿದ ರೂಪ ಕಂಡುಬರುವುದಿಲ್ಲ. ಅಂಗಾಂಶ ಪರೀಕ್ಷೆಗೆ ಇದೇ ಆಧಾರ. ಅಂದರೆ ಯಾವುದೇ ಒಂದು ಪೋಷಕಾಂಶ ಸಸ್ಯರಸದಲ್ಲಿ ಇದೆಯ ಇಲ್ಲವೆ ಎಂಬುದನ್ನು ಕಂಡುಕೊಳ್ಳಲು ಸಹಾಯಕವಾದ ರಾಸಾಯನಿಕ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವುದೇ ಇದರ ಮುಖ್ಯಾಂಶ. ಒಂದು ಪೋಷಕದ ಸಾರಾಂಶ ಒಂದೇ ಸಸ್ಯದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯಲ್ಲಿರುತ್ತದೆ. ಈ ಕಾರಣದಿಂದ ಅಂಗಾಂಶ ಪರೀಕ್ಷೆಯಿಂದ ಒದಗಿದ ಫಲಿತಾಂಶಗಳ ಪರಿಶೀಲನೆ, ಅದು ಯಾವ ಭಾಗಕ್ಕೆ ಸಂಬಂಧಿಸಿದ್ದು ಅನ್ನುವುದನ್ನು ಅವಲಂಬಿಸಿದೆ.

ಉದಾಹರಣೆಗಾಗಿ, ಸಸ್ಯದಲ್ಲಿನ ನೈಟ್ರೊಜನ್ನಿನ ಕೊರತೆ ಕಾಣದಿರುವುದು ಎಲೆ ಮೊಳಕೆಗಳಲ್ಲಿ ಮಾತ್ರ. ಚಿಗುರು ಎಲೆಗಳಲ್ಲಿ ಅದರ ಅಂಶ ಕಡಿಮೆಯಾಗಿರುತ್ತದೆ. ಕಾಂಡ ಮತ್ತು ಬುಡಗಳಲ್ಲಿ ಅದು ಇಲ್ಲವೇ ಇಲ್ಲದಾಗುತ್ತದೆ. ನೈಟ್ರೊಜನ್ನಿನ ಕೊರತೆಯ ತೀವ್ರತೆಯನ್ನು ಕಂಡುಕೊಳ್ಳಬೇಕಾದರೆ ಅದರ ಅಂಶ ಸಸ್ಯಾಂಗದ ಯಾವ ಭಾಗದಲ್ಲಿ ಪ್ರಪ್ರಥಮ ಕಡಿಮೆಯಾಗಿರುತ್ತದೆಯೋ ಅಲ್ಲಿ ಪರೀಕ್ಷೆ ಮಾಡಬೇಕು. ಯಾವಾಗಲೂ ಸಸ್ಯಾಂಗ ಪರೀಕ್ಷೆಗೆ ಒಂದು ಸಸ್ಯದ ನಿಖರವಾದ ಭಾಗವನ್ನು ತೆಗೆದುಕೊಳ್ಳುವುದು ಅತ್ಯಗತ್ಯ. ಹಾಗೆ ಮಾಡಿದರೆ ಹೋಲಿಸಬಹುದಾದ ಫಲಿತಾಂಶ ದೊರೆಯುತ್ತದೆ. ಉದಾಹರಣೆಗಾಗಿ, ಈ ಮುಂದೆ ಕೆಲವು ಸಸ್ಯಾಂಗ ಪರೀಕ್ಷೆಗಳನ್ನು ಸೂಚಿಸಿದೆ. ಇವು 'ಸ್ಥಳ ಪರೀಕ್ಷೆ' ಯ(ಸ್ಪಾಟ್ ಟೆಸ್ಟ್) ಮಾದರಿಯವು. ಇವನ್ನು ಸಸ್ಯರಸ ಪರೀಕ್ಷೆಗೆ ಅಳವಡಿಸಿಕೊಂಡಿದೆ. ಸಸ್ಯರಸವನ್ನು ಸಸ್ಯಭಾಗದಿಂದ, ಒಂದು ಶೋಧಿಸುವ ಕಾಗದದ ಉದ್ದನೆ ಚೂರಿನ ಮೇಲೆ ಹಿಂಡಿಕೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ ಈ ಕಾಗದದ ಚೂರನ್ನು ಅಗತ್ಯವಾದ ರಾಸಾಯನಿಕಗಳ ಪ್ರತಿಕ್ರಿಯೆಗೆ ಒಳಪಡಿಸಲಾಗಿರುತ್ತದೆ. ಸಾಮಾನ್ಯವಾಗಿ ಕಾಗದದ ಮೇಲೆ ಸಸ್ಯರಸ ಹಿಂಡಿದ ಸ್ಥಳದಲ್ಲಿ ರಾಸಾಯನಿಕ ವಸ್ತುವನ್ನು ಒಂದೆರಡು ತೊಟ್ಟು ಹಾಕಬೇಕು. ಸಸ್ಯದಿಂದ ರಸ ಹಿಂಡುವುದಕ್ಕೆ ನಾವು ಬಳಸುವ ಇಕ್ಕಳ ಸಾಕಾಗುತ್ತದೆ. ಸಸ್ಯದ ಕತ್ತರಿಸಿದ ಅಂಗವನ್ನೇ ನೇರವಾಗಿ ಪರೀಕ್ಷಿಸಬಹುದು.

ನೈಟ್ರೊಜನ್ ಪರೀಕ್ಷೆ– ಬೇರಿಯಂ ಸಲ್ಫೇಟ್, ಮ್ಯಾಂಗನೀಸ್ ಸಲ್ಫೇಟ್, ಸತುವಿನ ಪುಡಿ, ಸಿಟ್ರಿಕ್ ಆಮ್ಲ, ಸಲ್ಫನಲಿಕ್ ಆಮ್ಲ, ಆಲ್ಫನ್ಯಾಫ್ತಲಮೈನ್, ಇವುಗಳನ್ನು ಬೆರೆಸಿ ಪುಡಿಮಾಡಿ, ಕಪ್ಪು ಬಣ್ಣದ ಶೀಷೆಯಲ್ಲಿ ಇಡಬೇಕು.

ಅನಂತರ ಕತ್ತರಿ ಇಲ್ಲವೆ ಚಾಕುವಿನಿಂದ ಪರೀಕ್ಷೆಗೊಳಪಡಿಸುವ ಸಸ್ಯದ ಭಾಗವನ್ನು ಕತ್ತರಿಸಿ, ಆ ಭಾಗದ ಮೈಮೇಲೆ ಈ ಪುಡಿಯನ್ನು ತೆಳುವಾಗಿ ಒದ್ದೆಯಾಗುವಷ್ಟು ಹರಡಬೇಕು. ಆಮೇಲೆ ಅದನ್ನು ಹಿಂಡಿದಾಗ ಸಸ್ಯದಲ್ಲಿ ನೈಟ್ರೇಟ್ ಇದ್ದಲ್ಲಿ ಪುಡಿ ನಸುಗೆಂಪು ಬಣ್ಣಕ್ಕೆ ತಿರುಗುತ್ತದೆ. ಸಸ್ಯದ ಬೆಳವಣಿಗೆಗೆ ವಿವಿಧ ಹಂತಗಳಲ್ಲಿ ಈ ರೀತಿಯ ಪರೀಕ್ಷೆಯಿಂದ, ನೈಟ್ರೋಜನ್ ಸಾಕಷ್ಟು ಒದಗುತ್ತಿದೆಯೊ ಇಲ್ಲವೊ ಎಂಬುದನ್ನು ತಿಳಿಯುವುದು ಸಾಧ್ಯ.

ಫಾಸ್ಫರಸ್ ಪರೀಕ್ಷೆ– ಸಸ್ಯದ ಬುಡದಿಂದ 6 ಅಥವಾ 7ನೆಯ ಎಲೆ ಅಥವಾ ತೆನೆಕೆಳಗಿನ ಎಲೆ ತೆಗೆದುಕೊಂಡು ಅದರ ನಡು ದಿಂಡಿನ ಮೇಲೆ ಶೋಧಿಸುವ ಕಾಗದ ಪಟ್ಟಿಯನ್ನು ಇಟ್ಟು ಇಕ್ಕಳದಿಂದ ಕಾಗದದ ಮೇಲೆ ರಸ ಬರುವಂತೆ ಹಿಂಡಬೇಕು; ಹೈಡ್ರೊಕ್ಲೋರಿಕ್ ಆಮ್ಲದಲ್ಲಿ ಕರಗಿಸಿದ ಅಮೋನಿಯಂ ಮೊಲಿಬ್ಡೇಟ್ ದ್ರಾವಣದ ಒಂದು ತೊಟ್ಟು ಇಡಬೇಕು. ಅದರ ಮೇಲೆ ತವರದ ಚೂರಿನಿಂದ ಉಜ್ಜಿದರೆ ಫಾಸ್ಫರಸ್ ಇದ್ದಲ್ಲಿ ನೀಲಿ ಬಣ್ಣ ಬರುತ್ತದೆ.

ಪೊಟಾಸಿಯಮ್ ಪರೀಕ್ಷೆ–ಬೇಕಾದ ರಾಸಾಯನಿಕ ದ್ರಾವಣಗಳು: ದ್ರಾವಣ 1. ಸೋಡಿಯಂ ಕಾರ್ಬೋನೇಟ್‌ನೊಂದಿಗೆ ಕರಗಿಸಿದ ಡೈ ಪಿಕ್ರಲಮೈನ್. ಇದರ ಸಾರವನ್ನು ಪರೀಕ್ಷಿಸಬೇಕಾದ ಪೊಟಾಸಿಯಂ ಮೊತ್ತಕ್ಕನುಗುಣವಾಗಿ ಅಳವಡಿಸಿಕೊಳ್ಳಬಹುದು. ದ್ರಾವಣ 2. ಹೈಡ್ರೋಕ್ಲೋರಿಕ್ ಆಮ್ಲ, ಶೋಧಿಸುವ ಕಾಗದದ ಚೂರನ್ನು ಇವುಗಳಲ್ಲಿ ನೆನೆಸಿ ಒಣಗಿಸಬೇಕು.

**ಕ್ರಮ :** ರಂಜಕದ ಪರೀಕ್ಷೆಯಲ್ಲಿನಂತೆಯೇ ಎಲೆ ಮಾದರಿಯನ್ನು ತೆಗೆದುಕೊಂಡು ಅದರಿಂದ ರಸ ಹಿಂಡಿ ಕಾಗದದ ಮೇಲೆ ವಿವಿಧಾಂಶವುಳ್ಳ ದ್ರಾವಣ 1ನ್ನು ಎರಡು ತೊಟ್ಟುಗಳಷ್ಟು ಹಾಕಿ ಒಂದು ನಿಮಿಷ ಕಾಲದ ಅನಂತರ ದ್ರಾವಣ 2ನ್ನು ಒಂದು ತೊಟ್ಟು ಹಾಕಬೇಕು. ಪೊಟಾಷ್ ಇದ್ದಲ್ಲಿ ಕಿತ್ತಳೆ ಕೆಂಪು ಬಣ್ಣ, ಪೊಟ್ಯಾಷ್ ಇಲ್ಲದಿದ್ದಲ್ಲಿ ನಿಂಬೆ ಹಳದಿ ಬಣ್ಣ ಬರುತ್ತದೆ.

ಇದೇ ರೀತಿ ಸೂಕ್ತವಾದ ರಾಸಾಯನಿಕ ವಸ್ತುಗಳ ಬಳಕೆಯಿಂದ ಮೆಗ್ನೀಷಿಯಂ, ಮ್ಯಾಂಗನೀಸ್, ಕಬ್ಬಿಣ, ತಾಮ್ರ ಮುಂತಾದ ಸಸ್ಯಪೋಷಕ ವಸ್ತುಗಳಿಗೆ ಪರೀಕ್ಷಾ ಕ್ರಮಗಳು ಅಳವಡಿಸಲ್ಪಟ್ಟಿವೆ. (ಬಿ.ವಿ.ವಿ.)

**ಅಂಗಾಂಶಶಾಸ್ತ್ರ :** ಗಿಡಮರಗಳ, ಪ್ರಾಣಿಗಳ ಸಹಜವಾದ ಸೂಕ್ಷ್ಮದರ್ಶಕ ರಚನೆಯನ್ನು ವಿವರಿಸುವ, ಮಿಣಿದರ್ಶಕದಿಂದ ತಿಳಿಯಬಹುದಾದ, ಬದುಕಿರುವ ಜೀವಾಣುಗಳ ನಡೆವಳಿಕೆಯ ನಿಜಗೆಲಸದ ವಿಚಾರಗಳನ್ನು ತಿಳಿಸುವ, ಜೀವವಿಜ್ಞಾನದ ಶಾಸ್ತ್ರಗಳೊಂದಿಗೆ ಅಂಗಾಂಶಶಾಸ್ತ್ರ (ಕಣಜಾಲಶಾಸ್ತ್ರ), ರೂಪವನ್ನು ವಿವರಿಸುವ ಇತರ ಶಾಸ್ತ್ರಗಳೊಂದಿಗೆ ಇದರ ಸಂಬಂಧವನ್ನು ತಿಳಿವ ಮುಂಚೆ, ಹಲವು ಕಣಗಳ ಜೀವಾಣುಗಳ ರಚನೆಯ ಓರಣದಲ್ಲಿ ಹಲವಾರು ಆಕಾರಗಳ ಮಟ್ಟದವು ಇರುವುದನ್ನು ಅರಿಯಬೇಕು. ಬದುಕಿರುವ ಜೀವಿಯ ನಿಜಗುಣ ಲಕ್ಷಣಗಳನ್ನೆಲ್ಲ ತೋರುವ ರಚನೆಯ ಅತಿ ಕಿರಿಯ ಒಮ್ಮಾನವೇ (ಯೂನಿಟ್) ಜೀವಕಣ. ಇದರ ವಿವರಣೆಯೇ ಜೀವಕಣಶಾಸ್ತ್ರ. ಜೀವಕಣಗಳೂ ಒಂದು ಗೊತ್ತಾದ ವಿಶೇಷ ನಿಜಗೆಲಸದಲ್ಲಿ ಒಟ್ಟಾಗಿ ಸೇರಿರುವ ಅವುಗಳಿಂದ ಬಂದ ಜೀವಕಣಗಳ ನಡುವಣ ಪದಾರ್ಥಗಳೂ ಒಂದುಗೂಡಿರುವುದೇ ಅಂಗಾಂಶ (ಕಣಜಾಲ). ಇದನ್ನು ವಿವರಿಸುವುದು ಅಂಗಾಂಶಶಾಸ್ತ್ರ (ಹಿಸ್ಟಾಲಜಿ). ಟಿಷ್ಯೂ ಎಂಬ ಪದಕ್ಕೆ ಅಂಗಾಂಶ ಎಂಬ ಹೆಸರಿಗಿಂತ ಕಣಜಾಲ ಎಂಬುದು ಹೆಚ್ಚು ಸಮಂಜಸವಾಗಿ ತೋರುತ್ತದೆ. ಕಣಜಾಲವನ್ನು ಕುರಿತ ಶಾಸ್ತ್ರವಾದ ಹಿಸ್ಟಾಲಜಿ ಕಣಜಾಲ ಶಾಸ್ತ್ರವಾಗಬೇಕು. ಆದರೆ ರೂಢಿಗೆ ಬಂದಿರುವಂತೆ ಇಲ್ಲಿ ಅಂಗಾಂಶ ಮತ್ತು ಅಂಗಾಂಶಶಾಸ್ತ್ರ ಎಂಬ ಪದಗಳನ್ನೇ ಬಳಸಲಾಗಿದೆ. ಅಂಗಾಂಶಕ್ಕೂ ದೊಡ್ಡ ಗಾತ್ರದ ರಚನೆಯೆಂದರೆ ಅಂಗ. ಇದು ಬರಿಯ ಕಣ್ಣಿಗೆ ಕಾಣುತ್ತದೆ. ಇದರಲ್ಲಿ ಎರಡೋ ಅಥವೇ ಅದಕ್ಕಿಂತ ಹೆಚ್ಚೋ ಅಂಗಾಂಶಗಳು ಇರುವುವು. ಈ ಮಟ್ಟದಲ್ಲಿ ವಿವರಿಸುವುದು ಅಂಗಶಾಸ್ತ್ರ (ಆರ್ಗನಾಲಜಿ). ಮೈಯ ಸಾಮಾನ್ಯ ನಿಜಗೆಲಸಗಳಲ್ಲಿ ಒಂದನ್ನು ನೆರವೇರಿಸಲು ಒಂದಾಗಿ ಸಹಕರಿಸುವ ಅಂಗಗಳ ತಂಡದ ಹೆಸರು ಅಂಗಮಂಡಲ. ಗುಂಡಿಗೆ, ಧಮನಿಗಳು, ಲೋಮನಾಳ, ಸಿರಗಳು, ಒಂದುಗೂಡಿರುವ ರಕ್ತ ಸುತ್ತಾಟದ ಮಂಡಲ ಒಂದು ಉದಾಹರಣೆ. ಮಂಡಲದ ಅಂಗರಚನಾಶಾಸ್ತ್ರದಲ್ಲಿ ಈ ಒಟ್ಟಾರೆ ಮಟ್ಟದ ವಿವರಗಳಿವೆ (**ನೋಡಿ– ಅಂಗರಚನಾಶಾಸ್ತ್ರ, ಒಟ್ಟಾರೆ**).

ಅಂಗಾಂಶಶಾಸ್ತ್ರದಲ್ಲಿ ಬಹುವಾಗಿ ಅಂಗಾಂಶಗಳನ್ನು ವಿವರಿಸಿದರೂ ಜೀವಕಣಗಳ ವಿಶಿಷ್ಟ ಗುಣಗಳೂ ಸೇರುವುದರಿಂದ ಜೀವಕಣಶಾಸ್ತ್ರದ ಭಾಗಗಳೂ ಇದರಲ್ಲಿ ಬೆರೆತಿವೆ. ಅಂಗಾಂಶಶಾಸ್ತ್ರವೂ ಮಿಣಿದರ್ಶಕದ ಅಂಗರಚನಾಶಾಸ್ತ್ರವೂ ಹಲವೇಳೆ ಒಂದೇ ಎನ್ನಬಹುದಾದರೂ ಇವೆರಡರ ನಡುವೆ ಮುಖ್ಯ ವ್ಯತ್ಯಾಸಗಳಿವೆ. ಅಂಗಾಂಶಶಾಸ್ತ್ರ ಒಂದೊಂದು ಅಂಗಾಂಶವನ್ನೂ ವಿವರಿಸುತ್ತದೆ. ಇನ್ನೊಂದೆಡೆ, ಅಂಗಗಳು, ಮಂಡಲಗಳಂಥ ಇನ್ನೂ ದೊಡ್ಡ ಓರಣಗಳಲ್ಲಿನ ಕಣಗಳ ಜೋಡಣೆಯನ್ನು ಮಿಣಿದರ್ಶಕದ ಅಂಗರಚನಾಶಾಸ್ತ್ರ ವಿವರಿಸುವುದು. ಈ ಅರ್ಥದಲ್ಲಿ ಮಿಣಿದರ್ಶಕದ ಅಂಗರಚನಾಶಾಸ್ತ್ರವನ್ನು ಅಂಗಾಂಶಶಾಸ್ತ್ರವೆಂದೇ ಗಣಿಸಬಹುದು. ಪ್ರಾಣಿಗಳ ಅಂಗಾಂಶಗಳನ್ನು ಮಾತ್ರ ಈ ಲೇಖನದಲ್ಲಿ ವಿವರಿಸಿದೆ. ಗಿಡಮರಗಳನ್ನು ಬೇರೆಡೆ ಕೊಟ್ಟಿದೆ.

**ಅಂಗಾಂಶದ ಬಗೆಗಳು :** ಉನ್ನತ ಪ್ರಾಣಿಗಳ ಮೈಗಳಲ್ಲಿ ಮೂಲದ ನಾಲ್ಕು ಬಗೆಯ ಅಂಗಾಂಶಗಳನ್ನು ಗಮನಿಸುವುದು ವಾಡಿಕೆ : ಮೇಲ್ಪೊರೆಯ, ಕೂಡಿಸುವ, ಸ್ನಾಯುವಿನ, ನರದ ಅಂಗಾಂಶಗಳು. ಆವರಣದೊಂದಿಗೆ ವಿನಿಮಯ, ರಚನೆಯ ಉಳಿಕೆ, ಚಲನೆ, ನಿಜಗೆಲಸಗಳ ಚಟುವಟಿಕೆಗಳ ಹೊಂದಾಣಿಕೆಯಂಥ ಮೈಯಲ್ಲಿನ ಸಾಮಾನ್ಯ ನಿಜಗೆಲಸಗಳಿಗಾಗಿ ಇರುವ ವಿಶೇಷ ಭಾಗಗಳಿವು. ಇನ್ನೂ ಹೆಚ್ಚಿನ ನಿಜಗೆಲಸಗಳನ್ನು ಮಾಡುವ ಜೀವಕಣಗಳನ್ನೂ ಜೀವಕಣಗಳ ನಡುವಣ ವಸ್ತುಗಳನ್ನೂ ಗುರುತಿಸಬಹುದಾದ ಮಾಟದ ಹೊಂದಾಣಿಕೆಗಳಾಗಿ. ಈ ಒಂದೊಂದು ಅಂಗಾಂಶವನ್ನೂ ಮತ್ತೆ ವಿಭಾಗಿಸಬಹುದು.

**ಮೇಲ್ಪೊರೆಯ ಅಂಗಾಂಶ :** ಒಂದೇ ಸಮನಾಗಿರುವ ಪದರಗಳಲ್ಲಿ ಜೀವಕಣಗಳು ಒತ್ತಾಗಿರುವ ಮೇಲ್ಪೊರೆ (ಎಪಿತೀಲಿಯಂ) ಹೊರ ಇಲ್ಲವೆ ಒಳ ಮೇಲ್ಮೈಗಳನ್ನು ಮುಚ್ಚಿರುತ್ತದೆ. ಆದುದರಿಂದ ಈ ಜೀವಿಗೂ ಆವರಣಕ್ಕೂ ನಡುವಿನ ಮೊಗವಿದು. ಹೊರಮೈಗಳ ಮೇಲೆಲ್ಲ ಒಣಕಲ್ಲನ್ನೂ ದಾಳಿಯನ್ನೂ ತಡೆವಂತೆ ತೂರಬಿಡದ ಮೇಲ್ಮೇಲಿನ ಪದರ ಆಗಿರುವುದು. ಜಠರ ಕರುಳುಗಳ ಒಳವರಿ (ಲೈನಿಂಗ್)ಯಲ್ಲಿದ್ದಂತೆ, ಒಳಗಣ ಮೇಲ್ಮೈಗಳ ಮೇಲೆ ಹೀರಿಕೆ, ಸುರಿಕೆ, ಹೊರದೂಡಿಕೆಗಳಿಗಾಗಿ ರಚನೆಯ ಹೊಂದಾಣಿಕೆ ಇರುವುದು. ಚಪ್ಪಟೆಯಾದ ಮೇಲ್ಮೈಯಿಂದ ಒದಗುವುದಕ್ಕಿಂತಲೂ ಹೆಚ್ಚಿನ ಸುರಿಕೆ ಬೇಕಾದಾಗ, ಮೇಲ್ಮೈಹರವನ್ನೂ ಬಹಳ ಹೆಚ್ಚಿಸುವ ಏಣುಗಳಾಗೋ ಪದರಗಳಾಗೋ ಹೊರಚಾಚಿಕೊಳ್ಳಬಹುದು. ಇಲ್ಲವೆ ಸುರಿಕ ಜೀವಕಣಗಳು ಒಳವರಿಯಾಗಿರುವ ಕವಲೊಡೆವ ನಾಳಗಳ ಮಂಡಲವಾಗಿ ಗ್ರಂಥಿಯಾಗಬಹುದು. ಮೇಲ್ಪೊರೆಯೇ ಸಾಲುಗಟ್ಟಿರುವ ಮೇಲ್ಮೈಗಳ ಹೊರಬೆಳೆಸಾಗಿ ಗ್ರಂಥಿಗಳು ಬೆಳೆಯುತ್ತವೆ. ಆದ್ದರಿಂದ ಇವುಗಳಲ್ಲಿ ಬಹುಪಾಲಿನವು ಒಳ ಇಲ್ಲವೇ ಹೊರ ಮೈಯ ಮೇಲ್ಮೈಯೊಂದಿಗೆ, ರಸವನ್ನು ಹೊರಬಿಡುವ ಅವುಗಳ ನಾಳಗಳ ಮೂಲಕ ಸಂಬಂಧಿಸಿರುತ್ತವೆ. ಇವು ಹೊರಸುರಿಕ (ಎಕ್ಸೊಕ್ರೈನ್) ಗ್ರಂಥಿಗಳು. ಆದರೆ ಕೆಲವು ಗ್ರಂಥಿಗಳು ಹೀಗಿರದೆ, ಪಿಂಡಜೀವನದಲ್ಲಿ ಮೊಟ್ಟಮೊದಲು ಅವನ್ನು ಹೊಮ್ಮಿಸಿದ ಮೇಲ್ಪೊರೆಯ ಮೇಲ್ಮೈಯಿಂದ ಅವುಗಳ ಸಂಬಂಧವನ್ನೇ ಕಳೆದುಕೊಂಡು, ನಾಳಗುಳಿಯ (ಸೈನುಸಾಯ್ಡಲ್) ರಕ್ತದ ಲೋಮನಾಳಗಳಿಗೆ ಚೆನ್ನಾಗಿ ತಾಕಿರುವಂತೆ ಜೋಡಿಸಿರುವ ಜೀವಕಣಗಳ ರಾಸಿಗಳು ಇಲ್ಲವೇ ಗಟ್ಟಿ ಹುರಿಗಳಾಗಿರುವುವು. ನೇರವಾಗಿ ರಕ್ತದ ಹರಿವಿಗೇ ಸುರಿಸುವ ಅಂಥ ಗ್ರಂಥಿಗಳಿಗೆ ಒಳಸುರಿಕ (ನಿರ್ನಾಳ) (ಎಂಡೊಕ್ರೈನ್) ಗ್ರಂಥಿಗಳೆಂದು ಹೆಸರಿದೆ.

**ಮೇಲ್ಪೊರೆಗಳ ವಿಂಗಡನೆ :** ಜೀವಕಣಗಳ ಆಕಾರದಂತೆ (ಹೊರಿಕೆಯ ಇಲ್ಲವೇ ಚಪ್ಪಟೆಯಾದ, ಘನಾಕಾರದ, ಕಂಬಾಕಾರದ); ಒಂದೇ ಪದರದಲ್ಲೋ (ಸರಳ), ಇಲ್ಲವೇ ಹಲವು ಪದರಗಳಲ್ಲೋ (ಸ್ಟ್ರಾಟಿಫೈಡ್) ಇರುವಂತೆ; ಮೇಲ್ಮೈ ವಿಶೇಷೀಕರಿಸಿರುವಂತೆ ಇಲ್ಲವೇ ಹಾಗಿಲ್ಲದಂತೆ (ಉದಾ: ಬಾಸೆಗೂಡಿದ–ಸಿಲಿಯೇಟೆಟ್) ಬಾಸೆಗೂಡಿರದ; ಕೊಂಪೊರೆಗೂಡಿದ (ಕೆರಾಟಿನೈಜ್ಡ್) ಇಲ್ಲವೇ ಕೊಂಪೊರೆಗೂಡಿರದ–ಹೀಗೆ ಹೊರಬಿಗಿಪೊರೆಯ (ಪೆರಿಟೋನಿಯಲ್) ಪೊಳ್ಳಿನಲ್ಲಿ ಒಳವರಿಯಾಗಿರುವ ಚಪ್ಪಟೆಜೀವಕಣಗಳ ಒಂಟಿ ಪದರ ಹೊರಿಕೆಯ ಮೇಲ್ಪೊರೆ ಎನಿಸಿಕೊಳ್ಳುತ್ತದೆ. ಕೊಂಪೊರೆಗೂಡಿದ ಪದರಗಟ್ಟಿದ ಹೊರಿಕೆಯ ಮೇಲ್ಪೊರೆ ಎನ್ನುವುದು ಮೇಲ್ಚರ್ಮ (ಎಪಿಡರ್ಮಿಸ್) ಆಗಿರುವ ಚಪ್ಪಟೆಜೀವಕಣಗಳ ಹಲವು ಪದರಗಳಿಗೆ. ಇದರ ಮೇಲು ಮೇಲಿನ ಜೀವಕಣಗಳು ಹೆಚ್ಚಾಗಿ ಕೊಂಪೊರೆಕ (ಕೆರ್ಯಾಟಿನ್) ಸೇರಿರುವ ಸತ್ತ ಹಗರು(ಹುರುಪೆ)ಗಳಾಗಿ (ಸ್ಕೇಲ್ಸ್) ಮಾರ್ಪಟ್ಟಿರುತ್ತವೆ. ಜೀರ್ಣನಾಳ, ಗ್ರಂಥಿಗಳ ಅಲ್ಲದೇ ಗರ್ಭಕೋಶದ ನಾಳಗಳು, ಪಿಂಡನಾಳಗಳು ಮೊದಲಾದವುಗಳಲ್ಲಿ ಸರಳ ಕಂಬಾಕಾರದ ಮೇಲ್ಪೊರೆ ಇರುವುದು. ಮೇಲ್ಪೊರೆಯಲ್ಲಿರುವ ಜೀವಕಣಗಳೆಲ್ಲ ಒಂದೇ ತೆರನಾಗಿ ಇರಬೇಕಿಲ್ಲ. ಬಾಸೆಗಳಿಂದ ಹೀರುವ ಜೀವಕಣಗಳು ಇಲ್ಲವೇ ಲೋಳೆಸುರಿಕಕಳಶ (ಗಾಬ್ಲೆಟ್) ಜೀವಕಣಗಳ ನಡುವೆ, ಬಾಸೆಗಳಿರುವ ಜೀವಕಣಗಳು ಇರಬಹುದು. ತಡ್ಡಿನ (ವೃಷಣ) ಪದರಗಟ್ಟಿದ ಜೀವಿಕುಡಿಯ(ಜರ್ಮಿನಲ್), ಮೇಲ್ಪೊರೆಯಲ್ಲಿರುವ ಜೀವಗಳು ತೆರತೆರನಾಗಿರುತ್ತವೆ. ಕೊನೆಗೆ ರೇತುಕಣ (ಸ್ಪರ್ಮಟೊಝೂನ್) ಆಗುವ ತನಕ ಮೊಳೆಯುವ ಜೀವಕಣಗಳು ನೆರೆವ ಬೇರೆ ಬೇರೆ ಹಂತಗಳಲ್ಲಿರುತ್ತವೆ. ಹೀಗೇ ಕಣ್ಣಾಲ (ರೆಟೀನ), ಕಿವಿ, ರುಚಿಕುಡಿಗಳೇ (ಟೇಸ್ಟ್‌ಬಡ್ಸ್) ಮೊದಲಾದವುಗಳಲ್ಲಿ ಇದ್ದಂತೆ ವಿಶೇಷ ಅರಿವಿನ ಪಡೆಕಗಳಾಗುವಂತೆ (ರಿಸೆಪ್ಟಾರ್) ಮೇಲ್ಪೊರೆಯ ಜೀವಕಣಗಳು ವಿಪರೀತ ಮಾರ್ಪಾಡಾಗಬಹುದು. ಕೆಲವು ವೇಳೆ ರಕ್ತನಾಳಗಳ ಮಂಡಲ ಮತ್ತು ಅಳ್ಳೆಪೊರೆ (ಪ್ಲೂರ), ಹೊರಬಿಗಿಪೊರೆಗಳಂಥ ದೊಡ್ಡ ರಸಿಕೆಯ ಪೊಳ್ಳುಗಳ ಚಪ್ಪಟೆ ಜೀವಕಣಗಳ ಒಂಟಿ ಪದರಗಳನ್ನು ಕ್ರಮವಾಗಿ, ಒಳಪೊರೆ (ಎಂಡೋತೀಲಿಯಂ), ನಡುಪೊರೆ (ಮೀಸೋತೀಲಿಯಂ) ಎಂದು ಕರೆವುದುಂಟು (**ನೋಡಿ– ಒಳಪೊರೆ**).

**ಕೂಡಿಸುವ ಅಂಗಾಂಶ:** ಜೀವಕಣಗಳು, ತಂತುಗಳು, ಅರೂಪದ ಆಧಾರ ವಸ್ತುಗಳು ಇದರಲ್ಲಿವೆ. ಮೈಯಲ್ಲಿ ಒಂದೊಂದೆಡೆಯಲ್ಲೂ ಈ ಮೂರರ ಹೋಲಿಕೆಯ ಪ್ರಮಾಣ ಒಂದೊಂದು ರೀತಿ. ಸಡಿಲವಾದ ವಿರಳಿಕ (ಏರಿಯೊಲಾರ್) ಕೂಡಿಸುವ (ಕನೆಕ್ಟಿವ್) ಅಂಗಾಂಶದಲ್ಲಿ, ಜೀವಕಣದ ಹೊರಗಿನವಲ್ಲಿ ಹೇಗೆಂದರೆ ಹಾಗಿರುವ, ಜಿಬ್ಬಿನ ಆಧಾರವಸ್ತುವಿನಲ್ಲಿ ನೆಟ್ಟಿರುವ ಸಡಿಲವಾಗಿ ಹೆಣೆದುಕೊಂಡಿರುವ ಅಂಟುಜನಕದ (ಕೊಲ್ಲಾಜಿನಸ್) ಮತ್ತು ಹಿಂಪುಟಿಕ (ಎಲಾಸ್ಟಿಕ್) ತಂತುಗಳು ಇರುತ್ತವೆ. ಕೂಡಿಸುವ ಅಂಗಾಂಶದ ಮುಖ್ಯ ಜೀವಕಣಗಳಾದ ತಂತುಕಣಗಳೂ (ಫೈಬ್ರೊಬ್ಲಾಸ್ಟ್‌ಗಳು) ನೆಲೆಸಿದ ನಿಡುತಿನಿಕಣಗಳೂ (ಮ್ಯಾಕ್ರೊಫೇಜಸ್) ತಂತುಗಳುದ್ದಕ್ಕೂ ಇರುತ್ತವೆ. ಹಾಲುರಸಕಣಗಳು, ತಿನಿಸು (ಮಾಸ್ಟ್) ಜೀವಕಣಗಳು, ಕೆಂಪಣುಗಿಕಗಳು (ಇಯೊಸಿನೊಫಿಲ್ಸ್), ರೂಪಿತ (ಪ್ಲಾಸ್ಮ) ಕಣಗಳೂ ಸೇರಿರುವ, ಬಿಡಿಯಾಗಿರುವ ಜೀವಕಣಗಳು ಅಲ್ಲಲ್ಲಿ ಹರಡಿರುತ್ತವೆ. ಚರ್ಮದಲ್ಲಿನ ನಿಜಚರ್ಮವೂ (ಡರ್ಮಿಸ್), ಬೇರೆ ಬೇರೆ ಅಂಗಗಳ ಕವಚಗಳಾಗುವ ದಟ್ಟ ಅಂಟುಜನಕದ ಕೂಡಿಸುವ ಅಂಗಾಂಶದಲ್ಲಿ ಇತರ ವಸ್ತುಗಳಿಗಿಂತಲೂ ದಪ್ಪ ಅಲೆಯಲೆಯಾದ ಕಟ್ಟುಗಳಾಗಿ ಒಂದುಗೂಡಿ ಅಂಟುಜನಕ ತಂತುಗಳೇ ಇರುತ್ತವೆ. ಇಂಥ ದಟ್ಟ ಕೂಡಿಸುವ ಅಂಗಾಂಶದ ಉದಾಹರಣೆ ಕಂಡರ (ಟೆಂಡನ್). ಜೀವಕಣಗಳು ಇದರಲ್ಲಿ ಅಲ್ಲೊಂದು ಇಲ್ಲೊಂದು ಇರುವುವು. ಇದು ವಿಪರೀತ ಗಟ್ಟಿಯಾಗಿ ಬಲ ತಡೆವಂತಿರಲು ಕಾರಣ, ಇದರಲ್ಲಿರುವ ಕ್ರಮವಾಗಿ ಸಮದೂರದಲ್ಲಿ ದಟ್ಟವಾಗಿ ಜೋಡಿಸಿರುವ ಅಂಟುಜನಕ ತಂತುಗಳು. ಮೆಲ್ಲೆಲುಬಿನಲ್ಲಿ (ಕಾರ್ಟಿಲೇಜ್) ಆಧಾರವಸ್ತು ಧಾರಾಳವಾಗಿದೆ. ಅಂಟುಜನಕ ಇಲ್ಲವೇ ಹಿಂಪುಟಿಕ ತಂತುಗಳೊಂದಿಗೆ ದಂಡಿಯಾಗಿರುವ ಗಾಜಂದದ ಎರಕಚ್ಚಿನಲ್ಲಿನ (ಮ್ಯಾಟ್ರಿಕ್ಸ್) ಬಿಡುತಿಗಳಲ್ಲಿ (ಲ್ಯಾಕ್ಯುನೆ) ಜೀವಕಣಗಳು ಬೇರೆ ಬೇರೆ ಇರುತ್ತವೆ. ಎಲುಬಿನಲ್ಲೂ ಜೀವಕಣದ ಹೊರಗಿನ ವಸ್ತುವೇ ಹೆಚ್ಚು. ಸುಣ್ಣದ ಲವಣಗಳು



ಪದರಗಟ್ಟಿದ ಚಪ್ಪಟೆಯಾದ ಮೇಲ್ಪೊರೆ; ಕಂಕೋಶದ ಘನಾಕಾರದ ಮೇಲ್ಪೊರೆ; ಬಾಸೆಗಳೀರುವ, ಹುಸಿ–ಪದರಗಟ್ಟಿದ, ಕಂಬಾಕಾರದ ಮೇಲ್ಪೊರೆ; ಕರುಳ್ನಡುಪೊರೆಯ ಒಳ್ಪೊರೆ; ಆಮ್ಲಸುರಿಕ ಜೀವಕಣಗೂಡಿದ ಜಠರದ ರಚನೆ; ಪಟ್ಟೆಪಟ್ಟೆ ಸ್ನಾಯು; ತಂತುಕ ಕೂಡಿಸುವ ಅಂಗಾಂಶ (ಕಂಡರ); ಪುಪ್ಪುಸದ ಗಾಳಿಗೂಡಿನ ಗೋಡೆಗಳು, ಲೋಮನಾಳಗಳು; ಪಟ್ಟೆಪಟ್ಟೆ ಸ್ನಾಯು; ನಯ ಸ್ನಾಯು

ಬಹಳ ತುಂಬಿರುವ ಎಲುಬಿನ ಎರಕಚ್ಚಿನಲ್ಲಿ ನಡುಸುತ್ತುವ ತೆಳುಪೊರೆಗಳಲ್ಲಿ (ಕಾನ್ಸೆಟ್ರಿಕ್ ಲೆಮೆಲ್ಲೆ) ಎಲುಬಿನ ಜೀವಕಣಗಳೂ ಅಂಟುಜನಕದ ತಂತುಗಳೂ ಜೋಡಿಸಿದಂತಿವೆ. ಕೂಡಿಸುವ ಅಂಗಾಂಶದ ಜೀವಕಣಗಳು ಅಪಾರವಾಗಿರುವ ಬಗೆಯದು ರಕ್ತಜನಿಯಕ (ಹೀಮೋಪೊಯಿಟಿಕ್) ಅಂಗಾಂಶ. ಸುತ್ತಿಡುವ ರಕ್ತದ ನೆರೆದ ಬಿಳಿಕಣಗಳು, ಕೆಂಪುಕಣಗಳು ಆಗಿ ಮಾರ್ಪಡುವುದರ ಬೇರೆ ಬೇರೆ ಹಂತಗಳಲ್ಲಿರುವ ಜೀವಕಣಗಳು ಇದರಲ್ಲಿ ಕಿಕ್ಕಿರಿದಿರುತ್ತವೆ (**ನೋಡಿ– ರಕ್ತ**) (**ನೋಡಿ– ಕೂಡಿಸುವ, ಆನಿಸುವ ಅಂಗಾಂಶಗಳು**).

**ಸ್ನಾಯುವಿನ ಅಂಗಾಂಶ :** ಹಲನಬ್ಬೀಜದ (ಮಲ್ಟಿನ್ಯೂಕ್ಲಿಯೇಟೆಡ್), ಕೂಡಲ್ಕಣದ (ಸಿನ್ಸಿಟಿಯಲ್) ತಂತುಗಳಿಂದಲೋ ಜೀವರಸದ ಕುಗ್ಗುವ ಗುಣ ಅಸಾಮಾನ್ಯ ಮಟ್ಟಕ್ಕೆ ಏರಿರುವ ಒಂಟಿ ಜೀವಕಣಗಳು ಕೊನೆಕೊನೆಗಳು ಸೇರಿಕೊಂಡೋ ಸ್ನಾಯು (ಮಸಲ್) ಆಗಿದೆ. ಸಾಧಾರಣವಾಗಿ ಸ್ನಾಯುಗಳಲ್ಲಿ ಎರಡು ತೆರಗಳಿವೆ : ನಯಸ್ನಾಯು (ಗುಂಡಿಗೆಯ ಸ್ನಾಯೂ ಸೇರಿದಂತೆ), ಪಟ್ಟೆಪಟ್ಟೆ ಸ್ನಾಯು, ನಯ ಇಲ್ಲವೇ ಸಾದಾ ಸ್ನಾಯುವಿನಲ್ಲಿ, ನಡುವಣ ಒಂಟಿ ನಬ್ಬೀಜದ (ನ್ಯೂಕ್ಲಿಯಸ್), ಉದ್ದಸಾಗಿದ ಕದಿರಾಕಾರಿ ಜೀವಕಣಗಳಿವೆ.

ಇದು ಕುಗ್ಗುವುದು ತುಸು ನಿಧಾನ. ನಮ್ಮಿಷ್ಟದಂತೆ ನಡೆವುದಿಲ್ಲ. ಜೀರ್ಣನಾಳದ ಭಿತ್ತಿ, ರಕ್ತನಾಳಗಳ ಗೋಡೆಗಳು, ಗರ್ಭಕೋಶ, ಕಂಕೋಶ (ಬ್ಲಾಡರ್) ಇನ್ನೂ ಬೇರೆ ಬೇರೆ ಪೊಳ್ಳಿನ ಒಳಾಂಗಗಳಲ್ಲೂ ಈ ತೆರನ ಸ್ನಾಯು ಇರುತ್ತದೆ. ಉಳಿದ ಕೆಲಸಗತಿಗಳೊಂದಿಗೆ, ಪಚನ, ರಕ್ತಸುತ್ತಾಟ, ಹೊರದೂಡಿಕೆಗಳಿಗೆ ಇದು ಚಲಬಲವನ್ನು ಒದಗಿಸುತ್ತದೆ. ಎಲುಗಟ್ಟಿನ (ಸ್ಕೆಲಿಟಲ್) ಪದರಗಟ್ಟಿದ ಸ್ನಾಯು ಗೊತ್ತಿರದಷ್ಟು ಉದ್ದದ ಉರುಳೆಯಾಕಾರದ ಕೂಡಲ್ಕಣದ


ಚರ್ಮದಡಿಯ ವಿರಳಿಕ ಕೂಡಿಸುವ ಅಂಗಾಂಶ; ಚರ್ಮದಡಿಯಲ್ಲಿ ಲೋಮನಾಳ; ತಡ್ಡಿನಲ್ಲಿನ ಪದರಗಟ್ಟಿದ ಜೀವಿಕುಡಿಯ ಮೇಲ್ಪೊರೆ; ಈಲಿಯ ಜೀವಕಣಗಳ ಜೋಡಣೆ; ರಕ್ತದ ಬಳಿತದಲ್ಲಿ ಕೆಂಪು, ಬಿಳಿ ರಕ್ತಕಣಗಳು, ಚಪ್ಪಟಿಕಗಳು; ಧಮನಿ ಮತ್ತು ಸಿರಗಳ ಭಾಗ; ನರಜೀವಕಣ; ಗುರಾಣಿಕ ಗ್ರಂಥಿಯ ಸರಳ ಘನಾಕಾರದ ಒಳ್ಪೊರೆ

ತಂತುಗಳಿಂದಾಗಿದೆ. ಒಂದೊಂದರಲ್ಲೂ ಸುತ್ತಂಚಿನಲ್ಲಿರುವ (ಪೆರಿಫೆರಲ್) ಹಲವಾರು ನಬ್ಬೀಜಗಳೂ ಉದ್ದಕ್ಕೂ ಅಡ್ಡಗೆರೆಯಂತೆ ಪಟ್ಟಿಗಳಿರುವ ಕುಗ್ಗುವಂಥ ಸ್ನಾಯುತಂತುಗಳೂ ತುಂಬಿವೆ. ಚಲನೆಗೆ ಕಾರಣವಾಗುವ ಮಂಡಲದ ಭಾಗವಾಗಿ ಮೈಯಲ್ಲಿ ಎಲ್ಲೆಲ್ಲೂ ಈ ಬಗೆಯ ಸ್ನಾಯು ಇದೆ. ಬೇಕೆಂದು ಇಷ್ಟಪಟ್ಟಾಗ ಮಾತ್ರ ಇದು ಸರಕ್ಕನೆ ಕುಗ್ಗುವುದು. ಓಡಾಟಕ್ಕಾಗಿ ಇರುವ ಎಲುಗಟ್ಟಿನ ಸ್ನಾಯುವಿಗೂ ಅದರಂತೆ ಅಡ್ಡಪಟ್ಟಿಗೂಡಿರುವ ಗುಂಡಿಗೆಯ ಸ್ನಾಯುವಿಗೂ ಹೋಲಿಕೆ ತೀರ ಕಡಿಮೆ. ಗುಂಡಿಗೆಯ ಸ್ನಾಯು ಹಿಣಿಲ ರೂಪದಲ್ಲಿ ಜೋಡಣೆಗೊಂಡಿದೆ. ಒಂದೊಂದು ಜೀವಕಣ–ಭಾಗದಲ್ಲೂ ನಡುವೆ ನಬ್ಬೀಜವಿದೆ. ಇದಕ್ಕಾಗೇ ಇದನ್ನು ಬೇರೆ ವರ್ಗವಾಗಿ ಗಣಿಸುವುದುಂಟು.

**ನರದ ಅಂಗಾಂಶ :** ಆವೇಗಗಳನ್ನು (ಇಂಪಲ್ಸಸ್) ಪಡೆವ, ಹುಟ್ಟಿಸುವ, ಸಾಗಿಸುವ ಜೀವಕಣಗಳಾದ ನರಕಣಗಳೂ ನರಾಂಟುಗಳು (ನ್ಯೂರೋಗ್ಲಿಯ) ಎನ್ನಿಸಿಕೊಳ್ಳುವ ಆನಿಸುವ ಜೀವಕಣಗಳೂ ಇದರಲ್ಲಿವೆ. ನರಾಂಟಿನ ಜೀವಕಣಗಳಲ್ಲಿ ಕೊನೆಯ ಪಕ್ಷ ಎರಡು ಬಗೆಗಳೂ ನರಕಣಗಳಲ್ಲಿ ಲೆಕ್ಕವಿಲ್ಲದಷ್ಟು ಬೇರೆ ಬೇರೆ ಬಗೆಗಳೂ ಇವೆ. ನಟ್ಟ ನಡುವೆ ಇರುವ ಕೋಶಿಕದಂಥ ನಬ್ಬೀಜವೂ ಎರಡೋ ಹೆಚ್ಚಿಗೋ ಚೂಪು ಚಾಚುಗಳಿರುವ ತಾರಾಕಾರದ ದೊಡ್ಡ ಮೈಯೂ ಒಂದು ನರಕಣದಲ್ಲಿ ಇರುತ್ತವೆ. ಈ ಚಾಚುಗಳು ಎರಡು ತೆರನಿವೆ : ಮರಾಕಾರಿಗಳು (ಡೆಂಡ್ರೈಟ್ಸ್) ಎಂಬ ಎರಡೋ ಹೆಚ್ಚಿಗೋ ಮೋಟು ಟಿಸಿಲೊಡೆವ ಚಾಚುಗಳು; ಅಚ್ಚುವಾಳ (ಅಯಾಕ್ಸನ್) ಎಂಬ ಇನ್ನೂ ಉದ್ದನೆಯ ಒಂದೇ ಒಂದು ಚಾಚು. ಈ ಅಚ್ಚುವಾಳಗಳು ಕೇಂದ್ರದ ನರಮಂಡಲದಲ್ಲಿನ ಇತರ ನರಕಣಗಳ ಮರಾಕಾರಿಗಳನ್ನು ತಾಕುವುದರೊಂದಿಗೆ ಕೊನೆಗೊಳ್ಳುವಂತೆ ತುಸು ಮೋಟಾಗಿರಬಹುದು; ಇಲ್ಲವೇ ಮಿದುಳು ಬೆನ್ನುಹುರಿಗಳಿಂದ ಕೈಕಾಲುಗಳಲ್ಲಿನ ಸ್ನಾಯುಗಳ ತನಕ ಕೇಂದ್ರದ ನರಮಂಡಲದಿಂದ ಎರಡು ಮೂರು ಅಡಿಗಳ ದೂರದಷ್ಟು ಉದ್ದವಾಗಿರಬಹುದು. ಅಚ್ಚುವಾಳಗಳಿಗೆ ಒರೆಗವಚ (ಷೀತ್ಸ್)ಗಳಿರಲೂಬಹುದು.

ಕೇಂದ್ರದ ನರಮಂಡಲದ ನರೆನರಾಂಶದಲ್ಲಿ (ಗ್ರೇ ಮ್ಯಾಟರ್) ಮುಖ್ಯವಾಗಿ ನರಕಣಗಳ ಮೈಗಳು ಇರುತ್ತವೆ. ಬಿಳಿ ನರಾಂಶದಲ್ಲಿ ತುಂಬಾ ಮಜ್ಜಿಕಗೂಡಿದ (ಮೈಲಿನೇಟೆಡ್) ಅಚ್ಚುವಾಳಗಳ ಜಾಡುಗಳೇ ಇರುವುವು. ನರಗಳ ಮಜ್ಜಿಕ ಒರೆಗವಚಗಳೇ ಬಿಳಿ ನರಾಂಶ ಬೆಳ್ಳಗೆ ಮಿನುಗುವಂತೆ ಕಾಣಿಸಲು ಕಾರಣ. ಸುತ್ತಂಚಿನ ನರಗಳಲ್ಲಿ ಮಜ್ಜಿಕಗೂಡಿದ ಮತ್ತು ಮಜ್ಜಿಕಗೂಡದ ಅಚ್ಚುವಾಳಗಳು ಬೆರೆತಿರುವ ಕಟ್ಟುಗಳಿರುತ್ತವೆ. ಈ ಅಚ್ಚುವಾಳಗಳ ಜೀವಕಣಗಳ ಮೈಗಳು ಕೇಂದ್ರದ ನರದ ಮಂಡಲದಲ್ಲೋ ಅದಕ್ಕೆ ಸಂಬಂಧಿಸಿದ ನರಗಂಟು (ಗ್ಯಾಂಗ್ಲಿಯಾನ್)ಗಳಲ್ಲೋ ಇರುತ್ತವೆ. (ಎನ್.ಟಿ.ಎನ್.)

**ಅಂಗಾಂಶ ಪರೀಕ್ಷೆಯ ವಿಧಾನಗಳು :** ಜೀವಂತ ಜೀವಕಣಗಳ, ಅಂಗಾಂಶಗಳ ರಚನೆಯನ್ನು ಅವುಗಳ ನಿಜಗೆಲಸದ ನಿಟ್ಟಿನಿಂದ ಕಂಡು ತಿಳಿದು ವಿವರಿಸಲು ಯತ್ನಿಸುವವನು ಅಂಗಾಂಶಶಾಸ್ತ್ರಜ್ಞ. ಜೀವಂತವಿರುವಂತೆಯೇ ಒಳಗಿನದನ್ನು ನೇರವಾಗಿ ತಿಳಿಯಲು ಎರಡು ಮಿತಿಗಳಿವೆ. ಅಂಗಾಂಶಗಳ ಒಂದೊಂದು ಭಾಗವೂ ಬೇರೆಯಾಗಿ ಗುರುತಿಸಲಾಗದಷ್ಟು ಸಹಜವಾಗೇ ಗಾಜಿನಂತೆ ತಿಳಿಯಾಗಿ ಇರುವುದೊಂದು; ಅವು ದಪ್ಪನಾಗಿರುವುದರಿಂದ ಬೆಳಕು ಹಾಯಿಸಿ ನೋಡಬೇಕೆಂದರೆ, ಹಲವಾರು ಭಾಗಗಳು ಒಂದರ ಮೇಲೊಂದು ಬಿದ್ದಂತೆ ಕಾಣುವುದು ಇನ್ನೊಂದು. ಇದರಿಂದಲೇ ಅಂಗಾಂಶಗಳ ಕೊಯ್ತಗಳನ್ನು (ಸೆಕ್ಷನ್ಸ್) ಬಳಸುವುದು ಸಾಮಾನ್ಯ. ಅಂಗಾಂಶಗಳನ್ನು ಸಾಯಿಸಿ ರಾಸಾಯನಿಕಗಳಲ್ಲಿ ಊರಿಸಿಟ್ಟು ತೆಳು ಚೂರುಗಳಾಗಿ ಕತ್ತರಿಸಿದ ಅಂಗಾಂಶಗಳಿವು. ಬೆಳಕು ಹಾಯಿಸಿ ಇವನ್ನು ಪರೀಕ್ಷಿಸಬಹುದು. ಅಂಗಾಂಶದ ಭಾಗಗಳು ಇನ್ನೂ ಚೆನ್ನಾಗಿ ಬಿಡಿ ಬಿಡಿಯಾಗಿ ಕಾಣುವಂತೆ, ಮಿಣಿದರ್ಶಕದಲ್ಲಿ ಗುರುತಿಸುವಂತೆ, ಹಲವಾರು ಬಣ್ಣವಸ್ತುಗಳಿಂದ ಬಣ್ಣಕಟ್ಟಬಹುದು. ಬದುಕಿರುವಾಗಿನ ಸ್ಥಿತಿಯಲ್ಲಿ ತುಸು ವ್ಯತ್ಯಾಸ ಮಾಡಿದರೂ ಬೇರೆ ಬೇರೆ ಕೂಡುಭಾಗಗಳನ್ನು ತುಂಬ ಸ್ಫುಟವಾಗಿ ತೋರುವುದೇ ಸರಿಯಾದ ಅಂಗಾಂಶಪರೀಕ್ಷೆಯ ವಿಧಾನ. ಈ ಗುರಿ ಮುಟ್ಟುವುದು ಕಷ್ಟ. ಈ ಆದರ್ಶದ ಹತ್ತಿರವಾಗಲೆಂದೇ ಅಂಗಾಂಶಗಳನ್ನು ಸಿದ್ಧಪಡಿಸುವ ವಿಧಾನಗಳು ಲೆಕ್ಕವಿಲ್ಲದಷ್ಟಿವೆ.

**ಜೀವಂತವಿರುವ ಅಂಗಾಂಶಗಳ ಪರೀಕ್ಷೆ :** ಸ್ಥಿರವಾಗಿರುವ ಬಿಂಬಚಿತ್ರಗಳಿಂದ ಒಳಗೆ ಆಗುತ್ತಿರುವ ಕೆಲಸಗಳನ್ನು ಊಹಿಸುವುದು ಕಷ್ಟವಾದ್ದರಿಂದ, ಜೀವಂತ ಅಂಗಾಂಶಗಳನ್ನು ಇದ್ದಲ್ಲಿರುವಂತೆ (ಇನ್ ಸಿಟು) ಪರೀಕ್ಷಿಸುವುದು ಅಂಗಾಂಶಶಾಸ್ತ್ರದ ಮುಖ್ಯ ಭಾಗ. ಕರುಳ್ನಡುಪೊರೆ (ಮೆಸೆಂಟರಿ), ಮುಸುಪೊರೆಗಳಂಥ (ಒಮೆಂಟರ್) ಕೆಲವು ರಸಿಕೆಯ ಪೊರೆಗಳು ಸಾಕಷ್ಟು ದೊಡ್ಡದಾಗಿಸಿ ನೋಡುವಷ್ಟು ತೆಳುವಾಗಿವೆ. ಇದಕ್ಕಾಗಿ ತೇವಗೂಡಿಸಿ, ಮಿಣಿದರ್ಶಕದ ಪೀಠದ ಮೇಲೆ ಮೈಕಾವಿನಷ್ಟರ ಬಿಸಿಯ ಗೂಡಿನಲ್ಲಿ ಇದನ್ನು ಇರಿಸಬೇಕು. ಅದರ ಬಾಲದ ತಿಳಿಯಾದ ತೆಳುಭಾಗಗಳಲ್ಲಿನ ಅಂಗಾಂಶಗಳ ಮಿಣಿದರ್ಶಕಪರೀಕ್ಷೆಗಾಗಿ ಚೊಂದವನ್ನು (ಟ್ಯಾಡ್‌ಪೋಲ್) ಹಲವಾರು ದಿನಗಳು ಇಲ್ಲವೆ ವಾರಗಳ ಗಟ್ಟಲೆ ಸ್ಥಿರವಾಗಿರುವ ವಿಧಾನಗಳಿವೆ. ಮೊಲದ ಕಿವಿಯಲ್ಲಿ ಶಾಶ್ವತವಾಗಿ ತಿಳಿಯಾದ ಗೂಡುಗಳನ್ನು ಇರಿಸಬಹುದು. ಇಂಥ ವಿಧಾನಗಳ ನೆರವಿಂದ, ಲೋಮನಾಳಗಳಲ್ಲಿನ ರಕ್ತದ ಹರಿವು, ರಕ್ತನಾಳಗಳ ನರಗಳ ಬೆಳೆತ, ಸ್ನಾಯುಕೊಬ್ಬಿನಂಗಾಂಶಗಳಂಥವುಗಳ ಬೆಳವಣಿಗೆಯೇ ಮೊದಲಾದ ಬೇರೆಬೇರೆ ವಿಷಯಗಳ ಕಣ್ಣರಿಕೆ ಆಗಿದೆ. ಪ್ರಯೋಗದ ಪ್ರಾಣಿಗಳ ಕಣ್ಣಿನ ಮುಂದಿನ ಅರೆಯೊಳಗೆ ಕೆಲವು ಅಂಗಾಂಶಗಳನ್ನು ಬದಲಿ ನೆಟ್ಟು ತಿಳಿಯಾಗಿರುವ ಕೋಡುಪೊರೆ (ಕಾರ್ನಿಯ) ಮೂಲಕ ನೇರವಾಗಿ ಹೊರಗಿನಿಂದಲೇ ನೋಡುತ್ತಿರಬಹುದು. ರಕ್ತನಾಳಗಳಿರುವ ಉದ್ದನೆಯ ಕಾಂಡಗಳಿರುವ ಚಲಿಸುವ ಅಂಗಗಳನ್ನು ಸಾಕಷ್ಟು ಬೆಳಕಿಗಾಗೂ ಸೂಕ್ಷ್ಮದರ್ಶಕಪರೀಕ್ಷೆಗಾಗೂ ತತ್ಕಾಲಕ್ಕೆ ಮೈ ಹೊರಕ್ಕೆ ತರಬಹುದು. ಈ ರೀತಿಯಲ್ಲಿ ನೋಡಿದ್ದರಿಂದ ತೊರಳೆಯಲ್ಲಿ (ಪ್ಲೀಹ) ರಕ್ತ ಸುತ್ತಾಡುವುದು ಅರ್ಥವಾಯಿತು; ಮಾಂಸಲಿಯ (ಮೇದೋಜೀರಕಾಂಗ) ಜೀವಕೋಶಗಳಿಂದ ರಸ ಹೊರಬರುವುದು ಕಂಡಿತು; ಹೊರತಂದ ಅಂಡಾಂಶಯಗಳಲ್ಲಿ ಅಂಡಾಣು ನೆರೆವ ಕೆಲಸಗತಿಯ ಚಲನ ಚಿತ್ರಗಳನ್ನು ತೆಗೆಯಲಾಗಿದೆ. ಜೀವಂತವಿರುವ ಜೀವಿಗಳನ್ನು ಪರೀಕ್ಷಿಸುವ ಈ ಹಲವಾರು ವಿಧಾನಗಳಿಂದ ಇನ್ನಾವ ಬಗೆಯಿಂದಲೂ ಸಿಗದಷ್ಟು ವಿಚಾರಗಳು ಬೆಳಕಿಗೆ ಬಂದಿವೆ.

**ಅಂಗಾಂಶ ಮತ್ತು ಅಂಗಾಂಶಕೃಷಿ (ವ್ಯವಸಾಯ):** ಉಭಯಚರಿಗಳ ಮರಿ ಹುಳುಗಳ (ಲಾರ್ವಲ್ ಆಂಫಿಬಿಯನ್ಸ್) ನರದ ಜೀವಕೋಶಗಳು ಸರಿಯಾದ ಸಹಜ ನಡುವರ್ತಿಗಳಿದ್ದಲ್ಲಿ ಮೈ ಹೊರಗೂ ಬದುಕುಳಿದು, ನಿಜಗೆಲಸದಲ್ಲಿದ್ದು, ಗುಣಿತವಾಗುತ್ತವೆಂದು ರಾಸ್ ಹ್ಯಾರಿಸನ್ (1907) ತೋರಿಸಿದಾಗ ಅಂಗಾಂಶ ಕೃಷಿ (ಟಿಷ್ಯೂಕಲ್ಚರ್) ಹುಟ್ಟಿಕೊಂಡಿತು. ಅಲ್ಲಿಂದೀಚೆಗೆ, ಮೈಯಲ್ಲಿನ ಬಹುಮಟ್ಟಿಗೆ ಎಲ್ಲ ಜೀವಕೋಶಗಳ ಮಾದರಿಗಳನ್ನೂ ಗಾಜುನಳಿಕೆಯಲ್ಲಿ (ಇನ್ ವಿಟ್ರೊ) ಬೆಳೆಸಲು ಯತ್ನಗಳಾಗಿವೆ. ಈ ದಿಸೆಯ ತಾಂತ್ರಿಕ ಮುನ್ನಡೆಗಳಿಂದ ಒಂಟಿ ಜೀವಕೋಶಗಳಿಂದ ಬೀಜತಳಿಗಳನ್ನು (ಕ್ಲೋನ್ಸ್) ಬೆಳೆಸಲೂ ಗೊತ್ತಾದ ರಾಸಾಯನಿಕಗಳಿರುವ ಕೃಷಿ ಮಾಧ್ಯಮಗಳಲ್ಲಿ (ಕಲ್ಚರ್ ಮೀಡಿಯ) ಕೆಲವು ಅಚ್ಚ ಜೀವಕೋಶ ತಳಿಗಳನ್ನು ಬೆಳೆಸುವುದೂ ಸಾಧ್ಯವೆನಿಸಿದೆ. ಬೇರೆ ತೆಗೆದ ಈ ಜೀವಕೋಶಗಳು ತಳಿಪಾತ್ರೆಯ ಗಾಜಿನ ಮೇಲ್ಮೈಗೆ ಅಂಟಿ ಚಪ್ಪಟೆಯಾಗಿರುವುದರಿಂದ ವಿಶೇಷವಾಗಿ ಜೀವಕೋಶದ ಕಣ್ಣರಿಕೆಗೂ ಮಿಣಿಕೈವಾಡಿಕೆಗೂ ಅನುಕೂಲಿಸುತ್ತವೆ. ಜೀವಕೋಶದ ಒಳಭಾಗಗಳ ಓಸರಿಕ ಸೂಚ್ಯಂಕದಲ್ಲಿನ ವ್ಯತ್ಯಾಸಗಳನ್ನು ಕಡುಪಿನ (ಇನ್ಟೆನ್ಸಿಟಿ) ವ್ಯತ್ಯಾಸಗಳಾಗಿ ಮಾರ್ಪಡಿಸುವ ಸಾಧನ ಸರಿಹಂತ ಬೇರೆಗಾಣಿಕ (ಫೇಸ್ ಕಾನ್ಟ್ರಾಸ್ಟ್) ಸೂಕ್ಷ್ಮದರ್ಶಕ. ಇದರಿಂದ ಸಾಯಿಸಿ

ಬಣ್ಣ ಹಾಕಿದ ತಯಾರಿಕೆಗಳಷ್ಟೇ ಚೆನ್ನಾಗಿ ಬದುಕಿರುವ ಜೀವಕೋಶಗಳ ಜೀವಕಣಾಂಗಗಳನ್ನು (ಆರ್ಗನೆಲ್ಲೆ) ನೋಡಬಹುದು. ಅವುಗಳ ನಡೆವಳಿಕೆಯನ್ನು ಚಲನಚಿತ್ರಗಳಲ್ಲಿ ಚಿತ್ರಿಸಬಹುದು.

ಪಿಂಡದಲ್ಲಿನ ಅಂಗದ ಅಂಕುರಾಂಗಗಳನ್ನು ಹೊರಗೆ ಅಂಗತಳಿಯೆಬ್ಬಿಸಿದರೆ, ಆ ತಳಿಗಳು ಬೆಳೆಯುತ್ತಲೇ ಇರುವುವಲ್ಲದೆ, ಗಾಜು ನಳಿಕೆಗಳಲ್ಲೂ ಭೇದಗಾಣಿಸುತ್ತವೆ. ಅಂಥ ತಯಾರಿಕೆಗಳು ನೇರವಾದ ಕಣ್ಣರಿಕೆಗೆ ಬಹಳ ದಪ್ಪವಾಗಿದ್ದರೂ ಅವನ್ನು ನೆಲೆಗೊಳಿಸಿ ಅಂಗಾಂಶದ ಕೊಯ್ತಗಳಲ್ಲಿ ನೋಡಬಹುದು. ಇಡೀ ಜೀವಿಯ ಸಮ್ಮಿಶ್ರ ಆವರಣದಿಂದ ಅಂಥ ಅಂಕುರಾಂಗಗಳನ್ನು ಬೇರೆ ತೆಗೆವುದರಿಂದ, ಭೇದಗಾಣಿಕೆಯನ್ನು ಹತೋಟಿಯಲ್ಲಿಡುವ ಅಂಶಗಳ ಬಿಡಿಪರೀಕ್ಷೆಯಲ್ಲಿ ನೆರವಾಗುವುದು (**ನೋಡಿ– ಅಂಗಾಂಶ ವ್ಯವಸಾಯ**).

**ಬಳಿತಗಳು (ಸ್ಮೀಯರ್ಸ್) :** ರಕ್ತದ ಅಲ್ಲದೆ ಮೈಯ ಬೇರೆಬೇರೆ ದ್ರವಗಳಲ್ಲಿರುವ ಜೀವಕೋಶಗಳನ್ನು ತೆಳುಪೊರೆಯಾಗಿ ಹರಡಿ, ಹಸಿಯದನ್ನೋ ಕಚ್ಚಿಸಿ ಬಣ್ಣ ಹಾಕಿಯೋ ಪರೀಕ್ಷಿಸಬಹುದು. ರೋಗಿ ರಕ್ತಪರೀಕ್ಷೆಯಲ್ಲೂ ಏಡಿಗಂತಿಯ ನಿಧಾನಕ್ಕಾಗಿ ಯೋನಿಯ ಬಳಿತಗಳು, ಉಗುಳು ಮತ್ತಿತರ ಮೈಯಲ್ಲಿನ ದ್ರವಗಳ ಸಾಲುಪರೀಕ್ಷೆಯಲ್ಲೂ ಈ ವಿಧಾನ ಬಹಳ ಬೆಲೆಯುಳ್ಳದ್ದು.

**ಜೀವಾಳದ ಬಣ್ಣ ಕಟ್ಟು :** ಅಷ್ಟಾಗಿ ವಿಷವಲ್ಲದ ಕೆಲವು ಬಣ್ಣಗಳನ್ನು ಬದುಕಿರುವ ಜೀವಿಗಳೊಳಕ್ಕೆ ಚುಚ್ಚಿ ಹೊಗಿಸಬಹುದು. (ಜೀವಾಳದ ಬಣ್ಣಕಟ್ಟು–ವೈಟಲ್ ಸ್ಟೇನಿಂಗ್), ಇಲ್ಲವೇ ಮೈಯಿಂದ ಆಗ ತಾನೇ ಹೊರತೆಗೆದರೂ ಬದುಕುಳಿದಿರುವ ಜೀವಕೋಶಗಳು, ಅಂಗಾಂಶಗಳಿಗೆ ಬಣ್ಣ ಕಟ್ಟಿದಾಗ (ಜೀವಿಮೇಲಿನ–ಸೂಪ್ರವೈಟಲ್ ಬಣ್ಣಕಟ್ಟು) ಕೆಲವು ಜೀವಕೋಶಗಳೋ ಅಂಗಾಂಶದ ಒಳಭಾಗಗಳೋ ಬಣ್ಣಗಳನ್ನು ಆರಿಸಿ ತೆಗೆದುಕೊಳ್ಳುತ್ತವೆ. ಜೀವಕೋಶಗಳ ತೀನಿಕಣದ (ಫ್ಯಾಗೊಸೈಟ್) ಆಳವನ್ನು ಅಳೆಯಲೋ ಜೀವಕಣಗಳ ಆಮೇಲಿನ ಚಲನೆಯನ್ನು ಗುರುತಿಸುವಂತೆ ಅವಕ್ಕೆ ಬಣ್ಣ ಹತ್ತಿಸಲೋ ಈ ವಿಧಾನವನ್ನು ಬಳಸಬಹುದು.

**ಸಾಯಿಗಟ್ಟಿಸಿದ ಅಂಗಾಂಶಗಳ ಪರೀಕ್ಷೆ:** ಕಣ್ಣೋಟದ ಸೂಕ್ಷ್ಮದರ್ಶಕದಲ್ಲಿ ಸರಿಯಾಗಿ ಪರೀಕ್ಷಿಸಲು (1500ರಷ್ಟು ವ್ಯಾಸದವರೆಗೆ) ಅಂಗಾಂಶಗಳನ್ನು ರಾಸಾಯನಿಕ ಸಾಯಿಗಟ್ಟಿಕೆಯಿಂದಲೋ ಗಡುಸಾಗಿಸಿಯೋ ಹುಗಿಸಿ ತೆಳುಪದರವಾಗಿ ಕೊಯ್ದು ಬಣ್ಣ ಕಟ್ಟಿ, ಜಾರುಗಾಜು ಮುಚ್ಚುಗಾಜುಗಳ (ಸ್ಲೈಡ್ಸ್, ಕವರ್ ಗ್ಲಾಸಸ್) ನಡುವೆ ಇರಿಸಬೇಕು. ಸಾಯಿಗಟ್ಟಿಸುವ ದ್ರವದ ಉದ್ದೇಶ ಅಂಗಾಂಶವನ್ನು ಬೇಗನೆ ಸಾಯಿಸಿ ಸಾಧ್ಯವಾದ ಮಟ್ಟಿಗೆ ಬದುಕಿದ್ದ ಸ್ಥಿತಿಯಲ್ಲಿದ್ದಂತೆ ಉಳಿಸಿರಿಸುವುದೇ. ಸಾಕಷ್ಟು ತೆಳುವಾದ ತಯಾರಿಕೆಗಳನ್ನು ಪಡೆಯಲು ಸಾಯಿಗಟ್ಟಿಸಿದ ಅಂಗಾಂಶದೊಳಗೆ ಒಲ್ಲದೆಣ್ಣೆಯನ್ನೋ (ಪ್ಯಾರಾಫಿನ್) ಸೆಲ್ಲಾಯ್ಡಿನ್ನನ್ನೋ ಒಳತೂರಿಸಿ, ತೀರ ತೆಳುವಾಗಿ ಕರಾರುವಾಕಾಗಿ ಕತ್ತರಿಸುವ ಮಿಣಿಗತ್ತರಿಯಿಂದ (ಮೈಕ್ರೊಟೋಮ್) ಮಿಲಿಮೀಟರಿನ ಕೆಲವು ಸಾವಿರಾಂಶದಷ್ಟು ತೆಳವಾಗಿ ಕತ್ತರಿಸಬೇಕು. ಹೆಚ್ಚೂಕಡಿಮೆ ಆರಿಸಿದಂತೆ ಬೇರೆ ಬೇರೆ ಅಂಗಾಂಶಗಳ ಒಳಭಾಗಗಳಿಗೆ ಬಣ್ಣಹತ್ತಿಸುವ ಅನಿಲೀನ್ ಬಣ್ಣಗಳ ಅನೇಕಾನೇಕ ಬೆರಕೆಗಳಿಂದ ಆಮೇಲೆ ಈ ಕೊಯ್ತಗಳಿಗೆ ಬಣ್ಣ ಕಟ್ಟಬಹುದು. ಅಂಗಾಂಶದ ಪರೀಕ್ಷೆಯಲ್ಲಿ ಎಷ್ಟೋ ಕಾಲದಿಂದಲೂ ಇದೇ ಮುಖ್ಯವಾದ ವಿಧಾನ. ಅಂಗಾಂಶದ ರಚನೆಯಲ್ಲಿ ಗೊತ್ತಿರುವ ವಿಚಾರಗಳಲ್ಲಿ ಬಹುಪಾಲು ಈ ತೆರನಾಗಿ ತಯಾರಿಸಿದ ಕೊಯ್ತಗಳನ್ನು ಅಭ್ಯಸಿಸಿದ್ದರಿಂದ ನಮಗೆ ದೊರೆತಿವೆ. ಅಂಗಾಂಶದ ಒಳವಸ್ತುಗಳು ಒಂದಕ್ಕೊಂದು ಚೆನ್ನಾಗಿ ಬೇರೆಯಾಗಿ ಕಾಣುವ ಅವುಗಳ ಅಳವಿನ ಮೇಲಿನ ಕೇವಲ ಅನುಭವದಿಂದ ಸಾಮಾನ್ಯವಾಗಿ ಬಳಸುವ ಬಣ್ಣಗಟ್ಟುವ ವಿಧಾನಗಳು ಹುಟ್ಟಿಕೊಂಡುವು. ಇದರಿಂದ ತುಂಬ ಸೂಕ್ಷ್ಮಗಾತ್ರದ ರಚನೆಯ ವಿವರಗಳನ್ನೂ ತಿಳಿಯಲು ಸೂಕ್ಷ್ಮದರ್ಶಕಿಗೆ ಅನುಕೂಲವಾಯಿತು. ಬಣ್ಣ ಹತ್ತಿಸಿಕೊಂಡ ಪದಾರ್ಥಗಳ ರಾಸಾಯನಿಕ ಗುಣಗಳನ್ನು ಆ ಬಣ್ಣಗಳು ಎಂದಿಗೂ ಸೂಚಿಸುತ್ತಿರಲಿಲ್ಲ. ಶಸ್ತ್ರಕ್ರಿಯೆ ಆಗುತ್ತಿರುವಾಗ ಒಂದು ಅಂಗಾಂಶದ ಚೂರಿನಲ್ಲಿ ರೋಗವಿದೆಯೋ ಇಲ್ಲವೋ ಯಾವ ರೋಗ ಇರಬಹುದು–ಇವೆಲ್ಲವನ್ನೂ ಕೆಲವೇ ನಿಮಿಷಗಳಲ್ಲಿ ಖಚಿತವಾಗಿ ತಿಳಿಯಲು ಅಂಗಾಂಶಗಳನ್ನು ಸರಕ್ಕನೆ ನೀರ್ಗಲ್ಲಾಗಿಸಿ ಗಡುಸುಗಟ್ಟಿಸಬಹುದು. ರೋಗಿಯಲ್ಲಿರುವ ಯಾವುದಾದರೂ ಅನುಮಾನ ಇರುವ ಬೆಳೆತದಿಂದ ಸಣ್ಣ ಚೂರನ್ನು ಪರೀಕ್ಷೆಗಾಗಿ ಕೊಯ್ದು ತೆಗೆದುಕೊಳ್ಳುವ, ಜೀವುಂಡಿಗೆಯ (ಬಯಾಪ್ಸಿ) ಪದಾರ್ಥವನ್ನು ಹಲವೇಳೆ ಹೀಗೆ ಮಾಡುವುದುಂಟು. ನೀರ್ಗಲ್ಲಾಗಿಸಿದ ಚೂರನ್ನು ನೀರ್ಗಲ್ಲಾಗಿಸುವ ಮಿಣಿಗತ್ತರಿಯಿಂದ ಕತ್ತರಿಸಬಹುದು.

**ಅಂಗಾಂಶ ರಸಾಯನಶಾಸ್ತ್ರ :** ಅಂಗಾಂಶಗಳೂ ಜೀವಕೋಶಗಳ ಒಳವಸ್ತುಗಳೂ ಒಳಗೆ ಇರುವ ಹಾಗೇ ಇದ್ದೆಡೆಯಲ್ಲೇ ರಾಸಾಯನಿಕ ಲಕ್ಷಣಗಳನ್ನು ಗುರುತಿಸಲು ವಿಶೇಷ ತಂತ್ರಗಳು ಹುಟ್ಟಿವೆ. ಇವುಗಳಲ್ಲಿ ಕೆಲವಂತೂ ಭೌತಿಕ ವಿಧಾನಗಳು: ನ್ಯೂಕ್ಲಿಯೋ ಪ್ರೋಟೀನುಗಳು ಇರುವೆಡೆ ನಿರ್ಧರಿಸಲೂ ಗುರುತಿಸಲೂ ಇರುವ ತೀರದ ನೇರಿಳೆ ಹೀರಿಕೆ; ಸಾಮಾನ್ಯ ಸೂಕ್ಷ್ಮದರ್ಶಕದ ಬಿಡಿಸುವ ಮಿತಿಗಳಿಗೂ ಮಿಗಿಲಾಗಿ ಜೋಡಣೆಯಾಗಿರುವ ತೋರಾಣುಗಳ (ಮ್ಯಾಕ್ರೊಮಾಲಿಕ್ಯೂಲ್ಸ್) ಸೆಲೆ ಹಿಡಿಯಲು ಧ್ರುವೀಕರಿಸಿದ ಬೆಳಕು; ವಿಶೇಷ ಪ್ರೋಟೀನುಗಳನ್ನೋ ಬಹುಶರ್ಕರಲವಣಗಳನ್ನೋ (ಪಾಲಿಸ್ಯಾಕರೈಡ್ಸ್) ಇರುವೆಡೆ ನಿರ್ಧರಿಸಲು ಸೂಸುಮಿರುಗಿಗೆ (ಫ್ಲೂರೋಸಿಯೇನ್) ಅಂಟಿದ ರೋಧವಸ್ತುಗಳು (ಆಂಟಿ–ಬಾಡೀಸ್) ಸೂಸುಮಿರುಗಣೆಯ (ಫ್ಲೂರೊಸೆಂಟ್) ಮಿಣಿದರ್ಶನ; ತಗುಲಿಸಿದ (ಟ್ಯಾಗ್ಡ್) ಅಣುಗಳು ಇರುವೆಡೆಗಳನ್ನು ತಿಳಿಸುವ ವಿಕಿರಣ ಸಮರೂಪಿಗಳು (ರೇಡಿಯೊ ಐಸೊಟೋಪ್ಸ್), ತನ್ವಿಕಿರಣಚಿತ್ರಣ (ರೇಡಿಯೊ ಆಟೊಗ್ರಫಿ), ರಾಸಾಯನಿಕ ವಿಧಾನಗಳು ಅನೇಕವಾಗಿವೆ; ಗೊತ್ತಾದ ಕೆಲವು ಕೊಬ್ಬುಗಳಲ್ಲಿ ಕರಗುವ ಬಣ್ಣಗಳನ್ನು ಆರಿಸಿಕೊಳ್ಳುವುದರಿಂದ ಕೆಲವು ಕೊಬ್ಬಿನ ಲವಣಗಳನ್ನು ಗುರುತಿಸುವಿಕೆ; ಅವುಗಳ ಜಲವಿಶ್ಲೇಷಣೆ (ಹೈಡ್ರೊಲಿಸಿಸ್) ಇಲ್ಲವೆ ಆಮ್ಲಜನಕಗೂಡಿಕೆಯಿಂದ ಬರುವ ಉತ್ಪನ್ನಗಳೊಂದಿಗೆ ಬಣ್ಣದ ವಸ್ತುವಾಗಿಸುವ ಪತ್ತೆಕಾರಕಗಳಿಂದ (ರಿಯೇಜೆಂಟ್ಸ್) ಡಿಯಾಕ್ಸಿರೈಬೋನ್ಯೂಕ್ಲಿಯೊಪ್ರೋಟೀನೋ ಬಹುಶರ್ಕರಲವಣಗಳೋ ಇರುವೆಡೆಗಳನ್ನು ತಿಳಿಯುವಿಕೆ. ಹೀಗೆ ಬೇರೆ ಬೇರೆ ಕಿಣ್ವಗಳನ್ನು (ಎನ್‌ಜೈಮ್ಸ್) ಅವುಗಳ ರಾಸಾಯನಿಕ ಪ್ರತಿಕ್ರಿಯೆಗಳಿಂದಾದ ಉತ್ಪನ್ನಗಳಿಂದ ಗುರುತಿಸುವ ವಿಧಾನಗಳೂ ಇವೆ.

ಜೀವರಸಾಯನಶಾಸ್ತ್ರಕ್ಕೂ ಅಂಗಾಂಶಶಾಸ್ತ್ರಕ್ಕೂ ವ್ಯತ್ಯಾಸಗಳಿವೆ. ಅಂಗಾಂಶಗಳ ರಚನೆಯಲ್ಲಿ ರಾಸಾಯನಿಕ ಸಂಯುಕ್ತಗಳು ಇರುವೆಡೆಯನ್ನು ಅಂಗಾಂಶಶಾಸ್ತ್ರ ಒತ್ತಿ ಹೇಳುತ್ತದೆ. ಅಂಗಾಂಶವನ್ನು ಒಡೆದು ಪರೀಕ್ಷಿಸುವುದರಿಂದ ಗೊತ್ತಾಗುವುದಕ್ಕಿಂತಲೂ ಹೆಚ್ಚಿನ ವಿಚಾರಗಳನ್ನು ಇದು ತೋರಿಸಿಕೊಡುತ್ತದೆ.

**ಅಂಗಾಂಶಗಳ ಎಲೆಕ್ಟ್ರಾನ್ ಮಿಣಿದರ್ಶಕದ ಪರೀಕ್ಷೆ:** ಕಣ್ಣೋಟದ ಸೂಕ್ಷ್ಮದರ್ಶಕದಲ್ಲೂ ಕಾಣದಿರುವ ಅಂಗಾಂಶದ ರಚನೆಯ ವಿವರಗಳನ್ನು ಈಗ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನೋಡಬಹುದು. ಇದು ಈಗ 2 ಲಕ್ಷ ವ್ಯಾಸಗಳಿಗೂ ಮೀರಿದಷ್ಟು ದೊಡ್ಡದಾಗಿಸಿ ತೋರುವುದು. 15 ಅಂಗ್‌ಸ್ಟ್ರಾಂ (ಮಿಲಿಮೀಟರಿನ ಕೋಟಿಯಂಶ) ಒಮ್ಮಾನಗಳಷ್ಟು ದೂರದಲ್ಲಿರುವ ವಸ್ತುಗಳನ್ನು ಕೂಡ ಬಿಡಿಯಾಗಿ ತೋರುವ ಬಲ ಇದಕ್ಕಿದೆ. ಬದುಕಿರುವ ಜೀವಿಗಳ ಪರೀಕ್ಷೆ ಈ ಪರಿಕರದಿಂದ ಆಗದು. ಇದಕ್ಕಾಗಿ ಅಂಗಾಂಶವನ್ನು ಸಾಯಿಗಟ್ಟಿಸಿ, ನೀರ್ಗಳೆದು, ಅಕ್ರಿಲಿಕ್ ಪ್ಲಾಸ್ಟಿಕ್ಕಿನಲ್ಲೋ ಈಪಾಕ್ಸಿ ರಾಳದಲ್ಲೋ ಹುದುಗಿಸಿಟ್ಟು, ಮಿಲಿಮೀಟರಿನ 10,000 ಪಾಲಿಗಿಂತಲೂ ತೆಳುವಿನ ಕೊಯ್ತಗಳಾಗಿ ಗಾಜಿನ ಇಲ್ಲವೇ ವಜ್ರದ ಚಾಕುವಿನಿಂದ ಕತ್ತರಿಸಬೇಕು. ಈ ಕೊಯ್ತಗಳನ್ನು ನೇರವಾಗೋ ಭಾರದ ಲೋಹಗಳನ್ನು ಬಳಿದೋ ಪರೀಕ್ಷಿಸಬಹುದು. ತೋರಾಣುಗಳ ಸಣ್ಣ ಗಾತ್ರದಷ್ಟು ವಿವರಗಳನ್ನು ಜೀವಕೋಶ ಮತ್ತು ಅಂಗಾಂಶದ ರಚನೆಯಲ್ಲಿ ತೋರುವಂತೆ ನಿಖರವಾಗಿರುವಂತೆ ಚಿತ್ರಗಳನ್ನೂ ತೆಗೆದಿಡಬಹುದು.

**ಅಂಗಾಂಶರೋಗಶಾಸ್ತ್ರ:** ಮೇಲೆ ಹೇಳಿದಂತೆ ಬೇರೆ ಬೇರೆ ವಿಧಾನಗಳ ಬಳಕೆಯಿಂದ ಅಂಗಾಂಶಗಳ ಸಹಜವಾದ ಸೂಕ್ಷ್ಮದರ್ಶಕದ ರಚನೆಯನ್ನು ಚೆನ್ನಾಗಿ ತಿಳಿಸುವ ಮೂಲವಿಜ್ಞಾನ ಅಂಗಾಂಶಶಾಸ್ತ್ರ. ಇನ್ನೊಂದೆಡೆಯಲ್ಲಿ ಅಂಗಾಂಶ ರೋಗಶಾಸ್ತ್ರ (ಹಿಸ್ಟೊಪ್ಯಾಥಾಲಜಿ) ಎಂದರೆ, ರೋಗದ ತಿಳಿವಿಗಾಗಿ ಇವೇ ವಿಧಾನಗಳಲ್ಲಿ ಅನೇಕವನ್ನು ಅಳವಡಿಸುವ ಶಾಸ್ತ್ರ ಅಂಗಾಂಶಗಳಲ್ಲಿನ ರಚನೆಯ ಬದಲಾವಣೆಗಳನ್ನು ಪರೀಕ್ಷಿಸುವುದರಿಂದ, ರೋಗಿಯಲ್ಲಿ ರೋಗವನ್ನು ತೋರುವ ಲಕ್ಷಣಗಳ, ನಿಜಗೆಲಸಗಳ ಏರುಪೇರುಗಳನ್ನು ಸೂಕ್ಷ್ಮದರ್ಶಕದಲ್ಲಿ ಕಂಡ ಅಂಗಾಂಶಗಳಿಗೆ ಸಂಬಂಧ ಕಲ್ಪಿಸಲು ರೋಗಶಾಸ್ತ್ರಜ್ಞ ಯತ್ನಿಸುವನು. ಅಂಗಾಂಶಗಳ ಸಹಜವಾದ ರಚನೆಯ ತಿಳಿವಳಿಕೆ, ಅಂಗಾಂಶಶಾಸ್ತ್ರಜ್ಞ ಗೊತ್ತುಮಾಡಿದ ಅವುಗಳಲ್ಲಿನ ನಿಜಗೆಲಸಗಳ ಏರುಪೇರುಗಳ ಇತಿಮಿತಿ (ರೇಂಜ್)–ಇವುಗಳ ಮೇಲೆ ರೋಗಶಾಸ್ತ್ರಜ್ಞ ತನ್ನ ಅಭಿಪ್ರಾಯ ಸೂಚಿಸುವನು.

**(ಯು.ಆರ್.)**

**ಅಂಗಾಂಶಶಾಸ್ತ್ರ (ಸಸ್ಯಗಳಲ್ಲಿ) :** ಸಸ್ಯದೇಹದ ವಿವಿಧ ಅಂಗಾಂಗಗಳು ವಿವಿಧರೀತಿಯ ಅಂಗಾಂಶಗಳಿಂದ ರಚಿಸಲ್ಪಟ್ಟಿವೆ. ಪ್ರತಿ ಅಂಗಾಂಶವೂ ತನ್ನದೇ ಆದ ಉತ್ಪತ್ತಿಸ್ಥಿತಿ ಕೋಶರಚನೆ ಮತ್ತು ಕಾರ್ಯನಿರ್ವಹಣೆಗಳನ್ನು ಹೊಂದಿದೆ. ಒಂದೇ ರೀತಿಯ ಕೋಶಗಳಿಂದ ಕೂಡಿರುವುದಕ್ಕೆ ಸಾಮಾನ್ಯ ಅಂಗಾಂಶವೆಂತಲೂ ವಿವಿಧ ರೀತಿಯ ಕೋಶಗಳಿಂದಾದ ಅಂಗಾಂಶಕ್ಕೆ ಸಂಯುಕ್ತ ಅಂಗಾಂಶವೆಂತಲೂ ಹೆಸರು. ಸಸ್ಯದೇಹರಚನೆಯಲ್ಲಿ ಕಾಣಬರುವ ಅನೇಕ ಸಾಮಾನ್ಯ ಮತ್ತು ಸಂಯುಕ್ತ ಅಂಗಾಂಶಗಳ ವರ್ಗೀಕರಣದಲ್ಲಿ ಎರಡು ವಿಧಗಳಿದ್ದು, 1875ರಲ್ಲಿ ಸ್ಯಾಕ್ಸ್ ಎಂಬ ಅಂಗರಚನಾಶಾಸ್ತ್ರಜ್ಞನು ಹೊರಚರ್ಮಪದರಭಾಗಗಳು, ಅಂತರಗುಚ್ಛಅಂಗಾಂಶಗಳು, ಮತ್ತು ಮೂಲಅಂಗಾಂಶಗಳು ಎಂದು ಅವನ್ನು ಮೂರು ಗುಂಪುಗಳಾಗಿ ವಿಂಗಡಿಸಿದ್ದಾನೆ. ಆದರೆ ಕೋಶಗಳ ಮತ್ತು ಅಂಗಾಂಶಗಳ ನಿಶ್ಚಿತಗುಣವಿಮರ್ಶೆಗಳಿಂದ ಈ ವರ್ಗೀಕರಣವನ್ನು ಅನೇಕ ವಿಜ್ಞಾನಿಗಳು ಒಪ್ಪುವುದಿಲ್ಲ. ರಚನೆ ಮತ್ತು ಕಾರ್ಯನಿರ್ವಹಣೆಗಳಿಗೆ ಅನುಸಾರವಾಗಿ ಹೇಬರ್‌ಲ್ಯಾಂಟ್ ಎಂಬ ವಿಜ್ಞಾನಿ, ಸಸ್ಯ ಅಂಗಾಂಶಗಳನ್ನು ರೂಪುಗೊಳ್ಳುತ್ತಿರುವ ವಿಭಜನಶಕ್ತಅಂಗಾಂಶಗಳು ಮತ್ತು ಸ್ಥಿರಅಂಗಾಂಶಗಳು ಎಂದು ವರ್ಗೀಕರಣ ಮಾಡಿದ್ದಾನೆ. ಹಲವು ಅಂಶಗಳಲ್ಲಿ, ಈ ವರ್ಗೀಕರಣ ಸರಿ ಕಾಣದಿದ್ದರೂ ಇದನ್ನೇ ಹೆಚ್ಚಾಗಿ ಬಳಸುವುದುಂಟು.

**ವಿಭಜನಶಕ್ತ ಅಂಗಾಂಶಗಳು (ಮೆರಿಸ್ಟಮ್ಯಾಟಿಕ್ ಟಿಶ್ಯೂಸ್) :** ಕಾಂಡದ ತುದಿ, ಬೇರುತುದಿ, ಮತ್ತು ಪಾರ್ಶ್ವಕಾಂಡದ ತುದಿ–ಈ ಭಾಗಗಳಲ್ಲಿ ಕಂಡುಬರುವ ಕೋಶಸಮೂಹಗಳಿಗೆ ಅಗ್ರಸ್ಥ ವಿಭಜನಅಂಗಾಂಶಗಳು ಎಂದೂ ಪಾರ್ಶ್ವಭಾಗಗಳಲ್ಲಿ ಕಂಡುಬರುವ ವಿಭಜನ ಅಂಗಾಂಶಗಳಿಗೆ, ಆನುಷಂಗಿಕ ವಿಭಜನ ಅಂಗಾಂಶಗಳು




ಅಂಗಾಂಶ (ಸಸ್ಯಗಳಲ್ಲಿ)

1. ಪೇರೆಂಖೈಮ
2. ಕಾಲೆಂಖೈಮ
3. ನೀರ್ನಾಳ ಅಂಗಾಂಶ (ಜೈಲಮ್)
4. ಎಲೆಯ ಒಂದು ಭಾಗ (ಹೊರಮೈ ಚರ್ಮ ಅಂಗಾಂಶ)
5. ಸ್ಕ್ಲೇರೆಂಖೈಮ
6. ಸ್ಕ್ಲೀರಿಡ್ಸ್
7. ಏಕದಳ ಸಸ್ಯದ ನಾಳಕೂರ್ಚ
8. ಕಾಂಡದ ತುದಿ
9. ರಸನಾಳ ಅಂಗಾಂಶ (ಪ್ಲೋಯೆಂ)
10. ರಸನಾಳ
11. ಬೇರು ತುದಿ
12. ಬೇರಿನ ವಾಹಕ
13. ದ್ವಿದಳ ಸಸ್ಯದ ನಾಳಕೂರ್ಚ
14. ಹಾಲ್ಗರೆಯುವ ಅಂಗಾಂಶ

ಎಂದೂ ಹೆಸರು. ಅಗ್ರಸ್ಥ (ಏಪಿಕ್ನಲ್ ಸೆಕೆಂಡರಿ) ಅಂಗಾಂಶಗಳು ಭ್ರೂಣದ ಮೂಲ ವಿಭಜನೆಗಳಿಂದ ಉತ್ಪತ್ತಿಯಾಗುವುದರಿಂದ ಅವುಗಳನ್ನು ಪ್ರಾಥಮಿಕ (ಪ್ರೈಮರಿ) ಅಂಗಾಂಶಗಳು ಎಂದೂ ಆನುಷಂಗಿಕ ಅಂಗಾಂಶಗಳು ಪಾರ್ಶ್ವಸ್ಥಾನಗಳಲ್ಲಿ ಉದ್ಭವಿಸುವುದರಿಂದ ಅವುಗಳಿಗೆ ಪಾರ್ಶ್ವಸ್ಥಿತ (ಲ್ಯಾಟರಲ್) ಅಂಗಾಂಶಗಳು ಎಂದೂ ಕರೆಯುತ್ತಾರೆ. ಮೂಲ ಅಂಗಾಂಶಗಳ ವಿಭಜನೆಯಿಂದ ಆನುಷಂಗಿಕ ಅಂಗಾಂಶಗಳು ಉತ್ಪತ್ತಿಯಾಗುವುವು. ವಿಭಜನಶಕ್ತಅಂಗಾಂಶಗಳ ಕೋಶಗಳು ವೃತ್ತಾಕಾರ ಅಥವಾ ಬಹುಕೋನಾಕಾರವಾಗಿರುತ್ತವೆ; ಅವುಗಳ ಮಧ್ಯೆ ಸ್ಥಳಾವಕಾಶಗಳಿರುವುದಿಲ್ಲ; ಈ ಕೋಶಗಳು ವಿಪುಲಜೀವದ್ರವಯುಕ್ತವಾದ ನ್ಯೂಕ್ಲಿಯಸ್ ಮತ್ತು ಕಡಿಮೆ ಕುಹರದ್ರವಗಳನ್ನು ಹೊಂದಿರುವ ಜೀವಕೋಶಗಳಾಗಿರುವುವು.

ಬೇರು ಮತ್ತು ಕಾಂಡಗಳ ತುದಿಗಳಲ್ಲಿ ಮೂಲ (ಪ್ರೋ) ವಿಭಜನಶಕ್ತಅಂಗಾಂಶಗಳು ಕಂಡುಬರುವುವು. ಇವುಗಳಿಂದ, ಮೂಲ ಚರ್ಮ ಅಂಗಾಂಶಗಳು ಮೂಲವರ್ಧನ ಅಂಗಾಂಶ (ಪ್ರೋಕೇಂಬಿಯಮ್) ಮತ್ತು ಮೂಲಾಧಾರ ಅಂಗಾಂಶಗಳು ಉತ್ಪತ್ತಿಯಾಗುವುವು.

ಈ ಮೂರು ಅಂಗಾಂಶಗಳು ಮೂಲತಃ ಕೆಲವು ನಿರ್ದೇಶಿತ ಗುಣಗಳನ್ನು ಹೊಂದಿದ್ದರೂ ಮೂಲವರ್ಧನ ಅಂಗಾಂಶ ನಿರಂತರ ಸಜೀವ ಲಕ್ಷಣಗಳನ್ನು ಹೊಂದಿರುವುದು ವಿಭಜನಶಕ್ತ ಅಂಗಾಂಶದ ಅತಿ ಮಹತ್ತ್ವದ ಅಂಶವಾಗಿದೆ.

ಮೂಲ ಅಗ್ರಸ್ಥಅಂಗಾಂಶಗಳ ಬಗೆಗಿನ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳಿವೆ. ನೆಗೆಲಿಯ ಅಗ್ರಸ್ಥಕೋಶಸೂತ್ರ ಮತ್ತು ಹ್ಯಾನ್‌ಸ್ಟೀನಿನ ಹಿಸ್ಟೋಜೆನ್ ಸೂತ್ರಗಳು ಮುಖ್ಯವಾದುವು. ಈಚಿನ ವಿಜ್ಞಾನಿಗಳು ಆವೃತಬೀಜಸಸ್ಯಗಳ ಮತ್ತು ಅನಾವೃತಬೀಜಸಸ್ಯಗಳಲ್ಲಿ ನಡೆಸಿದ ಸಂಶೋಧನೆಗಳ ಪ್ರಕಾರ, ಕೋಶರಚನೆ ಮತ್ತು ಕಾರ್ಯಗಳಿಗೆ ಅನುಗುಣವಾಗಿ ಕೆಲವು ವಲಯರೂಪಗಳನ್ನು ಗುರುತಿಸಿರುತ್ತಾರೆ. ಅಂಗಾಂಶ ವ್ಯವಸಾಯ ಪ್ರಯೋಗಗಳು ಕೋಶರಚನಾಶಾಸ್ತ್ರಗಳ ಪ್ರಯೋಗಗಳಿಂದ, ಅಗ್ರಸ್ಥ ಅಂಗಾಂಶಗಳ ಉತ್ಪತ್ತಿ, ಕೋಶಬೆಳೆವಣಿಗೆ ರಚನೆ ಮತ್ತು ಪ್ರಭೇದನಗಳ ಬಗ್ಗೆ ಹೆಚ್ಚಿನ ಅಂಶಗಳು ತಿಳಿದುಬಂದಿವೆ. ಕೋಶಗಳ ನಿಯತಿಗಳ (ಆಕೃತಿ, ಅಳತೆ) ಆಧಾರದ ಮೇಲೆ ಕಾಂಡದ ಅಗ್ರಸ್ಥಮೂಲ ಅಂಗಾಂಶಗಳಲ್ಲಿ ಮುಖ್ಯವಾಗಿ ಎರಡು ವಲಯಗಳನ್ನು ಗುರುತಿಸಬಹುದು. ಷ್ಮಿಟ್‌ರ ಈ ಅಭಿಪ್ರಾಯದಂತೆ, ಅಂಗಾಂಶದ ಹೊರ ಮೈ ರಚನಾ ವಿಭಾಗಕ್ಕೆ ಟ್ಯೂನಿಕ ಎಂದೂ ಒಳಭಾಗದ ತಿರುಳುವಿಭಾಗಕ್ಕೆ ಕಾರ್ಪಸ್ ಎಂದೂ ಹೆಸರುಗಳಿವೆ. ಸಸ್ಯಜಾತಿಗಳ ರೂಪಭೇದಗಳ ಪ್ರಕಾರ ಈ ಅಂಗಾಂಶಗಳಲ್ಲಿ ವ್ಯತ್ಯಾಸಗಳಿರುವುದಲ್ಲದೆ ಒಂದೇ ಸಸ್ಯದ ವಿವಿಧ ಭಾಗಗಳಲ್ಲಿಯೂ ಉತ್ಪತ್ತಿಕಾರಿಗಳಲ್ಲಿ ವ್ಯತ್ಯಾಸಗಳುಂಟಾಗಬಹುದು. ಫಿಲಿಪ್‌ಸನ್ನನ ಪ್ರಕಾರ ಪುಷ್ಪಅಂಗಾಂಶಗಳೂ ಟ್ಯೂನಿಕ ಕಾರ್ಪಸ್ ಅಂಗಾಂಶ ನಿಯತಿಗಳಿಗೆ ಒಳಪಟ್ಟಿವೆ.

ಬೇರುತುದಿಯ ಅಂಗಾಂಶಗಳು, ಕಾಂಡತುದಿಯ ಅಂಗಾಂಶಗಳಂತೆಯೇ ಇರುವುವು. ಇವುಗಳಲ್ಲಿ ಎಲೆಗಳ ಮತ್ತು ಮೊಗ್ಗುಗಳ ಅಂಗಾಂಶಗಳಿಲ್ಲದಿರುವುದರಿಂದ, ರಚನೆಯಲ್ಲಿ ಸುಲಭವಾಗಿರುವುವು. ಹ್ಯಾನ್‌ಸ್ಟೀನನ ಸೂತ್ರವನ್ನು ಈ ಭಾಗಗಳಿಗೆ ಚೆನ್ನಾಗಿ ಅಳವಡಿಸಿಕೊಳ್ಳಬಹುದು. ಭ್ರೂಣದಿಂದ ಉತ್ಪತ್ತಿಯಾಗುವ ಬೇರುತುದಿಯ ಪೂರ್ಣ ಬೆಳೆವಣಿಗೆ, ಮೂಲ ಬೇರುತುದಿ ಅಂಗಾಂಶಗಳ ರಚನೆ, ಪಾರ್ಶ್ವ ಬೇರುಗಳ ಅಂಗಾಂಶ ಮತ್ತು ಬೇರು ಅಂಗಾಂಶಗಳ ವಲಯರೂಪಗಳ ಬಗ್ಗೆ ಅನೇಕ ಅಂಶಗಳನ್ನು ತಿಳಿಯಬಹುದು. ಬೇರು ಟೊಪ್ಪಿಗೆಯ ಉತ್ಪತ್ತಿ ಮತ್ತು ಬೇರುಗಳ ಮೂಲವಿಭಜನ ಶಕ್ತಅಂಗಾಂಶಗಳ ಸಂಬಂಧಗಳಲ್ಲಿ ಅನೇಕ ವ್ಯತ್ಯಾಸಗಳು ಕಂಡುಬರುವುವು.

**ಪಾರ್ಶ್ವಸ್ಥಿತ ಅಂಗಾಂಶಗಳು:** ಕಾಂಡ ಮತ್ತು ಬೇರುಗಳಲ್ಲಿರುವ ಪಾರ್ಶ್ವಸ್ಥಿತ ಅಂಗಾಂಶಗಳು ಒಂದು ಪಾರ್ಶ್ವದಲ್ಲಿ ಕೊಳವೆ ಆಕಾರದ ವರ್ಧನ ಅಂಗಾಂಶಗಳನ್ನು (ಕೇಂಬಿಯಮ್) (ಚಿತ್ರ 13) ರಚಿಸುತ್ತವೆ. ಇವುಗಳಿಂದ ಆನುಷಂಗಿಕವಾಗಿ ಆನುಷಂಗಿಕ ರಸನಾಳಅಂಗಾಂಶಗಳು ಮತ್ತು ಆನುಷಂಗಿಕ ನೀರ್ನಾಳಅಂಗಾಂಶಗಳು ಉತ್ಪತ್ತಿಯಾಗುವುವು. ಅನೇಕ ಏಕದಳ ಸಸ್ಯಗಳು ಮತ್ತು ಕೆಳಮಟ್ಟದ ಸಸ್ಯಗಳಲ್ಲಿ ವರ್ಧನ ಅಂಗಾಂಶಗಳ ಚಟುವಟಿಕೆ ನಿಂತುಹೋಗುವುದರಿಂದ ಅಥವಾ ಕಡಿಮೆಯಾಗುವುದರಿಂದ ರಸನಾಳ ಮತ್ತು ನೀರ್ನಾಳಗಳ ಒಟ್ಟುಗೂಡುವಿಕೆಯಿಂದಾದ ನಾಳ ಕರಂಡಗಳು ಅನುಷಂಗಿಕ ರಚನೆಗಳನ್ನು ಹೊಂದುವುದಿಲ್ಲ. ಗಟ್ಟಿಮರದ ಸಸ್ಯ (ಹಾರ್ಡ್‌ವುಡ್ಸ್)ಗಳಲ್ಲಿ ಮತ್ತು ಅನಾವೃತಬೀಜಸಸ್ಯಗಳಲ್ಲಿ ಮೂಲವರ್ಧನ ಅಂಗಾಂಶಗಳು ಅಲ್ಪಾಯುಗಳಾಗಿರುವುದು ಅಥವಾ ಆನುಷಂಗಿಕ ಬೆಳೆವಣಿಗೆಗಳಿಂದ ಮುಚ್ಚಿಹೋಗುವುದು ಸಾಮಾನ್ಯ. ಕೆಲವು ಸಸ್ಯಗಳಲ್ಲಿ ಎಲೆತೊಟ್ಟು ಹಾಗೂ ನರಗಳಲ್ಲಿ ವರ್ಧನ ಅಂಗಾಂಶಗಳ ಆನುಷಂಗಿಕ ಬೆಳೆವಣಿಗೆ ಕಾಣಬರುತ್ತದೆ. ಪಾರ್ಶ್ವಸ್ಥಿತ ಅಂಗಾಂಶಗಳ ಮತ್ತು ಅಗ್ರಸ್ಥಿತ ಅಂಗಾಂಶಗಳ ಕೋಶಗಳು ಭಿನ್ನಭಿನ್ನ ಲಕ್ಷಣಗಳಲ್ಲಿ ತೋರುವುವು. ಮೂಲ ಮತ್ತು ಆನುಷಂಗಿಕ ಪಾರ್ಶ್ವಸ್ಥಿತ ಅಂಗಾಂಶಕೋಶಗಳಲ್ಲಿ ಹೆಚ್ಚು ಹೋಲಿಕೆಗಳು ಇರುವುವು. ಆಕೃತಿರಚನಾಶಾಸ್ತ್ರದ ಪ್ರಕಾರ ರಸನಾಳ ಮತ್ತು ನೀರ್ನಾಳಗಳ ಉತ್ಪಾದನೆಯಲ್ಲಿ ಭಾಗವಹಿಸುವ ಪರಿಪ್ರವಣಪದರಕೋಶಗಳಿಗೆ ವರ್ಧನಅಂಗಾಂಶಗಳೆಂದು ಹೆಸರು. ಇವುಗಳಲ್ಲಿ ಎರಡು ರೀತಿಯ ಮೂಲ ಕೋಶಾಂಶಗಳಿರುವುವು. ಕದಿರಿನಂತೆ ಉದ್ದವಾದ ಕೋಶಗಳಿಗೆ ಫ್ಯೂಸಿಫಾರಂ ಅಂಶಗಳೆಂದೂ ಸಣ್ಣದಾದ, ಸಮವ್ಯಾಸಾಕೃತಿಗಳಿಗೆ ನಾಳಕರಂಡರೇಖಿ ಕೋಶಾಂಶಗಳೆಂದೂ ಹೆಸರು. ಫ್ಯೂಸಿಫಾರಂ ಕೋಶಾಂಶಗಳಿಂದ ನೀರ್ಗೊಳವೆಗಳು ನಳಿಕೆಗಳು, ನಾರುಗಳು ಗಟ್ಟಿಯಾದ ಪೇರೆಂಖೈಮ ಅಂಗಾಂಶಗಳು ಮತ್ತು ರಸನಾಳ ಕೊಳವೆಗಳು ಉತ್ಪತ್ತಿಯಾಗುವುವು. ನಾಳಕರಂಡರೇಖಿಕೋಶಾಂಶಗಳ ತ್ರಿಜ್ಯಾಕಾರ ವಿಭಜನೆಗಳಿಂದ ರಸನಾಳ ಮತ್ತು ನೀರ್ನಾಳ ರೇಖೆಗಳು ಉಂಟಾಗುವುವು. ವರ್ಧನ ಅಂಗಾಂಶದ ಕೋಶಗಳು, ರಸನಾಳ ನಳಿಕೆಗಳನ್ನು ಹಾಗೂ ನೀರ್ನಾಳ ಅಂಗಾಂಶಗಳನ್ನು ಉತ್ಪತ್ತಿಮಾಡುವ ಬಗ್ಗೆ ಹೆಚ್ಚು ವಿಷಯಗಳು ತಿಳಿದಿಲ್ಲ. ವರ್ಧನ ಅಂಗಾಂಶದ ಕೋಶಗಳು ತ್ರಿಜ್ಯಾಕಾರದಲ್ಲಿ ಜೋಡಿಸಲ್ಪಟ್ಟ ವಿಭಜನಶಕ್ತ ಅಂಗಾಂಶ ವಲಯಗಳಾಗಿ ಮಾರ್ಪಟ್ಟು ಎರಡು ಪಕ್ಕಗಳಲ್ಲೂ ವಿಸ್ತರಿಸುತ್ತವೆ.

ಇದರಿಂದಾಗಿ ರಸನಾಳ ಮತ್ತು ನೀರ್ನಾಳ ಅಂಗಾಂಶಗಳು ಮಾರ್ಪಾಟು ಹೊಂದುವುವು. ಲಂಬಾಕಾರ ದೃಶ್ಯದಲ್ಲಿ ವರ್ಧನ ಅಂಗಾಂಶ ಎರಡು ಮಾದರಿಗಳಲ್ಲಿ ಕಾಣುತ್ತದೆ. ಉದಾ: ವಿಕಸಿತ ದ್ವಿದಳ ಸಸ್ಯಗಳಲ್ಲಿ ಪದರಗಳಂತೆಯೂ ಇತರ ಸಸ್ಯಗಳಲ್ಲಿ ಪದರರಹಿತವಾಗಿಯೂ ಕಾಣುವುವು. ವರ್ಧನ ಅಂಗಾಂಶದ ಮೂಲಕೋಶಗಳು ಪರಿಪ್ರವಣ ವಿಭಜನೆಗಳಿಂದ, ಸಸ್ಯದೇಹದ ಅಕ್ಷರೇಖೆಯ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ, ಅಂದರೆ ಹೊರ ಪ್ರದೇಶದಲ್ಲಿ ರಸನಾಳ ಅಂಗಾಂಶಗಳನ್ನೂ, ಒಳಪ್ರದೇಶದಲ್ಲಿ ನೀರ್ನಾಳ ಅಂಗಾಂಶಗಳನ್ನೂ ಉತ್ಪಾದಿಸುತ್ತವೆ; ತ್ರಿಜ್ಯರೇಖೆಗಳಂತೆ ಕಾಣಬರುವ ಈ ಅಂಗಾಂಶಗಳು ಬೆಳೆವಣಿಗೆ ಮತ್ತು ಮಾರ್ಪಾಟುಗಳಿಂದ ರೂಪರಚನೆಗಳಲ್ಲಿ ವ್ಯತ್ಯಾಸ ಹೊಂದುವುವು. ಆನುಷಂಗಿಕ ಬೆಳೆವಣಿಗೆಯಿಂದ ನೀರ್ನಾಳ ಕರಂಡಗಳು ಮತ್ತು ವರ್ಧನ ಅಂಗಾಂಶದ ಉರುಳೆಗಳು ದಪ್ಪನಾಗುವುವು. ಸಮಶೀತೋಷ್ಣವಲಯಗಳಲ್ಲಿ ಬೆಳೆಯುವ ಗಟ್ಟಿ ಮರದ ಸಸ್ಯಗಳಲ್ಲಿ ಕಾಲಮಾನದ ಅನುಸಾರವಾಗಿ, ವರ್ಧನ ಅಂಗಾಂಶಗಳು ಬೆಳೆವಣಿಗೆ ಮತ್ತು ಪ್ರಭೇದನಗಳನ್ನು ಹೊಂದುವುದರಿಂದ ವಾರ್ಷಿಕ ಋತುಚಕ್ರಗಳು ಉತ್ಪತ್ತಿಯಾಗುವುವು. ಚಳಿಗಾಲದಲ್ಲಿ ವರ್ಧನ ಅಂಗಾಂಶಗಳ ಚಟುವಟಿಕೆ ಕಡಿಮೆಯಾಗಿದ್ದು ವಸಂತಋತುವಿನಲ್ಲಿ ಪುನಃ ಹೆಚ್ಚಾಗುವುದರಿಂದ ವರ್ಷಕ್ಕೆ ಒಮ್ಮೆ ಒಂದು ವಾರ್ಷಿಕ ಋತುಚಕ್ರ ಅಥವಾ ವಲಯ ಉತ್ಪತ್ತಿಯಾಗುವುದು. ಋತುಚಕ್ರಗಳ ಆಧಾರದಿಂದ ಸಸ್ಯದ ವಯಸ್ಸನ್ನು ಸುಮಾರಾಗಿ ನಿರ್ಧರಿಸಬಹುದು.

**ಸ್ಥಿರ ಅಂಗಾಂಶಗಳು :** ಮೂಲ ಅಥವಾ ಆನುಷಂಗಿಕ ವಿಭಜನಶಕ್ತ ಅಂಗಾಂಶಗಳಿಂದ ಪ್ರಭೇದನ ಹೊಂದಿ ಉತ್ಪತ್ತಿಯಾಗುವ ಈ ಅಂಗಾಂಶಗಳು ಸಜೀವಕೋಶಗಳಿಂದಲೋ ನಿರ್ಜೀವಕೋಶಗಳಿಂದಲ್ಲೋ ರಚಿಸಲ್ಪಟ್ಟು, ರೂಪರಚನೆ ಮತ್ತು ಕಾರ್ಯನಿರ್ವಹಣೆಗಳಲ್ಲಿ ನಿರ್ದಿಷ್ಟ ಗುಣಗಳನ್ನು ಪಡೆದಿರುತ್ತವೆ. ಅಲ್ಲದೆ ಈ ಕೋಶಗಳು ವಿಭಜನರಹಿತವೂ ಆಗಿರುವುವು. ಅಗ್ರಸ್ಥ ವಿಭಜನಶಕ್ತ ಅಂಗಾಂಶಗಳಿಂದಲೂ ಪಾರ್ಶ್ವಸ್ಥ ವಿಭಜನಶಕ್ತ ಅಂಗಾಂಶಗಳಿಂದಲೂ ಉತ್ಪತ್ತಿಯಾಗುವ ಸ್ಥಿರ ಅಂಗಾಂಶಗಳು ಕೆಲವು ಬಾರಿ ಪುನಃ ವಿಭಜನಶಕ್ತ ಅಂಗಾಂಶಗಳಾಗಿ ಮಾರ್ಪಡುವ ಸಂಭವವುಂಟು. ಸಾಮಾನ್ಯವಾಗಿ ಬೇರುಗಳಲ್ಲಿ ಕಾಣಬರುವ ವರ್ಧನ ಅಂಗಾಂಶಗಳು, ಕೆಲವು ಕಾಂಡಗಳ ಅಂತರ್‌ಗುಚ್ಛವರ್ಧನ ಅಂಗಾಂಶಗಳು, ವಲ್ಕಲ ಅಥವಾ ತೊಗಟೆ ವರ್ಧನ ಅಂಗಾಂಶಗಳು ಇತ್ಯಾದಿಗಳು ಇದಕ್ಕೆ ಉದಾಹರಣೆಗಳು. ಮೂಲಸ್ಥಿರ ಅಂಗಾಂಶಗಳು, ಏಕದಳ ಮತ್ತು ದ್ವಿದಳ ಸಸ್ಯಗಳೆರಡರಲ್ಲಿಯೂ ಕಂಡುಬಂದರೂ ಆನುಷಂಗಿಕ ಸ್ಥಿರಅಂಗಾಂಶಗಳು ಸಾಮಾನ್ಯವಾಗಿ ದ್ವಿದಳ ಸಸ್ಯಗಳಲ್ಲಿ ಮಾತ್ರ ಕಂಡುಬರುವುವು. ಕಾರ್ಯನಿರ್ವಹಣೆಗೆ ಅನುಸಾರವಾಗಿ, ಸ್ಥಿರಅಂಗಾಂಶಗಳಲ್ಲಿ ಅನೇಕ ವಿಧದ ಅಂಗಾಂಶಗಳನ್ನು ಗುರುತಿಸಬಹುದು.

1. **ಹೊರಮೈಚರ್ಮ ಅಂಗಾಂಶ (ಎಪಿಡರ್ಮಲ್ ಟಿಷ್ಯೂ):** ಸಸ್ಯದ ಹೊರಮೈ ಭಾಗಗಳನ್ನು ಆವರಿಸಿರುವ ಅಂಗಾಂಶವು ಸಸ್ಯ ಹಾಗೂ ವಾತಾವರಣಗಳಿಗೆ ನೇರವಾಗಿ ಸಂಬಂಧಿಸಿರುವುದರಿಂದ, ಅನೇಕ ಬಗೆಯ ರಚನೆ ಮತ್ತು ಕರ್ತವ್ಯಗಳನ್ನು ಹೊಂದಿರುವುದು. ಭ್ರೂಣದ ಹೊರಚರ್ಮ ಮೂಲಾಂಶಗಳಿಂದ ಉತ್ಪತ್ತಿಯಾಗುವ ಈ ಅಂಗಾಂಶ ಸಸ್ಯದೇಹದ ರಕ್ಷಣಾ ಕಾರ್ಯಗಳಲ್ಲಿ ಅತಿಮುಖ್ಯ ಅಂಗವಾಗಿದೆ. ಆವೃತಸಸ್ಯಗಳಲ್ಲಿನ ಕಾಂಡತುದಿಗಳ ಅತ್ಯಂತ ಹೊರಮೈ ಪ್ರದೇಶದಲ್ಲಿ ಕಾಣಬರುವ ಮೂಲದರ್ಮ ಪದರ, ಕೆಳಮಟ್ಟದ ಸಸ್ಯಗಳಲ್ಲಿ ಕಾಂಡದ ತುದಿಗಳಿಂದ ಸ್ವಲ್ಪ ಕೆಳಮಟ್ಟಗಳಲ್ಲಿ ಕಾಣಬರುವುದು. ವಿಕಸಿತ ಸಸ್ಯಗಳಲ್ಲಿ ದೇಹದ ಎಲ್ಲೆಡೆಯೂ ಪ್ರಸರಿಸುವ ಚರ್ಮದ ಪದರ ವಿಜ್ಞಾನಿ ಷ್ಮಿಟ್ ಸೂಚಿಸಿರುವಂತೆ ಟ್ಯೂನಿಕ್ ವಲಯದಿಂದಲೂ ಹ್ಯಾನ್‌ಸ್ಟೀನ್ ಸೂಚಿಸಿರುವಂತೆ ಡರ್ಮ್ಯಟೋಜೆನ್ ವಲಯದಿಂದಲೂ ಉತ್ಪತ್ತಿಯಾಗುವುವೆಂಬ ನಂಬಿಕೆಗಳುಂಟು. ಲಿನ್ಸ್‌ಬಾರ್ ಎಂಬ ವಿಜ್ಞಾನಿಯ ಪ್ರಕಾರ ಬೇರುಗಳಲ್ಲಿ ಹೊರಚರ್ಮ ಪದರಗಳನ್ನು ಉತ್ಪಾದಿಸುವ ಮೂಲ ಅಂಗಾಂಶಗಳಿಗೆ ಎಪಿಬ್ಲಿಮ ಎಂದು ಹೆಸರು **(ನೋಡಿ ಚಿತ್ರ 4)**.

ಹೊರಮೈಚರ್ಮ ಅಂಗಾಂಶಕೋಶಗಳಲ್ಲಿ ಸಾಮಾನ್ಯವಾಗಿ ರೂಪುರಚನೆಗಳ ವ್ಯತ್ಯಾಸವಿದ್ದರೂ ಅವು ಪರಸ್ಪರ ಹೊಂದಾಣಿಕೆಯಿಂದ ಕರ್ತವ್ಯ ನಿರ್ವಹಿಸುತ್ತವೆ. ವಾಯುದ್ವಾರ (ಸ್ಟೊಮಟ) ಮತ್ತು ಲೆಂಟಿಸೆಲ್ ದ್ವಾರಗಳ ಹೊರತು ಮಿಕ್ಕೆಲ್ಲ ಭಾಗಗಳಲ್ಲಿಯೂ

ಸಸ್ಯದೇಹವನ್ನು ಆವರಿಸಿರುವ ಈ ಕೋಶಗಳಲ್ಲಿ, ಕೋಶದ್ರವ ಕಡಿಮೆ ಇರುವುದಲ್ಲದೆ ಕುಹರದ್ರವ ಇರುತ್ತದೆ. ಕೆಲವು ಸಸ್ಯಗಳಲ್ಲಿ ಆನ್ತೋಸಯನಿನ್ ಮತ್ತು ಕ್ರೋಮೋಪ್ಲಾಸ್ಟ್ ಎಂಬ ಬಣ್ಣಗಳ ಅಂಶಗಳು ಕೂಡ ಇರುವುವು. ವಾಯುದ್ವಾರಗಳನ್ನು ಆವರಿಸಿರುವ ಪಾಲಕಕೋಶಗಳಲ್ಲಿ (ಗಾರ್ಡ್‌ಸೆಲ್ಸ್) ಪತ್ರಹರಿತ್ತಿನ ಅಂಶಗಳಿರುವುವು. ಹೊರಮೈಚರ್ಮ ಅಂಗಾಂಶಕೋಶಗಳು ಅಲ್ಪಾಯುಗಳಾಗಿರುವುದರಿಂದ, ಟ್ಯಾನಿನ್, ಅಂಟುವಸ್ತುಗಳು, ಅಂಟುದ್ರವಗಳು, ಹರಳುಗಳು ಇತ್ಯಾದಿ ವಸ್ತುಗಳಿಂದ ತುಂಬಿದ್ದು ಗಟ್ಟಿಯಾದ ರಕ್ಷಕಪದರವಾಗಿ ಮಾರ್ಪಡುವುವು. ಈ ಕೋಶಗಳ ಪಾರ್ಶ್ವ ಮತ್ತು ಕೆಳಭಾಗದ ಪೊರೆಗಳು ತೆಳ್ಳಗಿದ್ದು, ಹೊರ ಪದರಗಳು ಮಾತ್ರ ಕ್ಯೂಟಿನ್ ಅಥವಾ ಸ್ಯೂಬರಿನ್ ಎಂಬ ವಸ್ತುಗಳಿಂದ ಆವೃತವಾಗಿರುವುವು. ಹೊರಚರ್ಮದ ಪದರ ಒಂದು ಅಥವಾ ಅನೇಕ ಪದರಗಳಾಗಿರುವುದನ್ನು ಕೆಲವು ಸಸ್ಯಗಳಲ್ಲಿ ಕಾಣಬಹುದು; ಅವುಗಳಿಗೆ ಏಕಪದರದ ಅಥವಾ ಬಹುಪದರದ ಹೊರಚರ್ಮ ಅಂಗಾಂಶ ಎಂದು ಹೆಸರುಗಳಿವೆ. ಕೆಲವು ಸಸ್ಯಗಳಲ್ಲಿ ಈ ಕೋಶಗಳಿಂದ ಕೂದಲುಗಳು ಟ್ರೈಕೋಮ್‌ಗಳು ಬೆಳೆಯುವುವು. ಬೇರು ಭಾಗಗಳಲ್ಲಿರುವ ಎಪಿಬ್ಲಿಮ ಕೋಶಗಳು ವಾಯುದ್ವಾರರಹಿತವೂ ಕ್ಯೂಟಿನ್‌ರಹಿತವೂ ಆಗಿದ್ದು, ನೀರು ಮತ್ತು ಲವಣಸಾರಗಳ ಹೀರುವಿಕೆಗೆ ಬೇಕಾದ ಬೇರುರೋಮಗಳನ್ನು ಉತ್ಪಾದಿಸುವುವು. ಅನೇಕ ವಿಜ್ಞಾನಿಗಳ ಅಭಿಪ್ರಾಯದಂತೆ, ಹೊರಚರ್ಮದ ಅಂಗಾಂಶ ವಾತಾವರಣದಲ್ಲಿ ಉಂಟಾಗುವ ವ್ಯತ್ಯಾಸಗಳಿಂದಲೂ ಯಾಂತ್ರಿಕ ಘರ್ಷಣೆಗಳಿಂದಲೂ ವಿಷಕ್ರಿಮಿಗಳಿಂದಲೂ ಸಸ್ಯದ ಒಳಭಾಗದ ಅಂಗಾಂಶಗಳನ್ನು ರಕ್ಷಿಸುವ ಹಾಗೂ ನೀರು ಮತ್ತು ಆಹಾರ ವಸ್ತುಗಳ ಶೇಖರಣ ಕಾರ್ಯಗಳಲ್ಲಿ ಭಾಗವಹಿಸುವ ಅಂಗವಾಗಿದೆ.

**2. ಪರೆಂಕಿಮ :** ಸುಲಭ ರಚನೆಗಳುಳ್ಳ ಆಧಾರಅಂಗಾಂಶಗಳಲ್ಲಿ ಪರೆಂಕಿಮ ಅಂಗಾಂಶ ಮುಖ್ಯವಾದುದೆಂದು ವಿಜ್ಞಾನಿಗಳ ಅಭಿಪ್ರಾಯ. ಸಸ್ಯದೇಹದ ವಿವಿಧ ಭಾಗಗಳಲ್ಲಿ, ವಿವಿಧರೀತಿಯ ರಚನೆಗಳಿಂದ ಕಂಡುಬರುವ ಈ ಅಂಗಾಂಶದ ಕೋಶಗಳು ತೆಳುಪೊರೆಗಳಿಂದ ಆವೃತವಾಗಿದ್ದು ಸಸ್ಯದ ಬೆಳವಣಿಗೆಯಲ್ಲಿ ನಿರತವಾಗಿರುವುವು. ಸಾಮಾನ್ಯವಾಗಿ ಇತರ ಅಂಗಾಂಶಗಳು ಈ ಅಂಗಾಂಶಗಳಲ್ಲಿ ಹುದುಗಿರುವುವಲ್ಲದೆ ವಿಶಿಷ್ಟ ಅಂಗಾಂಶಗಳಿಂದ ನಾಳಕರಂಡಗಳ ಸುತ್ತಲೂ ಪ್ರಸರಿಸಿರುವುವು. ಸಸ್ಯದ ಮೃದುಭಾಗಗಳಲ್ಲಿ ಕಂಡುಬರುವ ಈ ಅಂಗಾಂಶಗಳು ದ್ಯುತಿಸಂಶ್ಲೇಷಣೆ, ಉಸಿರಾಟ, ಆಹಾರಸಂಗ್ರಹಣ, ದ್ರವವಿಸರ್ಜನೆ ಇತ್ಯಾದಿ ಕಾರ್ಯಗಳ ಮೂಲಸ್ಥಾನವಾಗಿರುವುವು. ರೂಪರಚನೆಗಳಲ್ಲಿ ಸರಳ ಅಂಗಾಂಶಗಳಾಗಿದ್ದರೂ ಸಜೀವ ಅಂಗಾಂಶಗಳಾದುದರಿಂದ, ರಸನಾಳರಚನೆ, ನೀರ್ನಾಳ ಅಂಶಗಳು ಆಹಾರ ಮತ್ತು ನೀರು ಸರಬರಾಜು ಇತ್ಯಾದಿ ಕಾರ್ಯಗಳಲ್ಲಿ ಇವು ಭಾಗವಹಿಸುವುವು. ಕೆಲವು ಪರೆಂಕಿಮ ಕೋಶಜಾಲಗಳಲ್ಲಿ ಪತ್ರಹರಿತ್ತು ಇರುತ್ತದೆ. ಅವುಗಳಿಗೆ ಕ್ಲೋರೆಂಕಿಮ ಅಂಗಾಂಶವೆಂದು ಹೆಸರು (ಚಿತ್ರ 1). ಉದಾಹರಣೆಗೆ ಎಲೆಗಳಲ್ಲಿ ಕಂಡುಬರುವ ಮೀಸೋಫಿಲ್ ಕೋಶಜಾಲಗಳು ಕ್ಲೋರೆಂಕಿಮ ಅಂಗಾಂಶಗಳಾಗಿವೆ. ಬೇರುಗಳಲ್ಲಿ ಕಾಣಬರುವ ಪರೆಂಕಿಮ ಅಂಗಾಂಶ ಕೋಶಗಳು ವರ್ಣರಹಿತ ಅಂಶಗಳನ್ನು ಹೊಂದಿರುತ್ತವೆ. ನೈಟ್ರೋಜನ್ ವಸ್ತುಗಳು, ಕೊಬ್ಬುಗಳು, ಎಣ್ಣೆಗಳು, ಸಕ್ಕರೆ ಅಂಶಗಳು, ಇತ್ಯಾದಿಗಳ ಶೇಖರಣೆ ನಡೆಯುವ ಈ ಅಂಗಾಂಶಕೋಶಗಳ ಕ್ರಿಯೆಗಳಲ್ಲಿ ಅನೇಕ ರೀತಿಯ ವ್ಯತ್ಯಾಸ ತೋರಬಹುದು. ಬೀಜಗಳಲ್ಲಿ ಈ ಅಂಗಾಂಶದ ಪಾತ್ರ ಸರಿಯಾಗಿ ತಿಳಿದಿಲ್ಲ. ಬೀಜದಳಗಳಲ್ಲಿ ನಡೆಯುವ ಕಿಣ್ವ ಉತ್ಪಾದನೆ ಮತ್ತು ಭ್ರೂಣಾಹಾರ ಕೋಶಗಳಲ್ಲಿ ನಡೆಯುವ ಪಿಷ್ಟ ಮತ್ತಿತರ ಪದಾರ್ಥಗಳ ವಿಚ್ಛೇದನ ಕಾರ್ಯಗಳು ಈ ಅಂಗಾಂಶದಲ್ಲಿ ನಡೆಯುವುವೆಂದು ಈಚೆಗೆ ತಿಳಿದುಬಂದಿರುವುದು. ಮೆತು ತಿರುಳಿನ ಸಸ್ಯಗಳಲ್ಲಿ ನೀರು ಶೇಖರಣೆ ಕಾರ್ಯಗಳನ್ನು ಮಾಡುವ ಪರೆಂಕಿಮ ಕೋಶಗಳು ಅಗಲವಾಗಿಯೂ ಪತ್ರಹರಿದ್ರಹಿತವೂ ಆಗಿದ್ದು ಕೆಲವು ಅಂಟು ವಸ್ತುಗಳನ್ನು ಹೊಂದಿರುವುದರಿಂದ ಇದ್ದ ನೀರನ್ನು ಹೆಚ್ಚಾಗಿ ಶೇಖರಿಸಲು ತಕ್ಕವಾಗಿವೆ. ಗಾಯಗಳನ್ನು ಗುಣಪಡಿಸುವ ಕಾರ್ಯಗಳಲ್ಲಿ ಭಾಗವಹಿಸುವ ಕೆಲವು ಪರೆಂಕಿಮ ಕೋಶಗಳು ಟ್ಯಾನಿನ್ ರಹಿತ ಕೋಶಗಳನ್ನೂ ಟ್ಯಾನಿನ್ ಸಹಿತ ಕೋಶಗಳಾದ ಫೆಲೋಜನ್ ಅಂಶಗಳನ್ನೂ ಉತ್ಪಾದಿಸುವುವು. ಮೂಲ ಆಧಾರ ಅಂಗಾಂಶಗಳಿಂದ ಉದ್ಭವಿಸುವ ಪರೆಂಕಿಮ ಅಂಗಾಂಶ ಸ್ಥಿರ ಅಂಗಾಂಶಗಳ ಅತಿಮುಖ್ಯ ಅಂಗವಾಗಿದೆ.

**3. ಕಾಲೆಂಕಿಮ :** ಕಾಂಡ, ಎಲೆತೊಟ್ಟು ಮತ್ತು ಎಲೆಗಳ ಹೊರ ಆವರಣಗಳಲ್ಲಿ ಕಂಡುಬರುವ ಕೆಲವು ಅಂಗಾಂಶಗಳಿಗೆ ಕಾಲೆಂಕಿಮ ಅಂಗಾಂಶವೆಂದು ಹೆಸರು. ಉರುಳೆಗಳಂತೆ ರಚಿಸಲ್ಪಟ್ಟ, ಕೆಲವು ಕಾಂಡ ಮತ್ತು ಎಲೆತೊಟ್ಟುಗಳಲ್ಲಿ ಪರೆಂಕಿಮ ಪದರಗಳಿಂದ ಬೇರೆ ಮಾಡಲ್ಪಟ್ಟ ಕಾಲೆಂಕಿಮ ತಂತುಗಳು, ಅಂಗಗಳ ಹೊರ ಆವರಣಗಳಲ್ಲಿ ಕಂಡುಬರುತ್ತವೆ. ಕೋನಾಕಾರ, ತೆರಪು ಕೋಶಾಕಾರ ಮತ್ತು ತಟ್ಟೆಯಾಕಾರಗಳ ಈ ಕೋಶಗಳು ದಪ್ಪ ಪೊರೆಗಳಿಂದ ಆವೃತವಾಗಿವೆ. ದಪ್ಪ ಮೂಲೆಗಳುಳ್ಳ ಹಾಗೂ ಜೀವಿತಸ್ಥಿತಿಗಳುಳ್ಳ, ಆಧಾರ ಕಾರ್ಯ ನಿರ್ವಹಣೆಗಳಲ್ಲಿ ಭಾಗವಹಿಸುವ, ಈ ಅಂಗಾಂಶದ ಉತ್ಪತ್ತಿ ಮತ್ತು ಬೆಳವಣಿಗೆಗಳ ವಿಷಯಗಳಲ್ಲಿ ನಿರ್ದಿಷ್ಟ ಅಂಶಗಳು ತಿಳಿದುಬಂದಿಲ್ಲ (ಚಿತ್ರ 2). ಈ ಕೋಶಗಳ ಪೊರೆಗಳು ಸೆಲ್ಯುಲೋಸ್ ಮತ್ತು ಪೆಕ್ಟಿನ್ ವಸ್ತುಗಳ ಅಂಶಗಳಿಂದ ಕಠಿಣಗೊಂಡಿರುವುವೆಂದೂ, ಕೆಲವು ಸಸ್ಯಗಳಲ್ಲಿ ಈ ಅಂಗಾಂಶಕೋಶದ ಮಧ್ಯಂತರ ಪ್ರದೇಶಗಳು ಪೆಕ್ಟಿನ್ ವಸ್ತುಗಳಿಂದ ಆವೃತವಾಗಿರುವುವೆಂದೂ ಈಸ ಎಂಬ ವಿಜ್ಞಾನಿಯ ಅಭಿಪ್ರಾಯ.

**4. ಪ್ರೋಸೆಂಕಿಮ :** ಕಠಿಣ ಪೊರೆಗಳುಳ್ಳ, ಸಂಕೀರ್ಣವಾದ ಮತ್ತು ಆಧಾರ ಕಾರ್ಯಗಳಲ್ಲಿ ಭಾಗವಹಿಸುವ ಕೆಲವು ಪರೆಂಕಿಮ ಕೋಶಜಾಲಗಳಿದ್ದು ಅವುಗಳ ಕೋಶಗಳು ಲಿಗ್ನಿನ್ ವಸ್ತುವಿನಿಂದ ಆವೃತವಾಗಿರುವುವು. ಬಾಹ್ಯ ಒತ್ತಡ, ಎಳೆಯುವಿಕೆ, ಬಾಗುವಿಕೆ, ಇತ್ಯಾದಿ ಯಾಂತ್ರಿಕ ಘರ್ಷಣೆಗಳಿಂದ ಸಸ್ಯದ ಇತರ ಮೃದು ಅಂಗಾಂಶಗಳನ್ನು ರಕ್ಷಿಸುವ ಈ ಅಂಗಾಂಶಗಳಿಗೆ ಪ್ರೋಸೆಂಕಿಮ ಎಂದು ಹೆಸರು. ಈ ಅಂಗಾಂಶದ ಕೋಶಗಳು ಆನುಷಂಗಿಕ ಪೊರೆಗಳು, ಗಟ್ಟಿಯಾಗಿ ಸ್ಥಿತಿಸ್ಥಾಪಕ ಶಕ್ತಿಯುಳ್ಳ ಸ್ಕ್ಲೀರೆಂಕಿಮ ಅಂಗಾಂಶವನ್ನು ರಚಿಸುವುವು.

**5 ಸ್ಕ್ಲೀರೆಂಕಿಮ :** ಅಜೈವಿಕಕೋಶದ್ರವ ಮತ್ತು ಆನುಷಂಗಿಕ ಪೊರೆಗಳುಳ್ಳ ಅಂಗಾಂಶ ನಾರುಗಳು ಮತ್ತು ಗಂಟುಗಳು ಎಂಬ ಎರಡು ಬೇರೆ ಬೇರೆ ರೀತಿಯ ಕೋಶಗಳಿಂದಾಗಿರುತ್ತದೆ. ವಿಭಜನಶಕ್ತ ಕೋಶಗಳಿಂದ ಉತ್ಪತ್ತಿಯಾಗುವ ಮೂಲ ನಾರುಕೋಶಗಳಿಂದಾದ ನಾರುಕೋಶಗಳು, ಉದ್ದವಾದ ಕಠಿಣಪೊರೆಗಳಿಂದ ಮತ್ತು ಕ್ಷೀಣಿಸಿದ ಪಾತಗಳಿಂದ ಕೂಡಿರುವುವು. ರಸನಾಳ ಪರೆಂಕಿಮ ಕೋಶಗಳೂ ಕೆಲವು ಬಾರಿ ನಾರುಕೋಶಗಳಾಗಿ ಪರಿವರ್ತನೆಗೊಳ್ಳಬಹುದು. ಅಲ್ಲದೆ ಈ ಕೋಶಗಳು ಸಜೀವ ಕೋಶದ್ರವವನ್ನು ಸಹ ಹೊಂದಿರಬಹುದು. ಸ್ಥಿತಿಸ್ಥಾಪಕ ಎಳೆತ ಮತ್ತು ಒತ್ತಡಗಳಿಗೆ ಮಣಿಯದ ಶಕ್ತಿಯುಳ್ಳ, ಮೆದುವಾದ ಅಥವಾ ಕಠಿಣವಾದ ತಂತುಗಳಂತಿರುವ ಈ ನಾರುಗಳು ಆರ್ಥಿಕವಾಗಿ ಬೆಲೆ ಬಾಳುವ ನಾರು (ಹೆಂಪ್), ಗೋಣಿ ಹತ್ತಿ, ಇತ್ಯಾದಿ ವಸ್ತುಗಳಾಗಿವೆ. ಸಸ್ಯದ ಮೇಲೆ ಉಂಟಾಗುವ ಭೌತಿಕ ವ್ಯತ್ಯಾಸಗಳನ್ನು ತಡೆಹಿಡಿಯುವ ಈ ಕೋಶಗಳು ರಸನಾಳ ಅಂಶಗಳಿಂದ ಉತ್ಪತ್ತಿಯಾಗಿ ಅನೇಕ ಮೀಟರ್‌ಗಳ ಉದ್ದದ ನಾರುಗಳಾಗಿ ರೂಪುಗೊಳ್ಳುವುವು (ಚಿತ್ರ 5). ಕೆಲವು ಸಸ್ಯಗಳಲ್ಲಿ ಪರೆಂಕಿಮ ಮತ್ತು ನಾಳಕರಂಡಗಳ ಜೊತೆಗೂಡಿ ಕಾಣಬರುವ ಈ ಕೋಶಗಳು ನಾಳಕೂರ್ಚದ ವಿಶಿಷ್ಟ ಅಂಗ, ಬ್ಯಾಸ್ಟ್‌ನಾರು, ಮರದನಾರು ಇತ್ಯಾದಿ ಹೆಸರುಗಳಿಂದ ವಿವರಿಸಲ್ಪಡುತ್ತವೆ. ರಾಸಾಯನಿಕವಾಗಿ ನಾರುಕೋಶದ ಪೊರೆಗಳು ಲಿಗ್ನಿನ್ ವಸ್ತುವಿನಿಂದ ಆವೃತವಾಗಿರುವುವಲ್ಲದೆ, ಅವುಗಳಲ್ಲಿ ಸೆಲ್ಯುಲೋಸ್ ವಸ್ತುಗಳ ಅಚ್ಚುಗಳು (ಮ್ಯಾಟ್ರಿಕ್ಸ್) ಕಂಡುಬರುತ್ತವೆ. ಆನುಷಂಗಿಕ ಪೊರೆಗಳು, ಈ ಕೋಶಗಳಲ್ಲಿ ಉತ್ಪತ್ತಿ ಕಾಲದಿಂದಲೂ ರಚನೆ ಮತ್ತು ರಾಸಾಯನಿಕ ಪ್ರಭೇದನಗಳನ್ನು ಹೊಂದಿ ಅತಿ ಕಠಿಣವಾಗುತ್ತವೆ. 400–500 ಮೀಟರ್ ಉದ್ದದ ನಾರುಕೋಶಗಳು ಬೊಹಿಮೀರಿಯ ಸಸ್ಯಗಳಲ್ಲಿ ಕಂಡುಬರುವುದಲ್ಲದೆ, ಸೆಣಬು ಮುಂತಾದ ನಾರುಸಸ್ಯಗಳಲ್ಲಿಯೂ ಅತಿ ಉದ್ದದ ನಾರುಕೋಶಗಳಿರುವುವು. ತಂತುಗಳು ಅಥವಾ ನಿರಂತರ ಉರುಳೆಗಳ ಆಕಾರಗಳಲ್ಲಿ ಕಾಣಬರುವ ಈ ಕೋಶಗಳು, ನಾಳಕೂರ್ಚಗಳಲ್ಲಿ ರಸನಾಳ, ನೀರ್ನಾಳಗಳ ವೈವಿಧ್ಯಗಳಿಗೂ ಕಾರಣವಾಗಿವೆ.

ಪ್ರಮುಖಪಾತ್ರಗಳುಳ್ಳ ಪೊರೆಗಳನ್ನು ಹೊಂದಿರುವ ಗಂಟುಕೋಶಗಳು ಪರೆಂಕಿಮ ಅಂಗಾಂಶಗಳ ಅಥವಾ ಆನುಷಂಗಿಕ ಗಂಟುಕೋಶಗಳ ರೂಪದಲ್ಲಿಯೂ ಕೆಮಲಿಯ ಸಸ್ಯಗಳಲ್ಲಿ ಕೆಲವು ಮೂಲ ಗಂಟುಕೋಶಗಳಿಂದಲೂ ಉತ್ಪತ್ತಿಯಾಗುವುವು. ವಿಶೇಷರೀತಿಯ ಹಾಗೂ ಮಂದವಾದ ಆನುಷಂಗಿಕಪೊರೆಗಳುಳ್ಳ ಗಟ್ಟಿಯಾದ ಈ ಕೋಶಗಳು ಕಲ್ಲುಗಂಟುಕೋಶ (ಸ್ಟೋನ್ ಸೆಲ್ಸ್), (ಚಿತ್ರ 6) ಸರಳುಕೋಶಗಳು (ರಾಡ್ ಸೆಲ್ಸ್), ಸ್ತಂಭಾಕೃತಿಕೋಶಗಳು (ಪ್ರಾಪ್ ಸೆಲ್ಸ್) ಮತ್ತು ತಾರಾಕೃತಿಕೋಶಗಳು (ಆಸ್ಟ್ರೊಸ್ಕ್ಲೀರೈಡ್ಸ್) ಎಂಬ ನಾಲ್ಕು ಬಗೆಯಲ್ಲಿ ಕಾಣಬರುವುವು. ನಿಂಫಿಯೇಸೀ ಕುಟುಂಬದ ಸಸ್ಯಗಳಲ್ಲಿ ಈ ಕೋಶಗಳ ಪೊರೆಗಳಲ್ಲಿ ಹರಳುಅಂಶಗಳು ಕಂಡುಬರುತ್ತವೆ. ಬೀಜಕವಚ, ಹಣ್ಣುಗಳ ಚರ್ಮ, ಇತ್ಯಾದಿ ರೂಪಗಳಲ್ಲಿ ಕಾಣಬರುವ ಈ ಕೋಶಗಳು ಮುಖ್ಯವಾಗಿ ಅಂಗಗಳ ರಕ್ಷಣೆಯ ಕಾರ್ಯದಲ್ಲಿ ಭಾಗವಹಿಸುವುವು.

**6. ನಾಳಕೂರ್ಚದ ಅಂಗಾಂಶಗಳು (ವ್ಯಾಸ್ಕುಲರ್ ಟಿಶ್ಯೂ):** (ಚಿತ್ರ 7, 12), ರಸನಾಳ ಮತ್ತು ನೀರ್ನಾಳಗಳ ಅಂಗಾಂಶಗಳಿಂದ ರಚಿಸಲ್ಪಟ್ಟ ನಾಳಕೂರ್ಚದ ಅಂಗಾಂಶದ ರಚನೆ ಮತ್ತು ವಿಕಾಸ, ಸಸ್ಯವಿಕಾಸದ ಮುಖ್ಯ ಅಂಶವಾಗಿದೆ. ಕೆಳವರ್ಗದ ಸಸ್ಯಗಳಲ್ಲಿ ನಾಳವ್ಯೂಹ ಅಷ್ಟು ಸಂಕೀರ್ಣತೆ ಮುಟ್ಟಿಲ್ಲ. ಬೇರುತುದಿಯಿಂದ, ಕಾಂಡದ ತುದಿಯವರೆಗೆ ಪ್ರಸರಿಸಿ, ನೀರು ಮತ್ತು ಆಹಾರವಸ್ತುಗಳ ಸರಬರಾಜನ್ನು ಅತಿ ದಕ್ಷತೆಯಿಂದ ನಿರ್ವಹಿಸುವುದನ್ನು ಮೇಲ್ವರ್ಗದ ಸಸ್ಯಗಳಲ್ಲಿ ಕಾಣಬಹುದು. ಸಸ್ಯದ ವಂಶೇತಿಹಾಸದಿಂದಲೂ ವರ್ಧನ ಅಂಗಾಂಶಗಳ ಆನುಷಂಗಿಕ ವಿಭಜನೆಯಿಂದ ರೂಪುಗೊಳ್ಳುವ ರೀತಿಯಿಂದಲೂ ಇವುಗಳ ಬೆಳವಣಿಗೆಯ ಸ್ವರೂಪ ಮತ್ತು ಹರಡಿಕೆ ಸಸ್ಯಜಾತಿಗಳ ವರ್ಗೀಕರಣದಲ್ಲಿ ಸಹಾಯಕವಾದ ಅಂಶವಾಗಿದೆ.

**7. ನೀರ್ನಾಳ ಅಂಗಾಂಶ (ಕ್ಸೈಲಮ್) :** (ಚಿತ್ರ 3.) ಸಸ್ಯದೇಹದ ಎಲ್ಲೆಡೆಗೂ ನೀರು ಮತ್ತು ಲವಣಗಳನ್ನು ಸರಬರಾಜು ಮಾಡುವ ಈ ಅಂಗಾಂಶ ಸಂಕೀರ್ಣ ರಚನೆಯದು. ಕಠಿಣವಾದ ಪೊರೆಗಳುಳ್ಳ ಈ ಅಂಗಾಂಶ ನಾಳವ್ಯೂಹದ ಅಂಗಾಂಶದಲ್ಲಿ ರಸನಾಳ

ಕೋಶಗಳಿಗಿಂತ ಪ್ರಮುಖವಾಗಿ ಕಂಡುಬರುತ್ತದೆ. ನೀರ್ನಾಳ ಕೋಶಗಳು ಮತ್ತು ನೀರ್ಗೊಳವೆ ಕೋಶಗಳ ಜೊತೆಗೆ ಕೆಲವು ಅಜೈವಿಕ ನಾರು ಅಂಶಗಳನ್ನು ಹೊಂದಿರುವ ನೀರ್ನಾಳ ಅಂಗಾಂಶ ಸಸ್ಯದೇಹಕ್ಕೆ ಯಾಂತ್ರಿಕ ಆಧಾರವನ್ನು ಕೊಡುವುದಲ್ಲದೆ ಕೆಲವು ಪರೆಂಕಿಮ ಕೋಶಗಳನ್ನು ಹೊಂದಿರುವುದರಿಂದ, ಸಸ್ಯಕೋಶದ ಚಯಾಪಚಯಗಳಲ್ಲೂ ಭಾಗವಹಿಸುವುದು. ಭ್ರೂಣದ ಬೆಳೆವಣಿಗೆಯ ತಾರುಣ್ಯದಲ್ಲೆ ಉತ್ಪತ್ತಿಯಾಗುವ ಈ ಅಂಗಾಂಶಕ್ಕೆ ಮೂಲವರ್ಧನ ಅಂಗಾಂಶದಿಂದ ಉದ್ಭವಿಸಿದಲ್ಲಿ ಮೂಲ ನೀರ್ನಾಳವೆಂದೂ ಆನುಷಂಗಿಕ ಬೆಳೆವಣಿಗೆಗಳುಳ್ಳ ಸಸ್ಯಗಳಲ್ಲಿ ನಾಳಕೂರ್ಚ ಅಂಗಾಂಶದಿಂದ ಉದ್ಭವಿಸಿದಲ್ಲಿ ಆನುಷಂಗಿಕ ನೀರ್ನಾಳವೆಂದೂ ಹೆಸರುಗಳಿವೆ. ನೀರ್ಗೊಳವೆಗಳ ಕೋಶಗಳು ಮತ್ತು ನೀರ್ನಾಳಕೋಶಗಳು ಈ ಅಂಗಾಂಶದ ಮುಖ್ಯ ಕೋಶಜಾಲಗಳಾಗಿರುತ್ತವೆ.

ನೀರ್ಗೊಳವೆ ಕೋಶಗಳು ಎಲ್ಲ ಕಡೆಗಳಲ್ಲಿಯೂ ಕಠಿಣಪೊರೆಗಳಿಂದ ಆವೃತವಾಗಿ ಪಾರ್ಶ್ವಪೊರೆಗಳಲ್ಲಿ ವೃತ್ತಾಕಾರದ ಸುಲಭ ಪೊರೆಕುಳಿ ಅಥವಾ ಪಾತಗಳನ್ನು ಮತ್ತು ಆವೃತಸೀಮಾಪಾತಗಳನ್ನು ಹೊಂದಿದ್ದ, ಕೋಶದ್ರವರಹಿತ, ಕೋನಾಕಾರ ಅಥವಾ ಬಹುಮುಖ ಆಕಾರಗಳಲ್ಲಿ ಕಂಡುಬರುತ್ತವೆ. ಈ ಕೋಶಗಳ ಮೂಲಕೋಶ ಪೊರೆಗಳು ಕೋಶವನ್ನು ಪೂರ್ಣವಾಗಿ ಆವರಿಸಿ, ಕೇವಲ ಪಾತಗಳ ಮೂಲಕ, ಇತರ ಕೋಶಗಳಿಗೆ ಸಂಬಂಧ ಏರ್ಪಡಿಸಿಕೊಳ್ಳುವುವು; ಅಲ್ಲದೆ ಬಲಿತ ನೀರ್ಗೊಳವೆ ಕೋಶಗಳಲ್ಲಿ ಮೂಲಕೋಶಪೊರೆಗಳ ಮೇಲೆ ಉಂಗುರಾಕೃತಿ, ಹುರುಳಿ ಆಕೃತಿ, ಏಣಿಯಾಕೃತಿ, ಜಾಲಾಕೃತಿ, ಅಥವಾ ಸುಲಭಪಾತಗಳನ್ನು ಹೋಲುವ ಕಠಿಣಾಂಶಗಳನ್ನು ಹೊಂದಿರುವುವು. ಕೆಳಮಟ್ಟದ ಸಸ್ಯಗಳಲ್ಲಿ ಉಂಗುರಾಕೃತಿಯ ಕಠಿಣಾಂಶಗಳನ್ನು, ಕೆಳಮಟ್ಟದ ದ್ವಿದಳ ಸಸ್ಯಗಳಲ್ಲಿ ಏಣಿ ಆಕಾರದ ಕಠಿಣಾಂಶಗಳನ್ನು ಹೊಂದಿರುವ ನೀರ್ಗೊಳವೆಗಳನ್ನು ಕಾಣಬಹುದು. ಕೆಳ ಮತ್ತು ಮೇಲ್ವರ್ಗಗಳ ಸಸ್ಯಗಳಲ್ಲಿ ನಾಳಾಂಶಗಳು ಒಂದಕ್ಕೊಂದು ಕೂಡಿಕೊಂಡಿರುವಂತೆ ನಾಳಕೋಶವನ್ನು ರಚಿಸುತ್ತವೆ. ಈ ಕೋಶಗಳು ರಂಧ್ರವುಳ್ಳವಾಗಿದ್ದು ಕಠಿಣಾಂಶಗಳನ್ನು ಮತ್ತು ಪಾತಗಳನ್ನು ಹೊಂದಿರುವುವು. ಎರಡು ಕೋಶಗಳು ಸೇರುವ ಸ್ಥಳಗಳಲ್ಲಿ ವಿವಿಧ ರೀತಿಯ ರಂಧ್ರಗಳಿದ್ದು ಈ ಭಾಗಗಳಲ್ಲಿ ರಂಧ್ರಗಳು ಕಡಿಮೆ. ಆದರೆ ಹೆಚ್ಚು ಸ್ಥಳಾವಕಾಶ ಇರುವ ರಂಧ್ರಗಳುಳ್ಳ ನಾಳಾಂಶಕೋಶ ಹೆಚ್ಚು ವಿಕಾಸಗೊಂಡಿದೆಯೆಂದು ಕೆಲವು ವಿಜ್ಞಾನಿಗಳ ಅಭಿಪ್ರಾಯ. ರ್‍ಯಾನೇಲೀಸ್ ಗುಂಪಿನ ಕೆಲವು ಸಸ್ಯಗಳಲ್ಲಿ ನಾಳ ಅಂಗಗಳು ಕಂಡುಬರುವುದಿಲ್ಲವಾದ್ದರಿಂದ ಅವುಗಳು ಸಸ್ಯವಿಕಾಸದ ಬಗ್ಗೆ ಕೆಲವು ಮಾಹಿತಿಗಳನ್ನು ಒದಗಿಸುವುವು. ಅವುಗಳಲ್ಲಿ ಮೂಲ ಮತ್ತು ಮಾರ್ಪಟ್ಟ ನೀರ್ನಾಳ ಅಂಗಾಂಶಗಳಿದ್ದು, ಅವುಗಳು ನೀರ್ನಾಳ ಅಂಶಗಳ ಉತ್ಪತ್ತಿಯ ಎರಡು ಹಂತಗಳೆಂಬ ಅಭಿಪ್ರಾಯವಿದೆ. ಮೂಲ ಮತ್ತು ಆನುಷಂಗಿಕ ನೀರ್ನಾಳ ಅಂಗಾಂಶಗಳ ಉತ್ಪತ್ತಿ ಮತ್ತು ಪ್ರಭೇದನಗಳು ಸಂಕೀರ್ಣವಾಗಿದ್ದು ಈ ಎರಡು ಅಂಗಾಂಶಗಳ ಮಧ್ಯದಲ್ಲಿರುವ ಸಂಕ್ರಮಣ ನೀರ್ನಾಳ ಅಂಗಾಂಶಗಳ ಗುಣವಿಶೇಷಗಳು ಅಗತ್ಯವಾಗಿರುವುದರಿಂದ ಸದ್ಯಕ್ಕೆ, ನೀರ್ನಾಳ ಅಂಗಾಂಶಗಳ ವಿಕಸನದ ಪೂರ್ಣವಾದ ಅಂಶಗಳು ತಿಳಿದುಬಂದಿಲ್ಲ.

**8. ರಸನಾಳ ಅಂಗಾಂಶ (ಫ್ಲೋಯೆಮ್) :** (ಚಿತ್ರ 9). ಇದು ಕೇವಲ ಖಚಿತ ನಾಳಾಂಶಗಳಿಂದ ರಚಿಸಲ್ಪಟ್ಟು, ಸಸ್ಯದ ಆಹಾರ ಸಾಗಣೆಯ ಮುಖ್ಯ ಮಾರ್ಗವಾಗಿದೆ. ಮೂಲವರ್ಧನ ಅಂಗಾಂಶಗಳಿಂದಲೂ ನಾಳಕೂರ್ಚಅಂಗಾಂಶಗಳಿಂದಲೂ ಉದ್ಭವಿಸುವ ಈ ಅಂಗಾಂಶ ಒಂದಕ್ಕೊಂದು ಸೇರಿಕೊಂಡ ನಾಳಾಂಶಗಳಿಂದಾಗಿ, ಬಲಿತ ರಸನಾಳಕೋಶಗಳು, ಕೋಶಕೇಂದ್ರರಹಿತ ಕೋಶದ್ರವವನ್ನೂ ಅಂತರ್ಗತ ವಸ್ತುಗಳನ್ನೂ ವರ್ಣಧಾತುಗಳನ್ನೂ ಹೊಂದಿರುವುದು. ರಸನಾಳಕೋಶಗಳ ಪಾರ್ಶ್ವಗಳಲ್ಲಿರುವ ಸಂಗಾತಿ (ಕಂಪ್ಯಾನಿಯನ್) ಕೋಶಗಳು ಮತ್ತು ರಸನಾಳ ಪರೆಂಕಿಮ ಕೋಶಗಳು ಸಜೀವಿಕೋಶಗಳಾಗಿದ್ದು ಸಂಗಾತಿಕೋಶದ ಕೇಂದ್ರಭಾಗದ ರಸನಾಳ ಕೋಶದ ಕಾರ್ಯಗಳನ್ನು ನಿರ್ದೇಶಿಸುವುದು ಎಂದು ಅನೇಕರು ಅಭಿಪ್ರಾಯಪಟ್ಟಿರುವರು.

ರಸನಾಳ ಮತ್ತು ಸಂಗಾತಿಕೋಶಗಳ ಉತ್ಪತ್ತಿ ಒಂದೇ ಮೂಲಕೋಶದಿಂದ ಉಂಟಾಗುವುದರಿಂದ ಈ ಅಭಿಪ್ರಾಯಕ್ಕೆ ಮನ್ನಣೆಯಿದೆ. ಅನಾವೃತಬೀಜಸಸ್ಯಗಳಲ್ಲಿಯೂ ನಿರ್ದಿಷ್ಟ ರಸನಾಳ ಅಂಗಾಂಶವಿದ್ದು, ಸಂಗಾತಿಕೋಶಗಳ ಬದಲು ಕೆಲವು ಅಂಟುದ್ರವ ಕೋಶಗಳಿದ್ದು, ಅವುಗಳು ಸಂಗಾತಿಕೋಶಗಳಂತೆ ಕಾರ್ಯನಿರ್ವಹಣೆ ಮಾಡುವುವೆಂದೂ ಹೇಳಲಾಗಿದೆ (ಚಿತ್ರ 10). ಕೆಲವು ದ್ವಿದಳ ಸಸ್ಯಗಳಲ್ಲಿಯೂ ಅಂಟುವಸ್ತುಗಳ ಕೋಶಗಳಿರುವುದರಿಂದ ಈ ಅಭಿಪ್ರಾಯವನ್ನು ಒಪ್ಪಬಹುದಾಗಿದೆ. ಈ ಪ್ರಯೋಗಗಳಿಂದ ಬಲಿತ ನಾಳಾಂಶಕೋಶಗಳಲ್ಲಿ ಕೇಂದ್ರವಸ್ತುಗಳು ಅಜ್ಞಾತವಾದರೂ ನ್ಯೂಕ್ಲಿಯೋಲಸ್‌ಗಳು, ಪಿಷ್ಟವಸ್ತುಗಳು, ಅಂತರ್ಗತ ಸ್ಥಿತಿಯಲ್ಲಿರುವುವೆಂದು ತಿಳಿದುಬಂದಿದೆ. ರಚನೆಯಲ್ಲಿ ರಸನಾಳಕೋಶಗಳು ಒಂದರಮೇಲೊಂದು ಜೋಡಿಸಿದ ನಾಳಗಳಂತಿದ್ದು, ಜೋಡಣೆಯ ಭಾಗಗಳಲ್ಲಿ ಕೆಲವು ರಂಧ್ರಗಳಿದ್ದು ಅವುಗಳ ಮೂಲಕ ಎರಡು ಕೋಶಗಳ ಮೂಲಕೋಶ ಪೊರೆಗಳಿಗೆ ಸಂಬಂಧವೇರ್ಪಡಿಸುವ ತಂತುಗಳು ಇರುವುವು. ಈ ತಂತುಗಳ ಮೂಲಕ ಕೋಶದ್ರವದ ಪೊರೆಗಳು ಸಂಧಿಸುವುವು ಮತ್ತು ಆಹಾರಾಂಶಗಳ ವಿನಿಮಯ ನಡೆಯುವುದು. ಎರಡು ರಸನಾಳ ಕೋಶಗಳ ಮಧ್ಯದಲ್ಲಿರುವ ಈ ರಂಧ್ರಭಾಗಕ್ಕೆ ರಂಧ್ರಪಟ್ಟಿ (ಸೀವ್‌ಪ್ಲೇಟ್) ಎಂಬ ಹೆಸರುಂಟು. ಚಳಿಗಾಲಗಳಲ್ಲಿ ಈ ರಂಧ್ರಗಳು ಕ್ಯಾಲಸ್ ಎಂಬ ವಸ್ತುವಿನಿಂದ ಆವೃತವಾಗಿ ಮುಚ್ಚಿಹೋಗುವುವು. ರಂಧ್ರಪಟ್ಟಿಗಳು, ಕೆಲವು ಸಸ್ಯಗಳಲ್ಲಿ ಸರಳರೀತಿಯವಾಗಿದ್ದು, ಕೆಲವು ಸಸ್ಯಗಳಲ್ಲಿ ಬಾಗಿದಂತೆ ಜೋಡಿಸಲ್ಪಟ್ಟಿರುವುದರಿಂದ ಅವುಗಳು ಕ್ಲಿಷ್ಟಪಟ್ಟಿ ಎಂದು ಕರೆಯಲ್ಪಡುವುವು. ಎರಡು ರಸನಾಳಕೋಶಗಳ ಪಾರ್ಶ್ವಗಳಲ್ಲಿ ರಂಧ್ರಪಟ್ಟಿಗಳಂತೆ ಕಂಡುಬರುವ ಭಾಗಗಳಿಗೆ ಜಾಲರಿಕ್ಷೇತ್ರಗಳೆಂದು ಹೆಸರು. ರಸನಾಳಕೋಶಗಳ ಪೊರೆಗಳು ತೆಳ್ಳಗಿದ್ದು, ಅವುಗಳ ಮತ್ತು ಸಂಗಾತಿ ಕೋಶಗಳ ಸಂಬಂಧಗಳ ಬಗ್ಗೆ ಅನೇಕ ಅಂಶಗಳು ಇನ್ನೂ ತಿಳಿದಿಲ್ಲ. ಮೂಲ ಹಾಗೂ ಆನುಷಂಗಿಕ ರಸನಾಳ ಅಂಗಾಂಶಗಳನ್ನು ಬೇರ್ಪಡಿಸುವುದು ಕಷ್ಟಸಾಧ್ಯ. ಅಂಗಾಂಗಗಳ ಮೂಲವಿಸ್ತರಣೆಯ ಕಾಲಗಳಲ್ಲಿ ಉತ್ಪತ್ತಿಯಾಗುವ ಮೂಲರಸನಾಳ ಅಂಗಾಂಶ ಮತ್ತು ಬೆಳೆವಣಿಗೆಯ ಅಂತ್ಯಕಾಲಗಳಲ್ಲಿ ಉಂಟಾಗುವ ಮಾರ್ಪಟ್ಟ ರಸನಾಳ ಅಂಗಾಂಶ ಎಂದು ಎರಡು ವಿಧದ ರಸನಾಳ ಅಂಗಾಂಶಗಳನ್ನು ಸಸ್ಯದೇಹದಲ್ಲಿ ಕಾಣಬಹುದು. ಕೆಲವು ಸಾರಿ ಈ ಎರಡು ಅಂಗಾಂಶಗಳಿಂದ ನಾರುಅಂಗಾಂಶಗಳ ಉತ್ಪತ್ತಿಯೂ ಆಗುವುದುಂಟು.

**9. ಹಾಲ್ಗರೆಯುವ ಅಂಗಾಂಶಗಳು (ಲ್ಯಾಟಿಸಿಫಿರಸ್ ಟಿಶ್ಯೂ) :** (ಚಿತ್ರ 14) ಬಿಳಿ ಹಳದಿ ಮತ್ತು ವರ್ಣರಹಿತ ಹಾಲಿನಂಥ ದ್ರವವಸ್ತುವನ್ನು (ಲೇಟೆಕ್ಸ್) ಒಸರುವ ಕೆಲವು ಅಂಗಾಂಶಗಳನ್ನು ಅಪೋಸೈನೇಸೀ (ಕಣಿಗಿಲೆ ಜಾತಿಯ ಕುಟುಂಬ), ಆಸ್ಕ್ಲಿಪಿಡಿಯೇಸೀ, ಮೊರೇಸೀ (ಆಲ ಅರಳಿಜಾತಿ), ಯೂಫೊರ್‌ಬಿಯೇಸೀ (ಕಳ್ಳಿಗಳ ಜಾತಿ) ಮುಂತಾದ ಸಸ್ಯಗಳಲ್ಲಿ ಕಾಣಬಹುದು. ರಬ್ಬರ್, ಓಪಿಯಂ ರಸ, ಕಳ್ಳಿಹಾಲು, ಎಕ್ಕದಹಾಲು ಇತ್ಯಾದಿ ಸಸ್ಯಗಳ ಹಾಲು ಈ ಕೆಲವು ಸಂಕೀರ್ಣ ಪದರಗಳಂತಿರುವ ಅಂಗಾಂಶಗಳಿಂದ ಉತ್ಪಾದಿಸಲ್ಪಡುವುವು. ರಾಸಾಯನಿಕವಾಗಿ ಸಸಾರಜನಕ ವಸ್ತುಗಳು, ಮೇಣಗಳು, ರೆಸಿನ್‌ಗಳು ಇತ್ಯಾದಿ ವಸ್ತುಗಳ ಸಮ್ಮಿಶ್ರಣವಾದ ಹಾಲುರಸಗಳು ಪೌಷ್ಟಿಕಾಂಶ ಅಥವಾ ಶೇಖರಿತ ಆಹಾರಾಂಶಗಳಾಗಿರಬಹುದೆಂದು ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಡಿಬ್ಯಾರಿ ಎಂಬ ವಿಜ್ಞಾನಿಯ ಪ್ರಕಾರ, ಕೀಲುಗಳಿಂದಾದ ಸ್ಫುಟ ಹಾಲುರಸದ ಅಂಗಾಂಶಗಳು ಮತ್ತು ರೆಂಬೆಗಳಂತೆ ಪ್ರಸರಿಸುವ ಅಸ್ಫುಟ ಹಾಲುರಸದ ಅಂಗಾಂಶಗಳೆಂದು ಎರಡು ವಿಧಗಳಿವೆ. ಅಸ್ಫುಟ ಹಾಲುರಸದ ಈ ಅಂಗಾಂಶ ಸಂಕೀರ್ಣವಾಗಿದ್ದು ಬೇರುಗಳು ಮತ್ತು ಕಾಂಡಗಳಲ್ಲಿ ಹರಡಿರುವುದು. ಉದಾ: ಅಪೋಸೈನೇಸೀ, ಯೂಫೋರ್‌ಬಿಯೇಸೀ ಸಸ್ಯಗಳು, ಆಸ್ಕ್ಲಿಪಿಯಡೇಸೀ ಸಸ್ಯಗಳು ಅಸ್ಫುಟ ಹಾಲುರಸ ಅಂಗಾಂಶಗಳನ್ನು ಹೊಂದಿರುವುವು. ಭ್ರೂಣದ ಕೆಲವು ಅಂಶಗಳಿಂದ ಉದ್ಭವಿಸುವ, ಈ ಅಂಗಾಂಶ, ಬೀಜದ ಮೊಳೆಯುವಿಕೆಯಲ್ಲಿ ಸ್ಪಷ್ಟವಾಗಿ ಕಾಣಬರುವುದನ್ನು, ಪಪಾವರೇಸೀ, ಕ್ಯಾರಿಕೇಸೀ ಇತ್ಯಾದಿ ಕುಟುಂಬದ ಸಸ್ಯಗಳಲ್ಲಿ ಕಾಣಬಹುದು. ಸ್ಫುಟ ಹಾಲುರಸ ಅಂಗಾಂಶಗಳಲ್ಲಿ ಅಡ್ಡಪೊರೆಗಳು ನಶಿಸಿಹೋಗುವುದರಿಂದ ಕೊಳವೆಗಳು ಒಂದೇ ಸಾಲುಗಳಲ್ಲಿ ಹರಡಿರುವುವು.

**10. ಆನುಷಂಗಿಕ ಅಂಗಾಂಶಗಳು :** ಆನುಷಂಗಿಕ ಬೆಳೆವಣಿಗೆಗಳುಳ್ಳ ಕೆಲವು ದ್ವಿದಳ ಸಸ್ಯಗಳ ಮತ್ತು ಅನಾವೃತಬೀಜಸಸ್ಯಗಳ ಕಾಂಡಗಳು ಮತ್ತು ಬೇರುಗಳು ಮೂಲಅಂಗಾಂಶಗಳ ಹೊರ ಆವರಣಗಳಲ್ಲಿ ಕೆಲವು ರಕ್ಷಕ ಅಂಗಾಂಶಗಳನ್ನು ಉತ್ಪಾದಿಸುವುವು. ಇವುಗಳನ್ನು ಫೆಲೊಜೆನ್, ಪೆರಿಡರ್ಮ್ ಮತ್ತು ಈ ಎರಡು ಅಂಗಾಂಶಗಳ ಮಧ್ಯದ ಫೆಲಮ್ ಎಂದು ಮೂರು ವಿಭಾಗಗಳಾಗಿ ಮಾಡಬಹುದು. ಕಾರ್ಕ್‌ಕೆಂಬಿಯಂ ಅಥವಾ ತೊಗಟೆವರ್ಧನ ಅಂಗಾಂಶಗಳಿಂದ ಈ ಅಂಗಾಂಶಗಳು ಉತ್ಪತ್ತಿಯಾಗುವುವು. ಹಾಗೆಯೆ, ಮೂಲವರ್ಧನ ಅಂಗಾಂಶ ಕೂಡ ಇತರ ಮೂಲ ಅಂಗಾಂಶಗಳ ಪೂರ್ಣ ಬೆಳೆವಣಿಗೆಯ ಅನಂತರ, ಪುನಃ ಕಾರ್ಯಾರಂಭಮಾಡಿ, ಅಂತರಗುಚ್ಛವರ್ಧನಅಂಗಾಂಶಗಳನ್ನು ಉತ್ಪಾದಿಸುವುದು. ಅಂತರಗುಚ್ಛವರ್ಧನ ಅಂಗಾಂಶ ಮತ್ತು ನಾಳಕೂರ್ಚವರ್ಧನ ಅಂಗಾಂಶಗಳು ಜೊತೆಗೂಡಿ ವರ್ಧನ ಅಂಗಾಂಶವರ್ತುಲಗಳನ್ನು ಉತ್ಪಾದಿಸುವುವು. ಈ ರೀತಿಯ ಮೂಲ ಮತ್ತು ಆನುಷಂಗಿಕ ಬೆಳೆವಣಿಗೆಗಳಿಂದ ಸಸ್ಯದೇಹ ದಪ್ಪನಾಗುವ ಕ್ರಿಯೆಗೆ ಆನುಷಂಗಿಕ ಬೆಳೆವಣಿಗೆ ಎಂದು ಹೆಸರು.

ವರ್ಧನಅಂಗಾಂಶವರ್ತುಲಗಳು, ಹೊರ ಪ್ರದೇಶಗಳಲ್ಲಿ ಆನುಷಂಗಿಕರಸನಾಳ ಅಂಗಾಂಶಗಳನ್ನೂ ಒಳಪ್ರದೇಶಗಳಲ್ಲಿ ಆನುಷಂಗಿಕ ನೀರ್ನಾಳ ಅಂಗಾಂಶಗಳನ್ನೂ ಉತ್ಪಾದಿಸುವುವು. ಈ ಬೆಳೆವಣಿಗೆಯಲ್ಲಿ ನೀರ್ನಾಳಅಂಗಾಂಶದ ಹೆಚ್ಚು ಬೆಳೆವಣಿಗೆಯಿಂದ ರಸನಾಳಗಳ ಮಧ್ಯೆಯಿರುವ ಕೆಲವು ಪರೆಂಕಿಮ ಅಂಗಾಂಶಗಳು ಕಿರಣಗಳಂತೆ ಪ್ರಸರಿಸುವುದರಿಂದ ಅವುಗಳಿಗೆ ಆನುಷಂಗಿಕಮಧ್ಯರೇಖೆಗಳೆಂದು ಹೆಸರು ಬಂದಿದೆ. ಅಲ್ಲದೆ ವರ್ಧನಅಂಗಾಂಶಗಳಿಂದ ಉದ್ಭವಿಸುವ ಈ ರೇಖೆಗಳಿಗೂ ತಿರುಳು ಅಂಗಾಂಶಗಳಿಂದ (ಪಿತ್) ಪೆರಿಸೈಕಲ್ ಪಟ್ಟಿಯ ಹೊರತಿರುಳಿನ ಪದರದವರೆಗೆ ಹರಡುವ ರೇಖೆಗಳಿಗೂ ಸಾಮ್ಯವಿದ್ದು, ತಿರುಳುಅಂಗಾಂಶಗಳಲ್ಲಿ ಕಾಣಬರುವ, ಈ ರೇಖೆಗಳಿಗೆ ಮೂಲಮಧ್ಯರೇಖೆಗಳು ಎಂದು ಹೆಸರು ಬಂದಿದೆ. ಈ ಎರಡು ರೀತಿಯ ಮಧ್ಯರೇಖೆಗಳು ಆಹಾರ ಮತ್ತು ನೀರುಗಳ ಸಾಗಣೆಯ ಕಾರ್ಯಗಳಲ್ಲಿ ಭಾಗವಹಿಸುವುವು.

ಋತುಮಾನಗಳಿಗೆ ಅನುಸಾರವಾಗಿ, ವರ್ಧನಅಂಗಾಂಶಗಳು ಎರಡು ರೀತಿಯ ಗಟ್ಟಿಮರದ ಅಂಗಾಂಶಗಳನ್ನು ಉತ್ಪಾದಿಸುವುವು. ವಸಂತ ಋತುವಿನಲ್ಲಿ ಹೆಚ್ಚು ಚಟುವಟಿಕೆಯಿಂದ ಕೂಡಿದ ವರ್ಧನಅಂಗಾಂಶ ಅನೇಕ ನಾಳಗಳು ಮತ್ತು ಪಾತಗಳುಳ್ಳ

ಮರದ ಅಂಗಾಂಶವನ್ನು, ಚಳಿಗಾಲದಲ್ಲಿ ಕಿರಿದಾದ ಪಾತಗಳುಳ್ಳ ನಾಳಗಳನ್ನೂ ನಾರುಗಳುಳ್ಳ ಮರದ ಅಂಗಾಂಶವನ್ನೂ ಉತ್ಪಾದಿಸುವುದರಿಂದ, ಕ್ರಮವಾಗಿ ಇವುಗಳಿಗೆ ವಸಂತ ಋತುವಿನ ಅಂಗಾಂಶ ಮತ್ತು ಶರತ್ ಋತುವಿನ ಅಂಗಾಂಶ ಎಂದು ಕರೆಯುತ್ತಾರೆ. ಈ ಮರದ ಅಂಗಾಂಶಗಳ ಒಟ್ಟುಗೂಡುವಿಕೆಯಿಂದಾದ ವರ್ತುಲ ಅಂಗಾಂಶಕ್ಕೆ ಋತುಚಕ್ರ ಅಂಗಾಂಶ ಅಥವಾ ವರ್ಷಕ್ಕೊಂದು ಬಾರಿ ಉತ್ಪಾದನೆಯಾಗುವ ವಾರ್ಷಿಕಉಂಗುರ (ಆನ್ಯುಯಲ್ ರಿಂಗ್ಸ್) ಎಂಬ ಹೆಸರುಗಳಿವೆ. ಋತುಮಾನಗಳ ವ್ಯತ್ಯಾಸಗಳಿಂದ ವಾರ್ಷಿಕಉಂಗುರಗಳಲ್ಲಿ ವ್ಯತ್ಯಾಸವುಂಟಾಗಬಹುದು. ಉಂಗುರಗಳ ಒಳಗಣ ಅಂಗಾಂಶಭಾಗಗಳು ಟ್ಯಾನಿನ್ ವಸ್ತುವಿನಿಂದ ಆವೃತವಾಗಿ ಗಟ್ಟಿಮರದ (ಹಾರ್ಡ್ ವುಡ್) ಅಥವಾ ಡ್ಯೂರಮೆನ್ ಭಾಗಗಳಾಗಿ ಹೊರಪ್ರದೇಶದ ಭಾಗಗಳು ಹೆಚ್ಚು ಬಣ್ಣವಿಲ್ಲದ ತೆಳ್ಳಗಿರುವ ಸ್ಯಾಪ್ ವುಡ್ ಅಥವಾ ಆಲ್‌ಬರ್‍ನಂ ಭಾಗವಾಗಿ ಪರಿವರ್ತನೆಗೊಳ್ಳುವುವು. ಅಲ್ಲದೆ ಕ್ರಮವಾಗಿ ಆಹಾರ, ನೀರು, ಖನಿಜಾಂಶ– ಇವುಗಳ ಸಾಗಣೆಯ ಕಾರ್ಯಗಳಲ್ಲಿ ಭಾಗವಹಿಸುವುವು.

**11. ಕಾರ್ಕ್ ಕೇಂಬಿಯಂ ಅಥವಾ ತೊಗಟೆ ವರ್ಧನ ಅಂಗಾಂಶ :** ವರ್ಧನ ಅಂಗಾಂಶದ ಬೆಳವಣಿಗೆಗಳಿಂದ ಮೂಡುವ ಒತ್ತಡ ಸಸ್ಯದೇಹದ ಹೊರಮೈಅಂಗಾಂಶಗಳನ್ನು ಹಿಗ್ಗಿಸುವುದರಿಂದ ಹೊರಚರ್ಮಪದರ ಸೀಳಿಹೋಗುವುದು. ಹೊರಪ್ರದೇಶಗಳಲ್ಲಿ ಕಾಣಬರುವ ಕಾರ್ಟೆಕ್ಸ್ ಅಂಗಾಂಶ, ಈ ರೀತಿಯ ಒತ್ತಡಗಳನ್ನು ಸಹಿಸಿ, ಸಸ್ಯದ ಹೊರಮೈಭಾಗಗಳನ್ನು ರಕ್ಷಿಸುವುದು. ಆನುಷಂಗಿಕ ವಿಭಜನಅಂಗಾಂಶದ ಕೆಲವು ಕೋಶಜಾಲಗಳು ಈ ಭಾಗಗಳಲ್ಲಿ ಉದ್ಭವಿಸುವುದರಿಂದ, ತೊಗಟೆಯ ವರ್ಧನ ಹೊರಪದರಗಳು ವರ್ಧಿಸಿ, ತೊಗಟೆಅಂಗಾಂಶಗಳನ್ನು ಉತ್ಪಾದಿಸುವುದು. ಈ ಅಂಗಾಂಶದ ಒಳಪ್ರದೇಶಗಳಲ್ಲಿ ಸೆಲ್ಯುಲೋಸ್ ಪೊರೆಗಳಿಂದ ಆವೃತವಾದ ಆಹಾರೋತ್ಪಾದಕ ಪರೆಂಕಿಮ ಅಂಗಾಂಶಗಳಿಂದ ಫೆಲೊಡರ್ಮ್ ಎಂಬ ಹೊರಪ್ರದೇಶಗಳಲ್ಲಿ ದಪ್ಪಪೊರೆಗಳಿಂದಾವೃತವಾದ ಅಜೈವಿಕ ತೊಗಟೆ ಅಂಗಾಂಶಗಳನ್ನು ಉತ್ಪಾದಿಸುವ ಪೆರಿಡರ್ಮ್ ಎಂಬ ಅಂಗಾಂಶಗಳು ಉದ್ಭವಿಸುವುವು.

ಕಾರ್ಕ್ ಅಥವಾ ತೊಗಟೆ ಅಂಗಾಂಶಗಳಲ್ಲಿ ಕೆಲವೆಡೆ ಗಂಟು ಮತ್ತು ಹರಳುಗಳಿಂದ ಕೂಡಿದ ಲೆಂಟಿಸೆಲ್‌ಗಳೆಂಬ ವಾಯುದ್ವಾರಗಳು ಇರುವುವು. ಇವುಗಳ ಮೂಲಕ ಅನಿಲಗಳ ವಿನಿಮಯ ನಡೆಯುತ್ತದೆ. ಚಳಿಗಾಲದಲ್ಲಿ ಎಲೆಗಳು ಉದುರುವ ಸಸ್ಯಗಳಲ್ಲಿ, ಎಲೆತೊಟ್ಟುಗಳ ಕೆಳಭಾಗಗಳಲ್ಲಿ ಆ್ಯಬ್‌ಸಿಷನ್ ಪದರಗಳು ಕಂಡುಬರುವುವು. ಈ ಅಂಗಾಂಶ ತೊಗಟೆಅಂಗಾಂಶದ ಹೊರ ಆವರಣಗಳಲ್ಲಿದ್ದು, ಅವುಗಳಲ್ಲಿನ ಸೆಲ್ಯುಲೋಸ್ ಪೆಕ್ಟಿನ್ ವಸ್ತುಗಳಾಗಿ ಪರಿವರ್ತನೆಗೊಳ್ಳುವುದರಿಂದ, ಬೇರೆಯಾಗುವ ಕೋಶಗಳನ್ನು ಹೊಂದಿದ್ದು, ಎಲೆಗಳ ಉದುರುವಿಕೆಗೆ ಅನುಕೂಲವನ್ನುಂಟುಮಾಡುವುದು.

ಸಸ್ಯದೇಹದ ವಿವಿಧ ಅಂಗಾಂಶಗಳ ಉತ್ಪತ್ತಿ, ರಚನೆ, ರೂಪ, ಪ್ರಭೇದನ ಮತ್ತು ಕಾರ್ಯನಿರ್ವಹಣೆಗಳಲ್ಲಿ ಅನೇಕ ಅಂಶಗಳು ತಿಳಿದುಬಂದಿದ್ದರೂ ಅಂಗಾಂಶ ವ್ಯವಸಾಯ, ಜೀವಕೋಶಶಾಸ್ತ್ರ, ಅಂಗಗಳ ಸ್ಥಳಾಂತೀಕರಣ–ಇತ್ಯಾದಿಗಳ ಬಗ್ಗೆ ಮಹತ್ವದ ಅನೇಕ ಅಂಶಗಳು ಇನ್ನೂ ಬೆಳಕಿಗೆ ಬರಬೇಕಾಗಿದೆ. (ವೈ.ಆರ್.ಎಂ.)

**ಅಂಗಾರ :** ದಕ್ಷಿಣ ಮಧ್ಯ ಏಷ್ಯದಲ್ಲಿ (ಸೈಬೀರಿಯದಲ್ಲಿ) ಇರುವ ಒಂದು ಪ್ರದೇಶ. ಇಲ್ಲಿ ಅಂಗಾರ ಹೆಸರಿನ ನದಿ ಹರಿಯುವುದರಿಂದ ಈ ಪ್ರದೇಶಕ್ಕೆ ಈ ಹೆಸರು ಬಂದಿದೆ. ಭೂಮಿಯ ಪ್ರಮುಖ ಸ್ಥಿರಪ್ರದೇಶಗಳ ಪೈಕಿ ಇದೂ ಒಂದೆನಿಸಿದೆ. ಹೆಸರಿದೆ.ಆಲ್ಫ್ರೆಡ್‌ವೆಗನರನು ತನ್ನ ಭೂಖಂಡಗಳ ಚಲನಾ ಸಿದ್ಧಾಂತದಲ್ಲಿ, ಪ್ಯಾಂಜಿಯ ಸಮಗ್ರ ಭೂಭಾಗವು ವಿಭಾಗಗೊಂಡ ಉತ್ತರದ ಭಾಗವನ್ನು ಅಂಗಾರ ಅಥವಾ ಲಾರೇಷಿಯ ಭೂ ಫಲಕವೆಂದು ಹೆಸರಿಸಿರುವನು. ಪೃಥ್ವಿಯ ಸ್ಥಿರ ಭಾಗಗಳಲ್ಲಿ ಪ್ರಮುಖವಾದುದು;

ಭೂಗರ್ಭಶಾಸ್ತ್ರದ ಪ್ರಕಾರ ಪುರಾತನಯುಗಕ್ಕೆ (ಆರ್ಕೇಯನ್) ಸೇರಿದ ಪ್ರಾಚೀನಶಿಲೆಗಳಿಂದ ಆವರಿಸಲ್ಪಟ್ಟಿದೆ. ಆ ಯುಗದಲ್ಲಿ ಪುರಾತನ ಪರ್ವತಗಳೂ ಉದ್ಭವಿಸಿದುವು. ಅನಂತರ ಉಂಟಾಗಿರುವ ಸಂಚಯನಕಾರ್ಯದಿಂದ ಈ ಭಾಗಗಳ ಪ್ರಾಚೀನಶಿಲೆಗಳು ಒಳಭಾಗದಲ್ಲಿ ಸೇರಿಕೊಂಡಿವೆ. ಅಂಗಾರ ಭೂಮಿಯ ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಇತ್ತೀಚೆಗೆ ಉದ್ಭವಿಸಿರುವ ಪರ್ವತಶ್ರೇಣಿಗಳು ಕಂಡುಬರುತ್ತವೆ. ಈ ಪ್ರದೇಶದ ಉತ್ತರ ಭಾಗದಲ್ಲಿ ಆರ್ಕ್‌ಟಿಕ್ ಸಾಗರವಿದೆ. ಪಶ್ಚಿಮದಲ್ಲಿ ಇತ್ತೀಚಿನ ಪರ್ವತಶ್ರೇಣಿಗಳಲ್ಲಿ ಒಂದಾದ ಯೂರಲ್ ಪರ್ವತವಿದೆ. ಪ್ರಿಕೇಂಬ್ರಿಯನ್ ಕಾಲದಿಂದ ಈ ಭಾಗದಲ್ಲಿ ನಗ್ನೀಕರಣಕಾರ್ಯ ನಡೆದು ಸೈಬೀರಿಯದ ತಗ್ಗಾದ ಮೈದಾನ ಪ್ರದೇಶ ಏರ್ಪಟ್ಟಿದೆ. (ಎಂ.ಎಸ್.ಎಂ.)

**ಅಂಗಾರಕ :** ದೂರಾನುಸಾರ ಸೂರ್ಯನಿಂದ ನಾಲ್ಕನೆಯ ಗ್ರಹ (ಮಾರ್ಸ್). ಮೂರನೆಯದು ಭೂಮಿ. ಮಂಗಳ, ಕುಜ ಎಂಬುವು ಪರ್ಯಾಯ ನಾಮಗಳು. ಸೂರ್ಯನಿಂದ ಇದರ ದೂರ ಸರಾಸರಿ 227.9 ಮಿಲಿಯನ್ ಕಿಮೀ. 15 ಅಥವಾ 17 ವರ್ಷಗಳಿಗೊಮ್ಮೆ (1939, 1956, 1971, ಇತ್ಯಾದಿ) ಇದು ಭೂಮಿಗೆ ಅತ್ಯಂತ ಸಮೀಪದಲ್ಲಿ, ಎಂದರೆ 55,706,000 ಕಿಮೀ ದೂರದಲ್ಲಿ ಬರುತ್ತದೆ. ವ್ಯಾಸ 6810 ಕಿಮೀ. ಎಂದರೆ ಭೂಮಿಯ ಅರ್ಧಕ್ಕಿಂತ ಸ್ವಲ್ಪ ಹೆಚ್ಚು. ಅಂಗಾರಕದ ವರ್ಷದಲ್ಲಿ 687 ದಿವಸಗಳಿದ್ದು, ಅಂಗಾರಕದ ದಿವಸದ ಅವಧಿ ಭೂಮಿಯದಕ್ಕಿಂತ ತುಸು ಹೆಚ್ಚು. ಕಕ್ಷಾ ತಳಕ್ಕೆ ಅಕ್ಷದ ಬಾಗು $24^{o}$. ಭೂಕಕ್ಷ ಬಾಗುವೂ ಸು. $23^{o}$–$28^{o}$. ಗುರುತ್ವಾಕರ್ಷಣಬಲ ಭೂಮಿಯದರ 0.38ರಷ್ಟು ಮಾತ್ರವಿದೆ. ಗ್ರಹವನ್ನು ಸುತ್ತುವರಿದು ತೆಳು ವಾಯುಮಂಡಲವಿದೆ. ಆದರೆ ಭೂಮಿಯ ವಾಯುಮಂಡಲದ ಶೇ.5 ರಷ್ಟು ಮಾತ್ರ. ಆಕ್ಸಿಜನ್ ಅತ್ಯಲ್ಪವಿದೆ. ನೀರಿನ ಹಬೆ ಇಲ್ಲವೆಂದೇ ಹೇಳಬಹುದು. ಆದರೆ ಮೇರುಪ್ರದೇಶದ ಶಿಖರಗಳು ಹಿಮದಿಂದ ಹಿಮಾವೃತವಾಗಿರುವಂತೆ ಕಾಣುತ್ತವೆ. ಶುಕ್ರ ಮೇಘಾವೃತವಾಗಿದೆ. ಕುಜನಿಗೆ ಇಂಥ ಮಸುಕೇನೂ ಇಲ್ಲ. ಚಂದ್ರನಲ್ಲಿರುವಂಥ ಪರ್ವತಗಳಿಲ್ಲ. ತೆಳುಗೆರೆಗಳ ಬಲೆಗಳಿಂದ ಕೂಡಿದ ಕಪ್ಪಾದ ಗುರುತುಗಳು ಚಳಿಗಾಲದಲ್ಲಿ ಕಣ್ಮರೆಯಾಗಿ ವಸಂತಋತುವಿನಲ್ಲೂ ಬೇಸಗೆಯಲ್ಲೂ ಮತ್ತೆ ಕಾಣಿಸಿಕೊಳ್ಳುತ್ತವೆ. ಇವು ಸಸ್ಯರಾಶಿಗಳಿಂದ ಆವೃತವಾದ ನೀರಾವರಿ ಕಾಲುವೆಗಳಿರಬಹುದೆಂಬ ಭಾವನೆಯನ್ನುಂಟುಮಾಡುತ್ತವೆ. ಇವನ್ನು ಇಟಲಿ ದೇಶದ ಖಗೋಳವಿಜ್ಞಾನಿ ಷಿಯಾಪರೆಲ್ಲಿ (1835–1910) 1877ರಲ್ಲಿ ಮೊದಲು ಗುರುತಿಸಿದ. ಅಮೆರಿಕದ ವಿಜ್ಞಾನಿ ಪರ್ಸಿವಲ್ ಲೊವೆಲ್ (1855–1916) ಈ ಗುರುತುಗಳನ್ನು ವಿಶೇಷವಾಗಿ ಅಭ್ಯಸಿಸಿ ಗ್ರಹದ ಮೇಲೆ ಬುದ್ಧಿಶಾಲಿ ಜನರಿರುವರೆಂಬ ಊಹೆಯನ್ನು ಮುಂದಿಟ್ಟ. ಇದು ನಿಜವಲ್ಲ ಎಂದು ತರುವಾಯದ ಕುಜ ಪರೀಕ್ಷಣೆಗಳಿಂದ ತಿಳಿದುಬಂದಿದೆ.

ಗ್ರಹದ ಬಣ್ಣ ಕೆಂಪು ಎಂದೇ ಇದಕ್ಕೆ ಗ್ರೀಕರ ಯುದ್ಧದೇವತೆಯಾದ ಮಾರ್ಸ್‌ನ ಹೆಸರು ಬಂದಿದೆ.ಡೀಮೋಸ್ ಮತ್ತು ಫೋಬೋಸ್ ಎಂಬ ಎರಡು ಉಪಗ್ರಹಗಳಿವೆ. ಇವು ಯುದ್ಧದೇವತೆಯ ಸೇವಕರ ನಾಮಗಳು. ಡೀಮೋಸ್‌ನ ವ್ಯಾಸ ಕೇವಲ 16 ಕಿಮೀ. ಇದು ಅಂಗಾರಕದ ಸುತ್ತ 30 ಗಂ. 18 ಮಿ.ಗಳಲ್ಲಿ ಒಂದು ಪ್ರದಕ್ಷಿಣೆ ಮುಗಿಸುತ್ತದೆ. ಫೋಬೋಸ್‌ನ ವ್ಯಾಸ 58 ಕಿಮೀ. ಪರಿಭ್ರಮಣಕಾಲ ಕೇವಲ 7 ಗಂ 39 ಮಿ. ಇದು ಅಂಗಾರಕದ ದಿವಸಕ್ಕಿಂತ ಕಡಿಮೆಯಾಗಿರುವುದರಿಂದ ಫೋಬೋಸ್ ಪಶ್ಚಿಮದಲ್ಲಿ ಮೂಡಿ ಪೂರ್ವದಲ್ಲಿ ಕಂತುವಂತೆ ಕಂಡುಬರುತ್ತದೆ. ಇದೊಂದು ಏಕೈಕ ವಿರಳ ವಿದ್ಯಮಾನ. ಈ ಉಪಗ್ರಹವನ್ನು ಅಮೆರಿಕದ ಖಗೋಳವಿಜ್ಞಾನಿ ಅಸಫ್ ಹಾಲ್ (1829–1907) 1877ರಲ್ಲಿ ಆವಿಷ್ಕರಿಸಿದ.

ಈಚೆಗೆ ಆಕಾಶನೌಕೆಗಳು ಅಂಗಾರಕಗ್ರಹದ ಸಮೀಪ ಹಾದುಹೋಗಿ ಅಲ್ಲಿಯ ದೃಶ್ಯವನ್ನು ಭೂಮಿಗೆ ಪ್ರಸರಿಸಿವೆ. 1964ರಲ್ಲಿ ಮ್ಯಾರಿನರ್– 4 ಎಂಬ ಅಮೆರಿಕದ ನೌಕೆ 8ತಿಂಗಳ ಕಾಲ 5393500000 ಕಿಮೀ ದೂರ ಪ್ರಯಾಣ ಮಾಡಿ ಮಂಗಳವನ್ನು 5,700 ಕಿಮೀ ದೂರದಿಂದ ಸಂದರ್ಶಿಸಿದೆ. ಆಗ ಭೂಮಿ ಅಂಗಾರಕಗಳ ನಡುವಿನ ಅಂತರ 2150960000 ಕಿಮೀ. ಈ ಯಾನದಿಂದ ತಿಳಿದುಬಂದಿರುವ ಕೆಲವು ವಿವರಗಳು ಹೀಗಿವೆ– ಅಂಗಾರಕಗ್ರಹಕ್ಕೆ ಭೂಮಿಗಿರುವಂಥ ಪ್ರಬಲಕಾಂತ ಕ್ಷೇತ್ರವಾಗಲಿ ವಾನ್ ಅಲನ್ ರೇಡಿಯೇಷನ್ ಪಟ್ಟಿಯಾಗಲಿ ಇರುವುದಿಲ್ಲ. ವಾತಾವರಣ ಭೂಮಿಯದಕ್ಕಿಂತ ಅಧಿಕ ಸಾಂದ್ರ. ದಟ್ಟ ದೂಳಿನಿಂದ ಕೂಡಿದೆ. ಗ್ರಹದ ತಳದ ಬಲು ಭಾಗ ಬಹುತೇಕ ಮರುಭೂಮಿ. ನೀರಿನ ಅಂಶ ಅತ್ಯಲ್ಪ. 4–126 ಕಿಮಿ.ಗಳಷ್ಟು ಅಗಲ ಬಾಯಿಗಳಿರುವ ಮಹಾಕೂಪಗಳು ಅಲ್ಲಿವೆ. ಅಂಗಾರಕ ಬಲುಮಟ್ಟಿಗೆ ಚಂದ್ರನನ್ನು ಹೋಲುವುದು.

ಅಂಟಾರ್ಟಿಕದಲ್ಲಿ ದೊರಕಿದ ALH84001 ಎಂಬ ಉಲ್ಕಾಶಿಲೆ ಅಂಗಾರಕದಿಂದ ಬಂದಿದ್ದು ಅದರಲ್ಲಿ ಸೂಕ್ಷ್ಮಜೀವಿಗಳನ್ನು ಹೋಲುವ ಪಳೆಯುಳಿಕೆ ದೊರಕಿದೆ. ಅಂಗಾರಕದ ಮೇಲೆ 3.5 ಬಿಲಿಯನ್ ವರ್ಷಗಳ ಹಿಂದೆ ಇಂಥ ಜೀವಿಗಳಿದ್ದಿರಬಹುದು ಎಂಬ ಕಲ್ಪನೆ ವಿಜ್ಞಾನಿಗಳಿಗೆ ಹೊಸ ಉತ್ಸಾಹವನ್ನು ಮೂಡಿಸಿದೆ.

ಈಚಿನ ದಿನಗಳಲ್ಲಿ ಬಾಹ್ಯಾಕಾಶ ಯಾನದಲ್ಲಿ ಅಂಗಾರಕ ಮುಖ್ಯ ಗುರಿಯಾಗಿದೆ. 1990ರಿಂದೀಚೆಗೆ ಅನೇಕ ನೌಕೆಗಳು ಹಾರಿವೆ. ಮಾರ್ಸ್ ಆರ್ಬಿಟರ್ ಎಂಬುದು ಅಂಗಾರಕವನ್ನು ಸುತ್ತುತ್ತಿದೆ. ಮಾರ್ಸ್ ಪಾತ್ ಫೈಂಡರ್ ಎಂಬ ನೌಕೆ ಸೋಜರ್ನರ್ ಎಂಬ ಪುಟ್ಟ ಗಾಡಿಯನ್ನು (1997) ಅಂಗಾರಕದ ಮೇಲೆ ಓಡಾಡಿಸಿತು. ಈಚೆಗೆ ಸ್ಪಿರಿಟ್ ಮತ್ತು ಆಪರ್ಚುನಿಟಿ ಎಂಬೆರಡು ನೌಕೆಗಳೂ ಅಂಗಾರಕದ ಮೇಲೆ ಚಲಿಸುತ್ತ ಉತ್ತಮ ಮಾಹಿತಿಯನ್ನು ಒದಗಿಸಿವೆ. (ಆರ್.ಆರ್.ಯು.)

ತಪೋಬಲದಿಂದ ಅಂಗಾರಕ ನವಗ್ರಹಗಳಲ್ಲಿ ಒಬ್ಬನಾದ. ಇವನ ಜನನಕ್ಕೆ ವಿಷ್ಣು ಮತ್ತು ಭೂದೇವಿ ಕಾರಣರೆಂದು ಬ್ರಹ್ಮವೈವಸ್ವತಪುರಾಣವೂ ವಿಷ್ಣುವಿನ ಬೆವರಿನಿಂದ ಬಂದನೆಂದು ಪದ್ಮಪುರಾಣವೂ ಶಿವನ ಬೆವರಿನಿಂದ ಹುಟ್ಟಿದ ಭೂದೇವಿಯ ಸಾಕುಮಗನೆಂದು ಶಿವ ಮತ್ತು ಮತ್ಸ್ಯಪುರಾಣಗಳೂ ತಿಳಿಸುತ್ತವೆ.

ಭಾರತೀಯ ಜೋತಿಷ್ಯ ಶಾಸ್ತ್ರದಲ್ಲಿ ಅಂಗಾರಕನನ್ನು ಭ್ರಾತೃಕಾರಕನೆಂದು ಕರೆಯಲಾಗಿದೆ. ಯಾರ ಜನ್ಮ ಜಾತಕದಲ್ಲಿ ಅಂಗಾರಕ ಪ್ರಬಲನಾಗಿರುತ್ತಾನೋ ಅಂಥವರು ರಜೋಗುಣವನ್ನು ಅಧಿಕವಾಗಿ ಹೊಂದಿರುವವರು. ದರ್ಪಾನ್ವಿತರೂ ಕೋಪಿಷ್ಠರೂ ಆಗಿರುತ್ತಾರೆ. ಮೇಷ ವೃಶ್ಚಿಕ ರಾಶಿಗಳೇ ಅಂಗಾರಕ ಸ್ವಕ್ಷೇತ್ರಗಳಾಗಿದ್ದು ಮೇಷವೇ ಇವನ ತ್ರಿಕೋಣ ರಾಶಿಯಾಗಿರುತ್ತದೆ. (ಜಿ.ಎಚ್.)

**ಅಂಗಿರಸ :** ಮಹರ್ಷಿ. ದೇವತೆಗಳಿಗೆ ಪುರೋಹಿತ. ಯಾಗಗಳಲ್ಲಿ ಇವನ ಪಾತ್ರ ಹಿರಿದು. ಬ್ರಹ್ಮಮಾನಸಪುತ್ರನೆಂದೂ ಅಗ್ನಿಯ ತಂದೆಯೆಂದೂ ಅಗ್ನಿಯ ಮಗಳಾದ ಆಗ್ನೇಯಿಯ ಪುತ್ರನೆಂದೂ ಈತನ ಕುಲ ಗೋತ್ರದ ವಿಚಾರವಾಗಿ ನಾನಾ ಅಭಿಪ್ರಾಯಗಳಿವೆ.

ಸತಿ ಎಂಬ ಪತ್ನಿಯಲ್ಲಿ ಅಥರ್ವಾಂಗಿರಸರನ್ನು ಪಡೆದ. ಒಮ್ಮೆ ಅಗ್ನಿ ಕೋಪಗೊಂಡು ಎಲ್ಲೋ ಅವಿತುಕೊಂಡಾಗ ಬ್ರಹ್ಮ ಅವನ ಸ್ಥಾನಕ್ಕೆ ಅಂಗಿರಸನನ್ನು ನಿಯಮಿಸಿದನೆಂದೂ ಕೊಂಚ ಕಾಲದ ಅನಂತರ ಅಗ್ನಿ ಪಶ್ಚಾತ್ತಾಪದಿಂದ ಹಿಂತಿರುಗಿದಾಗ ಅವನ ಸ್ಥಾನವನ್ನು ಬಿಟ್ಟುಕೊಟ್ಟನೆಂದೂ ಮಹಾಭಾರತದ ವನಪರ್ವದಲ್ಲಿ ಹೇಳಿದೆ. (ಎ.ಎಂ.)

**ಅಂಗುತ್ತರನಿಕಾಯ :** ಬೌದ್ಧರ ಪಾಳಿ ತ್ರಿಪಿಟಕಗಳಲ್ಲಿ ಎರಡನೆಯದಾದ ಸುತ್ತಪಿಟಕದಲ್ಲಿ ಸೇರಿರುವ ಐದು ನಿಕಾಯಗಳಲ್ಲಿ ನಾಲ್ಕನೆಯದು. ಅಂಗುತ್ತರವೆಂದರೆ ಇನ್ನೊಂದು ಅಂಗವೆಂದರ್ಥ. ಈ ನಿಕಾಯದಲ್ಲಿರುವ 2,308 ಸುತ್ತಗಳನ್ನು ಹನ್ನೊಂದು ನಿಪಾತಗಳಲ್ಲಿ ಅಡಕ ಮಾಡಿದ್ದಾರೆ. ಒಂದೇ ಒಂದಿರುವ ವಸ್ತುಗಳನ್ನು ಕುರಿತು ಮೊದಲನೆಯ ನಿಪಾತದಲ್ಲಿ, ಎರಡಿರುವ ವಸ್ತುಗಳನ್ನು ಕುರಿತು ಎರಡನೆಯ ನಿಪಾತದಲ್ಲಿ, ಹತ್ತಿರುವ ವಸ್ತುಗಳನ್ನು ಕುರಿತು ಹತ್ತನೆಯ ನಿಪಾತದಲ್ಲಿ– ಹೀಗೆ ಬೌದ್ಧ ಸಂಪ್ರದಾಯದ ವಿವರಗಳನ್ನು ಇಲ್ಲಿ ನಿರೂಪಿಸಿದ್ದಾರೆ. ಒಂದೊಂದು ನಿಪಾತದಲ್ಲೂ ಹಿಂದಿನ ನಿಪಾತದಲ್ಲಿ ಹೇಳಿದುದಕ್ಕಿಂತ ಒಂದು ಹೆಚ್ಚಾಗಿ ಹೇಳುವುದರಿಂದ ಇದಕ್ಕೆ ಅಂಗುತ್ತರವೆನ್ನುತ್ತಾರೆ. ಸಂಸ್ಕೃತ ತ್ರಿಪಿಟಕದಲ್ಲಿ ಇದನ್ನು ಏಕೋತ್ತರಾಗಮ ಎಂದು ವ್ಯವಹರಿಸುತ್ತಾರೆ. ಒಂದೊಂದು ನಿಪಾತವನ್ನೂ ವಗ್ಗಗಳಲ್ಲಿ ಮತ್ತೆ ಅಡಕ ಮಾಡಿದ್ದಾರೆ. ತತ್ತ್ವಗಳನ್ನು ಸಂಖ್ಯಾನ ಮಾಡುವ ಪದ್ಧತಿ ಈ ನಿಕಾಯದಲ್ಲಿ ಆರಂಭವಾಗಿ ಅಭಿದಮ್ಮಪಿಟಕದಲ್ಲಿ ಬೆಳೆಯಿತು. ಸಂಗ್ರಹರೂಪವಾದ ನಿರೂಪಣೆ ಅಂಗುತ್ತರನಿಕಾಯದ ವೈಶಿಷ್ಟ್ಯ. ಗೌತಮಬುದ್ಧ ಲೋಕೋತ್ತರನಾದ, ದೇವಾಂಶಸಂಭೂತನಾದ ಗುರುವೆಂಬ ಭಾವನೆ ಬಲಿತಿದ್ದ ಕಾಲದಲ್ಲಿ ಈ ನಿಕಾಯದ ಸ್ವರೂಪ ನಿರ್ಧಾರವಾಯಿತು. ತ್ರಿಪಿಟಕದ ಹೆಚ್ಚಿನ ವಿವರಗಳಿಗೆ (ನೋಡಿ– ಪಾಳಿ ಸಾಹಿತ್ಯ ಅಭಿಧಮ್ಮ ಪಿಟಕ) (ಎಸ್.ಕೆ.ಆರ್.)

**ಅಂಗುಲೀಮಾಲ :** ಬುದ್ಧನ ಸಮಕಾಲೀನನಾದ ಕುಖ್ಯಾತ ದರೋಡೆಕಾರ. ಇವನ ಹೆಸರಿನ ಉಲ್ಲೇಖ ಬೌದ್ಧತ್ರಿಪಿಟಕಗಳಲ್ಲಿ ದೊರೆಯುತ್ತದೆ. ಬೌದ್ಧರ ನಂಬಿಕೆಯಂತೆ ಇವನು ಕ್ಷೀಣಾಶ್ರವ ಅರ್ಹಂತರಲ್ಲಿ ಒಬ್ಬ. ಅತ್ಯಂತ ಕ್ರೂರಿಯಾಗಿದ್ದ ಈತ ಜನರನ್ನು ಕೊಂದು ಅವರ ಕೈಬೆರಳುಗಳನ್ನು ಕತ್ತರಿಸಿ ಮಾಲೆ ಹಾಕಿಕೊಳ್ಳುತ್ತಿದ್ದರಿಂದ ಇವನಿಗೆ ಅಂಗುಲೀಮಾಲ ಎಂಬ ಹೆಸರು ಬಂತು ಎಂದು ಐತಿಹ್ಯವಿದೆ. ಬುದ್ಧನ ಪ್ರಭಾವದಿಂದ ಇವನಿಗೆ ಹೃದಯಪರಿವರ್ತನೆಯಾಗಿ ಧರ್ಮಚಕ್ಷು ಪ್ರಾಪ್ತವಾಯಿತು. ಬುದ್ಧನಿಂದ ಭಿಕ್ಷುದೀಕ್ಷೆಯನ್ನು ಪಡೆದು ಸಂಘವನ್ನು ಸೇರಿದನೆಂದೂ ಕಥೆಯಿದೆ. (ಪಿ.)

**ಅಂಗುಳು :** ಮಾನವನಲ್ಲೂ ಬೆನ್ನೆಲುಬುಗಳಿರುವ ಪ್ರಾಣಿಗಳಲ್ಲೂ ಬಾಯಿಯ ಒಳಗೆ ಛಾವಣಿಯಾಗಿರುವ ಭಾಗ (ಪೆಲೇಟ್). ಮೂಗಿನ ಹೊಳ್ಳುಗಳಿಗೆ ಇದೇ ತಳ; ಅಂದರೆ ಮೂಗು ಬಾಯಿಗಳ ನಡುವೆ ಇದೆ. ಅಂಗುಳದ ಮುಂಭಾಗ ಎಲುಬಿನಿಂದಾದುದರಿಂದ ಗಡುಸಾಗಿದೆ; ಅದರ ಹಿಂಭಾಗ ಮೆತ್ತಗೆ ಇದೆ. ಮೆತ್ತಗಿನ ಅಂಗುಳ ಹಿಂದೆ ಸಾಗಿದಂತೆ ಸಡಿಲಾಗಿ ಮಧ್ಯಭಾಗದಲ್ಲಿ ಚಾಚಿಕೊಂಡಿರುತ್ತದೆ. ಇದಕ್ಕೆ ಕಿರುನಾಲಿಗೆ ಅಥವಾ ನಂಗಿಲು ಎನ್ನುತ್ತಾರೆ. ಆಹಾರವಾಗಲಿ, ನೀರಾಗಲಿ ನುಂಗುವಾಗ ಮೂಗಿನೊಳಗೆ ಹೋಗದಂತೆ ಕಿರುನಾಲಿಗೆ ತಡೆಯುತ್ತದೆ. ಮಲಗಿದವರು ಗೊರಕೆ ಶಬ್ದ ಮಾಡುವಾಗ ಕಿರುನಾಲಿಗೆ ಕಂಪಿಸುತ್ತದೆ. ಎರಡೂ ಪಕ್ಕಗಳಿಂದ ಬೆಳೆಯುತ್ತ ಮಧ್ಯದಲ್ಲಿ ಒಂದುಗೂಡಿರುವ ಅಂಗುಳವು ಒಮ್ಮೊಮ್ಮೆ ಪಿಂಡಗೂಸಿನ ಬೆಳವಣಿಗೆಯಲ್ಲಿ ಕೂಡಿಕೊಳ್ಳುವುದಿಲ್ಲ. ಆಗ ಮಧ್ಯದಲ್ಲಿ ಸೀಳು ಉಂಟಾಗುತ್ತದೆ. ಇದಕ್ಕೆ ಸೀಳು ಅಂಗುಳ (ಕ್ಲೆಫ್ಟ್ ಪೆಲೇಟ್) ಕಾರಣ. (**ನೋಡಿ– ಬಾಯಿ; ಗಂಟಲು**). (ಆರ್.ವಿ.)

**ಅಂಗೋರ :** ಈಗಿನ ತುರ್ಕಿ ದೇಶದಲ್ಲಿರುವ ಒಂದು ಪ್ರದೇಶ. ಈ ಪ್ರದೇಶ ಮತ್ತು ಇದರ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಸು. 2000 ವರ್ಷಗಳಿಂದಲೂ ಸಾಕುತ್ತಿರುವ ವಿಶಿಷ್ಟ ಜಾತಿಯ ಮೇಕೆಯ ತುಪ್ಪಟ (ಮೊಹೇರ್) ಪ್ರಪಂಚಾದ್ಯಂತ ಪ್ರಸಿದ್ಧಿ ಪಡೆದಿದೆ. ಈ ತುಪ್ಪಟದ ಎಳೆ 7"–8"ಉದ್ದವಿರುತ್ತದೆ. ಅಲ್ಲದೆ, ಕೆಲವು ವಿಶಿಷ್ಟಗುಣಗಳನ್ನೂ ಹೊಂದಿದೆ. ನುಣುಪು, ಗಡಸು ಮತ್ತು ಎಳೆತವನ್ನು ತಡೆಯಬಲ್ಲುದು. ಇತರ ನೂಲುಗಳೊಂದಿಗೆ ಬೆರೆತಾಗ ಅವುಗಳ ಬಣ್ಣ, ಚೆಂದ, ಮೃದುತ್ವ ಮತ್ತು ಹೊಳಪನ್ನು ಹೆಚ್ಚಿಸುತ್ತದೆ. ಕಸದ ಕಣಗಳು ಅದರ ಮೇಲೆ ನಿಲ್ಲುವುದಿಲ್ಲ. ಹಾಕಿದ ಬಣ್ಣವನ್ನು ಶಾಶ್ವತವಾಗಿ ಇಟ್ಟುಕೊಂಡಿರುತ್ತದೆ. ಆದ್ದರಿಂದ ತಯಾರಾದ ಬಟ್ಟೆಗಳ ಮೇಲೆ ಅಂದವಾಗಿ ಆಲಂಕಾರಿಕ ಚಿತ್ರಣ ಮಾಡುವುದಕ್ಕೆ ತುಂಬ ಅನುಕೂಲ.

ಆದರೆ ಇಂದು ಮೊಹೇರ್ ನಿಜವಾದ ಅಂಗೋರ ಆಡಿನ ತುಪ್ಪಟವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. 19ನೆಯ ಶತಮಾನದ ಪ್ರಾರಂಭದಲ್ಲೇ ಈ ಕೂದಲಿನ ಉಪಯುಕ್ತತೆಯನ್ನು ಜನ ಅರಿತಿದ್ದರು. ನಾನಾ ದೇಶಗಳಿಂದ ಅದಕ್ಕಾಗಿ ಬೇಡಿಕೆ ಬರತೊಡಗಿತು. ಇದನ್ನು ಪೂರೈಸುವುದಕ್ಕೆ ಅಂಗೋರ ಮತ್ತು ಸಾಮಾನ್ಯ ಆಡುಗಳ ಮಿಶ್ರತಳಿ ಮೇಕೆಗಳನ್ನು ಬೆಳೆಸತೊಡಗಿದರು. ಈ ಮೇಕೆಗಳ ಕೂದಲು ಶುದ್ಧ ಮೊಹೇರ್ ತುಪ್ಪಟಕ್ಕಿಂತ ಕೆಳದರ್ಜೆಯದು. ಮಿಶ್ರತಳಿ ತಯಾರಿಕೆ ಪ್ರಾರಂಭವಾದ ಮೇಲೆ ನಾನಾ ಮಟ್ಟದ ಮೊಹೇರ್ ತುಪ್ಪಟಗಳು ಬರತೊಡಗಿದುವು. ಅಮೆರಿಕದ ಸಂಯುಕ್ತಸಂಸ್ಥಾನ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ನ್ಯೂಜಿಲೆಂಡ್, ಮುಂತಾದ ಪ್ರಮುಖ ದೇಶಗಳಿಗೂ ಈ ಮಿಶ್ರತಳಿ ತಯಾರಿಕೆ ಹರಡಿತು. ಇತರ ತುಪ್ಪಟದಿಂದ ತಯಾರಾಗುವ ವಸ್ತುಗಳಿಗೆ ಅಂಗೋರ ತುಪ್ಪಟವನ್ನು ಬೆರೆಸುವುದು

ಅಂಗೋರ ಆಡು

ಬಹಳ ಉಪಯುಕ್ತ. ಅವು ಬಹಳ ದಿನ ಬಾಳಿಕೆ ಬರುತ್ತವೆ, ಸುಕ್ಕಾಗುವುದಿಲ್ಲ. ಅವುಗಳನ್ನು ನುಸಿ ಹಿಡಿಯದಂತೆ ಮಾಡುವುದೂ ಸುಲಭ. ಉತ್ಕೃಷ್ಟವಾದ ರತ್ನಗಂಬಳಿಗಳು, ಹೊದೆಯುವ ಕಂಬಳಿ, ಗವುಸುಗಳು, ನಾನಾ ವಿಧದ ಉಡುಪುಬಟ್ಟೆಗಳು ಇದರಿಂದ ತಯಾರಾಗುತ್ತವೆ. (ಎ.ಎಂ.)

**ಅಂಗೋಲ :** ದಕ್ಷಿಣ ಆಫ್ರಿಕದಲ್ಲಿರುವ ಒಂದು ಸ್ವತಂತ್ರ ಗಣರಾಜ್ಯ (ಸ್ವಾತಂತ್ರ್ಯ ಪಡೆದ ದಿನ 11 ನವೆಂಬರ್ 1975). ಸಮಭಾಜಕ ವೃತ್ತದ ದಕ್ಷಿಣಕ್ಕೆ ಕಾಂಗೋ ಮತ್ತು ಕ್ಯೂನೀನ್ ನದಿಗಳ ನಡುವೆ ಇರುವ ಅಟ್ಲಾಂಟಿಕ್ ತೀರಪ್ರದೇಶ; ($12^o$ ಮತ್ತು $18^o$ ದಕ್ಷಿಣ ಅಕ್ಷಾಂಶ. $12^o$ 30' ಮತ್ತು $25^o$ ಪೂರ್ವ ರೇಖಾಂಶ) ಈ ದೇಶದ ಪಶ್ಚಿಮದಲ್ಲಿ ದಕ್ಷಿಣ ಅಟ್ಲಾಂಟಿಕ್ ಸಾಗರ, ಉತ್ತರದಲ್ಲಿ ಕಾಂಗೊ, ದಕ್ಷಿಣದಲ್ಲಿ ನಮೀಬಿಯ ಪೂರ್ವದಲ್ಲಿ ಕಾಂಗೋ ಮತ್ತು ಜಾಂಬಿಯ ಗಣರಾಜ್ಯಗಳಿವೆ. ಉತ್ತರ–ದಕ್ಷಿಣವಾಗಿ 1,368 ಕಿಮಿ. ಪೂರ್ವ–ಪಶ್ಚಿಮವಾಗಿ 1,287 ಕಿಮಿ. ಇದ್ದು 1,493 ಕಿಮೀ. ಉದ್ದದ ಸಮುದ್ರ ತೀರವಿರುವ ಈ ದೇಶದ ಒಟ್ಟು ವಿಸ್ತೀರ್ಣ 12,46,700 ಚ.ಕಿಮೀ. ಒಟ್ಟು ಜನಸಂಖ್ಯೆ 12,531,357 (2000). ರಾಜಧಾನಿ ಸಾಪಿ ಪೌಲೋದ ಲುವಾಂಡ; ಜನಸಂಖ್ಯೆ 12,00,000 (2000) ಸಾಕ್ಷರತೆ ಶೇ.67.4 ಭಾಷೆಗಳು ಪೋರ್ಚುಗೀಸ್ ಮತ್ತು ಬಂಟು.

ಅಂಗೋಲವನ್ನು ಎರಡು ಮುಖ್ಯ ವಲಯಗಳನ್ನಾಗಿ ವಿಂಗಡಿಸಬಹುದು : 1. ಕಡಲತೀರ, 2.ಪ್ರಸ್ಥಭೂಮಿ. ತೀರಪ್ರದೇಶ ಹಿತಕರವಾದ ವಾಯುಗುಣವನ್ನು ಹೊಂದಿಲ್ಲ; ಆದರೆ 4000' ದಿಂದ 6000' ಎತ್ತರದ ಪ್ರಸ್ಥಭೂಮಿ ಶ್ವೇತವರ್ಣೀಯರ ವಾಸಕ್ಕೆ ಅನುಕೂಲವಾದ ವಾಯುಗುಣವನ್ನು ಹೊಂದಿದೆ. ತೀರಪ್ರದೇಶದಲ್ಲಿ ಸುಮಾರು 15' ಮಳೆ ಬೀಳುತ್ತದೆ; ಆದರೆ ಒಳ್ಳೆಯ ವಾಯುಗುಣವನ್ನು ಹೊಂದಿರುವ ಪ್ರಸ್ಥಭೂಮಿಯ ಮೇಲೆ ಸುಮಾರು 60"ಮಳೆ. ಇಲ್ಲಿ ಅತ್ಯಂತ ಉಪಯುಕ್ತವಾದ ಮರಗಳಿರುವ ದಟ್ಟವಾದ ಕಾಡುಗಳಿವೆ; ಆದರೆ ಇವುಗಳಿಂದ ಪ್ರಯೋಜನವನ್ನು ಪಡೆಯಲು ಸಾಕಷ್ಟು ಪ್ರಯತ್ನಗಳು ನಡೆದಿಲ್ಲ.

15ನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತಕ್ಕೆ ಸಮುದ್ರ ಮಾರ್ಗವನ್ನು ಅರಸುತ್ತ ಹೊರಟ ಪೋರ್ಚುಗೀಸ್ ನಾವಿಕರು 1482ರಲ್ಲಿ ಅಂಗೋಲ ತೀರಪ್ರದೇಶವನ್ನು ತಲುಪಿದರು. ಕೊಂಚಕೊಂಚವಾಗಿ ದೇಶದ ಒಳಭಾಗದ ಪರಿಚಯ ಮಾಡಿಕೊಂಡರು. 1575ರಲ್ಲಿ ಪಾವ್‌ಲೋ ಡಯಸ್ ದ ನೋವೇ ಎಂಬ ಪೋರ್ಚುಗೀಸನು ಅಂಗೋಲಕ್ಕೆ ಹೋಗಿ ಲುವಾಂಡ ನಗರವನ್ನು ಸ್ಥಾಪಿಸಿದನು. ಪೋರ್ಚುಗೀಸರ ಆಕ್ರಮಣ ಹೀಗೆ ಮುಂದುವರಿಯಿತು. 1617ರಲ್ಲಿ ಬೆನ್‌ಗೂಲ ನಗರ ಸ್ಥಾಪಿತವಾಯಿತು. ಪ್ರಸ್ಥಭೂಮಿ ಪ್ರದೇಶವನ್ನಾಕ್ರಮಿಸಿ ಸ್ವಾಧೀನಕ್ಕೆ ತಂದುಕೊಳ್ಳುವ ಕೆಲಸ ಬಹುಕಾಲ ಹಿಡಿಯಿತು. ಈ ಮಧ್ಯೆ 19ನೆಯ ಶತಮಾನದ 8ನೆಯ ದಶಕದಲ್ಲಿ ಯುರೋಪಿನ ಪ್ರಬಲ ರಾಷ್ಟ್ರಗಳಲ್ಲಿ ಏರ್ಪಟ್ಟಿದ್ದ ಮೇಲಾಟ ಕಚ್ಚಾಟಗಳನ್ನು ನೋಡಿ ಪೋರ್ಚುಗಲ್ ಸರ್ಕಾರ ಅಂಗೋಲದಲ್ಲಿ ತನ್ನ ಸ್ವಾಮ್ಯವನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿ ಸಾಧ್ಯವಾದಷ್ಟು ಹೆಚ್ಚು ಪ್ರಾಂತಗಳನ್ನು ಆಕ್ರಮಿಸಿಕೊಂಡಿತು. ಈ ಗೊಂದಲದ ಮಧ್ಯೆ ದೇಶದ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಳ್ಳುವುದಕ್ಕೆ ಪೋರ್ಚುಗಲ್ ಸರ್ಕಾರಕ್ಕೆ ಸಾಧ್ಯವಾಗಲೇ ಇಲ್ಲ; ಅಲ್ಲದೆ ಸಣ್ಣ ದೇಶವಾದ್ದರಿಂದ ಅದಕ್ಕೆ ಹೆಚ್ಚಾದ ಸೌಕರ್ಯಗಳೂ ಇರಲಿಲ್ಲ. ಆದ್ದರಿಂದ

ಅಂಗೋಲದ ದೊಡ್ಡ ದೊಡ್ಡ ಕೈಗಾರಿಕೆ ಮತ್ತು ಇತರ ಉದ್ಯಮಗಳು ಪರಕೀಯರ ಸ್ವಾಧೀನದಲ್ಲಿವೆ. ಇತ್ತೀಚೆಗೆ, ಹೆಚ್ಚಾಗಿ ಸಾಲ್‍ಸ್ಜಾರ್‌ನ ಆಡಳಿತದಲ್ಲಿ, ಅಂಗೋಲದ ಆರ್ಥಿಕ ಪ್ರಗತಿಯನ್ನು ಕ್ರಮಗೊಳಿಸಿ ದೇಶದ ಪ್ರಗತಿಯನ್ನು ಸಾಧಿಸುವ ಕೆಲಸ ಮಾಡಿತು.

ಅಂಗೋಲದಲ್ಲಿ ಕ್ರಮಬದ್ಧವಾದ ಆಡಳಿತ 1953ರಲ್ಲಿ ಹೊರಡಿಸಿದ ಸಾಗರೋತ್ತರ ಪ್ರಾಂತಗಳ ಶಾಸನ ಮತ್ತು 1955ರ ನಿಬಂಧನೆಗಳಿಗೆ ಅನುಸಾರವಾಗಿ ಪೋರ್ಚುಗಲ್ ಸರ್ಕಾರದಿಂದ ನಿಯಮಿತವಾದ ಒಬ್ಬ ಪ್ರಾಂತಾಧಿಪತಿ (ಗವರ್ನರ್) ಆಡಳಿತವನ್ನು ನಡೆಸುವಂತಾಯಿತು. ಕೇಂದ್ರ ಸರ್ಕಾರದ ಸಾಗರೋತ್ತರ ಪ್ರಾಂತಸಚಿವನಿಗೆ ಈತ ಜವಾಬ್ದಾರ. ಕಾನೂನು ರಚನೆಯಲ್ಲಿ ಆಡಳಿತ ನಿರ್ವಹಣೆಯಲ್ಲಿ, ಈತನಿಗೆ ವ್ಯಾಪಕ ಅಧಿಕಾರವನ್ನು ನೀಡಲಾಗಿತ್ತು. ಅವನಿಗೆ ಸೂಕ್ತ ಸಲಹೆಗಳನ್ನು ಕೊಡುವುದಕ್ಕೆ, 26 ಸದಸ್ಯರನ್ನೊಳಗೊಂಡ ಶಾಸನಸಭೆಯೊಂದಿತ್ತು. ಅದರಲ್ಲಿ 18 ಮಂದಿ ನೇರವಾಗಿಯಾಗಲಿ ಸಂಸ್ಥೆಗಳ ಮೂಲಕವಾಗಲಿ ಚುನಾಯಿತ ಸದಸ್ಯರು. 8 ಮಂದಿ ನಿಯಮಿತ ಸದಸ್ಯರು. ಸಾಮಾನ್ಯ ಸಂದರ್ಭಗಳಲ್ಲಿ ಶಾಸನ ರಚನೆಗೆ ಪ್ರಾಂತಾಧಿಪತಿ ಈ ಸಭೆಯ ಒಪ್ಪಿಗೆ ಪಡೆಯಬೇಕಾಗಿತ್ತು. ದೇಶವನ್ನು 15 ಜಿಲ್ಲೆಗಳಾಗಿ ವಿಭಾಗಿಸಿದ್ದರು; ಪ್ರತಿ ಜಿಲ್ಲೆಯನ್ನೂ ಉಪಜಿಲ್ಲೆಗಳನ್ನಾಗಿಯೂ ಮತ್ತೆ ಇವುಗಳನ್ನು ಪೌರಸಂಸ್ಥೆಗಳನ್ನಾಗಿಯೂ ವಿಂಗಡಿಸಿದ್ದರು.

ಅಂಗೋಲದ ಸ್ವಾತಂತ್ರ್ಯ ಹೋರಾಟ ಬಹಳ ವರ್ಷಗಳ ಕಾಲ ನಡೆದು ಲಕ್ಷಾಂತರ ಮಂದಿಯ ಬಲಿದಾನದೊಂದಿಗೆ ರಕ್ತಪಾತ ನಡೆದು 1975ರಲ್ಲಿ ಸ್ವತಂತ್ರಗೊಂಡಿತು. ಈಗ ಕ್ಷೇಮಾಭಿವೃದ್ಧಿ ಕಾರ್ಯಗಳು ತ್ವರಿತಗತಿಯಿಂದ ಮುಂದುವರಿಯುತ್ತಿರುತ್ತವೆ. ಎಲ್ಲ ಕಡೆ ಹರಡಿದ್ದ ಭಯಂಕರ ನಿದ್ರಾವಾತರೋಗವನ್ನು (ಸ್ಲೀಪಿಂಗ್ ಸಿಕ್‌ನೆಸ್) ತಡೆಗಟ್ಟಲಾಗಿದೆ. ಸಿಡುಬು, ಕಾಲರ, ಪ್ಲೇಗು ಮುಂತಾದ ರೋಗಗಳನ್ನು ತಡೆಗಟ್ಟಲು ಬೇಕಾದ ಏರ್ಪಾಟುಗಳಾಗಿವೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಗ್ರಾಮ ಚಿಕಿತ್ಸಾಲಯಗಳು, ಕುಷ್ಠರೋಗಚಿಕಿತ್ಸಾ ಕೇಂದ್ರಗಳು ಇವೆ. ವಿದ್ಯಾಭ್ಯಾಸಕ್ಕೂ ಹೆಚ್ಚು ಹೆಚ್ಚಾಗಿ ಗಮನ ಕೊಡಲಾಗುತ್ತಿದೆ; ದೇಶದ ಆವಶ್ಯಕತೆಗೆ ಬೇಕಾದ, ಕೈಗಾರಿಕೆ ಕಲೆಗಳ ಶಿಕ್ಷಣವೂ ಮುಂದುವರಿಯುತ್ತಿದೆ. 2002ರಲ್ಲಿ ಕೊನೆಗೊಂಡ ಸಿವಿಲ್ ಯುದ್ಧದ ನಂತರ ಅಂಗೋಲ ತನ್ನ ದೇಶವನ್ನು ಪುನರ್ನಿರ್ಮಾಣ ಮಾಡುತ್ತಿದೆ.

ಅಂಗೋಲ ಕೃಷಿಪ್ರಧಾನವಾದ ದೇಶ; ಉಷ್ಣವಲಯದ ಬೆಳೆಗಳಿಗೆ ಪ್ರಸ್ಥಭೂಮಿ ಭಾಗದಲ್ಲಿ ಅವಕಾಶವಿದೆ. ಉಪಯುಕ್ತ ಮರಗಳು, ಕಾಫಿ, ಮುಸುಕಿನ ಜೋಳ, ಕತ್ತಾಳೆ ನಾರು, ಸಕ್ಕರೆ ಮುಂತಾದವು ರಫ್ತಾಗುತ್ತವೆ. ಹತ್ತಿಯನ್ನು ಬೆಳೆದು ಎಲ್ಲವನ್ನೂ ಹೊರದೇಶಗಳಿಗೆ ರಫ್ತು ಮಾಡುತ್ತಾರೆ. ಉತ್ತಮವಾದ ಹುಲ್ಲುಗಾವಲುಗಳಿರುವುದರಿಂದ ದನಕರುಗಳು, ಆಡು, ಮೇಕೆ, ಕುದುರೆ, ಕುರಿ ಮುಂತಾದ ಪ್ರಾಣಿಗಳನ್ನು ಸಾಕುತ್ತಾರೆ. ಇವುಗಳಿಗೆ ಮಾರಕವಾಗಿರುವ ಟ್ಸೆಟ್ಸೆ ಎಂಬ ನೊಣ ಕೆಲವು ಕಡೆ ಇರುವುದರಿಂದ ಅವುಗಳಿಂದಾಗುವ ಹಾನಿ ಹೆಚ್ಚು. ಕಬ್ಬಿಣ ಮತ್ತು ತಾಮ್ರ ಅಧಿಕ ಪ್ರಮಾಣದಲ್ಲಿ ದೊರಕುತ್ತವೆ. ಕಲ್ಲೆಣ್ಣೆ ದೊರಕುತ್ತದೆಂಬುದು 1955ರಲ್ಲಿ ತಿಳಿದುಬಂದು, 1958ರಲ್ಲಿ ಉತ್ಪಾದನೆ ಪ್ರಾರಂಭವಾಯಿತು. ವರ್ಷಕ್ಕೆ ಏಳು ಲಕ್ಷ ಟನ್‌ಗಳಷ್ಟು ಶುದ್ಧಿ ಮಾಡಿದ ಎಣ್ಣೆ ದೊರಕುತ್ತಿದೆ. ಅಂಗೋಲ ಆಫ್ರಿಕವೇ ಹೆಚ್ಚು ತೈಲೋತ್ಪಾದನೆ ಮಾಡುವ ದೇಶ. ಚಿನ್ನ, ಸೀಸ, ಕಲ್ಲಿದ್ದಲು, ಅಲ್ಲಲ್ಲೇ ದೊರಕುತ್ತವೆ. ಲುಂಡಾ ಎಂಬ ಜಿಲ್ಲೆಯಲ್ಲಿ ವಜ್ರದ ಗಣಿಗಳಿವೆ. ಕೈಗಾರಿಕೋದ್ಯಮಗಳಿಗೆ ಬೇಕಾದ ಅನುಕೂಲತೆಗೆ ಪ್ರಸ್ಥಭೂಮಿ ಪ್ರದೇಶದಲ್ಲಿ ವಿದ್ಯದುತ್ಪಾದನೆ ಭರದಿಂದ ಸಾಗಿದೆ. ಇದು ಪ್ರಾರಂಭವಾದದ್ದು ಇತ್ತೀಚೆಗೆ. ರೈಲ್ವೆ, ಉತ್ತಮ ಭೂಮಾರ್ಗಗಳು ಮತ್ತು ಸಾಧಾರಣ ರಸ್ತೆಗಳಿದ್ದರೂ ದೇಶದ ಕೈಗಾರಿಕೆ ಬೆಳೆಯಬೇಕಾದರೆ ಇನ್ನೂ ಹೆಚ್ಚಿಗೆ ಸಾರಿಗೆ ಸಂಪರ್ಕಾನುಕೂಲಗಳು ಆವಶ್ಯಕ. (ಪಿ.ಕೆ.ಎಸ್.; ಎ.ಎಂ.)

**ಅಂಗೋಲ ದಾರ :** ಸಾಮಾನ್ಯವಾಗಿ ಶೇ.80 ಉಣ್ಣೆ ಮತ್ತು ಶೇ.20 ಹತ್ತಿಯ ಮಿಶ್ರಣದಿಂದ ಕೂಡಿರುತ್ತದೆ. ಈ ಪ್ರಮಾಣವನ್ನು ಮಾರ್ಪಡಿಸಬಹುದು. ಈ ದಾರವನ್ನು ಷರ್ಟಿನ ಹಾಗೂ ಸುಲಭ ಬೆಲೆಯ ಇತರ ಉಡುಪುಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ಅಂಗೋಲ ದಾರಕ್ಕೆ ಉಪಯೋಗಿಸುವ ಉಣ್ಣೆದಾರ ಸಾಮಾನ್ಯವಾಗಿ ಒರಟು ಹಾಗೂ ತುಂಡು ಬಗೆಯದ್ದಾಗಿರುತ್ತದೆ. ಅಂಗೋಲ ಬಟ್ಟೆ ಹತ್ತಿಹಾಸಿನ ಮತ್ತು ಅಂಗೋಲ ಹೊಕ್ಕಿನಿಂದ ಕೂಡಿದ್ದು ಸಾದಾ ಅಥವಾ ಮೂಲೆ (ಟ್ವಿಲ್) ನೇಯ್ಗೆಯದಾಗಿರುತ್ತದೆ. (ವಿ.ಎಸ್.ವಿ.)

**ಅಂಗ್ರಮೈನ್ಯು :** (ನೋಡಿ– ಅಹ್ರಿಮನ್).

**ಅಂಚೆ ಇತಿಹಾಸ :** ಪ್ರಪಂಚದ ವಿವಿಧ ಭಾಗಗಳ ಜನರೂ ಸಂಸ್ಥೆಗಳೂ ಸರ್ಕಾರಗಳೂ ಪರಸ್ಪರವಾಗಿ ಸಂಪರ್ಕವನ್ನು ವೃದ್ಧಿಪಡಿಸಿಕೊಳ್ಳುವುದಕ್ಕೂ ವ್ಯವಹಾರಗಳನ್ನು ಬೆಳೆಸುವುದಕ್ಕೂ ನೆರವಾಗಿರುವ ಸಾಧನಗಳಲ್ಲಿ ಅಂಚೆ ವ್ಯವಸ್ಥೆ (ಪೋಸ್ಟಲ್ ಸಿಸ್ಟಮ್) ಮುಖ್ಯವಾದದ್ದು. ಅಂಚೆ ಇತಿಹಾಸ ಬಹಳ ಪುರಾತನವಾದದ್ದು. ಬಹು ಹಿಂದೆ ಪೂರ್ವದೇಶಗಳಲ್ಲಿ ಪ್ರವರ್ಧಮಾನ ಸ್ಥಿತಿಯಲ್ಲಿದ್ದ ಚಕ್ರಾಧಿಪತ್ಯಗಳ ಕಾಲದಲ್ಲಿಯೂ ಅಂಚೆ ವ್ಯವಸ್ಥೆಯಿದ್ದುದು ತಿಳಿದುಬಂದಿದೆ. ಆ ಕಾಲದ ಚಕ್ರಾಧಿಪತ್ಯಗಳಿಗೆ ಒಳಪಟ್ಟಿದ್ದ ವಿಶಾಲವಾದ ಭೂ ಪ್ರದೇಶಗಳನ್ನು ಹಿಡಿತದಲ್ಲಿಟ್ಟುಕೊಂಡು ಆಡಳಿತ ನಡೆಸಲು ಈ ವ್ಯವಸ್ಥೆ ಅಗತ್ಯವಾಗಿತ್ತು. ಬಹು ಪುರಾತನವಾದ ಪರ್ಷಿಯ ಚಕ್ರಾಧಿಪತ್ಯದಲ್ಲಿ ಅಂಚೆ ವ್ಯವಸ್ಥೆಯಿತ್ತೆಂಬುದಾಗಿ ಗೊತ್ತಾಗಿದೆ. ಅನಂತರ ಬಂದ ಮೆಸಿಡೋನಿಯನ್ನರೂ ಅಲ್ಪಪ್ರಮಾಣದಲ್ಲಿ ಈ ವ್ಯವಸ್ಥೆಯನ್ನಿಟ್ಟುಕೊಂಡಿದ್ದರು. ರೋಮನ್ ಚಕ್ರಾಧಿಪತ್ಯದ ಕಾಲದಲ್ಲಂತೂ ಈ ವ್ಯವಸ್ಥೆ ಬಹಳ ಸಮರ್ಪಕವಾಗಿತ್ತು. ಈ ಚಕ್ರಾಧಿಪತ್ಯಗಳು ಕ್ಷೀಣಿಸಿ, ಮತ್ತೆ ಅನಾಗರಿಕತೆಯ ಸ್ಥಿತಿ ಬಂದಾಗ ಅಂಚೆಯ ವ್ಯವಸ್ಥೆಯೂ ಅಳಿಸಿಹೋಯಿತು.

ಆದರೆ ಆಗಿನ ಕಾಲದಲ್ಲಿ ಖಾಸಗಿ ಪತ್ರಗಳನ್ನು ಒಂದೆಡೆಯಿಂದ ಇನ್ನೊಂದು ಎಡೆಗೆ ಸಾಗಿಸುವ ಜವಾಬ್ದಾರಿ ಸರ್ಕಾರದ್ದಾಗಿರಲಿಲ್ಲ. ಮಧ್ಯಯುಗದಲ್ಲಿಯೂ ಕೂಡ ಸರ್ಕಾರ ಈ ಹೊಣೆ ಹೊತ್ತಿರಲಿಲ್ಲ. ಆ ಕಾಲದಲ್ಲಿ ವಿಶ್ವವಿದ್ಯಾನಿಲಯಗಳೂ ವರ್ತಕಶ್ರೇಣಿಗಳೂ ಈ ಕೆಲಸ ನಿರ್ವಹಿಸುತ್ತಿದ್ದವು. ಕ್ರಮೇಣ ಯುರೋಪಿನ ಸರ್ಕಾರಗಳಿಗೆ ಇದರ ಆವಶ್ಯಕತೆಯ ಅರಿವು ಹೆಚ್ಚಾಯಿತು. ಒಂದು ರಾಷ್ಟ್ರದ ಜನರು ಇನ್ನೊಂದು ರಾಷ್ಟ್ರದವರೊಂದಿಗೆ ನಡೆಸುತ್ತಿದ್ದ ಪತ್ರ ವ್ಯವಹಾರವನ್ನು ಪರಾಮರ್ಶಿಸಿ ದೇಶದ ಹಿತಕ್ಕೆ ವಿರೋಧವಾಗಿರದಂತೆ ಅದನ್ನು ನಿಯಂತ್ರಿಸುವುದು ಅಗತ್ಯವಾಯಿತು. ಅಲ್ಲದೆ ಖಾಸಗಿಯವರ ಪತ್ರಗಳನ್ನು ಸಾಗಿಸುವ ವ್ಯವಸ್ಥೆಯಿಂದ ಹೆಚ್ಚು ವರಮಾನವನ್ನು ದೊರಕಿಸಿಕೊಳ್ಳುವುದು ಸರ್ಕಾರದ ಜವಾಬ್ದಾರಿಯೆಂಬುದು ಹೆಚ್ಚು ಹೆಚ್ಚಾಗಿ ಮನವರಿಕೆಯಾಯಿತು.

17ನೆಯ ಶತಮಾನದಲ್ಲಿ ಇಂಗ್ಲೆಂಡಿನ ಅಂಚೆ ವ್ಯವಸ್ಥೆ ಹೆಚ್ಚು ಸಮರ್ಪಕವಾಗಿ ಬೆಳೆಯಿತು. ಥಾಮಸ್ ವಿದರಿಂಗ್ಸ್ ಎಂಬುವನು ಇಂಗ್ಲೆಂಡಿನಲ್ಲಿ ಅಂಚೆ ವ್ಯವಸ್ಥೆಯನ್ನು ಬಹಳವಾಗಿ ಸುಧಾರಿಸಿದ. ಹೊರನಾಡಿನಲ್ಲೂ ಒಳನಾಡಿನಲ್ಲೂ ಅಂಚೆ ಸಿಬ್ಬಂದಿಯನ್ನು ನಿಯಮಿಸಿದ; ಅಂಚೆ ಮನೆಗಳನ್ನು ಸ್ಥಾಪಿಸಿದ; ಪತ್ರಗಳನ್ನು ಸಾಗಿಸಬೇಕಾದ ದೂರಕ್ಕೆ ತಕ್ಕಂತೆ ಶುಲ್ಕ ವಿಧಿಸಿದ; ದಿನಕ್ಕೆ ನೂರಿಪ್ಪತ್ತು ಮೈಲಿಗಳಂತೆ ಹಗಲೂ ರಾತ್ರಿಯೂ ಇವು ಸಾಗುವಂತೆ ಏರ್ಪಡಿಸಿದ. ಅಂಚೆ ವ್ಯವಸ್ಥೆಯಿಂದ ಸರ್ಕಾರಕ್ಕೆ ವರಮಾನವನ್ನು ದೊರಕಿಸಿಕೊಳ್ಳುವ ಸಾಧ್ಯತೆಯೂ 17ನೆಯ ಶತಮಾನದಲ್ಲಿ ಖಚಿತವಾಯಿತು. ಅಂಚೆ ವ್ಯವಸ್ಥೆಯನ್ನು ನಿರ್ವಹಿಸುವ ಹಕ್ಕನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಡುವ ಪದ್ಧತಿ ಏರ್ಪಟ್ಟಿತು. ಇದರಿಂದ ಸರ್ಕಾರಕ್ಕೆ ವರ್ಷಕ್ಕೆ ಇಷ್ಟೆಂದು ವರಮಾನ ದೊರಕುತ್ತಿತ್ತು. ಆದರೆ ಕ್ರಮೇಣ ಸರ್ಕಾರ ಖಾಸಗಿಯವರಲ್ಲಿದ್ದ ಈ ಹಕ್ಕನ್ನು ಪರಿಹಾರಕೊಟ್ಟು ಕೊಂಡುಕೊಂಡಿತು. ಅಂತೂ 19ನೆಯ ಶತಮಾನದ ನಡುಗಾಲದವರೆಗೂ ಕೆಲವರಿಗೆ ಈ ಹಕ್ಕು ಇತ್ತು.

**ಪೆನ್ನಿ ಪೋಸ್ಟ್ :** 1680 ರಲ್ಲಿ ಲಂಡನ್ನಿನಲ್ಲಿ ಜನ್ಮವೆತ್ತಿದ ಪೆನ್ನಿ ಅಂಚೆ ಎಂಬ ವ್ಯವಸ್ಥೆ ಅಂಚೆ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನೇ ತಂದಿತು. ಇದಕ್ಕೆ ಮುಂಚೆ ಫ್ರಾನ್ಸಿನ 14ನೆಯ ಲೂಯಿ ದೊರೆ ಮಿತಪ್ರಮಾಣದಲ್ಲಿ ಇಂಥ ಕ್ರಮವೊಂದನ್ನು ಪ್ರಯೋಗಿಸಿದ್ದ. ಲಂಡನ್ನಿನ ವಿಲಿಯಂ ಡಾಕ್ರಾ ಎಂಬ ವ್ಯಾಪಾರಿ ಫ್ರಾನ್ಸಿನ ಪ್ರಯೋಗದಿಂದ ಸ್ಫೂರ್ತಿಪಡೆದು ಈ ಪೆನ್ನಿ ಅಂಚೆಯನ್ನು ಸ್ಥಾಪಿಸಿದ. ಲಂಡನ್ನಿನಲ್ಲಿ ಒಂದು ಎಡೆಯಿಂದ ಇನ್ನೊಂದು ಎಡೆಗೆ ಸಾಗಿಸಬೇಕಾದ ಒಂದು ಪೌಂಡ್ ತೂಕದವರೆಗಿನ ಎಲ್ಲ ಲಕೋಟೆಗಳ ಮೇಲೆಯೂ ಒಂದು ಪೆನ್ನಿಯ ದರದ ಶುಲ್ಕ ವಿಧಿಸಿದ. ಈ ಶುಲ್ಕವನ್ನು ಮೊದಲೇ ಕೊಡಬೇಕಾಗಿತ್ತು. ಹತ್ತು ಪೌಂಡ್ ಮೌಲ್ಯದವರೆಗೆ ಲಕೋಟೆಗಳನ್ನು ವಿಮೆ ಮಾಡಿಸಬಹುದಾಗಿತ್ತು. ಲಂಡನ್ನಿನ ಹಲವು ಕಡೆಗಳಲ್ಲಿ ಪತ್ರಗಳನ್ನು ಸಂಗ್ರಹಿಸಲು ನೂರಾರು ಕೇಂದ್ರಗಳು ತೆರೆಯಲ್ಪಟ್ಟವು. ಇವುಗಳನ್ನು ವಿಂಗಡಿಸಿ, ಇವುಗಳ ಮೇಲೆ ತಾರೀಖಿನ ಮುದ್ರೆ ಒತ್ತುವುದಕ್ಕಾಗಿಯೇ ಆರು ಕೇಂದ್ರಗಳು ಸ್ಥಾಪಿತವಾದುವು. ಲಂಡನ್ ನಗರದೊಳಗೆ ದಿನಕ್ಕೆ 4–12ರವರೆಗೆ ಬಟವಾಡೆಗಳಾಗುತ್ತಿದ್ದವು. ಲಂಡನ್ನಿನಿಂದ ಆಚೆಗೂ ಹತ್ತು ಹದಿನೈದು ಮೈಲಿಗಳ ಫಾಸಲೆಯಲ್ಲಿ ದಿನಕ್ಕೆ ಒಂದು ಸಾರಿ ಬಟವಾಡೆಯ ಸೌಲಭ್ಯವೇರ್ಪಟ್ಟಿತು. ಮೊದಮೊದಲು ಡಾಕ್ರಾ ಈ ವ್ಯವಸ್ಥೆಯಿಂದ ನಷ್ಟವನ್ನನುಭವಿಸಬೇಕಾಯಿತಾದರೂ ಕ್ರಮೇಣ ಅವನಿಗೆ ಲಾಭ ಬರಲಾರಂಭಿಸಿತು. ಇನ್ನೊಬ್ಬ ಖಾಸಗಿ ವ್ಯಕ್ತಿ ಈ ಹಕ್ಕು ತನ್ನದೆಂದು ತಕರಾರು ಹೂಡಿದಾಗ ಡಾಕ್ರಾ ಈ ವ್ಯವಸ್ಥೆಯನ್ನು ಬಿಡಬೇಕಾಯಿತು. ಡಾಕ್ರಾನ ನಿರ್ಗಮನವಾದ ಮೇಲೆ ಕೂಡ ಪೆನ್ನಿ ಅಂಚೆ ಪದ್ಧತಿ ಬಹುಕಾಲ ಜಾರಿಯಲ್ಲಿತ್ತು. ಕೊನೆಗೆ ಇದು ಅಲ್ಲಿನ ಸಾರ್ವತ್ರಿಕ ಅಂಚೆ ಕಚೇರಿಯಲ್ಲಿ ಲೀನವಾಯಿತು.

**ಮಜಲುಗಾಡಿ, ರೈಲು ಅಂಚೆ :** 18ನೆಯ ಶತಮಾನದಲ್ಲಿ ಅಂಚೆ ವ್ಯವಸ್ಥೆ ಬಹಳವಾಗಿ ಪ್ರಗತಿ ಹೊಂದಿತು. ರಸ್ತೆಗಳು ಅಭಿವೃದ್ಧಿ ಹೊಂದಿದವು. ವೇಗವಾಗಿ ಚಲಿಸುವ ಮಜಲುಗಾಡಿ (ಸ್ಟೇಜ್‌ಕೋಚ್) ಪ್ರಚಾರಕ್ಕೆ ಬಂತು. ಮೊದಮೊದಲು ಅಂಚೆ ಸಾಮಗ್ರಿಗಳನ್ನು ಸಾಗಿಸಲು ಅಂಚೆ ಸಿಬ್ಬಂದಿಯನ್ನೇ ಬಳಸಿಕೊಳ್ಳಲಾಗುತ್ತಿತ್ತು. ಮಜಲು ಗಾಡಿಗಳ ಮೂಲಕವಾಗಿ ಕಳ್ಳತನದಲ್ಲಿ ಪತ್ರಗಳು ಸಾಗಲಾರಂಭವಾಗಿ, ಅಂಚೆ ಕಚೇರಿಯ ವರಮಾನ ಬಹಳಮಟ್ಟಿಗೆ ತಗ್ಗಿತು. ಆಗ ಅಂಚೆ ಕಚೇರಿಯೂ ಕೂಡ ಮಜಲುಗಾಡಿಯ ಪ್ರಯೋಜನವನ್ನು ಪಡೆಯಲಾರಂಭಿಸಿತು. 18ನೆಯ ಶತಮಾನದ ಕೊನೆಯ ವೇಳೆಗೆ ಮಜಲುಗಾಡಿಯ ಉಪಯುಕ್ತತೆ ತುಂಬ ಮನದಟ್ಟಾಯಿತಲ್ಲದೆ, ಅದು ಬಹಳವಾಗಿ ಪ್ರಚಾರಕ್ಕೆ ಬಂದಿತು.

19ನೆಯ ಶತಮಾನದ ದೊಡ್ಡ ಬೆಳವಣಿಗೆಯೆಂದರೆ ರೈಲ್ವೆ ಅಂಚೆ ವ್ಯವಸ್ಥೆ. 1830ರಲ್ಲಿ ಇಂಗ್ಲೆಂಡಿನಲ್ಲಿ ರೈಲು ಓಡಾಟದ ವ್ಯವಸ್ಥೆಯ ಆರಂಭವಾಯಿತು. ರೈಲಿನ ಮೂಲಕ ಅಂಚೆಯನ್ನು ಸಾಗಿಸುವ ಪದ್ಧತಿ ಬಳಕೆಗೆ ಬಂದಿತು. 1830ರಲ್ಲಿ ಈ ಬಗ್ಗೆ ಒಂದು ಶಾಸನ ಜಾರಿಗೆ ಬಂದಿತು. ಅಂಚೆಯ ಅಧಿಕಾರಿಗಳ ಅಪೇಕ್ಷೆಯಂತೆ ಅಂಚೆಯ

ಪದಾರ್ಥಗಳನ್ನು ಸಾಗಿಸಲು ಎಲ್ಲ ರೈಲುಗಾಡಿಗಳಲ್ಲೂ ಸೌಲಭ್ಯವನ್ನೊದಗಿಸಿಕೊಡುವುದಲ್ಲದೆ, ಅಗತ್ಯವಾದಲ್ಲಿ ಪತ್ರಗಳ ವಿಂಗಡಣೆಗಾಗಿ ಒಂದು ಇಡಿಯ ಗಾಡಿಯನ್ನೇ ಮೀಸಲಾಗಿಡಬೇಕೆಂಬುದಾಗಿಯೂ ಈ ಶಾಸನದಲ್ಲಿ ವಿಧಿಸಲಾಯಿತು. ಇದಕ್ಕಾಗಿ ರೈಲ್ವೆ ಕಂಪನಿಗೆ ನ್ಯಾಯವಾದ ಸಂಭಾವನೆ ನೀಡಬಹುದೆಂಬುದಾಗಿಯೂ ನಿಗದಿಯಾಯಿತು. ರೈಲು ಬಂಡಿಯಲ್ಲಿ ಅಂಚೆಯನ್ನು ಶೀಘ್ರವಾಗಿ ಸಾಗಿಸುವುದು ಸಾಧ್ಯವಾಯಿತು. ಚಲಿಸುವ ರೈಲು ಬಂಡಿಯಲ್ಲೇ ಪತ್ರಗಳನ್ನು ವಿಂಗಡಿಸುವ ಕೆಲಸವನ್ನೂ ನಿರ್ವಹಿಸುವುದರಿಂದ ಇದಕ್ಕಾಗಿ ಪ್ರತ್ಯೇಕವಾಗಿ ಸಮಯ ವ್ಯಯವಾಗುವುದು ತಪ್ಪಿತು. ಮಾರ್ಗಮಧ್ಯದ ಊರುಗಳ ಅಂಚೆ ಕಚೇರಿಗಳಿಗೆ ಚಲಿಸುವ ರೈಲಿನ ಅಂಚೆ ಕಚೇರಿಗಳಿಂದಲೇ ಪತ್ರಗಳ ಚೀಲವನ್ನು ರವಾನಿಸುವುದಕ್ಕೂ ಆ ಕಚೇರಿಗಳಿಂದ ಚೀಲಗಳನ್ನು ಪಡೆಯುವುದಕ್ಕೂ ಮಾಡಿದ ಏರ್ಪಾಡಿನಿಂದ ಈ ವ್ಯವಸ್ಥೆಯ ವೇಗವನ್ನು ಹೆಚ್ಚಿಸಲು ಬಹಳ ಸಹಾಯವಾಯಿತು.

**ವಿಮಾನ ಸೌಲಭ್ಯ :** 19ನೆಯ ಶತಮಾನದ ಆರಂಭದಲ್ಲಿ ಜನ್ಮ ತಳೆದ ಉಗಿ ಜಹಜುಗಳೂ 20 ಶತಮಾನದ ಎರಡನೆಯ ದಶಕದಲ್ಲಿ ಬಂದ ವಿಮಾನ ವ್ಯವಸ್ಥೆಯೂ ಅಂಚೆಯ ಸೌಕರ್ಯವನ್ನು ಹೆಚ್ಚಿಸಲು ಬಹಳ ಮಟ್ಟಿಗೆ ನೆರವಾದುವು. ವಿಮಾನ ಸಂಚಾರಗಳು ಮೊದಮೊದಲು ಅಷ್ಟೇನೂ ಕ್ರಮಬದ್ಧವಾಗಿರಲಿಲ್ಲ. ಆದರೆ ಮೊದಲನೆಯ ಮಹಾಯುದ್ಧದ ಕಾಲದಲ್ಲಿ ವಿಮಾನ ವ್ಯವಸ್ಥೆ ತುಂಬ ಅಭಿವೃದ್ಧಿ ಹೊಂದಿದುದರ ಫಲವಾಗಿ ಯುದ್ಧಾನಂತರದ ಕಾಲದಲ್ಲಿ ವಿಮಾನದ ಅಂಚೆ ಹೆಚ್ಚಾಗಿ ಬೆಳೆಯಿತು. ಯುರೋಪ್ ಏಷ್ಯ ಅಮೆರಿಕಗಳಲ್ಲೆಲ್ಲ ಈ ವ್ಯವಸ್ಥೆ ವಿಸ್ತರಿಸಿತು. ಖಂಡಾಂತರ ವಿಮಾನ ಸಂಚಾರದಿಂದ ಅಂತಾರಾಷ್ಟ್ರೀಯ ಅಂಚೆ ವ್ಯವಸ್ಥೆಯ ಬೆಳವಣಿಗೆಗೆ ಅನುಕೂಲವಾಯಿತು. ಈಚಿನ ವರ್ಷಗಳಲ್ಲಿ ವಿಮಾನ ವ್ಯವಸ್ಥೆಯಲ್ಲಾಗಿರುವ ಕ್ರಾಂತಿಕಾರಕ ಪ್ರಗತಿಗಳಿಂದ ಇಂದು ವಿಮಾನ ಅಂಚೆ ಬಹಳ ಮಟ್ಟಿಗೆ ಪ್ರಚಾರಕ್ಕೆ ಬಂದಿದೆ. ಹಗುರವಾದ ಪತ್ರಗಳನ್ನೇ ಅಲ್ಲದೆ, ಲಕೋಟೆಗಳನ್ನೂ ಭಾಂಗಿಗಳನ್ನೂ ವಿಮಾನದಲ್ಲಿ ಸಾಗಿಸುವುದು ಹೆಚ್ಚು ಹೆಚ್ಚು ಸಾಧ್ಯವಾಗುತ್ತಿದೆ. ಎಲ್ಲೆಲ್ಲಿ ಶೀಘ್ರಸೇವೆಯೇ ಮುಖ್ಯವೋ ಅಲ್ಲೆಲ್ಲ ವಿಮಾನದ ಸೌಲಭ್ಯವನ್ನು ಹೆಚ್ಚು ಹೆಚ್ಚಾಗಿ ಪಡೆದುಕೊಳ್ಳಲಾಗುತ್ತಿದೆ.

**ಅಮೆರಿಕ, ಫ್ರಾನ್ಸ್‌ಗಳಲ್ಲಿ :** ಬ್ರಿಟನ್ನೇ ಅಲ್ಲದೆ ವಿಶ್ವದ ಇತರ ರಾಷ್ಟ್ರಗಳಲ್ಲೂ ಈ ಕಾಲದಲ್ಲಿ ಅಂಚೆಯ ವ್ಯವಸ್ಥೆ ಬಹಳ ಸಮರ್ಪಕವಾಗಿ ಬೆಳೆದಿದೆ. ಬ್ರಿಟಿಷರ ಅಧೀನದಲ್ಲಿದ್ದ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 1639ರಲ್ಲಿ ಮೊಟ್ಟ ಮೊದಲನೆಯ ಅಂಚೆ ಕಚೇರಿಯ ಸ್ಥಾಪನೆಯಾಯಿತು. ಆ ವಸಾಹತಿನ ಒಳಭಾಗದಲ್ಲಿ ಒಂದು ಎಡೆಯಿಂದ ಇನ್ನೊಂದು ಎಡೆಗೆ ಅಂಚೆ ಪತ್ರವನ್ನು ಸಾಗಿಸುವ ಹಕ್ಕನ್ನು 1692ರಲ್ಲಿ ಥಾಮಸ್ ನೀಲ್ ಎಂಬುವನು ಪಡೆದ. 1707ರಲ್ಲಿ ಸರ್ಕಾರ ಈ ಹಕ್ಕನ್ನು ಕೊಂಡುಕೊಂಡಿತು. ಬೆಂಜಮಿನ್ ಫ್ರಾಂಕ್ಲಿನ್ 1752ರಲ್ಲಿ ಅಂಚೆಯಮಹಾಪಾಲ (ಪೋಸ್ಟ್ ಮಾಸ್ಟರ್ ಜನರಲ್) ಆದ. ಅಂಚೆಯ ವರಮಾನ ಹೆಚ್ಚಿತು. ಇಂಗ್ಲೆಂಡಿಗೂ ನ್ಯೂಯಾರ್ಕಿಗೂ ನಡುವೆ ನೇರವಾದ ಲಕೋಟೆ ವ್ಯವಸ್ಥೆ ಏರ್ಪಟ್ಟಿತು. ಇತರ ಕಡೆಗಳಿಗೂ ಇದು ವಿಸ್ತರಿಸಿತು. ಬ್ರಿಟನ್ನಿಗೂ ಈ ವಸಾಹತಿಗೂ ನಡುವಣ ಸಂಬಂಧ ಬಿಗಡಾಯಿಸಿದರ ಫಲವಾಗಿ ಫ್ರಾಂಕ್ಲಿನ್ 1774ರಲ್ಲಿ ವಜಾ ಮಾಡಲ್ಪಟ್ಟ. ಮುಂದೆ ಅನೇಕ ವರ್ಷಗಳ ಕಾಲ ಈ ವ್ಯವಸ್ಥೆಯಲ್ಲೇನೂ ಬದಲಾವಣೆಯಾಗಲಿಲ್ಲ. ಸಂಯುಕ್ತ ಸಂಸ್ಥಾನಗಳು ಸ್ವತಂತ್ರವಾದ ಮೇಲೆ ಈ ವ್ಯವಸ್ಥೆಯಲ್ಲಿ ಹೊಸ ಯುಗದ ಆರಂಭವಾಗಿ ಅಲ್ಲಿಂದ ಮುಂದೆ ಅದು ಶೀಘ್ರಗತಿಯಿಂದ ಬೆಳೆಯಿತು.

ಕೆನಡ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಭಾರತ – ಮುಂತಾದ ಅಂದಿನ ಬ್ರಿಟಿಷ್ ಚಕ್ರಾಧಿಪತ್ಯದ ಇತರ ದೇಶಗಳಲ್ಲಿಯೂ ಅಂಚೆ ವ್ಯವಸ್ಥೆ ಬೆಳೆಯಿತು. ಬ್ರಿಟನ್ನು ತನ್ನ ಅಧೀನ ರಾಜ್ಯಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಈ ವ್ಯವಸ್ಥೆ ಒಂದು ಮುಖ್ಯ ಸಾಧನವಾಗಿ ಪರಿಣಮಿಸಿತು.

ಫ್ರಾನ್ಸಿನಲ್ಲಿ ಸರ್ಕಾರಿ ಅಂಚೆ ವ್ಯವಸ್ಥೆ 1464ರಷ್ಟು ಹಿಂದೆಯೇ ಸ್ಥಾಪಿತವಾಯಿತು. ಮುಂದೆ 1627ರಲ್ಲಿ ರಿಚಲೂ, 1643ರಲ್ಲಿ ಮಾಜ್ಹಾರ ಎಂಬುವರು ಇದನ್ನು ಬಹುಮಟ್ಟಿಗೆ ಸುಧಾರಿಸಿದರು. ಅಂಚೆಯ ಸೇವೆ ಸಲ್ಲಿಸುವ ಹಕ್ಕನ್ನು ಗುತ್ತಿಗೆಗೆ ಕೊಡುವ ಪದ್ಧತಿ ಇಂಗ್ಲೆಂಡಿನಲ್ಲಿ 17ನೆಯ ಶತಮಾನದಲ್ಲಿ ಜಾರಿಗೆ ಬಂದು ಸ್ವಲ್ಪ ಕಾಲ ಮಾತ್ರವೇ ಜಾರಿಯಲ್ಲಿತ್ತಾದರೂ ಫ್ರಾನ್ಸಿನಲ್ಲಿ ಇದು ಬಹುಕಾಲ ಮುಂದುವರಿಯಿತು. ಫ್ರೆಂಚ್ ಮಹಾಕ್ರಾಂತಿಯ ಸಮಯದಲ್ಲಿ ಇದು ತೊಡೆದು ಹೋಯಿತು. ಅಂಚೆ ವ್ಯವಸ್ಥೆಯ ಆಡಳಿತ ನಡೆಸಲು ಒಂದು ಸಮಿತಿಯ ರಚನೆಯಾಯಿತು. 1804ರಲ್ಲಿ ನೆಪೋಲಿಯನ್ನನು ಈ ಸಮಿತಿಯನ್ನು ರದ್ದು ಮಾಡಿ, ಮಹಾನಿರ್ದೇಶಕ (ಡೈರೆಕ್ಟರ್ ಜನರಲ್) ನನ್ನು ನಿಯಮಿಸಿದ. ಆಗ ರಚಿಸಿದ ಆಡಳಿತದ ಚೌಕಟ್ಟು ಈಗಲೂ ಸ್ಥೂಲವಾಗಿ ಮುಂದುವರಿಯುತ್ತಿದೆ. ಈಗ ಸಾಮಾನ್ಯವಾಗಿ ಅಂಚೆಗಾಗಿಯೇ ಪ್ರತ್ಯೇಕವಾದ ಮಂತ್ರಿಯಿರುವುದಿಲ್ಲ. ಹಣಕಾಸು, ಲೋಕೋಪಯೋಗಿ ಕಾರ್ಯ, ವಾಣಿಜ್ಯ, ಕೈಗಾರಿಕೆ – ಹೀಗೆ ಬೇರೆ ಯಾವುದಾದರೂ ಸಚಿವಾಲಯದ ಆಡಳಿತಕ್ಕೆ ಈ ಖಾತೆಯನ್ನೂ ಸೇರಿಸಲಾಗುತ್ತಿದೆ.

**ಅಂತಾರಾಷ್ಟ್ರೀಯ ಅಂಚೆ ವ್ಯವಸ್ಥೆ :** ಇದರ ಆವಶ್ಯಕತೆಯೂ ಪ್ರಾಮುಖ್ಯವೂ ಬಹಳ ಹಿಂದಿನಿಂದಲೂ ವೇದ್ಯವಾಗಿರುವ ವಿಚಾರ. ಆದರೆ ಈ ವ್ಯವಸ್ಥೆ ಹಿಂದಿನ ಕಾಲದಲ್ಲಿ ಸಾರೋದ್ಧಾರವಾಗಿ ಬೆಳೆದುಬರಲಿಲ್ಲ. 16ನೆಯ ಶತಮಾನದಲ್ಲಿ ಲಂಡನ್ನಿಗೂ ಕೆಲೇ ಎಂಬ ಪಟ್ಟಣಕ್ಕೂ ಓಲೆಕಾರರ ಮೂಲಕವಾಗಿ ಪತ್ರಗಳು ಸಾಗಿಸಲ್ಪಡುತ್ತಿದ್ದವು. ಆಗ ಪ್ರಮುಖವಾಗಿದ್ದ ಪ್ರಪಂಚದ ಮುಖ್ಯ ನಗರಗಳಿಂದ ಕೆಲೇ ಎಂಬಲ್ಲಿಗೆ ಪತ್ರಗಳು ಬರುತ್ತಿದ್ದವು. ಆದರೆ ಆಗಿನ ಕಾಲದ ಈ ಓಲೆಕಾರರು ತಮ್ಮ ಈ ಕರ್ತವ್ಯಕ್ಕೆ ಅಷ್ಟಾಗಿ ಗಮನ ನೀಡುತ್ತಿರಲಿಲ್ಲ. ಅವರಿಗೆ ಇದೇ ಮುಖ್ಯ ಕರ್ತವ್ಯವಾಗಿರಲಿಲ್ಲ. ಸರಕುಗಳನ್ನು ಹೊತ್ತು ಮಾರುವುದೇ ಅವರಿಗೆ ಪ್ರಧಾನ ಕಸುಬಾಗಿತ್ತು.

1670ರಲ್ಲಿ ಇಂಗ್ಲೆಂಡಿಗೂ ಫ್ರಾನ್ಸಿಗೂ ನಡುವೆ ಆದ ಅಂಚೆಯ ಒಪ್ಪಂದದಂತೆ ಲಂಡನ್–ಪ್ಯಾರಿಸ್‌ಗಳ ನಡುವೆ ವಾರಕ್ಕೆರಡು ಸಾರಿ ಅಂಚೆಯ ಸಾಗಾಟವೇರ್ಪಟ್ಟಿತು. ಎರಡು ದೇಶಗಳ ಅಂಚೆಯ ಕಚೇರಿಗಳೂ ಈ ಜವಾಬ್ದಾರಿ ವಹಿಸಿಕೊಂಡವು. ಅನಂತರ ಈ ಎರಡು ದೇಶಗಳ ನಡುವೆ ಯುದ್ಧಗಳು ಸಂಭವಿಸಿ ಒಪ್ಪಂದ ಮುರಿದುಬಿತ್ತು. ಪ್ರ.ಶ.1713ರಲ್ಲಿ ಈ ಒಪ್ಪಂದಕ್ಕೆ ಮತ್ತೆ ಜೀವ ಕೊಡಲಾಯಿತು. ಬೇರೆ ಬೇರೆ ದೇಶಗಳಿಗೆ ಕಳಿಸಲಾಗುತ್ತಿದ್ದ ಪತ್ರಗಳಿಗೆ ಅವುಗಳ ದೂರ ಹಾಗೂ ತೂಕಗಳಿಗೆ ಅನುಗುಣವಾಗಿ ಅಂಚೆ ದರಗಳನ್ನು ನಿಗದಿ ಮಾಡಲಾಯಿತು. ಈ ಬಗೆಯ ಒಪ್ಪಂದಗಳ ಸಂಖ್ಯೆ ಕ್ರಮೇಣ ಬೆಳೆಯಿತು. ಈ ಕಾರಣದಿಂದಾಗಿ 19ನೆಯ ಶತಮಾನದ ಮಧ್ಯಕಾಲದ ವೇಳೆಗೆ ವಿದೇಶೀಯ ಅಂಚೆ ವ್ಯವಸ್ಥೆ ಅತ್ಯಂತ ಜಟಿಲವಾಯಿತು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿರ್ದಿಷ್ಟವಾದ ಅಂಚೆ ದರವೇನೆಂಬುದನ್ನು ಹೇಳುವುದು ಬಹು ಕಠಿಣವಾಯಿತು. ಒಂದು ಕಚೇರಿಗೂ ಇನ್ನೊಂದು ಕಚೇರಿಗೂ ದರಗಳಲ್ಲಿ ತುಂಬ ವ್ಯತ್ಯಾಸಗಳಿದ್ದವು. ಆಯಾ ಕಚೇರಿಗಳಲ್ಲಿ ಅಂತರ್ದೇಶೀಯ ಪತ್ರಗಳಿಗೆ ವಿಧಿಸುತ್ತಿದ್ದ ದರಗಳ ಆಧಾರದ ಮೇಲೆ ವಿದೇಶೀಯ ಅಂಚೆಯ ದರಗಳನ್ನು ಗೊತ್ತುಪಡಿಸಲಾಗುತ್ತಿತ್ತು. ಅಂಚೆಯ ಶುಲ್ಕವನ್ನು ಮುಂದಾಗಿಯೇ ಕೊಡುವುದು ಅನೇಕ ಸಂದರ್ಭಗಳಲ್ಲಿ ಕಡ್ಡಾಯವಾಗಿತ್ತು. ಮುಂದಾಗಿಯೇ ಶುಲ್ಕವನ್ನು ಕೊಟ್ಟಾಗಲೂ ಇದು ಒಂದು ಕ್ಲುಪ್ತವಾದ ದೂರದವರೆಗೆ ಮಾತ್ರ ಅನ್ವಯವಾಗುತ್ತಿತ್ತು. ಅಲ್ಲಿಂದ ಮುಂದಿನ ದೂರಕ್ಕೆ ವಿಳಾಸದಾರನು ಶುಲ್ಕ ಕೊಡಬೇಕಾಗುತ್ತಿತ್ತು. ಅಂಚೆ ಕಚೇರಿಗಳು ಸಾಮಾನ್ಯವಾಗಿ ಪತ್ರಗಳನ್ನು ಮಾತ್ರ ಸ್ವೀಕರಿಸುತ್ತಿದ್ದುವು.

ಕೈಗಾರಿಕೆ ಕ್ರಾಂತಿಯ ಫಲವಾಗಿ 19ನೆಯ ಶತಮಾನದ ವೇಳೆಗೆ ಪತ್ರ ವ್ಯವಹಾರಗಳ ಪ್ರಮಾಣ ತುಂಬ ಹೆಚ್ಚಿತು. ವಿದೇಶೀಯ ಅಂಚೆ ವ್ಯವಸ್ಥೆಯಲ್ಲಿ ತೀವ್ರವಾದ ಸುಧಾರಣೆ ಬಹಳ ಅಗತ್ಯವಾಗಿತ್ತು.

ಅಂತಾರಾಷ್ಟ್ರೀಯ ಅಂಚೆ ಸಂಬಂಧಗಳನ್ನು ಸುಧಾರಿಸಿ ಸರಳಗೊಳಿಸುವ ಉದ್ದೇಶದಿಂದ ಸಮ್ಮೇಳನವೊಂದನ್ನು ಕರೆಯಬೇಕೆಂದು ಅಮೆರಿಕ ಸಂಯುಕ್ತ ಸಂಸ್ಥಾನ 1862ರಲ್ಲಿ ಸಲಹೆ ಮಾಡಿತು. ಮರುವರ್ಷ ಈ ಸಮ್ಮೇಳನ ಪ್ಯಾರಿಸ್‌ನಲ್ಲಿ ಸಮಾವೇಶಗೊಂಡಿತು. ಅಲ್ಲಿ ಅಂತಾರಾಷ್ಟ್ರೀಯ ಒಡಂಬಡಿಕೆಗೆ ಆಧಾರವಾದ ಹಲವು ನಿಯಮಾವಳಿಗಳು ರಚಿತವಾದುವು. ಈ ನಿಟ್ಟಿನಲ್ಲಿ ಸಾಕಷ್ಟು ಪ್ರಗತಿಯಾಗುವ ವೇಳೆಗೆ ಹಲವಾರು ಪ್ರತಿಬಂಧಕಗಳು ಬಂದೊದಗಿದುವು. ಅಮೆರಿಕದಲ್ಲಿ ಅಂತರ್ಯುದ್ಧ ಸಂಭವಿಸಿತು. ಫ್ರಾನ್ಸಿಗೂ ಜರ್ಮನಿಗೂ ಯುದ್ಧವಾಯಿತು. ಆದರೆ ಈ ಬಗ್ಗೆ ಪ್ರಯತ್ನ ನಿಲ್ಲಲಿಲ್ಲ. ವಾನ್ ಸ್ಟೀಫನ್ ಎಂಬುವನು ಪ್ರಪಂಚದ ಅಂಚೆ ಒಕ್ಕೂಟವೊಂದನ್ನು ಸ್ಥಾಪಿಸಲು ಯತ್ನ ನಡೆಸಿದ. ಜರ್ಮನಿ ತನ್ನ ಸುತ್ತಣ ರಾಷ್ಟ್ರಗಳೊಂದಿಗೆ ಏರ್ಪಡಿಸಿಕೊಂಡಿದ್ದ ಒಕ್ಕೂಟದ ಆಧಾರದ ಮೇಲೆ ಅವನು ಈ ದಿಕ್ಕಿನಲ್ಲಿ ಹೆಜ್ಜೆಯಿಟ್ಟ. ಜರ್ಮನಿಯ ಸಲಹೆಯ ಮೇರೆಗೆ ಸ್ವಿಟ್ಜರ್‌ಲೆಂಡ್ ಸರ್ಕಾರ ಬರ್ನೆ ಎಂಬಲ್ಲಿ ಈ ಉದ್ದೇಶದಿಂದ 1874ರಲ್ಲಿ ಒಂದು ಸಮ್ಮೇಳನವನ್ನು ಕರೆಯಿತು. ಅದರಲ್ಲಿ ಯುರೋಪಿನ ಎಲ್ಲ ರಾಷ್ಟ್ರಗಳೂ ಅಮೆರಿಕವೂ ಈಜಿಪ್ಟೂ ಭಾಗವಹಿಸಿದ್ದುವು. ಅಂತಾರಾಷ್ಟ್ರೀಯ ಅಂಚೆ ಒಡಂಬಡಿಕೆಗೆ ಸಹಿ ಬಿದ್ದಿತು (1875). ಇದರ ಆಧಾರದ ಮೇಲೆ ಅಂತಾರಾಷ್ಟ್ರೀಯ ಅಂಚೆ ವ್ಯವಸ್ಥೆ ರೂಪುಗೊಂಡಿತು. ಕ್ರಮೇಣ ಇತರ ರಾಷ್ಟ್ರಗಳೂ ಈ ವ್ಯವಸ್ಥೆಗೆ ಸೇರಿದುವು. ಸಹಿ ಹಾಕಿರುವ ಎಲ್ಲ ರಾಷ್ಟ್ರಗಳೂ ಅಂಚೆಯ ವ್ಯವಸ್ಥೆಯ ದೃಷ್ಟಿಯಿಂದ ಒಂದೇ ಪ್ರದೇಶವೆಂದು ಪರಿಗಣಿಸಲ್ಪಟ್ಟುವು. ಪ್ರತಿಯೊಂದು ರಾಷ್ಟ್ರವೂ ಇತರ ರಾಷ್ಟ್ರಗಳಿಂದ ತನ್ನೆಡೆಗೆ ಬಂದ ಅಂಚೆಯನ್ನು ಆದಷ್ಟು ತ್ವರಿತವಾದ ಸಾರಿಗೆ ವ್ಯವಸ್ಥೆಯಿಂದ ಸಾಗಿಸಬೇಕೆಂದೂ ಇದಕ್ಕಾಗಿ ಇಡಿಯ ಪ್ರಪಂಚದ ರೈಲು, ಜಹಜು ಹಾಗೂ ಇತರ ಸಾರಿಗೆ ವ್ಯವಸ್ಥೆಗಳನ್ನೆಲ್ಲ ಯಾವ ನಿರ್ಬಂಧವೂ ಇಲ್ಲದೆ ಎಲ್ಲ ರಾಷ್ಟ್ರಗಳೂ ಬಳಸಬಹುದೆಂದೂ ಒಡಂಬಡಿಕೆಯಾಯಿತು.

ಅಂಚೆ ಒಕ್ಕೂಟದ ಸಂವಿಧಾನ ತುಂಬ ಸರಳವಾದದ್ದು. ರಾಷ್ಟ್ರ ರಾಷ್ಟ್ರಗಳ ನಡುವಣ ಸಮಸ್ಯೆಗಳು ಆಯಾ ರಾಷ್ಟ್ರಗಳಿಂದಲೇ ನೇರವಾಗಿ ಪರಿಹರಿಸಲ್ಪಟ್ಟುವು. ಇಡೀ ಒಕ್ಕೂಟಕ್ಕೆ ಸಂಬಂಧಿಸಿದ ವಿಚಾರಗಳಿಗಾಗಿ ಬರ್ನೆಯಲ್ಲಿರುವ ಈ ಸಂಸ್ಥೆಯ ಕೇಂದ್ರೀಯ ಕಚೇರಿ ಈ ಒಕ್ಕೂಟದ ಸದಸ್ಯ ರಾಷ್ಟ್ರಗಳಿಗೆ ಸಂಬಂಧಿಸಿದ ಸಮಾಚಾರಗಳನ್ನು ಪ್ರಕಟಿಸುತ್ತದೆ. ಸಾರಿಗೆ ಸಾಧನಗಳ ವೇಳಾಪಟ್ಟಿಯನ್ನು ಪ್ರಕಟಿಸುತ್ತದೆ. ಕಚೇರಿಯ ವೆಚ್ಚವನ್ನು ಎಲ್ಲ

ರಾಷ್ಟ್ರಗಳೂ ಹಂಚಿಕೊಳ್ಳುತ್ತವೆ. ಅಂಚೆಯ ಒಡಂಬಡಿಕೆಯೂ ಇತರ ಉಪವಿಧಿಗಳೂ ಪ್ರತಿ ಐದು ಅಥವಾ ಆರು ವರ್ಷಗಳಿಗೆ ಒಮ್ಮೆ ಸೇರುವ ಸರ್ವಸದಸ್ಯ ಸಮ್ಮೇಳನದಲ್ಲಿ ವಿಮರ್ಶಿಸಲ್ಪಡುತ್ತವೆ; ಸೂಕ್ತ ಕಂಡ ಬದಲಾವಣೆಗಳು ಮಾಡಲ್ಪಡುತ್ತವೆ.

ಅಂತಾರಾಷ್ಟ್ರೀಯ ಒಡಂಬಡಿಕೆಯ ಫಲವಾಗಿ ಅಂಚೆ ದರಗಳಲ್ಲಿ ಹಾಗೂ ವಸ್ತುಗಳ ತೂಕದಲ್ಲಿ ಸಮಾನತೆಯೇರ್ಪಟ್ಟಿತು. ಅಂಚೆಯು ಸಾಮಾನ್ಯವಾಗಿ ಪತ್ರ, ಅಂಚೆಯ ಕಾರ್ಡು, ಹಾಗೂ ಅಚ್ಚಾದ ಪತ್ರಿಕೆಗಳೆಂದು ಮೂರು ವಿಭಾಗಗಳಾಗಿ ವಿಂಗಡಿಸಲ್ಪಟ್ಟಿತು. ಇವಕ್ಕೆ ಬೇರೆ ಬೇರೆ ದರಗಳು ಗೊತ್ತುಮಾಡಲ್ಪಟ್ಟವು. ಒಂದು ದೇಶ ಇನ್ನೊಂದು ದೇಶದ ರೈಲು ಅಥವಾ ಜಹಜುಗಳನ್ನು ಅಂಚೆಯ ಸಾಗಾಣಿಕೆಗಾಗಿ ಉಪಯೋಗಿಸಿಕೊಂಡ ಪಕ್ಷದಲ್ಲಿ ಆ ದೇಶಕ್ಕೆ ಕೊಡಬೇಕಾದ ಹಣವೂ ನಿಗದಿಯಾಯಿತು. ಪತ್ರಗಳ ನೋಂದಣಿಯ (ರಿಜಿಸ್ಟ್ರೇಷನ್) ಬಗ್ಗೆಯೂ ಒಂದು ಸಾರ್ವತ್ರಿಕ ನಿಯಮವೇರ್ಪಟ್ಟಿತು. ಮುಂದೆ ಅಂತಾರಾಷ್ಟ್ರೀಯ ಮನಿಯಾರ್ಡರ್ ಅಥವಾ 'ಧನ ಆದೇಶ' ವ್ಯವಸ್ಥೆಯೂ ಭಾಂಗಿ ಅಂಚೆಯೂ ಈ ಒಡಂಬಡಿಕೆಯಲ್ಲಿ ಸೇರಿಸಲ್ಪಟ್ಟವು. ಇವುಗಳೇ ಅಲ್ಲದೆ, ಇವಕ್ಕೆ ಸಂಬಂಧಿಸಿದ ಇನ್ನೂ ಅನೇಕ ವಿಚಾರಗಳಲ್ಲಿ ಆಗಿಂದಾಗ್ಗೆ ಸಣ್ಣಪುಟ್ಟ ಒಪ್ಪಂದಗಳು ಏರ್ಪಟ್ಟವು.

ಅಂತಾರಾಷ್ಟ್ರೀಯ ಅಂಚೆ ಒಕ್ಕೂಟದ ಸ್ಥಾಪನೆಯ ಫಲವಾಗಿ ವಿದೇಶೀಯ ಅಂಚೆ ದರಗಳು ಬಹುಮಟ್ಟಿಗೆ ಕಡಿಮೆಯಾದುವು. ಆದರೂ ದೂರ ದೇಶಗಳಿಗೆ ಸಾಗುವ ಅಂಚೆಯ ದರಗಳು ಸಾಮಾನ್ಯವಾಗಿ ಅಧಿಕವಾಗಿಯೇ ಇದ್ದುವು. ಇವುಗಳನ್ನು ವ್ಯವಸ್ಥಿತಮಟ್ಟಕ್ಕೆ ತರಬೇಕಾದರೆ ಅನೇಕ ವರ್ಷಗಳೇ ಬೇಕಾದುವು. ಬ್ರಿಟಿಷ್ ಸಾಮ್ರಾಜ್ಯ ತನ್ನ ಅಧೀನ ರಾಜ್ಯಗಳ ನಡುವಣ ಅಂಚೆಯ ದರಗಳನ್ನು ನಿಗದಿ ದರಗಳಿಗಿಂತ ಕಡಿಮೆಯ ಮಟ್ಟಕ್ಕೆ ತಂದಿತು. ರಾಜಕೀಯ ಉದ್ದೇಶಗಳಿಂದ ಜಾರಿಗೆ ಬಂದ ಇಂಥ ಕ್ರಮಗಳಿಗೆ ಅಂತಾರಾಷ್ಟ್ರೀಯ ಅಂಚೆ ಒಕ್ಕೂಟದ ಒಪ್ಪಿಗೆ ದೊರಕಿತು. ಮುಂದೆ ಅಮೆರಿಕ ಸಂಯುಕ್ತಸಂಸ್ಥಾನವೂ ಈ ವ್ಯವಸ್ಥೆಗೆ ಸೇರಿಕೊಂಡಿತು. ಫ್ರಾನ್ಸು ತನ್ನ ಅಧೀನದ ರಾಜ್ಯಗಳನ್ನೊಳಗೊಂಡ ಪ್ರದೇಶದಲ್ಲಿ ಇದೇ ಬಗೆಯಲ್ಲಿ ಕಡಿಮೆಯ ಮಟ್ಟದ ದರಗಳನ್ನು ಸ್ಥಾಪಿಸಿತು. ಲ್ಯಾಟಿನ್ ಅಮೆರಿಕ ರಾಜ್ಯಗಳೂ ಅಮೆರಿಕ ಸಂಯುಕ್ತಸಂಸ್ಥಾನಗಳೂ ಸೇರಿ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಂಡವು. ಒಂದು ಸದಸ್ಯರಾಷ್ಟ್ರದಿಂದ ಇನ್ನೊಂದು ಸದಸ್ಯರಾಷ್ಟ್ರಕ್ಕೆ ಸಾಗುವ ಅಂಚೆಯ ದರಗಳು ಆ ರಾಷ್ಟ್ರದ ಆಂತರಿಕ ದರಗಳಿಗಿಂತ ಅಧಿಕವಾಗಿರಬಾರದೆಂದು ಒಡಂಬಡಿಕೆಯಾಯಿತು. ಒಂದು ಸದಸ್ಯರಾಷ್ಟ್ರದ ಅಂಚೆಯನ್ನು ಇನ್ನೊಂದು ಸದಸ್ಯರಾಷ್ಟ್ರ ಮುಫತ್ತಾಗಿ ಸಾಗಿಸಬೇಕೆಂದೂ ಒಪ್ಪಂದವಾಯಿತು. ಹೀಗೆ ಕ್ರಮೇಣ ಅಂತಾರಾಷ್ಟ್ರೀಯ ಅಂಚೆ ದರಗಳು ವ್ಯವಸ್ಥಿತಮಟ್ಟದಲ್ಲಿ ಸ್ಥಿರವಾಗುವುದು ಸಾಧ್ಯವಾಯಿತು.

**ಅಂಚೆ–ತಂತಿ, ಭಾರತದಲ್ಲಿ :** ಭಾರತದಲ್ಲಿ ಅಂಚೆಯ ಇತಿಹಾಸ ಬಹಳ ಹಳೆಯದು. ಹಿಂದಿನ ಚಕ್ರಾಧಿಪತ್ಯಗಳ ಅಧೀನದಲ್ಲಿ ದೂರ ದೂರದಲ್ಲಿ ಹಬ್ಬಿದ್ದ ನಾನಾ ಪ್ರಾಂತಗಳಿಗೆ ಕೇಂದ್ರದ ಆದೇಶಗಳನ್ನು ಮುಟ್ಟಿಸುವುದಕ್ಕೂ ಆ ಪ್ರಾಂತಗಳಲ್ಲಿನ ವಿದ್ಯಮಾನಗಳನ್ನು ಅರಿಯುವುದಕ್ಕೂ ಸಮರ್ಪಕವಾದ ಅಂಚೆ ವ್ಯವಸ್ಥೆಯ ಅಗತ್ಯವಿತ್ತು.

ವ್ಯಾಪಾರಿಗಳಾಗಿ ಭಾರತಕ್ಕೆ ಬಂದು, ಆಡಳಿತಗಾರರಾಗಿ ಕಾಲೂರಿ ನಿಂತ ಬ್ರಿಟಿಷರಾದರೂ ಇಲ್ಲಿ ಅಂಚೆ ವ್ಯವಸ್ಥೆಯನ್ನೇರ್ಪಡಿಸಿದ್ದು ಈ ಉದ್ದೇಶದಿಂದಲೇ. ಬ್ರಿಟಿಷ್ ಭಾರತದ ಅಂಚೆ ವ್ಯವಸ್ಥೆಗೆ ಲಾರ್ಡ್ ಕ್ಲೈವನೇ ಜನಕ. 1766ರಲ್ಲಿ ಈ ವ್ಯವಸ್ಥೆಯನ್ನು ಮುಖ್ಯವಾಗಿ ಆಡಳಿತದ ಉದ್ದೇಶಗಳಿಗಾಗಿಯೇ ಸ್ಥಾಪಿಸಲಾಯಿತು. ಸಾರ್ವಜನಿಕರೂ ಈ ವ್ಯವಸ್ಥೆಯ ಉಪಯೋಗವನ್ನು ಪಡೆದುಕೊಳ್ಳುವಂತೆ ಆದದ್ದು 1837ರಲ್ಲಿ. ಆ ವರ್ಷದಲ್ಲಿ ಇದಕ್ಕಾಗಿ ಒಂದು ಶಾಸನವಾಯಿತು. 1854ರಲ್ಲಿ ಈ ವ್ಯವಸ್ಥೆಯನ್ನು ಮಹಾನಿರ್ದೇಶಕನ (ಡೈರೆಕ್ಟರ್ ಜನರಲ್) ಅಧೀನಕ್ಕೆ ಒಳಪಡಿಸಲಾಯಿತು; ಇಡೀ ಭಾರತಕ್ಕೆ ಅನ್ವಯಿಸುವಂತೆ ಅಂಚೆಯ ದರಗಳ ನಿಷ್ಕರ್ಷೆಯಾಯಿತು.

ಅಂಚೆಯ ಚೀಟಿಗಳನ್ನು ಭಾರತದಲ್ಲಿ ಪ್ರಥಮವಾಗಿ ನೀಡಿದ್ದು ಕರಾಚಿಯಲ್ಲಿ (1825). ಆಗ ಸಿಂಧ್ ಪ್ರಾಂತದಲ್ಲಿ ಮಾತ್ರ ಇವುಗಳ ವ್ಯಾಪ್ತಿಯಿತ್ತು. 1830ರಲ್ಲಿ ಇಂಗ್ಲೆಂಡಿಗೂ ಭಾರತಕ್ಕೂ ನಡುವೆ ಸೂಯೆಜ಼್ ಮೂಲಕವಾಗಿ ಅಂಚೆಯ ಸಾಗಾಟದ ಆರಂಭವಾಯಿತು.

1839ರಲ್ಲಿ ಭಾರತದಲ್ಲಿ ತಂತಿಯ ಉದಯವಾಯಿತು. ವಿಲಿಯಂ ಷಾಘ್‌ನೆಸ್ಸಿ ಎಂಬುವನು ಕಲ್ಕತ್ತೆಯಿಂದ ಡೈಮಂಡ್ ಹಾರ್ಬರಿಗೆ ಹಾಕಿದ ಪ್ರಾಯೋಗಿಕ ತಂತಿ ಮಾರ್ಗವೇ ಈ ನಿಟ್ಟಿನಲ್ಲಿ ಪ್ರಥಮಯತ್ನ. ಕಲ್ಕತ್ತೆಯ ವೈದ್ಯಕೀಯ ಕಾಲೇಜಿನಲ್ಲಿ ಆತ ಪ್ರಾಧ್ಯಾಪಕನಾಗಿದ್ದ. ಆಗಿನ ಕಾಲಕ್ಕೆ ಇದೇ ಪ್ರಪಂಚದಲ್ಲೆಲ್ಲಾ ಅತ್ಯಂತ ಉದ್ದವಾದ ತಂತಿಮಾರ್ಗವಾಗಿತ್ತು. ಅದರ ಉದ್ದ ಸು.33ಕಿಮೀ. ಇದು 2200ಮೀ. ದೂರ ನದಿಯನ್ನು ದಾಟಿ ಹೋಗುತ್ತಿದ್ದುದು ಇದರ ಒಂದು ವೈಶಿಷ್ಟ್ಯ.

ಸರ್ಕಾರದವರು ತಂತಿ ಮಾರ್ಗವನ್ನೇರ್ಪಡಿಸಲು ತೊಡಗಿದ್ದು 1851ರಲ್ಲಿ, ಕಲ್ಕತ್ತೆಯಿಂದ ಡೈಮಂಡ್ ಹಾರ್ಬರಿಗೆ. ದೂರದ ತಂತಿಮಾರ್ಗದ ಕೆಲಸ 1853ರಲ್ಲಿ ಆರಂಭವಾಯಿತು. ಭಾರತದ ತಂತಿ ವ್ಯವಸ್ಥೆಯ ಉದಯವಾದದ್ದು ಈ ವರ್ಷದಲ್ಲೇ ಎಂದು ಹೇಳಬಹುದು. ಕಲ್ಕತ್ತೆಯಿಂದ ಆಗ್ರಕ್ಕೆ ಹಾಕಲಾಗಿದ್ದ ಈ ಮಾರ್ಗದ ಮೇಲೆ ಮೊಟ್ಟಮೊದಲಿಗೆ ಸುದ್ದಿಯನ್ನು ಕಳಿಸಿದ್ದು 1854ರ ಮಾರ್ಚ್ 24ರಂದು. ಮುಂದೆ ಈ ಮಾರ್ಗವನ್ನು ಒಂದು ಕಡೆಯಲ್ಲಿ ಮುಂಬೈವರೆಗೂ ಇನ್ನೊಂದು ಕಡೆಯಲ್ಲಿ ಪೆಷಾವರಿನವರೆಗೂ ವಿಸ್ತರಿಸಲಾಯಿತು. 1865ರಲ್ಲಿ ಇಂಗ್ಲೆಂಡ್ ಭಾರತಗಳ ನಡುವೆ ತಂತಿಮಾರ್ಗವೇರ್ಪಟ್ಟಿತು. 1867ರ ವೇಳೆಗೆ ಭಾರತದ ಒಳನಾಡಿನಲ್ಲಿ 14,900 ಮೈಲಿಗಳಷ್ಟು ತಂತಿಮಾರ್ಗಗಳಿದ್ದುವು. ಅಖಿಲ ಭಾರತದ ಉಪಯೋಗಕ್ಕಾಗಿ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದ್ದು 1854ರ ಅಕ್ಟೋಬರಿನಲ್ಲಿ. ವಿ.ಪಿ. ಅಥವಾ ಮೌಲ್ಯ ದೇಯ ಅಂಚೆ ವ್ಯವಸ್ಥೆಯು 1877ರಲ್ಲೂ ಮನಿ ಆರ್ಡರ್ ಅಥವಾ ಧನ ಆದೇಶದ ಸೌಲಭ್ಯ 1880ರಲ್ಲೂ ಅಂಚೆಯ ಸಂಚಿತ ಠೇವಣಿ ವ್ಯವಸ್ಥೆ ಅಥವಾ ಪೋಸ್ಟಲ್ ಸೇವಿಂಗ್ಸ್ ಬ್ಯಾಂಕ್ 1885ರಲ್ಲೂ ಆರಂಭವಾದುವು.

ವಿಮಾನ ಅಂಚೆ ಸೌಲಭ್ಯ ಆರಂಭವಾದದ್ದು 1911ರಲ್ಲಿ. ಭಾರತ ಬ್ರಿಟನ್ನುಗಳ ನಡುವೆ ವಿಮಾನ ಅಂಚೆಯ ಸೇವೆಯನ್ನು 1929ರಲ್ಲಿ ತೆರೆಯಲಾಯಿತು.

ಇಲಾಖೆಯ ಆಡಳಿತ: ಭಾರತದ ಅಂಚೆ–ತಂತಿ ಇಲಾಖೆಯು ಭಾರತಸರ್ಕಾರದ ಸಂಪರ್ಕ ಇಲಾಖೆಯ ಆಡಳಿತಕ್ಕೊಳಪಟ್ಟಿದೆ. ಅಂಚೆ–ತಂತಿಯ ಮಹಾ ನಿರ್ದೇಶಕರು ಈ ಇಲಾಖೆಯ ಮುಖ್ಯಾಧಿಕಾರಿಗಳು. ಆಡಳಿತ ಹಾಗೂ ಆಂತರಿಕ ಹಣಕಾಸಿನ ನಿರ್ವಹಣೆಗಾಗಿ ಅಂಚೆ–ತಂತಿ ಮಂಡಳಿ 1959ರಲ್ಲಿ ಸ್ಥಾಪಿತವಾಯಿತು. ಈ ಮಂಡಳಿಯಲ್ಲಿ ಅಧ್ಯಕ್ಷರಲ್ಲದೆ ಆರು ಮಂದಿ ಸದಸ್ಯರಿದ್ದಾರೆ. ಹಣಕಾಸು, ಅಂಚೆ, ಆಡಳಿತ, ತಂತಿ, ಸಂಪರ್ಕವ್ಯವಹಾರ, ತಂತಿ ಸಂಪರ್ಕಾಭಿವೃದ್ಧಿ, ಬ್ಯಾಂಕಿಂಗ್ ಮತ್ತು ವಿಮೆ–ಇವುಗಳಲ್ಲಿ ಒಂದೊಂದಕ್ಕೂ ಒಬ್ಬೊಬ್ಬರಂತೆ ಸದಸ್ಯರಿದ್ದಾರೆ.

ಆಡಳಿತ ಸೌಕರ್ಯಕ್ಕಾಗಿ ಹಾಗೂ ಕಾರ್ಯನಿರ್ವಹಣೆಗಾಗಿ ದೇಶವನ್ನು ಹಲವಾರು ವಿಭಾಗಗಳಾಗಿ ವಿಂಗಡಿಸಿದೆ. ಈಗ ಇಂಥ ಹದಿನೈದು ಪ್ರಾದೇಶಿಕ ಅಂಚೆ–ತಂತಿ ವಿಭಾಗಗಳಿವೆ. ಆಂಧ್ರ, ಅಸ್ಸಾಂ, ಬಿಹಾರ, ಗುಜರಾತ್, ಜಮ್ಮು ಕಾಶ್ಮೀರ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಒರಿಸ್ಸ, ಪಂಜಾಬ್, ರಾಜಸ್ಥಾನ, ತಮಿಳುನಾಡು, ಉತ್ತರಪ್ರದೇಶ, ಪಶ್ಚಿಮಬಂಗಾಲ ಇವುಗಳು ಆ ವಿಭಾಗಗಳು. ಆಡಳಿತದೃಷ್ಟಿಯಿಂದ ದೆಹಲಿ ಒಂದು ಪ್ರತ್ಯೇಕ ವಿಭಾಗವಾಗಿದೆ. ದೂರವಾಣಿಯ ವ್ಯವಸ್ಥೆಗಾಗಿ ದೇಶವನ್ನು ಮುಂಬೈ, ಕಲ್ಕತ್ತ, ದೆಹಲಿ, ಮದರಾಸು, ಹೈದರಾಬಾದ್ ಮತ್ತು ಬೆಂಗಳೂರು ಎಂದು ಆರು ಜಿಲ್ಲೆಗಳಾಗಿ ವಿಂಗಡಿಸಿದೆ.

ಅಂಚೆ–ತಂತಿ ಸೇವಾನಿರ್ವಹಣೆಯ ಸಿಬ್ಬಂದಿಯ ತರಬೇತಿಗಾಗಿ ದೇಶದ ಕೆಲವು ಸ್ಥಳಗಳಲ್ಲಿ ಪ್ರಶಿಕ್ಷಣ ಹಾಗೂ ಸಂಶೋಧನ ಕೇಂದ್ರಗಳನ್ನು ತೆರೆಯಲಾಗಿದೆ.

ಕೆಲವು ಪ್ರಮುಖನಗರಗಳಲ್ಲಿ ಸಂಚಾರಿ ಅಂಚೆ ಕಚೇರಿಗಳು ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿವೆ. ರಾತ್ರಿಯ ವೇಳೆಯ ವಿಮಾನ ಅಂಚೆವ್ಯವಸ್ಥೆಯ ಮೂಲಕ ದೇಶದ ಮುಖ್ಯ ನಗರಗಳೊಂದಿಗೆ ಸಂಬಂಧ ಕಲ್ಪಿಸಲಾಗಿದೆ. ಎಲ್ಲೆಲ್ಲಿಗೆ ವಿಮಾನ ಸೌಲಭ್ಯವಿದೆಯೋ ಅಲ್ಲಿಗೆಲ್ಲಾ ಸಾಮಾನ್ಯವಾಗಿ ಅಂತರ್ದೇಶೀಯ ಪತ್ರಗಳೂ ಕಾರ್ಡುಗಳೂ ಮನಿಯಾರ್ಡರುಗಳೂ ವಿಮಾನದ ಮೂಲಕವೇ ಸಾಗುತ್ತವೆ. ಹೊರದೇಶಗಳಿಗೆ ವಿಮಾನದಲ್ಲಿ ಭಾಂಗಿಗಳನ್ನು ಕಳುಹಿಸುವ ಸೌಲಭ್ಯವಿದೆ. ಬಹುತೇಕ ಅಂಚೆ ಕಚೇರಿಗಳಲ್ಲಿ ಸೇವಿಂಗ್ಸ್ ಬ್ಯಾಂಕ್ ಅಥವಾ ಸಂಚಿತ ಠೇವಣಿ ಸೌಕರ್ಯವಿದೆ. ರಾತ್ರಿಯ ಅಂಚೆ ಕಚೇರಿಗಳೂ ಇವೆ. ಅಂಚೆ ಇಲಾಖೆ ತನ್ನ ದಿನ ನಿತ್ಯದ ವ್ಯವಹಾರಕ್ಕೆ ವಿದ್ಯುನ್ಮಾನ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿದೆ. ಪ್ರಮುಖ ಅಂಚೆ ಕಛೇರಿಗಳಲ್ಲಿ ಧನಾದೇಶ, ನೋಂದಣಿ (ರಿಜಿಸ್ಟ್ರೇಷನ್), ಸ್ಪೀಡ್‌ಪೋಸ್ಟ್ ಭಾಂಗಿಗಳ ಸ್ವೀಕೃತಿ ಮತ್ತಿತರ ವ್ಯವಹಾರಕ್ಕೆ, ಗಣಕ ಯಂತ್ರಗಳನ್ನು ಬಳಕೆಗೆ ತಂದಿದೆ. ಇದರಿಂದ ಕಾರ್ಯಕ್ಷಮತೆ ಹೆಚ್ಚಿದೆ, ಸೇವಾ ಸೌಲಭ್ಯ ವಿಸ್ತರಿಸಿದೆ.

ಸ್ಪೀಡ್ ಪೋಸ್ಟ್: ಪತ್ರಗಳು, ಲಕೋಟೆ ತ್ವರಿತವಾಗಿ ನಿರ್ದಿಷ್ಟ ಅವಧಿಯಲ್ಲಿ ವಿಳಾಸದಾರರಿಗೆ ತಲುಪಿಸುವ ಸೇವೆ.

ಎಕ್ಸ್‌ಪ್ರೆಸ್ ಪಾರ್ಸೆಲ್ ಪೋಸ್ಟ್: ಭಾಂಗಿಗಳನ್ನು ವಿಳಾಸದಾರರಿಗೆ ನೇರವಾಗಿ ನಿರ್ದಿಷ್ಟ ಅವಧಿಯಲ್ಲಿ ಖಾತರಿಯಾಗಿ ತಲುಪಿಸುವ ಸೇವೆ. 50,000ರೂ ವರೆಗೆ ಮೌಲ್ಯದೇಯ ಅಂಚೆ ವ್ಯವಸ್ಥೆ (ವಿ.ಪಿ.ಸೌಲಭ್ಯ). ವ್ಯಾಪಾರಿಗಳಿಗೆ ಉಪಯುಕ್ತವಾದ ಸೇವೆ. ಸದ್ಯಕ್ಕೆ ಕೆಲವೇ ಪ್ರಮುಖ ಕೇಂದ್ರಗಳಿಗೆ ಸೀಮಿತವಾಗಿದೆ.

ಶುಭಾಶಯ ಪತ್ರ: ಸುಂದರ ಶುಭಾಶಯ ಪತ್ರ. ಲಕೋಟೆಯ ಮೇಲೆ ಶುಭಾಶಯ ಪತ್ರದ ಪ್ರತಿಕೃತಿ ಇರುವ ಅಂಚೆ ಚೀಟಿ ಮುದ್ರಿತ ಪತ್ರ. ಆಕರ್ಷಕ ಬೆಲೆಗಳಲ್ಲಿ ಲಭ್ಯ. ಪ್ರತಿವರ್ಷವೂ ಹೊಸ ವಿನ್ಯಾಸ.

ಪಾಸ್‌ಪೋರ್ಟ್: ವಿದೇಶ ಪ್ರವಾಸ ಮಾಡುವವರಿಗೆ ಅಗತ್ಯವಾದ ಪಾಸ್‌ಪೋರ್ಟ್ ಅರ್ಜಿ ಮಾರಾಟ, ತುಂಬಿದ ಅರ್ಜಿ ಸ್ವೀಕರಿಸುವುದು, ಪರಿಶೀಲಿಸಿ ಪಾಸ್‌ಪೋರ್ಟ್ ಕಛೇರಿಗೆ ಕಳಿಸಿ, ಸಿದ್ಧವಾದ ಪಾಸ್‌ಪೋರ್ಟ್‌ನ್ನು ಸಂಬಂಧಪಟ್ಟವರಿಗೆ ತಲುಪಿಸುವ ಸೇವೆ. ಈ ಸೇವೆಗೆ ದುಬಾರಿಯಲ್ಲದ ಶುಲ್ಕ. ದೂರವಾಣಿ ಬಿಲ್ಲಿನ ಸ್ವೀಕೃತಿ, ಬಸ್‌ಪಾಸ್ ನೀಡಿಕೆ ಸರಕಾರದ ಹಾಗೂ ಖಾಸಗಿ ಸಂಸ್ಥೆಗಳ ಅರ್ಜಿಫಾರಂಗಳ ಮಾರಾಟದ ಸೇವೆಯೂ ಲಭ್ಯ.

ಉಳಿತಾಯ ಯೋಜನೆ: ಜನಪ್ರಿಯವಾದ ಸೇವೆಯ ವ್ಯಾಪ್ತಿ ವಿಸ್ತಾರವಾಗಿದೆ, 1,55,000 ಅಂಚೆ ಕಛೇರಿಗಳಲ್ಲಿ 14 ಕೋಟಿ ಖಾತೆದಾರರು. ಸಂಚಿತ ಠೇವಣಿ ಮೊತ್ತ ರೂ. 80,000. ಸಂಚಿತ ಠೇವಣಿಯಲ್ಲದೆ, ಆವರ್ತಠೇವಣಿ ಮಾಸಿಕ ವರಮಾನ ಠೇವಣಿ, ನಿಶ್ಚಿತ ಅವಧಿ ಠೇವಣಿ, ಮೊದಲಾದ ಯೋಜನೆಗಳು. ಸಾರ್ವಜನಿಕ ಭವಿಷ್ಯ ನಿಧಿ.

ಕಿಸಾನ್ ವಿಕಾಸ ಪತ್ರ, ರಾಷ್ಟ್ರೀಯ ಉಳಿತಾಯ ಪತ್ರ, ಮೊದಲಾದವುಗಳಿಂದ ಅಂಚೆ ಕಛೇರಿಯಲ್ಲಿ ರಾಷ್ಟ್ರೀಯ ಉಳಿತಾಯ ನಿಧಿಯಲ್ಲಿ ಕೂಡಿರುವ ಮೊತ್ತ ರೂ. 13,600 ಕೋಟಿ (31, ಮಾರ್ಚ್2003).

ಅಂತಾರಾಷ್ಟ್ರೀಯ ಧನಾದೇಶ: ಅಂತರಜಾಲ ಸೌಲಭ್ಯ ಇಲ್ಲದವರಿಗೆ ಅಂತಾರಾಷ್ಟ್ರೀಯ ಧನಾದೇಶ ಸ್ವೀಕೃತಿ, ಪಾವತಿ.

ರಾಷ್ಟ್ರದಲ್ಲೂ ಉಪಗ್ರಹದ ಮೂಲಕ ಕ್ಷಿಪ್ರವಾಗಿ ಧನಾದೇಶ ಪಾವತಿ ಸೌಲಭ್ಯ.

ಲಾಭಾಂಶ ವಿತರಣೆ: ಯುಟಿಐ ಮತ್ತು ಸಿಟಿ ಬ್ಯಾಂಕ್ ಮೊದಲಾದ ಹಣಕಾಸು ಸಂಸ್ಥೆಗಳ ಲಾಭಾಂಶ ಪತ್ರಗಳು (ಡಿವಿಡೆಂಡ್ ವಾರಂಟ್) ವಿತರಣೆ ಹಾಗೂ ನಗದು ಪಾವತಿ.

**ಜೀವ ವಿಮೆ:** ಪ್ರಶ 1884ರಲ್ಲಿ ಅಂಚೆ ಇಲಾಖೆಯ ನೌಕರರಿಗೆ ಒದಗಿಸಿದ ಸೌಲಭ್ಯ ಈಗ ಸಾರ್ವಜನಿಕರಿಗೂ ಲಭ್ಯ 5 ಬಗೆಯ ವಿಮೆ. ಗ್ರಾಮೀಣ ಬಡಜನರಿಗಾಗಿ ಕಡಿಮೆ ಪ್ರೀಮಿಯಂ ಇರುವ ಆಕರ್ಷಕ ವಿಮಾ ಯೋಜನೆಗಳು.

ಮಾರ್ಚ್ 31, 2003ರವರೆಗೆ ಚಾಲ್ತಿಯಲ್ಲಿದ್ದ ವಿಮಾ ಪಾಲಿಸಿಗಳ ಸಂಖ್ಯೆ 17,95,000 ಈ ಯೋಜನೆ ಜನಪ್ರಿಯವಾಗಿದೆ. 2003–04ರಲ್ಲಿ 2,64,396 ವಿಮಾ ಪಾಲಿಸಿಗಳನ್ನು ನೀಡಲಾಯಿತು. ಮೊತ್ತ 2,926 ಕೋಟಿ. ಗ್ರಾಮೀಣ ವಲಯದಲ್ಲಿ ನೀಡಲಾದ ಪಾಲಿಸಿಗಳ ಸಂಖ್ಯೆ 11,25,099, ವಿಮಾ ಮೊತ್ತ 6520.68 ಕೋಟಿ.

**ತಂತಿ–ವ್ಯವಸ್ಥೆ:** ಭಾರತದ ತಂತಿ ವ್ಯವಸ್ಥೆಗೆ 1953ರ ನವೆಂಬರಿನಲ್ಲಿ ಶತಮಾನೋತ್ಸವವಾಯಿತು. ಭಾರತದ ತಂತಿ ವ್ಯವಸ್ಥೆ ಪ್ರಪಂಚದ ಅತ್ಯಂತ ಹಳೆಯ ಸರ್ಕಾರಿ ಉದ್ಯಮ. ಹಿಂದಿ ಹಾಗೂ ಇತರ ಭಾರತೀಯ ಭಾಷೆಗಳಲ್ಲಿ (ದೇವನಾಗರಿ ಲಿಪಿಯಲ್ಲಿ) ತಂತಿಯನ್ನು ಕಳಿಸುವ ಸೌಲಭ್ಯವನ್ನು 1949ರಲ್ಲಿ ಕಲ್ಪಿಸಲಾಯಿತು. ಈ ಸೌಲಭ್ಯ ಈಗ ಭಾರತದ 2,543 ತಂತಿ ಕಚೇರಿಗಳಲ್ಲಿ ದೊರಕುತ್ತದೆ. ಸಂದೇಶದ ತಂತಿ ಹಾಗೂ ಮುದ್ರಿತ ತಂತಿವ್ಯವಸ್ಥೆಯನ್ನೂ ಒದಗಿಸಲಾಗಿದೆ. ವಿವಾಹ, ಪರೀಕ್ಷೆಯಲ್ಲಿ ಜಯ, ಚುನಾವಣೆಗಳಲ್ಲಿ ಗೆಲುವು, ಹಬ್ಬ, ಉತ್ಸವ–ಮುಂತಾದ ಸಂದರ್ಭಗಳಲ್ಲಿ ಸಂದೇಶ ತಂತಿಗಳನ್ನು ಕಡಿಮೆ ವೆಚ್ಚದಲ್ಲಿ ಕಳಿಸಬಹುದಾಗಿದೆ. ಟೆಲಿಪ್ರಿಂಟರ್ ಅಥವಾ ದೂರಮುದ್ರಕದ ಸೌಲಭ್ಯವನ್ನು ಬಯಸುವ ಚಂದಾದಾರರಿಗೆ ತಂತಿ ಕಚೇರಿಯಿಂದ ಅವರು ಬಯಸುವ ಸ್ಥಳಕ್ಕೆ ತಲುಪಿದ ಸುದ್ದಿ ಅಚ್ಚಾಗಿ ದೊರಕುತ್ತದೆ. ಅಪಘಾತ, ಕಾಯಿಲೆ, ಮರಣ ಮುಂತಾದ ಸುದ್ದಿಗಳಿಗೆ ಪ್ರಥಮಪ್ರಾಶಸ್ತ್ಯ ಕೊಟ್ಟು ಅವನ್ನು ವೇಗವಾಗಿ ಮುಟ್ಟಿಸುವ ವ್ಯವಸ್ಥೆಯಿದೆ. ಟೆಲಿಫೋನ್ ಅಥವಾ ದೂರವಾಣಿಯ ಮೂಲಕ ತಂತಿ ಕಳಿಸುವುದು ಕೂಡ ಈಗ ಸಾಧ್ಯ. ರಾಷ್ಟ್ರೀಯ ಟೆಲೆಕ್ಸ್ ಅಥವಾ ದೂರ ಮುದ್ರಕದ ವ್ಯವಸ್ಥೆಯಿಂದಾಗಿ ಒಂದು ತಂತಿ ಕಚೇರಿಯಿಂದ ಇನ್ನೊಂದು ತಂತಿ ಕಚೇರಿಗೆ ನೇರವಾಗಿ ಸುದ್ದಿ ಅಚ್ಚಾಗಿ ತಲುಪುತ್ತದೆ.

1876ರಲ್ಲಿ ಟೆಲಿಫೋನ್ ಅಥವಾ ದೂರವಾಣಿಯನ್ನು ಕಂಡುಹಿಡಿಯಲಾಯಿತು. ಮುಂದೆ ಐದೇ ವರ್ಷಕ್ಕೆ ಭಾರತದಲ್ಲಿ, ಮೊದಲು ಕಲ್ಕತ್ತೆಯಲ್ಲಿ, ಐವತ್ತು ಪಥಗಳ (ಲೈನುಗಳು) ದೂರವಾಣಿ ವಿನಿಮಯಕೇಂದ್ರ ಸ್ಥಾಪಿಸಲ್ಪಟ್ಟಿತು. ದೂರವಾಣಿ ವ್ಯವಸ್ಥೆಯನ್ನು ಮೊಟ್ಟಮೊದಲಿಗೆ ಸ್ಥಾಪಿಸಿದ ದೇಶಗಳಲ್ಲಿ ಭಾರತವೂ ಒಂದು. (ಕಲ್ಕತ್ತೆಗೆ ಪ್ರಥಮ ಗೌರವ). 1913ರಲ್ಲಿ ಶಿಮ್ಲದಲ್ಲಿ ಪ್ರಥಮವಾಗಿ ದೂರವಾಣಿಯ ಸ್ವಯಂವಿನಿಮಯಕೇಂದ್ರದ ವ್ಯವಸ್ಥೆ ಆರಂಭವಾಯಿತು.

ತಂತಿ ವ್ಯವಸ್ಥೆ ಮುರಿದುಬಿದ್ದ ಸಂದರ್ಭಗಳಲ್ಲಿ ವೈರ್‌ಲೆಸ್ ಅಥವಾ ತಂತಿರಹಿತ ಸಂಪರ್ಕಸೌಲಭ್ಯವನ್ನು ದೇಶದ ಕೆಲವು ಮುಖ್ಯಸ್ಥಳಗಳಲ್ಲಿ ಸ್ಥಾಪಿಸಿದೆ.

ಭಾರತಕ್ಕೂ ಇತರ ದೇಶಗಳಿಗೂ ನಡುವೆ ರೇಡಿಯೊ–ಟೆಲಿಗ್ರಾಫ್, ರೇಡಿಯೊ–ಟೆಲಿಫೋನ್, ರೇಡಿಯೊ–ಫೋಟೊ ಮತ್ತು ದೂರ ಮುದ್ರಕ (ಟೆಲೆಕ್ಸ್) ಸಂಪರ್ಕಗಳಿವೆ. ಈ ವ್ಯವಸ್ಥೆಯೂ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದೆ. ಕೃತಕ ಉಪಗ್ರಹಗಳ ಮೂಲಕವಾಗಿ ದೇಶಾಂತರಕ್ಕೆ ಸುದ್ದಿ ಕಳಿಸುವ ಸಾಧ್ಯತೆ ಈಗ ಹೆಚ್ಚಾಗಿದೆ. ಇದಕ್ಕಾಗಿ ಭಾರತ ಸರ್ಕಾರ ಕೂಡ ಇತರ ರಾಷ್ಟ್ರಗಳೊಂದಿಗೆ ಒಂದು ಒಪ್ಪಂದಕ್ಕೆ ಸಹಿ ಹಾಕಿದೆ.

1948ರಲ್ಲಿ ಭಾರತದಲ್ಲಿ ಇದ್ದದ್ದು 321 ದೂರವಾಣಿ ವಿನಿಮಯ ಕೇಂದ್ರಗಳು. ಮೇ 2004ರ ವೇಳೆಗೆ ಅವುಗಳ ಸಂಖ್ಯೆ 3,73,172 ಕ್ಕೆ ಏರಿದೆ. ಎಲ್ಲವೂ ವಿದ್ಯುನ್ಮಾನ ವಿನಿಮಯ ಕೇಂದ್ರಗಳು.

ಇತ್ತೀಚಿನ ಬೆಳವಣಿಗೆ: ಸ್ವಾತಂತ್ರ್ಯಾನಂತರ ತಂತಿ ಮತ್ತು ದೂರವಾಣಿ–ದೂರಸಂಪರ್ಕ ಸೇವಾವಲಯದಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಸರಕಾರಿ ಸ್ವಾಮ್ಯದಲ್ಲಿದ್ದ ಈ ವಲಯದಲ್ಲಿ ಅಕ್ಟೋಬರ್ 15, 2001ರಿಂದ ಸರ್ಕಾರ ಖಾಸಗಿ ಬಂಡವಾಳ ಹೂಡಿಕೆಗೆ ಆಹ್ವಾನ ನೀಡಿದೆ. ಸಾರ್ವಜನಿಕ ಉದ್ಯಮ ವಲಯದಲ್ಲಿ, ಭಾರತ ಸಂಚಾರ ನಿಗಮ ಲಿಮಿಟೆಡ್ (ಬಿಎಸ್‌ಎನ್‌ಎಲ್) ಮತ್ತು ಮಹಾನಗರಗಳಿರುವ ಕಡೆ ಮಹಾನಗರ ಟೆಲಿಫೋನ್ ಲಿಮಿಟೆಡ್ (ಎಂ.ಟಿ.ಎನ್.ಎಲ್) ಅಸ್ತಿತ್ವಕ್ಕೆ ಬಂದಿದೆ. ಸಂಚಾರಿ ದೂರವಾಣಿ ಸೇವೆ (ಮೊಬೈಲ್) ಅತ್ಯಂತ ತ್ವರಿತವಾಗಿ ವಿಕಾಸವಾಗುತ್ತಿರುವ ಸೇವೆ. ದೇಶವನ್ನು 19 ವಲಯಗಳಾಗಿ ವಿಂಗಡಿಸಿ ಪ್ರತಿಯೊಂದು ವಲಯದಲ್ಲೂ ನಾಲ್ಕು ಸೇವಾ ಪ್ರಾಯೋಜಕರು. ಅದರಲ್ಲಿ ಒಂದು ಸಾರ್ವಜನಿಕ ವಲಯಕ್ಕೆ ಸೇರಿದ ಸಂಸ್ಥೆ ಭಾರತ ಸಂಚಾರ ನಿಗಮ ಲಿಮಿಟೆಡ್. ಉಳಿದ ಮೂರು ಖಾಸಗಿ ಸೇವಾ ಪ್ರಯೋಜಕರು 'ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ'ದ ಸಮಗ್ರ ಮೇಲ್ವಿಚಾರಣೆ. ಅದರ ನಿರ್ಣಯಕ್ಕೆ ಎಲ್ಲರೂ ಬದ್ಧವಾಗಿರತಕ್ಕದ್ದು.

ಭಾರತದಲ್ಲಿ 27 ದಶಲಕ್ಷಕ್ಕೂ ಹೆಚ್ಚು ಸಂಚಾರಿ ದೂರವಾಣಿ ಮೊಬೈಲ್ ಗ್ರಾಹಕರಿದ್ದಾರೆ. ಪ್ರತಿ ತಿಂಗಳೂ ಹತ್ತು ಲಕ್ಷ ಗ್ರಾಹಕರ ಸೇರ್ಪಡೆ ಆಗುತ್ತಿದೆ.

ಅಂತರಜಾಲ (ಇಂಟರ್‌ನೆಟ್) ಈಗ ಖಾಸಗಿ ವಲಯಕ್ಕೆ ತೆರೆದಿದೆ. ಸೇವಾ ಪ್ರಾಯೋಜಕರಿಗೆ ಪ್ರೋತ್ಸಾಹಕರವಾದ ವಾತಾವರಣವಿದೆ. ಈಗ (2004)ರಲ್ಲಿ 42 ಲಕ್ಷ ಚಂದಾದಾರರಿದ್ದಾರೆ. ನೊಯಿಡ, ಚೆನ್ನೈ, ಕೋಲ್ಕತ್ತ ಕೇಂದ್ರಗಳಲ್ಲಿ ಇಂಟರ್‌ನೆಟ್ ವಿನಿಮಯ ಕೇಂದ್ರಗಳು ಆರಂಭವಾಗಿವೆ.

ಟೆಲಿಮೆಡಿಸಿನ್, ಟೆಲಿ ದೂರಶಿಕ್ಷಣ, ಟೆಲಿಬ್ಯಾಂಕಿಂಗ್, ಕರೆ ಕೇಂದ್ರಗಳು (ಕಾಲ್‌ಸೆಂಟರ್ಸ್) ಮೊದಲಾದವುಗಳ ಸ್ಥಾಪನೆಗೆ ಅಗತ್ಯವಾದ ತಾಂತ್ರಿಕ ನೆರವನ್ನು ನೀಡಲಾಗುತ್ತಿದೆ. ಕರೆ ಕೇಂದ್ರಗಳು ದೇಶದಲ್ಲಿ ಉದ್ಯೋಗಾವಕಾಶ ಹೆಚ್ಚಿಸುವ ಸಾಧನವಾಗಿದೆ. ಕರೆ ಕೇಂದ್ರಗಳಿಂದ 1999–2000ರಲ್ಲಿ ರೂ 2,400 ಕೋಟಿ ರೂಪಾಯಿ ವರಮಾನ ಬಂದಿದ್ದು, ಅದು 2002–03ರಲ್ಲಿ 11,700 ಕೋಟಿ ರೂಗಳಿಗೂ ಮೀರಿದೆ.

ದೂರಸಂಪರ್ಕ ಸೇವೆಯಲ್ಲಿ ಆಧುನಿಕ ತಂತ್ರಜ್ಞಾನ ರೂಪಿಸಲು ಮತ್ತು ಅದನ್ನು ಅನುಷ್ಠಾನಕ್ಕೆ ತರುವ ದೃಷ್ಟಿಯಿಂದ ಆರಂಭಿಸಲಾದ ಸಂಸ್ಥೆ ಸೆಂಟರ್ ಫಾರ್ ಡೆವಲೆಪ್‌ಮೆಂಟ್ ಆಫ್ ಟೆಲಿಮ್ಯಾಟಿಕ್ಸ್ (ಸಿ.ಡಾಟ್). (ಎಚ್.ಎಸ್.ಕೆ.)

**ಅಂಚೆಯ ಚೀಟಿಗಳು :** ಪ್ರತಿಯೊಂದು ದೇಶದಲ್ಲಿಯೂ ಬಳಕೆಯಲ್ಲಿವೆ. ದೇಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೂ ಮತ್ತು ಒಂದು ದೇಶದಿಂದ ಮತ್ತೊಂದು ದೇಶಕ್ಕೂ ರವಾನಿಸುವ ಕಾರ್ಡುಗಳ ಮೇಲೂ ಲಕೋಟೆಗಳ ಮೇಲೂ ಹಚ್ಚಲು ಇವನ್ನು ಉಪಯೋಗಿಸುತ್ತಾರೆ. ಇವುಗಳ ಆಕಾರ, ಪ್ರಮಾಣ ಮತ್ತು ಬೆಲೆಯನ್ನು

ಸರ್ಕಾರದ ಪರವಾಗಿ ನಿಗದಿ ಮಾಡುವುದು ಅಂಚೆ ಇಲಾಖೆಯ ಕೆಲಸ. ಖಾಲಿ ಕಾರ್ಡು ಅಥವಾ ಲಕೋಟೆಗಳ ಮೇಲೆ ಹಚ್ಚುವುದಕ್ಕೆ ಬೇಕಾಗುವ ಅಂಚೆ ಚೀಟಿಗಳನ್ನು (ಪೋಸ್ಟಲ್ ಸ್ಟ್ಯಾಂಪ್ಸ್) ಅಂಚೆ ಕಚೇರಿಗಳು ಮಾರುತ್ತವೆ. ಮುದ್ರಿತವಾಗಿರುವ ಅಂಚೆಯ

ಚೀಟಿಗಳನ್ನೊಳಗೊಂಡ ಕಾರ್ಡು ಮತ್ತು ಲಕೋಟೆಗಳು ಎಲ್ಲ ಅಂಚೆ ಕಚೇರಿಗಳಲ್ಲೂ ಮಾರಾಟಕ್ಕಿರುತ್ತವೆ. ಕಾನೂನು ರೀತ್ಯಾ ಅಂಚೆಯ ಮೂಲಕ ರವಾನಿಸುವ ಪ್ರತಿಯೊಂದು ಕಾಗದಕ್ಕೂ ಅಂಚೆಯ ಚೀಟಿಯನ್ನು ಅಂಟಿಸಬೇಕಾಗುತ್ತದೆ. ರವಾನಿಸುವ ಈ ಕೆಲಸದಿಂದ ಅಂಚೆಯ ಇಲಾಖೆಗೆ ಕ್ಲುಪ್ತವಾದ ಆದಾಯವಿದೆ. ಕಾಗದಗಳನ್ನು ಆಯಾ ವಿಳಾಸದವರಿಗೆ ಸಕಾಲದಲ್ಲಿ ತಲುಪಿಸುವ ಜವಾಬ್ದಾರಿ ಇಲಾಖೆಯದು. ಒಂದು ವೇಳೆ ಸಾಕಷ್ಟು ಅಂಚೆ ಚೀಟಿಗಳನ್ನು ಅಂಟಿಸದೆ ಪತ್ರಗಳನ್ನು ರವಾನಿಸಿದರೆ ಇಲಾಖೆಯವರು ಅವನ್ನು ವಿಳಾಸದವರಿಗೆ ತಲುಪಿಸಿ, ಅವರಿಂದಲೇ ಅಥವಾ ಕಳುಹಿಸಿದವರಿಂದಲೇ ನಿಗದಿ ಮಾಡಿರುವ ದಂಡವನ್ನು ವಸೂಲು ಮಾಡುತ್ತಾರೆ.

ಆಯಾ ದೇಶದ ನಾಣ್ಯದ ರೀತ್ಯಾ ಅಂಚೆ ಚೀಟಿಗಳು ಮುದ್ರಿತವಾಗಿರುತ್ತವೆ. ನಮ್ಮ ದೇಶದಲ್ಲಿ ಒಂದು ಪೈಸೆ ಬೆಲೆಯುಳ್ಳದ್ದರಿಂದ ಹಿಡಿದು ಒಂದು ರೂಪಾಯಿ ಮತ್ತು ಒಂದು ರೂಪಾಯಿಗಿಂತ ಅಧಿಕಮೊತ್ತದ ಅಂಚೆ ಚೀಟಿಗಳು ಮುದ್ರಿತವಾಗುತ್ತವೆ. ಚೀಟಿಗಳ ಮೇಲೆ ಆಯಾ ದೇಶದ ಅನೇಕ ಚಿತ್ರಗಳು ಅಚ್ಚಾಗಿರುತ್ತವೆ. ಉದಾಹರಣೆಗೆ ನಮ್ಮ ದೇಶದ ಚೀಟಿಗಳ ಮೇಲೆ ದೇಶದ ಭೂಪಟ, ಪ್ರೇಕ್ಷಣೀಯ ಸ್ಥಳಗಳು, ರಾಜಕಾರಣಿಗಳು, ಚಾರಿತ್ರಿಕ ವೀರರು, ಸಾಧುಸಂತರು, ವಿದ್ವಾಂಸರು ಮೊದಲಾದವರ ಭಾವಚಿತ್ರಗಳು, ಕೈಗಾರಿಕೋದ್ಯಮಗಳು, ಪ್ರಸಿದ್ಧ ಘಟನೆಗಳ ಸ್ಮಾರಕ ಚಿತ್ರಗಳು–ಹೀಗೆ ಅನೇಕ ಬಗೆಯ ಚಿತ್ರಗಳನ್ನು ಮುದ್ರಿಸಿರುತ್ತಾರೆ. ಈ ಚಿತ್ರಗಳ ಆಸೆಯಿಂದಾಗಿ ಇಂಥ ಚೀಟಿಗಳನ್ನು ಸಂಗ್ರಹಿಸುವುದೇ ಅನೇಕರ ಹವ್ಯಾಸವಾಗಿದೆ. ಆಸಕ್ತರಿಗೆ ಇಂಥ ಚೀಟಿಗಳನ್ನು ಮಾರುವುದಕ್ಕೇ ಅನೇಕ ಸಂಸ್ಥೆಗಳಿವೆ.

ಸೌಲಭ್ಯಕ್ಕಾಗಿ ಅನೇಕ ಸಂಸ್ಥೆಗಳು ವರ್ಷಕ್ಕೆ ಒಮ್ಮೆ ಗೊತ್ತುಪಡಿಸಿರುವ ಶುಲ್ಕವನ್ನು ಅಂಚೆ ಇಲಾಖೆಗೆ ಕೊಟ್ಟು ತಾವು ರವಾನಿಸುವ ಕಾಗದಪತ್ರಗಳ ಮೇಲೆ ತಮ್ಮದೇ ಆದ ಮುದ್ರೆಯೊತ್ತಿ ರವಾನಿಸುತ್ತಾರೆ. ಆ ರೀತಿ ರವಾನಿಸುವ ಕಾಗದಗಳಿಗೆ ಪ್ರತ್ಯೇಕ ಅಂಚೆ ಚೀಟಿಗಳ ಅಗತ್ಯವಿಲ್ಲ. ಸರ್ಕಾರದ ಲಕೋಟೆಗಳ ಮೇಲೆ ಸಾಧಾರಣವಾಗಿ ಭಾರತ ಸರ್ಕಾರದ ಸೇವೆಯ ಮೇರೆಗೆ ಎಂದು ಬರೆಯುತ್ತಾರಲ್ಲದೆ ಸರ್ಕಾರದ ಕೆಲಸಕ್ಕಾಗಿಯೇ ಗೊತ್ತುಮಾಡಲ್ಪಟ್ಟಿರುವ ಸರ್ವಿಸ್ ಸ್ಟ್ಯಾಂಪ್ ಎಂಬ ಸರ್ಕಾರಿ ಅಂಚೆ ಚೀಟಿಗಳನ್ನು ಹಚ್ಚುತ್ತಾರೆ. ಈ ಎರಡು ವಿಧಗಳಲ್ಲದೆ ಅಂಚೆ ಚೀಟಿ ಇಲ್ಲದ, ಮುದ್ರೆ ಒತ್ತದ ಕಾಗದಗಳನ್ನು ಇಲಾಖೆಯವರು ರವಾನಿಸುವುದಿಲ್ಲ. ಯಾವ ಅಂಚೆ ಚೀಟಿಯೂ ಇಲ್ಲದ ಪತ್ರಗಳ ಮೇಲೆ ಇಲಾಖೆಯವರು ದುಪ್ಪಟ್ಟು ದಂಡ ವಸೂಲಿ ಮಾಡುತ್ತಾರೆ.

ನಾವು ರವಾನಿಸುವ ಕಾಗದ ಪತ್ರಗಳ ಮೇಲಿನ ಅಂಚೆ ಚೀಟಿಗಳ ಮೇಲೆ ಇಲಾಖೆಯವರು ತಮ್ಮ ತಾರೀಖಿನ ಮುದ್ರೆಯನ್ನು ಒತ್ತುತ್ತಾರೆ. ಹೀಗೆ ಮಾಡುವುದರಿಂದ ಹಳೆಯ ಅಂಚೆ ಚೀಟಿಗಳನ್ನೇ ಮತ್ತೊಮ್ಮೆ ಬಳಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಉಪಯೋಗಿಸಿದಲ್ಲಿ ಅದು ಕಾನೂನಿಗೆ ವಿರುದ್ಧವಾಗಿರುತ್ತದೆ. (ಬಿ.ವಿ.ಬಿ.)

**ಅಂಜದೀವ** : ಗೋವ ತೀರದಾಚೆ ಇರುವ ಒಂದು ದ್ವೀಪ. ಹಿಂದೆ ಪೋರ್ಚುಗೀಸರ ವಶದಲ್ಲಿದ್ದ ಈ ದ್ವೀಪದ ಬಳಿಯಲ್ಲಿಯೇ 1961ನೆಯ ಡಿಸೆಂಬರ್ ತಿಂಗಳಲ್ಲಿ ಒಬ್ಬ ಭಾರತೀಯ ಅಂಬಿಗನು ಅವರಿಂದ ಗುಂಡು ಹಾರಿಸಿ ಕೊಲ್ಲಲ್ಪಟ್ಟ. 400 ವರ್ಷಗಳಿಗಿಂತ ಹೆಚ್ಚಾಗಿ ಗೋವೆಯಲ್ಲಿ ಭಾರತೀಯರನ್ನು ಕೆಟ್ಟ ರೀತಿಯಿಂದ ಆಳುತ್ತಿದ್ದು ಗೌರವದಿಂದ ಅದನ್ನು ಬಿಟ್ಟುಕೊಡದಿದ್ದ ಪೋರ್ಚುಗೀಸರ ವಿರುದ್ಧ ಭಾರತೀಯರಲ್ಲಿ ಉರಿಯುತ್ತಿದ್ದ ಬೆಂಕಿಯ ಕಿಡಿಯನ್ನು ಎಬ್ಬಿಸಿದ್ದೂ ಇದೇ ಘಟನೆ. ಭಾರತೀಯ ಬಾಂಧವರನ್ನು ಮತ್ತು ಪೋರ್ಚುಗೀಸರ ವಶದಲ್ಲಿದ್ದ ಇನ್ನುಳಿದ ವಸಾಹತುಗಳನ್ನು ಭಾರತ ಹೇಗೆ ಮುಕ್ತಗೊಳಿಸಿತೆಂಬುದು ಇಂದಿನ ಇತಿಹಾಸಕ್ಕೆ ಸೇರಿಕೊಂಡಿರುವ ವಿಷಯ. ಅಂಜದೀವ್‌ನ ಬಳಿ ಭಾರತದ ಜಲನೌಕೆಗಳು ಹೋದಾಗ ಪೋರ್ಚುಗೀಸ್ ಪಡೆಗಳು ಶರಣಾಗತವಾದವು. ಆದರೆ ಜಲಸೈನಿಕರು ತೀರದಲ್ಲಿ ಇಳಿಯುವಾಗ ಪೋರ್ಚುಗೀಸರು ಇವರ ಮೇಲೆ ಗುಂಡುಹಾರಿಸಿ ಕೆಲವರನ್ನು ಕೊಂದರು. ಅಂಜದೀವ್‌ನಲ್ಲಿ ನಡೆದ ಅಂಬಿಗನ ಕೊಲೆಯೇ ಗೋವೆಯನ್ನು ಪೋರ್ಚುಗೀಸರಿಂದ ಮುಕ್ತಗೊಳಿಸಲು ಭಾರತ ಕೈಗೊಂಡ ನಿರ್ಧಾರಕ್ಕೆ ತತ್‌ಕ್ಷಣದ ಕಾರಣವಾಯಿತೆಂದು ಹೇಳಬಹುದು (**ನೋಡಿ– ಗೋವ**). (*)

**ಅಂಜಲೆ** : ಮ್ಯಾಕರಲ್ ಮೀನುಗಳನ್ನು ಹೋಲುವ, ಆದರೆ ಗಾತ್ರದಲ್ಲಿ ಅವುಗಳಿಗಿಂತಲೂ ಬಹಳ ದೊಡ್ಡವಾದ ಸ್ಕಾಂಬಿರೋ ಮೋರಸ್ ಜಾತಿಯ ಮೀನುಗಳಿಗೆ ಅಂಜಲೆ (ಸಿಯರ್) ಮೀನುಗಳೆಂದು ಹೆಸರು. (ಸಿ.ಜಿ.ಕೆ.)

**ಅಂಜೂರ** : ಜನಪ್ರಿಯ ಹಣ್ಣಿನ ಮರ (ಫಿಗ್). ಫೈಕಸ್ ಕ್ಯಾರಿಕ ಇದರ ವೈಜ್ಞಾನಿಕ ಹೆಸರು. ಆಲ, ಅತ್ತಿ ಮೊದಲಾದ ಮರಗಳನ್ನು ಒಳಗೊಂಡಿರುವ ಮೊರೇಸೀ ಎಂಬ ಕುಟುಂಬಕ್ಕೆ ಸೇರಿದೆ. ಇದು ಚಿಕ್ಕ ಮರ. ಇದರ ಎತ್ತರ ಸಾಮಾನ್ಯವಾಗಿ ಸು. 3–5 ಮೀ. ಎಲೆಯ ಮೇಲ್ಭಾಗ ಒರಟು; ತಳಭಾಗದಲ್ಲಿ ರೋಮಗಳಿವೆ. ಹಣ್ಣುಗಳು ಎಲೆಯ ಕಂಕುಳಲ್ಲಿ ಮೂಡುತ್ತವೆ. ಪೇರಿಳೆಹಣ್ಣಿನಾಕಾರದ ಅವುಗಳ ಬಣ್ಣ ಮತ್ತು ಗಾತ್ರದಲ್ಲಿ ವ್ಯತ್ಯಾಸ ಉಂಟು.

ಅಂಜೂರದ ತೌರೂರು ಏಷ್ಯ ಮೈನರಿನಲ್ಲಿರುವ ಕ್ಯಾರಿಕ ಪ್ರದೇಶ. ಮೆಡಿಟರೇನಿಯನ್ ಸಮುದ್ರ ತೀರಪ್ರದೇಶಗಳಲ್ಲಿ ತುರ್ಕಿಸ್ತಾನದಿಂದ ಸ್ಪೇನಿನವರೆಗೂ ಏಷ್ಯ ಖಂಡದ ಅರೇಬಿಯ, ಪರ್ಷಿಯ, ಆಫ್ಘಾನಿಸ್ತಾನ, ಭಾರತ, ಚೀನ ಮತ್ತು ಜಪಾನ್‌ಗಳಲ್ಲೂ ಬೆಳೆಯುತ್ತಾರೆ. ಅಮೆರಿಕದಲ್ಲೂ ಇದರ ವ್ಯವಸಾಯವಿದೆ. ಭಾರತದಲ್ಲಿ ಮಹಾರಾಷ್ಟ್ರದ ಪುಣೆ, ಕರ್ನಾಟಕದ ಬಳ್ಳಾರಿ, ಆಂಧ್ರದ ಅನಂತಪುರ ಜಿಲ್ಲೆಗಳು ಇದರ ಬೇಸಾಯಕ್ಕೆ ಪ್ರಸಿದ್ಧ. ಉತ್ತರ ಪ್ರದೇಶ ಮತ್ತು ಪಂಜಾಬಿನಲ್ಲೂ ಕೆಲವೆಡೆಗಳಲ್ಲಿ ಇದನ್ನು ಬೆಳೆಯುತ್ತಾರೆ.

ಅಂಜೂರದ ಹೂಗೊಂಚಲು ಅತ್ತಿಯ ಹೂಗೊಂಚಲಿನಂತೆಯೇ ಇದೆ. ಮಂದವಾದ ಅದರ ರಸದಿಂದ ಕೂಡಿದ ಕೋಶದೊಳಗಡೆ ಪುಟ್ಟ ಹೂಗಳಿರುತ್ತವೆ. ಪರಾಗಸ್ಪರ್ಶಕ್ರಿಯೆ ಗೊಂಚಲಿನಲ್ಲಿರುವ ಹೂಗಳ ಸ್ವರೂಪವನ್ನವಲಂಬಿಸಿದೆ. ಕೃಷಿಶಾಸ್ತ್ರದ ಪ್ರಕಾರ ಅಂಜೂರವನ್ನು ನಾಲ್ಕು ವಿಧವಾಗಿ ವಿಂಗಡಿಸಿದ್ದಾರೆ. ಹೂಗೊಂಚಲಿನಲ್ಲಿ ಹೆಣ್ಣು ಹೂಗಳು ಮಾತ್ರವಿದ್ದು, ಪರಾಗಸ್ಪರ್ಶವಿಲ್ಲದೆ ಅಥವಾ ಗರ್ಭಾಂಕುರತೆಯಿಲ್ಲದೆ, ಕೋಶ ಬೆಳೆದು, ಹಣ್ಣಾದರೆ ಅದು ಸಾಧಾರಣ ಅಂಜೂರ. ಎರಡನೆಯದು ಕ್ಯಾಪ್ರಿ ಅಂಜೂರ. ಇದರ ಹೂಗೊಂಚಲಿನಲ್ಲಿ ಗಂಡು ಮತ್ತು ಹೆಣ್ಣು ಹೂಗಳಿವೆ. ಶಲಾಕ ತುಂಡಾಗಿದೆ. ಅಂಡಾಶಯಗಳನ್ನು ಉತ್ತೇಜನಗೊಳಿಸಿದರೆ ಹಣ್ಣು ರೂಪುಗೊಳ್ಳುತ್ತದೆ. ಮೂರನೆಯದು ಸ್ಮಿರ್ನ ಅಂಜೂರ. ಇವುಗಳ ಹೂಗೊಂಚಲು ಹಣ್ಣಾಗಬೇಕಾದರೆ ಅನ್ಯಪರಾಗಸ್ಪರ್ಶವಾಗಲೇಬೇಕು. ಈ ಕ್ರಿಯೆಯಾಗಬೇಕಾದರೆ ಕ್ಯಾಪ್ರಿ ಅಂಜೂರದ ಹುಳುಗಳು–ಇದರ ಹೂಗೊಂಚಲನ್ನು ಕೊರೆಯುವ ಹಾಗೆ ಮಾಡಬೇಕು. ಸಣ್ಣ ಬಿದಿರು ಕಡ್ಡಿಯನ್ನು ಕ್ಯಾಪ್ರಿ ಅಂಜೂರದ ಕಾಯಿನೊಳಕ್ಕೆ ಚುಚ್ಚಿ ಅದನ್ನು ಸ್ಮಿರ್ನ ಅಂಜೂರದ ಕಾಯಿಗೆ ಚುಚ್ಚಿದರೆ ಅದರಿಂದ ಅನ್ಯಪರಾಗಸ್ಪರ್ಶ ನಡೆದು ಹಣ್ಣು ರೂಪುಗೊಳ್ಳುತ್ತದೆ. ನಾಲ್ಕನೆಯದು ಸ್ಯಾನ್‌ಪೆಡ್ರೊ ಅಂಜೂರ. ಇದರಲ್ಲಿ ಮೊದಲ ಬೆಳೆಯ ಹಣ್ಣು ಪರಾಗಸ್ಪರ್ಶವಿಲ್ಲದೆ ರೂಪುಗೊಳ್ಳುತ್ತದೆ. ಎರಡನೆಯ ಬೆಳೆಯ ಹಣ್ಣು ರೂಪುಗೊಳ್ಳಬೇಕಾದರೆ ಅನ್ಯಪರಾಗಸ್ಪರ್ಶ ಕ್ಯಾಪ್ರಿ ಅಂಜೂರದಿಂದ ಆಗಲೇಬೇಕು. ಈ ನಾಲ್ಕು ವಿಧದ ಹಣ್ಣುಗಳಲ್ಲಿ ಸ್ಮಿರ್ನ ಅಂಜೂರವನ್ನು ಯೂರೋಪು ಮತ್ತು ಅಮೆರಿಕ ದೇಶಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತಾರೆ.


ಅಂಜೂರ: ಗಿಡ ಮತ್ತು ಹಣ್ಣು

ಅಂಜೂರದ ವ್ಯವಸಾಯಕ್ಕೆ ಅತಿ ಫಲವತ್ತಾದ ಮಣ್ಣು ಬೇಕಾಗಿಲ್ಲ. ಮರಳು ಮಿಶ್ರಿತ ಎರೆಭೂಮಿ, ನೀರು ನಿಲ್ಲದ ಎರೆಭೂಮಿ ಮತ್ತು ಮೆಕ್ಕಲು ಮಣ್ಣಿನ ಭೂಮಿಯಲ್ಲಿ ಅಂಜೂರ ಚೆನ್ನಾಗಿ ಬೆಳೆಯುತ್ತದೆ. ಚೆನ್ನಾಗಿ ಫಸಲು ಬರಲು ಒಣಹವೆ ಸಹಕಾರಿ.

**ಸಸ್ಯವಂಶಾಭಿವೃದ್ಧಿ:** ಬೀಜಗಳಿಂದ ಸಸಿಗಳನ್ನೇಳಿಸಬಹುದಾದರೂ ಯಾರೂ ಈ ಕ್ರಮವನ್ನನುಸರಿಸುವುದಿಲ್ಲ. ಸಣ್ಣ ಸಣ್ಣ ರೆಂಬೆಗಳನ್ನು 20–25 ಸೆಂಮೀ. ಉದ್ದ ಕತ್ತರಿಸಿ, ಹದಗೊಳಿಸಿದ ಪಾತಿಗಳಲ್ಲಿ ಒಂದೊಂದು ಅಡಿ ಮಧ್ಯಂತರ ಜಾಗ ಬಿಟ್ಟು ನೆಡುತ್ತಾರೆ. ಕೊಂಕುಳಮೊಗ್ಗುಗಳು ಬೆಳೆದು ಗಿಡವಾಗುತ್ತವೆ. 12–15 ತಿಂಗಳಲ್ಲಿ ಕಿತ್ತು ಸಸಿಯಿಂದ ಸಸಿಗೆ 2–3 ಮೀ ಅಂತರವಿರುವಂತೆ ಬೇರೆ ಕಡೆ ನೆಡುತ್ತಾರೆ. ಗೂಟ ಮತ್ತು ರೆಂಬೆಗಳನ್ನು ತಾಯಿಗಿಡದಿಂದ ಪ್ರತ್ಯೇಕಿಸದೆ ಭೂಮಿಯಲ್ಲಿ ಹೂಳಿ (ಲೇಯರಿಂಗ್) ಹೊಸ ಹೊಸ ಸಸ್ಯಗಳನ್ನೇಳಿಸಬಹುದು. ಅತ್ತಿ ಮತ್ತು ಆಲದ ಮರದ ರೆಂಬೆಗಳಿಗೆ ಅಂಜೂರದ ಎಲೆ ಮೊಗ್ಗುಗಳನ್ನು ಸೇರಿಸಿ ಬೆಳೆಯುವಂತೆ ಮಾಡಿದರೆ ಮರದ ಸ್ವರೂಪವೇ ಬದಲಾಯಿಸುತ್ತದೆ.

ಅಂಜೂರ ತೋಟದ ವ್ಯವಸಾಯ ಇತರ ಹಣ್ಣಿನ ತೋಟಗಳ ವ್ಯವಸಾಯದ ಹಾಗೆಯೇ. ಕುರಿ ಗೊಬ್ಬರ ದನಗಳ ಗೊಬ್ಬರ ಮತ್ತು ಕಾಂಪೋಸ್ಟ್ ಗೊಬ್ಬರಗಳು ಉತ್ತಮ. ಪೂನಾದಲ್ಲಿ ಮಳೆ ಕಡಿಮೆಯಾದ ಮೇಲೆ ಸೆಪ್ಟೆಂಬರ್ ತಿಂಗಳಲ್ಲಿ ಗಿಡದ ಸುತ್ತಲೂ ಮಣ್ಣನ್ನು ಅಗೆದು ಸಡಿಲಗೊಳಿಸಿ, ಕೆಲವು ಹಳೆಯ ಬೇರುಗಳನ್ನು ಕತ್ತರಿಸಿ, ಉಳಿದವು ಬಿಸಿಲಿನಲ್ಲಿ ಒಣಗುವಂತೆ ನಾಲ್ಕು ದಿನ ಬಿಡುತ್ತಾರೆ. ಅನಂತರ ಬೇರನ್ನು ಮಣ್ಣಿನಿಂದ ಮುಚ್ಚಿ ಎರಡು ಬಾಣಲೆಯಷ್ಟು ಗೊಬ್ಬರ ಹಾಕಿ ನೀರು ಹಾಕುತ್ತಾರೆ. ವ್ಯವಸಾಯ ಹದಿನೈದು ದಿನಗಳಲ್ಲಿ ಮುಗಿಯಬೇಕು. ಅಕ್ಟೋಬರ್ ತಿಂಗಳ ಅನಂತರ ಗೊಬ್ಬರ ಹಾಕಬಾರದು. ಮಾರ್ಚಿಯಿಂದ ಮೇವರೆಗೆ ಹದಿನೈದು ದಿವಸಕ್ಕೊಂದಾವರ್ತಿ ಮಣ್ಣನ್ನು ಸಡಿಲಗೊಳಿಸಬೇಕು.

ಅಂಜೂರದ ಗಿಡಕ್ಕೆ ಹದವರಿತು ನೀರು ಹಾಕಬೇಕು. ಹಣ್ಣು ಬಿಡುವ ಕಾಲದಲ್ಲಿ ಒಂದು ವಾರ ನೀರು ತಪ್ಪಿದರೂ ಫಸಲು ಕಡಿಮೆಯಾಗುತ್ತದೆ. ಮೊದಮೊದಲು ನಾಲ್ಕು ದಿನಕ್ಕೊಂದಾವರ್ತಿ ನೀರು ಹಾಕುತ್ತಿದ್ದು ಕ್ರಮಕ್ರಮೇಣ ಅಂತರವನ್ನು ಹೆಚ್ಚಿಸಿ ಎಂಟುದಿವಸಕ್ಕೊಂದಾವರ್ತಿ ನೀರು ಹಾಕಬೇಕು.

ಹೊಸದಾಗಿ ಬರುವ ರೆಂಬೆಗಳಲ್ಲಿ ಹಣ್ಣು ಬರುವುದರಿಂದ ಕಾಲವರಿತು ಹದವಾಗಿ ರೆಂಬೆಗಳನ್ನು ಪ್ರತಿವರ್ಷವೂ ಕತ್ತರಿಸಬೇಕು. ಪೂನಾದಲ್ಲಿ ಜುಲೈ ತಿಂಗಳಲ್ಲೂ ಉತ್ತರಪ್ರದೇಶದಲ್ಲಿ ಡಿಸೆಂಬರ್ ತಿಂಗಳಲ್ಲೂ ಮೈಸೂರಿನಲ್ಲಿ ಜನವರಿ–ಫೆಬ್ರವರಿ ತಿಂಗಳುಗಳಲ್ಲೂ ರೆಂಬೆಗಳನ್ನು ಕತ್ತರಿಸುವುದು ವಾಡಿಕೆ. ಕೆಲವರು ಅಕ್ಟೋಬರ್ ತಿಂಗಳಲ್ಲಿ ಕತ್ತರಿಸುತ್ತಾರೆ. ಹೀಗೆ ಮಾಡುವುದರಿಂದ ಮುಂದಿನ ಬೇಸಗೆಯಲ್ಲಿ ಫಸಲು ಬರುತ್ತದೆ.

**ರೋಗಗಳು :** ಅಂಜೂರಕ್ಕೆ ಕೀಟ ಮತ್ತು ಬೂಷ್ಟು ರೋಗಗಳು ಬರುತ್ತವೆ. ನಮ್ಮ ದೇಶದಲ್ಲಿ ಬೆಳೆ ಹಾಳುಮಾಡುವ ರೋಗ ಬರುವುದು ಕಡಿಮೆ. ಎಲೆಗೆ ಬೂಷ್ಟಿನಿಂದ ಕಾಡಿಗೆರೋಗ ತಗುಲಿದರೆ ಎಲೆಗಳು ಉದುರಿಹೋಗಿ ಫಸಲು ಕಡಿಮೆಯಾಗುತ್ತದೆ. ಬ್ಯಾಟೊಸಿರ ರಪೊಮ್ಯಾಕುಲೇಟ ಎಂಬ ಕೀಟ ಗಿಡದ ಕಾಂಡವನ್ನು ಕೊರೆಯುತ್ತದೆ. ದುಂಬಿಗಳು ತೊಗಟೆ, ಎಲೆ ಮತ್ತು ಹಣ್ಣುಗಳನ್ನು ತಿನ್ನುತ್ತವೆ. ಕಂಬಳಿಹುಳು ತೊಗಟೆ ಮತ್ತು ಜಲವಾಹಕ ನಾಳಗಳನ್ನು ಟಿಷ್ಯೂಗಳನ್ನು ತಿನ್ನುವುದರಿಂದ ರೆಂಬೆಗಳು ಒಣಗಿಹೋಗುತ್ತವೆ. ಗಿಡವೇ ನಾಶವಾದರೂ ಆಗಬಹುದು. ಇಂಥ ಪಿಡುಗುಗಳನ್ನು ನಿವಾರಿಸಲು ಮರದ ಬುಡಕ್ಕೆ ಡಾಂಬರು ಬಳಿದಿರುವ ಕಾಗದವನ್ನು ಸುತ್ತಿ ಇಲ್ಲವೆ ತಂತಿಯ ಬಲೆಯನ್ನು ಸುತ್ತಿ ರಕ್ಷಿಸುತ್ತಾರೆ; ಕಂಬಳಿಹುಳುಗಳನ್ನು ಹಿಡಿದು ಸೀಮೆ ಎಣ್ಣೆಯಲ್ಲಿ ಹಾಕಿ ಕೊಲ್ಲುವುದೇ ರೂಢಿ.

ಹಣ್ಣುಗಳು ಉದುರಿ ಹೋಗುವುದರಿಂದಲೂ ಅಥವಾ ಬಿರಿಯುವುದರಿಂದಲೂ ಫಸಲು ನಷ್ಟವಾಗುತ್ತದೆ. ಹವಾಗುಣದ ವ್ಯತ್ಯಾಸ ಮತ್ತು ಹಣ್ಣು ರೂಪುಗೊಳ್ಳಲು ಅನುಕೂಲವಾಗುವಂತೆ ಕ್ಯಾಪ್ರಿ ಅಂಜೂರದ ಪರಾಗಸ್ಪರ್ಶ ಮಾಡುವ ಪದ್ಧತಿಯಲ್ಲಿ ವ್ಯತ್ಯಾಸ–ಇವುಗಳೇ ಇದಕ್ಕೆ ಕಾರಣ. ಹಣ್ಣಾಗುವ ಕಾಲದಲ್ಲಿ ನೀರನ್ನು ಹೆಚ್ಚಾಗಿ ಹಾಕಿದರೆ ಹಣ್ಣು ಬಿರಿಯುತ್ತದೆ. ಹಣ್ಣಿಗೆ ಅಸ್ಪರ್‌ಜಿಲ್ಲಸ್ ನೈಜರ್ ಎಂಬ ಬೂಷ್ಟು ರೋಗ ಬರುತ್ತದೆ. ಫಸಲಿನ ಕಾಲದಲ್ಲಿ ಬಾವಲಿ ಮತ್ತು ಪಕ್ಷಿಗಳು ಹಣ್ಣುಗಳನ್ನು ತಿಂದು ಹಾಳುಮಾಡದಂತೆ ನೋಡಿಕೊಳ್ಳಬೇಕು.

ಗಿಡ 2–3ವರ್ಷ ವಯಸ್ಸಾದಾಗ ಫಸಲು ಬರುತ್ತದೆ. ಮೊದಲೆರಡು ವರ್ಷ ರೂಪುಗೊಳ್ಳುವ ಕಾಯಿಗಳನ್ನು ಕಿತ್ತು ಹಾಕುತ್ತಾರೆ. 3ನೆಯ ವರ್ಷದಿಂದ ಫಸಲನ್ನು ಸಂಗ್ರಹಿಸುತ್ತಾರೆ. ಒಂದು ಗಿಡ 12–15 ವರ್ಷ ಫಸಲು ಕೊಡುತ್ತದೆ. ಅನಂತರ ಫಸಲು ಕಡಿಮೆಯಾಗಿ ಸಸ್ಯವೇ ಒಣಗಿಹೋಗುತ್ತದೆ. ಫಸಲು ವರ್ಷಕ್ಕೆರಡಾವೃತ್ತಿ ಬರುತ್ತದೆ. ಕೆಲವು ವೇಳೆ ಮೂರು ಫಸಲೂ ಬರಬಹುದು. ನಮ್ಮ ದೇಶದ ವಿವಿಧ ಪ್ರಾಂತಗಳಲ್ಲಿ ಮೊದಲನೆಯ ಫಸಲು ಜುಲೈ–ಅಕ್ಟೋಬರ್ ತಿಂಗಳುಗಳಲ್ಲೂ ಎರಡನೆಯ ಫಸಲು ಜನವರಿ–ಮೇ ತಿಂಗಳುಗಳಲ್ಲೂ ಬರುತ್ತವೆ. ಪೂನ ಮತ್ತು ಮೈಸೂರಿನಲ್ಲಿ ಮೊದಲನೆಯ ಫಸಲಿನಲ್ಲಿ ಬರುವ ಹಣ್ಣು ರುಚಿಯಾಗಿರುವುದರಿಂದ ಮಾರುಕಟ್ಟೆಗೆ ಅನುಕೂಲ. ಒಂದು ಗಿಡದಿಂದ ದೊರೆಯುವ ಫಸಲಿನ ಪ್ರಮಾಣ ಹವಾಗುಣ ಮತ್ತಿತರ ಪರಿಸ್ಥಿತಿಯನ್ನವಲಂಬಿಸಿದೆ.

**ಅಂಜೂರವನ್ನು ಒಣಗಿಸುವಿಕೆ :** ಅಂಜೂರವನ್ನು ಒಣಗಿಸಿ ಮಾರಾಟಕ್ಕೆ ಕಳುಹಿಸುವುದು ಸಾಮಾನ್ಯ. ಒಣಗಿಸದೆಯೂ ಮಾರುವುದುಂಟು. ಗಿಡದಿಂದ ತಾವಾಗಿಯೇ ಮಾಗಿ ಬಿದ್ದ ಹಣ್ಣುಗಳನ್ನಾರಿಸಿ ಅಗಲವಾದ ತಟ್ಟೆಗಳಲ್ಲಿಟ್ಟು ಒಣಗಿಸುತ್ತಾರೆ. ಒಣಗಿಸುವ ಪದ್ಧತಿ ಒಂದೊಂದು ದೇಶದಲ್ಲಿ ಒಂದೊಂದು ರೀತಿಯಾಗಿದೆ. ನಮ್ಮಲ್ಲಿ ಒಣಗಿಸಿ ಮಾರಾಟಕ್ಕೆ ಕಳುಹಿಸುವುದು ಕಡಿಮೆ. ಪುಣೆ ವಿಭಾಗದಲ್ಲಿ ಮಾತ್ರ ಫಸಲಿನ ಸ್ವಲ್ಪ ಭಾಗವನ್ನು ಒಣಗಿಸುತ್ತಾರೆ. ಮಾಗಿದ ಹಣ್ಣುಗಳನ್ನು ಕಿತ್ತು ಹಣ್ಣಿನಮೇಲೆ ಹಣ್ಣು ಬೀಳದಂತೆ ಎಚ್ಚರಿಕೆಯಿಂದ ಮರದ ತಟ್ಟೆಯಲ್ಲಿಟ್ಟು, 20–30 ನಿಮಿಷ ಗಂಧಕದ ಹೊಗೆ ಕೊಡುತ್ತಾರೆ. ದಿನಕ್ಕೆ 6–7 ಸಾರಿ ಹಣ್ಣುಗಳನ್ನು ಮೇಲೆ ಕೆಳಗೆ ಮಾಡುತ್ತ ಎಲ್ಲ ಹಣ್ಣುಗಳೂ ಒಂದೇ ಸಮನಾಗಿ ಒಣಗುವಂತೆ ಮಾಡಿ, ಸಂಪೂರ್ಣವಾಗಿ ಒಣಗುವ ಮೊದಲು ಹಣ್ಣುಗಳನ್ನು ಅದುಮುತ್ತಾರೆ. ಅದುಮುವುದರಿಂದ ಪೆಟ್ಟಿಗೆಗಳಲ್ಲಿ ಹಣ್ಣುಗಳನ್ನು ಹೆಚ್ಚಾಗಿ ತುಂಬಬಹುದು. ಭರ್ತಿಮಾಡುವ ಮೊದಲು ಶೇ.3 ಉಪ್ಪಿರುವ ನೀರನ್ನು ಮರಳಿಸಿ ಅದರಲ್ಲಿ ಅವುಗಳನ್ನು ಅದ್ದುತ್ತಾರೆ. ಹೀಗೆ ಮಾಡುವುದರಿಂದ ಹಣ್ಣುಗಳು ಮೃದುವಾಗುವುವಲ್ಲದೆ ರುಚಿಯೂ ಹೆಚ್ಚುತ್ತದೆ. ಹಣ್ಣಿನ ಗಾತ್ರ ಮತ್ತು ಬಣ್ಣಗಳ ಆಧಾರದ ಮೇಲೆ ಅವನ್ನು ವರ್ಗೀಕರಿಸಿ ಮಾರಾಟಕ್ಕೆ ಸಿದ್ಧಪಡಿಸುತ್ತಾರೆ.

ಹಣ್ಣುಗಳಲ್ಲಿ ಅನೇಕ ಪೌಷ್ಟಿಕಾಂಶಗಳಿವೆ. ಸುಮಾರು 84ರಷ್ಟು ತಿರುಳಿರುತ್ತದೆ. ಹಣ್ಣುಗಳಲ್ಲಿ ಖನಿಜಾಂಶ ಮತ್ತು ಸಕ್ಕರೆಗಳಿರುವುದರಿಂದ ಪುಷ್ಟಿಕರವಾದ ಆಹಾರವೆನಿಸಿದ್ದು ಬೇಡಿಕೆ ಹೆಚ್ಚು. ಕಬ್ಬಿಣದ ಮತ್ತು ತಾಮ್ರದ ಅಂಶ ಇತರ ಹಣ್ಣುಗಳಲ್ಲಿರುವುದಕ್ಕಿಂತಲೂ ಇವುಗಳಲ್ಲಿ ಹೆಚ್ಚಾಗಿವೆ. ಸತುವಿನ ಅಂಶವೂ ಸ್ವಲ್ಪ ಇರುತ್ತದೆ. ಎ ಮತ್ತು ಸಿ ಅನ್ನಾಂಗಗಳು ಹೆಚ್ಚು ಪ್ರಮಾಣದಲ್ಲೂ ಬಿ ಮತ್ತು ಡಿ ಅನ್ನಾಂಗಗಳು ಕಡಿಮೆ ಪ್ರಮಾಣದಲ್ಲೂ ಇರುತ್ತವೆ. ಇವುಗಳಲ್ಲದೆ ಸಿಟ್ರಿಕ್ ಮತ್ತು ಅಸಿಟಿಕ್ ಆಮ್ಲಗಳೂ ಇರುತ್ತವೆ.

ಅಂಜೂರದ ಸೇವನೆಯಿಂದ ಮಲಬದ್ಧತೆ ನಿವಾರಣೆಯಾಗುತ್ತದೆ. ಹಣ್ಣು ಮೂತ್ರವಿಸರ್ಜನೆಗೆ ಉತ್ತೇಜನಕಾರಿ. ಹೆಚ್ಚುಕಾಲ ಬಳಸಿದರೆ ಆಹಾರದ ಕೊರತೆಯಿಂದ ರಕ್ತಹೀನತೆಯುಂಟಾಗುವುದನ್ನು ತಪ್ಪಿಸುತ್ತದೆ.

ಫಸಲು ಬಂದಮೇಲೆ ಎಲೆಗಳನ್ನು ಕಿತ್ತು ದನಗಳಿಗೆ ಹಾಕುವುದುಂಟು. ಗಿಣ್ಣು ಉತ್ಪನ್ನದಲ್ಲಿ ಅಂಜೂರದ ಹಾಲನ್ನು ಹೆಪ್ಪುಗಟ್ಟಿಸುವುದಕ್ಕೆ ಉಪಯೋಗಿಸುತ್ತಾರೆ. ಹಾಲು ಕರುಳಿನಲ್ಲಿರುವ ಜಂತುಹುಳುಗಳನ್ನು ನಾಶಮಾಡುತ್ತದೆ. ಹಣ್ಣನ್ನು ಪೋಲ್ಟೀಸುಮಾಡಿ ಕೀವು ಬರುವ ಗಾಯಕ್ಕೆ ಕಟ್ಟುತ್ತಾರೆ. ಚರ್ಮದಮೇಲೆ ಹಾಲು ಬಿದ್ದರೆ ಗಂದೆ ಮತ್ತು ಗುಳ್ಳೆಗಳಾಗುತ್ತವೆ.

(ಎಚ್.ಎನ್.ಪಿ.)

**ಅಂಟಣಿಕ :** ಆರೋಗ್ಯವಾಗಿರುವವರಲ್ಲೂ ಪ್ರಾಣಿಗಳಲ್ಲೂ ರೋಗದೆದುರು ಪ್ರತಿರಕ್ಷಣೆ (ಇಮ್ಯುನೈಸೇಷನ್) ಪಡೆದಿರುವವರಲ್ಲೂ ಇರುವ ರೋಧವಸ್ತುವಿನ (ಆಂಟಿಬಾಡಿ) ಮಾದರಿ (ಅಗ್ಲೂಟಿನಿನ್). ಇವುಗಳ ಎದುರು ವರ್ತಿಸುವ ಏಕಾಣುಜೀವಿಗಳು, ಮುಂಜೀವಿಗಳು (ಪ್ರೋಟೊಜೋವ), ಕೆಂಪು ರಕ್ತಕಣಗಳಂಥ ಮೇಲ್ಮೈಯಲ್ಲಿ ವಿಶಿಷ್ಟ ರೋಧಜನಕಗಳಿರುವ (ಆಂಟಿಜೆನ್), ಕಣಗಳ ಒಂದೇ ಸಮನಾಗಿರುವ ತೂಗುಟ್ಟುಗಳೊಂದಿಗೆ (ಸಸ್ಪೆನ್ಷನ್) ಸೇರಿಸಿದಾಗ, ತೂಗಟ್ಟಿಸಿದ ವಸ್ತುಗಳು ಒಂದಕ್ಕೊಂದು ಅಂಟಿಕೊಂಡು ಗರಣೆಗಟ್ಟಿ ತಳಕ್ಕೆ ಬೀಳುವುದರಿಂದ ತೂಗಟ್ಟಿಸುವ ಸಾರಗುಂದಕ (ಡೈಲ್ಯುಯೆಂಟ್) ತಿಳಿದೇರುವುದು. ಅಂಟಣಿಕದ (ಅಗ್ಲೂಟಿನೇಷನ್) ಈ ವರ್ತನೆ ರೋಧಜನಕ ರೋಧವಸ್ತು ನಡುವಣ ಮಾದರಿಯಾದ ಪ್ರತಿಕ್ರಿಯೆ. ಇದು ಒಂದಕ್ಕೊಂದು ತೀರ ವಿಶಿಷ್ಟ. ಇದನ್ನು ಹಿಮ್ಮರಳಿಸಬಹುದು. ಎದುರು ವರ್ತಿಸುವ ಕಿರಿಯ ಗುಂಪುಗಳು ಒಂದೊಂದರ ಮೇಲ್ಮೈಯಲ್ಲೂ ಇರುತ್ತವೆ. ಇದರಿಂದಲೇ ಸರಿಯೆನ್ನಿಸುವ ಸಮಯಗಳಲ್ಲಿ ಒಂದು ಅಂಟಣಿಕಪಡಲಿ (ಪ್ರೆಸಿಪಿಟಿನ್) ಇಲ್ಲವೇ ಬೇರೆ ರೋಧವಸ್ತುವಾಗಿ ವರ್ತಿಸಬಹುದು.

ಸೋಂಕು ತಗುಲಿಯೋ ಬೇರೆ ಪ್ರತಿರಕ್ಷಣಾವಿಧಾನಗಳಿಂದಲೋ ರಕ್ಷಣೆ ಪಡೆದವರಲ್ಲಿ ಒಂದು ಗೊತ್ತಾದ ರೋಧವಸ್ತು ಹೆಚ್ಚಿರುವುದು. ಈ ಕಾರಣದಿಂದಲೇ ರಸಿಕೆಯಲ್ಲಿ ಅಂಟಣಿಕಗಳು ಇರುವುದನ್ನು ಗುರುತಿಸಲು ಅಂಟಣಿಕವನ್ನು ಬಳಸುವುದು. ಹೀಗೆ ವಿಶಿಷ್ಟ ರೋಧಜನಕದಿಂದಾದ ಪ್ರತಿರಕ್ಷಣೆಯನ್ನೋ ಇಂದಿನ ಇಲ್ಲವೇ ಹಿಂದಿದ್ದ ಸೋಂಕನ್ನು ಗುರುತಿಸಲೂ ಇದರಿಂದ ಅನುಕೂಲ. ಇದರ ತಿರುವುಮುರುವಾಗಿ, ಗೊತ್ತಾದ ರೋಧಜನಕಗಳ ಎದುರಿನ ಅಂಟಣಿಕೆಗಳಿರುವ ರಸಿಕೆಗಳನ್ನು ಕೂಡ, ಗೊತ್ತಾದ ರೋಧಜನಕವಿರುವ ಬೇರೆ ಬೇರೆ ಏಕಾಣುಜೀವಿಗಳು ಕೆಂಪು ರಕ್ತಕಣಗಳು ಮತ್ತಿತರ ವಸ್ತುಗಳನ್ನು ಗುರುತಿಸಲೂ ಬಳಸಬಹುದು.

ಕೆಂಪು ಕಣಗಳನ್ನು ಗರಣೆಗಟ್ಟಿಸುವ ಸರಿರಕ್ತಂಟಣಿಕೆಗಳು (ಐಸೊಹೀಮಗ್ಲೂಟಿನಿನ್) ಮಾನವನಲ್ಲಿವೆ. ಇವುಗಳಲ್ಲಿ ಎರಡು ರೋಧಜನಕಗಳ ಅನುಸಾರವಾಗಿ ರಕ್ತದ ನಾಲ್ಕು ಗುಂಪುಗಳು ವಿಂಗಡವಾಗಿವೆ : ಕೆಂಪು ರಕ್ತಕಣಗಳಲ್ಲಿರುವ A ಮತ್ತು B ; ರಕ್ತದ ರಸಿಕೆಯಲ್ಲಿರುವ ಎರಡು ಸರಿರಕ್ತಂಟಣಿಕೆಗಳಾದ A– ರೋಧಕ, B– ರೋಧಕ, ಇದರಂತೆ. ಮಾನವನಲ್ಲಿ 'O'ಗುಂಪಿನಲ್ಲಿ, ಇವೆರಡು ರೋಧಜನಕಗಳೂ ಇರದೆ, ಎರಡು ಅಂಟಣಿಕಗಳೂ ಇರುತ್ತವೆ ; A ಗುಂಪಿನಲ್ಲಿ, A – ರೋಧಜನಕ B–ರೋಧಕ ಅಂಟಣಿಕೆಗಳು ಇರುವುವು ; ಹಾಗೇ B ಗುಂಪಿನಲ್ಲಿ B-ರೋಧಜನಕವೂ B- ರೋಧಕ ಅಂಟಣಿಕವೂ ಇರುತ್ತವೆ; A B ಗುಂಪಿನಲ್ಲಾದರೋ ಎರಡು ರೋಧಜನಕಗಳೂ ಇದ್ದು ಯಾವ ಅಂಟಣಿಕವೂ ಇರದು. ಹುಟ್ಟುತ್ತಲೇ ಇವೆಲ್ಲ ಮೈಯಲ್ಲಿ ಇರುವುದರಿಂದ ಇವು ವಿಶಿಷ್ಟ ದರ್ಶಕಗಳು. ಇವೇ ಅಲ್ಲದೆ, ಮಾನವನ ರಕ್ತದ ಕೆಂಪು ಕಣಗಳಲ್ಲಿ D,MN,Rho ನಂಥ ಇನ್ನಷ್ಟು ರೋಧಜನಕಗಳಿರುವುದು ಗೊತ್ತಾಗಿದೆ. ಹಾಗೆ ನೋಡಿದರೆ, ಇಂದು ಗೊತ್ತಿರುವ ರೋಧಜನಕಗಳ ಬೇರೆ ಬೇರೆ ಜೋಡಿಗಳಿಂದ ಕೋಟಿಗಟ್ಟಳೆ ರಕ್ತದ ಗುಂಪುಗಳು ಆಗಬಹುದು.

ಮಾನವತಳಿಶಾಸ್ತ್ರ, ನ್ಯಾಯ ವೈದ್ಯ, ರಕ್ತಪೂರಣೆ, ಹಸುಗೂಸಿನ ರಕ್ತಕಣಲಯ (ಹೇಮೊಲಿಟಿಕ್) ರೋಗಗಳ ನಿಟ್ಟಿನಿಂದ ರಕ್ತದ ಗುಂಪುಗಳು ಮುಖ್ಯ. ಕೂಸು ಹೆತ್ತವರನ್ನು ಗುರುತಿಸಲೂ ಅಪರಾಧದಲ್ಲಿ ರಕ್ತಕಲೆ ಯಾರದೆಂದು ನಿರ್ಧರಿಸಲೂ ರಕ್ತದ ಗುಂಪುಗಳು ನೆರವಾಗುತ್ತವೆ. ಒಂದಕ್ಕೊಂದು ಹೊಂದಿಕೊಳ್ಳದ ರಕ್ತಗಳನ್ನು ಕೂಡಿಸುವುದರಿಂದ, ರಕ್ತನಾಳದೊಳಗೆ ಅಂಟಣಿಸುವುದರಿಂದಲೇ ಯಾರಿಗಾದರೂ ರಕ್ತ ಕೊಡಲು, ರಕ್ತದಾನಿಯ ಅಲ್ಲದೆ ಪಡೆದವನ ರಕ್ತದ ಗುಂಪುಗಳನ್ನೂ ಮೊದಲು ಕಂಡುಕೊಳ್ಳಲೇಬೇಕು. ಹಸುಗೂಸಿನಲ್ಲಿ ಕಾಣಬರುವ ರಕ್ತಕೊರೆಗೆ ಬಹುಮಟ್ಟಿನ ಕಾರಣ Rho ಇಲ್ಲವೇ D ಎಂಬ ರೋಧಜನಕವೇ. ಇದು ಬಲು ಅಪರೂಪವಾದರೂ ಮಾರಕ ರೋಗ. ತಂದೆಯಿಂದ ಬಂದು ಕೂಸಿನಲ್ಲಿರುವ ರೋಧಜನಕಗಳೊಂದಿಗೆ, ತಾಯಲ್ಲಿ ತಯಾರಾಗುವ ರೋಧವಸ್ತುಗಳು ಎದುರು ವರ್ತಿಸುವುದೇ ಈ ರೋಗದ ಕಾರಣ. **(ನೋಡಿ– ರಕ್ತ; ರಕ್ತದ ಗುಂಪುಗಳು; ಪ್ರತಿರಕ್ಷಣೆ; ಪರತಂತ್ರ (ಪರಪಿಂಡಿ) ಜೀವಶಾಸ್ತ್ರ; ರೋಗಶಾಸ್ತ್ರ; ಲಸಿಕೆರೋಗಚಿಕಿತ್ಸೆ; ಜೀವವಿಷ; ಜೀವವಿಷರೋಧಕ)**

(ಡಿ.ಎಸ್.ಎಸ್.)

**ಅಂಟಾರ್ಕ್‌ಟಿಕ :** ದಕ್ಷಿಣ ಧ್ರುವದ ಸುತ್ತ ವ್ಯಾಪಿಸಿರುವ ಖಂಡ, 66° 30' ದಕ್ಷಿಣ ಅಕ್ಷಾಂಶದೊಳಗಿರುವ ನೀರ್ಗಲ್ಲು ಮತ್ತು ಹಿಮಾವೃತ ಖಂಡದ ಚಾಚು ಮತ್ತು ಸಾಗರ. ಆರ್ಕ್‌ಟಿಕ್‌ಗೆ ವಿರುದ್ಧವಾಗಿ ನೆಲೆಯಾಗಿರುವ ಖಂಡ. ಸಾಗರವನ್ನು ಸುತ್ತುವರಿದಂತೆ ದ್ವೀಪಗಳು, ಖಂಡಗಳ ತುದಿಗಳು ನೆಲೆಯಾಗಿರುವುದು ಆರ್ಕ್‌ಟಿಕ ವಿಶೇಷ. ಖಂಡವನ್ನು ಸುತ್ತುವರಿದಂತೆ ದ್ವೀಪ, ಸಾಗರಗಳಿರುವುದು ಅಂಟಾರ್ಕ್‌ಟಿಕ ಖಂಡದ ವೈಶಿಷ್ಟ್ಯ. ಅಂಟಾರ್ಕ್‌ಟಿಕ ಖಂಡವನ್ನು

ಆವರಿಸಿರುವ ಜಲರಾಶಿಯನ್ನು ದಕ್ಷಿಣ ಸಾಗರವೆಂದೇ ಗುರುತಿಸಲಾಗಿದೆ. ಇದು ಪ್ರತ್ಯೇಕ ಜಲರಾಶಿಯಲ್ಲ. ಹಿಂದೂ ಮಹಾಸಾಗರ, ಪೆಸಿಫಿಕ್ ಸಾಗರ ಹಾಗೂ ಅಂಟ್ಲಾಂಟಿಕ್ ಸಾಗರ ಒಂದುಗೂಡಿರುವ ಭಾಗ. ಸಾಗರದಲ್ಲಿ ಪಶ್ಚಿಮಾಭಿಮುಖವಾಗಿ ಬೀಸುವ ಗಾಳಿ, ಪ್ರದಕ್ಷಿಣಾ ಪಥವನ್ನೂ, ಖಂಡದ ಮೇಲೆ ಪೂರ್ವಾಭಿಮುಖವಾಗಿ ಬೀಸುವ ಗಾಳಿ ಅಪ್ರದಕ್ಷಿಣಾ ಪಥವನ್ನೂ ಅನುಸರಿಸುವುದರಿಂದ ಇವುಗಳ ಸಂಗಮ ಭಾಗ ದಕ್ಷಿಣ ಸಾಗರದಲ್ಲಿ ಪ್ರಕ್ಷುಬ್ಧ ಅಲೆಗಳನ್ನು ಎಬ್ಬಿಸುತ್ತದೆ.

ಅಂಟಾರ್ಕ್‌ಟಿಕ ಖಂಡವನ್ನು ಐದನೆಯ ವಿಶಾಲ ಖಂಡವೆಂದು ಕರೆಯಲಾಗಿದೆ. ಈ ಖಂಡದ ಒಟ್ಟು ವಿಸ್ತೀರ್ಣ ಭಾರತ ಮತ್ತು ಚೀನ ಎರಡೂ ದೇಶಗಳನ್ನು ಸೇರಿಸಿದರೆ ದೊರೆಯುವ ವಿಸ್ತೀರ್ಣಕ್ಕಿಂತ ದೊಡ್ಡದು – 14,245,000 ಚ.ಕಿಮೀ; ಅಮೆರಿಕ ಸಂಯುಕ್ತ ಸಂಸ್ಥಾನದ ವಿಸ್ತೀರ್ಣದ ಒಂದೂವರೆಯಷ್ಟು. ಇದು ಭೂಗೋಳದ ಅತ್ಯಂತ ಎತ್ತರದ



ಹಿಮಸಾಗರದಲ್ಲಿ ಪೆಂಗ್ವಿನ್‌ಗಳು ವಿಶ್ರಮಿಸುತ್ತಿರುವುದು

ಖಂಡ. ಸಾಗರ ಮಟ್ಟದಿಂದ ಸರಾಸರಿ ಎತ್ತರ 2,300 ಮೀ. ಪ್ರಸ್ಥಭೂಮಿ, ಪರ್ವತಸಾಲು, ಕಣಿವೆ ಕಂದರ, ಹಿಮನದಿಗಳಿದ್ದರೂ ಖಂಡದ ಶೇ.95 ಭಾಗ ಹಿಮಾವೃತ, ಶೀತಲ ಖಂಡ, ಹಿಮದ ಮರುಭೂಮಿ ಶ್ವೇತಖಂಡ, ರೆಫ್ರಿಜಿರೇಟರ್ ಖಂಡ ಎಂಬ ವಿಶೇಷಣಗಳು ಈ ಖಂಡಕ್ಕುಂಟು. ಅತ್ಯಂತ ಸಮೀಪದ ನೆಲ ಭಾಗವೆಂದರೆ ಲ್ಯಾಟಿನ್ ಅಮೆರಿಕದ ದಕ್ಷಿಣದ ಕೊನೆಯ ತುದಿ ಕೇಪ್‌ಹಾರನ್. ಇದು 990 ಕಿಮೀ ದೂರದಲ್ಲಿದೆ. ವಿನ್ಸನ್ ಮ್ಯಾಸಿಫ್ ಎಂಬ ಭಾಗವೇ ಖಂಡದ ಅತಿ ಎತ್ತರದ ಭಾಗ (5,140 ಮೀ). ಇದು ಪೆಸಿಫಿಕ್ ಸಾಗರದ ಕಡೆಗಿರುವ ಪಶ್ಚಿಮ ಅಂಟಾರ್ಕ್‌ಟಿಕದಲ್ಲಿ ನೆಲೆಯಾಗಿದೆ. ಅಂಟಾರ್ಕ್‌ಟಿಕ್ ಖಂಡವನ್ನು ಟ್ರಾನ್ಸ್ ಅಂಟಾರ್ಕ್‌ಟಿಕ ಪರ್ವತ ಸಾಲು ಎರಡು ಪ್ರಮುಖ ಭೌಗೋಳಿಕ ಭಾಗಗಳಾಗಿ ವಿಭಜಿಸುತ್ತದೆ. ಈ ಪರ್ವತ ಸಾಲಿನಲ್ಲಿ ಜಲಜಶಿಲೆಗಳು ಹೆಚ್ಚು ಮೈದಳೆದಿವೆ. ಸರೀಸೃಪಗಳ ಪಳೆಯುಳಿಕೆಗಳು ಮತ್ತು ಸಸ್ಯ ಪಳೆಯುಳಿಕೆಗಳು ಇಲ್ಲಿ ಕಂಡುಬಂದಿವೆ. ಇದರ ಒಟ್ಟು ಉದ್ದ 3,000 ಕಿಮೀ. ಖಂಡದ ಎರಡು ಭಾಗಗಳ ಪೈಕಿ ಪೂರ್ವ ಭಾಗ ವಿಸ್ತೀರ್ಣದಲ್ಲಿ ದೊಡ್ಡದು. ಪಶ್ಚಿಮ ಭಾಗಕ್ಕೆ ಹೋಲಿಸಿದಂತೆ ಇಲ್ಲಿಯ ಶಿಲೆಗಳು ಹಿರಿ ಪ್ರಾಯದವು. ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಕಂಡುಬರುವ ನೈಸ್–ಗ್ರಾನೈ ಶಿಲೆಗಳೇ ಇಲ್ಲೂ ದೊಡ್ಡ ಪ್ರಮಾಣದಲ್ಲಿ ಮೈದಳೆದಿವೆ. ಇವು 570 ದಶಲಕ್ಷ ವರ್ಷಗಳಿಗೂ ಹಿಂದಿನವು. ಪೂರ್ವ ಮತ್ತು ಪಶ್ಚಿಮ ಭಾಗಗಳ ನಡುವಿನ ಪ್ರಸ್ಥಭೂಮಿಯ ಎತ್ತರ 4,000 ಮೀ. ಭೌಗೋಳಿಕ ಧ್ರುವ ಮತ್ತು ಕಾಂತಧ್ರುವ ಎರಡೂ ಪ್ರಸ್ಥಭೂಮಿಯಲ್ಲೇ ಇವೆ. ಪಶ್ಚಿಮ ಅಂಟಾರ್ಕ್‌ಟಿಕ ಭಾಗ ಬಹುತೇಕ ಸಾಗರಮಟ್ಟದಿಂದ ಕೆಳಗೇ ಇದೆ. ಹಲವು ದ್ವೀಪಗಳ ಸಮೂಹವಿದು. ಮೌಂಟ್ ಎರಬಸ್ ಇಲ್ಲಿನ ಜೀವಂತ ಜ್ವಾಲಾಮುಖಿ.

ಅಂಟಾರ್ಕ್‌ಟಿಕ ಖಂಡಕ್ಕೆ ಹಿಮದ ಖಂಡ ಎಂಬ ಹೆಸರೂ ಇದೆ. ಸು. 40 ದಶಲಕ್ಷ ವರ್ಷಗಳ ಹಿಂದೆ ಅನಂತರ ಹಿಮಯುಗದಲ್ಲಿ (20 ಲಕ್ಷ ವರ್ಷಗಳ ಹಿಂದೆ) ಹಿಮದ ಸ್ತರಗಳು ನಿರಂತರವಾಗಿ ಖಂಡದ ಮೇಲೆ ಬೆಳೆಯುತ್ತ ಹೋದುವು. ಹಿಮಯುಗದ ಕೊನೆಯ ಹಂತ ತಲಪಿದಾಗಲೂ (10,000 ವರ್ಷಗಳ ಹಿಂದೆ) ಹಿಮ ಕರಗಲಿಲ್ಲ. ಇಂಥ ಶಾಶ್ವತ ಹಿಮರಾಶಿಯನ್ನು ಹಿಮದ ಟೋಪಿ ಎನ್ನಲಾಗಿದೆ. ಅಂಟಾರ್ಕ್‌ಟಿಕ ಖಂಡದಲ್ಲಿ 30 ದಶಲಕ್ಷ ಘನ ಕಿಮೀ ಹಿಮ ಸಂಚಯಿಸಿದೆ. ಇದೆಲ್ಲ ಕರಗಿದರೆ ಜಾಗತಿಕ ಸಾಗರದ ಮಟ್ಟ 50 ರಿಂದ 65 ಮೀ ಏರುತ್ತದೆಂದು ಅಂದಾಜು. ಹಿಮದ ಭಾರಕ್ಕೆ ಧ್ರುವಪ್ರದೇಶ 540 ಮೀ ಆಳಕ್ಕೆ ಕುಸಿದಿದೆ. ಜಗತ್ತಿನ ಶೇ. 90 ಭಾಗ ಸಿಹಿನೀರು ಹಿಮದ ಗಡ್ಡೆಯ ರೂಪದಲ್ಲಿ ಈ ಖಂಡದ ಮೇಲೆ ಕೂತಿದೆ. ಪೂರ್ವ ಅಂಟಾರ್ಕ್‌ಟಿಕದಲ್ಲಿ ಒಂದೆಡೆ ಹಿಮದ ಗರಿಷ್ಠ ಮಂದ 4.8 ಕಿಮೀ. ಹಿಮದ ಹಾಳೆ ಖಂಡದಿಂದ ಮೆಲ್ಲನೆ ಸಾಗರದತ್ತ ಸರಿಯುತ್ತದೆ. ಅದರಲ್ಲೂ ಪೂರ್ವ ಅಂಟಾರ್ಕ್‌ಟಿಕದ 4000 ಮೀ ಎತ್ತರದಿಂದ ಕಡಿದಾದ ಭಾಗದಲ್ಲಿ ಇಳಿಯುವ ಹಿಮದ ಹಾಳೆಗಳು ದೊಡ್ಡ ದೊಡ್ಡ ಹಿಮನದಿಗಳಿಗೆ ಎಡೆಮಾಡಿಕೊಟ್ಟಿವೆ. ಟ್ರಾನ್ಸ್ ಅಂಟಾರ್ಕ್‌ಟಿಕ ಪರ್ವತ ಸಾಲು, ರಾಸ್ ಸಮುದ್ರ ಮತ್ತು ವೆಡೆಲ್ ಸಮುದ್ರದತ್ತ ಹಿಮನದಿಗಳು ಹಾಯುವುದನ್ನು ಅಡ್ಡಗಟ್ಟೆಯಂತೆ ತಡೆದು ನಿಲ್ಲಿಸಿದೆ. ಲ್ಯಾಂಬರ್ಟ್ ಎಂಬುದು ಇಲ್ಲಿನ ಪ್ರಮುಖವಾದ ಹಿಮನದಿ. ಸರಿಯುವ ಹಿಮದ ಗಡ್ಡೆಗಳು ಹಿಮದ ಖಂಡಾಂತರ ಪ್ರದೇಶಕ್ಕೂ ತೇಲುವ ಬರ್ಫದ ಹೆಬ್ಬಂಡೆಗಳಿಗೂ ಕಾರಣವಾಗಿವೆ. ರಾಸ್ ಸಮುದ್ರಕ್ಕೆ ಚಾಚಿಕೊಂಡಿರುವಂತೆ ಇರುವ ಹಿಮದ ಚಾಚು ಸುಮಾರು ಫ್ರಾನ್ಸ್ ದೇಶದಷ್ಟು ದೊಡ್ಡದು. ಈ ಭಾಗದಿಂದ 1983ರಲ್ಲಿ ಕಳಚಿ ಸಮುದ್ರದ ಪಾಲಾದ ಹಿಮದ ಹೆಬ್ಬಂಡೆ 1760 ಕಿಮೀ ಉದ್ದವಿತ್ತು. 1976ರಲ್ಲಿ ಲಾಸನ್ ಹಿಮಚಾಚಿನಿಂದ ಕಿತ್ತುಬಂದ ಹಿಮಬಂಡೆ 3,600 ಚ.ಕಿಮೀ ವಿಸ್ತೀರ್ಣವಿತ್ತು. ಅಂಟಾರ್ಕ್‌ಟಿಕ ಖಂಡದ ನಿಜವಾದ ವಿಸ್ತೀರ್ಣ ಅಳೆಯುವುದೇ ದುಸ್ತರವೆನ್ನುವಷ್ಟು ಹಿಮದ ರಾಶಿ ಬೆಳೆಯುತ್ತದೆ. ಪ್ರತಿವರ್ಷ ಮಾರ್ಚ್ ತಿಂಗಳ ಹೊತ್ತಿಗೆ ಸುಮಾರು 2.6 ದಶಲಕ್ಷ ಚ.ಕಿಮೀ.ಗಳಷ್ಟು ಬೆಳೆಯುವ ಹಿಮರಾಶಿ ಸೆಪ್ಟಂಬರ್ ಹೊತ್ತಿಗೆ 18.8 ದಶಲಕ್ಷ ಚ.ಕಿಮೀಗಳಷ್ಟು ಹಿಗ್ಗುತ್ತದೆ. ಈ ಖಂಡದ ಮೇಲೆ ಬೇರೆ ಬೇರೆ ದಿಕ್ಕಿನಿಂದ ಬೀಸುವ ಬಿರುಗಾಳಿ ಹಾಗೂ ಸಾಗರದ ಪ್ರವಾಹ ತೇಲುವ ಹಿಮದ ಬಂಡೆಗಳು ಸಾಗುವ ದಿಕ್ಕನ್ನು ನಿಯಂತ್ರಿಸುತ್ತವೆ.

**ವಾಯುಗುಣ:** ಖಂಡವು ವಾಯುಗುಣದ ವೈಪರೀತ್ಯಕ್ಕೆ ಹೆಸರುವಾಸಿಯಾಗಿದೆ. ದಕ್ಷಿಣ ಧ್ರುವದ ಬಳಿ 78°–28' ದ.ಅ) ರಷ್ಯ ಸ್ಥಾಪಿಸಿರುವ ವೋಸ್ಟಾಕ್ (3,505 ಮೀ ಎತ್ತರ) ಎಂಬ ಕೇಂದ್ರದ ಬಳಿ 1983ರಲ್ಲಿ –89 ಡಿಗ್ರಿ ಸೆ. ಉಷ್ಣತೆಯನ್ನು ದಾಖಲಿಸಲಾಗಿದೆ. ಭೂಮಿಯ ಯಾವುದೇ ಭಾಗದಲ್ಲೂ ಉಷ್ಣತೆ ಇಷ್ಟು ಕೆಳಮಟ್ಟಕ್ಕೆ ಇಳಿದಿರುವುದು ಇದುವರೆಗೂ ದಾಖಲಾಗಿಲ್ಲ. ಬೇಸಗೆಯಲ್ಲೂ –20 ಡಿಗ್ರಿ ಸೆ. ಉಷ್ಣತೆಯನ್ನು ಅನೇಕ ಭಾಗಗಳು ಅನುಭವಿಸುತ್ತವೆ. ಸಾಗರ ಭಾಗದಲ್ಲಿ ಅತ್ಯಂತ ಕಡಿಮೆ ಉಷ್ಣತೆ –60 ಸೆ. ದಾಖಲಾಗಿದೆ. ಚಳಿಗಾಲದಲ್ಲಿ ಸಾಗರತೀರದಲ್ಲಿ –20 ರಿಂದ –30 ಡಿಗ್ರಿ ಸೆ. ಉಷ್ಣತೆ ಇರುತ್ತದೆ. ಒಳನಾಡಿನಲ್ಲಿ ಇದೇ ಕಾಲದಲ್ಲಿ –40 ರಿಂದ –70 ಡಿಗ್ರಿ ಸೆ. ಉಷ್ಣತೆ ದಾಖಲಾಗಿದೆ. ಬೇಸಿಗೆಯಲ್ಲಿ ತೀರ ಪ್ರದೇಶದಲ್ಲಿ ಉಷ್ಣತೆ 0 ಡಿಗ್ರಿ ಸೆ.ಗೆ ಇಳಿದರೆ, ಒಳನಾಡಿನಲ್ಲಿ –20 ರಿಂದ –35 ಡಿಗ್ರಿ ಸೆ.ಗೆ ಇಳಿಯುವುದುಂಟು. ಗಂಟೆಗೆ 100 ಕಿಮೀ ವೇಗದಲ್ಲಿ ಬಿರುಗಾಳಿ ಬೀಸುತ್ತದೆ. ವಾಯುಮಂಡಲದಲ್ಲಿ ಆರ್ದ್ರತೆ ಕಡಿಮೆ. ಪ್ರಸ್ಥಭೂಮಿಯಲ್ಲಿ ಗರಿಷ್ಠವೆಂದರೆ ವಾರ್ಷಿಕ 50 ಮಿ.ಮೀ ಮಳೆ ಬೀಳುತ್ತದೆ. ಅಂಟಾರ್ಕ್‌ಟಿಕ ಹಿಮದ ಮರುಭೂಮಿ. ಹಿಮವೃಷ್ಟಿ ಸರ್ವೇ ಸಾಮಾನ್ಯ. ಸಮುದ್ರದ ಅಂಚಿನಿಂದ ಧ್ರುವದತ್ತ ಹೋದರೆ ಒತ್ತಡ ಹೆಚ್ಚುತ್ತದೆ, ಆದರೆ ಉಷ್ಣತೆ ಕಡಿಮೆಯಾಗುತ್ತದೆ.

**ಸಸ್ಯ ಮತ್ತು ಪ್ರಾಣಿಗಳು:** ಖಂಡದಲ್ಲಿ ಸಂಪೂರ್ಣವಾಗಿ ಪ್ರತಿಕೂಲ ಹವಾಮಾನವಿದೆ. ಜೂನ್ 22ರಂದು ಭೂಮಿಯ ಉತ್ತರ ಮೇರು ಅತ್ಯಧಿಕವಾಗಿ ಸೂರ್ಯನೆಡೆ ವಾಲುವುದರಿಂದ ಆಗ ಅಂಟಾರ್ಕ್‌ಟಿಕದಲ್ಲಿ ದಿನದ 24 ಗಂಟೆಯೂ ಕತ್ತಲು. ಡಿಸೆಂಬರ್ 22ರಂದು ದಕ್ಷಿಣದ ಮೇರು ಅತ್ಯಧಿಕವಾಗಿ ಸೂರ್ಯನೆಡೆ ವಾಲುವುದರಿಂದ ದಿನದ 24 ಗಂಟೆಯೂ ಬೆಳಕು, ವರ್ಷದಲ್ಲಿ ಆರು ತಿಂಗಳು ರಾತ್ರಿ, ಆರು ತಿಂಗಳು ಹಗಲು ಇರುವುದರಿಂದ ಈ ಖಂಡ ಜೈವಿಕ ವೈವಿಧ್ಯವನ್ನು ಪೋಷಿಸಿಲ್ಲ. ಅಲ್ಲಿರುವ ಸೀಮಿತ ಜೀವಿಗಳೂ ಈ ಪ್ರತಿಕೂಲ ವಾತಾವರಣಕ್ಕೆ ಹೊಂದಿಕೊಂಡು ಬಾಳುವೆ ಮಾಡುತ್ತವೆ. ಪ್ರಧಾನ ಜೀವಿಗಳೆಂದರೆ ಪೆಂಗ್ವಿನ್. ಇವುಗಳಲ್ಲಿ 15 ಪ್ರಭೇದಗಳಿದ್ದರೂ ಮೂರು ಪ್ರಭೇದಗಳು ಮಾತ್ರ ಈ ಖಂಡಕ್ಕೆ ಸೀಮಿತ. ಉಳಿದವು ದಕ್ಷಿಣ ಅಮೆರಿಕದ ದಕ್ಷಿಣ ತುದಿಯವರೆಗೆ, ಸಮಭಾಜಕ ವೃತ್ತದ ಗ್ಯಾಲಪೋಗೋಸ್ ದ್ವೀಪದವರೆಗೆ ಹಂಚಿಕೆಯಾಗಿದೆ. ಅದಿಲೆ, ಎಂಪರೆರ್ ಮತ್ತು ಚಿನ್ ಸ್ಟ್ರಾಪ್ ಇವು ಇಲ್ಲಿನ ಪೆಂಗ್ವಿನ್ ಪ್ರಭೇದಗಳು. ಬಹುತೇಕ ಪೆಂಗ್ವಿನ್‌ಗಳು ಕಲ್ಲು ಪೊಟರೆಗಳಲ್ಲಿ ಗೂಡುಮಾಡಿ ಸಂತಾನಾಭಿವೃದ್ಧಿ ಮಾಡುತ್ತವೆ. ಇಂಥ ಗೂಡುಗಳನ್ನು ರೂಕರಿ ಎನ್ನಲಾಗುವುದು. ಅಡಿಲೆ ಪೆಂಗ್ವಿನ್‌ಗಳು 30 ರಿಂದ 68 ಸೆಂ.ಮೀ ಎತ್ತರ, ಮೂರರಿಂದ ಆರು ಕಿ.ಗ್ರಾಂ. ತೂಕ. ವಸಂತ ಕಾಲದಲ್ಲಿ 3–4 ದಿನಗಳ ಅಂತರದಲ್ಲಿ ಎರಡು ಮೊಟ್ಟೆಗಳನ್ನಿಡುತ್ತವೆ. ಎಂಪರರ್ ಪೆಂಗ್ವಿನ್‌ಗಳು ಒಂದು ಮೀಟರ್ ಎತ್ತರದವರೆಗೂ ಬೆಳೆಯುತ್ತವೆ. ತೂಕ 27 ರಿಂದ 41 ಕಿ.ಗ್ರಾಂ. ಇವು ವರ್ಷಕ್ಕೊಂದು ಮೊಟ್ಟೆ ಇಡುತ್ತವೆ.

ಉತ್ತರ ಅಟ್ಲಾಂಟಿಕ್ ದ್ವೀಪವನ್ನು ತೊರೆದು ಸ್ಕುವಾ ಎಂಬ ಹಕ್ಕಿಗಳು ಅಂಟಾರ್ಕ್‌ಟಿಕದವರೆಗೂ ಪ್ರಯಾಣ ಮಾಡುತ್ತವೆ. ಪೆಂಗ್ವಿನ್ ಮೊಟ್ಟೆಗಳನ್ನು ಇವು ಅಪಹರಿಸುತ್ತವೆ. ನೀರುಕೋಳಿ, ಟರ್ನ್ ಇವೂ ಕೂಡ ದೂರದಿಂದ ಈ ಖಂಡಕ್ಕೆ ವಲಸೆ ಬರುತ್ತವೆ. ಖಂಡದ ಸಮೀಪದ ದ್ವೀಪಗಳಲ್ಲಿ ಹಾಗೂ ತೀರ ಪ್ರದೇಶಗಳಲ್ಲಿ ಸೀಲ್ ಸಂತತಿ ಹೆಚ್ಚು. ಅವುಗಳ ತುಪ್ಪಳದಿಂದಾಗಿ ಬೇಟೆಗೆ ಸಿಕ್ಕಿ ವಿನಾಶದಂಚಿಗೆ ತಲಪಿದ್ದವು. ಈಗ ಅವುಗಳ ಸಂತತಿಯನ್ನು ರಕ್ಷಿಸಲಾಗಿದೆ. ಖಂಡದ ಅಂಚಿನಲ್ಲಿ ಆರು ಬಗೆಯ ಸೀಲ್‌ಗಳನ್ನು ಗುರುತಿಸಲಾಗಿದೆ. ವೆಡೆಲ್ ಸಮುದ್ರ ಹಾಗೂ ರಾಸ್ ಸಮುದ್ರಗಳಲ್ಲಿ

ಮತ್ತು ಅವುಗಳಿಗೆ ಹೊಂದಿಕೊಂಡಿರುವ ದ್ವೀಪಗಳಲ್ಲಿ ಇವುಗಳ ಸಂತತಿ ಹೆಚ್ಚು. 600 ಮೀಟರ್ ಆಳದವರೆಗೆ ಇವು ಮುಳುಗಬಲ್ಲವು. ವಿವಿಧ ಬಗೆಯ ಮೀನುಗಳು ಕಂಡುಬರುತ್ತವೆ. ಆದರೆ ಅವು ಗಾತ್ರದಲ್ಲಿ ಸಣ್ಣವು ಮತ್ತು ಸಂಖ್ಯೆ ಕಡಿಮೆ. ದಕ್ಷಿಣ ಸಾಗರದ ಬಹುತೇಕ ಜೀವಿಗಳಿಗೆ ಇಲ್ಲಿ ದೊರೆಯುವ ಕ್ರಿಲ್ ಎಂಬ ಸೀಗಡಿಯೇ ಆಧಾರ. ಈ ಸಾಗರದಲ್ಲಿ ಸುಮಾರು 270 ದಶಲಕ್ಷ ಟನ್ ಕ್ರಿಲ್ ಸಂಪನ್ಮೂಲವಿದೆಯೆಂದು ಅಂದಾಜು. ನೀಲ ತಿಮಿಂಗಿಲಗಳು ಕೂಡ ಅಂಟಾರ್ಕ್‌ಟಿಕ ಖಂಡದ ಆಸುಪಾಸಿನ ದ್ವೀಪಗಳಿಗೆ ವಲಸೆ ಬರುತ್ತವೆ. 1994ರಲ್ಲಿ ಅಂತಾರಾಷ್ಟ್ರೀಯ ಕಾನೂನು ರಚಿಸಿ ತಿಮಿಂಗಿಲಗಳ ಬೇಟೆಯನ್ನು ಇಲ್ಲಿ ನಿಷೇಧಿಸಲಾಗಿದೆ. ಅಲ್ಲದೆ ಈ ಖಂಡಕ್ಕೆ ಸಂಶೋಧನೆಗೆಂದು ಬರುವವರು ಯಾವುದೇ ಜೀವಿ ಪ್ರಭೇದವನ್ನು ಇಲ್ಲಿಗೆ ತರುವಂತಿಲ್ಲ.

ಅಂಟಾರ್ಕ್‌ಟಿಕ ಖಂಡಕ್ಕೇ ಸೀಮಿತವಾದ ಮೇಲ್ವರ್ಗದ ಸಸ್ಯಗಳಿಲ್ಲ. ಸಸ್ಯದ ಸಾಲು ಈ ಖಂಡದ ಪರ್ಯಾಯ ದ್ವೀಪದ ಕೊನೆಯ ಅಂಚಿನಿಂದ 1200 ಕಿಮೀ ಉತ್ತರಕ್ಕೆ ನಿಂತುಬಿಡುತ್ತದೆ. ಟೆರಾ ಡೆಲ್ಫಿಯಾಗೋ ದ್ವೀಪದ ಬಳಿ (54 ಡಿಗ್ರಿ ರೇಖಾಂಶ) ವೃಕ್ಷರಾಶಿ ಕೊನೆಗೊಳ್ಳುತ್ತದೆ. ಪರ್ಯಾಯ ದ್ವೀಪದ ಪಶ್ಚಿಮದುದ್ದಕ್ಕೂ ಕೆಲವು ಜಾತಿಯ ಹುಲ್ಲು ಬೆಳೆದಿದೆ. ಸುಮಾರು 300 ಜಾತಿಯ ಪಾಚಿ, 400 ಜಾತಿಯ ಶಿಲಾವಲ್ಕ, ಹಾವಸೆ ಅಂಟಾರ್ಕ್‌ಟಿಕ ಖಂಡದ ತೆರೆದ ಭಾಗದಲ್ಲಿ ಕಲ್ಲಿನ ಮೇಲೆ ಬೆಳೆಯುತ್ತವೆ. ಖಂಡದ ಒಳಭಾಗದಲ್ಲಿ ಸಿಹಿ ನೀರಿನ ಸರೋವರದಲ್ಲಿ ಕೆಲವು ಬಗೆಯ ಬ್ಯಾಕ್ಟೀರಿಯಗಳನ್ನು ಪತ್ತೆಹಚ್ಚಲಾಗಿದೆ.

**ಖನಿಜ ಸಂಪನ್ಮೂಲ:** 20ನೆಯ ಶತಮಾನದ ಉತ್ತರಾರ್ಧದಲ್ಲಿ ಅಂಟಾರ್ಕ್‌ಟಿಕ ಖಂಡವನ್ನು ಅನೇಕ ದೇಶಗಳು ಕೇವಲ ತಮ್ಮ ಸಾಹಸದ ಪ್ರದರ್ಶನಕ್ಕೆ ಆಯ್ದುಕೊಳ್ಳಲಿಲ್ಲ. ವಿಸ್ತೀರ್ಣದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಒಂದೂವರೆಯಷ್ಟಿರುವ ಈ ಖಂಡದಲ್ಲಿ ದೊಡ್ಡ ಪ್ರಮಾಣದ ಖನಿಜ ಸಂಪನ್ಮೂಲಗಳಿರಬಹುದೆಂದು ಹಲವು ದೇಶಗಳು ಊಹಿಸಿದ್ದವು. ಅದರ ಒಡೆತನ ಸಾಧಿಸಲು ಹಲವು ದೇಶಗಳು ಈ ಖಂಡದಲ್ಲಿ ತಮ್ಮ ತಮ್ಮ ಗಡಿ ಗುರುತಿಸಿಕೊಂಡವು. ಸ್ವಾಮ್ಯವನ್ನು ಘೋಷಿಸಿದವು. ಅದರಲ್ಲೂ ವಿಶೇಷವಾಗಿ ಕೊಕ್ಕೆಯಂತಿರುವ ಪರ್ಯಾಯ ದ್ವೀಪದ ಭಾಗ ಉಳಿದ ಭಾಗಕ್ಕಿಂತ ಹೆಚ್ಚು ಗಮನ ಸೆಳೆಯಿತು. ಭೌಗೋಳಿಕವಾಗಿ ಇದು ಆಂಡಿಸ್ ಪರ್ವತದ ಮುಂದುವರಿದ ಭಾಗ. ಹಿಂದೆ ಸ್ಕಾಟ್ ತನ್ನ ಯಾತ್ರೆಯಲ್ಲಿ ಈ ಭಾಗದಿಂದ ಶಿಲಾ ಮಾದರಿಗಳನ್ನು ಜೊತೆಗೆ ಕಲ್ಲಿದ್ದಲ್ಲನ್ನೂ ಸಂಗ್ರಹಿಸಿ ತಂದಿದ್ದ. ಈ ಖಂಡವು ಗೊಂಡ್ವಾನ ಮಹಾಖಂಡದ ಒಂದು ಭಾಗವೇ ಆದ್ದರಿಂದ ಶಿಲೆ ಮತ್ತು ಖನಿಜ ಸಂಪನ್ಮೂಲದ ದೃಷ್ಟಿಯಿಂದ ಆಸ್ಟ್ರೇಲಿಯ, ಭಾರತ, ದಕ್ಷಿಣ ಅಮೆರಿಕ, ಆಫ್ರಿಕ ಖಂಡಗಳಲ್ಲಿ ಇರುವ ಸಂಪನ್ಮೂಲಗಳು ತಾತ್ವಿಕವಾಗಿ ಇಲ್ಲೂ ಇರಲೇಬೇಕೆಂಬುದು ಒಂದು ಊಹೆ. ಉದಾಹರಣೆಗೆ ದಕ್ಷಿಣ ಆಫ್ರಿಕದ ಚಿನ್ನ ದೊರೆಯುವ ವಿಟ್ ವಾಟರ್ ಸ್ಟ್ಯಾಂಡ್‌ನ ಪಶ್ಚಿಮ ಭಾಗದ ಶಿಲೆಗಳು ಅಂಟಾರ್ಕ್‌ಟಿಕ ಖಂಡದ ಕ್ವೀನ್ಸ್ ಮೌಡ್ ಲ್ಯಾಂಡ್‌ನ ಪಶ್ಚಿಮ ತೀರಕ್ಕೆ ಸಮಾಂತರವಾಗಿ ಹಾಯುತ್ತದೆ. ದಕ್ಷಿಣ ಭಾರತದ ಶಿಲೆಗಳ ಮುಂದುವರಿದ ಭಾಗವೋ ಎಂಬಂತೆ ಆ ಖಂಡದಲ್ಲಿ ಸ್ಥಾಪಿಸಿರುವ ಭಾರತದ ಮೈತ್ರಿ ಕೇಂದ್ರದ ಸುತ್ತಮುತ್ತ ಇರುವ ಬೆಟ್ಟಗಳು ಕಂಡುಬರುತ್ತವೆ. ಈವರೆಗೆ ದೊಡ್ಡ ಪ್ರಮಾಣದ ನಿಕ್ಷೇಪಗಳು ಯಾವುದೂ ಕಂಡುಬಂದಿಲ್ಲ. ಇದ್ದರೂ ಅವು ಹಿಮದ ಸ್ತರದಡಿ ಬಹುತೇಕ ಮುಚ್ಚಿಹೋಗಿವೆ. ಅಂತಾರಾಷ್ಟ್ರೀಯ ಭೂಭೌತ ವರ್ಷದ ಕಾರ್ಯಾಚರಣೆಯ ಅನಂತರ ಈ ಖಂಡದ ಬಹು ಭಾಗವನ್ನು ಸಮೀಕ್ಷೆ ಮಾಡಲಾಗಿದೆ. ಪರ್ಯಾಯ ದ್ವೀಪದ ಭಾಗದಲ್ಲಿ ಸಣ್ಣ ಪ್ರಮಾಣದ ತಾಮ್ರದ ನಿಕ್ಷೇಪಗಳಿರುವುದನ್ನು ಪತ್ತೆ ಹಚ್ಚಲಾಗಿದೆ. ಪೂರ್ವ ಅಂಟಾರ್ಕ್‌ಟಿಕದ ಕೆಲವೆಡೆ ಕಲ್ಲಿದ್ದಲು, ಯುರೇನಿಯಂ, ಕ್ರೋಮಿಯಂ, ಚಿನ್ನ, ಕಬ್ಬಿಣ, ಸೀಸ, ಮ್ಯಾಂಗನೀಸ್, ಮಾಲಿಬ್ಡಿನಂ ಮತ್ತು ಸತುವು ಅಲ್ಪ ಪ್ರಮಾಣದಲ್ಲಿ ಕಂಡುಬಂದಿವೆ. ಆದರೆ ಖನಿಜಗಳ ಉತ್ಪಾದನೆ ಲಾಭದಾಯಕವಲ್ಲ. ರಾಸ್ ಸಮುದ್ರ ಮತ್ತು ಬ್ರಾನ್ಸ್ ಫೀಲ್ಡ್ ಜಲಸಂಧಿಯಲ್ಲಿ ನೆಲದಡಿ ತೈಲ ಇರುವ ಸಾಧ್ಯತೆಯನ್ನು ಅಲ್ಲಿ ಕೈಗೊಂಡಿರುವ ಬೈರಿಗೆ ಕಾರ್ಯಾಚರಣೆ ಸೂಚಿಸಿದೆ. ದೊಡ್ಡ ಪ್ರಮಾಣದ ನಿಕ್ಷೇಪಗಳು ಕಂಡುಬಂದರೂ ಅಲ್ಲಿ ಗಣಿ ಮಾಡುವಂತಿಲ್ಲ. ಹಲವು ರಾಷ್ಟ್ರಗಳು ಸ್ವಾಮ್ಯವನ್ನು ಹಿಂದೆ ಘೋಷಿಸಿದ್ದರೂ ಅವು ಊರ್ಜಿತವಲ್ಲ. ಅಂಟಾರ್ಕ್‌ಟಿಕ ಖಂಡದ ಬಹು ದೊಡ್ಡ ಮುಗಿಯದ ಸಂಪನ್ಮೂಲವೆಂದರೆ ಹಿಮದ ಗಡ್ಡೆಯ ರೂಪದಲ್ಲಿ ಘನೀಭವಿಸಿರುವ ಶುದ್ಧ ನೀರು. ಇದನ್ನು ಒಯ್ಯಲು ಯಾರ ಪರವಾನಗಿಯೂ ಬೇಡ.

**ಖಂಡದ ಶೋಧ ಮತ್ತು ಸಾಹಸ ಯಾನಗಳು:** 8ನೆಯ ಶತಮಾನದ ಉತ್ತರಾರ್ಧದಿಂದ ಪ್ರಾರಂಭಿಸಿ 1957–58ರಲ್ಲಿ ಅಂತಾರಾಷ್ಟ್ರೀಯ ಭೂಭೌತ ವರ್ಷದ ಆಚರಣೆಯವರೆಗೆ ಈ ಖಂಡ ಕುರಿತು ವ್ಯಾಪಕ ಸಂಶೋಧನೆಯಾಗಿದೆ. ಪ್ರತಿಕೂಲ ವಾತಾವರಣವಿರುವ, ಸಾಹಸಿಗರಿಗೂ ಸವಾಲಾಗಿರುವ ಈ ಖಂಡದ ಬಗ್ಗೆ ವಿವರಗಳನ್ನು ಪಡೆಯಲು ಸಾಕಷ್ಟು ಕಾಲವೇ ಬೇಕಾಯಿತು. ಸಪ್ತರ್ಷಿ ಮಂಡಲದ ಕೆಳಗಿರುವ ಪ್ರದೇಶ ಎಂಬರ್ಥದಲ್ಲಿ ಉತ್ತರ ಧ್ರುವ ಪ್ರದೇಶವನ್ನು ಗ್ರೀಕರು ಆರ್ಕ್‌ಟಿಕ್ ಎಂದರು. ಅದಕ್ಕೆ ವಿರುದ್ಧ ದಿಕ್ಕಿನಲ್ಲಿರುವ ದಕ್ಷಿಣ ಧ್ರುವ ಪ್ರದೇಶವನ್ನು ಅಂಟಾರ್ಕ್‌ಟಿಕ ಎಂದರು. ಗ್ರೀಕ್ ಭೂಗೋಳ ತಜ್ಞ ಟಾಲಮೀ (ಪ್ರ.ಶ. 127–151) ದಕ್ಷಿಣ ಧ್ರುವ ಪ್ರದೇಶ ನೆಲವಾಗಿರಬಹುದೆಂದು ಊಹಿಸಿ ಅದಕ್ಕೆ ಟೆರ್ರಾ ಆಸ್ಟ್ರೇಲಿಸ್ ಇನ್‌ಕಾಗ್ನೀಟಾ (ಅಜ್ಞಾತ ದಕ್ಷಿಣ ನೆಲ) ಎಂದು ಕರೆದ.

ಅಂಟಾರ್ಕ್‌ಟಿಕ ಖಂಡದ ವೃತ್ತದ ಸುತ್ತ ಗಸ್ತು ಹೊಡೆದ ಮೊದಲಿಗ ಕೊಲಂಬಸ್ (1768). ಇದು ಪ್ರಾಯಃ ಯುರೋಪಿನ ವಿಸ್ತೀರ್ಣಕ್ಕೆಂದು ಕೈಗೊಂಡ ಯಾನಗಳಲ್ಲೊಂದು. ಅಂಟಾರ್ಕ್‌ಟಿಕ ವೃತ್ತದ ಒಳಗೆ ಪ್ರವೇಶಿಸಿದ ಕೀರ್ತಿ ಕ್ಯಾಪ್ಟನ್ ಕುಕ್‌ಗೆ ಸೇರುತ್ತದೆ (1772–75). ಈತ ಮೂರು ಬಾರಿ ಯಾನ ಕೈಗೊಂಡು ನೆಲವೆಲ್ಲ ಹಿಮಾವೃತವಾಗಿದೆ ಎಂದಷ್ಟೇ ವಿವರಣೆ ನೀಡಲು ಸಾಧ್ಯವಾಯಿತು. ಸ್ವಲ್ಪ ದೂರದಲ್ಲೇ ಅಂಟಾರ್ಕ್‌ಟಿಕ ಪರ್ಯಾಯ ದ್ವೀಪವಿದ್ದುದು ಅವನಿಗೆ ಗೋಚರಿಸಲಿಲ್ಲ. ಹತ್ತಿರದಲ್ಲಿದ್ದ ಜಾರ್ಜಿಯ ಎಂಬ ದ್ವೀಪವನ್ನು ಪತ್ತೆಮಾಡಿದ. ಅದೇ ಹೆಸರಿನಿಂದ ಈಗಲೂ ಆ ದ್ವೀಪ ಪರಿಚಿತ. ಯಾರಾದರೂ ಧೈರ್ಯದಿಂದ ಮುನ್ನುಗ್ಗಿ ಖಂಡವಿದೆಯೆಂದು ಸಾಬೀತು ಪಡಿಸಿದರೆ ನಾನು ಕೆಚ್ಚಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅದರಿಂದ ಬಿಡಿಗಾಸಿನ ಪ್ರಯೋಜನವೂ ಇಲ್ಲ ಎಂದು ಬರೆದ. ಕುಕ್‌ನ ಸಾಹಸ ಯಾನದ ಹಿಂದೆಯೇ ಯುರೋಪ್ ಚೀನದೊಡನೆ ವ್ಯಾಪಾರ ಕುದುರಿಸಲು ಕೇಪ್ ಹಾರನ್ ಮೂಲಕ ಯಾನ ಮಾಡಿದ ನಾವಿಕರು ಸೀಲ್‌ಗಳನ್ನು ಬೇಟೆಯಾಡಿದರು. ಕೆಲವೊಮ್ಮೆ ಅವರ ನೌಕೆಗಳು ತೀರ ದಕ್ಷಿಣಕ್ಕೆ ಒಯ್ಯಲ್ಪಡುತ್ತಿದ್ದವು. ಈ ವಾಣಿಜ್ಯ ಯಾನದಿಂದಾಗಿ ಅಂಟಾರ್ಕ್‌ಟಿಕ ಖಂಡದ ಸುತ್ತ ನಾವಿಕರು ಸುತ್ತಬೇಕಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನ, ಅಂದಿನ ಸೋವಿಯತ್ ರಷ್ಯ, ಇಂಗ್ಲೆಂಡ್ ಈ ಮೂರೂ ರಾಷ್ಟ್ರಗಳು ಈ ಅಜ್ಞಾತ ಖಂಡವನ್ನು ಕಂಡ ಖ್ಯಾತಿ ತಮ್ಮ ದೇಶಕ್ಕೇ ಸಲ್ಲಬೇಕೆಂದು ವಾದಿಸುತ್ತ ಬಂದವು. ಸೀಲ್ ಬೇಟೆಗೆಂದು ಹೊರಟ 20ರ ತರುಣ ಅಮೆರಿಕದ ಪಾಮರ್, ಹೀರೋ ಎಂಬ ಹೆಸರಿನ ಪುಟ್ಟ ನೌಕೆಯನ್ನು ತಾನೇ ನಡೆಸಿ ಸೀಲ್ ಸಂತಾನಾಭಿವೃದ್ಧಿಯ ತಾಣವನ್ನು ಹುಡುಕುವಾಗ ಹಿಮಾಚ್ಛಾದಿತ ಕೋಡುಗಲ್ಲನ್ನು ಅಂಟಾರ್ಕ್‌ಟಿಕ ಖಂಡದಲ್ಲಿ ಕಂಡನೆಂದು (1820) ಅಮೆರಿಕ ವಾದಿಸಿದೆ.

ಇದೇ ಅವಧಿಯಲ್ಲಿ ವೋಸ್ಟೋಕ್ ಮತ್ತು ಮಿರ್ನಿ ಎಂಬ ಎರಡು ನೌಕೆಗಳೊಡನೆ ರಷ್ಯದ ಬೆಲ್ಲಿಂಗ್ ಹ್ಯಾಸನ್ ಎಂಬ ನಾವಿಕ ಪಾಮರ್‌ಗೆ ಎದುರಾಗಿದ್ದ. ಕೇವಲ 30 ಕಿಮೀ. ದೂರ ಸಾಗಿದ್ದರೆ ಅಂಟಾರ್ಕ್‌ಟಿಕ ಖಂಡಕ್ಕೆ ಕಾಲಿಟ್ಟ ಮೊದಲಿಗ ಎನ್ನುವ ಖ್ಯಾತಿ ಅವನದಾಗುತ್ತಿತ್ತು. ಆದರೆ ಹಿಮಾಚ್ಛಾದಿತ ಖಂಡವನ್ನು ಕಂಡು ಹಿಂತಿರುಗಬೇಕಾಯಿತು. 1823ರಲ್ಲಿ ಬ್ರಿಟನ್ನಿನ ಸಾಗರಯಾನಿ ಜೇಮ್ಸ್ ವೆಡಲ್ ದಕ್ಷಿಣ ಸಾಗರದ 74° ರೇಖಾಂಶ ತಲಪಿ ಈಗಿನ ವೆಡಲ್ ಸಮುದ್ರದ ಬಗ್ಗೆ ಅನೇಕ ವಿವರಗಳನ್ನು ನೀಡಿದ. 1837ರಲ್ಲಿ ಫ್ರಾನ್ಸ್ ಲೆಫ್ಟಿನೆಂಟ್ ದುಮಾಂಟ್ ದ ಊರ್ವಿಲ್, ಅಂಟಾರ್ಕ್‌ಟಿಕ ಖಂಡದ ಪರ್ಯಾಯ ದ್ವೀಪಕ್ಕೆ ಹೊಂದಿಕೊಂಡಿರುವ ಕೆಲವು ದ್ವೀಪಗಳನ್ನು ಪತ್ತೆಮಾಡಿದ. ಅದನ್ನು ಅಡಿಲೇ ಲ್ಯಾಂಡ್ ಎಂದು ತನ್ನ ಹೆಂಡತಿಯ ಹೆಸರಲ್ಲಿ ಕರೆದ (ಅಡಿಲೆ ಪೆಂಗ್ವಿನ್‌ಗಳ ಹೆಸರಿನ ಮೂಲ ಇದೇ). 1838–41ರಲ್ಲಿ ಅಮೆರಿಕದ ನೌಕಾಪಡೆಯ ಲೆಫ್ಟಿನೆಂಟ್ ವಿಲ್ಕಸ್, ಪೂರ್ವ ಅಂಟಾರ್ಕ್‌ಟಿಕದ 2400 ಕಿಮೀ. ಉದ್ದದ ತೀರವನ್ನು ಸಮೀಕ್ಷೆ ಮಾಡಿ ಅಂಚನ್ನು ಮುಟ್ಟಿದ, ಪರ್ವತಗಳನ್ನು ಕಂಡ. ಹಿಂತಿರುಗಿದಾಗ ಯಥೋಚಿತ ಸ್ವಾಗತದ ಬದಲು ಸಂಗಡಿಗರನ್ನು ಹಿಂಸಿಸಿದ ಎನ್ನುವ ಕಾರಣಕ್ಕಾಗಿ ಅಮೆರಿಕ ಅವನಿಗೆ ಭಾರಿ ದಂಡ ವಿಧಿಸಿ ದಿವಾಳಿಗೆ ತಳ್ಳಿತು. 1839–43ರ ನಡುವೆ ಬ್ರಿಟನ್ನಿನ ಪರಿಶೋಧಕ ಜೇಮ್ಸ್ ಕ್ಲಾರ್ಕ್ ರಾಸ್, ಎರಬೆಸ್ ಮತ್ತು ಟೆರೆರ್ ಎಂಬ ಎರಡು ನೌಕೆಗಳೊಂದಿಗೆ ಅಂಟಾರ್ಕ್‌ಟಿಕ ಖಂಡದ ಪ್ರಕ್ಷುಬ್ಧ ಸಾಗರವನ್ನು ಹಾಯ್ದು ರಾಸ್ ಸಮುದ್ರವನ್ನು ಪತ್ತೆ ಹಚ್ಚಿದ. 1901–04ರ ನಡುವೆ ಇಂಗ್ಲೆಂಡಿನ ನೌಕಾಪಡೆಯ ರಾಬರ್ಟ್ ಫಾಲ್ಕನ್ ಸ್ಕಾಟ್ ಅಂಟಾರ್ಕ್‌ಟಿಕ ಖಂಡದ ಹಿಮನದಿಯನ್ನು ರಾಸ್ ಸಮುದ್ರ ಮಾರ್ಗವಾಗಿ ಹಾಯುವುದರಲ್ಲಿ ಯಶಸ್ವಿಯಾದ. ಆದರೆ ಬಿರುಗಾಳಿಯಿಂದಾಗಿ ಹಿಂತಿರುಗಬೇಕಾಯಿತು. 1909ರಲ್ಲಿ ಇಂಗ್ಲೆಂಡಿನ ಷಾಕಲ್ಟನ್ ದಕ್ಷಿಣದ ಕಾಂತಧ್ರುವವನ್ನು ಮೆಟ್ಟಿನಿಲ್ಲುವುದರಲ್ಲಿ ಸಫಲನಾದ. ಅದೇ ವರ್ಷ ಅಮೆರಿಕದ ರಾಬರ್ಟ್ ಪಿಯರಿ ಉತ್ತರ ಧ್ರುವ ಯಾತ್ರೆಯಲ್ಲಿ ಯಶಸ್ಸು ಸಾಧಿಸುತ್ತಲೇ ದಕ್ಷಿಣ ಧ್ರುವ ತಲಪುವ ಸ್ಪರ್ಧೆ ಯುರೋಪಿನಲ್ಲಿ ಮೂಡಿತು. ಈ ಸ್ಪರ್ಧೆಗಿಳಿದ ಇಬ್ಬರು ಪ್ರಮುಖರೆಂದರೆ ನಾರ್ವೆಯ ಅಮುಂಡ್‌ಸನ್ (1912), ಬ್ರಿಟನ್ನಿನ ರಾಬರ್ಟ್ ಫಾಲ್ಕನ್ ಸ್ಕಾಟ್ (1912).

ಅಮುಂಡ್‌ಸನ್, ಫ್ರಾಮ್ ಎಂಬ ನೌಕೆಯಲ್ಲಿ ಹೊರಟ. 43 ಮಂದಿ ಪಳಗಿದ ಎಸ್ಕಿಮೋಗಳು, ನಾಲ್ಕು ಶ್ವಾನಬಂಡಿ, ಕುದುರೆಗಳೊಡನೆ ಕ್ವೀನ್ಸ್ ಮೌಡ್ ಪರ್ವತ ಸಾಲಿನ ಮೂಲಕ ಹಾದು 1911 ಡಿಸೆಂಬರ್ 4ರಂದು ದಕ್ಷಿಣ ಧ್ರುವವನ್ನು ಮೆಟ್ಟಿನಿಂತು ಇತಿಹಾಸ ನಿರ್ಮಿಸಿದ. 1912 ಜನವರಿ 17ರಂದು ಸ್ಕಾಟ್ ತನ್ನ ತಂಡದೊಂದಿಗೆ ಅದೇ ಧ್ರುವವನ್ನು ಮೆಟ್ಟಿ ನಿಂತಾಗ ಅಮುಂಡ್‌ಸನ್‌ನ ಹೆಜ್ಜೆ ಗುರುತು ನೋಡಿ ಖಿನ್ನನಾಗಿದ್ದ. ಹಿಂದಿರುಗುವಾಗ ಆಹಾರವೂ ಇಲ್ಲದೆ ಬಿರುಗಾಳಿಯ ಹೊಡೆತಕ್ಕೆ ಸಿಲುಕಿ, ದಣಿದು ತನ್ನ ಸಂಗಡಿಗರೊಂದಿಗೆ ಕೊನೆಯುಸಿರೆಳೆದ. ಅವನ ದಿನಚರಿಯಲ್ಲಿ ಅಮೂಲ್ಯ ಮಾಹಿತಿಗಳು ದೊರೆತವು. ಧ್ರುವವನ್ನು ಮೆಟ್ಟಿ ನಿಲ್ಲುವ ಸ್ಪರ್ಧೆಗೆ ಇದು ತೆರೆ ಎಳೆಯಿತಾದರೂ, ವೈಜ್ಞಾನಿಕ ಅನ್ವೇಷಣೆಗೆ ನವಚೈತನ್ಯವನ್ನು ತಂದಿತು. ಶ್ವಾನಪಡೆ, ಬಂಡಿ, ಪುಟ್ಟ ನೌಕೆಗಳನ್ನು ಅಂಟಾರ್ಕ್‌ಟಿಕ ತಂಡದ ಪರಿಶೋಧನೆಗೆ

ಒಯ್ಯುತ್ತಿದ್ದ ಕಾಲ ಹಿಂದೆ ಸರಿದು, ಈ ಖಂಡದ ಪರಿಶೋಧನೆಗೆ 1929ರಲ್ಲಿ ಅಮೆರಿಕದ ನೌಕಾಪಡೆಯ ಅಡ್ಮಿರಲ್ ರಿಚರ್ಡ್ ಬೈರ್ಡ್, ದಕ್ಷಿಣ ಧ್ರುವವನ್ನು ಮೊತ್ತಮೊದಲಿಗೆ ವಿಮಾನಯಾನದ ಮೂಲಕ ತಲುಪಿದ. ಅನಂತರ ಇವನ ನೇತೃತ್ವದಲ್ಲಿ ನಾಲ್ಕು ಸಾಹಸಯಾನಗಳಾದವು. ಇದರ ಅನಂತರ ಅಂಟಾರ್ಕ್‌ಟಿಕ ಖಂಡದ ವೈಜ್ಞಾನಿಕ ಅಧ್ಯಯನಕ್ಕೆ ಅನೇಕ ದೇಶಗಳು ಮುಂದಾದವು.

**ಅಂತಾರಾಷ್ಟ್ರೀಯ ಭೂಭೌತ ವರ್ಷ:** 1957 ಜುಲೈ 1ರಿಂದ ಪ್ರಾರಂಭವಾಗಿ 1958 ಡಿಸೆಂಬರ್ 31ರವರೆಗಿನ ಅವಧಿಯನ್ನು ಅಂತಾರಾಷ್ಟ್ರೀಯ ಭೂಭೌತ ವರ್ಷ ಎಂಬ ಹೆಸರಿನಲ್ಲಿ ಆಚರಿಸಲು ಜಗತ್ತಿನ ಅನೇಕ ವಿಜ್ಞಾನಿಗಳು ಯೋಜನೆ ರೂಪಿಸಿದರು. ಅಂತಾರಾಷ್ಟ್ರೀಯ ವಿಜ್ಞಾನ ಒಕ್ಕೂಟಗಳ ಮಂಡಳಿಯನ್ನು (ಐ.ಸಿ.ಎಸ್.ಯು) ಸ್ಥಾಪಿಸಿ 40 ದೇಶಗಳನ್ನು ಈ ಅಧ್ಯಯನದಲ್ಲಿ ತೊಡಗಿಸಿಕೊಂಡಿತು. ಖಂಡದ ವ್ಯಾಪಕ ಸಂಶೋಧನಾ ಯೋಜನೆಗಳು ಮೈದಳೆದು ಅಲ್ಲಿ ಅನೇಕ ಶಿಬಿರಗಳನ್ನು ನಿರ್ಮಿಸಲು ಯೋಜಿಸಲಾಯಿತು. ಸಂಪರ್ಕ ಸಾಧನಗಳ ನೆರವು ಪಡೆಯುವುದು, ಹವಾಮಾನ ಕುರಿತು ಖಚಿತ ಮಾಹಿತಿಗಳನ್ನು ಪಡೆಯುವುದು, ಖಂಡದ ಬೆಟ್ಟಗುಡ್ಡಗಳನ್ನು ಸಮೀಕ್ಷೆ ಮಾಡುವುದು ಯೋಜನೆಯ ಮುಖ್ಯ ಗುರಿಯಾಗಿತ್ತು. ಇದಕ್ಕಾಗಿ 12 ದೇಶಗಳು ಮುಂದಾದವು. ಅಂಟಾರ್ಕ್‌ಟಿಕ, ಅದರ ಸುತ್ತಮುತ್ತಲಿನ ಸಣ್ಣಪುಟ್ಟ ದ್ವೀಪಗಳಲ್ಲಿ ಒಟ್ಟು 60 ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ಪೈಕಿ ಅಮೆರಿಕ ಸಂಯುಕ್ತ ಸಂಸ್ಥಾನವೊಂದೇ ಆರು ಸಂಶೋಧನಾ ಕೇಂದ್ರಗಳನ್ನು ತೆರೆಯಿತು. ಆಗ ತೆರೆದ ಮ್ಯಾಕ್ ಮುರ್ಡೋ ಸೌಂಡ್ ಎಂಬ ಕೇಂದ್ರ ಈಗಲೂ ಅಂಟಾರ್ಕ್‌ಟಿಕ ಖಂಡದಲ್ಲಿ ಸ್ಥಾಪಿಸಿರುವ, ಸರ್ವಋತುವಿನಲ್ಲೂ ಕೆಲಸ ಮಾಡುವ ಬಹುದೊಡ್ಡ ಕೇಂದ್ರ, ರಷ್ಯ, ಬ್ರಿಟನ್, ನ್ಯೂಜಿಲೆಂಡ್, ಆಸ್ಟ್ರೇಲಿಯ ಕೂಡ ನೆಲ, ಜಲ, ಬಾನಿಗೆ ಸಂಬಂಧಿಸಿದಂತೆ, ಅತ್ಯುಚ್ಚ ಉಪಕರಣಗಳನ್ನು ಬಳಸಿ ಮಾಹಿತಿಗಳನ್ನು ಸಂಗ್ರಹಿಸಲು ಪ್ರಾರಂಭಿಸಿದುವು. ಈ ಖಂಡಕ್ಕೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಭೂಭೌತ ವರ್ಷದ ಅತ್ಯುನ್ನತ ಸಾಧನೆ ಎಂದರೆ ಇಡೀ ಖಂಡವನ್ನು ಅಡ್ಡಹಾಯಲು ರೂಪಿಸಿದ ಕಾಮನ್‌ವೆಲ್ತ್ ಟ್ರಾನ್ಸ್ ಅಂಟಾರ್ಕ್‌ಟಿಕ್ ಯಾತ್ರೆ. ಇದರ ಮುಂದಾಳುಗಳು ಸರ್ ವಿವಿಯನ್ ಫುಟ್ ಮತ್ತು ಸರ್ ಎಡ್ಮಂಡ್ ಹಿಲೇರಿ. 1957ರಿಂದ ಪ್ರಾರಂಭಿಸಿ ಈ ಯಾತ್ರೆ ಮೂರು ತಿಂಗಳ ಅವಧಿಯಲ್ಲಿ ಮೊತ್ತಮೊದಲ ಬಾರಿಗೆ ಖಂಡವನ್ನು ಅಡ್ಡ ಹಾಯಿತು. 12 ರಾಷ್ಟ್ರಗಳ ಪ್ರತಿನಿಧಿಗಳು ವಾಷಿಂಗ್‌ಟನ್ ಡಿ.ಸಿ.ಯಲ್ಲಿ ಸಭೆ ಸೇರಿ 1959ರಲ್ಲಿ ಅಂಟಾರ್ಕ್‌ಟಿಕ ಖಂಡದ ಒಪ್ಪಂದಕ್ಕೆ ಸಂಬಂಧಿಸಿದಂತೆ ಕರಡು ಸಿದ್ಧಪಡಿಸಿದುವು. ಈ ಒಪ್ಪಂದದಂತೆ ಇಡೀ ಖಂಡವೇ ವೈಜ್ಞಾನಿಕ ಸಂಶೋಧನೆಗಷ್ಟೇ ಮೀಸಲಾಗಿರಬೇಕು. ಅಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸುವಂತಿಲ್ಲ, ಯಾವ ದೇಶವೂ ನೆಲ, ಜಲದ ಮೇಲೆ ಸ್ವಾಮ್ಯ ಘೋಷಿಸುವಂತಿಲ್ಲ. ಅಂಟಾರ್ಕ್‌ಟಿಕದ ಪರಿಸರವನ್ನು ಕಲುಷಿತಗೊಳಿಸುವಂತಿಲ್ಲ. ಈ ಖಂಡದಲ್ಲಿ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದ್ದ ಹನ್ನೆರಡೂ ದೇಶಗಳು 1961ರಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದುವು. ಅನಂತರ 1991ರಲ್ಲಿ ಸ್ಪೇನ್ ದೇಶದ ಮ್ಯಾಡ್ರಿಡ್ ಎಂಬಲ್ಲಿ 39 ದೇಶಗಳ ಪ್ರತಿನಿಧಿಗಳು ಕಲೆತು ಅಂಟಾರ್ಕ್‌ಟಿಕ ಖಂಡದ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಕೆಲವೊಂದು ಷರತ್ತುಗಳಿಗೆ ಸಹಿ ಹಾಕಿದುವು. ಈ ಷರತ್ತಿನಂತೆ ಮುಂದಿನ 50 ವರ್ಷಗಳ ತನಕ ಈ ಖಂಡದಲ್ಲಿ ಯಾವುದೇ ಗಣಿಗಾರಿಕೆಗೆ ಅವಕಾಶವಿಲ್ಲ. ಈ ಷರತ್ತನ್ನು 1998ರ ಏಪ್ರಿಲ್‌ನಿಂದ ಜಾರಿಗೆ ತರಲಾಗಿದೆ. ಭಾರತವು ಈಗ ಅಂಟಾರ್ಕ್‌ಟಿಕ ಕೂಟದ ಸದಸ್ಯತ್ವ ಹೊಂದಿದೆ. ಈಗ ಸ್ಕಾರ್ (ಸೈಟಿಂಫಿಕ್ ಕಮಿಟಿ ಆನ್ ಅಂಟಾರ್ಕ್‌ಟಿಕ್ ರೀಸರ್ಚ್) ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಈ ಸಮಿತಿ ಖಂಡದ ಪರಿಸರ ಸಂರಕ್ಷಣೆಗೆ ಕಟಿಬದ್ಧವಾಗಿ ನಿಂತಿದೆ. ಇಲ್ಲಿನ ಸೀಲ್ ಸಂತತಿಯನ್ನು ಸಂರಕ್ಷಿಸಲು ಕನ್ಸರ್ವೇಷನ್ ಆಫ್ ಅಂಟಾರ್ಕ್‌ಟಿಕ್ ಸೀಲ್ಸ್ ಹೆಸರಿನಲ್ಲಿ ಸಮಿತಿಯು ರಚನೆಯಾಗಿದೆ. ಅಲ್ಲಿನ ಜೀವ ಸಂಪನ್ಮೂಲವನ್ನು ರಕ್ಷಿಸಲು ಕನ್ಸರ್ವೇಷನ್ ಆಫ್ ಅಂಟಾರ್ಕ್‌ಟಿಕ್ ಮೆರೈನ್ ಲಿವಿಂಗ್ ರಿಸೋರ್ಸ್ ಎಂಬ ಸಮಿತಿಯೂ ಅಸ್ತಿತ್ವದಲ್ಲಿದೆ. ಅಂಟಾರ್ಕ್‌ಟಿಕ ಹಾಗೂ ಅದರ ಸುತ್ತಮುತ್ತಲ ದ್ವೀಪ, ಸಾಗರ, ತೀರದಲ್ಲದಿರುವ ಜೈವಿಕ ವೈವಿಧ್ಯದ ಬಗ್ಗೆ ತಪಶೀಲು ಸಮೀಕ್ಷೆಯಾಗಿಲ್ಲ. ಇದನ್ನು ಕೇಂದ್ರ ಗುರಿಯನ್ನಾಗಿರಿಸಿಕೊಂಡು ಬಯೋಮಾಸ್ (ಬಯಾಲಾಜಿಕಲ್ ಇನ್ವೆಸ್ಟಿಗೇಷನ್ ಆಫ್ ಮೆರೈನ್ ಅಂಟಾರ್ಕ್‌ಟಿಕ್ ಸಿಸ್ಟಮ್) ಎಂಬ ಯೋಜನೆಯನ್ನು ಈಗಾಗಲೇ ಕೂಟದ ಸದಸ್ಯ ರಾಷ್ಟ್ರಗಳು ಅನುಷ್ಠಾನಕ್ಕೆ ತಂದಿವೆ. ಮುಂದಿನ ತಲೆಮಾರಿಗೆ ಅಂಟಾರ್ಕ್‌ಟಿಕ ಖಂಡವನ್ನು ಉಳಿಸಲೆಂದೇ ಮ್ಯಾಡ್ರಿಡ್ ಒಪ್ಪಂದದಲ್ಲಿ ಅನೇಕ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಅದರಲ್ಲಿ ಮುಖ್ಯವಾದವು ಈ ಖಂಡದ ಮೇಲೆ ಪರಿಸರ ಬೀರಿರುವ ಪ್ರಭಾವದ ಮೌಲ್ಯಮಾಪನ, ಅಲ್ಲಿನ ಜೀವಿ ವೈವಿಧ್ಯದ ಸಂರಕ್ಷಣೆ, ತ್ಯಾಜ್ಯ ಪದಾರ್ಥಗಳ ವಿಲೇವಾರಿ–ನಿರ್ವಹಣೆ, ಸಾಗರ ಮಾಲಿನ್ಯ ವಿಶೇಷವಾಗಿ ತೈಲ ಸೋರಿಕೆಯಿಂದುಂಟಾಗುವ ಅವಘಡಗಳನ್ನು ಕುರಿತು ತೆಗೆದುಕೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮಗಳು ಸೇರಿವೆ. ಸಂಶೋಧನೆಯ ಹೆಸರಿನಲ್ಲಿ ಅಲ್ಲಿ ಯಾವ ಹೊಸ ಜೀವಿಗಳನ್ನೂ ತರುವಂತಿಲ್ಲ. ಕೆಳಮಟ್ಟದಲ್ಲಿ ವಿಮಾನ ಹಾರಾಟ ಮಾಡಿ ಅಲ್ಲಿನ ಜೀವಿಗಳನ್ನು ಗಲಿಬಿಲಿಗೊಳಿಸುವಂತಿಲ್ಲ. ಏಪ್ರಿಲ್ 2000ದಲ್ಲಿ ಅಂಟಾರ್ಕ್‌ಟಿಕ ಒಪ್ಪಂದಕ್ಕೆ ಕೆಲವೊಂದು ತಿದ್ದುಪಡಿಗಳನ್ನು ತರಲಾಗಿದೆ. ಈ ತಿದ್ದುಪಡಿಯಲ್ಲಿ ಅಂಟಾರ್ಕ್‌ಟಿಕ ತೀರದಲ್ಲಿ ನೌಕೆಗಳ ಚಲನವಲನಗಳ ಮೇಲೆ ನಿಯಂತ್ರಣ ತರಲಾಗಿದೆ. ಹೆಚ್ಚುತ್ತಿರುವ ಪ್ರವಾಸೀ ಒತ್ತಡವನ್ನು ನಿರ್ವಹಿಸಲು ಮತ್ತು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮವನ್ನು ಜಾರಿಗೊಳಿಸಲಾಗಿದೆ.

**ಭಾರತ ಮತ್ತು ಅಂಟಾರ್ಕ್‌ಟಿಕ ಯಾನ:** ಕಳೆದ ಶತಮಾನದ 70ರ ದಶಕದಲ್ಲಿ ಭಾರತ ಎರಡು ಪ್ರಮುಖ ಮೈಲಿಗಲ್ಲುಗಳನ್ನು ಸ್ಥಾಪಿಸಿ ಅಂತಾರಾಷ್ಟ್ರೀಯ ವಲಯದಲ್ಲಿ ಹೆಸರುಗಳಿಸಿತು. ಆರ್ಯಭಟ ಉಪಗ್ರಹವನ್ನು ರೂಪಿಸಿ ಬಾಹ್ಯಾಕಾಶಕ್ಕೆ ಹಾರಿಸಿ ಒಂದು ಹೊಸ ಅಧ್ಯಾಯವನ್ನು ತೆರೆದಿದ್ದು ಒಂದಾದರೆ, ಇನ್ನೊಂದು ಪೋಕ್ರಾನಿನಲ್ಲಿ ಯಶಸ್ವಿಯಾಗಿ ಪರಮಾಣು ಬಾಂಬು ಸ್ಫೋಟಿಸಿದ್ದು. ಭಾರತದ ಈ ಸಾಧನೆ ನಮ್ಮ ವಿಜ್ಞಾನಿಗಳ, ತಂತ್ರಜ್ಞರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಂತಿತ್ತು. ಭಾರತ ತನ್ನ ಸಾಮರ್ಥ್ಯವನ್ನು ಅಂಟಾರ್ಕ್‌ಟಿಕ ಖಂಡದ ಪರಿಶೋಧನೆಯಲ್ಲೂ ತೋರುವಂತೆ ಈ ಸಾಧನೆಗಳು ಹೆಚ್ಚು ನೈತಿಕ ಸ್ಥೈರ್ಯ ಮೂಡಿಸಿದುವು. 1981ರಲ್ಲಿ 21 ಸದಸ್ಯರ ಮೊದಲ ತಂಡ ಅಂಟಾರ್ಕ್‌ಟಿಕ ಖಂಡದಲ್ಲಿ ಹೆಚ್ಚಿನ ಪರಿಶೋಧನೆ ಮಾಡಲು ನಾರ್ವೆ ದೇಶದ ಪೋಲಾರ್ ಸರ್ಕಲ್ ಎಂಬ ನೌಕೆಯಲ್ಲಿ ಹೊರಟಿತು. ಈ ಪರಿಶೋಧನೆಯ ಮುಖ್ಯ ಗುರಿ:

- ಸೂರ್ಯನಿಂದ ಹೊರಹೊಮ್ಮುವ ಆವಿಷ್ಟ ಕಣಗಳು ಭೂಕಾಂತಕ್ಷೇತ್ರದ ಮೇಲೆ ವರ್ತಿಸುವ ಬಗೆಯನ್ನು ಅರಿಯಲು, ಆ ಮೂಲಕ ನಮ್ಮ ವಾತಾವರಣದ ಭೌತ ವಿದ್ಯಮಾನವನ್ನು ದಾಖಲಿಸಲು ಅಂಟಾರ್ಕ್‌ಟಿಕ ಅತ್ಯಂತ ಪ್ರಶಸ್ತವಾದ ನೆಲೆ.
- ಇಡೀ ಭೂಗೋಳದ ಉಷ್ಣತೆಯ ಆಯವ್ಯಯವನ್ನು ನಿರ್ಧರಿಸುವುದು ಎರಡು ಧ್ರುವಗಳೇ. ವಾಯುಗೋಳದಲ್ಲಿ ಉಷ್ಣತೆಯ ಸಾಗಣೆಯಾಗುವುದರಿಂದ ಸಾಗರದಿಂದ ನೆಲಕ್ಕೆ, ನೆಲದಿಂದ ಸಾಗರಕ್ಕೆ ಹರಿಯುವಾಗ ವಾತಾವರಣದಲ್ಲಿ ಅದು ಉದ್ದ ತರಂಗಗಳಾಗಿ ಹರಿಯುತ್ತದೆ. ಇದರ ಅಧ್ಯಯನದಿಂದ ಭಾರತ ಉಪಖಂಡದ ವಾಯುಗೋಳದ ಮೇಲೆ ಅಂಟಾರ್ಕ್‌ಟಿಕದ ಪ್ರಭಾವವನ್ನು ಅರಿಯಲು ನೆರವಾಗುತ್ತದೆ.
- ಹಿಂದೂ ಮಹಾಸಾಗರ, ಅಟ್ಲಾಂಟಿಕ್ ಸಾಗರ, ಪೆಸಿಫಿಕ್ ಸಾಗರ, ಅಂಟಾರ್ಕ್‌ಟಿಕದಲ್ಲಿ ಸಂಗಮವಾಗುತ್ತವೆ. ಆಗ ಅದು ದಕ್ಷಿಣ ಸಾಗರ ಎನ್ನಿಸಿಕೊಳ್ಳುತ್ತದೆ. ಇಲ್ಲಿ ಶೀತ ಜಲ ಮತ್ತು ಉಷ್ಣ ಜಲಗಳ ವಿನಿಮಯವಾಗುತ್ತದೆ. ನಮ್ಮ ದೇಶದ ಮಾನ್ಸೂನ್ ಮೇಲೆ ಇದರ ದಟ್ಟ ಪ್ರಭಾವವಿದೆ.
- ಅಂಟಾರ್ಕ್‌ಟಿಕ ಇಡೀ ಭೂಗೋಳದಲ್ಲೇ ಅತ್ಯಂತ ಎತ್ತರವಾದ ಖಂಡ. ದಕ್ಷಿಣಾಕಾಶ ವೀಕ್ಷಿಸಲು, ಪರಿಸರದ ಕಲುಷಿತತೆಯನ್ನು ಅಧ್ಯಯನ ಮಾಡಲು ಇದು ನಿಸರ್ಗವೇ ಒದಗಿಸಿರುವ ದೊಡ್ಡ ವೇದಿಕೆ.
- ಅಂಟಾರ್ಕ್‌ಟಿಕ ಖಂಡದಲ್ಲಿ ಜಗತ್ತಿನ ಶೇ. 90 ಭಾಗದ ಸಿಹಿನೀರು ಮಂಜುಗಡ್ಡೆಯ ರೂಪದಲ್ಲಿದೆ. ವಾರ್ಷಿಕವಾಗಿ ಹಿಮಗಡ್ಡೆ ಎಷ್ಟು ಕರಗುತ್ತದೆ ಎನ್ನುವುದು ಹಿಂದೂ ಮಹಾಸಾಗರದ ಮೇಲೆ ನೇರ ಪ್ರಭಾವ ಬೀರುತ್ತದೆ. ಇದರ ಅಧ್ಯಯನವನ್ನು ಹಿಮಾಲಯದ ಹಿಮನದಿಗಳಿಗೂ ಅನ್ವಯಿಸಿ, ಏರುತ್ತಿರುವ ಜಾಗತಿಕ ಉಷ್ಣದ ಪ್ರಭಾವವನ್ನು ಅಳೆಯಬಹುದು.

ಈ ಖಂಡದಲ್ಲಿ ಜೈವಿಕ ವೈವಿಧ್ಯ ಹೇರಳವಾಗಿಲ್ಲದಿದ್ದರೂ ಕೆಲವೇ ಜೀವಿಗಳು ಸಮೃದ್ಧವಾಗಿ ಅಭಿವರ್ಧಿಸಿವೆ. ಅಲ್ಲಿನ ಜೀವಿ ಸಂಕುಲಕ್ಕೆ ಆಹಾರದ ಮೊದಲ ಕೊಂಡಿಯಾಗಿರುವ ಕ್ರಿಲ್ ಎಂಬ ಸೀಗಡಿ ಅಧ್ಯಯನ ಜೀವ ವಿಜ್ಞಾನದ ಅನೇಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ.

ಸು. 225 ಮಿಲಿಯನ್ ವರ್ಷಗಳ ಹಿಂದೆ ಆಫ್ರಿಕ, ಅಂಟಾರ್ಕ್‌ಟಿಕ, ಆಸ್ಟ್ರೇಲಿಯ, ಇಂಡಿಯ ಗೊಂಡ್ವಾನ ಖಂಡವೆಂಬ ಒಂದೇ ಒಂದು ಖಂಡವಾಗಿ ಒಂದುಗೂಡಿದ್ದವು. ಅನಂತರ ಒಡೆದು ಖಂಡಗಳಾಗಿ ಚಲಿಸಿ ಈಗಿನ ನೆಲೆ ತಲಪಿದುವು. ಭಾರತ ಮತ್ತು ಅಂಟಾರ್ಕ್‌ಟಿಕದ ಭೂವಿಜ್ಞಾನದಲ್ಲಿ ಸರ್ವಸಾಮಾನ್ಯವಾದ ಅನೇಕ ಅಂಶಗಳಿವೆ. ಖಂಡಗಳ ಉಗಮ, ವಿಕಾಸವನ್ನರಿಯಲು ಈ ನಿಟ್ಟಿನ ಅಧ್ಯಯನ ಹೊಸ ಅಂಶಗಳನ್ನು ಬೆಳಕಿಗೆ ತರುತ್ತದೆ.

ಅಂಟಾರ್ಕ್‌ಟಿಕ ಖಂಡದ ಅನ್ವೇಷಣೆಗೆ ಹಿಂದೆ ತೊಡಗಿದ್ದ ಅನೇಕ ದೇಶಗಳು ಆ ಖಂಡದ ಖನಿಜ ಸಂಪನ್ಮೂಲದ ಮೇಲೆ ಕಣ್ಣಿಟ್ಟಿದ್ದವು. ವಾಸ್ತವವಾಗಿ ದೊಡ್ಡ ಪ್ರಮಾಣದ ನಿಕ್ಷೇಪಗಳು ಈವರೆಗೆ ವರದಿಯಾಗಿಲ್ಲ. ಇದರ ಮೌಲ್ಯಮಾಪನೆ ಮಾಡಲು ಕೂಡ ಅಂಟಾರ್ಕ್‌ಟಿಕ ಯಾತ್ರೆಗೆ ಭಾರತ ತೊಡಗಿದುದರ ಉದ್ದೇಶಗಳಲ್ಲೊಂದು.

ಇಡೀ ಯೋಜನೆಯ ನಿರ್ವಹಣೆಯನ್ನು ಸಾಗರಾಭಿವೃದ್ಧಿ ಇಲಾಖೆ ಕೈಗೊಂಡಿತು. ಕೇವಲ ಮೂರು ತಿಂಗಳ ಅವಧಿಯಲ್ಲಿ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು ದೇಶದ ಬೇರೆ ಬೇರೆ ವಿಜ್ಞಾನ ವಿಭಾಗದ ತಜ್ಞರು ಈ ಯಾತ್ರೆಯಲ್ಲಿ ಪಾಲ್ಗೊಂಡರು. 1981ರ ಡಿಸೆಂಬರ್ 6ರಂದು ಎಸ್.ಜೆಡ್.ಕಾಸಿಂ ಅವರ ನೇತೃತ್ವದಲ್ಲಿ 21 ಮಂದಿ ಸದಸ್ಯರು ಪೋಲಾರ್ ಸರ್ಕಲ್ ನೌಕೆಯಲ್ಲಿ ಗೋವ ಬಂದರನ್ನು ಬಿಟ್ಟು ಮಾರಿಷಸ್ ದ್ವೀಪದ ಮೂಲಕ ಅಂಟಾರ್ಕ್‌ಟಿಕದತ್ತ ಪಯಣ ಮಾಡಿದರು. ಅಂಟಾರ್ಕ್‌ಟಿಕ ತಲಪಲು ಕ್ರಮಿಸಬೇಕಾಗಿದ್ದ ಒಟ್ಟು ದೂರ 11,000 ಕಿಮೀ. ಈ ತಂಡದಲ್ಲಿ ಸಾಗರ ವಿಜ್ಞಾನಿಗಳು, ಭೂವಿಜ್ಞಾನಿಗಳು, ಪವನವಿಜ್ಞಾನಿಗಳು, ಭೂಭೌತ ವಿಜ್ಞಾನಿಗಳು, ರೇಡಿಯೋ ಸಂವಹನ ತಜ್ಞರು ಮತ್ತು ನೌಕಾಪಡೆಯ ಸಿಬ್ಬಂದಿ ಇತ್ತು. ಡಿಸೆಂಬರ್ 16ರಂದು ತಂಡ ಮಾರಿಷಸ್

ದ್ವೀಪ ತಲಪಿತು. ಡಿಸೆಂಬರ್ 22ರಂದು ಈ ದ್ವೀಪದಿಂದ ಹೊರಟು ಸಾಗರದ ಪ್ರಕ್ಷುಬ್ಧ ಅಕ್ಷಾಂಶಗಳಾದ 48 ಡಿಗ್ರಿ ಮತ್ತು 60 ಡಿಗ್ರಿ ದಾಟುವಾಗ 49 ಮೀಟರು ಉದ್ದದ 500 ಟನ್ನು ಭಾರದ ಪೋಲಾರ್ ಸರ್ಕಲ್ ನೌಕೆ ಸಾಕಷ್ಟು ಓಲಾಟವನ್ನು ತೋರಿಸಿತ್ತು. ಹತ್ತಿರದಲ್ಲಿ ಎಲ್ಲೂ ನೆಲವಿರದ ಕಾರಣ ದಕ್ಷಿಣ ಸಾಗರದಲ್ಲಿ ಏಳುವ ದೊಡ್ಡ ಅಲೆಗಳಿಗೆ ತಡೆಯೇ ಇರುವುದಿಲ್ಲ. ಮೂರೂ ಸಾಗರಗಳು ಒಂದುಗೂಡುವ ಜಾಗ ಬಹು ದೊಡ್ಡ ಅಲೆಗಳನ್ನು ಏಳಿಸುತ್ತದೆ. 55 ಡಿಗ್ರಿ ಅಕ್ಷಾಂಶದಿಂದ 60 ಡಿಗ್ರಿ ಅಕ್ಷಾಂಶ ತಲಪುವ ಹೊತ್ತಿಗೆ ದಕ್ಷಿಣ ಸಾಗರದಲ್ಲಿ ದೊಡ್ಡ ದೊಡ್ಡ ಬೆಟ್ಟದಂತೆ ಕಾಣುವ ಬರ್ಫದ ರಾಶಿ ತೇಲಿತೇಲಿ ಬರುತ್ತದೆ. ಲ್ಯಾಟಿನ್ ಅಮೆರಿಕದ ಭಾಗಕ್ಕಿಂತ ಭಾರತದ ಕಡೆಗಿರುವ ಸಾಗರ ಭಾಗದಲ್ಲಿ ತೇಲುವ ಬರ್ಫದ ತುಂಡುಗಳ ಸಂಖ್ಯೆ ಹೆಚ್ಚು. ಎಂದೇ ಹಿಂದೆ ಬಹುತೇಕ ತಂಡಗಳು ಲ್ಯಾಟಿನ್ ಅಮೆರಿಕ ಭಾಗದ ದಕ್ಷಿಣ ಸಾಗರವನ್ನೇ ತಮ್ಮ ಯಾನಕ್ಕಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದವು. ಅಲ್ಲದೆ ಅಲ್ಲಿಂದ ಅಂಟಾರ್ಕ್‌ಟಿಕ ತಲಪಲು ತೆಗೆದುಕೊಳ್ಳುತ್ತಿದ್ದ ಕಾಲವೂ ಕಡಿಮೆ.

ದೊಡ್ಡ ದೊಡ್ಡ ಬರ್ಫಗಳನ್ನು ತುಂಡರಿಸುವ ಹಲ್ಲುಗಳಿಂದ ಸಜ್ಜಾದ ಪೋಲಾರ್ ಸರ್ಕಲ್ ನೌಕೆ ಜನವರಿ 9, 1982ರಂದು ಭಾರತೀಯ ಕಾಲಮಾನ 00.30 ಗಂಟೆಗೆ ಅಂಟಾರ್ಕ್‌ಟಿಕ ಖಂಡದ ತೀರವನ್ನು ತಲಪಿತು. ಈ ಭಾಗ ಕ್ವೀನ್ ಮೌಡ್ ಲ್ಯಾಂಡ್ ಎಂಬ ಹೆಸರನ್ನು ಪಡೆದಿದೆ. ಒಡನೆಯೇ ತಂಡ ಕಾರ್ಯೋನ್ಮುಖವಾಯಿತು. ಹಿಮ, ಹಿಮದ ಉಷ್ಣ ವಿತರಣೆ, ಸ್ಫಟಿಕ ವಿನ್ಯಾಸ ಮುಂತಾದವನ್ನು ಅರಿಯಲು ಹಿಮ ವಿಜ್ಞಾನಿಗಳು ಅಧ್ಯಯನ ಕೈಗೊಂಡರು. ಭೂವಿಜ್ಞಾನಿಗಳು ಅಲ್ಲಿನ ಶಿಲಾಮಾದರಿಗಳನ್ನು ಸಂಗ್ರಹಿಸಿದರು. ಪವನ ವಿಜ್ಞಾನಿಗಳು ಹವಾಮಾನ ಅಧ್ಯಯನ ಮಾಡಲು ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿದರು. ರೇಡಿಯೋ ತರಂಗಗಳನ್ನು ಅಲ್ಲಿನ ಬಾನು ಹೇಗೆ ಸಂವಹಿಸುತ್ತದೆ ಎಂಬುದನ್ನು ಅರಿಯಲು ಅನೇಕ ಪರೀಕ್ಷೆಗಳನ್ನು ಮಾಡಲಾಯಿತು. ಜೀವ ವಿಜ್ಞಾನಿಗಳು ಅಂಟಾರ್ಕ್‌ಟಿಕದ ಜೀವಿಗಳ ಆಹಾರ ಮತ್ತು ಪಚನ ಕ್ರಿಯೆ ಕುರಿತಂತೆ ಅನೇಕ ಶೋಧಗಳನ್ನು ಕೈಗೊಂಡರು. ಹೆಲಿಕಾಪ್ಟರ್ ಮತ್ತು ಹಿಮದ ಸ್ಕೂಟರುಗಳನ್ನು ಬಳಸಿ ತಂಡ ಸಜ್ಜಿತವಾಗಿ ಅಲ್ಲಿನ ಭೂಭಾಗವನ್ನು ಸಮೀಕ್ಷಿಸಿತು. ಎರಡು ಗುಡ್ಡಗಳ ನಡುವೆ ನೆಲೆಯಾಗಿದ್ದ ಸಿಹಿನೀರಿನ ಸರೋವರವನ್ನು ಅಧ್ಯಯನಮಾಡಿತು. ಮೊತ್ತಮೊದಲ ಬಾರಿಗೆ ಸ್ವಯಂಚಾಲಿತ ಹವಾಗುಣ ಅಧ್ಯಯನ ಕೇಂದ್ರವನ್ನು ತಂಡ ಸ್ಥಾಪಿಸಿತು. ಭಾರತೀಯ ತಂಡ ಸ್ಥಾಪಿಸಿದ ಮೊದಲ ಸಂಶೋಧನಾ ಕೇಂದ್ರದ ಹೆಸರು ದಕ್ಷಿಣ ಗಂಗೋತ್ರಿ ಇದು ನಾರು ಗಾಜಿನಿಂದ (ಫೈಬರ್ ಗ್ಲಾಸ್) ಕಟ್ಟಿದ ಕೇಂದ್ರ. ಇದರ ನೆಲೆ 70º 45' 12º 962" ದ.: 11º 38'13.618" ಪೂ. ಅಂಟಾರ್ಕ್‌ಟಿಕ ಖಂಡದಲ್ಲಿ ಭೌಗೋಳಿಕ ನೆಲೆಯನ್ನು ಗುರುತಿಸಲು ಯಾವುದೇ ನಿರ್ದೇಶನ ಬಿಂದುಗಳನ್ನು ಬಳಸಿಕೊಳ್ಳಲು ಸಾಧ್ಯವಿಲ್ಲದುದರಿಂದ ಉಪಗ್ರಹಗಳ ನೆರವು ಪಡೆದು ಸ್ಥಾನ ನಿರ್ದೇಶನಗಳ ನೆರವು ಪಡೆಯಬೇಕಾಗುತ್ತದೆ.

ಮೊದಲ ಯಾನದಲ್ಲೇ ಭಾರತದ ವಿಜ್ಞಾನಿಗಳು ಅಂಟಾರ್ಕ್‌ಟಿಕ ಖಂಡವನ್ನು ತಲಪುವ ಮುನ್ನ ವ್ಯಾಪಕವಾದ ಸಾಗರಾಧ್ಯಯನವನ್ನು ಮಾಡಿ, ಸಾಗರ ತಳದಿಂದ ಎದ್ದಿರುವ ಒಂದು ಪರ್ವತ ಶಾಖೆಯನ್ನು ಪತ್ತೆಹಚ್ಚಿದ್ದಾರೆ. ಇದರ ನೆಲೆ 53º 39.79' ದ. ಮತ್ತು 47º 55.82' ಪೂ. ಸಾಗರ ತಳದ 4,500 ಮೀಟರು ಆಳದಿಂದ ಇದು 1200 ಮೀಟರು ಎತ್ತರಕ್ಕೆ ವಿಸ್ತರಿಸಿದೆ. ಇದಕ್ಕೆ ಅನೇಕ ಶೃಂಗಗಳಿವೆ. ಒಂದು ಶೃಂಗ ಸಾಗರದ ಮೇಲ್ಮೈನಿಂದ ಕೇವಲ 880 ಮೀಟರ್ ಆಳದಲ್ಲಿದೆ. ಸುತ್ತಳತೆ 134 ಕಿಮೀ. ಜ್ವಾಲಾಮುಖಿಯಿಂದ ಉಂಟಾದ ಪರ್ವತವೆಂದು ಭಾವಿಸಲಾಗಿದೆ. ಇದನ್ನು ಇಂದಿರಾ ಮೌಂಟ್ ಎಂದು ಕರೆದಿದ್ದಾರೆ.

ಮೊದಲನೆಯ ಅಂಟಾರ್ಕ್‌ಟಿಕ ಯಾತ್ರೆಯ ಯಶಸ್ಸಿನ ನಂತರ ಭಾರತ ನಿರಂತರವಾಗಿ ಪ್ರತಿವರ್ಷವೂ ಸಂಶೋಧನಾ ತಂಡವನ್ನು ಅಲ್ಲಿಗೆ ಕಳಿಸುತ್ತಿದೆ. ಮೊದಲ ಯಾತ್ರೆಯಲ್ಲಿ ನಿರ್ಮಿಸಿದ ದಕ್ಷಿಣ ಗಂಗೋತ್ರಿ ಕೇಂದ್ರ ಈಗ ದಾಸ್ತಾನಿಗಷ್ಟೇ ಬಳಕೆಯಾಗುತ್ತದೆ. ಎರಡನೆಯ ಸಂಶೋಧನಾ ಕೇಂದ್ರ ಮೈತ್ರಿ, ಶಿರ್ಮಾಚರ್ ಓಯಸಿಸ್ ಮೇಲೆ ನಿರ್ಮಾಣವಾಗಿದೆ. ಅಕ್ಷಾಂಶ 70º 45' 53" ರೇಖಾಂಶ 11º 44' 03". ಇಲ್ಲಿ ಹೆಚ್ಚು ಹಿಮ ಸಂಚಯವಾಗುವುದಿಲ್ಲ. ವರ್ಷವಿಡೀ ವೈಜ್ಞಾನಿಕ ಸಂಶೋಧನೆಗೆ ಬಳಸಿಕೊಳ್ಳಬಹುದು. ಈ ಕೇಂದ್ರವನ್ನು 1988–89ರಲ್ಲಿ ನಿರ್ಮಿಸಲಾಯಿತು. ಇದು ಸರ್ವಋತು ಕೇಂದ್ರ. 26 ಮಂದಿ ಒಟ್ಟಿಗೆ ಇರಲು ಅನುಕೂಲ ಕಲ್ಪಿಸಲಾಗಿದೆ. ಈ ಕೇಂದ್ರದಿಂದ 255 ಮೀಟರ್ ದೂರವಿರುವ ಪ್ರಿಯದರ್ಶಿನಿ ಸರೋವರದಿಂದ ನೀರಿನ ಪೂರೈಕೆ ಮಾಡಿಕೊಳ್ಳುವ ವ್ಯವಸ್ಥೆ ಇದೆ. ಉಷ್ಣತೆ –40 ಡಿಗ್ರಿ ತಲಪಿದರೂ ನೀರಿನ ಪೂರೈಕೆಗೆ ಬಾಧಕವಾಗದಂತೆ ಕಾಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಭಾರತದ ಮೊದಲನೆಯ ಅಂಟಾರ್ಕ್‌ಟಿಕ ಯಾತ್ರೆಯ ನಂತರ ಇದೀಗ 23 ತಂಡಗಳು (2004) ಈ ಖಂಡದಲ್ಲಿ ಕೆಲಸಮಾಡಿವೆ. ಇಂದೂ ಕೂಡ ಕೆಲಸ ಮಾಡುತ್ತಿವೆ. ಮೊದಲನೇ ತಂಡದ ಸಾಹಸ ಯಾತ್ರೆಯ ಯಶಸ್ಸು ಭಾರತಕ್ಕೆ ಅಂಟಾರ್ಕ್‌ಟಿಕ ಖಂಡದ ಸಲಹಾ ಮಂಡಳಿಯ ಸದಸ್ಯತ್ವವನ್ನು ಗಳಿಸಿಕೊಟ್ಟಿತು. ಈ ಖಂಡದಲ್ಲಿ ಗಳಿಸಿದ ಅನುಭವದ ಹಿನ್ನೆಲೆಯಲ್ಲಿ ಭಾರತದ ತಂಡ ವೆಡೆಲ್ ಸಮುದ್ರದ ಪರಿಶೋಧನೆಯಲ್ಲೂ ಯಶಸ್ಸು ಗಳಿಸಿತು. ಇದೊಂದು ಅತಿ ದುರ್ಗಮವಾದ ಭಾಗ. 1823ರಲ್ಲಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಇಂಗ್ಲಿಷ್ ಸಾಗರಯಾನಿ ಜೇಮ್ಸ್ ವೆಡೆಲ್ ಈ ಭಾಗವನ್ನು ಹಾಯ್ದಿದ್ದ.

ಭಾರತದ ಸಾಗರಾಧ್ಯಯನ ಸಂಸ್ಥೆ ನಿರಂತರ ಸಂಶೋಧನೆಗೆ ಭಾರತದಲ್ಲಿ ಅಂಟಾರ್ಕ್‌ಟಿಕ ಅಧ್ಯಯನ ಕೇಂದ್ರವೊಂದನ್ನು ತೆಗೆದಿದೆ (ಇದರ ಹೆಸರನ್ನು ಅಂಟಾರ್ಕ್‌ಟಿಕ ಮತ್ತು ಸಾಗರ ಸಂಶೋಧನೆಯ ರಾಷ್ಟ್ರೀಯ ಕೇಂದ್ರ ಎಂದು ಬದಲಾಯಿಸಿದೆ). ಮೈತ್ರಿ ಕೇಂದ್ರದ ಸುತ್ತಮುತ್ತ ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಅತ್ಯುತ್ತಮ ತಂತ್ರಜ್ಞಾನ ಅನ್ವಯಿಸಿ ಕೈಗೊಂಡ ಭಾರತದ ತಂಡದ ವಿಜ್ಞಾನಿಗಳ ಶೋಧನೆ ಹಿಮಾಲಯದ ಉನ್ನತ ಭಾಗಗಳಲ್ಲಿ ಹಿಮದ ಚಲನೆಯನ್ನು ಕುರಿತು ಮಾಡುವ ಅಧ್ಯಯನಕ್ಕೆ ಹೆಚ್ಚು ನೆರವಾಗಲಿದೆ. ದಕ್ಷಿಣ ಸಾಗರ ಕುಗ್ಗುವುದರ ಬದಲು ವ್ಯಾಕೋಚಿಸುತ್ತಿದೆ ಎಂದು ಭಾರತದ ವಿಜ್ಞಾನಿಗಳು ಅಮೂಲ್ಯ ಮಾಹಿತಿ ಒದಗಿಸಿದ್ದಾರೆ. 2007–08ರಲ್ಲಿ ಯೋಜಿಸಲಾಗಿರುವ ಅಂತಾರಾಷ್ಟ್ರೀಯ ಧ್ರುವ ವರ್ಷದ ಆಚರಣೆಗೆ ಸಂಬಂಧಿಸಿದಂತೆ ಮೂಲ ಸಂಶೋಧನೆ ಕೈಗೊಳ್ಳಲು ಭಾರತ ಅವಕಾಶವನ್ನು ಪಡೆದಿದೆ.

**ಅಂಟಾರ್ಕ್‌ಟಿಕ ಪ್ರವಾಸ:** ಸದ್ಯದಲ್ಲಿ ಅಂಟಾರ್ಕ್‌ಟಿಕ ಖಂಡಕ್ಕೆ ಪ್ರವಾಸಿಗಳಿಂದಾಗಿ ಭಾರೀ ಒತ್ತಡ ಏರ್ಪಟ್ಟಿದೆ. ದಕ್ಷಿಣ ಧ್ರುವದ ನೆತ್ತಿಯ ಮೇಲೆ ವಿಮಾನ, ಹೆಲಿಕಾಪ್ಟರುಗಳಲ್ಲಿ ಪ್ರವಾಸಿಗಳ ದಂಡು ಬರುತ್ತಿದೆ. ಅಲ್ಲಿನ ಪರಿಸರವನ್ನು ಕಲುಷಿತಗೊಳಿಸಬಹುದೆಂಬ ಭಯ ಪರಿಸರ ಪ್ರೇಮಿಗಳಲ್ಲಿ ಮೂಡಿದೆ. ನ್ಯೂಜಿಲೆಂಡ್ ಮೊದಲಿನಿಂದಲೂ ಅಂಟಾರ್ಕ್‌ಟಿಕದ ಸಂಶೋಧನೆಯಲ್ಲಿ ತೊಡಗಿದ ದೇಶ. ಜೊತೆಗೆ ಹಿಂದೆ ಆ ಖಂಡದ ಕೆಲವು ಭಾಗಗಳ ಸ್ವಾಮ್ಯವನ್ನು ಘೋಷಿಸಿತ್ತು. ಈಗ ಅಂಥ ಘೋಷಣೆ ಊರ್ಜಿತವಲ್ಲ. ಆದರೂ ವಿಕ್ಟೋರಿಯ ಲ್ಯಾಂಡ್ ಎಂಬ ಜಾಗದಲ್ಲಿ ಆ ದೇಶ ಹಿಂದೆ ಸ್ಥಾಪಿಸಿದ್ದ ಸ್ಕಾಟ್ ಬೇಸ್ ಎಂಬ ಶಿಬಿರ ಕ್ರಿಯಾಶೀಲ ಕೇಂದ್ರಗಳಲ್ಲೊಂದು. ಈ ಶಿಬಿರದ ಹತ್ತಿರವೇ ಅಮೆರಿಕದ ಅತ್ಯಂತ ದೊಡ್ಡ ಕೇಂದ್ರವಾದ ಮ್ಯಾಕ್ ಮುರ್ಡೋ ಸೌಂಡ್ ಎಂಬ ಕೇಂದ್ರವಿದೆ. ಪ್ರತಿ ಬೇಸಗೆಯಲ್ಲೂ ಸುಮಾರು 1,000 ಮಂದಿ ಇಲ್ಲಿ ಸಂಶೋಧನೆಯಲ್ಲಿ ನಿರತರಾಗಿರುತ್ತಾರೆ. ಚಳಿಗಾಲದ ಶಿಬಿರಕ್ಕೆಂದೇ 200 ಮಂದಿ ಉಳಿದುಕೊಳ್ಳುತ್ತಾರೆ. ಹತ್ತಿರದಲ್ಲೇ ಮೌಂಟ್ ಎರಬಸ್ ಎಂಬ ಜ್ವಾಲಾಮುಖಿ ಇದೆ. ಇದನ್ನು ಪ್ರವಾಸಿಗರಿಗೆ ತೋರಿಸಲೆಂದು ನ್ಯೂಜಿಲೆಂಡ್ ಪ್ರತಿವರ್ಷವೂ ಕ್ರೈಸ್ಟ್ ಚರ್ಚ್‌ನಿಂದ ವಿಮಾನಯಾನ ಕಲ್ಪಿಸಿದೆ. ಇಲ್ಲಿಗೆ ಸಮೀಪದ ಟೆರ್ರಾ ನೋವ ಕೊಲ್ಲಿ ಎಂಬಲ್ಲಿ ಇಟಲಿ ಅನೇಕ ರೆಸ್ಟೋರಾಂಟುಗಳನ್ನು ನಿರ್ಮಿಸಿ ಪ್ರವಾಸಿಗರನ್ನು ಆಕರ್ಷಿಸಿದೆ. ಇಲ್ಲಿಂದ ಮೌಂಟ್ ಮೆಲ್ಬೋರನ್ ಎಂಬ ಜ್ವಾಲಾಮುಖಿಯನ್ನು ನೋಡಬಹುದು. ದಕ್ಷಿಣ ಅಮೆರಿಕದ ಚಿಲಿಯ ದಕ್ಷಿಣ ತುದಿಯಿಂದ ಅಂಟಾರ್ಕ್‌ಟಿಕದ ಪರ್ಯಾಯ ದ್ವೀಪಕ್ಕೆ ಯಾತ್ರಿಕರನ್ನು ಒಯ್ಯುತ್ತದೆ. ಮುಂದಿನ ದಿನಗಳಲ್ಲಿ ದಕ್ಷಿಣ ಧ್ರುವಕ್ಕೆ ಯಾತ್ರಿಕರನ್ನು ಒಯ್ಯುವ ಯೋಜನೆ ರೂಪಿಸಿದೆ. ಸದ್ಯದಲ್ಲಿ ಈ ಯಾತ್ರೆಗೆ ತಗಲುವ ತಲಾ ವೆಚ್ಚ 33,000 ಅಮೆರಿಕನ್ ಡಾಲರ್. ಪ್ರತಿವರ್ಷ 21,000 ಮಂದಿ ಪ್ರವಾಸಿಗರು ಅಂಟಾರ್ಕ್‌ಟಿಕ ಖಂಡದ ಸುತ್ತಣ ದ್ವೀಪಗಳಿಗೆ ಬರುತ್ತಾರೆ. ಪೆಂಗ್ವಿನ್, ಸೀಲ್ ಮತ್ತು ತಿಮಿಂಗಿಲಗಳನ್ನು ನೋಡುವ ಅವಕಾಶಗಳನ್ನು ಪಡೆಯುತ್ತಾರೆ. ಈ ಹಿನ್ನೆಲೆಯಲ್ಲಿ ಯಾತ್ರಿಗಳನ್ನು ಪ್ರತಿಬಂಧಿಸಲು, ಅಲ್ಲಿನ ಪರಿಸರ ಹಾಳಾಗದಂತೆ ನೋಡಿಕೊಳ್ಳಲು ಗ್ರೀನ್‌ಪೀಸ್ ಸದಸ್ಯರು ಅಂಟಾರ್ಕ್‌ಟಿಕ ಕೂಟದ ಸದಸ್ಯ ದೇಶದ ಮೇಲೆ ಒತ್ತಡ ತಂದಿದ್ದಾರೆ.

**ಜಾಗತಿಕ ಅಧ್ಯಯನ:** ಸದ್ಯ 39 ದೇಶಗಳು ಅಂಟಾರ್ಕ್‌ಟಿಕ ಖಂಡದ ಅಧ್ಯಯನದಲ್ಲಿ ತೊಡಗಿವೆ. ಪ್ರತಿವರ್ಷವೂ ಈ ಖಂಡ ಕುರಿತು ಅನೇಕ ಹೊಸ ಅಂಶಗಳು ಬೆಳಕಿಗೆ ಬರುತ್ತಿವೆ. ಖಂಡದ ಹಿಮದ ಅಧ್ಯಯನ, ಪವನವಿಜ್ಞಾನ, ಭೂಕಾಂತತ್ವ, ಭೂಕಂಪನ ವಿಜ್ಞಾನ, ಅಯಾನೋಗೋಳದ ಭೌತವಿಜ್ಞಾನ ಮುಂತಾದವನ್ನು ಕುರಿತಂತೆ ಮಾಹಿತಿಗಳನ್ನು ಪಡೆಯಲು ಇಲ್ಲಿನ ಕಾಯಂ ಪರಿಶೋಧನಾ ಕೇಂದ್ರಗಳು ಸರ್ವಋತುವಿನಲ್ಲೂ ಕೆಲಸಮಾಡುತ್ತವೆ. ಹಾಗೆಯೇ ಮುಕ್ತವಾಗಿ ವೈಜ್ಞಾನಿಕ ಮಾಹಿತಿಗಳನ್ನೂ ಹಂಚಿಕೊಳ್ಳುತ್ತವೆ. ಅಂಟಾರ್ಕ್‌ಟಿಕ ಖಂಡದ ಸುತ್ತಣ ದಕ್ಷಿಣ ಸಾಗರದಲ್ಲಿರುವ ಸಮೃದ್ಧ ಪೋಷಕಗಳ ಬಗ್ಗೆ ಅನೇಕ ಕೇಂದ್ರಗಳು ಆಸಕ್ತಿ ತಳೆದಿವೆ. ಈ ನೀರಿನಲ್ಲಿರುವ ಮೀನುಗಳ ರಕ್ತದಲ್ಲಿ ಪ್ರತಿಶೀತಲ ಅಂಶವಿದ್ದು ಚಳಿಗಾಲದಲ್ಲಿ ಅತ್ಯಂತ ಶೈತ್ಯವನ್ನು ನಿಭಾಯಿಸುವುದರ ಗುಟ್ಟನ್ನು ಜೀವ ವಿಜ್ಞಾನಿಗಳು ಅರಿತಿದ್ದಾರೆ. ಪೆಂಗ್ವಿನ್, ಸೀಲ್, ಕ್ರಿಲ್ ಕುರಿತು ಈಗ ಮಾಡಿರುವ ಅಧ್ಯಯನ ಅವುಗಳ ಜೀವಿ ಪರಿಸ್ಥಿತಿಯ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ಒದಗಿಸಿದೆ. ದಕ್ಷಿಣ ಸಾಗರದ ಆಹಾರದ ಮೊದಲ ಕೊಂಡಿ ಎನಿಸಿರುವ ಕ್ರಿಲ್ ಎಂಬ ಸೀಗಡಿಗಳ ಸಂತಾನೋತ್ಪತ್ತಿಯನ್ನು ಕುರಿತು ಮಾಡಿರುವ ಅಧ್ಯಯನಗಳು ಅವುಗಳನ್ನು ಹೇಗೆ ಬೆಳೆಸಬೇಕೆಂಬುದರ ಬಗ್ಗೆ ಹೊಸ ಪರಿಕಲ್ಪನೆ ಮಾಡಲು ಅವಕಾಶ ನೀಡಿವೆ.

ಭೂವಿಜ್ಞಾನಿಗಳು ಈ ಖಂಡದ ಬಹುತೇಕ ಶಿಲೆಗಳ ಬಗ್ಗೆ ಅಧ್ಯಯನ ಮಾಡಿ ಹಿಂದೆ ಗೊಂಡ್ವಾನ ಖಂಡದ ಕೇಂದ್ರ ಭಾಗವಾಗಿದ್ದ ಅಂಟಾರ್ಕ್‌ಟಿಕದ ಭೂವಿಜ್ಞಾನ ಇತರ ಸದಸ್ಯ ಖಂಡಗಳ ಭೂವಿಜ್ಞಾನಕ್ಕೆ ಹೇಗೆ ತಾಳೆಯಾಗುತ್ತವೆ ಎನ್ನುವುದನ್ನು ಸಮೀಕ್ಷೆಗಳಿಂದ ದೃಢಪಡಿಸಿದ್ದಾರೆ. ಈ ಖಂಡ ಈಗಿನದಕ್ಕಿಂತ ಹೆಚ್ಚು ಹಿಮರಾಶಿಯಿಂದ ಕೂಡಿತ್ತೆಂದು

ಪ್ರಾಗ್ವಾತಾವರಣ ಕುರಿತು ಹಿಮವಿಜ್ಞಾನಿಗಳು ಮಾಡಿರುವ ಸಂಶೋಧನೆಯಿಂದ ಬೆಳಕಿಗೆ ಬಂದಿದೆ. 1982ರಲ್ಲಿ ಅಂಟಾರ್ಕ್‍ಟಿಕ ಖಂಡದಿಂದ ದೊರೆತ ಸಸ್ತನಿಗಳ ಪಳೆಯುಳಿಕೆ, 1986ರಲ್ಲಿ ದೊರೆತ ಡೈನೋಸಾರ್‌ಗಳ ಪಳೆಯುಳಿಕೆ ಈ ಖಂಡ ಹಿಂದೆ ಉಷ್ಣವಲಯದಲ್ಲಿದ್ದುದಕ್ಕೆ ಸಾಕ್ಷ್ಯಾಧಾರಗಳನ್ನು ಒದಗಿಸುತ್ತವೆ. 1984ರಲ್ಲಿ ಅಂಟಾರ್ಕ್‍ಟಿಕ ಖಂಡದ ಅಲೆನ್ ಹಿಲ್ಸ್ ಎಂಬ ಭಾಗದ ಬಳಿ 1.9 ಕಿಗ್ರಾಂ ತೂಕದ ಆಲೂಗಡ್ಡೆ ಗಾತ್ರದ ಉಲ್ಕೆಯ ತುಂಡು (ALH-84001) ಸಿಕ್ಕಿತು. ಇದು ಮಂಗಳಗ್ರಹದಿಂದ ಸಿಡಿದು ಬಂದಿರುವ ತುಂಡೆಂದು ಖಚಿತವಾಗಿದೆ. ಅಂಟಾರ್ಕ್‍ಟಿಕದ ಹಿಮದ ಹಾಳೆಯ ಮೇಲೆ ಉಲ್ಕ ತುಂಡುಗಳನ್ನು ಸಂಗ್ರಹಿಸುವುದೇ ಒಂದು ದೊಡ್ಡ ಕಾರ್ಯಚಟುವಟಿಕೆಯಾಗಿದೆ. ಅಂತೆಯೇ ಚಂದ್ರ ಶಿಲೆಯ ತುಣುಕುಗಳನ್ನೂ ಇಲ್ಲಿನ ಹಿಮದ ಹಾಳೆಯಿಂದ ಸಂಗ್ರಹಿಸಲಾಗಿದೆ. ಇದುವರೆಗೆ ಅಂಟಾರ್ಕ್‍ಟಿಕ ಖಂಡದಿಂದ ಸುಮಾರು 15,000 ಉಲ್ಕಾ ತುಂಡುಗಳನ್ನು ಹೆಕ್ಕಿ ತೆಗೆದಿದ್ದಾರೆ. ಇವು ಒಂದೊಂದೂ ಸೌರವ್ಯೂಹದ ಉಗಮ, ವಿಕಾಸ ಕುರಿತು ಹೆಚ್ಚಿನ ಮಾಹಿತಿಗಳನ್ನು ಒದಗಿಸುತ್ತವೆ. ರೇಡಿಯೋ ತರಂಗಗಳನ್ನು ಕಳಿಸಿ ಹಿಮದ ಸ್ತರಗಳ ಕೆಳಗೆ ಸಿಹಿನೀರಿನ ಸರೋವರವಿರುವುದನ್ನು ಪತ್ತೆಹಚ್ಚಲಾಗಿದೆ. ಉಪಗ್ರಹಗಳ ನೆರವಿನಿಂದ ಹಿಮದ ಹಾಳೆಗಳ ಚಲನೆಯನ್ನು ಕರಾರುವಾಕ್ಕಾಗಿ ವಿಜ್ಞಾನಿಗಳು ಅಳೆದಿದ್ದಾರೆ. 1985ರಲ್ಲಿ ಬ್ರಿಟಿಷ್ ಸಂಶೋಧನಾ ತಂಡವೊಂದು ಅಂಟಾರ್ಕ್‍ಟಿಕದ ನೆತ್ತಿಯ ಮೇಲೆ ಸ್ಟ್ರಾಟೋಗೋಳದಲ್ಲಿ ಓಜೋನ್ ಪದರ ತೆಳುವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದಷ್ಟು ವಿಸ್ತೀರ್ಣದ ರಂಧ್ರ ಉಂಟಾಗಿರುವುದಾಗಿ ವರದಿ ಮಾಡಿತು. ಅದರಿಂದ ತೂರಿಬರುವ ಅತಿನೇರಿಳೆ ಕಿರಣಗಳು ಭೂಜೀವಿಗಳಿಗೆ ಅತ್ಯಂತ ಮಾರಕ ಎಂದು ತಿಳಿದ ಮೇಲೆ ಓಜೋನ್ ವಲಯವನ್ನು ಛಿದ್ರಮಾಡುವ ಮಾನದ ನಿರ್ಮಿತ ಕ್ಲೋರೋಫ್ಲೂರೋ ಕಾರ್ಬನ್ ಪ್ರಮಾಣವನ್ನು ತಗ್ಗಿಸಲು ಅಂತಾರಾಷ್ಟ್ರೀಯ ಒಡಂಬಡಿಕೆಯಾಗಿದೆ. ಮಾನವ ಸ್ವಭಾವದ ಮೇಲೆ ಅಂಟಾರ್ಕ್‍ಟಿಕದ ಏಕಾಂತತೆ ಬೀರುವ ಪರಿಣಾಮವನ್ನು ಅನೇಕ ದಶಕಗಳಿಂದ ಮನೋವಿಜ್ಞಾನಿಗಳು ಅಧ್ಯಯನ ಮಾಡುತ್ತಿದ್ದಾರೆ. ಅಂಟಾರ್ಕ್‍ಟಿಕ ನಿಸರ್ಗವೇ ಒದಗಿಸಿರುವ ಜೀವಂತ ವಿಜ್ಞಾನ ಪ್ರಯೋಗಾಲಯ. (ಪಿ.ಡಿ.ಎಂ., *.)

**ಅಂಟಿಕೆಪಂಟಿಕೆ :** ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರಚಾರದಲ್ಲಿರುವ ಒಂದು ಜನಪದ ಸಂಪ್ರದಾಯ. ಇದಕ್ಕೆ ಹಬ್ಬ ಹಾಡುವುದು, ದೀಪ ನೀಡುವುದು ಎಂಬ ಹೆಸರುಗಳೂ ಇವೆ.

ತೀರ್ಥಹಳ್ಳಿಯ ಸುತ್ತಮುತ್ತ ಮಾತ್ರ ಇದಕ್ಕೆ ಅಂಟಿಕೆಪಂಟಿಕೆ ಎನ್ನುತ್ತಾರೆ. ದೀಪಾವಳಿಯ ಬಲಿಪಾಡ್ಯಮಿ ದಿನದಿಂದ ಹಿಡಿದು ಮೂರು ದಿನಗಳವರೆಗೆ ಹಳ್ಳಿಯ ರೈತರು (ಒಕ್ಕಲಿಗರು, ದೀವರು, ಹಸಲರು ಮುಂತಾದ ವರ್ಗಗಳವರು) ಮನೆಮನೆಗೂ ದೀಪಾವಳಿಯ ಬೆಳಕಿನ ದಿವ್ಯ ಸಂದೇಶವನ್ನು ಒಯ್ಯುತ್ತ ಜ್ಯೋತಿ ಹಚ್ಚಿ ಹೀಗೆ ಹಾಡುತ್ತಾರೆ: 'ಮಣ್ಣಿಲಿ ಹುಟ್ಟಿದೆ,

ದೀಪದ ಕುಡಿ ವಿನಿಮಯ

ಮಣ್ಣಲಿ ಬೆಳೆದೆ, ಎಣ್ಣೇಲಿ ಕಣ್ಣಬಿಟ್ಟಿದೆ– ಎಣ್ಣೇಲಿ ಕಣ್ಣಬಿಟ್ಟಿದೆ ಜಗಜ್ಯೋತಿ ನಾ ಸತ್ಯದಿಂದುರಿಯೆ ಜಗಜ್ಯೋತಿ.' ಒಂದೊಂದು ಸೀಮೆಯಲ್ಲೂ (3–4 ಹಳ್ಳಿಗಳ ಗುಂಪು) 4ರಿಂದ 6 ಜನರಿರುವ ಹಲವು ತಂಡಗಳು ಹಬ್ಬಹಾಡಲು ಹೋಗುವುದುಂಟು. ಆ ದಿನ ರಾತ್ರಿ ಆ ಸೀಮೆಯ ದೇವಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ಹಣತೆ ಹಚ್ಚಿಕೊಂಡು ಹಾದಿಯುದ್ದಕ್ಕೂ ಹಾಡುತ್ತಲೇ ಮನೆಮನೆಗೂ ಹೋಗುತ್ತಾರೆ. ಒಂದೊಂದು ಮನೆಯ ಮುಂದೂ 'ಬಾಗಿಲತೆಗಿರಮ್ಮಾ ಭಾಗ್ಯದ ಲಕ್ಷ್ಮಮ್ಮ ಜ್ಯೋತ್ಯಮ್ಮನೊಳಗೆ ಕರಕೊಳ್ಳಿ' ಎಂದೂ 'ಮುಳ್ಳಾಗೆ ಕಲ್ಲಾಗೆ ಬಂದೇವಯ್ಯಾ, ತಂದೀವಿ ದೀಪಾನ ಕೊಳ್ಳೀರಯ್ಯಾ' ಮುಂತಾಗಿ ಹಾಡಿ ಬಾಗಿಲ ತೆಗೆಸಿ 'ಜ್ಯೋತಿಗೆಣ್ಣೆಯನೆರೆಯ ಬನ್ನಿ' ಎಂಬಂಥ ಹಾಡು ಹೇಳಿ ತಮ್ಮ ಹಣತೆಯಿಂದ ಅವರಿಗೆ ದೀಪದ ಕುಡಿ ಕೊಡುತ್ತಾರೆ. ಅನಂತರ ಮನೆಯ ಜಗಲಿಯನ್ನೇರಿ ಅರ್ಜುನಜೋಗಿ ಹಾಡು, ಉತ್ತರದೇವಿ ಹಾಡು, ತೆರೆಅಳೆಯುವ ಹಾಡು, ಕರು ಅಗಚುವ ಹಾಡು ಇತ್ಯಾದಿ ದೀರ್ಘ ಗೀತೆಗಳನ್ನು ಒಕ್ಕೊರಲಿನಿಂದ ಹಾಡುತ್ತಾರೆ. ಕೊನೆಯಲ್ಲಿ ಮಂಗಳಗೀತೆ ಹೇಳುತ್ತಾರೆ. ಹಾಡುಗಳಲ್ಲಿ ಹೆಚ್ಚಿನವು ತ್ರಿಪದಿ, ಉಳಿದವು ದ್ವಿಪದಿ, ಚೌಪದಿ ಮುಂತಾದ ಸರಳ ರಚನೆಗಳು. ಅಪರೂಪವಾಗಿ ಲಾವಣಿ ಅಥವಾ ಕೋಲಾಟದ ಮಟ್ಟುಗಳೂ ಇರುತ್ತವೆ. ಹಾಡುವಾಗ ಜೊತೆಗೆ ಯಾವುದೇ ವಾದ್ಯ ಇರುವುದಿಲ್ಲ. ಕಥನಗೀತೆಗಳಲ್ಲಿ ಸಾಮಾನ್ಯವಾಗಿ ಶಿವನ, ಶಿವಭಕ್ತರ, ಅಪರೂಪವಾಗಿ ಐತಿಹಾಸಿಕ, ಕೌಟುಂಬಿಕ ಕಥೆಗಳೂ ಸೇರಿರುತ್ತವೆ. ಹಾಡುವವರಿಗೆ ಮನೆಮನೆಯಲ್ಲೂ ದೀಪಕ್ಕೆ ಎಣ್ಣೆ, ಬಟ್ಟೆ, ಅಕ್ಕಿ, ಹಣ್ಣು, ತೆಂಗಿನಕಾಯಿ, ಹಬ್ಬದತಿಂಡಿ, ಚಿಲ್ಲರೆ ಹಣ ಕೊಡುತ್ತಾರೆ. ಹೀಗೆ ಮೂರು ರಾತ್ರಿಯ ಪರ್ಯಂತ ದೀಪ ನೀಡುವುದು ನಡೆಯುತ್ತದೆ. ಮೂರು ದಿನವಾದಮೇಲೆ ಬತ್ತಿಯನ್ನು ಹಣತೆಯಿಂದ ತೆಗೆದು ಹಲಸಿನ ಮರದ ಕೊಂಬೆಯ ಮೇಲಿಟ್ಟು ಅದಕ್ಕೆ ಕೈ ಮುಗಿಯುತ್ತಾರೆ. ವಸೂಲಿಯಿಂದ ಬಂದ ಹಣದಿಂದ ಊರಿನವರನ್ನೂ ಆಹ್ವಾನಿಸಿ ಅಂಟಿಕೆ ಪಂಟಿಕೆ ಔತಣ ಮಾಡಿಕೊಂಡು ವನಭೋಜನ ಮಾಡುತ್ತಾರೆ. (ಕೆ.ವಿ.ಎಸ್.)

**ಅಂಟು ದಿಸ್ ಲಾಸ್ಟ್ :** 19ನೆಯ ಶತಮಾನದ ಇಂಗ್ಲಿಷ್ ಗದ್ಯ ಬರೆಹಗಾರ ಜಾನ್ ರಸ್ಕಿನ್ನನು (1819–1900) ರಚಿಸಿದ ಕೃತಿ. ತನ್ನ ಈ ಕೃತಿಗೆ ಮೊದಲು ಅರ್ಥಶಾಸ್ತ್ರದ ಪ್ರಥಮ ತತ್ತ್ವಗಳನ್ನು ಕುರಿತ ಪ್ರಬಂಧಗಳು ಎನ್ನುವ ಹೆಸರನ್ನು ಕೊಟ್ಟ. ಅನಂತರ ಏಸುಕ್ರಿಸ್ತನ ಒಂದು ದೃಷ್ಟಾಂತಕಥೆಯಲ್ಲಿನ ಒಂದು ಪದವೃಂದವನ್ನು ಬಳಸಿ ಪುಸ್ತಕಕ್ಕೆ ಅಂಟು ದಿಸ್ ಲಾಸ್ಟ್ ಎಂದು ನಾಮಕರಣ ಮಾಡಿದ. 1862ರಲ್ಲಿ ರಚಿತವಾದ ಈ ಕೃತಿಯಲ್ಲಿ ನಾಲ್ಕು ಭಾಗಗಳಿವೆ. ಸಂಪತ್ತಿನ ನಿಜವಾದ ಅರ್ಥ, ಸಂಪತ್ತಿನ ಗಳಿಕೆಯಲ್ಲಿ ಪ್ರಾಮಾಣಿಕತೆಯ ಮಹತ್ತ್ವ–ಇವನ್ನು ವಿವರಿಸುವುದು ಅವನ ಉದ್ದೇಶ. ಅರ್ಥಶಾಸ್ತ್ರಕ್ಕೂ ಅಂತಃಕರಣಕ್ಕೂ ಸಂಬಂಧವಿಲ್ಲ ಎನ್ನುವ ವಾದವನ್ನು ವಿರೋಧಿಸಿ ಕೈಗಾರಿಕೆ ಮತ್ತು ವಾಣಿಜ್ಯಗಳಲ್ಲಿ ಸಹಾನುಭೂತಿ ಮತ್ತು ನ್ಯಾಯದೃಷ್ಟಿ ಅತ್ಯಗತ್ಯ ಎಂದು ಸಾರುತ್ತಾನೆ. ವಾಣಿಜ್ಯ ದೃಷ್ಟಿಯ ಆರ್ಥಿಕತೆಗೂ ರಾಜಕೀಯ ಆರ್ಥಿಕತೆಗೂ ಇರುವ ವ್ಯತ್ಯಾಸವನ್ನು ಒತ್ತಿ ಹೇಳುತ್ತಾ, ವಾಣಿಜ್ಯ ದೃಷ್ಟಿಯ ಆರ್ಥಿಕತೆಯು ಹಣ ಒಂದನ್ನೇ ಸಂಪತ್ತು ಎಂದು ಪರಿಗಣಿಸುತ್ತದೆ, ರಾಜಕೀಯ ಆರ್ಥಿಕತೆಯು ದೇಶದ ಎಲ್ಲರ ಆರ್ಥಿಕ ಕಲ್ಯಾಣಕ್ಕೆ ಮಹತ್ವವನ್ನು ನೀಡುತ್ತದೆ ಎಂದು ವಿವರಿಸುತ್ತಾನೆ. ಅತ್ಯಂತ ಅಗ್ಗವಾದ ಮಾರುಕಟ್ಟೆಯಲ್ಲಿ ಕೊಂಡುಕೊ ಅತ್ಯಂತ ದುಬಾರಿಯಾದ ಮಾರುಕಟ್ಟೆಯಲ್ಲಿ ಮಾರು ಎನ್ನುವ ವಾಣಿಜ್ಯ ಆರ್ಥಿಕತೆ ಹೃದಯಹೀನ; ಇದರಿಂದ ದೇಶಕ್ಕೆ ಹಾನಿಯೇ ಆಗುತ್ತದೆ ಎಂದು ಪ್ರತಿಪಾದಿಸುತ್ತಾನೆ. ಅರ್ಥಶಾಸ್ತ್ರದ ನಿಜವಾದ ಗುರಿ ಎಲ್ಲರಿಗೂ ಪರಿಪೂರ್ಣವೂ ಸ್ವತಂತ್ರವೂ ಆದ ಜೀವನವನ್ನು ಕಲ್ಪಿಸುವುದು ಎಂದು ಈತ ಸಾಧಿಸುತ್ತಾನೆ. ಈ ಕೃತಿಯು ಮೊದಲು, ಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರ ಥ್ಯಾಕರೆ ನಡೆಸುತ್ತಿದ್ದ ಕಾರ್ನ್‌ಹಿಲ್ ಮ್ಯಾಗ್‌ಜೀನ್‌ನಲ್ಲಿ ಧಾರಾವಾಹಿಯಾಗಿ ಪ್ರಾರಂಭವಾಯಿತು; ಆದರೆ ರಸ್ಕಿನ್ನನ ದೃಷ್ಟಿಕೋನವು ಪತ್ರಿಕೆಯ ಮಧ್ಯಮವರ್ಗದ ಓದುಗರಿಗೆ ಒಪ್ಪಿಗೆಯಾಗಲಿಲ್ಲ. ಅವರ ಪ್ರತಿಭಟನೆಯಿಂದಾಗಿ ಥ್ಯಾಕರೆ ತನ್ನ ಪತ್ರಿಕೆಯಲ್ಲಿ ಇದರ ಪ್ರಕಟಣೆಯನ್ನು ನಿಲ್ಲಿಸಿದ. ಭಾವನೆಯ ಪ್ರಾಮಾಣಿಕತೆ, ನಿರಾಡಂಬರತೆಯ ಸೊಗಸು, ಘನತೆ, ವಾಗ್ಮಿತೆಗಳು ಬೆರೆತ ಶೈಲಿ–ಇವು ಈ ಕೃತಿಗೆ ಇಂಗ್ಲಿಷ್ ಗದ್ಯ ಸಾಹಿತ್ಯದಲ್ಲಿ ಹಿರಿಯ ಸ್ಥಾನವನ್ನು ನೀಡಿವೆ. ಇದರ ಮುಕ್ತಾಯಭಾಗದ ಉದಾತ್ತ ಭಾವನೆ, ಘನವಾದ ಧೋರಣೆ ಮರೆಯಲಾಗದಂಥವು. ಆರ್ಥಿಕ ತತ್ತ್ವಗಳ ವಿಚಾರದಲ್ಲಿ ಕ್ರಾಂತಿಯನ್ನು ಉಂಟುಮಾಡಿ ನೀತಿಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನು ಸಮೀಪಕ್ಕೆ ತಂದ ಕೃತಿ ಇದು. ದಕ್ಷಿಣ ಆಫ್ರಿಕದಲ್ಲಿ ಪ್ರಯಾಣ ಮಾಡುತ್ತಿದ್ದಾಗ ಇದನ್ನು ಓದಿದ ಗಾಂಧೀಜಿಯವರ ಧ್ಯೇಯ ಧೋರಣೆಗಳ ಮೇಲೆ ಈ ಗ್ರಂಥ ಬೀರಿದ ಪ್ರಭಾವ ಸರ್ವವಿದಿತವಾಗಿದೆ (**ನೋಡಿ– ರಸ್ಕಿನ್,ಜಾನ್**). (ಎಲ್.ಎಸ್.ಎಸ್.)

**ಅಂಟುಪದಾರ್ಥಗಳು :** ಕಾಗದ, ಗಾಜು, ಲೋಹ ಮುಂತಾದ ಯಾವುದೇ ಪದಾರ್ಥಗಳ ಎರಡು ಅಥವಾ ಹೆಚ್ಚು ಪದರಗಳನ್ನು ಅಂಟಿಸಲು, ಬಳಸುವ ವಸ್ತುಗಳು (ಅಡ್ಹೆಸಿವ್ಸ್). ಇವುಗಳ ಉಪಯೋಗ ಪುರಾತನವಾದುದು. ಸಹಜವಾಗಿಯೇ ಮೊದಲು ಬಳಕೆಗೆ ಬಂದವುಗಳು ಗಿಡಗಳಿಂದ ದೊರೆತ ಗೋಂದು, ಜಿಗುಟು ಪದಾರ್ಥಗಳು, ರಬ್ಬರ್ ಮುಂತಾದವುಗಳು. ಸಾವಿರಾರು ವರ್ಷಗಳ ಹಿಂದೆಯೇ ಈಜಿಪ್ಟಿನವರು ಹಾಲಿನಲ್ಲಿರುವ ಕೇಸಿಯಿನ್ ಎಂಬ ಸಸಾರಜನಕ (ನೈಟ್ರೋಜಿನಸ್) ಪದಾರ್ಥದಿಂದ ಮಾಡಿದ ಅಂಟನ್ನು, ಮರದ ಪೀಠೋಪಕರಣಗಳನ್ನು ತಯಾರುಮಾಡಲೂ ಅವುಗಳನ್ನು ಅಲಂಕರಿಸಲೂ ಉಪಯೋಗಿಸುತ್ತಿದ್ದರು. ಗೋಂದು ಮುಂತಾದ ಸಸ್ಯಜನ್ಯ ಅಂಟುಪದಾರ್ಥಗಳು ನೀರಿನಿಂದ ಮೆದುವಾಗುವುದರಿಂದ ಅವುಗಳ ಅಂಟಿಸುವ ಶಕ್ತಿ ಕಡಿಮೆಯಾಗಿದ್ದು ಇಂಥ ಅಂಟುಗಳ ಬಳಕೆ ಕಾಗದ ಮತ್ತು ಮರದ ಉಪಯೋಗದಲ್ಲಿ ಮಾತ್ರ ಇತ್ತು. ಆದರೆ ಇತ್ತೀಚೆಗೆ ಬೇರೆ ಬೇರೆ ರೀತಿಯ ಸಂಶ್ಲೇಷಿತ ಅಂಟುಗಳು ಕಾರಿನ, ವಿಮಾನದ ತಯಾರಿಕೆ, ಎಲೆಕ್ಟ್ರಾನಿಕ್ಸ್, ಮುಂತಾದ ಕೈಗಾರಿಕೆಗಳಲ್ಲಿ ಬಳಕೆಗೆ ಬಂದಿವೆ. ಈಗ ಇರುವ ಅಂಟುಗಳು ಗಾಜು, ಲೋಹ, ಪ್ಲಾಸ್ಟಿಕ್ ಮುಂತಾದವುಗಳನ್ನು ಬಹು ಭದ್ರವಾಗಿ ಅಂಟಿಸಬಲ್ಲವು. ಹೀಗೆ ಅಂಟಿಸುವುದರಿಂದ ಬರುವ ಎರಡು ಅಥವಾ ಹೆಚ್ಚು

ಪದರದ ವಸ್ತುಗಳಲ್ಲಿ ತೂಕ, ಒತ್ತಡ, ಆಘಾತ-ಇವನ್ನು ತಡೆಯುವ ವಿಶೇಷ ಶಕ್ತಿ ಮುಂತಾದ, ಮೊದಲ ವಸ್ತುಗಳಿಗಿಲ್ಲದ ಉಪಯೋಗಕರವಾದ ಗುಣಗಳು ಬರುತ್ತವೆ. ರಂಧ್ರ ಮಾಡಿದ ಜಾಗಗಳಲ್ಲಿ ದೃಢತೆ ಇರುವುದಿಲ್ಲ. ಸರಿಯಾದ ಅಂಟನ್ನು ಉಪಯೋಗಿಸಿದರೆ ಈ ನ್ಯೂನ್ಯತೆ ಇರುವುದಿಲ್ಲ. ಆದುದರಿಂದಲೇ ಈ ಹೊಸರೀತಿಯ ಅಂಟುಗಳ ಬಳಕೆ, ಅವುಗಳ ಬೆಲೆ ಹೆಚ್ಚಾದರೂ ಏರೋಪ್ಲೇನ್ ತಯಾರಿಕೆಯಲ್ಲಿ ಸಾಮಾನ್ಯ.

ಅಂಟುಶಕ್ತಿಯ ಸ್ಪಷ್ಟ ಪರಿಚಯ ಅಷ್ಟಾಗಿ ಇಲ್ಲ. ಕೆಲವು ಅಂಟುಗಳು ರಾಸಾಯನಿಕ ಬದಲಾವಣೆಗೆ ಒಳಗಾಗಿ ಹೊಂದಿ ಹೊಸ ಬಂಧಗಳು ಉಂಟಾಗಿ ಅವುಗಳ ಅಂಟುಶಕ್ತಿಗೆ ಆಧಾರವಾಗಿರುತ್ತವೆ. ಹೊಸ ಬಂಧಗಳು ಈ ಅಂಟಿಗೂ ಅಂಟಿಸಿದ ಪದರಕ್ಕೂ ನಡುವೆ ಏರ್ಪಡಬಹುದು ಅಥವಾ ಇದರಲ್ಲಿ ಭೌತಶಕ್ತಿಯೂ ಸೇರಿರಬಹುದು. ಒಟ್ಟಿನಲ್ಲಿ ಎರಡು ಪದರಗಳನ್ನು ಹಿಡಿದಿಟ್ಟಿರುವ ಅಂಟುಶಕ್ತಿಯಲ್ಲಿ, ಅಂಟುಗಳ ನಡುವಣ ಶಕ್ತಿ ಮತ್ತು ಅಂಟಿಗೂ ಪದರದ ಮೇಲ್ಮೈಗೂ ಇರುವ ಬಂಧಶಕ್ತಿ-ಎರಡೂ ಸೇರಿವೆ. ಆದುದರಿಂದ ಅಂಟಿನ ಪೂರ್ಣ ಪ್ರಯೋಜನ ಪಡೆಯಲು ವಸ್ತುವಿನ ಮೇಲ್ಮೈಯನ್ನು ಶುದ್ಧಮಾಡಿ, ಅದರ ಮೇಲೆ ಸಂಪೂರ್ಣವಾಗಿ ಅಂಟು ಹಚ್ಚಬೇಕು. ಅಂಟು ಎಷ್ಟು ತೆಳ್ಳಗಿದ್ದರೆ ಅಷ್ಟು ಉತ್ತಮ. ಹಚ್ಚುವ ಮೊದಲು ಲೋಹಗಳ ಮೈಯನ್ನು ಉಜ್ಜಿ ಒರಟು ಮಾಡುವುದು ಒಳ್ಳೆಯದು. ಈ ಅಂಟು ಪದಾರ್ಥಗಳನ್ನು ದ್ರಾವಣಗಳ ರೂಪದಲ್ಲಿ ಬಳಸುವುದಾದರೆ ದ್ರಾವಕವನ್ನು ಆವಿಯಾಗಿಸಬೇಕು. ಸರಂಧ್ರ ವಸ್ತುಗಳನ್ನು ಅಂಟಿಸಲು ಈ ದ್ರಾವಣ ಆ ರಂಧ್ರಗಳ ಮೂಲಕ ಹೋಗುವಂತೆ ಮಾಡಿ ಅನಂತರ ದ್ರಾವಕವನ್ನು ಆವಿಯಾಗಿಸಿ ತೆಗೆಯಬೇಕು. ಸೋಡಿಯಂ ಸಿಲಿಕೇಟ್ ದ್ರಾವಣವನ್ನು ಈ ರೀತಿ ರಟ್ಟಿನ ರಂಧ್ರಗಳ ಮೂಲಕ ಹೋಗುವಂತೆ ಮಾಡಿ ಕಾಗದದ ಪೆಟ್ಟಿಗೆಗಳನ್ನು ತಯಾರಿಸುತ್ತಾರೆ. ಅಂಟಿಸಬೇಕೆಂದಿರುವ ವಸ್ತುವಿನ ಮೈಮೇಲೆ ಹಚ್ಚಿದ ಅಂಟು, ಅದರ ಅಣುಗಳು ಹಲವಾರು ಸೇರಿ ಬೃಹತ್ ಅಣು ಆಗುವಂತೆ ಮಾಡುವುದು ಇನ್ನೊಂದು ಮಾರ್ಗ. ಅಂಟಿಸುವ ಪದರಗಳನ್ನು ಹೆಚ್ಚು ಒತ್ತಡಕ್ಕೆ ಒಳಪಡಿಸುವುದು ಆವಶ್ಯಕ. ಹೀಗೆ ಮಾಡುವುದರಿಂದ ದುರ್ಬಲ ಸ್ಥಾನಗಳಿಲ್ಲದೆ ಮೇಲಿನ ಮೈ ಎಲ್ಲವೂ ಸರಿಯಾಗಿ ಅಂಟಿಕೊಳ್ಳುವುದು. ಸಂಶ್ಲೇಷಿತ ಅಂಟುಗಳು ಹಲವಾರು ಇರುವುದರಿಂದ ಅವುಗಳನ್ನು ಬೆರೆಸಿ, ಬಂದ ಮಿಶ್ರಣಕ್ಕೆ ಬೇಕಾದ ಗುಣಗಳು ಬರುವಂತೆ ಮಾಡಬಹುದು.

**ಪ್ರಕೃತಿಯಲ್ಲಿ ದೊರಕುವ ಅಂಟು ಪದಾರ್ಥಗಳು :** ಪ್ರಾಣಿಗಳ ಚರ್ಮ, ಮೂಳೆಗಳಿಂದ ತಯಾರಾದ ಪ್ರಾಣಿಜನ್ಯ ಅಂಟುಪದಾರ್ಥಗಳಲ್ಲಿ ಜೆಲಟಿನ್ ಎಂಬ ರಸಾಯನವಸ್ತು ಅಪರಿಶುದ್ಧರೂಪದಲ್ಲಿ ಇರುತ್ತದೆ. ಬಿಸಿಯಿರುವಾಗ ಹಚ್ಚಿ, ಪದರಗಳನ್ನು ಒತ್ತಿ, ಆರಿಸಿದಾಗ ಅವು ನೀರು ಕಳೆದುಕೊಂಡು ಗಟ್ಟಿಯಾಗುತ್ತವೆ. ಅವುಗಳ ಮುಖ್ಯ ಉಪಯೋಗ ಮರದ ಪೀಠೋಪಕರಣಗಳ ತಯಾರಿಕೆಯಲ್ಲಿ ಮತ್ತು ಉಪ್ಪು ಕಾಗದದ ತಯಾರಿಕೆಯಲ್ಲಿ. ಕೇಸಿಯಿನ್ ಅಂಟು ಸರಂಧ್ರವಸ್ತುಗಳನ್ನು ಅಂಟಿಸುವುದಕ್ಕೆ, ಮರಗೆಲಸಕ್ಕೆ, ಕಾಗದದ ಉತ್ಪನ್ನಗಳಲ್ಲಿ ಹೆಚ್ಚು ಉಪಯುಕ್ತವಾದುದು. ಗಿಡದ ಕಾಂಡವನ್ನು ಗಾಯಮಾಡಿದಾಗ ಜಿನುಗುವ ಗೋಂದು ಈ ಗುಂಪಿಗೆ ಸೇರಿದುದು. ಗಮ್ ಅರಾಬಿಕ್ ಇವುಗಳ ಪೈಕಿ ಒಂದು. ನೀರಿನ ಆವಿಯಿದ್ದರೆ ತನ್ನ ದೃಢತೆಯನ್ನು ಕಳೆದುಕೊಳ್ಳುವುದರಿಂದ ಅವುಗಳ ಉಪಯೋಗ ಕಾಗದಗಳನ್ನು ಅಂಟಿಸಲು ಮಾತ್ರ. ಇದೇ ಗುಂಪಿಗೆ ಸೇರಿದ ರಬ್ಬರ್ ದ್ರಾವಣ, ಅರಗು ಮುಂತಾದುವುಗಳು ನೀರನ್ನು ನಿರೋಧಿಸಬಲ್ಲವು. ಆದುದರಿಂದ ರಬ್ಬರ್ ದ್ರಾವಣವನ್ನು ಚರ್ಮ ಮುಂತಾದುವುಗಳನ್ನು ಅಂಟಿಸಲು ಉಪಯೋಗಿಸುತ್ತಾರೆ. ಬಳಕೆಯಲ್ಲಿರುವ ನಿರವಯವ ಅಂಟುಗಳ ಪೈಕಿ ಸೋಡಿಯಂ ಸಿಲಿಕೇಟ್ ಅಥವಾ ನೀರುಗಾಜು ಒಂದೇ ಒಂದು ಅಂಟು $280^{o}$ ಸೆಲ್ಸಿಯಸ್ ಗಿಂತಲೂ ಹೆಚ್ಚು ಶಾಖವನ್ನು ತಡೆಯಬಲ್ಲದು. ಇದು ಬೇರೆ ವಸ್ತುಗಳೊಂದಿಗೆ ಸೇರಿಕೊಂಡು ಶಾಖ ನಿರೋಧಕ ಸಿಮೆಂಟ್ ಆಗುತ್ತದೆ. ಈ ಸಿಮೆಂಟನ್ನು ವಿದ್ಯುದ್ದೀಪದ ಬುರುಡೆಯ ತಳಕ್ಕೆ, ಗಾಜು ಮತ್ತು ಲೋಹದ ಭಾಗವನ್ನು ಅಂಟಿಸಲು ಅಲ್ಲದೆ ಅದೇ ರೀತಿಯಲ್ಲಿ ವಿದ್ಯುದುಪಕರಣಗಳ ತಯಾರಿಕೆಗೆ ಬಳಸುತ್ತಾರೆ. ನೀರುಗಾಜನ್ನು ವಿಶೇಷವಾಗಿ ಕಾಗದಪೆಟ್ಟಿಗೆಗಳ ತಯಾರಿಕೆಗೆ ಉಪಯೋಗಿಸುತ್ತಾರೆ.

ಸಂಶ್ಲೇಷಿತ ಅಂಟುಪದಾರ್ಥಗಳು ಎರಡು ಬಗೆಯವು. ಮೊದಲನೆಯ ಗುಂಪಿಗೆ ಸೇರಿದ ಅಂಟುಗಳು ಆರಿದಾಗ ರಾಸಾಯನಿಕ ಬದಲಾವಣೆ ಹೊಂದಿ ದೃಢವಾಗುವುವು. ಇವುಗಳಿಂದ ಅಂಟಿಸಿದ ಪದಾರ್ಥಗಳನ್ನು ಮತ್ತೆ ಕಾಯಿಸಿದರೂ ಅಂಟಿನ ದೃಢತೆಗೆ ಕುಂದು ಬರುವುದಿಲ್ಲ; ಮೊದಲಿನ ಶಕ್ತಿಯನ್ನು ಉಳಿಸಿಕೊಳ್ಳುತ್ತವೆ. ಎರಡನೆಯ ಗುಂಪಿನ ಅಂಟುಗಳು ಆರಿದಾಗ ಗಟ್ಟಿಯಾದರೂ ಮತ್ತೆ ಬಿಸಿ ಮಾಡಿದಾಗ ಮೆತ್ತಗಾಗುವುವು. ಈಪಾಕ್ಸಿ ಅಂಟು, ಫೀನಾಲಿಕ್ಸ್, ಯೂರಿಯಾ ಸಿಲಿಕೋನು, ಅಲ್ಕೈಡ್‌ರಾಳ, ರಿಸಾರ್ಸಿನಾಲ್ ರಾಳ, ಸಂಯುಕ್ತ ತಯಾರಿಕೆಯ ರಬ್ಬರ್-ಮುಂತಾದವುಗಳು ಮೊದಲನೆಯ ಗುಂಪಿಗೂ ವೀನೈಲ್ ರಾಳ, ಸೆಲ್ಯುಲೋಸ್ ಉತ್ಪನ್ನಗಳು, ಅಕ್ರಿಲಿಕ್ ರಸಾಯನ ವಸ್ತುಗಳು ಎರಡನೆಯ ಗುಂಪಿಗೂ ಸೇರಿವೆ.

ಮೊದಲ ಗುಂಪಿಗೆ ಸೇರಿದ ಅಂಟುಗಳಲ್ಲಿ ಈಪಾಕ್ಸಿ ಅಂಟುಗಳು ಶಕ್ತಿಯುತವಾಗಿದ್ದು ತುಂಬ ಉಪಯುಕ್ತವಾಗಿವೆ. ಇವಕ್ಕೆ ದ್ರಾವಕ ಬೇಕಾಗಿಲ್ಲ. ಗಟ್ಟಿಯಾಗುವುದು ರಾಸಾಯನಿಕ ಕ್ರಿಯೆಯಿಂದ. ಆದುದರಿಂದ ಇವನ್ನು ಲೋಹಗಳನ್ನು ಅಂಟಿಸಲೂ ಸರಂಧ್ರವಸ್ತುಗಳನ್ನು ಅಂಟಿಸಲೂ ಉಪಯೋಗಿಸುತ್ತಾರೆ. ಈಪಾಕ್ಸಿ ಮಿಶ್ರಣ ದೊರೆಯುವುದು ಎರಡು ಭಾಗವಾಗಿ. ಮೊದಲನೆಯದು ಅಂಟು, ಎರಡನೆಯದು ಗಟ್ಟಿಯಾಗುವ ರಾಸಾಯನಿಕ ಕಾರ್ಯವನ್ನು ಪ್ರಚೋದಿಸುವ ವೇಗೋತ್ಕರ್ಷಕ. ಬಳಸುವ ಮುಂಚೆ ಅವೆರಡನ್ನೂ ಬೆರೆಸಬೇಕು. ಕೆಲವು ಬಗೆಯ ಈಪಾಕ್ಸಿ ಅಂಟುಗಳು ನಿಧಾನವಾಗಿಯೂ ಇನ್ನೂ ಕೆಲವು ಕಾಯಿಸಿದರೆ ತುಂಬ ಶೀಘ್ರವಾಗಿಯೂ ಹಿಡಿಯುವುವು. ಎರಡು ಲೋಹಗಳನ್ನು ಬೆಸೆದ ಈ ಅಂಟಿಗೆ ಒಂದು ಚ.ಅಂ.ಕ್ಕೆ 3000-7000 ಪೌಂಡಿನಷ್ಟು ಶಕ್ತಿ ಬರಲು ಸಾಧ್ಯ. ಬೆಲೆ ಹೆಚ್ಚು. ಆದರೂ ಏರೋಪ್ಲೇನ್ ತಯಾರಿಕೆಯಲ್ಲಿ, ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳಲ್ಲಿ ಇವುಗಳ ಉಪಯೋಗ ಹೆಚ್ಚು.

ಫೀನಾಲಿಕ್ಸ್ ಅಂಟುಗಳು ದ್ರಾವಣರೂಪದಲ್ಲಿ ದೊರೆಯುತ್ತವೆ. ಪ್ಲೈವುಡ್, ಮರ ಮುಂತಾದ ಸರಂಧ್ರ ವಸ್ತುಗಳನ್ನು ಅಂಟಿಸಲು ಬಳಸುತ್ತಾರೆ. ಗಾಜು ಮತ್ತು ಲೋಹಗಳನ್ನು ಅಂಟಿಸಲು ಉಪಯುಕ್ತವಾದುವಲ್ಲ. ಯೂರಿಯಾಗಳ ಗುಂಪಿನ ಪಾಲಿಯೂರಿಥೇನ್‌ಗಳನ್ನು ಗಾಜು, ಲೋಹ, ಮತ್ತು ಸರಂಧ್ರ ವಸ್ತುಗಳನ್ನು ಅಂಟಿಸಲು ಬಳಸಬಹುದು. ಪಾಲಿ ಎಸ್ಟರ್ ರಾಳಗಳಿಂದ ಗಾಜಿನ ಎಳೆಗಳನ್ನು ಅಂಟಿಸಿ ಶಕ್ತಿಯುತ ಕಂಬಿಗಳನ್ನು, ಪಟ್ಟಿಗಳನ್ನು ತಯಾರಿಸಿ ದೋಣಿ ಹಾಗೂ ಕಾರಿನ ಭಾಗಗಳು ಮುಂತಾದುವುಗಳಿಗೆ ಉಪಯೋಗಿಸುತ್ತಾರೆ. ಇವು ಗಟ್ಟಿಯಾದಾಗ ಸಂಕುಚಿತವಾಗುವುದಿಲ್ಲ. ದ್ರಾವಣವೂ ಬೇಕಾಗಿಲ್ಲ. ಶಾಖ ಇದನ್ನು ಬೇಗನೆ ದೃಢವಾಗಿಸುತ್ತದೆ. ಸಿಲಿಕೋನುಗಳು ದೃಢವಾದಮೇಲೆ $280^{o}$ ಸೆಲ್ಸಿಯಸಿಗಿಂತ ಹೆಚ್ಚು ಶಾಖವನ್ನು ತಡೆಯಬಲ್ಲುವು. ಅಲ್ಲದೆ ನೀರನ್ನು ನಿರೋಧಿಸುವ ಶಕ್ತಿಯೂಂಟು. ವಿದ್ಯುತ್ತು ಹರಿಯದಂತೆ ಮಾಡುವ ಅವಾಹಕ ಪಟ್ಟಿಗಳ ತಯಾರಿಕೆಗೆ, ಗಾಜಿನ ಎಳೆಗಳನ್ನು ಅಂಟಿಸಲು, ಎಲೆಕ್ಟ್ರಾನಿಕ್ಸ್ ಕೈಗಾರಿಕೆಯಲ್ಲಿ ಇವುಗಳ ಉಪಯೋಗ ಹೆಚ್ಚು. ಸಂಶ್ಲೇಷಿತ ರಬ್ಬರನ್ನು ಉಪಯೋಗಿಸಿ ಅಂಟಿಸಿದ ಒಂದು ವಸ್ತುವನ್ನು ಬಗ್ಗಿಸಿದರೂ ಅಂಟುಶಕ್ತಿ ಕುಂದುವುದಿಲ್ಲ. ಆದುದರಿಂದ ಅದನ್ನು ಫೆಲ್ಟ್ ಬಟ್ಟೆಯನ್ನು, ರಬ್ಬರ್ ಚರ್ಮಗಳನ್ನು ಅಂಟಿಸಲು ಬಳಸುತ್ತಾರೆ.

ಎರಡನೆಯ ಗುಂಪಿಗೆ ಸೇರಿದ ವೀನೈಲ್ ರಾಳವನ್ನು ಗಾಜು, ಲೋಹಗಳನ್ನು ಅಂಟಿಸಲು ಬಳಸುತ್ತಾರೆ. ಹೆಚ್ಚು ಶಾಖದಲ್ಲಿ ಶಕ್ತಿಯನ್ನು ಕಳೆದುಕೊಂಡರೂ ಬಹುಬೇಗ ಗಟ್ಟಿಯಾಗುವ ಮತ್ತು ನೀರನ್ನು ನಿರೋಧಿಸುವ ಶಕ್ತಿಯಿರುವುದರಿಂದ ಇದನ್ನು ಕಾರಿನ ಕೈಗಾರಿಕೆಯಲ್ಲಿ ಸುರಕ್ಷಿತ ಗಾಜನ್ನು ತಯಾರಿಸಲು ಉಪಯೋಗಿಸುತ್ತಾರೆ. ಗೋಂದುಗಳ ಬದಲು ವೀನೈಲ್ ರಾಳ ಬಳಕೆಯಲ್ಲಿ ಬರುತ್ತಿದೆ. ಸೆಲ್ಯುಲೋಸ್ ಅಸಿಟೇಟ್ ಮತ್ತು ನೈಟ್ರೇಟುಗಳ ದ್ರಾವಣಗಳು ಬಹು ಬೇಗ ಗಟ್ಟಿಯಾಗುವುವು; ಅಲ್ಲದೆ ನೀರನ್ನು ನಿರೋಧಿಸುವ ಶಕ್ತಿ ಹೊಂದಿದ ಈ ಅಂಟುಗಳು ಮನೆಯ ಕೆಲಸಗಳಿಗೆ, ಮರ, ಕಾಗದಗಳನ್ನು ಅಂಟಿಸಲು ಯೋಗ್ಯವಾಗಿವೆ. ಅಕ್ರಿಲಿಕ್ ಅಂಟುಗಳಿಗೆ ಅಂಟುಶಕ್ತಿ ಕಡಿಮೆಯಾದರೂ ಅವು ಪಾರದರ್ಶಕವಾಗಿರುವುದರಿಂದ ಅವುಗಳಿಂದಲೂ ಉಪಯೋಗವುಂಟು. ಇದೇ ಗುಂಪಿಗೆ ಸೇರಿದ ಸಯನೊ ಅಕ್ರಿಲೇಟ್ ಎಂಬುದು ಬೇಗ ಗಟ್ಟಿಯಾಗುವ ಗುಣ ಹೊಂದಿರುವುದರಿಂದ ಅದನ್ನು ಗಾಜು ಮತ್ತು ಲೋಹಗಳನ್ನು ಅಂಟಿಸಲು ಉಪಯೋಗಿಸುತ್ತಾರೆ. (ಎ.ಎಸ್.ಆರ್.)

**ಅಂಟುವಾಳ :** ಸ್ಯಾಪಿಂಡೇಸೀ ಕುಟುಂಬಕ್ಕೆ ಸೇರಿದ ಒಂದು ಆರ್ಥಿಕ ಪ್ರಾಮುಖ್ಯವುಳ್ಳ ಸಸ್ಯ (ಸೋಪ್‌ನಟ್). ಸ್ಯಾಪಿಂಡಸ್ ಜಾತಿಯ ಲಾರಿಫೋಲಿಯಸ್ ಮತ್ತು ಈಮಾರ್ಜಿನೇಟಸ್ ಎಂಬ ಎರಡು ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ.

ಅಂಟುವಾಳ ಭಾರತ, ಶ್ರೀಲಂಕಗಳ ಪರ್ಣಪಾತಿಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಅಲ್ಲದೆ ಇದರ ಕಾಯಿಗಳಿಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ, ಮಲೆನಾಡ ತೋಟಗಳಲ್ಲಿ, ಬದುಗಳಲ್ಲಿ ಬೆಳೆಸಲಾಗುತ್ತದೆ.

ಇದು 10-12ಮೀ ಎತ್ತರಕ್ಕೆ ಬೆಳೆಯುವ ಮಧ್ಯಮ ಗಾತ್ರದ ಮರ. ಇದರ ಎಲೆಗಳು ಸಂಯುಕ್ತ ಮಾದರಿಯವು. ಒಂದು ಎಲೆಯಲ್ಲಿ 2-3 ಜೊತೆ ಒರಟಾದ ಅಂಡಾಕಾರದ ಉಪಪತ್ರಗಳಿರುವುವು. ಹೂಗೊಂಚಲುಗಳು ಕಿರುಎಲೆಗಳು ಕಾಂಡ, ಮುಖ್ಯ ಅಥವಾ ರೆಂಬೆಗಳ ತುದಿಯಲ್ಲಿ ಹುಟ್ಟುತ್ತವೆ. ಗೊಂಚಲಿನ ಕೆಲವು ಹೂಗಳು ದ್ವಿಲಿಂಗಿಗಳಾದರೆ ಇನ್ನು ಕೆಲವು ಏಕಲಿಂಗಗಳಾಗಿರುವುದು ಈ ಮರದ ವೈಶಿಷ್ಟ್ಯ. ಹೂಬಿಡುವ ಕಾಲ ಅಕ್ಟೋಬರ್- ನವೆಂಬರ್. ಫೆಬ್ರವರಿ ವೇಳೆಗೆ ಕಾಯಿ ಬಲಿಯುವುವು.

ಅಂಟುವಾಳ ಹಲವು ಬಗೆಯಲ್ಲಿ ಉಪಯುಕ್ತವಾಗಿದೆ. ಇದರ ಬೀಜದ ತಿರುಳನ್ನು ಶುಂಠಿ, ಬೆಲ್ಲ, ಎಲಚಿ ಬೀಜದೊಂದಿಗೆ ಸೇರಿಸಿ ದಮ್ಮು ರೋಗದ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಕಾಯಿಯ ಲೇಪದಿಂದ ಗಂಡಮಾಲೆ ವಾಸಿಯಾಗುತ್ತದೆ. ಇದರ ಕಾಯಿಯನ್ನು ತೇದು ವಿನಿಗರ್‌ನೊಂದಿಗೆ ಸೇರಿಸಿ ತಲೆಗೆ ಹಚ್ಚಿ ಸ್ನಾನ ಮಾಡಿದರೆ ಹೇನು ನಾಶ. ಕಾಯಿಯ ನಯಚೂರ್ಣವನ್ನು ನಶ್ಯದ ರೀತಿ ಬಳಸಿದರೆ ಮೂರ್ಛೆರೋಗ ಹತೋಟಿಗೆ ಬರುತ್ತದೆ. ಅಂಟುವಾಳದ ಕಾಯಿಯಲ್ಲಿನ ಸಪೋನಿನ್ ಎಂಬ ರಾಸಾಯನಿಕ ಇದರ ನೊರೆಗೆ ಕಾರಣವಾಗಿದೆ. ಆದ್ದರಿಂದ ಕಾಯನ್ನು ನೀರಿಗೆ ಹಾಕಿ ನೆನೆಸಿ, ಲಭಿಸುವ ನೊರೆಯನ್ನು ಬೆಳ್ಳಿ ಆಭರಣ ವಸ್ತುಗಳನ್ನೂ, ತಲೆಗೂದಲನ್ನೂ, ರೇಷ್ಮೆ ಬಟ್ಟೆಗಳನ್ನೂ ಶುಚಿ ಮಾಡಲು ಸಾಬೂನಿನ ಬದಲು ಬಳಸುತ್ತಾರೆ. (ಡಿ.ಜಿ.ಕೆ.)

**ಅಂಡ :** ಮೊಟ್ಟೆ ಅಥವಾ ತತ್ತಿ (ಎಗ್). ನಿಶೇಚನಗೊಂಡ ಅಂಡಾಣುವಿಗೆ ಈ ಹೆಸರು ಬಳಕೆಯಾಗುತ್ತದೆ. ಈ ಪದವನ್ನು ಪ್ರಜನನಜೀವಕೋಶದ ಬೆಳವಣಿಗೆಯಲ್ಲಿನ ವಿವಿಧ ಹಂತಗಳಿಗೂ ಬಳಸುತ್ತಾರೆ. ಅದರ ರಚನೆ ಸಾಮಾನ್ಯವಾದ ಜೀವಕೋಶದಂತೆಯೇ ಇರುತ್ತದೆ. ಆಹಾರ ಸಂಗ್ರಹಣೆಯಿಂದ ಗಾತ್ರ ಸ್ವಲ್ಪ ದೊಡ್ಡದಾಗಿರಬಹುದು. ಕೆಲವು ಸಾರಿ ಅದರ ಸುತ್ತಲೂ ರಕ್ಷಣೆಗಾಗಿ ಸ್ರವಿಸಿದ ಇತರ ರಚನೆಗಳೂ ಇರಬಹುದು.

ಕಪ್ಪೆಯ ಮೊಟ್ಟೆಯ ರಚನೆ ಬಹಳ ಸರಳ. ಆಕಾರದಲ್ಲಿ ಅದರ ಮೊಟ್ಟೆ ಚೆಂಡಿನಂತೆ ದುಂಡಾಗಿದೆ. ಅದರ ಸುತ್ತಲೂ ಜೆಲ್ಲಿಯ ಹೊದಿಕೆಯಿದೆ. ಅದನ್ನು ತೆಗೆದು ಮೊಟ್ಟೆಯನ್ನು ಪರೀಕ್ಷಿಸಿದರೆ ಬಣ್ಣದಲ್ಲಿ ಎರಡು ಭಾಗವನ್ನು ಕಾಣಬಹುದು. ನೀರಿನಲ್ಲಿ ತೇಲುವಾಗ ಮೇಲ್ಭಾಗದಲ್ಲಿರುವ ಕಪ್ಪು ಛಾಯೆಯ ಭಾಗ–ಅದಕ್ಕೆ ಪ್ರಾಣಿಧ್ರುವ ಎಂದು ಹೆಸರು. ಇದು ಬೆಳವಣಿಗೆಯಲ್ಲಿ ಪ್ರಾಣಿಯ ರೂಪ ರಚನೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ; ನೀರಿನಲ್ಲಿ ಮುಳುಗಿರುವಾಗ ಕೆಳಭಾಗದಲ್ಲಿರುವ ಎದುರು ಭಾಗಕ್ಕೆ ಸಸ್ಯಧ್ರುವ ಎಂದು ಹೆಸರು. ಇದು ಕಪ್ಪೆಯ ಮೊಟ್ಟೆಯ ಬಂಡಾರದ ದೆಸೆಯಿಂದ ತುಸುಹಳದಿ ಬಣ್ಣವಾಗಿ ಕಾಣುತ್ತದೆ. ಈ ಭಾಗ ನೀರಿನಲ್ಲಿ ಮುಳುಗುವುದಕ್ಕೂ ಈ ಬಂಡಾರದ ಭಾರವೇ ಕಾರಣ. ಇದು ಮೊಟ್ಟೆಯಲ್ಲಿ ತಾಯಿ ಸಂಗ್ರಹಿಸಿದ ಆಹಾರ. ಬೆಳವಣಿಗೆಯ ಕಾಲದಲ್ಲಿ ಈ ಆಹಾರವನ್ನು ಉಪಯೋಗಿಸಿಕೊಂಡು ಭ್ರೂಣ ಬೆಳೆಯುತ್ತದೆ. ಜರ್ಮೈನಲ್ ವೆಸಿಕಲ್ ಪ್ರಾಣಿಧ್ರುವದ ಕಡೆಗಿದೆ. ಮೊಟ್ಟೆಯ ಸುತ್ತಲೂ ವೈಟಲೈನ್ ಪಟಲದ ಹೊದಿಕೆ ಇದೆ.

ಇದಕ್ಕಿಂತಲೂ ರಚನೆಯಲ್ಲಿ ಸ್ವಲ್ಪ ಸಂಕೀರ್ಣವಾದ ಮೊಟ್ಟೆಗಳೆಂದರೆ ಪಕ್ಷಿಗಳ ಮೊಟ್ಟೆಗಳು. ಇವು ಗಾತ್ರದಲ್ಲಿ ದೊಡ್ಡವು. ಆಹಾರ ಭಂಡಾರ ಹೆಚ್ಚಾಗಿದ್ದು ಆಲ್ಬುಮಿನ್ ಎನ್ನುವ ಶ್ವೇತಭಾಗವು ಇವುಗಳಲ್ಲಿ ಇದೆ. ಸುತ್ತಲೂ ರಕ್ಷಣೆಗಾಗಿ ಕ್ಯಾಲ್ಸಿಯಂ ಕಾರ್ಬೊನೇಟ್‌ನಿಂದ ರಚಿತವಾದ ಹೊರಚಿಪ್ಪಿದೆ (ಶೆಲ್).

ಜರಾಯುಜಗಳಲ್ಲಿ ಬೆಳೆಯುವ ಭ್ರೂಣ ತನಗೆ ಬೇಕಾದ ಆಹಾರ ಮತ್ತು ಆಕ್ಸಿಜನ್ನನ್ನು ತಾಯಿಯ ರಕ್ತದಿಂದ ಪಡೆಯುತ್ತದೆ. ಆದುದರಿಂದ ಅವುಗಳ ಅಂಡಗಳಲ್ಲಿ ಆಹಾರ ಸಂಗ್ರಹ ಇರುವುದಿಲ್ಲ. ಸ್ತನಿಗಳ ಅಂಡಾಣುಗಳಿಗೆ ಸುತ್ತಲಿರುವ ಆವರಣಗಳಿಂದಾದ ಸೇರಿ ಗ್ರಾಫಿಯನ್ ಫಾಲಿಕಲ್‌ನೊಳಗೆ ಬೆಳೆಯುತ್ತದೆ. ಅಂಡಾಶಯದಲ್ಲಿ ತತ್ತಿ ಬೆಳೆಯುವ ಹಂತದಲ್ಲಿ ಅನೇಕ ಜೀವಕೋಶಗಳು ಗ್ರಾಫಿಯನ್ ಫಾಲಿಕಲ್ ರಚನೆಯಲ್ಲಿ ಪಾಲ್ಗೊಳ್ಳುತ್ತವೆ. ಮೊಟ್ಟೆಗಳು ರಚನೆಯಲ್ಲಿ ವಿವಿಧ ರೂಪವನ್ನು ತಾಳುತ್ತವೆ. ಗಾತ್ರದಲ್ಲೂ ವ್ಯತ್ಯಾಸಗಳುಂಟು. ಇಲಿಯದು ಅತಿ ಚಿಕ್ಕ ಅಂಡ (ವ್ಯಾಸ 0.6 ಮಿಮೀ). ಉಷ್ಟ್ರ ಪಕ್ಷಿಯ ಮೊಟ್ಟೆ 85 ಮಿಮೀ ವ್ಯಾಸದ್ದಾಗಿದೆ. ಕ್ರಿಕೆಟ್ ಚೆಂಡಿಗಿಂತಲೂ ದೊಡ್ಡ ಗಾತ್ರದ್ದು ಯಾವ ಗಾತ್ರದ್ದೇ ಆಗಿರಲಿ ಅದರಲ್ಲಿರುವ ಸೈಟೋಪ್ಲಾಸಮ್ ಅಂಶ ಮಾತ್ರ ಎಲ್ಲಾ ಮೊಟ್ಟೆಗಳಲ್ಲಿಯೂ ಒಂದೇ. ಗಾತ್ರವು ಅದರೊಳಗೆ ಸಂಗ್ರಹವಾಗಿರುವ ಬಂಡಾರದ ಪ್ರಮಾಣದ ವ್ಯತ್ಯಾಸದಿಂದ ಉಂಟಾಗುತ್ತದೆ.




**1. ಹೊರಚಿಪ್ಪು 2. ಅಷ್ಟು ಮಂದವಲ್ಲದ ಆಲ್ಬುಮಿನ್ 3. ಮಂದವಾಗಿರುವ ಆಲ್ಬುಮಿನ್ 4. ಆಲ್ಬುಮಿನ್ ಸುರುಳಿ 5. ಹಳದಿಬಣ್ಣದ ಲೋಳೆ 6. ಬಿಳಿಯ ಬಣ್ಣದ ಲೋಳೆ 7. ವೈಟಲೈನ್ ಪೊರೆ 8. ಕೋಶದ ಹೊರಪೊರೆ 9. ವಾಯುಪ್ರದೇಶ 10. ಕೋಶದ ಒಳಪೊರೆ 11. ಕೇಂದ್ರಭಾಗ**

ಮೊಟ್ಟೆಯ ಸುತ್ತಲೂ ಪ್ಲಾಸ್ಮಾ ಪೊರೆ ಇದೆ. ಇದರ ಸುತ್ತಲೂ ವಿಟಲೈನ್ ಪೊರೆಯಿದೆ. ನಿಶೇಚನಗೊಂಡ ಅಂಡಗಳಲ್ಲಿ ಗರ್ಭಾದಾನ ಪೊರೆ ಇರುತ್ತದೆ.

ಮೊಟ್ಟೆಯ ಒಳಗಿರುವ ಭಂಡಾರವನ್ನು ಡ್ಯೂಟೋಪ್ಲಾಸಮ್ ಎಂದೂ ಕರೆಯುತ್ತಾರೆ. ಇದರಲ್ಲಿ ವೈಟಮಿನ್‌ಗಳು, ಪ್ರೋಟೀನುಗಳು ಮುಂತಾದ ಬೆಳವಣಿಗೆಗೆ ಆವಶ್ಯಕವಾದ ವಸ್ತುಗಳಿರುತ್ತವೆ. ಅನೇಕ ಮೊಟ್ಟೆಗಳು ಬಣ್ಣಬಣ್ಣದವಾಗಿರುತ್ತವೆ.

ಮೊಟ್ಟೆಯೊಳಗಿನ ಭಂಡಾರದ ಹಂಚಿಕೆಯಲ್ಲಿ ಒಂದು ನಿಯಮವನ್ನು ಕಾಣಬಹುದು. ಇದನ್ನನುಸರಿಸಿ ಮೊಟ್ಟೆಗಳನ್ನು ಮೂರು ರೀತಿಯಾಗಿ ವಿಂಗಡಿಸಬಹುದು. ಸ್ತನಿಗಳ ಅಂಡದಲ್ಲಿ ಭಂಡಾರ ಎಲ್ಲೆಡೆ ಸಮವಾಗಿ ಹರಡಿದೆ. ಇದನ್ನು ಹೋಮೋಲೆಸಿತಲ್ ಎನ್ನುವರು. ಭಂಡಾರ ಮೊಟ್ಟೆಯ ಮಧ್ಯಭಾಗದಲ್ಲಿದ್ದು ಅದರ ಸುತ್ತಲೂ ಸೈಟೋಪ್ಲಾಸಮ್ ಇರುವ ಮೊಟ್ಟೆಗೆ ಸೆಂಟ್ರೋಲೆಸಿತಲ್ ಎನ್ನಲಾಗುತ್ತದೆ (ಉದಾ: ಕೀಟಗಳ ಮೊಟ್ಟೆ). ಕಪ್ಪೆಯ ಮೊಟ್ಟೆಯಲ್ಲಿ ಭಂಡಾರ ಸಸ್ಯಧ್ರುವದಲ್ಲಿ ಕೇಂದ್ರೀಕೃತವಾಗಿರುತ್ತದೆ. ಇದನ್ನು ಟೀಲೋಲೆಸಿತಲ್ ಎನ್ನುವರು. ಪಕ್ಷಿಯ ಮೊಟ್ಟೆಗಳಲ್ಲಿ ಭಂಡಾರ ಪೂರ್ಣ ತುಂಬಿದ್ದು ಭ್ರೂಣವಾಗಿ ಬೆಳೆಯುವ ಭಾಗವನ್ನು ಕೇವಲ ಒಂದು ಸಣ್ಣ ಕೋಶಕೇಂದ್ರ ಭಾಗದಿಂದ ಗುರುತಿಸಬಹುದು. ಇಂಥ ಮೊಟ್ಟೆಗಳಿಗೆ ಮೆಗಾಲೆಸಿತಲ್ ಎನ್ನುತ್ತೇವೆ.

ಮೊಟ್ಟೆಯಲ್ಲಿರುವ ಅಥವಾ ಅದರ ಸುತ್ತಲೂ ಇರುವ ಪಟಲಗಳನ್ನು ಅವು ತಾಯಿಯ ದೇಹದಲ್ಲಿ ಉಂಟಾದ ಸ್ಥಳ ಮತ್ತು ರೀತಿಗಳನ್ನನುಸರಿಸಿ ಮೂರು ಗುಂಪುಗಳಾಗಿ ವಿಂಗಡಿಸಬಹುದು.

1. ಪ್ರಥಮ ಪಟಲಗಳು – ಇವು ಮೊಟ್ಟೆಯ ಭಾಗಗಳು. ಉದಾ: ವೈಟಲೈನ್ ಪಟಲ. 2. ದ್ವಿತೀಯ ಪಟಲಗಳು– ಅಂಡಾಶಯದಲ್ಲಿ ಮೊಟ್ಟೆಗಳು ಬೆಳೆಯುವ ಹಂತದಲ್ಲಿ ಫಾಲಿಕಲ್ ಜೀವಕೋಶಗಳು ಕೆಲವು ಕೀಟಗಳಲ್ಲಿ ಗಟ್ಟಿಯಾದ ಹೊದಿಕೆಗಳನ್ನು ಉಂಟುಮಾಡುತ್ತವೆ. 3. ತೃತೀಯ ಪಟಲಗಳು–ಇವು ಅಂಡಾಶಯದಲ್ಲಿ ಉತ್ಪತ್ತಿಯಾಗದೆ, ಮೊಟ್ಟೆ ಅಂಡಾಶಯವನ್ನು ಬಿಟ್ಟು ಹೊರಗೆ ಹೋಗುವ ಹಾದಿಯಲ್ಲಿ ಓವಿಡಕ್ಟ್ ನಾಳದಲ್ಲಿ ಸ್ರವಿಸಲ್ಪಡುತ್ತದೆ. ಉದಾ: ಕೋಳಿ ಮೊಟ್ಟೆ; ಮೊಟ್ಟೆಯ ಆಲ್ಬುಮಿನ್ ಚಿಪ್ಪಿನ ಹೊದಿಕೆ ಮತ್ತು ಚಿಪ್ಪುಗಳು.

ಪ್ರಾಣಿಗಳ ಮೊಟ್ಟೆಗಳನ್ನು ಸಮೀಕ್ಷೆ ಮಾಡಿದರೆ ಅದರಲ್ಲಿಯೂ ಒಂದು ರೀತಿಯ ವಿಕಸನ ಕಂಡುಬರುತ್ತದೆ.

ಸಾಮಾನ್ಯವಾಗಿ ನೀರಿನಲ್ಲಿ ಬೆಳೆಯುವ ಮೊಟ್ಟೆಗಳು ಗಾತ್ರದಲ್ಲಿ ದೊಡ್ಡವಲ್ಲ. ಕಾರಣ ಆಹಾರ ಸಂಗ್ರಹಣೆ ಹೆಚ್ಚು ಇರುವುದಿಲ್ಲ. ಏಕೆಂದರೆ ಸುತ್ತಲಿರುವ ನೀರಿನಿಂದಲೇ ಬೆಳೆಯುತ್ತಿರುವ ಭ್ರೂಣ ತನಗೆ ಬೇಕಾದ ಆಹಾರ ಮತ್ತು ನೀರನ್ನು ಸುಲಭವಾಗಿ ಪಡೆಯುತ್ತದೆ. ಆದುದರಿಂದ ತಾಯಿ ಆಹಾರ ಸಂಗ್ರಹಣೆ ಅಷ್ಟಾಗಿ ಮಾಡುವುದಿಲ್ಲ. ಈ ರೀತಿಯ ಪ್ರಾಣಿಗಳು ಒಂದು ಸಾರಿಗೆ ಸಾವಿರಾರು ಮೊಟ್ಟೆಗಳನ್ನಿಡುತ್ತವೆ. ತಾಯಿ ತಂದೆಗಳು ಮೊಟ್ಟೆಗಳ ಬಗ್ಗೆ ಯಾವ ರೀತಿಯ ಗಮನವನ್ನೂ ತೆಗೆದುಕೊಳ್ಳುವುದಿಲ್ಲ. ಪ್ರಕೃತಿಯೆ ಇವನ್ನು ಕಾಪಾಡುತ್ತದೆ. ಆದರೂ ಇವುಗಳಲ್ಲಿ ಶತ್ರುಗಳ ಆಹಾರವಾಗಿ ಪರಿಣಮಿಸುವ ಮೊಟ್ಟೆಗಳೇ ಹೆಚ್ಚು. ಬೆಳೆದು ಮರಿಗಳಾಗುವಂಥವುಗಳ ಸಂಖ್ಯೆ ಕಡಿಮೆ.

ನೆಲದ ಮೇಲೆ ಇಡುವ ಮೊಟ್ಟೆಗಳು ಗಾತ್ರದಲ್ಲಿ ದೊಡ್ಡವಾಗಿರುತ್ತವೆ. ನೀರಿನಲ್ಲಿಟ್ಟ ಮೊಟ್ಟೆಗಳಲ್ಲಿ ನೀರೇ ಒಂದು ರೀತಿಯ ರಕ್ಷಣೆಯನ್ನು ಕೊಡುತ್ತದೆ. ಆದರೆ ನೆಲದ ಮೇಲೆ ಇಟ್ಟ ಮೊಟ್ಟೆಗಳಿಗೆ ಇದಾವುದೂ ಇಲ್ಲ. ಅವು ಸೂರ್ಯನ ಬಿಸಿಲಿನ ಬೇಗೆ ಬಿರುಗಾಳಿಯ ಬಿರುಸು ಮುಂತಾದುವನ್ನು ಎದುರಿಸಬೇಕು. ಬಿಸಿಲಿನ ಬೇಗೆಯಿಂದಾಗಿ ಮೊಟ್ಟೆಗಳಿಗೆ ಸುಣ್ಣದ ಚಿಪ್ಪಿದೆ. ಅದರಿಂದ ಒಳಗಿರುವ ನೀರು ಆವಿಯಾಗಿ ಹೋಗಲಾರದು. ಜೊತೆಗೆ ಚಿಪ್ಪು ಒಳಗಿರುವ ಭ್ರೂಣವನ್ನು ರಕ್ಷಿಸುತ್ತದೆ. ಪ್ರಾಣಿಗಳು ನೀರನ್ನು ಪೂರ್ಣವಾಗಿ ತ್ಯಜಿಸಿ ನೆಲದ ಮೇಲೆ ಜೀವಿಸಲು ಇದು ಮುಖ್ಯವಾಗಿ ಸಹಕಾರಿ.

ಬೆಳವಣಿಗೆಯ ವ್ಯತ್ಯಾಸದ ಆಧಾರದ ಮೇಲೆ ವರ್ಗೀಕರಣ ಮಾಡಬಹುದು. ಕೆಲವು ಮೊಟ್ಟೆಗಳ ಭಾಗಗಳನ್ನು ಆಕಸ್ಮಿಕವಾಗಿಯೋ, ಪ್ರಾಯೋಗಿಕವಾಗಿಯೋ ಕತ್ತರಿಸಿ ತೆಗೆದರೆ ಆಗ ಅದರಿಂದ ಬೆಳೆಯುವ ಭ್ರೂಣದಲ್ಲಿ ಕೆಲವು ಭಾಗಗಳಿರುವುದಿಲ್ಲ. ಇಂಥ ಮೊಟ್ಟೆಗಳಿಗೆ ಮೊಸಾಯಿಕ್ ಮೊಟ್ಟೆಗಳೆಂದು ಹೆಸರು. ಇವುಗಳಲ್ಲಿ ಮೊಟ್ಟೆಯಲ್ಲಿಯೇ ಮುಂದೆ ಬೆಳೆಯಬಹುದಾದ ಅಂಗಾಂಗಗಳ ಭ್ರೂಣ ವಿಂಗಡಣೆಯಿರುತ್ತದೆ. ಇವು ಕಡಿಮೆ. (ಉದಾ: ಡೆಂಟೇಲಿಯಂ ಮತ್ತು ಕೀಟಾಪ್ಟರಿಸ್ ಮೊಟ್ಟೆಗಳು). ಮಿಕ್ಕ ಮೊಟ್ಟೆಗಳು ಭಾಗಗಳನ್ನು ಕಳೆದುಕೊಂಡರೂ ಪೂರ್ಣವಾಗಿ ಬೆಳೆಯುತ್ತವೆ. ಇವಕ್ಕೆ ನಿಯಂತ್ರಿತ (ರೆಗ್ಯುಲೇಟಿವ್) ಮೊಟ್ಟೆಗಳೆಂದು ಹೆಸರು.

ಆಮೆ, ಮೊಸಳೆ, ಸ್ಟರ್ಜನ್ ಮುಂತಾದ ಪ್ರಾಣಿಗಳ ಮತ್ತು ಕೆಲವು ಜಾತಿಯ ಪಕ್ಷಿಗಳ ಮೊಟ್ಟೆಗಳನ್ನು ಮನುಷ್ಯ ಆಹಾರವಾಗಿ ಸೇವಿಸಿದ್ದುಂಟು. ಕಾಡುಪಕ್ಷಿಗಳ ಗೂಡಿನಿಂದ ತಂದೋ ಪಕ್ಷಿಗಳನ್ನು ಸಾಕಿಯೋ ಮೊಟ್ಟೆ ಪಡೆದು ಅವುಗಳನ್ನು ಸೇವಿಸುತ್ತಿದ್ದ. ಇತ್ತೀಚೆಗಂತೂ ಕೋಳಿ ಮೊಟ್ಟೆಯ ಬಳಕೆ ಹೆಚ್ಚಾಗಿದ್ದು, ಅದನ್ನು ಪಡೆಯುವ ಸಲುವಾಗಿಯೇ ಪ್ರಪಂಚದ ನಾನಾ ಭಾಗಗಳಲ್ಲಿ ಕೋಳಿ ಸಾಕಣೆ ಕೇಂದ್ರಗಳು ಅಧಿಕ ಸಂಖ್ಯೆಯಲ್ಲಿ ತೆರೆಯಲ್ಪಟ್ಟಿವೆ. ಇದರಿಂದ ಉತ್ಪತ್ತಿಯಾಗುವ ವರಮಾನವೂ ಅಧಿಕವಾಗಿದೆ. ಕೋಳಿ ಸಾಕಣೆ, ಕೋಳಿಗಳಿಡುವ ಮೊಟ್ಟೆಯ ವರ್ಗೀಕರಣ, ಸಂರಕ್ಷಣೆ ಹಾಗೂ ಸಂಸ್ಕರಣ– ಈ ಮೊದಲಾದ ವಿಧಾನಗಳನ್ನು ಜನರಿಗೆ ತಿಳಿಸಿಕೊಡುವುದಕ್ಕಾಗಿಯೇ ಅನೇಕ ತರಬೇತಿ ಕೇಂದ್ರಗಳು ಸ್ಥಾಪಿತವಾಗಿವೆ. ಇದೇ ರೀತಿ ಬಾತು ಮೊಟ್ಟೆಗಳನ್ನೂ ಹಲವರು ಸೇವಿಸುತ್ತಾರೆ. ಇಂಥ ಮೊಟ್ಟೆಗಳನ್ನು ಸೇವಿಸುವುದರಿಂದ ದೇಹಪೋಷಣೆಗೆ ಬೇಕಾದ ಪ್ರೋಟೀನು ಮೊದಲಾದ ಪೌಷ್ಟಿಕಾಂಶಗಳು ದೊರಕುತ್ತವೆ ಎಂಬುದು ವೈದ್ಯಶಾಸ್ತ್ರಜ್ಞರ ಅಭಿಪ್ರಾಯ (**ನೋಡಿ ಜೀವಾತುಗಳು**).

(ಎಚ್.ಬಿ.ಡಿ.)

**ಅಂಡಕ (ಸಸ್ಯಗಳಲ್ಲಿ) :** ಸಸ್ಯಗಳ (ವಿಶೇಷವಾಗಿ ಬೀಜ ಸಸ್ಯಗಳ) ಹೆಣ್ಣು ಜನನಾಂಗದ ಪ್ರಧಾನ ಅಂಗ (ಓವ್ಯೂಲ್). ಪುಷ್ಪಪತ್ರ, ದಳ, ಕೇಸರ, ಅಂಡಕೋಶಗಳನ್ನುಳ್ಳ ಇಡೀ ಹೂವನ್ನು ಉದ್ದ ಸೀಳಿ ನೋಡಿದಾಗ (ಚಿತ್ರ 1) ಅಂಡಕೋಶದ ಒಳಭಾಗದಲ್ಲಿ ಅಂಡಕ ಕಾಣುತ್ತದೆ. ಪರಾಗಸ್ಪರ್ಶಕ್ರಿಯೆ, ನಿಶೇಚನಕ್ರಿಯೆಗಳ ಫಲವಾಗಿ ಬೀಜವಾಗಿ ವರ್ಧನಗೊಳ್ಳುತ್ತದೆ.

ಅಂಡಕ ಆಕೃತಿಯಲ್ಲಿ ಸಾಧಾರಣವಾಗಿ ಚೆಂಡಿನಂತಿದೆ. ಅದರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಹಲವಾರು ಬಗೆಯ ಆಕಾರಗಳನ್ನು ತಳೆಯುತ್ತದೆ. ಕೆಲವು ವಿಜ್ಞಾನಿಗಳ ಪ್ರಕಾರ ರೂಪಾಂತರ ಹೊಂದಿದ ಕಾಂಡವೇ ಹೂವು. ಹೂವಿನ ವಿವಿಧ ಅಂಗಾಂಗಗಳು ಬೆಳೆಯುವಂಥ ಕಾಂಡ ಅಥವಾ ಕಂಕುಳ ಭಾಗದ ತುದಿಯಲ್ಲಿ ಚಂದ್ರಾಕಾರದಂತಿರುವ ಪ್ಲಾಸೆಂಟ ಭಾಗದಲ್ಲಿ ಕೆಲವು ಜೀವಕೋಶಗಳು ಹೊರಚರ್ಮದ (ಎಪಿಡರ್ಮಿಸ್) ಮೊದಲ ಅಥವಾ ಎರಡನೆಯ ಪದರದಿಂದ ವೃದ್ಧಿಹೊಂದಿ ತಮ್ಮ ಅಸ್ತಿತ್ವವನ್ನು ಪಡೆಯುತ್ತವೆ. ಈ ರೀತಿಯ ಬೆಳವಣಿಗೆಗೆ ಕಾರಣವಾದ ಜೀವಕೋಶಗಳು ಹಲವಾರು ಅಥವಾ ಒಂದೆರಡು

ಮಾತ್ರವಿರಬಹುದು. ಉದಾ: ಕೆಲವು ಆರ್ಕಿಡ್‌ಗಳಲ್ಲಿ, ಅಂಡಕ ಎಂದರೆ ಹೊರಚರ್ಮದಿಂದ ಆವೃತವಾದ ಕೆಲವೇ ಜೀವಕೋಶಗಳ ಸಮೂಹವಾಗಿದ್ದರೆ ಮತ್ತೆ ಕೆಲವು ಬಗೆಯ ಸಸ್ಯಗಳಲ್ಲಿ, ಅದರಲ್ಲಿಯೂ ಪರಾವಲಂಬಿಗಳಲ್ಲಿ ಅಂಡಕಕ್ಕೆ ಒಳಪಟ್ಟ ಬೇರೆಬೇರೆ ಭಾಗಗಳು ಅಂಡಕದ ಕಾರ್ಯವನ್ನು ಎಸಗುತ್ತವೆ. ಅಂಡಕದ ಬೆಳವಣಿಗೆ ಕೇಸರದ ಅಥವಾ ಹೂವಿನ ಬೆಳವಣಿಗೆಯನ್ನು ಹೆಚ್ಚಾಗಿ ಅನುಸರಿಸಿರುತ್ತದೆಯಾದರೂ ಓಕ್‌ಮರ (ಕ್ವೆರ್‌ಕಸ್) ಎಂಬ ಸಸ್ಯದಲ್ಲಿ ಪರಾಗಾರ್ಪಣೆಯಾಗುವವರೆಗೂ ಅಂಡ ಬೆಳೆಯದಿರುವಂಥ ನಿದರ್ಶನಗಳಿವೆ. ಕೆಲವು ಆರ್ಕಿಡ್‌ಗಳಲ್ಲಿ ಪರಾಗಾರ್ಪಣೆಯಾಗಿ ಹಲವು ವಾರಗಳು ಸಂದಿದ್ದರೂ ಅಂಡಕ ತನ್ನ ಪ್ರಬುದ್ಧ ಸ್ಥಿತಿಯನ್ನು ಪಡೆದಿರುವುದಿಲ್ಲ. ಹೀಗೆ ಅಂಡಕದ ಬೆಳವಣಿಗೆ ಆವೃತ ಬೀಜಸಸ್ಯಗಳಲ್ಲಿ ವೈವಿಧ್ಯವನ್ನು ಪ್ರದರ್ಶಿಸುತ್ತದೆ.

ಅಂಡಕವನ್ನು ಉದ್ದವಾಗಿ ಕತ್ತರಿಸಿದಾಗ (ಚಿತ್ರ 2) ಹಲವಾರು ಒಳಭಾಗಗಳನ್ನು ಗಮನಿಸಬಹುದು. ಅದರ ಮಧ್ಯಭಾಗದಲ್ಲಿ ಸಾಮಾನ್ಯಬಗೆಯ ಜೀವಕೋಶಗಳು ತುಂಬಿಕೊಂಡಿರುತ್ತವೆ. ಈ ಭಾಗವನ್ನು ನ್ಯೂಸೆಲಸ್ ಅಥವಾ ಅಂಡಕಾಯ ಎಂದು ಹೇಳುತ್ತಾರೆ. ಸಾಧಾರಣವಾಗಿ ನ್ಯೂಸೆಲಸ್ ಒಂದು ಅಥವಾ ಎರಡು ಹೊದಿಕೆಗಳಿಂದ (ಇಂಟೆಗ್ಯುಮೆಂಟ್) ಆವೃತವಾಗಿರುತ್ತದೆ. ಅಂಡಕದ ತಳಭಾಗವಾದ ಹಾಗು ತೊಟ್ಟಿನ ಭಾಗದಿಂದ ಪದರ ಬೆಳೆದುಬಂದು – ಆರಂಭದಲ್ಲಿ ಒಂದು ಹೊದಿಕೆ ಬೆಳೆದು ಕ್ರಮೇಣ ಎರಡಾಗಬಹುದು, ಇಲ್ಲವೇ ಆರಂಭದಿಂದಲೇ ಎರಡು ಹೊದಿಕೆ ಸ್ವತಂತ್ರವಾಗಿ ಬೆಳೆಯಬಹುದು–ಇದು ನ್ಯೂಸೆಲಸ್ ಭಾಗವನ್ನು ಕೊಂಚ ಅಥವಾ ಸಂಪೂರ್ಣವಾಗಿ ಆವರಿಸಿಕೊಂಡಿರುತ್ತದೆ. ಹೀಗೆ ಹೊದಿಕೆಗಳು ಆವರಿಸಿಕೊಳ್ಳುವಾಗ ಹೊರಹೊದಿಕೆ ಸ್ವಲ್ಪ ಹೆಚ್ಚಿಗೆ ಬೆಳೆದುಕೊಂಡು ಹೋಗಲೂಬಹುದು. ಈ ಹೊದಿಕೆಗಳು ಪರಸ್ಪರ ಸಂಧಿಸುವ ಪ್ರದೇಶದಲ್ಲಿ ಕಿರಿದಾದ ರಂಧ್ರವಿರುತ್ತದೆ. ಇದನ್ನು ಬೀಜರಂಧ್ರ (ಮೈಕ್ರೋಪೈಲ್) ಎಂದು. ಈ ಭಾಗದಿಂದಲೇ ಕೇಸರದಿಂದ ಹೊರದೂಡಲ್ಪಟ್ಟ ಪರಾಗ ಅಂಡಕದೊಳಕ್ಕೆ ಹೋಗುತ್ತದೆ. ಆವೃತ ಬೀಜಸಸ್ಯಗಳ ಅಂಡಕಗಳಲ್ಲಿ ಹೆಚ್ಚಾಗಿ ಎರಡು ಹೊದಿಕೆಗಳು ಇರುವುವಾದರೂ ಮೂರು ಅಥವಾ ನಾಲ್ಕು ಹೊದಿಕೆಗಳು ಇರಬಹುದು. ಅಥವಾ ಹೊದಿಕೆಯೇ ಇಲ್ಲದೆಯೂ ಇರಬಹುದು. ಅಂಥ ಅಂಡಕಕ್ಕೆ ನಗ್ನ ಅಂಡಕ ಎಂದು ಕರೆಯುತ್ತಾರೆ. (ನಗ್ನ ಅಂಡಕದ ಇರುವಿಕೆಯನ್ನು ಹಲವಾರು ಸಸ್ಯ ಕುಟುಂಬಗಳಲ್ಲಿ ಗಮನಿಸಬಹುದು. ವಿಕಾಸದ ಹಾದಿಯಲ್ಲಿ ಅಂಡಕ ಹೂವಿನಂತೆಯೇ ಗಳಿಸಿಕೊಂಡಿರುವ ಸರಳರೂಪ ನಗ್ನತೆ ಎಂದು ಕೆಲವು ವಿಜ್ಞಾನಿಗಳ ಅಭಿಪ್ರಾಯ. ಸ್ಯಾಂಟಲೇಸೀ ಕುಟುಂಬದಲ್ಲಿ (ಶ್ರೀಗಂಧ ಮರದ ಗುಂಪು) ಹೆಚ್ಚಾಗಿ ನಗ್ನ ಅಂಡಕಗಳನ್ನು ಕಾಣಬಹುದು). ಅಂಡಕದಲ್ಲಿ ಎರಡು ಹೊದಿಕೆ ಮಾತ್ರವಿರುವಾಗ ಕೇವಲ ಎರಡು ಮೂರು ಹೊದಿಕೆ ಜೀವಕೋಶಗಳಿದ್ದರೂ– ಹೊರಭಾಗದ ಹೊದಿಕೆ ಗಡಸಾಗಿದ್ದು, ಒಳಭಾಗದ್ದು ತೆಳುವಾಗಿ ಮೃದುವಾಗಿರುತ್ತದೆ. ಒಂದೇ ಹೊದಿಕೆ ಇದ್ದಲ್ಲಿ ಮೊದಲನೆಯದಕ್ಕಿಂತ ಗಡಸಾಗಿರುತ್ತದೆ. ಕೆಲವು ಅಂಡಕಗಳಲ್ಲಿ ಒಳಭಾಗದ ಹೊದಿಕೆ ಪ್ರಾಮುಖ್ಯವನ್ನು ಗಳಿಸಿಕೊಂಡು ಹೊರಹೊದಿಕೆಯಿಂದ ಆಚೆ ಬಂದುಬಿಡುತ್ತದೆ. ಇಂಥ ಹೊದಿಕೆಯನ್ನು ಸೀತಾಫಲ ಕುಟುಂಬದ ಕೆಲವು ಸಸ್ಯಗಳಲ್ಲಿ ಕಾಣಬಹುದು. ಹೊದಿಕೆಗಳ ಸಂಖ್ಯೆಯನ್ನು ಅನುಸರಿಸಿ ಅನುವಂಶೀಯ ಪ್ರಭೇದವನ್ನು ಕೆಲವು ವಿಜ್ಞಾನಿಗಳು ಗಮನಿಸಿರುವರಾದರೂ ಅದೊಂದೇ ಪ್ರಮುಖವಾದ ಅಂಶವೇನಲ್ಲ.

ಎರಡು ಹೊದಿಕೆಗಳಿರುವ ಅಂಡಕಗಳನ್ನು ನಿಮ್ನ ಬೀಜಗಳಲ್ಲೂ ಏಕದಳ ಸಸ್ಯಗಳಲ್ಲೂ ಕಾಣಬಹುದು. ಸಂಯುಕ್ತ ದಳಗಳ ದ್ವಿದಳ ಸಸ್ಯಗಳಲ್ಲಿ ಕೇವಲ ಒಂದು ಹೊದಿಕೆ ಇರುವುದು– ಅದು ಎರಡು ಹೊದಿಕೆ ಕೂಡಿಕೊಂಡು ಆಗಿರಬಹುದು, ಇಲ್ಲವೆ ಸ್ವತಂತ್ರವಾಗಿ ಒಂದೇ ಹೊದಿಕೆಯಾಗಿರಬಹುದು. ಇದು ಸಾಮಾನ್ಯವಾದರೂ ಇದಕ್ಕೆ ಕೆಲವು ಅಪವಾದಗಳಿವೆ. ಉದಾ: ಕುಂಬಳ ಸಸ್ಯಕುಟುಂಬ ಸಂಯುಕ್ತ ದಳ ದ್ವಿದಳ ಸಸ್ಯವಾದರೂ ಅಂಡಕ ಎರಡು ಹೊದಿಕೆಗಳನ್ನು ಪಡೆದಿದೆ.

ಹೊರಹೊದಿಕೆಯಲ್ಲಿ ಅಲ್ಲಲ್ಲಿ ಈ ರಂಧ್ರಗಳು ಕೆಲವು ಸಸ್ಯಗಳಲ್ಲಿ ಪದರ ಸಂಪೂರ್ಣ ಬೆಳೆದ ಅನಂತರ ಕಾಣಿಸಿಕೊಳ್ಳಬಹುದು. ಒಳ ಹೊದಿಕೆ ಕೆಲವು ಬಗೆಯ ಸಸ್ಯಗಳಲ್ಲಿ ವಿಶಿಷ್ಟವಾದ ಕಾರ್ಯಗಳಲ್ಲಿ ಭಾಗವಹಿಸಬಹುದು. ಅಂಡಕದಲ್ಲಿರುವ ಭ್ರೂಣಕೋಶ ಭಿತ್ತಿಯೊಂದಿಗೆ ಸೇರಿ (ಆಗ ನ್ಯೂಸೆಲಸ್ ಬಹುಮಟ್ಟಿಗೆ ನಶಿಸಿ ಹೋಗಿರುತ್ತದೆ) ಭ್ರೂಣದ ಬೆಳವಣಿಗೆಗೆ ಆಹಾರವನ್ನು ಒದಗಿಸುತ್ತದೆ. ಹೊದಿಕೆ ಇಂಥ ಕಾರ್ಯದಲ್ಲಿ ನಿರತವಾದಾಗ ಎಂಡೋಥೀಲಿಯಂ ಅಥವಾ ಇದನ್ನು ಟೆಗ್ಯುಮೆಂಟರಿ ಟಿಪೀಟಂ ಎಂದು ಹೇಳುತ್ತಾರೆ. ಮತ್ತೆ ಕೆಲವು ಬಗೆಯ ಸಸ್ಯಗಳಲ್ಲಿ ಬೀಜರಂಧ್ರಭಾಗದ ಒಳಹೊದಿಕೆಯಲ್ಲಿರುವ ಹಲವು ಜೀವಕೋಶಗಳು ಪ್ರತ್ಯೇಕವಾಗಿ ಭ್ರೂಣಗಳನ್ನೀಯಬಹುದು. ಗುಲಾಬಿ ಕುಟುಂಬದ ಹಾಗೂ ಬದನೆ ಕುಟುಂಬದ ಕೆಲವು ಸಸ್ಯಗಳಲ್ಲಿ ಇಂಥ ಭ್ರೂಣಗಳನ್ನು ಕಾಣಬಹುದು. ಅಂಡ ಕಟ್ಟಿದ ಮೇಲೂ ಭ್ರೂಣವಾಗಿ ಕ್ರಮೇಣ ಬೆಳೆದು ಬೀಜವಾಗುವ ಸಮಯದಲ್ಲಿ ಸಾಮಾನ್ಯವಾಗಿ ಒಳಹೊದಿಕೆ ನಶಿಸಿಹೋಗುತ್ತದೆ. ಬೀಜದ ಸಿಪ್ಪೆ ಹೊರಹೊದಿಕೆಯಿಂದ ಆಗಿದೆ. ಒಮ್ಮೊಮ್ಮೆ ಈ ಹೊರಹೊದಿಕೆವೇ ಪ್ರಧಾನವಾಗಿದ್ದು ಬೀಜವನ್ನು ಕಾಪಾಡುವ ಅಂಗವಾಗಿ ಇರಬಹುದು.

ಸಾಮಾನ್ಯವಾಗಿ ಅಂಡಕದಲ್ಲಿ ಎರಡು ವಿಧಗಳಿವೆ. ಹೆಚ್ಚಾಗಿ ನ್ಯೂಸೆಲಸ್ ಇದ್ದಾಗ ಕ್ರಾಸಿನ್ಯೂಸಿಲೇಟ್ ಹೊದಿಕೆಗಳು ಭ್ರೂಣಕೋಶದ ಆದಿಕೋಶ ಹೊರಚರ್ಮದ ಕೆಳಭಾಗದಲ್ಲಿದ್ದು ಒಂದೆರಡು ಪದರಗಳಲ್ಲಿ ಮಾತ್ರ ನ್ಯೂಸೆಲಸ್ ಅನ್ನು ಆವರಿಸಿದ್ದರೆ, ಟೆನ್ಯೂನ್ಯೂಸಿಲೇಟ್ ಎಂದೂ ಹೇಳುತ್ತಾರೆ. ನ್ಯೂಸಲಸ್‌ನ ತಳಭಾಗದಲ್ಲಿ ಒಮ್ಮೊಮ್ಮೆ ದಪ್ಪನಾಗಿರುವ ಕೋಶ ಸಮೂಹ ಇರುವುದುಂಟು. ಇದನ್ನು ಹೈಪೋಸ್ಟೇಸ್ ಎಂದು ಹೇಳುತ್ತಾರೆ. ಇದರ ಕಾರ್ಯನಿರ್ವಹಣೆಯ ಬಗ್ಗೆ ಹಲವು ಅಭಿಪ್ರಾಯಗಳಿವೆ.

ಕೆಲವು ಆರ್ಕಿಡ್‌ಗಳ ಅಂಡಕದಲ್ಲಿ ನ್ಯೂಸೆಲಸ್ ಬಹಳ ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ನಗ್ನ ಅಂಡಕವಿರುವ ಸಸ್ಯ ಜಾತಿಯಾದ ಲೊರಾಂತೇಸೀಯಲ್ಲಿ ಪ್ಲಾಸೆಂಟ ಭಾಗ ಅಥವಾ ಅಂಡದ ಭಿತ್ತಿ ನ್ಯೂಸೆಲಸ್‌ನ ಕಾರ್ಯವನ್ನೆಸಗುತ್ತದೆ. ಉದಾ: ಆರ್‌ಸಿತೋಬಿಯಂ ಮುಸಿಲ್ಲಂ ಎಂಬ ಸಸ್ಯದಲ್ಲಿ ಅಂಡಕವಿರುವುದೇ ಇಲ್ಲ; ಪ್ರಭೇದೀಕರಣ ಹೊಂದದ ಪ್ಲಾಸೆಂಟದ ಕೋಶ ಸಮೂಹ ಮಾತ್ರವಿರುತ್ತದೆ. ಆ ಸಮೂಹದಿಂದ



ಅಂಡಕ

1. ಹೂವಿನ ಉದ್ದಸೀಳಿಕೆ : i. ಶಲಾಕಾಗ್ರ ii. ಶಲಾಕೆ iii. ಅಂಡಕೋಶ iv. ಅಂಡಕ

2. ಅಂಡಕದ ಉದ್ದಸೀಳಿಕೆ : i. ಚಲಾಜ ii. ನ್ಯೂಸೆಲಸ್ iii. ವಾಹಕ ಅಂಗಾಂಶ iv. ತೊಟ್ಟು v. ಬೀಜರಂಧ್ರ vi. ಒಳಕವಚ vii. ಹೊರಕವಚ

3. ವಿವಿಧ ರೀತಿಯ ಅಂಡಕಗಳು : i. ಆರ್ಥೋಟ್ರೋಪಸ್ ii. ಅನಾಟ್ರೋಪಸ್ iii. ಕಾಂಪೈಲೊಟ್ರೋಪಸ್ vi. ಮಧ್ಯಂತರ ಬಗೆಯ ಅಂಡಕ (ಹೆಮಿ ಅನಾಟ್ರೋಪಸ್)

ಕ್ರಮೇಣ ಎರಡು ಭ್ರೂಣಕೋಶಗಳು ವೃದ್ಧಿಹೊಂದುತ್ತವೆ. ಒಮ್ಮೊಮ್ಮೆ ನ್ಯೂಸೆಲಸ್ ಬೀಜರಂಧ್ರ ಭಾಗದಿಂದ ಹೊರಬರಬಹುದು. ಕೆಲವು ಬಾರಿ ಅಂಡಕದಲ್ಲಿ ವಿಪುಲವಾಗಿದ್ದುಕೊಂಡು ಕ್ರಮೇಣ ನ್ಯೂನೀಕರಣ ಹೊಂದಬಹುದು. ಅಪೋಸೈನೇಸೀ ಸಸ್ಯ ಕುಟುಂಬದಲ್ಲಿ ಈ ಬಗೆಯ ನ್ಯೂನೀಕರಣವಿದೆ.

ವಿಪುಲವಾದ ನ್ಯೂಸೆಲಸ್ ಇರುವ ಸಸ್ಯಗಳು ಹೆಚ್ಚಾಗಿ ಕೆಳವರ್ಗದವು ಎಂಬುದೊಂದು ಅಭಿಪ್ರಾಯ. ಕೆಳವರ್ಗದ ಸಸ್ಯ ಕುಟುಂಬವಾದ ರೋಸೇಸೀ (ಗುಲಾಬಿ ಕುಟುಂಬ) ಯಲ್ಲಿ ನ್ಯೂನೀಕರಣದ ವಿವಿಧ ಹಂತಗಳನ್ನು ಕಾಣಬಹುದು. ಸಾಧಾರಣವಾಗಿ ಕೆಳವರ್ಗದ

ಏಕದಳ ಹಾಗೂ ದ್ವಿದಳ ಸಸ್ಯಗಳು ಕ್ರಾಸಿನ್ಯೂಸಿಲೇಟ್ ಅಂಡಕಗಳನ್ನು ಹೊಂದಿರುತ್ತವೆ. ಸಂಯುಕ್ತ ದಳದ ದ್ವಿದಳ ಸಸ್ಯಗಳು ಟೆನ್ಯೂ ನ್ಯೂಸಿಲೇಟ್ ಅಂಡಕಗಳನ್ನು ಹೊಂದಿರುತ್ತವೆ. ಇದಕ್ಕೆ ಕೆಲವು ಅಪವಾದಗಳಿವೆ. ಕುಂಬಳ ಕುಟುಂಬ ಸಂಯುಕ್ತದಳವರ್ಗಕ್ಕೆ ಸೇರಿದ್ದರೂ ಇದರ ಅಂಡಕ ವಿಪುಲವಾದ ನ್ಯೂಸೆಲಸ್ ಪಡೆದಿರುತ್ತದೆ. ಈ ಗುಣ ಬಿಡಿದಳ ಪುಷ್ಪಗಳ ಸಸ್ಯಗಳಿಗೆ ಹೆಚ್ಚು ಹತ್ತಿರದ ಸಂಬಂಧ ಪಡೆದಿರುವುದನ್ನು ಸೂಚಿಸುತ್ತದೆ.

ವಿಪುಲವಾದ ನ್ಯೂಸೆಲಸ್ ಭಾಗದಲ್ಲಿ ಯಾವುದಾದರೊಂದು ಅಥವಾ ಕೆಲವು ಜೀವಕೋಶಗಳು ವಿಭೇದೀಕರಣ ಸಾಮರ್ಥ್ಯವನ್ನು ಗಳಿಸಿ, ವಿಭಜನೆ ಹೊಂದಿ ಭ್ರೂಣಕೋಶಗಳಾಗುತ್ತವೆ. ಭ್ರೂಣಕೋಶ ಬೆಳೆದಂತೆ ನ್ಯೂಸೆಲಸ್ ಕ್ರಮೇಣ ನಶಿಸಿಹೋಗುತ್ತದೆ. ಕೆಲವು ಸಸ್ಯಗಳಲ್ಲಿ ಭ್ರೂಣಕೋಶದ ಸಮೀಪದಲ್ಲಿರುವ ನ್ಯೂಸೆಲಸ್ ಜೀವಕೋಶಗಳು ವಿಭಜನೆ ಹೊಂದಿ ಭ್ರೂಣಕೋಶಗಳಾಗಿ ವೃದ್ಧಿಸಲೂಬಹುದು. ಇಂಥ ಸಂದರ್ಭದಲ್ಲಿ ಒಂದು ಅಂಡಕದಲ್ಲಿಯೇ ನಾಲ್ಕು ಐದು ಭ್ರೂಣಕೋಶಗಳನ್ನು ಗಮನಿಸಬಹುದು. ಪೋಯೇಸೀ ಕುಟುಂಬದ ಸಸ್ಯಗಳಲ್ಲಿ ಈ ವಿಧಾನ ಹೆಚ್ಚಾಗಿ ಕಾಣಬಹುದಾಗಿದೆ.

ಅಂಡಕದ ಆಕಾರದಲ್ಲೂ ವೈವಿಧ್ಯವಿದೆ. ಮಿರಬೆಲ್ ಎಂಬಾತನು ಅಂಡಕದ ಆಕಾರಕ್ಕೆ ತಕ್ಕಂತೆ ಹೆಸರುಗಳನ್ನು ಸೂಚಿಸಿದ್ದಾನೆ. ಅಂಡಕ ಪ್ಲಾಸೆಂಟ ಭಾಗದ ಮೇಲೆ ನೇರವಾಗಿದ್ದುಕೊಂಡು ಫ್ಯೂನಿಕಲ್ ಅಂದರೆ ಅದರ ತೊಟ್ಟು, ಬೀಜರಂಧ್ರ ಹಾಗೂ ಚಲಾಜ ಒಂದೇ ಗೆರೆಯಲ್ಲಿದ್ದು, ಬೀಜರಂಧ್ರ ಫ್ಯೂನಿಕಲ್‌ಗೆ ಎದುರಿನ ತುದಿಯಲ್ಲಿರುವ ಅಂಡಕಕ್ಕೆ ಆರ್ಥೋಟ್ರೋಪಸ್ ಎನ್ನುತ್ತಾರೆ (ಚಿತ್ರ 3_i). ಚಲಾಜ ಭಾಗದಿಂದ ಪೂರ್ತಿಯಾಗಿ ಮುರುಟಿಕೊಂಡಿದ್ದರೆ ಅನಾಟ್ರೋಪಸ್ ಅಂಡಕ ಎನ್ನುತ್ತಾರೆ (ಚಿತ್ರ 3–ii). ಮುರುಟಿಕೊಳ್ಳುವಾಗ ಹುರುಳಿ ಬೀಜದ ಆಕಾರವನ್ನು ಪಡೆದು, ಬೀಜರಂಧ್ರ ಭಾಗ ಪ್ಲಾಸೆಂಟ ಭಾಗದ ಹತ್ತಿರವಿದ್ದು, ಅಂಡಕದ ಮಧ್ಯಪ್ರದೇಶದಿಂದ ತಗುಲಿಕೊಂಡಿದ್ದರೆ, ಕಾಂಪೈಲೋಟ್ರೋಪಸ್ ಅಂಡಕ ಎನ್ನುತ್ತಾರೆ(ಚಿತ್ರ 3–iii). ಒಮ್ಮೊಮ್ಮೆ ಅನಾಟ್ರೋಪಸ್ ಅಂಡಕ ($180^o - 300^o$) ಕೋನದವರೆಗೂ ಮುರುಟಿಕೊಳ್ಳಬಹುದು.

ಅನಾಟ್ರೋಪಸ್ ರೀತಿಯ ಅಂಡಕ ಅನೇಕ ಬಗೆಯ ಸಸ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದಾದರೂ ಇದನ್ನು ಹೆಚ್ಚಾಗಿ ಕೆಳವರ್ಗದ ಆವೃತ ಬೀಜಸಸ್ಯಗಳಲ್ಲಿ ಕಾಣಬಹುದು. ಆರ್ಥ್ರೋಟ್ರೋಪಸ್ ರೀತಿಯ ಅಂಡಕವನ್ನು ಸಾಧಾರಣವಾಗಿ ಹೆಚ್ಚು ಮುಂದುವರೆದಿರುವಂಥ ಸಸ್ಯಗಳಲ್ಲಿ ಕಾಣಬಹುದು. ಈ ಬಗೆಯ ಅಂಡಕದಲ್ಲಿ ಪ್ಲಾಸೆಂಟದ ಸಂಪರ್ಕ ತಳಭಾಗದಲ್ಲಿದ್ದು ಒಂಟಿಯಾಗಿರುತ್ತದೆ. ಉದಾ: ಪೂಪರೇಸೀ ಕುಟುಂಬದ ಸಸ್ಯಗಳು, ಕಾಂಪೈಲೋಟ್ರೋಪಸ್ ಅಂಡಕವನ್ನು ಕೆಲವು ಪ್ರಮುಖವಾದ ಸಸ್ಯಕುಟುಂಬಗಳಾದ ಕೆಪಾರಿಡೇಸೀ (ಮರಾಟಿಮೊಗ್ಗು) ಅಪೊಸೈನೇಸೀ (ಕಣಿಗಲೆ), ವರ್ಬಿನೇಸೀ (ಲಂಟಾನ) ಮುಂತಾದವುಗಳಲ್ಲಿ ಕಾಣಬಹುದು. ಕೆಲವು ಕುಟುಂಬಗಳಲ್ಲಿ ಅಂಡಕ ಒಂದೇ ರೀತಿಯದ್ದಾಗಿರಬಹುದು. ಇಲ್ಲವೆ ಒಂದಕ್ಕಿಂತ ಹೆಚ್ಚಿನ ರೀತಿಯನ್ನು ಹೊಂದಿರಬಹುದು. ತೆಂಗಿನ ಸಸ್ಯಗಳಲ್ಲಿ ಅನಾಟ್ರೋಪಸ್ ಹಾಗೂ ಆರ್ಥ್ರೋಟ್ರೋಪಸ್ ಅಂಡಕಗಳೆರಡನ್ನೂ ಕಾಣಬಹುದು. ಕೆಲವು ಸಸ್ಯಗಳಲ್ಲಿ ಪರಾಗಾರ್ಪಣೆಯ ಕಾಲದಲ್ಲಿ ಅನಾಟ್ರೋಪಸ್ ರೀತಿಯದಾಗಿ ಬದಲಾಗಬಹುದು. ಗರ್ಭಾಂಕುರತೆಯಾದ ಆನಂತರ ಕಾಂಪೈಲೋಟ್ರೋಪಸ್ ರೀತಿಯದಾಗಿ ಬದಲಾಗಬಹುದು. ಬಗೆಬಗೆಯ ಅಂಡಕದ ರೀತಿಯು ಸಾಮಾನ್ಯವಾಗಿ ವಾತಾವರಣಕ್ಕೆ ತಕ್ಕಂಥ ಹೊಂದಾಣಿಕೆಯನ್ನು ತೋರಲೂಬಹುದು. ಆರ್ಥ್ರೋಟ್ರೋಪಸ್ ಮತ್ತು ಅನಾಟ್ರೋಪಸ್ ರೀತಿಯ ಅಂಡಕಗಳು ಸಾಧಾರಣವಾಗಿ ಕೆಳದರ್ಜೆಯವೆಂದು ಹಲವರ ಅಭಿಪ್ರಾಯ. ಆರ್ಥ್ರೋಟ್ರೋಪಸ್ ಅಂಡಕದಲ್ಲಿ ಕಂಡುಬರುವ ಸರಳತೆಯೇ ಈ ರೀತಿಯ ಅಭಿಪ್ರಾಯಕ್ಕೆ ಕಾರಣವಾದರೂ ಸಾಕಷ್ಟು ರಚನೆಯ ಮಾರ್ಪಾಡು ಕಾಣುವುದರಿಂದ, ಈ ಸರಳತೆ ವಿಕಾಸದಿಂದ ಉದ್ಭವವಾದುದೆಂದೂ ಹೇಳಬಹುದು. ಅನಾಟ್ರೋಪಸ್ ಅಂಡಕ ಏಕದಳ ಹಾಗೂ ದ್ವಿದಳ ಸಸ್ಯಗಳಲ್ಲಿ ಅತಿ ಕೆಳವರ್ಗದ್ದಾಗಿರುತ್ತದೆ.

ಕೆಳವರ್ಗದ ಆವೃತ ಬೀಜಸಸ್ಯಗಳಲ್ಲಿ ಅಂಡಕದ ವಾಹಕ ಅಂಗಾಂಶಗಳ ವಿವರಣೆಯ ಬಗ್ಗೆ ಹಲವಾರು ವಂಶೇತಿಹಾಸದ (ಫೈಲೋಜೆನೆಟಿಕ್) ಪ್ರಾಮುಖ್ಯವನ್ನು ಕುರಿತು ಸಂಶೋಧನೆಗಳು ನಡೆದಿವೆ. ಅನಾವೃತ ಬೀಜಸಸ್ಯಗಳ ಪೈಕಿ ಒಂದಾದ ಪೈನಸ್‌ನಲ್ಲಿ ಅಂಡಕದ ಹೊದಿಕೆಯಲ್ಲೂ ವಾಹಕ ಅಂಗಾಂಶಗಳೂ(ವ್ಯಾಸ್ಕ್ಯುಲರ್ ಟಿಷ್ಯೂ) ಇಲ್ಲದಿರುವುದೂ ಹಾಗೂ ಅನೇಕ ಆವೃತ ಬೀಜಸಸ್ಯಗಳಲ್ಲಿಯ ಅಂಡಕವನ್ನು ಬಳಸಿಕೊಂಡಿರುವಂಥ ಹೊದಿಕೆಗಳಲ್ಲಿ ವಾಹಕ ಅಂಗಾಂಶಗಳಿಲ್ಲದಿರುವುದೂ ಹೂ ಬಿಡುವ ಸಸ್ಯಗಳ ಅಂಡಕದಲ್ಲಿರುವ ವಾಹಕ ಅಂಗಾಂಶ ಪ್ರಾಚೀನ ಅನಾವೃತ ಸಸ್ಯಗಳ ಬೀಜದಿಂದ ಬಹುಮಟ್ಟಿಗೆ ನ್ಯೂನೀಕರಣ ಹೊಂದಿದೆ ಎಂಬುದಕ್ಕೆ ವಿಜ್ಞಾನಿಗಳು ಅನೇಕ ಸಮರ್ಥನೆಯನ್ನು ಕೊಡಲಾರಂಭಿಸಿದ್ದಾರೆ. ಅಂಡಕದಲ್ಲಿ ಸಾಮಾನ್ಯವಾಗಿ ಎರಡು ವಾಹಕ ಅಂಗಾಂಶಗಳಿರುತ್ತವೆ. ಅನಾವೃತ ಬೀಜಸಸ್ಯದ ಹೊದಿಕೆಗಳಲ್ಲಿರುವಂತೆ ಆವೃತ ಬೀಜಸಸ್ಯಗಳ ಹೊದಿಕೆಗಳಲ್ಲಿ ವಾಹಕ ಅಂಗಾಂಶಗಳಿರುವುದು ಕೆಳವರ್ಗದ ದ್ವಿದಳ ಸಸ್ಯದ ಗುಣವೆಂದು ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಭಾವಿಸಲಾಗಿತ್ತು. ಆ ಸಮಯದಲ್ಲಿ ಸಂಯುಕ್ತ ಪುಷ್ಪದಳದ ಕುಟುಂಬಗಳಾದ ಕುಕುರ್‌ಬಿಟೇಸೀ (ಕುಂಬಳ ಜಾತಿ) ಓಲಿಯೇಸೀ (ಮಲ್ಲಿಗೆ ಜಾತಿ) ಯಲ್ಲಿ ವಾಹಕ ಅಂಗಾಂಶಗಳ ಇರುವಿಕೆಯ ಬಗ್ಗೆ ಅಷ್ಟು ಗಮನವನ್ನು ಕೊಟ್ಟಿರಲಿಲ್ಲ. ಆವೃತ ಬೀಜ ಸಸ್ಯಗಳಲ್ಲಿ ಕಂಡುಬರುವ ವಾಹಕ ಅಂಗಾಂಶಗಳು ಟೆರಿಡೋಸ್ಪರ್ಮ್ಸ್ (ಅನಾವೃತ ಬೀಜ ವರ್ಗದ ಪ್ರಾಚೀನ ಸಸ್ಯಗಳು) ಮತ್ತು ಗೊಡ್ಡು ಈಚಲು (ಸೈಕಾಸ್) ಅಂಡಕದಲ್ಲಿರುವ ವಾಹಕಗಳ ಅವಶೇಷಗಳಿರಬಹುದೆಂದು ಕೆಲವರು ಸೂಚಿಸಿದ್ದಾರೆ.

ಆವೃತ ಬೀಜಸಸ್ಯಗಳ ಅಂಡಕದಲ್ಲಿ ಕಂಡುಬರುವ ವಿವಿಧ ಭಾಗಗಳನ್ನು ಬೇರೆ ವರ್ಗದ ಸಸ್ಯಗಳ ಅಂಡಕಗಳೊಂದಿಗೆ ಹೋಲಿಸುವುದರೊಂದಿಗೆ ಅಂಡಕದ ಉಗಮ, ಬೆಳವಣಿಗೆಯ ಬಗ್ಗೆ ಕೆಲವು ವಿಜ್ಞಾನಿಗಳು ಊಹೆಮಾಡಿದ್ದಾರೆ. ಅಂಡಕದಲ್ಲಿ ಕಂಡುಬರುವ ನ್ಯೂಸೆಲಸ್ ಮೊಗ್ಗಿನ ತುದಿಭಾಗವೆಂದೂ ಹೊದಿಕೆಗಳನ್ನು ಮೊಗ್ಗಿನ ಅಕ್ಕಪಕ್ಕದಲ್ಲಿರುವ ಎಲೆಗಳೆಂದೂ ಕೆಲವರ ಊಹೆ. ಜರೀ ಸಸ್ಯಗಳಲ್ಲಿ (ಫರ್ನ್) ಕಂಡುಬರುವ ಸಂತಾನೋತ್ಪತ್ತಿಯ ಅಂಗವಾದ ಸೋರಸ್ ನೊಂದಿಗೆ ಅಂಡಕವನ್ನು ಹೋಲಿಸುವುದುಂಟು. ಕೆಲವು ವಿಜ್ಞಾನಿಗಳು ಅಂಡಕವನ್ನು ಎಲೆಯ ಒಂದು ರೂಪಾಂತರವೆಂದು ಭಾವಿಸಿ, ಒಳ ಹೊದಿಕೆ ಎಲೆಯ ತುದಿಯ ಭಾಗವೆಂದೂ, ಹೊರಹೊದಿಕೆ ಎಲೆಯ ಎರಡು ಅಂಚುಗಳೆಂದೂ ಹೇಳುತ್ತಾರೆ.

(ಎ.ಎನ್.ಎಸ್.)

**ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು :** ಬಂಗಾಲಕೊಲ್ಲಿಯ ಪೂರ್ವಭಾಗದಲ್ಲಿ ಸು. 223 ದ್ವೀಪಗಳನ್ನೊಳಗೊಂಡ ಸ್ತೋಮ. ಭಾರತದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದು ಇದು $6^0.45'$ ರಿಂದ $13^0.45'$ ಉ.ಅ. ಮತ್ತು $92^o.10'$ ರಿಂದ $94^o.15'$ ಪೂ.ರೇ.ಗಳ ನಡುವೆ ವಿಸ್ತರಿಸಿವೆ. ದಕ್ಷಿಣೋತ್ತರವಾಗಿ ಉದ್ದ 590 ಕಿಮೀ ಮತ್ತು ಅಗಲ 58 ಕಿಮೀ. ವಿಸ್ತೀರ್ಣ 8,249 ಚ.ಕಿಮೀ ಈ ದ್ವೀಪಸ್ತೋಮ ನೋಡಲು ಕಮಾನಿನಾಕಾರದಲ್ಲಿದ್ದು, ಅದರ ಪಶ್ಚಿಮ ಭಾಗವು ಹೊರಬಾಗಿದೆ. ಉತ್ತರದ ಅಂಡಮಾನ್ ಮತ್ತು ದಕ್ಷಿಣದ ನಿಕೋಬಾರ್ ಸ್ತೋಮಗಳನ್ನು 10ನೆಯ ಡಿಗ್ರಿ ಕಡಲ್ಗಾಲುವೆ ಪ್ರತ್ಯೇಕಿಸಿದೆ.

ಅಂಡಮಾನ್ ಸ್ತೋಮದಲ್ಲಿ 203 ದ್ವೀಪಗಳಿವೆ. ಈ ಸ್ತೋಮವು ದಕ್ಷಿಣೋತ್ತರವಾಗಿ 260 ಕಿಮೀ ಉದ್ದ ಮತ್ತು 30 ಕಿಮೀಗಳಷ್ಟು ಅಗಲವಾಗಿದೆ. ವಿಸ್ತೀರ್ಣ 6,496 ಚ.ಕಿಮೀ ಈ ದ್ವೀಪ ಸ್ತೋಮವನ್ನು ಉತ್ತರ ಅಂಡಮಾನ್, ಮಧ್ಯಅಂಡಮಾನ್, ದಕ್ಷಿಣ ಅಂಡಮಾನ್ ಹಾಗೂ ಪುಟ್ಟ ಅಂಡಮಾನ್ ಎಂದು ವಿಂಗಡಿಸಲಾಗಿದೆ. ಮಧ್ಯ ಅಂಡಮಾನ್ ದೊಡ್ಡದು. ಪುಟ್ಟ ಅಂಡಮಾನ್ ಮಹಾ ಅಂಡಮಾನ್‌ನಿಂದ 50 ಕಿಮೀ ದೂರದಲ್ಲಿದ್ದು ಡಂಕನ್ ಪ್ಯಾಸೇಜ್‌ನಿಂದ ಪ್ರತ್ಯೇಕಿಸಲ್ಪಟ್ಟಿದೆ. ಇದು 43 ಕಿಮೀ ಉದ್ದ ಮತ್ತು 23 ಕಿಮೀ ಅಗಲವಾಗಿದೆ.

ನಿಕೋಬಾರ್ ಸ್ತೋಮದಲ್ಲಿ 7 ದೊಡ್ಡ ಮತ್ತು 12 ಸಣ್ಣ ದ್ವೀಪಗಳಿವೆ. ಅಲ್ಲದೆ ಅನೇಕ ಚಿಕ್ಕಪುಟ್ಟ ದ್ವೀಪಗಳಿವೆ. ಈ ಸ್ತೋಮವು ಚದುರಿದಂತೆ 262 ಕಿಮೀ ಉದ್ದ ಮತ್ತು 58 ಕಿಮೀ ಅಗಲವಾಗಿದೆ. ವಿಸ್ತೀರ್ಣ 1,647 ಚಕಿಮೀ ಈ ಸ್ತೋಮದಲ್ಲಿ ಕಾರ್‌ನಿಕೋಬಾರ್, ಪುಟ್ಟ ನಿಕೋಬಾರ್ ಮತ್ತು ಗ್ರೇಟ್ ನಿಕೋಬಾರ್ ಎಂಬ ಮೂರು ವಿಭಾಗಗಳಿವೆ. ಹೆಸರೇ ಸೂಚಿಸುವಂತೆ ಕೊನೆಯದು ದೊಡ್ಡದು ಹಾಗೂ ನಿಕೋಬಾರ್ ಸ್ತೋಮದ ದಕ್ಷಿಣ ದಂಚಿನಲ್ಲಿರುವುದು. ಇದರ ದಕ್ಷಿಣ ತುದಿಯನ್ನು ಇಂದಿರಾಪಾಯಿಂಟ್ ಎಂದು ಕರೆಯಲಾಗಿದೆ. ಇದು ಇಂಡೊನೇಷ್ಯದ ಸುಮಾತ್ರ ದ್ವೀಪದಿಂದ 147 ಕಿಮೀ ದೂರದಲ್ಲಿದೆ.

ಈ ದ್ವೀಪಸ್ತೋಮ ಬಹಳ ಹಿಂದಿನಿಂದಲೂ ಪ್ರಸಿದ್ಧವಾಗಿತ್ತು. ಇತ್ಸಿಂಗ್, ಮಾರ್ಕೊಪೋಲೊ, ನಿಕಾಲೊ ಕಾಂಟಿ ಮತ್ತು ಇತರ ಪ್ರವಾಸಿಗರು ಇವುಗಳ ವಿಷಯವಾಗಿ ಬರೆದಿದ್ದಾರೆ. 1789 ರಲ್ಲಿ ಕ್ಯಾಪ್ಟನ್ ಆರ್ಚಿಬಾಲ್ಡ್ ಬ್ಲೇರ್ ಎಂಬುವನು ಇಲ್ಲಿ ಬ್ರಿಟಿಷ್ ವಸಾಹತುವನ್ನು ಸ್ಥಾಪಿಸಿದರು. ಬಹಳಕಾಲ ಈ ದ್ವೀಪಗಳು ದುಷ್ಕರ್ಮಿಗಳ, ಕೊಲೆಪಾತಕಿಗಳ ಮತ್ತು ರಾಜಕೀಯ ಬಂದಿಗಳ ನಿವಾಸವಾಗಿತ್ತು. 1858ರಲ್ಲಿ ಜಾರಿಗೆ ಬಂದ ಬಂದಿಗಳ ರವಾನೆಯ ಕಾನೂನು 1945ರಲ್ಲಿ ರದ್ದಾಯಿತು. 1942ರಲ್ಲಿ ಜಪಾನರು ಈ ದ್ವೀಪವನ್ನಾಕ್ರಮಿಸಿದರು. 1956ರಿಂದ ಈಚೆಗೆ ಇದು ಭಾರತದ ಕೇಂದ್ರಾಡಳಿತಕ್ಕೆ ಒಳಪಟ್ಟಿದೆ.

ಈ ದ್ವೀಪಗಳು ಬೆಟ್ಟಗುಡ್ಡಗಳಿಂದ ತುಂಬಿವೆ; ಇವು ಹೆಚ್ಚಾಗಿ ಹವಳ ದ್ವೀಪಗಳು. ಇದರಿಂದಾಗಿ ಭೂಮಿಯ ಮೇಲ್ಮೈ ಲಕ್ಷಣ ಬಹಳ ವ್ಯತ್ಯಾಸಗೊಂಡಿದೆ. ಜ್ವಾಲಾಮುಖಿ ಜನ್ಯಗಟ್ಟಿ ಶಿಲೆಗಳಿಂದ ರಚನೆಯಾದ ಭೂ ಸ್ವರೂಪಗಳಿವೆ. ಕೆಲವು ಎತ್ತರವಾದ ಶಿಖರಗಳಿವೆ: ಉತ್ತರ ಅಂಡಮಾನ್‌ನ ಸ್ಯಾಡಲ್ ಪೀಕ್ (730 ಮೀ) ಮಧ್ಯಅಂಡಮಾನ್‌ನ ವಿಯಾವೋಲೊ (515ಮೀ) ದ.ಅಂಡಮಾನ್‌ನ ಮೌಂಟ್ ಕೊಯಾಬ್ (460 ಮೀ) ಮೌಂಟ್ ಫೋರ್ಡ್ (435ಮೀ) ಪುಟ್ಟ ಅಂಡಮಾನಿನ ದಿಯೊಬಾನ್ (435ಮೀ) ಮತ್ತು ಗ್ರೇಟ್ ನಿಕೋಬಾನ್ (435ಮೀ) ಮತ್ತು ಗ್ರೇಟ್‌ನಿಕೋಬಾರ್‌ನ ಮೌಂಟ್ ಥೂಯಿಲ್ಲರ್ (642 ಮೀ) ಬೆಟ್ಟಗಳು ಮತ್ತು ಅವುಗಳ ಮಧ್ಯೆ ಉಂಟಾಗಿರುವ ಕಣಿವೆಗಳು ಮೇಲ್ಮೈ ಲಕ್ಷಣದ ವೈಶಿಷ್ಟ್ಯ. ಕರಾವಳಿಯಲ್ಲಿ ಅನೇಕ ಕೊಲ್ಲಿಗಳಿವೆ. ಅವುಗಳಲ್ಲಿ ಮುಖ್ಯವಾದುವು ಬ್ಲೇರ್, ಕಾಲ್‌ಪಾಂಗ್, ಕಾಲಾರ ಮತ್ತು ಕಾಂಗೊ. ನದಿಗಳೆಲ್ಲ ಸಣ್ಣವು; ಮಳೆಗಾಲದಲ್ಲಿ ಮಾತ್ರ ಪ್ರವಾಹವುಳ್ಳ ನುಗ್ಗು ಹೊನಲಿನವು. ಇಲ್ಲಿನ ವಾಯುಗುಣ ಸಾಗರೀಕ ಉಷ್ಣವಲಯದ ಮಾದರಿಯದು. ಶಾಖ 24 ಡಿಗ್ರಿ ಯಿಂದ 29 ಡಿಗ್ರಿ ಸೆಲ್ಸಿಯಸ್‌ಗಳ ವರೆಗೆ ಇರುತ್ತದೆ. ಸರಾಸರಿ ಸಾಪೇಕ್ಷ ಆರ್ದ್ರತೆ 80%. ವಾರ್ಷಿಕ ಮಳೆ ಉತ್ತರ ಭಾಗದಲ್ಲಿ 190 ಸೆಂಮೀ ದಕ್ಷಿಣ ಭಾಗದಲ್ಲಿ 300 ಸೆಂಮೀ.

ಇಲ್ಲಿನ ಸಸ್ಯವರ್ಗದಲ್ಲಿ ಪ್ರಧಾನವಾದವು ದಟ್ಟವಾದ ಉಷ್ಣವಲಯದ ಕಾಡುಗಳು; ಒಟ್ಟು 7,171 ಚ.ಕಿಮೀ ಪ್ರದೇಶದಲ್ಲಿ ಕಾಡುಗಳಿವೆ. ನಿತ್ಯ ಹರಿದ್ವರ್ಣದ, ಚಳಿಗಾಲದಲ್ಲಿ ಎಲೆಯುದುರುವ ಮತ್ತು ಮ್ಯಾನ್‌ಗ್ರೋವ್ ಎಂಬ ಜಾತಿಯ ಮರಗಳು ಎಲ್ಲೆಡೆ ಹಬ್ಬಿವೆ. ನಿತ್ಯಹರಿದ್ವರ್ಣದ ಕಾಡುಗಳು ನದಿ ಕಣಿವೆಗಳಲ್ಲಿಯೂ ಬೆಟ್ಟಗಳ ಮೇಲ್ಭಾಗದಲ್ಲಿಯೂ ಕಾಣಬರುವವು. ಬೆಟ್ಟಗಳ ಇಳಿಜಾರುಗಳಲ್ಲಿ ಮತ್ತು ತಗ್ಗು ಪ್ರದೇಶಗಳಲ್ಲಿ ಅಗಲವಾದ ಎಲೆಯುಳ್ಳ ಮರಗಳು ಬೆಳೆಯುತ್ತವೆ. (ಮ್ಯಾನ್‌ಗ್ರೋವ್) ಕಾಡುಗಳು ಕರಾವಳಿಯಲ್ಲಿ ಹೆಚ್ಚು. ಈ ದ್ವೀಪ ಸ್ತೋಮದಲ್ಲಿ 96 ವನ್ಯ ಜೀವಿಧಾಮಗಳು, 9 ರಾಷ್ಟ್ರೀಯ ಉದ್ಯಾನವನಗಳು ಮತ್ತು 1 ಜೀವಮಂಡಲ ಸಂರಕ್ಷಣಾವಲಯವಿದೆ. ಸುಮಾರು 55 ನೆಲವಾಸಿ ಮತ್ತು 7 ಜಲವಾಸಿ ಸಸ್ತನಿಪ್ರಾಣಿ ಪ್ರಭೇದಗಳಿವೆ. ಅವುಗಳಲ್ಲಿ 32 ಸ್ವದೇಶಿಯವಾದವು. ಸುಮಾರು 246 ಕ್ಕಿಂತಲೂ ಹೆಚ್ಚು ಪ್ರಭೇದದ ಪಕ್ಷಿಗಳು ಕಂಡುಬರುತ್ತವೆ. ಸುಮಾರು 76 ನೆಲವಾಸಿ ಸರೀಸೃಪಗಳಿವೆ. 1200 ಕ್ಕೂ ಹೆಚ್ಚು ಪ್ರಭೇದದ ಜಲಚರಗಳಿವೆ.

ಈ ದ್ವೀಪಗಳ ಆರ್ಥಿಕ ಸಂಪತ್ತು ಅರಣ್ಯ, ಮೀನುಗಾರಿಕೆ ಮತ್ತು ವ್ಯವಸಾಯಗಳನ್ನವಲಂಬಿಸಿದೆ. ಕೆಲವು ಮುಖ್ಯ ಪ್ರಭೇದದ ಮರಗಳ ಚೌಬೀನೆ (ಟಿಂಬರ್) ಇಲ್ಲಿಂದ ರಫ್ತಾಗುತ್ತಿವೆ. ಮೀನುಗಾರಿಕೆ ಹೆಚ್ಚಾಗಿ ಬೆಳೆಯಲವಕಾಶವಿದ್ದರೂ ಈಗ ಇಲ್ಲಿನ

ಅಂಡಮಾನಿನ ಸೆಲ್ಯುಲರ್ ಸೆರೆಮನೆ

ಜನರ ಆವಶ್ಯಕತೆಯನ್ನು ಮಾತ್ರ ಪೂರೈಸುವಷ್ಟಿದೆ. ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗಳ ನೆಲೆಸುನಾಡಾದಾಗಲೇ ಇಲ್ಲಿ ಭೂ ವ್ಯವಸಾಯ ಪ್ರಾರಂಭವಾಯಿತು; ಈಗ ಕೇವಲ ಒಂದರಷ್ಟು ಭೂಮಿಯನ್ನು (8068.7 ಹೆ.) ಕೃಷಿಗೆ ಉಪಯೋಗಿಸುತ್ತಿದ್ದಾರೆ. ಉಷ್ಣ ವಲಯದ ಬೆಳೆಗಳಾದ ಎಣ್ಣೆ ಕಾಳುಗಳು, ಕಬ್ಬು, ಬತ್ತ, ಸಿಹಿ ಆಲೂಗೆಡ್ಡೆ, ಬಾಳೆ, ಪರಂಗಿ, ಮಾವು, ಸೇಬು, ತೆಂಗು, ರಬ್ಬರ್, ಟೀ ಇವೇ ಮೊದಲಾದವುಗಳನ್ನು ಬೆಳೆಯುತ್ತಾರೆ. ಬತ್ತ ಅತಿಮುಖ್ಯವಾದ ಧಾನ್ಯ ಬೆಳೆ. ಆಹಾರಕ್ಕಾಗಿ ಕೋಳಿ ಸಾಕಣೆ ಎಲ್ಲೆಡೆಯೂ ಕಂಡುಬರುತ್ತದೆ. ಮರ ಕಡಿಯುವುದು ಮತ್ತು ಮರ ಕೊಯ್ಯುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಜನರ ಮುಖ್ಯ ಉದ್ಯೋಗ. ಚಾತಂ ದ್ವೀಪದಲ್ಲಿರುವ ಚಾತಂ ಮರ ಕೊಯ್ಯುವ ಕಾರ್ಖಾನೆ ಭಾರತದಲ್ಲಿಯೇ ದೊಡ್ಡದು. ಪೋರ್ಟ್‌ಬ್ಲೇರ್‌ನಲ್ಲಿ 1 ಬೆಂಕಿಪೊಟ್ಟಣದ ಕಾರ್ಖಾನೆಯೊಂದಿದೆ. ವಿವಿಧ ಕೈಗಾರಿಕೆಗಳ ಬೆಳವಣಿಗೆಗೆ ಇಲ್ಲಿ ಸಾಕಷ್ಟು ಅನುಕೂಲಗಳಿವೆ.

ಒಟ್ಟು 1763 ಗುಡಿಕೈಗಾರಿಕೆ ಮತ್ತು ಕರಕುಶಲ ಘಟಕಗಳು ದಾಖಲಾಗಿವೆ. ಅವುಗಳಲ್ಲಿ ಮೀನು ಮತ್ತು ಸೀಗಡಿಗಳನ್ನು ಸಂಸ್ಕರಿಸಿ ರಫ್ತು ಮಾಡುವ ಎರಡು ಘಟಕಗಳು ಅತಿ ಮುಖ್ಯವಾದವು. ಜೊತೆಗೆ ಮಿನಿ ಫ್ಲೋರ್ ಮಿಲ್, ಲಘುಪಾನೀಯ ತಯಾರಿಕೆ, ಪೀಠೋಪಕರಣ, ಸಿದ್ಧ ಉಡುಪುತಯಾರಿಕೆ, ಬಣ್ಣಗಳ ತಯಾರಿಕೆ ಮುಂತಾದವು ಅಭಿವೃದ್ಧಿಗೊಂಡಿವೆ. ರಸ್ತೆ ಸಾರಿಗೆ ಪ್ರಧಾನ. ಈ ದ್ವೀಪಸ್ತೋಮವು ಪರಿಸರ ಸ್ನೇಹಿ ಪ್ರವಾಸಿ ತಾಣಗಳನ್ನು ಹೊಂದಿದೆ. ದಟ್ಟವಾದ ಹಸಿರು ಕಾಡುಗಳು ಸುಂದರವಾದ ಬೀಚ್‌ಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಸರ್ಕಾರ ಈ ಉದ್ಯಮದ ಪ್ರಗತಿಗಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದು ಪ್ರತಿವರ್ಷವೂ ಇಲ್ಲಿಗೆ ಆಗಮಿಸುವ ದೇಶೀ ಮತ್ತು ವಿದೇಶಿ ಪ್ರವಾಸಿಗರಿಗಾಗಿ ಎಲ್ಲಾ ಮೂಲ ಸೌಲಭ್ಯಗಳನ್ನು ಪೂರೈಸಲು ಪ್ರಯತ್ನ ಮಾಡಿದೆ. ಪ್ರವಾಸೋದ್ಯಮದ ಅಭಿವೃದ್ಧಿ ಈ ದ್ವೀಪಸ್ತೋಮದ ಆರ್ಥಿಕ ವ್ಯವಸ್ಥೆಯ ಸುಧಾರಣೆಗೆ ನೆರವಾಗುತ್ತದೆ.

ಈ ದ್ವೀಪ ಸ್ತೋಮದಲ್ಲಿನ ಜನಸಂಖ್ಯೆ 356,152 (2001). ಸುಮಾರು 400 ಹಳ್ಳಿಗಳಿವೆ. ಈ ದ್ವೀಪಸ್ತೋಮದಲ್ಲಿ ಪೋರ್ಟ್‌ಬ್ಲೇರ್ ಒಂದೇ ಜನನಿಬಿಡವಾದ ಪಟ್ಟಣ. ಇದು ರಾಜಧಾನಿ. ಜನಸಂಖ್ಯೆ 100186 (2001). 1951_61ರ ಅವಧಿಯಲ್ಲಿ ಪೂರ್ವಬಂಗಾಲದಿಂದ ನಿರಾಶ್ರಿತರನ್ನು ಇಲ್ಲಿ ನೆಲೆಸುವಂತೆ ಮಾಡಿದುದರಿಂದ ಜನಸಂಖ್ಯೆ ಹೆಚ್ಚಿತು. ಸ್ಥಳೀಯ ಬುಡಕಟ್ಟಿನ ಒಟ್ಟು ಜನಸಂಖ್ಯೆ 14,122. ಇದು ಒಟ್ಟು ಜನಸಂಖ್ಯೆಯ ಶೇ.22 ರಷ್ಟಿದೆ. ಇಲ್ಲಿನ ಜಾರವಾಗಳು, ಒಂಗೇಸ್, ಅಂಡಮಾನೀಸ್ ಮತ್ತು ಸೆಂಟಿನಲೀಸ್ ಪಂಗಡದವರು ಪ್ರಪಂಚದ ಅತ್ಯಂತ ಪುರಾತನ ಜನಾಂಗಗಳಿಗೆ ಸೇರಿದವರು.

ದಟ್ಟವಾದ ಕಾಡುಗಳು, ಅನಾಗರಿಕ ಜನರು, ಪ್ರವೇಶಿಸಲು ಅಸಾಧ್ಯವಾದ ಭೂಸ್ಥಿತಿ ಇವುಗಳಿಂದ ಈ ದ್ವೀಪಗಳು ವಿಚಿತ್ರವಾದೊಂದು ಅಸ್ತಿತ್ವವನ್ನು ಪಡೆದಿವೆ. ಇತ್ತೀಚಿನವರೆಗೆ ಈ ದ್ವೀಪಗಳು ದಂಡನೆಗೊಳಗಾದ ಅಪರಾಧಿಗಳನ್ನಿಡುವ ಸ್ಥಳವಾಗಿದ್ದವು.

ಈ ಸ್ತೋಮ ಇಂದು ಭಾರತ ಒಕ್ಕೂಟದ ಒಂದು ಭಾಗವಾಗಿ ಉತ್ತಮ ಭವಿಷ್ಯವನ್ನು ಎದುರು ನೋಡುತ್ತಿದೆ. ಅರಣ್ಯ ಮತ್ತು ಮೀನುಗಾರಿಕೆಯ ಸಂಪತ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಂಡರೆ ಈ ದ್ವೀಪಗಳ ಭವಿಷ್ಯ ಉತ್ತಮವಾಗುತ್ತದೆ. (ಎ.ಬಿ.ಎಂ.; ಎಚ್.ಆರ್.)

**ಅಂಡಮಾನಿ ಭಾಷೆ :** ಅಂಡಮಾನ್ ದ್ವೀಪಗಳ ಆದಿವಾಸಿಗಳ ಭಾಷೆ. ಇದುವರೆಗೂ ಬೇರೆ ಭಾಷೆಯೊಂದಿಗೆ ಇದರ ಸಂಬಂಧವನ್ನು ಕಲ್ಪಿಸುವುದು ಸಾಧ್ಯವಾಗಿಲ್ಲ. ಅಂಡಮಾನಿ ಎನ್ನುವುದು ಕನಿಷ್ಠಪಕ್ಷ ಮೂರು ಭಾಷೆಗಳನ್ನೊಳಗೊಂಡಿರುವ ಗುಂಪು: 1. ಉತ್ತರದ ಭಾಷೆ ಅಥವಾ ಹಿರಿಯ ಅಂಡಮಾನಿ. 2. ಜಾರವ, ಇದು ಕೂಡ ಹಿರಿಯ ಅಂಡಮಾನಿನಲ್ಲೇ ವ್ಯವಹಾರದಲ್ಲಿದೆ. 3. ಓಂಗೆ, ಕಿರಿಯ ಅಂಡಮಾನಿನಲ್ಲಿ ಬಳಕೆಯಲ್ಲಿದೆ.

ಜಾರವ ಮತ್ತು ಓಂಗೆಗಳ ಪದಕೋಶದಲ್ಲಿ ಹತ್ತಿರದ ಸಂಬಂಧ ಕಂಡುಬಂದರೂ ಇವುಗಳ ಆಡುಗರು ಪರಸ್ಪರ ಅರ್ಥಮಾಡಿಕೊಳ್ಳುವುದಿಲ್ಲವೆಂದು ಹೇಳಲಾಗಿದೆ. ಈ ಭಾಷೆಗಳ ನ್ನಾಡುವ ಎರಡು ಪಂಗಡಗಳು ಮೂಲತಃ ಒಂದೇ ಆಗಿದ್ದುವೆಂದು ವಿದ್ವಾಂಸರ ಮತ.

ಅಂಡಮಾನಿಯಲ್ಲಿ ಪ್ರತ್ಯಯಗಳು ಹೆಚ್ಚು ಬಳಕೆಯಲ್ಲಿದ್ದು, ರಚನೆಯ ದೃಷ್ಟಿಯಿಂದ ಇದು ಸಂಯೋಜಕ ವರ್ಗಕ್ಕೆ (ಆಗ್ಲೂಟಿನೇಟಿಂಗ್) ಸೇರಿದ್ದೆಂದು ಗ್ರಿಯರ್‌ಸನ್ ಅಭಿಪ್ರಾಯ ಪಡುತ್ತಾನೆ. ಆದರೆ ಈ ರಚನೆಯ ಲಕ್ಷಣ ಇದೇ ವರ್ಗದ ಇತರ ಭಾಷೆಗಳಲ್ಲಿರುವಷ್ಟು ಸ್ಪಷ್ಟವಾಗಿಲ್ಲವೆಂದು ಅನಂತರದ ಸಂಶೋಧಕರು ತೋರಿಸಿಕೊಟ್ಟಿದ್ದಾರೆ.

ಮೂರ್ತವಿಚಾರಗಳ ಸಣ್ಣ ಸಣ್ಣ ವಿವರಗಳನ್ನು ಹೇಳಲು ಅಂಡಮಾನಿಯಲ್ಲಿ ಸಾಧ್ಯ. ಆದರೆ ಅಮೂರ್ತ ಭಾವನೆಗಳನ್ನು ವ್ಯಕ್ತಪಡಿಸುವ ಪದಗಳು ತುಂಬಾ ವಿರಳ. ವಿವಿಧ ಪ್ರಮಾಣಗಳನ್ನು (ಹೆಚ್ಚು ಕಡಿಮೆ ಇತ್ಯಾದಿ) ಸೂಚಿಸಬಹುದಾದರೂ ಸಂಖ್ಯೆಗಳ ಮೂಲಕ ಎಣಿಸಲು ಬರುವುದಿಲ್ಲ. (ಎಚ್.ಎಂ.ಎನ್.)

**ಅಂಡಾಶಯ ಕೊಯ್ತೆಗೆತ :** ಹೆಂಗಸಿನ ಒಂದು ಇಲ್ಲವೆ ಎರಡು ಅಂಡಾಶಯಗಳನ್ನು ಕೊಯ್ದು ತೆಗೆದುಹಾಕುವ ಶಸ್ತ್ರಕ್ರಿಯೆ (ಹಿಸ್ಟೆರೆಕ್ಟೊಮಿ). ಗಂತಿ ಬೆಳೆದಿರುವ ಅಂಡಾಶಯವನ್ನು ತೆಗೆದು ಹಾಕುವುದು ಕೂಡ ಇದರಲ್ಲಿ ಸೇರಿದೆ (**ನೋಡಿ – ಸ್ತ್ರೀರೋಗಶಾಸ್ತ್ರ**). (ಡಿ.ಎಸ್.ಎಸ್.)

**ಅಂಡಾಶ್ಮಗಳು :** ಊಲೈಟುಗಳೆಂಬ ಹೆಸರುಳ್ಳ ಇವು ಸಣ್ಣ ಸಣ್ಣ ಗುಂಡುಗಳು. ಸಾಮಾನ್ಯವಾಗಿ ಇವುಗಳ ವ್ಯಾಸ 1 ಮಿಮೀ. ಇವುಗಳ ಕೇಂದ್ರದಲ್ಲಿ ಗುರುತಿಸಬಹುದಾದೊಂದು ನ್ಯೂಕ್ಲಿಯಸ್ ಇರುತ್ತದೆ. ಒಂದು ಅವಸಾದನದಲ್ಲಿ ಇವು ಬಹಳವಾಗಿದ್ದರೆ ಅದಕ್ಕೊಂದು ವಿಶಿಷ್ಟ ಹೆಣಿಗೆಯನ್ನು ಕೊಡುತ್ತವೆ. ಏಕಕೇಂದ್ರೀಯಪದರಗಳಿಲ್ಲದ ಅಥವಾ ನ್ಯೂಕ್ಲಿಯಸ್ ಇಲ್ಲದ ಇವುಗಳಂಥ ಬೇರೆಯ ಕಲ್ಲುಗಳನ್ನು ಮತ್ತು ಕೆಲವು ಫೊರ್ಯಾಮಿನಿಫೆರಾಗಳನ್ನು ಅಂಡಾಶ್ಮಗಳೆಂದು ಭ್ರಮಿಸುವುದುಂಟು.

ಅನೇಕ ತರದ ಅಂಡಾಶ್ಮದಂಥ ಕಾಯಗಳು ಬೇರೆಬೇರೆ ತೆರನಾದ ಖನಿಜಗಳನ್ನು ಒಳಗೊಂಡಿರುವುವೆಂದೂ ಅವುಗಳು ಬೇರೆಬೇರೆ ರೀತಿಯಲ್ಲಿ ರಚಿತವಾಗಿವೆಯೆಂದೂ ವರದಿಯಾಗಿದೆ. ಕ್ಯಾಲ್ಸೈಟಿನ ಅಂಡಾಶ್ಮಗಳೇ ಸರ್ವಸಾಧಾರಣವಾಗಿರುವುವು. ಇವು ಸಾಗರ ನಿಕ್ಷೇಪಗಳಲ್ಲಿ ಸಿಕ್ಕುತ್ತವೆ. ಕೆಲವು ಜಾಗಗಳಲ್ಲಂತೂ ಅಲ್ಲಿನ ಸುಣ್ಣಕಲ್ಲುಗಳ ತುಂಬ ಇವೇ ತುಂಬಿಕೊಂಡಿವೆ. ಇತರ ವಸ್ತುಗಳಿಂದ ರಚಿತವಾದ ಕೆಲವು ಅಂಡಾಶ್ಮಗಳು ಅದರಲ್ಲೂ ಸಿಲಿಕಾಮಯ ಮತ್ತು ಡೋಲಮೆಟಿಕ್ ಅದಿರುಗಳು, ಕ್ಯಾಲ್ಸಿಯಂ ಕಾರ್ಬೊನೇಟಿನ ಸ್ಥಾನಪಲ್ಲಟದಿಂದ ಉಂಟಾದುವು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಮಿಕ್ಕವುಗಳ ಉತ್ಪತ್ತಿಯ ವಿಷಯ ಚರ್ಚಾಸ್ಪದವಾಗಿದೆ.

ಕ್ಯಾಲ್ಸಿಯಂ ಕಾರ್ಬೊನೇಟ್ ಅಂಡಾಶ್ಮಗಳು ಸಾಮಾನ್ಯವಾಗಿ ತಮ್ಮ ಅಂತಃಕೇಂದ್ರದಲ್ಲಿ ಬಗೆಬಗೆಯ ಖನಿಜಗಳ ಕಣಗಳು, ಪಳೆಯುಳಿಕೆಗಳ ಚೂರುಗಳು, ಅಥವಾ ಇತರ ವಸ್ತುಗಳು_ಇವನ್ನು ಮೂಲದ್ರವ್ಯಗಳಾಗಿ ಹೊಂದಿವೆ. ಕೇಂದ್ರೀಯ ಮೂಲ ದ್ರವ್ಯಗಳು ಗಾತ್ರದಲ್ಲೂ ಆಕಾರದಲ್ಲೂ ವಿವಿಧತೆ ಉಂಟು. ಆದರೆ ಅವುಗಳ ಮೇಲೆ ಪದರಗಳು ಬೆಳೆದುಕೊಳ್ಳುತ್ತ ಹೋದಹಾಗೆಲ್ಲ ಹೆಚ್ಚು ಹೆಚ್ಚು ಗುಂಡಾದ ಆಕೃತಿಯನ್ನು ಪಡೆಯುತ್ತವೆ. ಈ ಆಕೃತಿಗಳು ಗಾತ್ರದಲ್ಲಿ ಒಂದೇ ಸಮವಾಗಿಲ್ಲ ಮತ್ತು ಬಣ್ಣ, ಅಪಾರಕತೆ ಮತ್ತು ಹರಳಿನ ರಚನೆಯಲ್ಲಿ ಒಂದಕ್ಕೊಂದಕ್ಕೆ ಸ್ವಲ್ಪ ವ್ಯತ್ಯಾಸವಿರುವುದರಿಂದ ಪ್ರತಿಯೊಂದನ್ನೂ ಪ್ರತ್ಯೇಕವಾಗಿ ಗುರುತಿಸಬಹುದು. ದಪ್ಪವಾಗಿರುವ ಅಂಥ ಕೆಲವು ಪದರಗಳಲ್ಲಿ ಕ್ಯಾಲ್ಸೈಟಿನ ನೇರವಾದ ಎಳೆಗಳಿರಬಹುದು. ಈ ಸೂಕ್ಷ್ಮ ಆಕೃತಿಗಳು ಮತ್ತೆ ಸ್ಫಟಿಕೀಕರಣಗೊಂಡು ಬದಲಾವಣೆ ಹೊಂದಿರಲೂಬಹುದು ಮತ್ತು ಕೆಲವು ಅಂಡಾಶ್ಮಗಳು ತಮ್ಮ ಏಕಕೇಂದ್ರೀಯ ಆಕಾರಗಳನ್ನು ಕಳೆದುಕೊಂಡಿರಲೂಬಹುದು.

ಕ್ಯಾಲ್ಸಿಯಂ ಕಾರ್ಬೋನೇಟಿನಿಂದಾದ ಅಂಡಾಶ್ಮಗಳೂ ಸ್ಥಾನಪಲ್ಲಟದಿಂದ ವ್ಯತ್ಯಾಸಹೊಂದಿರುವ ಇತರ ಅಂಡಾಶ್ಮಗಳೂ ಕೇಂಬ್ರಿಯನ್ ಯುಗಕ್ಕೆ ಪೂರ್ವದ ಕಾಲದಿಂದ ಆಧುನಿಕ ಕಾಲದವರೆಗಿನ ಶಿಲೆಗಳಲ್ಲಿರುವುದು ಕಂಡುಬಂದಿದೆ. (ಸಿ.ಜಿ.)

**ಅಂತಃಕರಣ :** ಸಾಂಖ್ಯದರ್ಶನದ ಒಂದು ಮುಖ್ಯ ಪಾರಿಭಾಷಿಕ ಪದ. ಆಧುನಿಕ ಮನಶ್ಶಾಸ್ತ್ರಜ್ಞರು ಮಿದುಳು ನಮ್ಮ ಒಳ ಅನುಭವಗಳಿಗೆ ಕಾರಣವಾದ ಒಳ ಅಂಗವೆಂದೂ ಹೊರಗಿನ ವಸ್ತುಗಳ ಅನುಭವಕ್ಕೆ ಕಾರಣವಾದ ಕಣ್ಣು, ಕಿವಿ ಮೂಗು, ನಾಲಗೆ ಮತ್ತು ಸ್ಪರ್ಶೇಂದ್ರಿಯಗಳು ಹೊರ ಅಂಗಸಂಸ್ಥೆಗಳೆಂದೂ ಭಾವಿಸುತ್ತಾರೆ. ಸಾಂಖ್ಯರ ಅಂತಃಕರಣ ಒಳ ಅಂಗವಾದ ಮಿದುಳಿಗೆ ಸಮಾನಾಂತರವಾದ ಪದ. ಸಾಂಖ್ಯದರ್ಶನದ ಪ್ರಕಾರ ಅಂತಃಕರಣ ಮನಸ್ಸು, ಅಹಂಕಾರ ಮತ್ತು ಬುದ್ಧಿ– ಈ ಮೂರರಿಂದ ಕೂಡಿದ ಒಳ ಇಂದ್ರಿಯ ಸ್ಥಾನ, ಇವುಗಳ ಮೂಲಕ ಜ್ಞಾನೋತ್ಪತ್ತಿಯ ಕ್ರಮ ಈ ರೀತಿ ಇದೆ: ಹೊರ ವಸ್ತುಗಳ ರೂಪ, ಶಬ್ದ, ರಸ, ಗಂಧ, ಮುಂತಾದ ಗುಣಗಳನ್ನು ಕಣ್ಣು, ಕಿವಿ, ನಾಲಗೆ, ಮೂಗು ಮುಂತಾದ ಹೊರ ಇಂದ್ರಿಯಗಳು ಮನಸ್ಸಿಗೆ ಮುಟ್ಟಿಸುತ್ತವೆ. ಮನಸ್ಸು ಇಂದ್ರಿಯಾನುಭವಗಳನ್ನು ವರ್ಗೀಕರಿಸುತ್ತದೆ. ಈ ವರ್ಗೀಕರಿಸುವ ವೃತ್ತಿಗೆ ಸಂಕಲ್ಪವೆಂದು ಪಾರಿಭಾಷಿಕ ಹೆಸರು. ಸಂಕಲ್ಪಿಸಿದ ವಿಷಯ ಜೀವನಿಗೆ ಉಪಯುಕ್ತವೋ ನಿರುಪಯುಕ್ತವೋ ಅದನ್ನು ಆದರಿಸಬೇಕೋ ಬಿಡಬೇಕೋ ಎಂಬುದನ್ನು ಅಹಂಕಾರ ತಿಳಿಸುತ್ತದೆ. ಅಹಂಕಾರ ನಮ್ಮ ಅಭಿಮಾನ, ದುರಭಿಮಾನಗಳಿಗೆ ಕಾರಣ. ಹೀಗೆ ಅಭಿಮಾನದಿಂದ ದುರಭಿಮಾನದಿಂದ ಹುಟ್ಟಿದ ಅನುಭವ ಬುದ್ಧಿಯನ್ನು ಸುಖಕರವಾಗಿರಿಸಬಹುದು ಅಥವಾ ದುಃಖಕರವಾಗಿರಿಸಬಹುದು. ಈ ಮೂರು ವಿಧವಾದ ಅನುಭವಗಳಿಗೆ ಕಾರಣವಾದ ಒಳ ಅಂಗಗಳ ಸ್ಥಾನ ಅಂತಃಕರಣ. (ಜಿ.ಎಚ್.)

ವೇದಾಂತಿಗಳು ಅಂತಃಕರಣ ಚತುಷ್ಟಯ ಎಂಬ ಪದ ಪ್ರಯೋಗ ಮಾಡುತ್ತಾರೆ. ಚಿತ್ತ ನಾಲ್ಕನೆಯದು. ವೇದಾಂತದ ಪ್ರಕಾರ ಅಹಂಕಾರವು ಅಂತಃಕರಣದ ಕಾರ್ಯದಲ್ಲಿ ಅಭಿಮಾನಪೂರ್ವಕವಾಗಿ ಕಾರ್ಯನಿರ್ವಹಿಸಿ, ಎಲ್ಲ ಅನುಭವಗಳನ್ನೂ ಜೀವಿಗೆ ಆರೋಪಿಸುವ ಮೂಲಕ ಸುಖ – ದುಃಖಗಳ ಅನುಭವಕ್ಕೆ ಕಾರಣೀಭೂತವಾಗುತ್ತದೆ. ಆದ್ದರಿಂದ ಅಹಂಕಾರವನ್ನು ಕಡಿಮೆ ಮಾಡಿಕೊಳ್ಳುವುದು ಮನುಷ್ಯನ ಆರೋಗ್ಯಕ್ಕೆ ಮತ್ತು ಉನ್ನತಿಗೆ ಮುಖ್ಯ ಎಂದು ವೇದಾಂತಿಗಳು ಅಭಿಪ್ರಾಯ ಪಡುತ್ತಾರೆ. (ಎಸ್.ಕೆ.ಕೆ.)

**ಅಂತಃಕೋಪಕ :** ಉಗಿಗುಡಾಣದಲ್ಲಿನ (ಬಾಯ್ಲರ್) ಒತ್ತಡಕ್ಕೆ ವಿರುದ್ಧವಾಗಿ ಉಗಿಧಾರೆಯ ಸಹಾಯದಿಂದ ಗುಡಾಣದೊಳಕ್ಕೆ ನೀರನ್ನು ಬಲವಂತವಾಗಿ ನುಗ್ಗಿಸುವ ಸಾಧನ. ಸಮಾನ ಪರಿಸ್ಥಿತಿಗಳಲ್ಲಿ ಉಗಿಧಾರೆ (ಸ್ಟೀಮ್ ಜೆಟ್) ಚಲನಾತ್ಮಕ ಶಕ್ತಿ (ಕೈನೆಟಿಕ್ ಎನರ್ಜಿ) ಗುಡಾಣದಿಂದ ಹೊರಹೊಮ್ಮುವ ಜಲಧಾರೆಯ ಶಕ್ತಿಗಿಂತ ಬಹಳಷ್ಟು ಹೆಚ್ಚಿರುತ್ತದೆ. ಅದರಿಂದಾಗಿ ಅಂತಃಕೋಪಕ ಗುಡಾಣದೊಳಕ್ಕೆ ನೀರನ್ನು ನುಗ್ಗಿಸಬಲ್ಲುದು.




ಅಂತಃಕೋಪಕದ ಭಾಗಗಳು

1. ಉಗಿ, 2. ಚುಳ್ಳಿ, 3. ಮಿಳನನಾಳ, 4. ಹೊರಚೆಲ್ಲು, 5. ನಿರ್ಗಮನಾಳ, 6. ತಡೆಕವಾಟ, 7. ಗುಡಾಣಕ್ಕೆ, 8. ನೀರು

ಸಾಮಾನ್ಯ ಅಂತಃಕೋಪಕದ ಅತ್ಯಗತ್ಯ ಭಾಗಗಳೆಂದರೆ: 1.ಉಗಿಚುಳ್ಳಿ (ಸ್ಟೀಮ್ ನಾಜ಼ಲ್) 2. ಮಿಳನ ನಳಿಗೆ(ಕಂಬೈನಿಂಗ್ ಟ್ಯೂಬ್) 3.ನಿರ್ಗಮನಾಳ 4. ನೀರಿನ ನಳಿಗೆ 5.ಹೊರಚೆಲ್ಲು ಕೋಣೆ (ಓವರ್‌ಫ್ಲೊ).

ಸರಳ ರೀತಿಯ ಏಕನಳಿಗೆ ಅಂತಃಕೋಪಕವನ್ನು ಚಿತ್ರದಲ್ಲಿ ತೋರಿಸಿದೆ. ಉಗಿಗುಡಾಣದಿಂದ ಹೊರಹೊಮ್ಮುವ ಉಗಿಯು, ಚುಳ್ಳಿಯ ಮೂಲಕ ಹಾಯ್ದು ಭರದಿಂದ ಹೊರಹೊಮ್ಮುತ್ತದೆ. ಈ ಉಗಿಯನ್ನು ಮಿಳನ ನಾಳದಲ್ಲಿ ನೀರಿನಿಂದ ತಣಿಸಿದಾಗ, ಅಲ್ಲಿ ನಿರ್ವಾತ ಪ್ರದೇಶ ಉಂಟಾಗುತ್ತದೆ. ಇದರಿಂದಾಗಿ ನೀರಿನ ನಳಿಗೆಯ ಮೂಲಕ ನಿರ್ವಾತ ಪ್ರದೇಶದ ಕಡೆಗೆ ನುಗ್ಗುತ್ತದೆ. ಹೀಗೆ ಒಳನುಗ್ಗುವ ತಣ್ಣೀರು ಮಿಳನ ನಾಳದಲ್ಲಿ ಹರಿಯುವಾಗ ಉಗಿಯನ್ನು ತಣಿಸುತ್ತದೆ. ಈ ರೀತಿ ಉಂಟಾದ ಜಲಧಾರೆ ಮೊದಮೊದಲು ಕೋಣೆಯ ಮೂಲಕ ಹೊರದೂಡಲ್ಪಡುತ್ತದೆ. ಜಲಧಾರೆಯ ವೇಗ ಹೆಚ್ಚಿದಂತೆಲ್ಲ ಅದು ಗುಡಾಣದಲ್ಲಿನ ಒತ್ತಡವನ್ನು ಒತ್ತಿಕ್ಕುವಷ್ಟು ರಭಸವನ್ನು ಪಡೆಯುತ್ತದೆ. ಪರಿಣಾಮ – ನೀರು ನಿರ್ಗಮ ನಾಳವನ್ನು ಹಾಯ್ದು ತಡೆಕವಾಟದ (ಚೆಕ್ ವಾಲ್ವ್) ಮೂಲಕ ಉಗಿಯ ಗುಡಾಣವನ್ನು ಸೇರುತ್ತದೆ.

ಅಂತಃಕೋಪಕ ಗುಡಾಣಕ್ಕೆ ನೀರೊದಗಿಸುವ ಸಾಧನವಾದಾಗ ಅದರ ಶಾಖ ಕಾರ್ಯಸಾಮರ್ಥ್ಯ (ಥರ್ಮಲ್ ಎಫಿಷಿಯೆನ್ಸಿ) ನೂರಕ್ಕೆ ನೂರು. ಗುಡಾಣಕ್ಕೆ ನೀರೊದಗಿಸುವ ಸಾಧನವಾಗಿ ಅಂತಃಕೋಪಕ ಅನ್ಯೋನ್ಯ ಕಾರ್ಯಸಾಮರ್ಥ್ಯವನ್ನು ಪಡೆದಿದ್ದರೂ ಈ ನಿಟ್ಟಿನಲ್ಲಿ ಅದು ಅತ್ಯಂತ ಮಿತವ್ಯಯದ ಸಾಧನ ಆಗಲಾರದು. ಕಾರಣ ಬಿಸಿ ನೀರನ್ನು ತನ್ನ ಕಾರ್ಯಾಚರಣೆಯಲ್ಲಿ ಬಳಸಲಾಗದ ಇದರ ಅಸಮರ್ಥತೆ. ಅಂದರೆ, ಬೇರೆ ಮೂಲಗಳಿಂದ ಒದಗಬಹುದಾದ ವ್ಯರ್ಥ ಶಾಖದ ಪ್ರಯೋಜನವನ್ನು ಇದು ಪಡೆಯಲಾರದು.

ಅಂತಃಕೋಪಕ ವಿಶೇಷವಾಗಿ ಸ್ವಯಂಚಾಲಿತ ಎಂಜಿನ್ನುಗಳಲ್ಲಿ (ಲೋಕೊಮೋಟಿವ್) ಉಪಯೋಗದಲ್ಲಿದೆ. ಪಂಪಿನ ಮಾದರಿಯಾಗಿ ಬಳಸಿದಾಗ ಇದರ ಕಾರ್ಯಸಾಮರ್ಥ್ಯ ಸಾಮಾನ್ಯವಾಗಿ ಶೇ.1–2. (ಬಿ.ಎಲ್.ಎಸ್.)

**ಅಂತಪಾಲರು :** ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿತವಾಗಿರುವ ಆಡಳಿತಾಧಿಕಾರಿಗಳು. ಮೌರ್ಯ ಸಾಮ್ರಾಜ್ಯವನ್ನು ಆಡಳಿತದ ಅನುಕೂಲದೃಷ್ಟಿಯಿಂದ ಅನೇಕ ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಒಂದು ಆಡಳಿತದ ವಿಭಾಗದಲ್ಲಿ ಅಂತಪಾಲರು ತಮ್ಮ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದರು. ಸಾಮಾನ್ಯವಾಗಿ ಗಡಿ ಪ್ರದೇಶಗಳು ಇವರ ಆಡಳಿತ ಕ್ಷೇತ್ರಗಳು. ಪ್ರತಿಯೊಂದು ಗಡಿ ಪ್ರದೇಶದಲ್ಲೂ ಒಂದೊಂದು ಮಿಲಿಟರಿ ಠಾಣ್ಯವಿರುತ್ತಿತ್ತು. ಪ್ರಾಂತಾಧಿಕಾರಿಗೆ ಇವರೆಲ್ಲರೂ ಹೊಣೆಗಾರರಾಗಿದ್ದುದರಿಂದ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಂದಾಯ ವಸೂಲಿ ಮಾಡುವುದು ಇವರ ಮುಖ್ಯ ಕೆಲಸಗಳಲ್ಲೊಂದಾಗಿತ್ತೆಂದು ತೋರುತ್ತದೆ. ಈ ವಿಷಯ ಅರ್ಥಶಾಸ್ತ್ರ ಗ್ರಂಥದ ಜನಪದನಿವೇಶ ಎಂಬ ಅಧ್ಯಾಯದಲ್ಲಿ ಬರುತ್ತದೆ. ಇಲ್ಲಿ ಹಳ್ಳಿಗಳ ರಚನೆಯ ಬಗ್ಗೆ ವಿವರಣೆ ಇದೆ. ಜನಗಳಿಂದ ಕಂದಾಯವನ್ನು ವಸೂಲಿ ಮಾಡಿ ಅದನ್ನು ರಾಜ್ಯದ ಬೊಕ್ಕಸಕ್ಕೆ ಕಳುಹಿಸುವ ಜವಾಬ್ದಾರಿ ಇವರದಾಗಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಸ್ಥಾಪಿಸುವ ಅಧಿಕಾರವನ್ನು ಕೇಂದ್ರಸರ್ಕಾರ ಇವರಿಗೆ ವಹಿಸಿಕೊಟ್ಟಿತ್ತು. ಅಂದರೆ ಜನಗಳಿಗೆ ಕಳ್ಳಕಾಕರಿಂದ ಯಾವ ತೊಂದರೆಯೂ ಬರದಂತೆ ನೋಡಿಕೊಳ್ಳುವುದು ಇವರ ಕರ್ತವ್ಯವಾಗಿತ್ತು. ರಾಜ್ಯ ಗಡಿದ್ವಾರಗಳಲ್ಲಿ ಇವರು ಇರುತ್ತಿದ್ದುದರಿಂದ ರಾಜ್ಯಕ್ಕೆ ಹೊರಗಿನ ಶತ್ರುಗಳಿಂದ ಯಾವ ಅಪಾಯವೂ ಬರದಂತೆ ನೋಡಿಕೊಳ್ಳುವುದು ಇವರ ಇನ್ನೊಂದು ಮುಖ್ಯ ಕರ್ತವ್ಯವಾಗಿತ್ತು. ಒಟ್ಟಿನಲ್ಲಿ ಇವರು ಪೊಲೀಸ್ ಮತ್ತು ರೆವಿನ್ಯೂ ಕಾರ್ಯಗಳೆರಡನ್ನೂ ನಿರ್ವಹಿಸುತ್ತಿದ್ದರು. ದೇಶದ ಆರ್ಥಿಕಾಭಿವೃದ್ಧಿ ವ್ಯಾಪಾರ ವಾಣಿಜ್ಯಗಳನ್ನು ಅವಲಂಬಿಸಿದ್ದುದರಿಂದ ಕೌಟಿಲ್ಯನು ಪಾಶ್ಚಾತ್ಯ ವಾಣಿಜ್ಯೋದ್ಯಮಗಳನ್ನು ದೇಶದಲ್ಲಿ ನೆಲೆಸುವಂತೆ ಪ್ರೋತ್ಸಾಹಿಸುತ್ತಿದ್ದನು. ಈ ವ್ಯಾಪಾರಿಗಳು ದೇಶದ ಮೂಲೆ ಮೂಲೆಗಳಲ್ಲಿ ಯಾವ ನಿರ್ಬಂಧವಿಲ್ಲದೆ ಸಂಚರಿಸಬಹುದಾಗಿತ್ತು. ಅಂತಪಾಲರು ಅವರಿಂದ ಮಾರ್ಗ ಸುಂಕವನ್ನು ವಸೂಲಿ ಮಾಡುವುದರಲ್ಲಿ ಅವರ ಸರಕುಗಳು ಹಾಳಾಗದಂತೆ ಎಚ್ಚರ ವಹಿಸಬೇಕಾಗಿತ್ತು. ಹೀಗೆ ಅಂತಪಾಲರು ಅನೇಕ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. (ಬಿ.ಎಂ.)

**ಅಂತರ್ಕೀಲಕ :** ರೈಲಿನ ಕೈಮರ ಬೀಳಿಸಲು ಕೊಡುವ ಸಂಜ್ಞೆಯಲ್ಲಿ ತಪ್ಪು ಕಲ್ಪನೆಗೆ ಅವಕಾಶವಿಲ್ಲದಂತೆ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವ ವಿಧಾನ (ಪರಸ್ಪರ ತೊಡರಿಕೆ) ಮಾರ್ಗವನ್ನು ನಿರ್ಧರಿಸುವುದಕ್ಕೆ ಮೊದಲೇ ಕೈಮರ ಬೀಳದಂತೆ ಸಂಜ್ಞೆಯ ಉಪಕರಣವಿರುವ ಪೆಟ್ಟಿಗೆಯಲ್ಲಿ ಸನ್ನೆಗೋಲನ್ನು (ಲೀವರ್) ಅಳವಡಿಸಲಾಗಿರುತ್ತದೆ. ಸಂಜ್ಞೆಯಲ್ಲಿ ವಿರೋಧಾಭಾಸವುಂಟಾಗುವುದನ್ನು ಈ ಕ್ರಮದಿಂದ ತಡೆಗಟ್ಟಬಹುದು. ಕೈಮರ ಬೀಳಿಸಿ, ಸಂಜ್ಞೆಕೊಟ್ಟು, ಮಾರ್ಗ ನಿಗದಿಯಾದ ಮೇಲೆ ಮತ್ತೆ ಅದನ್ನು ಬದಲಾಯಿಸುವುದಕ್ಕೆ ಆಗದಂತೆ ಈ ಪರಸ್ಪರ ತೊಡರಿಕೆ ಕ್ರಮ ಸಹಾಯಕವಾಗಿದೆ. (ಕೆ.ಸಿ.ಆರ್.)

**ಅಂತರ್ಗ್ರಹಣ ರೋಹಿತ :** ಆರ್ಕ್ ದೀಪದಂಥ ಹೆಚ್ಚು ಉಷ್ಣತೆಯುಳ್ಳ ಉಗಮದಲ್ಲಿ ವಸ್ತುಗಳನ್ನು ಇಟ್ಟಾಗ ಅವುಗಳಲ್ಲಿ ಇರುವ ಪರಮಾಣುಗಳಿಂದ ಪ್ರಕಾಶ ಬರುವುದು. ಇದನ್ನು ರೋಹಿತಲೇಖದಿಂದ ಪರಿಶೀಲಿಸಿದಾಗ ತೋರುವ ವರ್ಣಮಾಲೆಯನ್ನು ನಿಸ್ಸರಣರೋಹಿತ (ಎಮಿಷನ್ ಸ್ಪೆಕ್ಟ್ರಮ್) ಎಂದು ಕರೆಯಲಾಗುವುದು. ಇದು ಗೆರೆಗಳನ್ನು ಅಥವಾ ಪಟ್ಟಿಗಳನ್ನು ಹೊಂದಿರುವುದು. ವಿದ್ಯುದ್ದೀಪದಿಂದ ಹೊರಟ ಪ್ರಕಾಶದ ವರ್ಣಮಾಲೆ ಹೀಗಿರದೆ ಅವಿಚ್ಛಿನ್ನವಾಗಿರುವುದು. ಈ ಪ್ರಕಾಶದ ಮಾರ್ಗದಲ್ಲಿ ವಸ್ತುಗಳನ್ನು ಇಟ್ಟು, ಅವುಗಳ ಮೂಲಕ ಪ್ರಸಾರವಾಗಿ ಬಂದ ಪ್ರಕಾಶವನ್ನು ಪರೀಕ್ಷಿಸಿದರೆ ಅವಿಚ್ಛಿನ್ನ ರೋಹಿತದಲ್ಲಿ ಕಪ್ಪುಗೆರೆಗಳು ಕಂಡುಬರುವುವು. ಇವುಗಳನ್ನು ಅಂತರ್ಗ್ರಹಣರೋಹಿತವೆಂದು (ಅಬ್ಸಾರ್ಪ್ಷನ್ ಸ್ಪೆಕ್ಟ್ರಮ್) ಕರೆಯುತ್ತೇವೆ.

ಸೂರ್ಯರಶ್ಮಿಯ ರೋಹಿತವು ಸಾಧಾರಣವಾಗಿ ಅವಿಚ್ಛಿನ್ನವಿರುವಂತೆ ತೋರುವುದು. ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಡಬ್ಲ್ಯು.ಎಚ್.ವೊಲಾಸ್ಟನ್ (1802) ಮತ್ತು ಜೆ.ಫ್ರಾನ್‌ಹಾಫರ್ (1817) ಎಂಬುವರು ಮೊಟ್ಟ ಮೊದಲನೆಯ ಅಂತರ್ಗ್ರಹಣ ರೋಹಿತವನ್ನು ಕಂಡುಹಿಡಿದರು. ಇದರಲ್ಲಿ ನೂರಾರು ಗೆರೆಗಳಿವೆ. ಅವನ್ನು ಫ್ರಾನ್ ಹಾಫರ್‌ಗೆರೆಗಳೆಂದು ಕರೆಯುತ್ತಾರೆ. ಇವುಗಳು ಉಂಟಾಗುವ ಬಗೆಯನ್ನು ಐವತ್ತು ವರ್ಷಗಳ ಅನಂತರ

ಕಿರ್‌ಚಾಫ್ (1859) ವಿವರಿಸಿದ. ಈತ ಗಣಿತಶಾಸ್ತ್ರದ ಮೂಲಕ ಸಾಧಿಸಿದ ನಿಯಮದ ಪ್ರಕಾರ, ಯಾವುದೇ ಒಂದು ಉಷ್ಣತೆಯ ಪರಿಸ್ಥಿತಿಯಲ್ಲಿ, ಒಂದು ನಿರ್ದಿಷ್ಟವಾದ ತರಂಗಾಂತರದ ಪ್ರಕಾಶವನ್ನು ಉತ್ಪಾದಿಸುವ ಶಕ್ತಿ ಮತ್ತು ಹೀರುವ ಶಕ್ತಿಗಳಿಗೆ ಇರುವ ಅನುಪಾತ ಎಲ್ಲ ವಸ್ತುಗಳಿಗೂ ಒಂದೇ ಆಗಿರುವುದು. ಅಂದರೆ ಪ್ರತಿಯೊಂದು ವಸ್ತುವೂ ತಾನು ಹೆಚ್ಚಾಗಿ ಉತ್ಪಾದಿಸಬಲ್ಲ ತರಂಗಾಂತರವನ್ನು ಹೆಚ್ಚಿಸಿ ಹೀರಿಕೊಳ್ಳುವುದು. ಹೆಚ್ಚು ಉಷ್ಣತೆಯಿರುವ ಸೂರ್ಯನ ಒಳಭಾಗದಿಂದ ಹೊರಟ ಪ್ರಕಾಶದ ಕೆಲವು ಭಾಗಗಳನ್ನು ಅದಕ್ಕಿಂತ ಕಡಿಮೆ ಉಷ್ಣತೆಯುಳ್ಳ ಸೂರ್ಯನ ಹೊರ ಆವರಣದಲ್ಲಿರುವ ಅನಿಲ ಪದಾರ್ಥಗಳು ಹೀರಿಕೊಳ್ಳುವುವು. ಇದರಿಂದ ಸೌರರೋಹಿತದಲ್ಲಿ ಕಪ್ಪು ಗೆರೆಗಳು ಉಂಟಾಗುವುವು. ಈ ಗೆರೆಗಳ ತರಂಗಾಂತರಗಳನ್ನು ಪ್ರಯೋಗಶಾಲೆಯಲ್ಲಿ ಉತ್ಪಾದಿಸಿ ಅಳೆಯಲ್ಪಟ್ಟ ವಿವಿಧ ಪರಮಾಣುಗಳ ನಿಸ್ಸರಣತರಂಗಾಂತರಗಳೊಂದಿಗೆ ಹೋಲಿಸಿ, ಕಿರ್‌ಚಾಫ್ ಮತ್ತು ಬುನ್ಸೆನ್ ಸೂರ್ಯನ ಹೊರ ಆವರಣದ ರಾಸಾಯನಿಕ ವಿಶ್ಲೇಷಣೆಯನ್ನೇ ಮಾಡಿದರು. ಅಲ್ಲಿ ಅವರು ಸೂರ್ಯನಲ್ಲಿ ಸೀಷಿಯಂ ಮತ್ತು ಸೀಸಗಳನ್ನು ಕಂಡುಹಿಡಿದರು. ಈ ರೀತಿ ಸೂರ್ಯನಲ್ಲಿ ಜಲಜನಕ (ಹೈಡ್ರೊಜನ್), ಹೀಲಿಯಂ, ಸೋಡಿಯಂ, ಕ್ಯಾಲ್ಸಿಯಂ, ಕಬ್ಬಿಣ ಮುಂತಾದ 66 ಧಾತುಗಳು ಇರುವುದು ತಿಳಿದುಬಂದಿದೆ. ಹಾಗೆಯೇ ನಕ್ಷತ್ರಗಳ ಅಂತರ್ಗ್ರಹಣರೋಹಿತ ಅವುಗಳಲ್ಲಿ ಜಲಜನಕ, ಕ್ಯಾಲ್ಸಿಯಂ, ಕಬ್ಬಿಣ, ಮ್ಯಾಂಗನೀಸ್ ಇವು ಹೆಚ್ಚು ಪ್ರಮಾಣದಲ್ಲಿ ಇರುವುದನ್ನು ತಿಳಿಸಿದೆ.

ಶಕಲ (ಕ್ವಾಂಟಮ್) ಸಿದ್ಧಾಂತದ ಪ್ರಕಾರ ಪ್ರಕಾಶ ಶಕ್ತಿಯ ಚಿಕ್ಕ ಚಿಕ್ಕ ಕಣಗಳಂತಿರುವ ಫೋಟಾನುಗಳ ಸಮೂಹವೆಂದು ತಿಳಿಯಲಾಗಿದೆ. ಒಂದು ಫೋಟಾನನ್ನು ಹೆಚ್ಚಿಗೆ ಸೇರಿಸಿದಾಗ ಅಣುವಿನ ಅಥವಾ ಪರಮಾಣುವಿನ ಶಕ್ತಿಯು ಹೆಚ್ಚಾಗುತ್ತದೆ. ಈ ವಿಷಯ ಅವುಗಳ ಶಕ್ತಿಮಟ್ಟದ ಚಿತ್ರದಲ್ಲಿ–(ಎನರ್ಜಿ ಲೆವೆಲ್ ಡಯಾಗ್ರಮ್) ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಹೋಗುವ ಬಾಣಗಳಿಂದ ಸೂಚಿಸಲಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಮೇಲಿನಿಂದ ಕೆಳಕ್ಕೆ ಬರುವ ಬಾಣಗಳು ಅಣುಗಳ ಶಕ್ತಿ ಕಡಿಮೆಯಾಗಿ ಫೋಟಾನುಗಳು ಹೊರಬರುವುದನ್ನು ಸೂಚಿಸುತ್ತವೆ. ಹೀಗೆ ಪ್ರಕಾಶವನ್ನು ಹೀರುವ ಮತ್ತು ಉತ್ಪಾದಿಸುವ ಕ್ರಮಗಳು ಪರಸ್ಪರ ವ್ಯತಿರಿಕ್ತವಾಗಿದ್ದು, ಅವುಗಳಿಗೆ ಸಂಬಂಧಿಸಿದ ಶಕಲ ನಿಯಮಗಳು ಒಂದೇ ಇರುತ್ತವೆ. ಆದರೂ ಅಂತರ್ಗ್ರಹಣ ರೋಹಿತ ತನ್ನದೇ ಆದ ಕೆಲವು ವಿಶಿಷ್ಟ ಮತ್ತು ಮುಖ್ಯ ಗುಣಗಳನ್ನು ಹೊಂದಿದೆ.

**ಅಂತರ್ಗ್ರಹಣ ರೋಹಿತ**

**ಫ್ರಾನ್‌ಹಾಫರ್‌ನ ಕಪ್ಪು ಗೆರೆಗಳನ್ನು ತೋರಿಸುವ ಅಂತರ್ಗ್ರಹಣ ರೋಹಿತ**

ನಿಸ್ಸರಣ ರೋಹಿತವನ್ನು ಪಡೆಯಲು ಉಪಯೋಗಿಸುವ ಬುನ್‌ಸೆನ್ ಜ್ವಾಲೆ (200$^\circ$ ಸೆ) ಆಕ್ಸಿ ಅಸಿಟಲಿನ್ ಜ್ವಾಲೆ (2500$^\circ$ ಸೆ) ಮತ್ತು ಆರ್ಕ್ ದೀಪಗಳ (3500$^\circ$ ರಿಂದ 8000$^\circ$ ಸೆಂ)ಉಷ್ಣತೆ ಹೆಚ್ಚಾಗಿದ್ದು, ಅವುಗಳಲ್ಲಿ ಹಿಡಿಯಲ್ಪಟ್ಟ ಪದಾರ್ಥಗಳ ಅಣುಗಳು ವಿಭಜನೆ ಹೊಂದುವುದರಿಂದ, ಅಣುಗಳ ರೋಹಿತ ದೊರಕದೇ ಅವುಗಳಲ್ಲಿರುವ ಪರಮಾಣುಗಳ ಮತ್ತು ಕೆಲವು ತಾತ್ಪೂರ್ತಿಕವಾದ ಅಣುಗಳ ರೋಹಿತವೇ ಸಾಧಾರಣವಾಗಿ ದೊರೆಯುವುದು. ಕ್ಲೋರಿನ್ ಮೊದಲಾದ ಹ್ಯಾಲೊಜೆನ್ನುಗಳ ಮತ್ತು ಸಂಯುಕ್ತ ಮೂಲಘಟಕಗಳ ರೋಹಿತ ದೊರೆಯುವುದಿಲ್ಲ. ಒಂದು ಲೋಹದ ಆಕ್ಸೈಡುಗಳು, ಹ್ಯಾಲೈಡುಗಳು, ಕಾರ್ಬೊನೇಟುಗಳು ಮತ್ತು ಸಲ್ಫೇಟುಗಳು ಒಂದೇ ರೀತಿಯ ರೋಹಿತವನ್ನು, ಅಂದರೆ ಆ ಲೋಹದ ವಿಲಕ್ಷಣ ರೋಹಿತವನ್ನು ಮಾತ್ರ ಕೊಡುತ್ತವೆ. ಹೀಗಾಗಿ ನಿಸ್ಸರಣ ಪದ್ಧತಿಯಿಂದ ನಾವು ಉಪಯೋಗಿಸಿದ ಪದಾರ್ಥದ ರಾಸಾಯನಿಕ ಸ್ವರೂಪ ತಿಳಿಯಲಾಗುವುದಿಲ್ಲ. ಆದರೆ ಈ ಪರಿಸ್ಥಿತಿ ಅಂತರ್ಗ್ರಹಣ ಪದ್ಧತಿಯಲ್ಲಿ ಉದ್ಭವಿಸುವುದಿಲ್ಲ. ಏಕೆಂದರೆ ಇದರಲ್ಲಿ ಪದಾರ್ಥಗಳ ಉಷ್ಣತೆ ಸಾಮಾನ್ಯವಾಗಿದ್ದು, ಅವುಗಳ ವಿಭಜನೆಗೆ ಅವಕಾಶವೇ ಇರುವುದಿಲ್ಲ. ಹೀಗಾಗಿ ರಾಸಾಯನಿಕ ಸ್ವರೂಪವನ್ನು ತಿಳಿಯಲು ಈ ಪದ್ಧತಿ ಬಹಳ ಉಪಯುಕ್ತವಾಗಿದೆ.

ಹೊರಬರುವ ಪ್ರಕಾಶ ವಿದ್ಯುತ್ಕಾಂತ ವಿಕಿರಣವಾಗಿದ್ದು ಅದು ಅತಿ ಚಿಕ್ಕ ತರಂಗಾಂತರದ ಕ್ಷ–ಕಿರಣ (ತರಂಗಾಂತರ 1 ಆ್ಯಂಗ್‌ಸ್ಟ್ರಾಂ– 10$^8$ ಸೆಂ.ಮೀ) ಗಳಿಂದ ಅತಿ ದೊಡ್ಡದಾದ ರೇಡಿಯೋ ಅಲೆಗಳವರೆಗೂ (1000 ಮೀ) ವಿಸ್ತರಿಸಿರುವುದು. ನಿಸ್ಸರಣ ರೋಹಿತವನ್ನು ಅತಿನೇರಳೆ ತರಂಗಗಳು (ಅಲ್ಟ್ರವಯೋಲೆಟ್: 1000–3500 ಆ.ವರೆಗೆ) ಗೋಚರರೋಹಿತ (3500–7000 ಆ.ವರೆಗೆ) ಮತ್ತು ಹತ್ತಿರದ ಅತಿರಕ್ತತರಂಗಗಳ (ಇನ್‌ಫ್ರಾರೆಡ್: 700–10,000 ಆ.ವರೆಗೆ) ವಿಭಾಗಗಳಲ್ಲಿ ಮುಖ್ಯವಾಗಿ ಪಡೆಯಬಹುದು. ಅಂತರ್ಗ್ರಹಣ ರೋಹಿತವನ್ನು ಈ ವಿಭಾಗಗಳಲ್ಲಲ್ಲದೆ ದೂರದ ಅತಿರಕ್ತ ತರಂಗಗಳು (10,000 ಆ. ಅಥವಾ 10$^{-4}$ಸೆಂಮೀನಿಂದ 10$^{-1}$ಸೆಂಮೀ ವರೆಗೂ) ಮತ್ತು ಮೈಕ್ರೋವೇವ್ (10$^{-1}$ ಸೆಂಮೀನಿಂದ 10 ಸೆಂಮೀ ವರೆಗೂ) ವಿಭಾಗಗಳಲ್ಲೂ ಪಡೆಯಬಹುದು. ಕಾಂತ ಅನುನಾದರೋಹಿತ (ಮ್ಯಾಗ್ನೆಟಿಕ್ ರೆಸೊನೆನ್ಸ್ ಸ್ಪೆಕ್ಟ್ರಮ್) ಕೂಡ ಇದೇ ಪದ್ಧತಿಗೆ ಸೇರುತ್ತದೆ. ಇದರಲ್ಲಿ 1000 ಸೆಂಮೀ ತರಂಗಾಂತರದ ವಿದ್ಯುತ್ಕಾಂತ ಅಲೆಗಳನ್ನು ಉಪಯೋಗಿಸುವರು. ತತ್ವಶಃ ಎಷ್ಟು ದೊಡ್ಡ ಪ್ರಮಾಣದ ಅಲೆಗಳನ್ನಾದರೂ ಈ ಪದ್ಧತಿಯಲ್ಲಿ ಉಪಯೋಗಿಸಬಹುದು.

ವಿವಿಧ ತರಂಗಾಂತರಗಳಲ್ಲಿ ಉಪಯೋಗಿಸಲ್ಪಡುವ ಉಗಮಗಳು, ಬೆಳಕನ್ನು ವಿಶ್ಲೇಷಿಸುವ ಅಶ್ರಕಗಳು, ಬೆಳಕನ್ನು ವೀಕ್ಷಿಸುವ ಸಾಧನಗಳೂ ಹೀಗಿವೆ : ಅತಿ ನೇರಳೆ ಬಣ್ಣ ಮತ್ತು ಗೋಚರವಿಭಾಗಗಳಲ್ಲಿ ಜಲಜನಕದೀಪ, ವಿದ್ಯುದ್ದೀಪ, ಇವುಗಳೊಂದಿಗೆ ಕ್ವಾರ್ಟ್ಜ (Quartz) $CaF_2$, LiF ಅಶ್ರಕಗಳು (ಗೋಚರ ವಿಭಾಗಕ್ಕೆ ಮಾತ್ರ ಗಾಜಿನ ಅಶ್ರಕ) ಬಿಂಬಗ್ರಾಹಿ ತಟ್ಟೆಗಳು ಮತ್ತು ಪ್ರಕಾಶ ಕೋಶಗಳು (ಫೋಟೊಸೆಲ್ಸ್) ಅತಿರಕ್ತರಶ್ಮಿವಿಭಾಗಕ್ಕೆ 1500ಳಿಸೆಂ.ಗ್ರೇ.ಉಷ್ಣತೆಗೆ ಕಾಯಿಸಿದ ನರ್ನ್‌ಸ್ಟ್ ತಂತು (ಫಿಲಮೆಂಟ್). ಇದರಲ್ಲಿ(ಸೀಜಿಯಂ ಮತ್ತು ಥೋರಿಯಂ ಆಕ್ಸೈಡುಗಳಿವೆಯಲ್ಲದೆ ಇದರೊಂದಿಗೆ NaCl, Kbr, TiBrI ಸ್ಫಟಿಕಗಳ ಅಶ್ರಕಗಳು ಮತ್ತು ಉಷ್ಣಯುಗ್ಮಗಳು (ಥರ್ಮೊಕಪಲ್ಸ್) ಜಾಲಿಗೆಗಳನ್ನು ಅಶ್ರಕಗಳ ಬದಲು ಎಲ್ಲಾ ವಿಭಾಗದಲ್ಲಿ ಉಪಯೋಗಿಸಬಹುದು. ಸೂಕ್ಷ್ಮ ತರಂಗಗಳನ್ನು ಕ್ಲೆಸ್ಟ್ರಾನ್ ಮತ್ತು ಮ್ಯಾಗ್ನೆಟ್ರಾನುಳಿಂದ ಉತ್ಪಾದಿಸಿ ಸ್ಫಟಿಕ ಋಜುಕಾರಿ (ರೆಕ್ಟಿಫೈಯರ್)ಗಳಿಂದ ವೀಕ್ಷಿಸುವರು. ಕಾಂತ ಅನುನಾದದ ಪದ್ಧತಿಯಲ್ಲಿ ಸ್ಫಟಿಕದಿಂದ ಪಡೆದ ವಿದ್ಯುತ್‌ಕಾಂತ ಅಲೆಗಳನ್ನು ಪ್ರೇರಕ ಸುರುಳಿಯಿಂದ (ಇಂಡಕ್ಷನ್ ಕಾಯಿಲ್) ವೀಕ್ಷಿಸುವರು.

ಅಣುರೋಹಿತ ಶಾಸ್ತ್ರದ (ಮಾಲಿಕ್ಯುಲಾರ್ ಸ್ಪೆಕ್ಟ್ರೊಸ್ಕೊಪಿ) ಮುಖ್ಯವಾದ ಫಲ ಈ ರೀತಿಯದಾಗಿದೆ. ಪ್ರತಿಯೊಂದು ಅಣುವಿಗೂ ಅತಿನೇರಳೆ ವರ್ಣವಿಭಾಗದಲ್ಲಿ ಒಂದು, ಹಿರಿಗೆಂಪುವರ್ಣ (ಅತಿರಕ್ತರಶ್ಮಿ) ವಿಭಾಗದಲ್ಲಿ ಒಂದು, ಸೂಕ್ಷ್ಮತರಂಗ ವಿಭಾಗದಲ್ಲಿ ಒಂದು – ಹೀಗೆ ಮೂರು ವರ್ಣಮಾಲೆಗಳು ಇರುವುವು. ಈ ರೋಹಿತಗಳು ಅಣುವಿನಲ್ಲಿರುವ ಮೂರು ವಿಧವಾದ ಶಕ್ತಿಗಳಿಂದ ಉಂಟಾಗುತ್ತವೆ. ಅಣುವಿನಲ್ಲಿ ಎಲೆಕ್ಟ್ರಾನುಗಳ ಹಂಚಿಕೆಯಿಂದ ಉಂಟಾಗುವ ಶಕ್ತಿ ಮತ್ತು ಅಣುವಿನ ಪರಿಭ್ರಮಣ ಶಕ್ತಿಗಳ ಬಗ್ಗೆ ಅಧ್ಯಯನ ಹಾಗೂ ಸಂಶೋಧನೆ ನಡೆಸಲು ಅಂತರ್ಗ್ರಹಣರೋಹಿತ ಅತಿ ಮುಖ್ಯ ಸಾಧನವಾಗಿದೆ. ಇದರ ಸಹಾಯದಿಂದ ಅಣುವಿನ ಶಕ್ತಿಮೂಲಗಳು, ಅಣುವಿನಲ್ಲಿ ಪರಮಾಣುಗಳ ಜೋಡಣೆ ಮುಂತಾದ ಅತಿಮುಖ್ಯ ವಿಷಯ ಸಂಗ್ರಹಣೆ ನಡೆದಿದೆ.

ಅನಿಲ ಪದಾರ್ಥಗಳು ($O_2$, HCl) ಮತ್ತು ಬಾಷ್ಪಗಳು (Na, $H_2O$) ಸಣ್ಣದಾದ ಗೆರೆಗಳನ್ನೂ ದ್ರವಗಳು ಮತ್ತು ದ್ರಾವಣಗಳು ಅಗಲವಾದ ಪಟ್ಟಿಗಳನ್ನೂ ಹೊಂದಿರುವ ಅಂತರ್ಗ್ರಹಣರೋಹಿತವನ್ನು ಕೊಡುವುವು. ಉದಾ:($KMnO_4$) ದ್ರಾವಣ ಹಸಿರು ವಿಭಾಗದಲ್ಲಿ ಐದು ಪಟ್ಟಿಗಳನ್ನೂ ಕೋಬಾಲ್ಟ್ ಕ್ಲೋರೈಡ್ ದ್ರಾವಣ ಹಸಿರು ವಿಭಾಗದಲ್ಲಿ ಒಂದು ಪಟ್ಟಿಯನ್ನೂ ಕೊಡುತ್ತವೆ. ಪ್ರಯೋಗಶಾಲೆಯಲ್ಲಿ ತೆಗೆದ ರೋಹಿತಗಳಲ್ಲಿ ಆಮ್ಲಜನಕ ಮತ್ತು ನೀರಿನ ಆವಿಯ ಗೆರೆಗಳು ಸಾಧಾರಣವಾಗಿ ಕಂಡುಬರುವುವು. ಆದರೆ ನೀರಿನಲ್ಲಿ ಕರಗಿರುವ ಅಪೂರ್ವ ಪದಾರ್ಥಗಳು ಅತಿ ಕಡಿಮೆ ಅಗಲವಿರುವ ಪಟ್ಟಿಗಳನ್ನು ಕೊಡುತ್ತವೆ. (ಉದಾ :ಡಿಡಿಮಿಯಂ ಮತ್ತು ಎರ್ಬಿಯಂ). ಈ ಧಾತುಗಳ ಸ್ಫಟಿಕಗಳು ಅತಿ ಕಡಿಮೆ ಉಷ್ಣತೆಯಲ್ಲಿ ಉಪಯೋಗಿಸಿದಾಗ ಸಣ್ಣದಾದ ಗೆರೆಗಳನ್ನು ಕೊಡುತ್ತವೆ. ಅಂತರ್ಗ್ರಹಣರೋಹಿತ ರಾಸಾಯನಿಕ ವಿಶ್ಲೇಷಣೆಗೆ ಸೂಕ್ಷ್ಮವೇದಿಯಾದ (ಸೆನ್ಸಿಟಿವ್) ಪದ್ಧತಿಯಾಗಿದೆ. ಉದಾಹರಣೆಗಾಗಿ 10$^{-15}$ ಗ್ರಾಂಗಳಷ್ಟು ಇದ್ದ ವೆನೇಡಿಯಂ ಲವಣವನ್ನು ಈ ಪದ್ಧತಿಯಿಂದ ಕಂಡುಹಿಡಿಯಲಾಯಿತು. (ಕೆ.ಎಸ್.ಆರ್.)

**ಅಂತರ್ಜಲ :** ನೆಲಮಟ್ಟದ ಕೆಳಗೆ ಆಳದಲ್ಲಿನ ಮಣ್ಣು ಮತ್ತು ಶಿಲೆಗಳಲ್ಲಿನ ರಂಧ್ರಗಳಲ್ಲಿ ಹುದುಗಿರುವ ನೀರು. (ಗ್ರೌಂಡ್ ವಾಟರ್). ಭೂಮಿಯ ಮೇಲೆ ಬಿದ್ದ ಮಳೆಯ ನೀರಿನ ಬಹುಭಾಗ ಹರಿದುಹೋಗುತ್ತದೆ; ಸ್ವಲ್ಪ ಭಾಗ ಆವಿಯಾಗಿ ವಾಯುಮಂಡಲವನ್ನು ಮತ್ತೆ ಸೇರುತ್ತದೆ. ಇನ್ನೂ ಸ್ವಲ್ಪ ಭಾಗವನ್ನು ಸಸ್ಯವರ್ಗಗಳು ಹೀರಿಕೊಳ್ಳುತ್ತವೆ. ಹೀಗಾಗಿ ಉಳಿದ ನೀರು ಭೂಮಿಯ ಮೇಲ್ಪದರಲ್ಲಿರುವ ಶಿಲೆ ಮತ್ತು ಮಣ್ಣಿನ ಮೂಲಕ ಜಿನುಗಿ ಅವುಗಳಲ್ಲಿನ ರಂಧ್ರಗಳಲ್ಲಿ ಶೇಖರವಾಗುತ್ತದೆ. ಹೀಗೆ ಜಿನುಗಿ ಶೇಖರಗೊಳ್ಳುವ ನೀರಿನ ಪ್ರಮಾಣವನ್ನು ಹಲವಾರು ಅಂಶಗಳು ನಿರ್ಧರಿಸುತ್ತವೆ. ಉದಾ: ಹುಡಿಮಣ್ಣಿನ ನೆಲದಲ್ಲಿ ಬಿದ್ದ ಮಳೆಯ ನೀರು ಬಹುಬೇಗನೆ ಇಂಗುತ್ತದೆ. ಅದೇ ನೀರು ಜೇಡಿಮಣ್ಣಿನ ಭೂಭಾಗದಲ್ಲಿ ಇಂಗಿಹೋಗದೆ ನೆಲದ ಮೇಲಿನ ಕುಣಿಗಳಲ್ಲಿ ಶೇಖರವಾಗುತ್ತದೆ. ನೆಲ ಭಾಗ ಇಳಿಜಾರಾಗಿದ್ದಲ್ಲಿ ಬಹುಬೇಗನೆ ಹರಿದುಹೋಗುತ್ತದೆ. ಇಂಗುವ ನೀರಿನದಕ್ಕಿಂತ ಹರಿಯುವ ನೀರಿನ ಪ್ರಮಾಣವೇ ಹೆಚ್ಚು. ಅಂತೂ ಭೂಮಿಯ ಮೇಲ್ಪೊಗಟೆಯ ನಾನಾ ಭಾಗಗಳಲ್ಲಿ ಅಂತರ್ಜಲವಿರುತ್ತದೆ. ಇದು ಶೇಖರವಾಗುವ ಆಳ ನೆಲಮಟ್ಟದಿಂದ ಒಂದು ಮೈಲಿಗಿಂತ ಹೆಚ್ಚಾಗಿರುವುದಿಲ್ಲ. ಅದರಲ್ಲೂ ಮರುಭೂಮಿಯ ಪ್ರದೇಶಗಳಲ್ಲೇ ಆಳ ಹೆಚ್ಚು.

ಶಿಲೆಯಲ್ಲಿನ ಅಂತರ್ಜಲ ಪ್ರಮಾಣ ಒಂದೇ ಸಮನಾಗಿರದೆ ಸೇ. 1–50ರಷ್ಟು ಏರುಪೇರುಗಳನ್ನು ತೋರಿಸುತ್ತದೆ. ಇದು ಬಹುಮಟ್ಟಿಗೆ ಶಿಲೆಗಳ ರಂಧ್ರತ್ವವನ್ನು ಅವಲಂಬಿಸಿದೆ. ರಂಧ್ರತ್ವ ಅಧಿಕವಾಗಿರುವ ಶಿಲೆಗಳು ಉತ್ತಮ ಜಲವಾಹಕಗಳೂ ಹೌದು. ರಂಧ್ರಗಳ ಗಾತ್ರ ಮತ್ತು ಅವು ಹರಡಿರುವ ಪ್ರಮಾಣವೂ ಈ ದೃಷ್ಟಿಯಿಂದ ಮುಖ್ಯ. ಅಲ್ಲದೆ ಶಿಲೆಯ ಸೀಳುಗಳೂ ಬಿರುಕುಗಳೂ ನೀರು ವ್ಯಾಪಿಸುವುದಕ್ಕೆ ವಿಶೇಷ ಸಹಾಯಕಾರಿಗಳು. ಮರಳುಶಿಲೆಯಲ್ಲಿ ಸಾಮಾನ್ಯವಾಗಿ ನೂರಕ್ಕೆ ಹತ್ತು ಹದಿನೈದರಷ್ಟು ರಂಧ್ರಗಳಿರುತ್ತವೆ. ನೊರಜುಗಲ್ಲಿನಲ್ಲಿ ನೂರಕ್ಕೆ ಮೂವತ್ತಾರರಷ್ಟು ರಂಧ್ರಗಳಿರುತ್ತವೆ. ಶಿಲೆಗಳೆಲ್ಲಲ್ಲ ಇದರ ರಂಧ್ರತ್ವ ಬಹು ಹೆಚ್ಚು. ಆದ್ದರಿಂದ ಅಂತರ್ಜಲ ತಡೆಯಿಲ್ಲದೆ ಪ್ರಸಾರವಾಗುತ್ತದೆ. ಆದರೆ ಜೇಡುಶಿಲೆಯಲ್ಲಿ ನೂರಕ್ಕೆ ಐವತ್ತೆರಡು ಭಾಗ ರಂಧ್ರಗಳಿದ್ದರೂ ನೀರು ಸುಲಭವಾಗಿ ಪ್ರವಹಿಸಲಾರದು. ಅದೊಂದು ಅವ್ಯಾಪ್ಯ ಇಂಪರ್ಮಿಯಬಲ್ ಶಿಲೆ. ಅದು ನೀರನ್ನು ಶೇಖರಿಸಿಟ್ಟುಕೊಳ್ಳಬಲ್ಲುದೇ ಹೊರತು ಅದರ ಪ್ರಸಾರಕ್ಕೆ ಸಹಾಯಕವಾಗಿಲ್ಲ.

ಭೂಮಿಯ ಮೇಲ್ಪೊಗಟೆಯಲ್ಲಿ ಅಂತರ್ಜಲವಿರುವ ಮಟ್ಟವನ್ನು ಸಂತೃಪ್ತವಲಯ (ಸ್ಯಾಚುರೇಟೆಡ್ ಜ಼ೋನ್) ಎನ್ನಲಾಗಿದೆ. ಇದರ ಮೇಲ್ಭಾಗವೇ ಜಲಮಟ್ಟ (ವಾಟರ್ ಟೇಬಲ್). ಇದಕ್ಕೂ ನೆಲಮಟ್ಟಕ್ಕೂ ನಡುವೆ ಇರುವ ಭೂಭಾಗವೇ ವಾಯು ಸಂಸರ್ಗವಲಯ (ಜ಼ೋನ್ ಆಫ್ ಏರೇ). ಇದರ ಮೂಲಕವಾಗಿಯೇ ನೆಲದ ಮೇಲೆ ಬಿದ್ದ ಮಳೆಯ ನೀರು ಜಿನುಗಿ ಜಲಮಟ್ಟವನ್ನು ಮುಟ್ಟುವುದು. ಹೀಗೆ ಜಿನುಗುವ ನೀರನ್ನು ಜಿನುಗು ನೀರು(ವ್ಯಾಡೋಸ್ ವಾಟರ್) ಎನ್ನುತ್ತಾರೆ. ಒಂದು ಪ್ರದೇಶದ ಜಲಮಟ್ಟ ವರ್ಷದುದ್ದಕ್ಕೂ ಒಂದೇ ಸಮನಾಗಿರದೆ ಏರುಪೇರುಗಳನ್ನು ತೋರಿಸುತ್ತದೆ. ಇದು ಸಾಮಾನ್ಯವಾಗಿ ನೆಲಭಾಗದ ಏರುತಗ್ಗುಗಳನ್ನು ಅನುಸರಿಸುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ಬೀಳುವ ಮಳೆಯ ವಾರ್ಷಿಕ ಪ್ರಮಾಣ ಮತ್ತು ಹವಾಗುಣವನ್ನು ಅವಲಂಬಿಸಿದೆ. ಬೆಂಗಾಡು ಪ್ರದೇಶಗಳಲ್ಲಿ ನೂರಾರು ಮಿ.ಗಳ ಆಳದಲ್ಲೂ ಮಳೆನಾಡು ಪ್ರದೇಶಗಳಲ್ಲಿ ಕೇವಲ ಕೆಲವು ಆಳದಲ್ಲೂ ಸಾಧಾರಣ ಮಳೆಯಾಗುವ ಬಯಲುಸೀಮೆಯಲ್ಲಿ 50–150 ಅಡಿಗಳ ಆಳದಲ್ಲೂ ಜಲಮಟ್ಟವಿರುತ್ತದೆ. ಅಲ್ಲದೆ, ಭೂ ಪ್ರದೇಶದ ಶಿಲೆಗಳ ವಿನ್ಯಾಸವೂ ಗಮನಿಸಬೇಕಾದ ಅಂಶ.

ಅಂತರ್ಜಲ ಭೂಮಿಯ ಒಳಗೆ ಸಾಮಾನ್ಯವಾಗಿ ಒಂದೆಕಡೆ ಶೇಖರವಾಗಿರದೆ ಕೆಳಮಟ್ಟಕ್ಕೆ ಸದಾ ಪ್ರವಹಿಸುತ್ತಿರುತ್ತದೆ. ಇದಕ್ಕೆ ಮುಖ್ಯ ಕಾರಣ ಭೂಮಿಯ ಗುರುತ್ವಾಕರ್ಷಣ ಶಕ್ತಿ. ಮೇಯಿನ್‌ಜ಼ರ್ ಎಂಬವರ ಅಭಿಪ್ರಾಯದಂತೆ ಅತಿ ಹೆಚ್ಚಿನ ವೇಗವೆಂದರೆ ದಿನಕ್ಕೆ 420 ಆದರೆ ಪ್ರಯೋಗಶಾಲೆಯ ಅಧ್ಯಯನಗಳ ಪ್ರಕಾರ ಇದು ಬಹು ಹೆಚ್ಚು. ಅಧಿಕವೆಂದರೆ ದಿನಕ್ಕೆ 5 ಹೆಚ್ಚಿರಬಾರದು: ಕನಿಷ್ಠವೆಂದರೆ ವರ್ಷಕ್ಕೆ 5 ಕಡಿಮೆ ಇರಬಾರದು.

ಭೂ ಪದರಗಳಲ್ಲಿ ಆಗಾಗ ತೋರುವ ಒತ್ತಡ ವ್ಯತ್ಯಾಸಗಳಿಂದ ಶಿಲೆಗಳಲ್ಲಿ ಸೀಳುಗಳೂ ಬಿರುಕುಗಳೂ ಉಂಟಾಗಿ ಅವುಗಳ ಮೂಲಕ ಅಂತರ್ಜಲ ಹೊರ ಚಿಮ್ಮುತ್ತದೆ. ಇವೇ ಚಿಲುಮೆಗಳು. ಒತ್ತಡದ ಪ್ರಮಾಣವನ್ನನುಸರಿಸಿ ಚಿಮ್ಮುವ ನೀರಿನ ಎತ್ತರ ನಿರ್ಧಾರವಾಗುತ್ತದೆ. ಬಹುಮಟ್ಟಿಗೆ ಚಿಲುಮೆಯ ನೀರು ತಣ್ಣಗಿರುತ್ತದೆ. ಆದರೆ ಹಲವು ಚಿಲುಮೆಗಳು ಬಿಸಿನೀರನ್ನು ಚಿಮ್ಮುತ್ತವೆ. ಅನೇಕ ಚಿಲುಮೆಗಳ ನೀರಿನಲ್ಲಿ ರಾಸಾಯನಿಕ ಅಂಶಗಳಿದ್ದು ಉತ್ತಮ ಔಷಧಿಯ ಗುಣಗಳು ಕಂಡುಬಂದಿವೆ. ಚಿಲುಮೆಗಳನ್ನು ನಮ್ಮ ದೇಶದ ಪಶ್ಚಿಮ ಕರಾವಳಿ, ಹಿಮಾಲಯ ತಪ್ಪಲು ಪ್ರದೇಶಗಳು, ಬಿಹಾರ ಮತ್ತು ಪಶ್ಚಿಮ ಬಂಗಾಲದಲ್ಲಿ ಗುರುತಿಸಲಾಗಿದೆ.

ಅಂತರ್ಜಲವು ಶಿಲೆಗಳ ಮೂಲಕ ಜಿನುಗುವಾಗ ಶಿಲೆಗಳಲ್ಲಿ ಕೆಲವು ಪದಾರ್ಥಗಳನ್ನು ತನ್ನಲ್ಲಿ ಕರಗಿಸಿಕೊಂಡು ಅನೇಕ ಕೆಲಸಗಳನ್ನು ಮಾಡಲು ಶಕ್ತವಾಗುತ್ತದೆ. ಅದರಲ್ಲೂ ಸುಣ್ಣಶಿಲೆಯ ಭೂಮಿಯಲ್ಲಿ ಪ್ರವಹಿಸುವಾಗ ಆ ಶಿಲೆಯನ್ನು ಸವೆಸಿ ತನ್ನಲ್ಲಿ ಅರಗಿಸಿಕೊಂಡು ಗವಿ ಕಂದರಗಳನ್ನು ಕೊರೆಯಬಲ್ಲದು. ಈ ಗವಿಗಳಲ್ಲಿ ಚಿತ್ರವಿಚಿತ್ರಾಕಾರದ ಕಂಬಗಳನ್ನು ಮನೋಹರವಾದ ಇಳಿಗೊಂಚಲುಗಳನ್ನು ನಿರ್ಮಿಸಬಲ್ಲದು.

ಒಟ್ಟಿನಲ್ಲಿ ಅಂತರ್ಜಲ, ಪ್ರಕೃತಿ ನಮಗಾಗಿ ಭೂಮಿಯಲ್ಲಿ ಹೂತಿಟ್ಟಿರುವ ಗುಪ್ತನಿಧಿ. ಇದನ್ನು ನಾವು ರೂಢಿಸಿಕೊಂಡಲ್ಲಿ ನಮಗಾಗುವ ಉಪಯೋಗಗಳು ಬಹು ಅಧಿಕ. ಬೇಸಾಯಕ್ಕಂತೂ ಇದು ವರದಾನ. ಇದರಿಂದ ಕುಡಿಯುವ ನೀರಿನ ಕೊರತೆಯ ನಿವಾರಣೆಯೂ ಸಾಧ್ಯ. ಭಾರತದ ಭೂ ಸಂಶೋಧನ ಸಂಸ್ಥೆಯ ಮುಖ್ಯಾಧಿಕಾರಿಗಳಾಗಿದ್ದ ಸರ್.ಸಿರಿಲ್ ಎಸ್.ಫಾಕ್ಸ್ ಅಂದಾಜಿಸಿರುವಂತೆ ಭಾರತದಲ್ಲಿ ಕನಿಷ್ಠ 20 ದಶಲಕ್ಷ ಎಕರೆಗಳಲ್ಲಿ ಅಂತರ್ಜಲವನ್ನು ರೂಢಿಸಿಕೊಂಡು ಬೇಸಾಯ ಮಾಡಲಾಗುತ್ತಿದೆ. ಕರ್ನಾಟಕದ ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಈಚಿನ ವರ್ಷಗಳಲ್ಲಿ ಈ ಬಗೆಯ ಬೇಸಾಯ ಅಧಿಕವಾಗುತ್ತಿದೆ. (ಬಿ.ವಿ.ಜಿ.)

**ಅಂತರ್ಜಲಸಂಪುಟ :** ಬಂದರಿನ ಮತ್ತು ನದಿಗಳ ಮೇಲಿನ ಸೇತುವೆಗಳ ನಿರ್ಮಾಣಕಾರ್ಯದಲ್ಲಿ ಇವಕ್ಕೆ ಸಂಬಂಧಿಸಿದಂತೆ ನೀರಿನ ಕೆಳಭಾಗದಲ್ಲಿ ಅಸ್ತಿಭಾರ ಹಾಕಲು ಒಂದು ಪೆಟ್ಟಿಗೆಯಾಕಾರದಲ್ಲಿ (ಕೆಲವು ಸಂದರ್ಭಗಳಲ್ಲಿ ಉರುಳೆಯಾಕಾರದಲ್ಲಿ) ನಿರ್ಮಿಸುವ ಒಂದು ರಚನೆಗೆ ಯಂತ್ರಶಿಲ್ಪಶಾಸ್ತ್ರದಲ್ಲಿ ಈ ಹೆಸರಿದೆ. ಇಂಥ ಸಂಪುಟಗಳಲ್ಲಿ ಮೂರು ವಿಧಗಳುಂಟು.

1. ಪೆಟ್ಟಿಗೆಯ ಮಾದರಿ 2. ತೆರೆದಿರುವ ಮಾದರಿ 3. ವಾಯುಪ್ರೇರಿತ ಸಂಪುಟ.

1. ಪೆಟ್ಟಿಗೆ ಮಾದರಿ ಅಂತರ್ಜಲ ಸಂಪುಟ : ಈ ಬಗೆಯ ಸಂಪುಟದ ಮೇಲ್ಭಾಗ ತೆರೆದಿದ್ದು ತಳಭಾಗ ಮುಚ್ಚಿರುತ್ತದೆ. ಇಂಥ ಸಂಪುಟಗಳನ್ನು ನೆಲದಮೇಲೆ ನಿರ್ಮಿಸಿ ಆಮೇಲೆ ವರ್ಗಾಯಿಸಿ, ಪೂರ್ವಭಾವಿಯಾಗಿ ರಚಿಸಲಾಗಿರುವ ಪಾಯದ ಮೇಲಿರಿಸುತ್ತಾರೆ. ಇಟ್ಟು ಒಳಕ್ಕೆ ಅದುಮುತ್ತಾರೆ. ಕೂರಬೇಕಾದ ಸ್ಥಳದಲ್ಲಿ ಸಂಪುಟ ಕೂತಾಗ ಅದರ ಮೇಲ್ಭಾಗ ನೀರಿನ ಮಟ್ಟಕ್ಕಿಂತ ಮೇಲಿರುತ್ತದೆ. ಸೇತುವೆಯ ಆಧಾರಸ್ತಂಭ, ಸಮುದ್ರಗೋಡೆ, ತಡೆ ನೀರಿನ ಭಾಗ ಹಾಗೂ ಹಡಗಿನಿಂದ ಇಳಿಯುವುದಕ್ಕೆ ಕಟ್ಟಿರುವ ಧಕ್ಕೆಯಂಥ ರಚನೆಗಳ ನಿರ್ಮಾಣಕ್ಕೆ ಇಂಥ ಸಂಪುಟಗಳ ಆವಶ್ಯಕತೆ ಹೆಚ್ಚಾಗಿದೆ. ನೀರಿನ ಕೆಳಭಾಗದಲ್ಲಿ ಪಾಯ ಹಾಕುವಾಗ ಅಂತರ್ಜಲಸಂಪುಟವನ್ನು ನೀರಿನ ತಳಭಾಗಕ್ಕಿಂತ ಇನ್ನೂ ಕೆಳಕ್ಕೆ ಅದುಮುವ ಆವಶ್ಯಕತೆಯಿಲ್ಲದಿದ್ದಾಗ ಈ ಬಗೆಯ ಸಂಪುಟವನ್ನು ಬಳಸುತ್ತಾರೆ.

2. ತೆರೆದ ಅಂತರ್ಜಲಸಂಪುಟ :ಈ ಬಗೆಯ ಸಂಪುಟದ ಕೆಳಭಾಗ ಹಾಗೂ ಮೇಲ್ಭಾಗ ಎರಡೂ ತೆರೆದಿರುತ್ತದೆ. ದುಂಡಾಗಿರುವ ಇದರ ಕೆಳಭಾಗ ಭೂಮಿಯನ್ನು ಕೊರೆದುಕೊಂಡು ಹೋಗುವಂತಿದ್ದು, ಕೆಳಗೆ ಇಳಿದಂತೆಲ್ಲ ಕೆಸರಿನ ಮಣ್ಣು ಸಂಪುಟಕ್ಕೆ ಅಳವಡಿಸಲಾಗಿರುವ ಕೊಳವೆಗಳ ಮೂಲಕ ಹೊರಬರುತ್ತದೆ. ಈ ಕೆಸರಿನ (ಬದಿ) ಮಣ್ಣನ್ನು ಹೊರ ತೆಗೆಯುವ ಕೆಲಸ ಮುಂದುವರಿದಂತೆಲ್ಲ ಅಂತರ್ಜಲಸಂಪುಟ ಕೆಳಕ್ಕಿಳಿಯುತ್ತದೆ. ಹೀಗೆ ಕೆಳಕ್ಕಿಳಿಯುತ್ತಿದ್ದಂತೆಯೇ ಅದಕ್ಕೆ ಹೆಚ್ಚು ಹೆಚ್ಚು ಸಂಪುಟಗಳನ್ನು ಅಳವಡಿಸುತ್ತಾರೆ. ಇಲ್ಲಿಯೂ ಸಂಪುಟದ ಮೇಲ್ಭಾಗ ನೀರಿನ ಮಟ್ಟಕ್ಕಿಂತ ಮೇಲಿರುತ್ತದೆ. ಅಗತ್ಯವಿರುವಷ್ಟು ಆಳಕ್ಕೆ ಹೋಗುವವರೆಗೂ ಸಂಪುಟವನ್ನು ಕೆಳಕ್ಕೆ ಅದುಮಲಾಗುತ್ತದೆ. ಕೆಳಗಿಳಿದ ಸಂಪುಟದೊಳಗಡೆ ನುಗ್ಗುವ ನೀರನ್ನು ತಡೆಹಿಡಿಯಲು ಕಾಂಕ್ರೀಟನ್ನು ಅದರ ಒಳಕ್ಕೆ ತುಂಬುತ್ತಾರೆ. ಸಂಪುಟವನ್ನು ಒಳಕ್ಕೆ ತಳ್ಳಿದ್ದರಿಂದ ಉಂಟಾದ ದುಂಡನೆಯ ಬಾವಿಯಿಂದ ನೀರನ್ನು ಹೊರತೆಗೆದು, ಕಾಂಕ್ರೀಟನ್ನು ತುಂಬಿ, ಅದರ ಮೇಲೆ ಕಟ್ಟಡ, ಸೇತುವೆಯ ಆಧಾರಸ್ತಂಭ ಮುಂತಾದುವುಗಳನ್ನು ನಿರ್ಮಾಣ ಮಾಡುತ್ತಾರೆ. ಈ ರೀತಿಯ ತೆರೆದ ಅಂತರ್ಜಲ ಸಂಪುಟ ಒಂದೇ ಅಥವಾ ಹಲವಾರು ದುಂಡನೆಯ ಅಥವಾ ಆಯಾಕಾರದ ಸಂಪುಟಗಳನ್ನೊಳಗೊಂಡು ಬಾವಿಯಾಕಾರದಲ್ಲಿರಬಹುದು. ಸುತ್ತಣ ಗೋಡೆಯಲ್ಲಿ ಒಂದೋ ಎರಡೋ ಪದರಗಳಿರಬಹುದು.

3. ವಾಯುಪ್ರೇರಿತ ಅಂತರ್ಜಲಸಂಪುಟ: ಇವು ತೆರೆದ ಅಂತರ್ಜಲ ಸಂಪುಟಗಳಂತೆಯೇ ಇರುತ್ತವೆ. ಸಂಪುಟದ ಕೊರೆಯುವ ತಳಭಾಗಕ್ಕೆ ಸು.2–3ಮಿ ಎತ್ತರದಲ್ಲಿ ಒಂದು ವಾಯುಬಂಧಿತ ಪ್ರಧಾನ ಶಿರ (ಬಲ್ಕ್ ಹೆಡ್) ಇರುತ್ತದೆ. ಮಣ್ಣು ಹಾಗೂ ಸಂಪುಟದ ನಡುವಿನ ಜಾಗವನ್ನು ಒತ್ತಡಕ್ಕೊಳಪಡಿಸಿರುತ್ತಾರೆ. ಇದರಿಂದಾಗಿ ಸಂಪುಟದ ಕೆಳಭಾಗದಲ್ಲಿ ಮಣ್ಣನ್ನು ಹೊರತೆಗೆಯುವ ಕೆಲಸಗಾರರಿಗೆ ಅನುಕೂಲವುಂಟಾಗುತ್ತದೆ. ಸಂಪುಟದಲ್ಲಿನ ಒತ್ತಡವನ್ನು ಒಂದು ವಾಯುತಡೆ (ಏರ್ ಲಾಕ್) ಯಿಂದ ನಿಯಂತ್ರಿಸಬಹುದು. ಸಾಧ್ಯವಾದರೆ, ತೆರೆದ ಅಂತರ್ಜಲ ಸಂಪುಟವನ್ನು ಅದುಮುವ ಒಂದು ಕಾರ್ಯಕ್ರಮದಲ್ಲಿ ವಾಯುಪ್ರೇರಿತ ಸಂಪುಟವನ್ನಾಗಿಯೂ ಪರಿವರ್ತಿಸಬಹುದು. ಅಗತ್ಯವಾದ ವಾಯುತಡೆ ಹಾಗೂ ಪ್ರಧಾನ ಶಿರಗಳನ್ನು ಬಳಸುವುದರಿಂದ ಈ ಪರಿವರ್ತನೆಯು ಸಾಧ್ಯವಾಗುತ್ತದೆ.

ಅಂತರ್ಜಲಸಂಪುಟಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಕೈಸನ್ ಎಂದು ಕರೆಯುತ್ತಾರೆ. ಕೈಸನ್ ಎಂಬ ಪದಕ್ಕೆ ಸ್ಥಳದಲ್ಲಿಯೇ ರಚಿಸಿದಂಥ ಸೇತುವೆಯ ಸ್ತಂಭಗಳು ಎಂಬ ಅರ್ಥವೂ ಇದೆ. (**ನೋಡಿ–ಕಾಂಕ್ರೀಟ್**) (ಎಸ್.ಆರ್.ಪಿ.)

**ಅಂತರ್ಜೀವಿಗಳು :** ಜೀವಿಗಳ ದೇಹದ ಒಳಗೆ ವಾಸಿಸುವ ಕೆಲವು ಬಗೆಯ ಜೀವಿಗಳು (ಎಂಡೋಫೈಟ್ಸ್). ಅಂತರ್ಜೀವಿಗಳು ಸಾಮಾನ್ಯವಾಗಿ ಬೇರೆ ಜೀವಿಗಳಲ್ಲಿ ವಾಸವಾಗಿದ್ದರೂ ಪರಾವಲಂಬಿಗಳಾಗಿರುವುದಿಲ್ಲ. ಕೆಲವೊಮ್ಮೆ ಸಹಜೀವನವನ್ನೂ




**ಅಂತರ್ಜೀವಿಗಳು**

**1. ಶಿಲಾವಲ್ಕದಲ್ಲಿ ಅಂತರ್ಜೀವಿಯಾಗಿರುವ ಸೈಟೋನಿಮಾ**
**2. ಬೂಷ್ಟಿನ ತಂತುಗಳು**

**ಸೈಕಾಸ್ ಬೇರಿನ ಅಡ್ಡಸೀಳಿಕೆಯ ಸ್ಥೂಲಾಕಾರ**
**1. ಕಾರ್ಟೆಕ್ಸ್ 2. ಅಂತರ್ಜೀವಿಯಾಗಿ ಆಲ್ಗೆಗಳಿರುವ ಪ್ರದೇಶ 3. ಸ್ಟೀಲ್**

ತೋರ್ಪಡಿಸಬಹುದು. ಅಂತರ್ಜೀವಿಗಳಲ್ಲಿ ಕೆಲವು, ಅಪ್ಪು ಗಿಡಗಳಂತೆ ಆಶ್ರಯದಾತ ಗಿಡಗಳಿಗೆ ತೊಂದರೆಯನ್ನೀಯದೆ ಸ್ವತಂತ್ರವಾಗಿ ಜೀವಿಸಿದರೆ ಮತ್ತೆ ಕೆಲವು ಸಸ್ಯದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ನಿಮ್ನವರ್ಗದ ಸಸ್ಯಗಳಾದ ಶೈವಲಗಳಲ್ಲಿ ಅದರಲ್ಲಿಯೂ ಅನಬೀನ, ರಿವ್ಯುಲೇರಿಯ, ಸೈಟೋನೀಮ, ನಾಸ್ಟಾಕ್, ಪ್ರೋಟೊಕಾಕಸ್ ಇತ್ಯಾದಿಗಳು ಅಧಿಕವಾಗಿ ಉಚ್ಚವರ್ಗದ ಸಸ್ಯವರ್ಗದಲ್ಲಿ ಜೀವಿಸುವುದನ್ನು ಕಾಣಬಹುದು. ಅಂತರ್ಜೀವಿಗಳನ್ನು ಬೂಷ್ಟು ಜಾತಿಗೆ (ಫಂಗೈ) ಸೇರಿದ ಶಿಲಾವಲ್ಕಗಳಲ್ಲಿಯೂ ಸೈಕಾಸ್ ಮತ್ತಿತರ ಅನಾವೃತಬೀಜಸಸ್ಯದ ಬೇರುಗಳಲ್ಲೂ ಕಾಣಬಹುದು. ಆವೃತಬೀಜಸಸ್ಯಗಳಾದ ಲೆಗ್ಯೂಮಿನೇಸೀ ಕುಟುಂಬದ ಸಸ್ಯಗಳಲ್ಲೂ ಕೆಲವು ಉಪಯುಕ್ತ ಬ್ಯಾಕ್ಟೀರಿಯಾಗಳು ಅಂತರ್ಜೀವಿಗಳಾಗಿ ಜೀವಿಸುತ್ತವೆ. ಕೆಲವೇ ಬಗೆಯ ಸಸ್ಯಗಳಲ್ಲಿ ಅಂತರ್ಜೀವಿಗಳಿರುವ ಔಚಿತ್ಯದ ಬಗ್ಗೆ ಸಂಶೋಧನೆಗಳು ನಡೆಯಬೇಕಾಗಿದೆ. (ಎ.ಎನ್.ಎಸ್.)

**ಅಂತರ್ದಹನ ಎಂಜಿನ್ನುಗಳು :** ಉಷ್ಣಶಕ್ತಿಯನ್ನು ಚಲನಶಕ್ತಿಯನ್ನಾಗಿ ಮಾರ್ಪಡಿಸುವ ಸಾಧನಗಳಲ್ಲಿ ಬಹು ಮುಖ್ಯವಾದುವು (ಇಂಟರ್ನಲ್ ಕಂಬಷ್ಚನ್ ಎಂಜಿನ್ಸ್). ಉರವಲು (ಇಂಧನ) ಅಗತ್ಯವಾದಷ್ಟು ಗಾಳಿಯನ್ನು ಪಡೆದು ಒಂದು ಆವರಣದೊಳಗೆ ದಹನಗೊಂಡಾಗ ಉತ್ಪತ್ತಿಯಾಗುವ ಅಧಿಕಪ್ರಮಾಣದ ದಹನಾನಿಲಗಳು ಚಲಿಸಲವಕಾಶವುಳ್ಳ ಆವರಣದ ಒಂದು ಭಾಗದ ಮೇಲೆ ಉಂಟುಮಾಡುವ ಒತ್ತಡ ಹಾಗೂ ಅನಿಲದ ವಿಸ್ತರಣದಿಂದಾಗಿ ಅದು ಚಲಿಸಿ ಉಪಯುಕ್ತವಾದ ಕೆಲಸವನ್ನು ಮಾಡುವಂತಿರುವುದು ಇದರ ಮೂಲ ತತ್ತ್ವ. ಅದೇ ಬಹಿರ್ದಹನ ಎಂಜಿನ್ನುಗಳಲ್ಲಿ ಉರುವಲಿನ ದಹನದಿಂದಾದ ಉಷ್ಣಶಕ್ತಿ ಪ್ರತ್ಯೇಕ ಪಾತ್ರೆಯಲ್ಲಿ ನೀರಿನಂಥ ಒಂದು ದ್ರವಮಾಧ್ಯಮವನ್ನು ಅಧಿಕ ಒತ್ತಡದಲ್ಲಿ ಆವಿಯಾಗಿ ಮಾರ್ಪಡಿಸಿ ಆ ಆವಿ ಮೇಲಿನಂಥದೇ ಸಂದರ್ಭದಲ್ಲಿ ವಿಸ್ತಾರಗೊಂಡು ಕೆಲಸ ಮಾಡುವಂತೆ ಇರುತ್ತದೆ. ಅಂತರ್ದಹನ ಎಂಜಿನ್ನುಗಳಲ್ಲಿ ಈ ಒಂದು ಪ್ರತ್ಯೇಕ ಮಾಧ್ಯಮದ ಉಪಯೋಗವಿರದೆ ದಹನಜನ್ಯ ಅನಿಲಗಳೇ ಸ್ವಯಂ ವಿಸ್ತರಿಸುವಂತಿರುವುದು ಸಾಧನವನ್ನು ಎಷ್ಟೋ ಸರಳಗೊಳಿಸುತ್ತದೆಯಲ್ಲದೆ ಬಳಸುದಾರಿಯಲ್ಲಿನ ಎಷ್ಟೋ ಶಕ್ತಿವ್ಯಯ ಕಡಿಮೆಯಾಗಿ ಅದರ ದಕ್ಷತೆ ಹೆಚ್ಚುವಂತೆ ಮಾಡುತ್ತದೆ.

ಬಲೋತ್ಪಾದಕ ಎಂಜಿನ್ನುಗಳ ಅನ್ವೇಷಣೆ ಬಹಳ ಹಿಂದಿನಿಂದಲೂ ನಡೆದು ಬಂದಿದ್ದು, 18ನೆಯ ಶತಮಾನದಲ್ಲಿ ಜೇಮ್ಸ್ ವಾಟ್‌ನ ಉಗಿ ಎಂಜಿನ್ನಿನ ರಚನೆಯಿಂದಾಗಿ ಅದು ಸಫಲವಾದ ಮೇಲೆ, ಕಾಲಾನುಕ್ರಮದಲ್ಲಿ ಉಗಿಯಂತ್ರದ್ದೇ ಒಂದು ಉತ್ತಮ ಪರಿಷ್ಕಾರವೆಂಬಂತೆ ಅಂತರ್ದಹನ ಎಂಜಿನ್ನು ಆವಿರ್ಭವಿಸಿತೆಂದು ಹೇಳಬಹುದು. ಯಂತ್ರಯುಗದಲ್ಲಿ ಅಭಿವ್ಯಕ್ತವಾದ ಅನೇಕ ಸಾಧನಗಳಂತೆ, ಈ ಅಂತರ್ದಹನ ಎಂಜಿನ್ನಿನ 'ಜನಕ' ಎಂದು ಯಾವೊಬ್ಬ ವ್ಯಕ್ತಿಯನ್ನೂ ನಿರ್ಧರಿಸಲಾಗದಿರುವುದನ್ನು ಗಮನಿಸಬೇಕು. ಉಷ್ಣಚಲನ ವಿಜ್ಞಾನದ ಮೂಲತತ್ತ್ವಗಳ ಕ್ರಮೇಣ ಕ್ರೋಡೀಕರಣ, ಯಾಂತ್ರಿಕ ಕೌಶಲ, ರಚನಾಕಾರ್ಯಕ್ಕೆ ಅಗತ್ಯವಾದ ವಸ್ತುಗಳ ಹಾಗೂ ಅನುಭವದ ಲಭ್ಯತೆ – ಇವುಗಳಿಂದಾಗಿ ಇದು ಸಾಧಿತವಾಯಿತು. ಅಂತರ್ದಹನ ಎಂಜಿನ್ನಿನ ಬಗ್ಗೆ ಉಷ್ಣಚಲನ ವೈಜ್ಞಾನಿಕ ದೃಷ್ಟಿಯ ಸಮರ್ಥ ಪರಿಶೀಲನೆ ನಡೆಸಿದ ಮೊಟ್ಟಮೊದಲಿಗನೆಂದರೆ ಫ್ರಾನ್ಸಿನ ಸಾದಿ ಕಾರ್ನೋ. ಸ್ವತಃ ಅವನು ಯಾವ ಎಂಜಿನ್ನಿನ ಪ್ರಯೋಗ ನಡೆಸದಿದ್ದರೂ 1824ರಲ್ಲಿ ಪ್ರಕಟಿತವಾದ ಅವನ ಈ ಸಂಬಂಧದ ಪ್ರಬಂಧ, ಅಂತರ್ದಹನ ಎಂಜಿನ್ನಿನ ಮೂಲತತ್ತ್ವಗಳ ಪ್ರತಿಪಾದನೆ ಮಾಡಿದ್ದು, ಈ ದಿಶೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಉತ್ತಮ ಮಾರ್ಗದರ್ಶನ ನೀಡಿತೆಂದು ಹೇಳಬಹುದು. ಈ ಮಾದರಿಯ ಎಂಜಿನ್ನುಗಳನ್ನು ರಚಿಸಿ ಹೊರತಂದವರ ಪೈಕಿ ಮೊತ್ತಮೊದಲಿಗರಾಗಿ ಸ್ಯಾಮ್ಯುಯೆಲ್ ಬ್ರೌನ್ (1823), ಡಬ್ಲ್ಯೂ. ಎಲ್. ರೈಟ್ (1833), ಆಲ್ಫ್ರೆಡ್ ಡ್ರೇಕ್ (1843), ಜೆ.ಜೆ.ಇ.ಲೆನೊಯರ್ (1860), ಆಟೋ 1867, ಸರ್ ಡ್ಯುಗಾಲ್ಡ್ ಕ್ಲಾರ್ಕ್ (1878), ಜೋಸೆಫ್ ಡೆ (1891), ರುಡಾಲ್ಫ್ ಡೀಸೆಲ್ (1897) – ಇವರುಗಳನ್ನು ಹೆಸರಿಸಬಹುದು.

ಒತ್ತಡದಿಂದೊಡಗೂಡಿದ ದಹನಜನ್ಯ ಅನಿಲಗಳು ಒಂದು ತಿರುಬಾನಿಯ ಅಲಗುಗಳ ಮೇಲೆ ಹರಿದು ವಿಸ್ತರಿಸುವುದರಿಂದ ಸುತ್ತುಚಲನೆ ಸಾಧಿತವಾದಾಗ– ಇದೂ ಅಂತರ್ದಹನ ಎಂಜಿನ್ನಿನ ಕಕ್ಷೆಯಲ್ಲೇ ಬರುವುದಾದರೂ– ಅದನ್ನು ಅನಿಲ ತಿರುಬಾನಿ (ಗ್ಯಾಸ್ ಟರ್ಬೈನ್) ಎಂದು ಪ್ರತ್ಯೇಕವಾಗಿ ಪರಿಗಣಿಸುವುದು ರೂಢಿಯಾಗಿದ್ದು, ಹಿಂದುಮುಂದು ಚಲನೆಯ ಆಡುಬೆಣೆ ಅಥವಾ ಕೊಂತ (ಪಿಸ್ಟನ್) ಉಳ್ಳವನ್ನು ಮಾತ್ರ ಎಂಜಿನ್ನುಗಳೆಂದು ಕರೆಯಲಾಗುತ್ತದೆ. ಈ ಎಂಜಿನ್ನುಗಳ ರಚನೆಯಲ್ಲಿನ ಸಾಮಾನ್ಯ ಲಕ್ಷಣವೆಂದರೆ, ಒಂದು ನಳಿಗೆ (ಸಿಲಿಂಡರ್), ಅದರೊಳಕ್ಕೆ ಉರುವಲನ್ನೂ (ದ್ರವ ಅಥವಾ ಅದರ ಆವಿಯ ರೂಪದಲ್ಲಿ), ಅಗತ್ಯವಾದ ಪ್ರಮಾಣದ ಗಾಳಿಯನ್ನೂ ಪ್ರತ್ಯೇಕವಾಗಿ ಅಥವಾ ಸೂಕ್ತ ಪ್ರಮಾಣದಲ್ಲಿ ಬೆರೆಸಿ ಒಳಕ್ಕೆ ಬಿಡಲು ಮತ್ತು ಕೆಲಸವಾದ ಅನಂತರ ಅನಿಲಗಳನ್ನು ಹೊರಹಾಕಲು ಕವಾಟಗಳು (ವಾಲ್ವ್) ಅಥವಾ ದ್ವಾರಗಳು (ಪೋರ್ಟ್), ಒಳಕ್ಕೆ ಸೆಳೆದುಕೊಂಡ ಗಾಳಿ ಅಥವಾ ಮಿಶ್ರಣವನ್ನು ಹೆಚ್ಚಿನ ಒತ್ತಡ ಉಂಟಾಗುವಂತೆ ಸಂಕುಚಿತ ಅವಕಾಶಕ್ಕೆ ತಳ್ಳಿ ಸಂಪೀಡಿಸಲು, ನಳಿಗೆಯೊಳಗೆ ಸಲೀಸಾಗಿ, ಆದರೆ ಅನಿಲ ತೂರುವಂತೆ, ಚಲಿಸುವ ಒಂದು ಆಡುಬೆಣೆ(ಪಿಸ್ಟನ್) ಉರುವಲನ್ನು ಹೊತ್ತಿಸುವ ಒಂದು ಸಾಧನ, ಅದರಿಂದಾಗುವ ಸ್ಫೋಟನದಿಂದಲೂ ದಹನಜನ್ಯ ಅನಿಲಗಳ ವಿಸ್ತರಣದೊಡನೆಯೂ ಆಡುಬೆಣೆ ಹಿಂದಕ್ಕೆ ತಳ್ಳಲ್ಪಟ್ಟು ಶಕ್ತಿ ಉತ್ಪಾದನೆಯಾದಾಗ ಅದನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗುವಂತೆ ಆಡುಬೆಣೆಯನ್ನು ಎಂಜಿನ್ನಿನ ಸುತ್ತುವ ಕಾಂಡಕ್ಕೆ (ಷಾಫ್ಟ್) ಸೇರಿಸುವ ಕೂಡುಸರಳು (ಕನೆಕ್ಟಿಂಗ್ ರಾಡ್) ಮತ್ತು ಕ್ರ್ಯಾಕ್ – ಇಷ್ಟು ಇರುವುವು.

ಅಂತರ್ದಹನ ಎಂಜಿನ್ನುಗಳನ್ನು, ಅವು ಉಪಯೋಗಿಸುವ ಉರುವಲು, ಅದನ್ನು ಒಳಕ್ಕೆ ತೆಗೆದುಕೊಳ್ಳುವ ರೀತಿ, ಮಿಶ್ರಣವನ್ನು ಹೊತ್ತಿಸುವ ಬಗೆ, ಎಂಜಿನ್ನಿನ ವೇಗ, ವೇಗವನ್ನು ಸಮಮಟ್ಟದಲ್ಲಿರಿಸುವ ವಿಧಾನ, ಅದು ಅನುಸರಿಸುವ ತಾತ್ವಿಕ ಆವರ್ತ, ಅದನ್ನು ಎರಡು ಘಾತ (ಟೂ ಸ್ಟ್ರೋಕ್ ಅಥವಾ ಒಂದು ಸುತ್ತು) ಅಥವಾ ನಾಲ್ಕು ಘಾತಗಳಲ್ಲಿ (ಫೋರ್ ಸ್ಟ್ರೋಕ್ ಅಥವಾ ಎರಡು ಸುತ್ತು) ಪೂರೈಸುತ್ತದೆಯೋ ಎಂಬುದು, ಮೇಲಾಗಿ ಅವು ಉಪಯೋಗಿಸಲ್ಪಡುವ ಸನ್ನಿವೇಶ, ಎಂಜಿನ್ನಿನ ನಳಿಗೆಯನ್ನು ತಂಪಾಗಿರಿಸುವ




ನಾಲ್ಕು ಘಾತಗಳ ಅಂತರ್ದಹನ ಎಂಜಿನ್ನುಗಳು
1. ಒಳಕವಾಟದ ಮೂಲಕ ಉರುವಲು ಒಳಹೊಗುವುದು ಪ್ರೇರಣ ಘಾತ
2. ಆಡುಬೆಣೆ (ಕೊಂತ) ಮೇಲೇರುವುದು ಸಂಕೋಚನ ಘಾತ
3. ಉರುವಲನ್ನು ಹೊತ್ತಿಸುವುದು ಸಾಮರ್ಥ್ಯ ಘಾತ
4. ಉರಿದ ಅನಿಲಗಳು ಹೊರಕವಾಟದ ಮೂಲಕ ಹೊರಹೋಗುವುದು–ಬಹಿರ್ಗಮನ ಘಾತ

ವಿಧಾನ, ಮೃದುಚಾಲಕದ ವಿತರಣೆ, ಹಲವು ಸಿಲಿಂಡರುಗಳಿರುವಲ್ಲಿ ಅವುಗಳ ವಿನ್ಯಾಸ – ಇತ್ಯಾದಿಗಳಿಗನುಗುಣವಾಗಿ ಹಲವು ರೀತಿಗಳಲ್ಲಿ ವಿಂಗಡಿಸಬಹುದಾಗಿರುವುದರಿಂದ ಒಂದು ಎಂಜಿನ್ನಿನ ಪೂರ್ಣವಾದ ವಿವರಣೆಗೆ ಈ ಎಲ್ಲವನ್ನೂ ಹೇಳಬೇಕಾಗುತ್ತದೆ.

ಎಂಜಿನ್ನಿನ ಉರುವಲು ಅನಿಲವಾಗಿರಬಹುದು, ಪೆಟ್ರೋಲ್, ಸೀಮೆಎಣ್ಣೆ, ಡೀಸೆಲ್ ಅಥವಾ ಕಚ್ಚಾ ಎಣ್ಣೆ ಆಗಿರಬಹುದು. ಪೆಟ್ರೋಲ್ ಎಂಜಿನ್ನಿನಲ್ಲಿ ಕಾರ್ಬ್ಯುರೇಟರ್ ಎಂಬ ಸಾಧನದ ಉಪಯೋಗದಿಂದ ಉರುವಲು–ಗಾಳಿಯ ಮಿಶ್ರಣವನ್ನು ಒಳಕ್ಕೆ ತೆಗೆದುಕೊಂಡರೆ ಡೀಸೆಲ್ ಎಂಜಿನ್ನಿನಲ್ಲಿ ಬರಿಯ ಗಾಳಿಯನ್ನು ಒಳಕ್ಕೆ ಸೆಳೆದುಕೊಂಡು ಅದನ್ನು ಒತ್ತಡಗೊಳಿಸಿ ತದನಂತರ ಡೀಸೆಲ್ಲನ್ನು ಅಂತಕ್ಷೇಪಕದ (ಇಂಜೆಕ್ಟರ್) ಮೂಲಕ ಸಿಂಪಡಿಸಲಾಗುತ್ತದೆ. ಪೆಟ್ರೋಲ್ ಎಂಜಿನ್ನಿನಂಥವುಗಳಲ್ಲಿ ಮಿಶ್ರಣವನ್ನು ಹೊತ್ತಿಸಲು ವಿದ್ಯುತ್ ಕಿಡಿ (ಸ್ಪಾರ್ಕ್) ಉಪಯೋಗಿಸಲ್ಪಟ್ಟರೆ, ಡೀಸೆಲ್ಲಿನಲ್ಲಿ ಅಧಿಕ ಒತ್ತಡದಿಂದಾದ ಶಾಖದಿಂದಲೇ ಉರುವಲು ಹೊತ್ತಿಕೊಳ್ಳುತ್ತದೆ. ಸ್ಥಿರ ಎಂಜಿನ್ನುಗಳ ವೇಗ ಕಡಿಮೆಯಿದ್ದರೆ ವಿಮಾನದ ಎಂಜಿನ್ನುಗಳ

ವೇಗ ಅತಿ ಹೆಚ್ಚಿನದಾಗಿರುತ್ತದೆ. ವೇಗವೇ ಅಲ್ಲದೆ, ಬಳಕೆಯ ದೃಷ್ಟಿಯಿಂದ ಇವುಗಳ ಜೊತೆಗೆ ಲಾರಿ, ಕಾರು, ಮೋಟಾರ್ ಸೈಕಲ್ಲುಗಳು ಒಂದು ರೀತಿಯವಾದರೆ, ಡೀಸೆಲ್ ರೈಲು ಎಂಜಿನ್ನಿನ ರಚನೆ ಒಂದು ರೀತಿಯಿರುತ್ತದೆ. ನಳಿಗೆ ಅತಿ ಕಾವೇರದಂತೆ ತಂಪಾಗಿಸಲು ನೀರನ್ನು (ಮೋಟಾರ್ ಕಾರ್) ಅಥವಾ ಗಾಳಿಯನ್ನು (ವಿಮಾನ, ಸ್ಕೂಟರ್ ಇತ್ಯಾದಿ) ಉಪಯೋಗಿಸಬಹುದು.

ಅಂತರ್ದಹನ ಎಂಜಿನ್ನುಗಳ ಸಾಮರ್ಥ್ಯವನ್ನು ಅದರ ಅಶ್ವಶಕ್ತಿಯಿಂದಲೂ (ಹಾರ್ಸ್‌ಪವರ್) ದಕ್ಷತೆಯನ್ನು ಉರುವಲಿನಲ್ಲಿನ ಉಷ್ಣಶಕ್ತಿಯ ಎಷ್ಟು ಭಾಗವನ್ನು ಚಲನಶಕ್ತಿಯನ್ನಾಗಿ ಪರಿವರ್ತಿಸುತ್ತದೆ ಎಂಬುದರಿಂದಲೂ ಲೆಕ್ಕ ಮಾಡಲಾಗುತ್ತದೆ.

**ಅಂತರ್ದಹನ ಎಂಜಿನ್ನುಗಳ ಉರುವಲುಗಳು :** ಅನಿಲ ಅಥವಾ ದ್ರವ ರೂಪದ್ದಾಗಿರುತ್ತವೆ. ಮೊತ್ತಮೊದಲ ಅಂತರ್ದಹನ ಎಂಜಿನ್ನಿನ ಮುನ್ಸೂಚಕವೆಂದು ಪರಿಗಣಿಸಬಹುದಾದ, 1680ರ, ಡಚ್ ಪ್ರಯೋಗಶೀಲ ಕ್ರಿಶ್ಚಿಯನ್ ಹಾಯ್ಗೆನ್ಸ್ ಎಂಬುವನ ರಚನೆಯಲ್ಲಿ ಬಳಸಿದ್ದು ಬಂದೂಕದ ಸಿಡಿಮದ್ದು, ಆದರೆ ಕೆಲವು ಕಾರಣಗಳಿಗಾಗಿ ಮುಂದಿನ ಪ್ರಯತ್ನಗಳಲ್ಲೆಲ್ಲ ಘನರೂಪಿ ಉರುವಲನ್ನು ಕೈಬಿಡಲಾಗಿದ್ದು, ಲೆನೋಯರ್ ಅವರಿಂದ ರಚಿತವಾದ (1860) ಪ್ರಥಮ ಲಾಭದಾಯಕ ಅಂತರ್ದಹನ ಎಂಜಿನ್ನಿನಲ್ಲಿ ಅನಿಲ ಉರುವಲನ್ನು ಬಳಸಲಾಯಿತು. ಸುಲಭವಾಗಿ ಹಬೆಯಾಗುವ ದ್ರವಗಳು ಉರುವಲಾಗಿ ಬಳಕೆಯಾದದ್ದು 1890ರ ಸುಮಾರಿನಲ್ಲಿ.

ಪ್ರಪಂಚದ ಕೆಲವು ಭಾಗಗಳಲ್ಲಿ ಪ್ರಕೃತಿಯಲ್ಲಿ ದೊರೆಯುವ ನಿಸರ್ಗಾನಿಲ (ನ್ಯಾಚುರಲ್ ಗ್ಯಾಸ್ ಫ್ಯೂಯೆಲ್)ವನ್ನು ಬಿಟ್ಟರೆ, ಅನಿಲ ರೂಪಿ ಉರುವಲುಗಳನ್ನು ಒಂದು ಅಥವಾ ಹಲವು ಎಂಜಿನ್ನುಗಳಿಗೆ ಒದಗಿಸಲಾಗುವಂತೆ ಒಂದು ಅನಿಲೋತ್ಪಾದಕದಲ್ಲಾಗಲಿ ಅಥವಾ ಬಲೋತ್ಪಾದನೆಯೇ ಅಲ್ಲದೆ ಶಾಖ ಮತ್ತು ದೀಪಗಳಿಗಾಗಿಯೂ ಬಳಸುವ ಅನಿಲೋತ್ಪಾದಕ ಕೇಂದ್ರಗಳನ್ನಾಗಲಿ ತಯಾರಿಸಲಾಗುತ್ತದೆ.

ಆಧುನಿಕ ಅಂತರ್ದಹನ ಎಂಜಿನ್ನುಗಳಲ್ಲೆಲ್ಲ ಅಧಿಕವಾಗಿ ಬಳಸಲಾಗುವ ದ್ರವರೂಪಿ ಉರುವಲುಗಳೆಂದರೆ ಗ್ಯಾಸೊಲಿನ್ (ಪೆಟ್ರೋಲ್) ಮತ್ತು ಡೀಸೆಲ್. ಈ ಎರಡಕ್ಕೂ ಮೂಲವಸ್ತು ಒಂದೇ–ತೈಲದ ಗಣಿಗಳಲ್ಲಿ ದೊರೆಯುವ ಕಲ್ಲೆಣ್ಣೆ ಅಥವಾ ಪೆಟ್ರೋಲಿಯಂ. ಬೇರೆ ಬೇರೆ ಉಷ್ಣಾಂಶಗಳಲ್ಲಿ ಬಟ್ಟಿಯಿಳಿಸುವುದರಿಂದ ಬೇರೆ ಬೇರೆ ಹೆಸರುಗಳು ಇವಕ್ಕೆ ಬಂದಿವೆ. ಮೋಟಾರ್ ಗ್ಯಾಸೊಲಿನ್‌ಗಳು $100^\circ$ F.ನಿಂದ $400^\circ$ F. ಉಷ್ಣಾಂಶದಲ್ಲಿ ಭಟ್ಟಿಯಿಳಿಯುವುವಾಗಿರುತ್ತವೆ. ಅಗತ್ಯಕ್ಕೆ ತಕ್ಕಂತೆ ಇನ್ನೂ ಹಗುರವಾದ ಅಥವಾ ಭಾರವಾದ ತೈಲದ ವಿಭಾಗಗಳಿಂದಲೂ ಸೂಕ್ತ ರಾಸಾಯನಿಕ ಪ್ರಕ್ರಿಯೆಗಳಿಂದ ಬೇಕಾದ ಗುಣಲಕ್ಷಣಗಳಿರುವಂತೆ ಇದರ ಉತ್ಪಾದನಾಪ್ರಮಾಣವನ್ನು ಹೆಚ್ಚಿಸುತ್ತಾರೆ.

ಗ್ಯಾಸೊಲಿನ್ನಿನ ಒಂದು ಪ್ರಧಾನ ಗುಣಸೂಚಿ ಎಂದರೆ ಅದರ ಆಕ್ಟೇನ್ ಸಂಖ್ಯೆ (ನಂಬರ್). ಎಂಜಿನ್ನಿನಲ್ಲಿ ಬಳಸಲ್ಪಟ್ಟಾಗ ಉರುವಲು ಅಪಸ್ಫೋಟಗೊಳ್ಳದೆ ಕೆಲಸ ಮಾಡುವ ಮಿತಿಯನ್ನು ಇದು ಸೂಚಿಸುತ್ತದೆ. ಈ ಬಗೆಯ ಎಂಜಿನ್ನುಗಳಲ್ಲಿ ವಿದ್ಯುತ್ ಕಿಡಿ ಉಂಟಾದ ಬಿಂದುವಿನಿಂದ ಹೊತ್ತಿಕೊಂಡ ಉರಿಯ ಗರ್ಭವೊಂದು ಸುತ್ತಲೂ ಪ್ರಸರಿಸಿ ಇಡೀ ಉರುವಲು ವಾಯುಮಿಶ್ರಣವನ್ನು ಹೊತ್ತಿಕೊಳ್ಳುವಂತೆ ಮಾಡುವುದು ಕ್ರಮ. ಇದು ಹೀಗೆ ಪೂರ್ಣವಾಗಿ ಹರಡಿಕೊಳ್ಳುವ ಮುನ್ನವೇ ಹೊರ ಅಂಚಿನಲ್ಲಿರುವ ಮಿಶ್ರಣದ ಭಾಗವೊಂದು ಅದರ ಮೇಲೆ ಉಂಟಾದ ಒತ್ತಡ ಹಾಗೂ ಶಾಖದ ಪ್ರಭಾವದಿಂದ ತಾನೇ ಹೊತ್ತಿಕೊಂಡು ಉರಿಯ ಪ್ರತಿವಲಯವನ್ನು ಸೃಷ್ಟಿಸಿ ದಕ್ಷತೆಗೆ ಹಾನಿ ಹಾಗೂ ನಳಿಗೆಗೆ ಅಪಾಯವನ್ನುಂಟುಮಾಡುವುದಕ್ಕೆ ಅಪಸ್ಫೋಟ ಎಂದು ಹೆಸರು. ಐಸೋ–ಆಕ್ಟೇನ್ ಎಂಬ ಜಲಜನಕ–ಇಂಗಾಲ ಸಂಯುಕ್ತ (ಹೈಡ್ರೋಕಾರ್ಬನ್) ($C_8H_{18}$) ಅಪಸ್ಫೋಟ ನಿರೋಧಿ ಗುಣವನ್ನು ಚೆನ್ನಾಗಿ ಹೊಂದಿದ್ದು, ಇದಕ್ಕೆ ಆಕ್ಟೇನ್ ಸಂಖ್ಯೆ 100 ಅಂಕ ಎಂದು ಇಟ್ಟು, 8–ಹೆಪ್ಟೇನ್ ($C_7H_{16}$) ಎಂಬ ಮತ್ತೊಂದು ಸಂಯುಕ್ತವು ಸುಲಭ ಅಪಸ್ಫೋಟಿಯಾಗಿದ್ದು ಅದರ ಆಕ್ಟೇನ್ ಸಂಖ್ಯೆ 0 ಅಂಕವನ್ನಿಟ್ಟು, ಗ್ಯಾಸೊಲಿನ್ ಈ ಎರಡರ ಯಾವ ಪ್ರಮಾಣದ ಮಿಶ್ರಣಕ್ಕೆ ಸರಿಹೊಂದುವಂತೆ ಅಪಸ್ಫೋಟಗೊಳ್ಳುತ್ತದೆ ಎಂಬುದನ್ನು ಒಂದು ವಿಶೇಷ ಮಾದರಿಯ ಎಂಜಿನ್ನಿನಲ್ಲಿ ಪರೀಕ್ಷಿಸಿ ಅದಕ್ಕೆ ಆ ಅಂಕವನ್ನು ನಮೂದಿಸಲಾಗುತ್ತದೆ. ಟೆಟ್ರಈಥೈಲ್ ಲೆಡ್ ಮುಂತಾದ ರಾಸಾಯನಿಕಗಳನ್ನು ಸೇರಿಸಿ ಗ್ಯಾಸೊಲಿನ್ನಿನ ಆಕ್ಟೇನ್ ಅಂಕವನ್ನು ಉತ್ತಮಗೊಳಿಸಬಹುದು. 100ರ ಗುಣಾಂಕವನ್ನು ಮುಟ್ಟಲೂ ಮತ್ತು ಇದಕ್ಕಿಂತ ಅಧಿಕ ಗುಣಾಂಕವನ್ನು ಹೊಂದಲೂ ಈಗ ಸಾಧ್ಯವಾಗಿದೆ.

ಡೀಸೆಲ್ ಇಂದಿಗೂ ಹೆಚ್ಚು ಫಲದಾಯಕವಾದ ದ್ರವ ಉರುವಲಾಗಿರುವುದರಿಂದ ಅನೇಕ ಬಗೆಯ ಅಂತರ್ದಹನ ಎಂಜಿನ್ನುಗಳಲ್ಲಿ ಅದರ ಬಳಕೆ ಹೆಚ್ಚಾಗಿರುವುದನ್ನು ಕಾಣಬಹುದು. ಅತ್ಯಧಿಕ ಒತ್ತಡದಿಂದಾಗಿ ತುಂಬ ಬಿಸಿಯಾಗಿರುವ ಗಾಳಿಯೊಳಕ್ಕೆ ತುಂತುರಾಗಿ ಸಿಂಪಡಿಸಿದರೆ ಇದು ಹೊತ್ತಿಕೊಳ್ಳುವ ಕಾರಣ, ಆಕ್ಟೇನ್ ಅಂಕಕ್ಕೆ ವ್ಯತಿರಿಕ್ತವಾದ ಸೀಟೇನ್ ಸಂಖ್ಯೆ ಎಂಬುದನ್ನು ಇದರ ಗುಣಸೂಚಿಯಾಗಿ ಉಪಯೋಗಿಸುತ್ತಾರೆ. ಶಾಖ ಹಾಗೂ ಒತ್ತಡದಲ್ಲಿ ತತ್‌ಕ್ಷಣ ಹೊತ್ತಿಕೊಳ್ಳುವುದೇ ಇದರಲ್ಲಿರುವ ಒಂದು ಗಮನಾರ್ಹ ಗುಣ.

(ಕೆ.ವಿ.ಎಸ್.)

**ಅಂತರ್ಬೀಜ :** ಬೀಜದೊಳಗಿರುವ ಒಂದು ಅಂಗಾಂಶ (ಎಂಡೊಸ್ಪರ್ಮ್). ಇದಕ್ಕೆ ಭ್ರೂಣಾಹಾರ ಎಂಬ ಹೆಸರೂ ಇದೆ. ಬೀಜ ಮೊಳೆತು ಸಸಿಯಾಗುವ ಮುನ್ನ, ಬೀಜದೊಳಗಿರುವ ಭ್ರೂಣ ಬೆಳೆಯಲು ಪ್ರಾರಂಭಿಸಿದಾಗ ಅದಕ್ಕೆ ಆವಶ್ಯಕವಾದ ಆಹಾರವನ್ನು ಒದಗಿಸುವ ಕೆಲಸ ಇದರದು. ಆವೃತಬೀಜಸಸ್ಯ (ಆ್ಯಂಜಿಯೋಸ್ಪರ್ಮ್) ವರ್ಗದ ಭ್ರೂಣಕೋಶದೊಳಗಿದ್ದು ಈ ಗುಂಪಿನ ಸಸ್ಯಗಳ ಒಂದು ವಿಶೇಷ ಎನಿಸಿದೆ.

ಕೆಲವು ಬೀಜಗಳಲ್ಲಿ, ಬೀಜ ಪೂರ್ಣವಾಗಿ ಮೊಳೆಯುವ ಮುಂಚೆಯೇ, ಭ್ರೂಣವು ಅಂತರ್ಬೀಜವನ್ನು ಸಂಪೂರ್ಣವಾಗಿ ಹೀರಿ ಬಳಸಿಕೊಂಡಿರುತ್ತದೆ. ಇಂಥ ಅಂತರ್ಬೀಜರಹಿತ ಬೀಜಗಳನ್ನು ಅನಂಕುರಾಚ್ಛಾದಿತ ಬೀಜಗಳು ಎಂದು ಕರೆಯುತ್ತಾರೆ. ಇಂಥ ಬಲಿತ ಬೀಜಗಳಲ್ಲಿ ಬೀಜದ ಸಿಪ್ಪೆ ಹಾಗೂ ಭ್ರೂಣ ಮಾತ್ರ ಇರುತ್ತದೆ. ಉದಾ: ಅವರೆ, ನೆಲಗಡಲೆ, ಬಟಾಣಿ, ಸೂರ್ಯಕಾಂತಿ, ಕುಂಬಳ ಇತ್ಯಾದಿ.

ಇನ್ನುಳಿದ ಕೆಲವು ಜಾತಿಯ ಬೀಜಗಳಲ್ಲಿ, ಅಂತರ್ಬೀಜವು ಹಾಗೇ ಉಳಿದಿದ್ದು, ಬೀಜ ಮೊಳೆತ ಅನಂತರವೇ ಭ್ರೂಣದಿಂದ ಹೀರಲ್ಪಡುತ್ತದೆ. ಇಂಥ ಬೀಜಗಳು ಮೊಳಕೆಯಾಗಲು ನಿಧಾನವಾಗುತ್ತವೆ. ಏಕೆಂದರೆ ಅಂತರ್ಬೀಜದ ಸಾಗಾಟ ಮಂದಗತಿಯಲ್ಲಿರುವುದು. ಇಂಥ ಭ್ರೂಣಾಹಾರವನ್ನು ಹೊಂದಿರುವ ಬೀಜಗಳನ್ನು ಅಂಕುರಾಚ್ಛಾದಿತ ಬೀಜಗಳು ಎಂದು ಕರೆಯುತ್ತಾರೆ. ಉದಾ: ಧಾನ್ಯಗಳು, ಓಟ್ಸ್, ಗೋಧಿ ಇತ್ಯಾದಿ.




ಅಂತರ್ಬೀಜ

1. ನ್ಯೂಕ್ಲಿಯರ್ 2. ಸೆಲ್ಯುಲರ್ 3. ಹಿಲೋಬಿಯಲ್

ಅಂತರ್ಬೀಜದ ಅಂಗಾಂಶ ಸುಲಭವಾಗಿ ಕರಗದಿರುವಂಥ ಆಹಾರ ವಸ್ತುಗಳ ಶೇಖರಣೆಯಿಂದಾಗಿರುತ್ತದೆ. ಪಿಷ್ಟ ಅಧಿಕ ಪ್ರಮಾಣದಲ್ಲೂ ಸಕ್ಕರೆ ಮತ್ತು ಹೆಮಿಸೆಲ್ಯುಲೋಸ್‌ಗಳು (ಖರ್ಜೂರ, ಕಾಡು ಸಾಸಿವೆ) ಕಡಿಮೆ ಪ್ರಮಾಣದಲ್ಲೂ ಇದ್ದು ಶಕ್ತಿಯ ಆಗರವಾಗಿದೆ. ಒಟ್ಟಾರೆ ಇದು ಭ್ರೂಣದ ಬೆಳವಣಿಗೆಗೆ ಪೂರಕವಾಗಿದ್ದು, ಕೋಶಭಿತ್ತಿಯ ಸೆಲ್ಯುಲೋಸ್ ತಯಾರಿಕೆಗೂ ನೆರವಾಗುತ್ತದೆ.

**ಅಂತರ್ಬೀಜದ ರಚನೆ:** ಅಂತರ್ಬೀಜದ ಮೂಲವಸ್ತು ಅಥವಾ ನ್ಯೂಕ್ಲಿಯಸ್ ತ್ರಿಮುಖ ಕ್ರಿಯೆಯಿಂದ ಉತ್ಪನ್ನವಾಗಿರುತ್ತದೆ. ಹೂವು ಪರಾಗಸ್ಪರ್ಶ ಹೊಂದಿದ ಅನಂತರ, ಎರಡು ಶುಕ್ಲಾಣುಗಳು ಭ್ರೂಣಕೋಶದೊಳಗಿರುವ ಅಂಡಾಣುವಿನೊಡನೆ ಸಂಯೋಗವಾಗಿ ಗರ್ಭಾಂಕುರತೆಯನ್ನುಂಟುಮಾಡುತ್ತವೆ. ಗರ್ಭ ಕಟ್ಟಿದ ಯುಗ್ಮಜ (ಜೈಗೋಟ್) ಅಥವಾ ಗರ್ಭಾಂಕುರತೆ ಹೊಂದಿದ ಅಂಡಾಣು ಅಂಡಕ ಚೀಲದೊಳಗೆ ಬೆಳೆದು ಭ್ರೂಣವಾಗುತ್ತದೆ. ತ್ರಿಮುಖಕ್ರಿಯೆಯಿಂದ ಉದ್ಭವವಾದ ಪ್ರಥಮ ಅಂತರ್ಬೀಜದ ಮೂಲವಸ್ತು ಕ್ರಮೇಣ ಅಂತರ್ಬೀಜವಾಗಿ ಬೆಳೆಯುತ್ತದೆ.

ಅಂತರ್ಬೀಜವು ಭ್ರೂಣವನ್ನು ಸುತ್ತುವರಿದಿದ್ದು, ಭ್ರೂಣಕೋಶದೊಳಗಿದ್ದುಕೊಂಡೇ ಭ್ರೂಣಕ್ಕೆ ಆಹಾರವನ್ನು ಒದಗಿಸಿ ಒಂದು ಪೋಷಣಾಂಗವಾಗಿ ಕೆಲಸ ಮಾಡುತ್ತದೆ. ಅಂತರ್ಬೀಜ ಬೆಳೆದಂತೆಲ್ಲ ನ್ಯೂಸೆಲಸ್ ಭಾಗವನ್ನು ತುಂಬಿಕೊಳ್ಳುತ್ತದೆ. ಅಂತರ್ಬೀಜವನ್ನು ಕೆಲವರು ಅನಾವೃತಬೀಜಸಸ್ಯಗಳ (ಜಿಮ್ನೊಸ್ಪರ್ಮ್ಸ್) ಹೆಣ್ಣು ಗ್ಯಮಿಟೋಫೈಟಿಗೆ ಹೋಲಿಸುತ್ತಾರೆ. ಇದರಲ್ಲಿ ಸ್ವತಂತ್ರ ಜೀವಕಣ ವಿಭಜನೆಯಿದ್ದು, ದೈಹಿಕ ಅಂಗಾಂಶವಾಗಿ ಭ್ರೂಣಕೋಶದೊಳಗಿರುವುದೇ ಇದಕ್ಕೆ ಕಾರಣ.

ತಜ್ಞರ ಅಭಿಪ್ರಾಯದಂತೆ ಅಂತರ್ಬೀಜ ಹೆಣ್ಣು ಗ್ಯಮಿಟೋಫೈಟಾಗಲೀ, ಕೊಳೆತಿನಿ ಅಂಗಾಂಶ (ಸ್ಯಾಪ್ರೊಫೈಟಿಕ್ ಟಿಷ್ಯೂ) ವಾಗಲಿ ಆಗಲು ಸಾಧ್ಯವಿಲ್ಲ – ಏಕೆಂದರೆ ಇದರಲ್ಲಿ ತ್ರಿಬೀಜಕೋಶ ಕೇಂದ್ರವಿರುವುದು.

ಇದರ ಉತ್ಪನ್ನ ಎರಡು ಧ್ರುವ ಕೋಶಬೀಜಗಳ (ಪೋಲಾರ್ ನ್ಯೂಕ್ಲಿಯಸುಗಳು) ಮತ್ತು ಒಂದು ಗಂಡು ಶುಕ್ಲಾಣುವಿನಂತಾಗಿರುತ್ತದೆ. ಆದುದರಿಂದ ಇದನ್ನು ಟ್ರಿಪ್ಲಾಯಿಡ್ ಎನ್ನುತ್ತಾರೆ. ಅನಂತರ ವಿಭಜನೆ ಹೊಂದಿ ಸ್ವತಂತ್ರ ಜೀವಕೋಶಗಳನ್ನು ಉತ್ಪಾದಿಸಿ ಜೀವಕೋಶಗಳು(ಸೆಲ್ಸ್) ವ್ಯವಸ್ಥಿತವಾಗಿ ಜೋಡಣೆಯಾದ ಅನಂತರ, ಮಧ್ಯ ಭಾಗದಲ್ಲಿ ಒಂದು ಗುಳ್ಳೆ ಅಥವಾ ಕುಹರ ಏರ್ಪಡುತ್ತದೆ.

ಆರ್ಕಿಡೇಸೀ ಮತ್ತು ಪೋಡೋಸ್ಟೆಮೇಸೀ ಕುಟುಂಬದ ಸಸ್ಯಗಳಲ್ಲಿ ಅಂತರ್ಬೀಜ ಕ್ಷೀಣವಾಗಿರುತ್ತದೆ. ಪೊಡೋಸ್ಟೆಮೇಸೀ ಕುಟುಂಬದ ಸಸ್ಯಗಳಲ್ಲಿ ಭ್ರೂಣಾಹಾರದ ಕೆಲಸವನ್ನು ಮಿಥ್ಯಾ ಭ್ರೂಣಕೋಶವೇ ಮಾಡುತ್ತದೆ.

ಸಂರಚನೆಯ ಆಧಾರದ ಮೇಲೆ ವಿಜ್ಞಾನಿಗಳು ಅಂತರ್ಬೀಜವನ್ನು ಪ್ರಮುಖವಾದ ಮೂರು ಬಗೆಯವುಗಳನ್ನಾಗಿ ವಿಂಗಡಿಸಿದ್ದಾರೆ. ಹೂ ಬಿಡುವ ಸಸ್ಯಗಳು ಇವುಗಳ ಪೈಕಿ ಯಾವುದಾದರೊಂದು ರೀತಿಯ ಅಂತರ್ಬೀಜವನ್ನು ಪಡೆದಿರುತ್ತದೆ. ಜೊತೆಗೆ ಕೆಲವು ಭಿನ್ನರೀತಿಯ ರಚನೆಗಳನ್ನು ಪಡೆದಿರುವುದೂ ಉಂಟು. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಿದೆ.

**ನ್ಯೂಕ್ಲಿಯರ್ ಅಂತರ್ಬೀಜ :** ಈ ರೀತಿಯ ಅಂತರ್ಬೀಜದ ಅಭಿವೃದ್ಧಿ ಕ್ರಿಯೆಯಲ್ಲಿ ಪ್ರಾಥಮಿಕ ಕೋಶ ವಿಭಜನೆಯಲ್ಲೂ ಅನಂತರದ ವಿಭಜನೆಗಳಲ್ಲೂ ಸಾಮಾನ್ಯವಾಗಿ ಕೋಶಭಿತ್ತಿ ಮೂಡಿರುತ್ತದೆ. ಅಂತರ್ಬೀಜದ ಅಂತಿಮ ಅಭಿವರ್ಧನೆಯ ಘಟ್ಟದವರೆಗೂ ಬಿಡಿ ನ್ಯೂಕ್ಲಿಯಾರ್ ಮಟ್ಟದಲ್ಲೇ ಇರಬಹುದು. ಅಥವಾ ಕೊನೆಯ ಹಂತದಲ್ಲಿ ಕೋಶಭಿತ್ತಿಯ ರಚನೆಯಾಗಬಹುದು. ಮೊದಲ ಹಂತದ ವಿಭಜನೆಗಳು ಏಕಕಾಲದಲ್ಲೇ ಸಂಭವಿಸಬಹುದು. ಈ ಕ್ರಿಯೆಯಿಂದಾಗಿ ಜೀವಕೋಶಗಳು ಹೆಚ್ಚಿದಂತೆಲ್ಲ ಅವು ಭ್ರೂಣಕೋಶದ ಅಂಚಿಗೆ ಹೋಗಿ ಸೇರಿಕೊಳ್ಳುತ್ತವೆ. ಈ ಪರಿಣಾಮವಾಗಿ ಕೇಂದ್ರಭಾಗ ಖಾಲಿಯಾಗಿದ್ದು ಮಧ್ಯೆ ದೊಡ್ಡ ಟೊಳ್ಳು ರಚನೆಇರುತ್ತದೆ. ಕೋಶಭಿತ್ತಿಯ ರಚನೆ ಭ್ರೂಣಕೋಶದ ತುದಿಯಿಂದ ಪ್ರಾರಂಭವಾಗಿ ಕೇಂದ್ರ ಭಾಗದತ್ತ ಮುಂದುವರಿಯಬಹುದು, ಅಥವಾ ಮೇಲ್ತುದಿಯಿಂದ ಕೆಳತುದಿಯತ್ತ ಸಾಗಬಹುದು. ಈ ರೀತಿಯ ಅಂತರ್ಬೀಜ ರಚನೆಯನ್ನು ನಾಟಿ ಓಕ್ ಮರದ ಕುಟುಂಬ (ಪ್ರೋಟಿಯೇಸೀ), ಡಿಪ್ಟೆರೋಕಾರ್ಪೇಸೀ ಕುಂಬಳಕಾಯಿ ಕುಟುಂಬ (ಕುಕರ್ಬಿಟೇಸೀ) ಮತ್ತು ಅವರೆ ಜಾತಿಯ ಕುಟುಂಬದ (ಲೆಗ್ಯೂಮಿನೋಸೀ) ಸಸ್ಯಗಳಲ್ಲಿ ಕಾಣಬಹುದು. ಕೋಶಭಿತ್ತಿಯ ಅಭಿವೃದ್ಧಿ ಬೀಜರಂಧ್ರದ ತುದಿಯಿಂದ ಆರಂಭವಾಗಿ ಚಲಾಜದತ್ತ ಸಾಗಬಹುದು. ಉದಾ: ರಕ್ತರೋಹಿತ (ಪಾಲಿಗೋನಮ್) ಚುಕ್ಕಿ ಸೊಪ್ಪು (ರೂಮೆಕ್ಸ್) ಇತ್ಯಾದಿ.

**ಸೆಲ್ಯುಲರ್ ಅಂತರ್ಬೀಜ :** ಈ ರೀತಿಯ ಅಂತರ್ಬೀಜದ ಅಭಿವೃದ್ಧಿಯಲ್ಲಿ ಪ್ರಾಥಮಿಕ ಕೋಶವಿಭಜನೆ ಕೋಶಭಿತ್ತಿ ರಚನೆಯಿಂದಲೇ ಪ್ರಾರಂಭವಾಗುತ್ತದೆ. ಈ ಗುಣ ಉನ್ನತವರ್ಗದ ಸಸ್ಯಗಳ ಲಕ್ಷಣವೆನ್ನಲಾಗಿದೆ.

ಸೆಲ್ಯುಲರ್ ಅಂತರ್ಬೀಜ ಭಿನ್ನದಳಪುಷ್ಪಗಳುಳ್ಳ ಸಸ್ಯಗಳಲ್ಲೂ ಸಂಯುಕ್ತದಳ ಪುಷ್ಪಗಳುಳ್ಳ ಸಸ್ಯಗಳಲ್ಲೂ ಇದೆ. ಕೋಶಭಿತ್ತಿ ಸಾಮಾನ್ಯವಾಗಿ ಅಡ್ಡವಾಗಿದ್ದರೆ ಅಡಾಕ್ಸ ಮತ್ತು ಪೆಪೆರೋಮಿಯಳಿತ್ತಲ್ಲಿ ಮೊದಲನೆಯ ಮತ್ತು ಎರಡನೆಯ ಕೋಶಭಿತ್ತಿಗಳು ಲಂಬವಾಗಿರುತ್ತವೆ.

**ಹಿಲೋಬಿಯಲ್ ಅಂತರ್ಬೀಜ:** ಇದರಲ್ಲಿ ಪ್ರಥಮಕೋಶ ವಿಭಜನೆ ಕೋಶಭಿತ್ತಿಯ ರಚನೆಯಿಂದಲೇ ಪ್ರಾರಂಭವಾಗುತ್ತದೆ. ಆದರೆ ತದನಂತರ ಬರುವ ಕೋಶವಿಭಜನಾಕ್ರಿಯೆ ನ್ಯೂಕ್ಲಿಯರ್ ರೀತಿಯನ್ನು ಹೋಲುತ್ತದೆ. ಕೊನೆಗೆ ಅಂತರ್ಬೀಜ ಸೆಲ್ಯೂಲರ್ ರೀತಿಯದಾಗುತ್ತದೆ. ಆದುದರಿಂದಲೇ ಈ ರೀತಿಯ ಅಂತರ್ಬೀಜದ ಅಭಿವೃದ್ಧಿಯನ್ನು ಮಧ್ಯಂತರ ಅಂತರ್ಬೀಜದ ಲಕ್ಷಣವೆನ್ನುತ್ತಾರೆ. ಹಿಲೋಬಿಯಲ್ ಅಂತರ್ಬೀಜ ಚೆನ್ನದಾವರೆ (ಹೈಪರಿಕಮ್), ಬದನಿಕೆ (ಲೊರ್‍ಯಾಂಥಸ್), ಘಂಟಾಪಾಟಲಿ(ಬಿಗ್ನೋನಿಯ), ಬಿಳಿಜಂಬುಹುಲ್ಲು (ಜಂಕಸ್) ಇತ್ಯಾದಿ ಗಿಡಗಳಲ್ಲಿ ಇದೆ.

**ಅಂತರ್ಬೀಜದ ಶೋಷಣಾವಯವ ಎಂಡೋಸ್ಪರ್ಮ್ ಹಾಸ್ಟೋರಿಯಮ್:** ಇದು ಕ್ಲಿಷ್ಟ ರಚನೆಯ ಒಂದು ಅಂಗಾಂಶ. ಅಂತರ್ಬೀಜದ ಶೋಷಣಾವಯವವನ್ನು ಪ್ರಾಣಿಗಳಲ್ಲಿರುವ ಜರಾಯುವಿಗೆ ಹೋಲಿಸಬಹುದು. ಈ ಶೋಷಣಾವಯವ ಅಂತರ್ಬೀಜದೊಡನಿದ್ದು ಉದ್ದಕ್ಕೆ ಸುತ್ತಿಕೊಂಡಿರುತ್ತದೆ. ಇದು ತನ್ನ ಸುತ್ತಲಿರುವ ಅಂಗಾಂಶಗಳ ಒಳಕೆನ್ನುಗ್ಗಿ ಆಹಾರಾಂಶಗಳನ್ನು ಹೀರಿ, ಬೆಳೆಯುವ ಭ್ರೂಣಕ್ಕೆ ಒದಗಿಸುತ್ತದೆ. ಶೋಷಣಾವಯವದ ರೂಪು, ರಚನೆ ಮತ್ತು ಕ್ರಿಯೆಗಳು ಅಂತರ್ಬೀಜದ ಬೆಳವಣಿಗೆಯ ಹಂತಗಳಿಗನುಸಾರವಾಗಿದ್ದು, ಭ್ರೂಣದ ಆಹಾರದ ಆವಶ್ಯಕತೆಗೆ ಪೂರಕವಾಗಿರುತ್ತದೆ. ಅಂತರ್ಬೀಜದ ಶೋಷಣಾವಯವದ ಹುಟ್ಟು ಮತ್ತು ರೀತಿನೀತಿಗಳು ಸಸ್ಯವರ್ಗೀಕರಣಕ್ಕೆ ಮಹತ್ವದ ಮಾರ್ಗದರ್ಶನ ನೀಡುತ್ತವೆ.

**ಅಂತರ್ಬೀಜದ ವಿಶ್ಲೇಷಣೆ:** ಇತರ ಸಸ್ಯಭಾಗಗಳನ್ನು (ಅಂಗಾಂಶಗಳು ಮತ್ತು ಅಂಗಗಳನ್ನು) ಕೃತಕವಾದ ಪೋಷಕಾಂಶ ದ್ರವ್ಯದಲ್ಲಿ ಬೆಳೆಸುವಲ್ಲಿ ಅಂತರ್ಬೀಜದ ಉಪಯೋಗ ಬಹಳವಾಗಿದೆ. ಸಸ್ಯದ ಅಂಗಗಳನ್ನು ಅಂತರ್ಬೀಜದ ಸಾರವನ್ನಿತ್ತು ಬೆಳೆಸಬಹುದು. ತೆಂಗಿನ ಎಳನೀರು ಸಹ ದ್ರವರೂಪದ ಅಂತರ್ಬೀಜ. ಇದರಲ್ಲಿ ಅನೇಕ ಬಗೆಯ ಸಸ್ಯಗಳ ಶೈಶವಾವಸ್ಥೆಯ ಭ್ರೂಣಗಳನ್ನು ಬೆಳೆಸಬಹುದು. ಎಳನೀರಿನಲ್ಲಿ ಬೆಳವಣಿಗೆಗೆ ಉತ್ತೇಜಕವಾದ ವಸ್ತುಗಳಿವೆ. ಅಂತರ್ಬೀಜಗಳು ಉತ್ತೇಜಕ ವಸ್ತುಗಳ ಆಗರವಾಗಿವೆ. ಮುಸುಕಿನ ಜೋಳದ ಅಂತರ್ಬೀಜದಲ್ಲಿ ಇಂಡೋಲ್ ಅಸಿಟಿಕ್ ಆಮ್ಲ ಮತ್ತು ಪೈರುವಿಕ್ ಆಮ್ಲ ಸಹ ಇವೆ. ಸೇಬಿನ ಅಂತರ್ಬೀಜದಲ್ಲಿ ಬೆಳವಣಿಗೆಗೆ ಉತ್ತೇಜಕವಾದ 4 ಬಗೆಯ ವಸ್ತುಗಳಿವೆ. ಭ್ರೂಣ ಬೆಳೆದಂತೆಲ್ಲ ಇಂಥ ವಸ್ತುಗಳ ಮೊತ್ತ ಕಡಿಮೆಯಾಗುತ್ತ ಹೋಗುತ್ತದೆ.

(ಎಚ್.ಕೆ.ಎಂ.)

**ಅಂತರ್ಬೋಧೆ :** ಸಂವೇದನೆ ಅನುಮಾನ ಮತ್ತು ಆಲೋಚನೆಯ ಹಂಗಿಲ್ಲದೆ, ಯಾವುದಾದರೂ ವಿಷಯವಾಗಿ ಮನಸ್ಸಿಗೆ ನೇರವಾಗಿ ಗೋಚರಿಸುವ ಅರಿವು (ಇಂಟ್ಯೂಷನ್). ಅಂದರೆ ಒಂದು ವಿಷಯ ಅಥವಾ ವಸ್ತುವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ, ಸಾಮಾನ್ಯವಾಗಿ ಇರಬೇಕಾದ, ರಚನಾಂಶವಿಶ್ಲೇಷಣೆ, ತರ್ಕ ಈ ಮುಂತಾದ ಮೆಟ್ಟಿಲುಗಳು ಇರುವುದಿಲ್ಲವೆಂದರ್ಥ. ಅಂತರ್ಬೋಧೆ ಇದ್ದಕ್ಕಿದ್ದಂತೆಯೇ ಮನಸ್ಸಿಗೆ ಹೊಳೆಯುವ ಒಂದು ಅರಿವು ಅಥವಾ ನಿರ್ಣಯ. ಸಾಮಾನ್ಯವಾಗಿ ಅದು ಭಾವನಾಪೂರಿತವಾಗಿರುತ್ತದೆಯಲ್ಲದೆ ಆ ಅನುಭವಕ್ಕೆ ಪೂರ್ವಭಾವಿಯಾಗಿ ಯಾವ ವಿಧವಾದ ಪ್ರಜ್ಞಾತ್ಮಕ ಹಂತಗಳೂ ಇರುವುದಿಲ್ಲ. ಅಂತರ್ಬೋಧೆ ಈ ವಿಶ್ವದ ಎಲ್ಲ ಮಹತ್ವಪೂರ್ಣ ಜ್ಞಾನದ ಮೂಲವಾಗಿದೆ, ಅಲ್ಲದೆ ವಾಸ್ತವಿಕತೆಯೊಡನೆ ಅದಕ್ಕೆ ಅಂತರಂಗದ ಅನ್ಯೋನ್ಯತೆ ಇದೆ – ಎಂದು ಫ್ರೆಂಚ್ ತತ್ತ್ವಜ್ಞಾನಿಯಾದ ಹೆನ್ರಿ ಬರ್ಗ್ಸನ್ ಹೇಳಿದ್ದಾನೆ. ಕ್ಯಾಂಟನ ಪ್ರಕಾರ ಕಾಲ ಮತ್ತು ದೇಶಗಳು ನಮ್ಮ ಅಂತರ್ಬೋಧೆಯ ಸ್ವಚ್ಛ ರೂಪಗಳು. ಕಾಲದೇಶಗಳಿಗೆ ಸಂಬಂಧಪಟ್ಟ ನಮ್ಮ ಜ್ಞಾನ ಎಲ್ಲ ವಿಧವಾದ ಪೂರ್ವಾನುಭವದಿಂದಲೂ ಮುಕ್ತವಾದುದು.

ಅತೀಂದ್ರಿಯ ದರ್ಶನ, ಧಾರ್ಮಿಕ ಪ್ರಬೋಧನೆ, ನೈತಿಕಪ್ರಜ್ಞೆ, ಅಂತರಂಗ ಭಾವನೆಗಳ ಮತ್ತು ವರ್ತನೆಗಳ ಅರಿವು ಮತ್ತು ಇತರರ ಚಿಂತನೆ, ಭಾವನೆ ಹಾಗೂ ಆಶಯಗಳ ಸೂಕ್ಷ್ಮಪ್ರಜ್ಞೆ, ಇವೆಲ್ಲವುಗಳಿಗೂ ಅಂತರ್ಬೋಧೆ ಅನ್ವಯಿಸುತ್ತದೆ.

ವಿಶ್ವದಲ್ಲಿ ಸರ್ವವ್ಯಾಪ್ತವಾಗಿರುವ ಹಲವು ತತ್ತ್ವಗಳ ಅರಿವಿನಲ್ಲಿ ಮಾತ್ರವಲ್ಲದೆ, ಸರ್ವಸಾಮಾನ್ಯವಾಗಿ ಕಂಡುಬರುವ ಕೆಲವು ಅಮೂರ್ತ ಸತ್ಯಗಳ ಪ್ರಕಾಶನದಲ್ಲೂ ಅಂತರ್ಬೋಧೆ ತನ್ನ ವಿಶಿಷ್ಟವಾದ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದು ತತ್ತ್ವಜ್ಞಾನಿಗಳ, ತಾರ್ಕಿಕರ ಮತ್ತು ವಿಜ್ಞಾನಿಗಳ ಅಭಿಮತ. ಕೆಲವು ವೇಳೆ, ಮನಸ್ಸಿಗೆ ಸ್ಪಷ್ಟವಾಗಿ ಗೋಚರಿಸಿದ ಸ್ವಯಂವೇದ್ಯ ತತ್ತ್ವಕ್ಕೂ ಒಂದು ಪ್ರಮಾಣವನ್ನು ಪುಷ್ಟೀಕರಿಸುವ ಎಣಿಕೆ ಮತ್ತು ಒಳನೋಟಗಳ ಆಧಾರದಿಂದ ಒಪ್ಪಿಕೊಂಡ ಮುಂಚಿನ ನಿರ್ಣಯಕ್ಕೂ ಅಂತರ್ಬೋಧೆ ಸಂಬಂಧವನ್ನು ಕಲ್ಪಿಸುತ್ತದೆ. ವೈಜ್ಞಾನಿಕ ಮತ್ತು ತಾರ್ಕಿಕ ಬರೆವಣಿಗೆಗಳಲ್ಲಿ ಹಾಗೂ ಸಾಮಾನ್ಯ ಮಾತುಕತೆಗಳಲ್ಲಿ, ಈ ರೀತಿಯ ಉಪಯೋಗ ಕಂಡುಬರುತ್ತದೆ.

ತತ್ತ್ವಶಾಸ್ತ್ರದಲ್ಲಿ ಅಂತರ್ಬೋಧೆ, ಪ್ರಜ್ಞಾಪೂರ್ವಕವಾದ ಆಲೋಚನೆಯಿಂದ ತಿಳಿದುಕೊಳ್ಳಲಾಗದ ಸತ್ಯದ ಸ್ವಯಂ ಪ್ರಕಾಶನ ಅಥವಾ ಅರಿವು. ನೈತಿಕ ಮತ್ತು ಧಾರ್ಮಿಕ ಜ್ಞಾನದಲ್ಲಿ, ಅದು ಸತ್ಯದ ತತ್‍ಕ್ಷಣದ ಪ್ರಕಾಶನ. ಮನೋವಿಜ್ಞಾನದಲ್ಲಾದರೆ ಅಂತರ್ಬೋಧೆ, ದತ್ತಾಂಶಗಳ ಒಂದು ಮೊತ್ತದಲ್ಲಿ ಅಂತರ್ಗತವಾಗಿರುವ ವಿಶಿಷ್ಟ ಅಂಶವನ್ನು ತತ್‍ಕ್ಷಣ ಅರಿಯುವುದು. ಕೆಲವು ಸಲ, ಅಂತರ್ಬೋಧೆಯನ್ನು ಒಳನೋಟದೊಂದಿಗೆ ಬೆರೆಸುವುದುಂಟು. ಆದರೆ, ಗುರುತಿಸಲು ಸಾಧ್ಯವಾಗುವಂಥ, ಯಾವ ವಿಧವಾದ ಪೂರ್ವಜ್ಞಾನ ಅಥವಾ ಸಂವೇದನಾಜ್ಞಾನಗಳ ಹಂಗಿಲ್ಲದೆ ಅದು ಉಂಟಾಗುವುದರಿಂದ, ಒಳನೋಟದಿಂದ ಅದು ಭಿನ್ನವಾದುದು ಎಂದು ಹೇಳಬಹುದು.

ಆದರೆ ಅಂತರ್ಬೋಧೆಯಿಂದ ಉಂಟಾದ ಜ್ಞಾನ ಸಹಜ ಪ್ರೇರಣಾತ್ಮಕವಾದುದು ಎಂಬ ಅಭಿಪ್ರಾಯದಿಂದ ನಾವು ಅನೇಕ ಅನುಭವಗಳನ್ನು, ಯಾವ ಪ್ರಮಾಣದ ಆಧಾರವೂ ಇಲ್ಲದೆ ಮತ್ತು ಸೂಕ್ತ ಪರಿಶೀಲನೆ ನಡೆಸದೆ ಸ್ವೀಕರಿಸುವುದುಂಟು. ನಮ್ಮ ಪ್ರಜ್ಞಾಕೇಂದ್ರದಲ್ಲಿರದೆ, ಅದರ ಅಸ್ಪಷ್ಟ ಅಂಚಿನಲ್ಲಿರಬಹುದಾದ ಕೆಲವು ಸಂಕೇತಗಳ ಅಥವಾ ಪ್ರಚೋದಕಗಳ ನೆರವಿನಿಂದ ನಮಗೆ ಕೆಲವು ಅನುಭವಗಳು ವೇದ್ಯವಾಗಬಹುದು. ಅಂಥ ಅನುಭವಗಳು ಅಂತರ್ಬೋಧೆ ಜನ್ಯವಾದುವುಗಳೆಂದು ತಪ್ಪು ತಿಳಿಯುವ ಸಾಧ್ಯತೆ ಹೆಚ್ಚು ಎಂಬುದು ಕೆಲವು ಮನೋವಿಜ್ಞಾನಿಗಳ ಅಭಿಮತ. ಅಂತೆಯೇ ಪ್ರೇರಣೆಗಳು, ಆಲೋಚನೆಗಳು ಅಥವಾ ಮತ್ತೊಬ್ಬರು ವರ್ತಿಸಬಹುದಾದ ರೀತಿ ಮುಂತಾದುವುಗಳಿಗೆ ಸಂಬಂಧಪಟ್ಟಂತೆ ಮಾಡಲಾಗುವ ವಿವೇಕಪೂರ್ಣ ಊಹೆಗಳು ಅಥವಾ ಎಣಿಕೆಗಳು ಕೂಡ ವ್ಯಕ್ತಿಯ ವಾಕ್ಸರಣಿ ಅಥವಾ ಹಾವಭಾವಗಳಲ್ಲಿ ಅಡಕವಾಗಿರಬಹುದಾದ ಸೂಕ್ಷ್ಮ ಸುಳಿವುಗಳ ನೆರವನ್ನು ಪಡೆಯಬಹುದು. ಅಂಥ ಸಂಕೇತಗಳಿಗೆ ವ್ಯಕ್ತವಾಗುವ ಪ್ರತಿಕ್ರಿಯೆಗಳು, ಹಲವು ವೇಳೆ ಅನುಬೋಧಾತ್ಮಕ ವಾದುವುಗಳು ಎನ್ನುವ ಭ್ರಾಂತಿಯನ್ನು ಉಂಟುಮಾಡುವಷ್ಟು ಯಾಂತ್ರಿಕವಾಗಿಬಿಡುತ್ತವೆ.

ಸಂವೇದನೆ, ಭಾವನೆ ಮತ್ತು ಸಂವೇಗಗಳನ್ನು ಒಳಗೊಂಡ ಇತರ ನಿರ್ಣಯಗಳಂತೆಯೇ ಸೌಂದರ್ಯಾತ್ಮಕ ಮೌಲ್ಯಗಳಿಗೆ ಸಂಬಂಧಪಟ್ಟ ಜ್ಞಾನ, ಅನೇಕ ವೇಳೆ, ಅಂತರ್ಬೋಧಾತ್ಮಕವಾಗಿರುತ್ತದೆ. ಸೌಂದರ್ಯ ಮೀಮಾಂಸೆಯಲ್ಲಿ ಅಂತರ್ಬೋಧೆಯನ್ನು ಪ್ರತಿಭೆ ಎಂದು ಕರೆಯುತ್ತಾರೆ.

ಸ್ವಯಂವೇದ್ಯ ಅಥವಾ ಅಚಿಂತ್ಯ ಜ್ಞಾನವೆಂಬ ಅರ್ಥ ಕೊಡುವುದಾದರೆ, ಅಂತರ್ಬೋಧೆ ಜ್ಞಾನದ ಎಲ್ಲ ಪ್ರಕ್ರಿಯೆಗಳಿಗೂ ಅನ್ವಯಿಸುತ್ತದೆ ಎಂಬುದು ಕಾರ್ಲ್ ಸ್ಪಿಯರ್‌ಮನ್ನನ ಅಭಿಪ್ರಾಯ.

ಜಿ.ಡಬ್ಲ್ಯೂ. ಆಲ್ಪೋರ್ಟನ ಪ್ರಕಾರ, ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳಲು ತರ್ಕ ಮತ್ತು ಅಂತರ್ಬೋಧೆ ಇವೆರಡರ ನೆರವೂ ಆವಶ್ಯಕ. ವ್ಯಕ್ತಿತ್ವ ರಚನೆಯಲ್ಲಿರುವ ಸಮಷ್ಟಿ ವ್ಯವಸ್ಥೆಯನ್ನು ತಿಳಿಯಲು, ಅಂತರ್ಬೋಧೆ ನೆರವಾಗುತ್ತದೆ. ಇವೆರಡನ್ನೂ ಅರ್ಥ ಮಾಡಿಕೊಳ್ಳುವ ನಮ್ಮ ಪ್ರಯತ್ನದಲ್ಲಿ ಅಂತರ್ಬೋಧೆ ಅಡಕವಾಗಿರುತ್ತದೆ. ನಮ್ಮ ಮೊದಲ ನೋಟದಲ್ಲಿಯೇ ಸ್ಥೂಲವಾಗಿಯಾದರೂ ಪೂರ್ಣ ವ್ಯಕ್ತಿಯನ್ನು ಕಾಣುತ್ತೇವೆ. ಇದು ಮುಂದಿನ ಸೂಕ್ಷ್ಮ ತಿಳಿವಿಗೆ ಅಡಿಪಾಯವಾಗುತ್ತದೆ. ಉದಾಹರಣೆಗೆ: ಒಬ್ಬ ಮನೋವೈದ್ಯ, ಒಬ್ಬ ಉಪಬೋಧಕ ಅಥವಾ ಒಬ್ಬ ಸಂದರ್ಶಕ, ಅವನು ವ್ಯವಹರಿಸುತ್ತಿರುವ ವ್ಯಕ್ತಿಯ ವರ್ತನೆಯನ್ನು ಅಸ್ಪಷ್ಟವಾದರೂ ಸಮಗ್ರವಾಗಿ ಗ್ರಹಿಸುವವರೆಗೆ, ಪ್ರಶ್ನೆಗಳನ್ನು ಹೇಗೆ ರೂಪಿಸಬೇಕು ಮತ್ತು ತನ್ನ ಶೋಧನೆಯನ್ನು ಹೇಗೆ ನಡೆಸಬೇಕು ಎಂಬುದರಲ್ಲಿ, ಆತನಿಗೆ ಯಾವ ಕಲ್ಪನೆಯೂ ಇರುವುದಿಲ್ಲ. ಆದುದರಿಂದ, ಯಾವುದಾದರೂ ಸಂಶೋಧನೆಯ ಆರಂಭದಲ್ಲಿ, ಅಂತರ್ಬೋಧೆಯ ಆವಶ್ಯಕತೆ ಇರುತ್ತದಲ್ಲದೆ, ಅದರ ಮುಂದಿನ ಹಂತಗಳಲ್ಲಿಯೂ ಅದರ ಪಾತ್ರ ಇದ್ದೇ ಇರುತ್ತದೆ **(ನೋಡಿ– ಪ್ರತಿಭೆ)**. (ಡಿ.)

**ಅಂತರ್ಯಾಮಿ :** ಪ್ರಪಂಚಕ್ಕೆಲ್ಲ ಒಡೆಯನಾದ ದೇವರೊಬ್ಬನು ಇದ್ದಾನೆಂದು ಒಪ್ಪಿಕೊಳ್ಳುವವರೆಲ್ಲ ಅವನು ಪರಿಶುದ್ಧವಾದ ಸ್ವರ್ಗದಲ್ಲಿರುತ್ತಾನೆಂದೂ ಸರ್ವಜ್ಞನಾದುದರಿಂದ ಅಲ್ಲಿಂದಲೇ ಅವನು ಈ ಲೋಕದ ವ್ಯಾಪಾರಗಳನ್ನೆಲ್ಲ ಸ್ಪಷ್ಟವಾಗಿ ಅರಿತುಕೊಳ್ಳುತ್ತಾನೆಂದೂ ಹೇಳುತ್ತಾರೆ. ಆದರೆ ವೈದಿಕರು ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿ, ದೇವರು ಎಲ್ಲ ಕಡೆಗಳಲ್ಲಿಯೂ ಎಂದರೆ ಎಲ್ಲ ವಸ್ತುಗಳಲ್ಲಿಯೂ ವ್ಯಾಪಿಸಿ ಅಂತರ್ಯಾಮಿಯಾಗಿರುತ್ತಾನೆಂದೂ ಆದುದರಿಂದ ಅವನನ್ನು ಹುಡುಕಿಕೊಂಡು ನಾವು ಎಲ್ಲಿಗೂ ಹೋಗಬೇಕಾಗಿಲ್ಲವೆಂದೂ ನಮ್ಮ ಹೃದಯದಲ್ಲೇ ಇರುವ ಅವನಿಗೆ ತಿಳಿಯದಂತೆ ನಾವು ಯಾವ ಕೆಲಸವನ್ನೂ ಮಾಡಲಾರೆವೆಂದೂ ಅವನಲ್ಲಿ ಅಲ್ಪ ಪ್ರೀತಿಯನ್ನಿಟ್ಟು ಭಜಿಸಲಾರಂಭಿಸಿದರೂ ಅವನು ಪ್ರಸನ್ನನಾಗಿ ನಮ್ಮ ಮನಸ್ಸನ್ನೂ ಇಂದ್ರಿಯಗಳನ್ನೂ ಸರಿಯಾದ ದಾರಿಯಲ್ಲಿ ನಡೆಸಿ ನಮಗೆ ಶ್ರೇಯಸ್ಸನ್ನುಂಟುಮಾಡುತ್ತಾನೆಂದೂ ಹೇಳುತ್ತಾರೆ. (ಭಗವದ್ಗೀತೆ 15–15, 18–61 ಇತ್ಯಾದಿ).

ಅಂತರ್ಯಾಮಿ ಅಥವಾ ಅಂತರಾತ್ಮ ಎಂಬ ಪದಕ್ಕೆ ಮನಸ್ಸನ್ನು ಅಥವಾ ಜೀವಾತ್ಮನನ್ನು ಆಳುವವನು ಎಂದರ್ಥ. ಎಂದರೆ, ಒಂದು ಶರೀರದಲ್ಲಿರುವ ಜೀವನು ಹೇಗೆ ಆ ಶರೀರವನ್ನೂ ಮನಸ್ಸನ್ನೂ ತನ್ನಿಷ್ಟದಂತೆ ನಡೆಸುವನೋ ಹಾಗೆ ದೇವರು ಸಹ ಚೇತನ ಅಚೇತನಗಳೆಂಬ ಎಲ್ಲ ವಸ್ತುಗಳೊಳಗೂ ಇದ್ದುಕೊಂಡು ಅವನ್ನೆಲ್ಲ ನಡೆಸುತ್ತಾನೆಂದು ಅರ್ಥ.

ಬೃಹದಾರಣ್ಯಕೋಪನಿಷತ್ತು (5–7) ಯಾವನು ಪಂಚಭೂತಗಳು, ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಗಳು, ಮೂರು ಲೋಕಗಳು, ಸೂರ್ಯ ಚಂದ್ರ ನಕ್ಷತ್ರಾದಿಗಳು, ಎಲ್ಲ ಪ್ರಾಣಿಗಳು, ಜೀವಾತ್ಮ - ಎಂಬಿವೇ ಮೊದಲಾದ ಸಮಸ್ತ ಪದಾರ್ಥಗಳಲ್ಲಿಯೂ ಇವುಗಳಿಗೆ ತಿಳಿಯದೆ ಇದ್ದುಕೊಂಡು ಇವುಗಳನ್ನು ತನಗೆ ಶರೀರವನ್ನಾಗಿ ಮಾಡಿಕೊಂಡು ನಿಯಮಿಸುತ್ತಾನೆಯೋ (ಎಂದರೆ ಆಳುತ್ತಾನೆಯೋ), ಅವನೇ ಅಂತರ್ಯಾಮಿ ಎಂದು ಹೇಳುತ್ತದೆ. ಬ್ರಹ್ಮಸೂತ್ರದ ಅಂತರ್ಯಾಮ್ಯಧಿಕರಣವು (1–2–19) ಮೇಲ್ಕಂಡ ಉಪನಿಷತ್ತಿನಲ್ಲಿ ಹೊಗಳಲ್ಪಟ್ಟ ಅಂತರ್ಯಾಮಿಯೇ ಪರಬ್ರಹ್ಮನೆಂದು ಸ್ಥಾಪಿಸುತ್ತದೆ. ಸುಬಾಲೋಪನಿಷತ್ತು ಸರ್ವಭೂತಾಂತರಾತ್ಮನಾದ ನಾರಾಯಣನು ಪೃಥ್ವಿ ಜಲ ಮುಂತಾದುವುಗಳನ್ನು ಶರೀರವನ್ನಾಗಿ ಹೊಂದಿ, ಅವುಗಳನ್ನು ಒಳಹೊಕ್ಕು ನಿಯಮಿಸುತ್ತಾನೆ ಎಂದು ತಿಳಿಸುತ್ತದೆ. ತನ್ನ ಅಂತರ್ಯಾಮಿತ್ವವನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುವುದಕ್ಕೆಂದೇ ದೇವರು ನರಸಿಂಹಾವತಾರವನ್ನೆತ್ತಿದನೆಂಬುದು ಪ್ರಸಿದ್ಧವಾಗಿರುವ ಕಥೆ. (ವಿಷ್ಣು ಪುರಾಣ 1–17, ಭಾಗವತ 6–7 ಇತ್ಯಾದಿ). (ಎ.ಎಸ್.)

**ಅಂತರ್ಯುದ್ಧಗಳು :** ಒಂದು ರಾಷ್ಟ್ರದ ರಾಜಕೀಯ ಪಕ್ಷ ಪ್ರತಿಪಕ್ಷಗಳು ಅಧಿಕಾರವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಕಾದಾಟವನ್ನು ಪ್ರಾರಂಭಿಸುತ್ತವೆ. ಇಂಥ ಕಾದಾಟಕ್ಕೆ ಅಂತರ್ಯುದ್ಧವೆಂದು ಹೆಸರು(ಸಿವಿಲ್‌ವಾರ್). ರೋಸಸ್ ಕದನಗಳು, ಯುರೋಪಿನಲ್ಲಿ ನಡೆದ ಫ಼್ರೊಂಡೆ ಮತ್ತು ಲೀಗ್ ಕದನ ಹಾಗೆಯೆ ಅಮೆರಿಕ ಮತ್ತು ಸ್ಪೇನ್‌ಗಳಲ್ಲಿ ನಡೆದ ಯುದ್ಧಗಳು ಮತ್ತು 20ನೆಯ ಶತಮಾನದಲ್ಲಿ ಚೀನದಲ್ಲಿ ಕೋಮಿನ್‌ಟಾಂಗ್ ಮತ್ತು ಕಮ್ಯೂನಿಸ್ಟರ ನಡುವೆ ನಡೆದವು_ಇವು ಅಂತರ್ಯುದ್ಧದ ಚರಿತ್ರಾರ್ಹ ನಿದರ್ಶನಗಳು. ಇಂಗ್ಲೆಂಡಿನಲ್ಲಿ ಒಂದನೆಯ ಚಾರ್ಲ್ಸ್ ಚಕ್ರವರ್ತಿ ಮತ್ತು ಪಾರ್ಲಿಮೆಂಟ್‌ಗಳ ಮಧ್ಯೆ ನಡೆದ ಹೋರಾಟವನ್ನು ಅಂತರ್ಯುದ್ಧ ಎಂಬ ಹೆಸರಿನಿಂದ ಕರೆಯಲಾಗಿದೆ. ಸಂಯುಕ್ತಸಂಸ್ಥಾನಗಳಲ್ಲಿ ಉತ್ತರ ಮತ್ತು ದಕ್ಷಿಣ ರಾಜ್ಯಗಳ ಮಧ್ಯೆ ನಡೆದ ಹೋರಾಟವನ್ನು ಅಮೆರಿಕದ ಅಂತರ್ಯುದ್ಧ ಎಂದು ಕರೆಯಲಾಗಿದೆ.

ಪ್ರಪಂಚದ ಎರಡನೆಯ ಘೋರ ಯುದ್ಧಾನಂತರ ಅಂತರ್ಯುದ್ಧದ ವ್ಯಾಪಕತೆ ವಿಶೇಷವಾಗಿ ಹೆಚ್ಚಿತು. ಕೊನೆಯ ಪಕ್ಷ ಅಂತರ್ಯುದ್ಧವನ್ನು ಹೂಡಿ 12 ರಾಷ್ಟ್ರಗಳು ತಮ್ಮ ಸರ್ಕಾರದ ಸ್ವರೂಪಗಳನ್ನು ಬದಲಾಯಿಸಿವೆ. ಅಂಗೋಲ, ಕಾಂಬೋಡಿಯ, ಕಾಂಗೋ, ಕ್ಯೂಬ, ವಿಯಟ್‌ನಾಮ್, ಲಾವೋಸ್, ಸೈಪ್ರಸ್, ನ್ಯೂಗಿನಿ, ಯೆಮೆನ್ ಆದಿಯಾಗಿ ಹನ್ನೊಂದು ರಾಷ್ಟ್ರಗಳು 1964ನೆಯ ಇಸವಿಯೊಂದರಲ್ಲೇ ಅಂತರ್ಯುದ್ಧದ ಮೂಲಕ ಬೇರೆ ಸರ್ಕಾರಗಳನ್ನು ರಚಿಸಿಕೊಂಡವು. ಇಂಥ ಘಟನೆಗಳಲ್ಲಿ ನಾಗರಿಕರೂ ಭಾಗವಹಿಸುವುದರಿಂದ ಮತ್ತು ಹಿಂಸಾಕೃತ್ಯಗಳು ನಡೆಯುವುದರಿಂದ ಇವಕ್ಕೆ ಅಂತರ್ಯುದ್ಧಗಳೆಂದು ಹೆಸರಾಗಿದೆ. ಅಂತರ್ಯುದ್ಧ ಸಮಾಜದ ಚೌಕಟ್ಟಿನೊಳಗೆ ಒಂದೇ ಗುಂಪಿನ ಮಧ್ಯದಲ್ಲೂ ನಡೆಯಬಹುದು. ಅದು ರಾಜಕೀಯ, ಮತೀಯ, ಸಾಮಾಜಿಕ ಅಥವಾ ಆರ್ಥಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಥವಾ ಇವುಗಳಲ್ಲಿ ಯಾವುದಾದರೂ ಒಂದೇ ಕ್ಷೇತ್ರದ ಆಧಾರದ ಮೇಲೆ ರೂಪುಗೊಳ್ಳಬಹುದು.

ಅಂತರ್ಯುದ್ಧಗಳಲ್ಲಿ ಮುಖ್ಯವಾಗಿ ಎರಡು ವಿಧಗಳುಂಟು. ಒಂದು ಸಹಜವಾದುದು; ಅದಕ್ಕೆ ಯಾವ ವಿಧವಾದ ಮುಂದಾಲೋಚನೆಯ ಆಧಾರವಿರಬೇಕಾದ್ದಿಲ್ಲ. ಹಾಗೂ ಯಾರ ನಾಯಕತ್ವದ ಅಗತ್ಯವೂ ಅದಕ್ಕೆ ಬೇಡ. ಇಂಥ ಸಂದರ್ಭದಲ್ಲಿ ರಸ್ತೆಯಲ್ಲಿನ ಗುಂಪೊಂದರಿಂದ ಅನಿರೀಕ್ಷಿತ ತೊಡಕು ಸಂಭವಿಸಿ ಅಸ್ತಿತ್ವದಲ್ಲಿರುವ ಸರ್ಕಾರವೇ ಉರುಳಬಹುದು. ಅಂಥ ಅನಿರೀಕ್ಷಿತ ಭಯೋತ್ಪಾದಕ ಘಟನೆಯಿಂದ ರಾಷ್ಟ್ರದಲ್ಲಿ ಅನಾಯಕತೆ ಮತ್ತು ಅಧಿಕಾರಶೂನ್ಯತೆ ಮೂಡಿ ಸರ್ಕಾರ ಬದಲಾಗುತ್ತದೆ. ಸಾಮಾನ್ಯವಾಗಿ ಅಂತರ್ಯುದ್ಧ ವಿಶಿಷ್ಟ ರಾಜಕೀಯ ಪರಂಪರೆಯನ್ನು ಹೊಂದಿರದ ಮತ್ತು ದುರ್ಬಲ ಸರ್ಕಾರವಿರುವ ರಾಷ್ಟ್ರಗಳಲ್ಲಿ ಸಂಭವಿಸುತ್ತದೆ.

ಮತ್ತೊಂದು ರೀತಿಯ ಅಂತರ್ಯುದ್ಧಕ್ಕೆ ಅಧಿಕಾರದಲ್ಲಿರುವ ಸರ್ಕಾರವನ್ನುರುಳಿಸಲು ಪೂರ್ವಸಿದ್ಧತೆಯೂ ವ್ಯವಸ್ಥೆಯೂ ಸಾಕಷ್ಟು ನಡೆದಿರುತ್ತದೆ. ಪೂರ್ವಯೋಜಿತ ಆಧಾರದ ಮೇಲೆ ನಡೆಯುವ ಅಂತರ್ಯುದ್ಧವನ್ನು ರಾಜಕೀಯದ ಮಹಾಬೇನೆ ಎಂದು ಕರೆಯಬಹುದು. ಇವುಗಳನ್ನು ಕ್ಷಿಪ್ರಕ್ರಾಂತಿ ಎನ್ನುತ್ತಾರೆ. ವೈಜ್ಞಾನಿಕವಾಗಿ ಪರಿಶೀಲಿಸಿದಲ್ಲಿ ಪೂರ್ವಯೋಜಿತ ಅಂತರ್ಯುದ್ಧಕ್ಕೆ ಎರಡು ಪ್ರಮುಖವಾದ ಅಂಶಗಳಿರುತ್ತವೆ. ಒಂದು ರಾಜಕೀಯ ಅಭದ್ರತೆ ಮತ್ತು ಅಡಚಣೆಗಳ ನಿವಾರಣೆಗೆ ರಚನಾತ್ಮಕ ಮಾರ್ಗಗಳಿಲ್ಲದಿರುವುದು. ರಾಜಕೀಯ ಒಳ ಜಗಳಗಳ ಮತ್ತು ನ್ಯೂನತೆಗಳ ನಿವಾರಣೆಗೆ ಹಿಂಸಾಕೃತ್ಯವನ್ನುಳಿದು ಬೇರೆ ಯಾವ ಮಾರ್ಗವೂ ಇಲ್ಲದಿರುವುದು ಎರಡನೆಯದು. ಯೋಜಿತ ಅಂತರ್ಯುದ್ಧಗಳಲ್ಲಿ ಬುಡಮೇಲು ಕೃತ್ಯಗಳು ಪ್ರಾರಂಭವಾಗುತ್ತವೆ. ತಾಂತ್ರಿಕವಾಗಿ ಹಾಗೂ ಕೈಗಾರಿಕೆಗಳಲ್ಲಿ ಮುಂದುವರಿದ ದೇಶಗಳಲ್ಲಿ ಬುಡಮೇಲು ಕೃತ್ಯದ ಕೇಂದ್ರವೊಂದು ಸ್ಥಾಪಿತವಾಗಿ ಗೆರಿಲ್ಲಾ ಗುಪ್ತಪಡೆಗಳನ್ನು ರಾಷ್ಟ್ರದಲ್ಲಿ ವ್ಯಾಪಕವಾಗಿ ಸ್ಥಾಪಿಸಿ ಕಾರ್ಯೋನ್ಮುಖವಾಗಲು ಒಂದು ಅಥವಾ ಎರಡು ವರ್ಷಗಳ ಅವಧಿ ಸಾಕು. ಹೋರಾಟದ ಕೊನೆಯಲ್ಲಿ ಭೀಕರವಾದ ಬಂಡಾಯವಾಗಿ ಅದು ಹಿಂಸಾಕೃತ್ಯಗಳಲ್ಲಿ ಕೊನೆಗೊಳ್ಳುತ್ತದೆ. ಅಂತರ್ಯುದ್ಧಗಳಿಗೆ ಅತ್ಯವಶ್ಯಕ ಅಂಶಗಳೆಂದರೆ 1. ನಾಗರಿಕ ಮುಖಂಡತ್ವ 2. ಸೈನ್ಯದ ಕೇಂದ್ರ 3.ಗುಪ್ತ ವಾರ್ತಾಪ್ರಸಾರ ಸಾಧನ 4. ಸಾಗಾಣಿಕೆ 5. ಪ್ರಸಾರ ಸಾಧನ 6. ಮೀಸಲು ಪಡೆ 7. ತಾರ್ಕಿಕ ಸಿದ್ಧಾಂತ 8. ಯುದ್ಧೋಪಕರಣಗಳು ಮತ್ತು ಗೆರಿಲ್ಲಾ ಪಡೆಗಳು (ಗೆರಿಲ್ಲಾ ಪಡೆಗಳು ಸೈನ್ಯದ ರೀತಿಯಲ್ಲಿ ಸಜ್ಜಾಗಿರುವುದೂ ಉಂಟು).

ಆಧುನಿಕ ಕಾಲದಲ್ಲಿ ಅಂತರ್ಯುದ್ಧಗಳು ರಾಷ್ಟ್ರೀಯತೆಯ ಉಗ್ರರೂಪ ಹಾಗೂ ವಸಾಹತುಶಾಹಿಯ ಕಡು ವಿರೋಧ – ಈ ಪರಿಸ್ಥಿತಿಗಳನ್ನು ಬಹುಮಟ್ಟಿಗೆ ಅವಲಂಬಿಸಿರುತ್ತದೆ. (ಬಿ.ಎಸ್.)

**ಅಂತರ್ವಲಿತ :** ಒಂದು ವೃತ್ತಪರಿಧಿಯ ಅಥವಾ ಅದರ ಯಾವುದೇ ಒಂದು ಭಾಗದ ಮೇಲಿನ ಪಕ್ಕಪಕ್ಕದ ಬಿಂದುಗಳಲ್ಲಿನ ಎಲ್ಲ ಸ್ಪರ್ಶ ರೇಖೆಗಳನ್ನೂ ಸಮಕೋನದಲ್ಲಿ ಛೇದಿಸುವ ರೇಖೆ (ಇನ್‌ವೊಲ್ಯೂಟ್). ಇದರ ವಿವರಣೆಯನ್ನು ಒಂದು ದಾರದ ಸಹಾಯದಿಂದ ತಿಳಿಯಬಹುದು.

ಯಾವುದಾದರೊಂದು ರೇಖೆ (C) ಯನ್ನು ತೆಗೆದುಕೊಳ್ಳೋಣ. ದಾರದ ತುದಿ ರೇಖೆಯ ಮೇಲಿರುವ 'P' ಬಿಂದುವಿನಲ್ಲಿ ಬಿಗಿದಿರಲಿ. ರೇಖೆಯ ಮೇಲಿನ A, B, C,. . . ಬಿಂದುಗಳು ಸಮದೂರದಲ್ಲಿರಲಿ. ಈಗ ದಾರವನ್ನು ರೇಖೆ ಯಾವ ರೀತಿಯಲ್ಲಿರುವುದೋ ಅದೇ ರೀತಿಯಲ್ಲಿ A, B, C,. . . ಗಳ ಮೂಲಕ ಬಿಗಿಯಾಗಿ ಎಳೆದು ಹಾಯಿಸೋಣ. ಅನಂತರ ದಾರವನ್ನು. . . D, C, B, A ಗಳಲ್ಲಿ ಬಲವಾಗಿ ಅದುಮಿ ಹಿಡಿದು ಎಳೆದರೆ ದಾರ ಆ ಬಿಂದುಗಳಲ್ಲಿನ ಸ್ಪರ್ಶರೇಖೆಗಳ ಮೇಲೆಯೇ ಇರುತ್ತದೆ. ಹೀಗೆ ಮಾಡುವಾಗ ದಾರದ ಈ ತುದಿ a,b,c. . . ಗಳ ಮೂಲಕ ಹಾದುಹೋಗುತ್ತದೆ. a, b, c,. . .ಗಳ ಮೂಲಕ ಹಾದುಹೋಗುವ ರೇಖೆಯನ್ನು C ರೇಖೆಯ ಅಂತರ್ವಲಿತವೆಂಬುದಾಗಿ ಕರೆಯುತ್ತಾರೆ. ಬೇರೆಬೇರೆ ಉದ್ದದ ದಾರಗಳನ್ನು ಉಪಯೋಗಿಸಿ C ಯ ಬೇರೆ ಬೇರೆ ಅಂತರ್ವಲಿತಗಳನ್ನು ರಚಿಸಬಹುದು. (ಚಿತ್ರ 1).

ವೃತ್ತದ ಅಂತರ್ವಲಿತವನ್ನು ರಚಿಸಲು ವೃತ್ತಪರಿಧಿಯನ್ನು ಅನೇಕ ಸಮಭಾಗಗಳನ್ನಾಗಿ ವಿಭಜಿಸಿ, ಈ ವಿಭಜನಬಿಂದುಗಳ ಮೂಲಕ ವೃತ್ತಕ್ಕೆ ಸ್ಪರ್ಶರೇಖೆಗಳನ್ನು ಎಳೆಯಬೇಕು. ಅನಂತರ ಆರಂಭಬಿಂದುವಿನಿಂದ ವೃತ್ತಸ್ಪರ್ಶಬಿಂದುವಿನವರೆಗಿನ ವೃತ್ತಪರಿಧಿಯ ಭಾಗಕ್ಕೆ ಸಮನಾದ ಉದ್ದವನ್ನು ಪ್ರತಿಯೊಂದು ವೃತ್ತಸ್ಪರ್ಶರೇಖೆಯ ಮೇಲೂ ಗುರುತಿಸಬೇಕು. ಈ ತೆರನಾದ ಎಲ್ಲ ಬಿಂದುಗಳ ಮೂಲಕ ಹಾಯ್ದು ಹೋಗುವ ನಯವಾದ ವಕ್ರರೇಖೆ ಅಂತರ್ವಲಿತ. ಚಿತ್ರ 2 ರಲ್ಲಿ ವೃತ್ತದ ಅಂತರ್ವಲಿತವನ್ನು ಬಿಡಿಸಲಾಗಿ



ಚಿತ್ರ 1

ಬಹುಭುಜಿಯ ಅಂತರ್ವಲಿತವನ್ನು ರಚಿಸಲು, ಅದರ ಬಾಹುಗಳನ್ನು ವೃದ್ಧಿಸಿ, ಬಹುಭುಜಿಯ ಮೂಲೆಗಳನ್ನು ಕೇಂದ್ರವಾಗಿಟ್ಟುಕೊಂಡು ಹೀಗೆ ವೃದ್ಧಿಸಿದ ಬಾಹುಗಳ ಮೇಲೆ ಕಂಸಗಳನ್ನು ಎಳೆಯಿರಿ. ಮೊದಲನೆಯ ತ್ರಿಜ್ಯ ಬಹುಭುಜಿಯ ಒಂದು ಬಾಹುವಿನ ಉದ್ದದಷ್ಟಿರಲಿ. ಅನುಕ್ರಮ ಕಂಸಗಳ ತ್ರಿಜ್ಯ, ತ್ರಿಜ್ಯಕೇಂದ್ರಕ್ಕೂ ಹಿಂದಿನ ಕೆಲಸ ಕೊನೆಗೊಳ್ಳುವ ಬಿಂದುವಿಗೂ ಇರುವಷ್ಟು ಅಂತರ ಇರಲಿ.



ಚಿತ್ರ–2

ಈ ರೀತಿ ಗುರುತಿಸಿದ ಎಲ್ಲ ಬಿಂದುಗಳ ಮೂಲಕ ಹಾಯ್ದು ಹೋಗುವ ನಯವಾದ ವಕ್ರರೇಖೆಯೇ ಬಹುಭುಜಿಯ ಅಂತರ್ವಲಿತ. ಚಿತ್ರ 3 ರಲ್ಲಿ ಚತುರ್ಭುಜದ ಅಂತರ್ವಲಿತವನ್ನು ತೋರಿಸಿದೆ.

ಅಂತರ್ವಲಿತ ಅನೇಕ ಕುತೂಹಲಕಾರಿ ಮತ್ತು ಉಪಯುಕ್ತ ಗುಣಗಳನ್ನು ಪಡೆದಿದೆ. ಅವುಗಳಲ್ಲಿ ಅತಿಮುಖ್ಯವಾದುವೆಂದರೆ, ಅಂತರ್ವಲಿತದ ಯಾವುದೇ ಬಿಂದುವಿನಲ್ಲಿನ ಲಂಬ ಮೂಲವೃತ್ತಕ್ಕೆ (ಬೇಸ್ ಸರ್ಕಲ್) ಸ್ಪರ್ಶರೇಖೆಯಾಗಿರುತ್ತದೆ. ಆದುದರಿಂದ ಎರಡು ಅಂತರ್ವಲಿತ ಆಕಾರದ ಹಲ್ಲುಗಳು ಸಂಸ್ಪರ್ಶಗೊಂಡಿರುವಾಗ, ಸಂಸ್ಪರ್ಶ ಬಿಂದುವಿನಲ್ಲಿನ ಸಾಮಾನ್ಯ ಲಂಬ (ಕಾಮನ್ ನಾರ್ಮಲ್) ಮೂಲವೃತ್ತಗಳೆರಡಕ್ಕೂ ಸಾಮಾನ್ಯ ಸ್ಪರ್ಶರೇಖೆಯಾಗಿರುತ್ತದೆ. ಈ ಸ್ಪರ್ಶರೇಖೆ ಮಧ್ಯರೇಖೆಯನ್ನು ನಿರ್ದಿಷ್ಟ ಬಿಂದುವಿನಲ್ಲಿ ಭೇದಿಸುತ್ತದೆ. ಇದರಿಂದಾಗಿ ಹಲ್ಲುಚಕ್ರಗಳ ಹಲ್ಲು ಹಲ್ಲು ಕೂಡಿಸಲು (ಗೇರ್‌ಮೆಷಿಂಗ್) ಆವಶ್ಯಕವಾದ ಮೂಲ ನಿಯಮಗಳು ಪಾಲಿಸಲ್ಪಡುತ್ತವೆ. ಆದ್ದರಿಂದ ಅಳವಡಿಕೆ ಕಡೆಯುವುದರಲ್ಲಿ (ಗೇರ್ ಕಟಿಂಗ್) ಅಂತರ್ವಲಿತ ಬಹುವಾಗಿ ತನ್ನ ಉಪಯೋಗವನ್ನು ಕಂಡುಕೊಂಡಿದೆ. ಆದರೆ ಒಳ ಅಳವಡಿಕೆಗಳಲ್ಲಿ (ಇಂಟರ್ನಲ್ ಗೇರ್) ಅಂತರ್ವಲಿತ ಆಕಾರದ ಹಲ್ಲುಗಳನ್ನು ಅಡ್ಡಬರುವಿಕೆ (ಇಂಟರ್‌ಫಿಯರೆನ್ಸ್) ಯಿಂದಾಗಿ ಉಪಯೋಗಿಸಲು ಸಾಧ್ಯವಾಗುವುದಿಲ್ಲ. (ಬಿ.ಎಲ್.ಎಸ್.)


ಚಿತ್ರ 3

**ಅಂತರ್ವ್ಯಾಪ್ತಿ :** ತತ್ತ್ವಶಾಸ್ತ್ರದಲ್ಲಿ ಅಂತರ್ವ್ಯಾಪ್ತಿಯ ಪ್ರಶ್ನೆ ಅತಿ ಪ್ರಧಾನವಾದುದು. ತತ್ತ್ವಜ್ಞರು ಜಗತ್ತಿನ ಸತ್ಯತೆ ಮಿಥ್ಯತೆಗಳನ್ನು ವಿಮರ್ಶಿಸುವಾಗ ಜಗತ್ತಿನಲ್ಲಿರುವ ಸತ್ಯವಾವುದು, ಅದರ ಸ್ವರೂಪವೇನು. ಸತ್ಯ ವಿಶ್ವೈಕ್ಯವಾದುದೇ ಅಥವಾ ವಿಶ್ವಾತೀತವಾದುದೇ. ಎಂದು ವಿಚಾರ ಮಾಡಬೇಕಾಗುತ್ತದೆ. ಪರಬ್ರಹ್ಮ ವಸ್ತು ಜಗತ್ತಿನಲ್ಲಿ ಅಂತರ್ವ್ಯಾಪ್ತವಾದುದು ಎಂದೂ ಚೇತನಾಚೇತನಗಳಲ್ಲಿ ಅದೇ ಅಂತರ್ಗತವಾಗಿದೆ ಎಂದೂ ವಿಶ್ವೈಕ್ಯವಾದುವು ಹೇಳುತ್ತದೆ. ಪ್ರಕೃತಿಯೇ ಪರಬ್ರಹ್ಮನೆಂದು ವಾದಿಸುವವರೂ ಹೀಗೆ ಹೇಳುತ್ತಾರೆ. (ಪ್ಯಾನ್‌ಥೀಇಸ್ಟ್ಸ್). ಆದರೆ ಅಂತರ್ವ್ಯಾಪ್ತಿಗೆ ಮತ್ತೊಂದು ಅರ್ಥವೂ ಉಂಟು. ಜಗತ್ತಿನ ಚೇತನಗಳಲ್ಲಿ ಜೀವರುಗಳಲ್ಲಿ ಅಂತರ್ವ್ಯಾಪ್ತನಾದ ಪರಬ್ರಹ್ಮನ ಸ್ವರೂಪವನ್ನು ಈಶ್ವರವಾದಿಗಳು ಮುಂದೆ ಹೇಳುವ ರೀತಿಯಲ್ಲಿ ಪ್ರತಿಪಾದಿಸುತ್ತಾರೆ. ಅವನು ಅಸಂಖ್ಯಾತ ಜೀವರುಗಳನ್ನು ಸೃಷ್ಟಿಸಿ ಅವರಲ್ಲಿ ಪ್ರವೇಶಿಸುತ್ತಾನೆ. ಜಗತ್ತಿನ ಸರ್ವ ವ್ಯಾಪಾರವನ್ನೂ ಸೃಷ್ಟಿಸ್ಥಿತಿ ಲಯಗಳನ್ನೂ ನಡೆಸುವ ಯಂತ್ರವಾಹಕನಾಗಿರುತ್ತಾನೆ. ಪರಬ್ರಹ್ಮ ವಸ್ತುವೊಂದೇ ಸತ್ಯ ಮತ್ತು ನಿತ್ಯ. ಮತ್ತೆಲ್ಲವೂ ಅಸತ್ಯ, ಅನಿತ್ಯ. ಅವನು ಪ್ರಪಂಚದಲ್ಲಿದ್ದು ಸಪ್ರಪಂಚನಾಗಿದ್ದರೂ ಅವನೇ ಅದಕ್ಕೆ ಉಪಾದಾನ ಮತ್ತು ನಿಮಿತ್ತಕಾರಣನಾಗಿರುವುದರಿಂದ ಅವನು ವಿಶ್ವಾತೀತನೂ ಆಗಿರುತ್ತಾನೆ. ಪ್ರಪಂಚಕ್ಕೆ ಅಧೀನನಲ್ಲ. ಅಂತರ್ವ್ಯಾಪ್ತನಾಗಿದ್ದರೂ ಪ್ರಪಂಚವನ್ನು ಮೀರಿ ಸರ್ವಸ್ವತಂತ್ರನಾಗಿರುತ್ತಾನೆ. ಪ್ರಕೃತಿಯಲ್ಲಿ ಮತ್ತು ಜೀವರುಗಳಲ್ಲಿ ಒಂದೇ ರೀತಿಯಾಗಿ ಅಂತರ್ವ್ಯಾಪ್ತನಲ್ಲ. ಪ್ರಕೃತಿ ಜೀವರುಗಳಿಗೆ ಸಾಧನಸಾಮಗ್ರಿ. ಅವರು ಪ್ರಕೃತಿಗಿಂತ ಹೆಚ್ಚು ಸ್ವತಂತ್ರರು. ಅವರಿಗೆ ಕರ್ಮ ಮಾಡುವ ಸ್ವಾತಂತ್ರ್ಯವಿದೆ. ಅಂತರ್ವ್ಯಾಪ್ತನಾದ ಪರಮಾತ್ಮ ಕರ್ಮದ ಫಲವನ್ನು ನಿಯಾಮಕ ಮಾಡುವವ; ಕರ್ಮದಿಂದ ನಿರ್ಲಿಪ್ತನಾದರೂ ಅಸಂಗ, ಸರ್ವಸಾಕ್ಷಿ ಮತ್ತು ಸರ್ವಜ್ಞ, ಅಂತರ್ವ್ಯಾಪ್ತನಾದ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಜೀವಾತ್ಮರುಗಳ ಸಾಧನೆಯ ಗುರಿ.

ನಿಷ್ಪ್ರಪಂಚವಾದಿಗಳ ಪ್ರಕಾರ ಜಗತ್ತು ಮಿಥ್ಯ ಮತ್ತು ಮಾಯೆಯಿಂದ ಆವೃತವಾದುದು. ಅದನ್ನು ವ್ಯಾವಹಾರಿಕ ಸತ್ಯವೆನ್ನಬಹುದು. ಜ್ಞಾನದಿಂದ ಮಾಯೆಯ ನಾಶವಾದಾಗ ಜೀವಾತ್ಮ ಪರಮಾತ್ಮರು ಬೇರೆಬೇರೆಯಲ್ಲವೆಂದು ಅರಿವು ಉಂಟಾಗುವುದೇ ಸಾಕ್ಷಾತ್ಕಾರ. (ಎಸ್.ಎಸ್.ಆರ್.)

**ಅಂತರ್ವಿಕಾಸ** : ಇದು ದಿಮ್ಮಿತಡೆಯ ಒಂದು ನಮೂನೆ. ದಿಮ್ಮಿಯು ಚಲಿಸುವ ಚಕ್ರದ ಒಳ ಮೈಮೇಲೆ ಒತ್ತುವಂತೆ ಇದರಲ್ಲಿ ಅಳವಡಿಸಿದೆ. ಈ ಜೋಡಣೆಯನ್ನು ಚಿತ್ರ 1 ಮತ್ತು 2 ರಲ್ಲಿ ತೋರಿಸಿದೆ. ರಬ್ಬರ್ ಟೈರ್ ಹೊದಿಕೆ ಇರುವ ಚಕ್ರಗಳಿಂದ ರಚಿಸಲ್ಪಟ್ಟ


ಚಿತ್ರ 1

ಚಿತ್ರ 2

ಅಂತರ್ವಿಕಾಸ

ಬಂಡಿಗಳಲ್ಲಿ ಚಕ್ರದ ಹೊರಗಡೆ ದಿಮ್ಮಿಗಳನ್ನು ಅಳವಡಿಸುವುದು ಸಾಧ್ಯವಿಲ್ಲ. ಇಂಥ ಸನ್ನಿವೇಶಗಳಲ್ಲಿ ಹೊರ ದಿಮ್ಮಿಗಳನ್ನು ಒತ್ತುವುದಕ್ಕೆ ಬೇರೆ ಚಕ್ರಗಳನ್ನು ಅಳವಡಿಸಬೇಕು. ಈ ತೊಂದರೆಯನ್ನು ಅಂತಸ್ಥವಾಗಿ ಅರಳುವ ದಿಮ್ಮಿಗಳ ಜೋಡಣೆಯಿಂದ ನಿವಾರಿಸಬಹುದು. ಚಕ್ರದ ಹೊರ ಮೈಮೇಲೆ ರಬ್ಬರ್ ಹೊದಿಕೆಗಳನ್ನು ಅಳವಡಿಸಿ ಅದೇ ಚಕ್ರದ ಒಳ ಮೈಯಲ್ಲಿ ಅರಳುವ ದಿಮ್ಮಿಗಳನ್ನು ಅಳವಡಿಸಬಹುದು. ಈ ದಿಮ್ಮಿಗಳನ್ನು ಪ್ರಯೋಗಿಸಲು ಮಾನವಶಕ್ತಿಯನ್ನಾಗಲಿ ಅಥವಾ ದ್ರವಶಕ್ತಿಯನ್ನಾಗಲಿ ಉಪಯೋಗಿಸಬಹುದು. ದಿಮ್ಮಿಗಳಿಗೆ ಫೆರಾಡೊ ಅಥವಾ ಮಿನ್‌ಟೆಕ್ಸ್ ಹೊದಿಕೆಗಳನ್ನು ಸಾಮಾನ್ಯವಾಗಿ ಸಜ್ಜುಗೊಳಿಸಿರುತ್ತಾರೆ. ಚಕ್ರದ ಒಳಗಡೆ ಅಳವಡಿಸಿರುವುದರಿಂದ

ದಿಮ್ಮಿ ಮತ್ತು ಚಕ್ರಗಳ ಮಧ್ಯೆ ದೂಳು, ನೀರು ಇವುಗಳ ಸಂಪರ್ಕವಿಲ್ಲದಂತೆ ಇಡಲು ಸಾಧ್ಯ. ದ್ರವಶಕ್ತಿಯಿಂದ ನಡೆಸಲ್ಪಟ್ಟ ಈ ನಮೂನೆಯ ತಡೆಗಳು ಸ್ವಯಂಚಾಲಿತ




ಚಿತ್ರ 3

1. ವಾಯುದ್ವಾರ 2. ಪೂರಕ ಬೆಣೆ 3. ತಡೆದ್ರವದ ಕೋಣೆ 4. ತಡೆಲೈನುಗಳಿಗೆ 5. ವಿಸರ್ಜನ ಕವಾಟ 6. ಲೈನಿನ ವಾಪಸಾತಿ ಕವಾಟ 7. ಕೊಂತದ ವಾಪಸಾತಿ ಸ್ಪ್ರಿಂಗ್ 8. ಕೊಂತದ ಕುಳಿ 9. ಕೊಂತ 10. ಕೊಂತದ ಬಿರಡೆ 11. ದೂಳನ್ನು ತಡೆವ ರಬ್ಬರ್ ಹೊದಿಕೆ 12. ಮೆಟ್ಟುಸನ್ನೆಯ ಕೊಂಡಿಗೆ

ಬಂಡಿಗಳಲ್ಲಿ (ಆಟೋಮೋಟಿವ್) ಬಹಳವಾಗಿ ಬಳಕೆಯಲ್ಲಿವೆ. ಚಿತ್ರ 3 ರಲ್ಲಿ ಈ ತರಹದ ಒಂದು ಜೋಡಣೆಯನ್ನು ಕಾಣಬಹುದು. (ಎಸ್.ಎಸ್.)

**ಅಂತರ್ವಿರೋಧ ತತ್ತ್ವ :** ಪಾಶ್ಚಾತ್ಯ ತರ್ಕಶಾಸ್ತ್ರದಲ್ಲಿನ ಆಲೋಚನೆಯ ನಿಯಮಗಳಲ್ಲಿ ಒಂದು (ಲಾಸ್ ಆಫ್ ಥಾಟ್). ಒಂದೇ ವಸ್ತು ಏಕಕಾಲದಲ್ಲಿ ವಿರುದ್ಧ ಧರ್ಮಗಳನ್ನು ಹೊಂದಿರದು. 'A'ಯು ಒಂದೇ ಕಾಲದಲ್ಲಿ ಒಂದೇ ಸ್ಥಳದಲ್ಲಿ ಕಪ್ಪು ಮತ್ತು ಬಿಳುಪಾಗಿರಲಾರದು. ಇದು ಆಲೋಚನೆಯ ಸ್ವತಸ್ಸಿದ್ಧವಾದ ನಿಯಮ. ಈ ನಿಯಮವನ್ನು ಉಲ್ಲಘಿಂಸಿದರೆ ಆಲೋಚನೆಯೇ ಅಸಾಧ್ಯವಾಗುತ್ತದೆ. (ಜಿ.ಎಚ್.)

**ಅಂತರ್ವೇಶನ :** ಗಣಿತವಿಜ್ಞಾನ ಅಥವಾ ಸಂಖ್ಯಾಶಾಸ್ತ್ರದ ಹಲವು ಸಂಖ್ಯಾತ್ಮಕ ಕೋಷ್ಟಕಗಳಲ್ಲಿ ಚಲರಾಶಿಯ ಕೆಲವು ನಿರ್ದಿಷ್ಟ ಬೆಲೆಗಳಿಗೆ ಉತ್ಪನ್ನಗಳ (ಫಂಕ್ಷನ್) ಬೆಲೆಗಳನ್ನು ತಿಳಿಯಲಾಗುತ್ತದೆ. ಚಲರಾಶಿಯ ಈ ನಿರ್ದಿಷ್ಟ ಬೆಲೆಗಳು ಅಥವಾ ಸ್ಥಾನಗಳು ಸಾಮಾನ್ಯವಾಗಿ ಸಮಾಂತರದಲ್ಲಿರುವುವು. ಅನೇಕ ಸಂದರ್ಭಗಳಲ್ಲಿ ಇವುಗಳ ನಡುವಣ ಸ್ಥಾನಗಳಿಗೆ ತಕ್ಕ ಉತ್ಪನ್ನ ಬೆಲೆಗಳನ್ನು ಕಂಡುಹಿಡಿಯಬೇಕಾಗುತ್ತದೆ. ಇಂಥ ಬೆಲೆಗಳನ್ನು ಕಂಡುಹಿಡಿಯುವ ಕ್ರಮಕ್ಕೆ ಅಂತರ್ವೇಶನ (ಇಂಟರ್‌ಪೋಲೇಷನ್) ಎಂದು ಹೆಸರು. ಪರಿಮಿತ ವಿಕಲನ ಸೂತ್ರಗಳ ಸಹಾಯದಿಂದ ಅಂತರ್ವೇಶನವನ್ನು ಮಾಡಬಹುದು. ಉಕ್ತ ಉತ್ಪನ್ನವನ್ನು ಬಹುಪದಿಯ ರೂಪದಲ್ಲಿ ಸಾಕಷ್ಟು ನಿಖರತೆಯಿಂದ ನಿರೂಪಿಸಲು ಸಾಧ್ಯವೆಂದು ಭಾವಿಸಿ ಅಂತರ್ವೇಶನದ ಬೆಲೆಗಳನ್ನು ಕಂಡುಹಿಡಿಯುತ್ತೇವೆ.

ಬಹುಪದಿಯ ಘಾತಮಾನವು n ಆದರೆ ಬಹುಪದಿಯ ನಿರೂಪಣೆಯಲ್ಲಿ (n+1) ಅಜ್ಞಾತ ಸ್ಥಿರಾಂಕಗಳು (ಅನ್ನೋನ್ ಕಾನ್ಸ್‌ಟೆಂಟ್ಸ್) ಇರುತ್ತವೆ. ಇವುಗಳನ್ನು ಕಂಡುಹಿಡಿಯಲು (n+1) ಸಮೀಕರಣಗಳು ಆವಶ್ಯಕ. ಪರ್ಯಾಯವಾಗಿ, ಉತ್ಪನ್ನದ (n+1) ಬೆಲೆಗಳು ಗೊತ್ತಾಗಬೇಕು. ಆದಕಾರಣ ಉತ್ಪನ್ನದ (n+1) ಬೆಲೆಗಳು ದತ್ತವಾದಾಗ ಉತ್ಪನ್ನವು n ಘಾತಮಾನದ ಬಹುಪದಿಯೆಂದು ಭಾವಿಸಬಹುದು. ಇದರಿಂದಾಗಿ (n+1) ಮತ್ತು ಹೆಚ್ಚಿನ ವರ್ಗದ ವಿಕಲಿತಗಳು (ಡಿಫ಼ರೆನ್ಸ್) ಶೂನ್ಯವಾಗುವುವು.

ಉತ್ಪನ್ನದ (n+1) ಬೆಲೆಗಳ ಸಹಾಯದಿಂದ ಉಪಸಮವಾದ ಬಹುಪದಿಯಲ್ಲಿರುವ (n+1) ಅಜ್ಞಾತ ಸ್ಥಿರಾಂಕಗಳನ್ನು ಹಿಡಿಯುವುದು ಮಾತ್ರ ಅವಶ್ಯ. ಅನಂತರ ಚಲಕದ ಯಾವ ಬೆಲೆಗೆ ಬೇಕಾದರೂ ಉತ್ಪನ್ನದ ಬೆಲೆಯನ್ನು ಸುಲಭವಾಗಿ ಕಂಡುಹಿಡಿಯಬಹುದು. ಕೆಲವು ಸಂದರ್ಭಗಳಲ್ಲಿ ಇದು ಅಷ್ಟು ಸುಲಭಸಾಧ್ಯವಾಗಿರು ವುದಿಲ್ಲ. ಆದರೆ ಇದರ ಅಗತ್ಯವೂ ಇರುವುದಿಲ್ಲ. ಏಕೆಂದರೆ (n+1) ಅಜ್ಞಾತ ಸ್ಥಿರಾಂಕಗಳನ್ನು ಕಂಡುಹಿಡಿಯದೆಯೇ ಕೆಲವು ಸೂತ್ರಗಳ ಸಹಾಯದಿಂದ ಅಂತರ್ವೇಶನವನ್ನು ಮಾಡಬಹುದು.

**ಅಂತರ್ವೇಶನ ಸೂತ್ರಗಳು :** ಮೇಲೆ ಹೇಳಿದಂತೆ ಅಂತರ್ವೇಶನಕ್ಕೆ ಸಹಾಯವಾದ ಸೂತ್ರಗಳಲ್ಲಿ ಮುಖ್ಯವಾದುವೆಂದರೆ ನ್ಯೂಟನ್ ಸೂತ್ರ. ಚಲರಾಶಿಯ a, a+h, a+2h, ಇತ್ಯಾದಿಗಳಲ್ಲಿ h ಅಂತರವುಳ್ಳ ಬೆಲೆಗಳಿಗೆ f(x) ಉತ್ಪನ್ನದ ಮೌಲ್ಯಗಳು ಗೊತ್ತಾಗಿವೆ. ಪರಿಮಿತ ವಿಕಲನದ ಕಾರಕಚಿಹ್ನೆಯನ್ನು △ ಎಂದು ಸೂಚಿಸಿದರೆ

$\triangle f(a) = f(a+h) - f(a)$; $\triangle^2 f(a) = \triangle f(a+h) - f(h)$ ಎಂದು ಮುಂತಾಗಿ ಬರೆಯುತ್ತೇವೆ. ಪ್ರವರ್ಧಕ ಚಿಹ್ನೆಯನ್ನು E ಎಂದು ಸೂಚಿಸಿ $Ef(x) = f(x+h)$ ಎಂದು ವ್ಯಾಖ್ಯೆ ಮಾಡುತ್ತೇವೆ.

ಪರಿಮಿತ ವಿಕಲನ ಶಾಸ್ತ್ರಕ್ಕನುಸಾರವಾಗಿ △ ಪ್ರಕ್ರಿಯೆಯನ್ನು ಬೀಜಗಣಿತ ನಿಯಮಗಳಿಗೆ ಒಳಪಡಿಸಬಹುದು. ಆಗ $E = 1 + \triangle$ ಎಂದು ಬರೆಯಬಹುದು.

ಇದರಿಂದಾಗಿ $$f(a+uh) = E^u f(a) = (1+\Delta)^u f(a) \qquad (1)$$

ಎಂದು ಬರೆದು ಬಲಪಾರ್ಶ್ವದ ಪದೋಕ್ತಿಯನ್ನು ದ್ವಿಪದ ಪ್ರಮೇಯದಿಂದ ವಿಸ್ತರಿಸಿದರೆ

$$f(a+uh) = f(a) + u\Delta f(a) + \frac{u(u-1)}{2!}\Delta^2 f(a) + \cdots$$
$$+ \frac{u(u-1)\cdots(u-n+1)}{n!}\Delta^n f(a) \qquad (2)$$

ಆಗುತ್ತದೆ. ಇದಕ್ಕೆ 'ನ್ಯೂಟನ್ ವಿಕಲಿತ ಸೂತ್ರ' ಎಂದು ಹೆಸರು. ಇಲ್ಲಿ f(a) ಉತ್ಪನ್ನದ (u+1) ಮತ್ತು ಹೆಚ್ಚಿನ ವರ್ಗದ ಎಲ್ಲ ವಿಕಲಿತಗಳೂ ಶೂನ್ಯವಾಗುವುವು. ಇದಲ್ಲದೆ f(x) ಬಹುಪದಿಯ ಘಾತಮಾನವು n ಆದುದರಿಂದ f(a + uh) ಉತ್ಪನ್ನವನ್ನು ಹೀಗೆ ರೂಪಿಸಬಹುದು.

$$f(a+uh) = C_0 + C_1 u + C_2 u^{(2)} + \cdots + C_n u^{(n)} \qquad (3)$$

ಇಲ್ಲಿ $u^{(r)} = u(u-1)\cdots(u-r+1)$ ಎಂದರೆ, u ಎನ್ನುವುದರ ಕ್ರಮಗುಣಿತ. ಈಗ ಇಲ್ಲಿ (3) ರಲ್ಲಿ u = 0 ಎಂದು ಆದೇಶಿಸಲು $f(a) = C_0$ ಆಗುತ್ತದೆ. ಅಂತರ ಕಲನವನ್ನು ತೆಗೆದು ಅನಂತರ u = 0 ಎಂದು ಆದೇಶಿಸಿದರೆ $\triangle f(a) = C_1$ ದೊರೆಯುವುದು. ಅಂತರಕಲನವನ್ನು ಪುನರಾವರ್ತಿಸುತ್ತ ಪ್ರತಿ ಘಟ್ಟದಲ್ಲಿಯೂ u = 0 ಎಂದು ಆದೇಶಿಸಿದರೆ,

$$\Delta^2 f(a) = 2!\, C_2,\ \Delta^3 f(a) = 3!\, C_3, \cdots \Delta^n f(a) = n!\, C_n$$

ಹೀಗೆ ಲಭಿಸಿದ $C_0, C_1, \ldots\ldots C_n$ ಗಳ ಬೆಲೆಗಳನ್ನು (3) ರಲ್ಲಿ ಆದೇಶಿಸಿದರೆ ನ್ಯೂಟನ್ ಸೂತ್ರ ಸಿದ್ಧಿಸುವುದು. ಈಗ $a = 0, h = 1, u = x$ ಎಂದು (2) ರಲ್ಲಿ ಆದೇಶಿಸಿದರೆ ಅದು ಈ ಕೆಳಕಂಡ ಸರಳ ರೂಪವನ್ನು ತಾಳುವುದು:

$$f(x) = f(0) + x\Delta f(0) + \frac{x(x-1)}{1\cdot 2}\Delta^2 f(0)$$
$$+ \frac{x(x-1)(x-2)}{1\cdot 2\cdot 3}\Delta^3 f(0) + \cdots\cdots \qquad (4)$$

ಸೌಲಭ್ಯಕ್ಕಾಗಿ ಇನ್ನು ಮುಂದೆ h = 1 ಎಂದು ತೆಗೆದುಕೊಳ್ಳೋಣ. ಈ ಸೂತ್ರದಲ್ಲಿ f(x) ನ ಬೆಲೆಯನ್ನು ಅವರೋಹಿ ವಿಕಲಿತಗಳ (ಡಿಸೆಂಡಿಂಗ್ ಡಿಫ಼ರೆನ್ಸಸ್) ಮೂಲಕ ನಿರೂಪಿಸಲಾಗುವುದರಿಂದ ಇದನ್ನು ನ್ಯೂಟನ್ ಅವರೋಹಿ ಸೂತ್ರ ಎನ್ನುತ್ತೇವೆ. ಅವರೋಹಿ ವಿಕಲಿತಗಳಿಗೆ ಬದಲಾಗಿ ಆರೋಹಿ (ಅಸೆಂಡಿಂಗ್) ವಿಕಲಿತಗಳನ್ನು ಬಳಸಿದರೆ ಸಿದ್ಧಿಸುವ ಅಂತರ್ವೇಶನ ಸೂತ್ರವನ್ನು ನ್ಯೂಟನ್ ಆರೋಹಿ ಸೂತ್ರವೆನ್ನುತ್ತೇವೆ. ಅದಾಗಿ

$$f(x) = f(0) + x\nabla f(0) + \frac{x(x+1)}{1\cdot 2}\nabla^2 f(0)$$
$$+ \frac{x(x+1)(x+2)}{1\cdot 2\cdot 3}\nabla^3 f(0) + \cdots\cdots \qquad (5)$$

ಕೇಂದ್ರ ವಿಕಲಿತ ಅಂತರ್ವೇಶನ ಸೂತ್ರ : ನ್ಯೂಟನ್ ಅವರೋಹಿ ಅಂತರ್ವೇಶನ ಸೂತ್ರದಲ್ಲಿನ ಅಗ್ರವಿಕಲಿತಗಳು ಪರಂಪರೆಯ ಸೋಪಾನಕ್ರಮದಲ್ಲಿ ಇಳಿಯುತ್ತ ಹೋಗುವುದು f(a) ಯ ಒಂದೇ ಪಾರ್ಶ್ವದಲ್ಲಿನ ಉತ್ಪನ್ನ ಬೆಲೆಗಳನ್ನು ಅವಲಂಬಿಸಿರುತ್ತದೆ. ಇದಕ್ಕೆ ಪ್ರತಿಯಾಗಿ f(a)ಯ ಉಭಯ ಪಾರ್ಶ್ವದಲ್ಲೂ ಇರುವ ಬೆಲೆಗಳನ್ನು ಒಳಗೊಂಡ ಸೂತ್ರವನ್ನು ರಚಿಸಬಹುದು. ಗ್ಹಾಸ್ ಎಂಬುವನು ಈ ಬಗೆಯ ಎರಡು ಅಂತರ್ವೇಶನ ಸೂತ್ರಗಳನ್ನು ಅಳವಡಿಸಿದ್ದಾನೆ.

$\dfrac{x(x-1)(x-2)\cdots\cdots(x-r+1)}{r!}$ ಅನ್ನು $x_r$ ಎಂದು ಆದೇಶಿಸಿ ಈ ಸೂತ್ರಗಳನ್ನು ಕೆಳಕಂಡಂತೆ ನಿರೂಪಿಸಬಹುದು.

$$f(x) = f(0) + x_1\Delta f(0) + x_2\Delta^2 f(-1) + (x+1)_3\Delta^3 f(-1) +$$
$$(x+1)_4 f(-2) + (x+2)_5 \Delta f(-2) + \cdots\cdots\cdots \qquad (6)$$

$$f(x) = f(0) + x_1\Delta f(-1) + (x+1)_2\Delta^2 f(-1)$$
$$+ (x+1)_3\Delta^3 f(-2) + (x+2)_4\Delta^4 f(-2) + \cdots\cdots \qquad (7)$$

ಮೊದಲನೆಯ ಸೂತ್ರಕ್ಕೆ ನ್ಯೂಟನ್–ಗ್ಹಾಸ್ ಅಗ್ರಗಾಮಿ ಸೂತ್ರ (ಫ಼ಾರ್‌ವರ್ಡ್ ಫ಼ಾರ್ಮುಲ) ಎಂದೂ ಎರಡನೆಯದಕ್ಕೆ ನ್ಯೂಟನ್–ಗ್ಹಾಸ್ ಅಪಗಾಮಿ ಸೂತ್ರ (ಬ್ಯಾಕ್‌ವರ್ಡ್ ಫ಼ಾರ್ಮುಲ) ಎಂದೂ ಹೆಸರು.

ವಿಕಲಿತಗಳ ಕೋಷ್ಟಕಗಳನ್ನು ರಚಿಸಿ ಅವಲೋಕಿಸಿದರೆ, ಈ ಎರಡು ಸೂತ್ರಗಳಲ್ಲಿಯೂ $f(0)$ ಗೆ ಸಮಮಟ್ಟಕ್ಕೆ ಹೊಂದಿಕೆಯಾಗಿರುವ ವಿಕಲಿತಗಳನ್ನು ಬಳಸಿರುವುದನ್ನು ನಾವು ಕಾಣಬಹುದು. ಅಗ್ರಗಾಮಿ ಸೂತ್ರದ ವಿಕಲಿತಗಳೆಲ್ಲ ಸಮಮಟ್ಟದ ರೇಖೆಯ ಮೇಲೆ ಅಥವಾ ಅದಕ್ಕೆ ಹೊಂದಿಕೆಯಾಗಿ ಮೇಲು ಭಾಗದಲ್ಲಿರುವುದು. ಇವುಗಳನ್ನು ಸೇರಿಸುವ ರೇಖೆ ವಂಕಿಯಾಕಾರದಲ್ಲಿರುವುದು. ಈ ಪ್ರಕಾರ, ಅಪಗಾಮಿ ಸೂತ್ರದ ವಿಕಲಿತಗಳೆಲ್ಲ ಸಮಮಟ್ಟದ ರೇಖೆಯ ಮೇಲೆ ಅಥವಾ ಅದಕ್ಕೆ ಹೊಂದಿಕೆಯಾಗಿ ಕೆಳಭಾಗದಲ್ಲಿರುವುದು ಮತ್ತು ಅವುಗಳನ್ನು ಸೇರಿಸುವ ರೇಖೆಯೂ ವಂಕಿಯಾಕಾರದಲ್ಲಿರುವುದು. ಈ ಕಾರಣದಿಂದಾಗಿ ಈ ಎರಡು ಸೂತ್ರಗಳಿಗೂ ವಂಕಿಯಾಕಾರದ (ಜ಼ಿಗ್ ಜ್ಯಾಗ್) ಸೂತ್ರಗಳೆಂದು ಹೆಸರು. $f\left(x+\frac{1}{2}h\right)-f\left(x-\frac{1}{2}h\right)$ ಎಂಬುದನ್ನು $f(x)$ ನ ಕೇಂದ್ರವಿಕಲಿತ ಎನ್ನುತ್ತೇವೆ. ಇದನ್ನು

$\delta f(x)$ ಎಂದು ಸೂಚಿಸುತ್ತೇವೆ. ಪ್ರಕ್ರಿಯೆಗಳ ಪೃಥಕ್ಕರಣ ಮಾಡಿ ವಿಭಿನ್ನವಿಕಲಿತಗಳ ಪರಸ್ಪರ ಸಂಬಂಧವನ್ನು ಸಾಧಿಸಬಹುದು.

ಮತ್ತು $\Delta = E\nabla = E^{\frac{1}{2}}\delta$

ಈ ಸಾಮ್ಯಗಳನ್ನುಪಯೋಗಿಸಿ ವಂಕಿಸೂತ್ರಗಳನ್ನು ಹೀಗೆ ನಿರೂಪಿಸಬಹುದು :

$$f(x) = f(0) + x_1\delta f(\tfrac{1}{2}) + x_2\delta^2 f(0) + (x+1)_3\delta^3 f(\tfrac{1}{2}) \quad \ldots\ldots\ldots (8)$$

$$f(x) = f(0) + x_1\delta f(-½) + (x+1)_2\delta^2 f(0) + (x+1)_3\delta^3 f(-½) \ldots\ldots (9)$$

ಈ ಎರಡೂ ಪದಾವಳಿಗಳ ಸರಾಸರಿಯನ್ನು ತೆಗೆಯಲು ಸ್ಟರ್ಲಿಂಗ್ ಸೂತ್ರ ಸಿದ್ಧಿಸುತ್ತದೆ, ಅಂದರೆ

$$f(x) = f(0) + x_1\frac{\delta f\left(\frac{1}{2}\right)+\delta f\left(-\frac{1}{2}\right)}{2} + \frac{x^2}{2!}\delta^2 f(0)$$

$$+\frac{x\left(x^2-1\right)}{3!}\,\frac{\delta^3 f\left(\frac{1}{2}\right)+\delta^3 f\left(-\frac{1}{2}\right)}{2} + \frac{x^2\left(x^2-1\right)}{4!}\delta^4 f(0) + \cdots\cdots \quad (10)$$

ಈಗ ಸರಾಸರಿಯನ್ನು ಕಂಡುಹಿಡಿಯುವ $\mu$ ಎಂಬ ಪ್ರಕ್ರಿಯೆಯನ್ನು ಕಲ್ಪಿಸಿಕೊಳ್ಳೋಣ, ಅಂದರೆ,

$$\mu\ f(x) = \tfrac{1}{2}\left[f\left(\tfrac{1}{2}\right) + f\left(-\tfrac{1}{2}\right)\right]$$

ಎಂದಿಟ್ಟುಕೊಳ್ಳೋಣ. ಹೀಗೆ ವ್ಯಾಖ್ಯೆ ಮಾಡಲ್ಪಟ್ಟ $\mu$ ಪ್ರಕ್ರಿಯೆಯನ್ನುಪಯೋಗಿಸಿ (9) ನ್ನು ಸರಳವಾಗಿ ಹೀಗೆ ಬರೆಯಬಹುದು:

$$f(x) = f(0) + x\mu\,\delta\, f(0) + \frac{x^2}{2!}\delta^2\ f(0) + \frac{x(x^2-1)}{3!}\delta^2 f(0) + \ldots\ldots\ldots\ldots \quad (11)$$

ನ್ಯೂಟನ್–ಗ್ಹಾಸ್ ಅಪಗಾಮಿ ಸೂತ್ರದಲ್ಲಿ ಉಗಮಸ್ಥಾನವನ್ನು 1ರಲ್ಲೂ ಅಂತರವನ್ನು (x–1) ಎಂದೂ ತೆಗೆದುಕೊಂಡರೆ,

$$f(x) = f(1) + (x-1)\,\Delta\ f(o) + x_2\Delta^2 f(o) + x_3\,\Delta^3 f(-1) + (x+1)$$
$$4\Delta^4 f(-1) + \ldots\ldots\ldots\ldots \quad (12)$$

ಇದರ ಮತ್ತು (6)ರ ಸರಾಸರಿಯನ್ನು ತೆಗೆಯಲು

$$f(x) = \frac{1}{2}\left[f(0) + f(1)\right] + (x-\frac{1}{2})\Delta f(0) + \frac{x(x-1)}{2!}\times$$

$$\frac{\Delta^2 f(0) + \Delta^2 f(1)}{2} + \frac{x(x-1)(x-\frac{1}{2})}{3!}\Delta^3 f(-1) + \ldots\ldots\ldots\ \ldots\ldots \quad (13)$$

ಎಂಬ ಸೂತ್ರ ಸಿದ್ಧಿಸುವುದು. ಇದಕ್ಕೆ 'ಬೆಸ್ಸಲ್ ಸೂತ್ರ' ಎಂದು ಹೆಸರು. ಕೇಂದ್ರ ವಿಕಲನಕಾರಕಗಳ ಮೂಲಕ ನಿರೂಪಿಸಿದರೆ,

$$f(x) = \mu\ f\left(\frac{1}{2}\right) + (x-\frac{1}{2}) + \delta\ f\left(\frac{1}{2}\right) + x_2\mu\delta^2 f\left(\frac{1}{2}\right) +$$

$$\frac{x(x-1)(x-\frac{1}{2})}{3!}\delta^3 f\left(\frac{1}{2}\right) + \ldots\ldots\ldots\ \ldots\ldots \quad (14)$$

ಎಂಬ ರೂಪವನ್ನು ತಾಳುವುದು.

ಗ್ಹಾಸ್ ಅಗ್ರಗಾಮಿ ಸೂತ್ರದಲ್ಲಿನ ಬೆಸವರ್ಗದ ವಿಕಲಿತಗಳನ್ನು ಅವುಗಳ ಕೆಳಗಿನ ವಿಕಲಿತಗಳಲ್ಲಿ ನಿರೂಪಿಸಿ, $1-x=y$ ಎಂದು ಬರೆದರೆ,

$$f(x) = x\,f(1) + \frac{x(x^2-1)}{3!}\Delta^2 f(0) + \frac{x(x^2-1)(x^2-4)}{5!}$$

$$\Delta^3 f(-1) + yf(0) + \frac{y(y^2-1)}{3!}\Delta^2 f(-1) + \ldots\ldots \quad (15)$$

ಇದಕ್ಕೆ ಎವರೆಟ್ ಸೂತ್ರವೆಂದು ಹೆಸರು. ಇದು ಕೋಷ್ಟಕದ ರಚನೆಗೆ ಬಹಳ ಉಪಯುಕ್ತವಾಗಿದೆ.

x, y ಗಳನ್ನು ಪರಿವರ್ತನೆ ಮಾಡಿ ಬರೆದರೆ,

$$f(y) = yf(0) + \frac{y\left(y^2-1\right)}{3!}\Delta^2 f(0) + \frac{y\left(y^2-1\right)\left(y^2-4\right)}{5!}$$

$$\Delta^3 f(-1) + \cdots + xf(0) + \frac{x\left(x^2-1\right)}{3!}\Delta^2 f(-1) + \cdots\cdots$$

ಇದರಲ್ಲಿನ ಭರಣರಾಶಿ (ಆರ್ಗ್ಯುಮೆಂಟ್)ಯನ್ನು ಒಂದರಷ್ಟು ಹೆಚ್ಚಿಸಿದರೆ,

$$f(y+1) = yf(2) + \frac{y\left(y^2-1\right)}{3!}\Delta^2 f(1) + \frac{y\left(y^2-1\right)\left(y^2-4\right)}{5!}$$

$$\Delta^3 f(0) + \cdots + xf(1) + \frac{x\left(x^2-1\right)}{3!}\Delta^2 f(0) + \cdots\cdots \quad (16)$$

ಭರಣರಾಶಿಯ ಅನುಕ್ರಮವಾದ ಹಲವು ಬೆಲೆಗಳ ನಡುವಣ ಬೆಲೆಗಳಿಗೆ ಸಂವಾದಿಯಾದ ಉತ್ಪನ್ನದ ಬೆಲೆಗಳನ್ನು ಕ್ರಮಬದ್ಧವಾಗಿ ಕಂಡುಹಿಡಿಯಬೇಕಾದರೆ, ಈ ಸೂತ್ರ ಬಹಳ ಉಪಯೋಗವಾಗುತ್ತದೆ. (15) ರಲ್ಲಿ f(x)ನ ಬೆಲೆ ಒಂದನೇ ಪಂಕ್ತಿಯ (16) ರಲ್ಲಿನ ಎರಡನೆಯ ಪಂಕ್ತಿಯ ಪದಾವಳಿಗೆ ಸರ್ವಸಮವಾಗಿದೆಯೆಂಬುದನ್ನು ಗಮನಿಸಬೇಕು. ಆದ್ದರಿಂದ ಇದನ್ನು ಮತ್ತೊಮ್ಮೆ ಗುಣಕ ಹಾಕಬೇಕಾಗಿಲ್ಲ. ಇದರಿಂದಾಗಿ ವೇಳೆ ಮತ್ತು ಶ್ರಮ ಉಳಿತಾಯವಾಗುವುದು.

**ಅಸಮಾನಾಂತರ ಅಂತರ್ವೇಶನ :** ಇದುವರೆಗೆ ಸಮಾನಾಂತರ ಅಂತರ್ವೇಶನ ಕ್ರಮವನ್ನು ತಿಳಿದದ್ದಾಯಿತು. ಉತ್ಪನ್ನದ ಬೆಲೆ ಸಮಾನಾಂತರ ಸ್ಥಾನಗಳಲ್ಲಿ ಗೊತ್ತಿದ್ದರೆ ಮೇಲೆ ಹೇಳಿದ ಸೂತ್ರಗಳ ಸಹಾಯದಿಂದ ನಡುವಣ ಬೆಲೆಗಳನ್ನು ಕಂಡುಹಿಡಿಯಬಹುದು. ಕೆಲವು ಸಂದರ್ಭಗಳಲ್ಲಿ ಉತ್ಪನ್ನದ ಬೆಲೆಗಳ ಅಸಮಾನಾಂತರ ಸ್ಥಾನಗಳಲ್ಲಿ ಗೊತ್ತಿರಬಹುದು. ಅಂಥ ಸಂದರ್ಭಗಳಲ್ಲಿ ಮಧ್ಯದ ಬೆಲೆಗಳನ್ನು ಮೇಲೆ ಸಾಧಿಸಿರುವ ಸೂತ್ರಗಳಿಂದ ಕಂಡುಹಿಡಿಯುವುದು ಸಾಧ್ಯವಿಲ್ಲ. ವಿಭಾಜಿತ ವಿಕಲಿತ (ಡಿವೈಡೆಡ್ ಡಿಫರೆನ್ಸಸ್) ಗಳನ್ನು [illegible] ಉತ್ಪನ್ನವು f(x) ಆದರೆ $\frac{f(x_1)-f(x_0)}{x_1-x_0}$ ಅನ್ನು f(x) ನ ಪ್ರಥಮ ವಿಭಾಜಿತ ವಿಕಲಿತ ಎನ್ನುತ್ತೇವೆ. ಇದನ್ನು $f[x_0, x_1]$ ಎಂದು ಬರೆಯುತ್ತೇವೆ. ಪುನರಾವೃತ್ತಿಸುತ್ತಾ $\frac{f[x_1,x_2]-f[x_0,x_1]}{x_2-x_0} = f[x_0,x_1,x_2]$ ಎಂಬುದನ್ನು ದ್ವಿತೀಯ ವಿಭಾಜಿತ ವಿಕಲಿತ ಎನ್ನುತೇವೆ. ಇದೇ ರೀತಿಯಲ್ಲಿ ತೃತೀಯ ವಿಭಾಜಿತ ವಿಕಲಿತ ಮತ್ತು ಹೆಚ್ಚಿನ ವರ್ಗದ ವಿಭಾಜಿತ ವಿಕಲಿತಗಳನ್ನು ವ್ಯಾಖ್ಯೆ ಮಾಡುತ್ತೇವೆ. ವಿಭಾಜಿತ ವಿಕಲಿತಗಳ ಮುಖ್ಯ ಸೂತ್ರವೆಂದರೆ ನ್ಯೂಟನ್ ವಿಭಾಜಿತ ವಿಕಲಿತ ಅಂತರ್ವೇಶನ ಸೂತ್ರ.

$(x-x_0)$ $(x-x_1)$ ..... $(x-x_n)$ $[x, x_0, x_1, \ldots..x_n]$ ಎಂಬುದನ್ನು $R_{n+1}(x)$ ಎಂದು ಸೂಚಿಸಿದರೆ ನ್ಯೂಟನ್ ವಿಭಾಜಿತ ವಿಕಲಿತ ಅಂತರ್ವೇಶನ ಸೂತ್ರವನ್ನು

$$f(x) = f(x_0) + (x-x_0)\ f\ [x_0,-x_1] + (x-x_0)(x-x_1).$$
$$f[x_0,x_1,x_2] + \cdots\cdots\cdots + (x-x_0)\quad (x-x_1)\cdots(x-x_{n-1})$$
$$f[x_{0,\ldots\ldots}x_n] + R_{n+1}(x) \quad (17)$$

ಎಂಬುದಾಗಿ ಬರೆಯಬಹುದು. ಅಸಮಾನಾಂತರ ಸ್ಥಾನಗಳಾದ $x_0, x_1, \ldots\ldots.. x_n$ ಗಳಲ್ಲಿ f(x) ನ ಬೆಲೆಯು ಗೊತ್ತಿದ್ದಾಗ ಈ ಸೂತ್ರದ ಸಹಾಯದಿಂದ ಅಂತರ್ವೇಶನ ಮಾಡಬಹುದು. f(x) ಉತ್ಪನ್ನ n ಘಾತದ ಬಹುಪದಿಯಾದರೆ ಅದರ (n+1) ವರ್ಗದ ವಿಭಾಜಿತ ವಿಕಲಿತವು – ಎಂದರೆ $[x, x_0, x_1, \ldots\ldots x_n]$ ಶೂನ್ಯವಾಗುವುದು. (17) ರ ಆಧಾರದ ಮೇಲೆ ಲೆಕ್ಕ ಮಾಡಿದ ಅಂತರ್ವೇಶಿತ ಬೆಲೆ ನಿಖರವಾಗಿರುತ್ತದೆ. ಈ ನಿಬಂಧನೆಗೆ f(x) ಉತ್ಪನ್ನ ಒಳಗಾಗದಿದ್ದರೂ $R_{n+1}(x)$ ನಗಣ್ಯವಾದರೆ (17) ರಿಂದ ಅಂತರ್ವೇಶನ ಮಾಡಿ ಸ್ಥೂಲಬೆಲೆಯನ್ನು ಕಂಡುಹಿಡಿಯಬಹುದು.

ಲೆಗ್ರಾಂಜ್ ಸೂತ್ರದಿಂದಲೂ ಅಸಮಾನಾಂತರ ಅಂತರ್ವೇಶನವನ್ನು ಮಾಡಬಹುದು. f(x) ಬಹುಪದಿಯ ಘಾತ n ಆದಾಗ

ಅನ್ನು ಆಂಶಿಕ ಭಿನ್ನರಾಶಿ (ಪಾರ್ಷಿಯಲ್ ಫ್ರಾಕ್ಷನ್) ಗಳಾಗಿ $\sum_{k=0}^{n}\frac{A_k}{x-x_k}$ ನಿರೂಪಿಸಬಹುದು. ಅದರಂತೆ

(18)

$$\frac{f(x)}{(x-x_0)\cdots(x-x_n)} = \frac{f(x_0)}{(x_0-x_1)\cdots(x-x_0)}\cdot\frac{1}{x-x_0} + \cdots + \frac{f(x_n)}{(x_n-x_0)\cdots(x_n-x_{n-1})}\cdot\frac{1}{x-x_n} \qquad (18)$$

ಇದರ ಉಭಯ ಪಾರ್ಶ್ವವನ್ನೂ $(x-a_0)\ (x-a_1)\ldots\ldots\ (x-a_n)$ ಇಂದ ಗುಣಿಸಲು

$$f(x) = \frac{(x-x_1)\cdots(x-x_n)}{(x_0-x_1)\cdots(x_0-x_n)}f(x_0) + \cdots + \frac{(x-x_0)\cdots(x-x_{n-1})}{(x_n-x_0)\cdots(x_n-x_{n-1})}f(x_n) \qquad (19)$$

ಎಂದಾಗುವುದು. ಇದಕ್ಕೆ ಲೆಗ್ರಾಂಜ್ ಸೂತ್ರವೆಂದು ಹೆಸರು.

ವಿಲೋಮ ಅಂತರ್ವೇಶನ (ಇನ್ವರ್ಸ್ ಇಂಟರ್‌ಪೋಲೇಷನ್): ಮೇಲಿನ ಪ್ರಕರಣಗಳಲ್ಲಿ ವಿವರಿಸಿದ ಅಂತರ್ವೇಶನ ಕ್ರಮದಿಂದ ಚಲರಾಶಿಯ ದತ್ತ ಬೆಲೆಗಳಿಗೆ ಸಂವಾದಿಯಾದ ಉತ್ಪನ್ನದ ಬೆಲೆಗಳನ್ನು ಕಂಡುಹಿಡಿಯುವುದು ಸಾಧ್ಯವಾಗುವುದು. ಇದಕ್ಕೆ ವ್ಯತಿರಿಕ್ತವಾಗಿ, ಉತ್ಪನ್ನದ ಬೆಲೆಗಳು ಗೊತ್ತಿದ್ದಾಗ ಅವಕ್ಕೆ ಸಂವಾದಿಯಾದ ಚಲರಾಶಿಯ ಬೆಲೆಗಳನ್ನು ಕಂಡುಹಿಡಿಯುವುದಕ್ಕೆ ವಿಲೋಮ ಅಂತರ್ವೇಶನ ಎಂದು ಹೆಸರು. ವಿಲೋಮ ಅಂತರ್ವೇಶನವನ್ನು ಸಾಧಿಸಲು ನಾಲ್ಕು ವಿಧಾನಗಳುಂಟು.

I ಮೊದಲನೆಯದನ್ನು ಲೆಗ್ರಾಂಜ್ ಸೂತ್ರದಿಂದ ಸಾಧಿಸಬಹುದು. ಈಗ $f(x) = y$, $f(a_0) = y_0$, $f(a_1) = y_1 \ldots\ldots\ldots f(a_n) = y_n$ ಎಂದು ಬರೆದು (18)ರಲ್ಲಿ ಆದೇಶಿಸಬಹುದು. ಆಗ ಲೆಗ್ರಾಂಜ್ ಸೂತ್ರ ಈ ಕೆಳಕಂಡ ರೂಪವನ್ನು ಹೊಂದುವುದು.

$$y = \frac{(x-x_1)\cdots(x-x_n)}{(x_0-x_1)\cdots(x_0-x_n)}y_0 + \cdots + \frac{(x-x_0)\cdots(x-x_{n-1})}{(x_n-x_0)\cdots(x_n-x_{n-1})}y_n \qquad (20)$$

ಈ y ಅನ್ನು ಸ್ವತಂತ್ರ ಚಲರಾಶಿಯನ್ನಾಗಿಯೂ x ಅನ್ನು ಅವಲಂಬಿತ ಚಲರಾಶಿಯನ್ನಾಗಿಯೂ ಭಾವಿಸಿದರೆ, ಅರ್ಥಾತ್ x, y ಗಳನ್ನು ಪರಿವರ್ತಿಸಿದರೆ

$$x = \frac{(y-y_1)\ldots(y-y_n)}{(y_0-y_1)\ldots(y_0-y_n)}x_0 + \ldots\frac{(y-y_0)\ldots(y-y_{n-1})}{(y_n-y_0)\ldots(y_n-y_{n-1})}x_n \qquad (21)$$

ಎಂದಾಗಬಹುದು.

ಬಲಪಾರ್ಶ್ವದ ಎಲ್ಲ ರಾಶಿಗಳ ಬೆಲೆಗಳೂ ಗೊತ್ತಿವೆಯಾದುದರಿಂದ ಆ ಬೆಲೆಗಳನ್ನು ಆದೇಶಿಸಿ x ನ ಬೆಲೆಯನ್ನು ಕಂಡುಹಿಡಿಯಬಹುದು.

ii .ಕ್ರಮಾನುಗತ ಉಪಸಮವಿಧಾನ : ಈ ವಿಧಾನದಲ್ಲಿ ಮೊದಲು ಯಾವುದಾದರೂ ಒಂದು ಬೆಲೆಯನ್ನು ಸ್ಥೂಲವಾಗಿ ಅಂದಾಜಿನಿಂದ ಕಂಡುಹಿಡಿಯಬೇಕು. ಅನಂತರ ಕ್ರಮಕ್ರಮವಾಗಿ ಸನ್ನಿಹಿತ ಬೆಲೆಯನ್ನು ಕಂಡುಹಿಡಿಯಬೇಕು. ಹೇಗೆಂದರೆ, ನ್ಯೂಟನ್ ಅಂತರ್ವೇಶನ ಸೂತ್ರದ ಪ್ರಕಾರ

$$y = y_0 + x\Delta y_0 + \frac{x(x-1)}{2!}\Delta^2 y_0 + \frac{x(x-1)(x-2)}{3!}\Delta^3 y_0 + \qquad (22)$$

ಪ್ರಥಮ ವಿಕಲಿತವನ್ನು ಮಾತ್ರ ಉಳಿಸಿಕೊಂಡು ಮುಂದಿನ ಪದಗಳನ್ನು ತ್ಯಜಿಸಿದರೆ x ನ ಪ್ರಥಮ ಸ್ಥೂಲಬೆಲೆ $x^{(1)}$ ಸಿದ್ಧಿಸುತ್ತದೆ.

ಅಂದರೆ $x^{(1)} = \dfrac{y-y_0}{\Delta y_0}$ ಎಂದಾಗುವುದು. ಇದನ್ನು (21)ರ ಬಲಪಾರ್ಶ್ವದ ಮೂರನೆಯ ಪದದಲ್ಲಿ $(x-1)$ ಎಂಬ ಗುಣಕದಲ್ಲಿ ಆದೇಶಿಸಿ, ದ್ವಿತೀಯ ವಿಕಲಿತಗಳವರೆಗೆ ಉಳಿಸಿಕೊಂಡು ಮಿಕ್ಕ ಪದಗಳನ್ನು ತ್ಯಜಿಸಿ x ನ ಬೆಲೆಯನ್ನು ಕಂಡುಹಿಡಿದರೆ x ನ ದ್ವಿತೀಯ ಉಪಸಮಬೆಲೆ $x^{(2)}$ ಲಭಿಸುತ್ತದೆ.

ಅಂದರೆ $x^{(2)} = \dfrac{y-y_0}{\Delta y_0 + \frac{1}{2}\left[x^{(1)}-1\right]\Delta^2 y_0}$ ಎಂದಾಗುವುದು.

ಇದನ್ನು ಮತ್ತೆ ನ್ಯೂಟನ್ ಅಂತರ್ವೇಶನ ಸೂತ್ರದಲ್ಲಿ ಆದೇಶಿಸಲು x ನ ತೃತೀಯ ಉಪಸಮಬೆಲೆಯು ಪ್ರಾಪ್ತವಾಗುವುದು.

ಅಂದರೆ

$$x^{(3)} = \frac{y-y_0}{\Delta y_0 + \frac{1}{2}\left[x^{(2)}-1\right]\Delta^2 y_0 + \frac{1}{6}\left[x^{(2)}-1\right]\left[x^{(2)}-2\right]\Delta^3 y_0} \qquad (23)$$

ಹೀಗೆ ಕ್ರಮಕ್ರಮವಾಗಿ x ನ ಇತರ ಉಪಸಮಬೆಲೆಗಳನ್ನು ಬರೆಯುತ್ತ ಹೋಗಬಹುದು.

iii ತೃತೀಯ ವಿಕಲಿತಗಳ ವಿಸರ್ಜನ ವಿಧಾನ : ನ್ಯೂಟನ್ ಅಂತರ್ವೇಶನ ಸೂತ್ರದಲ್ಲಿ ತೃತೀಯ

ವಿಕಲಿತದವರೆಗೆ ಉಳಿಸಿಕೊಂಡಾಗ

$$f(x) = f(0) + x\Delta f(0) + \frac{x(x-1)}{2!}\Delta^2 f(0) + \cdots \qquad (24)$$

ಎಂದಾಗುವುದು. ಇದೇ ಸೂತ್ರವನ್ನು ಉಗಮಸ್ಥಾನದಲ್ಲಿ 1 ರಲ್ಲಿರಿಸಿ (x-1) ಅಂತರ ಮಾಡಿ ಬರೆದಾಗ

$$f(x) = f(1) + (x-1)\Delta f(1) + \frac{(x-1)(x-2)}{2!}\Delta^2 f(1) + \cdots \qquad (25)$$

ಎಂದಾಗುವುದು. ಈಗ x ನ ಅಂದಾಜುಬೆಲೆಯನ್ನು $\alpha$ ಎಂದು ಸೂಚಿಸಿ, (26)ನ್ನು $(3-\alpha)$ದಿಂದಲೂ (24)ನ್ನು $\alpha$ ದಿಂದಲೂ ಗುಣಿಸಿ ಕೂಡಿದಾಗ

$$3f(x) = (3-\alpha)f(0) + \alpha f(1) + (3-\alpha)x\Delta f(0) + \alpha(x-1)$$
$$\Delta f(1) + \tfrac{1}{2}(3-\alpha)x(x-1)\Delta^2 f(0) + \tfrac{1}{2}\alpha(x-1)(x-2)\Delta^2 f(1)$$

ಇದರಲ್ಲಿ $f(x), f(0), \triangle f(0)$ ಮೊದಲಾದ ರಾಶಿಗಳ ಬೆಲೆಗಳನ್ನು ಆದೇಶಿಸಲು xನಲ್ಲಿ ಒಂದು ವರ್ಗಸಮೀಕರಣವು ಲಭಿಸುವುದು. ಇದನ್ನು ಬಿಡಿಸಿದಾಗ x ನ ಬೆಲೆ ದೊರೆಯುತ್ತದೆ. ಈ ಎರಡು ಬೆಲೆಗಳಲ್ಲಿ ಒಂದು ಬೆಲೆ ಸೂಕ್ತವಾಗಿರಬಹುದು. ಮತ್ತೊಂದು ಅನ್ಯಕೀಯ (ಎಕ್ಸ್ ಟ್ರೇನಿಯಸ್) ಮೂಲವಾಗಿರುವುದು. ಇದನ್ನು ತೊರೆದು ಮೊದಲನೆಯದನ್ನು ಗ್ರಾಹ್ಯವೆಂದು ಅರಿಯಬೇಕು.

iv. ಶ್ರೇಣಿ ವಿಪರ್ಯಾಸ ವಿಧಾನ : $y = a_0 + a_1 X + a_2 X^2 + \cdots + a_n X^n$ ಆಗಿದ್ದು ಈ ಶ್ರೇಣಿ $n \to \infty$ ಆದಾಗ ಉಪಸರಿಸುವುದೆಂದರೆ, x ನ್ನು y ಯ ಘಾತಗಳ ಅನಂತ ಉಪಸರಣ ಶ್ರೇಣಿಯ ರೂಪದಲ್ಲಿ ನಿರೂಪಿಸಬಹುದು. ಎಂದರೆ,

$$x = b_0 + b_1 y + b_2 y^2 + \cdots\cdots$$

ಈಗ $\dfrac{y-a_0}{a_1} = z$ ಎಂದಿಟ್ಟುಕೊಂಡರೆ,

$z = x + \dfrac{a_2}{a_1}x^2 + \dfrac{a_3}{a_1}x^3 + \cdots$ ಎಂದಾಗುತ್ತದೆ.

ಶ್ರೇಣಿವಿಪರ್ಯಾಸದಿಂದ

$x = z + b_2 z^2 + b_3 z^3 + \cdots$ ಎಂದಾಗಲಿ,

x ನ ಈ ಬೆಲೆಯನ್ನು ಮೇಲಣ ಸಮೀಕರಣದಲ್ಲಿ ಆದೇಶಿಸಲು

$$z = \left(z + b_2 z^2 + b_3 z^3 + \cdots\right) + \frac{a_2}{a_1}\left(z + b_2 z^2 + \cdots\right)^2 + \frac{a_3}{a_1}\left(z + b_2 z^2 + \cdots\right)^3 + \cdots$$

ಇದೊಂದು ನಿತ್ಯಸಮೀಕರಣವಾದ್ದರಿಂದ ಬಲಪಾರ್ಶ್ವದಲ್ಲಿ z ಅನ್ನು ಬಿಟ್ಟು ಉಳಿದ z ನ ಘಾತಗಳೆಲ್ಲವೂ ಲೋಪವಾಗುವುದು, ಆದ್ದರಿಂದ

$b_2 + \dfrac{a_2}{a_1} = 0 \quad ; \quad b_3 + 2\dfrac{a_2}{a_1}b_2 + \dfrac{a_3}{a_1} = 0 \quad ;$ ಇತ್ಯಾದಿ.

ನ್ಯೂಟನ್ ಅಂತರ್ವೇಶನ ಸೂತ್ರವನ್ನು x ನ ಶ್ರೇಣಿಯನ್ನಾಗಿ ಬರೆದು ಈ ಫಲಿತಾಂಶವನ್ನುಪಯೋಗಿಸಿ ಶ್ರೇಣಿವಿಪರ್ಯಾಸ ಮಾಡಲು y ಯ ಶ್ರೇಣಿರೂಪದಲ್ಲಿ ನಿರೂಪಿಸಬಹುದು. (ಎಂ.ವಿ.ಜೆ.)

**ಅಂತಃಕ್ಷೇಪೋಕ್ತಿ :** (ಇಂಟರ್‌ಪೋಲೇಷನ್ ಫಾರ್ಮುಲ) ಆಧುನಿಕ ಅಂಕಶಾಸ್ತ್ರಕ್ಕೆ ಒಂದು ಅಂಗವಾದ ಅಂತಃಕ್ಷೇಪ ಸಿದ್ಧಾಂತವೆಂಬ ಶಾಸ್ತ್ರದಲ್ಲಿ ಬ್ರಹ್ಮಗುಪ್ತನೆಂಬುವನು ಖಂಡಖಾದ್ಯಕವೆಂಬ ತನ್ನ ಇನ್ನೊಂದು ಗ್ರಂಥದಲ್ಲಿ ಮೊಟ್ಟಮೊದಲನೆಯ ಉಕ್ತಿಯನ್ನು

ಕೊಟ್ಟು ಹೊಸದೊಂದು ಶಾಸ್ತ್ರವನ್ನು ಆರಂಭಿಸಿದನು. ಇದನ್ನು ಭಾರತದಲ್ಲಿ ಯಾರೂ ಮುಂದುವರಿಸಲಿಲ್ಲ. ಬ್ರಹ್ಮಗುಪ್ತನ ಉಕ್ತಿಯನ್ನು ನ್ಯೂಟನ್–ಸ್ಟರ್ಲಿಂಗ್ ಸಂಕ್ಷೇಪೋಕ್ತಿಗೆ ಹೋಲಿಸಬೇಕು. (ಸಿ.ಎನ್.ಎಸ್.)

**ಅಂತರಕೋನಮಾಪಕ :** ದೂರದ ವಸ್ತುಗಳೆರಡರ ಲಂಬ ಹಾಗೂ ಕ್ಷಿತಿಜೀಯ ಕೋನಾಂತರಗಳನ್ನು ಅಳೆಯಲು ಮೋಜಣಿಯಲ್ಲಿ ಉಪಯೋಗಿಸುವ ಒಂದು ಉಪಕರಣ (ಥಿಯೊಡೊಲೈಟ್), ಭೂನಕ್ಷೆ ತಯಾರಿಕೆಯಲ್ಲಿ ತುಂಬ ಸಹಾಯಕವಾಗಿದೆ.

ಈ ಉಪಕರಣದಲ್ಲಿ (ಚಿತ್ರದಲ್ಲಿ ತೋರಿಸಿರುವಂತೆ) ಪರಸ್ಪರ ಲಂಬವಾಗಿ ಎರಡು ವರ್ತುಳ ಅಳತೆಪಟ್ಟಿಗಳೂ ಊರ್ಧ್ವ ಮತ್ತು ಸಮತಲಗಳಲ್ಲಿ ಕೋನದ ಅಳತೆಗೆ ಸಹಾಯವಾಗುವಂತೆ ವರ್ತುಳಪಟ್ಟಿಗಳ ಕೇಂದ್ರ ನೇರದಲ್ಲೇ ತಿರುಗುವ ಒಂದು ದೂರದರ್ಶಕವೂ ಇವೆ. ಕೋನಗಳ ನಿಖರ ಅಳತೆಗೆ ಸಹಾಯವಾಗಲು ಪ್ರತಿ ವರ್ತುಳ ಪಟ್ಟಿಗಳಲ್ಲಿ ಎರಡು ಅಥವಾ ಹೆಚ್ಚು ವರ್ನಿಯರ್ ಪಟ್ಟಿಗಳಿರುವುವು. ಇವೆಲ್ಲವುಗಳನ್ನು ಮಟ್ಟ ತಿರುಪುಗಳ ಆಧಾರದ ಮೇಲೆ ನಿಂತಿರುವ ಭದ್ರವಾದ ಪೀಠದ ಮೇಲೆ ಅಳವಡಿಸಿದೆ.



ಅಂತರಕೋನ ಮಾಪಕ

ಅಂತರಕೋನಮಾಪಕಗಳನ್ನು ಊರ್ಧ್ವತಲದ ಕೋನಗಳಿಗಿಂತ ಕ್ಷಿತಿಜೀಯ ಕೋನಗಳನ್ನು ಹೆಚ್ಚು ನಿಖರವಾಗಿ ಅಳತೆ ಮಾಡುವಂತೆ ರಚಿಸುವರು; ಏಕೆಂದರೆ ಭೂಮಿಯ ಅಳತೆಯಲ್ಲಿ ಕ್ಷಿತಿಜೀಯ ಕೋನಗಳೇ ಪ್ರಾಮುಖ್ಯ. ಊರ್ಧ್ವತಲದಲ್ಲಿ ಅಳತೆ ಮಾಡಿದ ಕೋನಗಳು ಭೂಮಿಯ ವಾತಾವರಣದಿಂದುಂಟಾಗುವ ಬೆಳಕಿನ ವಕ್ರೀಭವನದಿಂದ ಅಷ್ಟು ನಿಖರವಾಗಿರುವುದಿಲ್ಲ. ಆದ್ದರಿಂದ ದೂರದಲ್ಲಿರುವ ಭೂಮಿಯ ಮೇಲಿನ ವಸ್ತುಗಳ ಎತ್ತರ ಅಳತೆ ಮಾಡಲು ಅಂತರಕೋನಮಾಪಕ ಅಷ್ಟು ಉಪಯೋಗಕಾರಿಯಲ್ಲ. ಈ ಮಾಪಕವನ್ನುಪಯೋಗಿಸಿ ಭೂಮಿಯ ಮೇಲಿನ ವಸ್ತುಗಳೆರಡರ ಎತ್ತರ ಸಮತಲದಲ್ಲಿ ಅವುಗಳ ನಡುವಣ ಕೋನವನ್ನು ನಿಖರವಾಗಿ ಅಳತೆ ಮಾಡಬಹುದು. ಅಂತರಕೋನಮಾಪಕಗಳನ್ನು ರಾತ್ರಿ ವೇಳೆಯೂ ದೂರದ ಸ್ಥಳಗಳಿಂದ ಕಳುಹಿಸಿದ ಬೆಳಕಿನ ಕಿರಣಗಳ ನೇರಕ್ಕೆ ಅಳವಡಿಸಿ ಆ ಸ್ಥಳಗಳಿಗಿರುವ ಕೋನಾಂತರವನ್ನು ಕಂಡುಹಿಡಿಯಬಹುದು.

ತಿಯೊಡಲಸ್ ಎಂಬ ಗಣಿತ ಶಾಸ್ತ್ರಜ್ಞನು ಬರೆದಿರುವ ಓ.ಎಫ್.ಆರ್ ಥಿಯೊಡೋಲೈಟ್ ಅಥವಾ ಥಿಯೊಡೆಲೆಟ್ ಎಂಬ ಗ್ರಂಥದಿಂದ ಈ ಪದ ವ್ಯುತ್ಪತ್ತಿಯಾಗಿರಬಹುದೆಂದು ಕೆಲವರ ಅಭಿಪ್ರಾಯ. (ಪಿ.ವಿ.)

**ಅಂತರಗಂಗೆ[1] :** ಹಿಂದೂ ಜನರಿಗೆ ಅತ್ಯಂತ ಪವಿತ್ರವಾದ ತೀರ್ಥಗಳಲ್ಲಿ ಒಂದು. ಈ ತೀರ್ಥ ಕೋಲಾರಕ್ಕೆ ಸಮೀಪದಲ್ಲಿರುವ ಶತಶೃಂಗಪರ್ವತದಲ್ಲಿದೆ. ಇಲ್ಲಿ ಸ್ನಾನಪೂಜಾದಿಗಳು ಬಹಳ ಪವಿತ್ರವೆಂದು ಭಕ್ತರು ಭಾವಿಸುತ್ತಾರೆ. ಬೆಂಗಳೂರು ಜಿಲ್ಲೆಯ ಕುದೂರಿನಲ್ಲಿಯೂ ಈ ಹೆಸರಿನ ಒಂದು ತೀರ್ಥವಿದೆ. ಸಮಗ್ರ ಭಾರತದಲ್ಲಿ ಇದೇ ಹೆಸರಿನ ಹಲವು ತೀರ್ಥಗಳನ್ನು ನಾವು ಕಾಣಬಹುದು: ಪಾತಾಳಗಂಗೆ, ಶಿವಗಂಗೆ, ಸಿದ್ಧಗಂಗೆ, ದೇವಗಂಗೆ ಮೊದಲಾದುವುಗಳು ಇದಕ್ಕೆ ಉದಾಹರಣೆಗಳು. ಅಂತರಗಂಗೆ ಎಂಬುದು ಇದೇ ವರ್ಗದ ಒಂದು ತೀರ್ಥ. (ಬಿ.ಎಸ್.)

**ಅಂತರಗಂಗೆ[2] :** ಸಾಮಾನ್ಯವಾಗಿ ಅಂತರಗಂಗೆ ಎಂಬ ಹೆಸರು. ಲೆಮ್ನೇಸೀ ಕುಟುಂಬಕ್ಕೆ ಸೇರಿದ ಲೆಮ್ನ ಮತ್ತು ವುಲ್ಫಿಯ ಎಂಬೆರಡು ಜಾತಿಯ ಗಿಡಗಳು ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲೂ ಸ್ಪೈರೊಡಿಲ ಮತ್ತು ವುಲ್ಫಿಯ ಸ್ಪೈರೊಡೀಲ ಎಂಬ ಜಾತಿಯ ಗಿಡಗಳಿಗೆ ಅನ್ವಯವಾಗುತ್ತದೆ.

ಇವು ಆವೃತ ಬೀಜಧಾರಿ ಸಸ್ಯಗಳಲ್ಲಿ ಅತ್ಯಂತ ಸಣ್ಣ ಗ್ರಾತದ ಗಿಡಗಳೆಂದು ಹೆಸರಾಗಿವೆ. ಸಾಮಾನ್ಯವಾಗಿ ಇವುಗಳ ಉದ್ದ 5–15 ಮಿಮೀ; ಅಗಲ 4–10 ಮಿಮೀ. ಈ ಗಿಡಗಳು ನೀರಿನ ಮೇಲೆ ತೇಲುತ್ತಾ ಅನೇಕ ವರ್ಷಕಾಲ ಬೆಳೆಯುವುವು. ಇವುಗಳಲ್ಲಿ ಇತರ ಗಿಡಗಳಂತೆ ಕಾಂಡ, ಬೇರು ಮತ್ತು ಎಲೆಗಳೆಂಬ ಭಾಗಗಳು ಇರುವುದಿಲ್ಲ. ಇಡೀ ಲೆಮ್ನ ಗಿಡವು ಕಡಲೇಬೇಳೆಯಷ್ಟು ಗಾತ್ರದ್ದಾಗಿದ್ದು ಅಗಲವಾದ ಹಸಿರು ತಟ್ಟೆಯೋಪಾದಿಯಲ್ಲಿರುವುದು. ಇದೇ ಗಿಡದ ಕಾಂಡ. ಇದರ ಕೆಳಭಾಗದಿಂದ ಒಂದು ಉದ್ದವಾದ ಬೇರು (ಅಡ್ವೆಂಟಿಷಸ್ ರೂಟ್) ಹೊರಟು ಜೋಲಾಡುವುದು. ಈ ಬೇರಿನ ತುದಿಯಲ್ಲಿ ಚೆನ್ನಾಗಿ ಬೆಳೆದಿರುವ ಕುಲಾವಿ ಇರುವುದು. ಕಾಂಡ ಹಸಿರು ಬಣ್ಣದಿಂದ ಕೂಡಿರುವುದರಿಂದಲೂ ಎಲೆಗಳು ಇಲ್ಲದಿರುವುದರಿಂದಲೂ ಕಾಂಡವೇ ಎಲೆಗಳ ಕಾರ್ಯವನ್ನು ನಡೆಸುತ್ತದೆ. ಸಾವಿರಾರು ಸಣ್ಣಸಣ್ಣ ಗಿಡಗಳು ನೀರಿನಮೇಲೆ ತೇಲುತ್ತಿರುವಾಗ ಒಂದಕ್ಕೊಂದು ಸೇರಿಕೊಂಡು ಬೆಳೆಯುವುದು ಸ್ವಾಭಾವಿಕ. ಕಾಂಡದ ಹಿಂಭಾಗದ ತುದಿಯಲ್ಲಿ ಒಂದು ಸಣ್ಣ ಸಂದಿ ಇರುವುದು. ಈ ಸಂದಿಯಿಂದ 1–3 ರೆಂಬೆಗಳು ಹೊರಟು ಬೆಳೆಯುವುವು. ಈ ರೆಂಬೆಗಳು ತಾಯಿಕಾಂಡದಂತೆ ಇದ್ದು ಅದರ ಸಂಗಡವೇ ಇರಬಹುದು. ಅಥವಾ ಅದರಿಂದ ಬೇರ್ಪಟ್ಟು ಸ್ವತಂತ್ರವಾಗಿ ಬೆಳೆಯಬಹುದು. ಹೀಗೆ ಅನೇಕ ಹೊಸ ಗಿಡಗಳು ಉತ್ಪತ್ತಿಯಾಗಿ, ಬೆಳೆದು, ಇರುವ ಸ್ಥಳವನ್ನೆಲ್ಲ ಆಕ್ರಮಿಸಿಕೊಳ್ಳುವುವು. ಹಳೆಯ ಕಾಂಡ ಮುಳುಗಿ ನೀರಿನ ತಳವನ್ನು ಸೇರಿ ಕ್ರಮೇಣ ನಾಶವಾಗುವುದು. ರೆಂಬೆಗಳಲ್ಲಿ ಕೆಲವು ನೀರಿನೊಳಗೆ ಮುಳುಗಿದ್ದು ಚಳಿಗಾಲ ಕಳೆದ ಅನಂತರ ಮೇಲೆ ತೇಲಿಬಂದು ಹೊಸ ಗಿಡಗಳಾಗಿ ಪರಿಣಮಿಸುತ್ತವೆ.

ವುಲ್ಫಿಯ ಗಿಡ ಲೆಮ್ನ ಗಿಡಕ್ಕಿಂತ ಸಣ್ಣದು. ಇದಕ್ಕೆ ಬೇರು ಕೂಡ ಇರುವುದಿಲ್ಲ. ಮೊಟ್ಟೆಯಾಕಾರದ ಈ ಸಣ್ಣ ಗಿಡ ಹಸಿರು ಬಣ್ಣದಿಂದ ಕೂಡಿ, ಎಲೆಯ ಕಾರ್ಯವನ್ನೂ ಮಾಡುವುದು. ಲೆಮ್ನ ಗಿಡದಂತೆ ರೆಂಬೆಗಳು ಬೆಳೆದು, ಬೇರ್ಪಟ್ಟು ಹೊಸ ಗಿಡಗಳು ಹುಟ್ಟುವುವು. ಅದರಲ್ಲಿರುವಂತೆಯೇ ಹೂವು ಮತ್ತು ಅದರ ಭಾಗಗಳೂ ಇರುವುವು.

ಈ ಕುಟುಂಬಕ್ಕೆ ಸೇರಿದ ಎಲ್ಲ ಗಿಡಗಳ ಹೂವು ಮತ್ತು ಹೂಗೊಂಚಲುಗಳು ತುಂಬ ಸಣ್ಣಗಿರುವುವು. ಮೇಲೆ ಹೇಳಿದಂತೆ ಕಾಂಡದ ಸಂದಿಯಲ್ಲಿ ಹೂಗೊಂಚಲು ಬಿಡುವುದು. ಪ್ರತಿ ಗೊಂಚಲಿನಲ್ಲಿಯೂ ಎರಡೇ ಎರಡು ಗಂಡು ಹೂಗಳೂ ಒಂದು ಹೆಣ್ಣು ಹೂವೂ ಇರುತ್ತವೆ. ಇವೆಲ್ಲ ಒಂದು ತಾಳಗುಚ್ಛದ ಉಪಪತ್ರದಿಂದ (ಸ್ಪೇದ್) ಆವೃತವಾಗಿರುವುವು. ಗಂಡುಹೂವಿನಲ್ಲಿ ಒಂದೇ ಒಂದು ಪರಾಗ ಕೇಸರವೂ ಹೆಣ್ಣು ಹೂವಿನಲ್ಲಿ ಒಂದೇ ಒಂದು ಅಂಡಕೋಶವೂ ಇರುವುವು. ಅಂಡಕೋಶ ಒಂದೇ ಒಂದು ಅಂಡಾಶಯವನ್ನು ಬೆಳೆಸಿ ಅದರಲ್ಲಿ 1–6 ಬೀಜಾಂಡಗಳನ್ನು ಪೋಷಿಸುವುದು. ಈ ವಿಧವಾದ ಹೂಗೊಂಚಲಿಗೆ ತಾಳಗುಚ್ಛ ಅಥವಾ ಸ್ಥೂಲ ಮಂಜರಿ (ಸ್ಪೇಡಿಕ್ಸ್) ಎಂದು ಹೆಸರು.



ಅಂತರಗಂಗೆ (ಲೆಮ್ನ)

1. ವಿಸ್ತರಿಸಿಕೊಳ್ಳುತ್ತಿರುವ ಸಸ್ಯಗಳು 2. ಬೇರು 3. ಬೇರಿನ ಕುಲಾವಿ 4. ಹೂಗೊಂಚಲು 5. ಹೂಬಿಡುವ ಸಸ್ಯಭಾಗ 6. ಅಂತರಗಂಗೆ ಸಸ್ಯಗಳು

ಈ ಕುಟುಂಬಕ್ಕೂ ಕೆಸುವಿನ ದಂಟು ಅಥವಾ ಸುವರ್ಣಗೆಡ್ಡೆ ಗಿಡಗಳ ಕುಟುಂಬಕ್ಕೂ ತೀರ ಹತ್ತಿರದ ಸಂಬಂಧ ಉಂಟು. ಇಂಗ್ಲಿಷ್ ಆಡುಮಾತಿನಲ್ಲಿ ಈ ಕುಟುಂಬದ ಗಿಡಗಳನ್ನು ಡಕ್‌ವೀಡ್ ಎಂದು ಕರೆಯುತ್ತಾರೆ. ಈ ಗಿಡಗಳು ಹರಿಯುವ ನೀರಿನಲ್ಲಿ ಬೆಳೆಯುವುದಿಲ್ಲ. ಸಾಧಾರಣವಾಗಿ ಕೆರೆ ಕುಂಟೆಗಂಥ ನಿಂತ ನೀರಿನ ತಾಣಗಳಲ್ಲೊ ಇಲ್ಲವೆ ಮಂದಗತಿಯಲ್ಲಿ ಹರಿಯುವ ಹಳ್ಳಗಳಲ್ಲೊ ಬೆಳೆಯುತ್ತವೆ.

ಲೆಮ್ನ ಗಿಡದ ಕೋಶಗಳ ನಡುವಣ ಸಂದುಗಳಲ್ಲಿ ಸೇರಿಕೊಂಡು ಕ್ಲೋರೊಕೈಟ್ರಿಯಮ್ ಲೆಮ್ನಿ ಎಂಬ ಹೆಸರಿನ ಏಕಕೋಶಿ ಶೈವಲವು ವಾಸಮಾಡುತ್ತ ತನ್ನ ಜೀವನವನ್ನು ಸಾಗಿಸುತ್ತದೆ. ಈ ಶೈವಲ ಹರಿತ್ತಿನಿಂದ ಕೂಡಿರುವುದರಿಂದ ಆಹಾರವನ್ನು ತಾನೇ ತಯಾರಿಸುತ್ತದೆ: ಆಶ್ರಯದಾತ ಸಸ್ಯದಿಂದ ವಸತಿ ಹೊರತಾಗಿ ಇನ್ನಾವ ಪ್ರಯೋಜನವನ್ನೂ ಪಡೆಯುವುದಿಲ್ಲ; ಆದ್ದರಿಂದ ಈ ಸಂಬಂಧ ಪರತಂತ್ರ ಅಥವಾ ಪರಾವಲಂಬಿ ಜೀವನ ಎನಿಸುವುದಿಲ್ಲ. ಅದು ಒಂದು ರೀತಿಯ ಸಹಜೀವನ ಮಾತ್ರ. (ಎಲ್.ಎನ್.ಆರ್;ಕೆ.ಬಿ.ಎಸ್)

**ಅಂತರಗ್ನಿಶಿಲೆಗಳು :** ಅಗ್ನಿಶಿಲೆಗಳ ಒಂದು ವರ್ಗಕ್ಕೆ ಸೇರಿವೆ. ಮೇಲ್ಮೈಯಿಂದ ಬಹಳ ಆಳದಲ್ಲಿ (6 ರಿಂದ 20) ಕಿಮೀ ಶಿಲಾಪಾಕದಿಂದ (ಮ್ಯಾಗ್ಮ) ಸಾವಕಾಶವಾಗಿ ಆರಿದಾಗ ಆದ ಸ್ಫಟಿಕೀಕರಣದಿಂದ ರೂಪುಗೊಂಡ ಖನಿಜ ಹರಳುಗಳಿರುವ ಶಿಲೆಗಳು (ಪ್ಲುಟಾನಿಕ್ ರಾಕ್ಸ್). ಈ ಶಿಲೆಗಳಲ್ಲಿ ನಿರ್ದಿಷ್ಟವಾದ ಖನಿಜ ಸಮೂಹವೂ ಇದೆ. ಇವು 400 ರಿಂದ 6000 ಮೀ ಮಂದದ ಮೇಲ್ಪದರದ ಕೆಳಗೆ ಸ್ಫಟಿಕೀಕರಿಸಿದವೆಂದು ಡ್ಯಾಲಿ ಅಭಿಪ್ರಾಯಪಡುತ್ತಾನೆ. ಅಂತರಗ್ನಿಶಿಲೆಗಳ ಸ್ಫಟಿಕೀಕರಣಕ್ಕೆ ಅಗತ್ಯವಾದ ಪರಿಸ್ಥಿತಿಗಳಲ್ಲಿ ವ್ಯತ್ಯಾಸವಿರುತ್ತದೆ. ಭೂಮಿಯ ಮೇಲ್ಭಾಗದಲ್ಲಿ ಹೊರಕಾಣುವ ಅಂತರಗ್ನಿಶಿಲೆಗಳೆಲ್ಲ ಭೂಮಿಯ ಹೊರಮೈಯಿಂದ 100ಮೀ–20ಕಿಮೀ ತಳದಲ್ಲಿ ಸ್ಫಟಿಕೀಕರಿಸಿದುವೆಂಬುದರಲ್ಲಿ ಸಂಶಯವಿಲ್ಲ.

ಅಂತರಗ್ನಿಶಿಲೆಗಳ ವಿಶೇಷಕ್ಕೆ ವಿನ್ಯಾಸಕ್ಕೆ ಕಾರಣ ಅವು ಆಳದಲ್ಲಿ ನಿಧಾನವಾಗಿ ಆರಿ ಸ್ಫಟಿಕೀಕರಿಸುವುದಾಗಿದೆ. ಜೊತೆಗೆ ಅವುಗಳ ಅಂತಸ್ಸರಣದ ರೂಪ ಗಾತ್ರ ಮತ್ತು ಸ್ಥಳೀಯ ಉಷ್ಣಾಂಶತೆಯೂ ಮುಖ್ಯ ಕಾರಣಗಳಾಗಿವೆ.

ಅಂತರಗ್ನಿಶಿಲಾಕಾರ್ಯಗಳ ರೂಪ ಮತ್ತು ವಿಸ್ತಾರ ವ್ಯಾಪಕತೆಗಳಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಅತ್ಯಂತ ವಿಶಾಲವಾದುವು ಸಾವಿರಾರು ಕಿಮೀಗಳವರೆಗೆ ಹರಡಿರುತ್ತವೆ: ಅತಿ ಚಿಕ್ಕವು ಕೆಲವು ಸೆಂ.ಮೀ ಮಾತ್ರವಿರುತ್ತವೆ. ಅಂತರಗ್ನಿಶಿಲಾಪ್ರಭೇದಗಳಲ್ಲಿ ಮುಖ್ಯವಾದುವು ಸಿಲ್, ಲ್ಯಾಕೊಲಿತ್, ಫೇಕೊಲಿತ್, ಡೈಕು (ಒಡ್ಡು), ಬ್ಯಾಥೊಲಿತ್, ಸ್ಟಾಕ್ಸ್ (ಬಾಸಸ್)

ಅಂತರಗ್ನಿಶಿಲೆಗಳು

ಮತ್ತು ಪ್ಲುಟಾನುಗಳು. ಅವುಗಳ ಸ್ವಭಾವಗಳನ್ನು ಸ್ಥೂಲವಾಗಿ ಇಲ್ಲಿ ತಿಳಿಸಿದೆ: ಸಿಲ್‌ಗಳು ಸ್ಥಳೀಯ ಶಿಲೆಗಳ ಹರವನ್ನನುಸರಿಸಿ ಅವುಗಳ ಪದರಗಳ ಮಧ್ಯದಲ್ಲಿ ಹರಿದು ಹರಡಿರುವ ಶಿಲಾಪಾಕದ ಪದರಗಳಾಗಿವೆ. ದೊಡ್ಡ ದೊಡ್ಡ ಸಿಲ್‌ಗಳ ಮಂದ ನೂರಾರು ಮೀಟರುಗಳಷ್ಟು, ಹರವು ಅನೇಕ ಸಾವಿರ ಕಿ.ಮೀ ಸಾಮಾನ್ಯವಾಗಿ ಅವುಗಳ ರಾಸಾಯನಿಕ ಸಂಯೋಜನೆಯಲ್ಲಿ ಸಿಲಿಕಾಂಶ ಅಲ್ಪವಾಗಿರುತ್ತದೆ. ಫೇಕೊಲಿತ್‌ಗಳು ಮಡಪುಗಳ ತಳ ಮತ್ತು ಶಿಖರಗಳಲ್ಲಿ ರೂಪುಗೊಂಡ ಮಸೂರಾಕಾರದ ಮತ್ತು ಬಾಗಿದ ಅಂತಸ್ಸರಣಗಳು. ಲೋಪೊಲಿತ್‌ಗಳು ಪದರವಾಗಿರುವ ಅಥವಾ ಬಾನೆಯಂತಿರುವ ಅಂತಸ್ಸರಣ ಕುಸಿದು ಆದವು. ಅತ್ಯಂತ ದೊಡ್ಡದಾಗಿರುವ ಕೆಲವು ಅಂತಸ್ಸರಣಗಳು ಅಲ್ಪಸಿಲಿಕಾಂಶ ಶಿಲೆಗಳಿಂದಾಗಿರುತ್ತವೆ. ಒಡ್ಡುಗಳು ಇಕ್ಕಟ್ಟಾಗಿಯೂ ಬಹಳ ಉದ್ದವಾಗಿಯೂ ಸಮಾನಾಂತರವಾದ ಪಕ್ಕಗಳಿರುವ ರಚನೆಗಳು. ಇವು ನೇರವಾಗಿ ಅಥವಾ ಕಡಿದಾಗಿ ಇಳಿವೋರೆಯಾಗಿ ಸ್ಥಳೀಯ ಶಿಲಾಪದರಗಳನ್ನೂ ಇತರ ರಚನೆಗಳನ್ನೂ ಭೇದಿಸಿರುತ್ತವೆ. ಒಂದು ಪ್ರದೇಶದಲ್ಲಿ ಅನೇಕ ಒಡ್ಡುಗಳಿದ್ದರೆ ಅವುಗಳಿಗೆ ಒಡ್ಡು ಸಮೂಹವೆಂದು, ಒಂದು ಕೇಂದ್ರದಿಂದ ಹೊರಹರಡಿದ್ದರೆ ಹೊರಗಾಮಿ ಒಡ್ಡುಗಳೆಂದು, ಚಕ್ರಾಕಾರವಾಗಿದ್ದರೆ ಒಡ್ಡುಗಳ ಚಕ್ರವೆಂದು ಹೆಸರು. ಬ್ಯಾಥೊಲಿತ್‌ಗಳು ಕಡಿದಾಗಿ ಇಳಿಜಾರಾಗಿರುವ ಗೋಡೆಗಳುಳ್ಳ ಮತ್ತು ಸಾಮಾನ್ಯವಾಗಿ ತಳ ಕಾಣದಂತಿರುವ ಬೃಹದಾಕಾರದ ಅಂತಸ್ಸರಣಗಳು. ಇವುಗಳಲ್ಲಿ ಅಧಿಕ ಸಿಲಿಕಾಂಶ ಶಿಲೆಗಳಾದ ಗ್ರಾನೈಟ್, ಗ್ರಾನೊಡಯೊರೈಟ್ ಮತ್ತು ಅವುಗಳಿಗೆ ಸಂಬಂಧಪಟ್ಟ ಶಿಲೆಗಳಿರುತ್ತವೆ. ಇವುಗಳಲ್ಲಿ ದೊಡ್ಡವು ಸಾವಿರಾರು ಚ.ಕಿಮೀ ಹರಡಿರುತ್ತವೆ. ಕೆಲವು ಬ್ಯಾಥೊಲಿತ್‌ಗಳು ಅಗ್ನಿಶಿಲೆಗಳೇ ಅಥವಾ ರೂಪಾಂತರಿತ ಶಿಲೆಗಳೇ ಎಂಬ ಸಂಶಯವಿದೆ. ಖನಿಜ ಸಮೂಹದಲ್ಲಿಯೂ ರೂಪದಲ್ಲಿಯೂ ಬ್ಯಾಥೊಲಿತ್‌ಗಳನ್ನು ಹೋಲುವ, ಆದರೆ ಗಾತ್ರದಲ್ಲಿ ಚಿಕ್ಕದಾಗಿರುವ ಈ ರೀತಿಯ ಶಿಲಾರೂಪಕ್ಕೆ (100 ಚ. ಕಿಮೀ ಗಳಿಗಿಂತ ಕಡಿಮೆ) ಸ್ಟಾಕ್ಸ್ (ಬಾಸಸ್) ಎಂದು ಹೆಸರು. ಪ್ಲುಟಾನುಗಳು ಮೇಲೆ ತಿಳಿಸಿದ ಯಾವುದನ್ನೂ ಹೋಲದಿರುವ ಅಂತಸ್ಸರಣಗಳು.

**ವಿನ್ಯಾಸ :** ಅಂತರಗ್ನಿಶಿಲೆಗಳ ವಿನ್ಯಾಸದ ವಿಶೇಷ ಲಕ್ಷಣವೆಂದರೆ ಪೂರ್ಣ ಸ್ಫಟಿಕತ್ವ ಮತ್ತು ಸಮಕಣವಿನ್ಯಾಸ. ಇದಕ್ಕೆ ಗ್ರಾನಿಟಿಕ್ ವಿನ್ಯಾಸ ಎಂದು ಹೆಸರು. ಉದಾ: ಗ್ರಾನೈಟ್ ಶಿಲೆ, ಇವೆರಡು ರಚನೆಗಳೂ ಶಿಲಾಪಾಕ ನಿಧಾನವಾಗಿ ಸ್ಫಟಿಕೀಕರಿಸುವುದರಿಂದ ಉಂಟಾದುವು. ಇದರಿಂದ ಒಂದಕ್ಕೊಂದು ಹೆಣೆದು ಕೊಂಡಿರುವ ಮತ್ತು ಒಂದಕ್ಕೊಂದು ಮಿತಿ ಕಲ್ಪಿಸುವ ವಿನ್ಯಾಸ ಬೆಳೆದಿರುತ್ತದೆ. ಈ ಗುಂಪಿನ ಅಲ್ಪಸಿಲಿಕಾಂಶ ಶಿಲೆಗಳಲ್ಲಿ ಖನಿಜಕಣಗಳು ನಿರಾಕಾರ ವುಳ್ಳವಾಗಿಯೂ ಅಧಿಕ ಸಿಲಿಕಾಂಶ ಶಿಲೆಗಳಲ್ಲಿ ಅಪೂರ್ಣಾಕಾರವುಳ್ಳವಾಗಿಯೂ ಇವೆ.

**ರಾಸಾಯನಿಕ ಸಂಯೋಜನೆ :** ಅಂತರಗ್ನಿಶಿಲೆಗಳಲ್ಲಿ ಇತರ ಅಗ್ನಿಶಿಲೆ ಗಳಲ್ಲಿರುವಂತೆಯೇ ಸಿಲಿಕಾಂಶವು ಶೇ.35 ರಿಂದ ಶೇ.75 ವರೆಗಿರುತ್ತದೆ. ಸಿಲಿಕಾಂಶದ ಆಧಾರದ ಮೇಲೆ ಈ ವರ್ಗದ ಶಿಲೆಗಳನ್ನು ಅಧಿಕಸಿಲಿಕಾಂಶ ಶಿಲೆಗಳು (ಶೇ.65 ಕ್ಕಿಂತ ಹೆಚ್ಚು), ಸಮ ಸಿಲಿಕಾಂಶ ಶಿಲೆಗಳು ಅಥವಾ ಮಧ್ಯವರ್ತಿಶಿಲೆಗಳು (ಶೇ.52 ರಿಂದ ಶೇ.65 ರ ವರೆಗೆ) ಮತ್ತು ಅತ್ಯಲ್ಪಸಿಲಿಕಾಂಶ ಶಿಲೆಗಳು (ಶೇ.45 ಕ್ಕಿಂತ ಕಡಿಮೆ) ಎಂದು ನಾಲ್ಕು ವಿಧಗಳಾಗಿ ವಿಭಾಗಿಸಲಾಗಿದೆ.

**ವರ್ಗೀಕರಣ :** ಸಿಲಿಕಾಂಶ ಕ್ರಮೇಣ ಹೆಚ್ಚುವ ಕ್ರಮದಲ್ಲಿ ಕೆಳಗೆ ಕಂಡಂತೆ ವರ್ಗೀಕರಿಸಲಾಗಿದೆ:

**1. ಗ್ರಾನೈಟ್ ಡಯೋರೈಟ್ ಸಮೂಹ :** ಕ್ವಾರ್ಟ್ಸ್, ಪೊಟ್ಯಾಷ್ ಫೆಲ್ಡ್‌ಸ್ಪಾರ್. ಸೋಡಿಕ್‌ಪ್ಲೇಜಿಯೋಕ್ಲೇಸ್‌ಗಳೊಂದಿಗೆ ಬಯೋಟೈಟ್ ಮತ್ತು ಅಥವಾ ಹಾರನ್‌ಬ್ಲೆಂಡ್ ಖನಿಜಗಳು ವಿವಿಧ ಪ್ರಮಾಣದಲ್ಲಿರುವ ಗ್ರಾನೈಟ್, ಸೋಡಾಗ್ರ್ಯಾನೈಟ್, ಅಡಮೆಲೈಟ್.

**2. ಸಯನೈಟ್ ಸಮೂಹ :** ಫೆಲ್ಡ್‌ಸ್ಪಾರ್‌ಗಳ ಮತ್ತು ಇತರ ಅಧಿಕ ಸಿಲಿಕಾಂಶ ಖನಿಜಗಳ ಜೊತೆಗೆ ಸಿಲಿಕಾಂಶ ಕಡಿಮೆಯಿರುವ ನೆಫೆಲೀನ್, ಲ್ಯೂಸೈಟ್, ಸೋಡಲೈಟ್ ಖನಿಜಗಳು ಸೋಡ ಪ್ರಮಾಣ ಅಧಿಕವಾಗಿರುವ ಆಂಫಿಬೋಲ್ ಮತ್ತು ಪೈರಾಕ್ಸೀನ್‌ಗಳೂ ಇರುವ ಸಯನೈಟ್ ಶಿಲೆಗಳು ಈ ಗುಂಪಿಗೆ ಸೇರಿದುವು.

**3. ಡಯೊರೈಟ್ ಸಮೂಹ :** ಬೆಣಚು, ಆಂಡಿಸೀನ್ ಪ್ಲೇಜಿಯೋಕ್ಲೇಸ್, ಬಯೋಟೈಟ್, ಹಾರನ್‌ಬ್ಲೆಂಡ್ ಮುಂತಾದ ಖನಿಜಗಳು ಸಾಮಾನ್ಯವಾಗಿರುವ ಕ್ವಾರ್ಟ್ಸ್‌ಡಯೋರೈಟ್ ಮತ್ತು ಆಗೈಟ್‌ಡಯೋರೈಟ್ ಈ ಗುಂಪಿಗೆ ಸೇರಿದುವು.

**4. ಆಲ್ಕಲಿ ಗ್ಯಾಬ್ರೊ ಸಮೂಹ :** ಆಲ್ಕಲಿ ಖನಿಜಗಳಿರುವ ಟೆಶ್ಚನೈಟ್, ತೆರಲೈಟ್, ಎಸ್ಸೆಕ್ಸೈಟ್, ಪಿಕ್ರೈಟ್, ಶಾಂಕಿನೈಟ್ ಈ ಗುಂಪಿಗೆ ಸೇರಿದುವು.

**5. ಗ್ಯಾಬ್ರೊ ಸಮೂಹ :** ಲ್ಯಾಬ್ರೊಡಾರೈಟ್ ಪ್ಲೇಜಿಯೋಕ್ಲೇಸ್, ಆಗೈಟ್ ಕೆಲವು ವಿಧಗಳಲ್ಲಿ ಆಲಿವೀನ್ ಖನಿಜಗಳನ್ನು ಸಾಮಾನ್ಯವಾಗಿ ಉಳ್ಳ ಆಲಿವೀನ್ ಗ್ಯಾಬ್ರೊ, ಗ್ಯಾಬ್ರೊ, ಅನಾರ್ಥೊಸೈಟ್, ಟ್ರಾಕ್ಟೊಲೈಟ್ ಮುಂತಾದ ಶಿಲೆಗಳು ಈ ಗುಂಪಿಗೆ ಸೇರಿದುವು.

**6. ಪೆರಿಡೊಟೈಟ್ ಸಮೂಹ :** ಪೈರಾಕ್ಸೀನ್, ಆಲಿವೀನ್ ಮತ್ತು ಅಧಿಕ ಕ್ಯಾಲ್ಸಿಯಮ್ ಇರುವ ಪ್ಲೇಜಿಯೊಕೇಸ್ ಮುಂತಾದ ಖನಿಜಗಳನ್ನು ಸಾಮಾನ್ಯವಾಗಿ ಉಳ್ಳ ಪೈರಾಕ್ಸೆನೈಟ್, ಪೆರಿಡೊಟೈಟ್ ಮತ್ತು ಡನೈಟ್ ಮುಂತಾದ ಶಿಲೆಗಳು ಈ ಗುಂಪಿಗೆ ಸೇರಿದುವು.

(ಎಸ್.ವಿ.)

**ಅಂತರತ್ರಯ :** ಸಾಹಿತ್ಯಕ್ಕೆ ಅನ್ವಯಿಸುವ ಗಂಭೀರವೂ ಅರ್ಥಪೂರ್ಣವೂ ವೈವಿಧ್ಯಮಯವೂ ವಿಶಾಲವೂ ಆದ ಈ ತತ್ವವನ್ನು (ದಿ ತ್ರಿ ಡಿಸ್ಟನ್ಸಸ್) ಮೂರು ಹಿನ್ನೆಲೆಗಳು ಎನ್ನಬಹುದು; ಮೂರು ಆಳಗಳು, ಮೂರು ವ್ಯಾಪ್ತಿಗಳು ಎಂದರೂ ಸಲ್ಲುತ್ತದೆ. 19ನೆಯ ಶತಮಾನದಲ್ಲಿ ಕಾದಂಬರಿ ತಾನೇ ತಾನಾಗಿತ್ತು; 20ನೆಯ ಶತಮಾನದಲ್ಲಿ ನಾಟಕ ಅದರೊಂದಿಗೆ ಸ್ಪರ್ಧೆ ಹೂಡಿ, ಸ್ವಲ್ಪಮಟ್ಟಿಗೆ ಗಮನೀಯವಾಯಿತು. ಆದರೂ ಕಾದಂಬರಿಯ ಅಧಿಕಾರವಾಗಲಿ ಪ್ರಭಾವವಾಗಲಿ ಶಕ್ತಿಯಾಗಲಿ ಪ್ರಗತಿಯಾಗಲಿ ಕೊಂಚವೂ ಕುಗ್ಗಲಿಲ್ಲ. ಆದರೆ ಕಾದಂಬರಿ ಮೇಲಣ ವಿಮರ್ಶೆ ಅದಕ್ಕೆ ಯುಕ್ತವಾದಷ್ಟು ಬೆಳೆದುಬಂದಿಲ್ಲ; ಆಗಾಗ ಅಲ್ಲಲ್ಲಿ ಅದೂ ಇದೂ ಸೂತ್ರವೂ ಸಿದ್ಧಾಂತವೂ ಎದ್ದುಬಂದು ಕಾದಂಬರಿಯ ಸಂಕೀರ್ಣ ಕಲೆಗಾರಿಕೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅಷ್ಟಿಷ್ಟು ಕಥೆಯನ್ನು ನಡೆಸುವ ಪಾತ್ರಗಳಿಗೆ ಸನ್ನಿವೇಶ ಸಾಮಾನು ಸರಂಜಾಮು ಮುಂತಾದ ಭೌತ ಪದಾರ್ಥಗಳು ಬೇಕೇಬೇಕು. ಅವುಗಳನ್ನು ನಿಯಂತ್ರಿಸುವಾಗ ಕಾದಂಬರಿಕಾರ ಒಂದು ಪದಾರ್ಥದಿಂದ ಮೂರು ಸೂಚನೆಗಳನ್ನು ಹಿಂಡಿಕೊಳ್ಳಬಹುದು. ಹಳ್ಳಿಯ ದೇವಾಲಯವನ್ನು ತೆಗೆದುಕೊಳ್ಳೋಣ; ಅದೂ ಅದರ ಸರಹದ್ದೂ ಕಥಾನಾಯಕ ನಾಯಕಿಯರ ಕಾರ್ಯಕ್ಷೇತ್ರವೆನ್ನೋಣ. ಅದು ಮೊದಲನೆಯ ಹಿನ್ನೆಲೆ. ಎರಡನೆಯ ಹಿನ್ನೆಲೆ, ನಾಡಿನ ಇತರ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ದೇವಾಲಯಗಳ ನೆನಪು. ಇನ್ನೂ ಮುಂದೆ ಹೋಗಿ ಲೇಖಕ ಜಗತ್ತಿನ ಇತರ ಭೂಭಾಗಗಳ ದೇವಸ್ಥಾನಗಳೊಡನೆ ಸಾದೃಶ್ಯ–ವೈದೃಶ್ಯಗಳನ್ನು ಸೂಚಿಸಬಹುದು. ಎಂದರೆ ಇಂಥ ಮುಷ್ಟಿಯನ್ನು ಔಚಿತ್ಯ ಭಂಗವಾಗದಂತೆ ಬರಹಕ್ಕೆ ತಂದು ಕೊಡಬೇಕಾದರೆ ಉತ್ಕೃಷ್ಟಪ್ರತಿಭೆ ಲೇಖಕನ ಅಂತರ್ಯದಲ್ಲಿರಬೇಕು.

ಘಟನಾವಳಿಗೂ ಅದೇ ಬಗೆಯ ಹೆಚ್ಚುವರಿಕೆ ಸಾಧ್ಯ. ತಂದೆಗೆ ಎದುರುಬಿದ್ದು, ಬಹಿಷ್ಕೃತನಾಗಿ, ಮಗ ಮನೆಯಿಂದಾಚೆ ಹೋಗುತ್ತಾನೆ ಎನ್ನೋಣ, ಕಾರ್ಯದ ಪ್ರಥಮ ಆಕಾರ ಅದು. ದ್ವಿತೀಯ ಆಕಾರವಾವುದೆಂದರೆ, ದೇಶದ ಇತರ ಕಡೆಗಳಲ್ಲೂ ಕಾಣಬರುವ ಪಿತ–ಪುತ್ರ ವಿವಾದದ ಪರಿಚಯ, ಧರಿತ್ರಿಯನ್ನು ಆಕ್ರಮಿಸಿರುವ ಮಾನವರಲ್ಲಿ ತೋರಿಬರುವ

ಜನಕ–ತನೂಜರ ಸಂಬಂಧ ಛಾಯಾಚಿತ್ರವಾಗಿ ಸುಳಿದಾಡಬಹುದು. ತೃತೀಯ ಆಕೃತಿಯಾಗಿ. ಎಲ್ಲಕ್ಕೂ ಮಿಗಿಲಾದ ಅಂಗ ಮನುಜಪಾತ್ರ ವರ್ಗ. ನಾಯಕನೊ ಇತರ ಪಾತ್ರವೊ ಮೊಟ್ಟಮೊದಲಾಗಿ ಅದು ಒಂದು ಊರಿನಲ್ಲಿ, ಒಬ್ಬ ದಂಪತಿಗಳಿಂದ ಜನಿಸಿ, ಒಂದು ನಾಮಧೇಯವನ್ನು ಪಡೆದು, ಬೆಳೆದು, ಒಂದು ವ್ಯಕ್ತಿವರ್ಚಸ್ಸಿನಿಂದ ಶೋಭಿಸುವ ಪುರುಷ. ಇದು ಅದರ ಮೊದಲನೆಯ ಆಳ. ತರುವಾಯ, ಅದರ ವೃತ್ತಿ ಹವ್ಯಾಸ ಆಕಾಂಕ್ಷೆಗಳಿಗೆ ಅನುಗುಣವಾದ ಚಲನವಲನೆ, ಮಾತುಗಾರಿಕೆ, ಸ್ವಭಾವ ಪ್ರಕಾಶನವೆಲ್ಲವೂ ಕೂಡಿಕೊಂಡು ಎರಡನೆಯ ಆಳ ಎನ್ನಿಸಿಕೊಳ್ಳುತ್ತದೆ. ಮೂರನೆಯ ಆಳ, ಆ ಪಾತ್ರದ ಅತ್ಯಂತ ಒಳಗಡೆಯಿಂದ ಆಗಾಗ ಇಣುಕಿ ನೋಡುವ ಸಾಮಾನ್ಯ ಮಾನವಧರ್ಮ.

ಕೆಲವು ವಿಮರ್ಶಕರು, ಹಿನ್ನೆಲೆ ವ್ಯಾಪ್ತಿ ಅಥವಾ ಆಳ ಎನ್ನುವುದನ್ನು ಮೂರಕ್ಕೇ ಪರಿಮಿತ ಮಾಡಬೇಕಾದ್ದಿಲ್ಲ, ನಾಲ್ಕನೆಯ ಅತೀವತತ್ತ್ವವನ್ನೂ ಒಡಗೂಡಿಸಬೇಕು ಎಂದಿದ್ದಾರೆ. ಅವರ ಅಭಿಮತದಂತೆ, ದೇವಗುಡಿಯ ಕಟ್ಟಡ ಆರಾಧನೆ ಭಕ್ತಿಗಳ ನಾನಾ ರೂಪಗಳನ್ನೂ ಮೀರಿ ಮುಂದೆ ಹೋಗಿ ಮನುಷ್ಯನ ಅಮರವಾದ ಹಂಬಲಿಕೆಗೆ ಸಂಜ್ಞೆಯಾಗಬಹುದು. ಹಾಗೆಯೇ ಒಬ್ಬ ನರನ ಒಂದು ಓಡಾಟ ಇಡೀ ವಿಶ್ವದ ಗಡಿಬಿಡಿಗೆ ಸಾಕ್ಷ್ಯವಾಗಬಹುದು, ಒಬ್ಬ ಪುರುಷ ಸಮಸ್ತ ಮಾನವರ ಪ್ರತಿನಿಧಿಯಾಗಿ ನಿಲ್ಲಬಹುದು. (ಎಸ್.ವಿ.ಆರ್.)

**ಅಂತರವನ್ನು ಅಳೆಯುವ ಕೈಯಂತ್ರ :** ಅಂತರಗಳನ್ನು ಅಳೆಯುವುದಕ್ಕಾಗಿ ಉಪಯೋಗಿಸುವ ಚಿಕ್ಕ ದುರ್ಬೀನಿನಿಂದ ಕೂಡಿದ ಉಪಕರಣ (ಹ್ಯಾಂಡ್‌ಲೆವಲ್ಸ್). ಸಾಮಾನ್ಯವಾಗಿ 4"–6" ಉದ್ದವಿದ್ದು ಆಕಾರದಲ್ಲಿ ಕೊಳವೆಯಂತಿರುತ್ತದೆ.ಕೊಳವೆಯ ಮೇಲೆ



ಅಂತರವನ್ನು ಅಳೆಯುವ ಕೈ ಯಂತ್ರ

ಒಂದು ರಸಮಟ್ಟವಿದ್ದು, ರಸಗುಳ್ಳೆಯ ಓಡಾಟ ಕೊಳವೆಯಲ್ಲಿರುವ ಕನ್ನಡಿಯಲ್ಲಿ ಪ್ರತಿಬಿಂಬಿತವಾಗಿ ಯಾವ ವಸ್ತುವಿನ ಮಟ್ಟವನ್ನು ವೀಕ್ಷಿಸಲು ಪ್ರಯತ್ನಿಸುತ್ತೇವೆಯೋ ಆ ವಸ್ತುವಿಗೆ ನೇರವಾಗಿ ಗೋಚರವಾಗುವುದು.

ಇದು ಗಾತ್ರದಲ್ಲಿ ಕಿರಿದಾಗಿದ್ದು ಬೇರೊಂದು ಆಶ್ರಯವಿಲ್ಲದಂತೆ ಕೈಯಲ್ಲಿ ಹಿಡಿದು ಉಪಯೋಗಿಸಲನುಕೂಲವಾಗಿದೆ. ಅಂತರದ ವ್ಯತ್ಯಾಸಗಳನ್ನು ಅತಿ ಶೀಘ್ರದಲ್ಲಿ ಕಂಡುಹಿಡಿಯಲು ಇದಕ್ಕಿಂತ ಸುಲಭವಾದ ಉಪಕರಣ ಮತ್ತಾವುದೂ ಇಲ್ಲ. ಇಂಥ ಉಪಕರಣಗಳಲ್ಲಿ ಆಬ್‌ನೀ ಕ್ಲಿನೋಮೀಟರ್ ಹೆಚ್ಚು ಜನಪ್ರಿಯವಾಗಿದೆ. (ಎಚ್.ಕೆ.ಪಿ.)

**ಅಂತರವಲೋಕನ :** ಒಬ್ಬ ವ್ಯಕ್ತಿಯ ಪ್ರಜ್ಞಾನುಭವದ (ಕಾನ್ಷಸ್ ಎಕ್ಸ್‌ಪೀರಿಯನ್ಸ್) ಸ್ವಯಂ ವೀಕ್ಷಣೆ (ಇಂಟ್ರಸ್ಪೆಕ್ಷನ್). ಅದು ಒಂದು ಒಳನೋಟ; ತನ್ನ ಪ್ರಬುದ್ಧ ಚೇತನದಲ್ಲಿ ನಡೆಯುತ್ತಿರುವ ಆಲೋಚನೆಗಳು, ಭಾವನೆಗಳು ಮತ್ತು ಇಚ್ಛೆಗಳಲ್ಲದೆ ತಾನು ಯಾವುದನ್ನು ನೋಡುತ್ತಾನೆ, ಕೇಳುತ್ತಾನೆ ಅಥವಾ ಕಲ್ಪಿಸಿಕೊಳ್ಳುತ್ತಾನೆ ಎಂಬುವುಗಳ ಬಗ್ಗೆ, ಒಬ್ಬ ವ್ಯಕ್ತಿ ವಿವರಗಳನ್ನು ನೀಡುವ ವಿಧಾನ. ಅಂದರೆ, ಒಬ್ಬ ವ್ಯಕ್ತಿ ತನ್ನ ಪ್ರಬುದ್ಧ ಪ್ರಜ್ಞಾ ಪ್ರವಾಹದ (ಸ್ಟ್ರೀಮ್ ಆಫ್ ಕಾನ್ಷಸ್‌ನೆಸ್) ಮೂಲಾಂಶಗಳ ವೈಲಕ್ಷಣ್ಯಗಳಲ್ಲಿರುವ ಪರಸ್ಪರ ಹೋಲಿಕೆ ವ್ಯತ್ಯಾಸಗಳನ್ನು ಗುರುತಿಸಿ, ಅವುಗಳನ್ನು ವಿಂಗಡಿಸಿ ವಿವರಿಸುವ ಕ್ರಮ.

ತನ್ನ ಪ್ರಜ್ಞಾರಂಗದಲ್ಲಿ ನಡೆಯುವ ಘಟನೆಗಳನ್ನು ವೀಕ್ಷಿಸಲು ಉಪಯೋಗಿಸುವ ಅಂತರವಲೋಕನಕ್ರಿಯೆ ಪ್ರತಿಯೊಬ್ಬ ವ್ಯಕ್ತಿಗೂ ಪರಿಚಿತವಾದದ್ದೇ. ಆಗಾಗ ತನ್ನ ಪ್ರಜ್ಞಾವ್ಯಾಪಾರದ ವಿಚಾರವಾಗಿ ಆತ ಸ್ವಲ್ಪ ವಿವರಣೆ ಕೊಡಬಲ್ಲನೆಂಬುದು ಸರ್ವವೇದ್ಯ. ತಾನು ಆಲಿಸುವ ಧ್ವನಿಯನ್ನಾಗಲಿ ಅನುಭವಿಸುವ ಉಷ್ಣತೆಯನ್ನಾಗಲಿ ಆಹ್ಲಾದವನ್ನಾಗಲಿ ತನ್ನ ಕೋಪದ ಉದ್ರಿಕ್ತಸ್ವಭಾವವನ್ನಾಗಲಿ ತನ್ನ ವಿಷಣ್ಣತೆಯನ್ನಾಗಲಿ ಆತ ನಿರೂಪಿಸಬಹುದು. ವಯಸ್ಕನಾದ ಪ್ರತಿಯೊಬ್ಬನೂ ತನ್ನ ಪ್ರಜ್ಞಾನುಭವಗಳನ್ನು ನಿರೂಪಿಸಲು ಶಕ್ತನಾಗಿರುತ್ತಾನೆ ಎಂದು ಹೇಳಬಹುದು.

ಆದರೆ, ತನ್ನ ವಿಚಾರವಾಗಿಯೋ ತನ್ನ ಸ್ವಂತ ತೊಂದರೆಗಳ ವಿಚಾರವಾಗಿಯೋ ಚಿಂತೆ ಮಾಡುವುದು, ತನ್ನ ವ್ಯಕ್ತಿತ್ವದ ವಿಚಾರವಾಗಿ ವ್ಯಸನಾಕ್ರಾಂತನಾಗಿರುವುದು ಅಂತರವಲೋಕನವಲ್ಲ. ಅದು ಒಂದು ಬಗೆಯ ಸ್ಪಷ್ಟವಾದ, ನಿಯಮಿತ ವೀಕ್ಷಣೆ. ಅಲ್ಲಿ ಚೇತನದ ಒಂದು ವಿಶಿಷ್ಟ ಅನುಭವದ ಮೇಲೆ ನಮ್ಮ ಗಮನ ಕೇಂದ್ರೀಕೃತವಾಗಿ ಏನು ನಡೆಯುತ್ತಿದೆ ಎಂಬುದನ್ನು ನಿಖರವಾಗಿ ಅರಿಯಬೇಕೆಂಬ ಉದ್ದೇಶವಿರುತ್ತದೆ.

**ಹಿನ್ನೆಲೆ:** ಆಧುನಿಕ ಮನೋವಿಜ್ಞಾನದ ಸಂಶೋಧನಾ ಕಾರ್ಯಗಳಿಗೆ ಉಪಯೋಗವಾಗುವುದಕ್ಕೆ ಮೊದಲೇ ಅಂತರವಲೋಕನ ವಿಧಾನ ಪ್ರಚಲಿತವಾಗಿತ್ತು. ತತ್ತ್ವಶಾಸ್ತ್ರದಲ್ಲಿ ಅಂತರವಲೋಕನ ವಿಧಾನದ ಉಪಯುಕ್ತತೆ ಬಹಳ. ಇಂಗ್ಲಿಷ್ ತತ್ತ್ವಶಾಸ್ತ್ರಜ್ಞರಾದ ಥಾಮಸ್ ಹಾಬ್ಸ್, ಜಾನ್ ಲಾಕ್, ಜಾರ್ಜ್ ಬರ್ಕ್ಲೆ, ಡೇವಿಡ್ ಹ್ಯೂಮ್, ಜೇಮ್ಸ್ ಮಿಲ್, ಜಾನ್ ಸ್ಟುವರ್ಟ್ ಮಿಲ್, ಅಲೆಕ್ಸಾಂಡರ್ ಬೇನ್– ಮೊದಲಾದವರು ಇದಕ್ಕೆ ಆದ್ಯತೆ ನೀಡಿದರು. ಇತ್ತೀಚಿನವರೆಗೆ ತತ್ತ್ವಶಾಸ್ತ್ರಜ್ಞರು ಮತ್ತು ದಾರ್ಶನಿಕರು ಅಂತರವಲೋಕನ ವಿಧಾನವನ್ನು ವಿಶೇಷವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಆದರೆ, ವಸ್ತುನಿಷ್ಠ ಹಾಗೂ ನಿರ್ದಿಷ್ಟ ವಿಧಾನಗಳನ್ನು ಉಪಯೋಗಿಸಿಕೊಂಡು, ಕೆಲವು ದಶಕಗಳಲ್ಲಿಯೇ ಅಭಿವೃದ್ಧಿಯ ಹಂತಗಳನ್ನು ಏರಿದ ಆಧುನಿಕ ಮನೋವಿಜ್ಞಾನದಲ್ಲಿ, ಅಂತರವಲೋಕನ ವಿಧಾನ ಸಾಕಷ್ಟು ಪರಿಷ್ಕಾರಗೊಂಡು ಉಪಯೋಗಿಸಲ್ಪಟ್ಟಿತು. ಕುಲ್ಪೆ, ವುಂಟ್, ಟಿಚ್‌ನರ್ ಮೊದಲಾದವರು ಅಂತರವಲೋಕನ ವಿಧಾನವನ್ನು ಮನೋವ್ಯಾಪಾರಗಳ ವೀಕ್ಷಣೆಯಲ್ಲಿ ಸಮರ್ಪಕವಾಗಿ ಉಪಯೋಗಿಸಿದರು. ತತ್‌ಕ್ಷಣದ ಮತ್ತು ಪೂರ್ಣವಾದ ಪ್ರಜ್ಞಾನುಭವಗಳನ್ನು ವೀಕ್ಷಿಸಲು ಕುಲ್ಪೆ ಮತ್ತು ಆತನ ಹಿಂಬಾಲಕರು ಈ ವಿಧಾನವನ್ನು ಬಳಸಿದರು. ಇದರಿಂದಾಗಿ, ಪ್ರತಿಮಾರಹಿತ ಆಲೋಚನೆಯ (ಇಮೇಜ್‌ಲೆಸ್ ಥಾಟ್) ಸಾಧ್ಯತೆ ಇರುವುದು ತಿಳಿದುಬಂದಿತು.

**ಪ್ರಾಯೋಗಿಕ ಅಂತರವಲೋಕನ :** ಮೊಟ್ಟಮೊದಲನೆಯ ಮನೋವೈಜ್ಞಾನಿಕ ಪ್ರಯೋಗಶಾಲೆ 1879ರಲ್ಲಿ ಲೀಪ್‌ಜಿಗ್‌ನಲ್ಲಿ ಪ್ರಾರಂಭವಾಯಿತು. ಇದರ ಸ್ಥಾಪಕ ವಿಲ್‌ಹೆಮ್ ವುಂಟ್. ಈ ಪ್ರಯೋಗಶಾಲೆಯಲ್ಲಿ ಸಂಶೋಧಕರು, ಮನೋವ್ಯಾಪಾರಗಳನ್ನು ಅರಿಯಲು ನವೀನ ಸಲಕರಣೆಗಳನ್ನು ಬಳಸಲು ತೊಡಗಿದರು. ವುಂಟನ ಅಭಿಪ್ರಾಯದಂತೆ, ಈ ಪ್ರಾಯೋಗಿಕ ಮನೋವಿಜ್ಞಾನದ ಪ್ರಮುಖ ಉದ್ದೇಶ ಒಬ್ಬ ಭೌತಶಾಸ್ತ್ರಜ್ಞ, ಒಂದು ವಸ್ತುವನ್ನು ಅದರ ಸಣ್ಣ ಸಣ್ಣ ಮೂಲಾಂಶಗಳಾಗಿ ವಿಂಗಡಿಸುವಂತೆ, ಮನೋವಿಜ್ಞಾನಿ ಕೂಡ ಒಬ್ಬ ವ್ಯಕ್ತಿಯ ಪ್ರಜ್ಞಾನುಭವದ ಮೂಲಾಂಶಗಳನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳಬೇಕೆಂಬುದು. ಪ್ರಾಯೋಗಿಕವಾಗಿ ಅನುಭವಗಳನ್ನು ಉಂಟುಮಾಡುವ ಪ್ರಚೋದಕಗಳನ್ನು (ಸ್ಟಿಮ್ಯುಲೈ) ನಿಯಂತ್ರಿಸಲು ಇಲ್ಲಿ ಉಪಕರಣಗಳ ಆವಶ್ಯಕತೆ ಕಂಡುಬಂದಿತು. ಆದರೆ ವಾಸ್ತವಾಗಿ ಇಲ್ಲಿ ಉಪಯೋಗಿಸಲಾದ ವಿಧಾನ ಪ್ರಾಯೋಗಿಕ ಅಂತರವಲೋಕನ. ವುಂಟನ ಪ್ರಯೋಗಶಾಲೆಯಲ್ಲಿ ಈ ವಿಧಾನದ ನೆರವಿನಿಂದ ಸಂವೇದನೆ ಮತ್ತು ಸಂವೇದನಾಗ್ರಾಹ್ಯಗಳಿಗೆ (ಪರ್ಸೆಪ್ಷನ್) ಸಂಬಂಧಪಟ್ಟ ಸಮಸ್ಯೆಗಳ ಅಧ್ಯಯನಕ್ಕೆ ಪ್ರಾಧಾನ್ಯ ಕೊಡಲಾಗಿತ್ತಾದರೂ ಭಾವನೆಗಳು, ಮನೋಪ್ರತಿಮೆಗಳು ಹಾಗೂ ಭಾವನೆಗಳನ್ನೂ (ಐಡಿಯಾಸ್) ಅಧ್ಯಯನ ಮಾಡುವ ಪ್ರಯತ್ನ ನಡೆದಿತ್ತು. ಗಮನ ಸೆಳೆಯುವ ಮತ್ತೊಂದು ವಿಷಯವೆಂದರೆ, ಸಂಶೋಧಕರಿಗೆ, ಅಂತರವಲೋಕನ ವಿಧಾನದಲ್ಲಿ ದೀರ್ಘ ಹಾಗೂ ಸಮರ್ಪಕ ತರಬೇತಿ ಕೊಡಲಾಗುತ್ತಿದ್ದುದು.

ವುಂಟನ ಶಿಷ್ಯರಲ್ಲೊಬ್ಬನಾದ ಟಿಚ್‌ನರ್ (1867–1927) ಅಂತರವಲೋಕನ ವಿಧಾನವನ್ನು ಬಹಳ ಪ್ರಭಾವಯುತವನ್ನಾಗಿ ಮಾಡಿದನು. ಮನೋವಿಜ್ಞಾನ ರಂಗದಲ್ಲಿ ಸ್ವರೂಪಾತ್ಮಕ ಸಿದ್ಧಾಂತ (ಸ್ಟ್ರಕ್ಚರಲಿಸಮ್) ಎಂಬ ಒಂದು ಪಂಥವನ್ನೇ ಸ್ಥಾಪಿಸಿದ. ಈತ ಮನೋವಿಜ್ಞಾನದ ಅಧ್ಯಯನ ವಸ್ತುವು ಪ್ರಜ್ಞಾನುಭವ ಎಂದೂ ಅದರ ಅಧ್ಯಯನಕ್ಕೆ ಸಮರ್ಪಕವಾದ ವಿಧಾನ ಅಂತರವಲೋಕನವೆಂದೂ ಪ್ರತಿಪಾದಿಸಿದ್ದಾನೆ. ಟಿಚ್‌ನರನ ಪ್ರಕಾರ, ಪ್ರಜ್ಞಾನುಭವದ ರಚನಾಂಶಗಳು ಸಂವೇದನೆ (ಸೆನ್ಸೇಷನ್), ಭಾವ (ಫೀಲಿಂಗ್) ಮತ್ತು ಮನೋಪ್ರತಿಮೆಗಳು. ಪ್ರತಿಯೊಂದು ರಚನಾಂಶವೂ ಗುಣ, ತೀವ್ರತೆ ಮತ್ತು ಅವಧಿಗಳಿಂದ ಕೂಡಿರುತ್ತದೆ. ಇವುಗಳನ್ನು ಮೂಲವಾಗಿಟ್ಟುಕೊಂಡು ಎಲ್ಲ ಜಟಿಲವಾದ, ವೈವಿಧ್ಯಪೂರ್ಣವಾದ ಮಾನಸಿಕ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಬಹುದೆಂಬುದು ಟಿಚ್‌ನರನ ಅಭಿಮತ. ಇವುಗಳ ಅಧ್ಯಯನಕ್ಕೆ ಪ್ರಭಾವಶಾಲಿಯಾದ ಏಕೈಕ ವಿಧಾನವೆಂದರೆ ಅಂತರವಲೋಕನವೆಂದು ಆತನ ವಾದ.

**ಆಕ್ಷೇಪಣೆಗಳು :** ಅಂತರವಲೋಕನದ ವಿರುದ್ಧವಾಗಿ ಅನೇಕ ಆಕ್ಷೇಪಣೆಗಳನ್ನು ಮನೋವಿಜ್ಞಾನದ ವಿವಿಧ ಪಂಥಗಳ ಅನುಯಾಯಿಗಳು ಎತ್ತಿದರು. ವರ್ತನಾತ್ಮಕ ಸಿದ್ಧಾಂತದ (ಬಿಹೇವಿಯರಿಸಂ) ಆಚಾರ್ಯಪುರುಷನಾದ ಜೆ. ಬಿ. ವಾಟ್ಸನ್, ಟಿಚ್‌ನರನ ಪಂಥವನ್ನು ತೀವ್ರವಾಗಿ ಟೀಕಿಸಿದನು. ಈ ಪಂಥದಲ್ಲಿ ಅಧ್ಯಯನ ವಿಧಾನ ಸಂಪೂರ್ಣವಾಗಿ ವ್ಯಕ್ತಿಗತ (ಸಬ್ಜೆಕ್ಟಿವ್) ಸ್ವಭಾವದಿಂದ ಕಲುಷಿತವಾಗಿದೆಯೆಂಬುದು ಆತನ ವಾದ. ಅಂತರವಲೋಕನವಿಧಾನದಲ್ಲಿ ಸಮರ್ಪಕ ತರಬೇತಿ ಕೊಡುವುದು ಕಷ್ಟಸಾಧ್ಯ. ಆದುದರಿಂದ, ಮನೋವಿಜ್ಞಾನ, ವಿಜ್ಞಾನವೆಂದು ಪರಿಗಣಿಸಲ್ಪಡಬೇಕಾದರೆ ಅದು ಅಂತರವಲೋಕನದಿಂದ ವಿಮುಕ್ತವಾಗಬೇಕೆಂದು ವಾಟ್ಸನ್ ಕರೆಕೊಟ್ಟ.

ಪ್ರಜ್ಞಾತ್ಮಕ ಪ್ರಕ್ರಿಯೆಗಳು ಅಸ್ಥಿರವಾದುವುಗಳು. ಆದುದರಿಂದ ಅವುಗಳನ್ನು ಅವಲೋಕಿಸುವುದಕ್ಕೂ ಮತ್ತು ಸರಿಯಾಗಿ ದಾಖಲೆ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲವೆಂದು ಕೆಲವು ಮನೋವಿಜ್ಞಾನಿಗಳ ಅಭಿಪ್ರಾಯ.

ಪ್ರಾಣಿಗಳ, ಮಕ್ಕಳ, ಭಾಷೆ ಬಾರದವರ ಮತ್ತು ಹುಚ್ಚರ ಮನೋವ್ಯಾಪಾರಗಳನ್ನು ಅಧ್ಯಯನ ಮಾಡುವುದರಲ್ಲಿ ಅಂತರವಲೋಕನ ಸಹಕಾರಿಯಲ್ಲ. ಮನೋವಿಜ್ಞಾನದ ಅಧ್ಯಯನವಸ್ತು ಜಟಿಲ ಹಾಗೂ ಕ್ರಿಯಾತ್ಮಕವಾಗಿರುವುದರಿಂದ, ಯಾವುದಾದರೂ ಏಕೈಕ ವಿಧಾನದಿಂದ ಅದನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ. ಆದುದರಿಂದ ಇಂದು ಅನೇಕ ವಿಧಾನಗಳನ್ನು ಮನೋವೈಜ್ಞಾನಿಕ ಸಂಶೋಧನೆಗಳಲ್ಲಿ ಬಳಸಲಾಗುತ್ತಿದೆ. ಯಾವ ಸಂಶೋಧಕನಾದರೂ ವ್ಯಕ್ತಿ ವರ್ತನೆಯ ಉತ್ತಮ ಅರಿವನ್ನು ಪಡೆಯಬೇಕಾದರೆ, ಪರಸ್ಪರ ಪೂರಕವಿಧಾನಗಳನ್ನು ಉಪಯೋಗಿಸುವುದು ಅತ್ಯಾವಶ್ಯಕ.(ಡ.)

**ಅಂತರಾಳ :** ಮುಖ್ಯ ಕೋಣೆಯನ್ನು ಪ್ರವೇಶಿಸುವುದಕ್ಕೆ ಮುನ್ನ ಇರುವ ಚಿಕ್ಕ ಕೋಣೆಯೇ ಅಂತರಾಳ. ಇದನ್ನು ಮುಂಗೋಣೆ (ಆಂಟಿ ರೂಮ್) ಎನ್ನಬಹುದು. ಭಾರತದ ದೇವಾಲಯಗಳಲ್ಲಿ ಇಂಥ ಕೋಣೆಯನ್ನು ಕಾಣಬಹುದು. ದೇವರ ಪ್ರತಿಮೆ ಇರುವ ಗರ್ಭಗೃಹಕ್ಕೂ ಭಕ್ತಾದಿಗಳು ನಿಲ್ಲುವ ಸ್ಥಳವಾದ ಮಂಟಪಕ್ಕೂ ಇದು ಮಧ್ಯೆ ಇರುತ್ತದೆ. (ಕೆ.ಎಸ್.ಎಸ್.)




**ಅಂತರಿಕ್ಷ ಕಾಯಿದೆ :** ಒಂದು ದೇಶಕ್ಕೆ ತನ್ನ ಭೂಭಾಗದ ಮೇಲೆ ಸರ್ವೋಚ್ಚ ಸ್ವಾಮ್ಯವಿದೆ. ಅದನ್ನು ಅತಿಕ್ರಮಿಸುವುದು ಅಕ್ರಮಧಾಳಿ ಎನಿಸುವುದು. ತನ್ನ ಭೂಪ್ರದೇಶವನ್ನು ಪರಕೀಯ ಧಾಳಿಯಿಂದ ರಕ್ಷಿಸಿಕೊಳ್ಳುವ ಹಕ್ಕು ಪ್ರತಿಯೊಂದು ರಾಷ್ಟ್ರಕ್ಕೂ ಇದೆ. ಸಮುದ್ರದಿಂದ ಸುತ್ತುವರಿಯಲ್ಪಟ್ಟಿದ್ದರೆ, ಈ ರಾಷ್ಟ್ರಕ್ಕೆ ಸಮುದ್ರದಲ್ಲಿ 1500 ಮೀ.ಗಳಷ್ಟು ದೂರದವರೆಗೆ ಅಧಿಕಾರವಿದೆ. ಆದ್ದರಿಂದ ಪರಕೀಯ ನೌಕಾಬಲ ಭೂಮಿಯಿಂದ 1500 ಮೀ.ಗಳ ಒಳಗೆ ಪ್ರವೇಶಿಸದಂತೆ ಪ್ರತಿಬಂಧಿಸುವ ಹಕ್ಕು ಪ್ರತಿಯೊಂದು ರಾಷ್ಟ್ರಕ್ಕೂ ಇದೆ.

ವೈಮಾನಿಕ ವಿಜ್ಞಾನ ಬೆಳೆದು, ವಿಮಾನಗಳು ಹಾರಾಡಲು ಮೊದಲಾದ ಮೇಲೆ, ಒಂದು ರಾಷ್ಟ್ರ ತನ್ನ ಭೂಪ್ರದೇಶದ ಸಮಗ್ರತೆಯನ್ನು, ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಕ್ಕೆ ವಾಯುಪ್ರದೇಶದಲ್ಲಿಯೂ ಹಕ್ಕನ್ನು ಪಡೆಯುವುದು ಅನಿವಾರ್ಯವಾಯಿತು. ಇಲ್ಲದಿದ್ದರೆ, ಪರರಾಷ್ಟ್ರ ವಿಮಾನದಾಳಿಯಿಂದ ಒಂದು ರಾಷ್ಟ್ರದ ಆಸ್ತಿಪಾಸ್ತಿಗಳು ಧ್ವಂಸವಾಗಿ, ಪ್ರಾಣಹಾನಿಯಾಗಬಹುದು. ಆದಕಾರಣ 1906ರಲ್ಲಿ ಅಂತಾರಾಷ್ಟ್ರೀಯ ಶಾಸನ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ಇಂಟರ್ನ್ಯಾಷನಲ್ ಲಾ) ಒಂದು ಸಿದ್ಧಾಂತವನ್ನು ಅಂಗೀಕರಿಸಿತು. ಪ್ರತಿಯೊಂದು ರಾಷ್ಟ್ರಕ್ಕೂ ತನ್ನ ಭೂಭಾಗದ ಮೇಲೆ 1500 ಮೀ.ಗಳ ಎತ್ತರದವರೆಗೆ ವಾಯುಮಂಡಲದಲ್ಲಿ ಸರ್ವಾಧಿಕಾರ ಇರತಕ್ಕದ್ದು. ಆ ಎತ್ತರದ ಕೆಳಗೆ ಪರಕೀಯ ವಿಮಾನಗಳು ಒಂದು ದೇಶದ ಮೇಲೆ ಅದರ ಒಪ್ಪಿಗೆಯಿಲ್ಲದೆ ಹಾರಾಡುವುದು, ಆ ದೇಶದ ವಾಯುಮಂಡಲದ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಂತೆ ಎಂದು ಆ ಸಂಸ್ಥೆ ಅಭಿಪ್ರಾಯಪಟ್ಟಿತು. ಆದರೆ ಜಗತ್ತಿನ ಅನೇಕ ರಾಷ್ಟ್ರಗಳು ಈ ಸಂಸ್ಥೆಯ ಸಿದ್ಧಾಂತವನ್ನು ಒಪ್ಪಿಕೊಂಡಿರಲಿಲ್ಲ 1919ರಲ್ಲಿ ಶಾಂತಿಸಮ್ಮೇಳನ, ಒಂದು ರಾಷ್ಟ್ರದ ಭೂಪ್ರದೇಶದ ಮೇಲಿರುವ ವಾಯುಮಂಡಲ ಆ ರಾಷ್ಟ್ರಕ್ಕೆ ಸಂಪೂರ್ಣವಾಗಿ ಸರ್ವ ಹಕ್ಕುಗಳೊಡನೆ ಸೇರಿದೆ ಎಂಬುದಾಗಿ ತೀರ್ಮಾನಿಸಿ, ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದ್ದ ಉಚ್ಚ ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಿ ಅಂಗೀಕರಿಸಿದುವು.

ವೈಮಾನಿಕ ವಿಜ್ಞಾನ ನಾಗಾಲೋಟದಲ್ಲಿ ಬೆಳೆಯುತ್ತಿರುವ ಈ ಶತಮಾನದಲ್ಲಿ ಅಂತರಿಕ್ಷ ಕಾಯಿದೆ ಬೇಗಬೇಗನೆ ಬದಲಾಗುತ್ತಿದೆ. 1920ರಲ್ಲಿ ಒಂದು ರಾಷ್ಟ್ರದ ಭೂಪ್ರದೇಶದ ಮೇಲೆ ನೇರವಾಗಿರುವ ಅಂತರಿಕ್ಷ ಪ್ರದೇಶದಲ್ಲಿ ಮಾತ್ರ ಆ ದೇಶಕ್ಕೆ ಹಕ್ಕಿದೆ ಎಂದು ಭಾವಿಸಲಾಗಿತ್ತು. ಆದರೆ, ಒಂದು ವಿಮಾನ ನೇರವಾಗಿ ಒಂದು ದೇಶದ ಅಂತರಿಕ್ಷಕ್ಕೆ ಬಾರದೆಯೇ ದೇಶದ ಭದ್ರತೆಗೆ ಅಪಾಯ ತರಬಹುದಾಗಿದೆ. ಈಗ ಈ ಅಂತರಿಕ್ಷದ ಹಕ್ಕು ಸಮುದ್ರದ ಮೇಲಿನ ಅಂತರಿಕ್ಷದಲ್ಲೂ ಕೆಲವು ದೂರದವರೆಗೆ ವಿಸ್ತರಿಸಿದೆ.

ಒಂದು ದೇಶದ ಅಂತರಿಕ್ಷ ಪ್ರದೇಶದಲ್ಲಿ ಯಾವ ಬಗೆಯ ವಿಮಾನಗಳು ಹಾರಾಡಬಹುದೆಂಬುದನ್ನು ನಿಗದಿ ಮಾಡಿದ್ದಾರೆ. ಅದರಲ್ಲಿ ಖಾಸಗಿ ವಿಮಾನಗಳೆಂದೂ ಸಾರ್ವಜನಿಕ ವಿಮಾನಗಳೆಂದೂ ವಿಂಗಡಿಸಿದ್ದಾರೆ. ಅಂತಾರಾಷ್ಟ್ರೀಯ ವಿಮಾನಗಳು ಸಾರಿಗೆ ವಿಮಾನಗಳು ಹಾರಾಡುವುದನ್ನು ನಿಯಂತ್ರಿಸಲಾಗಿದೆ.

ಈ ಶಾಖೆಯ ಕಾಯಿದೆ ಹೆಸರಿಗೆ ಕಾಯಿದೆಯೇ ಹೊರತು, ನ್ಯಾಯಶಾಸ್ತ್ರದಲ್ಲಿ ಕಾಯಿದೆ ಎಂಬ ಮಾತಿಗೆ ಇರುವ ಸಂಪೂರ್ಣ ಅರ್ಥದಲ್ಲಿ ಕಾಯಿದೆಯಲ್ಲ. ಈ ಕಾಯಿದೆಗೆ ವಿವಿಧ ರಾಷ್ಟ್ರಗಳ ನಡುವೆ ಆಗಿರುವ ಒಪ್ಪಂದವೇ ಆಧಾರವಾಗಿದೆ. (ಕೆ.ಪಿ.)

**ಅಂತರಿಕ್ಷ ಮತ್ತು ಅಂತರಿಕ್ಷ ದೇವತೆಗಳು :** ಅಂತರಿಕ್ಷವೇ ಒಂದು ದೇವತೆ ಎಂಬ ಭಾವನೆ ಬಹಳ ಪ್ರಾಚೀನಕಾಲದ್ದು. ಪ್ರಾಚ್ಯ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ವಿಕಾಸಗೊಂಡಿರುವ ಧರ್ಮಗಳ ಹಿನ್ನೆಲೆಯಲ್ಲಿ ಅಂತರಿಕ್ಷ ದೇವತೆಯ ಪ್ರಭಾವವನ್ನು ಕಾಣಬಹುದು. ಆದುದರಿಂದ ಅನಾದಿಕಾಲದ ಪ್ರಕೃತಿ ಧರ್ಮದೃಷ್ಟಿ ಇದೂ ಪ್ರಾಚೀನವಾದುದು. ಈ ಅಂತರಿಕ್ಷದೇವತೆಯ ಸ್ವರೂಪವನ್ನು ಬೇರೆ ಬೇರೆ ದೇಶದ ಬೇರೆ ಬೇರೆ ಜನಾಂಗದವರು ಬೇರೆ ಬೇರೆ ರೂಪದಲ್ಲಿ ಗುರುತಿಸಿದ್ದಾರೆ. ಅಮೆರಿಕದ ಮಾಯ ಜನಾಂಗ, ಇಂಕ ಜನಾಂಗ, ಟ್ರೆಸ್ಸಿಲ್ ಮತ್ತು ಆಂಡಿಸ್ ಪ್ರದೇಶದ ಜನ ಹಾಗೂ ಎಸ್ಕಿಮೋ ಜನರ ಪ್ರಾಚೀನ ಪುರಾಣಗಳಲ್ಲಿ ಈ ದೇವತೆಯನ್ನು ಹೆಸರಿಸಲಾಗುತ್ತದೆ. ಅಂಡಮಾನಿನ ಪುಲಗ ಹಾಗೂ ಪ್ರಾಚೀನ ಭಾರತದ ವರುಣ ಅಂತರಿಕ್ಷ ದೇವತೆಯ ರೂಪವೆಂದು ತಿಳಿದುಬಂದಿದೆ. ಮಲೇಷ್ಯ ಪಾಲಿನೇಷ್ಯ, ಆಸ್ಟ್ರೇಲಿಯ ಮೊದಲಾದ ದೇಶಗಳಲ್ಲೂ ಈ ದೇವತೆಯ ಲಕ್ಷಣಗಳು ವಿವಿಧ ರೂಪಾಂತರಗಳಲ್ಲಿ ಕಂಡುಬರುತ್ತವೆ; ನೂರಾರು ಬೇರೆ ಬೇರೆ ಹೆಸರುಗಳಿಂದ ಈ ದೇವತೆಯನ್ನು ಕರೆದಿದ್ದಾರಾದರೂ ಈ ದೇವತೆಯ ಸ್ವರೂಪವನ್ನು ನಾವು ಎಲ್ಲ ಕಡೆಯೂ ಖಚಿತವಾಗಿ ಗುರುತಿಸಬಹುದು. ಒಂದೇ ಅಂತರಿಕ್ಷ ದೇವತೆಯ ಬೇರೆ ಬೇರೆ ಸ್ವರೂಪವನ್ನು ಆಫ್ರಿಕದ ಆದಿವಾಸಿಗಳು ವರ್ಣಿಸಿರುತ್ತಾರೆ.

ಅಂತರಿಕ್ಷದೇವತೆ ಆಳದ ಜಾಗವಿಲ್ಲ. ಇದರ ರಾಜ್ಯ ವಿಶ್ವದಷ್ಟು ವಿಸ್ತಾರ. ಆದಿಮಾನವ ಸೃಷ್ಟಿಯ ವಿಷಯವಾಗಿ ಹೆಚ್ಚು ಕಡಿಮೆ ಒಂದೇ ಭಾವನೆಯನ್ನು ಹೊಂದಿದ್ದುದರಿಂದ ಈ ದೇವತೆಯ ವಿಷಯದಲ್ಲಿ ಏಕರೂಪತೆಯನ್ನು ಕಾಣುತ್ತೇವೆ ಇದು ದ್ರವರೂಪವಾಗಿಯೂ ಪಾರದರ್ಶಕವಾಗಿಯೂ ಇವೆಯೆಂದೂ ಇದರ ಕೆಳಗೆ ನಮ್ಮ ಭೂಮಿ ಇರುವುದೆಂದೂ ಅವರು ಭಾವಿಸಿದ್ದರು. ಆಕಾಶದ ಜಲಗಳಿಗೂ ಭೂಮಿಯ ಸಮುದ್ರಗಳಿಗೂ ಇರುವ ಸಂಬಂಧ. ದೊಡ್ಡ ನದಿಗಳು ಆಕಾಶದ ಮೂಲವನ್ನೆ ಹೊಂದಿವೆ ಎಂಬ ಕಥಾನಕಗಳು, ಮೇಘಗಳಿಂದ ವರ್ಷಿಸುವ ಜಲರಾಶಿಗಳು–ಮೊದಲಾದುವನ್ನು ಗಮನಿಸಿದರೆ ಆಕಾಶ ದೇವತೆಯ ಹಾಗೂ ಮಳೆ ದೇವತೆಯ ಕೆಲಸ ಸ್ಪಷ್ಟವಾಗುತ್ತದೆ. ಪ್ರಕೃತಿಯ ಮಹತ್ಕಾರ್ಯಗಳನ್ನೆಲ್ಲ ಆಕಾಶ ದೇವತೆಗೆ ಹೇಳಿರುವುದರ ಅರ್ಥ ಸ್ಪಷ್ಟವಾಗುವುದು. ಅಂತರಿಕ್ಷಕ್ಕೂ ಅಂತರಿಕ್ಷ ದೇವತೆಗೂ ನಿಕಟ ಸಂಬಂಧವಿದೆ. ಆಕಾಶದ್ರವ್ಯ, ಮಳೆ ಮೋಡ, ಗುಡುಗು, ಮಿಂಚು, ಬಿರುಗಾಳಿ, ಮೊದಲಾದುವುಗಳಿಗೂ ಆಕಾಶದೇವತೆಗೂ ಸಂಬಂಧವಿರುವುದು ಸ್ಪಷ್ಟವಾಗುವುದು.

ಹಿಂದೂಗಳ, ಗ್ರೀಕರ, ರೋಮನ್ನರ ಮತ್ತು ಟ್ಯೂಟನ್ ಜನರ ಪುರಾತನರು ಆಕಾಶದೇವತೆಗೆ ಕೊಟ್ಟಿರುವ ದ್ಯೌಃ, ಜ್ಯೂಸ್, ಜೋವಿಸ್, ಟಿಯು ಎಂಬ ಹೆಸರುಗಳಲ್ಲಿ ಸಾಮ್ಯವಿದೆ. ಒಂದು ಕಾಲದಲ್ಲಿ ಈ ದೇವತೆ ವರುಣನಾಗಿ ತುಂಬ ಉದಾತ್ತನಾಗಿ ಕಾಣಿಸುತ್ತಾನೆ. ಇವನು ಸರ್ವವ್ಯಾಪಿ. ಇವನ ಪ್ರಭುತ್ವಕ್ಕೆ ಎಲ್ಲವೂ ಒಳಪಟ್ಟಿವೆ. ಇವನು ಸರ್ವದೃಕ್, ಇವನ ಕಣ್ಣಿಂದ ಯಾವುದೂ ತಪ್ಪಿಸಿಕೊಳ್ಳುವಂತಿಲ್ಲ. ಈ ಮೂರು ಸ್ಥಾನಗಳಲ್ಲಿಯೂ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡು ಬೇರೆ ಬೇರೆ ವ್ಯಾಪಾರಗಳನ್ನು ಸರ್ವಾತ್ಮಕನಾದ ಒಬ್ಬನೇ ದೇವರು ನಡೆಸುವನೆಂದು ವೇದಗಳಲ್ಲಿ ಹೇಳಿರುವುದು ಅತ್ಯಾಶ್ಚರ್ಯಕರವಾಗಿದೆ. ಪೃಥ್ವೀಸ್ಥಾನದಲ್ಲಿ ಅಗ್ನಿಯ ರೂಪದಲ್ಲಿ ಇದ್ದು, ಅಂತರಿಕ್ಷದಲ್ಲಿ ವಿದ್ಯುದ್ರೂಪದಿಂದಲೂ ದ್ಯುಲೋಕದಲ್ಲಿ ಸೂರ್ಯನಾಗಿಯೂ ಶೋಭಿಸುವನೆಂದು ಹೇಳಿದ್ದಾರೆ. ಈ ಬೇರೆ ಬೇರೆ ಸ್ಥಾನಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಒಬ್ಬನೇ ಆದ ವಿಶ್ವಾತ್ಮನು ಹೇಗೆ ಅಭಿವ್ಯಕ್ತನಾಗಿರುವನೆಂಬುದನ್ನು ವಿಶ್ವದಲ್ಲೇ ಅತಿ ಪ್ರಾಚೀನವಾದ ವೇದಗಳು ಉದ್ದಕ್ಕೂ ಘೋಷಿಸುತ್ತವೆ. ಯಾಸ್ಕರು ಏಕ ಆತ್ಮಾ ಬಹುಧಾ ಸ್ತೂಯತೇ ಎಂದು ಈ ಅಂಶವನ್ನು ಪ್ರತಿಪಾದಿಸಿದ್ದಾರೆ. ಹೀಗೆ ದೇವತಾ ವೈವಿಧ್ಯ ಉಪಪನ್ನವಾಗುತ್ತದೆ. ಪೃಥ್ವೀ ಸ್ಥಾನದಲ್ಲಿ ಅಗ್ನಿ, ಪೃಥ್ವೀ, ಸೋಮ, ನದೀ, ಬೃಹಸ್ಪತೀ ದೇವರುಗಳಿರುವಂತೆ, ದ್ಯುಸ್ಥಾನದಲ್ಲಿ ವರುಣ, ಮಿತ್ರ, ಸೂರ್ಯ, ಸವಿತೃ, ಪೂಷನ್, ಅಶ್ವಿನ್, ಋಭು ಮೊದಲಾದ ದೇವತೆಗಳಿರುವಂತೆ ಅಂತರಿಕ್ಷ ಸ್ಥಾನದಲ್ಲಿ ಇಂದ್ರ, ವಾಯು, ಅಪಾಂನಪಾತ್, ರುದ್ರ, ಮರುತ್, ವಾತ, ಪರ್ಜನ್ಯ ಮತ್ತು ಅಬ್ದೇವತೆಗಳು ಇದ್ದಾರೆ.

ಇತರ ದೇಶಗಳಲ್ಲಿ ಹೇಗೋ ಹಾಗೆ ಅಂತರಿಕ್ಷದೇವತೆಗೂ ಮಳೆ, ಗುಡುಗು, ಸಿಡಿಲು ಮೊದಲಾದುವುಗಳಿಗೂ ಇಲ್ಲಿಯೂ ಸಂಬಂಧವಿದೆ. ಈ ದೇವತೆಗಳಲ್ಲಿ ಇಂದ್ರ ಮತ್ತು ವಾಯುವಿಗೆ ಮುಖ್ಯವಾದ ಸ್ಥಾನವಿದೆ. ಬೇರೆ ಬೇರೆ ಪ್ರಕೃತಿಯ ವ್ಯಾಪಾರಗಳನ್ನು ಈ ದೇವತೆಗಳು ಪ್ರತಿಬಿಂಬಿಸಿದರೂ ಆ ಪ್ರಕೃತಿಯ ಸ್ವರೂಪಕ್ಕಿಂತ ಮೀರಿದ ಹಾಗೂ ಸರ್ವವ್ಯಾಪಕವಾದ ಲಕ್ಷಣಗಳನ್ನು ಈ ದೇವತೆಗಳಿಗೆ ಹೇಳಿರುವುದು ಗಮನಾರ್ಹವಾದ ಅಂಶವಾಗಿದೆ. ಈ ದೇವತೆಗಳಿಗೆ ಸರ್ವಶಕ್ತಿತ್ವವನ್ನೂ ಹೇಳಿದ್ದಾರೆ. ಸರ್ವಜ್ಞತ್ವವನ್ನೂ ಹೇಳಿದ್ದಾರೆ. ಜಗತ್ಕಾರಣವಾದ ಪರತತ್ತ್ವವೇ ಹೀಗೆ ಬೇರೆ ಬೇರೆ ರೂಪಗಳಲ್ಲಿ ನಮ್ಮನ್ನು ಕೈಹಿಡಿದು ನಡೆಸುತ್ತದೆ ಎಂದು ವರ್ಣಿಸಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ನಮ್ಮ ದೇಶದವರ ದೇವತಾ ಕಲ್ಪನೆ ಇತರ ದೇಶದವರ ಕಲ್ಪನೆಗಿಂತ ಬೇರೆಯಾಗಿ ಕಂಡುಬರುತ್ತದೆ.

ಅಂತರಿಕ್ಷದೇವತೆಗಳಲ್ಲೆಲ್ಲ ಓಜಸ್ಸುಳ್ಳವನೂ ಬಲಿಷ್ಠನೂ ಆದವನು ಇಂದ್ರ. ಇವನು ಹಿರಣ್ಯವರ್ಣ, ಹಿರಣ್ಯಬಾಹು, ಹಿರಣ್ಯಪಾಣಿ. ಇವನ ಆಯುಧ ಬಲಿಷ್ಠವಾದ ವಜ್ರ. ಈ ವಜ್ರಾಯುಧ ಸಹಸ್ರಧಾರೆಯಿಂದ ಕೂಡಿದುದು. ಇದನ್ನು ಇವನು ಧರಿಸುವುದರಿಂದಲೇ ಇವನಿಗೆ ವಜ್ರಭೃತ್, ವಜ್ರಿವತ್, ವಜ್ರದಕ್ಷಿಣ, ವಜ್ರಬಾಹು ಎಂಬ ಹೆಸರುಗಳು ಬಂದಿವೆ. ಪುರುಷಾಕಾರವನ್ನು ಈತ ಹೊಂದಿದ್ದಾನೆ. ಸ್ವರ್ಣಮಯವಾದ ರಥದಲ್ಲಿ ಇವನು ಮನೋವೇಗವನ್ನು ಮೀರಿ ಸಂಚರಿಸುತ್ತಾನೆ. ಆಕಾಶದಲ್ಲಿ ದ್ಯುಲೋಕವನ್ನು ಇವನು ಸ್ಥಾಪಿಸಿದ. ಮಹತ್ತರವಾದ ಅಂತರಿಕ್ಷವನ್ನೂ ದ್ಯಾವಾಪೃಥುವಿಗಳನ್ನೂ ತನ್ನ ತೇಜಸ್ಸಿನಿಂದ ತುಂಬಿದ್ದಾನೆ.

ವಿಸ್ತಾರವಾದ ಭೂಮಿಯನ್ನು ಪೋಷಿಸುತ್ತಿದ್ದಾನೆ. ಸೋಮಪಾನದಿಂದಾದ ಹರ್ಷದಿಂದ ಈತ ಇದೆಲ್ಲವನ್ನೂ ಮಾಡಿದನು. ಇವನ ವೀರ್ಯವನ್ನು ಅತ್ಯಧಿಕವಾಗಿ ಕೊಂಡಾಡಿದ್ದಾರೆ. ಅಸಾಮಾನ್ಯ ವೀರನಾದ ಇವನು ಅನೇಕಾನೇಕ ಅಸುರರನ್ನು ಧ್ವಂಸಮಾಡಿದ್ದಾನೆ. ವೃತ್ರನೊಡನೆ ಹೋರಾಡಿ ಅವನನ್ನು ವಧಿಸಿದ್ದಾನೆ. ಇವನ ಅನೇಕ ಸಾಹಸಕರ್ಮಗಳಲ್ಲಿ ವೃತ್ರವಧೆ ಮುಖ್ಯವಾದುದು.

ಇಂದ್ರನಂತೆ ಅಂತರಿಕ್ಷಸ್ಥಾನಕ್ಕೆ ಸೇರಿದವರಲ್ಲಿ ವಾಯುವೂ ಮುಖ್ಯ. ವಾಯು ನಿತ್ಯವೂ ಕಾಣಿಸಿಕೊಳ್ಳುತ್ತಾನೆ. ಮಾನವನ ಜೀವನ ವಾಯುವಿನ ಕೃಪೆಯಿಲ್ಲದೆ ಸಾಧ್ಯವಿಲ್ಲ. ನಮಗೆ ಕಾಣುವ ವಾಯುವನ್ನು ಅಧಿಷ್ಠಾನವಾಗಿ ಉಳ್ಳ ಈ ದೇವತೆಯನ್ನು ವೇದಗಳಲ್ಲಿ ಸ್ತುತಿಸಿದ್ದಾರೆ. ವಾಯುವಿನ ರೂಪ ಮನೋಹರವಾದುದು, ಉನ್ನತವಾದುದು. ಮನೋವೇಗ ಇವನದು. ಇವನು ಇಂದ್ರನಂತೆ ನೂರಾರು ಕುದುರೆಗಳು ಹೂಡಿದ ರಥದಲ್ಲಿ ಸಂಚರಿಸುವವನು. ವಾಯುವಿನ ರಥ ಗುಡುಗಿನಂತೆ ಶಬ್ದ ಮಾಡುವುದು. ಈ ರಥದ ವೇಗಕ್ಕೆ ಸಿಕ್ಕ ಸ್ಥಾವರ ಜಂಗಮಾದಿಗಳು ನುಚ್ಚುನೂರಾಗುವುವು. ಪರ್ವತಗಳು ವಾಯುವಿಗನುಗುಣವಾಗಿ ಕಂಪಿಸುವುವು. ವಿಶ್ವದಲ್ಲಿರುವು ದೆಲ್ಲವೂ ಇವನ ಆಳ್ವಿಕೆಗೊಳಪಟ್ಟಿವೆ. ಇವನು ಒಂದು ಕ್ಷಣವೂ ಒಂದೆಡೆಯಲ್ಲಿ ನಿಲ್ಲುವುದಿಲ್ಲ. ಎಲ್ಲ ಪ್ರಾಣಿಗಳಿಗಿಂತ ಮೊದಲು ಹುಟ್ಟಿದವನಿವನು. ಇವನ ಉತ್ಪತ್ತಿಯನ್ನಾಗಲೀ ವ್ಯಾಪ್ತಿಯನ್ನಾಗಲೀ ಯಾರೂ ತಿಳಿಯಲಾರರು. ದೇವತೆಗಳಿಗೂ ಇವನು ಆತ್ಮನಾಗಿದ್ದಾನೆ. ಎಲ್ಲ ಪ್ರಾಣಿಗಳಿಗೂ ಇವನು ಜೀವಾಧಾರ. ಇವನ ರೂಪ ಕಾಣಿಸದು. ಶಬ್ದದಿಂದ ಇವನ ಬರವನ್ನು ಊಹಿಸಬಹುದು. ಇಂಥ ವಾಯುದೇವ ರೋಗನಿವಾರಕ, ಆಯುರ್ವರ್ಧಕನಾಗಿದ್ದಾನೆ.

ಮಳೆಗೆ ನೇರವಾಗಿ ಸಂಬಂಧಿಸಿದವನು ಪರ್ಜನ್ಯ. ಇವನೂ ಅಂತರಿಕ್ಷದೇವತೆ. ಗರ್ಜನೆ ಮಾಡುತ್ತ ಸಸ್ಯಗಳಲ್ಲಿ ಅಂಕುರಗಳನ್ನು ಇವನು ಸ್ಥಾಪಿಸುತ್ತಾನೆ. ಲೋಕ ಇವನಿಂದಲೇ ಬದುಕಿದೆ. ಜಲರಥದಲ್ಲಿ ಕುಳಿತು ಇವನು ಮೇಘದ ಸುತ್ತಲೂ ಸುತ್ತುತ್ತ ಮೇಘಕೋಶವನ್ನು ಸಡಿಲಿಸಿ ಕೆಳಮೊಗನಾಗಿ ಬಗ್ಗಿಸಿ ಮಳೆ ಸುರಿಸುತ್ತಾನೆ. ಹೀಗೆ ಮಳೆಯಾದಾಗ ಹಳ್ಳ ತಗ್ಗುಗಳೆಲ್ಲ ನೀರಿನಿಂದ ತುಂಬಿಹೋಗಿ ಒಂದೇ ಸಮನಾಗಿ ಕಾಣುತ್ತವೆ.

ಪರ್ಜನ್ಯನಿಗೆ ಅನೇಕ ದೂತರಿದ್ದಾರೆ. ಇವರು ಮಳೆಯನ್ನು ಸುರಿಸುತ್ತಾರೆ. ಸಾರಥಿ ಕುದುರೆಗಳನ್ನು ಚಾವಟಿಯಿಂದ ಹೊಡೆವಂತೆ ತನ್ನ ದೂತರಾದ ಮೋಡಗಳನ್ನು ಹೊಡೆಯುತ್ತಾನೆ. ಮಳೆ ಸುರಿಸುವಾಗ ದೂರದ ಸಿಂಹಗಳ ಗರ್ಜನೆ ಕೇಳಿಸುವುದು. ಪರ್ಜನ್ಯ ಲೋಕದ ಚರಾಚರಗಳಿಗೆ ಸುಖಕರ. ಜಲದೇವತೆಗಳೂ ಅಂತರಿಕ್ಷಸ್ಥಾನಕ್ಕೆ ಸೇರಿದವರು. ಅಂತರಿಕ್ಷದಿಂದ ಮಳೆಯ ರೂಪದಲ್ಲಿ ಭೂಮಿಗೆ ಜಲ ಸುರಿಯುವುದು. ಈ ಜಲವನ್ನು ಅಧಿಷ್ಠಾನವಾಗಿ ಹೊಂದಿರುವ ದೇವತೆ ಜಲದೇವತೆ, ಸೂರ್ಯ ತನ್ನ ಕಿರಣಗಳಿಂದ ಜಲವನ್ನು ಹೀರಿ ಅಬ್ದೇವತೆಯನ್ನು ಬೆಳೆಸುತ್ತಾನೆ. ಇಂದ್ರ ವಜ್ರಾಯುಧದಿಂದ ಮೇಘಗಳನ್ನು ಬಡಿದು ಒಳಗೆ ಸೆರೆಯಾಗಿದ್ದ ಜಲ ಹರಿಯುವಂತೆ ಮಾಡುತ್ತಾನೆ. ಭೂಮಿಯ ಮೇಲೆ ಅನೇಕ ರೂಪದಲ್ಲಿ ಜಲ ಇರುವುದಾದರೂ ಆಕಾಶದಿಂದ ಜಲದ ವರ್ಷವಾಗುವ ಕಾರಣ ಅಬ್ದೇವತೆಯನ್ನು ಅಂತರಿಕ್ಷಸ್ಥಾನದಲ್ಲಿ ಸೇರಿಸಿರುವಂತೆ ಕಾಣುತ್ತದೆ.

ಅಪಾಂನಪಾತ್ ಎಂಬ ದೇವತೆ ಅಗ್ನಿಯ ಒಂದು ರೂಪ. ಈ ದೇವತೆ ಜಲದೊಳಗೆ ಇರುತ್ತ ತೇಜಸ್ವಿಯಾಗಿದೆ. ಇದನ್ನೂ ಅಂತರಿಕ್ಷಸ್ಥಾನದಲ್ಲಿ ಸೇರಿಸಿದ್ದಾರೆ. ಸರ್ಪ ಲೋಕವನ್ನು ಇದು ಸೃಜಿಸಿತೆಂದು ಹೇಳಿದೆ. ಮೇಘದ ಮಧ್ಯದಲ್ಲಿ ಉದಕಗಳ ನಡುವೆ ಇರುವ ಈ ತೇಜೋರೂಪಿ ವೃಷ್ಟಿಗೆ ಕಾರಣವಾಗಿ ತನ್ಮೂಲಕ ಎಲ್ಲ ಲೋಕಗಳ ಜನ್ಮಕ್ಕೂ ಕಾರಣವಾಗಿದೆ. ಇದು ಮಳೆ ಸುರಿಸುತ್ತದೆ. ಮಳೆಯೊಡನೆ ಭೂಮಿಯನ್ನು ಸೇರುತ್ತದೆ. ಸರ್ವತ್ರ ದೀಪ್ತವಾಗಿ ವ್ಯಾಪಿಸಿರುತ್ತದೆ. ಅಂತರಿಕ್ಷದೇವತೆಗಳಲ್ಲಿ ರುದ್ರನೂ ಸೇರಿದ್ದಾನೆ. ಇಂದ್ರ ಮಳೆಯನ್ನು ಸುರಿಸಿದರೆ ಇವನು ಇಷ್ಟಾರ್ಥಗಳನ್ನು ವರ್ಷಿಸುವ ವೃಷಭನಾಗಿದ್ದಾನೆ. ರೋಗ ಪರಿಹಾರಕವಾದ ಔಷಧಗಳನ್ನು ಇವನು ಕೊಡುವನೆಂದು ಹೇಳಿದೆ. ಈ ಔಷಧಗಳು ಪ್ರಾಯಶಃ ಮಳೆಯೇ ಇರಬೇಕೆಂದು ವಿಮರ್ಶಕರು ಹೇಳುತ್ತಾರೆ. ಶತ್ರುನಾಶಕನೂ ಅತಿಭಯಂಕರನೂ ಆದವನಿವನು. ಪ್ರಕೃತಿಯ ರೌದ್ರ ಸ್ವರೂಪವನ್ನು ಇವನು ಪ್ರತಿನಿಧಿಸುತ್ತಾನೆ.

ಈ ಮೇಲೆ ಹೇಳಿದ ದೇವತೆಗಳಂತೆ ಅಂತರಿಕ್ಷಸ್ಥಾನಕ್ಕೆ ಮರುದ್ದೇವತೆಗಳೂ ಸೇರಿದ್ದಾರೆ. ಇವರು ವೀರರು, ಸ್ವರ್ಣವರ್ಣದವರು. ಇವರಿಗೂ ವಿದ್ಯುತ್ತುಗಳಿಗೂ ನಿಕಟಸಂಬಂಧವಿದೆ. ಇವರು ಮಳೆಯನ್ನು ಸುರಿಸುವರೆಂದು ಹೇಳಿದೆ. ಈ ಮರುತ್ತುಗಳು ವರ್ಷಿಸುವಾಗ ವಿದ್ಯುತ್ತುಗಳು ಶಬ್ದ ಮಾಡುತ್ತವೆ. ಇವರು ಸರ್ವಾಭರಣಗಳಿಂದಲೂ ಉದಕಗಳಿಂದಲು ಕೂಡಿದ್ದಾರೆ. ಇವರಿಗೆ ಮನುಷ್ಯರಂತೆ ರೂಪವಿದೆ. ಹೆಗಲುಗಳ ಮೇಲೆ ಆಯುಧಗಳೂ ಪಾದಗಳಲ್ಲಿ ಕಾಲ್ಬಳೆಗಳೂ ವಕ್ಷಸ್ಥಳದಲ್ಲಿ ಚಿನ್ನದ ಹಾರಗಳೂ ಕೈಗಳಲ್ಲಿ ಜ್ವಲಿಸುವ ಮಿಂಚುಗಳೂ ಶಿರಸ್ಸುಗಳಲ್ಲಿ ಸ್ವರ್ಣಕಿರೀಟಗಳೂ ಇವೆ. ಇವರ ರಥದಲ್ಲಿ ಮಧುರವಾದ ಉದಕ ಪ್ರಕಾಶಿಸುತ್ತದೆ. ಮರುದ್ದೇವತೆಗಳಿಗೆ ಭಯಂಕರ ರೂಪವಿರುವಂತೆ ಸೌಮ್ಯ ರೂಪವೂ ಇದೆ. ನೀರಿನಿಂದ ತುಂಬಿದ ಮೇಘದಿಂದ ಸೂರ್ಯನ ಪ್ರಕಾಶವನ್ನು ಮುಚ್ಚಿ ಹಗಲಿನಲ್ಲಿಯೂ ಕತ್ತಲೆಯನ್ನುಂಟು ಮಾಡುತ್ತಾರೆ. ಇವರು ಲೋಕಹಿತಕಾರಕರು. ತಮ್ಮನ್ನು ಸೇವಿಸುವವರಿಗೆ ಬಹು ವಿಧವಾದ ಅನುಗ್ರಹವನ್ನು ಮಾಡುತ್ತಾರೆ.

ಅಂತರಿಕ್ಷಸ್ಥಾನದ ದೇವತೆಗೆ ಪ್ರಧಾನವಾದ ಕರ್ಮ ವರ್ಷಕರ್ಮ. ಈ ಕೆಲಸ ಇಂದ್ರ, ಪರ್ಜನ್ಯ ಮೊದಲಾದವರುಗಳಿಂದ ಆಗುತ್ತದೆ. ಇತರ ದೇಶಗಳಲ್ಲಿ ಹೇಗೋ ಹಾಗೆ ನಮ್ಮಲ್ಲಿಯೂ ಅಂತರಿಕ್ಷಸ್ಥಾನದ ದೇವತೆಗೆ ವಿಶಿಷ್ಟ ಸ್ಥಾನವಿದೆ. ಈ ಒಂದೊಂದು ದೇವತೆಯೂ ಪರತತ್ತ್ವ ಸ್ವರೂಪವೆಂದು ಪ್ರತಿಪಾದಿಸಿರುವುದು ವೈದಿಕ ಧರ್ಮದ ವೈಶಿಷ್ಟ್ಯ.

(ಎನ್.ಎಸ್.ಎ.)

**ಅಂತರಿಕ್ಷ ಮೋಜಣಿ :** ವಿಮಾನಗಳಲ್ಲಿ ಬಿಂಬಗ್ರಾಹಿಗಳನ್ನು (ಕ್ಯಾಮರ) ಕೊಂಡೊಯ್ದು ಅಂತರಿಕ್ಷದಿಂದ ಒಂದು ಭೂಪ್ರದೇಶದ ಛಾಯಾಚಿತ್ರಗಳನ್ನು ಪಡೆದು ಆ ಚಿತ್ರಗಳ ಆಧಾರದಮೇಲೆ ಆ ಪ್ರದೇಶದ ಮೇಲ್ಮೈಲಕ್ಷಣದ ನಕ್ಷೆಯನ್ನು (ಟೊಪಾಗ್ರಫಿಕ್ ಮ್ಯಾಪ್) ತಯಾರಿಸಬಹುದು. ಇಂಥ ಮೋಜಣಿಗೆ ಅಂತರಿಕ್ಷ ಮೋಜಣಿ (ಏರಿಯಲ್ ಸರ್ವೇಯಿಂಗ್) ಎಂದು ಹೆಸರು. ಬಿಂಬ ಗ್ರಾಹಿ ತಟ್ಟೆಯ (ಸೆನ್ಸಿಟಿವ್ ಪ್ಲೇಟ್) ಮೇಲೆ ಬೀಳುವ ಛಾಯೆಯ ಅಳತೆಗಳಿಗೂ ಮತ್ತು ಅದರ ಮೂಲ ವಸ್ತುವಿನ ಅಳತೆಗಳಿಗೂ ಇರುವ ಪ್ರಮಾಣ (ರೇಷಿಯೋ) ಬಿಂಬ ಗ್ರಾಹಿಯ ಮಸೂರ (ಲೆನ್ಸ್), ತಟ್ಟೆ ಮತ್ತು ಮೂಲವಸ್ತು ಇವುಗಳ ಅಂತರದ ಪ್ರಮಾಣದಷ್ಟೇ ಇರುತ್ತದೆ. ಈ ತತ್ತ್ವವನ್ನನುಸರಿಸಿ ವಿಮಾನದ ಮಟ್ಟವನ್ನು ವಾಯುಭಾರಮಾಪಕಯಂತ್ರದಿಂದ ನಿರ್ಧರಿಸುವುದರಿಂದಾಗಲೀ ಛಾಯಾಚಿತ್ರದಲ್ಲಿ ಕಾಣುವ ಎರಡು ಸ್ಥಳಗಳ ವಾಸ್ತವ ದೂರಾಂತರವನ್ನು ಸೂಕ್ಷ್ಮವಾದ ಸಲಕರಣೆಗಳಿಂದ ಅಳೆಯುವುದರಿಂದಾಗಲೀ ವಿಷಯವನ್ನು ಸಂಗ್ರಹಿಸಿ ಒಂದು ನಕ್ಷೆಯನ್ನು ತಯಾರಿಸಬಹುದು. ನೀರಾವರಿ ಯೋಜನೆ, ಸಮುದ್ರತೀರದ ಮೋಜಣಿ, ದಟ್ಟವಾಗಿಯೂ ವಿಶಾಲವಾಗಿಯೂ ಬೆಳೆದಿರುವ ನಗರದ ಮೋಜಣಿ, ಖನಿಜ ಪ್ರದೇಶದ ಮೋಜಣಿ– ಮುಂತಾದವುಗಳಿಗೆ ಅಂತರಿಕ್ಷ ಮೋಜಣಿಯ ಕ್ರಮವನ್ನು ಪ್ರಯೋಗಿಸುವುದರ ಮೂಲಕ ಅತ್ಯಲ್ಪ ಕಾಲಾವಧಿಯಲ್ಲಿ ಯೋಗ್ಯವಾದ ನಕ್ಷೆಯನ್ನು ತಯಾರಿಸಬಹುದು. ಅತಿ ವಿಶಾಲವಾದ ಪ್ರದೇಶದ ಮೋಜಣಿಯಲ್ಲಿ ಅನೇಕ ಛಾಯಾಚಿತ್ರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಈ ವಿಧವಾದ ಕ್ರಮ ಹೆಚ್ಚು ಬಳಕೆಯಲ್ಲಿದೆ **(ನೋಡಿ– ಮೋಜಣಿ)** (ಕೆ.ಎಸ್.ಕೆ.)

**ಅಂತರಿಕ್ಷ ಸಂಶೋಧನೆ :** ಬಾಹ್ಯಾಕಾಶದ ಭೌತವೃತ್ತಾಂತ ಕುರಿತ ಸಮಗ್ರ ಅಧ್ಯಯನ (ಸ್ಪೇಸ್ ರಿಸರ್ಚ್). ಅನಾದಿಕಾಲದಿಂದಲೂ ಮಾನವ ಅಂತರಿಕ್ಷವನ್ನು ವೀಕ್ಷಿಸಿ ಅಚ್ಚರಿಪಟ್ಟಿದ್ದಾನೆ. ಅಂತರಿಕ್ಷದಲ್ಲಿಯ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳಲ್ಲಿ ದೇವತ್ವವನ್ನು ಕಂಡಿದ್ದಾನೆ. ಅವನ್ನು ಸಾಧ್ಯವಾದಮಟ್ಟಿಗೂ ಅಧ್ಯಯನ ಮಾಡಿದ್ದಾನೆ. ಈ ಖಗೋಳವಿಜ್ಞಾನಾಧ್ಯಯನ ಚೀನ, ಭಾರತ, ಈಜಿಪ್ಟ್, ಗ್ರೀಸ್ ಮುಂತಾದ ದೇಶಗಳಲ್ಲಿ ನಡೆಯುತ್ತ ಬಂತು. ಮುಂದೆ ಯುರೋಪಿನ ಹಲವು ದೇಶಗಳಲ್ಲಿ ನಡೆಯುತ್ತ ಬಂತು. ಮುಂದೆ ಅಲ್ಲಿಯ ವಿವಿಧ ವಿಜ್ಞಾನಿಗಳ ಅಧ್ಯಯನದ ಫಲವಾಗಿ 18ನೆಯ ಶತಮಾನ ಪ್ರಾರಂಭವಾಗುವ ಹೊತ್ತಿಗೆ ಸೌರವ್ಯೂಹದ ರಚನೆ ಸುಮಾರಾಗಿ ಅರಿವಾಯಿತು. ಈ ಅರಿವಿಗೆ ಕೊಪರ್ನಿಕಸ್, ಟೈಕೊಬ್ರಾಹೆ, ಕೆಪ್ಲರ್ ಪ್ರತಿಪಾದಿಸಿದ ಗ್ರಹಚಲನ ನಿಯಮಗಳು, ನ್ಯೂಟನ್ನನ ಚಲನನಿಯಮಗಳು ಹಾಗೂ ಗುರುತ್ವಾಕರ್ಷಣ ನಿಯಮಗಳು 20ನೆಯ ಶತಮಾನದ ಅಂತರಿಕ್ಷಯಾನಕ್ಕೆ ಬುನಾದಿಯಾಗಿವೆ.

19ನೆಯ ಶತಮಾನದ ಆದಿಯಲ್ಲಿ ಮಾನವ ಸಾಧ್ಯವಾದ ಮಟ್ಟಿಗೆ ಭೂಮಿಯಿಂದ ಮೇಲಕ್ಕೆ ಹೋಗಿ ಇದನ್ನು ಆವರಿಸಿರುವ ವಾತಾವರಣದ ಅಧ್ಯಯನವನ್ನು ಪ್ರಾರಂಭಿಸಿದ. 1803ರಲ್ಲಿ ಗ್ಯಾಸ್‌ಪಾಲ್ಸ್, ರಾಬಿನ್‌ಸನ್ ಮತ್ತು ಲೋಯೆಸ್ಸ್ ಎನ್ನುವವರು ವಾಯು ತುಂಬಿದ ದೊಡ್ಡ ಬೆಲೂನಿಗೆ (ಇದನ್ನು ಗಂಡೋಲ ಎನ್ನುತ್ತಿದ್ದರು) ಕಟ್ಟಿದ ಬುಟ್ಟಿಯಲ್ಲಿ ಕುಳಿತು ಸು. 7400ಮೀ ಎತ್ತರದವರೆಗೂ ಹೋದರು. ಹೀಗೆ ಹೋಗುತ್ತ ವಿವಿಧ ಎತ್ತರಗಳಲ್ಲಿ ವಾತಾವರಣದ ಒತ್ತಡ, ಉಷ್ಣತೆ, ಅದರ ಅನಿಲ ಸಂಯೋಜನೆ ಮುಂತಾದವನ್ನು ಶೋಧಿಸಿದರು. ಮುಂದೆಯೂ ಇಂಥ ಪ್ರಯತ್ನಗಳು ನಡೆದು ಸು. 10515 ಮೀವರೆಗೂ ಹೋಗಲು ಸಾಧ್ಯವಾಯಿತು. ಆದರೆ ತೆರೆದ ಬುಟ್ಟಿಗಳಲ್ಲಿ ಕುಳಿತು ಮೇಲುಮೇಲಕ್ಕೆ ಹೋದಂತೆ ವಾಯು ಒತ್ತಡ ಕಡಿಮೆಯಾಗುತ್ತ ಬಂದು ಆಕ್ಸಿಜನ್ ಹಾಗೂ ಉಷ್ಣತೆ ಕಡಿಮೆಯಾಗುತ್ತ ಹೋಗುತ್ತವೆ. ಆದ್ದರಿಂದಲೇ ಅತಿ ಎತ್ತರಕ್ಕೆ ಹೋದವರಲ್ಲನೇಕರು ಮೂರ್ಛೆ ಹೋಗುತ್ತಿದ್ದರು, ಇಲ್ಲವೇ ಸಾಯುತ್ತಿದ್ದರು. ಆದರೂ ಇಂಥ ಪ್ರಯಾಣಗಳಿಂದ ನಮ್ಮ ವಾತಾವರಣದ ಕೆಲವು ಮುಖ್ಯ ಅಂಶಗಳು ಹೊರಬಿದ್ದುವು.

ಇನ್ನೂ ಎತ್ತರಕ್ಕೆ ಹೋಗಲು ಸಾಧ್ಯವೆಂದು ತಿಳಿದಮೇಲೆ ಮಾನವನ ಬದಲು ಬರಿ ಉಪಕರಣಗಳನ್ನೇ ಕಳುಹಿಸಲಾಯಿತು. ಅವು ಮಾಹಿತಿಗಳನ್ನು ಒಂದು ಗ್ರಾಫ್‌ಕಾಗದದ ಮೇಲೆ ವಕ್ರರೇಖೆಯೋಪಾದಿಯಲ್ಲಿ ಗುರುತುಮಾಡುತ್ತಿದ್ದುವು. ಬೆಲೂನು ಕೆಳಗಿಳಿದ ಮೇಲೆ ಈ ವಕ್ರರೇಖೆಯನ್ನು ಪರಿಶೀಲಿಸುತ್ತಿದ್ದರು. ಇಂಥ ಉಪಕರಣಗಳನ್ನು ಹೊತ್ತ ಬೆಲೂನುಗಳ ಹಾರಾಟಕ್ಕೆ ಬೆಲೂನ್‌ಸೋಂಡ್ ಎಂದು ಹೆಸರು. ಬೆಲೂನ್‌ಸೋಂಡ್‌ಗಳನ್ನು ಸು. 30480ಮೀ ಎತ್ತರದವರೆಗೂ ಹಾರಿಸಿದರು.

ಈ ಬೆಲೂನ್‌ಸೋಂಡ್‌ಗಳಲ್ಲೂ ಒಂದು ತೊಂದರೆಯಿತ್ತು. ಅದು ಯಾವ ಸ್ಥಳದಲ್ಲಿ ಬಿದ್ದಿದೆಯೆಂದು ಹೇಳುವುದು ಕಷ್ಟವಾಗಿತ್ತು. ದಟ್ಟಡವಿಯಲ್ಲಾಗಲಿ ಸಮುದ್ರದಲ್ಲಾಗಲಿ ಬಿದ್ದು ಹಾಳಾಗಬಹುದಾಗಿತ್ತು. ಹೀಗಾಗಿ ಬೆಲೂನ್‌ಸೋಂಡ್‌ಗಳಲ್ಲನೇಕವು ನಷ್ಟವಾದುವು.

ಮೊದಲನೆಯ ಮತ್ತು ಎರಡನೆಯ ಮಹಾಯುದ್ಧದ ನಡುಗಾಲದಲ್ಲಿ ಇದಕ್ಕೂ ಒಂದು ಉಪಾಯವನ್ನು ಕಂಡುಹಿಡಿದರು. ಬೆಲೂನ್‌ಸೋಂಡ್‌ಗಳಲ್ಲಿಯ ಉಪಕರಣಗಳು ತಾವು ಸಂಗ್ರಹಿಸಿದ ಮಾಹಿತಿಗಳನ್ನು ತತ್‌ಕ್ಷಣವೇ ರೇಡಿಯೊ ಉಪಕರಣಗಳ ಮೂಲಕ ಭೂಮಿಗೆ ಪ್ರಸಾರ ಮಾಡುವಂತೆ ನಿಯೋಜಿಸಿದರು. ಇದರಿಂದ ಆ ಮಾಹಿತಿಗಳು ಭೂಮಿಯ ಮೇಲಿನ ಒಂದು ಚಿತ್ರಪಟದ (ಚಾರ್ಟ್ ಪೇಪರ್) ಮೇಲೆ ತಾವಾಗಿಯೇ ಆಗಾಗಲೇ ಗುರುತಾಗುತ್ತಿದ್ದುವು. ಈ ರೀತಿಯ ಮಾಹಿತಿ ರವಾನೆಗೆ ದೂರಮಾಪನ (ಟೆಲಿಮಿಟ್ರಿ) ಎಂದು ಹೆಸರು. ಈ ವಿಧಾನವನ್ನು ಇನ್ನೂ ಹೆಚ್ಚು ನಿಖರವಾಗಿ ಸುಧಾರಿತ ರೀತಿಯಲ್ಲಿ ಅಂತರಿಕ್ಷ ಸಂಶೋಧನಾ ಸಾಧನಗಳಲ್ಲಿ ಈಗಲೂ ಉಪಯೋಗಿಸುತ್ತಾರೆ.

ಎಷ್ಟೇ ಆದರೂ ಮೇಲುಮೇಲಕ್ಕೆ ಹೋದಷ್ಟೂ ವಾತಾವರಣದ ಒತ್ತಡ ಕಡಿಮೆಯಾಗುವುದರಿಂದ ರೇಡಿಯೊ ಸೋಂಡ್‌ಗಳು 30,480 ಮಿ.ಗಿಂತ ಹೆಚ್ಚು ಏರುವುದು ಸಾಧ್ಯವಿರಲಿಲ್ಲ.

ಎರಡನೆಯ ಮಹಾಯುದ್ಧದ ಕಾಲದಲ್ಲಿ (1930–45) ಜರ್ಮನರು ಪ್ರಯೋಗಿಸಿದ V-2 ರಾಕೆಟ್ಟುಗಳು ಗಾಳಿಯ ಸಹಾಯವಿಲ್ಲದೆಯೇ ಹಾರಾಡುತ್ತಿದ್ದುವು **(ನೋಡಿ– ಕ್ಷಿಪಣಿ; ರಾಕೆಟ್)**.

ಯುದ್ಧಕ್ಕೆ ಮುಂಚೆಯೇ ಅಮೆರಿಕದ ರಾಬರ್ಟ್ ಗಾಡರ್ಡ್ (1882 –1945) ಎಂಬಾತ ರಾಕೆಟ್ಟುಗಳನ್ನು ನಿರ್ಮಿಸಿ ಹಾರಿಸಿದ್ದರೂ ಜರ್ಮನರ V-2 ರಾಕೆಟ್ಟುಗಳ ಅನಂತರವೇ ಅವುಗಳ ಕಡೆ ಜನರ ಮನಸ್ಸು ಹರಿದದ್ದು, ಕಾರಣವೇನೆಂದರೆ, ಗಾಡರ್ಡ್‌ನ ರಾಕೆಟ್ಟುಗಳು ಸು. 22900 ಮೀ.ಗಳಷ್ಟು ಹಾರಿದರೆ V-2 ರಾಕೆಟ್ಟುಗಳು ನೂರಾರು ಕಿಮಿ. ದೂರ ಹಾರಿದುವು. ಯುದ್ಧಾನಂತರ ಅಮೆರಿಕನ್ನರು ತಮ್ಮ ಕೈಗೆ ಸಿಕ್ಕಿದ ಕೆಲವು V-2 ರಾಕೆಟ್ಟುಗಳನ್ನು ಉಪಯೋಗಿಸಿ ಭೂಮಿಯ ಬಾಹ್ಯಾವರಣದ ವಿಚಾರವಾಗಿ ಇನ್ನೂ ಹೆಚ್ಚಿನ ಮಾಹಿತಿ ಪಡೆದರು. ರಾಕೆಟ್ಟಿನ ಮುಂಭಾಗದಲ್ಲಿ (ನೋಸ್ ಕೋನ್) ಅಳವಡಿಸಿದ್ದ ಉಪಕರಣಗಳು ಮೇಲೆ ಹೋಗುತ್ತ ವಾತಾವರಣದ ಒತ್ತಡ, ಉಷ್ಣತೆ, ಅನಿಲಸಂಯೋಜನೆ ಮುಂತಾದವುಗಳ ವಿವರಗಳನ್ನು ದೂರಮಾಪನ ವಿಧಾನದ ಮೂಲಕ ಭೂಮಿಗೆ ಕಳುಹಿಸುತ್ತಿದ್ದುವು. ಈ ರೀತಿ ಉಪಯೋಗಿಸುವ ರಾಕೆಟ್ಟುಗಳನ್ನು ಸೌಂಡಿಂಗ್ ರಾಕೆಟ್ಟುಗಳೆನ್ನುತ್ತಾರೆ. ಮುಂದೆ ತಯಾರಿಸಿದ ವೈಕಿಂಗ್, ಏರೋಬಿ ಮುಂತಾದ ರಾಕೆಟ್ಟುಗಳನ್ನು ವಾತಾವರಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಉಪಯೋಗಿಸಿದರು. ಈ ಎಲ್ಲ ಪ್ರಯೋಗಗಳಿಂದ ನಮ್ಮ ವಾತಾವರಣದ ವಿಷಯವಾಗಿ ಈ ಮುಂದಿನ ಅಂಶಗಳು ತಿಳಿದುಬಂದುವು:

ಭೂಮಿಯಿಂದ ಸು. 16 ಕಿಮೀ ಎತ್ತರದವರೆಗೆ (ಇದು ವಾಸ್ತವವಾಗಿ ಧ್ರುವಗಳಲ್ಲಿ 8 ಕಿಮೀ ಮತ್ತು ಭೂಮಧ್ಯರೇಖೆಯಲ್ಲಿ 16 ಕಿಮೀ ಇರುತ್ತದೆ) ವಾತಾವರಣ ಅತಿಚಲನಶೀಲವಾಗಿರುತ್ತದೆ. ವಾಯುಗುಣ ವ್ಯತ್ಯಾಸಗಳುಂಟಾಗುವುದು ಈ ಪದರದಲ್ಲಿಯೇ. ಈ ಪದರವನ್ನು ಟ್ರೋಪೊಸ್ಫಿಯರ್ (ಹವಾಗೋಲ) ಎನ್ನುತ್ತಾರೆ. ಇದರಲ್ಲಿ ಆಕ್ಸಿಜನ್, ಸಾರಜನಕ, ಆರ್ಗಾನ್ ಮತ್ತು ಕಾರ್ಬನ್ ಡೈ ಆಕ್ಸೈಡ್‌ಗಳು ಕ್ರಮವಾಗಿ ಗಾತ್ರ ರೀತ್ಯ ಶೇ.20.9 ಶೇ.78, ಶೇ.0.9 ಮತ್ತು ಶೇ.0.03 ಭಾಗಗಳು ಇರುತ್ತವೆ. ಮೇಲೆ ಮೇಲೆ ಹೋದಂತೆಲ್ಲ ಉಷ್ಣತೆ 1.6 ಕಿಮೀಗೆ ಸು. $10^{o}$ ಸೆಂ.ಗ್ರೇ.ನಷ್ಟು ಕಡಿಮೆಯಾಗುತ್ತ ಹೋಗುತ್ತದೆಯಲ್ಲದೆ ವಾತಾವರಣದ ಸಾಂದ್ರತೆಯೂ ಅತಿ ಶೀಘ್ರವಾಗಿ ಕಡಿಮೆಯಾಗುತ್ತದೆ. ಟ್ರೋಪೊಸ್ಫಿಯರ್‌ನಲ್ಲಿ ಶೇ.79 ನಷ್ಟು ವಾತಾವರಣ ಅಡಕವಾಗಿದೆ. ಸುಮಾರು 10–20 ಮೈಲಿಗಳವರೆಗಿನ ಪದರವನ್ನು ಟ್ರೋಪೋಪಾಸ್ ಎನ್ನುತ್ತಾರೆ. ಈ ಪದರದ ಕೆಳಭಾಗವನ್ನು ಬಿಟ್ಟರೆ ಮಿಕ್ಕೆಲ್ಲಾ ಭಾಗಗಳಲ್ಲಿ ವಾತಾವರಣದ ಚಲನೆ ಇರುವುದಿಲ್ಲ ಮತ್ತು ಉಷ್ಣತೆ $-50^{o}$ ಸೆಂ.ಗ್ರೇ ಗಳಷ್ಟು ನಿಯತವಾಗಿರುತ್ತದೆ. ಸುಮಾರು 30–80ಕಿಮೀ ವರೆಗಿನ ಪದರವನ್ನು ಸ್ಟ್ರಾಟೋಸ್ಫಿಯರ್ ಎನ್ನುತ್ತಾರೆ. ಇದರಲ್ಲಿ ಓಝೋನ್ ಅನಿಲ ಸಿಗುತ್ತದೆ. 30 ಮೈ ಮೇಲೆ ಆಕ್ಸಿಜನ್ ಅಣುಗಳು ಪರಮಾಣುಗಳಾಗಿ ವಿಭಜನೆಯಾಗತೊಡಗುತ್ತವೆ ಮತ್ತು ಅಯೋನಾವರಣದ ಆ ಪದರ ಹಗಲಿನ ಹೊತ್ತು ಉತ್ಪತ್ತಿಯಾಗುತ್ತದೆ. ಹೆಚ್ಚು ಉಲ್ಕೆಗಳು ಈ ಪದರದಲ್ಲಿ ಭಸ್ಮವಾಗಿಹೋಗುತ್ತವೆ. 32–48 ಕಿಮೀವರೆಗೆ ಉಷ್ಣತೆ1.6 ಕಿಮೀಗೆ ಸುಮಾರು $3^{o}$–$5^{o}$ ಸೆ.ಮೀನಷ್ಟು ಹೆಚ್ಚುತ್ತ ಹೋಗುತ್ತದೆ. 48–80 ಕಿಮೀ. 1.6 ಸೆಂ.ಮೀ.ವರೆಗೆ ಸು. $2.4^{o}$–$6.4^{o}$ ಸೆಂಗ್ರೇವರೆಗೆ ಕಡಿಮೆಯಾಗುತ್ತ ಹೋಗುತ್ತದೆ. 80–400 ಕಿಮೀ ವರೆಗಿನ ಪದರವನ್ನು ಅಯೋನಾವರಣವೆನ್ನುತ್ತಾರೆ. ಈ ಎತ್ತರಗಳಲ್ಲಿ ಒತ್ತಡ ಬಹಳ ಕಡಿಮೆಯಿದ್ದು 96 ಕಿಮೀ ಎತ್ತರದಲ್ಲಿ ಸಮುದ್ರಮಟ್ಟದ ಒತ್ತಡಕ್ಕಿಂತ ಹತ್ತುಲಕ್ಷ ಪಾಲು ಕಡಿಮೆಯಿರುತ್ತದೆ. ಆಕ್ಸಿಜನ್ ಪೂರ್ತಿಯಾಗಿ ಒಡೆದು ನೈಟ್ರೋಜನ್ನಿನ ಅಣುಗಳು ಪರಮಾಣುಗಳಾಗಿ ವಿಭಜನೆಯಾಗತೊಡಗುತ್ತವೆ. ಉಷ್ಣತೆ ಶೀಘ್ರವಾಗಿ ಹೆಚ್ಚುತ್ತ ಹೋಗಿ 96ಕಿಮೀ. $-53^{o}$ ಸೆಂ.ಗ್ರೇ 160 ಕಿಮೀ.ಗಳಲ್ಲಿ $672^{o}$ ಸೆಂ.ಗ್ರೇ ಮತ್ತು 320 ಕಿಮೀಗಳಲ್ಲಿ $1170^{o}$ ಸೆಂ.ಗಳಷ್ಟಿರುತ್ತದೆ. 400 ಕಿ.ಮೀ. ಮೇಲಿನ ಪದರವನ್ನು ಎಕ್ಸೋಸ್ಫಿಯರ್ ಎನ್ನುತ್ತಾರೆ. ಈ ಪದರದಲ್ಲಿ ಹೀಲಿಯಂ ಅನಿಲ ಹೆಚ್ಚಾಗಿ ಸಿಗುತ್ತದೆ. ಇಲ್ಲಿ ಉಷ್ಣತೆ ದೈನಂದಿನ ವ್ಯತ್ಯಾಸಗಳನ್ನು ಹೊಂದುತ್ತಿರುತ್ತದೆ. ಸೂಕ್ಷ್ಮ ಉಲ್ಕೆಗಳು (ಮೈಕ್ರೊಮಿಟಿಯೊರೈಟ್ಸ್) ಮತ್ತು ಉಲ್ಕೆಗಳು ಸಮೃದ್ಧವಾಗಿ ಬರುತ್ತಿರುತ್ತವೆ. 960 ಕಿಮೀ ಮೇಲಿನ ಆವರಣವನ್ನು ಕಾಂತಗೋಳ (ಮ್ಯಾಗ್ನೆಟಿಕ್ ಸ್ಫಿಯರ್) ಎನ್ನುತ್ತಾರೆ. ಇಲ್ಲಿ ಜಲಜನಕದ ಪರಮಾಣುಗಳಿರುತ್ತವೆ. ಆದರೆ ಈ ಪದರದಲ್ಲಿ ಪರಮಾಣುಗಳ ಸಂಖ್ಯೆ ಎಷ್ಟು ಕಡಿಮೆಯೆಂದರೆ ಇವು ಒಂದನ್ನೊಂದು ಡಿಕ್ಕಿ ಹೊಡೆಯದೆ ಒಂದೊಂದೂ ಒಂದೊಂದು ಉಪಗ್ರಹದಂತೆ ಭೂಮಿಯನ್ನು ಸುತ್ತುತ್ತಿರುತ್ತವೆ. ಕೆಲವು ಪರಮಾಣುಗಳು ಭೂಮಿಯ ಗುರುತ್ವಾಕರ್ಷಣೆಯನ್ನು ತಪ್ಪಿಸಿಕೊಂಡು ಹೋಗುತ್ತಲೂ ಇರುತ್ತವೆ.

ವಾತಾವರಣದ ಸಂಶೋಧನೆಯಲ್ಲಿ ಉಪಯೋಗಿಸುವ ರಾಕೆಟ್ಟುಗಳ ಒಂದು ಮುಖ್ಯ ತೊಂದರೆ ಎಂದರೆ ಅವುಗಳ ಅಗಾಧ ವೇಗ. ಅವು ನೂರಾರು ಕಿಮೀ ವೇಗದಲ್ಲಿ ಚಲಿಸುತ್ತವೆ. ಯಾವ ಎತ್ತರದಲ್ಲೂ ಸ್ಥಿರವಾಗಿ ನಿಲ್ಲುವುದಿಲ್ಲ. ಇದರಿಂದಾಗಿ ವಾತಾವರಣದ ಕ್ಷಣಿಕ ಸ್ಥಿತಿಗತಿಗಳು ಮಾತ್ರ ಗೊತ್ತಾಗುತ್ತವೆ. ಆದರೆ ನಾವು ಯಾವುದೇ ಎತ್ತರದ ವಿಚಾರಗಳನ್ನು ನಿಖರವಾಗಿ ಹೇಳಬೇಕಾದರೆ ಅಲ್ಲಿ ಹಲವಾರು ಸಾರಿ ಪ್ರಯೋಗಗಳನ್ನು ನಡೆಸಿರಬೇಕು. ಈ ಕೊರತೆಯನ್ನು ಕೃತಕ ಭೂ ಉಪಗ್ರಹಗಳು ನೀಗಿಸಿದುವು. ಆದರೆ ಇವು ಸು.240 ಕಿಮೀ ಮೇಲೆ ಮಾತ್ರ ಹಾರಲು ಸಾಧ್ಯ. ಆದ್ದರಿಂದ ಅಲ್ಲಿಗಿಂತ ಕೆಳಗೆ ಪ್ರಯೋಗಗಳನ್ನು ಮಾಡಬೇಕಾದರೆ ಸೌಂಡಿಂಗ್ ರಾಕೆಟ್ಟುಗಳೇ ಅವಶ್ಯ.

ಈ ಲೇಖನದ ವಿಷಯ ವಿಂಗಡಣೆ ಹೀಗಿದೆ:

ಭಾಗ I ಅಂತರಿಕ್ಷಯುಗದ ಪ್ರಾರಂಭ ಮತ್ತು ಮುನ್ನಡೆ

ಭಾಗ II ಮಾನವರಹಿತ ಉಪಗ್ರಹಗಳು

(i) ವೈಜ್ಞಾನಿಕ ಉಪಗ್ರಹಗಳು

[ಎ] ರಷ್ಯ: 1. ಸ್ಪುಟ್ನಿಕ್ಕುಗಳು
2. ಕಾಸ್ಮಾಸ್ ಉಪಗ್ರಹಗಳು
3. ಎಲೆಕ್ಟ್ರಾನ್ ಉಪಗ್ರಹಗಳು
4. ಪ್ರೋಟಾನ್ ಉಪಗ್ರಹಗಳು

[ಬಿ] ಅಮೆರಿಕ: 1. ಎಕ್ಸ್‌ಪ್ಲೋರರ್ ಉಪಗ್ರಹಗಳು
2. ವ್ಯಾನ್‌ಗಾರ್ಡ್ ಉಪಗ್ರಹಗಳು
3. ಡಿಸ್ಕವರರ್ ಉಪಗ್ರಹಗಳು
4. ಒಜಿಒ, ಒಎಸ್‌ಒ ಮತ್ತು ಒಎಒ ಉಪಗ್ರಹಗಳು
5. ಹಬಲ್ ಅಂತರಿಕ್ಷ ದೂರದರ್ಶಕ
6. ಚಂದ್ರ ಕ್ಷ–ಕಿರಣ ವೇಧಶಾಲೆ
7. ಲೈಮನ್ ಸ್ಪಿಟ್ಸರ್ ಅತಿರಕ್ತ ವೇಧಶಾಲೆ
8. ಕಾಂಪ್ಟನ್ ಗ್ಯಾಮಾಕಿರಣ ವೀಕ್ಷಣಾಲಯ

(ii) ಹವಾಮಾನ ಉಪಗ್ರಹಗಳು
(iii) ಸಂಪರ್ಕ ಸಾಧನೋಪಗ್ರಹಗಳು
(iv) ದೂರಸಂವೇದಿ ಉಪಗ್ರಹಗಳು
(v) ಯಾನ ನಿರ್ವಹಣ ಉಪಗ್ರಹಗಳು
(vi) ಸೇನಾ ಉಪಗ್ರಹಗಳು
(vii) ಜೀವವೈಜ್ಞಾನಿಕ ಉಪಗ್ರಹಗಳು

ಭಾಗ III ಅಂತರಿಕ್ಷದಲ್ಲಿ ಮಾನವ

1. ರಷ್ಯದೇಶದ ಮಾನವಸಹಿತ ಅಂತರಿಕ್ಷ ನೌಕೆಗಳು
   1. ವಸ್ತಾಕ್ ಶೀರ್ಷಿಕೆಯ ಅಂತರಿಕ್ಷ ನೌಕೆಗಳು
   2. ವಸ್ಕೋದ್ ಶೀರ್ಷಿಕೆಯ ಅಂತರಿಕ್ಷ ನೌಕೆಗಳು
   3. ಸೂಯೂಜ್ ಶೀರ್ಷಿಕೆಯ ಅಂತರಿಕ್ಷ ನೌಕೆಗಳು
   4. ಸಲ್ಯೂತ್ ಅಂತರಿಕ್ಷ ನಿಲ್ದಾಣಗಳು
   5. ಮಿಯರ್ ಅಂತರಿಕ್ಷ ನಿಲ್ದಾಣ
2. ಅಮೆರಿಕ ದೇಶದ ಮಾನವಸಹಿತ ಅಂತರಿಕ್ಷ ನೌಕೆಗಳು
   1. ಮರ್ಕ್ಯುರಿ ಯೋಜನೆ
   2. ಜೆಮಿನಿ ಯೋಜನೆ
   3. ಅಪೊಲೊ ಯೋಜನೆ
   4. ಸ್ಕೈಲ್ಯಾಬ್ ಯೋಜನೆ
   5. ಅಂತರಿಕ್ಷ ಶಟಲ್ ಯೋಜನೆ
   6. ಅಂತಾರಾಷ್ಟ್ರೀಯ ಅಂತರಿಕ್ಷ ನಿಲ್ದಾಣ ಯೋಜನೆ

ಭಾಗ IV ಚಂದ್ರ ಸಂಶೋಧನೆ

**1. ರಷ್ಯದ ಪ್ರಯತ್ನಗಳು :** ಲೂನಾ (ಲೂನಿಕ್) ಅಂತರಿಕ್ಷ ನೌಕೆಗಳು

**2. ಅಮೆರಿಕದ ಪ್ರಯತ್ನಗಳು :** ಪಯೋನೀರ್, ರೇಂಜರ್, ಸರ್ವೆಯರ್ ಮತ್ತು ಲ್ಯೂನಾರ್ ಆರ್ಬಿಟರ್, ಕ್ಲಮಂಟೈನ್ ಮತ್ತು ಲೂನಾರ್ ಪ್ರಾಸ್ಪೆಕ್ಟರ್ ಅಂತರಿಕ್ಷ ನೌಕೆಗಳು.

ಭಾಗ V ದೂರದ ಆಕಾಶಕಾಯಗಳ ಅನ್ವೇಷಣೆಯ ಅಂತರಿಕ್ಷ ನೌಕೆಗಳು

1. ರಷ್ಯದ ನೌಕೆಗಳು: ವೆನ್ಯಾರಾ ಮತ್ತು ಮಾರ್ಸ್

2. ಅಮೆರಿಕದ ನೌಕೆಗಳು: ಮ್ಯಾರಿನರ್, ಫೋಬೋಸ್ ಮತ್ತು ವೇಗಾ, ವಾಯೇಜರ್, ಗ್ಯಾಲಿಲಿಯೊ, ಪಾತ್‌ಫೈಂಡರ್, ಪಯನೀರ್, ಮಾರ್ಸ್ ಗ್ಲೋಬಲ್ ಸರ್ವೇಯರ್, ಮಾರ್ಸ್ ಎಕ್ಸ್‌ಪ್ಲೋರೇಷನ್ ರೋವರ್, ಮಾರ್ಸ್ ಆಡಿಸ್ಸಿ ಮೆಜೆಲಾನ್, ನಿಯರ್, ಕೆಸ್ಸೀನಿ, ಜಿಯೊಟ್ಟೊ, ಹೊಯ್‌ಗನ್ಸ್, ಸೋಹೋ, ಭಾಗ

ಭಾಗ VI ಅಂತಾರಾಷ್ಟ್ರೀಯ ಅಂತರಿಕ್ಷ ಕಾರ್ಯಕ್ರಮಗಳು

**ಭಾಗ I ಅಂತರಿಕ್ಷ ಯುಗದ ಪ್ರಾರಂಭ ಮತ್ತು ಮುನ್ನಡೆ:** ಅಂತರಿಕ್ಷ ಸಂಶೋಧನೆಯನ್ನು ಕೈಗೊಳ್ಳುವ ಸಲುವಾಗಿ ಮಾನವ ಅನೇಕ ಯೋಜನೆಗಳನ್ನು ರೂಪಿಸಿಕೊಂಡ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಪಂಚದ ವಿವಿಧ ರಾಷ್ಟ್ರಗಳು ಒಂದುಗೂಡಿ ತಮ್ಮ ಸಹಕಾರವನ್ನು ಕೊಟ್ಟುವು. ಇಂಥ ಯೋಜನೆಗಳಲ್ಲೊಂದಾದ ಅಂತಾರಾಷ್ಟ್ರೀಯ ಭೂಭೌತವರ್ಷ (ಇಂಟರ್‌ನ್ಯಾಷನಲ್ ಜಿಯೋಫಿಸಿಕಲ್ ಇಯರ್-ಐಜಿವೈ-1957-58) ಸಂಶೋಧನ ರಾಕೆಟ್ಟುಗಳನ್ನು (ಸೌಂಡಿಂಗ್ ರಾಕೆಟ್ಟು) ಉಪಯೋಗಿಸಿಯೇ ನಡೆಯುತ್ತಿತ್ತು. ಈ ಮಧ್ಯೆ ಅಮೆರಿಕ, ಇಂಗ್ಲೆಂಡ್ ಮತ್ತು ರಷ್ಯ ದೇಶಗಳಲ್ಲಿ ಯುದ್ಧೋಪಕರಣವಾದ ಕ್ಷಿಪಣಿಯ (ಮಿಸೈಲ್) ಕಾರ್ಯ ಪ್ರಗತಿ ನಡೆಯುತ್ತಲೇ ಇತ್ತು. 1954ರಲ್ಲಿ ಸೇರಿದ ಐಜಿವೈ ಆಯೋಜನಾ ಸಮಿತಿ ಕೃತಕ ಉಪಗ್ರಹಗಳನ್ನು ಹಾರಿಸುವುದು ಉಚಿತವೆಂದು ಸೂಚಿಸಿತು. ಇದನ್ನು ಅನುಮೋದಿಸಿ ಅಮೆರಿಕ (ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಇಲ್ಲಿಂದ ಮುಂದೆ ಅಮೆರಿಕ ಎನ್ನಲಾಗಿದೆ) ಮತ್ತು ರಷ್ಯ ದೇಶಗಳು ಉಪಗ್ರಹಗಳನ್ನು ಹಾರಿಸುವುದಾಗಿ ಪ್ರಕಟಪಡಿಸಿದುವು. ಅಂತೆಯೇ 1957ರ ಅಕ್ಟೋಬರ್ 4 ರಂದು ರಷ್ಯ ಭೂಮಿಯ ಮೊದಲ ಕೃತಕ ಉಪಗ್ರಹವನ್ನು ಹಾರಿಸಿತು.

ಅಂದಿನಿಂದ ಅಂತರಿಕ್ಷ ಸಂಶೋಧನೆ ಅನವರತವಾಗಿ ನಡೆಯುತ್ತಿದೆ. ಅಂತರಿಕ್ಷ ನೌಕೆಗಳ (ಇದು ಅಂತರಗ್ರಹಯಾನ ಮಾಡುವ ನೌಕೆ ಅಥವಾ ಕೃತಕ ಭೂ ಉಪಗ್ರಹವಾಗಬಹುದು) ನೆರವಿನಿಂದ ಮುಖ್ಯವಾಗಿ ಈ ಕೆಳಗಿನ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಯುತ್ತಿದೆ:

1. ಭೂಮಿಯ ವಾತಾವರಣ ಮತ್ತು ಬಾಹ್ಯವರಣದ ಗುಣವಿಶೇಷಗಳು.
2. ಅಂತರಗ್ರಹಪ್ರದೇಶದ ಗುಣವಿಶೇಷಗಳು.
3. ಚಂದ್ರನ ಅಧ್ಯಯನ: ಆಕಾರ, ಮೇಲ್ಮೈಲಕ್ಷಣ, ರಚನೆ, ಕಾಂತಕ್ಷೇತ್ರ, ವಾಯುಪದರ, ರಶ್ಮಿಪದರ-ಮುಂತಾದುವು.
4. ಸೌರವ್ಯೂಹದ ಗ್ರಹ, ಉಪಗ್ರಹ, ಕ್ಷುದ್ರಗ್ರಹ (ಆ್ಯಸ್ಟರಾಯ್ಡ್), ಧೂಮಕೇತುಗಳು ಮತ್ತು ಸೂರ್ಯನ ಅಧ್ಯಯನ
5. ವಿಶ್ವಕಿರಣಗಳು ಮತ್ತು ಉಲ್ಕೆಗಳು.
6. ಖಗೋಳನಿಯತಾಂಕಗಳ ಪುನರ್‌ವಿಮರ್ಶೆ.
7. ಅಂತರಿಕ್ಷಯಾನದ ವಿಧಾನಗಳು: ಮುಖ್ಯವಾಗಿ ಅಂತರಿಕ್ಷನೌಕೆಗಳನ್ನು ಹಾರಿಸುವ ಬಗೆ
8. ಅಂತರಿಕ್ಷ ಜೀವವಿಜ್ಞಾನ.

ಇಷ್ಟೇ ಅಲ್ಲದೆ ಈ ಸಂಶೋಧನೆಗಳಿಗೆ ಬೇಕಾದ ರಾಕೆಟ್ ಮತ್ತು ಅದರ ನೋದಕಗಳು (ಪ್ರೊಪೆಲೆಂಟ್ಸ್) ಎಲೆಕ್ಟ್ರಾನಿಕ್ಸ್, ಲೋಹವಿಜ್ಞಾನ, ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತವಿಜ್ಞಾನ ಮತ್ತು ಇನ್ನೂ ಅನೇಕಾನೇಕ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯಾಗಿದೆ.

ಅಂತರಿಕ್ಷದಲ್ಲಿ ಸಂಚರಿಸುವ ವಸ್ತುವಿನ ಚಲನೆಯನ್ನು 6 ಭಾಗಗಳಾಗಿ ವಿಂಗಡಿಸಬಹುದು. ಅವು ಹೀಗಿವೆ:



ಚಿತ್ರ 1.

**1.** ನೇರಗಮನ (ಸರ್ಜ್)-ಅದರ ವೇಗದಿಕ್ಪರಿಮಾಣದ (ವೆಲಾಸಿಟಿ ವೆಕ್ಟರ್) ಕಡೆಯಿರುವ ಚಲನೆ.

2. ಅಧೋಗಮನ (ಹೀವ್)-ವೇಗದಿಕ್ಪರಿಮಾಣಕ್ಕೆ ಲಂಬನೇರದಲ್ಲಿ, ಸಾಮಾನ್ಯವಾಗಿ ಗುರುತ್ವಾಕರ್ಷಣೆಯ ಕಡೆ ಇರುವ ಚಲನೆ.

3. ಪಾರ್ಶ್ವಗಮನ (ಸ್ವೇ)-ನೇರ ಮತ್ತು ಅಧೋಗಮನಗಳೆರಡಕ್ಕೂ ಲಂಬನೇರದಲ್ಲಿರುವ ಚಲನೆ.

4. ಹೊರಳುವಿಕೆ (ರೋಲ್)-ವೇಗದಿಕ್ಪರಿಮಾಣದ ಮೇಲೆ ಸುತ್ತುವಿಕೆ.

5. ಪಿಚ್-ಪಾರ್ಶ್ವಗಮನದ ಅಕ್ಷದ ಮೇಲೆ ಸುತ್ತುವಿಕೆ.

6. ಯಾ-ಅಧೋಗಮನದ ಅಕ್ಷದ ಮೇಲೆ ಸುತ್ತುವಿಕೆ

ಚಲಿಸುತ್ತಿರುವ ವಸ್ತುವನ್ನು ನಿಯಂತ್ರಿಸಲು ಈ ಆರು ರೀತಿಯ ಚಲನೆಗಳೂ ನಿಖರವಾಗಿ ತಿಳಿದಿರಬೇಕು.

ಭೂಮಿಯನ್ನು ಸುತ್ತುತ್ತಿರುವ ಉಪಗ್ರಹವೊಂದು ಕೆಪ್ಲರನ ಗ್ರಹಚಲನನಿಯಮಗಳಿಗನುಗುಣವಾಗಿ ದೀರ್ಘವೃತ್ತಾಕಾರದ ಪಥದಲ್ಲಿ ಪರಿಭ್ರಮಿಸುತ್ತದೆ. ಆದರೆ ಭೂಮಿ ಶುದ್ಧ ಗೋಳಾಕಾರದಲ್ಲಿಲ್ಲವಾದ್ದರಿಂದ ಉಪಗ್ರಹದ ಪಥ ಶುದ್ಧ ದೀರ್ಘವೃತ್ತಾಕಾರದಲ್ಲಿರುವುದಿಲ್ಲ. ಭೂಮಿ ಭೂಮಧ್ಯರೇಖೆ ಯಲ್ಲಿ ಧ್ರುವಪ್ರದೇಶಗಳಿಗಿಂತ ಸುಮಾರು 31ಕಿಮೀಗಳಷ್ಟು ದಪ್ಪಗಿದೆ. ಇದರಿಂದಾಗಿ ಉಪಗ್ರಹ ಭೂಮಧ್ಯ ರೇಖೆಯ ಮೇಲೆ ಬಂದಾಗ ಹೆಚ್ಚಾಗಿ ಎಳೆಯಲ್ಪಟ್ಟು ವೇಗವೂ ಅಧಿಕವಾಗುತ್ತದೆ.

ಧ್ರುವ ಪ್ರದೇಶಗಳ ಮೇಲೆ ಬಂದಾಗ ಇದರ ಮೇಲಿನ ಆಕರ್ಷಣೆ ಕಡಿಮೆಯಾಗಿ ಇನ್ನೂ ಎತ್ತರಕ್ಕೇರಿದಾಗ ವೇಗ ಕಡಿಮೆಯಾಗುತ್ತದೆ. ಇದೂ ಅಲ್ಲದೆ ಉಪಗ್ರಹ ಪಥದ ಸಮತಲ ಭೂಮಧ್ಯ ರೇಖೆಗೆ ಒಂದು ಕೋನದಲ್ಲಿದ್ದರೆ ($\theta$) ಅದರ ದೀರ್ಘಾಕ್ಷ (ಮೇಜರ್ ಆ್ಯಕ್ಸಿಸ್) ಪಥದ ಸಮತಲದಲ್ಲಿಯೇ ನಿಧಾನವಾಗಿ ತಿರುಗುತ್ತದೆ ಮತ್ತು ಪಥ ಸಮತಲವೇ ಭೂಮಿಯ ಅಕ್ಷದ ಮೇಲೆ ಸುತ್ತತೊಡಗುತ್ತದೆ.

ಇಷ್ಟೇ ಅಲ್ಲದೆ ಭೂಮಿಯ ಮೇಲ್ಮೈ ಸಮವಾಗಿರದೆ ವಿಚಿತ್ರ ರೀತಿಯಲ್ಲಿ ಏರಿಳಿತಗಳನ್ನು ಹೊಂದಿದೆ. ಅದರ ಸಾಂದ್ರತೆಯಲ್ಲಿಯೂ ವ್ಯತ್ಯಾಸಗಳಿವೆ. ಆದ್ದರಿಂದ ಪ್ರತಿ ದಿಕ್ಕಿನಲ್ಲಿಯೂ ಭೂಮಿಯ ಗುರುತ್ವಾಕರ್ಷಣೆ ಒಂದೇ ಆಗಿಲ್ಲ. ಇದರಿಂದಾಗಿಯೂ ಉಪಗ್ರಹದ ಪಥದಲ್ಲಿ ಸೂಕ್ಷ್ಮ ಕ್ಷೋಭೆಗಳು (ಪರ್ಟರ್ಬೇಷನ್ಸ್) ಆಗುತ್ತವೆ.

ಇವುಗಳ ಜೊತೆಗೆ ಆ ಎತ್ತರಗಳಲ್ಲಿ, ಸ್ವಲ್ಪವಾದರೂ ಇರುವ ಅನಿಲಕಣಗಳು ಮತ್ತು ಸೂಕ್ಷ್ಮ ಉಲ್ಕೆಗಳ ಘರ್ಷಣೆಯಿಂದ ಉಪಗ್ರಹದ ವೇಗ ಕ್ರಮೇಣ ತಗ್ಗುವುದು ಇದರಿಂದಾಗಿ ಅದರ ಎತ್ತರವೂ ಕಡಿಮೆಯಾಗುತ್ತ ಬಂದು ಕೊನೆಗೆ ಉಪಗ್ರಹ ಭೂಮಿಯ ಸಾಂದ್ರ ವಾಯುಮಂಡಲವನ್ನು ಪ್ರವೇಶಿಸಿ ಸುಟ್ಟು ಹೋಗುತ್ತದೆ. ಆದ್ದರಿಂದ ಉಪಗ್ರಹದ ಸರಿಯಾದ ಪಥವನ್ನು ಲೆಕ್ಕ ಹಾಕಬೇಕಾದರೆ ಮೇಲೆ ಹೇಳಿದ ಎಲ್ಲ ಅಂಶಗಳನ್ನೂ ಗಮನಿಸಲೇಬೇಕು.

ಅಂತರಿಕ್ಷ ನೌಕೆಯ ಗತಿವೀಕ್ಷಣೆಯ (ಟ್ರ್ಯಾಕಿಂಗ್)ಹಲವಾರು ವಿಧಾನಗಳಲ್ಲಿ ಮಾಡುತ್ತಾರೆ. ಮುಖ್ಯವಾದವು ದೃಗ್ವಿಧಾನ (ಆಪ್ಟಿಕಲ್); ಡಾಪ್ಲರ್ ವಿಧಾನ; ವ್ಯತಿಕರಣ (ಇಂಟರ್‌ಫೆರೋಮೆಟ್ರಿಕ್) ಮತ್ತು ಲೇಸರ್ ದೃಗ್ವಿಧಾನದ ರೀತಿ ಹೀಗಿದೆ: ದೂರದರ್ಶಕವನ್ನು ಅಳವಡಿಸಿರುವ ಒಂದು ಬಿಂಬಗ್ರಾಹಿ ಅಂತರಿಕ್ಷನೌಕೆಯ ಛಾಯಾಚಿತ್ರಗಳನ್ನು ಅತಿವೇಗವಾಗಿ ಒಡ್ಡುತ್ತದೆ. ಬಿಂಬಗ್ರಾಹಿಯನ್ನು ಜಿಂಬಾಲ್‌ಗಳ ಮೇಲೆ ಅಳವಡಿಸಿರುವುದರಿಂದ ಅದನ್ನು ಯಾವ ದಿಕ್ಕಿಗೆ ಬೇಕಾದರೂ ತಿರುಗಿಸಬಹುದು. ಸಾಮಾನ್ಯವಾಗಿ ಅದನ್ನು ಅಂತರಿಕ್ಷ ನೌಕೆಯ ಕಡೆಯೇ ಇರುವಂತೆ ತಿರುಗಿಸುತ್ತಾರೆ. ಛಾಯಾಚಿತ್ರದ ಮೇಲೆ ಬಿಂಬಗ್ರಾಹಿಯ ದಿಶೆ ಮತ್ತು ವೇಳೆ ಸೂಚಿಸಲ್ಪಟ್ಟಿರುತ್ತವೆ. ಈ ರೀತಿ ಗೊತ್ತಾದ ದೂರದಲ್ಲಿರುವ ಎರಡು ಕೇಂದ್ರಗಳಿಂದ ಚಿತ್ರಗಳನ್ನು ಒಡ್ಡುತ್ತಾರೆ. ಇವುಗಳ ನೆರವಿನಿಂದ ನೌಕೆಯ ಎತ್ತರ, ದಿಶೆ ಮತ್ತು ವೇಗಗಳನ್ನು ಗಣಿಸಬಹುದು.



ಚಿತ್ರ 2

ನೌಕೆ ಪಥದಲ್ಲಿರುವಾಗ ಗೊತ್ತುಗುರಿಯಿಲ್ಲದೆ ಹೊರಳಲು ಅವಕಾಶವುಂಟು. ಇದನ್ನು ತಪ್ಪಿಸಲು ಕೆಲವು ವೇಳೆ ಅದನ್ನು ಪಥದಲ್ಲಿ ನೂಕುವಾಗ ಅದು ತನ್ನ ಅಕ್ಷದ ಮೇಲೆ ಸುತ್ತುವಂತೆ ಮಾಡುತ್ತಾರೆ. ಇದರಿಂದಾಗಿ ಅದು ಇತರ ದಿಕ್ಕುಗಳತ್ತ ಹೊರಳುವುದಿಲ್ಲ. ಜೊತೆಗೆ ಬೇರೆ ಒಂದು ಅನುಕೂಲವೂ ಇದೆ. ಬಾಹ್ಯಾಕಾಶದಲ್ಲಿ ವಾತಾವರಣವಿಲ್ಲವಾದ್ದರಿಂದ ಸೂರ್ಯನ ಕಡೆಗೆ ತಿರುಗಿರುವ ನೌಕೆಯ ಭಾಗ ಬಹಳವಾಗಿ ಕಾದು ಮತ್ತೊಂದು ಭಾಗ ಅತಿ ತಣ್ಣಗೆ ಇರುತ್ತದೆ. ಈಗ ಅದು ಮೆಲ್ಲಗೆ ಸುತ್ತುತ್ತಿದ್ದರೆ ಪ್ರತಿ ಭಾಗವೂ ಸ್ವಲ್ಪ ಹೊತ್ತು ಸೂರ್ಯನ ಕಡೆಗೆ ಬರುವುದರಿಂದ ಉಷ್ಣದ ಘಾತ ಅಷ್ಟಾಗಿರುವುದಿಲ್ಲ.

ಅಂತರಿಕ್ಷ ನೌಕೆಗಳನ್ನು ರಾಕೆಟ್ಟುಗಳ ಸಹಾಯದಿಂದ ಉಡಾಯಿಸುತ್ತಾರೆ. ಮೊದಲು ರಾಕೆಟ್ ಯಾವ ಪಥದಲ್ಲಿ ಹೋಗಬೇಕೆಂಬುದನ್ನು ಗಣಿಸಿ ನಿರ್ಧರಿಸುತ್ತಾರೆ. ಅಂದರೆ, ಅದು ಹಾರುವಾಗ ಯಾವ ಯಾವ ಹೊತ್ತುಗಳಲ್ಲಿ ಎಷ್ಟೆಷ್ಟು ಎತ್ತರದಲ್ಲಿರಬೇಕು ಮತ್ತು ಎಷ್ಟೆಷ್ಟು ವಾಲಿರಬೇಕು ಎಂಬುದನ್ನು ಮೊದಲೇ ನಿಗದಿಸಿ ಈ ಪಥಯೋಜನೆಯನ್ನು ರಾಕೆಟ್‌ನ ಮೆದುಳಾದ ಗಣಕದಲ್ಲಿ ಅಳವಡಿಸಿರುತ್ತಾರೆ. ಇದರ ಆದೇಶದಂತೆ ರಾಕೆಟ್ ಇಚ್ಛಿತ ದಿಶೆಗೆ ತಿರುಗುತ್ತಿರುತ್ತದೆ. ಇದಕ್ಕೆ ಜಡನಿಯಂತ್ರಣ ವ್ಯವಸ್ಥೆ (ಇನರ್ಷಿಯಲ್ ಗೈಡೆನ್ಸ್ ಸಿಸ್ಟಮ್) ಎಂದು ಹೆಸರು.

**ಭಾಗ II ಮಾನವರಹಿತ ಉಪಗ್ರಹಗಳು:** ಈ ತನಕ ಹಾರಿಸಿರುವ ಮಾನವರಹಿತ ಉಪಗ್ರಹಗಳನ್ನು ಅವುಗಳ ಉಪಯೋಗಕ್ಕೆ ತಕ್ಕಂತೆ 7 ಭಾಗಗಳಾಗಿ ವಿಂಗಡಿಸಬಹುದು: 1. ವೈಜ್ಞಾನಿಕ ಉಪಗ್ರಹಗಳು, 2. ಹವಾಮಾನ ಉಪಗ್ರಹಗಳು, 3. ಸಂಪರ್ಕ ಸಾಧನೋಪಗ್ರಹಗಳು, 4. ದೂರಸಂವೇದೀ ಉಪಗ್ರಹಗಳು, 5. ಯಾನ ನಿರ್ವಹಣಾ ಉಪಗ್ರಹಗಳು, 6. ಸೇನಾ ಉಪಗ್ರಹಗಳು, 7. ಜೀವವೈಜ್ಞಾನಿಕ ಉಪಗ್ರಹಗಳು.

1. **ವೈಜ್ಞಾನಿಕ ಉಪಗ್ರಹಗಳು**

(ಎ) ರಷ್ಯದ ಉಪಗ್ರಹಗಳು.

**1. ಸ್ಪುಟ್ನಿಕ್‍ಗಳು :** ಅಂತರಿಕ್ಷಯುಗ ಪ್ರಾರಂಭವಾದುದು ಇವುಗಳಿಂದಲೇ. 1957 ಅಕ್ಟೋಬರ್ 4ರಂದು ಉಡಾಯಿಸಿದ ಮೊದಲನೆಯ ಸ್ಪುಟ್ನಿಕ್‍ನಿಂದ ಅಯೋನಾವರಣದ ಎಲೆಕ್ಟ್ರಾನ್ ಸಾಂದ್ರತೆ, ಉಪಗ್ರಹದೊಳಗಿನ ಉಪಕರಣಗಳು ತೃಪ್ತಿಕರವಾಗಿ ಕೆಲಸ ಮಾಡಲು ಇರಬೇಕಾದ ಅನುಕೂಲತೆಗಳು, ಉಷ್ಣನಿಯಂತ್ರಣ, ಉಪಕರಣಗಳ ದಕ್ಷತೆ ಮುಂತಾದವುಗಳ ಅಧ್ಯಯನವನ್ನು ನಡೆಸಿದರು. ಇದರ ಜೊತೆಗೆ ಅದು ವಾತಾವರಣದ ಮೇಲ್ಭಾಗದಲ್ಲಿ ಹಾದುಹೋಗುವ ಹಾಗೆ ಅದರ ಪಥವನ್ನು ನಿರ್ದೇಶಿಸಿದ್ದರು. ಆ ಮೂಲಕ ವಾತಾವರಣಸಾಂದ್ರತೆಯನ್ನು ಗಣಿಸಲಾಯಿತು. 1957ರ ನವೆಂಬರ್‌ನಲ್ಲಿ ಹಾರಿಸಿದ ಎರಡನೆಯ ಸ್ಪುಟ್ನಿಕ್, ಲೈಕಾ ಎಂಬ ನಾಯಿಯನ್ನು ಹೊತ್ತಿತ್ತು. ಇದರ ನೆರವಿನಿಂದ ಅಂತರಿಕ್ಷ ಪರಿಸರದಲ್ಲಿ ಜೀವವೈಜ್ಞಾನಿಕ ಪರಿಣಾಮಗಳನ್ನು ಅಧ್ಯಯನ ಮಾಡಿದರು. 1958 ಮೇ ತಿಂಗಳಿನಲ್ಲಿ ಉಡಾಯಿಸಿದ ಮೂರನೆಯ ಸ್ಪುಟ್ನಿಕ್, ವಾತಾವರಣದ ಸಾಂದ್ರತೆ, ಒತ್ತಡ, ಅಯೋನಾವರಣದಲ್ಲಿರುವ ಧನವಿದ್ಯುತ್ಕಣ ಸಾಂದ್ರತೆ, ಭೂಕಾಂತಕ್ಷೇತ್ರ, ವಿಶ್ವಕಿರಣಗಳು, ಸೂಕ್ಷ್ಮ ಉಲ್ಕೆಗಳು, ಮುಂತಾದವುಗಳ ಅಧ್ಯಯನ ನಡೆಸಿತು. ಇವಲ್ಲದೆ ರಷ್ಯ ಹಾರಿಸಿದ ಲೂನ–1 ಎಂಬ ಉಪಗ್ರಹ ಭೂಮಿಯ ಆಕರ್ಷಣೆಯಿಂದ ಪಾರಾಗಿ, ಚಂದ್ರಮಂಡಲವನ್ನು ದಾಟಿ, ಬಾಹ್ಯಾಕಾಶದಲ್ಲಿ ಸೂರ್ಯನಿಗೆ ಒಂದು ಕೃತಕಗ್ರಹವಾಯಿತು. ಇದಾದ ಅನಂತರ 1950 ಜನವರಿ, ಮಾರ್ಚ್ ಮತ್ತು ಅಕ್ಟೋಬರ್‌ಗಳಲ್ಲಿ ರಷ್ಯ ಕ್ರಮವಾಗಿ ಲುನಿಕ್–2 ಮತ್ತು ಲುನಿಕ್–3 ಎಂಬ ಉಪಗ್ರಹಗಳನ್ನು ಹಾರಿಬಿಟ್ಟಿತು. ಲುನಿಕ್–3 ಚಂದ್ರನನ್ನು ಬಳಸಿ ಪ್ರಪ್ರಥಮ ಬಾರಿಗೆ ಅದರ ಅಗೋಚರ ಪಾರ್ಶ್ವದ ಛಾಯಾಚಿತ್ರವನ್ನು ಭೂಮಿಗೆ ರವಾನಿಸಿತು. ಅಂತರಿಕ್ಷ ಸಂಶೋಧನೆಯಲ್ಲಿ ಇದೊಂದು ಮಹತ್ತ್ವದ ಹೆಜ್ಜೆ.



**ಚಿತ್ರ 3**
**ಎರಡನೆಯ ಸ್ಪುಟ್ನಿಕ್ ಉಪಗ್ರಹವನ್ನು ಹೊತ್ತ ರಾಕೆಟ್ಟಿನ ನಾಸಿಕ ಶಂಕು**

1960 ಮೇ 15 – 1961 ಮಾರ್ಚ್‌ತನಕ ರಷ್ಯ ಬಹಳ ಭಾರವಾದ ಉಪಗ್ರಹಗಳನ್ನು ಉಡಾಯಿಸಿತು. ಇವು ವಿಶ್ವಕಿರಣ, ಕ್ಷ–ಕಿರಣ, ಅತಿನೇರಿಳೆಕಿರಣ ಮುಂತಾದವುಗಳ ಅಧ್ಯಯನದ ಜೊತೆಗೆ ಮುಂದೆ ಮಾನವನನ್ನೊಳಗೊಂಡ ಉಪಗ್ರಹಗಳಿಗಿರಬೇಕಾದ ಗುಣವಿಶೇಷಗಳನ್ನೂ ಅಧ್ಯಯನ ಮಾಡಿದುವು.

**2. ಕಾಸ್ಮಾಸ್ ಉಪಗ್ರಹಗಳು:** ಮೊದಲ ಕಾಸ್ಮಾಸ್‍ನ್ನು 1962 ಮಾರ್ಚ್ 16ರಂದು ರಷ್ಯ ಹಾರಿಸಿತು. ಅಲ್ಲಿಂದೀಚೆಗೆ ಸು.200ಕ್ಕೂ ಹೆಚ್ಚು ಕಾಸ್ಮಾಸ್ ಹೆಸರಿನ ಉಪಗ್ರಹಗಳನ್ನು ಹಾರಿಸಲಾಗಿದೆ. ಇವು ವಿವಿಧ ಆಕಾರಗಳಲ್ಲಿದ್ದು ವಿವಿಧ ರೀತಿಯ ಕಕ್ಷೆಗಳಲ್ಲಿ ಭೂಮಿಯನ್ನು ಸುತ್ತುತ್ತಿವೆ. ಭೂಮಿಯನ್ನು ಆವರಿಸಿರುವ ವಿಕಿರಣ ಪದರುಗಳು ಭೂಕಾಂತಕ್ಷೇತ್ರ ಮೊದಲಾದವುಗಳ ಅಧ್ಯಯನವನ್ನು ಈ ಉಪಗ್ರಹಗಳ ನೆರವಿನಿಂದ ಮಾಡಲಾಗಿದೆ.

ಕೆಲವು ಕಾಸ್ಮಾಸ್‍ಗಳ ಸಹಾಯದಿಂದ ಅಂತರಿಕ್ಷನೌಕೆಗಳ ರಚನೆ, ಅವುಗಳ ದಿಙ್ನಿಯಂತ್ರಣ, ಅವನ್ನು ಭೂಮಿಗೆ ಮರಳಿಸುವ ವಿಧಾನಗಳು, ಅವುಗಳಲ್ಲಿ ಅಳವಡಿಸಿರುವ ಜೀವ ಸೌಕರ್ಯಗಳು ಮುಂತಾದುವುಗಳ ಅಧ್ಯಯನ ನಡೆಸಲಾಯಿತು. 1967 ಅಕ್ಟೋಬರ್ 30ರಂದು ಉಡಾಯಿಸಿದ ಆದೇಶಗಳ ಅನುಸಾರ ಕಾಸ್ಮಾಸ್–188 ಅದಕ್ಕೆ ಮೂರುದಿನಗಳ ಮೊದಲೇ ಹಾರಿಸಿದ್ದ ಕಾಸ್ಮಾಸ್ 186ನ್ನು, ಭೂಮಿಯಿಂದ ಬಂದ ಆದೇಶಗಳಿಗನುಗುಣವಾಗಿ ಸೇರಿಕೊಂಡಿತು. ಇವೆರಡೂ ಒಟ್ಟಿಗೆ 3½ ಗಂಟೆಗಳ ಕಾಲ ಪ್ರಯಾಣಿಸಿದ ಬಳಿಕ ಅನಂತರ ಬೇರ್ಪಟ್ಟವು.

ಪುನಃ 1968 ಏಪ್ರಿಲ್ 15ರಂದು ಕಾಸ್ಮಾಸ್–212 ಮತ್ತು ಕಾಸ್ಮಾಸ್–213 ಉಪಗ್ರಹಗಳು ಒಂದನ್ನೊಂದು ಸೇರಿದುವು. ಅವು ಒಟ್ಟಿಗೆ 3 ಗಂಟೆ 30 ಮಿನಿಟುಗಳು ಹಾರಾಡಿದುವು. ಅನಂತರ ಬೇರೆ ಬೇರೆಯಾಗಿ ಬೇರೆ ಬೇರೆ ಪಥಗಳಲ್ಲಿ ಸಂಚರಿಸಿದುವು. 5 ದಿನಗಳ ಅನಂತರ ಅವೆರಡೂ ಸುರಕ್ಷಿತವಾಗಿ ಭೂಮಿಗೆ ಮರಳಿದುವು.

**3. ಎಲೆಕ್ಟ್ರಾನ್ ಉಪಗ್ರಹಗಳು:** ಭೂಮಿಯನ್ನಾವರಿಸಿರುವ ವ್ಯಾನ್ ಅಲೆನ್ ವಿಕಿರಣಪದರಗಳ ರಚನೆ, ರೂಪು ರೀತಿ ಮತ್ತು ಅವುಗಳಲ್ಲಿರುವ ಕಣಗಳನ್ನು ಅಧ್ಯಯನ ಮಾಡಲು ಈ ಉಪಗ್ರಹಗಳನ್ನು ಹಾರಿಸಿದರು.

ವಿದ್ಯುದ್ರೋಹಿತ (ಎಲೆಕ್ಟ್ರೋ ಮ್ಯಾಗ್ನಟಿಕ್ ಸ್ಪೆಕ್ಟ್ರಮ್) ಬಹಳ ವಿಶಾಲ ವಾಗಿರುವುದರಿಂದ ಅಂತರಿಕ್ಷದ ವಿವಿಧ ಭಾಗಗಳಲ್ಲಿ ಒಂದೇ ಸಾರಿ ಅಳತೆಗಳನ್ನು ತೆಗೆಯುವುದು ಸುಲಭ. ಇದಕ್ಕಾಗಿ ಒಂದೇ ರಾಕೆಟ್ಟಿನಿಂದ ಎರಡು ಉಪಗ್ರಹಗಳನ್ನು (ಎಲೆಕ್ಟ್ರಾನ್–1 ಮತ್ತು ಎಲೆಕ್ಟ್ರಾನ್–2) ಬೇರೆ ಬೇರೆ ಪಥಗಳಲ್ಲಿ 1964 ಜನವರಿಯಲ್ಲಿ ಉಡಾಯಿಸಿದರು.

ರೋಹಿತ್ಯಾಧ್ಯಯನದ ಜೊತೆಗೆ ಭೂಕಾಂತಕ್ಷೇತ್ರ, ವಿಶ್ವಕಿರಣಗಳು, ಸೂರ್ಯನಿಂದ ಬರುವ ಕಡಿಮೆ ತರಂಗಮಾನ ರೇಡಿಯೋ ತರಂಗ ಗಳು, ವಿಶ್ವರೇಡಿಯೋ ಪ್ರಸರಣ, ಸೂಕ್ಷ್ಮ ಉಲ್ಕೆಗಳು–ಮುಂತಾದುವುಗಳ ಮೇಲೆ ಕೂಡ ಇವು ಅಧ್ಯಯನ ನಡೆಸಿದುವು ಎಲೆಕ್ಟ್ರಾನ್–3 ಮತ್ತು ಎಲೆಕ್ಟ್ರಾನ್–4 ಉಪಗ್ರಹಗಳು ಮುಂದುವರಿಸಿದುವು.

**4. ಪ್ರೋಟಾನ್ ಉಪಗ್ರಹಗಳು :** ಮೂಲ ವಿಶ್ವಕಿರಣಗಳಲ್ಲಿ ಪ್ರಬಲ ಶಕ್ತಿಯ ವಿದ್ಯುತ್ಕಣಗಳಿರುತ್ತವೆ. ಇವುಗಳ ಶಕ್ತಿ $10^{19}$ ರಿಂದ–$10^{20}$ ರಷ್ಟು ಎಲೆಕ್ಟ್ರಾನ್ ವೋಲ್ಟುಗಳು. ಈ ಕಣಗಳ ಅಧ್ಯಯನವನ್ನು ಮಾಡಲು ದೊಡ್ಡ ಪ್ರೋಟಾನ್ ಉಪಗ್ರಹಗಳನ್ನು ಹಾರಿಸಿದರು.

**(ಬಿ) ಅಮೆರಿಕದ ಉಪಗ್ರಹಗಳು.**

**1. ಎಕ್ಸ್‌ಪ್ಲೋರರ್ ಉಪಗ್ರಹಗಳು :** ಅಮೆರಿಕ ತನ್ನ ಮೊದಲ ಉಪಗ್ರಹವಾದ ಎಕ್ಸ್‌ಪ್ಲೋರರ್–1ನ್ನು 1958 ಜನವರಿ 31ರಂದು ಹಾರಿಸಿತು. ಇದು ಮುಖ್ಯವಾಗಿ ವ್ಯಾನ್‌ಅಲೆನ್ ವಿಕಿರಣ ಪಟ್ಟಿಯನ್ನು ಪತ್ತೆ ಹಚ್ಚಿತು. ಈ ಮುಂದಿನ ಇದರ ಜೊತೆಗೆ ಈ ಶ್ರೇಣಿಯಲ್ಲಿ ಆಮೇಲೆ ಹಾರಿಸಿದ ಎಕ್ಸ್‌ಪ್ಲೋರರ್‌ಗಳು: ಕೆಳಕಂಡ ವಿಷಯಗಳಲ್ಲಿ ಹೆಚ್ಚು ಜ್ಞಾನವನ್ನು ಸಂಪಾದಿಸಿಕೊಟ್ಟವು, ಉಲ್ಕೆಗಳು, ಒತ್ತಡ, ಉಷ್ಣತೆ, ರಶ್ಮಿ, ಭೂಕಾಂತಕ್ಷೇತ್ರ, ಸೌರ ಚಟುವಟಿಕೆಗಳು ಭೂಮಿಯ ವಾತಾವರಣದ ಮೇಲೆ ಉಂಟುಮಾಡುವ ಪರಿಣಾಮಗಳು, ಶಕ್ತಿಯುತ ವಿದ್ಯುತ್‌ಕಣಗಳ ಲಕ್ಷಣಗಳು, ಅಯೋನಾವರಣದ ರಚನೆ ಮತ್ತು ಗ್ಯಾಮಾ ಕಿರಣಗಳು.

**2. ವ್ಯಾನ್‌ಗಾರ್ಡ್ ಉಪಗ್ರಹಗಳು :** ಇವು ಅಂತಾರಾಷ್ಟ್ರೀಯ ಭೂಭೌತ ವರ್ಷದ ಅಂಗವಾಗಿ ಉಡಾಯಿಸಿದ ಉಪಗ್ರಹಗಳು. 1958 ಮಾರ್ಚ್‌ನಲ್ಲಿ ಎಡಾಯಿಸಿದ ವ್ಯಾನ್‌ಗಾರ್ಡ್–1ರಿಂದಭೂಮಿಯ ಆಕಾರ ಸುಮಾರಾಗಿ ಗೇರುಬೀಜದಂತಿದೆಯೆಂದು ತಿಳಿದುಬಂದಿತು. ಇದರ ಜೊತೆಗೆ ಮುಂದೆ ಪ್ರಯೋಗಿಸಿದ ವ್ಯಾನ್‌ಗಾರ್ಡ್ ಉಪಗ್ರಹಗಳು, ಭೂಮಿಯ ವಾಯುಗುಣ, ಭೂಕಾಂತಕ್ಷೇತ್ರ, ವ್ಯಾನ್‌ಅಲೆನ್ ವಿಕಿರಣ ಪಟ್ಟಿಯ ಕೆಳಭಾಗ, ಸೂಕ್ಷ್ಮ ಉಲ್ಕೆಗಳ ಸಾಂದ್ರತೆ–ಮುಂತಾದ ವಿಚಾರಗಳ ಮೇಲೆ ಅಧ್ಯಯನ ನಡೆಸಿದುವು.



**ಚಿತ್ರ 4**
**ಕಾಸ್ಮಾಸ್ ಉಪಗ್ರಹ**

**3. ಡಿಸ್ಕವರರ್ ಉಪಗ್ರಹಗಳು** : 1959 ಫೆಬ್ರವರಿಯಲ್ಲಿ ಮೊದಲನೆಯ ಡಿಸ್ಕವರರ್ ಉಪಗ್ರಹವನ್ನು ಧ್ರುವಪಥದಲ್ಲಿ ಹಾರಿಸಲಾಯಿತು. ಅಂತರಿಕ್ಷ ನೌಕೆಗಳನ್ನು ಭೂಮಿ ಸುರಕ್ಷಿತವಾಗಿ ವಾಪಸ್ಸು ಪಡೆಯುವ ವಿಧಾನಗಳನ್ನು ಅಭ್ಯಸಿಸಲಾಯಿತು. ಜೊತೆಗೆ ಚಾಲನೆ (ಪ್ರೊಪಲ್ಷನ್) ಸಂಪರ್ಕಸಾಧನಗಳು, ಬಾಹ್ಯಾ ಕಾಶದಿಂದ ಬರುವ ರೇಡಿಯೋ ಸಂಜ್ಞೆಗಳು ಮುಂತಾದುವನ್ನು ಅಧ್ಯಯನ ಮಾಡಲಾಯಿತು.

**4. ಕಕ್ಷಿಸುತ್ತಿರುವ ಭೂಭೌತ ವೇಧಶಾಲೆಗಳು (ಆರ್ಬಿಟಿಂಗ್ ಜಿಯೊಫಿಸಿಕಲ್ ಆಬ್ಸರ್ವೇಟರೀಸ್–ಒಜಿಒ):** ಹೆಸರೇ ಸೂಚಿಸು ವಂತೆ ಇವನ್ನು ಭೂಭೌತ ವಿಜ್ಞಾನಾಧ್ಯಯನಕ್ಕೆ ಉಪಯೋಗಿಸಲಾಯಿತು.

ಕಕ್ಷಿಸುತ್ತಿರುವ ಸೌರವೇಧ ಶಾಲೆ (ಆರ್ಬಿಟಿಂಗ್ ಸೋಲಾರ್ ಅಬ್ಸರ್ವೇಟರೀಸ್–ಓಎಸ್‌ಒ): ವೃತ್ತಾಕಾರಪಥದಲ್ಲಿ ಹಾರಿಸಿ ಇವನ್ನು ಭೂಮಿಯ ವಾತಾವರಣದ ಮೇಲಿನಿಂದ ಸೌರ ಚಟುವಟಿಕೆಗಳನ್ನು ಅಧ್ಯಯನ ಮಾಡಲು ಉಪಯೋಗಿಸಲಾಯಿತು. ಇವುಗಳಲ್ಲಿ ಕ್ಷ–ಕಿರಣ ಮತ್ತು ಲೈಮಾನ ಅಲ್ಪರೋಹಿತ ಮಾಪಕಗಳೂ (ಸ್ಪೆಕ್ಟ್ರಾಮೀಟರ್) ನ್ಯೂಟ್ರಾನ್ ಮತ್ತು ಗ್ಯಾಮಾ ಗಣಕಗಳೂ ಇದ್ದವು.

**ಕಕ್ಷಿಸುತ್ತಿರುವ ಖಗೋಳ ವೇಧಶಾಲೆ: (ಆರ್ಬಿಟಿಂಗ್ ಆಸ್ಟ್ರನಾಮಿಕಲ್ ಅಬ್ಸರ್ವೇಟರಿ– ಒಎಒ):** ಅಂತರಿಕ್ಷದಿಂದ ಬರುವ ಅನೇಕ ವಿಧವಾದ ವಿದ್ಯುತ್ಕಾಂತೀಯ ತರಂಗಗಳನ್ನು ಭೂಮಿಯ ವಾತಾವರಣ ಹೀರಿಕೊಳ್ಳುತ್ತದೆ. ಇದರಿಂದಾಗಿ ಭೂಮಿಯ ಮೇಲಿಂದಲೇ ಮಾಡುವ ಖಗೋಳಾಧ್ಯಯನ ಕುಂಠಿತವಾಗಿದೆ. ಆದ್ದರಿಂದ ಒಎಒಗಳು ಭೂಮಿಯ ವಾತಾವರಣದ ಮೇಲ್ಭಾಗದಿಂದ ಅಧ್ಯಯನ ನಡೆಸಿದುವು. ಹೀಗೆ ನಡೆಸಿದ ಅಧ್ಯಯನದ ಫಲವಾಗಿ ಭೂಮಿಯ ಮೇಲಿನ ವಾಯುಮಂಡಲದ ಸ್ವಭಾವ, ಪರಿಣಾಮ ತಿಳಿಯುವುದರ ಜೊತೆಗೆ ನಕ್ಷತ್ರ, ನೀಹಾರಿಕೆ ಮುಂತಾದ ಆಕಾಶಕಾಯಗಳನ್ನು ಕುರಿತು ಹೆಚ್ಚು ನಿಖರವಾದ ವಿವರಗಳನ್ನು ಸಂಗ್ರಹಿಸುವುದು ಕೂಡ ಸಾಧ್ಯವಾಯಿತು. ಇಂಥ ಅಧ್ಯಯನ ಅಂತರಿಕ್ಷಯಾನಕ್ಕೆ ಅತ್ಯಾವಶ್ಯಕ.

**5. ಹಬಲ್ ಅಂತರಿಕ್ಷ ದೂರದರ್ಶಕ :** ಗೋಚರ ಬೆಳಕು ಅತಿನೇರಿಳೆ ಕಿರಣಗಳು ಅವರಕ್ತ ಕಿರಣಗಳು ಇವನ್ನು ದಾಖಲಿಸುವ ಮೂಲಕ ಆಕಾಶಕಾಯಗಳನ್ನು ಅಭ್ಯಸಿಸಬಲ್ಲ ಹಬಲ್ ಅಂತರಿಕ್ಷ ದೂರದರ್ಶಕವನ್ನು ಅಮೆರಿಕ 1990ರಲ್ಲಿ ಭೂಕಕ್ಷೆಗೆ ಉಡಾಯಿಸಿತು. ಸೌರವ್ಯೂಹದ ಗ್ರಹಗಳಿಂದ ಹಿಡಿದು ಸಾವಿರ ಕೋಟಿ ಜ್ಯೋತಿರ್ವರ್ಷಗಳಷ್ಟು ದೂರದ ಬ್ರಹ್ಮಾಂಡಗಳ ಚಿತ್ರಗಳನ್ನು ರವಾನಿಸಿರುವ ಆ ವೈಜ್ಞಾನಿಕ ಉಪಗ್ರಹ ಖಗೋಲ ವೀಕ್ಷಣಾ ಕ್ಷೇತ್ರದಲ್ಲಿ ಮಹತ್ತರವಾದ ಮುನ್ನಡೆ ತಂದಿದೆ.



**ಚಿತ್ರ 5**
**ಎಲೆಕ್ಟ್ರಾನ್–1 ಉಪಗ್ರಹ**

**6. ಚಂದ್ರ ಕ್ಷಕಿರಣ ವೇಧಶಾಲೆ;** ಭಾರತೀಯ ಸಂಜಾತ ಅಮೆರಿಕದ ಖಗೋಲ ಭೌತವಿಜ್ಞಾನಿ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತ ಸುಬ್ರಹ್ಮಣ್ಯನ್ ಚಂದ್ರಶೇಖರ್ (1910–95) ಅವರ ಹೆಸರುಳ್ಳ ಈ ದೊಡ್ಡ ವೈಜ್ಞಾನಿಕ ಉಪಗ್ರಹ ಭೂಮಿಯನ್ನಿಂದು ಸುತ್ತುತ್ತಿದೆ. ಈ ಬ್ರಹ್ಮಾಂಡದ ಅನೇಕ ಕುತೂಹಲಕಾರಿ ಆಕಾಶಕಾಯಗಳಾದ ಮಹಾಸೇವಾಗಳು, ಕಪ್ಪು ರಂಧ್ರಗಳು, ಬ್ರಹ್ಮಾಂಡಗಳು ಮುಂತಾದವುಗಳ ಬಗ್ಗೆ 1999ರಲ್ಲಿ ಉಡಾಯಿಸಿದ ಆ ಉಪಗ್ರಹ ಅಮೂಲ್ಯ ಮಾಹಿತಿಯನ್ನು ಒದಗಿಸುತ್ತಿದೆ. ಜೊತೆಗೇ ಯುರೋಪಿನ ಎಕ್ಸ್.ಎಮ್.ಎಮ್ ಉಪಗ್ರಹವೂ ಕ್ಷಕಿರಣಗಳ ಅಧ್ಯಯನವನ್ನು ನಡೆಸುತ್ತಿದೆ. ಇದಕ್ಕೆ ಮೊದಲು ಸ್ಕೈಲ್ಯಾಬ್ (ಮಾನವಸಹಿತ) ಅಂತರಿಕ್ಷ ನಿಲ್ದಾಣದ ಉಪಕರಣಗಳೂ ಕ್ಷಕಿರಣ ಖಗೋಲವಿಜ್ಞಾನಕ್ಕೆ ಪ್ರಮುಖವಾದ ನೆರವು ನೀಡಿದವು.

**7. ಲೈಮನ್ ಸ್ಪಿಟ್ಸರ್ ಅತಿರಕ್ತ ವೇಧಶಾಲೆ:** ಅಮೆರಿಕ ಉಡಾಯಿಸಿದ ಈ ವೈಜ್ಞಾನಿಕ ಉಪಗ್ರಹವು ನೀಹಾರಿಕೆಗಳು, ನಕ್ಷತ್ರಗಳ ಜನನ, ಕ್ಷೀಣ ನಕ್ಷತ್ರಗಳು ಮುಂತಾದ ವಿಷಯಗಳ ಬಗ್ಗೆ ಅಮೂಲ್ಯವಾದ ಮಾಹಿತಿ ಒದಗಿಸುತ್ತಿದೆ. ಜೊತೆಗೆ ಯುರೋಪಿನ ಐಎಸ್ಒ ಉಪಗ್ರಹವೂ ಅವರಕ್ತ ಕಿರಣಗಳ ಅಧ್ಯಯನಕ್ಕೆ ನೆರವನ್ನು ನೀಡುತ್ತಿದೆ.

**8. ಕಾಂಪ್ಟನ್ ಗಾಮಾಕಿರಣ ವೇಧಶಾಲೆ :** 1991ರಲ್ಲಿ ಕಕ್ಷೆಗೆ ತೆರಳಿದ ಈ ಉಪಗ್ರಹ ನಮ್ಮಲ್ಲಿ ಬ್ರಹ್ಮಾಂಡದಲ್ಲಿ (ಅಂದರೆ ಆಕಾಶಗಂಗೆಯಲ್ಲಿ) ಜರುಗುವ ಅನೇಕ ಶಕ್ತಿಯುತವಾದ ವಿದ್ಯಮಾನಗಳ ಅಧ್ಯಯನದಲ್ಲಿ ಮಾನವನಿಗೆ ಒಂದು ದಶಕದ ಕಾಲ ಅಮೂಲ್ಯ ನೆರವನ್ನು ನೀಡಿತು. 2005 ರಿಂದೀಚೆಗೆ ಯುರೋಪಿನ ಇಂಟೆಗ್ರಲ್ ಎಂಬ ವೈಜ್ಞಾನಿಕ ಉಪಗ್ರಹ ಗ್ಯಾಮಾಕಿರಣಗಳ ಅಧ್ಯಯನಕ್ಕೆ ಪ್ರಮುಖ ಕೊಡುಗೆ ನೀಡುತ್ತಿದೆ. ಇವಲ್ಲದೇ ದೊಡ್ಡ ನಕ್ಷತ್ರಗಳ ಅಧ್ಯಯನದ ಸಂಬಂಧದಲ್ಲಿ ಅತಿನೇರಿಳೆ ಕಿರಣಗಳನ್ನು ದಾಖಲು ಮಾಡಿಕೊಳ್ಳಬಲ್ಲವಾಗಿದ್ದ ಐ.ಯು.ಇ. ಮತ್ತು ಇ.ಯು.ವಿ.ಯಿ. ಉಪಗ್ರಹಗಳು ಅಮೂಲ್ಯ ನೆರವನ್ನು ನೀಡಿದವು.

ಇತರ ದೇಶಗಳ ಉಪಗ್ರಹ ಗಳು: ಇಂಗ್ಲೆಂಡ್, ಕೆನಡ, ಇಟಲಿ, ಫ್ರಾನ್ಸ್, ಇಸ್ರೇಲ್, ಜರ್ಮನಿ, ನೆದರ್ ಲೆಂಡ್ಸ್ ಹಾಗೂ ಇನ್ನೂ ಅನೇಕ ದೇಶಗಳೂ ವೈಜ್ಞಾನಿಕ ಉಪಗ್ರಹಗಳನ್ನು ಹಾರಿಸಿವೆ. ಇಲ್ಲವೇ ಅಂಥ ಉಪಗ್ರಹಗಳನ್ನು ಹೊಂದಿವೆ. ಕ್ಷ–ಕಿರಣ ಗಳನ್ನು ಅಭ್ಯಸಿಸಬಲ್ಲ ಪಿಆರ್ಎಸ್–ಪಿ3, ಗಾಮಾಕಿರಣಗಳ ಸ್ಫೋಟನೆಗ ಳನ್ನು ಹಾಗೂ ಭೂಮಿಯ ಅಯಾನು ಮಂಡಲವನ್ನು ಅಭ್ಯಸಿಸಬಲ್ಲ ಸ್ರಾಸ್–ಸಿ 3 ಮತ್ತು ಸ್ರಾಸ್–ಸಿ2 ಉಪಗ್ರಹಗಳನ್ನು ಹಾರಿಬಿಟ್ಟ ಭಾರತ ಆ ಮೂಲಕ ಅಂತರಿಕ್ಷದಿಂದ ಖಗೋಲವೀಕ್ಷಣೆ ಯನ್ನು ನಡೆಸಿದೆ.

**(ii) ಹವಾಮಾನ ಉಪಗ್ರಹಗಳು:** ಭೂಮಿಯ ಮೇಲಿನ ಮೋಡಗಳ ವಿತರಣೆ, ಎತ್ತರ, ಧ್ರುವ ಪ್ರದೇಶಗ ಳಲ್ಲಿಯ ಮಂಜುಗಡ್ಡೆಗಳು, ಭೂಪ್ರ ದೇಶದ ಉಷ್ಣತೆ ಮುಂತಾದವು ವಾಯುಗುಣದ ಮೇಲೆ ಬಹಳವಾಗಿ ಪರಿಣಾಮ ಬೀರುತ್ತವೆ. ಅದೂ ಅಲ್ಲದೆ ಒಂದು ಕಡೆಯ ವಾಯುಗುಣ ಅದರ ಸುತ್ತಮುತ್ತಲಿನ ಸಾವಿರಾರು ಕಿಮೀ ವ್ಯಾಪ್ತಿಯಲ್ಲಿಯ ಪ್ರದೇಶದ ವಾಯುಗುಣವನ್ನು ಅವಲಂಬಿಸಿದೆ. ಆದ್ದರಿಂದ ಭೂಮಿಯ ಬಹುಭಾಗದ ವಾಯುಗುಣವನ್ನು ಒಂದೇ ಸಾರಿಗೆ ಪರಿಶೀಲಿಸುವುದು ಅಗತ್ಯ. ಇದನ್ನು ಉಪಗ್ರಹಗಳು ಮಾತ್ರ ಮಾಡಬಲ್ಲವು. ಇವು ನೂರಾರು ಕಿಮೀ. ಎತ್ತರದಿಂದ ಮೋಡಗಳ ಚಿತ್ರಗಳನ್ನು ತೆಗೆದು ರೇಡಿಯೊ ತರಂಗಗಳ ಮೂಲಕ ಭೂಮಿಗೆ ರವಾನಿಸುತ್ತವೆ. ಈ ಚಿತ್ರಗಳ ಸಹಾಯದಿಂದ ಬಿರುಗಾಳಿ, ಹಿಮಪಾತ, ಚಂಡಮಾರುತ, ಪ್ರವಾಹಗಳು–ಮುಂತಾದವನ್ನು ಮೊದಲೇ ಪತ್ತೆಹಚ್ಚಿ ಅವುಗಳಿಂದುಂಟಾಗುವ ವಿನಾಶವನ್ನು ಕಡಿಮೆ ಮಾಡಬಹುದು. ನಂಬಲರ್ಹವಾದ ಹವಾಮಾನದ ವಿವರಗಳನ್ನು ಮುಂಚೆಯೇ ತಿಳಿಯುವುದರಿಂದ ಹಡಗುಗಳು ಮತ್ತು ವಿಮಾನಗಳು ಸುರಕ್ಷಿತವಾಗಿ ಓಡಾಡಬಹುದು. ಈ ಕೆಲಸಕ್ಕಾಗಿಯೇ ಮೀಸಲಾದ ಕೆಲವು ಉಪಗ್ರಹಗಳನ್ನು ಉಡಾಯಿಸಲಾಗಿದೆ.



**ಚಿತ್ರ 6**
**ಎಲೆಕ್ಟ್ರಾನ್ 2 ಉಪಗ್ರಹ**

ಅಮೆರಿಕನ್ನರು ಹವಾಮಾನ ಅಧ್ಯಯನಕ್ಕಾಗಿ ಮೊದಲು ಟೈರೋಸ್ ಶೀರ್ಷಿಕೆಯಲ್ಲಿ ಎಂಟು ಉಪಗ್ರಹಗಳನ್ನು ಉಡಾಯಿಸಿದರು. ಮುಂದೆ ಇವುಗಳ ಸುಧಾರಿತ ಉಪಗ್ರಹಗಳಾದ ಎಸ್ಸಾ–1 ಮತ್ತು 2ನ್ನೂ ಬಳಿಕ ಇನ್ನೂ ಉತ್ತಮ ಪಡಿಸಿದ ನಿಂಬಸ್ ಉಪಗ್ರಹಗಳನ್ನೂ ಹಾರಿಸಿದ್ದರು, ನಿಂಬಸ್‌ಗಳಲ್ಲಿ ಸ್ವಯಂಚಾಲಿತ ಚಿತ್ರಪ್ರಸಾರ (ಎಪಿಟಿ) ಉಪಕರಣಗಳಿದ್ದವು. ಇವು ಭೂಮಿಯನ್ನು ಸುತ್ತುವಾಗ ಎಪಿಟಿ ಕ್ಯಾಮರ ಸದಾ ಭೂಮಿಯನ್ನೇ ಮೀಕ್ಷಿಸುತ್ತಿದ್ದು 208 ಸೆಕೆಂಡ್‌ಗಳಿಗೊಮ್ಮೆ ಮೋಡಗಳ ಚಿತ್ರಗಳನ್ನು ತೆಗೆದು ಭೂಮಿಗೆ ಪ್ರಸಾರ ಮಾಡುತ್ತಿತ್ತು. ಈ ಚಿತ್ರಗಳನ್ನು 44 ಸ್ಥಳಗಳಿಂದ ಗ್ರಹಿಸಲಾಗುತ್ತಿತ್ತು. ಇವುಗಳಲ್ಲಿ ಮುಂಬಯಿಯ ಕೊಲಾಬಾ ವೇಧಶಾಲೆಯಲ್ಲಿ ಸೇರಿತ್ತು.

ರಷ್ಯಾದೇಶ ಮೊದಲಿಗೆ ಕಾಸ್ಮಾಸ್–122 ಉಪಗ್ರಹದಿಂದ ಮೋಡಗಳ ಚಿತ್ರಗಳನ್ನು ತೆಗೆಯಿತು. ಕಾಸ್ಮಾಸ್–144 ಮತ್ತು ಕಾಸ್ಮಾಸ್ 156 ಒಟ್ಟಿಗೆ ಕೆಲಸ ಮಾಡಿ ಪ್ರತಿ 6 ಗಂಟೆಗೊಮ್ಮೆ ಭೂಮಿಯ ಪೂರ್ಣ ಚಿತ್ರಗಳನ್ನು ಕೊಡುತ್ತಿದ್ದುವು. ಮೋಲ್ನಿಯಾ

ಸರಣಿಯ ಉಪಗ್ರಹವನ್ನು ರಷ್ಯನ್ನರು ಅತಿದೀರ್ಘ ವೃತ್ತಪಥದಲ್ಲಿ ಹಾರಿಸಿದರು. ಇದು ತನ್ನ ಪಥದಲ್ಲಿ ದೂರ ದೂರ ಹೋದಂತೆಲ್ಲ ಭೂಮಿಯ ಹೆಚ್ಚು ಹೆಚ್ಚು ಭಾಗದ ಚಿತ್ರಗಳನ್ನು ತೆಗೆದು ಕಳುಹಿಸಿತು. ಕಾಸ್ಮಾಸ್–149 ಭೂಮಿಯಿಂದ ಹೊರಡುವ ಉಷ್ಣ ವಿಕಿರಣವನ್ನು ವಿವಿಧ ರೋಹಿತವಿಭಾಗಗಳಲ್ಲಿ ಅಳೆಯಿತು.



**ಚಿತ್ರ 7**
**ವ್ಯಾನ್‌ಗಾರ್ಡ್ ಉಪಗ್ರಹ**

ಇಂದು ಹವಾಮಾನ ಉಪಗ್ರಹಗಳ ಪೈಕಿ ಕೆಲವು ಭೂಮಿಯಿಂದ ಕೆಲವು ನೂರು ಕಿಮೀ. ಎತ್ತರವಿದ್ದು ಧ್ರುವ ಪ್ರದೇಶಗಳ ಮೇಲೆ ಹಾದು ಹೋಗುವ ಕಕ್ಷೆಯಲ್ಲಿವೆ. ಮತ್ತೆ ಕೆಲವು ಭೂಮಿಯಿಂದ 36,000 ಕಿಮೀ. ಎತ್ತರದ ಭೂಸ್ಥಿರ ಕಕ್ಷೆಗಳಲ್ಲಿದೆ. ಅವುಗಳಲ್ಲಿ ಅಮೆರಿಕದ ಟೈರೋಸ್, ಗೋಸ್, ರಷ್ಯಾದ ಮೀಟಿಯೊರ್, ಭಾರತದ ಇನ್ಸಾಟ್–22, ಇನ್ಸಾಟ್–ಎ ಮತ್ತು ಕಲ್ಪನಾ–1, ಯುರೋಪಿನ ಮೀಟಿಯೋಸ್ಯಾಟ್ ಮತ್ತು ಜಪಾನಿನ ಹಿಮವಾರಿ, ಇವನ್ನು ಹೆಸರಿಸಬಹುದು.

**(iii) ಸಂಪರ್ಕ ಸಾಧನೋಪಗ್ರಹಗಳು :** ಸೂಕ್ಷ್ಮತರಂಗ ಮತ್ತು ಟೆಲಿವಿಷನ್ ಪ್ರಸಾರಗಳನ್ನು ದೃಷ್ಟಿನೇರದಲ್ಲಿ ಮಾತ್ರ ಗ್ರಹಿಸಬಹುದು. ಆದ್ದರಿಂದ ದೂರಪ್ರಸಾರಕ್ಕೆ ಅಲ್ಲಲ್ಲಿ ಪುನಃ ಪ್ರಸಾರಕೇಂದ್ರಗಳನ್ನಿಡಬೇಕು. ಒಂದು ಉಪಗ್ರಹದಲ್ಲಿ ಮರುಪ್ರಸಾರೋಪಕರಣಗಳನ್ನಿಟ್ಟರೆ ಈ ತೊಂದರೆ ಬಲುಮಟ್ಟಿಗೆ ಪರಿಹಾರವಾಗುವುದು. ನೂರಾರು ಕಿಮೀ. ಎತ್ತರದಲ್ಲಿರುವ ಉಪಗ್ರಹದ ದೃಷ್ಟಿ ನೇರದಲ್ಲಿ ಸಾವಿರಾರು ಕಿಮೀ.ಗಳಷ್ಟು ಭೂಭಾಗ ಬರುವುದರಿಂದ ಇಂಥ ಉಪಗ್ರಹ ಸಾವಿರಾರು ಕಿಮೀ. ವ್ಯಾಪ್ತಿಯ ಪ್ರಸಾರಕ್ಕೆ ಸಾಕಾಗುತ್ತದೆ. 1960 ಡಿಸೆಂಬರಿನಲ್ಲಿ ಅಮೆರಿಕನ್ನರು 100 ಅಡಿ ವ್ಯಾಸದ ಲೋಹಲೇಪಿತ 'ಎಕೋ' ಎಂಬ ಪ್ಲಾಸ್ಟಿಕ್ ಬೆಲೂನನ್ನು ಹಾರಿಸಿದರು. ಅದರ ಮೂಲಕ ಧ್ವನಿಯನ್ನೂ ಛಾಯಾಚಿತ್ರಗಳನ್ನೂ ಭೂಮಿಯ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರತಿಫಲಿಸಿ ಕಳುಹಿಸುವುದು ಸಾಧ್ಯವೆಂದು ತಿಳಿದುಬಂತು. ರಿಲೇ–1 ಎಂಬ ಉಪಗ್ರಹವನ್ನು ಅಮೆರಿಕ 1962 ಡಿಸೆಂಬರ್ 13ರಂದು ಉಡಾಯಿಸಿತು. ತನ್ನತ್ತ ಉದ್ದೇಶಿತವಾಗಿಯೇ ಭೂಕೇಂದ್ರವೊಂದು ಪ್ರಸಾರ ಮಾಡಿದ ದೂರಸಂಪರ್ಕ ಹಾಗೂ ದೂರದರ್ಶನದ ಸಂಜ್ಞೆಗಳನ್ನು ಪಡೆದು, ವೃದ್ಧಿಸಿ ಮರುಪ್ರಸಾರವನ್ನು ಮಾಡುವ ಸಾಮರ್ಥ್ಯ ಆ ಉಪಗ್ರಹಕ್ಕೆ ಇತ್ತು. ಇದು ಅಮೆರಿಕ ಮತ್ತು ಯುರೋಪುಗಳ ನಡುವೆ ಟೆಲಿಫೋನ್ ಮತ್ತು ಬಣ್ಣದ ಟೆಲಿವಿಷನ್ ಸಂಪರ್ಕವನ್ನೇರ್ಪಡಿಸಿತು. 1964 ಜನವರಿಯಲ್ಲಿ ಹಾರಿಸಿದ ರಿಲೇ–2 ಉಪಗ್ರಹ ಅಮೆರಿಕ ಮತ್ತು ಜಪಾನುಗಳ ನಡುವೆ ಸಂಪರ್ಕವನ್ನೇರ್ಪಡಿಸಿತು. ಮುಂದೆ ಹಾರಿಸಿದ ಟೆಲ್‌ಸ್ಟಾರ್ ಉಪಗ್ರಹಗಳೂ ಮೇಲಿನಂತೆ ಕೆಲಸ ಮಾಡಿದರೂ ಅವುಗಳ ರಚನೆ ಬೇರೆ ರೀತಿಯದಾಗಿತ್ತು. 1962ರಲ್ಲಿ ಟೆಲ್‌ಸ್ಟಾರ್–1 ಮತ್ತು 1963ರಲ್ಲಿ ಟೆಲ್‌ಸ್ಟಾರ್–2 ಉಪಗ್ರಹಗಳನ್ನು ಹಾರಿಸಿದರು. ಆದರೆ ಮೇಲೆ ಹೇಳಿದ ಉಪಗ್ರಹಗಳ ಪರಿಭ್ರಮಣಾವಧಿ ಭೂಮಿಯ ಆವರ್ತನಾವಧಿಗಿಂತ ಕಡಿಮೆಯಿರಲಾಗಿ ಅವು ಸದಾಕಾಲ ಭೂಮಿಯ ಮೇಲೆ ಒಂದೇಕಡೆ ಇರುತ್ತಿರಲಿಲ್ಲ. ಆದ್ದರಿಂದ ಅವು ಒಂದು ಪ್ರದೇಶದ ದೃಷ್ಟಿನೇರದಲ್ಲಿರುವಷ್ಟು ಸಮಯ ಮಾತ್ರ ಅವುಗಳ ಮೂಲಕ ಆ ಪ್ರದೇಶದಲ್ಲಿನ ಜನರು ಸಂಪರ್ಕಗಳನ್ನು ಹೊಂದಬಹುದಾಗಿತ್ತು. ಆನಂತರ ಅವು ಪುನಃ ಆ ಪ್ರದೇಶದ ಮೇಲೆ ಬರುವ ತನಕವೂ ಕಾಯಬೇಕಾಗಿತ್ತು. ಈ ತೊಂದರೆಯನ್ನು ತಪ್ಪಿಸಬೇಕಾದರೆ 36000ಕಿಮೀ ಎತ್ತರದ ವರ್ತುಳೀಯ ಕಕ್ಷೆಯಲ್ಲಿ ಉಪಗ್ರಹವನ್ನು ಹಾರಿಸಬೇಕು. ಆಗ ಅದರ ಪರಿಭ್ರಮಣಾವಧಿ 24 ಗಂಟೆಗಳು. ಇದರಿಂದಾಗಿ ಅಂತಹ ಉಪಗ್ರಹವೊಂದು ಭೂಮಿಯ ಒಂದೇ ಪ್ರದೇಶದ ಮೇಲೆ ಸ್ಥಿರವಾಗಿ ನಿಂತಂತೆ ವರ್ತಿಸುತ್ತದೆ. ಇಂಥ ಉಪಗ್ರಹದ ಕಕ್ಷೆಗೆ ಭೂಸ್ಥಿರಕಕ್ಷೆ (ಜಿಯೋಸ್ಟೇಷನರಿ ಆರ್ಬಿಟ್) ಎಂದು ಹೆಸರು. ಈ ಬಗೆಯ ಸಿಂಕಾಮ್–2 ಎಂಬ ಉಪಗ್ರಹವನ್ನು ಬ್ರೆಜಿಲ್ ದೇಶದ ಮೇಲೆ ನಿಲ್ಲುವಂತೆ ಹಾರಿಸಿದರು. ಶ್ರೇಣಿಯಲ್ಲಿ ಹಾರಿಸಿದ 'ಅರ್ಲಿಬರ್ಡ್' ಎಂಬ ಉಪಗ್ರಹ 36,000 ಕಿಮೀ ಎತ್ತರದಲ್ಲಿದ್ದು 24 ಗಂಟೆಗಳಿಗೊಂದಾವರ್ತಿ ಭೂಪರಿಭ್ರಮಣೆ ಮಾಡುತ್ತ ಸದಾಕಾಲವೂ ಒಂದೇ ಸ್ಥಾನದಲ್ಲಿದ್ದಂತೆ ವರ್ತಿಸುತ್ತಿತ್ತು. ಹೀಗೆ ಮೂರು ಉಪಗ್ರಹಗಳನ್ನು ಭೂಮಿಯ ಸುತ್ತ ಒಂದು ಸಮಭುಜ ತ್ರಿಭುಜದ ಶೃಂಗಗಳಲ್ಲಿರುವಂತೆ ನಿಲ್ಲಿಸಿ ಸಮಗ್ರ ಭೂಮಿಗೆ ಸದಾಕಾಲವೂ ದೃಶ್ಯವಾರ್ತಾ ವಿನಿಮಯವನ್ನೊದಗಿಸುವ ಸಾಧ್ಯಾಸಾಧ್ಯತೆಗಳನ್ನು ವಿಜ್ಞಾನಿಗಳು ಕಂಡುಕೊಂಡರು.

ರಷ್ಯನ್ನರು 1965 ಏಪ್ರಿಲ್ 23 ರಂದು ಹಾರಿಸಿದ ಮೋಲ್ನಿಯಾ–1 ಸಂಪರ್ಕ ಉಪಗ್ರಹ ಅತಿದೀರ್ಘವೃತ್ತ ಪಥದಲ್ಲಿದ್ದು (ಇದರ ನೀಚಸ್ಥಾನ 500 ಕಿಮೀಗಳು ಮತ್ತು ಉಚ್ಚಸ್ಥಾನ 36,000 ಕಿಮೀಗಳು) ಉಚ್ಚಸ್ಥಾನದಲ್ಲಿರುವಾಗ ಯುರೋಪ್ ಮತ್ತು ರಷ್ಯಗಳ ಮೇಲೆ ಇದ್ದವು. ಆದ್ದರಿಂದ ಇದರ 12 ಗಂಟೆ ಆವರ್ತಸಮಯದಲ್ಲಿ 10 ಗಂಟೆಗಳ ಕಾಲ ರಷ್ಯನರು ಇದನ್ನು ಸಂಪರ್ಕ ಸಾಧನವಾಗಿ ಉಪಯೋಗಿಸಿದರು. ಈಗ ಸಂಪರ್ಕ ಸಾಧನೋಪಗ್ರಹಗಳನ್ನು ಅಂತಾರಾಷ್ಟ್ರೀಯ ವಾಣಿಜ್ಯೋದ್ಯಮ ಮಾಧ್ಯಮವಾಗಿ ಬಳಸುತ್ತಿದ್ದಾರೆ.

ಭೂಸ್ಥಿರ ಕಕ್ಷೆಯಲ್ಲಿನ ಮೂರು ಸಂಪರ್ಕ ಉಪಗ್ರಹಗಳಿಂದ ಬಹುಮಟ್ಟಿಗೆ ಇಡೀ ಜಗತ್ತನ್ನು ಜೋಡಿಸುವ ಕಾರ್ಯ 1969ರಲ್ಲಿ ಸಫಲವಾಯಿತು. 1970 ಹಾಗೂ 80ರ ದಶಕಗಳಲ್ಲಿ ಕೆನಡ, ಇಂಡೊನೇಷಿಯ, ಭಾರತ, ಮೆಕ್ಸಿಕೋ ಮುಂತಾದ ದೇಶಗಳು, 1970ರ ದಶಕದಿಂದ ರಷ್ಯನ್ನರು ಸಂಪರ್ಕ ಉಪಗ್ರಹಗಳನ್ನು ಭೂಸ್ಥಿರ ಕಕ್ಷೆಗಳು ಹೊಂದಲಾರಂಭಿಸಿದವು.

ಆ ಮೂಲಕ ತಮ್ಮೊಳಗಿನ ಸಂಪರ್ಕಕ್ಕಾಗಿ ಭೂಸ್ಥಿರ ಕಕ್ಷೆಯು ಸಂಪರ್ಕ ಉಪಗ್ರಹಗಳನ್ನು ಬಿಳಿಸಿಕೊಳ್ಳಲಾರಂಭಿಸಿದವು. ಜೊತೆಗೆ 1980ರ ದಶಕದಿಂದ ಟಿ.ವಿ.ಪ್ರಸಾರಕ್ಕಾಗಿ ಜಗತ್ತಿನಾದ್ಯಂತ ಉಪಗ್ರಹಗಳನ್ನು ಬಾರಿ ಪ್ರಮಾಣದಲ್ಲಿ ಅವಲಂಬಿಸುವುದು ಆರಂಭವಾಯಿತು. ನಂತರ 1990ರ ದಶಕದ ಮಧ್ಯಭಾಗದ ಸುಮಾರಿನಿಂದ ಸಂಪರ್ಕ ಉಪಗ್ರಹಗಳನ್ನು ಹಿಂಡು ಹಿಂಡಾಗಿ ಭೂಮಿಗೆ ಹತ್ತಿರವಿರುವ ಕಕ್ಷೆಗಳಿಗೆ ಹಾರಿಬಿಡುವ ಕಾರ್ಯ ಪ್ರಸಾರವಾಯಿತು.



**ಚಿತ್ರ 8**
**ಆರ್ಬಿಟಿಂಗ್ ಸೋಲಾರ್ ಅಬ್ಸರ್ವೇಟರ್**

**(iv) ದೂರಸಂವೇದಿ ಉಪಗ್ರಹಗಳು:** ಸೂಕ್ಷ್ಮ ಎಲೆಕ್ಟ್ರಾನಿಕ್ ಕ್ಯಾಮರಾಗಳನ್ನು ಹೊತ್ತ ಕೃತಕ ಭೂ ಉಪಗ್ರಹಗಳ ನೆರವಿನೊಂದಿಗೆ ಭೂ ಸಂಪನ್ಮೂಲಗಳ ಸಮೀಕ್ಷೆಯನ್ನು ವ್ಯವಸ್ಥಿತವಾಗಿ ನಡೆಸಬಹುದು. ಭೂಮಿಯ ಮೇಲಿನ ವಸ್ತುಗಳು ಹಾಗೂ ವಿದ್ಯಮಾನಗಳ ಬಗ್ಗೆ ಅಂತರಿಕ್ಷದಿಂದಲೇ ಗಮನಹರಿಸುವ ಉಪಗ್ರಹಗಳಿಗೆ ದೂರಸಂವೇದಿ ಉಪಗ್ರಹಗಳು ಎಂದು ಹೆಸರು. ಇವುಗಳನ್ನು ದೀರ್ಘಕಾಲದ ಭೂ ಸ್ವರೂಪಗಳ ವೀಕ್ಷಣೆಗೆ ನೆರವಾಗುವ ಸೌರಮೇಳಯುಕ್ತ ಕಕ್ಷೆಗಳಿಗೆ (ಸನ್ ಸಿಂಕ್ರೊನಿಟ್ ಆರ್ಬಿಟ್ಸ್) ಹಾರಿಬಿಡಲಾಗುತ್ತದೆ.

ಈ ಕಕ್ಷೆಗಳ ಎತ್ತರ ಸಾಮಾನ್ಯವಾಗಿ ಒಂದು ಸಾವಿರ ಕಿಲೋಮೀಟರ್ ಒಳಗೆ ಇರುತ್ತದೆ. ಅಮೆರಿಕ ಈ ಕ್ಷೇತ್ರದಲ್ಲಿ ಮುನ್ನಡೆಯನ್ನು ಸಾಧಿಸಿದ ಮೊದಲ ರಾಷ್ಟ್ರವಾಯಿತು. ಆ ದೇಶದ 'ಲ್ಯಾಂಡ್‌ಸ್ಯಾಟ್' ಉಪಗ್ರಹಗಳು ಭೂಮಿಯ ಮೊದಲ ದೂರ ಸಂವೇದಿ

ಉಪಗ್ರಹಗಳಾದವು. ಆ ದೇಶದ ಲ್ಯಾಂಡ್‌ಸ್ಯಾಟ್, ಕ್ವಿಕ್ ಬರ್ಡ್, ಐಕನೋಸ್, ಆರ್ಬ್‌ವ್ಯೂ, ಫ್ರಾನ್ಸ್ ದೇಶದ ಸ್ಪಾಟ್, ಕೆನಡಾದ ರೇಡಾರ್ ಸ್ಯಾಟ್, ಯೂರೋಪಿನ ಇ.ಆರ್.ಎಸ್ ಮತ್ತು ಎನ್ವಿಸ್ಯಾಟ್ ಹಾಗೂ ಭಾರತದ ಐಆರ್‌ಎಸ್ ಸರಣಿಯ ದೂರಸಂವೇದಿ ಉಪಗ್ರಹಗಳು ಜಾಗತಿಕ ಮಟ್ಟದಲ್ಲಿಂದು ಕಾರ್ಯನಿರತವಾಗಿವೆ. ಈ ನಿಟ್ಟಿನಲ್ಲಿ ಭಾರತವು ಭಾರಿ ಮುನ್ನಡೆಯನ್ನು ಸಾಧಿಸಿ ಜಗತ್ತಿನ ಅತಿದೊಡ್ಡ ದೂರಸಂವೇದಿ ಉಪಗ್ರಹಗಳ ಪುಂಜವನ್ನು ಹೊಂದಿರುವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**(v). ಯಾನ ನಿರ್ವಹಣ ಉಪಗ್ರಹಗಳು:** ಭೂ, ಜಲ ಹಾಗೂ ವಾಯುಮಂಡಲಗಳಲ್ಲಿ ಪಯಣಿಸುತ್ತಿರುವ ವ್ಯಕ್ತಿಗಳು ತಮ್ಮ ಸ್ಥಾನವನ್ನು ನಿಖರವಾಗಿ ಗುರುತಿಸಿಕೊಳ್ಳುವಲ್ಲಿ ನೆರವಿಗೆ ಬರುವ ಉಪಗ್ರಹಗಳಿಗೆ ಯಾನ ನಿರ್ವಹಣಾ ಉಪಗ್ರಹಗಳೆಂದು ಹೆಸರು. ಅಮೆರಿಕ ಹಾಗೂ ರಷ್ಯಾಗಳು ಈ ಕ್ಷೇತ್ರದ ಮೊದಲಿಗ ರಾಷ್ಟ್ರಗಳು. ಡಾಪ್ಲರ್ ಪರಿಣಾಮವನ್ನು ಆಧರಿಸಿ ಕಾರ್ಯ ನಿರ್ವಹಿಸುತ್ತಿರುವ ಟ್ರಾನ್ಸಿಟ್ ಯಾನ ನಿರ್ವಹಣೆ ಉಪಗ್ರಹಗಳನ್ನು ಅಮೆರಿಕ 1960ರಿಂದ ಹಾರಿಬಿಡುವುದನ್ನು ಪ್ರಾರಂಭಿಸಿತು. ಅದಕ್ಕೆ ಪ್ರತಿಯಾಗಿ ಅಂದು ಆ ದೇಶದ ಪ್ರತಿಸ್ಪರ್ಧಿಯಾಗಿದ್ದ ಸೋವಿಯತ್ ರಷ್ಯಾ ಸಹ ಅನೇಕ ಯಾನ ನಿರ್ವಹಣಾ ಉಪಗ್ರಹಗಳನ್ನು ಹಾರಿ ಬಿಟ್ಟಿತು. ಇಂದು ಅಮೆರಿಕದ ನಾವ್‌ಸ್ಟಾರ್ ಜಿ.ಪಿ.ಎಸ್. ಉಪಗ್ರಹ. ವ್ಯವಸ್ಥೆಯ ನೆರವಿನೊಂದಿಗೆ ಸದಾಕಾಲ ನಿಖರವಾದ ಸ್ಥಾನ ನಿರ್ಧರಣೆ ಸಾಧ್ಯವಾಗಿದೆ. ಸಾರಿಗೆ ಕ್ಷೇತ್ರಕ್ಕೆ ಇದರಿಂದ ಆಗಿರುವ ಅನುಕೂಲ ಅಪಾರ. ಅಮೆರಿಕದ ನಾವ್‌ಸ್ಟಾರ್ ಯಾನ ನಿರ್ವಹಣಾ ಉಪಗ್ರಹ ವ್ಯವಸ್ಥೆಯಲ್ಲಿ 24 ಉಪಗ್ರಹಗಳಿದ್ದು ಅವು 20,000 ಕಿಲೋಮೀಟರ್ ಎತ್ತರದ ಕಕ್ಷೆಯಲ್ಲಿವೆ. ಜೊತೆಗೇ ಬಹುಮಟ್ಟಿಗೆ ಅದೇ ಬಗೆಯ ಕಕ್ಷೆಯಲ್ಲಿರುವ ರಷ್ಯಾದ 'ಗ್ಲೋನಾಸ್' ಮಾನವ ನಿರ್ವಹಣಾ ಉಪಗ್ರಹಗಳೂ ಇಂದು ಕಾರ್ಯ ನಿರ್ವಹಿಸುತ್ತಿವೆ. ಯುರೋಪ್ ಇಂದು ಗ್ಯಾಲೆಲಯೋ ಎಂಬ ಯಾನ ನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುತ್ತಿದೆ.



**ಚಿತ್ರ 9**
**ಟೈರೋಸ್ ಹವಾಮಾನ ಉಪಗ್ರಹ**

**(vi). ಸೇನಾ ಉಪಗ್ರಹಗಳು:** ವೈರಿ ರಾಷ್ಟ್ರ ಇಲ್ಲವೇ ರಾಷ್ಟ್ರಗಳ ಸಾಮರ್ಥ್ಯ ಹಾಗೂ ಉದ್ದೇಶಗಳನ್ನು ಅರಿಯಲು ಕೃತಕ ಭೂ ಉಪಗ್ರಹಗಳನ್ನು ಬಳಸುವುದನ್ನು 1960ರ ದಶಕದಲ್ಲಿ ಅಮೆರಿಕ ಹಾಗೂ ಸೋವಿಯತ್ ರಷ್ಯಾಗಳು ಪ್ರಾರಂಭಿಸಿದವು. ಇಂದಿನ ಶೀತಲ ಸಮರೋತ್ತರ ಯುಗದಲ್ಲೂ ಅದು ಮುಂದುವರೆದಿದೆ. ಅತ್ಯಂತ ಸ್ಫುಟವಾದ ಚಿತ್ರಗಳನ್ನು ತೆಗೆಯಬಲ್ಲ ಸೇನಾ ಸಮೀಕ್ಷಾ ಉಪಗ್ರಹಗಳು ಇಂದು ಅಸ್ತಿತ್ವದಲ್ಲಿವೆ. ಇಂತಹ ಉಪಗ್ರಹಗಳನ್ನು ಇಂದು ಅಮೆರಿಕ, ರಷ್ಯಾ, ಚೀನಾ, ಫ್ರಾನ್ಸ್, ಮತ್ತು ಇಸ್ರೇಲ್‌ಗಳು ಹೊಂದಿವೆ. ಅದೇ ರೀತಿ ಕ್ಷಿಪಣಿಗಳ ಉಡಾವಣೆಯ ಬಗ್ಗೆ ಮುನ್ನೆಚ್ಚರಿಕೆ ನೀಡಿರುವ ಅಮೆರಿಕ ಹಾಗೂ ರಷ್ಯದ ಉಪಗ್ರಹಗಳು ಇಂದು ಅಸ್ತಿತ್ವದಲ್ಲಿ ಇವೆ. ಇದರೊಂದಿಗೇ ವೈರಿ ದೇಶಗಳಲ್ಲಿ ಟೆಲಿಫೋನ್, ರೇಡಿಯೋಗಳ ಮೂಲಕ ನಡೆಯುವ ಸಂಭಾಷಣೆಗಳನ್ನು ಕದ್ದು ಕೇಳುವ ಉಪಗ್ರಹಗಳೂ ಇಂದು ಭೂಮಿಯನ್ನು ಗಸ್ತು ಹೊಡೆಯುತ್ತಿವೆ. ಯಾನ ನಿರ್ವಹಣೆ ಮತ್ತು ಸೇನಾ ಹವಾಮಾನ ಉಪಗ್ರಹಗಳು ಮತ್ತು ಶಸ್ತ್ರಗಳ ಗುರಿಯನ್ನು ಹೆಚ್ಚಿಸುವ ಸೇನಾ ಸಂಪರ್ಕ ಉಪಗ್ರಹಗಳು ಬಲಿಷ್ಠ ರಾಷ್ಟ್ರವೊಂದು ಜಗತ್ತಿನ ಯಾವ ಭಾಗದಲ್ಲಾದರೂ ಸಮರ್ಥವಾಗಿ ಯುದ್ಧ ಮಾಡುವುದನ್ನು ಸಾಧ್ಯಮಾಡಿವೆ.

**(vii) ಜೀವವೈಜ್ಞಾನಿಕ ಉಪಗ್ರಹಗಳು:** ಉಪಗ್ರಹಗಳನ್ನು ಹಾರಿಸಲು ಪ್ರಾರಂಭಿಸಿದಾಗಿನಿಂದಲೂ ಮಾನವನನ್ನು ಅಂತರಿಕ್ಷಕ್ಕೆ ಕಳುಹಿಸುವ ಪ್ರಯತ್ನಗಳು ಮೊದಲಾದುವು. ಹಾಗೆಯೇ ಚಂದ್ರಯಾತ್ರೆಯ ಯೋಜನೆಗಳೂ ಸಿದ್ಧವಾದುವು. ಈ ರೀತಿಯ ಪ್ರಯೋಗಗಳಿಗೆ ಮುಂಚೆ ಅಂತರಿಕ್ಷವು ಜೀವಿಗಳ ಮೇಲೆ ಬೀರುವ ಪ್ರಭಾವಗಳನ್ನು ಅಧ್ಯಯನ ಮಾಡಲಾಯಿತು. ಅಂತರಿಕ್ಷದಲ್ಲಿ ಜೀವಶಾಸ್ತ್ರಾಧ್ಯಯನ 1957ನೆಯ ನವೆಂಬರ್‌ನಲ್ಲಿ ರಷ್ಯ ಹಾರಿಸಿದ ಸ್ಪುಟ್ನಿಕ್–2ರಿಂದಲೇ ಪ್ರಾರಂಭವಾಯಿತು. ಈ ಉಪಗ್ರಹದಲ್ಲಿ ಲೈಕಾ ಎಂಬ ನಾಯಿಯನ್ನಿಟ್ಟು ಹಾರಿಸ ಲಾಯಿತು. ಏಳು ದಿನಗಳ ಕಾಲ ನಾಯಿಯ ಉಷ್ಣತೆ, ಹೃದಯ ಬಡಿತ, ಉಸಿರಾಟ ಮುಂತಾದುವುಗಳನ್ನು ದೂರಮಾಪನ (ಟೆಲಿಮೆಟ್ರಿಯ)ದ ಮೂಲಕ ಭೂಮಿಗೆ ಪ್ರಸಾರ ಮಾಡಲಾಯಿತು. 1960ರ ಆಗಸ್ಟಿನಲ್ಲಿ ರಷ್ಯ ಸ್ಪುಟ್ನಿಕ್–5ನ್ನು ಹಾರಿಸಿತು. ಇದರಲ್ಲಿ ಎರಡು ನಾಯಿಗಳು. ಆರು ಇಲಿಗಳು ಮತ್ತು ಕೆಲವು ಕೀಟಗಳಿದ್ದುವು. ನಾಯಿಗಳು ಅಂತರಿಕ್ಷದಲ್ಲಿ ವರ್ತಿಸಿದ ರೀತಿಯನ್ನು ಭೂಮಿಗೆ ಟೆಲಿವಿಷನ್ ಮೂಲಕ ಪ್ರಸಾರ ಮಾಡಲಾಯಿತು. ನಂತರ ಆ ಉಪಗ್ರಹವು ಭೂಮಿಗೆ ಸುರಕ್ಷಿತವಾಗಿ ಮರಳಿತು. ಮುಂದೆ ಪ್ರಾಣಿಗಳು ಬಾಹ್ಯಾಂತರಿಕ್ಷದಲ್ಲಿ ಬಹಳ ದಿನಗಳ ಕಾಲವಿದ್ದರೆ ಆಗುವ ಪರಿಣಾಮಗಳನ್ನು ನೇರವಾಗಿ ಅಧ್ಯಯನ ಮಾಡಿದರು. ಕಣ್ಣಿನ ಅಂಗಾಂಶ, ಅಸ್ಥಿ ದ್ರವ್ಯ, ರಕ್ತಕಣಗಳು ಮತ್ತು ಚಿಂಪಾಂಜಿಗಳನ್ನು ಅಮೆರಿಕ ಉಪಗ್ರಹಗಳಲ್ಲಿ ಕಳುಹಿಸಿ ಅವುಗಳ ಅಧ್ಯಯನವನ್ನು ನಡೆಸಿತು. ಇಂತಹ ಅಧ್ಯಯನಗಳು ಅಂತರಿಕ್ಷ ಜೀವಶಾಸ್ತ್ರಕ್ಕೆ ಪೀಠಿಕೆಯಾದುವು. ಈಗ ಮನುಷ್ಯರೇ ಅಂತರಿಕ್ಷಕ್ಕೆ ಹೋಗುತ್ತಿರುವುದರಿಂದ ಅವರ ಮೇಲೆ ಉಂಟಾಗುವ ಜೀವ ವೈಜ್ಞಾನಿಕ ಪರಿಣಾಮಗಳನ್ನು ಅಧ್ಯಯನ ಮಾಡುತ್ತಿದ್ದಾರೆ. ಆದರೂ ಚಿಕ್ಕ ಪ್ರಾಣಿಗಳನ್ನು ಅಂತರಿಕ್ಷ ನಿಲ್ದಾಣಗಳಿಗೆ ಕೊಂಡೊಯ್ದು ಅಥವಾ ಅಂತರಿಕ್ಷ ಶಟಲ್‌ನಲ್ಲಿ ಕೊಂಡೊಯ್ದು ಅಂತರಿಕ್ಷ ಯಾನವು ಜೀವಿಗಳ ದೇಹದ ಮೇಲೆ ಬೀರುವ ಪರಿಣಾಮವನ್ನು ಅಭ್ಯಸಿಸುವುದು ನಡೆಯುತ್ತಲೇ ಇದೆ.

**ಚಿತ್ರ 10**
**ಟೆಲ್‌ಸ್ಟಾರ್ ಸಂಪರ್ಕ ಸಾಧನೋಪಗ್ರಹ**

**ಭಾಗ III ಅಂತರಿಕ್ಷದಲ್ಲಿ ಮಾನವ:** ಮಾನವರಹಿತ ಕೃತಕ ಭೂ ಉಪಗ್ರಹ ಹಾರಿಸುವುದರ ಮೂಲಕ ಕಂಡುಕೊಂಡ ಅಂಕಿ–ಅಂಶಗಳಿಂದ ಉತ್ತೇಜಿತಗೊಂಡು ಸಂಶೋಧನೆಯ ಸಲುವಾಗಿ ಮಾನವನನ್ನೇ ಅಂತರಿಕ್ಷನೌಕೆಯಲ್ಲಿ ಅಂತರಿಕ್ಷಯಾನಕ್ಕೆ ಕಳುಹಿಸುವ ಪ್ರಯತ್ನವನ್ನು ಮಾಡಲಾಯಿತು. ಇದಕ್ಕೆ ಮೊದಲು, ಅಂತರಿಕ್ಷಯಾನವನ್ನು ಕೈಗೊಳ್ಳುವ ಮಾನವನಿಗೆ ಒದಗಬಹುದಾದ ತೊಂದರೆಗಳು ಮುಂತಾದ ಪರಿಣಾಮಗಳನ್ನು ಅಧ್ಯಯನ ಮಾಡುವ ಸಲುವಾಗಿ, ಆ ಪರಿಣಾಮಗಳನ್ನೇ ತಮ್ಮ ಪ್ರಯೋಗಾಲಯಗಳಲ್ಲಿ

ಕೃತಕವಾಗಿ ಸೃಷ್ಟಿಸಿಕೊಂಡು ಅವುಗಳಿಗೆ ಅವನನ್ನು ಈಡುಮಾಡಿ ಉಂಟಾಗುವ ಪ್ರತಿಕ್ರಿಯೆಗಳನ್ನು ಅಳೆದು ಅಧ್ಯಯನ ಮಾಡಲಾಗಿದೆ. ಇಂಥ ಒಂದು ಅಧ್ಯಯನಕ್ಕೆ ಸಿಮ್ಯುಲೇಷನ್ ಸ್ಟಡಿ ಎಂದು ಕರೆಯುತ್ತಾರೆ. ಇದಲ್ಲದೆ ಅವನನ್ನು ಅಂತರಿಕ್ಷ ಯಾತ್ರೆಗೆ ಕಳುಹಿಸಿಕೊಡುವುದು ಮಾತ್ರವಲ್ಲದೆ ಸುರಕ್ಷಿತವಾಗಿ ವಾಪಸ್ಸು ಕರೆತರುವ ವಿಚಾರದಲ್ಲೂ ಸಾಕಷ್ಟು ಅಧ್ಯಯನ ಮಾಡಲಾಗಿದೆ ಮತ್ತು ಅನುಭವ ದೊರೆತಿದೆ. ರಷ್ಯನ್ನರು ನಾಯಿಗಳಿಂದ, ಅಮೆರಿಕನ್ನರು ಕೋತಿಗಳಿಂದ ಭೂಪ್ರದಕ್ಷಿಣೆ ಮಾಡಿಸಿ, ಅವುಗಳ ಜೀವಕ್ರಿಯೆ ಮನೋವ್ಯಾಪಾರಗಳ ಮೇಲೆ ಆದ ಪರಿಣಾಮಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿ ಅನಂತರ ಮನುಷ್ಯರಿಂದ ಭೂಪ್ರದಕ್ಷಿಣೆ ಮಾಡಿಸುವ ಕೆಲಸ ಕೈಗೊಂಡರು. ಮಾನವರನ್ನು ಹೊತ್ತ ಅಂತರಿಕ್ಷನೌಕೆಯನ್ನು ಅಂತರಿಕ್ಷಕ್ಕೆ ಕಳುಹಿಸಲು ವಿವಿಧ ಹಂತಗಳ ಬೃಹತ್ ರಾಕೆಟ್ಟುಗಳನ್ನು ಬಳಸಲಾಗುವುದು. ಅವನ್ನು ಉಡಾಯಿಸಲು ಅವುಗಳಿಗೆ ಒದಗಿಸಬೇಕಾದ ನೋದಕಗಳ ಪ್ರಮಾಣವನ್ನು ಮೊದಲೇ ತೀರ್ಮಾನಿಸಿರಲಾಗುತ್ತದೆ. ಏಕೆಂದರೆ ಉಪಗ್ರಹವನ್ನು ಭೂಕಕ್ಷೆಯಲ್ಲಿ ಸ್ಥಾಪಿಸಲು ರಾಕೆಟ್ಟನ್ನು ಆ ಎತ್ತರಕ್ಕೆ ಕೊಂಡೊಯ್ಯಬಲ್ಲ ಶಕ್ತಿ ಒದಗುವುದು ನೋದಕ (ಪ್ರೊಪೆಲೆಂಟ್) ಗಳಿಂದಲೇ. ರಾಕೆಟ್ಟುಗಳು ತಮ್ಮ ನೋದಕಗಳನ್ನು ಬಹಳ ಜಾಗ್ರತೆಯಾಗಿ ಉರಿಸಿ ತಮ್ಮ ತೂಕಕ್ಕೆ ಹೆಚ್ಚಾದ ವೇಗೋತ್ಕರ್ಷವನ್ನುಂಟುಮಾಡುತ್ತವೆ. (ಉದಾಹರಣೆಗೆ, ಅಪೊಲೊವನ್ನು ಹೊತ್ತ ಸ್ಯಾಟರ್ನ್–5 ವಾಹನ ಮೊದಲ ಸೆಕೆಂಡಿಗೆ 15 ಟನ್ನುಗಳಷ್ಟು ಇಂಧನವನ್ನು ಉರಿಸಿತು). ಇದರಿಂದ ಕೋಶದಲ್ಲಿರುವ ಮನುಷ್ಯನನ್ನು ಬಲವಾಗಿ ಅದುಮಿದಂತಾಗುತ್ತದೆ. ಗುರುತ್ವಾಕರ್ಷಣದ ಪರಿಣಾಮವೂ ಇದೇ ಆದುದರಿಂದ ಇದನ್ನು g ಬಲ ಎನ್ನುತ್ತಾರೆ. ಅಂತರಿಕ್ಷನೌಕೆ ಭೂಮಿಗೆ ಹಿಂತಿರುಗುವಾಗ ಅದು ಗಂಟೆಗೆ ಸಾವಿರಾರು ಕಿ.ಮೀ.ಗಳ ವೇಗದಲ್ಲಿ ಭೂಮಿಯ ವಾತಾವರಣದೊಳಗೆ ನುಗ್ಗುತ್ತದೆ. ವಾತಾವರಣ ಅದರ ವೇಗವನ್ನು ಬಹುಜಾಗ್ರತೆಯಾಗಿ ಕುಂದಿಸುತ್ತದೆ. ಅಂದರೆ ಅದಕ್ಕೆ ವೇಗಾಪಕರ್ಷಣ (ಡಿಸೆಲರೇಷನ್) ಉಂಟಾಗುತ್ತದೆ. ಇದರಿಂದಾಗಿ ಕೋಶದಲ್ಲಿರುವ ಮನುಷ್ಯನನ್ನು ಬಲವಾಗಿ ಮೇಲೆತ್ತಿದಂತಾಗುತ್ತದೆ. ಇದನ್ನು ವಿರುದ್ಧ g ಬಲ ಎನ್ನುತ್ತಾರೆ. ಇಂಥ g ಬಲ ಭೂಮಿಯದಕ್ಕಿಂತ 8–10 ರಷ್ಟು ಹೆಚ್ಚಾಗಿರುತ್ತದೆ. ಈ ರೀತಿಯ ವಿರುದ್ಧ g ಬಲಗಳು ನೌಕೆಯ ತಡೆರಾಕೆಟ್ಟನ್ನು (ರೆಟ್ರೊರಾಕೆಟ್) ಹಾರಿಸಿದಾಗಲೂ ಮತ್ತು ನೌಕೆ ಭೂಮಿಯನ್ನು ತಲುಪಿದಾಗಲೂ ಉಂಟಾಗುತ್ತವೆ. ಈ ಎರಡು ಬಗೆಯ g ಬಲಗಳನ್ನೂ ಮನುಷ್ಯ ಎಷ್ಟು ಮಾತ್ರ ಮತ್ತು ಎಷ್ಟು ಸಮಯ ತಾಳಬಲ್ಲನೆಂಬುದನ್ನು ವಿಜ್ಞಾನಿಗಳು ಕೇಂದ್ರಾಪಗಮನ ಯಂತ್ರ (ಸೆಂಟ್ರಿಫ್ಯೂಜ್) ಎಂಬುದರಲ್ಲಿ ಪ್ರಯೋಗಗಳನ್ನು ಮಾಡಿ ತಿಳಿದುಕೊಂಡಿದ್ದಾರೆ. ಈ ಯಂತ್ರ ಭೂಮಿಯ ಸಮತಲದಲ್ಲಿ ಬಹುವೇಗವಾಗಿ ಸುತ್ತುವ ಒಂದು ಕಂಬ. ಇದರ ಒಂದು ಕೊನೆಯಲ್ಲಿ ಗಗನಯಾತ್ರಿ (ಆಸ್ಟ್ರೊನಾಟ್) ಕುಳಿತುಕೊಳ್ಳುತ್ತಾನೆ. ಈ ಕಂಬ ವೇಗ ವೇಗವಾಗಿ ಸುತ್ತಿದಷ್ಟೂ ಆತನ ಮೇಲೆ ಹೆಚ್ಚು ಹೆಚ್ಚು g ಬಲ ಉಂಟಾಗುತ್ತದೆ. ತನಗೆ ತಡೆಯಲಾರದಷ್ಟಾದಾಗ ಆತನೇ ಅದನ್ನು ನಿಲ್ಲಿಸುತ್ತಾನೆ. ಈ ಪ್ರಯೋಗದಲ್ಲಿ ಆತನನ್ನು ಟೆಲಿವಿಷನ್ ಮೂಲಕ ವೀಕ್ಷಿಸುತ್ತಿರುತ್ತಾರೆ. ಆತನೇನಾದರೂ ಜ್ಞಾನ ತಪ್ಪಿದರೆ ಅದನ್ನು ತತ್‌ಕ್ಷಣ ನಿಲ್ಲಿಸುತ್ತಾರೆ.

ಮನುಷ್ಯನು ಕಾಲುಗಳನ್ನು ಮಡಿಸಿ ವೇಗೋತ್ಕರ್ಷದ ಕಡೆಗೆ 25$^o$ ಗಳಷ್ಟು ಬಾಗಿ ಕುಳಿತಿದ್ದರೆ g ಬಲಗಳನ್ನು ಮತ್ತು ವೇಗಾಪಕರ್ಷದ ಕಡೆಗೆ ಲಂಬವಾಗಿ ಕುಳಿತಿದ್ದರೆ ವಿರುದ್ಧ g ಬಲಗಳನ್ನೂ ಸುಲಭವಾಗಿ ತಾಳಬಲ್ಲನೆಂದೂ ಹೆಚ್ಚು ಹೆಚ್ಚು g ಬಲಗಳನ್ನು ಕಡಿಮೆ ಕಡಿಮೆ ಸಮಯಗಳಲ್ಲಿ ತಾಳಬಲ್ಲನೆಂದೂ ಈ ಪ್ರಯೋಗಗಳಿಂದ ತಿಳಿದುಬಂದಿದೆ. ಅಂತರಿಕ್ಷಯಾನಿಯ ಶರೀರದ ಉಬ್ಬುತಗ್ಗುಗಳಿಗೆ ಸರಿಯಾಗಿ ಆತನ ಆಸನವನ್ನು ತಯಾರಿಸಿದ್ದರೆ g ಬಲಗಳನ್ನು ತಡೆಯಲು ಇನ್ನೂ ಅನುಕೂಲವಾಗುತ್ತದೆ. ಇಂಥ ಪೀಠಕ್ಕೆ ಕಾಂಟೂರ್ ಚೇರ್ ಎಂದು ಹೆಸರು.

ನೌಕೆ ತಾನಾಗಿಯೇ ಅಂತರಿಕ್ಷದಲ್ಲಿ ಹೋಗುತ್ತಿದ್ದರೆ ಯಾನಿ ತೂಕವನ್ನು ಅನುಭವಿಸುವುದಿಲ್ಲ. ಈ ಭಾರರಹಿತಸ್ಥಿತಿಯಲ್ಲಿ ಮನುಷ್ಯ ಸರಿಯಾಗಿ ಕೆಲಸ ಮಾಡಲಾರನೆಂಬ ಶಂಕೆಯಿತ್ತು. ಆದರೆ ಮನುಷ್ಯ ತೂಕರಹಿತಸ್ಥಿತಿಯಲ್ಲಿ 14 ದಿನಗಳ ಕಾಲವಿದ್ದರೂ ಅಪಾಯಕಾರಿ ಪರಿಣಾಮಗಳೇನೂ ಆಗುವುದಿಲ್ಲವೆಂದು 1965ರ ಡಿಸೆಂಬರ್‌ನಲ್ಲಿ ಅಮೆರಿಕದ ಜೆಮಿನಿ–7ರ ಯಾನದಿಂದ ತಿಳಿದುಬಂತು. ಆದರೆ ತೂಕರಹಿತಸ್ಥಿತಿಯಲ್ಲಿ ಶಾರೀರಿಕ ವ್ಯತ್ಯಾಸಗಳೇನೂ ಇರುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಬಹಳ ದಿನಗಳ ಕಾಲ ತೂಕರಹಿತಸ್ಥಿತಿಯಲ್ಲಿದ್ದರೆ ಶರೀರ ಅಲ್ಲಿಗೆ ತಕ್ಕಂತೆ ತನ್ನ ಕೆಲಸಗಳನ್ನು ಸರಿಪಡಿಸಿಕೊಳ್ಳುತ್ತದೆ. ಆದ್ದರಿಂದ ಹಿಂದಿರುಗುವಾಗ ಉಂಟಾಗುವ ವಿರುದ್ಧ g ಬಲಗಳನ್ನು ತಡೆದುಕೊಳ್ಳಲು ಕಠಿಣವಾಗುತ್ತದೆ ಮತ್ತು ಭೂಮಿಯ ಮೇಲೆ ಶರೀರ ಎಂದಿನಂತೆ ಕೆಲಸ ಮಾಡಲು ಕೆಲವು ದಿನಗಳಾದರೂ ಬೇಕು.

ಅಂತರಿಕ್ಷದಲ್ಲಿ ವಾತಾವರಣದ ಒತ್ತಡ ತೀರ ಕಡಿಮೆ ($10^{-13}$ – $10^{-14}$ ಮಿಮೀ) ಇರುವುದರಿಂದ ಶರೀರದ ಉಷ್ಣತೆಯಿಂದಲೇ ಮನುಷ್ಯನ ರಕ್ತ ಕುದಿಯತೊಡಗುತ್ತದೆ. ಆದ್ದರಿಂದ ಆತನು ಒತ್ತಡಕ್ಕೆ ಒಳಪಡಿಸಿದ ಅಂತರಿಕ್ಷ ಉಡುಪನ್ನು ಧರಿಸಬೇಕು. ಈ ಉಡುಪಿನಲ್ಲಿ ಪ್ರತಿ ಚದುರ ಅಂಗುಲಕ್ಕೆ .ಕ್ಕೆ 3–5 ಪೌಂಡಿನಷ್ಟು (ಆಬ್ಸಲೂಟ್ ಮಾನ) ಒತ್ತಡವಿರುವಂತೆ ಆಮ್ಲಜನಕವಿದ್ದು ಉಸಿರಾಟದಲ್ಲಿ ಉತ್ಪತ್ತಿಯಾಗುವ ಕಾರ್ಬನ್ ಡೈ ಆಕ್ಸೈಡ್ ಅನ್ನು ಸದಾ ತೆಗೆದುಹಾಕುವಂತೆ ಏರ್ಪಾಡಾಗಿರುತ್ತದೆ. ಅಂತರಿಕ್ಷ ನೌಕೆಯನ್ನೂ ಒತ್ತಡಕ್ಕೆ ಒಳಪಡಿಸಿರುತ್ತಾರೆ. ಮೊದಲಿಗೆ (ರಷ್ಯನ್ನರು ಶೇ.21 ಆಮ್ಲಜನಕ ಮತ್ತು ಶೇ.79 ಸಾರಜನಕವನ್ನು ಪ್ರತಿ ಚದುರ ಅಂಗುಲಕ್ಕೆ 14.7 ಪೌಂಡ್ ಒತ್ತಡದಲ್ಲಿ ಉಪಯೋಗಿಸಲಾರಂಭಿಸಿದರು.) ನೌಕೆಯಲ್ಲಿ ಮತ್ತು ಉಡುಪಿನಲ್ಲಿ ಉಷ್ಣತೆ 23$^o$ ಸೆ. ಇರುವಂತೆಯೂ ತೇವಾಂಶ ಶೇ.40–ಶೇ.70ವರೆಗೆ ಇರುವಂತೆಯೂ ಮಾಡಿರುತ್ತಾರೆ. ಗಮನಾರ್ಹ ಪ್ರಮಾಣದ ಉಲ್ಕೆ ನೌಕೆಯನ್ನು ಬಡಿದು ತೂತುಮಾಡಿದರೆ ನೌಕೆಯಲ್ಲಿರುವ ಅನಿಲವೆಲ್ಲವೂ ಹೊರಹೋಗಿ ಒಳಗಿನ ಮನುಷ್ಯರು ಮರಣಹೊಂದುವ ಸಂಭವವುಂಟು, ಆದ್ದರಿಂದ ಮೊದಮೊದಲು ನೌಕೆಯಲ್ಲಿರುವಾಗಲೂ ಒತ್ತಡಕ್ಕೆ ಒಳಪಡಿಸಿದ ಉಡುಪುಗಳನ್ನು ತೆಗೆಯುತ್ತಿರಲಿಲ್ಲ. ಆದರೆ ಈಗಿನವರೆಗೆ ಇಂಥ ಅಪಾಯ ಸಂಭವಿಸಿಲ್ಲ. ನೌಕೆಯ ಹೊರಮೈಯನ್ನು ಆದಷ್ಟು ಗಟ್ಟಿಯಾಗಿ ಮಾಡಿರುತ್ತಾರಾದ್ದರಿಂದ ಇಂದು ನೌಕೆ ಭಾರರಹಿತಸ್ಥಿತಿಯಲ್ಲಿರುವಾಗ ಅಂತರಿಕ್ಷ ಉಡುಪನ್ನು ತೆಗೆಯುತ್ತಾರೆ.

**ಚಿತ್ರ 11**
**ಜೆಮಿನಿ**

ವ್ಯಾನ್‌ಅಲೆನ್ ವಿಕಿರಣಪದರ, ವಿಶ್ವಕಿರಣ, ಸೌರಮಾರುತ–ಇವುಗಳಿಂದ ಬರುವ ವಿಕಿರಣಗಳು ಮಾನವ ಶರೀರದ ಮೇಲೆ ಅಪಾಯಕಾರಿ ಪರಿಣಾಮಗಳನ್ನುಂಟು ಮಾಡಬಹುದು. ಈ ವಿಕಿರಣಗಳಲ್ಲಿ ಮುಖ್ಯವಾಗಿ ಎಲೆಕ್ಟ್ರಾನ್ ಮತ್ತು ಪ್ರೋಟಾನ್‌ಗಳಿರುತ್ತವೆ. ಕಡಿಮೆ ಶಕ್ತಿಯ ಈ ಕಣಗಳನ್ನು ನೌಕೆಯ ಗೋಡೆಯೇ ತಡೆಯುತ್ತದೆ. ಆದರೆ ಹೆಚ್ಚು ಶಕ್ತಿಯ ಎಲೆಕ್ಟ್ರಾನ್‌ಗಳು ಗೋಡೆಯಲ್ಲಿಯೇ ಕ್ಷ–ಕಿರಣಗಳನ್ನುತ್ಪತ್ತಿ ಮಾಡುತ್ತವೆ ಮತ್ತು ಪ್ರೋಟಾನ್‌ಗಳು ತೂರಿಬಂದು ಶರೀರವನ್ನು ಪ್ರವೇಶಿಸುತ್ತವೆ. ಇವು ಸ್ವಲ್ಪಮಟ್ಟಿಗೆ ಮಾತ್ರ ಶರೀರದ ಮೇಲೆ ಬಿದ್ದರೆ ಒದಗುವ ಅಪಾಯ ಇಲ್ಲ. ಆದರೆ, ಮಿತಿಮೀರಿದರೆ ಅಪಾಯಕರ.

ಅಂತರಿಕ್ಷ ಹಾರಾಟದ ತೂಕರಹಿತ ಸ್ಥಿತಿಯಲ್ಲಿ ಎಲ್ಲ ವಸ್ತುಗಳೂ ತೇಲುತ್ತವೆ. ಆದ್ದರಿಂದ ಅಲ್ಲಿ ಸಾಮಾನ್ಯವಾದ ರೀತಿಯಲ್ಲಿ ಆಹಾರಸೇವನೆಗೆ ಸಾಧ್ಯವಿಲ್ಲ. ಇದಕ್ಕಾಗಿ ಮೊದಲಿಗೆ ಸಾರೀಕೃತ ಆಹಾರಗಳನ್ನು ನಿರ್ಜಲೀಕರಿಸಿ ಟೂತ್‌ಪೇಸ್ಟಿನಂತೆ ಕೊಳವೆಗಳಲ್ಲಿ ತುಂಬಿರುತ್ತಾರೆ. ಉಪಯೋಗಿಸುವಾಗ ಇವುಗಳಿಗೆ ನೀರನ್ನು ಅಂತಕ್ಷೇಪಿಸುತ್ತಿದ್ದರು. ಅನಂತರ ಅವು ಚೆನ್ನಾಗಿ ಕಲೆಯುವಂತೆ ಮಾಡಿ ಕೊಳವೆಯ ತುದಿಯನ್ನು ಬಾಯಲ್ಲಿಟ್ಟುಕೊಂಡು ಒತ್ತಿದರೆ ಆಹಾರ ಬಾಯೊಳಕ್ಕೆ ಬರುತ್ತಿತ್ತು. ಅದನ್ನು ನುಂಗಬೇಕಾಗಿತ್ತು. ನೀರನ್ನು ಇದೇ ರೀತಿ ಕುಡಿಯಬೇಕಾಗಿತ್ತು. ಹಾಗೆಯೆ ಶಾರೀರಿಕ ವಿಸರ್ಜನೆಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಭಾವೀ ಪರೀಕ್ಷೆಗಾಗಿ ಒಂದೆಡೆ ಇಡುತ್ತಿದ್ದರು. ಮೊದಲಿಗೆ ಸು. 15 ದಿನಗಳ ಕಾಲ ಮನುಷ್ಯನ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಿತ್ತು.

ಆದರೆ ಇಂದು ಅಂತರಿಕ್ಷ ನಿಲ್ದಾಣಗಳಲ್ಲಿ (ಸ್ಪೇಸ್‌ಸ್ಟೇಷನ್ಸ್) ಮತ್ತು ಅಂತರಿಕ್ಷ ಶಟಲ್‌ನಲ್ಲಿ ವಾಸಿಸುವ ಗಗನಯಾತ್ರಿಗಳು ವಿಶೇಷ ರೀತಿಯಲ್ಲಿ ಸಂಸ್ಕರಿಸಲಾದ ವಿವಿಧ ಬಗೆಯ ತಾಜಾ ಆಹಾರ ಮತ್ತು ಹಣ್ಣುಗಳನ್ನು ತಿನ್ನುವುದು ಸಾಧ್ಯವಿದೆ. ಅದೇ ರೀತಿ

ಇಂದಿನ ಅಂತರಿಕ್ಷ ನಿಲ್ದಾಣ ಹಾಗೂ ಅಂತರಿಕ್ಷ ಶಟಲ್‌ಗಳಲ್ಲಿ ಅತ್ಯಾಧುನಿಕ ಶೌಚಾಲಯವೂ ಇದೆ. ಅಂತರಿಕ್ಷ ನಿಲ್ದಾಣಗಳಲ್ಲಿ ತುಂತುರುಸ್ನಾನ (ಶವರ್) ವ್ಯವಸ್ಥೆಯೂ ಇರುತ್ತದೆ. ಅಂತರಿಕ್ಷದಲ್ಲಿ ಭೂಮಿಯನ್ನು ಸುತ್ತುವ ಗಗನಯಾತ್ರಿಗಳಿಗೆ ಇದೀಗ ವರ್ಷಾನುಗಟ್ಟಲೆ ಆಹಾರ, ನೀರು ಹಾಗೂ ಇತರ ಅಗತ್ಯಗಳನ್ನು ಒದಗಿಸಲು ಸಾಧ್ಯವಿದೆ. ಮುಂದೆ ಶುಕ್ರ ಮತ್ತು ಮಂಗಳ ಗ್ರಹಗಳಿಗೆ ಹೋಗಬೇಕಾದರೆ ತಿಂಗಳುಗಟ್ಟಲೆ ಭೂಮಿಯಿಂದ ದೂರವಿರುವ ಪರಿಸರದಲ್ಲಿ ಸುಮಾರು 5–7 ತಿಂಗಳು ಅಥವಾ ಇನ್ನೂ ಹೆಚ್ಚು ಕಾಲ ಪ್ರಯಾಣ ಮಾಡಬೇಕಾಗುತ್ತದೆ. ಇಷ್ಟು ದಿನಗಳ ಕಾಲ ಮನುಷ್ಯನ ಆವಶ್ಯಕತೆಗಳನ್ನು ಪೂರೈಸಬೇಕಾದರೆ



ಚಿತ್ರ 12
ಡಕ್‌ವೀಡ್ ಫ್ರಾಂಡ್ಸ್ ಸಸ್ಯಗಳು

ನೌಕೆಯ ಭಾರ ಬಹಳ ಹೆಚ್ಚಾಗುತ್ತದೆ. ಆದ್ದರಿಂದ ಆವಶ್ಯಕತೆಗಳ ಪೂರೈಕೆಗೆ ಇತರ ಮಾರ್ಗಗಳನ್ನು ಯೋಚಿಸುತ್ತಿದ್ದಾರೆ. ಡಕ್‌ವೀಡ್ ಫ್ರಾಂಡ್ಸ್ ಸಸ್ಯಗಳು ಮನುಷ್ಯ ಹೊರಗೆಡಹಿದ ಇಂಗಾಲಾಮ್ಲವನ್ನುಪಯೋಗಿಸಿಕೊಂಡು ಆಮ್ಲಜನಕವನ್ನು ಕೊಡಬಲ್ಲುವು. ಅಲ್ಲದೆ ಇವುಗಳನ್ನು ಮನುಷ್ಯ ತಿನ್ನಲೂಬಹುದು. ಆದ್ದರಿಂದ ಈ ಸಸ್ಯಗಳ ಮೇಲೆ ಅಧ್ಯಯನ ನಡೆಯಲು ಪ್ರಾರಂಭವಾಯಿತು. ಹಾಗೆಯೇ ಮಾನವವಿಸರ್ಜನೆಗಳನ್ನು ಇತರ ಉಪಯೋಗಕಾರೀ ಅಂಶಗಳಾಗಿ ಮಾರ್ಪಡಿಸುವ ವಿಧಾನಗಳ ಕಡೆ ಈಗ ವಿಜ್ಞಾನಿಗಳ ಗಮನ ಹರಿದಿದೆ.

ಮನುಷ್ಯ ಅಂತರಿಕ್ಷಕ್ಕೇರಿದಾಗ ಅವನು ನೋಡುವುದೆಲ್ಲವೂ ವಿಶಾಲವಾದ ಮತ್ತು ಅಪರಿಚಿತವಾದ ಪ್ರದೇಶಗಳು. ಉಳಿದೆಲ್ಲ ಲೌಕಿಕ ವ್ಯವಹಾರಗಳಿಂದ ಆತನು ದೂರವಾಗಿ ಏಕಾಂತತೆಯನ್ನು ಅನುಭವಿಸುತ್ತಾನೆ. ಇದು ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿ ಆತನ ನಿರ್ಣಾಯಕ ಶಕ್ತಿ ಕುಂದಬಹುದು. ಈ ತೊಂದರೆಯನ್ನು ತಪ್ಪಿಸಬೇಕಾದರೆ ಮೊದಲು ಆತನು ಬಹಳ ಧೈರ್ಯಶಾಲಿಯಾಗಿರಬೇಕು, ಸರಿಯಾದ ತರಬೇತಿಯನ್ನು ಪಡೆದಿರಬೇಕು, ಅಂತರಿಕ್ಷದಲ್ಲಿರುವಾಗ ಆತನೊಡನೆ ಸತತವಾಗಿ ರೇಡಿಯೋ ಸಂಪರ್ಕವಿರಬೇಕು. ಇಬ್ಬರು ಮೂವರು ಪ್ರಯಾಣ ಮಾಡುವಾಗ ಈ ಏಕಾಂತತೆ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ.

ಅಂತರಿಕ್ಷಯಾನಕ್ಕೆ ಜನರನ್ನು ಆರಿಸಿಕೊಳ್ಳುವಾಗ ಬಹಳ ಕಠಿಣ ಪರೀಕ್ಷೆಗಳಿಗೆ ಅವರನ್ನು ಒಳಪಡಿಸಲಾಗುತ್ತಿತ್ತು. ಹೀಗಾಗಿ ಆರಿಸಿ ಬಂದವರು ದೃಢಕಾಯರೂ ಧೈರ್ಯವಂತರೂ ಸ್ಥಿರಮನೋಭಾವದವರೂ ತುರ್ತುಪರಿಸ್ಥಿತಿಗಳಲ್ಲಿ ಸರಿಯಾದ ನಿರ್ಣಯಗಳನ್ನು ಮಾಡುವವರೂ ಆಗಿರುತ್ತಿದ್ದರು. ಆರಿಸಿ ಬಂದ ಮೇಲೆ ಅವರಿಗೆ ವರ್ಷಗಟ್ಟಲೆ ಕಠಿಣ ತರಬೇತಿಯನ್ನು ಕೊಡಲಾಗುತ್ತಿತ್ತು. ಇವುಗಳಲ್ಲಿ ಮುಖ್ಯವಾದುವು: g ಬಲಗಳನ್ನು ತಡೆಯುವಿಕೆ; ತೂಕರಹಿತಸ್ಥಿತಿಯಲ್ಲಿರುವಿಕೆ; ಉಷ್ಣವೈಪರೀತ್ಯಗಳನ್ನು ತಡೆಯುವಿಕೆ–ಮುಂತಾದುವು. ಈ ಎಲ್ಲವುಗಳನ್ನೂ ಏಕಾಂಗಿಯಾಗಿ ಹೆಚ್ಚುಕಾಲದವರೆಗೂ ಅವರು ಅನುಭವಿಸಿ ತಾಳಬೇಕಾಗುತ್ತಿತ್ತು. ಈ ರೀತಿಯ ಕಠಿಣ ತರಬೇತಿಯಿಲ್ಲದಿದ್ದರೆ ಇಂದು ಅಂತರಿಕ್ಷಯಾನ ಕೈಗೊಳ್ಳುವುದು ಕಷ್ಟ.

**1. ರಷ್ಯದೇಶದ ಮಾನವಸಹಿತ ಅಂತರಿಕ್ಷನೌಕೆಗಳು:**

**i ವಸ್ತಾಕ್ ಶೀರ್ಷಿಕೆಯ ಅಂತರಿಕ್ಷ ನೌಕೆಗಳು:** ಮಾನವನನ್ನು ಮೊದಲು ಅಂತರಿಕ್ಷಕ್ಕೆ ಕಳುಹಿಸಿದ್ದು ರಷ್ಯ. 1961 ಏಪ್ರಿಲ್ 12ರಂದು ವಸ್ತಾಕ್–1 ಎಂಬ ನೌಕೆಯಲ್ಲಿ ಯೂರಿ ಗಗಾರಿನ್ ಭೂಮಿಯನ್ನು ಒಂದು ಸಾರಿ ಸುತ್ತಿ ಪ್ರಪಂಚದ ಮೊದಲ ಗಗನಯಾತ್ರಿಯಾದ.

ಆತನ ಅಂತರಿಕ್ಷಯಾನಕ್ಕೆ ಬೇಕಾದ ಒಟ್ಟು ಸಮಯ 108 ಮಿನಿಟುಗಳು, 1961 ಆಗಸ್ಟ್ 6ರಂದು ಹರ್‌ಮನ್ ಟಿಟೋವ್ ಎಂಬಾತ ವಸ್ತಾಕ್–2ರಲ್ಲಿ ಭೂಮಿಯನ್ನು 17 ಸಾರಿ ಸುತ್ತಿ ಒಟ್ಟು 25 ಗಂಟೆ 11 ಮಿನಿಟುಗಳ ಕಾಲ ಅಂತರಿಕ್ಷದಲ್ಲಿದ್ದ. ಇತರ ಪ್ರಯೋಗಗಳ ಜೊತೆಗೆ ಹವಾಮಾನ ಮತ್ತು ಭೂಭೌತಶಾಸ್ತ್ರಾಧ್ಯಯನಗಳನ್ನು ನಡೆಸಿದ. 1962 ಆಗಸ್ಟ್ 11 ರಂದು ಆ್ಯಂಡ್ರಿಯಸ್ ನಿಕೊಲೆಯೇವ್ ಎಂಬುವವನನ್ನು ವಸ್ತಾಕ್–3ರಲ್ಲಿ ಅಂತರಿಕ್ಷಕ್ಕೆ ಹಾರಿಸಲಾಯಿತು. ಮಾರನೆಯ ದಿನ ಪಾವೆಲ್ ಪಾಪೋವಿಚ್ ಎಂಬಾತನನ್ನೊಳಗೊಂಡ ವಸ್ತಾಕ್–4ನ್ನು ವಸ್ತಾಕ್–3ರ ಪಥದಲ್ಲಿಯೇ ಹಾರಿಸಿದರು. ಇವೆರಡು ನೌಕೆಗಳೂ ಸುಮಾರು 5ಕಿ.ಮೀ. ಹತ್ತಿರ ಬಂದುವು. ಇವಕ್ಕೆ ಪರಸ್ಪರ ರೇಡಿಯೋಸಂಪರ್ಕವಿತ್ತು. ನಿಕೊಲೆಯೇವ್ ಭೂಮಿಯನ್ನು 64 ಸುತ್ತುಹಾಕಿ 94 ಗಂಟೆ 22 ಮಿನಿಟುಗಳ ಕಾಲ ಅಂತರಿಕ್ಷದಲ್ಲಿದ್ದ.ಪಾಪೋವಿಚ್ 48 ಸುತ್ತುಹಾಕಿ 70 ಗಂಟೆ 50 ಮಿನಿಟುಗಳ ಕಾಲ ಅಂತರಿಕ್ಷದಲ್ಲಿದ್ದ. ಇವರಿಬ್ಬರೂ ಸು. 6 ಮಿನಿಟುಗಳ ಅಂತರದಲ್ಲಿ ಮತ್ತು ಒಬ್ಬರಿಂದೊಬ್ಬರಿಗೆ 240ಕಿಮೀ.ಗಳ ದೂರದಲ್ಲಿ ಭೂಮಿಗೆ ಬಂದು ಇಳಿದರು. 1963 ಜೂನ್ 14ರಲ್ಲಿ ವೆಲೆರಿ ಬೈಕೋವ್‌ಸ್ಕಿ ಎಂಬಾತನನ್ನು ವಸ್ತಾಕ್–5ರಲ್ಲಿ ಹಾರಿಸಿದರು. ಎರಡು ದಿನಗಳ ಅನಂತರ ವ್ಯಾಲೆಂತೀನಾ ತೆರೆಷ್ಕೋವಾ ಎಂಬುವಳನ್ನು ವಸ್ತಾಕ್–6ರಲ್ಲಿ ಭೂಮಿಯ ಸುತ್ತ ಹಾರಿಸಿದರು. ಬೈಕೋವಿಸ್ಕಿಯು 81 ಸುತ್ತುಹಾಕಿ 119 ಗಂಟೆ 6 ಮಿನಿಟುಗಳ ಕಾಲ ಮತ್ತು ತೆರೆಷ್ಕೋವಾ 48 ಸುತ್ತುಹಾಕಿ 78 ಗಂಟೆ 50 ಮಿನಿಟುಗಳ ಕಾಲ ಅಂತರಿಕ್ಷದಲ್ಲಿದ್ದರು. ಈ ಪ್ರಯೋಗದಲ್ಲಿ ಅಂತರಿಕ್ಷ ಹಾರಾಟ ಮಹಿಳೆಯ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಅಧ್ಯಯನ ಮಾಡಿದರು. ವ್ಯಾಲೆಂಟೀನಾ ಟೆರೆಷ್ಕೋವಾ ಪ್ರಪಂಚದ ಮೊದಲ ಮಹಿಳಾ ಅಂತರಿಕ್ಷಯಾನಿ. ಅಲ್ಲಿಂದೀಚೆಗೆ ಅನೇಕ ಮಹಿಳೆಯರು ಅಂತರಿಕ್ಷಯಾನ ಮಾಡಿ ಬಂದಿದ್ದಾರೆ.

**ii. ವಸ್ಕೋಡ್ ಶೀರ್ಷಿಕೆಯ ಅಂತರಿಕ್ಷ ನೌಕೆಗಳು:** 1965 ಅಕ್ಟೋಬರ್ 12ರಂದು ಮೂರು ಜನರನ್ನು ಹೊತ್ತ ವಸ್ಕೋದ್–1 ಎಂಬ ನೌಕೆಯನ್ನು ಹಾರಿಸಲಾಯಿತು. ಇದರಲ್ಲಿ ಕಮ್ಯಾಂಡರ್ ವ್ಲದೀಮಿಯರ್ ಕಮರೋವ್, ವೈದ್ಯ ಬೋರಿಸ್ ಎಗರೋವ್ ಮತ್ತು ವಿಜ್ಞಾನಿ ಕಾನ್‌ಸ್ಟಂಟಿನ್ ಫಿಯೋಕ್ಟಿಸ್ಟೋವ್–ಈ ಮೂವರು ಇದ್ದರು. ವಸ್ಕೋದ್ ನೌಕೆಗಳ ಪಥಗಳು ವಸ್ತಾಕ್‌ಗಳ ಪಥಗಳಿಗಿಂತ ಎತ್ತರದಲ್ಲಿದ್ದುವು. ಹಾರಾಟಗಳಲ್ಲಿ ಯಾನಿಗಳು ಅಂತರಿಕ್ಷ ಉಡುಪುಗಳನ್ನು ಧರಿಸಿರಲಿಲ್ಲ. ವಸ್ಕೋದ್‌ಗಳು ಭೂಮಿಗೆ ಇಳಿಯುವಾಗ ಪ್ಯಾರಾಚೂಟ್ ಜೊತೆಗೆ ಒಂದು ರಾಕೆಟ್ ಯಂತ್ರವನ್ನು ಉಪಯೋಗಿಸಿದುವು.

1965 ಮಾರ್ಚ್ 18ರಂದು ವಸ್ಕೋದ್–2 ಎಂಬ ನೌಕೆಯಲ್ಲಿ ಪಾವೆಲ್ ಬೆಲ್ಯಾಯೇವ್ ಮತ್ತು ಅಲೆಕ್ಸಿ ಲಿಯನೋವ್ ಎಂಬುವರನ್ನು ಹಾರಿಸಿದರು. ಈ ಯಾನದ ನಡುವೆ 12 ಮಿನಿಟುಗಳ ಕಾಲ ನೌಕೆಯಿಂದ ಹೊರಬಂದ ಲಿಯನೋವ್ ಅಂತರಿಕ್ಷದಲ್ಲಿ ತೇಲಿದ.



ಚಿತ್ರ 13
ಇಸ್ರೊ ಉಪಗ್ರಹ

ಲಿಯನೋವ್ ಹೊರಗೆ ಬಂದಾಗ ಆತನಿಗೂ ನೌಕೆಗೂ ಒಂದು 'ಹಗ್ಗ' ಕಟ್ಟಲ್ಪಟ್ಟಿತ್ತು. ಅಲ್ಲದೆ ಆತ ಒಂದು ಪ್ರತ್ಯೇಕ ಉಡುಪನ್ನು ಧರಿಸಿದ್ದ. ಆತನಿಗೆ ಬೇಕಾದ ಪ್ರಾಣರಕ್ಷಣಾಪರಿಕರಗಳೆಲ್ಲವನ್ನೂ ಆ ಉಡುಪಿನಲ್ಲಿಯೇ ಅಳವಡಿಸಲಾಗಿತ್ತು. ಈ ಮೊದಲ 'ಅಂತರಿಕ್ಷ ನಡಿಗೆ'ಯನ್ನು ಟೆಲಿವಿಷನ್ ಮೂಲಕ ಭೂಮಿಗೆ ಪ್ರಸಾರಮಾಡಲಾಯಿತು.

**iii. ಸೊಯೂಜ್ ಶೀರ್ಷಿಕೆಯ ಅಂಕರಿಕ್ಷ ನೌಕೆಗಳು:** 1967 ಏಪ್ರಿಲ್ 23ರಂದು ಸೊಯೂಸ್–1 ಎಂಬ ನೌಕೆಯಲ್ಲಿ ವ್ಲದೀಮಿಯರ್ ಕಮರೋವ್ ಎಂಬಾತನನ್ನು ಹಾರಿಸಿದರು. ಆತ ಸು. 24 ಗಂಟೆಗಳ ಕಾಲ ಅಂತರಿಕ್ಷದಲ್ಲಿ ಹಾರಾಡಿದ. ಆದರೆ ಭೂಮಿಗೆ ಮರಳುವಾಗ ಪ್ಯಾರಾಚೂಟ್ ಸರಿಯಾಗಿ ಬಿಚ್ಚಿಕೊಳ್ಳದೆ ನೌಕೆ ಹಾಗೆಯೇ ಕೆಳಗೆ ಬಿದ್ದು ಆತ ಮರಣಹೊಂದಿದ.

1968 ಅಕ್ಟೋಬರ್‌ನಲ್ಲಿ ಸೋಯೂಸ್‌-2 ಮತ್ತು ಸೋಯೂಸ್‌-3 ನೌಕೆಗಳನ್ನೊಳಗೊಂಡ ಪ್ರಯೋಗವೊಂದನ್ನು ನಡೆಸಿದರು. ಒಂದು ನೌಕೆಯಲ್ಲಿದ್ದ ಜಿ. ಟಿ. ಬೆರೆಗೊವಾಯ್ ಇನ್ನೊಂದು ನೌಕೆಯನ್ನು ಹುಡುಕುವುದು, ಹತ್ತಿರ ಬರುವುದು– ಮುಂತಾದ ಪ್ರಯೋಗಗಳನ್ನು ನಡೆಸಿದ.

1969 ಜನವರಿ 14ರಂದು ಸೊಯೂಸ್‌-4 ಎಂಬ ನೌಕೆಯಲ್ಲಿ ವ್ಲಾಡಿಮಿರ್ ಎ. ಷಟಲೋವ್ ಎಂಬಾತನನ್ನು ಭೂಪ್ರದಕ್ಷಿಣೆಗೆ ಕಳುಹಿಸಿದರು. ಮಾರನೆಯ ದಿನ, ಸೊಯೂಸ್‌ -5 ಎಂಬ ನೌಕೆಯಲ್ಲಿ ಬೋರಿಸ್ ವಿ. ವಾಲ್ಯನೊವ್, ಅಲೆಕ್ಸಿಸ್, ಎಲಸ್ಸೆಯೇವ್ ಮತ್ತು ಎವ್‌ಗೆನಿ ಕ್ರುನೋವ್ ಎಂಬ ಮೂವರನ್ನು ಹಾರಿಸಿದರು. ಹಾರಾಟದಲ್ಲಿದ್ದಾಗ ನೌಕೆಗಳು ಒಂದನ್ನೊಂದನ್ನು ತೀರ ಹತ್ತಿರ ಸಮೀಪಿಸುವಂತೆ ಮಾಡಲಾಯಿತು. ಮಾರನೆಯ ದಿನ ನೌಕೆಗಳು ತಾವಾಗಿಯೇ 330ಅಡಿಗಳಷ್ಟು ಹತ್ತಿರ ಬಂದುವು. ಆಗ ಷಟಲೊವ್ ತಾನೇ ತನ್ನ ನೌಕೆಯನ್ನು ನಡೆಸಿ ಸೊಯೂಸ್‌-5 ಅನ್ನು ಸೇರುವಂತೆ ಮಾಡಿದ. ಆಗ ಅದರಲ್ಲಿದ್ದ ಕ್ರುನೋವ್ ಮತ್ತು ಎಲಸ್ಸೆಯೇವ್ ಅಂತರಿಕ್ಷ ಉಡುಪುಗಳನ್ನು ಧರಿಸಿ ನೌಕೆಯಿಂದ ಹೊರಗೆ ಬಂದು ಎರಡು ನೌಕೆಗಳನ್ನೂ ಯಾಂತ್ರಿಕವಾಗಿ ಸೇರಿಸಿದುದಲ್ಲದೆ ಎರಡಕ್ಕೂ ವಿದ್ಯುತ್‌ಸಂಪರ್ಕವನ್ನೂ ಕಲ್ಪಿಸಿದರು. ಇವರಿಬ್ಬರೂ ಸುಮಾರು ಒಂದು ಗಂಟೆಯಕಾಲ ನೌಕೆಯಿಂದ ಹೊರಗೆ ಇದ್ದು ಅನಂತರ ಸೊಯೂಸ್‌-4ರಲ್ಲಿ ಹೋಗಿ ಸೇರಿಕೊಂಡರು. ಅನಂತರ ಎರಡು ನೌಕೆಗಳೂ ಬೇರೆಬೇರೆಯಾಗಿ ತಮ್ಮ ತಮ್ಮ ಪಥಗಳಲ್ಲಿ ಹೋದುವು. ಮುಂದಿನ ಎರಡು ದಿನಗಳಲ್ಲಿ ಸೊಯೂಸ್‌-4 ಮತ್ತು ಸೊಯೂಸ್‌-5 ಭೂಮಿಗೆ ಮರಳಿದವು.

**ಅಂತರಿಕ್ಷ ನಿಲ್ದಾಣಗಳು:** ಸಲ್ಯೂತ್ – 1971ರಲ್ಲಿ ಸೋವಿಯತ್ ರಷ್ಯ ತನ್ನ ಸಲ್ಯೂತ್ ಅಂತರಿಕ್ಷ ನಿಲ್ದಾಣ ಕಾರ್ಯಕ್ರಮ ವನ್ನು ಪ್ರಾರಂಭಿಸಿತು. ಈ ಕಾರ್ಯಕ್ರಮದಡಿ ಏಳು ಅಂತರಿಕ್ಷ ನಿಲ್ದಾಣಗಳನ್ನು ಅಂದರೆ ಕನಿಷ್ಠ ಪಕ್ಷ ಮೂವರು ಗಗನಯಾತ್ರಿಗಳು ತಿಂಗಳುಗಟ್ಟಲೆ ವಾಸಿಸುತ್ತಾ ಪ್ರಯೋಗಗಳನ್ನು ನಿರ್ವಹಿಸಲು ಮತ್ತು ಖಗೋಲ ಮತ್ತು ಭೂ ವೀಕ್ಷಣೆ ನಡೆಸಲು ಸೌಲಭ್ಯಗಳನ್ನುಳ್ಳ ದೊಡ್ಡ ಅಂತರಿಕ್ಷ ನೌಕೆಗಳನ್ನು ಉಡಾಯಿಸಲಾಯಿತು. ಈ ನಿಟ್ಟಿನಲ್ಲಿ ಸಲ್ಯೂತ್–1ನ್ನು ಯಶಸ್ವಿಯಾಗಿ ಸಂದರ್ಶಿಸಿದ ಮೊದಲ ಮೂರು ಗಗನಯಾತ್ರಿಗಳು ಭೂಮಿಗೆ ಮರಳುವಾಗ ಅಪಘಾತಕ್ಕೀಡಾಗಿ ಮಡಿದರೂ ಅನಂತರ ಉಡಾಯಿಸಲಾದ ಸಲ್ಯೂತ್ ನೌಕೆಗಳಿಗೆ ಅನೇಕ ದೇಶಗಳ ಗಗನಯಾತ್ರಿಗಳು ಭೇಟಿ ನೀಡಿದರು. ಅವರ ಪೈಕಿ 1984 ರ ಏಪ್ರಿಲ್‌ನಲ್ಲಿ ಒಂದು ವಾರ ಕಾಲ ಸಲ್ಯೂತ್–7 ರಲ್ಲಿ ವಾಸಿಸಿದ ಭಾರತದ ರಾಕೇಶ್ ಶರ್ಮಾ ಸಹ ಒಬ್ಬರು. ಸಲ್ಯೂತ್ ಕಾರ್ಯಕ್ರಮದ ನಡುವೆ ಗಗನ ಯಾತ್ರಿಗಳು ತಿಂಗಳುಗಟ್ಟಲೇ ಆ ಸರಣಿಯ ಅಂತರಿಕ್ಷ ನೌಕೆಗಳಲ್ಲಿ ವಾಸಿಸುವುದು ಸಾಮಾನ್ಯ ವಾಯಿತು. ಅದೇ ರೀತಿ ಅಂತರಿಕ್ಷ ನಿಲ್ದಾಣಗಳಿಗೆ ಅಗತ್ಯ ವಸ್ತುಗಳನ್ನು 'ಪ್ರೋಗ್ರೆಸ್' ರೋಬಾಟ್ ನೌಕೆಗಳಲ್ಲಿ ಆಗಿಂದಾಗ್ಗೆ ಕಳುಹಿಸುವುದೂ ಪ್ರಾರಂಭವಾಯಿತು. ಮಿಯರ್ 1986ರಲ್ಲಿ ಸೋವಿಯತ್ ರಷ್ಯ ಮಿಯರ್ (ಶಾಂತಿ) ಎಂಬ ಅಂತರಿಕ್ಷ ನಿಲ್ದಾಣದ ಪ್ರಮುಖ ತುಂಡನ್ನು 350 ಕಿಮೀ ಎತ್ತರದ ಭೂ ಕಕ್ಷೆಗೆ ಉಡಾಯಿಸಿತು. ನಂತರ ಉಡಾಯಿಸಲಾದ ಅನೇಕ ಕೋಶಗಳನ್ನು ಅದಕ್ಕೆ ಜೋಡಿಸುವ ಮೂಲಕ 1990ರ ದಶಕದ ಮಧ್ಯಭಾಗದ ಹೊತ್ತಿಗೆ ಅದನ್ನು ಬೃಹತ್ ಅಂತರಿಕ್ಷ ನಿಲ್ದಾಣವಾಗಿ ಪರಿವರ್ತಿಸಲಾಯಿತು. 2000 ಇಸವಿಯಲ್ಲಿ ಹಳೆಯದಾಗಿದ್ದ ಆ ಅಂತರಿಕ್ಷನಿಲ್ದಾಣವನ್ನು ಬೇಕೆಂದೇ ವಾತಾವರಣವನ್ನು ಪ್ರವೇಶಿಸುವಂತೆ ಮಾಡಲಾಗಿ ಅದು ಉರಿದು ಬೂದಿಯಾಯಿತು. ದೀರ್ಘ ಕಾಲದ ಅಂತರಿಕ್ಷ ಯಾನವು ಮಾನವ ದೇಹದ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮಿಯರ್ ಮತ್ತು ಸಲ್ಯೂತ್ ಅಂತರಿಕ್ಷನಿಲ್ದಾಣಗಳು ಬಹು ಮುಖ್ಯವಾದ ಪಾತ್ರ ವಹಿಸಿದವು.

1974 ರಲ್ಲಿ ಸ್ಕೈಲ್ಯಾಬ್ ಎಂಬ ಅಂತರಿಕ್ಷನಿಲ್ದಾಣವನ್ನು ಉಡಾಯಿಸುವ ಮೂಲಕ ಅಮೆರಿಕ ತಾನೂ ಸಹ ಅಂತರಿಕ್ಷನಿಲ್ದಾಣಗಳ ಕ್ಷೇತ್ರಕ್ಕೆ ಲಗ್ಗೆಯಿಟ್ಟಿತು. ಮಾನವ ದೇಹದ ಮೇಲೆ ದೀರ್ಘಕಾಲದ ಅಂತರಿಕ್ಷ ಯಾನದ ಪರಿಣಾಮ, ಪದಾರ್ಥಶಾಸ್ತ್ರ, ಭೂ ವೀಕ್ಷಣೆ ಮತ್ತು ಖಗೋಲ ವೀಕ್ಷಣೆ, ಅದರಲ್ಲೂ ಸೌರವೀಕ್ಷಣೆ ಈ ಕ್ಷೇತ್ರಗಳಲ್ಲಿ ಉಪಯುಕ್ತವಾದ ಪ್ರಯೋಗಗಳನ್ನು ಸ್ಕೈಲ್ಯಾಬ್‌ನಲ್ಲಿ ವಾಸಿಸಿದ ಒಟ್ಟು ಒಂಬತ್ತು ಗಗನ ಯಾತ್ರಿಗಳು ನಿರ್ವಹಿಸಿದರು. 1979ರಲ್ಲಿ ಸ್ಕೈಲ್ಯಾಬ್ ಭೂ ವಾತಾವರಣವನ್ನು ಪ್ರವೇಶಿಸಿ ಉರಿದು ಬೂದಿಯಾದಾಗ ಅದು ಜನಭರಿತ ಪ್ರದೇಶಗಳ ಮೇಲೆ ಬಿದ್ದು ಹಾನಿ ಮಾಡಬಹುದೆಂಬ ಭೀತಿ ಉಂಟಾಗಿತ್ತು. ಇಂದು ಅಮೆರಿಕ, ರಷ್ಯ ಹಾಗೂ ಇತರ ಹದಿನಾಲ್ಕು ರಾಷ್ಟ್ರಗಳು ಒಟ್ಟಾಗಿ ಅಂತಾರಾಷ್ಟ್ರೀಯ ಅಂತರಿಕ್ಷ ನಿಲ್ದಾಣ ಎಂಬ ಬೃಹತ್ ಅಂತರಿಕ್ಷ ನಿಲ್ದಾಣವನ್ನು 350 ಕಿಮೀ ಎತ್ತರದ ಕಕ್ಷೆಯಲ್ಲಿ ನಿರ್ಮಿಸುತ್ತಿವೆ. 2005ರ ಆದಿಯಲ್ಲಿ ಒಬ್ಬ ಅಮೆರಿಕದ ಗಗನಯಾತ್ರಿ ಹಾಗೂ ಒಬ್ಬ ರಷ್ಯದ ಗಗನ ಯಾತ್ರಿ ಇನ್ನೂ ನಿರ್ಮಾಣದ ಹಂತದಲ್ಲಿರುವ ಆ ನಿಲ್ದಾಣದಲ್ಲಿ ವಾಸಿಸುತ್ತಿದ್ದರು. ಅದೇ ರೀತಿ 2005 ಪ್ರಾರಂಭದ ಹೊತ್ತಿಗೆ ಅಂತರಿಕ್ಷದಲ್ಲಿ ಮಾನವ ಸತತವಾಗಿ ವಾಸಿಸಿದ್ದ ಅವಧಿಯ ದಾಖಲೆ 437 ದಿನಗಳು. ಆ ದಾಖಲೆಯನ್ನು ನಿರ್ಮಿಸಿದ ವ್ಯಕ್ತಿ ರಷ್ಯದ ವಲ್ಯೇರಿ ಪ್ಯೋಲ್ಯಾಕೋವ್ ಎಂಬ ಗಗನಯಾತ್ರಿ. ಅವರು ವಾಸಿಸಿದ್ದು ರಷ್ಯದ ಮಿಯರ್ ಅಂತರಿಕ್ಷ ನಿಲ್ದಾಣದಲ್ಲಿ.

**2. ಅಮೆರಿಕದ ಮಾನವಸಹಿತ ಅಂತರಿಕ್ಷ ನೌಕೆಗಳು: i. ಮರ್ಕ್ಯುರಿ ಯೋಜನೆ:** ಈ ಯೋಜನೆಯ ಚಟುವಟಿಕೆಗಳನ್ನು 1958 ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭಿಸಿದರು. ಇದರ ಮೊದಲು ಅಂದರೆ 1961 ಮೇ ತಿಂಗಳ 5ರಂದು ಅಲೆನ್ ಬಿ. ಷಪರ್ಡ್ ಎಂಬುವವನನ್ನು ಮರ್ಕ್ಯುರಿಕೋಶದಲ್ಲಿ ಕುಳ್ಳಿರಿಸಿ ಅದನ್ನು ರೆಡ್‌ಸ್ಟೋನ್‌ವಾಹಕ ರಾಕೆಟ್ಟನ್ನುಪಯೋಗಿಸಿ 125ಕಿಮೀ ಎತ್ತರಕ್ಕೆ ಉಡಾಯಿಸಿದರು. ಅರೆವೃತ್ತಾಕಾರಪಥದಲ್ಲಿ ಗಂಟೆಗೆ ಸುಮಾರು 8000ಕಿಮೀ.ಗಳ ವೇಗದಲ್ಲಿ ಸಾಗಿದ ಈ ಅಂತರಿಕ್ಷನೌಕೆ 15 ನಿಮಿಷಗಳಿಗಿಂತ ಸ್ವಲ್ಪ ಹೆಚ್ಚಿನ ಕಾಲ ಪ್ರಯಾಣ ಸಾಗಿಸಿತ್ತು. ಉಡಾವಣಾಕೇಂದ್ರದಿಂದ 500 ಕಿಮಿ. ದೂರದಲ್ಲಿ ಕೋಶ ಹಿಂತಿರುಗಿಬಂದು ಆತ ಸುರಕ್ಷಿತವಾಗಿ ಧರೆಗಿಳಿದ. ಈ ಪ್ರಯೋಗದಿಂದ ತೂಕರಹಿತಸ್ಥಿತಿ ಮಾನವನ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಎಂಬುದರ ಬಗ್ಗೆ ಮಾಹಿತಿ ದೊರೆಯಿತು. 1962 ಫೆಬ್ರವರಿ 2ರಂದು ಜಾನ್ ಗ್ಲೆನ್ ಎಂಬಾತನನ್ನು ಫ್ರೆಂಡ್‌ಷಿಪ್–7 ಎಂಬ ನೌಕೆಯಲ್ಲಿ ಕುಳ್ಳಿರಿಸಿ ಹಾರಿಸಿದರು. ಈತ ಭೂಮಿಯನ್ನು 3 ಸಾರಿ ಸುತ್ತಿ ಸುರಕ್ಷಿತವಾಗಿ ಮರಳಿದ. ಅನಂತರ ಸ್ಕಾಟ್ ಕಾರ್ಪೆಂಟರ್, ವಾಲ್ಟರ್ ಎಮ್ ಷಿರ್ರಾ ಮತ್ತು ಗೋರ್ಡಾನ್ ಕೂಪರ್ ಎಂಬುವವರನ್ನು ಹಾರಿಸಿದರು. ಮರ್ಕ್ಯುರಿ ಯೋಜನೆಯಲ್ಲಿ ಬಹಳಕಾಲ ಅಂದರೆ, 24ಗಂಟೆ 20 ನಿಮಿಷಗಳು ಅಂತರಿಕ್ಷದಲ್ಲಿದ್ದವನೆಂದರೆ ಕೂಪರ್. ಮನುಷ್ಯ ಅಂತರಿಕ್ಷಯಾನದ ವಿವಿಧ ರೀತಿಯ ತೊಂದರೆಗಳನ್ನು ಅಪಾಯವಿಲ್ಲದೆ ಸಹಿಸಬಲ್ಲ ಎಂಬುದು ಈ ಯೋಜನೆಯ ಹಾರಾಟಗಳಿಂದ ಖಚಿತವಾಯಿತು.

**ii. ಜೆಮಿನಿ ಯೋಜನೆ:** ಈ ಯೋಜನೆಯಲ್ಲಿ ಹಾರಿದ ಪ್ರತಿ ನೌಕೆಯಲ್ಲೂ ಇಬ್ಬರು ಯಾನಿಗಳಿರುತ್ತಿದ್ದರು. ಮರ್ಕ್ಯುರಿ ನೌಕೆಗಳ ಭಾರ ಸುಮಾರು 1400 ಕಿಲೋಗ್ರಾಂಗಳಾದರೆ ಜೆಮಿನಿ ನೌಕೆಗಳ ಭಾರ ಸು. 3500 ಕಿಲೋಗ್ರಾಮ್‌ಗಳು. ಈ ಯೋಜನೆಯಲ್ಲಿ ಹಾರಿಸಲಾದ ನೌಕೆಗಳ ಒಟ್ಟು ಸಂಖ್ಯೆ 12. ಜೆಮಿನಿ ಯೋಜನೆಯ ಉದ್ದೇಶಗಳೆಂದರೆ–ಅಂತರಿಕ್ಷದಲ್ಲಿ ಎರಡು ವಾರಗಳಷ್ಟು ಕಾಲ ಒಂದೇ ಸಮನೆ ಪ್ರಯಾಣ ಮಾಡುವ ಮಾನವ ಯಾವ ರೀತಿ ಅಲ್ಲಿನ ಪರಿಸ್ಥಿತಿಗಳನ್ನು ಸಹಿಸಿಕೊಳ್ಳಬಲ್ಲನೆಂಬುದನ್ನು ಅಧ್ಯಯನ ಮಾಡುವುದು, ಭೂಕಕ್ಷೆಯಲ್ಲಿರುವ ಅಂತರಿಕ್ಷನೌಕೆ ಒಂದನ್ನೊಂದು ಸಮೀಪಿಸಿ ಒಂದರೊಡನೊಂದು ಕೂಡುವ ತಂತ್ರದ ಅಧ್ಯಯನ, ಅಂತರಿಕ್ಷದಲ್ಲಿದ್ದು ವೈಜ್ಞಾನಿಕ ಪರೀಕ್ಷೆಗಳನ್ನು ನಡೆಸುವುದು ಮತ್ತು ಭೂವಾತಾವರಣದೊಳಕ್ಕೆ ಪುನಃ ಪ್ರವೇಶ ಹಾಗೂ ಮೊದಲೇ ಆರಿಸಿದ ಪ್ರದೇಶದಲ್ಲಿ ಬಂದಿಳಿಯುವ ವಿಚಾರ–ಇವುಗಳನ್ನು ಅಧ್ಯಯನ ಮಾಡುವುದು.

**ಚಿತ್ರ 14**
**ಅಂತರಿಕ್ಷ ನಡಿಗೆ**

ಮರ್ಕ್ಯುರಿ ಕೋಶವನ್ನೇ ಹೋಲುತ್ತಿದ್ದು, ಗಾತ್ರದಲ್ಲಿ ಸುಮಾರು 2 1/2 ಯಷ್ಟಿದ್ದು, ತೂಕದಲ್ಲೂ ಗಮನಾರ್ಹವಾಗಿ ಹೆಚ್ಚಾಗಿದ್ದ ಜೆಮಿನಿ ಎಂಬ ಅಂತರಿಕ್ಷಕೋಶವನ್ನು ಈ ಕಾರ್ಯಕ್ರಮದಲ್ಲಿ ಬಳಸಲಾಯಿತು. ಈ ಶೀರ್ಷಿಕೆಯಲ್ಲಿ ವರ್ಜಿಲ್ ಗ್ರಿಸಮ್ ಮತ್ತು ಜಾನ್ ಡಬ್ಲ್ಯು. ಯಂಗ್ 1965 ಮಾರ್ಚ್ 22ರಂದು ಮೊದಲ ಯಾತ್ರೆಯನ್ನು ಕೈಕೊಂಡರು. ಇವರು ಭೂಮಿಯನ್ನು ಮೂರುಸಾರಿ ಸುತ್ತಿ 4 ಗಂಟೆ 53 ನಿಮಿಷಗಳ ಕಾಲ ಅಂತರಿಕ್ಷದಲ್ಲಿದ್ದು ಮರಳಿದರು. ಅನಂತರ 1965 ಜೂನ್ 3ರಂದು ಜೇಮ್ಸ್ ಎ. ಮೆಕ್‌ಡಿವಿಟ್ ಮತ್ತು ಎಡ್ವರ್ಡ್ ಎಚ್. ವೈಟ್ ಎಂಬುವರು ಸು. 4 ದಿನಗಳ ಕಾಲ ಜೆಮಿನಿ–4ರಲ್ಲಿ ಪ್ರಯಾಣ ಮಾಡಿದರು. ಗಂಟೆಗೆ 28000 ಕಿಮೀ.ಗಳ ಈ ಹಾರಾಟದಲ್ಲಿ ವೈಟ್ ನೌಕೆಯ ಹೊರಗೆ ಬಂದು ಅಂತರಿಕ್ಷದ ಸುಮಾರು 20 ನಿಮಿಷಗಳ ಕಾಲ ತೇಲಿದ. ಈತನಿಗೂ ನೌಕೆಗೂ ಸಂಪರ್ಕ ತಂತಿಗಳನ್ನೊಳಗೊಂಡ 25 ಅಡಿ ಉದ್ದದ ಹಗ್ಗ ಕಟ್ಟಲ್ಪಟ್ಟಿತ್ತು. ಈ ಹಗ್ಗದ ಮೂಲಕ ಆತನಿಗೆ ಬೇಕಾದ ಆಮ್ಲಜನಕದ ಸರಬರಾಜು ನಡೆಯಿತು.

1965 ಆಗಸ್ಟ್ 21ರಂದು ಗೋರ್ಡನ್ ಕೂಪರ್ ಮತ್ತು ಚಾರ್ಲ್ಸ್ ಕೊನ್ರಾಡ್ ಎಂಬುವರು ಜೆಮಿನಿ–5ರಲ್ಲಿ ಹಾರಿ ಎಂಟು ದಿನಗಳವರೆಗೂ ಅಂತರಿಕ್ಷದಲ್ಲಿದ್ದರು. 1965 ಡಿಸೆಂಬರ್ 4ರಂದು ಫ್ರ್ಯಾಂಕ್ ಬೋರ್‌ಮನ್ ಮತ್ತು ಜೇಮ್ಸ್ ಲೊವೆಲ್ ಎಂಬುವರು

ಜೆಮಿನಿ–7 ನೌಕೆಯಲ್ಲಿ ತಮ್ಮ 14 ದಿನದ ಹಾರಾಟವನ್ನು ಪ್ರಾರಂಭಿಸಿದ ಹನ್ನೊಂದು ದಿನಗಳ ಅನಂತರ ವಾಲ್ಟರ್ ಷಿರ್ರಾ ಮತ್ತು ಥಾಮಸ್ ಸ್ಟ್ಯಾಫೋರ್ಡ್ ಎಂಬುವರು ಜೆಮಿನಿ–5ರಲ್ಲಿ ಹಾರಿ ಅಂತರಿಕ್ಷದಲ್ಲಿ ಜೆಮಿನಿ–7 ಎಂಬ ನೌಕೆಯನ್ನು ಸಂಧಿಸಿದರು. ಎರಡೂ ನೌಕೆಗಳು ಕೆಲವು ಗಜಗಳವರೆಗೂ ಹತ್ತಿರ ಹತ್ತಿರ ಬಂದು ಸು. 6 ಗಂಟೆಗಳ ಕಾಲ ಒಂದರ ಸುತ್ತ ಇನ್ನೊಂದು ಸುತ್ತುತ್ತಲೂ ಒಂದನ್ನೊಂದು ಚಿತ್ರೀಕರಿಸುತ್ತಲೂ ಇದ್ದವು. ಮಾರನೆಯ ದಿನ ಜೆಮಿನಿ–6 ಹಿಂತಿರುಗಿತು.

1966 ಮಾರ್ಚ್ 16ರಂದು ನೀಲ್ ಎ. ಆರ್ಮ್‌ಸ್ಟ್ರಾಂಗ್ ಮತ್ತು ಡೇವಿಡ್ ಆರ್. ಸ್ಕಾಟ್ ಎಂಬುವರು ಜೆಮಿನಿ–8ರಲ್ಲಿ ಹಾರಿ ಈ ಮೊದಲೇ ವೃತ್ತಾಕಾರ ಪಥದಲ್ಲಿ ಭೂಮಿಯನ್ನು ಸುತ್ತುತ್ತಿದ್ದ ಅಜೆನಾ ರಾಕೆಟ್ಟಿಗೆ ತಮ್ಮ ನೌಕೆಯನ್ನು ಸೇರಿಸಿದರು. 1966 ಜುಲೈ 18 ರಂದು ಜಾನ್–ಡಬ್ಲ್ಯು. ಯಂಗ್ ಮತ್ತು ಮೈಕೆಲ್ ಕಾಲಿನ್ಸ್ ಜೆಮಿನಿ–10ರಲ್ಲಿ ಹಾರಿ ಹಿಂದಿನಂತೆಯೇ ಅಜೇನಾ ರಾಕೆಟ್ಟನ್ನು ಕೂಡಿಕೊಂಡರು. ಅನಂತರ ಇಚ್ಛಿತ ದಿಕ್ಕಿಗೆ ತಿರುಗಿ, ಸೂಕ್ತ ಸಮಯದಲ್ಲಿ ಅಜೇನಾ ಯಂತ್ರವನ್ನು ಉರಿಸಿ ತಮ್ಮ ಪಥವನ್ನು 800ಕಿಮಿ. ಗಳಿಗೆ ಏರಿಸಿಕೊಂಡರು. ಹೀಗೆ ಮಾಡಿ ಅವರು ಮತ್ತೊಂದು ಅಜೇನಾದ ಹತ್ತಿರ ಹೋದರು. ಇಲ್ಲಿ ಮೈಕೆಲ್ ಕಾಲಿನ್ಸ್ ತನ್ನ ನೌಕೆಯಿಂದ ಹೊರಬಂದು ಅಜೇನಾದಲ್ಲಿಟ್ಟಿದ್ದ ಉಲ್ಕಾಸಂಗ್ರಹಣೆಯ ಪೆಟ್ಟಿಗೆಯನ್ನು ತೆಗೆದುಕೊಂಡು ತನ್ನ ನೌಕೆಗೆ ಹಿಂತಿರುಗಿದ.

1966 ಸೆಪ್ಟೆಂಬರ್ 12ರಂದು ಚಾರಲ್ಸ್ ಕೊನ್ರಾಡ್ ಮತ್ತು ರಿಚರ್ಡ್ ಎಫ್. ಗೋರ್ಡಾನ್ ಜೆಮಿನಿ–11ರಲ್ಲಿ ಹಾರಿ ತಮ್ಮ ಮೊದಲ ಪಥದಲ್ಲಿಯೇ ಅಜೇನಾವೊಂದನ್ನು ಸೇರಿಕೊಂಡರು. ಈ ಅಜೇನಾವನ್ನುಪಯೋಗಿಸಿಕೊಂಡು ತಮ್ಮ ಪಥವನ್ನು 1300 ಕಿಮೀ.ಗಳ ಎತ್ತರಕ್ಕೆ ಏರಿಸಿಕೊಂಡರು. ಗೋರ್ಡಾನ್ ನೌಕೆಯಿಂದ ಹೊರಬಂದು ನೌಕೆಯನ್ನೂ ಅಜೇನಾವನ್ನೂ ಒಂದು ಉದ್ದದ ಹಗ್ಗದಿಂದ ಸೇರಿಸಿದ. ಅನಂತರ ಎರಡೂ ಒಂದರ ಮೇಲೊಂದು ನಿಧಾನವಾಗಿ ಸುತ್ತಿದುವು.

1966 ನವೆಂಬರ್ ತಿಂಗಳಲ್ಲಿ ಜೇಮ್ಸ್ ಲೊವೆಲ್ ಮತ್ತು ಎಡ್ವಿನ್ ಆಲ್ಡ್ರಿನ್ ಜೆಮಿನಿ–12ರಲ್ಲಿ ಹಾರಿದರು. ಆಲ್ಡ್ರಿನ್ ನೌಕೆಯಿಂದ ಹೊರಬಂದು 5 ಗಂಟೆ 37 ಮಿನಿಟುಗಳ ಕಾಲ ಇದ್ದ. ಈತ ಇತರ ಚಿತ್ರಗಳೊಂದಿಗೆ ಆಗ ಜರುಗಿದ್ದ ಸೂರ್ಯಗ್ರಹಣದ ಚಿತ್ರಗಳನ್ನೂ ತೆಗೆದ. ಜೆಮಿನಿ–12 ಸಹ ಅಜೇನಾ ರಾಕೆಟ್ಟಿನ ಹತ್ತಿರ ಹೋಯಿತು. ಜೆಮಿನಿ–11ರಂತೆಯೇ ನೌಕೆ ಮತ್ತು ಅಜೇನಾ ಹಗ್ಗದಿಂದ ಕಟ್ಟಲ್ಪಟ್ಟು ಒಂದರ ಮೇಲೊಂದು ಸುತ್ತಿದುವು.

ಮೇಲೆ ಹೇಳಿದ ಜೆಮಿನಿ ಹಾರಾಟಗಳಲ್ಲಿ ವಿವಿಧ ವಿಧಾನಗಳಿಂದ ನೌಕೆಗಳು ಒಂದನ್ನೊಂದು ಸಂಧಿಸುವಂತೆ ಮಾಡಿದರು.

**iii. ಅಪಾಲೊ (ಅಪೊಲೊ) ಯೋಜನೆ:** ಇದು ಮಾನವನನ್ನೊಳಗೊಂಡ ಅಂತರಿಕ್ಷಯಾನದ ಯೋಜನೆಗಳಲ್ಲೆಲ್ಲ ಅತ್ಯಂತ ಬೃಹತ್ತಾದ ಹಾಗೂ ಜಟಿಲವಾದ ಒಂದು ಯೋಜನೆ. ಮಾನವನನ್ನು ಚಂದ್ರನ ಮೇಲೆ ಕಾಲಿಡುವಂತೆ ಮಾಡಿ ಅನಂತರ ಅವನನ್ನು ಸುರಕ್ಷಿತವಾಗಿ ಭೂಮಿಗೆ ಮರಳಿ ಬರುವಂತೆ ಮಾಡುವುದೇ ಇದರ ಮುಖ್ಯ ಉದ್ದೇಶ. ಈ ಯೋಜನೆಯನ್ನು ಕಾರ್ಯಗತ ಮಾಡಲು ಅದಕ್ಕನುಗುಣವಾಗಿ ಒಂದು ಅಂತರಿಕ್ಷನೌಕೆಯನ್ನು ಸಿದ್ಧಪಡಿಸುವುದರ ಅಗತ್ಯವನ್ನು ವಿಶೇಷಾಧ್ಯಯನಗಳಿಂದ ಮನಗಂಡು ಒಂದು ವಿಶೇಷ ನೌಕೆಯ ರಚನೆ ಸಾಧ್ಯವಾಯಿತು. ಇದೇ ಅಪಾಲೊ ಅಂತರಿಕ್ಷನೌಕೆ. ಈ ನೌಕೆ ಮೂರು ಭಾಗಗಳಿಂದ ಕೂಡಿದ್ದಾಗಿತ್ತು. ಅವು ಹೀಗಿವೆ:

**1) ಆಜ್ಞಾ ಕೋಶ ಅಥವಾ ಕಮ್ಯಾಂಡ್ ಮಾಡ್ಯೂಲ್** (ಸಿ.ಎಂ.): ಇದರಲ್ಲಿ ಮೂರು ಜನ ಕುಳಿತುಕೊಳ್ಳಲು, ಒತ್ತಡಕ್ಕೊಳಪಡಿಸಿದ ತಮ್ಮ ಉಡುಪುಗಳನ್ನು ತೆಗೆದುಹಾಕಿ ಆಹಾರ ಸೇವಿಸಲು, ಕೆಲಸ ಮಾಡಲು ಮತ್ತು ನಿದ್ರಿಸಲು ಅವಕಾಶವಿತ್ತು. ಇದಕ್ಕೆ ಐದು ಕಿಟಕಿಗಳಿದ್ದವು. ಇದರಲ್ಲಿ ಒಂದು ಗಣಕಯಂತ್ರವೂ ಸೇರಿದಂತೆ ವಿವಿಧ ರೀತಿಯ ಉಪಕರಣಗಳು ಮತ್ತು ನೌಕೆಯನ್ನು ನಡೆಸುವ ಎಲ್ಲ ರೀತಿಯ ನಿಯಂತ್ರಣಸಾಧನಗಳೂ ಇದ್ದವು. ಚಂದ್ರನ ಯಾತ್ರೆಯನ್ನು ಮುಗಿಸಿಕೊಂಡು ಕೊನೆಯಲ್ಲಿ ಭೂಮಿಗೆ ಹಿಂತಿರುಗುವ ಭಾಗ ಇದೇ. ಆದ್ದರಿಂದ ಆದುದರಿಂದ ಗಂಟೆಗೆ 40,000ಕಿಮೀ. ವೇಗದಿಂದ ವಾತಾವರಣವನ್ನು ಇದು ಪ್ರವೇಶಿಸುವಾಗ ಘರ್ಷಣೆಯ ಪರಿಣಾಮವಾಗಿ ಉಂಟಾಗುವ ಅತ್ಯಂತ ಉಷ್ಣತೆಯನ್ನು ತಡೆಯುವಂತೆ ಇದರ ಹೊರಕ ವಚವನ್ನು ನಿರ್ಮಿಸಲಾಗಿತ್ತು. ಇದರ ಭಾರ 5 ಟನ್ನುಗಳು, ಎತ್ತರ 11 ಮತ್ತು ತಳದ ವ್ಯಾಸ 13'.

**2) ಸೇವಾಕೋಶ ಅಥವಾ ಸರ್ವಿಸ್ ಮಾಡ್ಯೂಲ್** (ಎಸ್.ಎಂ.): ಇದರಲ್ಲಿ ಒಂದು ದೊಡ್ಡ ರಾಕೆಟ್ಟು ಮತ್ತು ಸುತ್ತಲೂ ಅಳವಡಿಸಿರುವ ನಾಲ್ಕು ಸಣ್ಣ ರಾಕೆಟ್ಟುಗಳಿದ್ದವು. ಅವಕ್ಕೆ ಬೇಕಾಗುವ ನೋದಕಗಳನ್ನೂ ಇದರಲ್ಲೇ ತುಂಬಲಾಗುತ್ತಿತ್ತು. ಅಪಾಲೊ ತನ್ನ ಪಥವನ್ನು ಸರಿಪಡಿಸಿ ಕೊಳ್ಳಲು, ಬೇಕಾದಾಗ ತನ್ನ ವೇಗವನ್ನು ಕಡಿಮೆ ಅಥವಾ ಹೆಚ್ಚು ಮಾಡಿಕೊಳ್ಳಲು, ಈ ರಾಕೆಟ್ಟುಗಳನ್ನುಪಯೋಗಿಸಲಾಗುತ್ತಿತ್ತು. ನೌಕೆ ಭೂಮಿಯ ವಾತಾವರಣ ದೊಳಕ್ಕೆ ಪ್ರವೇಶಿಸುವ ಮುಂಚೆ ಇದನ್ನು ಸಿ. ಎಂ. ನಿಂದ ಬೇರ್ಪಡಿಸಲಾಗುತ್ತಿತ್ತು, ಸರ್ವಿಸ್ ಮಾಡ್ಯೂಲ್‌ನ ಭಾರ 24 ಟನ್ನುಗಳು. ಎತ್ತರ 23' ಮತ್ತು ತಳದ ವ್ಯಾಸ 13'.

3) ಚಂದ್ರಕೋಶ ಅಥವಾ ಲೂನಾರ್ ಮಾಡ್ಯೂಲ್ (ಎಲ್.ಎಂ.): ಇದೇ ಚಂದ್ರನ ಮೇಲೆ ಇಳಿಯುವ ಅಪಾಲೊ ನೌಕೆಯ ಭಾಗ. ಚಂದ್ರನಲ್ಲಿಳಿಯುವಾಗ ಅದರ ವೇಗವನ್ನು ಕಡಿಮೆ ಮಾಡಲು, ಪಥದಲ್ಲಿ ಅಕ್ಕಪಕ್ಕಕ್ಕೆ ಚಲಿಸಲು ಮತ್ತು ಚಂದ್ರನ ಮೇಲಿಂದ ಪುನಃ ಹಾರಲು ಬೇಕಾಗುವ ರಾಕೆಟ್‌ಗಳು ಮತ್ತು ಇಂಧನಗಳು ಈ ಭಾಗದಲ್ಲಿ ಇದ್ದವು. ಚಂದ್ರನ ಮೇಲಿಳಿದು ನಿಲ್ಲಲು ಬೇಕಾಗುವ ನಾಲ್ಕು ಕಾಲುಗಳಿದ್ದವು. ಈ ಕಾಲುಗಳಲ್ಲಿ ಆಘಾತ ತಡೆಗಳಿದ್ದವು. ಇದರಲ್ಲಿ ಮನುಷ್ಯನ ಆವಶ್ಯಕತೆಗಳನ್ನು ಪೂರೈಸುವ ಸಲಕರಣೆಗಳು, ಭೂಮಿಯೊಡನೆ ಮತ್ತು ಸಿ.ಎಮ್. ನೊಡನೆ ಸಂಪರ್ಕವೇರ್ಪಡಿಸುವ ರೇಡಿಯೋ ಸಾಧನಗಳು– ಮುಂತಾದುವು ಇದ್ದವು. ಚಂದ್ರನ ಮೇಲಿಳಿದು ಚಂದ್ರಮಂಡಲದ ಪರೀಕ್ಷೆಯ ಅನಂತರ ಈ ಭಾಗ ಅಲ್ಲಿಂದ ಮೇಲೇರಿ ಚಂದ್ರನನ್ನು ಸುತ್ತುಹಾಕುತ್ತಿರುವ ಅಪಾಲೊವಿನ ಕಮ್ಯಾಂಡ್ ಮತ್ತು ಸರ್ವಿಸ್ ಮಾಡ್ಯೂಲ್‌ಗಳನ್ನು ಸಂಧಿಸಿ ಅವುಗಳೊಡನೆ ಕೂಡಿಕೊಳ್ಳುತ್ತಿತ್ತು. ಇದರ ಭಾರ 14 1/2 ಟನ್ನುಗಳು, ಎತ್ತರ ಸು. 20' ಮತ್ತು ತಳದ ವ್ಯಾಸ 13'.

43 1/2 ಟನ್ನುಗಳಷ್ಟು ತೂಕವುಳ್ಳ ಅಪಾಲೊವನ್ನು ಚಂದ್ರನಲ್ಲಿಗೆ ಕಳುಹಿಸುವುದು ಸುಲಭದ ವಿಚಾರವಲ್ಲ. ಇದಕ್ಕಾಗಿ 76 ಲಕ್ಷ ಪೌಂಡುಗಳ ನೂಕುಬಲವನ್ನು ಉತ್ಪಾದಿಸಬಲ್ಲ ಸ್ಯಾಟರ್ನ್–5 ಎಂಬ ರಾಕೆಟ್‌ವಾಹನವನ್ನು ನಿರ್ಮಿಸಲಾಯಿತು. 3 ಹಂತಗಳ ಈ ವಾಹನ 36 ಮಹಡಿಗಳ ಎತ್ತರವಿದ್ದು (363') 33' ವ್ಯಾಸವಿತ್ತು. ಈ ರಾಕೆಟ್ಟು ತನ್ನಲ್ಲಿರುವ ಇಂಧನವನ್ನು ಸೆಕೆಂಡಿಗೆ 13.6 ಟನ್ನುಗಳಷ್ಟನ್ನು ಉರಿಸುತ್ತ 500 ಜೆಟ್ ವಿಮಾನಗಳಿಗಿಂತ ಹೆಚ್ಚು ಶಕ್ತಿಯನ್ನು ಪಡೆಯುತ್ತಿತ್ತು.



**ಚಿತ್ರ 15**
**ಜೆಮಿನಿ–6 ಜೆಮಿನಿ–7ನ್ನು ಸಂಧಿಸುತ್ತಿರುವುದು**

ಮೊದಲು ಅಪಾಲೊವನ್ನು, ಸ್ಯಾಟರ್ನ್–5 ರಾಕೆಟ್ಟಿನೊಡನೆ, ಭೂಕಕ್ಷೆಗೆ ಹಾರಿಸಲಾಗುತ್ತಿತ್ತು. ಅಲ್ಲಿಂದ ಸೂಕ್ತ ಸಮಯದಲ್ಲಿ ಸ್ಯಾಟರ್ನ್–5 ಮತ್ತೆ ಕಾರ್ಯಾರಂಭಿಸಿ ಅವೆರಡೂ ಭೂಮೋಕ್ಷ ವೇಗವನ್ನು ಪಡೆದು ಭೂಮಿಯ ಆಕರ್ಷಣೆಯನ್ನು ತಪ್ಪಿಸಿಕೊಂಡು ಚಂದ್ರನತ್ತ ಪ್ರಯಾಣ ಬೆಳೆಸುತ್ತಿದ್ದವು. ಅಂತರಿಕ್ಷಯಾನಿಗಳನ್ನು ಹೊತ್ತ ಅಪೊಲೊ ಮಾರ್ಗಮಧ್ಯದಲ್ಲಿ ಸ್ಯಾಟರ್ನ್–5ರಿಂದ ಕಳಚಿಕೊಂಡು ಮುಂದೆ ಸಾಗುತ್ತಿತ್ತು. ಸಾಗುವ ದಾರಿಯಲ್ಲಿ ಪಥವ್ಯತ್ಯಾಸಗಳೇನಾದರೂ ಇದ್ದರೆ ಅವನ್ನು ಒಂದೆರಡುಸಾರಿ ಸರಿಪಡಿಸಿಕೊಳ್ಳಲಾಗುತ್ತಿತ್ತು. ಸುಮಾರು 65 ಗಂಟೆಗಳ ಪ್ರಯಾಣದ ಅನಂತರ ಅವರು ಚಂದ್ರನ ಹತ್ತಿರ ಬರುತ್ತಿದ್ದರು. ಆಗ ಚಂದ್ರನ ಗುರುತ್ವಾಕರ್ಷಣೆಗೊಳಗಾಗಿ ಅಪಾಲೊ ಚಂದ್ರನ 'ಹಿಂಭಾಗಕ್ಕೆ' ಬರುತ್ತಿತ್ತು. ಹೀಗೆ ಬರುತ್ತಿರುವಾಗ ಅಪಾಲೊವನ್ನು ಹಿಂದಕ್ಕೆ ತಿರುಗಿಸಿ ಸರಿಯಾದ ಸಮಯದಲ್ಲಿ ಅದರ ರಾಕೆಟ್ಟನ್ನುರಿಸಿ ವೇಗವನ್ನು ಕಡಿಮೆ ಮಾಡಲಾಗುತ್ತಿತ್ತು. ಆದ್ದರಿಂದ ಅಪಾಲೊ ಚಂದ್ರನನ್ನು ಸುತ್ತತೊಡಗುತ್ತಿತ್ತು.

ಅನಂತರ ಸಿ. ಎಂ. ಒಳಗಿಂದ ಇಬ್ಬರು ಯಾನಿಗಳು ಎಲ್. ಎಂ. ಒಳಕ್ಕೆ ನುಸುಳುತ್ತಿದ್ದರು. ಅಲ್ಲಿ ಎಲ್. ಎಂ.ನ ಉಪಕರಣಗಳೆಲ್ಲವೂ ಸರಿಯಾಗಿವೆಯೇ ಎಂದು ನೋಡಿಕೊಳ್ಳುತ್ತಿದ್ದರು. ಅನಂತರ ಎಲ್.ಎಂ. ತನ್ನ ರಾಕೆಟ್ಟನ್ನುರಿಸಿ ಸಿ.ಎಂ.ನಿಂದ ಬೇರ್ಪಟ್ಟು ಅತಿ ದೀರ್ಘವೃತ್ತಪಥದಲ್ಲಿ ಸುತ್ತುತ್ತ ಚಂದ್ರನನ್ನು ಆ ಆಕಾಶಕಾಯದ ಮೇಲ್ಮೈಯಿಂದ 16 ಕಿಮೀ. ಎತ್ತರದವರೆಗೆ ಸಮೀಪಿಸುತ್ತಿತ್ತು. ಪುನಃ ತನ್ನ ಎಂಜಿನ್ನುಗಳನ್ನುರಿಸಿ ಎಲ್. ಎಂ. ಚಂದ್ರನ ಮೇಲಿಳಿಯುತ್ತಿತ್ತು.

ಅನಂತರ ಯಾನಿಗಳು ತಮ್ಮ ಅಂತರಿಕ್ಷ ಉಡುಪನ್ನು ಧರಿಸಿ ಎಲ್. ಎಂ. ನಿಂದ ಹೊರಬಿದ್ದು ಚಂದ್ರನ ಮೇಲೆ ಕಾಲಿಡುತ್ತಿದ್ದರು. ಅಲ್ಲಿಯ ಕಲ್ಲುಗಳು ಮತ್ತು ಧೂಳನ್ನು ಸಂಗ್ರಹಿಸುತ್ತಿದ್ದರು. ಸಾಧ್ಯವಾದಲ್ಲಿ ಕೆಲವೆಡೆ ಕಂಪನಮಾಪಕ, ಕಾಂತ ಮಾಪಕ ಮತ್ತು ಲೇಸರ್ ಪ್ರತಿಫಲಕವನ್ನು ನೆಡುತ್ತಿದ್ದರು. ಇವು ಬಹಳ ಕಾಲದವರೆಗೆ ತಮ್ಮ ಮಾಪನ ಮಾಹಿತಿಗಳನ್ನು ಭೂಮಿಗೆ ಕಳುಹಿಸಿದವು. (ಲೇಸರ್ ಫಲಕಗಳು ಇನ್ನೂ ಬಳಕೆಯಲ್ಲಿವೆ.) ಯಾನಿಗಳು ಇನ್ನೂ ಸ್ವಲ್ಪ ಕಾಲ ಚಂದ್ರನ ಮೆಲೆ ಕೆಲವು ಪ್ರಯೋಗಗಳನ್ನು ನಡೆಸಿ ಎಲ್. ಎಂ.ಗೆ ಹಿಂತಿರುಗುತ್ತಿದ್ದರು. ಕೆಲವು ಗಂಟೆಗಳ ನಿದ್ರೆಯ ಅನಂತರ ಮೇಲೆ ಸುತ್ತುತ್ತಿರುವ ಮಾತೃನೌಕೆಯನ್ನು (ಸಿ. ಎಂ. ಮತ್ತು ಎಸ್. ಎಂ.) ಸೇರಲು ಸಿದ್ಧವಾಗುತ್ತಿದ್ದರು.

ಅನಂತರ ಎಲ್.ಎಂ.ನ ಕೆಳಹಂತವನ್ನು ಅಲ್ಲಿಯೇ ಬಿಟ್ಟು ಅದರ ಮೇಲಿದ್ದ ಮೇಲಿರುವ ಹಂತದ ನೆರವಿನಿಂದ ಸುತ್ತುತ್ತಿರುವ ಮಾತೃನೌಕೆಯನ್ನು ಸೇರಿಕೊಳ್ಳುತ್ತಿದ್ದರು. ಅನಂತರ ಯಾನಿಗಳು, ತಾವು ಹೊತ್ತುತಂದ ಚಂದ್ರನ ಕಲ್ಲುಮಣ್ಣುಗಳನ್ನು ತೆಗೆದುಕೊಂಡು, ಎಲ್.ಎಂ.ನಿಂದ ಸಿ.ಎಂ.ನೊಳಕ್ಕೆ ನುಸುಳುತ್ತಿದ್ದರು. ಅನಂತರ ಎಲ್.ಎಂ.ಅನ್ನು ಸಿ.ಎಂ.ನಿಂದ ಕಳಚಿ, ಅದು ಚಂದ್ರನ ಕಕ್ಷೆಯಲ್ಲೇ ಸುತ್ತುಹಾಕಲು ಬಿಟ್ಟುಬಿಡುತ್ತಿದ್ದರು.




**ಚಿತ್ರ 16**
**ಲೂನಾರ್ ಮಾಡ್ಯೂಲ್**

ಅನಂತರ ಅಪೊಲೊ, ಎಸ್.ಎಂ.ನ ರಾಕೆಟ್ಟನ್ನುರಿಸಿ ಚಂದ್ರನ ಗುರುತ್ವಾಕರ್ಷಣೆಯಿಂದ ತಪ್ಪಿಸಿಕೊಂಡು ಭೂಮಿಯ ಕಡೆಗೆ ಪ್ರಯಾಣ ಬೆಳೆಸುತ್ತಿತ್ತು. ಸುಮಾರು 60 ಗಂಟೆಗಳ ಅನಂತರ ಅಪೊಲೊ ಭೂಮಿಯನ್ನು ತಲುಪುತ್ತಿತ್ತು. ದಾರಿಯಲ್ಲಿ ಪಥವ್ಯತ್ಯಾಸಗಳೇನಾದರೂ ಇದ್ದರೆ ಅವನ್ನು ಸರಿಪಡಿಸಿಕೊಳ್ಳುತ್ತಿದ್ದರು. ಭೂಮಿಯ ವಾತಾವರಣಕ್ಕೆ ಬರುತ್ತಲೇ ಎಸ್.ಎಂ.ನಿಂದ ಸಿ.ಎಂ. ಕಳಚಿಕೊಂಡು ಹಿಂದು ಮುಂದಾಗಿ ತಿರುಗಿ ವಾತಾವರಣದೊಳಕ್ಕೆ ನುಗ್ಗುತ್ತಿತ್ತು. ಅದು ವಾತಾವರಣವನ್ನು ಸರಿಯಾಗಿ 64$^{o}$ ಕೋನದಲ್ಲಿ ಪ್ರವೇಶಿಸಬೇಕಾಗುತ್ತಿತ್ತು. ಇದಕ್ಕಿಂತ ಕಡಿಮೆಯಾದರೆ ನೌಕೆ ವಾತಾವರಣದಿಂದ ಚಿಮ್ಮಲ್ಪಟ್ಟು ಭೂಮಿಗೆ ಹಿಂತಿರುಗಲಾರದ ಪಥವನ್ನು ಸೇರುತ್ತಿತ್ತು. ಇದಕ್ಕಿಂತ ಹೆಚ್ಚು ಕೋನದಲ್ಲಿ ಪ್ರವೇಶಿಸಿದರೆ ವಿರುದ್ಧ g ಬಲಗಳು ತಡೆಯಲಾರದಷ್ಟಾಗುತ್ತಿದ್ದವು. ವಾತಾವರಣವನ್ನು ಪ್ರವೇಶಿಸುವಾಗ ನೌಕೆಯ ಉಷ್ಣತೆ ಸುಮಾರು 10,000$^{o}$ ಸೆ. ವರೆಗೂ ಏರಿ ನೌಕೆಯನ್ನು ಅಗ್ನಿಜ್ವಾಲೆಗಳು ಆವರಿಸಿ ಅದನ್ನು ಸುಟ್ಟು ಬೂದಿ ಮಾಡುತ್ತಿದ್ದವು. ಆದರೆ ಸರಿಯಾದ ಕೋನದಲ್ಲಿ ಭೂವಾತಾವರಣದೊಳಗೆ ಧುಮುಕಿದ ಅಪಾಲೊ ನೌಕೆ ಹೆಚ್ಚು ಉಷ್ಣತೆಯನ್ನೂ ತಡೆದುಕೊಂಡು ನೌಕೆ ಕೆಳಗೆ ಬೀಳತೊಡಗುತ್ತಿತ್ತು. ಅನಂತರ, ಅದರಲ್ಲಿನ ಒಂದು ಪ್ಯಾರಾಚೂಟ್ ಬಿಚ್ಚಿಕೊಂಡು ನೌಕೆಯ ವೇಗವನ್ನು ಕಡಿಮೆ ಮಾಡುತ್ತಿತ್ತು. ಸ್ವಲ್ಪ ಸಮಯದ ಅನಂತರ ಮೂರು ಪ್ಯಾರಾಚೂಟ್‌ಗಳು ಬಿಚ್ಚಿಕೊಂಡು ನೌಕೆಯನ್ನು ನಿಧಾನವಾಗಿ ಕೆಳಗಿಳಿಸುತ್ತಿದ್ದವು. ಚಂದ್ರನಿಂದ ನಮಗೆ ತಿಳಿಯದ ಬ್ಯಾಕ್ಟೀರಿಯ ಅಥವಾ ನಂಜುಕ್ರಿಮಿಗಳನ್ನು (ವೈರಸ್) ಅಪಾಲೊ ಯಾನಿಗಳು ಹೊತ್ತು ತಂದಿರುವ ಸಂಭವವುಂಟೆಂದು ವಿಜ್ಞಾನಿಗಳು 60ರ ದಶಕದಲ್ಲಿ ಶಂಕಿಸಿದ್ದರು. ಹಾಗೇನಾದರೂ ಇದ್ದರೆ ಅವು ಒಬ್ಬರಿಂದೊಬ್ಬರಿಗೆ ಹರಡದಂತೆ ಅವುಗಳ ವಿರುದ್ಧ ಸೂಕ್ತ ನಿವಾರಣೋಪಾಯಗಳನ್ನು ಮಾಡಿದ ಅನಂತರವೇ ಆ ಯಾನಿಗಳಿಗೆ ಇತರರೊಡನೆ ಸಂಪರ್ಕ ಕಲ್ಪಿಸಲಾಗುವುದೆಂದು ಅವರು ತೀರ್ಮಾನಿಸಿದರು. ಆದ್ದರಿಂದ ನೌಕೆಯಿಂದ ಇಳಿದ ಗಗನಯಾತ್ರಿಗಳು ವಿಶೇಷ ಕೋಶವೊಂದನ್ನು ಪ್ರವೇಶಿಸುತ್ತಿದ್ದರು. ನಂತರ ಅದರಲ್ಲೇ ಅವರು ವಿಶೇಷ ವಿಮಾನದಲ್ಲಿ ಪ್ರಯಾಣ ಮಾಡಿ ಅನಂತರ ತಾವಿರುವ ಕೋಶದಿಂದ ಪ್ಲಾಸ್ಟಿಕ್ ಕೊಳವೆಯೊಂದರ ಮೂಲಕ ನೆಲಮಾಳಿಗೆಯೊಳಕ್ಕೆ ಬರುತ್ತಿದ್ದರು. ಅಲ್ಲಿ ಅವರ ಮತ್ತು ಅವರು ತಂದಿರುವ ಚಂದ್ರನ ಪದಾರ್ಥಗಳ ಮೇಲೆ 21 ದಿನಗಳ ಸತತ ಅಧ್ಯಯನ ನಡೆಯುತ್ತಿತ್ತು. ಕೊನೆಗೆ ಅವುಗಳಿಂದ ಭೂಮಿಯ ಜೀವಿಗಳಿಗೆ ಯಾವ ಅಪಾಯವೂ ಇಲ್ಲವೆಂದು ಖಚಿತವಾದ ಅನಂತರ ಅವರು ಹೊರಬರುತ್ತಿದ್ದರು. ಹೀಗಾಗಿ ಯಾನಿಗಳನ್ನು 21 ದಿವಸಗಳ ಪರ್ಯಂತ ಏಕಾಂತದಲ್ಲಿರಿಸಲಾಗುತ್ತಿತ್ತು. ಈ ಬಗೆಯ ಏಕಾಂತ ವಾಸವನ್ನು ಅನುಭವಿಸಿದವರು ಅಪೊಲೊ 11, 12 ಮತ್ತು 14ರ ಗಗನಯಾತ್ರಿಗಳು ಮಾತ್ರ.

ಈ ರೀತಿಯಾಗಿ ಚಂದ್ರಲೋಕಯಾತ್ರೆ ನಡೆಯಿತು. ಅಪಾಲೊ ಯೋಜನೆಯಲ್ಲಿ ಮೊದಮೊದಲು ಸ್ಯಾಟರ್ನ್ ವಾಹನದ ಮತ್ತು ಅಪೊಲೊವಿನ ಮೂರು ಭಾಗಗಳ ಅಭಿವೃದ್ಧಿಯೆಡೆಗೆ ಗಮನ ಕೊಟ್ಟರು.

ಮೊದಲ ಮನುಷ್ಯನನ್ನೊಳಗೊಂಡ ಅಪೊಲೊ ಹಾರಾಟ 1967 ಫೆಬ್ರವರಿ 4 ರಂದು ನಡೆಯಬೇಕಿತ್ತು. ತರಬೇತಿಗಾಗಿ 1967 ಜನವರಿಯಲ್ಲಿ ವರ್ಜಿಲ್ ಗ್ರಿಸಮ್, ಎಡ್ವರ್ಡ್ ವೈಟ್ ಮತ್ತು ರೋಜರ್ ಬಿ. ಚಾಫೀ ಎಂಬುವರು ರಾಕೆಟ್ಟಿನ ಮೇಲೆ ಅಳವಡಿಸಿದ್ದ ತಮ್ಮ ನೌಕೆಯಲ್ಲಿ ಕುಳಿತು ಮುಂದಿನ ಹಾರಾಟದ ರೀತಿಯಲ್ಲಿಯೇ ಪರಿಪಾಠವನ್ನು ಮಾಡಿಕೊಳ್ಳುತ್ತಿದ್ದರು. ಅಕಸ್ಮಾತ್ತಾಗಿ ಕೋಶದಲ್ಲಿ ಬೆಂಕಿಯ ಅಪಘಾತವಾದ ಕಾರಣ ಮೂವರೂ ಮರಣ ಹೊಂದಿದರು. ಈ ಆಕಸ್ಮಿಕ ಅಪೊಲೊ ಕಾರ್ಯಕ್ರಮದ ಪ್ರಗತಿಯನ್ನು ಸ್ವಲ್ಪ ಕುಂಠಿತಗೊಳಿಸಿತು.

ಇದಾದ ಅನಂತರ ಅತ್ಯಂತ ಜಾಗರೂಕತೆಯಿಂದ ಮತ್ತೊಂದು ಅಪೊಲೊ ಕೋಶದ ರಚನೆಯಾಗಿ 1968 ಡಿಸೆಂಬರ್ 21ರಂದು ಅಪೊಲೊ–8 ಎಂಬ ನೌಕೆಯಲ್ಲಿ ಫ್ರ್ಯಾಂಕ್ ಬೋರ್‌ಮನ್, ಜೇಮ್ಸ್ ಲೊವೆಲ್ ಮತ್ತು ವಿಲಿಯಂ ಆಂಡರ್ಸ್ ಎಂಬುವರನ್ನು ಚಂದ್ರಮಂಡಲದ ಪೂರ್ವಭಾವೀ ಹಾರಾಟಕ್ಕೆಂದು ಕಳುಹಿಸಲಾಯಿತು. ಈ ಹಾರಾಟದಲ್ಲಿ ಎಲ್. ಎಂ. ಇರಲಿಲ್ಲ. ಯಾನಿಗಳು 24–25ನೆಯ ದಿನಾಂಕಗಳಲ್ಲಿ ಚಂದ್ರನನ್ನು ಹತ್ತುಸಾರಿ ಸುತ್ತಿದರು. ಅಲ್ಲಿಂದ ಚಂದ್ರನ ಮತ್ತು ಭೂಮಿಯ ಚಿತ್ರಗಳನ್ನು ತೆಗೆದರು. ಮುಂದೆ ಚಂದ್ರನಲ್ಲಿಳಿಯಬೇಕಾದ ಪ್ರದೇಶಗಳನ್ನು ಪರೀಕ್ಷಿಸಿದರು. ಅಪೊಲೊ–8, ದಿನಾಂಕ 27ರಂದು ಪೆಸಿಫಿಕ್ ಸಾಗರದಲ್ಲಿ ಸುರಕ್ಷಿತವಾಗಿ ಇಳಿಯಿತು. ಅಪಾಲೋ ನೌಕೆಗಳ ಹಾರಾಟಗಳಲ್ಲಿ ಅಪೊಲೊ–8ರ ಹಾರಾಟ ಒಂದು ಅಮೋಘ ಸಾಧನೆ.

1969 ಮಾರ್ಚ್ 3ರಂದು ಅಪೊಲೊ–9 ನೌಕೆಯಲ್ಲಿ ಜೇಮ್ಸ್ ಎ. ಮೆಕ್‌ಡಿವಿಟ್, ಡೇವಿಡ್ ಆರ್. ಸ್ಕಾಟ್ ಮತ್ತು ರಸ್ಸೆಲ್ ಎಲ್. ಷ್ವೀಕಾರ್ಟ್ ಎಂಬುವರನ್ನು ಹಾರಿಸಲಾಯಿತು. ಈ ಹಾರಾಟದ ಮುಖ್ಯ ಗುರಿ ಅಂತರಿಕ್ಷದಲ್ಲಿ ಎಲ್.ಎಂ. ಸರಿಯಾಗಿ ಕೆಲಸ ಮಾಡುತ್ತದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸುವುದು. ಅಪೊಲೋ–9 ಭೂಕಕ್ಷೆಯಲ್ಲಿ ಹಾರಿ ಮುಂದೆ ಚಂದ್ರನಲ್ಲಿಳಿಯುವಾಗ ಎಲ್.ಎಂ. ಮಾಡಬೇಕಾದಾಗ ಚಲನವಲನಗಳೆಲ್ಲವನ್ನೂ ಮಾಡಿದರು. ಸಿ.ಎಂ. ನಿಂದ ಎಲ್.ಎಂ.ಗೆ ಮೆಕ್‌ಡಿವಿಟ್ ಮತ್ತು ಷ್ವೀಕಾರ್ಟ್ ನುಸುಳಿಕೊಂಡು ಹೋಗಿ ಎಲ್.ಎಂ. ಅನ್ನು ಸಿ.ಎಂ. ನಿಂದ ದೂರ ಹಾರಿಸಿ, ಪರೀಕ್ಷಿಸಿ, ಪುನಃ ಬಂದು ಸೇರಿಕೊಂಡರು. ಅಂತರಿಕ್ಷದಲ್ಲಿ ಹತ್ತು ದಿನಗಳಿದ್ದು, ಎಲ್ಲ ಪ್ರಯೋಗಗಳನ್ನೂ ಸುಗಮವಾಗಿ ನೆರವೇರಿಸಿ 13ರಂದು ಭೂಮಿಗೆ ಹಿಂತಿರುಗಿದರು.

1969 ಮೇ 18ರಂದು ಅಮೆರಿಕ ಹಾರಿಬಿಟ್ಟ ಅಪೊಲೊ–10 ಅಂತರಿಕ್ಷನೌಕೆಯಲ್ಲಿದ್ದ ಥಾಮಸ್ ಪಿ. ಸ್ಟಾಫೋರ್ಡ್, ಜಾನ್ ಡಬ್ಲ್ಯೂ. ಯೆಂಗ್ ಮತ್ತು ಯುಜೀನ್ ಎ. ಸೆರ್‌ನನ್ ಇವರು ಮೂರು ದಿವಸಗಳ ಕಾಲ ಪ್ರಯಾಣ ಮಾಡಿ ಚಂದ್ರನೆಡೆಗೆ ಧಾವಿಸಿದರು. ಈ ಮೂವರಲ್ಲಿ ಸ್ಟಾಫೋರ್ಡ್ ಮತ್ತು ಸೆರ್‌ನನ್ ಚಂದ್ರನ ಸುತ್ತ 110 ಕಿಮೀಗಳೆತ್ತರದಲ್ಲಿ ಸುತ್ತುತ್ತಿದ್ದ ಕಮಾಂಡ್ ಮಾಡ್ಯೂಲ್‌ನಿಂದ ಲ್ಯೂನಾರ್ ಮಾಡ್ಯೂಲ್‌ಗೆ ಬಂದು, ಹಿಂದೆಂದೂ ಮಾನವ ಚಂದ್ರನನ್ನು ಸಮೀಪಿಸಿರದಷ್ಟು ಸಮೀಪಕ್ಕೆ (ಕೇವಲ 50,000') ತಮ್ಮ ಲ್ಯೂನಾರ್ ಮಾಡ್ಯೂಲ್‌ನಲ್ಲಿ ಹೋದರು. ಅನಂತರ ಚಂದ್ರನ ಅತಿ ಸಮೀಪದ ಚಿತ್ರಗಳನ್ನೂ ಮುಂದೆ ಅಂತರಿಕ್ಷ ಯಾತ್ರಿಗಳು ಇಳಿಯಬಹುದಾದ ಚಂದ್ರನ ಮೇಲಿನ ನಿವೇಶನವನ್ನೂ ಚಿತ್ರಿಸಿಕೊಂಡರು. ಅನಂತರ ಲ್ಯೂನಾರ್ ಮಾಡ್ಯೂಲ್ ಚಂದ್ರನಿಂದ 50,000' ಎತ್ತರದಲ್ಲಿದ್ದಾಗ ಅದರ ಇಳಿವ ಹಂತವನ್ನು (ಡಿಸೆಂಟ್ ಸ್ಟೇಜ್) ಬೇರ್ಪಡಿಸಿ ಅದು ಚಂದ್ರನ ಮೇಲೆ ಬೀಳುವಂತೆ ಮಾಡಿ ಅನಂತರ ಲ್ಯೂನಾರ್ ಮಾಡ್ಯೂಲಿನ ಏರುವ ಹಂತವನ್ನು (ಅಸೆಂಟ್ ಸ್ಟೇಜ್) ಮೇಲೇರಿಸಿ ಕಮಾಂಡ್ ಮಾಡ್ಯೂಲನ್ನು ಪುನಃ ಸೇರಿಕೊಂಡರು. ಆಮೇಲೆ ಮೂವರು ಅಂತರಿಕ್ಷ ಯಾತ್ರಿಗಳೂ 15 ಬಾರಿ ಚಂದ್ರನನ್ನು

ಪ್ರದಕ್ಷಿಣೆ ಹಾಕಿ, ಚಂದ್ರನ ಮೇಲ್ಮೈಯ ಕೆಲವು ವೈಜ್ಞಾನಿಕ ಅಳತೆಗಳನ್ನೂ ಚಂದ್ರನ ಸಮೀಪದ ಗುರುತ್ವಾಕರ್ಷಣೆಯನ್ನೂ ಗುರುತು ಮಾಡಿಕೊಂಡರು. ತಮ್ಮ ಚಂದ್ರಲೋಕ ಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿದ ಬಳಿಕ ಈ ಮೂವರೂ ಮೇ 23ರಂದು ಸುರಕ್ಷಿತವಾಗಿ ಭೂಮಿಗೆ ಇಳಿದರು.

ಇದಾದ ಅನಂತರ ಅಪೊಲೊ-11 ನೌಕೆಯನ್ನು ಚಂದ್ರನಲ್ಲಿಗೆ ಹಾರಿಸಿದರು. ಮಾನವ ಅಲ್ಲಿ

ಯಶಸ್ವಿಯಾಗಿ ಇಳಿದು ಅಲ್ಲಿನ ಪರಿಸರದ ಪ್ರತ್ಯಕ್ಷ ವೀಕ್ಷಣೆ ನಡೆಸಿದ; ಚಂದ್ರಶಿಲೆ ಹಾಗೂ ಕಲ್ಲುಮಣ್ಣುಗಳನ್ನು ಭೂಮಿಗೆ ತಂದ. ಮಾನವನ ಚಂದ್ರಲೋಕ ಪ್ರವೇಶ ನಿಜಕ್ಕೂ ಹೆಮ್ಮೆಯ ಸಂಗತಿ.

ಅಪೊಲೊ 11ರ ಯಶಸ್ಸಿನ ಅನಂತರ ಆ ಸರಣಿಯಲ್ಲಿ ಇನ್ನೂ ಆರು ನೌಕೆಗಳನ್ನು ಚಂದ್ರನತ್ತ ಉಡಾಯಿಸಲಾಯಿತು, ಆ ಪೈಕಿ 1970 ಏಪ್ರಿಲ್‌ನಲ್ಲಿ ಉಡಾಯಿಸಲಾದ ಅಪಾಲೋ 13 ಚಂದ್ರನತ್ತ ತೆರಳುವ ನಡುವೆ ಅಪಘಾತಕ್ಕೆ ಒಳಗಾಗಿ ಅದರ ಗಗನಯಾತ್ರಿಗಳಾದ ಜೇಮ್ಸ್ ಲೊವೆಲ್, ಫ್ರೆಡ್ ಹೈಸೆ ಮತ್ತು ಜಾಕ್ ಸ್ವೈಗರ್ಟ್ ಭೂಮಿಗೆ ಬದುಕಿ ಬಂದದ್ದೇ ಒಂದು ಸಾಹಸವಾಯಿತು. ಆದರೆ ಇನ್ನುಳಿದ ಐದು ಅಪಾಲೊ ನೌಕೆಗಳಾದ 12, 14, 15, 16 ಮತ್ತು 17 ಚಂದ್ರನ ಮೇಲೆ ಇಳಿದು ನಂತರ ಸುರಕ್ಷಿತವಾಗಿ ಹಿಂತಿರುಗಿ ಬಂದವು. ಹೀಗಾಗಿ ಇದುವರೆವಿಗೂ 12 ಜನ ಅಪಾಲೋ ಗಗನ ಯಾತ್ರಿಗಳು ಚಂದ್ರನ ಮೇಲೆ ವಿಹರಿಸಿ ಬಂದಿದ್ದಾರೆ. ಅಪಾಲೋ 15, 16 ಮತ್ತು 17ರ ಗಗನಯಾತ್ರಿಗಳು ತಮ್ಮೊಂದಿಗೆ ಕೊಂಡೊಯ್ದ ಬ್ಯಾಟರಿ ಚಾಲಿತ ಕಾರೊಂದರಲ್ಲೂ ಚಂದ್ರನ ಮೇಲೆ ಕಿಲೋಮೀಟರ್‌ಗಟ್ಟಲೆ ವಿಹರಿಸಿದರು. ಅಪಾಲೋಚಂದ್ರಯಾನ ಕಾರ್ಯಕ್ರಮ ಮುಕ್ತಾಯವಾದ ಬಳಿಕ ಅಪಾಲೊ ನೌಕೆಗಳನ್ನು (ಇನ್ನೂ ಸರಿಯಾಗಿ ಹೇಳಬೇಕೆಂದರೆ ಆಜ್ಞಾಕೋಶ-ಸೇವಾಕೋಶಗಳ ಜೋಡಿಯನ್ನು) ಅಮೆರಿಕದ ಸ್ಕೈಲ್ಯಾಬ್ ಅಂತರಿಕ್ಷ ನಿಲ್ದಾಣಕ್ಕೆ ಗಗನಯಾತ್ರಿಗಳನ್ನು ಕೊಂಡೊಯ್ಯಲು ಹಾಗೂ ಅಲ್ಲಿಂದ ಅವರನ್ನು ಹಿಂತಿರುಗಿ ಭೂಮಿಗೆ ಕರೆತರಲು ಬಳಸಿಕೊಳ್ಳಲಾಯಿತು.

**V ಅಂತರಿಕ್ಷ ಷಟಲ್ ಯೋಜನೆ :** 1981ರಲ್ಲಿ ಮಾನವ ಸಹಿತ ಅಂತರಿಕ್ಷಯಾನ ಕ್ಷೇತ್ರದಲ್ಲಿ ಒಂದು ಮಹತ್ತರವಾದ ಬೆಳವಣಿಗೆ ಉದಯವಾಯಿತು. ಅದೇ ಅಂತರಿಕ್ಷ ಶಟಲ್‌ನ ಆಗಮನ.

ಅಂತರಿಕ್ಷ ಷಟಲ್ ಎಂಬುದು ರಾಕೆಟೊಂದರಂತೆ ಮೇಲೇರಿ, ಅಂತರಿಕ್ಷ ನೌಕೆಯೊಂದರಂತೆ ಭೂಕಕ್ಷೆಯಲ್ಲಿ ವಿಹರಿಸಿ ನಂತರ ವಿಮಾನವೊಂದರಂತೆ ಧರೆಗಿಳಿಯುವ ವಿಶೇಷ ರಾಕೆಟ್ ವಾಹನ. ಇದರ ಹೆಚ್ಚಿನ ಪ್ರಾಮುಖ್ಯಕ್ಕೆ ಕಾರಣ ಇದು ಮರುಪಯೋಗಿ ಎಂಬುದಾಗಿದೆ. ಅಂತರಿಕ್ಷ ಷಟಲ್ ಎಂಬುದು ಮೇಣದ ಬತ್ತಿಗಳಂತೆ ಕಾಣುವ ಎರಡು ಘನ ಶೋಧನಕಾರಿ ರಾಕೆಟ್ಟುಗಳಿಗೆ ಜೋಡಿಸಲ್ಪಟ್ಟು ಒಂದು ಬೃಹತ್ ನೋದಕ ಟ್ಯಾಂಕ್‌ನ ಮೇಲೆ ಕುಳಿತ ವಿಮಾನ. ಉಡಾವಣೆಯ ವೇಳೆಯಲ್ಲಿ ಇದು ಆ ಎರಡು ಘನ ರಾಕೆಟ್ಟುಗಳ ಹಾಗೂ ತನ್ನ ಮೂರು ದಕ್ಷ ಕ್ರಯೋಜನಿಕ್ ಯಂತ್ರಗಳ ನೆರವಿನೊಂದಿಗೆ ಭೂಕಕ್ಷೆಗೆ ತೆರಳುತ್ತದೆ. ನಡುವೆ ಘನ ರಾಕೆಟ್ಟುಗಳು ಬೇರ್ಪಟ್ಟು ಪ್ಯಾರಾಚ್ಯೂಟ್‌ಗಳ ನೆರವಿನೊಡನೆ ಭೂಮಿಗೆ ಇಳಿಯುತ್ತವೆ. ನಂತರ ಅವು ಮರುಪಯೋಗಕ್ಕೆ ಬರುತ್ತವೆ. ಕೇವಲ ಭೂಕಕ್ಷೆಯನ್ನು ಪ್ರವೇಶಿಸುವ ವೇಳೆಯಲ್ಲಿ ಅದರಿಂದ ಬೇರ್ಪಡುವ ನೋದಕಗಳ ಟ್ಯಾಂಕ್ ನಂತರ ಉರಿದು ಬೂದಿಯಾಗುತ್ತದೆ.

ಷಟಲ್ ಭೂ ಕಕ್ಷೆಯನ್ನು ತಲುಪಿದ ನಂತರ ಹತ್ತಿರ ಹತ್ತಿರ ಮೂರು ವಾರಗಳ ಕಾಲ ಅನೇಕ ಪ್ರಯೋಗಗಳನ್ನು ಅದರಲ್ಲಿ ನಡೆಸಲು ಹಾಗೂ ವಾಸಿಸಲು ಎಂಟು ಗಗನ ಯಾತ್ರಿಗಳಿಗೆ ಅವಕಾಶವಿರುತ್ತದೆ. ಭೂಮಿಗೆ ಹಿಂತಿರುಗುವ ಸಮಯ ಬಂದಾಗ ಷಟಲ್ ರೆಟ್ರೋ ರಾಕೆಟ್‌ಗಳನ್ನು ಉರಿಸಿ ತನ್ನ ವೇಗವನ್ನು ಕಡಿಮೆ ಮಾಡಿಕೊಂಡು ಭೂವಾತಾವರಣಕ್ಕೆ ಧುಮುಕುತ್ತದೆ. ಆಗ ಅಲ್ಲಿ ಉಂಟಾಗುವ ಘರ್ಷಣೆಯಿಂದಾಗಿ ತನ್ನ ವೇಗವನ್ನು ಕಡಿಮೆ ಮಾಡಿಕೊಳ್ಳುವುದರೊಂದಿಗೇ ತನ್ನನ್ನಾವರಿಸಿರುವ ಶಾಖ ವಿರೋಧಿ ಬಿಲ್ಲೆಗಳ ಹಾಗೂ ಶಾಖ ಕವಚಗಳ ನೆರವಿನೊಂದಿಗೆ ಒಳಗಿರುವ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ಇಡುವ ಮೂಲಕ ಕಂಪ್ಯೂಟರ್‌ಗಳ ನೆರವಿನೊಡನೆ ಓಡುದಾರಿಯೊಂದರ ಮೇಲಿಳಿಯುತ್ತದೆ. ಸು. 30 ಟನ್ ತೂಕದ ಉಪಗ್ರಹ ಅಂತರಿಕ್ಷ ನೌಕೆ/ಅಂತರಿಕ್ಷ ಪ್ರಯೋಗ ಶಾಲೆಗಳನ್ನು ಕೆಲವೇ ನೂರು ಕಿಲೋಮೀಟರ್ ಎತ್ತರದ ಭೂಕಕ್ಷೆಗೆ ಕೊಂಡೊಯ್ಯುವ ಸಾಮರ್ಥ್ಯ ಅಮೆರಿಕದ ಅಂತರಿಕ್ಷ ಷಟಲ್‌ಗೆ ಇದೆ.

ಕಳೆದ ಎರಡೂವರೆ ದಶಕಗಳ ಸುಮಾರಿನಲ್ಲಿ ಷಟಲ್‌ನ ನೆರವಿನೊಂದಿಗೆ ಉಪಗ್ರಹಗಳನ್ನು ಉಡಾಯಿಸುವುದು, ಉಪಗ್ರಹಗಳನ್ನು ಹಿಂತಿರುಗಿ ಭೂಮಿಗೆ ತರುವುದು, ಉಪಗ್ರಹಗಳನ್ನು ಭೂಕಕ್ಷೆಯಿಂದಲೇ ರಿಪೇರಿ ಮಾಡಿ ಹಾರಿಬಿಡುವುದು, 'ಅಂತರಿಕ್ಷ ಪ್ರಯೋಗಶಾಲೆ'ಯನ್ನು ಭೂಕಕ್ಷೆಗೆ ಕೊಂಡೊಯ್ಯುವುದು, ಅಂತರಿಕ್ಷ ನಿಲ್ದಾಣವೊಂದರ ಜೊತೆ ಭೂಕಕ್ಷೆಯಲ್ಲಿ ಸಂಧಿಸಿ ಕೂಡಿಕೊಳ್ಳುವುದು, ಅಂತರಿಕ್ಷವೊಂದನ್ನು ಭೂಕಕ್ಷೆಯಲ್ಲಿ ಹಂತ ಹಂತವಾಗಿ ನಿರ್ಮಿಸುವುದು, ಇಂತಹ ಮಹತ್ತರವಾದ ಕಾರ್ಯಗಳನ್ನು ನಿರ್ವಹಿಸಲಾಯಿತು.

ಇದುವರೆವಿಗೂ ಅಮೇರಿಕ ಆರು ಷಟಲ್ ವಾಹನಗಳನ್ನು ನಿರ್ಮಿಸಿದೆ. ಆ ಪೈಕಿ ಮೊದಲನೆಯದಾದ ಎಂಟರ್‌ಪ್ರೈಸ್ ಅನ್ನು ಕೆಲವು ಪರೀಕ್ಷೆಗಳನ್ನು ನಡೆಸುವ ಉದ್ದೇಶದಿಂದ ನಿರ್ಮಿಸಲಾಯಿತು. 1981ರ ಏಪ್ರಿಲ್ 12 ರಂದು ಭೂಕಕ್ಷೆಗೆ ತೆರಳಿದ ಕೊಲಂಬಿಯಾ ಎಂಬ ಷಟಲ್ ಅಂತರಿಕ್ಷಯಾನ ಕೈಗೊಂಡ ಮೊದಲ ಷಟಲ್ ವಾಹನವಾಯಿತು. ನಂತರ ಛಾಲೆಂಜರ್, ಡಿಸ್ಕವರಿ, ಅಟ್ಲಾಂಟಿಸ್ ಮತ್ತು ಎಂಡೆವರ್ ಎಂಬ ಷಟಲ್ ವಾಹನಗಳನ್ನು ನಿರ್ಮಿಸಲಾಯಿತು. ಷಟಲ್‌ನ ಆಗಮನದಿಂದಾಗಿ ಅಂತರಿಕ್ಷಯಾನ ಕೈಗೊಳ್ಳುವುದು ಸುಲಭಸಾಧ್ಯವಾದಂತೆ ನೂರಾರು ಜನ ಇಂದು ಷಟಲ್‌ನಲ್ಲಿ ಅಂತರಿಕ್ಷಯಾನ ಮಾಡಿಬಂದಿದ್ದಾರೆ.. ಅವರಲ್ಲಿ ಅನೇಕರು ಮಹಿಳೆಯರು.

1981-86ರ ನಡುವಿನ ಅವಧಿಯಲ್ಲಿ ಷಟಲ್ ಒಟ್ಟು 24 ಬಾರಿ ಸುರಕ್ಷಿತವಾಗಿ ಭೂಕಕ್ಷೆಗೆ ಹೋಗಿ ಬಂತು. ಆದರೆ ಷಟಲ್ ಕಾರ್ಯಕ್ರಮದ 25ನೇ ಯಾನವನ್ನು ಕೈಗೊಂಡ ಛಾಲೆಂಜರ್ ಷಟಲ್ ವಾಹನ ಯಾನದ ನಡುವೆ ಭಯಂಕರವಾಗಿ ಆಸ್ಫೋಟಿಸಿ ಅದರಲ್ಲಿದ್ದ 7 ಜನ ಗಗನ ಯಾತ್ರಿಗಳು ಮಡಿದರು. ಇದಾದ ಎರಡೂವರೆ ವರ್ಷಗಳ ಅನಂತರ ಮತ್ತೆ ಪ್ರಾರಂಭವಾದ ಷಟಲ್‌ಯಾನ ಮುಂದಿನ ಸುಮಾರು ಒಂದೂವರೆ ದಶಕಗಳಷ್ಟು ಕಾಲ ಸುಗಮವಾಗಿ ಮುಂದುವರೆಯಿತು. ಆದರೆ 2003 ಫೆಬ್ರವರಿ 1ರಂದು ಅಂತರಿಕ್ಷದಿಂದ ಹಿಂತಿರುಗುತ್ತಿದ್ದ ಕೊಲಂಬಿಯಾ ಷಟಲ್ ತಾನು ಎರಡುವಾರಗಳ ಹಿಂದೆ ಅಂತರಿಕ್ಷಕ್ಕೆ ತೆರಳುವಾಗ ಉಂಟಾದ ತಾಂತ್ರಿಕ ತೊಂದರೆಯೊಂದು ಉಲ್ಬಣಿಸಿದ್ದರಿಂದ ನಾಶವಾಯಿತು. ಭಾರತೀಯ ಸಂಜಾತೆ ನಾಸಾ ಗಗನಯಾತ್ರಿ ಕಲ್ಪನಾ ಛಾವ್ಲಾ ಅವರೂ ಸೇರಿದಂತೆ 7 ಜನ ಗಗನಯಾತ್ರಿಗಳು ಇದರಿಂದಾಗಿ ಸಾವಿಗೀಡಾದರು. ಇದೀಗ (2005_ ಪೂರ್ವಾರ್ಧದಲ್ಲಿ) ಭೂಕಕ್ಷೆಯಲ್ಲಿರುವ ಅಂತಾರಾಷ್ಟ್ರೀಯ ಅಂತರಿಕ್ಷ ನಿಲ್ದಾಣಕ್ಕೆ ಹೋಗಿಬರಲು ರಷ್ಯದ ಸೊಯಜ಼್ ನೌಕೆಯನ್ನು ಅವಲಂಬಿಸಲಾಗುತ್ತಿದೆ. ಆ ನೌಕೆಯಲ್ಲೇ ತೆರಳಿದ ಇಬ್ಬರು ಅಂತರಿಕ್ಷ ಪ್ರವಾಸಿಗಳು ಅಂತಾರಾಷ್ಟ್ರೀಯ ಅಂತರಿಕ್ಷ ನಿಲ್ದಾಣಕ್ಕೆ ಒಂದು ವಾರದ ಭೇಟಿ ನೀಡಿ ಬಂದಿದ್ದಾರೆ.

**ಚಿತ್ರ 17**
**ಚಂದ್ರನ ಮೇಲೆ ಲೂನಾರ್ ಮಾಡ್ಯೂಲ್**

**ಭಾಗ iv. ಚಂದ್ರಲೋಕ ಸಂಶೋಧನೆ:** ಮನುಷ್ಯನನ್ನು ಚಂದ್ರನ ಮೇಲಿಳಿಸುವ ಮುಂಚೆ ಅಲ್ಲಿನ ವಿಚಾರಗಳನ್ನು ಕೂಲಂಕಷವಾಗಿ ತಿಳಿಯಲು ಸ್ವಯಂಚಾಲಿತ ಅಂತರಿಕ್ಷ ನೌಕೆಗಳ ನೆರವಿನೊಡನೆ ಪ್ರಯತ್ನ ಮಾಡಲಾಯಿತು.

**1. ಸೋವಿಯತ್ ರಷ್ಯದ ಪ್ರಯತ್ನಗಳು:** 1959 ಜನವರಿ 2 ರಂದು ರಷ್ಯ ಲ್ಯೂನಾ -1 ಎಂಬ ನೌಕೆಯನ್ನು ಹಾರಿಸಿತು. ಇದು ಚಂದ್ರನಿಂದ 7000 ಕಿಮೀ.ಗಳ ಅಂತರದಲ್ಲಿ ಹಾದುಹೋಯಿತು. ಮುಂದೆ ಇದು ಸೂರ್ಯನನ್ನು ಸುತ್ತುಹಾಕತೊಡಗಿತು.

1959 ಸೆಪ್ಟೆಂಬರ್ 12ರಂದು ಲ್ಯೂನಾ-2 ಎಂಬ ನೌಕೆಯನ್ನು ಹಾರಿಸಲಾಯಿತು. ಸುಮಾರು 350ಕಿಲೋಗ್ರಾಂ ತೂಕವಿದ್ದ ಈ ನೌಕೆ 14ರಂದು ಚಂದ್ರನ ಮೇಲೆ ಬಿತ್ತು. ಈ ನೌಕೆ ಚಂದ್ರನಿಗೆ ಕಾಂತಕ್ಷೇತ್ರವಿಲ್ಲವೆಂದೂ ಅದರ ಸುತ್ತಲೂ ವಿಕಿರಣ ಪಟ್ಟಿಗಳಿಲ್ಲವೆಂದೂ ಆದರೆ ಅದರ ಹತ್ತಿರದ ಪ್ರದೇಶಗಳಲ್ಲಿನ ಅಯಾನುಗಳ ಸಂಖ್ಯೆ ದೂರಪ್ರದೇಶಗಳಿಗಿಂತ ಸ್ವಲ್ಪ ಹೆಚ್ಚಿರುವುದೆಂದೂ ತಿಳಿಸಿಕೊಟ್ಟಿತು.

1959 ನವೆಂಬರ್ 4ರಂದು ಸು. 1,100ಕಿಗ್ರಾಂ ತೂಕದ ಲ್ಯೂನಾ-3ನ್ನು ರಷ್ಯ ಕಳುಹಿಸಿತು. ಮಾನವನು ಅದುವರೆಗೂ ಕಾಣದಿದ್ದ ಚಂದ್ರನ ಇನ್ನೊಂದು ಮುಖದ ಛಾಯಾಚಿತ್ರಗಳನ್ನು ಇದು 7ರಂದು ತೆಗೆದು ಟೆಲಿವಿಷನ್ ಮೂಲಕ ಭೂಮಿಗೆ ಕಳುಹಿಸಿತು.

1965 ಜುಲೈ 18ರಂದು ಅಂತರ್‌ಗ್ರಹಪ್ರದೇಶದ ಅಧ್ಯಯನ ಮಾಡಲು ಕಳುಹಿಸಿದ್ದ ಜ಼ೋಂಡ್-3 ಎಂಬ ನೌಕೆ ತಾನು ಹೋಗುವ ದಾರಿಯಲ್ಲಿ ಚಂದ್ರನ ಹಿಂಭಾಗದ ಚಿತ್ರಗಳನ್ನು ತೆಗೆಯಿತು. ಇವು ಲ್ಯೂನಾ-3 ತೆಗೆಯದೆ ಇದ್ದ ಪ್ರದೇಶಗಳನ್ನು ತೋರಿಸಿದವು. ಇದರಿಂದ ಚಂದ್ರನ ಎಲ್ಲ ಭಾಗಗಳನ್ನೂ ಚಿತ್ರೀಕರಿಸಿದಂತಾಯಿತು. ಮುಂದೆ ಚಂದ್ರನ ಮೇಲೆ ನೌಕೆಗಳನ್ನು ನಿಧಾನವಾಗಿ ಇಳಿಸಲು (ಸಾಫ್ಟ್ ಲ್ಯಾಂಡಿಂಗ್) ಬೇಕಾದ ಪ್ರಯತ್ನಗಳು

ನಡೆದುವು. ಇದಕ್ಕಾಗಿ ಐದು ಲ್ಯೂನಾ ನೌಕೆಗಳನ್ನು ಹಾರಿಸಿ ಪ್ರಯೋಗಗಳನ್ನು ನಡೆಸಿದರು. 1966 ಫೆಬ್ರವರಿ 3 ರಂದು ಲ್ಯೂನಾ–9 ಚಂದ್ರನ ಮೇಲೆ ಸುರಕ್ಷಿತವಾಗಿ ಇಳಿದು ಚಂದ್ರಪ್ರದೇಶದ ಛಾಯಾಚಿತ್ರಗಳನ್ನು ಕಳುಹಿಸಿತು. ಈ ಚಿತ್ರಗಳಿಂದ ಮಾನವನಿಗೆ ಚಂದ್ರನ ಮೇಲ್ಮೈ ಲಕ್ಷಣ, ಅದರಲ್ಲೂ ಚಂದ್ರನ ಕೂಪಗಳ (ಕ್ರೇಟರ್ಸ್) ಅಗಲ, ಆಳ ಮುಂತಾದುವುಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯಿತು. ಲ್ಯೂನಾ–9ರಿಂದ ಚಂದ್ರನ ಮೇಲಿನ ವಿಕಿರಣ ಪರಿಸರವನ್ನು ಕುರಿತ ವಿಚಾರಗಳನ್ನೂ ತಿಳಿಯಲಾಯಿತು.

1966 ಮಾರ್ಚ್ 31ರಂದು ಲ್ಯೂನಾ–10 ನೌಕೆಯನ್ನು ಹಾರಿಸಿದರು. ಇದು 1966 ಏಪ್ರಿಲ್ 3ರಂದು ಚಂದ್ರನ ಸುತ್ತ ಸುತ್ತತೊಡಗಿತು, 350ಕಿಗ್ರಾಂ ತೂಕವಿದ್ದ ಈ ನೌಕೆ ಚಂದ್ರನ ಮೊದಲ ಉಪಗ್ರಹವಾಯಿತು. ಲ್ಯೂನಾ–10 ಚಂದ್ರನ ಸುತ್ತಲಿನ ಪ್ರದೇಶದ ವಿದ್ಯುತ್ಕಣಗಳ ಸಾಂದ್ರತೆ, ವಿಶ್ವಕಿರಣಗಳು, ಕ್ಷ–ಕಿರಣಗಳು, ಅವರಕ್ತಕಿರಣಗಳು ಮತ್ತು ಗ್ಯಾಮಾ–ಕಿರಣಗಳ ತೀಕ್ಷ್ಣತೆಗಳನ್ನು ಅಳೆಯಿತು. ಚಂದ್ರನಿಗೆ ಅತಿಕ್ಷೀಣವಾದ ಕಾಂತಕ್ಷೇತ್ರವಿದೆಯೆಂದೂ ಸುತ್ತಲಿನ ಪ್ರದೇಶದಲ್ಲಿ ಅನಿಲಗಳೇನೂ ಇಲ್ಲವೆಂದೂ ತಿಳಿಸಿತು. ಲ್ಯೂನಾ–10ರ ಪಥ ವ್ಯತ್ಯಾಸಗಳ ಅಧ್ಯಯನದಿಂದ ಚಂದ್ರನ ಗುರುತ್ವಾಕರ್ಷಣಕ್ಷೇತ್ರದ ವ್ಯತ್ಯಾಸಗಳನ್ನು ತಿಳಿಯಲಾಯಿತು.

ಅನಂತರ ಹಾರಿಸಿದ ಲ್ಯೂನಾ–11 ಮತ್ತು ಲ್ಯೂನಾ–12 ನೌಕೆಗಳು ಮುಖ್ಯವಾಗಿ ಮೇಲಿನ ಅಧ್ಯಯನಗಳನ್ನೇ ನಡೆಸಿದುವು. ಲ್ಯೂನಾ–12 ಚಂದ್ರನ ಚಿತ್ರಗಳನ್ನು 100–330ಕಿಮೀ. ಎತ್ತರದಿಂದ ತೆಗೆಯಿತು.

1966 ಡಿಸೆಂಬರ್ 24ರಂದು ಲ್ಯೂನಾ–13 ಎಂಬ ನೌಕೆಯನ್ನು ಚಂದ್ರನ ಮೇಲೆ ನಿಧಾನವಾಗಿ ಇಳಿಸಿದರು. ಇದು ಚಂದ್ರನ ಮೇಲ್ಮೈಯ ಚಿತ್ರಗಳನ್ನು ತೆಗೆದುದಲ್ಲದೆ ಅಲ್ಲಿನ ವಿಕಿರಣಗಳ ತೀಕ್ಷ್ಣತೆಯನ್ನೂ ಅಳೆಯಿತು. ಇದರ ಜೊತೆಗೆ ಲ್ಯೂನಾ–13ರಲ್ಲಿದ್ದ ತೂರುಮಾಪಕದ (ಪೆನೆಟ್ರೋಮೀಟರ್) ಒಂದು ಕಡ್ಡಿ ಚಂದ್ರನ ನೆಲದೊಳಗೆ 45 ಮಿಮೀ ಗಳವರೆಗೆ ತೂರಿತು. ಈ ಮಾಪಕದಿಂದ ಚಂದ್ರನ ಮಣ್ಣಿನ ಸಾಂದ್ರತೆ (13.3 ಗ್ರಾಂ/ಘ. ಸೆಂ ಮೀ) ಬಹಳ ಕಡಿಮೆಯಿರುವುದರಿಂದ ಚಂದ್ರನ ಮೇಲ್ಮೈ ಬಹಳ ಮೆತ್ತಗಿರಬೇಕು ಎಂಬುದು ತಿಳಿದುಬಂತು.

ಬಳಿಕ 1969 ಜುಲೈನಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ ಹಾಗೂ ಎಡ್ವಿನ್ ಆಲ್ಡಿನ್ ಚಂದ್ರನ ಮೇಲೆ ಅಪಾಲೊ 11 ರಲ್ಲಿ ಇಳಿದ ವೇಳೆಯಲ್ಲೇ ತಾನೂ ಇಳಿಯಲು ಪ್ರಯತ್ನಿಸಿದ ಲ್ಯೂನಾ 15 ಚಂದ್ರನ ಮೇಲ್ಮೈಯನ್ನು ಅಪ್ಪಳಿಸಿತು. ಆದರೆ ಅ ನಂತರದ ಲ್ಯೂನಾ 16, 1970ರಲ್ಲಿ ಚಂದ್ರನ ಮೇಲೆ ಸುರಕ್ಷಿತವಾಗಿ ಇಳಿದು ಅನಂತರ ಅಲ್ಲಿನ ಕಲ್ಲು ಮಣ್ಣುಗಳನ್ನು ಅಲ್ಪ ಪ್ರಮಾಣದಲ್ಲಿ ಸಂಗ್ರಹಿಸಿಕೊಂಡು ಭೂಮಿಗೆ ಯಶಸ್ವಿಯಾಗಿ ತಂದಿತು. ಆ ಬಳಿಕ ಲ್ಯೂನಾ 17 ಲೂನಖೋದ್–1 ಎಂಬ ಎಂಟು ಚಕ್ರಗಳ ಕಾರನ್ನು ಚಂದ್ರನ ಮೇಲಿಳಿಸಿತು. ಅನಂತರ ಆ ಕಾರು ಭೂಮಿಯ ಮೇಲಿನ ತನ್ನ ಚಾಲಕರು ರೇಡಿಯೋ ಮೂಲಕ ನೀಡಿದ ಆದೇಶಗಳಿಗೆ ಅನುಗುಣವಾಗಿ ಕಿಲೋಮೀಟರ್‌ಗಟ್ಟಲೆ ಓಡಾಡಿ ಚಂದ್ರನ ಅನ್ವೇಷಣೆಯನ್ನು ನಡೆಸಿತು. 1970ರ ದಶಕದಲ್ಲಿ ಲ್ಯೂನಾ 20 ಮತ್ತು ಲ್ಯೂನಾ 24 ಚಂದ್ರನ ಮೇಲಿಂದ ಕಲ್ಲುಮಣ್ಣುಗಳನ್ನು ಸಂಗ್ರಹಿಸಿ ತಂದರೆ ಲ್ಯೂನಾ–21 ಲೂನ್‌ನೋಡ್–2ನ್ನು ಚಂದ್ರನ ಮೇಲೆ ಇಳಿಸಿತು. ಹೀಗೆ ರೋಬಾಟ್‌ಗಳ ನೆರವಿನಿಂದ ಸೋವಿಯತ್ ರಷ್ಯ ನಡೆಸಿದ ಚಂದ್ರನ ಅನ್ವೇಷಣೆಗಳು ಶ್ಲಾಘನೀಯ.



**ಚಿತ್ರ 18**
**ಭೂಮಿಯಿಂದ ಚಂದ್ರನೆಡೆಗೆ ಹೋಗಲು ಮತ್ತು ಪುನಃ ಭೂಮಿಗೆ ಹಿಂತಿರುಗಲು ಅಪೊಲೊ 8 ಅನುಸರಿಸಿದ ಪಥ**

**2. ಅಮೆರಿಕದ ಪ್ರಯತ್ನಗಳು:** ಮೊದಲಿಗೆ ಅಮೆರಿಕನ್ನರು ಚಂದ್ರನಲ್ಲಿಗೆ ಕಳುಹಿಸಿದ ಪಯೋನೀರ್ ಶೀರ್ಷಿಕೆಯ ನೌಕೆಗಳೆಲ್ಲವೂ ವಿಫಲವಾದುವು. ಅನಂತರ ಅವರು ಕಳುಹಿಸಿದ ರೇಂಜರ್‌ಗಳಲ್ಲಿ ಕೆಲವು ವಿಫಲವಾದ ಅನಂತರ ರೇಂಜರ್–7 ಚಂದ್ರನ ಮೇಲೆ ಬಿತ್ತು. 1964 ಜುಲೈ 28ರಂದು ಹಾರಿಸಿದ ರೇಂಜರ್–7 ಚಂದ್ರನ ಮೇಲೆ ಬೀಳುವಾಗ 3000ಕಿಮೀ.ಗಳಿಂದ ಹಿಡಿದು 1,000' ಎತ್ತರದವರೆಗೂ ಚಂದ್ರನ ಛಾಯಾಚಿತ್ರಗಳನ್ನು ತೆಗೆಯಿತು.

1965 ಫೆಬ್ರವರಿ 17ರಂದು ಕಳುಹಿಸಿದ ರೇಂಜರ್–8 ರೇಂಜರ್–7ರಂತೆಯೇ ಕೆಲಸ ಮಾಡಿತಾದರೂ ಇದು ಚಂದ್ರನ ಇನ್ನೂ ಹೆಚ್ಚಿನ ಮೇಲ್ಮೈ ವಿಸ್ತೀರ್ಣವನ್ನು ಚಿತ್ರೀಕರಿಸಿತು. 1965ರ ಮಾರ್ಚ್ 21ರಂದು ಕಳುಹಿಸಿದ ರೇಂಜರ್–9 ಸಹ ಹಿಂದಿನಂತೆಯೇ ಚಿತ್ರಗಳನ್ನು ತೆಗೆಯಿತು. ಈ ಚಿತ್ರಗಳಿಂದ ಚಂದ್ರನ ಮೇಲೆ ವಿವಿಧ ಗಾತ್ರದ ಕೂಪಗಳಿವೆಯೆಂದು ತಿಳಿಯಿತು. ಚಂದ್ರನ ಸಮುದ್ರಗಳೆಂದು ಕರೆಯಲ್ಪಡುವ ಪ್ರದೇಶದಲ್ಲಿ ಕೂಪಗಳಿದ್ದರೂ ಒಟ್ಟಿನಲ್ಲಿ ಚಂದ್ರ ನುಣುಪಾಗಿಯೇ ಇದೆಯೆಂದು ತಿಳಿಯಿತು.



**ಚಿತ್ರ 19**
**ಲ್ಯೂನಾ 13**

1966 ಮೇ ತಿಂಗಳ 30ರಂದು ಸರ್ವೇಯರ್–1 ಎಂಬ ನೌಕೆ ಚಂದ್ರನ ಮೇಲೆ ನಿಧಾನವಾಗಿ ಇಳಿಯಿತು. ಇದು ತಾನು ಇಳಿದ ಸುತ್ತಮುತ್ತಲಿನ ಪ್ರದೇಶವನ್ನು ಚಿತ್ರೀಕರಿಸಿತು. ಒಟ್ಟು 11,000 ಚಿತ್ರಗಳನ್ನು ತೆಗೆಯಿತು. ಈ ಚಿತ್ರಗಳು ಚಂದ್ರನ ಮೇಲೆ ಅನೇಕ ಸಣ್ಣ ಸಣ್ಣ ಕಲ್ಲುಗಳಿರುವುದನ್ನು ತೋರಿಸಿದವು. ಇವು ಉಲ್ಕೆಗಳಾಗಿರಬೇಕೆಂದು ವಿಜ್ಞಾನಿಗಳು ಊಹಿಸಿದರು. ಚಂದ್ರನ ಮೇಲೆ ಸಣ್ಣ ಸಣ್ಣ ಕೂಪಗಳೂ ಉಂಟು. ಇವುಗಳಲ್ಲಿ ಕೆಲವು ಕೇವಲ 40 ಸೆಂಮೀ. ಅಗಲ, 25 ಸೆಂಮೀ. ಆಳವಾಗಿವೆ. ಇವು ಗುಂಡು ಬಿದ್ದರೆ ಆಗುವ ಹಳ್ಳಗಳಂತೆ ಅಲ್ಲಲ್ಲಿ ಕಾಣುತ್ತವೆ. ಚಂದ್ರನ ಮೇಲೆ ಮೊದಲೆಣಿಸಿದಷ್ಟು ಧೂಳು ಕಾಣಲಿಲ್ಲ. ಚಂದ್ರನ ನೆಲ ಹೊಸದಾಗಿ ಉತ್ತಿರುವ ನೆಲದಂತೆ ಮೆತ್ತಗೆ ಇದೆಯೆಂದು ಕಂಡುಬಂದಿತು.

1967 ಏಪ್ರಿಲ್ ತಿಂಗಳಲ್ಲಿ ಸರ್ವೇಯರ್–3 ಎಂಬ ನೌಕೆ ಚಂದ್ರನ ಮೇಲೆ ನಿಧಾನವಾಗಿ ಬಂದಿಳಿಯಿತು. ಇದು ಸರ್ವೇಯರ್–1ರಂತೆಯೇ ಚಿತ್ರಗಳನ್ನು ಕಳುಹಿಸಿದ್ದಲ್ಲದೆ ಜೊತೆಗೆ ಚಂದ್ರಪ್ರದೇಶವನ್ನು ಕೆಲವೆಡೆ ಒಂದು ಸಣ್ಣ ಯಂತ್ರದಿಂದ ಅಗೆಯಿತು. ಈ ಎಲ್ಲ ಪ್ರಯೋಗಗಳೂ ಚಂದ್ರನ ಮೇಲೆ (ಕೊನೆಯ ಪಕ್ಷ ಸರ್ವೇಯರ್‌ಗಳು ಇಳಿದ ಪ್ರದೇಶದಲ್ಲಿ) ಮಾನವನು ಸುರಕ್ಷಿತವಾಗಿ ಇಳಿಯಬಹುದೆಂದು ತೋರಿಸಿದುವು.

ಚಂದ್ರನ ಸುತ್ತ ಸುತ್ತುತ್ತ ಚಂದ್ರನ ವಿವಿಧ ಭಾಗಗಳನ್ನು ಚಿತ್ರೀಕರಿಸಿ ಅದರ ಮೇಲ್ಮೈಯ ನಿಖರವಾದ ನಕ್ಷೆಯನ್ನು ತಯಾರಿಸಲು ಲ್ಯೂನಾರ್ ಆರ್ಬಿಟರ್ ನೌಕೆಗಳನ್ನು ಅಮೆರಿಕನ್ನರು ಬಳಿಕ ಕಳುಹಿಸಿದರು. 1966 ಆಗಸ್ಟ್ 10ರಂದು ಹಾರಿಸಿದ ಲ್ಯೂನಾರ್ ಆರ್ಬಿಟರ್–1 ಮೊದಲು ಚಂದ್ರನನ್ನು 170–2000 ಕಿಮೀ.ಗಳ ಪಥದಲ್ಲಿ ಸುತ್ತತೊಡಗಿತು. ಮೂರು ದಿನಗಳ ಅನಂತರ ತನ್ನ ರಾಕೆಟ್ಟನ್ನುರಿಸಿ ಸುಮಾರು 60 ಕಿಮೀ.ಗಳೆತ್ತರದಲ್ಲಿ ಚಂದ್ರನನ್ನು ಸುತ್ತತೊಡಗಿತು. ಇದು ಮುಖ್ಯವಾಗಿ ಚಂದ್ರಮಧ್ಯಭಾಗವನ್ನು ಚಿತ್ರೀಕರಿಸಿತು. ಈ ಚಿತ್ರಗಳಿಂದ ಮುಂದೆ ಅಪಾಲೋ ನೌಕೆಯ ಲ್ಯೂನಾರ್ ಮಾಡ್ಯೂಲ್ ಅನ್ನು ಇಳಿಸಬಹುದಾದ ಕೆಲವು ಜಾಗಗಳನ್ನು ಆರಿಸಿಕೊಳ್ಳಲಾಯಿತು.

ಚಿತ್ರೀಕರಣದ ಜೊತೆಗೆ ಸೂಕ್ಷ್ಮ ಉಲ್ಕೆಗಳು, ಸೌರ ಮಾರುತಗಳು ಮತ್ತು ವಿದ್ಯುತ್‌ಕಿರಣಗಳ ಅಧ್ಯಯನಗಳಿಗೆ ಬೇಕಾದ ಉಪಕರಣಗಳನ್ನು ಲ್ಯೂನಾರ್ ಆರ್ಬಿಟರ್–1 ಹೊಂದಿತ್ತು. ಭೂಮಿಯಿಂದ ಲ್ಯೂನಾರ್ ಆರ್ಬಿಟರ್–1ರ ಚಂದ್ರಪಥವನ್ನು ಅತಿ ನಿಖರವಾಗಿ ಲೆಕ್ಕಹಾಕಿದರು. ಇದರಿಂದ ಚಂದ್ರನ ಆಕಾರದ ವಿಷಯವಾಗಿ ಹೆಚ್ಚು ವಿವರಗಳು ದೊರೆತವು.

1972 ಡಿಸೆಂಬರ್‌ನಲ್ಲಿ ಅಪೊಲೊ 17ರ ಗಗನ ಯಾತ್ರಿಗಳು ಹಿಂತಿರುಗಿ ಬಂದ ಅನಂತರ ಚಂದ್ರನತ್ತ ತೆರಳಿದ ಆ ದೇಶದ ನೌಕೆಯೇ ಕ್ಲಮಂಟೈನ್. 1994ರಲ್ಲಿ ಉಡಾಯಿಸಲಾದ ಆ ಪುಟ್ಟ ರೋಬಾಟ್ ನೌಕೆ ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿ ಹಿಮವನ್ನು ಗುರುತಿಸಿದಂತೆ ವಿಜ್ಞಾನಿಗಳಿಗೆ ಕಂಡಿತು. ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ಅವರು 1998ರಲ್ಲಿ ಲ್ಯೂನಾರ್ ಪ್ರಾಸ್ಪೆಕ್ಟರ್ ಎಂಬ ಮತ್ತೊಂದು ಪುಟ್ಟ ರೋಬಾಟ್

ನೌಕೆಯನ್ನು ಉಡಾಯಿಸಿದರು. ಆದರೆ ಚಂದ್ರನ ಧ್ರುವ ಪ್ರದೇಶಗಳಲ್ಲಿನ ಹಿಮದ ಬಗ್ಗೆ ಹೆಚ್ಚು ಸ್ಪಷ್ಟವಾದ ಮಾಹಿತಿ ಇನ್ನೂ ದೊರೆತಿಲ್ಲ. 1990ರ ದಶಕದ ಆದಿಯಲ್ಲಿ ಜಪಾನಿನ ಹಿತೇನ್ ಎಂಬ ಪುಟ್ಟ ರೋಬೋಟ್ ನೌಕೆ ಚಂದ್ರನ ಉಪಗ್ರಹವಾಯಿತು. ಇಂದು ಐರೋಪ್ಯ ಅಂತರಿಕ್ಷ ಸಂಸ್ಥೆಯ ಸ್ಮಾರ್ಟ್–1 ಎಂಬ ರೋಬಾಟ್ ನೌಕೆ ಚಂದ್ರನನ್ನು ಸುತ್ತುತ್ತಿದೆ. ಚಂದ್ರನ ಚರಿತ್ರೆ ಮೇಲ್ಮೈ ಸ್ವರೂಪಗಳು ಹಾಗೂ ರಾಸಾಯನಿಕ ಸಂಯೋಜನೆ, ಇವುಗಳನ್ನು ಅಭ್ಯಸಿಸಲು ಚಂದ್ರಯಾನ–1 ಎಂಬ ಸಂಶೋಧನೆಯನ್ನು ಕೈಗೊಂಡಿದೆ.

**ಭಾಗ v. ದೂರಾಂತರಿಕಾನ್ವೇಷಣೆಯ ನೌಕೆಗಳು :** ಭೂಮಿಯ ಗುರುತ್ವಾಕರ್ಷಣೆಯನ್ನು ತಪ್ಪಿಸಿಕೊಂಡು ಹೋಗುವ ನೌಕೆಗಳನ್ನು ಅಂತರಿಕ್ಷಾನ್ವೇಷಣೆಯ ನೌಕೆಗಳು ಎಂದು ಕರೆಯುತ್ತಾರೆ. ಇವು ಚಂದ್ರನ ಪಥವನ್ನು ದಾಟಿ ಬಹುದೂರ ಹೋಗುವುವುಗಳಾದರೆ ಇವನ್ನು ದೂರಾಂತರಿಕ್ಷಾನ್ವೇಷಣೆಯ ನೌಕೆಗಳು ಎನ್ನುತ್ತಾರೆ.

ಇಂದಿನವರೆಗೆ (2005) ಕಳುಹಿಸಿರುವ ಈ ರೀತಿಯ ನೌಕೆಗಳು ಅಂತರಗ್ರಹ ಪ್ರದೇಶ ಹಾಗೂ ಪ್ಲೋಟೋ ಒಂದನ್ನು ಬಿಟ್ಟು ಸೌರವ್ಯೂಹದ ಮಿಕ್ಕೆಲ್ಲ ಗ್ರಹಗಳ, ಅನೇಕ ಉಪಗ್ರಹಗಳ, ಕ್ಷುದ್ರಗ್ರಹಗಳ ಹಾಗೂ ಧೂಮಕೇತುಗಳ ಅನ್ವೇಷಣೆಯನ್ನು ನಡೆಸಿವೆ. ಚಂದ್ರನಿಗಾಗಲೀ ಅಥವಾ ಇತರ ಗ್ರಹಗಳಿಗಾಗಲೀ ನೌಕೆಗಳನ್ನು ನೆಟ್ಟಗೆ ಬಾಣ ಹೊಡೆದಂತೆ ಕಳುಹಿಸಬಹುದು. ಹೀಗೆ ಮಾಡಬೇಕಾದರೆ ನೌಕೆಯನ್ನು ಅದರ ಪಥದುದ್ದಕ್ಕೂ ರಾಕೆಟ್ಟನ್ನುರಿಸಿ ನೂಕುತ್ತಲೇ ಇರಬೇಕು. ಏಕೆಂದರೆ ಒಂದು ಗ್ರಹದತ್ತ ತೆರಳುವ ರಾಕೆಟ್‌ನ ಪ್ರಯಾಣ ಕಾಲದಲ್ಲಿ ಚಂದ್ರ ಇಲ್ಲವೇ ಉದ್ದಿಷ್ಟ ಗ್ರಹ ಕೂಡಾ ತನ್ನ ಪಥದಲ್ಲಿ ಸೂರ್ಯನ ಸುತ್ತಲೂ ತಿರುಗುತ್ತಿರುತ್ತದೆ, ಆದ್ದರಿಂದ ದಕ್ಷವಾಗಿ ರೋಬೋಟ್ ನೌಕೆಯೊಂದನ್ನು ಉಡಾಯಿಸಲು ಅದನ್ನು ಕೊಂಡೊಯ್ಯುತ್ತಿರುವ ರಾಕೆಟ್ಟನ್ನು ಹಾರಿಸುವ ದಿಕ್ಕು, ವೇಗ ಮೊದಲಾದುವುಗಳನ್ನು ಗ್ರಹದ ಚಲನೆಗನುಗುಣವಾಗಿ ಅಳವಡಿಸಿ ಅನಂತರ ಗ್ರಹವನ್ನು ಸಂಧಿಸಲು ರಾಕೆಟ್ಟನ್ನು ಹಾರಿಸಬೇಕಾಗುತ್ತದೆ. ಮೊದಲು ನೌಕೆಗೆ ಬಿಡುಗಡೆಯ ವೇಗಕ್ಕಿಂತ ಹೆಚ್ಚು ವೇಗವನ್ನು ಕೊಡುತ್ತಾರೆ. ಅನಂತರ ಇದು ಸೂರ್ಯನ ಸುತ್ತಲೂ ದೀರ್ಘವೃತ್ತದಲ್ಲಿ ಸುತ್ತತೊಡಗುತ್ತದೆ. ವೇಗ, ದಿಕ್ಕು ಮತ್ತು ಹಾರಿಸುವ ಸಮಯಗಳನ್ನು ಸರಿಯಾಗಿ ನಿಯಂತ್ರಿಸಿದರೆ ಅದು ತಾನು ಹೋಗುವ ಪಥದಲ್ಲಿ ಉದ್ದಿಷ್ಟ ಗ್ರಹವನ್ನು ಸಂಧಿಸುತ್ತದೆ.

ಚಿತ್ರ 24ರಲ್ಲಿ 1 ಎಂದು ಗುರುತಿಸಿರುವುದೇ ನೌಕೆ ಹೋಗಬೇಕಾದ ದೀರ್ಘವೃತ್ತ ಪಥ. ಆದರೆ ನೌಕೆ ಭೂಮಿಯನ್ನು ಬಿಟ್ಟ ಮೊದಲಲ್ಲಿ ಭೂಮಿಯ ಮತ್ತು ಚಂದ್ರನ ಗುರುತ್ವಾಕರ್ಷಣೆಗಳು ಪ್ರಬಲವಾಗಿರುತ್ತವೆ. ಬರಬರುತ್ತ ಶುಕ್ರನ ಹತ್ತಿರ ಬಂದಂತೆ ಶುಕ್ರನ ಗುರುತ್ವಾಕರ್ಷಣೆ ಪ್ರಬಲವಾಗುತ್ತದೆ. ಆದ್ದರಿಂದ ನೌಕೆಯ ನಿಜವಾದ ಪಥ ಚಿತ್ರದಲ್ಲಿ 2 ಎಂದು ಗುರುತಿಸಿರುವ ರೇಖೆಯಂತೆ ಇರುತ್ತದೆ. ಇದನ್ನು ಲೆಕ್ಕ ಹಾಕುವುದು ಬಲು ಕಠಿಣ. ಈ ಕೆಲಸ ಗಣಕಯಂತ್ರಕ್ಕೆ ಮಾತ್ರ ಸಾಧ್ಯ.

ಹಾಗೆಯೇ ಮಂಗಳಗ್ರಹಕ್ಕೆ ಹೋಗಲು ಆದರ್ಶ ಪಥವನ್ನು ರೇಖೆ–1 ಮತ್ತು ನಿಜವಾದ ಪಥವನ್ನು ರೇಖೆ–2 ತೋರಿಸುತ್ತವೆ (ಚಿತ್ರ 25).

ಈ ಚಿತ್ರಗಳನ್ನು ಪರಿಶೀಲಿಸಿದರೆ ಭೂಮಿ ಮತ್ತು ಆಯಾ ಗ್ರಹಗಳು ನಿರ್ದಿಷ್ಟವಾದ ಸ್ಥಳಗಳಲ್ಲಿದ್ದಾಗ ಮಾತ್ರ ನೌಕೆಗಳನ್ನು ಹಾರಿಸಬೇಕು ಎಂದು ತಿಳಿಯುತ್ತದೆ. ಈ ಅನುಕೂಲ ಸಮಯಗಳು ಯಾವಾಗಲೂ ಸಿಗುವುದಿಲ್ಲ. ಶುಕ್ರಗ್ರಹಕ್ಕೆ ನೌಕೆಯನ್ನು ಕಳುಹಿಸಬೇಕಾದರೆ ಸು. 19 ತಿಂಗಳಿಗೊಮ್ಮೆ ಮತ್ತು ಮಂಗಳಗ್ರಹಕ್ಕೆ ಕಳುಹಿಸಬೇಕಾದರೆ ಸು. 26 ತಿಂಗಳಿಗೊಮ್ಮೆ ಒದಗುತ್ತವೆ.

ಮೊದಲಿಗೆ ಸೂಕ್ತಸಮಯದಲ್ಲಿ ಮತ್ತು ಸೂಕ್ತ ದಿಕ್ಕಿನಲ್ಲಿ ಸೂಕ್ತ ವೇಗದಿಂದ ನೌಕೆಯನ್ನು ನಿಗದಿಯಾದ ಪಥದಲ್ಲಿ ನೂಕುತ್ತಾರೆ. ನೌಕೆ ಗಣಕಯಂತ್ರ ಲೆಕ್ಕ ಹಾಕಿದ ಪಥದಲ್ಲಿಯೇ ಹೋಗಬೇಕು. ಅದರ ದಿಕ್ಕು ಮತ್ತು ವೇಗಗಳಲ್ಲಿ ಅತ್ಯಲ್ಪ ವ್ಯತ್ಯಾಸಗಳಿದ್ದರೂ ನೌಕೆ ಬರಬರುತ್ತಾ ಸರಿಯಾದ ಪಥದಿಂದ ದೂರವಾಗುತ್ತದೆ. ಹಾಗೆಯೇ ಬಿಟ್ಟರೆ ಅದು ತನ್ನ ಗುರಿಯನ್ನು ತಪ್ಪುತ್ತದೆ. ಉದಾಹರಣೆಗೆ, ಮಂಗಳಗ್ರಹಕ್ಕೆ ಕಳುಹಿಸಬೇಕಾದ ನೌಕೆಯ ವೇಗದಲ್ಲಿ (ಇದು ಸೆಕೆಂಡಿಗೆ 11ಕಿಮೀ ಗಳಿಗಿಂತ ಹೆಚ್ಚು) ಸೆಕೆಂಡಿಗೆ ಒಂದು ಅಡಿಯಷ್ಟು ವ್ಯತ್ಯಾಸವಿದ್ದರೂ ಅಥವಾ ಅದರ ದಿಕ್ಕಿನಲ್ಲಿ ಒಂದು ಡಿಗ್ರಿಯ ಅರವತ್ತನೆಯ ಒಂದು ಭಾಗದಷ್ಟು ವ್ಯತ್ಯಾಸವಿದ್ದರೂ ಗುರಿಯನ್ನು 20000 ಕಿಮೀ.ಗಳಷ್ಟು ತಪ್ಪುತ್ತದೆ. ಎಷ್ಟೇ ನಿಖರವಾಗಿ ದಿಕ್ಕು ಮತ್ತು ವೇಗಗಳನ್ನು ನಿಯಂತ್ರಿಸಿದರೂ ಸ್ವಲ್ಪ ವ್ಯತ್ಯಾಸಗಳಿದ್ದೇ ಇರುತ್ತವೆ. ಅದೂ ಅಲ್ಲದೆ ಮಾರ್ಗಮಧ್ಯದಲ್ಲಿ ಸೂಕ್ಷ್ಮ ಉಲ್ಕೆಗಳ ಘರ್ಷಣೆಯಿಂದಲೂ ಮತ್ತು ಸೂರ್ಯವಿಕಿರಣದಿಂದಲೂ ನೌಕೆಯ ಪಥದಲ್ಲಿ ವ್ಯತ್ಯಾಸಗಳಾಗುತ್ತವೆ. ಆದ್ದರಿಂದ ನೌಕೆಯ ಪಥವನ್ನು ಅನೇಕ ಬಾರಿ ರೇಡಿಯೋ ಆದೇಶ ಸಂಜ್ಞೆಗಳ ಮೂಲಕ ಸರಿಪಡಿಸುತ್ತಾರೆ.

1. ರಷ್ಯದೇಶದ ನೌಕೆಗಳು: 1961 ಜನವರಿ 1ರಂದು ರಷ್ಯ ವೆನ್ಯಾರಾ–1 ಎಂಬ ನೌಕೆಯನ್ನು ಶುಕ್ರನೆಡೆಗೆ ಹಾರಿಸಿತು. ಭೂಮಿಯಿಂದ ಎಂಬತ್ತು ಲಕ್ಷ ಕಿಮೀ.ಗಳ ದೂರದಲ್ಲಿದ್ದಾಗ ಇದರೊಡನೆ ರೇಡಿಯೋ ಸಂಪರ್ಕ ಕಡಿದು ಹೋಯಿತು. ಇಷ್ಟರಲ್ಲಿ ಇದು ಅಂತರ್‌ಗ್ರಹ ಪ್ರದೇಶದ ಕಾಂತಕ್ಷೇತ್ರ ಮತ್ತು ವಿಕಿರಣಗಳ ವಿಚಾರವಾಗಿ ಮಾಹಿತಿಗಳನ್ನು ಕಳುಹಿಸಿತ್ತು. ಮುಂದೆ ಇದು ಸೂರ್ಯನನ್ನು ಸುತ್ತುವ ವಸ್ತುವಾಯಿತು.

1962 ನವೆಂಬರ್ 1ರಂದು ಮಾರ್ಸ್–1 ಎಂಬ ನೌಕೆಯನ್ನು ಮಂಗಳಗ್ರಹದ ಕಡೆಗೆ ಹಾರಿಸಿದರು. ಭೂಮಿಯಿಂದ 10 ಕೋಟಿ ಕಿಮೀ.ಗಳ ದೂರದಲ್ಲಿದ್ದಾಗ ಇದರೊಡನೆಯೂ ರೇಡಿಯೋ ಸಂಪರ್ಕ ಕಡಿದು ಹೋಯಿತು. ಇದೂ ಅಂತರ್‌ಗ್ರಹ ಸಂಶೋಧನೆ ನಡೆಸಿತು.

1965 ನವೆಂಬರ್ 12ರಂದು ಹಾರಿಸಿದ ವೆನ್ಯಾರಾ–2 ನೌಕೆ ಶುಕ್ರನನ್ನು ಸು. 24000 ಕಿಮಿ.ಗಳಂತರದಲ್ಲಿ ಹಾದುಹೋಯಿತು. ಇದರೊಡನೆ 26 ಸಾರಿ ರೇಡಿಯೋ ಸಂಪರ್ಕಗಳನ್ನು ಹೊಂದಿ ಇದು ಒದಗಿಸಿದ ವಿಷಯಗಳನ್ನು ಸಂಗ್ರಹಿಸಲಾಯಿತು.

1965 ನವೆಂಬರ್ 16ರಂದು ಉಡಾಯಿಸಲಾದ ವೆನ್ಯಾರಾ–3 1966 ಮಾರ್ಚ್ 1ರಂದು ಶುಕ್ರನ ಮೇಲೆ ಬಿತ್ತು. ಶುಕ್ರನನ್ನು ಮೊದಲು ಮುಟ್ಟಿದ ನೌಕೆಯೆಂದರೆ ವೆನ್ಯಾರಾ–3. ಶುಕ್ರನ ಮೇಲೆ ಬೀಳುವವರೆಗೂ ಇದರೊಡನೆ 65 ಸಾರಿ ರೇಡಿಯೋ ಸಂಪರ್ಕವನ್ನು ಹೊಂದಿ ಸಂಗ್ರಹಿಸಿದ್ದ ವಿಷಯಗಳನ್ನು ಅರಿಯಲಾಯಿತು.

1967 ಮೇ 12ರಂದು ಹಾರಿಸಿದ ವೆನ್ಯಾರಾ–4 ಶುಕ್ರನನ್ನು ತಲುಪಿ ಅಕ್ಟೋಬರ್ 18 ರಂದು ಶುಕ್ರನ ವಾತಾವರಣದೊಳಕ್ಕೆ 400ಕಿ.ಗ್ರಾಂ ತೂಕದ ಉಪಕರಣಗಳುಳ್ಳ ಭಾಗವನ್ನು ಪ್ಯಾರಾಚೂಟ್ ಮುಖಾಂತರ ನಿಧಾನವಾಗಿ ಇಳಿಸಿತು. ಇದು ಶುಕ್ರನ ವಾತಾವರಣದ ವಿಚಾರವಾಗಿ ಮುಖ್ಯ ಅಂಶಗಳನ್ನು ಸಂಗ್ರಹಿಸಿತು. ಇದು ದೊರಕಿಸಿದ ಅಂಕಿಅಂಶಗಳೆಂದರೆ–ಶುಕ್ರನ ವಾತಾವರಣದ ಮೇಲ್ಭಾಗಗಳಲ್ಲಿ ಉಷ್ಣತೆ 39.6$^{o}$ ಸೆಂ.ಗ್ರೇ.ನಷ್ಟು ಇದೆ; ಅಲ್ಲಿಂದ ಕೆಳಕ್ಕೆ ಉಷ್ಣತೆ ಒಂದೇ ಸಮನೆ ಹೆಚ್ಚುತ್ತಾ ಹೋಗಿ ಅದರ ನೆಲದ ಮೇಲೆ 277.20$^{o}$ಗಳಷ್ಟು ಆಗುತ್ತದೆ. ಗ್ರಹದ 22–25 ಕಿಮಿ.ಗಳ ಎತ್ತರದಲ್ಲಿ ಕಾರ್ಬನ್ ಡೈ ಆಕ್ಸೈಡ್ ಶೇ.90–ಶೇ.95 ಭಾಗಗಳು ಮತ್ತು ಆಮ್ಲಜನಕ ಶೇ.0.4 ಭಾಗದಷ್ಟು ಮಾತ್ರ ಇವೆ. ಗ್ರಹದ ನೆಲದಮೇಲೆ ಒತ್ತಡ ಭೂಮಿಯ ಮೇಲಿನ ಒತ್ತಡಕ್ಕಿಂತ 15–22 ಪಟ್ಟು ಹೆಚ್ಚಾಗಿದೆ. ಇದರ ಜೊತೆಗೆ ಶುಕ್ರಗ್ರಹಕ್ಕೆ ಗಮನಾರ್ಹ ಕಾಂತಕ್ಷೇತ್ರ, ವಿಕಿರಣ ವಲಯ ಇಲ್ಲವೆಂತಲೂ ತಿಳಿದುಬಂದಿತು. ಆದರೆ ಶುಕ್ರಗ್ರಹದ ಮೇಲ್ಮೈಯನ್ನು ತಲುಪುವುದಕ್ಕೆ ಮೊದಲೇ ಆ ನೌಕೆ ನಿಷ್ಕ್ರಿಯವಾಗಿತ್ತೆಂದು ಆ ಬಳಿಕ ತಿಳಿದು ಬಂದಿತು.

1969 ಜನವರಿ 5ರಂದು ರಷ್ಯ ಹಾರಿಸಿದ ವೆನ್ಯಾರಾ–5 ಎಂಬ ರೋಬೋಟ್ ಅಂತರಿಕ್ಷ ನೌಕೆ ಭೂಮಿ ಮತ್ತು ಶುಕ್ರಗ್ರಹದ ನಡುವಿನ 350,000,000 ಕಿಮೀ. (220,000,000 ಮೈ.) ದೂರವನ್ನು 130 ದಿನಗಳಲ್ಲಿ ಪ್ರಯಾಣ ಮಾಡಿ ಮೇ 16ರಂದು ಪ್ಯಾರಾಚೂಟಿನ ಸಹಾಯದಿಂದ ಶುಕ್ರಗ್ರಹದ ವಾತಾವರಣದ ಮೂಲಕ ನಿಧಾನವಾಗಿ ಇಳಿಯಿತು. ಶುಕ್ರಗ್ರಹದ ಅಧಿಕ ಸಾಂದ್ರತೆಯುಳ್ಳ ವಾತಾವರಣದ ಮೂಲಕ ಕೆಳಗಿಳಿಯುವಾಗ ನೌಕೆ ಗ್ರಹದ ಉಷ್ಣತೆ, ಒತ್ತಡ, ವಾತಾವರಣದ ರಾಸಾಯನಿಕ ರಚನಾಸ್ವರೂಪ–ಇವೆಲ್ಲವನ್ನೂ ಅಳೆಯಿತು.

ಜನವರಿ 10ರಂದು ರಷ್ಯ ಹಾರಿಸಿದ ಇಂಥ ಮತ್ತೊಂದು ನೌಕೆ ವೆನ್ಯಾರಾ–6 ಶುಕ್ರ ಗ್ರಹದೆಡೆಗೆ ಪ್ರಯಾಣ ಮಾಡಿ, ವೆನ್ಯಾರಾ–5 ಬಂದಿಳಿದ ಮಾರನೆಯ ದಿವಸ ಶುಕ್ರಗ್ರಹದ ಮೇಲೆ ನಿಧಾನವಾಗಿ ಇಳಿಯಿತು. ಇದು ಸಹ ವೆನ್ಯಾರಾ–5ರಂತೆಯೆ ಅನೇಕ ಬಗೆಯ ಅಳತೆಗಳನ್ನೂ ವೀಕ್ಷಣೆಗಳನ್ನೂ ನಡೆಸಿತು. ಆದರೆ ವೆನ್ಯಾರಾ 5 ಮತ್ತು 6 ಸಹ ಶುಕ್ರಗ್ರಹದ ಮೇಲ್ಮೈಯಿಂದ ಪ್ರಸಾರ ಮಾಡಲು ವಿಫಲವಾದವು.

ರಷ್ಯ ಹಾರಿಸಿದ ಈ ಎರಡು ನೌಕೆಗಳಲ್ಲಿ ಪ್ರತಿಯೊಂದರಲ್ಲಿಯೂ 20,000 ಘಟಕಗಳಿದ್ದವು. ಶುಕ್ರನ ವಾತಾವರಣ ಮಾನವ ಜೀವಿಸಲು ಸೂಕ್ತವಾಗಿಲ್ಲವೆಂಬುದನ್ನು ಇವು ತಿಳಿಸಿಕೊಟ್ಟಿವೆ. ಅಲ್ಲದೆ, ಸೂರ್ಯನಿಗೆ ಸಮೀಪದಲ್ಲಿನ ಗ್ರಹಗಳ ಬಳಿಸಾರಿ ವೈಜ್ಞಾನಿಕ ವೀಕ್ಷಣೆಗಳನ್ನು ಮಾಡುವುದು ಸಾಧ್ಯ ಎಂಬುದನ್ನು ಇವು ತೋರಿಸಿದವು.

ಶುಕ್ರಗ್ರಹದ ಮೇಲೆ ಯಶಸ್ವಿಯಾಗಿ ಇಳಿದ ಮೊದಲ ನೌಕೆಯೇ ವೆನ್ಯಾರಾ 7. 1970 ಆಗಸ್ಟ್ 17ರಂದು ಶುಕ್ರನ ಮೇಲ್ಮೈಯನ್ನು ತಲುಪಿದ ಆ ರೋಬಾಟ್ ನೌಕೆ ಸು. 23 ನಿಮಿಷಗಳ ಕಾಲ ಕ್ಷೀಣವಾದ ವರದಿಯನ್ನು ಅಲ್ಲಿಂದ ಕಳುಹಿಸಿತು.

1975ರಲ್ಲಿ ವೆನ್ಯಾರಾ 9 ಮತ್ತು 10 ನೌಕೆಗಳು ಶುಕ್ರಗ್ರಹದ ಮೇಲ್ಮೈಯಿಂದ ಕಪ್ಪು ಬಿಳುಪು ಚಿತ್ರಗಳನ್ನು ಮತ್ತು 1982ರಲ್ಲಿ ವೆನ್ಯಾರಾ 15 ಮತ್ತು 16 ಅಲ್ಲಿಂದ ಬಣ್ಣದ ಚಿತ್ರಗಳನ್ನು ಪ್ರಸಾರ ಮಾಡಿದವು. ಅದೇ ರೀತಿ ವೆನ್ಯಾರಾ 13 ಮತ್ತು 14 ಶುಕ್ರವನ್ನು ಸುತ್ತುತ್ತಲೇ ತಮ್ಮ ರೇಡಾರ್ ಕಣ್ಣುಗಳಿಂದ ಶುಕ್ರನ ಮೋಡ ಮುಸುಕಿದ ವಾತಾವರಣವನ್ನು ತೂರಿ ಅದರ ಮೇಲ್ಮೈಯ ಚಿತ್ರ ತೆಗೆದವು. 1985ರಲ್ಲಿ ಆ ದೇಶ ಉಡಾಯಿಸಿದ ವೇಗಾ 1 ಮತ್ತು 2 ನೌಕೆಗಳು ತಲಾ ಒಂದೊಂದು ಕೋಶ ಹಾಗೂ ಬೆಲೂನನ್ನು ಶುಕ್ರಗ್ರಹದ ಮೇಲೆ ಇಳಿಸಿದವು. ಮಂಗಳ ಗ್ರಹದ ಮೇಲೆ ಸುರಕ್ಷಿತವಾಗಿ ಇಳಿದ ಮೊದಲ ಮಾನವ ನಿರ್ಮಿತನೌಕೆ ಸೋವಿಯತ್ ರಷ್ಯದ ಮಾರ್ಸ್–3.

ಆದರೂ 20 ಸೆಕೆಂಡುಗಳ ಅ ನಂತರ ಅದು ಸ್ತಬ್ಧವಾಯಿತು. ಅದಾದ ಬಳಿಕ ಮಂಗಳ ಗ್ರಹದ ಅನ್ವೇಷಣೆಯ ಸಂದರ್ಭದಲ್ಲಿ ಭಾಗಶಃ ಯಶಸ್ಸನ್ನಾದರೂ ಕಂಡ ರಷ್ಯದ ಏಕೈಕ ನೌಕೆಯೆಂದರೆ ಫೋಬೋಸ್–1.

**2. ಅಮೇರಿಕದ ನೌಕೆಗಳು :** ಅಮೇರಿಕನ್ನರು 1962 ಆಗಸ್ಟ್ 27ರಂದು ಮ್ಯಾರಿನರ್ –2 ಎಂಬ ನೌಕೆಯನ್ನು ಶುಕ್ರಗ್ರಹದೆಡೆಗೆ ಹಾರಿಸಿದರು. ಇದು ಶುಕ್ರನನ್ನು 33000ಕಿಮೀ. ಅಂತರದಲ್ಲಿ ಹಾದುಹೋಗಿ ಶುಕ್ರಗ್ರಹದ ಸಾಂದ್ರತೆ, ವಾತಾವರಣ, ಉಷ್ಣತೆ ಮತ್ತು ಕಾಂತಕ್ಷೇತ್ರಗಳ ಅಧ್ಯಯನ ನಡೆಸಿತು.

1970 ದಶಕದ ಉತ್ತರಾರ್ಧದಲ್ಲಿ ಅಮೇರಿಕ ಉಡಾಯಿಸಿದ ಪಯನೀರ್ ವೀನಸ್ ಸರಣಿಯ ಎರಡು ನೌಕೆಗಳು ಶುಕ್ರಗ್ರಹವನ್ನು ಅನ್ವೇಷಿಸಿದವು. ಆ ಪೈಕಿ ಪಯನೀರ್ ವೀನಸ್ 1 ರೇಡಾರ್ ಕಣ್ಣಿನಿಂದ ಶುಕ್ರಗ್ರಹದ ಸಮೀಕ್ಷೆ ನಡೆಸಿದರೆ ಪಯನೀರ್ ವೀನಸ್ 2, ಆ ಗ್ರಹವನ್ನು ಸುತ್ತುತ್ತಲೇ ನಾಲ್ಕು ಕೋಶಗಳನ್ನು ಆ ಗ್ರಹದ ಮೇಲೆ ಎಸೆದು ಆ ಮೂಲಕ ಅನ್ವೇಷಣೆ ನಡೆಸಿತು. ಅನಂತರ 1989ರಲ್ಲಿ ಉಡಾಯಿಸಲಾದ ಮೆಜೆಲಾನ್ ಎಂಬ ರೋಬೋಟ್ ನೌಕೆ ತನ್ನ ರೋಬಾಟ್ ಕಣ್ಣಿನ ನೆರವಿನಿಂದ ಶುಕ್ರನ ಮೇಲ್ಮೈಯ ಶೇ 99 ಭಾಗದ ಸಮೀಕ್ಷೆ ನಡೆಸಿತು.

1964 ನವೆಂಬರ್ 28ರಂದು ಮ್ಯಾರಿನರ್–4 ಎಂಬ ನೌಕೆಯನ್ನು ಮಂಗಳ ಗ್ರಹದೆಡೆಗೆ ಹಾರಿಸಿದರು. ಇದು 1965 ಜುಲೈ ತಿಂಗಳಲ್ಲಿ ಮಂಗಳಗ್ರಹದ ಸಮೀಪದಲ್ಲಿ ಹಾದು ಹೋದುದಲ್ಲದೆ ಅದರ ಚಿತ್ರಗಳನ್ನೂ ತೆಗೆಯಿತು. ಈ ಅಧ್ಯಯನದಂತೆ ಬಹುಮಟ್ಟಿಗೆ ಕಾರ್ಬನ್ ಡೈ ಆಕ್ಸೈಡಿನಿಂದ ಕೂಡಿದ ಮಂಗಳನ ವಾತಾವರಣದ ಒತ್ತಡ ಭೂಮಿಯದಕ್ಕಿಂತ ಶೇ. 1 ಭಾಗ ಮಾತ್ರವಿದೆ ಎಂದು ತಿಳಿಯಿತು.



ಚಿತ್ರ 20
ಸರ್ವೇಯರ್–1

1967 ಅಕ್ಟೋಬರ್ 20ರಂದು ಮ್ಯಾರಿನರ್‌ಕಡ 5 ಎಂಬ ನೌಕೆ ಶುಕ್ರಗ್ರಹವನ್ನು 5000 ಕಿಮೀ.ಗಳ ಅಂತರದಲ್ಲಿ ಹಾದು ಹೋಗುತ್ತಿದ್ದಂತೆ ಅದು ಕಳುಹಿಸಿದ ರೇಡಿಯೋ ತರಂಗಗಳು ಶುಕ್ರನ ವಾತಾವರಣದ ವಿವಿಧ ಸ್ತರಗಳನ್ನು ಹೊಕ್ಕು ಭೂಮಿಯನ್ನು ತಲುಪುತ್ತಿದ್ದುವು. ತರಂಗಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದ ಅಲ್ಲಿನ ವಾತಾವರಣದ ಗುಣವಿಶೇಷಗಳನ್ನು ಲೆಕ್ಕಹಾಕಿದರು. ಇದನ್ನು ರೇಡಿಯೋ ಅಕ್ಕಲ್ಟೇಷನ್ ಪ್ರಯೋಗ ಎನ್ನುತ್ತಾರೆ. ಈ ಪ್ರಯೋಗದಿಂದ ಶುಕ್ರನ ವಾತಾವರಣದ ಒತ್ತಡ ಭೂಮಿಯದಕ್ಕಿಂತ 7–8 ಪಾಲು ಹೆಚ್ಚಾಗಿದೆಯೆಂದೂ ಅದರಲ್ಲಿ ಇಂಗಾಲಾಮ್ಲ ಶೇ.70 – ಶೇ.85 ರಷ್ಟಿದ್ದು ಜಲಜನಕ ಮತ್ತು ಆಮ್ಲಜನಕ ಇಲ್ಲವೇ ಇಲ್ಲವೆಂತಲೂ ಲೆಕ್ಕ ಹಾಕಲಾಯಿತು. ಇದರ ಜೊತೆಗೆ ಮ್ಯಾರಿನರ್–5 ಹೊತ್ತ ಉಪಕರಣಗಳು ಶುಕ್ರನಿಗೆ ಕಾಂತಕ್ಷೇತ್ರವೇನಾದರೂ ಇದ್ದರೆ ಅದು ಭೂಮಿಯದಕ್ಕಿಂತ 1/300 ರಷ್ಟಕ್ಕಿಂತ ಕಡಿಮೆಯಿರಬೇಕೆಂದೂ ವಿಕಿರಣ ವಲಯಗಳಿಲ್ಲವೆಂದೂ ತಿಳಿಸಿದುವು.

1969 ಫೆಬ್ರವರಿ 2ರಂದು ಮ್ಯಾರಿನರ್–6 ಮತ್ತು ಮಾರ್ಚ್ 24ರಂದು ಮ್ಯಾರಿನರ್–7 ಎಂಬ ನೌಕೆಗಳನ್ನು ಮಂಗಳಗ್ರಹದೆಡೆಗೆ ಹಾರಿಸಿದರು. ಇವುಗಳಲ್ಲಿ ಮ್ಯಾರಿನರ್–6 ಜೂನ್ 31ರ ವೇಳೆಗೆ ಮಂಗಳನ ಭೂ ಮಧ್ಯ ವಿಭಾಗದ ಮೇಲೂ ಮ್ಯಾರಿನರ್–7 ಆಗಸ್ಟ್ 5ರ ಹೊತ್ತಿಗೆ ಧ್ರುವಭಾಗದ ಮೇಲೂ ಹಾದುಹೋದವು. ಎರಡು ನೌಕೆಗಳೂ ಮಂಗಳನ ಚಿತ್ರಗಳನ್ನು ತೆಗೆದು ಆ ಪ್ರದೇಶದ ಉಷ್ಣತೆಯನ್ನೂ ಅಳೆದವು. ಇದರ ಜೊತೆಗೆ ಅವುಗಳಲ್ಲಳವಡಿಸಲಾದ ಅತಿನೇರಳೆ ಮತ್ತು ಅವರಕ್ತರೋಹಿತಮಾಪಕಗಳು (ಇನ್‌ಫ್ರಾರೆಡ್ ಸ್ಪೆಕ್ಟ್ರೋಮೀಟರ್) ಆ ಗ್ರಹದ ವಾತಾವರಣವನ್ನು ಅಧ್ಯಯನ ಮಾಡಿದವು. ಈ ನೌಕೆಗಳೂ ರೇಡಿಯೋ ಅಕ್ಕಲ್ಟೇಷನ್ ಪ್ರಯೋಗಗಳನ್ನು ನಡೆಸಿದವು. ನೌಕೆಗಳು ಗ್ರಹವನ್ನು ಸಮೀಪಿಸಿದಂತೆ ಅವುಗಳ ಪಥಗಳನ್ನು ನಿಖರವಾಗಿ ಕಂಡುಹಿಡಿದು ಗ್ರಹದ ಸರಿಯಾದ ತೂಕ ಮತ್ತು ಸ್ಥಾನವನ್ನು ಲೆಕ್ಕ ಹಾಕಲಾಯಿತು. 1971ರಲ್ಲಿ ಅಮೇರಿಕದ ಮ್ಯಾರಿನರ್ 9 ನೌಕೆ ಮಂಗಳ ಗ್ರಹದ ಮೊದಲ ಕೃತಕ ಉಪಗ್ರಹವಾಯಿತು. ಅನಂತರ ಆ ಗ್ರಹವನ್ನು ಸುತ್ತುವಾಗ ಅದರ ಮೇಲ್ಮೈಯ ಸ್ಫುಟವಾದ ಚಿತ್ರಗಳನ್ನು ಆ ರೋಬೋಟ್ ನೌಕೆ ಭೂಮಿಗೆ ಪ್ರಸಾರಮಾಡಿತು. ಅನಂತರ 1976ರಲ್ಲಿ ವೈಕಿಂಗ್ ಸರಣಿಯ ಎರಡು ನೌಕೆಗಳು ಮಂಗಳ ಗ್ರಹದ ಮೇಲೆ ಸುರಕ್ಷಿತವಾಗಿ ಇಳಿದು ಅಲ್ಲಿಂದ ಬಣ್ಣದ ಚಿತ್ರಗಳನ್ನು ಪ್ರಸಾರ ಮಾಡಿದವು. ಅನಂತರ ಅಲ್ಲಿನ ಮಣ್ಣಿನಲ್ಲೂ ಸೂಕ್ಷ್ಮ ಜೀವಿಗಳಿಗಾಗಿ ಅವು ಹುಡುಕಾಟ ನಡೆಸಿ ಕಳುಹಿಸಿದ ವರದಿಯನ್ನು ವಿಶ್ಲೇಷಿಸಿದ ಅನಂತರ ಅದರಲ್ಲಿ ಸೂಕ್ಷ್ಮ ಜೀವಿಗಳು ಇಲ್ಲವೆಂದು ಬಹುತೇಕ ವಿಜ್ಞಾನಿಗಳು ತೀರ್ಮಾನಿಸಿದರು. ವೈಕಿಂಗ್ ನೌಕೆಗಳು ಮಂಗಳ ಗ್ರಹದ ಎರಡು ಪುಟ್ಟ ಉಪಗ್ರಹಗಳಾದ ಫೋಬೋಸ್ ಮತ್ತು ಡೈಮೋಸ್‌ಗಳ ಚಿತ್ರಗಳನ್ನೂ ಭೂಮಿಗೆ ಪ್ರಸಾರ ಮಾಡಿದವು.

1997ರಲ್ಲಿ ಅಮೇರಿಕದ ಪಾತ್‌ಫೈಂಡರ್ ನೌಕೆ ಸೋಜೋರ್ನರ್ ಎಂಬ ಪುಟ್ಟ ರೋಬೋಟ್ ವಾಹನವೊಂದನ್ನು ಮಂಗಳ ಗ್ರಹದ ಮೇಲೆ ಇಳಿಸಿತು. ಅದೇ ವರ್ಷ ಹಾಗೂ 2001ರಲ್ಲಿ ಮಾರ್ಸ್ ಗ್ಲೋಬಲ್ ಸರ್ವೇಯರ್ ಮತ್ತು ಮಾರ್ಸ್ ಒಡಿಸ್ಸಿ ಎಂಬ ಎರಡು ರೊಬೋಟ್ ನೌಕೆಗಳು ಮಂಗಳ ಗ್ರಹದ ಕೃತಕ ಉಪಗ್ರಹಗಳಾಗುವ ಮೂಲಕ ಅದರ ಅನ್ವೇಷಣೆಯನ್ನು ಪ್ರಾರಂಭಿಸಿದವು. 2004ರಲ್ಲಿ ಅಮೇರಿಕದ ಮತ್ತೆರಡು ನೌಕೆಗಳು ಮಂಗಳ ಗ್ರಹದ ಮೇಲಿಳಿಸಿದ ಸ್ಪಿರಿಟ್ ಮತ್ತು ಆಪರ್ಚುನಿಟಿ ಎಂಬ ಎರಡು ರೋಬೋಟ್ ವಾಹನಗಳು ತಾವಿಳಿದ ಪ್ರದೇಶದಿಂದ ಎರಡು ಕಿಲೋಮೀಟರ್‌ಗಿಂತ ಹೆಚ್ಚು ದೂರ ಧಾವಿಸಿ ಅನ್ವೇಷಣೆ ನಡೆಸುತ್ತಿವೆ. ಅಂತೆಯೇ ಮಾರ್ಸ್ ಎಕ್ಸ್‌ಪ್ರೆಸ್ ಎಂಬ ಯುರೋಪ್‌ನ ಒಂದು ರೋಬೋಟ್ ನೌಕೆ ಮಂಗಳ ಗ್ರಹವನ್ನು ಸುತ್ತುತ್ತಾ ಅದರ ಮೇಲ್ಮೈಯತ್ತ ತನ್ನ ಚುರುಕಾದ ನೋಟವನ್ನು ಹಾಯಿಸಿ ಅಲ್ಲಿನ ಸ್ಫುಟವಾದ ಚಿತ್ರಗಳನ್ನು ಭೂಮಿಗೆ ಪ್ರಸಾರ ಮಾಡುತ್ತಿದೆ.

**ಭಾಗ vi. ಅಂತಾರಾಷ್ಟ್ರೀಯ ಅಂತರಿಕ್ಷ ಕಾರ್ಯಕ್ರಮಗಳು:** 1958 ನವೆಂಬರ್ ತಿಂಗಳಲ್ಲಿ ಅಂತಾರಾಷ್ಟ್ರೀಯ ಅಂತರಿಕ್ಷ ಸಂಶೋಧನ ಸಮಿತಿ (ಇಂಟರ್‌ನ್ಯಾಷನಲ್ ಕಮಿಟಿ ಫಾರ್ ಸ್ಪೇಸ್ ರಿಸರ್ಚ್) ಸ್ಥಾಪನೆಯಾಯಿತು. ಸದಸ್ಯ ರಾಷ್ಟ್ರಗಳು ಆಗಾಗ ಸಭೆ ಸೇರುವುದಲ್ಲದೆ ತಾವು ನಡೆಸಿದ ಅಂತರಿಕ್ಷ ಸಂಶೋಧನೆಯ ಅಂಕಿ–ಅಂಶಗಳನ್ನು, ಹಾರಿಸಲಿರುವ ಪರೀಕ್ಷಕ ರಾಕೆಟ್ಟುಗಳ ಅಥವಾ ಅಂತರಿಕ್ಷ ನೌಕೆಗಳ ವಿವರಗಳನ್ನು ವಿನಿಮಯ ಮಾಡಿಕೊಳ್ಳಲಾರಂಭಿಸಿದವು.

ಅಂತಾರಾಷ್ಟ್ರೀಯ ಅಂತರಿಕ್ಷಯಾನ ಸಂಘದ (ಇಂಟರ್‌ನ್ಯಾಷನಲ್ ಆಸ್ಟ್ರೋನಾಟಿಕಲ್ ಫೆಡರೇಷನ್) ಆಶ್ರಯದಲ್ಲಿ ಅಂತರಿಕ್ಷ ಸಂಶೋಧನೆಗೆ ಸಂಬಂಧಿಸಿದ ಯಂತ್ರೋದ್ಯಮದ (ಎಂಜಿನಿಯರಿಂಗ್) ವಿಚಾರಗಳನ್ನು ಆಗಾಗ ಚರ್ಚಿಸಲಾಗುತ್ತದೆ.

ಅಂತಾರಾಷ್ಟ್ರೀಯ ಸಂಪರ್ಕ ಸಾಧನೋಪಗ್ರಹಗಳ ಸಂಘದಲ್ಲಿ (ಇಂಟರ್‌ನ್ಯಾಷನಲ್ ಟೆಲಿಕಮ್ಯುನಿಕೇಷನ್ ಸೆಟಲೈಟ್ ಕನ್‌ಸಾರ್ಟಿಯಮ್) ಭಾರತವನ್ನೊಳಗೊಂಡಂತೆ ಅನೇಕ ಸದಸ್ಯರಾಷ್ಟ್ರಗಳಿವೆ. ಇದರ ಆಶ್ರಯದಲ್ಲಿ ಸಂಪರ್ಕ ಉಪಗ್ರಹಗಳನ್ನು ಭೂಸ್ಥಿರ ಕಕ್ಷೆಗೆ ಹಾರಿಸುವುದು 1965ರಿಂದ ಪ್ರಾರಂಭವಾಯಿತು. ಆ ಪೈಕಿ: i, ಅರ್ಲಿಬರ್ಡ್–ಇದನ್ನು ಭೂಸ್ಥಿರ ಕಕ್ಷೆಯಲ್ಲಿ 1965ರ ಏಪ್ರಿಲ್‌ನಲ್ಲಿ ಅಟ್ಲಾಂಟಿಕ್ ಸಾಗರದ ಮೇಲೆ ಹಾರಿಸಿದರು. ಇದರಿಂದ ಅಮೇರಿಕ ಮತ್ತು ಯುರೋಪ್‌ಗಳಿಗೆ ಟೆಲಿಫೋನ್ ಮತ್ತು ಟೆಲಿವಿಷನ್ ಸಂಪರ್ಕಗಳೇರ್ಪಟ್ಟವು. ii. ಇಂಟೆಲ್‌ಸ್ಯಾಟ್–II–ಪೆಸಿಫಿಕ್–1: ಇದನ್ನು 1967ರ ಜನವರಿಯಲ್ಲಿ ಪೆಸಿಫಿಕ್ ಸಾಗರದ ಮೇಲೆ ಸ್ಥಾಪಿಸಿದರು. ಇದರಿಂದ ಉತ್ತರ ಅಮೇರಿಕ, ಪೂರ್ವ ದೇಶಗಳು ಹಾಗೂ ಆಸ್ಟ್ರೇಲಿಯಕ್ಕೆ ಸಂಪರ್ಕವೇರ್ಪಟ್ಟಿತು. ಇಂಟೆಲ್‌ಸ್ಯಾಟ್ ಉಪಗ್ರಹಗಳಿಂದ ಪ್ರಪಂಚದ ಎಲ್ಲ ಭಾಗಗಳಿಗೂ ಸಂಪರ್ಕ 1969ರಿಂದ ಏರ್ಪಟ್ಟಿತು. ಉಪಗ್ರಹಗಳು ಪುನಃಪ್ರಸಾರ ಮಾಡಿದ ಸೂಕ್ಷ್ಮ ತರಂಗ ಸಂಜ್ಞೆಗಳನ್ನು ಗ್ರಹಿಸುವ ಒಂದು ಕೇಂದ್ರವನ್ನು ಭಾರತದ ಅಹಮದಾಬಾದಿನಲ್ಲಿ ವಿಶ್ವಸಂಸ್ಥೆಯ ಸಹಾಯದಿಂದ 1967ರಲ್ಲಿ ಸ್ಥಾಪಿಸಲಾಯಿತು. ಇದು ಅಮೇರಿಕ ಹಾರಿಸಿದ ATS-2 ಎಂಬ ಉಪಗ್ರಹದ ಸಹಾಯದಿಂದ ಜಪಾನಿನೊಡನೆ ಸಂಪರ್ಕವನ್ನು ಪಡೆಯಿತು. ಈ ಕೇಂದ್ರದಲ್ಲಿ ಭಾರತದ ಮತ್ತು ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಿಜ್ಞಾನಿಗಳು ತರಬೇತಿ ಪಡೆದರು.

1961ರಲ್ಲಿ ವಿಶ್ವಸಂಸ್ಥೆಯ ಬಾಹ್ಯಾಂತರಿಕ್ಷದ ಶಾಂತಿಯುತ ಉಪಯೋಗಗಳ ಮಂಡಳಿ ಏರ್ಪಟ್ಟಿತು. ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳು ಮತ್ತು ಕಾನೂನಿನ ವಿಷಯಗಳು–ಇವಕ್ಕೆ ಸಂಬಂಧಿಸಿದಂತೆ ಎರಡು ಉಪಸಮಿತಿಗಳ ರಚನೆಯಾಯಿತು. ಇವುಗಳಲ್ಲೊಂದಾದ ವೈಜ್ಞಾನಿಕ ಮತ್ತು ತಾಂತ್ರಿಕ ಉಪಸಮಿತಿ ಭೂಕಾಂತ ಮಧ್ಯರೇಖೆಯಲ್ಲಿ ಅಂತಾರಾಷ್ಟ್ರೀಯ ಉಪಯೋಗಕ್ಕಾಗಿ ಒಂದು ರಾಕೆಟ್ ಕೇಂದ್ರವನ್ನು ಸ್ಥಾಪಿಸಲು ಕರೆಯಿತ್ತಿತ್ತು. ಇದಕ್ಕೆ ಓಗೊಟ್ಟು ಭಾರತ ಆಗಲೇ ಸಿದ್ಧವಾಗುತ್ತಿದ್ದ ತನ್ನ ತುಂಬಾ ಕೇಂದ್ರವನ್ನು ಅಂತಾರಾಷ್ಟ್ರೀಯ ಕೇಂದ್ರವನ್ನಾಗಿ ಮಾಡಲು ಒಪ್ಪಿಕೊಂಡಿತು. ಇದಕ್ಕೆ ವಿಶ್ವಸಂಸ್ಥೆಯ ಅನುಮೋದನೆ ಸಿಕ್ಕಿತು. ತುಂಬಾ ಕೇಂದ್ರದ ಬೆಳವಣಿಗೆಗೆ ರಷ್ಯ, ಅಮೇರಿಕ ಮತ್ತು ಫ್ರಾನ್ಸ್ ದೇಶಗಳ ನೆರವು ದೊರಕಿತು.

ತುಂಬಾ ಕೇಂದ್ರದಿಂದ 1963 ನವೆಂಬರ್‌ನಿಂದ ಪರೀಕ್ಷಕ ರಾಕೆಟ್ಟುಗಳನ್ನು ಹಾರಿಸಲು ಪ್ರಾರಂಭ ಮಾಡಲಾಯಿತು. ಮೊದಲಿಗೆ ಅಮೇರಿಕ ಮತ್ತು ಫ್ರಾನ್ಸ್ ದೇಶಗಳಿಂದ ಪಡೆದ ರಾಕೆಟ್ಟುಗಳನ್ನು ಇಲ್ಲಿಂದ ಹಾರಿಸಲಾಯಿತು. ನಂತರ ತುಂಬಾದಲ್ಲಿಯೇ ತಯಾರಿಸಲಾದ

ಮೇನಕ ಮತ್ತು ರೋಹಿಣಿ ಎಂಬ ರಾಕೆಟ್ಟುಗಳನ್ನೂ ಟ್ರಾಂಬೆಯಲ್ಲಿ ತಯಾರಾದ ಸೆಂಟಾರ್ ಎಂಬ ರಾಕೆಟ್ಟನ್ನೂ ಹಾರಿಬಿಡಲಾಯಿತು. ತುಂಬಾದಲ್ಲಿ ನಡೆಸಿದ ಪ್ರಯೋಗಗಳಲ್ಲಿ ಮುಖ್ಯವಾದುದೆಂದರೆ ವಿವಿಧ ಎತ್ತರಗಳಲ್ಲಿ ಗಾಳಿಯ ಚಲನೆಯನ್ನು ಗೊತ್ತು ಹಚ್ಚುವುದು. ಇದಕ್ಕಾಗಿ ರಾಕೆಟ್ ಮೇಲಕ್ಕೆ ಹೋಗುತ್ತ ಒಂದು ನಿರ್ದಿಷ್ಟ ಎತ್ತರದಲ್ಲಿ ಸೋಡಿಯಂ ಧೂಮವನ್ನು ಹೊರಬಿಡುತ್ತಿತ್ತು. ಈ ಧೂಮ ಚಲಿಸುವ ದಿಕ್ಕು ಮತ್ತು ವೇಗಗಳನ್ನು ದೃಗ್ವಿಧಾನದಲ್ಲಿ ಕಂಡುಹಿಡಿಯಲಾಗುತ್ತಿತ್ತು.

ತುಂಬಾ ಕೇಂದ್ರದಲ್ಲಿ ಅಯೋನಾವರಣಕ್ಕೆ ಸಂಬಂಧಿಸಿದ ಪ್ರಯೋಗಗಳನ್ನೂ ಮಾಡಲಾಯಿತು. ತುಂಬಾವು ಭೂಮಿಯ ಕಾಂತಮಧ್ಯರೇಖೆಗೆ ಬಹಳ ಹತ್ತಿರವಿರುವುದರಿಂದ ಈ ರೀತಿಯ ಪ್ರಯೋಗಗಳು ನಡೆಯಲು ಬಹಳ ಸಹಾಯಕಾರಿಯಾಗಿದೆ.

1969ರಲ್ಲಿ ಭಾರತದ ಪೂರ್ವ ಕರಾವಳಿಯಲ್ಲಿ ಇರುವ ಚೆನ್ನೈ(ಮದ್ರಾಸ್)ನ ಹತ್ತಿರ ಇನ್ನೊಂದು ರಾಕೆಟ್ ಕೇಂದ್ರವನ್ನು ಸ್ಥಾಪಿಸಲಾಯಿತು. ಭಾರತದ ಪ್ರಥಮ ಉಪಗ್ರಹವನ್ನು ಹಾರಿಬಿಟ್ಟದ್ದು ಇಂದು ಸತೀಶ್ ಧವನ್ ಅಂತರಿಕ್ಷ ಕೇಂದ್ರ–ಶಾರ್ ಎಂಬ ಹೆಸರಿರುವ ಈ ಕೇಂದ್ರದಿಂದಲೇ. ಇದು ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಶ್ರೀಹರಿಕೋಟ ದ್ವೀಪದಲ್ಲಿದೆ.

ಯುರೋಪಿನ ಕಾರ್ಯಕ್ರಮಗಳು: ಯುರೋಪಿನ ಒಂಬತ್ತು ರಾಷ್ಟ್ರಗಳು ಯುರೋಪಿನ ಅಂತರಿಕ್ಷ ಸಂಶೋದನ ಸಂಘವನ್ನು [ಯುರೋಪಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್–(ಇ ಎಸ್ ಅರ್ ಒ)] ಮಾಡಿಕೊಂಡಿವು. ಇದರ ಜೊತೆಗೆ ಯುರೋಪಿನ ವಾಹನಾಭಿವೃದ್ಧಿ ಸಂಘವನ್ನು [ಯುರೋಪಿಯನ್ ಲಾಂಚರ್ ಡೆವಲಪ್‌ಮೆಂಟ್ ಆರ್ಗನೈಸೇಷನ್–(ಇ ಎ. ಡಿ ಒ)] ಮಾಡಿಕೊಂಡು ಇ ಎಸ್ ಆರ್ ಒ ಆಶ್ರಯದಲ್ಲಿ ಹಾರಿಸಲಿರುವ ಉಪಗ್ರಹಗಳಿಗೆ ರಾಕೆಟ್ ವಾಹನಗಳನ್ನು ತಯಾರಿಸುವ ಯೋಜನೆಯನ್ನು ಇಟ್ಟುಕೊಂಡಿದ್ದವು. ಬಳಿಕ ಸ್ಥಾಪನೆಯಾದ ಐರೋಪ್ಯ ಅಂತರಿಕ್ಷ ಸಂಸ್ಥೆ (ಈಸಾ) ಅಂತರಿಕ್ಷ ಕ್ಷೇತ್ರದಲ್ಲಿ ಅನೇಕ ಸಾಧನೆಗಳನ್ನು ಮಾಡಿದೆ.

ಅಮೆರಿಕ ಮತ್ತು ಇತರ ದೇಶಗಳ ಸಹಕಾರ: ಅಮೆರಿಕದ ರಾಕೆಟ್ ವಾಹನಗಳ ನ್ನುಪಯೋಗಿಸಿಕೊಂಡು ಕೆಲವು ರಾಷ್ಟ್ರಗಳು ತಮ್ಮ ಉಪಗ್ರಹಗಳನ್ನು ಹಾರಿಸಿದವು. ಆ ಪೈಕಿ 1. ಇಂಗ್ಲೆಂಡ್–ಏರಿಯಲ್ I ಮತ್ತು ಏರಿಯಲ್ II, 2. ಕೆನಡ–ಆಲ್ಯೂಟ್, 3. ಫ್ರಾನ್ಸ್–ಫ್ರೆಂಚ್–I. 4. ಇಟಲಿ–ಸ್ಯಾನ್–ಮಾರ್ಕೋ.

ಪರೀಕ್ಷಕ ರಾಕೆಟ್ಟುಗಳನ್ನು ಹಾರಿಸಲು ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳಿಗೆ ಅಮೆರಿಕ ನೆರವು ನೀಡಿತು. ಅಂತರಿಕ್ಷ ಕ್ಷೇತ್ರದಲ್ಲಿ ಒಂದು ಪ್ರಮುಖ ರಾಷ್ಟ್ರವೆನ್ನಿಸಿಕೊಂಡಿರುವ ಭಾರತ ಇಂದು ಅಮೆರಿಕದಂತೆಯೇ ಇತರ ರಾಷ್ಟ್ರಗಳ ವಿಜ್ಞಾನಿಗಳಿಗೆ ತರಬೇತಿಯನ್ನು ನೀಡುತ್ತಿದೆ.

1960ರ ದಶಕದಲ್ಲಿ ರಷ್ಯ ಮತ್ತು ಅಮೆರಿಕ ತನ್ನ ಹವಾಮಾನ ಉಪಗ್ರಹಗಳಿಂದ ಬರುವ ಮಾಹಿತಿಗಳನ್ನು ಇತರ ದೇಶಗಳಿಗೂ ಕಳುಹಿಸಿದವು.

ಅಂತರಿಕ್ಷ ಕಾನೂನು: ವಿಶ್ವಸಂಸ್ಥೆಯ ಬಾಹ್ಯಾಂತರಿಕ್ಷ ಶಾಂತಿಯುತ ಉಪಯೋಗಗಳ ಮಂಡಲಿ ಮತ್ತು ಅದರ ಕಾನೂನು ಉಪಮಂಡಲಿ ಸಿದ್ಧಪಡಿಸಿದ ವಿಚಾರಗಳ ಮೇಲೆ ವಿಶ್ವಸಂಸ್ಥೆ ಚರ್ಚಿಸಿ ಅವನ್ನು ತನ್ನ ಶಾಸನದಲ್ಲಿ 1962ನೆಯ ಸಾಲಿನ ಠರಾವನ್ನಾಗಿ (ನಂ. XVIII) ಅಂಗೀಕರಿಸಿತು. ಈ ಠರಾವಿನ ಕೆಲವು ಅಂಶಗಳು ಹೀಗಿವೆ:

ಈಗಿರುವ ಅಂತಾರಾಷ್ಟ್ರೀಯ ಕಾನೂನು ಬಾಹ್ಯಾಂತರಿಕ್ಷ ಮತ್ತು ಖಗೋಳ ವಿಜ್ಞಾನಗಳಿಗೂ ಸಂಬಂಧಿಸುತ್ತದೆ. ಬಾಹ್ಯಾಂತರಿಕ್ಷ ಮತ್ತು ಆಕಾಶಕಾಯಗಳನ್ನು ಎಲ್ಲ ದೇಶಗಳವರೂ ಸಂಶೋಧಿಸಬಹುದು. ಹೀಗೆ ಮಾಡುವಾಗ ಅವು ಅಂತಾರಾಷ್ಟ್ರೀಯ ಕಾನೂನಿಗೆ ಒಳಪಟ್ಟಿರುತ್ತವೆ.

ಸದಸ್ಯ ರಾಷ್ಟ್ರಗಳ ಸರ್ಕಾರವಾಗಲೀ ಇಲ್ಲವೇ ಆ ರಾಷ್ಟ್ರಗಳ ಸರ್ಕಾರೇತರ ಸಂಸ್ಥೆಗಳಾಗಲೀ ತಾವು ನಡೆಸುವ ಅಂತರಿಕ್ಷ ಸಂಶೋಧನೆಗಳಿಗೆ ತಾವೇ ಜವಾಬ್ದಾರಿಯಾಗಿರುತ್ತವೆ. ತಮ್ಮ ಕಾರ್ಯಕ್ರಮಗಳಿಂದ ಇತರ ರಾಷ್ಟ್ರಗಳಿಗೆ ತೊಂದರೆಯಾದರೆ ಅದರ ಸಂಪೂರ್ಣ ಜವಾಬ್ದಾರಿಯನ್ನು ತಾವೇ ವಹಿಸಬೇಕು.

ಯಾವುದೇ ರಾಷ್ಟ್ರದ ಅಂತರಿಕ್ಷನೌಕೆ ಇತರ ದೇಶಗಳ ಮೇಲೆ ಹಾರಿದರೂ ಆ ದೇಶಗಳ ಮೇಲೆ ಬಿದ್ದರೂ ಅದರ ಯಜಮಾನಿಕೆ ಹಾರಿಸಿದ ರಾಷ್ಟ್ರದ್ದೇ ಆಗಿರುತ್ತದೆ. ಆದ್ದರಿಂದ ಯಾವ ದೇಶದ ಮೇಲಾಗಲೀ ಇತರ ದೇಶದ ಅಂತರಿಕ್ಷನೌಕೆ ಬಿದ್ದಲ್ಲಿ ಅಥವಾ ಅಕಸ್ಮಾತ್ತಾಗಿ ಮಾನವಸಹಿತವಾದ ನೌಕೆ ಇಳಿದಲ್ಲಿ ಅದನ್ನು ಸುರಕ್ಷಿತವಾಗಿ ಸಂಬಂಧಪಟ್ಟ ದೇಶಕ್ಕೆ ತಲುಪಿಸಬೇಕು.

ವಿಜ್ಞಾನಕ್ಷೇತ್ರದಲ್ಲಿ ಪ್ರಗತಿ ಮುಂದುವರಿದಂತೆಲ್ಲ ಮಾನವ ಹೊಸ ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳುವುದು ಸಹಜ. ಈ ದಿಶೆಯಲ್ಲಿ ಪ್ರಸ್ತುತ ಅಂತರಿಕ್ಷ ಸಂಶೋಧನೆಯ ಮೂಲೋದ್ದೇಶ ಸಂಶೋಧನೆ. ಅಂತರಿಕ್ಷಕ್ಕೆ ಸಂಬಂಧಪಟ್ಟಂತೆ ಸಂಶೋಧನೆಯನ್ನು ನಡೆಸುವುದು ಮಾತ್ರವಲ್ಲದೆ ಮಾನವನ ಪ್ರಗತಿಶೀಲಾಭ್ಯುದಯಕ್ಕೆ ಸಹಾಯವೆಸಗುವಂತೆಯೂ ಅವನ್ನು ನಿರೂಪಿಸಲಾಗಿದೆ. ಸಂಶೋಧನೆಯ ಫಲವಾಗಿ ಹೆಚ್ಚು ಸುಧಾರಿತ ರೀತಿಯಲ್ಲಿ ಯಾನಗಳನ್ನು ಕೈಗೊಳ್ಳುವುದು, ನಿರ್ದೇಶಿಸುವುದು ಹಾಗೂ ನಿಯಂತ್ರಿಸುವುದು–ಮುಂತಾದ ಯಂತ್ರೋದ್ಯಮದ ತಂತ್ರಗಳು ಇಂದು ಸಾಧ್ಯವಾಗಿವೆ. ಅಂತರಿಕ್ಷದಲ್ಲಿ ಒಂದು ನೌಕೆಯನ್ನು ಮತ್ತೊಂದು ನೌಕೆ ಸಂಧಿಸುವುದು ಒಗ್ಗೂಡುವುದು. ಪುನಃ ಬೇರ್ಪಡುವುದು, ಮುಂದೆ ಇತರ ಗ್ರಹಾನ್ವೇಷಣೆಗೆ ಸಹಾಯವಾಗುವಂತೆ ಅಂತರಿಕ್ಷನಿಲ್ದಾಣಗಳನ್ನೂ ಸ್ಥಾಪಿಸಿಕೊಂಡು ಅಲ್ಲಿಂದಲೇ ನೌಕೆಗಳನ್ನು ಉಡಾಯಿಸುವುದು, ಮುಖ್ಯವಾಗಿ ಭೂಮಿಯನ್ನು ಆಮೂಲಾಗ್ರವಾಗಿ ಸಂಶೋಧಿಸಿ ಅದರಿಂದೊದಗುವ ಸಮಸ್ತ ವಿಷಯಗಳನ್ನೂ ಭೂನಿವಾಸಿಗಳಿಗೆ ಅರಿವು ಮಾಡಿಕೊಡುವುದು–ಈ ಮುಂತಾದ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಅರಿವು ಈ ಸಂಶೋಧನೆಯಿಂದ ಸಾಧ್ಯವಾಗಿದೆ. ಈ ಎಲ್ಲ ಕಾರ್ಯಕ್ರಮಗಳನ್ನು ಸುಧಾರಿತ ರೀತಿಯಲ್ಲಿ ರೂಪಿಸಿಕೊಂಡು ಕಾರ್ಯಗತಗೊಳಿಸಲು ಶ್ರಮಿಸುತ್ತಿರುವ ಅಮೆರಿಕದ ನಾಸಾ (ಎನ್‌ಎಎಸ್‌ಎ) ಸಂಸ್ಥೆ ಹಾಗೂ ರಷ್ಯ, ಯುರೋಪ್, ಜಪಾನ್, ಭಾರತದ ಅಂತರಿಕ್ಷ ಸಂಸ್ಥೆಗಳು ಪ್ರಗತಿಶೀಲ ಪ್ರಯತ್ನಗಳು ಹಾಗೂ ನಡೆಸುತ್ತಿರುವ ಕಾರ್ಯಕ್ರಮಗಳು–



**ಚಿತ್ರ 21**
**ಅಪೊಲೊ 8 ತೆಗೆದ ಚಂದ್ರನ ಒಂದು ಭಾಗ**

ಮಾನವನಿಗೆ ಯಶಸ್ಸನ್ನು ಗಳಿಸಿಕೊಟ್ಟು ಅವನ ಕೀರ್ತಿಯನ್ನು ವ್ಯೋಮಮಂಡಲದ ರುದ್ರವಿಸ್ತಾರದವರೆಗೂ ಹರಡಿವೆ. ಈ ಅನ್ವೇಷಣೆ ಅಜ್ಞಾನ–ಜ್ಞಾನಗಳ ನಡುವೆ ಇರುವ ನಿರಂತರ ಸ್ಪರ್ಧೆಯಲ್ಲಿನ ಸತ್ಯಾನ್ವೇಷಣೆಯೇ ಆಗಿದೆ. (ಕೆ.ಜಿ.)

**ಸೌರವ್ಯೂಹದ ಹೊರಭಾಗದ ಅನ್ವೇಷಣೆ:** ಮಂಗಳ ಗ್ರಹದ ಅನಂತರ ಬರುವ ಕ್ಷುದ್ರಗ್ರಹಗಳ ಪಟ್ಟಿಯ ಆಚೆ ಬರುವ ಸೌರವ್ಯೂಹದ ಹೊರಭಾಗದ ಆಕಾಶಕಾಯಗಳು ಭೂಮಿಯಿಂದ ಇರುವ ದೂರದ ಮಹತ್ವದಿಂದಾಗಿ ಅವುಗಳತ್ತ ರೋಬೋಟ್ ಅಂತರಿಕ್ಷ ನೌಕೆಗಳನ್ನು ಉಡಾಯಿಸುವುದು 1970ರ ದಶಕದ ವರೆಗೂ ಸಾಧ್ಯವಾಗಲಿಲ್ಲ. ನಂತರ 1972 ರಲ್ಲಿ ಉಡಾಯಿಸಲಾದ ಅಮೆರಿಕದ ಪಯೋನೀರ್ 10 ನೌಕೆ ಕ್ಷುದ್ರಗ್ರಹಗಳ ಪಟ್ಟಿಯನ್ನು ದಾಟಿ ಗುರುಗ್ರಹವನ್ನು ಅನ್ವೇಷಿಸಿದ ಮೊದಲ ನೌಕೆಯಾಯಿತು. ನಂತರದ ಪಯೋನೀರ್ 11 (ಉಡಾವಣೆ 1973) ಗುರು ಹಾಗೂ ನಂತರ ಶನಿ ಈ ಎರಡು ಗ್ರಹಗಳನ್ನೂ ಅನ್ವೇಷಿಸಿ ಮುನ್ನಡೆಯಿತು.

ಸೌರವ್ಯೂಹದ ಹೊರಭಾಗದ ಆಕಾಶ ಕಾಯಗಳ ಅನ್ವೇಷಣೆಯಲ್ಲಿ ಅಮೆರಿಕ 1977ರಲ್ಲಿ ಉಡಾಯಿಸಿದ ವಾಯೇಜರ್ ಸರಣಿಯ ಎರಡು ನೌಕೆಗಳ ಪಾತ್ರ ಮಹತ್ತರವಾದುದು. ಆ ಪೈಕಿ 1979ರಲ್ಲಿ ಗುರುಗ್ರಹದ ಸಮೀಪದಲ್ಲಿ ಹಾದು ಹೋದ ವಾಯೇಜರ್ 1 ಆ ಗ್ರಹದ ವಾತಾವರಣದಲ್ಲಿನ ಸ್ವರೂಪಗಳ ಸ್ಫುಟವಾದ ಚಿತ್ರಗಳನ್ನು ರವಾನಿಸುವುದರೊಂದಿಗೆ ಆ ಗ್ರಹಕ್ಕೆ ಇರುವ ಒಂದು ತೆಳುವಾದ ಉಂಗುರವನ್ನು ಗುರುತಿಸಿತು. ಇಷ್ಟೇ ಅಲ್ಲದೆ ಗುರುಗ್ರಹದ ನಾಲ್ಕು ಗ್ಯಾಲಿಲೆಯನ್ ಉಪಗ್ರಹಗಳ ಸ್ವರೂಪದ ಪರಿಚಯವೂ ಮಾನವನಿಗಾಯಿತು. ಆ

ಪೈಕಿ ಅಯೋ ಉಪಗ್ರಹದ ಮೇಲೆ ಭುಗಿಲೇಳುತ್ತಿದ್ದ ಜ್ವಾಲಾಮುಖಿಗಳು, ಕೆಳಗಿರುವ ನೀರನ್ನು ಸೂಚಿಸುವಂತೆ ತೋರುವ ಯೂರೋಪಿನ ನುಣುಪಾದ ಹಿಮಾವೃತವಾದ ಮೇಲ್ಮೈ ಸೌರವ್ಯೂಹದ ಅತಿ ದೊಡ್ಡ ಉಪಗ್ರಹವಾದ ಗ್ಯಾನಿಮೀಡ್‌ನ ಕುತೂಹಲಕಾರಿ ಕಾಂತಕ್ಷೇತ್ರ ಹಾಗೂ ಮೈತುಂಬಾ ಹೊಂಡಗಳನ್ನು ಹರಡಿಕೊಂಡ ಕೆಲಿಸ್ಟೋ, ಇವುಗಳ ದರ್ಶನವನ್ನು ವಾಯೇಜರ್ ನೌಕೆಗಳು ಮಾನವನಿಗೆ ಮಾಡಿಸಿದವು. ಜೊತೆಗೇ ಆವರೆಗೂ ತಿಳಿಯದಿದ್ದ ಗುರುಗ್ರಹದ ಕೆಲವು ಹೊಸ ಉಪಗ್ರಹಗಳನ್ನು ಅವು ಗುರುತಿಸಿದವು. ಇದಾದ ಬಳಿಕ ಗುರುಗ್ರಹದ ಅನ್ವೇಷಣೆಯನ್ನು ಗಮನಾರ್ಹವಾದ ಮಟ್ಟದಲ್ಲಿ ನಡೆಸಿದ್ದು ಅಮೆರಿಕದ ಗ್ಯಾಲಿಲೆಯೋ ರೋಬೋಟ್ ನೌಕೆ. 1995 – 2004ರ ವರೆಗೆ ಸು. 8 ವರ್ಷಗಳ ಕಾಲ ಗುರುಗ್ರಹದ ಕೃತಕ ಉಪಗ್ರಹವಾಗಿದ್ದ ಆ ನೌಕೆ ಗುರುವಿನ ಹಾಗೂ ಅದರ ಬೃಹತ್ ಕಾಂತಕ್ಷೇತ್ರದ ಸ್ವರೂಪ, ಉಪಗ್ರಹಗಳು, ಉಂಗುರಗಳು, ಈ ಬಗ್ಗೆ ಅಪಾರವಾದ ಮಾಹಿತಿಯನ್ನು ರೇಡಿಯೋ ತರಂಗಗಳ ರೂಪದಲ್ಲಿ ಭೂಮಿಗೆ ರವಾನಿಸಿತು.

ಅದರಲ್ಲೂ ಯೂರೋಪಾದ ಹಿಮಾವೃತವಾದ ಮೇಲ್ಮೈಯಡಿಯಲ್ಲಿ ಒಂದು ಸಾಗರ ಇರಬಹುದೆಂಬ ವಿಜ್ಞಾನಿಗಳ ಶಂಕೆಗೆ ಮತ್ತಷ್ಟು ಪುಷ್ಟಿಯನ್ನು ಗ್ಯಾಲಿಲೆಯೊ ನೌಕೆ ಒದಗಿಸಿತು. ಇಷ್ಟೇ ಅಲ್ಲದೆ 1995ರ ಅಂತ್ಯದಲ್ಲಿ ಗ್ಯಾಲಿಲೆಯೊ ಗುರುಗ್ರಹದ ಕೃತಕ ಉಪಗ್ರಹವಾಗುವ ವೇಳೆಯಲ್ಲೇ ಅದರಿಂದಾಗಲೇ ಬೇರ್ಪಟ್ಟಿದ್ದ ಕೋಶವೊಂದು ಗುರುಗ್ರಹದ ದಟ್ಟವಾದ ವಾತಾವರಣದೊಳಗೆ ಧುಮುಕಿ, ಆ ಬಳಿಕ ತನ್ನ ಶಾಖಕವಚ ಹಾಗೂ ಪ್ಯಾರಚ್ಯೂಟ್‌ಗಳ ನೆರವಿನೊಡನೆ ನಿಧಾನವಾಗಿ ಅದರೊಳಗೆ ಇಳಿಯುತ್ತಾ ಅಲ್ಲಿನ ಪರಿಸ್ಥಿತಿಯ ಬಗ್ಗೆ ಭೂಮಿಗೆ ವರದಿ ಮಾಡಿತು.

**ಶನಿಯ ಅನ್ವೇಷಣೆ:** ಶನಿಗ್ರಹದ ಸಮೀಪದಲ್ಲಿ ಹಾದು ಹೋದ ಮೊದಲ ರೋಬಾಟ್ ನೌಕೆಯೇ ಅಮೆರಿಕದ ಪಯೊನೀರ್ 11. ಆದರೆ ಆ ಗ್ರಹದ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಮಾನವನಿಗೆ ಒದಗಿಸಿ ತನ್ಮೂಲಕ ಶನಿಗ್ರಹದ ಬಗ್ಗೆ ಮಾನವನ ದೃಷ್ಟಿಕೋನವನ್ನೇ ಬದಲಿಸಿದ ನೌಕೆಗಳೆಂದರೆ ವಾಯೇಜರ್ 1 ಮತ್ತು 2. ಆ ಪೈಕಿ 1980ರಲ್ಲಿ ಶನಿಯ ಸಮೀಪದಲ್ಲಿ ಹಾದುಹೋದ ವಾಯೇಜರ್ 1 ಆ ಗ್ರಹದ ಉಂಗುರಗಳ ಬಗ್ಗೆ ಕಳುಹಿಸಿದ ಚಿತ್ರಗಳಲ್ಲಿ ಅಪಾರವಾದ ವಿವರಗಳು ಕಂಡುಬಂದವು. ಹೀಗಾಗಿ ಶನಿಯನ್ನು ಆವರಿಸಿರುವುದು ಕೆಲವೇ ಉಂಗುರಗಳಲ್ಲ, ಸಾವಿರಾರು ತೆಳುವಾದ ಉಂಗುರಗಳು ಎಂಬುದು ಮಾನವನಿಗೆ ಅರಿವಾಯಿತು. ಜೊತೆಗೆ ಚಿತ್ರಗಳಲ್ಲಿ ಸೈಕಲ್ ಚಕ್ರದ ಕಡ್ಡಿಯಂತಹ ಸ್ವರೂಪಗಳು ಹಾಗೂ ಹೆಣೆದ ಜಡೆಯಂತಿರುವ ತೆಳುವಾದ ಉಂಗುರಗಳು ಕಂಡುಬಂದವು. ಶನಿಯ ಕೆಲವು ಉಪಗ್ರಹಗಳ ಸ್ವರೂಪವನ್ನು ಕುರಿತ ಮಾಹಿತಿಗಳೂ ವಿಜ್ಞಾನಿಗಳನ್ನು ಚಕಿತಗೊಳಿಸಿದವು. ಆ ಪೈಕಿ ಶನಿಯ ಅತ್ಯಂತ ದೊಡ್ಡ ಉಪಗ್ರಹವಾದ ಟೈಟಾನ್ ಸೌರವ್ಯೂಹದ ಎರಡನೆಯ ದೊಡ್ಡ ಉಪಗ್ರಹವೆಂಬುದು ಸ್ಪಷ್ಟವಾಯಿತು. ಅದರ ವಾತಾವರಣದಲ್ಲಿ ಗರಿಷ್ಠ ಪ್ರಮಾಣದಲ್ಲಿ ನೈಟ್ರೋಜನ್ ಹಾಗೂ ಅನೇಕ ಸಾವಯವ ಸಂಯುಕ್ತಗಳು ಕಂಡುದು ಆ ಉಪಗ್ರಹದ ಬಗ್ಗೆ ವಿಜ್ಞಾನಿಗಳಲ್ಲಿ ಹೆಚ್ಚಿನ ಕುತೂಹಲವನ್ನು ಮೂಡಿಸಿತು. ಗುರುಗ್ರಹದ ಅನ್ವೇಷಣೆಯ ನಡುವೆ ಆದಂತೇ ಶನಿಗ್ರಹದ ಸಮೀಪದಲ್ಲಿದ್ದಾಗಲೂ ವಾಯೇಜರ್ ನೌಕೆಗಳು ಆ ಗ್ರಹದ ಕೆಲವು ಹೊಸ ಉಪಗ್ರಹಗಳನ್ನು ಗುರುತಿಸಿದವು. ಅದಾದ 23 ವರ್ಷಗಳ ಸುಮಾರಿಗೆ ಶನಿಗ್ರಹದ ಅನ್ವೇಷಣೆಯ ಸಂಬಂಧದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು. 1997ರಲ್ಲಿ ಉಡಾಯಿಸಲಾದ ಅಮೆರಿಕದ ಕೆಸ್ಸಿನಿ ನೌಕೆ 2004 ಜುಲೈನಲ್ಲಿ ಶನಿಗ್ರಹದ ಕೃತಕ ಉಪಗ್ರಹವಾಗಿ ಆ ಗ್ರಹದ ಅನ್ವೇಷಣೆಯನ್ನು ಪ್ರಾರಂಭಿಸಿದ್ದೇ ಇದಕ್ಕೆ ಕಾರಣ. ಕೆಸ್ಸಿನಿಯ ಬೆನ್ನೇರಿ ಶನಿಯ ಸಮೀಪಕ್ಕೆ ಧಾವಿಸಿದ ಹೊಯ್ಗನ್ಸ್ ಎಂಬ ಕೋಶ 2005 ಜನವರಿಯಲ್ಲಿ ಟೈಟನ್‌ನ ಮೇಲೆ ಯಶಸ್ವಿಯಾಗಿ ಇಳಿಯಿತು.

ಸೌರವ್ಯೂಹದ ಏಳನೆಯ ಗ್ರಹವಾದ ಯುರೇನಸ್‌ನ ಅನ್ವೇಷಣೆಯನ್ನು ಅದರ ಸಮೀಪದಿಂದ ನಡೆಸಿರುವ ಏಕೈಕ ರೋಬೋಟ್ ನೌಕೆಯಾದ ವಾಯೇಜರ್ 2 1986 ಜನವರಿಯಲ್ಲಿ ಯುರೇನಸ್ ಅನ್ನು ಸಂಧಿಸಿತು. ಯುರೇನಸ್‌ನ ಆ ಭೇಟಿಯ ವೇಳೆಯಲ್ಲಿ ವಾಯೇಜರ್ 2 ಆ ಗ್ರಹಕ್ಕೆ ಉಂಗುರಗಳಿರುವುದನ್ನು ಹಾಗೂ ಕನಿಷ್ಠ ಪಕ್ಷ ಉಪಗ್ರಹಗಳಿರುವುದನ್ನು ಸ್ಪಷ್ಟಪಡಿಸುವುದಲ್ಲದೇ ಆ ವೇಳೆಗಾಗಲೇ ಗಮನಿಸಲಾಗಿದ್ದ ಯುರೇನಸ್‌ನ ಐದು ಉಪಗ್ರಹಗಳ ವಿವರಗಳನ್ನು ಪ್ರದರ್ಶಿಸುವಾಗ ಚಿತ್ರಗಳನ್ನು ಪ್ರಸಾರ ಮಾಡಿತು.

ಇದಾದ ಬಳಿಕ ಬರಿಗಣ್ಣಿಗೆ ಗೋಚರಿಸದ ನೆಪ್ಚೂನ್‌ನ ಸಮೀಪದಲ್ಲಿ ಆ ನೌಕೆ 1989ರ ಆಗಸ್ಟ್‌ನಲ್ಲಿ ಹಾದುಹೋಯಿತು. ಆ ನಡುವೆ ನೆಪ್ಚೂನ್‌ನ ಮೇಲಿನ ಒಂದು ಬೃಹತ್ ಚುಕ್ಕಿ, ನೆಪ್ಚೂನ್‌ನ ಉಂಗುರಗಳು ಹಾಗೂ ನೆಪ್ಚೂನ್‌ನ ದೊಡ್ಡ ಉಪಗ್ರಹವಾದ ಟ್ರೈಟನ್‌ನ ಮೇಲೆ ಏಳುತ್ತಿದ್ದ ಬೃಹತ್ ಬುಗ್ಗೆಗಳು ವಿಜ್ಞಾನಿಗಳನ್ನು ಆಶ್ಚರ್ಯಕ್ಕೀಡುಮಾಡಿದವು.

ಸಾಮಾನ್ಯವಾಗಿ ಸೌರವ್ಯೂಹದ 9ನೆಯ ಗ್ರಹವಾದ ಪ್ಲೂಟೋದ ಅನ್ವೇಷಣೆಯನ್ನು ಇದುವರೆಗೂ ಯಾವ ರೋಬೋಟ್‌ನೌಕೆಯೂ ಅದರ ಸಮೀಪಕ್ಕೆ ತೆರಳಿ, ನಡೆಸಿಲ್ಲ. ಆದರೆ ಭೂಮಿಯನ್ನು 600 ಕಿಮೀ ಎತ್ತರದಲ್ಲಿ ಸುತ್ತುತ್ತಿರುವ ಹಬಲ್ ಅಂತರಿಕ್ಷ ದೂರದರ್ಶಕ ಆ ಗ್ರಹ ಹಾಗೂ ಅದರ ಉಪಗ್ರಹವಾದ ಷರೋನ್ ಇವುಗಳ ಅಸ್ಪಷ್ಟವಾದ ಚಿತ್ರಗಳನ್ನು ತೆಗೆಯುವಲ್ಲಿ ಯಶಸ್ವಿಯಾಗಿದೆ.

ಕೇವಲ ಸೌರವ್ಯೂಹದ ಗ್ರಹ ಹಾಗೂ ಉಪಗ್ರಹಗಳಲ್ಲದೆ ಸೌರವ್ಯೂಹದ ಕೇಂದ್ರವಾದ ಸೂರ್ಯ, ಪುಟ್ಟ ಆಕಾಶಕಾಯಗಳಾದ ಕ್ಷುದ್ರಗ್ರಹಗಳು ಹಾಗೂ ಧೂಮಕೇತುಗಳು, ಇವುಗಳ ಅನ್ವೇಷಣೆಯನ್ನೂ ರೋಬೋಟ್‌ನೌಕೆಗಳು ಕಳೆದ ಐದು ದಶಕಗಳ ಸುಮಾರಿನಲ್ಲಿ ನಡೆಸಿವೆ.

ಆ ಪೈಕಿ ಜರ್ಮನಿ–ಅಮೆರಿಕಗಳು ಜಂಟಿಯಾಗಿ ಹಮ್ಮಿಕೊಂಡ ಹೀಲಿಯೋಸ್ ಕಾರ್ಯಕ್ರಮದ ಎರಡು ರೋಬೋಟ್ ನೌಕೆಗಳು 1970ರ ದಶಕದ ಮಧ್ಯಭಾಗದ ಸುಮಾರಿಗೆ ಶುಕ್ರಗ್ರಹದ ಕಕ್ಷೆಯೊಳಗೆ ನುಸುಳಿ ಸೂರ್ಯನನ್ನು ಸಾಕಷ್ಟು ಹತ್ತಿರದಿಂದ ಅನ್ವೇಷಿಸಿದವು. ಅವುಗಳಲ್ಲಿ ಒಂದಾದ ಹೀಲಿಯೋಸ್–1976ರಲ್ಲಿ ಸೂರ್ಯನಿಗೆ ಬುಧನಿಗಿಂತ ಹತ್ತಿರದಲ್ಲಿತ್ತು. ಇದರೊಂದಿಗೆ 1970ರ ದಶಕದಲ್ಲಿ ಭೂಮಿಯನ್ನು ಸುತ್ತುತ್ತಿದ್ದ ಸ್ಕೈಲ್ಯಾಬ್ ಅಂತರಿಕ್ಷ ನಿಲ್ದಾಣ ಹಾಗೂ 1980ರ ದಶಕದಲ್ಲಿ ಸೋಲಾರ್ ಮ್ಯಾಕ್ಸ್ ಉಪಗ್ರಹ ಇವುಗಳು ಸೌರ ವೀಕ್ಷಣೆಯನ್ನು ಭೂಕಕ್ಷೆಯಿಂದಲೇ ನಡೆಸಿದವು. 1990ರ ದಶಕದ ಆದಿಯಲ್ಲಿ ಯುರೋಪ್‌ನ ಯೂಲಿಸಿಸ್ ನೌಕೆ ಸೂರ್ಯನ ಧ್ರುವಪ್ರದೇಶಗಳನ್ನು ಅನ್ವೇಷಿಸಿತು. ಅದೇ ದಶಕದ ಮಧ್ಯಭಾಗದಿಂದ ಸೋಹೋ ಎಂಬ ಅಮೆರಿಕ–ಯುರೋಪಿನ ರೋಬಾಟ್ ನೌಕೆ ಸೂರ್ಯನನ್ನು ಸದಾಕಾಲ ವೀಕ್ಷಿಸುತ್ತಾ ಆ ನಕ್ಷತ್ರದಿಂದ ಜನಿತವಾಗಿ ಭೂಮಿಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುವ ಬೃಹತ್ ಸೌರಜ್ವಾಲೆಗಳ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡುತ್ತಿದೆ. ಇದರೊಂದಿಗೇ ಇಂದು ಜಪಾನಿನ ಯೋಕೋ, ಅಮೆರಿಕದ ಪೋಲಾರ್, ಯುರೋಪ್‌ನ ಕ್ಲಸ್ಟರ್ ಮುಂತಾದ ಉಪಗ್ರಹಗಳು ಕೂಲಂಕಷವಾದ ಸೌರವೀಕ್ಷಣೆಯನ್ನು ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ನಡೆಸುತ್ತಿವೆ.

ಇನ್ನು ಸೌರವ್ಯೂಹದ ಪುಟ್ಟ ಆಕಾಶಕಾಯಗಳ ಅನ್ವೇಷಣೆಯ ವಿಷಯಕ್ಕೆ ಬಂದರೆ ಆ ಸಂಬಂಧದಲ್ಲಿ ಕ್ಷುದ್ರಗ್ರಹ (ಆಸ್ಟರಾಯ್ಡ್) ಒಂದರ ಅನ್ವೇಷಣೆ ನಡೆಸಿದ ಮೊದಲ ನೌಕೆ ಗ್ಯಾಲಲೆಯೋ ಎನ್ನಬಹುದು. ಗುರುಗ್ರಹಕ್ಕೆ ತೆರಳುವ ನಡುವೆ ಆ ನೌಕೆ ಗ್ಯಾಸ್ಪ್ರಾ ಹಾಗೂ ಐಡಾ ಎಂಬ ಎರಡು ಕ್ಷುದ್ರಗ್ರಹಗಳ ಅನ್ವೇಷಣೆಯನ್ನು ನಡೆಸಿತು. ಇದಾದ ಬಳಿಕ 1990ರ ದಶಕದ ಉತ್ತರಾರ್ಧದಲ್ಲಿ ಉಡಾಯಿಸಲಾದ ನಿಯರ್ ಎಂಬ ಅಮೆರಿಕದ ಪುಟ್ಟ ರೋಬೋಟ್ ನೌಕೆ 2000ದಲ್ಲಿ ಎರೋಸ್ ಎಂಬ ಕ್ಷುದ್ರಗ್ರಹದ ಕೃತಕ ಉಪಗ್ರಹವಾಗಿ ಆ ಕ್ಷುದ್ರಗ್ರಹದ ಮೇಲೆ ಸುರಕ್ಷಿತವಾಗಿ ಇಳಿಯಿತು.

ಇನ್ನು ಸೌರವ್ಯೂಹದ ಧೂಮಕೇತುವೊಂದನ್ನು ಅನ್ವೇಷಿಸಿದ ಮೊದಲ ರೋಬೋಟ್ ನೌಕೆಯೆಂದರೆ ಐಸ್. ಆ ಪುಟ್ಟ ನೌಕೆ 1985ರಲ್ಲಿ ಜಾಕೋಬಿನಿ–ಜಿನ್ನರ್ ಎಂಬ ಧೂಮಕೇತುವಿನ ಬಾಲದ ಮೂಲಕ ಹಾದುಹೋಯಿತು. ನಂತರ 1986ರಲ್ಲಿ ವಿಶ್ವವಿಖ್ಯಾತ ಹ್ಯಾಲಿ ಧೂಮಕೇತು ಸೌರವ್ಯೂಹದ ಒಳಭಾಗದಲ್ಲಿದ್ದಾಗ ಅದರ ಅನ್ವೇಷಣೆಯನ್ನು ಐದು ರೋಬೋಟ್ ನೌಕೆಗಳು ನಡೆಸಿದವು. ಆ ಪೈಕಿ ಜಪಾನಿನ ಸುಯಿಸಿ ಮತ್ತು ಸಾಕಿಗಾಕೆ ಹ್ಯಾಲಿಯ 'ಶಿರ'ದಿಂದ ಸಾಕಷ್ಟು ದೂರ ಇದ್ದೇ ಆ ಧೂಮಕೇತುವಿನ ಅನ್ವೇಷಣೆ ನಡೆಸಿದರೆ ಸೋವಿಯತ್ ರಷ್ಯದ ವೇಗಾ–1 ಮತ್ತು ವೇಗಾ–2 ನೌಕೆಗಳು ಹ್ಯಾಲಿಯ ಶಿರವನ್ನು ಪ್ರವೇಶಿಸಿ ಆ ಬಗ್ಗೆ ವರದಿ ನೀಡಿದವು. ಕೊನೆಗೆ ಯುರೋಪಿನ ಜಿಯೊಟ್ಟೊ ಎಂಬ ಪುಟ್ಟ ನೌಕೆ ಹ್ಯಾಲಿಯ 'ಶಿರ'ವನ್ನು ಪ್ರವೇಶಿಸಿ ಅದರ ಘನರೂಪದ ತಿರುಳಿನಿಂದ ಸ್ವಲ್ಪವೇ ದೂರದಲ್ಲಿ ಹಾದುಹೋಗಿ ಆ ತಿರುಳಿನ ಚಿತ್ರಗಳನ್ನು ಭೂಮಿಗೆ ಪ್ರಸಾರ ಮಾಡಿತು. ಅನಂತರ ಅದೇ ನೌಕೆ 1992ರಲ್ಲಿ ಗ್ರಿಗ್–ಸ್ಕೆಲ್ಲರ್‌ಅಪ್ ಎಂಬ ಮತ್ತೊಂದು ಧೂಮಕೇತುವನ್ನು ಅನ್ವೇಷಿಸುವಲ್ಲಿ ಯಶಸ್ವಿಯಾಯಿತು. ಇದಾದ ಸುಮಾರು ಒಂದು ದಶಕದ ಅನಂತರ (2001) ಅಮೆರಿಕದ 'ಡೀಪ್ ಸ್ಪೇಸ್–1' ನೌಕೆ 'ಬೊರೆಲ್ಲಿ' ಎಂಬ ಧೂಮಕೇತುವನ್ನು ಸಂಧಿಸಿ ಅನ್ವೇಷಿಸಿತು. ಇತ್ತೀಚೆಗೆ (2004) ಅಮೆರಿಕದ ಸ್ಟಾರ್‌ಡಸ್ಟ್ ನೌಕೆ ವಿಲ್ಡ್ 2 ಎಂಬ ಧೂಮಕೇತುವಿನ 'ಧೂಳನ್ನು' ಸಂಗ್ರಹಿಸಿಕೊಂಡು ಭೂಮಿಯತ್ತ ಹಿಂತಿರುಗಿ ಬಂದಿತು. 2004ರಲ್ಲಿ ಐರೋಪ್ಯ ಅಂತರಿಕ್ಷ ಸಂಸ್ಥೆ 'ಈಸಾ'ವು ರೊಸೆಟ್ಟಾ ಎಂಬ ರೋಬೋಟ್‌ನೌಕೆಯನ್ನು ಉಡಾಯಿಸಿತು. 2014ರಲ್ಲಿ ಆ ನೌಕೆ ಚುರ್ಯುಮೋವ್ ಗೆರಾಸಿಮೆಂಕೊ ಎಂಬ ಧೂಮಕೇತುವನ್ನು ಸಂಧಿಸಿ ಅದರ ಮೇಲೆ ಫಿಲೇ ಎಂಬ ಕೋಶವೊಂದನ್ನು ಇಳಿಸಲಿದೆ. 2005ರ ಜನವರಿಯಲ್ಲಿ ಅಮೆರಿಕ ಡೀಪ್ ಇಂಪಾಕ್ಟ್ ಎಂಬ ರೋಬೋಟ್ ನೌಕೆಯೊಂದನ್ನು ಉಡಾಯಿಸಿತು. 2005 ಜುಲೈನಲ್ಲಿ ಆ ನೌಕೆ ಟೆಂಪಲ್ 1 ಎಂಬ ಧೂಮಕೇತುವನ್ನು ಸಂಧಿಸಿ, ತನ್ನಲ್ಲಿರುವ ಕೋಶವೊಂದು ಅದಕ್ಕೆ ಅಪ್ಪಳಿಸಿತು. ಆ ಮೂಲಕ ಧೂಮಕೇತುವೊಂದರ ಆಂತರಿಕ ರಚನೆಯನ್ನು ಅರಿಯುವ ಪ್ರಯತ್ನವನ್ನು ವಿಜ್ಞಾನಿಗಳು ಮಾಡಿದ್ದಾರೆ. (ಕೆ.ಜಿ.;ಬಿ.ಆರ್.ಜಿ)

**ಅಂತರಿಕ್ಷೀಯ ಟ್ರಾಂವೇ :** ವಸ್ತುಗಳನ್ನು ಪೀಪಾಯಿಗಳಲ್ಲಿ (ಬಕೆಟ್ಟು) ತುಂಬಿ ಉಕ್ಕಿನಿಂದ ಮಾಡಿದ ದಪ್ಪ ಹಗ್ಗಗಳ ಮೇಲೆ ಜೋತುಹಾಕಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಭೂಮಿಯ ಆಧಾರವಿಲ್ಲದೆ ಯಂತ್ರದ ಸಹಾಯದಿಂದ ಸಾಗಿಸುವ ವಿಧಾನಕ್ಕೆ ಅಂತರಿಕ್ಷೀಯ ಸೂತ್ರಪಥ ಅಥವಾ ಅಂತರಿಕ್ಷೀಯ ಟ್ರಾಂವೇ ಎನ್ನಬಹುದು. ಭೂಮಿ ಹಳ್ಳತಿಟ್ಟು, ಬೆಟ್ಟಗುಡ್ಡ, ನದಿ ಕೊಳದಿಂದ ಕೂಡಿರುವಾಗ ಅತಿ ಸುಲಭವಾಗಿ

ಲೋಹಗಳ ಅದಿರು ಅಥವಾ ಕಲ್ಲುಗಳನ್ನು ಅವು ಸಿಗುವ ಸ್ಥಳದಿಂದ ಗಣಿಗಳ ಅಥವಾ ಅಣೆಕಟ್ಟಿನ ಸ್ಥಳಗಳಿಗೆ ಟ್ರಾಂವೇಗಳ ಮೂಲಕ ಸಾಗಿಸುತ್ತಾರೆ. ದುಂಡಗೆ ದಪ್ಪನಾಗಿರುವ ಉಕ್ಕಿನ ಹಗ್ಗಗಳನ್ನು ವರ್ತುಳಾಕಾರದಲ್ಲಿ ಮನುಷ್ಯಶಕ್ತಿ ಅಥವಾ ವಿದ್ಯುತ್‌ಶಕ್ತಿಯಿಂದ ಸುತ್ತುವಂತೆ ಮಾಡುತ್ತಾರೆ. ಗಾಲಿಗಳನ್ನೊಳಗೊಂಡ ದೊಡ್ಡ ದೊಡ್ಡ ಪೀಪಾಯಿಗಳನ್ನು ಇಂಥ ಉಕ್ಕಿನ ಹಗ್ಗಗಳ ಮೇಲೆ ಜೋತುಹಾಕಿ ಅದಿರುಗಳನ್ನು ತುಂಬಿ ಸಾಗಿಸಬಹುದು. ಇಂಥ ಪೀಪಾಯಿಗಳು ಒಂದಕ್ಕಿಂತ ಜಾಸ್ತಿ ಇದ್ದು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುತ್ತಿರುತ್ತವೆ. ವರ್ತುಳಾಕಾರದಲ್ಲಿ ಸುತ್ತುವುದರಿಂದ ಒಂದು ಕಡೆಯಲ್ಲಿ ಅದಿರುಗಳನ್ನು ಪೀಪಾಯಿಗಳಲ್ಲಿ ತುಂಬುವುದಕ್ಕೂ ಅದೇ ಸಂದರ್ಭದಲ್ಲಿ ಇನ್ನೊಂದು ಕಡೆಯಲ್ಲಿ ಅದಿರುಗಳನ್ನು ಖಾಲಿ ಮಾಡುವುದಕ್ಕೂ ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಅಂತರಿಕ್ಷೀಯ ಟ್ರಾಂವೇಗಳನ್ನು ಗಣಿಗಳ ಪ್ರದೇಶದಲ್ಲಿ ಕಾಣಬಹುದು. ಭದ್ರಾವತಿಯ ಹತ್ತಿರವಿರುವ ಕೆಮ್ಮಣ್ಣುಗುಂಡಿಯ ಮೇಲಿನ ಕಬ್ಬಿಣದ ಅದಿರನ್ನು ಪೀಪಾಯಿಗಳಲ್ಲಿ ತುಂಬಿ ಹಗ್ಗಗಳ ಮೇಲೆ ಜೋತುಹಾಕಿ ವಿದ್ಯುತ್ ಶಕ್ತಿಯಿಂದ ತಿರುಗಿಸಿದಾಗ ಪೀಪಾಯಿಗಳು ವೇಗದಿಂದ ಚಲಿಸಿ ಕೆಮ್ಮಣ್ಣುಗುಂಡಿ ಗುಡ್ಡದ ಕೆಳಭಾಗಕ್ಕೆ ತಂದುಹಾಕುತ್ತವೆ.

ಭಾಕ್ರಾ ಅಣೆಕಟ್ಟಿನ ಪ್ರದೇಶದಲ್ಲಿ ಕಲ್ಲನ್ನು ಸಾಕಷ್ಟು ದೂರದಿಂದ ಅಣೆಕಟ್ಟಿನ ಪ್ರದೇಶಕ್ಕೆ ಸಾಗಿಸಲು, ಮೂರು ಅಥವಾ ನಾಲ್ಕು ಅಡಿ ಅಗಲದ ಚರ್ಮದ ಪಟ್ಟಿಯನ್ನು ಸುತ್ತುತ್ತಿರುವ ದುಂಡುಗಾಲಿಗಳ ಮೇಲೆ ಇರಿಸಿ ಚರ್ಮದ ಪಟ್ಟಿ ಚಲಿಸುವಂತೆ ಮಾಡಿ, ಅದರ ಮೇಲೆ ಕಲ್ಲುಗಳನ್ನಿಟ್ಟು, ಕೆಲಸದ ನಿವೇಶನದಲ್ಲಿ ಸುರಿದಿದ್ದಾರೆ. ಈ ತರದ ಏರ್ಪಾಡಿಗೆ ಚರ್ಮದ ಪಟ್ಟಿಯ ಮೇಲೆ ಸಾಗಿಸುವ ವಿಧಾನವೆನ್ನಬಹುದು (ಬೆಲ್ಟ್ ಕನ್ವೇಯರ್ಸ್).

ಇನ್ನು ಕೆಲವು ಸಂದರ್ಭಗಳಲ್ಲಿ ಪೀಪಾಯಿಗಳನ್ನು ಉಕ್ಕಿನ ದಪ್ಪ ಹಗ್ಗಗಳಿಂದ ಕಟ್ಟಿ ಯಂತ್ರಗಳ ಮೂಲಕ ಎತ್ತಿಹಿಡಿದು ಸುತ್ತಲೂ ತಿರುಗಿಸಲು ಸಾಧ್ಯವಾಗುವಂತೆ ಮಾಡಿ ನಿರ್ದಿಷ್ಟವಾದ ಸ್ಥಳಗಳಿಗೆ ಕೊಂಡೊಯ್ಯುತ್ತಾರೆ. ಈ ರೀತಿ ಏರ್ಪಾಡಿಗೆ ಸುತ್ತುವ ಟ್ರಾಂವೇ (ರೊಟೇಟಿಂಗ್ ಟ್ರಾಂವೇ) ಎನ್ನಬಹುದು.

ಕಂದರಗಳಿದ್ದಾಗ ವಸ್ತುಗಳನ್ನು ಸಾಗಿಸಲು ಗುಡ್ಡದಿಂದ ಗುಡ್ಡಕ್ಕೆ ರೈಲು ಕಂಬಿಗಳನ್ನು ಹಾಯಿಸಿ ಅದರ ಮೇಲೆ ಸಾಗಣೆ ಮಾಡುವುದುಂಟು. (ಜಿ.ಟಿ.ಜಿ.)

**ಅಂತಲಿಕಿತ :** ಅಥವಾ ಆಂಟಿಯಾಲ್ಕಿಡಾಸ್ ಇಂಡೋಗ್ರೀಕ್ ಪಂಗಡದ ಯೂಕ್ರಟೈಡಿಯನ್ ಮನೆತನಕ್ಕೆ ಸೇರಿದ ದೊರೆ (ಸು.ಪ್ರ.ಶ.ಪೂ 115–100). ಪ್ರಸಿದ್ಧವಾದ ಬೆಸ್‌ನಗರದ ಗರುಡಧ್ವಜದ ಮೇಲಿರುವ ಶಾಸನದಲ್ಲಿ ಈ ದೊರೆಯನ್ನು ಕುರಿತ ಉಲ್ಲೇಖ ಇದೆ. ಇದರ ಪ್ರಕಾರ ಹೆಲಿಯೋಡೋರಸ್ ಎಂಬ ತಕ್ಷಶಿಲೆಯ ಯವನನು ವೈಷ್ಣವ ಧರ್ಮಕ್ಕೆ ಮನಸೋತು ಭಾಗವತನಾಗಿ, ಭಾಗಭದ್ರ ಎಂಬ ದೊರೆಯ ಆಸ್ಥಾನಕ್ಕೆ ಅಂತಲಿಕಿತನಿಂದ ರಾಯಭಾರಿಯಾಗಿ ಕಳುಹಿಸಲ್ಪಟ್ಟನೆಂದು ತಿಳಿಯಬರುತ್ತದೆ. ಬಹುಶಃ ಅಂತಲಿಕಿತ ತಕ್ಷಶಿಲೆಯಲ್ಲಿಯೇ ರಾಜ್ಯವಾಳುತ್ತಿದ್ದನೆಂದು ಊಹಿಸಬಹುದು. ಅಂತಲಿಕಿತ ಮೀನಾಂಡರನ ಮೇಲೆ ಯುದ್ಧ ಮಾಡುವ ಸಲುವಾಗಿ ಭಾಗಭದ್ರ ಎಂಬ ಭಾರತೀಯ ರಾಜನ ಸಹಾಯ ಮತ್ತು ಸ್ನೇಹವನ್ನು ಬಯಸಿರಬೇಕು. ಅಂತಲಿಕಿತನ ನಾಣ್ಯಗಳಲ್ಲಿ ರಾಜನ ಚಿತ್ರ, ಆನೆ ಮತ್ತು ಖರೋಷ್ಠೀಲಿಪಿಯಲ್ಲಿ 'ಮಹಾರಾಜಸ ಜಯಧರಸ ಅಂತಿಯಲಿಖಿತಸ' ಎಂಬ ಬರೆಹಗಳಿವೆ. (ಎ.ವಿ.ಎನ್.)

**ಅಂತಃಶುದ್ಧಿ :** ಮಾನವನ ನೈತಿಕ ಜೀವನದಲ್ಲಿ ಅಂತಃಶುದ್ಧಿಯ ಮಹತ್ತ್ವ ಅತಿ ಹೆಚ್ಚಿನದು. ಅಂತಃಶುದ್ಧಿ ಇಲ್ಲದೆ ಯಾವ ಧಾರ್ಮಿಕ ಕಾರ್ಯಗಳನ್ನು ಮಾಡಿದರೂ ಅವುಗಳಿಗೆ ನೈತಿಕದೃಷ್ಟಿಯಲ್ಲಿ ಬೆಲೆಯಿಲ್ಲ. ಆಡಂಬರಕ್ಕೆ ಮಾಡಿದಂತೆ ಆಗುತ್ತದೆ. ತಾನು ಮಾಡಿದ ಕಾರ್ಯ ಸಾರ್ಥಕವಾಯಿತು ಎಂಬ ತೃಪ್ತಿ ಬರಬೇಕಾದರೆ ಈ ಕಾರ್ಯವನ್ನು ಅಂತಃಶುದ್ಧಿಯಿಂದ ಮಾಡಿರಬೇಕು. ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ ಎಂಬ ಬಸವಣ್ಣನವರ ವಚನ ಸದಾಚಾರವೇ ಅಂತಃಶುದ್ಧಿಯ ಅಡಿಗಲ್ಲೆಂಬ ವಿಷಯವನ್ನು ಸ್ಪಷ್ಟ ಪಡಿಸುತ್ತದೆ.

ಬಾಹ್ಯ ಶುದ್ಧಿಗಿಂತಲೂ ಅಂತಃಶುದ್ಧಿಯೇ ಮುಖ್ಯವೆಂದು ಎಲ್ಲ ಶಾಸ್ತ್ರಗಳೂ ಹೇಳಿವೆ. ತನುವನ್ನು ತೊಳೆಯುವುದಕ್ಕಿಂತ ಮನವನ್ನು ತೊಳೆಯುವುದು ಮುಖ್ಯವಾದುದು. ಕಾಮಕ್ರೋಧಾದಿಗಳನ್ನು ಒಳಗೆ ಸೇರಿಸಿಕೊಂಡಿರುವವರು ಹೊಲೆಯರೆಂದು ಹಿಂದೂ ಶಾಸ್ತ್ರಗಳು ಹೇಳುತ್ತವೆ. ತ್ರಿಕರಣಶುದ್ಧಿಯಿಂದ ಅಂದರೆ ದೇಹ ಮಾತು ಮನಸ್ಸು ಇವುಗಳ ನೈರ್ಮಲ್ಯದಿಂದ ಮಾಡಿದ ಪೂಜೆಗೆ, ಧರ್ಮಕಾರ್ಯಕ್ಕೆ, ಭಗವಂತ ಒಲಿಯುತ್ತಾನೆಂದು ಹೇಳುತ್ತವೆ. ಯೋಗಶಾಸ್ತ್ರದಲ್ಲಿ ಹೇಳಿರುವಂತೆ ಅಷ್ಟಾಂಗಯೋಗವನ್ನು ಅಭ್ಯಾಸಮಾಡಿದರೆ ಮನಸ್ಸು ಶುಚಿಯಾಗಿ ಜೀವಾತ್ಮ ಪರಮಾತ್ಮ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ. ಮನಸ್ಸಿನ ನಿರ್ಲಿಪ್ತತೆಯನ್ನು ಹೊಂದಲು ಅನುಸರಿಸಬೇಕಾದ ತತ್ತ್ವವನ್ನು ದೃಢವಾಗಿ ನಂಬಿ ಅನುಸರಿಸುವುದೆ ಮನಃಶುದ್ಧಿಯಲ್ಲಿನ ಒಂದು ಕ್ರಮವೆಂದು ಸಹಸ್ರಗೀತಾ ವ್ಯಾಖ್ಯಾನ ಹೇಳುತ್ತದೆ.

ಅಕಾರ್ಯ ಮಾಡಿದವರನ್ನು ಶಿಕ್ಷಿಸುವಾಗಲೂ ಅವರ ಮನಸ್ಸಿನ ಸ್ಥಿತಿಯನ್ನು ವಿಮರ್ಶಿಸಿ ನೋಡಬೇಕೆಂದು ನ್ಯಾಯಶಾಸ್ತ್ರವೂ ನೀತಿಶಾಸ್ತ್ರವೂ ಒಪ್ಪಿಕೊಂಡಿವೆ. ಸದುದ್ದೇಶದಿಂದ ಮಾಡಿದ ಕಾರ್ಯ ಕ್ರೂರವಾಗಿ ಕಂಡರೂ ಅದಕ್ಕಾಗಿ ಕಠಿಣವಾಗಿ ಶಿಕ್ಷಿಸಲಾಗದು. ದುಷ್ಟಭಾವನೆಗಳನ್ನು ಇಟ್ಟುಕೊಂಡು ಮಾಡಿದ ಕಾರ್ಯಕ್ಕೆ ಕಠಿಣ ಶಿಕ್ಷೆಯನ್ನೇ ವಿಧಿಸಲಾಗುತ್ತದೆ. ಪಶ್ಚಾತ್ತಾಪದಿಂದ ಅಂತಃಶುದ್ಧಿಯನ್ನು ಪಡೆಯಬಹುದೆಂದು ನೀತಿಶಾಸ್ತ್ರಜ್ಞರು ಹೇಳುತ್ತಾರೆ. ಅಗ್ನಿಯಲ್ಲಿ ಕಬ್ಬಿಣವನ್ನು ಹದಮಾಡಿದಂತೆ ಪಶ್ಚಾತ್ತಾಪದ ಬೇಗೆಯಲ್ಲಿ ಮನಸ್ಸು ಶುದ್ಧವಾಗುತ್ತದೆ. ಅಂಥ ಮನಸ್ಸಿನಲ್ಲಿ ಪುನಃ ಪಾಪ ಪ್ರವೇಶಿಸಲಾರದು. ಕ್ರಿಸ್ತನು ಪಶ್ಚಾತ್ತಾಪಕ್ಕೆ ಹೆಚ್ಚು ಮಹತ್ತ್ವವನ್ನು ಕೊಟ್ಟು ಪಾಪಕ್ಕೆ ಕ್ಷಮೆಯುಂಟೆಂದು ಬೋಧಿಸಿದ. (ಎ.ಎಸ್.)

**ಅಂತಸ್ಥಶಿಲೆ :** ನವೀನ ಶಿಲೆಗಳಿಂದ ಆವೃತವಾಗಿ ತಳದಲ್ಲಿರುವ ಹಳೆಯ ಶಿಲಾರಚನೆಗಳಿಗೆ ಅಂತಸ್ಥಶಿಲೆಗಳೆಂದು (ಇನ್‌ಲೇಯರ್ಸ್) ಹೆಸರು.




ಜಲಜಶಿಲೆಗಳ ಮೇಲೆ 1. ಶಿಲಾ ಶಿಥಿಲೀಕರಣ 2. ಸ್ತರ ನಿರ್ಮಾಣ 3. ಸ್ತರ ಭಂಗ–ಈ ಪ್ರಕ್ರಿಯೆಗಳುಂಟಾದಾಗ ಅಂತಸ್ಥಶಿಲೆಗಳು ರೂಪುಗೊಳ್ಳುತ್ತವೆ. ಇವುಗಳಲ್ಲಿ ಎರಡು ವಿಧ : 1. ಸಮತಲ ಜಲಜಶಿಲೆಗಳು ಸಂಚಿತವಾದ ಮೇಲೆ ಮಡಿಕೆಗೊಂಡವು. ಆಮೇಲೆ ಇವು ಪುಡಿಪುಡಿಯಾಗುತ್ತವೆ. 2. ಸ್ತರಭಂಗ ಕ್ರಿಯೆಗಳಿಂದ ಉಂಟಾದುವು.

ಒಂದನೆಯ ಚಿತ್ರದಲ್ಲಿ 'ಅ'ದಿಂದ ಪ್ರಾರಂಭವಾಗಿ 'ಉ' ವರೆಗೆ ಶಿಲಾಪದರಗಳು




ಒಂದರ ಮೇಲೊಂದು ಕವಿದಿರುವುದನ್ನು ಕಾಣಬಹುದು. ಈ ಮಡಿಕೆಗಳು ಶಿಖರಾಕೃತಿಯಲ್ಲಿ ಬೆಳೆದಿವೆ. ಮೇಲಿನ ಪದರ ಮನೆಯ ಸೂರಿನಂತೆ ಇಕ್ಕಡೆಯಲ್ಲೂ ಇಳಿಜಾರಾಗಿ ಬಾಗಿದೆ. ಇಲ್ಲಿ ಆ ಭಾಗ ಅಂತಸ್ಥಶಿಲೆ. ಎರಡನೆಯ ಚಿತ್ರದಲ್ಲಿ ಶಿಖರ ಕುಸಿದು ಕಣಿವೆಯಾಗಿದೆ. ಆ ಭಾಗದ ಅಂತಸ್ಥಶಿಲೆಯ ಎರಡೂ ಪಕ್ಕಗಳಲ್ಲಿ ವರ್ಣಾನುಕ್ರಮದಲ್ಲಿ ಇತರ ಶಿಲಾಪದರಗಳು ಏರ್ಪಟ್ಟಿವೆ. (ಐ.ಆರ್.ವಿ.)

**ಅಂತಾರಾಷ್ಟ್ರೀಯ ಅಣುಶಕ್ತಿನಿಯೋಗ :** ಪರಮಾಣುಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ಅಂದರೆ ಪ್ರಪಂಚದಾದ್ಯಂತ ಸಾರ್ವಜನಿಕ ಆರೋಗ್ಯ ಮತ್ತು ಸಂಪದಭಿವೃದ್ಧಿ ಕಾರ್ಯಗಳಿಗೆ ಮಾತ್ರ ಬಳಸಲು ಸಾಧ್ಯವಾಗುವಂತೆ ಮಾಡುವುದೇ ಇದರ ಮೂಲ

ಉದ್ದೇಶ. 1957ರ ಜುಲೈ 29ರಂದು ಅಸ್ತಿತ್ವಕ್ಕೆ ಬಂತು. ಪರಮಾಣುಶಕ್ತಿಯನ್ನು ಉತ್ಪಾದಿಸಲು ಈ ನಿಯೋಗದಿಂದ ಆರ್ಥಿಕ ನೆರವನ್ನು ಪಡೆದ ಯಾವ ರಾಷ್ಟ್ರವಾಗಲಿ ತಾನು ಉತ್ಪಾದಿಸಿದ ಪರಮಾಣುಶಕ್ತಿಯನ್ನು ಯುದ್ಧೋದ್ಯಮಗಳಿಗೆ ಬಳಸಿಕೊಳ್ಳದಂತೆ ನೋಡಿಕೊಳ್ಳಲು ಈ ನಿಯೋಗ ಒಂದು ಹತೋಟಿಕ್ರಮವನ್ನು ಇಟ್ಟುಕೊಂಡಿದೆ. ಇದರ ಕೇಂದ್ರಕಚೇರಿ ಆಸ್ಟ್ರಿಯದ ವಿಯನ್ನಾದಲ್ಲಿದೆ. (ಎಸ್.ಆರ್.ಪಿ.)

**ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ :** (ನೋಡಿ– ಅಂತಾರಾಷ್ಟ್ರೀಯ ಪುನರ್ರಚನೆ ಮತ್ತು ಅಭಿವೃದ್ಧಿ ಬ್ಯಾಂಕು).

**ಅಂತಾರಾಷ್ಟ್ರೀಯ ಅರ್ಥಶಾಸ್ತ್ರ :** ರಾಷ್ಟ್ರವೊಂದರ ರಾಜಕೀಯ ಎಲ್ಲೆಯನ್ನು ಮೀರಿ ನಡೆಯುವ ಆರ್ಥಿಕ ವ್ಯವಹಾರಗಳ ಕಾರಣಗಳು, ಸ್ವರೂಪ ಹಾಗೂ ಪರಿಣಾಮಗಳನ್ನೂ ಅವುಗಳನ್ನು ನಡೆಸುವ ವ್ಯವಸ್ಥೆಯನ್ನೂ ಕುರಿತ ಅಧ್ಯಯನವೇ ಈ ಶಾಸ್ತ್ರದ ಉದ್ದೇಶ. ವಿದೇಶೀ ಸಂಚಾರ ಮತ್ತು ವಲಸೆ ಹೋಗುವುದು ಬಂಡವಾಳ ಹಾಗೂ ಇತರ ಉತ್ಪಾದನಾಂಗಗಳ (ಫ್ಯಾಕ್ಟರ್ಸ್ ಆಫ್ ಪ್ರೊಡಕ್ಷನ್) ಅಂತಾರಾಷ್ಟ್ರೀಯ ಚಲನೆ, ಸರಕು ಸೇವೆಗಳಲ್ಲಿನ ಆಮದು–ರಫ್ತು ವ್ಯಾಪಾರ–ಇವು ಮುಖ್ಯವಾದ ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗಳಾಗಿವೆ.

ಒಂದು ದೇಶದ ಜನ ಪ್ರಪಂಚದ ಬೇರೆ ಭಾಗಗಳಲ್ಲಿ ನೆಲೆಸುವ ದೃಷ್ಟಿಯಿಂದ ವಲಸೆ ಹೋಗುವುದು ಹಿಂದಿನ ಮೂರು ಶತಮಾನಗಳಲ್ಲಿದ್ದಂತೆ ಈ ಶತಮಾನದಲ್ಲಿ ಮುಖ್ಯವಾಗಿರುವುದಿಲ್ಲ. ಆದರೆ ಆರ್ಥಿಕ ಅಥವಾ ಇತರ ಕಾರಣಗಳಿಗಾಗಿ ಜನರ ವಿದೇಶ ಸಂಚಾರ ಬಹುಮಟ್ಟಿಗೆ ಹೆಚ್ಚಿದೆ. ರಾಷ್ಟ್ರಗಳ ಆಧುನಿಕ ಆರ್ಥಿಕಾಭಿವೃದ್ಧಿಯಲ್ಲಿ ವಿದೇಶೀ ಬಂಡವಾಳದ ಮತ್ತು ತಾಂತ್ರಿಕ ಸಹಾಯದ ಪಾತ್ರ ಯಾವತ್ತೂ ಮಹತ್ವಪೂರ್ಣವಾದುದಾಗಿದೆ. ಪ್ರಪಂಚದ ಒಟ್ಟು ಸರಕುಗಳ ವ್ಯಾಪಾರವೂ ಬೆಳೆದಿದೆ. 1960 ರಲ್ಲಿ ನಡೆದ ಅಂತಾರಾಷ್ಟ್ರೀಯ ವ್ಯಾಪಾರದ ಒಟ್ಟು ಬೆಲೆ 12,719 ಕೋಟಿ ಡಾಲರುಗಳ ಬೆಲೆಗೆ ಸಮನಾಗುವಷ್ಟು ಇದ್ದಿತು. 2007ರಲ್ಲಿ ಈ ಅಂತಾರಾಷ್ಟ್ರೀಯ ವ್ಯಾಪಾರದ ಮೊತ್ತ 16 ಟ್ರಿಲಿಯನ್ ಡಾಲರುಗಳಿಗೂ ಹೆಚ್ಚಾಗಿತ್ತು. ಬ್ಯಾಂಕುಗಳು, ವಿಮಾ ಕಂಪೆನಿಗಳು, ಯಾನವಾಹನ ಕಂಪೆನಿಗಳು – ಇವುಗಳು ವಿದೇಶೀಯರಿಗೂ ಸೇವೆ ಸಲ್ಲಿಸುತ್ತವೆ. ಹೀಗೆ ಅನೇಕ ರೀತಿಯ ಆರ್ಥಿಕ ವ್ಯವಹಾರಗಳ ಮೂಲಕ ಪ್ರಪಂಚದ ವಿವಿಧ ರಾಷ್ಟ್ರಗಳೊಳಗೆ ನಿಕಟ ಬಾಂಧವ್ಯವಿದೆ. ಈ ಆರ್ಥಿಕ ಬಾಂಧವ್ಯಗಳ ಸವಿವರ ಪರಿಶೀಲನೆಯೇ ಅಂತಾರಾಷ್ಟ್ರೀಯ ಅರ್ಥಶಾಸ್ತ್ರದ ಅಧ್ಯಯನದ ವಿಷಯ.

ರಾಷ್ಟ್ರ ರಾಷ್ಟ್ರಗಳಲ್ಲಿ ವ್ಯಾಪಾರ, ಬಂಡವಾಳ ಚಲನೆ ಇವುಗಳು ಏಕೆ ಉದ್ಭವಿಸುತ್ತವೆ, ರಾಷ್ಟ್ರವೊಂದು ಯಾವ ಸರಕುಗಳನ್ನು ಎಲ್ಲೆಲ್ಲಿಗೆ ಯಾವ ಪ್ರಮಾಣದಲ್ಲಿ, ಯಾವ ಬೆಲೆಗೆ ರಫ್ತು ಮಾಡುವುದು ಎಂಬ ವಿಷಯಗಳು, ವಿವಿಧ ರಾಷ್ಟ್ರಗಳ ಲೇಣೆದೇಣೆಗಳು ಸರಿತೂಗುವ ಬಗೆ: ವಿವಿಧ ರಾಷ್ಟ್ರಗಳ ಹಣಗಳ ಪರಸ್ಪರ ವಿನಿಮಯ, ವಿವಿಧ ಮಾದರಿ ವಾಣಿಜ್ಯ ನೀತಿಗಳು; ವಾಣಿಜ್ಯ ಹಾಗೂ ವಿನಿಮಯ ನಿಯಂತ್ರಣ; ಅಂತಾರಾಷ್ಟ್ರೀಯ ಆರ್ಥಿಕ ಸಂಸ್ಥೆಗಳು–ಇವು ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ಪರಿಶೀಲಿಸುವ ಮುಖ್ಯ ವಿಷಯಗಳಾಗಿವೆ. ಈ ಪರಿಶೀಲನೆಯನ್ನು ತಾತ್ವಿಕಮಟ್ಟದಲ್ಲಾಗಲಿ, ವಾಸ್ತವಿಕ ದೃಷ್ಟಿಯಿಂದಾಗಲಿ ನಡೆಸಬಹುದು. ಇವು ಅಂತಾರಾಷ್ಟ್ರೀಯ ಅರ್ಥಶಾಸ್ತ್ರದ ಎರಡು ಮುಖ್ಯ ಭಾಗಗಳಾಗಿವೆ.

ಅರ್ಥಶಾಸ್ತ್ರದ ಸಾಮಾನ್ಯ ತತ್ತ್ವಗಳು ದೇಶದ ಆಂತರಿಕ ಆರ್ಥಿಕ ವ್ಯವಹಾರಗಳಿಗೆ ಅನ್ವಯಿಸುವಂತೆ ಅಂತಾರಾಷ್ಟ್ರೀಯ ವ್ಯವಹಾರಗಳಿಗೂ ಎಷ್ಟುಮಟ್ಟಿಗೆ ಅನ್ವಯಿಸುವುವು ಮತ್ತು ಅಂತಾರಾಷ್ಟ್ರೀಯ ಅರ್ಥಶಾಸ್ತ್ರವೆಂದೇ ಪ್ರತ್ಯೇಕವಾದ ಆರ್ಥಿಕ ಮೀಮಾಂಸೆಗೆ ಇರುವ ಸ್ಥಾನಮಾನಗಳೇನು–ಎಂಬುವು ತಾತ್ವಿಕ ಅಧ್ಯಯನದ ಮುಖ್ಯ ಪ್ರಶ್ನೆಗಳಾಗಿವೆ.

ಸಂಪತ್ಸಾಧನಗಳ ಹಂಚಿಕೆಯ ಅಸಮಾನತೆ ಹಾಗೂ ಕೆಲವು ಸರಕುಗಳ ಬೇಡಿಕೆ ವ್ಯಾಪಕವಾಗಿರುವಂತೆ–ಇವು ದೇಶದೊಳಗಿನ ವಿವಿಧ ಭಾಗಗಳೊಳಗೆ ನಡೆಯುವ ಆರ್ಥಿಕ ವ್ಯವಹಾರಗಳಿಗೆ ಹೇಗೂ ಹಾಗೆಯೇ ವಿವಿಧ ರಾಷ್ಟ್ರಗಳೊಳಗೆ ನಡೆಯುವ ವ್ಯಾಪಾರ ಹಾಗೂ ಇತರ ಆರ್ಥಿಕ ವ್ಯವಹಾರಗಳಿಗೂ ತಳಹದಿಯಾಗಿವೆ. ಇವೆರಡರಲ್ಲಿ ಕಾಣಬರುವ ವ್ಯತ್ಯಾಸಗಳು ಗಾತ್ರ ಅಥವಾ ಪ್ರಮಾಣಕ್ಕೆ ಸಂಬಂಧಿಸಿವೆಯೇ ಹೊರತು ಬೇರೆಬೇರೆ ವಿಧಗಳಿಗಲ್ಲ. ಆದ್ದರಿಂದ ಅರ್ಥಶಾಸ್ತ್ರದ ಸಾಮಾನ್ಯ ನಿಯಮಗಳು ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗಳನ್ನೂ ಸ್ಪಷ್ಟಗೊಳಿಸಬಲ್ಲವು; ಇದಕ್ಕಾಗಿ ಪ್ರತ್ಯೇಕ ಆರ್ಥಿಕ ಮೀಮಾಂಸೆಯ ಆವಶ್ಯಕತೆ ಇಲ್ಲ ಎಂದು ಕೆಲವರ ವಾದವಾಗಿತ್ತು.

ಆದರೆ ಆಧುನಿಕ ಅರ್ಥಶಾಸ್ತ್ರದ ಬೆಳವಣಿಗೆಯಲ್ಲಿ ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ಪ್ರತ್ಯೇಕ ಶಾಖೆಯಾಗಿ ಬೆಳೆದು ಬಂದಿದೆ. ರಾಜಕೀಯ ಪ್ರತ್ಯೇಕತೆ ಮತ್ತು ಸಾಮಾಜಿಕ ಹಾಗೂ ಇತರ ಕಾರಣಗಳಿಂದಾಗಿ ಆಂತರಿಕ ಹಾಗೂ ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗಳಲ್ಲಿ ಸಾಕಷ್ಟು ಮುಖ್ಯ ಭೇದಗಳಿರುವುದೇ ಇದಕ್ಕೆ ಕಾರಣ. ಒಟ್ಟಿನಲ್ಲಿ ಹೇಳುವುದಾದರೆ, ನೀಡಿಕೆ– ಬೇಡಿಕೆ ಶಕ್ತಿಗಳ (ಫೋರ್ಸಸ್ ಆಫ್ ಸಪ್ಲೈ ಅಂಡ್ ಡಿಮಾಂಡ್) ಪರಸ್ಪರ ಪ್ರಭಾವಕ್ಕೆ ಅನುಸಾರವಾಗಿ ರಾಷ್ಟ್ರದೊಳಗೆ ಚಲಿಸುವಷ್ಟು ನಿರಾತಂಕವಾಗಿ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಪರಸ್ಪರ ಕ್ರಿಯಾತ್ಮಕವಾಗಿ ವರ್ತಿಸುವುದಿಲ್ಲ.

ಮೊದಲನೆಯದಾಗಿ ಹೊರದೇಶದ ಬೇಡಿಕೆಯ ಅಥವಾ ನೀಡಿಕೆಯ ಆಧಾರದ ಮೇಲೆ ದೇಶದ ಉತ್ಪನ್ನ ವ್ಯವಸ್ಥೆಯನ್ನು ರಚಿಸುವುದರಲ್ಲಿ ಒಂದು ದೇಶದ ಉದ್ಯಮಿಗಳು ವಿಶೇಷವಾದ ಹೊಣೆಗಾರಿಕೆ ವಹಿಸಬೇಕಾಗುವುದು. ಏಕೆಂದರೆ ಇತರ ದೇಶದ ಬೇಡಿಕೆ–ನೀಡಿಕೆಗಳಲ್ಲಿ ವ್ಯತ್ಯಾಸವುಂಟುಮಾಡುವ ಶಕ್ತಿಗಳು ಇವರ ಉದ್ಯಮಗಳ ಮೇಲೆ ಪ್ರಭಾವ ಹೊಂದಿವೆಯಾದರೂ ಈ ಶಕ್ತಿಗಳ ಮೇಲೆ ಇವರಿಗೆ ಹೆಚ್ಚು ಹತೋಟಿ ಇರುವುದಿಲ್ಲ. ಅಂತಾರಾಷ್ಟ್ರೀಯ ಸಾರಿಗೆ, ಸಂಪರ್ಕ ಹಾಗೂ ವ್ಯಾಪಾರ ಸಮಾಚಾರ ವ್ಯವಸ್ಥೆ ಇವುಗಳ ಬಗ್ಗೆಯೂ ಭೌಗೋಳಿಕ ಹಾಗೂ ರಾಜಕೀಯ ಕಾರಣಗಳಿಂದ ವಿಶೇಷ ಏರ್ಪಾಡುಗಳು ಆವಶ್ಯಕ.

ಎರಡನೆಯದಾಗಿ ಭಾಷೆ, ಧರ್ಮ, ಪದ್ಧತಿಗಳು ಇತ್ಯಾದಿ ಅಂಶಗಳ ಬಗ್ಗೆ ಇರುವ ವೈವಿಧ್ಯ ಮತ್ತು ಪ್ರತಿಯೊಂದು ರಾಷ್ಟ್ರವೂ ನಿರ್ಮಿಸಿರುವ ಕಾನೂನಿನ ನಿರ್ಬಂಧಗಳು– ಇಂಥ ಕಾರಣಗಳಿಂದ ಉತ್ಪಾದನಾಂಗವಾದ ಶ್ರಮ(ಲೇಬರ್), ದೇಶ–ದೇಶಗಳೊಳಗೆ ಸಲೀಸಾಗಿ ಚಲಿಸುವುದಿಲ್ಲ. ಇದರಿಂದ ಪ್ರಪಂಚದ ಶ್ರಮ ವಿಭಜನೆ ಪರಿಪೂರ್ಣವಾಗಲು ಸಾಧ್ಯವಿಲ್ಲ. ಆಯಾ ದೇಶದ ಶ್ರಮಬಲ ಹೆಚ್ಚಾಗಿ ಅಲ್ಲಿನ ಸಂಪತ್ತನ್ನು ರೂಢಿಸುವುದರಲ್ಲಿ ತೊಡಗಬೇಕಾಗಿದೆ.

ಮೂರನೆಯದಾಗಿ, ಬಂಡವಾಳ ಆಂತರಿಕವಾಗಿ ಒಂದು ದೇಶದೊಳಗೆ ಯಾವ ವಿಭಾಗಕ್ಕಾಗಲಿ, ಉದ್ಯಮಕ್ಕಾಗಲಿ ಚಲಿಸಲು ಇರುವಷ್ಟು ಅವಕಾಶ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಇರುವುದಿಲ್ಲ. ಈ ಬಗ್ಗೆ ಪ್ರತಿಯೊಂದು ರಾಷ್ಟ್ರಸರ್ಕಾರವೂ ವಿಶೇಷ ಕಾನೂನಿನ ಕಟ್ಟುಪಾಡುಗಳನ್ನು ನಿರ್ಮಿಸಿದೆ. ಅಲ್ಲದೆ, ವಿವಿಧ ಹಣಗಳ ವಿನಿಮಯ ಮತ್ತು ವಿವಿಧ ರಾಷ್ಟ್ರಗಳ ವಾಣಿಜ್ಯನೀತಿ– ಇವುಗಳು ಅಂತಾರಾಷ್ಟ್ರೀಯ ಬಂಡವಾಳ ಸಮಸ್ಯೆಯನ್ನು ಒಂದು ವಿಶೇಷ ಸಮಸ್ಯೆಯಾಗಿ ಮಾಡಿವೆ. ಆದ್ದರಿಂದ ಅಂತಾರಾಷ್ಟ್ರೀಯ ಬಂಡವಾಳ ಚಲನೆಗೆ ಸಂಬಂಧಿಸಿದಂತೆ ಒಂದು ವಿಶೇಷ ಮೀಮಾಂಸೆ ಆವಶ್ಯಕವಾಗಿ ಬೆಳೆದುಬಂದಿದೆ. ಅಂತಾರಾಷ್ಟ್ರೀಯ ಬಂಡವಾಳ ಸಮಸ್ಯೆಯ ಪರಿಹಾರಕ್ಕಾಗಿ ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳೂ ಏರ್ಪಾಟಾಗಿವೆ.

ನಾಲ್ಕನೆಯದಾಗಿ, ಅಂತಾರಾಷ್ಟ್ರೀಯ ವ್ಯಾಪಾರ ಆಯಾ ರಾಷ್ಟ್ರ ಅನುಸರಿಸುವ ವಾಣಿಜ್ಯ ನೀತಿಗೆ ಅನುಸಾರವಾಗಿ ನಡೆಯತಕ್ಕದ್ದಾಗಿದೆ. ಸುಂಕ ನೀತಿ, ಸುಂಕ ದರಗಳು, ಆಮದು ರಫ್ತುಗಳ ಬಗ್ಗೆ ಇತರ ನಿಯಂತ್ರಣ ಕ್ರಮಗಳು ಅಥವಾ ಒಪ್ಪಂದಗಳು – ಇತ್ಯಾದಿ ವಿಷಯಗಳ ಬಗ್ಗೆ ಪ್ರತಿಯೊಂದು ರಾಷ್ಟ್ರವೂ ಅದರ ಹಿತಕ್ಕೆ ಅನುಸಾರವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಸ್ವಾತಂತ್ರ್ಯ ಪಡೆದಿದೆ. ಇದರಿಂದಾಗಿ ಉದ್ಭವಿಸುವ ಸಮಸ್ಯೆಗಳು ಆಂತರಿಕ ವ್ಯಾಪಾರದಲ್ಲಿ ಸಾಮಾನ್ಯವಾಗಿ ಏಳುವುದಿಲ್ಲ. ಹೀಗೆ ಅಂತಾರಾಷ್ಟ್ರೀಯ ವಾಣಿಜ್ಯ ನೀತಿ ಮತ್ತು ಇದಕ್ಕೆ ಸಂಬಂಧಪಟ್ಟ ಸಂಸ್ಥೆಗಳ ಹಾಗೂ ಸಮಸ್ಯೆಗಳ ಪರಿಶೀಲನೆ ಅಂತಾರಾಷ್ಟ್ರೀಯ ಅರ್ಥಶಾಸ್ತ್ರದ ಒಂದು ಮುಖ್ಯ ಭಾಗವಾಗಿದೆ.

ಐದನೆಯದಾಗಿ, ಅಂತಾರಾಷ್ಟ್ರೀಯ ವ್ಯಾಪಾರ ವ್ಯವಹಾರಗಳು ಬೇರೆಬೇರೆ ಹಣಗಳ ಮಾಧ್ಯಮದ ಮೂಲಕ ನಡೆಯಬೇಕಾಗಿರುವುದರಿಂದ ಈ ವ್ಯವಹಾರಗಳಿಗೂ ಆಂತರಿಕ ಆರ್ಥಿಕ ವ್ಯವಹಾರಗಳಿಗೂ ಇನ್ನೊಂದು ಮುಖ್ಯವಾದ ವ್ಯತ್ಯಾಸ ಉಂಟಾಗಿದೆ. ಇದರಿಂದ ವಿವಿಧ ರಾಷ್ಟ್ರಗಳ ನಡುವಿನ ಲೇಣೆ–ದೇಣೆ ವ್ಯವಹಾರಗಳ ಸಾಗಣೆಗೆ ವಿಶೇಷ ಏರ್ಪಾಡುಗಳು ಆವಶ್ಯಕ. ಸರಿಯಾದ ವಿನಿಮಯ ದರ ನಿರ್ಣಯ, ಹಾಗೂ ವಿವಿಧ ಹಣಗಳ ಪರಸ್ಪರ ವಿನಿಮಯ ಸೌಕರ್ಯ ಮತ್ತು ವಿವಿಧ ರಾಷ್ಟ್ರಗಳ ಲೇಣೆ–ದೇಣೆ ಸರಿದೂಗಿಸುವ ಕ್ರಮಗಳು– ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳು ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗಳನ್ನು ಆಂತರಿಕ ಆರ್ಥಿಕ ವ್ಯವಹಾರಗಳಿಂದ ಸ್ಪಷ್ಟವಾಗಿ ಪ್ರತ್ಯೇಕಿಸಿವೆ.

ಹೀಗೆ ಅನೇಕ ಕಾರಣಗಳಿಂದ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ನಡೆಯುವ ಎಲ್ಲ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ರೀತಿ ನೀತಿಗಳ ಬಗ್ಗೆ ಮೀಮಾಂಸಾ ದೃಷ್ಟಿಯಿಂದಲೂ ಸಮಸ್ಯೆಗಳ ಪರಿಹಾರ ದೃಷ್ಟಿಯಿಂದಲೂ ವಿಶೇಷ ಅಧ್ಯಯನ ಆವಶ್ಯಕವಾಗಿದೆ. ಇಂಥ ಅಧ್ಯಯನವೇ ಅಂತಾರಾಷ್ಟ್ರೀಯ ಅರ್ಥಶಾಸ್ತ್ರವೆನಿಸುವುದು.

ಪ್ರಪಂಚದ ಆರ್ಥಿಕಾಭಿವೃದ್ಧಿಗೆ ವಿಶೇಷ ಪ್ರಾಮುಖ್ಯ ನೀಡಲಾಗುತ್ತಿರುವ ಕಳೆದ ಎರಡು ದಶಕಗಳಲ್ಲಿ ಅಂತಾರಾಷ್ಟ್ರೀಯ ಅರ್ಥಶಾಸ್ತ್ರಕ್ಕೆ ಹೊಸ ಆಯಾಮ ಬಂದಿದೆ. ವಿವಿಧ ರಾಷ್ಟ್ರಗಳು ಆರ್ಥಿಕ ಪ್ರಗತಿ ಪಥದಲ್ಲಿ ವಿವಿಧ ಹಂತಗಳಲ್ಲಿವೆ. ಮುಂದುವರಿದಿರುವ ರಾಷ್ಟ್ರಗಳು ಪೂರ್ಣೋದ್ಯೋಗ, ಜೀವನ ಮಟ್ಟದ ಸಾರ್ವತ್ರಿಕ ಏರಿಕೆ, ವಿಶ್ವಸಂಪರ್ಕ– ಇಂಥ ಘನ ಉದ್ದೇಶಗಳಿಗೆ ಅನುಗುಣವಾಗಿ ಅವುಗಳ ಆರ್ಥಿಕ ವ್ಯವಸ್ಥೆಯನ್ನು ರೂಪಿಸುತ್ತಿವೆ. ಹಿಂದುಳಿದಿರುವ ರಾಷ್ಟ್ರಗಳು, ಮುಂದುವರಿದಿರುವ ರಾಷ್ಟ್ರಗಳ ಆರ್ಥಿಕಮಟ್ಟಗಳನ್ನು ಸಾಧಿಸುವ ಹಂಬಲದಿಂದ ಆದಷ್ಟು ಶೀಘ್ರವಾಗಿ ಮುನ್ನುಗ್ಗುತ್ತಿವೆ. ಮೊದಲ ಬಾರಿಗೆ ಪ್ರಪಂಚದ ನಾನಾ ರಾಷ್ಟ್ರಗಳು ರಾಜಕೀಯ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಆರ್ಥಿಕ ಸಹಕಾರವೇರ್ಪಡಿಸಿಕೊಳ್ಳಲು ಉದ್ಯಮಿಸಿರುವ ಈ ಚಾರಿತ್ರಿಕ ಸನ್ನಿವೇಶದಲ್ಲಿ ದೇಶ–ದೇಶಗಳ ಪರಸ್ಪರ ಆರ್ಥಿಕ ಸಂಬಂಧಗಳು ತೀವ್ರ ಬದಲಾವಣೆಗಳಿಗೆ ಒಳಗಾಗುತ್ತಲಿವೆ. ಇವುಗಳ ಶಾಸ್ತ್ರೀಯ ಅಧ್ಯಯನದಿಂದ ಮಾತ್ರ ಜಾಗತಿಕ ಆರ್ಥಿಕಾಭಿವೃದ್ಧಿಗೆ ಆವಶ್ಯಕವಾದ ಸೂಕ್ತ ಮಾರ್ಗಗಳನ್ನು ಗುರುತಿಸುವುದು ಸಾಧ್ಯ.

ಅನೇಕ ರಾಷ್ಟ್ರಗಳು ಆರ್ಥಿಕಯೋಜನೆಗಳನ್ನು ಅನುಸರಿಸುತ್ತಲಿರುವುದು ಗಮನಿಸಬೇಕಾದ ಇನ್ನೊಂದು ಮುಖ್ಯ ಬೆಳವಣಿಗೆಯಾಗಿದೆ. ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧ, ಬೆಳವಣಿಗೆಯೊಡನೆ ಈ ವಿವಿಧ ರಾಷ್ಟ್ರೀಯ ಆರ್ಥಿಕ ಯೋಜನೆಗಳನ್ನು ಸಮನ್ವಯಗೊಳಿಸಬೇಕಾದರೆ ಆರ್ಥಿಕ ಯೋಜನೆ ಬರಿ ರಾಷ್ಟ್ರೀಯ ಮಟ್ಟದಲ್ಲಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯಬೇಕಾಗುವುದು. ಈ ಮುಖ್ಯ ಬೆಳವಣಿಗೆ ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ಅಧ್ಯಯನದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆದಿದೆ.

ಪ್ರಪಂಚದ ನಾನಾ ರಾಷ್ಟ್ರಗಳು ಮೂಲಭೂತವಾಗಿ ಯಾವ ಆಧಾರ ಹಾಗೂ ತತ್ತ್ವಗಳ ಮೇಲೆ ಅವುಗಳ ಆರ್ಥಿಕ ಸಂಬಂಧಗಳನ್ನು ರೂಪಿಸಿಕೊಂಡರೆ ಪ್ರಪಂಚದಲ್ಲಿ ಶಾಂತಿ ಸ್ತಿಮಿತತೆ ಹಾಗೂ ಜೀವನಮಟ್ಟದ ಏರಿಕೆ ಸಾಧ್ಯವಾಗುವುದೆಂಬುದನ್ನು ಹುಡುಕುವುದೇ ಅಂತಾರಾಷ್ಟ್ರೀಯ ಅರ್ಥಶಾಸ್ತ್ರದ ಹೆಗ್ಗುರಿ. (ಎ.ಪಿ.ಎಸ್.)

**ಅಂತಾರಾಷ್ಟ್ರೀಯ ಆರ್ಥಿಕ ಮಂಡಲಿ :** ಪ್ರಪಂಚದ ಹಲವಾರು ರಾಷ್ಟ್ರಗಳ, ಅದರಲ್ಲೂ ಹಿಂದುಳಿದ ದೇಶಗಳ, ಖಾಸಗಿ ಉದ್ಯಮಗಳಿಗೆ ಬಂಡವಾಳ ಒದಗಿಸುವ ಉದ್ದೇಶದಿಂದ ಈ ಅಂತಾರಾಷ್ಟ್ರೀಯ ಸಂಸ್ಥೆ (ಇಂಟರ್‌ನ್ಯಾಷನಲ್ ಫೈನಾನ್ಸ್ ಕಾರ್ಪೊರೇಷನ್ – ಐ.ಎಫ್.ಸಿ) 1956ರಲ್ಲಿ ಸ್ಥಾಪಿತವಾಯಿತು. ಇದು ಇತರ ಅಂತಾರಾಷ್ಟ್ರೀಯ ಸಂಸ್ಥೆಗಳಂತೆ ಒಂದು ಸಾರ್ವಜನಿಕ ಸಂಸ್ಥೆ. ಅಂತಾರಾಷ್ಟ್ರೀಯ ಪುನಾರರಚನೆ ಮತ್ತು ಅಭಿವೃದ್ಧಿ ಬ್ಯಾಂಕಿನ ಒಂದು ಉಪಸಂಸ್ಥೆ. ಆದರೂ ಈ ಸಂಸ್ಥೆಗೆ ತನ್ನದೇ ಆದ ವೈಶಿಷ್ಟ್ಯ, ಸ್ವತಂತ್ರನೀತಿ ಇವೆ. ಆದರೆ ಈ ಸಂಸ್ಥೆಗೆ ಅಂತಾರಾಷ್ಟ್ರೀಯ ಬ್ಯಾಂಕಿನ ಸದಸ್ಯರು ಮಾತ್ರ ಸದಸ್ಯರಾಗಬಹುದೆಂದೂ ಮತ್ತು ಪೂರ್ಣ ಪ್ರಯೋಜನ ಪಡೆಯಬಹುದೆಂದೂ ನಿಯಮವಿದೆ. 1957ರಲ್ಲಿ ವಿಶ್ವದ ಸುಮಾರು ಮೂವತ್ತೆರಡು ದೇಶಗಳು ಮಂಡಲಿಯ ಸದಸ್ಯರಾಗಿದ್ದುವು. ಪ್ರಮುಖಸದಸ್ಯ ರಾಷ್ಟ್ರಗಳಲ್ಲಿ ಭಾರತದೇಶ ಒಂದು. ಸಂಸ್ಥೆಯ ಅಧಿಕೃತ ಬಂಡವಾಳ ಒಂದು ಸಾವಿರ ದಶಲಕ್ಷ ಡಾಲರ್‌ಗಳು. ಈ ಪೈಕಿ ಹೂಡಿಕೆಯಾದ ಬಂಡವಾಳ 78.4 ದಶಲಕ್ಷ ಡಾಲರ್‌ಗಳು. ಈ ಸಂಸ್ಥೆಯ ನಾಲ್ಕನೆಯ ಸದಸ್ಯರಾಷ್ಟ್ರವಾದ ಭಾರತ ಸುಮಾರು 4.43 ದಶಲಕ್ಷ ಡಾಲರುಗಳಷ್ಟು ಹಣವನ್ನು ಬಂಡವಾಳವಾಗಿಕೊಟ್ಟಿದೆ. ಸದಸ್ಯರಾಷ್ಟ್ರಗಳಲ್ಲಿ ಅಗ್ರಸ್ಥಾನ ಅಮೆರಿಕದ ಸಂಯುಕ್ತ ಸಂಸ್ಥಾನಕ್ಕೆ ಸೇರಿದೆ.

ಈ ಆರ್ಥಿಕ ಸಂಸ್ಥೆ ಅಂತಾರಾಷ್ಟ್ರೀಯ ವ್ಯವಹಾರ, ವಾಣಿಜ್ಯ, ವ್ಯವಸಾಯ ಮುಂತಾದ ಕ್ಷೇತ್ರಗಳಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ರಾಷ್ಟ್ರಗಳ ಆರ್ಥಿಕ ಬೆಳವಣಿಗೆ ಸಾಧಿಸಲು ಹಲವಾರು ಮಹತ್ತರವಾದ ಉದ್ದೇಶಗಳನ್ನು ಹೊಂದಿದೆ. 1. ಮುಖ್ಯವಾಗಿ ಖಾಸಗಿಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಖಾಸಗಿ ಬಂಡವಾಳಗಾರರು ಮುಂದೆ ಬರಲು ಸಾಧಾರಣವಾಗಿ ಅಡ್ಡಿ ಆತಂಕಗಳಿರುವ ಹಿಂದುಳಿದ ರಾಷ್ಟ್ರಗಳಲ್ಲಿ ಖಾಸಗಿ ಬಂಡವಾಳಗಾರರ ಜೊತೆಗೆ ತನ್ನ ಬಂಡವಾಳವನ್ನು ವಿನಿಯೋಗಿಸಲು ಈ ಸಂಸ್ಥೆ ಮುಂದೆ ಬಂದಿದೆ. 2. ಖಾಸಗಿ ಬಂಡವಾಳಗಾರರ ಜೊತೆಗೆ ತನ್ನ ಬಂಡವಾಳವನ್ನು ವಿನಿಯೋಗಿಸಿ ರಾಷ್ಟ್ರದ ಆರ್ಥಿಕ ಪ್ರಗತಿಗೆ ಅಗತ್ಯವಾದ ಕೈಗಾರಿಕಾ ಉದ್ಯಮಗಳ ಅನುಭವ, ತಾಂತ್ರಿಕಶಿಕ್ಷಣ, ಕೈಗಾರಿಕಾ ವ್ಯವಸ್ಥೆ ಮತ್ತು ಬಂಡವಾಳ–ಇವುಗಳ ಸಮನ್ವಯ ಮಾಡುವ ಒಂದು ಮಹತ್ತರವಾದ ಆಕಾಂಕ್ಷೆಯನ್ನು ಈ ಸಂಸ್ಥೆ ಹೊಂದಿದೆ. 3. ಖಾಸಗಿ ಬಂಡವಾಳ ದೇಶೀಮೂಲವಾಗಿರಲಿ ಅಥವಾ ವಿದೇಶೀ ಮೂಲವಾಗಿರಲಿ ಯಾವ ವ್ಯತ್ಯಾಸವೂ ಇಲ್ಲದೆ ಮುಖ್ಯವಾಗಿ ಬಂಡವಾಳ ಖಾಸಗಿ ವಲಯದಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ವಿನಿಯೋಗವಾಗಿ ರಾಷ್ಟ್ರಗಳ ಪ್ರಗತಿಗೆ ನೆರವಾಗಬೇಕೆಂಬುದೇ ಈ ಸಂಸ್ಥೆಯ ಧ್ಯೇಯ. 4. ಈ ಸಂಸ್ಥೆ ತನ್ನ ಬಂಡವಾಳ ವಿನಿಯೋಗದ ಜೊತೆಗೆ ದೇಶದ ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಎಲ್ಲ ಅಂಶಗಳನ್ನೂ ಏರ್ಪಾಟುಗಳನ್ನೂ ವಿಮರ್ಶೆಮಾಡುವ ಹೊಣೆಗಾರಿಕೆಯನ್ನು ಹೊತ್ತಿದೆ. 5. ಈ ಸಂಸ್ಥೆ ತನ್ನ ಬಂಡವಾಳವನ್ನು ವಿನಿಯೋಗಿಸಬೇಕಾದರೆ ತಾನು ನೆರವು ನೀಡುವ ಉದ್ಯಮ ದೇಶೀಯವಾಗಿರಬೇಕು ಅಥವಾ ಆ ದೇಶದ ಅಧೀನರಾಷ್ಟ್ರಕ್ಕೆ ಸೇರಿದ ಉದ್ಯಮವಾಗಿರಬೇಕು. ಈ ನೆರವು ನೀಡುವುದರಲ್ಲಿ ದೇಶೀ ಅಥವಾ ವಿದೇಶೀ ಬಂಡವಾಳಗಾರರ ಜೊತೆಗೆ ಈ ಸಂಸ್ಥೆ ಧನಸಹಾಯ, ಸಹಕಾರ ನೀಡುತ್ತದೆ. 6. ಆ ದೇಶೀಯ ಉದ್ಯಮಕ್ಕೆ ಖಾಸಗಿ ಬಂಡವಾಳ ಸಾಕಷ್ಟು ಪ್ರಮಾಣದಲ್ಲಿ ಅಂದರೆ 50% ರಷ್ಟು ಬಂದಿದ್ದರೆ ಮಾತ್ರ ಈ ಸಂಸ್ಥೆ ನೆರವು ನೀಡಲು ಸಿದ್ಧವಿರುತ್ತದೆ.

ಈ ಸಂಸ್ಥೆ ಸಾಧಾರಣವಾಗಿ ಚಿಲ್ಲರೆ ಉದ್ಯಮಗಳಿಗೆ ಸಹಾಯ ಮಾಡುವುದಿಲ್ಲ. ಇದರ ನಿಯಮಾವಳಿಯ ಪ್ರಕಾರ ನೆರವನ್ನು ಅಪೇಕ್ಷಿಸುವ ದೇಶೀಯ ಉದ್ಯಮ ಕನಿಷ್ಠವಾಗಿ 5 ಲಕ್ಷ ಡಾಲರ್ ಅಥವಾ ತತ್ಸಮವಾದ ಆಸ್ತಿಯನ್ನು ಹೊಂದಿರಬೇಕು. ತಾನು ನೆರವು ನೀಡುವ ಬಂಡವಾಳ ಒಂದು ಲಕ್ಷ ಡಾಲರುಗಳಿಗಿಂತ ಕಡಿಮೆ ಇರಬಾರದು. ಪ್ರಾರಂಭದಲ್ಲಿ ಈ ಸಂಸ್ಥೆ ಆರ್ಥಿಕ ಪ್ರಗತಿಯಲ್ಲಿ ಹಿಂದುಳಿದ ರಾಷ್ಟ್ರಗಳಿಗೆ ಅಥವಾ ಸದಸ್ಯರಾಷ್ಟ್ರಗಳ ಅಧೀನ ರಾಷ್ಟ್ರಗಳಿಗೆ ಆದ್ಯತೆ ನೀಡುತ್ತದೆ. ಸಹಾಯಧನ ಪಡೆಯುವ ಉದ್ಯಮ, ಕೈಗಾರಿಕೆ, ವ್ಯವಸಾಯ ಅಥವಾ ವ್ಯಾಪಾರ ಮುಂತಾದ ಯಾವ ಕ್ಷೇತ್ರಕ್ಕಾದರೂ ಸೇರಿರಬಹುದು. ಆದರೆ ಆ ಉದ್ಯಮ ಉಪಯುಕ್ತವಾಗಿ ಲಾಭದಾಯಕವಾಗಿರಬೇಕು. ಸಂಸ್ಥೆಯ ನಿಯಮಾವಳಿಯಂತೆ ಕೈಗಾರಿಕಾ ಉದ್ಯಮಗಳಿಗೆ ಆದ್ಯತೆ ಸಿಗುತ್ತದೆ. ಸರ್ಕಾರಿ ಕ್ಷೇತ್ರಕ್ಕೆ ಸೇರಿದ ಉದ್ಯಮಗಳಿಗೆ ಅಥವಾ ವಿಶೇಷವಾಗಿ ಸರ್ಕಾರಿ ಪ್ರಭಾವಕ್ಕೆ ಒಳಪಟ್ಟಿರುವ ಸಂಸ್ಥೆಗಳಿಗೆ ನೆರವು ಸಿಗುವುದಿಲ್ಲ. ಧನಸಹಾಯ ನೀಡುವುದಕ್ಕೆ ಮುಂಚೆ ಈ ಸಂಸ್ಥೆ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ವಿಮರ್ಶಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತದೆ: 1. ತಾನು ಧನಸಹಾಯ ಮಾಡಲು ಮುಂದೆ ಬಂದರೆ ಈ ಸಂಸ್ಥೆಗೆ ಖಾಸಗಿ ಬಂಡವಾಳ ಎಷ್ಟರಮಟ್ಟಿಗೆ ದೊರಕುತ್ತದೆ 2. ಈ ನೆರವಿನಿಂದ ತನಗೂ ಮತ್ತು ನೆರವು ನೀಡಿದ ಇತರ ಖಾಸಗಿ ಬಂಡವಾಳಗಾರರಿಗೂ ಎಷ್ಟರಮಟ್ಟಿಗೆ ಲಾಭವಾಗುತ್ತದೆ 3. ಬಂಡವಾಳ ವಿನಿಯೋಗದಿಂದ ಎಷ್ಟರಮಟ್ಟಿಗೆ ರಾಷ್ಟ್ರದ ಆರ್ಥಿಕ ಪ್ರಗತಿ ಸಾಧಿಸಬಹುದು?

ಈ ವಿಷಯಗಳನ್ನು ಪರಿಶೀಲಿಸಿ ಮಂಡಲಿ ತನಗೆ ಸೂಕ್ತ ತೋರಿದ ಹಲವಾರು ರೀತಿಯಲ್ಲಿ ತನ್ನ ಬಂಡವಾಳವನ್ನು ವಿನಿಯೋಗಿಸುವ ಪರಮಾಧಿಕಾರವನ್ನು ಹೊಂದಿದೆ. ಇದು ತಾನು ನೆರವು ನೀಡುವ ಸಂಸ್ಥೆಯ ಷೇರು ಅಥವಾ ಬಾಂಡುಗಳನ್ನು ನೇರವಾಗಿ ಕೊಳ್ಳುವುದಿಲ್ಲ. ಸಾಲದ ರೂಪದಲ್ಲಿ ಸಹಾಯಧನ ನೀಡಲು ಸಿದ್ಧವಿದೆ; ಆದರೆ ಇತರ ಸಾಲಗಾರರಂತೆ ಕೇವಲ ಬಡ್ಡಿಗಾಗಿ ಮಾತ್ರ ಸಾಲ ಕೊಡುವುದಿಲ್ಲ. ಖಾಸಗಿ ಕ್ಷೇತ್ರದಲ್ಲಿ ಬಹು ಲಾಭದಾಯಕವಾಗಿ ಸುಲಭವಾಗಿ ಮಾರಾಟವಾಗುವ ಸೆಕ್ಯೂರಿಟಿಗಳನ್ನು ಮಾರುವ ಅಥವಾ ಕೊಳ್ಳುವ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತದೆ. ಸುಲಭವಾಗಿ ಮಾರಾಟವಾಗುವ ಷೇರುಗಳ ಮತ್ತು ಸ್ಟಾಕುಗಳ ಮೇಲೆ ಬಂಡವಾಳ ವಿನಿಯೋಗಿಸುವ ಹಕ್ಕು ಪಡೆದಿದ್ದು ಇದರಿಂದ ತನಗೆ ಲಾಭದಾಯಕವಾದ ಸೆಕ್ಯೂರಿಟಿಗಳನ್ನು ಸೂಕ್ತ ತೋರಿದಾಗ ಮಾರಿ, ಬೇರೆ ಉದ್ಯಮಗಳಲ್ಲಿ ಬಂಡವಾಳ ವಿನಿಯೋಗದಿಂದ ಸಂಭವಿಸಿರಬಹುದಾದ ತನ್ನ ನಷ್ಟವನ್ನು ಭರ್ತಿ ಮಾಡಿಕೊಳ್ಳುವ ಅವಕಾಶ ಮತ್ತು ಅಧಿಕಾರವನ್ನು ಈ ಸಂಸ್ಥೆ ಹೊಂದಿದೆ. ಈ ರೀತಿ ಸಮತೋಲನವಾದ ರೀತಿಯಲ್ಲಿ ಬಂಡವಾಳ ವಿನಿಯೋಗ ಮಾಡಿ ತನ್ನ ಹಣಕಾಸಿನ ಭದ್ರತೆಯನ್ನು ಮತ್ತು ತನ್ನ ವ್ಯವಹಾರ ಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಲು ಈ ಸಂಸ್ಥೆ ಶ್ರಮಿಸುತ್ತದೆ. ಈ ಸಂಸ್ಥೆ ತಾನು ಪಡೆದಿರುವ ಅನೇಕ ಸೆಕ್ಯೂರಿಟಿಗಳನ್ನು ಇತರ ಖಾಸಗಿ ಉದ್ಯಮಿಗಳಿಗೆ ಮಾರುವ ಹಕ್ಕನ್ನು ಪಡೆದಿದ್ದರೂ ಇತರ ಬಂಡವಾಳಗಾರರಂತೆ ಬರೀ ಲಾಭಕ್ಕಾಗಿ ವ್ಯವಹಾರ ನಡೆಸುವುದಿಲ್ಲ; ತನ್ನ ಬಂಡವಾಳ ವಿನಿಯೋಗದ ನೀತಿಯನ್ನು ತನಗೆ ಸೂಕ್ತ ಕಂಡಂತೆ ಬದಲಾಯಿಸುವ ಅಧಿಕಾರವನ್ನು ಹೊಂದಿದೆ.

ಇದು ನೀಡುವ ಧನಸಹಾಯ 5 ರಿಂದ 15 ವರ್ಷಗಳ ಅವಧಿಯಲ್ಲಿ ತೀರಿಸಬಹುದಾದ ಸಾಲವಾಗಿರಬಹುದು. ಈ ಸಾಲ ಒಟ್ಟಾಗಿಯಾಗಲಿ ಅಥವಾ ಆವಶ್ಯಕವಾದ ಕಂತುಗಳ ರೂಪದಲ್ಲಾಗಲಿ ಇರಬಹುದು. ಬಡ್ಡಿ ಸಂದರ್ಭಾನುಸಾರವಾಗಿ ಹೆಚ್ಚು ಅಥವಾ ಕಡಿಮೆ ಇರಬಹುದು. ಇದು ಸಾಲ ಕೊಡಬೇಕಾದರೆ ಆ ಉದ್ಯಮದಲ್ಲಿ ಅನುಭವಪೂರ್ಣವಾದ ದಕ್ಷತೆಯಿಂದ ಕೂಡಿದ ಆಡಳಿತ ವ್ಯವಸ್ಥೆ ಕಡ್ಡಾಯವಾಗಿ ಇರಬೇಕು. ತಾನು ಸಹಾಯಧನ ನೀಡುವ ಸಂಸ್ಥೆಯ ಆಡಳಿತ ವರ್ಗದಲ್ಲಿ ತನ್ನ ಪರವಾಗಿ ಒಬ್ಬ ನಿರ್ದೇಶಕ ಇರಲೇಬೇಕೆಂದು ಸೂಚಿಸಬಹುದು ಅಥವಾ ನಿಯಮಿಸಬಹುದು. ತನ್ನಿಂದ ಸಾಲ ಪಡೆದ ಯಾವ ಉದ್ಯಮದಲ್ಲಿಯಾಗಲೀ ಬಂಡವಾಳ ವೆಚ್ಚವಾಗುವ ವಿಧಾನವನ್ನು ಆಗಿಂದಾಗ್ಗೆ ಪರಿಶೀಲಿಸುವ ವಿಶೇಷ ಹಕ್ಕನ್ನು ಈ ಸಂಸ್ಥೆ ಪಡೆದಿದೆ. ಈ ರೀತಿ ಸಹಾಯಧನ ನೀಡಲು ತಾನು ಮುಂದೆ ಬಂದಾಗ ಯಾವ ಸರ್ಕಾರವಾಗಲಿ ಆಕ್ಷೇಪಿಸಿದರೆ ಕೂಡಲೆ ಸಹಾಯ ನಿಲ್ಲಿಸುವ ಸ್ವಾತಂತ್ರ್ಯ ಈ ಸಂಸ್ಥೆಗೆ ಇದೆ.

ಹೀಗೆ ಈ ಸಂಸ್ಥೆ ಹಲವಾರು ರೀತಿಯಲ್ಲಿ ಖಾಸಗಿ ವಲಯದ ಅನೇಕ ಉದ್ಯಮಗಳಿಗೆ ಬಂಡವಾಳರೂಪದಲ್ಲಿ ಸಹಾಯಮಾಡುವ ಜವಾಬ್ದಾರಿಯನ್ನು ಹೊತ್ತಿದೆ. ತನ್ನ ವ್ಯವಹಾರದಿಂದ ಸಂಭವಿಸಬಹುದಾದ ಎಲ್ಲ ಲಾಭನಷ್ಟಗಳಿಗೂ ಈ ಸಂಸ್ಥೆಯೇ ಪೂರ್ಣವಾಗಿ ಹೊಣೆಯಾಗಿದೆ. ತಾನು ಸಹಾಯ ನೀಡುವ ಉದ್ಯಮಗಳಿಗೆ ಇದು ಸಾಧಾರಣವಾಗಿ ಇತರ ಅಂತಾರಾಷ್ಟ್ರೀಯ ಧನಸಹಾಯ ಸಂಸ್ಥೆಗಳಿಗೆ ಸರ್ಕಾರದ ಖಾತರಿಯನ್ನು ಅಪೇಕ್ಷಿಸುವುದಿಲ್ಲ. ಇದರಿಂದ ಈ ಸಂಸ್ಥೆಯ ಮೂಲ ಉದ್ದೇಶ ಖಾಸಗಿ ಕ್ಷೇತ್ರದಲ್ಲಿ ಹಲವಾರು ರೀತಿಯ ಉದ್ಯಮಗಳನ್ನು ಸ್ಥಾಪಿಸಿ ತನ್ಮೂಲಕ ಆ ರಾಷ್ಟ್ರಗಳ ನಾನಾ ಮುಖವಾದ ಆರ್ಥಿಕಪ್ರಗತಿಯನ್ನು ಸಾಧಿಸುವುದಾಗಿದೆ ಎಂಬುದು ವ್ಯಕ್ತವಾಗುತ್ತದೆ. ಈ ಸಂಸ್ಥೆ ಭಾರತ ದೇಶದಲ್ಲಿ ಈಚೆಗೆ ಅಸ್ಸಾಂ ಪ್ರಾಂತ್ಯದ ಸಿಲಿಮೆನೈಟ್ ಕೈಗಾರಿಕೆಗೆ ಮತ್ತು ಕೆ.ಎಸ್.ಬಿ.ಪಂಪ್ಸ್ ಲಿಮಿಟೆಡ್ ಎಂಬ ಕೈಗಾರಿಕಾ ಸಂಸ್ಥೆಗೆ ಧನಸಹಾಯ ನೀಡಿ ಈ ಕೈಗಾರಿಕೆಗಳ ಪ್ರಗತಿಗೆ ಕಾರಣವಾಗಿದೆ. ಹಿಂದುಳಿದ ರಾಷ್ಟ್ರಗಳ ಅನೇಕ ಅಭಿವೃದ್ಧಿ ಕಾರ್ಯಗಳಲ್ಲಿ ತನ್ನ ನೆರವು ಮತ್ತು ತಾಂತ್ರಿಕತಜ್ಞರ ಸಲಹೆಗಳನ್ನು ಒದಗಿಸಿ ತನ್ನ ಬಂಡವಾಳದ ಜೊತೆಗೆ ಆಯಾ ದೇಶಗಳ ಖಾಸಗಿ ಬಂಡವಾಳ ಮುಂದೆ ಬರುವಂತೆ ಅನುಕೂಲ ವಾತಾವರಣವನ್ನು ಕಲ್ಪಿಸುವುದು ಸಾಧ್ಯವಾಗಿದೆ. (ಬಿ.ಆರ್.ಎಸ್.)

**ಅಂತಾರಾಷ್ಟ್ರೀಯ ಆರ್ಥಿಕ ಸಂಘಗಳು :** ಪ್ರಪಂಚದಲ್ಲಿ ಪದೇ ಪದೇ ಸಂಭವಿಸುವ ಬಿಕ್ಕಟ್ಟುಗಳಿಗೂ ಯುದ್ಧಗಳಿಗೂ ರಾಷ್ಟ್ರಗಳ ನಡುವೆ ಸಹಕಾರ ಇಲ್ಲದಿರುವುದೇ ಕಾರಣ. ಈ ಪರಿಸ್ಥಿತಿಯನ್ನು ನಿವಾರಿಸುವ ಉದ್ದೇಶದಿಂದ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಈಚೆಗೆ ಅನೇಕ ಅಂತಾರಾಷ್ಟ್ರೀಯ ಸಂಘಗಳೂ ಸಂಸ್ಥೆಗಳೂ ಹುಟ್ಟಿವೆ.

ಹಿಂದೆ ಸ್ಥಾಪಿತವಾಗಿದ್ದ ಲೀಗ್ ಆಫ್ ನೇಷನ್ಸ್ ಎಂಬ ರಾಷ್ಟ್ರಗಳ ಒಕ್ಕೂಟವೂ ದ್ವಿತೀಯ ಯುದ್ಧಾನಂತರದ ಕಾಲದಲ್ಲಿ ಸ್ಥಾಪಿತವಾದ ವಿಶ್ವಸಂಸ್ಥೆಯೂ ರಾಜಕೀಯ ಉದ್ದೇಶಗಳನ್ನು ಹೊಂದಿದ ಅಂತಾರಾಷ್ಟ್ರೀಯ ಸಂಸ್ಥೆಗಳು. ಇದೇ ರೀತಿ ಆರ್ಥಿಕ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಸಹಕಾರವನ್ನೇರ್ಪಡಿಸುವ ಉದ್ದೇಶದಿಂದ ಅನೇಕ ಸಂಘಗಳೂ ಸಂಸ್ಥೆಗಳೂ ಸ್ಥಾಪಿತವಾಗಿವೆ. ಅಂತಾರಾಷ್ಟ್ರೀಯ ಪುನಾರಚನೆ ಹಾಗೂ ಅಭಿವೃದ್ಧಿ ಬ್ಯಾಂಕು, ಅಂತಾರಾಷ್ಟ್ರೀಯ ದ್ರವ್ಯನಿಧಿ, ಅಂತಾರಾಷ್ಟ್ರೀಯ ಆರ್ಥಿಕ ಮಂಡಲಿ. ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ, ಅಂತಾರಾಷ್ಟ್ರೀಯ ವಾಣಿಜ್ಯ ಸಂಘ, ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಅನೇಕ ಬಗೆಯ ಅಂತಾರಾಷ್ಟ್ರೀಯ ಆರ್ಥಿಕ ಸಹಕಾರದ ಒಡಂಬಡಿಕೆಗಳು – ಇವನ್ನೆಲ್ಲ ಇಲ್ಲಿ ಹೆಸರಿಸಬಹುದಾಗಿದೆ.

ಆರ್ಥಿಕೋದ್ದೇಶಗಳಿಗಾಗಿ ಏರ್ಪಟ್ಟ ಅಂತಾರಾಷ್ಟ್ರೀಯ ಸಂಘಗಳ ಇತಿಹಾಸ ಸುಮಾರು ಒಂದುನೂರು ವರ್ಷಗಳಿಂದ ಬೆಳೆದುಬಂದಿದೆ. ಅಂತಾರಾಷ್ಟ್ರೀಯ ಪ್ರದರ್ಶನಗಳಿಂದ ಆರಂಭವಾದ ಆರ್ಥಿಕ ಸಹಕಾರದ ಕಲ್ಪನೆ ಕ್ರಮವಾಗಿ ಬೆಳೆದಿದೆ: ಆರ್ಥಿಕ ಚಟುವಟಿಕೆಗಳ ನಾನಾ ಕ್ಷೇತ್ರಗಳಲ್ಲಿ ಆರಂಭವಾದ ಪ್ರತ್ಯೇಕ ಸಂಘಗಳ ರೂಪದಲ್ಲಿ ಸ್ಪಷ್ಟವಾಗಿದೆ. ರೋಮಿನಲ್ಲಿ ಸ್ಥಾಪಿತವಾದ (1905) ಅಂತಾರಾಷ್ಟ್ರೀಯ ಸಂಸ್ಥೆಯೂ ಹಲವಾರು ಕೈಗಾರಿಕೆಗಳು ಪ್ರತ್ಯೇಕವಾಗಿ ಏರ್ಪಡಿಸಿಕೊಂಡಿರುವ ಸಂಘಗಳೂ ಜವಳಿ ಉತ್ಪಾದಕರ ಅಂತಾರಾಷ್ಟ್ರೀಯ ಸಂಘವೇ ಮುಂತಾದ ಸಂಸ್ಥೆಗಳೂ ಆಮದು – ರಫ್ತು ಸುಂಕಗಳ ಪಟ್ಟಿಗಳ ಪ್ರಕಟಣೆಗಾಗಿ ಸ್ಥಾಪಿತವಾದ ಅಂತಾರಾಷ್ಟ್ರೀಯ ಬ್ಯೂರೋ ಮುಂತಾದ ಸಂಸ್ಥೆಗಳೂ ತಮತಮಗೆ ವಿಶಿಷ್ಟವಾದ ಕ್ಷೇತ್ರಗಳಲ್ಲಿನ ಹಿತಗಳನ್ನು ರಕ್ಷಿಸಿ ಬೆಳೆಸುವುದೇ ಅಲ್ಲದೆ, ಅಂತಾರಾಷ್ಟ್ರೀಯ ಆರ್ಥಿಕ ಸಹಕಾರ ಬೆಳವಣಿಗೆಗಳಿಗೆ ಸಹಾಯಕವಾಗಿ ವಿಶ್ವಶಾಂತಿಗೂ ಪೋಷಕವಾಗಿದೆ. (ಎಚ್.ಎಸ್.ಕೆ.)

**ಅಂತಾರಾಷ್ಟ್ರೀಯ ಕಾರ್ಟೆಲ್ಲುಗಳು :** ಅಂತಾರಾಷ್ಟ್ರೀಯ ವ್ಯಾಪಾರದಲ್ಲಿಯೂ ಪೈಪೋಟಿಯನ್ನು ತಡೆಗಟ್ಟಲು ಮತ್ತು ಲಾಭವನ್ನು ಹೆಚ್ಚಿಸಿಕೊಳ್ಳಲು ನಡೆದಿರುವ ಪ್ರಯತ್ನಗಳಲ್ಲಿ ಇಂಥ ಕಾರ್ಟೆಲ್ಲುಗಳ ಸ್ಥಾಪನೆಯೂ ಒಂದು. ವಿವಿಧ ದೇಶಗಳ ಖಾಸಗೀ ಉದ್ಯಮಿಗಳು ಏಕಪ್ರಕಾರದ ಅಥವಾ ಅಷ್ಟೇನೂ ವ್ಯತ್ಯಾಸವಿಲ್ಲದ ವಸ್ತುಗಳ ಮಾರಾಟಕ್ಕಾಗಿ ವ್ಯವಸ್ಥೆ ಮಾಡಿಕೊಳ್ಳಲು ಇವುಗಳನ್ನು ಸ್ಥಾಪಿಸಿದರು. ಸಾಧಾರಣಾರ್ಥದಲ್ಲಿ ಕಾರ್ಟೆಲ್ ಪದ ಉದ್ಯಮಿಗಳು ವಸ್ತುಗಳ ವ್ಯಾಪಾರಕ್ಕಾಗಿ ಏರ್ಪಡಿಸಿಕೊಳ್ಳುವ ಬಹುರೂಪದ ವ್ಯವಸ್ಥೆಗಳಿಗೆ ಅನ್ವಯಿಸುತ್ತದೆ. ಇದು ಒಂದು ದೇಶದ ವ್ಯಾಪ್ತಿಯಲ್ಲಿ ಮಾತ್ರ ಇದ್ದರೆ ಇದನ್ನು ದೇಶೀಯ ಕಾರ್ಟೆಲ್ ಎಂದೂ ಅನೇಕ ದೇಶಗಳ ವ್ಯಾಪ್ತಿಗೊಳಪಟ್ಟಿದ್ದರೆ ಅಂತಾರಾಷ್ಟ್ರೀಯ ಕಾರ್ಟೆಲ್ ಎಂದೂ ಕರೆಯಲಾಗುತ್ತದೆ. ಕಾರ್ಟೆಲ್ಲುಗಳು ಮೂರು ರೂಪದಲ್ಲಿರಬಹುದು: 1. ವ್ಯಾಪಾರ ಸಂಘದ ರೀತಿಯಲ್ಲಿ ಅಂತಾರಾಷ್ಟ್ರೀಯ ವ್ಯಾಪಾರವನ್ನು ನಿರ್ಬಂಧಿಸುವ ಉದ್ದೇಶದಿಂದ ಅಧಿಕೃತ ನಿಯಮಗಳಿಗನುಸಾರ ಸ್ಥಾಪನೆಯಾದುವಾಗಿರಬಹುದು. 2. ವ್ಯಾಪಾರದಲ್ಲಿ ಭಾಗವಹಿಸುವ ಸದಸ್ಯರೆಲ್ಲರೂ ಸೇರಿ ಸ್ವಾಮ್ಯರಹದಾರಿಗಳ (ಪೇಟೆಂಟ್ ಲೈಸೆನ್ಸ್) ಮುಖಾಂತರ ಮಾರುಕಟ್ಟೆಗಳನ್ನು ಹಂಚಿಕೊಳ್ಳುವ ಉದ್ದೇಶವುಳ್ಳವಾಗಿರಬಹುದು. 3. ವಿವಿಧ ದೇಶಗಳ ಪೈಪೋಟಿದಾರರನ್ನು ಒಂದೇ ಸ್ವಾಮ್ಯಕ್ಕೆ ಅಥವಾ ಆಡಳಿತಕ್ಕೆ ಒಳಪಡಿಸುವ ಒಂದು ದೊಡ್ಡ ಒಕ್ಕೂಟವಾಗಿರಬಹುದು.

ಕಾರ್ಟೆಲ್‌ಗಳು ಆರಂಭವಾದುದು 1870ರ ದಶಕದಲ್ಲಿ, ಮಧ್ಯ ಯುರೋಪಿನಲ್ಲಿ. ಜರ್ಮನಿ ಕಾರ್ಟೆಲ್ಲುಗಳ ತವರು ಎನಿಸಿಕೊಂಡಿದೆ. ಮೊದಲನೆಯ ಮಹಾಯುದ್ಧದ ಕಾಲದವರೆಗೆ ಇವು ಜರ್ಮನಿ ಮತ್ತು ಆಸ್ಟ್ರಿಯಾಗಳಲ್ಲಿ ಮಾತ್ರ ಕಂಡುಬರುತ್ತಿದ್ದು ಅನಂತರ ಇತರ ರಾಷ್ಟ್ರಗಳಿಗೂ ಹರಡಿದುವು.

ಅಂತಾರಾಷ್ಟ್ರೀಯ ಕಾರ್ಟೆಲ್ಲುಗಳಲ್ಲಿ ಎರಡು ವಿಧ : 1. ಸ್ವಯಂಪ್ರೇರಿತ : ಇವು ಸರ್ಕಾರದ ಪ್ರೇರಣೆ ಇಲ್ಲದೆ ಖಾಸಗಿ ಉದ್ಯಮಿಗಳು ತಮ್ಮ ಲಾಭಗಳಿಕೆಯನ್ನು ಪರಮಾವಧಿಗೊಳಿಸಲು ಏರ್ಪಡಿಸಿಕೊಂಡಂಥವು. 2. ಕಡ್ಡಾಯ : ಇವು ಸರ್ಕಾರದ ಪ್ರೇರಣೆಯಿಂದ ಮತ್ತು ಸರ್ಕಾರದ ನಿಬಂಧನೆಗಳಿಗನುಸಾರವಾಗಿ ಸ್ಥಾಪಿಸಲ್ಪಟ್ಟವು. ಉದ್ಯಮಿಗಳ ಕಾರ್ಯಚಟುವಟಿಕೆ ಸರ್ಕಾರದಿಂದ ನಿರ್ದೇಶಿಸಲ್ಪಡುವುದರಿಂದ ಇಂಥ ಸಂಸ್ಥೆಗಳಲ್ಲಿ ಭಾಗವಹಿಸುವವರನ್ನು ಸಾಂಪ್ರದಾಯಿಕ ಅರ್ಥದಲ್ಲಿ ಉದ್ಯಮಿಗಳೆಂದು ಪರಿಗಣಿಸುವುದು ಕಷ್ಟ. 1934 ರ ಅನಂತರ ಜರ್ಮನಿ, ಜಪಾನ್ ಮತ್ತು ಇಟಲಿಯ ಕಾರ್ಟೆಲ್ಲುಗಳು ಬಹುಮಟ್ಟಿಗೆ ಸರ್ಕಾರದಿಂದ ನಿರ್ದೇಶಿಸಲ್ಪಟ್ಟವಾಗಿದ್ದುವು.

ಅಂತಾರಾಷ್ಟ್ರೀಯ ಕಾರ್ಟೆಲ್ಲುಗಳು ಅನೇಕ ಕಾರಣಗಳಿಗಾಗಿ ಸ್ಥಾಪಿತವಾದುವು. ಯುದ್ಧಕಾಲದ ಅಧಿಕ ಉತ್ಪಾದನೆಯಿಂದ ಆದ ಉತ್ಪಾದನೆ, ಮಾರಾಟ ಮತ್ತು ಬೆಲೆಗಳ ಬಗ್ಗೆ ಸಂಭವಿಸಿದ ತೊಡಕುಗಳು, 1930ರ ದಶಕದ ಆರ್ಥಿಕ ಕುಸಿತ – ಇವು ಮುಖ್ಯವಾಗಿ ಕಾರ್ಟೆಲ್ಲುಗಳ ಸ್ಥಾಪನೆಗೆ ಪ್ರೇರಕವಾದುವು. ಕಾರಣಗಳೇನೇ ಇರಲಿ, ಕಾರ್ಟೆಲ್ಲುಗಳ ಮೂಲಭೂತ ಉದ್ದೇಶ ಒಂದೇ. ಉದ್ಯಮಿಗಳ ಲಾಭಗಳಿಕೆಯನ್ನು ಪರಮಾವಧಿ ಮಟ್ಟಕ್ಕೇರಿಸುವುದು: ಏಕಸ್ವಾಮ್ಯವುಳ್ಳ ಉದ್ಯಮಿಗಳು ಉದ್ದೇಶಿಸುವಂತೆ ಪೈಪೋಟಿ ಇರುವಲ್ಲಿ ಹೊಸ ಉದ್ಯಮಿಗಳ ಪ್ರವೇಶದಿಂದ ಮತ್ತು ಉತ್ಪಾದನೆ ಹೆಚ್ಚುವುದರಿಂದ ಬೆಲೆಗಳು ಇಳಿದು ಲಾಭಗಳಿಕೆ ಕಡಿಮೆಯಾಗುವುದನ್ನು ತಡೆಯುವುದು. ಇದಕ್ಕಾಗಿ ಇವು ಬಳಸಿಕೊಂಡ ತಂತ್ರಗಳು ಹೀಗಿವೆ:

1.ಉತ್ಪಾದನಾ ವೆಚ್ಚವನ್ನು ಇಳಿಸುವ ಕಡೆಗೆ ಗಮನ ಕೊಡದೆ ಬೆಲೆಗಳನ್ನು ಏರಿಸುವುದರ ಮೂಲಕ ಲಾಭಗಳಿಸಲು ಪ್ರಯತ್ನಿಸುವುದು.

2.ಬೆಲೆಗಳಲ್ಲಿ ಪಕ್ಷಪಾತ ಮಾಡುವುದು ಲಾಭವನ್ನು ಅಧಿಕಗೊಳಿಸುವ ಉಪಾಯಗಳಲ್ಲೊಂದು. ವಿವಿಧ ದೇಶದ ಉದ್ಯಮಿಗಳು ಒಪ್ಪಂದದ ಮೂಲಕ ಬೇರೆ ಬೇರೆ ದೇಶಗಳಲ್ಲಿ ಒಂದೇ ವಸ್ತುವಿಗೆ ಬೇರೆ ಬೇರೆ ಬೆಲೆಗಳನ್ನು ನಿಗದಿ ಮಾಡಬಹುದು. ಉದಾಹರಣೆಗೆ, ಮೊದಲನೆಯ ಅಂತಾರಾಷ್ಟ್ರೀಯ ಉಕ್ಕು ಕಾರ್ಟೆಲ್ ಸದಸ್ಯರು ಬೆಲ್ಜಿಯಂನ ನಿರ್ಯಾತ ಉಕ್ಕಿನ ಬೆಲೆಯ ಎರಡರಷ್ಟು ಬೆಲೆಯನ್ನು ಜರ್ಮನಿಯ ಉಕ್ಕಿಗೆ ವಿಧಿಸಿದರು.

3. ಉತ್ಪನ್ನದ ಮೊತ್ತವನ್ನು ನಿರ್ಬಂಧಿಸುವುದು, ಕಾರ್ಟೆಲ್ ಸದಸ್ಯರು ತಯಾರಿಸುವ ವಸ್ತುಗಳ ಮೊತ್ತವನ್ನು ನಿಗದಿಮಾಡಿ ಆ ಮಟ್ಟವನ್ನು ಮೀರದಂತೆ ತಡೆಯುವುದರ ಮೂಲಕ ಉತ್ಪನ್ನದ ಮೊತ್ತವನ್ನು ಪರಿಮಿತಿಗೊಳಿಸುತ್ತಿದ್ದರು. ನಿಗದಿಯಾದ ಮಿತಿಯನ್ನು ದಾಟಿದ ಸದಸ್ಯರುಗಳಿಗೆ ಒಂದಿಲ್ಲೊಂದು ರೀತಿಯಲ್ಲಿ ದಂಡ ವಿಧಿಸಲಾಗುತ್ತಿತ್ತು. ಅಂತಾರಾಷ್ಟ್ರೀಯ ಉಕ್ಕು ಕಾರ್ಟೆಲ್ಲು ಉತ್ಪನ್ನದ ಮೊತ್ತವನ್ನು ಯಶಸ್ವಿಯಾಗಿ ನಿರ್ಬಂಧಿಸಿತು. ಸದಸ್ಯರು ಗೊತ್ತಾದ ಮಿತಿಯನ್ನು ಉಲ್ಲಂಘಿಸದಂತೆ ಮಾಡಲು ನಿಗದಿಯಾದ ಮಿತಿಯನ್ನು ಮೀರಿ ಉತ್ಪಾದಿಸಿದವರಿಗೆ ದಂಡ ವಿಧಿಸಲಾಗುತ್ತಿತ್ತು. ಈ ಕಾರ್ಯದಲ್ಲಿ ಎಲ್ಲ ಕಾರ್ಟೆಲ್ಲುಗಳೂ ಯಶಸ್ವಿಯಾಗಲಿಲ್ಲ. ಕಾರ್ಟೆಲ್ಲುಗಳ ಅಧಿಕಾರ ವ್ಯಾಪ್ತಿ ಸಾಕಷ್ಟು ಇಲ್ಲದಿದ್ದುದರಿಂದ ಇಂಥ ಪ್ರಯತ್ನಗಳು ಎಷ್ಟೋವೇಳೆ ವಿಫಲವಾದುದೂ ಉಂಟು.

4.ಕಾರ್ಟೆಲ್ಲುಗಳ ಉದ್ದೇಶ ಸಾಧನೆ ಮಾರುಕಟ್ಟೆಗಳ ಹಂಚಿಕೆಯ ಮೂಲಕವೂ ಸಾಧ್ಯವಾಯಿತು. ವಸ್ತುಗಳ ಆಧಾರದ ಮೇಲೆ ಅಥವಾ ಭೌಗೋಳಿಕ ಆಧಾರದ ಮೇಲೆ ಮಾರುಕಟ್ಟೆಗಳನ್ನು ವಿವಿಧ ದೇಶಗಳಿಗೆ ಹಂಚಿಕೆ ಮಾಡಿ ಪೈಪೋಟಿಯನ್ನು ತಡೆದು ಬೆಲೆಯ ಮಟ್ಟವನ್ನು ರಕ್ಷಿಸಿಕೊಳ್ಳಲಾಗುತ್ತಿತ್ತು. ಯಾವ ರಾಷ್ಟ್ರಗಳಿಗೆ ಯಾವ ಮಾರುಕಟ್ಟೆಗಳಲ್ಲಿ ಹೆಚ್ಚು ಅನುಕೂಲತೆಗಳುಂಟೋ ಅಲ್ಲಿ ಮಾತ್ರ ಅವು ತಮ್ಮ ಹಂಚಿಕೆ ಮಾಡುತ್ತಿದ್ದವು. ಕೆಲವು ಕಂಪೆನಿಗಳಿಗೆ ಕೆಲವು ಮಾರುಕಟ್ಟೆಗಳನ್ನು ಮೀಸಲಾಗಿಟ್ಟು, ಗೊತ್ತಾದ ಎಲ್ಲೆಗಳನ್ನು ದಾಟಿ ಹೋಗದಂತೆ ಒಪ್ಪಂದ ಮಾಡಿಕೊಳ್ಳಲಾಗುತ್ತಿತ್ತು. ಪೈಪೋಟಿಯನ್ನು ತಪ್ಪಿಸಿ ಬೆಲೆಯನ್ನು ಹೆಚ್ಚಿಸುವುದಕ್ಕೆ ಅನುವುಮಾಡಿಕೊಳ್ಳುವುದೇ ಇಂಥ ಒಪ್ಪಂದಗಳ ಮೂಲಭೂತ ಉದ್ದೇಶ. ಜರ್ಮನಿಯ ಬೇಯರ್ ಕಂಪೆನಿ ಬ್ರಿಟನ್ನಿನ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಮುಂತಾದವು ಇಂಥ ಒಪ್ಪಂದಗಳಿಂದ ಪ್ರಯೋಜನ ಪಡೆದುವು.

5. ಉತ್ಪಾದನೆಯನ್ನು ನಿಯಮಿತಗೊಳಿಸಲು ಉತ್ಪಾದನಾ ಶಕ್ತಿಯನ್ನೇ ಕೃತಕವಾಗಿ ಮಿತಗೊಳಿಸುವ ಪ್ರಯತ್ನಗಳೂ ನಡೆದುವು. ಒಪ್ಪಂದಗಳ ಮೂಲಕ ಕಂಪೆನಿಗಳ ಉತ್ಪಾದನಾ ಶಕ್ತಿಯನ್ನು ನಿಯಮಿತಗೊಳಿಸಲಾಗುತ್ತಿತ್ತು.

ಈ ತಂತ್ರಗಳನ್ನನುಸರಿಸಿದುದರಿಂದ ಬೆಲೆಗಳ ಸ್ವಚ್ಛಂದ ಪ್ರವೃತ್ತಿಗೆ ಪೆಟ್ಟು ಬಿತ್ತು. ಅಂತಾರಾಷ್ಟ್ರೀಯ ವ್ಯಾಪಾರದ ಮೊತ್ತ ಇಳಿಮುಖವಾಯಿತಷ್ಟೇ ಅಲ್ಲದೆ ಅದು ವಿರೂಪವೂ ಆಯಿತು. ಉತ್ಪಾದನಾ ಮಟ್ಟ ಮತ್ತು ಬೇಡಿಕೆಗಳ ಬದಲಾವಣೆಗೆ ಅಂತಾರಾಷ್ಟ್ರೀಯ ವ್ಯಾಪಾರ ಸುಲಭವಾಗಿ ಹೊಂದಿಕೊಂಡು ಬರುವುದು ತಪ್ಪಿತು. ಈ ಕಾರಣಗಳಿಂದಾಗಿ ಅಂತಾರಾಷ್ಟ್ರೀಯ ಕಾರ್ಟೆಲ್ಲುಗಳು ಅಪಕೀರ್ತಿಗೆ ಗುರಿಯಾದುವು. ಅವುಗಳನ್ನು ನಿಷೇಧಿಸಬೇಕೆಂಬ ವಾದಕ್ಕೆ ಹಲವರು ಬೆಂಬಲ ನೀಡಿದರು. ಅವುಗಳ ಉಪಯುಕ್ತತೆಯನ್ನು ಎತ್ತಿ ಹಿಡಿದು ಅವು ವಿನಾಶಕಾರಿ ಬೆಲೆ ಸಮರವನ್ನೂ ಘಾತುಕ ಪೈಪೋಟಿಯನ್ನೂ ತಪ್ಪಿಸುವುದರಿಂದ ಅವುಗಳನ್ನು ನಿಷೇಧಿಸಬಾರದೆಂಬ ವಾದವೂ ಹುಟ್ಟಿತು. ಈ ಎರಡು ತೀವ್ರಗಾಮಿ ಅಭಿಪ್ರಾಯಗಳನ್ನೂ ಬಿಟ್ಟು ಕೆಲವು ನಿರ್ಬಂಧಗಳೊಡನೆ ಕಾರ್ಟೆಲ್ಲುಗಳು ಕೆಲಸ ಮಾಡುವಂತೆ ಆಗಬೇಕೆಂಬ ಮಧ್ಯಮಾರ್ಗ ಪ್ರತಿಪಾದನೆಗೆ ಅನೇಕರ ಬೆಂಬಲ ದೊರಕಿತು. ಅತಿ ಪೈಪೋಟಿ ಇಲ್ಲದಂತೆ ಮಾಡುವುದು ಎಷ್ಟು ಆವಶ್ಯಕವೊ ಸ್ವಲ್ಪಮಟ್ಟಿನ ಪೈಪೋಟಿಯಾದರೂ ಇರುವಂತೆ ಮಾಡುವುದೂ ಅಷ್ಟೇ ಆವಶ್ಯಕ. ಅಂದಮೇಲೆ ಕಾರ್ಟೆಲ್ಲುಗಳನ್ನು ನಿಷೇಧಿಸುವ ಬದಲು ಕೆಲವು ಹತೋಟಿಗಳಿಗೆ ಒಳಪಟ್ಟು ಅವು ಕೆಲಸ ಮಾಡುವಂತೆ ಮಾಡುವುದು ಸೂಕ್ತವೆಂಬ ಅಭಿಪ್ರಾಯ ಬೆಳೆಯಿತು. ಆದರೆ ಅನೇಕ ರಾಷ್ಟ್ರಗಳ ವ್ಯಾಪ್ತಿಗೆ ಒಳಪಟ್ಟಿರುವ ಕಾರ್ಟೆಲ್ಲುಗಳ ಮೇಲೆ ಪರಿಣಾಮಕಾರಿಯಾದ ಹತೋಟಿಯನ್ನು ವಿಧಿಸುವುದು ಸಾಧ್ಯವಿಲ್ಲ. ಅಂತಾರಾಷ್ಟ್ರೀಯ ವ್ಯಾಪಾರ ಸಂಸ್ಥೆಯ ಹವಾನಾ ಪ್ರಣಾಳಿಕೆಯಲ್ಲಿ, ಅಂತಾರಾಷ್ಟ್ರೀಯ ವ್ಯಾಪಾರವನ್ನು ನಿರ್ಬಂಧಿಸುವಂಥ ಹಲವಾರು ಕಾರ್ಟೆಲ್ ತಂತ್ರಗಳನ್ನು ಬಿಡಬೇಕೆಂದು ಸೂಚಿಸಲಾಯಿತು. ಇದರಿಂದ ಅಂತಾರಾಷ್ಟ್ರೀಯ ಕಾರ್ಟೆಲ್ಲುಗಳು ನಿರಾತಂಕ ವ್ಯಾಪಾರಕ್ಕೆ ಅಡ್ಡಿ ಮಾಡುವುವೆಂದೂ ಆದ್ದರಿಂದ ಅವುಗಳ ಮೇಲೆ ಹತೋಟಿ ಇಡಬೇಕೆಂಬುದೂ ಸರ್ವವಿದಿತವಾಯಿತು **(ನೋಡಿ– ಏಕಸ್ವಾಮ್ಯ ಸ್ಪರ್ಧೆ, ಆರ್ಥಿಕ)**. (ಬಿ.ಎಸ್.ಎಸ್.)

**ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ :** ಪ್ರಥಮ ಮಹಾಯುದ್ಧವಾದ ಮೇಲೆ 1919ರಲ್ಲಿ ಆದ ವರ್ಸೇಲ್ಸ್‌ನ ಶಾಂತಿಕೌಲಿನ ಫಲವಾಗಿ ರಚಿತವಾದ ಸ್ವಯಮಧಿಕಾರವುಳ್ಳ ಕಾರ್ಮಿಕ ಸಂಸ್ಥೆ ಇದು. 1945ರವರೆಗೂ ರಾಷ್ಟ್ರಗಳ ಒಕ್ಕೂಟದೊಡನೆ (ಲೀಗ್ ಆಫ್ ನೇಷನ್ಸ್) ಸಂಯೋಜನೆ ಹೊಂದಿದ್ದು 1946ರಲ್ಲಿ ವಿಶ್ವಸಂಸ್ಥೆಯ ಒಂದು ಅಂಗಸಂಸ್ಥೆಯಾಯಿತು. ಪ್ರಾರಂಭದಲ್ಲಿ ರಾಷ್ಟ್ರಗಳ ಒಕ್ಕೂಟದ ಸದಸ್ಯರೇ ಇದರ ಸದಸ್ಯರಾಗಿದ್ದು ಕ್ರಮೇಣ ಅದರ ಸದಸ್ಯರಲ್ಲದವರೂ ಇದರ ಸದಸ್ಯರಾಗಲು ಅವಕಾಶವಾಯಿತು. ಕೇವಲ ರಾಷ್ಟ್ರಸರ್ಕಾರಗಳು ಇದರ ಸದಸ್ಯತ್ವವನ್ನು ಪಡೆಯುವುದು ಮಾತ್ರವಲ್ಲದೆ ಆ ಸರ್ಕಾರಗಳ ಕಾರ್ಮಿಕರ ಹಾಗೂ ಉದ್ದಿಮೆಗಾರರ ಸಂಘಗಳ ಪ್ರತಿನಿಧಿಗಳು ಸಹ ಸದಸ್ಯತ್ವವನ್ನು ಪಡೆಯಲವಕಾಶವಿದೆ. ಈ ತ್ರಿಪಕ್ಷ ದೋಷಗಳನ್ನು ನಿವಾರಿಸುವ ಹಾಗೂ ಕಾರ್ಮಿಕರ ಸ್ಥಾನಮಾನಗಳನ್ನು ಕಾಪಾಡುವುದರ ಅಗತ್ಯವನ್ನು ಜಗತ್ತು ಕಂಡುಕೊಂಡದ್ದು ನೂರ್ರೆವತ್ತು ವರ್ಷಗಳ ಹಿಂದೆಯೇ. ಆದಕಾರಣ 1905ರಲ್ಲಿ ಸ್ವಿಟ್ಜರ್ಲೆಂಡಿನ ಬಾಸೆಲ್‌ನಲ್ಲಿ ಹಲವು ಸರ್ಕಾರಗಳ ಸಹಕಾರದಿಂದ ಕಾರ್ಮಿಕರಿಗಾಗಿಯೇ ಸ್ಥಾಪಿತವಾದ ಅಂತಾರಾಷ್ಟ್ರೀಯ ಸಂಘವನ್ನು ಈ ಕಾರ್ಮಿಕ ಸಂಘಕ್ಕೆ ಮಾತೃಸಂಸ್ಥೆಯೆನ್ನಬಹುದು. ಕಾರ್ಮಿಕರ ಕೆಲಸದ ವೇಳೆಯ ನಿಯಂತ್ರಣ, ಸಾಕಾದಷ್ಟು ವೇತನ ನೀಡಿಕೆ, ಕಾರ್ಯನಿಮಿತ್ತ ಕಾರ್ಮಿಕರಿಗೆ ಬರಬಹುದಾದ ಕಾಯಿಲೆಗಳು ಹಾಗೂ ಒದಗಬಹುದಾದ ಅಪಘಾತಗಳಿಂದ ರಕ್ಷಣೆ, ನಿವೃತ್ತಿ ವೇತನ, ಕಾರ್ಮಿಕರಿಗೆ ಆಂತರಿಕ ಸೌಲಭ್ಯಗಳನ್ನು ದೊರಕಿಸಿಕೊಡುವುದರ ಮೂಲಕ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಿ ಸಾರ್ವತ್ರಿಕ ಶಾಂತಿ ಸಾಧಿಸುವುದು, ಎಲ್ಲ ರಾಷ್ಟ್ರಗಳು ಕಾರ್ಮಿಕ ಸ್ಥಿತಿಗತಿಗಳ ವಿಚಾರದ ಬಗ್ಗೆ ಒಂದು ಸರ್ವಸಾಮಾನ್ಯ ಕ್ರಮವನ್ನನುಸರಿಸಿ ಅದರಂತೆ ಕಾರ್ಮಿಕರಿಗೆ ಅನುಕೂಲಗಳನ್ನು ಕಲ್ಪಿಸುವುದು–ಇತ್ಯಾದಿ ಈ ಸಂಸ್ಥೆಯ ಮುಖ್ಯ ಉದ್ದೇಶಗಳು.

ಇವುಗಳನ್ನು ಕಾರ್ಯಗತ ಮಾಡುವುದಕ್ಕಾಗಿಯೇ ಈ ಸಂಸ್ಥೆ ಅಂತಾರಾಷ್ಟ್ರೀಯ ವಾರ್ಷಿಕ ಸಮ್ಮೇಳನಗಳನ್ನು ಕರೆಯುತ್ತದೆ. ಪ್ರಥಮ ವಾರ್ಷಿಕ ಸಮ್ಮೇಳನ 1919ರಲ್ಲಿ ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆಯಿತು. 1921–1939 ರವರೆಗೂ ಇದರ ವಾರ್ಷಿಕ ಸಮ್ಮೇಳನಗಳು ಜಿನೀವಾದಲ್ಲಿ ನಡೆಯುತ್ತಿದ್ದು 1940ರಿಂದ ಅಮೆರಿಕದ ಮಾಂಟ್ರಿಯಲ್‌ನಲ್ಲಿ ನಡೆಯುತ್ತಿವೆ. ಸಂಸ್ಥೆಯ ಕೇಂದ್ರ ಕಚೇರಿ ಮಾತ್ರ ಜಿನೀವಾದಲ್ಲಿದೆ.

ಎರಡನೆಯ ಮಹಾಯುದ್ಧದ ಅನಂತರವೂ ಈ ಸಂಸ್ಥೆ ತನ್ನ ವಾರ್ಷಿಕ ಸಮ್ಮೇಳನಗಳಲ್ಲಿ ಮಹತ್ತರ ತೀರ್ಮಾನಗಳನ್ನು ಕೈಗೊಂಡು ಸೂಕ್ತ ಸಲಹೆಗಳನ್ನು ನೀಡುವುದಲ್ಲದೆ, ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳಿಗೆ ತಾಂತ್ರಿಕ ನೆರವನ್ನೂ ನೀಡುತ್ತದೆ. ಇಂಥ ಒಂದು ಕ್ರಿಯಾಶೀಲಪ್ರವೃತ್ತಿ 1949–1954ರ ಅವಧಿಯಲ್ಲಿ ಪ್ರಥಮ ಬಾರಿಗೆ ಕಂಡುಬಂತು. ಇದಲ್ಲದೆ ಪ್ರಾದೇಶಿಕ ಚಟುವಟಿಕೆಗಳನ್ನು ಕೈಗೊಂಡು ಔದ್ಯೋಗಿಕ ಮಂಡಲಿಗಳನ್ನು ರಚಿಸಿ, ಕಾರ್ಮಿಕರಿಗೆ ಸೌಲಭ್ಯ ಒದಗಿಸುವುದರ ಬಗ್ಗೆ ಸೂಕ್ತಕ್ರಮಗಳನ್ನು ಕೈಗೊಳ್ಳಲು ಕಾರ್ಮಿಕ ಪ್ರತಿನಿಧಿಗಳ ನಿರ್ದೇಶಕ ಮಂಡಲಿಗಳನ್ನೂ ಈ ಸಂಸ್ಥೆ ಸ್ಥಾಪಿಸಿದೆ. ಒಟ್ಟಿನಲ್ಲಿ ಹೇಳುವುದಾದರೆ ಕಾರ್ಮಿಕರಂಗದಲ್ಲಿ ಈ ಸಂಸ್ಥೆ ಹಾಕಿಕೊಂಡಿರುವ ಯೋಜನೆಗಳು ಮತ್ತು ನೆರವೇರಿಸುತ್ತಿರುವ ಕಾರ್ಯಗಳು ಕಾರ್ಮಿಕರ ಕಲ್ಯಾಣಕ್ಕೆ ಸಹಕಾರಿಯಾಗಿವೆ.

(*)

**ಅಂತಾರಾಷ್ಟ್ರೀಯ ಕೃಷಿ ಸಂಸ್ಥೆ :** ಇದು 1905ರಲ್ಲಿ, ರೋಮ್ ನಗರದಲ್ಲಿ ಇಟಲಿಯ ರಾಜ ಕರೆದ 40 ರಾಷ್ಟ್ರಗಳ ಪ್ರತಿನಿಧಿಗಳ ಸಭೆಯ ನಿರ್ಣಯದ ಪ್ರಕಾರ ಸ್ಥಾಪಿಸಲ್ಪಟ್ಟಿತು. 1906ರಲ್ಲಿ 24 ರಾಷ್ಟ್ರಗಳು ಕೂಡಿ ಒಪ್ಪಂದದ ಕರಡು ತಯಾರಿಸಿ, ಅದನ್ನು ಕಾರ್ಯರೂಪಕ್ಕೆ ತಂದುವು. ಅನಂತರ 77 ರಾಷ್ಟ್ರಗಳು ಈ ಸಂಸ್ಥೆಯ ಸದಸ್ಯರಾದುವು.

ಈ ಯೋಜನೆಯನ್ನು ಸೂಚಿಸಿದ್ದು ಧರ್ಮಪ್ರಚಾರಕ ಡೇವಿಡ್ ಲೂಬಿನ್. ವಾಣಿಜ್ಯ ಅಭಿವೃದ್ಧಿಗೆ ಕೃಷಿಸಂಪತ್ತು ಆಧಾರವಾಗಿದ್ದು, ಕೃಷಿ ಮತ್ತು ಕೈಗಾರಿಕೆಗಳ ನಡುವೆ ಸಮತೋಲ ಸಾಧಿಸಲು ಇಂಥ ಸಂಸ್ಥೆ ಆವಶ್ಯಕವೆಂಬುದು ಅವರ ಅಭಿಮತವಾಗಿತ್ತು. ಈ ಒಪ್ಪಂದ ಕೃಷಿ ಸಂಬಂಧಿತ ಪುಸ್ತಕಾಲಯಕ್ಕೆಡೆಮಾಡಿತು (ಅದು ಕ್ರಮೇಣ ಪತ್ರಾಗಾರವಾಗಿ ಆರ್ಕೈವ್ಸ್ ಬೆಳೆದು ಈಗ ಪ್ರಪಂಚದ ಅತಿ ದೊಡ್ಡ ಕೃಷಿಸಂಖ್ಯಾಸಂಗ್ರಹಣ ನಿಲಯವಾಗಿದೆ). ಜೊತೆಗೆ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಸಾಧಾರಣ ಸಭೆಯನ್ನು ಕರೆಯಲು ಮತ್ತು ಸಂಸ್ಥೆಯ ಕಾರ್ಯ ರೂಪರೇಷೆಯನ್ನು ತಯಾರಿಸಲು ಅವಕಾಶ ಮಾಡಿಕೊಟ್ಟಿದೆ.

ಈ ಸಂಸ್ಥೆಯ ಕಾರ್ಯಕ್ಷೇತ್ರ ಬಹು ವಿಶಾಲವಾಗಿದೆ. ಬೆಳೆ, ಪಶು, ಜನಸಂಖ್ಯೆ, ವ್ಯಾಪಾರ, ಧಾರಣೆ, ಕೂಲಿ, ರೋಗ ಮತ್ತು ಬೆಳೆಗಳ ಪೀಡೆಗಳ ಬಗ್ಗೆ ಅಂಕಿ ಅಂಶ ಸಂಗ್ರಹಿಸುವುದು, ವೈಜ್ಞಾನಿಕ, ಆರ್ಥಿಕ ಮಾಹಿತಿಯ ಸಂಗ್ರಹಣೆ, ವಿಶ್ಲೇಷಣೆ, ಪ್ರಕಟಣೆ ಮತ್ತು ಹಂಚುವಿಕೆ, ವ್ಯವಸಾಯ, ಸಹಕಾರ, ವಿಮೆ, ಹಾಗೂ ವೈಜ್ಞಾನಿಕ ಮತ್ತು ವ್ಯವಸಾಯದ ಪರಿಷತ್ತುಗಳ ನಿರ್ಧಾರಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಯ ಅಧ್ಯಯನ – ಇವು ಸಂಸ್ಥೆಯ ಕೆಲವು ಮುಖ್ಯ ಕೆಲಸಗಳು. ಇವೆಲ್ಲ ಧೋರಣೆಗಳು ಈ ಸಂಸ್ಥೆಯನ್ನು ಜಗತ್ತಿನ ಸಮಸ್ತ ಕೃಷಿ ಸಮಸ್ಯೆಗಳನ್ನೂ ಪರಿಶೀಲಿಸಿ, ಪರಿಹರಿಸುವ ಸಂಸ್ಥೆಯನ್ನಾಗಿಸಿವೆ. ಕ್ರಮೇಣ ಈ ಸಂಸ್ಥೆ ಕೃಷಿ ಕಾನೂನು, ಸಾಮಾಜಿಕ ಸಮಸ್ಯೆಗಳು, ವಲಸೆ ಹೋಗುವಿಕೆ, ಅರಣ್ಯಸಂಬಂಧಿ ವಿಷಯಗಳು ಮುಂತಾದುವನ್ನು ತನ್ನ ವ್ಯಾಪ್ತಿಗೆ ಒಳಪಡಿಸಿಕೊಂಡು ಬೆಳೆಯಿತು.

ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಕೆಳಗೆ ಅನೇಕ ವಿಭಾಗಗಳಲ್ಲಿ ನೂರಾರು ರಾಷ್ಟ್ರಗಳ ಸುಮಾರು ಸಾವಿರಾರು ಸ್ತ್ರೀಪುರುಷರ ಸಿಬ್ಬಂದಿ ಕೆಲಸ ಮಾಡುತ್ತದೆ.

ರೋಮ್‌ನಲ್ಲಿ ಎರಡು ವರ್ಷಗಳಿಗೊಮ್ಮೆ ಸೇರುತ್ತಿದ್ದ ಸಾಮಾನ್ಯ ಸಭೆಗಳಿಗೆ ಮತ್ತು ಯುರೋಪಿನ ನೂರಾರು ಸ್ಥಳಗಳಲ್ಲಿ ಆಗಾಗ ಸೇರುತ್ತಿದ್ದ ವಿಶೇಷ ಸಭೆಗಳಿಗೆ ಸೂಕ್ತ ಸಿದ್ಧತೆಗಳನ್ನು ಮಾಡುವುದು ಇದರ ಮುಖ್ಯ ಕೆಲಸಗಳಲ್ಲೊಂದಾಗಿತ್ತು. ಲೀಗ್ ಆಫ್ ನೇಷನ್ಸ್, ಅಂತಾರಾಷ್ಟ್ರೀಯ ಕಾರ್ಮಿಕ ಕಚೇರಿ ಮತ್ತು 1927, 1933, 1939ರಲ್ಲಿ ಸಮಾವೇಶಗೊಂಡ ಆರ್ಥಿಕ ಸಮ್ಮೇಳನಗಳೊಂದಿಗೆ ಈ ಸಂಸ್ಥೆ ಪೂರ್ಣ ಸಹಕಾರ ತೋರಿತಲ್ಲದೆ ಜಾಗತಿಕ ಅರಣ್ಯ ಪರಿಷತ್ತು, ಕುಕ್ಕುಟ ಮತ್ತು ಕ್ಷೀರ ಸಂವರ್ಧನ ಪರಿಷತ್ತುಗಳ ಸಭೆಗಳಲ್ಲಿ ಭಾಗವಹಿಸಿತು.

ಈ ಸಂಸ್ಥೆಯ ಕಾರ್ಯಗಳನ್ನು ಅನೇಕ ಶ್ರೇಣಿಗಳಲ್ಲಿ ಪ್ರಚುರಪಡಿಸಿ ವಿವರಗಳನ್ನು ಸರ್ಕಾರ ಹಾಗೂ ಸಾರ್ವಜನಿಕರಿಗೆ ಹಂಚಲಾಯಿತು. ಈ ಸಂಸ್ಥೆ ಇಂಗ್ಲಿಷ್, ಫ್ರೆಂಚ್ ಭಾಷೆಗಳನ್ನೊಳಗೊಂಡು ಹಲವು ಅಂತಾರಾಷ್ಟ್ರೀಯ ಭಾಷೆಗಳಲ್ಲಿ ಅಂತಾರಾಷ್ಟ್ರೀಯ ಒಕ್ಕಲುತನ ಕಾಯಿದೆಯ ವಾರ್ಷಿಕ ಗ್ರಂಥಗಳು, ಅಂತಾರಾಷ್ಟ್ರೀಯ ಅರಣ್ಯ ಸಂಖ್ಯಾ ಸಂಗ್ರಹಣ ವಾರ್ಷಿಕ ಗ್ರಂಥಗಳು ಮತ್ತು ರಾಷ್ಟ್ರೀಯ ಒಕ್ಕಲುತನ ವಿಮರ್ಶಿಸುವ ಮಾಸಿಕ ಪತ್ರಿಕೆಗಳು ಇತ್ಯಾದಿ ಅತ್ಯುಪಯುಕ್ತವಾದ ಪುಸ್ತಕಗಳನ್ನು ಪ್ರಕಟಿಸಿತು.

ಎರಡನೆಯ ಮಹಾಯುದ್ಧ ಕಾಲದಲ್ಲಿ ಈ ಸಂಸ್ಥೆಯ ಅಂತಾರಾಷ್ಟ್ರೀಯ ಧೋರಣೆಯನ್ನು ಒಪ್ಪದ ಯುದ್ಧಾಸಕ್ತ ರಾಷ್ಟ್ರಗಳ ಬಲದಿಂದಾಗಿ ಇದರ ಕಾರ್ಯಾಸಕ್ತಿ ಕ್ಷೀಣಿಸಿತು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಆಹಾರ ಮತ್ತು ಕೃಷಿಸಂಸ್ಥೆ (ಎಫ್.ಎ.ಒ.) 1943ರಲ್ಲಿ ಸ್ಥಾಪನೆಗೊಂಡಾಗ ಖ್ಯಾತ ಡೇವಿಡ್ ಲೂಬಿನ್ ಸ್ಮಾರಕ ಗ್ರಂಥಾಲಯದ ಎಲ್ಲ ಗ್ರಂಥಗಳನ್ನೂ ರೋಮ್ ನಗರದ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಚೇರಿಗೆ ರವಾನಿಸಲಾಯಿತು (1946) **(ನೋಡಿ– ಆಹಾರ ಮತ್ತು ಕೃಷಿ ಸಂಸ್ಥೆ)**.

(ಎಫ್.ಎ.ಒ.) (ಎಂ.)

**ಅಂತಾರಾಷ್ಟ್ರೀಯ ಕ್ಷಿಪಣಿ : (ನೋಡಿ– ರಾಕೆಟ್) (ನೋಡಿ– ಕ್ಷಿಪಣಿ).**

**ಅಂತಾರಾಷ್ಟ್ರೀಯಗಳು :** ಇದು ಪಾಶ್ಚಾತ್ಯ ಚರಿತ್ರೆಯಲ್ಲಿ ವಿಶಿಷ್ಟವಾದ ಅರ್ಥವನ್ನು ಪಡೆದಿದೆ. ವಿವಿಧ ಕಾಲಘಟ್ಟಗಳಲ್ಲಿ ಅನೇಕ ಶ್ರಮಜೀವಿಗಳ ಸಂಘಗಳೂ ಸಮ್ಮೇಳನಗಳೂ ಅಂತಾರಾಷ್ಟ್ರೀಯವೆಂಬ ಹೆಸರನ್ನು ಹೊಂದಿದ್ದರೂ ಬಂಡವಾಳ ಪದ್ಧತಿಯ ವಿರುದ್ಧ ಹೋರಾಟ ನಡೆಸಿ ಸಮಾಜವಾದ ತತ್ತ್ವವನ್ನು ಅವಲಂಬಿಸಿದ ಶ್ರಮಜೀವಿಗಳ ಮೂರು ಅಂತಾರಾಷ್ಟ್ರೀಯ ಸಂಸ್ಥೆಗಳು ಮಾತ್ರ ಚರಿತ್ರೆಯಲ್ಲಿ ಅಂತಾರಾಷ್ಟ್ರೀಯಗಳು ಎಂದು ಪ್ರಸಿದ್ಧಿಯಾಗಿವೆ. ಇವುಗಳಲ್ಲಿ ಮೊದಲನೆಯದಾದ ಅಂತಾರಾಷ್ಟ್ರೀಯ ಕೂಲಿಗಾರರ ಸಂಘ 1864ನೆಯ ಸೆಪ್ಟೆಂಬರ್ 28ರಂದು ಲಂಡನ್ನಿನಲ್ಲಿ ಸ್ಥಾಪಿತವಾಗಿ ಹನ್ನೆರಡು ವರ್ಷಗಳ ಕಾಲ ಕೆಲಸ ಮಾಡಿ 1876ರಲ್ಲಿ ಅಂತ್ಯಗೊಂಡಿತು. ಇದೇ ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವ ಅಂತಾರಾಷ್ಟ್ರೀಯ I. ಕಾರ್ಲ್‌ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ನೇತೃತ್ವದಲ್ಲಿ ಸ್ಥಾಪಿತವಾದ ಈ ಸಂಸ್ಥೆ ತನ್ನ ಕಾರ್ಯಕ್ರಮವನ್ನು 1866ರಲ್ಲಿ ಪ್ರಚುರಪಡಿಸಿತು. ಇದರ ಧೋರಣೆ ಅತ್ಯಂತ ಕ್ರಾಂತಿಕಾರಿಯಾದುದರಿಂದ ಸಮಾಜವಾದಿಗಳು ಇಂದೂ ಇದರ ಬಗೆಗೆ ಗೌರವವನ್ನು ಹೊಂದಿದ್ದಾರೆ.

ಪ್ರಥಮ ಅಂತಾರಾಷ್ಟ್ರೀಯ ಮುಕ್ತಾಯಗೊಂಡ 15 ವರ್ಷಗಳ ಅನಂತರ ಅಂತಾರಾಷ್ಟ್ರೀಯ II ಹುಟ್ಟಿಕೊಂಡಿತು. ಇದರ ಮುಖಂಡರು ಹೆಚ್ಚಾಗಿ ಸಮತಾವಾದಿಗಳು. ಮೊದಲನೆಯ ಮಹಾಯುದ್ಧದವರೆಗೂ ಇದು ಜಾಗತಿಕ ಸಮತಾವಾದಿಗಳ ಪ್ರತಿನಿಧಿ ಸಂಸ್ಥೆಯಾಗಿತ್ತು. ಆದರೆ ಯುದ್ಧಕಾಲದಲ್ಲಿ ಇದರಲ್ಲಿ ಒಡಕು ಹುಟ್ಟಿದ್ದರಿಂದ 1919ರಲ್ಲಿ ಅಂತಾರಾಷ್ಟ್ರೀಯ III ರ ನಿರ್ಮಾಣ ಅಗತ್ಯವಾಯಿತು. ಈ ಕಮ್ಯೂನಿಸ್ಟ್ ಅಂತಾರಾಷ್ಟ್ರೀಯ 1943ರವರೆಗೆ ಕೆಲಸ ಮಾಡಿ ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಅಂತ್ಯಗೊಂಡಿತು.

ಅಂತಾರಾಷ್ಟ್ರೀಯ I (1864–76) : ಈ ಸಂಸ್ಥೆ ಆಧುನಿಕ ಶ್ರಮಜೀವಿಗಳ ಚಳವಳಿಗೆ ಅಗತ್ಯವಾದ ತಾತ್ತ್ವಿಕ ಮತ್ತು ಸಂಘಟನಾತ್ಮಕ ತಳಹದಿಯನ್ನು ಹಾಕಿಕೊಟ್ಟಿತು. ಇದರ ಮೂಲಕ ಮಾರ್ಕ್ಸ್ ಮತ್ತು ಎಂಗೆಲ್ಸರ ವೈಜ್ಞಾನಿಕ ಸಮಾಜವಾದ ಜನಾದರಣೀಯವಾಯಿತಲ್ಲದೆ ಶ್ರಮಜೀವಿಪಕ್ಷಗಳ ರಾಜಕೀಯ ಕರ್ತವ್ಯ ಮತ್ತು ಧೋರಣೆ ನಿರ್ದಿಷ್ಟಗೊಂಡಿತು.

ಈ ಸಂಸ್ಥೆ ತನ್ನ ಹನ್ನೆರಡು ವರ್ಷಗಳ ಅಸ್ತಿತ್ವದಲ್ಲಿ ಪ್ರಪಂಚದ ನಾನಾ ಭಾಗಗಳಲ್ಲಿ ಸಣ್ಣಪುಟ್ಟ ಗುಂಪುಗಳಾಗಿ ಚದುರಿಹೋಗಿದ್ದ ಕೂಲಿಗಾರರ ಸಂಸ್ಥೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದುಗೂಡಿಸಿ ಬಲಪಡಿಸಿತು. ಇದರ ಮೊದಲ ನಾಲ್ಕು ಸಮ್ಮೇಳನಗಳು ಜಿನೀವ (1866), ಲಾಸೇನ್(1867), ಬ್ರಸೆಲ್ಸ್ (1868) ಮತ್ತು ಬಾಸೆಲ್ (1869)

ನಗರಗಳಲ್ಲಿ ಸಮಾವೇಶಗೊಂಡುವು. ಈ ಸಮ್ಮೇಳನಗಳ ಮೂಲಕ ಯುರೋಪಿನ ಶ್ರಮಜೀವಿಗಳ ಅನೇಕ ಚಳವಳಿಗಳಿಗೆ ಬೆಂಬಲಕೊಟ್ಟು ಕೂಲಿಗಾರರ ಅಂತಾರಾಷ್ಟ್ರೀಯ ಒಕ್ಕೂಟ ಸ್ಥಾಪನೆಯಾಯಿತು. ಇದರ ಪ್ರಭಾವ ಪೂರ್ವ ಯುರೋಪಿನ ಪೋಲೆಂಡ್ ಮತ್ತು ಹಂಗೆರಿಯವರೆಗೂ ವ್ಯಾಪಿಸಿತ್ತು. ಯುರೋಪಿನ ಅನೇಕ ರಾಷ್ಟ್ರಗಳಲ್ಲಿ ಇದರ ಅಂಗಸಂಸ್ಥೆಗಳ ಸಂಖ್ಯೆ ಹೆಚ್ಚಿತು. ಅಲ್ಲದೆ ಅಂದಿನ ಯುರೋಪಿನ ಪ್ರತಿಯೊಂದು ಕ್ರಾಂತಿಕಾರಿ ಚಳವಳಿಗೂ ಇದು ಪ್ರೇರಕಶಕ್ತಿಯಾಗಿತ್ತು. ಪ್ಯಾರಿಸ್ ಕಮ್ಯೂನ್ (1871) ಚಳವಳಿಯಲ್ಲಿ ಇದು ನೇರವಾಗಿ ಭಾಗವಹಿಸದಿದ್ದರೂ ಅದರ ಮೇಲೆ ತನ್ನ ಪ್ರಭಾವವನ್ನು ಬೀರಿತು.

ಪ್ಯಾರಿಸ್ ಕಮ್ಯೂನ್ ಚಳವಳಿ ಮುಗಿದ ಅನಂತರ ಅದರ ಕಾರ್ಯಚಟುವಟಿಕೆಗಳು ಇಳಿಮುಖವಾಗುತ್ತ ಬಂದುವು. ಬ್ರಿಟನ್ನಿನ ಕಾರ್ಮಿಕ ಸಂಘಗಳು ತಮ್ಮ ಸ್ವಂತ ವ್ಯವಹಾರಗಳಲ್ಲಿ ಮಗ್ನರಾಗಿ ಅಂತಾರಾಷ್ಟ್ರೀಯದ ಕೆಲಸಗಳಿಂದ ದೂರವಾಗುತ್ತ ಬಂದುವು. ಜರ್ಮನ್ ಸಮತಾವಾದಿಗಳು ಆ ಕಾಲದಲ್ಲಿ ಸಂಘಸಂಸ್ಥೆಗಳಲ್ಲಿ ಭಾಗವಹಿಸಲು ಆ ದೇಶದ ಕಾನೂನಿನ ತಡೆಯಿತ್ತು. ಇಂಟರ್‌ನ್ಯಾಷನಲ್ಲಿನ ಚಟುವಟಿಕೆಗಳಿಂದ ಅಮೆರಿಕ ದೂರ ಸರಿದಿತ್ತು. ಕಾರ್ಮಿಕ ವಲಯಗಳಲ್ಲಿ ಪ್ರಥಮ ಅಂತಾರಾಷ್ಟ್ರೀಯದ ಪ್ರಭಾವ ಮತ್ತು ಘನತೆ ಬಹಳ ಹೆಚ್ಚಾಗಿದ್ದಿತಾದರೂ ಇದಕ್ಕೆ ಸಾಧನಸಂಪತ್ತುಗಳ ಕೊರತೆ ಬಹುವಾಗಿತ್ತು. ಅಲ್ಲದೆ ಇದರ ನಾಲ್ಕನೆಯ ಸಮ್ಮೇಳನದಲ್ಲಿ ಈ ಸಂಸ್ಥೆಯನ್ನು ಪ್ರವೇಶಿಸಿದ ಅರಾಜಕತಾವಾದಿ ಬಕುನಿನ್ ಮತ್ತು ಅನುಯಾಯಿಗಳು ಇದರ ಪತನಕ್ಕೆ ಕಾರಣರಾದರು. 1872ರಲ್ಲಿ ಹೇಗ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಮಾರ್ಕ್ಸ್‌ವಾದಿಗಳಿಗೂ ಅರಾಜಕತಾವಾದಿಗಳಿಗೂ ವಿರೋಧ ಬೆಳೆದು ಬಕುನಿನ್ ಮಾರ್ಕ್ಸ್ ಪಕ್ಷದಿಂದ ಹೊರಗೆ ಬರಬೇಕಾಯಿತು. ಇವನು ಇಟಲಿಯ ಮತ್ತು ಸ್ಪೇನಿನ ಪ್ರತಿನಿಧಿಗಳನ್ನು ಸೇರಿಸಿಕೊಂಡು ಮಾರ್ಕ್ಸ್ ಪಕ್ಷದ ವಿರುದ್ಧ ಬೇಕೆಂದು ಹೊಸ ಅಂತಾರಾಷ್ಟ್ರೀಯ ಒಂದನ್ನು ಸ್ಥಾಪಿಸಿದನು. ಈ ಸಂದರ್ಭದಲ್ಲಿ ಹಳೆಯ ಅಂತಾರಾಷ್ಟ್ರೀಯವನ್ನು ನ್ಯೂಯಾರ್ಕಿಗೆ ವರ್ಗಾಯಿಸಲಾಯಿತು. ಆದರೆ ಇದು ಅಲ್ಲೂ ಬಹಳಕಾಲ ಉಳಿಯಲಿಲ್ಲ. 1874 ಮತ್ತು 1876ರಲ್ಲಿ ಎರಡು ಸಮ್ಮೇಳನಗಳನ್ನು ನಡೆಸಿದ ಅನಂತರ ಅದರ ವಿಸರ್ಜನೆಯಾಯಿತು.

ಅಂತಾರಾಷ್ಟ್ರೀಯ II (1889–1914) : ಬ್ಯಾಸ್ಟೀಲ್ ಪತನದ ಶತಾಬ್ದಿಯ ಸಮಾರಂಭದಲ್ಲಿ ಎರಡನೆಯ ಅಂತಾರಾಷ್ಟ್ರೀಯದ ಉದಯವಾಯಿತು. ಫ್ರೆಂಚ್ ಮತ್ತು ಜರ್ಮನ್ ಮಾರ್ಕ್ಸ್‌ವಾದಿಗಳು ಇದರ ಸ್ಥಾಪನೆಯ ಕಾಲದಲ್ಲಿ ಪ್ರಭಾವಶಾಲಿಗಳಾಗಿದ್ದರು. ಮೇ ಒಂದನೆಯ ತಾರೀಖನ್ನು ಅಂತಾರಾಷ್ಟ್ರೀಯ ಕೂಲಿಗಾರರ ದಿನವೆಂದು ಘೋಷಿಸಿದುದು ಇದರ ಮುಖ್ಯಸಾಧನೆ. ಮೊದಲನೆಯ ಅಂತಾರಾಷ್ಟ್ರೀಯದಂತೆ ಇದರ ಕೇಂದ್ರ ಸಂಸ್ಥೆ ಅಷ್ಟೇನೂ ಶಕ್ತಿಯುತವಾಗಿರಲಿಲ್ಲ. ಇದರ ಸಭೆಗಳಲ್ಲಿ ಕೂಲಿಗಾರರ ಸಂಘಗಳ ಸಾಮಾನ್ಯ ಸಮಸ್ಯೆಗಳ ಪರಿಹಾರವೇ ಮುಖ್ಯ ವಿಷಯವಾಗಿತ್ತು. ಆದರೆ 1911ರಿಂದ ಅದಕ್ಕಿಂತ ಹೆಚ್ಚು ವಿಶಾಲವಾದ ಯುದ್ಧ ಮತ್ತು ಶಾಂತಿಯ ವಿಷಯಗಳಲ್ಲಿ ಆಸಕ್ತಿವಹಿಸಲು ಪ್ರಾರಂಭಿಸಿತು. ಈ ಪ್ರಶ್ನೆ ಮೊಟ್ಟಮೊದಲಿಗೆ ಚರ್ಚೆಗೆ ಬಂದದ್ದು 1903ರ ಆಮ್ಸ್ಟರ್‌ಡ್ಯಾಂ ಸಮ್ಮೇಳನದಲ್ಲಿ. ಅಂದಿನಿಂದ ಯುದ್ಧ ಮತ್ತು ಶಾಂತಿಯ ವಿಚಾರವಾದ ಚರ್ಚೆ ಇದರ ಸಮ್ಮೇಳನಗಳಲ್ಲಿನ ಪ್ರಮುಖ ಪ್ರಶ್ನೆಯಾಯಿತು.

1911ರ ಅನಂತರ ಯುದ್ಧದ ಕಾರ್ಮೋಡಗಳು ಯುರೋಪನ್ನು ಆವರಿಸಿದುವು. ಅಗದಿರ್ ಘಟನೆ, ಇಟಲಿ–ತುರ್ಕಿ ಯುದ್ಧ ಮತ್ತು ಬಾಲ್ಕನ್ ಯುದ್ಧಗಳು ಮೊದಲನೆಯ ಮಹಾಯುದ್ಧದ ಮುನ್ಸೂಚನೆಗಳಾದುವು. ಪ್ರತಿಯೊಂದು ಸಮಾಜವಾದಿ ಪಕ್ಷವೂ ಯುದ್ಧನಿವಾರಣೆಯ ಕಾರ್ಯದಲ್ಲಿ ಆಸಕ್ತಿಗೊಂಡಿತು. 1912ರಲ್ಲಿ ಶ್ರಮಜೀವಿಗಳನ್ನು ಯುದ್ಧದಿಂದ ರಕ್ಷಿಸಿ ವಿಶ್ವಶಾಂತಿ ಸ್ಥಾಪಿಸಲು ಬಾಸೆಲ್ ನಗರದಲ್ಲಿ ಎರಡನೆಯ ಅಂತಾರಾಷ್ಟ್ರೀಯದ ವಿಶೇಷ ಸಮ್ಮೇಳನವನ್ನು ಕರೆಯಲಾಯಿತು. ಈ ಸಮ್ಮೇಳನ ಯುದ್ಧವನ್ನು ತಡೆಗಟ್ಟಲು ಸ್ಟುಟ್‌ಗಾರ್ಟ್ ಅಧಿವೇಶನದಲ್ಲಿ ಲೆನಿನ್ ಮತ್ತು ರೋಸಾ ಲಕ್ಸಂಬರ್ಗ್ ಮಂಡಿಸಿದ್ದ ಗೊತ್ತುವಳಿಯ ಆಧಾರದ ಮೇಲೆ, ಎಲ್ಲ ಕಾರ್ಮಿಕರೂ ತಮ್ಮ ರಾಜ್ಯಗಳು ಶಾಂತಿಯುತ ವಿದೇಶೀಯ ನೀತಿಯನ್ನು ಅನುಸರಿಸುವಂತೆ ಒತ್ತಾಯ ಮಾಡಬೇಕೆಂದು ಘೋಷಿಸಿತು. ಈ ಯುದ್ಧವಿರೋಧಿ ಚಳವಳಿಯೂ ಬಂಡವಾಳ ಪದ್ಧತಿಯ ವಿರುದ್ಧ ಚಳವಳಿಯ ಒಂದು ಮುಖ್ಯ ಅಂಗವಾಗುವಂತೆ ಅದನ್ನು ಮಾರ್ಪಡಿಸಬೇಕೆಂದೂ ಸೂಚಿಸಿತು. ಇದಾದಮೇಲೆ ವಿಯೆನ್ನಾದಲ್ಲಿ 1914ರಲ್ಲಿ ಸೇರಿದ ಸಮ್ಮೇಳನದಲ್ಲಿಯೂ ಈ ಪ್ರಶ್ನೆಯ ಚರ್ಚೆಗೆ ಇನ್ನೂ ಹೆಚ್ಚು ಪ್ರಾಶಸ್ತ್ಯ ದೊರೆಯಿತು. ಆದರೆ ಈ ಸಮ್ಮೇಳನ ಸೇರುವ ಮೊದಲೇ ಒಂದನೆಯ ಮಹಾಯುದ್ಧ ಪ್ರಾರಂಭವಾಗಿತ್ತು. ಇದರಿಂದಾಗಿ ಎಲ್ಲ ಅಂತಾರಾಷ್ಟ್ರೀಯ ಚಟುವಟಿಕೆಗಳೂ ಸ್ತಬ್ಧವಾದುವು. ಯುದ್ಧ ನಡೆಯುತ್ತಿದ್ದಾಗ ಅಂತಾರಾಷ್ಟ್ರೀಯದ ಕಾರ್ಯಕಾರಿ ಸಮಿತಿಯ ಸಭೆಗಳು ನಡೆಯಲಿಲ್ಲವಾದರೂ ಅಂತಾರಾಷ್ಟ್ರೀಯ ಚಟುವಟಿಕೆಗಳನ್ನು ಪುನರಾರಂಭಿಸಲು ಕೆಲವು ಪ್ರಯತ್ನಗಳು ನಡೆದುವು. ಡಚ್ ಮತ್ತು ಸ್ಕ್ಯಾಂಡಿನೇವಿಯನ್ ಸಂಘಗಳು ದ್ವಿತೀಯ ಅಂತಾರಾಷ್ಟ್ರೀಯದ ಕಾರ್ಯದರ್ಶಿ ಕ್ಯಾಮಿಲ್ ಹ್ಯೂಸ್‌ಮಾನ್ಸ್‌ನ ಬೆಂಬಲದಿಂದ ಸ್ಟಾಕ್‌ಹೋಂನಲ್ಲಿ 1917ರಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಕರೆಯಲು ಪ್ರಯತ್ನಿಸಿದುವು. ಮಿತ್ರರಾಷ್ಟ್ರಗಳು ಈ ಸಮ್ಮೇಳನದ ಸದಸ್ಯರಿಗೆ ರಹದಾರಿಯನ್ನು ಕೊಡಲು ನಿರಾಕರಿಸಿದುದರಿಂದ ಈ ಸಮ್ಮೇಳನ ನಡೆಯಲ್ಲಿಲ್ಲ. ಅನಂತರ ಜಿಮ್ಮರ್‌ವಾಲ್ಡ್ ಮತ್ತು ಕೀನ್ಥಾಲ್‌ಗಳಲ್ಲಿ ನಡೆದ ಸಮ್ಮೇಳನಗಳಲ್ಲಿ ಕೇವಲ ಕೆಲವು ರಾಷ್ಟ್ರಗಳ ಪ್ರತಿನಿಧಿಗಳು ಮಾತ್ರ ಭಾಗವಹಿಸಿದ್ದರು. ಈ ಪ್ರತಿನಿಧಿಗಳೇ ಮುಂದೆ ತೃತೀಯ ಅಂತಾರಾಷ್ಟ್ರೀಯದ ಸ್ಥಾಪನೆಗೆ ಕಾರಣಕರ್ತರಾದರು.

ಮಾರ್ಕ್ಸ್‌ವಾದಿ ಸಂಸ್ಥೆಯಾಗಿ ಪ್ರಾರಂಭಗೊಂಡ ದ್ವಿತೀಯ ಅಂತಾರಾಷ್ಟ್ರೀಯವು ಪ್ರಗತಿವಿರೋಧಿಶಕ್ತಿಗಳ ಪಿತೂರಿಗಳಿಂದ ಸಮಯಸಾಧಕಶಕ್ತಿಗಳ ಕೈಗೊಂಬೆಯಾಗಿ ಪರಿಣಮಿಸಿತು. ಮೊದಲನೆಯ ಮಹಾಯುದ್ಧದ ಅನಂತರ ದ್ವಿತೀಯ ಅಂತಾರಾಷ್ಟ್ರೀಯವು ಪ್ರಪಂಚದ ಶ್ರಮಜೀವಿಗಳ ಮುನ್ನಡೆಗೆ ಕಂಟಕವಾಯಿತಲ್ಲದೆ ಸಮಾಜವಾದದ ಗುರಿಯಿಂದಲೂ ಹಿಮ್ಮೆಟ್ಟಿತು.

ಸಮಯಸಾಧಕ ಮುಂದಾಳುಗಳು ಈ ಅಂತಾರಾಷ್ಟ್ರೀಯದ ಕಡೆಯ ವರ್ಷಗಳಲ್ಲಿ ಸಮಾಜವಾದಿ ತತ್ತ್ವವನ್ನು ಕೈಬಿಟ್ಟು ಬೂರ್ಜ್ವ ಸುಧಾರಣಾ ನೀತಿಗೆ ಮಾರುಹೋಗಿ ಅದರ ಕ್ರಾಂತಿಕಾರಿ ನೀತಿಯನ್ನು ಮೊಟಕು ಮಾಡಿದರು. ಇದರಿಂದಾಗಿ ದ್ವಿತೀಯ ಅಂತಾರಾಷ್ಟ್ರೀಯ ಅವಸಾನಗೊಂಡಿತು.

ಪರಿಸ್ಥಿತಿ ಹೀಗಿದ್ದರೂ ದ್ವಿತೀಯ ಅಂತಾರಾಷ್ಟ್ರೀಯವು ಶ್ರಮಜೀವಿಗಳ ಅನೇಕ ಹೋರಾಟಗಳಲ್ಲಿ ಜಯಗಳಿಸಿ ಕಾರ್ಮಿಕಚಳವಳಿಯನ್ನು ಪ್ರಭಾವಶಾಲಿಯನ್ನಾಗಿ ಮಾಡಿತು. ಪಶ್ಚಿಮ ಯುರೋಪಿಗೆ ಮಾತ್ರ ಸೀಮಿತವಾಗಿದ್ದ ಕಾರ್ಮಿಕ ಚಳವಳಿ ದ್ವಿತೀಯ ಅಂತಾರಾಷ್ಟ್ರೀಯದ ಅವಧಿಯಲ್ಲಿ ಯುರೋಪಿನಾದ್ಯಂತ ಹರಡಿ ಅಮೆರಿಕವನ್ನೂ ಪ್ರವೇಶಿಸಿತು. ಆದರೆ ಅಂತಾರಾಷ್ಟ್ರೀಯ ಕಾರ್ಮಿಕರು ತಮ್ಮ ಸಮಾಜವಾದಿ ಗುರಿಯತ್ತ ಮುನ್ನಡೆಯಲು ಅಗತ್ಯವಾದ ಮುಂದಾಳುಗಳನ್ನು ಪಡೆಯಲು ತೃತೀಯ ಅಂತಾರಾಷ್ಟ್ರೀಯದವರೆಗೆ ಕಾಯಬೇಕಾಯಿತು.

ಅಂತಾರಾಷ್ಟ್ರೀಯ III (1919–42) – ಒಂದನೆಯ ಮಹಾಯುದ್ಧದ ಅನಂತರ ಪೋಲೆಂಡ್, ಹಂಗೆರಿ, ಜರ್ಮನಿ, ಆಸ್ಟ್ರಿಯ, ರಷ್ಯ, ಫಿನ್‌ಲೆಂಡ್ ಮತ್ತು ಬಾಲ್ಕನ್ ಗಣರಾಜ್ಯಗಳ ಸಮಾಜವಾದೀ ಪಕ್ಷಗಳು 1919ರಲ್ಲಿ ತೃತೀಯ ಅಂತಾರಾಷ್ಟ್ರೀಯವನ್ನು ಸ್ಥಾಪಿಸಲು ಕರೆಗೊಟ್ಟುವು. ಮಾಸ್ಕೊ ನಗರದಲ್ಲಿ ಮಾರ್ಚ್ 1919ರಲ್ಲಿ 19 ರಾಷ್ಟ್ರಗಳ ಮಾರ್ಕ್ಸ್‌ವಾದಿ ಪಕ್ಷಗಳು ಲೆನಿನ್ನರ ಅಧ್ಯಕ್ಷತೆಯಲ್ಲಿ ಕಮ್ಯೂನಿಸ್ಟ್ ಅಂತಾರಾಷ್ಟ್ರೀಯ ಅಥವಾ ಕಾಮಿಂಟರ್ನ್ ಎಂದು ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವ ತೃತೀಯ ಅಂತಾರಾಷ್ಟ್ರೀಯವನ್ನು ಸ್ಥಾಪಿಸಿದುವು. ಇದು ಸಮಾಜವಾದಿ (ಕಮ್ಯೂನಿಸಂ) ತತ್ತ್ವದಲ್ಲಿ ನಂಬಿಕೆಯುಳ್ಳ ಕಾರ್ಮಿಕ ಪಕ್ಷಗಳ ಅಂತಾರಾಷ್ಟ್ರೀಯ. ಮಾರ್ಕ್ಸ್ ಮತ್ತು ಎಂಗೆಲ್ಸ್ ಸ್ಥಾಪಿಸಿದ ಪ್ರಥಮ ಅಂತಾರಾಷ್ಟ್ರೀಯದ ಕ್ರಾಂತಿಕಾರಿ ಧೋರಣೆ ಮತ್ತು ನೀತಿಯನ್ನು ಇದು ಎತ್ತಿಹಿಡಿದು ಕಟ್ಟುನಿಟ್ಟಾಗಿ ಸಮಾಜವಾದಿ ತತ್ತ್ವವನ್ನು ಪಾಲಿಸಲು ಶ್ರಮಿಸಿತು. ಪ್ರಪಂಚದ ಕಾರ್ಮಿಕ ಚಳವಳಿಯನ್ನು ತ್ವರಿತಗೊಳಿಸಿ ಸಮಾಜವಾದಿರಾಷ್ಟ್ರಗಳ ಸ್ಥಾಪನೆಯನ್ನು ಸಾಧಿಸುವುದೇ ಇದರ ಮುಖ್ಯ ಗುರಿ.

ಪ್ರಥಮ ಅಂತಾರಾಷ್ಟ್ರೀಯ ಶ್ರಮಜೀವಿಗಳ ಚಳವಳಿಗೆ ತಾತ್ತ್ವಿಕ ತಳಹದಿಯನ್ನು ಹಾಕಿಕೊಟ್ಟಿತು. ದ್ವಿತೀಯ ಅಂತಾರಾಷ್ಟ್ರೀಯದ ಮೂಲಕ ಈ ಚಳವಳಿಯು ಕಾರ್ಯಕಾರಿಯಾಗಿ ಯುರೋಪಿನಾದ್ಯಂತ ಹರಡಿದುದಲ್ಲದೆ ಅಮೆರಿಕದ ಮೇಲೂ ತನ್ನ ಪ್ರಭಾವವನ್ನು ಬೀರಿತು. ತೃತೀಯ ಅಂತಾರಾಷ್ಟ್ರೀಯವು ಶ್ರಮಜೀವಿಗಳ ಪ್ರಭುತ್ವವನ್ನು ಸ್ಥಾಪಿಸಲು ದಾರಿ ಮಾಡಿಕೊಟ್ಟಿತು. ಬೂರ್ಜ್ವಾ ಪಕ್ಷಗಳೊಡನೆ ರಾಜಿ ಮತ್ತು ಸಹಕಾರ ನೀತಿಯನ್ನು ತೊರೆದು ಕ್ರಾಂತಿಕಾರಿ ಶ್ರಮಜೀವಿಪಕ್ಷಗಳನ್ನು ನಿರ್ಮಾಣಮಾಡಿ ಸಮಾಜವಾದಿರಾಷ್ಟ್ರಗಳ ಸ್ಥಾಪನೆಯ ದಿಶೆಯಲ್ಲಿ ಮುನ್ನುಗ್ಗಿತು.

ತೃತೀಯ ಅಂತಾರಾಷ್ಟ್ರೀಯದ ಎಲ್ಲ ಅಂಗಸಂಸ್ಥೆಗಳೂ ಕೇಂದ್ರ ಸಂಸ್ಥೆಯ ನಿರ್ಧಾರಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಸರಿಸಿ ಕೆಲಸ ಮಾಡಬೇಕಾಗಿತ್ತು. ಇದರ ಎಲ್ಲ ಕಾರ್ಯಕ್ರಮಗಳೂ ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನ್ನರ ತತ್ತ್ವಗಳ ಆಧಾರದ ಮೇಲೆ ನಿರ್ದಿಷ್ಟ ರೂಪ ತಾಳಿ ಸಮಾಜವಾದಿ ರಾಷ್ಟ್ರಗಳನ್ನು ರಚಿಸಲು ದಾರಿ ಮಾಡಿಕೊಟ್ಟವು.

ಈ ಅಂತಾರಾಷ್ಟ್ರೀಯದ ಅಂಗಸಂಸ್ಥೆಗಳೆಲ್ಲವೂ ರಷ್ಯದ ಸಮಾಜವಾದಿ ಪಕ್ಷದ ರೀತಿಯಲ್ಲಿ ರಚಿತವಾದುವುಗಳಲ್ಲ; ಯುರೋಪಿನ ಮತ್ತು ಇತರ ದೇಶಗಳ ಸಮಾಜವಾದಿ ಪಕ್ಷಗಳು ಯಾರು ಬೇಕಾದರೂ ಸೇರಬಹುದಾದಂಥ ವಿಶಾಲ ಧೋರಣೆಯ ಸಂಸ್ಥೆಗಳು. ಅಂತಾರಾಷ್ಟ್ರೀಯವು ನಿರ್ಧರಿಸಿದ ರೀತಿನೀತಿಗಳನ್ನು ಅನುಸರಿಸಬೇಕಾದಾಗ ತಮ್ಮ ಆಂತರಿಕ ವ್ಯವಹಾರಗಳಲ್ಲಿ ತಾವು ಪ್ರತಿನಿಧಿಸುವ ರಾಷ್ಟ್ರಗಳ ರಾಜಕೀಯ ಪರಿಸ್ಥಿತಿಗನುಗುಣವಾಗಿ ಮಾರ್ಪಾಡು ಮಾಡಿಕೊಳ್ಳುವ ಸ್ವಾತಂತ್ರ್ಯ ಎಲ್ಲ ಅಂಗಸಂಸ್ಥೆಗಳಿಗೂ ಇತ್ತು. ಪ್ರಜಾಪ್ರಭುತ್ವ ಬೇರೂರಿದ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟರು ಅಲ್ಲಿನ ಪಾರ್ಲಿಮೆಂಟುಗಳಲ್ಲಿ ಭಾಗವಹಿಸಿ ಅದರ ಕಾರ್ಯಕಲಾಪಗಳಲ್ಲಿ ನೆರವಾಗುತ್ತಿದ್ದರು. ಅನೇಕ ವೇಳೆ ಇವರು ಇತರ ಸಮಾಜವಾದಿ (ಸೋಷಿಯಲಿಸ್ಟ್) ಪಕ್ಷಗಳೊಡನೆ ಒಕ್ಕೂಟವನ್ನೇರ್ಪಡಿಸಿಕೊಂಡು ಸಮಾಜಸುಧಾರಣಾ ಕಾರ್ಯಗಳಲ್ಲಿ ನೆರವಾಗುತ್ತಿದ್ದರು. ಕಮ್ಯೂನಿಸ್ಟ್ ಅಂತಾರಾಷ್ಟ್ರೀಯದ ಸದಸ್ಯತ್ವ ಪಡೆಯಲು ಪ್ರತಿಯೊಂದು ಅಂಗಸಂಸ್ಥೆಯೂ ತನ್ನ ದೇಶದಲ್ಲಿ ಸಮಾಜವಾದಿ ಪಕ್ಷವನ್ನು ನಿರ್ಮಾಣಮಾಡಿ

ಅಲ್ಲಿನ ಕಾರ್ಮಿಕ ಸಂಘಗಳಲ್ಲಿ, ಸಹಕಾರಿ ಸಂಘಗಳಲ್ಲಿ ಮತ್ತು ಜನಸಾಮಾನ್ಯರ ಸಂಘಸಂಸ್ಥೆಗಳಲ್ಲಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡಲ್ಲದೆ ಸದಸ್ಯತ್ವದ ಅರ್ಹತೆ ಪಡೆಯುವಂತಿರಲಿಲ್ಲ.

ತನ್ನ ಕ್ರಾಂತಿಕಾರಿ ನೀತಿಯನ್ನು ಸಾಧಿಸುವ ದಿಶೆಯಲ್ಲಿ ತೃತೀಯ ಅಂತಾರಾಷ್ಟ್ರೀಯ ಬಹುಮಟ್ಟಿಗೆ ಜಯಪ್ರದವಾಗಿ ಕೆಲಸಮಾಡಿದೆ. ಪ್ರಪಂಚದ ಕಾರ್ಮಿಕ ಚಳವಳಿಯ ನಿರ್ದೇಶನದ ಭಾರವನ್ನು ಹೊತ್ತಿದ್ದ ಅದರ 24 ವರ್ಷಗಳ ಅವಧಿಯಲ್ಲಿ ಪ್ರಪಂಚದ ಮೂರನೆ ಒಂದು ಭಾಗದಲ್ಲಿ ಸಮಾಜವಾದಪರವಾದ ರಾಷ್ಟ್ರಗಳನ್ನು ನಿರ್ಮಾಣಮಾಡಿದೆ. ಈ ದಿಶೆಯಲ್ಲಿ ಇದು ಸಾಧಿಸಿದ ಮಹತ್ಕಾರ್ಯಗಳಲ್ಲಿ ಮೂರು ಚರಿತ್ರಾರ್ಹವಾದುವು :

ಮೊದಲನೆಯದಾಗಿ, ಇದು ಕಾರ್ಮಿಕಚಳವಳಿ ಯಶಸ್ವಿಯಾಗಿ ನಡೆಯಲು ಅಗತ್ಯವಾದ ತಾತ್ತ್ವಿಕ ಸಾಹಿತ್ಯವನ್ನು ಕಾರ್ಮಿಕ ಪಕ್ಷಗಳಿಗೆ ಒದಗಿಸಿಕೊಟ್ಟಿತು. ಎರಡನೆಯದಾಗಿ ಎಲ್ಲ ಪ್ರಮುಖ ಸಮಾಜವಾದಿ ಪಕ್ಷಗಳನ್ನೂ ಬಲಗೊಳಿಸಿ ಬಂಡವಾಳ ಪದ್ಧತಿಯ ದೋಷಗಳನ್ನು ಪ್ರಕಟಗೊಳಿಸಿತು. ಕಾರ್ಮಿಕಸಂಘಗಳಲ್ಲಿ, ಯುವಜನ ಸಂಘಗಳಲ್ಲಿ ಮತ್ತು ಜನಸಾಮಾನ್ಯರ ಇತರ ಸಂಘಗಳಲ್ಲಿ ತರಬೇತಿ ಹೊಂದುತ್ತಿದ್ದ ಲಕ್ಷಾಂತರ ಮಾರ್ಕ್ಸ್‌ವಾದಿಗಳೊಡನೆ ಇದರ ಎಲ್ಲ ಅಂಗಸಂಸ್ಥೆಗಳೂ ಸೇರಿಕೊಂಡು ತಮ್ಮ ಕ್ರಾಂತಿಕಾರಿ ಶಕ್ತಿಯನ್ನು ಊರ್ಜಿತಗೊಳಿಸಿಕೊಂಡುವು. ಮೂರನೆಯದಾಗಿ, ಇದರ ಆಶ್ರಯದಲ್ಲಿ ಅನೇಕ ಕ್ರಾಂತಿಕಾರಿಚಳವಳಿಗಳು ಪ್ರಪಂಚದಾದ್ಯಂತ ನಡೆದುವು. ರಷ್ಯದಲ್ಲಿ ನಡೆದ 1905 ಮತ್ತು 1917ರ ಚಳವಳಿಗಳೂ ಕಮ್ಯೂನಿಸ್ಟ್ ಅಂತಾರಾಷ್ಟ್ರೀಯದ ನೇತೃತ್ವದಲ್ಲಿ ನಡೆದವುಗಳೇ. ಇದಲ್ಲದೆ ಆಸ್ಟ್ರಿಯ, ಜರ್ಮನಿ ಮತ್ತು ಹಂಗರಿಯಲ್ಲಿ ನಡೆದ ಕ್ರಾಂತಿಗಳೂ ಸ್ಪೇನಿನ ಅಂತರ್ಯುದ್ಧ ಮತ್ತು ವಸಾಹತು ಪ್ರದೇಶಗಳಲ್ಲಿ ನಡೆದ ಆಂದೋಲನಗಳೂ ತೃತೀಯ ಅಂತಾರಾಷ್ಟ್ರೀಯದ ಬೆಂಬಲ ಮತ್ತು ನಿರ್ದೇಶನದ ಮೂಲಕ ನಡೆದುವು.

ಎರಡನೆಯ ಮಹಾಯುದ್ಧದ ಕಾಲಕ್ಕೆ ಪ್ರಪಂಚದ ನಾನಾ ಭಾಗಗಳಲ್ಲಿ ಸ್ಥಳೀಯ ಪರಿಸ್ಥಿತಿಗಳು ಜಟಿಲಗೊಂಡು ಒಂದೊಂದು ರಾಷ್ಟ್ರದ ಕಾರ್ಮಿಕ ಚಳವಳಿಯನ್ನೂ ಕೇಂದ್ರಸಂಸ್ಥೆಯಾದ ತೃತೀಯ ಅಂತಾರಾಷ್ಟ್ರೀಯ ನಿರ್ವಹಿಸುವುದು ಕಷ್ಟವಾಗುತ್ತ ಬಂತು. ಇದರ ಮೊದಲ ಸಮ್ಮೇಳನ ಏರ್ಪಡಿಸಿದ್ದ ಸಂಘಟನಾ ವ್ಯವಸ್ಥೆ ಎರಡನೆಯ ಮಹಾಯುದ್ಧದ ಕಾಲಕ್ಕೆ ಸರಿಹೊಂದದೆ ಅಂತಾರಾಷ್ಟ್ರೀಯ ಚಳವಳಿಯನ್ನು ಬಲಪಡಿಸಲು ಮೂರನೆಯ ಅಂತಾರಾಷ್ಟ್ರೀಯಕ್ಕೆ ಶಕ್ತಿಸಾಲದೆ ಹೋಯಿತು. ಆದುದರಿಂದ 1943ರಲ್ಲಿ ಇದು ವಿಸರ್ಜನೆಯಾಯಿತು. (ಜಿ.ಎಚ್.ಆರ್.)

**ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು :** ಹಣಕಾಸಿನ ವಿಷಯವಾಗಿ ಅಂತಾರಾಷ್ಟ್ರೀಯ ಸಹಕಾರವನ್ನು ಏರ್ಪಡಿಸಲು ಶ್ರಮಿಸುತ್ತಿರುವ ಸಂಸ್ಥೆಗಳಲ್ಲಿ 1930 ರಲ್ಲಿ ಸ್ಥಾಪಿಸಲ್ಪಟ್ಟ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು (ದಿ ಬ್ಯಾಂಕ್ ಆಫ್ ಇಂಟರ್‌ನ್ಯಾಷನಲ್ ಸೆಟ್ಲ್‌ಮೆಂಟ್ಸ್) ಮುಖ್ಯವಾದ ಒಂದು ಸಂಸ್ಥೆ. ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳೊಳಗೆ ಪರಸ್ಪರ ಸಹಕಾರದ ಆವಶ್ಯಕತೆ ಆ ಹಿಂದೆಯೇ ಅನೇಕ ಸಂದರ್ಭಗಳಲ್ಲಿ – ಮುಖ್ಯವಾಗಿ 1922–29ರ ವಿದೇಶಿ ವಿನಿಮಯ ದರ ಸ್ತಿಮಿತತೆಯ ಪುನಃಸ್ಥಾಪನೆಯ ಕಾಲದಲ್ಲಿ ಎದ್ದು ಕಾಣುತ್ತಿದ್ದಿತು. ಮೊದಲ ಯುದ್ಧದ ತರುವಾಯ ಸೋತ ಜರ್ಮನಿಯ ಮೇಲೆ ಹೇರಲಾದ ಪರಿಹಾರದ್ರವ್ಯ ತೀರುವೆಯ ಸಂದರ್ಭದಲ್ಲಿ ತಯಾರಿಸಲಾದ ಯಂಗ್ ಯೋಜನೆ ಇತರ ವಿಷಯಗಳ ಜೊತೆಗೆ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕೊಂದನ್ನು ಸ್ಥಾಪಿಸುವ ಸಲಹೆಯೊಂದನ್ನು ಪೂರ್ಣ ವಿವರಗಳೊಡನೆ ನಮೂದಿಸಿತು. ಈ ಸಲಹೆಯಂತೆ ಕ್ರಮ ಕೈಗೊಳ್ಳಲು ಬೆಲ್ಜಿಯಂ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಬ್ರಿಟನ್ ಮತ್ತು ಅಮೆರಿಕ ಈ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳ ಗೌರ್ನರುಗಳು ಹೇಗ್‌ನಲ್ಲಿ ಸಭೆ ಸೇರಿ ಆವಶ್ಯಕ ಕ್ರಮಗಳನ್ನು ಕೈಗೊಂಡರು. ಪುನಃ ರೋಮ್‌ನಲ್ಲಿ ಇವರು ಕಲೆತು ಬ್ಯಾಂಕನ್ನು ಸ್ಥಾಪಿಸುವ ಪ್ರಣಾಳಿಕೆಗೆ 27–02–1930ರಲ್ಲಿ ಸಹಿ ಹಾಕಿದರು. ಸ್ವಿಟ್ಜರ್‌ಲೆಂಡಿನ ಬಾಸೆಲ್ ಎಂಬಲ್ಲಿ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕ್ ಹೀಗೆ ಸ್ಥಾಪನೆಯಾಯಿತು. ಸ್ವಿಟ್ಜರ್‌ಲೆಂಡ್ ಸರ್ಕಾರ ಈ ಬ್ಯಾಂಕಿನ ಅಂತಾರಾಷ್ಟ್ರೀಯ ಅಂತಸ್ಸನ್ನು ಕಾಪಾಡಲು ಬೇಕಾದ ಕ್ರಮಗಳುಳ್ಳ ಪ್ರಣಾಳಿಕೆಯೊಂದನ್ನು ಬ್ಯಾಂಕಿಗೆ ಮಂಜೂರು ಮಾಡಿತು.

ಬ್ಯಾಂಕಿನ ಬಂಡವಾಳ 50 ಕೋಟಿ ಸ್ವಿಟ್ಜರ್‌ಲೆಂಡಿನ ಚಿನ್ನದ ಫ್ರಾಂಕುಗಳು. (ಒಂದು ಚಿನ್ನದ ಫ್ರಾಂಕು = 0.2903 ಗ್ರಾಮುಗಳಷ್ಟು ಚೊಕ್ಕ ಚಿನ್ನ). ಈ ಬಂಡವಾಳ 2 ಲಕ್ಷ ಷೇರುಗಳಾಗಿ ಭಾಗಿಸಲ್ಪಟ್ಟು, ಶೇ. 25 ಭಾಗ ಷೇರು ಬೆಲೆ ಸಂದಾಯವಾದ ಬಂಡವಾಳ (ಪೇಡ್–ಅಪ್ ಕ್ಯಾಪಿಟಲ್) ಆಗಿದೆ. ಮೊದಲು ಬೆಲ್ಜಿಯಂ, ಫ್ರಾನ್ಸ್, ಇಂಗ್ಲೆಂಡ್, ಇಟಲಿ, ಜರ್ಮನಿ ಇವುಗಳ 5 ಕೇಂದ್ರ ಬ್ಯಾಂಕುಗಳು ಮತ್ತು ಜಪಾನ್ ಹಾಗೂ ಅಮೆರಿಕದ 2 ಬ್ಯಾಂಕ್ ಕೂಟಗಳೂ ಬಂಡವಾಳ ಹಾಕಿದವು. ಈಗ ರಷ್ಯ ಮತ್ತು ಸ್ಪೇನ್ ಉಳಿದು ಯುರೋಪಿನ ಎಲ್ಲಾ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳು ಷೇರು ಬಂಡವಾಳ ಹಾಕಿವೆ. ಜಪಾನಿನ ಷೇರುಗಳನ್ನೂ ಇವು ಕೊಂಡಿವೆ. ಅಂತಾರಾಷ್ಟ್ರೀಯ ತೀರುವೆ ಬ್ಯಾಂಕನ್ನು ಯುರೋಪಿನ ಕೇಂದ್ರ ಬ್ಯಾಂಕುಗಳ ಕೇಂದ್ರಬ್ಯಾಂಕು ಎಂದು ಹೇಳಬಹುದು.

ಬ್ಯಾಂಕಿನ ಆಡಳಿತ ನಿರ್ವಹಣೆಗೆ ನಿರ್ದೇಶಕರುಗಳ ಮಂಡಳಿ ಇದೆ. ಬ್ಯಾಂಕನ್ನು ಸ್ಥಾಪಿಸಿದ ಕೇಂದ್ರ ಬ್ಯಾಂಕುಗಳ ಗೌರ್ನರುಗಳು ಹಾಗೂ ಇತರ ಕೇಂದ್ರ ಬ್ಯಾಂಕುಗಳ ಗೌರ್ನರುಗಳಿಂದ ಚುನಾಯಿತರಾದವರು ಈ ಬೋರ್ಡಿನ ಸದಸ್ಯರು. ಜೊತೆಗೆ ಈ ಗೌರ್ನರುಗಳು ನಿಯಮಿಸುವ ಕೆಲವು ಸದಸ್ಯರುಗಳೂ ಇರುತ್ತಾರೆ. ನಿರ್ದೇಶಕರುಗಳ ಮಂಡಳಿ ಅಧ್ಯಕ್ಷನೊಬ್ಬನನ್ನು ಚುನಾಯಿಸುವುದು ಮತ್ತು ಜನರಲ್ ಮ್ಯಾನೇಜರನ್ನು ನೇಮಿಸುವುದು.; ಮಂಡಳಿ ಪ್ರತಿ ತಿಂಗಳೂ ಸಭೆ ಸೇರಿ ಬ್ಯಾಂಕು ಕೈಗೊಳ್ಳಬೇಕಾದ ಕಾರ್ಯಾಚರಣೆಯನ್ನು ನಿರ್ದೇಶಿಸುವುದು; ಹೀಗೆ 32 ವರ್ಷಗಳು ವಿವಿಧ ಕೇಂದ್ರ ಬ್ಯಾಂಕುಗಳ ಡೈರೆಕ್ಟರುಗಳು ಕ್ರಮವಾಗಿ ತಿಂಗಳಿಗೊಮ್ಮೆ ಎರಡು ಮೂರು ದಿನಗಳು ಕಲೆತು ವಿಚಾರ ವಿನಿಮಯ ಮಾಡಿಕೊಂಡು ಹಣಕಾಸಿನ ವಿಷಯಗಳ ಬಗ್ಗೆ ಆವಶ್ಯಕ ಕ್ರಮಗಳನ್ನು ಕೈಗೊಳ್ಳುತ್ತಾ ಬಂದಿರುವುದು ಪ್ರಶಂಸನೀಯ ಆರ್ಥಿಕ ಸಹಕಾರಸಾಧನೆಯಾಗಿದೆ.

ವ್ಯವಹಾರಗಳನ್ನು ನಡೆಸುವ ಬ್ಯಾಂಕಿಂಗ್ ಶಾಖೆ, ಸಂಶೋಧನೆ ನಡೆಸುವ ಹಾಗೂ, ವಾರ್ಷಿಕ ವರದಿ ತಯಾರಿಸುವ ಹಣಕಾಸು ಮತ್ತು ಆರ್ಥಿಕ ಶಾಖೆ ಮತ್ತು ಆಡಳಿತ ಕಾರ್ಯಗಳನ್ನು ನೋಡಿಕೊಳ್ಳುವ ಜನರಲ್ ಸೆಕ್ರೆಟೇರಿಯಟ್ಟು – ಹೀಗೆ ಬ್ಯಾಂಕಿನಲ್ಲಿ ಮೂರು ಮುಖ್ಯ ಶಾಖೆಗಳಿವೆ.

ಬ್ಯಾಂಕಿನ ಕಾರ್ಯಾಚರಣೆಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಸಂಬಂಧಪಟ್ಟವರು ಒಪ್ಪಿಸುವ ಕೆಲವು ಅಂತಾರಾಷ್ಟ್ರೀಯ ಹಣಕಾಸಿನ ವಿಷಯಗಳ ಬಗ್ಗೆ ಧರ್ಮದರ್ಶಿ (ಟ್ರಸ್ಟಿ) ಅಥವಾ ನಿಯೋಗಿ (ಏಜೆಂಟ್) ಆಗಿ ವರ್ತಿಸುವುದು ಮೊದಲನೆಯ ಬಗೆಯ ಕಾರ್ಯಾಚರಣೆ. ಕೇಂದ್ರ ಬ್ಯಾಂಕುಗಳು ಕೇಳಿಕೊಳ್ಳುವ ಬ್ಯಾಂಕು ವ್ಯವಹಾರಗಳನ್ನು ನಡೆಸುವುದು, ಅಂತಾರಾಷ್ಟ್ರೀಯ ಹಣಕಾಸು ವ್ಯವಹಾರಗಳಿಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸುವುದು ಮತ್ತು ಕೇಂದ್ರ ಬ್ಯಾಂಕುಗಳೊಳಗೆ ಪರಸ್ಪರ ಸಹಕಾರ ಹೆಚ್ಚಿಸುವುದು – ಇವು ಎರಡನೆ ಬಗೆಯ ಕಾರ್ಯಾಚರಣೆಗಳು. ಸ್ವಂತ ಲೆಕ್ಕಕ್ಕಾಗಲಿ, ಕೇಂದ್ರಬ್ಯಾಂಕುಗಳ ಪರವಾಗಿ ಆಗಲಿ ಚಿನ್ನ ಮಾರುವುದು, ಕೊಳ್ಳುವುದು ಹಾಗೂ ಇಟ್ಟುಕೊಳ್ಳುವುದು; ಕೇಂದ್ರಬ್ಯಾಂಕುಗಳಿಂದ ಸಾಲ ಪಡೆಯುವುದು ಅಥವಾ ಅವುಗಳಿಗೆ ಸಾಲ ಕೊಡುವುದು; ವಿನಿಮಯ ಹುಂಡಿ (ಬಿಲ್ ಆಫ್ ಎಕ್ಸ್‌ಚೇಂಜ್) ಹಾಗೂ ಇತರ ಅಲ್ಪಾವಧಿಯ ಪತ್ರಗಳನ್ನು ವಟ್ಟಾ (ಡಿಸ್ಕೌಂಟ್) ಅಥವಾ ಮರುವಟ್ಟಾ (ರೀ ಡಿಸ್ಕೌಂಟ್) ಮಾಡುವುದು, ಕೊಳ್ಳುವುದು ಅಥವಾ ಮಾರುವುದು; ವಿನಿಮಯ ಹಣ ಕೊಳ್ಳುವುದು, ಮಾರುವುದು; ಷೇರುಗಳನ್ನು ಬಿಟ್ಟು ಇತರ ನೆಗೋಷಿಯಬಲ್ ಸೆಕ್ಯೂರಿಟಿಗಳನ್ನು ಕೊಳ್ಳುವುದು ಮತ್ತು ಮಾರುವುದು; ಕೇಂದ್ರ ಬ್ಯಾಂಕುಗಳಿಂದ ಚಾಲ್ತಿ ಅಥವಾ ವಾಯಿದೆ ಠೇವಣಿಗಳನ್ನು ಸ್ವೀಕರಿಸುವುದು; ವಿಶೇಷ ಒಪ್ಪಂದಗಳಿಗೆ ಸಂಬಂಧಪಟ್ಟ ಸರ್ಕಾರಿ ಠೇವಣಿಗಳನ್ನು ಸ್ವೀಕರಿಸುವುದು – ಇತ್ಯಾದಿ ವ್ಯವಹಾರಗಳು ಬ್ಯಾಂಕಿನ ಕಾರ್ಯವ್ಯಾಪ್ತಿಯೊಳಗೆ ಸೇರಿವೆ.

ಬ್ಯಾಂಕು ನಡೆಸುವ ಕಾರ್ಯಾಚರಣೆಗಳು ಸಂಬಂಧಪಟ್ಟ ಕೇಂದ್ರಬ್ಯಾಂಕುಗಳ ಹಣಕಾಸಿನ ನೀತಿಗೆ ಅನುಸಾರವಾಗಿರಬೇಕು. ಅಲ್ಲದೆ, ಬ್ಯಾಂಕು ಯಾವ ಒಂದು ವ್ಯವಹಾರ ಕೈಗೊಳ್ಳುವ ಮುನ್ನ ಸಂಬಂಧಪಟ್ಟ ಎಲ್ಲಾ ಕೇಂದ್ರ ಬ್ಯಾಂಕುಗಳಿಗೂ ಅವುಗಳ ಅಭಿಪ್ರಾಯ ಸೂಚಿಸಲು ಅವಕಾಶ ನೀಡಬೇಕು. ವಿದೇಶೀ ವಿನಿಮಯವನ್ನು ಚುಕ್ತಾ ಮಾಡುವ ಪದ್ಧತಿಯೊಂದನ್ನು ರೂಪಿಸಬೇಕೆಂಬ ಬ್ಯಾಂಕಿನ ಇನ್ನೊಂದು ಮೂಲ ಉದ್ದೇಶ ಗಮನಾರ್ಹವಾದುದು. ಎಲ್ಲಾ ಕೇಂದ್ರ ಬ್ಯಾಂಕುಗಳ ವಿದೇಶಿ ವಿನಿಮಯ ರಿಸರ್ವ್‌ಗಳ ಒಂದು ಭಾಗವನ್ನು ಅಂತಾರಾಷ್ಟ್ರೀಯ ತೀರುವೆ ಬ್ಯಾಂಕಿನಲ್ಲಿ ಕೇಂದ್ರೀಕೃತಗೊಳಿಸಿ ಪರಸ್ಪರ ಲೇಣೆ – ದೇಣೆಗಳನ್ನು ಸುಲಭ ರೀತಿಯಲ್ಲಿ ನಡೆಸುವಂತೆ ಮಾಡಬೇಕೆಂಬ ಭಾವನೆಯಿಂದ ಸೂಕ್ತಕ್ರಮಗಳನ್ನು ಬ್ಯಾಂಕು ಆರಂಭಿಸಿತು. ಆದರೆ ವಿದೇಶಿ ವಿನಿಮಯ ಕ್ಷೇತ್ರದಲ್ಲಿ ಪ್ರಾಪ್ತವಾದ ವಿಶೇಷ ರಾಷ್ಟ್ರೀಯ ಕಟ್ಟುನಿಟ್ಟುಗಳಿಂದ ಈ ಉದ್ದೇಶವನ್ನು ಸಾಧಿಸಲಾಗಲಿಲ್ಲ.

ಬ್ಯಾಂಕಿನ ನಿರ್ಮಾಪಕರು ಸಾಮಾನ್ಯ ಉದ್ದೇಶಗಳನ್ನು ಸ್ಪಷ್ಟವಾಗಿ ವಿವರಿಸಿದರು : ಆದರೆ ಬ್ಯಾಂಕಿನ ರಚನೆ ಹಾಗೂ ಕ್ರಿಯಾ ಮಾರ್ಗಗಳನ್ನು ಅತಿಯಾಗಿ ನಿರ್ಬಂಧಿಸದೆ, ಬದಲಿಸಬಹುದಾದ ಸಂದರ್ಭಗಳಿಗನುಸಾರವಾಗಿ ಹೊಂದಿಕೊಳ್ಳಲು ಅವಕಾಶ ಕಲ್ಪಿಸಿದ್ದರು. ಇದು ಒಳ್ಳೆಯದಾಗಿ ಪರಿಣಮಿಸಿದೆ. ಏಕೆಂದರೆ ಆ ಬ್ಯಾಂಕು ಉದ್ದಕ್ಕೂ ಅನೇಕ ವಿಶೇಷ ಹಾಗೂ ಅನಿರೀಕ್ಷಿತ ಘಟನೆಗಳಿಂದ ಉದ್ಭವಿಸಿದ ಪರಿಸ್ಥಿತಿಗಳಿಗೆ ತಕ್ಕಂತೆ ಹೊಂದಿಕೊಂಡು ಸೇವೆ ಸಲ್ಲಿಸುತ್ತ ಬರಲು ಸಾಧ್ಯವಾಗಿದೆ.

ಬ್ಯಾಂಕು ನಿರ್ವಹಿಸಬೇಕಾದ ಪ್ರಥಮ ಹಾಗೂ ಮುಖ್ಯ ಕರ್ತವ್ಯ ಯಂಗ್ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದ್ದಾಗಿತ್ತು. 1930ರಲ್ಲಿ ಜರ್ಮನಿ ಕೊಟ್ಟ ಪರಿಹಾರ ದ್ರವ್ಯದ ಮಾಸಿಕ ಕಂತುಗಳನ್ನು ಪಾವತಿ ಪಡೆದು ಒಪ್ಪಂದದ ಪ್ರಕಾರ

ಹಂಚುವ ವ್ಯವಸ್ಥೆಯನ್ನು ಮಾಡಿತು. ಹೀಗೆ ಕೊಡಬೇಕಾದ ಹಣ ಒದಗಿಸಿಕೊಳ್ಳಲು ಜರ್ಮನಿ ಎತ್ತಿದ ಅಂತಾರಾಷ್ಟ್ರೀಯ ಸಾಲಕ್ಕೆ ನಿಯೋಗಿ ಹಾಗೂ ಧರ್ಮದರ್ಶಿಯಾಗಿ ವರ್ತಿಸಿತು. ಅಲ್ಲದೆ ಈ ವ್ಯವಹಾರಗಳಿಂದ ಉದ್ಭವಿಸಿದ ವರ್ಗಾವಣೆಯ ಸಮಸ್ಯೆಗಳನ್ನು ಎದುರಿಸಲು ಆವಶ್ಯಕವಾದ ಅನೇಕ ಕ್ರಮಗಳನ್ನು ಕೈಗೊಂಡು ಅಂತಾರಾಷ್ಟ್ರೀಯ ಬ್ಯಾಂಕು ಯುರೋಪಿನ ಹಿರಿಯ ಆರ್ಥಿಕ ಸಮಸ್ಯೆಯನ್ನು ಬಿಡಿಸುವುದರಲ್ಲಿ ನೆರವಾಯಿತು.

1931ರಲ್ಲಿ ಪ್ರಾಪ್ತವಾದ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಯನ್ನು ಸುಧಾರಿಸಲು ಯುರೋಪಿನ ರಾಷ್ಟ್ರಗಳು ಮಾಡಿದ ಪ್ರಯತ್ನಗಳಲ್ಲಿ ಬ್ಯಾಂಕು ಮುಖ್ಯ ಪಾತ್ರ ವಹಿಸಿತು. 1933ರಲ್ಲಿ ಜರುಗಿದ ಪ್ರಪಂಚ ಹಣಕಾಸು ಹಾಗೂ ಆರ್ಥಿಕ ಸಮ್ಮೇಳನದ ಕಾರ್ಯಾಚರಣೆಗಳಲ್ಲಿ ಭಾಗವಹಿಸಿತು. ಈ ಸಮ್ಮೇಳನ ಕೇಂದ್ರ ಬ್ಯಾಂಕುಗಳೊಳಗೆ ಬೆಳೆಯಬೇಕಾದ ಸಹಕಾರದ ಆವಶ್ಯಕತೆಯನ್ನು ಒತ್ತಿ ಹೇಳಿದುದೇ ಅಲ್ಲದೆ, ಈ ವಿಷಯದಲ್ಲಿ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕನ್ನು ಪ್ರಮುಖ ಪಾತ್ರವಹಿಸುವ ಸಾಧನವಾಗಿ ಇಟ್ಟುಕೊಳ್ಳಬೇಕೆಂಬ ಶಿಫಾರಸ್ಸನ್ನು ಮಾಡಿತು. ಆದರೆ 1930ನೆಯ ದಶಕದ ವಾತಾವರಣದಲ್ಲಿ ಬ್ಯಾಂಕು ಈ ನಿಟ್ಟಿನಲ್ಲಿ ಹೆಚ್ಚಿನ ಕಾರ್ಯಸಾಧನೆ ಮಾಡಲಾಗಲಿಲ್ಲ.

ಯುದ್ಧಕಾಲದಲ್ಲಿ ಬ್ಯಾಂಕು ಅದರ ಆರ್ಥಿಕ ಹಾಗೂ ನೈತಿಕ ಅಂತಸ್ತನ್ನು ಕಾಪಾಡಿಕೊಂಡು ಬಂದುದು ಮುಖ್ಯ ಸಾಧನೆಯೇ ಸರಿ. ಯುದ್ಧದಲ್ಲಿ ತೊಡಗಿದ್ದ ರಾಷ್ಟ್ರಗಳಿಗೆ ಸಂಬಂಧಪಟ್ಟ ಕಾರ್ಯಾಚರಣೆಗಳನ್ನು ಕೈಗೊಳ್ಳುವುದರಲ್ಲಿ ಯಾವ ವಿಧವಾದ ವಿವಾದಕ್ಕೂ ಅವಕಾಶಕೊಡದೆ ಜಾಗರೂಕತೆಯಿಂದ ವರ್ತಿಸಿ, ಯುದ್ಧಕಾಲದಲ್ಲಿ ಆದಷ್ಟೂ ಕಡಿಮೆ ವ್ಯವಹಾರಗಳನ್ನು ನಡೆಯಿಸಿತ್ತಾದರೂ ಎಲ್ಲಾ ಸದಸ್ಯ ರಾಷ್ಟ್ರಗಳ ಮಾನ್ಯತೆಯನ್ನು ಉಳಿಸಿಕೊಂಡು ಯುದ್ಧಕಾಲದಿಂದ ಯಶಸ್ವಿಯಾಗಿ ಹೊರಬಂದಿತು.

ಯುದ್ಧಾನಂತರ ಪುನಾರಚನೆಯ ಭಾಗವಾಗಿ ಅಂತಾರಾಷ್ಟ್ರೀಯ ವಿನಿಮಯ ನಿಧಿ ಮತ್ತು ಪುನಾರಚನೆ ಹಾಗೂ ಅಭಿವೃದ್ಧಿಯ ಅಂತಾರಾಷ್ಟ್ರೀಯ ಬ್ಯಾಂಕು, ಈ ಎರಡೂ ಸಂಸ್ಥೆಗಳನ್ನು ಸ್ಥಾಪಿಸಿದ ಬ್ರೆಟನ್‌ವುಡ್ಸ್ ಸಮ್ಮೇಳನ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕನ್ನು ಮುಚ್ಚುವಂತೆ ಶಿಫಾರಸ್ಸು ಮಾಡಿತ್ತು. ಆದರೆ ಸಹಜ ಸ್ಥಿತಿಗಳ ಪುನಃಪರಿಶೀಲನೆಯ ಅನಂತರ ಈ ಸಂಸ್ಥೆಯನ್ನು ಮುಂದುವರಿಸುವುದು ಪ್ರಯೋಜನಕರವೆಂದು ತೀರ್ಮಾನಿಸಲಾಯಿತು. ಅದರಂತೆ ತೀರುವೆ ಬ್ಯಾಂಕು ಮತ್ತು ಅಂತಾರಾಷ್ಟ್ರೀಯ ವಿನಿಮಯ ನಿಧಿ, ಹಾಗೂ ವಿಶ್ವ ಬ್ಯಾಂಕು ಇವುಗಳೊಳಗೆ ವಿಶೇಷ ಬಾಂಧವ್ಯ ಕ್ರಮವಾಗಿ ಏರ್ಪಾಟಾಗಿದೆ. ತೀರುವೆ ಬ್ಯಾಂಕಿನ ವಾರ್ಷಿಕ ಸಭೆಗೆ ಉಳಿದೆರಡೂ ಸಂಸ್ಥೆಗಳು ಪ್ರತಿನಿಧಿಗಳನ್ನು ಕಳಿಸುವುವು. ಹಾಗೂ ಈ ಎರಡೂ ಸಂಸ್ಥೆಗಳ ವಾರ್ಷಿಕ ಸಭೆಗೆ ತೀರುವೆ ಬ್ಯಾಂಕು ಪ್ರತಿನಿಧಿಗಳನ್ನು ಕಳುಹಿಸುವುದು.

ಇತ್ತೀಚಿನ ಯುದ್ಧೋತ್ತರ ಕಾಲದಲ್ಲಿ ತೀರುವೆ ಬ್ಯಾಂಕು ಯುರೋಪಿನ ಪುನಾರಚನೆಗೆ ಸಂಬಂಧಿಸಿದ ಅನೇಕ ಅಂತಾರಾಷ್ಟ್ರೀಯ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ. 1948ರಲ್ಲಿ ಸ್ಥಾಪನೆಯಾದ ಯುರೋಪಿನ ಆರ್ಥಿಕ ಸಹಕಾರ ವ್ಯವಸ್ಥೆಯ (ಒ.ಇ.ಇ.ಸಿ) ಹಾಗೂ ಯುರೋಪಿನ ದೇಣಿ ಒಕ್ಕೂಟದ (ಇ.ಪಿ.ಯು) ನಿಯೋಗಿಯಾಗಿ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು ಹಣಕಾಸು ಹಾಗೂ ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ಅನೇಕ ಕಾರ್ಯಾಚರಣೆಗಳನ್ನು ನಡೆಸಿತು. ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕಿನ ಸಮುದಾಯದ ಪರವಾಗಿಯೂ ಈಗ ರೂಪುಗೊಳ್ಳುತ್ತಿರುವ ಪಾಶ್ಚಾತ್ಯ ಯುರೋಪ್ ರಾಷ್ಟ್ರಗಳ ಆರ್ಥಿಕ ಸಂಘಗಳ ಪರವಾಗಿಯೂ ಅನೇಕ ಹಣಕಾಸಿನ ವ್ಯವಹಾರಗಳನ್ನು ನಡೆಸುತ್ತಿದೆ.

ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು ಹಣಕಾಸು ಹಾಗೂ ಆರ್ಥಿಕ ವಿಷಯಗಳ ಸಂಶೋಧನೆ ಮತ್ತು ಸಲಹಾ ಕೇಂದ್ರವೂ ಆಗಿದೆ. ಅದು ಪ್ರಕಟಿಸುವ ವಾರ್ಷಿಕ ವರದಿಗಳು ಯುರೋಪಿನ ಆರ್ಥಿಕತೆಯ ಬಗ್ಗೆ ಅನೇಕ ಉನ್ನತಮಟ್ಟದ ಲೇಖನಗಳನ್ನೂ ಉಪಯುಕ್ತ ಅಂಕಿ ಅಂಶಗಳನ್ನೂ ದೊರಕಿಸುತ್ತವೆ. ಕೇಂದ್ರ ಬ್ಯಾಂಕುಗಳ ಕೇಳಿಕೆಯ ಅನುಸಾರವಾಗಿ ಬ್ಯಾಂಕು ಅನೇಕ ವಿಶೇಷ ಅಧ್ಯಯನಗಳನ್ನು ನಡೆಸಿ ಸಹಾಯ ನೀಡಿದೆ. ಈ ಎಲ್ಲಾ ಪ್ರಕಟಣೆಗಳು ಹಾಗೂ ಅಧ್ಯಯನಗಳು ಅಂತಾರಾಷ್ಟ್ರೀಯ ಹಣಕಾಸಿನ ಬಗ್ಗೆ ಇರುವ ಜ್ಞಾನಭಂಡಾರಕ್ಕೆ ಉಪಯುಕ್ತ ಕೊಡುಗೆಗಳು.

ಹಣಬಲದ ಗಾತ್ರ, ವಿವರವಾದ ಕಾನೂನಿನ ಕಟ್ಟುನಿಟ್ಟುಗಳು, ಇವಕ್ಕಿಂತಲೂ ಒಂದು ಸಾರ್ವತ್ರಿಕ ಧ್ಯೇಯಕ್ಕೆ ಪಣತೊಟ್ಟು ನಿಂತಿರುವ ವ್ಯಕ್ತಿಗಳೊಳಗೆ ಇರುವ ಪರಸ್ಪರ ಸೌಹಾರ್ದ, ಯಾವ ಒಂದು ಅಂತಾರಾಷ್ಟ್ರೀಯ ಕಾರ್ಯಸಾಧನೆಗೂ ಅತಿ ಮುಖ್ಯ ಎಂಬುದಕ್ಕೆ ಬ್ಯಾಂಕಿನ ಈ ಹಲವಾರು ದಶಕಗಳ ಚರಿತ್ರೆಯೇ ನಿದರ್ಶನ. ಅಲ್ಲದೆ ಇಂದು ರೂಪುಗೊಳ್ಳುತ್ತಿರುವ ಯುರೋಪಿನ ರಾಷ್ಟ್ರಗಳ ಆರ್ಥಿಕ ಸಂಘಟನೆ ಹಾಗೂ ಅಂತಾರಾಷ್ಟ್ರೀಯ ಆರ್ಥಿಕ ಸಹಕಾರ – ಇವುಗಳಿಗೆ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು ಸಹಾಯಕವಾಗಿದೆ. (ಎ.ಪಿ.ಎಸ್.)

**ಅಂತಾರಾಷ್ಟ್ರೀಯತೆ :** ಅಂತಾರಾಷ್ಟ್ರೀಯತಾಭಾವನೆ ಉಗ್ರ ರಾಷ್ಟ್ರೀಯತೆಯಿಂದ ಒದಗಿರುವ ದುಷ್ಪರಿಣಾಮಗಳನ್ನು ನಿವಾರಿಸಿ ಇಡೀ ವಿಶ್ವವೇ ಒಂದು ಕುಟುಂಬ, ಅದರಲ್ಲಿನ ಪ್ರತಿಯೊಬ್ಬನೂ ವಿಶ್ವಮಾನವ ಎಂಬ ಸೌಹಾರ್ದಮಯ ಸಹಜೀವನತತ್ತ್ವವನ್ನು ಪ್ರತಿಪಾದಿಸುವ ಶಕ್ತಿಯಾಗಿದೆ. ರಾಷ್ಟ್ರೀಯತೆಯ ಭಾವನೆ ಇರುವುದು ತಪ್ಪೇನಲ್ಲ. ಆದರೆ ದಾರಿತಪ್ಪಿದಲ್ಲಿ ಅದರಿಂದ ಆಗುವ ಅನರ್ಥಗಳು ಅಪಾರ. ಯುರೋಪಿನಲ್ಲಿ 1700 ರ ಹೊತ್ತಿಗಾಗಲೆ ರಾಷ್ಟ್ರೀಯತೆ ಉಗ್ರರೂಪವನ್ನು ತಾಳಿದ್ದು 1800ರ ಸುಮಾರಿನಲ್ಲಿ ವಿದೇಶ ವ್ಯವಹಾರಗಳ ತಳಹದಿಯಾಗಿರುವುದು ಕಂಡುಬಂದಿದೆ. ಫ್ರಾಂಕೋ–ಪರ್ಷಿಯ ಯುದ್ಧ, ಕ್ರಿಮಿಯ ಯುದ್ಧ ಈ ಮೊದಲಾದ ಅನೇಕ ಯುದ್ಧಗಳಿಗೆ ತೀವ್ರ ರಾಷ್ಟ್ರೀಯತಾ ಭಾವನೆಯೇ ಕಾರಣವಾಗಿದೆ. ಒಂದನೆಯ ಮಹಾಯುದ್ಧಕ್ಕೂ ಇದೇ ಮೂಲವೆನ್ನುವವರೂ ಇದ್ದಾರೆ. ಫ್ಯಾಸಿಸಂ ಮತ್ತು ನ್ಯಾಜಿಸಂ ಗಳು ಬೆಳೆದಂತೆಲ್ಲಾ ಹಲವು ರಾಷ್ಟ್ರಗಳು ನೀತಿ ನಿರ್ಬಂಧಗಳನ್ನು ತೊರೆದು ದ್ವೇಷಾಸೂಯೆಗಳ ವಿಷಬೀಜವನ್ನು ಬಿತ್ತಲು ಮೊದಲು ಮಾಡಿದವು. ಅವುಗಳ ಪರಿಣಾಮವೇ ಎರಡನೆಯ ಮಹಾಯುದ್ಧ.

ಜಾಗತಿಕವಾಗಿ ಆಗಾಗ ತಲೆದೋರುತ್ತಿರುವ ಇಂಥ ಉಲ್ಬಣಗಳಿಂದ ಜಗತ್ತನ್ನು ಪಾರುಮಾಡಲು ಅಂತಾರಾಷ್ಟ್ರೀಯತಾ ಭಾವನೆಯ ಅಗತ್ಯವಿದೆ. 20ನೆಯ ಶತಮಾನದಲ್ಲಿ ಈ ಭಾವನೆ ಪುಷ್ಟಿಗೊಂಡು ಬೆಳೆದು ಬಲಗೊಳ್ಳುತ್ತಿದೆ.

ಅಂತಾರಾಷ್ಟ್ರೀಯತೆಯ ಆವಶ್ಯಕತೆಗಳನ್ನು ಕೆಲವು ದಶಮಾನಗಳಿಂದ ಅನೇಕ ತತ್ತ್ವಜ್ಞಾನಿಗಳು ವ್ಯಕ್ತಪಡಿಸಿದರು. ಫ್ರಾನ್ಸ್ ದೇಶದ ಡಕ್ ಡಿ ಸುಲ್ಲಿ, ಅಬ್ಬೆ ಡಿ ಸೆಂಟ್ ಪಿಯರೆ, ರೂಸೋ, ಬೆಂಥಮ್ ಕ್ಯಾಂಟ್ ಇವರು ಬಹು ಮುಖ್ಯರಾದವರು. ಈಚೆಗೆ ಏಬ್ರಹಾಂ ಲಿಂಕನ್, ಬರ್ಟ್‌ರಂಡ್ ರಸಲ್, ಮಹಾತ್ಮ ಗಾಂಧಿ, ಜವಹರಲಾಲ್ ನೆಹರು, ರವೀಂದ್ರನಾಥ ಠಾಕೂರ್ ಮೊದಲಾದವರು ಜೀವಮಾನವಿಡೀ ಇದೇ ಧ್ಯೇಯಕ್ಕಾಗಿ ಕೆಲಸ ಮಾಡಿರುವರು. ಈಗ ಪ್ರಜಾಭಿಪ್ರಾಯ ಅಂತಾರಾಷ್ಟ್ರೀಯತೆಯ ಕಡೆಗೆ ತಿರುಗಿದುದರಿಂದ ಅದು ಮಾನವ ಜನಾಂಗಕ್ಕೆ ಒಂದು ಹಾರೈಕೆಯಾಯಿತು. ಈ ಕಾರಣದಿಂದ ಅದು ಮಾನವನ ಯೋಚನೆಯ ಒಂದು ಸ್ವಾಭಾವಿಕ ಮತ್ತು ಕ್ರಮಬದ್ಧವಾದ ಭಾಗವಾಯಿತು. ಅದು ಅಂತಾರಾಷ್ಟ್ರೀಯ ಸಂಸ್ಥೆಗಳ ಉಗಮಕ್ಕೆ ಅವಕಾಶ ಮಾಡಿಕೊಟ್ಟಿತು. ಅದರಿಂದಲೇ ರಾಷ್ಟ್ರಗಳ ಒಕ್ಕೂಟವು (ಲೀಗ್ ಆಫ್ ನೇಷನ್ಸ್) ಪ್ರಾರಂಭವಾಯಿತು. ಅದಾದ ಅನಂತರ ಈಗ ವಿಶ್ವಸಂಸ್ಥೆ (ಯು.ಎನ್.ಒ) ಇದೇ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.

ಒಟ್ಟಿನಲ್ಲಿ ಅಂತಾರಾಷ್ಟ್ರೀಯತೆ ವಿಶ್ವಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಅಂತಾರಾಷ್ಟ್ರೀಯ ನ್ಯಾಯ ಮತ್ತು ಸಹಕಾರವನ್ನು ಸಮಾನವಾಗಿ ಕಲ್ಪಿಸಿ ವಿಶ್ವಶಾಂತಿಯನ್ನು ಎಲ್ಲಾ ರಾಷ್ಟ್ರಗಳ ಸ್ನೇಹದಿಂದ ಸ್ಥಾಪಿಸುವ, ಒಂದು ಸಿದ್ಧಾಂತ ಅಥವಾ ಒಂದು ನಂಬಿಕೆಯಾಗಿ ಬಹು ಜನಪ್ರಿಯವಾಗಿದೆ **(ನೋಡಿ – ವಿಶ್ವಸಂಸ್ಥೆ)**. (ಎಂ.ಕೆ.ಆರ್.)

**ಅಂತಾರಾಷ್ಟ್ರೀಯ ದಿನಾಂಕ ರೇಖೆ :** 180° ರೇಖಾಂಶದ ಮಧ್ಯಾಹ್ನ ರೇಖೆಗೆ ಈ ಹೆಸರಿದೆ. (ಇಂಟರ್‌ನ್ಯಾಷನಲ್ ಡೇಟ್ ಲೈನ್) ಪೆಸಿಫಿಕ್ ಸಾಗರದ ನಿರ್ಜನ ಪ್ರದೇಶದ ಮೇಲೆ ಇದು ಹಾದುಹೋಗುತ್ತದೆ. ಹೀಗೆ ಸಾಗುವಾಗ ಎದುರಾಗುವ ಒಂದೆರಡು ದ್ವೀಪಗಳನ್ನು ಬಳಸಿಕೊಂಡು ಹೋಗುವಂತೆ ಈ ರೇಖೆಯನ್ನು ಎಳೆಯಲಾಗಿದೆ.

ಭೂಮಿ ಪಶ್ಚಿಮದಿಂದ ಪೂರ್ವಕ್ಕೆ ಆವರ್ತಿಸುತ್ತಿರುವುದರಿಂದ ಯಾವುದೇ ಒಂದು ಸ್ಥಾನದಲ್ಲಿ ಸೂರ್ಯನ ಉದಯಾಸ್ತಗಳು (ಆದ್ದರಿಂದ ಸಮಯ) ಅದಕ್ಕಿಂತ ಪೂರ್ವಕ್ಕೆ ಇರುವ ಸ್ಥಳದ ಉದಯಾಸ್ತಗಳಿಗಿಂತ (ಸಮಯಕ್ಕಿಂತ) ಹಿಂದೆಯೂ ಪಶ್ಚಿಮಕ್ಕೆ ಇರುವ ಸ್ಥಳದ ಉದಯಾಸ್ತಗಳಿಗಿಂತ (ಸಮಯಕ್ಕಿಂತ) ಮುಂದೆಯೂ ಇರುವುವು. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಇದರಿಂದ ಉಂಟಾಗುವ ತೊಡಕನ್ನು ನಿವಾರಿಸಲು ಭೂಮಿಯನ್ನು 24 ನಿರ್ದಿಷ್ಟ ಕಾಲವಲಯಗಳಾಗಿ ವಿಭಾಗಿಸಲಾಗಿದೆ. ಇದರ ಪ್ರಕಾರ ಗ್ರೀನಿಚ್ ಮಧ್ಯಾಹ್ನರೇಖೆ (0° ರೇಖಾಂಶ) ಪೂರ್ವ ಮತ್ತು ಪಶ್ಚಿಮಕ್ಕೆ $7^1/_2$ರೇಖಾಂಶದ ಮಧ್ಯಾಹ್ನ ರೇಖೆಗಳು ಒಳಗೊಂಡಿರುವ 15° ಅಗಲದ ಪ್ರದೇಶ ಸೊನ್ನೆ ಗಂಟೆಯನ್ನು ತೋರಿಸುವ ಕಾಲ ವಲಯ. ಇವೆರಡೂ ರೇಖೆಗಳಿಂದ ಕ್ರಮವಾಗಿ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಕಡೆಗೆ 15° ಅಂತರದಲ್ಲಿ ಮಧ್ಯಾಹ್ನ ರೇಖೆಗಳು ಗುರುತಿಸುತ್ತ ಸಾಗಿದರೆ $172^1/_2$ ಪೂರ್ವ ಮತ್ತು $172^1_2$ ಪಶ್ಚಿಮ ರೇಖಾಂಶಗಳಿರುವ ಮಧ್ಯಾಹ್ನ ರೇಖೆಗಳನ್ನು ತಲುಪುತ್ತೇವೆ. ಹೀಗೆ ಗುರುತಿಸಲಾದ ಕಾಲವಲಯಗಳಲ್ಲಿ ಸಮಯ, ಗ್ರೀನಿಚ್ ಸಮಯಕ್ಕಿಂತ ಕ್ರಮವಾಗಿ 1. 2, . . . . . . .12 ಗಂಟೆ ಮುಂದೆಯೂ (ಪೂರ್ವದೆಡೆ) ಮತ್ತು ಹಿಂದೆಯೂ (ಪಶ್ಚಿಮದೆಡೆ) ಇರುತ್ತದೆ. ಇದರ ಪ್ರಕಾರ $172^1/_2$ ಪೂರ್ವದಿಂದ 180° ವರೆಗಿನ 172 ಅಗಲದ ವಲಯ ಗ್ರೀನಿಚ್ ಸಮಯಕ್ಕಿಂತ 12 ಗಂಟೆ ಮುಂದೆ ಇದೆ; $172^1/_2$ ಪಶ್ಚಿಮದಿಂದ 180° ವರೆಗಿನ $172^1/_2$ ಅಗಲದ ವಲಯ 12 ಗಂಟೆ ಹಿಂದೆಯಿದೆ. ಆದ್ದರಿಂದ ದಿನಾಂಕ ರೇಖೆಯ ಪೂರ್ವಕ್ಕೆ 12 ಗಂಟೆ ಆಗಿರುವಾಗ ಪಶ್ಚಿಮಕ್ಕೆ ಅದೇ ಗಳಿಗೆಯಲ್ಲಿ 12 ಗಂಟೆ ಆಗಿರುತ್ತದೆ. ಒಬ್ಬ ಪ್ರಯಾಣಿಕ ಗ್ರೀನಿಚ್‌ನಿಂದ (ಅಂದರೆ ಸೊನ್ನೆ ಕಾಲವಲಯದಿಂದ)




ಅಂತಾರಾಷ್ಟ್ರೀಯ ದಿನಾಂಕ ರೇಖೆಯನ್ನು ತೋರಿಸುವ ಭೂಪಟ

ಪೂರ್ವಾಭಿಮುಖವಾಗಿ ಸಾಗಿದರೆ ಒಂದೊಂದು ಹೊಸ ಕಾಲವಲಯವನ್ನು ಅನುಕ್ರಮವಾಗಿ ಪ್ರವೇಶಿಸಿದಂತೆಯೂ ಅವನು ತನ್ನ ಗಡಿಯಾರವನ್ನು ಒಂದೊಂದು ಗಂಟೆ ಮುಂದೆ ಇಡಬೇಕು; ಇದರ ಬದಲು ಪಶ್ಚಿಮಾಭಿಮುಖಿಯಾಗಿ ಸಾಗಿದರೆ ಅವನು ತನ್ನ ಗಡಿಯಾರವನ್ನು ಒಂದೊಂದು ಗಂಟೆ ಹಿಂದೆ ಇಡಬೇಕು. ದಿನಾಂಕ ರೇಖೆಯನ್ನು ಪೂರ್ವಾಭಿಮುಖಿಯಾಗಿ ತಲುಪಿದವನ ಗಡಿಯಾರ ಗ್ರೀನಿಚ್ ಸಮಯಕ್ಕಿಂತ 12 ಗಂಟೆ ಮುಂದೆಯೂ ಪಶ್ಚಿಮಾಭಿಮುಖಿಯಾಗಿ ತಲುಪಿದವನ ಗಡಿಯಾರ ಗ್ರೀನಿಚ್ ಸಮಯಕ್ಕಿಂತ 12 ಗಂಟೆ ಹಿಂದೆಯೂ ಇರುವುದು. ದಿನಾಂಕ ರೇಖೆಯನ್ನು ದಾಟವವನು ತೊಡಕಿಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ವ್ಯವಹಾರದಲ್ಲಿ ಈ ವ್ಯತ್ಯಾಸದಿಂದ ಉಂಟಾಗುವ ಸಂದಿಗ್ಧತೆಯನ್ನು ಪರಿಹರಿಸಲು ವಾಷಿಂಗ್ಟನ್ನಿನಲ್ಲಿ ಒಂದು ಅಂತಾರಾಷ್ಟ್ರೀಯ ಮಧ್ಯಾಹ್ನ ರೇಖಾ ಸಮಾವೇಶ 1884ರಲ್ಲಿ ನೆರವೇರಿತು. ಅಲ್ಲಿ ಎಲ್ಲಾ ರಾಷ್ಟ್ರಗಳು ಒಪ್ಪಿಕೊಂಡ ಸಂಪ್ರದಾಯದ ಪ್ರಕಾರ ದಿನಾಂಕ ರೇಖೆಯನ್ನು ಪೂರ್ವದಿಂದ ಪಶ್ಚಿಮಕ್ಕೆ ಅಡ್ಡ ಹಾಯ್ದಾಗ ತಾರೀಖು ಪಟ್ಟಿಗೆ ಹಿಂದಿನ ತಾರೀಖನ್ನು ಸೇರಿಸಿಕೊಳ್ಳಬೇಕೆಂದು ಪಶ್ಚಿಮದಿಂದ ಪೂರ್ವಕ್ಕೆ ಅಡ್ಡಹಾಯ್ದಾಗ ಒಂದು ತಾರೀಖನ್ನು ತೆಗೆದು ಹಾಕಬೇಕೆಂದೂ ತೀರ್ಮಾನವಾಯಿತು. ದಿನಾಂಕ ರೇಖೆ ಗ್ರೀನಿಚ್ ಮಧ್ಯಾಹ್ನರೇಖೆಯ ಮುಂದುವರಿಕೆ ಎಂಬುದು ಸ್ಪಷ್ಟ (ಆರ್.ಆರ್.ಯು.)

**ಅಂತಾರಾಷ್ಟ್ರೀಯ ದ್ರವ್ಯನಿಧಿ :** ವಿಶ್ವಸಂಸ್ಥೆಯೊಡನೆ ಸಂಯೋಜನೆಗೊಂಡಿದ್ದು ಅಂತಾರಾಷ್ಟ್ರೀಯ ಹಣ ವಿನಿಮಯವನ್ನು ಸ್ಥಿರಗೊಳಿಸುವ ವಿಶಿಷ್ಟ ಉದ್ದೇಶದಿಂದ ಕೆಲಸಮಾಡುತ್ತಿರುವ ಒಂದು ಸಂಸ್ಥೆಯಾಗಿದೆ (ಇಂಟರ್ನ್ಯಾಷನಲ್ ಮಾನಿಟರಿ ಫಂಡ್). 1944ರಲ್ಲಿ ಸಮಾವೇಶಗೊಂಡ ಬ್ರೆಟನ್‌ವುಡ್ಸ್ ಸಮ್ಮೇಳನ ಈ ಸಂಸ್ಥೆಯ ಹಾಗೂ ಅಂತಾರಾಷ್ಟ್ರೀಯ ಪುನಾರಚನೆ ಮತ್ತು ಅಭಿವೃದ್ಧಿ ಬ್ಯಾಂಕಿನ ನಿಯಮಾವಳಿಗಳನ್ನು ರೂಪಿಸಿತು. 27ನೇ ಡಿಸೆಂಬರ್ 1945ರಲ್ಲಿ ಈ ಸಂಸ್ಥೆ ರೂಪುಗೊಂಡಿತು. ವ್ಯವಹಾರ ಮೊದಲಾದದ್ದು 1947ರಲ್ಲಿ. 1950ರ ಅಂತ್ಯದಲ್ಲಿ 67 ರಾಷ್ಟ್ರಗಳು ಸದಸ್ಯರಾಗಿದ್ದವು. ಆಗ ಯಾವ ಕಮ್ಯೂನಿಸ್ಟ್ ರಾಷ್ಟ್ರವೂ ಇದಕ್ಕೆ ಸೇರಿರಲಿಲ್ಲ. ಈಗ ಸದಸ್ಯರ ಒಟ್ಟು ಸಂಖ್ಯೆ 100ಕ್ಕೂ ಹೆಚ್ಚಾಗಿದೆ. ಗವರ್ನರುಗಳ ಮಂಡಳಿಗೆ ಒಬ್ಬೊಬ್ಬ ಗವರ್ನರನ್ನು ಪ್ರತಿಯೊಂದು ಸದಸ್ಯ ರಾಷ್ಟ್ರವು ಗೊತ್ತುಮಾಡುತ್ತದೆ. ಆಡಳಿತ 12 ಮಂದಿ ಕಾರ್ಯನಿರ್ವಾಹಕ ನಿರ್ದೇಶಕರಿಗೆ ವಹಿಸಲ್ಪಟ್ಟಿದೆ. ಇವರಲ್ಲಿ ಅತ್ಯಧಿಕ ಪ್ರಮಾಣದ ಬಂಡವಾಳ ಹೊಂದಿರುವ 5 ಪ್ರತಿನಿಧಿಗಳು ಇದ್ದು, ಮಿಕ್ಕ ಸ್ಥಾನಗಳು ಚುನಾವಣೆಯ ಮೂಲಕ ಭರ್ತಿಯಾಗುತ್ತವೆ. ಇದರ ಕೇಂದ್ರಾಲಯ ವಾಷಿಂಗ್ಟನ್ ಡಿ.ಸಿ. ಸಂಸ್ಥೆಯ ಧ್ಯೇಯಗಳು ಹೀಗಿವೆ:

1. ಅಂತಾರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ಬಗ್ಗೆ ಸಲಹೆ ಮತ್ತು ಸಹೋದ್ಯಮಗಳ ಬಗ್ಗೆ ವಿವರಗಳನ್ನು ಒದಗಿಸುವ ಒಂದು ಸ್ಥಿರ ಸಂಸ್ಥೆಯ ಮೂಲಕ ಅಂತಾರಾಷ್ಟ್ರೀಯ ಸಹಕಾರವನ್ನು ಅಭಿವೃದ್ಧಿಪಡಿಸುವುದು.

2. ಅಂತಾರಾಷ್ಟ್ರೀಯ ವ್ಯಾಪಾರದ ಅಭಿವೃದ್ಧಿ ಮತ್ತು ಸಮರೂಪದ ಬೆಳವಣಿಗೆಗೆ ಅನುಕೂಲ ಮಾಡಿಕೊಡುವುದು.

3. ವಿನಿಮಯ ಸ್ಥಿರತ್ವವನ್ನು ಬಲಪಡಿಸುವುದು. ಪ್ರತಿನಿಧಿಗಳಲ್ಲಿ ಒಂದು ಕ್ರಮಬದ್ಧ ವಿನಿಮಯ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವುದು ಮತ್ತು ವಿನಿಮಯದ ಏರಿಳಿತದ ಸ್ಪರ್ಧೆಯನ್ನು ತಡೆಯುವುದು.

4. ಚಾಲ್ತಿ ವ್ಯವಹಾರಗಳಲ್ಲಿನ ಕೊಡುಗೆಯ ವಿವಿಧ ಪಾರ್ಶ್ವ ವ್ಯವಸ್ಥೆಯ ಸ್ಥಾಪನೆಗೆ ಅಂದರೆ ಸಾಮಗ್ರಿ ಮತ್ತು ಕೆಲಸಗಳ ಚಾಲ್ತಿ ರಫ್ತು ಮತ್ತು ಆಮದುಗಳ ವಿಚಾರವಾಗಿ ಅನುಕೂಲ ಮಾಡಿಕೊಡುವುದು.

5. ಸಾಕಷ್ಟು ಆಧಾರಗಳ ಮೇಲೆ ಧನ ಸಂಸ್ಥೆಯ ನಿಧಿಯ ಸದಸ್ಯ ರಾಷ್ಟ್ರಗಳಿಗೆ ದೊರೆಯುವಂತೆ ಭರವಸೆ ನೀಡಿ, ಅವು ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಏಳಿಗೆಗೆ ಭಂಗತರುವ ವಿನಾಶಕಾರಿ ಕ್ರಮಗಳನ್ನು ಅವಲಂಬಿಸದಂತೆ ತಡೆಹಾಕಿ, ಅವರು ಕೊಡಬೇಕಾದ ಸಾಲದ ಬಾಕಿಯನ್ನು ಸೂಕ್ತಮಾರ್ಗದಲ್ಲಿ ಹಿಂತಿರುಗಿಸುವ ಒಂದು ಅವಕಾಶ ಮಾಡಿಕೊಡುವುದು.

6. ಮೇಲಿನ ಅಂಶಗಳಿಗೆ ಸಂಬಂಧಪಟ್ಟಂತೆ ಸದಸ್ಯ ರಾಷ್ಟ್ರಗಳು ಕೊಡಬೇಕಾದ ಅಂತಾರಾಷ್ಟ್ರೀಯ ಬಾಕಿಯಲ್ಲಿನ ಅಸಮಸ್ಥಿತಿಯ ಪರಿಮಾಣವನ್ನು ತಗ್ಗಿಸಿ ಸಾಲ ತೀರುವೆಯ ಕಾಲವನ್ನು ಕಡಿಮೆ ಮಾಡುವುದು.

ಈ ಧನ ಸಂಸ್ಥೆಗೆ ಪ್ರತಿಯೊಂದು ಸದಸ್ಯ ರಾಷ್ಟ್ರವೂ ತಾನು ಕೊಡಬೇಕಾದ ಪ್ರಮಾಣದಲ್ಲಿ ಕೆಲವು ಭಾಗವನ್ನು ಚಿನ್ನದ ರೂಪವಾಗಿಯೂ, ಮತ್ತೆ ಕೆಲವು ಭಾಗವನ್ನು ತನ್ನದೇ ಆದ ನಾಣ್ಯದ ರೂಪದಲ್ಲೂ ಕೊಡಬೇಕಾಗುತ್ತದೆ. ಪ್ರತಿ ರಾಷ್ಟ್ರಕ್ಕೂ ಒಂದು ಪ್ರಮಾಣವನ್ನು ನಿರ್ಧರಿಸಲಾಗಿದೆ. ಅದು ಕೊಡಬೇಕಾದ ಹಣ ಈ ಪ್ರಮಾಣಕ್ಕೆ ಸಮನಾಗಿರುತ್ತದೆ. ಪ್ರತಿಯೊಂದು ಸದಸ್ಯ ರಾಷ್ಟ್ರವೂ ತನ್ನ ಚಂದಾಹಣದ ಶೇ.25 ಭಾಗವನ್ನು ಚಿನ್ನ ಅಥವಾ ಸಂಯುಕ್ತ ಸಂಸ್ಥಾನದ ಡಾಲರ್ ರೂಪದಲ್ಲಿ ಮತ್ತು ಉಳಿದ ಭಾಗವನ್ನು ತನ್ನದೇ ಆದ ನಾಣ್ಯದ ರೂಪದಲ್ಲಿ ಕೊಡುತ್ತದೆ. ಧನ ಸಂಸ್ಥೆ ಪಡೆಯುವ ಚಿನ್ನವನ್ನು ನ್ಯೂಯಾರ್ಕ್, ಲಂಡನ್, ಪ್ಯಾರಿಸ್, ಮುಂಬಯಿ ಮತ್ತು ಷಾಂಗೈಗಳಲ್ಲಿ ಇಟ್ಟಿರಲಾಗುತ್ತದೆ. ಈ ಧನಸಂಸ್ಥೆಯ

ಹೆಸರಿನಲ್ಲಿ ಉಳಿದ ನಾಣ್ಯ ರೂಪದ ಹಣವನ್ನು ಸದಸ್ಯ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಲ್ಲಿ ಇಟ್ಟಿರಲಾಗಿದ್ದು ಅವಶ್ಯವಿದ್ದಾಗ ಆಯಾ ರಾಷ್ಟ್ರಗಳು ತಮ್ಮ ಬ್ಯಾಂಕುಗಳಿಂದಲೇ ಹಣ ಪಡೆಯುವ ಅವಕಾಶವಿದೆ.

ಬ್ರೆಟನ್‌ವುಡ್ಸ್ ಸಮಾವೇಶದಲ್ಲಿ ಪ್ರತಿನಿಧಿಸಿದ ಮೂಲ ಸದಸ್ಯ ರಾಷ್ಟ್ರಗಳಲ್ಲಿ ಭಾರತವೂ ಒಂದು. ಇದು ಈ ಧನಸಂಸ್ಥೆಯಿಂದ ಅತ್ಯಂತ ಹೆಚ್ಚಿನ ಪ್ರಮಾಣದ ನೆರವನ್ನು ಪಡೆದಿರುವ 5ನೆ ರಾಷ್ಟ್ರವಾಗಿದ್ದು, ಕಾರ್ಯನಿರ್ವಾಹಕ ನಿರ್ದೇಶಕ ಮಂಡಳಿಗೆ ಒಬ್ಬ ನಿರ್ದೇಶಕನನ್ನು ಗೊತ್ತುಮಾಡುವ ಹಕ್ಕನ್ನು ಪಡೆದಿದೆ. ಈ ಧನ ಸಂಸ್ಥೆಯ ಉದ್ದೇಶಗಳು ಮತ್ತು ಕಾರ್ಯಗಳಿಗೆ ಭಾರತ ಇಟ್ಟಿರುವ ದಾಖಲೆ ಬಹಳ ಉತ್ತಮವಾಗಿದೆ. ಈ ಧನಸಂಸ್ಥೆ ನೀಡುವ ಸಾಲದ ಅವಕಾಶಗಳನ್ನು ಭಾರತ ಚೆನ್ನಾಗಿ ಬಳಸಿಕೊಂಡಿದೆ. ಇದುವರೆಗೆ ಧನಸಂಸ್ಥೆಯಿಂದ ಹೆಚ್ಚಿಗೆ ಸಹಾಯ ಪಡೆದಿರುವ ದೇಶಗಳಲ್ಲಿ ಬ್ರಿಟನ್ ಮೊದಲನೆಯದಾದರೆ, ಭಾರತವು ಎರಡನೆಯದಾಗಿತ್ತು. 1965ರ ಅಕ್ಟೋಬರ್ ಅಂತ್ಯದ ಹೊತ್ತಿಗೆ ಭಾರತ ಅತ್ಯಂತ ದೊಡ್ಡ ರಾಷ್ಟ್ರವಾಗಿದ್ದು ಅದು ಪಡೆದ ಒಟ್ಟು ಸಹಾಯದ ಮೊತ್ತ 775 ದಶಲಕ್ಷ ಡಾಲರುಗಳಷ್ಟಿತ್ತು. ಈ ಮೊತ್ತ ಇತ್ತೀಚಿನ ಸಾಮಾನ್ಯ ಹೆಚ್ಚುಗಾರಿಕೆಯ ಸಲುವಾಗಿ ಮತ್ತಷ್ಟು ದಶಲಕ್ಷ ಡಾಲರುಗಳಿಗೆ ಏರಿದೆ.

ಅಂತಾರಾಷ್ಟ್ರೀಯ ದ್ರವ್ಯನಿಧಿಯ ರಚನೆಯಲ್ಲಿ ಕೆಲವು ಕೊರತೆಗಳೂ ಅಪೂರ್ಣತೆಗಳೂ ಇದ್ದರೂ ಇದು ಅಂತಾರಾಷ್ಟ್ರೀಯ ಆರ್ಥಿಕ ಚೌಕಟ್ಟಿನ ಮುಖ್ಯ ಕಂಬವಾಗಿದೆ ಎಂದು ಧಾರಾಳವಾಗಿ ಹೇಳಬಹುದು. (ಸಿ.ಸಿ.ಪಿ.)

**ಅಂತಾರಾಷ್ಟ್ರೀಯ ನ್ಯಾಯಾಲಯ :** ರಾಷ್ಟ್ರರಾಷ್ಟ್ರಗಳ ಮಧ್ಯೆ ಉಂಟಾಗುವ ವಿವಾದಗಳನ್ನು ಯುದ್ಧ ಮತ್ತು ಪ್ರತೀಕಾರಗಳಿಂದಲ್ಲದೆ ನ್ಯಾಯಬದ್ಧವಾದ ರೀತಿಯಲ್ಲಿ ಪರಿಹರಿಸಿಕೊಳ್ಳುವ ಉದ್ದೇಶದಿಂದ 1927ರಲ್ಲಿ ಸ್ಥಾಪಿತವಾದ ರಾಷ್ಟ್ರಗಳ ಒಕ್ಕೂಟ (ಲೀಗ್ ಆಫ್ ನೇಷನ್ಸ್) ಹೇಗ್ ಪಟ್ಟಣದಲ್ಲಿ ಒಂದು ವಿಶ್ವ ನ್ಯಾಯಾಲಯವನ್ನು (ವರ್ಲ್ಡ್ ಕೋರ್ಟ್) ಸ್ಥಾಪಿಸಿತು. 1946ನೆಯ ಜನವರಿಯಲ್ಲಿ ಎರಡನೆಯ ಮಹಾಯುದ್ಧ ಮುಗಿದಮೇಲೆ ಆ ನ್ಯಾಯಾಲಯ ಪುನಾರಚನೆಗೊಂಡು ವಿಶ್ವಸಂಸ್ಥೆಯ ಒಂದು ಪ್ರಧಾನ ಅಂಗವಾಗಿ ಅಂತಾರಾಷ್ಟ್ರೀಯ ನ್ಯಾಯಲಯ ಎಂಬ ಹೆಸರಿನಿಂದ ತನ್ನ ಕೆಲಸಕಾರ್ಯಗಳನ್ನಾರಂಭಿಸಿತು.

ನ್ಯಾಯಾಲಯದ ಕಚೇರಿ ಇರುವುದು ಹೇಗ್‌ನಲ್ಲೇ. ಕಚೇರಿಯ ಎಲ್ಲಾ ವೆಚ್ಚವನ್ನು ವಿಶ್ವಸಂಸ್ಥೆ ವಹಿಸುತ್ತದೆ. ಇದರ ಮುಖ್ಯ ಆಡಳಿತಾಧಿಕಾರಿಯನ್ನು ಮಹಾಕಾರ್ಯದರ್ಶಿ ಎನ್ನುತ್ತಾರೆ. ನ್ಯಾಯಾಲಯದಲ್ಲಿ 15 ಜನ ನ್ಯಾಯಾಧೀಶರಿದ್ದಾರೆ. ಅವರು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಂದ ಚುನಾಯಿಸಲ್ಪಡುತ್ತಾರೆ. ಯಾವ ದೇಶದಿಂದಲೂ ಒಬ್ಬರಿಗಿಂತ ಹೆಚ್ಚು ನ್ಯಾಯಾಧೀಶರನ್ನು ಆರಿಸುವಂತಿಲ್ಲ. ಅವರು ತಮ್ಮತಮ್ಮ ದೇಶದಲ್ಲಿ ಅತ್ಯುಚ್ಚ ನ್ಯಾಯಾಧೀಶ ಪದವಿಗೆ ಅರ್ಹರಾಗಿರಬೇಕು. ಇಲ್ಲವೆ ಅಂತಾರಾಷ್ಟ್ರೀಯ ನ್ಯಾಯಶಾಸ್ತ್ರದಲ್ಲಿ ಪರಿಣತರೆಂದು ಖ್ಯಾತಿವೆತ್ತಿರಬೇಕು. ಅಂಥವರನ್ನು ಒಂಬತ್ತು ವರ್ಷಗಳ ಅವಧಿಯವರೆಗೆ ಚುನಾಯಿಸುವರು. ಪ್ರತಿ ಮೂರು ವರ್ಷಕ್ಕೆ ಐವರು ನಿವೃತ್ತಿ ಹೊಂದುವರು. ಅವರ ಸ್ಥಾನದಲ್ಲಿ ಮತ್ತೆ ಐವರನ್ನು ಆರಿಸುವರು. ಚುನಾಯಿಸಲ್ಪಟ್ಟ ನ್ಯಾಯಾಧೀಶ ಆ ಸ್ಥಾನಕ್ಕೆ ಅನರ್ಹನೆಂದು ಉಳಿದ ನ್ಯಾಯಾಧೀಶರಿಗೆ ಮನದಟ್ಟಾದರೆ ಆತನನ್ನು ಆ ಸ್ಥಾನದಿಂದ ತೆಗೆಯಬಹುದು. ಯಾವುದೇ ನ್ಯಾಯವನ್ನು ಇತ್ಯರ್ಥ ಮಾಡಬೇಕಾದರೂ ಒಂಬತ್ತು ಜನ ನ್ಯಾಯಾಧೀಶರು ಏಕಕಾಲಕ್ಕೆ ಕುಳಿತು ವಾದವಿವಾದವನ್ನು ಕೇಳಬೇಕು. ಅಧ್ಯಕ್ಷ ಉಪಾಧ್ಯಕ್ಷರನ್ನು ಮೂರು ವರ್ಷಗಳಿಗೊಮ್ಮೆ ಗುಪ್ತ ಮತದಾನದ ಪದ್ಧತಿಯಿಂದ ಚುನಾಯಿಸುವರು. ವಿಶ್ವಸಂಸ್ಥೆಯ 34ನೆಯ ವಿಧಿಯಂತೆ ಅಂತಾರಾಷ್ಟ್ರೀಯ ನ್ಯಾಯಾಲಯದ ಮುಂದೆ ರಾಷ್ಟ್ರ ರಾಷ್ಟ್ರಗಳೇ ವಿವಾದಕ್ಕೆ ಪಕ್ಷಗಾರರಾಗಬೇಕು. ವೈಯಕ್ತಿಕವಾಗಿ, ಜಗತ್ತಿನ ಯಾವ ಪ್ರಜೆಯೂ ಆ ನ್ಯಾಯಾಲಯದಲ್ಲಿ ಪರಿಹಾರವನ್ನು ಬೇಡಿ ಮನವಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಬೇಕಾದರೆ ಆ ವ್ಯಕ್ತಿ ತನ್ನ ರಾಷ್ಟ್ರದ ಮೂಲಕವಾಗಿಯೇ ಇನ್ನೊಂದು ರಾಷ್ಟ್ರದ ಮೇಲೆ ಮೊಕದ್ದಮೆ ಹೂಡಬಹುದು. ವಿಶೇಷ ಸಂದರ್ಭಗಳಲ್ಲಿ ವಿಶ್ವಸಂಸ್ಥೆ ಅಥವಾ ಅದರ ಅಂಗ ಸಂಸ್ಥೆಗಳು ಅಂತಾರಾಷ್ಟ್ರೀಯ ನ್ಯಾಯಾಲಯದ ಸಲಹೆಯನ್ನು, ಅಭಿಪ್ರಾಯವನ್ನು ಪಡೆದುಕೊಳ್ಳಬಹುದು. ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಗೆ ಸೀಮಿತವಾಗಿದೆ. ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಸದಸ್ಯರಲ್ಲದ ರಾಷ್ಟ್ರಗಳೂ ಈ ನ್ಯಾಯಾಲಯದ ಮುಂದೆ ತಮ್ಮ ವಿವಾದಗಳನ್ನು ಹೂಡಿ ಬಗೆಹರಿಸಿಕೊಳ್ಳಬಹುದು.

ನ್ಯಾಯಾಲಯದ ತೀರ್ಪುಗಳು ಮನ್ನಣೆ ಪಡೆದು ಜಾರಿಯಲ್ಲಿ ಬರುವಂತೆ ಮಾಡುವ ಏರ್ಪಾಟು ಇದೆಯಾದರೂ ತೀರ್ಮಾನದಂತೆ ರಾಷ್ಟ್ರಗಳು ನಡೆಯದಿದ್ದರೆ ಅವುಗಳನ್ನು ನಡೆಯುವಂತೆ ಮಾಡುವ ಸಾಮರ್ಥ್ಯ ಈ ನ್ಯಾಯಾಲಯಕ್ಕಿಲ್ಲ. ಈ ನ್ಯಾಯಾಲಯ ನ್ಯಾಯಗಳನ್ನು ಇತ್ಯರ್ಥ ಪಡಿಸುವಾಗ ಅಂತಾರಾಷ್ಟ್ರೀಯ ಲಿಖಿತ ಒಪ್ಪಂದಗಳನ್ನು ಅಲಿಖಿತ ಸಂಪ್ರದಾಯಗಳನ್ನು, ರೂಢಿಮೂಲ ನಡವಳಿಕೆಗಳನ್ನು ಹಾಗೂ ನಾಗರಿಕ ರಾಷ್ಟ್ರಗಳನ್ನು ಒಪ್ಪಿಕೊಂಡಿರುವ ನ್ಯಾಯಶಾಸ್ತ್ರ ಸೂತ್ರಗಳನ್ನು ಅನುಸರಿಸುತ್ತದೆ.

ಈ ನ್ಯಾಯಾಲಯದ ಅಧಿಕೃತ ಭಾಷೆ ಫ್ರೆಂಚ್ ಮತ್ತು ಇಂಗ್ಲಿಷ್. ಇವೆರಡರಲ್ಲೂ ಪರಿಣತಿಯಿಲ್ಲದ ರಾಷ್ಟ್ರ ತನ್ನ ಭಾಷೆ ಅಥವಾ ಮತ್ತಾವುದಾದರೂ ಭಾಷೆಯಲ್ಲಿ ವ್ಯವಹಾರ ನಡೆಸಬೇಕೆಂದು ಬೇಡಿ ಅನುಮತಿ ಪಡೆದುಕೊಂಡು ಅಂಥ ಅನ್ಯಭಾಷೆಯಲ್ಲಿ ವ್ಯವಹರಿಸಬಹುದು. ಪ್ರತಿಯೊಂದು ತೀರ್ಪು ಬಹುಮತದಿಂದ ನಿರ್ಣಯವಾಗತಕ್ಕದ್ದು. ನ್ಯಾಯಾಧೀಶರುಗಳಲ್ಲಿ ಸಮ್ಮತವಿದ್ದರೆ, ಅಧ್ಯಕ್ಷರಿಗೆ ಉಪರಿಮತ (ಕ್ಯಾಸ್ಟಿಂಗ್ ವೋಟ್) ಕೊಡುವ ಅಧಿಕಾರವಿದೆ. ಈ ನ್ಯಾಯಾಲಯ ಕೊಡುವ ತೀರ್ಪೇ ಅಖೈರು. ಅದರ ವಿರುದ್ಧ ಯಾವ ಮೇಲ್ಮನವಿಯೂ(ಅಪೀಲ್) ಇಲ್ಲ. ಆದರೆ, ತೀರ್ಪುಕೊಟ್ಟ 10 ವರ್ಷಗಳ ಒಳಗಾಗಿ, ಯಾವುದಾದರೂ ಹೊಸ ನಿರ್ಣಾಯಕ ಸಂಗತಿ ಬೆಳಕಿಗೆ ಬಂದರೆ ಮೊದಲಿನ ತೀರ್ಪನ್ನು ಪುನರ್ ವಿಮರ್ಶೆಮಾಡುವ ಅಧಿಕಾರ ಇದೇ ಕೋರ್ಟಿಗಿದೆ.

ಒಂದು ವಿವಾದ ಇತ್ಯರ್ಥ ಮಾಡುವಾಗ ಪ್ರತಿಪಕ್ಷದ ರಾಷ್ಟ್ರಗಳ ಒಬ್ಬೊಬ್ಬ ನ್ಯಾಯಾಧೀಶರು ವಿಚಾರಣೆಯ ಕಾಲಕ್ಕೆ ಇತರ ನ್ಯಾಯಾಧೀಶರೊಡನೆ ಕುಳಿತುಕೊಳ್ಳತಕ್ಕದ್ದು. ಒಂದುವೇಳೆ ಚುನಾಯಿಸಲ್ಪಟ್ಟ 15 ನ್ಯಾಯಾಧೀಶರಲ್ಲಿ ಪಕ್ಷಗಾರ ರಾಷ್ಟ್ರಗಳ ಪ್ರತಿನಿಧಿಗಳು ಇಲ್ಲದಿದ್ದರೆ ಅಂಥ ರಾಷ್ಟ್ರಗಳು ಒಬ್ಬೊಬ್ಬ ನ್ಯಾಯಾಧೀಶರನ್ನು ಚುನಾಯಿಸಿಕೊಳ್ಳುವ ಅಧಿಕಾರವಿದೆ. ಹಾಗೆ ಆರಿಸಲ್ಪಟ್ಟ ನ್ಯಾಯಾಧೀಶರಿಗೆ ಇತರ ನ್ಯಾಯಾಧೀಶರಂತೆ ಸಮಾನಾಧಿಕಾರ ಹೊಂದಿ ತೀರ್ಪುಕೊಡುವ ಹಕ್ಕಿದೆ. (ಕೆ.ಪಿ.)

**ಅಂತಾರಾಷ್ಟ್ರೀಯ ಪತ್ರಿಕಾ ಸಂಸ್ಥೆ :** ಸುದ್ದಿಯ ಪ್ರಸಾರ, ಅದರ ಬೆಳವಣಿಗೆ ಮತ್ತು ಸುದ್ದಿಯನ್ನು ತರುವ ಬಗೆ ಇವುಗಳ ವಿಚಾರದಲ್ಲಿ ಸಂಶೋಧನೆ ನಡೆಸಿ ಪ್ರಪಂಚದ ಪತ್ರಿಕಾಲೋಕಕ್ಕೆ ಮಾರ್ಗದರ್ಶನ ಮಾಡುವ ಮುಖ್ಯ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆ. ಇದರ ಕೇಂದ್ರ ಕಚೇರಿ ಸ್ವಿಟ್ಜರ್‌ಲೆಂಡಿನ ಜ್ಯೂರಿಚ್ ಪಟ್ಟಣದಲ್ಲಿದೆ. ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದ ಈ ಸಂಸ್ಥೆ ಪ್ರಪಂಚದ ಯಾವ ಸರ್ಕಾರದ ಹಿಡಿತಕ್ಕೂ ಒಳಪಟ್ಟಿಲ್ಲ. ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಣೆ ಮಾಡುವುದು, ನಾನಾ ದೇಶದ ಪತ್ರಿಕೋದ್ಯಮಿಗಳಲ್ಲಿ ಪರಸ್ಪರ ಮಧುರ ಬಾಂಧವ್ಯವನ್ನು ಹುಟ್ಟಿಸುವುದು, ಸುದ್ದಿ ನಿಷ್ಪಕ್ಷಪಾತವಾಗಿ ಯಾರ ಭಯ ಮತ್ತು ದಯಾದಾಕ್ಷಿಣ್ಯಕ್ಕೊಳಗಾಗದೆ ಪ್ರಚುರವಾಗುವಂತೆ ಮಾಡುವುದು, ಪತ್ರಿಕೋದ್ಯಮದ ವಿವಿಧ ಸಾಧನೆಗಳನ್ನು ಬೆಳೆಸುವುದು –ಇವು ಈ ಸಂಸ್ಥೆ ಮಾಡುತ್ತಿರುವ ಇತರ ಮುಖ್ಯ ಕೆಲಸಗಳು. ಪ್ರಪಂಚದ 45 ದೇಶಗಳಲ್ಲಿರುವ ಪತ್ರಿಕೆಗಳ ಪೈಕಿ ಸುಮಾರು 600 ಪತ್ರಿಕೆಗಳ 1300 ಪ್ರತಿನಿಧಿಗಳು ಈ ಸಂಸ್ಥೆಯ ಸದಸ್ಯರು. ಇದರ ಅಂಗಸಂಸ್ಥೆಯೊಂದು ಭಾರತದಲ್ಲೂ ಇದೆ. ಇದು ಪ್ರತಿ ವರ್ಷವೂ ಪತ್ರಿಕೋದ್ಯಮಿಗಳ ಉಪಯೋಗಕ್ಕಾಗಿ ವಿಚಾರಗೋಷ್ಠಿಗಳನ್ನು, ತರಬೇತಿ ತರಗತಿಗಳನ್ನು, ಪರಸ್ಪರ ವಿನಿಮಯ ಚರ್ಚೆಗಳನ್ನು ಏರ್ಪಡಿಸುತ್ತದೆ. (ಎನ್.ಕೆ.)

**ಅಂತಾರಾಷ್ಟ್ರೀಯ ಪುನಾರಚನೆ ಮತ್ತು ಅಭಿವೃದ್ಧಿ ಬ್ಯಾಂಕು :** ವಿಶ್ವಬ್ಯಾಂಕು ಎಂದು ಪ್ರಖ್ಯಾತಿ ಪಡೆದಿರುವ ಈ ಸಂಸ್ಥೆ ಅಂತಾರಾಷ್ಟ್ರೀಯ ದ್ರವ್ಯನಿಧಿಯೊಂದಿಗೆ ವಿಶ್ವಸಂಸ್ಥೆಯ ಒಂದು ಅಂಗವಾಗಿ ಸ್ಥಾಪಿತವಾಯಿತು (ಐ.ಬಿ.ಆರ್.ಡಿ). ಇದು ಅಂತಾರಾಷ್ಟ್ರೀಯಮಟ್ಟದ ಬಂಡವಾಳದ ಸಮಸ್ಯೆಗಳನ್ನು ನಿರ್ವಹಿಸುತ್ತದೆ. 1946ರ ಜೂನ್ ತಿಂಗಳಿನಲ್ಲಿ ತನ್ನ ವ್ಯವಹಾರವನ್ನು ಪ್ರಾರಂಭಿಸಿ ಅರುವತ್ತಕ್ಕೂ ಹೆಚ್ಚು ವರ್ಷಗಳಿಂದ ಕೆಲಸ ಮಾಡುತ್ತಿದ್ದು 185 ರಾಷ್ಟ್ರಗಳ ಸದಸ್ಯತ್ವವನ್ನು ಹೊಂದಿದೆ. ವಿತರಣೆ ಸುಮಾರು 9 ಬಿಲಿಯನ್ ಡಾಲರುಗಳು. ಇದರ ಪ್ರಧಾನ ಕಛೇರಿ ವಾಷಿಂಗ್ಟನ್‌ನಲ್ಲಿದೆ.

ಮೊದಲು ಈ ಬ್ಯಾಂಕಿನ ಆರ್ಥಿಕ ಬಂಡವಾಳ 10 ಬಿಲಿಯನ್ ಡಾಲರುಗಳಷ್ಟಿತ್ತು. ಬೇರೆ ಬೇರೆ ಘಟ್ಟಗಳಲ್ಲಿ ಬೆಳೆದು ಈಗಿನ ಬಂಡವಾಳ 24 ಬಿಲಿಯನ್ ಡಾಲರುಗಳಾಗಿದೆ.

ಪ್ರತಿಯೊಂದು ಸದಸ್ಯ ರಾಷ್ಟ್ರದ ಬಂಡವಾಳ ಈ ಕೆಳಗೆ ಕಂಡ ಅಂಶಗಳ ಆಧಾರದ ಮೇಲೆ ನಿರ್ಣಯವಾಗುತ್ತದೆ.

1. ರಾಷ್ಟ್ರೀಯ ಆದಾಯದ ಶೇ.2 ರಷ್ಟು, 2. ಚಿನ್ನ ಮತ್ತು ಡಾಲರ್ ಉಳಿಕೆಯ ಶೇ.5 ರಷ್ಟು, 3.ಸರಾಸರಿ ಆಮದಿನ ಶೇ.10 ರಷ್ಟು, 4. ರಫ್ತಿನ ಪರಮಾವಧಿ ವ್ಯತ್ಯಾಸದ ಶೇ.10ರಷ್ಟು. 5. ಮೇಲಿನ ನಾಲ್ಕು ಅಂಶಗಳ ಮೊತ್ತಕ್ಕೆ ಸರಾಸರಿ ರಫ್ತು ವರಮಾನದ ಶೇಕಡ ಪ್ರಮಾಣದಷ್ಟನ್ನು ಕೂಡಿಸಿದಷ್ಟು.

ಸದಸ್ಯತ್ವ ಪಡೆಯಲು ಪ್ರತಿಯೊಂದು ರಾಷ್ಟ್ರವೂ ತನ್ನ ಭಾಗದ 20ರಷ್ಟನ್ನು (ಶೇ.2 ರಷ್ಟು ಚಿನ್ನ ಅಥವಾ ಅಮೆರಿಕ ಡಾಲರಿನ ರೂಪದಲ್ಲಿ, ಶೇ.18 ರಷ್ಟನ್ನು ತನ್ನ ರಾಷ್ಟ್ರದ ಹಣದ ರೂಪದಲ್ಲಿ ಕೊಟ್ಟು ಉಳಿದ ಶೇ.80 ಭಾಗವನ್ನು ಭರವಸೆಯ ನಿಧಿಗೆ ಕೊಡಬೇಕಾಗುತ್ತದೆ. ತನ್ನ ಜವಾಬ್ದಾರಿಯನ್ನು ಪೂರೈಸಲು ಅನಿವಾರ್ಯವಾದಾಗ ಮಾತ್ರ ಈ ಭರವಸೆಯ ನಿಧಿಯ ಹಣವನ್ನು ಬ್ಯಾಂಕು ಬಳಸಿಕೊಳ್ಳುವ ಅಧಿಕಾರ ಹೊಂದಿದೆ. ಬಂಡವಾಳದ ವಿತರಣೆಗೆ ಅನುಕೂಲವಾಗುವಂತೆ ಒಂದು ಮೂಲ ವ್ಯವಸ್ಥೆಯ ರೂಪವನ್ನು ಅಂತಾರಾಷ್ಟ್ರೀಯ ದ್ರವ್ಯನಿಧಿ ಕೊಟ್ಟಿರುವ ಹಾಗೆ ಈ ಬ್ಯಾಂಕು ಯುದ್ಧದ ಪರಿಣಾಮದಿಂದ ಕುಸಿದ ಆರ್ಥಿಕ ವ್ಯವಸ್ಥೆಗೆ ಪುನಾರಚನೆಗೆ ಸಹಾಯ ಮಾಡಿ, ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ಉತ್ಪಾದನೆಯ ಉದ್ದೇಶಗಳಿಗೋಸ್ಕರ ಹಣವನ್ನು ಒದಗಿಸಿ, ಸಂಪನ್ಮೂಲಗಳ

ಬೆಳವಣಿಗೆಗೆ ನೆರವು ಕೊಡುತ್ತದೆ; ಅಂತಾರಾಷ್ಟ್ರೀಯ ವ್ಯಾಪಾರ ಸುಸಂಗತವಾದ ರೀತಿಯಲ್ಲಿ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುವುದಲ್ಲದೆ ದೀರ್ಘಾವಧಿ ಬಂಡವಾಳ ಹೂಡಿಕೆಗೆ ಉತ್ತೇಜನ ಕೊಟ್ಟು ತನ್ಮೂಲಕ ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗೊಳಿಸಿ ಸಲ್ಲಬೇಕಾದ ಸಾಲವನ್ನು ನಿಧಾನವಾಗಿ ತೆಗೆದುಕೊಳ್ಳುತ್ತದೆ. ಇದರಿಂದ ಸದಸ್ಯ ರಾಷ್ಟ್ರಗಳಲ್ಲಿನ ಜೀವನಮಟ್ಟ ಏರುವುದಕ್ಕೂ ಅಲ್ಲಿನ ಕಾರ್ಮಿಕ ವರ್ಗದ ಸ್ಥಿತಿಗತಿಗಳು ಉತ್ತಮಗೊಳ್ಳುವುದಕ್ಕೂ ಸಹಾಯವಾಗಿದೆ.

ಬ್ಯಾಂಕಿನ ಸಹಾಯ ಮೂರು ವಿಧವಾಗಿದೆ: 1. ಸಾಮಾನ್ಯ ಹೂಡಿಕೆ ವಿಧಾನಗಳ ಮೂಲಕ ಖಾಸಗಿ ಬಂಡವಾಳಗಾರರು ಮಾಡಿದ ಸಾಲಕ್ಕೆ ನೀಡುವ ಭರವಸೆ. 2. ಅದರ ನಿಧಿಯಿಂದ ನೇರವಾಗಿ ಸಾಲ ನೀಡಿಕೆ. 3. ಬ್ಯಾಂಕಿನ ಸದಸ್ಯ ರಾಷ್ಟ್ರಗಳಲ್ಲಿ ಖಾಸಗಿ ಬಂಡವಾಳಗಾರರಿಂದ ಆ ಬ್ಯಾಂಕು ಪಡೆದ ಸಾಲರೂಪದ ನಿಧಿಯಿಂದ ಸಾಲಕೊಡುವುದು.

ಸಾಲವನ್ನು ಪಡೆಯುವ ಸದಸ್ಯ ರಾಷ್ಟ್ರಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ತಾನು ತೃಪ್ತಿಗೊಂಡ ಮೇಲೆ ಮತ್ತು ಸಾಲವನ್ನು ಕೊಡಲು ನಡೆಸುವ ನಿರ್ದಿಷ್ಟ ಯೋಜನೆಗಳ ಮಹತ್ತ್ವವನ್ನು ಕಂಡುಕೊಂಡ ಅನಂತರ ಬ್ಯಾಂಕು ತನ್ನ ಸದಸ್ಯ ರಾಷ್ಟ್ರಗಳಿಗೆ ಸಾಲವನ್ನು ನೀಡುತ್ತದೆ. ಸಾಲವನ್ನು ನೀಡುವುದರಲ್ಲಿ ಬ್ಯಾಂಕ್ ನ್ಯಾಯವಾದ ಜವಾಬ್ದಾರಿಯುತ ಹೊಣೆಯನ್ನು ಹೊರುವುದಕ್ಕೆ ತಯಾರಿದೆ. ಈ ಹಣ ರಚನಾತ್ಮಕವಾಗಿ ಪ್ರಾಯೋಗಿಕ ಕೆಲಸಗಳಿಗೆ ಉಪಯೋಗವಾಗಬೇಕೆಂಬುದು ಅದರ ಅಪೇಕ್ಷೆ. ಯಾವ ಉದ್ದೇಶಕ್ಕಾಗಿ ಹಣವನ್ನು ಒದಗಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಹಣ ಬಳಸಲಾಗಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಲು ಮತ್ತು ನಿಯಂತ್ರಿಸಲು ಬ್ಯಾಂಕು ಅಧಿಕಾರವನ್ನು ಹೊಂದಿದೆ.

ಈ ಬ್ಯಾಂಕು ಹಿಂದುಳಿದಿರುವ ರಾಷ್ಟ್ರಗಳಿಗೆ ಸಾಲವನ್ನು ಒದಗಿಸಲು ಒಂದು ಹೊಸ ಪ್ರಯೋಗತಂತ್ರವನ್ನು ರೂಪಿಸಿದೆ. ಸದಸ್ಯ ರಾಷ್ಟ್ರಗಳಲ್ಲಿ ಬ್ಯಾಂಕು ಗಳಿಸಿರುವ ಅಥವಾ ಅಂಥ ಸಂಸ್ಥೆಗಳಿಂದ ಸ್ಥಾಪಿತವಾದ ಸಂಸ್ಥೆಗಳಿಗೆ ಈ ಬ್ಯಾಂಕು ಹಣವನ್ನು ನೀಡಿ ಸಣ್ಣ ಸಣ್ಣ ಯೋಜನೆಗಳಿಗೆ ಅವಕಾಶಮಾಡಿಕೊಡುತ್ತದೆ. ಇಂಥ ಯೋಜನೆಗಳನ್ನು ಎಲ್ಲಾ ರೀತಿಯಿಂದಲೂ ಪರೀಕ್ಷೆ ಮಾಡುತ್ತ ಅವುಗಳ ಮೂಲ ಆದರ್ಶಗಳಿಗೆ ಮತ್ತು ಉದ್ದೇಶಗಳಿಗೆ ಹಣ ದೊರಕುವಂತೆ ಸಹಾಯ ಮಾಡುತ್ತದೆ. ಭಾರತದಲ್ಲಿ ಕೈಗಾರಿಕಾ ಆರ್ಥಿಕ ಕಾರ್ಪೋರೇಷನ್ ಸರ್ಕಾರದಿಂದ ಮೊದಲೇ ಆದೇಶವನ್ನು ಪಡೆದುಕೊಂಡು ಈ ಬ್ಯಾಂಕಿನಿಂದ ಹಣವನ್ನು ಪಡೆಯಬಹುದು. ಭಾರತದ ಕೈಗಾರಿಕಾ ಸಾಲ ಮತ್ತು ಬಂಡವಾಳ ಕಾರ್ಪೋರೇಷನ್ನಿಗೆ ಆಗಿಂದಾಗ್ಗೆ ಬೇರೆ ಬೇರೆ ರಾಜ್ಯಗಳಲ್ಲಿ ಚಲಾವಣೆಯಿರುವ ನಾಣ್ಯಗಳ ಸಾಲವನ್ನು ಕೊಡಲು ವಿಶ್ವಬ್ಯಾಂಕ್ ಒಪ್ಪಿಕೊಂಡಿದೆ. ಭಾರತ ಸರ್ಕಾರ ಪಡೆದ ಹಣವನ್ನು ಬಡ್ಡಿಯ ಸಮೇತ ಹಿಂದಿರುಗಿಸಿಕೊಡಲು ಭರವಸೆಯನ್ನಿತ್ತಿದೆ. ಈ ಬ್ಯಾಂಕು ಯಾವ ವಿಧದಲ್ಲೂ ವಿದೇಶಿ ಖಾಸಗಿ ಬಂಡವಾಳ ಸಂಸ್ಥೆಗಳಿಗೆ ಸ್ಪರ್ಧಿಯಾಗಿಲ್ಲ; ಅವುಗಳಿಗೆ ಪೂರಕವಾಗಿ ವ್ಯವಹರಿಸುತ್ತಿದೆ.

ಬ್ಯಾಂಕಿನ ಸಾಲಗಳು ಎಲ್ಲಾ ದೊಡ್ಡ ಆರ್ಥಿಕ ಕ್ಷೇತ್ರಗಳಿಗೂ ದೊರೆತಿವೆ. ಆದರೆ ಮುಖ್ಯವಾಗಿ ಸಾಗಾಣಿಕೆ, ವಿದ್ಯುಚ್ಛಕ್ತಿ, ಕೈಗಾರಿಕೆ, ವ್ಯವಸಾಯ, ದೂರಸಂಪರ್ಕ, ನೀರುಸರಬರಾಜು ಮತ್ತು ಇತ್ತೀಚೆಗೆ ವಿದ್ಯಾಭ್ಯಾಸ – ಇಂಥ ಬಾಬುಗಳಿಗೆ ಈ ಸಾಲಗಳು ಸಿಕ್ಕಿವೆ.

ಈಚೆಗೆ ಬ್ಯಾಂಕು ಬಹಳವಾಗಿ ಮುಂದುವರಿದು ಅಭಿವೃದ್ಧಿಹೊಂದಿ ಎಲ್ಲರ ಮೆಚ್ಚುಗೆ ಪಡೆದಿದೆ. ಪ್ರಾರಂಭದಲ್ಲಿ ಇದು ಯುರೋಪಿನ ಪುನಾರಚನೆಯ ಸಮಸ್ಯೆಗಳಿಗೆ ಹೆಚ್ಚು ಗಮನವನ್ನು ಕೊಟ್ಟಿತ್ತಾದರೂ ಈಗ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆರ್ಥಿಕ ಸ್ಥಿತಿಯನ್ನು ಬೇಗ ಉತ್ತಮಗೊಳಿಸುವ ವಿಷಯಕ್ಕೆ ಹೆಚ್ಚು ಹೆಚ್ಚು ಗಮನವಿತ್ತಿದೆ.

ಬ್ಯಾಂಕಿನ ಚರಿತ್ರೆಯಲ್ಲಿ ಮತ್ತೊಂದು ಮುಖ್ಯವಾದ ಪ್ರಗತಿಯನ್ನು ಇಲ್ಲಿ ಹೇಳಬೇಕಾದ್ದು ಅತ್ಯಗತ್ಯ. ಇದು ಮತ್ತು 1960ನಲ್ಲಿ ಸ್ಥಾಪಿತವಾದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯು (ಇಂಟರ್ ನ್ಯಾಷನಲ್ ಡೆವಲಪ್‌ಮೆಂಟ್ ಅಸೋಸಿಯೇಷನ್–ಐ.ಡಿ.ಎ) ವಿಶ್ವಬ್ಯಾಂಕಿನ ಸದಸ್ಯ ರಾಷ್ಟ್ರಗಳ ಉತ್ಪಾದನಾ ಯೋಜನೆಗಳಿಗೆ ಬಂಡವಾಳವನ್ನು ಒದಗಿಸುವ ಉದ್ದೇಶವನ್ನು ಹೊಂದಿರುವ ವಿಚಾರ. ಈ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯಲ್ಲಿ ಈಗ 95 ಸದಸ್ಯ ರಾಷ್ಟ್ರಗಳಿವೆ. ಮಾಮೂಲಿನಂತೆ ಸಿಗುತ್ತಿದ್ದ ಸಾಲಕ್ಕಿಂತ ಹೆಚ್ಚಿನ ನೆರವನ್ನು ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ಇನ್ನೂ ಹೆಚ್ಚಿನ ರಿಯಾಯಿತಿಗಳೊಂದಿಗೆ ಒದಗಿಸುವುದೇ ಈ ಸಂಸ್ಥೆಯ ವಿಶಿಷ್ಟ ಉದ್ದೇಶ. ಈ ಸಂಸ್ಥೆ ನೀಡಿರುವ ಸಾಲದ ಮೊತ್ತ ಒಟ್ಟು 1 ಬಿಲಿಯನ್ ಡಾಲರುಗಳಿಗೂ ಹೆಚ್ಚಾಗಿದೆ.

ಬ್ರೇಟನ್‌ವುಡ್ಸ್ ನಲ್ಲಿ ನಡೆದ ಸಮಾವೇಶದಲ್ಲಿ ಭಾಗವಹಿಸಿದ ಭಾರತ ಬ್ಯಾಂಕಿನ ಪ್ರವರ್ತಕ ರಾಷ್ಟ್ರಗಳಲ್ಲೊಂದು; ಅಭಿವೃದ್ಧಿಗೆ ಬ್ಯಾಂಕು ನೀಡುವ ಸಹಾಯವನ್ನು ಗಣನೀಯ ಪ್ರಮಾಣದಲ್ಲಿ ಬಳಸಿಕೊಂಡಿದೆ. ಭಾರತ ದೇಶದಂತಹ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿ ಕಾರ್ಯಗಳಿಗೆ ವಿಶ್ವಬ್ಯಾಂಕಿನ ಅಂಗಸಂಸ್ಥೆಗಳಾದ ಅಂತಾರಾಷ್ಟ್ರೀಯ ಆರ್ಥಿಕ ಮಂಡಳಿ (ಇಂಟರ್‌ನ್ಯಾಷನಲ್ ಫೈನಾನ್ಸ್ ಕಾರ್ಪೋರೇಷನ್), ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳ ನೆರವು ಅಗತ್ಯವಾಗಿದೆ.

ಅಂತಾರಾಷ್ಟ್ರೀಯ ಆರ್ಥಿಕ ಮಂಡಳಿ 1956ರಲ್ಲಿ ಸ್ಥಾಪಿತವಾಯಿತು. ಸರ್ಕಾರಗಳ ಯಾವ ಭರವಸೆಯೂ ಇಲ್ಲದೆ ಖಾಸಗಿ ಉದ್ಯಮಗಳಲ್ಲಿ ಬಂಡವಾಳ ಹೂಡುವುದರ ಮೂಲಕ ಮುಂದುವರಿಯುತ್ತಿರುವ ರಾಷ್ಟ್ರಗಳ ಅಭಿವೃದ್ಧಿಕಾರ್ಯವನ್ನು ತ್ವರಿತಗೊಳಿಸುವುದೇ ಇದರ ಮುಖ್ಯ ಉದ್ದೇಶ. ವಿಶ್ವಬ್ಯಾಂಕಿನ ಎಲ್ಲಾ ಸದಸ್ಯರೂ ಈ ಸಂಸ್ಥೆಯ ಸದಸ್ಯರಾಗಲು ಅವಕಾಶವುಂಟು. ಪ್ರಪಂಚದಾದ್ಯಂತ ಅದರಲ್ಲೂ ಮಧ್ಯ ಮತ್ತು ದಕ್ಷಿಣ ಅಮೆರಿಕ, ಏಷ್ಯ ಭಾಗಗಳಲ್ಲಿ ಈ ಸಂಸ್ಥೆ ಹೂಡಿರುವ ಬಂಡವಾಳ ಯೋಜನೆಗಳನ್ನು ಬೆಳೆಸುತ್ತಿದೆ. ತಯಾರಿಕೆ, ಗಿರಣಿಗಳು, ಗಣಿ ಉದ್ಯಮ, ಖನಿಜದ ಉದ್ಯಮ, ಖನಿಜ ಶುದ್ಧೀಕರಣ – ಹೀಗೆ ಈ ಯೋಜನೆಗಳು ಬಹು ವ್ಯಾಪಕವಾಗಿವೆ.

ಉಪಖಂಡವಾಗಿರುವ ಭಾರತಕ್ಕೆ ಅಭಿವೃದ್ಧಿ ಬ್ಯಾಂಕು ನೀಡಿದ ಒಂದು ಗಮನಾರ್ಹವಾದ ನೆರವೆಂದರೆ, ಭಾರತ ಮತ್ತು ಪಾಕಿಸ್ತಾನಗಳ ನಡುವಣ ನೀರಿನ ವಿವಾದವನ್ನು ಪರಿಹರಿಸಿದ್ದು. 1960ನೆಯ ಸೆಪ್ಟೆಂಬರ್ ತಿಂಗಳಿನ 6ನೆಯ ತಾರೀಖಿನಂದು ನಡೆದ ಸಿಂಧೂ ಕಣಿವೆ ಒಪ್ಪಂದ ಮಹತ್ತ್ವದ ಸಾಧನೆ. (ಸಿ.ಸಿ.ಪಿ.)

**ಅಂತಾರಾಷ್ಟ್ರೀಯ ಬಾಕಿ ಪಾವತಿ :** ವ್ಯಾಪಾರದ ಬಾಕಿಯನ್ನು ತೀರಿಸಲು ಒಂದು ದೇಶ ಇನ್ನೊಂದಕ್ಕೆ ಹಣ ಸಂದಾಯ ಮಾಡುತ್ತದಷ್ಟೆ. ದೇಶಗಳ ನಡುವೆ ಜರಗುವ ಈ ಹಣ ಸಂದಾಯವನ್ನು ಅಂತಾರಾಷ್ಟ್ರೀಯ ಬಾಕಿ ಪಾವತಿ ಎನ್ನುತ್ತಾರೆ.

ಯಾವ ದೇಶದ ನಾಣ್ಯದಲ್ಲಿ ಅಂತಾರಾಷ್ಟ್ರೀಯ ಹಣ ಸಂದಾಯ ಮಾಡುವುದು? ಕೊಂಡ ದೇಶದ ಹಣದಲ್ಲೇ, ಮಾರಿದ ದೇಶದ ಹಣದಲ್ಲೇ ಅಥವಾ ಮತ್ತೊಂದು ದೇಶದ ಹಣದಲ್ಲೇ ಎನ್ನುವ ಪ್ರಶ್ನೆ ಏಳುವುದು. ಈ ವಿಷಯದಲ್ಲಿ ವ್ಯಾಪಾರಕ್ಕೊಳಗಾದ ದೇಶಗಳು ಹೇಗೆ ಒಪ್ಪಂದ ಮಾಡಿಕೊಂಡರೂ ಕೊನೆಯಲ್ಲಿ ಒಂದು ದೇಶದ ನಾಣ್ಯ ಇನ್ನೊಂದಕ್ಕೆ ಒಪ್ಪಿಗೆಯಾದ ನಾಣ್ಯವಾಗಿ ಪರಿವರ್ತನೆಯಾಗದೆ ವಿಧಿಯಿಲ್ಲ.

ಪ್ರಪಂಚದಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳೆಲ್ಲ ಒಂದರಿಂದ ಇನ್ನೊಂದಕ್ಕೆ ನಿರಾತಂಕವಾಗಿ ಪರಿವರ್ತನೆಯಾಗುವುದು ಅಂತಾರಾಷ್ಟ್ರೀಯ ಹಣಕಾಸಿನ ವ್ಯವಸ್ಥೆ ಮತ್ತು ಭದ್ರತೆಗೆ ತಳಹದಿ. ಹಾಗಾದ ಪಕ್ಷದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ವ್ಯವಹಾರದ ಜೊತೆಗೆ ಅಂತಾರಾಷ್ಟ್ರೀಯ ಹಣಕಾಸಿನ ಸಾಧನ ಸಂಪತ್ತುಗಳು ಬೆಳೆಯುವುವು. ಇದರಿಂದ ಅಂತಾರಾಷ್ಟ್ರೀಯ ಹಣಕಾಸಿನ ಮೌಲ್ಯ ಹೆಚ್ಚುವುದು. ಆದರೆ ನಾಣ್ಯಗಳ ನಿರಾತಂಕ ಪರಿವರ್ತನೆಗೆ ಇರುವ ಅಡ್ಡಿ ಆತಂಕಗಳೇ ಇಂದಿನ ಹಣಕಾಸು ಪ್ರಪಂಚದ ವಿಶೇಷ ಲಕ್ಷಣವಾಗಿದೆ. ಪ್ರತಿಯೊಂದು ದೇಶವೂ ಒಂದಿಲ್ಲೊಂದು ನಿರ್ಬಂಧವನ್ನು ವಿಧಿಸಲು ಹಿಂಜರಿದಿಲ್ಲ. ಹಾಗೆಯೇ ವಿದೇಶಿ ವಿನಿಮಯಗಳ ಮೇಲೆ ಹತೋಟಿಯನ್ನಿಡದ ರಾಷ್ಟ್ರವೊಂದಿಲ್ಲ.

ಬಂಗಾರವು ಪ್ರಪಂಚದ ಎಲ್ಲಾ ರಾಷ್ಟ್ರಗಳು ನಿಸ್ಸಂಕೋಚವಾಗಿ ತೆಗೆದುಕೊಳ್ಳುವ, ತೀವ್ರವಾಗಿ ಬಯಸುವ ಅಂತಾರಾಷ್ಟ್ರೀಯ ಹಣಸಂದಾಯ ಸಾಧನ. ಆದರೆ ಈ ಲೋಹದ ವಾರ್ಷಿಕ ಉತ್ಪತ್ತಿ ಸಾಕಷ್ಟಿಲ್ಲದೆ ಬಹಳ ಕಡಿಮೆಯಾಗಿದೆ; ಅಲ್ಲದೆ ಉತ್ಪತ್ತಿಯ ಸಣ್ಣ ಭಾಗ ಮಾತ್ರ ಹಣಕಾಸಿನ ವ್ಯವಸ್ಥೆಗೆ ದೊರಕುತ್ತಿದೆ. ಜೊತೆಗೆ ವಿಶ್ವದ ಹಣಕಾಸಿನ ವ್ಯವಹಾರಕ್ಕೆ ಬರುವ ಬಂಗಾರವೆಲ್ಲ ಕೆಲವೇ ರಾಷ್ಟ್ರಗಳ ಹಿಡಿತದಲ್ಲಿರುವುದರಿಂದ ಅಂತಾರಾಷ್ಟ್ರೀಯ ಹಣಕಾಸಿನ ಮೌಲ್ಯ ಹೆಚ್ಚಿಸಲು ಬಂಗಾರ ಪ್ರಯೋಜನಕಾರಿಯಾಗಿಲ್ಲ.

ಆದುದರಿಂದ ಪ್ರತಿಯೊಂದು ದೇಶವೂ ತನ್ನ ಹಣ ಸಂದಾಯ ಸ್ಥಿತಿಯನ್ನು ನೇರವಾಗಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದಕ್ಕಾಗಿ ಒಂದು ನಿಯಮಿತ ಕಾಲಾವಧಿಯಲ್ಲಿ ವಿಶ್ವದ ವಿವಿಧ ರಾಷ್ಟ್ರಗಳಿಂದ ತನಗೆ ಮತ್ತು ತನ್ನ ದೇಶೀಯರಿಗೆ ಬರಬೇಕಾದ ಮತ್ತು ಮಿಕ್ಕೆಲ್ಲಾ ದೇಶಗಳಿಗೂ ಮತ್ತು ದೇಶೀಯರಿಗೂ ತಾನು ಕೊಡಬೇಕಾದ ಆಯವ್ಯಯಪಟ್ಟಿಯನ್ನು ಪ್ರತಿಯೊಂದು ದೇಶವೂ ತಯಾರಿಸುತ್ತದೆ. ಈ ಲೆಕ್ಕಾಚಾರವನ್ನೇ ಹಣಸಂದಾಯ ಸಮತೋಲನವೆನ್ನುವುದು. ಮಿಕ್ಕೆಲ್ಲಾ ಆಯವ್ಯಯಗಳ ಪಟ್ಟಿಯಂತೆ ಈ ಲೆಕ್ಕದ ಎರಡು ಭಾಗಗಳನ್ನು ಪರಸ್ಪರ ಸರಿತೂಗಿಸಿರುತ್ತದೆ. ಈ ಎರಡೂ ಭಾಗಗಳ ಸರಿಸಮಾನತೆ ದೇಶದ ಹಣ ಸಂದಾಯ ಸ್ಥಿತಿಯಲ್ಲಿ ಸಮತೆ ಇದೆಯೆಂದು ಹೇಳುವುದಿಲ್ಲ. ಹೇಗೆಂದರೆ, ದೇಶದ ಹಣಸಂದಾಯ ಸ್ಥಿತಿಯಲ್ಲಿ ಅಸಮತೆ ಇದ್ದಾಗಲೂ ಕೂಡ ಹಣಸಂದಾಯ ಸಮತೋಲನ ಸಮವಾಗಿಯೇ ಇರುವುದು. ಸರಿಸಮಾನತೆಯನ್ನು ಗಳಿಸಲು ಕೈಗೊಂಡ ವಿವರಗಳನ್ನು ತೋರಿಸುವುದು ಈ ಲೆಕ್ಕದ ವೈಶಿಷ್ಟ್ಯವೆನ್ನಬಹುದು. ಒಂದು ದೇಶದ ಹಣಸಂದಾಯ ವ್ಯವಹಾರಗಳ ತಪಶೀಲುಗಳನ್ನು ತೋರಿಸುವುದಲ್ಲದೆ ಈ ವ್ಯವಹಾರವನ್ನು ಸರಿಸಮಗೊಳಿಸಲು ಮಾಡಿದ ಏರ್ಪಾಡುಗಳನ್ನು ತೋರಿಸುವುದು ಹಣ ಸಂದಾಯ ಸಮತೋಲನದ ಮುಖ್ಯೋದ್ದೇಶ ವೆನ್ನಬಹುದು. ಹಣಸಂದಾಯ ಸಮತೋಲನ ಖಾತೆಯ ಲೆಕ್ಕಾಚಾರ ಹೇಗೇ ಇರಲಿ, ಋಣಾಧಿಕ್ಯ ಇಲ್ಲದೆ ಆಯಾಧಿಕ್ಯ ಆ ದೇಶದ ಹಣಸಂದಾಯ ಸ್ಥಿತಿಯಲ್ಲಿ ಏರ್ಪಟ್ಟಿರುವ ಅಸಮತೆಯನ್ನು ತೋರಿಸುತ್ತದೆ. ಎರಡನೆಯ ಮಹಾಯುದ್ಧದಿಂದೀಚೆಗೆ ಋಣಾಧಿಕ್ಯದಿಂದ ಉಂಟಾದ ಅಸಮ ಹಣಸಂದಾಯಸ್ಥಿತಿ ವಿಶ್ವದಾದ್ಯಂತ ಹರಡಿರುವ ಕ್ಲಿಷ್ಟ ಸಮಸ್ಯೆಯಾಗಿದೆ: ವಿಶೇಷವಾಗಿ ಹಿಂದುಳಿದ ಮತ್ತು ಮುಂದುವರಿಯುತ್ತಿರುವ ರಾಷ್ಟ್ರಗಳನ್ನು ಬಹುಕಾಲದಿಂದ

ಪೀಡಿಸುತ್ತಿದೆ. ಹಣಸಂದಾಯ ಸ್ಥಿತಿಯ ಅಸಮತೆ ತಾತ್ಕಾಲಿಕವಾಗಿ ಕಂಡುಬರಬಹುದು ಅಥವಾ ಮೂಲಭೂತ ಕಾರಣಗಳಿಂದುಂಟಾಗಿರಬಹುದು. ದೇಶದ ಆರ್ಥಿಕ ಸ್ಥಿತಿಯಲ್ಲಿ ನಿಜವಾದ ಕುಂದುಕೊರತೆಗಳೇನೂ ಇಲ್ಲದಿದ್ದರೂ ಅಂತಾರಾಷ್ಟ್ರೀಯ ವ್ಯಾಪಾರ ವ್ಯವಹಾರದ ಅತಿರೇಕದಿಂದ ದೇಶದ ಹಣ ಸಂದಾಯ ಸ್ಥಿತಿಯಲ್ಲಿ ತಾತ್ಕಾಲಿಕವಾಗಿ ಅಸಮತೆ ಕಂಡುಬರಬಹುದು. ಹಾಗಲ್ಲದೆ ದೇಶದ ಆರ್ಥಿಕ ವ್ಯವಸ್ಥೆಯ ನ್ಯೂನಾತಿರೇಕಗಳ ಪರಿಣಾಮವಾಗಿ ಹಣಸಂದಾಯ ಸ್ಥಿತಿಯಲ್ಲಿ ಅಸಮತೆ ಅವಿರಳವಾಗಿ ಉದ್ಭವಿಸಬಹುದು. ಇಂಥ ಮೂಲಭೂತ ಅಸಮತೆ, ಮುಂದುವರಿಯುತ್ತಿರುವ ರಾಷ್ಟ್ರಗಳು ಪದೇಪದೇ ಎದುರಿಸುತ್ತಿರುವ ದೊಡ್ಡ ಸಮಸ್ಯೆ. ಇದನ್ನು ನಿವಾರಿಸಲು ದೇಶದ ಆರ್ಥಿಕ ಸ್ಥಿತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡದೆ ಸಾಧ್ಯವಿಲ್ಲ.

ಪ್ರತಿಯೊಂದು ದೇಶಕ್ಕೂ ತನ್ನದೇ ಆದ ವಿವರಣೆ ಇದ್ದರೂ ಮೂಲಭೂತ ಅಸಮತೆಗೆ ಸ್ಥೂಲವಾಗಿ ಮೂರು ಕಾರಣಗಳನ್ನು ತೋರಿಸಬಹುದು: 1. ಮುಂದುವರಿಯುತ್ತಿರುವ ರಾಷ್ಟ್ರಗಳು ತಮ್ಮ ಆರ್ಥಿಕಾಭಿವೃದ್ಧಿಗೆ ಮುಂದುವರಿದ ರಾಷ್ಟ್ರಗಳಿಂದ ಸಾಮಾನು ಸಲಕರಣೆಗಳನ್ನು ತಾಂತ್ರಿಕ ಸೇವಾ ಸೌಕರ್ಯಗಳನ್ನು ಮತ್ತು ವಿಶೇಷವಾಗಿ ಬಂಡವಾಳವನ್ನು ಆಮದು ಮಾಡಿಕೊಳ್ಳದೆ ಬೇರೆ ಮಾರ್ಗವಿಲ್ಲ. 2. ಮುಂದುವರಿಯುತ್ತಿರುವ ದೇಶಗಳ ರಫ್ತುಗಳಿಗೆ ಪ್ರಪಂಚದ ಮಾರುಕಟ್ಟೆಯಲ್ಲಿರುವ ಅನಾದರ, ಅನಾಸಕ್ತಿ; ಪರಿಣಾಮವಾಗಿ ರಫ್ತುಗಳಲ್ಲಿ ಕಂಡುಬರುವ ಅಸ್ಥಿರತೆ; ಇದಕ್ಕೆ ಕಾರಣವಾಗಿ ಕಂಡುಬರುವ ಮುಂದುವರಿದ ರಾಷ್ಟ್ರಗಳ ಮನೋಭಿಪ್ರಾಯ. 3. ಮುಂದುವರಿದ ರಾಷ್ಟ್ರಗಳು ಮುಂದುವರಿಯುತ್ತಿರುವ ರಾಷ್ಟ್ರಗಳೊಡನೆ ವ್ಯಾಪಾರವನ್ನು ಬೆಳೆಸಲು ಮತ್ತು ಹೆಚ್ಚಿಸಲು ಹಿಂಜರಿಯುತ್ತಿರುವುದು; ತಮ್ಮ ದೇಶದ ವ್ಯಾಪಾರ ವಹಿವಾಟನ್ನು ರಕ್ಷಿಸಲು ವಿಧಿಸಿರುವ ಸುಂಕ, ಸಂಕೋಲೆಗಳನ್ನು ತಗ್ಗಿಸಲು ನಿರುತ್ಸಾಹಿಗಳಾಗಿರುವುದು. ಇದರಿಂದಾಗಿ ಹಿಂದುಳಿದ ರಾಷ್ಟ್ರಗಳು ತಮಗೆ ಬೇಕಾಗಿರುವುದು ವ್ಯಾಪಾರ ವೈಶಾಲ್ಯವೇ ಹೊರತು ನೆರವಲ್ಲ ಎಂಬ ವಾದವನ್ನು ಮುಂದೊಡ್ಡಿವೆ.

ಹೀಗಾಗಿ ಅಂತಾರಾಷ್ಟ್ರೀಯ ಹಣಕಾಸಿನ ಸಾಧನ ಸಂಪತ್ತುಗಳು ಅಂತಾರಾಷ್ಟ್ರೀಯ ವ್ಯಾಪಾರದ ಜೊತೆಗೆ ಹೆಚ್ಚಲು ಸಾಧ್ಯವಿಲ್ಲವಾಗಿದೆ. ವಿಶ್ವದಾದ್ಯಂತ ಕಂಡುಬರುತ್ತಿರುವ ವಿದೇಶಿ ವಿನಿಮಯಗಳ ಕೊರತೆ ಈ ಅವ್ಯವಸ್ಥೆಯ ಪ್ರತೀಕ. ಹಣ ಸಂದಾಯದಲ್ಲಿ ಕೊರತೆಯನ್ನು ಅನುಭವಿಸುತ್ತಿರುವ ರಾಷ್ಟ್ರಗಳು ಬಯಸುತ್ತಿರುವ ನೆರವು, ಬೇಡುತ್ತಿರುವ ಸಾಲಸೋಲಗಳಿಗಿಂತ ಉಳಿತಾಯವನ್ನು ಗಳಿಸಿರುವ ರಾಷ್ಟ್ರಗಳು ನೀಡುತ್ತಿರುವ ನೆರವು ಕೊಡುತ್ತಿರುವ ಸಾಲ ಬಹಳವಾಗಿ ಕಡಿಮೆಯಾಗಿರುವುದರಿಂದ ಹಣಕಾಸಿನ ಸಾಧನಗಳಲ್ಲಿ ಕೊರತೆಯುಂಟಾಗಿ ಅಂತಾರಾಷ್ಟ್ರೀಯ ಹಣಕಾಸಿನ ಮೌಲ್ಯ ಕುಗ್ಗಿಹೋಗಿದೆ. ಆದ್ದರಿಂದಲೇ ವಿಶ್ವದ ಗಿರಾಕಿಗೆ ಅನುಗುಣವಾಗಿ ಮತ್ತು ಸರಿಸಮನಾಗಿ ಅಂತಾರಾಷ್ಟ್ರೀಯ ಹಣಕಾಸಿನ ಸರಬರಾಜನ್ನು ಹೆಚ್ಚಿಸುವ ಬಗೆ ಹೇಗೆ? ಹೀಗೆ ಹೆಚ್ಚಿಸಿದ ಸರಬರಾಜನ್ನು ಪ್ರಪಂಚದ ರಾಷ್ಟ್ರಗಳ, ಅದರಲ್ಲೂ ಮುಂದುವರಿಯುತ್ತಿರುವ ದೇಶಗಳ ಆವಶ್ಯಕತೆಗನುಗುಣವಾಗಿ ವಿತರಣೆ ಮಾಡುವುದು ಹೇಗೆ? ಈ ಪ್ರಶ್ನೆಗಳು ವಿಶ್ವದ ಹಣಕಾಸಿನ ಎಲ್ಲಾ ಸುಧಾರಣೆಗಳ ಮುಖ್ಯ ಉದ್ದೇಶ.

ಸುಮಾರು ಎರಡು ದಶಕಗಳಿಗೂ ಹಿಂದೆ ಸ್ಥಾಪಿಸಿದ ಅಂತಾರಾಷ್ಟ್ರೀಯ ದ್ರವ್ಯನಿಧಿ ತಾತ್ಕಾಲಿಕ ಅಸಮತೆಯ ನಿವಾರಣೆಗೆ ಬೇಕಾಗುವ ಅಂತಾರಾಷ್ಟ್ರೀಯ ಹಣಕಾಸು ಸಾಧನಗಳನ್ನೊದಗಿಸುತ್ತಿದೆ. ಹಾಗೆಯೇ ವಿಶ್ವಬ್ಯಾಂಕು ದೇಶಗಳ ಆರ್ಥಿಕ ಪ್ರಗತಿ ಮತ್ತು ಏಳಿಗೆಗೆ ಬೇಕಾಗುವ ದೀರ್ಘಾವಧಿ ಬಂಡವಾಳವನ್ನೊದಗಿಸುತ್ತಿದೆ. ಈ ಎರಡೂ ಸಂಸ್ಥೆಗಳೂ ತಮ್ಮ ಚಟುವಟಿಕೆಗಳಲ್ಲಿ ಪ್ರಶಂಸನೀಯವಾದ ಪ್ರಗತಿಯನ್ನು ಸಾಧಿಸಿವೆ. ಆದರೆ ವಿಶ್ವದ ಹಣಕಾಸಿನ ಕೊರತೆಯ ಲಕ್ಷಣ ಮತ್ತು ಪರಿಮಾಣ ಈ ಎರಡೂ ಸಂಸ್ಥೆಗಳ ಶಕ್ತಿ ಸಾಮರ್ಥ್ಯಗಳನ್ನು ಮೀರಿದ್ದರಿಂದ ಅಂತಾರಾಷ್ಟ್ರೀಯ ಹಣಕಾಸು ವಹಿವಾಟಿನಲ್ಲಿ ಸುಧಾರಣೆ ಅತ್ಯಗತ್ಯವಾಗಿದೆ. ಇತ್ತೀಚಿನ ಅಂತಾರಾಷ್ಟ್ರೀಯ ಹಣಕಾಸಿನ ವಾರ್ಷಿಕಾಧಿವೇಶನದಲ್ಲಿ ಅಂಗೀಕೃತವಾದ 'ವಿಶೇಷ ವಾಪಸಾತಿ ಹಕ್ಕುಗಳು' ಎನ್ನುವ 'ಕಾಗದ ಬಂಗಾರ ' ಸುಧಾರಣೆ ಮುಖ್ಯವಾದುವು. ಈ ವಿಶೇಷ ವಾಪಸಾತಿ ಹಕ್ಕುಗಳನ್ನು ಚಲಾಯಿಸುವುದರ ಮುಖಾಂತರ ಪ್ರತಿಯೊಂದು ದೇಶವೂ ತನ್ನ ಅಂತಾರಾಷ್ಟ್ರೀಯ ಜಮೆಗಳನ್ನು ನಿರ್ದಿಷ್ಟ ಪರಿಮಾಣದಲ್ಲಿ ಹೆಚ್ಚಿಸಿಕೊಳ್ಳಲು ಸಾಧ್ಯ. ಹಣ ಸಂದಾಯದ ಅಸಮತೆಯನ್ನು ತಗ್ಗಿಸಲು ಮತ್ತು ಅಂತಾರಾಷ್ಟ್ರೀಯ ಹಣಕಾಸಿನ ಮೌಲ್ಯವನ್ನು ಹೆಚ್ಚಿಸಲು ಇದೊಂದು ಉಪಯುಕ್ತ ಸಾಧನವಾಗುವುದರಲ್ಲಿ ಸಂಶಯವಿಲ್ಲ. (ಎಸ್.ಎಸ್.)

**ಅಂತಾರಾಷ್ಟ್ರೀಯ ಭಾಷೆ :** ಬೇರೆ ಬೇರೆ ರಾಷ್ಟ್ರಗಳಲ್ಲಿ ವಾಸಿಸುತ್ತಾ ಬೇರೆ ಬೇರೆ ಭಾಷೆಗಳನ್ನು ಬಳಸುತ್ತಿರುವ ಜನರೊಳಗೆ ಯೋಗ್ಯವಾದ ಸಂಪರ್ಕ ಬೆಳೆಯಬೇಕಾದರೆ, ಅವರೆಲ್ಲರಿಗೂ ಅರ್ಥವಾಗುವಂಥ ಒಂದು ವಿಶ್ವಭಾಷೆ ಅವಶ್ಯವೆಂಬ ವಿಷಯವನ್ನು ಯಾರೂ ಅಲ್ಲಗಳೆಯಲಾರರು. ಹಲವು ರಾಷ್ಟ್ರಗಳಿಂದ ಬಂದ ವಿಜ್ಞಾನಿಗಳು ಒಂದೆಡೆ ಸೇರಿ ಯಾವುದಾದರೊಂದು ಸಮಸ್ಯೆಯನ್ನು ಚರ್ಚಿಸತೊಡಗಿದಾಗ, ರಾಜಕೀಯ ಸಮಸ್ಯೆಯೊಂದನ್ನು ಚರ್ಚಿಸಲು ವಿಶ್ವ ರಾಜಕಾರಣಿಗಳೂ ಒಂದೆಡೆ ನೆರೆದಾಗ, ವಿವಿಧ ದೇಶಗಳ ವ್ಯಾಪಾರಿಗಳು ಸಮ್ಮೇಳನ ನಡೆಸಿದಾಗ ಒಬ್ಬರ ಭಾಷೆ ಮತ್ತೊಬ್ಬರಿಗೆ ಅರ್ಥವಾಗದೆ ಪೇಚಾಡುತ್ತಾರೆ. ದುಭಾಷಿಗಳ, ಅನುವಾದಕರ ಸಹಾಯ ಬೇಡುತ್ತಾರೆ. ಇವರೆಲ್ಲ ತಮಗೆದುರಾಗುವ ಈ ಭಾಷಾ ಸಮಸ್ಯೆಯನ್ನು ನೀಗಲು ನಿರಂತರ ಪ್ರಯತ್ನದಲ್ಲಿ ತೊಡಗಿದ್ದಾರೆ.

ಸ್ವಲ್ಪ ಆಳವಾಗಿ ವಿಚಾರಿಸಿ ನೋಡಿದರೆ ಈ ಸಮಸ್ಯೆ ಅಷ್ಟೊಂದು ಸರಳವಾದುದೇ ನಲ್ಲವೆಂಬುದು ವ್ಯಕ್ತವಾದೀತು.

ಅಂತಾರಾಷ್ಟ್ರೀಯ ಭಾಷೆ ನಾಲ್ಕು ಬಗೆಯಲ್ಲಿರಬಹುದು:

1. ಸಾಂಪ್ರದಾಯಿಕ ಶಬ್ದಾವಳಿ ಮತ್ತು ವ್ಯಾಕರಣಗಳಿಂದ ದೂರವಾಗಿದ್ದು, ತನ್ನದೇ ಆದ ಕೃತಕ ನುಡಿಗಟ್ಟಿನಿಂದ ಕೂಡಿ ಜನತೆಯ ಅಗತ್ಯತೆಗಳ ತಾತ್ವಿಕ ವಿಶ್ಲೇಷಣೆಯನ್ನು ಮೂಲಾಧಾರವಾಗುಳ್ಳ ಒಂದು ಭಾಷೆ. 17ನೆಯ ಶತಮಾನದಲ್ಲಿ ಫ್ರಾನ್ಸಿಸ್ ಬೇಕನ್, ಡೆಕಾರ್ಟ್ ಮತ್ತು ಇತರರು ಇಂಥದೊಂದು ಭಾಷೆಯನ್ನು ರೂಪಿಸಲು ಯತ್ನಿಸಿದರು. ಉನ್ನತ ಬೌದ್ಧಿಕಮಟ್ಟವನ್ನು ಬಯಸುತ್ತಿದ್ದ ಆ ಭಾಷೆ ವ್ಯವಹಾರಕ್ಕೆ ಒಗ್ಗಲಿಲ್ಲವಾಗಿ ಅದು ನಿಲ್ಲಲಿಲ್ಲ.

2. ಲ್ಯಾಟಿನ್ನಿನಂಥ ಮೃತಭಾಷೆಗಳೊಂದನ್ನು ಪರಿಷ್ಕರಿಸಿ ಪುನರುಜ್ಜೀವನಗೊಳಿಸುವುದು. 1913ರಲ್ಲೇ ಪ್ರಾರಂಭವಾದ ಯೋಜನೆ ಕೆಲ ಕಾಲದ ಮೇಲೆ ತಣ್ಣಗಾಯಿತು. ಜೀವಂತ ಭಾಷೆಯಾಗಿರುವ ಸತ್ವ ಮೃತಭಾಷೆಗೆ ಬರಲಾರದೆ, ಒಂದು ವೇಳೆ ಅಂಥ ಭಾಷೆಯನ್ನು ಇಟ್ಟುಕೊಂಡಾಗಲೂ ಆ ಭಾಷೆಗೆ ಎಲ್ಲಾ ಸಾಹಿತ್ಯ ಸಂಪತ್ತನ್ನು ಅನುವಾದ ಮಾಡುವುದು ಕಷ್ಟ.

3. ಇರುವ ನುಡಿಗಟ್ಟಿನ ಆಧಾರದ ಮೇಲೆ ಹೊಸದಾಗಿ ಕಟ್ಟಿರುವ ಒಂದು ನೂತನ ಭಾಷೆ. ಇಂಥವಲ್ಲಿ ಎಲ್.ಎಲ್ ಜಮೇನೆ ಹಾಫ್ನಿಂದ ಪ್ರಚುರವಾದ (1887) ಎಸ್ಪರಾಂಟೊ ಬಹು ಮುಖ್ಯವಾದುದು. ಇದಾದ ಮೇಲೆ ಇಡೊ, ಒಲಪೂಕ್, ನೋವಿಯಲ್, ಇಂಟರ್ ಲಿಂಗ್ವಾ ಮುಂತಾದುವು ಬಂದುವು. ಇವುಗಳ ಶಬ್ದಸಂಪತ್ತು ಲ್ಯಾಟಿನ್ ಮತ್ತು ರೋಮನ್ ಭಾಷೆಗಳಿಂದ ಬಂದಿದ್ದು ವ್ಯಾಕರಣ ಇಂಡೊ ಯುರೋಪಿಯನ್ ಭಾಷೆಗಳಿಗೆ ಸಂಬಂಧಿಸಿದೆ. ಪ್ರಪಂಚದ ಜನಸಂಖ್ಯೆಯಲ್ಲಿ ಬಹುಭಾಗದವರಿಗೆ (ಏಷ್ಯ, ಆಫ್ರಿಕ) ಈ ಶಬ್ದಸಂಪತ್ತಿನ ಹಾಗೂ ವ್ಯಾಕರಣದ ಪರಿಚಯವಿಲ್ಲ. ಅಂಥವರಿಗೆ ಈ ಹೊಸ ಭಾಷೆಗಳು ಕಷ್ಟವಾಗಿಯೂ ಅಸಹ್ಯವಾಗಿಯೂ ತೋರಬಹುದು.

4. ಪರಿಷ್ಕರಿಸಿದ ಯಾವುದಾದರೂ ಆಧುನಿಕ ಜೀವಂತಭಾಷೆಯನ್ನು ವಿಶ್ವಭಾಷೆಯಾಗಿ ಬಳಸಬಹುದು. ಉದಾ: ಬೇಸಿಕ್ ಇಂಗ್ಲಿಷ್. ಇತ್ತೀಚೆಗೆ ಈ ಕಡೆ ಒಲವು ಹೆಚ್ಚಾಗುತ್ತಿರುವ ಸೂಚನೆಗಳು ಕಂಡುಬರುತ್ತಿವೆ. ಬೇಸಿಕ್ ಇಂಗ್ಲಿಷ್‌ನೊಂದಿಗೆ ರಷ್ಯನ್ ಭಾಷೆ, ಚೀನೀ ಭಾಷೆಗಳು ಪ್ರತಿಸ್ಪರ್ಧಿಗಳಾಗಿವೆ. ಇವುಗಳಲ್ಲಿ ಯಾವ ಒಂದರಿಂದಲಾದರೂ ವಿಶ್ವಭಾಷಾ ಸಮಸ್ಯೆ ಪರಿಹಾರವಾಗುವುದಾದರೂ ಭಾಷೆಗೆ ಅಂಟಿರುವ ರಾಜಕೀಯ ಹಾಗೂ ತಾತ್ತ್ವಿಕ ಸಂಪರ್ಕಗಳಿಂದಾಗಿ ಬೇರೆ ರೀತಿಯ ತೊಂದರೆಗಳು ತಲೆಯೆತ್ತುವ ಸಂಭವಗಳಿವೆ.

ಆಯಾ ಜನರ ಮಾತೃಭಾಷೆ, ದೇಶಭಾಷೆಗಳಲ್ಲದೆ, ಇಡೀ ಪ್ರಪಂಚಕ್ಕೆ ಸಮ್ಮತವಾಗುವಂಥ, ಅರ್ಥವಾಗುವಂಥ ಒಂದು ಭಾಷೆಯಿರುವುದು ಅಸಾಧ್ಯವೇನಲ್ಲ. ಇಷ್ಟೆಲ್ಲ ಪ್ರಗತಿಯನ್ನು ಸಾಧಿಸಿದ ಮನುಷ್ಯನಿಗೆ ಇದೊಂದು ಮಾತ್ರ ನುಂಗಲಾರದ ತುತ್ತಾಗಿ ತೋರುವುದಿಲ್ಲ. ಆದರೆ, ಯಾವ ಭಾಷೆ ಈ ಸ್ಥಾನಕ್ಕೆ ಯೋಗ್ಯ ಎಂಬ ವಿಷಯವೇ ನಿರ್ಧಾರವಾಗದೆ ಉಳಿದಿದೆ. ವ್ಯಕ್ತಿಸ್ವಾತಂತ್ರ್ಯಕ್ಕೆ ಇಷ್ಟೊಂದು ಮಹತ್ವ ಬಂದಿರುವ ಈ ಜಗತ್ತಿನಲ್ಲಿ ಯಾರೊಬ್ಬರ ಮಾತೂ ವೇದವಾಕ್ಯವಾಗುವುದು ಉಳಿದವರಿಗೆ ಸಹಿಸದು. ಇಂಗ್ಲಿಷ್ ವಿಶ್ವಭಾಷೆಯಾಗಲಿ ಎಂಬ ಘೋಷಣೆ ನ್ಯಾಯಸಮ್ಮತವಿರಬಹುದು, ಯುಕ್ತಿಯುಕ್ತವಾಗಿರಬಹುದು. ಆದರೆ ಇತರರಿಗೆ ಇದು ಒಗ್ಗದಿರಬಹುದು.

ದಿನನಿತ್ಯದ ಬಳಕೆಯಲ್ಲಿರುವಂಥ ಪ್ರಾಕೃತಿಕ ಭಾಷೆಗಳು ರಾಷ್ಟ್ರೀಯ ಇಲ್ಲವೇ ಅಂತಾರಾಷ್ಟ್ರೀಯ ಭಾಷೆಗಳಾಗಿ ಪರಿವರ್ತನೆಗೊಳ್ಳಬೇಕಾದಾಗ ಇನ್ನೊಂದು ದೊಡ್ಡ ಸಮಸ್ಯೆ ನಮ್ಮನ್ನೆದುರಿಸಬೇಕಾಗುತ್ತದೆ. ಪ್ರಾಕೃತಿಕ ಭಾಷೆಗಳಲ್ಲಿ ಪ್ರಯುಕ್ತವಾಗುವ ಪ್ರತಿಯೊಂದು ಶಬ್ದಕ್ಕೂ ಬೇರೆ ಬೇರೆ ಸೂಕ್ಷ್ಮವಾದ ಅರ್ಥಭೇದಗಳಿರುತ್ತವೆ. ಅವುಗಳ ವ್ಯಾಕರಣ ತರ್ಕಬದ್ಧವಾಗಿರುವುದಿಲ್ಲ. ಯಾವುದೊಂದು ನಿಯಮಕ್ಕೂ ಒಂದಲ್ಲ ಒಂದು ಅಪವಾದವಿರುತ್ತದೆ. ಇವನ್ನೆಲ್ಲ ಸರಿಯಾಗಿ ಕಲಿತು ಆ ಭಾಷೆಯನ್ನು ಉಪಯೋಗಿಸಬೇಕೆಂದರೆ ಹಲವು ವರ್ಷಗಳ ಅಭ್ಯಾಸ ಬೇಕು. ಇಂಥ ಭಾಷೆಗಳನ್ನು ಬಳಸುವಾಗ, ಜನರು ತಪ್ಪು ಮಾಡಲು ಹೆದರುತ್ತಾರೆ. ಪ್ರತಿಯೊಂದು ಕ್ಷಣದಲ್ಲೂ ಕೂಡ ಎಲ್ಲಿ ತಾವು ಇತರರ ಅಪಹಾಸ್ಯಕ್ಕೆ ಗುರಿಯಾಗುವೆವೋ ಎಂಬ ಭಯ ಅವರಿಗಿರುತ್ತದೆ. ಆ ಭಾಷೆಯನ್ನಾಡುವ ಮೂಲಜನರೂ ಕೂಡ, ತಮ್ಮ ಭಾಷೆಯ ವೈಶಿಷ್ಟ್ಯಗಳನ್ನು ಆದರದಿಂದ ಕಾಯುತ್ತಿರುತ್ತಾರೆ. ತಪ್ಪು ಮಾಡುವ ವಿದೇಶೀಯರನ್ನು ಅವರೆಂದೂ ತಮಗೆ ಸಮಾನರೆಂದು ತಿಳಿಯಲಾರರು. ಇಂಥ ಸಮಸ್ಯೆಗಳನ್ನು ನಿವಾರಿಸುವ ಉದ್ದೇಶದಿಂದಲೇ ಕಲ್ಪಿತ ಭಾಷೆಗಳ ಸೃಷ್ಟಿ ಪ್ರಾರಂಭವಾಯಿತು. ಭಾಷೆ ಅತ್ಯಂತ ಸರಳವಾದ ವ್ಯಾಕರಣ ವನ್ನೊಳಗೊಂಡಿರಬೇಕು; ಅದರ ಶಬ್ದಸಂಪತ್ತು ಎಷ್ಟು ಸಾಧ್ಯವೋ ಅಷ್ಟು ವಿಶಾಲವಾಗಿರಬೇಕು; ಮತ್ತು ಅಂತಾರಾಷ್ಟ್ರೀಯವಾಗಿರಬೇಕು; ತರ್ಕಬದ್ಧವಾಗಿರಬೇಕು; ಹಾಗೂ ಅದನ್ನು ಕಲಿಯುವ

ಕೆಲಸ ಅತ್ಯಂತ ಸುಲಭವಾಗಿರಬೇಕು–ಇಂಥ ಉದಾರ ಧ್ಯೇಯಗಳನ್ನು ಮುಂದಿಟ್ಟುಕೊಂಡು ಕೃತಕ ಭಾಷೆಗಳ ಸೃಷ್ಟಿ ನಡೆಯಿತು. ಹಾಗೆ ಸೃಷ್ಟಿಯಾದ ಭಾಷೆಗಳಲ್ಲಿ ಎಷ್ಟು ಭಾಷೆಗಳು ಈ ಧ್ಯೇಯವನ್ನು ಸಾಧಿಸಿವೆ, ಎಷ್ಟರಮಟ್ಟಿಗೆ ಸಾಧಿಸಿವೆ ಎಂದು ಹೇಳುವುದು ಕಷ್ಟ.

ಆದರೆ, ಕಲ್ಪಿತ ಭಾಷೆಗಳು ಪ್ರಾಕೃತಿಕ ಭಾಷೆಗಳಿಗಿಂತ ಎಷ್ಟೋ ವಿಷಯಗಳಲ್ಲಿ ಪ್ರಕೃತ ಉದ್ದೇಶಕ್ಕೆ ಯೋಗ್ಯವಾಗಿ ತೋರಿಬರುತ್ತಿವೆ. ಮಾನವ ನಿರ್ಮಿತಗಳಾದ್ದರಿಂದ, ಅವು ತರ್ಕಬದ್ಧವಾಗಿರಲು ಸಾಧ್ಯವಿದೆ; ಅಪವಾದಗಳಿಲ್ಲದ ಸರಳವಾದ ನಿಯಮಗಳನ್ನೊಳಗೊಂಡಿರಲು ಸಾಧ್ಯವಿದೆ. ಮತ್ತು, ಅವು ಉಪಯೋಗಿಸುವ ಪ್ರತಿಯೊಂದು ಪ್ರತ್ಯಯವೂ ಅಸಂಖ್ಯರೂಪಗಳನ್ನು ಉತ್ಪಾದಿಸಿ, ಭಾಷೆಯ ಶಬ್ದಸಂಪತ್ತು ಅತ್ಯಂತ ವಿಶಾಲವಾಗುವಂತೆ ಮಾಡಲು ಸಾಧ್ಯವಿದೆ. ಅಂಥ ಭಾಷೆಯನ್ನು ಪ್ರಯೋಗಿಸುವಲ್ಲಿ ಹಲಕೆಲವು ತಪ್ಪುಗಳನ್ನು ಮಾಡಿದರೂ ನಿಂದಿಸುವವರಾಗಲಿ, ಹಾಸ್ಯಮಾಡುವವರಾಗಲಿ ಯಾರೂ ಇಲ್ಲ. ಆದರೆ, ಭಾಷೆ ಕೃತಕವೇ ಆದರೂ ಕೆಲವು ವರ್ಷ ಬಳಕೆಯಲ್ಲುಳಿದರೆ ಅದಕ್ಕೂ ಸಾಂಪ್ರದಾಯಿಕ ಕಟ್ಟುಪಾಡುಗಳು ಅಂಟಿಕೊಳ್ಳಲಾರವೆಂದು ಹೇಳುವುದು ಮಾತ್ರ ಕಷ್ಟ.

ಈ ದಿಕ್ಕಿನಲ್ಲಿ ಇನ್ನೂ ಬಹಳಷ್ಟು ಸಂಶೋಧನೆಗಳು ನಡೆಯಬೇಕಾಗಿವೆ. ಇದುವರೆಗೆ ನಿರ್ಮಿತವಾದ ಕೃತಕ ಭಾಷೆಗಳ ರಚನೆಯನ್ನು ಅಭ್ಯಾಸ ಮಾಡಿ ಅವನ್ನು ಇತರ ಪ್ರಾಕೃತಿಕ ಭಾಷೆಗಳೊಂದಿಗೆ ಹೋಲಿಸಿ ನೋಡಿ, ನಮ್ಮೆದುರಿರುವ ಸಮಸ್ಯೆಯ ನಿಜರೂಪವೇನೆಂಬುದನ್ನರಿಯಬೇಕು. ಅನಂತರ, ಅದಕ್ಕೆ ಯೋಗ್ಯವಾದ ಪರಿಹಾರವನ್ನು ಹುಡುಕಬೇಕು. ಇದಕ್ಕೆಲ್ಲ ಹೆಚ್ಚಿನ ಕಾಲಾವಕಾಶ, ಸೂಕ್ತ ಪರಿಶೀಲನೆ ಅಗತ್ಯ. (ಡಿ.ಎಸ್.ಎಸ್.)

**ಅಂತಾರಾಷ್ಟ್ರೀಯ ಭೂಪಟಶಾಸ್ತ್ರ ಸಂಘ :** ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟದಿಂದಲೇ ಉದ್ಭವಿಸಿದ ಈ ಸಂಘ ಇನ್ನೂ ಒಕ್ಕೂಟದ ಸಂಯೋಜಿತ ಸಂಘವಾಗಿಯೇ ಉಳಿದುಕೊಂಡಿದೆ. ಈ ಸಂಘದ ಧ್ಯೇಯಗಳೆಂದರೆ: 1. ದಕ್ಷಿಣ ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಗಳಲ್ಲಿ ಆಕೃತಿ ವಿಸ್ತಾರಗಳನ್ನು ತ್ರಿಕೋಣಮಾನದಿಂದ ನಿರ್ಣಯಿಸುವುದು. 2. ಭೂಗೋಳಶಾಸ್ತ್ರದ ಅಧ್ಯಯನದ ವಿವಿಧಘಟ್ಟಗಳಲ್ಲಿ ಪ್ರದೇಶವಿವರಣೆಯ ಭೂಪಟಗಳಿಗೆ ಪ್ರಾಮುಖ್ಯ ಕೊಡುವುದು. 3. ಸಮುದ್ರ ಮಟ್ಟದಲ್ಲಿ ಆಗುವ ಬದಲಾವಣೆಗಳನ್ನು ನಿರ್ಧರಿಸಲು ಭೂಮಿಯ ಕೆಲವು ಮೇಲ್ಮೈ ಭಾಗಗಳನ್ನು ನಿಖರವಾಗಿ ಸಮಗೊಳಿಸಲು ಇರುವ ಅಗತ್ಯ. 4. ಭೂಗೋಳವೊಂದನ್ನು 1:1,000,000ರ ಮಾಪಕದಲ್ಲಿ ತಯಾರಿಸಲು ಒಂದು ಪ್ರಯೋಗತಂತ್ರವನ್ನು ರೂಪಿಸುವುದು.

ಮೇಲೆ ತಿಳಿಸಿದ ಮಾಪಕದ ರೀತ್ಯಾ ಭೂಪಟದ ರಚನೆಗೆ ಸಂಬಂಧಿಸಿದ ಕಾರ್ಯವನ್ನು ನಡೆಸಲು ಸಂಘ 1891ರಲ್ಲಿ ಬರ್ನ್‌ನಲ್ಲಿ ಸ್ಪೇನಿನ ಕರ್ನಲ್ ಕೋಎಲ್ಲೊ ಅವರ ನೇತೃತ್ವದಲ್ಲಿ ಒಂದು ಸಮರ್ಥ ನಕ್ಷಾಶಾಸ್ತ್ರ ಸಮಿತಿಯನ್ನು ರಚಿಸಿತು. ಸಂಘದ ಮೂರು ಅಧಿವೇಶನಗಳು ಸ್ಟಾಕ್‌ಹೋಂನಲ್ಲಿ (1960), ಲಂಡನ್‌ನಲ್ಲಿ (1964) ಮತ್ತು ನವದೆಹಲಿಯಲ್ಲಿ (1968) ನಡೆದುವು. ಇದಕ್ಕೆ ಮೊದಲು 1925ರಲ್ಲಿ ಈಜಿಪ್ಟಿನ ದೊರೆ ಫೌದ್‌ನ ಆಶ್ರಯದಲ್ಲಿ 1908ರಲ್ಲಿ ಜಿನೀವ ಅಧಿವೇಶನದಲ್ಲಿ ಪ್ರಾರಂಭವಾದ ಪ್ರಪಂಚದ ಉಬ್ಬುಚಿತ್ರ ಭೂಪಟದ ಕಾರ್ಯವನ್ನು ಪೂರೈಸಲು ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಪ್ರಧಾನವಾಗಿ ಎದ್ದುಕಾಣುವ ಹಾಗೂ ಮೇಲ್ಮೈಲಕ್ಷಣಗಳನ್ನು ತೋರಿಸುವ ಭೂಪಟಗಳನ್ನು ಅಚ್ಚುಹಾಕಲು ಯುದ್ಧಾನಂತರ ಕಾಲಗಳಲ್ಲಿ ಹೊಸ ಹೊಸ ತಂತ್ರಗಳನ್ನು ರೂಪಿಸಲಾಗಿದೆ.

1968ರಲ್ಲಿ ನವದೆಹಲಿಯಲ್ಲಿ ಸೇರಿದ ಅಧಿವೇಶನದಲ್ಲಿ 1. ನಕ್ಷಾಶಾಸ್ತ್ರಜ್ಞರ ತರಬೇತಿ, 2. ತಾಂತ್ರಿಕ ಪದಗಳ ವ್ಯಾಖ್ಯೆ, ವರ್ಗೀಕರಣ ಹಾಗೂ ಅವುಗಳ ಪ್ರಮಾಣನಿಷ್ಕರ್ಷೆ, 3. ನಕ್ಷಾಶಾಸ್ತ್ರದಲ್ಲಿ ಸ್ವಯಂಚಾಲನ ವ್ಯವಸ್ಥೆ–ಈ ಅಂಶಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಲಾಯಿತು. ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟ ಮತ್ತು ಅಂತಾರಾಷ್ಟ್ರೀಯ ನಕ್ಷಾಶಾಸ್ತ್ರ ಸಂಘದ ಜಂಟಿ ಅಧಿವೇಶನ ಎರಡೂ ವಿಭಾಗಗಳಲ್ಲಿ ಪರಿಣತರ ಸಂಪೂರ್ಣ ಸಹಕಾರಕ್ಕೆ ಕರೆನೀಡಿತು. (ಇ.ಎ.ಎ.)

**ಅಂತಾರಾಷ್ಟ್ರೀಯ ಭೂಭೌತ ವರ್ಷ :** 1957ರ ಜುಲೈ 1ರಿಂದ 1958ರ ಡಿಸೆಂಬರ್ 31 ರವರೆಗಿನ 18 ತಿಂಗಳ ಅವಧಿಗೆ (ಇಂಟರ್ ನ್ಯಾಷನಲ್ ಜಿಯೋಫ಼ಿಸಿಕಲ್ ಇಯರ್–ಐ.ಜಿ.ವೈ.). ಈ ಅವಧಿಯಲ್ಲಿ ಭೂಗ್ರಹ ಹಾಗೂ ಅದರ ಸುತ್ತಲಿರುವ ವಾತಾವರಣದ ಬಗ್ಗೆ ಸಂಶೋಧನಾತ್ಮಕ ಅಧ್ಯಯನ ನಡೆಸುವುದರ ಮೂಲಕ ವಿಶ್ವದ ಬಗ್ಗೆ ಹೆಚ್ಚಿನ ಅರಿವನ್ನು ಪಡೆದುಕೊಳ್ಳಲಾಯಿತು ಈ ಭೂಭೌತ ಸಂಶೋಧನ ಕಾರ್ಯಕ್ರಮದಲ್ಲಿ ಪ್ರಪಂಚದ ಸು. 70 ರಾಷ್ಟ್ರಗಳು ಪಾಲ್ಗೊಂಡಿದ್ದವು. ಇವುಗಳಲ್ಲಿ ಭಾರತವೂ ಒಂದಾಗಿತ್ತು.

ಅಂತಾರಾಷ್ಟ್ರೀಯ ಭೂಭೌತ ವರ್ಷಕ್ಕೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ವಿಜ್ಞಾನ ಒಕ್ಕೂಟ ಒಂದು ವಿಶೇಷ ಸಮಿತಿಯನ್ನು ರಚಿಸಿತು. ಈ ಸಮಿತಿಯಲ್ಲಿ ಅಯೋನಾವರಣ (ಅಯೋನೋಸ್ಫಿಯರ್), ರೇಡಿಯೋ ಭೌತವಿಜ್ಞಾನ, ಖಗೋಳವಿಜ್ಞಾನ, ಭೂಭೌತವಿಜ್ಞಾನ, ಭೂಗೋಳ ವಿಜ್ಞಾನ ಹಾಗೂ ಪ್ರಪಂಚದ ಪವನವಿಜ್ಞಾನ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನೇಕ ರಾಷ್ಟ್ರಗಳ ವಿಜ್ಞಾನಿಗಳಿದ್ದರು.

ಈ ಅವಧಿಯಲ್ಲಿ ನಡೆದ ಚಟುವಟಿಕೆಗಳನ್ನು ಮುಖ್ಯವಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ :

1. ಮೇಲಿನ ವಾಯುಮಂಡಲದ ಭೌತವಿಜ್ಞಾನ : ಸೂರ್ಯನಲ್ಲಿ ನಡೆಯುವ ಘಟನೆಗಳು ಹಾಗೂ ಬಾಹ್ಯಾಕಾಶದ ಇತರ ನಕ್ಷತ್ರಗಳಿಂದ ಮತ್ತು ಬಾಹ್ಯಾಕಾಶದ ಮಾಧ್ಯಮದಿಂದ ಬರುತ್ತಿರುವ ಕಣಗಳ ಹಾಗೂ ರಶ್ಮಿಪ್ರಕಾಶದ ಅಧ್ಯಯನ ಇದರಲ್ಲಿ ಸೇರಿತ್ತು. ಈ ವಿಚಾರದಲ್ಲಿ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಪ್ರಮುಖವಾಗಿ ಅಮೆರಿಕ ಮತ್ತು ರಷ್ಯ ದೇಶಗಳು ಅನೇಕ ಪರೀಕ್ಷಾರ್ಥ ರಾಕೆಟ್ಟುಗಳನ್ನೂ ಕೃತಕ ಭೂ ಉಪಗ್ರಹಗಳನ್ನೂ ಕಳುಹಿಸಿ, ಗಮನಾರ್ಹ ಅಂಕಿ ಅಂಶಗಳನ್ನು ಸಂಗ್ರಹಿಸಿದುವು. 2. ಶಾಖ ಮತ್ತು ನೀರಿಗೆ ಸಂಬಂಧಿಸಿದಂತೆ ನಡೆದ ಕಾರ್ಯಕ್ರಮಗಳು : ಹವಾಮಾನಶಾಸ್ತ್ರ, ಸಾಗರಗಳ ವಿವರಣೆಗೆ ಸಂಬಂಧಿಸಿದ ಶಾಸ್ತ್ರ ಹಾಗೂ ನೀರ್ಗಲ್ಲು ನದಿಗಳಿಗೆ ಸಂಬಂಧಿಸಿದ ಶಾಸ್ತ್ರ ಇವುಗಳ ಅಧ್ಯಯನ ಇವುಗಳಲ್ಲಿ ಸೇರಿತ್ತು. 3. ಭೂರಚನೆ ಮತ್ತು ಅದರ ಒಳಭಾಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು : ಭೂಕಂಪಗಳಿಗೆ, ಗುರುತ್ವಕ್ಕೆ ಸಂಬಂಧಿಸಿದ ಹಾಗೂ ಅಕ್ಷಾಂಶ, ರೇಖಾಂಶಗಳಿಗೆ ಸಂಬಂಧಪಟ್ಟ ಅಧ್ಯಯನವನ್ನು ನಡೆಸಲಾಯಿತು. ಇವುಗಳ ಜೊತೆಗೆ ಜೀವಶಾಸ್ತ್ರಕ್ಕೆ ಸಂಬಂಧಪಟ್ಟ ಅಧ್ಯಯನ, ವಿವರಣಾತ್ಮಕ ವೈದ್ಯಶಾಸ್ತ್ರ ಮತ್ತು ಭೂಶಾಸ್ತ್ರಗಳಿಗೆ ಸಂಬಂಧಿಸಿದಂತೆ ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ಪ್ರದೇಶಗಳಲ್ಲಿ ಸಂಶೋಧನೆಗಳನ್ನು ನಡೆಸಲಾಯಿತು.

ಮೇಲಿನ ಮೊದಲೆರಡು ಯೋಜನೆಗಳಂತೆ ದೈನಂದಿನ ನಿಯಮಿತ ವೇಳೆಗಳಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ವೀಕ್ಷಣೆಗಳನ್ನು ಮಾಡಲಾಯಿತು. ಏಕೆಂದರೆ ದಿನದ ನಿಯಮಿತ ವೇಳೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ಸೂರ್ಯ ಬೆಳಗುವ ಹೊತ್ತಿನಲ್ಲೇ ಈ ಸಂಶೋಧನಾತ್ಮಕ ಅಧ್ಯಯನ ಮಾಡಲಾಯಿತು. ಅಲ್ಲದೆ ಈ ಅವಧಿಯನ್ನು ಸೂರ್ಯನಲ್ಲಿ ನಡೆಯುವ ಘಟನಾವಳಿಗಳಿಗೆ ಅನುಗುಣವಾಗಿರುವಂತೆ ಆಯ್ಕೆಮಾಡಿಕೊಳ್ಳಲಾಗಿತ್ತು. ಅಂದರೆ, ಸೂರ್ಯಮಂಡಲದ ಮೇಲಿನ ತೇಜೋಪ್ರವಾಹಗಳು ಮತ್ತು ಉನ್ನತಿಗಳಿಗೆ ಸಂಬಂಧಪಟ್ಟಂತಿರುವ ಗರಿಷ್ಠ ಸೌರಕಲೆಗಳ ಆವರ್ತದ (ಮ್ಯಾಕ್ಸಿಮಮ್ ಸನ್‌ಸ್ಪಾಟ್ ಸೈಕಲ್) ಕಾಲದಲ್ಲಿಯೇ ಈ ಅವಧಿಯನ್ನು ಆಯ್ಕೆಮಾಡಿಕೊಳ್ಳಲಾಯಿತು. ಸೂರ್ಯನ ಕಪ್ಪುಕಲೆಗಳಲ್ಲಿ ಕಂಡುಬರುವ ಏರುಪೇರುಗಳಿಗೆ ಅನುಗುಣವಾಗಿ ಸೂರ್ಯನಿಂದ ಹೊರಡುವ ತೇಜಾಣುಗಳ ಚಲನವಲನ, ಅಯೋನಾವರಣದಲ್ಲಿ ಆಗುವ ಬದಲಾವಣೆಗಳು, ವಿದ್ಯುದಯಸ್ಕಾಂತ ಕ್ಷೇತ್ರದಲ್ಲಿನ ಬದಲಾವಣೆ, ಭೂಕಾಂತ ಕ್ಷೇತ್ರದಲ್ಲಿನ ಬದಲಾವಣೆ ಹಾಗೂ ಭೂಮಿಯ ಮೇಲಿನ ನಿತ್ಯಜೀವನದಲ್ಲಿ ಆಗುವಂಥ ಪರಿಣಾಮಗಳ ಅಧ್ಯಯನ–ಇವುಗಳನ್ನು ನಡೆಸಲೋಸುಗವೇ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. ಅಂತಾರಾಷ್ಟ್ರೀಯ ಭೂಭೌತ ವರ್ಷದಲ್ಲಿ ನಡೆದ ಕಾರ್ಯಕ್ರಮಗಳ ವೆಚ್ಚ ಸುಮಾರು 50 ಕೋಟಿ ಪೌಂಡುಗಳಷ್ಟಿತ್ತು.

ಅಂತಾರಾಷ್ಟ್ರೀಯ ಭೂಭೌತ ವರ್ಷದ ಅವಧಿಯಲ್ಲಿ ನಡೆಸಿದ ಅಧ್ಯಯನ, ಸಂಶೋಧನೆಗಳ ಫಲವಾಗಿ ದೊರಕಿರುವ ಅಂಕಿಅಂಶಗಳು ವಿಜ್ಞಾನದ ಕ್ಷೇತ್ರದಲ್ಲಿ ಆಗಿರುವ ಗಮನಾರ್ಹ ಪ್ರಗತಿಗೆ ಕಾರಣವಾಗಿವೆ. ಈ ಅಂಕಿಅಂಶಗಳ ಸಲುವಾಗಿ ಹವಾಮಾನ ಹಾಗೂ ರೇಡಿಯೋ ಸಂಪರ್ಕದ ವಿಚಾರದಲ್ಲಿ ಇಂದು ಪ್ರಪಂಚದಲ್ಲಿ ಕಂಡುಬಂದಿರುವ ಸಾಧನೆಗಳು ಭೂಭಾಗದ ಹಾಗೂ ಇತರ ಧ್ರುವ ಪ್ರದೇಶಗಳ ಬಗ್ಗೆ ಹೆಚ್ಚು ಅರಿವನ್ನು ತಂದಿವೆ. ಉನ್ನತ ಮಟ್ಟದ ರೇಡಿಯೋ ಸಂಪರ್ಕಸಾಧನಗಳು ಬಳಕೆಗೆ ಬಂದಿರುವುದಲ್ಲದೆ, ಇತ್ತೀಚಿನ ಹವಾಮಾನ ಸಂಶೋಧನೆಯ ಕೃತಕ ಭೂಉಪಗ್ರಹಗಳ ಸಲುವಾಗಿ, ಯಾವುದೇ ಒಂದು ಪ್ರದೇಶದಲ್ಲಿ ಒಂದು ಗೊತ್ತಾದ ಅವಧಿಯಲ್ಲಿ ಹವಾಮಾನದ ಸ್ಥಿತಿಯನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಇವೆಲ್ಲವೂ ಅಂತಾರಾಷ್ಟ್ರೀಯ ಭೂಭೌತ ವರ್ಷದ ಅವಧಿಯಲ್ಲಿ ಗಳಿಸಿದ ಅಂಕಿ–ಅಂಶಗಳ ಹಾಗೂ ಅನಂತರದ ಪ್ರಗತಿಯ ಫಲವೇ ಆಗಿದೆ (**ನೋಡಿ– ಅಂತರಿಕ್ಷ ಸಂಶೋಧನೆ; ರಾಕೆಟ್; ಉಪಗ್ರಹ, ಕೃತಕ**). (ಎಂ.ಎಸ್.ಎಂ.)

**ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟ :** ಪ್ರಪಂಚದ ನಾನಾ ಭಾಗಗಳಲ್ಲಿ ನೆಲೆಸಿರುವ ಭೂಗೋಳಶಾಸ್ತ್ರಜ್ಞರಲ್ಲಿ ಸಂಪರ್ಕವನ್ನು ಬೆಳೆಸುವ ಮುಖ್ಯ ಗುರಿಯಿಂದ 1922ರಲ್ಲಿ ಆರಂಭವಾದ ಒಕ್ಕೂಟ. ಪ್ರಪಂಚಕ್ಕೆ ಅಥವಾ ಯಾವುದಾದರೂ ರಾಷ್ಟ್ರಕ್ಕೆ ಸಂಬಂಧಿಸಿದಂತೆ ಯಾವುದಾದರೊಂದು ನಿರ್ಧರಿಸಿದ ದೇಶದಲ್ಲಿ 4 ವರ್ಷಗಳಿಗೊಮ್ಮೆ ಒಟ್ಟಿಗೆ ಸೇರಿ ಭೌಗೋಳಿಕ ಸಮಸ್ಯೆಗಳನ್ನು ಚರ್ಚಿಸುತ್ತಾರೆ. ಅನಂತರ ಉಪಯುಕ್ತವಾದ ರೀತಿಯಲ್ಲಿ ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ತಿಳಿವಳಿಕೆಯನ್ನು ನೀಡುತ್ತಾರೆ. ಈ ಒಕ್ಕೂಟ ಕಾರ್ಯಕಾರಿ ಸಮಿತಿಯನ್ನು ಮತ್ತು ಕಚೇರಿಯನ್ನು ಹೊಂದಿದೆ. ನಾಲ್ಕು ವರ್ಷಗಳ ಅವಧಿಗೆ ಒಕ್ಕೂಟದಲ್ಲಿ ಸೇವೆಯನ್ನು ಸಲ್ಲಿಸಲು ನಾನಾ ರಾಷ್ಟ್ರಗಳಿಂದ ಭೂಗೋಳಶಾಸ್ತ್ರದಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಏಳು ಉಪಾಧ್ಯಕ್ಷರುಗಳನ್ನೂ ಹಾಗೂ ಒಬ್ಬ ಖಜಾಂಚಿ ಸಂಚಾಲಕನನ್ನೂ ನೇಮಿಸಲಾಗುವುದು. ಸುಮಾರು 50 ರಾಷ್ಟ್ರಗಳು ಇದರ ಸದಸ್ಯತ್ವವನ್ನು ಪಡೆದಿವೆ. ಸಂಸ್ಥೆಗೆ ಮಾರ್ಗದರ್ಶನವನ್ನು ಕೊಡಲು ಒಬ್ಬ ನಿರ್ದೇಶಕನನ್ನೂ ಐದು ಸದಸ್ಯರನ್ನೊಳಗೊಂಡಿರುವ ಒಂದು ಸಮಿತಿಯನ್ನೂ ನೇಮಕ ಮಾಡಲಾಗುವುದು.

ಇದು ಪ್ರಪಂಚಕ್ಕೆ ಸಂಬಂಧಿಸಿದ ಹಾಗೂ ರಾಷ್ಟ್ರೀಯ ಸಂಸ್ಥೆಗಳ ವಿಚಾರದಲ್ಲಿ ಒಕ್ಕೂಟಕ್ಕೆ ಅರಿವನ್ನುಂಟುಮಾಡುವುದು. ಏಷ್ಯ ಖಂಡದಲ್ಲಿ ಪ್ರಥಮ ಬಾರಿಗೆ ಭಾರತದಲ್ಲಿ 21ನೆಯ ಅಂತಾರಾಷ್ಟ್ರೀಯ ಭೌಗೋಳಿಕ ಕಾಂಗ್ರೆಸ್ಸಿನ ಅಧಿವೇಶನವನ್ನು 1968ನೆಯ ಇಸವಿಯ ಡಿಸೆಂಬರ್ ಮಾಹೆಯಲ್ಲಿ ನಡೆಸಲಾಯಿತು. (ಎಂ.ಎಸ್.ಎಂ.)

**ಅಂತಾರಾಷ್ಟ್ರೀಯ ರಾಜಕೀಯ :** ರಾಜಕೀಯವಾಗಿ ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ರಾಷ್ಟ್ರಗಳು ಇತರ ರಾಷ್ಟ್ರಗಳೊಡನೆ ಸಂಬಂಧವನ್ನು ಬೆಳೆಸುತ್ತವೆಯಷ್ಟೆ. ಅಂತಾರಾಷ್ಟ್ರೀಯ ಮಟ್ಟದಲ್ಲಿನ ಅಂಥ ಸಂಬಂಧಗಳ, ವಾದವಿವಾದಗಳ ಹಾಗೂ ಅವುಗಳ ಸೂಕ್ಷ್ಮ ಪರಿಹಾರಗಳ ವಿಚಾರಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ವ್ಯವಹಾರ ಅನೇಕ ರೀತಿಯದಾಗಿರಬಹುದು. ಉದಾಹರಣೆಗೆ–ಗಡಿಗಳ ಬಗ್ಗೆ ಅಥವಾ ಅವು ತಮಗೆ ಸೇರಿದ್ದೆಂದು ಹೇಳುವ ಪ್ರದೇಶಗಳ ಬಗ್ಗೆ ಅಥವಾ ಇತರ ರಾಷ್ಟ್ರಗಳು ತಮ್ಮ ಜನರನ್ನು ಆದರಿಸುವ ರೀತಿಗಳ ಬಗ್ಗೆ– ವ್ಯವಹರಿಸಬೇಕಾಗುತ್ತದೆ. ರಾಷ್ಟ್ರಗಳು ವ್ಯಾಪಾರದ ಮೇಲೆ ಹಣ ಹೂಡುತ್ತವೆ. ಅವುಗಳ ನಾಗರಿಕರು, ವಿದ್ಯಾರ್ಥಿಗಳು, ಉಪಾಧ್ಯಾಯರು, ಚಿತ್ರಗಾರರು, ಸಂಗೀತಗಾರರು ಮತ್ತು ಧರ್ಮಪ್ರಚಾರಕರು ಅಧ್ಯಯನಕ್ಕೆ, ಬೋಧಿಸುವುದಕ್ಕೆ, ಸಮಾವೇಶಗಳಲ್ಲಿ ಚರ್ಚಿಸುವ ಸುಲವಾಗಿ, ವಿದೇಶಕ್ಕೆ ಹೋಗುತ್ತಾರೆ. ಕೈಗಾರಿಕಾ ಕ್ರಾಂತಿ ಮತ್ತು ಸಾಗಾಣಿಕೆ ಹಾಗೂ ಸಂಪರ್ಕ ವ್ಯವಸ್ಥೆಯಲ್ಲಿ ಅಭಿವೃದ್ಧಿಯಾದಾಗಿನಿಂದ ವಿಶೇಷವಾಗಿ ಇಂಥ ಸಂಬಂಧಗಳ ಮಿತಿ ಮತ್ತು ತೀವ್ರತೆಯನ್ನು ವೃದ್ಧಿಪಡಿಸಿಕೊಳ್ಳುತ್ತ ಪ್ರಪಂಚದ ರಾಷ್ಟ್ರಗಳು ಒಂದಕ್ಕೊಂದು ಹತ್ತಿರ ಬಂದಿವೆ. ಸಾಧಾರಣವಾಗಿ ಇಂಥ ಸಂಬಂಧಗಳು ಮೈತ್ರಿಯುತವಾಗಿ ಹಾಗೂ ಶಾಂತಿಯುತವಾಗಿರುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಭಿನ್ನಾಭಿಪ್ರಾಯಗಳು ತಲೆದೋರುತ್ತವೆ; ರಾಷ್ಟ್ರಗಳ ಆವಶ್ಯಕತೆ ಹಾಗೂ ಸಾಮರ್ಥ್ಯಗಳು ಭಿನ್ನವಾಗಿರುವುದೇ ಇದಕ್ಕೆ ಕಾರಣ. ಆದರೂ ಈ ಸಂಬಂಧ ಯಾವಾಗಲೂ ಮತ್ತು ಎಲ್ಲೆಡೆಗಳಲ್ಲಿಯೂ ಸಮರಸವಾಗಿ ನಡೆದುಕೊಂಡು ಹೋಗುತ್ತದೆ ಎಂದು ಭಾವಿಸುವುದು ತಪ್ಪು. ವಾದವಿವಾದಗಳು ಹಾಗೂ ನಿರ್ಧಾರಗಳು, ಅನೇಕ ವಿಚಾರಗಳನ್ನು ಕ್ರಮಬದ್ಧಗೊಳಿಸಲು ಒಪ್ಪಂದಗಳು, ಯುದ್ಧಗಳು ಇದ್ದೇ ಇರುತ್ತವೆ.

ಅಂತಾರಾಷ್ಟ್ರೀಯ ರಾಜಕೀಯ 1. ರಾಷ್ಟ್ರಗಳ ನಡುವೆ ಇರುವ ಚಾರಿತ್ರಿಕ ಹಾಗೂ ಸಮಕಾಲೀನ ಸಂಬಂಧಗಳನ್ನು ಯಾವ ಆಧಾರದ ಮೇಲೆ ನಡೆಸಿಕೊಂಡು ಹೋಗಬಹುದು ಎಂಬುದನ್ನು ವಿಶ್ಲೇಷಿಸಲು. 2. ಬಿಕ್ಕಟ್ಟನ್ನು ಯಾವ ಆಧಾರದ ಮೇಲೆ ತಡೆಹಿಡಿಯಬಹುದು ಅಥವಾ ಬಗೆಹರಿಸಬಹುದು ಮತ್ತು ಯಾವ ಆಧಾರದ ಮೇಲೆ ಅಂತಾರಾಷ್ಟ್ರೀಯ ಶಾಂತಿ ಮತ್ತು ಪುರೋಭಿವೃದ್ಧಿಯನ್ನು ಉತ್ತಮಪಡಿಸಲು ಬೇಕಾದ ಸಹಕಾರಕ್ಕೆ ಒಂದು ರಚನಾತ್ಮಕ ರೀತಿಯನ್ನು ಕಂಡುಹಿಡಿಯಬಹುದು ಎಂಬ ವಿಷಯಗಳಿಗೆ ಗಮನಕೊಡುತ್ತದೆ.

ವ್ಯಾಪಕದೃಷ್ಟಿಯಿಂದ ನೋಡಿದರೆ, ಅಂತಾರಾಷ್ಟ್ರೀಯ ರಾಜಕೀಯ ಮೂರು ಅಂಶಗಳನ್ನು ಒಳಗೊಂಡಿದೆ : ಅಂತಾರಾಷ್ಟ್ರೀಯ ರಾಜಕೀಯ ತತ್ತ್ವ; ರಾಯಭಾರ ನಿರ್ವಹಣೆಯ ಇತಿಹಾಸ; ಮತ್ತು ಅಂತಾರಾಷ್ಟ್ರೀಯ ವ್ಯವಹಾರಕ್ರಮ.

ಸಾರ್ವಭೌಮತ್ವವನ್ನು ಹಾಗೂ ಸಮಾನ ಹಕ್ಕನ್ನು ಬಯಸುವ ರಾಷ್ಟ್ರಗಳಿದ್ದು, ವಿಶ್ವಸರ್ಕಾರ ಇಲ್ಲದಿರುವಾಗ, ಅಂತಾರಾಷ್ಟ್ರೀಯ ರಾಜಕೀಯವೆನ್ನುವುದು ಸಹಜವಾಗಿ ಅಧಿಕಾರದ ಹೋರಾಟವೇ ಹೊರತು ಬೇರೆ ಅಲ್ಲ. ಪ್ರತಿಯೊಂದು ರಾಷ್ಟ್ರವೂ ತನ್ನ ರಾಜಕೀಯ ಭದ್ರತೆಯ ವಿಷಯವಾಗಿ ಆಸ್ಥೆ ಹೊಂದಿರುತ್ತದೆ. ಅಲ್ಲದೆ ತನ್ನ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲೇ ಆಸಕ್ತಿ ತಳೆದಿರುತ್ತದೆ. ಮುಖ್ಯವಾಗಿ ಪ್ರಭುತ್ವ ಎಂದರೆ ಒಂದು ರಾಷ್ಟ್ರ ಇತರ ರಾಷ್ಟ್ರಗಳನ್ನು ತನ್ನ ಹಿತಸಾಧನೆಗೆ ಅನುಕೂಲವಾಗುವ ರೀತಿಯಲ್ಲಿ ನಡೆಯುವಂತೆ ಮಾಡುವ ಸಾಮರ್ಥ್ಯ. ಈ ಪ್ರಭುತ್ವ, ಕೇವಲ ಪಶುಬಲದ ಮೇಲೆ ನಿಂತಿರಬಹುದು; ಪರಂಪರಾಗತ ಆಚಾರವಿಚಾರಗಳ ಪ್ರಭಾವದಿಂದ ಬಂದಿರಬಹುದು; ಕಮ್ಯೂನಿಸಂ, ನಾಸಿಸಂಗಳಂಥ ಭಾವನಾ ಸಮುಚ್ಚಯಗಳ ನ್ನವಲಂಬಿಸಿರುವ ಕ್ರಾಂತಿಕಾರಕಶಕ್ತಿಯಾಗಿರಬಹುದು; ಆರ್ಥಿಕ ಸಂಪನ್ಮೂಲಗಳು, ಅವುಗಳ ವಿವೇಚನಾಯುತ ಬಳಕೆ–ಇವುಗಳಿಂದ ಬಂದಿರಬಹುದು; ಅಥವಾ ಸಂಪ್ರದಾಯದ ಮಾನ್ಯತೆ ಪಡೆದು ಜನಾಭಿಪ್ರಾಯದ ಮೇಲೂ ಹತೋಟಿ ಪಡೆದಿರುವ ಅಧಿಕಾರವಾಗಿರಬಹುದು. 1945ರಿಂದೀಚೆಗೆ ಬೆಳೆದಿರುವ ಔದ್ಯೋಗಿಕ ವಿಜ್ಞಾನದ ಸಹಾಯದಿಂದ, ವಿಶೇಷವಾಗಿ ಅಣುಶಕ್ತಿ ಪ್ರಯೋಗದಿಂದ, ಅಗಾಧಕಾರ್ಯಸಮರ್ಥತೆ ಪಡೆದಿರುವ ಸೈನ್ಯಬಲ, ನೌಕಾಬಲ, ವಾಯುಬಲಗಳು ಈ ಪ್ರಭುತ್ವಕ್ಕೆ ಆಧಾರ. ಅಂತಾರಾಷ್ಟ್ರೀಯ ರಾಜಕೀಯದ ತತ್ತ್ವಗಳ, ಅಧಿಕಾರದ ಮೂಲಗಳನ್ನು ವೈಜ್ಞಾನಿಕ ರೀತಿಯಲ್ಲಿ ಒಳಹೊಕ್ಕು ನೋಡಬೇಕಾಗಿರುವುದಲ್ಲದೆ ಅಂತಾರಾಷ್ಟ್ರೀಯ ನಿಯಮ, ವಿಶ್ವದ ಸಾರ್ವಜನಿಕ ಅಭಿಪ್ರಾಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆ ಇಂಥ ಅಂಶಗಳಿಂದ ಒದಗಿರುವ ಅಧಿಕಾರದ ಮೇಲಿನ ಇತಿಮಿತಿಗಳನ್ನೂ ಅದು ಶೋಧಿಸಬೇಕಾಗುತ್ತದೆ. ಸಾಮರಸ್ಯ ಹಾಗೂ ಶಾಂತಿಯನ್ನು ತರುವ ಮತ್ತು ವೈಮನಸ್ಯ ಮತ್ತು ಯುದ್ಧವನ್ನು ತಡೆಗಟ್ಟುವ ರೀತಿನೀತಿಗಳನ್ನು ರೂಪಿಸುವುದೇ ಇದರ ಉದ್ದೇಶ.

ರಾಯಭಾರನಿರ್ವಹಣೆಯ ಚರಿತ್ರೆಯೆನ್ನುವುದು ಶತಮಾನಗಳಿಂದಲೂ ರಾಷ್ಟ್ರ ರಾಷ್ಟ್ರಗಳ ಮಧ್ಯೆ ಇರುವ ಸಂಬಂಧಗಳ ಅಧ್ಯಯನವಾಗಿರುವುದಲ್ಲದೆ; 1. ರಾಯಭಾರಿ ಹಾಗೂ ವಿದೇಶೀಯರ ಬಗ್ಗೆ ವರ್ತನೆ, ಸುಂಕಗಳ ಬಳಕೆ, ಯುದ್ಧದ ಕ್ರಮ, ನಿಶ್ಶಸ್ತ್ರೀಕರಣ ಇತ್ಯಾದಿ ವಿಷಯಗಳಿಗೆ ಒಂದು ನಿಯಮಾವಳಿಯನ್ನು ರಚಿಸಿ ಚರ್ಚಿಸಲು ಅಂತಾರಾಷ್ಟ್ರೀಯ ಸಮಾವೇಶಗಳ ಒಂದು ಚರಿತ್ರೆ; 2. ಯುದ್ಧದ ಕಾರಣಗಳು ಹಾಗೂ ಅವುಗಳನ್ನು ತಡೆಗಟ್ಟುವ ಶಾಂತಿ ನಿಬಂಧನೆಗಳು, ಮತ್ತು 3. ರಾಷ್ಟ್ರಗಳ ಭದ್ರತೆ ಹಾಗೂ ಅಂತಾರಾಷ್ಟ್ರೀಯ ಶಾಂತಿಯನ್ನು ಶಾಶ್ವತವಾಗಿ ಉಳಿಸಲು ಬೇಕಾದ ಪ್ರಯತ್ನಗಳು–ಇಂಥ ವಿಷಯಗಳ ಅಧ್ಯಯನ ಕೂಡ ಆಗಿದೆ.

ಅಂತಾರಾಷ್ಟ್ರೀಯಸಂಸ್ಥೆಗಳು ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹೀಗೆ ನಾನಾ ತೆರನಾಗಿವೆ. 1. ವಿಶ್ವಸಂಸ್ಥೆ 2. ಅಂತಾರಾಷ್ಟ್ರೀಯ ಕೆಲಸಗಾರರ ಸಂಸ್ಥೆ ಮತ್ತು 3. ವಿಶ್ವಸಂಸ್ಥೆಯ ಶಿಕ್ಷಣ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ವಿಭಾಗ, ಇವು ಮೂರು ಮುಖ್ಯ ವಿಭಾಗಗಳು. ಹೀಗೆ ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳಿರುವುದರಿಂದಲೇ ಇಂದಿನ ಬಹುಮುಖವಾದ ಅಂತಾರಾಷ್ಟ್ರೀಯ ರಾಯಭಾರತಂತ್ರ ಕೌಶಲಗಳ ಹಾಗೂ ಚತುರರೂ ಸಮರ್ಥರೂ ಆದ ರಾಯಭಾರಿಗಳ ಅಗತ್ಯತೆಯ ಪ್ರಾಶಸ್ತ್ಯ ಹೆಚ್ಚುತ್ತಲಿದೆ. ಆದ್ದರಿಂದ, ಹೊರದೇಶಗಳಲ್ಲಿ ರಾಯಭಾರಿಗಳ ನೇಮಕ, ಅಂತಾರಾಷ್ಟ್ರೀಯ ವ್ಯವಹಾರ ನಿರ್ವಹಣೆಗೆ ಆವಶ್ಯಕವಾದ ಶಿಕ್ಷಣವನ್ನು ಅವರಿಗೆ ಕೊಡುವ ಏರ್ಪಾಡುಗಳು, ಅವರು ಹೊಂದಿರಬೇಕಾದ ವಿನಾಯಿತಿಗಳು ಮತ್ತು ವಿಶೇಷಾಧಿಕಾರ ಸೌಕರ್ಯಗಳು, ಇವೆಲ್ಲ ಹೊರದೇಶ ವ್ಯವಹಾರದ ಮುಖ್ಯ ಅಂಶಗಳಾಗುತ್ತವೆ. ರಾಷ್ಟ್ರಗಳ ನಡುವೆ ಇರುವ ದ್ವಿಮುಖ ಮಾತುಕತೆಗಳು ಈಚಿನ ವಿವಿಧಮುಖರಾಯಭಾರ ವ್ಯವಹಾರಗಳಿಂದಾಗಿ ತನ್ನ ಆವಶ್ಯಕತೆ ಅಥವಾ ಮಹತ್ವವನ್ನು ಕಳೆದುಕೊಂಡಿಲ್ಲ ಎಂಬುದನ್ನು ಗಮನಿಸಬೇಕು.

ಇತ್ತೀಚೆಗೆ ರಚಿತವಾದ ಯುರೋಪಿನ ಆರ್ಥಿಕ ಸಮುದಾಯ (ಯುರೋಪಿಯನ್ ಎಕನಾಮಿಕ್ ಕಮ್ಯೂನಿಟಿ), ಯುರೋಪಿನ ಸಲಹಾ ಮಂಡಳಿ (ಕೌನ್ಸಿಲ್ ಆಫ್ ಯುರೋಪ್) ಮುಂತಾದ ಸಂಸ್ಥೆಗಳ ವಿಷಯವಾಗಿ ಪ್ರಸ್ತಾಪಿಸುವುದು ಆವಶ್ಯಕ. ಕೆಲವು ನಿರ್ದಿಷ್ಟ ವಿಷಯಗಳಿಗಾಗಿ ರಚಿಸಲ್ಪಟ್ಟ, ಪರಸ್ಪರ ಸಹಾಯಕ ರಾಷ್ಟ್ರಸಂಘಗಳಿವು; ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಯಾವುದೊಂದು ರಾಷ್ಟ್ರವೂ ಹೆಚ್ಚು ಪ್ರಭಾವ ಹೊಂದುವುದಕ್ಕೆ ಇಲ್ಲಿ ಆಸ್ಪದ ಕಡಿಮೆ. ಇದೇ ಸಂದರ್ಭದಲ್ಲಿ, ಅನೇಕ ತಜ್ಞರ ಆಲೋಚನೆಯಲ್ಲಿರುವ ವಿಶ್ವ ಸರ್ಕಾರಸ್ಥಾಪನೆಯ ವಿಷಯವನ್ನು ಉಲ್ಲೇಖಿಸುವುದೂ ಯುಕ್ತ; ಅದಂತೂ ರಾಷ್ಟ್ರಾತೀತವಾದ ಅಧಿಕಾರವನ್ನು ಹೊಂದಿರುತ್ತದೆ. ಸ್ವತಂತ್ರರಾಷ್ಟ್ರವ್ಯವಸ್ಥೆ ಅಂತಿಮ ರಾಜಕೀಯ ಸಂಸ್ಥೆಯಂತೂ ಅಲ್ಲ; ವ್ಯವಸ್ಥಿತ ವಿಶ್ವಸಂಸ್ಥೆಯೊಂದರ ನಿರ್ಮಾಣದ ಮಾರ್ಗದಲ್ಲಿ ಒಂದು ಮೈಲಿಗಲ್ಲು ಮಾತ್ರ. ನಮ್ಮ ಅನುಭವದಿಂದಲೇ ಈ ಅಭಿಪ್ರಾಯಕ್ಕೆ ಸಮರ್ಥನೆ ದೊರಕುತ್ತದೆ; ಹೊರವೈರಿಗಳಿಂದ ಅಪಾಯ ಸಂಭವಿಸಿದಾಗ ಅಥವಾ ಅಂತಾರಾಷ್ಟ್ರೀಯ ಸಹಾಯ ಅಗತ್ಯವಾದಾಗ ಕೆಲವು ರಾಷ್ಟ್ರಗಳು ತಮ್ಮ ಸಾರ್ವಭೌಮತ್ವವನ್ನು ಇಚ್ಛೆಯಿಂದ ಬಿಟ್ಟುಕೊಟ್ಟ ಸಂಧರ್ಭಗಳನ್ನು ಇತಿಹಾಸದಲ್ಲಿ ಕಾಣುತ್ತೇವೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳು ಸ್ವಿಟ್ಜರ್ಲೆಂಡ್ ಮುಂತಾದ ದೇಶಗಳಲ್ಲಿ ಕಾಣುವ ಸಂಯುಕ್ತರಾಜ್ಯ ವ್ಯವಸ್ಥೆ ಇದಕ್ಕೆ ನಿದರ್ಶನ. ಇಷ್ಟಾದರೂ ಅಂತಾರಾಷ್ಟ್ರೀಯ ರಾಜಕೀಯ ವ್ಯವಹಾರದಲ್ಲಿ ರಾಷ್ಟ್ರಬಲಕ್ಕೇ ಪ್ರಾಧಾನ್ಯ; ಆದರೆ ಇಂದಿನ ಅಣುಶಕ್ತಿಯುಗದಲ್ಲಿ ರಾಷ್ಟ್ರಗಳ ಸಮಾನಬಲದ ಪ್ರಶ್ನೆ ಮಾಯವಾಗಿದೆ. ವಿನ್‌ಸ್ಟನ್ ಚರ್ಚಿಲ್ ಹೇಳಿದಂತೆ ಸಮಾನ ಭೀಕರತೆಯ (ಬ್ಯಾಲೆನ್ಸ್ ಆಫ್ ಟೆರರ್) ಭೂತ ತಲೆಯೆತ್ತಿ ನಿಂತಿದೆ; ಮಾನವಕುಲವೇ ನಾಶವಾದೀತೆಂಬ ಭೀತಿ, ಅದನ್ನು ನಿವಾರಿಸಿ, ಬದುಕಿ ಬಾಳಬೇಕೆಂಬ ಉತ್ಕಟಾಕಾಂಕ್ಷೆ–ಇವು, ರಾಷ್ಟ್ರೀಯ ರಾಜಕೀಯ ಹೋಗಿ ಅಂತಾರಾಷ್ಟ್ರೀಯ ರಾಜಕೀಯ ಸ್ಥಾಪನೆಯಾದರೆ ಸಾಲದು, ಅದೂ ಹೋಗಿ ವಿಶ್ವ ರಾಜಕೀಯ ಬಂದಲ್ಲಿ ಮಾನವಕುಲದ ಬದುಕು ಸುಗಮವಾದೀತು ಎಂಬ ಅಂಶವನ್ನು ಪ್ರಾಜ್ಞರು ಆಲೋಚಿಸುವಂತೆ ಮಾಡಿವೆ. (ಎ.ಎ.)

**ಅಂತಾರಾಷ್ಟ್ರೀಯ ವಿಚಾರಸಂಸ್ಥೆ :** ಪ್ಯಾರಿಸ್ಸಿನಲ್ಲಿ 1919ರಲ್ಲಿ ನಡೆದ ಶಾಂತಿ ಸಮ್ಮೇಳನದಲ್ಲಿ ನೆರೆದಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ಪ್ರತಿನಿಧಿಗಳಲ್ಲಿ ಮಾತುಕತೆ ನಡೆದು ಅದರ ಪರಿಣಾಮವಾಗಿ 20 ಜುಲೈ 1920ರಲ್ಲಿ ಬ್ರಿಟಿಷ್ ರಾಷ್ಟ್ರೀಯ ಸಂಸ್ಥೆ ಲಂಡನ್ನಿನಲ್ಲಿ ಉದಯಿಸಿತು. ಇದಕ್ಕೆ 16 ಜುಲೈ 1926ರಲ್ಲಿ ಬ್ರಿಟಿಷ್ ರಾಜರ ಮನ್ನಣೆ ದೊರೆತು ಅವರು ಅನುಗ್ರಹಿಸಿದ ಸನ್ನದಿಗೆ ಅನುಗುಣವಾಗಿ ಕಾರ್ಯಕಲಾಪಗಳು ಆರಂಭವಾದುವು. ಅಂದಿನಿಂದ ಇದರ ಹೆಸರು ರಾಯಲ್ ಅಂತಾರಾಷ್ಟ್ರೀಯ ವಿಚಾರಸಂಸ್ಥೆ (ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಅಫೇರ್ಸ್) ಎಂದಾಯಿತು. ಈಗ ಇದು ಛಾಥಮ್ ಸದನ ಎಂದು ಕರೆಯಲ್ಪಡುತ್ತಿದೆ. ಇದರ ಧ್ಯೇಯ ಅಂತಾರಾಷ್ಟ್ರೀಯ ವ್ಯವಹಾರಗಳನ್ನು ರಾಜಕೀಯ, ಆರ್ಥಿಕ, ಹಾಗೂ ಸಾಮಾಜಿಕ ಮೊದಲಾದ ದೃಷ್ಟಿಗಳಿಂದ ನಿಷ್ಪಕ್ಷಪಾತವಾಗಿ ಸಮದೃಷ್ಟಿಯಿಂದ ಪರಿಶೀಲಿಸುವುದು. ಇದಕ್ಕೆ ಸರ್ಕಾರದ ಅಥವಾ ಯಾವ ರಾಜಕೀಯ ಪಕ್ಷದ ಸೋಂಕೂ ಇಲ್ಲ. ಸನ್ನದಿನ ನಿಯಮಗಳ ಪ್ರಕಾರ ಸಂಸ್ಥೆ ಯಾವ ಅಂತಾರಾಷ್ಟ್ರೀಯ ವಿಚಾರದಲ್ಲೂ ತನ್ನ ಅಭಿಪ್ರಾಯ ಕೊಡಬಾರದು; ಇದರ ಚರ್ಚಾಗೋಷ್ಠಿಗಳಲ್ಲೂ ಪ್ರಕಾಶನಗಳಲ್ಲೂ ವ್ಯಕ್ತವಾದ ಅಭಿಪ್ರಾಯಗಳು ಸದಸ್ಯರ ವೈಯಕ್ತಿಕ ಅಭಿಪ್ರಾಯಗಳು. ಬ್ರಿಟನ್ನಿನ ರಾಜನೀತಿಜ್ಞರಲ್ಲಿ

ಪ್ರಮುಖರಾದವರೇ ಇದರ ಅಧ್ಯಕ್ಷರು–ವೈಕೌಂಟ್ ಸೆಸಿಲ್, ವಿನ್ಸ್ಟನ್ ಚರ್ಚಿಲ್, ಮೇಜರ್ ಅಟ್ಲೀ ಮೊದಲಾದವರು. ಬ್ರಿಟನ್ನಿನ ಪ್ರಧಾನಮಂತ್ರಿ ಅಧಿಕಾರದ ಕಾರಣದಿಂದಾಗಿ ನೇಮಕಗೊಂಡ ಉಪಾಧ್ಯಕ್ಷ. ಇದರ ಆಶ್ರಿತ ಸಂಸ್ಥೆಗಳು ಕೆನಡ, ಆಸ್ಟ್ರೇಲಿಯ ಮತ್ತು ಪಾಕಿಸ್ತಾನಗಳಲ್ಲಿವೆ. ಸಂಸ್ಥೆಯ ಸದಸ್ಯತ್ವ ಕೇವಲ ಆಮಂತ್ರಣಗಳ ಮೂಲಕ. ಆದ್ದರಿಂದ ಇದಕ್ಕೆ ವಿದ್ವಾಂಸರಲ್ಲಿ ಅಧಿಕ ಮನ್ನಣೆ, ಪುರಸ್ಕಾರ. ಸದಸ್ಯರ ಸಂಖ್ಯೆ ಸು. 3,000. ಪುಸ್ತಕಾಲಯದಲ್ಲಿ 10 ಲಕ್ಷಕ್ಕೆ ಮೀರಿ ಗ್ರಂಥಗಳಿವೆ. ಮುಖ್ಯ ನಿಯತಕಾಲಿಕ ಪ್ರಕಾಶನಗಳು–ಸರ್ವೆ ಆಫ್ ಇಂಟರ್ನ್ಯಾಷನಲ್ ಅಫೇರ್ಸ್ (ವಾರ್ಷಿಕ); ಬ್ರಿಟಿಷ್ ಬುಕ್ ಆಫ್ ಇಂಟರ್ನ್ಯಾಷನಲ್ ಲಾ (ವಾರ್ಷಿಕ); ಇಂಟರ್ನ್ಯಾಷನಲ್ ಅಫೇರ್ಸ್ (ತ್ರೈಮಾಸಿಕ); ದಿ ವರ್ಲ್ಡ್ ಟುಡೇ (ಮಾಸಿಕ). ಇವಲ್ಲದೆ ಹಲವಾರು ಇತರ ಉತ್ತಮ ಪ್ರಕಾಶನಗಳೂ ಉಂಟು. (ಎಸ್.ಎ.ಡಿ.)

**ಅಂತಾರಾಷ್ಟ್ರೀಯ ವ್ಯಾಪಾರ :** ಸರಕು, ಸೇವೆಗಳನ್ನು ಇತರ ಸರಕು, ಸೇವೆಗಳಿಗೆ ವಿನಿಮಯ ಮಾಡುವುದೂ ಬೆಲೆಗೆ ಇವುಗಳನ್ನು ಮಾರುವುದೂ ಕೊಳ್ಳುವುದೂ ವ್ಯಾಪಾರವೆನ್ನಿಸುವುದು. ಬೇರೆ ಬೇರೆ ರಾಷ್ಟ್ರಗಳ ಜನ, ಸರ್ಕಾರ ಅಥವಾ ಸಂಸ್ಥೆಗಳೊಡನೆ ನಡೆಯುವ ಇಂಥ ವ್ಯವಹಾರಗಳು ಅಂತಾರಾಷ್ಟ್ರೀಯ ವ್ಯಾಪಾರವಾಗುವುದು. ಅಂದಮೇಲೆ ಪ್ರಪಂಚದಲ್ಲಿ ಇರುವ ಪ್ರತ್ಯೇಕ ರಾಷ್ಟ್ರಗಳು ಅವುಗಳೊಳಗೆ ಪರಸ್ಪರವಾಗಿ ನಡೆಸುವ ಮಾರುವ ಹಾಗೂ ಕೊಳ್ಳುವ ವ್ಯವಹಾರಗಳ ಮೊತ್ತವೇ ಪ್ರಪಂಚದ ಅಂತಾರಾಷ್ಟ್ರೀಯ ವ್ಯಾಪಾರದ ಒಟ್ಟು ಮೊತ್ತವಾಗುವುದು. ವ್ಯವಹರಿಸುವ ರಾಷ್ಟ್ರ ಸ್ವತಂತ್ರ ರಾಷ್ಟ್ರವೇ ಅಧೀನ ರಾಷ್ಟ್ರವೇ ಅಥವಾ ವಸಾಹತು ರಾಷ್ಟ್ರವೇ ಎಂಬ ಪ್ರಶ್ನೆ ಅಪ್ರಕೃತ. ರಾಜಕೀಯ ಸ್ವಾತಂತ್ರ್ಯಕ್ಕೆ ಮುನ್ನ ಭಾರತ ಮತ್ತು ಇತರ ಅಧೀನ ರಾಷ್ಟ್ರಗಳು ಇತರ ರಾಷ್ಟ್ರಗಳೊಡನೆ ನಡೆಸುತ್ತಿದ್ದ ವ್ಯಾಪಾರವೆಲ್ಲವೂ ಅಂತಾರಾಷ್ಟ್ರೀಯ ವ್ಯಾಪಾರವೆಂದೇ ಪರಗಣಿಸಲ್ಪಟ್ಟಿದ್ದಿತು. ಆದರೆ ರಾಷ್ಟ್ರದ ರಾಜಕೀಯ ಎಲ್ಲೆ ಬದಲಾವಣೆಯಿಂದ ಒಳ ದೇಶದ ವ್ಯಾಪಾರ ಅಂತಾರಾಷ್ಟ್ರೀಯ ವ್ಯಾಪಾರವಾಗಬಹುದು. ಮಾಯನ್ಮಾರ್ ಮತ್ತು ಪಾಕಿಸ್ತಾನಗಳು ಪ್ರತ್ಯೇಕ ರಾಷ್ಟ್ರಗಳಾಗಿ ಹುಟ್ಟುವ ಮುನ್ನ ಈ ಭಾಗಗಳು ಮತ್ತು ಇಂದಿನ ಭಾರತ ಇವುಗಳೊಳಗೆ ನಡೆಯುತ್ತಿದ್ದ ವ್ಯಾಪಾರ ಒಳದೇಶ ವ್ಯಾಪಾರವಾಗಿದ್ದು ಅವು ಪ್ರತ್ಯೇಕ ರಾಷ್ಟ್ರಗಳಾದ ಮೇಲೆ ಈ ಭೌಗೋಳಿಕ ಭಾಗಗಳ ಪರಸ್ಪರ ವ್ಯಾಪಾರವು ಅಂತಾರಾಷ್ಟ್ರೀಯ ವ್ಯಾಪಾರವಾಗಿ ಪರಗಣಿಸಲ್ಪಟ್ಟಿದೆ. ರಾಷ್ಟ್ರಗಳ ಎಲ್ಲೆಗಳು ಬದಲಾಯಿಸಿರುವುದರಿಂದ ವ್ಯಾಪಾರದ ಲಕ್ಷಣ ಹೀಗೆ ಬದಲಾಯಿಸಿರುವುದಕ್ಕೆ ಪ್ರಪಂಚದ ಇತಿಹಾಸದಲ್ಲಿ ಅನೇಕ ನಿದರ್ಶನಗಳಿವೆ.

ಅಂತಾರಾಷ್ಟ್ರೀಯ ವ್ಯಾಪಾರ ಈಚೆಗೆ ಹುಟ್ಟಿದುದೇನೂ ಅಲ್ಲ; ಪುರಾತನ ಕಾಲದಲ್ಲಿಯೂ ದೇಶದೇಶಗಳ ವ್ಯಾಪಾರಸಂಬಂಧಗಳು ಇದ್ದುದನ್ನು ಇತಿಹಾಸ ತಿಳಿಸುತ್ತದೆ. ಆದರೆ, ಅಂತಾರಾಷ್ಟ್ರೀಯ ವ್ಯಾಪಾರದ ತೀವ್ರ ಬೆಳವಣಿಗೆ ಕೈಗಾರಿಕಾ ಕ್ರಾಂತಿ ಕಾಲದಿಂದ ಈಚೆಗೆ ಸಂಭವಿಸಿರುವ ಮುಖ್ಯ ಘಟನೆ. ಯಂತ್ರ, ಹಬೆಶಕ್ತಿ, ವಿದ್ಯುಚ್ಛಕ್ತಿ ಮತ್ತು ಇತರ ವೈಜ್ಞಾನಿಕ ಕಾರ್ಯವಿಧಾನಗಳ ಪ್ರಯೋಗ ಮೊದಲು ಇಂಗ್ಲೆಂಡ್ ತರುವಾಯ ಕೆಲವು ಐರೋಪ್ಯ ರಾಷ್ಟ್ರಗಳು, ಅಮೆರಿಕ, ಜಪಾನ್, ಸೋವಿಯತ್ ರಷ್ಯ ರಾಷ್ಟ್ರಗಳಲ್ಲಿ ವಿಸ್ತರಿಸಿದಂತೆ ಪ್ರಪಂಚದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರವೂ ಹೆಚ್ಚು ವೈವಿಧ್ಯ ತಾಳಿ ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತ ಬಂದಿತು. ಈ ಬೆಳವಣಿಗೆಗೆ ತಕ್ಕಂತೆ ವ್ಯವಸ್ಥಾಕ್ರಮಗಳಲ್ಲಿ ಮತ್ತು ರೀತಿನೀತಿಗಳಲ್ಲಿ ಬದಲಾವಣೆಗಳಾಗುತ್ತ ಬಂದಿವೆ. ಇಂದಿನ ಪ್ರಪಂಚದಲ್ಲಿ ಅನೇಕ ಹಿಂದುಳಿದ ರಾಷ್ಟ್ರಗಳು ಶೀಘ್ರ ಆರ್ಥಿಕಾಭಿವೃದ್ಧಿಗೆ ಹವಣಿಸುತ್ತಿರುವುದರಿಂದಲೂ ಮುಂದುವರಿದಿರುವ ರಾಷ್ಟ್ರಗಳ ರಾಷ್ಟ್ರೀಯ ಉತ್ಪಾದನೆ ಉನ್ನತಮಟ್ಟಗಳನ್ನು ತಲುಪಿರುವುದರಿಂದಲೂ ಅಂತಾರಾಷ್ಟ್ರೀಯ ವ್ಯಾಪಾರದ ಪ್ರಾಮುಖ್ಯ ಹೆಚ್ಚಿರುವುದೇ ಅಲ್ಲದೆ ಅದು ಹೊಸ ಸ್ವರೂಪವನ್ನೂ ತಾಳುತ್ತಿದೆ. ಇದರಿಂದ ಹೊಸ ಸಮಸ್ಯೆಗಳೂ ಉದ್ಭವಿಸುತ್ತಿವೆ. ಒಟ್ಟಿನಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ಪ್ರಪಂಚದ ಆರ್ಥಿಕಾಭಿವೃದ್ಧಿಯ ಒಂದು ಮುಖವಾಗಿದೆ; ಅಲ್ಲದೆ ಆಧುನಿಕ ನಾಗರಿಕತೆಯ ತಳಹದಿಯ ಒಂದು ಮುಖ್ಯ ಭಾಗವೂ ಆಗಿದೆ.

ಪ್ರಪಂಚದಲ್ಲಿ ಶ್ರಮದ ಹಂಚಿಕೆ (ಡಿವಿಷನ್ ಆಫ್ ಲೇಬರ್) ತತ್ತ್ವದ ಅನುಸರಣೆಯ ಮುನ್ನಡೆಯನ್ನು ಅಂತಾರಾಷ್ಟ್ರೀಯ ವ್ಯಾಪಾರ ಸೂಚಿಸುವುದು. ಪ್ರತಿ ರಾಷ್ಟ್ರವೂ ಅದರ ಪ್ರಾಕೃತಿಕ ಹಾಗೂ ಇತರ ಸಾಧನಗಳ ಬಲಕ್ಕೆ ಅನುಸಾರವಾಗಿ ಆರ್ಥಿಕ ಉತ್ಪನ್ನವನ್ನು ರೂಢಿಸಿ ಅನೇಕ ಮಾರ್ಗಗಳಲ್ಲಿ ವೈಶಿಷ್ಟ್ಯಗಳಿಸಿಕೊಂಡು ಈ ಸರಕುಗಳ ಸ್ವದೇಶದ ಬೇಡಿಕೆ ಪೂರೈಸುವುದೇ ಅಲ್ಲದೆ ಇತರ ರಾಷ್ಟ್ರಗಳ ಬೇಡಿಕೆಗಳನ್ನೂ ಪೂರೈಸುವಂತಾದಾಗ ವಿವಿಧ ರಾಷ್ಟ್ರಗಳ ಪರಸ್ಪರ ಅವಲಂಬನೆ ಹೆಚ್ಚಿದಂತೆ ಆಗುವುದಲ್ಲದೆ ಒಟ್ಟಿನಲ್ಲಿ ಶ್ರಮ ಹಂಚಿಕೆಯ ಪ್ರಯೋಗದ ವಿಶೇಷ ಫಲ ಪ್ರಪಂಚಕ್ಕೆ ಲಭಿಸುವಂತಾಗುತ್ತದೆ. ಆದುದರಿಂದಲೇ ವಿಶ್ವವ್ಯಾಪಾರಕ್ಕೆ ಹೆಚ್ಚಿನ ಪ್ರಾಮುಖ್ಯ ಸಲ್ಲುವುದು.

ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ಅರ್ಥಶಾಸ್ತ್ರದ ಒಂದು ಪ್ರತ್ಯೇಕ ವಿಭಾಗವಾಗಿ ಪರಿಗಣಿಸಲ್ಪಟ್ಟಿದೆ. ದೇಶದೊಳಗೆ ನಡೆಯುವ ವ್ಯಾಪಾರ ಹಾಗೂ ಇದಕ್ಕೆ ಸಂಬಂಧಪಟ್ಟ ಉತ್ಪನ್ನ, ಸಾರಿಗೆ, ವಿನಿಮಯ, ಹಣವ್ಯವಸ್ಥೆ–ಇವುಗಳಿಗೆ ಅನ್ವಯಿಸುವ ಆರ್ಥಿಕತತ್ತ್ವಗಳು ಅಷ್ಟು ನೇರವಾಗಿ ಅಂತಾರಾಷ್ಟ್ರೀಯ ವ್ಯಾಪಾರ ಹಾಗೂ ಅದರೊಡಗೂಡಿದ ಆರ್ಥಿಕ ವಿಷಯಗಳ ಪ್ರತಿಪಾದನೆಗೆ ಅನ್ವಯಿಸುವುದಿಲ್ಲ ಎಂಬುದೇ ಈ ರೀತಿ ಪ್ರತ್ಯೇಕ ಶಾಸ್ತ್ರ ವಿಭಾಗ ಬೆಳೆದು ಬಂದಿರುವುದಕ್ಕೆ ಕಾರಣ. ಸಿದ್ಧಾಂತ ನಿರೂಪಣೆಯ ದೃಷ್ಟಿಯಿಂದ ಈ ರೀತಿಯ ಪ್ರತ್ಯೇಕತೆ ಎಷ್ಟರಮಟ್ಟಿಗೆ ವಾಸ್ತವವಾಗಿಯೂ ಆವಶ್ಯಕ ಎಂಬುದು ವಿಚಾರಾರ್ಹವಾಗಿದೆ.

ಶ್ರಮ (ಲೇಬರ್), ಬಂಡವಾಳ ಉದ್ಯಮಶೀಲತೆ (ಎಂಟರ್‌ಪ್ರೈಸ್)–ಇಂಥ ಉತ್ಪಾದನಾಂಗಗಳು ಒಂದು ದೇಶದ ಒಳ ವ್ಯವಹಾರಕ್ಕೆ ಚೆನ್ನಾಗಿ ಒಗ್ಗುತ್ತವೆಂದೂ ರಾಷ್ಟ್ರ–ರಾಷ್ಟ್ರಗಳೊಳಗಿನ ವ್ಯವಹಾರಗಳಲ್ಲಿ ಅಷ್ಟು ಒಗ್ಗವೆಂದೂ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಆರ್ಥಿಕ ವಿಷಯಗಳ ಪರಿಶೀಲನೆಯಲ್ಲಿ ಇದೇ ಮುಖ್ಯವಾದ ವ್ಯತ್ಯಾಸವೆಂದೂ ಪ್ರಾಚೀನ ಪಂಥದ (ಕ್ಲಾಸಿಕಲ್ ಸ್ಕೂಲ್) ಅರ್ಥಶಾಸ್ತ್ರಜ್ಞರ ವಾದವಾಗಿದ್ದಿತು. ವಾಸ್ತವವಾಗಿ ನೋಡಿದರೆ ಈ ಭೇದ ಅಷ್ಟು ಸ್ಪಷ್ಟವಾಗಿಲ್ಲ. ದೇಶದ ಒಳಗಡೆ ಉತ್ಪಾದನಾಂಗಗಳು ಒಗ್ಗದೆ ಅಂತಾರಾಷ್ಟ್ರೀಯವಾಗಿ ಸ್ವಲ್ಪಮಟ್ಟಿಗೆ ಒಗ್ಗಿರುವ ನಿದರ್ಶನಗಳಿವೆ. ಆದುದರಿಂದ ಆರ್ಥಿಕ ತತ್ತ್ವ ಪ್ರತಿಪಾದನೆಯ ದೃಷ್ಟಿಯಿಂದ ಕೇವಲ ಈ ಅಂಶದ ಮೇಲೆಯೇ ಆಧಾರಗೊಂಡ ವ್ಯತ್ಯಾಸ ಅಷ್ಟು ಸಮಂಜಸವಾಗಲಾರದು. ಆದರೆ, ಇತರ ಕೆಲವು ಕಾರಣಗಳಿಂದಾಗಿ ಅಂತಾರಾಷ್ಟ್ರೀಯ ವ್ಯಾಪಾರವನ್ನು ಕುರಿತ ಪ್ರತ್ಯೇಕ ತಾತ್ತ್ವಿಕ ಅಧ್ಯಯನ ಸಾಧುವಾದುದು ಎಂದು ಹೇಳಬಹುದು.

ಒಂದೊಂದು ರಾಷ್ಟ್ರವೂ ತನ್ನದೇ ಆದ ಹಣವನ್ನೂ ಹಣ ಮತ್ತು ಬ್ಯಾಂಕು ವ್ಯವಸ್ಥೆಯನ್ನೂ ಹೊಂದಿರುವುದರಿಂದ ಒಂದು ರಾಷ್ಟ್ರದ ಹಣ ಇತರ ರಾಷ್ಟ್ರಗಳ ಹಣಗಳಿಗೆ ವಿನಿಮಯವಾಗುವ ರೀತಿನೀತಿಗಳ ವಿಶೇಷ ವಿವೇಚನೆ ಅಗತ್ಯ. ಅಂತಾರಾಷ್ಟ್ರೀಯ ವ್ಯಾಪಾರ, ಸಾಗಣೆಯಲ್ಲಿ ವಿದೇಶೀ ವಿನಿಮಯ ದರ ಹಾಗೂ ವ್ಯವಸ್ಥೆಯ ಪಾತ್ರ ಅತಿ ಮುಖ್ಯವಾದುದು. ಅಲ್ಲದೆ, ಆಮದು ರಫ್ತುಗಳು, ವಿದೇಶೀ ಬಂಡವಾಳ, ಸಾರಿಗೆ ವ್ಯವಸ್ಥೆ, ವಿದೇಶೀಯರು ದೇಶಕ್ಕೆ ಬರುವುದು, ನೆಲೆಸುವುದು ಮತ್ತು ಆರ್ಥಿಕೋದ್ಯಮ ನಡೆಸುವುದು, ದೇಶೀಯರು ಇತರ ದೇಶಗಳಿಗೆ ಹೋಗಿ ನೆಲೆಸುವುದು–ಇತ್ಯಾದಿ ವಿಷಯಗಳ ಬಗ್ಗೆ ಒಂದೊಂದು ರಾಷ್ಟ್ರವೂ ತನ್ನದೇ ಆದ ವಿಧಾಯಕಗಳನ್ನೂ ನಿಯಂತ್ರಣ ಕ್ರಮಗಳನ್ನೂ ನಿರ್ಮಿಸಿದೆ. ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗಳಿಗೆ ವಿಶೇಷವಾಗಿ ಸಂಬಂಧಿಸಿದ ಇಂಥ ಅಂಶಗಳು ಭಾವಗರ್ಭಿತವಾಗಿವೆ. ಆರ್ಥಿಕ ಸಿದ್ಧಾಂತಗಳ ಅನ್ವೇಷಣೆಯಲ್ಲಿ ಈ ವಿಶೇಷ ಅಂಶಗಳಿಗೆ ಪ್ರತ್ಯೇಕ ಪ್ರಾಮುಖ್ಯ ನೀಡಬೇಕಾದುದು ಅವಶ್ಯ. ಈ ಅನ್ವೇಷಣೆಯ ಫಲವಾಗಿ ಹೊರಬಿದ್ದಿರುವ ಅಂತಾರಾಷ್ಟ್ರೀಯ ವ್ಯಾಪಾರಸಿದ್ಧಾಂತಗಳ ವಿಭಾಗ ಅರ್ಥಶಾಸ್ತ್ರದ ಒಂದು ಮುಖ್ಯಭಾಗ. ಆಮದು ರಫ್ತು ಪಟ್ಟಿಗಳೊಳಗೆ ಸೇರುವ ಸರಕುಗಳು, ಆಮದು ರಫ್ತು ವ್ಯಾಪಾರಮಾರ್ಗಗಳು, ಈ ವ್ಯಾಪಾರದ ಪ್ರಮಾಣ ಮತ್ತು ಬೆಲೆ, ಇಂಥ ವ್ಯಾಪಾರದ ಒಟ್ಟು ಲಾಭ ಮತ್ತು ಅದರ ಹಂಚಿಕೆ, ವಾಣಿಜ್ಯನೀತಿ, ಅಂತಾರಾಷ್ಟ್ರೀಯ ಲೇಣ–ದೇಣೆ ಪಟ್ಟಿ–ಇತ್ಯಾದಿ ವಿಷಯಗಳು ಅಂತಾರಾಷ್ಟ್ರೀಯ ಸಿದ್ಧಾಂತ ನಿರೂಪಣೆಯಲ್ಲಿ ಪರಿಶೀಲನೆಗೆ ಬರುವ ವಿಷಯಗಳು.ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಸೇರುವ ಸರಕುಗಳನ್ನು ಗುರುತಿಸಲು ಡೇವಿಡ್ ರಿಕಾರ್ಡೊ ಎಂಬ ಪ್ರಾಚೀನ ಅರ್ಥಶಾಸ್ತ್ರಜ್ಞ ತೌಲನಿಕ ವೆಚ್ಚ ನಿಯಮವೊಂದನ್ನು (ಥಿಯರಿ ಆಫ್ ಕಂಪ್ಯಾರಟಿವ್ ಕಾಸ್ಟ್ಸ್) ನಿರೂಪಿಸಿದ. ರಾಷ್ಟ್ರ–ರಾಷ್ಟ್ರಗಳ ವ್ಯಾಪಾರ ಅನಿರ್ಬಂಧವಾಗಿರುವ ಸ್ಥಿತಿಯಲ್ಲಿ, ಪ್ರತಿರಾಷ್ಟ್ರವೂ ಯಾವ ಸರಕುಗಳ ಉತ್ಪಾದನೆಯಲ್ಲಿ ಮೇಲ್ಮೆ ಪಡೆದು, ಆ ಸರಕುಗಳನ್ನು ಇತರ ರಾಷ್ಟ್ರಗಳಿಗೆ ರಫ್ತು ಮಾಡುವುದು, ಮತ್ತು ಇತರ ರಾಷ್ಟ್ರಗಳು ಯಾವುದನ್ನು ಹೆಚ್ಚು ಸುಲಭ ವೆಚ್ಚದಲ್ಲಿ ತಯಾರು ಮಾಡಬಲ್ಲವೋ ಅವುಗಳನ್ನು ಆ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವುದು–ಎಂಬುದೇ ಈ ನಿಯಮದ ಸಾರಾಂಶ. ಡೇವಿಡ್ ರಿಕಾರ್ಡೊ ನೀಡಿರುವ ಕೆಳಗಣ ಉದಾಹರಣೆ ಈ ನಿಯಮವನ್ನು ಸ್ಪಷ್ಟಗೊಳಿಸುವುದು.

ಇಂಗ್ಲೆಂಡಿನಲ್ಲಿ 1 ಗ್ಯಾಲನ್ ದ್ರಾಕ್ಷಾರಸದ ಉತ್ಪಾದನೆಯ ವೆಚ್ಚ 120 ಗಂಟೆಗಳ ಕೆಲಸವಾದರೆ ಪೋರ್ಚುಗಲ್ಲಿನಲ್ಲಿ ಕೇವಲ 80 ಗಂಟೆ ಕೆಲಸ. 1 ಗಜ ಬಟ್ಟೆಯನ್ನು ಮಾಡಲು ಇಂಗ್ಲೆಂಡಿನಲ್ಲಿ 100 ಗಂಟೆಗಳ ಕೆಲಸ ವ್ಯಯವಾಗುವಲ್ಲಿ ಪೋರ್ಚುಗಲ್ಲಿನಲ್ಲಿ 90 ಗಂಟೆಗಳ ಕೆಲಸ ಸಾಕು. ಪೋರ್ಚುಗಲ್ ದ್ರಾಕ್ಷಾರಸ ಮತ್ತು ಬಟ್ಟೆ ಎರಡನ್ನೂ ಇಂಗ್ಲೆಂಡಿಗಿಂತ ಸುಲಭ ವೆಚ್ಚದಲ್ಲಿ ತಯಾರಿಸಬಲ್ಲದು; ಆದರೆ ಹೋಲಿಕೆ ವೆಚ್ಚದ ಪ್ರಕಾರ ಪೋರ್ಚುಗಲ್ಲು ದ್ರಾಕ್ಷಾರಸವನ್ನೂ ಇಂಗ್ಲೆಂಡ್ ಬಟ್ಟೆಯನ್ನೂ ಹೆಚ್ಚು ಸುಲಭ ವೆಚ್ಚದಲ್ಲಿ ತಯಾರಿಸಬಲ್ಲವು. ಎರಡು ಸರಕುಗಳೂ ಆಯಾ ರಾಷ್ಟ್ರಗಳಲ್ಲಿಯೇ ತಯಾರಾಗುವುದಾದರೆ, ದ್ರಾಕ್ಷಾರಸ ಮತ್ತು ಬಟ್ಟೆಯ ಉತ್ಪಾದನಾ ವೆಚ್ಚಗಳು ಇಂಗ್ಲೆಂಡಿನಲ್ಲಿ 120:100 ಪ್ರಮಾಣದಲ್ಲಿಯೂ ಪೋರ್ಚುಗಲ್ಲಿನಲ್ಲಿ 80:90 ಇರುವುವು. ಅಂದಮೇಲೆ 1 ಘಟಕ ದ್ರಾಕ್ಷಾರಸಕ್ಕೆ ಪ್ರತಿಯಾಗಿ 0.88 ಘಟಕಕ್ಕಿಂತ ಸ್ವಲ್ಪ ಹೆಚ್ಚು ಪ್ರಮಾಣದ ಬಟ್ಟೆ ಪಡೆಯುವುದಾದರೆ ಹಾಗೆ ವಿನಿಮಯ ಮಾಡಿಕೊಳ್ಳುವುದು ಪೋರ್ಚುಗಲ್ಲಿಗೆ ಲಾಭಕರವಾಗುವುದು. ಇಂಗ್ಲೆಂಡಿನಲ್ಲಿ 1 ಘಟಕ ದ್ರಾಕ್ಷಾರಸ 1.2 ಘಟಕ ಬಟ್ಟೆಗೆ ಸಮನಾಗುವುದರಿಂದ ಈ ರೀತಿಯ ವಿನಿಮಯಕ್ಕೆ ಇಂಗ್ಲೆಂಡು ಸಿದ್ಧವಿರುವುದು; ಹೀಗೆಯೇ ಇಂಗೆಂಡು 1.2 ಘಟಕಕ್ಕಿಂತ ಸ್ವಲ್ಪ ಕಡಿಮೆ ಬಟ್ಟೆ ಕೊಡುವುದರಿಂದ 1 ಘಟಕ ದ್ರಾಕ್ಷರಸ ಪಡೆಯುವುದಾದರೆ ಅದಕ್ಕೂ ಲಾಭವಾಗುವುದು. ಹೀಗೆ 1 ಘಟಕ ದ್ರಾಕ್ಷರಸಕ್ಕೆ ಪ್ರತಿಯಾಗಿ 0.88 ಮತ್ತು 1.2

ಘಟಕಗಳ ಒಳಗಿನ ಯಾವುದೇ ವಿನಿಮಯ ದರ ಏರುವುದಾದರೂ ಎರಡು ರಾಷ್ಟ್ರಗಳಿಗೂ ಒಟ್ಟಿನಲ್ಲಿ ಹೆಚ್ಚು ಲಾಭವಾಗುವುದು. ಪೋರ್ಚುಗಲ್ಲು ಅದರ ಉತ್ಪನ್ನಸಾಧನಗಳನ್ನು ಬಟ್ಟೆ ಉತ್ಪಾದನೆಯಲ್ಲಿಯೂ ಉಪಯೋಗಿಸುವುದರಿಂದ ಇವುಗಳನ್ನು ಪರಸ್ಪರವಾಗಿ ವಿನಿಮಯ ಮಾಡಿಕೊಳ್ಳುವುದರಿಂದಲೂ ಹೆಚ್ಚು ಪ್ರಯೋಜನ ಉಂಟಾಗುವುದು. ಇದೇ ತೌಲನಿಕ ವೆಚ್ಚ ನಿಯಮ.

ರಿಕಾರ್ಡೊ ಪ್ರತಿಪಾದಿಸಿರುವ ರೂಪದಲ್ಲಿ ಸಿದ್ಧಾಂತ ಅನೇಕ ಆಕ್ಷೇಪಣೆಗಳಿಗೆ ಒಳಗಾಗಿದೆ. ಸಿದ್ಧಾಂತವನ್ನು ಎರಡು ಸರಕು, ಎರಡು ರಾಷ್ಟ್ರಗಳಿಗೆ ಮಾತ್ರ ಅನ್ವಯಿಸಿರುವುದು, ಶ್ರಮವೆಚ್ಚದ ಆಧಾರದ ಮೇಲೆ ವೆಚ್ಚವನ್ನು ಗಳಿಸಿರುವುದು, ಸಾರಿಗೆ ವೆಚ್ಚ ನಿರ್ಲಕ್ಷಿಸಿರುವುದು. ಹೆಚ್ಚುವರಿ ಅಥವಾ ಇಳಿವರಿ ವೆಚ್ಚಗಳ ನಿಯಮಗಳ ಆಚರಣೆಯನ್ನು ಅಳವಡಿಸದಿರುವುದು–ಇತ್ಯಾದಿ ಅಂಶಗಳಿಗೆ ಈ ಆಕ್ಷೇಪಗಳು ಸಂಬಂಧಿಸಿವೆ. ಇಂಥ ಆಕ್ಷೇಪಣೆಗಳಿಗೆ ಒಳಗಾಗಿರುವುದರಿಂದ ಈ ಪ್ರಾಚೀನಪಂಥದ ಮಾರ್ಗವನ್ನು ಬಿಟ್ಟು ಸಾಮಾನ್ಯ ಸಮತೋಲನ ವಿಶ್ಲೇಷಣೆಯ (ಜನರಲ್ ಈಕ್ವಿಲಿಬ್ರಿಯಂ ಅನ್ಯಾಲಿಸಿಸ್) ಅನುಸಾರವಾಗಿ ಅಂತಾರಾಷ್ಟ್ರೀಯ ವ್ಯಾಪಾರದ ತಳಹದಿಯನ್ನು ಅನ್ವೇಷಿಸುವ ಬೇರೆ ಮಾರ್ಗವನ್ನು ಹಿಡಿದಿರುವವರಲ್ಲಿ ಬರ್ಟಿಲ್ ಓಹ್ಲಿನ್ ಎಂಬ ಅರ್ಥಶಾಸ್ತ್ರಜ್ಞ ಅತಿಮುಖ್ಯನಾದವನು. ಆದರೆ, ಅನೇಕ ಇತರ ಅರ್ಥಶಾಸ್ತ್ರಜ್ಞರು ರಿಕಾರ್ಡೊನ ವಾದವನ್ನೇ ಮುಂದುವರಿಸಿರುತ್ತಾರೆ. ಅವರು ಸುಲಭ ನಿರೂಪಣೆಗಾಗಿ ಮಾಡಿರುವ ಊಹೆಗಳನ್ನು (ಅಸಮ್ಷನ್ಸ್) ಬಿಟ್ಟು ಇದರಿಂದ ಸಿದ್ಧಾಂತದಲ್ಲಿ ಆಗುವ ಸೂಕ್ಷ್ಮ ಬದಲಾವಣೆಗಳನ್ನು ತೋರಿಸಿಕೊಟ್ಟಿರುತ್ತಾರೆ. ಅಭಿವೃದ್ಧಿ ಅರ್ಥಶಾಸ್ತ್ರ (ಗ್ರೋತ್ ಎಕನಾಮಿಕ್ಸ್) ಅಧ್ಯಯನದಲ್ಲಿ ಹೋಲಿಕೆ ವೆಚ್ಚ ಸಿದ್ಧಾಂತವನ್ನು ಹೆಚ್ಚು ಕ್ರಿಯಾತ್ಮಕ (ಡೈನಾಮಿಕ್ಸ್) ದೃಷ್ಟಿಯಿಂದ ನೋಡಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಒಂದು ರಾಷ್ಟ್ರದ ವಿವಿಧ ಸರಕುಗಳ ಹೋಲಿಕೆ ವೆಚ್ಚ ಸೂಚಿಸುವ ಪ್ರಮಾಣಗಳು ಅಭಿವೃದ್ಧಿಯ ಕಾರ್ಯದಲ್ಲಿ ಹೇಗೆ ವ್ಯತ್ಯಾಸವಾಗುವುವು, ಇವುಗಳಿಂದ ಆಮದು–ರಫ್ತು ನಮೂನೆ ಹೇಗೆ ಬದಲಾಗುವುದು ಎಂಬಂಥ ಅಂಶಗಳು ಸ್ವಾರಸ್ಯವಾದ ವಿಷಯಗಳಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ ಅಂತಾರಾಷ್ಟ್ರೀಯ ವ್ಯಾಪಾರಸಿದ್ಧಾಂತ ನಿರೂಪಣೆ ವಿಶ್ವವ್ಯಾಪಾರದ ಸ್ವರೂಪವನ್ನು ತಿಳಿಯಲು ಸಹಾಯಕವಾಗಿದೆ.

ಹೋಲಿಕೆ ವೆಚ್ಚದ ಸೂಕ್ಷ್ಮಸ್ವರೂಪದ ಸಿದ್ಧಾಂತಕ್ಕೆ ಅನುಸಾರವಾಗಿ ನಡೆಯುವ ಉತ್ಪಾದನಾಕ್ರಮದಿಂದ ಪ್ರಪಂಚದ ಆರ್ಥಿಕಸಾಧನಗಳನ್ನು ಹೆಚ್ಚು ಮಿತವ್ಯಯದಿಂದ ಉಪಯೋಗಿಸಿದಂತೆ ಆಗುವುದು. ಈ ಮಿತವ್ಯಯದ ಲಾಭ ಅಂತಾರಾಷ್ಟ್ರೀಯ ವ್ಯಾಪಾರದ ಫಲವಾಗಿರುತ್ತದೆ. ಈ ಒಟ್ಟು ಲಾಭ ಆಮದು–ರಫ್ತು ರಾಷ್ಟ್ರಗಳಲ್ಲಿ ಹೇಗೆ ಹಂಚಿಕೆಯಾಗುವುದು ಎಂಬುದು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದ ಇನ್ನೊಂದು ಮುಖ್ಯ ಪ್ರಶ್ನೆ. ಈ ಲಾಭಹಂಚಿಕೆ ಆಮದು–ರಫ್ತು ವಿನಿಮಯ ಸಂಬಂಧಗಳನ್ನು ಅವಲಂಬಿಸಿದೆ. ಆಮದು–ರಫ್ತು ಸಂಬಂಧ ರಫ್ತು ಮಾಡಲಾಗುವ ಒಂದು ಘಟಕಕ್ಕೆ ಪ್ರತಿಯಾಗಿ ಲಭಿಸುವ ಆಮದು ಪ್ರಮಾಣವನ್ನು ಸೂಚಿಸುವುದು. ಅಂದಮೇಲೆ ಆಮದು–ರಫ್ತು ಸಂಬಂಧ ವ್ಯತ್ಯಾಸವಾದಂತೆ ಅಂತಾರಾಷ್ಟ್ರೀಯ ವ್ಯಾಪಾರದ ಲಾಭಹಂಚಿಕೆಯಲ್ಲಿಯೂ ವ್ಯತ್ಯಾಸವಾಗುವುದು. ರಫ್ತುಮಾಡುವ ಸರಕುಗಳ ಬೇಡಿಕೆ ಹೆಚ್ಚು ಸ್ಥಿತಿಸ್ಥಾಪಕತ್ವ ಹೊಂದಿ ಆಮದು ಮಾಡಿಕೊಳ್ಳುವ ಸರಕುಗಳ ಬೇಡಿಕೆ ಸ್ಥಿತಿಸ್ಥಾಪಕತ್ವರಹಿತವಾಗಿರುವ ಪರಿಸ್ಥಿಯಲ್ಲಿ ಆಮದು–ರಫ್ತು ಸಂಬಂಧ ನಮಗೆ ಪ್ರತಿಕೂಲವಾಗುವುದು; ಅಂದರೆ, ಅಂತರರಾಷ್ಟ್ರೀಯ ವ್ಯಾಪಾರ ಲಾಭದಲ್ಲಿ ಸಿಗುವ ಭಾಗ ಕಡಿಮೆಯಾಗುವುದು. ದೀರ್ಘಕಾಲಾವಧಿಯ ಆಮದು–ರಫ್ತು ಸಂಬಂಧ ಕಚ್ಚಾ ಸರಕುಗಳನ್ನು ರಫ್ತುಮಾಡುವ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಪ್ರತಿಕೂಲವಾಗಿರುವುದು, ವಾದ ವಿವಾದಗಳಿಗೆ ಎಡೆಕೊಟ್ಟಿರುವ ಒಂದು ಅಂತಾರಾಷ್ಟ್ರೀಯ ವ್ಯಾಪಾರ ಸಮಸ್ಯೆಯಾಗಿದೆ. ಆಮದು–ರಫ್ತು ಸಂಬಂಧದ ಸಮಸ್ಯೆ ಕ್ಲಿಷ್ಟವಾದುದು. ಇದರ ಸೂಕ್ಷ್ಮ ಪರಿಶೀಲನೆಯಲ್ಲಿ ಆಮದು–ರಫ್ತು ಸರಕು ಸಂಬಂಧಗಳು, ಆಮದು–ರಫ್ತು ಮೊತ್ತಗಳ ಮೌಲ್ಯ ಸಂಬಂಧಗಳು, ಆಮದು–ರಫ್ತು ಉತ್ಪಾದನಾಂಗ ಸಂಬಂಧಗಳು ಎಂಬ ವಿವಿಧ ರೂಪದ ಆಮದು–ರಫ್ತು ಸಂಬಂಧಗಳನ್ನೂ ಇವುಗಳನ್ನು ನಿರ್ಣಯಿಸುವ ವಿವಿಧ ಅಂಶಗಳನ್ನೂ ಇವುಗಳು ಸೂಚಿಸುವ ಅರ್ಥವನ್ನೂ ಪರಿಶೀಲಿಸಬೇಕಾಗುವುದು.

ಅಂತಾರಾಷ್ಟ್ರೀಯ ವ್ಯಾಪಾರದಿಂದ ಉದ್ಭವವಾಗುವ ಲೇಣೆ–ದೇಣೆಗಳು ರಾಷ್ಟ್ರವೊಂದರ ಒಟ್ಟು ವಿದೇಶೀ ಲೇಣೆ–ದೇಣೆಗಳಲ್ಲಿ ಮುಖ್ಯಭಾಗವಾಗಿರುವುವು. ಆದುದರಿಂದ ಅಂತಾರಾಷ್ಟ್ರೀಯ ಲೇಣೆ–ದೇಣೆ ಪಟ್ಟಿ ಸರಿತೂಗಿಸುವುದರಲ್ಲಿ ರಫ್ತು ಆಮದುಗಳು ಹೆಚ್ಚಿನ ಪರಿಣಾಮ ಹೊಂದಿರುತ್ತವೆ. ದೇಶದ ರಫ್ತಿನ ಬೆಲೆ ಆಮದಿನ ಬೆಲೆಗಿಂತಲೂ ಹೆಚ್ಚಾಗಿರುವ ಸ್ಥಿತಿಯನ್ನು ರಫ್ತು ಹೆಚ್ಚಳವಿರುವ ವ್ಯಾಪಾರಸ್ಥಿತಿ ಅಥವಾ ಅನುಕೂಲ ವ್ಯಾಪಾರಸ್ಥಿತಿ ಎಂದೂ ಆಮದಿನ ಬೆಲೆ ರಫ್ತಿನ ಬೆಲೆಗಿಂತಲೂ ಹೆಚ್ಚಾಗಿರುವುದನ್ನು ಆಮದು ಹೆಚ್ಚಳವಿರುವ ವ್ಯಾಪಾರಸ್ಥಿತಿ ಅಥವಾ ಪ್ರತಿಕೂಲ ವಿದೇಶ ವ್ಯಾಪಾರಸ್ಥಿತಿ ಎಂದೂ ಹೇಳಲಾಗಿದೆ. ಆಮದಿಗಿಂತ ರಫ್ತು ಹೆಚ್ಚಾಗಿರುವಾಗ ನಮ್ಮ ದೇಶದ ವಿದೇಶೀ ಹಣದ ಲೆಕ್ಕಕ್ಕೆ ವಿದೇಶೀಹಣಗಳು ಜಮಾ ಆಗುವುವು; ಆದರೆ, ಆಮದು ಹೆಚ್ಚಳವಿರುವಾಗ ನಮ್ಮ ವಿದೇಶೀ ಹಣದ ಶುಲ್ಕ ಇಳುವರಿಯಾಗುವುದು.

ಇಂದಿನ ಪ್ರಪಂಚದಲ್ಲಿ ಆರ್ಥಿಕವಾಗಿ ಮುಂದುವರಿದಿರುವ ಕೆಲವು ರಾಷ್ಟ್ರಗಳೂ ಹಿಂದುಳಿದಿರುವ ಅನೇಕ ರಾಷ್ಟ್ರಗಳೂ ಬೇರೆಬೇರೆ ಕಾರಣಗಳಿಂದಾಗಿ ರಫ್ತು ಹೆಚ್ಚಳ ಹೊಂದಲೂ ಬಯಸುತ್ತವೆ. ಅಮೆರಿಕ ಮತ್ತು ಬ್ರಿಟನ್‍ಗಳಿಗೆ ಅವುಗಳ ಹಣವಾದ ಡಾಲರ್ ಮತ್ತು ಪೌಂಡುಗಳ ಅಂತಾರಾಷ್ಟ್ರೀಯ ಅಂತಸ್ತನ್ನು ಕಾಪಾಡಿಕೊಳ್ಳುವ ಸಮಸ್ಯೆ ಇದೆ. ಕಡಿಮೆ ಪ್ರಮಾಣದಲ್ಲಿ ಆದರೂ ಫ್ರಾನ್ಸ್, ಜರ್ಮನಿಗಳಂಥ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೂ ಇಂಥದೇ ಯೋಜನೆ ಇದೆ. ಅನೇಕ ರಾಷ್ಟ್ರಗಳು ಈ ಕೆಲವು ರಾಷ್ಟ್ರೀಯ ಹಣಗಳನ್ನು ಅಂತಾರಾಷ್ಟ್ರೀಯ ವ್ಯವಹಾರಕ್ಕೆ ಒಪ್ಪಿವೆ. ಈ ಒಪ್ಪಿಗೆ ಈ ಹಣಗಳ ಭದ್ರತೆಯ ಮೇಲೆ ನಿಂತಿದೆ. ಈ ಭದ್ರತೆಯ ಸಾಕಷ್ಟು ಚಿನ್ನ ಮತ್ತು ವಿದೇಶೀವಿನಿಯಮ ಶಿಲ್ಕುಗಳ ಬೆಂಬಲ ಅವಶ್ಯ. ಇದನ್ನು ಗಳಿಸಲು ಆ ರಾಷ್ಟ್ರಗಳು ರಫ್ತು ಹೆಚ್ಚಳವನ್ನು ಬಯಸುವುವು. ಅಲ್ಲದೆ, ಈ ಮುಂದುವರಿದಿರುವ ರಾಷ್ಟ್ರಗಳಲ್ಲಿ ಉತ್ಪಾದನಾಶಕ್ತಿಯ ತೀವ್ರ ಬೆಳವಣಿಗೆಯಿಂದ ಅನೇಕ ಸರಕುಗಳ ಹೇರಳ ಉತ್ಪಾದನೆಗೆ ಅವಕಾಶವಿರುವುದು. ಈ ಸಂದರ್ಭದಲ್ಲಿ ವಿದೇಶೀ ಮಾರುಕಟ್ಟೆಯನ್ನು ಸಾಕಷ್ಟು ವಿಸ್ತರಿಸದಿದ್ದರೆ ನಿರುದ್ಯೋಗದ ಸಮಸ್ಯೆ ಉಂಟಾಗುವ ಸಂಭವವುಂಟು.

ಹಿಂದುಳಿದಿರುವ ರಾಷ್ಟ್ರಗಳು ಎರಡನೆಯ ಮಹಾಯುದ್ಧದ ತರುವಾಯ ಹೆಚ್ಚು ಆರ್ಥಿಕಾಭಿವೃದ್ಧಿ ಸಾಧಿಸಲು ಹವಣಿಸುತ್ತಿವೆ. ಈ ಪ್ರಯತ್ನದಲ್ಲಿ ಅವುಗಳು ಮುಂದುವರಿದಿರುವ ರಾಷ್ಟ್ರಗಳಿಂದ ಯಂತ್ರ, ಯಂತ್ರೋಪಕರಣಗಳು ಇತ್ಯಾದಿ ಸರಕುಗಳನ್ನೂ ಅನೇಕ ವಿಧದ ತಜ್ಞರ ಸೇವೆಗಳನ್ನೂ ಪಡೆಯಬೇಕಾಗಿದೆ. ಹೀಗೆ ನೋಡುವುದಾದರೆ ಆಮದುಗಳು ಆರ್ಥಿಕಾಭಿವೃದ್ಧಿಯಲ್ಲಿ ಮುಖ್ಯ ಪಾತ್ರ ಹೊಂದಿರುವುದು ವ್ಯಕ್ತವಾಗುವುದು. ಈ ಆಮದುಗಳಿಗೆ ಬೆಲೆ ನೀಡಲು ಸಾಕಾಗುವಷ್ಟು ವಿದೇಶೀ ಹಣವನ್ನು ರಫ್ತುಗಳ ಮೂಲಕ ಗಳಿಸುವುದು ಈ ರಾಷ್ಟ್ರಗಳಿಗೆ ಕಷ್ಟವಾಗುವುದು. ಏಕೆಂದರೆ, ಅವುಗಳು ಆಗಲೇ ರಫ್ತುಮಾಡುತ್ತಿರುವ ಕಚ್ಚಾ ಸರಕುಗಳಿಗೂ ಆಹಾರ ಪದಾರ್ಥಗಳಿಗೂ ವಿದೇಶೀ ಬೇಡಿಕೆ ತೀವ್ರವಾಗಿ ಹೆಚ್ಚುವುದೆಂದು ನಿರೀಕ್ಷಿಸಲಾಗುವುದಿಲ್ಲ. ಹೊಸ ರಫ್ತುಗಳನ್ನು ಬೆಳೆಸುವ ಕಾರ್ಯದಲ್ಲಿ ಪಟ್ಟಭದ್ರ ಹಿತಗಳ ತೀವ್ರ ಪೈಪೋಟಿ ಎದುರಿಸಬೇಕಾಗುವುದು. ಮುಂದುವರಿದಿರುವ ರಾಷ್ಟ್ರಗಳು ಸಾಧಿಸಿರುವ ಉತ್ಪಾದನಾವೆಚ್ಚದ ಮಿತವ್ಯಯವನ್ನು ಈ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕೈಗಾರಿಕಾಭಿವೃದ್ಧಿಯ ಪ್ರಥಮ ಹಂತಗಳಲ್ಲಿ ಸಾಧಿಸಲು ಆಗದಿರುವುದರಿಂದ ರಫ್ತು ಮಾರುಕಟ್ಟೆಗಳನ್ನು ಹಿಡಿಯುವುದು ಬಹಳ ಕಷ್ಟವಾಗುವುದು. ತಾತ್ಕಾಲಿಕವಾಗಿ ವಿದೇಶೀ ಸಾಲಗಳ ಮೂಲಕ ಆಮದು ಹೆಚ್ಚಳಕ್ಕೆ ನೀಡಬೇಕಾದ ಹಣವನ್ನು ಪಾವತಿ ಮಾಡುವುದು ಅಭಿವೃದ್ಧಿಪಥದಲ್ಲಿರುವ ರಾಷ್ಟ್ರಗಳು ಸಾರ್ವತ್ರಿಕವಾಗಿ ಅನುಸರಿಸುತ್ತಿರುವ ಮಾರ್ಗವಾಗಿದೆ. ಆದರೆ, ಈ ಸಾಲದ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದರಲ್ಲಿಯೂ ಆಗಲೇ ತೆಗೆದಿರುವ ಸಾಲಗಳ ತೀರುವೆಗೂ ರಫ್ತುವ್ಯಾಪಾರವನ್ನು ತೀವ್ರವಾಗಿ ಹೆಚ್ಚಿಸುವುದು ಈ ರಾಷ್ಟ್ರಗಳ ನೀತಿಯಾಗಿದೆ. ಹೀಗೆ ರಫ್ತುಗಳನ್ನು ಹೆಚ್ಚಿಸಿ ಆಮದುಗಳ ಹೆಚ್ಚುವರಿಯನ್ನು ತಡೆಹಿಡಿದು ಅಭಿವೃದ್ಧಿಗೆ ತೊಂದರೆಯಾಗದಂತೆ ಕಾಲಕ್ರಮೇಣ ರಫ್ತು ಹೆಚ್ಚಳ ಹೊಂದುವುದು ಈ ರಾಷ್ಟ್ರಗಳ ಗುರಿ ಆಗಿದೆ.

ಹೀಗೆ ರಫ್ತು ಹೆಚ್ಚಳ ವಿದೇಶೀ ವಿನಿಮಯ ವ್ಯವಸ್ಥೆಯ ಮತ್ತು ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಮುಂದುವರಿದಿರುವ ಮತ್ತು ಹಿಂದುಳಿದಿರುವ ರಾಷ್ಟ್ರಗಳಿಗೆ ಅಂತಾರಾಷ್ಟ್ರೀಯ ವ್ಯಾಪಾರದ ಮುಖ್ಯ ಸಮಸ್ಯೆಯಾಗಿದೆ. ಆಯಾ ರಾಷ್ಟ್ರಗಳು ಕೇವಲ ರಾಷ್ಟ್ರೀಯತಾದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಹರಿಸಲು ಬಿಡುವುದು ಪ್ರಪಂಚದಲ್ಲಿ ಆರ್ಥಿಕ ಅಶಾಂತಿ ಹಾಗೂ ಗೊಂದಲಕ್ಕೆ ಕಾರಣವಾಗುವುದು. ಅದೃಷ್ಟವಶದಿಂದ ಈ ಬಗ್ಗೆ ಸ್ವಲ್ಪಮಟ್ಟಿಗಾದರೂ ಅಂತಾರಾಷ್ಟ್ರೀಯ ದೃಷ್ಟಿಯನ್ನು ಪೋಷಿಸುತ್ತಿರುವ ಕೆಲವು ಸಂಸ್ಥೆಗಳು ಏರ್ಪಟ್ಟಿವೆ. ಇದರಲ್ಲಿ ಸುಂಕಗಳ ಹಾಗೂ ವ್ಯಾಪಾರದ ಸಾರ್ವತ್ರಿಕ ಒಪ್ಪಂದ ಮತ್ತು ವ್ಯಾಪಾರ ಹಾಗೂ ಅಭಿವೃದ್ಧಿಯನ್ನು ಕುರಿತ ವಿಶ್ವಸಂಸ್ಥೆಯ ಸಮ್ಮೇಳನ ಅಂಕ್‍ಟಾಡ್ (ಯು.ಎನ್.ಸಿ.ಟಿ.ಎ.ಡಿ)–ಇವುಗಳು ಮುಖ್ಯ ಸಂಸ್ಥೆಗಳಾಗಿವೆ.

19ನೆಯ ಶತಮಾನದಲ್ಲಿ ಸಾಮಾನ್ಯವಾಗಿ ಅಂತಾರಾಷ್ಟ್ರೀಯ ವ್ಯಾಪಾರ ಮುಕ್ತ ವ್ಯಾಪಾರನೀತಿಯ (ಫ್ರೀ ಟ್ರೇಡ್ ಪಾಲಿಸಿ) ಆಧಾರದ ಮೇಲೆ ರೂಪುಗೊಂಡಿದ್ದಿತು. ಆದರೆ ಈ ಶತಮಾನದ ಆದಿ ಭಾಗದಲ್ಲಿ ಬೆಳೆದುಬರುತ್ತಿದ್ದ ರಕ್ಷಣಾ ಸುಂಕ ನೀತಿಯ (ಪ್ರೊಟೆಕ್ಷನಿಸ್ಟ್ ಪಾಲಿಸಿ) ಜೊತೆಗೆ 1930ರ ದಶಕದಲ್ಲಿ ಆಮದು ರಫ್ತು ವ್ಯಾಪಾರಗಳು ಕೇವಲ ನೀಡಿಕೆ–ಬೇಡಿಕೆ ಶಕ್ತಿಗಳ ಅನುಸಾರವಾಗಿ ನಡೆಯದಂತೆ ಮಾಡಿದ ಅನೇಕ ರೀತಿಯ ನಿಯಂತ್ರಣ ಕ್ರಮಗಳು ಜಾರಿಗೆ ಬಂದುವು. ರಕ್ಷಣಾ ಸುಂಕ, ಪಾಲುಪದ್ಧತಿ (ಕೋಟ ಸಿಸ್ಟಮ್), ಆಮದು ಅಥವಾ ರಫ್ತು ಪ್ರತಿಬಂಧ, ಸುಂಕ ತಾರತಮ್ಯಗಳು, ವಿದೇಶೀ ವಿನಿಮಯ ನಿಯಂತ್ರಣಗಳು, ದ್ವಿಪಕ್ಷೀಯ (ಬೈಲ್ಯಾಟರಲ್) ವ್ಯಾಪಾರ ಒಪ್ಪಂದಗಳು, ಮಾರುಕಟ್ಟೆ ಕೆಡಿಸುವ ಉದ್ಯೋಗ–ಇತ್ಯಾದಿ ಅನೇಕ ರೂಪಗಳಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ನಿರಾತಂಕವಾಗಿ ಬೆಳೆಯಲಾಗಲಿಲ್ಲ. ತಾತ್ಕಾಲಿಕವಾಗಿ ಈ ಕ್ರಮಗಳು ಕೆಲವು ವೇಳೆ ಅವಶ್ಯವಾಗಿದ್ದರೂ ಒಟ್ಟಿನಲ್ಲಿ ಈ ಕ್ರಮಗಳು ಮಿತಿಮೀರಿದುದರಿಂದ ಸಾರ್ವತ್ರಿಕ ಹಾನಿಯುಂಟಾಗಿದೆ. ಇಂಥ ಕ್ರಮಗಳನ್ನು ಕೂಲಂಕಷವಾಗಿ ವಿಮರ್ಶಿಸಿ, ಉಪಯುಕ್ತ ಬದಲಾವಣೆಗಳನ್ನು ಸೂಚಿಸಿ ಅಂತಾರಾಷ್ಟ್ರೀಯ ವ್ಯಾಪಾರವನ್ನು ಮುಕ್ತ ಹಾಗೂ

ಸರ್ವತೋಮುಖ ವ್ಯಾಪಾರ ಪದ್ಧತಿಯ (ಮಲ್ಟಿಲ್ಯಾಟರಲ್) ಅನುಸಾರವಾಗಿಯೂ ಆರ್ಥಿಕಾಭಿವೃದ್ಧಿಯ ವಿವಿಧ ಹಂತಗಳಲ್ಲಿ ಇರುವ ಎಲ್ಲ ರಾಷ್ಟ್ರಗಳ ಸಾರ್ವತ್ರಿಕಹಿತಕ್ಕೆ ಅನುಸಾರವಾಗಿಯೂ ನಡೆಯುವಂತೆ ಮಾಡುವುದೇ ಎರಡನೆಯ ಮಹಾಯುದ್ಧದ ತರುವಾಯದ ಅಂತಾರಾಷ್ಟ್ರೀಯ ವ್ಯಾಪಾರ ನೀತಿಯ ಹೆಗ್ಗುರಿಯಾಗಿದೆ.

ಉದಾರ ವಾಣಿಜ್ಯನೀತಿಯ ಆಧಾರದ ಮೇಲೆ ಪ್ರಪಂಚದ ವ್ಯಾಪಾರವನ್ನು ವಿಸ್ತರಿಸುವುದರ ಮೂಲಕ ಎಲ್ಲ ಜನಾಂಗಗಳ ಆರ್ಥಿಕ ಕ್ಷೇಮಾಭಿವೃದ್ಧಿ ಆಗುವಂತೆ ಮಾಡುವ ಉದ್ದೇಶದಿಂದ 1948ರಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ಸಂಸ್ಥೆಯೊಂದನ್ನು ಸ್ಥಾಪಿಸಲು ಹವಾನಾ ಪ್ರಣಾಳಿಕೆ ಎಂಬ ಕರಡು ಒಪ್ಪಂದವನ್ನು ತಯಾರಿಸಲಾಯಿತು. ಆದರೆ ಈ ಹಿರಿಯ ಸಂಸ್ಥೆಯ ಸ್ಥಾಪನೆಗೆ ಪ್ರಮುಖ ವ್ಯಾಪಾರೀ ರಾಷ್ಟ್ರಗಳ ಸಮ್ಮತಿ ದೊರೆಯದೆ ಅದು ಅಸ್ತಿತ್ವಕ್ಕೆ ಬರಲಿಲ್ಲ. ಇದಕ್ಕೆ ಪ್ರತಿಯಾಗಿ ಅದರಷ್ಟು ವ್ಯಾಪಕವಲ್ಲದ ಸುಂಕ ಹಾಗೂ ವ್ಯಾಪಾರದ ಸಾರ್ವತ್ರಿಕ ಒಪ್ಪಂದವೊಂದು (ಜಿ.ಎ.ಟಿ.ಟಿ.) 1948ರಲ್ಲಿ ಜಾರಿಗೆ ಬಂದಿತು. ಅಂದಿನಿಂದಲೂ ಅಂತಾರಾಷ್ಟ್ರೀಯ ವ್ಯಾಪಾರಕ್ಷೇತ್ರದಲ್ಲಿ ಇದು ಆರ್ಥಿಕ ಸಹಕಾರದ ಅತಿ ಮುಖ್ಯಯಂತ್ರವಾಗಿ ಅನೇಕ ವಿಧದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರಾಭಿವೃದ್ಧಿಗೆ ಅನುಕೂಲವಾಗಿದೆ. ಆದರೆ ನಿರೀಕ್ಷಿಸಿದಷ್ಟು ಯಶಸ್ವಿಯಾಗಿ ಮೂಲ ಗುರಿಗಳ ಸಾಧನೆಗೆ ಶ್ರಮಿಸಲು ಇದಕ್ಕೆ ಸಾಧ್ಯವಾಗಿಲ್ಲವೆಂಬ ಆಕ್ಷೇಪಣೆಗೆ ಒಳಗಾಗಿದೆ. ಅಭಿವೃದ್ಧಿಯಾಗುತ್ತಿರುವ ರಾಷ್ಟ್ರಗಳ ರಫ್ತು ವ್ಯಾಪಾರ ಮುಂದುವರಿದಿರುವ ರಾಷ್ಟ್ರಗಳ ರಫ್ತುವ್ಯಾಪಾರ ಬೆಳೆದಿರುವಂತೆ ಬೆಳೆಯದಿರುವುದು, ಪ್ರಾಥಮಿಕ (ಪ್ರೈಮರಿ) ಉತ್ಪನ್ನಗಳ ಬೆಲೆಗಳಲ್ಲಿ ಅಲ್ಪಾವಧಿ ಏರುಪೇರುಗಳು ಹೆಚ್ಚಾಗಿರುವುದು, ರಾಷ್ಟ್ರಗಳ ವ್ಯಾವಸಾಯಿಕ ರಕ್ಷಣಾನೀತಿಯನ್ನು ಹೆಚ್ಚಾಗಿ ಅನುಸರಿಸುತ್ತಿರುವುದು ಇವು ಅತಿ ಮುಖ್ಯ ಸಮಸ್ಯೆಗಳು. ಈ ಸಮಸ್ಯೆಗಳ ಬಗ್ಗೆಯೂ ಜಿ.ಎ.ಟಿ.ಟಿ. ಪರಿಶೀಲನೆಗಳನ್ನು ಕೈಗೊಂಡು ಕಾರ್ಯಾಚರಣೆಗಳನ್ನು ರೂಪಿಸುವ ಪ್ರಯತ್ನ ಮಾಡುತ್ತಿರುವುದಾದರೂ ಕಾರ್ಯತಃ ಅನೇಕ ತಡೆಗಳನ್ನು ಅದು ಎದುರಿಸುತ್ತಿದೆ. ಒಟ್ಟಿನಲ್ಲಿ ಅಭಿವೃದ್ಧಿರಾಷ್ಟ್ರಗಳ ವ್ಯಾಪಾರಸಮಸ್ಯೆಗೆ ಇದರ ಮೂಲಕ ಸೂಕ್ತಪರಿಹಾರ ಲಭಿಸದಿರುವುದೇ ವ್ಯಾಪಾರ ಮತ್ತು ಅಭಿವೃದ್ಧಿಯ ವಿಶ್ವಸಂಸ್ಥೆಯ ಸಮ್ಮೇಳನ ಎಂಬ ವಿಶ್ವಸಂಸ್ಥೆಯ ಉಪಸಂಸ್ಥೆಯ ಜನನಕ್ಕೆ ಕಾರಣವಾಯಿತು. 1964ರಲ್ಲಿ ಕಾರ್ಯಾಚರಣೆ ಆರಂಭಿಸಿದ ಈ ಸಂಸ್ಥೆ ಅಂತಾರಾಷ್ಟ್ರೀಯ ವಾಣಿಜ್ಯನೀತಿಗೆ ಒಂದು ಹೊಸ ಸ್ಫೂರ್ತಿ ನೀಡುತ್ತಿದೆ. ವ್ಯಾಪಾರದಲ್ಲಿ ಹಿಂದುಳಿದಿರುವ ರಾಷ್ಟ್ರಗಳ ಆರ್ಥಿಕಾಭಿವೃದ್ಧಿ ಹೆಚ್ಚು ಶೀಘ್ರವಾಗಿ ನೆರವೇರುವಂತೆ ಮಾಡುವುದರಲ್ಲಿ ಈ ಸಂಸ್ಥೆ ಮಹತ್ತ್ವದ ಪಾತ್ರ ವಹಿಸುವುದೆಂದು ನಿರೀಕ್ಷಿಸಲಾಗಿದೆ. (ಎ.ಪಿ.ಎಸ್.)

**ಅಂತಾರಾಷ್ಟ್ರೀಯ ಶಾಂತಸೌರವರ್ಷ** : 1964 ಜನವರಿ 1 – 1965 ಡಿಸೆಂಬರ್ 31 ವರೆಗಿನ 24 ತಿಂಗಳ ಅವಧಿಗೆ ಈ ಹೆಸರಿದೆ (ಇಂಟರ್‌ನ್ಯಾಷನಲ್ ಕ್ವಯಟ್ ಸನ್ ಇಯರ್–ಐ.ಕ್ಯು.ಎಸ್.ವೈ). 1957 – 58ರ ಅವಧಿಯಲ್ಲಿ ನಡೆದ ಅಂತಾರಾಷ್ಟ್ರೀಯ ಭೂಭೌತ ವರ್ಷದಲ್ಲಿ (ಐ.ಜಿ.ವೈ) ಭೂಗ್ರಹ ಹಾಗೂ ಅದರ ಸುತ್ತಲಿರುವ ವಾತಾವರಣದ ಬಗ್ಗೆ ಭೌತಾನ್ವೇಷಣೆಗಳನ್ನು ಪ್ರಪಂಚದ ಸು. 70 ರಾಷ್ಟ್ರಗಳು ಕೈಗೊಂಡಿದ್ದುವು. ಸೂರ್ಯನಲ್ಲಿ ನಡೆಯುವ ಘಟನಾವಳಿಗಳು ಅಧಿಕವಾಗಿದ್ದಾಗ, ಸೂರ್ಯಮಂಡಲದ ಮೇಲಿನ ಜ್ವಾಲಾಜಿಹ್ವೆಗಳು ಮತ್ತು ಉನ್ನತಿಗಳಿಗೆ ಸಂಬಂಧಪಟ್ಟಂತಿದ್ದ ಗರಿಷ್ಠ ಸೌರ ಕಲೆಗಳ ಆವರ್ತದ ಕಾಲ ಒದಗಿದಾಗ ಸೂರ್ಯನನ್ನು ಪರೀಕ್ಷಿಸ ಬೇಕೆಂಬುದೇ ಉದ್ದೇಶವಾಗಿದ್ದ ಕಾರಣ ಭೂಭೌತವರ್ಷದ ಅವಧಿಯನ್ನು ಆಯ್ಕೆ ಮಾಡಲಾಯಿತು. ಈ ಅವಧಿಯಲ್ಲಿ ಮಾಡಿದ ವೀಕ್ಷಣೆ, ಅಧ್ಯಯನ ಹಾಗೂ ಸಂಶೋಧನೆ–




ಇವುಗಳ ಪರಣಾಮವಾಗಿ ಅಧಿಕ ಪ್ರಮಾಣದಲ್ಲಿ ವಿದ್ಯುತ್ಪೂರಿತ ಅನಿಲಕಣಗಳನ್ನು ಹೊಂದಿರುವ ಪ್ಲಾಸ್ಮಾ ರಾಶಿಯಾದ ಹಾಗೂ ನಿರಂತರ ಕ್ಷೋಭೆಗಳಿಂದ (ಚಟುವಟಿಕೆ) ಕೂಡಿರುವ ಸೂರ್ಯನ ಅನ್ವೇಷಣೆ ಸಾಧ್ಯವಾಯಿತು. ಹಾಗೆಯೇ ಸೂರ್ಯ ಶಾಂತವಾಗಿರುವ ಅಂದರೆ, ಸೂರ್ಯನಲ್ಲಿ ನಡೆಯುವ ಘಟನೆಗಳ ಹಾಗೂ ಸೌರಕಲೆಗಳ ಕನಿಷ್ಠ ಆವರ್ತದ ಸಮಯವನ್ನೇ 1964–65ರ ಅವಧಿಯಲ್ಲಿ ಶಾಂತಸೌರವರ್ಷವೆಂದು ಆಯ್ಕೆ ಮಾಡಿ ಸೂರ್ಯಾನ್ವೇಷಣೆ ಮಾಡಲಾಯಿತು. ಶಾಂತಸೌರವರ್ಷದ ಲಾಂಛನ ವನ್ನು ಚಿತ್ರದಲ್ಲಿ ಕಾಣಬಹುದು. ಈ ಅವಧಿಯಲ್ಲಿ ಸೂರ್ಯನ ವೀಕ್ಷಣೆ ಹಾಗೂ ಸಂಶೋಧನೆ ಎಡೆಬಿಡದೆ ದಿನದ 24 ಘಂಟೆಗಳ ಪರ್ಯಂತ ನಿರಂತರವಾಗಿ ಸಾಗಲು ಪ್ರಪಂಚದ ನಾನಾ ಕಡೆಗಳಲ್ಲಿ ವಿವಿಧ ರೀತಿಯ ವೀಕ್ಷಣಾಲಯಗಳನ್ನು ಸ್ಥಾಪಿಸ ಲಾಯಿತು. ಈ ಒಂದು ಕಾರ್ಯದಲ್ಲಿ ಪ್ರಪಂಚದ ನೂರಕ್ಕೂ ಹೆಚ್ಚು ರಾಷ್ಟ್ರಗಳು ಪಾಲ್ಗೊಂಡಿದ್ದುವು. ಒಂದು ಕೇಂದ್ರ ಸಂಗ್ರಹಿಸಿದ ಅಂಕಿ ಅಂಶಗಳನ್ನು ಇತರ ಎಲ್ಲ ಕೇಂದ್ರಗಳಿಗೂ ತಿಳಿಸುವ ವ್ಯವಸ್ಥೆಯೂ ಇದ್ದಿತು.

ಈ ಅವಧಿಯಲ್ಲಿ ವೀಕ್ಷಣೆ ಗಳನ್ನು ನಡೆಸಲು ಅನುಕೂಲವಾಗು ವಂತೆ 1962ರಲ್ಲಿ ಹಾರಿಸಿದ ಆರ್ಬಿಟಿಂಗ್ ಸೋಲಾರ್ ಅಬ್ಸರ್ ವೇಟರಿ (ಒ.ಎಸ್.ಒ.) ಯಂಥ ಕೃತಕ ಉಪಗ್ರಹಗಳ ಸಹಾಯದಿಂದ ಸೂರ್ಯಮಂಡಲದ ಮೇಲಿನ ತೇಜೋ ಪ್ರವಾಹಗಳು (ಸೋಲಾರ್ ಫ್ಲೇರ್ಸ್) ಹಾಗೂ ಅವುಗಳ ಪರಿಣಾಮ ದಿಂದಾಗಿ ಅಯೋನಾವರಣದಲ್ಲಿನ ಸ್ತರಗಳಲ್ಲಿನ ಬದಲಾವಣೆಗಳನ್ನೂ ಭೂಕಾಂತಕ್ಷೇತ್ರದಲ್ಲಿ ಆಗುವ ಬದಲಾ ವಣೆಗಳನ್ನೂ ವೀಕ್ಷಿಸಲಾಯಿತು. ಅಲ್ಲದೆ ಅಂಟಾರ್ಕ್‌ಟಿಕ್ ಮತ್ತು ಉತ್ತರ ಧ್ರುವಪ್ರದೇಶದಲ್ಲಿ ಅನೇಕ ಹವಾಮಾನ ಕೇಂದ್ರಗಳನ್ನು ಸ್ಥಾಪಿಸಿ, ಅಧ್ಯಯನ ಮಾಡಲಾಯಿತು.

ಶಾಂತಸೌರವರ್ಷದ ಅವಧಿಯಲ್ಲಿ ಮುಖ್ಯವಾಗಿ ಸೂರ್ಯನ ಬಗ್ಗೆ ನಡೆಸಿದ ವೀಕ್ಷಣೆ, ಅಧ್ಯಯನ ಹಾಗೂ ಸಂಶೋಧನೆಗಳು ಸೂರ್ಯನ ಮೇಲ್ಮೈ ಬಗ್ಗೆ, ಭೂಕಾಂತಕ್ಷೇತ್ರ ಹಾಗೂ ಅದರ ಪ್ರಭಾವದ ಬಗ್ಗೆ, ಭೂಮಿಯನ್ನಾವರಿಸಿರುವ ವಾಯುಮಂಡಲ ಮತ್ತು ಅಯಾನ್‌ಗೋಳ, ವಾನ್ ಅಲನ್ ವಿಕಿರಣ ಪಟ್ಟಿ, ಭೂಕಾಂತ ಧ್ರುವಪ್ರಭೆ–ಮುಂತಾದ ವಿಚಾರಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲಿವೆ. ಈ ಅವಧಿಯಲ್ಲಿ ನಡೆದ ಅಭ್ಯಾಸಗಳ ಫಲವಾಗಿ ಸೂರ್ಯನನ್ನು, ಸೂರ್ಯ–ಭೂಮಿ ಇವುಗಳ ಸಂಬಂಧವನ್ನು ಕುರಿತು ಸಂಗ್ರಹ ಮಾಡಿಕೊಂಡಿರುವ ಜ್ಞಾನ ಅಪಾರ. *

**ಅಂತಾರಾಷ್ಟ್ರೀಯ ಸಂಬಂಧಗಳು** : ಆಧುನಿಕ ಯುಗದ ವಿಶ್ವವ್ಯಾಪಾರಗಳಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳು ಬಹು ಪ್ರಮುಖವಾದ ಸ್ಥಾನವನ್ನು ಹೊಂದಿವೆ. ಅಂತಾರಾಷ್ಟ್ರೀಯ ಸಂಬಂಧಗಳು ಈಗ ಒಂದು ವಿಶೇಷ ಅಧ್ಯಯನವಾಗಿ ಪರಿಗಣಿಸಲ್ಪಟ್ಟಿವೆ. ಅವು ಇತರ ಸಮಾಜಶಾಸ್ತ್ರಗಳಂತೆ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಮಾನವನ ಮತ್ತು ರಾಷ್ಟ್ರಗಳ ನಡೆವಳಿಕೆಗೆ ಸಂಬಂಧಪಟ್ಟಿವೆ. ಕೆಲವು ಸಂದರ್ಭಗಳಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳ ಶಾಖೆಯನ್ನು ರಾಜಕೀಯಶಾಸ್ತ್ರದ ಒಂದು ಮುಖ್ಯವಾದ ಭಾಗವೆಂದು ಪರಿಗಣಿಸಲಾಗಿದೆ.

ಈಗಿನ ಕಾಲದಲ್ಲಿ ಯಾವ ರಾಷ್ಟ್ರವೇ ಆಗಲಿ, ಬೇರೆ ರಾಷ್ಟ್ರಗಳೊಡನೆ ಸಂಬಂಧ ಬೆಳೆಸದೆ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಿಲ್ಲ. ಅಂದರೆ, ಆಧುನಿಕ ರಾಷ್ಟ್ರಗಳು ಪ್ರತ್ಯೇಕವಾಗಿ ಜೀವಿಸಲಾರವು. ಅವು ಯಾವಾಗಲೂ ಪ್ರಪಂಚದ ಇತರ ರಾಷ್ಟ್ರಗಳೊಡನೆ ಸಂಬಂಧ ಬೆಳೆಸಿಯೇ ಜೀವಿಸಬೇಕು. ಆದುದರಿಂದ ಪ್ರತಿ ರಾಷ್ಟ್ರವೂ ಬೇರೆ ರಾಷ್ಟ್ರಗಳೊಂದಿಗೆ ಸರಿಯಾದ ಸಂಬಂಧವನ್ನು ಇಟ್ಟುಕೊಳ್ಳಲೇಬೇಕು. ಇಂಥ ಸಂದರ್ಭ ಅಂತಾರಾಷ್ಟ್ರೀಯ ಸಂಬಂಧಕ್ಕೆ ಎಡೆಮಾಡಿಕೊಟ್ಟಿದೆ. ಆದುದರಿಂದ ಇಂದಿನ ರಾಜಕೀಯ ಜೀವನದಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳು ಬಹು ಪ್ರಮುಖವಾಗಿವೆ. ಈಗ ಪ್ರತಿಯೊಬ್ಬ ಮಾನವನೂ ಇತರ ಮಾನವರ ಜೊತೆಯಲ್ಲಿ ಸಂಬಂಧವನ್ನು ಬೆಳೆಸದೆ ಜೀವಿಸುವುದು ಎಷ್ಟು ಕಷ್ಟವೋ ಅದೇ ರೀತಿ ಒಂದು ರಾಷ್ಟ್ರವೂ ಬೇರೆ ರಾಷ್ಟ್ರಗಳೊಡನೆ ಸಂಬಂಧ ಬೆಳೆಸದೆ ಜೀವಿಸುವುದೂ ಕಷ್ಟ. ಈಗ ಅನೇಕ ಕಾರಣಗಳಿಂದ ಪ್ರಪಂಚದ ಯಾವುದೋ ಒಂದು ಭಾಗದಲ್ಲಿ ಆಗುವ ಘಟನೆಗಳು, ಎಲ್ಲ ರಾಷ್ಟ್ರಗಳ ಜನಜೀವನ ಮತ್ತು ರಾಷ್ಟ್ರನೀತಿಗಳ ಮೇಲೆ ಪರಿಣಾಮ ಬೀರುತ್ತವೆ. ಈ ಸಂದರ್ಭ ಆಧುನಿಕ ಸಾರಿಗೆ ಮತ್ತು ಸಂಪರ್ಕ ಸಾಧನಗಳಿಂದಿರಬಹುದು ಅಥವಾ ಆಧುನಿಕ ರಾಷ್ಟ್ರಗಳ ಪರಸ್ಪರ ಅವಲಂಬನದಿಂದಿರಬಹುದು. ಈಗ ಭೌಗೋಳಿಕವಾಗಿ ಒಂದು ಪ್ರಪಂಚವಿದ್ದರೂ ರಾಜಕೀಯ, ಆರ್ಥಿಕ ಮತ್ತು ತಾತ್ತ್ವಿಕ ದೃಷ್ಟಿಯಿಂದ ಅದು ಬೇರೆಬೇರೆ ಪ್ರಪಂಚಗಳಾಗಿ ವಿಂಗಡವಾಗಿದೆ. ಇಂಥ ಪ್ರಪಂಚದಲ್ಲಿ ಪ್ರತಿಯೊಂದು ರಾಷ್ಟ್ರವೂ ಬೇರೆ ರಾಷ್ಟ್ರಗಳೊಡನೆ ಸಂಬಂಧ ಬೆಳೆಸಲೇಬೇಕು. ಈ ಸಂಬಂಧಗಳನ್ನು ಅಂತಾರಾಷ್ಟ್ರೀಯ ಸಂಬಂಧಗಳೆಂದು ಕರೆಯುತ್ತಾರೆ.

ಅಂತಾರಾಷ್ಟ್ರೀಯ ಸಂಬಂಧ ಒಂದು ಶಾಖೆಯೋಪಾದಿಯಲ್ಲಿ ಬೆಳೆಯುತ್ತಿದೆ. ಅದನ್ನು ಕೆಲವು ಸಂದರ್ಭಗಳಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳ ಶಾಖೆಯೆಂದು ಕರೆಯುತ್ತಾರೆ. ಕೆಲವು ಸಾರಿ ಇದು ಒಂದು ದೇಶದ ವಿದೇಶಾಂಗ ನೀತಿಗೆ (ಫಾರಿನ್ ಪಾಲಿಸಿ) ಸಂಬಂಧಪಟ್ಟಿರುತ್ತದೆ. ಪ್ರಪಂಚದ ವ್ಯವಹಾರಗಳೂ ಇದರಲ್ಲಿ ಸೇರುತ್ತವೆ. ಇದು ಪ್ರಪಂಚದ ಜನಜೀವನ, ಚಟುವಟಿಕೆ ಮತ್ತು ಅಭಿಪ್ರಾಯಗಳಿಗೆ ಸಂಬಂಧಿಸಿರುವುದಲ್ಲದೆ ರಾಷ್ಟ್ರಗಳ ವ್ಯವಹಾರಗಳಿಗೆ ಕೂಡ ಸಂಬಂಧಿಸಿರುತ್ತದೆ. ಈ ಸಂಬಂಧಗಳು ಸರ್ಕಾರದ ಕಟ್ಟಳೆಗಳು ಮತ್ತು ಕರಾರುಗಳಿಂದ ಗೊತ್ತುಮಾಡಲ್ಪಟ್ಟಿರುತ್ತವೆ. ಅಂತಾರಾಷ್ಟ್ರೀಯ ರಾಜಕೀಯವೂ ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಆಗ ಒಂದು ದೇಶದ ರಾಜಕೀಯ ಚಟುವಟಿಕೆಗಳು ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಸೇರುತ್ತವೆ. ಇದರಲ್ಲಿ ಒಂದು ದೇಶದ ವಿದೇಶಾಂಗ ನೀತಿ ಯಾವ ರೀತಿ ಬೇರೆ ದೇಶಗಳ ನೀತಿಗಳನ್ನು ಪ್ರಚೋದಿಸುತ್ತವೆ ಎನ್ನುವುದನ್ನು ಕಾಣಬಹುದು ಈ ಶಾಖೆಯ ಮೇಲೆ ಪ್ರಪಂಚದ ರಾಷ್ಟ್ರಗಳ ಭೌಗೋಳಿಕ

ಅಂಶ, ಜನಸಂಖ್ಯೆ, ಸರ್ಕಾರದ ಸ್ವರೂಪ, ರಾಷ್ಟ್ರೀಯ ಮುಂದಾಳುತನ ಮತ್ತು ತತ್ತ್ವಗಳು ಪ್ರಭಾವ ಬೀರುತ್ತವೆ. ಅಂತಾರಾಷ್ಟ್ರೀಯ ಸಂಬಂಧಗಳ ಶಾಖೆಯ ವಿಷಯವಾಗಿ ಕೆಲವು ಭಿನ್ನಾಭಿಪ್ರಾಯ ಗಳಿವೆ. ಅದರ ಪ್ರಕಾರ ಕೆಲವು ಸಾರಿ ಇದು ಒಂದು ಸ್ವತಂತ್ರ ವಿಚಾರವಾಗಿ ಪರಿಗಣಿಸ ಲ್ಪಡುವುದಿಲ್ಲ. ಅನೇಕ ವಿಚಾರಗಳನ್ನು ಇದರಲ್ಲಿ ಸೇರಿಸಲಾಗುತ್ತದೆ. ಆಗ ಇದರಲ್ಲಿ ರಾಜಕೀಯಶಾಸ್ತ್ರ, ಅರ್ಥಶಾಸ್ತ್ರ, ಚರಿತ್ರೆ, ಭೂಗೋಳ ಮತ್ತು ನ್ಯಾಯಶಾಸ್ತ್ರ ಸೇರುತ್ತವೆ. ಆ ಸಂದರ್ಭಗಳಲ್ಲಿ ಇದು ಶಕ್ತಿರಾಜಕೀಯದ (ಪವರ್ ಪಾಲಿಟಿಕ್ಸ್) ಪ್ರಭಾವಕ್ಕೊಳಪಡುತ್ತದೆ. ಅದರ ಸ್ವಭಾವ ಕಾಲಕ್ಕನುಗುಣವಾಗಿ ಬದಲಾವಣೆ ಹೊಂದುತ್ತ ಹೋಗುತ್ತದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಈ ಶಾಖೆ ಒಂದು ಸ್ವತಂತ್ರ ವಿಷಯವಾಗಿ ಪರಿಗಣಿಸಲ್ಪಡುತ್ತದೆ. ಆಗ ಇದು ತನ್ನದೇ ಆದ ಸ್ವರೂಪ ಮತ್ತು ವ್ಯಾಪ್ತಿಯನ್ನು ಹೊಂದಿರುತ್ತದೆ. ಇದು ಪ್ರಪಂಚ ಸಮಾಜಕ್ಕೆ ಸಂಬಂಧಪಟ್ಟಿದ್ದಾಗಿ ಇದರ ವ್ಯಾಪ್ತಿಯಲ್ಲಿ ಪ್ರಪಂಚದ ರಾಷ್ಟ್ರಗಳು, ಜನರು, ಸರ್ಕಾರಗಳು, ಒಕ್ಕೂಟಗಳು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಸೇರುತ್ತವೆ. ಇದು ದೇಶಗಳ ವಿದೇಶಾಂಗ ನೀತಿಗೂ ಸಂಬಂಧಪಟ್ಟಿರುತ್ತದೆ. ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ತಿಳಿದುಕೊಳ್ಳಲು ಇದು ಬಹು ಸಹಾಯಕಾರಿ. ಅಲ್ಲದೆ ಇದು ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನೂ ಸೂಚಿಸುತ್ತದೆ. ಯಾವುದೋ ಗೊತ್ತಾದ ಸಂದರ್ಭಗಳಲ್ಲಿ ಮಾನವನೂ ರಾಷ್ಟ್ರಗಳೂ ಹೇಗೆ ಕೆಲಸ ಮಾಡಬಹುದೆಂದು ತಿಳಿವಳಿಕೆ ಕೊಡುತ್ತದೆ. ಮಾನವ ಮತ್ತು ರಾಷ್ಟ್ರಗಳು ಪ್ರಪಂಚದಲ್ಲಿ ಯಾವ ಪರಿಸ್ಥಿತಿಗೆ ಪ್ರೋತ್ಸಾಹ ಕೊಡಬೇಕು ಮತ್ತು ಯಾವ ಪರಿಸ್ಥಿತಿಗಳನ್ನು ತಡೆಗಟ್ಟಬೇಕೆನ್ನುವುದನ್ನು ತಿಳಿಸುತ್ತದೆ. ಇದು ಅಂತಾರಾಷ್ಟ್ರೀಯ ಸೌಹಾರ್ದ ಮತ್ತು ಸಾಮರಸ್ಯಗಳನ್ನು ಸ್ಥಾಪಿಸುವ ಮಾರ್ಗಗಳನ್ನು ತಿಳಿಸುತ್ತದೆ; ಅಲ್ಲದೆ ಅಂತಾರಾಷ್ಟ್ರೀಯ ಪರಿಸ್ಥಿತಿ ಮತ್ತು ನ್ಯೂನತೆಗಳನ್ನು ತಿಳಿಸಿ ಅವಕ್ಕೆ ಪರಿಹಾರೋಪಾಯಗಳನ್ನೂ ಸೂಚಿಸುತ್ತದೆ. ಒಟ್ಟಿನಲ್ಲಿ ಇದು ವಿಶ್ವ ಸಮಾಜದ ಅರಿವನ್ನು ಮಾನವನಿಗೆ ಉಂಟುಮಾಡಿಕೊಡುತ್ತದೆ.

ಅಂತಾರಾಷ್ಟ್ರೀಯ ಸಂಬಂಧಗಳು ಬಹು ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿವೆ. ಪ್ರಾಚೀನ ಕಾಲದಲ್ಲಿ ಕೆಲವು ರಾಷ್ಟ್ರಗಳು ತಮ್ಮ ಸಂಪರ್ಕವನ್ನು ಬೇರೆ ರಾಷ್ಟ್ರಗಳೊಡನೆ ಬೆಳೆಸಿಕೊಂಡಿದ್ದುವು. ಆದರೆ ಆಗ ಇವಕ್ಕೆ ಅಷ್ಟು ಪ್ರಾಮುಖ್ಯವಿಲ್ಲದಿದ್ದರೂ ಆಧುನಿಕ ಕಾಲದಲ್ಲಿ ಪ್ರತಿಯೊಂದು ರಾಷ್ಟ್ರವೂ ಅಂತಾರಾಷ್ಟ್ರೀಯ ಸಂಬಂಧಗಳಿಗೆ ಗಮನ ಕೊಡಲೇಬೇಕಾಗಿದೆ. 20ನೆಯ ಶತಮಾನದಲ್ಲಿ ಯಾವ ರಾಷ್ಟ್ರವೂ ಇವುಗಳನ್ನು ಕಡೆಗಣಿಸುವ ಹಾಗಿಲ್ಲ. ಏಕೆಂದರೆ ಅಂತರರಾಷ್ಟ್ರೀಯ ರಾಜಕೀಯದಲ್ಲಿ ಒಂದು ರಾಷ್ಟ್ರದ ಅಳಿವು ಉಳಿವು ಅದರ ಅಂತಾರಾಷ್ಟ್ರೀಯ ಸಂಬಂಧಗಳ ಮೇಲೆ ನಿಂತಿದೆ. ಇದೇ ಸಂದರ್ಭವೇ ಇದರ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ಕೊಟ್ಟಿದೆ. ನಾನಾ ಕಾರಣಗಳಿಂದ ಅಂತಾರಾಷ್ಟ್ರೀಯ ಸಂಬಂಧಗಳು ಈಗಿನ ಕಾಲದಲ್ಲಿ ಪ್ರಾಮುಖ್ಯ ಪಡೆದಿವೆ. ಇದು ಪ್ರಪಂಚದ ಸನ್ನಿವೇಶವನ್ನು ತಿಳಿಯಲು ಅವಕಾಶವನ್ನುಂಟುಮಾಡುತ್ತದೆ. ಯುದ್ಧದಿಂದ ಆಗುವ ಪರಿಣಾಮಗಳನ್ನು ತಿಳಿಸಿ, ಅವಕ್ಕೆ ಪರಿಹಾರೋಪಾಯಗಳನ್ನು ಸೂಚಿಸುತ್ತದೆ; ಅಂತಾರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದದ ವೈಶಿಷ್ಟ್ಯವನ್ನು ತಿಳಿಸಿ ಅದನ್ನು ಕಾಪಾಡಿಕೊಂಡು ಹೋಗುವ ಮಾರ್ಗಗಳನ್ನು ಸೂಚಿಸುತ್ತದೆ; ಪ್ರಪಂಚದಲ್ಲಿ ಒದಗಬಹುದಾದ ಯುದ್ಧಗಳನ್ನು ತಡೆಗಟ್ಟಿ, ಅದರಿಂದ ಮಾನವ ಜನಾಂಗದ ಏಳಿಗೆಗೆ ಶ್ರಮಿಸುತ್ತಿದೆ. ಪ್ರಪಂಚದಲ್ಲಿ ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತೆಯ ಸಂಸ್ಥೆಗಳು ಅಭಿವೃದ್ಧಿ ಹೊಂದಲು ಇದು ಪ್ರೋತ್ಸಾಹಿಸುತ್ತದೆ. ಇದರ ಜೊತೆಗೆ ಅಂತಾರಾಷ್ಟ್ರೀಯ ವ್ಯವಹಾರ ನಿರ್ವಹಣೆಗೆ ಅವಕಾಶ ಮಾಡಿಕೊಡುತ್ತದೆ. ಪ್ರಪಂಚದ ಪ್ರತಿಯೊಬ್ಬ ನಾಗರಿಕನ ಮತ್ತು ಪ್ರತಿ ರಾಷ್ಟ್ರದ ಮೇಲೆ ಇದರ ಪ್ರಭಾವ ಬಿದ್ದಿರುವುದರಿಂದ ಅಂತಾರಾಷ್ಟ್ರೀಯ ವ್ಯವಹಾರಗಳಿಗೆ ಇಂದಿನ ಪ್ರಪಂಚದಲ್ಲಿ ಹೆಚ್ಚಿನ ಪ್ರಾಧಾನ್ಯ ಸಿಕ್ಕಿದೆ. (ಎಂ.ಕೆ.ಆರ್.)

**ಅಂತಾರಾಷ್ಟ್ರೀಯ ಸಂಸ್ಥೆಗಳು :** ವಿಶ್ವವೇ ಒಂದು ಕುಟುಂಬ ಎಂಬ ಭಾವನೆ ಬೆಳೆದಂತೆಲ್ಲ ಜಾಗತಿಕ ಸಮಸ್ಯೆಗಳನ್ನು ಸೌಹಾರ್ದದಿಂದ ಬಿಡಿಸಬಲ್ಲ ಜಾಗತಿಕ ಪ್ರಗತಿಯನ್ನು ಸಾಧಿಸಬಲ್ಲ ಅಂತಾರಾಷ್ಟ್ರೀಯ ಸಂಸ್ಥೆಗಳ ಅಗತ್ಯ ಹೆಚ್ಚಾಗುತ್ತದೆ. ಇಂಥ ಸಂಸ್ಥೆಗಳನ್ನು ಸ್ಥಾಪನೆ ಮಾಡಬೇಕೆನ್ನುವ ಅಭಿಪ್ರಾಯ ಹೊಸದೇನಲ್ಲ. ಪ್ರಪಂಚ ಅನೇಕ ವರ್ಷಗಳಿಂದಲೂ ಇವುಗಳ ಸ್ಥಾಪನೆಗೆ ಪ್ರಯೋಗಗಳನ್ನು ಮಾಡುತ್ತಲೇ ಇದೆ. ಪ್ರಾಚೀನ ಗ್ರೀಕರು ಇಂಥ ಕೆಲವು ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಪುರಾತನ ರೋಮನ್ನರೂ ಇಂಥ ಸಂಸ್ಥೆಯ ಅಗತ್ಯವನ್ನು ಮನಗಂಡಿದ್ದರು. ಆಧುನಿಕ ಕಾಲದಲ್ಲಿ ಅನೇಕ ತತ್ತ್ವಜ್ಞಾನಿಗಳೂ ರಾಜನೀತಿನಿಪುಣರೂ ಈ ಬಗೆಯ ಸಂಸ್ಥೆಗಳ ಸ್ಥಾಪನೆಗೆ ಒತ್ತಾಯ ಮಾಡಿದ್ದಾರೆ. ಅವರಲ್ಲಿ ವಿಲಿಯಮ್ ಪೆನ್, ಗ್ರೋಷಿಅಸ್, ರೂಸೋ, ಬೆಂಥಾಮ್ ಮತ್ತು ಕ್ಯಾಂಟ್ ಮುಖ್ಯರು. ಈ ದೃಷ್ಟಿಯಿಂದ ನಿಜವಾದ ಅಂತಾರಾಷ್ಟ್ರೀಯ ಸಂಸ್ಥೆ 19ನೆಯ ಶತಮಾನದಲ್ಲೇ ಪ್ರಾರಂಭವಾಯಿತೆನ್ನಬಹುದು. ಆದರೆ, ಒಂದು ಗೊತ್ತಾದ ಆಕಾರ ಪಡೆದದ್ದು 20ನೆಯ ಶತಮಾನದಲ್ಲಿ.

ಆಧುನಿಕ ಅಂತಾರಾಷ್ಟ್ರೀಯ ಸಂಸ್ಥೆಯ ಮಾದರಿ 1948ರ ವೆಸ್ಟ್‌ಫೇಲಿಯ ಶಾಂತಿಕೌಲಿನಿಂದ ಉದ್ಭವಿಸಿತು. ಈ ಕೌಲು ಅಂತಾರಾಷ್ಟ್ರೀಯ ಸಂಸ್ಥೆಯ ಸ್ಥಾಪನೆಯಲ್ಲಿ ಒಂದು ಬಹುಮುಖ್ಯವಾದ ಮೈಲಿಗಲ್ಲಾಗಿದೆ. ವಿಯೆನ್ನ ಕಾಂಗ್ರೆಸ್ (1814–15) ನೆಪೋಲಿಯನ್ನನ ಪತನದ ಅನಂತರ ಸೇರಿ, ಪ್ರಪಂಚದ ವ್ಯವಹಾರಗಳನ್ನು ಪರಿಶೀಲಿಸಿ, ಇಂಥ ಅಂತಾರಾಷ್ಟ್ರೀಯ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು. ಇವುಗಳ ಜೊತೆ 19 ಮತ್ತು 20ನೆಯ ಶತಮಾನದ ಸಂಧಿಕಾಲದಲ್ಲಿ ಈ ಬಗ್ಗೆ ಇನ್ನೂ ಹೆಚ್ಚಿನ ಪ್ರಯತ್ನಗಳನ್ನು ಮಾಡಲಾಯಿತು; ಅನೇಕ ಸಮ್ಮೇಳನಗಳನ್ನು ನಡೆಸಲಾಯಿತು. ಆದಾಗ್ಯೂ ಮೊದಲನೆಯ ಮಹಾಯುದ್ಧ ಮುಗಿಯುವವರೆಗೂ ಒಂದು ಸರಿಯಾದ ಅಂತಾರಾಷ್ಟ್ರೀಯ ಸಂಸ್ಥೆಯನ್ನು ಏರ್ಪಡಿಸಲು ಸಾಧ್ಯವಾಗಲಿಲ್ಲ. ಮೊದಲನೆಯ ಮಹಾಯುದ್ಧವಾದ ಮೇಲೆ, ಶಾಂತಿ ಒಪ್ಪಂದದ ತೀರ್ಮಾನದಂತೆ ಅಂತಾರಾಷ್ಟ್ರೀಯ ಸಂಸ್ಥೆಯ ಇತಿಹಾಸದಲ್ಲಿ ಮೊದಲನೆಯದಾಗಿ ರಾಷ್ಟ್ರಗಳ ಒಕ್ಕೂಟ (ಲೀಗ್ ಆಫ್ ನೇಷನ್ಸ್) ಪ್ರಾರಂಭಿಸಿದ ನಂತರ ಈಗಿನ ವಿಶ್ವಸಂಸ್ಥೆ (ಯುನೈಟೆಡ್ ನೇಷನ್ಸ್ ಆರ್ಗನೈಸೇಷನ್) ಸ್ಥಾಪನೆಯಾಯಿತು. ವಿಶ್ವದ ಇತಿಹಾಸದಲ್ಲಿ ಅಂತಾರಾಷ್ಟ್ರೀಯ ಸಂಸ್ಥೆಯ ಕಲ್ಪನೆ ನಿಧಾನವಾಗಿ ವಿಕಾಸಗೊಂಡಿತೇ ವಿನಾ, ಆಕಸ್ಮಿಕವಾಗಿ ಅಲ್ಲ.

ಪ್ರಪಂಚದಲ್ಲಿ ಶಾಂತಿ ಮತ್ತು ರಕ್ಷಣೆ ಏರ್ಪಡಿಸಲು, ಅನಂತರ ರಾಷ್ಟ್ರೀಯ ವ್ಯವಹಾರಗಳಲ್ಲಿರುವ ಲೋಪದೋಷಗಳನ್ನು ನಿವಾರಿಸಲು, ರಾಷ್ಟ್ರಗಳು ಪರಸ್ಪರ ಸಹಕಾರ ಮತ್ತು ಸ್ನೇಹದಿಂದಿರಲು, ರಾಷ್ಟ್ರಗಳನ್ನು ಯುದ್ಧ ಮತ್ತು ಯುದ್ಧಭಯದಿಂದ ತಪ್ಪಿಸಲು, ಪ್ರಪಂಚದ ರಾಷ್ಟ್ರಗಳನ್ನು ಒಟ್ಟುಗೂಡಿಸಲು, ಯಾವುದೇ ಸಮಸ್ಯೆಗಳು ಬರಲಿ ಅವುಗಳನ್ನು ಶಾಂತಿ ಮಾರ್ಗದಿಂದಲೇ ತೀರ್ಮಾನಿಸಲು ಜನರ ಜೀವನದ ಮಟ್ಟವನ್ನು ಹೆಚ್ಚಿಸಲು ಮತ್ತು ಪ್ರಪಂಚದ ಎಲ್ಲ ರಾಷ್ಟ್ರಗಳೂ ಪ್ರಜಾಪ್ರಭುತ್ವಗಳನ್ನು ಸ್ಥಾಪಿಸಿ, ನಡೆಸಿಕೊಂಡು ಹೋಗಲು ಇಂಥ ಸಂಸ್ಥೆಗಳು ಅಗತ್ಯ. ಈ ಮೇಲ್ಕಂಡ ಆದರ್ಶಗಳು ಪ್ರಪಂಚದ ಏಳಿಗೆಗೆ ಅತ್ಯಾವಶ್ಯಕವಾಗಿರುವುದರಿಂದ, ಅಂತಾರಾಷ್ಟ್ರೀಯ ಸಂಸ್ಥೆಗಳು ವಿಶ್ವದ ಕಲ್ಯಾಣಕ್ಕಾಗಿ ಶ್ರಮಿಸುವ ಬಹು ಮುಖ್ಯವಾದ ಅಂಗಗಳಾಗಿವೆ.

ಇಪ್ಪತ್ತನೆಯ ಶತಮಾನದಲ್ಲಿ ಎರಡು ಸಂಸ್ಥೆಗಳು ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಬಹು ಮುಖ್ಯವಾದುವು. ಮೊದಲನೆಯದು ರಾಷ್ಟ್ರಗಳ ಒಕ್ಕೂಟ. ಎರಡನೆಯದು ವಿಶ್ವಸಂಸ್ಥೆ. ಮೊದಲನೆಯ ಸಂಸ್ಥೆ ಮೊದಲನೆಯ ಮಹಾಯುದ್ಧವಾದ ಅನಂತರ 1919ರಲ್ಲಿ ಶಾಂತಿಕೌಲಿನ ಪ್ರಕಾರ ಸ್ಥಾಪಿತವಾಯಿತು. ಆಗ ಅಮೆರಿಕ ಸಂಯುಕ್ತಸಂಸ್ಥಾನಗಳ ಅಧ್ಯಕ್ಷರಾಗಿದ್ದ ವುಡ್ರೋ ವಿಲ್ಸನ್ನರೇ ಇದರ ಸ್ಥಾಪನೆಗೆ ಮುಖ್ಯ ಕಾರಣರು. ಇದರಲ್ಲಿ ಒಟ್ಟು 63 ಸದಸ್ಯ ರಾಷ್ಟ್ರಗಳಿದ್ದುವು. ಆದರೆ ನಾನಾ ಕಾರಣಗಳಿಂದ ಇದು ತನ್ನ ಧ್ಯೇಯಗಳನ್ನು ಪಾಲಿಸಲಾಗಲಿಲ್ಲ. ಜೊತೆಗೆ ಎರಡನೆಯ ಮಹಾಯುದ್ಧ 1939ರಲ್ಲಿ ಪ್ರಾರಂಭವಾಯಿತು. ಆಗ ಈ ಒಕ್ಕೂಟ ಕೊನೆಗೊಂಡಿತು. ಅದಾದ ಅನಂತರ ಎರಡನೆಯ ಮಹಾಯುದ್ಧ ನಡೆಯುತ್ತಿರುವಾಗ ಈಗಿನ ವಿಶ್ವಸಂಸ್ಥೆ 1945ರಲ್ಲಿ ಸ್ಥಾಪಿಸಲ್ಪಟ್ಟು ಈಗ ಒಟ್ಟು 123 ರಾಷ್ಟ್ರಗಳು ಈ ಸಂಸ್ಥೆಯ ಸದಸ್ಯತ್ವ ಪಡೆದಿವೆ. ಇವಲ್ಲದೆ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಇತರ ಮುಖ್ಯ ಸಂಸ್ಥೆಗಳ ಸೂಕ್ಷ್ಮ ಪರಿಚಯವನ್ನಿಲ್ಲಿ ಕೊಡಲಾಗಿದೆ.

1. ಅಂತಾರಾಷ್ಟ್ರೀಯ ಗ್ರಂಥಾಲಯ ಸಂಘಗಳ ಸಂಯುಕ್ತ ಸಂಘ (ಇಂಟರ್ನ್ಯಾಷನಲ್ ಫೆಡರೇಷನ್ ಆಫ್ ಲೈಬ್ರರಿ ಅಸೋಸಿಯೇಷನ್ಸ್) : ಸ್ಥಾಪನೆ 1962ರಲ್ಲಿ. ಆಡಳಿತ ಕಚೇರಿ ಇಂಗ್ಲೆಂಡಿನಲ್ಲಿದೆ. ಗ್ರಂಥಾಲಯ ಕ್ಷೇತ್ರಗಳಲ್ಲಿನ ಸಹಕಾರವನ್ನು ಹೆಚ್ಚಿಸುವುದು, ಅದರಲ್ಲೂ ಮುಖ್ಯವಾಗಿ ಗ್ರಂಥಾಲಯಗಳ, ಗ್ರಂಥಾಲಯ ಸಂಘಗಳ ಹಾಗೂ ಗ್ರಂಥಸೂಚಿಕಾರರ ನಡುವೆ ಅಂತಾರಾಷ್ಟ್ರೀಯ ಮಟ್ಟದ ಸಂಪರ್ಕವನ್ನೇರ್ಪಡಿಸುವುದು ಇದರ ಮುಖ್ಯ ಉದ್ದೇಶ. ಅಂತಾರಾಷ್ಟ್ರೀಯ ಮೈತ್ರಿ ಒಕ್ಕೂಟ (ಇಂಟರ್ನ್ಯಾಷನಲ್ ಫ್ರೆಂಡ್‌ಷಿಪ್ ಲೀಗ್) : ಸ್ವಯಂಪ್ರೇರಿತ ಹಾಗೂ ರಾಜಕೀಯದಿಂದ ದೂರವಿರುವ ಈ ಒಕ್ಕೂಟದ ಉದ್ದೇಶ ಪ್ರಪಂಚದ ಜನರ ಪ್ರವಾಸಾಭಿಲಾಷೆ ಮೈತ್ರಿಮನೋಭಾವಗಳನ್ನು ಬೆಳೆಸುವುದೇ ಆಗಿದೆ.

2. ಅಂತಾರಾಷ್ಟ್ರೀಯ ಆರೋಗ್ಯ ಶಿಕ್ಷಣದ ಬ್ರಿಟಿಷ್ ಸಂಘ (ಬ್ರಿಟಿಷ್ ಸೊಸೈಟಿ ಫಾರ್ ಇಂಟರ್ನ್ಯಾಷನಲ್ ಹೆಲ್ತ್ ಎಜ್ಯುಕೇಷನ್) : ಶೈಕ್ಷಣಿಕ ವಿಧಾನಗಳಿಂದ ಜನಾರೋಗ್ಯವನ್ನು ಉತ್ತಮಗೊಳಿಸಲು ತಾಂತ್ರಿಕ ನೆರವನ್ನು ನೀಡುತ್ತಿರುವ ಈ ಸಂಘಕ್ಕೆ ಆರೋಗ್ಯ ಶಿಕ್ಷಣ ಹಾಗೂ ಕೈಗಾರಿಕಾಕ್ಷೇತ್ರದ ಪ್ರಮುಖ ಪರಿಣತರು ಸದಸ್ಯರಾಗಿದ್ದಾರೆ. ವಿಶ್ವಸಂಸ್ಥೆಯೊಂದಿಗೆ ಸಂಪರ್ಕ ಹೊಂದಿದ್ದು ಈ ಸಂಸ್ಥೆ ಗಣನೀಯ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆ. ಕೇಂದ್ರ ಕಚೇರಿ ಲಂಡನ್ನಿನಲ್ಲಿದೆ.

3. ಅಂತಾರಾಷ್ಟ್ರೀಯ ಬೌದ್ಧಿಕ ಸಹಕಾರ ಸಂಸ್ಥೆ (ಇಂಟರ್ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಟಲೆಕ್ಚುಯಲ್ ಕೋಆಪರೇಷನ್) : 1922ರಲ್ಲಿ ರಾಷ್ಟ್ರಗಳ ಒಕ್ಕೂಟದ ಅಂಗವಾಗಿ ರೂಪುಗೊಂಡ ಈ ಸಂಘದ ಉದ್ದೇಶ ಸಾಹಿತ್ಯ ವಿಜ್ಞಾನ ಹಾಗೂ ಕಲೆಗಳಿಗೆ ಸಂಬಂಧಿಸಿದ ವಿಚಾರಗಳನ್ನು ಅಂತರರಾಷ್ಟ್ರೀಯ ಸಹಕಾರ ದೃಷ್ಟಿಯಿಂದ ಪರಿಶೀಲಿಸುವುದೇ ಆಗಿದೆ. ಈಗ ಈ ಸಂಸ್ಥೆಯ ಕೆಲಸವನ್ನು ಯುನೆಸ್ಕೊ ವಹಿಸಿಕೊಂಡಿದೆ.

4. ಅಂತಾರಾಷ್ಟ್ರೀಯ ಭಾಷೆ : ಅಂತಾರಾಷ್ಟ್ರೀಯ ವ್ಯವಹಾರ ಮಾಧ್ಯಮವಾಗಿ ವಿಶ್ವಭಾಷೆಯೊಂದನ್ನು ರೂಪಿಸುವ ಕೆಲಸ ನಡೆದಿದೆ.

5. ಅಂತಾರಾಷ್ಟ್ರೀಯ ನ್ಯಾಯ : ಅಂತಾರಾಷ್ಟ್ರೀಯ ವ್ಯವಹಾರಗಳು ಯಾವ ರೀತಿಯಲ್ಲೂ ತೊಡಕಿಲ್ಲದೆ ಸಾಗಲು, ಒದಗಬಹುದಾದ ಸಮಸ್ಯೆಗಳನ್ನು ಒಡಂಬಡಿಕೆಯ ಮೂಲಕ ಪರಿಹಾರ ಮಾಡಿಕೊಳ್ಳಲು, ಕಾಯಿದೆಗಳಿಗೆ ಮಾನ್ಯತೆ ಕೊಟ್ಟು ಪರಸ್ಪರ ಕೀರ್ತಿಗೌರವಗಳನ್ನು ಉಳಿಸಿಕೊಳ್ಳಲು ಅನುಕೂಲವಾಗುವಂತೆ ತಯಾರಾದ ನ್ಯಾಯಸೂತ್ರಗಳಿವು. 1945ರಲ್ಲಿ ವಿಶ್ವಸಂಸ್ಥೆ ಈ ಬಗ್ಗೆ ಒಂದು ನ್ಯಾಯ ಪ್ರಣಾಳಿಕೆಯನ್ನು ಹೊರತಂದಿದೆ. ನ್ಯಾಯಪರಿಪಾಲನೆ, ಪ್ರತಿಭಟನೆಗಳಿಗೆ ಸಂಬಂಧಿಸಿದ ವಿಷಯಗಳು ಇಲ್ಲಿ ಅಡಕವಾಗಿವೆ.

6. ಅಂತಾರಾಷ್ಟ್ರೀಯ ಪತ್ರಿಕಾ ಸಂಸ್ಥೆ (ಇಂಟರ್ನ್ಯಾಷನಲ್ ಪ್ರೆಸ್ ಇನ್ಸ್ಟಿಟ್ಯೂಟ್) : ಪತ್ರಿಕಾ ಸ್ವಾತಂತ್ರ್ಯ, ಸಂಬಂಧಗಳಿಗೆ ಸಂಬಂಧಪಟ್ಟ ಸಂಸ್ಥೆ (**ನೋಡಿ– ಅಂತಾರಾಷ್ಟ್ರೀಯ ಪತ್ರಿಕಾ ಸಂಸ್ಥೆ**). (ಎಂ.ಕೆ.)

**ಅಂತಾರಾಷ್ಟ್ರೀಯ ಸಮ್ಮೇಳನಗಳು :** ಸಮ್ಮೇಳನಗಳು ಒಂದನೆಯ ಮಹಾಯುದ್ಧದಿಂದೀಚೆಗೆ ರೂಢಿಗೆ ಬಂದವು. 1964ರಲ್ಲಂತೂ ಇಂಥ ನೂರಾರು ಸಮ್ಮೇಳನಗಳು ಜರುಗಿದುವು. ಇವುಗಳನ್ನು ಸರ್ಕಾರಿ ಸಮ್ಮೇಳನಗಳು (ಉದಾ : ಕೈರೋ ನಗರದಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಸಮ್ಮೇಳನ) ಮತ್ತು ಖಾಸಗಿ ಸಮ್ಮೇಳನಗಳು (ಉದಾ: ಜರ್ಮನಿಯ ಹೋಹೆನ್ ಬೀಸ್ಪೀನ್‍ನಲ್ಲಿ ಜರುಗಿದ ಕ್ರೈಸ್ತವಿದ್ಯಾ ಸಮ್ಮೇಳನ) ಎಂದು ಎರಡು ವಿಭಾಗ ಮಾಡಬಹುದು. ಅಂತರಸರ್ಕಾರೀ ಸಮ್ಮೇಳನಗಳನ್ನು ಮಾತ್ರ ಅಂತಾರಾಷ್ಟ್ರೀಯ ಎಂದು ಹೇಳುವುದು ತಪ್ಪಾಗುತ್ತದೆ. ಮೂರು ಅಥವಾ ಹೆಚ್ಚು ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡು, ಧ್ಯೇಯದಲ್ಲಿ, ಕಾರ್ಯಕ್ರಮಗಳಲ್ಲಿ, ಅಂತಾರಾಷ್ಟ್ರೀಯ ರೂಪು ಪಡೆದಿರುವ ಎಲ್ಲ ಸಮ್ಮೇಳನಗಳನ್ನೂ ಅಂತಾರಾಷ್ಟ್ರೀಯ ಸಮ್ಮೇಳನಗಳೆಂದು ಕರೆಯುವುದು ಸೂಕ್ತ.

ಆದರೂ ಸಾಮಾನ್ಯ ಜನರ ಭಾವನೆಯಲ್ಲಿ ಮಾತ್ರ, ಅಂತಾರಾಷ್ಟ್ರೀಯ ಸಂಸ್ಥೆಗಳೆಂದರೆ: 1. ರಾಷ್ಟ್ರಗಳಿಗೆ ಸಮಾನವಾಗಿ ಸಂಬಂಧಿಸಿದ ವಿಷಯಗಳನ್ನು, ಸಮಸ್ಯೆಗಳನ್ನು, ಚರ್ಚಿಸಿ ನಿರ್ಧರಿಸಲು ಆ ದೇಶಗಳ ಪ್ರತಿನಿಧಿಗಳನ್ನೊಳಗೊಂಡ ಸಮ್ಮೇಳನಗಳು. 2. ವ್ಯವಸ್ಥಿತ ಅಂತಾರಾಷ್ಟ್ರೀಯ ಸಂಸ್ಥೆಗಳು. ಇಂಥ ಸಮ್ಮೇಳನಗಳನ್ನು ಕರೆಯಲು ಕಾರಣವಾದ ಮುಖ್ಯ ವಿಷಯಗಳೆಂದರೆ, ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸುವುದು, ನಡೆಯಬಹುದಾದ ಯುದ್ಧವನ್ನು ತಡೆಗಟ್ಟುವುದು. 1919ರಲ್ಲಿ ವಿಶ್ವಸಮರವನ್ನು ನಿಲ್ಲಿಸುವುದಕ್ಕೆಂದು ಆಹ್ವಾನಿಸಿದ ಪ್ಯಾರಿಸ್ ಶಾಂತಿ ಸಮ್ಮೇಳನ ಮೊದಲನೆಯದಕ್ಕೆ ಉದಾಹರಣೆ; ಶಾಂತಿಯುತವಾಗಿ ಅಂತಾರಾಷ್ಟ್ರೀಯ ವಿವಾದಗಳನ್ನು ಬಗೆಹರಿಸುವುದಕ್ಕಾಗಿ 1907ರಲ್ಲಿ ಕರೆದ ಹೇಗ್ ಸಮ್ಮೇಳನ ಎರಡನೆಯದಕ್ಕೆ ಉದಾಹರಣೆ. ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ಕಾರಣವಾದ ಇತರ ವಿಷಯಗಳೆಂದರೆ ವಾಣಿಜ್ಯ, ಆರೋಗ್ಯ, ಕಾರ್ಮಿಕರ ಸ್ಥಿತಿ, ಶಿಕ್ಷಣ ಮತ್ತು ಶಿಶುಪೋಷಣೆ.

ಅಂತಾರಾಷ್ಟ್ರೀಯ ಸಮ್ಮೇಳನಗಳು ಯಶಸ್ವಿಯಾಗಬೇಕಾದರೆ, ಎರಡು ವಿಧದ ಸಿದ್ಧತೆಗಳನ್ನು ನಡೆಸಬೇಕಾಗುತ್ತದೆ : 1. ಆಡಳಿತ ಇಲಾಖೆ ಮತ್ತು ನೌಕರ ವರ್ಗದವರು ಮಾಡುವ ಏರ್ಪಾಡುಗಳು. 2. ಸಮ್ಮೇಳನಕ್ಕೆ ಸಂಬಂಧಿಸಿದ ತಾಂತ್ರಿಕ ರೀತಿಯ ಏರ್ಪಾಡುಗಳು.

1. ಆಡಳಿತ ವರ್ಗದ ಏರ್ಪಾಡಿನಲ್ಲಿ ವಾಹನಸೌಕರ್ಯ, ವಾಸಸ್ಥಳದ ಅನುಕೂಲತೆಗಳು, ಆಡಳಿತ ಶಾಖೆ, ಸಮ್ಮೇಳನಕ್ಕೆ ಬೇಕಾದ ಸ್ಥಳಾವಕಾಶಗಳನ್ನು ಒದಗಿಸುವುದು ಸಮಾಚಾರ ಸಾಗಣೆ, ಭಾಷಾಂತರೀಕರಣಕ್ಕೆ, ಅರ್ಥವಿವರಣೆಗೆ ಬೇಕಾದ ಸೌಲಭ್ಯಗಳು, ಅವಶ್ಯಸಾಮಗ್ರಿಗಳ ಸರಬರಾಜು, ಬ್ಯಾಂಕು ವ್ಯವಸ್ಥೆ ಸಮ್ಮೇಳನದ ಕಾರ್ಯಕಲಾಪಗಳು ಸೌಹಾರ್ದದಿಂದ ಯಶಸ್ವಿಯಾಗಿ ಪೂರೈಸಬೇಕಾದರೆ ಈ ಸೌಲಭ್ಯಗಳು ದೋಷರಹಿತವಾಗಿರಬೇಕು. ಉದಾಹರಣೆಗೆ: ಸಮಿತಿಗಳ ಕೊಠಡಿಗಳಲ್ಲಿ ನಿರಾಳವಾಗಿ ಕೂಡುವ ವ್ಯವಸ್ಥೆ ಇಲ್ಲದಿದ್ದರೆ, ಶ್ರವಣ ಸಾಧನಗಳ ಏರ್ಪಾಡು ಸರಿಯಾಗಿಲ್ಲದೆ ಇದ್ದರೆ, ಸದಸ್ಯರು ಗಮನವಿಟ್ಟು ವ್ಯವಹರಿಸುವುದು ಸಾಧ್ಯವಿಲ್ಲ.

2. ತಾಂತ್ರಿಕ ರೀತಿಯ ಏರ್ಪಾಡುಗಳಲ್ಲಿ ಬಗೆಹರಿಸಬೇಕಾದ ಸಮಸ್ಯೆಗಳ ನಿಷ್ಕೃಷ್ಟ ನಿರೂಪಣೆ, ಸಮ್ಮೇಳನ ಸಾಧಿಸಬೇಕಾದ ಧ್ಯೇಯಗಳು (ಅಜೆಂಡ ಅಥವಾ ಕಾರ್ಯಸೂಚಿ), ಕಾರ್ಯಕ್ರಮದ ಸ್ವರೂಪ ಮತ್ತು ಸಾಧನಗಳ ನಿರ್ಣಯ ಅಂದರೆ ಸರ್ವಸದಸ್ಯಸಮ್ಮೇಳನಗಳು ಎಷ್ಟು ಬಾರಿ ಸೇರಬೇಕು, ಸಮಿತಿಗಳೆಷ್ಟಿರಬೇಕು ಎಂಬುದು ಮತ್ತು ಚರ್ಚೆಗಳಲ್ಲಿ ಭಾಗವಹಿಸುವವರಿಗೆ ಬೇಕಾದ ಆಧಾರ ಕಾಗದ ಪತ್ರಗಳನ್ನೊದಗಿಸುವುದು–ಇತ್ಯಾದಿ.

ಅಂತಾರಾಷ್ಟ್ರೀಯ ಸಮ್ಮೇಳನಗಳು ಈ ಮೂರರಲ್ಲಿ ಯಾವುದಾರೊಂದು ರೀತಿಯಲ್ಲಿ ಮುಕ್ತಾಯಗೊಳ್ಳಬಹುದು. 1. ಸಾಂಪ್ರದಾಯಿಕ ಅಥವಾ ಔಪಚಾರಿಕ ಅಂತಾರಾಷ್ಟ್ರೀಯ ಒಪ್ಪಂದಕ್ಕೆ ಎಲ್ಲರೂ ಸಹಿ ಹಾಕಬಹುದು; ಉದಾ: 1919ರಲ್ಲಿ ನಡೆದ ಪ್ಯಾರಿಸ್ ಸಮ್ಮೇಳನದ ಫಲವಾಗಿ ಎಲ್ಲರ ಒಪ್ಪಿಗೆ ಪಡೆದ ವರ್ಸೇಲ್ಸ್ ಕರಾರು; 2. ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ ಮಾತ್ರ ಹೊರಬೀಳಬಹುದು; 3. ಸದಸ್ಯರ ಒಟ್ಟು ಅಭಿಪ್ರಾಯವನ್ನೊಳಗೊಂಡು ಅಧಿಕಾರಯುತ ಪ್ರಕಟನೆಯನ್ನು ಕೊಡಬಹುದು; ಉದಾ: 1953ರ ಬಾಂಡುಂಗ್ ಸಮ್ಮೇಳನದ ವರದಿ.(ಎ.ಎ.)

**ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು :** 1930ರ ದಶಕದಲ್ಲಿ ಗೋದಿ, ಸಕ್ಕರೆ, ತವರ ಮುಂತಾದ ವಸ್ತುಗಳಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ಜಾರಿಗೆ ಬಂದುವು. ಸರಕುಗಳ ನಿಯಂತ್ರಣ ಪ್ರಯತ್ನ ಈ ಮೊದಲೇ ಕಂಡು ಬಂದಿದ್ದರೂ ಇದು ಪ್ರಾಮುಖ್ಯ ಗಳಿಸಿ ನಿರ್ದಿಷ್ಟ ರೂಪವನ್ನು ಪಡೆದದ್ದು ಇದೇ ಅವಧಿಯಲ್ಲಿ.

ಮುಖ್ಯವಾದ ಕಚ್ಚಾವಸ್ತುಗಳ ಮತ್ತು ಕೆಲವು ವಿಶೇಷ ಆಹಾರ ವಸ್ತುಗಳ ಬೆಲೆ ಬಹಳವಾಗಿ ಏರಿಳಿತಕ್ಕೊಳಗಾಗಿ ಉತ್ಪಾದಕರಿಗೆ ಮತ್ತು ಗ್ರಾಹಕರಿಗೆ ಕಷ್ಟ ಪರಿಸ್ಥಿತಿಯನ್ನುಂಟು ಮಾಡುತ್ತಿದ್ದುದನ್ನು ತಪ್ಪಿಸುವುದಕ್ಕಾಗಿ ಸರಕು ಒಪ್ಪಂದಗಳನ್ನು ರೂಪಿಸಲಾಯಿತು. ಬೇಡಿಕೆ ಮತ್ತು ನೀಡಿಕೆಗಳಲ್ಲಿ ಆಗುವ ಬದಲಾವಣೆಗಳು ಬೆಲೆಗಳ ಏರಿಳಿತಕ್ಕೆ ಕಾರಣವಾಗುವುದರಿಂದ ಸರಕುಗಳ ಉತ್ಪಾದನೆ ಮತ್ತು ವ್ಯಾಪಾರದ ಮೇಲೆ ಅಂತಾರಾಷ್ಟ್ರೀಯ ಹತೋಟಿ ಅವಶ್ಯಕವೆಂಬುದನ್ನು ಮನಗಂಡು ಒಪ್ಪಂದಗಳ ಮೂಲಕ ಮುಖ್ಯವಾದ ಕಚ್ಚಾವಸ್ತುಗಳು ಮತ್ತು ಆಹಾರ ವಸ್ತುಗಳ ಉತ್ಪಾದನೆ ಮತ್ತು ವ್ಯಾಪಾರದ ಮೇಲೆ ಹತೋಟಿ ಇಡಲು ಯತ್ನಿಸಲಾಯಿತು. ಉತ್ಪಾದನೆಯನ್ನು ನಿಗದಿ ಮಾಡಿ ಅಧಿಕ ಉತ್ಪಾದನೆಯಿಂದ ಉದ್ಭವಿಸುವ ಸಮಸ್ಯೆಗಳನ್ನು ತಡೆಯಲು ಮತ್ತು ನಿಗಧಿಯಾದ ಬೆಲೆಗೆ ಕೊಳ್ಳಲು ಮತ್ತು ಮಾರಲು ಒಪ್ಪಂದ ಮಾಡಿಕೊಂಡು ಉತ್ಪಾದಕರಿಗೆ ಒದಗಬಹುದಾದ ನಷ್ಟವನ್ನು ತಪ್ಪಿಸುವುದು–ಇವೇ ಅಂತಾರಾಷ್ಟ್ರೀಯ ಸರಕು ಒಪ್ಪಂದಗಳ ಮೂಲಭೂತ ಉದ್ದೇಶಗಳು.

**ಅಂತಾರಾಷ್ಟ್ರೀಯ ಗೋದಿ ಒಪ್ಪಂದ:** ಹಲವಾರು ವರ್ಷಗಳ ಪ್ರಯತ್ನದ ಫಲವಾಗಿ 1933ರಲ್ಲಿ ಪ್ರಥಮ ಬಾರಿಗೆ ಅಂತರರಾಷ್ಟ್ರೀಯ ಗೋದಿ ಒಪ್ಪಂದ ಜಾರಿಗೆ ಬಂದಿತು. ಕೆಲವು ವರ್ಷಗಳಿಗೆ ಮಾತ್ರ ಅನ್ವಯಿಸುವಂತೆ ಒಪ್ಪಂದವನ್ನು ಮಾಡಿಕೊಂಡು ಅದರ ಅವಧಿ ಮುಗಿದ ಕೂಡಲೆ ಸೂಕ್ತ ಮಾರ್ಪಾಡುಗಳೊಂದಿಗೆ ಮುಂದಿನ ಕೆಲವು ವರ್ಷಗಳಿಗೆ ಅನ್ವಯಿಸುವಂತೆ ಮತ್ತೆ ಒಪ್ಪಂದ ಮಾಡಿಕೊಳ್ಳಲಾಗುತ್ತಿತ್ತು. 1949ರ ಒಪ್ಪಂದ 1953ರ ವರೆಗೆ ಜಾರಿಯಲ್ಲಿದ್ದು, 1953ರಲ್ಲಿ ಅದನ್ನು 1957ರ ವರೆಗೂ ಅನಂತರ 1962ರ ವರೆಗೂ ಮುಂದುವರಿಸಲಾಯಿತು. ಈ ಒಪ್ಪಂದಗಳ ಪ್ರಕಾರ, ಸ್ಥಿರವಾದ ಬೆಲೆಯಲ್ಲಿ ಆಮದು ರಫ್ತು ವ್ಯಾಪಾರ ನಿರಾತಂಕವಾಗಿ ನಡೆಯುವಂತೆ ಭರವಸೆ ನೀಡಲಾಯಿತು. ಒಂದೊಂದು ಅವಧಿಯ ಒಪ್ಪಂದದಲ್ಲೂ ಸಣ್ಣಪುಟ್ಟ ವ್ಯತ್ಯಾಸಗಳು ಕಂಡು ಬಂದರೂ ಎಲ್ಲದರ ಸಾಮಾನ್ಯ ನಿಬಂಧನೆಗಳು ಈ ರೀತಿ ಇದ್ದುವು: 1. ರಫ್ತು ರಾಷ್ಟ್ರಗಳು ನಿಗದಿಯಾದ ಪ್ರಮಾಣದ ಗೋದಿಯನ್ನು ನಿಗದಿಯಾದ ಅಧಿಕತಮ ಬೆಲೆಯನ್ನು ಮೀರದಂತೆ ಖಾತರಿಯಾಗಿ ಒದಗಿಸಬೇಕು. 2. ಆಮದು ರಾಷ್ಟ್ರಗಳು ಗೊತ್ತಾದ ಪ್ರಮಾಣದ ಗೋದಿಯನ್ನು ನಿಗದಿಯಾದ ಕನಿಷ್ಠತಮ ಬೆಲೆಗೆ ಕಡಿಮೆ ಇಲ್ಲದಂತೆ ರಫ್ತುರಾಷ್ಟ್ರಗಳಿಂದ ಖಾತರಿಯಾಗಿ ಕೊಳ್ಳಬೇಕು. 3. ಒಪ್ಪಂದಕ್ಕೆ ಸಹಿಹಾಕಿದ ರಾಷ್ಟ್ರಗಳು ಗೋದಿಯ ಅಂತಾರಾಷ್ಟ್ರೀಯ ಬೆಲೆಯ ಕನಿಷ್ಠತಮ ಮತ್ತು ಅಧಿಕತಮ ಮಟ್ಟವನ್ನು ನಿಗದಿ ಮಾಡಬೇಕು ಆಂತರಿಕ ಬೆಲೆಗೆ ಈ ನಿಯಂತ್ರಣ ಅನ್ವಯಿಸಕೂಡದು.

ಗೋದಿ ಒಪ್ಪಂದದ ಆಡಳಿತವನ್ನು ನಿರ್ವಹಿಸಲು ಒಂದು ಅಂತಾರಾಷ್ಟ್ರೀಯ ಗೋದಿ ಸಭೆಯನ್ನು ನಿಯಮಿಸಲಾಯಿತು. ಗೋದಿಬೆಳೆ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ ಸದಸ್ಯರಾಷ್ಟ್ರಗಳಿಗೆ ಒದಗಿಸುವುದು, ವಾರ್ಷಿಕ ವರದಿಗಳನ್ನು ಪ್ರಕಟಿಸುವುದು ಮತ್ತು ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸುವುದರಿಂದ ಸಂಭವಿಸುವ ವಿವಾದಗಳನ್ನು ಪರಿಹರಿಸುವುದು–ಮುಂತಾದುವು ಇದರ ಮುಖ್ಯ ಕರ್ತವ್ಯಗಳು. ಈ ಸಭೆಗೆ ಪ್ರತಿಸದಸ್ಯ ರಾಷ್ಟ್ರದಿಂದ ಒಬ್ಬೊಬ್ಬ ಪ್ರತಿನಿಧಿ ಇರಬೇಕೆಂದು ತೀರ್ಮಾನಿಸಲಾಯಿತು. ಸಭೆಯ ಕಾರ್ಯ ಚಟುವಟಿಕೆಗಳಲ್ಲಿ ನೆರವಾಗಲು ಒಂದು ಕಾರ್ಯಕಾರಿ ಸಮಿತಿ ಮತ್ತು ಒಂದು ಬೆಲೆ ಸಲಹಾ ಸಮಿತಿ ನೇಮಕವಾದುವು.

**ಅಂತಾರಾಷ್ಟ್ರೀಯ ಸಕ್ಕರೆ ಒಪ್ಪಂದ :** ಇದರ ಉದ್ದೇಶವೂ ಬೆಲೆಯ ಸ್ತಿಮಿತತೆಯನ್ನು ಕಾಪಾಡುವುದೇ ಆಗಿದೆ. ಈ ದಿಶೆಯಲ್ಲಿ 1920ರಲ್ಲಿ ಪ್ರಥಮ ಪ್ರಯತ್ನ ನಡೆಯಿತು. 1931ರಲ್ಲಿ ರೂಪುಗೊಂಡ ಚಾಡ್‍ಬೋರ್ನ್ ಯೋಜನೆ ಈ ದಿಶೆಯಲ್ಲಿ ಮತ್ತೊಂದು ಪ್ರಯತ್ನ. ಆದರೆ ಇವು ಅಷ್ಟೇನೂ ಫಲಕಾರಿಯಾಗಲಿಲ್ಲ ಸಕ್ಕರೆಯ ಅಂತಾರಾಷ್ಟ್ರೀಯ ಬೆಲೆಯನ್ನು ಸ್ತಿಮಿತದಲ್ಲಿಡುವ ಪ್ರಯತ್ನಗಳಲ್ಲೆಲ್ಲ ಮಹತ್ತರವಾದುದು 1954ರಲ್ಲಿ ಜಾರಿಗೆ ಬಂದ ಅಂತಾರಾಷ್ಟ್ರೀಯ ಸಕ್ಕರೆ ಒಪ್ಪಂದ. 1953ರಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ಲಂಡನ್ನಿನಲ್ಲಿ ಐವತ್ತು ರಾಷ್ಟ್ರಗಳ ಪ್ರತಿನಿಧಿಗಳು ಸೇರಿದ್ದ ಸಭೆಯಲ್ಲಿ ಆದ ತೀರ್ಮಾನಕ್ಕನುಗುಣವಾಗಿ ಈ ಒಪ್ಪಂದ ಜಾರಿಗೆ ಬಂದಿತು. 22 ರಫ್ತುರಾಷ್ಟ್ರಗಳು ಮತ್ತು 16 ಆಮದುರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿದುವು. ಈ ಒಪ್ಪಂದದ ಆಡಳಿತವನ್ನು ನಿರ್ವಹಿಸಲು ಅಂತಾರಾಷ್ಟ್ರೀಯ ಸಕ್ಕರೆ ಸಭೆಯೊಂದು ನೇಮಕವಾಯಿತು.

ಸಭೆಯಲ್ಲಿ ಪ್ರತಿಸದಸ್ಯರಾಷ್ಟ್ರದಿಂದ ಒಬ್ಬೊಬ್ಬ ಸದಸ್ಯನಿರುವನು. ಐವರು ಸದಸ್ಯರನ್ನುಳ್ಳ ಕಾರ್ಯಕಾರಿ ಸಮಿತಿಯೊಂದು ಸಭೆಯ ಕರ್ತವ್ಯನಿರ್ವಹಣೆಗೆ ಸಹಾಯಕವಾಗಿದೆ. ನ್ಯಾಯವಾದ ಬೆಲೆಯಲ್ಲಿ ಸಕ್ಕರೆಯ ಮಾರಾಟ ಮತ್ತು ಕೊಳ್ಳಾಟಕ್ಕೆ ಸೂಕ್ತ ಮಾರುಕಟ್ಟೆಯನ್ನು ಒದಗಿಸುವುದೇ ಈ ಒಪ್ಪಂದದ ಮುಖ್ಯ ಉದ್ದೇಶ. ಪ್ರತಿ ಸದಸ್ಯ ರಫ್ತುರಾಷ್ಟ್ರದ ರಫ್ತು ದೇಯಾಂಶವನ್ನು ನಿಗದಿ ಮಾಡಲಾಗಿದೆ. ಒಂದು ಪೌಂಡ್ ಸಕ್ಕರೆಗೆ ನ್ಯಾಯಬೆಲೆ 3.25–4.33 ಸೆಂಟ್‌ಗಳೆಂದು 1954ರ ಒಪ್ಪಂದದ ಪ್ರಕಾರ ತೀರ್ಮಾನಿಸಲಾಯಿತು. ಬೆಲೆ ಮಾರುಕಟ್ಟೆಯಲ್ಲಿ ಪೌಂಡಿಗೆ 4.33 ಸೆಂಟ್‌ಗಿಂತ ಹೆಚ್ಚಾದರೆ ಬೇಡಿಕೆ ಹೆಚ್ಚಿದೆ ಎಂಬ ಸೂಚನೆ ದೊರಕುವುದರಿಂದ, ಸದಸ್ಯರಾಷ್ಟ್ರಗಳ ರಫ್ತು ಪಾಲನ್ನು ಹೆಚ್ಚಿಸಿ ನೀಡಿಕೆಯನ್ನು ಹೆಚ್ಚಿಸುವುದರ ಮೂಲಕ ಬೆಲೆ ಮೇಲ್ಮಿತಿಯನ್ನು ಮೀರದಂತೆ ತಡೆಯಬೇಕೆಂದೂ ಬೆಲೆ ಮಾರುಕಟ್ಟೆಯಲ್ಲಿ 3.25 ಸೆಂಟ್‌ಗಿಂತ ಕಡಿಮೆ ಯಾದಾಗ ನೀಡಿಕೆ ಹೆಚ್ಚಿದೆ ಎಂಬ ಸೂಚನೆ ದೊರಕುವುದರಿಂದ ರಫ್ತು ಪಾಲನ್ನು ಕಡಿಮೆ ಮಾಡಿ ನೀಡಿಕೆಯನ್ನು ತಗ್ಗಿಸಿ ಬೆಲೆ ಕೆಳಮಿತಿಗಿಂತ ಕಡಿಮೆಯಾಗದಂತೆ ತಡೆಯಬೇಕೆಂದೂ ತೀರ್ಮಾನಿಸಿ ಬೆಲೆಯ ಸ್ತಿಮಿತತೆಯನ್ನು ಕಾಪಾಡಲು ಈ ಕ್ರಮವನ್ನು ಅನುಸರಿಸಲಾಯಿತು.

**ಅಂತಾರಾಷ್ಟ್ರೀಯ ತವರ ಒಪ್ಪಂದ :** ಎರಡನೆಯ ಮಹಾಯುದ್ಧಪೂರ್ವದಲ್ಲಿಯೂ ಒಪ್ಪಂದಗಳ ಮೂಲಕ ತವರದ ಬೆಲೆಯ ಸ್ತಿಮಿತತೆಯನ್ನು ಕಾಪಾಡಲು ಪರಿಯತ್ನಗಳು ನಡೆದುವು. 1921ರಲ್ಲಿ ಮಲಯ, ನೆದರ್‌ಲೆಂಡ್ಸ್ ಮತ್ತು ಈಸ್ಟ್ ಇಂಡೀಸ್‌ಗಳು ಸೇರಿ ಬಾಂಡೂಂಗ್ ಪೂಲ್ ಎಂಬ ವ್ಯವಸ್ಥೆಯನ್ನು ಮಾಡಿದ್ದುವು. 1929ರಲ್ಲಿ ತವರ ತಯಾರಿಕೆಗಾರರ ಸಂಘವೊಂದನ್ನು ಬ್ರಿಟನ್, ನೆದರ್‌ಲೆಂಡ್ಸ್ ಮತ್ತು ಬೊಲಿವಿಯಗಳು ಸ್ಥಾಪಿಸಿದುವು. 1931ರಲ್ಲಿ ಒಂದು ಅಂತಾರಾಷ್ಟ್ರೀಯ ತವರ ಒಪ್ಪಂದವೇ ಜಾರಿಗೆ ಬಂದಿತು. 1937ರಲ್ಲಿ ಈ ಒಪ್ಪಂದಕ್ಕೆ ಪ್ರತಿಯಾಗಿ ಹೊಸ ಒಪ್ಪಂದವೊಂದು ಜಾರಿಗೆ ಬಂದಿತು. ಎರಡನೆಯ ಮಹಾಯುದ್ಧದ ಅನಂತರ ತವರದ ಬೇಡಿಕೆ–ನೀಡಿಕೆಯ ಮೇಲೆ ಹತೋಟಿಯನ್ನಿಟ್ಟು ಬೆಲೆಯನ್ನು ಸ್ತಿಮಿತದಲ್ಲಿಡಲು ಹೆಚ್ಚು ವ್ಯಾಪಕವಾದ ಪ್ರಯತ್ನ ನಡೆಯಿತು. ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆದ ಸಮ್ಮೇಳನಗಳ ಫಲವಾಗಿ 1953ರಲ್ಲಿ ಅಂತಾರಾಷ್ಟ್ರೀಯ ತವರ ಒಪ್ಪಂದ ಜಾರಿಗೆ ಬಂದಿತು. ಇದರ ಆಡಳಿತ ನಿರ್ವಹಣೆಗಾಗಿ ಅಂತಾರಾಷ್ಟ್ರೀಯ ತವರ ಸಭೆಯೊಂದು ಲಂಡನ್‌ನಲ್ಲಿ ಸ್ಥಾಪಿತವಾಯಿತು.

ಯುದ್ಧಪೂರ್ವ ವ್ಯವಸ್ಥೆ ಮತ್ತು ಯುದ್ಧೋತ್ತರ ವ್ಯವಸ್ಥೆಗಳೆರಡರಲ್ಲೂ ಬೆಲೆಗಳ ಸ್ತಿಮಿತತೆಯನ್ನು ಕಾಪಾಡಲು ಅನುಸರಿಸಿದ ಮುಖ್ಯ ಕ್ರಮಗಳು ಮೂರು ವಿಧವಾದುವು. 1. ಬಫರ್ ದಾಸ್ತಾನು; 2. ರಫ್ತುಪಾಲು ನಿಗದಿ ಮಾಡುವುದು; 3. ಬೆಲೆಯ ಮೇಲ್ಮಿತಿ ಮತ್ತು ಕೆಳಮಿತಿಯನ್ನು ನಿಗದಿ ಮಾಡುವುದು. ತವರದ ನೀಡಿಕೆ ಹೆಚ್ಚಿದಾಗ ಹೆಚ್ಚಳವನ್ನು ದಾಸ್ತಾನು ಮಾಡಿಕೊಂಡು ಬೆಲೆ ಇಳಿಯದಂತೆ ಮಾಡುವುದು ಬಫರ್ ದಾಸ್ತಾನುವ್ಯವಸ್ಥೆಯ ಉದ್ದೇಶ. ಪ್ರತಿ ಸದಸ್ಯ ರಾಷ್ಟ್ರದ ರಫ್ತು ಕೋಟಾವನ್ನು ನಿಗದಿ ಮಾಡಿ ಅದಕ್ಕೆ ಖಾತರಿಯಾದ ಮಾರುಕಟ್ಟೆ ದೊರಕುವಂತೆ ಮಾಡುವುದೇ ರಫ್ತುಪಾಲು ನಿಗದಿವ್ಯವಸ್ಥೆಯ ಉದ್ದೇಶ. ಬೆಲೆಯ ಮೇಲ್ಮಿತಿ ಮತ್ತು ಕೆಳಮಿತಿಯನ್ನು ನಿಗದಿ ಮಾಡುವ ವ್ಯವಸ್ಥೆಯೂ ಬೆಲೆಯ ಸ್ತಿಮಿತತೆಯನ್ನು ಕಾಪಾಡುವುದರಲ್ಲಿ ನೆರವು ನೀಡುತ್ತದೆ.

ಅಂತಾರಾಷ್ಟ್ರೀಯ ಸರಕುಒಪ್ಪಂದಗಳು ಮುಖ್ಯವಾದ ಸರಕುಗಳ ಉತ್ಪನ್ನ, ಬೇಡಿಕೆ, ನೀಡಿಕೆ, ಬೆಲೆ ಮುಂತಾದುವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಣೆ ಮಾಡುವ ಆದರ್ಶ ಧ್ಯೇಯಗಳನ್ನಿಟ್ಟುಕೊಂಡು ನಿಯೋಜಿಸಲ್ಪಟ್ಟಿವೆ. ಆದರೆ ಕೆಲವು ಸಮಸ್ಯೆಗಳಿಂದಾಗಿ ಇವು ಹೆಚ್ಚು ಫಲಪ್ರದವಾಗಿಲ್ಲ. ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ಸಾರ್ಥಕವಾಗಬೇಕಾದರೆ ಅವು ಹೆಚ್ಚು ವ್ಯಾಪಕವಾದ ಸದಸ್ಯತ್ವವನ್ನು ಹೊಂದಿರಬೇಕು. ಕೆಲವೇ ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಿ ಉಳಿದುವು ಒಪ್ಪಂದದ ವ್ಯಾಪ್ತಿಗೆ ಸೇರದಿದ್ದರೆ, ಇಂಥ ವ್ಯವಸ್ಥೆ ಪೂರ್ಣವಾಗಿ ಯಶಸ್ವಿಯಾಗುವುದಿಲ್ಲ. ಅಷ್ಟೇ ಅಲ್ಲದೆ ಇದುವರೆಗೆ ರೂಪಿತವಾಗಿರುವ ಒಪ್ಪಂದಗಳು ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಸರಕಿಗೆ ಸಂಬಂಧಿಸಿದಂತಿದ್ದು ಸಮಗ್ರವಾದ ಸರಕು ಒಪ್ಪಂದ ವ್ಯವಸ್ಥೆಯ ಪ್ರಯತ್ನ ಇನ್ನೂ ನಡೆದಿಲ್ಲ. ಇಂಥ ಕೆಲವು ಕುಂದುಕೊರತೆಗಳಿಂದಾಗಿ ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ಅಷ್ಟಾಗಿ ಯಶಸ್ವಿಯಾಗಿಲ್ಲವೆಂಬ ಅಂಶ ಕಂಡುಬರುತ್ತಿದೆ.

(ಬಿ.ಎಸ್.ಎಸ್.ಎ.)

**ಅಂತಿಚಕ್ :** ಬಿಹಾರ ರಾಜ್ಯದ ಭಾಗಲ್ಪುರ ಜಿಲ್ಲೆಯಲ್ಲಿರುವ ಬೌದ್ಧವಿಹಾರ. 9ನೆಯ ಶತಮಾನದ ಆರಂಭದಲ್ಲಿ ಪಾಲ ದೊರೆ ಧರ್ಮಪಾಲನಿಂದ ನಿರ್ಮಿಸಲ್ಪಟ್ಟಿತು. 13ನೆಯ ಶತಮಾನದಲ್ಲಿ ನಾಶವಾಯಿತು. ಗಂಗಾ ನದಿ ದಡದ ಮೇಲೆ ಈ ವಿಹಾರವಿದೆಯೆಂದೂ ಇದು ವಿಶಾಲವಾದ ಪೌಳಿ ಗೋಡೆಗಳಿಂದ ಆವೃತವಾಗಿದೆಯೆಂದೂ ಇದರ ಮಧ್ಯಭಾಗದಲ್ಲಿ ಒಂದು ದೊಡ್ಡ ಬೌದ್ಧ ಅಧ್ಯಯನ ಸಭಾಂಗಣವಿದೆಯೆಂದೂ ಟಿಬೆಟ್ ಆಕರಗಳಲ್ಲಿ ಉಲ್ಲೇಖವಿದೆ. ಇಲ್ಲಿಗೆ ಭಾರತದ ವಿವಿಧ ಭಾಗಗಳಿಂದ ವಿದ್ವಾಂಸರು ಅಧ್ಯಯನಕ್ಕೆ ಬರುತ್ತಿದ್ದರೆಂದು ತಿಳಿದುಬರುತ್ತದೆ.

ಈ ನೆಲೆಗೆ 1811ರಲ್ಲಿ ಮೊದಲ ಬಾರಿಗೆ ಫ್ರಾನ್ಸಿಸ್ ಬುಕನನ್ ಭೇಟಿನೀಡಿದ್ದ. ವಿಕ್ರಮಶೀಲ ಇಲ್ಲಿರುವ ಹತ್ತಿರದ ಪತರ್‌ಘಟ್ಟಾಕ್ಕೆ ಹೊಂದಿಕೊಂಡಿತ್ತು. ಇತ್ತೀಚೆಗೆ ಪಟಣ ವಿಶ್ವವಿದ್ಯಾಲಯದ ಬಿ.ಪಿ.ಸಿನ್ಹ ಅಂತಿಚಕ್‌ನಲ್ಲಿ 1960–69ರವರೆಗೆ ಉತ್ಖನನ ನಡೆಸಿ ಇದರ ಸಂಬಂಧವನ್ನು ವಿಕ್ರಮಶೀಲದೊಂದಿಗೆ ಗುರುತಿಸಿದ್ದಾರೆ. ಇಲ್ಲಿರುವ ಚೈತ್ಯ ತ್ರಿಕೂಟ ವಿನ್ಯಾಸದಲ್ಲಿದೆ. 9–13ನೆಯ ಶತಮಾನದ ಅವಧಿಯಲ್ಲಿ 3 ಹಂತಗಳಲ್ಲಿ ಈ ಚೈತ್ಯದ ನಿರ್ಮಾಣವಾಯಿತು. ಭೂಮಿಯ ತಳಮಟ್ಟದಿಂದ ಅಧಿಷ್ಠಾನ 15ಮೀ ಎತ್ತರವಿದ್ದು, ಅದರ ಸುತ್ತಳತೆ 100ಮೀ ಇದೆ. ಈ ಚೈತ್ಯ ಇಟ್ಟಿಗೆಗಳಿಂದ ನಿರ್ಮಾಣಗೊಂಡಿದೆ. ಇದರಲ್ಲಿ ವಿಶಾಲವಾದ ಹಾಗೂ ಸಣ್ಣ ಕೋಣೆಗಳಿವೆ. ಚೈತ್ಯದ ನಡುವೆ ದಾರಿಗಳಿದ್ದು ಇವುಗಳ ನಡುವೆ ಓಡಾಡಬಹುದಾಗಿದೆ. ಮೇಲಿನ ದಾರಿ ಕೆಳಗಿನ ದಾರಿಗಿಂತ 2ಮೀ ಎತ್ತರದಲ್ಲಿದೆ. ಬಾಂಗ್ಲಾದೇಶದ ಪಹರಪುರ್ ನಲ್ಲಿರುವ ಸೋಮಪುರ ಮಹಾ ವಿಹಾರದಂತಿರುವ ಈ ವಿಹಾರದ ಗೋಡೆಗಳು ಸುಂದರವಾದ ಸುಡಾವೆ ಮಣ್ಣಿನ ಫಲಕಗಳಿಂದ ಶೋಭಿತವಾಗಿವೆ. 1972ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ನಡೆಸಿದ ಉತ್ಖನನದಲ್ಲಿ 330 ಚ.ಮೀ ನ ಬೌದ್ಧ ವಿಹಾರ ಲಭ್ಯವಾಗಿದ್ದು, ಇದು 208 ಸಣ್ಣ ಕೋಣೆಗಳನ್ನು ಹೊಂದಿರುವುದು ಕಂಡುಬಂದಿದೆ. ವಿಹಾರದ ಉತ್ತರ ದ್ವಾರದಲ್ಲಿ ಚೌಕಾಕಾರದ ಮತ್ತು ವೃತ್ತಾಕಾರದ ರಚನೆಗಳು ಒಳ ಹಾಗೂ ಹೊರ ಗೋಡೆಗಳ ಮೇಲೆ ರಚಿತಗೊಂಡಿವೆ. ಈ ಕೋಣೆಗಳ ನಡುವೆ ಸಾಮಾನ್ಯವಾದ ಅಂಗಳವಿದೆ. ಮುಖ್ಯದ್ವಾರದ ಚಾವಣಿಗೆ ಆಧಾರವಾಗಿ 7.8ಮೀ ಎತ್ತರದ ಏಕಶಿಲಾ ಸ್ತಂಭಗಳನ್ನು ನಿಲ್ಲಿಸಲಾಗಿದೆ. ದಕ್ಷಿಣ ವಿಹಾರದ ದ್ವಾರವನ್ನೂ ಶೋಧಿಸಲಾಗಿದೆ. ಅಲ್ಲದೆ ಈಶಾನ್ಯದ ಮೂಲೆಯಲ್ಲಿ ಒಂದು ದೊಡ್ಡ ಚರಂಡಿಯೂ ತಳಪಾಯದಲ್ಲಿ ಕೆಲವು ಕೋಣೆಗಳೂ ಕಂಡುಬಂದಿದೆ.

ವಿಕ್ರಮಶೀಲದಲ್ಲಿ ದೊರೆತಿರುವ ಅವಶೇಷಗಳು ಬೌದ್ಧ ಮತ್ತು ವೈದಿಕಧರ್ಮದ ದೇವತೆಗಳು, ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಒಳಗೊಂಡಿವೆ. ಬುದ್ಧ, ಮೈತ್ರೇಯ, ವಜ್ರಪಾಣಿ, ಅವಲೋಕಿತೇಶ್ವರ ಮತ್ತು ಮಂಜುಶ್ರೀ ಮೊದಲಾದ ಹಿತ್ತಾಳೆಯ ವಿಗ್ರಹಗಳೂ ದೊರೆತಿವೆ. ಜೊತೆಗೆ ಕಲ್ಲು, ಕಬ್ಬಿಣ, ತಾಮ್ರ, ಬೆಳ್ಳಿ, ಹಿತ್ತಾಳೆಯ ವಸ್ತುಗಳೂ ಕೆಲವು ಬೆಳ್ಳಿ ಮತ್ತು ತಾಮ್ರದ ನಾಣ್ಯಗಳೂ ಸಿಕ್ಕಿವೆ. ಕೆಂಪು ಹಾಗೂ ಬೂದುಬಣ್ಣದ ಮಣ್ಪಾತ್ರೆಗಳೂ ಇಲ್ಲಿವೆ.

(ಎನ್‌ಆರ್.)

**ಅಂತಿಮಗತಿ ಶಾಸ್ತ್ರ :** ಮಾನವನ ಸಾವಿನೊಂದಿಗೆ ಅವನ ಅಸ್ತಿತ್ವ ಪೂರ್ಣವಾಗಿ ಅಳಿಸಿ ಹೋಗುತ್ತದೆಂದು ಮತಧರ್ಮಗಳಾಗಲಿ, ಅನೇಕ ದಾರ್ಶನಿಕರಾಗಲಿ ನಂಬುವುದಿಲ್ಲ. ಸಾವಿನಿಂದ ಭೌತಿಕ ಶರೀರ ಅಳಿಯುವುದು ನಿಜ; ಆದರೆ ಜೀವ ಸಾವಿನಿಂದಾಚೆಗೂ ಉಳಿಯುತ್ತದೆಂಬುದು ಎಲ್ಲ ಧರ್ಮಗಳ ನಂಬಿಕೆಯಾಗಿದೆ. ಸಾವಿನಿಂದಾಚೆಗೆ ಜೀವಿಯ ಸ್ಥಿತಿ ಏನೆಂಬುದರ ವಿಚಾರದಲ್ಲಿ ನಡೆದಿರುವ ಚಿಂತನೆಯನ್ನು ಅಂತಿಮಗತಿ ಶಾಸ್ತ್ರದ ವಸ್ತುವೆಂದು ಕರೆಯಲಾಗಿದೆ.

ಅಂತಿಮಗತಿಶಾಸ್ತ್ರಕ್ಕೆ ಆಧಾರರೂಪವಾದ ಅಂಶವೆಂದರೆ ಆತ್ಮ ಅಥವಾ ಚೇತನದ ಇರುವಿಕೆಯ ನಂಬಿಕೆ. ಚಾರ್ವಾಕರು ಇಲ್ಲವೆ ಆಧುನಿಕ ಲೌಕಿಕವಾದಿಗಳು ಆತ್ಮದ ಇರವನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಚೇತನವೆಂಬುದು ಭೌತಿಕ ತತ್ತ್ವಗಳ ಸಂಯೋಗದಿಂದ ಮತ್ತು ರಾಸಾಯನಿಕ ಅಂಶಗಳಿಂದ ಆದ ಒಂದು ಗುಣವಿಶೇಷ ಮಾತ್ರ. ಅವುಗಳಲ್ಲುಂಟಾಗುವ ವಿಷಮತೆಯಿಂದ ಈ ಚೇತನ ಇಲ್ಲದಾಗುತ್ತದೆ. ಅಂದಮೇಲೆ ಹುಟ್ಟು ಸಾವುಗಳೆಂಬುವು ಜಡತತ್ತ್ವವಾದ ಭೌತಿಕ ವಸ್ತುಗಳ ಅವಸ್ಥಾ ವಿಶೇಷವೇ ಹೊರತು ಮತ್ತೇನಲ್ಲ ಎಂದು ಅವರು ನಂಬುತ್ತಾರೆ. ಆದ್ದರಿಂದ ಅಂತಿಮಗತಿ ಶಾಸ್ತ್ರಕ್ಕೆ ಅವರ ಕೊಡುಗೆ ಬಹಳ ಕಡಿಮೆ.

ಆತ್ಮವನ್ನು ನಂಬುವ ಮಿಕ್ಕೆಲ್ಲ ಧರ್ಮಗಳು ಮತ್ತು ದರ್ಶನಗಳು ಆತ್ಮ ಅವಿನಾಶಿಯೆಂದೂ ಭೌತಿಕವಸ್ತುವಿಗಿಂತ ಭಿನ್ನವಾದದ್ದೆಂದೂ ಒಪ್ಪುತ್ತಾರೆ. ಅಂದಮೇಲೆ ಶರೀರದ ನಾಶದೊಂದಿಗೆ ಆತ್ಮನಾಶವಾಗುವುದಿಲ್ಲ. ಆತ್ಮ ಶರೀರದಿಂದ ಬೇರ್ಪಟ್ಟ ಸ್ಥಿತಿಯನ್ನೇ ಮರಣ ಎಂದು ಕರೆಯುತ್ತಾರೆ. ಹಾಗಾದರೆ ಆತ್ಮದ ಮುಂದಿನ ಗತಿ ಏನು? ಅದರ ಮುಂದಿನ ಗತಿಯನ್ನು ನಿರ್ಣಯಿಸುವ ನಿಯಮವಾದರೂ ಏನು?

ಅಂತಿಮಗತಿ ಶಾಸ್ತ್ರದಲ್ಲಿ ಮತ್ತೊಂದು ತತ್ತ್ವವೆಂದರೆ ವಿಧಿವಾದ ಅಥವಾ ಅದೃಷ್ಟದಲ್ಲಿ ಮಾನವನಿಗಿರುವ ನಂಬಿಕೆ. ವಿಶ್ವದ ವ್ಯಾಪಾರವನ್ನು ಅರಿಯಲು ಬೇಕಾಗುವ ವೈಜ್ಞಾನಿಕ ತತ್ತ್ವದ ಕಾರ್ಯಕಾರಣನಿಯಮವನ್ನು ಇಲ್ಲಿ ಬಳಸಲಾಗಿದೆ. ಕಾರಣವಿಲ್ಲದೆ ಕಾರ್ಯವಿಲ್ಲ. ಕಾರ್ಯ ಫಲವಾದರೆ ಕಾರಣವೇ ಅದರ ಬೀಜ. ಇದಕ್ಕೆ ಹೊಂದಿದಂತೆ ನೀತಿನಡತೆಗೆ ಸಂಬಂಧಪಟ್ಟ ಒಂದು ತತ್ತ್ವವಿದೆ. ನಾವು ಮಾಡುವ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳು ನಮ್ಮ ಮುಂದಿನ ಬಾಳಿಗೆ ಬುತ್ತಿಯಾಗುತ್ತವೆ. ಪಾಪಪುಣ್ಯಗಳ ಒಟ್ಟು ಸಮೂಹವೇ ಕರ್ಮ. ಇಂದ್ರಿಯಕ್ಕೆ ಗೋಚರವಾಗದಂಥ ಒಂದು ನಿಯಮವಾದ್ದರಿಂದ ಇದು ಅದೃಷ್ಟವೂ ಹೌದು. ಇದರಲ್ಲಿ ಸಂಚಿತ, ಆಗಮ, ಪ್ರಾರಬ್ಧ ಮುಂತಾದ ಬಗೆಗಳುಂಟು. ಅಂತೂ ಇವುಗಳಿಂದಲೇ ಆತ್ಮದ ಅಂತಿಮಗತಿ ನಿರ್ಣಯವಾಗಬೇಕು.

ಅಂತಿಮಗತಿಯ ವಿಚಾರದಲ್ಲಿ ಕೆಲವು ಪ್ರಮುಖ ಮತಧರ್ಮಗಳ ಅಭಿಪ್ರಾಯ ವೇನೆಂಬುದನ್ನು ಸ್ಥೂಲವಾಗಿ ತಿಳಿಯಬಹುದು. ಪುರಾತನ ಕ್ರೈಸ್ತಧರ್ಮದಂತೆ ಸತ್ತ ಬಳಿಕ ಮಾನವನ ಆತ್ಮ ದೇವದೂತರೊಂದಿಗೆ ಭಗವಂತನ ಎದುರುಹೋಗಿ ನಿಲ್ಲುತ್ತದೆ. ಅವನ ತಾತ್ಕಾಲಿಕ ತೀರ್ಪಿನಂತೆ ಸ್ವರ್ಗದ ತೋಟದಲ್ಲಿ ತನಗೆ ನಿಶ್ಚಿತಗೊಳಿಸಿದ ಜಾಗದಲ್ಲಿ ಅಂತಿಮ ತೀರ್ಮಾನದ ದಿನ ಅಥವಾ ಭಗವಂತನ ದಿನಕ್ಕಾಗಿ ಕಾದಿರುತ್ತದೆ. ಅಂತಿಮ ತೀರ್ಪಿನ ದಿನ ಬಂದಾಗ ಕೂಗಿದ ಕಹಳೆಯ ದನಿಗೆ ಇಂಥ ಎಲ್ಲ ಚೇತನಗಳು ಒಗ್ಗೊಟ್ಟು ಭಗವಂತನ ಮುಂದೆ ತಮ್ಮ ತೀರ್ಪಿಗಾಗಿ ಕಾದು ನಿಲ್ಲುತ್ತವೆ. ಅವನ ತೀರ್ಪು ಆ ಚೇತನಗಳ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳನ್ನು ಅವಲಂಬಿಸಿರುತ್ತದೆ. ಬಾಳಿನ ಗ್ರಂಥ (ಬುಕ್ ಆಫ್ ಲೈಫ್) ಎಂಬ ಪುಸ್ತಕದಲ್ಲಿಲ್ಲದವರು ಪಾಪಿಗಳೆಂದು ತೀರ್ಮಾನಿಸಿ ಅವರನ್ನು ಅಗ್ನಿಯ ಕೂಪಕ್ಕೆ ತಳ್ಳಲಾಗುತ್ತದೆ. ಅಂಥವರು ಮೃತ್ಯುವನ್ನು ಮತ್ತೊಮ್ಮೆ ಅನುಭವಿಸಬೇಕು. ಪುಣ್ಯಾತ್ಮರು ಪವಿತ್ರತಮವಾದ ಸ್ವರ್ಗವಾಸಿಗಳಾಗುತ್ತಾರೆ.

ಈ ವಿಚಾರದಲ್ಲಿ ಮಹಮ್ಮದೀಯರ ಕಲ್ಪನೆಗೂ ಯೆಹೂದಿಗಳ, ಕ್ರೈಸ್ತ ಮತ್ತು ಪಾರಸಿಗಳ ಕಲ್ಪನೆಗೂ ಬಹುಮಟ್ಟಿಗೆ ಸಾಮ್ಯವಿದೆ. ಸತ್ತ ಮನುಷ್ಯನ ಗೋರಿಯ ಬಳಿಗೆ ಇಬ್ಬರು ದೇವದೂತರು ಬಂದು ಅವನ ಆತ್ಮಕ್ಕೆ ಇರುವ ಧಾರ್ಮಿಕಶ್ರದ್ಧೆಯನ್ನು ಪರೀಕ್ಷಿಸುತ್ತಾರೆ. ಶ್ರದ್ಧೆ ತೃಪ್ತಿಕರವಾಗಿ ಕಂಡಲ್ಲಿ ಅವನನ್ನು ಗೋರಿಯಲ್ಲಿ ಶಾಂತಿಯಿಂದ ಮಲಗಲು ಬಿಡುತ್ತಾರೆ. ಇಲ್ಲವಾದರೆ ಅವನನ್ನು ಸುತ್ತಿಗೆಯಿಂದ ಹೊಡೆದು ಹಿಂಸಿಸುತ್ತಾರೆ. ಅಂತಿಮತೀರ್ಪಿನ ದಿನಕ್ಕಾಗಿ ಆತ್ಮಗಳು ಕಾದಿರುತ್ತವೆ. ಭಗವಂತನಿಗೆ ಸರಿಕಂಡಾಗ ದೇವದೂತ ನಿರ್ಣಯದ ದಿನ ಬಂದಿತೆಂಬುದನ್ನು ಸೂಚಿಸುವ ಕಹಳೆಯನ್ನು ಊದುತ್ತಾನೆ. ಆ ಕೂಗನ್ನು ಅನುಸರಿಸಿ ಜಗತ್ತಿನಲ್ಲಿ ಒಂದು ಪ್ರಳಯವೇ ಆಗುತ್ತದೆ ಮತ್ತು ಬದುಕಿದ್ದ ಮಾನವರೆಲ್ಲರೂ ಸಾಯುತ್ತಾರೆ. ಕೊನೆಗೊಮ್ಮೆ ಕಹಳೆಯ ದನಿಯನ್ನು ಕೇಳಿ ಎಲ್ಲ ಆತ್ಮಗಳೂ ಪುನಶ್ಚೇತನಗೊಂಡು ತಮ್ಮ ಪಾಪಪುಣ್ಯಗಳ ವರದಿಯನ್ನೊಪ್ಪಿಸಲು ಸಿದ್ಧವಾಗುತ್ತವೆ. ಭಗವಂತನ ಸಿಂಹಾಸನದ ಎದುರು ಜೀವಿಗಳು ಮಾಡಿದ ಪಾಪಪುಣ್ಯಗಳ ತುಲನಾತ್ಮಕ ಪರೀಕ್ಷೆ ನಡೆಯುತ್ತದೆ. ಈ ತೀರ್ಪು ಸು. 1000 ವರ್ಷದಿಂದ 50,000 ವರ್ಷಗಳವರೆಗೂ ನಡೆಯುತ್ತದಂತೆ. ಕೊನೆಗೆ ಎಲ್ಲ ಜೀವಗಳೂ ಸಿರಾತ್ ಎಂಬ ಸೇತುವೆಯ ಮೂಲಕ ನರಕವನ್ನು ದಾಟಿ ಸ್ವರ್ಗವನ್ನು ಪ್ರವೇಶಿಸಬೇಕು. ಇವರು ದಾಟುವ ಸೇತುವೆ ಕೂದಲಿಗಿಂತ ಸೂಕ್ಷ್ಮವೂ ಕತ್ತಿಯ ಅಲಗಿಗಿಂತ ಹರಿತವೂ ಆಗಿರುತ್ತದೆ. ಪುಣ್ಯಶಾಲಿಗಳು ಮಾತ್ರ ಸುರಕ್ಷಿತವಾಗಿ ದಾಟಬಲ್ಲರು. ಪಾಪಾತ್ಮರು ಸೇತುವೆ ಕುಸಿದು ನರಕದಲ್ಲಿ ಬೀಳುತ್ತಾರೆ.

ಕರ್ಮ ಮತ್ತು ಪುನರ್ಜನ್ಮದಲ್ಲಿನ ನಂಬಿಕೆ ಭಾರತೀಯ ಮತಗಳಿಗೆ ವಿಶಿಷ್ಟವಾದದ್ದು. ಬೌದ್ಧರು ಇತರ ಭಾರತೀಯರಂತೆ ಪರಮದೈವವನ್ನು ನಂಬದಿದ್ದರೂ ಕರ್ಮ ಮತ್ತು ಪುನರ್ಜನ್ಮಗಳನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಪಾಪಪುಣ್ಯಗಳನ್ನು ನಿರ್ಧರಿಸಿ ತಕ್ಕ ಫಲವನ್ನು ಕೊಡಲು ಬೌದ್ಧರ ಪ್ರಕಾರ ಈಶ್ವರನ ಅಗತ್ಯವಿಲ್ಲ. ಅದನ್ನು ಅವರವರ ಕರ್ಮವೇ ನಿರ್ಧರಿಸುತ್ತದೆ. ಜೀವರು ಅವರವರ ಕರ್ಮಕ್ಕೆ ತಕ್ಕಂತೆ ಉನ್ನತವಾದ ಇಲ್ಲವೆ ಕೀಳಾದ ಜೀವನವನ್ನು ಪಡೆಯುತ್ತಾರೆ. ಮಾನವನ ಕರ್ಮದ ಫಲವೆಲ್ಲವೂ ಸೇರಿ ಐದು ರೀತಿಯ ಸ್ಕಂದಗಳ ರೂಪದಲ್ಲಿ ಅವರ ಮುಂದಿನ ಜನ್ಮವೆಂಥದೆಂಬುದನ್ನು ನಿರ್ಣಯಿಸಲು ಶಕ್ತವಾಗುತ್ತವೆ. ಬೌದ್ಧಧರ್ಮದಲ್ಲಿಯೂ ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳ ಕಲ್ಪನೆಯುಂಟು. ಪಾಪಕ್ಕೆ ಪ್ರಾಯಶ್ಚಿತ್ತವಾಗಿ ನರಕದ ನೋವನ್ನೂ ಪುಣ್ಯದ ಫಲವಾಗಿ ಸ್ವರ್ಗದ ಸುಖವನ್ನೂ ಜೀವಿ ಅನುಭವಿಸುತ್ತಾನೆ. ಆದರೆ ಬೌದ್ಧಧರ್ಮದಲ್ಲಿ ಬಾಳಿನ ಪರಮಪುರುಷಾರ್ಥವಾದ ಜೀವನ್ಮುಕ್ತಿ ಸ್ವರ್ಗಕ್ಕಿಂತಲೂ ಅತೀತವಾದದ್ದು. ಜೀವನ್ಮುಕ್ತಿ ದಶೆಯೇ ಬೌದ್ಧರ ನಿರ್ವಾಣ.

ಹಿಂದೂ ಧರ್ಮದಲ್ಲಿ ಕರ್ಮ ಅಥವಾ ಅದೃಷ್ಟಕ್ಕೆ ಪ್ರಮುಖ ಸ್ಥಾನವಿದೆ. ಮಾನವ ಅರಿತೋ ಅರಿಯದೆಯೋ ಎಸಗುವ ಅನೇಕ ತಪ್ಪುಗಳಿಗೆ ಸೂಕ್ತವಾದ ವಿಧಿವತ್ತಾದ ಪರಿಹಾರಗಳೂ ಇವೆ. ಆದರೂ ಬಾಳನ್ನೆಲ್ಲ ನಿಯಂತ್ರಿಸುವ ಒಂದು ವ್ಯಾಪಕತತ್ತ್ವವನ್ನು ವಿಧಿ ಎಂದು ಕರೆಯಲಾಗಿದೆ. ಹಿಂದೂ ಧರ್ಮದಲ್ಲಿ ಅಂತ್ಯೇಷ್ಟಿ ಅಂದರೆ ಸತ್ತಾಗ ಆಚರಿಸಬೇಕಾದ ವೈದಿಕಕರ್ಮಗಳನ್ನು ಬಹಳ ವಿವರವಾಗಿ ಅಥರ್ವವೇದ ಶತಪಥಬ್ರಾಹ್ಮಣ ಮುಂತಾದ ಗ್ರಂಥಗಳಲ್ಲಿ ಹೇಳಲಾಗಿದೆ. ಮೃತ್ಯುವಿನ ಅಧಿದೇವತೆ ಅಥವಾ ಧರ್ಮದ ದೇವತೆ ಎನಿಸಿದ ಯಮ ಮಾನವನ ಪಾಪಪುಣ್ಯಗಳ ವಿಚಾರದಲ್ಲಿ ತೀರ್ಮಾನಿಸತಕ್ಕವ. ಋಗ್ವೇದದಲ್ಲಿ ಯಮ ಧರ್ಮದ ದೇವತೆಯಾಗಿ ಕಂಡುಬಂದರೂ ಅವನು ಭಯಂಕರರೂಪಿಯೂ ನರಕದ ಅಧಿಪತಿಯೂ ಎನಿಸಿದಂತೆ ವಿವರಗಳಿವೆ. ಅಥರ್ವವೇದದಲ್ಲಿ ಅವನು ಧರ್ಮಾಧರ್ಮಗಳನ್ನು ನಿರ್ಣಯಿಸುವ ಅಧಿದೇವತೆ ಎಂಬ ಮಾತುಗಳಿವೆ. ಸತ್ತಮೇಲೆ ಆತ್ಮ ಅನುಭವಿಸುವ ಸುಖದುಃಖಗಳ ವಿಚಾರದಲ್ಲಿ ಸಾಧಾರಣವಾಗಿ ಪ್ರಚಾರದಲ್ಲಿರುವ ಅನೇಕ ಅಭಿಪ್ರಾಯಗಳು ಶತಪಥಬ್ರಾಹ್ಮಣದಿಂದ ಬಂದಂತೆ ಕಾಣುತ್ತವೆ. ಅಶರೀರಿ ಆತ್ಮ ಬೆಂಕಿಯ ಬೇಗೆಗೆ ಸಿಕ್ಕುತ್ತದೆ. ಪುಣ್ಯಶಾಲಿಯಾದರೆ ಅದನ್ನು ಸುಲಭವಾಗಿ ಸಹಿಸುತ್ತದೆ. ಇಲ್ಲವಾದರೆ ದಾರುಣವಾದ ನೋವನ್ನು ಅನುಭವಿಸಬೇಕಾಗುತ್ತದೆ. ಇದಾದಮೇಲೆ ಪುಣ್ಯವಂತರು ಸ್ವರ್ಗಾರೋಹಿಗಳಾಗುತ್ತಾರೆ. ಪಾಪಿಗಳು ನರಕಕ್ಕೆ ಬೀಳುತ್ತಾರೆ. ಹೀಗೆ ಯಮಧರ್ಮ ಅವರವರ ಪಾಪಪುಣ್ಯಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಅದನ್ನು ಅನುಭವಿಸುವಂತೆ ನೋಡಿಕೊಳ್ಳುತ್ತಾನೆ. ಆದರೆ ಹಿಂದೂ ಧರ್ಮ ಆತ್ಮನಿಗೆ ಇದೇ ಕೊನೆಯ ಗತಿ ಎಂದು ಹೇಳಿಲ್ಲ. ಸ್ವರ್ಗದ ಸುಖವಾಗಲೀ, ನರಕದ ಯಾತನೆಯಾಗಲೀ ಶಾಶ್ವತವಲ್ಲ. ಪಾಪಪುಣ್ಯಗಳು ಕ್ಷೀಣವಾದರೆ ಪುನಃ ಪುನಃ ಮರ್ತ್ಯಲೋಕಕ್ಕೆ ಆಗಮಿಸಲೇಬೇಕು. ಈ ಪುನರ್ಜನ್ಮವನ್ನು ಮೀರಿ ಜೀವ ನಿತ್ಯ ಮುಕ್ತವಾಗಬೇಕಾದರೆ ಶೈವರ ಪ್ರಕಾರ ಶಿವನ, ವೈಷ್ಣವರ ಪ್ರಕಾರ ವಿಷ್ಣುವಿನ ಅನುಗ್ರಹ ಪಡೆಯಬೇಕು. ಇದು ಸಾವಿನ ಆಚಿನ ಮುಕ್ತಿದಶೆ. ಶಂಕರಾಚಾರ್ಯರ ಪ್ರಕಾರ ಪರಮಮುಕ್ತಿಯೆಂದರೆ ಬ್ರಹ್ಮನ ಸಾನ್ನಿಧ್ಯದಲ್ಲಿ ಬ್ರಹ್ಮನಲ್ಲಿ ಐಕ್ಯವಾಗುವುದು. ಈ ಮುಕ್ತಿ ಇಹಲೋಕದಲ್ಲಿ ಜೀವಂತವಾಗಿರುವಾಗಲೇ ಪಡೆಯಬಹುದಾದ ಪರಮಗತಿ.

ಹೀಗೆ ವಿವಿಧ ಧರ್ಮಗಳು ತಮ್ಮ ಧಾರ್ಮಿಕ ನಂಬಿಕೆ ಮತ್ತು ತತ್ತ್ವದರ್ಶನಕ್ಕೆ ಹೊಂದಿದಂತೆ ಸಾವಿನಿಂದಾಚೆಗೆ ಮಾನವನ ಅಂತಿಮ ಗತಿ ಏನು ಎಂಬ ಬಗ್ಗೆ ಯೋಚಿಸಿವೆ. ಅಷ್ಟೇ ಏಕೆ, ಅದಕ್ಕನುಗುಣವಾಗಿಯೇ ಶವಸಂಸ್ಕಾರಗಳ ವಿಧಾನಗಳೂ ಏರ್ಪಟ್ಟಿವೆ. ಸತ್ತವನನ್ನು ಸಮಾಧಿ ಮಾಡುವ ಕ್ರಮ, ಇಲ್ಲವೆ ಚಿತೆಯಲ್ಲಿ ಸುಡುವ ವಿಧಾನಗಳು ಧಾರ್ಮಿಕಶ್ರದ್ಧೆಗೆ ಅನುಗುಣವಾಗಿ ರೂಢಿಗೆ ಬಂದಿವೆ. ಮಾನವನ ಅಂತಿಮಗತಿ ಏನು ಎಂದು ಚಿಂತಿಸಿದ ಹಾಗೆಯೇ ಈ ಜಗತ್ತಿನ ಅಂತಿಮಗತಿ ಏನು ಎಂಬ ವಿಚಾರದಲ್ಲಿಯೂ ತಮ್ಮ ದೃಷ್ಟಿ ಹರಿಸಿದ್ದಾರೆ. ವಿಶ್ವದ ಕಾಲವನ್ನು ಯುಗಯುಗಗಳ ಮಾನದಲ್ಲಿ ಅಳೆದು ಕಲ್ಪಿಸಿದ್ದಾರೆ. ಅಂತೂ ಕೊನೆಗೊಮ್ಮೆ ಜಗತ್ತಿನ ಲಯವೂ ಅನಿವಾರ್ಯವೆಂಬುದು ಎಲ್ಲ ಧರ್ಮಗಳ ಒಮ್ಮತ. (ಎ.ಎಲ್.ಎಸ್.)

**ಅಂತಿಮಜಯದ ಅನಿಶ್ಚಿತತೆ :** ಸೈನ್ಯಾಧಿಕಾರಿ ತ್ವರಿತವಾಗಿಯಾಗಲೀ ಮಂದಗತಿಯಲ್ಲಾಗಲೀ ಕಾರ್ಯಕ್ರಮವನ್ನು ಕೈಕೊಳ್ಳಲು ಬಾರದ ಯುದ್ಧ ಪ್ರಸಂಗ (ಫ಼ಾಗ್ ಆಫ಼್ ವಾರ್). ಸಾಮಾನ್ಯವಾಗಿ ಯುದ್ಧದಲ್ಲಿ ಜಯಾಪಜಯಗಳು ಅನಿಶ್ಚಿತ. ಆದರೆ ಇಂಥ ವಿಶಿಷ್ಟ ಪ್ರಸಂಗಗಳು ಅನಿರೀಕ್ಷಿತ ಸಂಗತಿ ಅಥವಾ ಘಟನೆಗಳ ಪರಿಣಾಮವಾಗಿ ಉದ್ಭವಿಸುತ್ತವೆ. ಉದಾಹರಣೆಗಾಗಿ ಹೇಳುವುದಾದರೆ ಶತ್ರು ಅಧಿಕ ಪ್ರಮಾಣದಲ್ಲಿ ಅಗ್ನಿಶಕ್ತಿಯನ್ನೊ ಸೈನ್ಯಬಲವನ್ನೊ ಪ್ರಯೋಗಿಸಬಹುದು ಇಲ್ಲವೆ ಯುದ್ಧ ಕಾರ್ಯಾಚರಣೆಯ ಕ್ಷೇತ್ರ ಸೈನ್ಯದ ಚಲನವಲನಕ್ಕೆ ಅಡ್ಡಿ ಆತಂಕಗಳನ್ನು ಉಂಟುಮಾಡುವಂಥದಾಗಿರಬಹುದು. ಇವೇ ಮುಂತಾದ ಸನ್ನಿವೇಶಗಳಲ್ಲಿ ಆತುರದ ನಿರ್ಣಯ ಪ್ರಸಂಗವನ್ನು ಮತ್ತಷ್ಟು ಹದಗೆಡಿಸಬಹುದು. ಆತುರಾತುರವಾಗಿ ನಿರ್ಣಯ ಮಾಡುವುದಾದರೆ ಅನಿರೀಕ್ಷಿತವಾದ ವಿನಾಶಕ್ಕೆ ಎಡೆಗೊಡಬಹುದು. (ಎ.ಎನ್.ಎಸ್.ಎಂ.)

**ಅಂತಿಮಬಲ :** ಕಟ್ಟಡ ಮತ್ತು ಯಂತ್ರಗಳ ರಚನೆಯಲ್ಲಿ ಉಪಯೋಗಿಸಲಾಗುವ ವಸ್ತುಗಳ ಭೌತಿಕ ಗುಣಗಳಲ್ಲಿ ಅವುಗಳ ಶಕ್ತಿ ಸಾಮರ್ಥ್ಯವೂ ಪ್ರಮುಖವಾದ ಅಂಶ. ಪ್ರಯೋಗಶಾಲೆಯಲ್ಲಿ ಉಕ್ಕು, ಕಬ್ಬಿಣ, ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ ಮುಂತಾದ ರಚನಾಲೋಹಗಳನ್ನು ಕಲ್ಲು, ಇಟ್ಟಿಗೆ, ಮರ, ಕಾಂಕ್ರೀಟ್ ಇತ್ಯಾದಿ ವಸ್ತುಗಳನ್ನೂ ಸರ್ವಪರೀಕ್ಷಕಯಂತ್ರದಲ್ಲಿ (ಯೂನಿಸರ್ಲ್ ಟೆಸ್ಟಿಂಗ್ ಮಷೀನ್) ಪರೀಕ್ಷೆಗೊಳಪಡಿಸಿ, ಅವುಗಳ ಶಕ್ತಿ ಸಾಮರ್ಥ್ಯವನ್ನು ಅಳೆಯಬಹುದು.




ವಸ್ತುಗಳ ಶಕ್ತಿ ಸಾಮರ್ಥ್ಯ ವನ್ನು ನಿರ್ಧಾರ ಮಾಡಲು, ಒತ್ತಡ ಮತ್ತು ರೂಪ ವ್ಯತ್ಯಾಸಗಳಿಗೆ ಸಂಬಂಧಿಸಿದ ಒಂದು ರೇಖಾನಕ್ಷೆಯನ್ನು ತಯಾರಿಸಬೇಕು. ಈ ನಕ್ಷೆಯಲ್ಲಿ ಒತ್ತಡ ಅತ್ಯಂತ ಅಧಿಕವಾಗಿರುವ ಭಾಗವನ್ನು ಅಂತಿಮ ಬಲ (ಅಲ್ಟಿಮೇಟ್ ಸ್ಟ್ರೆಸ್) ಎಂದು ಗುರುತಿಸಬಹುದು. ಉದಾ ಹರಣೆಗಾಗಿ ಉಕ್ಕಿನ ಒತ್ತಡ ರೂಪ ವ್ಯತ್ಯಾಸ ಇವಕ್ಕೆ ಸಂಬಂಧಿಸಿದ ಚಿತ್ರದಲ್ಲಿ ಅಂತಿಮಬಲದ ಭಾಗವನ್ನು ತೋರಿಸಲಾಗಿದೆ.

ರಚನಾವಸ್ತುಗಳಲ್ಲಿ ಅವುಗಳ ಅಂತಿಮಬಲದ ಆಧಾರದ ಮೇಲೆ ವಸ್ತುಗಳ ಮೇಲಿನ ಕ್ರಿಯಾಒತ್ತಡ (ವರ್ಕಿಂಗ್ ಸ್ಟ್ರೆಸ್) ಅಥವಾ ರಚನಾಒತ್ತಡವನ್ನು (ಡಿಸೈನ್ ಸ್ಟ್ರೆಸ್) ಸುರಕ್ಷತೆಯ ಅಂಶದ (ಫ್ಯಾಕ್ಟರ್ ಆಫ್ ಸೇಫ್ಟಿ) ಸಹಾಯದಿಂದ ಕಂಡುಹಿಡಿಯಬಹುದು. ಈ ಮೂಲಕ ರಚನಾವಸ್ತುಗಳ ರೂಪ ಮತ್ತು ಗಾತ್ರಗಳನ್ನು ಅವುಗಳ ಮೇಲೆ ಬೀಳುವ ಭಾರ ಅಥವಾ ತೂಕಗಳಿಗೆ ಸಂಬಂಧಿಸಿದಂತೆ ನಿರ್ಣಯಮಾಡಬಹುದು.

ಇತ್ತೀಚಿನ ಎರಡು ದಶಕಗಳಲ್ಲಿ ರಚನಾವಸ್ತುಗಳ ರೂಪ ಮತ್ತು ಗಾತ್ರಗಳನ್ನು ಅಂತಿಮಶಕ್ತಿ ಸಿದ್ಧಾಂತದ ಆಧಾರದ ಮೇಲೆ ನಿರ್ಧರಿಸಲು ನಡೆಸಿರುವ ಪ್ರಯೋಗಗಳು ಯಶಸ್ವಿಯಾಗಿವೆ. ಇದರಂತೆ ಕಟ್ಟಡದಲ್ಲಿ ಉಪಯೋಗಿಸುವ ವಸ್ತುಗಳ ಅಂತಿಮಬಲ ಸಾಮರ್ಥ್ಯವನ್ನು ಅಂದಾಜು ಮಾಡಬಹುದು. ಅಲ್ಲದೆ ವಸ್ತುಗಳ ಮೇಲೆ ಬರುವ ಕ್ರಿಯಾಭಾರ

ಅಥವಾ ರಚನಾಭಾರವನ್ನು ಅವುಗಳ ಅಂತಿಮಬಲದೊಂದಿಗೆ ಹೋಲಿಸಿ, ಬಲದ ಅಂಶವನ್ನು ತಿಳಿಯಬಹುದು. ಈ ಬಲದ ಅಂಶ ಸುರಕ್ಷತೆಯ ಅಂಶಕ್ಕಿಂತ ಉತ್ತಮ ಮತ್ತು ಅರ್ಥಪೂರ್ಣವಾದದ್ದು. ಏಕೆಂದರೆ ಕಟ್ಟಡ ಎಷ್ಟರಮಟ್ಟಿಗೆ ಸುಭದ್ರವಾಗಿದೆ ಎಂಬುದನ್ನು ಬಲದ ಅಂಶ ಸೂಚಿಸುತ್ತದೆ. ಉಕ್ಕು ಮತ್ತು ಕಾಂಕ್ರೀಟ್ ರಚನಾ ವಿನ್ಯಾಸಗಳನ್ನು ಸುಭದ್ರವಾಗಿ ಅಲ್ಪ ಖರ್ಚಿನಲ್ಲೇ ಅಂತಿಮ ಬಲದ ಆಧಾರದಿಂದ ಸುಲಭವಾಗಿ ರಚಿಸುವ ಒಂದು ವಿಧಾನವನ್ನು ಇತ್ತೀಚೆಗೆ ಹೆಚ್ಚೆಚ್ಚಿಗೆ ಬಳಸಲಾಗುತ್ತಿದೆ. (ವಿ.ಡಿ.ಪಿ.)

**ಅಂತೂರಿಯಮ್**: ಏರೇಸೀ ಕುಟುಂಬಕ್ಕೆ ಸೇರಿದ ಒಂದು ಜನಪ್ರಿಯ ಆಲಂಕಾರಿಕ ಸಸ್ಯ. ಈ ಜಾತಿಯ ಅನೇಕ ಪ್ರಭೇದಗಳು ಸುಂದರವಾದ ಎಲೆ, ಹೂಗೊಂಚಲ ಕವಚ (ಸ್ಪೇತ್) ಇರುವುದರಿಂದ ಇದಕ್ಕೆ ಬೇಡಿಕೆ ಹೆಚ್ಚು. ಮಧ್ಯ ಅಮೆರಿಕದ ಮೂಲ ನಿವಾಸಿಗಳು ಅಂತೂರಿಯಮ್ ಸಸ್ಯಗಳನ್ನು ಮನೆಯ ಕೈತೋಟಗಳಲ್ಲಿ ಮತ್ತು ಉದ್ಯಾನವನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುತ್ತಾರೆ. ಇವುಗಳ ಹೂಗೊಂಚಲುಗಳನ್ನು ಮೇಜಿನ ಅಲಂಕಾರಕ್ಕಾಗಿ ಬಳಸುತ್ತಾರೆ.

ಈ ಜಾತಿಯಲ್ಲಿ ಸು. 500 ಪ್ರಭೇದಗಳು ಇವೆ. ಸಾಮಾನ್ಯವಾಗಿ ಇವು 1–2 ಮೀಟರ್ ಎತ್ತರ ಬೆಳೆಯುವ ಮೂಲಿಕೆ ಬಗೆಯ ಸಸ್ಯಗಳು. ತಾಳು ಮೆತುವಾಗಿರುತ್ತದೆ. ಕೆಲವು ಬಗೆಗಳಲ್ಲಿ ದೃಢವಾಗೂ ಇರುತ್ತದೆ. ಬೆಳೆ ಬಹುಕಾಲ ನಿಲ್ಲುತ್ತದೆ. ಈ ಸಸ್ಯಗಳು ಅಡರು ಬಳ್ಳಿಗಳಾಗಿಯೂ ಇರಬಹುದು. ಎಲೆ ಸರಳ ರೀತಿಯದು. ಹೃದಯಾಕಾರ, ಅಂಬಿನಾಕಾರ ಮತ್ತು ಈಟಿಯಾಕಾರದಲ್ಲಿರಬಹುದು. ಸಾಮಾನ್ಯವಾಗಿ ಎಲೆಯ ಬಣ್ಣ ಹಸಿರು. ಅಲಂಕಾರ ಜಾತಿಯ ಬಗೆಗಳಲ್ಲಿ ವಿವಿಧ ಬಣ್ಣಗಳಿರುತ್ತವೆ. ಎಲೆತೊಟ್ಟು ಉದ್ದ ಅಥವಾ ಮೋಟು; ಬಣ್ಣ ಮತ್ತು ಆಕಾರಗಳಲ್ಲಿ ವೈವಿಧ್ಯವುಂಟು. ಬೇರು ಗಡ್ಡೆರೂಪದ್ದು ಹೂಗೊಂಚಲು ಸ್ಪೇಡಿಕ್ಸ್ ಮಾದರಿಯದು. ಇವುಗಳ ಕೆಳಭಾಗದಲ್ಲಿ ಬಣ್ಣಬಣ್ಣದ ಹೂಗೊಂಚಲ ಕವಚಗಳು ಇರುತ್ತವೆ. ಹೂಗಳು ಉಪಪುಷ್ಪಪತ್ರಗಳಿಂದ ಕೂಡಿದ್ದು ತೊಟ್ಟಿಲ್ಲದೆ ದಿಂಡಿಗೆ ಸೇರಿಕೊಂಡಿರುತ್ತವೆ. ದ್ವಿಲಿಂಗಪುಷ್ಪಗಳಾದ ಅವುಗಳಲ್ಲಿ 5 ದಳಗಳೂ 5 ಪುಷ್ಪಪತ್ರಗಳೂ ಕೂಡಿಕೊಂಡಿವೆ. 5 ಕೇಸರಗಳೂ 5 ವಿಭಾಗವಾದ ಅಂಡಕೋಶವೂ ಇವೆ.

ಅಂತೂರಿಯಮ್ ಆ್ಯಂಡ್ರಸಿನಮ್: ಈ ಪ್ರಭೇದ ಕೊಲಂಬಿಯ ದೇಶದ್ದು. ಈ ಸಸ್ಯವನ್ನು 1876 ರಲ್ಲಿ ಎಡ್‍ಮಂಡ್ ಆ್ಯಂಡ್ರೆ ಎಂಬುವನು ಮೊದಲು ವಿವರಿಸಿದ ಕಾರಣ ಈ ಹೆಸರು ಬಂದಿದೆ. ಕಾಂಡ ಕುಳ್ಳಾಗಿ ನೇರವಾಗಿ ಬೆಳೆಯುತ್ತದೆ. ಎಲೆಯ ತೊಟ್ಟುಗಳು ತೆಳುವಾಗಿ ಎಲೆಗಳಿಗಿಂತ ಉದ್ದವಾಗಿರುತ್ತವೆ. ದೀರ್ಘಚತುರಸ್ರಾಕಾರದ ಈ ಎಲೆಗಳು ಕರಣೆಯಾಕಾರ ಅಥವಾ ಹೃದಯಾಕಾರವಾಗಿರುತ್ತವೆ; ಬಣ್ಣ ಹಸಿರು. ಕಿತ್ತಲೆಯ ಬಣ್ಣದ ಹೂಗೊಂಚಲ, ಕವಚ ನೆಲಕ್ಕೆ ಸಮಾನಾಂತರವಾಗಿದ್ದು ದಪ್ಪನಾಗಿ ಹೃದಯಾಕಾರದಲ್ಲಿರುತ್ತದೆ. ಹೂಗೊಂಚಲು ಸ್ಪೇಡಿಕ್ಸ್ ಮಾದರಿಯದು. ಸು. 152 ಮಿ.ಮೀ. ಉದ್ದವಾಗಿದ್ದು ಹಳದಿ ಬಣ್ಣಕ್ಕಿರುತ್ತದೆ.

ಅಂತೂರಿಯಮ್ ಕ್ರಿಸ್ಟಲೈನಮ್ ಎಂಬುದು ಈ ಜಾತಿಯ ಇನ್ನೊಂದು ಪ್ರಭೇದ. ಇದರ ಮೂಲಸ್ಥಾನ ಕೊಲಂಬಿಯ ಅಥವಾ ಪೆರು. ಹಸಿರು ಬಣ್ಣದ ಮೃದುವಾದ ಎಲೆಯ ಬುಡದ ವಿಭಾಗಗಳು ಒಂದರಮೇಲೊಂದು ಇರುತ್ತವೆ. ಹೂಗೊಂಚಲ ಕವಚ ಬಹಳ ಕಿರಿದು. ಆಕಾರ ನೀಳಚತುರಸ್ರ. ತುದಿ ಮೊನಚು. ನೆಲಕ್ಕೆ ಸಮಾನಾಂತರವಾಗಿ ಅಥವಾ ಕೆಳಮುಖವಾಗಿ ಬಾಗಿರುತ್ತದೆ. ಹೂಗೊಂಚಲು ಸ್ಪೇಡಿಕ್ಸ್ ಮಾದರಿಯದು.

ಅಂತೂರಿಯಮ್ ಮೆಗಸ್‍ಪಿಕಮ್ ಎಂಬುದು ಈ ಜಾತಿಯ ಮತ್ತೊಂದು ಪ್ರಭೇದ. ಇದು ಕೂಡ ಕೊಲಂಬಿಯ ಮೂಲದ್ದು. ಇದರ ಎಲೆಗಳ ತೊಟ್ಟುಗಳ ಮೇಲುಭಾಗದಲ್ಲಿ ರೆಕ್ಕೆಗಳು ಇರುತ್ತವೆ. ಚತುರ್ಮುಖಿ ಎಲೆಗಳು ಹೃದಯಾಕಾರ ಅಥವಾ ಕರಣೆಯಾಕಾರವಾಗಿ 0.5–1ಮೀ. ಮೀಟರ್ ಉದ್ದವಾಗಿರುತ್ತವೆ. ಬಿಳಿಯ ನಾಳಗಳು ಪರಮುಖವಾಗಿ ಎದ್ದುಕಾಣುತ್ತ ಅಂಚಿನಲ್ಲಿ ಸೇರಿಕೊಂಡಿರುತ್ತವೆ. ಹಸಿರುಬಣ್ಣದ ಹೂಗೊಂಚಲು ಸ್ಪೇಡಿಕ್ಸ್ ಮಾದರಿಯದು.

ಅಂತೂರಿಯಮ್ ವಾರೊಕ್ಯೂಯೆನಮ್ ಎಂಬ ಇನ್ನೊಂದು ಪ್ರಭೇದ ಮೂಲತಃ ಮೆಕ್ಸಿಕೋದೇಶದ್ದು. ಇದಕ್ಕೆ ವಾರೊಕ್ಯೂ ಎಂಬ ಪ್ರಸಿದ್ಧ ಅಂತೂರಿಯಮ್ ಬೇಸಾಯಗಾರನ ಹೆಸರನ್ನೇ ಇಟ್ಟಿದೆ. ಇದರ ಎಲೆಗಳ ತೊಟ್ಟುಗಳು ಗುಂಡಾಗಿರುತ್ತವೆ. ಎಲೆ 1.2 ಮೀಟರ್ ಉದ್ದವಾಗಿ ನೀಳಾಕಾರ, ದೀರ್ಘಚತುರಸ್ರಾಕಾರ ಅಥವಾ ಹೃದಯಾಕಾರವಾಗಿರುತ್ತವೆ. ಲಂಬಾಗ್ರ ತುದಿಯುಳ್ಳ ಎಲೆಗಳ ಮೇಲುಭಾಗ ಮೃದುವಾಗಿರುತ್ತದೆ. ಅದರ ಎರಡುಪಕ್ಕದ ನಾಳಗಳು ಅಂಚಿಗೆ ಸಮಾನಾಂತರವಾಗಿ ಮುಖ್ಯನಾಳದಿಂದ ಹೊರಡುತ್ತವೆ. ಸ್ಪೇಡಿಕ್ಸ್ ಮಾದರಿಯ ಹೂಗೊಂಚಲು 0.3ಮೀಟರ್ ಉದ್ದವಾಗಿರುತ್ತದೆ. ಹೂಗೊಂಚಲಕವಚ ಗೊಂಚಲ ತಳಭಾಗದಲ್ಲಿ ಸರಿಯಾಗಿ ಹೊಂದಿಕೊಳ್ಳುತ್ತದೆ.

ಅಂತೂರಿಯಮ್ ವಿಚ್ಚೈ ಈ ಜಾತಿಯ ಇನ್ನೊಂದು ಪ್ರಭೇದ. ಇಂಗ್ಲೆಂಡಿನ ವಿಚ್ ಎಂಬ ಸಸ್ಯ ಮಾರಾಟಗಾರನ ಜ್ಞಾಪಕಾರ್ಥವಾಗಿ ಈ ಹೆಸರು ಬಂದಿದೆ. ಈ ಪ್ರಭೇದದ ಮೂಲಸ್ಥಾನ ಕೊಲಂಬಿಯ. ಈ ಬಗೆ ಎತ್ತರವಾಗಿ ಬೆಳೆಯುವಂಥದ್ದು. ಇದರ ಕಾಂಡ ಸು. 1 ಮೀ. ಎತ್ತರವಾಗಿರುತ್ತದೆ. ಎಲೆಯ ತೊಟ್ಟು ಕೋನಾಕಾರವಾಗಿರುತ್ತದೆ. ಎಲೆ ತೆಳ್ಳಗೆ ಕೋಲುಕೋಲಾಗಿ ದೀರ್ಘಚತುರಸ್ರಾಕಾರದಲ್ಲಿ 1.2 ಮೀ. ಉದ್ದವಾಗಿರುತ್ತದೆ. ಅದರ ತುದಿ ಮೊನಚಾಗಿದ್ದು ಲೋಹದ ಹಸುರು ಬಣ್ಣದಿಂದ ಕೂಡಿರುತ್ತದೆ. ಬಿಳಿಯನಾಳಗಳು ಎಲೆಯ ಮೇಲೆ ಪ್ರಧಾನವಾಗಿ ಎದ್ದು ಕಾಣುತ್ತವೆ. ಹೂಗೊಂಚಲು ಸ್ಪೇಡಿಕ್ಸ್ ಮಾದರಿಯದು; 0.75 ಮೀ. ತೊಟ್ಟಿನ ಮೇಲಿರುತ್ತದೆ.

ಅಂತೂರಿಯಮ್ ಸ್ಕರ್ಜೆರಿಯಾನಮ್ ಎಂಬುದು ಈ ಜಾತಿಯ ಮತ್ತೊಂದು ಪ್ರಭೇದ. ಇದು ಗ್ವಾಟೆಮಾಲದ ಮೂಲವಾಸಿ. ಇದರ ಕಾಂಡ ಕುಳ್ಳು. ಎಲೆಯ ತೊಟ್ಟುಗಳು ಎಲೆಗಳಷ್ಟೇ ಅಥವಾ ಎಲೆಗಳಿಗಿಂತ ಸ್ವಲ್ಪ ಹೆಚ್ಚು ಉದ್ದವಾಗಿರುತ್ತವೆ. ಎಲೆ ದೀರ್ಘಚತುರಸ್ರಾಕಾರ, ಕರಣೆಯಾಕಾರದ ಅಥವಾ ಹೃದಯಾಕಾರದಲ್ಲಿರುತ್ತದೆ. ಬಣ್ಣ ಹಸಿರು. ಹೂಗೊಂಚಲಿಗೆ ಕವಚವೂ ಉದ್ದವಾದ ತೊಟ್ಟೂ ಇರುತ್ತವೆ. ಇದರ ಹೂಗೊಂಚಲು ಅತಿ ಕೆಂಪುಬಣ್ಣದ್ದಾಗಿದ್ದು ಬಾಗಿರುತ್ತದೆ. ಅಥವಾ ಸುರುಟಿಕೊಂಡಿರುತ್ತದೆ.

ಬೀಜಗಳಿಂದ ಗಿಡ ಪಡೆಯಲು ಹೆಚ್ಚುಕಾಲ ಹಿಡಿಯುವುದಲ್ಲದೆ, ಈ ವಿಧಾನದಲ್ಲಿ ಬೆಳೆಸಿದ ಪೀಳಿಗೆ ಅನೇಕಸಾರಿ ತನ್ನ ತಾಯಿಸಸ್ಯದ ಗುಣಗಳನ್ನು ಹೋಲುವುದಿಲ್ಲ. ಆದ್ದರಿಂದ ನಿರ್ಲಿಂಗರೀತಿಯ ವೃದ್ಧಿಕಾರ್ಯ ಹೆಚ್ಚು ಬಳಕೆಯಲ್ಲಿದೆ. ಅಂತೂರಿಯಮ್ ಸಸ್ಯಗಳನ್ನು ಬೇರು ತುಂಡುಗಳಿಂದ ಸುಲಭವಾಗಿಯೂ ಶೀಘ್ರವಾಗಿಯೂ ವೃದ್ಧಿಮಾಡಬಹುದು. ಅಂಥ ಬೇರಿನ ತುಂಡುಗಳಲ್ಲಿ ಮೋಸುಗಳು ಅಗತ್ಯವಾಗಿ ಇರಬೇಕು. ಸಾಮಾನ್ಯವಾಗಿ ಈ ಸಸ್ಯಗಳನ್ನು ಕುಂಡಗಳಲ್ಲಿ ಬೆಳೆಸುತ್ತಾರೆ. ಇವುಗಳಿಗೆ ಧಾರಾಳವಾಗಿ ಗಾಳಿ ಮತ್ತು ಬೆಳಕು ಅಗತ್ಯ. ನೆರಳಿನಲ್ಲಿ ಇವು ಚೆನ್ನಾಗಿ ಬೆಳೆಯುತ್ತವೆ. ಹೆಚ್ಚಿನ ಬಿಸಿಲಿನಲ್ಲಿ ಇಟ್ಟಾಗ ಎಲೆ ಮತ್ತು ಹೂಗಳ ಬಣ್ಣ ಕಂದಿಹೋಗುತ್ತದೆ.

ಈ ಸಸ್ಯಗಳಿಗೆ ಹೆಚ್ಚಿನ ರೋಗ ಮತ್ತು ಕೀಟಗಳ ಹಾವಳಿ ಇಲ್ಲ. ಆದರೆ ಕೆಲವುಸಾರಿ ಹೂಗೊಂಚಲು ಮತ್ತು ಬೇರುಗಳಲ್ಲಿ ಕೊಳೆತ ಕಾಣಿಸಿಕೊಳ್ಳುತ್ತದೆ. ಇದನ್ನು ಬೋರ್ಡೋ ದ್ರಾವಣ, ಬ್ಲೈಟೆಕ್ಸ್ ಮುಂತಾದುವುಗಳಿಂದ ತಡೆಗಟ್ಟಬಹುದು. ನುಸಿ, ಹೇನು, ಥ್ರಿಪ್ಸ್, ಮಿಡತೆ ಮುಂತಾದ ಕೀಟಗಳು ಈ ಕುಲದ ಸಸ್ಯಗಳನ್ನು ಪೀಡಿಸುತ್ತವೆ. ಇವುಗಳನ್ನು ಫಾಲಿಡಾಲ್, ಬಿ. ಎಚ್. ಸಿ., ಥೈಯಮೇಟ್ ಮುಂತಾದುವುಗಳಿಂದ ತಡೆಯಬಹುದು. (ಎಂ.ಎಚ್.ಎಂ.)

**ಅಂತೆ–ಕಂತೆ** : ಅಂತೆ–ಕಂತೆ (ಫೋಕ್–ಸೇ) ಎಂಬ ಈ ಶಬ್ದವನ್ನು ಬಿ. ಎ ಬೋಟ್ಕಿನ್ ತಮ್ಮ ಜಾನಪದ ಸಂಗ್ರಹದ ವಾರ್ಷಿಕ ಸಂಕಲನದ (1929–32) ತಲೆಬರೆಹವಾಗಿ ರೂಢಿಗೆ ತಂದರು. ಜಾನಪದದ ಇಂದಿನ, ಪ್ರಾಚೀನ ಹಾಗೂ ಕಾಲವೈಪರೀತ್ಯರೀತಿಯುಳ್ಳ (ಅನಾಕ್ರೊನಿಸ್ಟಿಕ್ ಫೇಸ್) ಬಾಯಿಮಾತಿನ, ಭಾಷಾವೈಜ್ಞಾನಿಕ, (ಲಾವಣಿ ಅಥವಾ ಕಥೆಯಾಗಲಿ ಇರುವ) ಕಥನಸ್ವರೂಪದ ಸಾಹಿತ್ಯವೆಂದು ಈ ಶಬ್ದಕ್ಕೆ ಅವರು ವ್ಯಾಖ್ಯೆ ಮಾಡಿರುವರು. ಜಾನಪದದ ಅರ್ಥವಿಸ್ತಾರಮಾಡಿ ಅದನ್ನು ಹೊಸ ಉಪಯೋಗಗಳಿಗೆ ಬಳಸುವುದು ಇದರ ಉದ್ದೇಶವೆಂದು ಅವರು ತಿಳಿಸಿದ್ದಾರೆ. ಇದು 1. ಇಂಥವರು ಹೇಳಿದ್ದು ಹಳೆಯ ನೆನಪುಗಳು, ಅಜ್ಜ ಅಜ್ಜಿಯ ಕಥೆಗಳು, ಜಾನಪದ ಇತಿಹಾಸ, ತಮ್ಮ ಮಾತಿನಲ್ಲಿಯೇ ಜನರು ತಮ್ಮನ್ನು ಕುರಿತು ಹೇಳಿದ ಸಂಗತಿಗಳು. 2. ಜಾನಪದ ಸಾಮಗ್ರಿಗಳನ್ನು ರಚನಾತ್ಮಕವಾಗಿ ಬಳಸುವುದು. 3. ಗಾದೆಗಳು, ಪಳೆಮಾತು, ಆಲಂಕಾರಿಕ ಭಾಷೆ, ದೇಸಿನುಡಿ–ಇತ್ಯಾದಿಗಳನ್ನೊಳಗೊಳ್ಳುತ್ತದೆ. ಗ್ರಂಥವಚನ (ಬುಕ್–ಸೇ) ಹಾಗೂ ಜನವಚನ (ಫೋಕ್–ಸೇ) ವಿರುದ್ಧಾರ್ಥಕಗಳೆಂದು ಬೆನ್.ಸಿ. ಕ್ಲೋ ಹೇಳುತ್ತಾರೆ.

ಜನರ ಸ್ಮರಣಕೋಶದಲ್ಲಿನ ಪವಾಡಕಥೆಗಳು, ಸ್ಥಳಕಥೆಗಳು, ಅನೇಕ ನಂಬಿಕೆ–ಮೂಢನಂಬಿಕೆಗಳು, ನಡೆದ ಸಂಗತಿಗಳಿಗೆ ಉಪ್ಪುಕಾರ ಹಚ್ಚಿ ಹೇಳಿದ ಸಂಗತಿಗಳು–ಇವೆಲ್ಲವೂ ಮಾತಿನ ರೂಪದಲ್ಲಿ ಹರಿದಾಡುತ್ತವೆ. ವೈಜ್ಞಾನಿಕ ಹಾಗೂ ಐತಿಹಾಸಿಕ ದೃಷ್ಟಿ ಕಡಿಮೆಯಿರುವ ಜನರು ಇರಬಹುದು, ದೇವರೇ ಬಲ್ಲ, ಯಾರೋ ಅಂದರು ಎಂಬ ರೀತಿಯಲ್ಲಿ ಇಂಥ ಮಾತುಗಳನ್ನು ಹೇಳುತ್ತಾರೆ; ಕೇಳುತ್ತಾರೆ. ಅನೇಕ ವಿಧಿನಿಷೇಧಗಳು ಇಂಥ ಅಂತೆ–ಕಂತೆಯ ಮೂಲಕವಾಗಿಯೇ ನಿರ್ಮಿತವಾಗಿವೆ–ಕೆಟ್ಟ ಸ್ವಪ್ನ ಬಿದ್ದರೆ ನಸುಕಿನಲ್ಲಿ ಕೊಟ್ಟಿಗೆಗೆ ಹೋಗಿ ಆಕಳ ಕಿವಿಯಲ್ಲಿ ಅದನ್ನು ಸುರಿದರೆ ದೋಷ ಪರಿಹಾರವಾಗುತ್ತದೆ. ಹೊಸದಾಗಿ ಮುಟ್ಟಾದ ಸ್ತ್ರೀಯರು ಬಾವಿಯನ್ನು ದಾಟಬಾರದು; ದಾಟಿದರೆ, ಬಾವಿಯ ನೀರು ಬತ್ತುತ್ತದೆ. ಮುಟ್ಟಾದವರು ಶಿಶುಗಳನ್ನು ಮುಟ್ಟಿದರೆ ಅವರ ದೇಹದ ಶಾಖದಿಂದ ಶಿಶುಗಳು ಬಾಡಿ ಸೊರಗುತ್ತವೆ ಇತ್ಯಾದಿ.

ಸ್ಥಳದ ಹೆಸರುಗಳಲ್ಲಿಯೂ ಮೂಢನಂಬಿಕೆಯ ಹಿನ್ನೆಲೆಯುಂಟು. ಹೊಲನಗದ್ದೆ ಎಂಬ ಊರಿನಲ್ಲಿ ಮಾಣಿಕಟ್ಟು ಎಂಬ ಗದ್ದೆಯಿದೆ (ಖಾರ್ ಲ್ಯಾಂಡ್). ಅದರ ದಂಡೆಯ ಕಟ್ಟನ್ನು ಎಷ್ಟು ಸಲ ಕಟ್ಟಿದರೂ ನೀರಿನ ಹೊಡೆತಕ್ಕೆ ನಿಲ್ಲದೆ ಅದು ಮುರಿದುಹೋಗುತ್ತಿತ್ತಂತೆ; ಒಬ್ಬ ಹುಡುಗನನ್ನು ಕಟ್ಟಿನ ಮಣ್ಣಿನ ಸಂಗಡ ಸೇರಿಸಿ ಜೀವಂತ ಸಮಾಧಿ ಮಾಡಿದ ಮೇಲೆ ಕಟ್ಟು ನಿಂತಿತಂತೆ. ಜನರು ಈ ಊರ ಹೆಸರಿನ ಬಗ್ಗೆ ಕೊಡುವ ಹೇಳಿಕೆ ನಿಜವೋ ಅಥವಾ ಮಾಣಿ ಎಂಬವನು ಕಟ್ಟಿದ್ದರಿಂದ ಮಾಣಿಕಟ್ಟು ಎಂಬ ಹೆಸರು ಬಂತೋ, ಹೇಳಲು ಬಾರದು. ಅನೇಕ ಸ್ಥಳಗಳ ಹೆಸರುಗಳ ಹಿಂದೆ ಇಂಥ ಕಥೆಗಳಿವೆ. ಯಲ್ಲಾಪುರ ತಾಲ್ಲೂಕಿನಲ್ಲಿ ಬಾರೆ, ಸೀರೆ, ಕಳಚೆ ಎಂಬ ಹತ್ತಿರ ಹತ್ತಿರ ಇರುವ ಊರುಗಳುಂಟು.

ಒಬ್ಬ ದಾರಿಕಾರ ಒಬ್ಬ ಹೆಂಗಸಿನ ಹತ್ತಿರ ದಾರಿಯಲ್ಲಿ ಒಂದೊಂದರಂತೆ ಮೇಲ್ಕಂಡ ಮಾತುಗಳನ್ನು ಹೇಳಿದ್ದರಿಂದ ಈ ಊರುಗಳಿಗೆ ಈ ಹೆಸರುಗಳು ಬಂದವೆಂಬ ಹೇಳಿಕೆಯಿದೆ. ಶ್ರವಣಬೆಳಗೊಳದ ಗುಳ್ಳಕಾಯಜ್ಜಿಯ ಕಥೆ ಇನ್ನೊಂದು ಮಾದರಿಯ ಕಥೆ.

ಹಾನಗಲ್ಲು ವಿರಾಟನಗರವೆಂಬ ಹೇಳಿಕೆಯುಂಟು. ಅಲ್ಲಿನ ಒಂದು ದೊಡ್ಡ ಬಾವಿಗೆ ವರ್ತುಲಾಕಾರದ ಪಾತ್ರೆಯ ಮಾದರಿಯ ದೊಡ್ಡ ಕಲ್ಲಿನ ಮುಚ್ಚಳವಿದೆ. ಅದು ಭೀಮ ಊಟಮಾಡುತ್ತಿದ್ದ ತಾಟು ಎಂದು ಅಲ್ಲಿಯ ಜನ ಹೇಳುತ್ತಾರೆ. ಭೀಮನ ಮಲ್ಲಶಾಲೆಯನ್ನೂ ಭೀಮ ಉಪಯೋಗಿಸಿದನೆಂದು ಹೇಳಲಾಗುವ ದೊಡ್ಡ ಬೀಸುವ ಕಲ್ಲನ್ನೂ ಜನ ಈಗಲೂ ತೋರಿಸುತ್ತಾರೆ. ಇದು ಪಾಂಡವರ ಸಂಬಂಧದ ಐತಿಹ್ಯವನ್ನು ಸಿದ್ಧಮಾಡಲು ರಚಿಸಿದ ಸ್ಮಾರಕವಾಗಿರಬಹುದು.

ಅಲ್ಲಿನ ಒಂದು ಕುಟುಂಬದವರಿಗೆ ಗಂಜಿಪೈಕದವರೆಂಬ ಹೆಸರು ಬಂದುದರ ಬಗ್ಗೆ ಹಿರಿಯರ ಹೇಳಿಕೆ ಹೀಗಿದೆ: ನಮ್ಮ ಕುಟುಂಬದವರು ಯಲ್ಲಾಪುರದ ಹೊನ್ನಗದ್ದೆಯಿಂದ ಮಾದನಗೇರಿಗೆ ಬಂದು ಉಳಿದಿದ್ದಾಗ ಬಿಜಾಪುರದ ಕಡೆಯ ಜನರು ಬರಗಾಲದಲ್ಲಿ ಗುಳೆಕಿತ್ತು ಬರುವಾಗ ದೊಡ್ಡ ಹಂಡೆಯಲ್ಲಿ ತೆಳ್ಳಗಿನ ಗಂಜಿಮಾಡಿ ಇವರು ಊಟಕ್ಕೆ ನೀಡುತ್ತಿದ್ದರಂತೆ, ಹೆಗಡೆಜಾತ್ರೆಯಲ್ಲಿ ತೆಂಗಿನಕಾಯಿಕಡಿ ಮರ್ಯಾದೆ ಸಲ್ಲಿಸುವಾಗ ಆ ಗಂಜಿಪೈಕದವರ ಮನ್ನಣೆಯ ಕಾಯಕಡಿಯನ್ನು ಆ ಕುಟುಂಬದವರೊಬ್ಬರು ಸ್ವೀಕರಿಸುತ್ತಾರೆ.

ಕೆಲವು ಚಿಕಿತ್ಸೆಯ ಕ್ರಮಗಳು ಅಂತೆ–ಕಂತೆಯ ಸ್ವರೂಪದವು. ಕೋಡಗ ಗೆಮ್ಮಿಗೆ ಹುಲಿದೇವರ ಗುತ್ತಿನ (ಸ್ಥಾನದ) ಮಣ್ಣು ತಿನ್ನಿಸಬೇಕಂತೆ. ದೇವಾಲಯಗಳ ಹರಕೆಗಳ ಹಾಗೂ ಗುರುಗಳ ಶಾಪಾನುಗ್ರಹಗಳ ವಿಷಯಗಳಲ್ಲಿಯೂ ಅನೇಕ ಹೇಳಿಕೆಗಳಿವೆ.

ಅಂತೆ–ಕಂತೆಯ ಕಂತೆಗೆ ತಕ್ಕ ಬೊಂತೆ, ಅಂಥವ, ಇಂಥವ, ಮೆಂತೆ ಕದ್ದವ' ಹೊಟ್ಟೆಯ ತಮ್ಮ ಬಟ್ಟಲು ಬಾರಿಸುತ್ತಾನೆ (ಹಸಿವೆಯಾಗಿದೆ ಎನ್ನಲು ಹೇಳುವ ಒಗಟನಂಥ ಆಲಂಕಾರಿಕ ಭಾಷೆ ಇದು) ಎಂಬಂಥ ಹಾಸ್ಯದ ನುಡಿಗಳನ್ನೂ ಆದೆ ಭಟ್ಟ ಸೋದೆಗೆ ಹೋದ; ಬಂದ (ಹೋದ ಪುಟ್ಟ; ಬಂದ ಪುಟ್ಟ) ಎಂಬಂಥ ಗಾದೆಗಳನ್ನೂ ಕನ್ನಡಕ್ಕೆ ಮೂಗಿನ ಶಿಪಳ (ಮೂಗನ್ನೆತ್ತಿ ಹಿಡಿಯುವ ಸೂತ್ರ;) ಕಣ್ಣಕಂಗಲ ಎಂಬಂಥ ಜನರೇ ಹೊಸದಾಗಿ ಸೃಷ್ಟಿಸಿದ ಶಬ್ದಗಳನ್ನೂ ಸೇರಿಸಬಹುದು. ಈಗಾಗಲೇ ಕಣ್ಮರೆಯಾಗುತ್ತಿರುವ ಅಂತೆ–ಕಂತೆಯ ಒಂದು ಕೋಶವನ್ನು ಸಿದ್ಧಮಾಡುವ ಬಗ್ಗೆ ಪ್ರಯತ್ನ ಮಾಡಬೇಕಾದ ಅಗತ್ಯವಿದೆ. (ಎಲ್.ಆರ್.ಎಚ್.)

**ಅಂದಾಜು :** ಬೆಲೆ ಕಟ್ಟುವ ಅಥವಾ ನಿಶ್ಚಯಿಸುವ ಕ್ರಮ. ಇದು ಒಟ್ಟು ಮೊತ್ತ, ಪ್ರಮಾಣ ಅಥವಾ ಸನ್ನಿವೇಶ ಇವುಗಳನ್ನು ಮೂಲವಾಗಿಟ್ಟುಕೊಂಡು ನಿರ್ಧರಿಸುವ ಒಂದು ಸರಿಸುಮಾರಾದ ತೀರ್ಮಾನ ಮಾತ್ರ.

ಎಂಜಿನಿಯರಿಂಗ್ ಉದ್ಯೋಗದಲ್ಲಿ ಅಂದಾಜು ಆಗಬೇಕಾಗಿರುವ ಒಂದು ಕೆಲಸಕ್ಕೆ, ಅದರ ನಕ್ಷೆಯ ಆಧಾರದ ಮೇಲೆ, ಈ ಕೆಲಸಕ್ಕೆ ಬೇಕಾಗುವ ಶರೀರಶ್ರಮ ಮತ್ತು ಸಾಮಗ್ರಿಗಳ ಪ್ರಮಾಣವನ್ನನುಸರಿಸಿ ಅದಕ್ಕಾಗುವ ಅಂದಾಜು ಖರ್ಚನ್ನು ತಿಳಿಸುವ ಕ್ರಮ ಬಳಕೆಯಲ್ಲಿದೆ.

ನಿರ್ಮಾಣಕಾರ್ಯವೊಂದನ್ನು ಕೈಗೊಳ್ಳಲು ಬೇಕಾದ ಹಣವನ್ನು ಸಾರ್ವಜನಿಕ ನಿಧಿಯಿಂದ ಪಡೆಯುವ ಬಗ್ಗೆ ಸರ್ಕಾರಿ ಖಜಾನೆ ಅಥವಾ ಹಣಕಾಸಿನ ಇಲಾಖೆಗೆ ಪೂರ್ವಭಾವಿ ತಿಳಿವಳಿಕೆ ನೀಡಲು ಈ ಅಂದಾಜನ್ನು (ಎಸ್ಟಿಮೇಟ್) ತಯಾರಿಸಲಾಗುವುದು.

ಕೆಲವು ವೇಳೆ ನಿರ್ದಿಷ್ಟವಾದ ಒಂದು ಕೆಲಸವನ್ನು ಕೈಗೊಳ್ಳುವ ಕಂತ್ರಾಟುದಾರರು ಅಥವಾ ಇತರ ಕಸಬುದಾರರು, ತಾವು ಎಷ್ಟು ಖರ್ಚಿನಲ್ಲಿ ಆ ಕೆಲಸವನ್ನು ಮುಗಿಸುವುದಾಗಿ ತಿಳಿಸುವ ಒಂದು ಹೇಳಿಕೆಗೂ ಅಂದಾಜು ಎಂದು ಹೇಳಬಹುದು. (ಕೆ.ಸಿ.ಆರ್.)

**ಅಂದಾನಪ್ಪ ದೊಡ್ಡಮೇಟಿ:** 1908–72. ಕರ್ನಾಟಕ ಏಕೀಕರಣಕ್ಕಾಗಿ ದುಡಿದ ರಾಜಕಾರಣಿ. ಇಂದಿನ ಗದಗ ಜಿಲ್ಲೆಯ ಗದಗ ತಾಲ್ಲೂಕಿನ ಜಕ್ಕಲಿ ಗ್ರಾಮದಲ್ಲಿ 1908 ಮಾರ್ಚ್ 8ರಂದು ಜನಿಸಿದರು. ಚಿಕ್ಕಂದಿನಲ್ಲಿ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು. 22ನೆಯ ವಯಸ್ಸಿನಲ್ಲಿ ಅಸಹಕಾರ ಆಂದೋಲನ ಮತ್ತು ಸತ್ಯಾಗ್ರಹಗಳಲ್ಲಿ ಭಾಗವಹಿಸಿದರು. 1933ರ ಕಾಯಿದೆ ಭಂಗ ಚಳವಳಿಯಲ್ಲಿ ಪಾಲ್ಗೊಂಡು ಸರ್ಕಾರದ ಆಗ್ರಹಕ್ಕೆ ಒಳಗಾಗಿ ಬಂಧಿಸಲ್ಪಟ್ಟರು. ಇವರು ಅನೇಕ ಬಾರಿ ಕಾರಾಗೃಹ ವಾಸ ಅನುಭವಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ದುಡಿದರು.

ಶ್ರೀಮಂತ ಜಮೀನುದಾರರಾಗಿದ್ದ ಅಂದಾನಪ್ಪನವರು ಒಮ್ಮೆ ಊರಿಗೆ ಬರ ಬಂದಾಗ ತಮ್ಮಲ್ಲಿದ್ದ ಧಾನ್ಯವನ್ನು ಜನರಿಗೆ ಹಂಚಿದರಲ್ಲದೆ ನಿರುದ್ಯೋಗ ನಿವಾರಣೆಗಾಗಿ ಜನರಿಗೆ ಕೆಲಸ ಒದಗಿಸಿದರು. ಹಾವು ಸಾಕುವುದು ಇವರ ಒಂದು ಹವ್ಯಾಸವಾಗಿತ್ತು. ತಮ್ಮ ಪ್ರೀತಿ ಪಾತ್ರ ಹಾವೊಂದು ಸತ್ತಾಗ ಇವರು ಉಪವಾಸ ಮಾಡಿದರಂತೆ. ಅಂದಾನಪ್ಪನವರು ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ್ದರು. ಕನ್ನಡ ಭುವನೇಶ್ವರಿಯನ್ನು ಸ್ತುತಿಸುವ ಕರ್ನಾಟಕ ಮಹಿಮಾಸ್ತೋತ್ರ ಎಂಬುದು ಇವರ ಕವನಸಂಗಹ. ಇವರು ಪತ್ರಿಕೋದ್ಯಮಿ



ಯಾಗಿದ್ದರು. ಕಲ್ಕಿ ಎಂಬ ಮಾಸಪತ್ರಿಕೆಯನ್ನು ಇವರು ಕೆಲವುಕಾಲ ಗದಗಿನಿಂದ ಪ್ರಕಟಿಸುತ್ತಿದ್ದರು. ಮುಂಬಯಿಯ ವಿಧಾನಸಭೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಕನ್ನಡದಲ್ಲಿ ಮಾತನಾಡಿದರು. ಕರ್ನಾಟಕ ಏಕೀಕರಣ ಪ್ರಯತ್ನವನ್ನು ಬಲಪಡಿಸಿ,ಹೆಚ್ಚು ಕಾಲವನ್ನು ಅದಕ್ಕಾಗಿ ಮೀಸಲಿಟ್ಟು ಮುಂಬಯಿ ವಿಧಾನ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಏಕೀಕರಣಗೊಂಡ ವಿಶಾಲ ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ವಿಧಾನ ಸಭೆಯಲ್ಲಿ ಪದೇಪದೇ ವಾದಿಸುತ್ತಿದ್ದರು. 1970–71ರಲ್ಲಿ ದೊಡ್ಡಮೇಟಿಯವರು ರಾಜ್ಯದ ನೀರಾವರಿ ಖಾತೆಯ ಸಹಾಯಕ ಮಂತ್ರಿಗಳಾಗಿದ್ದರು. 1972 ಫೆಬ್ರವರಿ 21ರಂದು, ನಿಧನರಾದರು. *

**ಅಂದಾನಿ, ವಿ.ಜಿ:** 1947 ಹೆಸರಾಂತ ಚಿತ್ರಕಲಾವಿದ. ಗುಲ್ಬರ್ಗ ಜಿಲ್ಲೆ ಕೀರಣಗಿ ಗ್ರಾಮದಲ್ಲಿ ಜನಿಸಿದರು (1947). ಗುಲ್ಬರ್ಗದ ಆದರ್ಶ ಕಲಾಮಂದಿರದಿಂದ ಚಿತ್ರಕಲೆಯಲ್ಲಿ ಡಿಪ್ಲೊಮಾ ಶಿಕ್ಷಣ ಪಡೆದರು (1969). ಬನಸ್ಥಲಿ ವಿದ್ಯಾಪೀಠದಲ್ಲಿ ಭಿತ್ತಿಚಿತ್ರರಚನೆಯನ್ನು ಕುರಿತು ಅಧ್ಯಯನ ನಡೆಸಿದರು (1970). ಗುಲ್ಬರ್ಗದ ಐಡಿಯಲ್ ಕಾಲೇಜ್ ಆಫ್ ವಿಷುಯಲ್ ಆರ್ಟ್ಸ್‌ನ ಸ್ನಾತಕೋತ್ತರ ಕೇಂದ್ರದ ಪ್ರಾಚಾರ್ಯರಾಗಿ ಈಗ ಸೇವೆಸಲ್ಲಿಸಿದ್ದರು.

ಭಾರತದ ಪ್ರಮುಖ ನಗರಗಳಲ್ಲಿ ಹಾಗೂ ವಿದೇಶಗಳಲ್ಲಿ ಇವರು ಕಲಾಪ್ರದರ್ಶನ ನಡೆಸಿದ್ದಾರೆ. ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಪಾಲ್ಗೊಂಡಿದ್ದರು.

ಇವರಿಗೆ ಅನೇಕ ಪ್ರಶಸ್ತಿ, ಗೌರವಗಳು ಸಂದಿವೆ. ಅವುಗಳಲ್ಲಿ ಮುಖ್ಯವಾದವು:

ಇಲಸ್ಟ್ರೇಟೆಡ್ ವೀಕ್ಲಿ ಪ್ರದರ್ಶನ ಪ್ರಶಸ್ತಿ (1963), ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಖಿಲ ಭಾರತ ಪ್ರದರ್ಶನ ಬಹುಮಾನ (1969), ಕರ್ನಾಟಕ ವಿಶ್ವವಿದ್ಯಾಲಯದ ಪ್ರದರ್ಶನ ಪ್ರಶಸ್ತಿ (1971), ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರದರ್ಶನ ಬಹುಮಾನ (1992), ಹೈದರಾಬಾದ್ ಆರ್ಟ್ ಸೊಸೈಟಿ ಪ್ರಶಸ್ತಿ (1985), ಕೇಂದ್ರ ಸರ್ಕಾರದ ಫೆಲೋಶಿಪ್ (1989), ರಾಷ್ಟ್ರೀಯ ಪ್ರಶಸ್ತಿ (1991), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1992), ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1993).

ಕಲೆಗೆ ಸಂಬಂಧಿಸಿದ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿಯೂ ಇವರು ಸೇವೆಸಲ್ಲಿಸಿದ್ದಾರೆ.ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ,ಅನಂತರ ಅದರ ಅಧ್ಯಕ್ಷರಾಗಿ (1998–2001) ಸೇವೆಸಲ್ಲಿಸಿದ್ದಾರೆ. ಕೇಂದ್ರ ಲಲಿತ ಕಲಾ ಅಕಾಡಮಿಯ ಸದಸ್ಯರೂ ತೀರ್ಪುಗಾರರೂ ಆಗಿದ್ದರು (1988–92). ಸರ್ಕಾರದ ಹಾಗೂ ವಿಶ್ವವಿದ್ಯಾಲಯಗಳ ಅನೇಕ ಕಲಾ ಶೈಕ್ಷಣಿಕ ಮಂಡಳಿಗಳಲ್ಲಿಯೂ ಸದಸ್ಯರಾಗಿ, ಕಾರ್ಯದರ್ಶಿಗಳಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಕಲಾಕೃತಿಗಳು ಭಾರತದ ಅನೇಕ ಪ್ರದರ್ಶನ ಭವನಗಳಲ್ಲಿ, ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳಲ್ಲಿ, ಕಲಾ ಪ್ರೇಮಿಗಳ ಮನೆಗಳಲ್ಲಿ ಮತ್ತು ವಿದೇಶಗಳಲ್ಲಿ ಸಂಗ್ರಹಗೊಂಡಿವೆ. (ಡಿ.ಎ.ಯು.)

**ಅಂಧಂತಮಸ್ಸು :** ಮಹಾಪಾಪಿಗಳಿಗಾಗಿ ಏರ್ಪಟ್ಟ ನರಕ. ಇದನ್ನು ಮಧ್ವಾಚಾರ್ಯರು ಚೆನ್ನಾಗಿ ಚಿತ್ರಿಸಿರುತ್ತಾರೆ. ಇತರ ದೇಶಗಳವರೂ ಇದೇ ರೀತಿಯಾದ ಕಗ್ಗತ್ತಲೆಯ ನರಕವನ್ನು ತಿಳಿಸುತ್ತಾರೆ. (ಜಿ.ಎಚ್.)

**ಅಂಧಕ :** ಒಬ್ಬ ರಾಕ್ಷಸ, ತಂದೆ ಕಶ್ಯಪ, ತಾಯಿ ಮಹಾಭಾರತದ ಪ್ರಕಾರ ದಿತಿ, ಮತ್ಸ್ಯಪುರಾಣದ ಪ್ರಕಾರ ದನು. ಶಿವನಿಂದ ಹತನಾದ ಎಂದು ಭಾರತವೂ ವಿಷ್ಣುಪುರಾಣವೂ ಮಹಾಲಕ್ಷ್ಮಿಯಿಂದ ಹತನಾದ ಎಂದು ಮಾರ್ಕಂಡೇಯ ಪುರಾಣವೂ ತಿಳಿಸುತ್ತವೆ. ಶಿವನೊಡನೆ ಹೋರಾಡಿ ಕೊನೆಯಲ್ಲಿ ಅವನನ್ನೇ ಮೊರೆ ಹೊಕ್ಕು ಪ್ರಮಥಗಣದಲ್ಲಿ ಒಬ್ಬನಾದನೆಂದು ಮತ್ಸ್ಯಪುರಾಣ ತಿಳಿಸುತ್ತದೆ. (ಜಿ.ಎಚ್.)

**ಅಂಧಕಾರಯುಗ :** ಮೆಡಿಟರೇನಿಯನ್ ಸಮುದ್ರದ ಸುತ್ತಲಿನ ದೇಶಗಳನ್ನೆಲ್ಲ ಆಕ್ರಮಿಸಿ ಸು. 5 ಶತಮಾನಗಳ ಕಾಲ (5ನೆಯ ಶತಮಾನದವರೆಗೂ) ಅತ್ಯಂತ ವೈಭವದಿಂದ ಮೆರೆದ ರೋಮನ್ ಸಾಮ್ರಾಜ್ಯದ ಪತನಾನಂತರದ 5 ಶತಮಾನಗಳ ಕಾಲವನ್ನು (500–1000) ಅಂಧಕಾರಯುಗವೆಂದು (ಡಾರ್ಕ್ ಏಜಸ್) ಇತಿಹಾಸಕಾರರು ಕರೆದಿದ್ದಾರೆ. ಯುರೋಪಿನ ಸಂಸ್ಕೃತಿ ಮೊದಲು ಬೆಳೆದದ್ದು ಗ್ರೀಸಿನಲ್ಲಿ; ಗ್ರೀಸಿನ ಪತನಾನಂತರ ರೋಮನರು ಅದನ್ನು ಪೋಷಿಸಿ ಬೆಳೆಸಿದರು. 5ನೆಯ ಶತಮಾನದಲ್ಲಿ ವೈಭವ, ಸಮೃದ್ಧಿ, ಸುಖಲೋಲುಪತೆಗಳಿಂದ ಬಲಗುಂದಿದ್ದ ಆ ಸಾಮ್ರಾಜ್ಯದೊಳಕ್ಕೆ ಅನಾಗರಿಕರಾದರೂ ಬಲಿಷ್ಠರಾದ ಹೊರಜನರು ನುಗ್ಗಿದರು; ಅವರ ಧಾಳಿಯನ್ನೆದುರಿಸಲಾರದೆ ಸಾಮ್ರಾಜ್ಯ ಕುಸಿಯಿತು. ಈ ಜನರು ರೋಮನ್ ಸಾಮ್ರಾಜ್ಯದಲ್ಲಿ ನಿಂತು, ರಾಜ್ಯಗಳನ್ನು ಕಟ್ಟಿ, ದೇಶೀಯರೊಂದಿಗೆ ಬೆರೆತು, ಬಾಳಿದ ನಾಲ್ಕೈದು ಶತಮಾನಗಳನ್ನು ಅಂಧಕಾರ ಯುಗವೆಂದು ಕೆಲವು ಚರಿತ್ರಕಾರರು ಕರೆದಿದ್ದಾರೆ. ಆ ಕಾಲಕ್ಕೆ ಈ ಹೆಸರು ಉಚಿತವೆಂದು ಹೇಳಲಾಗುವುದಿಲ್ಲ. ಆಗಿನ ಪರಿಸ್ಥಿತಿಯನ್ನು ಗಮನಿಸಿದರೆ ಹಿಂದಿನಿಂದಲೂ ಬೆಳೆದು ಬಂದ ರೋಮನ್ ಸಂಸ್ಕೃತಿ ಅಳಿಯಿತೇನೋ ಎನ್ನುವಂತಿತ್ತು, ನಿಜ. ಆದರೆ ವ್ಯಾಪಕವಾಗಿ ಬೆಳೆದು ಜನರಲ್ಲಿ ಬೇರೂರಿದ್ದ ಯಾವ ಸಂಸ್ಕೃತಿಯೂ ಅಷ್ಟು ಸುಲಭವಾಗಿ ನಾಶ ಹೊಂದಲಾರದು. ಅದು ಕೆಲವು ಕಾಲ ಕಾಂತಿಮಾಲಿನ್ಯ ಹೊಂದಿತ್ತೇ ಹೊರತು ಅಳಿಯಲಿಲ್ಲ. ಅಲ್ಲದೆ ರೋಮನ್ ಸಾಮ್ರಾಜ್ಯ ಕ್ಷೀಣಿಸಿದಂತೆಲ್ಲ ಕ್ರೈಸ್ತಧರ್ಮ ಬೆಳೆಯುತ್ತ ಬಂದು, ಅದನ್ನು ಪರೋಕ್ಷವಾಗಿ ಪೋಷಿಸಿತು. ಊಳಿಗಮಾನ್ಯ ಪದ್ಧತಿ, ವ್ಯವಸಾಯದಲ್ಲಿ ಸಮುದ್ರಯಾನದಲ್ಲಿ ಸುಧಾರಣೆಗಳು–ಇವೆಲ್ಲ ಹಳೆಯ ಸಂಸ್ಕೃತಿ ಅಳಿಯಲವಕಾಶಕೊಡಲಿಲ್ಲ. ನಿಜವಾಗಿ ಆ ಯುಗ ಮುಂದೆ ಬಂದ ಮಧ್ಯಯುಗಕ್ಕೆ ಸುಭದ್ರ ತಳಹದಿಯನ್ನು ಹಾಕಿತು. ಈ ಕಾರಣಗಳಿಂದ, ಇತ್ತೀಚಿನ ಚರಿತ್ರಕಾರರು ಆ ಕಾಲವನ್ನು ಪೂರ್ವಮಧ್ಯಯುಗ (ಅರ್ಲಿ ಮಿಡ್ಲ್ ಏಜಸ್) ಎಂದು ಕರೆದಿದ್ದಾರೆ.

ರೋಮನ್ ಚಕ್ರಾಧಿಪತ್ಯದೊಳಕ್ಕೆ ನುಗ್ಗಿ ಬಂದು ನೆಲೆಸಿದ ಆ ಹೊಸ ಜನರು ಆ ಚಕ್ರಾಧಿಪತ್ಯದ ಪ್ರಸಿದ್ಧ ಆಡಳಿತವ್ಯವಸ್ಥೆಯನ್ನು ಸಂಪೂರ್ಣವಾಗಿ ಕೆಡಿಸಿಬಿಟ್ಟರು. ಈ ಅವಧಿಯಲ್ಲಿ ವ್ಯವಸ್ಥಿತ ಆಡಳಿತವಿರಲೇ ಇಲ್ಲ. 800ರಿಂದ 814ರವರೆಗೆ ಆಳಿದ ಚಾರ್ಲಮಾನ್‌ನ (ಚಾರಲ್ಸ್ ದಿ ಗ್ರೇಟ್) ಕಾಲದಲ್ಲಿ ಮಾತ್ರ ಮಧ್ಯ ಯುರೋಪು ಕ್ರಮವಾದ ಆಡಳಿತಕ್ಕೆ ಒಳಪಟ್ಟಿತ್ತು. ಚಕ್ರಾಧಿಪತ್ಯದಲ್ಲಿದ್ದ ಸಾರಿಗೆ ಸಂಪರ್ಕವ್ಯವಸ್ಥೆ ಕೆಟ್ಟು, ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಜನರ ಪ್ರಯಾಣ ನಿಂತಿತು. ಗುಂಪುಗಾರಿಕೆ ಬೆಳೆಯಿತು; ಇದರೊಂದಿಗೆ ಕಲಹಗಳೂ ಹೆಚ್ಚಿದುವು. ಗ್ರೀಕರ ಕಾಲದಿಂದ ಬಂದು, ರೋಮನರ ಕಾಲದಲ್ಲಿ ಭವ್ಯವಾಗಿ ಬೆಳೆದಿದ್ದ ಲಲಿತಕಲೆಗಳು ಅವನತಿ ಹೊಂದಿದವು. ಲ್ಯಾಟಿನ್ ಭಾಷೆ ಒಡೆದು ಫ್ರೆಂಚ್, ಇಟಾಲಿಯನ್, ಸ್ಪ್ಯಾನಿಷ್ ಮುಂತಾದ ದೇಶೀಯ ಭಾಷೆಗಳ ಉಗಮಕ್ಕೆ ಕಾರಣವಾಯಿತು. ಸಾಹಿತ್ಯ, ದರ್ಶನಶಾಸ್ತ್ರ ಮುಂತಾದುವು ಕಡೆಗಣಿಸಲ್ಪಟ್ಟವು; ಆಗಿನ ಅಲ್ಪಸ್ವಲ್ಪ ಬರೆಹಗಾರರು ಸಿಸಿರೊ, ವರ್ಜಿಲ್ ಮುಂತಾದ ಪ್ರೌಢಪ್ರಾಚೀನ ಸಾಹಿತಿಗಳನ್ನು ಅನುಸರಿಸಲು ಯತ್ನಿಸಿದರೇ ಹೊರತು ಸ್ವಂತ ಪ್ರೌಢಿಮೆಯನ್ನು ಹೊಂದಿರಲಿಲ್ಲ.

ಇಂಥ ಕ್ಷೋಭೆಗೊಂಡ ಕಾಲದಲ್ಲೂ ಅಲ್ಲಲ್ಲೇ ಹಿಂದಿನ ಸಂಸ್ಕೃತಿ ಸಂಪತ್ತನ್ನು ಉಳಿಸಿಕೊಳ್ಳುವ ಪ್ರಯತ್ನಗಳು ನಡೆಯದೆ ಇರಲಿಲ್ಲ. ರೋಮನ್ ಸಾಮ್ರಾಜ್ಯ ಅಳಿದಿದ್ದರೂ ಅದರ ನೆನಪು ಅಳಿಯುವಂತಿರಲಿಲ್ಲ. ಹೊಸದಾಗಿ ಬಂದು ನೆಲೆಸಿದ ಆ ಅನಾಗರಿಕ ಜನರ ಮೇಲೂ ಅದು ತನ್ನ ಪ್ರಭಾವವನ್ನು ಬೀರಿತ್ತು. ಅವರೂ ಕಾಲಕ್ರಮೇಣ ರೋಮನರ ಆಡಳಿತಕ್ರಮ, ನ್ಯಾಯವ್ಯವಸ್ಥೆ ಮುಂತಾದುವನ್ನು ಜಾರಿಗೆ ತಂದರು. ರೋಮನ್ ಸಾಮ್ರಾಜ್ಯವೆಂದರೆ ವಿಶ್ವಸಾಮ್ರಾಜ್ಯ ಎಂಬ ಭಾವನೆ ಜನರಲ್ಲಿ ಬೇರೂರಿತ್ತು; ಅಂಥ ಸಾಮ್ರಾಜ್ಯದ ಪುನರುಜ್ಜೀವನವೇ ಸಮರ್ಥ ರಾಜರ ಗುರಿಯಾಯಿತು. 9ನೆಯ ಶತಮಾನದ ಪ್ರಾರಂಭದಲ್ಲೇ ಚಾರ್ಲಮಾನ್ ಈ ಗುರಿಯನ್ನು ಸಾಧಿಸಲು ಯತ್ನಿಸಿದ. ಪೂರ್ವ ಏಷ್ಯದ ಪ್ರಾಚೀನ ನಾಗರಿಕತೆ, ಗ್ರೀಸ್ ಮತ್ತು ರೋಮ್ ಸಂಸ್ಕೃತಿ–ಇವುಗಳೂ ಅಲ್ಲಲ್ಲೇ ಉಳಿದುವು; ಆದರೆ ಅವು ಜನರಲ್ಲಿ ಹರಡಿ ವಿಕಾಸಗೊಳ್ಳುವ ಕಾಲ ಇನ್ನೂ ಬಂದಿರಲಿಲ್ಲ. 7ನೆಯ ಶತಮಾನದಲ್ಲೇ ಪಶ್ಚಿಮ ಏಷ್ಯದಲ್ಲಿ ರಾಜ್ಯ ಸ್ಥಾಪಿಸಿದ ಮುಸ್ಲಿಮರೂ ಈ ಸಂಸ್ಕೃತಿಯನ್ನು ಮೆಚ್ಚಿ ಪೋಷಿಸಿದರು.

ರೋಮನ್ ಸಾಮ್ರಾಜ್ಯದ ಉತ್ತರಕ್ಕೆ, ಪೂರ್ವಕ್ಕೆ, ಅನಾಗರಿಕರಾದರೂ ಬಲಿಷ್ಠರು ಮತ್ತು ಧೈರ್ಯಶಾಲಿಗಳು ಆದ ಜನರು ಹಿಂದಿನಿಂದಲೂ ಸಾಮ್ರಾಜ್ಯದೊಳಗೆ ನುಗ್ಗಲು ಯತ್ನಿಸುತ್ತಲೇ ಇದ್ದರು. ರೋಮನರ ಇಳಿಗತಿ ಮೊದಲಾದಂದಿನಿಂದ (ಪ್ರಶ. 3 ಶತಮಾನ) ಅವರ ಹಾವಳಿ ಹೆಚ್ಚಿತು. ರೋಮನ್ ಸಾಮ್ರಾಜ್ಯದಲ್ಲೇ ಕೆಲವರು ನೆಲೆಸಿದ್ದರು; ಕೆಲವರು ರೋಮನ್ ಸೈನ್ಯಕ್ಕೂ ಸೇರಿದ್ದರು. ಇವರಲ್ಲಿ ಮುಖ್ಯರಾದವರು ಜರ್ಮನರು. ಹಿಂದಿನಿಂದ ಮಂಗೋಲ್ ಬುಡಕಟ್ಟಿಗೆ ಸೇರಿದ ಹೂಣರು ನೂಕತೊಡಗಿದುದರಿಂದ ಇವರು ಸಾಮ್ರಾಜ್ಯದೊಳಗೆ ನುಗ್ಗಲೇಬೇಕಾಯಿತು. ವಿಸಿಗಾತರು, ಆಸ್ಟ್ರೊಗಾತರು (ಗಾತ್ ಎಂಬ ಜನರ ಪಶ್ಚಿಮ ಮತ್ತು ಪೂರ್ವ ಶಾಖೆಗಳು) ಇವರಲ್ಲಿ ಮುಖ್ಯರಾದವರು, ವಿಸಿಗಾತರ ಮುಖಂಡನಾಗಿದ್ದ ಅಲರಿಕ್ ಎಂಬವನು 410ರಲ್ಲಿ ರೋಮ್ ನಗರವನ್ನು ಸ್ವಾಧೀನಪಡಿಸಿಕೊಂಡು ಕೊಳ್ಳೆ ಹೊಡೆದ. ಆಸ್ಟ್ರೊಗಾತರ ತಂಡವೊಂದು 470ರಲ್ಲಿ ರೋಂ ನಗರಕ್ಕೆ ನುಗ್ಗಿತು; ಅದರ ಮುಖಂಡನಾದ ಥಿಯಾಡರಿಕ್ ಎಂಬವನು ಸ್ವಲ್ಪಕಾಲ ದೊರೆಯಾಗಿ ನಿಂತ. ವ್ಯಾಂಡಲರೆಂಬ ಜನರು ಹೆಚ್ಚಾಗಿ ಸ್ಪೇನ್ ಕಡೆ ನುಗ್ಗಿ, ಅದನ್ನು ಸ್ವಾಧೀನಪಡಿಸಿಕೊಂಡು ಉತ್ತರ ಆಫ್ರಿಕದ ದೇಶಗಳಿಗೂ ನುಗ್ಗಿದರು. ಆಗಲೇ ನುಚ್ಚುನೂರಾಗಿದ್ದ ರೋಮನ್ ಸಾಮ್ರಾಜ್ಯ ಹೂಣರ ಹಾವಳಿಗೆ ತುತ್ತಾಯಿತು. ಶಲಭಸದೃಶರಾದ ಇವರಿಗೆ ಮಾನವೀಯತೆಯೇ ಇರಲಿಲ್ಲ. ಹೋದೆಡೆಯಲ್ಲೆಲ್ಲ ಕೊಲೆ, ಕೊಳ್ಳೆ, ಲೂಟಿ ನಡೆಯುತ್ತಿತ್ತು. ಇಡೀ ಪ್ರಾಂತ್ಯವನ್ನು ಬೆಂಗಾಡು ಮಾಡಿ ಮುಂದೆ ಹೋಗುತ್ತಿದ್ದರು. ಇವರಲ್ಲದೆ ಬರ್ಗಂಡಿಯನ್ನರು, ಲಾಂಬಾರ್ಡರು ಮುಂತಾದ ಜರ್ಮನ್ ಶಾಖೆಗಳೂ ಧಾಳಿ ನಡೆಸಿದುವು; ಆದರೆ ಇವರು ಧಾಳಿ ಮುಗಿದ ಮೇಲೆ ನೆಲೆನಿಂತರು. ಆ ಪ್ರದೇಶಗಳು ಬರ್ಗಂಡಿ ಲಾಂಬರ್ಡಿ ಎಂಬ ಹೆಸರು ಪಡೆದುವು. ಆಂಗ್ಲೋ ಸ್ಯಾಕ್ಸನರು ಎಂಬ ಇನ್ನೊಂದು ಗುಂಪು ಬ್ರಿಟಿಷ್ ದ್ವೀಪಗಳಿಗೆ ನುಗ್ಗಿ ನೆಲೆಸಿತು; ಇದರ ಒಂದು ಶಾಖೆಯಾದ ಆಂಗ್ಲರು ಎಂಬ ಹೆಸರಿನಿಂದಲೇ ಇಂಗ್ಲೆಂಡ್ ಎಂಬ ಶಬ್ದ ಬಂದಿದೆ. ಫ್ರಾಂಕರು ಎಂಬ ಜನರೂ ಜರ್ಮನರ ಇನ್ನೊಂದು ಶಾಖೆ. ಇವರು ಮಾತ್ರ ಗಾಲ್‌ನಲ್ಲೇ ನಿಂತು ಈಗಿನ ಫ್ರಾನ್ಸ್‌ಗೆ ತಮ್ಮ ಹೆಸರನ್ನು ಕೊಟ್ಟರು. ಇವರು ನೆಲೆಸಿದ ಸ್ವಲ್ಪ ಕಾಲದಲ್ಲೇ ಕ್ರೈಸ್ತಮತವನ್ನು ಸ್ವೀಕರಿಸಿ ಭದ್ರತೆ, ಮಾನ್ಯತೆಗಳನ್ನು ಪಡೆದರು. ಒಂಬತ್ತನೆಯ ಶತಮಾನದ ಮೊದಲಲ್ಲೇ ಸಾಮ್ರಾಜ್ಯ ಸ್ಥಾಪನೆಗೆ ಪ್ರಯತ್ನಿಸಿದ ಚಾರ್ಲಮಾನ್‌ನ ವಿಷಯ ಹಿಂದೆಯೇ ಬಂದಿದೆ.

ಹೀಗೆ 4, 5, 6ನೆಯ ಶತಮಾನಗಳಲ್ಲಿ ಹೊರ ಜನಾಂಗಗಳ ಧಾಳಿಯಿಂದಾಗಿ ರೋಮನ್ ಸಾಮ್ರಾಜ್ಯ ಕುಸಿದು, ಯುರೋಪಿನಲ್ಲಿ ಸಣ್ಣ ರಾಜ್ಯಗಳು ಏರ್ಪಡುವುದಕ್ಕೆ ದಾರಿ ಮಾಡಿಕೊಟ್ಟಿತು. ಆದರೆ ಪರಕೀಯರ ಧಾಳಿ ಇಲ್ಲಿಗೇ ಮುಗಿಯಲಿಲ್ಲ. 9 ಮತ್ತು 10ನೆಯ ಶತಮಾನಗಳಲ್ಲಿ ಉತ್ತರದ ಸ್ಕಾಂಡಿನೇವಿಯ ಪ್ರಾಂತ್ಯದಿಂದ ನಾರ್ಸ್‌ಮೆನ್ ಎಂಬ ಜನರು ಪಶ್ಚಿಮ ಯುರೋಪಿನ ದೇಶಗಳಿಗೆ ನುಗ್ಗಿ ಸಿಕ್ಕಿದುದನ್ನೆಲ್ಲ ದೋಚಿಕೊಂಡು ಹೋಗತೊಡಗಿದರು. ಎರಡು ಶತಮಾನಗಳ ಕಾಲ ಪಶ್ಚಿಮ ಯುರೋಪಿನ ತೀರಪ್ರಾಂತ್ಯಗಳಲ್ಲಿ ಇವರ ಧಾಳಿ ಅವಿಚ್ಛಿನ್ನವಾಗಿ ನಡೆಯಿತು. ಅಲ್ಪಸ್ವಲ್ಪ ಜನರು ಫ್ರಾನ್ಸ್ ಮತ್ತು ಬ್ರಿಟಿಷ್ ದ್ವೀಪಗಳಲ್ಲಿ ನೆಲೆಸಿದರು. ಇವರು ಅಧಿಕ ಸಂಖ್ಯೆಯಲ್ಲಿ ಒಂದೆಡೆ ನೆಲೆಸಲಿಲ್ಲ. ಏಳನೆಯ ಶತಮಾನದಲ್ಲಿ ಹುಟ್ಟಿದ್ದ ಇಸ್ಲಾಂ ಧರ್ಮಕ್ಕೆ ಸೇರಿದ ಮುಸ್ಲಿಮರ ಧಾಳಿ ಹೀಗಿರಲಿಲ್ಲ. 7ನೆಯ ಶತಮಾನ ಮುಗಿಯುವುದರೊಳಗೆ ಅವರು ಪಶ್ಚಿಮ ಏಷ್ಯದ ಕೆಲವು ಪ್ರದೇಶಗಳು ಮತ್ತು ಉತ್ತರ ಆಫ್ರಿಕದ ತೀರಪ್ರದೇಶಗಳನ್ನೆಲ್ಲ ಆಕ್ರಮಿಸಿದ್ದರು; ಮುಂದಿನ ಶತಮಾನದಲ್ಲಿ ಅವರು ಸ್ಪೇನಿಗೂ ನುಗ್ಗಿದರು. ಸಿಸಿಲಿ ಮತ್ತು ದಕ್ಷಿಣ ಇಟಲಿಗಳ ಮೇಲೆ ಧಾಳಿ ನಡೆಸಿದರು. ಬಾಸ್ಪೊರಸ್ ಜಲಸಂಧಿಯನ್ನು ದಾಟಿ ಆಗ್ನೇಯ ಯುರೋಪನ್ನು ವಶಪಡಿಸಿಕೊಂಡಾರೆಂಬ ಭಯ ಹೆಚ್ಚುತ್ತ ಹೋಯಿತು.

ನಾನಾ ಜನಾಂಗಕ್ಕೆ ಸೇರಿದ, ನಾನಾ ಮಟ್ಟದ ನಾಗರಿಕತೆಯ ಹೊರಜನರು ಈ ರೀತಿ ಶಿಥಿಲಗೊಂಡಿದ್ದ ರೋಮನ್ ಸಾಮ್ರಾಜ್ಯಕ್ಕೆ ನುಗ್ಗಿ ಅದನ್ನು ಕೊನೆಗಾಣಿಸಿದರು. ಮೊದಲು ಈ ಗೊಂದಲದ ಪರಿಸ್ಥಿತಿಯಲ್ಲಿ ಯುರೋಪಿನ ಮುಂದಿನ ಗತಿಯೇನು ಎಂಬುದು ತಿಳಿಯದಂತಾಗಿತ್ತು. ಆದರೆ ಕಾಲಕ್ರಮೇಣ, ಈ ಗಲಿಬಿಲಿಯಲ್ಲೇ ಯುರೋಪಿನ ನಾನಾ ರಾಜ್ಯಗಳ ಉಗಮವಾಯಿತು; ಈ ರಾಜರಲ್ಲಿ ದಕ್ಷರೂ ಸಮರ್ಥರೂ ಆದ ಫ್ರಾನ್ಸಿನ ಚಾರ್ಲಮಾನ್‌ನಂಥ ದೊರೆಗಳು ರೋಮನ್ ಸಾಮ್ರಾಜ್ಯವನ್ನು ಪುನರುಜ್ಜೀವನಗೊಳಿಸುವ ಯತ್ನವನ್ನೂ ಮಾಡಿದರು; ಇಂಗ್ಲೆಂಡಿನ ಆಲ್‌ಫ್ರೆಡ್ ಮಹಾಶಯನಂಥವರು ಸುಭದ್ರವಾದ ಪ್ರಗತಿಪರ ರಾಷ್ಟ್ರ ನಿರ್ಮಾಣಕಾರ್ಯ ಯಾವ ರೀತಿ ನಡೆಯಬೇಕೆಂಬುದನ್ನು ತೋರಿಸಿಕೊಟ್ಟರು. 10ನೆಯ ಶತಮಾನ ಕಳೆಯುವ ಕಾಲಕ್ಕೆ, ಯುರೋಪಿನ ರಾಜಕೀಯ ಪರಿಸ್ಥಿತಿ ಒಂದು ನಿರ್ದಿಷ್ಟ ರೀತಿಯಲ್ಲಿ ಸಾಗತೊಡಗಿತು. ರೋಮನ್ ಕೆಥೊಲಿಕ್ ಧರ್ಮ ಯುರೋಪಿನಲ್ಲೆಲ್ಲ ವ್ಯಾಪಿಸಿತ್ತು; ಸ್ಪೇನಿನ ಬಹುಭಾಗ, ಸಿಸಿಲಿ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿದ್ದುವು; ಕ್ರೈಸ್ತ ಧರ್ಮೀಯರಲ್ಲಿ, ರೋಮಿನ ಪೋಪನ ಅಧೀನದಲ್ಲಿದ್ದ ರೋಮನ್ ಕೆಥೊಲಿಕರು, ಕಾನ್‌ಸ್ಟಾಂಟಿನೋಪಲ್‌ನ (ಬೈಜ಼ಾಂಟಿಯಂ) ಧರ್ಮಗುರುವಿನ ಅಧಿಕಾರಕ್ಕೆ ಒಳಪಟ್ಟಿದ್ದ ಪೂರ್ವಕ್ರೈಸ್ತ (ಈಸ್ಟರ್ನ್ ಚರ್ಚ್) ಧರ್ಮೀಯರು ಎಂದು ಎರಡು ಶಾಖೆಗಳು ಹುಟ್ಟಿದ್ದುವು; ಊಳಿಗಮಾನ್ಯ ಪದ್ಧತಿ ಬೆಳೆಯತೊಡಗಿದ್ದರಿಂದ ಒಂದು ರೀತಿಯ ಸಮಾಜ ವ್ಯವಸ್ಥೆಯೇರ್ಪಟ್ಟು, ಸಾಮಾನ್ಯ ಜನತೆ ಅಹನ್ಯಹನಿ ಕಾಲಕ್ಷೇಪ ಮಾಡುವ ಪರಿಸ್ಥಿತಿ ತಪ್ಪಿತು. (ಎ.ಎಂ.)

**ಅಂಧವಾಚನಬೋಧಕಯಂತ್ರ :** 1914ರಲ್ಲಿ ಫೋರ್‍ನಿಯರ್ ಡಿ ಎಲ್‍ಬೆ ಎಂಬಾತ ಅಚ್ಚುಹಾಕಿದ ಪುಸ್ತಕಗಳನ್ನು ಮತ್ತು ವರ್ತಮಾನ ಪತ್ರಿಕೆಗಳನ್ನು ಅಂಧರು ಓದುವುದಕ್ಕೆ ಸಹಾಯಕವಾಗುವ ಆಪ್ಟೊಫೋನ್ ಈ ಯಂತ್ರವನ್ನು ಕಂಡುಹಿಡಿದ. ಮೂಲಭೂತವಾಗಿ ಈ ಯಂತ್ರದಲ್ಲಿರುವ ಸೆಲೇನಿಯಂ ಸೆಲ್ಲು ಬೆಳಕಿನ ಕಿರಣಗಳನ್ನು ಧ್ವನಿ ತರಂಗಗಳನ್ನಾಗಿ ಮಾರ್ಪಡಿಸುತ್ತದೆ. ಇದಕ್ಕೆ ಮುಂಚೆ ಈ ಅಂಧರು ದಪ್ಪವಾದ ಕಾಗದದ ಮೇಲೆ ಬ್ರೇಲ್ ವಿಧಾನದಂತೆ ಅಚ್ಚುಮೊಳೆಗಳಿಂದ ಉಬ್ಬಿಸಲ್ಪಟ್ಟ ಚುಕ್ಕೆಗಳ ಜೋಡಣೆಯನ್ನು ಬೆರಳುಗಳ ಸ್ಪರ್ಶದಿಂದ ಗುರುತಿಸಿ ಬರೆವಣಿಗೆಯನ್ನು ಗ್ರಹಿಸಬಹುದಾಗಿದ್ದಿತು.

ಸೆಲೇನಿಯಮ್ ಸೆಲ್ ಎಂಬ ದ್ಯುತಿವಿದ್ಯುತ್ ಸಲಕರಣೆ ಅಂಧವಾಚನ ಬೋಧಕಯಂತ್ರದ ಕಾರ್ಯನಿರ್ವಹಣೆಗೆ ಆಧಾರವಾಗಿದೆ. ಒಂದು ಪೋರ್ಸಿಲೀನ್ ಫಲಕದ ಮೇಲೆ ಎರಡು ಗ್ರಾಫೈಟ್ ವಿದ್ಯುತ್‍ಪ್ರವಾಹಗಳ ಮಧ್ಯೆ ಈ ಸೆಲೇನಿಯಮ್‍ನ ವಿದ್ಯುತ್‍ಸೇತುವೆಯನ್ನು ಇಟ್ಟು ಇದನ್ನು ಒಂದು ವಿದ್ಯುದುತ್ಪಾದಕ ಕೋಶಮಾಲೆಗೂ ಒಂದು ದೂರವಾಣಿಯಂತ್ರಕ್ಕೂ ಜೋಡಿಸುತ್ತಾರೆ. ಬೆಳಕಿನ ಕಿರಣರಾಶಿ, ನಡುವೆ ಇರಿಸಲ್ಪಟ್ಟ ಒಂದು ತಿರುಗುತ್ತಿರುವ ಸರಂಧ್ರ ಫಲಕಚಕ್ರದಿಂದ (ಸೈರೆನ್ ಡಿಸ್ಕ್) ಓದಬೇಕಾದ ಅಕ್ಷರಗಳ ಮೇಲೆ ಕೇಂದ್ರೀಕರಿಸಲ್ಪಡುತ್ತದೆ. ಇದು ಪುನಃ ಸೆಲೇನಿಯಮ್ ಸೇತುವೆಯ ಮೇಲೆ ಪ್ರತಿಬಿಂಬಿಸುವುದರಿಂದ ಸೆಲೇನಿಯಮ್‍ನ ವಿದ್ಯುತ್‍ಪ್ರವಾಹಕ ಶಕ್ತಿಯಲ್ಲಿ ಬೇರೆ ಬೇರೆ ಅಕ್ಷರಗಳಿಂದ ಬದಲಾವಣೆಗಳಾಗಿ ದೂರವಾಣಿಯಂತ್ರದಲ್ಲಿ ಆಯಾ ಅಕ್ಷರಗಳಿಗನುಸಾರವಾಗಿ. ವಿವಿಧ ಸ್ವರಗಳೂ ವರ್ಣಗಳೂ ಉತ್ಪತ್ತಿಯಾಗುತ್ತವೆ. ಇದು ಈ ಯಂತ್ರದ ಮೂಲಭೂತ ತತ್ತ್ವ.

ಈ ಯಂತ್ರದ ರಚನೆ ಮತ್ತು ಕಾರ್ಯಾಚರಣೆಯಲ್ಲಿ, ಒಂದು ಕಿರಣ ಕೇಂದ್ರೀಕರಣಕ್ಕೆ ಬದಲಾಗಿ, ಅಕ್ಷರಗಳನ್ನು ಮುಚ್ಚುವಂತೆ ಅನೇಕ ಕೇಂದ್ರೀಕೃತ ಕಿರಣಗಳನ್ನು ಈ ಅಕ್ಷರಗಳ ಮೇಲೆ ಪ್ರಸರಿಸುವಂತೆ ಏರ್ಪಡಿಸಲಾಗಿದೆ. ಒಂದೊಂದು ಕೇಂದ್ರೀಕೃತ ಕಿರಣಕ್ಕೂ ಬೇರೆ ಬೇರೆ ಕಂಪನ (ಫ್ರೀಕ್ವೆನ್ಸಿ) ಶಕ್ತಿ ಉಂಟಾಗುವಂತೆ ಚಕ್ರದಲ್ಲಿ ರಂಧ್ರಗಳನ್ನು ಮಾಡಿದೆ. ಅಂಧವಾಚಕ ಈ ಯಂತ್ರದಿಂದ ಉಂಟಾಗುವ ಪ್ರತಿ ಅಕ್ಷರಸೂಚಕ ಸ್ವರವರ್ಣಗಳನ್ನು, ಸ್ವಲ್ಪ ಅನುಭವದಿಂದ ಗುರುತಿಸುವ ಶಕ್ತಿ ಪಡೆದು, ಅನಂತರ ಈ ಸ್ವರವರ್ಣ ಸಮನ್ವಯದಿಂದುಂಟಾಗುವ ಶಬ್ದಗಳನ್ನು ಗ್ರಹಿಸುತ್ತಾನೆ. ಅಂಧವಾಚಕನ ಶಕ್ತಿ ಸಾಮರ್ಥ್ಯಕ್ಕನುಸಾರವಾಗಿ ಉಪಯೋಗಕ್ಕೆ ಅನುಕೂಲವಾಗುವಂತೆ ಈ ಯಂತ್ರವನ್ನು ವೇಗವಾಗಿಯೂ ಸಾವಕಾಶವಾಗಿಯೂ ನಡೆಸುವುದಕ್ಕೆ ನಿಯಂತ್ರಣ ಸೌಕರ್ಯವಿದೆ. ಪ್ರಾರಂಭದಲ್ಲಿ ಈ ಯಂತ್ರದಿಂದ ಒಬ್ಬ ಅಂಧವಾಚಕನು ಮಾತ್ರ ನಿಶ್ಶಬ್ದವಾಗಿ ಸಾಹಿತ್ಯಪಠಣವನ್ನು ಕೇಳಬಹುದಾಗಿದ್ದಿತು. 1920ರಿಂದೀಚೆಗೆ ಒಂದು ಕೊಠಡಿಯಲ್ಲಿರುವ ಅನೇಕ ಅಂಧವಾಚಕರು ಏಕಕಾಲದಲ್ಲಿ ಕೇಳಿ ತಿಳಿದುಕೊಳ್ಳಬಹುದಾದ ಮಾರ್ಪಾಡನ್ನು ಸಹ ಈ ಯಂತ್ರದಲ್ಲಿ ಮಾಡಲಾಗಿದೆ **(ನೋಡಿ- ಬ್ರೇಲ್ ಲಿಪಿ).** (*)

**ಅಂಬಕೇರಿ:** ಸಹರಿನ್‍ಪೂರ್ ಜಿಲ್ಲೆಯ ರೂರ್ಕೀ ತಹಸೀಲಿನ ಮುಂಡ್ಲನಗೆ ಉತ್ತರಕ್ಕೆ ಅರ್ಧ ಕಿಮೀ ದೂರದಲ್ಲಿರುವ ಪುರಾತತ್ತ್ವ ನೆಲೆ. 1963–64 ರಲ್ಲಿ ಕೇಂದ್ರ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆಯ ವತಿಯಿಂದ ಎಂ.ಎಸ್.ದೇಶಪಾಂಡೇ ಮತ್ತು ಇತರರ ನೇತೃತ್ವದಲ್ಲಿ ಉತ್ಖನನವನ್ನು ನಡೆಸಲಾಯಿತು. ಮಳೆಯ ನಾಲೆಗಳಿಂದ ಭಾಗಶಃ ಕೊಚ್ಚಿ ಹೋಗಿರುವ ಮತ್ತು ಬೇರೆ ಬೇರೆ ಭಾಗಗಳಲ್ಲಿ ವ್ಯವಸಾಯ ನಡೆಸಿರುವುದರಿಂದ ಕೇವಲ 1.10 ಮೀ ದಪ್ಪಗಿರುವ ಅಂತ್ಯಕಾಲೀನ ಹರಪ್ಪ ಸಂಸ್ಕೃತಿಯ ಸಮಕಾಲೀನ ಸಾಂಸ್ಕೃತಿಕ ಅವಶೇಷಗಳು ಆರು ಸ್ತರಗಳಲ್ಲಿ ಕಂಡು ಬಂದಿದೆ. ಎಲ್ಲಾ ಸ್ತರಗಳಲ್ಲಿಯೂ ಇದುವರೆಗೆ ಬೆಳಕಿಗೆ ಬಂದಿರುವ ಮಾಸಲು ಕಂದುಬಣ್ಣದ ಹಲವು ಪ್ರಕಾರಗಳ ಮಡಕೆಗಳಿದ್ದವು. ಈ ಮಡಕೆಗಳನ್ನು ಚೆನ್ನಾಗಿ ಹದಮಾಡಿರುವ ಜೇಡಿಮಣ್ಣಿನಿಂದ ತಿಗರಿಯ ಮೇಲೆ ತಯಾರಿಸಲಾಗಿದೆ. ಇವು ಪಾರ್ಶ್ವಭಾಗಗಳಲ್ಲಿ ಪೂರ್ಣ ಅಥವಾ ಭಾಗಶಃ ಕಂದುಬಣ್ಣದ್ದಾಗಿದ್ದು ಹೊಂದಾಣಿಕೆಗಾಗಿ ಮರಳು ಮತ್ತು ಮೈಕವನ್ನು ಉಪಯೋಗಿಸಲಾಗಿದೆ. ದಪ್ಪ ಮಡಕೆಗಳಲ್ಲಿ ಕತ್ತರಿಸಿರುವ ಹುಲ್ಲನ್ನು ಉಪಯೋಗಿಸಿರುವಂತೆ ಕಂಡುಬರುವುದು. ಮಡಕೆಗಳನ್ನು ಸಂಪೂರ್ಣವಾಗಿ ಸುಟ್ಟಿಲ್ಲದಿರುವುದು ಮತ್ತು ಮೇಲಿನ ಲೇಪನ ಮಡಕೆಯ ಚೂರುಗಳಲ್ಲಿ ವರ್ಣರಂಜಿತ ಚಿತ್ರಗಳಾಗಲೀ ಗೀರಿದ ಚಿತ್ರಗಳಾಗಲೀ ಇಲ್ಲದಿದ್ದರೂ ಇವುಗಳ ಹೊರಮೈಯಲ್ಲಿ ಹುರಿಯ ಗುರುತುಗಳೂ ಹೆಣೆದ ಚಾಪೆಯ, ಅಡ್ಡಡ್ಡಲಾಗಿ ಗುರುತಿಸಿರುವ ಗೆರೆಗಳಿವೆ.

ಮಣ್ಪಾತ್ರೆಯ ಪ್ರಧಾನವಾದ ಮಾದರಿಗಳೆಂದರೆ ಶೇಖರಣೆ ಜಾಡಿ, ನೀರಿನ ದೋಣಿ, ದಂಡ ಮೇಲಿನ ತಟ್ಟೆ, ಉದ್ದ ಕತ್ತಿನ ಜಾಡಿ, ಕೊಕ್ಕಿನಂತೆ ಅಡ್ಡಲಾಗಿ ಹೊರಚಾಚಿರುವ ಅಂಚಿನ ಬೋಗುಣಿ ಅಥವಾ ತಾಂಬಾಳ, ಕಾಲುಗಳುಳ್ಳ ಮಡಕೆ, ಬಟ್ಟಲು ಮಾದರಿಯ ಹಿಡಿಕೆ, ಮುಚ್ಚಳ. ದಪ್ಪನಾದ ಸಮತಲ ತಳದ ಸಣ್ಣ ಬಟ್ಟಲು ಮುಂತಾದವುಗಳು ದಪ್ಪ ಮತ್ತು ತೆಳ್ಳನೆಯ ಕಂದುಬಣ್ಣದ ವಿವಿಧ ಪ್ರಕಾರಗಳ ಮಡಕೆಗಳಿವೆ.

ಯಾವುದೇ ಒಂದು ನಿರ್ದಿಷ್ಟ ಆಕಾರಗಳಿಲ್ಲದ ಅರೆಸುಟ್ಟಿರುವ ಇಟ್ಟಿಗೆಗಳನ್ನು ಉಪಯೋಗಿಸಿ ಕಟ್ಟಿರುವ ಒಲೆ ನಿರ್ಮಿತಗಳಲ್ಲಿ ಒಂದು. ಇದು 58 ಸೆಂಮೀ ಉದ್ದ, 30 ಸೆಂಮೀ ಅಗಲ ಮತ್ತು 18ಸೆಂಮೀ ಎತ್ತರವಾಗಿದೆ. ದಕ್ಷಿಣಭಾಗದ ಇಟ್ಟಿಗೆಯ ಅಳತೆ 33x18x8 ಸೆಂಮೀ ಆಗಿದೆ. ಇದರ ಪೂರ್ವಭಾಗದ ನೆಲಗಟ್ಟನ್ನು ಇಟ್ಟಿಗೆ ಚೂರುಗಳಿಂದ ನಿರ್ಮಿಸಲಾಗಿದೆ. ಈ ಒಲೆಯಲ್ಲಿ ಸ್ವಲ್ಪ ಬೂದಿಯೂ ಕಂಡುಬಂದಿದೆ.

ನಿವೇಶನದ ದಕ್ಷಿಣ ಪರಿಧಿಯಲ್ಲಿ ಒಂದು ಇಟ್ಟಿಗೆಗೂಡು ಕಂಡು ಬಂದಿದೆ. ಇದು 1.60ಮೀ ಉದ್ದ ಮತ್ತು 30ಸೆಂಮೀ ಅಗಲವಾಗಿದ್ದು ಪೂರ್ವ–ಪಶ್ಚಿಮಾಭಿಮುಖವಾಗಿದೆ. ಇಟ್ಟಿಗೆಗೂಡನ್ನು ಒಂದು ದೊಗರಿರುವ ಗುಣಿಯಲ್ಲಿ ಮಾಡಿದೆ. ಇದರ ಪಕ್ಕಗಳನ್ನು ಒಣಹುಲ್ಲು ಮಿಶ್ರಿತ ಜೇಡಿಮಣ್ಣಿನಿಂದ ಗಿಲಾವು ಮಾಡಲಾಗಿದೆ. ಇಟ್ಟಿಗೆಗೂಡು ಉಪಯೋಗದಲ್ಲಿದ್ದಾಗ ಗಿಲಾವು ಮಾಡಿರುವ ಭಾಗ ಸುಟ್ಟಿದೆ. ಇದಕ್ಕೆ ಹತ್ತಿರದಲ್ಲಿಯೇ ಬಹಳಷ್ಟು ನಾಶವಾಗಿರುವ ಇದೇ ರೀತಿಯ ಇನ್ನೊಂದು ಇಟ್ಟಿಗೆ ಗೂಡು ಇತ್ತು. ಈ ಗೂಡಿನಲ್ಲಿ ಸುಟ್ಟ ಮಣ್ಣಿನ ಬೊಂಬೆ ಮತ್ತು ಚಕ್ರದ ಮಧ್ಯಭಾಗವೂ ದೊರಕಿದೆ.

ಕಲ್ಲಿನ ಒಂದು ಮಣಿ ಮತ್ತು ಡುಬ್ಬವಿರುವ ಸುಟ್ಟ ಮಣ್ಣಿನ ಗೂಳಿ, ಮಣಿಗಳು ಅಂಡಾಕೃತಿಯ ಚಪ್ಪಟೆ ಬಿಲ್ಲೆಗಳು ಮೊದಲಾದವು ಮತ್ತು ಕೆಲವು ಇತರ ಪ್ರಾಚೀನ ವಸ್ತುಗಳು ದೊರಕಿವೆ. ಕೆಲವು ವಸ್ತುಗಳ ಮೇಲೆ ಬೆರಳಿನ ಗುರುತುಗಳಿವೆ. ಮೂರು ಕಡೆ ರಂಧ್ರಗಳಿರುವ ಒಂದು ಇಟ್ಟಿಗೆ ಚೂರು ಸಹ ದೊರಕಿದೆ. ಈ ರಂಧ್ರಗಳ ಒಂದು ಕೊನೆಯಲ್ಲಿ ವೃತ್ತಾಕಾರವಾಗಿಯೂ ಮತ್ತೊಂದು ಕೊನೆಯಲ್ಲಿ ಲಂಬಾಕಾರವಾಗಿಯೂ ಇದೆ. ಒಂದು ಅರೆಯುವ ಕಲ್ಲು ಮತ್ತು ರುಬ್ಬು ಗುಂಡುಗಳು ದೊರಕಿವೆ.

ಕೆಲವು ಮಡಕೆಗಳ ಆಕಾರಗಳು ಹರಪ್ಪ ಸಂಸ್ಕೃತಿಯ ಅಂತ್ಯ ಕಾಲದ ಗಂಗಾ–ಯಮುನಾ ಸಂಗಮದ ಮತ್ತು ಪೂರ್ವ ಪಂಜಾಬಿನ ಮಡಕೆಗಳನ್ನು ಹೋಲುತ್ತವೆ. ಇದನ್ನು ಗಮನಿಸಿದರೆ ಈ ಸಂಸ್ಕೃತಿಗಳು ಸಮಕಾಲೀನವಾಗಿದ್ದಿರಬಹುದು ಅಥವಾ ಈ ಸಂಸ್ಕೃತಿಗಳ ಪರಸ್ಪರ ಸಂಪರ್ಕದಿಂದ ಉಂಟಾಗಿರಬಹುದೆಂದು ಹೇಳಬಹುದು.

(ಸಿ.ಕೆ.ಎಂ.)

**ಅಂಬರೀಶ್:** 1952–. ರೆಬಲ್ ಸ್ಟಾರ್, ಎಂದೇ ಖ್ಯಾತರಾದ ಕನ್ನಡ ಚಲನಚಿತ್ರ ನಟ, ಮಾಜಿ ಲೋಕಸಭಾ ಸದಸ್ಯ. ಮಂಡ್ಯ ಜಿಲ್ಲೆ ದೊಡ್ಡರಸನ ಕೆರೆ ಗ್ರಾಮದಲ್ಲಿ 1952 ಮೇ 29ರಂದು ಜನಿಸಿದರು. ತಂದೆ ಹುಚ್ಚೇಗೌಡ, ತಾಯಿ ಪದ್ಮಮ್ಮ. ನಾಗರಹಾವು ಚಲನಚಿತ್ರದ

ಮೂಲಕ ಚಿತ್ರರಂಗ ಪ್ರವೇಶಿಸಿದರು. ಇವರನ್ನು ಚಿತ್ರರಂಗಕ್ಕೆ ಪರಿಚಯಿಸಿದವರು ಹೆಸರಾಂತ ನಿರ್ದೇಶಕರ ಕಣಗಾಲ್‍ಪುಟ್ಟಣ್ಣ (ನೋಡಿ). ನಾಗರಹಾವು ಚಿತ್ರದಲ್ಲಿ ಜಲೀಲ್‍ಎಂಬ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡರು. ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶಿಸಿದ ಎಚ್.ಕೆ.ಅನಂತರಾವ್ ಅವರ ಕಾದಂಬರಿ ಆಧಾರಿತ ಅಂತ ಚಿತ್ರದ ನಾಯಕನಾಗಿ ಅಭಿನಯಿಸಿದ್ದು ಇವರ ವೃತ್ತಿ ಜೀವನಕ್ಕೆ ಒಂದು ಹೊಸ ಆಯಾಮ ನೀಡಿತು. ಈ ಚಿತ್ರದಲ್ಲಿ ಅನ್ಯಾಯದ ವಿರುದ್ಧ ಸಿಡಿದೇಳುವ ಕನ್ವರ್‍ಲಾಲ್‍ನ ಪಾತ್ರ ಇವರಿಗೆ ರೆಬಲ್‍ಸ್ಟಾರ್ ಎಂಬ ಇಮೇಜು ನೀಡಿತು. ಅನಂತರ ಇವರು ನಾಯಕ, ಖಳನಾಯಕ

ಪಾತ್ರಗಳಲ್ಲಿ ನಟಿಸಿದರು. ರಂಗನಾಯಕಿ, ಪಡುವಾರಹಳ್ಳಿ ಪಾಂಡವರು, ಮಸಣದ ಹೂವು, ಚಕ್ರವ್ಯೂಹ, ಏಳುಸುತ್ತಿನ ಕೋಟೆ, ಹೃದಯಹಾಡಿತು, ಸ್ನೇಹಸಂಬಂಧ, ಬ್ರಹ್ಮಾಸ್ತ್ರ, ಅಮರಜ್ಯೋತಿ ಮೊದಲಾದ ಅನೇಕ ಚಿತ್ರಗಳಲ್ಲಿ ಇವರು ನಟಿಸಿದ್ದಾರೆ. ಮಸಣದಹೂವು ಚಿತ್ರದಲ್ಲಿನ ಇವರ ಪಾತ್ರದ ಅಭಿನಯ ಅವಿಸ್ಮರಣೀಯವಾದದ್ದು. ಹೃದಯ ಹಾಡಿತು ಚಿತ್ರ ಇವರ ಚಿತ್ರರಂಗದ ಇಮೇಜನ್ನು ಬದಲಾಯಿಸಿತು. ಚಕ್ರವ್ಯೂಹ ಹಾಗೂ ಮೌನರಾಗ ಚಿತ್ರಗಳು ಇವರಿಗೆ ಜನಪ್ರಿಯತೆ ತಂದುಕೊಟ್ಟವು.

ಇವರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ ಸಂದರ್ಭದಲ್ಲಿ ಮೊದಲಿಗೆ ಜನತಾದಳದಲ್ಲಿದ್ದರು. ಅನಂತರ ಕಾಂಗ್ರೆಸ್‍ಪಕ್ಷ ಸೇರಿದರು. ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾದರು. ಅನಂತರ ಕಾವೇರಿ ಚಳವಳಿಯ ಹಿನ್ನೆಲೆಯಲ್ಲಿ ಜನತೆಯ ಅಭಿಪ್ರಾಯಕ್ಕೆ ಮನ್ನಣೆ ನೀಡಿ ತಮ್ಮ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ

ಪ್ರಕಟಿಸಿದ್ದರು (2002). ಅಂಬರೀಶ್ ತಮ್ಮ ಉದಾರ ಸ್ವಭಾವದಿಂದಾಗಿ ದಾನಶೂರ ಕರ್ಣ ಎಂದೇ ಹೆಸರಾಗಿದ್ದಾರೆ. ಸಮಾಜದ ದುರ್ಬಲ ವರ್ಗದವರ ಬಗ್ಗೆ ಇವರಿಗೆ ವಿಶೇಷ ಕಳಕಳಿ. ಖ್ಯಾತ ಪಿಟೀಲು ವಿದ್ವಾನ್ ಟಿ.ಚೌಡಯ್ಯ ಇವರ ಅಜ್ಜ. ನಟಿ ಸುಮಲತಾ ಇವರ ಪತ್ನಿ. *

**ಅಂಬರೀಷ :** ಮಹಾಭಾರತ ಮತ್ತು ಭಾಗವತಗಳಲ್ಲಿ ಪ್ರಸಿದ್ಧ ವಿಷ್ಣುಭಕ್ತರ ಶ್ರೇಣಿಗೆ ಸೇರಿದವನು. 2. ಅದ್ಭುತರಾಮಾಯಣದ ಪ್ರಕಾರ ಇವನ ಮಗಳಾದ ಶ್ರೀಮತಿಯನ್ನು ಮೋಹಿಸಿ ಬಂದ ಪರ್ವತ ನಾರದರು ವಿಷ್ಣುವಿನ ಮಾಯೆಯಿಂದ ಕಪಿಕೋಡಗಗಳಾಗಿ ಕಾಣಿಸಿದುದರಿಂದ ಅವಳು ಇವರಿಗೆ ಮಾಲೆ ಹಾಕದೆ ಇವರ ಮಧ್ಯೆ ಕಾಣಿಸಿಕೊಂಡ ವಿಷ್ಣುವಿಗೆ ಮಾಲೆ ಹಾಕಿದಳು. ಕೋಪಗೊಂಡ ಪರ್ವತ ನಾರದರು ಅಂಬರೀಷನನ್ನು ಶಪಿಸಲು ಹೋಗಿ ವಿಷ್ಣುಚಕ್ರದಿಂದ ಪರಾಜಿತರಾದರು. (ಜಿ.ಎಚ್.)

**ಅಂಬಲಿ ಚನ್ನಬಸಪ್ಪ :** 1895–1962. ಸ್ವಾತಂತ್ರ್ಯಯೋಧ ಮತ್ತು ಕರ್ನಾಟಕ ಏಕೀಕರಣದ ನೇತಾರ. ಬಿಜಾಪುರ ತಾಲ್ಲೂಕಿನ ಅರ್ಜುಣಗಿ ಗ್ರಾಮದಲ್ಲಿ ಒಕ್ಕಲುತನದ ಮನೆತನದಲ್ಲಿ ಜನಿಸಿದರು. ತಂದೆ ಜಗದೇವಪ್ಪ. ಶಿಕ್ಷಣ ಕನ್ನಡ ನಾಲ್ಕನೆಯ ತರಗತಿಯವರೆಗೆ. 1914ರಲ್ಲಿ ಒಂದನೆಯ ಮಹಾಯುದ್ಧ ನಿಧಿಗಾಗಿ ಗ್ರಾಮಕ್ಕೆ ಬಂದ ಮಾಮಲೆದಾರರನ್ನು ವಿರೋಧಿಸಿ ಮೂರುದಿನ ಉಪವಾಸಮಾಡಿ ಬಂಧನದ ಶಿಕ್ಷೆ ಅನುಭವಿಸುವುದರೊಂದಿಗೆ ಇವರ ಸ್ವಾತಂತ್ರ್ಯಹೋರಾಟ ಪ್ರಾರಂಭವಾಯಿತೆನ್ನಬಹುದು. ಗಾಂಧಿಯವರ ಅನುಯಾಯಿಯಾಗಿ ಬಿಜಾಪುರದಲ್ಲಿ ಒಂದು ಸಂಘ ಕಟ್ಟಿ ಭೂಕಂದಾಯ ವಸೂಲಿಯನ್ನು ವಿರೋಧಿಸಿದರು. 1919ರ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಇವರನ್ನು ಸಂಪೂರ್ಣವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಎಳೆದು ತಂದಿತು. ಚಳವಳಿಯಲ್ಲಿ ಭಾಗವಹಿಸಿ ಮೊದಲು 1919ರಲ್ಲಿ ಕಾರಾಗೃಹ ಶಿಕ್ಷೆ ಅನುಭವಿಸಿದರು. ಅನಂತರ ಕಾಯದೆಭಂಗ ಚಳವಳಿಯಲ್ಲಿ ಜೈಲು (1931) ಸೇರಿ ಬಿಜಾಪುರ ಹಾಗೂ ವಿಸಾಪುರಗಳಲ್ಲಿ ಬಂಧನದಲ್ಲಿದ್ದರು.

ಸರ್ಕಾರದ ಕಿರುಕುಳ ಹೆಚ್ಚಾದಾಗ ಇವರು ಬಿಜಾಪುರ ಬಿಟ್ಟು ಸಂಸಾರಸಮೇತ ಸೊಲ್ಲಾಪುರಕ್ಕೆ ಹೋಗಬೇಕಾಯಿತು. ಅಲ್ಲಿ ಜೀವನವನ್ನು ಸಾಗಿಸಲು ನೌಕರಿ ಹಿಡಿದರೂ ಕಾಯದೆಭಂಗ ಚಳವಳಿಯಲ್ಲಿ ಮತ್ತೆ ಸೇರಿ ಲಷ್ಕರಿ ಕಾನೂನಿನ ಕಾಲದಲ್ಲಿ ಸರ್ಕಾರದ ಕಣ್ಣುತಪ್ಪಿಸಿ ಸೊಲ್ಲಾಪುರದಿಂದ ಮತ್ತೆ ಬಿಜಾಪುರಕ್ಕೆ ಬಂದರು. 1930–33ರ ಸಾರ್ವತ್ರಿಕ ಕಾಯದೆಭಂಗ ಚಳವಳಿಯಲ್ಲಿ ಮುಖ್ಯಪಾತ್ರ ವಹಿಸಿದ್ದಕ್ಕಾಗಿ ಸರ್ಕಾರ ಇವರಿಗೆ ಕಠಿಣಶಿಕ್ಷೆ ವಿಧಿಸಿತು. ಜೈಲುವಾಸದ ಕಾಲದಲ್ಲಿ ಇವರು ಕನ್ನಡ, ಹಿಂದಿ ಮತ್ತು ಮರಾಠಿ ಭಾಷೆಗಳನ್ನು ಕಲಿತರು.

1940ರಲ್ಲಿ ಇವರು ಕೆ.ಪಿ.ಸಿ.ಸಿ. ಕಾರ್ಯದರ್ಶಿಯಾಗಿ ಹುಬ್ಬಳ್ಳಿ ಧಾರವಾಡಗಳಲ್ಲಿ ವಾಸಮಾಡತೊಡಗಿದರು. 1942ರಲ್ಲಿ ಕಾರ್ಯಕರ್ತರಾಗಿ, ಚಲೇಜಾವ್ ಸಮಿತಿಯ ಅಧ್ಯಕ್ಷರಾಗಿ ದುಡಿದರು. ಟಪಾಲು ಲೂಟಿ ಮಾಡುವುದು, ಸರ್ಕಾರಿ ಮಹತ್ತ್ವದ ಕಾಗದಪತ್ರಗಳನ್ನು ಸುಡುವುದು ಮುಂತಾದ ವಿಧ್ವಂಸಕ ಕೃತ್ಯಗಳನ್ನು ಕೈಗೊಂಡರು. ಇವರ ನೇತೃತ್ವದಲ್ಲಿ ಮಿಂಚನಾಳ ಮತ್ತು ಜುಮನಾಳ ಸ್ಟೇಷನ್‌ಗಳು ಅಗ್ನಿಗೆ ಆಹುತಿಯಾದವು. ಮುಂಬಯಿಯಿಂದ ಇಂಗ್ಲೆಂಡಿಗೆ ಬಂಗಾರ, ಸಾಮಾನುಸರಂಜಾಮು ತುಂಬಿಕೊಂಡು ಹೊರಟ ಹಡಗೊಂದರ ಜಲಸಮಾಧಿ ಮಾಡಿದ ಕೀರ್ತಿ ಇವರದು. ಆ ಕಾಲದಲ್ಲಿ ಇವರನ್ನು ಹಿಡಿದುಕೊಟ್ಟರೆ ರೂ.5,000 ಬಹುಮಾನ ಕೊಡುವುದಾಗಿ ಸರ್ಕಾರ ಸಾರಿತು. 1955ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, 1952 ಮತ್ತು 1957ರಲ್ಲಿ ಶಾಸನಸಭಾ ಸದಸ್ಯರಾಗಿ ಇವರು ಆಯ್ಕೆಹೊಂದಿದರು. ಕರ್ನಾಟಕ ಏಕೀಕರಣಕ್ಕಾಗಿ ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ದುಡಿದರು. ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂಬುದು ಇವರ ಹಟವಾಗಿತ್ತು. ಪಾರ್ಶ್ವವಾಯುಪೀಡಿತರಾಗಿ 1962 ಮಾರ್ಚ್ 1ರಂದು ನಿಧನರಾದರು. ಅರ್ಜುಣಗಿಯಲ್ಲಿ ಇವರ ಸಮಾಧಿ ಇದೆ. *

**ಅಂಬಲಿ ಮೀನು (ಅರಿಲಿಯ) :** ಕುಟುಕು ಕಣವಂತ (ಸಿಯಲೆಂಟರೇಟ) ವಂಶಕ್ಕೆ ಸೇರಿದ ಕಡಲ ಜೀವಿ. ಕೊಡೆ ಅಥವಾ ಸಾಸರ್ ಆಕಾರದ ಅಂಬಲಿಯಂತೆ ಕಾಣುವ ರಚನೆಯಿದೆ. ದ್ವಿಕುಡಿ ಪದರ ಜೀವಿ. ಒಳಕುಡಿ ಪದರ ಮತ್ತು ಹೊರಕುಡಿ ಪದರಗಳ ನಡುವೆ ಕೋಶರಹಿತ ಲೋಳೆಯಂಥ ಮೀಸೋಗ್ಲಿಯ ಇದೆ. ಕೊಡೆಯು ಉಬ್ಬಿದ ಮೇಲ್ಭಾಗವನ್ನು ಮತ್ತು ಕುಹರಿ ಕೆಳಭಾಗವನ್ನು ಹೊಂದಿದೆ. ಇವನ್ನು ಎಕ್ಸ್ ಅಂಬ್ರೆಲಾರ್ ಮತ್ತು ಸಬ್ ಅಂಬ್ರೆಲಾರ್ ಎಂದು ಗುರುತಿಸಬಹುದು. ಗಾತ್ರದಲ್ಲಿ ಸಾಮಾನ್ಯವಾಗಿ 3 ರಿಂದ 12 ಅಂಗುಲ ಅಗಲ ಇರುತ್ತದೆ. 2' ಗಳಿಗಿಂತ ಹೆಚ್ಚಿನ ವ್ಯಾಸವುಳ್ಳ ಅರಿಲಿಯಾಗಳು ಕಂಡು ಬಂದಿವೆ. ಅಂಬಲಿ ಮೀನು ಪಾರದರ್ಶಕ ತಿಳಿ ನೀಲಿ ವರ್ಣದ್ದು.

ಕೊಡೆ ಮೇಲ್ಭಾಗದಲ್ಲಿ ನಾಲ್ಕು ಕೆಂಪು ಮಿಶ್ರಿತ ಕುದುರೆ ಲಾಳ ಆಕಾರದ ಪ್ರಜನನಾಂಗಗಳಿವೆ. ಕೊಡೆಯ ಅಂಚು ಕುಳಿಗಳಿಂದ ಸರಿ ಸಮನಾಗಿ ಎಂಟು ಭಾಗಗಳಾಗಿವೆ. ಪ್ರತಿ ಕುಳಿಯಲ್ಲಿ ರೊಫಾಲಿಯ ಅಥವಾ ಟೆಂಟಕ್ಯುಲೋಸಿಸ್ ಜ್ಞಾನೇಂದ್ರಿಯ ಇದೆ.



ಚಿತ್ರ 1 ಅಂಬಲಿಮೀನು (ಬೆನ್ನಭಾಗ)

ಕೊಡೆಯ ಅಂಚು ಕುಬ್ಜವಾದ ಕರಬಳ್ಳಿಗಳನ್ನು ಹೊಂದಿದೆ.

ಕೊಡೆಯ ಕೆಳಭಾಗದಲ್ಲಿ ಚಚ್ಚೌಕವಾದ ಬಾಯಿ ಇದೆ. ನಾಲ್ಕು ಮೂಲೆಗಳಿಂದ ಉದ್ದವಾದ ನಾಲ್ಕು ಬಾಹುಗಳು ಹೊರಚಾಚಿವೆ. ಈ ಬಾಹುಗಳ ಒಳಭಾಗದಲ್ಲಿ ಕಾಲುವೆ ಇದ್ದು ಅದರ ಇಕ್ಕೆಲಗಳಲ್ಲಿ ಹೇರಳವಾದ ಕುಟುಕುಕಣವಂತಗಳುಳ್ಳ ಕರಬಳ್ಳಿಗಳಿವೆ. ಅರಿಲಿಯ ಏಕ ಲಿಂಗಿಗಳು. ಗಂಡು ಹೆಣ್ಣುಗಳು ಬಾಹ್ಯ ರಚನೆಯಲ್ಲಿ ಒಂದೇ ತೆರನಾಗಿವೆ. ಜಠರ ಕುಳಿಗಳಲ್ಲಿ ಪ್ರಜನ ನಾಂಗಗಳಿವೆ. ಒಳಕುಡಿ ಪದರದಿಂದ ಪ್ರಜನನಾಂಗಗಳು ರೂಪು ಗೊಳ್ಳುತ್ತವೆ. ಪ್ರಜನನ



ಚಿತ್ರ 2 ಮುಖಭಾಗ

ಜೀವಕಣಗಳು ಪಕ್ವವಾದಾಗ ಜಠರದಿಂದ ಹೊರಬೀಳುತ್ತವೆ. ಹೆಣ್ಣಿನ ಜಠರ ಪರಿಚಲನಾ ಅವಕಾಶದಲ್ಲಿ ನಿಶೇಚನ ನಡೆಯುತ್ತದೆ.

ಯುಗ್ಮಕದಿಂದ ಸ್ವತಂತ್ರ ಜೀವಿ ಶಿಲಕಾ ಪ್ಲಾನುಲ ಹೊರಬೀಳುತ್ತದೆ. ಪ್ಲಾನುಲ ಪಾಲಿಪ್ ರೂಪ ತಳೆಯುವುದು. ಇದರಿಂದ ಸ್ವತಂತ್ರವಾಗಿ ಈಜುವ ಎಫೈರಾ ಡಿಂಭಗಳಾಗಿ ಪರಿವರ್ತನೆಗೊಳ್ಳುತ್ತದೆ. ಹೀಗೆ ಅಂಬಲಿಮೀನಿನ ಜೀವನ ಚರಿತ್ರೆಯಲ್ಲಿ ಸ್ವಂತಂತ್ರವಾಗಿ ಈಜುವ ಮೇಡ್ಯುಸ ರೂಪಿ, ಸ್ಥಾಯಿ ರೂಪದ ಪಾಲಿಪ್‌ನ್ನು ಮತ್ತು ಪಾಲಿಪ್ ರೂಪ ವೆಲೂಡ್ಯಸ್ ರೂಪಿಯಾಗಿ ಮಾರ್ಪಾಡಾಗುವುದನ್ನು ಪರ್ಯಾಯ ಸಂತಾನೋತ್ಪತ್ತಿ ಎನ್ನುತ್ತಾರೆ. (ಎನ್.ಎಸ್.ಎಲ್)

**ಅಂಬಳೆ :** ಚಿಕ್ಕಮಗಳೂರು ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ. ಚಿಕ್ಕಮಗಳೂರು – ಬೆಳವಾಡಿ ಮಾರ್ಗದಲ್ಲಿ ಚಿಕ್ಕಮಗಳೂರಿನಿಂದ 8ಕಿಮೀ ದೂರದಲ್ಲಿದೆ. ಪುರಾತನ ಕಾಲದಲ್ಲಿ ಯಮಳಾಪುರಿ ಎಂಬ ಅಭಿಧಾನವನ್ನು ಹೊಂದಿದ್ದು ಸೋಮರಾಜನೆಂಬಾತ ಈ ಗ್ರಾಮವನ್ನು ನಿರ್ಮಿಸಿದನೆಂದು ಪ್ರತೀತಿ. 959ರ ಶಾಸನದಲ್ಲಿ ಅಮ್ಮಲೆ ಎಂಬ ಉಲ್ಲೇಖವಿದೆ. ಕಾಲಕ್ರಮೇಣ ಅಮ್ಮಲೆಯೇ ಅಂಬಳೆ ಎಂದಾಗಿದೆ. 12 ಮತ್ತು 13ನೆಯ ಶತಮಾನದಲ್ಲಿ ಹೊಯ್ಸಳರ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿ ಈ ಊರು ಧಾರ್ಮಿಕಮಹತ್ತ್ವ ಪಡೆದಿತ್ತು.

ಇಲ್ಲಿರುವ ಚನ್ನಿಗರಾಯ, ವೀರಭದ್ರ, ಲೋಕೇಶ್ವರ ಹಾಗೂ ಗೋಪಾಲಕೃಷ್ಣ ದೇವಾಲಯಗಳು ಪ್ರಸಿದ್ಧವಾಗಿವೆ. ವಾಸ್ತುಶಿಲ್ಪದ ದೃಷ್ಟಿಯಿಂದ ವಿಶೇಷ ಮಹತ್ತ್ವವನ್ನು ಈ ದೇಗುಲಗಳು ಹೊಂದಿಲ್ಲ ವಾದರೂ ಐತಿಹಾಸಿಕ ಕುರುಹುಗಳಾಗಿವೆ. ಚನ್ನಿಗರಾಯ ದೇವಾಲಯವನ್ನು ಹೊಯ್ಸಳ ದೊರೆ ಎರಡನೆಯ ಬಲ್ಲಾಳ (1178) ನಿರ್ಮಿಸಿದ್ದು ಇದನ್ನು ವೀರಬಲ್ಲಾಳ ಕೇಶವ ದೇವರೆಂದು ಕರೆಯಲಾಗಿದೆ. ಗುಡಿಯು ಚೌಕಾಕಾರದ ಗರ್ಭಗೃಹ, ನವರಂಗ ಹಾಗೂ ಸುಕನಾಸಿಯನ್ನು ಒಳಗೊಂಡಿದೆ. ಮಂಟಪದಂತಿರುವ ನಾಲ್ಕುಕಂಬಗಳು ಚಕ್ರಾಕಾರದ ಕೊಳವೆಯ ಹಿಡಿಕೆಗಳಿಂದ ಕೂಡಿವೆ. ಗರ್ಭಗೃಹದಲ್ಲಿರುವ ಗರುಡವಾಹನ ಚನ್ನಿಗರಾಯಮೂರ್ತಿ ಪೀಠದಿಂದ 1.5 ಮೀ ಎತ್ತರವಾಗಿದೆ. ಶಂಖ, ಚಕ್ರ, ಗದಾಧಾರಿಯಾದ ಚನ್ನಿಗರಾಯನ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರಿದ್ದಾರೆ. ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಸುಂದರ ಚಿತ್ರಣವಿದೆ. ಮೂರ್ತಿಯ ನಾಲ್ಕನೆಯ ಹಸ್ತ ಭಿನ್ನವಾಗಿರುವುದರಿಂದ ಪೂಜೆ ನಡೆಯುತ್ತಿಲ್ಲ. ಲೋಕೇಶ್ವರ ದೇವಾಲಯವೂ ಹೊಯ್ಸಳ ಶಿಲ್ಪ ಮಾದರಿಯದು. ಗುಡಿಯ ನವರಂಗದಲ್ಲಿ ಗಣಪತಿ, ನಂದಿವಾಹನಾರೂಢ ಶಿವಪಾರ್ವತಿ, ಷಣ್ಮುಖ, ಸೂರ್ಯನ ವಿಗ್ರಹಗಳನ್ನು ಕೆತ್ತಲಾಗಿದೆ. ಗೋಪಾಲಕೃಷ್ಣ ದೇವಾಲಯ ಸುಂದರವಾಗಿ ನಿರ್ಮಿತವಾಗಿದೆ. ವೀರಭದ್ರ ದೇವಾಲಯ ಈಗ ಆಧುನಿಕ ರೂಪವನ್ನು ಪಡೆದಿದೆ. ಇಲ್ಲಿ ಶಂಕರಲಿಂಗೇಶ್ವರ, ವೀರಭದ್ರೇಶ್ವರ, ಚಂದ್ರಮೌಳೇಶ್ವರ,

ಗಂಗಾವಿಶ್ವೇಶ್ವರ ಓಂಕಾರೇಶ್ವರ ಎಂಬ ಪಂಚಶಿವಾಲಯಗಳಿವೆ. ದೇವೀರಮ್ಮ ದೇವಾಲಯವಿದೆ. ಚೈತ್ರಮಾಸದಲ್ಲಿ ಇಲ್ಲಿನ ಬೀರಲಿಂಗೇಶ್ವರ ದೇವರ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ. ಕನ್ನಡದ ಉತ್ತಮ ಗದ್ಯ ಲೇಖಕರೆಂದೂ ಕನ್ನಡ ಅಶ್ವಿನಿ ದೇವತೆಗಳಲ್ಲಿ ಒಬ್ಬರೆಂದೂ ಪ್ರಸಿದ್ಧರಾದ ಎ.ಆರ್.ಕೃಷ್ಣಶಾಸ್ತ್ರೀ (ನೋಡಿ) ಈ ಊರಿನವರು. ಇವರ ಹೆಸರಿನಲ್ಲಿ ಇಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ.(ಬಿ.ಎಂ.ಎ.)

**ಅಂಬಾ :** ಪಾರ್ವತಿಯ ಬೇರೊಂದು ಹೆಸರು.

**ಅಂಬಾಲ :** ಹರಿಯಾಣ ರಾಜ್ಯದ ಒಂದು ಜಿಲ್ಲೆ ಮತ್ತು ಆಡಳಿತಗಳ ಕೇಂದ್ರ ನಗರ. ಜಿಲ್ಲೆಯ ವಿಸ್ತೀರ್ಣ ಸು. 1,574 ಚ.ಕಿ.ಮೀ. ಜನಸಂಖ್ಯೆ (2001). ಅಂಬಾಲ ಪಟ್ಟಣ ದಂಡು ಮತ್ತು ನಗರಭಾಗಗಳನ್ನು ಹೊಂದಿದೆ. ಇದರ ಜನಸಂಖ್ಯೆ : 1,68,316 (2001) ದಂಡಿನ ಭಾಗ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಸ್ಥಾಪಿತವಾಯಿತು. ಇದು ಅಂಬಾಲ ನಗರದ ಪೂರ್ವಕ್ಕಿದ್ದು ಸು. 61,748 ಜನಸಂಖ್ಯೆಯಿಂದ ಕೂಡಿದೆ (2001).

ಅಂಬಾಲ ಕ್ಷೇತ್ರ 14ನೆಯ ಶತಮಾನದಲ್ಲಿ ಅಂಬಾ ರಜಪೂತನಿಂದ ಸ್ಥಾಪಿತವಾಯಿತು. ಅನಂತರ ಪಟ್ಟಣವನ್ನು ಆತನ ಜ್ಞಾಪಕಾರ್ಥವಾಗಿ ಅಂಬಾಲವೆಂದು ಕರೆಯಲಾಯಿತು. ಈ ಹೆಸರು ಅಂಬಾಲದ ಸುತ್ತಮುತ್ತಲಿನ ಆವರಣದಲ್ಲಿ ಗೋಚರವಾಗುವ ಮಾವಿನತೋಪುಗಳಿಂದ ಬಂದಿರಲಿಕ್ಕೂ ಸಾಕು. ಅಂಬವಾಲ ಎಂಬುದಾಗಿ ಕರೆಯಲಾಗುತ್ತಿದ್ದುದು ಅನಂತರ ಅಶುದ್ಧವಾಗಿ ಅಂಬಾಲವಾಗಿರಬಹುದು. 1809ರಲ್ಲಿ ಒಡೆಯನಾಗಿದ್ದ ದಯಾಕಾರ್ ಸತ್ತಮೇಲೆ 1823ರಲ್ಲಿ ಅದು ಬ್ರಿಟಿಷರ ಕೈಸೇರಿತು; ಮುಂದೆ 1849ರಲ್ಲಿ ಜಿಲ್ಲೆಯ ಕೇಂದ್ರಕಚೇರಿ ಇಲ್ಲಿ ಸ್ಥಾಪಿತವಾಯಿತು.

ಭೌಗೋಳಿಕವಾಗಿ ಅಂಬಾಲ ಮೈದಾನ ಮತ್ತು ಬೆಟ್ಟಗುಡ್ಡಗಳು ಸೇರುವ ನೆಲೆಯಲ್ಲಿದೆ. ತನ್ನ ಹಿನ್ನೆಲೆಯ ಪ್ರಭಾವದಿಂದ ಒಂದು ಪ್ರಮುಖ ಕೈಗಾರಿಕಾ ಪಟ್ಟಣವಾಗಿ ಬೆಳೆದಿದೆ. ಕಾಗದ ತಯಾರಿಕೆ, ಹಣ್ಣುಗಳನ್ನು ಕೂಡಿಡುವುದು, ರೇಷ್ಮೆ ಕೈಗಾರಿಕೆ, ಗಾಜು ಮತ್ತು ವೈಜ್ಞಾನಿಕ ಸಲಕರಣೆಗಳು ಮತ್ತು ಆಟದ ಸಾಮಾನುಗಳ ತಯಾರಿಕೆ ಅಂಬಾಲದ ಪ್ರಮುಖ ಚಟುವಟಿಗೆಗಳು. ಅಂಬಾಲ ಇಂದಿಗೂ ಕೂಡ ಧಾರ್ಮಿಕತೆಗೆ ಹೆಸರುವಾಸಿ. ಸಿಖ್ಖರ ಒಂದು ಪ್ರಮುಖ ದೇವಸ್ಥಾನವಾದ ಗುರುದ್ವಾರ ಮಂಜಿ ಸಾಹಿಬ್ ಇಲ್ಲಿ ಇದ್ದು, ಪ್ರತಿ ವರ್ಷವೂ ಅನೇಕ ಯಾತ್ರಿಕರನ್ನು ಮತ್ತು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. (ಡಿ.ಸಿ.ಬಿ.)

**ಅಂಬಿಗರ ಚೌಡಯ್ಯ :** 12ನೆಯ ಶತಮಾನದ ಬಸವಣ್ಣನವರ ಕಾಲದ ಒಬ್ಬ ವಚನಕಾರ. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭಾವಿ. ಬಸವಣ್ಣನವರ ಅನುಭವಮಂಟಪದಲ್ಲಿ ಸಮಾನಭೂಮಿಕೆಯ ಸಮ್ಮೇಳನದಲ್ಲಿ ಸೇರಿಕೊಂಡವ. ತನ್ನ ಕಾಯಕ ಅಥವಾ ವ್ಯಕ್ತಿನಾಮವಾದ ಅಂಬಿಗರ ಚೌಡಯ್ಯ ಎಂಬುದೇ ಈತನ ವಚನಗಳ ಅಂಕಿತವಾಗಿದೆ. ತಾನು ಕೇವಲ ತುಂಬಿದ ಹೊಳೆಯಲ್ಲಿ ದೋಣಿಗೆ ಹುಟ್ಟುಹಾಕುವ ಅಂಬಿಗ ಮಾತ್ರವಲ್ಲ, ಭವಸಾಗರದಲ್ಲೂ ಹುಟ್ಟು ಹಾಕುವ ಕೌಶಲವುಳ್ಳವ ಎಂದು ಹೇಳಿಕೊಳ್ಳುವುದರಲ್ಲಿ ತನ್ನ ಅನುಭಾವದೃಷ್ಟಿಯನ್ನು ಪ್ರಕಟಿಸಿದ್ದಾನೆ.

ಉಳಿದ ವಚನಕಾರರ ವಚನಗಳಲ್ಲಿರುವಂತೆ ಇವನಲ್ಲಿಯೂ ಶಿವಾನುಭವಪರವಾದ ವಚನಗಳಿದ್ದರೂ ಅವುಗಳಲ್ಲಿ ಕಂಡುಬರುವ ಸಮಕಾಲೀನ ಸಮಾಜ ವಿಡಂಬನೆಯ ವ್ಯಗ್ರದೃಷ್ಟಿ ಬೇರೆಯವರಲ್ಲಿ ವಿರಳವೆಂದೇ ಹೇಳಬೇಕು. ಅವನ ವಚನಗಳ ವಸ್ತು, ಭಾಷೆ, ಶೈಲಿ ಗಮನಿಸಿದರೆ ಅವನೊಬ್ಬ ಕೆಚ್ಚೆದೆಯ, ನಿಷ್ಠುರಪ್ರಕೃತಿಯ, ಗ್ರಾಮ್ಯಮನೋಧರ್ಮದ ಒರಟು ವಚನಕಾರ ಎಂಬುದು ಸ್ಪಷ್ಟವಾಗುತ್ತದೆ. ಅವನು ನ್ಯಾಯನಿಷ್ಠುರ, ದಯಾದಾಕ್ಷಿಣ್ಯಪರನಲ್ಲ. ಯಾರನ್ನೇ ಆಗಲಿ ಯಾವುದನ್ನೇ ಆಗಲಿ ಅವನು ಟೀಕಿಸದೆ ಬಿಡುವುದಿಲ್ಲ. ಅವನು ಮೃದುವಾಗಿ ಮಾತನಾಡುವುದು ಅಪೂರ್ವ; ಮಾತಿನ ಬಹುಭಾಗ ಹರಿತವಾದದ್ದು, ಸಂಸ್ಕಾರದೂರವಾದದ್ದು. 'ಕೇಳಿರಯ್ಯ ಮಾನವರೇ', 'ಶೀಲದಲ್ಲಿ ಸಂಪನ್ನರಾದವರು ನೀವು ಕೇಳಿರೋ', 'ನನಗೊಬ್ಬರೆಂಜಲು ಸೇರದೆಂದು ಶುಚಿತನದಲ್ಲಿ ಬದುಕುವ ಬರಿಯ ಮಾತಿನ ಭುಂಜಕರು ನೀವು ಕೇಳಿರೋ', 'ಪರಪುರುಷಾರ್ಥವನರಿಯದೆ ಕೆಟ್ಟನರ ಕುರಿಗಳು ನೀವು ಕೇಳಿರೋ' ಎಂದು ಆರಂಭವಾಗಿ 'ಮೆಟ್ಟಿದ್ದ ದೊಡ್ಡ ಪಾದರಕ್ಷೆಯ ತಕ್ಕೊಂಡು ಲಟಲಟನೆ ಹೊಡೆಯೆಂದ', 'ಪಡಿಹಾರ ಉತ್ತಣ್ಣನ ಎಡಪಾದರಕ್ಷೆಯಿಂದ ಪಟಪಟನೆ ಹೊಡೆಯೆಂದ', 'ಮೂಗ ಕೊಯ್ದು ಇಟ್ಟಂಗಿಯ ಕಲ್ಲಿಲೆ ಸಾಸಿವೆಯ ತಿಕ್ಕಿ ಹಿಟ್ಟಿನ ತಳಿದು ಮೇಲೆ ನಿಂಬೆಯ ಹುಳಿಯನೆ ಹಿಂಡಿ ಪಡುವಲ ಗಾಳಿಗೆ ಹಿಡಿ'–ಹೀಗೆ ಮುಕ್ತಾಯವಾಗುತ್ತದೆ, ಇವನ ವಚನಗಳ ಶೈಲಿ. ಹಳೆಯ ಮತ್ತು ಹೊಸ ನಂಬಿಕೆಗಳ ಅವಸ್ಥಾಂತರದ ಅವ್ಯವಸ್ಥೆಯಲ್ಲಿದ್ದ ಅಂದಿನ ವೀರಶೈವ ಸಮಾಜದ ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸುವ ಅಂಬಿಗರ ಚೌಡಯ್ಯನ ಈ ವಚನಗಳು ಬಹುಶಃ ಅಂದಿನ ಸಾಮಾಜಿಕ ಆವಶ್ಯಕತೆಯ ಪರಿಣಾಮಗಳೆಂದು ನಾವು ಭಾವಿಸಬಹುದು. ಅಂಬಿಗರ ಚೌಡಯ್ಯನ ವಚನಗಳಿಂದ ನಮಗೆ ಕಂಡುಬರುವ ಸಮಾಜದ ಅವ್ಯವಸ್ಥೆಯ ಚಿತ್ರ, ಬೇರೆಯವರಲ್ಲಿ ನಮಗೆ ಇಷ್ಟರಮಟ್ಟಿಗೆ ಕಾಣದು. ಅವನ ವಚನಗಳಲ್ಲಿ ನಿಜಶರಣನ ಮೊರೆತದ ಜೊತೆಗೆ ಸುಧಾರಕನ ಕಟುಟೀಕೆಯೂ ಕೇಳಿಬರುತ್ತದೆ. ಅವನ ವಚನಗಳು ಅನರ್ಥ ಸಾಧಕವಾದ ಕೋಪದಿಂದ ಹೊಮ್ಮಿದುವಲ್ಲ; ಸದರ್ಥಸಾಧಕವಾದ ಸತ್ಕೋಪದಿಂದ ಹೊಮ್ಮಿರುವುವು. ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ದಿಟ್ಟತನ, ವ್ಯಗ್ರತೆ ಕಂಡುಬರುವುದು ಬಹುಶಃ ಇಬ್ಬರಲ್ಲೇ ಎಂದು ತೋರುತ್ತದೆ. ಒಬ್ಬ ಸಿಡಿಲು ನುಡಿಯ ಸರ್ವಜ್ಞ; ಇನ್ನೊಬ್ಬ ಕೆಚ್ಚೆದೆಯ ವಚನಕಾರ ಅಂಬಿಗರ ಚೌಡಯ್ಯ. (ಜಿ.ಎಸ್.ಎಸ್.)

**ಅಂಬುಳ :** ಕೀಟೋಗ್ನಾತಾ ಎಂಬ ವಂಶದ ಕಡಲಜೀವಿ (ಆರೋವರ್ಮ್). ಈ ವಂಶದಲ್ಲಿ 9 ಜಾತಿಗಳೂ 40 ಪ್ರಭೇದಗಳೂ ಇವೆ. ಇವುಗಳಲ್ಲಿ **ಸಜಿಟ್ಟ** ಎಂಬುದು ಇತರ ಪ್ರಭೇದಗಳಿಗಿಂತ ದೊಡ್ಡದು. ಸಮುದ್ರದಲ್ಲಿ ಬೇರೆ ಬೇರೆ ಆಳಗಳಲ್ಲಿ ಜೀವಿಸುವ ಈ ಹುಳು ನೀರಿನ ಮೇಲೆ ಈಜುವುದುಂಟು. ಕೆಲವು 6,000 ಮೀ. ಆಳದಲ್ಲಿಯೂ ಉಳಿದವು ಸಾಧಾರಣವಾಗಿ 200–300 ಮೀ. ಆಳದಲ್ಲಿಯೂ ಜೀವಿಸುವುವು. **ಸ್ಪಡೆಲ್ಲ** ಎಂಬುದು ಅತಿ ಆಳದಲ್ಲಿ ಜೀವಿಸುತ್ತದೆ. ಸ್ಪಡೆಲ್ಲಪೈಜಾಪ್ಟರ ಎಂಬುದು ಸೂಕ್ಷ್ಮವಾದ ಬೆರಳಿನಾಕಾರದ ರಚನೆಗಳ ಸಹಾಯದಿಂದ ಇತರ ವಸ್ತುಗಳಿಗೆ ಅಂಟಿರುವುದು. ಇತರ ಜಾತಿಯವು ತೇಲು ಜೀವಿಗಳು. ಹಲವು ಸಮುದ್ರದಲ್ಲಿ ಈಜಿ ಜೀವಿಸುತ್ತವೆ. ಇವು ಮುಖ್ಯವಾಗಿ ಮಾಂಸಾಹಾರಿಗಳು. ಇತರ ಜಾತಿಯ ಸಣ್ಣ ಜೀವಿಗಳೇ ಇವಕ್ಕೆ ಆಹಾರ. ಕೆಲವು ವೇಳೆ ಇತರ ಪ್ರಾಣಿಗಳಿಗೆ ಇವೇ ಆಹಾರವಾಗುವುದೂ ಉಂಟು. ಇದರ ದೇಹ ಪಾರದರ್ಶಕವಾಗಿರುವುದು. ಪ್ರೌಢಜೀವಿ 12–25 ಮಿಮೀ ಉದ್ದವಿರುವುದು. ದೇಹ ತಲೆ ಮೈ ಮತ್ತು ಬಾಲದಿಂದ ಕೂಡಿದೆ. ತಲೆಯ ತಳದಲ್ಲಿರುವ ಬಾಯಿಯ ಸುತ್ತಲೂ ತೆಳುವಾದ ಮುಳ್ಳುಗಳಂತಿರುವ ರಚನೆಗಳಿವೆ. ಮೈಭಾಗದ ಇಕ್ಕೆಡೆಯಲ್ಲಿಯೂ ಈಜುರೆಕ್ಕೆಗಳಿವೆ. ಬಾಲ ಕರಣೆಯಾಕಾರವಾಗಿದೆ. ದೇಹಾಂತರಾವಕಾಶ ವಿಶಾಲವಾಗಿದೆ. ಅದಕ್ಕೆ ಶಿಲಕೆಗಳುಳ್ಳ ಅನುಲೇಪಕ ಕಣಗಳ ಹೊದಿಕೆಯಿದೆ. ಜೀರ್ಣನಾಳದ ಮುಂದಿನ ತುದಿಯಲ್ಲಿ ಬಾಯಿಯೂ ಹಿಂದಿನ ತುದಿಯಲ್ಲಿ ಆಸನವೂ ಇವೆ. ತಲೆಯಲ್ಲಿ ಗಂಟಲಿನ ಮೇಲೆ ನರಮುಡಿ ಇರುವುದು. ಮೈ ಉದ್ದವಾದ ನರತಂತುಗಳು ಸಂಬಂಧವನ್ನು ಕಲ್ಪಿಸುತ್ತವೆ. ಎರಡು ನರಮುಡಿ ದೇಹಾಂತರಾವಕಾಶ ಅಡ್ಡಗೋಡೆಗಳಿಂದ 3 ಭಾಗಗಳಾಗಿ ವಿಭಾಗವಾಗಿದೆ: ನೀಳ ಅಚ್ಚಿನಲ್ಲಿ ಅದರ ಉದ್ದಕ್ಕೂ ಹರಿಯುವ ತೆಳುವಾದ ಪದರ ಜೀರ್ಣಾಂಗಗಳನ್ನು ದೇಹದ ಗೋಡೆಯಿಂದ ಪ್ರತ್ಯೇಕಿಸಿ, ಅದರ ಸ್ಥಳದಲ್ಲಿರಿಸುವುದು; ಜೊತೆಗೆ ದೇಹಾಂತರಾವಕಾಶದ ವಿಭಾಗಗಳನ್ನು ಎಡಬಲ ಭಾಗಗಳಾಗಿ ವಿಂಗಡಿಸುವುದು. ಈ ಜೀವಿಯಲ್ಲಿ ರಕ್ತಪರಿಚಲನಾಂಗಗಳಿಲ್ಲ; ನಿರ್ದಿಷ್ಟವಾದ ವಿಸರ್ಜನಾಂಗ ಶ್ವಾಸಾಂಗಗಳೂ ಇಲ್ಲ. ಈ ಜೀವಿಗಳು ದ್ವಿಲಿಂಗಿಗಳು; ಜನನೇಂದ್ರಿಯಗಳು ದೇಹಾಂತರಾವಕಾಶದ ಹಿಂಭಾಗದಲ್ಲಿ ಒಂದರ ಹಿಂದೆ ಇನ್ನೊಂದು ಇರುವುವು. ಅಂಡಾಶಯಗಳು ಮೈ ಭಾಗದ ದೇಹಾಂತರಾವಕಾಶದಲ್ಲಿವೆ; ಇವುಗಳ ನಾಳಗಳು ಮೈಭಾಗ ಮತ್ತು ಜಾಲ ಇವೆರಡಕ್ಕೂ ಮಧ್ಯೆ ಹೊರತೆರೆಯುತ್ತವೆ. ಬೀಜಾಶಯಗಳು ಬಾಲದ ದೇಹಾಂತರಾವಕಾಶದಲ್ಲಿವೆ. ಬೀಜಾಶಯನಾಳಗಳ ಒಳ ತುದಿಯಲ್ಲಿ ಶಿಲಕೆಗಳುಳ್ಳ ಆಲಿಕೆಗಳಿವೆ. ಇವು ಹಿಂದೆ ಬಾಲದ ಮೇಲೆ ಹೊರಕ್ಕೆ ತೆರೆಯುತ್ತವೆ. ನಿಶೇಚನ ಜೀವಿಯ ದೇಹದೊಳಗಾಗುತ್ತದೆ. ಅನಂತರ ತತ್ತಿಗಳು ಬೆಳೆದು ಮರಿಗಳಾಗಿ ಹೊರಬರುವುವು. ಡಿಂಭಾವಸ್ಥೆಯಿರುವುದಿಲ್ಲ (ಲಾರ್ವ). ಮರಿ ಗಾತ್ರದಲ್ಲಿ ಸಣ್ಣದಾದರೂ ಪ್ರೌಢ ಜೀವಿಯನ್ನು ಹೋಲುವುದು. ಬೆಳವಣಿಗೆ ಪ್ರಾರಂಭವಾದ ಅನಂತರ ಸಂಯೋಗಿಕಣ ಎರಡು ಪ್ರಜನನ ಜೀವಕಣಗಳಾಗಿ ಸ್ಫುಟನಾವಸ್ಥೆಯಲ್ಲಿಯೇ ಬೇರ್ಪಡುತ್ತವೆ. ಇವುಗಳಲ್ಲಿ ಒಂದು ಜೀವಕಣ ಅನೇಕ ಬಾರಿ ವಿಭಜನೆಯಾಗಿ ಅಂಡಾಶಯವಾಗಿಯೂ ಎರಡನೆಯ ಜೀವಕಣ ವೃಷಣವಾಗಿಯೂ ರೂಪುಗೊಳ್ಳುವುವು.




*ಸಜಿಟ್ಟ, ಸ್ಪಡೆಲ್ಲ, ಕ್ರೊಹ್ನಿಯ*–ಇವು ಉದಾಹರಣೆಗಳು. ಕೆಲವು ಸ್ವತಂತ್ರ ಏಕಕಣ ಜೀವಿಗಳೂ ಕೆಲವು ಬಹುಕಣಜೀವಿಗಳೂ ಉಪಜೀವಿಗಳಾಗಿ ವಾಸಿಸುತ್ತವೆ. ಈ ಜೀವಿಗಳನ್ನು ಸಮುದ್ರದ ನೀರಿನ ಚಲನೆಯ ಅಥವಾ ಪ್ರವಾಹದ ದಿಕ್ಸೂಚಕಗಳಾಗಿ ಬಳಸಬಹುದು. ಅಮಿಸ್ಕೂರಿಯ ಎಂಬ ಕೀಟೊಗ್ನಾತಾ ಮಧ್ಯಕೇಂಬ್ರಿಯನ್ ಯುಗದ ಬರ್ಗಸ್‌ಷೇಲಿನಲ್ಲಿ ಪಳೆಯುಳಿಕೆಗಳನ್ನು ಬಿಟ್ಟಿರುವುದನ್ನು ಇತ್ತೀಚೆಗೆ ವಿವರಿಸಲಾಗಿದೆ. (ಪಿ.ಎ.ಆರ್.)

**ಅಂಬೆ, ಅಂಬಿಕೆ, ಅಂಬಾಲಿಕೆ :** ಮಹಾಭಾರತದ ಕಥೆಯ ಪ್ರಕಾರ ಕಾಶೀರಾಜನ ಮಕ್ಕಳು. ತಂದೆ ಇವರಿಗೆ ಸ್ವಯಂವರವನ್ನು ಏರ್ಪಡಿಸಿದಾಗ ಭೀಷ್ಮ ಈ ಮೂವರನ್ನೂ ಅಪಹರಿಸಿದ. ಅಂಬೆ ತಾನು ಸಾಲ್ವರಾಜನನ್ನು ಪ್ರೀತಿಸಿದುದಾಗಿ ಹೇಳಲು ಭೀಷ್ಮ ಅವಳನ್ನು ಅವನ ಬಳಿಗೆ ಕಳುಹಿಸಿದ. ಆದರೆ ಭೀಷ್ಮ ಅಪಹರಿಸಿದ ಅವಳನ್ನು ಸಾಲ್ವ ಸ್ವೀಕರಿಸಲಿಲ್ಲ. ಅವಳು ಹಿಂತಿರುಗಿ ಬಂದು ತನ್ನನ್ನು ಭೀಷ್ಮನೇ ಮದುವೆಯಾಗಬೇಕೆಂದು ಹಠ ಹಿಡಿದಳು. ಭೀಷ್ಮ ಒಪ್ಪಲಿಲ್ಲ. ಅನಂತರ ಶಿಖಂಡಿಯಾಗಿ ಜನ್ಮತಾಳಿ ಭೀಷ್ಮನ ಮೇಲೆ ಸೇಡು ತೀರಿಸಿಕೊಂಡಳು.

ಭೀಷ್ಮನು ಅಂಬಾಲಿಕೆ ಮತ್ತು ಅಂಬಿಕೆಯರನ್ನು ತನ್ನ ಮಲತಮ್ಮನಾದ ವಿಚಿತ್ರವೀರ್ಯನಿಗೆ ಮದುವೆ ಮಾಡಿದ. ಸಂತಾನವಿಲ್ಲದೆ ಅವನು ತೀರಿಕೊಳ್ಳಲು, ಇವರು ಅತ್ತೆ ಸತ್ಯವತಿಯ ಆಜ್ಞೆಗೆ ವಿಧೇಯರಾಗಿ ನಿಯೋಗ ಪದ್ಧತಿಯಂತೆ ವ್ಯಾಸರಿಂದ ಅಂಬಾಲಿಕೆ ಪಾಂಡು ರಾಜನನ್ನೂ ಅಂಬಿಕೆ ಧೃತರಾಷ್ಟ್ರನನ್ನೂ ಪಡೆದರು. ಕೊನೆಯಲ್ಲಿ ಇವರಿಬ್ಬರೂ ಅತ್ತೆಯೊಡನೆ ತಪಸ್ಸಿಗಾಗಿ ಕಾಡಿಗೆ ಹೋದರು. (ಜಿ.ಎಚ್.)

**ಅಂಬೇಡ್ಕರ್, ಭೀಮರಾವ್ ರಾಮ್‌ಜಿ :** 1893–1956. ಡಾಕ್ಟರ್ ಅಂಬೇಡ್ಕರ್ ಎಂದು ಪ್ರಸಿದ್ಧರಾಗಿರುವ ಇವರು 1893 ಏಪ್ರಿಲ್ 14ರಂದು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬಾವಾಡಿ ಎಂಬ ಹಳ್ಳಿಯಲ್ಲಿ ಮಹಾರ್ ಎಂಬ ಹರಿಜನ ಕುಟುಂಬದಲ್ಲಿ ಜನಿಸಿದರು. ಎಳೆತನದಲ್ಲಿ ಇವರನ್ನು ಅಸ್ಪೃಶ್ಯನೆಂದು ತಿರಸ್ಕರಿಸಲಾಗುತ್ತಿತ್ತು. ಇವರು 1912ರಲ್ಲಿ ಬಿ.ಎ. ಪದವಿಯನ್ನು ಪಡೆದು, 1913ರಲ್ಲಿ ಅಂದಿನ ಬರೋಡಾ ಮಹಾರಾಜರ ಸಹಾಯದಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಅಮೆರಿಕದ ಕೊಲಂಬಿಯ ವಿಶ್ವವಿದ್ಯಾಲಯಕ್ಕೆ ತೆರಳಿದರು. ಅಲ್ಲಿ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ನೀತಿಶಾಸ್ತ್ರ ಮುಂತಾದುವುಗಳನ್ನು ಅಭ್ಯಸಿಸಿ ಎಂ.ಎ. ಹಾಗೂ ಪಿಎಚ್.ಡಿ. ಪದವಿಗಳನ್ನು ಪಡೆದು 1917ರಲ್ಲಿ ಭಾರತಕ್ಕೆ ಹಿಂತಿರುಗಿದರು. ಕೆಲಕಾಲ ಬೊಂಬಾಯಿಯ ಸಿಡನ್‌ಹ್ಯಾಮ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಪುನಃ ಅಮೆರಿಕಕ್ಕೆ ಪ್ರಯಾಣ ಮಾಡಿ 1920ರಲ್ಲಿ ಅಲ್ಲಿಂದ ಸ್ವದೇಶಕ್ಕೆ ಹಿಂತಿರುಗುವ ಮಾರ್ಗದಲ್ಲಿ ತಾವು ಹಿಂದೆಯೇ ಲಂಡನ್ನಿನಲ್ಲಿ ಪ್ರಾರಂಭಿಸಿದ್ದ ಕಾಯಿದೆ ಮತ್ತು ಅರ್ಥಶಾಸ್ತ್ರದ ಅಭ್ಯಾಸವನ್ನು ಪೂರ್ತಿಗೊಳಿಸಲು ಲಂಡನ್ನಿಗೆ ಹೋದರು. 1922ರಲ್ಲಿ ಬ್ಯಾರಿಸ್ಟರ್ ಪದವಿಯನ್ನು ಪಡೆದು ಅರ್ಥಶಾಸ್ತ್ರದ ಮೇಲಿನ ರೂಪಾಯಿಯ ಸಮಸ್ಯೆ ಎಂಬ ವಿಷಯದ ಮೇಲೆ ಪ್ರೌಢ ಪ್ರಬಂಧವನ್ನು ಬರೆದು 1923ರಲ್ಲಿ ಭಾರತಕ್ಕೆ ಹಿಂತಿರುಗಿದರು. ಈ ಪ್ರಬಂಧಕ್ಕಾಗಿ ಡಿ.ಎಸ್‌ಸಿ. ಪದವಿ ದೊರಕಿತು. 1923ರಿಂದ ಬೊಂಬಾಯಿ ಹೈಕೋರ್ಟಿನಲ್ಲಿ ವಕೀಲಿವೃತ್ತಿಯನ್ನು ಕೈಗೊಂಡರು. 1925–28ರವರೆಗೆ ಸ್ಥಳೀಯ ಸಂಸ್ಥೆಯೊಂದರಲ್ಲಿ ವ್ಯಾಪಾರಿ ಕಾಯಿದೆಯ ವ್ಯಾಖ್ಯಾತೃವಾಗಿ ಕೆಲಸ ಮಾಡಿದರು. 1926ರಲ್ಲಿ ಬೊಂಬಾಯಿಯ ವಿಧಾನ ಪರಿಷತ್ತಿನ ಸದಸ್ಯರಾದರು. ಈ ಸಭೆಯಲ್ಲಿ ಅನುವಂಶಿಕೆ ವತನ್‌ದಾರೀ (ಹುದ್ದೆಯ ಕಾಯಿದೆ), ಭೂಕಂದಾಯ, ಪಾನನಿರೋಧ–ಮೊದಲಾದ ವಿಷಯಗಳ ಮೇಲೆ ಇವರು ಮಾಡಿದ ಭಾಷಣಗಳಲ್ಲಿ ಸ್ವಾತಂತ್ರ್ಯಾನಂತರ ನಡೆದ ಎಷ್ಟೋ ಸುಧಾರಣೆಗಳ ಛಾಯೆಯನ್ನು ಕಾಣಬಹುದು. ಸೈಮನ್ ನಿಯೋಗ ನೇಮಕ ಹೊಂದಿದ ಮೇಲೆ ಹಿಂದೂಸ್ತಾನದ ಹೊಸ ಘಟನೆಯ ಸಂಬಂಧದ ಬೊಂಬಾಯಿ ಪ್ರಾಂತೀಯ ಸಮಿತಿ, ಸಂಯುಕ್ತ ರಾಜ್ಯ ರಚನಾಸಮಿತಿ ಹಾಗೂ ಪೌರತ್ವ ಸಮಿತಿಯ ಸದಸ್ಯರಾಗಿ ಕೆಲಸಮಾಡಿದರು. 1935ರಲ್ಲಿ ಬೊಂಬಾಯಿ ಲಾ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕಗೊಂಡರು. ಇಷ್ಟರೊಳಗೆ ವಕೀಲಿವೃತ್ತಿಯಲ್ಲಿ ಅಪಾರ ಕೀರ್ತಿಗಳಿಸಿದ್ದರು. ಘಟನಾ ವಿಷಯಕ ಕಾಯಿದೆ, ವತನ್ ಇನಾಮ್‌ಗಳ ಸಂಬಂಧಿ ಕಾಯಿದೆ, ಕ್ರಿಮಿನಲ್ ಕಾಯಿದೆಗಳಿಗೆ ಸಂಬಂಧಿಸಿದ ಕಾರ್ಯನಿರ್ವಹಣೆಯಲ್ಲಿ ಹೆಸರು ಗಳಿಸಿದ್ದರು. ಬಡವರ ಕೈವಾರಿಯಾಗಿ ಅಂಥವರ ಮೊಕದ್ದಮೆಗಳನ್ನು ಹಣ ಪಡೆಯದೇ ಅತ್ಯಂತ ಶ್ರದ್ಧೆಯಿಂದ ನಡೆಸುತ್ತಿದ್ದರು. ಪ್ರಿನ್ಸಿಪಾಲರಾದ ಮೇಲೆ ಬರೆದ ಮುಂಬೈ ಇಲಾಖೆಯಲ್ಲಿಯ ಕಾಯಿದೆ ಶಿಕ್ಷಣದ ಸುಧಾರಣೆ ವಿಷಯದ ವಿಚಾರಗಳು–ಎಂಬ ಲೇಖನ ವಕೀಲಿವೃತ್ತಿಯ ಭೇದಗಳನ್ನು ತೊಡೆದುಹಾಕುವ ಬಗೆಗೂ ವಕೀಲಿ ವಿದ್ಯಾಭ್ಯಾಸದ ಕ್ರಮಗಳ ಬಗೆಗೂ ಮನನೀಯ ವಿಚಾರಗಳಿಂದ ತುಂಬಿದೆ. ವಕೀಲರಿಗೆ ಕೇವಲ ಕಾಯಿದೆಯ ಜ್ಞಾನವೊಂದೇ ಸಾಲದು, ಕಾಯಿದೆಯ ಮೂಲತತ್ತ್ವಗಳ ಅಭ್ಯಾಸದೊಡನೆ ಕಾಯಿದೆಗೆ ಆನುಷಂಗಿಕವಾದ ಸಮಾಜಶಾಸ್ತ್ರ, ನೀತಿಶಾಸ್ತ್ರ ಮೊದಲಾದ ವಿಷಯಗಳ ಅಭ್ಯಾಸವೂ ಬೇಕು; ವಕೀಲಿ ವಿದ್ಯಾಭ್ಯಾಸದಲ್ಲಿ ವಿಷಯನಿರೂಪಣಾ ಸಾಮರ್ಥ್ಯ, ತತ್ತ್ವಪ್ರತಿಪಾದನೆಗಳನ್ನು ಬೆಳೆಸುವ ಶಿಕ್ಷಣವೂ ಬೇಕು; ಅಲ್ಲದೆ ಆ ಶಿಕ್ಷಣ ನ್ಯಾಯಶಾಸ್ತ್ರೀಯ ಮನೋವೃತ್ತಿಯನ್ನು ರೂಪಿಸುವಂತಾಗಬೇಕು–ಇವೇ ಮೊದಲಾದ ಹೊಸ ಕಾಯಿದೆ ಶಿಕ್ಷಣತತ್ತ್ವಗಳನ್ನು ಮೂಡಿಸಿದರು. ಅಗಾಧ ಪಂಡಿತರೂ ಗ್ರಂಥಭಂಡಾರಪ್ರಿಯರೂ ಆದ ಅಂಬೇಡ್ಕರ್‌ರ ಕಾಲದಲ್ಲಿ ಸರಕಾರಿ ಲಾ ಕಾಲೇಜಿನ ಪುಸ್ತಕಭಂಡಾರ ಅತ್ಯಂತ ಸಮೃದ್ಧ ಸ್ಥಿತಿಗೇರಿತು.

1937ರಲ್ಲಿ ಇವರು ಬೊಂಬಾಯಿ ಶಾಸನಸಭೆಯ ಸದಸ್ಯರಾಗಿ ಆಯ್ಕೆಯಾದರು. 1938 ಮೇ ತಿಂಗಳಿನಲ್ಲಿ ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಸ್ಥಾನಕ್ಕೆ ರಾಜೀ ನಾಮೆಯಿತ್ತರು. 1940ರಲ್ಲಿ ರಾಷ್ಟ್ರವಿಭಜನೆಯನ್ನು ಕುರಿತ ಥಾಟ್ಸ್ ಆನ್ ಪಾರ್ಟಿಷನ್ ಎಂಬ ಪುಸ್ತಕವನ್ನು ಪ್ರಕಟಿಸಿದರು. ಭಾರತದ ವಿಭಜನೆ ಯನ್ನು ಪ್ರಸ್ತಾಪಿಸಿ ಟರ್ಕಿ, ಗ್ರೀಸ್, ಬಲ್ಗೇರಿಯ ಮೊದಲಾದ ಪ್ರಸಿದ್ಧ ಅಂತಾರಾಷ್ಟ್ರೀಯ ಕಾಯಿದೆಗಳಲ್ಲಿನ ಪೂರ್ವೋದಾಹರಣೆಗಳನ್ನು ಕೊಟ್ಟು ವಿಭಜನೆಯ ಕಾಲಕ್ಕೆ ಪಾಕಿಸ್ತಾನ ಹಾಗೂ ಹಿಂದೂಸ್ತಾನದ ಹಿಂದೂ ಮುಸ್ಲಿಮರನ್ನು ಕಾಯಿದೆ ರೀತ್ಯ ಸ್ಥಳಾಂತರಿಸುವ ವ್ಯವಸ್ಥೆ ಮಾಡ ಬಾರದೆಂದು ಸೂಚಿಸಿದರು. 1942

ಜೂನ್ ತಿಂಗಳಲ್ಲಿ ವೈಸ್‌ರಾಯರ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾಗಿ ನೇಮಕಗೊಂಡರು. ಅಲ್ಲಿ ಕಾರ್ಮಿಕಶಾಖೆಯ ಮೇಲ್ವಿಚಾರಣೆಯನ್ನು ವಹಿಸಿಕೊಂಡಿದ್ದರು. ಈ ಮಂಡಲಿ 1946 ಜೂನ್ ತಿಂಗಳಲ್ಲಿ ವಿಸರ್ಜನೆ ಹೊಂದಿದ ಮೇಲೆ ಮುಂಬೈಗೆ ವಾಪಸಾಗಿ

ಅದೇ ವರ್ಷ ಸಿದ್ದಾರ್ಥ ಕಾಲೇಜನ್ನು ಸ್ಥಾಪಿಸಿದರು. 1946ರಲ್ಲಿ ಘಟನಾ ವಿಧಾಯಕ ಸಭೆಯ ಸದಸ್ಯರಾಗಿ ಆಯ್ಕೆಯಾದರು. 1947ರಲ್ಲಿ ಭಾರತದ ಸ್ವಾತಂತ್ರ್ಯ ಕಾಯಿದೆ ಅಂಗೀಕೃತವಾಗಿ ಘಟನಾವಿಧಾಯಕ ಸಭೆಗೆ ಸಾರ್ವಭೌಮತ್ವ ಲಭಿಸಿತು. ಅನಂತರ ಇವರನ್ನು ಕಾನೂನು ಮಂತ್ರಿಗಳಾಗಿಯೂ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿಯೂ ಆಯ್ಕೆ ಮಾಡಲಾಯಿತು. ಸಂವಿಧಾನ ರಚನೆಯ ಕಾರ್ಯನಿರ್ವಹಣೆಯನ್ನು ವಿಶೇಷವಾಗಿ ಇವರೊಬ್ಬರೇ ವಹಿಸಿ ಸುವ್ಯವಸ್ಥಿತ ರೀತಿಯಿಂದ ನೆರವೇರಿಸಿದರೆಂದು ಸಂವಿಧಾನ ಸಮಿತಿಯ ಸದಸ್ಯರೇ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ. ಇವರ ಧ್ಯೇಯವಾದ ಪ್ರಜಾಸತ್ತಾತ್ಮಕ ಸಮಾಜವಾದ ತತ್ತ್ವಗಳು, ಮೂಲಭೂತ ಹಕ್ಕುಗಳು (ಸಮತ್ವ, ವಾಕ್‌ಸ್ವಾತಂತ್ರ್ಯ–ಮೊದಲಾದವುಗಳು), ಎಂದಿಗೂ ಅಬಾಧಿತವಾಗಿ ಉಳಿಯುವಂತೆ ಕಾಯಿದೆಯಿಂದ ಸ್ಥಿರಪಡಿಸಬೇಕೆಂಬ ವಿಚಾರ–ಇವುಗಳು ಇವರ ಧ್ಯೇಯವಾಗಿದ್ದು ಇವನ್ನು ಘಟನೆಯಲ್ಲಿ ಸ್ಫುಟವಾಗಿ ಎತ್ತಿ ತೋರಿಸಲಾಗಿದೆ. ಹಿಂದೂ ಕಾಯಿದೆಯ ಕ್ರೋಡೀಕರಣ, ಜನತಾ ಪ್ರಾತಿನಿಧಿಕ ಕಾಯಿದೆಯ ಸುಧಾರಣೆ–ಇವು ಇವರು ಅನಂತರ ಎತ್ತಿಕೊಂಡ ಮುಖ್ಯ ಕಾಯಿದೆಯ ಮಸೂದೆಗಳು. ಹಿಂದೂ ಕಾಯಿದೆಯ ಕ್ರೋಡೀಕರಣದ ವಿಷಯದಲ್ಲಿ ಅದು ಸಿಖ್, ಬೌದ್ಧ, ಜೈನರಿಗೂ ಅನ್ವಯಿಸಬೇಕೆಂಬುದನ್ನು ಇವರು ಬಲವಾಗಿ ಸಮರ್ಥಿಸಿದರು. ಮುಂದೆ ಕ್ರೋಡೀಕರಣ ಕಾಯಿದೆಗೆ ಮಂತ್ರಿಮಂಡಲದಲ್ಲಿ ಮತ್ತು ದೇಶದಲ್ಲಿ ಬಲವಾದ ವಿರೋಧವೆದ್ದಿತು. ಅದರೊಳಗಿನ ವಿವಾಹ ವಿಚ್ಛೇದನ, ಸ್ತ್ರೀಯರಿಗೆ ದೊರಕುವ ವಾರಸಾಹಕ್ಕು ಮೊದಲಾದುವುಗಳನ್ನು ಕೌಟಿಲ್ಯ, ಬೃಹಸ್ಪತಿ, ಜೀಮೂತವಾಹನಾದಿಗಳ ಗ್ರಂಥಗಳ ಆಧಾರದ ಮೇಲೆ ಇವರು ಸಮರ್ಥಿಸಿದರು. ಆದರೂ ಪ್ರಬಲವಾದ ವಿರೋಧಕ್ಕೆ ತಲೆಬಾಗಿ ಸರಕಾರವೂ ಕೇವಲ ವಿವಾಹ ಮತ್ತು ತದ್ವಿಚ್ಛೇದ ಭಾಗವನ್ನು ಎತ್ತಿಕೊಳ್ಳಲು ನಿರ್ಣಯಿಸಿತು. ಮುಂದೆ ಅದೂ ಅಂಗೀಕೃತವಾಗುವುದು ಸಾಧ್ಯವಾಗದಿರಲು ಇವರು 1951 ಅಕ್ಟೋಬರ್‌ನಲ್ಲಿ ಮಂತ್ರಿಪದವಿಗೆ ರಾಜೀನಾಮೆಯನ್ನಿತ್ತು ಸುಪ್ರೀಮ್ ಕೋರ್ಟಿನಲ್ಲಿ ವಕೀಲಿ ವೃತ್ತಿಯನ್ನು ಕೈಕೊಂಡರು. ಹಿಂದೂ ಸಮಾಜದಲ್ಲಿ ಹರಿಜನರ ಏಳಿಗೆಗೋಸ್ಕರ ಅಧಿಕವಾಗಿ ಶ್ರಮಿಸಿ, ತಾವು ನಿರೀಕ್ಷಿಸಿದಷ್ಟು ಹರಿಜನರ ಉದ್ಧಾರಕಾರ್ಯ ನಡೆಯಲಿಲ್ಲವಾಗಿ 1956 ಅಕ್ಟೋಬರ್ ತಿಂಗಳಲ್ಲಿ 2 ಲಕ್ಷ ಹರಿಜನರೊಂದಿಗೆ ಬೌದ್ಧಧರ್ಮವನ್ನು ಸ್ವೀಕರಿಸಿದರು. ಅದೇ ವರ್ಷ ಡಿಸೆಂಬರ್‌ನಲ್ಲಿ ನಿಧನರಾದರು. ಇವರ ಅಗಾಧ ಕಾಯಿದೆ ಪಾಂಡಿತ್ಯ, ನವ್ಯ ನ್ಯಾಯತತ್ತ್ವಗಳ ಪ್ರತಿಪಾದನೆಗಳು, ಹೊಸಬಗೆಯ ಸಮಾಜ ಸಂಘಟನಾ ವಿಚಾರಗಳು ಇವರಿಗೆ ಜನತೆಯಿಂದ ಅಭಿನವ ಮನು ಎಂಬ ಗೌರವಾಭಿದಾನವನ್ನು ದೊರಕಿಸಿಕೊಟ್ಟವು. (ವಿ.ಆರ್.ಬಿ.; ಎ.ಎಂ.)

**ಅಂಭಿ :** ಅಲೆಗ್ಸಾಂಡರ್ ಮಹಾಶಯ ಸಿಂಧೂನದಿಯನ್ನು ದಾಟಿ ಪ್ರಶ.ಪೂ. 326ರಲ್ಲಿ ಪಂಜಾಬಿಗೆ ಕಾಲಿಟ್ಟಾಗ, ಸಿಂಧೂ ಮತ್ತು ಜೀಲಂ ನದಿಗಳ ಮಧ್ಯೆ ಇದ್ದ ರಾಜ್ಯವನ್ನು ಅಂಭಿ ಎಂಬ ಅರಸನು ಆಳುತ್ತಿದ್ದ. ಇವನಿಗೂ ಜೀಲಂ ಮತ್ತು ಚೀನಾಬ್ ನದಿಗಳ ಮಧ್ಯದ ರಾಜ್ಯಕ್ಕೆ ದೊರೆಯಾಗಿದ್ದ ಪೌರವ ರಾಜನಿಗೂ ಶತ್ರುತ್ವವಿತ್ತು. ಈ ಇಬ್ಬರು ಹಿಂದೂ ರಾಜರು ಪರಸ್ಪರ ವೈರಿಗಳಾಗಿದ್ದರು. ಆದ್ದರಿಂದ ಅಂಭಿ ಅಲೆಗ್ಸಾಂಡರನ ಮೈತ್ರಿಯನ್ನು ಯಾಚಿಸಿ ಅವನಿಗೆ ತನ್ನ ರಾಜಧಾನಿಯಾದ ತಕ್ಷಶಿಲೆಯಲ್ಲಿ ಕೊಂಚಕಾಲ ನಿಂತು ವಿಶ್ರಮಿಸಿಕೊಳ್ಳಲು ಅವಕಾಶ ಮಾಡಿಕೊಟ್ಟ. ಅಲೆಗ್ಸಾಂಡರ್ ತಾನು ಗೆದ್ದ ರಾಜ್ಯಗಳ ವ್ಯವಸ್ಥೆಯನ್ನು ಮಾಡಿದಾಗ ಅಂಭಿ ಗ್ರೀಕ್ ಮಾಂಡಲಿಕನ ಅಧೀನನಾಗುಳಿಯಬೇಕಾಯಿತು. (ಎಂ.ವಿ.ಕೆ.)

**ಅಂಶಗಣ :** ಅಕ್ಷರ ಮತ್ತು ಮಾತ್ರೆಗಳಂತೆ ಒಂದು ಗುರುವಿನ ಉಚ್ಚಾರಣೆಯ ಅಂಶವನ್ನು ಆಧಾರವಾಗಿಟ್ಟುಕೊಂಡು ಮಾಡುವ ಗಣರಚನೆಗೆ ಈ ಹೆಸರಿದೆ. ಈ ಗಣದಲ್ಲಿನ ಮೊದಲ ಅಂಶ ಒಂದು ಗುರು ಅಥವಾ ಎರಡು ಲಘುಗಳಾಗಿದ್ದು ಅನಂತರದ ಅಂಶ ಒಂದು ಲಘುವೋ ಒಂದು ಗುರುವೋ ಆಗಿರುತ್ತದೆ.

ಸಂಸ್ಕೃತದ ವೈದಿಕ ಛಂದಸ್ಸಿನಲ್ಲಿ ಅಕ್ಷರ ವೃತ್ತಗಳೂ ಲೌಕಿಕ ಛಂದಸ್ಸಿನಲ್ಲಿ ವರ್ಣವೃತ್ತಗಳೂ ಪ್ರಾಕೃತ–ಅಪಭ್ರಂಶಗಳಲ್ಲಿ ತಾಳವೃತ್ತ–ಮಾತ್ರಾವೃತ್ತಗಳೂ ವಿಶಿಷ್ಟವಾಗಿರುವಂತೆಯೇ ದ್ರಾವಿಡ ಭಾಷೆಗಳಲ್ಲಿ ದೇಶೀಯವಾದ ಹಾಡಿನ ಮಟ್ಟುಗಳು ಜಾತಿ ಎಂದೆನಿಸಿ ವಿಶಿಷ್ಟವಾಗಿವೆ. ದ್ರಾವಿಡ ಭಾಷೆಗಳಲ್ಲಿ ಒಂದಾದ ಕನ್ನಡದಲ್ಲಿ ಆದಿಕಾಲದಿಂದ ಸಹಜವಾಗಿ ಬಂದಿರುವ ಹಾಡಿನ ಮಟ್ಟುಗಳ ಗುಂಪನ್ನು ಛಂದಶ್ಶಾಸ್ತ್ರ ಕರ್ತೃಗಳು ಕರ್ಣಾಟ(ಕ) ವಿಷಯ ಜಾತಿ (ವೃತ್ತ) ಎಂದೂ ಕರ್ಣಾಟ ವಿಷಯ ಭಾಷಾಜಾತಿ ಎಂದೂ ಕರೆದಿದ್ದಾರೆ. ಅದನ್ನು ಕುರಿತಾಗಿ ಜಾತಿಛಂದಸ್ಸು, ದೇಶ್ಯ ಛಂದಸ್ಸು, ಕನ್ನಡಛಂದಸ್ಸು, ಅಚ್ಚಕನ್ನಡಛಂದಸ್ಸು ಎಂದು ಮುಂತಾಗಿ ಹೇಳುತ್ತಿದ್ದುದು ರೂಢಿ. ಈಚೆಗೆ ಇವುಗಳೊಂದಿಗೆ ಅಂಶಛಂದಸ್ಸು ಎಂಬ ಒಂದು ಮಾತು ಕೂಡಿಕೊಂಡಿತು; ಅದರೊಂದಿಗೆ ಅಂಶಲಯ, ಅಂಶಗಣ ಎಂಬಂಥ ಮಾತುಗಳೂ ಸೇರಿದುವು.

ನಾಗವರ್ಮ ಜಯಕೀರ್ತಿ ಮೊದಲಾದವರು, ಕನ್ನಡ ಸಂಸ್ಕೃತ ಲಾಕ್ಷಣಿಕರು, ಕೆಲವು ಬಗೆಯ ಜಾತಿಛಂದಸ್ಸಿನ ಮಟ್ಟುಗಳನ್ನು ಅವುಗಳ ಪ್ರಭೇದಗಳೊಡನೆ ತಮ್ಮ ಗ್ರಂಥಗಳಲ್ಲಿ ವಿವರಿಸಿದ್ದಾರೆ. ನಾಗವರ್ಮ ಛಂದೋಂಬುಧಿಯಲ್ಲಿ (ಪ್ರ.ಶ.990) ಇಂಥ ಮಟ್ಟುಗಳ ಲಕ್ಷಣಗಳನ್ನು ನಿರೂಪಿಸುವಾಗ, ಅವುಗಳಲ್ಲಿ ತೋರುವ ವಿಶಿಷ್ಟರೀತಿಯ ಗಣಗಳನ್ನು ಬ್ರಹ್ಮ ವಿಷ್ಣು ರುದ್ರ ಎಂಬ ಸಂಜ್ಞೆಗಳಿಂದ ನಿರ್ದೇಶಿಸಿ ಅವುಗಳ ಸ್ವರೂಪವನ್ನೂ ತಕ್ಕಮಟ್ಟಿಗೆ ವಿಶದಪಡಿಸಿದ್ದಾನೆ. ಇವೇ ಗಣಗಳಿಗೆ ಜಯಕೀರ್ತಿ ಮೊದಲಾದ ಸಂಸ್ಕೃತ ಛಂದಶ್ಶಾಸ್ತ್ರಕಾರರು ರತಿ ಮಾದನ ಶರ ಎಂಬ ಸಂಜ್ಞೆಗಳನ್ನು ಕೊಟ್ಟಿದ್ದಾರೆ; ಭೀಮಕವಿ ಮೊದಲಾದ ತೆಲುಗು ಲಾಕ್ಷಣಿಕರು ಸೂರ್ಯ ಇಂದ್ರ ಚಂದ್ರ ಎಂಬ ಸಂಜ್ಞೆಗಳನ್ನು ಬಳಸಿದ್ದಾರೆ. ತಮಿಳಿನಲ್ಲಿ ಇವನ್ನು ಹೋಲುವ ಹೆಸರುಗಳು ಈರಶೈಶೀರ್, ಮೂವಶೈಶೀರ್ ಮತ್ತು ನಾಲಶೈಶೀರ್.

ಕನ್ನಡದ ಬ್ರಹ್ಮ, ವಿಷ್ಣು, ರುದ್ರ ಎಂಬ ಹೆಸರುಗಳನ್ನು ಗಮನಿಸಿ, ಕೆಲವರು ಅವನ್ನು ತ್ರಿಮೂರ್ತಿಗಣವೆಂದೂ ದೇವಗಣವೆಂದೂ ಕರೆಯುತ್ತಾರೆ. ಆದರೆ ಜಾತಿಛಂದಸ್ಸಿಗೆ ಮೂಲಮಾಪಕವಾದ ಅಕ್ಷರವನ್ನು ಅಂಶವೆಂದೂ ಅದರ ವಿಶಿಷ್ಟ ರೀತಿಯ ಗಣಗಳಿಗೆ ಅಂಶಗಣವೆಂದೂ ಮೊದಲು ಹೆಸರು ಕೊಟ್ಟವರು ಬಿ.ಎಂ.ಶ್ರೀಕಂಠಯ್ಯನವರು, ಅವರು ಬ್ರಹ್ಮ, ವಿಷ್ಣು, ರುದ್ರಗಣಗಳ ಮೂಲ ಮಾಪಕವನ್ನು ಅಂಶವೆಂದು ಕರೆಯಲು ತಮಿಳು ಛಂದಸ್ಸಿನ ಆಶೈ ಎಂಬ ಪದದಿಂದ ಪ್ರೇರಣೆಯನ್ನು ಪಡೆದಿರಬಹುದು. ತಮಿಳಿನ ಆಶೈನಿಂದಾದ ಶೀರ್‌ಗೂ ಕನ್ನಡದ ಅಂಶದಿಂದಾದ ಅಂಶಗಣಕ್ಕೂ ಹೋಲಿಕೆಯಿದೆ.

ಅಂಶ ಎಂದರೆ ಜಾತಿಛಂದಸ್ಸಿನ ಪದ್ಯಪಾದಗಳ ಗಣಗಣಗಳಲ್ಲಿ ತಾಳಲಯಗಳು ಸರಿಯಾಗಿ ಹೊಂದಿಕೊಳ್ಳಲು ಮಾತ್ರಾಪರಿಮಾಣ ಹಿಗ್ಗಿ ಅಥವಾ ಕುಗ್ಗಿ ಹೊಂದಿಕೆಗೆ ಅನುವಾಗುವ ಅಕ್ಷರ. ಇಂಥ ಅಂಶಗಳಿಂದ ಕಟ್ಟಿದ ಗಣ ಅಂಶಗಣ. ಈ ಗಣದ ಮೊದಲನೆಯ ಅಂಶ ಗುರುವಾಗಿರುತ್ತದೆ, ಅಥವಾ ಅದರ ಸ್ಥಾನದಲ್ಲಿ ಎರಡು ಲಘುಗಳು ಬಂದಿರುತ್ತವೆ. ಗಣದಲ್ಲಿ ಆ ಮುಂದಿನ ಪ್ರತಿಯೊಂದು ಅಂಶವೂ ಒಂದು ಲಘುವೋ ಗುರುವೋ ಆಗಿರುತ್ತದೆ. ಎಂದರೆ ಗಣದ ಮೂಲಾಂಶ ಒಂದು ಗುರು ಅಥವಾ ಎರಡು ಲಘುಗಳಿಂದ ಕೂಡಿದ್ದು ಅದರ ಮುಂದಿನ ಅಂಶಗಳೆಲ್ಲ ಒಂದೊಂದೇ ಅಕ್ಷರದಿಂದ ಆಗಿರಬೇಕು. ಗಣದ ಮೊದಲಲ್ಲಿ (∪ –) ಎಂಬ ರೀತಿಯ ಅಕ್ಷರವಿನ್ಯಾಸ ಬರುವಂತಿಲ್ಲ. ಹೀಗೆ ಒಂದು ಗುರು ಅಥವಾ ಎರಡು ಲಘುಗಳನ್ನು ಮೂಲಮಾಪಕವಾಗಿಟ್ಟುಕೊಂಡು ಅಂಶಗಣಗಳನ್ನು ಗುರುತಿಸಬೇಕಾಗುತ್ತದೆ.. ಒಂದು ಗುರು ಅಥವಾ ಎರಡು ಲಘುಗಳಾದ ಮೇಲೆ ಗುರುವಾಗಲಿ ಲಘುವಾಗಲಿ ಒಂದು ಅಂಶ (ಅಕ್ಷರ) ಬಂದರೆ ಅದು ಬ್ರಹ್ಮ (ರತಿ, ಸೂರ್ಯ) ಗಣವಾಗುತ್ತದೆ. ಒಂದು ಗುರು ಅಥವಾ ಎರಡು ಲಘುಗಳಾದ ಮೇಲೆ ಗುರುವಾಗಲಿ ಲಘುವಾಗಲಿ ಎರಡು ಅಂಶಗಳು (ಅಕ್ಷರ) ಬಂದರೆ ಅದು ವಿಷ್ಣು (ಮದನ, ಇಂದ್ರ) ಗಣವಾಗುತ್ತದೆ. ಒಂದು ಗುರು ಅಥವಾ ಎರಡು ಲಘುಗಳಾದ ಮೇಲೆ ಗುರುವಾಗಲಿ ಮೂರು ಅಂಶಗಳು (ಅಕ್ಷರ) ಬಂದರೆ ಅದು ರುದ್ರ (ಶರ, ಚಂದ್ರ) ಗಣವಾಗುತ್ತದೆ. ಬ್ರಹ್ಮ (ರತಿ, ಸೂರ್ಯಗಣಕ್ಕೆ ಒಟ್ಟು ಎರಡು ಅಂಶಗಳು; ವಿಷ್ಣು (ಮದನ, ಇಂದ್ರ) ಗಣಕ್ಕೆ ಒಟ್ಟು ಮೂರು ಅಂಶಗಳು; ರುದ್ರ (ಶರ, ಚಂದ್ರ) ಗಣಕ್ಕೆ ಒಟ್ಟು ನಾಲ್ಕು ಅಂಶಗಳು. ಪ್ರಸ್ತಾರವೈವಿಧ್ಯದಿಂದ 4 ವಿಧವಾಗಿ ಬ್ರಹ್ಮ (ರತಿ) ಗಣಗಳೂ (-.-;∪∪.–;–.∪;∪∪.∪), 8 ವಿಧವಾಗಿ ವಿಷ್ಣು (ಮದನ) ಗಣಗಳೂ (–.–.–;–.–.∪;∪∪.–.–;∪∪.–.∪;–.∪.–;–.∪.∪;∪∪.∪.-;∪∪.∪.∪) 16 ವಿಧವಾಗಿ ರುದ್ರ (ಶರ) ಗಣಗಳೂ (–.–.–.–;∪∪.–.–.–;–.∪.–.–;∪∪.∪.–.–;–.–.∪.–;∪∪.–.∪.–;–.∪.∪.–;∪∪.∪.∪–;–.–.–.∪;∪∪.–.–.∪;–.∪.–.∪;∪∪.∪.–.∪;–.–.∪.∪.;∪∪.–.∪.∪;–.∪.∪.∪.;∪∪.∪.∪.∪) ಏರ್ಪಡುವ ಸಾಧ್ಯತೆಯಿದೆ. ಇದನ್ನು ಪರಿಶೀಲಿಸಿದರೆ ಒಂದು ಬ್ರಹ್ಮಗಣದಲ್ಲಿ ಮೂರರಿಂದ ನಾಲ್ಕು ಮಾತ್ರೆಗಳು, ಒಂದು ವಿಷ್ಣುಗಣದಲ್ಲಿ ನಾಲ್ಕರಿಂದ ಆರು ಮಾತ್ರೆಗಳು, ಒಂದು ರುದ್ರಗಣದಲ್ಲಿ ಐದರಿಂದ ಎಂಟು ಮಾತ್ರೆಗಳು ಅಡಕವಾಗುತ್ತವೆಯೆನ್ನಬಹುದು.

ತೆಲುಗು ಅಂಶಗಣಗಳಲ್ಲಿ, ಕನ್ನಡದ ಬ್ರಹ್ಮಗಣದ –.–. ಮತ್ತು ∪∪.– ಎಂಬ ವಿನ್ಯಾಸಗಳನ್ನು ಸೂರ್ಯಗಣದಲ್ಲಿಯೂ ಕನ್ನಡದ ವಿಷ್ಣುಗಣದ –.–.– ಮತ್ತು ∪∪.–.– ಎಂಬ ವಿನ್ಯಾಸಗಳನ್ನು ಇಂದ್ರಗಣದಲ್ಲಿಯೂ ಕನ್ನಡದ ರುದ್ರಗಣದ –.–.–.– ಮತ್ತು ∪∪.–.–.– ಎಂಬ ವಿನ್ಯಾಸಗಳನ್ನು ಚಂದ್ರಗಣದಲ್ಲಿಯೂ ತೆಲುಗು ಲಾಕ್ಷಣಿಕರು ಅಂಗೀಕರಿಸಿಲ್ಲವೆಂಬುದು ಕಾಣುತ್ತದೆ. ಆದರೆ ಪ್ರಾಚೀನವಾದ ತೆಲುಗು ಶಾಸನಗಳಲ್ಲಿ ಇಂಥ ಗಣಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ.

ತಮಿಳು ಅಂಶಗಣಗಳ ಸ್ವರೂಪ ಕನ್ನಡ ಮತ್ತು ತೆಲುಗು ಅಂಶಗಣಗಳ ಸ್ವರೂಪದಿಂದ ಸ್ವಲ್ಪಮಟ್ಟಿಗೆ ಬೇರೆಯಾಗಿದೆ. ಇಲ್ಲಿ ಗಣವಿನ್ಯಾಸದಲ್ಲಿ ಹೆಚ್ಚಿನ ಸ್ವಾತಂತ್ರ್ಯವೂ ವ್ಯಾಪ್ತಿಯೂ ವೈವಿಧ್ಯವೂ ಕಂಡುಬರುತ್ತವೆ. ನೇರ್ ಮತ್ತು ನಿರೈಗಳು ತಮಿಳು ಛಂದಸ್ಸಿನ ಆಶೈ (ಅಂಶ)ಗಳು. ಒಂದು ಹ್ರಸ್ವ ಅಥವಾ ದೀರ್ಘ ತಾನೇ ಆಗಲಿ ಅಥವಾ ವ್ಯಂಜನ ಸೇರಿಯಾಗಲಿ ಬರುವುದು ನೇರ್; ಎರಡು ಹ್ರಸ್ವ ಅಥವಾ ಹ್ರಸ್ವ ದೀರ್ಘ ತಾನೇ ಆಗಲಿ ಅಥವಾ ವ್ಯಂಜನ ಸೇರಿಯಾಗಲಿ ಬರುವುದು ನಿರೈ. ಈ ನೇರ್ ಆಶೈ ಮತ್ತು ನಿರೈ ಆಶೈಗಳು ಎರಡು ಸೇರಿದರೆ ಈರಶೈಶೀರ್, ಮೂರು ಸೇರಿದರೆ ಮೂವಶೈಶೀರ್, ನಾಲ್ಕು ಸೇರಿದರೆ ನಾಲಶೈಶೀರ್ ಆಗುವುವು. ಈ ಗಣಗಳು ಹ್ರಸ್ವದೀರ್ಘಗಳಿಂದಾಗಿವೆಯೇ ಹೊರತು ಲಘುಗುರುಗಳಿಂದಾಗಿಲ್ಲ. ಲಘು ಗುರುವಾಗುವ ಕೆಲವು ನಿಯಮಗಳು ಇಲ್ಲಿಗೆ ಅನ್ವಯಿಸುವುದಿಲ್ಲ. ಗಣದ ಮೊದಲಲ್ಲಿಯೇ ಅಲ್ಲದೆ ಆಮೇಲಿನ ಅಂಶಗಳ ಸ್ಥಾನದಲ್ಲಿಯೂ ಒಂದು ದೀರ್ಘ ಅಥವಾ ಹ್ರಸ್ವಕ್ಕೆ ಬದಲಾಗಿ ಎರಡು ಹ್ರಸ್ವ ಅಥವಾ ಹ್ರಸ್ವದೀರ್ಘ ತಾನೇ ಆಗಲಿ, ವ್ಯಂಜನ ಸೇರಿಯಾಗಲಿ ಬರಬಹುದಾಗಿದೆ. ಇದು ನಾಗವರ್ಮಾದಿಗಳು ವಿವರಿಸಿರುವ ಅಂಶಗಣಗಳ ರಚನೆಗಿಂತ ಒಂದು ವಿಧದಲ್ಲಿ ಬೇರೆಯಾಗಿದೆ. ತಮಿಳಿನಲ್ಲಿ ಶುದ್ಧವಾದ ದೇಶ್ಯರೀತಿಯಿಂದಲೂ ಕನ್ನಡದಲ್ಲಿ ಮತ್ತು ತೆಲುಗಿನಲ್ಲಿ ಮಾತ್ರಾಪರಿಭಾಷೆಯ ಪ್ರಸ್ತಾರವಿಧಾನದಿಂದಲೂ ಅಂಶಗಣದ ಸ್ವರೂಪವನ್ನು ವಿವರಿಸಿರುವುದೇ ಇದಕ್ಕೆ ಕಾರಣ. ಆದುದರಿಂದ ತಮಿಳು ದೇಶ್ಯಛಂದಸ್ಸಿನ ಆಶೈ ಮತ್ತು ತಳೈಗಳ (ಗಣಸಂಧಿ) ನಿಯಮಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕನ್ನಡ (ತೆಲುಗುಗಳ) ಅಂಶಗಣದ ನಿಯಮಗಳನ್ನು ಕೆಲಮಟ್ಟಿಗೆ ಪರಿಷ್ಕರಿಸುವುದು ಸೂಕ್ತವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದರಿಂದ ಅಂಶಗಣಗಳ ವ್ಯಾಪ್ತಿ ವಿಸ್ತರಿಸಿ ಪ್ರಸ್ತಾರದ ತೊಡಕುಗಳು ಬಗೆಹರಿಯುವುದು ಸಾಧ್ಯವೆಂದು ಅವರು ಭಾವಿಸುತ್ತಾರೆ.

ವರ್ಣಗಣ ಮಾತ್ರಾಗಣಗಳಿಂದ ಅಂಶಗಣದ ಪ್ರತ್ಯೇಕತೆಗೆ ಕಾರಣಗಳು ಹೀಗಿವೆ. ವರ್ಣವೃತ್ತಗಳು ವರ್ಣಮಾತ್ರೆಗಳಿಂದ ಕಟ್ಟಿದ ಪಾದಗಳನ್ನುಳ್ಳವು. ಇಂಥ ಪ್ರತಿಪಾದದಲ್ಲಿಯೂ ವರ್ಣಸಂಖ್ಯೆ ಇಷ್ಟೇ ಇರತಕ್ಕದ್ದು, ಲಘುಗುರುಗಳ ವಿನ್ಯಾಸ ಹೀಗೆಯೇ ಇರತಕ್ಕದ್ದು ಎಂಬುದಾಗಿ ಮೊದಲೇ ಗೊತ್ತಾಗಿರುತ್ತದೆ. ಲೌಕಿಕಛಂದಸ್ಸಿನ ಉಕ್ತೆ ಮೊದಲಾದ ಇಪ್ಪತ್ತಾರು ಛಂದೋವರ್ಗಗಳಲ್ಲಿ ಪ್ರತಿಯೊಂದರಲ್ಲಿಯೂ ಬಗೆಬಗೆಯ ಗುರುಲಘು ವಿನ್ಯಾಸವಿರುವ ವೃತ್ತಗಳು ಹೊರಡುತ್ತವೆಯಷ್ಟೆ. ಅವುಗಳನ್ನು ಗುರುತಿಸುವುದಕ್ಕೆ ಅಳೆಯುವುದಕ್ಕೆ ಮೂರು ಅಕ್ಷರಗಳ (ತ್ರಿಕ) ಗಣನಾಂಗವನ್ನು ಈಚೆಗೆ ಕಲ್ಪಿಸಿಕೊಳ್ಳಲಾಯಿತು. ಈ ತ್ರಿಕ ವರ್ಣಸಂಗೀತದ ಎಂಟು ವಿಭಿನ್ನ ರೀತಿಯ ಲಯಗಳನ್ನು ತೋರಿಸುವುದಾಗಿದ್ದು, ಆ ಲಯಗಳನ್ನು ಮಯರಸತಜಭನ ಎಂಬ ಸಂಜ್ಞೆಗಳು ಗುರುತಿಸುತ್ತವೆ. ಅಕ್ಷರಗಳು ಗುರುವಾಗಲಿ ಲಘುವಾಗಲಿ ವೃತ್ತಪಾದವನ್ನು ಮೂರು ಅಕ್ಷರಗಳಿಗೆ ಒಂದು ಗಣವಾಗಿ ಒಡೆಯುತ್ತ ಹೋಗಿ ಈ ಸಂಜ್ಞೆಗಳ ಮೂಲಕವಾಗಿ ವೃತ್ತರಚನೆಯನ್ನು ಕಂಡುಹಿಡಿಯುವುದು ರೂಢಿಯಾಗಿದೆ. ಇಂಥ ಗಣವಿಭಜನೆಗೆ ವರ್ಣಗಣವೆನ್ನಲಾಗುವುದು. ಮಾತ್ರಾವೃತ್ತಗಳು ಕೂಡ ವರ್ಣಮಾತ್ರೆಗಳಿಂದ ಕಟ್ಟಿದವೇ ಆಗಿವೆ. ಇಲ್ಲಿ ಪ್ರತಿ ಪಾದದಲ್ಲಿಯೂ ಇಷ್ಟಿಷ್ಟು ಗಣಗಳೆಂಬ ಸಾಮಾನ್ಯ ನಿಯಮವಿರುತ್ತದೆ. ಖಚಿತವಾದ ಗಣವಿಭಾಗವಿರುತ್ತದೆ. ಕೆಲವು ಕಡೆಗಳಲ್ಲಿ ಲಘು ಗುರುಗಳ ಜೋಡಣೆಯಲ್ಲಿ ಒಂದು ಕ್ರಮವನ್ನೂ, ವಿಧಿನಿಷೇಧಗಳನ್ನೂ ಹೇಳಿರುತ್ತದೆ. ಎರಡರಿಂದ ಎಂಟು ಮಾತ್ರೆಗಳವರೆಗೆ ಮಾತ್ರಾಗಣಗಳ ವ್ಯಾಪ್ತಿಯಿದ್ದರೂ ಕನ್ನಡದಲ್ಲಿ ಮೂರು ನಾಲ್ಕು ಮತ್ತು ಐದು ಮಾತ್ರೆಗಳ ಗಣಗಳೇ ಹೆಚ್ಚು ಬಳಕೆಯಾಗತಕ್ಕವಾಗಿವೆ.

ಅಂಶಗಣಗಳು ಇಂಥ ಯಾವ ನಿರ್ಬಂಧಗಳಿಗೂ ಒಳಗಾದವಲ್ಲ. ಇಲ್ಲಿ ಗಣಗಳನ್ನು ಕಟ್ಟುವ ಅಂಶಗಳು ವರ್ಣಮಾತ್ರಾಪ್ರಮಾಣದ ಬರಿಯ ಅಕ್ಷರಗಳಿಂದಾದವಲ್ಲ. ಎಂದರೆ ಬರಿಯ ಲಘು ಗುರುಗಳಿಂದಾದುವಲ್ಲ. ಅಕ್ಷರಗಳು ಗಣದಿಂದ ಗಣಕ್ಕೆ ಪಾದದಿಂದ ಪಾದಕ್ಕೆ ಹೆಚ್ಚೋ ಕಡಿಮೆಯೋ ಆಗುತ್ತಿರುತ್ತವೆ. ಬ್ರಹ್ಮದಲ್ಲಿ ಮೂರರಿಂದ ನಾಲ್ಕರವರೆಗೆ, ವಿಷ್ಣುವಿನಲ್ಲಿ ನಾಲ್ಕರಿಂದ ಆರರವರೆಗೆ, ರುದ್ರದಲ್ಲಿ ಐದರಿಂದ ಎಂಟರವರೆಗೆ ಮಾತ್ರೆಗಳು ಸೇರಬಹುದಾದ್ದರಿಂದ ಅಕ್ಷರದ ಮಾತ್ರಾಪ್ರಮಾಣ ಪದ್ಯಲಯದ ಆವಶ್ಯಕತೆಗೆ ತಕ್ಕಂತೆ ಹಿಗ್ಗುವುದು ತಗ್ಗುವುದು ಆಗಬಹುದಾಗಿದೆ. ಎಂದರೆ ಒಂದು ಗಣದ ಒಟ್ಟು ವಿಸ್ತಾರವನ್ನು ಇನ್ನೊಂದು ಗಣದ ಒಟ್ಟು ವಿಸ್ತಾರದೊಡನೆ ಸರಿತೂಗಿಸಿ ತಾಳಗತಿಯನ್ನು ಸಾಧಿಸಬಹುದಾಗಿದೆ. ಹ್ರಸ್ವದೀರ್ಘಾಕ್ಷರಗಳನ್ನು ಆವಶ್ಯಕತೆಗೆ ತಕ್ಕಂತೆ ಹಿಗ್ಗಿಸಿ ಕುಗ್ಗಿಸಿ ಲಯಾನುಗುಣವಾಗಿ ಉಚ್ಚಾರಾಂಶಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಹ್ರಸ್ವದೀರ್ಘಾಕ್ಷರಗಳ ಸಂಖ್ಯೆಯಲ್ಲಿಯೂ ವಿನ್ಯಾಸಕ್ರಮದಲ್ಲಿಯೂ ಸ್ವಯಂಚಾಲಿತವಾದ ಸ್ವಾತಂತ್ರ್ಯ,

ಲಯಗತಿಯಂತೆ ಏರ್ಪಡುವ ಗಣವ್ಯವಸ್ಥೆ, ಗಣಗಣಗಳಿಗೆ ಪರಸ್ಪರವಾಗಿ ಸಮಭಾರ–ಇವು ಅಂಶಗಣದ ಲಕ್ಷಣಗಳು. ಕೆಲವು ಸಂದರ್ಭಗಳಲ್ಲಿ ಅಕ್ಷರಗಳ ನ್ಯೂನಾಧಿಕ್ಯಗಳು ಒಂದು ಮಿತಿಗಿಂತ ಹೆಚ್ಚಾಗಿರುವುದುಂಟು, ಆಡುಮಾತು ಬರೆವಣಿಗೆಯಲ್ಲಿ ಬಗೆಬಗೆಯ ರೂಪವ್ಯತ್ಯಾಸಗಳನ್ನು ಪಡೆಯುವುದುಂಟು. ಆಗ ಗಣಗಳು ಗೊತ್ತಾದ ತಾಳಮಾನಕ್ಕೆ ಹೊಂದದೆ ಹೋಗುತ್ತವೆ, ನಿಷಿದ್ಧವಾದ ಅಕ್ಷರವಿನ್ಯಾಸ ಎದುರಾಗುತ್ತದೆ. ಆದರೆ ಅಂಶಛಂದಸ್ಸಿನಲ್ಲಿ ತಾಳಮಾನತೆಯಲ್ಲ. ಗೇಯಮಾನತೆಯೇ ಪ್ರಧಾನವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಶುದ್ಧ ಅಂಶಲಯ ತಾಳದ ಕಟ್ಟು ಮೀರಿದ್ದು (ತಾಲವರ್ಜಿತಾ). ತ್ರಿಪದಿ ಸಾಂಗತ್ಯದಂಥ ಕನ್ನಡದ ಮೆಚ್ಚಿನ ಮಟ್ಟುಗಳನ್ನು ಬೇರೆ ಬೇರೆ ಧಾಟಿಗಳಲ್ಲಿ ಸ್ಥಾಯಿಗಳಲ್ಲಿ ಬೇಕಾದ ಕಡೆ ಸ್ವರದ ಏರಿಳಿತಗಳನ್ನೂ ಒತ್ತುಗಳನ್ನೂ ತಂದು ಹಾಡುವುದನ್ನು ಆಲಿಸಿದರೆ ಇದು ಎಷ್ಟೋ ಕಡೆಗಳಲ್ಲಿ ತಾಳಸಂಗೀತದ ಕಾಲಮಾತ್ರೆಯೂ ಆಲಾಪನೆಯೂ ಮೌನವೂ ಉಚ್ಚಾರಾಂಶಗಳನ್ನು ಹೊಂದಿಸಿಕೊಡುತ್ತವೆ. ಅಂಶಗಣವೇ ದ್ರಾವಿಡ ಲಯವನ್ನು ರೂಪಿಸುವ ಘಟಕ. ನಿಯಮಕ್ಕೆ ಒಳಗಾಗಿರುವಂತೆಯೇ ಅದನ್ನು ಮೀರಿರುವುದು ಕೂಡ ಅದರ ಸಹಜ ಲಕ್ಷಣ.

ಇಲ್ಲಿ ಅಂಶಗಣರಚನೆಯ ಸಾಮಾನ್ಯ ಸ್ವರೂಪವನ್ನು ನಿದರ್ಶಿಸಲು ಮೂರು ಉದಾಹರಣೆಗಳನ್ನು ಕೊಡಲಾಗಿದೆ; ಅಂಶ ಛಂದಸ್ಸಿನಲ್ಲಿ ಅತ್ಯಂತ ಜನಪ್ರಿಯವಾಗಿರುವ ತ್ರಿಪದಿಯಲ್ಲಿ ಒಟ್ಟು 11 ಅಂಶಗಣಗಳಿದ್ದು, 6 ಮತ್ತು 10 ನೆಯವು ಬ್ರಹ್ಮಗಣಗಳೂ ಉಳಿದವು ವಿಷ್ಣುಗಣಗಳೂ ಆಗಿರುತ್ತವೆಯೆಂಬುದು ಸಾಮಾನ್ಯ ನಿಯಮ.

ತೊಟ್ಟಿಲ । ಹೊತುಕೊಂಡು । ತೌರ್ ಬಣ್ಣ । ಉಟುಕೊಂಡು

ಅಪ್ಪ ಕೊ । ಟ್ಟೆಮ್ಮೆ । ಹೊಡಕೊಂಡು । ತವರೂರ ।

ತಿಟ್ಟತ್ತಿ । ತಿರುಗಿ । ನೋಡ್ಯಾಳ ॥ **(ಜನಪದಗೀತೆ)**

ಅಂಶಛಂದಸ್ಸಿನಲ್ಲಿ ತ್ರಿಪದಿಯಂತೆಯೇ ಜನಪ್ರಿಯವೂ ಹಾಡುಗಬ್ಬಗಳಿಗೆ ವಾಹಕವೂ ಆಗಿರುವ ಸಾಂಗತ್ಯದಲ್ಲಿ ಒಟ್ಟು 14 ಅಂಶಗಣಗಳಿದ್ದು 7 ಮತ್ತು 14 ನೆಯವು ಬ್ರಹ್ಮಗಣಗಳೂ ಉಳಿದವು ವಿಷ್ಣುಗಣಗಳೂ ಆಗಿರುತ್ತವೆಯೆಂಬುದು ಸಾಮಾನ್ಯ ನಿಯಮ.

ತನು ಜಿನ । ಗೃಹವೆಂದು । ಮನ ಸಿಂಹ । ಪೀಠವೆಂ ।

ದನುಪಮ ವಾ । ತ್ಮನೆ ಜಿನ । ನೆಂದು ।

ನೆನಹನೆ । ಲ್ಲವ ಬಿಟ್ಟ । ಕಣ್ಮುಚ್ಚಿ । ನೋಳ್ಪಗೆ ।

ಜಿನನಾಥ । ತೋರುವ । ನೊಳಗೆ ॥ **(ಭರತೇಶವೈಭವ)**

ತ್ರಿಪದಿ ಮತ್ತು ಸಾಂಗತ್ಯಗಳನ್ನು ಬಿಟ್ಟರೆ, ಚಂಪೂಕಾವ್ಯಗಳಲ್ಲಿ ಪ್ರಾತಿನಿಧಿಕವಾಗಿ ಬಳಕೆಯಾಗಿರುವ ಪಿರಿಯಕ್ಕರದಲ್ಲಿ ಪ್ರತಿಪಾದದಲ್ಲಿಯೂ 1 ಬ್ರಹ್ಮ 5 ವಿಷ್ಣು 1 ರುದ್ರ ಹೀಗೆ ಅನುಕ್ರಮವಾಗಿ ಗಣಗಳು ಬರುತ್ತವೆ; ವಿಷ್ಣುಗಣಗಳ ಸ್ಥಾನದಲ್ಲಿ ಬ್ರಹ್ಮಗಣಗಳು ಬರುವುದು ಸಾಮಾನ್ಯ.

ಈಗಳ್ । ನೀನಿರ್ದು । ನೋನಿಪೆ । ನೊಂತು ಮ । ಹಾಬಳಂ । ಲಲಿತಾಂಗಂ ।
ವಜ್ರಜಂಘಂ ।

ಭೋಗ । ಭೂಮಿಜಂ । ಶ್ರೀಧರ । ದೇವಂ । ಸುವಿಧಿ ನ । ರಾಧಿಪ । ನಚ್ಯುತೇಂದ್ರ ।

ನಾಗ ರಾಂತರಂ । ನೆಲ ನೆನಿ । ತನಿತುಮಂ । ಚಕ್ರದಿಂ । ಬೆಳಕೆಯ್ಸಿ । ವಜ್ರನಾಭಿ ।

ಯಾಗಿ । ಸರ್ವಾರ್ಥ । ಸಿದ್ಧಿಯೊಳ್ । ಪುಟ್ಟಿ । ಭರತದೊ । ಳಿನ್ನಾದಿ । ದೇವನಪ್ಪೊಂ

। (ಆದಿಪುರಾಣ) (ನೋಡಿ– ಕನ್ನಡ–ಛಂದಸ್ಸು) (ಟಿ.ವಿ.ವಿ.)

**ಅಂಶ – ಚತುರ್ಥಕ ಕಾರ್ಯಕ್ರಮ :** ಅಮೆರಿಕ ಸರ್ಕಾರ 1949ರಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ದೇಶಗಳಿಗೆ ತಾಂತ್ರಿಕ ನೆರವು ನೀಡಲು ಪ್ರಾರಂಭಿಸಿದ ಒಂದು ಕಾರ್ಯಕ್ರಮ. 1949 ಜನವರಿ 20ರಂದು ಪ್ರೆಸಿಡೆಂಟ್ ಹ್ಯಾರಿ ಎಸ್. ಟ್ರೂಮನ್ನರು ಅಮೆರಿಕದ ಕಾಂಗ್ರೆಸ್ಸಿನಲ್ಲಿ ಮಾಡಿದ ಭಾಷಣದ ನಾಲ್ಕನೆಯ ಅಂಶದಲ್ಲಿ ಈ ವಿಷಯ ಪ್ರತಿಪಾದಿತವಾಗಿದ್ದುದರಿಂದ ಈ ಹೆಸರು ಬಂದಿತು. ಅಧ್ಯಕ್ಷ ಟ್ರೂಮನ್ ಹೇಳಿದ್ದೇನೆಂದರೆ 'ನಾಲ್ಕನೆಯದಾಗಿ, ನಮ್ಮ ವಿಜ್ಞಾನದ ಮುನ್ನಡೆ ಮತ್ತು ಔದ್ಯೋಗಿಕಾಭಿವೃದ್ಧಿ ಇವುಗಳ ನೆರವನ್ನು ಅಭಿವೃದ್ಧಿ ಹೊಂದದ ದೇಶಗಳ ಏಳಿಗೆಗೂ ಬೆಳೆವಣಿಗೆಗೂ ಒದಗುವಂತೆ ಮಾಡಲು ನಾವು ಧೃತಿಗೊಂಡು ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ನಡೆಸಬೇಕಾಗಿದೆ. ಶಾಂತಿಪ್ರಿಯರಾದ ಜನಗಳಿಗೆ ನಮ್ಮ ತಾಂತ್ರಿಕ ವಿಜ್ಞಾನದ ಬೊಕ್ಕಸವನ್ನು ತೆರೆದು, ಅವರು ತಮ್ಮ ಉತ್ತಮ ಜೀವನದಾಸೆಗಳನ್ನು ಪೂರೈಸಿಕೊಳ್ಳಲು ನಾವು ನೆರವು ನೀಡಬೇಕು......ತಮ್ಮ ತಾಂತ್ರಿಕ ಜ್ಞಾನದ ಸಂಪನ್ಮೂಲಗಳನ್ನು ಈ ಕೆಲಸಕ್ಕಾಗಿ ಒಟ್ಟುಗೂಡಿಸಲು ಇತರ ದೇಶಗಳನ್ನು ನಾವು ಆಹ್ವಾನಿಸುತ್ತೇವೆ. ಇದು ವಿಶ್ವಸಂಸ್ಥೆ ಮತ್ತು ಅದರ ಎಲ್ಲ ವಿಶಿಷ್ಟ ನಿಯೋಗಗಳ ಮೂಲಕ ಎಲ್ಲೆಲ್ಲಿ ಕಾರ್ಯಗತ ಮಾಡಲು ಸಾಧ್ಯವಾಗುತ್ತದೋ ಅಲ್ಲಲ್ಲಿ ಎಲ್ಲ ರಾಷ್ಟ್ರಗಳೂ ಸಹಕರಿಸಿ ವರ್ತಿಸುವ ಉದ್ಯಮವಾಗಬೇಕು.

ಮುಖ್ಯವಾಗಿ ತಾಂತ್ರಿಕ ನೆರವನ್ನು ಕೊಡುವ ಸಲುವಾಗಿಯೇ ಈ ಕಾರ್ಯಕ್ರಮವೇರ್ಪಟ್ಟಿತು; ದೇಶಾಭಿವೃದ್ಧಿಗಾಗಿ ಮೂಲಧನವನ್ನು ಒದಗಿಸುವುದಕ್ಕಲ್ಲ. 1949ರಲ್ಲಿ ಅಮೆರಿಕದ ಸ್ಟೇಟ್ ಕಾರ್ಯದರ್ಶಿಯವರು ವಿವರಿಸಿದಂತೆ, ಇದು ತಾಂತ್ರಿಕತಜ್ಞರ ವೇತನ ಮತ್ತು ಇತರ ವೆಚ್ಚಗಳನ್ನು ಒಳಗೊಂಡಿದೆ; ಬೃಹತ್ ಪ್ರಮಾಣದಲ್ಲಿ ಯಂತ್ರಸಾಮಗ್ರಿಗಳನ್ನು ಮತ್ತು ಕಚ್ಚಾವಸ್ತುಗಳನ್ನು ಕೊಂಡುಕೊಳ್ಳುವ ವೆಚ್ಚವನ್ನಲ್ಲ. ಆದರೂ ಖಾಸಗಿಯಾಗಿ ಅಮೆರಿಕ ದೇಶದವರು ಅನಭಿವೃದ್ಧಿ ದೇಶಗಳಿಗೆ ಮೂಲಧನವನ್ನು ಒದಗಿಸುವ ಪ್ರವೃತ್ತಿಗೆ ಉತ್ತೇಜನ ಕೊಡುವುದು ಅಂಶ–ಚತುರ್ಥಕ ಉದ್ದೇಶಗಳಲ್ಲೊಂದು.

1949–52ರ ನಡುವೆ ಏಷ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕದ 30 ದೇಶಗಳು ಅಂಶ–ಚತುರ್ಥಕದ ಪ್ರಕಾರ ತಾಂತ್ರಿಕ ಸಹಾಯವನ್ನು ಪಡೆದಿವೆ. ಈ ಕಾರ್ಯಕ್ರಮದ ನೆರವನ್ನು ಪ್ರಥಮತಃ ಪಡೆದ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿತ್ತು.

ಇದನ್ನು ಒಂದು ಕಾನೂನಿನ ಮೂಲಕ ಸ್ಟೇಟ್ ಕಾರ್ಯದರ್ಶಿಯವರು ನಿರ್ವಹಿಸಿದರು. ಈ ಕಾನೂನಿಗೆ ಅಂತಾರಾಷ್ಟ್ರೀಯ ಅಭಿವೃದ್ಧಿ ಕಾನೂನು ಎಂದು ಹೆಸರು. ಇದನ್ನು ಈ ಉದ್ದೇಶಕ್ಕಾಗಿಯೇ 1950ರಲ್ಲಿ ಕಾರ್ಯಗತಗೊಳಿಸಲಾಯಿತು. ವರ್ಷವೊಂದಕ್ಕೆ 50 ದಶಲಕ್ಷ ಡಾಲರ್ ವೆಚ್ಚದಿಂದ ಈ ಕಾರ್ಯಾಚರಣೆ ಪ್ರಾರಂಭವಾಯಿತು.

ಅಂಶ–ಚತುರ್ಥಕ ಕಾರ್ಯಕ್ರಮ ತನ್ನ ಮೂಲ ರೂಪದಲ್ಲಿ ಸು. 3 ವರ್ಷಗಳ ಕಾಲ ಮಾತ್ರ ಜರುಗಿತು. 1952ರಿಂದೀಚೆಗೆ ಅಭಿವೃದ್ಧಿಗೊಳ್ಳದ ದೇಶಗಳಿಗೆ ಅಮೆರಿಕದ ಸಹಾಯ ಪರಸ್ಪರ ಸಂರಕ್ಷಣ ಕಾನೂನಿನ ಪ್ರಕಾರ ಮೂಲ ಧನದ ಎಂದರೆ, ಅಮೆರಿಕದ ಯಂತ್ರಸಾಮಗ್ರಿಗಳನ್ನು ಮತ್ತು ಕಚ್ಚಾವಸ್ತುಗಳನ್ನು ಕೊಳ್ಳಲು ಹಣದ ಸಹಾಯವನ್ನೂ ಒಳಗೊಳ್ಳುವಂತೆ ವಿಸ್ತೃತವಾಯಿತು. 1956ರಿಂದೀಚೆಗೆ ಅಮೆರಿಕ ದೇಶ ಪಬ್ಲಿಕ್ ಲಾ–480 ಎಂಬ ವಿಧಿಯ ಮೂಲಕ (ಇದು ತಮ್ಮಲ್ಲಿ ಅಧಿಕವಾಗಿ ಶೇಖರವಾಗಿರುವ ಕೃಷಿವಸ್ತುಗಳನ್ನು ಹೊರಗೆ ವಿಲೇವಾರಿ ಮಾಡಲು ಅವರು ಬಳಸಿದ ಒಂದು ಕಾನೂನು) ತನ್ನಲ್ಲಿ ಹೆಚ್ಚುವರಿಯಾಗಿರುವ ಗೋಧಿ ಮತ್ತು ಹತ್ತಿಯನ್ನು ಕೊಡುವುದರ ಮೂಲಕ ಸಹಾಯ ಮಾಡಲು ಪ್ರಾರಂಭಿಸಿತು. ತಾಂತ್ರಿಕ ಸಹಾಯ ಮೊದಲು ಅಂತಾರಾಷ್ಟ್ರೀಯ ಸಹಕಾರಾಡಳಿತ, ಆ ಬಳಿಕ ಅಂತಾರಾಷ್ಟ್ರೀಯ ಅಭಿವೃದ್ಧಿ ನಿಯೋಗ–ಇವುಗಳಿಂದ ನಿರ್ವಹಿಸಲ್ಪಟ್ಟು, ಅಭಿವೃದ್ಧಿಗೊಳ್ಳದ ದೇಶಗಳಿಗೆ ಸಹಾಯವನ್ನು ನೀಡಲು ಸುಸಂಘಟಿತವಾದ ಯೋಜನೆಯೊಂದರ ಅಂಗವಾಗಿ ಪರಿಣಮಿಸಿತು.

1950ರಲ್ಲಿ ವಿಶ್ವಸಂಸ್ಥೆ 'ವಿಸ್ತೃತ ತಾಂತ್ರಿಕ ಸಹಾಯ ಕಾರ್ಯಕ್ರಮ'ವನ್ನು ಮೊದಲು ಪ್ರಾರಂಭಿಸಲು ಅಂಶ–ಚತುರ್ಥಕ ಕಾರ್ಯಕ್ರಮ ತಕ್ಕಷ್ಟು ಪ್ರಭಾವವನ್ನು ಬೀರಿತು. ವಿಶ್ವಸಂಸ್ಥೆಯ ಕಾರ್ಯಕ್ರಮಗಳಿಗೆ ಅಮೆರಿಕ ತನ್ನ ಕೊಡುಗೆಯನ್ನು ಅಧಿಕಾಂಶದಲ್ಲಿ ನೀಡುವ ದೇಶವಾಗಿದೆ. ತಮಗಿಂತ ಹೀನಸ್ಥಿತಿಯಲ್ಲಿರುವ ರಾಷ್ಟ್ರಗಳಿಗೆ ಸುಸ್ಥಿತಿಯಲ್ಲಿರುವ ರಾಷ್ಟ್ರಗಳು ಸಾಧ್ಯವಾದಷ್ಟು ಸಹಾಯ ಸಂಪತ್ತಿಯನ್ನು ಒದಗಿಸುವಂತೆ ಅಂಶ–ಚತುರ್ಥಕ ಮೇಲುಪಂಕ್ತಿಯನ್ನು ಹಾಕಿಕೊಟ್ಟಿದೆ. (ಎಚ್.ವಿ.)

**ಅಂಶುಮಂತ :** ಅಯೋಧ್ಯೆಯ ಸಗರ ಚಕ್ರವರ್ತಿಯ ಮೊಮ್ಮಗ. ಸಗರ ಅಶ್ವಮೇಧಯಾಗ ಪ್ರಾರಂಭಿಸಿದಾಗ ಯಾಗಾಶ್ವವನ್ನು ದೇವೇಂದ್ರ ಅಪಹರಿಸಿ ಪಾತಾಳಲೋಕದಲ್ಲಿಟ್ಟನು. ಆ ಅಶ್ವವನ್ನು ತರುವುದಕ್ಕಾಗಿ ಸಗರನ 60,000 ಮಕ್ಕಳು ಪಾತಾಳಕ್ಕೆ ಹೋಗಿ ಅಲ್ಲಿ ಕಪಿಲಮಹರ್ಷಿಯನ್ನು ಕೆಣಕಿ ಅವನ ಕೋಪಾಗ್ನಿಯಲ್ಲಿ ಬೆಂದು ಭಸ್ಮವಾದರು. ಪ್ರಾಜ್ಞನೂ ಸದ್ಗುಣಿಯೂ ಆದ ಅಂಶುಮಂತ ಹೋಗಿ ಆ ಕುದುರೆಯನ್ನು ತಂದು ಯಾಗ ಪೂರ್ಣಗೊಳ್ಳುವಂತೆ ಮಾಡಿದ. ಸಗರ ಸ್ವರ್ಗಸ್ಥನಾದ ಮೇಲೆ ಅಂಶುಮಂತ ಪಟ್ಟಾಭಿಷಿಕ್ತನಾದ. ಇವನ ಅನಂತರ ದಿಲೀಪ, ಭಗೀರಥ ಮುಂತಾದವರು ರಾಜ್ಯವನ್ನು ಆಳಿದರು. (ಎ.ಎಂ.)

**ಅಂಶುವರ್ಮನ್ :** 610–23. ನೇಪಾಳದ ಲಿಚ್ಛವಿ ವಂಶದ ರಾಜನಾದ ಶಿವದೇವನ ಮಹಾಸಾಮಂತ (ಠಾಕುರಿ ರಾಜಪುತ್ರನೆಂದೂ ಠಾಕುರಿ ವಂಶದ ಸಂಸ್ಥಾಪಕನೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಈ ವಂಶ ನೇಪಾಳಕ್ಕೆ 18 ರಾಜರನ್ನು ಕೊಟ್ಟಿತು). 7ನೆಯ ಶತಮಾನದ ಆದಿಭಾಗದಲ್ಲಿ ಆಭೀರರು ಲಿಚ್ಛವಿ ರಾಜ್ಯದ ಮೇಲೆ ದಂಡಯಾತ್ರೆಯನ್ನು ನಡೆಸಿದಾಗ ಅಂಶುವರ್ಮ ಅವರ ವಿರುದ್ಧ ಯುದ್ಧಮಾಡಿ, ಗೆದ್ದು ಶ್ರೇಷ್ಠ ಸೇನಾಪತಿಯೆನಿಸಿಕೊಂಡ. ಇವನ ಕೀರ್ತಿ ಎಲ್ಲ ಕಡೆಯೂ ಪ್ರಸರಿಸಿತು. ಕ್ರಮೇಣ ಇವನೇ ನೇಪಾಳಕ್ಕೆ ರಾಜನಾದ. ಲಿಚ್ಛವಿ ವಂಶದ ರಾಜನ ಮಗಳನ್ನೇ ಮದುವೆ ಮಾಡಿಕೊಂಡು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಮಾನಗೃಹವೇ ನಡೆದುಬಂದ ರಾಜಧಾನಿಯಾಗಿದ್ದರೂ ಕೈಲಾಸಕೂಟವನ್ನು ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡ. ಭಾರತಕ್ಕೆ ಬಂದ ಯುವಾನ್ ಚಾಂಗ್ ಇವನನ್ನು ನೇಪಾಳದ ಖ್ಯಾತಿವೆತ್ತ ದೊರೆಯೆಂದೂ

ಘನವಿದ್ವಾಂಸನೆಂದೂ ಹೇಳುತ್ತಾನೆ. ವ್ಯಾಕರಣವನ್ನು ಬರೆದುದರಿಂದ ಇವನ ಕೀರ್ತಿ ಎಲ್ಲೆಲ್ಲೂ ಹರಡಿತು. ಟಿಬೆಟ್ ರಾಜ್ಯಕ್ಕೆ ದೊರೆಯಾದ ಸ್ರಾನ್‌ತ್ಸಾನ್ ಗಾಂಪೊ, ಅಸ್ಸಾಂ ಮತ್ತು ನೇಪಾಳ ರಾಜ್ಯಗಳನ್ನು ವಶಪಡಿಸಿಕೊಂಡು, ಅಂಶುವರ್ಮನ ಮಗಳನ್ನು ಮದುವೆಯಾದ. ಕ್ರಮೇಣ ನೇಪಾಳ ಟಿಬೆಟ್ಟಿನ ಹತೋಟಿಗೆ ಬಂದುದರಿಂದ ಅಂಶುವರ್ಮ ಟಿಬೆಟ್ ರಾಜನ ಸಾಮಂತನಾಗಿ ಉಳಿಯಬೇಕಾಯಿತು. (ಬಿ.ಎಂ.)

**ಅಕಲಂಕ :** ಸು.7–8ನೆಯ ಶತಮಾನ. ಜೈನ ನ್ಯಾಯ ಹಾಗೂ ತರ್ಕಶಾಸ್ತ್ರಗಳಿಗೆ ಅಮೂಲ್ಯವಾದ ಕೊಡುಗೆ ಸಲ್ಲಿಸಿರುವ ದಾರ್ಶನಿಕರು. ಜನ್ಮಸ್ಥಳ ಮಾನ್ಯಖೇಟ ಎಂದು ಅಧಿಕಾಂಶ ವಿದ್ವಾಂಸರು ಒಪ್ಪಿದ್ದಾರೆ. ತಾವು ಲಘುಹವ್ಯನೆಂಬ ರಾಜನ ಮಗನೆಂದು ತಮ್ಮ 'ರಾಜವಾರ್ತಿಕ'ದ ಪ್ರಥಮ ಅಧ್ಯಾಯದಲ್ಲಿ ಹೇಳಿಕೊಂಡಿದ್ದಾರೆ.

ಆಚಾರ್ಯ ಸಮಂತಭದ್ರರು ತರ್ಕ ಹಾಗೂ ಅನೇಕಾಂತವೇದಗಳಿಗೆ ಹಾಕಿದ ಭದ್ರ ಅಡಿಪಾಯದ ಮೇಲೆ ಇವರು ನ್ಯಾಯದ ಉತ್ತುಂಗ ಹಾಗೂ ಸರ್ವಾಂಗೀಣ ಭವನವನ್ನು ಕೌಶಲ್ಯಪೂರ್ಣವಾಗಿ ನಿರ್ಮಿಸಿದ ತೀಕ್ಷ್ಣಬುದ್ಧಿಯ ತಾರ್ಕಿಕರು. ಆ ಕಾಲದಲ್ಲಿ ಒಂದೆಡೆ ಅದ್ವೈತವಾದಿ ಭರ್ತೃಹರಿ, ಪ್ರಸಿದ್ಧ ಮೀಮಾಂಸಕ ಕುಮಾರಿಲ, ನ್ಯಾಯ ನಿಷ್ಣಾತ ಉದ್ಯೋತಕರ ಪ್ರಭೃತಿ ಮುಂತಾದ ವೈದಿಕ ವಿದ್ವಾಂಸರು ತಮ್ಮ ಮತವನ್ನು ಸಮರ್ಥವಾಗಿ ಮಂಡಿಸುತ್ತಿದ್ದರು. ಮತ್ತೊಂದೆಡೆ ಧರ್ಮಕೀರ್ತಿ ಹಾಗೂ ತರ್ಕಪಟುಗಳೂ ವ್ಯಾಖ್ಯಾಕಾರರೂ ಆಗಿದ್ದ ಅವರ ಶಿಷ್ಯರಾದ ಪ್ರಜ್ಞಾಕರ, ಧರ್ಮೋತ್ತರ ಮುಂತಾದ ಬೌದ್ಧ ತಾರ್ಕಿಕರು ತಮ್ಮ ಮತದ ನಿಷ್ಣಾತ ಪ್ರತಿಪಾದಕರಾಗಿದ್ದರು. ಅದು ಶಾಸ್ತ್ರಾರ್ಥ ಹಾಗೂ ಶಾಸ್ತ್ರ ನಿರ್ಮಾಣದ ಪರಾಕಾಷ್ಠೆಯ ಕಾಲವಾಗಿತ್ತು. ಪ್ರತಿಯೊಬ್ಬ ದಾರ್ಶನಿಕನೂ ತನ್ನ ಮತವನ್ನು ಹೇಗಾದರೂ ಸಮರ್ಥಿಸಿ, ಪ್ರತಿಷ್ಠಾಪಿಸಿ ಮತ್ತೊಂದು ಪಕ್ಷವನ್ನು ನಿರಾಕರಿಸಿ ವಿಜಯಿಯಾಗಲು ಪ್ರಯತ್ನಿಸುತ್ತಿದ್ದರು. ಕ್ಷಣಿಕವಾದ, ನೈರಾತ್ಮ್ಯವಾದ, ಶೂನ್ಯವಾದ, ವಿಜ್ಞಾನವಾದ ಮುಂತಾದ ವಾದಗಳು ಮಂಡಿಸಲ್ಪಡುತ್ತಿದ್ದವು. ಪರಿಸ್ಥಿತಿಯನ್ನು ಅಭ್ಯಾಸ ಮಾಡಿದ ಅಕಲಂಕರು ಎಲ್ಲ ದರ್ಶನಗಳನ್ನೂ ಸೂಕ್ಷ್ಮವಾಗಿ, ಆಳವಾಗಿ ಅಧ್ಯಯನ ಮಾಡಿದರು.

ಇದಕ್ಕಾಗಿ ಕಾಂಚೀ, ನಾಲಂದಾ ಮುಂತಾದ ಪ್ರಸಿದ್ಧ ವಿದ್ಯಾಪೀಠಗಳಲ್ಲಿ ಪ್ರಚ್ಛನ್ನ ವೇಷದಿಂದ ವಿದ್ಯಾರ್ಥಿಯಾಗಿ ಸೇರಿದರು. ಇತರ ಪಕ್ಷಗಳವರು ಸ್ಯಾದ್ವಾದ ಅಥವಾ ಅನೇಕಾಂತ ವಾದದ ಮೇಲೆ ಮಾಡಿದ ಆಕ್ಷೇಪಣೆಗಳನ್ನು ತಾರ್ಕಿಕವಾಗಿ ಸಮರ್ಥವಾಗಿ ನಿವಾರಿಸಿ, ಸ್ಪಷ್ಟಗೊಳಿಸಿದರು, ಹಾಗೂ ಹೊಸ ಸಾಹಿತ್ಯವನ್ನೂ ನಿರ್ಮಾಣ ಮಾಡಿದರು. ರಾಷ್ಟ್ರಕೂಟ, ಪಲ್ಲವ ಮುಂತಾದ ರಾಜವಂಶಗಳವರ ರಾಜಸಭೆಗಳಲ್ಲಿ ವಾದಮಾಡಿ ಜೈನಧರ್ಮದ ಪತಾಕೆಯನ್ನು ಹಾರಿಸಿದರು. ಸೋಂನೆಯ ದೇಶೀಯ ಗಣದ ಆಚಾರ್ಯರಾಗಿದ್ದರು.

ಅಕಲಂಕರು ರಚಿಸಿರುವ ಮಹತ್ವದ ಕೃತಿಗಳಲ್ಲಿ ನಾಲ್ಕು ಕೃತಿಗಳು ನ್ಯಾಯಶಾಸ್ತ್ರವನ್ನು ಕುರಿತದ್ದೇ ಆಗಿವೆ. ಜೈನ ನ್ಯಾಯದ ಮಧ್ಯಕಾಲೀನದ ಸೃಷ್ಟಿಕರ್ತರೆಂದು ಇವರು ಖ್ಯಾತಿ ಪಡೆದಿದ್ದಾರೆ. ಇತಿಹಾಸಕಾರರು ಆ ಕಾಲವನ್ನು ಅಕಲಂಕ ಮಾರ್ಗವೆಂದು ಕರೆದಿದ್ದಾರೆ. ಅಕಲಂಕರ ಕೃತಿಗಳು 8.

1. ನ್ಯಾಯವಿನಿಶ್ಚಯ (ಸ್ವೋಪಜ್ಞ ವೃತ್ತಿ ಸಹಿತ): ಮೂಲ ರಚನೆಯ ಸ್ವತಂತ್ರ ಪ್ರತಿ ಲಭ್ಯವಿಲ್ಲ. ವಾದಿರಾಜ ಸೂರಿಗಳು ಈ ಕೃತಿಯ ಮೇಲೆ ಬರೆದಿರುವ ವಿವರಣ ಎಂಬ ಟೀಕಾ ಗ್ರಂಥ ಲಭ್ಯವಿದೆ. ಇದರಲ್ಲಿ ಪ್ರತ್ಯಕ್ಷ, ಅನುಮಾನ ಮತ್ತು ಪ್ರವಚನ ಎಂಬ ಮೂರು ಪ್ರಕರಣಗಳಿವೆ. ಬೌದ್ಧ, ಸಾಂಖ್ಯ, ನೈಯಮಿತರ ಪ್ರತ್ಯಕ್ಷದ ಲಕ್ಷಣಗಳನ್ನು ಖಂಡಿಸಿ ಅತೀಂದ್ರಿಯ ಪ್ರತ್ಯಕ್ಷದ ಲಕ್ಷಣವನ್ನು ವಿವರಿಸಿದ್ದಾರೆ. ಜೀವ ಮೊದಲಾದವುಗಳ ಸ್ವರೂಪವನ್ನು ವಿವೇಚಿಸಿ, ಚಾರ್ವಾಕ ಮುಂತಾದ ಮತಗಳ ವಿಮರ್ಶೆ ಮಾಡಿ, ಆರ್ಮಸತ್ಯ, ಮೋಕ್ಷದ ಮಾನ್ಯತೆ ಇತ್ಯಾದಿಗಳನ್ನು ಸಮಲೋಚಿಸಿದ್ದಾರೆ.

2. ಸಿದ್ಧಿವಿನಿಶ್ಚಯ : ಪ್ರತ್ಯಕ್ಷ ಸಿದ್ಧಿ, ಪ್ರಮಾಣಾಂತರ ಸಿದ್ಧಿ ಮತ್ತು ಜೀವ ಸಿದ್ಧಿ ಮೊದಲಾದ ಹನ್ನೆರಡು ಪ್ರಸ್ತಾವಗಳುಳ್ಳ ಕೃತಿ. ಮೂಲಕೃತಿ ಲಭ್ಯವಿಲ್ಲ. ಇದರ ಮೇಲೆ ಆಚಾರ್ಯ ಅನಂತವರ್ಮರ ವಿಶಾಲ ಟೀಕೆ ಉಪಲಬ್ಧವಿದೆ. ವಸ್ತುತತ್ತ್ವವನ್ನು ವಿಶ್ಲೇಷಣೆ ಮಾಡುತ್ತ ಅನೇಕಾಂತ ಸಿದ್ಧಾಂತವನ್ನು ಸಮರ್ಥಿಸಿ ಬೇರೆ ಬೇರೆ ದರ್ಶನಗಳ ಮಾನ್ಯತೆಯನ್ನು ಪ್ರಬಲವಾದ ಯುಕ್ತಿಗಳಿಂದ ಖಂಡಿಸಿದ್ದಾರೆ.

3. ಪ್ರಮಾಣ ಸಂಗ್ರಹ : ಇದರಲ್ಲಿ 9 ಪ್ರಸ್ತಾವಗಳಿವೆ ಇದರಲ್ಲಿ. (ಪ್ರಮಾಣ, ನಮ ಮತ್ತು ನಿಕ್ಷೇಪಗಳ ನಿರೂಪಣೆಯನ್ನು ಗಂಭೀರ ಹಾಗೂ ಪ್ರೌಢ ಶೈಲಿಯಲ್ಲಿ ನಿರೂಪಣೆ ಮಾಡಲಾಗಿದೆ). ಸೂತ್ರಾತ್ಮಕ ರಚನೆಗ್ರಂಥದ ವಿಷಯವೂ ಗಹನವಾಗಿದೆ. ಸ್ವೋಪಜ್ಞ ವಿವೃತ್ತಿಯೂ ಇದೆ. ಗದ್ಯ ಪದ್ಯಾತ್ಮಕವಾಗಿದೆ. ಈ ಕೃತಿಯ ಮೇಲೆ ಅನಂತ ವೀರ್ಯಕೃತ ಪ್ರಮಾಣ ಸಂಗ್ರಹ ಭಾಷ್ಯ ಉಪಲಬ್ಧವಿದೆ.

4. ಲಘೀಮ ಸ್ತ್ರಯ: ಪ್ರಮಾನ ಪ್ರವೇಶ, ನಯ ಪ್ರವೇಶ, ಪ್ರವಚನ ಪ್ರವೇಶ, ಎಂಬ ಹೆಸರಿನ ಮೂರು ಪ್ರಕರಣಗಳಿವೆ. ಇದರಲ್ಲಿ ಪ್ರತ್ಯಕ್ಷದ ಸ್ವತಂತ್ರ ಲಕ್ಷಣವನ್ನು ಸ್ಥಿರಗೊಳಿಸಿದ್ದಾರೆ. ತಾರ್ಕಿಕ ಒರೆಗಲ್ಲಿನಿಂದ ಕ್ಷಣಿಕವಾದದ ಖಂಡನೆ ಮಾಡಿದ್ದಾರೆ. ತರ್ಕದ ವಿಷಯ, ಸ್ವರೂಪ, ಉಪಯೋಗ ಮೊದಲಾದವುಗಳನ್ನು ಸ್ಥಿರಗೊಳಿಸಿದ್ದಾರೆ. ಆಚಾರ್ಯರೇ ಬರೆದ ವಿವೃತ್ತಿ ಎಂಬ ಹೆಸರಿನ ಟೀಕೆಯೂ ಇದೆ. 11ನೆಯ ಶತಮಾನದಲ್ಲಿ ಪ್ರಭಾಚಂದ್ರ ಆಚಾರ್ಯರು ಬರೆದ ಲಘೀಮ ಸ್ತ್ರಯಾಲಂಕಾರ ಎಂಬ ಹೆಸರಿನ ವಿಸ್ತಾರವಾದ ಟೀಕೆ ನ್ಯಾಯ ಕುಮುದ ಚಂದ್ರ ಎಂದು ಪ್ರಸಿದ್ಧವಾಗಿದೆ.

5. ಅಪ್ಪಶತಿ : ಸ್ವಾಮಿ ಸಮಂತಭದ್ರರ ದೇವಾಗಮ ಅಥವಾ ಆಪ್ರ ಮೀಮಾಂಸ ಕೃತಿಯ ಸಂಕ್ಷಿಪ್ತ ಗಂಭೀರ ವ್ಯಾಖ್ಯೆ. ಟೀಕೆಯ ಪರಿಮಾಣ 800 ಶ್ಲೋಕಗಳು. ಪೂರ್ವಾಪರ ವಿಚಾರ ವಿಮರ್ಶೆಯೊಡನೆ ತರ್ಕಬದ್ಧವಾದ ಪ್ರತಿಭೆ ಇದರಲ್ಲಿ ಗೋಚರಿಸುತ್ತದೆ. ಈ ಟೀಕೆಯ ಮೇಲೆ ಆಚಾರ್ಯ ವಿದ್ಯಾನಂದರು ಎಂಟು ಸಾವಿರ ಶ್ಲೋಕ ಪರಿಮಾಣವುಳ್ಳ ಅಷ್ಟಸಹಸ್ರೀ ಎಂಬ ವಿಸ್ತಾರವಾದ ಟೀಕೆ ರಚಿಸಿದ್ದಾರೆ.

6. ತತ್ತ್ವಾರ್ಥ ರಾಜವಾರ್ತಿಕ : ಆಚಾರ್ಯ ಉಮಾಸ್ವಾಮಿಗಳ ತತ್ತ್ವಾರ್ಥ ಸೂತ್ರಕ್ಕೆ ಬರೆದ ಭಾಷ್ಯ. ತತ್ತ್ವಾರ್ಥಕ್ಕೆ ಸಂಬಂಧಿಸಿದ ಉಪಲಬ್ಧ ಟೀಕೆಗಳಲ್ಲಿ ಸರ್ವಶ್ರೇಷ್ಠವಾದುದು. ಅನೇಕಾಂತ ಸಿದ್ಧಾಂತ ಅನುಸರಿಸಲ್ಪಟ್ಟು ಸಂದರ್ಭೋಚಿತವಾಗಿ ಬೇರೆ ಬೇರೆ ದರ್ಶನಗಳಿಗೆ ಸಂಬಂಧಿಸಿದ ವಿಷಯಗಳ ಗಂಭೀರ ಚರ್ಚೆ ಇದೆ. ಭಾಷೆ ಸರಳ ಹಾಗೂ ಸರಸವಾಗಿದೆ.

7. ಸ್ವರೂಪ ಸಂಬೋಧನೆ : 25 ಪದ್ಯಗಳ ಚಿಕ್ಕ ಕೃತಿ. ಅನೇಕಾಂತ ಶೈಲಿಯಿಂದ ವಸ್ತುತತ್ತ್ವ ವಿವೇಚಿಸಲಾಗಿದೆ. ಕೆಲವು ವಿದ್ವಾಂಸರು ಇದನ್ನು ಆಚಾರ್ಯ ಮಹಾಸೇನರ ರಚನೆ ಎಂದು ಹೇಳುವರು.

8. ಅಕಲಂಕ ಸ್ತೋತ್ರ : 16 ಪದ್ಯಗಳುಳ್ಳ ಸ್ತೋತ್ರಗ್ರಂಥ. ಇದರಲ್ಲಿ ಮಹಾದೇವ, ಶಂಕರ, ವಿಷ್ಣು, ಬ್ರಹ್ಮ ಹಾಗೂ ಬುದ್ಧರ ಸಂಬಂಧದಲ್ಲಿ, ಬಳಕೆಯಲ್ಲಿರುವ ಮಾನ್ಯತೆಗಳನ್ನು ಸಮಾಲೋಚಿಸಿ ವೀತರಾಗ, ನಿಷ್ಕಲಂಕ, ಸರ್ವಜ್ಞ ಹಾಗೂ ಹಿತೋಪದೇಶಿ ಪರಮಾತ್ಮನ ಸ್ತುತಿ ಮಾಡಲಾಗಿದೆ.

ಅಕಲಂಕರ ತತ್ತ್ವಾರ್ಥ ಭಾಷ್ಯ ಮೊದಲಾದ ಕೃತಿಗಳು ಭಾರತೀಯ ದರ್ಶನ ಶಾಸ್ತ್ರದ ಬಹುಮೂಲ್ಯ ರತ್ನಗಳು. ಜೈನ ನ್ಯಾಯಕ್ಕೆ ಇವರು ನೀಡಿದ ರೂಪರೇಷೆ ಮತ್ತು ದಿಕ್ಕನ್ನು ಮುಂದಿನ ಎಲ್ಲ ಜೈನ ತಾರ್ಕಿಕರೂ ಅನುಸರಿಸಿದರು. ಸೂತ್ರರೂಪದಲ್ಲಿರುವ ಇವರ ಹೇಳಿಕೆಗಳನ್ನು ತಮ್ಮ ವಿಸ್ತಾರವಾದ ವಿವರಣೆಗಳಿಂದ ಹೆಚ್ಚು ಸ್ಪಷ್ಟಗೊಳಿಸಿದರು.

ಶ್ರವಣಬೆಳಗೊಳ ಹಾಗೂ ಕರ್ನಾಟಕದ ನಾನಾಭಾಗಗಳಲ್ಲಿ ದೊರೆತಿರುವ ನೂರಾರು ಶಾಸನಗಳ ಆದಿಯಲ್ಲಿರುವ ಈ ಕೆಳಕಂಡ ಪ್ರಾರ್ಥನಾ ಶ್ಲೋಕದ ರಚನೆ ಅಕಲಂಕಾಚಾರ್ಯರದೇ ಆಗಿದೆ:

ಶ್ರೀಮತ್ಪರ ಗಂಭೀರಸ್ಯಾದ್ವಾದಾಮೋಘಲಾಂಛನಮ್ ।
ಜೀಯಾತ್ ತ್ರೈಲೋಕ್ಯನಾಥ ಸ್ವಶಾಸನಂ ಜಿನಶಾಸನಮ್ ॥

(*)

**ಅಕಶೇರುಕಗಳು :** ಕಶೇರು (ಬೆನ್ನೆಲುಬು) ಇಲ್ಲದ ಪ್ರಾಣಿಗಳು (ಇನ್‌ವರ್ಟಿಬ್ರೇಟ್ಸ್). ಅಕಶೇರುಕವೆಂಬ ಪದದ ಪರಿಮಿತಿಯಲ್ಲಿ ಪ್ರಪಂಚದಲ್ಲಿರುವ ಪ್ರಾಣಿ ಸಾಮ್ರಾಜ್ಯದ ಶೇ.95ರಷ್ಟು ಪ್ರಾಣಿಗಳು ಸೇರುತ್ತವೆ. ಇವುಗಳಲ್ಲಿ ಹೆಚ್ಚಿನವು ಭೂವಾಸಿಗಳು. ಜಲವಾಸಿಗಳು ಭೂವಾಸಿಗಳಿಗಿಂತ ಕಡಿಮೆಯೆನ್ನಬಹುದಾದರೂ ವೈವಿಧ್ಯದಲ್ಲಿ ಮಾತ್ರ ಭೂವಾಸಿಗಳಿಗಿಂತ ಜಲವಾಸಿಗಳದೇ ಮೇಲುಗೈ.

ಒಂದು ದಶಲಕ್ಷಕ್ಕಿಂತ ಹೆಚ್ಚಾಗಿರುವ ಈ ಪ್ರಾಣಿ ಪ್ರಭೇದಗಳನ್ನು ವಿಂಗಡಿಸುವುದು ಬಹಳ ಕಷ್ಟ. ಏಕೆಂದರೆ ವೈಜ್ಞಾನಿಕ ವರ್ಗೀಕರಣಕ್ಕೆ ವೈಜ್ಞಾನಿಕ ತತ್ವಗಳ ಆಧಾರವಿರಬೇಕು. ಪ್ರಪ್ರಥಮವಾಗಿ ಅರಿಸ್ಟಾಟಲ್ ಈ ಪ್ರಾಣಿವರ್ಗ ವನ್ನು ಎರಡು ಭಾಗಗಳಾಗಿ ವಿಂಗಡಿಸಿದ. ಆತನ ವರ್ಗೀಕರಣ ದಂತೆ, ಅಕಶೇರುಕ ಗಳು ರಕ್ತರಹಿತ ಜೀವಿಗಳು. ರಕ್ತರಹಿತ ಹಾಗೂ ರಕ್ತವುಳ್ಳ ಜೀವಿಗಳನ್ನು ಪುನಃ ನಾನಾ ಶಾಖೆಗಳನ್ನಾಗಿ ವಿಭಾಗಿಸಲಾಗಿದೆ. ಲಿನೀಯಸ್ ಎಂಬುವನು ಜೀವಪ್ರಭೇದಗಳನ್ನು ಅಕಶೇರುಕಗಳು ಮತ್ತು ಕಶೇರುಕಗಳು ಎಂದು ವಿಭಾಗಿಸಿ ಅಕಶೇರುಕ ಜೀವಿಗಳನ್ನು ಜಂತುಹುಳುಗಳ ವರ್ಗ, ಕೀಟಗಳ ವರ್ಗ ಎಂದು ಎರಡು ಭಾಗಗ ಳಾಗಿ ವಿಂಗಡಿಸಿದ. ಹತ್ತೊಂಬತ್ತ ನೆಯ ಶತಮಾನದಲ್ಲಿ ಲೆಮಾರ್ಕ್ ಅಕಶೇರುಕ ಜೀವಿಗಳನ್ನು ಅವುಗಳ ಬಾಹ್ಯರಚನಾಧಾರಗಳ ಮೇಲೆ ಹತ್ತು ವರ್ಗಗಳಾಗಿ ವಿಂಗಡಿಸಿದ್ದಾನೆ. ಈ ಹತ್ತು ವರ್ಗಗಳೆಂದರೆ 1. ಇನ್ ಫ್ಯೂಜೋರಿಯ 2. ಪಾಲಿಪ್ಸ್ 3. ರೇಡಿಯೇಟ್ಸ್ 4. ವರ್ಮ್ಸ್ 5. ವಲಯವಂತಗಳು 6. ಅರಾಕ್ನಿಡ 7. ಕ್ರಸ್ಟೇಷಿಯ 8. ಕೀಟಗಳು 9. ಸಿರಿಪೀಡಿಯ 10. ಮೃದ್ವಂಗಿಗಳು (ಮಾಲಸ್ಕ). ಲೆಮಾರ್ಕ್‌ನ ಸಮಕಾಲೀನನಾದ ಕೂವಿಯೋ ಪ್ರಾಣಿ ಪ್ರಪಂಚವನ್ನು ಕಶೇರುಕಗಳು, ಆರ್ಟಿಕ್ಯುಲೇಟ, ಮೃದ್ವಂಗಿಗಳು, ರೇಡಿಯೇಟ ಎಂಬ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದ. ಆದರೆ ಇವನ ಮೊದಲ ಮೂರು ಭಾಗಗಳು ಬಳಕೆಯಲ್ಲುಳಿದರೂ ನಾಲ್ಕನೆಯ ಭಾಗ ಬದಲಾಗಲೇ ಬೇಕಾಯಿತು. ಕೂವಿಯೋ ಆದಮೇಲೆ ಬಂದ ವಿಜ್ಞಾನಿಗಳು ಅಕಶೇರುಕ ಗಳ ವರ್ಗೀಕರಣಕ್ಕೆ ಯತ್ನಿಸಿ ದರು. ಜರ್ಮನಿ ದೇಶದ ಜೀವವಿಜ್ಞಾನಿಗಳಾದ ಶೀಬಾಲ್ಡ್ ಮತ್ತು ಲ್ಯೂಕರ್ಟ್ ಅವರಲ್ಲಿ ಮುಖ್ಯರು. ಶೀಬಾಲ್ಡ್ ಏಕ ಕೋಶಿಕ ಜೀವಿಗಳನ್ನು ಕಂಡು ಹಿಡಿದು ಅವುಗಳಿಗಾಗಿಯೇ ಪ್ರೋಟೋಜೋವ ಎಂಬ ವಂಶವನ್ನು ಹೆಸರಿಸುತ್ತಾನೆ. ಜೊತೆಗೆ ಸಂಧಿಪದಿಗಳ

ವರ್ಗವನ್ನು ಊರ್ಜಿತ ಗೊಳಿ ಸುತ್ತಾನೆ. ಲ್ಯೂಕರ್ಟ್ ರೇಡಿಯೇಟ ವಿಭಾಗವನ್ನು ಸೀಲೆಂಟರೇಟ ಮತ್ತು ಎಕೈನೊಡರ್ಮೆಟ ಎಂಬ ಎರಡು ಭಾಗಗಳಾಗಿ ವಿಭಾಗಿಸಿದ. ಮುಂದೆ ಬಂದ ವಿಜ್ಞಾನಿಗಳು ಬ್ರಾಕಿಯೊಪೋಡ, ಬ್ರಯೋಜೋವ ಹಾಗು ಟ್ಯೂನಿಕೇಟ್ ವರ್ಗಗಳನ್ನು ಮೃದ್ವಂಗಿಗಳ ಗುಂಪಿನಿಂದ ಬೇರ್ಪಡಿಸಿದರು. ಮಿಲ್ನೇ ಎಡ್ವರ್ಡ್ ಎಂಬವನು ಟ್ಯೂನಿಕೇಟ ಜೀವಿಗಳಿಗೆ ಟ್ಯೂನಿಕೇಟ್ ಎಂಬ ಪ್ರತ್ಯೇಕ ವಂಶದ ಅರ್ಹತೆಯನ್ನು ಕೊಟ್ಟ. ಕ್ಲಾಸ್ ಎಂಬ ಜರ್ಮನ್ ವಿಜ್ಞಾನಿ ಇಡೀ ಪ್ರಾಣಿ ಪ್ರಪಂಚವನ್ನು 1. ಪ್ರೋಟೋ ಜೋವ




**ಕೆಲವು ಅಕಶೇರುಕಗಳು**
**1. ಅಮೀಬ 2. ಸ್ಪಂಜ್ 3. ಹೈಡ್ರ 4. ಲಾಡಿಹುಳು 5. ಜಂತುಹುಳು 6. ಎರೆಹುಳು 7. ಚೇಳು 8. ಚಿಟ್ಟೆ 9. ಲಾಲಿಗೊ 10. ಬಸವನಹುಳು 11. ನಕ್ಷತ್ರ ಮೀನು**

2. ಸೀಲೆಂಟರೇಟ 3. ಎಕೈನೊಡರ್ಮೆಟಾ 4. ವರ್ಮಿಸ್ 5. ಆರ್ತ್ರಾಪೊಡ 6. ಮೃದ್ವಂಗಿಗಳು (ಮಾಲಸ್ಕ) 7. ಮೆಲಸ್ಕಾಯಿಡಿಯ 8. ಟ್ಯೂನಿಕೇಟ್ 9. ಕಶೇರುಕ ಎಂಬ ಒಂಬತ್ತು ವರ್ಗಗಳನ್ನಾಗಿ ವಿಂಗಡಿಸಿದನು. ಮುಂದೆ ಬಂದ ವಿಜ್ಞಾನಿಗಳು ಪೋರಿಫೆರ ಮತ್ತು ಹೆಮಿಕಾರ್ಡೇಟ ವಂಶಗಳನ್ನು ಕ್ಲಾಸ್‌ನ ವಿಭಜನೆಗೆ ಸೇರಿದರು. ಮುಂದೆ ವರ್ಮಿಸ್ ಗುಂಪನ್ನು, ಪ್ಲಾಟಿಹೆಲ್‌ಮೆನ್‌ಥೀಸ್, ನ್ಯಾಮರಟೈನ, ಆಸ್ಕಿಹೆಲ ಮೆನ್‌ಥೀಸ್ ಹಾಗೂ ಖಂಡಗಳುಳ್ಳ ಪ್ರಾಣಿಗಳಾದ ಆನೆಲಿಡ ಎಂಬ ವಂಶಗಳನ್ನು ಪ್ರತಿಪಾದಿಸುತ್ತಾರೆ. ಅತ್ಯಂತ ಆಧುನಿಕ ಅಭಿಪ್ರಾಯದಂತೆ ಇಂದು ಪ್ರಾಣಿ ಪ್ರಪಂಚದಲ್ಲಿ 20 ರಿಂದ 30 ವಂಶಗಳನ್ನು ಗುರುತಿಸಬಹುದು. ಆದುದರಿಂದ ಈ ವರ್ಗೀಕರಣದಲ್ಲಿ ಎಲ್ಲದರಲ್ಲಿಯೂ ಒಂದೇ ರೀತಿಯ ಸಾಮ್ಯವನ್ನು ಹುಡುಕುವುದು ಕಷ್ಟ ಇಂದು ಹೈಮನ್ ಎಂಬಾಕೆಯ ವರ್ಗೀಕರಣ ಪ್ರಚಲಿತವಾಗಿದೆ.

1. ಪ್ರೋಟೋಜೋವ 2. ಮೀಸೋಜೋವ 3. ಪೋರಿಫೆರ 4. ನೈಡೇರಿಯ 5. ಟಿನೊಫೊರ 6. ಪ್ಲಾಟಿಹೆಲ್‌ಮನ್‌ಥಿಸ್ 7. ರಿಂಕೊಸೀಲ್ 8. ಎಂಟೊಪ್ರಾಕ್ಟ 9. ಆಕ್ಯಾಂತೊ ಕಿಫಾಲಾ 10. ಆಸ್ಕಿಹೆಲ್‌ಮೆನ್‌ಥೀಸ್ 11. ಮೃದ್ವಂಗಿಗಳು (ಮಾಲಸ್ಕ) 12. ಸೈಫನ್‌ಕುಲಿಡ 13. ಎಕಿಯುರಾಯ್ಡಿಯ 14. ಆನೆಲಿಡ 15. ಆರ್ಥ್ರೊಪೋಡ 16. ಎಕ್ಟೊಪ್ರಾಕ್ಟ 17. ಪೋರೋನಿಡ 18. ಬ್ರಾಕಿಯೊಪೊಡ 19. ಎಕೈನೋಡರ್‌ಮ್ಯೇಟ 20. ಪೋಗೊನೊ ಫೋರ 21. ಕೀಟೋಗ್ನಾಥ ಎಂಬ 21 ವಂಶಗಳಾಗಿ ಆಕೆ ವರ್ಗೀಕರಿಸಿರುವಳು. ಅಕಶೇರುಕ ಪ್ರಾಣಿಗಳಿಗೆ ಸಂಬಂಧಿಸಿದ ಈ ವರ್ಗೀಕರಣವನ್ನು ಸಾಮಾನ್ಯವಾಗಿ ಇಂದು ಬಹಳಷ್ಟು ವಿಜ್ಞಾನಿಗಳು ಒಪ್ಪಿಕೊಳ್ಳುತ್ತಾರೆ.

ಮೇಲ್ಕಂಡ ವರ್ಗೀಕರಣ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಹೆಕೆಲ್ ಎಂಬವನು ಪ್ರಾಣಿಪ್ರಪಂಚವನ್ನು ಎರಡು ಭಾಗಗಳಾಗಿ ವಿಭಾಗಿಸಿದ್ದ. ಈತನ ಪ್ರಕಾರ ಏಕ ಕೋಶಜೀವಿಗಳೇ ಒಂದು ಪಂಗಡ. ಏಕಕೋಶ ಜೀವಿಗಳನ್ನು ಪ್ರೋಟೋಜೋವ ಎಂತಲೂ ಬಹುಕೋಶ ಜೀವಿಗಳನ್ನು ಮೆಟಜೋವ ಎಂತಲೂ ಆತ ಹೆಸರಿಸಿದ್ದ.

ಮೆಟಜೋವ ಪಂಗಡವನ್ನು ಅವುಗಳ ಅಂತಸ್ತಿಗೆ ತಕ್ಕಂತೆ ಮೂರು ವಿಭಾಗಗಳಾಗಿ ವಿಂಗಡಿಸಿ ಪ್ರಥಮ ವಿಭಾಗವನ್ನು ಮಿಸೊಜೋವವೆಂದು ಕರೆಯಲಾಯಿತು. ಇದರಲ್ಲಿ 50 ಪ್ರಭೇದಗಳಿವೆ. ಇವು ಅತ್ಯಂತ ಸೂಕ್ಷ್ಮ ಜೀವಿಗಳಾಗಿದ್ದು ಇವುಗಳ ಶರೀರ ಜೀವಕೋಶಗಳ ಒಂದೇ ಪದರವನ್ನು ಹೊಂದಿದೆ. ಇವುಗಳ ಜೀವಕೋಶ ಏಕಕೋಶ ಜೀವಿಗಳಾದ ಪ್ರೋಟೋಜೋವಗಳಂತೆ ತಮ್ಮ ಕ್ರಿಯೆಗಳನ್ನು ನಡೆಸುತ್ತದೆ.

ಎರಡನೆಯ ವಿಭಾಗ ಪ್ಯಾರಾಜೋವ. ಈ ವಿಭಾಗದಲ್ಲಿ 5,000 ಪ್ರಭೇದಗಳಿವೆ. ಇವುಗಳೇ ಸ್ಪಂಜು ಪ್ರಾಣಿಗಳು. ಇವನ್ನು ಪೊರಿಫೆರ ಎಂಬ ವಂಶಕ್ಕೆ ಸೇರಿಸಲಾಗಿದೆ. ಮೂಲಭೂತವಾಗಿ ಈ ಪ್ರಾಣಿಗಳು ಕೆಲವೇ ರೀತಿಯ ಜೀವಕೋಶಗಳನ್ನು ಹೊಂದಿವೆ. ಇವುಗಳಲ್ಲಿ ಅತಿ ಮುಖ್ಯವಾದುವೆಂದರೆ ಅಮಿಬಾಯಿಡ್ ಕೋಶಗಳು. ಕೊರಳುಪಟ್ಟಿ ಹಾಗೂ ಶಿಲಿಕೆಗಳುಳ್ಳ ಕೋಶಗಳು. ಅಮಿಬಾಯಿಡ್ ಕೋಶಗಳು ಮುಂದೆ ವಿಭೇದೀಕರಣ ಕ್ಕೊಳಗಾಗಿ ಪ್ರಬುದ್ಧ ಸ್ಪಂಜು ಪ್ರಾಣಿಯ ವಿವಿಧ ಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತವೆ. ಈ ಪ್ರಾಣಿಗಳಲ್ಲಿ ಜೀವಕೋಶಗಳು ಬಹಳ ಕನಿಷ್ಠಮಟ್ಟದಲ್ಲಿ ತಮ್ಮ ಹೊಂದಾಣಿಕೆಯನ್ನು ಪ್ರದರ್ಶಿಸುತ್ತವೆ. ಜೀವಕೋಶಗಳು ಪ್ರಾಣಿಯ ಶರೀರದಿಂದ ಅತಿ ಸುಲಭವಾಗಿ ಬೇರ್ಪಟ್ಟು ಶರೀರದ ಬೇರೆಕಡೆಗೆ ಕಾಣಬಹುದು. ಹೀಗಾಗಿ ಈ ಪ್ರಾಣಿಗಳಲ್ಲಿ ನಿಜವಾದ ಅಂಗಾಂಶಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಇವುಗಳ ಶರೀರವನ್ನು ಜೀವಕೋಶಗಳ ಸಮುದಾಯ ಮಾತ್ರವೆಂದು ಹೇಳಬಹುದು.

ಮೂರನೆಯ ವಿಭಾಗವೇ ಯೂಮೆಟಜೋವ. ಇದರಲ್ಲಿ ಜೀವ ಪ್ರಭೇದದ ಎಲ್ಲ ವಂಶಗಳೂ ಸೇರುತ್ತವೆ. ಈ ಎಲ್ಲ ವಂಶಗಳಲ್ಲಿಯೂ ಜೀವಕೋಶಗಳು ವಿಭೇದೀಕರಣ ಕ್ಕೊಳಪಟ್ಟು ಅತ್ಯಂತ ಉನ್ನತ ಹಾಗು ಕ್ಲಿಷ್ಟ ಅವಸ್ಥೆಗಳನ್ನು ತಲುಪಿರುವುದು ಕಂಡುಬರುತ್ತದೆ. ಉದಾಹರಣೆಗೆ, ನರಮಂಡಲದ ಕೋಶಗಳು, ಮಾಂಸಖಂಡದ ಕೋಶಗಳು–ಇತ್ಯಾದಿ. ಈ ಜೀವಕೋಶಗಳು ನಿರ್ದಿಷ್ಟವಾದ ಅಂಗಕಟ್ಟು ಹಾಗೂ ಅಂಗಗಳಾಗಿರುವುದನ್ನು ಕಾಣಬಹುದು. ಯೂಮೆಟಜೋವ ಪಂಗಡದ ಅತ್ಯಂತ ಕೆಳ ದರ್ಜೆಯ ವಂಶವೆಂದರೆ ರೇಡಿಯಲ್ ಸಿಮೆಟ್ರಿಯನ್ನು ಹೊಂದಿರುವ ಸೀಲೆಂಟರೇಟ ವಂಶ.

ಈ ಎಲ್ಲ ವಂಶಗಳ ಉಗಮ ಇಂದಿಗೂ ಸರಿಯಾಗಿ ತಿಳಿದುಬಂದಿಲ್ಲ. ಏಕೆಂದರೆ ಈ ಜೀವಿಗಳ ಪ್ರಾಚೀನ ಅವಶೇಷಗಳು ಸಾಕಷ್ಟು ಮಟ್ಟಿಗೆ ದೊರೆತಿಲ್ಲ. ಮೃದುದೇಹ ಹೊಂದಿದ್ದ ಈ ಜೀವಿಗಳ ಅವಶೇಷಗಳು ಭೂಮಿಯಲ್ಲಿ ಉಳಿಯಲಾರದೆ ಕರಗಿಹೋಗಿವೆ. ಜೀವಪ್ರಭೇದದ ಕೆಲವು ಮುಖ್ಯ ವಂಶದ ಜೀವಿಗಳ ಅವಶೇಷಗಳು ಕೇಂಬ್ರಿಯನ್ ಕಾಲದಿಂದ ಸಿಕ್ಕಿವೆ. ಹೀಗೆ ಸಿಕ್ಕಿರುವ ಪಳೆಯುಳಿಕೆಗಳ ಆಧಾರದಿಂದ ನಾವು ಒಂದು ವಂಶದ ಜೀವಿಗಳಿಗೂ ಮತ್ತೊಂದು ವಂಶದ ಜೀವಿಗಳಿಗೂ ಇರುವ ಸಾಮ್ಯ ಹಾಗು ವ್ಯತ್ಯಾಸಗಳನ್ನು ತಿಳಿದು ಅವುಗಳಿಗಿರುವ ಸಂಬಂಧವನ್ನು ಕಂಡುಕೊಳ್ಳಬೇಕಾಗಿದೆ. ಹ್ಯಾಟಚೆಕ್ (1888) ಈ ಜೀವಿಗಳ ವಂಶಾವಳಿಯನ್ನು ಎರಡು ದಾರಿಗಳಲ್ಲಿ ಗುರುತಿಸುತ್ತಾನೆ. ಈ ಎರಡು ದಾರಿಗಳನ್ನು ಮುಖ್ಯವಾಗಿ ಆ ಜೀವಿಗಳ ಕೇಂದ್ರ ನರಮಂಡಲದ ಬೆಳವಣಿಗೆಯ ಸಹಾಯದಿಂದ ಕಂಡುಕೊಳ್ಳಲಾಗಿದೆ. ದ್ವಿಪಾರ್ಶ್ವಸಮಾಂಗತೆಯನ್ನು ಹೊಂದಿರುವ ಮೆಟಜೋವ ಜೀವಿಗಳಲ್ಲಿ ನರಮಂಡಲ ಎರಡು ರೀತಿಯದಾಗಿದೆ. ಒಂದನೆಯ ರೀತಿಯ ನರಮಂಡಲ ಜೀವಿಯ ಅಧೋಭಾಗದಲ್ಲಿದ್ದರೆ, ಎರಡನೆಯ ರೀತಿಯದು ಜೀವಿಯ ಊರ್ಧ್ವಭಾಗದಲ್ಲಿದೆ. ಈ ರೀತಿಯ ಇಬ್ಬಗೆಯ ಬೆಳವಣಿಗೆಯನ್ನು ಭ್ರೂಣದ ಬೆಳವಣಿಗೆಯ ಪ್ರಥಮ ಹಂತಗಳಲ್ಲಿ ಕಾಣಬಹುದು. ಈ ವ್ಯತ್ಯಾಸಕ್ಕೆ ಬ್ಲಾಸ್ಟೊಪೋರ್ ಎಂಬ ರಂಧ್ರ ಮುಚ್ಚಿಕೊಳ್ಳುವುದೇ ಕಾರಣ. ಈ ರಂಧ್ರ ಯಾವಾಗಲೂ ಭ್ರೂಣದ ಒಂದು ಕೊನೆಯಿಂದ ಮುಚ್ಚಿಕೊಳ್ಳಲಾರಂಭಿಸುತ್ತದೆ.

ಆನೆಲಿಡ ವಂಶದ ಪ್ರಾಣಿಗಳಲ್ಲಿ ಈ ರಂಧ್ರ ಉದ್ದವಾದ ತೆರೆಯಂತಾಗಿ ಭ್ರೂಣದ ಅಧೋಭಾಗದಲ್ಲಿ ಒಂದು ಗೆರೆ ಇದ್ದಂತೆ ಕಂಡುಬರುತ್ತದೆ. ಇದು ಹಿಂದಿನ ತುದಿಯ ಭಾಗದಿಂದ ಮುಚ್ಚಿಕೊಳ್ಳಲಾರಂಭಿಸಿ ಮುಂದುವರಿಯುತ್ತ ಬಂದು ಕೊನೆಗೆ ಮುಂಭಾಗದಲ್ಲಿ ಉಳಿದುಕೊಂಡು ಮುಂದೆ ಜೀವಿಯ ಬಾಯಿಯಾಗುತ್ತದೆ. ಈ ರೀತಿಯ ಭ್ರೂಣ ಬೆಳವಣಿಗೆಯನ್ನು ಹೊಂದಿರುವ ಎಲ್ಲ ಜೀವಿಗಳನ್ನೂ ಪ್ರೋಟೊಸ್ಟೋಮಿಯ ಎಂಬ ಗುಂಪಿಗೆ ಸೇರಿಸಲಾಗಿದೆ. ಇಲ್ಲಿ ಬ್ಲಾಸ್ಟೊಪೋರ್ ಪ್ರಬುದ್ಧ ಜೀವಿಯ ಬಾಯಾಗುತ್ತದೆ.

ಈ ಜೀವಿಯಲ್ಲಿ ಆಸನದ್ವಾರ ಹೊರಚರ್ಮದ ಸಹಾಯದಿಂದ ಮುಂದೆ ಪ್ರತ್ಯೇಕವಾಗಿ ಉದಯವಾಗುತ್ತದೆ. ಪ್ರೋಟೊಸ್ಟೋಮಿಯ ಗುಂಪಿಗೆ ಸೇರಿದ ಜೀವಿಗಳಲ್ಲಿ ಕೆಲವು ತಮ್ಮ ಮೊಟ್ಟೆಗಳಲ್ಲಿ ಯೋಕ್ ಪದಾರ್ಥಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹೊಂದಿವೆ. ಉದಾಹರಣೆಗೆ, ಕೀಟವರ್ಗ ಹಾಗು ಅರ್ಯಾಕ್ನಿಡ. ಈ ಜೀವಿಗಳಲ್ಲಿ ಒಳಚರ್ಮ ಗ್ಯಾಸ್ಟ್ರುಲೇಷನ್ನಿನಿಂದ ಉತ್ಪತ್ತಿಯಾಗುವುದಿಲ್ಲ. ಆದುದರಿಂದ ಈ ಜೀವಿಗಳಲ್ಲಿ ಬ್ಲಾಸ್ಟೊಪೋರ್ ಇಲ್ಲ. ಇವುಗಳು ಪ್ರೊಟೊಸ್ಟೋಮಿಯ ಗುಂಪಿಗೆ ಹೇಗೆ ಸೇರಿವೆಯೆಂದರೆ ಅವುಗಳ ಶರೀರ ಒಳರಚನೆಗೂ ಆನೆಲಿಡ ಜೀವಿಗಳ ಶರೀರದ ಒಳರಚನೆಗೂ ಅತ್ಯಂತ ಹೆಚ್ಚಿನ ಸಾಮ್ಯ ಹಾಗೂ ಸಂಬಂಧವಿದೆ.

ಇನ್ನುಳಿದ ದ್ವಿಪಾರ್ಶ್ವಸಮಾಂಗತೆಯುಳ್ಳ ಜೀವಿಗಳ ಭ್ರೂಣದಲ್ಲಿ ಬ್ಲಾಸ್ಟೊಪೋರ್ ಆ ಜೀವಿಯ ಮುಂತುದಿಯ ಕಡೆಯಿಂದ ಮುಚ್ಚಿಕೊಳ್ಳಲಾರಂಭಿಸಿ ಬಾಲದ ಕಡೆಗೆ ಮುಂದುವರಿಯುತ್ತ ಹೋಗುತ್ತದೆ. ಕೊನೆಗೆ ಈ ಜೀವಿಯ ಬ್ಲಾಸ್ಟೊಪೋರ್ ಕೊನೆ ಆಸನದ್ವಾರವಾಗಿ ಉಳಿಯುತ್ತದೆ. ಈ ರೀತಿಯ ಬೆಳೆವಣಿಗೆಯುಳ್ಳ ಜೀವಿಗಳನ್ನು ಡ್ಯುಟಿರೊಸ್ಟೋಮಿಯ ಎಂದು ಕರೆಯುತ್ತಾರೆ.

ಈ ರೀತಿಯ ಬೆಳೆವಣಿಗೆಯುಳ್ಳ ಜೀವಿಗಳಲ್ಲಿ ನರಮಂಡಲ ಬ್ಲಾಸ್ಟೊಪೋರ್ ಹತ್ತಿರವಿರುವ ಹೊರಚರ್ಮದ ಕೋಶಗಳಿಂದ ಬೆಳೆದು ಬರುತ್ತದೆ. ಈ ಬ್ಲಾಸ್ಟೊಪೋರ್ ಮುಚ್ಚಿಕೊಳ್ಳುವಿಕೆಗನುಗುಣವಾಗಿ ನರಮಂಡಲದ ಸ್ಥಾನ ಪ್ರೋಟಿರೊಸ್ಟೋಮಿಯದಲ್ಲಿ ಜೀವಿಯ ಅಧೋಭಾಗಕ್ಕೂ ಡ್ಯುಟಿರೊಸ್ಟೋಮಿಯದಲ್ಲಿ ಊರ್ಧ್ವಭಾಗಕ್ಕೂ ಪಲ್ಲಟಗೊಳ್ಳುತ್ತದೆ. ಆದುದರಿಂದ ಪ್ರೋಟೆರೊಸ್ಟೋಮಿಯ ಜೀವಿಗಳನ್ನು ಅಕಶೇರುಕಗಳೆಂತಲೂ ಡ್ಯುಟಿರೊಸ್ಟೋಮಿಯ ಜೀವಿಗಳನ್ನು ಕಶೇರುಕಗಳೆಂತಲೂ ಭ್ರೂಣ ಬೆಳೆವಣಿಗೆಯ ಕಾಲದಲ್ಲೇ ಗುರುತಿಸಬಹುದು. ಹೆಮಿಕಾರ್ಡೇಟ ಮತ್ತು ಎಕೈನೊಡರ್ಮೇಟ ಇವಕ್ಕೆ ಹೊರತಾಗಿವೆ.

ಮೇಲೆ ಹೇಳಿದ ಎರಡು ವಿಭಾಗಗಳಲ್ಲಿಯೂ ಮಧ್ಯಚರ್ಮದ ಬೆಳೆವಣಿಗೆಯಲ್ಲಿಯೂ ವ್ಯತ್ಯಾಸಗಳನ್ನು ಕಾಣಬಹುದು. ಡ್ಯುಟಿರೊಸ್ಟೋಮಿಯದಲ್ಲಿ ಮಧ್ಯಚರ್ಮ ಆರಕೆಂಟೆರಾನ್ ಗೋಡೆಯಿಂದ ಬೇರ್ಪಟ್ಟು ಬೆಳೆಯುತ್ತದೆ. ಪ್ರೋಟಿರೊಸ್ಟೋಮಿಯದಲ್ಲಿ ಈ ರೀತಿಯ ಬೆಳೆವಣಿಗೆ ಇಲ್ಲ. ಪ್ರೋಟಿರೊಸ್ಟೋಮಿಯ ತನ್ನ ಅಸ್ಥಿ ರಚನೆಗಳನ್ನು ಹೊರ ಚರ್ಮದಿಂದ ಬೆಳೆಸಿಕೊಳ್ಳುತ್ತದೆ. ಆದುದರಿಂದ ಇದರ ಅಸ್ಥಿ ಹೊರ ಅಸ್ಥಿಯಾಗಿ ಈ ಜೀವಿಯನ್ನು ರಕ್ಷಿಸುತ್ತದೆ. ಡ್ಯುಟಿರೊಸ್ಟೋಮಿಯದಲ್ಲಿ ಕಂಡುಬರುವ ಒಳ ಅಸ್ಥಿ ಮಧ್ಯಚರ್ಮದಿಂದ ಬೆಳೆಯುತ್ತದೆ. ಇನ್ನೂ ಮುಂದುವರಿದು ಹೇಳುವುದಾದರೆ ಕೈಟಿನ್ ಎಂಬ ಪಾಲಿಸ್ಯಾಕರೈಡ್ ರಾಸಾಯನಿಕ ವಸ್ತು ಪ್ರೋಟಿರೊಸ್ಟೋಮಿಯ ಜೀವಿಗಳಲ್ಲಿ ಕಂಡುಬರುತ್ತದೆ. ಈ ಕೈಟಿನ್ ವಸ್ತುವನ್ನು ಉತ್ಪಾದನೆ ಮಾಡುವ ಶಕ್ತಿ ಡ್ಯುಟಿರೊಸ್ಟೋಮಿಯಕ್ಕೆ ಇಲ್ಲ.

ಪ್ರೋಟೋಜ಼ೋವ ವಂಶದ ಜೀವಿಗಳು ಅತ್ಯಂತ ಕೆಳಮಟ್ಟದವು. ಇವು ಕಶಗಳನ್ನು ಹೊಂದಿರುವ ಆಲ್ಗೆಗಳಂಥ ಸಸ್ಯಗಳ ವರ್ಗದಿಂದ ಹುಟ್ಟಿ ಬಂದಿರಬೇಕು. ಏಕೆಂದರೆ ಕಶಗಳನ್ನು ಹೊಂದಿರುವ ಏಕಕೋಶ ಸಸ್ಯಗಳಿಗೂ ಏಕಕೋಶ ಪ್ರಾಣಿಗಳಿಗೂ ಬಹಳ ಸಾಮ್ಯವಿದೆ. ಯುಗ್ಲಿನ ಎಂಬುದು ಪ್ರಾಣಿ ಹಾಗು ಸಸ್ಯಗಳೆರಡಕ್ಕೂ ಮಧ್ಯಸ್ಥಜೀವಿಯಾಗಿ ಇಂದಿಗೂ ಇದೆ. ಇಂದು ಪ್ರೋಟೋಜ಼ೋವ ವರ್ಗ 20,000 ಕ್ಕಿಂತಲೂ ಹೆಚ್ಚಿನ ಪ್ರಭೇದಗಳನ್ನು ಹೊಂದಿದೆ. ಈ ವಂಶದಲ್ಲಿ ಅನೇಕ ವರ್ಗಗಳಿವೆ. ಮಿಥ್ಯಪಾದಗಳು, ಕಶಗಳು ಹಾಗು ಶಿಲಕೆಗಳು ಈ ಪ್ರಾಣಿಗಳಲ್ಲಿ ಕಂಡುಬರುವ ಒಂದು ವಿಶಿಷ್ಟ ಲಕ್ಷಣ. ಪ್ರೋಟಿರೊಸ್ಪಾಂಜಿಯ ಎಂಬ ಏಕಕೋಶಕ ಜೀವಿ ಅತ್ಯಂತ ಸಾಮಾನ್ಯದರ್ಜೆಯ ಸ್ಪಂಜ್ ಪ್ರಾಣಿಗಳನ್ನು ಹೋಲುತ್ತದೆ. ಪ್ರೋಟೋಜ಼ೋವ ಜೀವಿಗಳಲ್ಲಿ ವೈವಿಧ್ಯ ಹೆಚ್ಚು. ಕಶಗಳುಳ್ಳ ವರ್ಗದಲ್ಲಿ ಬಹಳ ರೀತಿಯ ಹಾಗೂ ಬಹಳ ಪರಿಸರಗಳಲ್ಲಿ ವಾಸಿಸುವ ಜೀವಿಗಳು ಕಂಡುಬಂದಿವೆ. ಇವುಗಳಲ್ಲಿ ಪರತಂತ್ರ ಜೀವಿಗಳು, ಸಹಜೀವನ ನಡೆಸುವ ಜೀವಿಗಳು ಇವೆ. ಕಶವುಳ್ಳ ಈ ಏಕಕೋಶಕ ಜೀವಿಗಳೆಲ್ಲವನ್ನೂ ಫ್ಲಾಜೆಲ್ಲೇಟ ಎಂಬ ವರ್ಗಕ್ಕೆ ಸೇರಿಸಲಾಗಿದೆ.

ಸಾರ್ಕೊಡೈನ ಎಂಬ ಇನ್ನೊಂದು ವರ್ಗಕ್ಕೆ ಅಮೀಬ ಹಾಗೂ ಅದರ ಸಂಬಂಧಿಗಳನ್ನು ಸೇರಿಸಲಾಗಿದೆ. ಅಮೀಬ ಪ್ರೋಟಿಯಸ್ ಈ ವರ್ಗದ ಒಂದು ಉತ್ತಮ ಉದಾಹರಣೆ. ಪರತಂತ್ರ ಜೀವಿಗಳು ಈ ವರ್ಗದಲ್ಲಿ ಕಂಡುಬರುತ್ತವೆ. ಸಮುದ್ರವಾಸಿಗಳಾದ ಸಾರ್ಕೊಡೈನ ವರ್ಗದಲ್ಲಿ ಅತ್ಯಂತ ಮನೋಹರವಾದ ರಕ್ಷಾಕವಚಗಳು ಕಂಡುಬರುವುದುಂಟು. ಈ ವರ್ಗದ ಜೀವಿಗಳು ಪೂರ್ವಕೇಂಬ್ರಿಯನ್ ಕಾಲದಿಂದಲೂ ಇದ್ದುವೆಂದು ತಿಳಿದುಬರುತ್ತದೆ.

ಮತ್ತೊಂದು ವರ್ಗವಾದ ಸ್ಪೋರೋಜ಼ೋವ ಸಂಪೂರ್ಣವಾಗಿ ಪರತಂತ್ರ ಜೀವಿಗಳನ್ನು ಹೊಂದಿದೆ. ಮಲೇರಿಯ ಕಾಯಿಲೆಯನ್ನು ತರುವ ಪ್ಲಾಸ್‌ಮೋಡಿಯಮ್ ಜೀವಿ ಉತ್ತಮ ಉದಾಹರಣೆ.

ಪ್ರೋಟೋಜ಼ೋವ ವಂಶದಲ್ಲಿ ಅತ್ಯಂತ ಕ್ಲಿಷ್ಟ ಹಾಗೂ ಉನ್ನತ ಮಟ್ಟದ ಬೆಳೆವಣಿಗೆಯನ್ನು ಹೊಂದಿರುವ ಜೀವಿಗಳೆಂದರೆ ಸಿಲಿಯೇಟ ಎಂಬ ವರ್ಗದವು. ಇವು ಪ್ರೋಟೋಜ಼ೋವ ವಂಶದಿಂದ ಬೇರ್ಪಡಿಸಿ ಪ್ರತ್ಯೇಕ ವಂಶವನ್ನೇ ಇದಕ್ಕಾಗಿ ಸೃಷ್ಟಿಸಬಹುದಾದ ಮಟ್ಟಿಗೆ ಬೆಳೆದಿವೆ. ಇವುಗಳಲ್ಲಿ ಉತ್ತಮಮಟ್ಟದ ಶರೀರ ಸೌಷ್ಠವ ಕಂಡುಬರುತ್ತದೆ. ಇವು ಆಹಾರ ಸೇವನೆಗೆ ಪ್ರತ್ಯೇಕವಾದ ಒಂದು ರಂಧ್ರವನ್ನು ಹೊಂದಿವೆ. ಇದನ್ನು ಬಾಯಿ ಎಂದು ಹೇಳಬಹುದು. ಇವುಗಳ ಚಲನಾಂಗಗಳು ಶಿಲಿಕೆಗಳು. ಈ ಜೀವಿಗಳು ಲೈಂಗಿಕ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಆಧುನಿಕ ತಳಿವಿಜ್ಞಾನಕ್ಕೆ ಈ ಜೀವಿಗಳು ಅದ್ಭುತ ಸಲಹೆಯನ್ನು ನೀಡಿವೆ. ಕಾಂಜುಗೇಷನ್ ಎಂಬ ಒಂದು ವಿಧವಾದ ಲೈಂಗಿಕ ಸಂತಾನೋತ್ಪತ್ತಿ ಈ ಜೀವಿಗಳ ಒಂದು ವೈಶಿಷ್ಟ್ಯ. ಪ್ರಾಣಿಪ್ರಪಂಚದ ಇನ್ನಾವ ಜೀವವರ್ಗಗಳಲ್ಲಿಯೂ ಈ ರೀತಿಯ ಸಂತಾನೋತ್ಪತ್ತಿ ಇಲ್ಲ. ಪ್ಯಾರಮೀಸಿಯಮ್, ವರ್ಟಿಸೆಲ್ಲ ಮುಂತಾದುವುಗಳು ಈ ವರ್ಗದ ಉತ್ತಮ ಉದಾಹರಣೆಗಳು.

ಸೀಲಿಯೇಟ ವರ್ಗಕ್ಕೆ ಹತ್ತಿರದ ಸಂಬಂಧಿಗಳೆಂದರೆ ಸಕ್ಟೋರಿಯ ಜೀವಿಗಳು. ಇವುಗಳ ಜೈಗೋಟಿನ ಬೆಳೆವಣಿಗೆಯ ಹಂತದಲ್ಲಿ ಶಿಲಿಕೆಗಳನ್ನು ಬೆಳೆಸಿಕೊಂಡು ಚಲಿಸಲಾರಂಭಿಸಿ ಕೊನೆಗೆ ಒಂದು ಕಡೆ ನೆಲೆಯಾಗಿ ನಿಂತು ಆ ನೆಲಕ್ಕೆ ಅಂಟಿಕೊಂಡು, ಶಿಲಿಕೆಗಳನ್ನು ಕಳೆದುಕೊಂಡು ಸಕ್ಟೋರಿಯಾ ಜೀವಿಯಾಗುತ್ತದೆ.

ಪ್ರೋಟೋಜ಼ೋವ ಪ್ರಾಣಿಗಳನ್ನು ಬಿಟ್ಟರೆ ಅಕಶೇರುಕವರ್ಗದಲ್ಲಿ ಸ್ಪಂಜ್ ಪ್ರಾಣಿಗಳಿಗೆ ಎರಡನೆಯ ಸ್ಥಾನ. ಈ ಪ್ರಾಣಿಗಳನ್ನು ಪೋರಿಫರ ಎಂಬ ವಂಶಕ್ಕೆ ಸೇರಿಸಲಾಗಿದೆ. ಇದರಲ್ಲಿ 5,000 ಪ್ರಭೇದಗಳಿವೆ. ಈ ಪ್ರಾಣಿಗಳನ್ನು ಕೆಳದರ್ಜೆಯ ಪ್ರಾಣಿಗಳೆಂದೇ ಪರಿಗಣಿಸಲಾಗಿದೆ. ಕಾರಣವೆಂದರೆ, ಈ ಜೀವಿಗಳ ಶರೀರ ಜೀವಕೋಶಗಳ ಒಂದು ಸಹಕಾರ ಸಂಘದಂತಿದೆ. ಏಕೆಂದರೆ ಈ ಜೀವಿಗಳಲ್ಲಿ ಬಹುಕೋಶಜೀವಿಗಳಲ್ಲಿ ಕಂಡುಬರುವ ಅಂಗಕಟ್ಟುಗಳ ರಚನೆಯಿಲ್ಲ. ಇದರ ಪ್ರತಿಯೊಂದು ಜೀವಕೋಶವೂ ಸ್ವತಂತ್ರವಾಗಿ ಬದುಕಬಲ್ಲ ಶಕ್ತಿಯನ್ನು ಹೊಂದಿದೆ. ಆದುದರಿಂದ ಈ ಜೀವಿಗಳನ್ನು ವಿಕಾಸ ತಜ್ಞರು ಇನ್ನೂ ಕನಿಷ್ಠಹಂತದಲ್ಲಿರುವ ಜೀವಿಗಳೆಂದೇ ತೀರ್ಮಾನಿಸುತ್ತಾರೆ. ಈ ಜೀವಿಗಳು ಎಂದರೆ ಅವು ಹೊಂದಿರುವ ಶರೀರದೊಳಗಿನ ಕ್ಲಿಷ್ಟ ಹಾಗೂ ಸಂಯುಕ್ತ ಕಾಲುವೆಗಳು, ಅಲ್ಲದೆ ಅವುಗಳು ಉತ್ಪಾದಿಸುವ ಮುಳ್ಳಿನಂತಿರುವ ಅಸ್ಥಿರಚನೆಗಳು. ಈ ಜೀವಿಗಳು ನಿರ್ಲಿಂಗ ಹಾಗೂ ಲೈಂಗಿಕರೀತಿಯ ಸಂತಾನೋತ್ಪತ್ತಿಯನ್ನು ಮಾಡಬಲ್ಲುವು. ಬಹುಕೋಶ ಜೀವಿಗಳಿಂದ ಸ್ವಲ್ಪಮಟ್ಟಿಗೆ ದೂರಸರಿದಿರುವ ಈ ಜೀವಿಗಳು ವಿಕಾಸದ ಹಾದಿಯಲ್ಲಿನ ಒಂದು ಕವಲುದಾರಿ. ಇವುಗಳಲ್ಲಿ ವಿಕಶಸದ ಹಿನ್ನಡೆಯನ್ನು ಕಾಣುತ್ತೇವೆ. ವಿಕಾಸ ಇಲ್ಲಿ ತಟಸ್ಥಗೊಂಡಿದೆ.

ಅಕಶೇರುಕಗಳ ಮೀಸೋಜ಼ೋವ ವಂಶ ಕೇವಲ 50 ಪ್ರಭೇದಗಳನ್ನು ಹೊಂದಿದೆ. ಅಕಶೇರುಕ ಪ್ರಪಂಚದ ವಿಕಾಸವೃಕ್ಷದಲ್ಲಿ ಈ ಜೀವಿಗಳ ನಿರ್ದಿಷ್ಟ ಸ್ಥಾನ ಇನ್ನೂ ನಿರ್ಧಾರವಾಗಿಲ್ಲ. ರಚನಾದೃಷ್ಟಿಯಿಂದ ಇವು ಬಹಳ ಸಾಮಾನ್ಯದರ್ಜೆಯ ಬಹುಕೋಶಜೀವಿಗಳು. ಒಂದೇ ಜೀವಕೋಶಗಳ ಒಂದು ಪದರವನ್ನು ಹೊಂದಿ ಶರೀರದೊಳಗಡೆ ಸಂತಾನೋತ್ಪತ್ತಿಯನ್ನು ಮಾಡುವ ಶಕ್ತಿಯುಳ್ಳ ಜೀವಕೋಶಗಳನ್ನು ಹೊಂದಿರುವ ಈ ಜೀವಿಗಳು ಸೀಲೆಂಟರೇಟ ವಂಶದ ಪ್ಲಾನುಲ ಎಂಬ ಲಾರ್ವವನ್ನು ಹೋಲುತ್ತವೆ. ಮೀಸೋಜೋನ ಪರತಂತ್ರ ಜೀವಿಗಳು ಸಮುದ್ರ ಜೀವಿಗಳಾದ ಟರ್ಬೆಲೇರಿಯ ಹಾಗೂ ಮತ್ತಿತರ ಹೀವಿಗಳ ಶರೀರದೊಳಗೆ ವಾಸಿಸುತ್ತವೆ. ಡೈಸಿಮ, ಕೊನೋಸಿಮ, ಡೆಕ ಇವುಗಳು ಮೀಸೋಜೋವ ವರ್ಗಕ್ಕೆ ಸೇರಿದ ಜೀವಿಗಳು.

ಅಕಶೇರುಕಗಳ ಯೂಮೆಟಜ಼ೋವ ಗುಂಪನ್ನು ಎರಡು ಭಾಗವಾಗಿ ವಿಂಗಡಿಸಿರುತ್ತಾರೆ. ಇದರಲ್ಲಿ ಮೊದಲನೆಯದು ಸೀಲೆಂಟರೇಟ ಮತ್ತು ಎರಡನೆಯದು ಬೈಲೆಟೇರಿಯ. ಸೀಲೆಂಟರೇಟ ವಿಭಾಗವನ್ನು ನೈಡೇರಿಯ ಹಾಗೂ ಟಿನೊಫೊರ ಎಂಬ ಎರಡು ವಂಶಗಳಾಗಿ ಪ್ರತ್ಯೇಕಿಸುತ್ತಾರೆ.

ನೈಡೇರಿಯ ವರ್ಗದ ಜೀವಿಗಳು ಕೆಳದರ್ಜೆಯ ಯೂಮೆಟಜ಼ೋವ. ನೈಡೇರಿಯ 8,900 ಪ್ರಭೇದಗಳನ್ನು ಹೊಂದಿದೆ. ಇವು ಇಪ್ಪದರ ಜೀವಿಗಳು. ಇವುಗಳ ಶರೀರದಲ್ಲಿ ಮುಖ್ಯವಾಗಿ ಪಾಲಿಪ್ ಮತ್ತು ಮೆಡ್ಯುಸ ಎಂಬ ಎರಡು ಬಗೆಯುಂಟು. ಈ ಪ್ರಾಣಿಗಳಲ್ಲಿ ಕುಟುಕು ಕಣಗಳೆಂಬ ವಿಶಿಷ್ಟರೀತಿಯ ಜೀವಕೋಶಗಳಿದ್ದು ಈ ಜೀವಿಗಳ ರಕ್ಷಣೆಯ ಕಾರ್ಯಕ್ಕೆ ನೆರವಾಗುತ್ತವೆ. ಸಂತಾನ ಪರ್ಯಾಯಚಕ್ರ (ಆಲ್ಟರೇಷನ್ ಆಫ್ ಜನರೇಷನ್ಸ್) ಈ ಜೀವಿಗಳ ವಿಶಿಷ್ಟ ಗುಣ. ಇವುಗಳ ಶರೀರ ಕೊಳವೆಯಾಕಾರದಲ್ಲಿದ್ದು ಬಾಯನ್ನು ಮಾತ್ರ ಹೊಂದಿದೆ. ಶರೀರದಲ್ಲಿ ಇನ್ನಾವ ರಂಧ್ರಗಳೂ ಇಲ್ಲ. ಹೈಡ್ರ, ಅರೀಲಿಯ, ಸೀಅನಿಮನಿ, ಹವಳದ ಪ್ರಾಣಿಗಳು ಇವು ಈ ವಂಶಕ್ಕೆ ಸೇರಿವೆ. ಹವಳದ ಪ್ರಾಣಿಗಳು ಹವಳದ ಗುಡ್ಡಗಳನ್ನು ರಚಿಸುತ್ತವೆ. ಈ ಜೀವಿಗಳು ಅತ್ಯುತ್ತಮ ಪಳೆಯುಳಿಕೆಗಳನ್ನು ಭೂಗರ್ಭದಲ್ಲಿ ಬಿಟ್ಟಿವೆಯಾದ್ದರಿಂದ ಇವುಗಳ ಚರಿತ್ರೆಯನ್ನು ಆರ್ಡೊವೀಸಿಯನ್ ಕಾಲದಿಂದಲೂ ಅಭ್ಯಸಿಸಬಹುದು.

ಟಿನೊಫೊರ 80 ಪ್ರಭೇದಗಳನ್ನು ಹೊಂದಿದೆ. ಎಲ್ಲವೂ ಸಮುದ್ರವಾಸಿಗಳು. ಇವುಗಳನ್ನು ಸಾಮಾನ್ಯವಾಗಿ ಕೊಂಬ್‌ಜೆಲ್ಲೀಸ್ ಎಂದು ಕರೆಯುತ್ತಾರೆ. ಬಾಚಣಿಗೆಯಂತಿರುವ ಶಿಲಿಕೆಗಳ ತಟ್ಟೆಗಳನ್ನು ಇವುಗಳ ಶರೀರದ ಮೇಲೆ ಕಾಣಬಹುದು. ಇವು ವೃತ್ತ ಅಥವಾ ದ್ವಿಪಾರ್ಶ್ವಸಮಾಂಗತೆಯನ್ನು ಹೊಂದಿವೆ. ಈ ಜೀವಿಗಳಲ್ಲಿ ಕುಟುಕುಗಣಗಳು ಇಲ್ಲ. ಸಂತಾನಪರ್ಯಾಯಚಕ್ರ ಈ ಪ್ರಾಣಿಗಳಲ್ಲಿಲ್ಲ. ಇವುಗಳು ಪೂರ್ವ ಕೇಂಬ್ರಿಯನ್ ಕಾಲದಿಂದಲೂ ಇದ್ದು ಉಳಿದು ಬಂದುವೆಂದು ತಿಳಿದುಬರುತ್ತದೆ. ಪ್ಲುರೋಬೇಕಿಯ, ಹಾರ್ಮಿಫೊರ ಮತ್ತು ಟನೊಪ್ಲಾನ ಬೆರಾಯ ಉತ್ತಮ ಉದಾಹರಣೆಗಳು.

ಯೂಮೆಟಜೋವದ ಎರಡನೆಯ ವಿಭಾಗವೇ ಬೈಲಟೇರಿಯ. ಬೈಲಟೇರಿಯ ವಿಭಾಗವನ್ನು ಪ್ರೊಟಿರೊಸ್ಟೋಮಿಯ ಮತ್ತು ಡ್ಯುಟಿರೊಸ್ಟೋಮಿಯ ಎಂದು ಎರಡು ಗುಂಪುಗಳಾಗಿ ವಿಭಾಗಿಸಿದೆ.

ಪ್ರೊಟಿರೊಸ್ಟೋಮಿಯದಲ್ಲಿ ಎಂಟೊಪ್ರಾಕ್ಟ (60 ಪ್ರಭೇದಗಳನ್ನು ಹೊಂದಿದೆ), ಪ್ರಯಾಪುಲಿಡ (8 ಪ್ರಭೇದಗಳನ್ನು ಹೊಂದಿದೆ), ಆಸ್ಕಿಹೆಲ್‌ಮೆನ್‌ಥಿಸ್ (12,500 ಪ್ರಭೇದಗಳನ್ನು ಹೊಂದಿದೆ) ಈ ವಂಶಗಳಿವೆ. ಇವುಗಳ ಸ್ಥಾನಮಾನಗಳು ಇನ್ನೂ ಪೂರ್ಣವಾಗಿ ಬಗೆಹರಿದಿಲ್ಲ.

ಪ್ಲಾಟಿಹೆಲ್‌ಮೆಂಜೀಸ್ (12,4000 ಪ್ರಭೇದಗಳನ್ನು ಹೊಂದಿದೆ), ನ್ಯಾಮರಟೈನ (800 ಪ್ರಭೇದಗಳನ್ನು ಹೊಂದಿದೆ), ಮೊಲಸ್ಕ (1,28,000 ಪ್ರಭೇದಗಳನ್ನು ಹೊಂದಿದೆ), ಸೈಫನ್‌ಕುಲಿಡ (250 ಪ್ರಭೇದಗಳನ್ನು ಹೊಂದಿದೆ), ಎಕೈಯುರಿಡ (159 ಪ್ರಭೇದಗಳನ್ನು ಹೊಂದಿದೆ), ಆನೆಲಿಡ (87,000 ಪ್ರಭೇದಗಳನ್ನು ಹೊಂದಿದೆ), ಒನೈಕೊಫೊರ (70 ಪ್ರಭೇದಗಳನ್ನು ಹೊಂದಿದೆ). ಪೆಂಟಾಸ್ಟೊಮಿಡ (60 ಪ್ರಭೇದಗಳನ್ನು ಹೊಂದಿದೆ), ಟಾರ್ಡಿಗ್ರಾಡ (200 ಪ್ರಭೇದಗಳನ್ನು ಹೊಂದಿದೆ), ಆರ್ತ್ರೊಪೊಡ (8,50,000 ಪ್ರಭೇದಗಳನ್ನು ಹೊಂದಿದೆ), ಲೊಫೊಫೊರೇಟ (5000 ಪ್ರಭೇದಗಳನ್ನು ಹೊಂದಿದೆ). ಇವುಗಳ ಮೊದಲಿನ ಏಳು ವಂಶಗಳಲ್ಲಿ ಗರ್ಭಕಟ್ಟಿದ ಮೊಟ್ಟೆಯ ವಿಭಜನೆಯನ್ನು ಸುರುಳಿ (ಸುತ್ತು) ರೀತಿಯ ವಿಭಜನೆಯೆಂದು ಪರಿಗಣಿಸಲಾಗಿದೆ. ಇನ್ನುಳಿದವನ್ನು ಮೆಟಮೆರಿಕ್ ಪ್ರೋಟೊಸ್ಟೋಮಿಯ ಎಂದು ಕರೆಯುತ್ತಾರೆ.

ಮಾಲಸ್ಕ ವಂಶದಲ್ಲಿ 1,28,000 ಪ್ರಭೇದಗಳಿವೆ. ಪ್ರಾಣಿ ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ರಭೇದಗಳನ್ನು ಹೊಂದಿರುವ ಎರಡನೆಯ ವಂಶವೇ ಇದು. ಈ ಪ್ರಾಣಿಗಳು ಭೂಮಿ, ಸಿಹಿನೀರು, ಸಮುದ್ರದ ನೀರು–ಈ ಎಲ್ಲೆಡೆಯಲ್ಲಿಯೂ ಪಸರಿಸಿವೆ. ಕೇಂಬ್ರಿಯನ್ ಕಾಲದಿಂದಲೂ ಈ ಪ್ರಾಣಿಗಳ ಅವಶೇಷಗಳು ಸಿಕ್ಕಿವೆ. ಆದರೆ ಇವುಗಳ ಅವಶೇಷಗಳ ಅಭ್ಯಾಸದಿಂದ ವಂಶವಂಶಗಳ ಪರಸ್ಪರ ಸಂಬಂಧಗಳ ವಿಷಯದಲ್ಲಿ ಹೆಚ್ಚಿನ ಜ್ಞಾನ ಲಭಿಸಿಲ್ಲ. ಈ ಜೀವಿಗಳ ಶರೀರ 4 ಭಾಗಗಳನ್ನು ಹೊಂದಿದೆ: 1. ಮಾಂಸಖಂಡಗಳಿಂದೊಡಗೂಡಿದ ಪಾದ 2. ಶಿರ 3. ಶರೀರ 4. ಮ್ಯಾಂಟಲ್. ಈ ಮ್ಯಾಂಟಲ್ ಜೀವಿಯ ಶರೀರದ ಮೇಲಿರುವ ಅತ್ಯಂತ ಗಟ್ಟಿಯಾದ ಚಿಪ್ಪನ್ನು ಉತ್ಪಾದನೆ ಮಾಡುತ್ತದೆ. ಮೂಲಭೂತವಾಗಿ ಈ ಜೀವಗಳು ಪಾರ್ಶ್ವಸಮರೂಪತೆಯನ್ನು ಹೊಂದಿರುತ್ತವೆ. ಆದರೆ ಇವು ಪ್ರಬುದ್ಧ ವಯಸ್ಸಿಗೆ ಬಂದ ಮೇಲೆ ಈ ಸಮರೂಪತೆ ವ್ಯತ್ಯಾಸಗೊಳ್ಳುತ್ತದೆ. ಈ ಜೀವಿಗಳ ದೇಹವನ್ನು ಮೃದುವಾದ ಚರ್ಮ ಮುಚ್ಚಿರುವುದರಿಂದ ಇವುಗಳ ದೇಹ ಮೃದುವಾಗಿರುತ್ತದೆ. ಖಂಡಗಳ ಉಂಗುರಗಳ ಜೋಡಣೆ ಈ ಪ್ರಾಣಿಗಳ ಶರೀರದಲ್ಲಿ ಇಲ್ಲವೆಂದು ತಿಳಿಯಲಾಗಿತ್ತು. ಆದರೆ ಇಂದು ಖಂಡಗಳನ್ನೊಳಗೊಂಡಿರುವ ಜೀವಿಗಳೂ ಈ ವಂಶದಲ್ಲಿ ಸೇರಿವೆ. ಖೈಟಾನ್ ಎಂಬ ಮೃದ್ವಂಗಿ ಇದಕ್ಕೆ ಒಂದು ನಿದರ್ಶನ. ಬಸವನ ಹುಳು, ಕಪ್ಪೆಚಿಪ್ಪಿನ ಹುಳು, ಶಂಕುವಿನ ಹುಳು, ಆಕ್ಟೊಪಸ್, ನಾಟಿಲಸ್ ಮುಂತಾದುವು ಈ ವಂಶಕ್ಕೆ ಸೇರುತ್ತವೆ.

ವಲಯವಂತ ಪ್ರಾಣಿಗಳನ್ನೊಳಗೊಂಡ ವಂಶವನ್ನು ಆನೆಲಿಡ್ ಎಂದು ಕರೆಯುತ್ತಾರೆ. ಇದು ಪ್ರೊಟೊಸ್ಟೋಮಿಯ ಗುಂಪಿನ ಎರಡನೆಯ ಮುಖ್ಯ ಶಾಖೆ. ಎರೆಹುಳುಗಳು, ನೀರಿಸ್ ಹುಳುಗಳು, ಇತ್ಯಾದಿ ಪ್ರಾಣಿಗಳನ್ನೊಳಗೊಂಡಿರುವ ಈ ವಂಶದಲ್ಲಿ 8,700 ಪ್ರಭೇದಗಳಿವೆ. ಈ ಪ್ರಾಣಿಗಳ ಶರೀರ ಉಂಗುರ ಅಥವಾ ಖಂಡಗಳಿಂದ ಮಾಡಲ್ಪಟ್ಟಿದೆ. ಈ ಖಂಡಗಳ ಜೋಡಣೆ ನಿರ್ದಿಷ್ಟವಾಗಿದೆ. ಇವುಗಳಲ್ಲಿ ಶರೀರಾವಕಾಶ (ಸೀಲೋಮ್) ಅತ್ಯುತ್ತಮವಾಗಿ ಬೆಳೆದಿರುವುದು ಕಂಡುಬರುತ್ತದೆ. ಈ ಅವಕಾಶ ಜೀರ್ಣಾಂಗಗಳನ್ನು ಮಾಂಸಖಂಡಗಳಿಂದೊಡಗೂಡಿದ ಶರೀರದ ಗೋಡೆಯಿಂದ ಬೇರ್ಪಡಿಸುತ್ತದೆ. ಈ ಪ್ರಾಣಿಗಳಲ್ಲಿ ಚೆನ್ನಾಗಿ ವೃದ್ಧಿಯಾದ ನರಮಂಡಲವಿದೆ, ಬೆಳವಣಿಗೆಯಲ್ಲಿ ಟ್ರೋಕೋಫೊರ್ ಎಂಬ ಲಾರ್ವದ ಅವಸ್ಥೆ ಕಂಡುಬರುತ್ತದೆ. ಶರೀರದ ಮೇಲುಗಡೆ ಬಿರುಗೂದಲುಗಳು ಕಂಡುಬರುತ್ತವೆ. ಪಾಲಿಕೀಟ ಎಂಬ ವರ್ಗ ಈ ವಂಶದ ಅತ್ಯಂತ ಕನಿಷ್ಠ ದರ್ಜೆಯ ಪ್ರಾಣಿಗಳನ್ನು ಹೊಂದಿದೆ. ಈ ಪ್ರಾಣಿಗಳಲ್ಲಿ ಬೈರೆಮಸ್ ಪಾದಗಳು ಕಂಡುಬರುತ್ತವೆ. ಆನೆಲಿಡ್ ವಂಶದಲ್ಲಿ ಹೆಚ್ಚು ವಿಕಾಸ ಹೊಂದಿರತಕ್ಕವು ಎರೆಹುಳುಗಳು. ಇವುಗಳಲ್ಲಿ ಬಿರುಗೂದಲುಗಳಿದ್ದು ಚಲನೆಗೆ ಇವುಗಳಿಂದ ಸಹಾಯ ಒದಗಿದೆ. ಜಿಗಣೆಗಳೂ ಈ ವಂಶಕ್ಕೆ ಸೇರಿವೆ.

ಪ್ರೋಟೋಸ್ಟೋಮಿಯ ವರ್ಗದ ಪ್ರಾಣಿಗಳಲ್ಲೆಲ್ಲ ಅತ್ಯಂತ ಉಚ್ಚಾವಸ್ಥೆ ಮುಟ್ಟಿರುವ ವಂಶವೆಂದರೆ ಆರ್ತ್ರಾಪೊಡ ವಂಶ (ಸಂಧಿಪದಿಗಳು). ಈ ವಂಶದಲ್ಲಿ 8,50,000 ಪ್ರಭೇದಗಳಿವೆ. ಈ ಪ್ರಾಣಿಗಳ ಪ್ರಭೇದದ ಸಂಖ್ಯೆ ಇಡಿ ಪ್ರಾಣಿಪ್ರಪಂಚದ ಪ್ರಭೇದಗಳ 3/4 ರಷ್ಟಿರುತ್ತದೆ. ಈ ವಂಶ ಹೊಂದಿರುವಷ್ಟು ಭೂವಾಸಿ ಪ್ರಭೇದಗಳನ್ನು ಅಕಶೇರುಕ ಪ್ರಾಣಿ ಪ್ರಪಂಚದ ಇನ್ನಾವ ವಂಶವೂ ಹೊಂದಿಲ್ಲ. ಈ ವಂಶಕ್ಕೆ ಸೇರಿರುವ ಪ್ರಾಣಿಗಳು ಎಲ್ಲ ರೀತಿಯ ಪರಿಸರಗಳಲ್ಲೂ ವಾಸಿಸುತ್ತವೆ. ಈ ಪ್ರಾಣಿಗಳ ಶರೀರದ ಮೇಲೆ ಕಠಿಣವಾದ ಕರಟದಂಥ (ಕ್ಯುಟಿಕಲ್) ಕವಚವಿದೆ. ಪ್ರಾಣಿಗಳ ಶರೀರ ಹಾಗೂ ಪಾದಗಳು ಕೀಲುಗಳನ್ನು ಹೊಂದಿವೆ. ಆದುದರಿಂದಲೇ ಇವನ್ನು ಸಂಧಿಪದಿಗಳೆಂದು ಕರೆಯುತ್ತಾರೆ. ಈ ಜೀವಿಗಳು ತಮ್ಮ ಶರೀರದ ಮೇಲಿರುವ ಕ್ಯುಟಿಕಲ್ ಹೊದಿಕೆಯನ್ನು ವಲಯವಂತ ಪ್ರಾಣಿಗಳಿಂದ ಪಡೆದುಕೊಂಡಿವೆ. ಈ ರಕ್ಷಾಕವಚದಿಂದಾಗಿ ಇವುಗಳ ಶರೀರದಿಂದ ಹೊರಹೋಗುವ ನೀರಿನ ಅಂಶ ಕಡಿಮೆಯಾಗುತ್ತದೆ. ಇದರಿಂದಾಗಿ ಇವು ಭೂವಾಸಕ್ಕೆ ಹೊಂದಿಕೊಳ್ಳಲು ಬಹಳ ಅನುಕೂಲವಾಯಿತು. ಈ ಪ್ರಾಣಿಗಳ ಶರೀರದೊಳಗೆ ಸಿಲೋಮಿಗೆ ಬದಲು ಹೀಮೋಸೀಲ್ ಎಂಬ ದೇಹಾವಕಾಶವಿದೆ. ಈ ಜೀವಿಗಳ ಶರೀರ ಖಂಡಗಳ ಜೋಡಣೆ ಯಿಂದಲೇ ಆಗಿದೆ. ಈ ಜೋಡಣೆ ಬಾಹ್ಯವಾಗಿ ಅತಿ ಸ್ಪಷ್ಟವಾಗಿ ಕಾಣುತ್ತದೆ. ಏಡಿಗಳು, ಚೇಳುಗಳು, ಜೇಡಗಳು, ನೊಣಗಳು, ಸೊಳ್ಳೆಗಳು, ಜರಿಗಳು ಇತ್ಯಾದಿ ಪ್ರಾಣಿಗಳು ಇದರಲ್ಲಿ ಸೇರಿವೆ. ಪಳೆಯುಳಿಕೆಗಳನ್ನು ಬಿಟ್ಟಿರುವ ಪ್ರಾಚೀನ ಜೀವಿಗಳೂ ಬಹಳ ಉಂಟು. ಇವುಗಳಲ್ಲಿ ಟ್ರೈಲೊಬೈಟ್ ಎಂಬ ವರ್ಗ ಅತಿ ಮುಖ್ಯವಾದದ್ದು. ಆರ್ತ್ರೊಪೊಡ ವಂಶದ ಪ್ರಾಣಿಗಳ ಬಾಹ್ಯರಚನಾಭ್ಯಾಸದಿಂದ ಕ್ರಸ್ಟೇಷಿಯವರ್ಗ, ಮಿರಿಯೊಪೊಡ ವರ್ಗ ಹಾಗೂ ಇನ್‌ಸೆಕ್ಟ ವರ್ಗ ಒಂದೇ ಪೂರ್ವವಂಶಜರಿಂದ ಹುಟ್ಟಿ ಬಂದಿವೆಯೆಂಬುದು ಅರ್ಥವಾಗುತ್ತದೆ. ಕ್ರಸ್ಟೇಷಿಯ ವರ್ಗದ ಪ್ರಾಣಿಗಳಲ್ಲಿ ಶಿರ ಹಾಗು ಎದೆಯ ಭಾಗಗಳು ಕೂಡಿಕೊಂಡು ಶಿರೋವಕ್ಷವಾಗಿರುವುದು ಸಾಮಾನ್ಯ. ಇವು ಜಲವಾಸಿಗಳು. ಕೇಂಬ್ರಿಯನ್ ಕಾಲದಿಂದಲೂ ಈ ಜೀವಿಗಳ ಅವಶೇಷಗಳು ದೊರೆತಿವೆ. ಆರ್ತ್ರಾಪೊಡ ವಂಶದಲ್ಲಿ ಅತ್ಯಂತ ಹೆಚ್ಚಿನ ಪ್ರಭೇದಗಳನ್ನು ಹೊಂದಿರುವ ವರ್ಗವೇ ಕೀಟವರ್ಗ. ಇದರಲ್ಲಿ 6,60,000ಕ್ಕಿಂತ ಹೆಚ್ಚು ಪ್ರಭೇದಗಳಿವೆ. ಅತ್ಯಂತ ಉಚ್ಚಮಟ್ಟದ ವಿಕಾಸವನ್ನು ಹೊಂದಿರುವ ಈ ಪ್ರಾಣಿಗಳು ಭೂಮಿ, ನೀರುಗಳೆರಡನ್ನೂ ಆಕ್ರಮಿಸಿಕೊಂಡಿವೆ. ಅರಾಕ್ನಿಡಾ ವರ್ಗದಲ್ಲಿ ಚೇಳುಗಳು ಲಿಮ್ಯುಲಸ್ ಮುಂತಾದವು ಸೇರಿವೆ. ಇವು ಪಳೆಯುಳಿಕೆಗಳನ್ನು ಹೊಂದಿವೆ. ಒಟ್ಟಿನಲ್ಲಿ ಅಕಶೇರುಕ ಪ್ರಾಣಿವರ್ಗದ ಭವ್ಯತೆಯ ಮಜಲನ್ನು ಆರ್ತ್ರಾಪೊಡ ವಂಶದ ಪ್ರಾಣಿಗಳಲ್ಲಿ ಕಾಣುತ್ತೇವೆ.

ಆನೆಲಿಡ ಹಾಗೂ ಆರ್ತ್ರಾಪೊಡ ವಂಶಗಳೆರಡಕ್ಕೂ ಮಧ್ಯಸ್ಥಜೀವಿಯಾದ, ಆರ್ತ್ರಾಪೊಡಗಳು ಆನೆಲಿಡ ಜೀವಿಗಳಿಂದಲೇ ಹುಟ್ಟಿ ಬಂದಿವೆಯೆಂಬುದನ್ನು ತೋರಿಸುವ ಜೀವಿ ಪೆರಿಪೆಟಸ್. ಇದು ಒನೈಕೊಫೋರ ವರ್ಗಕ್ಕೆ ಸೇರುತ್ತದೆ. ಇದರಲ್ಲಿ ಆರ್ತ್ರಾಪೊಡ ಹಾಗು ಆನೆಲಿಡ ಜೀವಿಗಳೆರಡರ ಗುಣಗಳೂ ಇವೆ. ಇದು ಸುಮಾರು 70 ಪ್ರಭೇದಗಳನ್ನು ಹೊಂದಿದೆ. ಈ ಪ್ರಾಣಿ ರೂಪದಲ್ಲಿ ಪಾಲಿಕೀಟ ವರ್ಗದ ಪ್ರಾಣಿಗಳನ್ನು ಹೋಲುತ್ತದೆ. ಇದರ ಶರೀರದ ಮೇಲಿರುವ ಕ್ಯುಟಿಕಲ್ ಪೊರೆ ಆನೆಲಿಡ ಜೀವಿಗಳಲ್ಲಿರುವಂತೆ ತೆಳ್ಳಗಿದೆ. ಮಾಂಸಖಂಡಗಳು ಹಾಗು ಶುದ್ಧೀಕರಣಾಂಗಗಳು ಆ ಪ್ರಾಣಿಯಲ್ಲಿರುವಂತೆಯೇ ಇವೆ. ಇದರ ಜನನಾಂಗದ ನಾಳಗಳು ಶಿಲಿಕೆಗಳನ್ನು ಹೊಂದಿವೆ. ಆರ್ತ್ರಾಪೊಡ ವಂಶದಲ್ಲಿ ಈ ಶಿಲಿಕೆಗಳಿವೆ. ಇದರ ದವಡೆಗಳು ಹಾಗೂ ಹೀಮೋಸೀಲ್ ಮತ್ತು ರಕ್ತಪರಿಚಲನೆ ಆರ್ತ್ರಾಪೊಡ ವಂಶದ ಪ್ರಾಣಿಗಳನ್ನು ಹೋಲುತ್ತದೆ. ಉಸಿರಾಟದ ಅಂಗಗಳಾದ ಟ್ರೇಕಿಯ ನಾಳಗಳು ಇದನ್ನು ಆರ್ತ್ರಾಪೊಡವೆಂದು ಸ್ಥಿರಪಡಿಸುತ್ತವೆ. ಆದುದರಿಂದ ಈ ಜೀವಿ ಆನೆಲಿಡ ವಂಶದಿಂದ ಆರ್ತ್ರಾಪೊಡ ವಂಶಕ್ಕೆ ವಿಕಾಸದ ಹಾದಿಯಲ್ಲಿ ಪ್ರಯಾಣ ಮಾಡುತ್ತಿದೆಯೊ ಎಂಬಂತಿದೆ.

ಪ್ರೋಟೊಸ್ಟೋಮಿಯ ವರ್ಗದಲ್ಲಿ ಮೊದಲೇ ಹೇಳಿರುವ ಮಿಕ್ಕೆಲ್ಲ ವಂಶಗಳು ಅತಿ ಸಾಮಾನ್ಯ ದರ್ಜೆಯ ಜೀವಿಗಳು.

ಡ್ಯುಟಿರೊಸ್ಟೋಮಿಯ ವಿಭಾಗದಲ್ಲಿ ಬರುವ ಅಕಶೇರುಕಗಳೆಂದರೆ ಕೀಟೊಗ್ನಾಥ ವಂಶ, ಪೋಗೊನೋಫೊರ ಮತ್ತು ಎನೊಡರ್ಮೆಟ ವಂಶಗಳು. ಇವುಗಳಲ್ಲಿ ಗರ್ಭಕಟ್ಟಿದ ಮೊಟ್ಟೆಯ ವಿಭಜನೆ ಪ್ರೋಟೊಸ್ಟೋಮಿಯ ರೀತಿಯ ಪ್ರಾಣಿಗಳಲ್ಲಿರುವಂತಿಲ್ಲ. ಇಲ್ಲಿ ಬ್ಲಾಸ್ಟೊಪೋರ್ ಗುದದ್ವಾರವಾಗಿ, ಬಾಯಿ ಪ್ರತ್ಯೇಕವಾಗಿ ಉದಯವಾಗುತ್ತದೆ. ಕೀಟೊಗ್ನಾಥದಲ್ಲಿ ಒಂದು ವಿಶಿಷ್ಟರೀತಿಯ ಲಾರ್ವ ಜೀವಿ ಕಂಡುಬರುತ್ತದೆ. ಕೀಟೊಗ್ನಾಥ 50 ಪ್ರಭೇದಗಳನ್ನು ಹೊಂದಿದೆ. ಇವುಗಳನ್ನು ಅಂಬುಳಗಳೆಂದು ಕರೆಯುತ್ತಾರೆ. ಈ ಜೀವಿಗಳು ಅಕಶೇರುಕದ ಪ್ರಬುದ್ಧ ವಂಶಗಳಿಗೆ ಹೆಚ್ಚಿನ ಸಂಬಂಧವನ್ನು ಪ್ರದರ್ಶಿಸುವುದಿಲ್ಲ.

ಪೋಗೊನೋಪೂರ ವಂಶ 50 ಪ್ರಭೇದಗಳನ್ನು ಹೊಂದಿದೆ. ಇವುಗಳೆಲ್ಲ ಆಳವಾದ ಸಮುದ್ರದಲ್ಲಿ ವಾಸಿಸುತ್ತವೆ. ಇವುಗಳ ಬಗ್ಗೆ ಹೆಚ್ಚಿನ ಸಾಹಿತ್ಯವಿಲ್ಲ. ಇವುಗಳಲ್ಲಿ ಒಂದು ಅಥವಾ ಹೆಚ್ಚು ಟೆಂಟಕಲ್‌ಗಳು ಕಂಡುಬರುತ್ತವೆ. ಇವುಗಳ ಡಿಂಬಗಳ ಜೀವನ ತಿಳಿದುಬಂದಿಲ್ಲ.

ಎಕೈನೊಡರ್ಮೆಟ ವಂಶ ನಕ್ಷತ್ರಮೀನುಗಳು, ಸಮುದ್ರದ ಅರ್ಚಿನ್‌ಗಳು, ಸಮುದ್ರದ ಸೌತೆ–ಇತ್ಯಾದಿ ಜೀವಿಗಳನ್ನು ಒಳಗೊಂಡಿದೆ. ಈ ಪ್ರಾಣಿಗಳು ಅರೀಯ ಸಮಾಂಗತೆಯನ್ನು ಹೊಂದಿವೆ. ಆದರೆ ಇವುಗಳ ಲಾರ್ವ ಜೀವಿಗಳು ಮಾತ್ರ ದ್ವಿಪಾರ್ಶ್ವಸಮಾಂಗತೆಯನ್ನು ಹೊಂದಿರುತ್ತವೆ. ಆದುದರಿಂದ ಈ ಕೇಂದ್ರ ಸೌಷ್ಠವ ಜೀವಿ ಪ್ರಬುದ್ಧಾವಸ್ಥೆಯನ್ನು ತಲುಪಿದ ಮೇಲೆ ಗಳಿಸಿಕೊಂಡದ್ದು ಎಂದು ಧಾರಾಳವಾಗಿ ಹೇಳಬಹುದು. ಎಕೈನೊಡರ್ಮೆಟ ವಂಶದ ಎಲ್ಲ ಪ್ರಾಣಿಗಳೂ ಸಮುದ್ರವಾಸಿಗಳು. ಈ ಪ್ರಾಣಿಗಳ ಪ್ರಾಚೀನ ಇತಿಹಾಸ ಕೇಂಬ್ರಿಯನ್ ಕಾಲದಿಂದಲೂ ತಿಳಿದುಬಂದಿದೆ. ಅತ್ಯಂತ ಮುಖ್ಯವಾದ ವಿಷಯವೆಂದರೆ ಈ ವಂಶದ ಜೀವಿಗಳ ಲಾರ್ವ ಜೀವಿ ಹೆಮಿಕಾರ್ಡೇಟ ವಂಶದ ಲಾರ್ವಜೀವಿಯನ್ನು ಹೋಲುತ್ತದೆ. ಈ ಗುಣದಿಂದಾಗಿ ಈ ವಂಶ ಕಶೇರುಕಗಳ

ಉದಯಕ್ಕೆ ದಾರಿ ಮಾಡಿಕೊಟ್ಟಿದೆ ಎಂಬ ತೀರ್ಮಾನಕ್ಕೆ ಬರಲು ಸಹಾಯಮಾಡಿದೆ. ಏಕೆಂದರೆ ಎಕೈನೊಡರ್ಮೇಟ ವಂಶದ ಡೆಪ್ಲುರುಲ ಲಾರ್ವ, ಹೆಮಿಕಾರ್ಡೇಟ ವಂಶದ ಟಾರ್ನೆರಿಯ ಲಾರ್ವಾಕ್ಕೆ ಅತಿ ಹೆಚ್ಚಿನ ಹೋಲಿಕೆಯನ್ನು ತೋರಿಸುತ್ತದೆ. ಎಕೈನೊಡರ್ಮೇಟ ವಂಶದ ಜೀವಿಗಳ ಶರೀರ ಪಂಚ ಬಾಹುಗಳನ್ನು ಸಾಮಾನ್ಯವಾಗಿ ಹೊಂದಿರುತ್ತವೆ. ಇವುಗಳ ಶರೀರದಲ್ಲಿ ಸುಣ್ಣ ಮಿಶ್ರಿತವಾದ ತಟ್ಟೆಗಳು ರಕ್ಷಾಕವಚದಂತಿವೆ. ಆದುದರಿಂದ ಇವುಗಳನ್ನು ಕಠಿಣಚರ್ಮಿಗಳೆನ್ನುತ್ತಾರೆ. (ಎಲ್.ಎಸ್.ಜಿ.)

**ಅಕಶೇರುಕ ಭ್ರೂಣಶಾಸ್ತ್ರ :** ಅಂಡದಲ್ಲಿ (ಮೊಟ್ಟೆ) ಅಡಗಿರುವ ಜೀವಿ ಬೆಳೆದು ಮರಿಯಾಗಿ ಹೊರಬರುವ ವಿವಿಧ ಹಂತಗಳ ವಿವರವೇ ಭ್ರೂಣಶಾಸ್ತ್ರ. ಮೊದಮೊದಲು ಜೀವದ ಸೃಷ್ಟಿಯಬಗ್ಗೆ ವೈಜ್ಞಾನಿಕವೆನಿಸದ ಅನೇಕ ಕಲ್ಪನೆಗಳು ಇದ್ದವು. ಆ ರೀತಿಯ ಕಲ್ಪನೆಗಳನ್ನೇ ಸತ್ಯವೆಂದು ನಂಬುವವರು ಇಂದಿಗೂ ಇಲ್ಲದೇ ಇಲ್ಲ. 1839ರಲ್ಲಿ ಮ್ಯಾಥ್ಯೂಸ್ ಜೇಕಬ್ ಶ್ಲೈಡನ್ ಮತ್ತು ಥಿಯೊಡರ್ ಶ್ವಾನ್ ಎಂಬುವರು ಜೀವಕೋಶ ತತ್ವವನ್ನು ಪ್ರತಿಪಾದಿಸಿದರು. 'ಜೀವಕೋಶಗಳು ಹಿಂದಿದ್ದ ಜೀವಕೋಶಗಳಿಂದಲೇ ಹುಟ್ಟಿಬಂದಿವೆ; ಜೀವ ಜೀವಿಯಿಂದಲೇ ಹುಟ್ಟಿಬರಬೇಕು' ಎಂಬುದು ಅವರ ತತ್ವದ ತಿರುಳು. ಜೀವಿ ವಿಕಾಸದ ಪರಿಣಾಮವೇ ಹೊರತು ಭಗವಂತ ಒಮ್ಮೆಗೇ ಸೃಷ್ಟಿಮಾಡಿದ್ದಲ್ಲ ಎಂಬ ಮಾತನ್ನು ಲೂಯಿ ಪ್ಯಾಸ್ಚರ್ ಎತ್ತಿಹಿಡಿದ. ಈ ನೂತನ ವಿಚಾರಧಾರೆಗಳಿಗೆ ಪ್ರಯೋಗಗಳೂ ಸಾಕ್ಷಿಯನ್ನು ಹೊಂದಿಸಿದುವು. ಇಲ್ಲಿಂದ ಮುಂದೆ ಜೀವಿಗಳ ಹುಟ್ಟು ಹಾಗೂ ಬೆಳವಣಿಗೆಯನ್ನು ಅರಿಯಲು ಅಧ್ಯಯನಗಳು ನಡೆದವು. ಜೀವದ ಬೆಳವಣಿಗೆಯನ್ನು ಕೆಲವು ತತ್ವಗಳ ಆಧಾರದ ಮೇಲೆ ಅರ್ಥಮಾಡಿಕೊಳ್ಳಲು ಹಾಗೂ ಅರಿಯಲು ಪ್ರಯತ್ನಿಸಿದರು. ಈ ತತ್ವಗಳಲ್ಲಿ ಪೂರ್ವೋದ್ಭವ ತತ್ವ (ಪ್ರಿಫಾರ್ಮೇಷನ್ ಥಿಯೊರಿ) ಹಾಗೂ ಜೈವಾಂಕುರತತ್ವ (ಎಪಿಜೆನೆಸಿಸ್ ಥಿಯೊರಿ) ಅತಿ ಮುಖ್ಯವಾದುವು.

ಪೂರ್ವೋದ್ಭವತತ್ವದ ಪ್ರಕಾರ ಅಂಡಾಶಯದಿಂದ ಉದಯವಾದ ಮೊಟ್ಟೆ ಅಥವಾ ವೃಷಣದಿಂದ ಉದಯವಾದ ರೇತಸ್ಸು ಅತಿಮುಖ್ಯವಾದುವು. ಹೆಣ್ಣುಜೀವಿ ಉತ್ಪಾದನೆ ಮಾಡುವ ಅಂಡಾಣುವಿನೊಳಗೆ ಭವಿಷ್ಯಜೀವಿಯ ಒಂದು ಸೂಕ್ಷ್ಮಾಕೃತಿ ಇರುತ್ತದೆ ಎಂಬುದಾಗಿ ಕೆಲವು ವಿಜ್ಞಾನಿಗಳು ನಂಬಿದ್ದರು. ಈ ಸೂಕ್ಷ್ಮಜೀವಿಗೆ ಅದರ ಪಿತೃಗಳಂತೆಯೇ ಇರುವ ಎಲ್ಲ ಅಂಗಾಂಗಗಳೂ ಇರುವುದೆಂದೂ ಪುರುಷಜೀವಿಯಿಂದ ಬರುವ ವೀರ್ಯಾಣು ಈ ಅಂಡಾಣು ಬೆಳೆಯಲು ಬೇಕಾದ ಪ್ರಚೋದನೆಯನ್ನು ನೀಡುತ್ತದೆಂದೂ ಪ್ರತಿಪಾದಿಸಿದರು. ಆದರೆ ಇದನ್ನು ಕೆಲವರು ಒಪ್ಪಲಿಲ್ಲ. ಅವರಿಗೆ ಅಂಡಾಣುವಿಗಿಂತ ವೀರ್ಯಾಣು ಮುಖ್ಯವಾಗಿ ಕಂಡುಬಂದಿತು. ಮುಂದೆ ಬೆಳೆಯಬೇಕಾದ ಜೀವಿಯ ಸೂಕ್ಷ್ಮಾಕಾರ ವೀರ್ಯಾಣುವಿನಲ್ಲೇ ಇರುತ್ತದೆಯೆಂದು ಅವರು ಪ್ರತಿಪಾದಿಸಿದರು. ಕಡೆಗೆ ಜಾನ್ ಸ್ವಾಮರ್‌ಡಾಮ್, ಮಾರ್ಸೆಲ್ಲೊ ಮಾಲ್ಪಿಗಿ, ಚಾರ್ಲ್ಸ್ ಬಾಲೆಟ್ ಮುಂತಾದ ವಿಜ್ಞಾನಿಗಳು ಅಂಡಾಣುವೇ ಅತಿಮುಖ್ಯವೆಂದು ಮತ್ತೆ ಪ್ರತಿಪಾದಿಸಿದರು. ಕೀಟವರ್ಗ, ಪ್ರಾಣಿಗಳ ಮೊಟ್ಟೆಗಳು ಹಾಗೂ ಕೋಳಿ ಮೊಟ್ಟೆಯ ಬೆಳವಣಿಗೆಗಳನ್ನು ಅಭ್ಯಾಸಮಾಡಿದ ಅವರು ಅಂಡಾಣುವಿನೊಳಗೇ ಮುಂದಿನ ಪೀಳಿಗೆಯ ಸೂಕ್ಷ್ಮಾಕಾರವಿರುತ್ತದೆ, ವೀರ್ಯಾಣುವಿನಲ್ಲಲ್ಲ ಎಂದು ವಾದಿಸಿದರು. ಆದರೆ ಅವರಿಗೆ ಈ ಅಂಡಾಣುಗಳು ಗರ್ಭಧರಿಸಿದ್ದ ಅಂಡಾಣುಗಳೆಂಬುದು ಹೊಳೆಯಲಿಲ್ಲ. ಚಾರ್ಲ್ಸ್ ಬಾಲೆಟ್ ಮಾತ್ರ ಕೀಟವರ್ಗಗಳಾದ ಏಫಿಡ್‌ಗಳ ಅಂಡಾಣು ವೀರ್ಯಾಣುಗಳ ಸಂಪರ್ಕವಿಲ್ಲದೆ ಬೆಳೆಯುವುದನ್ನು ಪತ್ತೆಹಚ್ಚಿ, ವೀರ್ಯಾಣುಗಳು ಇಲ್ಲದಿದ್ದರೂ ಅಂಡಾಣು ಬೆಳೆದು ಮರಿಯಾಗಬಲ್ಲದು ಎಂದು ತೋರಿಸಿದನು. ಇದು ವಾಸ್ತವವಾದರೂ ಬೆಳವಣಿಗೆಯ ಪೂರ್ವದಲ್ಲಿ ಈ ಅಂಡಾಣುವಿನೊಳಗೆ ಮುಂದಿನ ಪೀಳಿಗೆಯ ಸರ್ವಾಂಗಗಳೂ ಅಡಕವಾಗಿರುತ್ತವೆಂಬುದು ಆಧಾರರಹಿತವಾಗಿತ್ತು.

ಭ್ರೂಣಶಾಸ್ತ್ರದ ಬೆಳವಣಿಗೆಯಲ್ಲಿ ಬರುವ ಮತ್ತೊಂದು ವಾದ ಜೀವಾಂಕುರ ಸೃಷ್ಟಿವಾದ, ಇದು ಅಂಡಾಣುವಿನಲ್ಲಾಗಲೀ ವೀರ್ಯಾಣುವಿನಲ್ಲಾಗಲಿ ಪೀಳಿಗೆಯ ಸೂಕ್ಷ್ಮಾಕೃತಿ ಅಡಗಿರುವುದಿಲ್ಲ. ಭ್ರೂಣದ ಬೆಳವಣಿಗೆಗೆ ಸಹಕಾರಿಯಾಗುವ ಅಂಡಾಣುವಿನೊಳಗೆ ಜೀವರಸ ಹಾಗೂ ಕ್ರೋಮೋಸೋಮುಗಳ ಸಮುದಾಯವಿರುತ್ತವೆ, ಈ ಅಂಡಾಣು ಗರ್ಭಧರಿಸಿದ ಮೊದಲ ಹಂತದಲ್ಲಿ ಭ್ರೂಣದ ಯಾವುದೇ ಅಂಗಗಳಿರುವುದಿಲ್ಲ ಎಂದು ಪ್ರತಿಪಾದಿಸುವ, ಇದನ್ನು ಅರಿಸ್ಟಾಟಲನೂ ಅನುಮೋದಿಸಿರುತ್ತಾನೆ. ಆದರೆ ಇದನ್ನು ಪೂರ್ಣವಾಗಿ ನಂಬಲು ಆಗ ವೈಜ್ಞಾನಿಕ ಪ್ರಯೋಗಗಳ ಸಾಕ್ಷ್ಯಗಳಿಲ್ಲದಿದ್ದುದರಿಂದ ಅದು ಪ್ರಕಾಶಕ್ಕೆ ಬರಲಿಲ್ಲ. 1750ರಲ್ಲಿ ಕ್ಯಾಸ್ಪರ್ ಎಫ್. ವುಲ್ಫ್ ಈ ತತ್ವವನ್ನು ಮತ್ತೆ ಪ್ರತಿಪಾದಿಸಿದ. ಸ್ತನಿಗಳ ಭ್ರೂಣದ ಬೆಳವಣಿಗೆಯ ಬಗ್ಗೆ ಪ್ರಯೋಗಗಳನ್ನು ನಡೆಸಿದ. ಆದ್ದರಿಂದ ಇದರ ಕರ್ತೃ ವುಲ್ಫ್ ಎಂದು ಹೇಳಬೇಕಾಗುತ್ತದೆ. 1821ರಲ್ಲಿ ಜಾನ್ ಫ್ರೆಡ್ರಿಕ್ ಮೆಕೆಲ್ ಎಂಬ ಜೀವವಿಜ್ಞಾನಿ ವುಲ್ಫ್‌ನ ವಾದದಲ್ಲಡಗಿದ್ದ ತಿರುಳನ್ನು ಕಂಡುಕೊಂಡ, ಮುಂದೆ ಅವನ ನಂಬಿಕೆ ಸರ್ವ ಸಾಮಾನ್ಯವಾಯಿತು.

ಈ ತತ್ತ್ವದ ಪ್ರಕಾರ ಪ್ರತಿಯೊಂದು ಜೀವಿಯೂ ತನ್ನದೇ ಆದ ಅನುವಂಶೀಯತೆಯನ್ನು ಹೊಂದಿದೆ. ಈ ಜೀವಿಯ ಸರ್ವ ಕ್ರಿಯೆಗಳೂ ಕೂಡ ಅನುವಂಶೀಯತೆಯ ಚೌಕಟ್ಟಿನಲ್ಲಿಯೇ ನಡೆಯುತ್ತವೆ. ಅನುವಂಶೀಯತೆ ಸಫಲವಾಗಬೇಕಾದರೆ ಪರಿಸರ ಅಗತ್ಯ. ಆದುದರಿಂದ ಯಾವುದೇ ಜೀವಿ ತನ್ನ ಬೆಳವಣಿಗೆಯ ಪೂರ್ಣತೆಯನ್ನು ಸಾಧಿಸಬೇಕಾದರೆ ಪರಿಸರವೂ ಮುಖ್ಯ. ಇವೆರಡು ಸರಿಯಾಗಿದ್ದಾಗ ಮಾತ್ರ ಬೆಳವಣಿಗೆ ಪರಿಪೂರ್ಣವಾಗುತ್ತದೆ. ಒಂದು ಕಪ್ಪೆಯ ಅಂಡಾಣು ಕಪ್ಪೆಯಾಗಲು ಬೇಕಾದ ಅನುವಂಶೀಯ ಕಾರ್ಯಸೂಚಿ ಇರುತ್ತವೆ. ಅದರಂತೆಯೇ ಮಾನವ ಭ್ರೂಣ ಮಾನವನಾಗಿ ಬೆಳೆಯಲು ಅನುವಂಶೀಯ ಗುಣಾಧಾರಗಳನ್ನು ಹೊಂದಿರುತ್ತದೆ. ಈ ಅನುವಂಶೀಯ ಗುಣಗಳಿಗೆ ಸೂಕ್ತ ಪರಿಸರ ಇದ್ದಾಗ ಮಾತ್ರ ಅವುಗಳ ಬೆಳವಣಿಗೆ ಸಾಧ್ಯ.

ಸುಸ್ಥಿತಿಯಲ್ಲಿರುವ ಒಂದು ಭ್ರೂಣ ಸರಿಯಾದ ಪರಿಸರದಲ್ಲಿದ್ದಾಗ ಅದರಲ್ಲಿ ಊಹೆಗೆ ನಿಲುಕದಂಥ ಬದಲಾವಣೆಗಳಾಗುತ್ತಿರುತ್ತವೆ. ಪ್ರತಿ ಬದಲಾವಣೆಯೂ ಅತಿಸೂಕ್ಷ್ಮವೂ ಸಂಕೀರ್ಣವೂ ಆದದ್ದು. ಇಂಥದರಲ್ಲಿ ಈ ಭ್ರೂಣದ ಪರಿಸರವನ್ನೇನಾದರೂ ಉದ್ದೇಶಪೂರ್ವಕವಾಗಿ ಪ್ರಯೋಗಕಾರ ಬದಲಾಯಿಸಿದರೆ ಅದರ ಬೆಳವಣಿಗೆ ಅಸ್ತವ್ಯಸ್ತವಾಗಿ, ಹಾನಿಯಾಗುತ್ತದೆ. ಭ್ರೂಣದ ಬೆಳವಣಿಗೆ ಕುಂಠಿತವಾಗುತ್ತದೆ. ಆದುದರಿಂದ ಗರ್ಭಧರಿಸಿರುವ ಮೊಟ್ಟೆ ತನ್ನ ಅನುವಂಶಿಕವಸ್ತುವಿನ ನಿರ್ದೇಶನದಂತೆ ಒಂದು ಗೊತ್ತಾದ ಪರಿಸರದಲ್ಲಿ ಹಂತ ಹಂತವಾಗಿ ಪರಿವರ್ತನೆ ಹೊಂದಿ ತನ್ನ ಅಂತಿಮ ಸ್ವರೂಪವನ್ನು ಪಡೆಯುತ್ತದೆ. ಆದುದರಿಂದ ಅಂಡಾಣುವಿನಲ್ಲಾಗಲೀ ಅಥವಾ ವೀರ್ಯಾಣುವಿನಲ್ಲಾಗಲಿ ಜೀವಿಯ ಪೂರ್ಣಚಿತ್ರ ಇರುವುದಿಲ್ಲ.

ಭ್ರೂಣಶಾಸ್ತ್ರದ ಬೆಳವಣಿಗೆಗೆ ವ್ಯಾನ್‌ಬೇರ್ (1792–1876) ಪ್ರತಿಪಾದಿಸಿದ ಜರ್ಮ್ ಲೇಯರ್‌ವಾದವೂ ನೆರವಾಯಿತು. ಅಲ್ಲದೆ ಕೆಲವು ಸ್ತನಿಗಳು ಮೊಟ್ಟೆಯಿಡುವುದು ಬೆಳಕಿಗೆ ಬಂದಮೇಲೆ ಅದಕ್ಕೆ ಸಾಮಾನ್ಯ ಸ್ವರೂಪವೂ ಗೋಚರಿಸ ಹತ್ತಿತ್ತು. ಅಷ್ಟರಲ್ಲಿ ಭ್ರೂಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಅನೇಕ ವಿಜ್ಞಾನಿಗಳ ಅಭಿಪ್ರಾಯವನ್ನು ಒಂದೆಡೆ ಕ್ರೋಡೀಕರಿಸಲಾಯಿತು. ಇವೆಲ್ಲದರ ಫಲವಾಗಿ ಭ್ರೂಣಶಾಸ್ತ್ರಕ್ಕೆ ಒಂದು ಹೊಸ ತಿರುವು ಸಿಕ್ಕಿತು.

ಜೀವಕೋಶತತ್ವ ಪ್ರತಿಪಾದನೆಯಾದಮೇಲೆ ಭ್ರೂಣಶಾಸ್ತ್ರಕ್ಕೆ ಸಂಬಂಧಿಸಿದ ಪ್ರಯೋಗಗಳಿಗೆ ಒಂದು ಹೊಸ ಹಾದಿ ತೆರೆಯಿತು. ಅಂಡಾಣು ಒಂದು ಕೋಶವೆಂತಲೂ ಹಾಗೂ ಆ ಕೋಶ ವಿಭಜನೆಯಾಗಿ ಜೀವಾಂಕುರವಾಗಲು ಅದರೊಡನೆ ವೀರ್ಯಾಣು ಮಿಲನಗೊಳ್ಳಬೇಕೆಂತಲೂ ಈ ರೀತಿ ಇವೆರಡೂ ಮಿಲನಗೊಳ್ಳುವ ಕ್ರಿಯೆಗೆ ನಿಶೇಚನವೆಂತಲೂ ಕರೆಯಲಾಯಿತು. ಹೀಗೆ ಇವೆರಡರ ಮಿಲನದಿಂದ ಉಂಟಾಗುವ ಸಂಯುಕ್ತ ಜೀವಕೋಶಕ್ಕೆ ನಿಶೇಚಿತ ಅಂಡಾಣು (ಜೈಗೋಟ್) ಎಂದು ಹೆಸರು. ಮುಂದೆ ಈ ಜೈಗೋಟ್ ಕೋಶ ವಿಭಜನೆ ಹೊಂದಿ, ಬೆಳೆದು ಭ್ರೂಣವಾಗುತ್ತದೆ. ಎಂದರೆ ತಡೆಯಿಲ್ಲದೇ ನಡೆಯುವ ಕೋಶವಿಭಜನೆ ಮತ್ತು ಕೋಶಗಳ ಸಕಾಲಿಕ ವಿಭೇದೀಕರಣವೇ ಭ್ರೂಣದ ಬೆಳವಣಿಗೆಯೆಂದು ಕರೆಯಬಹುದು.

1859ರಲ್ಲಿ ಚಾರಲ್ಸ್ ಡಾರ್ವಿನ್ ಜೀವ ವಿಕಾಸತತ್ವವನ್ನು ಪ್ರತಿಪಾದಿಸಿದ ಮೇಲಂತೂ ಭ್ರೂಣಶಾಸ್ತ್ರದ ಬೆಳವಣಿಗೆಯಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಯಿತು. ಬಿಡಿಸಲಾಗದಿದ್ದ ಭ್ರೂಣ ಬೆಳವಣಿಗೆಯ ಕ್ಲಿಷ್ಟಸಮಸ್ಯೆಗಳಿಗೆ ವಿಕಾಸ ತತ್ವ ಉತ್ತರ ನೀಡಿತು. ಜೀವವಿಜ್ಞಾನದ ಪ್ರಯೋಗಗಳಿಗೆ ಹೊಸ ಬಗೆಯ ಉಪಕರಣಗಳು ಬಳಕೆಗೆ ಬಂದುವು. ಭ್ರೂಣದ ಬೆಳವಣಿಗೆಯ ಪ್ರಾರಂಭದಿಂದ ಹಿಡಿದು ಪೂರ್ಣಗೊಳ್ಳುವವರೆಗೆ ಅದನ್ನು ಪ್ರತಿ ಹಂತದಲ್ಲಿಯೂ ಅಭ್ಯಸಿಸಲು ಈಗ ಸಾಧ್ಯ.

ಭ್ರೂಣಶಾಸ್ತ್ರದ ಬೆಳವಣಿಗೆಯಲ್ಲಿ ಬರುವ ಮತ್ತೊಂದು ಅಮೋಘ ತತ್ವವೆಂದರೆ, **ಹೆಕೆಲ್**ನ ಜೀವಾನುವಂಶೀಯ ತತ್ವ. ಇದನ್ನು ಫ್ರಿಟ್ಸ್ ಮುಲ್ಲರ್ (1821–97) ಹೆಕೆಲ್‌ನಿಗಿಂತ ಹಿಂದೆಯೇ ಪ್ರತಿಪಾದಿಸಿದ್ದ. ಬೆಳೆಯುತ್ತಿರುವ ಭ್ರೂಣ ತನ್ನ ಬೆಳವಣಿಗೆಯ ವಿವಿಧ ಹಂತಗಳಲ್ಲಿ ತನ್ನ ಪೂರ್ವಜರನ್ನು ನೆನೆಸಿಕೊಳ್ಳುತ್ತದೆ ಎಂಬುದೇ ಈ ತತ್ವದ ತಿರುಳು. ಮುಲ್ಲರ್ ಈ ತತ್ವವನ್ನು ಪ್ರತಿಪಾದಿಸಬೇಕಾದರೆ ಕ್ರಸ್ಟೇಷಿಯಾ ವರ್ಗದ ಭ್ರೂಣ ಬೆಳವಣಿಗೆಯನ್ನು ಕೂಲಂಕಷವಾಗಿ ಅಭ್ಯಸಿಸಿದನು. ಆ ವರ್ಗದ ವಿವಿಧ ಪ್ರಭೇದಗಳ ಭ್ರೂಣಗಳಲ್ಲಿ ವೈವಿಧ್ಯ ಇದ್ದರೂ ಅವೆಲ್ಲವೂ ನಾಪ್ಲಿಯಸ್ ಲಾರ್ವದ ಹಂತದಲ್ಲಿ ಒಂದೇ ತೆರನಾಗಿರುತ್ತವೆ. ಕ್ರಸ್ಟೇಷಿಯ ವರ್ಗದ ಎಲ್ಲ ಜೀವಿಗಳಲ್ಲಿಯೂ ಅವುಗಳ ಭ್ರೂಣ ನಾಪ್ಲಿಯಸ್ ಲಾರ್ವವಾಗಿಯೇ ಬೆಳೆದು ಮುಂದೆ ಬೇರೆ ಬೇರೆ ದಾರಿಯನ್ನು ಹಿಡಿಯುತ್ತವೆ. ಜೀವ ವಿಜ್ಞಾನಕ್ಕೆ ಅಕಶೇರುಕ ಭ್ರೂಣಶಾಸ್ತ್ರದ ಮಹತ್ವದ ಕೊಡುಗೆಯೆಂದರೆ ಈ 'ಜೀವಾನುವಂಶೀಯ ತತ್ವ'.

ಹೆಕೆಲ್ಲನ ಶಿಷ್ಯ, ಆಸ್ಕರ್ ಹರ್ಟ್‌ವಿಗ್ ಪ್ರಪ್ರಥಮವಾಗಿ ಜೀವಿಗಳಲ್ಲಿ ಫಲೀಕರಣ ಕ್ರಿಯೆಯನ್ನು ಕಂಡನು. ಈತ ಕಡಲಕುಡಿಕೆ ಅಂಡಾಣುವಿನೊಳಕ್ಕೆ ಆ ಜೀವಿಗಳ ವೀರ್ಯಾಣು ಪ್ರವೇಶಿಸುವುದನ್ನು ಸೂಕ್ಷ್ಮದರ್ಶಕದಲ್ಲಿ ಕಂಡನು. ಅಂಡಾಣು ಹಾಗೂ ರೇತಸ್ಸು ಇವೆರಡರ ಮಿಲನವೇ ಫಲೀಕರಣ (ನಿಶೇಚನ) ಎಂದು ಮೊಟ್ಟಮೊದಲು ಪ್ರಕಟಿಸಿದನು. ಈತನೂ ಮತ್ತು ಇವನ ಸೋದರ ರಿಚರ್ಡ್ ಹರ್ಟ್‌ವಿಗ್ ಭ್ರೂಣಶಾಸ್ತ್ರಕ್ಕೆ ಮಹತ್ತರ ಕೊಡುಗೆಯನ್ನು

ನೀಡಿದರು. ಭ್ರೂಣದ ಬೆಳೆವಣಿಗೆಯ ಕಾಲದಲ್ಲಿ ಉದಯಿಸುವ ನಡುಮೂಲಪದರ, ದೇಹದೊಳಗಿನ ಅವಕಾಶವಾದ ಸೀಲೋಮ್ ಬಗ್ಗೆ ಇವರು ನಡೆಸಿದ ಸಂಶೋಧನೆಗಳು ಅತಿ ಮುಖ್ಯವಾದವು. ಅಲ್ಲದೆ ಇವರು ಕೃತಕ ಫಲವಂತಿಕೆಯ ಕ್ರಿಯೆಯನ್ನೂ ಜೀವಿಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಿದರು.

ಭ್ರೂಣಶಾಸ್ತ್ರ ಸಂಶೋಧನೆಗಳಿಗೆ ಹೊಸ ರೂಪವನ್ನು ಕೊಟ್ಟ ಒಂದು ಹೊಸ ತತ್ತ್ವವೆಂದರೆ ಬೆಳವಣಿಗೆಯ ಯಾಂತ್ರಿಕ ನಿಯಮಬದ್ಧತೆಯ ತತ್ತ್ವ ಇದರಂತೆ ಭ್ರೂಣದ ಬೆಳವಣಿಗೆಯನ್ನು ಪ್ರಯೋಗಕ್ಕೆ ಒಳಪಡಿಸಿ ಅದರ ಪ್ರತಿಯೊಂದು ಹಂತವನ್ನೂ ವೈಜ್ಞಾನಿಕ ಯಂತ್ರೋಪಕರಣಗಳ ಸಹಾಯದಿಂದ ವಿವರವಾಗಿ ಪರೀಕ್ಷಿಸಿ ನೋಡಬಹುದು. ಭ್ರೂಣದ ಬೆಳವಣಿಗೆ ಯಾಂತ್ರಿಕವಾಗಿ ನಿಯಮಬದ್ಧವಾಗಿ ಸಾಗುವ ಕ್ರಿಯೆ. ಈ ಕ್ರಿಯೆಯನ್ನು ಯಾಂತ್ರಿಕ ತತ್ತ್ವಗಳ ಮೂಲಕ ವಿವರಿಸಬಹುದು. ಭ್ರೂಣದ ಬೆಳವಣಿಗೆಯ ಯಾವುದಾದರೊಂದು ಹಂತ ಮುಂದಿನ ಇನ್ನೊಂದು ಅನುಕ್ರಮ ಹಂತಕ್ಕೆ ನಾಂದಿ. ಆ ಇನ್ನೊಂದು ಹಂತ ಭ್ರೂಣದ ವಿಭೇದೀಕರಣದ ಮತ್ತೊಂದು ಹಂತದ ಹಾದಿಯಾಗುತ್ತದೆ. ಈ ರೀತಿ ಭ್ರೂಣದ ಬೆಳವಣಿಗೆ ಯಾಂತ್ರಿಕವಾಗಿ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸಾಗುತ್ತದೆ. ಇದನ್ನೇ ಬೆಳವಣಿಗೆಯ ಯಾಂತ್ರಿಕತೆಯೆನ್ನುವುದು. ಅಂಡಾಣು ವೀರ್ಯಾಣುವಿನೊಡನೆ ಮಿಲನವಾಗಿ ಯಾಂತ್ರಿಕವಾಗಿ ಬದಲಾಗುತ್ತಾ ಭ್ರೂಣವಾಗಿ ಬೆಳೆದು ಮುಂದೆ ಪ್ರಬುದ್ಧಜೀವಿಯಾಗಿ ವಿಕಸಿಸಿ ಮತ್ತೆ ತನ್ನ ಅಂಗಾಂಗಗಳಲ್ಲಿ ಲೈಂಗಿಕ ಕೋಶಗಳನ್ನು ಉತ್ಪತ್ತಿ ಮಾಡುತ್ತದೆ. ಈ ಲೈಂಗಿಕಕೋಶಗಳು ಮತ್ತೆ ಮಿಲನಗೊಂಡು ತಮ್ಮ ಪೀಳಿಗೆಯನ್ನು ಮುಂದುವರಿಸುತ್ತವೆ. ಇದು ನಿರಂತರ.

ಭ್ರೂಣಶಾಸ್ತ್ರದ ವಿಕಾಸಕ್ಕೆ ಆಗಸ್ಟ್ ವೀಸ್‌ಮನ್‌ನ ಕೊಡುಗೆಯೂ ಸಹಾಯ ಮಾಡಿದೆ. ಈತನು ಕೀಟಗಳ ಹಾಗೂ ಇತರ ಅಕಶೇರುಕಗಳ ಅಂಡಾಣುಗಳು ಬೆಳೆಯುವ ವಿಧಾನವನ್ನು ಅಭ್ಯಾಸ ಮಾಡಿದನು. ಈ ಜೀವಿಗಳ ಫಲಿತ ಅಂಡಾಣು ವಿಭಜನೆ ಹೊಂದುತ್ತಾ ಹೋಗುವುದನ್ನು ಪರಿಶೀಲಿಸಿದನು. ಆ ವಿಭಜನೆಯಿಂದಾಗಿ ಜೀವಕೋಶಗಳ ಸಂತತಿಯಲ್ಲಿ ಕೆಲವೇ ಜೀವಕೋಶಗಳು ಪ್ರಬುದ್ಧಜೀವಿಯ ಅಂಡಾಣು ಜನಾಂಗಗಳನ್ನು ಕೊಡುತ್ತವೆಯೆಂಬುದನ್ನು ಕಂಡುಕೊಂಡನು. ಉದಾಹರಣೆಗೆ ಜಂತುಹುಳುಗಳಲ್ಲಿ (ಅಸ್ಕಾರಿಸ್) ಎರಡನೇ ಕ್ಲೀವೇಜ್ ಕ್ರಿಯೆಯಿಂದ ಉತ್ಪತ್ತಿಯಾದ ಒಂದು ಕೋಶ ಮತ್ತೆಲ್ಲ ಕೋಶಗಳಿಂದ ಸ್ವಲ್ಪ ಸರಿದು ಮುಂದೆ ಆ ಜೀವಿಯ ಜನನಾಂಗವಾಗುವುದನ್ನು ವಿವರಿಸಿದನು. ಈ ಜನನಾಂಗ ವೃಷಣವಾಗಬಹುದು ಅಥವಾ ಅಂಡಾಶಯವಾಗಬಹುದು. ಇನ್ನುಳಿದ ಜೀವಕೋಶಗಳು ಪ್ರಾಣಿಯ ಶರೀರರಚನೆಗೆ ಸಹಾಯ ಮಾಡುತ್ತವೆಯೇ ವಿನಾ ಸಂತಾನೋತ್ಪತ್ತಿಕ್ರಿಯೆ ಅವುಗಳಿಂದ ಸಾಧ್ಯವಿಲ್ಲ. ಆದುದರಿಂದ ಈತ ಜೀವಿಯ ಶರೀರದಲ್ಲಿ ಎರಡು ಅಂಗಗಳನ್ನು ಗುರುತಿಸಿದನು. ಮೊದಲನೆಯದು ಸಂತಾನೋತ್ಪತ್ತಿಯಲ್ಲಿ ಭಾಗವಹಿಸುವ ಭಾಗ; ಎರಡನೆಯದು, ಈ ಸಂತಾನೋತ್ಪತ್ತಿ ವಿಭಾಗಕ್ಕೆ ಸಹಾಯ ಮಾಡುವ ಮಿಕ್ಕ ಶರೀರಭಾಗ. ಅವನು, ಸಂತಾನೋತ್ಪತ್ತಿ ಮಾಡುವ ಭಾಗ ಶರೀರದ ಇತರ ಭಾಗದ ಉಪಜೀವಿ ಇದ್ದಂತೆ ಎಂದು ಪ್ರತಿಪಾದಿಸಿದನು. ಆದ್ದರಿಂದ ವೀಸ್‌ಮನ್, ಜೀವಿಗಳು ಅಮರವಲ್ಲದಿದ್ದರೂ ಆ ಸಂತಾನೋತ್ಪತ್ತಿಯ ಭಾಗ ಅಮರವಾದದ್ದೆಂದು ಸಾರಿದ.

ಅಕಶೇರುಕ ಭ್ರೂಣಶಾಸ್ತ್ರದ ಮುನ್ನಡೆಗೆ ಮೊಸಾಯಿಕ್ ತತ್ತ್ವವೂ ಸಹಾಯಮಾಡಿದೆ. ಹಿಸ್ ಪ್ರತಿಪಾದಿಸಿದ ಈ ತತ್ತ್ವವನ್ನು ವಿಲ್‌ಹೆಲ್ಮ್‌ರೂಕ್ಸ್ ಎತ್ತಿ ಹಿಡಿದ. ಬೆಳವಣಿಗೆಯ ಪೂರ್ವಾವಸ್ಥೆಯಲ್ಲಿರುವ ಅಂಡಾಣುವಿನೊಳಗಿರುವ ಕೋಶರಸದಲ್ಲಿ ವಿವಿಧ ಭಾಗಗಳು ಪದರಗಳಂತಿದ್ದು ಮುಂದೆ ಆಯಾ ಅಂಗಗಳನ್ನು ಕೊಡುತ್ತವೆ ಎಂಬುದು ಈ ಮೊಸಾಯಿಕ್ ತತ್ತ್ವದ ತಿರುಳು. ಅಂಡಾಣು ಇನ್ನೂ ಅಂಡಾಶಯದೊಳಗಿರುವಾಗಲೆ ಅದರಲ್ಲಿ ಕೆಲವು ವಿಶಿಷ್ಟ ಭಾಗಗಳು ಉದಯವಾಗುತ್ತವೆಯೆಂದು ರೂಕ್ಸ್ ತಿಳಿಸಿದ. ಈ ತತ್ತ್ವವನ್ನು ಊರ್ಜಿತಗೊಳಿಸುವುದಕ್ಕಾಗಿ ಕಶೇರುಕ ಹಾಗೂ ಅಕಶೇರುಕ ಅಂಡಾಣುಗಳನ್ನು ಅನೇಕ ವಿಧವಾದ ಪ್ರಯೋಗಗಳಿಗೆ ಒಳಪಡಿಸಿ ಅದರ ಬೆಳವಣಿಗೆಯನ್ನು ಪ್ರತಿಹಂತದಲ್ಲಿಯೂ ಪರಿಶೀಲಿಸಿದ. ರೂಕ್ಸ್ ಮುಖ್ಯವಾಗಿ ಕಪ್ಪೆಗಳ ಮೊಟ್ಟೆಗಳ ಮೇಲೆ ಪ್ರಯೋಗಗಳನ್ನು ನಡೆಸಿದ. ನಿಶೇಚಿತ ಅಂಡಾಣುವಿನ ಪ್ರತಿ ಭಾಗವನ್ನೂ ಭೌತಿಕವಾಗಿ ಹಾಗೂ ರಾಸಾಯನಿಕವಾಗಿ ವಿಶ್ಲೇಷಿಸಿ ಅದರಲ್ಲಿ ಪ್ರಾಣಿವಲಯ ಹಾಗೂ ಆಹಾರ ವಲಯವನ್ನು ಗುರುತಿಸಿದ. ನಿಶೇಚಿತ ಅಂಡಾಣುವಿನಿಂದ ಉತ್ಪತ್ತಿಯಾದ ಜೀವಕೋಶಗಳ ಜೀವರಸವನ್ನೂ ಜೀವಕೋಶಗಳ ಭಾಗಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ ಕೋಶ ವಿಭಜನೆಯ ಕ್ರಿಯೆ ಮುಂದುವರಿದಂತೆ ಹಿಂದಿದ್ದ ಕೋಶಗಳಿಂದ ಉದಯವಾದ ಹೊಸ ಕೋಶಗಳು ಚಿಕ್ಕದಾಗಿರುವುದನ್ನು ಹಾಗೂ ಅವುಗಳಲ್ಲಿ ಕೆಲವು ನರಮಂಡಲ ಕೆಲವು ಮಾಂಸಖಂಡ, ಇತ್ಯಾದಿ ಭಾಗಗಳಾಗಿ ಬೆಳೆಯುವುದನ್ನು ಕಂಡುಕೊಂಡ. ಈ ರೀತಿಯ ಸಮಗ್ರ ಪರಿಶೀಲನೆಯನ್ನು ಹಿಮ್ಮುಖವಾಗಿ ಕೊಂಡೊಯ್ದು ಅಂಡಾಣುವಿನೊಳಗಿನ ಕೋಶರಸದ ವಿವಿಧ ಭಾಗಗಳಿಗೆ ಸಂಬಂಧ ಕಲ್ಪಿಸಿದ.

ಮೊಸಾಯಿಕ್ ತತ್ತ್ವವನ್ನು ಪರಿಶೀಲಿಸಲು ವಿವಿಧ ಪ್ರಭೇದಗಳ ಜೀವಿಗಳ ಅಂಡಾಣು ಯನ್ನು ಪ್ರಯೋಗಕ್ಕೊಳಪಡಿಸಲಾಯಿತು. ಕೆಲವು ಜೀವಿಗಳ ಅಂಡಾಣು ಮೊಸಾಯಿಕ್ ತತ್ತ್ವವನ್ನು ಪರಿಪಾಲಿಸಿದರೆ ಮತ್ತೆ ಕೆಲವು ಜೀವಿಗಳ ಅಂಡಾಣುಗಳು ಈ ತತ್ವಕ್ಕೆ ಹೊರತಾಗಿದ್ದವು. ಆದುದರಿಂದ ಮೊಸಾಯಿಕ್ ತತ್ತ್ವವನ್ನು ಸಂಪೂರ್ಣವಾಗಿ ಎಲ್ಲಾ ಜೀವಿಗಳಿಗೂ ಅನ್ವಯಿಸುವುದು ಕಷ್ಟ. ಬಹುತೇಕ ಅಕಶೇರುಕ ಜೀವಿಗಳು ಮೊಸಾಯಿಕ್ ಅಂಡಾಣುವನ್ನು ಹೊಂದಿವೆ. ಮತ್ತೆ ಕೆಲವೇ ಕೆಲವು ಅಕಶೇರುಕಗಳು ಇದಕ್ಕೆ ವಿರುದ್ಧವಾದ ರೀತಿಯ ಅಂಡಾಣುಗಳನ್ನು ಹೊಂದಿವೆ. ಈ ರೀತಿಯ ಮೊಟ್ಟೆಗಳನ್ನು ವಿಧಿಬದ್ಧ ಅಂಡಾಣುಗಳು ಎಂದು ಹೇಳುತ್ತಾರೆ. ವಿಧಿಬದ್ಧ ಅಂಡಾಣುಗಳ ಕೋಶರಸ ಮೊಸಾಯಿಕ್ ಅಂಡಾಣುಗಳ ಕೋಶರಸದಂತೆ ನಾನಾ ವಲಯಗಳನ್ನು ಹೊಂದಿಲ್ಲ. ಇಲ್ಲಿ ವಿಭಜನೆಯಾದ ನಿಶೇಚಿತ ಅಂಡಾಣುವಿನ ಕೋಶಗಳನ್ನು ಬೇರ್ಪಡಿಸಿ ಬೆಳೆಸಿದರೆ ಅವು ಎರಡು ಲಾರ್ವಾಗಳಾಗಿ ಬೆಳೆಯುವುದು ಕಂಡುಬಂತು. ಇನ್ನೂ ಮುಂದುವರಿದ ಪ್ರಯೋಗಗಳು ಜೈಗೋಟ್ ವಿಭಜನೆಯಿಂದ 4 ಜೀವಕೋಶಗಳು ಹುಟ್ಟಿಬಂದ ಅವಸ್ಥೆಯಲ್ಲಿ ಅವುಗಳನ್ನು ಬೇರ್ಪಡಿಸಿ 4 ಲಾರ್ವಾಗಳನ್ನು ಬೆಳೆಸಿರುವುದೂ ಉಂಟು. ಅಂದಮೇಲೆ ಈ ನಿಶೇಚಿತ ಅಂಡಾಣುಗಳ ಕೋಶರಸದಲ್ಲಿ ಜೈಗೋಟ್ ವಿಭಜನೆಯ ಪ್ರಥಮ ಹಂತದ ಪ್ರತಿಯೊಂದು ಕೋಶಗಳಲ್ಲಿಯೂ ಸಂಪೂರ್ಣ ಜೀವಿಯಾಗಲು ಬೇಕಾದ ಪರಿಕರಗಳೆಲ್ಲವೂ ಕಂಡುಬರುತ್ತವೆ. ಆದರೆ ಮೊಸಾಯಿಕ್ ಅಂಡಾಣುಗಳಲ್ಲಿ ಈ ರೀತಿ ಇಲ್ಲ. ಮೃದ್ವಂಗಿಗಳ ಹಾಗೂ ವಲಯವಂತಗಳ ಅಂಡಾಣುಗಳು ಮೊಸಾಯಿಕ್ ಅಂಡಾಣುಗಳಿಗೆ ಉತ್ತಮ ಉದಾಹರಣೆ. ಕಣಿಚರ್ಮಿಗಳಾದ ನಕ್ಷತ್ರಮೀನುಗಳು, ಕಡಲ ಕುಡಿಕೆಗಳು ವಿಧಿಬದ್ಧ ಮೊಟ್ಟೆಗಳನ್ನು ಹೊಂದಿವೆ. ಕಾನ್‌ಕ್ಲಿನ್ ಈ ಅಂಡಾಣುಗಳ ಜೈಗೋಟ್ ಅವಸ್ಥೆಯಲ್ಲಿ ನಡೆಯುವ ವಿಭಜನೆಯನ್ನು ನಿರ್ದಿಷ್ಟ ಹಾಗೂ ಅನಿರ್ದಿಷ್ಟ ಎಂದು ಎರಡು ರೀತಿಯಾಗಿ ವಿಂಗಡಿಸಿದ್ದಾನೆ.

ಇಷ್ಟೆಲ್ಲ ಪ್ರಯೋಗಗಳು ನಡೆದಿದ್ದರೂ ರೂಕ್ಸ್ ಪ್ರತಿಪಾದಿಸಿದ ಮೊಸಾಯಿಕ್ ತತ್ವ ಇನ್ನೂ ಜೀವಂತವಾಗಿ ಉಳಿದಿದೆ. ಈ ತತ್ತ್ವಕ್ಕೆ ಪ್ರಯೋಗಗಳ ಸಾಕ್ಷ್ಯಾಧಾರ ಹೆಚ್ಚಾಗಿ ಅಕಶೇರುಕ ಜೀವಿಗಳ ಮೊಟ್ಟೆಗಳಲ್ಲಿ ಕಂಡುಬಂದಿದೆ. ಮೃದ್ವಂಗಿಗಳ ಮತ್ತು ವಲಯವಂತಗಳ ಮೊಟ್ಟೆ ಬೆಳೆಯುವಾಗ ಕಂಡುಬರುವ ವೈಶಿಷ್ಟ್ಯಗಳನ್ನು, ಗರ್ಭಕಟ್ಟಿದ ಮೊಟ್ಟೆಯಿಂದ ಉದಯವಾದ ಪ್ರತಿ ಜೀವಕೋಶಗಳ ಬೆಳವಣಿಗೆಯನ್ನು, ಅವು ಮುಂದೆ ಕೊಡುವ ಅಂಗಗಳನ್ನು ನಿರ್ದಿಷ್ಟವಾಗಿ ಗುರುತಿಸಲಾಗಿದೆ. ಇದಕ್ಕೆ ಕೋಶವಂಶಾವಳಿ ಎನ್ನುವರು. ಈ ಬೆಳವಣಿಗೆಯ ಹಂತಗಳ ಅಧ್ಯಯನದಿಂದ ಅಕಶೇರುಕ ಭ್ರೂಣಶಾಸ್ತ್ರ ಬಹುವಾಗಿ ಪುಷ್ಟಿಗೊಂಡಿತು.

ನಿಶೇಚಿತ ಅಂಡಾಣುವಿನ ವಿಭಜನೆಯಿಂದ ಹುಟ್ಟಿಬರುವ ಬ್ಲಾಸ್ಟುಲ ಅವಸ್ಥೆಯಲ್ಲಿ ಬರುವ ಜೀವಕೋಶಗಳ ವಿವಿಧ ಭಾಗಗಳು ಮುಂದೆ ಬೆಳೆಯುವ ಭ್ರೂಣ ಇಂಥ ಅಂಗವನ್ನೇ ಕೊಡುತ್ತವೆ ಎಂಬುದನ್ನು ಪತ್ತೆಹಚ್ಚುವುದು ಈಗ ಸಾಧ್ಯವಾಗಿದೆ. ಜೈಗೋಟ್ ವಿಭಜನೆಯಿಂದ ಉತ್ಪತ್ತಿಯಾಗುವ ಜೀವಕೋಶಗಳ ಪ್ರಾಥಮಿಕ ವಿಭಜನಾಹಂತವನ್ನು ಗುರುತಿಸಿ ಹಾಗೂ ಪ್ರಾಥಮಿಕ ಹಂತದಲ್ಲಿದ್ದ ಜೀವಕೋಶಗಳನ್ನು ಗುರುತಿಟ್ಟುಕೊಂಡು ಅವುಗಳ ಬೆಳವಣಿಗೆಯನ್ನು ನೇರವಾಗಿ ಜೀವಿ ರೂಪುಗೊಳ್ಳುವವರೆಗೂ ಪರಿಶೀಲಿಸಿ ಅದು ಕೊನೆಯ ಘಟ್ಟದಲ್ಲಿ ಏನಾಗುತ್ತದೆಂಬುದನ್ನು ಅರಿಯುವುದೇ ಕೋಶವಂಶಾವಳಿಯ ಅಭ್ಯಾಸ. ಇದು ಭ್ರೂಣಶಾಸ್ತ್ರಕ್ಕೆ ಮಾತ್ರ ಸೀಮಿತವಲ್ಲ, ಜೀವಕೋಶಶಾಸ್ತ್ರಕ್ಕೂ ಸೇರಿದೆ. ಈ ಅಭ್ಯಾಸದಿಂದಾಗಿ ರೂಕ್ಸ್‌ನ ಮೊಸಾಯಿಕ್ ತತ್ತ್ವಕ್ಕೆ ಹೆಚ್ಚಿನ ವೈಜ್ಞಾನಿಕ ಬೆಲೆ ದೊರಕಿತು; ಪ್ರಾಯೋಗಿಕ ಬೆಳವಣಿಗೆಯ ಹಂತದಲ್ಲಿ ಈ ಕೋಶವಂಶಾವಳಿಯನ್ನು ಗುರುತಿಸಲಾಯಿತು. ಅಮೆರಿಕದ ಜೀವಕೋಶ ಶಾಸ್ತ್ರಜ್ಞರಾದ ಕಾಕ್ಲಿನ್, ಹ್ಯಾರಿಸನ್, ರೋಯೆಬ್ ಬ್ರಾಷೆ, ಹರ್ಟ್‌ವಿಗ್, ವೀಸ್‌ಮನ್ ಮುಂತಾದವರು ರೂಕ್ಸ್ ತತ್ತ್ವವನ್ನು ಒಪ್ಪಿಕೊಂಡರು. ಇವರು ಸಾಮಾನ್ಯವಾಗಿ ಅಕಶೇರುಕ ಗುಂಪಿನ ಎಲ್ಲಾ ವಂಶದ ಪ್ರಭೇದಗಳ ಬೆಳವಣಿಗೆಯಲ್ಲೂ ಕೋಶವಂಶಾವಳಿಯನ್ನು ಗುರುತಿಸಬಹುದು ಎಂಬ ತೀರ್ಮಾನಕ್ಕೆ ಬಂದರು. ಕೆಲವು ಕಶೇರುಕಗಳೂ ಕೋಶವಂಶಾವಳಿ ಯನ್ನು ಹೊಂದಿವೆ ಎಂಬುದಾಗಿಯೂ ತಿಳಿಸಿದರು. ಕೋಶವಂಶಾವಳಿಯನ್ನು ಸಂಪೂರ್ಣವಾಗಿ ಅರಿಯಬೇಕಾದರೆ ಮೊಟ್ಟೆಯೊಳಗೆ ಇರುವ ವಿವಿಧ ವಲಯಗಳನ್ನು ಗುರುತಿಸಿಕೊಳ್ಳಬೇಕು. ವಿವಿಧ ವಲಯಗಳಲ್ಲಿರುವ ರಾಸಾಯನಿಕ ವಸ್ತುಗಳನ್ನು ಅರ್ಥಮಾಡಿಕೊಳ್ಳಬೇಕು. ಯುಗ್ಮಜದ ವಿಭಜನೆಯಿಂದಾಗಿ ಹುಟ್ಟಿಬರುವ ಬ್ಲಾಸ್ಟುಲ ಹಾಗೂ ಗ್ಯಾಸ್ಟ್ರುಲ ಅವಸ್ಥೆಗಳಲ್ಲಿ ಮೊಟ್ಟೆಯ ವಿವಿಧವಲಯಗಳಿಂದ ಉಂಟಾಗುವ ಕೋಶಗಳ ಭಾಗಗಳನ್ನು ಗುರುತಿಸಿಕೊಳ್ಳಬೇಕು. ಈ ರೀತಿಯ ನಿರ್ದಿಷ್ಟ ಭಾಗಗಳ ಗುರುತಿನಿಂದಾಗಿ ಈ ಭಾಗಗಳಲ್ಲಿರುವ ಜೀವಕೋಶಗಳು ಮುಂದೆ ಯಾವ ಅಂಗಕಟ್ಟನ್ನು ಅಥವಾ ಅಂಗವನ್ನು ಕೊಡುತ್ತವೆ ಎಂಬುದನ್ನು ಪ್ರಯೋಗಗಳ ಮೂಲಕ ಅರಿಯುತ್ತ ಆ ಕೋಶಸಂತತಿಯ ಗತಿಯನ್ನೇ ಅನುಕ್ರಮವಾಗಿ ಪತ್ತೆ ಹಚ್ಚಿದಲ್ಲಿ ಕೊನೆಯ ಹಂತದಲ್ಲಿ ಅದು ಯಾವ ಅಂಗವನ್ನು ಕೊಡುತ್ತದೆಂದು ಗುರುತಿಸಬಹುದು. ಪ್ರಾಯೋಗಿಕ ಭ್ರೂಣಶಾಸ್ತ್ರದಲ್ಲಿ ಇಂತಹ ಅಧ್ಯಯನಗಳು ಹೊಸಬೆಳಕನ್ನು ಚೆಲ್ಲಿವೆ. ಇಂದು ಯಾವುದೇ ಅಕಶೇರುಕದ ಕೋಶವಂಶಾವಳಿಯನ್ನಾದರೂ ಅರ್ಥಮಾಡಿಕೊಳ್ಳಬಹುದು. ಪಾಲಿಗಾರ್ಡಿಯಸ್, ಪಟೆಲ್ಲಾ ಮುಂತಾದ ಪ್ರಭೇದಗಳಲ್ಲಿ ಇದನ್ನು ಪೂರ್ಣವಾಗಿ ಅಧ್ಯಯನಮಾಡಲಾಗಿದೆ.

ಮೊಟ್ಟೆಯಲ್ಲಿರುವ ಪ್ರಾಣಿವಲಯ ಹಾಗೂ ಆಹಾರ ವಲಯಗಳಲ್ಲಿ ನಡೆಯುವ ಜೈವಿಕ ಕ್ರಿಯೆಗಳಲ್ಲಿ ಬಹಳ ವ್ಯತ್ಯಾಸಗಳು ಕಂಡುಬರುತ್ತವೆ. ಇದು ಚೈಲ್ಡ್ ಎಂಬುವನ ಮೆಟಬಾಲಿಕ್ ಆ್ಯಕ್ಸಿಯಲ್ ಗ್ರೇಡಿಯೆಂಟ್ ಎಂಬ ತತ್ತ್ವದ ತಿರುಳು. ಈ ಜೈವಿಕ ಕ್ರಿಯೆಗಳ ಕಾರ್ಯರಂಗವನ್ನು ಪ್ರಾಯೋಗಿಕವಾಗಿ ಪರಿಶೀಲಿಸಿ ಚೈಲ್ಡ್ ಈ ತತ್ತ್ವವನ್ನು ಪ್ರತಿಪಾದಿಸಿರುತ್ತಾನೆ. ಪ್ರಾಣಿವಲಯದ ಭಾಗದಲ್ಲಿ ಜೈವಿಕ ಕ್ರಿಯೆಗಳ ಪ್ರಮಾಣ ಹೆಚ್ಚು. ಇದರಿಂದಾಗಿ ಅಲ್ಲಿ ಕೋಶವಿಭಜನೆ ತೀವ್ರಗತಿಯಲ್ಲಿ ನಡೆಯುತ್ತಿರುತ್ತದೆ. ಪ್ರಾಣಿವಲಯದಿಂದ ಕೆಳಗೆ ಬಂದಂತೆ ಈ ಕೋಶವಿಭಜನಾ ಪ್ರಮಾಣದ ಗತಿ ಕಡಿಮೆಯಾಗುತ್ತ ಬರುತ್ತದೆ. ಇದರಿಂದಾಗಿ ಚೈಲ್ಡ್, ಮೊಟ್ಟೆಯಲ್ಲಿ ಮೆಟಬಾಲಿಕ್ ಆ್ಯಕ್ಸಿಯಲ್ ಗ್ರೇಡಿಯೆಂಟ್ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಇರುತ್ತದೆ ಎಂಬ ತೀರ್ಮಾನಕ್ಕೆ ಬಂದ. ಈ ಆ್ಯಕ್ಸಿಯಲ್ ಗ್ರೇಡಿಯೆಂಟ್ ಸ್ಥಿತಿಗತಿಗಳು ಮೊಟ್ಟೆಯೊಳಗಿರುವ ಕೋಶರಸದಲ್ಲಿರುವ ವಿವಿಧ ರಾಸಾಯನಿಕ ವಸ್ತುಗಳಿಗೆ ಸಂಬಂಧಿಸಿರುವುದನ್ನು ಸೂಚಿಸಿದನು. ಡ್ರೋಸಾಫಿಲ ನೊಣದ ಮೊಟ್ಟೆಯನ್ನೇ ತೆಗೆದುಕೊಂಡರೆ ಅದರಲ್ಲಿರುವ ವಿವಿಧ ಭಾಗಗಳ ಕೋಶರಸದ ಸ್ಥಿತಿಗತಿಗಳನ್ನು ಹಾಗೂ ಅದರ ಆಕಾರವನ್ನು ಅಭ್ಯಾಸಮಾಡಿದರೆ ಮೊಟ್ಟೆಯ ಬೆಳವಣಿಗೆಯ ಪರಿಸರ ಅತಿ ಮುಖ್ಯ ಎಂಬುದು ಅರ್ಥವಾಗುತ್ತದೆ. ಚೈಲ್ಡ್ ಈ ತತ್ತ್ವವನ್ನು ಕಡಲ ಕುಡಿಕೆಗಳಲ್ಲಿ ಪ್ರಾಯೋಗಿಕವಾಗಿ ತೋರಿಸಿದ್ದಾನೆ. ಈ ತತ್ತ್ವವನ್ನೇ ಆಧರಿಸಿದ ಸುಧಾರಿತ ವಿವರಣೆಗಳು ಈಗ ಲಭ್ಯ.

ಭ್ರೂಣಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿವಿಜೇತನಾದ ಸ್ಪೀಮನ್ನನ ಆರ್ಗನೈಸರ್ಸ್ ತತ್ತ್ವ ಅತಿ ಮುಖ್ಯವಾದದ್ದು. ಆದರೆ ಈ ತತ್ತ್ವಪ್ರತಿಪಾದನೆಗೆ ಆತ ಉಪಯೋಗಿಸಿದ ಜೀವಿ ಕಶೇರುಕ. ಒಟ್ಟಿನಲ್ಲಿ ಹೇಳುವುದಾದರೆ ಭ್ರೂಣಶಾಸ್ತ್ರದಲ್ಲಿ ಫಲಿತ ಮೊಟ್ಟೆಯೊಳಗೆ ನಡೆಯುವ ನಾನಾ ಭೌತಿಕ ಹಾಗು ರಾಸಾಯನಿಕ ಕ್ರಿಯೆಗಳನ್ನು ಚಾಚೂ ತಪ್ಪದಂತೆ ಪ್ರತಿ ಹಂತದಲ್ಲಿಯೂ ಅಭ್ಯಾಸಮಾಡಲು ಸಹಾಯಕವಾಗಿದೆ. ಆದುದರಿಂದ ಭ್ರೂಣಶಾಸ್ತ್ರದ ಅಧ್ಯಯನ ಮೊಟ್ಟೆ ಹಾಗೂ ವೀರ್ಯಾಣುಗಳ ಮಿಲನದಿಂದ ಆರಂಭವಾಗುತ್ತದೆ. ಮೊಟ್ಟೆಯಿಂದ ಮರಿ ಹೊರಬರುವವರೆಗಿನ ಪರಿಶೀಲನೆಯೆಲ್ಲ ಅದರ ಪರಿಮಿತಿಯಲ್ಲಿ ಸೇರುತ್ತದೆ. (ಎಲ್.ಎಸ್.ಜಿ.)

**ಅಕಾಲಿ ಚಳವಳಿ :** ಸಿಕ್ಖರ ಧಾರ್ಮಿಕ ಮತ್ತು ರಾಜಕೀಯ ಸಂಸ್ಥೆಯಾದ ಶಿರೋಮಣಿ ಅಕಾಲಿ ದಳ ಸಿಕ್ಖರಿಗಾಗಿ ಪಂಜಾಬಿನಲ್ಲಿ ಪ್ರತ್ಯೇಕ ಸಿಕ್ಖ್ ರಾಜ್ಯಕ್ಕಾಗಿ ಹೋರಾಡಲು ಸ್ಥಾಪಿತವಾದ ಸಂಸ್ಥೆ. ಸಿಕ್ಖರ ಹಕ್ಕುಬಾಧ್ಯತೆಗಳನ್ನು ಕಾಪಾಡುವುದೇ ಇದರ ಮುಖ್ಯ ಧ್ಯೇಯ. ಈ ಸಂಸ್ಥೆ ಕಾಲಾನುಕ್ರಮದಲ್ಲಿ ಪಂಜಾಬಿ ಭಾಷೆಯ ಆಧಾರದ ಮೇಲೆ ಪ್ರತ್ಯೇಕ ರಾಜ್ಯಸ್ಥಾಪನೆಗೆ ಬೇಡಿಕೆಯನ್ನೊಡ್ಡಿತು. ಅಕಾಲಿದಳ ರಾಜಕೀಯ ವ್ಯವಹಾರದಲ್ಲಿ ಇಂದಿಗೂ ಕಾರ್ಯಾಚರಣೆಯಲ್ಲಿದೆ.

ಈ ಆಂದೋಲನ ಗುರುದ್ವಾರ ಸುಧಾರಣ ಚಳವಳಿಯ ರೂಪದಲ್ಲಿ ಪ್ರಾರಂಭವಾಗಿ ಅದಕ್ಕೆ ಮುಂಚೆ ಇದ್ದ ರಾಜಕೀಯ ಸಿಂಗ್ ಸಭಾಪಕ್ಷವನ್ನು ಹಿಂದೂಡಿತು. ಸಿಕ್ಖ್ ಧರ್ಮದಲ್ಲಿ ಧಾರ್ಮಿಕ ಮತ್ತು ರಾಜಕೀಯ ತತ್ತ್ವಗಳು ಒಂದನ್ನೊಂದು ಅವಲಂಬಿಸಿರುವುದೆಂದೂ ಸಿಕ್ಖರು ಪ್ರತ್ಯೇಕವಾದ ಜನಾಂಗವೆಂದೂ ತೋರಿಸುವುದೇ ಇದರ ಮುಖ್ಯ ಉದ್ದೇಶ.

ಈ ಚಳವಳಿಯ ಉಗಮ 1920ರ ಗುರುದ್ವಾರ ಸುಧಾರಣಾ ಚಳವಳಿಯ ಕಾಲಕ್ಕೆ ಹೋಗುತ್ತದೆ. ಪ್ರಾರಂಭದಲ್ಲಿ ಇದು ಭಾಗಶಃ ಒಂದು ಸೈನಿಕಸಂಸ್ಥೆಯಾಗಿದ್ದು ಅಕಾಲಿದಳ ಎಂಬ ಹೆಸರನ್ನು ಪಡೆಯಿತು. ಈ ಸಂಸ್ಥೆಯ ಇತಿಹಾಸ ಅದರ ಶ್ರೇಷ್ಠನಾಯಕನಾದ ಯಜಮಾನ ತಾರಾಸಿಂಗನ ರಾಜಕೀಯ ಜೀವನದೊಂದಿಗೆ ಬೆಸೆದಿತ್ತು.

ಅಮೃತಸರದಲ್ಲಿರುವ ಸುವರ್ಣದೇವಾಲಯ ಅಕಾಲಿದಳದ ಕಾರ್ಯಚಟುವಟಿಕೆಗಳ ಕೇಂದ್ರಸ್ಥಾನವಾಗಿದೆ. ಇದನ್ನು ಸಿಕ್ಖರ ಮೆಕ್ಕ ಎಂದು ಕರೆಯುತ್ತಾರೆ. ಅಕಾಲಿದಳದ ಸದಸ್ಯತ್ವ ಸಿಕ್ಖ್ ಜನಾಂಗಕ್ಕೆ ಮಾತ್ರ ಸೀಮಿತವಾಗಿದೆ. ದಳದ ಮೇಲ್ವಿಚಾರಣೆಗಾಗಿ ಒಬ್ಬ ಅಧ್ಯಕ್ಷನಿರುವನು. 1930ರಿಂದಲೂ ಯಜಮಾನ ತಾರಾಸಿಂಗನು ತಾನು 1988ರಲ್ಲಿ ಸಾಯುವತನಕ ಈ ದಳದ ಅಧ್ಯಕ್ಷನಾಗಿದ್ದ.

ಅಕಾಲಿದಳ ಪಂಜಾಬಿ ಸುಭಾ ಸ್ಥಾಪನೆಯ ಹೋರಾಟಕಾಲದಲ್ಲಿ ಅನೇಕ ದೊಡ್ಡ ದೊಡ್ಡ ಹಣಕಾಸಿನ ಸಂಸ್ಥೆಗಳಿಂದ ಸಹಾಯವನ್ನು ಪಡೆಯುತ್ತಿತ್ತು. ರಾಜಕೀಯ ಹೋರಾಟ, ಕ್ರಮೇಣ ಆಕ್ರಮಣ ನೀತಿ ಮತ್ತು ಚಳವಳಿಗಳು ಇದರ ಗುರಿ ಸಾಧನೆಯ ಮಾರ್ಗಗಳಾದವು. ಇಂಥ ಚಳವಳಿಗಳಲ್ಲಿ ಪಂಜಾಬಿ ಸುಭಾ ಸ್ಥಾಪನೆಯಾಗಿ 1955 ಮತ್ತು 1960–61ರಲ್ಲಿ ಮಾಡಿದ ಘೋಷಣೆಗಳು ಬಹು ಮುಖ್ಯವಾದುವು. ಅಕಾಲಿದಳ ತನ್ನ ಅನೇಕ ಕಾರ್ಯ ಚಟುವಟಿಕೆಗಳಲ್ಲಿ ಬಹಳ ಮಟ್ಟಿಗೆ ಯಶಸ್ಸು ಸಾಧಿಸಿತು. ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ 1966ರಲ್ಲಿ ಅಕಾಲಿದಳದವರ ಪಂಜಾಬಿ ಸುಭಾ ಬೇಡಿಕೆಯ ಮೇರೆಗೆ, ಪಂಜಾಬಿ ಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಹೊಂದಿರುವ ಪ್ರತ್ಯೇಕ ಪಂಜಾಬು ರಾಜ್ಯಸ್ಥಾಪನೆಗೆ ಅನುಮೋದನೆ ನೀಡಿತು. ಅಂತೆಯೆ 1967ರಲ್ಲಿ ಪಂಜಾಬು ರಾಜ್ಯ ವಿಭಜಿಸಲ್ಪಟ್ಟು ಹರಿಯಾನ ಮತ್ತು ಪಂಜಾಬುಗಳೆಂಬ ಎರಡು ಪ್ರತ್ಯೇಕ ರಾಜ್ಯಗಳು ಅಸ್ತಿತ್ವಕ್ಕೆ ಬಂದುವು.

(ಆರ್.ಜಿ.ಎಸ್.; ಎಸ್.ಎಂ.ಎಚ್.)

**ಅಕ್ಯಾಂತೊಟೆರಿಜಿಯೈ :** ಮೂಳೆಯ ಮೀನುಗಳಲ್ಲಿ ಇವು ವಿಕಾಸದ ದೃಷ್ಟಿಯಿಂದ ಮುಂದುವರಿದ ಉಪವರ್ಗಕ್ಕೆ ಸೇರಿವೆ. ಮುಂದಿನ ಈಜುರೆಕ್ಕೆಯ ಕಿರಣಗಳು ಬಿಡುವಾಗಿದ್ದು ಮೊದಲನೆಯದು ಮುಳ್ಳಾಗಿ ಪರಿವರ್ತನೆಹೊಂದಿದೆ. ಮೈಮೇಲಿನ ಹುರುಪೆಗಳು ಸಾಧಾರಣವಾಗಿ ಟೀನಾಯಿಡ್ ರೀತಿಯವು. ಪ್ರೌಢಜೀವಿಗಳಲ್ಲಿ ಅನ್ನನಾಳಕ್ಕೂ ಗಾಳಿಯ ಕೋಶಕ್ಕೂ ಸಂಬಂಧವಿರುವುದಿಲ್ಲ. ಸೊಂಟದ ಈಜುರೆಕ್ಕೆಗಳು ಮುಂದೆ ಸರಿದು ಎದೆಯ, ಕೊರಳಿನ ಅಥವಾ ಕೆಳದವಡೆಯ ತಳದಲ್ಲಿ ಇರುತ್ತವೆ. ನಡುಕಟ್ಟು ಕ್ಲೈತ್ರಂ ಮೂಳೆಗೆ ಅಂಟಿಕೊಂಡಿರುತ್ತದೆ. ಮೇಲ್ದವಡೆಯ ಮ್ಯಾಕ್ಸಿಲ್ಲ ಮೂಳೆಗಳಲ್ಲಿ ಹಲ್ಲುಗಳಿಲ್ಲ ಮತ್ತು ಅವು ಬಾಯಿಯ ಅಂಚಿಗೆ ಸೇರಿರುವುದಿಲ್ಲ.

ಇವು ಸಾಧಾರಣವಾಗಿ ಸಮುದ್ರವಾಸಿಗಳು. ಇವುಗಳಲ್ಲಿ ಸುಮಾರು 36 ಕುಟುಂಬಗಳಿವೆ. ಹಾರುಮೀನು, ಬಾಸ್, ಗೋಬಿ, ಫ್ಲೌಂಡರ್, ಬಾಂಗಡಮೀನು, ಉಬ್ಬು ಮೀನು, ಮೂರ್ಖಮೀನು, ಸಂದೂಕಮೀನು, ಮುಳ್ಳುಹಂದಿ ಮೀನು, ತಲೆಮೀನು, ಅಳಿಮೀನು ಮುಂತಾದುವು ಈ ಉಪವರ್ಗಕ್ಕೆ ಸೇರಿವೆ.

ಇವುಗಳ ಕೆಲವು ಜಾತಿಗಳು ಕ್ರಿಟೇಷಿಯಸ್ ಯುಗದಲ್ಲಿ ಹುಟ್ಟಿ ಟರ್ಷಿಯರಿ ಯುಗದಲ್ಲಿ ಅಧಿಕವಾಗಿದ್ದುವು. (ಪಿ.ಎ.ಆರ್.)

**ಅಕ್ಯಾಂತೋಫೀನಿಕ್ಸ್ :** ಪಾಮೀ (ಅರಿಕೇಸೀ) ಕುಟುಂಬದ ಸುಂದರವಾದ ಉದ್ಯಾನ ಸಸ್ಯ. ತಾಳೆ (ಪಾಮ್) ಜಾತಿಯ ಪ್ರಭೇದಗಳಲ್ಲಿ ಹೆಸರುವಾಸಿಯಾದದ್ದು; ಇದರ ಪ್ರಭೇದಗಳು ಸಾಧಾರಣ ಗಾತ್ರದಿಂದ ಹಿಡಿದು ದೊಡ್ಡ ಮರದ ಗಾತ್ರಕ್ಕೆ ಬೆಳೆಯುವುದರಿಂದ ಕುಂಡಗಳಲ್ಲೊ ಉದ್ಯಾನವನಗಳಲ್ಲೊ ಬೆಳೆಸಲು ಯೋಗ್ಯವಾಗಿವೆ.

ಎಲೆ ಸಂಯುಕ್ತಗರಿಯ ರೂಪದಲ್ಲಿದೆ; ಕಿರುಗರಿಗಳು ನೀಳಾಕಾರವಾಗಿದ್ದು ಭರ್ಜಿಯಾಕಾರದ ಮೊನಚುತುದಿ ಉಳ್ಳವಾಗಿವೆ. ಅಪರೂಪವಾಗಿ ಲಂಬಾಗ್ರ ತುದಿಯವೂ ಉಂಟು. ಕಾವು ಮೂರು ಮುಖವಾಗಿರುತ್ತದೆ. ಇದರ ರೆಕ್ಕೆಗಳ ಅಂಚು ನಯವಾಗಿರುತ್ತದೆ. ಮುಳ್ಳು ಅಂಚೂ ಉಂಟು. ಹೂಗೊಂಚಲು ಎರಡು ಭಾಗವಾಗಿರುವ ತಾಳಗುಚ್ಛದ ಮಾದರಿಯಲ್ಲಿದೆ. ಚಪ್ಪಟೆಯಾಗಿರುವ ಎರಡುಭಾಗದ ಉಪಪತ್ರಯುಗ್ಮವೂ ಇದೆ. ತಿರುಪು ಮೊಳೆಯಾಕಾರವಾಗಿ ಜೋಡಣೆಯಾಗಿರುವ ಹೂವಿನ ಮೂರು ಸಾಲುಗಳಿವೆ. ಲಿಂಗ ಪ್ರತ್ಯೇಕವಾಗಿದೆ. ಹೂವು, ಉಪಪತ್ರ ಯುಗ್ಮ ಮತ್ತು ಹೂದಳ ಇವೆಲ್ಲ ಕೆಂಪು, ನಸುಗೆಂಪು ಅಥವಾ ಕಿತ್ತಳೆಬಣ್ಣವಾಗಿರುವುದುಂಟು. ಗಂಡು ಹೂಗಳಲ್ಲಿ 12 ಕೇಸರಗಳು ಇವೆ. ಹೆಣ್ಣು ಹೂಗಳಲ್ಲಿ ಬಂಜೆ ಕೇಸರುಗಳು ಉಂಗುರಾಕೃತಿಯಲ್ಲಿವೆ.

ಅಕ್ಯಾಂತೋಫೀನಿಕ್ಸ್‌ಕ್ರೈನಿಟ ಎಂಬ ಪ್ರಭೇದ ಸು. 25ಕಿಮೀ ಎತ್ತರ ಬೆಳೆಯುತ್ತದೆ. ಗರಿಗಳು ಸು. 5ಕಿಮೀ ಉದ್ದವಾಗಿದ್ದು, ತೊಟ್ಟಿನ ಬುಡಭಾಗದಲ್ಲಿ ಒತ್ತಾದ ಒರಟಾದ ಉದ್ದವಾದ ಮುಳ್ಳುಗಳು ಇರುತ್ತವೆ. ಎಲೆ ತೊಟ್ಟಿನ ಅಗಲವಾದ ಭಾಗದಲ್ಲಿ ಒರಟಾದ ಕಪ್ಪುಬಣ್ಣದ ಬಿರುಸು ರೋಮಗಳೂ ಮುಳ್ಳುಗಳೂ ಇರುತ್ತವೆ. ಕಿರುಗರಿಗಳ ತಳಭಾಗ ಬಿಳಿಯ ಬಣ್ಣವಾಗಿದೆ. ಹೂಗೊಂಚಲು ಕಪ್ಪುಬಣ್ಣದ ತಾಳಗುಚ್ಛದ ಮಾದರಿಯಲ್ಲಿದೆ. ಹೂಗೊಂಚಲಲ್ಲಿ ಕಂದುಬಣ್ಣದ ನಾರು ಮತ್ತು ಮುಳ್ಳು ಇರುತ್ತವೆ. ಪುಷ್ಪಪತ್ರ ಮತ್ತು ದಳಗಳು ಕೆಂಪು, ಕಂದು ಅಥವಾ ಬಿಳುಪು ಬಣ್ಣವಾಗಿರುತ್ತವೆ.

ಅಕ್ಯಾಂತೋಫೀನಿಕ್ಸ್‌ರುಬ್ರ ಎಂಬ ಪ್ರಭೇದ ಸಸ್ಯ ಸುಮಾರು 20ಮೀ ಎತ್ತರ ಬೆಳೆಯುತ್ತದೆ. ಎಳೆಯ ಸಸ್ಯದ ಎಳೆಯ ಗರಿಗಳು ಅತಿ ಹಸಿರುಬಣ್ಣವಾಗಿರುತ್ತವೆ. ನಾಳಗಳು ಕೆಂಪು. ಗರಿಗಳು 2–4ಮೀ ಉದ್ದವಾಗಿವೆ. ನವಿರಾದ ರೋಮಗಳು ಗರಿತೊಟ್ಟಿನ ಮೇಲುಭಾಗದಲ್ಲಿವೆ. ತೊಟ್ಟಿನ ಬುಡದ ಅಗಲವಾದ ಭಾಗದಲ್ಲಿ ನೇರವಾಗಿ, ಒರಟಾಗಿರುವ ಕಪ್ಪುಬಣ್ಣದ ಮುಳ್ಳುಗಳು ಇರುತ್ತವೆ. ಹೂಗೊಂಚಲು ಹಿಂದಕ್ಕೆ ಬಾಗಿದ ಮುಳ್ಳುಗಳಿಂದ ಕೂಡಿರುತ್ತದೆ. ಪುಷ್ಪಪತ್ರ ಕೂಡಿಕೊಂಡಿದ್ದು ದಳಗಳು ಕೆಂಪು ಅಥವಾ ಕಂದುಬಣ್ಣವಾಗಿರುತ್ತವೆ.

ಅಕ್ಯಾಂತೋಫೀನಿಕ್ಸ್ ಸಸ್ಯಗಳನ್ನು ಬೀಜಗಳಿಂದ ವೃದ್ಧಿಮಾಡಬಹುದು. ಬಿತ್ತನೆ ಮಾಡಿದ ಬೀಜಗಳು ಮೊಳೆಯಲು 2–3 ವರ್ಷಗಳ ಕಾಲ ಬೇಕಾಗುತ್ತದೆ. ಇತರ ವಿವರಗಳಿಗೆ **(ನೋಡಿ–ಪಾಮ್).** (ಡಿ.ಎಂ.)

**ಅಕ್ಯಾಂಥೋಡಿಯೈ :** ಪೇಲಿಯೊಜೋಯಿಕ್ ಯುಗದಲ್ಲಿ ಬದುಕಿದ್ದ, ಈಗ ಗತವಂಶಿಗಳಾಗಿರುವ ಮೀನುಗಳ ಒಂದು ವರ್ಗ. ನಿಜವಾದ ದವಡೆಗಳುಳ್ಳ ಸರಳರಚನೆಯ ಕಶೇರುಕಗಳಲ್ಲಿ ಇವೇ ಅತಿ ಪ್ರಾಚೀನವಾದುವು. ಇವು ಸೈಲೂರಿಯನ್ ಯುಗದ ಉತ್ತರಾರ್ಧದಲ್ಲಿ ಕಾಣಿಸಿಕೊಂಡು ಪರ್ಮಿಯನ್ ಯುಗದ ಪಶ್ಚಿಮಾರ್ಧದವರೆಗೂ ಬದುಕಿದ್ದುವು. ಅನಂತರ ಕಣ್ಮರೆಯಾದುವು.

ಸಿಹಿನೀರಿನ ನದಿ ಮತ್ತು ಸರೋವರಗಳಲ್ಲಿ ವಾಸಿಸುತ್ತಿದ್ದ ಈ ಪ್ರಾಚೀನ ಮೀನುಗಳು ಕೆಲವು ಸೆಂಮೀ ಗಳಷ್ಟು ಮಾತ್ರ ಉದ್ದವಿದ್ದವು. ಆಕೃತಿಯಲ್ಲಿ ಕದಿರಿನಾಕಾರದ ಷಾರ್ಕ್ ಮೀನುಗಳನ್ನು ಹೋಲುತ್ತಿದ್ದವು. ತಲೆ ತುಂಬ ಚಿಕ್ಕದು; ಬಾಯಿ ತಲೆಯ ತುದಿಯಲ್ಲಿತ್ತು. ತಲೆಯ ಮುಂಭಾಗದಲ್ಲಿದ್ದ ಕಣ್ಣುಗಳು ದೊಡ್ಡವು; ಮೇಲಿನ ಮತ್ತು ಕೆಳಗಿನ ದವಡೆಗಳಿದ್ದು ಅನೇಕ ಜಾತಿಗಳಿಗೆ ಹಲ್ಲುಗಳಿರಲಿಲ್ಲ; ಇದ್ದಲ್ಲಿ ಮಾರ್ಪಟ್ಟ ಮೊನೆಗಳುಳ್ಳ ಹುರುಪೆಗಳಂತಿದ್ದವು.

ಮೂಳೆಯಂಥ ವಸ್ತುವಿನಿಂದಾದ ವಜ್ರಾಕಾರದ ಹುರುಪೆಗಳು ದೇಹವನ್ನು ರಕ್ಷಿಸುತ್ತಿದ್ದುವು. ತಲೆಯ ಮೇಲಿನ ಹುರುಪೆಗಳು ದೊಡ್ಡವಾಗಿದ್ದು ನಿರ್ದಿಷ್ಟ ರೀತಿಯಲ್ಲಿ ಹರಡಿದ್ದುವು. ಒಂದು ಅಥವಾ ಎರಡು ಬೆನ್ನಿನ ಈಜುರೆಕ್ಕೆಗಳು ಬಾಲದ ಈಜುರೆಕ್ಕೆ ಮತ್ತು ಗುದಭಾಗದ ಈಜುರೆಕ್ಕೆ–ಇವು ಒಂಟಿ ಈಜುರೆಕ್ಕೆಗಳು. ಇವು ಸಾಮಾನ್ಯವಾಗಿ ಅಲುಗಾಡುತ್ತಿರಲಿಲ್ಲ. ಮುಂಭಾಗದಲ್ಲಿ ಇವಕ್ಕೆ ಒಂದೊಂದು ದೃಢವಾದ ಮುಳ್ಳುಗಳಿದ್ದುವು. ಭುಜದ ಮತ್ತು ಸೊಂಟದ ಜೋಡಿ ಈಜುರೆಕ್ಕೆಗಳು ಸಾಮಾನ್ಯ ರೀತಿಯವು. ಕೆಲವು ಜಾತಿಗಳಲ್ಲಿ ಭುಜದ ಈಜುರೆಕ್ಕೆಗೂ ಸೊಂಟದ ಈಜುರೆಕ್ಕೆಗೂ ಮಧ್ಯೆ ಐದು ಈಜುರೆಕ್ಕೆಗಳ ಸಾಲು ಇತ್ತು. ಕೊನೆಕೊನೆಗೆ ಕಾಣಿಸಿಕೊಂಡವುಗಳಲ್ಲಿ ಅವುಗಳ ಸಂಖ್ಯೆ ಕ್ಷೀಣಿಸಿ ಒಂದೇ ಒಂದು ಈಜುರೆಕ್ಕೆಯಿತ್ತು. ಬಾಲದ ಈಜುರೆಕ್ಕೆ ವಿಷಮವೃತ್ತಾಕಾರದ್ದಾಗಿತ್ತು.

ಕಿವಿರುರಂಧ್ರಗಳು ಬಿಡಿಯಾಗಿ ಹೊರಕ್ಕೆ ತೆರೆಯುತ್ತಿದ್ದುವು. ಕೆಲವು ಜಾತಿಗಳಲ್ಲಿ ಸ್ವಲ್ಪಮಟ್ಟಿಗೆ ಕಿವಿರುಕವಚದಂತಿದ್ದು ಚರ್ಮದ ತುಣುಕಿನಿಂದ ಮುಚ್ಚಿದ್ದುವು. ವಿಸರಲ್ ಆರ್ಚ್ ಸಂಖ್ಯೆ ಒಂದೊಂದರಲ್ಲಿ ಒಂದೊಂದು ರೀತಿಯಿತ್ತು. 3, 4 ಮತ್ತು 5ನೆಯ ಕಿವಿರು ಕಮಾನುಗಳು ಒಂದೊಂದೂ ಪಕ್ಕದಲ್ಲಿದ್ದ ಕಿವಿರುಗಳಿಗೆ ಆಧಾರವಾಗಿದ್ದುವು. ಒಳಭಾಗದಲ್ಲಿ ಒಂದೊಂದರಿಂದಲೂ ಹೊರ ಚಾಚಿದ ಕಿವಿರು ಕಡ್ಡಿಗಳು ಆಹಾರವನ್ನು ಶೋಧಿಸಲು ಸಹಕಾರಿಯಾಗಿದ್ದುವು. ಮ್ಯಾಂಡಿಬ್ಯುಲರ್ ಆರ್ಚ್ ತಲೆಬುರುಡೆಗೆ ಆಟೊಸ್ಟೈಲಿಕ್ ರೀತಿಯಲ್ಲಿ ನೇರ ಸಂಪರ್ಕ ಹೊಂದಿತ್ತೆಂದು ತೋರುತ್ತದೆ. ಪೂರ್ವ ಡಿವೋನಿಯನ್ ಕಾಲದಲ್ಲಿ ಜೀವಿಸುತ್ತಿದ್ದ ಕ್ಲೈಮೇಟಿಯಸ್ ಮೀನಿನಲ್ಲಿ ಕೆಳದವಡೆ ಮೂಳೆ ತಲೆಬುರುಡೆಗೆ ನೇರವಾಗಿ ಕೂಡಿಕೊಂಡಿತ್ತು. (ಪಿ.ಎ.ಆರ್.)

**ಅಕ್ಯಾಬ್ :** ಮಯನ್ಮಾರ್‌ನ ಅರಕಾನ್ ಪ್ರಾಂತ್ಯದ ಪಶ್ಚಿಮ ತೀರದಲ್ಲಿ ಮಾಯುಕಲಾಡನ್ ಮತ್ತು ಲೆಮ್ರೊ ನದಿಗಳ ಸಂಗಮದಲ್ಲಿರುವ ಮುಖ್ಯ ರೇವುಪಟ್ಟಣ ಹಿಂದೆ ಮೀನುಗಾರಿಕೆಯ ಒಂದು ಹಳ್ಳಿಯಾಗಿದ್ದು ಇಂದು ಮಯನ್ಮಾರಿನ ಒಂದು ಪ್ರಮುಖ ರೇವುಪಟ್ಟಣವಾಗಿ ಬೆಳೆದಿದೆ. ಬೌದ್ಧರೇ $^1/_3$ ಭಾಗದಷ್ಟಿದ್ದಾರೆ. ಅಕ್ಕಿಯನ್ನು ಹೆಚ್ಚಾಗಿ ರಫ್ತು ಮಾಡುತ್ತಾರೆ. ಇಲ್ಲಿ ಅನೇಕ ಸಾರ್ವಜನಿಕ ಕಟ್ಟಡಗಳ ಜೊತೆಗೆ ದೊಡ್ಡ ಅಕ್ಕಿ ಗಿರಣಿಗಳೂ ಇವೆ. (ಎಂ.ಎಸ್.ಎಂ.)

**ಅಕ್ಯಾಲಿಫ :** ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಅಲಂಕಾರ ಸಸ್ಯ. ಉದ್ಯಾನ ವ್ಯವಸಾಯದಲ್ಲಿ ಬಹು ಪ್ರಸಿದ್ಧಿ ಪಡೆದಿರುವ ಇವನ್ನು ಉದ್ಯಾನವನದ ಮಡಿಗಳಲ್ಲಿ, ಅಲಂಕಾರದ ಬೇಲಿಗಳಲ್ಲಿ ಬೆಳೆಸುತ್ತಾರಲ್ಲದೆ ಅಂಚುಸಸ್ಯಗಳಾಗಿಯೂ ಬೆಳೆಸುತ್ತಾರೆ. ಈ ಜಾತಿಯ ಸಸ್ಯಗಳು ಸುಲಭವಾಗಿ ರೋಗಕೀಟಗಳ ಬಾಧೆಯಿಲ್ಲದೆ ಗಟ್ಟಿಮುಟ್ಟಾಗಿ ಬೆಳೆಯುವುದರಿಂದ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿವೆ. ಇವುಗಳ ಎಲೆಗಳ ವರ್ಣವಿನ್ಯಾಸ ವೈವಿಧ್ಯಮಯವಾಗಿರುವುದರಿಂದ ವಿವಿಧ ಬಣ್ಣದ ಆಕರ್ಷಕ ಸಸ್ಯಗಳು ಕಾಣಿಸಿಕೊಳ್ಳುತ್ತವೆ. ಬಣ್ಣದ ಎಲೆಗಳ ಮಧ್ಯದಲ್ಲಿ ಬಾಲದಂತಿರುವ ಹೂಗೊಂಚಲು ಈ ಗಿಡಗಳನ್ನು ಬಹಳ ಭವ್ಯವಾಗಿ ಕಾಣುವಂತೆ ಮಾಡುತ್ತವೆ.

ಈ ಜಾತಿಯಲ್ಲಿ ಸುಮಾರು 250ಕ್ಕೂ ಹೆಚ್ಚು ಪ್ರಭೇದಗಳಿವೆ. ಇವು ನೆಟ್ಟಗೆ ಮೇಲ್ಮುಖವಾಗಿ ಬೆಳೆಯುವ ಪೊದೆಗಳೋ ಪರ್ಣಸಸಿಗಳೋ ಆಗಿವೆ. ಎಲೆಗಳು ಸರಳ ರೀತಿಯವು; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿರುವುವು. ಆಕಾರ ಕರಣೆ ಅಥವಾ ಭರ್ಜಿಯಂತೆ ಎಲೆಯಂಚು ಹಲ್ಲುಗಳಾಗಿ ಒಡೆದಿರುತ್ತದೆ. ಅದರ ಮೇಲೆ ಗರಿಮಾದರಿಯ ನಾಳ ರಚನೆಯಿರುತ್ತದೆ. ತೊಟ್ಟು ಉದ್ದ, ಹೂಗೊಂಚಲು ಸ್ಪೈಕ್ ಮಾದರಿಯದು. ಹೂವುಗಳು ಏಕಲಿಂಗಿಗಳು ಅಥವಾ ದ್ವಿಲಿಂಗಿಗಳು. ಅಂಡಕಗಳು ಮೂರು. ಹಣ್ಣು (ಕ್ಯಾಪ್‌ಸೂಲ್) ಮಾದರಿಯದು.

**ಅಕ್ಯಾಲಿಫ ಇಂಡಿಕ :** ಎಂಬ ಪ್ರಭೇದದ ಸಸ್ಯ 1ಮೀ ಎತ್ತರವಾಗಿ ಬೆಳೆಯುವ ಸಣ್ಣ ಪೊದೆ. ಎಲೆಗಳು ಹಸುರುಬಣ್ಣದವು. ಇವುಗಳಲ್ಲಿ ಮಿಶ್ರಬಣ್ಣವಿಲ್ಲದೆ ಇರುವುದರಿಂದ ಹೆಚ್ಚು ಆಕರ್ಷಕವಾಗಿ ಕಾಣುವುದಿಲ್ಲ. ತೊಟ್ಟು ಎಲೆಗಿಂತ ಉದ್ದವಾಗಿರುತ್ತದೆ. ಎಲೆ ಅಗಲವಾಗಿಯೂ ಕರನೆಯಾಕಾರವಾಗಿಯೂ ಇರುತ್ತದೆ. ಹೂಗೊಂಚಲು ಸುಮಾರು 8ಸೆಂಮಿ ಉದ್ದ ಸ್ಪೈಕ್ ಮಾದರಿಯಲ್ಲಿರುತ್ತದೆ.

**ಅಕ್ಯಾಲಿಫ ಬೈಕಲರ್** ಎಂಬ ಇನ್ನೊಂದು ಪ್ರಭೇದದ ಎಲೆಯ ತೊಟ್ಟು ಸುಮಾರು 10ಸೆಂಮೀ. ಉದ್ದವಿರುತ್ತದೆ; ಎಲೆ 20ಸೆಂಮೀ ಉದ್ದವೂ 15ಸೆಂಮೀ ಅಗಲವಾಗಿರುತ್ತದೆ. ತಾಮ್ರದ ಹಸುರುಬಣ್ಣದ ಇವುಗಳ ನಡುದಿಂಡು ಮಾಸಲು ಕೆಂಪಾಗಿಯೂ ತಳಭಾಗ ಕಂಚುಬಣ್ಣವಾಗಿಯೂ ಎಳೆಯಭಾಗ ಕೇಸರಿಬಣ್ಣವಾಗಿಯೂ ಇದ್ದು ಎಲೆ ಒಟ್ಟಾರೆಯಾಗಿ ವರ್ಣರಂಜಿತವಾಗಿರುತ್ತದೆ.

**ಅಕ್ಯಾಲಿಫ ಡೆನ್ಸಿಫ್ಲೋರ** ಎಂಬುದು ಮಧ್ಯಮ ಎತ್ತರದ ಪೊದೆಯಾಗಿ ಬೆಳೆಯುವಂಥದು. ಎಲೆಯತೊಟ್ಟು 10ಸೆಂಮಿ ಉದ್ದವಾಗಿದ್ದು ಎಲೆ ಮಾಸಲು ಕೆಂಪುಬಣ್ಣದ್ದು; 15ಸೆಂಮಿ ಉದ್ದ 20ಸೆಂಮಿ ಅಗಲ ಇರುತ್ತದೆ. ಬಣ್ಣ ವಯಸ್ಸನ್ನು ಅನುಸರಿಸಿ ವ್ಯತ್ಯಾಸವಾಗುತ್ತದೆ. ಸಾಧಾರಣವಾಗಿ ಆಲಿವ್ ಹಸುರು ನಡುದಿಂಡೂ ಕಂಚುಬಣ್ಣದ ಹೂಗೊಂಚಲೂ ಇರುತ್ತವೆ. ಹೂಗೊಂಚಲು ಮಿಶ್ರ (ಕ್ಯಾಟ್ಕಿನ್) ಮಾದರಿಯದು. ಹೂಗಳು ನಿಬಿಡವಾಗಿದ್ದು ಸುಟ್ಟ ಇಟ್ಟಿಗೆ ಬಣ್ಣದವಾಗಿವೆ.

**ಅಕ್ಯಾಲಿಫ ಇಲಸ್ಟ್ರೇಟ** ಎಂಬ ಇನ್ನೊಂದು ಪ್ರಭೇದ ಎತ್ತರವಾಗಿ ಬೆಳೆಯುತ್ತದೆ. ಎಲೆಯ ತೊಟ್ಟು 12ಸೆಂಮಿ ಉದ್ದವಾಗಿದ್ದು ಮಾಸಲು ಹಸುರು ಬಣ್ಣವನ್ನು ತಳೆದಿರುತ್ತದೆ. ಎಲೆ 20ಸೆಂಮಿ ಉದ್ದ 15ಸೆಂಮಿ ಅಗಲವಾಗಿದ್ದು ಹಳದಿ ಮಿಶ್ರಿತ ಹಸುರುಬಣ್ಣವನ್ನು ತಳೆದಿರುತ್ತದೆ. ಮೇಲುಭಾಗದಲ್ಲಿ ಮಚ್ಚೆಗಳು ಇರುತ್ತವೆ. ತಿಳಿ ಮತ್ತು ಆಳವಾದ ಹಸುರು ಬಣ್ಣಗಳು ನಿರ್ದಿಷ್ಟವಾಗಿ ಬೇರೆ ಬೇರೆ ಕಾಣುತ್ತವೆ.

**ಅಕ್ಯಾಲಿಫ ಗೊಡ್‌ಸೆಫಿಯಾನ** ಎಂಬುದು ಮತ್ತೊಂದು ಪ್ರಭೇದ. ಇದು ಕುಳ್ಳಾಗಿ ಬೆಳೆಯುವ ಗಿಡ. ನೆರಳಿನಲ್ಲಿ ಸಮೃದ್ಧಿಯಾಗಿ ಬೆಳೆಯುವ ಇದರ ಎಲೆ ತೊಟ್ಟು 5ಸೆಂಮೀ. ಉದ್ದವಿರುತ್ತದೆ. ಬಣ್ಣ ತಿಳಿ ಹಸುರು. ಎಲೆ 15ಸೆಂಮೀ ಉದ್ದ 5ಸೆಂಮಿ ಅಗಲವಾಗಿ ಭರ್ಜಿ ಅಥವಾ ಕರಣೆಯಾಕಾರವಾಗಿರುತ್ತದೆ. ಎಲೆ ಬಹುಭಾಗ ಹಸುರಾಗಿರುತ್ತದೆ. ಅಂಚು ಹಲ್ಲುಗಳಾಗಿ ಒಡೆದು ಬೆಳ್ಳಗಿರುತ್ತದೆ. ಅಲ್ಲಲ್ಲಿ ಕೆಂಪು ಪಟ್ಟೆಗಳು ಇರುತ್ತವೆ.

**ಅಕ್ಯಾಲಿಫ ಹ್ಯಾಮಿಲ್ಟೋನಿಯ** ಎಂಬುದು ಈ ಜಾತಿಯ ಇನ್ನೊಂದು ಪ್ರಭೇದ. ಇದರ ಎಲೆಯತೊಟ್ಟು 12ಸೆಂಮಿ ಉದ್ದವಾಗಿರುತ್ತದೆ. ಎಲೆ 18ಸೆಂಮಿ ಉದ್ದ 10ಸೆಂಮಿ ಅಗಲವಾಗಿರುತ್ತದೆ. ಬಲಿತ ಎಲೆಯ ಅಂಚು ಬಿಳುಪಾಗಿದ್ದು ಹಲ್ಲುಗಳಾಗಿ ಒಡೆದಿರುತ್ತದೆ. ಎಳೆಯ ಎಲೆಯ ಅಂಚಿನ ಹೆಚ್ಚುಭಾಗ ಬಿಳುಪಾಗಿರುತ್ತದೆ. ಎಲೆಯ ಮೇಲೆ ಬಿಳಿ ಪಟ್ಟೆಗಳು ಹರಡಿಕೊಂಡಿದ್ದು ನೋಡಲು ಮನೋಹರವಾಗಿರುತ್ತದೆ.

**ಅಕ್ಯಾಲಿಫ ಹಿಸ್ಪಿಡ** ಎಂಬ ಪ್ರಭೇದದ ಕೆಂಪು ಬಣ್ಣದ ಉದ್ದವಾದ ಹೂಗೊಂಚಲು ಬೆಕ್ಕಿನ ಬಾಲದಂತೆ ನೇತುಬೀಳುವುದರಿಂದ ಬಹಳ ಸುಂದರವಾಗಿ ಕಾಣುತ್ತದೆ. ಇದು ಮಧ್ಯಮ ಎತ್ತರದ ಸಸ್ಯ. ಎಲೆಯತೊಟ್ಟು 10ಸೆಂಮಿ ಉದ್ದ. ಬಣ್ಣ ಹಸುರು ಕಡುಗೆಂಪು ಮಿಶ್ರ. ನಡುದಿಂಡು ನಸುಗೆಂಪು. 35ಸೆಂಮಿ ಉದ್ದದ ಗೊಂಚಲು ಕ್ಯಾಟ್‌ಕಿನ್ ಮಾದರಿಯದು.

**ಅಕ್ಯಾಲಿಫ ಮ್ಯಾಕ್ರೊಫೈಲ** ಎಂಬುದು ಅಗಲವಾದ ಎಲೆಗಳಿಗೆ ಹೆಸರುವಾಸಿಯಾಗಿದೆ. ಎಲೆತೊಟ್ಟು ಹಸುರು, ನಸುಗೆಂಪು ಮಿಶ್ರಿತ. ಎಲೆ 35ಸೆಂಮಿ ಉದ್ದ 2.5ಸೆಂಮಿ ಅಗಲ, ಬಣ್ಣ ಸೀಸೆ ಹಸುರು, ನಾಳ ಮತ್ತು ನಡುದಿಂಡು ನಸುಗೆಂಪು. ಎಲೆಯ ಮೇಲು ಭಾಗದಲ್ಲಿ ನಸುಗೆಂಪು ಮತ್ತು ಕೆಂಪುಬಣ್ಣದ ಮಚ್ಚೆಗಳು ಇರುತ್ತವೆ. ಎಳೆಯ ಎಲೆಗಳು ನಸುಗೆಂಪು. ಅಲ್ಲಲ್ಲಿ ಹಸುರುಬಣ್ಣದ ಮಚ್ಚೆಗಳೂ ಇರುತ್ತವೆ.

**ಅಕ್ಯಾಲಿಫ ಟ್ರೈಕಲರ್** ಎಂಬುದು ಮೂರು ಬಣ್ಣದ ಎಲೆಗಳುಳ್ಳ ಪ್ರಭೇದ. ಎಲೆಯ ತೊಟ್ಟು 7ಸೆಂಮಿ ಉದ್ದ. ಎಲೆ 25ಸೆಂಮಿ ಉದ್ದ 18ಸೆಂಮಿ ಅಗಲ. ಮಾಸಲು ತಾಮ್ರವರ್ಣದ ಜೊತೆಗೆ ಆಲಿವ್ ಹಸುರು, ಕಂಚಿನ ಹಸುರು ಬಣ್ಣಗಳಿದ್ದು ಮೇಲುಭಾಗದಲ್ಲಿ ಕೇಸರಿಬಣ್ಣದ ಪಟ್ಟೆಗಳು ಇರುತ್ತವೆ. ಎಳೆಯ ಎಲೆಗಳು ಪೂರ್ತಿಯಾಗಿ ಕೇಸರಿಬಣ್ಣದಲ್ಲಿರುತ್ತವೆ.

ಅಕ್ಯಾಲಿಫ ಸಸ್ಯಗಳನ್ನು ಎಳೆಯ ಕಾಂಡದ ತುಂಡುಗಳಿಂದ ವೃದ್ಧಿಮಾಡುವುದು ರೂಢಿಯಲ್ಲಿದೆ. ಮಳೆಗಾಲದಲ್ಲಿ ಈ ತುಂಡುಗಳು ಸುಲಭವಾಗಿ ಬೇರು ಬಿಡುವುದರಿಂದ ವೃದ್ಧಿಕಾರ್ಯಕ್ಕೆ ಇದು ಯೋಗ್ಯವಾದ ಕಾಲ.

ಈ ಸಸ್ಯಗಳು ಸುಲಭವಾಗಿ ಗಟ್ಟಿಮುಟ್ಟಾಗಿ ಬೆಳೆಯುವುದರಿಂದ ಇವುಗಳ ಬೇಸಾಯಕ್ಕೆ ಹೆಚ್ಚಿನ ಎಚ್ಚರಿಕೆ ವಹಿಸುವ ಅಗತ್ಯವಿಲ್ಲ. ಇವುಗಳ ಬೇರುಗಳು ಆಳವಾಗಿ ಇಳಿಯುವುದರಿಂದ ಸರಿಯಾದ ಸೌಲಭ್ಯ ಒದಗಿಸುವುದು ಅಗತ್ಯ. ಕುಂಡಗಳಲ್ಲಿ ಅಕ್ಯಾಲಿಫ ಸಸ್ಯಗಳನ್ನು ಬೆಳೆಯುವಾಗ ದೊಡ್ಡ ಕುಂಡಗಳನ್ನು ಆರಿಸಿಕೊಳ್ಳಬೇಕು. ಗಿಡಗಳ ಆಕಾರವನ್ನು ನಿಯಂತ್ರಿಸದಿದ್ದಲ್ಲಿ ವಿಕಾರವಾಗಿ ಕಾಣುತ್ತವೆ. ಅಲಂಕಾರ ಬೇಲಿಯಾಗಿ ಬೆಳೆಸುವಾಗ ಕ್ರಮವಾಗಿ ಕತ್ತರಿಸಿ ಸರಿಯಾದ ಆಕಾರದಲ್ಲಿ ಇಟ್ಟಿರಬೇಕು. ಸೂರ್ಯನ ಬೆಳಕು ಸರಿಯಾಗಿ ಬೀಳದೆ ಇದ್ದಲ್ಲಿ ಸರಿಯಾದ ಬಣ್ಣ ಬಾರದೆ ಹೋಗುತ್ತದೆ. (ಎಂ.ಎಚ್.ಎಂ.)

**ಅಕಿಮಿನೀಸ್ :** ಜೆಸ್ನೇರಿಯೇಸೀ ಕುಟುಂಬಕ್ಕೆ ಸೇರಿದ ಆಲಂಕಾರಿಕ ಸಸ್ಯ ಜಾತಿ. ಇದರ ವಿವಿಧ ಪ್ರಭೇದಗಳ ಹೂಗಳು ಕೆಂಪು, ನಸುಗೆಂಪು, ಹಳದಿ, ಬಿಳುಪು, ನಸುಬಿಳುಪು, ಕೇಸರಿ ಇತ್ಯಾದಿ ಬಣ್ಣಗಳಲ್ಲಿದ್ದು ಬಹಳ ಸುಂದರವಾಗಿ ಕಾಣುತ್ತವೆಯಲ್ಲದೆ ದೀರ್ಘ ಕಾಲವಿರುವುದರಿಂದ ತೋಟಗಾರಿಕೆಯಲ್ಲಿ ಹೆಚ್ಚಿನ ಜನಪ್ರಿಯತೆ ಗಳಿಸಿವೆ. ಅಕಿಮಿನೀಸ್ ಜಾತಿಯ ಪ್ರಭೇದಗಳನ್ನು ಅಂಚುಸಸ್ಯಗಳಾಗಿಯೂ ಮಡಿಸಸ್ಯಗಳಾಗಿಯೂ ಕುಂಡಸಸ್ಯಗಳಾಗಿಯೂ ಬೆಳೆಸುತ್ತಾರೆ.

ಈ ಜಾತಿಯಲ್ಲಿ 40ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಅನೇಕವು ಗ್ವಾಟೆಮಾಲ ಮತ್ತು ಮೆಕ್ಸಿಕೊ ದೇಶದ ಮೂಲವಾಸಿಗಳು. ಇವುಗಳ ಪೈಕಿ ಕೆಲವು ಮಾತ್ರ ಉದ್ಯಾನವನದಲ್ಲಿ ಪ್ರಾಮುಖ್ಯ ಪಡೆದಿವೆ. ಅಕಿಮಿನೀಸ್ ಸಸ್ಯಗಳಲ್ಲಿ ಗುಪ್ತಕಾಂಡವೂ ಅದರಿಂದ ಹೊರಡುವ ಎಲೆಗಳೂ ಇವೆ. ಎಲೆಗಳನ್ನು ಕೊಡುತ್ತವೆ. ಎಲೆಗಳು ಅಭಿಮುಖ ಸಂಯೋಜನೆಯನ್ನೂ ಕೆಲವು ಸಸ್ಯಗಳಲ್ಲಿ ವರ್ತುಲಜೋಡಣೆಯನ್ನೂ ಪ್ರದರ್ಶಿಸುತ್ತವೆ. ಅವುಗಳ ಅಂಚು ಗರಗಸದ ಹಲ್ಲಿನಂತಿದೆ. ಹೂಗಳು ಒಂಟಿಯಾಗಿಯೊ ಗುಂಪಾಗಿಯೊ ಇರಬಹುದು. ಕೊಳವೆಯಾಕಾರದ ಪುಷ್ಪಪತ್ರಗಳು ಅಂಡಾಶಯಕ್ಕೆ ಅಂಟಿದಂತಿದ್ದು ಐದು ಅಸಮ ಭಾಗಗಳಿಂದ ಕೂಡಿವೆ. ಐದು ದಳಗಳಿವೆ. ಇವು ಕೂಡಿಕೊಂಡಿದ್ದು ಬುಡದಲ್ಲಿ ಕೊಳವೆಯಾಕಾರವಾಗಿಯೂ ತುದಿ ಹರಡಿಕೊಂಡಂತೆಯೂ ಇರುತ್ತದೆ. ಕೇಸರಗಳ ಸಂಖ್ಯೆ 5. ಅವುಗಳ ಬುಡ ದಳಗಳಿಗೆ ಅಂಟಿಕೊಂಡಿರುತ್ತದೆ. ಕೇಸರಗಳಲ್ಲಿ ಒಂದು ಬಂಜೆಕೇಸರ. ಎರಡು ಕೋಶ ಅಂಡಾಶಯಗಳುಳ್ಳ ನೀಚ ಸ್ಥಿತಿಯದಾಗಿರುತ್ತದೆ.

ಅಕಿಮಿನೀಸ್ ಅಸಲೆಟ ಎಂಬ ಪ್ರಭೇದ 1ಮೀ ಎತ್ತರ ಬೆಳೆಯುವ ಇದು ಸುಂದರವಾದ ಹೂ ಮತ್ತು ಎಲೆಗಳನ್ನು ಬಿಡುತ್ತದೆ. ಇದರ ಗುಪ್ತಕಾಂಡ (ರೈಸೋಮ್) ಸಣ್ಣಗಡ್ಡೆಯ ರೂಪದಲ್ಲಿರುತ್ತದೆ. ತೊಟ್ಟಿನಿಂದ ಕೂಡಿರುವ ಕಂದು ಬಣ್ಣದ ಇದರ ಎಲೆ ಕರಣೆಯಾಕಾರವಾಗಿದ್ದು ಗರಗಸದ ಅಂಚಂತಿದೆ. ಅದರ ಮೇಲುಭಾಗ ಅತಿ ಹಸುರಾಗಿಯೂ ತಳಭಾಗ ಕಂದುಬಣ್ಣದ್ದಾಗಿಯೂ ಇವೆ. ಹೂ ತೊಟ್ಟಿನಿಂದ ಕೂಡಿದ್ದು ಕೆಂಪುಬಣ್ಣವಾಗಿರುತ್ತದೆ. 2.5ಸೆಂಮಿ ಉದ್ದವಾಗಿರುವ ಅದರ ತಳ ಕೊಳವೆಯಾಕಾರದಲ್ಲಿದೆ. ದಳಗಳ ಮೇಲೆ ಕಪ್ಪು ಮತ್ತು ಹಳದಿ ಚುಕ್ಕೆಗಳು ಇರುತ್ತವೆ.

ಅಕಿಮಿನೀಸ್ ಕಾಕ್ಸೀನಿಯ ಎಂಬ ಇನ್ನೊಂದು ಪ್ರಭೇದ ಸುಮಾರು 0.75ಮೀ ಎತ್ತರಕ್ಕೆ ಬೆಳೆಯುವ ಕೆಂಪುಕಾಂಡದ ಸಸ್ಯ. ಎಲೆ ಅಭಿಮುಖ ಅಥವಾ ವೃತ್ತಾಕಾರದ ಜೋಡಣೆಯನ್ನು ಪ್ರದರ್ಶಿಸುತ್ತದೆ. ಆಕಾರ ಕರಣೆಯಂತೆ. ಅಂಚು ಗರಗಸದ ಹಲ್ಲಿನಂತೆ ಒಡೆದಿದ್ದು ಲಂಬಾಗ್ರ ತುದಿಯನ್ನು ಹೊಂದಿರುತ್ತದೆ. ಹೂಗಳು ಒಂಟಿಯಾಗಿರುತ್ತವೆ. ಅವುಗಳ ತೊಟ್ಟು ಚಿಕ್ಕವು. ದಳಗಳು ಕೂಡಿಕೊಂಡಿರುತ್ತವೆ. ಪುಷ್ಪಪಾತ್ರೆಗಳಿಗಿಂತ ದಳಗಳು ಎರಡರಷ್ಟು ಉದ್ದವಾಗಿರುತ್ತವೆ. ಇದು ಇತರ ಅಕಿಮಿನೀಸ್ ಪ್ರಭೇದಗಳಿಗಿಂತ ನಿಧಾನವಾಗಿ ಹೂಬಿಡುತ್ತದೆ.

ಅಕಿಮಿನೀಸ್ ಹೆಟಿರೊಫಿಲ ಎಂಬ ಮತ್ತೊಂದು ಪ್ರಭೇದ ಸುಮಾರು 30ಸೆಂಮಿ ಎತ್ತರ ಬೆಳೆಯುವ ಕುಳ್ಳು ಸಸ್ಯ. ಇದಕ್ಕೆ ಅತಿ ಕಂದುಬಣ್ಣದ ಕುಚ್ಚು ಬೇರು ಇರುತ್ತದೆ. ಕರಣೆಯಾಕಾರದ ಇದರ ಎಲೆಗಳು ಗರಗಸದ ಅಂಚಿನಂತೆ ಒಡೆದಿದ್ದು ಲಂಬಾಗ್ರ ತುದಿಯನ್ನು ಹೊಂದಿರುತ್ತದೆ. ಪ್ರತಿ ಪತ್ರದ್ವಯದಲ್ಲೂ ಒಂದೊಂದು ಅಸಮ ಎಲೆ ಇರುತ್ತದೆ. ಉದ್ದವಾದ ತೊಟ್ಟಿನ ಮೇಲೆ ಹೂಗಳು ಒಂಟೊಂಟಿಯಾಗಿರುತ್ತವೆ. ಅವುಗಳು ಹಳದಿ ಅಥವಾ ಕೇಸರಿ ಬಣ್ಣದಲ್ಲಿರುತ್ತವೆ. ಇದು ಮೆಕ್ಸಿಕೊ ದೇಶದ ಮೂಲದ್ದು.

ಅಕಿಮಿನೀಸ್ ಪೀಡಂಕ್ಯುಲೇಟ ಎಂಬುದು ಮತ್ತೊಂದು ಪ್ರಭೇದ. ಇದು ಸು. 0.75ಮೀ ಎತ್ತರಕ್ಕೆ ಬೆಳೆಯುತ್ತದೆ. ಇದರಲ್ಲಿ ಕೆಂಪು ಗುಪ್ತಕಾಂಡ ರೋಮಗಳಿಂದ ಕೂಡಿರುತ್ತದೆ. ಕೆಂಪುವರ್ಣದ ಎಲೆಗಳು ಚಿಕ್ಕವಾಗಿದ್ದು ತೊಟ್ಟಿನಮೇಲೆ ಹಲ್ಲಿನಂತಿರುತ್ತದೆ. ಒಂಟಿಯಾಗಿರುವ ಹೂಗಳು ಜೋಲುಬಿದ್ದಿರುತ್ತವೆ. ಅವುಗಳ ಬಣ್ಣ ಹಳದಿ ಮಿಶ್ರಿತ ಕೆಂಪು; ಮೇಲುಭಾಗದಲ್ಲಿ ಕಪ್ಪುಚುಕ್ಕೆಗಳು ಇರುತ್ತವೆ; ಗಂಟಲು ಹಳದಿಬಣ್ಣ. ಈ ಸಸ್ಯ ಗ್ವಾಟೆಮಾಲ ಮೂಲದ್ದು.

ಅಕಿಮಿನೀಸ್ ಟ್ಯೂಬಿಫ್ಲೋರ ಎಂಬುದು ಇನ್ನೊಂದು ಪ್ರಭೇದ. ಇದರ ಹೂವಿನ ಕೊಳವೆ ಉದ್ದವಾಗಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ತೊಟ್ಟನ್ನುಳ್ಳ ಚಿಕ್ಕ ಚಿಕ್ಕ ಎಲೆಗಳು ಆಯತಾಕಾರವಾಗಿದ್ದು ಅಭಿಮುಖ ಪತ್ರಸಂಯೋಗವನ್ನು ಪ್ರದರ್ಶಿಸುತ್ತವೆ. ಅವುಗಳ ಅಂಚು ಗುಂಡಾದ ಹಲ್ಲುಗಳಾಗಿ ಒಡೆದಿದೆ. ಹೂ 10ಸೆಂಮೀ ಉದ್ದವಾಗಿರುತ್ತದೆ. ಹೂಕೊಳವೆ ಉದ್ದವಾಗಿದ್ದು ಆಲೂಗಡ್ಡೆಯ ಆಕಾರವಾಗಿರುತ್ತದೆ. ಇದರ ಮೂಲ ಆರ್ಜಂಟೀನ.

ಅಕಿಮಿನೀಸ್ ಸಸ್ಯಗಳನ್ನು ಗುಪ್ತಕಾಂಡಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಮೆದುಕಾಂಡಗಳನ್ನು ಮಳೆಗಾಲದಲ್ಲಿ ಕತ್ತರಿಸಿ ಮರಳಿನಲ್ಲಿ ನೆಟ್ಟಾಗ ಅವು ಬೇರು ಬಿಡುತ್ತವೆ. ಆದರೆ ಗುಪ್ತಕಾಂಡಗಳಿಂದ ವೃದ್ಧಿಕಾರ್ಯ ಸುಲಭವಾಗಿರುವುದರಿಂದ ಈ ವಿಧಾನದಲ್ಲಿ ವೃದ್ಧಿಮಾಡುವುದು ಹೆಚ್ಚಾಗಿ ಬಳಕೆಯಲ್ಲಿದೆ.

ಅಕಿಮಿನೀಸ್ ಜಾತಿಯ ಸಸ್ಯಗಳ ಬೇರುಗಳು ತೀರ ಮೇಲುಭಾಗದಲ್ಲೇ ಹರಡುವುದರಿಂದ ಕುಂಡಗಳಲ್ಲಿ ತೆಂಗಿನನಾರು, ಒಣ ಪಾಚಿ ಹಾಕಿ ಸುಲಭವಾಗಿ ಬೆಳೆಯಬಹುದು ಅಥವಾ ನೇರವಾಗಿ ನೆಲದಲ್ಲಿಯೆ, ಬೆಳೆಸಬಹುದು. ಲಶುನಗಳನ್ನು ಮಾರ್ಚ್ ತಿಂಗಳಿನಲ್ಲಿ ನೆಟ್ಟರೆ ಜೂನ್ ತಿಂಗಳಿನಲ್ಲಿ ಗಿಡಗಳು ಬೆಳೆದು ಹೂ ಬಿಟ್ಟು ನವೆಂಬರ್ ತಿಂಗಳವರೆಗೆ ಉಳಿಯುತ್ತವೆ. ಈ ಸಸ್ಯಗಳನ್ನು ಸರಾಗವಾಗಿ ಗಾಳಿ ಬೆಳಕು ಬರುವಂತೆ ನೆರಳಿನಲ್ಲಿಡಬೇಕು. ಹೂ ಮುಗಿದ ಅನಂತರ ಸಸ್ಯವಿರುವ ಕುಂಡವನ್ನು ಫೆಬ್ರವರಿ ತಿಂಗಳವರೆಗೆ ಎಚ್ಚರಿಕೆಯಿಂದ ನೆರಳಿನಲ್ಲಿ ಇಟ್ಟಿರಬೇಕು. ಮತ್ತೆ ಮಾರ್ಚ್ ತಿಂಗಳಲ್ಲಿ ಕುಂಡದಲ್ಲಿರುವ ಗುಪ್ತಕಾಂಡವನ್ನು ಬೇರೆ ಕುಂಡಗಳಲ್ಲಿ ಹಾಕಿ ಮೊದಲಿನಂತೆ ಬೆಳೆಸಬಹುದು. (ಡಿ.ಎಂ.)

**ಅಕಿಲೀಸ್ :** ಟ್ರೋಜನ್ ಯುದ್ಧದಲ್ಲಿ ಹೋರಾಡಿದ ಗ್ರೀಕ್ ವೀರರಲ್ಲಿ ಅಗ್ರಗಣ್ಯ. ಪೀಲಿಯೂಸ್ ಮತ್ತು ಥೀಟಿಸ್ ಅವರ ಮಗ. ಅಕಿಲೀಸನ ದೇಹ ಅಭೇದ್ಯವಾಗಿ ಇರುವುದಕ್ಕಾಗಿ ಅವನ ತಾಯಿ ಅವನನ್ನು ಪಾತಾಳವನ್ನು ಸುತ್ತುವರಿದಿರುವ ಸ್ಟಿಕ್ಸ್ ನದಿಯಲ್ಲಿ ಮುಳುಗಿಸಿದಳಂತೆ. ಹಾಗೆ ಮಾಡುವಾಗ ಆಕೆ ಅವನ ಹಿಮ್ಮಡಿಗಳನ್ನು ತನ್ನ ಕೈಯಲ್ಲಿ ಹಿಡಿದಿದ್ದರಿಂದ ಹಿಮ್ಮಡಿಗಳು ಮಾತ್ರ ನೀರಿನಲ್ಲಿ ಮುಳುಗಲಿಲ್ಲ. ಆದ್ದರಿಂದ ಅವನ ಹಿಮ್ಮಡಿಗಳನ್ನು ಬಿಟ್ಟು ದೇಹದ ಉಳಿದ ಭಾಗವೆಲ್ಲ ವಜ್ರದಂತೆ ಗಟ್ಟಿಯಾಯಿತು. ಇದಲ್ಲದೆ ಅವನು ಟ್ರೋಜನ್ ಯುದ್ಧದಲ್ಲಿ ಭಾಗವಹಿಸದೆ ಇರುವಂತೆ ಮಾಡಲು ಅವನ ತಾಯಿ ಅವನಿಗೆ ಹೆಣ್ಣು ಹುಡುಗಿಯ ವೇಷಹಾಕಿ ಸ್ಕೈರೂಸ್ ನಗರದ ದೊರೆಯ ಆಸ್ಥಾನದಲ್ಲಿ ಬಚ್ಚಿಟ್ಟಿದ್ದಳು. ಆದರೆ ಒಡಿಸ್ಸಿಯೂಸ್ ಅವನ ಮುಂದೆ ಆಯುಧಗಳನ್ನು ಇಟ್ಟಾಗ ಅವನ ನಡತೆಯಿಂದ ಅವನು ಹೆಣ್ಣಲ್ಲವೆಂದು ಖಚಿತವಾಯಿತು. ಟ್ರಾಯ್ ನಗರದ ಮುತ್ತಿಗೆಯಾದಾಗ ಅಕಿಲೀಸ್ ಮರ್‌ಮಿಡನ್ನರ ನಾಯಕನಾಗಿದ್ದ. ಇವನು ಸಮರ್ಥನೂ ಪ್ರಬಲನೂ ಶೀಘ್ರಗಾಮಿಯೂ ಉಗ್ರನೂ ಕಠೋರನೂ ಆಗಿದ್ದ ವೀರನೆಂದು ಹೆಸರು ಪಡೆದಿದ್ದ. ಅಗಮೆಮ್‌ನಾನಿನ ಸಂಗಡ ಜಗಳವಾಡಿ ಅಕಿಲೀಸ್ ತನ್ನ ಗುಡಾರದಲ್ಲಿ ಕುಳಿತುಬಿಟ್ಟಾಗ ಗ್ರೀಕರು ಏನೂ ಮಾಡಲು ತೋರದೆ ತಮ್ಮ ಹಡಗುಗಳಿಗೆ ವಾಪಸಾದರು. ಆದರೆ ಅಗಮೆಮ್‌ನಾನಿನ ಜೊತೆಯಲ್ಲಿ ರಾಜಿಯಾದ ಮೇಲೆ ಅಕಿಲೀಸ್ ಯುದ್ಧಮಾಡಿ ಹೆಕ್ಟರನನ್ನು ಕೊಂದುಹಾಕಿದ. ಕೊನೆಗೆ ಪ್ಯಾರಿಸ್ ಅವನ ಹಿಮ್ಮಡಿಗೆ ಬಾಣ ಹೊಡೆದು ಅವನನ್ನು ಕೊಂದ. ಅಕಿಲೀಸ್ ಚಿರಂಜೀವಿಯಾಗಿ ತನ್ನದೇ ಆದ ದ್ವೀಪದಲ್ಲಿದ್ದಾನೆಂಬ ಕಥೆಯೂ ಇದೆ. ಕೋಪಾವೇಶದ ಪರಮಾವಧಿಗೇರುತ್ತಿದ್ದ ಅಕಿಲೀಸ್ ದುರಂತ ನಾಯಕರೆಲ್ಲರ ಮೊದಲಿಗ. ಹೀಲ್ ಆಫ್ ಅಕಿಲೀಸ್–ಅಕಿಲೀಸನ ಹಿಮ್ಮಡಿ ಎಂಬ ಮಾತು ಅಪಾಯಸ್ಥಾನ ಎಂಬ ಅರ್ಥವನ್ನು ಸೂಚಿಸುವ ಆಡುನುಡಿಯಾಗಿ ಇಂದಿಗೂ ಉಳಿದು ಬಂದಿದೆ.

(ಸಿ.ಎನ್.ಎಂ.)

**ಅಕಿಲೀಸನ ಕಂಡರ :** ಕಾಲಿನ ಹರಡಿನ ಹಿಂಗಡೆ ದಪ್ಪನಾಗಿರುವ ಬಲವಾದ ಕಂಡರ (ಟೆಂಡನ್). ಪಾದವನ್ನು ಒಳಮಡಿಸುವ, ಚಾಚುವ, ಕಣಕಾಲಿನ ಮೀನಖಂಡದ ಸ್ನಾಯುಗಳ ಕಂಡರವಾಗಿ ಹಿಮ್ಮಡಿಯ ಮೂಳೆಗೆ ಅಂಟಿದೆ. ರೂಪಕವಾಗಿ ಅಪಾಯ ಸ್ಥಾನ ಎಂಬರ್ಥದಲ್ಲಿ ಈ ಮಾತು ಬಳಕೆಗೆ ಬಂದಿದೆ. (ಎಂ.ಡಿ.)

**ಅಕೆಡಮಿಗಳು :** ಪ್ಲೇಟೊ ನಡೆಸುತ್ತಿದ್ದ ವಿದ್ಯಾಪೀಠ ಅಕೆಡಮಿ ಎಂಬ ಸ್ಥಳದಲ್ಲಿದ್ದಿತಾದ ಕಾರಣ ಅವನ ವಿದ್ಯಾಪೀಠವನ್ನೂ ಅದೇ ಹೆಸರಿನಿಂದ ಕರೆಯುವ ರೂಢಿ ಬಂದಿತು. ಅಲ್ಲಿಂದೀಚೆಗೆ ಅಕೆಡಮಿ (ಅಕಾಡೆಮಿ) ಪದ ವಿದ್ಯಾಪೀಠವೆಂಬ ಅರ್ಥದಲ್ಲೇ ಪ್ರಚಲಿತವಾಗಿದೆ. ತತ್ತ್ವ ಜಿಜ್ಞಾಸೆ, ಮಂಥನ, ಪರಿಶೀಲನೆ, ಇತ್ಯರ್ಥ – ಇವು ಮೊದಲಿನಿಂದಲೂ ವಿದ್ಯಾಪೀಠಗಳ ಧ್ಯೇಯವಾಗಿದ್ದುವು. ಇದರಿಂದ ಇನ್ನೊಬ್ಬರು ಹೇಳಿದ್ದನ್ನೇ ಪರಮಸತ್ಯವೆಂದು ನಂಬುವ ಮೌಢ್ಯ ದೂರವಾಗುತ್ತ ಶಾಸ್ತ್ರೀಯವಾಗಿ ಸತ್ಯಮಥನ ನಡೆಯುವಂತಾಯಿತು.

**ಗ್ರೀಕ್ ಅಕೆಡಮಿ:** ಅಥೆನ್ಸಿಗೆ ವಾಯವ್ಯ ದಿಕ್ಕಿನಲ್ಲಿ ಅದರಿಂದ $1^1/_2$ ಕಿಮೀ ದೂರದಲ್ಲಿ ಸೆಫಿಸಸ್ ನದಿಯ ದಡದ ಮೇಲಿದ್ದ ಅಕೆಡಮಿ ಎಂಬ ಉದ್ಯಾನವನದಲ್ಲಿ ಪ್ಲೇಟೊ ಒಂದು ವಿದ್ಯಾಪೀಠವನ್ನು ಸ್ಥಾಪಿಸಿದ. ಐವತ್ತು ವರ್ಷಗಳ ಕಾಲ ಎಂದರೆ ಪ್ರ.ಶ.ಪೂ. 348ರಲ್ಲಿ ಅವನು ತೀರಿಕೊಳ್ಳುವವರೆಗೆ ಅಲ್ಲಿ ಪಾಠಪ್ರವಚನಗಳನ್ನು ನಡೆಸುತ್ತಿದ್ದ. ಅವನ ತರುವಾಯ ಅವನ ಶಿಷ್ಯರು ಅದನ್ನು ವಿದ್ಯಾಪೀಠವಾಗಿ 520ರವರೆಗೆ ನಡೆಸಿದರು. ಆದರೆ ಅದು ಮತಬೋಧನೆಗೆ ಗಮನ ಕೊಡದಿದ್ದುದರಿಂದ ಅದನ್ನು ಅಂದಿನ ದೊರೆ ಜಸ್ಟಿನಿಯನ್ ಮುಚ್ಚಿಸಿಬಿಟ್ಟ.

ಪ್ಲೇಟೊವಿನ ಅನಂತರ ಅಕೆಡಮಿಯಲ್ಲಿ ಐದು ಸಂಪ್ರದಾಯಗಳು ಬೆಳೆದುವೆಂದು ಕೆಲವರೂ ಮೂರು ಸಂಪ್ರದಾಯಗಳು ಬೆಳೆದುವೆಂದು ಇನ್ನು ಕೆಲವರೂ ಹೊಸದು ಹಳೆಯದು ಎಂದು ಎರಡು ಸಂಪ್ರದಾಯಗಳು ಮಾತ್ರ ಇದ್ದುವೆಂದು ಮತ್ತೆ ಕೆಲವರೂ ಹೇಳುತ್ತಾರೆ.

ಪ್ಲೇಟೊವಿನ ಕಾಲದಿಂದ ಸಿಸಿರೋವಿನ ಕಾಲದವರೆಗೆ ಈ ಅಕೆಡಮಿಯ ಸಂಪ್ರದಾಯದಲ್ಲಿ ನಾಲ್ಕು ಘಟ್ಟಗಳನ್ನು ಕಾಣಬಹುದು.

1. ಪ್ಲೇಟೊವಿನ ಭಾವನೆಗಳನ್ನು ಅವನ ಸಮೀಪದ ಅನುಯಾಯಿಗಳಾದ ಸ್ಪೆಸಿಪ್ಪಸ್ ಮತ್ತು ಕ್ಸೆನೊಕ್ರಾಟೀಸ್ ಅಂಗೀಕರಿಸಲಿಲ್ಲ. ಒಳ್ಳೆಯದು ಎಂಬುದು ವಸ್ತುಗಳ ಹುಟ್ಟಿಗೆ ಕಾರಣವಾಗಲಾರದು. ಏಕೆಂದರೆ ಅದು ವಸ್ತುಗಳಲ್ಲಿರುವ ಗುಣ ಮಾತ್ರ. ಆದ್ದರಿಂದ ಒಳ್ಳೆಯದು ಎಂಬುದಕ್ಕಿಂತ ಹೆಚ್ಚು ವ್ಯಾಪಕವಾದ ಭಾವನೆಯೊಂದು ಸೃಷ್ಟಿಗೆ ಕಾರಣವಾಗಿರಬೇಕು. ಎಲ್ಲದರಲ್ಲೂ ನೆಲೆಸಿ, ಎಲ್ಲವನ್ನೂ ವ್ಯಾಪಿಸಿ, ಎಲ್ಲವನ್ನೂ ಹಿಡಿತದಲ್ಲಿಟ್ಟುಕೊಂಡಿರುವ ಈಶ್ವರಶಕ್ತಿಯೇ ಸೃಷ್ಟಿಗೆ ಮೂಲ, ಇದು ಇವರಿಬ್ಬರ ನಿಲುವು.

2. ಆರ್‌ಸೆಸಿಲಸ್‌ನ ಕಾಲದಲ್ಲಿ ಅಕೆಡಮಿಯು ಅಜ್ಞಾತವಾದ (ಅಗ್ನಾಸ್ಟಿಸಿಸಮ್) ಕಡೆಗೆ ತಿರುಗಿತು. ನನಗೆ ಏನೂ ತಿಳಿಯದು ಎಂಬಷ್ಟು ಮಾತ್ರ ನನಗೆ ತಿಳಿದಿದೆ ಎಂದು ಸಾಕ್ರಟೀಸ್ ಹೇಳಿದನು. ಆರ್‌ಸೆಸಿಲಸ್ ಆದರೋ ಅಷ್ಟು ಕೂಡ ನನಗೆ ತಿಳಿಯದೆಂದು ಹೇಳುತ್ತಾನೆ. ನನಗೆ ತಿಳಿದಿದೆಯೋ ತಿಳಿದಿಲ್ಲವೋ ಯಾವುದನ್ನೂ ಹೇಳಲಾರೆ ಎಂದು ವಾದಿಸುತ್ತಾನೆ.

3. ಕಾರ್ನಿಡೀಸಿನ ಕಾಲದಲ್ಲಿ ಅಜ್ಞಾತವಾದವು ಸಂಭಾವ್ಯವಾದವಾಗಿ ಪರಿಣಮಿಸಿತು. ಒಂದು ಅಭಿಪ್ರಾಯ ಇತರರಿಗೆ ತಿಳಿಸಬೇಕಾದರೆ ಅದನ್ನು ತಿಳಿಸುವವನಿಗಾದರೂ ಅದು ಸಂಭಾವ್ಯವಾಗಿರಲೇಬೇಕು; ಆತನ ಅನುಭವಕ್ಕಾದರೂ ಸಂಗತವಾಗಿರಲೇಬೇಕು. ತನಗೆ ಸಂಭಾವ್ಯವಾಗದ್ದನ್ನು ಇತರರಿಗೆ ತಿಳಿಸುವುದು ಹೇಗೆ ಅಥವಾ ಇತರರಾದರೂ ಅದನ್ನು ನಂಬುವುದಾದರೂ ಹೇಗೆ?

4. ಕೊನೆಯ ಕಾಲದಲ್ಲಿ ಕಾರ್ನಿಡೀಸಿಗೂ ಪ್ಲೇಟೊವಿಗೂ ನಿಜವಾದ ವಿರೋಧವಿಲ್ಲವೆಂದೂ ಫೈಲೋ ವಾದಿಸಿ ಸಮನ್ವಯ (ಎಲೆಕ್ಟಿಸಿಸಮ್) ಪಂಥವನ್ನು ಸ್ಥಾಪಿಸಿದ.

**ಅಲೆಕ್ಸಾಂಡ್ರಿಯದ ಮ್ಯೂಸಿಯಂ :** ಇದು ಮೊದಲನೆಯ ಟಾಲೆಮಿಯಿಂದ ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಸ್ಥಾಪಿತವಾದ ವಿದ್ಯಾಪೀಠ. ಈಗಿನ ವಿಶ್ವವಿದ್ಯಾನಿಲಯಗಳ ಮಾದರಿಯಲ್ಲಿ ರೂಪುಗೊಂಡು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿತು. ಅಲ್ಲಿ ಅಂದಿನ ಎಲ್ಲ

ವಿಜ್ಞಾನಗಳೂ ಬಳಕೆಗೆ ಬಂದುವಲ್ಲದೆ ಗ್ರೀಸಿನ ಮತ್ತು ಪೂರ್ವ ರಾಷ್ಟ್ರಗಳ ವಿದ್ಯಾವಂತರೆಲ್ಲ ಅಲ್ಲಿ ನೆರೆದು ಪ್ರವಚನದಲ್ಲಿ ಭಾಗಿಯಾದರು. ಅಲೆಕ್ಸಾಂಡ್ರಿಯದ ಪ್ರಸಿದ್ಧ ಗ್ರಂಥಾಲಯಕ್ಕೆ ಅಂಕುರಾರ್ಪಣವಾದದ್ದು ಅಲ್ಲಿಯೆ.

**ಅಕೆಡಮಿಯ ಪಾಂಟಾನಿಯಾನ :** 1433ರಲ್ಲಿ ಆಂಟೋನಿಯ ಬೆಕಡೆಲ್ಲಿ ಎಂಬುವನಿಂದ ಫ್ಲಾರೆನ್ಸಿನಲ್ಲಿ ಸ್ಥಾಪನೆಯಾದ ವಿದ್ಯಾಪೀಠ. ಇದಕ್ಕಿಂತ ಪ್ರಸಿದ್ಧವಾದುದೆಂದರೆ 1442ರ ಸುಮಾರಿನಲ್ಲಿ ಸ್ಥಾಪಿತವಾದ ಅಕೆಡಮಿಯ ಪ್ಲೇಟೋನಿಕ ವಿದ್ಯಾಪೀಠ. ಇವು ಪ್ಲೇಟೊವಿನ ಜೊತೆಗೆ ಡಾಂಟೆಯಂಥ ಮಹಾಕವಿಗಳನ್ನೂ ಅಭ್ಯಾಸಕ್ಕೆ ಆರಿಸಿಕೊಂಡವಲ್ಲದೆ ಇಟಾಲಿಯನ್ ಭಾಷೆಯ ಪರಿಷ್ಕರಣಕ್ಕೆ ಯತ್ನಿಸಿದುವು. ಕೇವಲ ಐವತ್ತು ವರ್ಷಗಳು ಮಾತ್ರ ಜೀವಂತವಾಗಿದ್ದರೂ ಈ ಸಂಸ್ಥೆಗಳು ಮುಂದೆ ಬಂದ ಅನೇಕ ವಿದ್ಯಾಪೀಠಗಳಿಗೆಲ್ಲ ಮಾದರಿಯಾಗಿದ್ದು ಸ್ಫೂರ್ತಿಯನ್ನು ಕೊಟ್ಟುವು.

**ವೈಜ್ಞಾನಿಕ ಅಕೆಡಮಿಗಳು:** ಈಚೆಗೆ ಯುರೋಪು ಮತ್ತು ಅಮೆರಿಕಗಳಲ್ಲಿ ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ಹಲವಾರು ವಿದ್ಯಾಪೀಠಗಳು ಸ್ಥಾಪನೆಯಾಗಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿವೆ. ಅವುಗಳಲ್ಲಿ ಫ್ರಾನ್ಸಿನ ಫ್ರೆಂಚ್ ಅಕೆಡಮಿ, ಬರ್ಲಿನ್ನಿನ ಅಕೆಡಮಿ ಡರ್‌ವಿಸ್ಸೆನ್‌ಛಾಫ್ಟನ್, ಐರ್ಲೆಂಡಿನ ರಾಯಲ್ ಅಕೆಡಮಿ, ರಷ್ಯದ ಇಂಪೀರಿಯಲ್ ಅಕೆಡಮಿ – ಇವು ಪ್ರಸಿದ್ಧವಾದ ಸಂಸ್ಥೆಗಳು. **(ಜಿ.ಎಚ್.)**

**ಸಾಹಿತ್ಯ ಅಕೆಡಮಿಗಳು :** ಇಟಲಿಯಲ್ಲಿ ಅಕೆಡಮಿಯ ಪಾಂಟಾನಿಯಾನದಂಥ ಇನ್ನೆರಡು ಸಂಸ್ಥೆಗಳು ಉಲ್ಲೇಖನಾರ್ಹವಾಗಿವೆ. ಆರ್ಕೆಡಿ ಅಕೆಡಮಿಯು (1690) ಗ್ರಾಮಜೀವನಕ್ಕೆ ಸಂಬಂಧಿಸಿದ ಕವನಗಳಿಗೆ ಪ್ರೋತ್ಸಾಹವಿತ್ತು ಅವನ್ನು ಗ್ರಂಥರೂಪದಲ್ಲಿ ಪ್ರಚುರಪಡಿಸಿತು. ಇದಕ್ಕೆ ಈಗ ಇಟಾಲಿಯನ್ ಸಾಹಿತ್ಯ ಅಕೆಡಮಿ ಎಂಬ ಹೆಸರಿದೆ. 1603ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಸಾಹಿತ್ಯ ಪರಿಷತ್ತು ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನವಿತ್ತು, ಪುರಸ್ಕರಿಸುವ ಕೆಲಸ ಮಾಡುತ್ತಿದೆ.

ಇವುಗಳೊಂದಿಗೆ ಮುಖ್ಯವಾಗಿ ಫ್ರಾನ್ಸಿನ ಫ್ರೆಂಚ್ ಅಕೆಡಮಿ, ಜರ್ಮನಿಯ ದಿ ಫ್ರೂಟ್‌ಫುಲ್ ಸೊಸೈಟಿ, ಇಟಲಿಯ ಅಕೆಡಮಿಯ ಫ್ಲಾರೆಂಟೀನ, ಸ್ಪೇನಿನ ದಿ ರಿಯಲ್ ಅಕೆಡಮಿಯ ಎಸ್ಪನೋಲ – ಇವನ್ನು ಸೇರಿಸಬಹುದು. **(ಎಚ್.ಕೆ.ಆರ್.)**

**ಕಲೆಗೆ ಮೀಸಲಾದ ಅಕೆಡಮಿಗಳು:** ಇವು ಈಚಿನವು. ಗಿಲ್ಡುಗಳೆಂದು ಕರೆಯಲಾದ ವ್ಯಾಪಾರ ಸಂಘಗಳು ಹುಟ್ಟಿದ ಅನಂತರ ಕಲೆಗಾರರ ಹಕ್ಕುಬಾಧ್ಯತೆಗಳನ್ನು ಸಂರಕ್ಷಿಸಲು ಅದೇ ಮಾದರಿಯ ಸಂಘಸಂಸ್ಥೆಗಳು ಏರ್ಪಟ್ಟವು. ಕಾಲ ಕ್ರಮೇಣ ಅವು ಕಲೆಯ ಆರಾಧನೆ ಮತ್ತು ಬೋಧನೆಯನ್ನು ಕೈಗೊಂಡು ಕಲಾಕೇಂದ್ರಗಳಾದುವು. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಿದೆ: 1. ಫ್ರಾನ್ಸಿನ ದಿ ಅಕೆಡಮಿ ರಾಯಲೆ ದಿ ಪೇಂಚರ್ ಎಟ್ ದಿ ಸ್ಕಲ್ಪ್ಚರ್ (1648). ಇದರೊಂದಿಗೆ 1671ರಲ್ಲಿ ಸ್ಥಾಪಿತವಾದ ಅಕೆಡಮಿ ಆಫ್ ಆರ್ಕಿಟೆಕ್ಚರ್ ಸಂಸ್ಥೆ ವಿಲೀನವಾಯಿತು. 2. ಇಟಲಿಯ ಅಕೆಡಮಿ ಆಫ್ ಪೇಂಟಿಂಗ್ ಅಂಡ್ ಸ್ಕಲ್ಪ್ಚರ್ ಆಫ್ ಟೂರಿನ್ (1776); ವೆನಿಸ್ ಫ್ಲಾರೆನ್ಸ್ ಮೊದೇನ ಮೊದಲಾದ ಕಡೆಗಳಲ್ಲಿರುವ ದಿ ಅಕೆಡಮಿ ಆಫ್ ಆರ್ಟ್ಸ್ ಸಂಸ್ಥೆಗಳು. 3. ರಷ್ಯದ ಅಕೆಡಮಿ ಆಫ್ ಸೇಂಟ್ ಪೀಟರ್ಸ್‌ಬರ್ಗ್ (1816). 4. ದಕ್ಷಿಣ ಅಮೆರಿಕದ ಎಸ್ಕೊಲ ನ್ಯಾಷನಲ್ ದಿ ಬೆಲಾಸ್ ಆರ್ಟ್ಸ್ (1816). 5. ಸ್ಪೇನಿನ ಅಕೆಡಮಿ ದಿ ಬೆಲ್ಲಾಸ್ ಆರ್ಟ್ಸ್ ದಿ ಸ್ಯಾನ್ ಫರ್ನ್ಯಾಂಡೊ ಐದನೆಯ ಫಿಲಿಪ್ಪನಿಂದ ಸ್ಥಾಪಿತವಾದದ್ದು. 6. ಸ್ವೀಡನ್ನಿನ ಸ್ಟಾಕ್‌ಹೋಂನಲ್ಲಿ ಸ್ಥಾಪಿತವಾದ ಅಕೆಡಮಿ ಆಫ್ ಫೈನ್ ಆರ್ಟ್ಸ್ (1733) 7. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿರುವ ನ್ಯಾಷನಲ್ ಅಕೆಡಮಿ ಆಫ್ ಡಿಸೈನ್ (1826) 8. ಬ್ರಿಟನ್ನಿನಲ್ಲಿ – ಲಂಡನ್ನಿನ ರಾಯಲ್ ಅಕೆಡಮಿ ಆಫ್ ಆರ್ಟ್ಸ್ (1768), ದಿ ಅಕೆಡಮಿ ಆಫ್ ಏನ್‌ಷಂಟ್ ಮ್ಯೂಸಿಕ್ (1710) 9. ಟರ್ಕಿಯ ದಿ ಅಕೆಡಮಿ ಆಫ್ ಆರ್ಟ್ಸ್ (1908). ಇವು ಮುಖ್ಯವಾದುವು. **(ಪಿ.ಎಸ್.)**

**ರಾಯಲ್ ಅಕೆಡಮಿ ಆಫ್ ಆರ್ಟ್ಸ್:** ಚಿತ್ರಕಲೆಯ ಅಭಿವೃದ್ಧಿಗಾಗಿ ಒಂದು ಸಂಘವನ್ನು ಸ್ಥಾಪಿಸುವ ಉದ್ದೇಶದಿಂದ ಗ್ರೇಟ್ ಬ್ರಿಟನ್ನಿನ ಖ್ಯಾತ ಚಿತ್ರಕಾರರು ಮತ್ತು ವಾಸ್ತುಶಿಲ್ಪಕಾರರು ಅಂದಿನ ದೊರೆಯಾಗಿದ್ದ ಮೂರನೆಯ ಜಾರ್ಜ್‌ಗೆ ಅರ್ಪಿಸಿದ ಬಿನ್ನವತ್ತಳೆ ಫಲಪ್ರದವಾಗಿ 1768ರಲ್ಲಿ ಲಂಡನ್ನಿನಲ್ಲಿ ಈ ಅಕೆಡಮಿ ಸ್ಥಾಪನೆಗೊಂಡಿತು. ಸಂಘದ ಎರಡು ಮುಖ್ಯ ಉದ್ದೇಶಗಳೆಂದರೆ ಉತ್ತಮವಾಗಿ ನಿಯಂತ್ರಿತವಾದ ಒಂದು ಶಾಲೆಯ ಸ್ಥಾಪನೆ ಮತ್ತು ವಾರ್ಷಿಕ ಪ್ರದರ್ಶನ. ದೊರೆಯೇ ಅಕೆಡಮಿಯ ಪ್ರಧಾನ ಪೋಷಕ, ರಕ್ಷಕ ಮತ್ತು ಬೆಂಬಲಿಗ. ಅಕೆಡಮಿಯಲ್ಲಿ 40 ಜನ ಸದಸ್ಯರಿರಬೇಕೆಂದು ತೀರ್ಮಾನಿಸಿ, ಮೊದಲ 34 ಜನರನ್ನು ಸಂಘ ನಾಮಕರಣ ಮಾಡಿತು. ಸಂಘದ ಕಾರ್ಯಕಲಾಪಗಳನ್ನು, ಮಂಡಲಿ ಮತ್ತು ಪ್ರಧಾನಾಡಳಿತ ಮಂಡಲಿಯ ಕೆಲಸಕಾರ್ಯಗಳ ಕಚೇರಿಗಳ ಸ್ಥಾಪನೆ ಹಾಗು ಹೊಸ ಸದಸ್ಯರನ್ನು ಆರಿಸುವ ಕ್ರಮ – ಮುಂತಾದುವುಗಳನ್ನು ಸಭೆಯೊಂದರಲ್ಲಿ ತೀರ್ಮಾನಿಸಲಾಯಿತು. ಅಕೆಡಮಿಯ ವ್ಯವಹಾರದಲ್ಲಿನ ಯಾವುದೇ ವಿಷಯದ ಮೇಲೆ ತೀರ್ಮಾನ, ಅಧ್ಯಕ್ಷರ ಮತ್ತು ಸಿಬ್ಬಂದಿಯ ನೇಮಕ, ಅಥವಾ ಯಾವುದೇ ತಿದ್ದುಪಡಿ ಮೊದಲಾದುವನ್ನು ಮಾಡಬೇಕಾದರೆ ಸಾರ್ವಭೌಮರ ಅನುಮತಿ ಪಡೆಯಬೇಕಾದದ್ದು ಅತ್ಯಗತ್ಯ. ಅಧಿಕಾರ ವಹಿಸಿಕೊಳ್ಳುವ 40 ಜನ ರಾಯಲ್ ಸದಸ್ಯರು ಮಂಡಳಿಯ ಹಾಗೂ ವಾರ್ಷಿಕ ಪ್ರದರ್ಶನಗಳ ಆಡಳಿತವನ್ನು ಒಂದು ಚಕ್ರೀಯ ಕ್ರಮದಲ್ಲಿ ನೋಡಿಕೊಳ್ಳುತ್ತಾರೆ. 1769 ಮತ್ತು 1918ರಲ್ಲಿ ಅಕೆಡಮಿಯಲ್ಲಿ ಎರಡು ಗಮನಾರ್ಹ ಬದಲಾವಣೆಗಳು ಕಂಡುಬಂದುವು. 30ಕ್ಕಿಂತ ಹೆಚ್ಚಿನ ಮತ್ತು 35ಕ್ಕೆ ಮೀರದ ಒಂದು ಸಂಗಡಿಗರ ಕೂಟವೊಂದು 1769ರಲ್ಲಿ ರಚಿತವಾಯಿತು. ಈ ಕೂಟ ಅಕೆಡಮಿಯ ಸದಸ್ಯರನ್ನು ಚುನಾಯಿಸುವ ವಿವಿದ ಸಮಿತಿಗಳಲ್ಲಿ ಭಾಗವಹಿಸುತ್ತಿತ್ತು. 1918ರ ಬದಲಾವಣೆಯೆಂದರೆ, 75 ವರ್ಷಕ್ಕೆ ಕಾಲಿಡುವ ಅಕೆಡಮಿಯ ಸದಸ್ಯರನ್ನು ಹಿರಿಯ ಸದಸ್ಯರೆಂದೂ (ಸೀನಿಯರ್ ಅಕೆಡಮಿಷಿಯನ್ಸ್) ಮತ್ತು ಹಿರಿಯ ಸಂಗಡಿಗರೆಂದೂ (ಸೀನಿಯರ್ ಅಸೋಸಿಯೇಟ್ಸ್) ವಿಭಾಗ ಮಾಡಿದ್ದು, ಇಂಥವರು ಯಾವುದೇ ಕಚೇರಿ ಅಥವಾ ಸಮಿತಿಯಲ್ಲಿ ಕೆಲಸ ಮಾಡಲು ಅರ್ಹರಾಗಿಲ್ಲದಿದ್ದರೂ ಅವರು ಜನರಲ್ ಅಸೆಂಬ್ಲಿಯಲ್ಲಿ ತಮ್ಮ ಮತ ಚಲಾಯಿಸುವ ಹಕ್ಕು ಮತ್ತು ಇನ್ನಿತರ ಹಕ್ಕುಗಳನ್ನು ಹೊಂದಿದವರಾಗಿದ್ದರು. ಇಂಥ ಸದಸ್ಯರಿಂದ ಮತ್ತು ಮರಣಹೊಂದಿದ ಸದಸ್ಯರಿಂದ ತೆರವಾದ ಸ್ಥಾನಕ್ಕೆ ಸರ್ವಸದಸ್ಯರ ಸಭೆಯಲ್ಲಿ ಚುನಾವಣೆ ನಡೆದು ಆಯಾ ಸ್ಥಾನಕ್ಕೆ ಆಯ್ಕೆಯನ್ನು ನಡೆಸಲಾಗುತ್ತಿತ್ತು. ಸಾರ್ವಭೌಮರ ಸಹಿ ಹೊಂದಿರುವ ಡಿಪ್ಲೊಮಪ್ರಶಸ್ತಿಯನ್ನು ಸ್ವೀಕರಿಸುವುದಕ್ಕೆ ಮುಂಚಿತವಾಗಿ ಪ್ರತಿಯೊಬ್ಬ ಹೊಸ ರಾಯಲ್ ಸದಸ್ಯನೂ ತನ್ನ ಕಲಾನಿಪುಣತೆಯ ಒಂದು ಮಾದರಿಯನ್ನು ಅಕೆಡಮಿಗೆ ಅರ್ಪಿಸಬೇಕಾಗುತ್ತದೆ.

1868ರಲ್ಲಿ ತನ್ನ ಶತಮಾನೋತ್ಸವವನ್ನಾಚರಿಸಿದ ರಾಯಲ್ ಅಕೆಡಮಿ ಲಂಡನ್ನಿನ ಪಿಕ್ಯಾಡಿಲ್ಲಿಯಲ್ಲಿರುವ ಬರ್ಲಿಂಗ್‌ಟನ್ ಹೌಸ್‌ನಲ್ಲಿ ಈಗ ತನ್ನ ಕಚೇರಿಯನ್ನು ನಡೆಸುತ್ತಿದೆ. ಅಲ್ಲದೆ ಬರ್ಲಿಂಗ್‌ಟನ್ ಹೌಸಿನ ಹೊರಗಡೆ ಸ್ವಂತ ಖರ್ಚಿನಲ್ಲಿಯೇ ಸಭಾಂಗಣವನ್ನೂ ಉದ್ಯಾನವನದ ಒಂದು ಭಾಗದಲ್ಲಿ ಶಾಲೆಗಳನ್ನೂ ನಿರ್ಮಿಸಿದೆ. ಈಗ ಈ ಭವನವನ್ನು ವಿಸ್ತರಿಸಲಾಗಿದೆ.

1769ರಿಂದಲೂ ಈ ಅಕೆಡಮಿ ಜನಪ್ರಿಯವಾದ ತನ್ನ ಕಲಾಪ್ರದರ್ಶನವನ್ನು ನಡೆಸಿಕೊಂಡು ಬರುತ್ತಿದೆ. ಪ್ರತಿಯೊಬ್ಬ ಸದಸ್ಯನೂ ಆರಕ್ಕೆ ಮೀರದಂತೆ ತನ್ನ ಕಲಾಕೃತಿಗಳನ್ನು ಕಳುಹಿಸಿಕೊಡಲು ಅವಕಾಶವಿದೆ. ಪ್ರತಿ ವರ್ಷವೂ 10,000 ಹೆಚ್ಚು ಕಲಾಕೃತಿಗಳು ಬಂದು ಸುಮಾರು 1,500ನ್ನು ಪ್ರದರ್ಶಿಸಲಾಗುತ್ತದೆ. ಮಾರಾಟವಾದ ಯಾವುದೇ ಕಲಾಕೃತಿಯ ಮೇಲೆ ಯಾವುದೇ ರೀತಿಯ ಶೇಕಡ ರುಸುಮನ್ನು ಸಂಗ್ರಹಿಸಲಾಗುವುದಿಲ್ಲ.

ಮುಖ್ಯ ಸಭಾಂಗಣದಲ್ಲಿ ನಡೆಯುವ ಚಳಿಗಾಲದ ಪ್ರದರ್ಶನ 1870ರಲ್ಲಿ ಪ್ರಾರಂಬವಾಯಿತು. ಇದರಲ್ಲಿ ಪ್ರಾಚೀನ ಕಲಾನಿಪುಣರ ಅಂತಾರಾಷ್ಟ್ರೀಯ ಖ್ಯಾತಿಗಳಿಸಿರುವ ಅತ್ಯುತ್ತಮ ಕಲಾಕೃತಿಗಳನ್ನೂ ಪ್ರದರ್ಶಿಸಲಾಗುತ್ತದೆ. 1952ರಿಂದ ಈ ಸಭಾಂಗಣವನ್ನು ವರ್ಷವಿಡೀ ವಿಶೇಷ ಎರವಲು ಪಡೆದ ಪ್ರದರ್ಶನಗಳಿಗೋಸ್ಕರವಾಗಿ ಉಪಯೋಗಿಸಲಾಗುತ್ತಿದೆ.

ರಾಯಲ್ ಅಕೆಡಮಿ ನಡೆಸುತ್ತಿರುವ ಶಾಲೆಯ ಶಿಕ್ಷಣವನ್ನು ಕೈಗೊಳ್ಳಲು ಆಸಕ್ತಿಯುಳ್ಳ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಪ್ರವೇಶವನ್ನು ನೀಡಲಾಗುತ್ತದೆ. ಉತ್ತೀರ್ಣರಾದವರನ್ನು ಚಿತ್ರಕಲೆ ಮತ್ತು ಮೂರ್ತಿಶಿಲ್ಪ ಕಲಾಶಾಲೆಗಳಿಗೆ ಮೂರು ತಿಂಗಳ ಅವಧಿಗೆ ಸೇರಿಸಿಕೊಳ್ಳಲಾಗುತ್ತದೆ. ಇದಾದ ನಂತರ ಸಮ್ಮತಿ ದೊರೆತಲ್ಲಿ ಅವರನ್ನು ನಾಲ್ಕು ವರ್ಷದ ವಿದ್ಯಾರ್ಥಿವೇತನಸಹಿತ ಶಿಕ್ಷಣಕ್ಕೆ ಕಳುಹಲಾಗುತ್ತದೆ. ವಾಸ್ತುಶಿಲ್ಪದ ಶಾಲೆ 1947ರವರೆಗೂ ಈ ಕ್ರಮದಲ್ಲಿಯೇ, ಮುಂದುವರಿದು ಬಂದು ಒಂದು ವರ್ಷ ಅವಧಿಯ ಸ್ನಾತಕೋತ್ತರ ಶಿಕ್ಷಣದ ಸೌಲಭ್ಯವನ್ನೂ ಕಲ್ಪಿಸಿದೆ.

ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಧನಸಹಾಯವನ್ನು ಎಂದೂ ಈ ಅಕೆಡಮಿ ಸ್ವೀಕರಿಸಿಲ್ಲ. ತನ್ನ ಅಸ್ತಿತ್ವದ ಮೊದಲ 11 ವರ್ಷಗಳಲ್ಲಿ ಇದರ ಆರ್ಥಿಕ ಪರಿಸ್ಥಿತಿ ಹದಗೆಟ್ಟು ದೊರೆಯೇ ತನ್ನ ರಾಜಧನದಿಂದ ಇದಕ್ಕೆ ಸಹಾಯಮಾಡಬೇಕಾಗಿ ಬಂದ ಸಂದರ್ಭವೊಂದನ್ನು ಬಿಟ್ಟರೆ ಆರ್ಥಿಕವಾಗಿ ಇದು ಒಂದು ಸ್ವಾವಲಂಬಿ ಸಂಸ್ಥೆ. ಸಂಸ್ಥೆಯ ಭವನದ ಖರ್ಚು, ಸಾಮಾನ್ಯಾಡಳಿತದ ಖರ್ಚು – ಮುಂತಾದ ಖರ್ಚುಗಳಿಗೆ, ಪ್ರದರ್ಶನಕ್ಕೆ ಸಾರ್ವಜನಿಕರು ನೆರವು ನೀಡುತ್ತಾರೆ. ಇದಲ್ಲದೆ ಈ ಅಕೆಡಮಿ ವಿದ್ಯಾರ್ಥಿವೇತನಗಳನ್ನು ನೀಡಲು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನೀಯಲು, ತೊಂದರೆಗೊಳಗಾಗಿರುವ ಕಲಾವಂತರಿಗೆ ವಾರ್ಷಿಕ ಸಹಾಯಧನವನ್ನೀಯಲು ಮತ್ತು ಗ್ರೇಟ್ ಬ್ರಿಟನ್ನಿನಲ್ಲಿರುವ ಪ್ರತಿಭಾವಂತ ಕಲಾನಿಪುಣರ ಕಲಾಕೃತಿಗಳನ್ನು ಕೊಳ್ಳಲೆಂದೇ ಕೆಲವು ದ್ರವ್ಯನಿಧಿ ಸಂಸ್ಥೆಗಳಿಂದ ಧನವನ್ನು ಪಡೆಯುತ್ತಿದೆ. **(ಎಸ್.ಆರ್.ಪಿ.)**

**ಪ್ರಾಚೀನ ಭಾರತದ ಅಕೆಡಮಿಗಳು:** ಪ್ರಾಚೀನ ಗ್ರೀಸಿನಲ್ಲಿ ಮತ್ತು ಮಧ್ಯಯುಗದ ಯುರೋಪಿನಲ್ಲಿ ಇದ್ದಂತೆ ಭಾರತದಲ್ಲೂ ವೇದಗಳ ಕಾಲದಿಂದಲೂ ಪ್ರಸಿದ್ಧವಾದ ವಿದ್ಯಾಪೀಠಗಳಿದ್ದುವು. ಇವುಗಳಲ್ಲಿ ಬ್ರಾಹ್ಮಣ ವಿದ್ಯಾಪೀಠಗಳು ತುಂಬ ಪ್ರಾಚೀನವಾದುವು. ವಸಿಷ್ಠ, ವಿಶ್ವಾಮಿತ್ರ, ಯಾಜ್ಞವಲ್ಕ್ಯ ಮುಂತಾದ ಋಷಿಗಳು ತಮ್ಮ ಆಶ್ರಮಗಳಲ್ಲಿ ಅನೇಕ ಶಿಷ್ಯರಿಗೆ ವಿದ್ಯೆ ಕಲಿಸುತ್ತಿದ್ದರೆಂದೂ ತಮ್ಮ ಶಿಷ್ಯವರ್ಗವನ್ನು ಕಾಪಾಡಲು ಜನಕ ಮುಂತಾದ ರಾಜರುಗಳಿಂದ ಕೊಂಬುಗಳಿಗೆ ಚಿನ್ನದ ನಾಣ್ಯಗಳನ್ನು ಕಟ್ಟಿದ್ದ ನೂರಾರು ಹಸುಗಳನ್ನು ಪಡೆಯುತ್ತಿದ್ದರೆಂದೂ ತಿಳಿಯುತ್ತದೆ. ಒಂದೇ ಕಾಲದಲ್ಲಿ ಸಾವಿರ ವಿದ್ಯಾರ್ಥಿಗಳನ್ನು

ಸಂರಕ್ಷಿಸಿ ವಿದ್ಯೆ ಕಲಿಸಿದ ಗುರುವಿಗೆ ಕುಲಪತಿಯೆಂದು ಹೆಸರಿತ್ತು. ಅಂಥ ಕುಲಪತಿಗಳು ವೇದ ಕಾಲದಿಂದ ಇತ್ತೀಚಿನವರೆಗೂ ಇದ್ದರು. ಕಾಶೀಕ್ಷೇತ್ರ ಪ್ರಸಿದ್ಧರಾದ ಕುಲಪತಿಗಳಿಗೆ ತವರು. ಈಗಲೂ ಅಲ್ಲಿ ಬ್ರಾಹ್ಮಣ, ಜೈನ, ವೀರಶೈವ ವಿದ್ಯಾಪೀಠಗಳಿವೆ. ಬಹಳ ಹಿಂದಿನ ಕಾಲದಿಂದ ಭಾರತದ ನಾನಾ ಭಾಗಗಳಿಂದ ಉಚ್ಚಶಿಕ್ಷಣ ಪಡೆಯಲು ಕಾಶಿಗೆ ಹೋಗಿ ಅನೇಕ ವರ್ಷಗಳ ಕಾಲ ಅಲ್ಲಿ ವ್ಯಾಸಂಗ ನಡೆಸಿ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿ ತಾವು ಕಲಿತ ವಿದ್ಯೆಯನ್ನು ದಾನಮಾಡುವುದು ಸಂಪ್ರದಾಯವಾಗಿತ್ತು. ಹಿಂದಿನಷ್ಟಿಲ್ಲದಿದ್ದರೂ ಈಗಲೂ ಹಲಕೆಲವು ದಾಕ್ಷಿಣಾತ್ಯರು ಆ ವಿದ್ಯಾಪೀಠಗಳಲ್ಲಿ ವ್ಯಾಸಂಗ ಮಾಡಿ ಬರುತ್ತಿದ್ದಾರೆ. ಬ್ರಾಹ್ಮಣ ವಿದ್ಯಾಪೀಠಗಳು ಸಾಮಾನ್ಯವಾಗಿ ಒಬ್ಬ ಗುರುವಿನ ವಿದ್ಯಾಪೀಠಗಳು. ಕೆಳಗಿನ ದರ್ಜೆಯ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸಲು ತನ್ನೊಂದಿಗೆ ಆತ ಮೇಲಿನ ಮಟ್ಟವನ್ನು ಮುಟ್ಟಿದ ತನ್ನ ವಿದ್ಯಾರ್ಥಿಗಳ ನೆರವು ಪಡೆಯುತ್ತಿದ್ದ.

ಬೌದ್ಧ ವಿದ್ಯಾನಿಲಯಗಳು ಬ್ರಾಹ್ಮಣ ವಿದ್ಯಾಪೀಠಗಳಂತೆ ಗುರುಗೃಹಗಳಲ್ಲ. ಗುರುಗೃಹಗಳ ವಾತಾವರಣ ಕುಟುಂಬದ ವಾತಾವರಣ. ಆ ಆವರಣದಲ್ಲಿ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ಅವಕಾಶವಿರಲಿಲ್ಲ. ಬೌದ್ಧ ವಿದ್ಯಾಪೀಠಗಳಾದರೋ ಕುಟುಂಬ ವಾತಾವರಣದಲ್ಲಿ ಬೆಳೆದುವಲ್ಲ; ಸನ್ಯಾಸಿಗಳ ವಾತಾವರಣದಲ್ಲಿ ಬೆಳೆದವು. ಒಂದೇ ಸ್ಥಳದಲ್ಲಿ ಸಾವಿರಾರು ಬೌದ್ಧ ಸಂನ್ಯಾಸಿ ಸಂಘಗಳಿರುವುದು ಬುದ್ಧನ ಕಾಲದಲ್ಲಿ ಸಾಮಾನ್ಯವಾಗಿತ್ತು. ಆದ್ದರಿಂದ ಒಂದೇ ಬೌದ್ಧ ವಿದ್ಯಾಪೀಠದಲ್ಲಿ ಸಾವಿರ ಉಪಾಧ್ಯಾಯರೂ ಹತ್ತು ಸಾವಿರ ವಿದ್ಯಾರ್ಥಿಗಳೂ ಇರಲು ಸಾಧ್ಯವಾಯಿತು. ಆಗಿನ ಕಾಲದಲ್ಲಿ ಬೌದ್ಧಧರ್ಮದಲ್ಲಿ ಜನರಿಗೆ ವಿಶೇಷವಾದ ಭಕ್ತಿ ಇತ್ತು. ರಾಜರೂ ವರ್ತಕರೂ ಸಾಮಾನ್ಯ ಜನರೂ ನಾ ಮುಂದು ತಾ ಮುಂದೆಂದು ನೆರವು ನೀಡಲು ಬರುತ್ತಿದ್ದರು. ಬೌದ್ಧಭಿಕ್ಷುಗಳೂ ತಮ್ಮ ಊಟವಸತಿಗಳಿಗಾಗಿ ಸಮಾಜವನ್ನು ಆಶ್ರಯಿಸಬೇಕಾಗಿತ್ತು. ಸಮಾಜದ ಆಶ್ರಯವನ್ನು ಸಂಪಾದಿಸಲು ಅವರು ಜನರಿಗೆ ಧರ್ಮವನ್ನಲ್ಲದೆ ಬೇರೆ ಬೇರೆ ಶಾಸ್ತ್ರವಿದ್ಯೆಯನ್ನೂ ಕಲಿಸುತ್ತಿದ್ದರು. ಆಗಾಗ ವಿದ್ವದ್ಗೋಷ್ಠಿಗಳನ್ನೂ ವಾದ್ಯಗೋಷ್ಠಿಗಳನ್ನೂ ಏರ್ಪಡಿಸಿ ಜನರ ಗಮನವನ್ನು ಸೆಳೆಯುತ್ತಿದ್ದರು.

ಬೌದ್ಧ ವಿದ್ಯಾಪೀಠಗಳಲ್ಲಿ ತುಂಬ ಪ್ರಸಿದ್ಧವಾದವು ನಾಲಂದ, ವಿಕ್ರಮಶೀಲ ಮತ್ತು ತಕ್ಷಶಿಲ ವಿದ್ಯಾನಿಲಯಗಳು. ಈ ವಿದ್ಯಾನಿಲಯಗಳು ಬೌದ್ಧ ಸನ್ಯಾಸಿಗಳಿಗಲ್ಲದೆ, ಬೌದ್ಧ ಮಾನವರಿಗೂ ಬೌದ್ಧರಲ್ಲದವರಿಗೂ ತೆರಪಾಗಿದ್ದವು (ಇಲ್ಲಿ ಮಾನವ ಎಂದರೆ ಸಂನ್ಯಾಸಿಯಲ್ಲದವ ಎಂದು ಅರ್ಥ). ಇವುಗಳಲ್ಲಿ ಬೌದ್ಧಧರ್ಮವನ್ನಲ್ಲದೆ ವೇದಗಳನ್ನೂ, ಹೇತು ವಿದ್ಯೆಯನ್ನೂ, ವ್ಯಾಕರಣವನ್ನೂ, ವೈದ್ಯವಿದ್ಯೆಯನ್ನೂ ಪ್ರೌಢವಾಗಿ ಅಭ್ಯಾಸಮಾಡುತ್ತಿದ್ದರು. ಯುವಾನ್ ಚಾಂಗ್ ಯೋಗವಿದ್ಯೆಯನ್ನು ನಾಲಂದದಲ್ಲಿ ಐದು ವರ್ಷಗಳ ಕಾಲ ಶೀಲಭದ್ರನ ಶಿಷ್ಯನಾಗಿ ಕಲಿತ. ಅವನು ಅಲ್ಲಿ ಯೋಗವಿದ್ಯೆಯನ್ನು ಕಲಿಯುತ್ತಿದ್ದಾಗ 1,500 ಉಪಾಧ್ಯಾಯರೂ 10,000 ವಿದ್ಯಾರ್ಥಿಗಳೂ ಇದ್ದುದಾಗಿ ತಿಳಿಸುತ್ತಾನೆ. ಪ್ರತಿದಿನವೂ ಉಪನ್ಯಾಸಗಳಿಗಾಗಿ ಚರ್ಚಾಕೂಟಗಳಿಗಾಗಿ ಒಂದು ನೂರು ವೇದಿಕೆಗಳನ್ನು ಏರ್ಪಡಿಸುತ್ತಿದ್ದರು. ವಿದ್ಯೆಯಲ್ಲಿ ಪಾರಂಗತರಾದವರಿಗೆ ಪಂಡಿತ ಎಂಬ ಬಿರುದನ್ನು ಕೊಡುವ ಪದ್ಧತಿ ಇತ್ತು. ಒಂದು ಸಲ ಕೇಳಿದ ಮಾತ್ರದಿಂದಲೇ ಒಂದು ಗ್ರಂಥವನ್ನು ಸ್ಮೃತಿಯಲ್ಲಿ ಧಾರಣೆಮಾಡಿ ಅದನ್ನು ಪುನರುಚ್ಚರಣೆ ಮಾಡುವಷ್ಟು ಗ್ರಹಣಶಕ್ತಿಯನ್ನು ಬೆಳೆಸಿಕೊಂಡವರಿದ್ದರೆಂದು ಇತ್ಸಿಂಗನ ವರದಿಯಿಂದ ತಿಳಿಯಬರುತ್ತದೆ.

ಇಲ್ಲಿನ ಪುಸ್ತಕ ಭಂಡಾರಗಳ ವೈಖರಿ ಅದ್ಭುತವಾದದ್ದು. ಅವು ವಿದ್ಯಾಪೀಠಗಳ ಮುಖ್ಯ ಭಾಗಗಳು. ವಿದ್ಯಾಪೀಠಗಳ ಕಟ್ಟಡಗಳು ಕೆಲವು ಹಸ್ತಪ್ರತಿಗಳಿಗೆ ಮೀಸಲಾಗಿದ್ದವು. ಆ ಕಟ್ಟಡಗಳು ಅನೇಕ ಅಂತಸ್ತುಗಳುಳ್ಳವು. ಅವುಗಳಲ್ಲಿ ಮೂರು ಪ್ರಖ್ಯಾತವಾಗಿದ್ದುವು. ಒಂದರ ಹೆಸರು ರತ್ನದಧಿ, ಇನ್ನೊಂದರದು ರತ್ನಸಾಗರ, ಮತ್ತೊಂದರದು ರತ್ನರಂಜಕ. ಮೊದಲನೆಯದು ಒಂಬತ್ತು ಅಂತಸ್ತುಗಳ ಕಟ್ಟಡ. ಇಲ್ಲಿನ ಕಟ್ಟಡಗಳು ವಿಸ್ತಾರದಲ್ಲೂ ಸೌಂದರ್ಯದಲ್ಲೂ ಅನುಪಮವಾದುದೆಂದು ಯುವಾನ್ ಚಾಂಗ್ ಅಲ್ಲದೆ ಹ್ವೂಯ್‌ಲಿ ಮುಕ್ತಕಂಠದಿಂದ ಹೊಗಳಿರುತ್ತಾರೆ. ಈ ವಿದ್ಯಾನಿಲಯದಲ್ಲಿ ಬೌದ್ಧ ಸಂನ್ಯಾಸಿಗಳಲ್ಲದೆ ಎಲ್ಲ ಮತದವರೂ ಭಾಗವಹಿಸುತ್ತಿದ್ದರು. ಇವುಗಳ ಖ್ಯಾತಿ ಪೂರ್ವದೇಶಗಳಲ್ಲೆಲ್ಲ ಹಬ್ಬಿ ಹೊರದೇಶದವರೂ ಇಲ್ಲಿಗೆ ಬಂದು ಹಲವು ವರ್ಷಗಳ ಕಾಲ ಇವುಗಳಲ್ಲಿ ಸೇರಿ ವ್ಯಾಸಂಗ ನಡೆಸುತ್ತಿದ್ದರು. 5ನೆಯ ಶತಮಾನದಿಂದ 8ನೆಯ ಶತಮಾನದವರೆಗೆ ಚೀನ ದೇಶದಿಂದ ಭಾರತಕ್ಕೆ ವಿದ್ಯಾರ್ಜನೆಗಾಗಿ ಬಂದವರ ಸಂಖ್ಯೆ 197 ಎಂದು ಒಬ್ಬ ಆಧುನಿಕ ಚೀನಿ ವಿದ್ವಾಂಸ ದಾಖಲಿಸಿದ್ದಾನೆ.

10–12 ಸಾವಿರ ಜನರು ಒಂದೇ ಕಡೆ ವಾಸಮಾಡುತ್ತ ವ್ಯಾಸಂಗ ಮಾಡುತ್ತ ಬಾಳಬೇಕಾದರೆ ಆ ವಿದ್ಯಾಪೀಠಗಳು ಎಷ್ಟು ವಿಶಾಲವಾಗಿರಬೇಕು ಎಂಬುದನ್ನು ಊಹಿಸಿಕೊಳ್ಳಬಹುದು. ವಿಶಾಲವಾದ ಕೋನೆಯ ಪ್ರಾಕಾರದಲ್ಲಿ ವಸತಿಗೃಹಗಳೂ ಈ ಮಧ್ಯೆ ಉಪನ್ಯಾಸ ಮಂದಿರಗಳೂ ಪುಸ್ತಕ ಭಂಡಾರಗಳೂ ಇರುತ್ತಿದ್ದವು. ವಿಕ್ರಮಶೀಲ ವಿದ್ಯಾಲಯಕ್ಕೆ ಆರು ಮಹಾದ್ವಾರಗಳಿದ್ದುವು. ಒಂದೊಂದು ಮಹಾದ್ವಾರದ ರಕ್ಷಕನಾಗಿ ಒಬ್ಬೊಬ್ಬ ದ್ವಾರಪಾಲಕ, ಪಂಡಿತ ನೇಮಕವಾಗಿರುತ್ತಿದ್ದ. ಇವನ ಒಪ್ಪಿಗೆ ಇಲ್ಲದೆ ಮಹಾವಿಹಾರಕ್ಕೆ ಪ್ರವೇಶವಿರಲಿಲ್ಲ. ಪಂಡಿತನೆಂದಾಗಲಿ ಅಥವಾ ವಿದ್ಯೆಯಲ್ಲಿ ನಿಜವಾದ ಆಸಕ್ತಿಯುಳ್ಳವನೆಂದಾಗಲಿ ಅಥವಾ ಅಲ್ಲಿನ ವಿದ್ಯೆಯನ್ನು ಕಲಿಯಲು ತಕ್ಕ ಯೋಗ್ಯತೆಯನ್ನು ಪಡೆದವನೆಂದಾಗಲಿ ದ್ವಾರಪಂಡಿತ ನಿಶ್ಚಯಿಸಿದ ವಿನಾ ಯಾವ ದ್ವಾರದಲ್ಲೂ ಪ್ರವೇಶವಿರಲಿಲ್ಲ. ದೀಪಂಕರನನ್ನು ಟಿಬೆಟ್ಟಿಗೆ ಕರೆದುಕೊಂಡು ಹೋಗಬೇಕೆಂದು ಭಾರತಕ್ಕೆ ಬಂದಿದ್ದ ಗನ್–ಥಾ–ಪಾ ವಿಕ್ರಮಶೀಲಕ್ಕೆ ಬಂದಾಗ ಸೂರ್ಯಾಸ್ತವಾಗಿತ್ತು. ಆದ್ದರಿಂದ ಹೊರಬಾಗಿಲುಗಳನ್ನು ಮುಚ್ಚಿದ್ದರು. ಅವನೂ ಅವನ ಸಂಗಡಿಗರೂ ಬಾಗಿಲ ಹೊರಗಿದ್ದೇ ರಾತ್ರಿಯನ್ನು ಕಳೆಯಬೇಕಾಗಿತ್ತು. ತನ್ನ ದೇಶದವನಾದ ವಿಕ್ರಮಸಿಂಗ್ ಎಂಬ ಭಿಕ್ಷುವಿನ ಅನುಗ್ರಹದಿಂದ ಅವರಿಗೆ ವಿದ್ಯಾಪೀಠಕ್ಕೆ ಪ್ರವೇಶ ದೊರೆತರೂ ಅವನು ದೀಪಂಕರನನ್ನು ಕಂಡು ತಾವು ಅಲ್ಲಿಗೆ ಬಂದ ಉದ್ದೇಶವನ್ನು ಅವನಿಗೆ ತಿಳಿಸಲು ಕೆಲವು ಕಾಲ ಕಾಯಬೇಕಾಯಿತು. ದೀಪಂಕರ ಆಗ ವಿಕ್ರಮಶೀಲ ವಿದ್ಯಾಲಯದ ಆಡಳಿತ ಮುಖ್ಯಸ್ಥನಾಗಿದ್ದ. ಅಲ್ಲಿನ ನೂರೆಂಟು ಬೌದ್ಧ ಚೈತ್ಯಗಳ ಆಡಳಿತ ಅವನ ಕೈಯಲ್ಲಿತ್ತು. ಆ ಜವಾಬ್ದಾರಿಯಿಂದ ನಿವೃತ್ತನಾಗಲು ಹದಿನೆಂಟು ತಿಂಗಳ ಕಾಲ ಹಿಡಿಯುವುದಾಗಿ ದೀಪಂಕರ ಅವನಿಗೆ ಹೇಳಿದ. ಅವರು ಅಲ್ಲಿಯೇ ಹದಿನೆಂಟು ತಿಂಗಳ ಕಾಲ ಕಾಯಬೇಕಾಯಿತು. ಅಲ್ಲಿನ ಕಾರ್ಯ ಕಲಾಪಗಳು, ವ್ಯವಸ್ಥೆ ಅಷ್ಟು ಮಹತ್ತರವಾಗಿತ್ತು.

1197ರಲ್ಲಿ ಮುಸ್ಲಿಮರ ದಾಳಿಗೆ ಸಿಕ್ಕಿ ಅದು ನಾಮಾವಶೇಷವಾಯಿತು. ಬೌದ್ಧ ಭಿಕ್ಷುಗಳು ಪೂರ್ಣವಾಗಿ ಹತರಾದರು. ಈಗ ಉಳಿದಿರುವುದು ಬರಿಯ ಮಣ್ಣಿನ ದಿಬ್ಬಗಳು, ಮುರಿದವಿಗ್ರಹಗಳು, ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಚೂರುಪಾರುಗಳು. ಪ್ರಾಕ್ತನ ಸಂಶೋಧಕರು ದಿಬ್ಬಗಳನ್ನು ಅಗೆದು ಸಂಗ್ರಹಿಸಿದ ಅವಶೇಷಗಳನ್ನು ಸೇರಿಸಿ ಇಡುತ್ತಿದ್ದಾರೆ. ಇವುಗಳಲ್ಲಿ ಆ ವಿದ್ಯಾನಿಲಯದ ಮುದ್ರೆಯೊಂದಿದೆ. ನಾಲಂದ ಬೌದ್ಧಭಿಕ್ಷುಸಂಘದ ಮಹಾವಿಹಾರವೆಂದು ಇದರ ಮೇಲೆ ಕೆತ್ತಿದೆ. ಇದೇ ವಿಧವಾದ ಮಹಾವಿಹಾರ ವಲ್ಲಭಿಯಲ್ಲಿತ್ತೆಂದು ಇತ್ಸಿಂಗ್ ಮತ್ತು ಯುವಾನ್ ಚಾಂಗ್ ವರದಿಗಳು ತಿಳಿಸುತ್ತವೆ.

ವಿಕ್ರಮಶೀಲ ವಿದ್ಯಾನಿಲಯ ನಾಲಂದ ವಿದ್ಯಾಲಯಕ್ಕಿಂತ ಈಚಿನದು. ಅದರ ವಿಚಾರ ನಮಗೆ ತಿಳಿದಿರುವುದು ಟಿಬೆಟ್ಟಿನ ಸಾಹಿತ್ಯದಿಂದ, ಮುಖ್ಯವಾಗಿ ತಾರಾನಾಥನ ಬೌದ್ಧಧರ್ಮಚರಿತ್ರೆಯಿಂದ. ದೀಪಂಕರ 1034ರಿಂದ 1038ರವರೆಗೆ ಆ ವಿದ್ಯಾನಿಲಯದ ಅಧ್ಯಕ್ಷನಾಗಿದ್ದನೆಂದು ತಿಳಿದುಬಂದಿದೆ.

ಈ ಮಹಾವಿಹಾರಗಳು ಮೊದಲಿನಿಂದ ಕೊನೆಯವರೆಗೂ ಮುಖ್ಯವಾಗಿ ಬೌದ್ಧ ಸಂನ್ಯಾಸಿಗಳ ವಿಹಾರಗಳು. ಬೌದ್ಧಧರ್ಮದ ತಿಳಿವಿಗೆ ಮಾತ್ರ ಮೀಸಲಾದವಲ್ಲ: ಸರ್ವಶಾಸ್ತ್ರಗಳನ್ನು ಬೋಧಿಸುವ ಯುರೋಪಿನ ಮಧ್ಯಯುಗದ ವಿಶ್ವವಿದ್ಯಾನಿಲಯಗಳಂತೆ ಇದ್ದುವು. ಬೌದ್ಧರು ಬೌದ್ಧೇತರರು ಎಂಬ ಭೇದವಿಲ್ಲದೆ ಇವುಗಳ ಉಪಯೋಗ ಸಾರ್ವತ್ರಿಕವಾಗಿತ್ತು. ಇವುಗಳಲ್ಲಿ ಬೌದ್ಧದರ್ಶನವಲ್ಲದೆ ಭಾರತದ ಸರ್ವದರ್ಶನಗಳನ್ನೂ ವ್ಯಾಸಂಗ ಮಾಡುತ್ತಿದ್ದರು; ಸರ್ವವಿದ್ಯೆಗಳನ್ನೂ – ವ್ಯವಸಾಯ ವಾಸ್ತುಶಿಲ್ಪ ಮುಂತಾದ ಉಪಯೋಗಕರವಾದ ವಿದ್ಯೆಗಳನ್ನೂ ಅಭ್ಯಾಸಮಾಡುತ್ತಿದ್ದರು. (ಜಿ.ಎಚ್.)

**ಆಧುನಿಕ ಭಾರತದ ಪ್ರಮುಖ ಅಕೆಡಮಿಗಳು**

**ಸಾಹಿತ್ಯ ಅಕೆಡಮಿ:** ಭಾರತದ ಸಾಹಿತ್ಯಾಭಿವೃದ್ಧಿಗೆ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಮತ್ತು ಭಾರತದ ಎಲ್ಲ ಭಾಷೆಗಳಲ್ಲಿಯೂ ಇರುವ ಸಾಹಿತ್ಯವನ್ನು ಸಂಘಟಿಸಿ ಸಶಕ್ತವನ್ನಾಗಿ ಮಾಡಲು ಉನ್ನತ ಧ್ಯೇಯಗಳನ್ನು ಹೊಂದಿರುವ ಈ ಸಂಸ್ಥೆಯನ್ನು ಭಾರತ ಸರ್ಕಾರ 1954ರಲ್ಲಿ ಸ್ಥಾಪಿಸಿತು. ಈ ಸಂಘಟನೆ ದೇಶದ ಸಾಂಸ್ಕೃತಿಕ ಏಕತೆಯನ್ನು ಎಲ್ಲೆಡೆಯಲ್ಲಿಯೂ ಸಾಧಿಸಲು ಭಾರತ ಸರ್ಕಾರ ಇಟ್ಟ ಒಂದು ಹೆಜ್ಜೆ. ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವನ್ನು ಪಡೆಯುತ್ತಿರುವ ಈ ಅಕೆಡಮಿ ಸ್ವಯಮಧಿಕಾರವುಳ್ಳದ್ದಾಗಿದೆ.

ಅಕೆಡಮಿಯ ಸಾಮಾನ್ಯ ನೀತಿ – ಧೋರಣೆಗಳು ಮತ್ತು ಅದರ ಕಾರ್ಯಕ್ರಮಗಳ ಮೂಲ ತತ್ತ್ವಗಳು – ಇವುಗಳನ್ನು ರೂಪಿಸುವ ಹೊಣೆ ಪ್ರಧಾನಾಡಳಿತಮಂಡಲಿಯದು. ಕಾರ್ಯನಿರ್ವಾಹಕ ಮಂಡಲಿಯ ನೇರ ಪರಿಶೀಲನೆಯ ನಂತರವೇ ಅವುಗಳನ್ನು ಕಾರ್ಯರೂಪಕ್ಕೆ ತರುವುದು. ಪ್ರತಿಯೊಂದು ಭಾಷೆಗೂ ಒಂದೊಂದು ಸಲಹಾ ಮಂಡಲಿಯಿರುತ್ತದೆ. ಇವಲ್ಲದೆ ನಿರ್ದಿಷ್ಟ ಯೋಜನೆಗಳಿಗೆ ಸಂಬಂಧಿಸಿದಂತೆ ವಿಶೇಷ ಸಂಪಾದನಾ ಮಂಡಲಿ ಅಥವಾ ಸಲಹಾ ಮಂಡಲಿಯಿರುತ್ತದೆ. ಭಾರತ ಸರ್ಕಾರದ ರಾಜ್ಯಾಂಗದ ರೀತ್ಯ ಹದಿನೈದು ಭಾಷೆಗಳಿದ್ದರೂ ಈ ಅಕೆಡಮಿ ಇಂಗ್ಲಿಷ್ ಭಾಷೆಯನ್ನು ಸಹ ಅಂಗೀಕಾರ ಮಾಡಿ ಆ ಭಾಷೆಯಲ್ಲೇ ತನ್ನ ಎಲ್ಲ ವ್ಯವಹಾರಗಳನ್ನೂ ನಡೆಸುತ್ತಿದೆ.

ಇದುವರೆಗೆ ಈ ಅಕೆಡಮಿ ಪ್ರಾಚೀನ ಹಾಗು ಆಧುನಿಕ ಸಾಹಿತ್ಯ ಕೃತಿಗಳ ಭಾಷಾಂತರ ಸಂಪುಟಗಳನ್ನೂ ಇತರ ಸಾಹಿತ್ಯ ಕೃತಿಗಳ ಪ್ರಕಟಣೆಗಳ ಕಾರ್ಯವನ್ನೂ ಮಾಡಿದೆ. ಭಾಷಾಂತರಕ್ಕೆ ಆರಿಸಿಕೊಂಡ ಕೃತಿಗಳಲ್ಲಿ ಷೇಕ್ಸ್‌ಪಿಯರ್, ಮಿಲ್ಟನ್, ವಿಕ್ಟರ್ ಹ್ಯೂಗೋ, ಗಯಟೆ, ಇಬ್ಸನ್, ಟಾಲ್‌ಸ್ಟಾಯ್ ಮುಂತಾದ ಖ್ಯಾತ ಸಾಹಿತಿಗಳ ಕೃತಿಗಳೂ ಸೇರಿವೆ. ಭಾಷಾಂತರ ಕಾರ್ಯದ ಜೊತೆಗೆ ಇಂಗ್ಲಿಷ್ ಭಾಷೆಯಲ್ಲಿ ಇಂಡಿಯನ್ ಲಿಟರೇಚರ್, ಸಂಸ್ಕೃತದಲ್ಲಿ ಸಂಸ್ಕೃತ ಪ್ರತಿಭ ಎಂಬ ಎರಡು ಪತ್ರಿಕೆಗಳನ್ನೂ ಮತ್ತು ಪುಕ್ಕಟೆಯಾಗಿ ಕೊಡಲೆಂದೇ ನ್ಯೂಸ್ ಬುಲೆಟಿನ್ ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನೂ ಹೊರಡಿಸುತ್ತಿದೆ. ಈ ಸಾಹಿತ್ಯ ಅಕೆಡಮಿ ಹೊರತರಲಿರುವ ಇತರ ಗ್ರಂಥಗಳೆಂದರೆ ಕಾಳಿದಾಸನ ಶಾಕುಂತಲ, ಮಾಳವಿಕಾಗ್ನಿ ಮಿತ್ರ ಮತ್ತು ರಘುವಂಶ; ಸಂಸ್ಕೃತ ಸಾಹಿತ್ಯದ ಕವನ ಸಂಕಲನದ ಏಳು ಸಂಪುಟಗಳು; ಟಿಬೆಟಿಯನ್ ಹಿಂದಿ ನಿಘಂಟು; ತೆಲುಗು ಸಾಹಿತ್ಯದ ಇತಿಹಾಸ; ಹತ್ತು ಸಂಪುಟಗಳಲ್ಲಿ ಮೌಲಾನ ಕಲಾಂ ಆಜಾದರ ಬರೆಹಗಳ ಸಂಗ್ರಹಣಾ ಗ್ರಂಥ ಮತ್ತು

ಸರ್ದಾರ್ ಪೂರಣ್‌ಸಿಂಗ್ ಅವರ ಬರೆಹಗಳ ಸಂಗ್ರಹಣಾ ಗ್ರಂಥ. ಭಾರತದ ಹದಿನಾಲ್ಕು ಭಾಷೆಗಳಿಂದಲೂ ಆರಿಸಿ ಸಂಗ್ರಹಿಸಿರುವ ಭಾರತೀಯ ಕವಿತಾ ಎಂಬ ಕವನ ಸಂಕಲನ ಹತ್ತು ಸಂಪುಟಗಳಷ್ಟು ದೊಡ್ಡದಾಗಿದೆ. ಇದನ್ನು ಅಕೆಡಮಿ ಈಗಾಗಲೇ ಪ್ರಕಟಿಸಿದೆ. ರವೀಂದ್ರ 101 ಕವನಗಳನ್ನೊಳಗೊಂಡಿರುವ ಏಕೋತ್ತರ ಶತಿ ಎಂಬ ಗ್ರಂಥದ ಮೊದಲ ಆರು ಸಂಪುಟಗಳನ್ನು ಮತ್ತು 500 ಕವನಗಳಿರುವ ಗೀತಾಪಂಚಶತಿ ಎಂಬ ಗ್ರಂಥವನ್ನೂ ಈ ಅಕೆಡಮಿ ಪ್ರಕಟಿಸಿದೆ. ಇದಲ್ಲದೆ ರವೀಂದ್ರರ 21 ಸಣ್ಣಕಥೆಗಳ ಸಂಕಲನವಾದ ಏಕವಿಂಶತಿ ಎಂಬ ಪುಸ್ತಕದ ಗುಜರಾತಿ, ಪಂಜಾಬಿ, ಮರಾಠಿ, ಕನ್ನಡ ಮತ್ತು ಒರಿಯ ಭಾಷೆಗಳ ಪ್ರತಿಗಳನ್ನು ಇದು ಹೊರತಂದಿದೆ. 1961ರಲ್ಲಿ ರವೀಂದ್ರರ ಶತಮಾನೋತ್ಸವ ಸಂಚಿಕೆಯನ್ನು ಪ್ರಕಟಿಸಿ, ರೋಲಾ(ಂಡ್)ನ ದಿ ಲೈಫ್ ಆಫ್ ವಿವೇಕಾನಂದ ಎಂಬ ಪುಸ್ತಕವನ್ನೂ ಹೊರ ತಂದಿದೆ.

ಭಾರತದ ಯಾವುದೇ ಭಾಷೆಯಲ್ಲಿ ಹಾಗೂ ಇಂಗ್ಲಿಷ್‌ನಲ್ಲಿ ಶ್ರೇಷ್ಠಮಟ್ಟದ ಕೃತಿಗಳನ್ನು ರಚಿಸುವ ಸಾಹಿತ್ಯತಜ್ಞರಿಗೆ ಪ್ರತಿವರ್ಷವೂ ಆರ್ಥಿಕ ಸಹಾಯದೊಂದಿಗೆ ಪ್ರಶಸ್ತಿ ನೀಡಿ (ರೂ 50,000=00) ಸನ್ಮಾನಿಸುತ್ತಿದೆ  ಕನ್ನಡದ ಪ್ರಸಿದ್ಧ ಲೇಖಕರನೇಕರಿಗೆ ಈ ಪ್ರಶಸ್ತಿ ದೊರೆತಿದೆ. ಭಾಷಾಸಮ್ಮಾನ್ ಎಂಬ ಪುರಸ್ಕಾರವನ್ನೂ ನೀಡುತ್ತಿದೆ. ಅಕೆಡಮಿಯ ಪ್ರಾದೇಶಿಕ ಕಚೇರಿಗಳು ಕಲ್ಕತ್ತ ಬೆಂಗಳೂರು ಮತ್ತು ಮದರಾಸುಗಳಲ್ಲಿವೆ. (ಎಸ್.ಆರ್.ಪಿ.)

**ಸಂಗೀತ ನಾಟಕ ಅಕೆಡಮಿ:** 1953ರಲ್ಲಿ ಭಾರತ ಸರ್ಕಾರದಿಂದ ಸ್ಥಾಪಿತವಾದ ಈ ಸಂಸ್ಥೆ ಸ್ವಯಮಧಿಕಾರವುಳ್ಳದಾಗಿದ್ದು ಸಂಗೀತ, ನೃತ್ಯ ಮತ್ತು ನಾಟಕ ಇವುಗಳ ಪುರೋಭಿವೃದ್ಧಿಗೆ ಹಾಗೂ ಪ್ರಚಾರಕ್ಕಾಗಿ ಶ್ರಮಿಸುತ್ತಿದೆ. ಇದರ ಆಡಳಿತ ನಿರ್ವಹಣೆಯನ್ನು ಪ್ರಧಾನಾಡಳಿತ ಮಂಡಲಿ, ಕಾರ್ಯನಿರ್ವಾಹಕ ಮಂಡಲಿ, ಆರ್ಥಿಕ ಸಮಿತಿಗಳು ಹೊತ್ತಿವೆ. ಇವಲ್ಲದೆ ಇತರ ವಿಶೇಷ ಸಮಿತಿಗಳನ್ನು ರಚಿಸಲು ಕಾರ್ಯ ನಿರ್ವಾಹಕಮಂಡಲಿ ಅಧಿಕಾರವನ್ನು ಹೊಂದಿದೆ.

ಈ ಅಕೆಡಮಿಯ ಕಾರ್ಯಕ್ರಮದಲ್ಲಿ ಛಾಯಾಗ್ರಹಣ, ಧ್ವನಿಮುದ್ರಣ, ಚಿತ್ರೀಕರಣ – ಮುಂತಾದ ಸಾಧನ ಸಲಕರಣೆಗಳಿಂದ ಜಾನಪದ ಕಲೆಯ ಹಾಗೂ ವಸ್ತು ವಿಶೇಷಗಳ ಸಂಗ್ರಹಣೆ ಒಂದು ಮುಖ್ಯವಾದ ಅಂಶ. ಶಾಸ್ತ್ರೀಯ ಹಾಗು ಜಾನಪದ ಸಂಗೀತದ ಧ್ವನಿಮುದ್ರಿಕೆಯ ಸಂಗ್ರಹಣಕ್ಕಾಗಿ ಪ್ರತ್ಯೇಕ ವಿಭಾಗವೇ ಇದೆ. ಸಂಗೀತ ವಾದ್ಯಗಳ ಸಂಗ್ರಹಾಲಯ ಮತ್ತು ಧ್ವನಿಮುದ್ರಣ ಸ್ಟುಡಿಯೊವೊಂದನ್ನು ಈ ಅಕೆಡಮಿ ಹೊಂದಿದೆ. ಸಂಗೀತ, ನೃತ್ಯ ಮತ್ತು ನಾಟಕಗಳಲ್ಲಿ ವಿಶೇಷ ರೀತಿಯ ತರಬೇತಿ ಪಡೆದ ಕಲಾವಿದರಿಗೆ ಮತ್ತು ಅಪೂರ್ವ ಕಲಾಕೃತಿಗಳಿಗೆ ಇದು ಪ್ರೋತ್ಸಾಹ ನೀಡುತ್ತಿದೆ. ಸಂಗೀತನಾಟಕ ಎಂಬ ತ್ರೈಮಾಸಿಕ ಪತ್ರಿಕೆಯೊಂದನ್ನು ಮತ್ತು ಒಂದು ಪಾಕ್ಷಿಕ ಸುದ್ದಿ ಪತ್ರಿಕೆಯನ್ನು ಇದು ಪ್ರಕಟಿಸುತ್ತಿದೆ.

ಮೂರು ವರ್ಷ ಅವಧಿಯ ನಾಟ್ಯಕಲೆಯ ಒಂದು ತರಬೇತಿ ಶಿಕ್ಷಣವನ್ನು ನೀಡುವ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮ ಎಂಬ ಸಂಸ್ಥೆಯೊಂದನ್ನು ಈ ಅಕೆಡಮಿ ನಡೆಸುತ್ತಿದೆ. ಮಣಿಪುರಿ ನೃತ್ಯದಲ್ಲಿ ತರಬೇತಿ ಕೊಡಲು ಇಂಪಾಲ್‌ನಲ್ಲಿ ಜವಹರ್‌ಲಾಲ್ ನೆಹರು ಡ್ಯಾನ್ಸ್ ಅಕೆಡಮಿ ಎಂಬ ಸಂಸ್ಥೆಯನ್ನೂ ಮತ್ತು ದೆಹಲಿಯಲ್ಲಿ ಕಥಕ್ಕಳಿ ನೃತ್ಯದಲ್ಲಿ ತರಬೇತಿ ಕೊಡುವ ಕೇಂದ್ರವೊಂದನ್ನೂ ಈ ಅಕೆಡಮಿ ನಡೆಸುತ್ತಿದೆ.

ಕಲಾಭಿವೃದ್ಧಿಯ ಪಥದಲ್ಲಿ ಸಂಶೋಧನೆ, ತರಬೇತಿ, ವ್ಯಾಸಂಗಗೋಷ್ಠಿ, ಉತ್ಸವಾಚರಣೆ, ಸಂಗೀತ, ನೃತ್ಯ, ನಾಟಕಗಳಿಗೆ ಸಂಬಂಧಿಸಿದ ಪ್ರಕಟಣೆಗಳಿಗೆ ಸಹಾಯಧನ ನೀಡಿಕೆ – ಮೊದಲಾದುವುಗಳನ್ನು ಈ ಅಕೆಡಮಿ ಕೈಗೊಳ್ಳುತ್ತಿರುವುದಲ್ಲದೆ ಪ್ರತಿವರ್ಷವೂ ಸಂಗೀತ, ನೃತ್ಯ, ನಾಟಕ ಕ್ಷೇತ್ರಗಳಲ್ಲಿ ಶ್ರೇಷ್ಠದರ್ಜೆಯ ಕಲಾವಂತರಿಗೆ ಸನ್ಮಾನವನ್ನು ಮಾಡಿ ಪ್ರಶಸ್ತಿಯನ್ನು ನೀಡುತ್ತಿದೆ. (ಎಸ್.ಆರ್.ಪಿ.)

**ಲಲಿತಕಲಾ ಅಕೆಡಮಿ:** ಚಿತ್ರಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ – ಮುಂತಾದ ಕಲಾಕ್ಷೇತ್ರಗಳಿಗೆ ಸಂಬಂಧಿಸಿದಂತೆ ಇರುವ ಅಧ್ಯಯನ ಮತ್ತು ಸಂಶೋಧನೆಗಳಿಗೆ ಉತ್ತೇಜನ ನೀಡುವ ಮೂಲಭೂತ ಧ್ಯೇಯವನ್ನಿಟ್ಟುಕೊಂಡಿರುವ ಈ ಅಕೆಡಮಿ ಸ್ಥಾಪನೆಯಾದದ್ದು 1954ರಲ್ಲಿ. ಇದು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ನೆರವಿನಿಂದಲೇ ನಡೆಯುತ್ತಿದೆ. ಇದು ಪೂರ್ಣವಾಗಿ ಸ್ವಯಮಧಿಕಾರವುಳ್ಳ ಸಂಸ್ಥೆಯಾಗಿಲ್ಲ. ಕೇಂದ್ರ ಸರ್ಕಾರ ಮತ್ತು ಪ್ರಧಾನಾಡಳಿತ ಮಂಡಲಿ ಈ ಅಕೆಡಮಿಯ ಆಡಳಿತವನ್ನು ವಹಿಸಿಕೊಂಡಿದೆ. ಈ ಅಕೆಡಮಿಯ ಮುಖ್ಯವಾದ ಎರಡು ಕಾರ್ಯಗಳೆಂದರೆ ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ವಸ್ತು ಪ್ರದರ್ಶನಗಳನ್ನೇರ್ಪಡಿಸುವುದು ಮತ್ತು ಭಾರತದ ಪ್ರಾಚೀನ ಮತ್ತು ಆಧುನಿಕ ಕಲೆಗಾರಿಕೆಗೆ ಸಂಬಂಧಿಸಿದ ಪ್ರಕಾಶಿಕೆಗಳನ್ನು ಹೊರತರುವುದು. ಇದಲ್ಲದೆ ಅನೇಕ ಕಲಾಸಂಸ್ಥೆಗಳಿಗೆ ನೆರವನ್ನು ನೀಡಿ ಗೋಷ್ಠಿಗಳನ್ನೇರ್ಪಡಿಸುವುದು, ಗೋಡೆಯ ಮೇಲೆ ರಚಿಸಿದ ವರ್ಣಚಿತ್ರಗಳ ಹಾಗೂ ಕಲಾವಂತರ ಚಿತ್ರಗಳನ್ನು ಪುನರ್‌ಮುದ್ರಿಸಿಕೊಳ್ಳುವುದು ಮುಂತಾದುವು ಅಕೆಡಮಿಯ ಇತರ ಚಟುವಟಿಕೆಗಳು. 1968ರಲ್ಲಿ ನವದೆಹಲಿಯಲ್ಲಿ ಈ ಅಕೆಡಮಿ ನಡೆಸಿದ ಅಂತಾರಾಷ್ಟ್ರೀಯ ತ್ರೈವಾರ್ಷಿಕೋತ್ಸವದಲ್ಲಿ 35 ರಾಷ್ಟ್ರಗಳು ಭಾಗವಹಿಸಿದ್ದುವು.

ಅಕೆಡಮಿಯ ಚಟುವಟಿಕೆಗಳಲ್ಲಿ ಸೇರಿದ ಇತರ ಅಂಶಗಳೆಂದರೆ: ಪ್ರತಿವರ್ಷವೂ ರಾಷ್ಟ್ರೀಯ ಕಲಾಪ್ರದರ್ಶನವನ್ನೇರ್ಪಡಿಸುವುದು, ವಿದೇಶೀ ಕಲಾವಸ್ತು ಪ್ರದರ್ಶನಗಳನ್ನೇರ್ಪಡಿಸುವುದು, ಭಾರತದ ಕಲಾಪ್ರದರ್ಶನವನ್ನು ವಿದೇಶಗಳಲ್ಲಿ ನಡೆಸುವುದು, ಜಾನಪದ ಗೀತೆ, ವಸ್ತು ಮುಂತಾದುವುಗಳ ಸಂಗ್ರಹಣೆ, ಗಾರೆಯ ಮೇಲೆ ರಚಿಸಿರುವ ವರ್ಣಚಿತ್ರಗಳನ್ನು ಚಿತ್ರಿಸಿಕೊಳ್ಳುವುದು, ಪ್ರಕಟನೆಗಳನ್ನು ಹೊರಡಿಸುವುದು, ಕಲಾ ಸಂಸ್ಥೆಗಳಿಗೆ ಅಂಗೀಕಾರ, ನೆರವು ನೀಡುವುದು – ಇತ್ಯಾದಿ. ಈ ಅಕೆಡಮಿ ಪ್ರಕಾಶ ಪಡಿಸಿರುವ ಪುಸ್ತಕಗಳಲ್ಲಿ ಮೊಗಲರ ಕಾಲದ ಬರವಣಿಗೆಯ ಚಿತ್ರಪ್ರತಿಗಳು; ಪಹಾರಿ ಚಿತ್ರಕಲೆಯಲ್ಲಿ ಶ್ರೀಕೃಷ್ಣನ ಕಥೆ: ಅಜಂತ, ಮೇವಾರ, ಕಿಷನ್‌ಗಢ್, ಬುಂಡಿ ಮುಂತಾದ ಸ್ಥಳಗಳ ವರ್ಣಚಿತ್ರಗಳು; ಬೇಂದ್ರೆ, ರವಿವರ್ಮ, ಹೆಬ್ಬಾರ್, ಛಾವ್ಡಾ, ಪಣಿಕರ್– ಮುಂತಾದ ವ್ಯಕ್ತಿಗಳ ಮೇಲೆ ಪ್ರಬಂಧ ಗ್ರಂಥಗಳ ಪ್ರಕಟಣೆ – ಇತ್ಯಾದಿ ಕಂಡುಬರುತ್ತವೆ. ಇವಲ್ಲದೆ ಎರಡು ದ್ವಿವಾರ್ಷಿಕ ಪತ್ರಿಕೆಗಳನ್ನು ಪ್ರಕಟಿಸುತ್ತಿದೆ.

ರಾಷ್ಟ್ರೀಯ ಕಲಾಪ್ರದರ್ಶನದಲ್ಲಿ ಭಾಗವಹಿಸುವ ಶ್ರೇಷ್ಠದರ್ಜೆಯ ಕಲಾವಂತರಿಗೆ ಪ್ರತಿವರ್ಷವೂ ಪ್ರಶಸ್ತಿಗಳನ್ನಿತ್ತು ವಿಜೇತರಿಗೆ ತಾಮ್ರಪತ್ರ, ಅಂಗವಸ್ತ್ರ ಮತ್ತು ನಗದು ಬಹುಮಾನ ನೀಡಿ ಗೌರವಿಸುತ್ತದೆ. (ಎಸ್.ಆರ್.ಪಿ.)

**ಅಕೇಟೀಸ್ :** ವರ್ಜಿಲ್ ಕವಿಯ ಲ್ಯಾಟಿನ್ ಭಾಷೆಯ ಮಹಾಕಾವ್ಯ ಈನಿಯಡ್‌ನಲ್ಲಿ ಬರುವ ನಾಯಕ ಈನಿಯಸ್ಸನ ಸಂಗಡಿಗ, ನಿಷ್ಠಾವಂತ ಸ್ನೇಹಿತ.  ಫೈಡಸ್ ಅಕೇಟೀಸ್ ಎನ್ನುವುದು ನಿಷ್ಠಾವಂತನೂ ಆಸಕ್ತನೂ ಆದ ಸಂಗಡಿಗನನ್ನು ಕುರಿತು ಹೇಳುವ ಲೋಕರೂಢಿಯ ಮಾತಾಗಿದೆ. (ಸಿ.ಎನ್.ಎಂ.)

**ಅಕೇಮೆನಿಡೇ :** ಪರ್ಷಿಯದ ಪ್ರಾಚೀನ ರಾಜವಂಶದ ಹೆಸರು. ಈ ವಂಶದ ಮೂಲಪುರುಷ ಹಖಮನೀಷ್. ಇವನು ಪ್ರ.ಶ.ಪೂ.7ನೆಯ ಶತಮಾನದಲ್ಲಿ ಪರ್ಷಿಯದ ನೈಋತ್ಯ ಪ್ರಾಂತ್ಯವನ್ನಾಳುತ್ತಿದ್ದನೆಂದು ತಿಳಿದುಬಂದಿದೆ. ಹಖಮನೀಷ್ ಎಂಬ ಹೆಸರೇ ಗ್ರೀಕರ ಮತ್ತು ರೋಮನರ ಉಚ್ಚಾರಣೆಯ ಪರಿಣಾಮವಾಗಿ ಅಕೇಮೆನಿಡೇ ಎಂದು ರೂಪಾಂತರ ಹೊಂದಿದೆ. ಪ್ರ.ಶ.ಪೂ. 50 ಶತಮಾನಗಳ ಹಿಂದೆಯೇ ಪರ್ಷಿಯದಲ್ಲಿ ಸ್ಥಾಪಿತವಾಗಿ ಬೆಳೆದು ಬಂದಿದ್ದ ಈಲಾಂ ಸಾಮ್ರಾಜ್ಯ ಆಳಿದ ಮೇಲೆ ಅಕೇಮೆನಿಡೇ ದೊರೆಗಳು ರಾಜ್ಯವನ್ನು ವಿಸ್ತರಿಸಲು ಅನುಕೂಲವಾಯಿತು. ಪ್ರ.ಶ.ಪೂ.5ನೆಯ ಶತಮಾನದಲ್ಲಿ ಆಳಿದ ಕೈರಸ್ ಮಹಾಶಯ ಲಿಡಿಯದ ಕ್ರೀಸಸ್, ಬ್ಯಾಬಿಲೋನಿಯದ ನೆಬೊನೈಡಸ್ ಮುಂತಾದ ನೆರೆ ರಾಜರನ್ನು ಸೋಲಿಸಿ ದೊಡ್ಡ ಸಾಮ್ರಾಜ್ಯವನ್ನೇ ಕಟ್ಟಿದ. ಪ್ರಬಲವಾಗಿದ್ದ ಮೀಡಿಯ ರಾಜ್ಯವೂ ಅವನ ಕೈವಶವಾಯಿತು. ಪ್ರ.ಶ.ಪೂ.546ರ ಕಾಲಕ್ಕೆ ಅವನು ಕಟ್ಟಿದ್ದ ಸಾಮ್ರಾಜ್ಯ ಭದ್ರತೆಯನ್ನು ಪಡೆದಿತ್ತೆನ್ನಬಹುದು. ಆತನು ಗೆದ್ದ ರಾಜ್ಯಗಳ ನಾಗರಿಕಜೀವನ ಸಂಸ್ಕೃತಿಗಳನ್ನು ಅಳಿಸದೆ ಅವುಗಳ ತಳಪಾಯದ ಮೇಲೆ ಹೊಸ ಸಂಸ್ಕೃತಿಯನ್ನು ರೂಪಿಸಲೆತ್ನಿಸಿದ. ಈಜಿಪ್ಟ್, ಬ್ಯಾಬಿಲೋನಿಯ ಮುಂತಾದ ಕಡೆಗಳಿಂದ ಶಿಲ್ಪಿಗಳನ್ನು ಬರಮಾಡಿಕೊಂಡು ಪಸಾಗಾರ್ಡೆ ಎಂಬಲ್ಲಿ ಭವ್ಯವಾದ ಅರಮನೆ ಮುಂತಾದ ಕಟ್ಟಡಗಳನ್ನು ನಿರ್ಮಿಸಿದ.

ಎರಡು ಶತಮಾನಗಳ ಕಾಲ ಕೈರಸ್ ಕಟ್ಟಿದ ಸಾಮ್ರಾಜ್ಯ ಭವ್ಯವಾಗಿ ಬಾಳಿತು. ಪ್ರ.ಶ.ಪೂ. 522ರಿಂದ 485ರವರೆಗೆ ಆಳಿದ ಡೇರಿಯಸ್ಸನ ಕಾಲದಲ್ಲಿ ಸಿಂಧೂನದಿಯವರೆಗಿನ ಪ್ರದೇಶವೆಲ್ಲ ಪರ್ಷಿಯನ್ನರ ಕೈವಶವಾಯಿತು. ಡೇರಿಯಸ್ಸ್ ಆ ವಿಶಾಲ ಸಾಮ್ರಾಜ್ಯವನ್ನು ಇಪ್ಪತ್ತು ಪ್ರಾಂತಗಳಾಗಿ ವಿಭಾಗಿಸಿ ಪ್ರತಿಯೊಂದಕ್ಕೂ ದಕ್ಷ ಮಾಂಡಲಿಕರನ್ನು ನೇಮಿಸಿದ. ಗ್ರೀಸ್‌ದೇಶದ ಮೇಲೆ ದಂಡೆತ್ತಿ ಹೋದಾಗ ಮಾತ್ರ ಮ್ಯಾರಥಾನ್ ಕದನದಲ್ಲಿ ಆತ ಸೋತು ಹಿಮ್ಮೆಟ್ಟಬೇಕಾಯಿತು. ಅವನ ಮಗನಾದ ಸರ್‌ಕ್ಸಸ್ ಗ್ರೀಕರನ್ನು ಸೋಲಿಸಲು ಪುನಃ ಪ್ರಯತ್ನಿಸಿ ಸೆಲಾಮಿಸ್ ಮತ್ತು ಪ್ಲಾಟಿಯ ಕದನಗಳಲ್ಲಿ ಸೋತು ಹಿಂತಿರುಗಬೇಕಾಯಿತು. ಅನಂತರದ ಕಾಲವನ್ನು ಅಕೇಮೆನಿಡೇ ಸಾಮ್ರಾಜ್ಯದ ಅವನತಿಯ ಕಾಲವೆನ್ನಬಹುದು. ಕೊನೆಯ ದೊರೆಯಾದ ಮೂರನೆಯ ಡೇರಿಯಸ್ ಅರ್ಬೆಲ ಕಾಳಗದಲ್ಲಿ ಅಲೆಗ್ಸಾಂಡರನಿಗೆ ಸೋತು (ಪ್ರ.ಶ.ಪೂ.331) ರಣರಂಗದಿಂದ ಓಡಿಹೋಗಬೇಕಾಯಿತು. ಪರ್ಷಿಯ ಸಾಮ್ರಾಜ್ಯವೆಲ್ಲ ಅಲೆಗ್ಸಾಂಡರನ ಮ್ಯಾಸಿಡೋನಿಯ ಸಾಮ್ರಾಜ್ಯಕ್ಕೆ ಸೇರಿಹೋಯಿತು. (ಎ.ಎಂ.)

**ಅಕೇಯನ್ನರು :** ಪ್ರಾಚೀನ ಗ್ರೀಸ್‌ದೇಶದ ಜನ. ಹೊರದೇಶಗಳಿಂದ ವಲಸೆ ಬಂದು ನೆಲೆಸಿದವರೋ ಮೂಲನಿವಾಸಿಗಳೋ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಪ್ರ.ಶ.ಪೂ.13ನೆಯ ಶತಮಾನದಲ್ಲೇ ಅವರು ಗ್ರೀಸಿನ ದಕ್ಷಿಣ ಭಾಗವಾದ ಪೆಲೆಪೊನೀಸಸ್‌ನಲ್ಲಿ ನೆಲೆಸಿದ್ದರು. ಹಿಂದೆ ಮೈಸಿನೀ ನಾಗರಿಕತೆ ಹರಡಿದ್ದ ಪ್ರಾಂತವನ್ನೆಲ್ಲ ಅವರು ಸ್ವಾಧೀನಪಡಿಸಿಕೊಂಡಿದ್ದರು. ಪ್ರ.ಶ.ಪೂ. ಸು. 10ನೆಯ ಶತಮಾನದಲ್ಲಿ ಡೋರಿಯನ್ನರೆಂಬ ಹೊಸ ಜನ ಬಂದುದರ ಪರಿಣಾಮವಾಗಿ ಅಕೇಯನ್ನರಲ್ಲಿ ಕೆಲವರು ಪೆಲೊಪೊನೀಸಸ್‌ನ ಉತ್ತರ ಭಾಗದಲ್ಲಿ ನೆಲೆಸಿದರು; ಮಿಕ್ಕವರು ಏಷ್ಯ ಮೈನರ್‌ಗೆ ಮತ್ತು ದಕ್ಷಿಣ ಇಟಲಿಗೆ ವಲಸೆ ಹೋದರು. ಇವರು ರೋಮಿನೊಂದಿಗೆ ನಿರ್ನಾಮವಾಗುವವರೆಗೂ ಹೊಡೆದಾಡಿದರು. (ಎ.ಎಂ.)

**ಅಕೇಯನ್ ಒಕ್ಕೂಟ :** ಅಕೇಯನ್ ಪಂಗಡದ ಹನ್ನೆರಡು ಪ್ರಮುಖ ನಗರರಾಷ್ಟ್ರಗಳು ಪ್ರ.ಶ.ಪೂ.4ನೆಯ ಶತಮಾನದಲ್ಲಿ ರಚಿಸಿಕೊಂಡ ಒಂದು ಒಕ್ಕೂಟ. ಕಾರಿಂತ್ ಕೊಲ್ಲಿಯಿಂದ ಉಪದ್ರವ ಕೊಡುತ್ತಿದ್ದ ಕಡಲ್ಗಳ್ಳರ ಹಾವಳಿಯನ್ನು ತಡೆಗಟ್ಟಲು ಈ ಒಕ್ಕೂಟ ಸ್ಪಾರ್ಟ ಮತ್ತು ಥೀಬ್ಸಿನ ಪ್ರಾಬಲ್ಯವನ್ನು ತಡೆಗಟ್ಟಲು ಹೋರಾಡಿತು. ಪ್ರ.ಶ.ಪೂ. 338ರಲ್ಲಿ ಮ್ಯಾಸಿಡೋನಿಯದ 2ನೆಯ ಫಿಲಿಪ್ಪನ ಆಕ್ರಮಣವನ್ನು ತಡೆಗಟ್ಟಲು ಒಕ್ಕೂಟ ಹೋರಾಡಿತು. ಅಲೆಕ್ಸಾಂಡರ್ ಮಹಾಶಯನ ಮರಣಾನಂತರದ ಗೊಂದಲದಲ್ಲಿ ದುರ್ಬಲವಾಗಿದ್ದ ಈ ಒಕ್ಕೂಟ ನಾಮಾವಶೇಷವಾಯಿತು. ಆದರೆ ಕೆಲವು ಅಕೇಯನ್ ರಾಷ್ಟ್ರಗಳ ಪ್ರಯತ್ನದಿಂದ ಪುನಃ ಸಂಯುಕ್ತರೀತಿಯ ರಾಜಕೀಯ ಒಕ್ಕೂಟವೊಂದು ಸ್ಥಾಪಿತವಾಯಿತು. ಕಾಲಕ್ರಮೇಣ ಅಕೇಯನ್ ಪಂಗಡಕ್ಕೆ ಸೇರದ ಇತರ ನಗರರಾಷ್ಟ್ರಗಳಾದ ಆರ್ಗಾಲಿಸ್, ಕಾರಿಂತ್ ಮತ್ತು ಏಜಿಯಾನ್‌ಗಳೂ ಸಮಾನತೆಯ ಆಧಾರದ ಮೇಲೆ ರೂಪಿತವಾಗಿದ್ದವು. ಕೇಂದ್ರ ಆಡಳಿತ ಸಮಿತಿಗೆ ಯುದ್ಧಕಾಲದಲ್ಲಿ ಸಂಪೂರ್ಣ ಅಧಿಕಾರವಿತ್ತಲ್ಲದೆ ಶಾಸಕಾಂಗಗಳ ಮುಂದೆ ಪ್ರಮುಖ ಸಮಸ್ಯೆಗಳನ್ನು ಚರ್ಚೆಗೆ ತರುವ ಅಧಿಕಾರವೂ ಇತ್ತು. ಪ್ರಾದೇಶಿಕ ಸಮಾನತೆಯ ಆಧಾರದ ಮೇಲೆ ಚುನಾಯಿತರಾದ ಸದಸ್ಯರಿಂದ ಕೂಡಿದ ಎರಡು ಶಾಸಕಾಂಗಗಳಿದ್ದುವು. ಸರ್ವೋತ್ಕೃಷ್ಟ ಫೆಡರಲ್ ನ್ಯಾಯಾಲಯವಿದ್ದಿತು. ಒಕ್ಕೂಟದ ರಾಜ್ಯಗಳೆಲ್ಲಲ್ಲ ಏಕರೂಪದ ನಾಣ್ಯಪದ್ಧತಿಯಿತ್ತು. ಒಕ್ಕೂಟದ ಸದಸ್ಯ ರಾಷ್ಟ್ರಗಳು ಒಳಾಡಳಿತದಲ್ಲಿ ಸ್ವತಂತ್ರವಾಗಿದ್ದುವು. ವಿದೇಶಾಂಗ ನೀತಿ ಮತ್ತು ಯುದ್ಧಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೇಂದ್ರ ಸರ್ಕಾರ ಪರಮಾಧಿಕಾರವನ್ನು ಹೊಂದಿತ್ತು.

ಒಕ್ಕೂಟ ತನ್ನ ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ಸ್ಪಾರ್ಟ ಮತ್ತು ಮ್ಯಾಸಿಡೋನಿಯದ ಐದನೆಯ ಫಿಲಿಪ್ಪನೊಡನೆ ಯುದ್ಧಗಳಲ್ಲಿ ಹೋರಾಡಿತು. ಕೊನೆಗೆ ಅಯ್‌ಟೋಲಿಯನ್ನರೊಡನೆ ಸೇರಿ ರೋಮನ್ನರನ್ನು ಎದುರಿಸಿತು. ಪ್ರ.ಶ.ಪೂ. 168ರಲ್ಲಿ ರೋಮನರು ಪಿಡ್ನ ಎಂಬಲ್ಲಿ ಅಕೇಯನ್ನರನ್ನು ಸಂಪೂರ್ಣವಾಗಿ ಸೋಲಿಸಿದರು. ಪ್ರ.ಶ.ಪೂ. 146ರಲ್ಲಿ ರೋಮನರು ಅಕೇಯನ್ ರಾಜಕೀಯ ಒಕ್ಕೂಟವನ್ನು ವಿಸರ್ಜಿಸಿದರು. ಅದು ಕೇವಲ ಸಾಂಸ್ಕೃತಿಕ ಹಾಗೂ ನಾಮಮಾತ್ರ ಸಂಸ್ಥೆಯಾಗಿ ಉಳಿಯಿತು. ಅಕೇಯನ್ ನಗರ ರಾಜ್ಯಗಳನ್ನು ಮ್ಯಾಸಿಡೋನಿಯದೊಡನೆ ವಿಲೀನಗೊಳಿಸಿ ಒಂದು ಪ್ರಾಂತ್ಯವನ್ನಾಗಿ ವಿಂಗಡಿಸಿ ರೋಮನರು ತಮ್ಮ ಆಡಳಿತವನ್ನು ಸ್ಥಾಪಿಸಿದರು. ಅಕೇಯನ್ ಒಕ್ಕೂಟ ಸಮಾನತೆ ಹಾಗೂ ಸ್ವಾತಂತ್ರ್ಯ ಧ್ಯೇಯಗಳಿಗಾಗಿ ಶತಮಾನಗಳ ಕಾಲ ಹೋರಾಡಿತು. ಇದು ಸಂಯುಕ್ತ ಪ್ರಜಾಪ್ರಭುತ್ವ ಸಂಪ್ರದಾಯಕ್ಕೆ ತನ್ನದೇ ಆದ ಕಾಣಿಕೆಯನ್ನು ಸಲ್ಲಿಸಿದೆ.

(ಜಿ.ಆರ್.ಆರ್.)

**ಅಕೋಲ :** ಮಹಾರಾಷ್ಟ್ರ ಪ್ರಾಂತ್ಯದ ಒಂದು ಮುಖ್ಯ ಪಟ್ಟಣ ಹಾಗೂ ತಾಲ್ಲೂಕು ಕೇಂದ್ರ. ಊರು ಪೂರ್ಣಾನದಿಯ ಉಪನದಿಯಾದ ಮುರ್ನಾ ನದಿಯ ಪಶ್ಚಿಮದಡದ ಭಾಗವನ್ನು ಆಕ್ರಮಿಸಿಕೊಂಡಿದೆ. ಪೂರ್ವದಡದ ಭಾಗದಲ್ಲಿ ತಾಜ್ನಾಪೇಟೆ, ಸರ್ಕಾರಿ ಕಟ್ಟಡಗಳು ಮತ್ತು ಐರೋಪ್ಯರ ನಿವಾಸಗಳಿವೆ. ಜನಸಂಖ್ಯೆ 4,00,520 (2006) ಪೌರಸಭೆಯ ಆಡಳಿತಕ್ಕೆ ಒಳಪಟ್ಟಿದೆ.

ಪಟ್ಟಣದ ಸುತ್ತಲಿನ ಕೋಟೆ 19ನೆಯ ಶತಮಾನದ್ದು. ಈ ಪಟ್ಟಣ ಹತ್ತಿ ಮತ್ತು ಹೊಗೆಸೊಪ್ಪಿನ ವ್ಯಾಪಾರಕ್ಕೆ ಹೆಸರುವಾಸಿಯಾದ ಕೇಂದ್ರ. ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ ಅನೇಕ ಕಾರ್ಖಾನೆಗಳುಂಟು. ವಿದ್ಯಾಭ್ಯಾಸದ, ಕೈಗಾರಿಕಾ ಶಾಲೆಯ ಸೌಲಭ್ಯಗಳು ದೊರಕುತ್ತವೆ. ಊರಿನ ತುಂಬ ವಖಾರಗಳು ದಲಾಲಿ ಸಂಸ್ಥೆಗಳೇ ಕಂಡುಬರುತ್ತವೆ.

ಅಕೋಲ ಜಿಲ್ಲೆಯ ವಿಸ್ತೀರ್ಣ ಸು. 10,598 ಚ.ಕಿಮೀ. ಜನಸಂಖ್ಯೆ 16,29,305 (2001). ಜನಸಾಂದ್ರತೆ ಚ.ಕಿಮೀಗೆ 800 ಜನರು. ಈ ಜಿಲ್ಲೆಯ ಭೂಭಾಗ ಚಪ್ಪಟೆಯಾಗಿದ್ದು ಕಣಿವೆಯ ಪ್ರದೇಶ ಸಾಕಷ್ಟಿದೆ. ಉತ್ತರ ಭಾಗದಲ್ಲಿ ಮೇಲ್‌ಘಟ್ ಬೆಟ್ಟಗಳಿವೆ. ಪೂರ್ವದಲ್ಲಿ ಅಜಂತ ಬೆಟ್ಟಗಳು ಜಿಲ್ಲೆಗೆ ಸೇರಿಕೊಂಡಂತಿವೆ. ಈ ಭಾಗ ಸಮುದ್ರಮಟ್ಟಕ್ಕಿಂತ 610 ಮೀ.ಗಳಷ್ಟು ಎತ್ತರದಲ್ಲಿದ್ದು ಬಾಸಿಮ್ ಪ್ರಸ್ಥಭೂಮಿಯನ್ನು ಒಳಗೊಂಡಿದೆ.

ಅಜಂತ ಬೆಟ್ಟಗಳ ಉತ್ತರ ಭಾಗದಲ್ಲಿ ತಪತಿಗೆ ಉಪನದಿಯಾದ ಪೂರ್ಣಾ ಮತ್ತು ಅದರ ಉಪನದಿಗಳು ಹರಿಯುತ್ತವೆ. ಬೇಸಗೆಯಲ್ಲಿ ಶಾಖ ಹೆಚ್ಚು. ವಾರ್ಷಿಕ ಸರಾಸರಿ ಮಳೆ 26 ಸೆಂ.ಮೀ ಪೂರ್ಣಾ ಕಣಿವೆ ಮೆಕ್ಕಲುಮಣ್ಣಿನಿಂದ ಕೂಡಿದ ಫಲವತ್ತಾದ ಕಪ್ಪುಮಣ್ಣಿನಿಂದ ಕೂಡಿದ್ದು ಹತ್ತಿ ಬೆಳೆಗೆ ಉತ್ಕೃಷ್ಟ ಪ್ರದೇಶವಾಗಿದೆ. ಈ ಭಾಗವೆಲ್ಲವನ್ನೂ ಕೃಷಿಗೆ ಅಳವಡಿಸಿಕೊಳ್ಳಲಾಗಿದೆ.

(ಎಂ.ಎಸ್.; ಡಿ.ಕೆ.)

**ಅಕ್ಕಣ್ಣ – ಮಾದಣ್ಣ :** ವಾರಂಗಲ್ ಜಿಲ್ಲೆಗೆ ಸೇರಿದ ಹನುಮಕೊಂಡ ಗ್ರಾಮದಲ್ಲಿ ಬ್ರಾಹ್ಮಣ ಮನೆತನಕ್ಕೆ ಸೇರಿದ ಇಬ್ಬರು ಪಂಡಿತರೆಂದರೆ ಏಕನಾಥ ಮತ್ತು ಅವನ ಸಹೋದರ ಮಾದಣ್ಣ. ಇವರು ದಕ್ಷಿಣ ಭಾರತದ ಇತಿಹಾಸದಲ್ಲಿ ಅಕ್ಕಣ್ಣ–ಮಾದಣ್ಣ ಎಂಬುದಾಗಿ ಪ್ರಸಿದ್ಧರಾಗಿದ್ದಾರೆ. 17ನೆಯ ಶತಮಾನದಲ್ಲಿ ಗೋಲ್ಕೊಂಡ ಷಾಹಿ ರಾಜ್ಯವನ್ನಾಳುತ್ತಿದ್ದ ಕುತುಬ್‌ಷಾಹನ ವಿಖ್ಯಾತ ಮಂತ್ರಿಯಾದ ಮೀರ್‌ಜುಮ್ಲಾನ ಸೇವೆಯಲ್ಲಿದ್ದುಕೊಂಡು ತಮ್ಮ ಶಕ್ತಿ ಮತ್ತು ದಕ್ಷತೆಯಿಂದ ಉನ್ನತಾಧಿಕಾರಕ್ಕೆ ಬಂದರು. ಗಲಭೆಕೋರರನ್ನು ಅಡಗಿಸಲು ಮಾದಣ್ಣನೇ ಸರಿಯಾದ ವ್ಯಕ್ತಿಯೆಂದು ಅರಿತ ರಾಜನು ಅವನಿಗೆ ಉನ್ನತಾಧಿಕಾರವನ್ನು ಕೊಟ್ಟು ಆಡಳಿತ ಸುಧಾರಣಾಕಾರ್ಯವನ್ನು ವಹಿಸಿಕೊಟ್ಟ. ಬಹಳ ವರ್ಷಗಳ ಕಾಲ ಮಾದಣ್ಣ ಷಾಹನಿಗೆ ನಿಷ್ಠೆಯಿಂದಿದ್ದುಕೊಂಡು ತನ್ನ ಸೇವೆಯನ್ನು ಸಲ್ಲಿಸಿದನು. ಸಂಸ್ಕೃತ, ಪರ್ಷಿಯನ್ ಮತ್ತಿತರ ಭಾಷೆಗಳಲ್ಲಿ ಪ್ರವೀಣನೂ ದಕ್ಷಿಣ ಭಾರತದ ರಾಜಕೀಯದಲ್ಲಿ ತಕ್ಕಷ್ಟು ಪಳಗಿದವನೂ ಆದ ಮಾದಣ್ಣ ಕುತುಬ್‌ಷಾಹಿ ರಾಜ್ಯಭಾರವನ್ನು ನಿರ್ವಹಿಸಿದ. ಮಾದಣ್ಣ ಪಂಡಿತನೂ ನಿಗರ್ವಿಯೂ ಶಾಂತಸ್ವಭಾವದವನೂ ಆದರೆ ಅವನ ಅಣ್ಣನಾದ ಅಕ್ಕಣ್ಣ ಮುಂಗೋಪಿಯೂ ಚಪಲಸ್ವಭಾವದವನೂ ಆಗಿದ್ದ ಎಂಬುದಾಗಿ ಆಗಿನ ಕಾಲದ ಯುರೋಪಿಯನ್ ಪ್ರವಾಸಿಗಳು ವರ್ಣಿಸಿದ್ದಾರೆ. ಕುತುಬ್‌ಷಾಹಿ ರಾಜ್ಯಕ್ಕೆ ಸೇರಿದ ಕರ್ನಾಟಕದ ಪ್ರದೇಶಗಳ ಆಡಳಿತವನ್ನು ಅಕ್ಕಣ್ಣ ಕೆಲವು ಕಾಲ ನಿರ್ವಹಿಸಿದ ಅನಂತರ ಮಾದಣ್ಣ ಪ್ರಧಾನಿಯಾಗಿದ್ದು, ಅನಂತರ ಬಿಜಾಪುರದಲ್ಲಿ ರಾಯಭಾರಿಯಾಗಿದ್ದ. ಆಮೇಲೆ ಷಾಹಿ ಸೈನ್ಯದ ದಂಡನಾಯಕನಾದ. 1677ರಲ್ಲಿ ಶಿವಾಜಿ ಕರ್ನಾಟಕದ ದಂಡಯಾತ್ರೆಯನ್ನು ಕೈಗೊಂಡಾಗ ಈ ಸಹೋದರರೂ ಅವನೊಂದಿಗೆ ಬಹಳವಾಗಿ ಸಹಕರಿಸಿದರು.

(ಬಿ.ಎಂ.)

**ಅಕ್ಕನಾಗಮ್ಮ :** 12ನೆಯ ಶತಮಾನದ ಕನ್ನಡ ನಾಡಿನ ಶಿವಶರಣೆಯರಲ್ಲಿ ಅಗ್ರಗಣ್ಯಳು. ಬಾಗೇವಾಡಿ ಈಕೆಯ ಜನ್ಮಸ್ಥಳ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಮಗ ಚನ್ನಬಸವೇಶ್ವರ, ಸಹೋದರ ಬಸವೇಶ್ವರ, ಗುರು ಕಪ್ಪಡಿ ಸಂಗಮದ ಜಾತವೇದಸ್ವಾಮಿ. ಮಹಾಯೋಗಿನಿಯಾದ ಈಕೆಯ ಸ್ಮಾರಕಗಳು ಬಿಜಾಪುರ ಜಿಲ್ಲೆಯ ಇಂಗಳೇಶ್ವರ, ಬೀದರ್ ಜಿಲ್ಲೆಯ ಕಲ್ಯಾಣ, ಉತ್ತರಕನ್ನಡ ಜಿಲ್ಲೆಯ ಉಳವಿಯಲ್ಲಿವೆ. ಬಸವೇಶ್ವರರು ಕೈಗೊಂಡ ಎಲ್ಲ ಚಟುವಟಿಕೆಗಳಲ್ಲೂ ಈಕೆ ಬೆಂಬಲಿಗಳಾಗಿದ್ದಳು. ಕರ್ನಾಟಕದ ಶಿವಶರಣರು ಈಕೆಯ ಬಗ್ಗೆ ಹೆಚ್ಚಿನ ಭಕ್ತಿಗೌರವಗಳನ್ನು ತಾಳಿದ್ದಾರೆ. ಚೆನ್ನಬಸವಪುರಾಣ, ಪುರಾತನ ದೇವಿಯರ ತ್ರಿಪದಿ, ಬಸವಪುರಾಣ ಈ ಗ್ರಂಥಗಳಲ್ಲಿ ಈಕೆಯ ಹೆಸರು ನಿರೂಪಿತವಾಗಿದೆ.

(ಬಿ.ಎಸ್.)

**ಅಕ್ಕಮಹಾದೇವಿ :** 12ನೆಯ ಶತಮಾನದ ಪ್ರಸಿದ್ಧ ಶಿವಶರಣೆ. ಕನ್ನಡದ ಮೊದಲ ಕವಯಿತ್ರಿ ಎಂಬ ಬಿರುದಿಗೆ ಪಾತ್ರಳಾಗಿದ್ದಾಳೆ. ಇವಳು ಉಡುತಡಿಯವಳು ಎಂದು ಹರಿಹರ ಮುಂತಾದವರು ಹೇಳಿದ್ದಾರೆ. ಉಡುತಡಿ ಈಗಿನ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಉಡುಗಣಿ ಮತ್ತು ತಡುಗಣಿಗಳೇ ಆಗಿವೆ ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಇವಳ ತಂದೆತಾಯಿಗಳ ಹೆಸರುಗಳನ್ನು ಬೇರೆ ಬೇರೆ ಕವಿಗಳು ಬೇರೆ ಬೇರೆ ರೀತಿಗಳಲ್ಲಿ ಹೇಳಿದ್ದಾರೆ. ಹರಿಹರ ಅವರನ್ನು ಶಿವಭಕ್ತರೆಂದು ಸಾಮಾನ್ಯ ರೂಪದಲ್ಲಿ ಹೆಸರಿಸಿದ್ದರೆ, ಚಾಮರಸ ಅವರ ಹೆಸರನ್ನು ನಿರ್ಮಲ, ಸುಮತಿ ಎಂಬುದಾಗಿ ಹೇಳುತ್ತಾನೆ. ರಾಚಕವಿ ಓಂಕಾರಶೆಟ್ಟಿ, ಲಿಂಗಮ್ಮ ಎಂದು ಹೇಳುತ್ತಾನೆ. ಚಾಮರಸನ ಹೆಸರುಗಳು ಅವನ ಕಾವ್ಯದಲ್ಲಿ ಬರುವ ಇತರ ಹೆಸರುಗಳಂತೆ ಸಾಂಕೇತಿಕ ಎಂದು ಭಾವಿಸಬಹುದು. ರಾಚಕವಿ ಬಹಳ ಈಚಿನವನು. ಆದ್ದರಿಂದ ಆ ಬಗ್ಗೆ ಏನನ್ನೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಈಕೆ ಶಿವನಲ್ಲಿ ಅಪಾರವಾದ ಭಕ್ತಿಯನ್ನಿಟ್ಟುದಲ್ಲದೆ, ಅವನನ್ನೇ ತನ್ನ ಗಂಡನೆಂದು ಭಾವಿಸಿದ್ದಳು. ಊರಿನ ರಾಜ ಕೌಶಿಕನ ದೃಷ್ಟಿ ಈ ಯುವತಿಯ ಮೇಲೆ ಬಿತ್ತು. ಮದುವೆಯಾಗಬಯಸಿದ. ಇವಳಿಗಾದರೋ ಅವನ ಕೈಹಿಡಿಯಲು ಸ್ವಲ್ಪವೂ ಇಷ್ಟವಿರಲಿಲ್ಲ. ರಾಜನಿಂದ ತನ್ನ ತಂದೆ ತಾಯಿಗಳಿಗೆ ಉಂಟಾಗಬಹುದಾದ ತೊಂದರೆಗಳನ್ನು ನೆನೆದು ಮೂರು ಷರತ್ತುಗಳೊಂದಿಗೆ ಮದುವೆಯಾಗಲು ಒಪ್ಪಿದಳು. ಮದುವೆಗೆ ಇದಕ್ಕಿಂತಲೂ ಇದ್ದ ದೊಡ್ಡ ಅಡ್ಡಿಯೆಂದರೆ ಕೌಶಿಕ ಜೈನ, ಅಷ್ಟೇ ಅಲ್ಲ, ಭವಿ. ಆತ ಸಂಸಾರದಲ್ಲಿ ಆಸಕ್ತ, ರಾಗಿ; ಇವಳು ಸಂಸಾರದಲ್ಲಿ ನಿರಾಸಕ್ತೆ, ವಿರಾಗಿ. ಕೌಶಿಕ ಲೌಕಿಕವ್ಯಕ್ತಿ; ಮಹಾದೇವಿ ಅಲೌಕಿಕವ್ಯಕ್ತಿ. ಅವನ ವ್ಯವಹಾರವೆಲ್ಲ ಪ್ರಾಪಂಚಿಕ, ಇವಳದೋ ಆಧ್ಯಾತ್ಮಿಕ. ಮದುವೆಯಾದರೂ ಆ ದಾಂಪತ್ಯ ಹೆಚ್ಚುಕಾಲ ಉಳಿಯಲಿಲ್ಲ. ಕೌಶಿಕ ತನ್ನ ಮೂರು ಷರತ್ತುಗಳನ್ನೂ ಮುರಿದಾಗ, ಇವಳು ಅವನನ್ನು ತ್ಯಜಿಸಿ ಕೇಶಾಂಬರಿಯಾಗಿ, ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಹೊರಟು ದಾರಿಯಲ್ಲಿ ಹಲವಾರು ರೀತಿಯ ಕೋಟಲೆಗಳನ್ನು ಅನುಭವಿಸಿದಳು. ಈ ಎಲ್ಲ ಅಸಹನೀಯವಾದ ನೋವನ್ನೂ ನುಂಗಿ ಸಹಿಸಿಕೊಳ್ಳಲು ಧೈರ್ಯ ಕೊಟ್ಟದ್ದು ಇವಳ ಶಿವನಿಷ್ಠೆ. ತಾನು ಶಿವನ ವಧುವಾದ್ದರಿಂದ ಯಾರಿಗೂ ಅಳುಕಬೇಕಾಗಿಲ್ಲವೆಂಬ ಕೆಚ್ಚು ಇವಳದು. ಶ್ರೀಶೈಲಕ್ಕೆ ಹೋಗುವ ಮಾರ್ಗದಲ್ಲಿ ಈಕೆ ಕಲ್ಯಾಣಕ್ಕೂ ಬಂದಳು. ಕಲ್ಯಾಣ ಆಗ ವೀರಶೈವ ಧಾರ್ಮಿಕ ಚಟುವಟಿಕೆಗಳಿಂದ ತುಂಬಿ ತುಳುಕುತ್ತಿದ್ದಿತು. ಬಸವ, ಅಲ್ಲಮ ಮುಂತಾದವರ ನೇತೃತ್ವದಲ್ಲಿ ಸಾಮಾಜಿಕ ಕ್ರಾಂತಿಯೊಂದು ರೂಪುಗೊಳ್ಳುತ್ತಿದ್ದಿತು. ಆ ಶರಣರ ಕಿವಿಗಾಗಲೇ ಅಕ್ಕನ ನಿಷ್ಠೆ ಭಕ್ತಿಗಳು ಕೇಳಿ ಬಂದಿದ್ದವು. ಕಲ್ಯಾಣದಲ್ಲಿ ಕೆಲವು ಕಾಲ ನಿಂತು ಅನುಭಾವಿಗಳ ಸಂಗದಲ್ಲಿ ಸುಖ ಶಾಂತಿಗಳನ್ನು ಕಂಡಳು. ಬಸವಣ್ಣ, ಅಲ್ಲಮಪ್ರಭು–ಮುಂತಾದ ಅನುಭಾವಿಗಳಿಂದ

ಮಹಾಶಿವಶರಣೆ ಎಂಬ ಹೊಗಳಿಕೆಗೆ ಪಾತ್ರಳಾದಳು. ಅಲ್ಲಿಂದ ಈಕೆ ಎಲ್ಲರ ಹರಕೆಯನ್ನೂ ಹೊತ್ತು, ತನ್ನ ಗಂಡ ಶೀಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಶ್ರೀ ಶೈಲಕ್ಕೆ ಬಂದು, ಕದಳಿವನ ಪ್ರವೇಶಿಸಿ, ತನ್ನ ಆರಾಧ್ಯದೈವದ ಸಾನ್ನಿಧ್ಯದಲ್ಲಿ ಕೊನೆಯುಸಿರೆಳೆದಳು. ಹೀಗೆ ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು ಇವಳು ಮಾಡಿದ ಉಗ್ರಸಾಧನೆ, ಪಡೆದ ಸಿದ್ಧಿ ಅಪೂರ್ವವಾದುದು.

ಅಕ್ಕಮಹಾದೇವಿ ಶ್ರೇಷ್ಠ ಅನುಭಾವಿಯಾಗಿರುವಂತೆ ಶ್ರೇಷ್ಠ ವಚನ ಕಾರ್ತಿಯೂ ಆಗಿದ್ದಾಳೆ. ಚೆನ್ನಮಲ್ಲಿಕಾರ್ಜುನ ಎಂಬುದು ಇವಳ ವಚನಗಳ ಅಂಕಿತ. ಇವಳ ವಚನಗಳಲ್ಲಿ ಇವಳ ಅಂತರಂಗದ ಎಲ್ಲ ತುಮುಲಗಳೂ ಆಸೆ–ನಿರಾಸೆಗಳೂ ಸಂದೇಹ–ನಂಬಿಕೆಗಳೂ ವ್ಯಕ್ತವಾಗಿವೆ. ಅವು ಇವಳ ತೀವ್ರ ಅನುಭವದ ಅಗಳಾಗಿ ಹೊಮ್ಮುವುದರಿಂದ ಅನೇಕ ಕಡೆ ಶುದ್ಧ ಭಾವ ಗೀತೆಯ ಲಕ್ಷಣಗಳನ್ನು ಪಡೆದಿವೆ. ಸೃಷ್ಟಿಯಲ್ಲಿ ಒಂದಾಗಿಯೂ ಸೃಷ್ಟಿಯಿಂದ ಬೇರೆಯಾಗಿಯೂ ಇರುವ ಭಗವಂತನ ನಿಲುವನ್ನು ಬಹು ಪರಿಣಾಮ ಕಾರಿಯಾದ ರೀತಿಯಲ್ಲಿ ಚಿತ್ರಿಸುವ ಅಕ್ಕನ ವಚನವೊಂದು ಹೀಗಿದೆ:

ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿನೀರನೆರೆದವರಾರಯ್ಯ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿನೀರನೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ ಓಗರದ ಉದಕವನೆರೆದವರಾರಯ್ಯ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯ?
ಇಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೆ
ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನ? ತನ್ನ ಪರಿ ಬೇರೆ

ಚೆನ್ನಮಲ್ಲಿಕಾರ್ಜುನನಿಗಾಗಿ ಕಾತರಿಸಿ ಕಳವಳಪಟ್ಟ ಇವಳ ಅಂತರಂಗದ ವೇದನೆಯನ್ನು ಕೆಳಗಿನ ವಚನ ಚೆನ್ನಾಗಿ ಚಿತ್ರಿಸುತ್ತದೆ:

ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು,
ಕನಸಿನಲ್ಲಿ ಕಳವಳಿಸಿ ಆನು ಬೆರಗಾದೆ,
ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ,
ಆಪತ್ತಿಗೆ ಸಖಿಯರನಾರನೂ ಕಾಣೆ,
ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ,
ಎನಗೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ

ತೆರಣಿಯ ಹುಳು ತನ್ನ ಸ್ನೇಹಕ್ಕೆ ಮನೆಯ ಮಾಡಿ ತನ್ನ ನೂಲ ತಾನು ಸುತ್ತಿ ಸಾವ ತೆರನಂತೆ; ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪಬಿಟ್ಟಿತ್ತೆ? ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದೊಡೆಂತಯ್ಯ, ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದೊಡೆಂತಯ್ಯ; ಚಿಲಿಪಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ ನೀವು ಕಾಣಿರೆ–ಈ ಮುಂತಾದ ವಚನಗಳಲ್ಲಿ ಸಹಜ ಅನುಭವದ ತೀವ್ರತೆಯುಳ್ಳ ಭಾವಗೀತೆಯ ಲಕ್ಷಣಗಳನ್ನು ಕಾಣಬಹುದಾಗಿದೆ. ಸಾಹಿತ್ಯಗುಣ ಇಂಥ ಹಲವಾರು ವಚನಗಳಲ್ಲಿ ಘನೀಭೂತವಾಗಿದೆ. ಸಮಾಜ ವಿಮರ್ಶೆಯ, ಬೋಧನೆಯ ವಚನಗಳು ಅಕ್ಕನಲ್ಲಿ ಬಹಳ ಕಡಿಮೆ. ಈಕೆ ವಚನಗಳನ್ನಲ್ಲದೆ ಯೋಗಾಂಗ ತ್ರಿವಿಧಿ ಎಂಬ 67 ತ್ರಿಪದಿಗಳನ್ನೊಳಗೊಂಡ ತಾತ್ತ್ವಿಕ ವಿಷಯನಿರೂಪಣೆಯುಳ್ಳ ಒಂದು ಗ್ರಂಥವನ್ನು ಬರೆದಿದ್ದಾಳೆ. ಇದರಲ್ಲಿ ತಾತ್ತ್ವಿಕ ವಿಷಯಗಳು ಕೆಲವು ಸಲ ಸರಳವಾಗಿಯೂ ಹಲವು ಸಲ ಬೆಡಗಿನ ವಚನಗಳ ಮಾದರಿಯಲ್ಲಿಯೂ ನಿರೂಪಿತವಾಗಿವೆ. ಈ ಕೃತಿ ಚಿಕ್ಕದಾದರೂ ಅಕ್ಕನ ಅನುಭಾವಸಂಪತ್ತಿಗೆ ಸಾಕ್ಷಿಯಾಗಿದೆ. ಇಡೀ ವಚನಸಾಹಿತ್ಯದಲ್ಲಿ ಗುಣದ ದೃಷ್ಟಿಯಿಂದ ನಾಲ್ಕಾರು ಕೃತಿಕಾರರ ಹೆಸರುಗಳನ್ನು ಹೇಳಬೇಕಾದಾಗ ಅದರಲ್ಲಿ ಅಕ್ಕಮಹಾದೇವಿಯ ಹೆಸರು ಖಂಡಿತ ಸೇರುತ್ತದೆ. (ಪ.)

**ಅಕ್ಕಲಕೋಟೆ :** ಗುಲ್ಬರ್ಗಕ್ಕೆ ಸಮೀಪದಲ್ಲಿರುವ ಪ್ರಾಚೀನ ಐತಿಹಾಸಿಕ ಸ್ಥಳ. ಇದು ಸಾತವಾಹನರ ಮತ್ತು ರಾಷ್ಟ್ರಕೂಟರ ರಾಜ್ಯದಲ್ಲಿ ಸೇರಿತ್ತೆಂದು ಶಾಸನಗಳಿಂದ ಗೊತ್ತಾಗುತ್ತದೆ. ಯಾದವ ಮನೆತನದವರ ಅನೇಕ ಶಾಸನಗಳು ಇಲ್ಲಿ ದೊರೆತಿರುವುದರಿಂದ 14ನೆಯ ಶತಮಾನದವರೆಗೆ ಇದು ಯಾದವರ ಆಳ್ವಿಕೆಯಲ್ಲಿತ್ತು ಎಂದು ತಿಳಿದುಬರುತ್ತದೆ. 16ನೆಯ ಶತಮಾನದಲ್ಲಿ ಬಿಜಾಪುರ ಮತ್ತು ಅಹಮದ್‌ನಗರ ರಾಜ್ಯಗಳ ಯುದ್ಧಗಳು ಇಲ್ಲಿ ನಡೆದುವು. ಶಿವಾಜಿಯ ಮೊಮ್ಮಗನಾದ ಷಾಹು ರಾಣೋಜಿ ಎಂಬ ಬಾಲಕನಿಗೆ ಫತೇಸಿಂಗ್ ಎಂಬ ಹೊಸ ಹೆಸರನ್ನು ಕೊಟ್ಟು 1712ರಲ್ಲಿ ಅವನಿಗೆ ಅಕ್ಕಲಕೋಟೆಯನ್ನು ಜಹಗೀರನ್ನಾಗಿ ಕೊಟ್ಟ. 1760ರಲ್ಲಿ ಫತೇಸಿಂಗನು ಮರಣಹೊಂದಲು ಷಾಹಜಿ ಅಕ್ಕಲಕೋಟೆ ಸಂಸ್ಥಾನದ ರಾಜನಾದ. ಇವನಿಗೂ ಇವನ ಸಹೋದರನಾದ ತುಳಜೀ ಎಂಬುವನಿಗೂ ಆದ ಕಲಹದಲ್ಲಿ ಅಬ್ಬಾಸಾಹೇಬನ ಪರವಾಗಿ ಈಸ್ಟ್ ಇಂಡಿಯಾ ಕಂಪೆನಿ ಈ ಕಲಹದಲ್ಲಿ ಪ್ರವೇಶಿಸಿತು. ಅಬ್ಬಾಸಾಹೇಬನೇ ಅಕ್ಕಲಕೋಟೆಯ ರಾಜನೆಂದು ತೀರ್ಮಾನಿಸಿತು. ಇವನು 1822ರಲ್ಲಿ ಮರಣಹೊಂದಲು ಇವನ ಮಗನಾದ ಮಾಲೋಜಿ ರಾಜನಾದ. ಮಾಲೋಜಿ 1828ರಲ್ಲಿ ಮರಣ ಹೊಂದಲು ಇವನ ಮಗನಾದ ಷಾಹಜಿ ರಾಜನಾದ. ಆಗ ಇವನಿಗೆ ಕೇವಲ 8 ವರ್ಷ. ಆದುದರಿಂದ ಸತಾರ ಸಂಸ್ಥಾನದ ರಾಜ ಇವನ ಪರವಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದ. ಆದರೆ ಜನಗಳು ಸತಾರದ ರಾಜನಮೇಲೆ ದಂಗೆ ಎದ್ದರು. ಬ್ರಿಟಿಷ್ ಸೈನ್ಯ ದಂಗೆಯನ್ನು ಅಡಗಿಸಿ ಬ್ರಿಟಿಷ್ ಗವರ್ನರನ್ನು ನೇಮಕ ಮಾಡಿತು. ಅನಂತರ ಷಾಹಜಿ ಬ್ರಿಟಿಷರ ಅಧೀನನಾಗಿ ಆಳಿದ. ಭಾರತ ಸ್ವತಂತ್ರವಾದ ಮೇಲೆ ಅಕ್ಕಲಕೋಟೆ ಸಂಸ್ಥಾನ ಮಹಾರಾಷ್ಟ್ರ ಸರ್ಕಾರದ ಆಡಳಿತಕ್ಕೊಳಪಟ್ಟು ಶೋಲಾಪುರ ಜಿಲ್ಲೆಯ ಭಾಗವಾಗಿ ಮುಂದುವರೆಯುತ್ತಿದೆ.

ಈಗ ಊರು ಪ್ರಮುಖ ರೈಲುನಿಲ್ದಾಣವಾಗಿದೆ. ಜನಸಂಖ್ಯೆ 21,500. ಸಮುದ್ರಮಟ್ಟದಿಂದ 1800' ಎತ್ತರವಿದ್ದು ಸಹ್ಯಾದ್ರಿಯ ಮಳೆಯ ನೆರಳಿನಲ್ಲಿರುವುದರಿಂದ ವಾರ್ಷಿಕ ಮಳೆ ಸು. 63–76ಸೆಂ.ಮೀ ಮಾತ್ರ. ಬೋರಿ ಮತ್ತು ಹರಣಿ ನದಿಗಳು ದಕ್ಷಿಣಕ್ಕೆ ಹರಿಯುತ್ತವೆ. ನೀರು ಮತ್ತು ವಿದ್ಯುತ್ ಪೂರೈಕೆ ಬೋರಿನದಿಯಿಂದ. ನೆಲ ಕರಿ ಮತ್ತು ಕೆಂಪು; ವೃಕ್ಷರಹಿತ. ಜೋಳ, ನೆಲಗಡಲೆ, ಸಜ್ಜೆ, ಗೋದಿ, ತೊಗರಿ, ಅಗಸೆ, ಹತ್ತಿ, ಮೆಣಸಿನಕಾಯಿ, ಬತ್ತ, ಕಬ್ಬು, ಬಾಳೆ, ವೀಳೆಯದೆಲೆ–ಇವು ಇಲ್ಲಿನ ಬೆಳೆಗಳು. ಒಕ್ಕಲುತನ, ತೋಟಗಾರಿಕೆ, ನೇಯ್ಗೆ ಇವು ಪ್ರಮುಖ ಉದ್ಯಮಗಳು. ಇಲ್ಲಿ ಸ್ವಾಮಿ ಮಹಾರಾಜರ ಸಮಾಧಿ ಮತ್ತು ಶಸ್ತ್ರಾಸ್ತ್ರ ಸಂಗ್ರಹಾಲಯಗಳು ಪ್ರೇಕ್ಷಣೀಯ ಸ್ಥಳಗಳಾಗಿವೆ. (ಎ.ವಿ.ಎನ್.)

**ಅಕ್ಕಸಾಲಿಗರ ಉದ್ಯಮ :** ಅಕ್ಕಸಾಲಿಗ ಪದದ ಮೂಲ ರೂಪ ಅರ್ಕಶಾಲಿ. ಜಗತ್ತನ್ನು ಸೃಷ್ಟಿಸಿದವನೆಂದೂ ಜಗಚ್ಛಿಲ್ಪಿಯೆಂದೂ ಸರ್ವಹೃದಯಗಳಲ್ಲೂ ಸ್ಥಿತನಾಗಿರುವ ಪರಬ್ರಹ್ಮರೂಪಿಯೆಂದೂ ವೇದಗಳಲ್ಲಿ ವರ್ಣಿತವಾಗಿರುವನು ವಿಶ್ವಕರ್ಮ. ವಿಶ್ವಕರ್ಮ (ಅಕ್ಕಸಾಲಿಗ) ವಂಶದ ಮೂಲಪುರುಷ. ಇವನ 5 ಮಂದಿ ಮಕ್ಕಳು ಋಷಿಪುಂಗವರಾಗಿದ್ದು 5 ಶಿಲ್ಪಕಾಯಕಗಳ ಪ್ರವರ್ತಕರಾಗಿದ್ದಾರೆ; ಮನು ಕಬ್ಬಿಣದ ಕೆಲಸಗಳನ್ನು ಪ್ರವರ್ತಿಸಿದವನು. ಮಯ ಮರಗೆಲಸವನ್ನು ತಿಳಿಸಿದವನು. ಯಜ್ಞಕರ್ಮಗಳಿಗೆ ಬೇಕಾದ ಪಾತ್ರೆ ಪಡಗಗಳನ್ನು ತಯಾರಿಸಿದವನು ತ್ವಷ್ಟ, ವಿಗ್ರಹ ಹಾಗೂ ದೇವಾಲಯಗಳ ಕರ್ತೃವೇ ಶಿಲ್ಪಿ. ಮಾಂಗಲ್ಯಾದಿ ಆಭರಣಗಳನ್ನು ಮಾಡಿದವನು ವಿಶ್ವಜ್ಞ. ಈ ವಿವರ ಅಕ್ಕಸಾಲಿಗರ ಉದ್ಯಮದ ವ್ಯಾಪ್ತಿಯನ್ನು ಚೆನ್ನಾಗಿ ತಿಳಿಸುತ್ತದೆ.

ಬಂಗಾರದ ಆಭರಣಗಳನ್ನು ಮಾಡುವೆಡೆಯನ್ನು ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಅಕ್ಷಶಾಲೆಯೆಂದು ಪ್ರಸ್ತಾಪಿಸುತ್ತಾನೆ. ಅಕ್ಷಶಾಲೆಗೆ ಈಗ ಕನ್ನಡ ಪ್ರತ್ಯಯ ಸೇರಿ ತದ್ಭವವಾದಾಗ ಅಕ್ಕಸಾಲಿಗ ಆಗುತ್ತದೆ.

ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ತಯಾರಿಸುವ ಕುಶಲಕರ್ಮಿಗಳಾದ ಅಕ್ಕಸಾಲಿಗರಿಗೆ ಓಜರು, ಚಿನಿವಾರರು, ರಥಕಾರರು, ನಾಡಿಂದಮರು, ಸೊನೆಗಾರರು ಎಂಬ ಹೆಸರುಗಳು ಇವೆ. ಬಂಗಾರ, ಬೆಳ್ಳಿ, ವಜ್ರ, ರತ್ನ, ಮಣಿಗಳು ಮುಂತಾದ ಪ್ರಶಸ್ತ ವಸ್ತುಗಳನ್ನು ಬಳಸಿ ಸೂಕ್ಷ್ಮತಮ ಕುಸುರಿಕೆಲಸಗಳನ್ನು ನಡೆಸಿ ಆಭರಣಗಳನ್ನು ಸಿದ್ಧಪಡಿಸುವುದರಲ್ಲಿ ಇವರು ನಿಷ್ಣಾತರು.

ಗತಕಾಲದ ನಾಗರಿಕತೆಯನ್ನು ಗುರುತಿಸುವಾಗೆಲ್ಲ ಆ ತಲೆಮಾರುಗಳ ಅಕ್ಕಸಾಲಿಗರು ರಚಿಸಿದ ವಿನ್ಯಾಸಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ; ಪ್ರಾಚೀನ ಶಿಲ್ಪ ಹಾಗೂ ಚಿತ್ರಗಳಲ್ಲಿ ಅಕ್ಕಸಾಲಿಗರ ನಿರ್ಮಾಣ ಕೌಶಲ್ಯ ವ್ಯಕ್ತವಾಗುತ್ತದೆ. ಅನೇಕ ವೇಳೆ ಶಿಲ್ಪಗಳಲ್ಲಿ ಉಡುಪಿಗಿಂತಲೂ ಹೆಚ್ಚಾಗಿ ಧರಿಸಲಾಗಿರುವ ಆಭರಣಗಳನ್ನು ಕಾಣಬಹುದಲ್ಲದೆ ಅವುಗಳ ವಿನ್ಯಾಸವೂ ಕಾಲಕಾಲಕ್ಕೆ ಬದಲಾಗಿರುವುದು ಗೋಚರವಾಗುತ್ತದೆ.

ಪ್ರ.ಶ.ಪೂ.2500ರ ಸಮಯದ ಹಿಂದೂ ಕಣಿವೆ ನಾಗರಿಕತೆಯ ಅಕ್ಕಸಾಲಿಗರು ಬೆಳ್ಳಿ ಬಂಗಾರ ಮತ್ತು ತಾಮ್ರದ ಆಭರಣಗಳನ್ನು ತಯಾರಿಸಿದ್ದಾರೆ. ಛಂಕವನ್ನೂ (ಒಂದು ಬಗೆಯ ಕೊಂಬು) ರಕ್ತವರ್ಣದ ಮಣಿಗಳನ್ನೂ ಆಗಿನ ಜನ ಆಭರಣಗಳಿಗಾಗಿ ಬಳಸುತ್ತಿದ್ದರು. ಅಲ್ಲಿನ ಅಕ್ಕಸಾಲಿಗರು ಬೆಳ್ಳಿ, ಬಂಗಾರ, ಮಣಿಗಳು, ನುಣುಪು ಶಿಲೆಯ ಹರಳುಗಳು – ಇವನ್ನು ಬಳಸಿ ಹಾರಗಳನ್ನು ತಯಾರಿಸುತ್ತಿದ್ದರು. ಪ್ರ.ಶ.ಪೂ. 1500ರ ಹೊತ್ತಿಗೆ ಭಾರತಕ್ಕೆ ಬಂದ ಆರ್ಯರು ಅಳಿದುಳಿದ ಹಿಂದೂ ಕಣಿವೆ ನಾಗರಿಕರಂತೆಯೇ ಬೆಳ್ಳಿ ಬಂಗಾರಗಳ ಕುಶಲತೆಯಲ್ಲಿ ಚೆನ್ನಾಗಿ ತರಪೇತಾಗಿದ್ದವರೇ. ಅಲ್ಲಿಂದ ಮುಂದೆ ಪ್ರ.ಶ.ಪೂ.300ರವರೆಗೆ ಅಕ್ಕಸಾಲಿಗರ ಕಲೆಯ ಬಗ್ಗೆ ಸ್ಪಷ್ಟ ದಾಖಲೆ ಸಿಗುವುದಿಲ್ಲ. ಸುವರ್ಣಯುಗ ಎಂದು ಕರೆಯಲಾದ ಗುಪ್ತರ ಆಳ್ವಿಕೆಯ ಕಾಲವು ಭಾರತೀಯ ಕಲೆಯ ಚರಿತ್ರೆಯ ದೃಷ್ಟಿಯಿಂದ ಮಹತ್ತರವಾದದ್ದು. ಪ್ರ.ಶ.ಪೂ.300 ರಿಂದ ಪ್ರ.ಶ.ಪೂ.600ರವರೆಗೆ ಹರಡುವ ಆ ಅವಧಿಯಲ್ಲಿ, ಇಡೀ ಭರತಖಂಡವನ್ನು ಪ್ರತಿನಿಧಿಸಲಾಗುವಂಥ ಭಾರತೀಯ ವಿನ್ಯಾಸಕಲೆ ಮತ್ತು ನಿರ್ಮಾಣಕಲೆಗಳಿಗೆ ಮೂರ್ತರೂಪ ಬಂತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಕ್ಕಸಾಲಿಗರು, ಅವರ ವೃತ್ತಿ, ಸರ್ಕಾರದ ನಿಯಂತ್ರಣ ಇವುಗಳ ಬಗ್ಗೆ ಮಾಹಿತಿಗಳು ಸಿಗುತ್ತವೆ. ಹುಟ್ಟಿನಿಂದ ಪ್ರಶಸ್ತನಾದ ಮತ್ತು ಸದಾಚಾರವಂತನಾದ ನುರಿತ ಕುಶಲಿ ಅಕ್ಕಸಾಲಿಗನೊಬ್ಬನಿಗೆ ನಡುರಸ್ತೆಯಲ್ಲಿ ಅಂಗಡಿಯೊಂದನ್ನು ಇಟ್ಟುಕೊಳ್ಳಲು ನಿಯಮಿಸಲಾಗುತ್ತಿತ್ತು. ಬೆಳ್ಳಿ ಬಂಗಾರಗಳ ಆಭರಣಗಳನ್ನು ಜನರು ಕೊಳ್ಳುವುದರಲ್ಲೂ

ಮಾರುವುದರಲ್ಲೂ ಅವರಿಗೆ ನೆರವಾಗುವುದು ಅವನ ಕೆಲಸ. ಆಸ್ಥಾನದ ಅಕ್ಕಸಾಲಿಗನು ಅಕ್ಷಶಾಲೆಯಲ್ಲಿ ಕೆಲಸ ಮಾಡಲು ಅಕ್ಕಸಾಲಿಗರನ್ನು ನಿಯಮಿಸುತ್ತಿದ್ದ. ಆ ಅಕ್ಕಸಾಲಿಗರು ನಾಗರಿಕರಿಂದ ಲೋಹವನ್ನು ಪಡೆದು ಬೆಳ್ಳಿ ಬಂಗಾರಗಳ ನಾಣ್ಯಗಳನ್ನೂ ಆಭರಣಗಳನ್ನೂ ತಯಾರಿಸಿಕೊಡುತ್ತಿದ್ದರು. ಗಟ್ಟಿ ಮೈಯಿನ ಆಭರಣಗಳ ತಯಾರಿಕೆ ಘನ; ಬಿಂದಿಗೆ ಲೋಟ ಮುಂತಾದ ಪೊಳ್ಳು ಮೈಯಿನ ವಸ್ತುಗಳ ತಯಾರಿಕೆ – ಘನಸುಶಿರ; ಬೆಸುಗೆ ಹಾಕುವಿಕೆ – ಸಂಯೂಹ್ಯ; ಧಾತುಗಳ ಸಂಯೋಜನೆ – ಅವಲೇಪ್ಯ; ಮುಲಾಮು ಹಾಕುವಿಕೆ – ವಾಸೀತಕಂ – ಇವು ಅಕ್ಕಸಾಲಿಗರು ನಡೆಸುತ್ತಿದ್ದ ಕುಶಲಕರ್ಮಗಳು. ರತ್ನಮಣಿ ಮುಂತಾದುವನ್ನು ಬಂಗಾರದ ಮೈಮೇಲೆ ಹುದಗುವುದನ್ನು ಕ್ಷೇಪಣ ಎಂದೂ ಬಂಗಾರವನ್ನು ಮತ್ತು ಬೆಳ್ಳಿಯನ್ನು ಎಳೆಗಳನ್ನಾಗಿ ಎಳೆಯುವುದನ್ನು ಗುಣ ಎಂದೂ ಕರೆಯಲಾಗುತ್ತಿತ್ತು. ಅಕ್ಕಸಾಲಿಗರ ಬೇರೆ ಬೇರೆ ಕೆಲಸಗಳಿಗೆ ಬೇರೆ ಬೇರೆ ದರಗಳಲ್ಲಿ ರುಸುಮನ್ನು ನಿಶ್ಚಯ ಮಾಡಲಾಗಿತ್ತು. ಕೆಲಸದಲ್ಲಿ ಅಜಾಗರೂಕತೆ ವಹಿಸಿದರೆ, ಮೋಸಗೊಳಿಸಿದರೆ ಅಕ್ಕಸಾಲಿಗ ತನ್ನ ವೇತನದ ರುಸುಮಿನ ಹಲವು ಪಟ್ಟು ದಂಡ ತೆರಬೇಕಾಗುತ್ತಿತ್ತು. ಅಕ್ಷಶಾಲೆಯ ಹೊರಗೆ ಮತ್ತೆಲ್ಲಿಯಾದರೂ ಆಭರಣದ ತಯಾರಿಕೆ ಅಥವಾ ಇನ್ನಾವುದೇ ಬೆಳ್ಳಿ ಬಂಗಾರಗಳ ಕೆಲಸ ನಡೆಸಿದರೆ ಅವರಿಗೆ ದಂಡ ವಿಧಿಸಲಾಗುತ್ತಿತ್ತು. ಅಕ್ಷಶಾಲೆಯ ಮೇಲ್ವಿಚಾರಕನಾದ ಆಸ್ಥಾನದ ಅಕ್ಕಸಾಲಿಗನು ವಿವಿಧ ಮೂಲಗಳಿಂದ ಬರುವ ವಜ್ರಗಳ ಗುಣ, ತೂಕ, ಸಂಯೋಜನೆ, ಜಾತಿಗಳು (ಪುದ್ಗಲ ಲಕ್ಷಣಗಳು); ಪ್ರಶಸ್ತ ಹರಳುಗಳು (ಮಣಿ); ಮುತ್ತು, ಹವಳ, ನಾಣ್ಯಗಳು (ರೂಪ); ಇವುಗಳಲ್ಲಿ ಪಾರಂಗತನಾಗಿರುತ್ತಿದ್ದ. ಕೌಟಿಲ್ಯನ ಅರ್ಥಶಾಸ್ತ್ರದ ಮೂಲಕ ಸುವರ್ಣಯುಗದಲ್ಲಿ ಅಕ್ಕಸಾಲಿಗರು ನಡೆಸುತ್ತಿದ್ದ ಕುಶಲಕರ್ಮಗಳ ವೈವಿಧ್ಯ ಮನದಟ್ಟಾದರೂ ಈವರೆಗೆ ದೊರೆತ ಅವಶೇಷಗಳಲ್ಲಿ ಆಗಿನ ಕಾಲದ ಆಭರಣಗಳು ದೊರೆತಿಲ್ಲ. ಆದರೆ ತಕ್ಷಶಿಲೆಯಲ್ಲಿ ಒಟ್ಟಾಗಿ ಸಿಕ್ಕ ಸುಮಾರು 180 ಆಭರಣಗಳು ಪ್ರ.ಶ.ಪೂ.1ನೆಯ ಶತಮಾನಕ್ಕೆ ಸೇರಿದುವೆಂದು ಹೇಳಲಾಗುತ್ತಿದೆ. ಆ ಆಭರಣಗಳಲ್ಲಿ ಅಕ್ಕಸಾಲಿಗರು ಬಳಸಿರುವ ಅಚ್ಚು, ಎರಕ, ಜಾಲಂದ್ರ ವಿನ್ಯಾಸ – ಈ ವಿಧಾನಗಳು ಪ್ರ.ಶ.ಪೂ.500ರ ಸಮಯದ ಗ್ರೀಕ್ – ರೋಮನ್ ಪದ್ಧತಿಗಳನ್ನು ಹೋಲುತ್ತದೆ. ಏನೇ ಆದರೂ, ಈ ಪೈಕಿ ಯಾವುದೇ ವಿಧಾನವೂ ಪಶ್ಚಿಮದಿಂದ ಪಡೆದದ್ದು ಎಂಬುದಾಗಿ ಭಾವಿಸಲು ಸಾಧ್ಯವಾಗುವುದಿಲ್ಲ ಎಂದು ಪಾಶ್ಚಾತ್ಯ ತಜ್ಞರು ಒಪ್ಪಿಕೊಳ್ಳುತ್ತಾರೆ.

ಪ್ರಸಕ್ತ ಶಕ ಆರಂಭವಾದ ಮೇಲೂ ಅಕ್ಕಸಾಲಿಗ ಕುಶಲಕರ್ಮಗಳಿಗೆ ಅನ್ಯಾದೃಶವಾದ ಅವಕಾಶವಿತ್ತು. ಪ್ರ.ಶ. 1, 3, 4, 7ನೆಯ ಶತಮಾನಗಳ ಅಕ್ಕಸಾಲಿಗರು ತಯಾರಿಸಿದ ಕೆಲವು ಆಭರಣಗಳು ಲಭ್ಯವಾಗಿವೆ. ಏನೇ ಆದರೂ ಕ್ರಿಸ್ತಶಕೆಯ ಮೊದಲ ಹದಿನಾರು ಶತಮಾನಗಳ ಅಕ್ಕಸಾಲಿಗರ ಕಲೆಯನ್ನು ಅಭ್ಯಾಸ ಮಾಡಲು ವರ್ಣಚಿತ್ರಗಳ ಮತ್ತು ಶಿಲ್ಪಗಳ ಮೊರೆ ಹೋಗಬೇಕಾಗುತ್ತದೆ. ಸು. 2 – 7ನೆಯ ಶತಮಾನದವರೆಗಿನ ಅಕ್ಕಸಾಲಿಗರ ಕಲೆಯನ್ನು ಅಜಂತಾ ಗುಹೆಗಳು ಮುಂತಾದೆಡೆ ಸ್ಥಿತವಾಗಿರುವ ಕಲೆಯಲ್ಲಿ ಗುರುತಿಸಬಹುದು. ಅಲ್ಲಿ ಕಂಡುಬರುವ ಆಕೃತಿ ರಚನೆ ಮತ್ತು ನಿರ್ಮಾಣದ ವಿಧಾನ – ಇವು ಸು. 16ನೆಯ ಶತಮಾನದ ಐರೋಪ್ಯ ಅಕ್ಕಸಾಲಿಗ ಕಲೆಯನ್ನು ಮೀರಿಸಿವೆ. ಅನಂತರ ಭಾರತಕ್ಕೆ ಆಗಮಿಸಿದ ಮುಸ್ಲಿಂ ಅಕ್ಕಸಾಲಿಗರ ಕಲೆಯೂ ಪ್ರಸಿದ್ಧವಾದುವೇ. ಮುಸ್ಲಿಂ ರಚನಾ ವಿನ್ಯಾಸಗಳು ಹಿಂದೂ ವಿನ್ಯಾಸಗಳಿಗೆ ವ್ಯತಿರಿಕ್ತವಾದುವೇನೂ ಆಗಿರಲಿಲ್ಲ. ಕಾಲಕ್ರಮೇಣ ಎರಡೂ ವೈಖರಿಗಳು ಸರಿಸುಮಾರು ಒಂದೇ ಆಗಿ ಹೋದುವು. 17, 18, 19ನೆಯ ಶತಮಾನಗಳಲ್ಲಿ ಕಾಶ್ಮೀರ, ದೆಹಲಿ, ಜೈಪುರ, ಲಾಹೋರ್, ಕಲ್ಕತ್ತ, ಬೊಂಬಾಯಿ, ಮದರಾಸು, ಹೈದರಾಬಾದ್ – ಇವು ಕುಶಲ ಅಕ್ಕಸಾಲಿಗರ ಕೇಂದ್ರಗಳಾಗಿದ್ದವು. ಕಾಶ್ಮೀರೀ ಮತ್ತು ಪಂಜಾಬಿ ಅಕ್ಕಸಾಲಿಗರು ಮಣಿಗಳನ್ನು ಹರಳುಗಳನ್ನು ಹುದುಗುವುದರಲ್ಲಿ ನಿಷ್ಣಾತರಾಗಿದ್ದರು. ರಜಪೂತ ಅಕ್ಕಸಾಲಿಗರು ಮಿನಾಯಿ (ಎನಾಮಲ್) ಕಲೆಗೆ ಹೆಸರಾಗಿದ್ದರು.

ಬ್ಯಾಂಕಿಂಗ್ ಉದ್ಯಮದ ಮೂಲಪುರುಷ: ಇಂಗ್ಲೆಂಡಿನ ಬ್ಯಾಂಕಿಂಗ್ ಉದ್ಯಮದ ಮೂವರು ಮೂಲಪುರುಷರಲ್ಲಿ ಅಕ್ಕಸಾಲಿಗನೂ ಒಬ್ಬ. ಇನ್ನಿಬ್ಬರು ಮೂಲ ಪುರುಷರು – ಸಂಚಾರೀ ವ್ಯಾಪಾರಿ ಮತ್ತು ಲೇವಾದೇವಿ ಹಣವಂತ. 17ನೆಯ ಶತಮಾನದ ಇಂಗ್ಲೆಂಡಿನ ಅಕ್ಕಸಾಲಿಗ ತನ್ನ ವೃತ್ತಿಗನುಗುಣವಾಗಿ ತನ್ನ ಆಭರಣಗಳನ್ನು ಸುರಕ್ಷಿತವಾಗಿಟ್ಟುಕೊಳ್ಳಲು ವ್ಯವಸ್ಥೆ ಮಾಡಿಕೊಂಡಿರುತ್ತಿದ್ದ. ಅವನ ಗಿರಾಕಿಗಳು ತಮ್ಮ ಬೆಲೆ ಬಾಳುವ ವಸ್ತುಗಳನ್ನು ಸಂರಕ್ಷಣೆಗಾಗಿ ಆಗಾಗ ಅವನಲ್ಲಿ ಇಡುತ್ತಿದ್ದುದೂ ಉಂಟು. ವ್ಯಾಪಾರಗಾರರು ಬಂಗಾರದ ರೂಪದಲ್ಲಿರುತ್ತಿದ್ದ ತಮ್ಮ ಹಣದ ಥೈಲಿಗಳನ್ನು ಲಂಡನ್ ನಗರದ ಟವರ್ ಆಫ್ ಲಂಡನ್ ಗೋಪುರದಲ್ಲಿ ಭದ್ರಪಡಿಸುತ್ತಿದ್ದರು. ಆದರೆ 1640ರಲ್ಲಿ ಮೊದಲ ಚಾರಲ್ಸ್ ದೊರೆ ತನಗೆ ಹಣದ ಅಗತ್ಯ ಬಿದ್ದಾಗ ಗೋಪುರದಲ್ಲಿದ್ದ ವ್ಯಾಪಾರಗಾರರ ಸಂಪತ್ತನ್ನು ಮುಟ್ಟುಗೋಲು ಪಡಿಸಲು ಬೇರೆ ನೆಲೆಗಳನ್ನು ಹುಡುಕಿದರು. ಆಗ ಅವರಿಗೆ ಅಕ್ಕಸಾಲಿಗನೇ ಸುರಕ್ಷಕನಾಗಿ ಕಂಡ. ಅಲ್ಲಿಂದಲೇ ಅಕ್ಕಸಾಲಿಗರ ಉಪವೃತ್ತಿ ಇತರ ವಾರಸುದಾರರ ಚಿನ್ನದ ರೂಪದ ಹಣವನ್ನು ಭದ್ರಪಡಿಸುವುದಾಯಿತು. ವಾರಸುದಾರರು ಠೇವಣಿ ಮಾಡಿದ ಬಂಗಾರಕ್ಕೆ ಅಕ್ಕಸಾಲಿಗ ರಶೀತಿಯೊಂದನ್ನು ಕೊಡುತ್ತಿದ್ದ. ಇಟ್ಟ ಬಂಗಾರವನ್ನು ಹಿಂದೆಗೆದುಕೊಳ್ಳಲು ರಶೀತಿ ಆಧಾರವಾಗಿರುತ್ತಿತ್ತು. ಆ ಉದ್ದೇಶಕ್ಕಾಗಿ ಮಾತ್ರ ರಶೀತಿಯನ್ನು ಬಳಸಲಾಗುತ್ತಿತ್ತು. ಕ್ರಮೇಣ ಅಕ್ಕಸಾಲಿಗರ ಪ್ರಸಿದ್ಧಿ ಹರಡಿದಂತೆ ವ್ಯಾಪಾರಗಾರರು ಬಂಗಾರದ ಥೈಲಿಗಳನ್ನು ಹೊತ್ತು ಹೋಗುವಾಗ ಜಾಗ್ರತೆ ವಹಿಸಬೇಕಾದುದು ಸಹ ತಪ್ಪುವುದೆಂಬ ಅರಿವು ಮೂಡಿದಂತೆ ಅಕ್ಕಸಾಲಿಗನ ರಶೀತಿಗೆ ಇದ್ದ ಪ್ರಾಶಸ್ತ್ಯ ಹೆಚ್ಚಿತು. ಹೀಗೆ ಘನರೂಪದ ಬಂಗಾರದ ನಾಣ್ಯಗಳ ಸ್ಥಾನವನ್ನು ಅಕ್ಕಸಾಲಿಗನ ರಶೀತಿ ಆಕ್ರಮಿಸಿತು. ಕಡೆಗೆ ಬೇರೆ ಬೇರೆ ಪ್ರದೇಶಗಳ ವ್ಯಾಪಾರಿಗಳು ರಶೀತಿಯ ಮೇಲಿನ ಹೆಸರುಗಳನ್ನು ಬದಲಾಯಿಸಿಕೊಳ್ಳುವುದರ ಮೂಲಕವೇ ಕೊಡುವ, ಕೊಳ್ಳುವ ಅನುಕೂಲತೆಯನ್ನು ಕಂಡುಕೊಂಡರು. ಇಂದಿನ ಚೆಕ್ ಹೀಗೆ ಅವತಾರ ತಾಳಿತು. ವಾರಸುದಾರರು ಯಾರೇ ಆಗಿರಲಿ, ತನ್ನ ರಕ್ಷಣೆಗೆ ಒಳಗಾಗಿರುವ ಬಂಗಾರದ ಪ್ರಮಾಣದ ಆಧಾರದ ಮೇಲೆ, ಇರುವ ಮೊಬಲಗಿಗಿಂತ ಒಂದಷ್ಟು ಪ್ರಮಾಣ ಹೆಚ್ಚು ಹಣಕ್ಕೆ ಅಕ್ಕಸಾಲಿಗ ರಶೀತಿಗಳನ್ನು ಚಲಾಯಿಸಲು ಮೊದಲುಮಾಡಿದ. ಹೀಗೆ ಹಣದ ಚಲಾವಣೆಯ ಜೊತೆಗೆ ಹಣವನ್ನು ಹುಟ್ಟುಹಾಕುವುದನ್ನೂ ಕಲಿತ. ಇಂದಿನ ಅಗಾಧ ಪ್ರಮಾಣದ ಬ್ಯಾಂಕಿಂಗ್ ವ್ಯವಸ್ಥೆಯ ಉಗಮಕ್ಕೆ ಹೀಗೆ ಅಕ್ಕಸಾಲಿಗ ಕಾರಣನಾದ. ಬ್ಯಾಂಕಿಂಗ್ ಉದ್ಯಮದ ಮೂಲಪುರುಷರಲ್ಲಿ ಮೊದಲನೆಯವನಾದ ಸಂಚಾರೀ ವ್ಯಾಪಾರಿ ಹಣದ ಚಲಾವಣೆಗೆ ಕಾರಣಪುರುಷನಾದ. ಎರಡನೆಯ ಮೂಲಪುರುಷನಾದ ಲೇವಾದೇವಿ ಮಾಡುವ ಹಣವಂತನು ಸಮಾಜದಲ್ಲಿ ಉಳಿತಾಯ ಮಾಡುವವರ ಹೆಚ್ಚುವರಿ ಹಣವನ್ನು, ಹಣದ ಅಗತ್ಯವಿರುವ ಇತರರಿಗೆ ಒದಗಿಸಿಕೊಡುವುದರಲ್ಲಿ ನೆರವಾದನು. ಆದರೆ ಮೂರನೆಯ ಮೂಲಪುರುಷನಾದ ಅಕ್ಕಸಾಲಿಗ ಇವರಿಬ್ಬರನ್ನೂ ಒಳಗೊಂಡಂತೆ ವಹಿವಾಟಿಗೆ ಒಂದು ವ್ಯವಸ್ಥೆಯನ್ನು ಒದಗಿಸಿಕೊಟ್ಟ.

ಇಂದಿನ ಅಕ್ಕಸಾಲಿಗರು: ದಿನೇ ದಿನೇ ಅಕ್ಕಸಾಲಿಗ ಕಸಬಿನ ಜನರ ಸಂಖ್ಯೆ ಇಳಿಮುಖವಾಗುತ್ತಿದ್ದರೂ ಹಳ್ಳಿ ಮತ್ತು ನಗರಗಳಲ್ಲಿ ಅಕ್ಕಸಾಲಿಗರು ವಿಪುಲವಾಗಿದ್ದಾರೆ. ಅಕ್ಕಸಾಲಿಗರು ಒಬ್ಬೊಬ್ಬರೇ ಅಥವಾ ಗುಂಪುಗುಂಪಾಗಿ ತಮ್ಮ ಕರ್ಮಾಗಾರಗಳನ್ನು ಅನುಕೂಲಕ್ಕೆ ಅಗತ್ಯಕ್ಕೆ ತಕ್ಕಂತೆ ಏರ್ಪಡಿಸಿಕೊಳ್ಳುತ್ತಾರೆ. ಬಂಗಾರವನ್ನು ಕಾಯಿಸುವುದು, ಎರಕ ಹುಯ್ಯುವುದು, ಅಚ್ಚು ಒತ್ತುವುದು, ಬೇರೆ ಬೇರೆ ಬಗೆಯ ಆಭರಣಗಳನ್ನು ತಯಾರಿಸುವುದು – ಎಲ್ಲವನ್ನೂ ಒಬ್ಬ ಅಕ್ಕಸಾಲಿಗನೇ ಮಾಡಬಲ್ಲನಾದರೂ ಅನುಕೂಲದ ದೃಷ್ಟಿಯಿಂದ ಅಕ್ಕಸಾಲಿಗರು ಗುಂಪುಗೂಡುತ್ತಾರೆ. ನಗರಗಳಲ್ಲಂತೂ ಒಂದೇ ಒಂದು ಬಗೆಯ ಕೆಲಸ ಮಾಡುವ ಕರ್ಮಾಗಾರಗಳು ಹುಟ್ಟಿಕೊಂಡು ಅಕ್ಕಸಾಲಿಗರಿಗೆ ನೆರವಾಗುತ್ತಿವೆ. ಅಕ್ಕಸಾಲಿಗರು ಸಾಮಾನ್ಯವಾಗಿ ಬೆಳ್ಳಿ ಮತ್ತು ಬಂಗಾರ ಎರಡೂ ಲೋಹಗಳಿಂದ ಆಭರಣಗಳನ್ನು ತಯಾರಿಸುತ್ತಾರೆ. ಶುದ್ಧ ಬಂಗಾರದ ಶೇಕಡ ಮಟ್ಟವನ್ನು ಇಂತಿಷ್ಟು ಕ್ಯಾರೆಟ್ ಇದೆ ಎಂಬುದಾಗಿ ಹೇಳುವುದು ರೂಢಿಯಲ್ಲಿದೆ. ಬಂಗಾರದ ನ್ಯಾಯಬದ್ಧವಾದ ಮಟ್ಟಗಳು ಅನುಕ್ರಮವಾಗಿ ಶೇ.91.67, ಶೇ.75, ಶೇ.58.5, ಶೇ.37.5 ಶುದ್ಧ ಬಂಗಾರವನ್ನುಳ್ಳ 22, 18, 14 ಮತ್ತು 9 ಕ್ಯಾರೆಟ್‌ಗಳಾಗಿರುತ್ತವೆ. ಗಡುಸಾಗಿದ್ದು ಬಾಳಿಕೆ ಬರಲೆಂಬ ಉದ್ದೇಶದಿಂದ ಬಂಗಾರಕ್ಕೆ ಮಿಶ್ರ ಮಾಡುವ ಲೋಹಗಳು ತಾಮ್ರ ಮತ್ತು ಬೆಳ್ಳಿ. ಬಂಗಾರದ ಮಟ್ಟವನ್ನು ಕಂಡುಹಿಡಿಯುವ ಅತಿ ಸಾಮಾನ್ಯ ಹಾಗೂ ಪ್ರಚಲಿತ ವಿಧಾನವೆಂದರೆ ಒರೆಗಲ್ಲಿನ ಮೇಲೆ ಅದನ್ನು ತೀಡುವುದು. ಲೋಹವನ್ನು ಒರೆಗಲ್ಲಿನ ಮೇಲೆ ತೀಡಿದಾಗ ಉಂಟಾಗುವ ಗೆರೆಯ ಬಣ್ಣವನ್ನು ಶುದ್ಧಲೋಹದಿಂದಾದ ಗೆರೆಯ ಬಣ್ಣದ ಜೊತೆ ಹೋಲಿಸಿದಾಗ ಲೋಹದ ಪರಿಶುದ್ಧತೆ ವ್ಯಕ್ತವಾಗುತ್ತದೆ. ಅನುಭವಿಗಳಾದ ಅಕ್ಕಸಾಲಿಗರು ಮತ್ತು ವಣಿಕರು ಲೋಹದ ಮಟ್ಟವನ್ನು ಬಲುಬೇಗ ಕಂಡುಕೊಳ್ಳುತ್ತಾರೆ. ಬಂಗಾರದ ಜೊತೆ ಮಿಶ್ರ ಮಾಡಲಾಗಿರುವುದು ತಾಮ್ರವೋ ಅಥವಾ ಬೆಳ್ಳಿಯೋ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಈಗ ಚಿನ್ನದ ಶುದ್ಧತೆಯನ್ನು ಕಂಡುಹಿಡಿಯಲು ಯಂತ್ರಗಳು ಬಂದಿವೆ. ಅಕ್ಕಸಾಲಿಗರು ಆಭರಣಗಳನ್ನು ತಯಾರಿಸಲು ವಜ್ರ, ಕೆಂಪು, ನೀಲಮಣಿ, ಪಚ್ಚೆ, ಹಸಿರು – ನೀಲಮಣಿ (ಆಕ್ವಾಮೆರಿನ್), ಕ್ಷೀರಸ್ಫಟಿಕ (ಓಪಲ್), ರತ್ನ (ಗಾರ್ನೆಟ್), ಪದ್ಮರಾಗ, ರಕ್ತಶಿಲೆ, ವೈಡೂರ್ಯ (ನೀಲವರ್ಣದ ಅಥವಾ ಹಸಿರು ಛಾಯೆಯ ಪ್ರಶಸ್ತ ಶಿಲೆ), ತೈಲ ಸ್ಫಟಿಕ (ಅಂಬರ್), ಪಡಗ (ಹವಳ) ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ರಾಸಾಯನಿಕ ಸಂವಿಧಾನದ ಹರಳುಗಳು – ಇವುಗಳನ್ನೂ ಉಪಯೋಗಿಸುತ್ತಾರೆ. (ಈ ಪೈಕಿ ಪಚ್ಚೆಗಳನ್ನು ಮರಕತಮಣಿಗಳೆಂದೂ ಕರೆಯುತ್ತಾರೆ. ಇವು ಅಪರೂಪ ಮಣಿಗಳು. ಪ್ರಶಸ್ತವಾದ ಪಚ್ಚೆಮಣಿಯೆಂದರೆ ವಜ್ರಕ್ಕಿಂತಲೂ ಅಮೂಲ್ಯ). ಅಕ್ಕಸಾಲಿಗರು ಸಾಮಾನ್ಯವಾಗಿ ತಯಾರಿಸುವ ಆಭರಣಗಳನ್ನು ಹೀಗೆ ಹೆಸರಿಸಬಹುದು: ರಾಗಟೆ, ಜಡೆಬಿಲ್ಲೆ, ಚೌರಿ, ಬಾವಲಿ, ಓಲೆ, ಪದಕ, ಅಡ್ಡಿಕೆ, ಮೂಗುತಿ, ಲೋಲಕು, ಕಂಕಣಿ, ವಂಕಿ, ಬಾಜೂಬಂದ, ಡಾಬು, ಕಾಲುಗೆಜ್ಜೆ, ಪದಕಗಳಿಗೆ ಕೂಡಿಸಿದ ಒಂದು ಅಥವಾ ಹಲವಾರು ಎಳೆಗಳ ಸರಗಳು, ಕಾಸಿನ ಸರ, ಸೆರಗಿನ ಮತ್ತು ಹರಳಿನ ಬ್ರೋಚುಗಳು, ಉಂಗುರ, ಬಳೆ, ಕಾಲುಂಗರ, ಮಾಂಗಲ್ಯ – ಇತ್ಯಾದಿ. ಇವು ಸ್ತ್ರೀಯರ ಆಭರಣಗಳು. ಪುರುಷರಿಗಾಗಿ ಒಂದೆಳೆ ತುಂಡು ಸರ, ಶರಟಿನ ಗುಂಡಿಗಳು, ತೋಳಿನ ಗುಂಡಿಗಳು, ಕೈಗಡಿಯಾರದ ಸರಪಣಿ – ಇವುಗಳನ್ನು ತಯಾರಿಸುತ್ತಾರೆ. ಬೆಳ್ಳಿಯಿಂದ ತಟ್ಟೆ, ಲೋಟ, ಚಮಚೆ,

ಬಟ್ಟಲು, ಭರಣಿ, ತಾಯಿತಿ, ಉಡಿದಾರ, ಪನ್ನೀರುದಾನಿ, ದೇವರಪಟಗಳು ಮುಂತಾದುವನ್ನು ತಯಾರಿಸುತ್ತಾರೆ. ಹಿಂದೂಗಳು ದೇವತಾರಾಧನೆಗೆ ಬಳಸುವ ಬೆಳ್ಳಿ ಮತ್ತು ಬಂಗಾರ ಎರಡೂ ಲೋಹಗಳಿಂದ ಆದ ವಿಗ್ರಹಗಳು, ಪ್ರಭಾವಳಿಗಳು, ಹಲವಾರು ಬಗೆಯ ಹಿಡಿಕೆಗಳು, ಛತ್ರಿಗಳು, ಬೀಸಣಿಕೆಗಳು, ಲಾಂಛನಗಳು ಇವುಗಳನ್ನು ತಯಾರಿಸಲು ಶಾಸ್ತ್ರ ಪ್ರಮಾಣಗಳ ಪರಿಜ್ಞಾನವಿರುವ ಅಕ್ಕಸಾಲಿಗರೇ ಆಗಬೇಕಾಗುತ್ತದೆ. ಇದ್ದಿಲನ್ನುರಿಸುವ ಅಗ್ಗಿಷ್ಟಿಕೆ, ಊದುಕೊಳವೆ, ತಿದಿ, ಮೂಸೆ, ಅಡಿಗಲ್ಲು (ಪಟ್ಟಡೆ), ಬಗೆಬಗೆಯ ಅಚ್ಚುಗಳು, ಸುತ್ತಿಗೆ, ಉಳಿ, ಕತ್ತರಿ, ಬೈರಿಗೆ, ತ್ರಿಜ್ಯಮಾಪಕ, ಇಕ್ಕಳ, ಚಿಮ್ಮಟ, ಅರಗಳು, ಕುಂಚಗಳು ಇವು ಅಕ್ಕಸಾಲಿಗರು ಸಾಮಾನ್ಯವಾಗಿ ಬಳಸುವ ಆಯುಧಗಳು. ಬಹುತೇಕ ಆಯುಧಗಳು ಕಬ್ಬಿಣ ಅಥವಾ ಉಕ್ಕಿನಿಂದ ಮಾಡಲ್ಪಟ್ಟಿರುತ್ತವೆ. ಕಾಲಕಳೆದಂತೆ ಅಕ್ಕಸಾಲಿಗರ ಆಯುಧಗಳಲ್ಲೇನೂ ವಿಶೇಷ ಬದಲಾವಣೆಗಳು ಕಂಡುಬರುವುದಿಲ್ಲ. (ಕೋಲಿನ ಎರಡು ತುದಿಗಳಿಗೆ ದಾರದ ಎರಡು ತುದಿಗಳನ್ನು ಬಿಗಿದು ಅದನ್ನು ಬೈರಿಗೆ ಸ್ತಂಭದ ಸುತ್ತ ಹಾಯಿಸಿ ಕೋಲನ್ನು ಅಡ್ಡಗಲಕ್ಕೆ ಆಡಿಸಿ ರಂಧ್ರಕೊರೆಯುವ ಬದಲು, ಮೇಲೆ – ಕೆಳಕ್ಕೆ ಒತ್ತುವ ಸ್ಪ್ರಿಂಗು ಬೈರಿಗೆ ಬಳಸುವುದು; ಇಂಥ ಅತಿ ಸಾಮಾನ್ಯ ಬದಲಾವಣೆಗಳು ಮಾತ್ರ ಕಾಣಸಿಗುತ್ತವೆ.)

ಸಮುದ್ರದ ಉಪ್ಪು, ಪೆಟ್ಲುಪ್ಪು (ಪೊಟಾಸಿಯಂ ನೈಟ್ರೇಟ್), ನುಣ್ಣನೆಯ ಕೆಂಪು ಮರಳು, ಪಟಿಕ, ರಸಕರ್ಪೂರ (ಪಾದರಸದಿಂದಾದ ಒಂದು ಸಿದ್ಧವಸ್ತು – ಕ್ಯಾಲೊಮೆಲ್), ಗಂಧಕಾಮ್ಲ, ನೈಟ್ರಿಕ್ ಆಮ್ಲ, ಬಿಳಿಗಾರ (ಬೋರಾಕ್ಸ್) – ಇವನ್ನು ಅಕ್ಕಸಾಲಿಗರು ವಿಶೇಷವಾಗಿ ಬಳಸುತ್ತಾರೆ.

ತಯಾರಿಸಿದ ಇಂಥ ಆಭರಣಕ್ಕೆ ಇಂತಿಷ್ಟು ಎನ್ನುವ ಪ್ರಕಾರ ಸಿದ್ಧಪಡಿಸಿದ ತೂಕವನ್ನು ಅನುಸರಿಸಿ ಅಕ್ಕಸಾಲಿಗರು ಪ್ರತಿಫಲವನ್ನು ಪಡೆಯುತ್ತಾರೆ. ಅಕ್ಕಸಾಲಿಗರ ಉದ್ಯಮದ ಉದ್ದಕ್ಕೂ ಅವರ ಅವಿಭಾಜ್ಯ ಅಂಗವಾಗಿ ಮತ್ತು ಬಹುತೇಕ ಸಂದರ್ಭಗಳಲ್ಲಿ ಅಕ್ಕಸಾಲಿಗರಿಗೂ ಗ್ರಾಹಕರಿಗೂ ನಡುವೆ ಬಂಡವಾಳಕಾರ ಮಧ್ಯಸ್ಥಕಾರರಾಗಿ ಷರಾಫರು ನಿಲ್ಲುತ್ತಾರೆ.

1962ರ ಭಾರತ ಸುವರ್ಣ ನಿಯಂತ್ರಣ ಆಜ್ಞೆ ಅಕ್ಕಸಾಲಿಗರ ಜೀವನೋಪಾಯದ ಮೇಲೆಯೇ ತೀವ್ರತರವಾದ ಪರಿಣಾಮ ಬೀರಿತು. ಬಂಗಾರವನ್ನು ಶೇಖರಿಸಬಾರದೆಂದೂ ಶೇ.58.5 (14 ಕ್ಯಾರೆಟ್)ಗಿಂತ ಹೆಚ್ಚು ಶುದ್ಧ ಬಂಗಾರವನ್ನೊಳಗೊಂಡ ಆಭರಣಗಳನ್ನು ತಯಾರಿಸಬಾರದೆಂದೂ ನಿರ್ಬಂಧವನ್ನು ಹೇರಿದ ನಿಯಂತ್ರಣ ಆಜ್ಞೆಯನ್ನು ಮಾರ್ಪಾಟು ಮಾಡಲಾಯಿತಾದರೂ ಹಲವಾರು ನಿರ್ಬಂಧಗಳು ಅಕ್ಕಸಾಲಿಗರ ಪಾಲಿಗೆ ಪ್ರೋತ್ಸಾಹಕರವಾಗಲಿಲ್ಲ. ತಮ್ಮ ಕಲೆಯನ್ನು ಇತರ ಕ್ಷೇತ್ರಗಳಿಗೆ ಹಾಯಿಸಿಕೊಳ್ಳಲು ಕಾಲಾವಕಾಶವೇ ಇಲ್ಲದಂತಾದಾಗ ಬಹುತೇಕ ಅಕ್ಕಸಾಲಿಗರು ಆಭರಣ ನಿರ್ಮಾಣ ಕಲೆಯನ್ನೇ ತೊರೆದರು. ನಿಜವಾಗಿ ಅಕ್ಕಸಾಲಿಗರದು ಲಾಭದಾಯಕವಾದ ಒಂದು ಉದ್ಯಮ. ಅದರಲ್ಲಿ ಬಹು ಉತ್ತಮಮಟ್ಟದ ಕಲೆಯೂ ಇದೆ. ಪಶ್ಚಿಮ ರಾಷ್ಟ್ರಗಳಲ್ಲಿ ಈ ಉದ್ಯಮವನ್ನು ಬೃಹದ್ ಪ್ರಮಾಣದಲ್ಲಿ ಬೆಳೆಸಿಕೊಂಡಿದ್ದಾರೆ. ಭಾರತೀಯರೂ ಈ ಕಡೆ ಗಮನ ಹರಿಸಬೇಕಾದುದು ಅಗತ್ಯ. (ಎಸ್.ಸಿ.ಜಿ.)

**ಅಕ್ಕಾಡ್** : ಮೆಸಪೊಟೇಮಿಯದ ಬ್ಯಾಬಿಲೋನಿಯ ಪ್ರದೇಶದ ಉತ್ತರ ಭಾಗ. ಈ ಹೆಸರು ಮೊದಲನೆಯ ಸಾರಗಾನ್ ರಾಜ ಸ್ಥಾಪಿಸಿದ ಪಟ್ಟಣದ ಹೆಸರಿನಿಂದ ಬಂದಿದೆ. ಶರ್ರುಂಕಿನ್ ಅಥವಾ ಸಾರಗಾನನೇ ಮೊಟ್ಟಮೊದಲನೆಯ ಸೆಮಿಟಿಕ್ ವರ್ಗದ ಬ್ಯಾಬಿಲೋನಿಯದ ರಾಜ. ಇಷ್ಟಾರ್ ದೇವತೆಯ ವರಪ್ರಸಾದದಿಂದ ಇವನು ಅತ್ಯಂತ ಪ್ರಭಾವಯುತ ದೊರೆಯಾದನೆಂದು ಸಾಹಿತ್ಯಗ್ರಂಥಗಳಿಂದ ತಿಳಿಯುತ್ತದೆ. ಸಾರಗಾನನು ಕಿಷ್ ಎಂಬಲ್ಲಿ ಆಳುತ್ತಿದ್ದ ಉರ್‌ಜಬಾಬ ಎಂಬುವನನ್ನು ಸೋಲಿಸಿ ಅಕ್ಕಾಡ್‌ನ ರಾಜಮನೆತನವನ್ನು ಸ್ಥಾಪಿಸಿದ. ಇವನ ರಾಜ್ಯ ಮೆಡಿಟರೇನಿಯನ್ ಸಮುದ್ರದಿಂದ ಪರ್ಷಿಯನ್ ಕೊಲ್ಲಿಯವರೆಗೂ ಹರಡಿದ್ದಿತು. ಆಗೇಡ್ ಅಥವಾ ಅಕ್ಕಾಡ್ ಎಂಬ ವೈಭವಯುತವಾದ ರಾಜಧಾನಿಯನ್ನು ಸ್ಥಾಪಿಸಿದ ಕೀರ್ತಿಯೂ ಇವನಿಗೆ ಸಲ್ಲುತ್ತದೆ. ಇವನಿಗೆ ಸೆಮಿಟಿಕ್ ಭಾಷೆಯಲ್ಲಿ ಬಹುಪಾಂಡಿತ್ಯವಿದ್ದಿತು. ಸಾರಗಾನನು 56 ವರ್ಷಗಳ ಕಾಲ (ಪ್ರ.ಶ.ಪೂ. 2356–2300) ರಾಜ್ಯಭಾರ ಮಾಡಿದ. ಇವನ ಮರಣಾನಂತರ ಇವನ ಮಕ್ಕಳಾದ ರಿಮಸ್ ಮತ್ತು ಮನಿಷ್ಟುಷು ರಾಜ್ಯವಾಳಿದರು. ಇವರ ಅನಂತರ ಸಾರಗಾನನ ಮೊಮ್ಮಗನಾದ ನರಮುಸಿನ್ ಎಂಬುವನು ದೊರೆಯಾದ. ಇವನೂ ತನ್ನ ತಾತನಂತೆಯೇ ಪ್ರಭಾವಯುತನಾದ ದೊರೆಯಾಗಿದ್ದ. ಇವನ ರಾಜ್ಯಭಾರದ ಅಂತ್ಯಕಾಲದಲ್ಲಿ ಗುಟಿ ಎಂಬಲ್ಲಿಂದ ಬಂದ ಜನಗಳು ಅಕ್ಕಾಡ್ ರಾಜ್ಯದ ಮೇಲೆ ಯುದ್ಧವನ್ನು ಮಾಡಿ ಅಕ್ಕಾಡ್ ನಗರವನ್ನು ನಾಶಮಾಡಿ, ಅಕ್ಕಾಡ್ ರಾಜಮನೆತನದ ಪತನಕ್ಕೆ ಕಾರಣರಾದರು. ಅಕ್ಕಾಡ್ ರಾಜಮನೆತನದವರ ಕಾಲದಲ್ಲಿ ಅಕ್ಕೇಡಿಯನ್ ಭಾಷೆ ಮತ್ತು ಲಿಪಿ ಅಭಿವೃದ್ಧಿಯಾಯಿತು. ವಾಸ್ತುಶಿಲ್ಪವೂ ಉತ್ತಮ ಸ್ಥಿತಿಯನ್ನು ಪಡೆದಿತ್ತು. ಸಾರಗಾನನ ಕಾಲದಲ್ಲಿ ವ್ಯಾಪಾರವು ವಿಶೇಷವಾಗಿ ಅಭಿವೃದ್ಧಿ ಹೊಂದಿತು. ಪರ್ಷಿಯ ದೇಶದಿಂದ ವ್ಯಾಪಾರಕ್ಕಾಗಿ ಹಡಗುಗಳು ಇಲ್ಲಿಗೆ ಬರುತ್ತಿದ್ದವು. ಭಾರತದ ಸಿಂಧೂ ನಾಗರಿಕತೆಯ ಅವಶೇಷಗಳಾದ ಮಣ್ಣಿನ ಮುದ್ರೆಗಳು ಅಕ್ಕಾಡಿನಲ್ಲಿ ದೊರಕಿರುವುದು ಗಮನಾರ್ಹ. ಇದರಿಂದ ಭಾರತಕ್ಕೂ ಮತ್ತು ಅಕ್ಕಾಡ್ ರಾಜ್ಯಕ್ಕೂ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳಿದ್ದವೆಂದು ತಿಳಿಯುತ್ತದೆ. (ಎ.ವಿ.ಎನ್.)

**ಅಕ್ಕಿ** : ಪ್ರಪಂಚದ ಮೂರರಲ್ಲೊಂದು ಪಾಲು ಜನರ ಮುಖ್ಯ ಆಹಾರ (ರೈಸ್). ಪಕ್ವ ಮಾಡಿದ ಅಕ್ಕಿಯನ್ನು ಅನ್ನವೆನ್ನುತ್ತಾರೆ. ಕೂಳು ಕನ್ನಡ ಪದ. ಸಾಮಾನ್ಯವಾಗಿ ಯಂತ್ರಗಳ ಮೂಲಕ ಬತ್ತದಿಂದ ಸಿಪ್ಪೆಯನ್ನು ಬೇರ್ಪಡಿಸಿ ಬರುವ ಕಾಳನ್ನು ಚೆನ್ನಾಗಿ ಪಾಲಿಷ್ ಮಾಡಿದಾಗ ಬಿಳಿಯ ಹೊಳೆಯುವ ಅಕ್ಕಿ ಸಿಗುತ್ತದೆ. ಪಾಲಿಷ್ ಮಾಡಿದ ಅಕ್ಕಿ ತಿನ್ನಲು ಹೆಚ್ಚು ಹಿತಕರವಾಗಿದ್ದರೂ ಪಾಲಿಷ್ ಮಾಡದ ಮಬ್ಬು ಬಣ್ಣದ ಕೊಟ್ಟಣದ ಅಕ್ಕಿಯೇ ನಿಜವಾಗಿ ಹೆಚ್ಚು ಪೌಷ್ಟಿಕ ಆಹಾರ. ಹಿಂದೆ ಹಳ್ಳಿಗಳವರೆಲ್ಲ ಹೀಗೆ ಕೈಯಿಂದ ಕುಟ್ಟಿದ ಅಕ್ಕಿಯನ್ನೇ ಬಳಸುತ್ತಿದ್ದರು. ಅಕ್ಕಿಯ ಮೂಗು (ಭ್ರೂಣ) ಮತ್ತು ಮೇಲಿನ ತೆಳುಪೊರೆಯ ತೌಡಿನಲ್ಲಿ ಬಿ.ಕಾಂಪ್ಲೆಕ್ಸ್ ಮೊದಲಾದ ಉತ್ತಮ ಅನ್ನಾಂಗಗಳಿವೆ. ಬತ್ತವನ್ನು ಬೇಯಿಸಿ ತಯಾರಿಸಿದ ಕುತುಬಲಕ್ಕಿ ಅಥವಾ ಕುಸುಬಲಕ್ಕಿ ಬಹು ಜನಪ್ರಿಯವಾಗಿದೆ. ಇದು ಪಾಲಿಷ್ ಆದ ಅಕ್ಕಿಗಿಂತ ಉತ್ತಮ.

ಅಕ್ಕಿಯಲ್ಲಿ ಪಿಷ್ಟ ಪದಾರ್ಥವೇ (ಕಾರ್ಬೊಹೈಡ್ರೇಟ್) ಹೆಚ್ಚು. ಪ್ರೋಟೀನು ಮತ್ತು ಕೊಬ್ಬು ತೀರ ಕಡಿಮೆ. ಮಾಂಸ, ಎಣ್ಣೆ, ಬೆಣ್ಣೆ, ಹಾಲು, ಬೇಳೆಕಾಳು ಮತ್ತು ತರಕಾರಿಗಳೊಂದಿಗೆ ಸೇರಿದಾಗ ಒಳ್ಳೆಯ ಆಹಾರವಾಗಬಲ್ಲುದು. ಅಕ್ಕಿಯಿಂದ ಕೋಡುಬಳೆ, ಚಕ್ಕುಲಿ, ದೋಸೆ, ಇಡ್ಲಿ, ರೊಟ್ಟಿ, ಹಪ್ಪಳ, ಸಂಡಿಗೆ ಮೊದಲಾದ ರುಚಿಕರವಾದ ತಿಂಡಿಗಳನ್ನು ತಯಾರಿಸಿ ಬಳಸಲಾಗುತ್ತಿದೆ. ನೇರವಾಗಿ ಚಿತ್ರಾನ್ನ, ಪುಳಿಯೊಗರೆ, ಪೊಂಗಲು ಮೊದಲಾದುವನ್ನು ಮಾಡುತ್ತಾರೆ. ಅಕ್ಕಿಯ ಬೇರೆ ರೂಪಗಳಾದ ಅವಲಕ್ಕಿ, ಪುರಿ, ಅರಳುಗಳೂ ಜನಪ್ರಿಯವಾಗಿವೆ. ಇದರ ನುಚ್ಚನ್ನು ದನಗಳಿಗೆ ಹಾಕುತ್ತಾರೆ. ಅಕ್ಕಚ್ಚು ಅವುಗಳಿಗೆ ಬಹು ಪ್ರಿಯವಾದ ಪಾನೀಯ, ತೌಡಂತೂ ಕರೆಯುವ ದನಕ್ಕೆ ಅಗತ್ಯವಾದ ಮೇವು.

ಅಕ್ಕಿಯಿಂದ ಮದ್ಯವನ್ನು ತಯಾರಿಸುವ ವಾಡಿಕೆ ಹಿಂದಿನಿಂದಲೂ ಪ್ರಚಾರದಲ್ಲಿದೆ. ಜಪಾನಿನಲ್ಲಿ ಈಗಲೂ ಅಕ್ಕಿಯ ಮದ್ಯ (ಸಾಕೆ) ತಯಾರಿಸುತ್ತಾರೆ.

ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ ಅಕ್ಕಿಯ ಬಳಕೆ ಬಹಳ ಹೆಚ್ಚು. **(ನೋಡಿ– ಬತ್ತ)**. (ಎನ್.ಪಿ.)

**ಅಕ್ಕಿ, ಟಿ.ಪಿ** : 1908–. ಕರ್ನಾಟಕದ ಹೆಸರಾಂತ ಕಲಾವಿದರು. ಇಂದಿನ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ 1908 ಡಿಸೆಂಬರ್ 31ರಂದು ಜನಿಸಿದರು. ಉತ್ತಮ ಕಲಾಸಂಸ್ಕಾರದ ಪರಿಸರದಲ್ಲಿ ಬೆಳೆದ ಇವರು ವಿದ್ಯಾರ್ಥಿದೆಸೆಯಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ತಳೆದರು. ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನಲ್ಲಿ ಮಾಸ್ಟರ್ ಪದವಿ ಗಳಿಸಿದರು. ಮುಂಬಯಿ, ನವಸಾರಿ, ಫಟಿಯಾಳ, ಬೆಂಗಳೂರು ಮೊದಲಾದ ನಗರಗಳಲ್ಲಿ ನಡೆದ ಚಿತ್ರಕಲಾ ಪ್ರದರ್ಶನಗಳಲ್ಲಿ ಪಾಲ್ಗೊಂಡು ಜನಮೆಚ್ಚುಗೆ ಗಳಿಸಿದರು. ವಿಜಯನಾಟ್ಯ ಸಂಸ್ಥೆ ಮತ್ತು ವಿಜಯ ಕಲಾ ಮಂದಿರವನ್ನೂ ಸ್ಥಾಪಿಸಿ (1947) ಪ್ರತಿವರ್ಷ ನೂರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಹಲವಾರು ಕಲಾಸಂಸ್ಥೆಗಳಲ್ಲಿ ಸಲಹಾ ಸಮಿತಿ ಸದಸ್ಯರಾಗಿ, ಅಧ್ಯಕ್ಷರಾಗಿ, ಉಚ್ಚಕಲಾಪರೀಕ್ಷೆಗಳ ಪರೀಕ್ಷಕರಾಗಿ, ನಿಯಂತಕರಾಗಿ, ಸಲಹೆಗಾರರಾಗಿ, ರಾಜ್ಯ ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ (1967). ನವದೆಹಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಮಕ್ಕಳ ಕಲಾ ಪ್ರದರ್ಶನದಲ್ಲಿ ಮತ್ತು ಕೋಲ್ಕತದಲ್ಲಿ ನಡೆದ ಅಖಿಲಭಾರತ ಕಲಾವಿದರ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು (1967). ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ (1981–84). (ಜಿ.ಆರ್.ಟಿ.)

**ಅಕ್ಕಿಪತಂಗ** : ಶೇಖರಣೆ ಮಾಡಿದ ಖಾದ್ಯ ವಸ್ತುಗಳಿಗೆ ಅತ್ಯಂತ ಹಾನಿಯನ್ನುಂಟು ಮಾಡುವ ಪತಂಗದ (ಚಿಟ್ಟೆಯ) ಗುಂಪಿಗೆ ಸೇರಿದ ಜೀವಿಯೆಂದರೆ ಅಕ್ಕಿ ಚಿಟ್ಟೆ. ಕಾರ್ಸೈರಾ ಕಿಫಲೋನಿಕ ಎಂಬ ಹೆಸರುಳ್ಳ ಈ ಕೀಟ ಲೆಪಿಡಾಪ್ಟರ ಗಣದ ಪೈರಾಲಿಡೀ ಕುಟುಂಬಕ್ಕೆ ಸೇರಿದ್ದು. ಈ ಹುಳುವಿನ ಕಾಟಕ್ಕೆ ತುತ್ತಾಗುವ ಆಹಾರ ಪದಾರ್ಥಗಳ ಶ್ರೇಣಿ ಅತ್ಯಂತ ವಿಸ್ತಾರ. ಉದಾಹರಣೆಗೆ: ಆಹಾರ ಧಾನ್ಯಗಳು ಅದರಲ್ಲೂ ಒಡೆದು ಬೀಸಿದವು (ನುಚ್ಚು, ತರಿ, ರವೆ, ಹಿಟ್ಟು, ಆಟ್ಟ, ಬೂಸ, ಬೇಸಿನ್, ಮೈದಾ, ಇತ್ಯಾದಿ), ಸಾಂಬಾರ ವಸ್ತುಗಳು, ಸೇಂಗಾ ಬೀಜ, ಒಣ ಹಣ್ಣುಗಳು, ಬಿಸ್ಕತ್, ಹಿಂಡಿ, ಕೋಕೋ, ಇತ್ಯಾದಿಗಳು. ತಿಂದು ಮುಗಿಸುವುದಕ್ಕಿಂತ ಹೆಚ್ಚಾಗಿ ನೂಲು ಎಳೆಗಳಿಂದ ಆಹಾರ ಪದಾರ್ಥಗಳ ಆದ್ಯಂತ ದಟ್ಟವಾದ ಬಲೆ ಕಟ್ಟುವುದರಿಂದ, ಹುಳುಬಿದ್ದ ಖಾದ್ಯ ವಸ್ತುಗಳನ್ನು ಶುಚಿಮಾಡಿ ಉಪಯೋಗಿಸಲು ಸಾಧ್ಯವಿಲ್ಲವಾಗುವುದು.

ಪ್ರಾಯದ ಚಿಟ್ಟೆ ಕಂದು ಬಣ್ಣದ್ದು; ರೆಕ್ಕೆ ಪೂರ್ತಿ ಪಸರಿಸಿದಾಗ ತುದಿಯಿಂದ ತುದಿಗೆ 1.25 - 2 ಸೆಂಮೀ ಇರುತ್ತದೆ. ಗಂಡು ಚಿಟ್ಟೆ ಹೆಣ್ಣಿಗಿಂತ ಚಿಕ್ಕದು. ಹಗಲಿನಲ್ಲಿ ಉಗ್ರಾಣದ ಕತ್ತಲು ಪ್ರದೇಶಗಳಲ್ಲಿ ಅಂದರೆ ಗೋಡೆ, ಚಾವಣಿ, ಮೂಟೆ ಮುಂತಾದ ಜಾಗಗಳಲ್ಲಿ ಕುಳಿತಿದ್ದು, ರಾತ್ರಿಕಾಲದಲ್ಲಿ ಚಟುವಟಿಕೆಯಿಂದ ಹಾರಾಡುತ್ತದೆ. ತಾಯಿ ಚಿಟ್ಟೆ ಸು. 200 ದುಂಡುತತ್ತಿಗಳನ್ನು ಒಂಟಿ ಒಂಟಿಯಾಗಿ ಆಹಾರ ವಸ್ತುಗಳ ಬಳಿ ಇಡುತ್ತದೆ.

ಮರಿಹುಳು ರೇಷ್ಮೆನೂಲಿನ ಬಲೆಯಿಂದ ಆಹಾರವನ್ನು ಆವರಿಸಿ, ಒಳಗೆ ಮೇಯುತ್ತಾ ಪ್ರವರ್ಧಮಾನಕ್ಕೆ ಬರುತ್ತದೆ. ಈ ರೀತಿ ಬಲೆಯಿಂದ ಆವರಿಸುವುದಕ್ಕೆ ತೆಂಡೆ ಕಟ್ಟುವುದು ಎಂದು ಕರೆಯುತ್ತಾರೆ. ಮರಿ ಹುಳ ನಸು ಹಳದಿಬಣ್ಣದ್ದು; ಇದು ರೂಪಪರಿವರ್ತನೆಯಾಗಿ ಹೊರಬರಲು ಸು. 6 ವಾರ ಬೇಕು; ವರ್ಷಕ್ಕೆ 6–8 ಬಾರಿ ಸಂತಾನೋತ್ಪತ್ತಿ ಮಾಡುತ್ತವೆ. (ಡಿ.ಎಸ್.)

**ಅಕ್ಕಿಯ ಸೊಂಡಿಲುಕೀಟ :** ಶೇಖರಿಸಿಟ್ಟ ಕಾಳುಗಳಿಗೆ (ದ್ವಿದಳಧಾನ್ಯಗಳನ್ನು ಬಿಟ್ಟು) ಪ್ರಪಂಚಾದ್ಯಂತ ಭಾರಿ ಪ್ರಮಾಣದ ನಷ್ಟವನ್ನುಂಟುಮಾಡುವ ಕೀಟವೆಂದರೆ ಇದೇ. ಸುಸ್ರಿ, ರೈಸ್ ವೀವಿಲ್ ಮತ್ತು ಸೈಟೊಫೈಲಸ್ (ಕ್ಯಲಾಂಡ್ರ) ಒರೈಸೇ ಎಂಬ ಹೆಸರುಗಳನ್ನುಳ್ಳ ಈ ಜೀವಿ ಕೋಲಿಯಾಪ್ಟರ ಗಣದ ಕರ್ಕ್ಯೂಲಿಯಾನಿಡೀ ಕುಟುಂಬಕ್ಕೆ ಸೇರಿದ್ದು. ಮೂತಿ ತಲೆಯ ಮುಂದೆ ಆನೆ ಸೊಂಡಿಲಿನಂತೆ ಚಾಚಿಕೊಂಡಿರುವ ಮೂತಿಯೇ ಈ ಹೆಸರಿಗೆ ಕಾರಣ; ವಾಡೆಹುಳ, ಕುಟ್ಟೇಹುಳ ಎಂದೂ ಇದನ್ನು ಕರೆಯುವುದುಂಟು.

ಪ್ರಾಯಕ್ಕೆ ಬಂದ ಕೀಟ ಮಾಸಲು ಕೆಂಪು ಅಥವಾ ಕಂದು ಬಣ್ಣವಾಗಿದ್ದು ಸುಮಾರು 2–3 ಮಿಮೀ ಉದ್ದವಿರುತ್ತದೆ. ಬೆನ್ನ ಮೇಲೆ ನಾಲ್ಕು ಕಪ್ಪುಚುಕ್ಕೆಗಳಿವೆ. ಉಗ್ರಾಣದಲ್ಲಿರುವ ಎಲ್ಲ ಬಗೆಯ ಕಾಳುಗಳಿಗೂ ಅಂದರೆ ಜೋಳ, ಗೋದಿ, ಅಕ್ಕಿ, ಸಜ್ಜೆ, ಮುಸುಕಿನ ಜೋಳ ಮುಂತಾದವುಗಳಿಗೆಲ್ಲ ಹತ್ತುತ್ತದೆ. ರಾಗಿ, ಸಾವೆ ಮುಂತಾದ ಸಣ್ಣ ಕಾಳುಗಳಿಗೂ ದ್ವಿದಳ ಧಾನ್ಯಗಳಿಗೂ ಸಾಮಾನ್ಯವಾಗಿ ಮುತ್ತುವುದಿಲ್ಲ. ಉಂಡೆಕಾಳುಗಳಿಗೇ ಈ ಹುಳುಬೀಳುವುದು ಸ್ವಾಭಾವಿಕ; ಬತ್ತಕ್ಕೆ ಹತ್ತುವುದು ಅಪರೂಪ; ಒಡೆದ, ಬೀಸಿದ ಪದಾರ್ಥಗಳಿಗೆ ಸಾಧಾರಣವಾಗಿ ಇದರಿಂದ ತೊಂದರೆ ಇಲ್ಲ. ಈ ಕೀಟ ತನ್ನ ಉದ್ದನೆ ಸೊಂಡಿಲಿನಿಂದ ಕಾಳಿನ ಬಿರುಸು ಸಿಪ್ಪೆಯನ್ನು ಕೊರೆದು ಒಳಗಿನ ಪಿಷ್ಟ ಭಾಗವನ್ನು ತಿನ್ನುತ್ತದೆ. ಅಲ್ಲದೆ ಸೊಂಡಿಲಿನಿಂದ ಕಾಳಿನಲ್ಲಿ ಕುಳಿತೋಡಿ ಅದರೊಳಗೆ ಒಂದು ತತ್ತಿ ಇಟ್ಟು ಅದಕ್ಕೆ ಅಪಾಯವಾಗದಂತೆ ಮೇಲೆ ಅಂಟಿನಿಂದ ಮುಚ್ಚುತ್ತದೆ. ಮೊಟ್ಟೆಯೊಡೆದು ಬಂದ ಮರಿಗಳು ಕಾಳಿನೊಳಕ್ಕೆ ಕೊರೆದುಕೊಂಡು ಹೋಗಿ, ತಿರುಳನ್ನು ತಿಂದು ಬೆಳೆಯುವುವು. ಪ್ರಾಯದ ಕೀಟವೂ ಕಾಳನ್ನು ಹೊರಗಿನಿಂದ ಕೊರೆಯುವುದರಿಂದ ಈ ಕೀಟದ ಉಪಟಳ ಉಗ್ರಾಣದ ಕಾಳಿಗೆ ವಿಪರೀತ ಹೆಚ್ಚು.

ಕಾಳಿನ ಗಾತ್ರದ ಮೇಲೆ ಪ್ರೌಢಕೀಟದ ಗಾತ್ರ ನಿರ್ಣಯವಾಗುವುದುಂಟು; ಅಂದರೆ ಸಣ್ಣ ಕಾಳಿನಿಂದ (ಉದಾ, ಸಜ್ಜೆ) ಉತ್ಪತ್ತಿಯಾದ ಕೀಟ ದೊಡ್ಡ ಕಾಳಿನಿಂದ (ಉದಾ. ಮುಸುಕಿನ ಜೋಳ) ಬರುವ ಕೀಟಕ್ಕಿಂತ ಚಿಕ್ಕದು. ಇದರ ಹತ್ತಿರದ ಸಂಬಂಧಿಯಾದ ಸೈ. ಗ್ರನೇರಿಯ ಎಂಬುದು ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಪ್ರಬಲವಾಗಿದೆ; ನಮ್ಮ ದೇಶದಲ್ಲಿ ಇದರ ಹಾವಳಿ ಅತ್ಯಲ್ಪ.

ಹೆಣ್ಣುಕೀಟ ಒಂದು ಸಲಕ್ಕೆ ಸುಮಾರು 400 ಮೊಟ್ಟೆಗಳನ್ನಿಡುವುದು. ಒಂದು ತಲೆಮಾರಿನ ಜೀವಮಾನ 4–6 ವಾರಗಳು ಮಾತ್ರ; ವರ್ಷದಲ್ಲಿ 8–10 ಸಂತತಿಗಳಾಗುತ್ತವೆ. ಹುಳ ಬಿದ್ದ ಕಾಳಿನ ಮೇಲೆ ಕಾಣುವ ರಂಧ್ರಗಳು ಪ್ರೌಢಕೀಟ ಹೊರಕ್ಕೆ ಬರುವಾಗ ಮಾಡಿದ ತೂತುಗಳೇ ಹೊರತು ಮರಿಗಳು ಕಾಳಿನೊಳಕ್ಕೆ ಹೋಗುವಾಗ ಮಾಡಿದುವಲ್ಲ. ಹುಳಬಿದ್ದಕಾಳು ಒಳಗೆ ಸಂಪೂರ್ಣವಾಗಿ ಟೊಳ್ಳಾಗಿ ಬರಿ ಧೂಳಿನಿಂದ ತುಂಬಿರುತ್ತದೆ. ಅಕ್ಕಿ, ಗೋದಿಗಳಿಗಿಂತ ಜೋಳಕ್ಕೆ ಈ ಹುಳುವಿನ ಅಪಾಯ ಹೆಚ್ಚು.

ಕಾಳನ್ನು ಉಗ್ರಾಣಕ್ಕೆ ಒಯ್ಯುವುದಕ್ಕೆ ಮುಂಚೆ ಚೆನ್ನಾಗಿ ಒಣಗಿಸಿ, ಈ ಕೀಟಗಳ ಸುಳಿವಿಲ್ಲದ ಶುಚಿಯಾದ ಜಾಗದಲ್ಲಿ ದಾಸ್ತಾನು ಮಾಡಿದರೆ ಹುಳದ ಕಾಟವಿಲ್ಲದಂತೆ ಸಂರಕ್ಷಿಸಬಹುದು. ಹಾಗೂ ಆಗಾಗ್ಗೆ ಎಚ್ಚರಿಕೆಯಿಂದ ಪರೀಕ್ಷಿಸುತ್ತಿರಬೇಕು; ಏಕೆಂದರೆನಮ್ಮ ಗಮನಕ್ಕೆ ಬರದಂತೆಯೇ ಅಕ್ಕಪಕ್ಕದ ಉಗ್ರಾಣದಿಂದ ಈ ಪಿಡುಗು ಅಕ್ರಮ ಪ್ರವೇಶ ಮಾಡುವ ಸಂಭವವುಂಟು. ಅಂಥ ಸಂದರ್ಭದಲ್ಲಿ ವಿಷವಾಯು ಪ್ರಯೋಗ ಮತ್ತಿತರ ವಿಧಾನಗಳಿಂದ ಹುಳುಹತ್ತಿದ ಧಾನ್ಯವನ್ನು ಶುಚಿಗೊಳಿಸಬಹುದು. (ಡಿ.ಎಸ್.)

**ಅಕ್ಕೇಡಿಯನ್ ಭಾಷೆ :** ಯೂಫ್ರೆಟಿಸ್, ಟೈಗ್ರಿಸ್ ನದಿಗಳ ನಡುವಣ ಪ್ರದೇಶದ ಉತ್ತರ ಭಾಗಕ್ಕೆ ರಾಜಧಾನಿಯಾಗಿದ್ದ ಅಕ್ಕಾಡ್ ನಗರದ ಸುತ್ತಮುತ್ತ ಪ್ರಚಲಿತವಾಗಿತ್ತು. ಇದು ಹೀಬ್ರೂ, ಅರಬ್ಬಿ ಮುಂತಾದ ಭಾಷೆಗಳಂತೆ ಸೆಮಿಟಿಕ್ ಭಾಷಾವರ್ಗಕ್ಕೆ ಸೇರಿದ್ದು; ಆ ಭಾಷಾವರ್ಗದ ಪೂರ್ವದಿಕ್ಕಿನ ಶಾಖೆ. ಸೆಮಿಟಿಕ್ ಭಾಷೆಯೊಂದನ್ನು ಆಡುತ್ತಿದ್ದ ಜನ ಅರೇಬಿಯದಿಂದ ವಲಸೆ ಹೊರಟು ಪ್ರ.ಶ.ಪೂ. 2000ದ ಸುಮಾರಿನಲ್ಲಿ ಅಕ್ಕಡ ಪ್ರದೇಶದಲ್ಲಿ ಬಂದು ನೆಲೆಸಿದರು; ಅವರ ಭಾಷೆ ಇಲ್ಲಿ ಬೆಳೆದು ಅಕ್ಕೇಡಿಯನ್ ಆಯಿತು. ಇದರಲ್ಲಿ ವಿಪುಲವಾದ ಸಾಹಿತ್ಯವಿದೆ; ಶಾಸನಗಳು, ಬರಹವನ್ನುಳ್ಳ ಸುಟ್ಟಮಣ್ಣಿನ ಚದರ ಬಿಲ್ಲೆಗಳು ಹೇರಳವಾಗಿ ದೊರೆತಿವೆ. ಚರಿತ್ರೆಯ ಅಂಶಗಳು, ನ್ಯಾಯಶಾಸನಗಳು, ವಾಣಿಜ್ಯ ವ್ಯವಹಾರದ ಲೆಕ್ಕಪತ್ರಗಳು, ಪ್ರಾರ್ಥನಾ ಪದ್ಯಗಳು, ಪುರಾತನ ಕಟ್ಟುಕಥೆಗಳು, ಖಗೋಳಶಾಸ್ತ್ರ, ಜ್ಯೋತಿಷ್ಯ, ವೈದ್ಯ ಮುಂತಾದ ಅನೇಕ ವಿಷಯಗಳು ಇವುಗಳಲ್ಲಿವೆ. ಹಳೆ ಅಕ್ಕೇಡಿಯನ್ (ಪ್ರ.ಶ.ಪೂ. 2800–650), ಹೊಸ ಅಕ್ಕೇಡಿಯನ್ (ಪ್ರ.ಶ.ಪೂ. 650 ರಿಂದ ಈಚೆಗೆ) ಎಂಬೆರಡು ಭಾಷಾವಸ್ಥೆಗಳಿವೆ. ಈ ಭಾಷೆಗೆ ಬೇರೊಂದು ಬುಡಕಟ್ಟಿಗೆ ಸೇರಿದ್ದ ಸುಮೇರಿಯನ್ ಭಾಷೆಯ ಸಂಪರ್ಕವುಂಟಾಗಿತ್ತು. ಪ್ರ.ಶ.ಪೂ. 800ರಲ್ಲಿ ಈ ಭಾಷೆ ಆರ್ಮೈಕ್ ಭಾಷೆಗೆ ಎಡೆಗೊಟ್ಟಿತು. ಅಲೆಗ್ಸಾಂಡರನ ಕಾಲಕ್ಕೆ ಇದು ವ್ಯವಹಾರದಲ್ಲೂ ಇಲ್ಲವಾಯಿತು. ಆದರೂ ಪ್ರ.ಶ.ಪೂ. 1ನೆಯ ಶತಮಾನದವರೆಗೆ ಇದು ಗ್ರಾಂಥಿಕ ಭಾಷೆಯಾಗಿ ಬಳಕೆಯಲ್ಲಿತ್ತು. ನುಜಿ ಎಂಬುದು ಇದರ ಒಂದು ಉಪಭಾಷೆ. (*)

**ಅಕ್ಬರ್ :** 1542–1605. ಮೊಗಲ್ ಸಂತತಿಯ ಸಾಮ್ರಾಟರಲ್ಲಿ ಮೂರನೆಯವ. ಭಾರತ ದೇಶದ ಚರಿತ್ರೆಯಲ್ಲಿ ಅತ್ಯಂತ ಪ್ರಸಿದ್ಧರಾದ ಸಾಮ್ರಾಟರಲ್ಲಿ ಒಬ್ಬ. ಹುಮಾಯೂನನ ಮಗ, ಷೇರ್‌ಷಹನಿಂದ ಸೋತು ರಾಜ್ಯಭ್ರಷ್ಟನಾಗಿ ಸಹಾಯವನ್ನರಸುತ್ತ ಹುಮಾಯೂನ್ ಅಲೆದಾಡುತ್ತಿದ್ದಾಗ ಅಮರಕೋಟೆಯಲ್ಲಿ 1542ರಲ್ಲಿ ಅಕ್ಬರನು ಜನಿಸಿದ. ಪಟ್ಟಕ್ಕೆ ಬಂದಾಗ ಅವನು ಹದಿನಾಲ್ಕು ವರ್ಷದ ಬಾಲಕ. ತಂದೆಯ ಕಾಲದಲ್ಲಾದ ರಾಜಕೀಯ ವಿಪ್ಲವಗಳ ಪರಿಣಾಮವಾಗಿ, ಸಾಮ್ರಾಜ್ಯದ ನಾನಾ ಕಡೆಗಳಲ್ಲಿ ವಿದ್ರೋಹಿಗಳು ಬಲಗೊಂಡಿದ್ದರು. ಅವರ ಹಾವಳಿಯನ್ನು ತಡೆಗಟ್ಟಿ ಪ್ರಾಂತ್ಯಗಳನ್ನು ತನ್ನ ಹತೋಟಿಗೆ ತಂದುಕೊಂಡು ಸುಭದ್ರ ಆಡಳಿತವನ್ನು ಸ್ಥಾಪಿಸುವುದಕ್ಕೆ ಬಹುಕಾಲ ಹಿಡಿಯಿತು. ಸ್ವತಂತ್ರರಾಗಲೆತ್ನಿಸುತ್ತಿದ್ದ ಸಾಮಂತರನ್ನು ಸೋಲಿಸಿ, ಹೊಸ ಪ್ರಾಂತ್ಯಗಳನ್ನು ಗೆದ್ದು, ದೇಶದಲ್ಲಿದ್ದ ಅರಾಜಕತೆಯನ್ನು ಕೊನೆಗಾಣಿಸಿ, ಬಹಳ ಕಾಲದಿಂದಲೂ ಇಲ್ಲದೇ ಇದ್ದ ರಾಜಕೀಯ ಏಕತೆಯನ್ನೂ ಆಡಳಿತ ಭದ್ರತೆಯನ್ನೂ ಏರ್ಪಡಿಸಿದ. ರಾಷ್ಟ್ರೀಯತೆ, ಏಕತೆ ಮತ್ತು ಹಿಂದೂ–ಮುಸಲ್ಮಾನರ ಪರಸ್ಪರ ಸ್ನೇಹ ಸೌಹಾರ್ದ, ಈ ಮೂರು ಮುಖ್ಯಾಂಶಗಳನ್ನು ಬೆಳೆಸುವ ಸಂಪ್ರದಾಯವನ್ನು ಹಾಕಿಕೊಟ್ಟ. ಅವನ ರಾಜಕೀಯ ಧೋರಣೆ ಮತೀಯ ಪ್ರಭಾವಕ್ಕೊಳಗಾಗಿರಲಿಲ್ಲ. ಆತ ರಾಜಪುತ್ರ ಕನ್ಯೆಯೊಬ್ಬಳನ್ನು ಮದುವೆಯಾದ. ಹಿಂದೂ ಯಾತ್ರಿಕರ ಮೇಲೆ ಈ ಹಿಂದೆ ಇದ್ದ ತೆರಿಗೆಯನ್ನೂ ತಲೆಗಂದಾಯವನ್ನೂ ರದ್ದುಗೊಳಿಸಿದ. ಮುಸಲ್ಮಾನ್ ಪ್ರಜೆಗಳಿಂದಲೇ ಕೂಡಿದ್ದ ಕಾಬೂಲ್ ಪ್ರಾಂತ್ಯಕ್ಕೆ ಮಾನಸಿಂಗನನ್ನು ಪ್ರಾಂತ್ಯಾಧಿಕಾರಿಯನ್ನಾಗಿ ಮಾಡಿದ. ಅವರೆಗೂ ಸೈನ್ಯಕ್ಕೆ ಸೇರಲು ಮುಸಲ್ಮಾನರು ಮಾತ್ರ ಅರ್ಹತೆ ಪಡೆದಿದ್ದರು. ಅಕ್ಬರನು ಅರ್ಹತೆಯ ಆಧಾರದ ಮೇಲೆ ಹಿಂದೂ ಮುಸಲ್ಮಾನರಲ್ಲಿ ಭೇದವನ್ನೆಣಿಸದೆ ಸೈನ್ಯದಲ್ಲಿ ಹುದ್ದೆಗಳನ್ನು ಕೊಟ್ಟ. ನ್ಯಾಯವಾದಿಯೂ ಗುಣಗ್ರಾಹಿಯೂ ಆಗಿದ್ದ ಅವನು ಪ್ರಜೆಗಳಲ್ಲಿ ಭೇದವನ್ನೆಣಿಸದೆ ಎಲ್ಲರಿಗೂ ನ್ಯಾಯವನ್ನು ದೊರಕಿಸಿಕೊಟ್ಟ. ಆತ ದೊಡ್ಡ ಹುದ್ದೆಗಳನ್ನು ಕೊಡುತ್ತಿದ್ದುದು ಕುಶಲತೆ ಮತ್ತು ಸಾಮರ್ಥ್ಯದ ಆಧಾರದಮೇಲೆ. ತನ್ನ ನೀತಿಯಿಂದ ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿ ಆ ಮೂಲಕ ತಾವು ಪರಕೀಯರೆಂಬ ಭಾವನೆಯನ್ನು ಹೋಗಲಾಡಿಸಿ, ರಾಷ್ಟ್ರೀಯತೆಯನ್ನು ಮೂಡಿಸಿದ. ಹಿಂದೂಗಳಿಗೆ ಅವನ ಆಡಳಿತ ಪರಕೀಯವೆನಿಸಲಿಲ್ಲ. ಇದಲ್ಲದೇ ಅವನು ಹಿಂದೂಸಮಾಜದಲ್ಲಿ ಬೆಳೆದು ಬಂದಿದ್ದ ಸ್ತ್ರೀಶಿಶುಹತ್ಯೆ, ಸಹಗಮನ ಮತ್ತು ಪ್ರಾಣಿಬಲಿ ಮುಂತಾದ ಪದ್ಧತಿಗಳನ್ನು ತಪ್ಪಿಸಲು ಮತ್ತು ವಿಧವಾವಿವಾಹವನ್ನು ಜಾರಿಗೆ ತರಲು ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡ. ಅವನು ಜಾರಿಗೆ ತಂದ ಆಡಳಿತ ಪದ್ಧತಿ ಮುಂದೆ ಬ್ರಿಟಿಷರೂ ಅನುಕರಿಸುವಂಥದಾಗಿತ್ತು. ಅಕ್ಬರನ ಆಡಳಿತದಲ್ಲಿ ಸರ್ಕಾರಕ್ಕೂ ರೈತರಿಗೂ ನೇರವಾದ ಸಂಪರ್ಕವಿದ್ದು ಮಧ್ಯಸ್ಥಗಾರರಿಗೆ ಅವಕಾಶವಿರಲಿಲ್ಲ.

ಅಕ್ಬರನ ಮತೀಯನೀತಿ ಇತಿಹಾಸದಲ್ಲಿ ಸ್ಮರಣೀಯ. ಉನ್ನತ ಧ್ಯೇಯಗಳನ್ನು ಹೊಂದಿ ಭಾವಜೀವಿಯಾಗಿದ್ದ ಆತ ಎಲ್ಲ ಮತಗಳ ತತ್ತ್ವಗಳನ್ನೂ ಗ್ರಹಿಸಿ ಮತೀಯ ಏಕತೆಯನ್ನು ಉಂಟುಮಾಡುವ ಗುರಿಯನ್ನು ಹೊಂದಿದ್ದ. ಈ ಗುರಿಯನ್ನು ಸಾಧಿಸಲು 1581ರಲ್ಲಿ ದೀನ್–ಎ–ಇಲಾಹಿ, ಎಂಬ ಹೊಸ ಮತವನ್ನು ಸ್ಥಾಪಿಸಿದ. ಅದು ಪ್ರಗತಿಪರ ವಿಚಾರಶೀಲರ ಸಂಘವಾಗಿತ್ತು; ಸರ್ವಧರ್ಮ ಸಹಿಷ್ಣುತೆಯ ಆದರ್ಶವಾಗಿತ್ತು. ಈ ಹೊಸ ಮತದ ಪ್ರಕಾರ ಸರ್ವಶಕ್ತನಾದ ದೇವರು ಒಬ್ಬನೇ. ಎಲ್ಲರೂ ದುರ್ಗುಣಗಳನ್ನು ತ್ಯಜಿಸಿ ಸದ್ಗುಣಗಳನ್ನು ಅನುಸರಿಸಿ ವಿವೇಚನೆಗೆ ತಲೆಬಾಗಬೇಕು. ಪೂಜೆ–ಪುರಸ್ಕಾರ ಮತ್ತು ಪುರೋಹಿತರ ಆವಶ್ಯಕತೆ ಇಲ್ಲ. ದೀನ್–ಎ–ಇಲಾಹಿ ಸರ್ವ ಮತಗಳ ಆಧ್ಯಾತ್ಮಿಕ ಮತ್ತು ತಾತ್ತ್ವಿಕ ಸಂಪ್ರದಾಯಗಳ ಸಂಗ್ರಹವಾಗಿತ್ತು. ಧರ್ಮೋಪದೇಶಕರಿಗಾಗಲಿ ಮೌಢ್ಯ ಮತ್ತು ಕಂದಾಚಾರಗಳಿಗಾಗಲಿ ಈ ಮತದಲ್ಲಿ ಅವಕಾಶವಿರಲಿಲ್ಲ. ಈ ಮತಕ್ಕೆ ಸೇರಲು ಯಾರನ್ನೂ ಬಲಾತ್ಕರಿಸುತ್ತಿರಲಿಲ್ಲ. ವಿಚಾರಶೀಲರಾದ ಹದಿನೆಂಟು ಜನರು ಮಾತ್ರ ಅದನ್ನು ಅವಲಂಬಿಸಿದ್ದರು. ಅವರಲ್ಲಿ ರಾಜ ಬೀರಬಲ್ಲನೂ ಒಬ್ಬ. ಅಕ್ಬರ್ ವೈಯಕ್ತಿಕವಾಗಿ ಆಧ್ಯಾತ್ಮಿಕ ಜೀವನದ ರಹಸ್ಯಗಳನ್ನು ಅರಿಯಲು ಕುತೂಹಲಿಯಾಗಿದ್ದವನು. ಅವನು ಅನೇಕ ವೇಳೆ ಏಕಾಂಗಿಯಾಗಿ ತನ್ನ ಅರಮನೆಯ ಪ್ರಾಂಗಣದಲ್ಲಿ ಕುಳಿತು ಮಧ್ಯರಾತ್ರಿಯ ವರೆಗೂ ನಭೋಮಂಡಲವನ್ನು ವೀಕ್ಷಿಸುತ್ತ ಜೀವನದ ಸತ್ಯಾಸತ್ಯಗಳ ವಿಚಾರವಾಗಿ ದೀರ್ಘಾಲೋಚನೆಗಳಲ್ಲಿ ಮಗ್ನನಾಗುತ್ತಿದ್ದ. ಜನರ ಮತೀಯ ಮೌಢ್ಯಗಳನ್ನು ಕಂಡು ಮರುಗುತ್ತಿದ್ದ. ಸರ್ವಧರ್ಮಗಳ ಸಮನ್ವಯವಾದ ದೀನ್–ಇಲಾಹಿಯ ಮುಖಾಂತರ ಜನರ ಭಿನ್ನಭಾವಗಳನ್ನು ತೊಡೆದು ಹಾಕುವ ಗುರಿಯನ್ನು ಹೊಂದಿದ್ದ. ಈ ಪ್ರಯತ್ನದಲ್ಲಿ ಕೆಲವು ಅಂಶಗಳು ಅವನಿಗೆ ಸಹಕಾರಿಯಾದುವು. ಮೊದಲನೆಯದಾಗಿ ಆತನ ತಂದೆ ಮತ್ತು ತಾತ ಸಂಪ್ರದಾಯಶರಣರಾಗಿರದೆ ಉದಾರ ಪಂಥಿಗಳಾಗಿದ್ದರು. ಎರಡನೆಯದಾಗಿ ಆತನು ರಾಜಪುತ್ರ ರಾಜಕುಮಾರಿಯನ್ನು ವಿವಾಹವಾದದ್ದು ಅವನ ವಿಚಾರಧಾರೆಯನ್ನು ಬದಲಾಯಿಸಿತು. ಕೊನೆಯದಾಗಿ ನಿಕಟವರ್ತಿಗಳಾದ ಶೇಕ್ ಮುಬಾರಕ್, ಫೈಜಿ ಮತ್ತು

ಅಬುಲ್ ಫಜ಼ಲ್ ಅವರ ಭಾವನೆಗಳು ಮತ್ತು ವಿಚಾರಧಾರೆಗಳು ಅಕ್ಬರನ ಮೇಲೆ ಪರಿಣಾಮ ಬೀರಿದುವು. 'ಜೀವಾತ್ಮಗಳು ಪರಮಾತ್ಮನ ಅಂಶಗಳು ಮತ್ತು ಕೊನೆಗೆ ಪರಮಾತ್ಮನಲ್ಲೇ ಐಕ್ಯವಾಗುತ್ತವೆ', ಎಂಬ ಸೂಫಿ ತತ್ತ್ವದಲ್ಲಿ ಅವನಿಗೆ ಬಹಳ ನಂಬಿಕೆ. ಅಕ್ಬರ್ 1575ರಲ್ಲಿ ಸಿಕ್ರಿ ಎಂಬಲ್ಲಿ ಇಬದತ್‍ಖಾನವನ್ನು (ಪ್ರಾರ್ಥನಾಮಂದಿರ) ಕಟ್ಟಿಸಿದ. ಇಲ್ಲಿ ಸಾಮ್ರಾಜ್ಯದ ಎಲ್ಲ ಭಾಗಗಳಿಂದಲೂ ಹಿಂದೂ, ಜೈನ, ಪಾರಸಿ, ಕ್ರೈಸ್ತ ಮತ್ತು ಮಹಮದೀಯ ಮತದ ಪಂಡಿತರು ಸಭೆ ಸೇರಿ ಅಕ್ಬರನ ಸಂದೇಹಗಳನ್ನು ನಿವಾರಿಸ ಬೇಕಾಗಿದ್ದಿತು. ಆದರೆ ನಾನಾ ಪಂಥಗಳ ವಿದ್ವಾಂಸರು ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಮುಂದುಮಾಡಿಕೊಂಡು ವಾದ ವಿವಾದದಲ್ಲಿ ನಿರತರಾಗಿ ಸಮಸ್ಯೆಗಳನ್ನೇ ಸೃಷ್ಟಿಸಿದರು. ಆದ್ದರಿಂದ ಅಕ್ಬರ್ ತಾನೇ ಸರ್ವಧರ್ಮಗಳ ಮುಖಂಡತ್ವವನ್ನು ವಹಿಸಿಕೊಂಡು ಮತೀಯ ಕಚ್ಚಾಟಗಳನ್ನು ನಿಲ್ಲಿಸಿ ತನ್ನ ತೀರ್ಪನ್ನು ಅವರು ಒಪ್ಪುವಂತೆ ವಿಧೇಯಕ ಮಾಡಿದ. ಅಕ್ಬರ್ ತಾನೊಬ್ಬ ಪ್ರವಾದಿ ಎಂದು ನಂಬಿಯೂ ಇರಲಿಲ್ಲ. ಹಾಗೆ ಪ್ರಚಾರವನ್ನೂ ಮಾಡಲಿಲ್ಲ. ಆದರೆ ವಿಭಿನ್ನ ಮತೀಯರನ್ನು ಸಮತೆಯ ಆಧಾರದ ಮೇಲೆ ಒಂದುಗೂಡಿಸಲು ಸತತವಾಗಿ ಪ್ರಯತ್ನಪಟ್ಟ. ಅಲ್ಲದೆ ಅವನ ಆಳ್ವಿಕೆಯು ಮಹಾ ಘಟನಾವಳಿಗಳಿಂದ ಕೂಡಿದ ಉಜ್ವಲ, ಐತಿಹಾಸಿಕ ಕಾಲವಾಗಿತ್ತು. ಆದ್ದರಿಂದ ಚರಿತ್ರಕಾರರು ಅಕ್ಬರನನ್ನು ಮಹಾಶಯ ಎಂದು ಕರೆದರು. (ಬಿ.ಎಸ್.ಎ.)

**ಅಕ್ಬರನಾಮ** : ಚಕ್ರವರ್ತಿ ಅಕ್ಬರನ ಜೀವನವನ್ನು ಚಿತ್ರಿಸುವ ಚಾರಿತ್ರಿಕ ಗ್ರಂಥ. ಅಕ್ಬರನ ಆಸ್ಥಾನದಲ್ಲಿದ್ದ ಅಬುಲ್ ಫಜ಼ಲ್ ಇದನ್ನು ಪರ್ಷಿಯನ್ ಭಾಷೆಯಲ್ಲಿ ರಚಿಸಿದ. ಇದರ ಶೈಲಿ ಪ್ರೌಢವಾಗಿದೆ. ಗ್ರಂಥದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಮೊಗಲ್ ವಂಶಾವಳಿಯನ್ನು ವಿವರಿಸಲಾಗಿದೆ. ಮೊಗಲ ಬಾದಶಹರು ತೈಮೂರನ ವಂಶಕ್ಕೆ ಸೇರಿದವರು. ಅಕ್ಬರನು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದನು. ಮೊದಲಿನ ಹದಿನೇಳು ವರ್ಷದ ಆಳ್ವಿಕೆಯನ್ನು ಈ ಭಾಗದಲ್ಲಿ ವರ್ಣಿಸಲಾಗಿದೆ. ಗ್ರಂಥದ ಎರಡನೆಯ ಭಾಗದಲ್ಲಿ ಅಕ್ಬರನ ಮುಂದಿನ ಇಪ್ಪತ್ತೊಂಬತ್ತು ವರ್ಷಗಳ ಆಳ್ವಿಕೆಯನ್ನು ಬಣ್ಣಿಸಲಾಗಿದೆ. (ಎಸ್.ಎಂ.ಎಸ್.)

**ಅಕ್ರಮ ನಿರ್ಬಂಧ** : ಒಬ್ಬ ವ್ಯಕ್ತಿಯ ಚಲನವಲನದ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿ ಬಲವಂತವಾಗಿ ಒಂದೆಡೆ ಕೂಡಿಡುವುದು. ಇದನ್ನು ಇಂಡಿಯನ್ ಪೀನಲ್ ಕೋಡ್ 339ನೆಯ ಕಲಂನಲ್ಲಿ ವಿವರಿಸಿದೆ.

ತನಗಿಷ್ಟ ಬಂದ ಕಡೆ ಹೋಗುವ ಹಕ್ಕು ವ್ಯಕ್ತಿಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದು. ಬೇರೆಯವರ ಮನೆಗೆ ಅಕ್ರಮವಾಗಿ ಪ್ರವೇಶಿಸುವುದು, ಇತರರ ಆಸ್ತಿವ್ಯವಹಾರಗಳಲ್ಲಿ ಕೈಹಾಕುವುದು–ಇತ್ಯಾದಿ ವ್ಯಕ್ತಿಸ್ವಾತಂತ್ರ್ಯವಲ್ಲ. ತಮಗೆ ಇಷ್ಟ ಬಂದ ಕಡೆ ಹೋಗುವ ಸ್ವಾತಂತ್ರ್ಯ ಎಲ್ಲ ವ್ಯಕ್ತಿಗಳಿಗೂ ಉಂಟು. ಅದನ್ನು ನಿರೋಧಿಸುವುದು ಅಕ್ರಮ ನಿರ್ಬಂಧ. ಆದರೆ ಎಲ್ಲ ನಿರ್ಬಂಧವೂ ಅಕ್ರಮವೆನಿಸುವುದಿಲ್ಲ. ಅವುಗಳಿಗೆ ನಿರ್ದಿಷ್ಟ ನಿಯಮಗಳಿರುತ್ತವೆ. ನೆಲದ ಮೇಲೆ ಅಥವಾ ನೀರಿನ ಮೇಲೆ ಹಾದುಹೋಗುವ ಖಾಸಗಿ ದಾರಿಹಕ್ಕನ್ನು ಹೊಂದಿದವನೊಬ್ಬನು ತನಗೊಬ್ಬನಿಗೆ ಆ ದಾರಿಯಲ್ಲಿ ಓಡಾಡುವ ಸಂಪೂರ್ಣ ಹಕ್ಕಿದೆಯೆಂದು ತಿಳಿದು, ಇತರರು ಆ ದಾರಿಯಲ್ಲಿ ಹೋಗದಂತೆ ನಿರ್ಬಂಧಪಡಿಸಿದರೆ ಆಗ ಅದು ಅಕ್ರಮ ನಿರ್ಬಂಧ ಎನಿಸುವುದಿಲ್ಲ. ಏಕೆಂದರೆ, ಅಡ್ಡಿಪಡಿಸಿದಾತನಿಗಿರುವ ನ್ಯಾಯಸಮ್ಮತವಾದ ಹಕ್ಕಿನ ಪ್ರಕಾರ ಹಾಗೂ ಇತರರಿಗೆ ಆ ದಾರಿಯಲ್ಲಿ ಓಡಾಡುವ ಹಕ್ಕು ಇರುವುದಿಲ್ಲ. ಒಂದು ವೇಳೆ ಅಡ್ಡಗಟ್ಟಿದವನು ದಾರಿಹೋಕನ ಹಕ್ಕನ್ನು ಅಡ್ಡಪಡಿಸಿದ್ದರಿಂದ ಉದ್ಭವಗೊಂಡ ವಿವಾದವನ್ನು ಸಿವಿಲ್ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳಬೇಕು.

ಒಬ್ಬನನ್ನು ಒಂದು ಕೋಣೆಯಲ್ಲೋ ಮನೆಯಲ್ಲೋ ಕೂಡಿಹಾಕಿ ಹೊರಗೆ ಬರದಂತೆ ಆತನನ್ನು ನಿರ್ಬಂಧಿಸುವುದಾಗಲಿ, ಮನೆಯ ಯಜಮಾನನು ತನ್ನ ಮನೆಯೊಳಕ್ಕೆ ಹೋಗದಂತೆ ಬಾಗಿಲನ್ನು ಭದ್ರಪಡಿಸಿ ಅಥವಾ ನಿರ್ಬಂಧಿಸುವುದು ನಿಸ್ಸಂಶಯವಾಗಿ ಅಕ್ರಮ ನಿರ್ಬಂಧವಾಗುತ್ತದೆ. ಆದರೆ, ಸಾರ್ವಜನಿಕ ರಸ್ತೆಗೆ ಅಡ್ಡಲಾಗಿ ಕಲ್ಲನ್ನೋ ಮರದ ದಿಮ್ಮಿಗಳನ್ನೋ ಇಟ್ಟು ಗುಳಿ ತೋಡಿದರೆ ಅದು ಅಕ್ರಮ ನಿರ್ಬಂಧವಾಗುವುದೆ? ದಾರಿಹೋಕನಿಗೆ ಆತ ಮುಂದಕ್ಕೆ ಹೋಗಲು ಅದು ಅಡ್ಡಿಯಾಗಿದೆಯೇ ಹೊರತು, ಹಿಂತಿರುಗಿ ಹೋಗಲು ಎಡಬಲಗಳಿಗೆ ಸರಿದುಹೋಗಲು ಯಾವ ಅಡ್ಡಿಯೂ ಇರುವುದಿಲ್ಲವಲ್ಲ – ಎಂದು ವಾದಿಸಿ ಇದು ಅಕ್ರಮ ನಿರ್ಬಂಧವಲ್ಲವೆಂದು ವಾದಿಸಬಹುದು. ಇದೂ ಅಕ್ರಮ ನಿರ್ಬಂಧವೆಂದು ನ್ಯಾಯಾಲಯಗಳು ತೀರ್ಪಿತ್ತಿವೆ. ತನಗೆ ಹಕ್ಕಿರುವ ದಿಕ್ಕಿನಲ್ಲಿ ಹೋಗುವವನೊಬ್ಬನನ್ನು ಬೇರೊಂದು ದಿಕ್ಕಿನಲ್ಲಿ ಹೋಗುವಂತೆ ಪ್ರೇರೇಪಿಸಿ ನಿರ್ಬಂಧಿಸಿದರೆ ಆಗ ಅದು ಅಕ್ರಮ ನಿರ್ಬಂಧವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಒಬ್ಬನ ವ್ಯಕ್ತಿಸ್ವಾತಂತ್ರ್ಯವನ್ನು ಮೊಟಕುಮಾಡುವ ಯಾವುದೇ ರೀತಿಯ ನಿರ್ಬಂಧವಾದರೂ ಅದು ಅಕ್ರಮ ನಿರ್ಬಂಧವಾಗುತ್ತದೆ. (ಕೆ.ಪಿ.)

**ಅಕ್ರಾನ್** : ಅಮೆರಿಕ ಸಂಯುಕ್ತಸಂಸ್ಥಾನದ ಓಹಿಯೊ ರಾಜ್ಯದಲ್ಲಿರುವ ಒಂದು ನಗರ. ಸಮುದ್ರಮಟ್ಟದಿಂದ 366ಮೀ ಎತ್ತರದಲ್ಲಿದೆ. ಗುಡ್ಡಗಳಿಂದ ಆವರಿಸಲ್ಪಟ್ಟಿದ್ದು ಅನೇಕ ಸರೋವರಗಳಿಂದ ಕೂಡಿದೆ. ವಿಸ್ತೀರ್ಣ 53.7 139 ಚ.ಕಿಮೀ. ಜನಸಂಖ್ಯೆ 217074 (2000). ಅಕ್ರಾನ್‍ನಗರ, ಕ್ಲೀವ್‍ಲ್ಯಾಂಡ್‍ನಿಂದ 56ಕಿಮೀ ದಲ್ಲಿ ಕುಯಾ ಹೋಗು ನದಿ ದಂಡೆಯಲ್ಲಿದೆ. ಓಹಿಯೊ ಪ್ರಾಂತ್ಯದಲ್ಲೇ ಅತ್ಯಂತ ಎತ್ತರದ ಸ್ಥಳದಲ್ಲಿರುವುದರಿಂದ ಇದರ ಈ ಹೆಸರು ಬಂದಿದೆ. ಗ್ರೀಕ್ ಭಾಷೆಯಲ್ಲಿ ಅಕ್ರಾಸ್ ಎಂದರೆ ಎತ್ತರವೆಂದರ್ಥ. ಈ ನಗರಕ್ಕೆ ಓಹಿಯೊ ಮತ್ತು ಈರಿ ಕಾಲುವೆಯ ನೌಕಾಯಾನ ಸೌಲಭ್ಯವಿದೆ. ಇದು ಕೈಗಾರಿಕಾಭಿವೃದ್ಧಿಗೆ ಪೂರಕ. ರಬ್ಬರು ವಸ್ತುಗಳ ತಯಾರಿಕೆಗೆ ಪ್ರಸಿದ್ಧಿ ಪಡೆದಿದೆ. ಪ್ರಪಂಚದ ಎರಡನೆಯ ಮಹಾಯುದ್ಧದ ಕಾಲದಲ್ಲಿ ಕೃತಕ ರಬ್ಬರಿನ ಸಾಮಗ್ರಿಗಳನ್ನು ತಯಾರಿಸುವ ಕೇಂದ್ರವಾಗಿತ್ತು. ಹೀಗಾಗಿ ಪ್ರಪಂಚದ ರಬ್ಬರ್‍ನಗರವೆಂದೇ ಪ್ರಸಿದ್ಧಿ. ಆಹಾರ ವಸ್ತುಗಳು, ರಾಸಾಯನಿಕ ಕಲ್ನಾರು, ರಬ್ಬರಿನ ಉಪಕರಣಗಳು, ವಾಹನಗಳ ಬ್ಯಾಟರಿಗಳು, ಮರದ ಸಾಮಗ್ರಿಗಳು ಕಾಗದ, ಹೈನದ ವಸ್ತು ಇವೇ ಮೊದಲಾದವು ಇಲ್ಲಿಯ ಕೈಗಾರಿಕಾ ಉತ್ಪನ್ನಗಳು. (ಎಂ.ಎಸ್.ಎಂ.)

**ಅಕ್ರಿಡಿನ್** : ಸಾರಜನಕದ ಪರಮಾಣುವೊಂದನ್ನುಳ್ಳ ಮಿಶ್ರಚಕ್ರೀಯ (ಹೆಟಿರೋಸೈಕ್ಲಿಕ್) ಸಂಯುಕ್ತ ಇದನ್ನು ಮುಂದೆ ತೋರಿಸಿರುವ ಅಣುಸೂತ್ರದಿಂದ ನಿರೂಪಿಸಬಹುದು. ಒಂದಕ್ಕೊಂದು ಸೇರಿಕೊಂಡಿರುವ ಮೂರು ಚಕ್ರಗಳನ್ನುಳ್ಳ ಈ ಸಂಯುಕ್ತ ರಚನೆ (ರಿಂಗ್ ಸ್ಟ್ರಕ್ಚರ್) ಆ್ಯಂಥ್ರಸೀನ್ ರಚನೆಯನ್ನು ಹೋಲುತ್ತದೆ.

ಕಲ್ಲಿದ್ದಲಿನಿಂದ ಉತ್ಪತ್ತಿಯಾಗುವ ಟಾರ್‍ಣ್ಣೆಯಲ್ಲಿ ಈ ಸಂಯುಕ್ತ ಅಲ್ಪ ಪ್ರಮಾಣದಲ್ಲಿ ದೊರೆಯುತ್ತದೆ. ಕೃತಕವಾಗಿಯೂ ಇತರ ಸಂಯುಕ್ತಗಳಿಂದಲೂ ಅಕ್ರಿಡಿನ್ನನ್ನು ತಯಾರಿಸಬಹುದು.



ಅಕ್ರಿಡಿನ್

ಶುದ್ಧ ಅಕ್ರಿಡಿನ್ನಿನ ರೂಪ ವರ್ಣ ರಹಿತ ಸೂಜಿಯಾಕಾರದ ಹರಳು ಗಳಂತಿರುತ್ತದೆ. ಅಕ್ರಿಡಿನ್ ಮತ್ತು ಅದರ ಇತರ ಸಂಯುಕ್ತಗಳೆಲ್ಲವೂ ತಮ್ಮದೇ ಆದ ಒಂದು ವಿಶಿಷ್ಟ ವಾಸನೆಯನ್ನು ಹೊಂದಿವೆ. ದ್ರಾವಣರೂಪದಲ್ಲಿದ್ದಾಗ ಹಳದಿ ಹಸಿರುಮಿಶ್ರಿತವಾಗಿ ಗೋಚರಿಸುವ ಕಿರಣಸ್ಫುರಣ ಅಥವಾ ಪ್ರತಿದೀಪ್ತಿಯನ್ನು (ಫ್ಲೋರಸೆನ್ಸ್) ಇವು ಪ್ರದರ್ಶಿಸಬಲ್ಲುವು.

ಅಕ್ರಿಡಿನ್ನಿನಿಂದ ನೇರವಾಗಿ ಹೆಚ್ಚು ಉಪಯೋಗವಿಲ್ಲದಿದ್ದರೂ ಬಣ್ಣಗಳಾಗಿ ಉಪಯೋಗಿಸಲಾಗುತ್ತಿರುವ ಅಕ್ರಿಡಿನ್ ಆರೆಂಜ್, ಅಕ್ರಿಡಿನ್ ಯೆಲ್ಲೋ, ಕ್ರೈಸಾನಿಲಿನ್, ಟ್ರಿಪಫ್ಲೇವಿನ್ ಮತ್ತು ಬೆಂಜೋಫ್ಲೇವಿನ್‍ಗಳಲ್ಲಿ ಅಕ್ರಿಡಿನ್ನಿನ ಮಾತೃವೃತ್ತ (ಪೇರೆಂಟ್‍ರಿಂಗ್) ಇದೆ. ಮಲೇರಿಯಾ ಜ್ವರಕ್ಕೆ ಮದ್ದಾಗಿರುವ ಅಟೆಬ್ರಿನ್ ಮತ್ತು ಅಮೀಬದ ರಕ್ತಭೇದಿಯ ಚಿಕಿತ್ಸೆಯಲ್ಲಿ ಉಪಯೋಗಿಸುವ ರಿವನಾಲ್ ಸಂಯುಕ್ತಗಳು ಅಕ್ರಿಡಿನ್ ರಚನೆಯಿಂದ ಜನ್ಯವಾದವು. (ಕೆ.ಟಿ.ಎಸ್.)

**ಅಕ್ರಿಫ್ಲೇವಿನ್** : ಕಲ್ಲಿದ್ದಲ ಟಾರೆಣ್ಣೆಯಿಂದ ತಯಾರಾದ, ಜೀವಿನಿರೋಧಕ (ಆ್ಯಂಟಿಸೆಪ್ಟಿಕ್), ಕೆಂಬೂದು ಬಣ್ಣದ, ಅಕ್ರಿಡಿನ್ ಸಂಯುಕ್ತ ಪುಡಿ. ಟ್ರಿಪಫ್ಲೇವಿನ್ ಹೆಸರಿನಲ್ಲಿ ಜರ್ಮನಿಯ ಪಾಲ್ ಆರ್ಲಿಕ್ (1912) ಇದನ್ನು ನಂಜು ಕಳೆವ ಮದ್ದಾಗಿ ಬಳಕೆಗೆ ತಂದ ಮೇಲೆ, ಒಂದನೆಯ ಮಹಾಯುದ್ಧದಲ್ಲಿ ಬಹುವಾಗಿ ಬಳಕೆಯಲ್ಲಿತ್ತು. ಸಲ್ಫ, ಜೀವಿರೋಧಕ (ಆಂಟಿಬಯೋಟಿಕ್) ಮದ್ದುಗಳು ಬಂದ ಮೇಲೆ ಇದರ ಬಳಕೆ ತೀರ ಅಪರೂಪ. ಪರಮಾ (ಗೊನೋರಿಯ) ಮೇಹರೋಗದಲ್ಲಿ ಮೂತ್ರನಾಳವನ್ನೂ ಗಾಯಗಳನ್ನೂ ತೊಳೆಯಲು ಇದರ ತಟಸ್ಥ (ನ್ಯೂಟ್ರಲೈಸ್ಡ್) ರೂಪದ ದ್ರಾವಣ ಬಳಕೆಯಲ್ಲಿದೆ. ಮೂತ್ರಜನಕಾಂಗ ಮಂಡಲದ ಜೀವಿನಿರೋಧಕವಾಗಿ ಹೊಟ್ಟೆಗೂ ಸೇವಿಸಬಹುದು. (ಡಿ.ಎಸ್.ಎಸ್.)

**ಅಕ್ರಿಯಾವಾದ** : ಬುದ್ಧನ ಸಮಕಾಲೀನನಾದ ಪೂರಣ ಕಸ್ಸಪನೆಂಬುವನ ತತ್ತ್ವ. ನಿಜ ಹೇಳುವುದು, ದಾನ ಮಾಡುವುದು, ಸಂಯಮ–ಇವು ಒಳ್ಳೆಯವೂ ಅಲ್ಲ; ಸುಳ್ಳು ಹೇಳುವುದು, ಕದಿಯುವುದು, ಕೊಲೆ ಮಾಡುವುದು–ಇವು ಕೆಟ್ಟವೂ ಅಲ್ಲ. ಯಾವುದನ್ನೂ ಮಾಡದ ನಿಷ್ಕ್ರಿಯೆಯೇ ಸರಿಯಾದ ಮಾರ್ಗ ಎಂಬುದು ಇವನ ತತ್ತ್ವ. (ಜಿ.ಎಚ್.)

**ಅಕ್ರೂರ** : ತಂದೆಯ ಕಡೆಯಿಂದ ಕೃಷ್ಣನ ಮಿತ್ರನಾದ ಯಾದವ. ಯದುವಂಶದ ಶ್ವಫಲ್ಕನ ಮಗ. ತಾಯಿ ಗಾಂದಿನಿ, ಕಂಸನ ಅಷ್ಟಮಂತ್ರಿಗಳಲ್ಲಿ ಒಬ್ಬ. ಆಹುಕನ ಮಗಳಾದ ಭುತನುವನ್ನು ಮದುವೆಯಾಗಿದ್ದ. ಕಂಸನ ಅಪ್ಪಣೆಯಂತೆ ಬಲರಾಮ ಕೃಷ್ಣರನ್ನು ಮಧುರೆಗೆ ಕರೆತರುವಾಗ ಯಮುನೆಯಲ್ಲಿ ಸ್ನಾನ ಮಾಡುತ್ತಿದ್ದ ಇವನಿಗೆ ಕೃಷ್ಣ ತನ್ನ ದಿವ್ಯರೂಪವನ್ನು ತೋರಿದ. ದ್ರೌಪದೀ ಸ್ವಯಂವರ ಕಾಲದಲ್ಲಿ ಇವನೂ ಹೋಗಿದ್ದ. ಪಾಂಡವರು ಅಜ್ಞಾತವಾಸ ಮುಗಿಸಿ ಉಪಪ್ಲಾವ್ಯ ನಗರದಲ್ಲಿ ವಾಸವಾಗಿದ್ದಾಗ ಅವರಲ್ಲಿಗೆ ಹೋಗಿದ್ದ. ಈತನಿಗೆ ಬಭ್ರು ಎಂದು ಇನ್ನೊಂದು ಹೆಸರು. ಪರಮ ಭಾಗವತರಲ್ಲೊಬ್ಬನಾದ ಈತನನ್ನು ಕುರಿತ ಸೋಮನಾಥಕೃತ ಅಕ್ರೂರ ಚರಿತೆ (ಸು. 1600) ಎಂಬ ಕನ್ನಡ ಷಟ್ಪದಿ ಕಾವ್ಯವಿದೆ. (*)

**ಅಕ್ರೋಟ್ :** ಜ್ಯೂಗ್ಲಂಡೇಸೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಫಲವೃಕ್ಷ. ಇದರಲ್ಲಿ 6 ಅಥವಾ 7 ಜಾತಿಗಳೂ ಸುಮಾರು 60 ಪ್ರಭೇದಗಳೂ ಇವೆ. ಈ ಸಸ್ಯಗಳು ಉತ್ತರ ಸಮಶೀತೋಷ್ಣ ವಲಯದ ಭೂಪ್ರದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತವೆ. ಅಲ್ಲದೆ ಮಧ್ಯ ಮತ್ತು ದಕ್ಷಿಣ ಅಮೆರಿಕ, ಏಷ್ಯದ ಉಷ್ಣ ಪ್ರದೇಶಗಳು, ಜಾವ ಮತ್ತು ನ್ಯೂಗಿನಿ ದೇಶಗಳಲ್ಲಿಯೂ ಬೆಳೆಯುತ್ತವೆ. ಇವು ಪೊದರು ಮತ್ತು ಮರಗಳ



**1. ಹೆಣ್ಣು ಹೂಗಳು 2. ಗಂಡು ಹೂಗಳು 3. ಕಾಯಿ–ಒಳನೋಟ 4. ಕಾಯಿ–ಹೊರನೋಟ**

ರೂಪದಲ್ಲಿರುತ್ತವೆ. ಎಲೆಗಳು ಸಂಯುಕ್ತ ಮಾದರಿಯವು. ಇದರ ಒಂದು ಬಗೆಯದಕ್ಕೆ ಸುವಾಸನೆಯುಂಟು. ಪ್ರತಿವರ್ಷ ಹಳೆ ಎಲೆಗಳು ಉದುರಿ ಹೊಸ ಎಲೆಗಳು ಹುಟ್ಟುತ್ತವೆ. ಹೂಗೊಂಚಲುಗಳು ಕ್ಯಾಟ್‌ಕಿನ್ ಮಾದರಿಯವು. ಸಾಮಾನ್ಯವಾಗಿ ಗಂಡು ಮತ್ತು ಹೆಣ್ಣು ಜಾತಿಯ ಹೂ ಗೊಂಚಲುಗಳೆರಡೂ ಒಂದೇ ಸಸ್ಯದಲ್ಲಿ ಬಿಡುತ್ತವೆ. ಆದರೆ ಎಂಗೆಲ್ ಹಾರ್ಡಿಟ ಜಾತಿಗೆ ಸೇರಿದ ಕೆಲವು ಪ್ರಭೇದಗಳಲ್ಲಿ ಗಂಡು ಮತ್ತು ಹೆಣ್ಣು ಜಾತಿಯ ಹೂಗೊಂಚಲುಗಳು ಪ್ರತ್ಯೇಕ ಸಸ್ಯಗಳಲ್ಲಿ ಅರಳುತ್ತವೆ. ಗಂಡು ಹೂಗಳಲ್ಲಿ 4 ಅಥವಾ ಕಡಿಮೆ ಪೆರಿಯಾಂತ್ ದಳಗಳು (ಇವು ಇಲ್ಲದಿರುವುದು ಕೇವಲ ಅಪೂರ್ವ) 3–100 ಕೇಸರಗಳೂ ಇರುತ್ತವೆ. ಹೆಣ್ಣು ಹೂಗಳಲ್ಲಿ 4 ಪೆರಿಯಾಂತ್‌ದಳಗಳೂ ನೀಚಸ್ಥಾನದ ಅಂಡಾಶಯವೂ ಇರುತ್ತವೆ. ಸಂಯುಕ್ತ ಅಂಡಾಶಯದಲ್ಲಿ 2 ಅಥವಾ 3 ವಿಭಾಗಗಳಿದ್ದು ಒಂದೇ ಒಂದು ಮೂಲಬೀಜ ಇರುತ್ತದೆ. ಈ ಸಸ್ಯಗಳಿಗೆ ಗಾಳಿಯಿಂದ ಪರಾಗಸ್ಪರ್ಶ ವಾಗುತ್ತದೆ. ಕಾಯಿಗಳು ಗೋಳಾಕಾರವಾಗಿದ್ದು ನಟ್ ಜಾತಿಗೆ ಸೇರಿರುತ್ತವೆ. ಭಾರತ ದೇಶದಲ್ಲಿ ಜುಗ್ಲಾನ್ಸ್ ಜಾತಿಗೆ ಸೇರಿದ ಒಂದು ಪ್ರಭೇದವಾದ ಜುಗ್ಲಾನ್ಸ್ ರೀಜಿಯ ಮತ್ತು ಎಂಗೆಲ್ ಹಾರ್ಡಿಟಕ್ಕೆ ಸೇರಿದ ಐದು ಪ್ರಭೇದಗಳೂ ಇವೆ. ಇವುಗಳಲ್ಲಿ ಜುಗ್ಲಾನ್ಸ್ ರೀಜಿಯ ಬಹು ಮುಖ್ಯವಾದದ್ದು. ಇದನ್ನು ಸಾಮಾನ್ಯವಾಗಿ ವಾಲ್‌ನಟ್, ಪರ್ಷಿಯಾ ದೇಶದ ವಾಲ್‌ನಟ್ ಅಥವಾ ಐರೋಪ್ಯ ದೇಶದ ವಾಲ್‌ನಟ್ ಎಂದು ಕರೆಯುತ್ತಾರೆ. ಇದು ಹಿಮಾಲಯ ಪ್ರದೇಶದಲ್ಲಿ ಮತ್ತು ಅಸ್ಸಾಮಿನ ಬೆಟ್ಟಗುಡ್ಡ ಪ್ರದೇಶದಲ್ಲಿ ಸುಮಾರು 1000ಮೀಗಳಿಂದ 3,500ಮೀ ಎತ್ತರದ ಪರ್ವತ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದನ್ನು ಪಂಜಾಬ್, ಉತ್ತರ ಪ್ರದೇಶ ಮತ್ತು ಹಿಮಾಚಲ ಪ್ರದೇಶಗಳಲ್ಲೂ ಬೆಳೆಸುವುದುಂಟು.

ಈ ಕುಟುಂಬದಲ್ಲಿ ಬೆಲೆಬಾಳುವ ಉತ್ಕೃಷ್ಟವಾದ ಮರಗಳೂ ತಿನ್ನಲು ಕಾಯಿಗಳನ್ನು ಒದಗಿಸುವ ಸಸ್ಯಗಳೂ ಸೇರಿದ್ದು ಉಪಯುಕ್ತತೆಯ ದೃಷ್ಟಿಯಿಂದ ಇದು ಮಹತ್ವದ್ದಾಗಿದೆ. (ಎಂ.ಎನ್.)

**ಅಕ್ರೋಪೊಲಿಸ್ :** ಅಥೆನ್ಸ್ ಪಟ್ಟಣದಲ್ಲಿ ಸುಂದರ ಮಂದಿರಗಳಿರುವ ನಗರ ಭಾಗ. ಗ್ರೀಕ್ ಭಾಷೆಯಲ್ಲಿ ಇದಕ್ಕೆ ಎತ್ತರದಲ್ಲಿಯ ಪಟ್ಟಣ ಎಂಬರ್ಥವಿದೆ. ಸುತ್ತಲೂ ಕಡಿದಾದ ಇಳಿಜಾರಿರುವ ಬೆಟ್ಟದ ಮೇಲೆ ಕಟ್ಟಿದ ಅಥೆನ್ಸ್ ಪಟ್ಟಣದ ಕೇಂದ್ರಬಿಂದುವಿದು. ಸು. 2,300 ವರ್ಷಗಳ ಹಿಂದೆ ಪೆರಿಕ್ಲೀಸನ ಕಾಲದಲ್ಲಿ ಗ್ರೀಕರು ಕಟ್ಟಿದ ಸುಂದರ ಶುಭ್ರಸಂಗಮವರಿ ಕಲ್ಲಿನ ಮಂದಿರಗಳೂ ಇಲ್ಲಿವೆ. ಅವುಗಳಲ್ಲಿ ಪಾರ್ಥೆನಾನ್ ದೇವಾಲಯವೂ ಒಂದು. ಇದು ಅಥೆನ್ಸ್ ನಗರದ ಮಧ್ಯದಲ್ಲಿ ಎತ್ತರವಾದ ಪ್ರದೇಶದಲ್ಲಿ ನಿಂತಿದೆ. ಪಟ್ಟಣದ ಬುಡದಿಂದ 78ಮೀ ಎತ್ತರ, 304ಮೀ ಉದ್ದ ಮತ್ತು 140ಮೀ ಅಗಲವುಳ್ಳ ಈ ಪ್ರದೇಶ 3 ಹೆಕ್ಟೇರ್ ಕ್ಷೇತ್ರವನ್ನೊಳಗೊಂಡಿದೆ. ಸಂಗಮವರಿ ಕಲ್ಲನ್ನು 16 ಕಿಮೀ ದೂರದಲ್ಲಿರುವ ಪೆಂಟೆಲಿಕಸ್ ಗುಡ್ಡದಿಂದ ಹೊತ್ತು ತರಲಾಗಿದೆ.

ಪ್ರ.ಶ.ಪೂ. 600 ವರ್ಷಗಳ ಹಿಂದೆ ಲೆಕೆಡೆಮಾನಿಯನ್ಸ್ ಮತ್ತು ಪರ್ಷಿಯನ್ನರು ಈ ಸುಂದರ ಮಂದಿರಗಳನ್ನು ಹಾಳುಗೆಡವಿದರು. ರೋಮನ್ನರ ಆಳ್ವಿಕೆಯ ಕಾಲದಲ್ಲಿ ಇವು ಮತ್ತೆ ಊರ್ಜಿತಗೊಂಡುವು. ಈ ಕಾಲವೇ ಅದರ ಸುವರ್ಣಯುಗವೆಂದು ಹೇಳಬಹುದು. 5ನೆಯ ಶತಮಾನದ ಅನಂತರ ಇದನ್ನು ಚರ್ಚನ್ನಾಗಿಯೂ 15ನೆಯ ಶತಮಾನದಲ್ಲಿ ಮಸೀದಿಯಾಗಿಯೂ ಮಾರ್ಪಾಡಿಸಲಾಯಿತು. ವೆನಿಸ್ ದೇಶದೊಡನೆ ನಡೆದ ಯುದ್ಧಕಾಲದಲ್ಲಿ ಇದು ಮದ್ದುಗುಂಡುಗಳ ಸಂಗ್ರಹಾಲಯವಾಗಿ ಸಂಪೂರ್ಣ ಹಾಳಾಯಿತು. 18 ಮತ್ತು 19ನೆಯ ಶತಮಾನದಲ್ಲಿ ಅಳಿದುಳಿದ ಮಂದಿರಗಳು ವಿದೇಶೀ ಪ್ರಾಚ್ಯಕಲಾ ವಸ್ತುಸಂಗ್ರಹಕಾರರ ದಾಳಿಗೆ ಬಲಿಯಾದುವು. ಇಲ್ಲಿನ ದೇವಾಲಯಗಳ ಆಕರ್ಷಕ ಭಾಗಗಳು ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿ ಈಗಲೂ ಇವೆ. 1835ರಲ್ಲಿ ಕೆಲವನ್ನು ಗ್ರೀಕರು ಪುನಃ ಕಟ್ಟಿದರು.

ಈ ಅವಶೇಷಗಳನ್ನು ಕಾಯ್ದು ಪ್ರದರ್ಶಿಸುವುದಕ್ಕಾಗಿಯೇ ಒಂದು ಪ್ರಾಚ್ಯ ವಸ್ತುಸಂಗ್ರಹಾಲಯವನ್ನು ಈಗ ನಿರ್ಮಿಸಿದ್ದಾರೆ. ಗ್ರೀಕರು ಅಥೆನ್ಸ್ ನಗರದ ಹೆಮ್ಮೆಯ ಸವಿನೆನಪಿಗಾಗಿ ರಚಿಸಿದ ಸುಂದರ ಕಲಾಕೃತಿಗಳನ್ನು ಯುದ್ಧಗಳಾಗಲೀ ಕಾಲಚಕ್ರವಾಗಲೀ ನಿರ್ನಾಮ ಮಾಡಲಾರದೆಂಬ ಸತ್ಯವನ್ನು ಇಂದಿನ ಈ ಸುಂದರ ಅವಶೇಷಗಳು ಎತ್ತಿ ತೋರಿಸುತ್ತಿವೆ. (ಡಿ.ಕೆ.; ಜಿ.ವಿ.)

**ಅಕ್ಲೇದಿತ ವಸ್ತ್ರ :** ಮಳೆಯಲ್ಲಿ ತಿರುಗಾಡುವಾಗ ಉಪಯೋಗಿಸಲೂ ವಸ್ತ್ರಗಳು ನೀರಿನಲ್ಲಿ ನೆನೆಯದಂತೆ ಮೇಲೆ ಹೊದಿಸುವುದಕ್ಕೂ ಗುಡಾರ ಮತ್ತು ರಂಧ್ರವಸ್ತ್ರಗಳಲ್ಲಿ (ಶ್ಯಾಮಿಯಾನಾ) ಮಳೆಯ ನೀರು ಒಳನುಗ್ಗದಂತೆ ಮಾಡಲೂ ವಿಶೇಷಗುಣವುಳ್ಳ ಬಟ್ಟೆ ಬೇಕಾಗುತ್ತದೆ. ಇಂಥ ಬಟ್ಟೆಗೆ ಅಕ್ಲೇದಿತ (ಜಲಾಭೇದ್ಯ, ವಾಟರ್‌ಪ್ರೂಫ್) ವಸ್ತ್ರವೆನ್ನುತ್ತಾರೆ. ಇದಕ್ಕಾಗಿ ತಯಾರಾದ ಬಟ್ಟೆ ಒತ್ತಾಗಿ ನೇಯಲ್ಪಟ್ಟಿರಬೇಕು. ಅಲ್ಲದೆ ಕೆಲವು ರಾಸಾಯನಿಕ ವಸ್ತುಗಳ ಪ್ರಯೋಗದಿಂದ ಬಟ್ಟೆಗಳಿಗೆ ಅಕ್ಲೇದನಗುಣ ಬಂದಿರಬೇಕು.

ಈ ಗುಣವನ್ನು ಎರಡು ಬಗೆಯಾಗಿ ವಿಂಗಡಿಸಬಹುದು. 1. ಜಲಾಭೇದ್ಯ ಮತ್ತು 2. ಜಲಾಕ್ಲೇದ (ಜಲಾಪಕರ್ಷಕ), ಜಲಾಭೇದ್ಯ ವಸ್ತ್ರದಲ್ಲಿ ನೀರು ಮತ್ತು ಗಾಳಿ ಬಟ್ಟೆಯೊಳಗೆ ಹಾಯ್ದು ಹೋಗಲಾರದು. ಬಟ್ಟೆ ಒಂದು ವೇಳೆ ಸ್ವಲ್ಪ ಒದ್ದೆಯಾಗಬಹುದು, ಅಷ್ಟೆ. ಜಲಾಕ್ಲೇದ ವಸ್ತ್ರದಲ್ಲಿ ನೀರು ಹರಿಯದೇ ಗಾಳಿ ಹೋಗಬಹುದು. ಆದರೆ ಬಟ್ಟೆ ಎಂದಿಗೂ ಒದ್ದೆಯಾಗುವುದಿಲ್ಲ.

ಜಲಾಭೇದ್ಯಕಾರಕವಾಗಿ ರಬ್ಬರ್, ಮೇಣ, ಕೃತಕರಾಳ, ಘೋಷಣತೈಲ ಮುಂತಾದ ಪದಾರ್ಥಗಳನ್ನು ಬಟ್ಟೆಯ ಮೇಲೆ ತೆಳುವಾಗಿ ಬಳಿಯುವರು. ಬಳಿಯಲು ಕುಂಚ ಅಥವಾ ದಿಂಡು ಯಂತ್ರಗಳನ್ನು ಉಪಯೋಗಿಸುವರು. ರಬ್ಬರ್, ಮೇಣ ಮುಂತಾದುವುಗಳನ್ನು ಸೇಂದ್ರಿಯ ದ್ರಾವಕಗಳಲ್ಲಿ ಕರಗಿಸಿ ಬಟ್ಟೆಯ ಮೇಲೆ ಹರಡಿಸುವರು. ಲಿನ್ಸೀಡ್ ಎಣ್ಣೆ ಮೊದಲಾದುವನ್ನು ಹಾಗೆಯೇ ಬಳಿದು ಒಣಗಿಸಬಹುದು. ಈ ರೀತಿಯಾಗಿ ದುರ್ಗಮಕ್ರಮದಲ್ಲಿ ಬಟ್ಟೆಯಲ್ಲಿರುವ ರಂಧ್ರಗಳು ಮುಚ್ಚಲ್ಪಟ್ಟು ನೀರು ಮತ್ತು ಗಾಳಿ ತೂರದಂತಾಗುವುದು.

ಜಲಾಪಕರ್ಷಣಕ್ಕೆ ಜಲವಿರೋಧಿ ವಸ್ತುಗಳನ್ನು ಪ್ರಯೋಗಿಸುತ್ತಾರೆ. ಇದರಿಂದ ಬಟ್ಟೆ ನೆನೆಯದಂತೆ ಮೇಲೆ ಬಿದ್ದ ನೀರು ಹರಿದು ಹೋಗುವುದು. ಇದಕ್ಕೆ ಉಪಯೋಗಿಸುವ ವಸ್ತುಗಳೆಂದರೆ:

1. ಅಲ್ಯೂಮಿನಿಯಂ ಲವಣ ಮತ್ತು ಅಲ್ಯೂಮಿನಿಯಂ ಸಾಬೂನು 2. ಎಣ್ಣೆ, ಮೇಣ, ಕೊಬ್ಬುಗಳಿಂದ ತಯಾರಾದ ವಸ್ತುಗಳು 3. ಕೃತಕ ರಾಸಾಯನಿಕ ವಸ್ತುಗಳು ಇತ್ಯಾದಿ.

ಮೇಲ್ಕಂಡವುಗಳನ್ನು ಬಟ್ಟೆಯ ಮೇಲೆ ಸಮನಾಗಿ ಹರಡಿ, ಅನುಗುಣವಾಗಿ ದೃಢೀಕರಿಸಿದರೆ ಅದು ಜಲಾಪಕರ್ಷಕವಾಗುವುದು. (ಬಿ.ಎಲ್.)

**ಅಕ್ವಿನಸ್, ಸೇಂಟ್ ಥಾಮಸ್ :** 1226–1274. ಪ್ರಸಿದ್ಧ ತಾರ್ಕಿಕ. ಮತಧರ್ಮ ಶಾಸ್ತ್ರಜ್ಞನಾದ ಈತ ಶ್ರೀಮಂತ ಮನೆತನದಲ್ಲಿ ಹುಟ್ಟಿ, ತಂದೆತಾಯಿಗಳ ಇಷ್ಟಕ್ಕೆ ವಿರೋಧವಾಗಿ ಸೇಂಟ್ ಡಾಮಿನಿಕ್ ಪಂಥದ ಸಂನ್ಯಾಸಿಯಾದ. ಇವನ ಅಸಾಧಾರಣ ಪ್ರತಿಭೆ ಬಾಲ್ಯದಲ್ಲೇ ಕಂಡುಬಂದಿತು. ಪ್ರಖ್ಯಾತ ದೇವತಾಶಾಸ್ತ್ರಪಂಡಿತನಾದ ಆಲ್ಬರ್ಟಸ್ ಮ್ಯಾಗ್ನಸ್ ಎಂಬುವನ ಶಿಷ್ಯನಾಗಿದ್ದು ಮತಧರ್ಮಪಾಂಡಿತ್ಯದಲ್ಲಿ ಅದ್ವಿತೀಯನೆಂದು ಹೆಸರು ಗಳಿಸಿದ. ಕ್ರೈಸ್ತಧರ್ಮೀಯರಲ್ಲಿ ಅಭಿಪ್ರಾಯಭೇದಗಳು ಹುಟ್ಟಿ ನಾನಾ ಪಂಥಗಳು ನಿರ್ಮಾಣವಾಗುತ್ತಿದ್ದ ಕಾಲ ಅದು. ಡಾಮಿನಿಕ್ ಪಂಥದ ತತ್ತ್ವಗಳನ್ನು ಸಮರ್ಥಿಸುವುದಕ್ಕಾಗಿ ಧರ್ಮಸಮ್ಮೇಳನಗಳು

ನಡೆಯುತ್ತಿದ್ದ ಕಡೆಗಳಿಗೆಲ್ಲ ಅಕ್ವಿನಸ್ ಹೋಗಿ ಬಂದ. ನಾಲ್ಕನೆಯ ಅರ್ಬನ್, ಮೂರನೆಯ ಕ್ಲೆಮೆಂಟ್ ಮುಂತಾದ ಪೋಪರೂ ಧಾರ್ಮಿಕ ಸಮಸ್ಯೆಗಳ ಪರಿಹಾರಕ್ಕೆ ಇವನ ವಿದ್ವತ್ತಿನ ನೆರವು ಪಡೆಯುತ್ತಿದ್ದರು. ಇಂಥ ನೆರವು ನೀಡುವುದಕ್ಕೆಂದು ಲಯನ್ಸ್ ನಗರಕ್ಕೆ ಪ್ರಯಾಣ ಮಾಡುತ್ತಿದ್ದಾಗ 1274ರಲ್ಲಿ ಕಾಲವಾದ. 1323ರಲ್ಲಿ ಇವನನ್ನು ಸಂತನನ್ನಾಗಿ ಪರಿಗಣಿಸಲಾಯಿತು. (ಎ.ಎಂ.)

**ಅಕ್ಷ :** ಭೂಮಿ ತನ್ನ ಅಕ್ಷದ ಮೇಲೆ ಬುಗುರಿಯಂತೆ ಆವರ್ತಿಸುತ್ತಿದೆ. ಅಕ್ಷ ಎಂದರೆ ಒಂದು ಸರಳರೇಖೆ; ಇದು ಆವರ್ತಿಸುತ್ತಿರುವ ವಸ್ತುವಿನ ದೃಷ್ಟಿಯಿಂದ ಇರುವಲ್ಲಿಯೇ ಆವರ್ತಿಸುವುದರಿಂದ ಅಕ್ಷದ ಸ್ಥಾನ ಸ್ಥಿರ; ವಸ್ತುವಿನ ಇತರ ಬಿಂದುಗಳೂ ಅಕ್ಷದ ಸುತ್ತಲೂ ಸ್ಥಿರದೂರಗಳಲ್ಲಿ ವೃತ್ತಪಥಗಳಲ್ಲಿ ಚಲಿಸುತ್ತವೆ.



ಅಕ್ಷ

ಇನ್ನು ಬೀಜರೇಖಾಗಣಿತದಲ್ಲಿ ಅಕ್ಷ ಪದದ ಅರ್ಥ ಬೇರೆ. ದತ್ತವಸ್ತುವಿನ (ಅಥವಾ ಘನದ ಅಥವಾ ವಕ್ರರೇಖೆಯ) ಮೇಲಿರುವ ಬಿಂದುಗಳನ್ನು ಗುರುತಿಸಲು ಸಹಾಯಕವಾಗುವಂತೆ ಅನುಕೂಲವಾದ ಒಂದು ಮೂಲರೇಖೆಯನ್ನು ಆರಿಸುತ್ತೇವೆ. ಇದು ಒಂದು ಅಕ್ಷ. ಇದರ ಮೇಲೆ ಒಂದು ಸ್ಥಿರಬಿಂದುವನ್ನು ಗುರುತಿಸುತ್ತೇವೆ. ಇದು ಮೂಲಬಿಂದು. ಇಲ್ಲಿಂದ ಮುಂದೆ ಆಯಾ ನಿರ್ದೇಶಕ ವ್ಯವಸ್ಥೆಯ ಕ್ರಮವನ್ನನುಸರಿಸಿ ಮೂಲಬಿಂದುವಿನ ಮೂಲಕ ಸಾಗುವ ಇತರ ಎಲ್ಲ ಅಕ್ಷಗಳನ್ನು ಆರಿಸಬಹುದು.

ಉದಾಹರಣೆಗಾಗಿ ಸಮತಳ ಕಾರ್ಟೀಸಿಯನ್ ನಿರ್ದೇಶಕ ವ್ಯವಸ್ಥೆಯನ್ನು ಚಿತ್ರದಲ್ಲಿ ತೋರಿಸಲಾಗಿದೆ. ಅಲ್ಲಿ x'oxನ್ನು x –ಅಕ್ಷವೆಂದೂ y'oy ಯನ್ನು y–ಅಕ್ಷವೆಂದೂ ಕರೆಯುತ್ತೇವೆ. ಆಗ P ಬಿಂದುವಿನ ನಿರ್ದೇಶಕಗಳು ಕ್ರಮವಾಗಿ OL ಮತ್ತು LP.

ಎರಡನೆಯ ಮಹಾಯುದ್ಧದ ಮೊದಲು ಇಟಲಿಯ ಮುಸೊಲೋನಿ ಜರ್ಮನಿಯ ಹಿಟ್ಲರನೊಡನೆ ಇದ್ದ ತನ್ನ ಅವಿಭಾಜ್ಯ ಮೈತ್ರಿಯನ್ನು ಕುರಿತು "......ಈಗ ನಾವು ಪರಿಶೀಲಿಸಬೇಕಾದ ಇನ್ನೊಂದು ವಾಸ್ತವಿಕಾಂಶ ರೋಮ್–ಬರ್ಲಿನ್ ಅಕ್ಷ ಎಂದು ಸಾಮಾನ್ಯವಾಗಿ ಪ್ರಚಲಿತವಾಗಿರುವ ಭಾವನೆ...." ಎಂದ (1937). ಹಿಟ್ಲರ್ ಮತ್ತು ಆತನ ಅನುಯಾಯಿಗಳನ್ನು ಕುರಿತು ಅಂದಿನಿಂದ ಅಕ್ಷರಾಷ್ಟ್ರಗಳು ಎಂಬ ಪದ ರೂಢಿಗೆ ಬಂದಿತು. (ಸಿ.ಎನ್.ಎಸ್.)

**ಅಕ್ಷಪಾದ :** ಕಾಲಿನಲ್ಲಿ ಕಣ್ಣುಳ್ಳ ಗೌತಮ ಋಷಿ. ನ್ಯಾಯಶಾಸ್ತ್ರದ ಮೂಲಪುರುಷ. ನ್ಯಾಯಸೂತ್ರಗಳನ್ನು ರಚಿಸಿದವ. ತನ್ನ ಮತವನ್ನು ದೂಷಿಸಿದ ವ್ಯಾಸನನ್ನು ಕಣ್ಣಿನಿಂದ ನೋಡುವುದಿಲ್ಲವೆಂದು ಶಪಥಮಾಡಿ ಕಾಲಾಂತರದಲ್ಲಿ ವಿವೇಕ ಮೂಡಿಬರಲು ಪ್ರತಿಜ್ಞಾಭಂಗವಾಗದಂತೆ ಕಾಲಿನಲ್ಲೇ ಹೊಸದಾಗಿ ಕಣ್ಣನ್ನು ಸೃಷ್ಟಿಸಿಕೊಂಡು ಅದರಿಂದ ವ್ಯಾಸನನ್ನು ನೋಡಿದವ. (ಎಸ್.ಎನ್.ಕೆ.)

**ಅಕ್ಷರಗಣ :** ಮಾತ್ರಾಗಣ ಅಂಶಗಣಗಳಂತೆ ಅಕ್ಷರಗಣವೂ ಛಂದಸ್ಸಿನ ರಚನೆಯನ್ನು ಅಳೆಯುವ ಒಂದು ಮಾನ. ಸಂಸ್ಕೃತ ಲೌಕಿಕಛಂದಸ್ಸಿಗೆ ಸೇರಿದ ಅನೇಕಾನೇಕ ವೃತ್ತಗಳನ್ನು ಮೂರು ಮೂರು ಅಕ್ಷರಗಳಿಗೆ ಒಂದು ಗಣದಂತೆ ವಿಭಾಗಿಸಿ ಅಂಥ ಒಂದೊಂದು ಗಣದಲ್ಲಿನ ಲಘುಗುರುಗಳ ಲೆಕ್ಕಾಚಾರದಂತೆ ಅವಕ್ಕೆ ಬೇರೆ ಬೇರೆ ಹೆಸರಿಟ್ಟು ಆಯಾ ವೃತ್ತಜಾತಿಯನ್ನು ಗುರುತಿಸುತ್ತಾರೆ.

ಸಂಸ್ಕೃತ ಲೌಕಿಕಛಂದಸ್ಸಿಗೆ ಸೇರಿದ ವರ್ಣವೃತ್ತಗಳು ನಾಲ್ಕು ಬಗೆಯಾದವು; ಸಮಚತುಷ್ಪದಿ, ಅರ್ಧಸಮಚತುಷ್ಪದಿ, ವಿಷಮಚತುಷ್ಪದಿ ಮತ್ತು ದಂಡಕ. ಇವುಗಳಲ್ಲಿ ವೃತ್ತಪಾದದ ಅಕ್ಷರಸಂಖ್ಯೆಯನ್ನು ಅನುಸರಿಸಿ, ಹ್ರಸ್ವ ದೀರ್ಘಾಕ್ಷರಗಳ ಬಗೆಬಗೆಯ ಗಣಿತ ಗುಣಿತಗಳಿಂದಾಗಿ, ಬಹುಸಂಖ್ಯೆಯ ವೃತ್ತಭೇದಗಳು ಹೊರಡುತ್ತವೆ. ಇಂಥ ವರ್ಣವೃತ್ತಗಳ ಸಾಧಾರಣ ಲಕ್ಷಣ ಹೀಗೆ; ನಾಲ್ಕು ಪಾದಗಳು; ಪ್ರತಿಪಾದದಲ್ಲಿಯೂ ನಿರ್ದಿಷ್ಟವಾದ ಅಕ್ಷರಸಂಖ್ಯೆ; ಆ ಅಕ್ಷರಗಳು ಲಘುವೂ ಗುರುವೂ ಆಗಿದ್ದು ನಿರ್ದಿಷ್ಟವಾದ ಆ ಲಘುಗುರುಗಳ ವಿನ್ಯಾಸ. ಪ್ರತಿಯೊಂದು ವೃತ್ತಭೇದದಲ್ಲಿಯೂ ಈ ಸಾಮಾನ್ಯಲಕ್ಷಣವನ್ನು ಅನುಸರಿಸಿ ಅಕ್ಷರಸಂಖ್ಯೆಯಲ್ಲಿಯೂ ಲಘುಗುರುವಿನ್ಯಾಸದಲ್ಲಿಯೂ ವಿಶಿಷ್ಟಲಕ್ಷಣ ಗೋಚರಿಸುತ್ತದೆ. ಅದನ್ನು ಗುರುತಿಸುವುದಕ್ಕೆ ಅಕ್ಷರಗಣ ಅಥವಾ ವರ್ಣಗಣ ಎಂಬ ಗಣವಿಭಜನೆಯ ಕ್ರಮವನ್ನು ಅನುಸರಿಸಲಾಗುತ್ತದೆ. ಅಕ್ಷರಗಣ ಎನ್ನುವುದಕ್ಕಿಂತ ವರ್ಣಗಣ ಎಂಬ ಮಾತೆ ಹೆಚ್ಚು ರೂಢಿಯಾದುದು.

ಬೇರೆ ಬೇರೆ ವರ್ಣವೃತ್ತಗಳಲ್ಲಿ ಕಂಡುಬರುವ ಹ್ರಸ್ವ ದೀರ್ಘಾಕ್ಷರಗಳ ಸಂಖ್ಯೆಯನ್ನೂ ಅವುಗಳ ಸರಣಿಯನ್ನೂ ಕಂಡುಹಿಡಿದು ಗುರುತಿಟ್ಟುಕೊಳ್ಳಲು ಛಂದಶ್ಶಾಸ್ತ್ರಕಾರರು ನಡೆಸಿದ ಪ್ರಯತ್ನವೇ ಅಕ್ಷರ (ವರ್ಣ)ಗಣದ ಹುಟ್ಟಿಗೆ ಕಾರಣವಾಯಿತು. ಮೊದಮೊದಲು ಅನುಸರಿಸಿದ ಕೆಲವು ಪ್ರಸ್ತಾರವಿಧಾನಗಳಲ್ಲಿ ಅಷ್ಟು ಸೌಕರ್ಯವಾಗಲಿ ಲಯದ ಮೌಲಿಕ ಅಂಶಗಳನ್ನು ಪೂರ್ತಿಯಾಗಿ ಗುರುತಿಸುವ ಸೌಲಭ್ಯವಾಗಲಿ ಇಲ್ಲದೆ ಹೋದುದರಿಂದ, ಹೊಸದೊಂದು ಗಣನಾಂಗವನ್ನು ಕಲ್ಪಿಸಿಕೊಳ್ಳಲಾಯಿತು.

ಪ್ರಾಚೀನ ಭಾರತದಲ್ಲಿ ಮೂರರ ಸಂಖ್ಯೆ ದೊಡ್ಡದರಲ್ಲಿ ಅತಿ ಚಿಕ್ಕದೂ ಚಿಕ್ಕದರಲ್ಲಿ ಅತಿ ದೊಡ್ಡದೂ ಆಗಿ ಗ್ರಹಿಸಲ್ಪಟ್ಟಿದ್ದಿತು. ಅದು ವೃದ್ಧಿಂಗತ ಸಂಕೀರ್ಣತೆಗೆ ಅತಿ ಚಿಕ್ಕ ಘಟಕವಾಗಿ ಅಂಗೀಕೃತವಾಗಿದ್ದಿತು. ಗುಣ (ತ್ರಯ), ಅವಸ್ಥಾ (ತ್ರಯ), ಕಾಲ (ತ್ರಯ), ಲೋಕ (ತ್ರಯ), ತ್ರಿ (ಸ್ಥಾಯಿ) – ಈ ಮೊದಲಾಗಿ ಹಲವು ಪರಿಸ್ಥಿತಿಗಳಲ್ಲಿ ಮೂರರ ಸಂಖ್ಯೆ ಮೇಲು ಕೆಳಗಿನ ಎಲ್ಲ ಸ್ಥಿತ್ಯಂತರಗಳನ್ನೂ ತೋರಿಸಲು ತಕ್ಕ ಅಡಕವಾದ ಸಂಖ್ಯೆಯಾಗಿದ್ದಿತು. ಪಾಣಿನಿಯ ಪ್ರಕಾರ ಬಹುತ್ವವನ್ನು ಸಂಘಟಿಸುವ ಅತಿ ಚಿಕ್ಕ ಸಂಖ್ಯೆಯೆಂದರೆ ಮೂರು. ಆದ್ದರಿಂದ ಶಾಸ್ತ್ರನಿಯಮ ದೃಷ್ಟಿಯಿಂದಲೂ ಸೌಕರ್ಯದೃಷ್ಟಿಯಿಂದಲೂ ತ್ರಿಕವೆಂದು ಹೇಳಬಹುದಾದ ಮೂರಕ್ಷರಗಳ ಒಂದು ಹೊಸ ಗಣನಾಂಗ ಕಾಣಿಸಿಕೊಂಡಿತು. ಹೀಗೆಂಬುದು ವಿದ್ವಾಂಸರ ಗ್ರಹಿಕೆಯಾಗಿದೆ.

ಹೀಗೆ ವೃತ್ತಪಾದವನ್ನು ಮೂರು ಮೂರು ಅಕ್ಷರಗಳಿಗೆ (ತ್ರಿಕಗಳಿಗೆ) ಒಂದೊಂದು ಗಣದಂತೆ ವಿಭಜಿಸುವ ಪದ್ಧತಿ ರೂಢಿಯಾಗಿದೆ. ಈ ಪದ್ಧತಿಯಲ್ಲಿ ವರ್ಣವೃತ್ತಗಳ ಬಗೆಬಗೆಯಾದ ಹ್ರಸ್ವದೀರ್ಘಾಕ್ಷರವಿನ್ಯಾಸಗಳ ಎಂಟು ವಿಭಿನ್ನ ರೀತಿಯ ಲಯಗಳನ್ನು (ವರ್ಣಮಾತ್ರಾವಿನ್ಯಾಸಗಳನ್ನು) ಗುರುತಿಸುವುದು ಸಾಧ್ಯ. ಮೂರು ಗುರುಗಳಿಂದ ಹಿಡಿದು ಮೂರು ಲಘುಗಳವರೆಗೆ ಇದರ ವ್ಯಾಪ್ತಿಯಿದೆ. ಈ ವಿನ್ಯಾಸಗಳನ್ನು ವಿವಿಧಪ್ರಸ್ತಾರಕ್ರಮಗಳಲ್ಲಿ ಛಂದೋಗ್ರಂಥಗಳಲ್ಲಿ ಗುರುತಿಸಿದೆ. ಇವುಗಳಿಗೆ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಸೂರ್ಯ, ಚಂದ್ರ, ಸ್ವರ್ಗ–ಎಂಬವು ಸಂಕೇತಗಳು; ಮ–ಯ–ರ–ಸ–ತ–ಜ–ಭ–ನ ಎಂಬವು ಸಂಜ್ಞೆಗಳು. ಹೀಗೆಯೇ ಲಘು ಗುರುಗಳಿಗೆ ಹರಿ ಮತ್ತು ಹರ ಎಂಬವು ಸಂಕೇತಗಳು: ಲ–ಗ ಎಂಬವು ಸಂಜ್ಞೆಗಳು. ಸಂಕೇತಗಳಿಗೆ ಪರ್ಯಾಯವಾಚಕಗಳನ್ನು ಬಳಸುವುದು ಸಾಮಾನ್ಯ; ಆದರೆ ಸಂಜ್ಞೆಗಳು ಸ್ಥಾಯಿಯಾದುವು. ಹೀಗೆ ಅಕ್ಷರ (ವರ್ಣ) ಗಣಗಳು ಎಂಟು ವಿಧಗಳು; ಮಗಣ (– – –), ಯಗಣ (υ—) , ರಗಣ(–υ–), ಸಗಣ (υυ –) ತಗಣ (– – υ) ಜಗಣ (υ – υ) ಭಗಣ(–υυ) ನಗಣ (υυυ) .

ಸಂದರ್ಭಕ್ಕೆ ತಕ್ಕಂತೆ ಮಕಾರ ಮೊದಲಾದ ಎಂಟು ಸಂಜ್ಞೆಗಳಲ್ಲಿ ಆವಶ್ಯಕವಾದವನ್ನು ಅಡಕವಾಗಿ ಸೂಚಿಸುವುದರಿಂದಲೋ ಲಕ್ಷಣ – ಲಕ್ಷ್ಯ ವಿಧಾನದಲ್ಲಿ ಸೂತ್ರರೂಪವಾಗಿ ಹೆಣೆದಿರುವುದರಿಂದಲೋ ಛಂದೋಗ್ರಂಥಗಳಲ್ಲಿ ಆಯಾ ವರ್ಣವೃತ್ತಗಳ ಲಕ್ಷಣಗಳನ್ನು ವಿವರಿಸಿರುತ್ತದೆ. ಅವು ನಿರ್ದೇಶಿಸುವ ಗುರುಲಘುವಿನ್ಯಾಸಗಳನ್ನು ನೆನಪಿಟ್ಟುಕೊಳ್ಳಲು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಛಂದಶ್ಶಾಸ್ತ್ರಕಾರರು ಕೆಲವು ನೆನಪಿನ ಪದ್ಯಗಳನ್ನು ಕಟ್ಟಿರುತ್ತಾರೆ. ಸಂಸ್ಕೃತದಲ್ಲಿ ರೂಢಿಯಾಗಿರುವ ಪದ್ಯಗಳಲ್ಲಿ ಒಂದು ಶ್ಲೋಕ ಹೀಗಿದೆ:

ಆದಿಮಧ್ಯಾವಸಾನೇಷು ಯರತಾ ಯಾನ್ತಿ ಲಾಘವಮ್।
ಭಜಸಾ ಗೌರವಂ ಯಾಂತಿ ಮನೌತು ಗುರುಲಾಘವಮ್॥

ಕನ್ನಡದಲ್ಲಿ ಬಳಕೆಯಾಗಿರುವ ಒಂದು ಪದ್ಯ ಹೀಗಿದೆ:

ಗುರು ಲಘು ಮೂರಿರೆ ಮನಗಣ
ಗುರು ಲಘು ಮೊದಲಲ್ಲಿ ಬರಲು ಭಯಗಣಮಕ್ಕುಂ॥
ಗುರು ಲಘು ನಡುವಿರೆ ಜರಗಣ
ಗುರು ಲಘು ಕಡೆಯಲ್ಲಿ ಬರಲು ಸತಗಣಮಕ್ಕುಂ॥

ಇವು ಮಾತ್ರವಲ್ಲದೆ, 'ಯಮಾತಾರಾಜಭಾನಸಲಗಂ' ಎಂಬ ಒಂದು ಸರಳ ಸೂತ್ರದಿಂದಲೂ ಗುರುಲಘುವಿನ್ಯಾಸಗಳನ್ನು ಗುರುತಿಸುವುದುಂಟು. ಇಲ್ಲಿ ಯಮಾತಾ (υ—) ಮಾತಾರಾ (– – –) ಎಂದು ಮುಂತಾಗಿ ತ್ರಿಕಗಳನ್ನು ವಿಂಗಡಿಸಿಕೊಂಡರೆ, ಮೊದಲನೆಯ ಅಕ್ಷರ ಗಣದ ಹೆಸರನ್ನು ಸೂಚಿಸುತ್ತದೆ. ಯಮಾತಾ ಯಗಣ, ಮಾತಾರಾ ಮಗಣ, ತಾರಾಜ ತಗಣ, ರಾಜಭಾ ರಗಣ, ಜಭಾನ ಜಗಣ, ಭಾನಸ ಭಗಣ, ನಸಲ ನಗಣ, ಸಲಗಂ ಸಗಣ – ಹೀಗೆ.

ಈಗ, ವರ್ಣವೃತ್ತವೊಂದರಲ್ಲಿ ಅಕ್ಷರ (ವರ್ಣ)ಗಣಗಳನ್ನು ವಿಭಜಿಸಿ ವೃತ್ತಭೇದವಾವುದೆಂದು ತಿಳಿಯುವುದಕ್ಕೆ ಒಂದು ನಿದರ್ಶನವನ್ನು ಕೊಡಬಹುದು: ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ । – ಇದು ಸಮಚತುಷ್ಪದಿಯೊಂದರ ಮೊದಲನೆಯ ಪಾದ. ಇದನ್ನು ಪ್ರಸ್ತಾರಿಸಿದರೆ, ಎಂದರೆ ಇಲ್ಲಿಯ ಗುರುಲಘುವಿನ್ಯಾಸವನ್ನು ಗುರುತಿಸಿದರೆ, ಆಗ ಹೀಗಿರುತ್ತದೆ:

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ.

ಬಳಿಕ ಮೂರು ಮೂರು ಅಕ್ಷರಗಳಿಗೆ ಒಂದೊಂದು ಗಣವಾಗಿ ಪಾದವನ್ನು ವಿಭಜಿಸಿದರೆ ಹೀಗಾಗುತ್ತದೆ:

ಛಲದೊಳ್ । ದುರ್ಯೋಧ । ನಂ ನನ್ನಿ । ಯೊಳಿನ । ತನಯಂ । ಗಂಡಿನೊಳ್ । ಭೀಮಸೇ । ನಂ.

ಮೇಲಿನ ಜ್ಞಾಪಕಪದ್ಯಗಳ ಅಥವಾ ಸೂತ್ರದ ನೆರವಿನಿಂದ ಪರಿಶೀಲಿಸಿದಾಗ ಇಲ್ಲಿರುವ ಅಕ್ಷರ (ವರ್ಣ) ಗಣಗಳು ಸ–ತ–ತ–ನ–ಸ–ರ–ರ–ಗ ಎಂಬುದಾಗಿ ತಿಳಿಯುತ್ತದೆ. ಇಂಥ ವಿನ್ಯಾಸವಿರುವ ವೃತ್ತಭೇದ ಮಹಾಸ್ರಗ್ಧರಾ ಎಂಬ ಹೆಸರಿನಿಂದ ಛಂದೋಗ್ರಂಥಗಳಲ್ಲಿ ನಿರ್ದೇಶಿತವಾಗಿರುತ್ತದೆ. (ಒಮ್ಮೊಮ್ಮೆ ಒಂದೇ ವೃತ್ತ ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧವಾಗಿರುವುದೂ ಉಂಟು). ಸೂತ್ರಬದ್ಧವಾದ ವಾಕ್ಯಗಳಿಂದ ವೃತ್ತಗಳ ಹೆಸರುಗಳನ್ನು ನಮ್ಮ ನೆನಪಿನಲ್ಲಿಟ್ಟುಕೊಂಡಿದ್ದರೆ ವೃತ್ತಭೇದವಾವುದೆಂಬುದು ಕೂಡಲೇ ಹೊಳೆಯುತ್ತದೆ. ಉದಾ–ಸತತಂನಂಸಂರರಂಗಂ ನೆರೆದೆಸೆಯೆ ಮಹಾಸ್ರಗ್ಧರಾವೃತ್ತಮಕ್ಕುಂ. ಇದು ಆ ವೃತ್ತವನ್ನು ನಮ್ಮ ನೆನಪಿಗೆ ತರುತ್ತದಲ್ಲದೆ ಅದರ ನಡೆಯನ್ನೂ ತಿಳಿಸುತ್ತದೆ.

ಅಕ್ಷರ(ವರ್ಣ) ಗಣ ವಿಭಜನೆಯೆಂಬುದು ಬಹುಸಂಖ್ಯೆಯ ವರ್ಣವೃತ್ತಗಳಲ್ಲಿ ಒಂದೊಂದರ ಪ್ರಸ್ತಾರವನ್ನೂ ಲಕ್ಷಣವನ್ನೂ ಕಂಡುಹಿಡಿದು ಸೂತ್ರೀಕರಿಸುವುದಕ್ಕೆ ಮಾಡಿಕೊಂಡ ಒಂದು ಬಗೆಯ ಕೃತಕಶಾಸ್ತ್ರವ್ಯವಸ್ಥೆ. ಮಾತ್ರಾಗಣ ಮತ್ತು ಅಂಶಗಣಗಳಲ್ಲಿ ಸಾಮಾನ್ಯವಾಗಿ ತೋರುವಂತೆ ಇಲ್ಲಿ ವೃತ್ತಲಯಕ್ಕೂ ಗಣವಿಭಜನೆಗೂ ಆತ್ಮೀಯ ಸಂಬಂಧವೇನೂ ತೋರುವುದಿಲ್ಲ. ಇದಕ್ಕೆ ಮೇಲಿನ ಉದಾಹರಣೆಯನ್ನು ಪರಿಶೀಲಿಸಿದರೆ ಸಾಕು. ಕೆಲವು ಬಾರಿ ಮಾತ್ರಾಗಣದ ಧಾಟಿ ಎದ್ದು ಕಾಣುವ ಕೆಲವು ವರ್ಣವೃತ್ತಗಳಲ್ಲಿ ಅಕ್ಷರ (ವರ್ಣ) ಗಣ ವಿಭಜನೆಯೆಂಬುದು ತೀರ ಕೃತಕವಾಗಿ ತೋರುತ್ತದೆ (ಉದ–ತರಳ, ಮಲ್ಲಿಕಮಾಲೆ ಇತ್ಯಾದಿ.) ಹಾಗೆಯೇ ಆದಿಯ ಅಲ್ಪವ್ಯತ್ಯಾಸದ ಹೊರತು ಒಂದೇ ವಿಧವಾದ ಗುರುಲಘುವಿನ್ಯಾಸವಿರುವ ಕೆಲವು ವರ್ಣವೃತ್ತಗಳು ಅಕ್ಷರ(ವರ್ಣ)ಗಣಗಳಿಂದ ವಿಭಜಿತವಾದಾಗ ಒಂದಕ್ಕೊಂದಕ್ಕೆ ಎಷ್ಟೋ ಅಂತರವಿರುವಂತೆ ಭಾಸವಾಗುತ್ತದೆ. ಅಂದರೆ ಉತ್ಪಲಮಾಲೆಯ ಮೊದಲ ಗುರುವನ್ನು ಒಡೆದು ಎರಡು ಲಘುಗಳಾಗಿ ಮಾಡಿದರೆ ಅದೇ ವೃತ್ತ ಚಂಪಕಮಾಲೆಯಾಗುತ್ತದೆ. ಸ್ರಗ್ಧರೆ ಮಹಾಸ್ರಗ್ಧರೆ, ಶಾರ್ದೂಲವಿಕ್ರೀಡಿತ ಮತ್ತೇಭವಿಕ್ರೀಡಿತ ವೃತ್ತಗಳ ಮಧ್ಯದ ವ್ಯತ್ಯಾಸವೂ ಇಷ್ಟೇ. ಆದ್ದರಿಂದ ಅಕ್ಷರಗಣವೆಂಬುದು ವರ್ಣ ವೃತ್ತದ ಪ್ರಸ್ತಾರಕ್ಕಾಗಿಯೂ ವೃತ್ತಭೇದದ ಪರಿಜ್ಞಾನಕ್ಕಾಗಿಯೂ ಮಾಡಿಕೊಂಡ ಒಂದು ಹೊರಗಿನ ವ್ಯವಸ್ಥೆ ಮಾತ್ರ ಎಂಬುದನ್ನು ನೆನಪಿನಲ್ಲಿಡಬೇಕು. (ಟಿ.ವಿ.ವಿ.)

**ಅಕ್ಷರತೆ :** ಅಕ್ಷರಜ್ಞಾನವನ್ನು ಹೊಂದಿರುವುದು, ಸಾಕ್ಷರತೆ (ಲಿಟರಸಿ) ಎಂದರ್ಥ. ಜ್ಞಾನಾರ್ಜನೆಯ ಸಾಧನಗಳಲ್ಲಿ ಅಕ್ಷರತೆ ಬಹಳ ಮುಖ್ಯವಾದುದು. ಮುಂದುವರಿದ ರಾಷ್ಟ್ರಗಳಲ್ಲೆಲ್ಲ ಅಕ್ಷರತೆ ಹೆಚ್ಚಾಗಿರುತ್ತದೆ. ಹಿಂದುಳಿದ ರಾಷ್ಟ್ರಗಳಲ್ಲಿ ನಿರಕ್ಷರತೆ (ಇಲ್ಲಿಟರಸಿ) ಹೆಚ್ಚಾಗಿರುತ್ತದೆ. ಅಕ್ಷರತೆಯ ಗಣತಿಗಾಗಿ 15 ವರ್ಷಕ್ಕೆ ಮೇಲ್ಪಟ್ಟವರನ್ನು ವಯಸ್ಕರೆಂದು ಪರಿಗಣಿಸಲಾಗಿದೆ. ಪ್ರಪಂಚದಲ್ಲಿ ಶೇ.44 ನಿರಕ್ಷರಸ್ಥರಿದ್ದಾರೆ. ಇವರಲ್ಲಿ ಹೆಂಗಸರು ಹೆಚ್ಚು.

ಅಮೆರಿಕ ಶೇ.99, ಯುಕೆ ಶೇ.99, ಬ್ರೆಜಿಲ್ ಶೇ.85, ಚೀನ ಶೇ.84, ಕುವೈತ್ ಶೇ.83, ಜಪಾನ್ ಮುಂತಾದ ದೇಶಗಳಲ್ಲಿ ಶೇ.60 ಕ್ಕಿಂತ ಹೆಚ್ಚು ಜನ ಅಕ್ಷರಸ್ಥರಿದ್ದಾರೆ (ಲಿಟರೇಟ್ಸ್). ಭಾರತದಲ್ಲಿ (1907) 57, ಅಂಗೋಲ, ಸೊಮಾಲಿಯ ಶೇ.24, ನೈಜೀರಿಯ ಶೇ.16 ಅಕ್ಷರತೆ ಶೇ.24.4 ಇವರ ಸಂಖ್ಯೆ 1951ರಲ್ಲಿ 16.6, 1931ರಲ್ಲಿ ಶೇ.10.5, 1907ರಲ್ಲಿ ಶೇ.7 ಆಗಿತ್ತು.

ಸಾಮಾನ್ಯವಾಗಿ ಉಚಿತವಾದ ಮತ್ತು ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿರುವ ರಾಷ್ಟ್ರಗಳಲ್ಲಿ ಸಾಕ್ಷರತೆಯ ಮಟ್ಟ ಹೆಚ್ಚಾಗಿರುತ್ತದೆ. ಆಯಾ ದೇಶದ ಸ್ಥಿತಿಗತಿಗಳಿಗನುಗುಣವಾಗಿ ಸಾಕ್ಷರತೆಯ ಮಟ್ಟ ವ್ಯತ್ಯಾಸವಾಗುತ್ತದೆ. ಯುನೆಸ್ಕೊ ಸಂಸ್ಥೆ ಏರ್ಪಡಿಸಿದ್ದ ಸಮಿತಿಯೊಂದು ಇದರ ಬಗ್ಗೆ ಪರಿಶೀಲನೆ ನಡೆಸಿ ಓದಿ ವಿಷಯವನ್ನು ಗ್ರಹಿಸಿಕೊಳ್ಳುವುದರ ಜೊತೆಗೆ ನಿತ್ಯಜೀವನಕ್ಕೆ ಸಂಬಂಧಪಟ್ಟ ವಿಷಯವನ್ನು ಸರಳವಾದ ಶೈಲಿಯಲ್ಲಿ ಬರೆಯುವ ಶಕ್ತಿಯನ್ನು ಮಾತ್ರ ಪಡೆದಿದ್ದು, ಬರೆಹ ತಿಳಿಯದವನ್ನು ಅರೆಅಕ್ಷರಸ್ಥನೆಂದೂ ವಿವರಿಸಿದೆ.

ಮುಂದುವರಿಯುತ್ತಿರುವ ದೇಶಗಳೆಲ್ಲ ತಮ್ಮ ದೇಶದ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಪ್ರಯತ್ನ ಮಾಡುತ್ತಿವೆ. ಸಾಕ್ಷರತೆ ಕಡಿಮೆ ಇರುವ ದೇಶಗಳಲ್ಲೆಲ್ಲ ವಯಸ್ಕರ ಶಿಕ್ಷಣಸಂಸ್ಥೆಗಳು ಅಕ್ಷರಪ್ರಚಾರಕ್ಕೆ ಹೆಚ್ಚು ಗಮನಕೊಡುತ್ತಿವೆ.

ಕರ್ನಾಟಕ ರಾಜ್ಯದಲ್ಲಿ ಶೇ.66.64 ಅಕ್ಷರಸ್ಥರಿದ್ದಾರೆ. ಗಂಡಸರಲ್ಲಿ ಶೇ.76.10, ಹೆಂಗಸರಲ್ಲಿ ಶೇ.56.87 ಅಕ್ಷರಸ್ಥರು. ಹಳ್ಳಿಗಳಲ್ಲಿ ಸಾಕ್ಷರತೆ ಶೇ.19.9, ಪಟ್ಟಣಗಳಲ್ಲಿ ಶೇ.44.3. ಸಾಕ್ಷರತೆಯ ಮಟ್ಟ ದೆಹಲಿಯಲ್ಲಿ ಶೇ.81.67 ಕೇರಳದಲ್ಲಿ ಶೇ.90.86 ತಮಿಳುನಾಡಿನಲ್ಲಿ ಶೇ.30.2. ಬಿಹಾರ, ರಾಜಸ್ತಾನ, ಮಧ್ಯಪ್ರದೇಶ, ಉತ್ತರಪ್ರದೇಶಗಳಲ್ಲಿ ಸಾಕ್ಷರತೆ ಬಹಳ ಕಡಿಮೆ. ಕರ್ನಾಟಕ ರಾಜ್ಯದಲ್ಲಿ ಸಾಕ್ಷರತೆಯನ್ನು ಪ್ರಸಾರ ಮಾಡುವ ಕೆಲಸ ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗಲೇ (1912) ಪ್ರಾರಂಭವಾಯಿತು. ಕಾರಣಾಂತರಗಳಿಂದ ನಿಂತಿದ್ದ ಆ ಕಾರ್ಯವನ್ನು 1941ರಿಂದ ಈಚೆಗೆ ಸಂಸ್ಥಾನದ ವಯಸ್ಕರ ಶಿಕ್ಷಣಸಮಿತಿ ಕೈಗೊಂಡಿದೆ. ಅದು ಸಾಕ್ಷರತೆಯ ಮಟ್ಟವನ್ನು ಈ ನಿರ್ಣಯಗಳಿಂದ ಸೂಚಿಸಿದೆ. ವೃತ್ತಪತ್ರಿಕೆಗಳಲ್ಲಿ ಬರುವ ಲೇಖನ, ವರ್ತಮಾನ, ಜಾಹೀರಾತು ಮೊದಲಾದವುಗಳನ್ನು ಓದಿ ಅರ್ಥಮಾಡಿಕೊಳ್ಳುವುದು. ಸುಲಭ ಲೆಕ್ಕಾಚಾರವನ್ನೂ 1–100ರವರೆಗಿನ ಅಂಕಿಗಳನ್ನೂ ತಿಳಿದಿರುವುದು. ಬಂಧುವಿಗೆ ಒಂದು ಕಾಗದವನ್ನು ಬರೆಯುವ ಶಕ್ತಿ, ಬಂದ ಉತ್ತರವನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿ ಪಡೆದಿರುವುದು. ಈ ಮಟ್ಟವನ್ನು ಸಾಧಿಸಲು ನಿರ್ದಿಷ್ಟ ಪಠ್ಯಪುಸ್ತಕಗಳ ಸಹಾಯದಿಂದ ಕೇವಲ 150 ಗಂಟೆಗಳಲ್ಲಿ (5–6 ತಿಂಗಳು) ವಯಸ್ಕರಿಗೆ ಓದು ಬರೆಹ ಕಲಿಸುವ ಯೋಜನೆಯನ್ನು ಸಮಿತಿ ಆಚರಣೆಗೆ ತಂದಿದೆ. ಬೇಗ ಕಲಿತ ಅಕ್ಷರ ಮರೆತು, ನಿರಕ್ಷರತೆಗೆ ಪುನಃ ಜಾರದಿರಲೆಂದು ಹೊಸದಾಗಿ ಅಕ್ಷರಕಲಿತ ವಯಸ್ಕರಿಗಾಗಿಯೇ ವಿಶೇಷ ರೀತಿಯಲ್ಲಿ ರಚಿಸಿದ ಬೆಳಕು ವಾರಪತ್ರಿಕೆಯನ್ನೂ ಮೂರು ಹಂತಗಳ ಓದುಪುಸ್ತಕಗಳನ್ನೂ ಕಿರುಹೊತ್ತಗೆಗಳ ಮಾಲೆಯನ್ನೂ ಸಮಿತಿ ಪ್ರಕಟಿಸುತ್ತಿದೆ (**ನೋಡಿ– ವಯಸ್ಕರ–ಶಿಕ್ಷಣ**). (ಕೆ.ಎಸ್.ಎಂ.)

**ಅಕ್ಷರಲಿಪಿ ಚರಿತ್ರೆ :** ಚಿಹ್ನೆಗಳ ಮೂಲಕ ಅಭಿಪ್ರಾಯ ಅಥವಾ ಶಬ್ದವನ್ನು ಸೂಚಿಸುವ ಸಾಧನವೇ ಲಿಪಿ. ಲಿಪಿಗಳಲ್ಲಿ ಅನೇಕ ವಿಧಗಳಿವೆ. ಇವುಗಳಲ್ಲಿ ಅಕ್ಷರ ಮಾಲಾಲಿಪಿ (ಆಲ್ಫಬೆಟಿಕ್‌ರೈಟಿಂಗ್) ಬಹಳ ಮುಂದುವರಿದುದು. ಇದರಲ್ಲಿ ಪ್ರತಿಯೊಂದು ಚಿಹ್ನೆಗೂ ಅಕ್ಷರಕ್ಕೂ ಒಂದು ಸ್ಪಷ್ಟವಾದ, ಸಾಮಾನ್ಯವಾಗಿ ಎಲ್ಲರಿಂದಲೂ ಮಾನ್ಯ ಪಡೆದ, ಒಂದು ಅಥವಾ ಅನೇಕ ಶಬ್ದಗಳ ಮೌಲ್ಯ ಇರುತ್ತದೆ. ಬರೆಯುವ ಚಿಹ್ನೆಗೂ ಉಚ್ಚರಿಸುವ ಶಬ್ದಕ್ಕೂ ಯಾವುದೇ ವಿಧವಾದ ಸಂಬಂಧವೂ ಇರುವುದಿಲ್ಲವೆಂದು ಹೇಳಬಹುದು. ಅಂದರೆ ಂ ಎಂಬ ಅಕ್ಷರವನ್ನು ಬರೆಯುವ ವಿಧಾನಕ್ಕೂ ಅದೇ ಅಕ್ಷರವನ್ನು ಉಚ್ಚರಿಸುವ ಶಬ್ದಕ್ಕೂ ಯಾವ ವಿಧವಾದ ಸಂಬಂಧವನ್ನು ಕಲ್ಪಿಸುವುದು ಕಷ್ಟ ಆದ್ದರಿಂದ ಅಕ್ಷರಲಿಪಿ ಉಚ್ಚರಿತಶಬ್ದದ ಒಂದು ಸಂಕೇತ. ಆದರೆ ಚಿತ್ರಲಿಪಿ, ಭಾವಲಿಪಿ ಮುಂತಾದುವು ಅಕ್ಷರಲಿಪಿಗಳಲ್ಲ. ಅವುಗಳನ್ನು ಅನಕ್ಷರಲಿಪಿಗಳು (ನಾನ್‌ಆಲ್ಫಬೆಟಿಕ್) ಎಂದು ಕರೆಯಬಹುದು. ಏಕೆಂದರೆ ಅವುಗಳಲ್ಲಿ ಬರೆಯುವ ಚಿಹ್ನೆಗೂ ಉಚ್ಚರಿಸುವ ಶಬ್ದಕ್ಕೂ ನಿಕಟ ಸಂಬಂಧವಿರುತ್ತದೆ.

ಅನಕ್ಷರಲಿಪಿಯ ಬೆಳೆವಣಿಗೆ ಮತ್ತು ವಿಕಾಸದಿಂದ ಅಕ್ಷರಮಾಲಾಲಿಪಿ ಉಗಮವಾಯಿತು ಎಂಬ ವಾದವನ್ನು ಎಲ್ಲರೂ ಒಪ್ಪುತ್ತಾರೆ. ಮಾನವ ತನ್ನ ನಾಗರಿಕತೆಯ ಪ್ರಾರಂಭ ದೆಶೆಯಲ್ಲಿ, ಚಿತ್ರಲಿಪಿ, ಭಾವಲಿಪಿ ಮುಂತಾದ ಅನಕ್ಷರಲಿಪಿಗಳನ್ನು ಉಪಯೋಗಿಸಿ, ಅವುಗಳಲ್ಲಿದ್ದ ನ್ಯೂನತೆಗಳನ್ನು ಸರಿಪಡಿಸಿ, ಸಮರ್ಪಕವಾದ ಅಕ್ಷರಲಿಪಿಗೆ ತಳಹದಿಯನ್ನು ಹಾಕಿದ. ಚರಿತ್ರಪೂರ್ವಕಾಲದ, ಶಿಲಾಯುಗದ ಮಾನವ ಗುಹೆಗಳಲ್ಲಿ ಚಿತ್ರಗಳನ್ನು ಗೀಚುವ ಅಭ್ಯಾಸವನ್ನು ಇಟ್ಟುಕೊಂಡಿದ್ದರೂ ಅವು ಬರೆವಣಿಗೆಯ ದೃಷ್ಟಿಯಿಂದ ನಿರ್ಮಾಣವಾದವೆಂದು ಹೇಳಲಾಗುವುದಿಲ್ಲ.

ಅನಕ್ಷರಲಿಪಿಯ ಬೆಳೆವಣಿಗೆಯಲ್ಲಿ ಮುಖ್ಯವಾದ ಮೂರು ಮೂಲ ಅವಸ್ಥೆಗಳನ್ನು ನಾವು ಕಾಣಬಹುದು. ಮೊದಲನೆಯದು ಬೀಜರೂಪವಾದ ಬರೆವಣಿಗೆ (ಎಂಬ್ರಿಯೋರೈಟಿಂಗ್). ಇದರಲ್ಲಿ ಅನೇಕ ವಿಧವಾದ ಜ್ಯಾಮಿತಿಯ ಸಂಕೇತಗಳು ಚಿಹ್ನೆಗಳು ವೃತ್ತಗಳು ರೇಖೆಗಳು ಮತ್ತು ಇತರ ಗುರುತುಗಳನ್ನು ಕಾಣುತ್ತೇವೆ. ಎರಡನೆಯದು ಬಿಂಬರೂಪ ಮತ್ತು ತಾಂತ್ರಿಕಮತಗಳಲ್ಲಿ ಉಪಯೋಗಿಸುವ ರೀತಿಯ ಸೂಚ್ಯಾತ್ಮಕ ಚಿಹ್ನೆಗಳು (ಐಕನಾಗ್ರಫಿ ಮತ್ತು ಸಿಂಪತೆಟಿಕ್ ಮ್ಯಾಜಿಕ್). ಮೂರನೆಯದು ಸ್ಮರಣೆಗೆ ಸಹಾಯಕವಾದ (ನೆಮೋನಿಕ್) ಸಾಧನಗಳು. ಉದಾಹರಣೆಗೆ ಪೆರು ಸಂಸ್ಕೃತಿಯಲ್ಲಿ ಬಣ್ಣದ ದಾರಗಳಿಂದ ಒಂದು ಅಥವಾ ಅನೇಕ ಗಂಟುಗಳನ್ನು ಹಾಕುವುದು ಬಹು ಸಾಮಾನ್ಯವಾದ ಪದ್ಧತಿಯಾಗಿತ್ತು. ಈ ಗಂಟುಗಳು ಲೆಕ್ಕಕ್ಕೆ ಉಪಯೋಗಿಸಲ್ಪಡುತ್ತಿದ್ದುವು. ಅದೇ ರೀತಿಯಲ್ಲಿ ಚಾಕುವಿನಿಂದ ಮರದ ಕೊಂಬೆಗಳ ಮೇಲೆ ಗೀರುಗಳನ್ನು ಮಾಡಿ ಈ ಗೀರುಗಳ ಅರ್ಥವನ್ನು ಸುದ್ದಿಗಾರರಿಗೆ ತಿಳಿಸಿದರೆ, ಸುದ್ದಿಗಾರ ಅದನ್ನು ಮತ್ತೊಂದು ದೇಶದ ರಾಜನಿಗೆ ವಿವರಿಸುತ್ತಿದ್ದ ಪದ್ಧತಿಯೂ ಇದ್ದಿತೆಂದು ಗೊತ್ತಾಗುತ್ತದೆ. ಅಕ್ಷರಲಿಪಿಯ ಬೆಳೆವಣಿಗೆಯಲ್ಲಿ ಚಿತ್ರಲಿಪಿ (ಪಿಕ್ಟೊಗ್ರಫಿಕ್ ಸ್ಕ್ರಿಪ್ಟ್), ಭಾವಲಿಪಿ (ಐಡಿಯೋಗ್ರಫಿಕ್ ಸ್ಕ್ರಿಪ್ಟ್), ಪದಸೂಚಕಲಿಪಿ (ಫೋನಟಿಕ್ ಸ್ಕ್ರಿಪ್ಟ್) ಏಕಶಬ್ದಾತ್ಮಕ ವರ್ಣಲಿಪಿಗಳು (ಸಿಲಬರಿ) ಕ್ರಮವಾದ ಹಂತಗಳು.

ಚಿತ್ರಲಿಪಿಯೇ ಬರೆವಣಿಗೆಯ ಅತ್ಯಂತ ಪ್ರಾಚೀನವಾದ ಅವಸ್ಥೆ. ಚಿತ್ರಗಳಲ್ಲಿ ಉಚ್ಚಾರಣ ಧ್ವನಿಗಳಿಲ್ಲ. ಬರೆಯಲ್ಪಟ್ಟ ವಸ್ತುವಿನ ಅಭಿಪ್ರಾಯ ಬರೆದ ಚಿತ್ರದ ಮೂಲಕ ಮಾತ್ರ ಉಂಟಾಗುತ್ತದೆ. ಒಂದು ಸಣ್ಣ ವೃತ್ತಾಕಾರ ಸೂರ್ಯನನ್ನೂ, ಆನೆಯ ಚಿತ್ರ ಆನೆಯನ್ನೂ ತೋರಿಸುವುದೇ ಚಿತ್ರಲಿಪಿಯ ಮೂಲೋದ್ದೇಶ. ಚಿತ್ರಲಿಪಿ ಪ್ರಾಚೀನಪ್ರಪಂಚದ ಈಜಿಪ್ಟ್, ಮೆಸಪೊಟೇಮಿಯ, ಫೋನೀಷಿಯ, ಕ್ರೀಟ್, ಸ್ಪೇನ್ ಮುಂತಾದ ಅನೇಕ ಕಡೆಗಳಲ್ಲಿ ಉಪಯೋಗದಲ್ಲಿತ್ತು.

ಭಾವಲಿಪಿ ಚಿತ್ರಲಿಪಿಗಿಂತ ಹೆಚ್ಚು ಮುಂದುವರಿದುದು. ಇದರಲ್ಲಿನ ಚಿತ್ರಗಳು ಅವುಗಳ ಹಿಂದೆ ಅಡಗಿರುವ ಭಾವವನ್ನು ವ್ಯಕ್ತಪಡಿಸುತ್ತವೆ. ಒಂದು ಸಣ್ಣ ವೃತ್ತ ಚಿತ್ರಲಿಪಿಯಲ್ಲಿ ಸೂರ್ಯನನ್ನು ತಿಳಿಸಿದರೆ, ಭಾವಲಿಪಿಯಲ್ಲಿ ಸೂರ್ಯನ ಶಾಖ, ಬಿಸಿಲು, ಹಗಲು

ಅಥವಾ ಸೂರ್ಯದೇವ ಎಂಬ ಅರ್ಥಗಳನ್ನು ಕೊಡುತ್ತದೆ. ಅದೇ ರೀತಿಯಲ್ಲಿ ಹೋಗುವುದು ಎನ್ನುವ ಅರ್ಥ ಬರಲು ಎರಡು ಕಾಲುಗಳನ್ನು ತೋರಿಸಬಹುದು. ವಿಶೇಷ ಪರಿವರ್ತನೆ ಹೊಂದಿದ ಭಾವಲಿಪಿಗೂ ಮತ್ತು ಪದ ಸೂಚಕಲಿಪಿಗೂ ಮಧ್ಯದಲ್ಲಿರುವ ಲಿಪಿಯನ್ನು ವಿದ್ವಾಂಸರು ಮಧ್ಯಮಾವಸ್ಥೆಯ ಲಿಪಿ (ಟ್ರ್ಯಾನ್ಸಿಷನಲ್ ಸ್ಕ್ರಿಪ್ಟ್) ಎಂದು ಕರೆಯುತ್ತಾರೆ. ಈ ವರ್ಗಕ್ಕೆ ಕ್ಯೂನಿಫಾರಂ, ಹೈರೊಗ್ಲಿಫಿಕ್, ಕ್ರೀಟ್ ದೇಶದ ಲಿಪಿ, ಸಿಂಧೂಲಿಪಿ, ಹಿಟ್ಟೈಟ್‌ಲಿಪಿ, ಚೀನಿಲಿಪಿ, ಮಧ್ಯಅಮೆರಿಕ ಮತ್ತು ಮೆಕ್ಸಿಕೊಗಳ ಲಿಪಿ, ಈಸ್ಟರ್ ದ್ವೀಪಗಳ ಲಿಪಿ ಮುಂತಾದ



**1. ಅಜೀಲಿಯನ್ (ಸೂಚ್ಯಾತ್ಮಕ) ಬಣ್ಣದ ಕಲ್ಲುಗಳು. 2. ಪ್ರಾಗೈತಿಹಾಸಿಕ ಕಾಲದ ಚಿಹ್ನೆಗಳು. 3. ನೆಮೋನಿಕ್ ಸಾಧನಗಳು. 4. ಹೈರೊಗ್ಲಿಫಿಕ್ ಚಿಹ್ನೆಗಳು. 5. ಕ್ರೀಟನ್ ಲಿಪಿ. 6. ಹಿಟ್ಟೈಟ್ ಲಿಪಿ. 7. ಮಾಯ ಲಿಪಿ. 8 ಮತ್ತು 9 ಬಿಬ್ಲೋಸ್‌ನ ಏಕಶಬ್ದಾತ್ಮಕ ವರ್ಣಲಿಪಿ. 10. ಕ್ಯೂನಿಫಾರಂ. 11. ಅರಾಮೇಯಿಕ್. 12. ಪ್ರಾಚೀನ ಗ್ರೀಕ್. 13. ಪ್ರಾಚೀನ ಲ್ಯಾಟಿನ್.**

ಲಿಪಿಗಳು ಸೇರುತ್ತವೆ. ಕ್ಯೂನಿಫಾರಂ ಲಿಪಿ (ಬೆಣೆಯಾಕಾರ) ಸುಮೇರಿಯನ್ ಜನಗಳಿಂದ ಪ್ರ.ಶ.ಪೂ. ನಾಲ್ಕನೆಯ ಸಹಸ್ರಮಾನದಲ್ಲಿಯೇ ಉಪಯೋಗಿಸಲ್ಪಡುತ್ತಿದ್ದಿತೆಂದು ಹೇಳಲು ಆಧಾರಗಳಿವೆ. ಸುಮೇರಿಯನ್ನರ ಅನಂತರ ಬ್ಯಾಬಿಲೋನಿಯನ್, ಅಸ್ಸೀರಿಯನ್, ಎಲಾಮೈಟ್, ಹಿಟ್ಟೈಟ್, ಕ್ಯಾಸೈಟ್, ಪರ್ಷಿಯನ್ ಮುಂತಾದ ಜನ ಕ್ಯೂನಿಫಾರಂ ಲಿಪಿಯನ್ನು ಬಳಸುತ್ತಿದ್ದರು. ಕ್ರಿಸ್ತಶಕದ ಆರಂಭದ ಹೊತ್ತಿಗೆ ಕ್ಯೂನಿಫಾರಂ ಲಿಪಿಯ ಬಳಕೆ ನಿಂತುಹೋಯಿತು. ಕ್ಯೂನಿಫಾರಂನಲ್ಲಿ ರೇಖಾರೂಪದ ಮತ್ತು ಬೆಣೆಯಾಕಾರದ ಚಿಹ್ನೆಗಳೇ ವಿಶೇಷವಾಗಿವೆ.

ಹೈರೊಗ್ಲಿಫಿಕ್ (ಕೆತ್ತಿದ ಪವಿತ್ರಾಕ್ಷರ) ಬರವಣಿಗೆ ಪ್ರಾಚೀನ ಪ್ರಪಂಚದ ಅತ್ಯಂತ ಮುಖ್ಯಲಿಪಿಗಳಲ್ಲೊಂದು. ಇದು ಈಜಿಪ್ಟಿನಲ್ಲಿ ಉಗಮವಾಗಿ, ಸುಮಾರು ಪ್ರ.ಶ.ಪೂ.3500ರಲ್ಲಿಯೇ ಬಳಕೆಯಲ್ಲಿತ್ತು. ಇದು ಪ್ರಾಚೀನ ಈಜಿಪ್ಟಿನ ದೇವಲಿಪಿ. ಹೈರೊಗ್ಲಿಫಿಕ್ ಲಿಪಿಯಲ್ಲಿ ಪದಸೂಚಕ ಚಿಹ್ನೆಗಳೂ ಏಕಶಬ್ದಸೂಚಕ ಚಿಹ್ನೆಗಳೂ ಇವೆ. ಸಿಮಿಟಿಕ್ ಭಾಷೆಯಲ್ಲಿದ್ದಂತೆ ಇದರಲ್ಲಿ ವ್ಯಂಜನಗಳನ್ನು ಮಾತ್ರ ಲಿಪಿಯಲ್ಲಿ ಸೂಚಿಸುತ್ತಿದ್ದರು. ಸ್ವರಗಳ ಬಳಕೆ ಇರಲಿಲ್ಲ. ಈ ಚಿಹ್ನೆಗಳು ಬಲದಿಂದ ಎಡಕ್ಕೆ ಬರೆಯಲ್ಪಡುತ್ತಿದ್ದುವು. ಹೈರೊಗ್ಲಿಫಿಕ್ ಲಿಪಿ ಈಜಿಪ್ಟಿನಲ್ಲಿ ಪ್ರ.ಶ. 6ನೆಯ ಶತಮಾನದವರೆಗೂ ಬಳಕೆಯಲ್ಲಿತ್ತು. ಈಜಿಪ್ಟಿನ ರಾಜಪುರೋಹಿತರು ಪ್ಯಾಪೈರಸ್ ಎಂಬ ಕಾಗದದ ಮೇಲೆ ಬರೆಯುತ್ತಿದ್ದ ಲಿಪಿಗೆ ಹೈರಾಟಿಕ್‌ಲಿಪಿ ಎಂದು ಹೆಸರು. ಇದು ಹೈರೊಗ್ಲಿಫಿಕ್‌ಲಿಪಿಯ ಜೊತೆಯಲ್ಲಿಯೇ ಸುಮಾರು ಪ್ರ.ಶ. 3ನೆಯ ಶತಮಾನದವರೆಗೂ ಪವಿತ್ರ ಗ್ರಂಥಗಳನ್ನು ಬರೆಯಲು ಉಪಯೋಗಿಸಲ್ಪಡುತ್ತಿತ್ತು. ಲೆಕ್ಕಗಳನ್ನು ಬರೆಯಲು ಡೆಮೋಟಿಕ್ ಎಂಬ ಮತ್ತೊಂದು ಲಿಪಿ ಈಜಿಪ್ಟಿನಲ್ಲಿ ಪ್ರ.ಶ.ಪೂ. 7ನೆಯ ಶತಮಾನದಿಂದ ಪ್ರ.ಶ. 6ನೆಯ ಶತಮಾನದವರೆಗೆ ಬಳಕೆಯಲ್ಲಿತ್ತು.

ಕ್ರೀಟ್ ದೇಶದ ಪ್ರಾಚೀನ ಮಿನೋವನ್ ಮತ್ತು ಮಧ್ಯ – ಮಿನೋವನ್ ನಾಗರಿಕತೆಗಳಿಗೆ ಸಂಬಂಧಿಸಿದ ಚಿತ್ರಲಿಪಿ ಮತ್ತು ಭಾವಲಿಪಿಗಳನ್ನುಳ್ಳ ಮಣ್ಣಿನ ಮುದ್ರೆಗಳು ದೊರಕಿವೆ. ಮಧ್ಯ – ಮಿನೋವನ್ ನಾಗರಿಕತೆಯ ಕೊನೆಯ ಭಾಗದಲ್ಲಿ ಎರಡು ವಿಧವಾದ ರೇಖಾಲಿಪಿಗಳು ಬೆಳೆದುವು. ಅವುಗಳನ್ನು ಲೀನಿಯರ್ ಎ ಮತ್ತು ಬಿ ಎಂದು ವ್ಯವಹರಿಸುತ್ತಾರೆ. ಲೀನಿಯರ್ ಎ ಲಿಪಿಗಿಂತ ಲೀನಿಯರ್ ಬಿ ಲಿಪಿ ವಿಶೇಷ ವಿಕಾಸ ಹೊಂದಿದೆ. ಇವುಗಳಲ್ಲಿ ಸು. 70 ಚಿಹ್ನೆಗಳಿವೆ. ಈ ಎರಡು ಲಿಪಿಗಳೂ ಪ್ರ.ಶ.ಪೂ. 1600 ಮತ್ತು 1400 ರಿಂದ 400 ವರ್ಷಗಳ ಕಾಲ ಬಳಕೆಯಲ್ಲಿದ್ದವು. ಕ್ರೀಟನ್‌ಲಿಪಿ ಈಜಿಪ್ಟಿನ ಹೈರೊಗ್ಲಿಫಿಕ್ ಲಿಪಿಯಿಂದ ಪ್ರಭಾವಿತಗೊಂಡು ಉಗಮವಾಯಿತೆಂದು ಕೆಲವು ವಿದ್ವಾಂಸರು ಭಾವಿಸುತ್ತಾರೆ. ಆದರೆ ಲೀನಿಯರ್ ಎ ಮತ್ತು ಬಿ ಲಿಪಿಗಳು ಕ್ರೀಟನ್ ಜನಗಳಿಂದಲೇ ಕಂಡುಹಿಡಿಯಲ್ಪಟ್ಟಿತೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ.

ಭಾರತದಲ್ಲಿ ಸುಮಾರು ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಪ್ರಚಾರದಲ್ಲಿದ್ದ ಸಿಂಧೂಲಿಪಿ ಇನ್ನೂ ಗೋಪ್ಯಲಿಪಿಯಾಗಿಯೇ ಉಳಿದಿರುವುದರಿಂದ, ಈ ಲಿಪಿಯ ಆಂತರಿಕ ಲಕ್ಷಣಗಳನ್ನು ನಿರೂಪಿಸುವುದು ಕಷ್ಟ. ಕೇವಲ ಬಾಹ್ಯಲಕ್ಷಣಗಳನ್ನು ಮಾತ್ರ ಗಮನಿಸಬಹುದು. ಸುಮಾರು ಒಂದು ಸಾವಿರ ಕಲ್ಲಿನ ಮತ್ತು ತಾಮ್ರದ ಮುದ್ರೆಗಳು ಸಿಂಧೂನಾಗರಿಕತೆಯ ಅನೇಕ ಸ್ಥಳಗಳಲ್ಲಿ ದೊರಕಿವೆ. ಸಿಂಧೂ ಬರೆವಣಿಗೆಯಲ್ಲಿ ಕೊನೆಯ ಪಕ್ಷ ಮುನ್ನೂರು ಸಂಕೇತಗಳನ್ನು ಕಾಣುತ್ತೇವೆ. ಇಷ್ಟೊಂದು ಸಂಕೇತಗಳಿರುವುದರಿಂದ, ಈ ಲಿಪಿ ವರ್ಣಾನುಕ್ರಮದ ಅಥವಾ ಉಚ್ಚಾರಾಂಶದ ಲಿಪಿಯಲ್ಲವೆಂದು ಹೇಳಬಹುದು. ಸಿಂಧೂಲಿಪಿ ಈಜಿಪ್ಟಿನ ಹೈರೊಗ್ಲಿಫಿಕ್‌ಲಿಪಿಗಿಂತ ಹೆಚ್ಚು ಬೆಳವಣಿಗೆಯನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಪ್ರಾಣಿಗಳ ಚಿಹ್ನೆಗಳಿಗಿಂತ ಏಣಿ ಚೌಕ ವೃತ್ತ ಮುಂತಾದ ಚಿಹ್ನೆಗಳೇ ಹೆಚ್ಚು. ಆದುದರಿಂದ ಇದು ಭಾವಲಿಪಿ ಮತ್ತು ಭಾಷಾಧ್ವನಿನಿರೂಪಕ ಲಿಪಿಯ ಮಿಶ್ರಣವೆಂದು ಹೇಳಬಹುದು. ಸುಮೇರಿಯನ್ ಲಿಪಿಗಳಿಗೂ ಸಿಂಧೂಲಿಪಿಗೂ ಅನೇಕ ಹೋಲಿಕೆಗಳಿರುವುದ ರಿಂದ, ಇದು ಸುಮೇರಿಯದಿಂದ ಭಾರತಕ್ಕೆ ಬಂದಿದ್ದು ಎಂದು ವ್ಯಾಡಲ್ ಎಂಬ ವಿದ್ವಾಂಸ ವಾದಿಸಿದ್ದಾನೆ. ಹಿರಾಸ್ ಎಂಬ ವಿದ್ವಾಂಸ ಇದು ದ್ರಾವಿಡಲಿಪಿಯೆಂದು ಭಾವಿಸುತ್ತಾನೆ. ಸಿಂಧೂಲಿಪಿಗೂ ಎಲಾಮೈಟ್‌ಲಿಪಿಗೂ ಹೋಲಿಕೆಗಳಿವೆ. ಆದರೆ ಅಷ್ಟರಿಂದಲೇ ಈ ಲಿಪಿಯ ಉಗಮದ ವಿಚಾರವನ್ನು ನಿರ್ಧರಿಸುವುದು ಸಾಧ್ಯವಿಲ್ಲ. ಸಿಂಧೂಲಿಪಿಯೇ ಭಾರತದಲ್ಲಿ ವಿಕಾಸಹೊಂದಿ ಬ್ರಾಹ್ಮೀಲಿಪಿಯಾಯಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಏಷ್ಯಮೈನರ್ ಮತ್ತು ಉತ್ತರ ಸಿರಿಯ ದೇಶದ ಹಿಟ್ಟೈಟ್ ಜನಗಳು ಪ್ರ.ಶ.ಪೂ. 1500ರ ಸುಮಾರಿನಲ್ಲಿ ಹೈರೊಗ್ಲಿಫಿಕ್ ಲಿಪಿಯನ್ನೂ ಕ್ಯೂನಿಫಾರಂ ಲಿಪಿಯನ್ನೂ ಉಪಯೋಗಿಸುತ್ತಿದ್ದರು. ಹಿಟ್ಟೈಟ್ ಚಿತ್ರಲಿಪಿಯಲ್ಲಿ ಒಂದು ಸಾಲು ಎಡದಿಂದ ಬಲಕ್ಕೂ ಮುಂದಿನ ಸಾಲು ಬಲದಿಂದ ಎಡಕ್ಕೂ ಬರೆಯಲ್ಪಡುತ್ತಿತ್ತು. ಹಿಟ್ಟೈಟ್‌ಲಿಪಿ ಈಜಿಪ್ಟಿನ ಹೈರೊಗ್ಲಿಫಿಕ್ ಲಿಪಿಯಿಂದ ಉಗಮವಾಯಿತೆಂದು ಕೆಲವರು ವಾದಿಸುತ್ತಾರೆ. ಮತ್ತೆ ಕೆಲವರು ಅದು ಕ್ರೀಟನ್‌ಲಿಪಿಯಿಂದ ಹುಟ್ಟಿತೆಂದು ಅಭಿಪ್ರಾಯಪಡುತ್ತಾರೆ.

ಚೀನಿಲಿಪಿ ಪ್ರಾಚೀನಕಾಲದಿಂದ ಇಂದಿನವರೆಗೂ ಹೆಚ್ಚು ಬದಲಾವಣೆಯಿಲ್ಲದೆ ಉಪಯೋಗಿಸಲ್ಪಡುತ್ತಿದೆ. ಚೀನಿ ಚಿತ್ರಲಿಪಿಗೂ ಈಜಿಪ್ಟಿನ ಮತ್ತು ಕ್ಯೂನಿಫಾರಂ ಲಿಪಿಗಳಿಗೂ ಹೋಲಿಕೆಗಳಿರುವುದರಿಂದ, ಚೀನಿಲಿಪಿ ಅವುಗಳಿಂದ ಉತ್ಪತ್ತಿಯಾಯಿತೆಂದು ಅನೇಕರು ಭಾವಿಸುತ್ತಾರೆ.

ಮಧ್ಯ ಅಮೆರಿಕ ಮತ್ತು ಮೆಕ್ಸಿಕೊಗಳಲ್ಲಿ ಆಜ್ಟೆಕ್ ಮತ್ತು ಮಾಯ ಲಿಪಿಗಳನ್ನು ಕಾಣುತ್ತೇವೆ. ಆಜ್ಟೆಕ್‌ಲಿಪಿಗಿಂತ ಮಾಯಲಿಪಿ ಹೆಚ್ಚು ವಿಕಾಸಹೊಂದಿದೆ.

ಏಕಶಬ್ದಾತ್ಮಕ ವರ್ಣಲಿಪಿ ಸಿರಿಯ ಮತ್ತು ಸೈಪ್ರಸ್‌ಗಳಲ್ಲಿ ಬಳಕೆಗೆ ಬಂದಿತು. ಬಿಬ್ಲೋಸ್ ಅಥವಾ ಸಿರಿಯದ ಲಿಪಿಯಲ್ಲಿ 114 ಸಂಕೇತಗಳಿವೆ. ಈ ಸಂಕೇತಗಳಲ್ಲಿ ಕೆಲವು ಈಜಿಪ್ಟಿನ ಕ್ಯೂನಿಫಾರಂ ಮತ್ತು ಸಿಂಧೂಲಿಪಿಯ ಚಿಹ್ನೆಗಳಿಗೆ ಹೋಲಿಕೆಗಳಿವೆ. ಈ ಲಿಪಿ ಪ್ರ.ಶ.ಪೂ. 14ನೆಯ ಶತಮಾನದಲ್ಲಿಯೇ ಬಳಕೆಯಲ್ಲಿತ್ತು; ಸಿಪ್ರಿಯೋಟ್ ಲಿಪಿಯೂ ರೇಖಾಸಂಕೇತಗಳಿಂದ ಕೂಡಿ. ಇದರಲ್ಲಿ ಸುಮಾರು ಐವತ್ತೈದು ಸಂಕೇತಗಳಿವೆ. ಸಾಮಾನ್ಯವಾಗಿ ಈ ಲಿಪಿ ಬಲದಿಂದ ಎಡಕ್ಕೆ ಬರೆಯಲ್ಪಡುತ್ತಿತ್ತು. ಸಿಪ್ರಿಯೋಟ್ ಲಿಪಿ ಕ್ರೀಟನ್ನಿನ ಲೀನಿಯರ್ ಲಿಪಿಯಿಂದ ಉತ್ಪತ್ತಿಯಾಯಿತೆಂದು ಎಲ್ಲರೂ ಒಪ್ಪುತ್ತಾರೆ. ಏಕಶಬ್ದಾತ್ಮಕ ವರ್ಣಲಿಪಿಯ ವರ್ಗಕ್ಕೆ ಜಪಾನಿನ ಕನ್ನ ಎಂಬ ಲಿಪಿ, ಉತ್ತರ ಅಮೆರಿಕದ ಚೆರೋಕೀ, ಆಫ್ರಿಕದ ವೈ ಮತ್ತು ಮೆಂಡೆ ಮುಂತಾದ ಲಿಪಿಗಳನ್ನು ಸೇರಿಸಬಹುದು.

ಮುಂದಿನ ಹಂತವೇ ಅಕ್ಷರಲಿಪಿ. ಅಕ್ಷರಲಿಪಿ ಎಲ್ಲಿ ಉಗಮವಾಯಿತು ಮತ್ತು ಅದು ಯಾವ ಜನಾಂಗದ ಕೊಡುಗೆ ಎಂಬ ಪ್ರಶ್ನೆಗಳು ಇನ್ನೂ ಚರ್ಚಾಸ್ಪದವಾಗಿಯೇ ಇದೆ. ಈಜಿಪ್ಟಿನ ಹೈರೊಗ್ಲಿಫಿಕ್ ಲಿಪಿ, ಸುಮೇರಿಯದ ಕ್ಯೂನಿಫಾರಂಲಿಪಿ, ಹೆಟ್ಟೈಟ್ ಭಾವಲಿಪಿ, ಸೈಪ್ರೆಸ್‌ನ ಭಾವಲಿಪಿ ಇವುಗಳಿಂದ ಅಕ್ಷರಲಿಪಿ ಹುಟ್ಟಿತೆಂದು ಕೆಲವು ವಿದ್ವಾಂಸರು


ಸಿಂಧೂ ಲಿಪಿ

ಅಭಿಪ್ರಾಯಪಡುತ್ತಾರೆ. ಆದರೆ ಸರ್ ಆರ್ಥರ್ ಇವಾನ್ಸ್ ಅಕ್ಷರಲಿಪಿ ಕ್ರೀಟಿನ ಲೀನಿಯರ್ ಲಿಪಿಗಳಿಂದ ಉಗಮವಾಯಿತೆಂದು ವಾದಿಸಿದ್ದಾನೆ. ಕ್ರೀಟ್‌ನಿಂದ ಅಕ್ಷರಲಿಪಿ ಪ್ಯಾಲಸ್ತೀನಿಗೆ ಫಿಲಿಸ್ಟೈನ್ ಜನಗಳಿಂದ ಒಯ್ಯಲ್ಪಟ್ಟಿತೆಂದೂ ಅದನ್ನು ಅವರಿಂದ ಫೋನೀಷಿಯನ್ನರೂ ಕಲಿತರೆಂದೂ ಇವಾನ್ಸನ ಅಭಿಪ್ರಾಯ. ಚರಿತ್ರಪೂರ್ವಯುಗದ ರೇಖಾಚಿತ್ರಗಳೇ ಮುಂದೆ ವಿಕಾಸಹೊಂದಿ ಅಕ್ಷರಗಳಾದವು ಎಂದು ಫ್ಲಿಂಡರ್ಸ್ ಪೆಟ್ರಿಯ ವಾದ. ಬಿಬ್ಲೊಸ್‌ನಲ್ಲಿ ದೊರಕಿರುವ ಭಾವಲಿಪಿಯೇ ಅಕ್ಷರದ ಮೂಲವೆಂದು ಮತ್ತೆ ಕೆಲವರು ವಾದಿಸುತ್ತಾರೆ. ಡಿರಿಂಜರ್ ಅವರು ಪ್ಯಾಲಸ್ತೀನ್ (ಅಕ್ಷರನಗರ) ಬಿಬ್ಲೊಸ್ (ಪುಸ್ತಕನಗರ) ಮತ್ತು ಸಿರಿಯಗಳು ಅಕ್ಷರಲಿಪಿಯ ಉಗಮಕ್ಕೆ ಬೇಕಾದ ಎಲ್ಲ ಮಾಹಿತಿಗಳನ್ನೂ ಒದಗಿಸುತ್ತವೆಂದು ಅಭಿಪ್ರಾಯಪಡುತ್ತಾರೆ. ಅಕ್ಷರಲಿಪಿಯ ಉಗಮಕ್ಕೆ ಒಂದೇ ಜನಾಂಗ ಕಾರಣವಲ್ಲದಿರಬಹುದೆಂದೂ ಪ್ರಾಚೀನ ಪ್ರಪಂಚದ ಅನೇಕ ಸಂಸ್ಕೃತಿಗಳ ಪ್ರಭಾವ ಮತ್ತು ಕೊಡುಗೆಗಳಿಂದ ಅಕ್ಷರಲಿಪಿ ಉಗಮವಾಗಿರಬೇಕೆಂದೂ ಡಿರಿಂಜರ್ ತನ್ನ ನಿರ್ಧಾರವನ್ನು ಸೂಚಿಸಿದ್ದಾನೆ.

ಪ್ರೋಟೋ ಸೆಮಿಟಿಕ್ ಲಿಪಿಯನ್ನು ದಕ್ಷಿಣ ಸಿಮಿಟಿಕ್ ಮತ್ತು ಉತ್ತರ ಸಿಮಿಟಿಕ್ ಎಂದು ಎರಡು ಭಾಗಗಳನ್ನಾಗಿ ಮಾಡಬಹುದು. ದಕ್ಷಿಣ ಸಿಮಿಟಿಕ್ ಲಿಪಿಯ ಒಂದು ಪ್ರಕಾರ ಅರೇಬಿಯ ಸಿನಾಯ್ ಸಿರಿಯಗಳಿಗೂ ಮತ್ತೊಂದು ಇಥಿಯೋಪಿಯಕ್ಕೂ ಪ್ರವೇಶಿಸಿ, ಅಲ್ಲಿ ಬೇರೆ ಬೇರೆ ಲಿಪಿಗಳಾಗಿ ಪರಿಣಮಿಸಿದುವು. ದಕ್ಷಿಣ ಅರೇಬಿಯನ್ ಲಿಪಿಗಳಲ್ಲಿ ಸಬೇಯನ್ ಲಿಪಿಯೂ ಉತ್ತರ ಅರೇಬಿಯನ್‌ನಲ್ಲಿ ಥಾಮುಡಿಕ್, ಡೆಡನೈಟ್ ಮತ್ತು ಸಫೈಟಿಕ್ ಲಿಪಿಗಳನ್ನೂ ಕಾಣಬಹುದು. ಕ್ಯಾನೈಟ್ ಎಂಬುದು ಉತ್ತರ ಸಿಮಿಟಿಕ್‌ಗೆ


ಬ್ರಾಹ್ಮೀ ಲಿಪಿ

ಸೇರಿದ ಒಂದು ವರ್ಗ. ಈ ಲಿಪಿಯನ್ನು ಪ್ರಾಚೀನಹೀಬ್ರೂ (ಮೋಬೈಟ್, ಎಡೊಮೈಟ್ ಮತ್ತು ಅಮೊನೈಟ್) ಮತ್ತು ಫಿನೀಷಿಯನ್ ಎಂದು ವಿಭಾಗಿಸಬಹುದು. ಫಿನೀಷಿಯನ್ ಅಕ್ಷರಲಿಪಿಯಿಂದ ಲಿಬಿಯನ್ ಮತ್ತು ಐಬೀರಿಯನ್ ಲಿಪಿಗಳು ಉಗಮವಾದುವು. ಅರಾಮೇಯಿಕ್ ಲಿಪಿಗಳು ಉತ್ತರ ಸಿಮಿಟಿಕ್ ವರ್ಗಕ್ಕೆ ಸೇರಿದವು. ಈ ಲಿಪಿಯ ಅತ್ಯಂತ ಪ್ರಾಚೀನ ಶಾಸನ ಪ್ರ.ಶ.ಪೂ. 9ನೆಯ ಶತಮಾನಕ್ಕೆ ಸೇರಿದ್ದು ಟೆಲ್ ಹಲಾಫ್‌ನಲ್ಲಿ ದೊರಕಿದೆ. ಪ್ರ.ಶ.ಪೂ. 500 ವರ್ಷಗಳ ಅನಂತರ ಅರಾಮೇಯಿಕ್ ಲಿಪಿ ಪರ್ಷಿಯದಲ್ಲಿ ವಿಶೇಷವಾಗಿ ಬಳಕೆಗೆ ಬಂದಿತು. ಆಫ್ಘಾನಿಸ್ಥಾನದಲ್ಲಿ ದೊರಕಿರುವ ಒಂದು ಅಶೋಕನ ಶಾಸನ ಅರಾಮೇಯಿಕ್ ಲಿಪಿಯಲ್ಲಿರುವುದು ಗಮನಾರ್ಹ. ಹೀಬ್ರೂ, ನಬತೇನ್, ಪಲ್ಮೈರೀನ್, ಸಿರಿಯಾಕ್, ಮಂಡೇನ್ ಮತ್ತು ಮನಿಷೇನ್ ಲಿಪಿಗಳು ಅರಾಮೇಯಿಕ್ ಲಿಪಿಯಿಂದ ಉತ್ಪತ್ತಿಯಾದುವು. ಇವೆಲ್ಲವೂ ಸಿಮಿಟಿಕ್ ವರ್ಗಕ್ಕೆ ಸೇರಿದವು. ಇದಕ್ಕೆ ಸೇರದ ಪಹ್ಲವಿ, ಖರೋಷ್ಠಿ, ಅವೆಸ್ತ, ಸೊಗಡಿಯನ್, ಮಂಗೋಲಿಯನ್ ಮುಂತಾದ ಲಿಪಿಗಳೂ ಅರಾಮೇಯಿಕ್ ಲಿಪಿಯಿಂದಲೇ ಉತ್ಪತ್ತಿಯಾದುವು.

ಭಾರತದ ವಾಯವ್ಯದಿಕ್ಕಿನ ದೇಶಗಳಲ್ಲಿ ಖರೋಷ್ಠಿಯನ್ನು ಕತ್ತೆಯ ಚರ್ಮದ ಮೇಲೆ ಬರೆಯುತ್ತಿದ್ದುದರಿಂದಲೂ ಈ ಬರವಣಿಗೆ ಡೊಂಕಾಗಿ ಇದ್ದುದರಿಂದಲೂ ಇದನ್ನು ಭಾರತೀಯರು ಕತ್ತೆಯ ತುಟಿ (ಖರ+ಓಷ್ಠ) ಎಂದು ಕುಚೋದ್ಯದಿಂದ ಕರೆದಿರಬಹುದು. ಆದರೆ ಖರೋಷ್ಠಿ ಎಂಬ ಪದ ಇರಾನಿಯನ್ ಭಾಷೆಯ ಖರಪೊಸ್ತ ಎಂಬ ಪದದಿಂದ ಬಂದಿರಬೇಕೆಂಬ ವಾದವನ್ನು ಎಲ್ಲರೂ ಒಪ್ಪುತ್ತಾರೆ. ಅರಾಮೇಯಿಕ್ ಲಿಪಿಗೂ ಖರೋಷ್ಠಿ ಲಿಪಿಗೂ ಬಹಳ ಹೋಲಿಕೆಗಳಿವೆ. ಖರೋಷ್ಠಿಲಿಪಿ ಸು. ಪ್ರ.ಶ..ಪೂ. 5ನೆಯ ಶತಮಾನದಲ್ಲಿ ಉಗಮವಾಗಿರಬೇಕು. ಭಾರತದಲ್ಲಿ ಈ ಲಿಪಿ ಇನ್ನೆಲ್ಲಿಯೂ ಬಳಕೆಗೆ ಬರದೆ, ಕೇವಲ ವಾಯುವ್ಯಗಡಿಯಲ್ಲಿ ಮಾತ್ರ ಉಪಯೋಗದಲ್ಲಿತ್ತು. ಅಶೋಕನ ಶಾಬಾಸ್‌ಗರಿ ಮುಂತಾದಲ್ಲಿನ ಶಾಸನಗಳು ಖರೋಷ್ಠಿ ಲಿಪಿಯಲ್ಲಿವೆ.

ಬ್ರಾಹ್ಮೀಲಿಪಿ ಪ್ರಾಚೀನ ಭಾರತದಲ್ಲಿ ವಿಶೇಷವಾಗಿ ಬಳಕೆಯಲ್ಲಿತ್ತು. ಬ್ರಹ್ಮನಿಂದ ರಚಿತವಾದ ಅಥವಾ ಬ್ರಹ್ಮವಿದ್ಯೆಗೋಸ್ಕರ ರಚಿತವಾದ ಈ ಲಿಪಿಗೆ ಬ್ರಾಹ್ಮೀ ಎಂದು ಹೆಸರಾಯಿತೆಂದು ಸಾಂಪ್ರದಾಯಿಕ ಮತ. ಆದರೆ ಬ್ರಾಹ್ಮೀಲಿಪಿ ಸಿಮಿಟಿಕ್ ಜನರ ಕೊಡುಗೆ


ಖರೋಷ್ಠಿ ಲಿಪಿ

ಎಂಬುದು ಬಹುಮಂದಿ ವಿದ್ವಾಂಸರ ಮತ. ಬ್ರಾಹ್ಮೀಲಿಪಿಯ ಅಕ್ಷರಗಳಿಗೂ ಅರಾಮೇಯಿಕ್‌ಲಿಪಿಗೂ ಅನೇಕ ಹೋಲಿಕೆಗಳಿರುವುದರಿಂದಲೂ ಅರಾಮೇಯಿನ್ ದೇಶಕ್ಕೂ ಭಾರತಕ್ಕೂ ವ್ಯಾಪಾರ ಸಂಬಂಧಗಳಿದ್ದುದರಿಂದಲೂ ಅರಾಮೇಯಿಕ್‌ಲಿಪಿಯೇ ಬ್ರಾಹ್ಮೀಲಿಪಿಯ ಉತ್ಪತ್ತಿಗೆ ಕಾರಣವೆಂದು ಕೆಲವರು ವಾದಿಸುತ್ತಾರೆ. ಬ್ರಾಹ್ಮೀಲಿಪಿ ಭಾರತದಲ್ಲಿಯೇ ಉಗಮವಾಯಿತೆನ್ನುವ ವಿದ್ವಾಂಸರು ಕೆಲವರಿದ್ದಾರೆ. ಈ ಲಿಪಿ ಸಿಂಧೂಲಿಪಿಯ ವಿಕಾಸದಿಂದ ಉಂಟಾಯಿತೆನ್ನುವ ವಿದ್ವಾಂಸರಿಗೂ ಕೊರತೆ ಇಲ್ಲ. ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರಾರಂಭವಾಗಿ ಬ್ರಾಹ್ಮೀಲಿಪಿಯ ಶಾಸನಗಳು ದೊರಕಿವೆ. ಅಶೋಕನ ಶಾಸನಗಳು ವಿಶೇಷವಾಗಿ ಈ ಲಿಪಿಯಲ್ಲಿವೆ. ಭಾರತದೇಶದ ಮತ್ತು ಆಗ್ನೇಯ ಏಷ್ಯದ ಎಲ್ಲ ಲಿಪಿಗಳೂ ಅಶೋಕನ ಕಾಲದ ಬ್ರಾಹ್ಮೀಲಿಪಿಯಿಂದ ಉತ್ಪತ್ತಿಯಾದವು. ಸಾತವಾಹನ, ಕದಂಬ, ಗಂಗ, ಬಾದಾಮಿಚಳುಕ್ಯ, ರಾಷ್ಟ್ರಕೂಟ, ಕಲ್ಯಾಣಿಚಾಳುಕ್ಯ, ಹೊಯ್ಸಳ, ವಿಜಯನಗರ ಕಾಲಗಳಲ್ಲಿ ಕ್ರಮೇಣ ವಿಕಾಸಹೊಂದಿ, ಇದು ಇಂದಿನ ಕನ್ನಡಲಿಪಿಯಾಗಿದೆ. ಇದೇ ರೀತಿಯಲ್ಲಿ ಉತ್ತರ ಮತ್ತು ದಕ್ಷಿಣ ಭಾರತದ ಎಲ್ಲ ಲಿಪಿಗಳೂ ಬ್ರಾಹ್ಮೀ ಲಿಪಿಗೆ ಋಣಿಯಾಗಿವೆ.

ಪಾಶ್ಚಾತ್ಯ ಲಿಪಿಗಳಿಗೆ ಮಾತೃಪ್ರಾಯವಾಗಿರುವ ಗ್ರೀಕ್‌ಲಿಪಿ, ಫಿನೀಷಿಯನ್ನರ ಲಿಪಿಯಿಂದ ಉಗಮವಾಯಿತೆಂಬ ವಾದವನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಪ್ರ.ಶ.ಪೂ. ಸು. 11ನೆಯ ಶತಮಾನದಲ್ಲಿ ಗ್ರೀಕರು ಫಿನೀಷಿಯನ್ನರಿಂದ ಲಿಪಿಯನ್ನು ಕಲಿತರು ಎಂದು ಹೇಳಬಹುದು. ಅತ್ಯಂತ ಪ್ರಾಚೀನ ಗ್ರೀಕ್‌ಲಿಪಿ ಬಲದಿಂದ ಎಡಕ್ಕೆ ಬರೆಯಲ್ಪಡುತ್ತಿತ್ತು. ಆದರೆ ಪ್ರ.ಶ. ಐದನೆಯ ಶತಮಾನದ ಅನಂತರ ಎಡದಿಂದ ಬಲಕ್ಕೂ ಮತ್ತು ಮೇಲಿನಿಂದ ಕೆಳಕ್ಕೂ ಬರೆಯಲ್ಪಡುತ್ತಿತ್ತು. ಗ್ರೀಕರ ಕೈಲಿ ಸಿಮಿಟಿಕ್ ವ್ಯಂಜನಗಳು ಉತ್ತಮವಾದ ವರ್ಣಮಾಲೆಯಾದುವು. ಗ್ರೀಕ್‌ಲಿಪಿಯಿಂದ ಎಟ್ರೂಸ್ಕನ್, ಲಿಡಿಯನ್, ಗ್ಲಗೋಲಿಟಿಕ್, ಸೈರಿಲಿಕ್ ಮುಂತಾದ ಅನೇಕ ಲಿಪಿಗಳು ಉತ್ಪತ್ತಿಯಾದುವು. ಲ್ಯಾಟಿನ್‌ಲಿಪಿ ಎಟ್ರೂಸ್ಕನ್‌ಲಿಪಿಯ ಮೂಲಕ ಗ್ರೀಕ್ ಲಿಪಿಯಿಂದ ಉಗಮವಾಯಿತೆಂದು ಎಲ್ಲರೂ ಒಪ್ಪುತ್ತಾರೆ. ಅತ್ಯಂತ ಪ್ರಾಚೀನ ಲ್ಯಾಟಿನ್‌ಲಿಪಿಯ ಶಾಸನ ಪ್ರ.ಶ.ಪೂ. 6ನೆಯ ಶತಮಾನಕ್ಕೆ ಸೇರಿದೆ. ಎಟ್ರೂಸ್ಕನ್ ವರ್ಣಮಾಲೆಯಲ್ಲಿ ಇಪ್ಪತ್ತಾರು ಅಕ್ಷರಗಳಿದ್ದುವು. ರೋಮನ್ನರು

ಗ್ರೀಕ್‌ಲಿಪಿಯ ತೀಟ, ಫೈ, ಖೈ ಎಂಬ ಅಕ್ಷರಗಳನ್ನು ಬಿಟ್ಟು ಉಳಿದ ಅಕ್ಷರಗಳನ್ನು ಲ್ಯಾಟಿನ್ನಿಗೆ ಅಳವಡಿಸಿಕೊಂಡರು. ಕಾಲಕ್ರಮೇಣ ಲ್ಯಾಟಿನ್ನಿನ ಅಕ್ಷರಗಳು ಈಗಿನ ಇಂಗ್ಲಿಷ್ ಲಿಪಿಗೆ ಸೇರಿದುವು. ಇಂಗ್ಲಿಷ್ ಭಾಷೆಯಲ್ಲಿ ವರ್ಣಮಾಲೆ (ಆಲ್ಫಬೆಟ್) ಎಂಬ ಪದ ಗ್ರೀಕರ ಆಲ್ಫ ಮತ್ತು ಬೀಟ ಎಂಬ ಎರಡು ಚಿಹ್ನೆಗಳಿಂದ ಬಂದಿದೆ. ಪ್ರಪಂಚದಲ್ಲಿರುವ ಇನ್ನೂ ಅನೇಕಾನೇಕ ಲಿಪಿಗಳು ಈ ಮೇಲೆ ನಿರೂಪಿತವಾಗಿರುವ ಒಂದಲ್ಲ ಒಂದು ಲಿಪಿಯಿಂದ ಉಗಮವಾದವುಗಳಾಗಿವೆ. (ಎ.ವಿ.ಎನ್.)

**ಅಕ್ಷಾಂಶ ಮತ್ತು ರೇಖಾಂಶ :** ಭೂಮಿಯ ಮೇಲಿನ ಸ್ಥಳಗಳನ್ನು ಸೂಚಿಸುವ ಕೋನನಿರ್ದೇಶಕಗಳು (ಲ್ಯಾಟಿಟ್ಯೂಡ್ ಮತ್ತು ಲಾಂಜಿಟ್ಯೂಡ್). ಭೂಮಿಯ ಅಕ್ಷಕ್ಕೆ ಲಂಬವಾಗಿರುವಂತೆ, ಕೇಂದ್ರದ ಮೂಲಕ ರಚಿಸಿದ ಸಮತಳ, ಭೂಗೋಳವನ್ನು ಒಂದು ಮಹಾವೃತ್ತದಲ್ಲಿ ಛೇದಿಸುವುದು. ಇದು ಸಮಭಾಜಕ ವೃತ್ತ (ಭೂಮಧ್ಯ ರೇಖೆ: ಟೆರೆಸ್ಟ್ರಿಯಲ್ ಇಕ್ವೇಟರ್, 1ನೆಯ ಚಿತ್ರದಲ್ಲಿ QR). ಇದಕ್ಕೆ ಸಮಾನಾಂತರವಾಗಿ ಉತ್ತರಕ್ಕೂ ದಕ್ಷಿಣಕ್ಕೂ ಎಳೆದ ಅಲ್ಪವೃತ್ತಗಳು ಉತ್ತರ ಮತ್ತು ದಕ್ಷಿಣ ಅಕ್ಷಾಂಶ ವೃತ್ತಗಳು. ಭೂಮಿಕೇಂದ್ರ O; P ಒಂದು ಸ್ಥಳ; ಸಮಭಾಜಕವೃತ್ತದ ಮೇಲೆ P ಯ ಅನುರೂಪಬಿಂದು T ಆಗಿದ್ದರೆ TOP ಕೋನ P ಸ್ಥಳದ ಅಕ್ಷಾಂಶ. ಆದ್ದರಿಂದ ಉತ್ತರ ಮೇರು ಮತ್ತು ದಕ್ಷಿಣ ಮೇರು




ಭೂಗೋಳೀಯ ಅಕ್ಷಾಂಶ ಮತ್ತು ರೇಖಾಂಶ

(N,S) ಅಕ್ಷಾಂಶಗಳು ಕ್ರಮವಾಗಿ $90^{\circ}$ ಉ. ಮತ್ತು $90^{\circ}$ ದ. ಯಾವುದೇ ಸ್ಥಳದ ಅಕ್ಷಾಂಶ ಇದಕ್ಕಿಂತ ಹೆಚ್ಚಾಗುವುದು ಅಸಾಧ್ಯ. ಆದ್ದರಿಂದ ಅಕ್ಷಾಂಶಗಳನ್ನು $0^{\circ}$ ಯಿಂದ (ಸಮಭಾಜಕವೃತ್ತದ ಮೇಲಿರುವ ಸ್ಥಳಗಳು) $90^{\circ}$ ಉ. ಅಥವಾ ದಕ್ಷಿಣದವರೆಗೆ ಸೂಚಿಸಲಾಗುವುದು.

ಅಕ್ಷದ ಮೂಲಕ (NS ರೇಖೆ) ಸಾಗುವ ಸಮತಳಗಳು ಭೂಮಿಯನ್ನು ಮಹಾವೃತ್ತಗಳಲ್ಲಿ ಛೇದಿಸುವುವು ಮತ್ತು ಸಮಭಾಗಿಸುವುವು. ಇಂಥ ಮಹಾವೃತ್ತಗಳು ಅಸಂಖ್ಯಾತವಾಗಿವೆ. ಅವೆಲ್ಲವೂ ಸಮಭಾಜಕವೃತ್ತ ಮತ್ತು ಇತರ ಅಕ್ಷಾಂಶ ವೃತ್ತಗಳಿಗೆ ಲಂಬವಾಗಿವೆ. ಇವುಗಳ ಹೆಸರು ರೇಖಾಂಶವೃತ್ತಗಳು. ಇಂಗ್ಲೆಂಡಿನ ಗ್ರೀನಿಚ್ ಮೂಲಕ ಸಾಗುವ ರೇಖಾಂಶವೃತ್ತವನ್ನು (ಹೆಸರು ಪ್ರಧಾನ ರೇಖಾಂಶವೃತ್ತ NBS ವೃತ್ತ) ಆಧಾರವಾಗಿಟ್ಟುಕೊಂಡು ಅಲ್ಲಿಂದ ಪೂರ್ವಕ್ಕೆ $0^{\circ}$ ಯಿಂದ $180^{\circ}$ ಮತ್ತು ಪಶ್ಚಿಮಕ್ಕೆ $0^{\circ}$ ಯಿಂದ $180^{\circ}$ ಗಳಾಗಿ (ಒಟ್ಟು $360^{\circ}$) ಭೂಗೋಳವನ್ನು ವಿಭಜಿಸಲಾಗಿದೆ. ಪ್ರಧಾನ ರೇಖಾಂಶವೃತ್ತ ಮತ್ತು P ಯ ಮೂಲಕ ಸಾಗುವ ರೇಖಾಂಶವೃತ್ತ ಇವೆರಡರ ನಡುವಣ ಕೋನ P ಸ್ಥಳದ ರೇಖಾಂಶ. ಗ್ರೀನಿಚ್‌ನಿಂದ P ಪೂರ್ವಕ್ಕೆ ಇದ್ದರೆ ಆ ರೇಖಾಂಶವನ್ನು ಪೂರ್ವ ರೇಖಾಂಶವೆಂದೂ ಪಶ್ಚಿಮಕ್ಕೆ ಇದ್ದರೆ ಪಶ್ಚಿಮ ರೇಖಾಂಶವೆಂದೂ ಹೇಳುತ್ತೇವೆ. BOP ಕೋನ P ಯ ರೇಖಾಂಶ.

ಹೀಗೆ ಒಂದು ಸ್ಥಳದ ಕೋನ ನಿರ್ದೇಶಕಗಳು ಏಕೈಕವಾಗಿವೆ ಮತ್ತು ಒಂದು ಜೊತೆ ಕೋನನಿರ್ದೇಶಕಗಳು ದತ್ತವಾಗಿರುವಾಗ ಅವು ಸೂಚಿಸುವ ಸ್ಥಳವೂ ಏಕೈಕವಾಗಿದೆ. ಋತುಭೇದಗಳನ್ನು ಅನುಸರಿಸಿ $23^{\circ}$ $27^{\prime}$ ಉತ್ತರ ಮತ್ತು ದಕ್ಷಿಣ ಅಕ್ಷಾಂಶವೃತ್ತಗಳನ್ನು ಕ್ರಮವಾಗಿ ಮಕರಸಂಕ್ರಾಂತಿ ವೃತ್ತ (ಟ್ರಾಪಿಕ್ ಆಫ್ ಕ್ಯಾಪ್ರಿಕಾರನ್) ಮತ್ತು ಕರ್ಕಾಟಕ ಸಂಕ್ರಾಂತಿ ವೃತ್ತ (ಟ್ರಾಪಿಕ್ ಆಫ್ ಕ್ಯಾನ್ಸರ್) (ಒಟ್ಟಾಗಿ ಸಂಕ್ರಾಂತಿವೃತ್ತಗಳು) ಎಂದೂ $66^{\circ}$ $32^{\prime}$ ಉತ್ತರ ಮತ್ತು ದಕ್ಷಿಣ ಅಕ್ಷಾಂಶವೃತ್ತಗಳನ್ನು ಉತ್ತರಮೇರುವೃತ್ತ (ಆರ್ಕ್‌ಟಿಕ್ ಸರ್ಕಲ್) ಮತ್ತು ದಕ್ಷಿಣಮೇರುವೃತ್ತ ಅಂಟಾರ್ಕ್‌ಟಿಕ್ ಸರ್ಕಲ್ – ಒಟ್ಟಾಗಿ ಮೇರುವೃತ್ತಗಳು) ಎಂದೂ ಕರೆಯಲಾಗಿದೆ.

$0^{\circ}$ ರೇಖಾಂಶವೃತ್ತದ ಮುಂದುವರಿಕೆಯೇ $180^{\circ}$ ಪೂರ್ವ ಅಥವಾ $180^{\circ}$ ಪಶ್ಚಿಮ ರೇಖಾಂಶವೃತ್ತ.

ಒಂದು ಸ್ಥಳದ ಕೋನನಿರ್ದೇಶಕಗಳನ್ನು ಕೊಡುವಾಗ ಅಕ್ಷಾಂಶವನ್ನು ಮೊದಲೂ ರೇಖಾಂಶವನ್ನು ಅನಂತರವೂ ಹೇಳುವುದು ವಾಡಿಕೆ. ಬೆಂಗಳೂರಿನ ನಿರ್ದೇಶಕಗಳು ($12^{\circ}$ $57^{\prime}$ ಉತ್ತರ, $77^{\circ}$ $38^{\prime}$ ಪೂರ್ವ) ಎಂದರೆ ಅದರ ಅಕ್ಷಾಂಶ $12^{\circ}$ $57^{\prime}$ ಉತ್ತರ ಎಂದೂ ರೇಖಾಂಶ $77^{\circ}$ $38^{\prime}$ ಪೂರ್ವ ಎಂದೂ ಅರ್ಥ.

**ಖಗೋಳೀಯ ಅಕ್ಷಾಂಶ ಮತ್ತು ರೇಖಾಂಶ :** ನಮಗೆ ಕಾಣುವ ಆಕಾಶಗೋಳ ನಿಜವಾಗಿ ಇದೆಯೆಂದೂ ಅದರ ಕೇಂದ್ರ ಭೂಮಿಯೆಂದೂ ಭಾವಿಸುತ್ತೇವೆ. ಆಕಾಶಗೋಳದ ಹೆಸರು ಖಗೋಳ. ವೀಕ್ಷಕನ ಸುತ್ತಲೂ ಖಗೋಳ ಪೂರ್ವದಿಂದ ಪಶ್ಚಿಮಕ್ಕೆ ಪ್ರತಿ 24 ಗಂಟೆಗಳಿಗೆ ಒಂದು ಸಲ ಆವರ್ತಿಸುವುದು ಎಲ್ಲರ ಅನುಭವ. ಈ ಆವರ್ತನದ ಅಕ್ಷ




ಖಗೋಳೀಯ ಅಕ್ಷಾಂಶ ಮತ್ತು ರೇಖಾಂಶ

ಖಗೋಳವನ್ನು ಉತ್ತರ ಮತ್ತು ದಕ್ಷಿಣ ಧ್ರುವ ಬಿಂದುಗಳಲ್ಲಿ ಸಂಧಿಸುವುದು. ಉತ್ತರ ಧ್ರುವಬಿಂದುವಿನ ಸಮೀಪವಿರುವ ಕ್ಷೀಣ ನಕ್ಷತ್ರದ (ಧ್ರುವ ನಕ್ಷತ್ರ) ಸಹಾಯದಿಂದ ಆ ಬಿಂದುವನ್ನು ಗುರುತಿಸಬಹುದು. ಖಗೋಳಾಕ್ಷಕ್ಕೆ ಲಂಬವಾಗಿರುವಂತೆ ಖಗೋಳಕೇಂದ್ರದ (ಅಂದರೆ ಭೂಮಿ) ಮೂಲಕ ರಚಿಸಿದ ಸಮತಳ, ಖಗೋಳವನ್ನು ಛೇದಿಸುವ ಮಹಾವೃತ್ತವೇ ವಿಷುವದ್ವೃತ್ತ (ಸೆಲೆಸ್ಟಿಯಲ್ ಇಕ್ವೇಟರ್, 2ನೆಯ ಚಿತ್ರದಲ್ಲಿ QR.).

ಭೂಮಿ ಮತ್ತು ಇತರ ಗ್ರಹಗಳು ಸೂರ್ಯನ ಸುತ್ತಲೂ ಪರಿಭ್ರಮಿಸುವ ಕಕ್ಷೆಗಳು (ಆರ್ಬಿಟ್ಸ್) ಸುಮಾರಾಗಿ ಏಕಸಮತಳೀಯವಾಗಿದೆ. ಈ ಸಮತಳ ಖಗೋಳವನ್ನು ಛೇದಿಸುವ ಮಹಾವೃತ್ತದ ಹೆಸರು ಕ್ರಾಂತಿವೃತ್ತ (ಎಕ್ಲಿಪ್ಟಿಕ್, CL). ಕ್ರಾಂತಿವೃತ್ತ ಮತ್ತು ವಿಷುವದ್ವೃತ್ತಗಳ ನಡುವಿನ ಕೋನ ಸುಮಾರು $23^{\circ}$ $27^{\prime}$. ಅವೆರಡೂ ಱ (ವಸಂತವಿಷುವದ್ಬಿಂದು ಅಥವಾ ಮೇಷಬಿಂದು) $\Omega$ ಮತ್ತು (ಶರದವಿಷುವದ್ಬಿಂದು ಅಥವಾ ತುಲಾಬಿಂದು) ಎಂಬ ಎರಡು ಬಿಂದುಗಳಲ್ಲಿ ಸಂಧಿಸುತ್ತದೆ. K ಮತ್ತು $K^{\prime}$ ಕ್ರಾಂತಿವೃತ್ತದ ಧ್ರುವಗಳು. S ಒಂದು ಆಕಾಶಕಾಯ. ಈ ಕಾಯ ಮತ್ತು K ಮೂಲಕ ಎಳೆದ ಒಂದು ಮಹಾವೃತ್ತ KSM . ಇದು ಕ್ರಾಂತಿವೃತ್ತಕ್ಕೆ (CL) ಲಂಬವಾಗಿದೆ. MS ಮತ್ತು *YM*ಗಳ ಕೋನಮಾನಗಳ (ಅಂದರೆ ಅವು ಭೂಮಿಯಲ್ಲಿ, O ಉಂಟುಮಾಡುವ ಕೋನ) ಹೆಸರು ಕ್ರಮವಾಗಿ (Sನ) ಖಗೋಳೀಯ ಅಕ್ಷಾಂಶ, ಮತ್ತು ಖಗೋಳೀಯ ರೇಖಾಂಶ. ಕ್ರಾಂತಿವೃತ್ತದ ಉತ್ತರಕ್ಕಿರುವ ಕಾಯಗಳ ಅಕ್ಷಾಂಶಗಳನ್ನು ಉತ್ತರ

ಅಕ್ಷಾಂಶಗಳೆಂದೂ ದಕ್ಷಿಣಕ್ಕಿರುವವುಗಳದ್ದನ್ನು ದಕ್ಷಿಣ ಅಕ್ಷಾಂಶಗಳೆಂದೂ ಕರೆಯುತ್ತೇವೆ. ಅಕ್ಷಾಂಶವನ್ನು $0^o$ – $90^o$ ಉ. ಮತ್ತು ದ.ದವರೆಗೂ ರೇಖಾಂಶವನ್ನು $0^o$ – $180^o$ ಪೂ. ಮತ್ತು ಪ.ದವರೆಗೂ ಅಳೆಯಲಾಗುವುದು.

ಖಗೋಳಿಯ ಅಕ್ಷಾಂಶ, ರೇಖಾಂಶಗಳ ನೆರವಿನಿಂದ ಯಾವುದೇ ಆಕಾಶಕಾಯದ ಸ್ಥಾನನಿರ್ದೇಶನವನ್ನು ಏಕೈಕವಾಗಿ ಮಾಡಬಹುದು. ವಿಲೋಮವಾಗಿ ಯಾವುದೇ ಆಕಾಶಕಾಯದ ಅಕ್ಷಾಂಶ, ರೇಖಾಂಶಗಳನ್ನು ಏಕೈಕವಾಗಿ ನಿರ್ಧರಿಸಬಹುದು.

ಒಂದು ಸ್ಥಳದ ಅಕ್ಷಾಂಶ ಧ್ರುವದ ಕೋನೋನ್ನತಿಗೆ ಸಮಾನ. ಆದ್ದರಿಂದ ಭೂಮಿಯ ಉತ್ತರ ಭಾಗಗಳಲ್ಲಿರುವ (ಮೈಸೂರು ರಾಜ್ಯ ಹೀಗಿದೆ) ಸ್ಥಳಗಳಲ್ಲಿ ಧ್ರುವನಕ್ಷತ್ರದ ಕೋನೋನ್ನತಿಗಳು ಆ ಸ್ಥಳಗಳ ಅಕ್ಷಾಂಶಗಳನ್ನು ನೀಡುತ್ತವೆ. (ಸಿ.ಎನ್.ಎಸ್.; ಎಂ.ಎಸ್.)

**ಅಕ್ಷೋಭಕ ತೊಟ್ಟಿಗಳು :** ಜಲಯಂತ್ರಗಳು ಆವರ್ತಿಸುವ ವೇಗವನ್ನು ನಿಯಂತ್ರಿಸುವಾಗ, ಅವುಗಳಿಗೆ ನೀರನ್ನು ಪೂರೈಸುವ ಪೈಪುಗಳಲ್ಲಿ ಹರಿಯುವ ನೀರಿನ ಜಡತೆಯ ಪರಿಣಾಮವಾಗಿ, ಹಲವು ಸಮಸ್ಯೆಗಳು ತಲೆದೋರುತ್ತವೆ. ಕ್ರಮಕಾರಕಗಳು (ಗವರ್ನರ್ಸ್), ಜಲಯಂತ್ರಗಳೊಳಗೆ ನೀರನ್ನು ಬಿಡುವ ಬಾಗಿಲುಗಳನ್ನು ಭಾಗಶಃ ಮುಚ್ಚಿದಾಗ, ಪೈಪುಗಳಲ್ಲಿ ಹರಿಯುವ ನೀರಿನ ವೇಗ ಕಡಿಮೆಯಾಗುವುದು. ಆಗ ಜಲಬಡಿಗೆ (ವಾಟರ್ ಹ್ಯಾಮರ್) ಉಂಟಾಗಿ, ಯಂತ್ರಗಳ ಸಮೀಪದಲ್ಲಿನ ನೀರಿನ ಒತ್ತಡ ಒಮ್ಮೆಗೇ ಮೇಲೇರುವುದು. ಇದರಿಂದ ಯಂತ್ರಗಳ ಆವರ್ತನ ವೇಗ ಕಡಿಮೆಯಾಗುವುದಕ್ಕೆ ಬದಲಾಗಿ ಹೆಚ್ಚುತ್ತ ಹೋಗುವುದು. ಆದ್ದರಿಂದ ನೀರಿನ ಜಡತೆಯ ಪರಿಣಾಮವನ್ನು ನಿವಾರಿಸುವುದು ಅಗತ್ಯ. ಇದಕ್ಕಾಗಿ ರಚಿಸಿದ ಸಾಧನಕ್ಕೆ ಅಕ್ಷೋಭಕ ತೊಟ್ಟಿ (ಸರ್ಜ್ ಟ್ಯಾಂಕ್) ಎಂದು ಹೆಸರು.

ಅಕ್ಷೋಭಕ ತೊಟ್ಟಿಗಳನ್ನು ಜಲಯಂತ್ರಗಳಿಗೆ ಸಾಧ್ಯವಾದಷ್ಟು ಸಮೀಪದಲ್ಲಿ, ನೀರು ಪೂರೈಸುವ ಪೈಪುಗಳಿಗೆ, ಒಂದು ಲಂಬ ಕೊಳವೆಯ ಮೂಲಕ ಜೋಡಿಸಿರುತ್ತಾರೆ. ಈ ತೊಟ್ಟಿಗಳ ಮೇಲ್ಭಾಗ ತೆರೆದಿರುತ್ತದೆ. ಜಲಯಂತ್ರಗಳ ಬಾಗಿಲುಗಳು ಮುಚ್ಚಿ, ನೀರಿನ ವೇಗ ಕಡಿಮೆಯಾಗಿ, ಒತ್ತಡ ಮೇಲೇರಿದಾಗಿ, ನೀರು ತೊಟ್ಟಿಗಳೊಳಗೆ ನುಗ್ಗುತ್ತದೆ. ಮತ್ತು ಜಲಬಡಿಗೆ ಉಂಟಾಗದಂತೆ ತಡೆಯುತ್ತದೆ. ಜಲಯಂತ್ರಗಳ ಬಾಗಿಲುಗಳು ತೆರೆದುಕೊಂಡಾಗ, ಪೈಪುಗಳಲ್ಲಿ ನೀರು ವೇಗೋತ್ಕರ್ಷದಿಂದ ಹರಿಯುತ್ತದೆ. ಆಗ ಅಕ್ಷೋಭಕ ತೊಟ್ಟಿಗಳೊಳಗಿಂದ ನೀರು ಹರಿದು ಪೈಪಿನೊಳಗೆ ತುಂಬಿಕೊಳ್ಳುವುದರಿಂದ, ನೀರಿನ ಒತ್ತಡ ಕಡಿಮೆಯಾಗದೆ ಒಂದೇ ಸಮನಾಗಿರುವುದು.

ಜಲಯಂತ್ರಗಳ ಮೇಲಿನ ನೀರಿನ ಎತ್ತರ ಬಹಳ ಹೆಚ್ಚಾಗಿದ್ದರೆ, ಮೇಲ್ಭಾಗ ಮುಚ್ಚಿರುವ ತೊಟ್ಟಿಗಳನ್ನು ಉಪಯೋಗಿಸುವರು. ಮುಚ್ಚಿದ ತೊಟ್ಟಿಗಳಲ್ಲಿ ಸಿಲುಕಿಕೊಳ್ಳುವ ಗಾಳಿ, ಜಲಯಂತ್ರದ ಬಾಗಿಲುಗಳು ಮುಚ್ಚಿ ಅಥವಾ ತೆರೆಯುವಾಗ, ಸಂಕುಚಿಸುತ್ತದೆ, ಇಲ್ಲವೇ ವಿಸ್ತರಿಸುತ್ತದೆ. ಹೀಗೆ ಪೈಪು ಮತ್ತು ತೊಟ್ಟಿಗಳ ನಡುವೆ ನೀರಿನ ವಿನಿಮಯ ನಡೆಯುವುದರಿಂದ, ಜಲಬಡಿಗೆ ಉಂಟಾಗದೆ ಜಲಯಂತ್ರಗಳ ಸಮೀಪದಲ್ಲಿ ನೀರಿನ ಒತ್ತಡ ಒಂದೇ ಸಮನಾಗಿರುವುದು. (ಬಿ.ಪಿ.ಟಿ.)

**ಅಖಿಮನಿಸ್ :** ಪ್ರ.ಶ.ಪೂ. ಸು. 7ನೆಯ ಶತಮಾನ. ಪರ್ಷಿಯ ರಾಜವಂಶದ ಮೂಲಪುರುಷ. ಡೇರಿಯಸ್ಸನ ಬೆಹಿಸ್ತನ್ ಶಾಸನದ ಪ್ರಕಾರ ತೆಸ್‍ಪಿಸ್ಸನ ತಂದೆ ಮತ್ತು ಕೈರಸ್‍ನ ತಾತ. ಮೀಡರಿಗೆ ಅಧೀನವಾಗಿದ್ದ ಔಷಾನ್ ಎಂಬ ಪ್ರಾಂತವನ್ನಾಳುತ್ತಿದ್ದ ಈತ ಸ್ವತಂತ್ರವಾಗಿ ಪರ್ಷಿಯ ಸಾಮ್ರಾಜ್ಯವನ್ನು ಸ್ಥಾಪಿಸಿದ. ಇವನ ವಿಷಯವಾಗಿ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ. ಇವನು ಸ್ಥಾಪಿಸಿದ ಈ ಸಾಮ್ರಾಜ್ಯವನ್ನು ಇವನ ಮನೆತನದವರು ಪ್ರಶ.ಪೂ. 330ರವರೆಗೂ (ಅಂದರೆ ಅಲೆಗ್ಸಾಂಡರನು ಆಗಿನ ಪರ್ಷಿಯದ ದೊರೆ 3ನೆಯ ಡೇರಿಯಸ್‍ನನ್ನು ಸೋಲಿಸಿ ದೇಶವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವವರೆಗೂ) ವೈಭವದಿಂದ ಆಳಿದರು. (ಎಸ್.ಕೆ.ಕೆ.)

**ಅಖಿಲಭಾರತ ಉತ್ಪಾದಕರ ಸಂಘ :** 1941ರಲ್ಲಿ ಸ್ಥಾಪಿತವಾಯಿತು. ಇದರ ಪ್ರಧಾನ ಕಚೇರಿ ಮುಂಬಯಿ. ಸಮರ್ಪಕವಾದ ಪ್ರಗತಿಪರ ಅಸ್ತಿಭಾರದ ಮೇಲೆ ಭಾರತದ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸುವ ಆಸಕ್ತಿ ಹೊಂದಿರುವ ವ್ಯಕ್ತಿಗಳಿಗೂ ಸಂಘಗಳಿಗೂ ಒಂದು ಸಾಮಾನ್ಯ ವೇದಿಕೆಯನ್ನೊದಗಿಸುವುದೂ ಸರ್ಕಾರದ ನೀತಿ ಹಾಗೂ ಕಲಾಪಗಳ ವಿಷಯದಲ್ಲಿ ಜಾಗೃತವಾಗಿರುವುದೂ ಇದರ ಉದ್ದೇಶಗಳು.

ಸಂಘದ ಕಲಾಪಗಳನ್ನು 125 ಮಂದಿ ಸದಸ್ಯರ ಕೇಂದ್ರೀಯ ಸಮಿತಿ ನಿರ್ವಹಿಸುತ್ತದೆ. ನೀತಿನಿರೂಪಣೆ ಮಾಡಿ ಕಾರ್ಯವನ್ನು ನಿರ್ದೇಶಿಸುವುದರಲ್ಲಿ ಈ ಸಮಿತಿಯದೇ ಪರಮಾಧಿಕಾರ. ಪ್ರಾಥಮಿಕ ಸದಸ್ಯತ್ವದ, ಅಂಗಸಂಸ್ಥೆಗಳ ಹಾಗೂ ಪ್ರಾದೇಶಿಕ ಸಂಘಗಳ ಜಾಲದ ಮೂಲಕ ಇದು ಇಡೀ ದೇಶದಲ್ಲಿ ಹರಡಿರುವ ದೊಡ್ಡ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಸಹಸ್ರಾರು ಉತ್ಪಾದಕರನ್ನು ಪ್ರತಿನಿಧಿಸುತ್ತದೆ.

ನಾನಾ ಕೈಗಾರಿಕೆಗಳಿಗೆ ಸಂಬಂಧಿಸಿದ ತಾಂತ್ರಿಕ, ಆರ್ಥಿಕ ಹಾಗೂ ವ್ಯವಸ್ಥೆಯ ವಿವರಗಳನ್ನು ನೀಡುವುದೇ ಅಲ್ಲದೆ ಈ ಸಂಸ್ಥೆ ಕೈಗಾರಿಕಾ ಅಭಿವೃದ್ಧಿಗೆ ವ್ಯಾಪಕ ಯೋಜನೆಗಳನ್ನು ರೂಪಿಸುತ್ತದೆ. ಪ್ರಮುಖ ಕೈಗಾರಿಕೆಗಳ ವಿಚಾರವಾಗಿ ಇದು ಅನೇಕ ಉಪಯುಕ್ತ ಪ್ರಕಟಣೆಗಳನ್ನೂ ಹೊತ್ತಿಗೆಗಳನ್ನೂ ಹೊರತಂದಿದೆ. (*)

**ಅಖಿಲ ಭಾರತ ಕ್ರೀಡಾಮಂಡಲಿ :** ಭಾರತದಲ್ಲಿ ಕ್ರೀಡಾಭಿವೃದ್ಧಿಯನ್ನು ಸಾಧಿಸಲು ಕೇಂದ್ರ ಸರ್ಕಾರ 1954ರಲ್ಲಿ ಸ್ಥಾಪಿಸಿದ ಮಂಡಲಿ. ಆರಂಭದಲ್ಲಿ ರಾಷ್ಟ್ರೀಯ ಕ್ರೀಡಾಸಂಘಗಳ ಅಧ್ಯಕ್ಷರು ಹಾಗೂ ಕೇಂದ್ರ ಸರ್ಕಾರದಿಂದ ನಾಮಕರಣ ಹೊಂದಿದ 5 ಮಂದಿ ಕ್ರೀಡಾತಜ್ಞರನ್ನೊಳಗೊಂಡ 25 ಸದಸ್ಯರು ಈ ಮಂಡಲಿಯಲ್ಲಿ ಇದ್ದರು. 1959ರಲ್ಲಿ ಮಂಡಲಿ ಪುನಾರಚಿತವಾಗಿ ಇದರಲ್ಲಿನ 15 ಮಂದಿ ಸರ್ಕಾರದಿಂದ ನಾಮಕರಣ ಹೊಂದಿದ ಸದಸ್ಯರಾಗಿದ್ದರು.

ದೇಶದಲ್ಲಿ ಕ್ರೀಡಾಭಿವೃದ್ಧಿಗಾಗಿ ಭಾರತ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡುವುದು, ವಿವಿಧ ಆಟಗಳ ಮಟ್ಟವನ್ನು ಉತ್ತಮಗೊಳಿಸಲು ರಾಷ್ಟ್ರೀಯ ಕ್ರೀಡಾಸಂಘಗಳಿಗೆ ಸಲಹೆ ಹಾಗೂ ಸಹಾಯವನ್ನೊದಗಿಸುವುದು, ಕ್ರೀಡಾಸಂಘಗಳಿಗೆ ಆರ್ಥಿಕ ನೆರವನ್ನು ಕೊಡಲು ಭಾರತ ಸರ್ಕಾರಕ್ಕೆ ಶಿಫಾರಸು ಮಾಡುವುದು, ಕ್ರೀಡಾಂಗಣಗಳ ರಚನೆ, ಉತ್ತಮ ಕ್ರೀಡೋಪಕರಣಗಳನ್ನು ಒದಗಿಸುವುದು, ಹಾಗೂ ವಿವಿಧ ಆಟಗಳಲ್ಲಿ ತರಬೇತಿ ಶಿಬಿರಗಳನ್ನೇರ್ಪಡಿಸುವುದು – ಇವೇ ಮೊದಲಾದವುಗಳಿಗೆ ಧನಸಹಾಯ ಒದಗಿಸಲು ಸರ್ಕಾರಕ್ಕೆ ಶಿಫಾರಸು ಮಾಡುವುದು, ವಿದೇಶಗಳಿಗೆ ಭಾರತದ ಆಟಗಾರರ ತಂಡಗಳನ್ನು ಕಳುಹಿಸಲು ಮತ್ತು ವಿದೇಶಗಳಿಂದ ಆಟದ ತಂಡಗಳು ದೇಶದಲ್ಲಿ ಸಂಚಾರ ಕೈಕೊಂಡಾಗ ತಗಲುವ ವೆಚ್ಚದ ಮೇಲೆ ಯೋಗ್ಯ ನಿರ್ಬಂಧಗಳನ್ನಿಡುವುದು, ದೇಶದ ಖ್ಯಾತ ಕ್ರೀಡಾಪಟುಗಳಿಗೆ ಪದ್ಮಶ್ರೀ, ಪದ್ಮಭೂಷಣ, ಅರ್ಜುನ, ಏಕಲವ್ಯ ಪ್ರಶಸ್ತಿ ಮುಂತಾದುವುಗಳನ್ನು ನೀಡುವಾಗ ಯೋಗ್ಯ ಆಟಗಾರರ ಹೆಸರುಗಳನ್ನು ಸೂಚಿಸುವುದು – ಇವು ಮಂಡಲಿಯ ಕಾರ್ಯಗಳಲ್ಲಿ ಪ್ರಮುಖವಾದವು ಎನ್ನಬಹುದು.

ಇದು ಕೇವಲ ಸಲಹಾಮಂಡಲಿಯಾಗಿದ್ದು ಇದಕ್ಕೆ ತನ್ನದೇ ಆದ ಯಾವ ನಿಧಿಯೂ ಇರುವುದಿಲ್ಲ. ರಾಷ್ಟ್ರೀಯ ಕ್ರೀಡಾಸಂಘಗಳಾಗಲೀ ರಾಜ್ಯ ಕ್ರೀಡಾಮಂಡಲಿಗಳಾಗಲೀ ಇಲ್ಲವೆ ಇತರ ಕ್ರೀಡಾಸಂಸ್ಥೆಗಳಾಗಲೀ ಆರ್ಥಿಕ ನೆರವಿಗಾಗಿ ಭಾರತ ಸರ್ಕಾರಕ್ಕೆ ವಿನಂತಿ ಪತ್ರ ಕಳುಹಿಸಿದಾಗ ಅವನ್ನು ಮಂಡಲಿ ವಿಮರ್ಶಿಸಿ ಸಲಹೆ ನೀಡುತ್ತದೆ. ಅದರ ಸಲಹೆಯ ಮೇರೆಗೆ ಸರ್ಕಾರ ಶಿಕ್ಷಣಖಾತೆಯ ಮೂಲಕ ಧನಸಹಾಯವನ್ನೊದಗಿಸುತ್ತದೆ.

ದೇಶವು ಉತ್ತಮ ಕ್ರೀಡಾಪಟುಗಳನ್ನು ಹೊಂದಬೇಕಾದರೆ ತರುಣ ಆಟಗಾರರಿಗೆ ವೈಜ್ಞಾನಿಕ ತಳಹದಿಯ ಮೇಲೆ ಮಾನವ ಸಂಪನ್ಮೂಲ ಅಥವಾ ಕ್ರೀಡಾ ಮತ್ತು ಯುವಜನ ಕೇಡೆಯ ಬಗೆಗೆ ತರಬೇತಿ ನೀಡುವುದು ಅತ್ಯಾವಶ್ಯಕವೆಂಬುದನ್ನು ಮನಗಂಡು ಈ ಮಂಡಲಿಯ ಸಲಹೆಯಂತೆ ಪಟಿಯಾಲದಲ್ಲಿ ರಾಷ್ಟ್ರೀಯ ಕ್ರೀಡಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅಲ್ಲಿ ತರಬೇತಿ ಹೊಂದಿದ ಅನುಭವಿ, ಶಿಕ್ಷಕರು ದೇಶದಾದ್ಯಂತ ಉತ್ತಮ ಕಾರ್ಯ ನಿರ್ವಹಿಸುತ್ತಿದ್ದಾರೆ.

ದೇಶದಲ್ಲಿ, ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ, ಆಟ ಮತ್ತು ಮನರಂಜನೆಯ ಚಟುವಟಿಕೆಗಳು ಪ್ರಗತಿಪರವಾಗಿ ಸಾಗಬೇಕಾದರೆ ಆಟದ ಬಯಲುಗಳು ಅತ್ಯಾವಶ್ಯಕ. ಅಖಿಲ ಭಾರತ ಕ್ರೀಡಾಮಂಡಲಿಯ ನೇತೃತ್ವದಲ್ಲಿ ರಚಿಸಲ್ಪಟ್ಟ ಉಪಸಮಿತಿಗಳು ಆಟದ ಅಭಿವೃದ್ಧಿಗಾಗಿ ಕೆಲವು ಯೋಜನೆಗಳನ್ನು ಸಿದ್ಧಪಡಿಸಿವೆ. ವಿದ್ಯಾಸಂಸ್ಥೆಗಳಿಗೂ ಇತರ ಸಂಘಗಳಿಗೂ ಕ್ರೀಡಾಂಗಣಗಳನ್ನು ಒದಗಿಸುವುದು ಈ ಯೋಜನೆಗಳಲ್ಲೊಂದಾಗಿದೆ. ಅಂತಿಮವಾಗಿ ರಾಷ್ಟ್ರೀಯ ಕ್ರೀಡಾಂಗಣ ಸಂಘವನ್ನು ರಚಿಸುವುದೇ ಇದರ ಮುಖ್ಯ ಗುರಿಯಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರದಲ್ಲಿರುವ ದೇಶೀಯ ಕ್ರೀಡಾಚಟುವಟಿಕೆಗಳನ್ನು ಪುನರುಜ್ಜೀವನಗೊಳಿಸಲು, ಗ್ರಾಮಸ್ಥರಿಗೆ ಮನೋರಂಜನೆ ಒದಗಿಸಿ ಜನಜೀವನದಲ್ಲಿ ಸಂತಸದ ಕಳೆ ತುಂಬಲು ಗ್ರಾಮೀಣ ಕ್ರೀಡಾಕೇಂದ್ರಗಳನ್ನು ದೇಶದೆಲ್ಲೆಡೆ ತೆರೆಯುವಂತೆ ಒಂದು ಯೋಜನೆಯನ್ನು ಇತ್ತೀಚೆಗೆ ಅನುಷ್ಠಾನಕ್ಕೆ ತರಲಾಗಿದೆ.

ಈ ಮಂಡಲಿಯ ಸಲಹೆಯ ಮೇರೆಗೆ, ರಾಜ್ಯ ಕ್ರೀಡಾಮಂಡಲಿಗಳನ್ನೂ ತಾಲ್ಲೂಕು ಕ್ರೀಡಾಮಂಡಲಿಗಳನ್ನೂ ತಾಲ್ಲೂಕು ಕ್ರೀಡಾಮಂಡಲಿಗಳನ್ನೂ ದೇಶಾದ್ಯಂತ ಸ್ಥಾಪಿಸಲಾಗಿದ್ದು ಈ ಸಂಸ್ಥೆಗಳು ಕ್ರೀಡಾಭಿವೃದ್ಧಿಯಲ್ಲಿ ಗಣನೀಯ ಪ್ರಮಾಣದಲ್ಲಿ ಕಾರ್ಯೋನ್ಮುಖವಾಗಿವೆ.

ಉತ್ತಮ ಶ್ರೇಣಿಯ ಉಪಕರಣಗಳು ಕ್ರೀಡಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದನ್ನು ಮನಗಂಡು ಭಾರತ ಸರ್ಕಾರದ ಯೋಗ್ಯತಾ ನಿಷ್ಕರ್ಷಕ ಇಲಾಖೆಯ ಹಾಗೂ ದೇಶದ ಕ್ರೀಡೋಪಕರಣಗಳ ಉದ್ದಿಮೆಗಾರರ ಸಹಕಾರದಿಂದ, ವಿದ್ಯಾಸಂಸ್ಥೆ ಮತ್ತು ಇತರ ಕ್ರೀಡಾಸಂಘಗಳಿಗೆ ಶ್ರೇಷ್ಠ ದರ್ಜೆಯ ಉಪಕರಣಗಳು ಯೋಗ್ಯ ಬೆಲೆಗೆ ಸಿಗುವಂತೆ ಮಾಡಲು ಪ್ರಯತ್ನಿಸಲಾಗಿದೆ.

ಅಖಿಲ ಭಾರತ ಕ್ರೀಡಾಮಂಡಲಿ ನೇಮಿಸಿದ ವಿಶೇಷ ಯೋಜನಾ ಸಮಿತಿಯು 1966ರಲ್ಲಿ ದೇಶದ ಪ್ರಮುಖ ಕೇಂದ್ರಗಳನ್ನು ಸಂದರ್ಶಿಸಿ, ತಜ್ಞರು ಹಾಗೂ ಅಧಿಕಾರಿಗಳೊಡನೆ ಸಮಾಲೋಚಿಸಿ ಒಂದು ಬೃಹದ್ಯೋಜನೆಯನ್ನು ನಿರ್ಮಿಸಿದೆ. ಅದರಲ್ಲಿಯ ಮಹತ್ವದ ಸೂಚನೆಗಳನ್ನು ಮಂಡಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು ಅವು ಸರ್ಕಾರದ ಪರಿಶೀಲನೆಯಲ್ಲಿವೆ. ಅವು ಕಾರ್ಯಗತವಾದಲ್ಲಿ ದೇಶದ ಕ್ರೀಡಾಮಟ್ಟ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. (*)

**ಅಖಿಲಭಾರತ ಪತ್ರಿಕಾಸಂಘಗಳು :** ಅಖಿಲಭಾರತ ಪತ್ರಿಕಾ ಸಂಪಾದಕರ ಪರಿಷತ್ತು: ಭಾರತ ಸರ್ಕಾರ 1940 ಅಕ್ಟೋಬರ್ 26ನೆಯ ತಾರೀಕು ಭಾರತದ ಪತ್ರಿಕೆಗಳ ಮೇಲೆ, ಬಿಗಿಯಾದ ಮತ್ತು ಭೀತಿ ಹುಟ್ಟಿಸುವ ನಿಷೇಧಾಜ್ಞೆಯನ್ನು ಜಾರಿಮಾಡಿತು. ಸರ್ಕಾರದ ಈ ನಿಷೇಧಾಜ್ಞೆಯಿಂದ ಸ್ವಾತಂತ್ರ್ಯಹೋರಾಟದ ಸುದ್ದಿಗಳನ್ನು ಪ್ರಚಾರ ಮಾಡುವುದು ಸಾಧ್ಯವಿರಲಿಲ್ಲ. ಅದು ಪತ್ರಿಕಾಸ್ವಾತಂತ್ರ್ಯಕ್ಕೆ ಕೊಡಲಿ ಪೆಟ್ಟನ್ನು ಹಾಕಿದಂತಾಗಿತ್ತು. ಈ ಎಲ್ಲ ಸಮಸ್ಯೆಗಳನ್ನು ಸರ್ಕಾರದೊಂದಿಗೆ ಸಮಾಲೋಚನೆಮಾಡಿ ಒಂದು ತೀರ್ಮಾನಕ್ಕೆ ಬರಲು, ಭಾರತದ ಪತ್ರಿಕೆಗಳ ಸಂಪಾದಕರು ಒಂದೆಡೆ ಸೇರಿದರು. ಆ ಒಕ್ಕೂಟವೇ ಅಖಿಲಭಾರತ ಪತ್ರಿಕಾಸಂಪಾದಕರ ಪರಿಷತ್ತಾಗಿ ಮಾರ್ಪಾಡಾಯಿತು.

ಪತ್ರಿಕೋದ್ಯಮದ ಶ್ರೇಷ್ಠವಾದ ಸಂಪ್ರದಾಯ ಮತ್ತು ಮಟ್ಟಗಳನ್ನು ಕಾಪಾಡುವುದು; ಪ್ರಕಟಣೆ, ಸುದ್ದಿ ಮತ್ತು ವಿಮರ್ಶಾತ್ಮಕ ಟೀಕೆಗಳ ಸ್ವಾತಂತ್ರ್ಯವನ್ನು ಕಾಪಾಡುವುದು; ಸರ್ಕಾರಕ್ಕೂ ಸಾರ್ವಜನಿಕರಿಗೂ ಇರುವ ಸಂಬಂಧವನ್ನು ಪತ್ರಿಕಾಲೋಕ ಯಾವ ರೀತಿ ತಿಳಿಸುತ್ತಿದೆ ಎಂಬುದನ್ನು ತಿಳಿಯುವುದು; ಸಾಧ್ಯವಾದಮಟ್ಟಿಗೂ ಸರ್ಕಾರಕ್ಕೂ ಪತ್ರಿಕೆಗಳಿಗೂ ಮಧ್ಯೆ ಮಧುರ ಬಾಂಧವ್ಯವನ್ನೇರ್ಪಡಿಸುವುದು; ವೃತ್ತಿಗೆ ಸಂಬಂಧಪಟ್ಟ ಇತರ ವಿಷಯಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು–ಇವು ಈ ಪರಿಷತ್ತಿನ ಮುಖ್ಯ ಉದ್ದೇಶಗಳಾಗಿವೆ.

ಈ ಪರಿಷತ್ತಿನ ಅಧ್ಯಕ್ಷರುಗಳಾಗಿ ಹಿಂದೂ ಪತ್ರಿಕೆಯ ಕಸ್ತೂರಿ ಶ್ರೀನಿವಾಸನ್, ಬಾಂಬೆ ಕ್ರಾನಿಕಲ್ ಪತ್ರಿಕೆಯ ಸೈಯದ್ ಅಬ್ದುಲ್ಲಾ ಬ್ರೆಲ್ವಿ, ಅಮೃತ ಬಜಾರ ಪತ್ರಿಕೆಯ ತುಷಾರ ಕಾಂತಿಘೋಷ್, ಸ್ವದೇಶಮಿತ್ರನ್ ಪತ್ರಿಕೆಯ ಸಿ. ಆರ್. ಶ್ರೀನಿವಾಸನ್ ಮತ್ತು ಎ.ಡಿ. ಮಣಿ, ದೇವದಾಸ್ ಗಾಂಧಿ, ದುರ್ಗಾದಾಸ್, ಜೆ. ನಟರಾಜನ್, ಸಚಿನ್‌ಸೇನ್, ಮತ್ತು ಸಿ.ಕೆ. ಭಟ್ಟಾಚಾರ್ಯ ಮುಂತಾದವರು ಹೆಚ್ಚಿನ ಕೆಲಸಮಾಡಿದ್ದಾರೆ. (ಎನ್.ಕೆ.)

ಭಾರತಕ್ಕೆ ಸ್ವಾತಂತ್ರ್ಯ ಬಂದ ಕಾಲದಲ್ಲಿ ಬಹುತೇಕ ಪತ್ರಿಕೆಗಳಲ್ಲಿ ಪತ್ರಕರ್ತರ ಹಾಗೂ ಪತ್ರಕರ್ತರೇತರ ನೌಕರರ ಪರಿಸ್ಥಿತಿ ಚಿಂತಾಜನಕವಾಗಿತ್ತು. ಸಾಕಷ್ಟು ಸಂಬಳ ಸಾರಿಗೆಗಳಿರಲಿಲ್ಲ. ಇತರ ವರ್ಗಗಳ ಕಾರ್ಮಿಕರಿಗಿದ್ದ ಕನಿಷ್ಠ ಸೌಕರ್ಯಗಳಿಂದಲೂ ಪತ್ರಕರ್ತರು ವಂಚಿತರಾಗಿದ್ದರು. ರಜಾ ಸೌಲಭ್ಯವಿರಲಿಲ್ಲ. ಉದ್ಯೋಗ ರಕ್ಷಣೆಯೇ ಇರಲಿಲ್ಲ. ಯಾರನ್ನು ಬೇಕಾದರೂ ಯಾವ ಸಮಯದಲ್ಲಾದರೂ ಸೇವೆಯಿಂದ ವಜಾ ಮಾಡಬಹುದಾಗಿತ್ತು. ಇಂತಹ ಶೋಷಣೆಯ ಪರಿಸ್ಥಿತಿಯೇ ಮುಂದೆ ಪತ್ರಕರ್ತರ ಹಾಗೂ ಪತ್ರಕರ್ತೇತರ ಸಂಘಟನೆಗಳು ಜನ್ಮ ತಾಳಲು ಕಾರಣವಾಯಿತು.

1947 ಆಗಸ್ಟ್ 15ರಂದು ಸ್ವಾತಂತ್ರ್ಯ ಸಂಪಾದಿಸಿದ ದೇಶದಲ್ಲಿ 1950ರ ಅಕ್ಟೋಬರ್ 15 ರಂದು ದೆಹಲಿಯಲ್ಲಿ ದೇಶದ ಎಲ್ಲ ಭಾಗಗಳಿಂದ ಬಂದಿದ್ದ ಪತ್ರಕರ್ತರು ಸಭೆ ಸೇರಿ ಅಖಿಲ ಭಾರತ ಕಾರ್ಯನಿರತ ಪತ್ರಕರ್ತರ ಒಕ್ಕೂಟವನ್ನು ಸ್ಥಾಪಿಸಲು ಐತಿಹಾಸಿಕ ತೀರ್ಮಾನ ಕೈಗೊಂಡರು. ಅಂದಿನಿಂದ ಇಲ್ಲಿಯವರೆಗೆ ಈ ಪತ್ರಕರ್ತರ ಒಕ್ಕೂಟ (ಫೆಡರೇಷನ್ ಆಫ್ ವರ್ಕಿಂಗ್ ಜರ್ನಲಿಸ್ಟ್‌ಗೆ) ಪತ್ರಕರ್ತರ ಸೇವಾ ಸ್ಥಿತಿಗತಿ ಉತ್ತಮಪಡಿಸಲು ಹೋರಾಟ ನಡೆಸಿ ಗಣನೀಯ ಸಾಧನೆಗೆ ಕಾರಣವಾಗಿದೆ. ಕಾಲ ಉರುಳಿದಂತೆ ಇತರ ಕೆಲವು ಸಂಘಗಳು ರೂಪುಗೊಂಡವು.

ಇಂಡಿಯನ್ ಜರ್ನಲಿಸ್ಟ್ಸ್ ಯೂನಿಯನ್, ದೆಹಲಿ ಅಖಿಲ ಭಾರತ ವೃತ್ತಪತ್ರಿಕಾ ನೌಕರರ ಸಂಘ ದೆಹಲಿ ಇವೆರಡು, ಕಾರ್ಯನಿರತ ಪತ್ರಕರ್ತರ ಸಂಘಟನೆಗಳು. (ಎಸ್.ವಿ.ಜಿ)

ಭಾರತೀಯ ವೃತ್ತ ಪತ್ರಿಕಾ ಸಂಸ್ಥೆ (ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ, (ಐಎನ್‌ಎಸ್)) ವೃತ್ತಪತ್ರಿಕೆಗಳ ಹಾಗೂ ಪ್ರಕಾಶಕರ ಸಂಸ್ಥೆ, ಅವರ ಮುಖವಾಣಿ. 1988ರ ಜನವರಿ 25ರಂದು ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಮುನ್ನ ಇಂಡಿಯ ಬರ್ಮ ಅಂಡ್ ಸಿಲೋನ್ ನ್ಯೂಸ್ ಪೇಪರ್ಸ್ ಲಂಡನ್ ಕಮಿಟಿ 1927ರ ಅಕ್ಟೋಬರ್ 1ರಂದು ಸ್ಥಾಪನೆಯಾಗಿತ್ತು. ಅನಂತರ ಈ ಸಂಸ್ಥೆ ಇಂಡಿಯನ್ ಅಂಡ್ ಈಸ್ಟರ್ನ್ ನ್ಯೂಸ್ ಪೇಪರ್ ಸೊಸೈಟಿ (ಐ.ಇ.ಎನ್.ಎಸ್) ಆಗಿ ಪರಿವರ್ತಿತವಾಯಿತು. ಸಿಲೋನ್ ಬರ್ಮಾದೇಶಗಳು ಪ್ರತ್ಯೇಕವಾದ ಮೇಲೆ, ಸಂಸ್ಥೆಯ ಹೆಸರು ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ (ಐಎನ್‌ಎಸ್)ಎಂದು ಪರಿವರ್ತನೆಗೊಂಡಿತು. ಇದರ ಕೇಂದ್ರ ಕಛೇರಿ ದೆಹಲಿಯಲ್ಲಿದೆ.

ಈ ಸಂಸ್ಥೆ ವೃತ್ತಪತ್ರಿಕೆಗಳು ಮಾಲೀಕರ ಮುಖವಾಣಿಯಾಗಿ ಸಾರ್ವಜನಿಕವಾಗಿ ಸರಕಾರದೊಡನೆ ವ್ಯವಹರಿಸುತ್ತಿದೆ. ವೃತ್ತಪತ್ರಿಕೆಗಳಿಗೆ ಅಗತ್ಯವಾದ ಮುದ್ರಣಕಾಗದ, ಯಂತ್ರಗಳು, ಬಿಡಿಭಾಗಗಳ ಆಮದಿಗೆ ನೆರವು ನೀಡುತ್ತಿದೆ.

ಪ್ರೆಸ್ ಟ್ರಸ್ಟ್ ಆಫ್ ಇಂಡಿಯ(ಯುಎನ್‌ಎ) ವಾರ್ತಾಸಂಸ್ಥೆಗಳು ಪತ್ರಿಕೆಗಳ ಪ್ರಸಾರಸಂಖ್ಯೆಯನ್ನು ದೃಢೀಕರಿಸಿ ಪ್ರಮಾಣ ಪತ್ರ ನೀಡುತ್ತವೆ. ಆಡಿಟ್ ಬ್ಯೂರೋ ಆರ್ಫ್ ಸರ್ಕ್ಯುಲೇಷನ್ ಎಂಬ ಸ್ವಾಯತ್ತ ಸಂಸ್ಥೆಗಳ ರಚನೆಗೆ ಕಾರಣವಾಗಿದೆ.

ಪತ್ರಿಕೆಗಳಿಗೆ ಜಾಹೀರಾತು ಒದಗಿಸುವ ಜಾಹೀರಾತು ಸಂಸ್ಥೆಗಳಿಗೆ ಮಾನ್ಯತೆ ನೀಡುವ ಮೂಲಕ ಪತ್ರಿಕಾ ಸಂಸ್ಥೆಗಳು ಹಾಗೂ ಜಾಹೀರಾತು ಸಂಸ್ಥೆಗಳ ನಡುವೆ ವ್ಯವಹಾರ ಏಕರೂಪವಾಗಿ ಸುವ್ಯವಸ್ಥಿತವಾಗಿ ನಡೆಯಲು ಸಹಾಯಕವಾಗಿದೆ.

18 ಭಾಷೆಗಳ ಸು. 990 ದಿನಪತ್ರಿಕೆಗಳು, ವಾರಪತ್ರಿಕೆಗಳು, ಪಾಕ್ಷಿಕಗಳು, ಮಾಸಪತ್ರಿಕೆಗಳ ಮಾಲೀಕರು ಈ ಸಂಸ್ಥೆಯ ಸದಸ್ಯರಾಗಿದ್ದಾರೆ.

ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್ : ಪತ್ರಿಕೆಗಳ ನಿಖರವಾದ ಪ್ರಸಾರವನ್ನು ದೃಢೀಕರಿಸುವ ಸಂಸ್ಥೆ. ಪ್ರಸಾರ ಪ್ರಮಾಣ ಪತ್ರ ನೀಡಿಕೆ ಮಾರಾಟವಾಗಿ ಸಂಸ್ಥೆಗೆ ಹಣಸಂದಾಯವಾದ ಪ್ರತಿಗಳ ಸಂಖ್ಯೆಯನ್ನು ಮಾತ್ರ ಪರಿಗಣಿಸಲಾಗುತ್ತದೆ. ಈ ಸಂಸ್ಥೆ ಸ್ಥಾಪನೆಗೆ ಐ.ಎನ್.ಎಸ್. (ವೃತ್ತಪತ್ರಿಕಾ ಮಾಲೀಕರ ಸಂಘಟನೆ) ಕಾರಣ. (ಎಂ. ಬಿ. ಎಸ್)

ಇಂಡಿಯನ್ ಲ್ಯಾಂಗ್ವೇಜಸ್ ನ್ಯೂಸ್‌ಪೇಪರ್ಸ್ ಅಸೋಸಿಯೇಷನ್: ಸ್ಥಾಪನೆ 1941. ಭಾರತದಲ್ಲಿನ ವೃತ್ತಪತ್ರಿಕೆಗಳು ಹಾಗೂ ನಿಯತಕಾಲಿಕೆಗಳ ಮಾಲಿಕರ ಸಂಘವಾಗಿದ್ದು ತನ್ನ ಸದಸ್ಯರ ನಡುವಣ ವ್ಯಾಪಾರಾಸಕ್ತಿಗಳನ್ನು ಉತ್ತೇಜನಗೊಳಿಸಿ ಅಭಿವೃದ್ಧಿಪಡಿಸುವುದು, ಅವರಲ್ಲಿ ಮೈತ್ರಿ ಹಾಗೂ ಸಹಕಾರವನ್ನು ಕಲ್ಪಿಸುವುದು–ಇತ್ಯಾದಿ ಉದ್ದೇಶಗಳನ್ನು ಹೊಂದಿದೆ. 1968ರಲ್ಲಿದ್ದ ಸದಸ್ಯರ ಸಂಖ್ಯೆ 215. ಕೇಂದ್ರ ಕಚೇರಿ ಮುಂಬಯಿ.

ಆಲ್ ಇಂಡಿಯ ನ್ಯೂಸ್‌ಪೇಪರ್ ಎಡಿಟರ್ಸ್ ಕಾನ್ಫರೆನ್ಸ್ : ಸ್ಥಾಪನೆ 1940. ಭಾರತದಲ್ಲಿನ ಪತ್ರಿಕೆ ಹಾಗೂ ನಿಯತಕಾಲಿಕೆಗಳ ಸಂಪಾದಕರನ್ನೊಳಗೊಂಡಿರುವ ಸ್ವಯಂಪ್ರೇರಿತ ಸಂಸ್ಥೆ. ಪತ್ರಿಕೋದ್ಯಮದ ಉನ್ನತ ಆದರ್ಶಗಳನ್ನು ಮತ್ತು ಸತ್‌ಸಂಪ್ರದಾಯಗಳನ್ನು ಎತ್ತಿಹಿಡಿಯುವುದು. ತಮ್ಮ ಕಾರ್ಯನಿರ್ವಹಣೆಯನ್ನು ನೆರವೇರಿಸಲು ಪತ್ರಿಕಾಲಯಗಳಿಗೆ ಬೇಕಾದ ಸೌಲಭ್ಯವನ್ನೊದಗಿಸುವುದು, ಪತ್ರಿಕೋದ್ಯೋಗಿಗಳ ಮತ್ತು ಸರ್ಕಾರದ ನಡುವೆ ಹಾಗೂ ಪತ್ರಿಕೋದ್ಯೋಗಿಗಳ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಕಲ್ಪಿಸುವುದು, ಇಂಥದೇ ಉದ್ದೇಶಗಳನ್ನಿಟ್ಟುಕೊಂಡಿರುವ ಇತರ ಸಂಘ–ಸಂಸ್ಥೆಗಳೊಡನೆ ಸಂಪರ್ಕವನ್ನು ಕಲ್ಪಿಸಿಕೊಳ್ಳುವುದು–ಇವೇ ಇದರ ಮುಖ್ಯ ಉದ್ದೇಶಗಳು. ಕೇಂದ್ರ ಕಚೇರಿ ನವದೆಹಲಿ.

ಪ್ರೆಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯ: ಭಾರತದ ಪತ್ರಿಕೋದ್ಯಮಿಗಳು ತಮ್ಮಲ್ಲಿನ ಉನ್ನತ ಹೊಣೆಗಾರಿಕೆಯನ್ನು ಅರಿಯುವಂತಾಗಲು ಅವರಿಗೆ ತರಬೇತಿ ನೀಡಲು ಒಂದು ವೃತ್ತಿಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ನೆರವಾಗುವಂತೆ ಮಾಡಲು ವೃತ್ತಪತ್ರಿಕೆ ಇತ್ಯಾದಿಗಳ ಬೆಳವಣಿಗೆ ಮತ್ತು ಸ್ಥಿರತೆಗೆ ನೆರವು ನೀಡಲು ಭಾರತದ ಪತ್ರಿಕೋದ್ಯಮಿಗಳು 1963ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. ಧರ್ಮದರ್ಶಿಗಳ ಮಂಡಲಿ, ಆಡಳಿತ ಮಂಡಲಿ ಮತ್ತು ಸೆಕ್ರೆಟೇರಿಯಟ್–ಈ ಮೂರು ಘಟ್ಟಗಳಲ್ಲಿ ಈ ಸಂಸ್ಥೆ ತನ್ನ ಕೆಲಸವನ್ನು ನಡೆಸುತ್ತಿದೆ. ಸಂಸ್ಥಾರೂಪದಲ್ಲಿನ ವ್ಯಕ್ತಿಗಳಿಗೆ ಮಾತ್ರ ಇದರ ಸದಸ್ಯತ್ವದ ಸೌಲಭ್ಯವಿದೆ.

ಪ್ರೆಸ್ ಗಿಲ್ಡ್ ಆಫ್ ಇಂಡಿಯ: ಪತ್ರಿಕೋದ್ಯೋಗಿಗಳಿಗೆ ಮಾತ್ರವಲ್ಲದೆ ಪತ್ರಿಕಾ ವ್ಯವಹಾರದಲ್ಲಿ ತೊಡಗಿರುವ ಇತರರಿಗೂ ಒಂದು ಪ್ರಾಜ್ಞ ಹಾಗೂ ಸಾಮಾಜಿಕ ಮಟ್ಟದಲ್ಲಿ ಬಂಧುತ್ವವನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ ವ್ಯಾಪಕದೃಷ್ಟಿಯುಳ್ಳ ಈ ಸಂಘಟಿತ ಪತ್ರಿಕೋದ್ಯೋಗಿಗಳ ಸಂಸ್ಥೆ 1955ರಲ್ಲಿ ಸ್ಥಾಪನೆಯಾಯಿತು. ಆಡಳಿತ ಕಚೇರಿ ಮುಂಬಯಿ.

ಸ್ಪೆಷಲೈಸ್ಡ್ ಪಬ್ಲಿಕೇಷನ್ ಅಸೋಸಿಯೇಷನ್: ಭಾರತದಲ್ಲಿನ ವ್ಯಾಪಾರ, ವಾಣಿಜ್ಯ, ತಾಂತ್ರಿಕ ಪತ್ರಿಕಾಸಂಘಗಳು ಹಾಗೂ ಇತರ ವೈಶಿಷ್ಟ್ಯವುಳ್ಳ ಪ್ರಮುಖ ಪ್ರಕಟಣೆಗಳ ಪ್ರತಿನಿಧಿ ಸಂಸ್ಥೆ. 1959ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ. ವಾಣಿಜ್ಯ ಪದ್ಧತಿಯಂತೆ ನಡೆವ ಭಾರತದ ವೈಶಿಷ್ಟ್ಯಪೂರ್ಣ ಪ್ರಕಟಣೆಗಳಿಗೆ ಸಮಾನ ಸ್ಥಾನಮಾನಗಳು ದೊರೆಯುವಂತೆ ಮಾಡುವುದು, ವೈಜ್ಞಾನಿಕ ಹಾಗೂ ಪ್ರಗತಿಪಥದಲ್ಲಿ ಮುಂದುವರೆಯುವಂತೆ ವೈಶಿಷ್ಟ್ಯಪೂರ್ಣ ಪ್ರಕಾಶನಗಳಿಗೆ ನೆರವು ನೀಡುವುದು – ಇವೇ ಈ ಸಂಸ್ಥೆಯ ಮುಖ್ಯ ಉದ್ದೇಶಗಳು. ಆಡಳಿತ ಕಚೇರಿ ಮುಂಬಯಿ.

ಟ್ರೇಡ್ ಅಂಡ್ ಟೆಕ್ನಿಕಲ್ ಪಬ್ಲಿಕೇಷನ್ಸ್ ಅಸೋಸಿಯೇಷನ್: ವ್ಯಾಪಾರ ಮತ್ತು ತಾಂತ್ರಿಕಪತ್ರಿಕೆಗಳಲ್ಲಿ ಆಸಕ್ತಿ ಹೊಂದಿದವರಿಂದ 1959ರಲ್ಲಿ ಸ್ಥಾಪನೆಯಾದ ಈ ಸಂಸ್ಥೆ ಸರ್ಕಾರದ ಧೋರಣೆಗಳ ಫಲವಾಗಿ ಪತ್ರಿಕೆಗಳು ಕಾಲಕಾಲಕ್ಕೆ ಅನುಭವಿಸುವಂಥ ತೊಂದರೆಗಳನ್ನು ನಿವಾರಿಸಲು ಸಹಾಯಮಾಡುತ್ತವೆ. ಆಡಳಿತ ಕಚೇರಿ ಮುಂಬಯಿ.

ಆಲ್ ಇಂಡಿಯ ಇಂಡಸ್ಟ್ರಿಯಲ್ ಎಡಿಟರ್ಸ್ ಕೌನ್ಸಿಲ್: ಪತ್ರಿಕೋದ್ಯಮದ ಉನ್ನತಸಂಪ್ರದಾಯಗಳನ್ನೂ ನೀತಿಯನ್ನೂ ಎತ್ತಿಹಿಡಿಯುವ ಈ ಸಂಸ್ಥೆಯ ಆಡಳಿತ ಕಚೇರಿ ನವದೆಹಲಿಯಲ್ಲಿದೆ.

ಆಲ್ ಇಂಡಿಯ ಸ್ಮಾಲ್ ಅಂಡ್ ಮೀಡಿಯಂ ನ್ಯೂಸ್‌ಪೇಪರ್ಸ್ ಎಡಿಟರ್ಸ್ ಅಸೋಸಿಯೇಷನ್: ಅಖಿಲಭಾರತ ಸಣ್ಣ ಮತ್ತು ಮಧ್ಯಮ ದರ್ಜೆಯ ವೃತ್ತಪತ್ರಿಕೆಗಳ ಸಂಪಾದಕರ ಸಂಘವಾಗಿರುವ ಇದರ ಉದ್ದೇಶ ಪತ್ರಿಕೋದ್ಯಮದ ಉನ್ನತ ಆದರ್ಶಗಳನ್ನು ರಕ್ಷಿಸುವುದು, ಭಾರತದಲ್ಲಿ ಪ್ರಕಟವಾಗುವ ವೃತ್ತಪತ್ರಿಕೆ ಹಾಗೂ ಪ್ರಕಟನೆಗಳ ವ್ಯಾಪಾರ ಹಿತಾಸಕ್ತಿಯನ್ನು ಕಾಪಾಡುವುದು–ಇವೇ ಆಗಿವೆ. ಆಡಳಿತ ಕಚೇರಿ ನವದೆಹಲಿ. ಭಾರತ ಭಾಷಾಪತ್ರಿಕೆಗಳ ಸಂಘಟನೆ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯೂನಿಕೇಷನ್ ಈ ಎರಡೂ ಸಂಸ್ಥೆಗಳ ಕೇಂದ್ರ ಕಛೇರಿ ನವದೆಹಲಿಯಲ್ಲಿದೆ. (ಎಸ್.ಆರ್.ಪಿ.)

**ಪ್ರೆಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯ :** ಸ್ವತಂತ್ರ ವಿಶ್ವಸ್ಥ ಸಂಸ್ಥೆ 1963ರಲ್ಲಿ ಆರಂಭವಾಯಿತು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪತ್ರಿಕೋದ್ಯಮದಲ್ಲಿ ಉನ್ನತ ಮೌಲ್ಯಗಳನ್ನು ನೆಲೆಗೊಳಿಸುವುದು ಈ ಸಂಸ್ಥೆಯ ಗುರಿ. ಆರಂಭದಲ್ಲಿ ಬ್ರಿಟನ್ನಿನ ಥಾಂಸನ್ ಫೌಂಡೇಷನ್ನಿನಲ್ಲಿ ಪತ್ರಿಕೋದ್ಯಮದಲ್ಲಿ ಶಿಕ್ಷಣ ಪಡೆಯಲು, ಪತ್ರಕರ್ತರನ್ನು ಮತ್ತು ಛಾಯಾಗ್ರಾಹಕರನ್ನು ಆಯ್ಕೆ ಮಾಡುತ್ತಿತ್ತು. ಈಗ ಈ ಸಂಸ್ಥೆಯೇ ಪತ್ರಿಕಾಲಯಗಳಲ್ಲಿ ಹಾಗೂ ನಗರಗಳಲ್ಲಿ

ಪತ್ರಿಕೋದ್ಯಮದ ವಿವಿಧ ವಿಭಾಗಗಳಿಗೆ ಸಂಬಂಧಪಟ್ಟಂತೆ ಕಾರ್ಯಾಗಾರ ನಡೆಸುತ್ತದೆ. ಭಾರತ, ಪಾಕಿಸ್ಥಾನ, ಸಿಲೋನ್ ಮೊದಲಾದ ಏಷ್ಯಾದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸೇರಿದ 4,000 ಮಂದಿ ಪತ್ರಕರ್ತರಿಗೆ ತರಬೇತಿ ನೀಡಿದೆ. ಪತ್ರಿಕೋದ್ಯಮಕ್ಕೆ ಸಂಬಂಧಪಟ್ಟಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸಿದೆ. 'ವಿದುರ' ಈ ತ್ರೈಮಾಸಿಕ ಪ್ರಕಟಣೆ. (*)

**ಅಖಿಲಭಾರತ ಮಾನಸಿಕ ಆರೋಗ್ಯ ಸಂಸ್ಥೆ :** ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಎಂದು ಕರೆಯಲಾಗುವ ಈ ಸಂಸ್ಥೆಯನ್ನು 1954ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಮಾನಸಿಕ ಆರೋಗ್ಯದಲ್ಲಿ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗೆ ಉತ್ತೇಜನ ಕೊಡುತ್ತಿರುವುದಲ್ಲದೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮಾನಸಿಕ ಆರೋಗ್ಯ ಸೇವೆಯ ಬಗ್ಗೆ ಆದೇಶಗಳನ್ನು ಕೊಟ್ಟು, ಮಾನಸಿಕ ಆರೋಗ್ಯದ ಬಗ್ಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಿಯೋಗಗಳ ಸಹಕಾರದೊಂದಿಗೆ ಇದು ಕೆಲಸ ಮಾಡುತ್ತಿದೆ. 1955ರಿಂದೀಚೆಗೆ ಮಾನಸಿಕ ವೈದ್ಯದಲ್ಲಿ ಒಂದು ಡಿಪ್ಲೋಮಾ ತರಗತಿಯನ್ನು ನಡೆಸುತ್ತಿರುವುದಲ್ಲದೆ ವೈದ್ಯಕೀಯ ಮನಶ್ಶಾಸ್ತ್ರದಲ್ಲಿ ತರಬೇತಿ ಶಿಕ್ಷಣವನ್ನೂ ನೀಡುತ್ತಿದೆ. (ಎಸ್.ಆರ್.ಪಿ.)

**ಅಖಿಲಭಾರತ ವಾಕ್‌ಶ್ರವಣ ಸಂಸ್ಥೆ:** ಕರ್ನಾಟಕ ರಾಜ್ಯದ ಮೈಸೂರು ನಗರದಲ್ಲಿ ನೆಲೆಗೊಂಡಿರುವ ವಾಕ್ ಮತ್ತು ಶ್ರವಣ ದೋಷಗಳ ಅಖಿಲ ಭಾರತ ಮಟ್ಟದ ಚಿಕಿತ್ಸಾ ಕೇಂದ್ರ (ಆಯಿಶ್). ಮಾತಿನ ತೊಂದರೆ, ಕಿವುಡತನ ಇತ್ಯಾದಿ ನ್ಯೂನತೆಗಳನ್ನು ಸರಿಪಡಿಸುವುದು ಹಾಗೂ ಆ ಬಗ್ಗೆ ಶಿಕ್ಷಣ ನೀಡುವುದು, ಸಂಶೋಧನೆ ನಡೆಸುವುದು ಈ ಸಂಸ್ಥೆಯ ಮುಖ್ಯ ಕಾರ್ಯಗಳು. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಕೆಲಸ ಮಾಡುತ್ತಿರುವ ಈ ಸಂಸ್ಥೆ 1966ರ ಅಕ್ಟೋಬರ್ ತಿಂಗಳಿನಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿತು. ಮೊದಲಿಗೆ ಮೈಸೂರು ನಗರದ ಝಾನ್ಸಿಲಕ್ಷ್ಮೀಬಾಯಿ ರಸ್ತೆಯಲ್ಲಿರುವ ರಾಮಮಂದಿರ ಹಾಗೂ ಅನಂತರ ಮಹಾರಾಜಕಾಲೇಜು ಶತಮಾನೋತ್ಸವ ಭವನದಲ್ಲಿ ಕೆಲಸ ಮಾಡುತ್ತಿದ್ದ ಈ ಸಂಸ್ಥೆ 1970ರಲ್ಲಿ ಮಾನಸಗಂಗೋತ್ರಿ ಆವರಣಕ್ಕೆ ವರ್ಗಾವಣೆಗೊಂಡಿತು. ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂದಿನ ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜೇಂದ ಒಡೆಯರ್ ಅವರು ಈ ಸಂಸ್ಥೆಗೆ ನೀಡಿದ್ದ 32 ಎಕರೆ ಜಮೀನಿಗೆ ಬದಲಾಗಿ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯಲ್ಲಿ 32 ಎಕರೆ ಜಮೀನು ನೀಡಿದ್ದರ ಫಲವಾಗಿ ಈ ಸಂಸ್ಥೆ ಇಲ್ಲಿ ರೂಪುಗೊಂಡಿತು. ವಾಕ್-ಶ್ರವಣ ದೋಷಗಳ ತಪಾಸಣೆ ಚಿಕಿತ್ಸೆಗಳ ಜೊತೆಗೆ ಈ ಸಂಸ್ಥೆ ಅಧ್ಯಯನ ಹಾಗೂ ಸಂಶೋಧನೆಗೆ ಸಹ ಹೆಚ್ಚಿನ ಒತ್ತು ನೀಡುತ್ತಿದೆ. ಹಾಗಾಗಿ ಈ ಸಂಸ್ಥೆಯಿಂದ ಇದುವರೆಗೆ ಎಂಟುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಾಕ್-ಶ್ರವಣ ವಿಜ್ಞಾನದಲ್ಲಿ ಪದವಿ ಪಡೆದಿದ್ದಾರಲ್ಲದೆ ದೇಶ ವಿದೇಶಗಳಲ್ಲಿ ಸೇವೆಸಲ್ಲಿಸುತ್ತಿದ್ದಾರೆ (2003).

ಭಾರತದಲ್ಲಿ ಬಹಳಷ್ಟು ಮಂದಿಯನ್ನು ಕಾಡುತ್ತಿರುವ ವಾಕ್-ಶ್ರವಣ ಸಮಸ್ಯೆಯ ಅಧ್ಯಯನ ಹಾಗೂ ಚಿಕಿತ್ಸೆ ನಡೆಸಲು ಅನುಕೂಲಿಸುವಂತಹ ಕೇಂದ್ರವೊಂದನ್ನು ಸ್ಥಾಪಿಸಲು 1963ರಲ್ಲಿ ಭಾರತ ಸರ್ಕಾರ ನಿರ್ಧರಿಸಿತು. ಸರ್ಕಾರದ ಕೋರಿಕೆಯ ಮೇರೆಗೆ ಅಮೆರಿಕದ ಪ್ರಖ್ಯಾತ ವಾಕ್ ಶ್ರವಣ ತಜ್ಞ ಡಾ.ಮಾರ್ಟಿನ್ ಎಫ್.ಪಾಮರ್ ಅವರು ಭಾರತಾದ್ಯಂತ ಪ್ರವಾಸ ಮಾಡಿ ವಾಕ್-ಶ್ರವಣ ಸಂಸ್ಥೆಯ ಸ್ಥಾಪನೆಗೆ ಮೈಸೂರು ನಗರ ಸೂಕ್ತವಾದ ಸ್ಥಳವೆಂದು ವರದಿ ಮಾಡಿದರು. ಹಾಗಾಗಿ ಈ ಸಂಸ್ಥೆ ಮೈಸೂರು ನಗರದಲ್ಲಿ ಸ್ಥಾಪನೆಯಾಗಲು ಕಾರಣವಾಯಿತು.

**ಕಾರ್ಯವ್ಯಾಪ್ತಿ:** ಈ ಸಂಸ್ಥೆ ಈಗ ವಾಕ್-ಶ್ರವಣ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯ ವರೆಗಿನ ಶಿಕ್ಷಣವನ್ನು ನೀಡುತ್ತಿದ್ದು ಇಲ್ಲಿ ಒಟ್ಟು ಆರು ವಿಭಾಗಗಳಿವೆ: ಶ್ರವಣ ವಿಜ್ಞಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಆಡಿಯಾಲಜಿ), ಮನೋವಿಜ್ಞಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಸೈಕಾಲಜಿ), ವಿದ್ಯುನ್ಮಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್), ಕಿವಿ-ಮೂಗು-ಗಂಟಲು ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಇಎನ್‌ಟಿ), ವಾಕ್-ಭಾಷಾ ವಿಜ್ಞಾನವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಸ್ಪೀಚ್ ಲಾಂಗ್ವೇಜ್ ಸೈನ್ಸ್), ವಾಕ್-ದೋಷನಿದಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಸ್ಪೀಚ್ ಪೆಥಾಲಜಿ) ಹಾಗೂ ಚಿಕಿತ್ಸಾ ಕೇಂದ್ರ (ಥೆರಪಿ ಕ್ಲಿನಿಕ್). ಸದ್ಯದಲ್ಲಿಯೇ ಸಲಕರಣೆ ಅಭಿವೃದ್ಧಿ ವಿಭಾಗವನ್ನು (ಡಿಪಾರ್ಟ್‌ಮೆಂಟ್ ಆಫ್ ಮೆಟೀರಿಯಲ್ ಡೆವಲಪ್‌ಮೆಂಟ್) ತೆರೆಯಲಾಗುವುದು.

**ಶ್ರವಣ ವಿಜ್ಞಾನ ವಿಭಾಗ:** ಈ ವಿಭಾಗದಲ್ಲಿ ವ್ಯಕ್ತಿಯೊಬ್ಬನ ಶ್ರವಣ ಶಕ್ತಿಯನ್ನೂ ಸಂಬಂಧಿಸಿದ ನ್ಯೂನತೆಯನ್ನೂ ಶಬ್ದರಹಿತ ಪರಿಸರದಲ್ಲಿ ಶ್ರವಣಶಕ್ತಿ ಮಾಪಕ ಯಂತ್ರದ ಸಹಾಯದಿಂದ ಅಳೆದು ಪತ್ತೆ ಹಚ್ಚಲಾಗುತ್ತದೆ. ಅನಂತರ ಸೂಕ್ತ ಚಿಕಿತ್ಸೆಯನ್ನು ಸೂಚಿಸಲಾಗುತ್ತದೆ.

ಇತ್ತೀಚೆಗೆ 70ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ವಿಭಾಗ ಸಂಪೂರ್ಣ ಹವಾನಿಯಂತ್ರಿತ ಸೌಲಭ್ಯವುಳ್ಳ 16 ಕೊಠಡಿಗಳನ್ನೊಳಗೊಂಡಿದೆ. ಮಕ್ಕಳ ಪರೀಕ್ಷೆಗಾಗಿ ಪ್ರತ್ಯೇಕ ಕೊಠಡಿಗಳನ್ನು ಮೀಸಲಿಡಲಾಗಿದೆ.

**ಕಿವಿಯಚ್ಚು ವಿಭಾಗ:** ಈ ವಿಭಾಗ ಶ್ರವಣವಿಜ್ಞಾನ ವಿಭಾಗದ ಒಂದು ಅಂಗ. ಶ್ರವಣೋಪಕರಣವನ್ನು ಪಡೆದ ವ್ಯಕ್ತಿ ಆ ಯಂತ್ರವನ್ನು ಬಳಸಬೇಕಾದರೆ, ಆ ವ್ಯಕ್ತಿಯ ಕಿವಿಗೆ ಸರಿಹೊಂದುವಂತಹ ಕಿವಿಯಚ್ಚು ಬೇಕೇಬೇಕು. ಎಲ್ಲರೂ ಬಳಸಬಹುದಾದ ಸಾಮಾನ್ಯ ಸಿದ್ಧ ಅಚ್ಚನ್ನು ತಯಾರಿಸಲು ಸಾಧ್ಯವಿಲ್ಲ. ಹಾಗಾಗಿ ಪ್ರತಿ ವ್ಯಕ್ತಿಯ ಕಿವಿಯ ಅಳತೆಯನ್ನು ತೆಗೆದುಕೊಂಡು ಆ ಅಳತೆಗೆ ತಕ್ಕಂತಹ ಅಚ್ಚನ್ನು ಈ ವಿಭಾಗದಲ್ಲಿ ತಯಾರಿಸಿಕೊಡಲಾಗುತ್ತದೆ.

ಈಜುಗಾರರ ಕಿವಿಯೊಳಗೆ ನೀರು ಹೋಗದಂತೆ ತಡೆಯಲು ಕಿವಿಯ ಪ್ಲಗ್‌ಗಳನ್ನು ಇಲ್ಲಿ ತಯಾರಿಸಿಕೊಡಲಾಗುತ್ತದೆ. ಈ ಸಂಬಂಧವಾಗಿ ಕಿವಿಯಚ್ಚು ತಂತ್ರಜ್ಞಾನ (ಡಿಪ್ಲೊಮಾ ಇನ್ ಹಿಯರಿಂಗ್ ಏಡ್ ಅಂಡ್ ಇಯರ್‌ಮೋಲ್ಡ್ ಟೆಕ್ನಾಲಜಿ) ಎಂಬ ಒಂದು ವರ್ಷದ ಅವಧಿಯ ನೂತನ ಡಿಪ್ಲೊಮಾ ಶಿಕ್ಷಣವನ್ನು ಸಂಸ್ಥೆ ಪ್ರಾರಂಭಿಸಿದೆ (2002).

**ವಿದ್ಯುನ್ಮಾನ ವಿಭಾಗ:** ಈ ವಿಭಾಗ ವಿದ್ಯುತ್ ಹಾಗೂ ಎಲೆಕ್ಟ್ರಾನಿಕ್ಸ್‌ಗೆ ಸಂಬಂಧಿಸಿದ ವೈದ್ಯಕೀಯ ಚಿಕಿತ್ಸೋಪಕರಣಗಳ ದುರಸ್ತಿ ಹಾಗೂ ನಿರ್ವಹಣೆಯ ಕೆಲಸಗಳನ್ನು ನಿರ್ವಹಿಸುತ್ತವೆ. ಶ್ರವಣ ವಿಜ್ಞಾನ ವಿಭಾಗವು ನೀಡುವ ಮಾಹಿತಿಯನ್ನು ಅನುಸರಿಸಿ ಶ್ರವಣ ದೋಷವುಳ್ಳವರಿಗೆ ಶ್ರವಣೋಪಕರಣಗಳನ್ನು ಸಹ ಈ ವಿಭಾಗ ನೀಡುತ್ತದೆ.

ಶ್ರವಣದೋಷ ಪರೀಕ್ಷೆ

ಅಷ್ಟೇ ಅಲ್ಲ, ಅತ್ಯಂತ ಕಡಿಮೆ ವೆಚ್ಚದಲ್ಲಿ ಶ್ರವಣೋಪಕರಣಗಳ ದುರಸ್ತಿಯನ್ನೂ ಇಲ್ಲಿ ಮಾಡಲಾಗುತ್ತದೆ. ರೋಟರಿ, ಲಯನ್ಸ್ ಇತ್ಯಾದಿ ಸ್ವಯಂ ಸೇವಾ ಸಂಸ್ಥೆಗಳ ನೆರವಿನೊಂದಿಗೆ ಶ್ರವಣೋಪಕರಣಗಳ ದುರಸ್ತಿಯ ಉಚಿತ ಶಿಬಿರ ಮತ್ತು ಶ್ರವಣೋಪಕರಣಗಳನ್ನು ಬಳಸುವವರಿಗಾಗಿ ಅದನ್ನು ಸಮರ್ಥವಾಗಿ ಬಳಸುವ ಹಾಗೂ ಸುಸ್ಥಿತಿಯಲ್ಲಿಟ್ಟುಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗೆಗೂ ಆಗಾಗ್ಗೆ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಸಂಸ್ಥೆಯ ಈ ವಿಭಾಗ ಕೆಳಕಂಡ ಉಪಕರಣಗಳನ್ನು ಸಂಪೂರ್ಣ ಸ್ವದೇಶಿ ವಸ್ತುಗಳನ್ನು ಬಳಸಿ ಅಭಿವೃದ್ಧಿಪಡಿಸಿದೆ. (1) ಕಮ್ಯುನಿಕೇಟರ್ – ಮಾತೂ ಬಾರದ, ಕಿವಿಯೂ ಕೇಳದ ಹಾಗೂ ನಡೆದಾಡಲೂ ಆಗದಂತಹವರಿಗಾಗಿ ಈ ಉಪಕರಣಗಳನ್ನು ಸಿದ್ಧಪಡಿಸಲಾಗಿದೆ. ವ್ಯಕ್ತಿಯು ಈ ಯಂತ್ರದ ಸೂಚಿಗುಂಡಿಗಳನ್ನು ಒತ್ತುವುದರ ಮೂಲಕ ತನಗೆ ಏನು ಬೇಕು ಎಂಬುದನ್ನು ಇನ್ನೊಬ್ಬರಿಗೆ ತಿಳಿಸಬಹುದು. (2) ಕಂಪನ ತರಂಗೋಪಕರಣ – ಕಿವಿ ಕೇಳಿಸದವರಿಗಾಗಿ ರೂಪಿಸಿರುವ ಒಂದು ಅಲಾರಾಂ ವ್ಯವಸ್ಥೆ. ಮಲಗುವಾಗ ದಿಂಬಿನ ಅಡಿಯಲ್ಲಿ ಈ ಉಪಕರಣವನ್ನಿಟ್ಟು ಕೊಳ್ಳಬೇಕು. ಇದರ ಕಂಪನದ ಮೂಲಕ ವ್ಯಕ್ತಿಯು ನಿಗದಿತ ಸಮಯಕ್ಕೆ ಸರಿಯಾಗಿ ನಿದ್ದೆಯಿಂದ ಎದ್ದೇಳಲು ಸಾಧ್ಯವಾಗುತ್ತದೆ. (3) ಧ್ವನಿಸೂಚನಾ ದೀಪ –ಉಗ್ಗುವಿಕೆಯುಳ್ಳವರಿಗೆ ಚಿಕಿತ್ಸೆ ನೀಡುವ ಸಲುವಾಗಿ ಇದನ್ನು ಬಳಸಲಾಗುತ್ತದೆ. (4) ಅನುನಾಸಿಕ ಸೂಚಕ – ಒಬ್ಬ ವ್ಯಕ್ತಿ ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳ ಪ್ರಮಾಣ ಎಷ್ಟು ಎಂಬುದನ್ನು ತೋರುವ ಉಪಕರಣವಿದು. (5) ಲೂಪ್ ಸಿಸ್ಟಂ – ಕಿವುಡು ದೋಷವುಳ್ಳ ಹಲವಾರು ಮಕ್ಕಳಿಗೆ ಒಮ್ಮೆಗೆ ಚಿಕಿತ್ಸಾತರಬೇತಿ ನೀಡಲು ಹಾಗೂ ಮಕ್ಕಳಿಗೆ ಶಾಲಾಪೂರ್ವ ತರಬೇತಿ ನೀಡಲು ಈ ಉಪಕರಣವನ್ನು ಬಳಸಲಾಗುತ್ತದೆ. (6) ಎಫ್.ಎಂ.ವ್ಯವಸ್ಥೆ – ಇದೊಂದು ಬಗೆಯ ಶ್ರವಣೋಪಕರಣ. ಶ್ರವಣ ದೋಷವಿರುವ ಮಕ್ಕಳ ತರಗತಿಗಳಲ್ಲಿ ಈ ಉಪಕರಣ ಬಹಳ ಉಪಯುಕ್ತ. ಈ ಶ್ರವಣೋಪಕರಣದ ವೈಶಿಷ್ಟ್ಯವೇನೆಂದರೆ ಹೊರಗಿನ ಅನಗತ್ಯ ಶಬ್ದಗಳು ಇದರಲ್ಲಿ ಕೇಳಿಸುವುದಿಲ್ಲ.

**ವಾಕ್-ಭಾಷಾ ವಿಜ್ಞಾನ ವಿಭಾಗ:** ಈ ವಿಭಾಗದಲ್ಲಿ ನಿರರ್ಗಳ ಮಾತುಗಾರಿಕೆ, ಉಚ್ಚಾರಣೆ, ಧ್ವನಿಯ ಪ್ರಮಾಣ ಇತ್ಯಾದಿಗಳನ್ನು ಅಭ್ಯಸಿಸಲಾಗುತ್ತದೆ. ಭಾಷೆಯನ್ನು ಮಕ್ಕಳು ಹೇಗೆ ಕಲಿಯುತ್ತಾರೆ, ಸಾಮಾನ್ಯ ಮಕ್ಕಳು ಮಾತನಾಡಲು ಕಲಿಯುವ ರೀತಿ

ನೀತಿಗಳೇನು ಎಂಬಿತ್ಯಾದಿಗಳಲ್ಲದೆ ಇತರ ಯಾವುದೇ ರೀತಿಯ ವಾಕ್-ಶ್ರವಣ ದೋಷಕ್ಕೆ ಒಳಗಾದ ಮಕ್ಕಳು ಮಾತು ಕಲಿಯುವ ಬಗೆಗೆ ಅಭ್ಯಸಿಸಿ ಅದಕ್ಕೆ ಪೂರಕ ಚಿಕಿತ್ಸೆ ನೀಡುವ ಮೂಲಕ ತೊಂದರೆಗಳನ್ನು ನಿವಾರಿಸಲಾಗುತ್ತದೆ. ಬಾಲ್ಯದಿಂದ ವೃದ್ಧಾಪ್ಯದವರೆಗೂ ಮನುಷ್ಯನೊಬ್ಬನಲ್ಲಿ ಉಂಟಾಗುವ ಧ್ವನಿಯ ಬದಲಾವಣೆಗಳ ಬಗೆಗೆ ಈ ವಿಭಾಗದಲ್ಲಿ ಸಂಶೋಧನೆ ನಡೆಸಲಾಗುತ್ತಿದೆ. ಸಂಗೀತಗಾರರು, ಭಾಷಣಕಾರರು, ನಟರು, ಪತ್ರಕರ್ತರು, ಉಪನ್ಯಾಸಕರು ಮೊದಲಾದವರು ಧ್ವನಿಯನ್ನು ಹೆಚ್ಚಾಗಿ ಬಳಸುವ ಜನ. ಇಂಥವರ ಧ್ವನಿಪೆಟ್ಟಿಗೆ ಹಾನಿಗೊಳಗಾಗುವ ಸಂಭವವಿರುತ್ತದೆ. ಇಂತಹ ದೋಷಗಳಿಗೂ ಈ ವಿಭಾಗದಲ್ಲಿ ಚಿಕಿತ್ಸೆ ಲಭ್ಯ. ವ್ಯಕ್ತಿಯೊಬ್ಬನ ಧ್ವನಿಯನ್ನು ವಿಶ್ಲೇಷಿಸಿ ಪತ್ತೆಹಚ್ಚುವ ಅಪರಾಧಪತ್ತೆ ಕೆಲಸದಲ್ಲಿಯೂ ಈ ವಿಭಾಗ ಪೊಲೀಸರಿಗೆ ನೆರವಾಗುತ್ತದೆ.

**ವಾಕ್‌ದೋಷನಿದಾನ ವಿಭಾಗ:** ಇದು ಸಂಸ್ಥೆಯ ಮೊದಲ ಹಾಗೂ ಅತಿ ಮುಖ್ಯವಾದ ವಿಭಾಗವಾಗಿದೆ. ಶಿಕ್ಷಣ (ಪದವಿ ಹಾಗೂ ಸ್ನಾತಕೋತ್ತರ ಪದವಿ) ರೋಗತಪಾಸಣೆ ಹಾಗೂ ಚಿಕಿತ್ಸೆ, ವಾಕ್ ದೋಷಕ್ಕೆ ಸಂಬಂಧಿಸಿದ ಸಂಶೋಧನ ಕಾರ್ಯಗಳು, ಪೋಷಕರಿಗೆ ಸಲಹೆ ಸೂಚನೆಗಳು, ಸಾರ್ವಜನಿಕರಲ್ಲಿ ಅರಿವುಂಟುಮಾಡುವ ಕಾರ್ಯಕ್ರಮಗಳು ಇತ್ಯಾದಿಗಳನ್ನು ಈ ವಿಭಾಗ ಹಮ್ಮಿಕೊಂಡಿದೆ. ಜೊತೆಗೆ, ಮಕ್ಕಳಲ್ಲಿ ಮತ್ತು ವಯಸ್ಕರಲ್ಲಿ ಬರುವ ಅನೇಕ ವಿಧದ ಮಾತಿನ ತೊಂದರೆಗಳನ್ನು ಪರೀಕ್ಷಿಸಿ ಚಿಕಿತ್ಸೆ ನೀಡುತ್ತದೆ.

ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡುಬರುವ ಕುಂಠಿತಗೊಂಡ ಮಾತಿನ ಬೆಳವಣಿಗೆ, ಬುದ್ಧಿಮಾಂದ್ಯತೆ, ಮೆದುಳಿನ ತೊಂದರೆಗಳು, ಹಗಲುಕನಸು ಕಾಣುವಿಕೆ (ಆಟಿಸಂ), ಶ್ರವಣ ದೋಷ, ಮಾತಿನ ಅಂಗಗಳಾದ ಅಂಗುಳು, ನಾಲಗೆ, ಹಲ್ಲು ಇತ್ಯಾದಿಗಳಲ್ಲಿನ ನ್ಯೂನತೆಯಿಂದ ಧ್ವನಿತೊಂದರೆಗಳುಂಟಾಗಬಹುದು. ಉಗ್ಗುವಿಕೆ, ಅರ್ಥಮಾಡಿಕೊಳ್ಳುವುದರಲ್ಲಿ ತೊಂದರೆ, ಶಾಲಾಮಕ್ಕಳಲ್ಲಿ ಕಲಿಕೆಯ ತೊಂದರೆ ಇತ್ಯಾದಿಗಳಿಗೆ ಈ ವಿಭಾಗದಲ್ಲಿ ಚಿಕಿತ್ಸೆ ದೊರೆಯುತ್ತದೆ. ವಯಸ್ಕರಲ್ಲಿ ಪಾರ್ಶ್ವವಾಯುವಿನಿಂದ ಉಂಟಾಗುವ ವಾಕ್ ಸ್ತಂಭನ (ಮಾತು ನಿಲ್ಲುವಿಕೆ), ನರರೋಗ ಸಂಬಂಧದಿಂದುಂಟಾಗುವ ಧ್ವನಿ ಹಾಗೂ ಉಚ್ಚಾರಣಾ ದೋಷಗಳು, ಧ್ವನಿಯ ತೊಂದರೆ, ಉಗ್ಗು, (ತೊದಲು) ಇತ್ಯಾದಿಗಳಿಗೂ ಇಲ್ಲಿ ಚಿಕಿತ್ಸೆಯುಂಟು.

**ಮನೋವಿಜ್ಞಾನ ವಿಭಾಗ:** ವಾಕ್-ಶ್ರವಣ ದೋಷಗಳಲ್ಲಿ ಮಾನಸಿಕ ತೊಂದರೆಯೂ ತಳುಕು ಹಾಕಿಕೊಂಡಿರುವ ಸಾಧ್ಯತೆ ಉಂಟು. ಉದಾ: ತೀವ್ರ ಮಾನಸಿಕ ಆಘಾತದಿಂದ ಮಾತು ನಿಲ್ಲುವುದು. ಇಂತಹ ಸಂದರ್ಭಗಳಲ್ಲಿ ವಾಕ್ ಶ್ರವಣ ದೋಷಗಳುಳ್ಳ ವ್ಯಕ್ತಿಗಳಲ್ಲಿರಬಹುದಾದ ಮಾನಸಿಕ ತೊದರೆಗಳನ್ನು ಪತ್ತೆ ಹಚ್ಚಿ ತಕ್ಕ ಚಿಕಿತ್ಸೆಯನ್ನು ಈ ವಿಭಾಗದಲ್ಲಿ ನೀಡಲಾಗುತ್ತದೆ. ತರಗತಿಯಲ್ಲಿ ಹಿಂದೆ ಬಿದ್ದಿರುವ ವಿದ್ಯಾರ್ಥಿ, ವಯಸ್ಸಿಗೆ ಮೀರಿದ ಬುದ್ಧಿಯಿಂದಾಗುವ ತೊಂದರೆ, ಒಂದು ವಯಸ್ಸಿನಲ್ಲಿರಬೇಕಾದ ಬುದ್ಧಿಮಟ್ಟ ಇಲ್ಲದಿರುವಿಕೆ, ಬುದ್ಧಿಮಾಂದ್ಯತೆ ಇಂತಹ ತೊಂದರೆಗಳನ್ನು ಪರೀಕ್ಷಿಸಿ ಇಲ್ಲಿ ಪರಿಹಾರವನ್ನು ಸೂಚಿಸಲಾಗುವುದು.

**ಕಿವಿಮೂಗುಗಂಟಲು ವಿಭಾಗ:** ಈ ವಿಭಾಗದಲ್ಲಿ ಕಿವಿ-ಮೂಗು ಹಾಗೂ ಗಂಟಲುಗಳಿಗೆ ಸಂಬಂಧಿಸಿದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನೀಡಲಾಗುತ್ತದೆ. ಕಿವಿಯೊಳಗೆ ಗುಯ್ ಎಂದು ಸದ್ದಾಗುವುದು, ಕಿವಿನೋವು, ಗುಗ್ಗೆಕಟ್ಟುವುದು ಇತ್ಯಾದಿ ತೊಂದರೆಗಳನ್ನು ಇಲ್ಲಿ ನಿವಾರಿಸಲಾಗುವುದು. ಸಂಸ್ಥೆಯ ಈ ವಿಭಾಗ ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತನ್ನದೇ ಆದ ಹೊರರೋಗಿಗಳ ವಿಭಾಗವನ್ನು ಹೊಂದಿದ್ದು ಅಲ್ಲಿಯೂ ರೋಗಿಗಳನ್ನು ಪರೀಕ್ಷಿಸಲಾಗುತ್ತದೆ. ಕಿವಿಗೆ ಸಂಬಂಧಿಸಿದಂತೆ ಶಸ್ತ್ರ ಚಿಕಿತ್ಸೆಯ ಅಗತ್ಯ ಕಂಡುಬಂದಲ್ಲಿ ಅದನ್ನೂ ನೆರವೇರಿಸಲಾಗುತ್ತದೆ.

**ಚಿಕಿತ್ಸಾ ಕೇಂದ್ರ:** ಸಂಸ್ಥೆಯ ಆವರಣದಲ್ಲಿ ವಿವಿಧೋದ್ದೇಶ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇಲ್ಲಿ ಒಂದೇ ಸೂರಿನಡಿಯಲ್ಲಿ ರೋಗ ನಿರ್ಣಯ ಘಟಕ ಹಾಗೂ ಪುನರ್ವಸತಿ ಘಟಕಗಳ ಸೌಲಭ್ಯ ಲಭ್ಯವಿದೆ. ದಿನವೊಂದಕ್ಕೆ 600ಕ್ಕೂ ಹೆಚ್ಚು ರೋಗಿಗಳು ಬರುವ ಸಾಧ್ಯತೆಯಿದ್ದು ನರ ಸಂಬಂಧ ನ್ಯೂನತೆಗಳನ್ನು ಸರಿಪಡಿಸುವ ಘಟಕವನ್ನೂ ಇಲ್ಲಿ ಸ್ಥಾಪಿಸಿಲಾಗಿದೆ. ಇದುವರೆಗೆ ಸು.2 ಲಕ್ಷ ಜನರಿಗೆ ಚಿಕಿತ್ಸೆ ನೀಡಲಾಗಿದೆ. ಈ ಕಟ್ಟಡದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ 189 ಕೊಠಡಿಗಳಿವೆ. ವಾಕ್ ಧ್ವನಿ ಮತ್ತು ಭಾಷಾ ನ್ಯೂನತೆಗಳಿಗೆ ವಿವಿಧ ರೀತಿಯ ಪರೀಕ್ಷೆಗಳನ್ನು ನಡೆಸಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ. ಅಗತ್ಯವಿದ್ದಾಗಲೆಲ್ಲ ಹೊರಗಿನ ತಜ್ಞವೈದ್ಯರ ನೆರವನ್ನು ಸಹ ಪಡೆಯಲಾಗುತ್ತದೆ. ಪಿಡಿಯಾಟಿಷಿಯನ್, ಪ್ಲಾಸ್ಟಿಕ್‌ಸರ್ಜನ್, ಪ್ರೋಸ್ಥೋಡೆನ್ಟಿಸ್ಟ್, ನ್ಯೂರಾಲಜಿಸ್ಟ್, ಫೋನೋಸರ್ಜನ್, ಆಕ್ಯುಪೆಷನಲ್ ಥೆರಪಿಸ್ಟ್, ಫಿಜಿಯೋಥೆರಪಿಸ್ಟ್ ಇತ್ಯಾದಿ ತಜ್ಞರು ನಿಯಮಿತ ದಿನಗಳ ನಿಗದಿತ ವೇಳೆಗಳಲ್ಲಿ ಸಂಸ್ಥೆಗೆ ಭೇಟಿ ನೀಡುತ್ತಾರೆ.

**ಪಿಓಡಿ ಮತ್ತು ಸಿಡಿ:** ಶ್ರವಣ ದೋಷ ಹಾಗೂ ವಾಕ್ ಭಾಷಾ ದೋಷಗಳನ್ನು ತಡೆಗಟ್ಟುವ ಯೋಜನೆಯೊಂದು ಸಂಸ್ಥೆಯಲ್ಲಿದೆ. ಇದಕ್ಕೆ ಪ್ರಿವೆನ್ಷನ್ ಆಫ್ ಡೆಫ್‌ನೆಸ್ ಅಂಡ್ ಕಮ್ಯುನಿಕೇಷನ್ ಡಿಸಾರ್ಡರ್ಸ್ ಎಂದು ಹೆಸರು. ಇದರಲ್ಲಿ ಮೂರು ಹಂತಗಳಿವೆ (1) ಹೆಚ್ಚು ಅಪಾಯಕರವಾದ ಆರೋಗ್ಯದ ತೊಂದರೆಯೊದಗುವ ಶ್ರವಣ ಹಾಗೂ ವಾಕ್ ಭಾಷಾ ದೋಷಗಳನ್ನು ತಡೆಗಟ್ಟುವುದು (2)ಆರಂಭದಲ್ಲಿಯೇ ದೋಷಗಳನ್ನು ಗುರುತಿಸಿ ಸಲಹೆ ಸೂಚನೆಗಳನ್ನು ಕೊಡುವುದು, (3) ಪುನರ್ವಸತಿ ಕಲ್ಪಿಸುವುದು. ಈ ಯೋಜನೆಯನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕೂಡ ಹಮ್ಮಿಕೊಳ್ಳಲಾಗಿದೆ.

**ಆಲ್ಟರ್ನೇಟ್ ಅಂಡ್ ಆಗ್ಮಂಟೇಟಿವ್ ಕಮ್ಯುನಿಕೇಷನ್ ಡಿವೈಸಸ್** (ಎ.ಎ.ಸಿ.): ಕೆಲವೊಮ್ಮೆ ಕೆಲವರಿಗೆ ಕಾರಣಾಂತರಗಳಿಂದ ಮಾತು ಕಲಿಯಲು ಸಾಧ್ಯವಾಗುವುದಿಲ್ಲ. ಅಂತಹವರು ತಮ್ಮ ಅಭಿಪ್ರಾಯವನ್ನು ಇತರರಿಗೆ ತಿಳಿಸುವುದು ಹೇಗೆ? ಅದಕ್ಕೆ ಹಲವಾರು ಬಗೆಯ ಉಪಕರಣಗಳಿವೆ. ಇವಕ್ಕೆ ಆಲ್ಟರ್ನೇಟ್ ಅಂಡ್ ಆಗ್ಮಂಟೇಟಿವ್ ಕಮ್ಯೂನಿಕೇಷನ್ ಡಿವೈಸಸ್ (ಸಂಕ್ಷಿಪ್ತವಾಗಿ ಎ.ಎ.ಸಿ) ಎಂದು ಕರೆಯಲಾಗುತ್ತದೆ. ಈ ಉಪಕರಣಗಳಲ್ಲಿ ಗುಂಡಿಯನ್ನೊತ್ತಿಯೋ ಅಥವಾ ಇನ್ನಾವುದೇ ವಿಧಾನದಿಂದಲೋ ವ್ಯಕ್ತಿಯೊಬ್ಬ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯ.

**ಡಿಜಿಟಲ್ ಗ್ರಂಥಾಲಯ:** 12 ಸಾವಿರ ಗ್ರಂಥಗಳು, ಅಸಂಖ್ಯಾತ ಪತ್ರಿಕೆಗಳು, 78 ಸಾವಿರಕ್ಕೂ ಹೆಚ್ಚು ಪಠ್ಯಪುಸ್ತಕಗಳು, ಸಂಶೋಧನ ಪತ್ರಿಕೆಗಳು, ಸಿಡಿ ಮತ್ತು ವೀಡಿಯೋ ಕೆಸೆಟ್‌ಗಳನ್ನೊಳಗೊಂಡ ಪೂರ್ಣ ಪ್ರಮಾಣದಲ್ಲಿ ಗಣಕೀಕೃತಗೊಂಡಿರುವ ಅತ್ಯಮೂಲ್ಯ ಗ್ರಂಥಭಂಡಾರ ಸಂಸ್ಥೆಯ ಆವರಣದ ಸುಂದರ ಕಟ್ಟಡದಲ್ಲಿದೆ. ಕೇಂಬ್ರಿಜ್ ವಿಶ್ವ ವಿದ್ಯಾಲಯದ ಗ್ರಂಥಾಲಯದ ಮಾದರಿಯಲ್ಲಿ ನಿರ್ಮಿಸಲಾಗಿರುವ ಈ ಗ್ರಂಥಾಲಯದಲ್ಲಿ ಸೂಕ್ಷ್ಮತರಂಗ ಅಂತರ್ಜಾಲ ವ್ಯವಸ್ಥೆಯಿಂದಾಗಿ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದಲ್ಲಿ ಕುಳಿತೇ ಗ್ರಂಥಾಲಯದಿಂದ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆಯಿದೆ.

**ಮೌನವನ್ನು ಮಾತಾಗಿಸುವ ತರಬೇತಿ:** ಶಬ್ದ ಮಾಲಿನ್ಯದ ಹೆಚ್ಚಳದಿಂದಾಗಿ ನಗರ ಪ್ರದೇಶಗಳಲ್ಲಿ ಶ್ರವಣದೋಷವುಳ್ಳವರ ಸಂಖ್ಯೆ ಹೆಚ್ಚುತ್ತಿದೆ. ಅನಕ್ಷರತೆಯಿಂದಾಗಿ ಹಳ್ಳಿಗಳಲ್ಲಿ ವಾಕ್-ಶ್ರವಣ ದೋಷಗಳ ಬಗೆಗೆ ಅರಿವು ಕಡಿಮೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯು ಹಲವು ಸಂಸ್ಥೆಗಳ ಸಹಯೋಗದೊಡನೆ ಗ್ರಾಮೀಣ ಪ್ರದೇಶಗಳಲ್ಲಿ ಶಿಬಿರಗಳನ್ನೇರ್ಪಡಿಸಿ ಈ ವಿಚಾರದಲ್ಲಿ ಅರಿವು ಹಾಗೂ ಚಿಕಿತ್ಸೆ ನೀಡುತ್ತಿದೆ. ಭಾರತೀಯ ಪುನರ್ವಸತಿ ಮಂಡಲಿಯ ಸಹಕಾರದೊಂದಿಗೆ ಅರಿವು ಹಾಗೂ ತರಬೇತಿಯ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಮತ್ತು ಮುಖ್ಯೋಪಾಧ್ಯಾಯರುಗಳಿಗೆ, ಅಲ್ಲದೆ ಪ್ರಾಥಮಿಕ ಆರೋಗ್ಯಕೇಂದ್ರಗಳ ವೈದ್ಯಾಧಿಕಾರಿಗಳಿಗೆ ಆಗಾಗ ಕಾರ್ಯಕ್ರಮಗಳನ್ನು ನಡೆಸಿ, ವಾಕ್ ದೋಷ, ಬುದ್ಧಿಮಾಂದ್ಯತೆಗಳನ್ನು ಪ್ರಾಥಮಿಕ ಹಂತದಲ್ಲೇ ಗುರುತಿಸುವಿಕೆ, ರಕ್ತಸಂಬಂಧದಲ್ಲಿ ಮದುವೆಯಾದಾಗ ಹುಟ್ಟುವ ಮಕ್ಕಳಲ್ಲಿ ಉಂಟಾಗುವ ಅಂಗವೈಕಲ್ಯ ಇತ್ಯಾದಿ ವಿಚಾರಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. ವಾಕ್ ಶ್ರವಣಕ್ಕೆ ಸಂಬಂಧಿಸಿದಂತೆ ಯಾರು ಯಾವ ವಿಚಾರದಲ್ಲಿ ತಿಳಿಯಬೇಕೆಂದು ಅಪೇಕ್ಷಿಸುತ್ತಾರೋ ಆ ವಿಷಯದಲ್ಲಿ ಅವರಿಗೆ ತರಬೇತಿ ಕೊಡುವ ಕಾರ್ಯಕ್ರಮವನ್ನೂ ಸಂಸ್ಥೆ ಹಮ್ಮಿಕೊಂಡಿದೆ. ಈ ತರಬೇತಿ ಕಾರ್ಯಕ್ರಮಗಳಲ್ಲಿ ಕನಿಷ್ಠ 5 ಜನ, ಗರಿಷ್ಠ 15 ಜನ ಭಾಗವಹಿಸಬಹುದು. ಸಂಸ್ಥೆಯು ಆಗಿಂದಾಗ್ಗೆ ಅನೇಕ ಬಗೆಯ ಕಾರ್ಯಾಗಾರಗಳನ್ನು ನಡೆಸುತ್ತಿದೆ.

**ಶೈಕ್ಷಣಿಕ ವಿಭಾಗ:** ಪದವಿ ಪರೀಕ್ಷೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆಯೊಂದಿಗೆ ನಡೆಸಲಾಗುತ್ತಿದೆ. ಉಳಿದಂತೆ ಈ ಸಂಸ್ಥೆ ಸ್ವಾಯತ್ತತೆ ಪಡೆದಿದೆ. ವಾಕ್-ಶ್ರವಣ ವಿಜ್ಞಾನದ ಅಧ್ಯಯನಕ್ಕಾಗಿ ಬಿ.ಎಸ್ಸಿ ಪದವಿ ಹಾಗೂ ಎಂ.ಎಸ್ಸಿ ಸ್ನಾತಕೋತ್ತರ ಪದವಿ ಶಿಕ್ಷಣಗಳು ನಡೆಯುತ್ತಿದೆ. ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಡೆಯುವ ಅವಕಾಶವಿದೆ. ಪಿಎಚ್.ಡಿ. ಪದವಿಗೆ ಸಂಶೋಧನೆ ನಡೆಸುವವರಿಗೂ ವಿದ್ಯಾರ್ಥಿ ವೇತನ ಸೌಲಭ್ಯ ಕಲ್ಪಿಸಿದೆ. 2003ನೆಯ ವರ್ಷದಿಂದ ಶ್ರವಣದೋಷ ವಿಷಯದ ಬಗ್ಗೆ ಬಿ.ಎಸ್ಸಿ.ಇಡಿ. ಎಂಬ ಪದವಿ ಶಿಕ್ಷಣವನ್ನು ಸಂಸ್ಥೆ ಆರಂಭಿಸಲಿದೆ. ಈಗ ಈ ಸಂಸ್ಥೆಯಲ್ಲಿ ದೇಶೀಯ ವಿದ್ಯಾರ್ಥಿಗಳ ಜೊತೆಗೆ ಮಲೇಷಿಯ, ಮಾರಿಷಸ್, ನೇಪಾಳ, ಮಯನ್ಮಾರ್, ಕುವೈತ್, ಯು.ಎ.ಇ. ಆಫ್ಘಾನಿಸ್ತಾನ ಮೊದಲಾದ ದೇಶಗಳ ವಿದೇಶೀಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಲಿಯುತ್ತಿದ್ದಾರೆ.

**ಸಂಶೋಧನೆ:** ಇತ್ತೀಚಿನ ದಿನಗಳಲ್ಲಿ ಈ ಸಂಸ್ಥೆ ಸಂಶೋಧನೆಗೆ ಹೆಚ್ಚಿನ ಪ್ರಾಮುಖ್ಯ ನೀಡುತ್ತಿದೆ. ದಿನ ಕಳೆದಂತೆ ವಾಕ್-ಶ್ರವಣ ಚಿಕಿತ್ಸೆಯಲ್ಲಿ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕೆಂಬ ಹೆಬ್ಬಯಕೆಯಿಂದ ಇತರ ಸಂಸ್ಥೆಗಳು ಮತ್ತು ಸರ್ಕಾರದ ನೆರವಿನಿಂದ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಶಬ್ದಮಾಲಿನ್ಯದಿಂದ ಹೆಚ್ಚುತ್ತಿರುವ ಶ್ರವಣ ದೋಷಗಳ ನಿವಾರಣೆಯೇ ಈ ಸಂಶೋಧನೆಗಳ ಗುರಿಯಾಗಿದೆ. ಸಂಶೋಧನೆಗಳಿಗಾಗಿಯೇ ಸಂಸ್ಥೆಯಲ್ಲಿ ಒಂದು ಸಂಶೋಧನ ಸಹಾಯ ನಿಧಿಯನ್ನು (ಆಯಿಷ್ ರಿಸರ್ಚ್ ಫಂಡ್) ಸ್ಥಾಪಿಸಿದೆ. ಸಂಸ್ಥೆಯು ಜರ್ನಲ್ ಆಫ್ ದಿ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಎಂಬ ವಾರ್ಷಿಕವನ್ನು ಪ್ರಕಟಿಸುತ್ತಿದೆ. ಇದರಲ್ಲಿ ಮಾತು, ಭಾಷೆ ಹಾಗೂ ಶ್ರವಣ ವಿಚಾರಗಳಿಗೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳಿಗೆ ಆದ್ಯತೆ ನೀಡಲಾಗುತ್ತದೆ. ಜನ ಸಾಮಾನ್ಯರಿಗೆ ಈ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ತಿಳಿವಳಿಕೆ ನೀಡುವ ಸಲುವಾಗಿ ಅನೇಕ ಭಾರತೀಯ ಭಾಷೆಗಳಲ್ಲಿ ಹಲವಾರು ಕರಪತ್ರ, ಮಾಹಿತಿ ಪುಸ್ತಕಗಳನ್ನೂ ಪ್ರಕಟಿಸಲಾಗುತ್ತಿದೆ.

**ಶಾಲಾಪೂರ್ವ ತರಬೇತಿ:** ಮಗುವೊಂದರ ಬೌದ್ಧಿಕ ಬೆಳವಣಿಗೆ 2ರಿಂದ 6 ವರ್ಷಗಳೊಳಗೆ ಆರಂಭವಾಗುವುದೆಂದು ಸಂಶೋಧನ ವರದಿ ಹೇಳುತ್ತದೆ. ಈ ಕಾರಣದಿಂದ ಸಂವಹನ ಸಮಸ್ಯೆಯಿಂದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಶಾಲಾ ಪೂರ್ವ ತರಬೇತಿ ಯೋಜನೆಯನ್ನು ಈ ಸಂಸ್ಥೆ ಆರಂಭಿಸಿದೆ. ಇಂಗ್ಲಿಷ್, ಮಲೆಯಾಳಂ, ಹಿಂದಿಯೂ ಸೇರಿ ಒಟ್ಟು ಆರು ಭಾಷೆಗಳಲ್ಲಿ ಇಲ್ಲಿ ತರಬೇತಿ ನೀಡಲಾಗುತ್ತದೆ.

ಭಾರತದಲ್ಲಿ ಪ್ರತಿಶತ ಮೂವರಿಗೆ ಮಾತಿನ ಅಥವಾ ಶ್ರವಣ ದೋಷವಿದೆ. ಇವರಲ್ಲಿ ಹೆಚ್ಚಿನ ಜನರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಅವರಿಗೆ ಹೊಸ ಜೀವನವನ್ನು ಕಲ್ಪಿಸಲು ಪಣತೊಟ್ಟಿರುವ ಈ ಸಂಸ್ಥೆ ರಾಜ್ಯದ ಹೊರಗೂ ಶಿಬಿರಗಳನ್ನು ಏರ್ಪಡಿಸಿ, ಗ್ರಾಮೀಣ ಜನರಿಗೂ ಈ ಸೌಲಭ್ಯ ಒದಗುವಂತೆ ಮಾಡಿದೆ. ಅಗತ್ಯವಿದ್ದವರಿಗೆ ಶಿಬಿರಗಳಲ್ಲಿ ಶ್ರವಣೋಪಕರಣಗಳನ್ನು ಉಚಿತವಾಗಿ ಸ್ಥಳದಲ್ಲೇ ವಿತರಿಸಲಾಗುತ್ತಿದೆ.

**ವಸತಿ ಸೌಕರ್ಯ:** ಹೊರ ಊರು, ಹೊರ ರಾಜ್ಯಗಳಿಂದ ಚಿಕಿತ್ಸೆಗಾಗಿ ಬರುವ ರೋಗಿಗಳು ಉಳಿದುಕೊಳ್ಳಲು ಸೂಕ್ತ ವಸತಿ ಸೌಕರ್ಯವೂ ಸಂಸ್ಥೆಯಲ್ಲಿದೆ. ಇತ್ತೀಚೆಗೆ ದೇಶದ ಬೇರೆ ಬೇರೆ ಸ್ಥಳಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ತೆರೆಯುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಸಂಸ್ಥೆಯ ಆಡಳಿತವು ನಿರ್ದೇಶಕರ ನೇರ ಉಸ್ತುವಾರಿಯಲ್ಲಿ ನಡೆಯುತ್ತಿದ್ದು ಅಧ್ಯಯನ ಮಂಡಳಿ ಹಾಗೂ ವಿವಿಧ ಸಮಿತಿಗಳು ಈ ಆಡಳಿತಕ್ಕೆ ಸಹಕಾರಿಯಾಗಿ ಸ್ಥಾಪಿತವಾಗಿವೆ. (ಎಂ.ಜಿ.ಎ.)

**ಅಖಿಲಭಾರತ ವೈದ್ಯವಿಜ್ಞಾನಗಳ ಸಂಸ್ಥೆ :** ದೇಶಕ್ಕೆ ಒಂದು ಪ್ರಗತಿಪರ, ವೈದ್ಯಶಿಕ್ಷಣಕ್ಕೆ ಮಾದರಿ ಎನಿಸಿರುವ, ಒಂದು ಕೇಂದ್ರವನ್ನು ಸ್ಥಾಪಿಸಬೇಕೆಂದು ಭೋರ್ ಸಮಿತಿ (1946) ಸಲಹೆ ಕೊಟ್ಟಿತ್ತು. ಭಾರತ ಸ್ವತಂತ್ರವಾದ ಮೇಲೆ, ನ್ಯೂಜಿಲೆಂಡ್ ಸರ್ಕಾರ ಕೊಲಂಬೊ ಯೋಜನೆಯ ಮೂಲಕ ದತ್ತಿಯಾಗಿ ಕೊಟ್ಟ ಹತ್ತುಲಕ್ಷ ಪೌಂಡುಗಳನ್ನು ಭಾರತ ಸರ್ಕಾರ ಸ್ವೀಕರಿಸಿದಾಗ (1956) ಈ ಸಂಸ್ಥೆಯ (ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್) ಯೋಜನೆ ಮೊಳೆಯಿತು. ಭಾರತದ ಲೋಕಸಭೆ ಅದೇ ವರ್ಷದ ಶಾಸನದಂತೆ, ಸ್ವಯಂ ಅಧಿಕಾರದ ಸಂಸ್ಥೆಯೊಂದು ನಾಡಿಗೇ ಪ್ರಧಾನ ವಿಶ್ವವಿದ್ಯಾನಿಲಯವಾಯಿತು. ಭಾರತದ ವೈದ್ಯರು ಪರದೇಶಗಳಿಗೆ ಹೆಚ್ಚಿನ ಕಲಿಕೆಗಾಗಿ ಹೋಗುವುದನ್ನು ತಪ್ಪಿಸಿ, ಮಹೋನ್ನತ ಮಟ್ಟದ ಸ್ನಾತಕೋತ್ತರ ವೈದ್ಯವಿದ್ಯೆ, ಶಿಕ್ಷಕರ ಶಿಕ್ಷಣ, ಸಂಶೋಧನೆ, ವೈದ್ಯಚಿಕಿತ್ಸೆಗಳಿಗೆ ಇಲ್ಲೇ ಎಲ್ಲ ಅವಕಾಶಗಳನ್ನು ಕಲ್ಪಿಸುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶ. ಶಿಕ್ಷಕರ ಶಿಕ್ಷಣಕ್ಕಾಗಿ ವೈದ್ಯವಿದ್ಯಾರ್ಥಿಗಳ ಕಾಲೇಜು ವಿಭಾಗದಲ್ಲಿ ಪ್ರತಿವರ್ಷವೂ ಭಾರತದ ಎಲ್ಲೆಡೆಗಳಿಂದಲೂ ಹೊರನಾಡುಗಳಿಂದಲೂ ಆಯ್ಕೆಯಾಗಿ ಬರುವ, ಕೇವಲ 50 ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಳ್ಳಲಾಗುವುದು.

ದಕ್ಷಿಣ ದೆಹಲಿಯಲ್ಲಿ 150 ಎಕರೆಯ ಹರವಿನಲ್ಲಿರುವ ವೈದ್ಯಶಿಕ್ಷಣ ಕೇಂದ್ರವಿದು. ವೈದ್ಯಶಿಕ್ಷಣದ ಎಲ್ಲ ವಿಭಾಗಗಳೂ ಇಲ್ಲಿದ್ದು, ಸಂಶೋಧನೆಗೆ ಪ್ರಪಂಚದಲ್ಲೇ ಹೆಸರಾಗಿದೆ. ಹೊರ ರೋಗಿಗಳ ಚಿಕಿತ್ಸೆಗಾಗಿ ಚೆನ್ನಾಗಿ ವ್ಯವಸ್ಥೆ ಇರುವಂತೆ, 650 ಹಾಸಿಗೆಗಳ ಆಸ್ಪತ್ರೆ ಒಂದಿದೆ. ಆಸ್ಪತ್ರೆ ದಾದಿಯರ ಕಾಲೇಜೂ ಇದೆ. ವಿದ್ಯಾರ್ಥಿಗಳು, ಶಿಕ್ಷಕರು, ಕೆಲಸಗಾರರು, ಎಲ್ಲರಿಗೂ ತಕ್ಕ ವಸತಿಗಳಿವೆ. ಪ್ರಾಧ್ಯಾಪಕರು ಸದಸ್ಯರಾಗಿರುವ ಸಮಿತಿಯೊಂದು ಆಡಳಿತ ನಡೆಸುತ್ತದೆ. ಅಮೆರಿಕ ಗೋದಿ ನಿಧಿಯಿಂದ (ಪಿ.ಎಲ್.–180) 290 ಲಕ್ಷ ರೂಪಾಯಿಗಳೂ ವಿದೇಶೀವಿನಿಮಯ ಹಣಕ್ಕಾಗಿ ರಾಕ್‌ಫೆಲರ್ ಪ್ರತಿಷ್ಠಾನದಿಂದ ಹತ್ತು ಲಕ್ಷ ಪೌಂಡುಗಳ ದತ್ತಿ ದಯಪಾಲಿಸಿದೆ. ನ್ಯೂಜಿಲೆಂಡ್ ಸರ್ಕಾರ ಒಂದು ಲಕ್ಷ ಪೌಂಡುಗಳ ದತ್ತಿ ನೀಡಿದೆ. ಸಂಸ್ಥೆಯ ಒಟ್ಟು ಯೋಜನೆಯ ಖರ್ಚು 9 ಕೋಟಿ ರೂಪಾಯಿಗಳು. ವರುಷದ ಖರ್ಚು ಒಂದು ಕೋಟಿ ರೂಪಾಯಿಗಳು. (ಡಿ.ಎಸ್.ಎಸ್.)

**ಅಗಪಾಂತಸ್ :** ಹೂಬಿಡುವ ಲಶುನ (ಬಲ್ಬ್) ಸಸ್ಯಗಳಲ್ಲಿ ಬಹುಮುಖ್ಯ ಬಗೆಯದಾಗಿದ್ದು, ಲಿಲಿಯೇಸೀ ಕುಟುಂಬಕ್ಕೆ ಸೇರಿದೆ. ಇದೊಂದು ಜನಪ್ರಿಯ ಅಲಂಕಾರ ಸಸ್ಯ. ಇದನ್ನು ವಿಶಾಲವಾದ ಕುಂಡಗಳಲ್ಲಿ ಬೆಳೆಸಿ ದಾರಿ ಪಕ್ಕದಲ್ಲಿ ಮತ್ತು ಉದ್ಯಾನದ ಹಸಲೆಯ ತುದಿಗಳಲ್ಲಿ ಇಟ್ಟಾಗ ಬಹು ಸುಂದರವಾಗಿ ಕಾಣುತ್ತದೆ.

ಅಗಪಾಂತಸ್ ಒಂದು ಋತುವಿನಲ್ಲಿ ತನ್ನ ಹಸಿರು ಭಾಗವನ್ನು ಹೊರವಾಗಿ ಬೆಳೆಸಿಕೊಂಡು, ಇನ್ನೊಂದು ಋತುವಿನಲ್ಲಿ ಸುಂದರವಾಗಿ ಹೂಬಿಡುವ ದ್ವೈವಾರ್ಷಿಕ ಸಸ್ಯ. ಈ ಸಸ್ಯದಲ್ಲಿ ಭೂಗತ ಗುಪ್ತಕಾಂಡವೂ ಉದ್ದವಾದ ಮತ್ತು ಕಿರಿದಾದ ಎಲೆಗಳೂ ಇವೆ. ಹೂಗೊಂಚಲು ಅಂಬೆಲ್ ಮಾದರಿಯದು. ಆರು ಕೇಸರಗಳೂ ಮೂರು ಕೋಶದ ಉನ್ನತಸ್ಥಿತಿಯ ಅಂಡಾಶಯವೂ ಇರುತ್ತವೆ. ಫಲ ಕ್ಯಾಪ್ಸೂಲ್ ಮಾದರಿಯದು.

ಅಗಪಾಂತಸ್ ಆಫ್ರಿಕ್ಯಾನಸ್: ಎಂಬುದು ಆಫ್ರಿಕದ ಮೂಲವಾಸಿ. ಇದರ ನೀಳಾಕಾರದ ಹಸಿರು ಕೊಳವೆ ಎಲೆ ನೋಡಲು ಅಂದವಾಗಿ ಕಾಣುತ್ತದೆ. ಹೂಗೊಂಚಲು ಅನೇಕ ಹೂಗಳನ್ನೊಳಗೊಂಡ ಅಂಬೆಲ್ ಮಾದರಿಯದು. ಪತ್ರಪುಷ್ಪಗಳೂ ದಳಗಳೂ ಸಂಯುಕ್ತರಚನೆಯನ್ನು ತಳೆದಿವೆ. ಪರಾಗಕೋಶಗಳು ಮೊದಲು ಹಳದಿಬಣ್ಣವಾಗಿದ್ದು ಅನಂತರ ಕಂದುಬಣ್ಣಕ್ಕೆ ತಿರುಗುವುದರಿಂದ ಬಹಳ ಆಕರ್ಷಕವಾಗಿ ಕಾಣುತ್ತವೆ.

ಅಗಪಾಂತಸ್ ಸಸ್ಯಗಳನ್ನು ಚಿಕ್ಕ ಲಶುನಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಇದನ್ನು ಬೀಜಗಳಿಂದ ವೃದ್ಧಿಸ ಬಹುದಾದರೂ ಸಾಮಾನ್ಯವಾಗಿ ಲಶುನಗಳಿಂದಲೇ ಬೆಳೆಸುವುದು ವಾಡಿಕೆ. ಅನ್ಯಪರಾಗಸ್ಪರ್ಶದಿಂದ ಗರ್ಭಧಾರಣೆಯಾಗಿ ಉತ್ಪತ್ತಿಯಾಗುವ ಬೀಜಗಳಿಂದ ಬೆಳೆದರೆ ಮುಂದಿನ ಪೀಳಿಗೆಯ ಗಿಡಗಳಲ್ಲಿ ಮೂಲ ಗಿಡದ ಸೊಗಸು ಮಾಯವಾಗಬಹುದಾದ್ದರಿಂದ ಬೀಜಗಳ ಮೂಲಕ ಬೆಳೆಸುವುದು ವಾಡಿಕೆಯಲ್ಲಿಲ್ಲ.

ಅಗಪಾಂತಸ್ ಸಸ್ಯಗಳು ಸಮುದ್ರಮಟ್ಟದಿಂದ 1000ಮೀ–2000ಮೀ ಎತ್ತರ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ. ದೃಢವಾಗಿ ಮತ್ತು ಆಳವಾಗಿ ಬೇರು ಬಿಡುವುದರಿಂದ, ಇವುಗಳ ಬೇಸಾಯಕ್ಕೆ ಹೆಚ್ಚಿನ ತೇವ ಅವಶ್ಯವಾದದ್ದರಿಂದ, ಇವುಗಳಿಗೆ ಕಾಲಕ್ಕೆ ಸರಿಯಾಗಿ ನೀರು ಕೊಡುವುದು ಅಗತ್ಯ. ಆದರೆ ಇವು ಜೌಗನ್ನು ಸಹಿಸುವ ಶಕ್ತಿಯನ್ನು ಪಡೆದಿಲ್ಲ. ಅಗಪಾಂತಸ್ ಸಸ್ಯಗಳು ಪಾರ್ಶ್ವನೆರಳಿನಲ್ಲಿ ಸಮೃದ್ಧಿಯಾಗಿ ಬೆಳೆದು ಹೂಬಿಡುತ್ತವೆ. ಜೊತೆಗೆ ಅವಕ್ಕೆ ಧಾರಾಳವಾದ ಗಾಳಿ ಬೆಳಕು ಅಗತ್ಯ. ಇವು ಫಲವತ್ತಾಗಿಲ್ಲದ ಮಣ್ಣಿನಲ್ಲಿ ಬೆಳೆಯಲಾರವಾದ್ದರಿಂದ ದ್ರಾವಣ ಗೊಬ್ಬರವನ್ನು ಎರಡು ವಾರಗಳಿಗೊಮ್ಮೆ ಕೊಡುತ್ತಿರಬೇಕು. ಕುಂಡದ ಮಣ್ಣನ್ನು ಕೊನೆಯಪಕ್ಷ ಮೂರು ವರ್ಷಗಳಿಗೆ ಒಂದು ಸಾರಿಯಾದರೂ ಬದಲಾಯಿಸಬೇಕು. ಅಗಪಾಂತಸ್ ಸಸ್ಯಗಳು ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಹೂ ಬಿಡುತ್ತವೆ. (ಡಿ.ಎಂ.)

**ಅಗರ್ತಲ :** ತ್ರಿಪುರ ರಾಜ್ಯದ ರಾಜಧಾನಿ ಹಾಗೂ ಮುಖ್ಯ ಪಟ್ಟಣ ಜನಸಂಖ್ಯೆ 189,327. ಶಿಕ್ಷಣ, ವ್ಯಾಪಾರ ವಾಣಿಜ್ಯ – ಮುಂತಾದುವುಗಳ ದೃಷ್ಟಿಯಿಂದ ಹಿಂದುಳಿದಿರುವ ಒಂದು ಚಿಕ್ಕ ಪಟ್ಟಣ. ಇಲ್ಲಿ ಹೋರಾ ನದಿ ಹರಿಯುತ್ತದೆ. ಇದು ಬಂಗ್ಲಾದೇಶ ಮತ್ತು ಭಾರತಗಳ ಗಡಿಯಾಗಿದೆ. ಕೃಷಿಗೆ ಫಲವತ್ತಾದ ಮೈದಾನ.

ತ್ರಿಪುರ ಪ್ರಾಂತದಲ್ಲೇ ಪ್ರಮುಖ ರೈಲುನಿಲ್ದಾಣವುಳ್ಳ ಪಟ್ಟಣ. ಇಲ್ಲಿಂದ ಬ್ರಹ್ಮಪುತ್ರ ಪ್ರದೇಶದ ಕೆಲವು ಪಟ್ಟಣಗಳಿಗೆ ರೈಲು ಸಂಪರ್ಕವಿದೆ. ಭಾರತ ಮತ್ತು ಬಂಗ್ಲಾದೇಶ ಗಡಿಪ್ರದೇಶದಲ್ಲಿರುವ ಈ ಪಟ್ಟಣದಲ್ಲಿ ಸೇನಾಶಿಬಿರಗಳಿವೆ. ಈ ಪ್ರದೇಶದಲ್ಲಿ ಅಧಿಕವಾಗಿ ಮಳೆಯಾಗುವುದರಿಂದ ಹವಾಗುಣ ಅಷ್ಟು ಹಿತಕರವಾಗಿಲ್ಲ. ಪ್ರವಾಹಗಳಿಂದಾಗಿ ಜನ ಆಗಾಗ ತೊಂದರೆಗೊಳಗಾಗುತ್ತಾರೆ. ಇದೇ ಇಲ್ಲಿನ ಅಲ್ಪ ಜನಸಂಖ್ಯೆಗೆ ಕಾರಣ. ಗುಡ್ಡಗಾಡಿನ ಪ್ರದೇಶದಲ್ಲಿರುವ ಈ ಪಟ್ಟಣದ ನಿವಾಸಿಗಳಿಗೆ ಇತ್ತೀಚೆಗೆ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರದ ನೆರವು ಹೆಚ್ಚಾಗಿ ದೊರೆತಿದೆ.

ವಾಣಿಜ್ಯ ಕೇಂದ್ರ ಕೋಲ್ಕೊತ ವಿಶ್ವವಿದ್ಯಾಲಯಕ್ಕೆ ಸೇರಿದ 4 ಕಾಲೇಜುಗಳಿವೆ. ಮಹಾರಾಜರ ಅರಮನೆ ಹಾಗೂ ಒಂದು ದೇವಾಲಯವಿದೆ. (ಡಿ.ಕೆ.)

**ಅಗಸೆ :** ಮೃದುವಾದ ಸು. 3–6 ಮೀ ಎತ್ತರ ಬೆಳೆಯುವ ಪ್ಯಾಪಿಲಿಯೊನೇಸೀ ಜಾತಿಗೆ ಸೇರಿದ ವೃಕ್ಷ. ಸೆ. ಗ್ರಾಂಡಿಫ್ಲೋರ (ಸೆಸ್ಟೇನಿಯ) ಇದರ ವೈಜ್ಞಾನಿಕ ಹೆಸರು. ಇದರ ಪುಷ್ಪಗಳು ಬಿಳಿ ಅಥವಾ ಗುಲಾಬಿ ಬಣ್ಣದ್ದಾಗಿವೆ. ಒಂದೊಂದು ಪುಷ್ಪವೂ ಸು. 7 ಸೆಂಮೀ ಉದ್ದವಿರುತ್ತದೆ. ಸಾಮಾನ್ಯವಾಗಿ ಇದು ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಹೂ ಬಿಡುತ್ತದೆ. ಹೂವಿನ ರಚನೆ ಬಣ್ಣ ಮತ್ತು ಮಕರಂದ–ಇವೆಲ್ಲ ಚಿಟ್ಟೆಗಳಿಂದ ಅನ್ಯಪರಾಗಸ್ಪರ್ಶಕ್ಕೆ ಅನುಕೂಲಿಸುವಂತೆ ಮಾರ್ಪಟ್ಟು ವೈಶಿಷ್ಟ್ಯಪೂರ್ಣವಾಗಿವೆ. ಇದರ ಕಾಯಿ, ಎಲೆ ಮತ್ತು ಹೂವನ್ನು ಅಡುಗೆಗೂ ಕಾಯಿ ಮತ್ತು ಎಲೆಯನ್ನು ದನಗಳಿಗೆ ಮೇವಾಗೂ ಉಪಯೋಗಿಸುತ್ತಾರೆ. ಈ ಮರವನ್ನು ತೋಟಗಳಲ್ಲಿ ಎಲೆಯಬಳ್ಳಿ ಹಬ್ಬಿಸುವ ಸಲುವಾಗಿ ಬೆಳೆಸುತ್ತಾರೆ. ಇದರ ಎಲೆ ಮತ್ತು ತೊಗಟೆಗಳಿಗೆ ಔಷಧೀಯ ಗುಣವುಂಟು. (*)

**ಅಗಸೆಎಣ್ಣೆ :** ಅಗಸೆಯ (ನಾರಗಸೆಯ) ಬೀಜದಿಂದ ಪಡೆಯಲಾಗುವ ಉಪಯುಕ್ತವಾದ ಎಣ್ಣೆ (ಲಿನ್‌ಸೀಡ್ ಆಯಿಲ್). ಇದು ಒಂದು ಬಗೆಯ ಎಣ್ಣೆ, ಮೆರುಗು ಎಣ್ಣೆ. ನಾರಗಸೆಯ ಉತ್ಪನ್ನಗಳಲ್ಲಿ ಇದೇ ಅತ್ಯಂತ ಮುಖ್ಯವಾದುದು. ಈ ಗಿಡವನ್ನು ಸಮಶೀತೋಷ್ಣ ಪ್ರದೇಶಗಳಲ್ಲಿ ನಾರು, ಎಣ್ಣೆಗಳೆರಡರ ಸಲುವಾಗಿಯೂ ಟರ್ಕಿ, ಆಫ್ಘಾನಿಸ್ತಾನ ಮತ್ತು ಭಾರತಗಳಲ್ಲಿ ಬರಿ ಎಣ್ಣೆಗಾಗಿಯೂ ಬೆಳೆಯುತ್ತಾರೆ. ಭಾರತದಲ್ಲಿ ಮೂರು ನಾಲ್ಕು ಜಾತಿಯ ನಾರಗಸೆ ಗಿಡಗಳು ಬೆಳೆಯುತ್ತವೆ. ಇವುಗಳಲ್ಲಿ ಲಿನಮ್ ಯುಸಿಟಾಟಿಸಿಮಮ್ ಎಂಬ ಬಗೆಯನ್ನು ಬಹುವಾಗಿ ಬೆಳೆಯುತ್ತಾರೆ. ಇದರಲ್ಲಿ ಶೇ88. ಭಾಗ ಎಣ್ಣೆ ತೆಗೆಯಲು ಉಪಯೋಗವಾಗುತ್ತದೆ.

ಬೀಜಗಳನ್ನು ಮುಂಚೆ ನಯವಾಗಿ ಅರೆದು, ಎತ್ತಿನ ಗಾಣಗಳಿಂದ ಅಥವಾ ಯಂತ್ರಶಕ್ತಿಯಿಂದ ನಡೆಯುವ ಉರುಳೆಯಂತ್ರಗಳಿಂದ ಎಣ್ಣೆ ತೆಗೆಯುತ್ತಾರೆ. ಹಸಿ ಬೀಜದಿಂದಾಗಲೀ ಬೀಜವನ್ನು ಬಿಸಿಮಾಡಿಯಾಗಲಿ ಎಣ್ಣೆ ತೆಗೆಯಬಹುದು. ಬೀಜದ ಪುಡಿಯನ್ನು $160^0$ ಉಷ್ಣತೆಯಲ್ಲಿ ಕಾಯಿಸಿದರೆ ಹೆಚ್ಚು ಎಣ್ಣೆ (ಬೀಜದ ತೂಕದ ಶೇ.33 ಭಾಗ) ಸಿಗುತ್ತದೆ. ಬೀಜದ ತೂಕದ ಶೇ.23 – ಶೇ.36ವರೆಗೆ ಎಣ್ಣೆ ಸಿಗಬಹುದು. ಭಾರತದಲ್ಲಿ ಸರಾಸರಿ ಉತ್ಪತ್ತಿ ಶೇ.33.

ಹೀಗೆ ತೆಗೆದ ಎಣ್ಣೆಯನ್ನು ಶೇಖರಿಸಿಟ್ಟಿದ್ದರೆ ಅದರಲ್ಲಿರುವ ತೇವ ಮತ್ತು ಅಂಟು ಪದಾರ್ಥಗಳು ತಳದಲ್ಲಿ ನಿಲ್ಲುತ್ತವೆ. ಹಲವು ವರ್ಷಗಳು ಹೀಗೆ ಇಟ್ಟ ಎಣ್ಣೆಗೆ ಟ್ಯಾಂಕ್‌ಆಯಿಲ್ ಎನ್ನುತ್ತಾರೆ. ವಾರ್ನಿಷ್ ತಯಾರಿಕೆಯಲ್ಲಿ ಇದಕ್ಕೆ ಬಹು ಬೆಲೆಯಿದೆ, ಆದರೆ ಈ ರೀತಿಯ ಶುದ್ಧೀಕರಣ ಬಹು ನಿಧಾನ. ಆದ್ದರಿಂದ ಸಾಮಾನ್ಯವಾಗಿ ಕಚ್ಚಾ ಎಣ್ಣೆಗೆ ಶೇ.1 ಅಥವಾ ಶೇ.2 ಭಾಗದಷ್ಟು ಪ್ರಬಲ ಸಲ್ಫ್ಯೂರಿಕ್ ಆಮ್ಲವನ್ನು ಸೇರಿಸುತ್ತಾರೆ. ಕಶ್ಮಲಗಳ ಬಹುಭಾಗ ಇದರಿಂದ ಕರಿಕಾಗಿ ಕೆಳಗೆ ನಿಲ್ಲುತ್ತದೆ. ಚಿತ್ರಕಾರರ ಎಣ್ಣೆಯನ್ನು ತಯಾರಿಸಲು ಈ ರೀತಿ ಶುದ್ಧಿಮಾಡಿದ ಎಣ್ಣೆಯನ್ನು ಆಳವಿಲ್ಲದ ಅಗಲವಾದ ತಟ್ಟೆಗಳಲ್ಲಿ ಹಾಕಿ ಗಾಜಿನ ಮುಚ್ಚಳಗಳಿಂದ ಮುಚ್ಚಿ ಬಿಸಿಲಿಗೆ ಇಡುತ್ತಾರೆ. ಇದರಿಂದ ಬಂದ ಎಣ್ಣೆ ಅತ್ಯಂತ ಪರಿಶುದ್ಧವಾಗಿರುತ್ತದೆ. ಇನ್ನೂ ಅನೇಕ ಶುದ್ಧೀಕರಣ ವಿಧಾನಗಳನ್ನು ಕಂಡುಹಿಡಿದಿದ್ದರೂ ಹಳೆಯ ವಿಧಾನಗಳೇ ಹೆಚ್ಚಾಗಿ ಬಳಕೆಯಲ್ಲಿವೆ.

ಎಣ್ಣೆಗೆ ಫುಲ್ಲರ್ಸ್ ಅರ್ತ್ ಅಥವಾ ಚುರುಕುಗೊಳಿಸಿದ ಇಂಗಾಲವನ್ನು ಹಾಕಿ ಶೋಧಿಸಿದರೆ ಬಣ್ಣ ಉತ್ತಮಗೊಳ್ಳುತ್ತದೆ. ಅಲೋಹ ಪಾತ್ರೆಗಳಲ್ಲಿ ಹಾಕಿ ಗಾಳಿ ಬೆಳಕುಗಳ ಸಂಪರ್ಕವಿಲ್ಲದಂತೆ ಇಟ್ಟರೆ ಎಣ್ಣೆ ಬಹುಕಾಲ ಕೆಡದೆ ನಿಲ್ಲುತ್ತದೆ.

ಈ ಎಣ್ಣೆಯ ಮುಖ್ಯ ಉಪಯೋಗ ವಾರ್ನಿಷ್ ಮತ್ತು ಬಣ್ಣಗಳ ತಯಾರಿಕೆಯಲ್ಲಿ. ಮೆರುಗು ಎಣ್ಣೆ ಅಥವಾ ಆರುವ ಎಣ್ಣೆಗಳಲ್ಲೆಲ್ಲಾ ಇದೇ ಅತಿ ಮುಖ್ಯವಾದುದು. ಲಿನೋಲಿಯಂ ಮತ್ತು ಮೇಣಗಪಟದ ಬಟ್ಟೆ, ಮುದ್ರಣ ಮತ್ತು ಲಿಥೋಗ್ರಫಿ ಮಸಿಗಳು, ಮೆತುಸಾಬೂನು, ಪಾಲಿಷ್‌ಗಳು, ಬಾಣಬಿರುಸುಗಳು–ಇವುಗಳ ತಯಾರಿಕೆಯಲ್ಲಿಯೂ ಚರ್ಮ ನಯ ಮಾಡುವಾಗಲೂ ಸೆಣಬಿನ ನೇಯ್ಗೆಯ ಬಾಬಿನ್‌ಗಳನ್ನೂ ಕ್ರಿಕೆಟ್ ಬ್ಯಾಟುಗಳನ್ನು ಹದ ಮಾಡುವುದಕ್ಕೂ ಸ್ವಚ್ಛ ಎಣ್ಣೆ ಉಪಯೋಗವಾಗುತ್ತದೆ. ಹಸಿಬೀಜದಿಂದ ತೆಗೆದ ಎಣ್ಣೆಯನ್ನು ಪೂರ್ವ ಯುರೋಪಿನಲ್ಲಿಯೂ ಕಾಶ್ಮೀರ, ಬಿಹಾರ್, ಮಧ್ಯಪ್ರದೇಶ, ಪಂಜಾಬ್ ಮತ್ತು ಉತ್ತರಪ್ರದೇಶಗಳಲ್ಲಿಯೂ ಆಹಾರದಲ್ಲಿ ಬಳಸುತ್ತಾರೆ. ಚರ್ಮದ ಮೇಲೆ ಔಷಧವಾಗಿ ಹಚ್ಚುವುದಕ್ಕೂ ಕುದುರೆಗಳಿಗೆ ಭೇದಿಔಷಧವಾಗಿಯೂ ಇದನ್ನು ಉಪಯೋಗಿಸುವುದುಂಟು. ಎಣ್ಣೆ ತೆಗೆದ ಅನಂತರ ಉಳಿವ ಹಿಂಡಿ ದನಗಳಿಗೆ ಒಳ್ಳೆಯ ಮೇವು. (ಎಂ.ಆರ್.ಆರ್)

**ಅಗಸೆನಾರು** : ಲೈನೇಸೀ ಸಸ್ಯ ಕುಟುಂಬದ ಲೈನಮ್ ಯುಸಿಟಾಟಿಸಿಮಮ್ ಜಾತಿಗೆ ಸೇರಿದ ಸಸ್ಯ (ಲಿನ್‌ಸೀಡ್). ಸಾಮಾನ್ಯವಾಗಿ ಇದನ್ನು ಅಗಸೆನಾರು ಅಥವಾ ನಾರಗಸೆ (ಫ್ಲಾಕ್ಸ್) ಎಂದೂ ತೊಗಟೆಯ ನಾರನ್ನು ಬ್ಯಾಸ್ಟ್ ನಾರೆಂದೂ ಕರೆಯುತ್ತಾರೆ.

ಅಗಸೆನಾರು ಒಂದು ವಾರ್ಷಿಕ ಬೆಳೆ. ಸಮಶೀತೋಷ್ಣ ವಾಯುಗುಣವಿದ್ದೆಡೆಯೆಲ್ಲ ಚೆನ್ನಾಗಿ ಬೆಳೆಯುತ್ತದೆ. ಇದನ್ನು ನಾರಿಗಾಗಿಯೂ ಬೀಜಕ್ಕಾಗಿಯೂ ಬೆಳೆಸುತ್ತಾರೆ. ಬೀಜದಿಂದ ಉತ್ತಮ ಎಣ್ಣೆ (ಲಿನ್‌ಸೀಡ್ ಆಯಿಲ್) ಮತ್ತು ಹಿಂಡಿ ಉತ್ಪನ್ನವಾಗುತ್ತವೆ.

ಗಿಡ್ಡನೆಯ ಸಸ್ಯಜಾತಿಗೆ ಸೇರಿದ ಈ ಗಿಡ 30–120ಸೆಂಮೀ ಎತ್ತರ ಬೆಳೆಯುತ್ತದೆ. ತಾಯಿ ಬೇರಿದ್ದರೂ ಇತರ ಬೇರುಗಳು ಗುಚ್ಛವಾಗಿ ಮೇಲ್ಪದರದಲ್ಲೇ ಹರಡಿರುತ್ತವೆ. ತೆಳ್ಳಗಿನ ನೀಳಕಾಂಡದಲ್ಲಿ ಅನೇಕ ಕೊಂಬೆಗಳಿರುತ್ತವೆ. ಬೀಜದಿಂದಲೇ ಬೆಳೆ. ಎಲೆಗಳು ಅತಿ ಕಿರಿದಾಗಿರುತ್ತವೆ. ಹೂಗಳು ಬಿಳುಪು ಅಥವಾ ನೀಲಿ ಬಣ್ಣವಿದ್ದು ಸುಮಮಿತಿಯುಳ್ಳ ಸ್ವಪರಾಗಸಂಪರ್ಕದವಾಗಿವೆ. ಹೂವಿನಲ್ಲಿ 5 ಪುಷ್ಪಪತ್ರಗಳೂ 5 ಪುಷ್ಪದಳಗಳೂ 10 ಕೇಸರಗಳೂ 10 ಬೀಜ ಉತ್ಪನ್ನಮಾಡುವ 5 ವಿಭಾಗದ ಅಂಡಕೋಶವೂ ಇರುತ್ತವೆ. ಬೀಜ ಹೊಳಪುಕಂದು ಅಥವಾ ಕಪ್ಪು ಬಣ್ಣದ್ದು.

ಈ ಜಾತಿಯ ಗಿಡಗಳಲ್ಲಿ ದೇಶದ ವಾಯುಗುಣ ಮತ್ತು ಭೂಗುಣಕ್ಕೆ ಹೊಂದಿಕೊಂಡಂಥ ಅನೇಕ ಪ್ರಭೇದಗಳಿವೆ. ನಾರಿನ ಜಾತಿಯನ್ನು ಒತ್ತಾಗಿ ಬಿತ್ತಬೇಕು. ಅದರ ಕಾಂಡ ನೇರ, ರೆಂಬೆಗಳು ಕಡಿಮೆ. ಕೇವಲ ನಾರಿಗಾಗಿ ಬೆಳೆಸುವ ಈ ಗಿಡದಲ್ಲಿ ಬೀಜದ ಉತ್ಪತ್ತಿ ಕಡಿಮೆ. ಬೀಜದ ಜಾತಿಯನ್ನು ಸ್ವಲ್ಪ ವಿರಳವಾಗಿ ಬಿತ್ತಬೇಕು; ಗಿಡ ಗಿಡ್ಡ; ರೆಂಬೆಗಳು ಹೆಚ್ಚು; ನಾರು ಒರಟು; ಬೀಜ ಹೆಚ್ಚು.

ಅಗಸೆ ಬಹುಶಃ ಭೂಮಧ್ಯಪ್ರದೇಶದ ಆಗ್ನೇಯ ರಾಷ್ಟ್ರಗಳಲ್ಲಿ ಮೊದಲು ಹುಟ್ಟಿ ಆ ಪ್ರದೇಶದಲ್ಲೆಲ್ಲ ಹರಡಿ ಅಲ್ಲಿಂದ ಕ್ರಮೇಣ ಯುರೋಪ್, ಅಮೆರಿಕ ಮತ್ತು ಆಸ್ಟ್ರೇಲಿಯಗಳಿಗೆ ಪ್ರಸರಿಸಿದೆ. ಅಲ್ಲದೆ ಏಷ್ಯ ಮತ್ತು ಆಫ್ರಿಕದಲ್ಲೂ ಈಗ ಹೆಚ್ಚಾಗಿ ಕಾಣಿಸಿಕೊಂಡಿದೆ.

ಈ ನಾರಿನ ಮಾದರಿಗಳು ಸ್ವಿಟ್ಜರ್‌ಲೆಂಡ್ ದೇಶದ ಸರೋವರಗಳ ವಸಾಹತುಗಳಲ್ಲೂ ಈಜಿಪ್ಟ್‌ದೇಶದ ಪುರಾತನ ಸಮಾಧಿಗಳಲ್ಲೂ ಕಂಡುಬಂದಿದೆ. ಅಲ್ಲದೆ ಶಿಲಾಯುಗದಲ್ಲೂ ಇದರ ಬಳಕೆ ಹೆಚ್ಚಾಗಿತ್ತೆಂಬುದಕ್ಕೆ ಪುರಾವೆಗಳಿವೆ. ಇದರಿಂದ ಬಹುಶಃ ಯುರೋಪ್ ಪ್ರದೇಶದಲ್ಲಿ ಅಗಸೆನಾರೂ ಏಷ್ಯಖಂಡದಲ್ಲಿ ಸಣಬುನಾರೂ ಮಾನವೇತಿಹಾಸದ ಆದಿಯಿಂದಲೂ ಬಳಕೆಯಲ್ಲಿದ್ದಿರಬಹುದೆಂದು ಊಹಿಸಲಾಗಿದೆ. ಅರ್ಜೆಂಟೈನ ಮತ್ತು ಕ್ಯಾಲಿಫೋರ್ನಿಯಗಳಲ್ಲಿ ಅಗಸೆನಾರಿನ ಬೀಜವನ್ನು ಶರತ್ಕಾಲದಲ್ಲಿ ಬಿತ್ತುತ್ತಾರೆ. ಅದು ಐದು ತಿಂಗಳ ಕಾಲಾವಧಿಯಲ್ಲಿ ಮಾಗುತ್ತದೆ. ಉತ್ತರವಲಯದಲ್ಲಿ ವಸಂತಕಾಲದಲ್ಲಿ ಬಿತ್ತುತ್ತಾರೆ. 100–120 ದಿನಗಳಲ್ಲೇ ಅದು ಕೊಯಿಲಿಗೆ ಸಿದ್ಧವಾಗುತ್ತದೆ. ಅಲ್ಲಿ ಅವುಗಳ ಬೇಸಾಯ ಸಾಮಾನ್ಯವಾಗಿ ಗೋದಿ ಮತ್ತಿತರ ಸಣ್ಣಕಾಳುಗಳಂತೆಯೇ ಇದ್ದು, ಅವೆಲ್ಲಕ್ಕೂ ಒಂದೇ ರೀತಿಯ ಯಾಂತ್ರಿಕ ಉಪಕರಣಗಳು ಬಳಕೆಯಲ್ಲಿವೆ.

ಭಾರತದ ಅಗಸೆನಾರಿನ ಗಿಡ ಗಿಡ್ಡಜಾತಿಯದು. ಅಬಿಸೀನಿಯ ದೇಶದ್ದಕ್ಕೆ ದಪ್ಪಕಾಂಡವಿದ್ದು ಎಲೆಗಳು ದಟ್ಟವಾಗಿರುತ್ತವೆ. ಭೂಮಧ್ಯಪ್ರದೇಶದಲ್ಲಿ ಗಿಡದ ಬೀಜ ದಪ್ಪವಾಗಿದ್ದು ನಾರು ಹಳದಿ ಅಥವಾ ಬಂಗಾರದ ಬಣ್ಣದ್ದಾಗಿದ್ದು ನೀಳವಾಗಿರುತ್ತದೆ.

ಯುರೋಪ್ ಖಂಡದಲ್ಲಿ ಮಾತ್ರ ನಾರಿನ ಬೆಳೆಗೆ ಅತಿ ಹೆಚ್ಚಿನ ಪ್ರಾಶಸ್ತ್ಯವಿದೆ. ರಷ್ಯವೊಂದರಲ್ಲೇ ಪ್ರಪಂಚದಲ್ಲಿನ ಉತ್ಪನ್ನದ ಅಧಿಕಭಾಗ ಬೆಳೆಯುವುದು. ಆದರೆ ಅದು ಉತ್ತಮ ದರ್ಜೆಯದಲ್ಲ. ಎಕರೆಯೊಂದಕ್ಕೆ ಬರುವ ಉತ್ಪನ್ನವೂ ಕಡಿಮೆ. ಉತ್ತಮದರ್ಜೆಯ ನಾರು ಫ್ರಾನ್ಸ್, ಬೆಲ್ಜಿಯಂ ಮತ್ತು ಹಾಲೆಂಡ್ ದೇಶಗಳಲ್ಲಿ ಉತ್ಪಾದನೆಯಾಗುತ್ತದೆ. ಐರ್‌ಲೆಂಡ್ ಮತ್ತು ಕೆನಡಗಳಲ್ಲೂ ಸ್ವಲ್ಪಮಟ್ಟಿಗೆ ಈಗ ಇದನ್ನು ಬೆಳೆಸಲಾಗುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳು, ಕೆನಡ ಮತ್ತು ಅರ್ಜೆಂಟೈನ ದೇಶಗಳಲ್ಲಿ ಅದು ಈಚೆಗೆ ಹೆಚ್ಚು ಪ್ರಮುಖವಾಗುತ್ತಿದೆ.

ಮುಖ್ಯವಾಗಿ ಸಮಶೀತೋಷ್ಣವಲಯದ ಬೆಳೆಯಾಗಿದ್ದರೂ ಅಗಸೆ ಬೇರೆ ಯಾವ ಪ್ರದೇಶದಲ್ಲಾದರೂ ಅನುಕೂಲವೇರ್ಪಡಿಸಿದಲ್ಲಿ ಹೊಂದಿಕೊಂಡು ಬೆಳೆಯಬಲ್ಲುದು. ಅದನ್ನು ಭಿನ್ನ ಭಿನ್ನ ವಾಯುಗುಣ, ಭೂಗುಣಗಳ ಪ್ರದೇಶಗಳಲ್ಲಿ ಬೆಳೆಸಲಾಗುತ್ತಿದೆ. ಹೆಚ್ಚಿನ ಉಷ್ಣಾಂಶ ಮತ್ತು ಅತಿ ಹೆಚ್ಚಿನ ಮಳೆ ಇದಕ್ಕೆ ಅನುಕೂಲವಲ್ಲ.

ನಾರಿನ ವ್ಯವಸಾಯ ದೇಶಕ್ಕನುಗುಣವಾಗಿ ಮಾರ್ಪಾಟು ಹೊಂದುತ್ತದೆ. ಜೇಡಿಮಣ್ಣು ಮತ್ತು ಹೆಚ್ಚಿನ ಸಾವಯವವಸ್ತುಗಳಿದ್ದಲ್ಲಿ ಬೆಳೆ ಚೆನ್ನಾಗಿ ಬಾರದು. ಹಾಗೂ ಕರಲು ಅಥವಾ ಕಲ್ಲು ಭೂಮಿಗಳೂ ಅದರ ಬೆಳಸಿಗೆ ಯೋಗ್ಯವಲ್ಲ. ಭೂಮಿ ಸ್ವಲ್ಪ ಫಲವತ್ತಾಗಿದ್ದರೂ ಮರಳುಮಿಶ್ರಿತ ಲಘು ಜೇಡಿಮಣ್ಣಿದ್ದರೂ ಗಿಡ ಹಸನಾಗಿ ಬೆಳೆಯುತ್ತದೆ. ಬಿತ್ತನೆಗೆ ಮೊದಲು ಭೂಮಿಯನ್ನು ಅನೇಕ ಸಲ ಉತ್ತು ಹದಗೊಳಿಸಬೇಕು. ರಾಸಾಯನಿಕ ಗೊಬ್ಬರ ಕೊಟ್ಟಲ್ಲಿ ಒಂದೇ ಎತ್ತರಕ್ಕೆ ಗಿಡ ಬೆಳೆಯುವುದಿಲ್ಲವಾದ್ದರಿಂದ ಅದನ್ನು ಬಳಸುವುದಿಲ್ಲ. ಆದರೆ ಅದರ ಹಿಂದಿನ ಬೆಳೆಗೆ ಹೆಚ್ಚು ಗೊಬ್ಬರ ಒದಗಿಸಿದ್ದಲ್ಲಿ ಉಳಿದ ಗೊಬ್ಬರ ಭೂಮಿಯಲ್ಲಿ ಹರಡಿಕೊಂಡು ಸಹಾಯಕವಾಗುತ್ತದೆ. ಬೀಜವನ್ನು ಎರಚಬಹುದು, ಸಾಲಾಗಿ ಬಿತ್ತಬಹುದು, ಕೂರಿಗೆ ಹೊಡೆಯಬಹುದು. ಭೂಮಿಯನ್ನು ಸಣ್ಣ ಪಾತಿಗಳನ್ನಾಗಿಸಿ, ಬಿತ್ತಿ, ಮೇಲೆ ಭಾರವಾದ ಕಲ್ಲು ಮುಂತಾದುವನ್ನು ಆಡಿಸಿ ಗಟ್ಟಿಗೊಳಿಸುವುದರಿಂದ ಉತ್ತಮ ಮೊಳಕೆ ಉತ್ಪನ್ನವಾಗುತ್ತದೆ. ಬಿತ್ತನೆ ಪ್ರಮಾಣ ಸು. 40–65 ಕಿಗ್ರಾಂ.

ಬೆಳೆಯ ಅವಧಿಯಲ್ಲಿ ಕಳೆತೆಗೆದು ಉಪಬೇಸಾಯ ಕೈಗೊಳ್ಳುತ್ತಾರೆ. ಬೀಜ ಅರ್ಧ ಬಲಿತಿರುವಾಗ ಅದು ಕೊಯಿಲಿಗೆ ಸಿದ್ಧ. ಗಿಡವನ್ನು ಭೂಮಟ್ಟಕ್ಕೆ ಕತ್ತರಿಸಬಹುದು ಅಥವಾ ಬೇರುಸಮೇತ ಕೀಳಲೂಬಹುದು. ಈಗ ಯಂತ್ರಗಳಿಂದ ಕೊಯಿಲುಮಾಡುವುದು ಅಮೆರಿಕ ಸಂಯುಕ್ತಸಂಸ್ಥಾನ ಮುಂತಾದ ರಾಷ್ಟ್ರಗಳಲ್ಲಿ ಸಾಮಾನ್ಯ. ಕೊಯಿಲು ಆದೊಡನೆ ಗಿಡಗಳನ್ನು ಅದೇ ಹೊಲದಲ್ಲಿ ಗುಂಪು ಗುಂಪಾಗಿ ಶೇಖರಿಸಿ ನಿಲ್ಲೊಟ್ಟಲು ಹಾಕಿ ಒಣಗಿಸುತ್ತಾರೆ. ಬೀಜವನ್ನು ಒಣಗಿಸಿ ಅನಂತರ ಶೇಖರಿಸುತ್ತಾರೆ. ಅದರ ಶೇಖರಣೆಯಲ್ಲೂ ವೈವಿಧ್ಯವಿದೆ. ಬಿತ್ತನೆಗೂ ದನದ ಮೇವಿಗೂ ಎಣ್ಣೆಗೂ ಅದನ್ನು ಬಳಸಲಾಗುತ್ತದೆ.

ವಿವಿಧ ದೇಶಗಳಲ್ಲಿ ಅಲ್ಲಿನ ಅನುಕೂಲಕ್ಕೆ ತಕ್ಕಂತೆ ನಾರನ್ನು ಕಾಂಡದಿಂದ ಬೇರ್ಪಡಿಸುತ್ತಾರೆ. ಇದರಲ್ಲಿ ಎರಡು ಮುಖ್ಯ ವಿಧಾನಗಳಿವೆ. ಮೊದಲನೆಯದರಲ್ಲಿ, ಕಾಂಡವನ್ನು ಇಬ್ಬನಿಯಲ್ಲಿ ದೀರ್ಘಕಾಲ ನೆನೆಸುತ್ತಾರೆ. ಎರಡನೆಯದರಲ್ಲಿ, ಬೇಗ ನೆನೆಯುವಂತೆ ನೀರಿನಲ್ಲಿ ಕೊಳೆಹಾಕುತ್ತಾರೆ. ಮೊದಲನೆಯ ವಿಧಾನ ರಷ್ಯದಲ್ಲಿ ಹೆಚ್ಚು. ಇಬ್ಬನಿ ಮಳೆ ಮತ್ತು ಹಿಮದ ನೀರು, ಸೂಕ್ಷ್ಮಾಣುಗಳು ಮತ್ತು ಬೂಷ್ಟುಗಳ ಕಾರ್ಯಾಚರಣೆ ಗಳನ್ನವಲಂಬಿಸಿ ಅವು ಎಷ್ಟು ಚೆನ್ನಾಗಿದ್ದರೆ ಅಷ್ಟು ಬೇಗನೆ ಗಿಡ ನೆನೆದು ಹದವಾಗುತ್ತದೆ. ನೀರಿನಲ್ಲೇ ಆದರೆ ಗಿಡ ಬಹು ಬೇಗ ಹದವಾಗುತ್ತದೆ. ಕಾಂಡದ ಮಧ್ಯಭಾಗ ಮೃದುವಾಗಿ, ಸುಲಭವಾಗಿ ಸೀಳಬಹುದಾದಾಗ ನಾರು ತೆಗೆಯಲು ಬರುತ್ತದೆ. ನೀರಿನಲ್ಲಿ ಕೊಳೆಹಾಕುವ ಮಾರ್ಗವನ್ನೇ ಅನೇಕ ಮುಖ್ಯ ರಾಷ್ಟ್ರಗಳು ಅನುಸರಿಸುತ್ತಿವೆ. ನೀರಿನಲ್ಲಿ ನಾರಿನ ಮಧ್ಯೆ ಹಾಗೂ ಮೇಲ್ಭಾಗದ ಅಂಗಾಂಶಗಳು ಪೂರ್ಣ ಕೊಳೆಯುತ್ತವೆ. ಹೊಂಡ, ಕೆರೆ, ತೆಳ್ಳಗೆ ಹರಿಯುವ ಝರಿ, ಸರೋವರ ಮತ್ತು ಸಾಧ್ಯವಾದೆಡೆ ದೊಡ್ಡ ದೊಡ್ಡ ಕೊಪ್ಪರಿಗೆಗಳಲ್ಲೂ ಅದನ್ನು ನೆನೆಹಾಕಬಹುದು. ಈ ಕೊನೆಯವಿಧಾನದಲ್ಲಿ ಉಷ್ಣತೆಯನ್ನು ನಿಯಂತ್ರಣಗೊಳಿಸಿಡಲು ಸಾಧ್ಯವಾದ ಪಶ್ಚಿಮ ಮತ್ತು ಮಧ್ಯ ಯುರೋಪ್ ಹಾಗೂ ಸಂಯುಕ್ತಸಂಸ್ಥಾನಗಳಲ್ಲಿ ಬಳಕೆಯಲ್ಲಿದೆ. ಅದಕ್ಕೆ ಬೇಕಾದ ನಿರ್ದಿಷ್ಟ ಸೂಕ್ಷ್ಮಾಣುಗಳನ್ನು ಹೆಚ್ಚಾಗಿ ಬೆಳೆಸಿ ರಾಸಾಯನಿಕ ಪ್ರಯೋಗದ ಸಹಾಯದಿಂದ ನಾರು ಬಿಡಿಸುವ ಮಾರ್ಗ ಸಂಶೋಧನೆಗಳಿಂದ ಸಿದ್ಧಿಸಿದ್ದರೂ ಸಾಮಾನ್ಯವಾಗಿ ಬಳಕೆಯಲ್ಲಿಲ್ಲ.

ಹೀಗೆ ಕೊಳೆಸಿ ಒಣಗಿಸಿದ ಹುಲ್ಲನ್ನು ಚೆನ್ನಾಗಿ ಜಜ್ಜಬೇಕು. ನಾರು ತುಂಡಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ವಿವಿಧ ಯಾಂತ್ರಿಕ ಸಲಕರಣೆಗಳ ಸಹಾಯದಿಂದ ಅದನ್ನು ನಿರ್ವಹಿಸಲಾಗುತ್ತದೆ. ಜಜ್ಜಿದ ಹುಲ್ಲಿನಲ್ಲಿನ ಬೆಂಡು ಮತ್ತು ಸ್ವಚ್ಛನಾರುಗಳನ್ನು ಬೇರ್ಪಡಿಸಿ ಎಳೆಗಳು ಮುದ್ದೆಯಾಗದೆ ಸರಳವಾಗಿರುವಂತೆ ಹಣಿಗೆಯ ಸಹಾಯದಿಂದ

ಹೆಕ್ಕಿಯೋ ವಿವಿಧ ನಾರುಬಿಡಿಸುವ ಯಂತ್ರಗಳನ್ನು ಬಳಸಿಯೋ ನಾರಿನ ಸಿಕ್ಕನ್ನು ಬಿಡಿಸುತ್ತಾರೆ. ನೀಳವಾಗಿ ನವುರಾಗಿರುವ ಎಲೆಗಳನ್ನು ಗಂಟುಬಿದ್ದು ತುಂಡಾಗಿರುವ ಎಲೆಗಳಿಂದ ಬೇರ್ಪಡಿಸಿ ಅವೆಲ್ಲವನ್ನೂ ಪ್ರತ್ಯೇಕ ಪ್ರತ್ಯೇಕ ಗಂಟುಗಳಾಗಿ ಕಟ್ಟಿ ನೂಲುವ ಕಾರ್ಖಾನೆಗಳಿಗೆ ಒದಗಿಸಲಾಗುತ್ತದೆ.

ನಾರಿನ ಉತ್ಪತ್ತಿ ಫ್ರಾನ್ಸ್‌ನಲ್ಲೇ ಹೆಚ್ಚು. ಆಸ್ಟ್ರೇಲಿಯ ಮತ್ತು ಹಾಲೆಂಡ್‌ಗಳು ದ್ವಿತೀಯ ಸ್ಥಾನ ಪಡೆಯುತ್ತವೆ. ಪಶ್ಚಿಮ ಯುರೋಪಿನಲ್ಲಿ ಎಕರೆಗೆ ಸು. 175 ಕಿ.ಗ್ರಾಂ; ರಷ್ಯದಲ್ಲಿ ಸು. 140 ಕಿ.ಗ್ರಾಂ.; ಸಂಯುಕ್ತ ಸಂಸ್ಥಾನದಲ್ಲಿ, ಸು. 185 ಕಿ.ಗ್ರಾಂ.

ಯುರೋಪ್‌ನಲ್ಲಿ ನಾರಿನಿಂದ ವಿವಿಧ ಬಗೆಯ ದಾರಗಳನ್ನೂ ಗಟ್ಟಿ ಹುರಿಗಳನ್ನೂ ಹಗ್ಗಗಳನ್ನೂ ತಯಾರಿಸುವರು. ಉತ್ತಮದರ್ಜೆಯ ಬಟ್ಟೆಗಳು, ಅಲಂಕಾರದ ಪಟ್ಟಿಗಳು ಇದರಿಂದ ಉತ್ಪನ್ನವಾಗುತ್ತದೆ. ಅಮೆರಿಕದಲ್ಲಿ ಜಮಖಾನೆಗಳಿಗಾಗಿ ಬೇಕಾದ ನೂಲು, ದಾರಕ್ಕೂ ಹೆಂಗಸರ ಕಾಲುಚೀಲಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ.

ಅರ್ಜೆಂಟೈನ, ಭಾರತ, ಸಂಯುಕ್ತಸಂಸ್ಥಾನ ಮತ್ತು ಕೆನಡ ದೇಶಗಳು ಬೀಜಕ್ಕಾಗಿ ಈ ಗಿಡವನ್ನು ಬೆಳೆಸುತ್ತವೆ. ಅರ್ಜೆಂಟೈನ ದೇಶವೊಂದರಿಂದಲೇ ಪ್ರಪಂಚದ ಒಟ್ಟು ಉತ್ಪತ್ತಿಯ ಅರ್ಧಭಾಗ ರಫ್ತಾಗುತ್ತದೆ. ಬೀಜದಿಂದ ಶೇ.30–ಶೇ.40 ಭಾಗ ಎಣ್ಣೆ ಉತ್ಪನ್ನವಾಗುತ್ತದೆ. ಎಣ್ಣೆಯಿಂದ ಬಣ್ಣ, ವಾರ್ನಿಷ್ (ಮೆರುಗೆಣ್ಣೆ) ಅಲ್ಲದೆ ಕಪ್ಪು ಮೆರುಗಿನ ಬಟ್ಟೆ ತಯಾರಿಕೆಗಾಗಿಯೂ ತೊಗಲಿನ ಮೇಲಿನ ಕಪ್ಪು ಬಣ್ಣಕ್ಕಾಗಿಯೂ ಉಪಯೋಗ ವಾಗುವ ಮಸಿ–ಹೀಗೆ ಅನೇಕ ವಸ್ತುಗಳು ತಯಾರಾಗುತ್ತವೆ. ಎಣ್ಣೆಯನ್ನು ಹಾಗೆಯೇ ಅನೇಕ ಕೆಲಸಗಳಿಗೆ ಬಳಸುತ್ತಾರೆ. ಹಿಂಡಿಯಲ್ಲಿ 30–40 ಭಾಗ ನೈಟ್ರೋಜನ್ ಇರುವುದರಿಂದ ಕರಾವುಹಸುಗಳ ಮೇವಿಗೆ ಅದು ಅತಿ ಮುಖ್ಯ ವಸ್ತುವಾಗಿದೆ.

(ಎಸ್.ಡಬ್ಲ್ಯೂ.ಎಂ.)

**ಅಗಸ್ಟ ಕಾಂಟ್ :** 1798–1857. ಹೆಸರಾಂತ ಸಮಾಜಶಾಸ್ತ್ರಜ್ಞ. 1798ರಲ್ಲಿ ಫ್ರಾನ್ಸ್‌ದೇಶದ ಮಾಂಟ್ ಪೆಲಿಯರ್ ಎಂಬ ಸ್ಥಳದಲ್ಲಿ ಜನಿಸಿದ. ಇವನ ತಂದೆ–ತಾಯಿ ರೋಮನ್ ಕೆಥೊಲಿಕ್ ಧರ್ಮಕ್ಕೆ ಸೇರಿದವರು. ಚಿಕ್ಕವಯಸ್ಸಿನಿಂದಲೂ ಈತ ಮೇಧಾವಿ, ವಾದಚತುರ, ಪ್ರತಿಭಾವಂತ, ಚುರುಕು ಬುದ್ಧಿಯವ, ಜ್ಞಾನಾರ್ಜನೆಯಲ್ಲಿಯೂ, ಓದಿದ್ದನ್ನು ಗ್ರಹಿಸುವುದರಲ್ಲಿಯೂ, ಇತರರಿಗೆ ಮೇಲ್ಪಂಕ್ತಿಯಾಗಿದ್ದ. ಹದಿನಾರನೆಯ ವಯಸ್ಸಿನಲ್ಲಿಯೇ ಗಣಿತಶಾಸ್ತ್ರವನ್ನು ಅಧ್ಯಯನ ಮಾಡುವುದರಲ್ಲಿ ಹೆಚ್ಚಿನ ಕಾಲವನ್ನು ಉಪಯೋಗಿಸತೊಡಗಿದ. ಬಾಲ್ಯದಲ್ಲಿಯೇ ತನ್ನ ಉಪಾಧ್ಯಾಯನೊಬ್ಬನ ಜೊತೆಯಲ್ಲಿ ವಾದ ಮಾಡಿ ಗೆದ್ದ. ನೆಪೋಲಿಯನ್ನನಂಥ ಪರಾಕ್ರಮಿಯನ್ನೂ ಈತ ಟೀಕಿಸದೆ ಬಿಡಲಿಲ್ಲ. ಸ್ವಮತೀಯರಲ್ಲಿ ಇವನಿಗೆ ಅಷ್ಟೇನೂ ಗೌರವವಿರಲಿಲ್ಲ.

ಕಾಂಟನಿಗೆ ತನ್ನ 19ನೆಯ ವಯಸ್ಸಿನಲ್ಲಿಯೇ ಸೇಂಟ್ ಸೈಮನ್ ಎಂಬ ಸಮಾಜ ಸ್ವಾಮ್ಯವಾದಿಯ ಪರಿಚಯವಾಗಿ ಮನಸ್ಸಿನ ಪರಿವರ್ತನೆಯಾಯಿತು. ಅನಂತರ ಆತ ಸಮಾಜವಿಜ್ಞಾನ ಮತ್ತು ಸಾಮಾಜಿಕ ಸಂಘಗಳ ಉತ್ಕೃಷ್ಟ ರೀತಿಯ ಅಧ್ಯಯನವನ್ನು ನಡೆಸಿದ.

ಕಾಂಟ್ 1822ರಲ್ಲಿ ಎ ಪ್ರಾಸ್‌ಪೆಕ್ಟಸ್ ಆಫ್ ದಿ ಸೈಂಟಿಫಿಕ್ ವರ್ಕ್ಸ್ ರಿಕ್ವೈರ್ಡ್ ಫಾರ್ ದಿ ರಿ ಆರ್ಗನೈಸೇಷನ್ ಆಫ್ ದಿ ಸೊಸೈಟಿ ಎಂಬ ಗ್ರಂಥವನ್ನು ಪ್ರಕಟಿಸಿದ. ಈ ಪ್ರಕಟಣೆಯಿಂದ ಕಾಂಟನ ಜೀವನದ ಮೇಲೆ ಮಹತ್ಪರಿಣಾಮವಾಯಿತು. ಅಲ್ಲಿಂದಾಚೆ ದೀರ್ಘವಾಗಿ ಆಲೋಚನೆ ಮಾಡಿ ವಿಷಯಗ್ರಹಣ ಮಾಡಲು ಆತ ಪ್ರಾರಂಭಿಸಿದ. ಈ ಮಧ್ಯೆ ಮದುವೆ ಮಾಡಿಕೊಂಡ. ತನ್ನ ಪುಸ್ತಕದ ಪ್ರಕಟಣೆಗೆ ಯಥಾಶಕ್ತಿ ದುಡಿದಿದ್ದರಿಂದಲೂ ಸಂಸಾರದಲ್ಲಿ ಹೆಚ್ಚಿನ ಹೊಂದಾಣಿಕೆ ಇಲ್ಲದ್ದರಿಂದಲೂ ಅವನ ಮನೋರೋಗ ಪ್ರಬಲವಾಯಿತು. ಅದೇ ಕಾಲದಲ್ಲಿ ಸಾರ್ವಜನಿಕರಿಗಾಗಿ ಪ್ರತಿಮಾನವನೂ ಸತತವೂ ದುಡಿಯಬೇಕೆಂಬ ಧ್ಯೇಯವನ್ನೊಳಗೊಂಡ ಹಲವಾರು ಭಾಷಣಗಳನ್ನು ಮಾಡಿದ. ಈತ ತನ್ನ ಪುಸ್ತಕಗಳಿಂದ ಬರುತ್ತಿದ್ದ ಸಂಭಾವನೆಯನ್ನು ಸ್ವೀಕರಿಸುತ್ತಿರಲಿಲ್ಲವಾಗಿ ಕೊನೆಗಾಲದವರೆಗೂ ಬಡವನಾಗಿಯೇ ಇರಬೇಕಾಯಿತು. ಸನ್ಮಿತ್ರರು ಅವನಿಗೆ ಆಗಾಗ ಹಣವನ್ನು ಕೊಟ್ಟು ಅವನ ಜೀವನಕ್ಕೆ ನೆರವಾಗುತ್ತಿದ್ದರು.

ಕಾಂಟನ ಜ್ಞಾಪಕಶಕ್ತಿ ಆತ ಬರೆದ ಎಲ್ಲ ಗ್ರಂಥಗಳಲ್ಲಿಯೂ ವಿಷಯಗಳನ್ನು ಶಾಸ್ತ್ರೋಕ್ತವಾಗಿ ಚಿತ್ರಿಸಲು ಅನುಕೂಲವಾಯಿತು. ಇದರಿಂದಲೇ ಆತ ಮಹಾಜ್ಞಾನಿಯಾಗಲು ಸಾಧ್ಯವಾಯಿತೆಂದು ಅನೇಕ ತಜ್ಞರ ಅಭಿಪ್ರಾಯ.

ಪಾಸಿಟಿವ್ ಫಿಲಾಸಫಿ (ಲೋಕಸಿದ್ಧವಾದ, ಪ್ರತ್ಯಕ್ಷ ಪ್ರಮಾಣವಾದ) ಮತ್ತು ಪಾಸಿಟಿವ್ ಪಾಲಿಟಿ (ಲೋಕಸಿದ್ಧ ಆಡಳಿತವಿಧಾನ) ಎಂಬ ಗ್ರಂಥಗಳನ್ನು ಬರೆದು ಕಾಂಟ್ ಜಗತ್ಪ್ರಸಿದ್ಧ ನಾದ. 1830 – 42ರವರೆಗೆ ಪಾಸಿಟಿವ್ ಫಿಲಾಸಫಿಯ ಆರು ಸಂಕ್ಷಿಪ್ತ ಸಂಪುಟಗಳನ್ನು ಪ್ರಕಟಿಸಿದ. ಹೀಗೆಯೇ ಪಾಸಿಟಿವ್ ಪಾಲಿಟಿಯ ನಾಲ್ಕು ಸಂಕ್ಷಿಪ್ತ ಸಂಪುಟಗಳನ್ನು 1851 – 54ರೊಳಗೆ ಪ್ರಕಟಿಸಿದ. ಕಾಂಟನ ಮೇಧಾಶಕ್ತಿಯನ್ನು ಜಾನ್ ಸ್ಟುವರ್ಟ್‌ಮಿಲ್ ಮಿಗಿಲಾಗಿ ಕೊಂಡಾಡಿ, ಪ್ರಪಂಚದ ಮೇಧಾವಿಗಳಲ್ಲಿ ಅಗ್ರಗಣ್ಯನೆಂದು ಸಾರಿದ್ದಾನೆ. ಜಾರ್ಜ್ ಹೆನ್ರಿ ಲೂಯಿಸ್ ಎಂಬ ವಿದ್ವಾಂಸ ಆಧುನಿಕ ಸಮಾಜದ ಮಾರ್ಗದರ್ಶಕನೆಂದು ಹೇಳಿದ್ದಾನೆ. ಜಾನ್‌ಮಾರ್ಲೆ ಎಂಬ ಇಂಗ್ಲೆಂಡ್ ದೇಶದ ರಾಜಕಾರಣಿ, ಕಾಂಟನಂಥ ಮೇಧಾವಿಯನ್ನು ಸರಿದೂಗುವ ಸಮಾಜಶಾಸ್ತ್ರಜ್ಞನೇ ಇಲ್ಲವೆಂದು ಅಭಿಪ್ರಾಯ ಪಟ್ಟಿದ್ದಾನೆ.

ಮಾನವ ಬಹುದೇವತಾರಾಧನೆಯನ್ನುಳಿದು ಕ್ರಮೇಣ ಹೇಗೆ ಏಕದೇವೋಪಾಸಕನಾದ ನೆಂಬುದನ್ನು ತನ್ನ ಗ್ರಂಥಗಳಲ್ಲಿ ಕಾಂಟ್ ವಿವರಿಸಿದ್ದಾನೆ. ಕಾಲಕ್ರಮೇಣ ಮನುಷ್ಯನ ಬುದ್ಧಿಶಕ್ತಿ ಚುರುಕುಗೊಂಡು ಅನೇಕ ದೇವತಾರಾಧನೆ ಸುವ್ಯವಸ್ಥಿತ ಮಾರ್ಗವಲ್ಲವೆಂದು ಮನುಷ್ಯ ಮನಗಂಡನೆಂದೂ ಅನಂತರ ಏಕದೇವತಾವಾದವನ್ನು ಅವಲಂಬಿಸಿದನೆಂದೂ ಪ್ರತಿಪಾದಿಸಿದ್ದಾನೆ. ಆಮೇಲೆ ದೇವರು ಮನಸ್ಸಿನ ಹಿಂದಿರುವ ಒಂದು ಶಕ್ತಿಯೆಂದು ದೃಢಪಡಿಸಿ ವಾಸ್ತವಾಂಶಗಳನ್ನೂ ಗೋಚರಸಾಧ್ಯ ವಿಷಯಗಳನ್ನೂ ಮಾತ್ರ ಅಂಗೀಕರಿಸುವ ಮಾನವೋತ್ತಮತಾವಾದವನ್ನು ಮಂಡಿಸಿದ್ದಾನೆ.

ಕಾಂಟನ ವಿಶಿಷ್ಟವಾದ ಕೊಡುಗೆಯನ್ನು ಹೀಗೆ ಸಂಗ್ರಹಿಸಬಹುದು: ಜ್ಞಾನಾರ್ಜನೆಯ ವಿಜ್ಞಾನಗಳ ವಿಂಗಡಣೆಯಲ್ಲಿ ವಿಜ್ಞಾನಕ್ಕೆ ನಿಗದಿಯಾದ ಸ್ಥಾನವಿದೆ. ವಿಜ್ಞಾನಗಳಲ್ಲಿ ಗಣಿತವಿಜ್ಞಾನ ಅತಿ ಮುಖ್ಯವಾದುದು. ಅದರಿಂದ ಮಾನವನಿಗೆ ಹೆಚ್ಚು ಪ್ರಯೋಜನವಿದೆ. ಮಾನವನ ಮನಸ್ಸನ್ನು ಸ್ಥಿಮಿತಗೊಳಿಸಲು ಗಣಿತವಿಜ್ಞಾನ ಅಗತ್ಯ. ಭೌತವಿಜ್ಞಾನವೂ, ರಸಾಯನ ವಿಜ್ಞಾನವೂ, ಗಣಿತವಿಜ್ಞಾನಕ್ಕೆ ಅಂಟಿಕೊಂಡಿವೆ. ಜೀವವಿಜ್ಞಾನವನ್ನು ಅರಿಯಲು ಮೇಲೆ ಹೇಳಿದ ವಿಜ್ಞಾನಗಳಿಂದ ಅನುಕೂಲವಾಗುತ್ತದೆ. ಸಾಮಾಜಿಕ ಭೌತವಿಜ್ಞಾನ (ಸೋಷಿಯಲ್ ಫಿಸಿಕ್ಸ್) ಜೀವರಾಶಿಗಳ ಚಲನವಲನಗಳ ಅನುಭವಕ್ಕೆ ಅನುಕೂಲಮಾಡಿಕೊಡುತ್ತದೆ. ಹಾಗೆಯೇ ಸಮಾಜವಿಜ್ಞಾನ ಮೇಲೆ ಹೇಳಿದ ವಿಜ್ಞಾನಗಳನ್ನು ಅವಲಂಬಿಸಿದೆ. ಈ ಅವಲಂಬನೆಯ ಅಧ್ಯಯನವೇ ಸಮಾಜವಿಜ್ಞಾನ. ಮಾನವಸಂಘಗಳು ಪ್ರಬಲವಾದಂತೆಲ್ಲ ವ್ಯಕ್ತಿಯ ಸೌಮ್ಯತೆ ವಿಕಾಸಗೊಳ್ಳುವುದು ಸಾಧ್ಯ. ಸಮಾಜದಲ್ಲಿ ಕುಟುಂಬಕ್ಕೆ ಅಗ್ರಸ್ಥಾನವಿದೆ. ಮಾನವ ಒಬ್ಬೊಂಟಿಗನಾಗಿರಲು ಸಾಧ್ಯವಿಲ್ಲ. ಸ್ತ್ರೀಗೆ ಕುಟುಂಬದಲ್ಲಿ ಪ್ರಥಮ ಸ್ಥಾನವಿರಬೇಕು.

ತನ್ನೆಲ್ಲ ಭಾಷಣ ಮತ್ತು ಬರವಣಿಗೆಯಿಂದ ಕಾಂಟ್ ಸಮಾಜವಿಜ್ಞಾನದ ಮೂಲಪುರುಷನೆಂದು ಖ್ಯಾತಿಪಡೆದ. (ಕೆ.ಎನ್.ವಿ.)

**ಅಗಸ್ಟಸ್ ಆಕ್ಟೇವಿಯಸ್ :** ಪ್ರ.ಶ.ಪೂ.63–ಪ್ರ.ಶ.14) ರೋಮ್ ಸಾಮ್ರಾಟರಲ್ಲೆಲ್ಲ ಅತ್ಯಂತ ಪ್ರಸಿದ್ಧನೂ ಪ್ರತಿಭಾನ್ವಿತನೂ ಯುಗಸ್ಥಾಪಕನೂ ಆದ ದೊರೆ. ಈತ ಜೂಲಿಯಸ್ ಸೀಸರನ ಮೊಮ್ಮಗ ಹಾಗೂ ದತ್ತುಪುತ್ರ. ಸೀಸರನ ಕೊಲೆಯಾದ ಅನಂತರ ರೋಮ್ ಸಾಮ್ರಾಜ್ಯದಲ್ಲಿ ಅಧಿಕಾರಕ್ಕಾಗಿ ನಡೆದ ಕಚ್ಚಾಟದಲ್ಲಿ ಕೇವಲ ಹದಿನೆಂಟು ವರ್ಷದ ಯುವಕನಾದ ಆಕ್ಟೇವಿಯಸ್ ತನ್ನ ಜಾಣತನ, ಆತ್ಮಸಂಯಮ ಮತ್ತು ಧಾರಣಶಕ್ತಿಯಿಂದ ರೋಮನರ ಮೆಚ್ಚಿಕೆ ಗಳಿಸಿದ. ಪ್ರ.ಶ.ಪೂ. 44–30ರವರೆಗೆ ಅಂತರ್ಯುದ್ಧಗಳನ್ನಡಗಿಸುವ ಮತ್ತು ರೋಮನ್ ಸಾಮ್ರಾಜ್ಯದ ಪ್ರಾಂತಗಳನ್ನು ತನ್ನ ಅಧಿಕಾರಕ್ಕೊಳಪಡಿಸುವ ಕಾರ್ಯದಲ್ಲಿ ಸಂಪೂರ್ಣ ಯಶಸ್ವಿಯಾದ. ಪ್ರ.ಶ.ಪೂ. 30ರಲ್ಲಿ ಈಜಿಪ್ಟಿನ ಜೈತ್ರಯಾತ್ರೆಯನ್ನು ಮುಗಿಸಿಕೊಂಡು ರೋಮ್ ನಗರಕ್ಕೆ ಹಿಂದಿರುಗಿದ ಆಕ್ಟೇವಿಯಸ್‌ನನ್ನು ರೋಮನ್ನರು ಸಂಭ್ರಮದಿಂದ ಸ್ವಾಗತಿಸಿ ವಿಜಯೋತ್ಸವವನ್ನು ಆಚರಿಸಿದರು. ಈತ ಪ್ರ.ಶ.ಪೂ. 27ರಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಇವನ ಉತ್ಕೃಷ್ಟಸೇವೆಗಾಗಿ ರೋಮನ್ ಸೆನೆಟ್ಟು ಇವನಿಗೆ ಅಗಸ್ಟಸ್ ಎಂಬ ಗೌರವಸೂಚಕಬಿರುದನ್ನು ಕೊಟ್ಟಿತು. ಅಗಸ್ಟಸ್ ತನ್ನ ವೈಯಕ್ತಿಕ ಅಧಿಕಾರವನ್ನು ಪ್ರಜಾಪ್ರಭುತ್ವದ ಮೂಲಸ್ವರೂಪಕ್ಕೆ ಚತುರತೆಯಿಂದ ಸಮನ್ವಯಗೊಳಿಸಿದ. ಇವನನ್ನು ಚಕ್ರಾಧಿಪತ್ಯದ ಮುಖ್ಯ ನ್ಯಾಯಾಧೀಶ ಮತ್ತು ಪ್ರಜಾಪ್ರಭುತ್ವದ ಪ್ರಥಮ ನಾಗರಿಕನೆಂದು ಜನ ಪರಿಗಣಿಸಿದರು. ಆದ್ದರಿಂದಲೇ ಇವನ ಆಳ್ವಿಕೆಯನ್ನು ಪ್ರಿನ್ಸಿಪೇಟ್ ಎಂದು ಕರೆಯಲಾಗಿದೆ. ಈತನ ಕಾಲದಲ್ಲಿ ರೋಮನ್ ಸಾಮ್ರಾಜ್ಯ ಯುರೋಪು, ಆಫ್ರಿಕ ಮತ್ತು ಏಷ್ಯ ಖಂಡಗಳ ಅನೇಕ ಭಾಗಗಳನ್ನೊಳಗೊಂಡಿತ್ತು. ಚಕ್ರಾಧಿಪತ್ಯದ ಗಡಿಗಳನ್ನು ನಿಗದಿಮಾಡಿ ಅವುಗಳ ರಕ್ಷಣೆಗಾಗಿ ಸುಸಜ್ಜಿತ ಸೈನ್ಯಗಳನ್ನು ಇಡಲಾಗಿತ್ತು.

ಅಗಸ್ಟಸ್ ಚಕ್ರವರ್ತಿ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸುಧಾರಣೆಗಳನ್ನು ಜಾರಿಗೆ ತಂದ. ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತಕ್ಕನುಗುಣವಾಗಿ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ದಕ್ಷತೆಯ ಆಧಾರದ ಮೇಲೆ ಪ್ರತಿ ಪ್ರಾಂತ್ಯದಲ್ಲೂ ರೋಮನ್ ಸೈನ್ಯದ ತುಕಡಿಗಳನ್ನಿಡಲಾಯಿತು. ಪ್ರಾಂತ್ಯಾಧಿಕಾರಿಗಳು ರಕ್ಷಣಾಪಡೆಗಳನ್ನು ಚಕ್ರವರ್ತಿಯ ಆಜ್ಞೆ ಪಡೆದು ಮಾತ್ರ ಉಪಯೋಗಿಸಬೇಕಾಗಿತ್ತು. ಅನೇಕ ವರ್ಷಗಳ ಕಾಲ ನಡೆದ ಅಂತರ್ಯುದ್ಧಗಳಿಂದ ಚಕ್ರಾಧಿಪತ್ಯದಲ್ಲಿ ಆರ್ಥಿಕ ಕ್ಷೋಭೆಯುಂಟಾಗಿತ್ತು. ಪರಿಸ್ಥಿತಿಯನ್ನು ಉತ್ತಮಪಡಿಸಲು ಅವನು ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಸಾಮ್ರಾಜ್ಯದ ಜನಗಣತಿಯನ್ನು ನಡೆಸಿದ. ಚಿಲ್ಲರೆ ತೆರಿಗೆಗಳನ್ನು ರದ್ದುಗೊಳಿಸಿದ. ಕೈಗಾರಿಕೆ ಹಾಗೂ ವ್ಯಾಪಾರದ ಮೇಲಿನ ನಿರ್ಬಂಧವನ್ನು ತೆಗೆದುಹಾಕಿದ. ಅನೇಕ ಸೇತುವೆಗಳನ್ನೂ ರಸ್ತೆಗಳನ್ನೂ ಕಾಲುವೆಗಳನ್ನೂ ಕಟ್ಟಿಸಿದ. ಅನೇಕ ಸಮಾಜ ಸುಧಾರಣೆಗಳು ಬಳಕೆಗೆ ಬಂದುವು. ರೋಮನ್ನರ ಉಡಿಗೆತೊಡಿಗೆ ಮತ್ತು ಮತಪದ್ಧತಿಗಳು ಸುಧಾರಿತವಾದವು; ಅನೇಕ

ವಿಧವಾದ ಸ್ಪರ್ಧೆಗಳು ಹಾಗೂ ವಿನೋದ ಕ್ರೀಡೆಗಳು ಜಾರಿಗೆ ಬಂದುವು. ಪ್ರಾಚೀನ ದೇವಾಲಯಗಳು ಜೀರ್ಣೋದ್ಧಾರಗೊಂಡುವು. ರೋಮನ್ ಸಾಮ್ರಾಜ್ಯ ಹೆಚ್ಚಾಗಿ ವ್ಯಾಪಿಸಿದಂತೆ ಅನೇಕ ಮತಗಳು ರೋಮ್‌ನಲ್ಲಿ ಆಶ್ರಯಪಡೆದುವು. ರೋಮನ್ನರು ಗ್ರೀಕ್, ಈಜಿಪ್ಟ್ ಮತ್ತು ಯಹೂದಿ ಮುಂತಾದ ದೇವತೆಗಳನ್ನು ಆರಾಧಿಸತೊಡಗಿದರು. ಈ ಕಾಲದಲ್ಲಿ ಜನರಲ್ಲಿ ನೈತಿಕಜಾಗೃತಿ ಮೂಡಿತ್ತು; ರೋಮ್ ನಗರ ಸುಂದರವಾದ ರಸ್ತೆಗಳಿಂದಲೂ ಉದ್ಯಾನಗಳಿಂದಲೂ ಮನೋಹರವಾದ ದೇವಾಲಯಗಳಿಂದಲೂ ಭವ್ಯ ಸಾರ್ವಜನಿಕ ಭವನಗಳಿಂದಲೂ ಕಂಗೊಳಿಸಿ ಸರ್ವತೋಮುಖವಾಗಿ ಬೆಳೆಯಿತು.

ರೋಮನ್ ಸಾಮ್ರಾಜ್ಯದ ಕ್ಷೇಮ ಹಾಗೂ ಒಳಿತೇ ಆಕ್ಟೇವಿಯಸ್ಸನ ಗುರಿ. ಎಲ್ಲ ವರ್ಗಗಳ ಪ್ರೀತಿ ವಿಶ್ವಾಸವನ್ನು ಆತ ಗಳಿಸಿದ್ದ. ಅವನನ್ನು ರೋಮ್ ಸಾಮ್ರಾಜ್ಯದ ರಕ್ಷಕನೆಂದೂ ಪ್ರತ್ಯಕ್ಷ ದೇವತೆಯೆಂದೂ ಪ್ರಜೆಗಳು ಪೂಜಿಸಲಾರಂಭಿಸಿದರು. ವಿಶಾಲಸಾಮ್ರಾಜ್ಯದಲ್ಲಿದ್ದ ಭಿನ್ನ ಭಿನ್ನ ಪಂಗಡ ಮತ್ತು ಮತೀಯರಿಗೆ ಸಮಾನತೆಯ ಆಧಾರದ ಮೇಲೆ ನ್ಯಾಯ ಮತ್ತು ರಕ್ಷಣೆ ದೊರೆಯುವಂತಾಯಿತು. ರೋಮನ್ ಸಾಮ್ರಾಜ್ಯದಲ್ಲೆಲ್ಲಾ ಶಾಂತಿ ನೆಲೆಸಿತು.

ಈತನ ಆಳ್ವಿಕೆಯನ್ನು ಅಗಸ್ಟಸ್‌ಯುಗವೆಂದೂ ರೋಮ್‌ಸಾಮ್ರಾಜ್ಯದ ಸುವರ್ಣಯುಗವೆಂದೂ ಕರೆದಿದ್ದಾರೆ. ಅಗಸ್ಟಸ್ ಚಕ್ರವರ್ತಿ ಸುಪ್ರಸಿದ್ಧ ರಾಜಕೀಯ ನಿಪುಣನೂ ಸುಧಾರಕನೂ ಆಗಿದ್ದುದಲ್ಲದೆ ಕಲೆಯನ್ನೂ ಸಾಹಿತ್ಯವನ್ನೂ ವಿಶೇಷವಾಗಿ ಪ್ರೋತ್ಸಾಹಿಸುವವನೂ ಆಗಿದ್ದ. ಈತನ ಕಾಲದಲ್ಲಿ ಲ್ಯಾಟಿನ್ ಭಾಷೆ ಅತ್ಯಂತ ಉಚ್ಛ್ರಾಯಸ್ಥಿತಿಯನ್ನು ಮುಟ್ಟಿತು. ಆ ಕಾಲದ ಮುಖ್ಯ ಕವಿಗಳಲ್ಲಿ ಈನಿಯಡ್ ಮಹಾಕಾವ್ಯವನ್ನು ರಚಿಸಿದ ವರ್ಜಿಲ್ ಅತ್ಯಂತ ಪ್ರಸಿದ್ಧ. ಓವಿಡ್, ಹೊರೇಸ್ ಮೊದಲಾದವರೂ ಆ ಕಾಲದವರೇ. ಅದೇ ಕಾಲದಲ್ಲಿ ಅನೇಕ ವಿದ್ವಾಂಸರು ವ್ಯಾಕರಣ, ವೈದ್ಯ, ವ್ಯವಸಾಯ, ಚರಿತ್ರೆ ಇತ್ಯಾದಿ ಗ್ರಂಥಗಳನ್ನು ರಚಿಸಿದರು.

44 ವರ್ಷಗಳ ಕಾಲ ಸಾಮ್ರಾಜ್ಯದ ಹಿತಚಿಂತನೆಗಾಗಿ ದುಡಿದು, ಚಕ್ರಾಧಿಪತ್ಯವನ್ನು ವಿಸ್ತರಿಸಿ, ಸುಭದ್ರವಾದ ಆಡಳಿತವನ್ನೂ ಶಾಂತಿಯನ್ನೂ ಸ್ಥಾಪಿಸಿ ಕಲೆಯನ್ನು ವಿಶೇಷವಾಗಿ ಪ್ರೋತ್ಸಾಹಿಸಿ ಅಗಸ್ಟಸ್ ಪ್ರಜೆಗಳಿಂದ ಪ್ರತ್ಯಕ್ಷದೇವನೆಂಬ ಹೆಸರನ್ನು ಪಡೆದ.

(ಜಿ.ಆರ್.ಆರ್.)

**ಅಗಸ್ತ್ಯ :** ವೇದೋಕ್ತನಾದ ಈ ಬ್ರಹ್ಮರ್ಷಿಗೆ ಕುಂಭಸಂಭವ, ಕಳಶಯೋನಿಜ ಎಂಬ ಹೆಸರುಗಳೂ ಉಂಟು. ತಂದೆ ಪುಲಸ್ತ್ಯ. ತಾಯಿ ಕರ್ದಮಬ್ರಹ್ಮನ ಮಗಳಾದ ಹವಿರ್ಭುಕ್. ಪಿತೃಗಳ ಕೋರಿಕೆಯ ಮೇಲೆ ಸಂತಾನಪ್ರಾಪ್ತಿಗಾಗಿ ಲೋಪಾಮುದ್ರೆ ಎಂಬ ಕನ್ನಿಕೆಯನ್ನು ಸೃಜಿಸಿ ಮದುವೆಯಾದ. ಇವನ ಮಗ ದೃಢಸ್ಯು ಅಥವಾ ಇಧ್ಮವಾಹ. ಇಲ್ವಲ ವಾತಾಪಿ ಎಂಬ ದೈತ್ಯರನ್ನು ಕೊಂದದ್ದು, ಇಂದ್ರಪದವಿ ದೊರಕಿತೆಂಬ ಕಾರಣದಿಂದ ಮತಾಂಧನಾಗಿ ಋಷಿಗಳಿಂದ ತನ್ನ ರಥವನ್ನೆಳೆಸಿದ ನಹುಷನ ಪದಚ್ಯುತಿ, ವಿಂಧ್ಯಪರ್ವತ ಮೇರುವಿನಷ್ಟಾಗಬೇಕೆಂಬ ಉದ್ದೇಶದಿಂದ ಬೆಳೆಯುತ್ತಿದ್ದುದನ್ನು ತಡೆಗಟ್ಟಿದ್ದು, ಸಮುದ್ರಗರ್ಭದಲ್ಲಿ ಅಡಗಿಕೊಂಡಿದ್ದ ಕಾಲೇಯರೆಂಬ ರಾಕ್ಷಸರನ್ನು ಹೊರಗೆಡಹುವುದಕ್ಕಾಗಿ ಸಮುದ್ರವನ್ನೇ ಆಪೋಶನ ಮಾಡಿದ್ದು–ಇವೆಲ್ಲ ಅಗಸ್ತ್ಯನಿಂದಾದ ಲೋಕರಕ್ಷಣಾಕಾರ್ಯಗಳು, ತಮಿಳುನಾಡಿನ ಪೊದಿಯಲ್ ಬೆಟ್ಟದಲ್ಲಿ ನೆಲೆಸಿ ತಮಿಳುಭಾಷೆಗೆ ಜನ್ಮವಿತ್ತನೆಂದೂ ಅಗತ್ತಿಯಂ ಎಂಬ ಪ್ರಥಮ ತಮಿಳುವ್ಯಾಕರಣವನ್ನು ಬರೆದನೆಂದೂ ತಮಿಳು ಪ್ರಥಮ ಸಾಹಿತ್ಯ ಸಂಘದ ಅಧ್ಯಕ್ಷನಾಗಿದ್ದನೆಂದೂ ತಮಿಳು ಸಾಹಿತ್ಯದಲ್ಲಿ ವರ್ಣಿತವಾಗಿದೆ. ಮರಣಾನಂತರ ನಕ್ಷತ್ರಪದವಿ ಇವನಿಗೆ ದೊರಕಿತು.

ಮಹಾವ್ಯಾಧ (ಒರೈಯನ್) ನಕ್ಷತ್ರಪುಂಜದ ಪೂರ್ವ–ದಕ್ಷಿಣಕ್ಕೆ ಇರುವ ಲುಬ್ಧಕದ (ಸಿರಿಯಸ್) ದಕ್ಷಿಣದಲ್ಲಿರುವ ಸಮಾನಪ್ರಕಾಶದ ನಕ್ಷತ್ರವೇ ಅಗಸ್ತ್ಯ (ಕ್ಯಾನೊಪಸ್). ಇದು ಕರಿನಾ ಪುಂಜದ ಪ್ರಥಮ ನಕ್ಷತ್ರ. ಭೂಮಿಯಿಂದ ಇದರ ದೂರ 650 ಜ್ಯೋತಿರ್ವರ್ಷಗಳು. ಇದರ ಪ್ರಕಾಶ ಸೂರ್ಯಪ್ರಕಾಶದ ಸುಮಾರು 1,00,000ದಷ್ಟು. ಕಾಣುವ ಅತಿ ಪ್ರಕಾಶಮಾನ ನಕ್ಷತ್ರಗಳಲ್ಲಿ ಇದು ಎರಡನೆಯದು. (*)

**ಅಗಾಥಿಸ್ :** ಕೋನಿಫರೀ ಗುಂಪಿನ ಪೈನೇಸೀ ಕುಟುಂಬಕ್ಕೆ ಸೇರಿದ ನಿತ್ಯ ಹರಿದ್ವರ್ಣದ ವೃಕ್ಷ. ಡಾಮರ್‌ಪೈನ್ ಇದರ ಸಾಮಾನ್ಯ ಹೆಸರು. ಪ್ರಪಂಚದ ಶೀತಹವೆಯುಳ್ಳ ಪ್ರದೇಶಗಳಲ್ಲೆಲ್ಲ ಚೆನ್ನಾಗಿ ಬೆಳೆಯುತ್ತದೆ. ಎತ್ತರ 30–60ಮೀ. ಹುಲುಸಾಗಿ ಬೆಳೆದ ಮರದ ಬುಡ ಅಗಾಧವಾಗಿ ಹಿಗ್ಗಿ 6ಮೀ.ಗೂ ಹೆಚ್ಚು ಸುತ್ತಳತೆಯನ್ನು ಪಡೆದಿರುವ ನಿದರ್ಶನಗಳಿವೆ.

ಅದರ ಎಲೆಗಳು ಸೂಜಿಯಾಕಾರದಲ್ಲಿ ಇರುವುದಿಲ್ಲ. ಇದೇ ಈ ಗಿಡಕ್ಕೂ ಇತರ ಶಂಕುವೃಕ್ಷಗಳಿಗೂ ಇರುವ ವ್ಯತ್ಯಾಸ. ಅಭಿಮುಖ ಇಲ್ಲವೆ ಪರ್ಯಾಯ ಜೋಡಣೆ ಹೊಂದಿರುವ ಇದರ ಎಲೆಗಳು ಚಪ್ಪಟೆಯಾಗಿ, ಅಗಲವಾಗಿ ಒರಟಾಗಿರುತ್ತದೆ. ಎಲೆಗಳಿಗೆ ಸಮಾನಾಂತರ ನಾಳಗಳಿರುತ್ತವೆ. ಇರುವ 20 ಪ್ರಭೇದಗಳಲ್ಲಿ ಅಗಾಥಿಸ್ ಆಸ್ಟ್ರಾಲಿಸ್, ಅಗಾಥಿಸ್ ಬ್ರೌನಿಯೈ ಮತ್ತು ಅಗಾಥಿಸ್ ಅಲ್ಬ ಎಂಬ ಮೂರು ಮುಖ್ಯವಾದುವು.

i) ಗಂಡು ಶಂಕು ii) ಹೆಣ್ಣು ಶಂಕು

ಅಗಾಥಿಸ್ ಏಕಲಿಂಗ ಇಲ್ಲವೇ ದ್ವಿಲಿಂಗಸಸ್ಯ: ಅಂತೆಯೇ ಗಂಡು ಮತ್ತು ಹೆಣ್ಣು ಶಂಕುಗಳು (ಕೋನ್ಸ್) ಬೇರೆ ಬೇರೆ ಇಲ್ಲವೇ ಒಂದೇ ವೃಕ್ಷದಲ್ಲಿ ಬಿಡಬಹುದು. ಶಂಕುಗಳು ಸಾಮಾನ್ಯವಾಗಿ ಪಕ್ಕದ ಸಣ್ಣ ಟೊಂಗೆಗಳಲ್ಲಿ ಮಾತ್ರ ಬಿಡುತ್ತವೆ. ಗಂಡು ಶಂಕುಗಳು ದುಂಡಗೆ 5–8ಸೆಂ.ಮೀ ಉದ್ದವಾಗಿರುತ್ತವೆ. ಹೆಣ್ಣು ಶಂಕುಗಳು ದುಂಡಗೆ ದಪ್ಪವಾಗಿರುತ್ತವೆ.

ಮೆರುಗೆಣ್ಣೆಗಳ ತಯಾರಿಕೆಯಲ್ಲಿ ಉಪಯೋಗಿಸುವ ಕೌರಿ ಅಂಟು ಅಗಾಥಿಸ್ ಆಸ್ಟ್ರಾಲಿಸ್ ಪ್ರಭೇದದ ಪಳೆಯುಳಿಕೆಗಳಿಂದ ದೊರೆಯುವ ಪದಾರ್ಥ. ಪ್ರಾಚೀನಕಾಲದಲ್ಲಿ ಈ ಮರಗಳ ಒಂದು ದೊಡ್ಡ ಅರಣ್ಯವೇ ನ್ಯೂಜಿಲೆಂಡಿನಲ್ಲಿತ್ತು. ಆದ್ದರಿಂದಲೇ ಇಂದೂ ಅಲ್ಲಿ ಕೇವಲ 2ಮೀ ಗಳಷ್ಟು ಭೂಮಿಯನ್ನು ಅಗೆದರೆ ಸಾಕು, ಹೇರಳವಾಗಿ ಈ ಕೌರಿ ಅಂಟು ಸಿಕ್ಕುತ್ತದೆ. ತಂಪು ಹವೆಯುಳ್ಳ ಪ್ರದೇಶಗಳ ತೋಟಗಳಲ್ಲಿ ಒಂದು ವಿಶೇಷ ಆಕರ್ಷಣೆಯಾಗಿ ಈ ಮರವನ್ನು ಬೆಳೆಸುವರು.

(ಎಸ್.ಎನ್.ಆರ್.)

**ಅಗಾರ್ (ಅಗಾರ್–ಅಗಾರ್) :** ಲೋಳೆಯಂತೆ ಜಿಗುಟಾದ ಜೆಲಟನ್ನಿನಂಥ ರಾಸಾಯನಿಕ ವಸ್ತು. ಆಲ್ಗೆ ಗುಂಪಿಗೆ ಸೇರಿದ ಜೆಲಿಡಿಯಂ ಮತ್ತು ಪ್ರಾಸಿಲೇರಿಯ, ಅನ್‌ಫೆಟಿಯ ಮತ್ತು ಟೆರೊಕ್ಲಾಡಿಯ ಎಂಬ ಕೆಂಪುಪಾಚಿ ಸಸ್ಯಗಳಿಂದ ತಯಾರಿಸುತ್ತಾರೆ. ವಾಡಿಕೆಯಲ್ಲಿ ಇದಕ್ಕೆ ಚೈನ ಗ್ರಾಸ್ ಎಂದು ಕರೆಯುತ್ತಾರೆ. ಸಮುದ್ರದ ಜೊಂಡುಗಳೆನಿಸುವ ಈ ಸಸ್ಯಗಳನ್ನು ಮೊದಲು ಚೆನ್ನಾಗಿ ಕುದಿಸಿ ಹೊರಬರುವ ಮೆತುಪಾಕದಂತಿರುವ ವಸ್ತುವನ್ನು ವಿಶೇಷ ರೀತಿಯಲ್ಲಿ ಒಣಗಿಸಿ ಕಡ್ಡಿಗಳ ಅಥವಾ ಸಣ್ಣ ಸಣ್ಣ ಇಟ್ಟಿಗೆಗಳ ರೂಪದಲ್ಲಿ ಡಬ್ಬಗಳಲ್ಲಿ ಶೇಖರಿಸುತ್ತಾರೆ.

ಈ ವಸ್ತು ತಣ್ಣೀರಿನಲ್ಲಿ ಕರಗುವುದಿಲ್ಲ. ಆದರೆ ಬಿಸಿನೀರಿನಲ್ಲಿ ಕರಗಿ ಮತ್ತೆ ಆರಿದಾಗ ತನ್ನ ತೂಕದ 20ರಷ್ಟು ನೀರನ್ನು ಹೀರಿಕೊಂಡು ಘನೀಭೂತವಾಗಿ ಅಸ್ಫಟಿಕದ್ರಾವಣ ಅಥವಾ ಜೆಲ್ ಆಗುವ ಸಾಮರ್ಥ್ಯವನ್ನು ಹೊಂದಿದೆ. ಈ ಕಾರಣದಿಂದಾಗಿ ಇದಕ್ಕೆ ಅನೇಕ ಪೋಷಕ ಆಹಾರಪದಾರ್ಥಗಳನ್ನು ಸೇರಿಸಿ ಈ ವಸ್ತುವಿನಲ್ಲಿ ಬ್ಯಾಕ್ಟೀರಿಯಗಳ (ಏಕಾಣುಜೀವಿಗಳ) ತಳಿಯೆಬ್ಬಿಕೆಯ ಅಥವಾ ಜೀವಾಣುವರ್ಧನದ ಮಧ್ಯವರ್ತಿಯಾಗಿ ಇದನ್ನು ಬಳಸಲಾಗುತ್ತಿದೆ. ಶೇ.1ರ ಅಗಾರ್‌ದ್ರಾವಣ ಸು. $104^{o}$ ಫ್ಯಾ. ಶಾಖದಲ್ಲಿ ಗಟ್ಟಿಯಾಗುವುದಾದರೂ ಮೊದಲೇ ಗಟ್ಟಿಯಾಗುವ ಅದರ ಜೆಲ್ ರೂಪ ಮಾತ್ರ $203^{o}$ ಫ್ಯಾ. ಶಾಖವನ್ನು ಮುಟ್ಟುವ ತನಕ ಕರಗುವುದಿಲ್ಲ. ಜಡತ್ವಗುಣಕ್ಕೆ (ಹಿಸ್ಟೆರಿಸಿಸ್) ಇದು ಒಳ್ಳೆಯ ಉದಾಹರಣೆ. ಹಲ್ವ ಮುಂತಾದ ಖಾದ್ಯ ಪದಾರ್ಥಗಳನ್ನು ತಯಾರಿಸುವಾಗ ಇದನ್ನು ಉಪಯೋಗಿಸುತ್ತಾರಾದರೂ ಸ್ವತಃ ಇದರಲ್ಲಿ ಯಾವ ಆಹಾರದ ಗುಣವೂ ಇಲ್ಲ. ಔಷಧ ಮತ್ತು ಅಂಗರಾಗ ವಸ್ತುಗಳ ತಯಾರಿಕೆಯಲ್ಲೂ ಇದನ್ನು ಉಪಯೋಗಿಸುತ್ತಾರೆ. ಇವಲ್ಲದೆ ಮಾಂಸವನ್ನು ಡಬ್ಬಿಯಲ್ಲಿ ತುಂಬಲೂ ಮೃದುವಿರೇಚಕದ ತಯಾರಿಕೆಗಳಲ್ಲೂ ಹಲ್ಲಿನ ಅಚ್ಚು ತೆಗೆಯುವ ಮೂಲವಸ್ತುವಾಗಿಯೂ ತಂತಿಯನ್ನು ಎಳೆಯುವ ಕಾರ್ಯದಲ್ಲಿ ಮೃದುಚಾಲನಸಹಾಯಕ ವಸ್ತುವಾಗಿಯೂ ಇದನ್ನು ಬಳಸಲಾಗುತ್ತದೆ.

ರಾಸಾಯನಿಕವಾಗಿ ಇದು ಕಾರ್ಬೊಹೈಡ್ರೇಟ್‌ನಲ್ಲಿನ ಪಾಲಿಸ್ಯಾಕರೈಡ್ ಗುಂಪಿಗೆ ಸೇರಿದ ವಸ್ತು. ಗ್ಯಾಲಾಕ್ಟೋಸ್ ಎಂಬ ಸಕ್ಕರೆಯ ಅಣುಗಳು ಮತ್ತು ಅಲ್ಲಲ್ಲೇ ಚದುರಿದ ಸಲ್ಫ್ಯೂರಿಕ್ ಆಮ್ಲದ ಅಣುಗಳು (53 ಗ್ಯಾಲಾಕ್ಟೋಸ್‌ಗೆ ಒಂದು ಸಲ್ಫ್ಯೂರಿಕ್ ಆಮ್ಲದ ಅಣು–ಈ ಅನುಪಾತದಲ್ಲಿದೆ ಒಂದಕ್ಕೊಂದು ಸೇರಿ ಇದರ ಅಣುವಿನ ರಚನೆಯಾಗಿದೆ. ಇದರ ಜೆಲ್ ರೂಪದಲ್ಲಿ ಋಣವಿದ್ಯುದಂಶವನ್ನು ಹೊತ್ತಿರುವ ಸಣ್ಣ ಸಣ್ಣ ಕಣಗಳಿರುತ್ತವೆ. ಜೆಲ್ ರೂಪದಲ್ಲಿರುವ ಇತರ ವಸ್ತುಗಳಂತೆ ಇದೂ ಸಹ ಕಣವನ್ನು ಒಗ್ಗೂಡಿಸುವ (ಸೈನೆರಿಸೆಸ್) ಗುಣವನ್ನು ಪ್ರದರ್ಶಿಸುತ್ತದೆ. ರಾಸಾಯನಿಕವಾಗಿ ಹೇಳುವುದಾದರೆ ಇದು ಗ್ಯಾಲಾಕ್ಟಾನಿನ ಸಲ್ಫ್ಯೂರಿಕ್ ಎಸ್ಟರ್. ಸ್ವಾಭಾವಿಕವಾಗಿ, ಅಗಾರ್ ಜೀವಿ ಸಸಿಗಳ ಜೀವಕಣದ

ಒಂದು ಅಂಗಾಂಶ ರೂಪದಲ್ಲೋ ಅಥವಾ ಅದರ ಕ್ಯಾಲ್ಸಿಯಂ ಲವಣವಾಗಿಯೋ ಕ್ಯಾಲ್ಸಿಯಂ–ಮೆಗ್ನೀಷಿಯಮ್‌ಗಳ ಸಂಯುಕ್ತ ಲವಣವಾಗಿಯೋ ಇದು ದೊರೆಯುತ್ತದೆ. ಇದನ್ನು ಮುಖ್ಯವಾಗಿ ಜಪಾನ್ ದೇಶದಲ್ಲೂ ಮಿಕ್ಕಂತೆ ಚೀನ, ರಷ್ಯ, ಅಮೆರಿಕ, ದಕ್ಷಿಣಆಫ್ರಿಕ, ನ್ಯೂಜಿಲೆಂಡ್, ಆಸ್ಟ್ರೇಲಿಯ ಮತ್ತು ಭಾರತದಲ್ಲೂ ತಯಾರಿಸುತ್ತಾರೆ.

(ಕೆ.ವಿ.ಜಿ.; ಎ.ಎಸ್.ಆರ್.; ಎ.ಎನ್.ಎಸ್.)

**ಅಗೂಟೀ :** ರಾಡೆನ್ಷಿಯ ವರ್ಗದ ಕೇವಿಡೀ ಎಂಬ ಮೂಷಿಕ ಕುಟುಂಬಕ್ಕೆ ಸೇರಿದ ಸ್ತನಿ. ಗಾತ್ರದಲ್ಲಿ ಮೊಲದಷ್ಟು ದೊಡ್ಡದು. ಬಣ್ಣ ಕಂದು, ಕೂದಲು ಒರಟು, ಬಾಲ ಚಿಕ್ಕದು. ಅರಣ್ಯದಲ್ಲಿ ಹಗಲು ಹೊತ್ತು ಗಿಡಗಳ ಪೊದರು ಇಲ್ಲವೆ ಬೇರುಗಳ ಮಧ್ಯದಲ್ಲಿ ಕಟ್ಟಿದ ಗೂಡಿನಲ್ಲಿ ಅವಿತುಕೊಂಡಿದ್ದು, ರಾತ್ರಿ ಹೊತ್ತಿನಲ್ಲಿ ಹೊರಬಂದು ತನ್ನ ಚಟುವಟಿಕೆ ಆರಂಭಿಸುವುದು. ಆವಶ್ಯಕತೆ ಬಂದಾಗ ಚೆನ್ನಾಗಿ ಈಜಲೂ ಬಲ್ಲದು. ಬೇರು, ಎಲೆ, ಕಾಯಿ–ಮುಂತಾದ ಸಸ್ಯಜನ್ಯ ಪದಾರ್ಥವೇ ಇದರ ಆಹಾರ. ಈ ಇಲಿ ಟ್ರಿನಿಡಾಡ್ ಮತ್ತು ಗಿನಿ ಪ್ರದೇಶಗಳಲ್ಲಿ ಸರ್ವಸಾಮಾನ್ಯವಾಗಿದ್ದು ಅಲ್ಲಿಯ ಕಬ್ಬು, ಬಾಳೆ ತೋಟಗಳಿಗೆ ಬಹಳ ಉಪದ್ರವಕಾರಿಯೆನಿಸಿದೆ. (ಎಸ್.ಬಿ.ಎಂ.)

**ಅಗೆಯುವ ಯಂತ್ರಗಳು :** ಕಲ್ಲು ಮತ್ತು ಮಣ್ಣನ್ನು ಅಗೆದು ಹೊರ ತೆಗೆಯಲು ಈ ಯಂತ್ರಗಳನ್ನು (ಎಕ್ಸ್‌ಕವೇಟರ್) ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಇವು ಸೂಕ್ತ ರೀತಿಯಲ್ಲಿ ಮಾರ್ಪಾಟು ಮಾಡಿದ ಕ್ರೇನ್‌ಯಂತ್ರಗಳೇ ಆಗಿವೆ. ಇಂಥವನ್ನು ಡ್ರ್ಯಾಗ್ ಲೈನ್ ಎನ್ನುತ್ತಾರೆ. ಈ ಯಂತ್ರಕ್ಕೆ ಅನೇಕ ಬಗೆಯ ಸಾಧನೆಗಳ ಸಾಧ್ಯತೆ ಇದೆ. ಇದರ ಮುಖ್ಯವಾದ ಮೂರು ಭಾಗಗಳೆಂದರೆ: 1. ಉದ್ದವಾಗಿರುವ ಒಂದು ಕ್ರೇನ್‌ದಂಡ. 2. ಸಮಾನಾಂತರ ಪಥದಲ್ಲಿ ಮಣ್ಣೆಳೆದು ಅಗೆಯುವ ಒಂದು ಬಕೆಟ್ ಮತ್ತು 3. ಎರಡು ಹಗ್ಗಗಳು (ಕೇಬಲ್ಸ್).

ಅಗೆಯುವ ಶಕ್ತಿಯ ನಿರ್ವಹಣೆ ಹಗ್ಗಗಳ ಮೇಲೆ ಇರುವುದರಿಂದ ಕ್ರೇನಿನ ದಂಡ ಉದ್ದವಾಗಿಯೂ ಹಗುರವಾಗಿಯೂ ಇರಲು ಸಾಧ್ಯ. ಅಗೆಯಬೇಕಾದ ಸ್ಥಳಕ್ಕೆ ಮಾತ್ರ ಬಕೆಟನ್ನು ಎಸೆಯುತ್ತದೆ. ಅನಂತರ ಅದನ್ನು ಒಂದು ಹಗ್ಗ ಯಂತ್ರದ ಕಡೆಗೆ ಎಳೆಯಲಾರಂಭಿಸುತ್ತದೆ. ಬಕೆಟಿನ ಆಕಾರ ಮತ್ತು ತೂಕಗಳಿಗನುಸಾರವಾಗಿ ಹೀಗೆ ಕಲ್ಲು ಅಥವಾ ಮಣ್ಣು ಅದರಲ್ಲಿ ತುಂಬಿಕೊಳ್ಳುತ್ತದೆ. ತುಂಬಿದ ಬಕೆಟನ್ನು ಯಂತ್ರದ ಎರಡನೇ



ಬ್ಯಾಕ್‌ಹೊ ಮಾದರಿಯ ಅಗೆಯುವ ಯಂತ್ರ

ಹಗ್ಗ ಕ್ರೇನ್‌ದಂಡ ಎಸೆಯುವುದಕ್ಕಿಂತ 10'–12' ಹೆಚ್ಚು ದೂರಕ್ಕೆ ಎಸೆಯುತ್ತದೆ. ನೀರು ಮತ್ತು ಕೆಸರಿನ ಕಾರಣ ಇತರ ಬಗೆಯ ಯಂತ್ರಗಳು ಕೆಲಸ ಮಾಡಲು ಸಾಧ್ಯವಾಗದೇ ಇರುವಾಗಲೂ ಇಂಥ ಯಂತ್ರವನ್ನು ಅಗೆಯುವ ಕೆಲಸಗಳಿಗಾಗಿ ಬಳಸಬಹುದು. ನೀರಾವರಿಗೆಂದು ನಾಲೆ ತೋಡುವಾಗ, ನದಿ ಪಾತ್ರಗಳ ಅಗಲವನ್ನು ಹೆಚ್ಚಿಸಬೇಕಾದಾಗ, ಮರಳು ಮತ್ತು ಜಲ್ಲಿ ಗುಂಡಿಗಳನ್ನು ತೋಡುವಾಗ ಇಂಥ ಯಂತ್ರಗಳನ್ನು ಬಳಸಲಾಗುತ್ತದೆ. ಮಾರ್ಪಾಟುಗೊಂಡ ಕ್ರೇನಿನ ಇಂಥ ಮತ್ತೊಂದು ಯಂತ್ರಚಾಲಿತ ಉಪಕರಣಕ್ಕೆ ಹಿಡಿಕೆಮೊರ (ಪೊವೆಲ್ ಷೊವೆಲ್) ಎಂದು ಹೆಸರು. ಇದರ ಕ್ರೇನ್ ದಂಡ ದಪ್ಪವಾಗಿಯೂ ಗಿಡ್ಡಗಾಗಿಯೂ ಇರುತ್ತದೆ. ಅಗೆಯುವ ಬಕೆಟ್ ಕೆಳಗೆ ಅದ್ದಿ ಏಳುವ ಮತ್ತೊಂದು ದಂಡದ ತುದಿಯಲ್ಲಿರುತ್ತದೆ. ಮುನ್ನುಗ್ಗುವ ಮತ್ತು ಮೇಲೇಳುವ ಎರಡು ಬಗೆಯ ಚಲನೆಗಳಿಂದ ಬಕೆಟ್ ದೊಡ್ಡ ಚೂರುಗಳನ್ನು ಕತ್ತರಿಸಿ ತುಂಬಿಕೊಳ್ಳುತ್ತದೆ. ಕೀಲುಗಳುಳ್ಳ ಅದರ ತಳವನ್ನು ತೆರೆಯುವುದರ ಮೂಲಕ ಅದರಲ್ಲಿ ತುಂಬಿರುವ ಹೆಂಟೆ ಮುಂತಾದುವುಗಳನ್ನು ಬೇರೊಂದೆಡೆ ಸುರಿಯಬಹುದು. ಅಗೆಯಬೇಕಾದ ಸ್ಥಳ ಒಣಪ್ರದೇಶವಾಗಿ ಗಡಸಾಗಿದ್ದಾಗ, ಕಡಿದಾದ ಕಣಿವೆಮುಖಗಳನ್ನು ಕತ್ತರಿಸಬೇಕಾದಾಗ, ಗಣಿ ಉದ್ಯಮದಲ್ಲಿ ಹೀಗೆ ವಿವಿಧ ಪ್ರಕಾರವಾಗಿ ಇಂಥ ಯಂತ್ರಗಳನ್ನು ಬಳಸುತ್ತಾರೆ. ತಿರುವುಗುದ್ದಲಿ (ಬ್ಯಾಕ್‌ಹೊ): ಮಾರ್ಪಾಟುಗೊಂಡ ಮತ್ತೊಂದು ಉಪಕರಣ. ಇದರಲ್ಲಿ ಅಗೆಯುವ ಬಕೆಟನ್ನು ತಲೆಕೆಳಗಾಗಿ ಗಿಡ್ಡನೆಯ ದಂಡದ ತುದಿಗೆ ಅಳವಡಿಸಿದೆ. ಬಕೆಟ್ ಅರೆವೃತ್ತಾಕಾರದಲ್ಲಿ ಕೆಳಕ್ಕೆ ಮತ್ತು ಯಂತ್ರದ ಕಡೆಗೆ ಹಗ್ಗಗಳಿಂದ ಎಳೆಯುಲ್ಪಟ್ಟು, ಅದರಲ್ಲಿ ಕಲ್ಲು ಮತ್ತು ಮಣ್ಣು ತುಂಬಿಕೊಳ್ಳುತ್ತವೆ. ಅನಂತರ ತುಂಬಿದ ಬಕೆಟನ್ನು ಮೇಲಕ್ಕೆತ್ತಿ ಅದರಲ್ಲಿರುವ ಮಣ್ಣುಕಲ್ಲನ್ನು ದೂರ ಸುರಿಯಲಾಗುತ್ತದೆ. ಈ ಮೊದಲು ವಿವರಿಸಿರುವ ಯಂತ್ರಗಳಷ್ಟು ಇದು ಬಲಯುತವಾಗಿಲ್ಲದಿದ್ದರೂ ಗಟ್ಟಿಭೂಮಿಯೊಳಗೆ ಕಂದಕಗಳನ್ನಗೆಯಲು, ಕಾಲುವೆಗಳನ್ನು ತೋಡಲು, ನಳಿಗೆಗಳನ್ನು ಹಾಕಲು, ಭೂಮಿಯನ್ನು ಅಗೆಯಲು–ಇವೇ ಮುಂತಾದ ಕೆಲಸಗಳಿಗೆ ಇದು ಸಾಧನವಾಗಿದೆ.

ಭೂಮಿಯ ಮೇಲ್ಪದರವನ್ನು ಸವರಿ ತೆಗೆದ ಕೆತ್ತುಯಂತ್ರದಲ್ಲಿ (ಸ್ಕಿಮ್ಮರ್) ಬಕೆಟ್ ತಗ್ಗಿನಲ್ಲಿ ಸಮಾನಾಂತರ ಮಟ್ಟದಲ್ಲಿರುವ ಒಂದು ಕ್ರೇನ್ ದಂಡದ ಮೇಲೆ ಹಿಂದಕ್ಕೂ ಮುಂದಕ್ಕೂ ಚಲಿಸುತ್ತದೆ. ಹೀಗೆ ಚಲಿಸುವಾಗ ಭೂಮಿಯನ್ನು ಕೆತ್ತಿ ಮಟ್ಟ ಮಾಡುತ್ತದೆ. ರಸ್ತೆ ಕೆಲಸದಲ್ಲಿ ಈ ಯಂತ್ರ ಬಳಕೆಯಲ್ಲಿದೆ. ಇದರ ಕೆಲಸ ಒಪ್ಪಾಗಿ, ಅಚ್ಚು–ಕಟ್ಟಾಗಿರುತ್ತದೆ.

ಇನ್ನೊಂದು ಬಗೆಯ ಯಂತ್ರದಲ್ಲಿ (ಕ್ಲಾಮ್‌ಷೆಲ್) ತೆರೆದು ಮುಚ್ಚಿ ಮಾಡಬಹುದಾದ, ದವಡೆಯಂಥ ಎರಡು ಚಿಪ್ಪುಗಳನ್ನು ಬಕೆಟಿಗೆ ಅಳವಡಿಸಿದೆ. ಈ ಯಂತ್ರ ಗಡಸಿಲ್ಲದ ಮೆತು ಪದಾರ್ಥಗಳನ್ನು ಮಾತ್ರ ದವಡೆಗಳಿಂದ ಕಚ್ಚಿ ತನ್ನೊಳಕ್ಕೆ ತುಂಬಿಕೊಳ್ಳುತ್ತದೆ.

ವಿಶೇಷ ರೀತಿಯ ಯಂತ್ರಗಳು: ಹಗ್ಗ, ತಂತಿ, ಹೊರಜಿಗಳ ಬದಲು, ದ್ರವದ ಒತ್ತಡದಿಂದ ಚಲಿಸುವ ಕೊಂತದಿಂದಲೂ ಅಗೆಯುವ ಕೆಲಸ ಮಾಡಬಹುದು. ಇಂಥ ಯಂತ್ರಗಳನ್ನು ಎಳೆಯಲು ವಿದ್ಯುಚ್ಛಕ್ತಿ, ಪೆಟ್ರೋಲ್ ಅಥವಾ ಡೀಸಲ್ ಎಣ್ಣೆಗಳನ್ನು ಉಪಯೋಗಿಸಲಾಗುತ್ತದೆ.

ಇನ್ನೊಂದು ಬಗೆಯ ಯಂತ್ರದಲ್ಲಿ (ಫ್ರಂಟ್‌ಎಂಡ್ ಲೋಡರ್) ಗಾಲಿಗಳ ಮೇಲೆ ಚಲಿಸುವ ಟ್ರ್ಯಾಕ್ಟರ್‌ನ ಮುಂಭಾಗದಲ್ಲಿ ಬಕೆಟನ್ನು ಅಳವಡಿಸಿರುತ್ತಾರೆ. ಟ್ರ್ಯಾಕ್ಟರ್ ಮುನ್ನುಗ್ಗಿದೊಡನೆಯೇ ಬಕೆಟ್ಟು ತುಂಬಿಕೊಳ್ಳುತ್ತದೆ. ಹೀಗೆ ತುಂಬಿದ ಬಕೆಟ್ಟನ್ನು ದ್ರವದ ಒತ್ತಡದಿಂದ ಚಲಿಸುವಂಥ ಕೊಂತಗಳಿಂದ ಎತ್ತಿ ಬೇರೊಂದೆಡೆಗೆ ಸುರಿಯಬಹುದು.

ಹಿಡಿಕೆ ಯಂತ್ರಗಳು (ಗ್ರಾಬ್): ಇವು ಹೆಚ್ಚಾಗಿ ಬಳಕೆಯಲ್ಲಿರುವ ಯಂತ್ರಗಳು, ಇವುಗಳಿಗೆ ಅಗಲವಾಗಿ ಬಾಯ್ಬಿಡುವ ಎರಡು ದವಡೆಗಳಿದ್ದು, ಈ ದವಡೆಗಳನ್ನು ತೆರೆಯಲು ಅಥವಾ ಮುಚ್ಚಲು ಒಂದೊ ಎರಡೋ ಹಗ್ಗಗಳನ್ನು ಉಪಯೋಗಿಸಲಾಗುತ್ತದೆ. ಯಂತ್ರದ ಈ ಭಾಗ ಕೆಳಗಿಳಿದಾಗ ದವಡೆಯ ಬಾಯಿ ತೆರೆದಿರುತ್ತದೆ. ಹಗ್ಗವನ್ನು ಎಳೆದು ಬಿಗಿಪಡಿಸಿದೊಡನೆಯೇ ಬಾಯಿ ಮುಚ್ಚಿಕೊಂಡು ತುಂಬಿಕೊಂಡಿರುವ ಪದಾರ್ಥಗಳೊಡನೆ ಮೇಲೇರುತ್ತದೆ. ಹಗ್ಗದ ಮೂಲಕ ಪುನಃ ಬೇಕಾದ ಸ್ಥಳದಲ್ಲಿ ಅದರ ದವಡೆಗಳನ್ನು ತೆರೆದು ತುಂಬಿರುವ ಪದಾರ್ಥವನ್ನು ಕೆಳಗೆ ಸುರಿಯಬಹುದು. ದವಡೆಗಳು ಮುಚ್ಚಿಕೊಳ್ಳುವಾಗ ಅವುಗಳ ಮೊನಚಾದ ಅಂಚು ಅಂಡಾಕಾರದ ಚಲನೆಯನ್ನು ಹೊಂದಿದ್ದರೆ, ಎಳೆದು ತುಂಬಿಕೊಳ್ಳುವ ಭಾಗಕ್ಕೆ ಸಹಾಯವಾಗುತ್ತದೆ. ಇಂಥ ಯಂತ್ರಗಳು ಹೆಚ್ಚು ಹೆಚ್ಚು ಆಳವಾಗಿ ಭೂಮಿಯನ್ನು ಅಗೆದು ಹೆಚ್ಚು ಹೆಚ್ಚು ಎತ್ತರಕ್ಕೆ ಕಲ್ಲುಮಣ್ಣನ್ನು ಎತ್ತುವ ಸಾಮರ್ಥ್ಯವನ್ನು ಹೊಂದಿವೆ. (ಕೆ.ವಿ.ಜಿ.)

**ಅಗೇಟ್ :** ಬೆಣಚುಕಲ್ಲು (ಕ್ವಾರ್ಟ್ಸ್) ಸಮುದಾಯಕ್ಕೆ ಸೇರಿದ ಖನಿಜ. ರಾಸಾಯನಿಕ ಸಂಯೋಜನೆ ಸಿಲಿಕಾನ್‌ಡೈಆಕ್ಸೈಡ್ ($SiO_2$). ಇದೊಂದು ಪ್ರಶಸ್ತ ಶಿಲೆ ಇದನ್ನು ಪ್ರಥಮ ಬಾರಿಗೆ ಗ್ರೀಸ್ ದೇಶದ ಸಿಸಿಲಿಯಲ್ಲಿರುವ, ಅಕೇಟ್ಸ್ ಎಂಬ ನದಿ ತೀರದಲ್ಲಿ ಗುರುತಿಸಿದುದರಿಂದ ಇದಕ್ಕೆ ಅಗೇಟ್ ಎಂದು ಹೆಸರು ಬಂದಿದೆ. ಬಹಳ ಸೂಕ್ಷ್ಮ ಕಣಗಳಿಂದಾದ ಅದರಲ್ಲೂ ಹೆಚ್ಚಾಗಿ ಚಾಲ್ಸಿಡನಿ ಮತ್ತು ಓಪಾರ್ ಎಂಬ ಸಿಕತ ಪ್ರಭೇದಕಣಗಳಿಂದ ಕೂಡಿರುವ ಸಮೂಹ ಖನಿಜ ಇದರ ವಿಶೇಷವೆಂದರೆ ವಿವಿಧ ಛಾಯೆಗಳನ್ನೊಳಗೊಂಡ ಇದರಲ್ಲಿ ಅತೀ ಕಲಾತ್ಮಕವಾಗಿ ನೈಸರ್ಗಿಕವಾಗಿ ಮೂಡಿಬಂದಿರುವ ಎಳೆ ಅಥವಾ ಪಟ್ಟೆ ರಚನೆ ಎದ್ದು ಕಾಣುವುದು. ಇಂತಹ ಪಟ್ಟೆ ರಚನೆಯು ಬೇರಾವ ಪ್ರಶಸ್ತ ಖನಿಜಗಳಲ್ಲಿಯೂ ಕಾಣಬರುವುದಿಲ್ಲ. ಆದ್ದರಿಂದ ಇದನ್ನು ಎಳೆ ಅಥವಾ ಪಟ್ಟೆ ಸುಂದರ ಎಂದೂ ಕೂಡ ಬಣ್ಣಿಸಿರುವುದುಂಟು.

ಈ ರೀತಿಯ ವಿವಿಧ ವರ್ಣವೈಚಿತ್ರ್ಯ, ಪಟ್ಟೆಗಳ ರಚನೆ ಮತ್ತು ಕಾಠಿಣ್ಯ ಈ ಖನಿಜಕ್ಕೆ ಒಂದು ವೈಶಿಷ್ಟ್ಯವನ್ನು ತಂದುಕೊಟ್ಟಿವೆ. ಈ ರೀತಿ ರಚನೆಯಾಗುವಾಗ ಆಗುವ ರಾಸಾಯನಿಕ ವ್ಯತ್ಯಯವೇ ವಿವಿಧ ಬಣ್ಣಗಳಿಂದ ಕೂಡಿದ ಪಟ್ಟೆ ಅಥವಾ ಎಳೆ ರಚನೆಗಳಿಗೆ ಕಾರಣ.

ಅಗೇಟ್ ಸಾಮಾನ್ಯವಾಗಿ ಅಗ್ನಿ ಶಿಲೆಗಳು ಭೂಮಿಯ ಮೇಲ್ಪದರದಲ್ಲಿ ರೂಪುಗೊಳ್ಳುವಾಗ ಅವುಗಳಲ್ಲಿ ಉಂಟಾದ ರಂಧ್ರಗಳಲ್ಲಿ ಹೆಚ್ಚು ಸಿಲಿಕಾಂಶವುಳ್ಳ ದ್ರವ ರೂಪಕ ವಸ್ತ್ರ ಪಟ್ಟಿಯೋಪಾದಿಯಲ್ಲಿ ರಂಧ್ರದ ಕೇಂದ್ರಬಿಂದುವಿನೆಡೆಗೆ ಘನೀಕರಣಗೊಳ್ಳುವಿಕೆಯಿಂದ ರಚನೆಯಾಗುತ್ತದೆ. ಇದಕ್ಕೆ ಚೆನ್ನಾಗಿ ಮೆರುಗು ಕೊಡಬಹುದು. ಈ ಖನಿಜದಲ್ಲಿ ಸೀಳುಗಳಿಲ್ಲ(ಕ್ಲೀವೇಜ್). ಇದರ ಕಾಠಿಣ್ಯ 7. ಸಾಪೇಕ್ಷಸಾಂದ್ರತೆ 2.65–2.66.

ಅಗೇಟ್ ವಿವಿಧ ಗಾತ್ರಗಳಲ್ಲಿಯೂ ದೊರಕುತ್ತದೆ ಅತೀ ದೊಡ್ಡ ಗಾತ್ರದ ಅಗೇಟ್ ಡಸ್ಸೆಲ್‌ಡಾರ್ಫ್ ನಗರದ ವಸ್ತುಪ್ರದರ್ಶನದಲ್ಲಿ 35 ಟನ್ ಭಾರದ ಜಿಯೋಡ್ ಎಂಬ ಹೆಸರಿನಲ್ಲಿ ಇಡಲಾಗಿತ್ತು.

ಅಗೇಟ್ ಉಳಿದ ಎಲ್ಲಾ ರೀತಿಯಲ್ಲೂ ಮತ್ತು ಲಕ್ಷಣಗಳಲ್ಲೂ ಚಿಣಚನ್ನು ಹೋಲುತ್ತದೆ. ಪ್ರಪಂಚದ ಎಲ್ಲಾ ಭಾಗಗಳಲ್ಲೂ ದೊರೆಯುತ್ತದೆ; ವಿಶೇಷವಾಗಿ ಅಮೆರಿಕದ ಪಶ್ಚಿಮ ರಾಜ್ಯಗಳು ಇದರ ಮೂಲ ಎಂದು ಗುರುತಿಸಿರುತ್ತೆ. ಭಾರತದಲ್ಲಿ ಡೆಕ್ಕನ್ ಬಸಾಲ್ಟ್ ಶಿಲಾ ಸಮೂಹದಲ್ಲಿ ಹೇರಳವಾಗಿ ದೊರಯುತ್ತದೆ.

ಅಗೇಟ್‌ನಲ್ಲಿರುವ ಕಾಠಿಣ್ಯತೆ ಹಾಗೂ ನಿರೋಧಕತೆ ಗುಣಗಳಿಗಾಗಿಯೇ ಇದನ್ನು ಕುಟ್ಟಾಣಿಯಾಗಿ ಅರೆಯುವಿಕೆ ಮತ್ತು ರಾಸಾಯನಿಕ ಸಂಯೋಜನೆಗಾಗಿ ಪ್ರಯೋಗಾಲಯಗಳಲ್ಲಿ ಉಪಯೋಗದಲ್ಲಿದೆ. ಇದಲ್ಲದೆ, ಕೈಗಾರಿಕೆಗಳಲ್ಲಿ ಅಲಂಕಾರಿಕ ವಸ್ತುಗಳ ತಯಾರಿಕೆಯಲ್ಲಿಯೂ ಅಗೇಟ್ ಅನ್ನು ಮೂಲ ವಸ್ತುವಾಗಿ ಬಳಸುತ್ತಾರೆ. ಅಗೇಟ್‌ನ ವಿವಿಧ ಬಗೆಗಳನ್ನು, ಅದರ ಆಕಾರ, ಬಣ್ಣ ಹಾಗೂ ಲಕ್ಷಣಗಳ ಆಧಾರದ ಮೇಲೆ ಗುರುತಿಸಲಾಗುವುದು. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಮುಂದೆ ತಿಳಿಸಿದೆ. ಸೈಕ್ಲೋಪ್ಸ್ ಅಥವಾ ಮೆಕ್ಸಿಕನ್ ಅಗೇಟ್ = ಒಂಟಿ ಕಣ್ಣಿನ ಆಕಾರವುಳ್ಳದ್ದಾಗಿದೆ; ಮಾಸ್ ಅಥವಾ ಡೆಂಡ್ರಿಟಿಕ್ ಅಗೇಟ್ = ಫರ್ನ್ ರೂಪವುಳ್ಳದ್ದಾಗಿರುತ್ತದೆ; ಟುರ್ರಿಟೆಲ್ಲಾ ಅಗೇಟ್ = ಟುರ್ರಿಟೆಲ್ಲಿ ಎಂಬ ಜೀವಾವಶೇಷದ ಆಕಾರದಲ್ಲಿರುತ್ತದೆ; ಪೆಟ್ರೋಸ್ಕಿ ಅಗೇಟ್= ಹವಳ ಅಗೇಟ್ ಆಗಿ ಪರಿವರ್ತಿತಗೊಂಡಿದೆ; ರೈನ್ ಬೋ ಅಗೇಟ್ = ಬೆಳಕಿನ ಕಿರಣವನ್ನು ಇಂತಹ ಅಗೇಟ್ ಮೂಲಕ ಪ್ರಸರಿಸಿದಾಗ ಕಾಮನಬಿಲ್ಲಿನ ಆಕಾರದಲ್ಲಿ ಬಣ್ಣಗಳು ಮೂಡುತ್ತವೆ. ಆದುದರಿಂದ, ಇದನ್ನು ರೈನ್ ಬೋ ಅಗೇಟ್ ಎಂಬುದಾಗಿ ಗುರುತಿಸಲಾಗಿದೆ. (*)

**ಅಗೇವಿ :** ಅಮರಿಲಿಡೇಸೀ ಅಥವಾ ಅಗೇವೇಸೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಉಪಯುಕ್ತ ಸಸ್ಯ. ಇದಕ್ಕೆ ಕತ್ತಾಳೆ ಎಂಬ ಹೆಸರೂ ಇದೆ. ಇದರಲ್ಲಿ ಸು. 500ಕ್ಕೂ ಹೆಚ್ಚಿನ ಬಗೆಗಳಿವೆ. ಇವು ಮಧ್ಯಅಮೆರಿಕದ ಮೂಲದವು. ನಮ್ಮ ದೇಶದಲ್ಲಿ ಸರ್ವಸಾಮಾನ್ಯವಾಗಿರುವ ಕತ್ತಾಳೆ ಅಗೇವ್‌ಅಮೆರಿಕಾನ ಪ್ರಭೇದಕ್ಕೆ ಸೇರಿದ್ದು. ಸುಮಾರು 15ನೆಯ ಶತಮಾನದಲ್ಲಿ ಕೆಲವು ಜಾತಿಯವನ್ನು ಪೋರ್ಚುಗೀಸ್ ನಾವಿಕರು ಭಾರತ ದೇಶಕ್ಕೆ ತಂದರೆನ್ನಲಾಗಿದೆ. ಈ ಸಸ್ಯಗಳು ಮಾನವಜನಾಂಗಕ್ಕೆ ಅನೇಕ ವಿಧಗಳಲ್ಲಿ ಉಪಯುಕ್ತವೆನಿಸಿವೆ. ಬರಗಾಲದಲ್ಲಿ ಕತ್ತಾಳೆಗೆಡ್ಡೆಯನ್ನು ತಿಂದು ತಮ್ಮ ಜೀವವನ್ನು ಉಳಿಸಿಕೊಂಡಿರುವ ಉದಾಹರಣೆಗಳು ಇವೆ. ಇದು ಒಳ್ಳೆಯ ಬೇಲಿಯಾಗುತ್ತದೆ. ಅಲಂಕಾರ ಸಸ್ಯವಾಗೂ ಇದನ್ನು ಬೆಳೆಸುತ್ತಾರೆ. ಕೆಲವು ಔಷಧಗಳಿಗೂ ಇದನ್ನು ಬಳಸುತ್ತಾರೆ. ಎಲೆ (ಪಟ್ಟೆ)ಗಳಿಂದ ತೆಗೆದ ನಾರು ಹಗ್ಗಮಾಡಲು ಬರುತ್ತದೆ; ಇದು ಅನೇಕ ಕುಟುಂಬಗಳ ಗೃಹಕೈಗಾರಿಕೆಯಾಗಿ ಪರಿಣಮಿಸಿದೆ. ಕತ್ತಾಳೆಗಳನ್ನು ಮಟ್ಟವಲ್ಲದ ಭೂಮಿಯ ಬದುಗಳಲ್ಲಿನ ಭೂಸವೆತವನ್ನು ತಡೆಯುವುದಕ್ಕೂ ಬೆಳೆಸುತ್ತಾರೆ. ಇವು ನೀರು, ಗೊಬ್ಬರ, ಕಾಲಿಕಸಂರಕ್ಷಣೆ ಮುಂತಾದ ಉಪಚಾರಗಳೇ ಇಲ್ಲದೆ ಸಮೃದ್ಧಿಯಾಗಿ ಬೆಳೆಯುತ್ತವೆ. ಕೆಲವು ಸಸ್ಯಗಳ ಎಲೆಗಳಿಂದ ತೆಗೆದ ರಸದಲ್ಲಿ ಸು. ಶೇ. 15ರಷ್ಟು ಸಕ್ಕರೆ ಅಂಶವಿರುವುದರಿಂದ ಹುಳಿಬರಿಸಿ ಮದ್ಯ ತಯಾರಿಸಬಹುದಾಗಿದೆ.

ಇವು ದೀರ್ಘಾವಧಿಯ ಬದುಕುವ ಚಿಕ್ಕ, ದೊಡ್ಡ ಪೊದೆಗಳಾಗಿ ಬೆಳೆಯುತ್ತವೆ. ವೃತ್ತಾಕಾರದಲ್ಲಿರುವ ಕಾಂಡದ ತುದಿಯಲ್ಲಿ ಎಲೆಗಳು ಗುಲಾಬಿ ದಳಗಳ ಮಾದರಿಯಲ್ಲಿ ಗುಂಪಾಗಿರುತ್ತವೆ. ಮೊಸು ಕಾಂಡದ ತುದಿಯಲ್ಲಿ ಎಳೆಯ ಎಲೆಗಳಿಂದ ಆವರಿಸಿಕೊಂಡಿರುತ್ತದೆ. ಎಳೆಯ ಎಲೆಗಳ ಕೆಳಭಾಗದಲ್ಲಿ ಹಿರಿಯ ಎಲೆಗಳು ಇರುತ್ತವೆ. ತಳಭಾಗದ ಅತ್ಯಂತ ಹಿರಿಯ ವಯಸ್ಸಿನ ಎಲೆಗಳು ವಯಸ್ಸಾದಂತೆ ಒಣಗಿ ಕಾಂಡಕ್ಕೆ ಅಂಟಿಕೊಂಡಿದ್ದು ನೇತಾಡುತ್ತಿರುತ್ತವೆ. ಎಳೆಯ ಎಲೆಗಳು ನೇರವಾಗಿ ನಿಂತಿದ್ದು, ಬಲಿತಂತೆ ಕೆಳಭಾಗಕ್ಕೆ ಬಾಗಿ, ಅನಂತರ ನೆಲಕ್ಕೆ ಸಮಾನಾಂತರವಾಗಿ, ಕೊನೆಗೆ ನೇತಾಡುತ್ತ ಒಣಗುತ್ತವೆ. ಎಲೆಗಳು ಕತ್ತಿಯ ಆಕಾರದವು. ಇವುಗಳ ಅಂಚುಗಳು ನಯವಾಗಿ ಅಥವಾ ಮುಳ್ಳುಗಳಿಂದ ಕೂಡಿರುತ್ತವೆ ಎಲೆಗಳ ತುದಿ ಮತ್ತು ಅಂಚುಗಳಲ್ಲಿ ಮುಳ್ಳುಗಳಿರುವುದು ಪ್ರಭೇದ ಸೂಚಕ. ಕೆಲವು ಪ್ರಭೇದಗಳು ಮುಳ್ಳುಗಳು ಇಲ್ಲದೆಯೂ ಇರುತ್ತವೆ. ಎಲೆಗಳ ಉದ್ದಕ್ಕೂ ಒಳಗೆ ಎಳೆ ಎಳೆಯಾದ ನಾರಿರುತ್ತದೆ. ಇದು ತನ್ನ ಜೀವನದ ಅಂತಿಮಘಟ್ಟದಲ್ಲಿ ಒಂದು ಸಲ ಹೂಬಿಟ್ಟು ಅನಂತರ ಸತ್ತುಹೋಗುತ್ತದೆ. ಹೂಗೊಂಚಲು ಸಸ್ಯಮಧ್ಯದಲ್ಲಿ ಹೊರಬಂದು ಸು. 2–3ಮೀ ಉದ್ದವಾದ ಕಂಬದಂತೆ ಕಾಣುತ್ತದೆ. ಅಂತ್ಯಾರಂಭಿ ಹೂಗಳು ಗೊಂಚಲಿನಲ್ಲಿ ಬಿಡಿಯಾಗಿದ್ದು ಬಲಿತ ಅನಂತರ ಬಲ್ಬಿಲ್‌ಗಳಾಗಿ (ಗೆಡ್ಡೆ) ಪರಿಣಮಿಸುತ್ತವೆ. ಬಲ್ಬಿಲ್‌ಗಳು ಬಲಿತು ಉದುರಿ ವಂಶಾಭಿವೃದ್ಧಿಯಾಗುವುದೂ ಉಂಟು. ಕೆಲವು ಸಾರಿ ಹೂಗಳು ಬೀಜಗಳನ್ನು ಕೊಡುತ್ತವೆ. ಹೂ ಬಿಡಲು ಬೇಕಾಗುವ ಅವಧಿ ಪ್ರಭೇದಗಳನ್ನು ಅನುಸರಿಸಿ 10–100 ವರ್ಷಗಳ ಅಂತರವಾಗಬಹುದು. ನೂರು ವರ್ಷಕ್ಕೆ ಹೂಬಿಡುವ ಅಗೇವ್ ಅಮೆರಿಕಾದ ಪ್ರಭೇದವನ್ನು ಶತಾಯುಸಸ್ಯ (ಸೆಂಚುರಿ ಪ್ಲಾಂಟ್) ಎಂದು ಕರೆಯುತ್ತಾರೆ. ಉದ್ದವಾದ ಕಂಬದ ತುದಿಯಲ್ಲಿ ಹೂಬಿಟ್ಟಿರುವ ಗಿಡ ರಮ್ಯವಾಗಿ ಕಾಣುತ್ತದೆ. ಈ ಸಸ್ಯಗಳು ಪಕ್ಕದಲ್ಲಿ ಮೊಸುಗಳನ್ನು ಹೊರಡಿಸುವುವು.

ಅಗೇವಿ ಅಮೆರಿಕನ: ಇದಕ್ಕೆ ಅಮೆರಿಕ ಕತ್ತಾಳೆ ಎಂಬ ಹೆಸರು ಬಳಕೆಯಲ್ಲಿದೆ. ಇದು ಒಂದು ಸಾಮಾನ್ಯ ಪ್ರಭೇದ. ಭಾರತ ದೇಶದ ಎಲ್ಲ ಭಾಗಗಳಲ್ಲೂ ಬೆಳೆಯುತ್ತದೆ. ಇದನ್ನು ತೋಟ, ಹೊಲಗಳಲ್ಲಿ ಬೇಲಿ ಹಾಕುವುದಕ್ಕೆ ಉಪಯೋಗಿಸುತ್ತಾರೆ. ಎಲೆಯ ಅಂಚುಗಳು ಅಲೆಯಲೆಯಾಗಿದ್ದು ಮುಳ್ಳುಗಳಿಂದ ಕೂಡಿರುತ್ತವೆ. ನಾರಿನ ಪ್ರಮಾಣ ಅಧಿಕವಾಗಿರುವ ಕಾರಣ ಹಳ್ಳಿಗಳ ಕಡೆ ಇದನ್ನು ಬೆಳೆಸುತ್ತಾರೆ. ಇದು ಗಟ್ಟಿಮುಟ್ಟಾಗಿದ್ದು ಮಳೆಯನ್ನೇ ಆಶ್ರಯಿಸಿ ಬೆಳೆದು, ಯಥೇಚ್ಛವಾಗಿ ಮೊಸುಗಳನ್ನು ಕೊಟ್ಟು ಸುಲಭವಾಗಿ ವೃದ್ಧಿಯಾಗುವುದರಿಂದ ಹೆಚ್ಚಿನ ಜನಪ್ರಿಯತೆ ಗಳಿಸಿದೆ. ಇವುಗಳ ಪೈಕಿ ಕೆಲವು ಅಲಂಕಾರ ತಳಿಗಳಿವೆ.

ಅಗೇವಿ ಅಮೆರಿಕನ ವರ್‌ಜಿನೇಟ ಎಂಬ ತಳಿಯ ಎಲೆಯ ಅಂಚುಗಳ ಬಣ್ಣ ಚಿನ್ನದ ಹಳದಿ. ಇದನ್ನು ಎಲ್ಲ ಉದ್ಯಾನವನಗಳಲ್ಲೂ ಬೆಳೆಯುತ್ತಾರೆ. ನಾರಿನ ಪ್ರಮಾಣ ಕಡಿಮೆ. ಆದ್ದರಿಂದ ಅಲಂಕಾರ ಸಸ್ಯವಾಗಿ ಮಾತ್ರ ಖ್ಯಾತಿ ಪಡೆದಿದೆ. ಇದರ ಪ್ರಭೇದವಾದ ಅಲ್ಬ ಎಂಬ ತಳಿಯಲ್ಲಿ ಎಲೆಗಳ ಅಂಚುಗಳ ಬಣ್ಣ ಬಿಳುಪು ಅಥವಾ ಕಡುಗೆಂಪು. ಪ್ಯಾಲಿಡ ಎಂಬ ತಳಿಯಲ್ಲಿ ಎಲೆಯ ಅಂಚುಗಳು ಬಿಳಿಚಿಕೊಂಡಿರುವ ಹಸಿರು ಬಣ್ಣದವಾಗಿವೆ. ಮಿಡಿಯೊಪಿಕ್ಟ ಎಂಬ ತಳಿಯಲ್ಲಿ ಎಲೆಯ ಮಧ್ಯದಲ್ಲಿ ಹಳದಿ ಮತ್ತು ಹಸಿರುಗೆರೆಗಳು ಇರುತ್ತವೆ. ಸ್ಟ್ರಿಯೇಟ ಎಂಬ ತಳಿಯಲ್ಲಿ ಎಲೆಯ ಮಧ್ಯದಲ್ಲಿ ಕಿರಿದಾದ ಕೆನೆಯ ಬಣ್ಣದ ಗೆರೆಗಳು ಇರುತ್ತವೆ.

ಅಗೇವಿ ಅಪ್ಲನಟ ಎಂಬ ಪ್ರಭೇದ ಮೆಕ್ಸಿಕೊ ದೇಶದ ಮೂಲದ್ದು. ಎಲೆಯ ಬುಡಗಳು ಪರಸ್ಪರ ಬಹಳ ಹತ್ತಿರಹತ್ತಿರವಿರುತ್ತವೆ. ಗಿಡ ಕಡಿಮೆ ಮೊಸುಗಳನ್ನು ಕೊಡುತ್ತದೆ. ನೀಳವಾದ ಎಲೆಯ ತುದಿಯಲ್ಲಿ ಸು. 9ಸೆಂ.ಮೀ ಉದ್ದವಾದ ಕಪ್ಪುಮಿಶ್ರಿತ ಕಂದು ಮುಳ್ಳು ಇದೆ. ಅಂಚಿನಲ್ಲಿರುವ ಮುಳ್ಳುಗಳು ದೃಢವಾಗಿದ್ದು ಹಿಂದಕ್ಕೆ ಬಾಗಿರುತ್ತವೆ. ಇವುಗಳ ಬಣ್ಣ ಬೂದು ಅಥವಾ ಬಿಳುಪಾಗಿದ್ದು ಸುಂದರವಾಗಿ ಕಾಣುತ್ತವೆ.

ಅಗೇವಿ ಹಾರಿಡ ಎಂಬ ಪ್ರಭೇದದಲ್ಲಿ ಅಧಿಕಸಂಖ್ಯೆಯಲ್ಲಿ ಎಲೆಗಳು ಗುಂಪುಗೂಡಿರುತ್ತವೆ. ಇದರ ಎಲೆಗಳು ಗಾಜುಹಸಿರುಬಣ್ಣವಾಗಿದ್ದು ಅಂಚುಗಳ ಮುಳ್ಳುಗಳು ದಪ್ಪವಾಗಿ ಎರಡು ಕಡೆಗೂ ಬಾಗಿರುತ್ತವೆ; ತುದಿ ಮುಳ್ಳು ಸು. 3ಸೆಂಮೀ.

ಅಗೇವಿ ಸಿಸಲಾನಾ ಎಂಬ ಪ್ರಭೇದದ ಜನ್ಮಸ್ಥಾನ ಖಚಿತವಾಗಿ ತಿಳಿದುಬಂದಿಲ್ಲ. ಇದನ್ನು ನಾರುಬೆಳೆಯಾಗಿ ಬೆಳೆಸುತ್ತಾರೆ. ದಪ್ಪವಾಗಿ ಕಿರಿದಾಗಿರುವ ಉದ್ದವಾದ ಎಲೆಗಳ ಗುಂಪು ಇತರ ಪ್ರಭೇದಗಳಲ್ಲಿರುವಂತೆಯೇ ಇರುತ್ತದೆ. ಅಂಚುಗಳಲ್ಲಿ ಮುಳ್ಳುಗಳು ಇರುವುದಿಲ್ಲ; ತುದಿಯಲ್ಲಿ ಮಾತ್ರ ಚಿಕ್ಕದಾಗಿರುವ ಮುಳ್ಳುಗಳು ಇರುತ್ತವೆ. ಈ ಗಿಡಗಳನ್ನು ಮೊಸುಗಳಿಂದ ವೃದ್ಧಿಮಾಡುತ್ತಾರೆ.

ಅಗೇವಿ ಫಿಲಿಫೆರ ಎಂಬ ಪ್ರಭೇದ ಮೆಕ್ಸಿಕೊ ದೇಶದ್ದು. ಹೂಗೊಂಚಲು ತೆನೆಯ ಮಾದರಿಯದು. ಎಲೆಗಳಲ್ಲಿ ಬಿಳಿಯ ಗೆರೆಗಳು ಇದ್ದು ಮುಳ್ಳುಗಳಿಲ್ಲದೆ ಅಗಲವಾಗಿ ತೆರಿನಂತಿರುವ ಹೂಗೊಂಚಲನ್ನು ಬಿಡುವುದರಿಂದ ಇದು ಅಲಂಕಾರ ಸಸ್ಯವಾಗಿ ಪ್ರಸಿದ್ಧಿ ಪಡೆದಿದೆ.

ಅಗೇವಿ ವಿಕ್ಟೋರಿಯ ರಿಜಿನೆ ಎಂಬ ಇನ್ನೊಂದು ಪ್ರಭೇದ ಅತ್ಯಂತ ಸುಂದರವಾದ ಉದ್ಯಾನಸಸ್ಯಗಳಲ್ಲೊಂದು. ಅಗಲವಾದ ವೃತ್ತಾಕಾರದಲ್ಲಿ ಎಲೆಗಳು ಗುಂಪುಗೂಡಿರುತ್ತವೆ. ಮೊಸುಗಳನ್ನು ಕೊಡುವುದಿಲ್ಲವಾದ್ದರಿಂದ ಬೀಜಗಳಿಂದ ಮಾತ್ರ ಈ ಬಗೆಯವನ್ನು ವೃದ್ಧಿಮಾಡಬಹುದು. ಸಂಖ್ಯೆಯಲ್ಲಿ ಅಧಿಕವಾಗಿರುವ ಎಲೆಗಳು 12–20ಸೆಂಮೀ ಉದ್ದವಾಗಿರುತ್ತವೆ. ಬಣ್ಣ ಮಾಸಲುಹಸಿರು; ಎರಡು ಕಡೆಗಳ ಅಂಚುಗಳ ಮಧ್ಯಭಾಗ ಸ್ವಲ್ಪ ತಗ್ಗಾಗಿರುವುದರಿಂದ ಕಾಲುವೆಯಂತೆ ಕಾಣುತ್ತದೆ. ಎಲೆಯ ತುದಿಯ ಭಾಗ ಕೂಡ ಸ್ವಲ್ಪ ಮೇಲುಭಾಗಕ್ಕೆ ಬಾಗಿರುತ್ತದೆ. ಎಲೆಗಳ ಮೇಲುಭಾಗದ ಅಂಚುಗಳಲ್ಲಿರುವ ಬಿಳಿಯ ಗೆರೆಗಳೂ ಮಧ್ಯಭಾಗದಲ್ಲಿರುವ ಬಿಳಿ ರೇಖಾವಿನ್ಯಾಸಗಳೂ ಈ ಗಿಡಗಳು ಸುಂದರವಾಗಿ ಕಾಣಲು ಕಾರಣವೆನಿಸಿವೆ. ಎಲೆಯ ಬುಡದ ಅಗಲಕ್ಕಿಂತ ತುದಿಯ ಅಗಲ ಸ್ವಲ್ಪ ಕಡಿಮೆಯಾಗಿದ್ದು ಮುಳ್ಳುಗಳಲ್ಲಿ ಮುಗಿಯುವುದರಿಂದ ಗಿಡದ ಅಂದಕ್ಕೆ ಪುಟಕೊಟ್ಟಂತಾಗುತ್ತದೆ. ಹೂಗೊಂಚಲು ಸು. 3ಮೀ ಎತ್ತರದ್ದು. (ಡಿ.ಎಂ.)

**ಅಗ್ಗದ ಭಯಾನಕಗಳು :** ಅಮೆರಿಕ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಕಳೆದ ಶತಮಾನದ ಉತ್ತರಾರ್ಧದಲ್ಲಿ ಬಹಳ ಜನಪ್ರಿಯವಾಗಿದ್ದ ಒಂದು ರೀತಿಯ ರೋಮಾಂಚಕ, ಹಿಂಸಾತ್ಮಕ ಕಥಾವಸ್ತುವನ್ನುಳ್ಳ ಕೀಳು ಕಾದಂಬರಿಗಳು (ಪೆನಿ ಡ್ರೆಡ್‌ಫುಲ್ಸ್). ಮೊದಲು ಅಗ್ಗವಾದ ದಿನಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಸಾಕಷ್ಟು ಜನರ ಕುತೂಹಲ ಕೆರಳಿಸುತ್ತಿದ್ದ ಇವು ಅನಂತರ ನೀಲಿ ಕಾಗದ, ಹಳದಿರಕ್ಷಾಪತ್ರವನ್ನುಳ್ಳ ಪುಸ್ತಕದ ರೂಪದಲ್ಲಿ ಹೇರಳವಾಗಿ ಮಾರಾಟವಾಗುತ್ತಿದ್ದುವು. ಮೊಟ್ಟಮೊದಲು 1860ರಲ್ಲಿ ಈ ಭಯಂಕರ ಸಾಹಿತ್ಯವಿಶೇಷವನ್ನು ಸೃಷ್ಟಿಸಿದ ಕೀರ್ತಿ ಇ.ಎಫ್.ಬೀಡ್ಲ್ ಎಂಬುವನಿಗೆ ಸಲ್ಲುತ್ತದೆ. 1895ರಲ್ಲಿ ಪ್ರಕಟವಾದ ಇನ್ನೂ ಅಗ್ಗವಾದ ನಿಕ್‌ಕಾರ್ಟರ್ ಮತ್ತು ಫ್ರ್ಯಾಂಕ್ ಮೆರಿವೆಲ್ ಪುಸ್ತಕಮಾಲೆಯನ್ನು ಅಸಂಖ್ಯಾತಮಂದಿ ಓದಿ ಮೈಮರೆತರು. ಪುಸ್ತಕದ ಬೆಲೆ ಒಂದು ಪೆನ್ನಿಗಿಂತ ಹೆಚ್ಚು ಇರುತ್ತಿರಲಿಲ್ಲವಾಗಿ ಅವುಗಳನ್ನು ಜನ ಧಾರಾಳವಾಗಿ ಕೊಳ್ಳುತ್ತಿದ್ದರು. ಮಾರಾಟದಿಂದ ಪ್ರಕಟಣಕಾರರಿಗೆ ಹೇರಳವಾಗಿ ಹಣ ಬರುತ್ತಿತ್ತು. ಕುತೂಹಲ ಕೆರಳಿಸಿ ಕೋಲಾಹಲವನ್ನುಂಟುಮಾಡುವಂಥ ಅಪಕ್ವಶೈಲಿಯಲ್ಲಿ ಬರೆದ ಈ ಪುಸ್ತಕಗಳು ಹುರುಳಿಲ್ಲದ ಸಾಂಪ್ರದಾಯಿಕ ಆದರ್ಶಗಳನ್ನೂ ಕುರುಡು ದೇಶಪ್ರೇಮವನ್ನೂ

ಎತ್ತಿಹಿಡಿಯಲೆತ್ನಿಸಿದುವು. ಆಕ್ಷೇಪಣೀಯವಾದ ಯಾವ ತೆರನಾದ ಅನೀತಿಯನ್ನು ಪ್ರತಿರೂಪಿಸದಿದ್ದರೂ ಈ ಪುಸ್ತಕಗಳ ಆಡಂಬರದ ಶೈಲಿ, ಸಾಮಾನ್ಯ ಜನರ ಅಭಿರುಚಿಯನ್ನು ಇನ್ನೂ ಕೀಳುಮಟ್ಟಕ್ಕೊಯ್ಯಲು ಕಾರಣವಾಯಿತೆಂದು ಅನೇಕರ ಅಭಿಪ್ರಾಯ. (ಎನ್.ಕೆ.ಆರ್.)

**ಅಗ್ಗದ ಹಣದ ಧೋರಣೆ :** ಕಡಿಮೆ ಬಡ್ಡಿದರದಲ್ಲಿ ಯಥೇಚ್ಛವಾಗಿ ಹಣ ಒದಗಿಸುವುದೇ ಈ ಧೋರಣೆಯ ಉದ್ದೇಶ. ಇಚ್ಛಿತ ಗುರಿಯನ್ನು ಯೋಗ್ಯ ಹಣದ ಧೋರಣೆಯಿಂದ ಸುಲಭವಾಗಿ ಸಾಧಿಸಬಹುದೆಂದು ತೋರಿಸುವುದಕ್ಕೆ ಇದೊಂದು ದೃಷ್ಟಾಂತ. ಹಣಕ್ಕೆ ಈ ಮಹತ್ವದ ಪಾತ್ರ ಬಂದುದು 1930ರ ಮಹಾಮುಗ್ಗಟ್ಟಿನ ಅನಂತರ; ಅದರಲ್ಲಿಯೂ ವಿಶೇಷವಾಗಿ ಕೀನ್ಸರ ದಿ ಜನರಲ್ ಥಿಯರಿ ಆಫ್ ಎಂಪ್ಲಾಯ್ಮೆಂಟ್, ಇಂಟರೆಸ್ಟ್ ಅಂಡ್ ಮನಿ ಎಂಬ ಪುಸ್ತಕದ ಪ್ರಕಟಣೆಯ ಅನಂತರ. ಅದಕ್ಕೂ ಮೊದಲು ಹಣವೊಂದು ಕೇವಲ ವಿನಿಮಯ ಸಾಧನ, ಆರ್ಥಿಕ ಉನ್ನತಿ ನಿಜವಾದ ಉಳಿತಾಯದಿಂದಲೇ ವಿನಾ ಬರೀ ಹಣದಿಂದಲ್ಲವೆಂಬ ಭಾವನೆಯಿತ್ತು. ಕೀನ್ಸರು ಯುದ್ಧವೆಚ್ಚವನ್ನು ಹೇಗೆ ನಿರ್ವಹಿಸುವುದು ಎಂಬ ವಿಷಯದಲ್ಲಿ ಅಗ್ಗ ಹಣದ ಧೋರಣೆಯನ್ನು ಪ್ರತಿಪಾದಿಸಿದರು. ಅದರಂತೆ ಭಾರತದಲ್ಲಿ ಸಹ ದ್ವಿತೀಯ ಮಹಾಯುದ್ಧದ ವೇಳೆಯಲ್ಲಿ ಇಂಥ ಧೋರಣೆಯನ್ನೇ ತಳೆಯಲು ಸರ್ಕಾರವನ್ನು ಒತ್ತಾಯಿಸಲಾಗುತ್ತಿತ್ತು.

ಈ ಧೋರಣೆಯನ್ನು ಬರೀ ಯುದ್ಧವೆಚ್ಚವನ್ನು ನಿರ್ವಹಿಸಲಷ್ಟೇ ಏಕೆ, ಆರ್ಥಿಕ ಉನ್ನತಿಯನ್ನು ಸಾಧಿಸಲು ಇಲ್ಲವೆ ಆರ್ಥಿಕಸ್ಥಿತಿಯಲ್ಲುಂಟಾಗುವ ಮುಗ್ಗಟ್ಟನ್ನು ನಿವಾರಿಸಲು ಉಪಯೋಗಿಸಬಹುದು. ರಾಷ್ಟ್ರದ ಕೇಂದ್ರ ಬ್ಯಾಂಕ್ ತಾನು ಬಡ್ಡಿದರವನ್ನು ಇಳಿಸಬಹುದು. ಇದರಿಂದ ಉಳಿದ ಬ್ಯಾಂಕುಗಳಿಗೆ ಸೋವಿ ದರದಲ್ಲಿ ಹಣ ಲಭ್ಯವಾಗುವುದರಿಂದ ಅವೂ ಸಹ ಹೆಚ್ಚು ಹಣವನ್ನು ತಮ್ಮ ಹತ್ತಿರ ವ್ಯರ್ಥವಾಗಿ ಇಟ್ಟುಕೊಳ್ಳಲಾರದೆ ಲಾಭಗಳಿಸುವುದಕ್ಕಾಗಿ ತಾವೂ ಬಡ್ಡಿದರವನ್ನು ಇಳಿಸುವುವು. ತತ್ಪರಿಣಾಮವಾಗಿ ಉತ್ಪಾದಕರಿಗೆ ಸುಲಭರೀತಿಯಲ್ಲಿ ಹಣ ದೊರಕಿ, ಅಧಿಕ ಉತ್ಪಾದನೆಗೆ ಅನುಕೂಲವಾಗುವುದು. ಇದರಿಂದ ದೇಶದಲ್ಲಿ ಉದ್ಯೋಗಾವಕಾಶ ಹೆಚ್ಚಿ ಜನರ ಉತ್ಪನ್ನ ಹೆಚ್ಚಾಗುವುದು. ವಸ್ತುಗಳ ಬೇಡಿಕೆ ಹೆಚ್ಚಾಗಿ ಮತ್ತಷ್ಟು ಉತ್ಪಾದನೆಗೆ ದಾರಿಯಾಗುವುದು. ಹೀಗೆ ಆರ್ಥಿಕ ಪ್ರಗತಿಯುಂಟಾಗುವುದು. ಬ್ಯಾಂಕುಗಳಿಗೆ ಹಣದ ಕೊರತೆ ಇದ್ದಾಗ ಮಾತ್ರ ಈ ಬಡ್ಡಿದರದ ಧೋರಣೆ ಪ್ರಭಾವಕಾರಿಯಾಗುವುದು. ಒಂದು ಪಕ್ಷ ಬ್ಯಾಂಕುಗಳಲ್ಲಿ ಹಣದ ವಿಪುಲ ಸಂಗ್ರಹವಿದ್ದರೆ ಈ ಧೋರಣೆ ತನ್ನ ಗುರಿಯನ್ನು ಸಾಧಿಸದೇ ಹೋಗಬಹುದು. ಆದ್ದರಿಂದ ಅದನ್ನು ಪುಷ್ಟೀಕರಿಸಲು ಮಧ್ಯವರ್ತಿ ಬ್ಯಾಂಕು ನೇರವಾಗಿ ಪೇಟೆಯಲ್ಲಿ ಸಾಲಪತ್ರಗಳ ವ್ಯವಹಾರವನ್ನು ಪ್ರಾರಂಭಿಸಬಹುದು. ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಕೊಂಡ ಸರಕಾರಕ್ಕೆ ಸಾಲ ನೀಡಬಹುದು. ಸಾಲಪತ್ರಗಳನ್ನು ಕೊಂಡು ಹೆಚ್ಚಿಗೆ ಹಣವನ್ನು ಆರ್ಥಿಕ ವ್ಯವಸ್ಥೆಯಲ್ಲಿ ತೊಡಗಿಸಬಹುದು. ಜನತೆ ಮತ್ತು ಇತರ ಬ್ಯಾಂಕುಗಳು ಈ ಸಾಲಪತ್ರಗಳನ್ನು ಮಾರಿ ಹಣ ಪಡೆಯುವುವು. ಇದೇ ಹಣದ ಉತ್ಪಾದನೆಗೆ ಉಪಯೋಗವಾಗುವುದು. ಒಮ್ಮೆ ಬ್ಯಾಂಕುಗಳಲ್ಲಿ ವಿಪುಲ ಹಣ ಸಂಗ್ರಹವಾಯಿತೆಂದರೆ ಅದನ್ನು ತೊಡಗಿಸಿ ಲಾಭಗಳಿಸುವ ಉದ್ದೇಶದಿಂದ ಅವು ಬಡ್ಡಿದರವನ್ನು ಇಳಿಸಲೇಬೇಕಾಗುವುದು. ಹೀಗಾಗಿ ಇವೆರಡು ಸಾಧನಗಳಿಂದ ಇಚ್ಛಿತ ಪರಿಣಾಮ ಸಾಧ್ಯವಾಗುವುದು. ಯುದ್ಧವೆಚ್ಚವನ್ನು ನಿರ್ವಹಿಸುವಾಗಲೂ ಯುದ್ಧಸಲಕರಣೆಗಳನ್ನೂ ಶಸ್ತ್ರಾಸ್ತ್ರಗಳನ್ನೂ ಇತರ ಸಾಮಗ್ರಿಯನ್ನೂ ಸಂಗ್ರಹಿಸಲು ಇದೇ ರೀತಿ ಅಗ್ಗದ ಹಣದ ಧೋರಣೆಯಿಂದ ಅನುಕೂಲವಾಗುವುದು. ಅಗ್ಗವಾಗಿ ದೊರಕುವ ಹಣವನ್ನು ಯುದ್ಧಕ್ಕೆ ಅವಶ್ಯವಾಗುವ ವಸ್ತುಗಳನ್ನು ಉತ್ಪಾದಿಸುವುದಕ್ಕೆ ಉಪಯೋಗವಾಗುವಂತೆ ಬಳಸುವುದು ಮಾತ್ರ ಅಗತ್ಯ. ಅದರಂತೆ ಆರ್ಥಿಕ ಮುಗ್ಗಟ್ಟು ಒದಗಿದ್ದರೆ ಲಾಭಾಂಶ ಕಡಿಮೆಯಾಗಿ, ಉತ್ಪಾದನೆ ಕುಂಠಿತವಾಗುವುದು. ಇಂಥ ಸಮಯದಲ್ಲಿ ಸಹ ಅಗ್ಗದ ಹಣದ ಧೋರಣೆಯನ್ನು ಬಳಸಿ ಆರ್ಥಿಕ ಸ್ಥಿತಿಯನ್ನು ಪುನರುಜ್ಜೀವನಗೊಳಿಸ ಬಹುದು. ಸುಲಭ ದರದಲ್ಲಿ ಹಣ ದೊರಕುವುದರಿಂದ ಉತ್ಪಾದನಾವೆಚ್ಚ ಕಡಿಮೆಯಾಗಿ, ಲಾಭಾಂಶ ಹೆಚ್ಚುವುದು; ಉತ್ಪಾದನೆಗೆ ಉತ್ತೇಜನ ದೊರಕಿದಂತಾಗುವುದು. ಉತ್ಪಾದನೆ ಹೆಚ್ಚಿದಂತೆ, ಉದ್ಯೋಗಾವಕಾಶ, ಜನರ ಆದಾಯ, ವಿವಿಧ ವಸ್ತುಗಳಿಗೆ ಬೇಡಿಕೆಗಳು ಹೆಚ್ಚಿ, ಮತ್ತಷ್ಟು ಊರ್ಜಿತಸ್ಥಿತಿಯುಂಟಾಗುವುದು.

ಬ್ರಿಟನ್ ಎರಡನೆಯ ಮಹಾಯುದ್ಧದ ಕಾಲದಲ್ಲಿ ಯುದ್ಧವೆಚ್ಚವನ್ನು ಪೂರೈಸುವುದಕ್ಕಾಗಿ ಕೈಗೊಂಡ ಈ ಧೋರಣೆಯನ್ನು 1951ರವರೆಗೆ ಮುಂದುವರಿಸಲಾಯಿತು. ಭಾರತದಲ್ಲಿ ಸಹ ಪರೋಕ್ಷವಾಗಿ ಇದೇ ನೀತಿಯನ್ನು ಅನುಸರಿಸಲಾಯಿತು.

ಅಗ್ಗದ ಹಣದ ಧೋರಣೆಯ ವಿಶೇಷ ಗುಣಗಳೆಂದರೆ 1. ಉತ್ಪಾದನಾವೆಚ್ಚ ಕಡಿಮೆಯಾಗಿ ಅಧಿಕೋತ್ಪಾದನೆಗೆ ಉತ್ತೇಜನ ಸಿಗುವುದು. 2. ಸುಲಭ ಬಡ್ಡಿದರದಲ್ಲಿ ಹಣ ದೊರಕುವುದರಿಂದ, ಬಂಡವಾಳದ ಬೆಳವಣಿಗೆಗೆ ಅನುಕೂಲವಾಗುವುದು. 3. ಅಧಿಕ ಬಂಡವಾಳದ ಸಹಾಯದಿಂದ ಬೆಳವಣಿಗೆಗೆ ಅನುಕೂಲವಾಗುವುದು. 3. ಅಧಿಕ ಬಂಡವಾಳದ ಸಹಾಯದಿಂದ ಸಕಲಸಾಧನಮೂಲಗಳ ಸಂಪೂರ್ಣ ಉಪಯೋಗ ಹೊಂದುವುದು. 4. ಹೆಚ್ಚಿನದೆಂದರೆ ಯೋಗ್ಯರೀತಿಯಲ್ಲಿ ಕೈಕೊಂಡ ಧೋರಣೆ ಜನತೆಯ ಮೇಲೆ ಹೆಚ್ಚಿನ ಭಾರ ಹೇರುವುದಿಲ್ಲ. ಆದಾಯದ ಒಂದು ಭಾಗವನ್ನು ಉಪಯೋಗಿಸದೇ ಇರುವುದು ಅಂದರೆ ಖರ್ಚನ್ನು ಕಡಿಮೆ ಮಾಡುವುದು ಯಾವುದೇ ಆರ್ಥಿಕ ಪ್ರಗತಿಗೆ ಮೂಲ ಬಂಡವಾಳವೆಂದು ಹಿಂದಿನ ಅರ್ಥಶಾಸ್ತ್ರಜ್ಞರ ವಾದ. ಇದಕ್ಕಾಗಿ ತಮ್ಮ ಕೆಲವು ಇಷ್ಟ ವಸ್ತುಗಳ ಉಪಭೋಗವನ್ನು ತ್ಯಾಗಮಾಡಲೇಬೇಕಾಗುತ್ತಿತ್ತು.

ಆದರೂ ಅಗ್ಗದ ಹಣದ ಧೋರಣೆ ಕೃತಿಯಲ್ಲಿ ಜಾರಿಮಾಡುವುದು ಅಷ್ಟು ಸುಲಭವಲ್ಲ. ಮಧ್ಯವರ್ತಿ ಬ್ಯಾಂಕು ಉತ್ಪಾದಿಸಿದ ಸಮಸ್ತ ಹಣವೂ ಉತ್ಪಾದನೆಗಾಗಿ ವಿನಿಯೋಗಿಸಲ್ಪಡದೆ ಸಟ್ಟಾವ್ಯಾಪಾರದಲ್ಲಿ ತೊಡಗಬಹುದು. ಅದು ದೇಶಕ್ಕೆ ಹಾನಿಕರ. ಉತ್ಪಾದನಾಕಾರ್ಯದಲ್ಲಿ ಕಚ್ಚಾಮಾಲು ಯೋಗ್ಯವೇಳೆಯಲ್ಲಿ ದೊರಕದೇ ಇರುವುದರಿಂದಾಗಲಿ, ನುರಿತ ಕಾರ್ಮಿಕರು ದೊರಕದೇ ಇರುವುದರಿಂದಾಗಲಿ, ಹಾಗೂ ಇನ್ನಿತರ ಕಾರಣಗಳಿಂದ ನಿರ್ದಿಷ್ಟ ಅವಧಿಯಲ್ಲಿ ಯೋಜಿತ ಉತ್ಪಾದನೆ ಆಗದೇ ಇರಬಹುದು. ಹಾಗಾದಲ್ಲಿ ವಿನಾಕಾರಣ ಅತಿಪ್ರಸರಣಕ್ಕೆ ಎಡೆಮಾಡಿಕೊಟ್ಟಂತಾಗುವುದು. ವಿಶೇಷತಃ ಅಗ್ಗದ ಹಣದ ಧೋರಣೆಯನ್ನು ಕೈಕೊಂಡಾಗ ಗ್ರಾಹಕ ವಸ್ತುಗಳ, ಅದರಲ್ಲಿಯೂ ಜೀವನಾವಶ್ಯಕವಸ್ತುಗಳ, ವಿಪುಲ ಸಂಗ್ರಹವಿರುವುದು ಅಗತ್ಯ. ಇಲ್ಲದಿದ್ದರೆ ವಿವಿಧ ಕಾರ್ಯಕ್ರಮಗಳು ಉದ್ಯೋಗಾವಕಾಶವನ್ನು ಹೆಚ್ಚಿಸುವುವು. ಅವುಗಳಲ್ಲಿ ತೊಡಗಿದ ಜನರ ಆದಾಯ ಹೆಚ್ಚಿ, ಗ್ರಾಹಕ ವಸ್ತುಗಳ ಬೇಡಿಕೆ ಹೆಚ್ಚಾಗುವುದು. ಅವು ಸಿಗದಿದ್ದಲ್ಲಿ ಧಾರಣೆಗಳು ಏರುವುವು. ಈ ಜಾಡ್ಯ ಉಳಿದ ವಸ್ತುಗಳ ಬೆಲೆಗಳಿಗೂ ತಾಗುವುದು. ಒಮ್ಮೆ ಬೆಲೆಗಳು ಏರಹತ್ತಿದುವೆಂದರೆ ಹೆಚ್ಚು ಹೆಚ್ಚು ಹಣವನ್ನು ಪೂರೈಸ ಬೇಕಾಗುವುದು. ಈ ಹಣದ ಉಬ್ಬರ ಆರ್ಥಿಕಪರಿಸ್ಥಿತಿಯನ್ನೇ ಹದಗೆಡಿಸುವುದು. ವಸ್ತುಗಳ ಪೂರೈಕೆ ಆಗದಿದ್ದಲ್ಲಿ ಬಲವಾದ ನಿಯಂತ್ರಣ, ಸೇವಾಪದ್ಧತಿ ಇತ್ಯಾದಿ ವಿಧಾನಗಳನ್ನು ಅನುಸರಿಸಬೇಕಾಗುವುದು. ಇವೆಲ್ಲವನ್ನೂ ಯೋಗ್ಯರೀತಿಯಲ್ಲಿ ಜಾರಿಗೊಳಿಸಲು ಸರ್ಕಾರದ ಸಿಬ್ಬಂದಿ ದಕ್ಷತೆಯಿಂದಿರಬೇಕಾಗುವುದು. ಈ ರೀತಿಯಾಗಿ ಒಮ್ಮೆ ಹಣದ ಮೇಲಿನ ಹಿಡಿತ ತಪ್ಪಿತೆಂದರೆ ಇಲ್ಲದ ಅನರ್ಥಗಳಿಗೆ ಗುರಿಯಾಗಬೇಕಾಗುವುದು. (*)

**ಅಗ್ಗಳ :** 12ನೆಯ ಶತಮಾನದ ಜೈನಕವಿ. ಚಂದಪ್ರಭಪುರಾಣ ಎಂಬ ಕಾವ್ಯದ ಕರ್ತೃ. ಬಿಜಾಪುರ ಜಿಲ್ಲೆಯ ಇಂಗಳೇಶ್ವರ ಇವನ ಜನ್ಮಸ್ಥಳ. ತಂದೆ ಶಾಂತೀಶ, ತಾಯಿ ಪೋಚಾಂಬಿಕೆ, ತ್ರೈವಿದ್ಯಶ್ರುತಕೀರ್ತಿದೇವ ಗುರು. ಕವಿಗೆ ಭಾರತೀಭಾಳನೇತ್ರ, ಸಾಹಿತ್ಯವಿದ್ಯಾವಿನೋದ ಎಂಬ ಬಿರುದುಗಳು ಇವೆ. ಪೂರ್ವಕವಿಗಳಲ್ಲಿ ಪಂಪ, ಪೊನ್ನ, ರನ್ನ–ಇವರುಗಳನ್ನು ಸ್ತುತಿಸಿದ್ದಾನೆ. ಕಳೆಗಳೆನಿತನಿತಜೊಳಮಗ್ಗಳಗಣ್ಣಂ ತೋರ್ಪನಗ್ಗಳಂ ನೃಪಸಭೆಯೊಳ್–ಎಂದು ಹೇಳಿಕೊಂಡಿರುವುದರಿಂದ ಪ್ರಸಿದ್ಧ ಕವಿಯಾಗಿದ್ದಂತೆ ತೋರುತ್ತದೆ. ನಾನಾರಸ ಮೊಪ್ಪೆ ವಸ್ತುಕೃತಿಯಂ ಪೇಳ್ದಗ್ಗಳಂ ಎಂದು ತನ್ನ ಕಾವ್ಯ ನವರಸಭರಿತವಾಗಿದೆ ಎಂದೂ ಹೇಳಿಕೊಂಡಿದ್ದಾನೆ. ಈತ ರೂಪ ಸ್ತವನಮಣಿಪವಾಳ, ಜಿನಾಸ್ಥಾನಸ್ತವನ ಎಂಬ ಗ್ರಂಥಗಳನ್ನು ರಚಿಸಿರುವನೆಂದು ಪಾರ್ಶ್ವಕವಿಯ (ಸು.1205) ಹೇಳಿಕೆ. ಆದರೆ ಈ ಕೃತಿಗಳು ಉಪಲಬ್ಧವಿಲ್ಲ. ಇವು ಸಂಸ್ಕೃತ ರಚನೆಗಳಾಗಿದ್ದಿರಬಹುದು.

ಚಂದಪ್ರಭಪುರಾಣ ಹದಿನಾರು ಆಶ್ವಾಸಗಳುಳ್ಳ ಚಂಪೂ ಗ್ರಂಥ. ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತ್ರೆ ಕಾವ್ಯದ ವಸ್ತು. ಈ ಗ್ರಂಥ ಹನ್ನೆರಡನೆಯ ಶತಮಾನದ ಇತರ ಚಂಪೂ ಗ್ರಂಥಗಳಂತೆ ಸಂಸ್ಕೃತಭೂಯಿಷ್ಠವಾಗಿ, ಬಿಗಿಯಾದ ಬಂಧದಿಂದ ಕೂಡಿ ಪ್ರೌಢವಾಗಿದೆ. ಗ್ರಂಥಾವತಾರದಲ್ಲಿ ಚಂದ್ರಪ್ರಭನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನು, ಪಂಚಗುರುಗಳನ್ನು, ಜಿನಧರ್ಮವನ್ನು, ಯಕ್ಷಯಕ್ಷಿಯರನ್ನು, ಸರಸ್ವತಿಯನ್ನು ಸ್ತುತಿಸಿ ಅನಂತರ ಅನುಬದ್ಧಕೇವಲಿಗಳಿಂದ ಶ್ರುತಕೀರ್ತಿಯ ತನಕ ತನ್ನ ಗುರುಪರಂಪರೆಯನ್ನು ಹೇಳಿಕೊಂಡಿದ್ದಾನೆ. ಗ್ರಂಥಾಂತ್ಯದಲ್ಲಿ ಸಂಸ್ಕೃತದಲ್ಲಿ ರಚಿತವಾದ 24 ತೀರ್ಥಂಕರರ ಸ್ತುತಿಸಂಗ್ರಹವಿದೆ. ಈ ಕೃತಿಯ ರಚನೆಯಲ್ಲಿ ಕವಿ ವೀರನಂದಿಯ ಸಂಸ್ಕೃತ ಚಂದ್ರಪ್ರಭ ಚರಿತೆಗೆ ಬಹಳಷ್ಟು ಋಣಿಯಾಗಿಯಾಗಿರುವಂತೆಯೂ ಅನೇಕ ಸುಂದರ ಸನ್ನಿವೇಶಗಳ ನಿರ್ಮಾಣದಲ್ಲಿ ಹಾಗೂ ಮನೋಜ್ಞವಾದ ವರ್ಣನಾಪದ್ಯಗಳಿಗೆ ಪಂಪನ ಆದಿಪುರಾಣ ಪ್ರೇರಣೆ ಒದಗಿಸಿರುವಂತೆಯೂ ತಿಳಿಯುತ್ತದೆ. ಚಂದ್ರಪ್ರಭನ ಚರಿತ್ರೆ ಸಾಂಪ್ರದಾಯಿಕ ಕಥೆಯಾದುದರಿಂದ ಕವಿಯ ಸಹಜ ಶಕ್ತಿಯ ಪ್ರಕಟಣೆಗೆ ಇಲ್ಲಿ ಅವಕಾಶವಿಲ್ಲ. ವರ್ಣನೆಗಳಲ್ಲಿ ಕಲ್ಪನಾವಿಲಾಸವಿದೆ. ಅಗ್ಗಳ ಪಂಡಿತಕವಿ ಆದರೂ ಕವಿಹೃದಯ ವಿದೆ. ಸಂಸ್ಕೃತ–ಕನ್ನಡ ಎರಡರಲ್ಲೂ ಈತನಿಗೆ ಉದ್ದಾಮ ಪಾಂಡಿತ್ಯವಿದೆ. ಈ ಕವಿಯ ಕಾವ್ಯಶಕ್ತಿಯನ್ನು ಕುರಿತು ದೇವಕವಿ, ಆಂಡಯ್ಯ, ಕಮಲಭವ, ಬಾಹುಬಲಿ, ಪಾರ್ಶ್ವ ಮೊದಲಾದ ಕವಿಗಳು ಹೊಗಳಿದ್ದಾರೆ. ಚಂದಪ್ರಭ ಸಾಂಗತ್ಯವನ್ನು ಬರೆದ ದೊಡ್ಡಯ್ಯ, ಚಂದ್ರಪ್ರಭ ಷಟ್ಪದಿಯನ್ನು ಬರೆದ ದೊಡ್ಡಣಾಂಕ ಇವನ ಗ್ರಂಥದಿಂದ ಉಪಕೃತರಾದಂತೆ ಕಂಡುಬರುತ್ತದೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ ಮತ್ತು ಅಭಿನವವಾದಿವಿದ್ಯಾನಂದನ ಕಾವ್ಯಸಾರಗಳಲ್ಲಿ ಇವನ ಕಾವ್ಯದ ಪದ್ಯಗಳು ಸಂಕಲನಗೊಂಡಿವೆ. ಸಾಳ್ವ ಮತ್ತು ಭಟ್ಟಾಕಳಂಕ ಇವರು ತಮ್ಮ ಗ್ರಂಥಗಳಲ್ಲಿ ಇವನ ರಚನೆಗಳನ್ನು ಲಕ್ಷ್ಯಗಳಾಗಿ ಉದಾಹರಿಸಿದ್ದಾರೆ. ಈತನ ಪ್ರಭಾವ ಮುಂದಿನ ಕನ್ನಡ ಸಾಹಿತ್ಯದ ಮೇಲೆ ಸ್ಪಷ್ಟವಾಗಿ ಆಗಿರುವುದು ಕಂಡುಬರುತ್ತದೆ. ಜೈನಪುರಾಣ ಗ್ರಂಥಗಳ ಸಾಲಿನಲ್ಲಿ ಈ ಕವಿಯ ಚಂದ್ರಪ್ರಭಪುರಾಣ ಒಂದು ಮಧ್ಯಮ ಗುಣದ ಕಾವ್ಯ ಎಂದು ಹೇಳಬಹುದು. (ಪಿ.ವಿ.ಸಿ.;ಎಂ.ವಿ.ಎಸ್.)

**ಅಗ್ಗಿಷ್ಟಿಕೆ :** ಹಿಂದೂಗಳು ಗೃಹಾಗ್ನಿಯೆಂದು ಕರೆಯುವ ಸ್ಥಳ. ಗೃಹಾಗ್ನಿ ಬಹುಶಃ ಪುರಾತನಕಾಲದಿಂದ ಎಲ್ಲ ಜನರ ವಾಸಸ್ಥಳದಲ್ಲೂ ಗಣ್ಯ ಹಾಗೂ ಪವಿತ್ರ ಸ್ಥಾನವನ್ನು ಪಡೆದಿದೆ. ಹಿಂದೂಗಳಲ್ಲಿ ಗೃಹಾಗ್ನಿಯೆಂದರೆ ಅಡುಗೆಯ ಒಲೆಯ ಅಗ್ನಿಯಾಗಬಹುದು, ಹೋಮಾಗ್ನಿಯಾದರೂ ಆಗಬಹುದು. ಎರಡು ಸ್ಥಳಗಳೂ ಪವಿತ್ರವಾದುವೇ. ಹಿಂದೂ ಆದವನು ಯಾವನೂ ಕಾಲು ತೊಳೆದುಕೊಳ್ಳದೆ ಅಡುಗೆಯ ಮನೆಗೆ ಪ್ರವೇಶಿಸಕೂಡದು. ಬ್ರಾಹ್ಮಣರು ಸ್ನಾನಮಾಡಿ ಮಡಿ ಉಟ್ಟುಕೊಂಡ ಹೊರತು ಒಲೆಯಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸುವಂತಿಲ್ಲ. ಹೋಮಕ್ಕೆ ಪ್ರತ್ಯೇಕ ಸ್ಥಳವಿರುವಾಗಲೂ ಆ ಸ್ಥಳಕ್ಕೆ ಅಡುಗೆಯ ಒಲೆಯ ಬೆಂಕಿಯನ್ನು ಮಡಿಯುಟ್ಟ ಹೆಂಗಸರು ತುಂಬ ಕಟ್ಟುನಿಟ್ಟಿನಿಂದ ತಂದಿಡುತ್ತಾರೆ.

ಪಾರಸಿಕರಿಗೆ ಗೃಹಾಗ್ನಿ ತುಂಬ ಪೂಜ್ಯವಾದದ್ದು. ನಿಷ್ಠರಾದ ಪಾರಸಿಕರು ಅದು ಆರಿಹೋಗದಂತೆ ನಿರಂತರವಾಗಿ ಪೋಷಿಸುತ್ತಾರೆ. ಅದನ್ನು ಆರಿಸುವುದನ್ನು ಮಹಾಪಾಪವೆಂದು ಎಣಿಸುತ್ತಾರೆ. ಕಾಡು ಜನರಲ್ಲೂ ಇಂಥ ಭಾವನೆಯುಂಟು. ದಕ್ಷಿಣ ಆಫ್ರಿಕದ ಡಮಾರ ಜನರು ಗೃಹಾಗ್ನಿಯನ್ನು ಆರಿಹೋಗದಂತೆ ತುಂಬ ಜಾಗರೂಕತೆಯಿಂದ ಇಡುತ್ತಾರೆ. ಈ ಕರ್ತವ್ಯ ಪರಿಪಾಲನೆಯನ್ನು ಗುಂಪಿನ ಮುಖ್ಯಸ್ಥನ ಮಗಳಿಗೆ ವಹಿಸುತ್ತಾರೆ.

(ಜಿ.ಎಚ್.)

**ಅಗ್ನಿ¹ :** ಪೃಥ್ವಿಗೆ ಅಧಿಪತಿಯಾದ ದೇವತೆ ಎಂದು ಪ್ರಸಿದ್ಧನಾಗಿದ್ದು ದ್ಯಾವಾಪೃಥಿವ್ಯಾದಿ ಸಕಲ ಲೋಕಗಳಲ್ಲೂ ವ್ಯಾಪಿಸಿರುವ ದಿವ್ಯಜ್ಯೋತಿ, ದಿವ್ಯಶಕ್ತಿ. ಸಕಲ ದೇವಮಾನವಾದಿಗಳೆಲ್ಲರ ವ್ಯವಹಾರಕ್ಕೂ ಮಾರ್ಗದರ್ಶಕನಾದ್ದರಿಂದ ಅಗ್ನಿ ಎಂಬ ಹೆಸರು ಅನ್ವರ್ಥವಾಗಿದೆ (ನಿರುಕ್ತ 7.14). ವಿಶ್ವವ್ಯಾಪಕನೂ ವಿಶ್ವಧಾರಕನೂ ಸಕಲದೇವತಾತ್ಮನೂ ಅಮರನೂ ಆದ ಅಗ್ನಿಯ ರೂಪಾಂತರಗಳು ವೈಶ್ವಾನರಾದಿ ಸಂಜ್ಞೆಗಳಿಂದ ಪ್ರಶಂಸಿತವಾಗಿದೆ. ಸಕಲ ಭೂತಗಳಲ್ಲೂ ಪ್ರವೇಶಿಸಿ ನೇತೃವಾಗಿರುವುದರಿಂದ ವೈಶ್ವಾನರ, ಧನ ಮತ್ತು ಶಕ್ತಿದಾತನಾದ್ದರಿಂದ ಪ್ರವಿಣೋದಾಃ, ಉತ್ಪನ್ನವಾದ ಸಕಲವನ್ನೂ ಅರಿತಿರುವುದರಿಂದ ಜಾತವೇದಸ್, ನರರಿಂದ ಪ್ರಶಂಸಿತನಾಗಿರುವುದರಿಂದ ನರಾಶಂಸ, ಉದಕಗಳಿಂದ ಓಷಧಿಗಳೂ ಓಷಧಿಗಳಿಂದ ಅಗ್ನಿಯೂ ಉತ್ಪನ್ನವಾಗುವುದರಿಂದ ಅಪಾಂನಪಾತ್, ತನ್ನಿಂದ ತಾನೇ ಉತ್ಪನ್ನವಾಗುವುದರಿಂದ ತನೂನಪಾತ್, ಅಂಗಾರದಿಂದ (ಕೆಂಡ) ಉತ್ಪನ್ನವಾಗುವುದರಿಂದ ಅಂಗಿರಾ–ಹೀಗೆ ನಾನಾವಿಧವಾಗಿ ಅಗ್ನಿಯ ರೂಪಾಂತರಗಳನ್ನು ಸ್ತುತಿಸಿದೆ.

ಅಗ್ನಿಯ ಸ್ವರೂಪವೆರಡು ವಿಧ. ಒಂದು ನಿತ್ಯ–ನಿಣ್ಯ ಗುಹ್ಯ ಇತ್ಯಾದಿ ವಿಶೇಷಣಗಳಿಂದ ವರ್ಣಿತವಾದ ಮತ್ತು ಸಾಧಾರಣ ದೃಷ್ಟಿಗೆ ಗೋಚರವಾಗದ ದಿವ್ಯ ಸ್ವರೂಪವುಳ್ಳದ್ದು. ಇನ್ನೊಂದು ಉತ್ಪನ್ನ–ಲೌಕಿಕಸ್ವರೂಪವುಳ್ಳದ್ದಾದರೂ ಅಸಾಧಾರಣಶಕ್ತಿಯಿಂದ ಕೂಡಿದ್ದು. ಈ ಎರಡು ರೂಪಗಳಿಂದಲೂ ಅಗ್ನಿಯ ಪ್ರಸಾರ ಮತ್ತು ಆಧಿಪತ್ಯ ಮೂರು ಲೋಕಗಳಿಗೂ ಸಂಬಂಧಿಸಿದೆ. ಅಗ್ನಿ ಪ್ರಥಮತಃ ದ್ಯುಲೋಕದಲ್ಲಿ ಆದಿತ್ಯಾತ್ಮನಾಗಿ ಉತ್ಪನ್ನನಾದ. ಎರಡನೆಯದಾಗಿ ಪೃಥ್ವಿಯಲ್ಲಿ ಜಾತವೇದರೂಪವನ್ನು ಹೊಂದಿದ. ಮೂರನೆಯದಾಗಿ ಅಂತರಿಕ್ಷದಲ್ಲಿ ಮಿಂಚಿನ ರೂಪದಲ್ಲಿ ಜನಿಸಿದ. ಈತ ದ್ಯುಲೋಕಕ್ಕೆ ಶಿರಸ್ಸಿನಂತೆ ಪ್ರಧಾನ. ಪೃಥಿವಿಗೆ ನಾಭಿ ರೂಪದ ಸಂರಕ್ಷಕ. ದ್ಯಾವಾಪೃಥಿವಿಗಳೆರಡಕ್ಕೂ ಅಧಿಪತಿ. ದಿವ್ಯಾಗ್ನಿ ರಾತ್ರಿಕಾಲದಲ್ಲಿ ಅಗ್ನಿ ರೂಪದಿಂದಲೂ ಪ್ರಾತಃಕಾಲ ಸೂರ್ಯರೂಪದಿಂದಲೂ ಪ್ರಕಾಶಿಸುತ್ತ ತನ್ನ ಲೋಕರಕ್ಷಣಾಕಾರ್ಯವನ್ನು ನಿರ್ವಹಿಸುತ್ತಾನೆ. ಸಕಲರೂಪಗಳನ್ನು ಹೊಂದಿರುವದರಿಂದ ವಿಶ್ವಾಪ್ಸು. ಇವನೇ ಚಂದ್ರ, ಇವನೇ ವರುಣ, ಮಿತ್ರಾದಿ ಸಕಲದೇವತೆಗಳೂ ಇವನೇ. ಮೂರು ಲೋಕಗಳಲ್ಲೂ ವ್ಯಾಪಿಸುವುದರಿಂದ ತ್ರಿತ. ಆದಿತ್ಯಾದಿ ಮೂರು ರೂಪಗಳಿಂದ ಪ್ರಕಾಶಿಸುವುದರಿಂದ ತ್ರಯಃಕೇಶಿನಃ ಎಂದು ಪ್ರಶಂಸಿತನಾಗಿದ್ದಾನೆ. ತ್ರಿಮೂರ್ಧಾ ತ್ರಿಧಾತು ತ್ರಿಪಾಜಸ್ಯ ತ್ರ್ಯನೀಕ ಇತ್ಯಾದಿ ವಿಶೇಷಣಗಳು ಮೂರುಲೋಕಗಳಲ್ಲೂ ಅಗ್ನಿಯ ಪ್ರಸಾರಕ್ರಮವನ್ನು ಕ್ರಿಯಾಪ್ರಭೇದಗಳನ್ನು ತಿಳಿಸುತ್ತವೆ.

ಇವನು ಯಜ್ಞದಲ್ಲಿ ಅರ್ಪಿಸಿದ ಹವಿಸ್ಸನ್ನು ಎಲ್ಲ ದೇವತೆಗಳಿಗೂ ಮುಟ್ಟಿಸುವನು; ಆದ್ದರಿಂದ ಎಲ್ಲ ದೇವತೆಗಳೂ ಬೇಕಾದವನು. ಅಗ್ನಿಯನ್ನು ಕುರಿತು ಋಗ್ವೇದದಲ್ಲಿ ಅನೇಕ ಸೂಕ್ತಿಗಳಿವೆ. ಪಾರ್ಥಿವಾಗ್ನಿಯ ಉತ್ಪತ್ತಿ ಅನೇಕ ವಿಧ. ಎಲೈ ಅಗ್ನಿಯೇ, ಶುಷ್ಕವೂ ರಸರಹಿತವೂ, ನಿರ್ಜೀವಿಯೂ ಆದ ಅರಣಿಗಳಿಂದ ಚೈತನ್ಯಾತ್ಮಕವಾದ ನೀನು ಉತ್ಪನ್ನನಾದೊಡನೆ ಯಜಮಾನರು ಭಕ್ತಿಯಿಂದ ನಿನ್ನನ್ನು ಪೂಜಿಸಿದರು. ಈ ಶಿಶು ಉತ್ಪನ್ನನಾದೊಡನೆ ತನ್ನ ಅಲೌಕಿಕವಾದ ಪ್ರಭಾವದಿಂದ ತನ್ನ ಪಿತೃಗಳನ್ನೆ ನುಂಗುವ ಪ್ರಯತ್ನಮಾಡುತ್ತದೆ. ಅಗ್ನಿ ಉತ್ಪನ್ನನಾದೊಡನೆ ನುಲುಚಿಕೊಂಡು ಏದುವ ಸರ್ಪದಂತೆ ತೀವ್ರ ಗಮನವುಳ್ಳವನಾಗಿ ಮಾನವನ ಹಿಡಿತಕ್ಕೆ ಸಿಲುಕದೆ ತಪ್ಪಿಸಿಕೊಳ್ಳುತ್ತಾನೆ. 'ಸ್ವರೂಪತಃ ಅಗ್ನಿ ಸುವರ್ಣಾತ್ಮಕ ಮತ್ತು ಪ್ರಭಾಪೂರಿತ. ಆದರೆ, ಅವನ ಸಂಚಾರಮಾರ್ಗ ಕೃಷ್ಣವರ್ಣವುಳ್ಳದ್ದು. ವನವನ್ನೆಲ್ಲ ಆಕ್ರಮಿಸಿ ದಹಿಸಿ ಎಲ್ಲವನ್ನೂ ಕೃಷ್ಣವರ್ಣವುಳ್ಳದ್ದನ್ನಾಗಿ ಮಾಡುತ್ತಾನೆ.' ಅವನ ಜ್ವಾಲೆಗಳು ಸಮುದ್ರದ ಅಲೆಗಳಂತೆ ಭೋರ್ಗರೆಯುತ್ತದೆ. ಗುಡುಗಿನಂತೆಯೂ ಸಿಂಹದಂತೆಯೂ ಗರ್ಜಿಸುತ್ತಾನೆ. ಅವನ ರಥ ಪ್ರಭಾಯುತವೂ ಸುವರ್ಣನಿರ್ಮಿತವೂ ಆಕರ್ಷಕವೂ ಆಗಿದೆ. ರಥದ ಅಶ್ವಗಳು ಇನ್ನೂ ಆಕರ್ಷಕವಾಗಿವೆ. ಅವು ಘೃತಪೃಷ್ಠವುಳ್ಳವಾಗಿಯೂ ವಾಯುಪ್ರೇರಿತವಾಗಿಯೂ ಹೊಂಬಣ್ಣದಿಂದ ಕೂಡಿಯೂ ಕ್ರಿಯಾಶಕ್ತಿಯುತವಾಗಿಯೂ ನಾನಾ ರೂಪವಾಗಿಯೂ ಸಂಕಲ್ಪ ಮಾತ್ರದಿಂದಲೆ ರಥಕ್ಕೆ ಯೋಜಿತವಾಗಿಯೂ ಇವೆ. ದ್ಯುಲೋಕದ ಶ್ಯೇನ (ಗಿಡುಗ) ಪಕ್ಷಿಯಾದ ಅಗ್ನಿ ದಿವ್ಯರಥದಲ್ಲಿ ಕುಳಿತು ಯಜ್ಞಾರ್ಥವಾಗಿ ಇಳಿಯುತ್ತಾನೆ.

ಇಂಥ ಅಸಾಧಾರಣ ಪ್ರಭಾವವುಳ್ಳ ಅಗ್ನಿಯನ್ನು ಭೃಗು, ಅಂಗೀರಸ, ಅಥರ್ವ, ಇತ್ಯಾದಿ ಮಹರ್ಷಿಗಳು ಯಜ್ಞಾರ್ಥವಾಗಿ ಪೃಥ್ವಿಗೆ ಕರೆತಂದರು, ದೇವಮಾನವಾದಿಗಳಿಂದೆಲ್ಲ ಪ್ರಾರ್ಥಿತನಾದ ಅಗ್ನಿ ಸಕಲ ಯಜ್ಞಕರ್ಮಗಳನ್ನೂ ಸಮಸ್ತ ಋತ್ವಿಕ್ಕುಗಳ ರೂಪದಲ್ಲಿ ನಿರ್ವಹಿಸಲು ಶಕ್ತ. ಅತ್ಯುತ್ತಮವಾದ ಜ್ಞಾನವುಳ್ಳವ. ಕವಿಗಳಿಗೆಲ್ಲ ದಿವ್ಯಸ್ವರೂಪಿ. ಯಜ್ಞಸಾಧಕ, ಯಜ್ಞರಕ್ಷಕ. ಪ್ರತಿಯೊಂದು ಗೃಹದಲ್ಲೂ ಪ್ರಭಾವಯುತನಾದ ಅತಿಥಿ. ಸಕಲರಿಗೂ ಕ್ಷೇಮಕಾರಿ.

ಸಕಲ ಮಾನವರಿಗೂ ಪ್ರಭುವೂ ಪಾಲಕನೂ ಆದ ಎಲೈ ಅಗ್ನಿಯೇ, ನೀನು ಯಾಗಾರ್ಥವಾಗಿ ಉತ್ಪನ್ನನಾಗಿದ್ದೀಯೆ. ಸ್ವತಃ ತೇಜೋಮಯನಾಗಿದ್ದು ಸಕಲ ಜಗತ್ತಿಗೂ ಪ್ರಕಾಶವನ್ನು ಹರಡುತ್ತೀಯೆ. ನಿನ್ನ ಮಾಹಾತ್ಮ್ಯ ದ್ಯುಲೋಕಕ್ಕಿಂತಲೂ ಅಧಿಕವಾಗಿ ಬೆಳೆದಿದೆ. ಮಾನವರಿಗೆ ಪ್ರಭುವಾಗಿರುವಂತೆ ಸಕಲ ದೇವತೆಗಳಿಗೂ ನೀನು ಪ್ರಭು. ದ್ಯಾವಾಪೃಥಿವಿಗಳು ವಿಸ್ತೃತವಾಗಿ ಪ್ರಸರಿಸಲು ನೀನೇ ಕಾರಣ. ಅವು ನಿನ್ನ ಶಕ್ತಿಯಿಂದಲೇ ಸ್ಥಿರವಾಗಿ ನಿಂತಿವೆ.

'ಔಷನ್ಯೋಗ್ನಿ ದ್ಯಾವಾಪೃಥಿವಿಗಳೆರಡನ್ನೂ ತನ್ನ ತೇಜಸ್ಸುಗಳಿಂದ ಅಲಂಕರಿಸುತ್ತ ಉದಕಕ್ಕೆ ಮೂಲಸ್ಥಾನವಾದ ಅಂತರಿಕ್ಷವನ್ನೆಲ್ಲ ವ್ಯಾಪಿಸುತ್ತಾನೆ. ಅಂತರಿಕ್ಷದ ಜಲ ಸಂಘಾತವನ್ನು ಪ್ರವಾಹರೂಪದಿಂದ ಹರಿಯುವಂತೆ ಮಾಡುತ್ತಾನೆ. ವೃಷ್ಟಿಯ ಫಲವಾಗಿ ಉತ್ಪನ್ನವಾದ ಸಕಲ ಸಸ್ಯಗಳಲ್ಲೂ ವ್ಯಾಪಿಸುತ್ತಾನೆ.' 'ಸಕಲ ಚರಾಚರಾತ್ಮಕವಾದ ಜಗತ್ತಿಗೂ ನಾಭಿಭೂತವಾದ ಅಗ್ನಿಯ ವೈಶ್ವಾನರ ಸಂಜ್ಞಕವಾದ ತತ್ತ್ವವನ್ನು ಮನಸ್ಸಿನಲ್ಲಿಯೇ ಧ್ಯಾನಿಸಿ ಪೂಜಿಸೋಣ'.

(ಜಿ.ಎನ್.ಸಿ.)

ಅಗ್ನಿಯ ಉಪಯೋಗದಿಂದ ಮಾನವಸಮಾಜ ತನ್ನ ಸುತ್ತಲಿನ ಪ್ರಾಣಿವರ್ಗದಿಂದ ಭಿನ್ನವಾಗಿದೆ. ಅದನ್ನುಪಯೋಗಿಸದ ಜನರಿಲ್ಲ. ಅನೂಹ್ಯವಾದ ಅದರ ಶಕ್ತಿ ಮತ್ತು ಅಗತ್ಯತೆಗಳು ಕಾರಣವಾಗಿ ಅದಕ್ಕೆ ಪವಿತ್ರತೆಯ ದೇವಪಟ್ಟ ಲಭಿಸಿದೆ. ಭಾರತೀಯರಂತೆ ಜರತುಷ್ಟ್ರನ ಅನುಯಾಯಿಗಳು ಸೂರ್ಯನೊಂದಿಗೆ ಅಗ್ನಿಯನ್ನೂ ಪೂಜಿಸುತ್ತಾರೆ. ಗ್ರೀಕರು ತಮ್ಮ ವಸಾಹತುಗಳಿಗೆ ಮೂಲನಗರದಿಂದ ಬೆಂಕಿಯನ್ನೊಯ್ಯುತ್ತಿದ್ದರು. ರೋಮನರಲ್ಲಿ ಅಗ್ಗಿಷ್ಟಿಕೆಯ ದೇವತೆಯಾದ ವೆಸ್ಟಳ ಪಂಥ ಪ್ರಬಲವಾಗಿತ್ತು. ಬೆಂಕಿ ತಂದ ಪ್ರಮಿಥಿಯಸ್ಸನ ಕಥೆ ಗ್ರೀಕ್ ಪುರಾಣದಲ್ಲಿ ಬಹುಪ್ರಸಿದ್ಧವಾದದ್ದು. ಅಗ್ನಿ ನಾಲ್ಕು ಮೂಲವಸ್ತುಗಳಲ್ಲೊಂದೆಂದು ಗ್ರೀಕ್ ತತ್ತ್ವಜ್ಞಾನಿಗಳ ಅಭಿಮತ.

(ಎನ್.ಎಸ್.ಎ.)

**ಅಗ್ನಿ² :** ಸಾಮಾನ್ಯವಾಗಿ ಯಾವುದನ್ನು ಬೆಂಕಿ ಎನ್ನಲಾಗುತ್ತದೊ ಅದನ್ನೇ ಅಗ್ನಿ ಎಂದೂ ಕರೆಯಲಾಗುತ್ತದೆ. ಮಾನವ ಮತ್ತು ಅಗ್ನಿ ಇವುಗಳ ನಡುವಿನ ಸಂಬಂಧವನ್ನು ಹೇಳುವುದಾದರೆ, ಅಗ್ನಿಯನ್ನು ಮಾನವ ಪವಿತ್ರವಸ್ತುವೆಂಬುದಾಗಿ ಭಾವಿಸಿ ಅದರಲ್ಲಿ ದೈವತ್ವವನ್ನು ಕಂಡು ಪೂಜಿಸಿ, ಸ್ತುತಿಸುವಂಥ ಅನೇಕ ಸಂದರ್ಭಗಳನ್ನು ಭಾರತದ ಪುರಾಣಗಳನ್ನೊಳಗೊಂಡಂತೆ ಪ್ರಪಂಚದ ಎಲ್ಲ ನಾಡಿನ ಪುರಾಣೇತಿಹಾಸಗಳಲ್ಲಿಯೂ ಕಾಣಬಹುದು. ಇದಲ್ಲದೆ ಮಾನವ ತನ್ನ ನಿತ್ಯಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಬೆಂಕಿಯನ್ನುಪಯೋಗಿಸಿಕೊಂಡು ಅದರಿಂದ ಪೂರ್ಣ ಪ್ರಯೋಜನವನ್ನು ಪಡೆದುಕೊಂಡಿದ್ದಾನೆ. ಬೆಂಕಿಯ ಉಪಯೋಗದಿಂದ ಮಾನವನ ಸಂಸ್ಕೃತಿ, ನಾಗರಿಕತೆಗಳು ಸಾಕಷ್ಟು ಪ್ರಭಾವಿತಗೊಂಡಿವೆ. ಬೆಂಕಿಯ ಬಳಕೆ ಮಾನವನ ನಿತ್ಯಜೀವನದಲ್ಲಿ ಅನಿವಾರ್ಯವೂ ಅತ್ಯಗತ್ಯವೂ ಆಗಿರುವಂಥ ವಿಶೇಷಗಳಲ್ಲೊಂದು.

**ಬೆಂಕಿಯನ್ನು ಉತ್ಪಾದಿಸುವ ಪ್ರಾಚೀನ ವಿಧಾನಗಳು:** ಅನಾದಿಕಾಲದಿಂದಲೂ ಮಾನವಜೀವನದ ಅವಿಭಾಜ್ಯ ಅಂಗವಾಗಿ ಮುಂದುವರಿದುಕೊಂಡು ಬಂದಿರುವ ಬೆಂಕಿಯನ್ನು ಕಂಡುಹಿಡಿದದ್ದು ಯಾವಾಗ, ಬಳಕೆ ಪ್ರಾರಂಭವಾದದ್ದು ಯಾವಾಗ,– ಮುಂತಾದ ಪ್ರಶ್ನೆಗಳಿಗೆ ಸಮಂಜಸ ಉತ್ತರ ದೊರಕದಿದ್ದರೂ ಆದಿಮಾನವರು ಬೆಂಕಿಯುರಿಯನ್ನು ಉತ್ಪತ್ತಿ ಮಾಡಿಕೊಳ್ಳುತ್ತಿದ್ದ ವಿಧಾನಗಳಿಂದಾಗಿ ಅದರ ಉತ್ಪಾದನೆ ಹಾಗೂ ಬಳಕೆ ಬಹು ಪ್ರಾಚೀನಕಾಲದಿಂದಲೂ ಅನೂಚಾನವಾಗಿ ಬೆಳೆದುಬಂದಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಜೀವನದ ಅತ್ಯಗತ್ಯಗಳಲ್ಲಿ ಒಂದಾಗಿರುವ ಆಹಾರವನ್ನು ಸಂಪಾದಿಸಲೋಸುಗ, ಅನಂತರ ಅವುಗಳನ್ನು ಬೇಯಿಸಿ, ಸೇವಿಸಲು ಅಗ್ನಿಯನ್ನು ಬಳಸಿಕೊಂಡುದುಂಟು. ಈ ಕೆಲಸಕ್ಕೆ ಬೇಕಾಗುವ ಬೆಂಕಿಯನ್ನು ಪಡೆಯಲು ಎರಡು ಕಲ್ಲುಗಳನ್ನು ಒಂದರಮೇಲೊಂದು ಉಜ್ಜಿ, ಘರ್ಷಣೆಯಿಂದುತ್ಪತ್ತಿಯಾದ ಶಾಖದ ಪರಿಣಾಮದಿಂದ ಬೆಂಕಿ ಉದ್ಭವಗೊಂಡುದನ್ನು ಅರಿತ ಮಾನವ, ಆಗಾಗ ನೈಸರ್ಗಿಕವಾಗಿ ಸಂಭವಿಸಿದ – ಕಾಡುಗಿಚ್ಚು ಮುಂತಾದ ಅಗ್ನಿಪ್ರಮಾದಗಳ ಅನುಭವದಿಂದಾಗಿ, ಅಂಥ ಅನಾಹುತದಲ್ಲಿ ಸಿಕ್ಕಿ ಬೆಂದುಹೋದ ಪ್ರಾಣಿಗಳನ್ನು ತಿಂದು ಸೇವಿಸಿ ಉದರಪೋಷಣೆ ಮಾಡಿಕೊಳ್ಳುತ್ತಿದ್ದ. ಅಗ್ನಿಯಿಂದಾಗುವ ಪ್ರಯೋಜನವನ್ನು ಅರಿತು ಕಾಲಕ್ರಮೇಣ ಅದನ್ನು ಬೇರೆ ಬೇರೆ ರೀತಿಗಳಲ್ಲಿ ಪಡೆಯುವ ವಿಧಾನಗಳನ್ನು ಕಂಡುಕೊಂಡ. ಕಲ್ಲುಗಳನ್ನು

ಉಜ್ಜುವುದರಿಂದ ಬೆಂಕಿ ಉಂಟಾಗುತ್ತದೆ ಎಂಬ ವಿಚಾರವನ್ನು ತಿಳಿದು ಈ ವಿಧಾನವನ್ನು ಸ್ವಲ್ಪ ಸುಧಾರಿಸಿಕೊಂಡ. ಮೊನಚಾಗಿರುವ, ಗಡುಸಾದ ಉದ್ದನೆಯ ಮರದ ತುಂಡೊಂದನ್ನು ಮತ್ತೊಂದು ಮರದ ತುಂಡಿನ ಮೇಲೆ ಇಟ್ಟು ಕಡೆದಾಗ ಘರ್ಷಣೆಯಿಂದ ಬೆಂಕಿ ಉತ್ಪತ್ತಿಯಾಗುವುದನ್ನು ಕಂಡುಕೊಂಡ. ಇಂಥ ವಿಧಾನ ನ್ಯೂಜ಼ಿಲೆಂಡ್, ಹವಾಯ್, ಟೊಂಗಾ ಮತ್ತು ಇತರ ಸ್ಥಳಗಳ ಆದಿಮಾನವರಲ್ಲಿತ್ತು; ಇಂದಿಗೂ ಸಿಲೋನಿನ ವಡ್ಡಾ ಎಂಬ ಜನಾಂಗದವರಲ್ಲಿ, ದಕ್ಷಿಣ ಆಫ್ರಿಕದ ಕೆಲವು ಪ್ರದೇಶಗಳಲ್ಲಿ ದಕ್ಷಿಣ ಮತ್ತು ಉತ್ತರ ಅಮೆರಿಕದ ಹಲವೆಡೆಗಳಲ್ಲಿ ಪ್ರಪಂಚದ ಹಿಂದುಳಿದ ಪ್ರದೇಶಗಳಲ್ಲಿ ಬಳಕೆಯಲ್ಲಿದೆ. ಈ ವಿಧಾನದಲ್ಲಿ ಅನೇಕ ರೀತಿಯ ಸುಧಾರಣೆಗಳು ಕಂಡುಬಂದಿವೆ. ಇವನ್ನು ಟೈಲರ್ ಮತ್ತು ಪಾಷ್‌ಮಾನ್ ಎಂಬುವರು ತಮ್ಮ ಪುಸ್ತಕದಲ್ಲಿ ವಿವರಿಸಿದ್ದಾರೆ.

ಬೆಂಕಿಯನ್ನು ಉತ್ಪಾದಿಸಲು ಅನುಸರಿಸುತ್ತಿದ್ದ ಮತ್ತೊಂದು ವಿಧಾನವೆಂದರೆ ಪದಾರ್ಥಗಳ ಪರಸ್ಪರ ಸಂಘಟ್ಟನೆ (ಪರ್ಕಷನ್). ಉಕ್ಕಿನ ಒಂದು ತುಂಡಿನ ಮೇಲೆ ಗಡಸಾಗಿರುವ ಒಂದು ಬಗೆಯ ಕಲ್ಲನ್ನು (ಚಕಮಕಿ) ಬಲವಾಗಿ ಘಟ್ಟಿದಾಗ ಉಂಟಾಗುವ ಕಿಡಿಯ ಪರಿಣಾಮವಾಗಿ ಬೆಂಕಿ ಉತ್ಪತ್ತಿಯಾಗುತ್ತದೆ. ಈ ವಿಧಾನ ತೀರ ಸ್ವಲ್ಪಕಾಲ ಬಳಕೆಯಲ್ಲಿತ್ತು. ಹಿಂದಿನ ಘರ್ಷಣಾವಿಧಾನವನ್ನೇ ಅತ್ಯಂತ ಸೂಕ್ತವೆಂದು ತಿಳಿಯಲಾಯಿತು. ಮಧ್ಯ ಏಷ್ಯದಲ್ಲಿ ಈ ವಿಧಾನವನ್ನನುಸರಿಸಿ ರಚಿಸಲಾದ ಬಂದೂಕುಗಳ ಬಳಕೆ ಇಂದಿಗೂ ಕಂಡುಬರುತ್ತದೆ.

ಬೆಂಕಿಯನ್ನು ಉತ್ಪತ್ತಿಮಾಡಿಕೊಳ್ಳಲು ಒಂದು ಸುಧಾರಿತ ವಿಧಾನ ಬಹಳ ಹಿಂದೆ ರೂಢಿಯಲ್ಲಿತ್ತು. ಒಂದು ಮಸೂರವನ್ನುಪಯೋಗಿಸಿಯೋ ನಿಮ್ನದರ್ಪಣವನ್ನು ಪಯೋಗಿಸಿಯೋ ಸೂರ್ಯರಶ್ಮಿಯನ್ನು ಮರ, ಹತ್ತಿ ಮುಂತಾದ ವಸ್ತುಗಳ ಮೇಲೆ ಕೇಂದ್ರೀಕರಿಸಿದಾಗ ಅವು ಹೊತ್ತಿಕೊಂಡು ಉರಿದು ಬೆಂಕಿಯನ್ನುಂಟುಮಾಡಬಲ್ಲವೆಂಬ ವಿಚಾರ ಮುಂದುವರಿದ ಜನಾಂಗಕ್ಕೆ ತಿಳಿದಿತ್ತು. ಈ ವಿಧಾನದ ವಿವರಣೆಗಳನ್ನು ಅರಿಸ್ಟೋಫೆನೀಸ್ ತನ್ನ ದಿ ಕ್ಲೌಡ್ಸ್ ಎಂಬ ಪುಸ್ತಕದಲ್ಲಿ ಹೇಳಿದ್ದಾನೆ. ಇಂಥ ವಿಧಾನವನ್ನು ಅನುಸರಿಸಿ ಯುದ್ಧಕಾಲಗಳಲ್ಲಿ ಸಮುದ್ರದ ಮೇಲಿನ ಶತ್ರುಪಕ್ಷದ ಹಡಗುಗಳನ್ನು ನಾಶಪಡಿಸಲಾಗುತ್ತಿತ್ತು.

ಅಗ್ನಿಯ ರೂಪಲಕ್ಷಣಗಳು ಸ್ಪಷ್ಟವಾದದ್ದು ರಾಸಾಯನಿಕ ಪ್ರಯೋಗಗಳು ಬೆಳೆದು ಬಂದ ಅನಂತರವೇ. ರಾಸಾಯನಿಕ ಕ್ರಮವನ್ನನುಸರಿಸಿ ವಿವರಿಸುವುದಾದರೆ ಇಂಗಾಲ ಮತ್ತು ಇತರ ಸೇಂದ್ರೀಯ ವಸ್ತುಗಳೊಡನೆ ಆಮ್ಲಜನಕ (ಗಾಳಿ) ಕೂಡಿಕೊಂಡು ಶಾಖ ಉರಿ ಮತ್ತು ಬೆಳಕು ಇವುಗಳನ್ನು ಉತ್ಪತ್ತಿಮಾಡುವ ಒಂದು ಸಂಘಟನೆಯ ಪರಿಣಾಮವನ್ನು ಬೆಂಕಿ ಎನ್ನಬಹುದು. ವ್ಯಾಪಕವಾಗಿ ಹೇಳುವುದಾದರೆ, ರಾಸಾಯನಿಕ ವಸ್ತುವೊಂದು ಮತ್ತೊಂದು ರಾಸಾಯನಿಕ ವಸ್ತುವಿನೊಡನೆ ಸೇರಿ ಅನಿಲರೂಪಕ್ಕೆ ಪರಿವರ್ತನೆಗೊಂಡು ಶಾಖ ಮತ್ತು ಜ್ವಾಲೆ (ಉರಿ) ಉತ್ಪಾದನೆಯಾಗುವಂತೆ ಕೂಡಿಕೊಳ್ಳುವ ಒಂದು ಕ್ರಮದ ಪರಿಣಾಮವನ್ನು ಬೆಂಕಿ ಎಂದು ವಿವರಿಸಬಹುದು. ಬೆಂಕಿ ಪದಾರ್ಥಗಳನ್ನು ಯಾವ ರೀತಿ ದಹಿಸುತ್ತದೆ, ಜ್ವಾಲೆಗಳು ಹೇಗೆ ಉಂಟಾಗುತ್ತವೆ–ಎಂಬ ವಿಚಾರದಲ್ಲಿ ಸಾಕಷ್ಟು ಅಧ್ಯಯನ, ಪ್ರಯೋಗ ಮತ್ತು ಸಂಶೋಧನೆಗಳು ನಡೆದಿವೆ.

ಸಾಮಾನ್ಯವಾಗಿ ಯಾವ ಪದಾರ್ಥವೇ ಆಗಲಿ ಬೆಂಕಿಯೊಡನೆ ಸಂಪರ್ಕ ಹೊಂದಿದರೆ ಆ ಪದಾರ್ಥ ಸುಟ್ಟುಹೋಗುತ್ತದೆ. ಲೋಹಾಂಶವಿರುವ ಅದಿರು ಬೆಂಕಿಯ ಉಷ್ಣದಿಂದ ಕರಗಿದಾಗ ಶುದ್ಧ ಲೋಹ ಹೊರಬೀಳುವ ವಿಚಾರ ಅಕಸ್ಮಾತ್ತಾಗಿ ತಿಳಿದು ಮುಂದೆ ಇದರ ವ್ಯವಸ್ಥಿತ ಕ್ರಮ ರೂಢಿಗೆ ಬಂದಿರಬೇಕು.

**ಬೆಂಕಿಯನ್ನು ಉತ್ಪಾದಿಸುವ ಆಧುನಿಕ ವಿಧಾನಗಳು:** ಇವು ವಿಪುಲವಾಗಿವೆ. ಅದರಲ್ಲೂ ವಿದ್ಯುಚ್ಛಕ್ತಿಯನ್ನು ಕಂಡುಹಿಡಿದ ಮೇಲಂತೂ ಬೆಂಕಿಯನ್ನು ಅನೇಕ ಬಗೆಯ ಸುಧಾರಿತ ರೀತಿಗಳಲ್ಲಿ ಉಂಟುಮಾಡಿಕೊಂಡು ಅದರಿಂದ ಇತರ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಅನಿಲದ ಒಂದು ಧಾರೆಯನ್ನುಪಯೋಗಿಸಿಕೊಂಡು ಅದು ಒಂದು ಸೂಕ್ತಸ್ಥಳದಲ್ಲಿ ಹರಿದಾಗ ವ್ಯವಸ್ಥೆಯ ಒಂದು ಭಾಗದಲ್ಲಿ ವಿದ್ಯುತ್ ಸಂಪರ್ಕ ಹಾಗೂ ಕಡಿತವೇರ್ಪಟ್ಟು ವಿದ್ಯುತ್ ಕಿಡಿಯುಂಟಾಗುತ್ತದೆ. ಅನಿಲದ ಮೂಲಕ ಹೊರಹೋಗುವ ವಿದ್ಯುತ್ ಕಿಡಿ ಅದನ್ನು ಹೊತ್ತಿಸುತ್ತದೆ. ಈ ವಿಧಾನದಲ್ಲಿ ಉತ್ಪತ್ತಿಯಾಗುವ ಬೆಂಕಿಯ ಜೊತೆಗೆ ಉಂಟಾಗುವ ಅಧಿಕ ಪ್ರಮಾಣದ ಶಾಖವನ್ನು ಅನೇಕ ರೀತಿಯಲ್ಲಿ ಬಳಸಿಕೊಂಡು ಬೆಂಕಿಯ ನೇರವಾದ ಉಪಯೋಗವನ್ನು ಇತ್ತೀಚೆಗೆ ಮಿತಗೊಳಿಸಲಾಗಿದೆ. ಈ ವಿಧಾನದಿಂದ ಉಂಟಾದ ಶಾಖವನ್ನು ಮನೆಗಳಲ್ಲಿ, ಕಾರ್ಖಾನೆಗಳೇ ಮುಂತಾದೆಡೆಗಳಲ್ಲಿ ಬಳಸಲಾಗುವ ವಿದ್ಯುತ್ ಒಲೆಗಳಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ.

ಬೆಂಕಿಯನ್ನುತ್ಪಾದಿಸಿಕೊಳ್ಳಲು ಅತ್ಯಾಧುನಿಕವಾದ ಒಂದು ವಿಧಾನವೆಂದರೆ ಬೆಂಕಿಕಡ್ಡಿ (ಮ್ಯಾಚ್). ಒಂದು ರೀತಿಯಲ್ಲಿ ಬಹಳ ಹಿಂದೆಯೇ ಇದ್ದ ಘರ್ಷಣಾ ವಿಧಾನವನ್ನನುಸರಿಸಿ ಕೊಂಡೇ ಇದನ್ನು ರೂಪಿಸಲಾಗಿದೆ. ಚಿಕ್ಕ ಚಿಕ್ಕ ಮರದ ಕಡ್ಡಿಗಳ ತುದಿಗೆ ರಂಜಕ, ಗಂಧಕ, ಪೆಟ್ಲುಪ್ಪು (ಪೊಟ್ಯಾಸಿಯಂ ಕ್ಲೋರೇಟ್) ಮತ್ತು ಜ಼ಿಂಕ್ ಆಕ್ಸೈಡ್‌ಗಳ ಸಮ್ಮಿಶ್ರಣವನ್ನು ಅಂಟಿಸಿ ಒಣಗಿಸುತ್ತಾರೆ. ಇಂಥ ಕಡ್ಡಿಯನ್ನು ಒಂದು ಒರಟಾಗಿರುವ ನೆಲದ ಮೇಲಾಗಲೀ ಇನ್ನಾವುದೇ ಅಷ್ಟು ನಯವಲ್ಲದ ವಸ್ತುವಿನ ಮೇಲಾಗಲೀ ಗೀರಿದರೆ ಘರ್ಷಣೆಯಿಂದ ಕಡ್ಡಿಯ ತುದಿಯಲ್ಲಿ ಬೆಂಕಿ ಕಾಣಿಸಿಕೊಂಡು ಉರಿಯಲು ಪ್ರಾರಂಭವಾಗುತ್ತದೆ. ಈ ಕ್ರಮದಲ್ಲಿ ತಯಾರಾದ ಬೆಂಕಿಕಡ್ಡಿಗಳು ಹೊರಗಿನ ಶಾಖ ಹೆಚ್ಚಾದಲ್ಲಿ ತಟಕ್ಕನೆ ಉರಿಯಲಾರಂಭಿಸುವ ಸಂಭವ ಇದ್ದುದರಿಂದಲೂ ಅವುಗಳನ್ನು ಕೈಯಲ್ಲಿ ಹಿಡಿದು ಬಳಸುವುದು ಚರ್ಮಕ್ಕೆ ಧಕ್ಕೆ ತರುವಂಥದಾದುದರಿಂದಲೂ ಅವುಗಳ ಬದಲು ನಿರಪಾಯದ ಬೆಂಕಿಕಡ್ಡಿಗಳ (ಸೇಫ್ಟಿ ಮ್ಯಾಚ್) ತಯಾರಿಕೆ ಮೊದಲಾಯಿತು. ಇಂಥ ಕಡ್ಡಿಗಳ ತುದಿಯಲ್ಲಿ ಪೆಟ್ಲುಪ್ಪು, ಮ್ಯಾಂಗನೀಸ್ ಡೈ ಆಕ್ಸೈಡ್ ಮತ್ತು ಗಂಧಕ – ಈ ರಾಸಾಯನಿಕ ವಸ್ತುಗಳ ಸಮ್ಮಿಶ್ರಣವಿದ್ದು ಜೊತೆಗೆ ಕೆಲವು ಅನಪಾಯಕಾರಿ ವಸ್ತುಗಳನ್ನೂ ಮಿಶ್ರ ಮಾಡಿರುತ್ತಾರೆ. ಇಂಥ ಕಡ್ಡಿಗಳನ್ನು ಒಂದು ಮರದ ಚಿಕ್ಕ ಪೆಟ್ಟಿಗೆಯೊಳಗಿರಿಸಿ, ಎರಡು ಪಾರ್ಶ್ವಗಳಿಗೂ ಕೆಂಪುರಂಜಕ ಮತ್ತು ಆಂಟಿಮೊನಿ ಎಂಬ ರಾಸಾಯನಿಕ ವಸ್ತುಗಳನ್ನು ಲೇಪನಮಾಡಿರುತ್ತಾರೆ. ಪೆಟ್ಟಿಗೆಯ ಈ ಭಾಗದಮೇಲೆ ಬೆಂಕಿಕಡ್ಡಿ ಗೀರಿದರೆ, ಘರ್ಷಣೆಯಿಂದಾಗಿ ಕಡ್ಡಿ ಉರಿಯತೊಡಗಿ ಬೆಂಕಿ ಉತ್ಪತ್ತಿಯಾಗುತ್ತದೆ. ಕಡ್ಡಿ ಮರದಿಂದ ಮಾಡಿರುವುದರಿಂದ ಹತ್ತಿದ ಬೆಂಕಿ ಸ್ವಲ್ಪ ಹೆಚ್ಚು ಕಾಲ ಇರುತ್ತದೆ.

ಮೊದಮೊದಲು ಸಸ್ಯಗಳ ನೂಲನ್ನು, ಕಾಗದ ಅಥವಾ ಮರದೊಡನೆ ರಾಳ, ಗಂಧಕ ಅಥವಾ ಇತರ ಎಣ್ಣೆಗಳಂಥ ದಹಿಸುವ ವಸ್ತುಗಳೊಡನೆ ಸೇರಿಸಿ, ಬೆಂಕಿಯನ್ನು ಉಂಟುಮಾಡಿಕೊಳ್ಳಲಾಗುತ್ತಿತ್ತು. 1786ರಲ್ಲಿ ಹಳದಿ ರಂಜಕವನ್ನುಪಯೋಗಿಸಿದಾಗ, ಏಕಾಏಕಿ ಬೆಂಕಿ ಕಾಣಿಸಿಕೊಂಡು ಅನೇಕ ಅನಾಹುತಗಳಿಗೆ ಅವಕಾಶವಾಯಿತು. ಅನಂತರದ ವರ್ಷಗಳಲ್ಲಿ ಸುಧಾರಣೆಗಳು ಕಂಡುಬಂದು 1810ರ ಹೊತ್ತಿಗೆ ಘರ್ಷಣಾ ವಿಧಾನವೇ ಅತಿಸೂಕ್ತವೆಂದು ಕಂಡುಬಂತು. 19ನೆಯ ಶತಮಾನದಲ್ಲಿ ಬೆಂಕಿಯನ್ನುತ್ಪಾದಿಸುವ ವಿಧಾನದಲ್ಲಿ ಅನೇಕ ಬಗೆಯ ಹೊಸ ಹೊಸ ಮಾರ್ಪಾಟುಗಳು ಕಂಡುಬಂದು ಬೆಂಕಿಕಡ್ಡಿಯನ್ನು ಅತ್ಯಧಿಕವಾಗಿ ಬಳಸಲಾಗುತ್ತಿದೆ.

ಇದಲ್ಲದೆ ಅನೇಕ ಬಗೆಯ ಇಂಧನಗಳನ್ನು ಉಪಯೋಗಿಸಿಕೊಂಡು ಬೆಂಕಿಯನ್ನುಂಟು ಮಾಡಿಕೊಳ್ಳುವ ವಿಧಾನಗಳಂತೂ ಹೇರಳವಾಗಿವೆ.

ಶಕ್ತಿಯ ಮೂಲ ಬೆಂಕಿ ಎಂಬುದನ್ನು ಮಾನವ ಕಂಡುಕೊಂಡದ್ದು ಒಂದು ಗಮನಾರ್ಹ ಅಂಶ. ಶಕ್ತಿ ಯಾವ ರೂಪದಲ್ಲಾದರೂ ಇರಬಹುದು. ಉಷ್ಣ ಶಕ್ತಿಯನ್ನುಪಯೋಗಿಸಿ ಹಬೆಯಂತ್ರಗಳನ್ನು ತಯಾರಿಸಲಾಯಿತು. ಚಲನಶಕ್ತಿಯನ್ನುತ್ಪಾದಿಸುವ ಬಗೆಯನ್ನು ಕಂಡು ಕೊಂಡು ಈ ಕ್ಷೇತ್ರದಲ್ಲಿ ಕಂಡುಬರುವ ರೈಲು, ಜಹಜು ಮುಂತಾದುವುಗಳನ್ನು ನಿರ್ಮಿಸಲಾಯಿತು. ಉಷ್ಣಶಕ್ತಿ, ದ್ಯುತಿ ಶಕ್ತಿ, ವಿದ್ಯುಚ್ಛಕ್ತಿ, ಯಾಂತ್ರಿಕ ಶಕ್ತಿ–ಇವೇ ಶಕ್ತಿಸಾಮರ್ಥ್ಯದ ವಿವಿಧ ಪ್ರಕಾರಗಳು. ಇವುಗಳಿಗೆಲ್ಲ ಪ್ರಧಾನಮೂಲವಾದದ್ದು ಬೆಂಕಿಯೇ. ಇಂಥ ವಿವಿಧ ಶಕ್ತಿಗಳ ಉಪಯೋಗ ಈಗ ಬೃಹತ್ ಕೈಗಾರಿಕೆಗಳಲ್ಲಿ ಸಂಶೋಧನಾಕೇಂದ್ರಗಳಲ್ಲಿ ಉಷ್ಣ ಹಾಗೂ ಶೀತ ವಲಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಪ್ರಾಚೀನ ಕಾಲದಲ್ಲಿ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ಬೆಂಕಿಯನ್ನು ಬೇರೆ ಬೇರೆ ವಿಧಾನಗಳಲ್ಲಿ ಬಳಸುತ್ತಿದ್ದರು. ಉದಾಹರಣೆಗೆ ಹುಚ್ಚುನಾಯಿ ಮುಂತಾದ ವಿಷಜಂತುಗಳ ಕಡಿತದಿಂದ ಮೈಗೇರುವ ವಿಷವನ್ನು ತಡೆಯಲು, ಅಂಟುರೋಗಗಳು ಹರಡದಂತೆ ತಡೆಯಲು ಬೆಂಕಿಯನ್ನು ಬಳಸುವ ವಿಧಾನ (ಚುಟಿಕೆ) ಬಹಳ ಹಿಂದಿನಿಂದಲೂ ತಿಳಿದಿದ್ದು ಈಗಲೂ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಬಳಕೆಯಲ್ಲಿದೆ. ಚರ್ಮರೋಗ, ಕೀಲುವಾಯು ಮುಂತಾದ ರೋಗಗಳ ಚಿಕಿತ್ಸಾ ವಿಧಾನಗಳು ರೋಮನ್ನರ ಕಾಲದಿಂದಲೂ ಬೆಳೆದುಬಂದಿವೆ. ಅನೇಕ ಕ್ರಿಮಿಶುದ್ಧಿಕಾರಕ ವಿಧಾನದಲ್ಲಿ ಬೆಂಕಿಯನ್ನು ಈಚೆಗೆ ಬಳಸಲಾಗುತ್ತಿದೆ. ಇದಲ್ಲದೆ ಸೂಜಿಮದ್ದನ್ನು ಕೊಡುವಾಗ, ಶಸ್ತ್ರಕ್ರಿಯೆಯನ್ನು ಮಾಡುವಾಗ ಬ್ಯಾಕ್ಟೀರಿಯಾದಂಥ ಕ್ರಿಮಿಗಳು ದೇಹದೊಳಕ್ಕೆ ಪ್ರವೇಶಿಸಿ ಕಾಯಿಲೆಯನ್ನು ಉಲ್ಬಣ ಮಾಡದಂತೆ ಮೊದಲು ಆ ಉಪಕರಣಗಳನ್ನು ಬೆಂಕಿಯ ಜ್ವಾಲೆಯಲ್ಲಿ ಶುದ್ಧಿ ಮಾಡಲಾಗುತ್ತದೆ. ಬೆಂಕಿ ಅಪಘಾತ ಸೂಚಕವೂ ಆಗಿದೆ. ಅದರಿಂದಾಗುವ ಅನಾಹುತಗಳಿಂದ ಪ್ರಾಣ ಹಾನಿ ಆಸ್ತಿಪಾಸ್ತಿಗಳ ನಷ್ಟ ಮುಂತಾದುವು ಸಂಭವಿಸುತ್ತವೆ. ಇಂಥ ಅನಾಹುತಗಳನ್ನು ಕುರಿತ ಚಾರಿತ್ರಿಕ ಘಟನೆಗಳು ಹೇರಳವಾಗಿವೆ. ಉಂಟಾಗುವ ಅಪಘಾತಗಳನ್ನು ತಪ್ಪಿಸುವ ವಿವಿಧರೀತಿಯ ತಂತ್ರಗಳು ಇತ್ತೀಚೆಗೆ ಬಳಕೆಯಲ್ಲಿವೆ. (**ನೋಡಿ– ಅಗ್ನಿಶಾಮಕದಳ**). ಇವಲ್ಲದೆ ಯಾವುದೇ ರೀತಿಯ ಅಗ್ನಿ ಅಪಘಾತಗಳ ವಿರುದ್ಧ ನಿಲ್ಲುವಂಥ ಕಟ್ಟಡಗಳ ನಿರ್ಮಾಣ, ಕೆಲವು ಸನ್ನಿವೇಶಗಳಲ್ಲಿ ಬೆಂಕಿಯಿರುವೆಡೆಯೇ ಕೆಲಸ ಮಾಡಬೇಕಾಗಿ ಬರುವ ಸಂದರ್ಭಗಳಲ್ಲಿ ಸುಡದ ಬಟ್ಟೆಗಳನ್ನು ಧರಿಸಿ ಕೆಲಸ ಮಾಡುವುದು – ಮುಂತಾದ ಇನ್ನೂ ಹಲವು ಬಗೆಯ ಶಾಮಕತಂತ್ರಗಳನ್ನು ಬಳಸಲಾಗುತ್ತಿದೆ.

ಇದಲ್ಲದೆ ಅಗ್ನಿ ಅನಾಹುತಗಳಿಂದ ಜನರಿಗೆ ಆಗುವ ಪ್ರಾಣಹಾನಿ, ಆಸ್ತಿಪಾಸ್ತಿಗಳ ನಷ್ಟ ಮುಂತಾದುವುಗಳಿಂದೊದಗಬಹುದಾದ ನಷ್ಟವನ್ನು ಪೂರೈಸಿಕೊಡಲು ಜೀವವಿಮೆ, ಅಗ್ನಿ ವಿಮೆಯೇ ಮೊದಲಾದ ವಿಮಾ ಸೌಲಭ್ಯಗಳನ್ನು ಒದಗಿಸಿಕೊಡುವ ವ್ಯವಸ್ಥೆ ಇದೆ.

ನಾಗರಿಕಮಾನವ ಆಹಾರವನ್ನು ಬೇಯಿಸಿ ತಿನ್ನುವುದನ್ನು ಕಲಿತಂತೆಯೇ ಶಾಖ ಮತ್ತು ಧೂಮಗಳ ಬಳಕೆಯಿಂದ ಆಹಾರಸಂರಕ್ಷಣಾ ವಿಧಾನವನ್ನೂ ಕಂಡುಕೊಂಡಿದ್ದಾನೆ.

**(ಎಸ್.ಆರ್.ಪಿ.)**

**ಅಗ್ನಿ ಉದರದ ನೆಲಗಪ್ಪೆ** : ದ್ವಿಚರವರ್ಗದ ಒಂದು ಜಾತಿ ಕಪ್ಪೆ (ಫೈರ್ ಬೆಲ್ಲೀಡ್ ಟೋಡ್). ಇದರ ಇನ್ನೊಂದು ಹೆಸರು ಬಾಂಬಿನ. ಇದು ಕೊಳಗಳಲ್ಲಿ ವಾಸಿಸುವ ಮಂದಬುದ್ಧಿಯ, ಬೂದುಬಣ್ಣದ ಪ್ರಾಣಿ. ತನ್ನ ಸುತ್ತಣ ಸನ್ನಿವೇಶದ ನೀರವತೆ ಭಂಗವಾದಾಗ, ಇದು ದೇಹದ ತಳಭಾಗವನ್ನು ಮೇಲೆ ಮಾಡಿ ನೀರಿನಲ್ಲಿ ನಿಶ್ಚೇಷ್ಟಿತವಾಗಿ ಮಲಗುತ್ತದೆ. ಆಗ ಇದರ ಹೊಟ್ಟೆಯ ಭಾಗದಲ್ಲಿನ ಕಿತ್ತಳೆ ಬಣ್ಣವುಳ್ಳ ಮಚ್ಚೆಗಳು ಬೆಂಕಿಯಂತೆ ಕಾಣುತ್ತವೆ. ಈ ಜಾತಿಯ ಸಣ್ಣ ಕಪ್ಪೆಗಳು ಕೆಲವೊಮ್ಮೆ ತಮ್ಮ ಶತ್ರುಗಳಿಂದ ತಪ್ಪಿಸಿಕೊಳ್ಳಲು ಅಲುಗಾಡದೆ ಸುಮ್ಮನೆ ಬಿದ್ದಿರುತ್ತವೆ. ಶತ್ರುಗಳ ದೃಷ್ಟಿಗೆ ಬೀಳದಿರಲು ಸುಳಿವು ಗೊತ್ತಾದೊಡನೆ ಬೆನ್ನಿನ ಭಾಗವನ್ನು ತೋರಿಸದೆ, ಬೆಂಕಿಯಂತೆ ಹೊಳೆಯುವ ಹೊಟ್ಟೆಯ ಭಾಗವನ್ನು ಮೇಲೆ ಮಾಡಿ ಸುಲಭವಾಗಿ ಆಪತ್ತಿನಿಂದ ಪಾರಾಗುತ್ತವೆ. ಆದರೆ ಇದು ಕೇವಲ ಬೆದರಿಸುವ ನಾಟಕವಲ್ಲ. ನಿಜಕ್ಕೂ ಉದರದ ಚರ್ಮ ಒಂದು ಬಗೆಯ ವಿಷ ಪದಾರ್ಥವನ್ನು ಸ್ರವಿಸುತ್ತದೆ. ಇದು ಬಹಳ ಖಾರವೆಂದು ಅನುಭವದಿಂದ ತಿಳಿದಿರುವ ಶತ್ರು ಪ್ರಾಣಿಗಳು ಕಪ್ಪೆಯ ಹತ್ತಿರ ಸುಳಿಯುವುದಿಲ್ಲ. ರಾತ್ರಿವೇಳೆಯಲ್ಲಿ ಈ ಕಪ್ಪೆ ಬಹಳ ಚುರುಕಾಗಿರುತ್ತದೆ. ಹುಳಹುಪ್ಪಟೆಗಳನ್ನು ತಿನ್ನಲು ಆಗಾಗ್ಗೆ ನೀರನ್ನು ಬಿಟ್ಟು ದಡದ ಮೇಲೆ ಬರುವುದಲ್ಲದೆ ಮಳೆಗಾಲದಲ್ಲಿ ಇದು ಹತ್ತಿರದ ಮೆದುಮಣ್ಣಿನಲ್ಲಿ ಗೂಡು ಮಾಡಿಕೊಂಡು ವಾಸಿಸುತ್ತದೆ. ಪ್ರೌಢ ಈ ಜಾತಿಯ ಕಪ್ಪೆ 7.5 ಸೆಂಮೀ ಉದ್ದವಿದ್ದು ಹೊಟ್ಟೆಯ ತಳಭಾಗದಲ್ಲಿ ಕಿತ್ತಳೆ ಬಣ್ಣವನ್ನು ಹೊಂದಿದೆ. ಸಂತಾನೋತ್ಪತ್ತಿ ಕಾಲದಲ್ಲಿ ಇದರ ಮುಂಗಾಲುಗಳ ಒಳ ಭಾಗಗಳಲ್ಲಿ ಕಪ್ಪನೆಯ ಒರಟು ಸಿಂಬಿಗಳು ಕಾಣಿಸಿಕೊಳ್ಳುತ್ತವೆ. ಗಂಡು ಕಪ್ಪೆ ಹೆಣ್ಣು ಕಪ್ಪೆಯನ್ನು ಎಡೆಬಿಡದೆ ಕರೆಯುತ್ತಿರುತ್ತವೆ. ವಸಂತ ಮತ್ತು ಗ್ರೀಷ್ಮಋತುಗಳು ಸಂತಾನೋತ್ಪತ್ತಿಯ ಕಾಲ. (ಎಚ್.ಎಸ್.ಎನ್.)

**ಅಗ್ನಿಕುಲ** : ಪ್ರತೀಹಾರ ಸಾಮ್ರಾಜ್ಯ ನಾಶವಾದ ಮೇಲೆ ಪ್ರಾಬಲ್ಯಕ್ಕೆ ಬಂದ ಪರಮಾರರು (ಮಾಳ್ವ) ಚೌಳುಕ್ಯರು (ಗುಜರಾತ್) ಮತ್ತು ಚಾಹಮಾನರು (ರಾಜಪುತ್ರಸ್ಥಾನ)– ಇವರು ಮತ್ತು ಪ್ರತೀಹಾರರು ಅಬು ಪರ್ವತದ ಮೇಲಿದ್ದ ಹೋಮಾಗ್ನಿಕುಂಡದಿಂದ ಹುಟ್ಟಿ ಬಂದವರಾಗಿದ್ದು ಅಗ್ನಿಕುಲಕ್ಕೆ ಸೇರಿದವರು ಎಂಬ ಐತಿಹ್ಯ ಒಂದಿದೆ. ಇವರೆಲ್ಲ ಮೂಲತಃ ಪರಕೀಯರಾಗಿದ್ದು ಅಗ್ನಿ ಸಂಸ್ಕಾರವಾದ ಮೇಲೆ ಹಿಂದೂಗಳಾದರೆಂಬುದಕ್ಕೆ ಆಧಾರ, ಚಾಂದ್ ಬರದಾಯಿ ಕವಿಯ ಪೃಥ್ವೀರಾಜ್ ರಾಸೋ, ಪದ್ಮಗುಪ್ತನ ನವಶಶಾಂಕಚರಿತ ಮತ್ತು ಇತರ ಕೆಲವು ಪ್ರಶಸ್ತಿಗಳು. ಆದರೆ ಪೃಥ್ವೀರಾಜ್ ರಾಸೋದಲ್ಲಿ ಅನೇಕ ತಪ್ಪುಗಳಿವೆ. ಅಗ್ನಿಕುಲದ ಕತೆಯನ್ನು ಚಾಂದ್ ಬರದಾಯಿ ಬರೆದಿರಲಾರ, ಅದು ಇತ್ತೀಚೆಗೆ ಸೇರಿಸಿದ್ದು ಎಂಬ ಅಭಿಪ್ರಾಯ ಬಲಗೊಂಡಿದೆ. ಅವರು ಪರಕೀಯರು ಎಂಬ ಖಚಿತವಾದ ಉಲ್ಲೇಖ ಪೃಥ್ವೀರಾಜ್ ರಾಸೋದಲ್ಲೇ ಎಲ್ಲೂ ಇಲ್ಲವಾಗಿ ಇತ್ತೀಚೆಗೆ ಈ ಅಭಿಪ್ರಾಯ ತಿರಸ್ಕೃತವಾಗಿದೆ. (ಎ.ಎಂ.)

**ಅಗ್ನಿನಿರ್ವಾಪ ಆದೇಶ** : ಸಾಮಾನ್ಯವಾಗಿ ಬೇಸಗೆಯಲ್ಲಿ ಸಂಜೆಯಾಗುತ್ತಲೂ ಚಳಿಗಾಲದಲ್ಲಿ ರಾತ್ರಿ 8 ಗಂಟೆಗೆ ಸರಿಯಾಗಿ ಎಲ್ಲರೂ ಬೆಂಕಿ ಹಾಗೂ ದೀಪವನ್ನು ನಂದಿಸಬೇಕೆಂದು ಕಟ್ಟಳೆ ವಿಧಿಸುತ್ತಿದ್ದ ಪೂರ್ವಕಾಲದ ಕಾನೂನು (ಕರ್ಫ್ಯೂ). ನಂದಿಸುವುದಕ್ಕೆ ಸೂಚನೆ ಕೊಡಲು ಗಂಟೆ ಬಾರಿಸುತ್ತಿದ್ದರು. ಈ ಪದ್ಧತಿ ಮೊದಲು ಯುರೋಪಿನಲ್ಲಿ ಬಳಕೆಯಲ್ಲಿದ್ದು ಅನಂತರ ವಿಲಿಯಂ ದಿ ಕಾಂಕರರ್ ಎಂಬ ಅಂದಿನ ಇಂಗ್ಲೆಂಡಿನ ದೊರೆ ಈ ಬಗ್ಗೆ ಒಂದು ಆಜ್ಞೆ ಹೊರಡಿಸಿದ್ದ. ಇದಕ್ಕೆ ಮೊದಲೇ ಈ ರೀತಿಯ ಪದ್ಧತಿ ಇಂಗ್ಲೆಂಡಿನ ಒಂದನೆಯ ಹೆನ್ರಿ ತನ್ನ ತಂದೆ ಈ ವಿಷಯದಲ್ಲಿ ಮಾಡಿದ ಶಾಸನವನ್ನು 1101ರಲ್ಲಿ ರದ್ದುಮಾಡಿದನೆಂದು ತಿಳಿದುಬಂದಿದೆ. ಇಂದಿಗೂ ಹಲವೆಡೆ ಜಾರಿಯಲ್ಲಿರುವ ಈ ಪದ್ಧತಿಯ ಉದ್ದೇಶ ಬೆಂಕಿಯಿಂದ ಉಂಟಾಗುವ ಅಪಘಾತಗಳನ್ನು ತಪ್ಪಿಸುವುದೇ ಹೊರತು, ಕರಾಳಶಾಸನದಿಂದ ಜನರನ್ನು ಹಿಂಸಿಸುವುದಲ್ಲ. ಈಗಲೂ ಇಂಗ್ಲೆಂಡಿನಲ್ಲಿ ಲಿಂಕನ್ಸ್ ಇನ್ ಎಂಬ ಸ್ಥಳದಲ್ಲೂ ಅಮೆರಿಕದ ಬಹುಭಾಗದಲ್ಲೂ (ಉದಾ: ಯೂಟಾ) ಇದು ಜಾರಿಯಲ್ಲಿದೆ. (ಕೆ.ವಿ.ವಿ.)

**ಅಗ್ನಿಪರ್ವತ** : ಭೂಮಿಯ ಅಂತರಾಳದಿಂದ ಕುದಿಯುತ್ತಿರುವ ಲಾವಾರಸವನ್ನು ಹೊರಕ್ಕೆ ಉಗುಳುವ ಪರ್ವತಗಳು. ಇವನ್ನು ಜ್ವಾಲಾಮುಖಿಗಳೆಂದೂ ಕರೆಯುತ್ತಾರೆ. ವಲ್ಕೆನೋ ಎಂಬ ಹೆಸರು ಬಂದದ್ದು ಸಿಸಿಲಿ ದ್ವೀಪದ ಉತ್ತರಕ್ಕಿರುವ ವಲ್‌ಕೆನೋ ಎಂಬ ದ್ವೀಪದಿಂದ. ಪ್ಲೇಟೊ, ಅರಿಸ್ಟಾಟಲ್, ಸ್ಟ್ರಾಬೊ ಮೊದಲಾದವರು ಇವುಗಳ ಚಟುವಟಿಕೆಗಳನ್ನು ವರ್ಣಿಸಿದ್ದಾರೆ. ಆದರೆ ಮೊತ್ತಮೊದಲ ವೈಜ್ಞಾನಿಕ ವರ್ಣನೆ ಸಿಕ್ಕುವುದು ಪ್ರ.ಶ. 79ರಲ್ಲಿಯ ಇಟಲಿಯ ಕಿರಿಯ ಪ್ಲಿನಿ ಎಂಬ ಗ್ರಂಥದಲ್ಲಿ. ಆತ ಪ್ರಕೃತಿಯ ಉಪಾಸಕ. ಇಟಲಿ ದೇಶದ ಹರ್ಕುಲೇನಿಯಂ ಎಂಬ ಪ್ರಕೃತಿ ವೀಕ್ಷಕನ ಮತ್ತು ಪಾಂಪೆ ನಗರಗಳನ್ನು ನೆಲಸಮ ಮಾಡಿದ ವೆಸೂವಿಯಸ್ ಅಗ್ನಿಪರ್ವತ ಲಾವಾವನ್ನು ಕಾರುತ್ತಿರುವಾಗ ಬಹು ಸಮೀಪದ ದೃಶ್ಯವನ್ನು ನೋಡಲು ಹೋಗಿ ಅದರಿಂದ ಹೊರಹೊರಟ ವಿಷವಾಯುವಿನಿಂದ ಮೃತಪಟ್ಟ. ವೆಸೂವಿಯಸ್ ಪರ್ವತದ ಚಟುವಟಿಕೆ, ಹೊರಬಂದ ಪದಾರ್ಥಗಳ ವಿವರ ಇತ್ಯಾದಿಗಳನ್ನು ಆತ ಶಾಸ್ತ್ರೀಯವಾಗಿ ವರ್ಣಿಸಿದ್ದಾನೆ. ಅನಂತರ, ದೀರ್ಘಕಾಲ ಈ ಶಾಸ್ತ್ರಭಾಗ ಬೆಳೆಯಲಿಲ್ಲ. 1774ರಲ್ಲಿ ಸರ್ ವಿಲಿಯಂ ಹ್ಯಾಮಿಲ್ಟನ್ ಕಣ್ಣಾರೆ ಕಂಡು ಅನುಭವಿಸಿದ ವೆಸೂವಿಯಸ್ ಮತ್ತು ಎಟ್ನಾ ಅಗ್ನಿಪರ್ವತಗಳ ದೃಶ್ಯಗಳನ್ನು ಚಿತ್ರಿಸಿದ್ದಾನೆ. ಅಲ್ಲಿಂದ ಈಚೆಗೆ 1820ರವರೆಗೆ ಹಲವು ವಿಜ್ಞಾನಶಾಸ್ತ್ರಜ್ಞರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಭೂಗೋಳದ ಮೂರರಲ್ಲೊಂದು ಪಾಲು ಭೂಭಾಗ, ಮಿಕ್ಕಪಾಲು ಜಲಭಾಗ. ಸಾಮಾನ್ಯವಾಗಿ ಭೂಭಾಗವೆಲ್ಲ ಮಣ್ಣು ಶಿಲೆಗಳಿಂದ ಕೂಡಿ ಶಿಲಾಮಂಡಲವೆಂದು ಹೆಸರು ಪಡೆದಿದೆ. ಇದರ ಮೇಲುಭಾಗದಿಂದ ತಳಭಾಗಕ್ಕೆ ಹೋದಂತೆಲ್ಲ ಉಷ್ಣತೆ ಸಾಧಾರಣವಾಗಿ 60 ಅಡಿಗೆ $1^o$ ಯಂತೆ ಹೆಚ್ಚುತ್ತ ಹೋಗಿ, ತಳಭಾಗದಲ್ಲಿ ಅತೀವವಾದ ಉಷ್ಣತೆ ಕಂಡು ಬರುತ್ತದೆ. ಹೀಗೆ ಹೆಚ್ಚುವ ಉಷ್ಣತೆಗೆ ಎರಡು ಕಾರಣಗಳುಂಟು. ಭೂಮಿ ಅನಿಲರೂಪದಿಂದ ದ್ರವರೂಪಕ್ಕೆ ಕುಗ್ಗಿ, ಅನಂತರ ಘನೀಭೂತವಾಗಿ, ಗೋಲವಾಗಿರುವುದರಿಂದ ಅತಿಯಾದ ಉಷ್ಣ ಅದರ ಅಂತರಾಳದಲ್ಲಿ ಈಗಲೂ ಅಡಗಿದೆ. ಇದೇ ಮೂಲೋಷ್ಣ. ಜೊತೆಗೆ ಅಂತರಾಳದಲ್ಲಿ ಶಿಲಾಸಮೂಹಗಳೊಡನೆ ಥೋರಿಯಂ, ಯುರೇನಿಯಂ, ಹೀಲಿಯಂ ಇತ್ಯಾದಿ ವಿಕಿರಣಪಟು ಖನಿಜಗಳು ಸಂಗ್ರಹವಾಗಿರುತ್ತವೆ. ಇವುಗಳ ಶಾಖ ಮೂಲೋಷ್ಣದ ಜೊತೆಗೆ ಸೇರಿ, ಭೂಮಿಯ ಅಂತರಾಳದಲ್ಲಿ ಹುದುಗಿರುವ ಅತಿಯಾದ ಉಷ್ಣತೆಗೆ ಪೂರಕವಾಗುತ್ತದೆ. ಘನೀಭೂತವಾದ ಶಿಲಾ ಸಮೂಹ, ಸಂಗ್ರಹವಾದ ಉಷ್ಣತೆಯಿಂದ ದ್ರವ ರೂಪಕ್ಕೆ ಪರಿವರ್ತನೆಯಾಗಿ, ಒತ್ತಡದ ಆಧಿಕ್ಯ ಮಿತಿಮೀರಿ ದಾಗ ಭೂಮಿಯ ಪದರಗಳನ್ನು ಭೇದಿಸಿಕೊಂಡು ಹೊರಗೆ ಬರುತ್ತದೆ. ಇದೇ ಶಿಲಾರಸ (ಲಾವಾ), ಜೊತೆಗೆ ಶಿಲೆ, ಮಣ್ಣು, ಅನಿಲಗಳು ಸಹ ಹೊರಬರುತ್ತವೆ. ಹೀಗೆ ಭೂಮಿಯ ಆಳಭಾಗದಿಂದ ದೊಡ್ಡ ಬಿರುಕುಗಳ ಮೂಲಕ, ಕಾದು ಕರಗಿರುವ ಪದಾರ್ಥಗಳನ್ನು ಉಗುಳುವ ಪರ್ವತಗಳೇ ಅಗ್ನಿಪರ್ವತಗಳು.




ಅಗ್ನಿಪರ್ವತದ ಸೀಳುನೋಟ
1. ಅಗ್ನಿಪರ್ವತದ ದ್ವಾರ 2. ದಿಬ್ಬ 3. ಕುಂಡ 4. ಶಿಲಾರಸ 5. ಅಗ್ನಿಶಿಲಾ ಛಿದ್ರಗಳು 6. ಡೈಕ್ 7. ಸಿಲ್

ಅಗ್ನಿಪರ್ವತ ಕೇವಲ ಕೆಲವು ಮೀಟರುಗಳ ಅಡ್ಡಳತೆಯುಳ್ಳ ಒಂದು ಸಣ್ಣ ದಿಬ್ಬವಾಗಿರ ಬಹುದು ಅಥವಾ ಸಮುದ್ರಮಟ್ಟಕ್ಕೆ 6,000ಮೀ. ಮೇಲ್ಮಟ್ಟದಲ್ಲಿರುವ ದೊಡ್ಡ ಪರ್ವತವಾಗಿರ ಬಹುದು (ಉದಾ: ಆಫ್ರಿಕದ ಕಿಲಿಮಂಜಾರೊ). ಸಾಮಾನ್ಯವಾಗಿ ಇದು ಬುಗುರಿಯಾಕಾರ ದಲ್ಲಿರುತ್ತದೆ. ಶಿಖರದಲ್ಲಿ ಕಂಡುಬರುವ ಹಳ್ಳ ಪ್ರದೇಶವೇ ಅಗ್ನಿಪರ್ವತದ ಬಾಯಿ ಅಥವಾ ಕುಂಡ (ಕ್ರೇಟರ್). ಭೂಅಂತರಾಳದಿಂದ ಪದಾರ್ಥಗಳೆಲ್ಲವೂ ಹೊರಬರುವುದು ಮುಖ್ಯವಾಗಿ ಈ ಕುಂಡದ ಮೂಲಕವೇ. ಒತ್ತಡ ಬಲು ಹೆಚ್ಚಾದಾಗ, ದ್ರವಪದಾರ್ಥಗಳು ಪ್ರಧಾನದ್ವಾರದಿಂದ ಹೊರಬರುತ್ತವೆ. ಇದಲ್ಲದೆ ಶಿಲಾರಸ ಅಂತಸ್ಸರಣವಾಗಿ ನೇರವಾಗಿಯೋ (ಡೈಕ್) ಸಮತಲವಾಗಿಯೋ (ಸಿಲ್) ಮರದ ಕೊಂಬೆಗಳೋಪಾದಿಯಲ್ಲಿ ಅನೇಕ ಬೀಳುಬಿರುಕುಗಳಲ್ಲಿ ಹರಡಿಕೊಳ್ಳುತ್ತದೆ.

ಈ ಕಾರ್ಯಚಟುವಟಿಕೆಯ ದೃಷ್ಟಿಯಿಂದ ಅಗ್ನಿಪರ್ವತಗಳನ್ನು ಮೂರು ಬಗೆಯಾಗಿ ವಿಂಗಡಿಸ ಬಹುದು. ಶಿಲಾರಸಾದಿಗಳನ್ನು ಉಗುಳಿ, ಹಾವಳಿ ಮಾಡುತ್ತ ಸದಾ ಚಟುವಟಿಕೆ ಯಿಂದಿರುವುವು ಜಾಗೃತ (ಆಕ್ಟಿವ್) ಜ್ವಾಲಾಮುಖಿಗಳು. ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುವು ಸುಪ್ತ(ಡಾರ್‌ಮೆಂಟ್). ಜ್ವಾಲಾಮುಖಿಗಳು ಚಟುವಟಿಕೆಗಳೆಲ್ಲವನ್ನೂ ಮುಗಿಸಿಕೊಂಡು, ಪೂರ್ಣವಾಗಿ ನಿಶ್ಶಬ್ದವಾಗಿರುವುವು ಲುಪ್ತ (ಎಕ್ಸ್‌ಟಿಂಕ್ಟ್) ಜ್ವಾಲಾಮುಖಿಗಳು. ಸಾಮಾನ್ಯವಾಗಿ ಅಗ್ನಿಪರ್ವತಗಳು ಕೇವಲ ಶಿಲಾರಸಾದಿಗಳನ್ನೇ ಹೊರಸೂಸದೆ, ಬಿಸಿನೀರನ್ನೋ ಕಾದ ನುಣುಪಾದ ಬರಿಯ ಮಣ್ಣನ್ನೋ ಹೊರ ಚಿಮ್ಮಬಹುದು. ಅಂಥವನ್ನು ಬಿಸಿನೀರಿನ ಊಟೆಗಳೆಂದೂ (ಗೈಸರ್), ಮೃತ್ತಿಕಾಗ್ನಿಪರ್ವತ ಗಳೆಂದೂ ಕರೆಯುತ್ತಾರೆ. ಕೆಲವು ಅಗ್ನಿ ಪರ್ವತಗಳು ಆವಿ, ಇಂಗಾಲಾಮ್ಲ, ಜಲಜನಕ ಮುಂತಾದ ಅನಿಲಗಳನ್ನು ಮಾತ್ರ ಹೊರಸೂಸುವುದುಂಟು. ಅಂಥವು ಅನಿಲರೂಪದ ಅಗ್ನಿಪರ್ವತಗಳು. ಬಿಸಿನೀರಿನ ಊಟೆಗಳಿಗೂ ಅನಿಲರೂಪದ ಅಗ್ನಿಪರ್ವತಗಳಿಗೂ ನಿಕಟವೂ ಸಹಜವೂ ಆದ ಸಂಬಂಧವಿರುತ್ತದೆ. ಬೇಸಿಗೆ ಕಾಲದಲ್ಲಿ ಜಲಾಂಶ

ಕಡಿಮೆಯಾಗುವುದರಿಂದ, ಬಿಸಿನೀರಿನ ಊಟೆಗಳು ಅನಿಲರೂಪದ ಅಗ್ನಿಪರ್ವತಗಳಾಗಿಯೂ ಚಳಿಗಾಲ ಅಥವಾ ಮಳೆಗಾಲಗಳಲ್ಲಿ ಜಲಾಂಶ ಹೆಚ್ಚಾಗುವುದರಿಂದ ಅನಿಲರೂಪದ ಅಗ್ನಿಪರ್ವತಗಳು ಬಿಸಿನೀರಿನ ಊಟೆಗಳಾಗಿಯೂ ಪರಿವರ್ತನೆ ಹೊಂದುತ್ತವೆ. ಊಟೆಗಳು ಭೂಮಿಯ ಅಂತರಾಳದ ವಿಶೇಷವಾದ ಒತ್ತಡದಿಂದ ನೀರನ್ನು ನೂರಾರು ಮೀ.ಗಳ ಎತ್ತರಕ್ಕೆ ಚಿಮ್ಮುತ್ತವೆ. ಅಮೆರಿಕದ ಎಲ್ಲೋಸ್ಟೋನ್ ನ್ಯಾಷನಲ್ ಪಾರ್ಕಿನಲ್ಲಿಯೂ ಐಸ್ಲೆಂಡ್ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿಯೂ ಇವನ್ನು ಹೆಚ್ಚು ಕಾಣಬಹುದು. ನೀರನ್ನು ಚಿಮ್ಮುವ ಕಾಲ ಎಡೆಬಿಡದೆ 5 ನಿಮಿಷಗಳಾದರೂ ಆಗಬಹುದು ಅಥವಾ 5 ವರ್ಷಗಳೇ ಆಗಬಹುದು. ಯೆಲ್ಲೊಸ್ಟೋನ್ ನ್ಯಾಷನಲ್ ಪಾರ್ಕಿನಲ್ಲಿರುವ ಓಲ್ಡ್‌ಫೆತ್ ಎಂಬುದು 66 ನಿಮಿಷಗಳಿಗೊಮ್ಮೆ ನೀರನ್ನು 30–50ಮೀ. ಎತ್ತರಕ್ಕೆ ಹೊರಚಿಮ್ಮುತ್ತದೆ. ಅಗ್ನಿಪರ್ವತಗಳ ಸ್ವರೂಪ ಅವುಗಳ ಶಿಲಾಸಂಯೋಜನೆ ಮುಂತಾದ ಅಂಶಗಳನ್ನಾಧರಿಸಿ ಮೂರು ಬಗೆಯ ಅಗ್ನಿಪರ್ವತಗಳನ್ನು ಗುರುತಿಸಲಾಗಿದೆ– ಗುರಾಣಿ ಅಗ್ನಿಪರ್ವತ, ಕಿಟ್ಟಶಂಕ, ಸಂಕೀರ್ಣ ಅಗ್ನಿಪರ್ವತ. ಗುರಾಣಿ ಅಗ್ನಿಪರ್ವತಗಳು ಹೆಸರೇ ಸೂಚಿಸುವಂತೆ ಪೀನ ಭಾಗ ಮೇಲಿರುವಂತೆ ನೆಲದ ಮೇಲಿಟ್ಟ ಗುರಾಣಿಯನ್ನು ಹೋಲುತ್ತವೆ. ಇವುಗಳು ದುಂಡಾಗಿದ್ದು ಇಳಿಜಾರು $2 - 1^{o}$ ಗಳನ್ನು ಸಾವಧಾನ ಇಳಿಜಾರೆನ್ನಬಹುದು. ಇಂಥ ಅಗ್ನಿಪರ್ವತಗಳು ಕಡಿಮೆ –ಸ್ನಿಗ್ಧತೆಯ ಪ್ರತ್ಯಾಮ್ಲೀಯ ಶಿಲಾರಸದ ಹರಿವನ್ನುಳ್ಳವು ಎಂದು ತಿಳಿಸುತ್ತದೆ. ತೆಳು ಹರಿವಾದ್ದರಿಂದ ವಿಶಾಲ ಕ್ಷೇತ್ರವನ್ನು ಆವರಿಸುತ್ತವೆ. ಸಾಧಾರಣ ಅಗ್ನಿಪರ್ವತಗಳಿರುವಂತೆ ಇವಕ್ಕೂ ಬಾಯಿ/ಕುಂಡ ಇರುವುದುಂಟು. ಪಕ್ಕದಿಂದ ಅನೇಕ ಶಂಖಾಕೃತಿ ತೆರಪುಗಳಿಂದ ಲಾವಾರಸವನ್ನು ಹೊರಹೊಮ್ಮಿಸಬಹುದು. ಹವಾಯಿ ದ್ವೀಪದ ಕಿಲೌಯಿಯ ಅಗ್ನಿಪರ್ವತದ ಪಾರ್ಶ್ವದಲ್ಲಿ ರಂಧ್ರವೊಂದು ತೆರೆದುಕೊಂಡು 1983–86 ನಡುವೆ 250 ಮೀ. ಎತ್ತರಕ್ಕೆ ಬೆಳೆದಿತ್ತು.



ಜೀವಂತ ಅಗ್ನಿ ಪರ್ವತ (ನ್ಯೂಜಿಲೆಂಡ್)

ಗುರಾಣಿ ಅಗ್ನಿಪರ್ವತಗಳು ಲಾವಾರಸ ಸೂಸುವ ಪ್ರಕ್ರಿಯೆಯನ್ನು ಕೆಲವೊಮ್ಮೆ ಹವಾಯಿ ಬಗೆಯ ಅಗ್ನಿಪರ್ವತ ಚಟುವಟಿಕೆ ಎನ್ನುವುದೂ ಉಂಟು. ಇವು ಸ್ಫೋಟಕ ಅಗ್ನಿಪರ್ವತಗಳಲ್ಲ. ಆದರೆ ಬುಗ್ಗೆಯಂತೆ ಲಾವಾರಸ ಉಕ್ಕಿಬರುತ್ತೆ. ಕೆಲವೊಮ್ಮೆ 400ಮೀ ಎತ್ತರಕ್ಕೆ ಚಿಮ್ಮಬಹುದು. ಬಹುತೇಕ ಇವು ಬಸಾಲ್ಟ್ ಸಂಯೋಜನೆಯ ಶಿಲಾರಸದಿಂದಾಗಿವೆ. ಸಾಗರ ಪ್ರದೇಶದಲ್ಲಿ ಈ ಬಗೆಯ ಅಗ್ನಿಪರ್ವತಗಳೇ ಹೆಚ್ಚು. ಹವಾಯ್ – ಐಸ್ಲೆಂಡಿನಲ್ಲಿ ಬಹುತೇಕ ಇಂತಹ ಅಗ್ನಿಪರ್ವತಗಳು ಇವೆ. ಕೆಲವೊಮ್ಮೆ ಪೂರ್ವ ಆಫ್ರಿಕದಲ್ಲಿದ್ದಂತೆ ಖಂಡದಲ್ಲೂ ನೆಲೆಯಾಗಿರಬಹುದು. ಹವಾಯ್ ದ್ವೀಪದ ಕಿಲೌಯಿಯ ಮತ್ತು ಮೌನಲೋಆ ಪ್ರಪಂಚದ ಅತಿ ದೊಡ್ಡ ಜ್ವಾಲಾಮುಖಿಗಳ ಸಾಲಿಗೆ ಸೇರುತ್ತವೆ. ಮೌನಲೋಆ ಬುಡದಲ್ಲಿ 100ಕಿಮೀ. ಸುತ್ತಳತೆಯದು. ಸುತ್ತಣ ಸಾಗರ ತಳದಿಂದ 3.5ಕಿಮೀ. ಮೇಲೆದ್ದಿದೆ. ಇದರ ಗಾತ್ರ 50,000 ಘನ ಕಿಮೀ. ಎನ್ನಲಾಗಿದೆ.

ಕಿಟ್ಟಶಂಕ(ಸಿಂಡರ್ ಕೋನ್): ಶೃಂಗಗಳು ಅಗ್ನಿಶಿಲಾ ಛಿದ್ರಗಳಿಂದ ಮೈದಳೆದಿರುವ ಅಗ್ನಿಪರ್ವತಗಳು. ರಾಶಿ ಹಾಕಿದ ಕಿಟ್ಟದಂತೆ ಕಾಣುವುದರಿಂದ ಈ ಹೆಸರು. ಅಗ್ನಿಪರ್ವತಗಳು ಸ್ಫೋಟಿಸುವಾಗ ಅಗ್ನಿಶಿಲಾಛಿದ್ರಗಳು ವಾಯುವಿನಲ್ಲಿ ತೂರಿ ಮತ್ತೆ ಪಾತವಾಗಿ ಬಾಯಿಯ ಸುತ್ತಲೂ ಸಂಚಯಿಸಿದಾಗ ಈ ಬಗೆಯ ಕಡಿದಾದ ಪಾರ್ಶ್ವಮುಖ ರಚನೆಗಳುಂಟಾಗುತ್ತವೆ. ಕೋನ 33 ಡಿಗ್ರಿವರೆಗೂ ವ್ಯತ್ಯಯವಾಗಬಹುದು. ಸಾಮಾನ್ಯವಾಗಿ ಈ ಬಗೆಯ ಅಗ್ನಿಪರ್ವತಗಳು ಗರಿಷ್ಠವೆಂದರೆ 400 ಮೀ. ಎತ್ತರಕ್ಕೇರಬಹುದು. ಆದರೆ ಬೋಗುಣಿಯಾಕಾರದ ಬಾಯಿರುವುದು ಸರ್ವೆಸಾಮಾನ್ಯ. ಕೆಲವೆಡೆ ಇದು ಸ್ವತಂತ್ರವಾಗಿ ಅಸ್ತಿತ್ವವಿರದೆ ದೊಡ್ಡ ಅಗ್ನಿಪರ್ವತದ ಕುಂಡದ ಒಳಗೆ ಅಥವಾ ಪಾರ್ಶ್ವದಲ್ಲಿ ನಿರ್ಮಿತವಾಗಿರಬಹುದು. ಹಿಂದೆ ಬಸ್ಸಾಲ್ ಶಿಲಾಹರವು ಇದ್ದ ಜಾಗದಲ್ಲಿ ಇವು ನೆಲೆಯಾಗಿರುತ್ತವೆ. ಈ ಬಗೆಯ ರಚನೆಗಳು ಅಗ್ನಿಶಿಲಾ ಚಟುವಟಿಕೆಯ ಕೊನೆಯ ಹಂತವನ್ನು ಪ್ರತಿನಿಧಿಸುತ್ತದೆ. ಕ್ಯಾಲಿಫೋರ್ನಿಯ, ಒರೆಗಾನ್ ಮತ್ತು ವಾಷಿಂಗ್ಟನ್ ಬಳಿ ಇಂಥ ರಚನೆಗಳಿವೆ. ಕಿಟ್ಟಶಂಕದ ಚಟುವಟಿಕೆ ಬಲು ಹ್ರಸ್ವ. ಅಲ್ಲಿಂದ ಹೊರ ಹರಿಯುವ ಲಾವಾರಸವನ್ನು ನಿಯಂತ್ರಿಸುವುದೂ ಸಾಧ್ಯ.

**ಸಂಕೀರ್ಣ ಅಗ್ನಿಪರ್ವತಗಳು:** ಸ್ತರ ಅಗ್ನಿಪರ್ವತ ಎನ್ನುವುದು ಪರ್ಯಾಯ ಹೆಸರು. ಅಗ್ನಿಶಿಲಾಛಿದ್ರಗಳು ಮತ್ತು ಲಾವಾ ಹರಿವು ಎರಡರಿಂದಲೂ ನಿರ್ಮಾಣವಾದ ರಚನೆಗಳು. ಇವೆರಡೂ ಮಧ್ಯಮ ರಾಸಾಯನಿಕ ಸಂಯೋಜನೆಯವು. ಮುಂದೆ ಶೈತ್ಯಗೊಂಡು ಆ್ಯಂಡಿಸೈಟ್ ಶಿಲೆಗಳಾಗುತ್ತವೆ. ಈ ಬಗೆಯ ಲಾವಾರಸ ಅತಿಕ್ಷಾರ ಲಾವಾರಸಕ್ಕಿಂತ ಹೆಚ್ಚು ಸ್ನಿಗ್ಧ ಅಲ್ಲದೆ ಲಹರ್ ಎಂಬ ಮಡ್ಡಿಯು ಇದರಲ್ಲಿ ಬೆರೆತಿರುತ್ತದೆ. ಕೆಲವೊಮ್ಮೆ ತೀರ ಜಾಳಾದ ಅಗ್ನಿಶಿಲಾಛಿದ್ರಗಳು ಮೇಲೆ ಮಳೆಗರೆದಾಗಲೂ ಲಹರ್ ಉಂಟಾಗಿ ಕೆಲವೆಡೆ ಕುಸಿತವಾಗಿ ಸಂಚಾರಕ್ಕೆ ತಡೆಯೊಡ್ಡಬಹುದು. ಕೊಲಂಬಿಯದಲ್ಲಿ ಈ ಬಗೆಯ ಲಹರ್ ಜಾರಿ 1985ರಲ್ಲಿ 23,000 ಜನ ಮಡಿದರು. ಫಿಲಿಪೀನ್ಸ್‌ನ ಪಿನತುಬೋ ಜ್ವಾಲಾಮುಖಿಯಿಂದ ಹೊರಬಂದ ಲಹರ್‌ನಿಂದ 727 ಮಂದಿ 1991ರಲ್ಲಿ ಬಲಿಯಾಗಿದ್ದರು. ಸಂಕೀರ್ಣ ಅಗ್ನಿಪರ್ವತಗಳು ಬಾಯಿಂದ ಕೆಳಗೆ ಅತಿ ಕಡಿದಾಗುತ್ತ ಬರುತ್ತದೆ. ಬಾಯಿ ವಿಶಾಲವಾಗಿದ್ದು ಅಗ್ನಿಶಿಲಾಛಿದ್ರಗಳು. ಲಾವಾ ಆಗಿಂದಾಗ್ಗೆ ಹೊರಚಿಮ್ಮುತ್ತವೆ. ವಾಷಿಂಗ್ಟನ್ ಬಳಿಯ ಸೇಂಟ್ ಹೆಲೆನ್ಸ್ ಇದಕ್ಕೆ ಉದಾಹರಣೆ. ಇವು ಬಹುತೇಕ ಖಂಡ ಮತ್ತು ದ್ವೀಪಚಾಪಕ್ಕೆ ಸೀಮಿತವಾಗಿವೆ. ಜಪಾನಿನ ಫ್ಯೂಜಿಯಾಮ, ಇಟಲಿಯ ವೆಸೂವಿಯಸ್ 1991ರಲ್ಲಿ ಸ್ಫೋಟಿಸಿದಾಗ 3–5 ಘನ ಕಿಮೀ ಅಗ್ನಿಶಿಲಾಛಿದ್ರ ಮತ್ತು ಬೂದಿಯನ್ನು ತೂರಿ ಕಳೆದ 50 ವರ್ಷಗಳಲ್ಲಿ ಅತಿ ವಿಧ್ವಂಸಕಾರಕ ಅಗ್ನಿಪರ್ವತ ಎನ್ನಿಸಿಕೊಂಡಿತು.

**ಲಾವಾಗುಮ್ಮಟ:** ಅತಿ ಸ್ನಿಗ್ಧ ಲಾವಾ ಅಗ್ನಿಪರ್ವತದ ಬಾಯಿಯೊಡನೆ ಸಂಪರ್ಕವಿರುವ ಕೊಳವೆಗಳಲ್ಲಿ ನುಗ್ಗಿದರೆ ಮೇಲೇರಿದಂತೆ ಗುಮ್ಮಟದಂತೆ ಹರಡಿಕೊಳ್ಳಬಹುದು. ಇಂಥ ಲಾವಾರಸ ಸಾಮಾನ್ಯವಾಗಿ ಫೆಲ್ಸಿಕ್ ಸಂಯೋಜನೆಯದಾಗಿರುತ್ತದೆ. ಕೆಲವೊಮ್ಮೆ ಮಧ್ಯಮ ಸಂಯೋಜನೆಯ ಲಾವಾರಸವೂ ಈ ರೂಪ ತಳೆಯುವುದುಂಟು. ಈ ಕ್ರಿಯೆ ಬಲು ನಿಧಾನ. ಗ್ವಾಟೆಮಾಲದ ಸಂತಮೇರಿಯ ಅಗ್ನಿಪರ್ವತದೊಳಗೆ 1922ರಲ್ಲಿ ಮೈದಳೆದ ಲಾವಾಗುಮ್ಮಟ 500ಮೀ ಎತ್ತರ ಗಳಿಸಲು ಎರಡು ವರ್ಷಗಳೇ ಬೇಕಾದವು. ಇಂಥ ಗುಮ್ಮಟಗಳೇ ಮುಂದೆ ಸಂಕೀರ್ಣ ಅಗ್ನಿಪರ್ವತಗಳಾಗಲು ಆಕರಗಳಾಗುತ್ತವೆ. ಮತ್ತೆ ಮತ್ತೆ ಕೆರಳುವ ಅಗ್ನಿಪರ್ವತಗಳಲ್ಲಿ ಈ ಬಗೆಯ ಗುಮ್ಮಟಗಳು ನಾಶವಾಗುತ್ತಿರುತ್ತವೆ. ಕೆಲವೊಮ್ಮೆ ಒತ್ತಡ ಏರಿದಾಗ ಸ್ಫೋಟಕ್ಕೂ ಅವಕಾಶ ಕೊಡುವುದುಂಟು. ಅಗ್ನಿಶಿಲಾ ಛಿದ್ರಗಳಲ್ಲದೆ ಅನಿಲ ಹಾಗೂ ಮಿನುಗುವ ಮೋಡವೆಂದೇ ಕರೆಸಿಕೊಂಡಿರುವ ದಹಿಸುತ್ತಿರುವ ಅನಿಲಗಳೂ ಎಡೆಮಾಡಿಕೊಡುತ್ತವೆ. 1902ರಲ್ಲಿ ಇಂಥ ಮೋಡ ಮೌಂಟ್ ಪೀಲಿಯಿಂದ ಗಂಟೆಗೆ 100 ಕಿಮೀ ವೇಗದಲ್ಲಿ ಧಾವಿಸಿ ಸೇಂಟ್ ಪೀಲೇ ನಗರದ 28,000 ಜನರನ್ನು ಕೊಂದಿತು. ದಹಿಸುತ್ತಿದ್ದ ಅನಿಲ 700 ಡಿಗ್ರಿ ಉಷ್ಣತೆಯಿತ್ತು ಎಂದು ಹೇಳಲಾಗಿದೆ.

ಮೃತ್ತಿಕಾಗ್ನಿಪರ್ವತಗಳು ಭೂಮಂಡಲದಲ್ಲಿ ದ್ವಾರಗಳನ್ನು ಕಲ್ಪಿಸಿಕೊಂಡು, ಕೆಸರು ಮಣ್ಣುಗಳನ್ನು ಹೊರಕ್ಕೆ ಎರಚುತ್ತವೆ. ಈ ಕೆಸರುಮಣ್ಣು ಒಂದೇ ಕಡೆ ರಾಶಿಯಾಗಿ ಸಣ್ಣಗುಡ್ಡಗಳಾಗಿಯೋ ಬೆಟ್ಟಗಳಾಗಿಯೋ ಪರಿಣಮಿಸುತ್ತದೆ. ಒಂದು ವೇಳೆ ಗಾಳಿಯ ಹೊಡೆತ ಜಾಸ್ತಿಯಾಗಿದ್ದಲ್ಲಿ ಧೂಳು ಬಹು ದೂರಕ್ಕೆ ಒಯ್ಯಲ್ಪಡುತ್ತದೆ. 79ರಲ್ಲಿ ವೆಸೂವಿಯಸ್ ಅಗ್ನಿಪರ್ವತದಿಂದ ಹೊರಬಂದ ಧೂಳು ಪಾಂಪೆ ನಗರದಲ್ಲಿ 6–8.7ಮೀ ಎತ್ತರದಷ್ಟು ಭರ್ತಿಯಾಗಿ, ಪೂರ್ತಿ ನಗರವೇ ಮುಚ್ಚಿಹೋಯಿತು. ಹೀಗೆ ಹೊರಬೀಳುವ ಧೂಳು ಸಾಮಾನ್ಯವಾಗಿ ಇತರ ಲವಣಗಳೊಡನೆ ಸಂಯೋಜಿತವಾಗಿರುವುದರಿಂದ ವಿವಿಧ ಬಣ್ಣಗಳ ಮಣ್ಣಿನ ರೂಪದಲ್ಲಿ ಹೊರಬೀಳುತ್ತದೆ. ಇದರಿಂದಲೇ ಅಂಥ ಕಡೆ ಮೃತ್ತಿಕಾಗ್ನಿಪರ್ವತಗಳನ್ನು ಭೂತದ ಬಣ್ಣದ ಪೆಟ್ಟಿಗೆ ಎಂಬುದಾಗಿ ಕರೆಯುವ ವಾಡಿಕೆಯಿದೆ. ಬರ್ಮ, ಬಲೂಚಿಸ್ತಾನಗಳಲ್ಲಿ ಇವು ಕಂಡುಬರುತ್ತವೆ.

ಅಗ್ನಿಪರ್ವತಗಳಿಂದ ಹೊರಬೀಳುವ ವಸ್ತುಗಳನ್ನು ಅನಿಲಾಂಶ, ಜಲಾಂಶ, ಘನಾಂಶಗಳೆಂದು ಮೂರು ಭಾಗಗಳಾಗಿ ಪ್ರತ್ಯೇಕಿಸಬಹುದು. ಇವು ಸಾಮಾನ್ಯವಾಗಿ ಒಂದಾದ ಮೇಲೊಂದು ಕ್ರಮವಾಗಿ ಹೊರಹೊಮ್ಮುತ್ತವೆ. ಅನಿಲಗಳಲ್ಲಿ ನೀರಿನ ಆವಿಯೇ ಹೆಚ್ಚು. ಈ ಆವಿ ಕೆಲವು ಕಡೆ ಮಳೆಯ ರೂಪದಲ್ಲಿ ಬೀಳುತ್ತದೆ. ಅನಿಲಗಳ ಜೊತೆಗೆ ಕಾರ್ಬನ್‌ಮಾನಾಕ್ಸೈಡ್, ಕ್ಲೋರಿನ್, ಸಾರಜನಕ, ಅಮೋನಿಯ ಮತ್ತು ಗಂಧಕದ ವಿವಿಧ ಸಂಯುಕ್ತ ಅನಿಲಗಳು ಇರುತ್ತವೆ. ಸಿಸಿಲಿಯ ಮೌಂಟ್ ಎಟ್ನ ಜ್ವಾಲಾಮುಖಿ ಪ್ರತಿವರ್ಷ ಎರಡೂವರೆ ಕೋಟಿ ಟನ್ ಕಾರ್ಬನ್ ಡೈ ಆಕ್ಸೈಡನ್ನು ಹೊರಸೂಸುತ್ತದೆ. ಇದು ಒಂದು ಸಾವಿರ ಮೆಗಾವಾಟ್ ಶಕ್ತಿ ಉತ್ಪಾದಿಸಲು ಬಳಕೆಯಾಗುವ ಕಲ್ಲಿದ್ದಲಿನ ದಹನಶಕ್ತಿಗೆ ಸಮ. ಪ್ರ.ಶ. 1948ರಲ್ಲಿ ಐಸ್ಲೆಂಡಿನ ಹೆಕ್ಲ ಜ್ವಾಲಾಮುಖಿಯಿಂದ ಹೊರಸೂಸಿದ ಕಾರ್ಬನ್ ಡೈ ಆಕ್ಸೈಡ್ 6000 ಚ.ಕಿಮೀ. ತಗ್ಗನ್ನು ತುಂಬಿ ಜೀವರಾಶಿಯನ್ನು ಕೊಂದಿತ್ತು. 1976ರಲ್ಲಿ ಅಲಾಸ್ಕದ ಅಗಸ್ಟೀನ್ ಜ್ವಾಲಾಮುಖಿ ಕೆರಳಿ 21 ಕೋಟಿ ಟನ್ನು ಜಲಜನಕದ ಕ್ಲೋರೈಡನ್ನು ಗಗನಕ್ಕೆ ತೂರಿತ್ತು.

ದ್ರವಾಂಶದ ಪೈಕಿ ಶಿಲಾರಸವೇ ಮುಖ್ಯವಾದ್ದು. ಇದರ ಸ್ವಭಾವ, ಚಹರೆ, ಬಣ್ಣ ಇತ್ಯಾದಿಗಳು ಮುಖ್ಯವಾಗಿ ರಾಸಾಯನಿಕ ಸಂಯೋಜನೆಯನ್ನನುಸರಿಸುತ್ತವೆ. ರಾಸಾಯನಿಕ ದೃಷ್ಟಿಯಿಂದ ಶಿಲಾರಸಗಳಲ್ಲಿ ಎರಡು ವಿಧ. ಶೇ.50ಕ್ಕಿಂತಲೂ ಹೆಚ್ಚು ಸಿಲಿಕ ಸಂಯೋಜಿತವಾಗಿರುವವುಗಳನ್ನು ಆಮ್ಲ (ಆ್ಯಸಿಡ್) ಶಿಲಾರಸಗಳೆಂದೂ ಶೇ.50ಕ್ಕಿಂತಲೂ

ಕಡಿಮೆ ಸಿಲಿಕ ಸಂಯೋಜಿತವಾಗಿರುವವುಗಳನ್ನು ಪ್ರತ್ಯಾಮ್ಲ (ಬೇಸಿಕ್) ಶಿಲಾರಸಗಳೆಂದೂ ವಿಂಗಡಿಸಿದ್ದಾರೆ. ಆಮ್ಲಶಿಲಾರಸಗಳು ಬಿಳಿ ಅಥವಾ ಬೂದು ಮಿಶ್ರವಾದ ಪ್ರತ್ಯಾಮ್ಲ ಶಿಲಾರಸಗಳು ತೀರ ಕಪ್ಪವೂ ಇರುತ್ತವೆ. ಶಿಲಾರಸದ ಉಷ್ಣತೆಯನ್ನು ನಿರ್ದಿಷ್ಟವಾಗಿ ಕಂಡುಹಿಡಿಯುವುದು ಅಷ್ಟಾಗಿ ಸುಲಭವಲ್ಲ. ಆದರೂ ಅಗ್ನಿಪರ್ವತದ ಕುಂಡದಿಂದ ಆಗ ತಾನೇ ಹೊರಚಿಮ್ಮಿದ ಶಿಲಾರಸದ ಉಷ್ಣಾಂಶ ಸು. $1500^{o}–1600^{o}$ ಸೆ ಇರಬೇಕೆಂದು ನಿರ್ಧರಿಸಲಾಗಿದೆ.

ಲಾವಾರಸದ ಭೌತಗುಣ: ಜ್ವಾಲಾಮುಖಿಯ ಕೋಷ್ಠದೊಳಗಿನ ಶಿಲಾಪಾಕದ ಉಷ್ಣತೆಯನ್ನು ಸ್ಫೋಟವಾದ ಅನಂತರ ಹೊರಚಿಮ್ಮುವ ಲಾವಾರಸದ ಉಷ್ಣತೆಯನ್ನಳೆದು ಅರಿಯಬಹುದು. ಜ್ವಾಲಾಮುಖಿಯ ಕೊಳವೆಯ ಬಳಿಯೇ ದೃಕ್ ಜ್ವಾಲಮಾಪಕಗಳನ್ನಿಟ್ಟು (ಆಪ್ಟಿಕಲ್ ಪೈರೋಮೀಟರ್ಸ್) ಅವಲೋಕನ ಮಾಡಬಹುದು. ಪ್ರತ್ಯಾಮ್ಲೀಯ ಲಾವಾರಸದ ಬಗ್ಗೆ ಸರಿಸುಮಾರು ಸನಿಹವೆನ್ನಬಹುದಾದ ಉಷ್ಣತೆಗಳನ್ನು ಅಳೆಯಲಾಗಿದೆ. ವಿಶೇಷವಾಗಿ ಹವಾಯಿ ದ್ವೀಪದ ಲಾವಾರಸದ ಉಷ್ಣತೆ $1200^{0}–1100^{0}$ ಸೆ. ಗಳೆಂದು ತಿಳಿದುಬಂದಿದೆ. ತಗ್ಗುಗಳಲ್ಲಿ ಸಂಚಯಿಸಿದ ಶೈತ್ಯಗೊಂಡ ಲಾವಾರಸ $980^{0}$ ಸೆ. ತಲುಪುತ್ತಲೇ ಘನೀಕರಿಸಿರುವುದನ್ನೂ ದಾಖಲೆ ಮಾಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಕೆಳ ಉಷ್ಣಾಂಶಗಳಲ್ಲೂ ಪ್ರತ್ಯಾಮ್ಲ ಲಾವಾರಸ ವಿಲೀನವಾದ ಬಾಷ್ಪನಿಲಗಳಿಂದಾಗಿ ತರಲ ಸ್ವಭಾವವನ್ನು ಉಳಿಸಿಕೊಂಡಿರುವ ಸಂದರ್ಭಗಳೂ ಉಂಟು. ಜಪಾನಿನ ಓಷಿಮಾ ಜ್ವಾಲಾಮುಖಿಯ ಕೊಳವೆ ಬಳಿ ಉಷ್ಣತೆ $1040^{0}–1050^{0}$ಸೆ. ವರೆಗೆ ಇದ್ದುದನ್ನು ಜ್ವಾಲಾಮುಖಿತಜ್ಞರು 1950–51ರಲ್ಲಿ ಅಳೆದಿದ್ದಾರೆ. ಕೆಲವೊಮ್ಮೆ ಅನಿಲಗಳು ಕೊಳವೆ ಬಳಿ ದಹಿಸುವುದರಿಂದ ಸ್ಥಳೀಯ ಉಷ್ಣತೆ $1400^{0}$ ಸೆ. ಗೂ ಏರಲು ಸಾಧ್ಯ.

ಸಿಲಿಕಾ ಪ್ರಧಾನವಾದ ಲಾವಾರಸದ ಉಷ್ಣತೆ ಅಳೆಯುವುದು ತುಸು ಕಷ್ಟವೇ. ಏಕೆಂದರೆ ಸ್ಫೋಟನೆ ಉಗ್ರರೀತಿಯದ್ದಾಗಿರುತ್ತದೆ. ಹಾಗೆಯೇ ಸ್ನಿಗ್ಧತೆಯನ್ನು ಛೇದಮಾಪಕ ದಿಂದ (ಪೆನೆಟ್ರೋಮೀಟರ್) ಅಳೆಯಬಹುದು. ಕಿಲೌಯಿಯ ಜ್ವಾಲಾಮುಖಿಯ ಲಾವಾರಸ $1130^{0}–1135^{0}$ ಸೆ. ಉಷ್ಣತೆಯಲ್ಲಿ 6500–7500 ಪಾಯ್ಸಸ್ ಸ್ನಿಗ್ಧತೆ ವ್ಯಕ್ತಪಡಿಸಿದೆ. ಐಸ್ಲೆಂಡಿನ ಬಳಿಯ ಹೆಕ್ಲಾ ಜ್ವಾಲಾಮುಖಿಯ ಸಿಲಿಕಾ ಪ್ರಧಾನ ಲಾವಾರಸ ತೋರಿರುವ ಸ್ನಿಗ್ಧತೆಯ ಮೌಲ್ಯ 10,000 ಪಾಯ್ಸಸ್. ಸರ್ವಸಾಮಾನ್ಯವಾಗಿ ಸಿಲಿಕಾಪ್ರಧಾನ ಶಿಲಾರಸ ಹೆಚ್ಚು ಸ್ನಿಗ್ಧ ಎಂಬುದು ಪ್ರಮಾಣೀಕೃತವಾಗಿದೆ.

ಜ್ವಾಲಾಮುಖಿಗಳನ್ನು ಅವುಗಳ ಸ್ವರೂಪವನ್ನಾಧರಿಸಿ ವರ್ಗೀಕರಿಸುವಂತೆ ಸ್ಫೋಟಿಸುವ ಬಗೆಯನ್ನು ಪರಿಗಣಿಸಿ ವರ್ಗೀಕರಿಸುವ ಕ್ರಮವಿದೆ.

ಲಾವಾರಸದ ದ್ರವ ಪ್ರಾವಸ್ಥೆಯಲ್ಲಿ (ಲಿಕ್ವಿಡ್‌ಫೇಸ್) ಅದರ ಸ್ನಿಗ್ಧತೆ ಎಷ್ಟಿರುತ್ತದೆ ಎನ್ನುವ ಅಂಶದ ಮೇಲೆ ಸ್ಫೋಟನಾ ಲಕ್ಷಣಗಳು ಅವಲಂಬಿಸಿವೆ. ಅದರಲ್ಲಿ ವಿಲೀನವಾಗಿರುವ ಅನಿಲ ಪ್ರಮಾಣ, ಸ್ಥಿತಿ ಕೂಡ ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಸ್ನಿಗ್ಧತೆ, ಶಿಲಾರಸದ ರಾಸಾಯನಿಕ ಸಂಯೋಜನೆ, ದ್ರವದ ಉಷ್ಣತೆ, ಘನ ಸ್ಫಟಿಕಗಳ ಹೊರೆ, ಅನ್ಯಶಿಲೆಗಳ ಪ್ರಮಾಣ ಅನಿಲ ವಿಲೀನವಾಗಿದೆಯೋ ಅಥವಾ ಗುಳ್ಳೆಗಳ ರೂಪದಲ್ಲಿದೆಯೋ ಎಂಬ ಅಂಶಗಳನ್ನು ಆಧರಿಸಿದೆ.

ಸ್ಫೋಟಿಸುವ ಬಗೆಯನ್ನು ಆಧರಿಸಿ ಜ್ವಾಲಾಮುಖಿಗಳನ್ನು ಕೆಳಕಂಡಂತೆ ವರ್ಗೀಕರಿಸಿದೆ.

**ಹವಾಯಿ ಬಗೆ:** ಸ್ಫೋಟದ ತೀವ್ರತೆ ತುಂಬ ಕಡಿಮೆ. ಲಾವಾರಸ ಹೆಚ್ಚು ತರಲ (ಫ್ಲೂಯಿಡ್). ಲಾವಾರಸದಿಂದ ಬಿಡುಗಡೆಯಾಗುವ ಅನಿಲ ಪ್ರಮಾಣ ಅತ್ಯಲ್ಪ. ಅತಿ ತೆಳು ಲಾವಾರಸ ದೂರ ಹರಿದು ವ್ಯಾಪಿಸುತ್ತದೆ. ಜ್ವಾಲಾಮುಖಿಯ ಬಾಯಿಯೊಳಗೆ ಅತಿ ಹೆಚ್ಚು ಸ್ನಿಗ್ಧ ಗುಣದ ಲಾವಾರಸದ ಮೇಲೆ ತೆಳು ಲಾವಾರಸ ಮಡುವುಗಟ್ಟಿರುತ್ತದೆ.

**ಸ್ಟ್ರಾಂಬೋಲಿ ಬಗೆ:** ಹೆಚ್ಚು ಸ್ಫೋಟನ ಗುಣವುಳ್ಳ ಜ್ವಾಲಾಮುಖಿ. ಲಾವಾರಸ ಹೆಚ್ಚು ಸ್ನಿಗ್ಧ. ಅಗ್ನಿಶಿಲಾಛಿದ್ರಗಳು ಹೆಚ್ಚು ಉತ್ಪನ್ನವಾಗುತ್ತವೆ. ಚಿಮ್ಮುವಾಗ ಬಾಂಬ್ ಮತ್ತು ಲ್ಯಾಪಿರಿ ಬೇರೆ ಬೇರೆ ಆಕಾರ ತಳೆಯುವುದುಂಟು. ತಾಡಿಸಿದಾಗ ಅವುಗಳ ರೂಪ ಬದಲಾವಣೆಯಾಗದು.

**ವಲ್ಕ್ಯಾನಿಯನ್ ಬಗೆ:** ಭಾರಿ ಸ್ಫೋಟಗುಣವುಳ್ಳ ಜ್ವಾಲಾಮುಖಿ ಸ್ನಿಗ್ಧವಾದ ಅಥವಾ ಏಣುಳ್ಳ ಭೂಮಿಗಳು ಆಗರದೆಡೆಗೆ ಬುರ್‍ರೆಂದು ತೂರಿಹೋಗುತ್ತವೆ. ಈ ಬಗೆಯ ಜ್ವಾಲಾಮುಖಿಗಳು ಬೂದಿ ಮೋಡವನ್ನು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಸುತ್ತವೆ. ಆದರೆ ಲಾವಾಹರಿವು ತುಂಬ ಕಡಿಮೆ.

**ಸಿಲೀಯನ್ ಬಗೆ:** ಜ್ವಾಲಾಮುಖಿಯ ಗುಮ್ಮಟ ರೂಪುಗೊಳ್ಳುವಷ್ಟು ಸ್ನಿಗ್ಧ ಲಾವಾರಸ ಹೊರಬೀಳುವುದೆ. ಬಾಯಿಯ ಸುತ್ತಲೂ ಸಂಚಯಿಸುತ್ತದೆ. ಪಾರ್ಶ್ವ ಬಲು ಕಡಿದು. ಗುಮ್ಮಟ ಭಾಗಶಃ ಕುಸಿಯುವುದು ಅಥವಾ ಸ್ಫೋಟಗೊಳ್ಳುವುದು ಸರ್ವಸಾಮಾನ್ಯ.

**ಪ್ಲಿನಿಯನ್ ಬಗೆ:** ಅತಿ ಉಗ್ರ ಸ್ವರೂಪದ ಜ್ವಾಲಾಮುಖಿ. ಬೂದಿಗಲ್ಲು ಮತ್ತು ಬೂದಿಯನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಎರಚುತ್ತದೆ. ಬಹುತೇಕ ಸಿಲಿಕಾ ಅಧಿಕಾಂಶದ ಲಾವ ಸ್ಫೋಟಿಸಿ ಮೂಲ ಬಾಯಿ ಕುಸಿಯುವುದು ಇದರ ಲಕ್ಷಣ. ಇಟಲಿಯ ವೆಸೂವಿಯಸ್ ಜ್ವಾಲಾಮುಖಿ ಈ ಬಗೆಯದು. ಶಿಲಾರಸಗಳ ಚಹರೆ ಹಲವು ಬಗೆಯಾಗಿರುತ್ತದೆ. ಕೆಲವು ಶಿಲಾಪ್ರವಾಹಗಳ ಮೇಲುಭಾಗ ನೊರೆಗಟ್ಟಿರುತ್ತದೆ. ದ್ರವತ್ವ ಕಡಿಮೆಯಿದ್ದಲ್ಲಿ ಇನ್ನೂ ಕೆಲವು ಗಟ್ಟಿಯಾದ ತಾರಿನಂತೆ ಹಗ್ಗದೋಪಾದಿಯಲ್ಲಿ ರೂಪುಗೊಳ್ಳುತ್ತವೆ. ರಸ ಕ್ರಮೇಣ ತಣ್ಣಗಾಗುತ್ತಾ ಬಂದಹಾಗೆಲ್ಲ ಮಿಲನವಾಗಿದ್ದ ಅನಿಲಗಳೆಲ್ಲವೂ ಸಣ್ಣ ಸಣ್ಣ ರಂಧ್ರಗಳ ಮೂಲಕ ಹೊರಹೊರಟು ರಂಧ್ರಗಳು ಹಾಗೆಯೇ ಪೊಳ್ಳು ಪೊಳ್ಳಾಗಿ ಉಳಿದು, ಗಟ್ಟಿಯಾದ ಮೇಲೆ ಸ್ಪಂಜಿನಂತೆ ಉಳಿದ ಕೆಲವು ಹಗುರಾಗುತ್ತವೆ. ಅಗ್ನಿಪರ್ವತದಿಂದ ಹೊರಬರುವ ಘನಾಂಶವನ್ನು ಅಗ್ನಿಶಿಲಾಛಿದ್ರಗಳೆಂದು ಕರೆಯುತ್ತಾರೆ. ಇವುಗಳ ಗಾತ್ರ ಸಣ್ಣ ಕಣಗಳಿಂದ ಹಿಡಿದು ದೊಡ್ಡ ಬಂಡೆಗಳವರೆಗೂ ಇರುತ್ತದೆ. ಧೂಳು ಅಥವಾ ಬೂದಿ, ಶಿಲಾರಸದಗಟ್ಟಿ, ಶಿಲಾರಸದ ಮುದ್ದೆ ಮತ್ತು ಶಿಲಾರಸದ ಗುಂಡು ಎಂದು ಇವನ್ನು ವಿಭಾಗಿಸಬಹುದು **(ನೋಡಿ: ಪ್ಯೂಮಿಸ್, ಅಗ್ನಿಶಿಲಾಛಿದ್ರಗಳು, ಲ್ಯಾಪಿಲ್ಲಿ).**

ಭೂವಿಜ್ಞಾನದ ರೀತ್ಯ, ಹಲವು ಪರ್ವತಶ್ರೇಣಿಗಳು ಇತ್ತೀಚೆಗೆ ಉದ್ಭವವಾದುವು. ಇಂಥವುಗಳ ಸ್ಥಿರತೆ ಕಡಿಮೆಯಾದ್ದರಿಂದ ಇವು ಅಗ್ನಿಪರ್ವತಗಳಿಗೆ ಆವಾಸಸ್ಥಾನವಾಗಿರುತ್ತವೆ. ಆಲ್ಪ್ಸ್ ಮತ್ತು ಹಿಮಾಲಯ ಪರ್ವತಶ್ರೇಣಿ, ರಾಕಿ ಮತ್ತು ಆಂಡೀಸ್ ಪರ್ವತಶ್ರೇಣಿಗಳು ಈ ಗುಂಪಿಗೆ ಸೇರಿದುವು. ಜೊತೆಗೆ ಪೆಸಿಫಿಕ್ ಮತ್ತು ಮೆಡಿಟರೇನಿಯನ್ ಸಮುದ್ರತೀರಗಳು ಕೆಲವು ಪ್ರಸ್ಥಭೂಮಿಗಳು ಕೂಡ ಜ್ವಾಲಾಮುಖಿಗಳ ತವರು. ಇವಲ್ಲದೆ ಯಾವ ವಿವರಣೆಗೂ ಸೇರದ ಕೆಲವು ಅಗ್ನಿಪರ್ವತಗಳು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿವೆ.

ಜಾಗೃತ ಅಗ್ನಿಪರ್ವತಗಳ ವಯಸ್ಸಿನ ಪ್ರಮಾಣ ಒಂದರಿಂದ ಒಂದಕ್ಕೆ ವ್ಯತ್ಯಾಸಗೊಳ್ಳುತ್ತದೆ. ಸಿಸಿಲಿ ದ್ವೀಪದ ಎಟ್ನಾ ಅಗ್ನಿಪರ್ವತ ಕಳೆದ 2500 ವರ್ಷಗಳಿಂದಲೂ ಜೀವಂತವಾಗಿದೆ. ಕೆಲವು ಸುಪ್ತ ಅಗ್ನಿಪರ್ವತಗಳ ವಿರಾಮಾವಧಿ ನೂರು ವರ್ಷಕ್ಕೂ ಮೀರಿರಬಹುದು.

ಅಗ್ನಿಪರ್ವತಗಳು ನಿದ್ರಾವಸ್ಥೆಯಿಂದ ಜಾಗೃತಾವಸ್ಥೆಗೆ ಮಾರ್ಪಡುವ ಮುನ್ನ ಕೆಲವು ಸೂಚನೆಗಳು ತೋರಿಬರುತ್ತವೆ. ಸಾಮಾನ್ಯವಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಶಾಖ ಹೆಚ್ಚಾಗುತ್ತದೆ. ಹತ್ತಿರದಲ್ಲಿ ಹಿಮಗಡ್ಡೆಗಳಿದ್ದರೆ ಕರಗಿ ನೀರಾಗುತ್ತವೆ. ಬಾವಿಗಳಲ್ಲಿ ಮತ್ತು ಕೆರೆ ಕೊಳಗಳಲ್ಲಿ ನೀರು ಬತ್ತಿ ಹೋಗುತ್ತದೆ. ಪೈರುಪಚ್ಚೆಗಳು ಶಾಖದಿಂದ ಒಣಗಿಹೋಗುತ್ತವೆ. ಅಗ್ನಿಪರ್ವತದ ಕುಂಡದಲ್ಲಿನ ನೀರು ಇಂಗಿ ಹೋಗುತ್ತದೆ. ಇವುಗಳೆಲ್ಲದರ ಜೊತೆಗೆ ಕೆಲವು ಕಡೆ ಭೂಮಿ ಹಠಾತ್ತನೆ ನಡುಗಲು ಪ್ರಾರಂಭವಾಗುತ್ತದೆ.

**ಜ್ವಾಲಾಮುಖಿಗಳ ಹಂಚಿಕೆ:** ಕ್ರಿಯಾಶೀಲ ಜ್ವಾಲಾಮುಖಿಗಳ ನೆಲೆಯನ್ನು ಗಮನಿಸಿದರೆ ಅವುಗಳ ಹಂಚಿಕೆ ಯಾದೃಚ್ಛಿಕವಲ್ಲವೆಂಬುದು ಸ್ಪಷ್ಟವಾಗುತ್ತದೆ. ಅದು ನಿರ್ದಿಷ್ಟ ಜಾಡಿಗೆ ಸೀಮಿತವಾಗಿವೆ. ಶೇ. 60 ಭಾಗ ಜ್ವಾಲಾಮುಖಿಗಳು ಪೆಸಿಫಿಕ್ ಸಮುದ್ರದ ಅಂಚಿಗೆ ಸೀಮಿತವಾಗಿದೆ. ಇದರಲ್ಲಿ ದಕ್ಷಿಣ ಅಮೆರಿಕದ ಆ್ಯಂಡೀಸ್, ಮಧ್ಯ ಅಮೆರಿಕ, ಮೆಕ್ಸಿಕೊ, ಉತ್ತರ ಅಮೆರಿಕದ ಕ್ಯಾಸ್‌ಕೇಡ್ ಶ್ರೇಣಿ, ಅಲಾಸ್ಕ, ಜಪಾನ್, ಫಿಲಿಪ್ಪೀನ್ಸ್, ಇಂಡೊನೇಷ್ಯ, ನ್ಯೂಜಿಲೆಂಡ್, ಅಂಟಾರ್ಕಟಿಕ್ ಖಂಡದ ದಕ್ಷಿಣದ ತುದಿಯಲ್ಲಿರುವ ಮೌಂಟ್ ಎರೆಬಸ್ ಜ್ವಾಲಾಮುಖಿ – ಈ ಭಾಗಗಳಲ್ಲಿರುವ ಜ್ವಾಲಾಮುಖಿಗಳು ಸೇರುತ್ತವೆ. ಪೆಸಿಫಿಕ್ ಸಾಗರದ ಅಂಚನ್ನು ಹೂಮಾಲೆಯಿಂತೆ ಸುತ್ತಿರುವ ಈ ಜಾಡನ್ನು ಜ್ವಾಲಾವರ್ತುಲ ಎಂದು ಕರೆಯುತ್ತಾರೆ.

ಇನ್ನೊಂದು ಪಟ್ಟಿ ಮೆಡಿಟರೇನಿಯನ್ ಬೋಗುಣಿಯಲ್ಲಿ ಆಫ್ರಿಕ ಮತ್ತು ಯುರೋಪು ಶಿಲಾಫಲಕವಗಳ ನಡುವೆ, ಫಲಕಗಳ ಅಪಸರಣ ಗಡಿಯಲ್ಲಿ (ಕನ್ವರ್‌ಜೆಟ್ ಬೌಂಡರಿ) ನೆಲೆಯಾಗಿದೆ. ಇದನ್ನು ಮೆಡಿಟರೇನಿಯನ್ ಪಟ್ಟಿ/ಜಾಡು ಎಂದು ಕರೆಯುತ್ತಾರೆ. ಇದು ಒಟ್ಟು ಜ್ವಾಲಾಮುಖಿಗಳ ಶೇ. 20 ಭಾಗವನ್ನು ಒಳಗೊಳ್ಳುತ್ತದೆ. ಇಟಲಿಯ ಮೌಂಟ್ ವೆಸೂವಿಯಸ್ ಎಟ್ನ, ಗ್ರೀಸ್‌ನ ಸ್ಟ್ರಾಂಬೊಲಿ ಮುಂತಾದ ಕ್ರಿಯಾಶೀಲ ಜ್ವಾಲಾಮುಖಿಗಳು ಇದರಲ್ಲಿ ಸೇರಿವೆ. ಪ್ರ.ಶ.ಪೂ. 1500ರಿಂದ ಈವರೆಗೆ 150 ಬಾರಿ ಮೌಂಟ್ ಎಟ್ನ ಸ್ಫೋಟಿಸಿದೆ. ತೀರ ಈಚಿನದು ಪ್ರ.ಶ. 2000ರಲ್ಲಿ. ಪ್ರ.ಶ. 79ರಲ್ಲಿ ವೆಸೂವಿಯಸ್ ಜ್ವಾಲಾಮುಖಿ ಸ್ಫೋಟಿಸಿ ಪಾಂಪೆ ಮತ್ತು ಹರ್ಕುಲೇನಿಯಮ್ ನಗರಗಳನ್ನು ಸಂಪೂರ್ಣವಾಗಿ ಧ್ವಂಸಮಾಡಿತ್ತು.

ಕ್ರಿಯಾಶೀಲ ಜ್ವಾಲಾಮುಖಿಗಳ ಮತ್ತೊಂದು ಪ್ರಮುಖ ಜಾಡೆಂದರೆ ಮಧ್ಯಸಾಗರ ಏಣಿನ ಆಸುಪಾಸು. ಮಧ್ಯ ಅಟ್ಲಾಂಟಿಕ್ ಏಣು ಮತ್ತು ಪೂರ್ವ ಪೆಸಿಫಿಕ್ ಏರು – ಇವೆರಡೂ ಜ್ವಾಲಾಮುಖಿಗಳಿಗೆ ಪ್ರಸಿದ್ಧ.

**ಅಭಿಸರಣ ಫಲಕಗಳ ಗಡಿ (ಡೈವರ್‌ಜೆಂಟ್ ಪ್ಲೇಟ್ ಬೌಂಡರಿ):**

ಪ್ರತ್ಯಾಮ್ಲೀಯ ಲಾವಾರಸ ತರಲ ಸ್ವಭಾವದ್ದಾಗಿದ್ದು ಈ ಪರಿಸರದಲ್ಲಿ ಅಗ್ನಿಶಿಲಾ ಛಿದ್ರಗಳ ಉತ್ಪತ್ತಿ ನಗಣ್ಯ. ನೀರಿನ ಸಂಮರ್ದ ಅನಿಲ ಬಿಡುಗಡೆಯಾಗದಂತೆ ತಡೆದಿರುತ್ತದೆ. ಈ ಭಾಗದಲ್ಲಿ ಮೈದಳೆಯುವ ಜ್ವಾಲಾಮುಖಿಗಳು ಬಹುತೇಕ ಗುರಾಣಿ ಜ್ವಾಲಾಮುಖಿಗಳು. ಮಧ್ಯಸಾಗರ ಏಣು, ವಿಶೇಷವಾಗಿ ಐಸ್ಲೆಂಡಿನಲ್ಲಿರುವ ಜ್ವಾಲಾಮುಖಿಗಳು ಈ ಬಗೆಯವು. 1963ರಲ್ಲಿ ದಿಢೀರೆಂದು ಹುಟ್ಟಿದ ಐಸ್ಲೆಂಡ್ ಬಳಿಯ ಸರ್ಟ್ಸೆ ಜ್ವಾಲಾಮುಖಿ ಇದಕ್ಕೊಂದು ಉದಾಹರಣೆ. ಇಂಡಿಯನ್ ಏಣು ಮತ್ತು ಪೂರ್ವ ಪೆಸಿಫಿಕ್ ಏರುವಿನ ಬಳಿಯೂ ಇದೇ ಬಗೆಯ ಜ್ವಾಲಾಮುಖಿಗಳನ್ನು ಕಾಣಬಹುದು.

**ಅಪಸರಣ ಫಲಕಗಳ ಗಡಿ (ಕನ್‌ವರ್‌ಜೆಂಟ್ ಪ್ಲೇಟ್ ಬೌಂಡರಿ):**

ಅಪಸರಣ ಫಲಕಗಳ ಗಡಿಯಲ್ಲಿ ಫಲಕಗಳು ಒಂದರಮೇಲೊಂದು ಸವಾರಿಮಾಡುತ್ತವೆ. ಪೆಸಿಫಿಕ್ ಸಾಗರದ ಅಂಚು, ಮೆಡಿಟರೇನಿಯನ್ ಬೋಗುಣಿ ಎರಡರಲ್ಲೂ ಈ ಬಗೆಯ ಸ್ಥಿತಿಯಿದೆ. ಇಲ್ಲಿ ಮೈದಳೆಯುವ ಜ್ವಾಲಾಮುಖಿಗಳು ಬಹುತೇಕ ಸಂಕೀರ್ಣ

ಜ್ವಾಲಾಮುಖಿಗಳು. ಇದಕ್ಕೆ ಅಪವಾದವೆಂದರೆ ಮೌಂಟ್ ಎಟ್ನ. ಇದೊಂದು ಗುರಾಣಿ ಜ್ವಾಲಾಮುಖಿ. ಅಪಸರಣ ಫಲಕಗಳ ಗಡಿ ಖಂಡೀಯವಾಗಿರಬಹುದು ಇಲ್ಲವೇ ಸಾಗರೀಯವಾಗಿರಬಹುದು. ಮಧ್ಯಮ ಅಥವಾ ಫೆಲ್ಸಿಕ್ ಸಂಯೋಜನೆಯ ಲಾವಾ ಇದರ ವಿಶೇಷ. ಅಗ್ನಿ ಶಿಲಾಛಿದ್ರಗಳನ್ನು ಧಾರಾಳವಾಗಿ ಉತ್ಪಾದಿಸುತ್ತವೆ. ಫಿಲಿಪ್ಪೀನ್ಸ್‌ನ ಮೌಂಟ್ ಪಿನತುಬೊ, ಮಯಾನ್ ಎರಡೂ ಜ್ವಾಲಾಮುಖಿಗಳು ಸಾಗರೀಯ ಫಲಕದ ಸ್ವಾಹಾವಲಯದಲ್ಲಿ ನೆಲೆಯಾಗಿವೆ.

| ಸ್ಫೋ. ಸೂ. | ವಿವರ | ಜ್ವಾಲೆಯ ಎತ್ತರ | ಟೆಫ್ರಾ ಗಾತ್ರ | ಅವಧಿ (ಗಂಟೆ) | ವರ್ಗೀಕರಣ | ಆವೃತ್ತಿ |
|---|---|---|---|---|---|---|
| 0 | ಅಸ್ಫೋಟಕ | 0–100 ಮೀ | $1000^3$ ಮೀ. | <1 | ಹವಾಯಿ ವಿಧ | ಪ್ರತಿದಿನ |
| 1 | ಸೌಮ್ಯ | 100–1000 ಮೀ | $10,000^3$ ಮೀ. | <1 | ಹವಾಯಿ / ಸ್ಟ್ರಾಂಟೋಲಿ | ಪ್ರತಿದಿನ |
| 2 | ಸ್ಫೋಟಕ | 1–5 ಕಿ.ಮೀ. | $1,000,000^3$ ಮೀ. | 1–6 | ಸ್ಟ್ರಾಂಟೋಲಿ / ವಲ್ಕಾನಿಯನ್ | ವಾರಕ್ಕೊಮ್ಮೆ |
| 3 | ತೀವ್ರ | 3–15 ಕಿ.ಮೀ. | $10,000,000^3$ ಮೀ. | 1–12 | ವಲ್ಕಾನಿಯನ್ | ವರ್ಷಕ್ಕೊಮ್ಮೆ |
| 4 | ಆರ್ಭಟದ | >25 ಕಿ.ಮೀ. | $1^3$ ಕಿ.ಮೀ. | 6–12 | ಪ್ಲಿನಿಯನ್ | ನೂರಾರು ವರ್ಷಗಳಿಗೊಮ್ಮೆ |
| 5 | ಭೀಕರ | >25 ಕಿ.ಮೀ. | $10^3$ ಕಿ.ಮೀ. | >12 | ಪ್ಲಿನಿಯನ್ / ಅತಿ ಪ್ಲಿನಿಯನ್ | ನೂರಾರು ವರ್ಷಗಳಿಗೊಮ್ಮೆ |
| 6 | ಅತಿ ಭೀಕರ | >25 ಕಿ.ಮೀ. | $100^3$ ಕಿ.ಮೀ. | >12 | ಅತಿ ಪ್ಲಿನಿಯನ್ | ನೂರಾರು ವರ್ಷಗಳಿಗೊಮ್ಮೆ |
| 7 | ಅತ್ಯಂತ ಭೀಕರ | >25 ಕಿ.ಮೀ. | $1000^3$ ಕಿ.ಮೀ. | >12 | ಅತಿ ಪ್ಲಿನಿಯನ್ | ನೂರಾರು ವರ್ಷಗಳಿಗೊಮ್ಮೆ |

ಹವಾಯಿ ದ್ವೀಪದ ಜ್ವಾಲಾಮುಖಿಗಳು ಅಂತರಫಲಕ ಜ್ವಾಲಾಮುಖಿ ಚಟುವಟಿಕೆಗೆ ಉದಾಹರಣೆಯಾಗಿವೆ. ಭೂಚಿಪ್ಪಿನಡಿ ಇರುವ ಬಿಸಿದಾಣಗಳ ಮೇಲೆ ಫಲಕಗಳು ಸರಿದಾಗ ಈ ಬಗೆಯ ಜ್ವಾಲಾಮುಖಿಗಳು ರೂಪುಗೊಳ್ಳುತ್ತವೆ.

**ಜ್ವಾಲಾಮುಖಿ ಸ್ಫೋಟಕ ಸೂಚಿ:**

ಭೂಕಂಪನದ ಪರಿಮಾಣವನ್ನು ಅಳೆಯಲು ರಿಕ್ಟರ್ ಮಾಪಕವಿದೆ. ತೀವ್ರತೆಯನ್ನು ಅಳೆಯಲು ಮರ್ಕಲಿ ಮಾಪನ ಬಳಸುತ್ತಾರೆ. ಜ್ವಾಲಾಮುಖಿಗಳ ಅಳತೆಯನ್ನು ವಿಜ್ಞಾನಿಗಳು ಒಂದು ಪಟ್ಟಿಯನ್ನು ನಿಗದಿಪಡಿಸಿದ್ದಾರೆ. ಅದು ಸ್ಫೋಟಕ ಸೂಚಿ (ವಾಲ್ಕನಿಕ್ ಎಕ್ಸ್‌ಪ್ಲೋಸಿಟಿವಿಟಿ ಇಂಡೆಕ್ಸ್ – ವಿ.ಇ.ಐ). ಜ್ವಾಲಾಮುಖಿಗಳು ಬಿಡುಗಡೆಮಾಡುವ ಶಕ್ತಿಯ ಪ್ರಮಾಣದ ಸೂಚಕ ಇದಲ್ಲ. ಬದಲಿಗೆ ಅವು ಹರಡುವ ಟೆಫ್ರಾ (ಅಗ್ನಿಶಿಲಾಛಿದ್ರಗಳ ಒಟ್ಟಾರೆ ಹೆಸರು), ಲಾವಾರಸ ಆಕ್ರಮಿಸುವ ಜಾಗದ ವೈಫಲ್ಯ ಮುಂತಾದವು ಪ್ರಧಾನವಾಗಿ ಗಣನೆಗೆ ಬರುವ ಅಂಶಗಳು. ಸ್ಫೋಟಕ ಸೂಚಿ 0ಯಿಂದ ಪ್ರಾರಂಭವಾಗಿ 8ಕ್ಕೆ ಕೊನೆಗೊಳ್ಳುತ್ತದೆ.

**ಅಗ್ನಿ ಪರ್ವತಗಳ ಮೇಲೆ ನಿಗ:** ಅಮೆರಿಕ ಭೂ ವೈಜ್ಞಾನಿಕ ಸಮೀಕ್ಷಾ ಸಂಸ್ಥೆಯ ವರದಿಯಂತೆ ಇಂದು ಜಗತ್ತಿನಾದ್ಯಂತ ಸುಮಾರು ಐವತ್ತು ಕೋಟಿ ಮಂದಿ ಭೂ ಚಿಪ್ಪಿನ ಫಲಕಗಳ ಅಂಚಿನಲ್ಲಿ ನೆಲೆಸಿದ್ದಾರೆ. ಈ ಭಾಗದಲ್ಲಿರುವ ಅಗ್ನಿಪರ್ವತಗಳು ಅನೇಕ ಭಾರಿ ಸ್ಫೋಟಿಸಿವೆ, ಮುಂದೆಯೂ ಸ್ಫೋಟಿಸುವ ಅಪಾಯವಿದೆ. 1975–85ರ ನಡುವೆ ಸು. 370 ಅಗ್ನಿಪರ್ವತಗಳ ಚಟುವಟಿಕೆಗಳು ವರದಿಯಾದವು. ಆದರೂ ಇಟಲಿ, ಜಪಾನ್ ನ್ಯೂಜಿಲೆಂಡ್, ಕ್ಯಾಸ್ಕೇಡ್ ಶ್ರೇಣಿಯ ಅಗ್ನಿಪರ್ವತಗಳನ್ನುಳಿದರೆ ಬೇರೆಡೆ ಅವುಗಳ ಬಗ್ಗೆ ನಿಗಾ ಇಟ್ಟಿರುವ ಪ್ರಸಂಗ ಕಡಿಮೆಯೇ.

ಅಗ್ನಿಪರ್ವತಗಳ ಕಾರ್ಯಚಟುವಟಿಕೆಗಳನ್ನು ನಿರಂತರವಾಗಿ ಗಮನಿಸುವ, ವೈಜ್ಞಾನಿಕ ಅಧ್ಯಯನಗಳ ಹಿನ್ನಲೆಯಲ್ಲಿ ವಿಶ್ಲೇಷಿಸುವ ಕಾರ್ಯ ಹವಾಯಿ ಅಗ್ನಿಪರ್ವತಗಳ ಮೇಲೆಯೇ ಸ್ಥಾಪಿಸಿರುವ ಅವಲೋಕನ ಕೇಂದ್ರದಲ್ಲಿ ಮಾಡಲಾಗುತ್ತಿದೆ. ಅಗ್ನಿಪರ್ವತಗಳ ಚಟುವಟಿಕೆಗೆ ಸಂಬಂಧಿಸಿದಂತೆ ಭೌತ, ರಾಸಾಯನಿಕ ಪ್ರಮಿತಿಗಳನ್ನು ಅನ್ವಯಿಸಲಾಗುತ್ತದೆ. ಭೂಮಿಯ ಆಳದಿಂದ ಲಾವಾರಸ ನುಗ್ಗಿ ಮೇಲೇರುವ ಸಂದರ್ಭದಲ್ಲಿ ಸುತ್ತಮುತ್ತಣ ಭಾಗ ಉಬ್ಬುತ್ತದೆ. ಅಲುಗು ಮಾಪಕಗಳು (ಟಿಲ್ಟ್ ಮೀಟರ್) ಇವನ್ನು ದಾಖಲಿಸಿಕೊಳ್ಳಬಲ್ಲವು. ಕ್ಷಿತಿಜೀಯ ಚಲನೆಯನ್ನು ಲೇಸರ್ ಕಿರಣ ಬಳಸಿದ ಜೀಯೋಡಿ ಮೀಟರ್ ಬಳಸಿ ಗಣನೆ ಮಾಡಬಹುದು. ಅನಿಲಗಳ ಸಂಯೋಜನೆಯ ವಿಶ್ಲೇಷಣೆ ಕೂಡ ಮುನ್ನುಡಿಯಲು ನೆರವಾಗಬಹುದು. ಅಗ್ನಿಪರ್ವತಗಳ ಸುತ್ತಮುತ್ತ ಕಾಂತೀಯ ಮತ್ತು ವಿದ್ಯುತ್ ಕ್ಷೇತ್ರಗಳ ಬದಲಾವಣೆ ಮುಂಬರುವ ಸ್ಫೋಟಕ್ಕೆ ಸೂಚನೆಯಾಗಬಹುದು. ಇದ್ದಕ್ಕಿದಂತೆ ಭೂಕಂಪನದ ಪುನರಾವರ್ತನೆ ಹೆಚ್ಚಬಹುದು. ಅದರಲ್ಲೂ ಸಂಗತ ಕಂಪನ (ಹಾರ್ಮೋನಿಕ್ ಟ್ರೆಮರ್) ಅಂತರಾಳದಿಂದ ಶಿಲಾಪಾಕ ಮೇಲೇರಿ ಬರುತ್ತಿರುವುದರ ಸೂಚಕ. ಹವಾಯಿ ದ್ವೀಪದ ಹಾಗೂ ಅಮೆರಿಕದ ಸೇಂಟ್ ಹಲೆನ್ ಅಗ್ನಿಪರ್ವತಗಳಲ್ಲಿ ಈ ಬಗೆಯ ಚಟುವಟಿಕೆಗಳು ಸರ್ವಸಾಧಾರಣ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಇವುಗಳ ಜೊತೆಗೆ ಆಯಾ ವಿಜ್ಞಾನವನ್ನು ವಿಶೇಷವಾಗಿ ಅನಿಲ ವಿಶ್ಲೇಷಣೆಯನ್ನು ಅಗ್ನಿಪರ್ವತಗಳ ಅಧ್ಯಯನಕ್ಕೆ ಯಶಸ್ವಿಯಾಗಿ ಅನ್ವಯಿಸಲಾಗುತ್ತಿದೆ. ಲಾವಾರಸ ಉಕ್ಕುವ ಮೊದಲು $H_2O$ ಅಂಶ ಕಡಿಮೆಯಾಗಬಹುದು. $CO$, $SO_2$, $H_2S$, $HCl$, $N_2$ ಹೆಚ್ಚುವುದು ಅನೇಕ ಕ್ರಿಯಾಶೀಲ ಜ್ವಾಲಾಮುಖಿಗಳಲ್ಲಿ ಕಂಡುಬರಬಹುದು. ಆದರೆ $H_2$ ಮತ್ತು $O_2$ ಪ್ರಮಾಣದಲ್ಲಿ ಅಂಥ ವ್ಯತ್ಯಾಸವೇನೂ ಕಂಡುಬರುವುದಿಲ್ಲ.

ಶಿಲಾಪಾಕದಲ್ಲಿ ಗಂಧಕ ಮತ್ತು ಕಾರ್ಬನ್ ಡೈ ಆಕ್ಸೈಡ್ ಅನಿಲಗಳು ಪ್ರಾರಂಭಿಕ ಹಂತದಲ್ಲಿ ಸಮೃದ್ಧವಾಗಿರುತ್ತವೆ. ಆದರೆ ಇವು ಅವಿಲೇಯ ಶಿಲಾ ಪಾಕ ಮೇಲೇರಿದಂತೆ ಅನಿಲೋತ್ಪಾಟನೆ ಕ್ರಿಯೆಯಲ್ಲಿ ಹೊರದೂಡಲ್ಪಡುತ್ತವೆ. ಆದರೆ ಹೆಚ್ಚು ವಿಲೇಯವಾದ ಹೈಡ್ರೋಕ್ಲೋರಿಕ್ ಆಮ್ಲ ಹಾಗೂ ನೀರು ಹಾಗೆಯೇ ಉಳಿದುಕೊಳ್ಳುತ್ತವೆ. ಅಗ್ನಿಪರ್ವತದಿಂದ ಹೊರಹೊಮ್ಮುವ ಅನಿಲಗಳನ್ನು ವಿಶ್ಲೇಷಿಸುವುದು ಈಗ ಅತ್ಯುತ್ತಮ ಫಲಿತಾಂಶ ನಿಡಿದೆ: $SO_2:HCl$ ನಿಷ್ಪತ್ತಿ ಶಿಲಾಪಾಕ ಕ್ರಿಯಾಶೀಲವಾಗಿರುವುದನ್ನು ತಿಳಿಸಬಲ್ಲದು. ಈಗ ಭೌಗೋಳಿಕ ಸ್ಥಾನ ನಿರ್ಧರಣಾ ವ್ಯವಸ್ಥೆ ಕೂಡ (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್) ಕ್ರಿಯಾಶೀಲ ಅಗ್ನಿಪರ್ವತಗಳ ಸುತ್ತಮುತ್ತಣ ಜಾಗದಲ್ಲಿ ಆಗುವ ಏರಿಳಿತಗಳ ಬದಲಾವಣೆಗಳನ್ನು ಸ್ಪಷ್ಟವಾಗಿ ಸೂಚಿಸಬಲ್ಲದು.

ಅಗ್ನಿಪರ್ವತಗಳಿರುವ ಕಡೆ ಮನುಷ್ಯವರ್ಗಕ್ಕೆ ವಿಪರೀತವಾದ ಪ್ರಾಣ ಮತ್ತು ಧನಹಾನಿ ಉಂಟಾಗುತ್ತದೆ. ಪ್ರಪಂಚದಲ್ಲಿ 270ಕ್ಕೂ ಹೆಚ್ಚು ಜಾಗ್ರತಜ್ವಾಲಾಮುಖಿಗಳಿದ್ದು, ಆಯಾ ಪ್ರದೇಶಗಳಲ್ಲಿ ಹೆಚ್ಚು ಕಡಿಮೆ ನಷ್ಟವುಂಟಾಗುತ್ತಲೇ ಇರುತ್ತದೆ. ಇಷ್ಟಾದರೂ ಮಾನವವರ್ಗಕ್ಕೆ ಇವುಗಳಿಂದ ಮತ್ತೊಂದು ರೀತಿಯಲ್ಲಿ ಉಪಯೋಗವಾಗಿದೆ. ಪ್ರಕೃತಿಯಲ್ಲಿ ದೊರೆಯುವ ಗಂಧಕ, ನವಸಾಗರ, ಬೋರಿಕ್ ಆ್ಯಸಿಡ್ ಇವು ಒದಗುವುದು ಅಗ್ನಿಪರ್ವತಗಳ ಮೂಲಕವೇ. ಇದಲ್ಲದೆ ಐಸ್ಲೆಂಡ್ ಮತ್ತು ಅಮೆರಿಕಗಳಲ್ಲಿ ಬಿಸಿನೀರಿನ ಊಟೆಗಳಿಂದ ಬರುವ ನೀರನ್ನು ಅಡುಗೆ ಮಾಡುವುದಕ್ಕೂ ಮತ್ತು ಬಟ್ಟೆ ಒಗೆಯುವುದಕ್ಕೂ ಉಪಯೋಗಿಸುತ್ತಾರೆ. ಕೆಲವು ಕಡೆ ಅತಿ ಆಳವಿಲ್ಲದ ಬಿಸಿನೀರಿನ ಊಟೆಗಳಿಂದ ಬರುವ ಆವಿಯನ್ನು ಕೈಗಾರಿಕೆಗಳಿಗೆ ಬಳಸುತ್ತಾರೆ. ಅಗ್ನಿಪರ್ವತಗಳಿಂದ ಹೊರಬರುವ ಹಬೆಯನ್ನುಪಯೋಗಿಸಿಕೊಂಡು ವಿದ್ಯುಚ್ಛಕ್ತಿ ಉತ್ಪಾದನಾಕೇಂದ್ರಗಳನ್ನು ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ಸ್ಥಾಪಿಸಲಾಗಿದೆ. ಇಲ್ಲಿ ಬಳಸಲಾಗುವ ತಿರುಬಾನಿ ಯಂತ್ರಗಳನ್ನು ನಡೆಸಲು ಅಗ್ನಿಪರ್ವತದಿಂದ ಹೊರಬರುವ ಅಧಿಕ ಉಷ್ಣದ ಅನಿಲವನ್ನೇ ಬಳಸಿಕೊಳ್ಳುತ್ತಾರೆ **(ನೋಡಿ–ಲಾವಾ, ಜ್ವಾಲಾಮುಖಿಜ–ಶಿಲೆಗಳು)**

(ಎಂ.ಎನ್.ವಿ.)

**ಅಗ್ನಿಪುರಾಣ :** ಸಂಸ್ಕೃತದಲ್ಲಿರುವ ಹದಿನೆಂಟು ಮುಖ್ಯಪುರಾಣಗಳಲ್ಲೊಂದು. ಅಗ್ನಿದೇವತೆಯಿಂದ ವಸಿಷ್ಠಮುನಿಗೆ ಉಪದಿಷ್ಟವಾದುದೆಂದು ಪ್ರತೀತಿ. ಕಾಲ ಸುಮಾರು ಪ್ರ.ಶ. 7ನೆಯ ಶತಮಾನ. ಪ್ರಧಾನವಾಗಿ ಶೈವಮತಕ್ಕೆ ಸಂಬಂಧಪಟ್ಟ ವಿಚಾರಗಳಲ್ಲದೆ ಜಗತ್ತಿನ ಸೃಷ್ಟಿ, ಧರ್ಮಶಾಸ್ತ್ರ, ರಾಜಧರ್ಮ, ಆಯುರ್ವೇದ, ಅಲಂಕಾರ, ಛಂದಸ್ಸು ಮುಂತಾದ ಅನೇಕ ವಿಷಯಗಳನ್ನೊಳಗೊಂಡು ವಿಶ್ವಕೋಶದಂತಿದೆ. (ಬಿ.ಕೆ.ಎಸ್.)

**ಅಗ್ನಿಮಿತ್ರ :** ಮೌರ್ಯರಿಂದ ಮಗಧರಾಜ್ಯವನ್ನು ಪ್ರ.ಶ.ಪೂ. ಸು. 187ರಲ್ಲಿ ಕಸಿದುಕೊಂಡು ಶುಂಗ ರಾಜಸಂತತಿಯನ್ನು ಸ್ಥಾಪಿಸಿ ಸು. 150ರವರೆಗೆ ಆಳಿದ ಪುಷ್ಯಮಿತ್ರನ ಮಗ. ತಂದೆಯ ಕಾಲದಲ್ಲಿ ಸಾಮ್ರಾಜ್ಯಕ್ಕೆ ಉಪರಾಜಧಾನಿಯಾಗಿದ್ದ ವಿದಿಶಾದಲ್ಲಿ ನಿಂತು

ಪ್ರಾಂತಾಡಳಿತ ನಡೆಸುತ್ತಿದ್ದ. ನೆರೆರಾಜ್ಯವಾಗಿದ್ದ ವಿದರ್ಭದ ದೊರೆ ದಂಡೆತ್ತಿ ಬಂದಾಗ ಅವನನ್ನು ಸೋಲಿಸಿದ. ತಂದೆಯ ಮರಣಾನಂತರ ಸಿಂಹಾಸನಕ್ಕೆ ಬಂದ. ಇವನ ವಿಷಯವಾಗಿ ಹೆಚ್ಚು ವಿವರಗಳು ತಿಳಿದುಬಂದಿಲ್ಲ. ಕಾಳಿದಾಸನ ಮಾಳವಿಕಾಗ್ನಿಮಿತ್ರ ನಾಟಕದ ಕಥಾನಾಯಕ ಇವನೇ. (ಎ.ಎಂ.)

**ಅಗ್ನಿವಿಮೆ :** ಪ್ರಪಂಚಾದ್ಯಂತ ಚಾಲ್ತಿಯಲ್ಲಿರುವ ಈ ವಿಮೆ 17ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಆರಂಭವಾಯಿತು. ಜೀವವಿಮೆ, ಕಳ್ಳತನದ ವಿರುದ್ಧ ಮಾಡುವ ವಿಮೆ ಮುಂತಾದ ವಿಮೆಗಳಂತೆಯೇ ಅಕಸ್ಮಾತ್ತಾಗಿ ಒದಗುವ ಬೆಂಕಿಯು ಅನಾಹುತದಿಂದೊದಗಬಹುದಾದ ಚರ ಹಾಗೂ ಸ್ಥಿರಸ್ವತ್ತುಗಳ ನಷ್ಟವನ್ನು ತುಂಬಲು ಮಾಡಿಕೊಳ್ಳುವ ವಿಮೆಯ ಬಗೆಯಿದು (ಫೈರ್‌ಇನ್ಶೂರೆನ್ಸ್).

ಈ ಪಾಲಿಸಿಯಲ್ಲಿ ಅದರ ವ್ಯಾಪ್ತಿಗೆ ಬರುವ ಸ್ವತ್ತಿನ ಬೆಲೆ ನಮೂದನೆಯಾಗದಿರಬಹುದು. ಇದಕ್ಕೆ ಬದಲಾಗಿ ಸ್ವತ್ತು ಬೆಂಕಿಯ ಅನಾಹುತಕ್ಕೊಳಗಾದಾಗ ಇಂತಿಷ್ಟು ಪರಿಹಾರಧನವನ್ನು ಕೊಡಬೇಕೆಂಬುದರ ಬಗ್ಗೆ ಮೊದಲೇ ಅದರಲ್ಲಿ ನಮೂದಿಸಿರಲೂಬಹುದು. ಕೆಲವು ಸಂದರ್ಭಗಳಲ್ಲಿ ಸ್ವತ್ತಿನ ಪರಿಮಾಣ, ಜಾಗ ಹಾಗೂ ಮೌಲ್ಯ ವ್ಯತ್ಯಾಸ ಹೊಂದುವುದಾಗಿದ್ದು, ಅಂಥ ಸ್ವತ್ತುಗಳ ಮೇಲಿನ ಅಗ್ನಿ ವಿಮಾಪಾಲಿಸಿ ಅನಿಶ್ಚಿತ ಅನಿರ್ದಿಷ್ಟ (ಫ್ಲೋಟಿಂಗ್) ವರ್ಗಕ್ಕೆ ಸೇರುತ್ತದೆ.

ಅಗ್ನಿವಿಮೆ ಮಾಡಿದ ಸ್ವತ್ತಿನ ಪರಿಪೂರ್ಣ ವರ್ಣನೆಯನ್ನು ಕರಾರಿನಲ್ಲಿ ಬರೆಯಬೇಕಲ್ಲದೆ ಅದರ ಒಡೆತನದ ಬಗ್ಗೆ ವಿಮೆ ಮಾಡಿಸುವವನು ಬರವಣಿಗೆಯಲ್ಲಿ ಹೇಳಿಕೆಯನ್ನು ಕೊಡಬೇಕು.

ಅಗ್ನಿವಿಮೆ ಕರಾರಿನಲ್ಲಿ ಅಡಕವಾಗಿರುವ ಕರಾರುಗಳನ್ನೆಲ್ಲ ವಿಮೆ ಮಾಡಿಸುವವರು, ವಿಮೆ ಮಾಡುವವರು ನಿಷ್ಠೆಯಿಂದ ಪಾಲಿಸಬೇಕು. ವಿಮಾಸಂಸ್ಥೆ ಒಪ್ಪಿಗೆಯ ಪತ್ರವನ್ನು (ರಿಸ್ಕ್ ನೋಟ್) ವಿಮೆ ಮಾಡಿಸಿದವನಿಗೆ ತಲುಪಿಸಿದ ಕ್ಷಣದಿಂದ ವಿಮಾ ಸಂಸ್ಥೆಯ ಹೊಣೆ (ರಿಸ್ಕ್) ಆರಂಭವಾಗುವುದಾದರೂ ಸಾಮಾನ್ಯವಾಗಿ ವಿಮೆಯ ಕಂತಿನ (ಪ್ರೀಮಿಯಂ) ಹಣ ಕೊಟ್ಟ ಬಳಿಕವೇ ಅದು ಜಾರಿಗೆ ಬರುತ್ತದೆ. ಸಾಮಾನ್ಯವಾಗಿ ಅಗ್ನಿವಿಮೆಯ ಅಪಾಯ ಹೊಣೆಯ ಅವಧಿ ಒಂದು ವರ್ಷ. ಈ ಅವಧಿಯನ್ನು ಮತ್ತೆ ನವೀಕರಿಸಬಹುದು.

ಅಗ್ನಿವಿಮೆ ಮಾಡಿದ ಸ್ವತ್ತು ಕಳವು ಮುಂತಾದ ಇತರ ರೀತಿಯಲ್ಲಿ ಕಳೆದು ಹೋದರೆ ವಿಮಾಸಂಸ್ಥೆಗೆ ಪರಿಹಾರ ಧನವನ್ನು ಕೊಡುವ ಹೊಣೆ ಇಲ್ಲ. ಅಂಥ ಸ್ವತ್ತು ಬೆಂಕಿಯಿಂದಾಗಲಿ ಬೆಂಕಿ ಹೊತ್ತಿದಾಗ ಅದನ್ನು ಆರಿಸುವಾಗಾಗಲಿ ಸುಡುವ ಸ್ಥಳದಿಂದ ಬೇರೆಡೆಗೆ ಸಾಗಿಸುವಾಗಾಗಲಿ ನಾಶವಾದಾಗ ಮಾತ್ರ ಹಾಗೂ ಅದನ್ನು ವಿಮಾದಾರನು ಸಿದ್ಧಪಡಿಸಿದ ಮೇಲೆ ಪರಿಹಾರಧನವನ್ನು ಕೊಡಲಾಗುವುದು. ವಿಪರೀತ ಬಿಸಿಲು, ಯುದ್ಧ, ನಾಗರಿಕ ಆಂದೋಲನಗಳಿಂದ ವಿಮೆ ಮಾಡಿದ ಸ್ವತ್ತಿಗೆ ಉಂಟಾಗುವ ನಷ್ಟಕ್ಕೆ ಪರಿಹಾರ ತೆರಲು ವಿಮಾ ಸಂಸ್ಥೆ ಬದ್ಧವಿಲ್ಲ ಎಂಬ ಷರತ್ತು ಅಗ್ನಿವಿಮೆ ಪಾಲಿಸಿಯಲ್ಲಿ ಇರುತ್ತದೆ. ಪಾಲಿಸಿಯನ್ನು ಅವಧಿ ಮುಗಿಯುವ ಮೊದಲೇ ರದ್ದುಪಡಿಸುವ ಷರತ್ತನ್ನು ಅದರಲ್ಲಿ ಸೇರಿಸಬಹುದು. ವಿಮೆ ಮಾಡಿಸುವವನು ಅಪ್ರಾಮಾಣಿಕ ಮಾಹಿತಿ ಕೊಟ್ಟಿದ್ದರೆ ಅಥವಾ ಪಾಲಿಸಿಯ ವಿಶೇಷ ಜವಾಬ್ದಾರಿಯನ್ನು (ವಾರಂಟಿ) ಪಾಲಿಸದಿದ್ದರೆ ಪಾಲಿಸಿ ರದ್ದಾಗಬಹುದಲ್ಲದೆ, ವಿಮಾಸಂಸ್ಥೆಯ ಹೊಣೆ ತಪ್ಪಬಹುದು. ಅಗ್ನಿವಿಮೆಯ ಒಪ್ಪಂದ ಇತರ ಒಪ್ಪಂದಗಳಂತೆ ಉಭಯ ಪಕ್ಷದವರಿಗೂ ಅನ್ವಯಿಸುತ್ತದೆ.

ವಿಮಾಸಂಸ್ಥೆ ಅಗ್ನಿಯಿಂದ ಸಂಭವಿಸಿದಷ್ಟು ಮಾತ್ರ ಪರಿಹಾರ ಧನವನ್ನು ತೆರಲು ಬದ್ಧವಾಗಿದೆ. ಹಣ ಕೊಡುವ ಬದಲು ಧಕ್ಕೆ ಹೊಂದಿದ ಸ್ವತ್ತನ್ನು ಅದು ಮೊದಲಿದ್ದಂತೆಯೇ ಸರಿಪಡಿಸಿಕೊಡಬಹುದು. ಏನೇ ಆಗಲಿ ಪಾಲಿಸಿದಾರನು ಬೆಂಕಿ ಅನಾಹುತದಿಂದ ಹೆಚ್ಚು ನಷ್ಟ ಉಂಟಾಗದಂತೆ ನೋಡಿಕೊಳ್ಳಬೇಕು.

ಭಾರತದಲ್ಲಿ ವಿಮೆಯ ವ್ಯವಹಾರ 1950ರವರೆಗೂ ಖಾಸಗಿಯಾಗಿಯೇ ನಡೆಯುತ್ತಿದ್ದು ಅನಂತರ ಸರ್ಕಾರದ ವಶಕ್ಕೆ ಬಂದಮೇಲೆ ಭಾರತದ ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಷನ್ ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಈಗ (ಸರ್ಕಾರೀ ಸ್ವಾಮ್ಯದ ಕೆಲವು ವಿಮಾಕಂಪನಿಗಳು) ಅಗ್ನಿವಿಮೆಯ ಹೊಣೆಯನ್ನೂ ಹೊತ್ತಿವೆ. ಅಗ್ನಿವಿಮೆಯ ಸೌಲಭ್ಯವನ್ನು ಅನೇಕ ಇತರ ಖಾಸಗೀ ವಿಮಾಸಂಸ್ಥೆಗಳೂ ನಡೆಸುತ್ತಿವೆ. (ಎನ್.ಎಸ್.ಎಂ.)

**ಅಗ್ನಿಶಾಮಕದಳ :** ಬೆಂಕಿಯಿಂದ ಉಂಟಾಗುವ ಅನಾಹುತಗಳನ್ನು ತಡೆಯಲು ಅದರೊಡನೆ ಹೋರಾಡಿ ಅದನ್ನು ಆರಿಸುವುದಕ್ಕೆಂದೇ ವಿಶೇಷವಾಗಿ ರಚನೆಯಾಗಿರುವ ಸಿಬ್ಬಂದಿಗೆ ಈ ಹೆಸರಿದೆ. ಸಾಮಾನ್ಯವಾಗಿ ಇಂಥ ದಳ ದೊಡ್ಡ ದೊಡ್ಡ ಪಟ್ಟಣಗಳಲ್ಲಿದ್ದು ತನ್ನ ಸೇವೆಯನ್ನು ಪಟ್ಟಣಗಳಿಗೆ ಮಾತ್ರವಲ್ಲದೆ ಸುತ್ತಮುತ್ತಲ ಪ್ರದೇಶಗಳಿಗೂ ವಿಸ್ತರಿಸುತ್ತದೆ. ಆಕಸ್ಮಿಕದಿಂದ ಉಂಟಾದ ಬೆಂಕಿಯನ್ನು ಆರಿಸುವುದು ಮಾತ್ರವಲ್ಲದೆ ಇತರೆಡೆಗಳಿಗೆ ಹರಡದಂತೆಯೂ ಈ ದಳ ನೋಡಿಕೊಳ್ಳುತ್ತದೆ. ಈ ದಳದ ನೆರವಿನಿಂದಾಗಿ ಬೆಂಕಿ ಅಪಘಾತದಿಂದ ಉಂಟಾಗುವ ಪ್ರಾಣಹಾನಿ, ಆಸ್ತಿಪಾಸ್ತಿಗಳ ನಷ್ಟ ಕಡಿಮೆಯಾಗಲವಕಾಶವಿದೆ. ಬೆಂಕಿಯನ್ನಾರಿಸಲು ಮುಖ್ಯವಾಗಿ ಬಳಸುವ ವಸ್ತುವೆಂದರೆ ನೀರು. ದೊಡ್ಡ ದೊಡ್ಡ ಅಗ್ನಿಆಕಸ್ಮಿಕಗಳನ್ನು ಹತೋಟಿಗೆ ತರಲು ತಣ್ಣೀರನ್ನು ಅಧಿಕ ಪ್ರಮಾಣದಲ್ಲಿ ಬಳಸಬೇಕಾಗುತ್ತದೆ. ನೀರಿನ ಸತತಧಾರೆಯಿಂದ ಮಾತ್ರ ಇಂಥ ಅಗ್ನಿಪ್ರಮಾದಗಳನ್ನು ತಡೆಯಲು ಸಾಧ್ಯ. ಅಧಿಕ ಒತ್ತಡದಲ್ಲಿ ಮತ್ತು ಹೆಚ್ಚು ಪ್ರಮಾಣದಲ್ಲಿ ನೀರನ್ನು ಬೆಂಕಿಯ ಮೇಲೆ ಎರಚಲು ನವೀನ ರೀತಿಯ ನೀರೆತ್ತುವ ಯಂತ್ರಗಳನ್ನು ಅಗ್ನಿಶಾಮಕದಳದವರು ಬಳಸುತ್ತಾರೆ. ಬೆಂಕಿಯ ಅಪಘಾತ ಒದಗಿದ ಸ್ಥಳದ ಬಳಿ ಬಾವಿಯಾಗಲೀ ಕೆರೆಯಾಗಲೀ ಇದ್ದರೆ ಬೆಂಕಿಯನ್ನಾರಿಸುವ ಕಾರ್ಯ ಸುಲಭವಾಗುತ್ತದೆ.

ಅಪಘಾತ ಸ್ಥಳದಲ್ಲಿ ನೀರಿನ ಸೌಕರ್ಯವಿಲ್ಲದಿದ್ದರೆ ಬೆಂಕಿಯನ್ನಾರಿಸುವುದು ಕಷ್ಟ. ಇಂಥ ಸನ್ನಿವೇಶಗಳಲ್ಲಿ ಆಧುನಿಕ ರೀತಿಯಲ್ಲಿ ತಯಾರಿಸಲಾಗಿರುವ ಬೆಂಕಿ ಆರಿಸುವ ಸಾಧನಗಳನ್ನು (ಫೈರ್ ಎಕ್ಸ್‌ಟಿಂಗ್ವಿಷರ್ಸ್) ಉಪಯೋಗಿಸಲಾಗುತ್ತದೆ. ಈ ಸಾಧನದಲ್ಲಿ ಇಂಗಾಲಾಮ್ಲ ಅನಿಲವನ್ನು ಉತ್ಪಾದಿಸಿ ಅದನ್ನು ಬೆಂಕಿ ಎಡೆಗೆ ಎರಚುವುದರಿಂದ ಬೆಂಕಿಯನ್ನು ಶಮನ ಮಾಡಬಹುದು. ಈ ತರದ ಆರಿಸುವ ಸಾಧನವನ್ನು ಸಾಮಾನ್ಯವಾಗಿ ಕಾರ್ಖಾನೆ, ಚಿತ್ರಮಂದಿರ, ಗ್ರಂಥಾಲಯ, ಪ್ರಯೋಗಾಲಯ, ವಸ್ತುಸಂಗ್ರಹಾಲಯ ಮುಂತಾದೆಡೆಗಳಲ್ಲಿ ಇಟ್ಟಿರುತ್ತಾರೆ. ಗ್ಯಾಸೊಲಿನ್, ಆಲ್ಕೊಹಾಲ್, ಎಣ್ಣೆ, ಬಣ್ಣ ಮತ್ತು ವಿದ್ಯುಚ್ಛಕ್ತಿಯಿಂದುಂಟಾದ ಬೆಂಕಿಯನ್ನು ಆರಿಸಲು ಇಂಥ ಉಪಕರಣವನ್ನುಪಯೋಗಿಸುತ್ತಾರೆ. ಇದಲ್ಲದೆ ಕೆಲವು ರಾಸಾಯನಿಕ ಮಾರ್ಜಕಗಳನ್ನು ನೀರಿಗೆ ಬೆರೆಸಿ, ಕಾಡುಗಿಚ್ಚು ಮತ್ತು ಇತರ ಸಾಮಾನ್ಯ ಬೆಂಕಿ ಆಕಸ್ಮಿಕಗಳನ್ನು ಆರಿಸುತ್ತಾರೆ. ದ್ರವರೂಪದ ಕಾರ್ಬನ್ ಟೆಟ್ರಾಕ್ಲೋರೈಡ್ ಸಹ ಬಳಕೆಯಲ್ಲಿದೆ.

ಅಗ್ನಿಶಾಮಕದಳದವರು ಉಪಯೋಗಿಸುವ ಮುಖ್ಯವಸ್ತುಗಳಲ್ಲಿ ದಪ್ಪನೆಯ ಹಗ್ಗ, ಬಲೆ, ಮರದ ಹಾಗೂ ನೂಲೇಣಿ, ದಪ್ಪ ಬಟ್ಟೆಯಿಂದ ಮಾಡಿರುವ ಕೊಳವೆಗಳು ಸೇರಿವೆ. ಜೊತೆಗೆ ನೀರೆತ್ತುವ ಯಂತ್ರಗಳು, ಶೋಧನಾ ದೀಪದ ಸಾಮಗ್ರಿಗಳು, ರಕ್ಷಣಾ ವಾಹನಗಳು, ನೀರಿನ ದೊಡ್ಡ ತೊಟ್ಟಿಗಳು, ರಕ್ಷಣಾ ಆಯುಧಗಳು ಮತ್ತು ಆಸ್ಪತ್ರೆ ಗಾಡಿ (ಆ್ಯಂಬುಲೆನ್ಸ್ ವ್ಯಾನ್)–ಇವುಗಳು ಇರುತ್ತವೆ. ತಾವು ಅಗ್ನಿಶಾಮಕದಳದವರೆಂಬು ದನ್ನು ಸೂಚಿಸಲು ಸಾಮಾನ್ಯವಾಗಿ ತಮ್ಮ ವಾಹನ ಇತ್ಯಾದಿಗಳಿಗೆ ಕೆಂಪುಬಣ್ಣವನ್ನು ಬಳಿದಿರುತ್ತಾರೆ. ಬೆಂಕಿ ಅಪಘಾತದ ಕರೆ ಬಂದರೆ, ಸದಾಸಿದ್ಧರಾಗಿರುವ ಈ ದಳದವರು ತಮ್ಮ ಅಗ್ನಿಶಾಮಕ ಯಂತ್ರಗಳನ್ನು ಮತ್ತು ಇತರ ಸಾಧನಗಳನ್ನು ತಮ್ಮದೇ ಆದ ವಿಶೇಷ ರೀತಿಯ ವಾಹನಗಳಲ್ಲಿರಿಸಿಕೊಂಡು ಆ ಸ್ಥಳಕ್ಕೆ ಧಾವಿಸುತ್ತಾರೆ. ದಾರಿಯಲ್ಲಿ ಹೋಗುವಾಗ ರಸ್ತೆಯಲ್ಲಿ ಸಂಚರಿಸುವ ಎಲ್ಲ ಜನ ಮತ್ತು ಇತರ ಎಲ್ಲ ವಾಹನಗಳೂ ಅವರ ವಾಹನಕ್ಕೆ ಮೊದಲು ಅವಕಾಶ ಮಾಡಿಕೊಟ್ಟು ಆದ್ಯತೆ ನೀಡಬೇಕು. ತಮ್ಮ ವಾಹನ ಆಗಮಿಸುತ್ತಿರುವುದನ್ನು ಸೂಚಿಸಲು ದಳದವರು ಒಂದು ಗಂಟೆಯನ್ನು ಎಡೆಬಿಡದೆ ಬಾರಿಸುತ್ತ ಹೋಗುತ್ತಾರೆ. ಇದಲ್ಲದೆ ವಾಹನದ ಮೇಲೆ ಸತತವಾಗಿ ಹತ್ತಿ ಆರುವ ಪ್ರಕಾಶಮಾನವಾದ ಕೆಂಪು ಅಥವಾ ನೀಲಿಬಣ್ಣದ ದೀಪವಿರುತ್ತದೆ.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಅದರಲ್ಲೂ ಮುಖ್ಯವಾಗಿ ಬೃಹತ್ ಕಾರ್ಖಾನೆಗಳಲ್ಲಿ ಉಂಟಾಗುವ ಬೆಂಕಿಯನ್ನಾರಿಸಲು ಹೆಚ್ಚಿನ ಸಂಖ್ಯೆಯಲ್ಲಿ ಅಗ್ನಿಶಾಮಕ ಯಂತ್ರಗಳನ್ನು ಬಳಸಿ ಹೆಚ್ಚುಕಾಲ ಹೋರಾಡಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಅಕ್ಕಪಕ್ಕದ ಪಟ್ಟಣಗಳ ಅಗ್ನಿಶಾಮಕದಳದವರ ನೆರವು ಸಿಕ್ಕಿದಲ್ಲಿ ಅಗ್ನಿಶಮನಕಾರ್ಯ ತ್ವರಿತಗೊಳ್ಳುತ್ತದೆ. ಕೆಲವು ದೊಡ್ಡ ದೊಡ್ಡ ಕಾರ್ಖಾನೆಗಳು ತಮ್ಮದೇ ಆದ ಅಗ್ನಿಶಾಮಕ ಯಂತ್ರಗಳನ್ನು ಹೊಂದಿರುತ್ತವೆ.

ಬೆಂಕಿ ಅಪಘಾತ ಸಂಭವಿಸಿದಾಗ ಗೊಂದಲಕ್ಕವಕಾಶ ಮಾಡಿಕೊಡದೆ ಶಾಂತ ರೀತಿಯಿಂದ ಶಮನಕಾರ್ಯದಲ್ಲಿ ಸಹಕರಿಸಿದಲ್ಲಿ ಕಾರ್ಯ ಸುಗಮವಾಗುತ್ತದೆ ಎಂಬುದೇ ಅಗ್ನಿಶಾಮಕದಳದವರು ಸಾರ್ವಜನಿಕರಿಗೆ ನೀಡುವ ಸಂದೇಶ. (ಎಸ್.ಆರ್.ಪಿ.)

**ಅಗ್ನಿಶಿಲಾಛಿದ್ರಗಳು :** ಅಗ್ನಿಪರ್ವತಗಳ ಸ್ಫೋಟನ ಕಾಲದಲ್ಲಿ ಅಧಿಕ ಶಾಖ ಮತ್ತು ಒತ್ತಡದಿಂದ ಹೊರಕ್ಕೆ ಎಸೆಯಲ್ಪಡುವ ಶಿಲೆಗಳ ಚೂರುಗಳು. ಗಾತ್ರಗಳಿಗನುಸಾರವಾಗಿ ಅಗ್ನಿಪರ್ವತದ ಬಾಯಿಂದ ಗಗನದತ್ತ ಬಹು ಎತ್ತರಕ್ಕೆ ಹೋಗಿ ಶಿಲಾವರ್ಷದಂತೆ ಮತ್ತೆ ಭೂಮಿಯ ಮೇಲೆ ಬೀಳುತ್ತವೆ. ಈ ಚೂರುಗಳಲ್ಲಿ ವಿವಿಧ ಶಿಲೆಗಳು, ಶಿಲಾರಸದ ಭಾಗಗಳು, ಹಾಗೂ ಶಿಲೆಗಳ ಸಣ್ಣ ಕಣ, ಬೂದಿ ಇತ್ಯಾದಿ ಸೇರಿರುತ್ತವೆ. ಇವೇ ಅಗ್ನಿಶಿಲಾಛಿದ್ರಗಳು (ಪೈರೊಕ್ಲ್ಯಾಸ್ಟಿಕ್ ರಾಕ್ಸ್).

ಅಗ್ನಿಶಿಲಾಛಿದ್ರಗಳು ಹೊರಕ್ಕೆ ಎಸೆಯಲ್ಪಟ್ಟಾಗ ಅವು ಶಿಲಾರಸದೊಡನೆ ಸೇರಿ ಗಟ್ಟಿಯಾಗಬಹುದು ಅಥವಾ ಹಾಗೆಯೇ ಉಳಿಯಬಹುದು. ಕಣಗಳ ಗಾತ್ರಗಳನ್ನನುಸರಿಸಿ ಇವುಗಳನ್ನು ಸ್ಥೂಲವಾಗಿ ಮೂರು ಭಾಗವಾಗಿ ವಿಂಗಡಿಸಬಹುದು:

| ಕಣಗಳ ಗಾತ್ರ | ಗಟ್ಟಿಯಾಗದ್ದು | ಗಟ್ಟಿಯಾದದ್ದು |
|---|---|---|
| 4. ಮಿಮೀ ಮೇಲೆ | ಬೂದಿ (ದೂಳು) | ಟಫ್ |
| 4. ಮಿಮೀ ರಿಂದ 32 ಮಿಮೀವರೆಗೆ | ಲಾಪಿಲ್ಲಿ | ಲಾಪಿಲ್ಲಿ ಟಫ್ |
| 32 ಮಿಮೀ ಮೇಲೆ | ಬಂಡೆಗಳು (ಬ್ಲಾಕು) ಗುಂಡುಗಳು (ಬಾಂಬು) | ಬ್ರೆಚಿಯ ಅಗ್ಲಾಮೆರೇಟ್ |

ಅಗ್ನಿಪರ್ವತಗಳ ಸ್ಫೋಟನೆಯಾದಾಗ ಸಾಮಾನ್ಯವಾಗಿ ಮೊದಲು ಹೊರಕ್ಕೆ ಎಸೆಯಲ್ಪಡುವುದು ಬೂದಿ ಅಥವಾ ಸಿಲಿಕಾ. ಇದು ಅತ್ಯಂತ ಸೂಕ್ಷ್ಮಕಣಗಳಿಂದ ಕೂಡಿದ್ದು ಗಟ್ಟಿಯಾಗದೆ ಹಾಗೆಯೇ ಉಳಿಯಬಹುದು. ಆದರೆ ಅನೇಕ ಸಂದರ್ಭಗಳಲ್ಲಿ ಬೂದಿ ಭೂಮಿಯ ಮೇಲೆ ಬಿದ್ದು ಮಿತವಾಗಿ ಗಟ್ಟಿಯಾಗುತ್ತದೆ. ಬೂದಿಯುಕ್ತವಾದ ಈ ವಸ್ತುವಿಗೆ ಟಫ್ ಎನ್ನುತ್ತಾರೆ. ಇದು ಅನೇಕ ವೇಳೆ ಪದರ ಪದರವಾಗಿರುವುದರಿಂದ ಪ್ರತಿಯೊಂದು



ಅಗ್ನಿಶಿಲಾಛಿದ್ರಗಳು
ಮೇಲುಗಡೆ ಎಡದಿಂದ ಬಲಕ್ಕೆ – ಹೊರಬಿದ್ದ ಸಣ್ಣಕಣಗಳು; ಮೊಟ್ಟೆಯಾಕಾರದ ಗುಂಡುಗಳು; ತಳದಲ್ಲಿ – ನೀರಿನ ಸಂಕರ್ಷ ಪಡೆದ ಲಾವಾರಸ ಆರಿ ಗಂಟುಕಟ್ಟಿರುವುದು.

ಪದರವೂ ನಿಯತಕಾಲವನ್ನು ಸೂಚಿಸುವ ಆಧಾರವಾಗುತ್ತದೆ. ಇದು ಅನೇಕ ವೇಳೆ ಸಮುದ್ರದ ತಳವನ್ನು ಸೇರಿ, ಮರಳು, ಜೇಡುಗಳ ಜೊತೆ ಶೇಖರವಾಗಿ ಟಫ್ ಮರಳುಶಿಲೆ ಮತ್ತು ಟಫ್ ಜೇಡುಶಿಲೆಗಳಾಗಿ ಮೈದೋರುತ್ತದೆ.

ಬೂದಿಯ ಜೊತೆ ಅತಿ ಸೂಕ್ಷ್ಮವಾದ ಸಣ್ಣ ಸಣ್ಣ ಮೊನಚಾದ ಗಾಜಿನ ಕಣಗಳು ಮಿಶ್ರವಾಗಿರುತ್ತವೆ. ಇವುಗಳನ್ನು ಬರಿಯ ಕಣ್ಣಿನಿಂದ ನೋಡಲು ಸಾಧ್ಯವಿಲ್ಲ. ಲಾವಾರಸದ ಸಣ್ಣ ದ್ರವಕಣಗಳೇ ಇವಕ್ಕೆ ಮೂಲ. ಬಹುಬೇಗ ಗಾಳಿಯಲ್ಲಿ ಇವು ಸಣ್ಣಾಗುವುದರಿಂದ ಗಾಜಾಗಿ ಪರಿವರ್ತನೆ ಹೊಂದುತ್ತವೆ.

ಇನ್ನೂ ಹೆಚ್ಚಿನ ಗಾತ್ರದ ಅಂದರೆ ಬಟಾಣಿಯಿಂದ ಬಾದಾಮಿಯಷ್ಟು ಗಾತ್ರವಿದ್ದು ಗುಂಡು ಅಥವಾ ಮೊನಚಾಗಿರುವ ಆಕಾರವನ್ನುಳ್ಳ ಶಿಲಾಛಿದ್ರಗಳು ಒಂದುಗೂಡಿರುವ ಶಿಲೆಯೇ ಲಾಪಿಲ್ಲಿ. ಕೆಲವೊಮ್ಮೆ ಶಿಲಾರಸ ಹಾಗೂ ಬೂದಿಯೊಡನೆ ಮಿಶ್ರಿತವಾಗಿ ಗಟ್ಟಿಯಾಗಿರುವುದೇ ಲಾಪಿಲ್ಲಿ ಟಫ್.

ಆಸ್ಫೋಟನೆಯಾದಾಗ ಆ ಪ್ರಚಂಡ ರಭಸಕ್ಕೆ ಭಾರಿ ಖಂಡಗಳೇ ಹೊರಕ್ಕೆ ಸಿಡಿಯುತ್ತವೆ. 32 ಮಿಮೀಗಳಿಗಿಂತ ಹೆಚ್ಚಿನ ಗಾತ್ರವಿದ್ದು ಮೊನಚಾಗಿದ್ದಲ್ಲಿ ಅವನ್ನು ಬಂಡೆಗಳು (ಬ್ಲಾಕುಗಳು) ಎನ್ನುತ್ತಾರೆ; ಬೂದಿ ಅಥವಾ ಮರಳಿನ ಜೊತೆ ಸೇರಿ ಗಟ್ಟಿಯಾಗಿದ್ದಲ್ಲಿ ಬ್ರೆಷಿಯ ಎನ್ನುತ್ತಾರೆ. ಹಾಗಲ್ಲದೆ ಗುಂಡು ಹಾಗೂ ಅಂಡಾಕಾರವಾಗಿದ್ದಲ್ಲಿ ಗುಂಡುಗಳು, ಮುದ್ದೆಗಳು (ಬಾಂಬು) ಎಂದೂ ಖಂಡಗಳು ಒಂದಕ್ಕೊಂದು ಸೇರಿ ಗಟ್ಟಿಯಾಗಿದ್ದಲ್ಲಿ ಅಗ್ಲಾಮರೇಟ್ ಶಿಲೆ ಎಂದೂ ಕರೆಯುತ್ತಾರೆ.

ಅಗ್ನಿಶಿಲಾಛಿದ್ರಗಳು ಸಾಮಾನ್ಯವಾಗಿ ಜ್ವಾಲಾಮುಖಿಯ ಬಾಯಿಯ ಸುತ್ತಮುತ್ತ ಬಹುಮಟ್ಟಿಗೆ ಶೇಖರವಾಗುತ್ತವೆ. ಹಲವು ಸಂದರ್ಭಗಳಲ್ಲಿ ಅವುಗಳ ಮಂದ ಒಂದು ಸಾವಿರ ಅಡಿಯನ್ನು ಮುಟ್ಟಬಹುದು. ಮೌಂಟ್ ಎಟ್ನಾ ಅಗ್ನಿಪರ್ವತ ಬಹುಮಟ್ಟಿಗೆ ಶಿಲಾಛಿದ್ರಗಳ ಸಂಗ್ರಹಣದಿಂದಾದುದು. ಆದರೆ ಕೆಲವೊಮ್ಮೆ ಧೂಳು, ಬೂದಿ ಮತ್ತು ಇತರ ಸೂಕ್ಷ್ಮಕಣಗಳು ಕುಂಡದ ಬಳಿ ಶೇಖರವಾಗದೆ ಬಹುದೂರಕ್ಕೆ ಒಯ್ಯಲ್ಪಡುತ್ತವೆ. ಉದಾ: ಕಟ್ಮಾಯಿ ಅಗ್ನಿಪರ್ವತದಿಂದ ಸುಮಾರು ನೂರು ಮೈಲಿ ದೂರದಲ್ಲಿ ಕೊಡಿಯಾರ್ ದ್ವೀಪದಲ್ಲಿ ಸುಮಾರು ಹನ್ನೆರಡು ಅಡಿ ಮಂದವಾಗಿರುವ ಅಗ್ನಿಪರ್ವತದ ಬೂದಿ ಶೇಖರವಾಗಿದೆ. 1883ರಲ್ಲಿ ಕ್ರಕಟೋವಾ ಅಗ್ನಿಪರ್ವತದಿಂದ ಎಸೆಯಲ್ಪಟ್ಟ ಬೂದಿ ಮತ್ತು ಧೂಳು ವಾಯುಮಂಡಲವನ್ನೆಲ್ಲ ವ್ಯಾಪಿಸಿ ಸುಮಾರು ಎರಡು ವರ್ಷಗಳವರೆಗೆ ಕಂಡುಬರುತ್ತಿತ್ತು. (ಎಂ.ಎನ್.ವಿ.)

**ಅಗ್ನಿಶಿಲೆಗಳು:** ಮಾತೃ ಶಿಲಾದ್ರವ ಆರಿ ನೇರವಾಗಿ ಅದರಿಂದ ರೂಪುಗೊಂಡ ಶಿಲೆಗಳು. ಈ ಬಗೆಯ ಶಿಲೆಗಳು ರೂಪುಗೊಳ್ಳಲು ಅತ್ಯುಚ್ಚ ಉಷ್ಣತೆ ಬೇಕು ಎಂದೇ ಇವುಗಳಿಗೆ ಅಗ್ನಿಶಿಲೆಗಳೆಂದು ಹೆಸರು.

ಈ ಶಿಲಾದ್ರವವು ಸಾಮಾನ್ಯವಾಗಿ ಭೂಮಿಯ ಮೇಲ್ಮೈನಿಂದ ಸು 100 – 200 ಕಿಮೀ ಆಳದಲ್ಲಿ ಉತ್ಪತ್ತಿಯಾಗಿ, $1400^0$ ಸೆಂ. – $1700^0$ ಸೆ. ಉಷ್ಣತೆಯನ್ನು ಹೊಂದಿರುತ್ತದೆ. ಹೀಗೆ ಉತ್ಪತ್ತಿಯಾದ ಶಿಲಾದ್ರವವು ಹಂತಹಂತವಾಗಿ ಶೇಖರಣೆಗೊಂಡು ಹೆಚ್ಚಿನ ಒತ್ತಡದಲ್ಲಿರುತ್ತದೆ. ಈ ಒತ್ತಡಕ್ಕೆ ಭೂಮಿಯ ಮೇಲ್ಪದರವು (5 ಕಿಮೀ –100 ಕಿಮೀ ವರೆಗೆ) ದುರ್ಬಲವಾಗಿರುವ ಕಡೆ ಬಿರುಕು ಬಿಡುತ್ತದೆ. ಶಿಲಾದ್ರವವು ಸ್ಥಳವನ್ನು ಪ್ರವೇಶಿಸುತ್ತದೆ. ಆಗ ಎಲ್ಲ ದ್ರವಗಳ ಲಕ್ಷಣಗಳಂತೆ ಹೆಚ್ಚಿನ ಒತ್ತಡದ ಸ್ಥಳದಿಂದ ಕಡಿಮೆ ಒತ್ತಡವಿರುವ ಸ್ಥಳಕ್ಕೆ ಸೀಳುಗಳ ಮೂಲಕ ಹರಿಯುತ್ತದೆ. ಕೆಲವೊಮ್ಮೆ ಈ ಸೀಳು ಜಾಡುಗಳು ಶಿಲಾಗೋಳದ ಮೇಲ್ಭಾಗದವರೆಗೂ ಹರಡಿರುತ್ತದೆ. ಇಂತಹ ಸಂದರ್ಭಗಳಲ್ಲಿ ಈ ಶಿಲಾದ್ರವ ಹೆಚ್ಚಿನ ಉಷ್ಣಾಂಶ ಮತ್ತು ಒತ್ತಡದಿಂದ ಭೂಮಿಯ ಹೊರ ಮೈಮೇಲೆ ಜ್ವಾಲೆ ಮತ್ತು ಶಬ್ದದೊಂದಿಗೆ ಚಿಮ್ಮುತ್ತದೆ. ಆಗ ಜ್ವಾಲಾಮುಖಿ ಹುಟ್ಟುತ್ತದೆ. ಈ ಬಗೆಯಲ್ಲಿ ಹೊರಹೊಮ್ಮಿದ ಶಿಲಾದ್ರವವೇ ಲಾವ. ಕೆಲವೊಮ್ಮೆ ಈ ಸೀಳು ಜಾಡುಗಳು ಭೂಮಿಯ ಮೇಲ್ಪದರವಾದ ಕೆಳಗೆ ಅಂತ್ಯಗೊಂಡಾಗ, ಈ ಪಥದ ಮೂಲಕ ಸಾಗಿದ ಶಿಲಾದ್ರವವು ಭೂಮಿಯ ಮೇಲ್ಭಾಗಕ್ಕೆ ಚಿಮ್ಮದೇ, ಭೂಮಿಯ ಶಿಲಾಪದರದೊಳಕ್ಕೆ ನುಗ್ಗುತ್ತದೆ. ಆಗ ಉಷ್ಣಾಂಶವು ಮೂಲ ಶಿಲಾದ್ರವದ ಉಷ್ಣಾಂಶಕ್ಕಿಂತ ಬಹಳಷ್ಟು ಕಡಿಮೆಯಾಗಿ ಆರಿ ಘನರೂಪವನ್ನು ತಾಳುತ್ತದೆ. ಈ ಬಗೆಯಲ್ಲಿ ಮಾತೃ ಶಿಲಾದ್ರವದಿಂದ ರೂಪಿತವಾದ ಶಿಲೆಗಳೇ ಅಗ್ನಿಶಿಲೆಗಳು.

**ವಿಂಗಡಣೆ:** ಅಗ್ನಿಶಿಲೆಗಳನ್ನು ಅನೇಕ ಅಂಶಗಳ ಆಧಾರದ ಮೇಲೆ ವಿಂಗಡಿಸಬಹುದು. ಶಿಲಾದ್ರವವು ಘನೀಕೃತಗೊಂಡ ನೆಲೆಯನ್ನಾಧರಿಸಿ, ಅಗ್ನಿಶಿಲೆಗಳನ್ನು ಎರಡು ವಿಧವಾಗಿ ವಿಂಗಡಿಸಲಾಗಿದೆ;

(1) ಬಾಹ್ಯಸ್ಥ ಬಹಿರ್ಗತ ಶಿಲೆಗಳು ಅಥವಾ ಜ್ವಾಲಾಮುಖಿಜ (2) ಅಂತರಗ್ನಿ ಅಂತಸ್ಥ ಶಿಲೆಗಳು.

ಜ್ವಾಲಾಮುಖಿಗಳಿಂದ ಹೊರಚಿಮ್ಮಿದ ಶಿಲಾದ್ರವದಿಂದ ಮಾರ್ಪಟ್ಟ ಶಿಲೆಗಳನ್ನು ಬಾಹ್ಯಸ್ಥ ಶಿಲೆ ಅಥವಾ ಜ್ವಾಲಾಮುಖಿಜ ಎಂದು ಕರೆಯಲಾಗಿದೆ. ಭೂಮಿಯ ಶಿಲಾಪದರದೊಳಗೆ ನುಗ್ಗಿದ ಶಿಲಾದ್ರವದಿಂದ ಮೈದಳೆದ ಶಿಲೆಗಳನ್ನು ಅಂತರಗ್ನಿ ಶಿಲೆಗಳು ಎಂದು ಹೆಸರಿಸಬಹುದು. ಅಂತಸ್ಥ / ಅಂತರಗ್ನಿ ಶಿಲೆಗಳನ್ನು ಅವುಗಳು ಜನಿಸುವ ಆಳವನ್ನು ಆಧಾರಿಸಿ ಪುನಃ ಅಂತರ್ಗತ (ಬಹು ಆಳದಲ್ಲಿ, ಅಂದರೆ ಸು 5 ಕಿಮೀ ಗಿಂತಲೂ ಹೆಚ್ಚು ಆಳದಲ್ಲಿ ಜನಿಸಿದ ಶಿಲೆಗಳು) ಮತ್ತು ಮಧ್ಯಸ್ಥ ಶಿಲೆಗಳು (400 ಮೀ – ಸು 2.5 ಕಿಮೀ ಆಳದಲ್ಲಿ ದೊರೆಯುವುವು) ಎಂದು ಎರಡು ಬಗೆಯಾಗಿ ವಿಂಗಡಿಸಲಾಗಿದೆ. ಅಗ್ನಿಶಿಲೆಗಳನ್ನು ಅವುಗಳ ಸ್ವರೂಪ, ಸ್ಥೂಲರಚನೆ ಮತ್ತು ಸೂಕ್ಷ್ಮರಚನೆಗಳ ಲಕ್ಷಣಗಳಿಂದ ವಿವರಿಸಬಹುದು.

**ಅಗ್ನಿಶಿಲೆಗಳ ಸ್ವರೂಪ:** ಜ್ವಾಲಾಮುಖಿಯ ಶಿಲಾದ್ರವ ಚಿಮ್ಮುವುದು ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ: ಶಿಲಾದ್ರವ ಉತ್ಪತ್ತಿಯಾದ ಆಳದಲ್ಲಿನ ಒತ್ತಡ, ಶಿಲಾದ್ರವದ ಸ್ನಿಗ್ಧತೆ (viscosity), ಉಷ್ಣಾಂಶ ಹಾಗೂ ಶಿಲಾದ್ರವದಲ್ಲಿ ಅಡಕವಾಗಿರುವ ಅನಿಲಾಂಶಗಳು, ಹೆಚ್ಚು ಒತ್ತಡ, ಉಷ್ಣಾಂಶ, ಅನಿಲಾಂಶ ಹಾಗೂ ಕಡಿಮೆ ಜಿಗುಟುತನ ಇರುವಂತಹ ಶಿಲಾದ್ರವಗಳು ರಭಸವಾಗಿ ಹೊರಚಿಮ್ಮುತ್ತವೆ ಹಾಗೂ ವಿಸ್ತಾರವಾಗಿ ಹರಿಯುತ್ತವೆ. ಈ

ರೀತಿಯಾಗಿ ಹೊರಚಿಮ್ಮಿದ ಶಿಲಾದ್ರವದ ಉಷ್ಣಾಂಶವು ಸು. $800^0$ ಸೆ. – $1200^0$ ಸೆ. ನವರೆಗೂ ಇರುತ್ತದೆ. ಇದು ಆರಿ ಘನರೂಪ ತಾಳಿ ಅದರದೇ ಆದ ಸ್ವರೂಪ, ಸ್ಥೂಲರಚನೆ ಮತ್ತು ಸೂಕ್ಷ್ಮ ರಚನೆಗಳ ಲಕ್ಷಣಗಳನ್ನು ಪ್ರಕಟಿಸುತ್ತದೆ. ಬಾಹ್ಯಸ್ಥ ಶಿಲೆಗಳು, ಶಿಲಾದ್ರವವು ಸೀಳು ಜಾಡನ್ನು ಅನುಸರಿಸಿ ಹೊರಚಿಮ್ಮುವಾಗ ಕೊಳವೆ ಅಥವಾ ಶಂಖಾಕೃತಿಯ ಆಕಾರವನ್ನು ತಳೆದು ಮೇಲು ತುದಿಯು ವರ್ತುಲ / ಅರೆವರ್ತುಲ ಆಕಾರದ ತಗ್ಗುಗಳನ್ನು ಸೃಷ್ಟಿಸಿರುತ್ತದೆ. ಈ ತಗ್ಗುಗಳ ವ್ಯಾಸವು 1 ಕಿಮೀಗಿಂತ ಕಡಿಮೆ ಇರುವಂತಹವುಗಳಿಗೆ ಕ್ರೆಡರ್ಸ್ ಅಂತಲೂ; 1 ಕಿಮೀಗಿಂತ ಹೆಚ್ಚಿನ ವ್ಯಾಸವಿದ್ದೆಡೆ ಅವನ್ನು (ಕುಂಡ) ಕ್ಯಾಲ್ಡೆರಾ ಎಂತಲೂ ಹೆಸರಿಸಲಾಗಿದೆ. ಕಾಲರಾಡೊವಿನ ಲಾಗ್ರಾಶಿಯ ಜ್ವಾಲಾಮುಖಿಗೆ ಸು 45 ಕಿಮೀ ವ್ಯಾಸವುಳ್ಳ ಕುಂಡವಿದೆ. ಕೆಲವೊಮ್ಮೆ ಸ್ತಂಭದೋಪಾದಿಯ ಸೀಳುಜಾಡುಗಳಲ್ಲೇ ಶಿಲಾದ್ರವವು ಘನೀಕರಿಸಬಹುದು, ಅಂತಹವುಗಳನ್ನು ಕೋವೆ ಅಂತಸ್ಸರಣ (vent intrusions) ಎಂದು ಕರೆಯುತ್ತಾರೆ. (ನೋಡಿ ಜ್ವಾಲಾಮುಖಿ/ ಅಗ್ನಿಪರ್ವತ ಅಗ್ನಿಶಿಲಾಭಿದ್ರಗಳು)

ಅಗ್ನಿಪರ್ವತದಿಂದ ಹೊರಹೊಮ್ಮಿರುವ ಲಾವಾ



ಸೀಳುಗಳ ಮುಖಾಂತರ ಹೊರಹೊಮ್ಮಿರುವ ಲಾವಾಪ್ರವಾಹ

ಲಾವರಸ ಸಮುದ್ರದ ತಳಭಾಗದಲ್ಲಿ ಹಾಗೂ ಭೂಖಂಡಗಳ ಮೇಲುಭಾಗದಲ್ಲಿ ವಿಶಾಲವಾಗಿ ಹರಡಿರುತ್ತದೆ. ಲಾವ ಸ್ತರರೂಪದಲ್ಲಿ ಮಟ್ಟಸವಾಗಿ ಭೂಮಿಯ ಮೇಲೆ ವ್ಯಾಪಿಸಿರುತ್ತದೆ. ಇಂತಹವುಗಳನ್ನು ಲಾವಾ–ಪ್ರಸ್ಥಭೂಮಿ ಎಂದು ಕರೆಯುತ್ತಾರೆ. ಉದಾ: ಭಾರತದಲ್ಲಿನ ದಖನ್–ಪ್ರಸ್ಥಭೂಮಿಯ ಒಸಾಲ್ಟ್, ಇಲ್ಲಿ ಸಮಾರು 3,21,869 ಚ. ಕಿಮೀ ವಿಸ್ತರಿಸಿದೆ.

**ಅಂತರಗ್ನಿ ಶಿಲೆಗಳ ಸ್ವರೂಪ:** ಪಶ್ಚಿಮದಲ್ಲಿ ಗುಜರಾತಿನಿಂದ ಹಿಡಿದು ಪೂರ್ವದಲ್ಲಿ ಆಂಧ್ರಪ್ರದೇಶದವರೆಗೆ ಮಧ್ಯಪ್ರದೇಶದಿಂದ ಹಿಡಿದು ದಕ್ಷಿಣದಲ್ಲಿ ಬೆಳಗಾವಿ–ಗುಲ್ಬರ್ಗದವರೆಗೆ ಲಾವಾ ಹರಿವನ್ನು ಕಾಣಬಹುದು. ಅಂತರಗ್ನಿ ಶಿಲಾಸ್ವರೂಪಗಳು ಹೋಗುವ ಭೂಭಾಗದ ನಾಡಶಿಲೆಗಳ ರಚನೆಯನ್ನು ಅವಲಂಬಿಸಿರುತ್ತವೆ. ಭೂಭಾಗದ ರಚನೆಯನ್ನು ಅನುಸರಿಸುವ ಅಗ್ನಿಶಿಲೆಗಳ ಶಿಲಾಸ್ವರೂಪವನ್ನು ಸುಸಂಗತ (ಕನ್ಕಾರ್ಡೆಂಟ್) ರೂಪಗಳೆಂದೂ ಅವುಗಳನ್ನು ಅನುಸರಿಸದೆ ಭೇದಿಸಿರುವ ಸ್ವರೂಪಗಳನ್ನು ಅಸಾಮಂಜಸ್ಯ (discordant) ಸ್ವರೂಪಗಳೆಂದು ಹೆಸರಿಸಲಾಗಿದೆ. ಇವೆರಡನ್ನೂ ಈ ಕೆಳಕಂಡಂತೆ ಉಪ ವಿಭಾಗ ಮಾಡಬಹುದು.

(ಅ) ಸುಸಂಗತ ಸ್ವರೂಪಗಳು: ಸಿಲ್, ಲ್ಯಾಕೋಲಿತ್, ಲೋಪೊಲಿತ್, ಫ್ಯಾಕೋಲಿತ್ ಮತ್ತು ಸುಸಂಗತ ಬ್ಯಾಥೊಲಿತ್

(ಆ) ಅಸಾಮಂಜಸ್ಯ ಸ್ವರೂಪಗಳು: ಡೈಕ್, ಕೋನ್‌ಷೀಟ್‌ಗಳು, ಜ್ವಾಲಾಮುಖಿ ಅಡಚು, ವರ್ತುಲ ಡೈಕ್ ಸುಸಂಗತ ಬ್ಯಾಥೊಲಿತ್, ಸ್ಟಾಕ್, ಬಾಸ್ ಮತ್ತು ಕೋನೊಲಿತ್.

ಎರಡು ಮಟ್ಟಸವಾದ ನಾಡ ಶಿಲಾಸ್ತರಗಳ ನಡುವೆ ಅಂತಸ್ಸರಣಗೊಂಡಿರುವ ತೆಳುವಾದ, ವಿಶಾಲ ಹಾಳೆಗಳೋಪಾದಿಯಲ್ಲಿ ಮೈದಳೆದ ಅಗ್ನಿಶಿಲೆಗಳನ್ನು ಸಿಲ್‌ಗಳೆಂದು ಕರೆಯುತ್ತಾರೆ. ಈ ಸಿಲ್‌ಗಳು ಕೆಲವೇ ಸೆಂಟಿಮೀಟರ್‌ನಿಂದ ಸುಮಾರು ಮೀಟರುಗಳಷ್ಟು ಮಂದವಾಗಿದ್ದು; ಕೆಲವೇ ಚದರಮೀಟರ್‌ನಿಂದ ಸಾವಿರಾರು ಚದರ ಮೀಟರ್‌ನಷ್ಟು ವಿಸ್ತಾರವುಳ್ಳದ್ದಾಗಿರಬಹುದು. ಇವುಗಳು ಎಷ್ಟು ವಿಸ್ತಾರವಾಗಿ ಹರಡುತ್ತವೆನ್ನುವುದು ಮೂಲ ಶಿಲಾದ್ರವದ ರಾಸಾಯನಿಕ ಗುಣ, ಉಷ್ಣತೆ, ದ್ರವತ್ವ ಹಾಗೂ ಮೇಲ್ಪದರದ ನಾಡಶಿಲೆಯ ಸಾಂದ್ರತೆಯನ್ನು ಅವಲಂಬಿಸಿರುತ್ತದೆ.

ಕೆಲವೊಮ್ಮೆ ಸಾಕಷ್ಟು ಸ್ನಿಗ್ಧ ಶಿಲಾದ್ರವವು ಕಿರಿದಾದ ಕೊಳವೆಯ ಮೂಲಕ ಮಟ್ಟಸವಾದ ಶಿಲಾಸ್ತರಗಳ ನಡುವೆ ಅಂತಸ್ಸರಣಗೊಂಡು ವಿಶಾಲವಾಗಿ ಹರಡದೆ ಗುಪ್ಪೆಯಾಗಿ ಮೇಲ್ಪದರದ ಶಿಲಾಸ್ತರವನ್ನು ಮೇಲಕ್ಕೆ ತಳ್ಳುತ್ತ ಪೀನ ಮಸೂರದಂತೆ ಉಬ್ಬಿರುತ್ತದೆ. ಇಂತಹ ಸ್ವರೂಪವನ್ನು ಲ್ಯಾಕೋಲಿತ್ ಎಂದು ಕರೆದಿದೆ. ಇದರ ತಳಭಾಗವು ಸಮತಟ್ಟಾಗಿರುತ್ತದೆ. ಒಮ್ಮೊಮ್ಮೆ ಹೆಚ್ಚಿನ ಒತ್ತಡವಿದ್ದಲ್ಲಿ, ಇದನ್ನು ಆವರಿಸಿರುವ ಮೇಲ್ಭಾಗದ ನಾಡ ಶಿಲಾಸ್ತರಗಳಲ್ಲಿ ಬಿರುಕುಗಳು ತಲೆದೋರಿ ಈ ಮೂಲಕ ಮೇಲಿನ ಶಿಲಾಸ್ತರಗಳಲ್ಲಿ ಸಿಲ್‌ಗಳು ಮತ್ತು ಡೈಕ್ ಸ್ವರೂಪದ ಅಗ್ನಿಶಿಲೆಗಳು ರೂಪುಗೊಳ್ಳುವುದುಂಟು. ಅಲ್ಲದೆ, ಈ ಲ್ಯಾಕೋಲಿತ್‌ಗಳು ಕ್ರಮೇಣ ಮೇಲಿನ ನಾಡಶಿಲಾಸ್ತರಗಳನ್ನು ಭೇದಿಸಿ ಬೆಳೆಯಬಹುದು. ಇಂತಹ ರಚನೆಗಳನ್ನು ಬಿಸ್ಮಲಿತ್ ಎಂದು ಕರೆಯುತ್ತಾರೆ.

ತಟ್ಟೆ ಅಥವಾ ಬೋಗುಣಿ ಆಕಾರದಲ್ಲಿ ಕಾಣುವ ಶಿಲಾಸ್ವರೂಪಗಳಿಗೆ ಲೋಪೊಲಿತ್ ಎಂದು ಹೆಸರು. ಇದರ ತಳಭಾಗ ಕೊಂಚಮಟ್ಟಿಗೆ ಕುಗ್ಗಿರುವುದುಂಟು. ಮೇಲ್ಭಾಗಕ್ಕೆ ನಿರ್ದಿಷ್ಟವಾದ ಆಕಾರವಿರುವುದಿಲ್ಲ. ಇದು ವಿಶಾಲ ಗುಮ್ಮಟ ಅಥವಾ ಕೆಳಮುಖನಾದ ಮಡಕೆಯಂತೆ ಅಥವಾ ಸಮತಟ್ಟಾಗಿಯೂ ಇರಬಹುದು. ಬಹು ವಿಶಾಲವಾದ ಪ್ರದೇಶವನ್ನು ಆಕ್ರಮಿಸಿರುವುದೇ ಇದರ ವಿಶಿಷ್ಟ ಲಕ್ಷಣ. ವಿಸ್ತೀರ್ಣ ಸುಮಾರು ನೂರಾರು ಚದರ ಮೀಟರಿನಿಂದ ಸಾವಿರಾರು ಚದರ ಕಿಲೋಮೀಟರು ಇರುತ್ತದೆ.



ದಿಂಬಿನಾಕಾರದ ಲಾವಾ

ನಾಡಶಿಲೆಗಳು ಮಡಿಕೆ ಬಿದ್ದು, ಇಂತಹ ಶಿಲಾಸ್ತರಗಳಿಗೆ ಶಿಲಾದ್ರವ ಹೊಕ್ಕಾಗ ಶಿಲಾದ್ರವವು ಶಿಲಾಮಡಿಕೆಯ ಶೃಂಗಭಾಗ ಮತ್ತು ಕೆಳ ಮಡಿಕೆಯ ತಳಭಾಗಗಳಲ್ಲಿ ಶೇಖರಣೆಗೊಂಡು ಮಸೂರಾಕಾರದ ಶಿಲಾಸ್ವರೂಪ ಮೈದಳೆಯುತ್ತದೆ. ಇಂತಹ ಸ್ವರೂಪವನ್ನು ಫ್ಯಾಕೋಲಿತ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇವು ಗಾತ್ರದಲ್ಲಿ ಚಿಕ್ಕವು.

ಮಾತೃಶಿಲಾದ್ರವವು ಕೆಲವೊಮ್ಮೆ ಮಟ್ಟಸವಾದ ಶಿಲಾಸ್ತರ ಶ್ರೇಣಿಗಳನ್ನು ಲಂಬವಾಗಿ ಅಥವಾ ನೀಳವಾದ ಹಾಗೂ ಕಿರಿದಾದ ಬಿರುಕುಗಳನ್ನು ಪ್ರವೇಶಿಸಿ ಒಡ್ಡು ಅಥವಾ ಗೋಡೆಗಳೋಪಾದಿಯಲ್ಲಿ ಘನೀಕರಿಸಬಹುದು. ಇಂತಹ ಶಿಲಾಸ್ವರೂಪಗಳಿಗೆ ಡೈಕ್ ಎಂದು ಹೆಸರು. ನೆಲದ ಮೇಲೆ ಡೈಕ್‌ಗಳ ಅಗಲ ಕೆಲವೇ ಸೆಂಟಿಮೀಟರುಗಳಿಂದ ನೂರಾರು ಮೀಟರುಗಳಷ್ಟಿರಬಹುದು. ಹಾಗೆಯೇ ಕೆಲವೇ ಮೀಟರುಗಳಿಂದ ನೂರಾರು ಕಿಲೋಮೀಟರ್ ಉದ್ದವಿರಬಹುದು. ಡೈಕ್‌ಗಳು ಕೆಲವು ಪ್ರದೇಶಗಳಲ್ಲಿ ನೂರಾರು ಸಂಖ್ಯೆಯಲ್ಲಿ ಕಾಣಬಹುದು. ಅಂತಹ ಡೈಕ್‌ಗಳನ್ನು ಡೈಕ್–ಸಮೂಹ ಎಂದು ಕರೆಯುತ್ತಾರೆ.



ನೀಳ್ಗಂಬಗಳಾಗಿ ಮಾರ್ಪಟ್ಟಿರುವ ಲಾವಾಪ್ರವಾಹ

ಈ ಡೈಕ್–ಸಮೂಹಗಳು ಒಂದು ವಿಶಿಷ್ಟ ಜಾಡಿಗೆ ಸೀಮಿತವಾಗಿರುತ್ತವೆ. ಅವುಗಳು ಏಕರೀತಿಯ ಖನಿಜ ಸಂಯೋಜನೆ ಮತ್ತು ಸೂಕ್ಷ್ಮ ರಚನೆಗಳನ್ನು ಹೊಂದಿದ್ದು ಒಂದೇ ಮೂಲದಿಂದ ಜನಿಸಿವೆ ಎಂಬುದನ್ನು ಸೂಚಿಸುತ್ತದೆ. ಒಂದೇ ಪ್ರದೇಶದಲ್ಲಿ ಒಂದು ಅಥವಾ ಹೆಚ್ಚು ಜಾಡುಗಳಿಗೆ ಸೀಮಿತಗೊಂಡಿರುವ ಡೈಕ್ ಸಮೂಹಗಳು ಕಾಣುವ ಸಾಧ್ಯತೆಗಳಿರಬಹುದು. ಒಂದು ಸಮೂಹದ ಡೈಕ್‌ಗಳು ಪರಸ್ಪರ ಸಮಾಂತರದಲ್ಲಿದ್ದರೆ ಅಂತಹವುಗಳನ್ನು ಸಮಾಂತರ ಡೈಕ್ ಸಮೂಹಗಳೆಂತಲೂ ಕೆಲವೊಮ್ಮೆ ಅಸಂಖ್ಯಾತ ಡೈಕ್‌ಗಳು ಕೇಂದ್ರ ಭಾಗದಿಂದ ನಾನಾ ದಿಕ್ಕುಗಳತ್ತ ಪ್ರಸರಿಸುತ್ತದೆ. ಅಂತಹವುಗಳನ್ನು ಕೇಂದ್ರ ಪ್ರಸರಣ ಡೈಕ್ ಸಮೂಹಗಳೆಂತಲೂ ಹೆಸರಿಸಲಾಗಿದೆ. ಮತ್ತೆ ಕೆಲವೊಮ್ಮೆ ಡೈಕ್ ಸಮೂಹದ ಡೈಕ್‌ಗಳು ನಕ್ಷೆಯಲ್ಲಿ ಚಕ್ರಾಕಾರ ಅಥವಾ ಅರ್ಧ ಚಕ್ರಾಕಾರ ಹೊಂದಿದ್ದು ನೆಲಸಮಕ್ಕೆ ಲಂಬವಾಗಿ ಅಥವಾ ಅಧಿಕ ಇಳಿವೋರೆಯನ್ನು ತೋರಿಸುವ ಡೈಕ್‌ಗಳಾಗಿರುತ್ತವೆ. ಇಂತಹವುಗಳನ್ನು ವರ್ತುಲ ಡೈಕ್‌ಸಮೂಹ ಎನ್ನುವರು. ಡೈಕ್‌ಸಮೂಹಗಳ ಇಳಿವೋರೆಯು ಕ್ರಮೇಣ ಆಳದಲ್ಲಿ ಒಳ ಇಳಿವೋರೆಯಾಗಿ ವ್ಯತ್ಯಾಸಗೊಂಡು, ಬಹು ಆಳದಲ್ಲಿ ಕೇಂದ್ರ ಬಿಂದುವಿನೊಂದಿಗೆ ಐಕ್ಯಗೊಳ್ಳುವುದುಂಟು. ಅನೇಕ ಸಂದರ್ಭಗಳಲ್ಲಿ ಈ ವರ್ತುಲ ಡೈಕ್‌ಗಳ ಇಳಿವೋರೆಯು ಪ್ರಾರಂಭದಿಂದಲೇ (ನೆಲದ ಮೇಲೆ) ಕಡಿಮೆ ಒಳ ಇಳಿವೋರೆಯನ್ನು ಸೂಚಿಸುತ್ತಾ ($30^0$–$40^0$) ಶಂಖಾಕೃತಿಯ ಹಾಳೆಗಳಂತೆ ಕಾಣುತ್ತವೆ (ಲಂಬ ಛೇದದಲ್ಲಿ). ಇಂತಹ ವರ್ತುಲ ಡೈಕ್‌ಗಳನ್ನು ಶಂಕುಫಲಕಗಳು ಎನ್ನುತ್ತಾರೆ.

ಮಾತೃ ಶಿಲಾದ್ರವವು ಭೂಭಾಗದಲ್ಲಿ ಉಂಟಾಗುವ ತೆರಪಿನ ಸ್ಥಳಕ್ಕೆ ನಿಧಾನವಾಗಿ ಪ್ರವಹಿಸಿ ಅಲ್ಲಿಯೇ ಆರಿ ಮೈದಳೆಯುವ ಅಗ್ನಿಶಿಲೆಗಳನ್ನು ಕೋನೊಲಿತ್ ಅನ್ನುತ್ತಾರೆ. ಇವುಗಳಿಗೆ ನಿರ್ದಿಷ್ಟ ಆಕಾರವಿರುವುದಿಲ್ಲ.

ಕೆಲವು ಅಂತಸ್ಥ ಶಿಲೆಗಳ ತಳವನ್ನು ಗುರುತಿಸಲಾಗದಷ್ಟು ಆಳದಲ್ಲಿದ್ದು ಬೃಹದಾಕಾರವನ್ನು ಹೊಂದಿರುತ್ತವೆ. ಇಂತಹ ಅಗ್ನಿಶಿಲೆಗಳನ್ನು ಬ್ಯಾತೊಲಿಕ್ ಅಥವಾ ಪ್ಲೂಟಾನ್ಸ್ ಎಂಬುದಾಗಿ ಹೆಸರಿಸಲಾಗಿದೆ. ಬ್ಯಾತೊಲಿತ್‌ಗಳು ಸಾಮಾನ್ಯವಾಗಿ 30–50 ಮೈಲು ಅಗಲ ಹಾಗೂ 700–1250 ಮೈಲು ಉದ್ದವುಳ್ಳ ಗುಮ್ಮಟಗಳಾಗಿರುತ್ತವೆ. ಇವುಗಳು ಭೂಮಿಯ ಮೇಲ್ಭಾಗಕ್ಕೆ

ತೆರೆದುಕೊಂಡಾಗ ಪರ್ವತ ಪಂಕ್ತಿಯ ಓಟಕ್ಕೆ ಸಮಾಂತರವಾಗಿ ಮತ್ತು ನೀಳವಾಗಿ ನೆಲೆಯಾಗಿರುತ್ತವೆ. ಮೇಲ್ಭಾಗ ಗುಮ್ಮಟಾಕಾರ ಹೊಂದಿದ್ದು ಆಳಕ್ಕೆ ಹೋದಂತೆಲ್ಲ ಅವುಗಳ ಪಾರ್ಶ್ವಗಳು ಅಧಿಕ ಇಳಿವೋರೆಯನ್ನು ತೋರಿಸುತ್ತ ಕ್ರಮೇಣ ಗಾತ್ರದಲ್ಲಿ ವಿಸ್ತರವಾಗುತ್ತಾ ಹೋಗುತ್ತವೆ. ಒಮ್ಮೊಮ್ಮೆ ಇವುಗಳ ಹೊರಮೈ ನುಣುಪಾಗಿರದೆ ಅವುಗಳನ್ನು ಆವರಿಸಿದ್ದ ನಾಡಶಿಲೆಗಳ ಉಳಿಕೆಗಳು ಮಾತ್ರ ಅಲ್ಲಲ್ಲಿ ಕಂಡುಬರುತ್ತವೆ. ಇವೇ ಅನ್ಯಶಿಲೆ (ಕ್ಸೆನೋಲಿತ್). ಕೆಲವೊಮ್ಮೆ ಬ್ಯಾತೊಲಿತ್‌ನ್ನು ಆವರಿಸಿರುವ ನಾಡಶಿಲೆಗಳು ಪೂರ್ಣವಾಗಿ ಬ್ಯಾತೊಲಿತ್‌ನಲ್ಲಿ ಐಕ್ಯಗೊಳ್ಳದೆ ಅವುಗಳ ಮಧ್ಯೆ ಮಧ್ಯೆ ಸ್ತಂಭದೋಪಾದಿಯಲ್ಲಿ ಗುಮ್ಮಟ ಚಾಚುಗಳು (cupolas) ಕಂಡುಬರುತ್ತವೆ. ಆಳದಲ್ಲಿ ಇವುಗಳು ಮುಖ್ಯ ಬ್ಯಾತೊಲಿತ್‌ನೊಡನೆ ಐಕ್ಯಗೊಳ್ಳುತ್ತವೆ. ಬ್ಯಾತೊಲಿತ್‌ಗಳು ಪರ್ವತೋದ್ಭವ ಸ್ಥಳಗಳಿಗೆ ಸೀಮಿತವಾಗಿದ್ದು ಮುಖ್ಯ ಪರ್ವತಜನ್ಯ ಕಾರ್ಯಕ್ಕೆ ಮುನ್ನ ತಲೆದೋರುತ್ತವೆ. ಇವು ಸಾಮಾನ್ಯವಾಗಿ ನಾಡಶಿಲೆಗಳನ್ನು ಅಡ್ಡ ಹಾಯ್ದು ಭೇದಿಸುತ್ತವೆ. ಈ ಬಗೆಯ ಕೆಲವು ಶಿಲೆಗಳು, ವಿಸ್ತಾರದಲ್ಲಿ 40 ಚದರ ಮೈಲುಗಳಿಗಿಂತಲೂ ಕಡಿಮೆ ಇದ್ದಾಗ ಅಂಥವುಗಳನ್ನು ಸ್ಟಾಕ್ ಮತ್ತು ಬಾಸ್ ಎಂದು ಕರೆಯಲಾಗುವುದು. ಶಿಲಾಸ್ವರೂಪ ನಕ್ಷೆಯಲ್ಲಿ ಇವುಗಳ ಬಾಹ್ಯರೂಪವು ವೃತ್ತಾಕಾರ (ಅಂಡಾಕಾರ)ವಾಗಿದ್ದರೆ ಬಾಸ್‌ಗಳೆಂದೂ ಹಾಗಿಲ್ಲದಿದ್ದರೆ ಸ್ಟಾಕ್‌ಗಳೆಂದೂ ಕರೆಯುತ್ತಾರೆ. ಬಾಸ್ ಮತ್ತು ಸ್ಟಾಕ್‌ಗಳ ಶಿಖರವು ಸಾಮಾನ್ಯವಾಗಿ ಸಮತಟ್ಟಾಗಿರುತ್ತದೆ.

ಅಂತರಗ್ನಿ ಶಿಲೆಗಳಲ್ಲಿ ಬಹು ಅಂತಸ್ಸರಣಗಳು (multiple intrusions), ಸಂಯುಕ್ತ ಅಂತಸ್ಸರಣಗಳು (composite intrusions) ಮತ್ತು ವಿಭೇಕೀಕೃತ ಅಂತಸ್ಸರಣಗಳು (differentiated intrusions) ಎಂದು ಗುರುತಿಸಬಹುದು. ಮಾತೃಶಿಲಾದ್ರವವು ಒಂದೇ ಸ್ಥಳಕ್ಕೆ ಒಂದಕ್ಕಿಂತ ಹೆಚ್ಚು ಸಲ ಒಂದೇ ಕೂಪದ ಮೂಲಕ ನುಗ್ಗಿದಾಗ ಬಹು ಅಂತಸ್ಸರಣಗಳು ರೂಪುಗೊಳ್ಳುತ್ತವೆ. ಇವುಗಳ ಶಿಲಾ ಸಂಯೋಜನೆಯಲ್ಲಿ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ. ಆದರೂ ಅವುಗಳ ಅಂಚಿನಲ್ಲಿ ಕಾಣಬರುವ ಸಡೆತದ ವಿನ್ಯಾಸದಿಂದ ಸುಲಭವಾಗಿ ಗುರುತಿಸಬಹುದು. ಕೆಲವು ಬಹು ಅಂತಸ್ಸರಣಗಳಲ್ಲಿ ಶಿಲಾ ಸಂಯೋಜನೆ ಬೇರೆಬೇರೆಯಾಗಿದ್ದರೆ ಅಂತಹವುಗಳನ್ನು ಸಂಯುಕ್ತ ಅಂತಸ್ಸರಣಗಳೆಂದು ಹೆಸರಿಸಲಾಗಿದೆ. ಇವುಗಳನ್ನು ಸಾಮಾನ್ಯವಾಗಿ ಸಿಲ್ ಮತ್ತು ಡೈಕ್ ಸ್ವರೂಪಗಳಲ್ಲಿ ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಮಾತೃಶಿಲಾದ್ರವವು ನಾಡಶಿಲೆಗಳನ್ನು ಭೇದಿಸಿ ಮೇಲಕ್ಕೆ ಬಂದ ಅನಂತರ ಅನುಕೂಲಕರ ಸನ್ನಿವೇಶದಡಿಯಲ್ಲಿ ಮಂದಗತಿಯಲ್ಲಿ ಆರಲು ಪ್ರಾರಂಭಿಸಿ ವಿವಿಧ ಹಂತಗಳಲ್ಲಿ ವಿವಿಧ ಖನಿಜಗಳು ರೂಪುಗೊಳ್ಳುತ್ತವೆ. ಆದ್ದರಿಂದ, ಒಂದೇ ಅಂತಸ್ಥಶಿಲೆಯ ವಿವಿಧ ಮಟ್ಟಗಳಲ್ಲಿ ಪರಸ್ಪರ ಜನ್ಯ ಸಂಬಂಧ ತೋರುವ ವಿವಿಧ ಶಿಲೆಗಳು ಕಂಡುಬರುತ್ತವೆ. ಇದು ವಿಭೇದಾತ್ಮಕ ಅಂತಸ್ಸರಣಗಳು.

ಅಗ್ನಿಶಿಲೆಗಳ ಸ್ಥೂಲ ರಚನೆ: ಬಾಹ್ಯಸ್ಥ ಶಿಲೆಗಳಿಗೆ ತಮ್ಮದೇ ಆದ ಸ್ಥೂಲ ರಚನೆಗಳಿರುತ್ತವೆ. ಇವುಗಳನ್ನು ಬರಿಗಣ್ಣಿನಿಂದಲೆ ವೀಕ್ಷಿಸಬಹುದು. ಬಾಹ್ಯಸ್ಥ ಶಿಲೆಗಳ ಸ್ಥೂಲ ರಚನೆಗಳನ್ನು ಈ ಕೆಳಗೆ ವಿವರಿಸಲಾಗಿದೆ.

**ರಂಧ್ರಕ ರಚನೆ:** ಈ ರಚನೆಯು ಜ್ವಾಲಾಮುಖಿಗಳ ಬಹುಮುಖ್ಯ ಲಕ್ಷಣ. ಮಾತೃಶಿಲಾದ್ರವದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅನಿಲಾಂಶಗಳು ಅಯಾಣು ರೂಪದಲ್ಲಿ ಸಂಯೋಜನೆಗೊಂಡಿರುತ್ತದೆ. ಈ ದ್ರವವು ಹೊರಚಿಮ್ಮಿದಾಗ, ಅದರಲ್ಲಿನ ಅನಿಲಾಂಶವು ದ್ರವದಿಂದ ಅನಿಲಗಳಾಗಿ ಬೇರ್ಪಟ್ಟು ವಾತಾವರಣವನ್ನು ಸೇರುತ್ತವೆ. ಈ ಕ್ರಿಯೆ ಸಂಭವಿಸುವಾಗ ಶಿಲಾದ್ರವದಿಂದ ಬೇರ್ಪಟ್ಟ ಅನಿಲಗಳು ವೈವಿಧ್ಯಮಯ ಗಾತ್ರ ಮತ್ತು ಆಕಾರವುಳ್ಳ ರಂಧ್ರಗಳನ್ನು (ಬಾಹ್ಯಸ್ಥಶಿಲೆ) ಜ್ವಾಲಾಮುಖಿಜಗಳಲ್ಲಿ ಸೃಷ್ಟಿಸುತ್ತವೆ. ಕೆಲವೊಮ್ಮೆ ಈ ರಂಧ್ರಗಳು ಕೊಳವೆಯೋಪಾದಿಯಲ್ಲಿ ಇರಬಹುದು. ಅಸಂಖ್ಯ ರೂಪರಹಿತ ಅನಿಲ ರಂಧ್ರಗಳುಳ್ಳ ಶಿಲೆಗಳನ್ನು ಕಿಟ್ಟ ಅಥವಾ ಸ್ಕೋರಿಯ ಎನ್ನುತ್ತಾರೆ. ನೊರೆಯಂತೆ ಕಾಣುವ ಇಂತಹ ಶಿಲೆಗಳನ್ನು ಪ್ಯೂಮಿಸ್ ಎಂದು ಹೆಸರಿಸಲಾಗಿದೆ.

**ಅಮಿಗ್ಡಲಾಯಿಡ್ ರಚನೆ:** ಮೇಲೆ ವಿವರಿಸಿದ ಜ್ವಾಲಾಮುಖಿಜಗಳಲ್ಲಿನ ರಂಧ್ರಕಗಳಲ್ಲಿ ಕ್ರಮೇಣ ಆನುಷಂಗಿಕ ಖನಿಜಗಳು (ದ್ವಿತೀಯಕ) ರೂಪುಗೊಳ್ಳಬಹುದು. ಇಂತಹ ಆನುಷಂಗಿಕ ಖನಿಜಗಳನ್ನು ಅಮಿಗ್ಡೇಲ್‌ಗಳೆಂದೂ ರಂಧ್ರಕಗಳನ್ನು ಅಮಿಗ್ಡಲಾಯಿಡ್‌ಗಳೆಂದೂ ಹಾಗೂ ರಚನೆಯನ್ನು ಅಮಿಗ್ಡಲಾಯಿಡ್ ರಚನೆ ಎಂದೂ ಕರೆಯುತ್ತಾರೆ. ಈ ಬಗೆಯಲ್ಲಿ ರೂಪುಗೊಂಡ ಆನುಷಂಗಿಕ ಖನಿಜಗಳಲ್ಲಿ ಬಹು ಮುಖ್ಯವಾದವುಗಳು; ಜಿಯೊಲೈಟ್, ಸಿಲಿಕ, ಕ್ಯಾಲ್ಸೈಟ್, ಕ್ಲೋರೈಟ್, ಇತ್ಯಾದಿ. ಕೆಲವೊಮ್ಮೆ ಆನುಷಂಗಿಕ ಖನಿಜಗಳು ನಿಕ್ಷೇಪದ ಪ್ರಮಾಣದಲ್ಲಿ ದೊರೆಯುವ ಸಾಧ್ಯತೆಗಳುಂಟು. ಉದಾ: ಭಾರತದ ಪೂನಾ ಬಳಿ ದಖನ್–ಬಸಾಲ್ಟ್ ಶಿಲೆಯಲ್ಲಿ ಈ ಬಗೆಯ ನಿಕ್ಷೇಪಗಳು ದೊರೆಯುತ್ತವೆ.

**ಬ್ಲಾಕ್ ಲಾವ:** ಲಾವಸ್ತರದ ಹೊರಮೈ ಸ್ವರೂಪದಲ್ಲಿ ನಾನಾ ಗಾತ್ರದ ಮತ್ತು ನಾನಾ ಆಕಾರದ ಶಿಲಾಛಿದ್ರಗಳು ಕಂಡುಬಂದಲ್ಲಿ ಅದನ್ನು ಬ್ಲಾಕ್ ಲಾವ ಎಂದು ಕರೆಯುತ್ತಾರೆ.

**ರೋಪಿ ಲಾವ:** ಲಾವಸ್ತರದ ಹೊರಮೈ ನುಣುಪಾಗಿದ್ದು ಹಗ್ಗದ ಸುರುಳಿಗಳಂತೆ ಕಂಡುಬಂದಲ್ಲಿ, ಇಂತಹ ಲಾವಸ್ತರಗಳನ್ನು ರೋಪಿ ಲಾವ ಎಂದು ಹೆಸರಿಸಲಾಗಿದೆ.

**ಪಿಲ್ಲೊ (ದಿಂಬು) ಲಾವ:** ಈ ರಚನೆಯು ಸಮುದ್ರದ ತಳಭಾಗದಲ್ಲಿ ಹರಿಯುವ ಲಾವಸ್ತರಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಸಮುದ್ರದ ತಳಭಾಗದಲ್ಲಿ ಲಾವ ತೀಕ್ಷ್ಣವಾಗಿ ಶೈತ್ಯಗೊಳ್ಳುವುದರಿಂದ ಗುಳ್ಳೆ ಆಕಾರದಲ್ಲಿ ಅನಿಲಗಳು ಬಿಡುಗಡೆಯಾಗುತ್ತವೆ ಹಾಗೂ ಮೇಲ್ಪದರದ ನೀರಿನ ಒತ್ತಡಕ್ಕೆ ಅನುಗುಣವಾಗಿ ದಿಂಬಿನ ಆಕಾರದ ರಚನೆಯು ಲಾವಸ್ತರಗಳ ಹೊರಮೈ ಮೇಲೆ ಕಂಡುಬರುತ್ತವೆ. ದಿಂಬುವಿನ ನಡುವೆ ಚೆರ್ಟ್ ಎಂಬ ಸೂಕ್ಷ್ಮ ಕಣಶಿಲೆಗಳಿರುತ್ತವೆ. ಈ ರಚನೆಯು ಅಂತಹ ಲಾವ ಸ್ತರಗಳ ಒಳಭಾಗದಲ್ಲಿ ಕಾಣುವುದಿಲ್ಲ. ಇದನ್ನು ಪಿಲ್ಲೊಲಾವ ಅಥವಾ ದಿಂಬುಲಾವ ರಚನೆ ಎಂದು ಹೇಳುವುದು. ಚಿತ್ರದುರ್ಗದ ಹಿರಿಯೂರು ಬಳಿಯ ಮರಡಿಹಳ್ಳಿ ಎಂಬಲ್ಲಿ ಈ ಬಗೆಯ ರಚನೆಗಳಿವೆ. ಭಾರತೀಯ ಭೂವೈಜ್ಞಾನಿಕ ಸರ್ವೆ ಸಂಸ್ಥೆ ಈ ದಿಬ್ಬವನ್ನು ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕವಾಗಿ ರಕ್ಷಿಸಿದೆ.

**ಪ್ರವಾಹ ರಚನೆ:** ಶಿಲಾರಸವು ಜ್ವಾಲಾಮುಖಿಯ ಮುಖ್ಯ ಕೊಳವೆಯ ಮೂಲಕ ಹೊರ ಹೊಮ್ಮಿದಾಗ ಭೂಮಿಯ ಹೊರಮೈನ ಇಳಿಜಾರಿಗೆ ಅನುಗುಣವಾಗಿ ಪ್ರವಾಹವಾಗಿ ಹರಿಯುತ್ತದೆ. ಈ ಪ್ರವಾಹದ ಪ್ರಭಾವದಿಂದ ಲಾವ ಶಿಲಾರೂಪ ತಾಳಿದಾಗ ಲಾವದಲ್ಲಿದ್ದ ಶಿಲಾಛಿದ್ರಗಳು, ಪ್ರವಾಹ ಗೆರೆಗಳು ಹಾಗೂ ವರ್ಣವ್ಯತ್ಯಾಸಗಳು ಪ್ರವಾಹದ ದಿಕ್ಕಿನತ್ತ ಓರಣಗೊಂಡು ಪರಸ್ಪರ ಸಮಾಂತರವಾಗಿರುತ್ತವೆ. ಈ ರಚನೆಗೆ ಪ್ರವಾಹರಚನೆ ಎಂದು ಹೆಸರು.

**ಶಿಲಾಸೀಳು ಮತ್ತು ಪದರ ರಚನೆಗಳು:** ಇಂತಹ ಸೀಳು ರಚನೆಗಳು ಸಾಮಾನ್ಯವಾಗಿ ಎಲ್ಲ ಬಗೆಯ ಶಿಲೆಗಳಲ್ಲೂ ಕಾಣಬಹುದು. ಈ ರಚನೆಗಳು, ಅಗ್ನಿಶಿಲೆಗಳು ಆರುವ ಸಮಯದಲ್ಲಿ ಅಥವಾ ಅನಂತರದ ಭೂ ಚಟುವಟಿಕೆಗಳಿಗೆ ಒಳಗಾದಾಗ ರೂಪುಗೊಳ್ಳುತ್ತವೆ. ಸೀಳು ರಚನೆಗಳು ಅನೇಕ ವಿಧವಾದ ರೂಪಗಳಲ್ಲಿ ಕಂಡುಬರುತ್ತವೆ. ಬಾಹ್ಯಸ್ಥ ಶಿಲೆಗಳಲ್ಲಿ ಬಹು ಮುಖ್ಯವಾದುದು ಸ್ತಂಭಾಕೃತಿಯ ಸೀಳುಗಳು. ಬಸಾಲ್ಟ್ ಶಿಲಾ ಪ್ರವಾಹವು ತಣ್ಣಗಾಗುವಾಗ ಚಿತ್ರದಲ್ಲಿ ತೋರಿಸಿರುವಂತೆ ಸಮಾಂತರದಲ್ಲಿ ಹರಡಿರುವ ಸೆಳೆತದ ಕೇಂದ್ರಬಿಂದುಗಳು ಉದ್ಭವಿಸುತ್ತವೆ.



ಗುಂಪಾಗಿ ಹರಡಿರುವ ಡೈಕ್‌ಗಳು ರಿಂಗ್ ಡೈಕ್

ಈ ಬಿಂದುಗಳ ನಡುವಿನ ಅಂತರದಲ್ಲಿ ಶಿಲೆಯು ವಿರುದ್ಧ ದಿಕ್ಕಿನಲ್ಲಿ ಕುಗ್ಗುವುದರಿಂದ ಆ ಸ್ಥಳದಲ್ಲಿ ಸೀಳುಗಳು ಉದ್ಭವಿಸಿ ಸ್ತಂಭಾಕೃತಿಯನ್ನು ಪಡೆಯುತ್ತವೆ. ಈ ಸೀಳುಗಳು ಪ್ರವಾಹಕ್ಕೆ ಲಂಬವಾಗಿರುತ್ತವೆ. ಇಂತಹ ಮನಮೋಹಕ ರಚನೆಗಳನ್ನು ಕರ್ನಾಟಕದ ಮಲ್ಪೆ ಬಂದರಿಗೆ ಸಮೀಪವಿರುವ ಸೈಂಟ್‌ಮೇರೀಸ್ ಐಲೆಂಡ್‌ನಲ್ಲಿ ವಿಶಾಲವಾಗಿ ಕಾಣಬಹುದು. ಇವುಗಳನ್ನು ಮೊದಲು ವರದಿ ಮಾಡಿದವರು ಬೆಂಗಳೂರು ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದ ಸಿ. ನಾಗಣ್ಣ.

**ಶಿಲಾವಿನ್ಯಾಸ:** ಶಿಲೆಗಳ ವಿನ್ಯಾಸವನ್ನು (ಸೂಕ್ಷ್ಮ ರಚನೆಯನ್ನು) ಅವುಗಳ ಖನಿಜಗಳ ಸ್ಫಟಿಕೆ, ಗಾತ್ರ, ಆಕಾರ ಮತ್ತು ಅವುಗಳ ಪರಸ್ಪರ ಸಂಬಂಧಗಳಿಂದ ವಿವರಿಸಬಹುದು. ಶಿಲೆ ಉಂಟಾದ ಬಗೆಯನ್ನು, ಆಗ ಇದ್ದ ಸನ್ನಿವೇಶದ ಬಗ್ಗೆ ವಿನ್ಯಾಸದ ಅಧ್ಯಯನ ತಿಳಿಸಿಕೊಡುತ್ತದೆ.

ಶಿಲೆಯಲ್ಲಿನ ಸ್ಫಟಿಕಾಕಾರದ ಖನಿಜಗಳು ಮತ್ತು ಅಸ್ಫಟಿಕ ವಸ್ತುಗಳ ನಡುವಿನ ಪರಿಮಾಣವೇ ಸ್ಫಟಿಕತೆ. ಮೂರು ಬಗೆಯ ಸ್ಫಟಿಕತೆಯನ್ನು ಗುರುತಿಸಲಾಗಿದೆ. ಶಿಲೆಯ ಎಲ್ಲ ಕಣಗಳು ಸ್ಫಟಿಕಗಳಾಗಿ ರೂಪುಗೊಂಡಿದ್ದರೆ ಅಂತಹವುಗಳನ್ನು ಪೂರ್ಣ ಸ್ಫಟಿಕತೆ, ಶಿಲೆಯಲ್ಲಿ ಕೆಲವು ಖನಿಜ ಸ್ಫಟಿಕಾಕಾರವನ್ನು ತಳೆದಿದ್ದು ಉಳಿದವು ಅಸ್ಫಟಿಕಾಕಾರವನ್ನು ಹೊಂದಿದ್ದರೆ ಅರೆ ಸ್ಫಟಿಕತೆ ಮತ್ತು ಶಿಲೆಯಲ್ಲಿ ಯಾವ ಸ್ಫಟಿಕಾಕಾರದ ಕಣಗಳು ಕಂಡು ಬರದಿದ್ದಲ್ಲಿ ಅಸ್ಫಟಿಕತೆ ಎಂದು ಹೇಳಲಾಗುವುದು. ಸಾಮಾನ್ಯವಾಗಿ ಪೂರ್ಣ ಸ್ಫಟಿಕತೆಯನ್ನು ಅಂತಸ್ಥ ಶಿಲೆಗಳಲ್ಲಿಯೂ, ಅರೆ ಸ್ಫಟಿಕತೆಯನ್ನು ಮಧ್ಯಸ್ಥ ಶಿಲೆಗಳಲ್ಲಿಯೂ ಮತ್ತು ಅಸ್ಫಟಿಕತೆಯನ್ನು ಬಾಹ್ಯಸ್ಥ ಶಿಲೆಗಳಲ್ಲಿಯೂ ಕಾಣಬಹುದು. ಪೂರ್ಣ ಅಸ್ಫಟಿಕತೆಯುಳ್ಳ ಶಿಲೆಯನ್ನು ನೈಜಗಾಜುಶಿಲೆ ಎಂದು ಕರೆಯುತ್ತಾರೆ. ಅನೇಕ ಸಂದರ್ಭಗಳಲ್ಲಿ ಇಂತಹ

ಶಿಲೆಯಲ್ಲಿ ವಿವಿಧಾಕಾರದ ಸೂಕ್ಷ್ಮ ಕಣಗಳನ್ನು ನೋಡಬಹುದು. ಇವುಗಳನ್ನು ಕ್ರಿಸ್ಟಲೈಟ್ಸ್ ಮತ್ತು ಮೈಕ್ರೊಲೈಟ್ಸ್ ಎಂದು ಹೆಸರಿಸಲಾಗಿದೆ. ಕ್ರಿಸ್ಟಲೈಟ್ಸ್‌ಗಳು ಅತೀ ಸೂಕ್ಷ್ಮ ಕಣಗಳಾಗಿದ್ದು, ಅವುಗಳು ಯಾವ ಖನಿಜ ವಿಭಾಗಕ್ಕೆ ಸೇರಿದವು ಎಂಬುದನ್ನು ಗುರುತಿಸಲು ಸಾಧ್ಯವಾಗದು. ಇವೇ ಭ್ರೂಣ ಸ್ಫಟಿಕಗಳು. ಭ್ರೂಣ ಸ್ಫಟಿಕಗಳು ವಿವಿಧಾಕೃತಿಯಲ್ಲಿರುತ್ತವೆ. ಮಣಿ ಅಥವಾ ಹನಿಗಳಂತೆ (ಗ್ಲಾಬ್ಯುಲೈಟ್), ಮಣಿಗಳ ಹಾರದಂತೆ (ಮಾರ್ಗರೈಟ್), ಸರಳು ಅಥವಾ ಸಿಲಿಂದರಾಕಾರದಂತೆ (ಲ್ಯಾಂಗುಲೈಟ್ ಅಥವಾ ಬೆಲೊನೈಟ್), ಕೂದಲೆಳೆಯಂತೆ (ಟ್ರಿಕೈಟ್), ತೆಂಗಿನಗರಿಯಾಕಾರ ಅಥವಾ ಮರದ ಕೊಂಬೆಯಂತೆ (ಸ್ಕಾಪ್ಯುಲೈಟ್) ಕಂಡುಬರಬಹುದು. ಗಾತ್ರದಲ್ಲಿ ಕ್ರಿಸ್ಟಲೈಟ್‌ಗಿಂತ ಕೊಂಚ ದೊಡ್ಡದಾಗಿದ್ದು ಹೆಚ್ಚಿನ ಸ್ಫಟಿಕಾಕೃತಿಯನ್ನು ತಳೆದಿರುವ ಸೂಕ್ಷ್ಮ ಕಣಗಳೇ ಮೈಕ್ರೋಲೈಟ್ಸ್. ಸಾಮಾನ್ಯವಾಗಿ ಮೈಕ್ರೋಲೈಟ್ಸ್ ಸೂಕ್ಷ್ಮ ಸರಳು ಅಥವಾ ಸೂಜಿಯಾಕಾರವನ್ನು ತಳೆದಿರುತ್ತವೆ. ಇವನ್ನು ಸೂಕ್ಷ್ಮದರ್ಶಿಯ ಮೂಲಕ ಮಾತ್ರ ಗುರುತಿಸಬಹುದು ಹಾಗೂ ಯಾವ ಖನಿಜ ವಿಭಾಗಕ್ಕೆ ಸೇರಿದವೆಂದು ಹೇಳಬಹುದು.



ಲ್ಯಾಕೊಲಿತ್ ಲೋಪೊಲಿತ್

ನೈಜಗಾಜುಶಿಲೆಗಳು ಹೆಚ್ಚುಕಾಲ ಗಾಜಾಗಿ ಉಳಿಯಲಾರವು. ಹೀಗಾಗಿ, ಗಾಜುತನ ಮಾಯವಾಗಿ ಅದರ ಬದಲಾಗಿ ಅನುಕೂಲಕರ ಸನ್ನಿವೇಶದಲ್ಲಿ ಅಲ್ಲಲ್ಲಿ ಖನಿಜಾಂಶಗಳು ಸ್ಫಟಿಕಾಕಾರವನ್ನು ತಳೆಯಲು ಪ್ರಾರಂಭಿಸುತ್ತವೆ. ಈ ಕ್ರಿಯೆಯನ್ನು ವಿಗಾಜತ್ವ ಎಂದು ಕರೆಯುತ್ತಾರೆ. ಫೆಲ್ಸೈಟ್ ಎಂಬ ಶಿಲೆಯು ಈ ರೀತಿಯಾಗಿ ಉದ್ಭವಿಸಿ ಸೂಕ್ಷ್ಮಕಣ ವಿನ್ಯಾಸ ಹೊಂದಿರುತ್ತದೆ. ಕೆಲವೊಮ್ಮೆ ಈ ವಿಗಾಜತ್ವವು ಗಾಜುಶಿಲೆಯ ಬಿರುಕುಗಳಲ್ಲಿ ಮುತ್ತಿನಮಣಿ ಆಕಾರದಲ್ಲಿ ಕಾಣಬರುತ್ತವೆ. ಇಂತಹ ಬಿರುಕುಗಳನ್ನು ಪರ್ಲಿಟಿಕ್ ಬಿರುಕುಗಳು ಎಂದು ಹೆಸರಿಸಲಾಗಿದೆ.

ಶಿಲೆಯ ಖನಿಜ ಕಣಗಳನ್ನು ಬರಿಗಣ್ಣಿನಲ್ಲಿ ಅಥವಾ ಮಸೂರದ ಮೂಲಕ ವೀಕ್ಷಿಸಿದಾಗ ಸ್ಪಷ್ಟವಾಗಿ ಗೋಚರಿಸಿದಲ್ಲಿ ಆ ಶಿಲೆಯ ವಿನ್ಯಾಸವನ್ನು ಫೆನಿರಿಕ್ (Pheneric) ಎಂದೂ ಹಾಗೆ ಗೋಚರವಾಗದಿದ್ದಲ್ಲಿ ಅಫೆನಿರಿಕ್ ಎಂದೂ ವಿವರಿಸುತ್ತಾರೆ. ಫೆನಿರಿಕ್ ವಿನ್ಯಾಸವುಳ್ಳ ಶಿಲೆಗಳನ್ನು ಅದರಲ್ಲಿನ ಕಣಗಳ ಗಾತ್ರಕ್ಕನುಸಾರವಾಗಿ ದಪ್ಪ ಕಣದವು (5 ಮಿಮೀಗಿಂತಲೂ ಅಧಿಕವಾಗಿರುವ), ಮಧ್ಯಮಕಣದವು (1– 5 ಮಿಮೀ ಇರುವ) ಮತ್ತು ಸೂಕ್ಷ್ಮಕಣದವು (1 ಮಿಮೀಗಿಂತಲೂ ಕಡಿಮೆಯಿರುವ) ಎಂದು ಮೂರು ವಿಧವಾಗಿ ವಿಂಗಡಿಸಬಹುದು.

ಶಿಲೆಗಳಲ್ಲಿ ಖನಿಜಕಣಗಳು ಸದಾ ಸಂಪೂರ್ಣ ಸ್ಫಟಿಕಾಕಾರವನ್ನು ಹೊಂದಿರುವುದಿಲ್ಲ; ಅವುಗಳ ಆಕಾರದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಖನಿಜಕಣಗಳು ಸಂಪೂರ್ಣ ಸ್ಫಟಿಕ ರೂಪವನ್ನು ತಳೆದಿದ್ದಲ್ಲಿ ಪೂರ್ಣಾಕೃತಿ (ಯೂಹೆಡುಲ್) ಎಂದೂ, ಸಾಧಾರಣ ಸ್ಫಟಿಕಾಕೃತಿಯನ್ನು ಹೊಂದಿದ್ದಲ್ಲಿ ಮಿತಾಕೃತಿ (subhedral) ಮತ್ತು ನಿರಾಕಾರವಾಗಿದ್ದಲ್ಲಿ ನಿರಾಕೃತಿ (anhedral) ಎಂದೂ ವಿವರಿಸಲಾಗುತ್ತದೆ.

ಅಗ್ನಿಶಿಲೆಗಳಲ್ಲಿನ ಕಣಗಳ ಪರಸ್ಪರ ಸಂಬಂಧ, ಆಕಾರ, ಗಾತ್ರ ಮತ್ತು ಸ್ಫಟಿಕತೆಗಳ ಆಧಾರದ ಮೇಲೆ ಈ ಕೆಳಕಂಡ ಬಗೆಯ ಶಿಲಾವಿನ್ಯಾಸ ಅಥವಾ ರಚನೆಯನ್ನು ಗುರುತಿಸಲಾಗಿದೆ.

**ಸಮಕಣ ರಚನೆ:** ಶಿಲೆಯಲ್ಲಿನ ಎಲ್ಲ ಕಣಗಳು ಹೆಚ್ಚು ಕಡಿಮೆ ಸಮ ಗಾತ್ರದವಾಗಿರುತ್ತವೆ. ಸಮಕಣ ರಚನೆಯಲ್ಲಿನ ಶಿಲೆಯ ಬಹುತೇಕ ಕಣಗಳು ಪೂರ್ಣಾಕೃತಿಯನ್ನು ತಳೆದಿದ್ದರೆ, ಅಂತಹವುಗಳನ್ನು ಪ್ಯಾನಿಡಿಯೋಮಾರ್ಫಿಕ್ ರಚನೆ ಎಂತಲೂ ಮಿತಕೃತಿಯನ್ನು ಹೊಂದಿದ್ದರೆ, ಹೈಪಿಡಿಯೋಮಾರ್ಫಿಕ್ ರಚನೆ ಎಂದೂ ಮತ್ತು ನಿರಾಕೃತಿಯಿಂದ ಕೂಡಿದ ಸಮಕಣ ರಚನೆಯನ್ನು ಅಲೋಟ್ರಿಯೋಮಾರ್ಫಿಕ್ ರಚನೆ ಎಂತಲೂ ವಿವರಿಸಬಹುದು. ಸಮಕಣ ರಚನೆಯು ಸಾಮಾನ್ಯವಾಗಿ ಅಂತಸ್ಥ ಶಿಲೆಗಳಲ್ಲಿ ಕಾಣಬಹುದು. ಅಲ್ಲದೆ, ಈ ರಚನೆಯನ್ನು ಮಧ್ಯಸ್ಥ ಮತ್ತು ಬಾಹ್ಯಸ್ಥ ಶಿಲೆಗಳಲ್ಲೂ ಕಾಣಬಹುದು, ಆದರೆ ಈ ಶಿಲೆಗಳಲ್ಲಿನ ಕಣಗಳ ಗಾತ್ರ ಚಿಕ್ಕದು.

**ಅಸಮಕಣ ರಚನೆ:** ಶಿಲೆಯ ಖನಿಜ ಘಟಕಗಳ ಗಾತ್ರದಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದಲ್ಲಿ ಅಸಮಕಣ ರಚನೆ ರೂಪುಗೊಳ್ಳುತ್ತದೆ. ಅಂದರೆ ಶಿಲೆಯಲ್ಲಿನ ಕೆಲವು ಕಣಗಳು ದೊಡ್ಡದಾಗಿದ್ದು ಮತ್ತೆ ಕೆಲವು ಚಿಕ್ಕದಾಗಿರುತ್ತವೆ. ಕೆಲವೊಮ್ಮೆ ಕಣಗಳ ಗಾತ್ರದಲ್ಲಿ ಅನುಕ್ರಮ ವ್ಯತ್ಯಾಸಗಳು ಕಂಡುಬರುತ್ತವೆ. ಇದೊಂದು ವಿಶೇಷ ಬಗೆಯ ಅಸಮಕಣ ರಚನೆ ಆಗಿದ್ದು ಇದನ್ನು ಅನುಕ್ರಮ ರಚನೆ ಎಂದು ಹೆಸರಿಸಲಾಗಿದೆ. ಅಸಮಕಣ ರಚನೆಯಲ್ಲಿ ಮುಖ್ಯವಾಗಿ 2 ಬಗೆಯ ರಚನೆಯನ್ನು ಗುರುತಿಸಬಹುದು.

ಪಾರ್ಫಿರಿಟಿಕ್ ರಚನೆ ಎಂಬ ಒಂದು ಬಗೆಯ ಅಸಮಕಣ ರಚನೆಯಲ್ಲಿ, ದೊಡ್ಡ ದೊಡ್ಡ ಹರಳುಗಳು ಸೂಕ್ಷ್ಮಕಣಗಳಿಂದಾದ ಮಾತೃಕೆಯಲ್ಲಿ ಅಲ್ಲಲ್ಲೆ ಕಂಡುಬರುತ್ತವೆ. ಈ ರಚನೆಗೆ ಶಿಲಾದ್ರವವು ಎರಡು ಸನ್ನಿವೇಶದಲ್ಲಿ ಸ್ಫಟಿಕೀಕರಣಗೊಂಡಿರುವುದೇ ಮುಖ್ಯ ಕಾರಣ. ದೊಡ್ಡ ಹರಳುಗಳು ಮೊದಲ ಸ್ಫಟಿಕೀಕರಣ ಸನ್ನಿವೇಶದಲ್ಲಿ ಬೆಳವಣಿಗೆ ಪ್ರಾರಂಭಿಸಿ, ಅದರ ಬೆಳವಣಿಗೆಯು ಎರಡನೆಯ ಸ್ಫಟಿಕೀಕರಣ ಸನ್ನಿವೇಶದಲ್ಲೂ ಮುಂದುವರೆದು ದೊಡ್ಡ ಗಾತ್ರವನ್ನು ಪಡೆಯುತ್ತದೆ. ಇದರಿಂದಾಗಿ, ಫಿನೋಕ್ರಿಸ್ಟ್ (ಬೃಹತ್ ಸ್ಫಟಿಕಗಳು) ನಲ್ಲಿ ಅನೇಕ ವೇಳೆ ವಿವಿಧ ಮಂಡಲಗಳಿರುವ ಸಾಧ್ಯತೆಗಳಿರುತ್ತವೆ (ಉದಾ: ಪ್ಲೇಜಿಯೊಕ್ಲೆಸ್ ನಲ್ಲಿರುವ ಮಂಡಲಗಳು). ಆದರೆ, ಸೂಕ್ಷ್ಮಕಣಗಳು ಎರಡನೆಯ ಸ್ಫಟಿಕೀಕರಣದಲ್ಲಿ ಮಾತ್ರ ಬೆಳೆದು ಮಾತೃಕೆಯಾಗಿರುತ್ತದೆ. ದೊಡ್ಡ ಹರಳುಗಳನ್ನು ಫಿನೋಕ್ರಿಸ್ಟ್ ಎಂದು ಕರೆಯುತ್ತಾರೆ. ಮಾತೃಕೆಯು ಕೆಲವೊಮ್ಮೆ ಗಾಜಿನಂತಿರಬಹುದು (ವಿಟ್ರೋಫಿರಿಕ್), ಅಸ್ಪಷ್ಟ ಸೂಕ್ಷ್ಮಕಣಗಳಿಂದ ಕೂಡಿರಬಹುದು (ಫೆಲ್ಸೋಫಿರಿಕ್) ಅಥವಾ ಸಣ್ಣಕಣಗಳ ಖನಿಜಗಳಿಂದ ಕೂಡಿರಬಹುದು.

ಪಾಯ್ಕಿಲಿಟಿಕ್ ಎಂಬ ಇನ್ನೊಂದು ಬಗೆಯ ಅಸಮಕಣ ರಚನೆಯು ಪಾರ್ಫಿರಿಟಿಕ್ ರಚನೆಗೆ ವಿರುದ್ಧವಾದುದು. ಶಿಲೆಯ ದೊಡ್ಡ ಖನಿಜದ ಹರಳಿನಲ್ಲಿ ಇತರ ಖನಿಜದ ಸಣ್ಣ ಸಣ್ಣ ಹರಳುಗಳು ಅಡಕವಾಗಿರುತ್ತವೆ. ಬೃಹತ್ ಹರಳುಗಳನ್ನು ಆಯ್ಕೊಕ್ರಿಸ್ಟ್ಸ್ (oikocrysts) ಅಥವಾ ಆತಿಥೇಯ ಖನಿಜ ಎಂತಲೂ ಅದರಲ್ಲಿರುವ ಸಣ್ಣ ಖನಿಜ ಕಣಗಳನ್ನು ಕ್ಯಾಡೊಕ್ರಿಸ್ಟ್ಸ್ ಎಂತಲೂ ಕರೆಯುತ್ತಾರೆ.

**ಓಫಿಟಿಕ್ ವಿನ್ಯಾಸ:** ಈ ರಚನೆಯನ್ನು ಡಾಲರೈಟ್ ಎಂಬ ಡೈಕ್ ಶಿಲೆಯಲ್ಲಿ ಸಾಮಾನ್ಯವಾಗಿ ಕಾಣುವುದರಿಂದ ಇದನ್ನು ಡಾಲೆರಿಟಿಕ್ ರಚನೆ ಎಂತಲೂ ಕರೆಯುತ್ತಾರೆ. ಈ ರಚನೆಯಲ್ಲಿ ಆಗೈಟ್ ಖನಿಜದ ದೊಡ್ಡ ಹರಳುಗಳನ್ನು ಪಟ್ಟಿಯಾಕಾರದ ಸಣ್ಣ ಸಣ್ಣ ಪ್ಲೇಜಿಯೊಕ್ಲೆಸ್‌ಗಳು ನಾನಾ ರೀತಿಯಲ್ಲಿ ಭೇದಿಸಿರುತ್ತವೆ. ಈ ಎರಡು ಖನಿಜಗಳ ಗಾತ್ರದಲ್ಲಿ ಹೆಚ್ಚು ವ್ಯತ್ಯಾಸ ಇಲ್ಲದಿದ್ದರೆ, ಅಂತಹ ರಚನೆಯನ್ನು ಸಬ್–ಓಫಿಟಿಕ್ ವಿನ್ಯಾಸವೆಂದು ಕರೆಯುತ್ತಾರೆ.

ಅ) ಖನಿಜ ಕಣಗಳು ಪೂರ್ಣವಾಗಿ ಸ್ಫುಟಗೊಂಡ 'ಹಾಲೊಕ್ರಿಸ್ಟಲೈನ್' ವಿನ್ಯಾಸ
ಆ) ಖನಿಜ ಕಣಗಳು ಅಪೂರ್ಣವಾಗಿ ಸ್ಫುಟಗೊಂಡ 'ಹೆಮಿಕ್ರಿಸ್ಟಲೈನ್' ವಿನ್ಯಾಸ
ಇ) ಖನಿಜ ಕಣಗಳು ಅಸ್ಫುಟಗೊಂಡ 'ಹಾಲೋ ಹಯಲೈನ್' ಒಳರಚನೆ

**ಬಸಾಲ್ಟ್ ವಿನ್ಯಾಸ:** ಇದರಲ್ಲಿ ಎರಡು ಪ್ರಮುಖ ವಿಧಗಳು; ಇಂಟರ್ ಸರ್ಟಲ್ ಮತ್ತು ಇಂಟರ್ ಗ್ರಾನ್ಯುಲಾರ್. ಇವೆರಡನ್ನು ಬಾಹ್ಯಸ್ಥ ಶಿಲೆಯಾದ ಬೆಸಾಲ್ಟ್‌ನಲ್ಲಿ ವಿಶಿಷ್ಟವಾಗಿ ಗುರುತಿಸಬಹುದು. ಆದ್ದರಿಂದಲೇ, ಇದನ್ನು ಬಸಾಲ್ಟಿಕ್ ವಿನ್ಯಾಸವೆಂದೇ ಕರೆಯುತ್ತಾರೆ. ಈ ವಿನ್ಯಾಸದಲ್ಲಿ ಬಸಾಲ್ಟ್‌ನ ಪ್ರಧಾನ ಖನಿಜಗಳಾದ ಮೂರು ಅಥವಾ ಹೆಚ್ಚಿನ ಪ್ಲೇಜಿಯೊಕ್ಲೇಸ್‌ನ ಪಟ್ಟಕಗಳು ಒಂದರೊಡನೊಂದು ಸೇರಿ ವಿವಿಧ ಚೌಕಟ್ಟನ್ನು ರಚಿಸಿ, ಆ ಚೌಕಟ್ಟುಗಳ ಒಳಗೆ ಆಗೈಟ್, ಆಲಿವಿನ್ ಇತ್ಯಾದಿ ಖನಿಜಗಳ ಸೂಕ್ಷ್ಮಕಣಗಳು

ಅಡಕವಾಗಿರುತ್ತದೆ. ಅದನ್ನು ಇಂಟರ್ ಗ್ರಾನ್ಯುಲಾರ್ (ಅಂತರ್‌ಕಣೀಯ) ವಿನ್ಯಾಸ ಎಂದು ಕರೆಯುತ್ತಾರೆ. ಹಾಗಿರದೇ, ಪ್ಲೇಜಿಯೊಕ್ಲೇಸ್ ಚೌಕಟ್ಟುಗಳೊಳಗೆ ಅಸ್ಫಟಿಕ ವಸ್ತುಗಳು ಅಥವಾ ಬಹು ಸೂಕ್ಷ್ಮ ಕ್ಲೋರಿಟಿಕ್ ಅಥವಾ ಸರ್ಪೆಂಟಿನ್ ಖನಿಜಗಳಿದ್ದರೆ, ಇಂತಹ ವಿನ್ಯಾಸವನ್ನು ಇಂಟರ್‌ಸರ್ಟಲ್ ವಿನ್ಯಾಸ ಎಂದು ಕರೆಯುತ್ತಾರೆ. ಬಸಾಲ್ಟ್ ಶಿಲೆಗಳಲ್ಲಿ ಕೆಲವೊಮ್ಮೆ ಯಾವ ತರಹದ ಅಸ್ಫಟಿಕ ವಸ್ತುವಾಗಲೀ ಅಥವಾ ಸೂಕ್ಷ್ಮ ಖನಿಜಾಂಶವಾಗಲೀ ಇರದೆ, ಸಂಪೂರ್ಣ ಸೂಕ್ಷ್ಮ ಕಣಗಳ ರಚನೆಯನ್ನು ಯಾವೊಂದೂ ಕಣ ರಚನೆಯು ಗೋಚರವಾಗದೆ ಗಾಜಿನಂತಹ ಅಸ್ಫಟಿಕ ವಿನ್ಯಾಸ ಹೊಂದಿದ್ದರೆ, ಇದಕ್ಕೆ ಟ್ಯಾಕಿಲಿಟಿಕ್ ವಿನ್ಯಾಸ ಎಂದು ಹೆಸರು.

**ಪ್ರವಾಹ ರಚನೆ:** ಮಾತೃಶಿಲಾದ್ರವವು ಹೊರಹೊಮ್ಮಿ ಪ್ರವಾಹದಂತೆ ಹರಿಯುತ್ತದೆ (ಭೂಮಿಯ ಇಳಿವೋರೆಯನ್ನನುಸರಿಸಿ). ಈ ಕ್ರಿಯೆಯು ಬಾಹ್ಯಸ್ಥ ಶಿಲೆಗಳಲ್ಲಿ ವಿಶಿಷ್ಟ ರಚನೆಗಳಿಗೆ ಕಾರಣವಾಗುತ್ತದೆ. ಈ ರಚನೆಗಳನ್ನು ಪ್ರವಾಹ ರಚನೆ ಎಂದು ಕರೆಯುತ್ತಾರೆ. ಪ್ರವಾಹದಿಂದ ಉಂಟಾದ ಸೂಕ್ಷ್ಮ ಗೆರೆಗಳು, ಪ್ರವಾಹ ಶಿಲೆಗಳಲ್ಲಿ ಮೊತ್ತಮೊದಲಿಗೆ ಉದ್ಭವಿಸುವ ಕ್ರಿಸ್ಟಲೈಟ್‌ಗಳು, ಮೈಕ್ರೊಲೈಟ್‌ಗಳು ಮತ್ತು ಸೂಕ್ಷ್ಮಹರಳುಗಳು ಪ್ರವಾಹದ ತುಯ್ತಕ್ಕೆ ಸಿಕ್ಕಿ ನಿರ್ದಿಷ್ಟ ದಿಕ್ಕುಗಳಲ್ಲಿ ಅಥವಾ ಜಾಡುಗಳಲ್ಲಿ ಸಂಗ್ರಹಿಸಿ ಪರಸ್ಪರ ಸಮಾಂತರವಾಗಿ ಓರೆಗೊಂಡಿರುತ್ತವೆ. ಈ ವಿನ್ಯಾಸಗಳು ಟ್ರ್ಯಾಕಿಲೈಟ್ ಎಂಬ ಬಗೆಯ ಬಾಹ್ಯಸ್ಥ ಶಿಲೆಗಳಲ್ಲಿ ಅತ್ಯಂತ ಉತ್ತಮವಾಗಿ ಕಾಣಬಹುದು. ಅದಕ್ಕಾಗಿಯೇ ಈ ವಿನ್ಯಾಸದ ಟ್ರ್ಯಾಕಿಲಿಟಿಕ್ ವಿನ್ಯಾಸ ಎಂದು ಕರೆಯಲಾಗಿದೆ. ಫೆಲ್ಡ್‌ಸ್ಪಾರ್ ಖನಿಜದ ಪಟ್ಟಕಗಳು ಪ್ರವಾಹ ರಚನೆಯನ್ನು ತೋರುತ್ತ ಗಾಜುವಸ್ತುವಿನ ಮಾತೃಕೆಯಲ್ಲಿ ಕಂಡುಬರುವ ವಿನ್ಯಾಸವನ್ನು ಹಯಲೊಫಿಲಿಟಿಕ್ ರಚನೆ ಎಂದು ಕರೆದಿದೆ. ಇದರಲ್ಲಿ ಗಾಜಿನ ಅಂಶವಿರದೆ ಉತ್ತಮ ಬಗೆಯ ಪ್ರವಾಹ ವಿನ್ಯಾಸ ತೋರಿಬಂದಲ್ಲಿ ಅದನ್ನು ಪೈಲೊಟ್ಯಾಕ್ಸಿಟಿಕ್ ವಿನ್ಯಾಸ ಎಂದು ಕರೆಯುತ್ತಾರೆ. ಟ್ರ್ಯಾಕೈಟ್ ಶಿಲೆಗಳನ್ನು ಹೋಲುವಂತಹ ಶಿಲೆಗಳಲ್ಲಿ (ಉದಾ: ಸಯನೈಟ್) ಈ ವಿನ್ಯಾಸ ಕಂಡುಬಂದರೆ ಅಂತಹವುಗಳನ್ನು ಟ್ರ್ಯಾಕಿಟಾಯಿಡ್ ವಿನ್ಯಾಸ ಎನ್ನುತ್ತಾರೆ.

**ಹೆಣಿಗೆ ವಿನ್ಯಾಸ:** ಶಿಲೆಯ ಖನಿಜ ಘಟಕಗಳು ಪರಸ್ಪರ ಹೆಣೆದು ಬೆಳೆದುಕೊಂಡಿರುವುದನ್ನು ಹೆಣಿಗೆ ವಿನ್ಯಾಸ ಎನ್ನುತ್ತಾರೆ. ಶಿಲೆ ಘನೀಕರಿಸುವಾಗ ಎರಡು ಖನಿಜ ಘಟಕಗಳು ಒಂದು ನಿರ್ದಿಷ್ಟ ಉಷ್ಣತೆಯಲ್ಲಿ ಒಮ್ಮೆಗೆ ಸ್ಫಟಿಕೀಕರಿಸಿ ಬೆಳೆದಾಗ ಈ ಹೆಣಿಗೆ ವಿನ್ಯಾಸ ಸೃಷ್ಟಿಯಾಗುತ್ತದೆ. ಪೆಗ್ಮಟೈಟ್ ಎಂಬ ಶಿಲೆಯಲ್ಲಿ ಕ್ವಾರ್ಟ್ಜ್ ಮತ್ತು ಫೆಲ್ಡ್‌ಸ್ಪಾರ್ ಖನಿಜಗಳು ಪರಸ್ಪರ ಹೆಣೆದುಕೊಂಡಿರುವುದನ್ನು ನಿಚ್ಚಳವಾಗಿ ಕಾಣಬಹುದು. ಆದ್ದರಿಂದಲೇ ಈ ವಿನ್ಯಾಸದ ಪೆಗ್ಮಟಿಟಿಕ್ ಅಥವಾ ಗ್ರಾಫಿಕ್ ವಿನ್ಯಾಸವೆಂತಲೂ ಕರೆಯುತ್ತಾರೆ. ಇವು ಗಾತ್ರದಲ್ಲಿ ಸೂಕ್ಷ್ಮವಾಗಿದ್ದಲ್ಲಿ, ಶಿಲೆಯನ್ನು ಮೈಕ್ರೊಪೆಗ್ಮಟೈಟ್ ಎಂದೂ ಮತ್ತು ವಿನ್ಯಾಸವನ್ನು ಮೈಕ್ರೊಪೆಗ್ಮಟಿಟಿಕ್ ವಿನ್ಯಾಸವೆಂದು ಕರೆಯುತ್ತಾರೆ. ಹೆಣಿಗೆಯು, ಸೂಕ್ಷ್ಮ ಮತ್ತು ಅಸ್ಪಷ್ಟವಾಗಿದ್ದರೆ ಅದನ್ನು ಗ್ರ್ಯಾನೊಫಿರಿಕ್ ವಿನ್ಯಾಸ ಎನ್ನುತ್ತಾರೆ.

ಕೆಲವೊಮ್ಮೆ ಹೆಣಿಗೆ ವಿನ್ಯಾಸವು ಫೆಲ್ಡ್‌ಸ್ಪಾರ್ ಘಟಕದ ವಿವಿಧ ಪ್ರಬೇಧಗಳ ನಡುವೆ ಕಾಣಿಸಬಹುದು. ಆರ್ಥೊಕ್ಲೇಸ್ ಹರಳಿನಲ್ಲಿ (ಪೊಟ್ಯಾಶಿಯಮ್–ಫೆಲ್ಡ್‌ಸ್ಪಾರ್) ಸಣ್ಣ ಸಣ್ಣ ಕಣಗಳ ಆಲ್ಬೈಟ್ ಕಣಗಳು (ಸೋಡಿಯಮ್–ಫೆಲ್ಡ್‌ಸ್ಪಾರ್) ಅಡಕವಾಗಿದ್ದು ಒಂದು ರೀತಿಯ ಹೆಣಿಗೆ ಕಂಡುಬರುತ್ತದೆ. ಇದನ್ನು ಪರ್ಥಿಟಿಕ್ ವಿನ್ಯಾಸ ಎನ್ನುತ್ತಾರೆ. ಆರ್ಥೊಕ್ಲೇಸ್ ಬದಲಾಗಿ ಮೈಕ್ರೊಕ್ಲೀನ್ (ಆರ್ಥೊಕ್ಲೇಸ್‌ನ ಇನ್ನೊಂದು ರೂಪ) ಇದ್ದಲ್ಲಿ ಮೈಕ್ರೊಕ್ಲೀನ್ ಪರ್ಥೈಟ್ ಎಂತಲೂ ಸೋಡಮೈಕ್ರೊಕ್ಲೀನ್ ಅಥವಾ ಸೋಡ ಆರ್ಥೊಕ್ಲೇಸ್ ಇದ್ದಲ್ಲಿ ಕ್ರಿಪ್ಟೊಪರ್ಥೈಟ್ ಎಂತಲೂ ಕರೆಯುತ್ತಾರೆ. ಹೆಣಿಗೆಯ ವಿನ್ಯಾಸವನ್ನು ಅನುಸರಿಸಿ ಪ್ಯಾಚ್‌ಪರ್ಥೈಟ್, ಸ್ಟ್ರಿಂಗ್‌ಪರ್ಥೈಟ್ ಮತ್ತು ಬೀಡ್‌ಪರ್ಥೈಟ್ ಎಂಬ ರಚನೆಗಳನ್ನು ಗುರುತಿಸಬಹುದು.

ಈವಿನ್ಯಾಸಕ್ಕೆ ಪ್ರತಿಯಾಗಿ ಪ್ಲೇಜಿಯೊಕ್ಲೇಸ್‌ನಲ್ಲಿ ಆರ್ಥೊಕ್ಲೇಸ್‌ನ ಕಣಗಳು ಹುದುಗಿ ಹೆಣೆದುಕೊಂಡಿದ್ದಲ್ಲಿ ಅದನ್ನು ಆಂಟಿ–ಪರ್ಥೈಟ್ ವಿನ್ಯಾಸವೆಂದು ವಿವರಿಸಬೇಕು. ಪರ್ಥಿಟಿಕ್ ಮತ್ತು ಆಂಟಿ–ಪರ್ಥಿಟಿಕ್ ವಿನ್ಯಾಸಗಳು ಹೊರಹೊಮ್ಮುವಿಕೆ ಕ್ರಿಯೆಯಿಂದ ಸೃಷ್ಟಿಯಾಗಿರುತ್ತವೆ. ಅಧಿಕ ಉಷ್ಣ / ಒತ್ತಡ ಮಟ್ಟದಲ್ಲಿ ಕೆಲವು ಖನಿಜಗಳು ಒಂದೇ ಪ್ರಬೇಧವಾಗಿ ಸೃಷ್ಟಿಯಾಗಿದ್ದು ಅದರ ಉಷ್ಣತೆಯು ಕಡಿಮೆಯಾದಂತೆ ಒಂದು ನಿರ್ದಿಷ್ಟ ಕೆಳಮಟ್ಟದ ಉಷ್ಣತೆಯಲ್ಲಿ / ಒತ್ತಡದಲ್ಲಿ ಎರಡು ಪ್ರಬೇಧಗಳಾಗಿ ವಿಭಜನೆಗೊಳ್ಳುವ ಕ್ರಿಯೆಯನ್ನು ಹೊರಹೊಮ್ಮುವಿಕೆ (exsolution) ಎನ್ನುತ್ತಾರೆ. ಈ ಹೆಣಿಗೆ ರಚನೆಯು ಕೇವಲ ಶ್ವೇತಖನಿಜಗಳಿಗೆ ಸೀಮಿತವಾಗಿರದೆ ಕೆಲವು ಬಾರಿ ಕೃಷ್ಣಖನಿಜಗಳು ಆಗಾಗ್ಗೆ ಪರಸ್ಪರ ಹೆಣೆದುಕೊಂಡಿರುತ್ತವೆ.

**ಪ್ರತಿಕ್ರಿಯಾ ರಚನೆಗಳು :** ಶಿಲಾದ್ರವವು ಘನೀಕರಿಸುವಾಗ ವಿವಿಧ ಖನಿಜಗಳು ಒಂದಾದ ಮೇಲೊಂದರಂತೆ ಒಂದು ಕ್ರಮದಲ್ಲಿ ಜನಿಸುತ್ತವೆ. ಈ ರೀತಿಯ ಸ್ಫಟಿಕೀಕರಣ ಕ್ರಿಯೆ ಜರಗುವ ಸಮಯದಲ್ಲಿ ಮೊದಲು ಜನಿಸಿದ ಖನಿಜಗಳು ಶಿಲಾದ್ರವದೊಂದಿಗೆ ಪ್ರತಿಕ್ರಿಯಿಸಿ, ಒಂದು ಹೊಸ ಖನಿಜವನ್ನು ಸೃಷ್ಟಿಸುವ ಸಾಧ್ಯತೆಯಿರುತ್ತದೆ. ಈ ಪ್ರತಿಕ್ರಿಯೆ ಸಂಪೂರ್ಣವಾಗದೆ, ಮಧ್ಯಭಾಗದಲ್ಲಿ ಮೊದಲು ಜನಿಸಿದ ಖನಿಜವಿದ್ದು ಅದರ ಸುತ್ತಲೂ ಮೇಲೆ ಹೇಳಿದ ಪ್ರತಿಕ್ರಿಯೆಯಿಂದ ಉಂಟಾದ ಮತ್ತೊಂದು ಖನಿಜ ಘಟಕದ ವಲಯ ನಿರ್ಮಾಣವಾಗುತ್ತದೆ. ಈ ರಚನೆಯನ್ನು ಪ್ರತಿಕ್ರಿಯಾ ರಚನೆ ಎಂದು ಹೆಸರಿಸಲಾಗಿದೆ.

**ಅಗ್ನಿಶಿಲೆಗಳ ವರ್ಗೀಕರಣ**

| | ಅಧಿಕಸಿಲಿಕಾಂಶ ಶಿಲೆಗಳು — ಕ್ವಾರ್ಟ್ಸ್ ಮತ್ತು ಫೆಲ್ಸ್‌ಪಾರ್ | | | ಪೂರ್ಣಸಿಲಿಕಾಂಶ ಶಿಲೆಗಳು — ಫೆಲ್ಸ್‌ಪಾರ್‌ಗಳು | | | ಅಪೂರ್ಣಸಿಲಿಕಾಂಶ ಶಿಲೆಗಳು | | |
|---|---|---|---|---|---|---|---|---|---|
| | ಕ್ವಾರ್ಟ್ಸ್ | ಆರ್ಥೋಕ್ಲೇಸ್ ಫೆಲ್ಸ್‌ಪಾರ್ ಅಧಿಕ | ಪ್ಲೇಜಿಯೋಕ್ಲೇಸ್ ಫೆಲ್ಸ್‌ಪಾರ್ ಅಧಿಕ | ಆಲ್ಕಲಿ ಫೆಲ್ಸ್‌ಫಾರ್ ಅಧಿಕ | ಸೋಡಾಲೈಮ್ ಫೆಲ್ಸ್‌ಪಾರ್ ಅಧಿಕ | ಲೈಮ್‌ಸೋಡಾ ಫೆಲ್ಸ್‌ಪಾರ್ ಅಧಿಕ | ಫೆಲ್ಸ್‌ಪಾರ್ ಮತ್ತು ಫೆಲ್ಸ್‌ಪಥಾಯಿಡ್ಸ್ | ಫೆಲ್ಸ್‌ಪಥಾಯಿಡ್ಸ್ | ಕಬ್ಬಿಣ ಮತ್ತು ಮ್ಯಾಗ್ನೀಷಿಯಂ ಉಳ್ಳ ಖನಿಜಗಳು ಅಧಿಕ |
| ಪ್ಲುಟಾನಿಕ್ ಶಿಲೆ ಅಥವಾ ಅಂತರ್ಗತಶಿಲೆ | | ಗ್ರಾನೈಟ್ | ಗ್ರಾನೋ ಡಯೊರೈಟ್ | ಸಯನೈಟ್ | ಡಯೊರೈಟ್ | ಅನಾರ್ಥೊಸೈಟ್ ಗ್ಯಾಬ್ರೊ | ನೆಫೆಲೀನ್ ಸಯನೈಟ್ | ಇಜೋಲೈಟ್ | ಪೆರಿಡೊಟೈಟ್ ಪಿಕ್ರೈಟ್ |
| ಹೈಪಬಿಸಲ್ ಶಿಲೆ ಅಥವಾ ಮಧ್ಯಸ್ಥ ಶಿಲೆ | ← ——— ← ——— ಗ್ರಾನೊಫೈರ್ ಫೆಲ್ಸೈಟ್ ← ——— | ——— ——— ← ——— ——— | ——— ——— ——— ಲ್ಯಾಂಪ್ರೊಫೈರ್‌ಗಳು ——— ಪಿಚ್‌ಸ್ಟೋನ್ ——— | ಅಪ್ಲೈಟ್ ಪಾರ್‌ಫಿರಿಗಳು ——— ——— | ——— ——— ——— ——— → | ——— ——— ——— ಡಾಲರೈಟ್ | ——— → ——— ——— ಟಿಂಗ್ವೈಟ್ | ——— → ——— | ——— → |
| ವಲ್ಕ್ಯಾನಿಕ್ ಶಿಲೆ ಅಥವಾ ಬಹಿರ್ಗತ ಶಿಲೆ | | ರೈಯೊಲೈಟ್ ← ——— ← ——— | ಡೇಸೈಟ್ ಪಿಚ್‌ಸ್ಟೋನ್ ಅಬ್ಸಿಡಿಯನ್ → | ಟ್ರ್ಯಾಕೈಟ್ ——— | ಆಂಡಿಸೈಟ್ ——— → | ಬಸಾಲ್ಟ್ | ಫೊನೊಲೈಟ್ | ನೆಫೆಲೀನ್ ಬಸಾಲ್ಟ್ | ಆಲಿವೀನ್‌ನಿಂದ ಕೂಡಿದ ಬಸಾಲ್ಟ್‌ಗಳು ಲಿಂಬರ್ಗೈಟ್ |
| ಸರಾಸರಿ ಸಿಲಿಕಾಂಶ : | 90 | 72 | 66 | 59 | 57 | 48 | 54 | 43 | 41 |

ಇದನ್ನು ಪೆರಿಡೊಟೈಟ್, ಆಲಿವಿನ್ ಗ್ಯಾಬ್ರೊ, ಗ್ಯಾಬ್ರೊ ಮುಂತಾದ ಪ್ರತ್ಯಾಮ್ಲೀಯ ಶಿಲೆಗಳಲ್ಲಿ ಗುರುತಿಸಬಹುದು. ಈ ಶಿಲೆಗಳಲ್ಲಿ ಆಲಿವಿನ್ ಕಣದ ಸುತ್ತ ಪೈರಾಕ್ಸಿನ್‌ನ ಪ್ರತಿಕ್ರಿಯಾ ವಲಯವನ್ನು ಕಾಣಬಹುದು. ಈ ಪ್ರತಿಕ್ರಿಯಾ ವಲಯವು ಜನನ ಮೂಲ ಕ್ರಿಯೆಯಿಂದ ಉಂಟಾಗಿದ್ದರೆ ಅದನ್ನು ಕರೋನ–ವಲಯ ಎಂತಲೂ, ಕೆಲವೊಮ್ಮೆ ಈ ಪ್ರತಿಕ್ರಿಯಾ ವಲಯವು ಶಿಲೆ ಘನೀಕರಿಸಿದ ಅನಂತರ ದ್ವಿತೀಯ ಕ್ರಿಯೆಯಿಂದ ಜನಿಸಿದ್ದರೆ ಅದನ್ನು ಕೆಲಿಫಿಟಿಕ್–ವಲಯ ಎಂತಲೂ ಕರೆಯುತ್ತಾರೆ. ಇವೆರಡನ್ನು ಬೇರ್ಪಡಿಸಿ ಗುರುತಿಸುವುದು ಅಷ್ಟು ಸುಲಭವಲ್ಲ.

**ಮರ್ಮಿಕಿಟಿಕ್ ರಚನೆ:** ಇದೊಂದು ವಿಶೇಷ ರೀತಿಯ ಪ್ರತಿಕ್ರಿಯಾ ರಚನೆ. ಇದನ್ನು ಸಿಡಾರ್–ಹೋಮ್ ಎಂಬಾತ ಮೊದಲು ಗುರುತಿಸಿ ವಿವರಿಸಿದರು. ಕ್ವಾರ್ಟ್ಜ್ ಮತ್ತು ಪ್ಲೇಜಿಯೊಕ್ಲೇಸ್ ನಡುವಣ ಹೆಣಿಗೆ ವಿನ್ಯಾಸವನ್ನು ಮರ್ಮಿಕಿಟಿಕ್ ವಿನ್ಯಾಸ ಎನ್ನುತ್ತಾರೆ. ಪ್ಲೇಜಿಯೊಕ್ಲೇಸ್‌ನ ಹರಳುಗಳಲ್ಲಿ ಕ್ವಾರ್ಟ್ಜ್‌ನ ಸಣ್ಣ ಸಣ್ಣ ಮಣಿಗಳು, ಕಣಗಳು ಅಥವಾ ಹುಳುವಿನಾಕಾರದ ಗೆರೆಗಳು ಅಡಕವಾಗಿರುತ್ತವೆ. ಸಾಮಾನ್ಯವಾಗಿ ಆರ್ಥೋಕ್ಲೇಸ್–ಫೆಲ್ಡ್‌ಸ್ಪಾರ್‌ಗಳ ಸಮೀಪವಿರುವ ಪ್ಲೇಜಿಯೊಕ್ಲೇಸ್‌ಗಳ ನಡುವೆ ನಡೆಯುವ ಪಲ್ಲಟ ಕ್ರಿಯೆಯೇ ಈ ರಚನೆಗೆ ಮೂಲವೆಂದು ಭಾವಿಸಲಾಗಿದೆ.

**ಅನ್ಯಶಿಲೀಯ ರಚನೆಗಳು:** ಅಗ್ನಿಶಿಲೆಗಳಲ್ಲಿ ಅನೇಕ ವೇಳೆ ಅನ್ಯಶಿಲೆಗಳ ಛಿದ್ರಗಳು ಹುದುಗಿರುವುದು ಕಾಣಬರುತ್ತದೆ. ಇವುಗಳಿಂದಾದ ವಿನ್ಯಾಸವನ್ನು ಅನ್ಯಶಿಲೀಯ ವಿನ್ಯಾಸ ಎನ್ನುತ್ತಾರೆ. ಅನ್ಯಶಿಲೆಗಳು ವಿವಿಧ ಗಾತ್ರ ಮತ್ತು ಆಕಾರದಲ್ಲಿ ದೊರೆಯುತ್ತವೆ. ಅನ್ಯಶಿಲೆಗೂ ಮತ್ತು ಅವು ಹುದುಗಿರುವ ಶಿಲೆಗೂ ಬಣ್ಣದಲ್ಲಿ ತೀವ್ರ ವ್ಯತ್ಯಾಸಗಳಿದ್ದರೆ ಅನ್ಯಶಿಲಾ ಛಿದ್ರಗಳನ್ನು ಸುಲಭವಾಗಿ ಗುರುತಿಸಬಹುದು. ಒಮ್ಮೊಮ್ಮೆ ಇವುಗಳಿಗೂ ಇವು ಹುದುಗಿರುವ ಶಿಲೆಗೂ ನಿಕಟವಾದ ಜನ್ಯ ಸಂಬಂಧ ಇರುವುದುಂಟು. ಇವನ್ನು ಸ್ವಜಾತಿ ಅನ್ಯಶಿಲೆಗಳು ಎನ್ನುತ್ತಾರೆ. ಇವುಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಿರುವುದಿಲ್ಲ. ಕೆಲವೊಮ್ಮೆ ನಾಡಶಿಲಾ ಛಿದ್ರಗಳು ಅನ್ಯಶಿಲೆಗಳಾಗಿ ಕಾಣಿಸಿಕೊಳ್ಳಬಹುದು, ಇವನ್ನು ಆಕಸ್ಮಿಕ ಅನ್ಯಶಿಲೆಗಳೆಂದು ಕರೆಯುವರು. ಈ ಆಕಸ್ಮಿಕ ಅನ್ಯಶಿಲೆಗಳು ಶಿಲಾಪಾಕದಲ್ಲಿ ಕರಗಿ, ಒಂದು ರೀತಿಯ ಸಂಕರ ಶಿಲೆಗಳು ಅಥವಾ ಮಿಶ್ರಿತ ಶಿಲೆಗಳು ಉಂಟಾಗುತ್ತವೆ. ಒಮ್ಮೊಮ್ಮೆ ಶಿಲಾದ್ರವಕ್ಕೂ ಮತ್ತು ಅನ್ಯಶಿಲೆಗಳ ನಡುವೆ ಪ್ರತಿಕ್ರಿಯೆ ಉಂಟಾಗಿ ಪ್ರತಿಕ್ರಿಯಾ ವಲಯಗಳು ಅನ್ಯಶಿಲಾ ಛಿದ್ರಗಳನ್ನು ಆವರಿಸಲೂಬಹುದು.

**ಗೋಳ ವಿನ್ಯಾಸ:** ಇದನ್ನು ಗ್ರಾನೈಟ್ ವರ್ಗದ ಅಂತಸ್ಥ ಶಿಲೆಗಳಲ್ಲಿ ಕಾಣಬಹುದು. ಶಿಲೆಯಲ್ಲಿ ಏಕ ಕೇಂದ್ರಕ ಮಂಡಲಗಳಿಂದಾದ ಗೋಳಾಕಾರದ ರಚನೆಗಳನ್ನು ಗುರುತಿಸಬಹುದು. ಈ ರಚನೆಯಲ್ಲಿ ಒಂದು ಮಂಡಲದಿಂದ ಮತ್ತೊಂದು ಮಂಡಲಕ್ಕೆ ಖನಿಜ ಸಂಯೋಜನೆ ಮತ್ತು ವಿನ್ಯಾಸಗಳಲ್ಲಿ ವಿಶಿಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದು. ಉದಾ: ಪ್ರತಿ ಗೋಳದ ಕೇಂದ್ರಭಾಗದಲ್ಲಿ ಡಯೋರೈಟ್ ಶಿಲೆ ಇದ್ದು ಅದರ ಸುತ್ತಾ ಫೆಲ್ಡ್‌ಸ್ಪಾರ್ ಮತ್ತು ಪೈರಿಬೋಲ್ ಖನಿಜಗಳನ್ನೊಳಗೊಂಡ ವಲಯಗಳು ಒಂದಾದ ಮೇಲೊಂದು ಆವರಿಸಿರುತ್ತವೆ. ಕೆಲವೊಮ್ಮೆ ಆಕಸ್ಮಿಕ ಅನ್ಯಶಿಲಾ ಛಿದ್ರಗಳ ಸುತ್ತಲೂ ಗೋಳದ ರಚನೆ ಉಂಟಾಗಿರುವುದನ್ನು ಕಾಣಬಹುದು.

**ಸ್ಫೆರುಲಿಟಿಕ್ ವಿನ್ಯಾಸ:** ಈ ವಿನ್ಯಾಸವನ್ನು ಸಾಮಾನ್ಯವಾಗಿ ಬಾಹ್ಯಸ್ಥಶಿಲೆ ಮತ್ತು ಮಧ್ಯಸ್ಥಶಿಲೆಗಳಲ್ಲಿ ಕಾಣಬಹುದು. ಶಿಲೆಯಲ್ಲಿನ ಮಾತೃಕೆಯಲ್ಲಿ ಅಲ್ಲಲ್ಲೆ ಕೇಂದ್ರಬಿಂದುವಿನಿಂದ ಸುತ್ತಲೂ ಕಿರಣಗಳಂತೆ ಸೂಜಿಯಾಕಾರದಲ್ಲಿ ಬೆಳೆದಿರುವ ಖನಿಜ ಕಣಗಳು ಸಮೂಹ ರಚನೆಯನ್ನು ಸ್ಫೆರುಲಿಟಿಕ್ ವಿನ್ಯಾಸ ಎನ್ನುತ್ತಾರೆ. ಸ್ಫೆರುಲೈಟ್‌ಗಳು ಗಾತ್ರದಲ್ಲಿ ಏಕರೀತಿಯಾಗಿರುವುದಿಲ್ಲ. ಕೆಲವು ಸೂಕ್ಷ್ಮದರ್ಶಕದ ಮೂಲಕ ಮಾತ್ರ ನೋಡುವಷ್ಟು ಸೂಕ್ಷ್ಮವಾಗಿದ್ದರೆ ಮತ್ತೆ ಕೆಲವು ಸು. 3 ಮೀ ವ್ಯಾಸವುಳ್ಳ ಬೃಹದಾಕಾರವನ್ನು ತಳೆದಿರುತ್ತವೆ. ವಿಗಾಜತ್ವದಿಂದಲೂ ವೇಗವಾಗಿ ಸಂಭವಿಸುವ ಘನೀಕರಣ ಕ್ರಿಯೆಯಿಂದಲೂ ಅಥವಾ ಘನೀಕರಣದ ವೇಳೆಯಲ್ಲಿ ನೀರಾವಿಯ ಕೇಂದ್ರೀಕರಣದ ಪರಿಣಾಮದಿಂದಲೂ ಈ ರಚನೆಯುಂಟಾಗಲು ಸಾಧ್ಯ.

**ಬಿರಿತ ವಿನ್ಯಾಸ:** ಕೆಲವು ಅಗ್ನಿಶಿಲೆಗಳಲ್ಲಿ ಬಿರಿತದಿಂದ ಉಂಟಾಗುವ ವಿನ್ಯಾಸಗಳನ್ನು ಕಾಣಬಹುದು. ನೈಜಗಾಜು ಶಿಲೆಯಲ್ಲಿ ಬಿರಿತದಿಂದ ವಿವಿಧ ಆಕಾರದ ವಿನ್ಯಾಸಗಳು ಉಂಟಾಗುತ್ತವೆ. ಸೂಕ್ಷ್ಮ ಛೇದದಲ್ಲಿ ಇವು ವೃತ್ತಾಕಾರದ ಏಕಕೇಂದ್ರಕ ಬಿರಿತಗಳಾಗಿರುತ್ತವೆ. ಇವು ಮುತ್ತುಗಳನ್ನು ಹೋಲುವುದರಿಂದ ಮುತ್ತು–ಬಿರಿತ ವಿನ್ಯಾಸ ಎನ್ನುತ್ತಾರೆ. ಕೆಲವೊಮ್ಮೆ ಬಿರಿತಗಳು ಶಿಲೆಯಲ್ಲಿನ ಕೆಲವು ಖನಿಜ ಘಟಕದಲ್ಲೂ ಕಾಣಬಹುದು. ಉದಾ: ಪ್ರತ್ಯಾಮ್ಲೀಯ ಶಿಲೆಯಲ್ಲಿನ ಆಲಿವೀನ್ ಖನಿಜದಲ್ಲಿ ಸರ್ಪೆಂಟಿನೀಕರಣದಿಂದಾಗಿ ಬಿರಿತಗಳು.

**ಅಗ್ನಿಶಿಲೆಗಳ ವರ್ಗೀಕರಣ:** ಅಗ್ನಿಶಿಲೆಗಳ ವರ್ಗೀಕರಣ ಅತ್ಯಂತ ಜಟಿಲವಾದದ್ದು. ಸರ್ವಸಮ್ಮತವಾದ ವರ್ಗೀಕರಣ ಇಲ್ಲವೆಂದೇ ಹೇಳಬಹುದು. ಬಹುಶಃ ಈ ವರ್ಗದ ಶಿಲೆಗಳಲ್ಲಿ ರಾಸಾಯನಿಕ ಸಂಯೋಜನೆ ಮತ್ತು ಖನಿಜಗಳ ದೃಷ್ಟಿಯಿಂದ ವ್ಯಾಪಕ ವೈಪರೀತ್ಯವಿರುವುದೇ ಕಾರಣ. ಶಿಲಾವಿಜ್ಞಾನಿಗಳ ವರ್ಗೀಕರಣ ಉದ್ದೇಶವೂ ಬೇಕೆಬೇಕು. ಅವುಗಳ ಜನನದ ಆಧಾರದ ಮೇಲೆ ಮಾಡುವ ವರ್ಗೀಕರಣವೇ ಬೇರೆ. ಅವುಗಳನ್ನು ಪ್ರಯೋಗಾಲಯದಲ್ಲಿ ರಾಸಾಯನಿಕ ವಿಶ್ಲೇಷಣೆ ಮಾಡಿ ವರ್ಗೀಕರಿಸುವುದೇ ಬೇರೆ. ಅದಕ್ಕೆ ಒಂದೊಂದು ಉಪಯೋಗವೂ ಉಂಟು. ಅವುಗಳಲ್ಲಿ ಪ್ರಮುಖ ವಿಧಾನಗಳೆಂದರೆ: (1) ರಾಸಾಯನಿಕ ಸಂಯೋಜನಾ ವಿಧಾನ, (2) ಶಿಲೆಯ ವರ್ಣಸೂಚಿಯನ್ನು ಆಧರಿಸಿದ ವಿಧಾನ, (3) ಖನಿಜ ಸಂಯೋಜನಾ ವಿಧಾನ, (4) ಶಿಲೆ ದೊರೆಯುವ ನೈಸರ್ಗಿಕ ಸನ್ನಿವೇಶ ಮತ್ತು ವಿನ್ಯಾಸಗಳನ್ನು ಆಧರಿಸಿದ ವಿಧಾನ, (5) ತಃಖ್ತೆವಾರು ವಿಧಾನ ಹಾಗೂ (6) ರೇಖಾಚಿತ್ರವಾರು ವಿಧಾನ.

ರಾಸಾಯನಿಕ ವರ್ಗೀಕರಣ ವಿಧಾನದಲ್ಲಿ ಶಿಲೆಯ ರಾಸಾಯನಿಕ ಸಂಯೋಜನೆಯೇ ಪ್ರಧಾನ ಅಂಶ. ಇಲ್ಲಿ ಇತರ ಪ್ರಮುಖ ಲಕ್ಷಣಗಳನ್ನು ಪರಿಗಣಿಸಲಾಗುವುದಿಲ್ಲ. ಇದೇ ಈ ವಿಧಾನದ ದೊಡ್ಡ ನ್ಯೂನತೆ. ಶಿಲೆಯ ರಾಸಾಯನಿಕ ಸಂಯೋಜನೆಯನ್ನು ಸಾಮಾನ್ಯವಾಗಿ 14 ಆಕ್ಸೈಡ್ ರೂಪದಲ್ಲಿ ಪ್ರಸ್ತುತಪಡಿಸುತ್ತಾರೆ. ಈ ಅಂಕಿ–ಅಂಶಗಳನ್ನು ಕೆಲವು ಸೈದ್ಧಾಂತಿಕ ಆಧಾರದ ಮೇಲೆ ಮರು ಲೆಕ್ಕಾಚಾರ ಮಾಡಿ ಕೆಲವು ಉಪಯುಕ್ತ ಮಾದರಿಗಳನ್ನು ಸೃಷ್ಟಿಸಿ ಶಿಲೆಗಳನ್ನು ವರ್ಗೀಕರಿಸುತ್ತಾರೆ. ಇವುಗಳಲ್ಲಿ ಬಹು ಮುಖ್ಯವಾದವು: (1) CIPW ವಿಧಾನ; (2) ಆಸ್ಸಾನ್ (Ossan) ವಿಧಾನ; (3) ನಿಗ್ಲಿ ವಿಧಾನ; (4) ಷ್ಯಾಂಡ್ ವಿಧಾನ.

CIPW ವಿಧಾನದಲ್ಲಿ ವಿಜ್ಞಾನಿಗಳು ರೂಪಿಸಿರುವ ನಿಯಮಾನುಸಾರ ಪ್ರಮಾಣಿತ ಖನಿಜಗಳನ್ನು ಶಿಲೆಯ ರಾಸಾಯನಿಕ ಸಂಯೋಜನೆಯಿಂದ ಗಣನೆ ಮಾಡಲಾಗಿದೆ. ಈ ಪ್ರಮಾಣಿತ ಖನಿಜಗಳನ್ನು ಸ್ಯಾಲಿಕ್ ಖನಿಜಗಳು (ಕ್ವಾರ್ಟ್ಜ್, ಆರ್ಥೊಕ್ಲೇಸ್, ಆಲ್‌ಬೈಟ್, ಅನಾರ್ಥೈಟ್, ಲೂಸೈಟ್, ಕೊರಂಡಮ್, ಜಿರ್ಕಾನ್) ಎಂತಲೂ; ಹಾಗೂ ಫೆಮಿಕ್ ಖನಿಜಗಳು (ಡಯಾಪ್ಸೈಡ್, ಹೈಪರ್‌ಸ್ತೀನ್, ಆಲಿವೀನ್, ಆಕ್ಮೈಟ್, ಮ್ಯಾಗ್ನಟೈಟ್, ಇಲ್ಮೆನೈಟ್, ಹಿಮಟೈಟ್, ಅಪಟೈಟ್) ಎಂತಲೂ ಎರಡು ಗುಂಪುಗಳನ್ನಾಗಿ ಮಾಡಿ, ಅವುಗಳ ನಿಷ್ಪತ್ತಿಗೆ ಅನುಸಾರವಾಗಿ ಶಿಲೆಗಳನ್ನು ವರ್ಗೀಕರಿಸಲಾಗುವುದು. ಸ್ಯಾಲಿಕ್ / ಫೆಮಿಕ್ > 7 ಇದ್ದರೆ ಪರ್‌ಸ್ಯಾಲಿಕ್ ಶಿಲೆಗಳೆಂತಲೂ 7 – 1.667, 1.667 – 0.6, 0.6 – 0.143ಕ್ಕಿಂತ ಕಡಿಮೆಯಿದ್ದರೆ ಕ್ರಮವಾಗಿ ಡೊಸ್ಯಾಲಿಕ್, ಸ್ಯಾಲ್‌ಫೆಮಿಕ್, ಡೋಫೆಮಿಕ್, ಪರ್‌ಫೆಮಿಕ್ ಶಿಲೆಗಳೆಂದು ವರ್ಗೀಕರಿಸಬಹುದು.

ನಿಗ್ಲಿ ವಿಧಾನದಲ್ಲಿ ಶಿಲೆಯ ರಾಸಾಯನಿಕ ಸಂಯೋಜನೆಯ ಸಹಾಯದಿಂದ Si, Al, Fm, e, Alk ಎಂಬ ನಿಗ್ಲಿವರ್ಟಿಗಳಾಗಿ ಒಂದು ನಿರ್ದಿಷ್ಟ ನಿಯಮಾನುಸಾರ ಪರಿವರ್ತಿಸಿ ಇದನ್ನು ಮತ್ತೆ Q, L ಮತ್ತು M ಎಂಬ ನಿಗ್ಲಿ ಬೇಸಸ್‌ಗಳಾಗಿ ಗುಂಪು ಮಾಡಿ, ಇವುಗಳ ಸಹಾಯದಿಂದ ಶಿಲೆಯ ಮಾತೃಶಿಲಾದ್ರವದ ಮಾದರಿ ಮತ್ತು ಜನನವನ್ನು ಅರಿಯಬಹುದು.

ಷ್ಯಾಂಡ್ ವಿಧಾನದಲ್ಲಿ ಶಿಲೆಯ ರಚನೆಯನ್ನು ಪ್ರಧಾನವಾಗಿರಿಸಿಕೊಂಡು ಅನಂತರ $Sio_2$ ಅಂಶವನ್ನು ಪರಿಗಣಿಸಿ, ಅನಂತರ $Al_2O_3$ ಮತ್ತು $Na_2O$ + ಇತರ ಕ್ಷಾರೀಯ ಧಾತುಗಳನ್ನು ಉಪಯೋಗಿಸಿ ಶಿಲೆಗಳನ್ನು ವರ್ಗೀಕರಿಸಬಹುದು. ರಚನೆಯನ್ನಾಧರಿಸಿ, X (ಸ್ಪಷ್ಟ ರಚನಾ ವರ್ಗ) ಮತ್ತು D (ಅಸ್ಪಷ್ಟ ರಚನಾ ವರ್ಗ) ಎಂದು ವಿಂಗಡಿಸಿ ಮತ್ತೆ ಈ ಎರಡು ವಿಧದಲ್ಲಿ $SiO_2$ ಅಂಶದ ಆಧಾರದ ಮೇಲೆ, O (ಅಧಿಪರ್ಯಾಪ್ತ ಶಿಲೆಗಳು = Over Saturated rocks), S (ಪರ್ಯಾಪ್ತ ಶಿಲೆಗಳು), V, U, W (ಅಪರ್ಯಾಪ್ತ ಶಿಲೆಗಳು) ಎಂದು ವಿಭಾಗ ಮಾಡಲಾಗುತ್ತದೆ. V ಯಲ್ಲಿ ಆಲಿವೀನ್ ಖನಿಜಗಳಿರುತ್ತವೆ, U ಮತ್ತು W ನಲ್ಲಿ ಪರ್ಯಾಪ್ತ ಮತ್ತು ಅಪರ್ಯಾಪ್ತ ಕೃಷ್ಣಖನಿಜಗಳಿರುತ್ತವೆ. ಈ O, S, V, U ಮತ್ತು W ಶಿಲೆಗಳನ್ನು $Al_2O_3$ ಮತ್ತು $Na_2O$ ಅಂಶಗಳನ್ನು ಆಧರಿಸಿ p (ಪರ್ ಅಲ್ಯೂಮಿನಸ್), m (ಮೆಟಾ ಅಲ್ಯೂಮಿನಸ್), s (ಸಬ್ ಅಲ್ಯೂಮಿನಸ್) ಮತ್ತು k (ಪರ್ ಆಲ್ಕಲೈನ್) ಶಿಲೆಗಳಾಗಿ ಪುನರ್ ವಿಂಗಡಿಸಬಹುದು. ಹೀಗೆ ಅಗ್ನಿಶಿಲೆಗಳನ್ನು 40 ಪ್ರಧಾನ ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ.

ಆಸ್ಸಾನ್ ವಿಧಾನದಲ್ಲಿ ಶಿಲೆಯ ರಾಸಾಯನಿಕ ಆಕ್ಸೈಡ್‌ಗಳನ್ನು $A = K_2O+Li_2O+Na_2O$; $C = Al_2o_3\text{-}A$; $F = [CaO + FeO + MnO + MgO + NiO + SrO + BaO]\text{-}C$ ಎಂಬುದಾಗಿ ಪರಿಗಣಿಸಿ, ಈ ಮೊತ್ತವನ್ನು 30ಕ್ಕೆ ಪರಿವರ್ತನೆ ಮಾಡಿ, ACF ಸಮಬಾಹು ತ್ರಿಭುಜದಲ್ಲಿ ಪ್ರತಿ ಶಿಲೆಯ ರಾಸಾಯನಿಕ ಸಂಯೋಜನೆಯನ್ನು ಬಿಂದುವಾಗಿ ಗುರುತಿಸಿ ಅದರ ಸ್ಥಾನದ ಆಧಾರದ ಮೇಲೆ ಶಿಲೆಯ ಜನನವನ್ನು ಊಹಿಸಬಹುದು.

ವರ್ಣಸೂಚಿಯ ಆಧಾರದ ಮೇಲೆ ಶಿಲೆಗಳನ್ನು 3 ಗುಂಪುಗಳಾಗಿ ವರ್ಗೀಕರಿಸಬಹುದು: ಲ್ಯೂಕೋಕ್ರ್ಯಾಟಿಕ್ (ಶ್ವೇತ ಖನಿಜಗಳೇ ಪ್ರಧಾನವಾಗಿರುತ್ತವೆ), ಮೀಸೊಕ್ರ್ಯಾಟಿಕ್ (ಶ್ವೇತ ಮತ್ತು ಕೃಷ್ಣ ಖನಿಜಗಳ ಸಮ ಪ್ರಮಾಣ) ಮತ್ತು ಮೆಲನೊಕ್ರ್ಯಾಟಿಕ್ (ಕೃಷ್ಣ ಖನಿಜಗಳೇ ಪ್ರಧಾನ). ಶಿಲೆಯಲ್ಲಿನ ಖನಿಜಗಳು ಸಂಪೂರ್ಣ ಕೃಷ್ಣ ಖನಿಜಗಳಾಗಿದ್ದರೆ ಅದರ ವರ್ಣಸೂಚಿಯನ್ನು 100 ಎಂತಲೂ ಬದಲಿಗೆ ಅವುಗಳು ಸಂಪೂರ್ಣ ಶ್ವೇತ ಖನಿಜಗಳಾಗಿದ್ದರೆ ಅದರ ವರ್ಣಸೂಚಿಯನ್ನು ಎಂತಲೂ ಪರಿಗಣಿಸಬಹುದು. ಹೀಗಾಗಿ, ಶಿಲೆಯ ಬಣ್ಣವನ್ನು, ಶ್ವೇತ ಖನಿಜಗಳ ಮತ್ತು ಕೃಷ್ಣ ಖನಿಜಗಳ ನಿಷ್ಪತ್ತಿಯ ಆಧರಿಸಿ ನಾಲ್ಕು ವರ್ಗಗಳನ್ನಾಗಿ ಗುರುತಿಸಲಾಗಿದೆ: ಲ್ಯೂಕೊಕ್ರ್ಯಾಟಿಕ್ (ವರ್ಣಸೂಚಿ 0–30), ಮೀಸೊಕ್ರ್ಯಾಟಿಕ್ (ವರ್ಣಸೂಚಿ 30–60), ಮೆಲನೊಕ್ರ್ಯಾಟಿಕ್ (ವರ್ಣಸೂಚಿ 50–90) ಮತ್ತು ಹೈಪರ್‌ಮೆಲಾನಿಕ್ (ವರ್ಣಸೂಚಿ (90–100).

**ಖನಿಜ ಸಂಯೋಜನೆಯನ್ನಾಧರಿಸಿದ ವರ್ಗೀಕರಣ ವಿಧಾನ:** ಶಿಲೆಗಳಲ್ಲಿರುವ ಖನಿಜಗಳನ್ನು ಅವುಗಳ ಭೌತಿಕ ಮತ್ತು ದೃಗ್ ಲಕ್ಷಣಗಳ ಆಧಾರದ ಮೇಲೆ ಗುರುತಿಸಿ ವಿವಿಧ ಖನಿಜಗಳ ಪ್ರಮಾಣವನ್ನು ನಿರ್ಧರಿಸಿ ವಿವಿಧ ಮುಖ್ಯ ವರ್ಗಗಳನ್ನೂ ಮತ್ತು ಪ್ರತಿ ವರ್ಗದಲ್ಲೂ ಉಪವರ್ಗಗಳನ್ನು ಗುರುತಿಸಿದ್ದಾರೆ. ಅಗ್ನಿಶಿಲೆಗಳಲ್ಲಿನ ಖನಿಜಗಳಲ್ಲಿ ಅಗತ್ಯ, ಅಪ್ರಮುಖ ಮತ್ತು ಆನುಷಂಗಿಕ ಖನಿಜಗಳಿರುತ್ತವೆ. ಇವುಗಳಲ್ಲಿ ಅಗತ್ಯ ಮತ್ತು ಅನಗತ್ಯ ಖನಿಜಗಳು ಪ್ರಾಥಮಿಕ ಅಥವಾ ಮೂಲ ಖನಿಜಗಳಾಗಿದ್ದು ಮಾತೃಶಿಲಾ ದ್ರವದಿಂದ ನೇರವಾಗಿ ಆರಿ ಮೈದಳೆದಿರುತ್ತವೆ. ಅಗತ್ಯ ಖನಿಜಗಳು ಶಿಲೆಯಲ್ಲಿ ಪ್ರಧಾನವಾಗಿಯೂ ಹಾಗೂ ಹೇರಳ ಪ್ರಮಾಣದಲ್ಲೂ ಇರುತ್ತವೆ. ಶಿಲೆಯ ನಾಮಕರಣಕ್ಕೆ ಇವು ಇರಲೇಬೇಕು. ಅನಗತ್ಯ ಖನಿಜಗಳು ಬಹು ಅಲ್ಪ ಪ್ರಮಾಣದಲ್ಲಿ ಇರುತ್ತವೆ. ಇಲ್ಲದಿದ್ದರೆ, ಬಾಧಕವೇನಿಲ್ಲ. ಮೂಲ ಖನಿಜಗಳು ಶೈತ್ಯಗೊಳ್ಳುತ್ತ ಹೋದಂತೆ ಆನುಷಂಗಿಕ ಖನಿಜಗಳು ರೂಪುಗೊಳ್ಳುತ್ತವೆ. ಶಿಲೆಗಳ ನಾಮಕರಣದಲ್ಲಿ ಇವುಗಳ ಪ್ರಾಮುಖ್ಯವೇನು ಇರುವುದಿಲ್ಲ, ಆದರೆ, ಶಿಲೆಗಳನ್ನು ಗುರುತಿಸುವುದರಲ್ಲಿ ಇವು ಬಹು ಸಹಾಯಕವಾಗುತ್ತವೆ.

**ಸನ್ನಿವೇಶ ಮತ್ತು ವಿನ್ಯಾಸಗಳನ್ನಾಧರಿಸಿದ ವರ್ಗೀಕರಣ ವಿಧಾನ:** ಈ ಮೊದಲೇ ವಿವರಿಸಿರುವಂತೆ ಸನ್ನಿವೇಶ ಮತ್ತು ವಿನ್ಯಾಸಗಳನ್ನಾಧರಿಸಿ ಬಾಹ್ಯಸ್ಥ, ಮಧ್ಯಸ್ಥ ಮತ್ತು ಅಂತಸ್ಥ ಶಿಲೆಗಳೆಂದು 3 ವಿಧವಾಗಿ ವಿಂಗಡಿಸಿದೆ. ಈ ಶಿಲೆಗಳು ತನ್ನದೇ ಆದ ವಿನ್ಯಾಸ ಹೊಂದಿದ್ದು, ಅವುಗಳಲ್ಲಿ ವಿವಿಧ ವರ್ಗಗಳನ್ನು ಗುರುತಿಸಲಾಗಿದೆ.

**ಕೋಷ್ಟಕರೂಪಿ ವರ್ಗೀಕರಣ ವಿಧಾನ:** ಈ ವಿಧಾನದಲ್ಲಿ ಮೇಲೆ ವಿವರಿಸಿರುವ ವಿಧಾನಗಳಲ್ಲಿ ಪರಿಗಣಿಸಿರುವ ಅನೇಕ ಅಂಶಗಳನ್ನು ವೈವಿಧ್ಯಮಯವಾಗಿ ಸಂಯೋಜನೆ ಮಾಡಿ ವಿಜ್ಞಾನಿಗಳು ವಿವಿಧ ಕೋಷ್ಟಕರೂಪಿ ವರ್ಗೀಕರಣಗಳನ್ನು ನೀಡಿರುತ್ತಾರೆ. ಅವುಗಳಲ್ಲಿ ಟಿರಿಲ್ ಎಂಬ ವಿಜ್ಞಾನಿ ನೀಡಿರುವ ವರ್ಗೀಕರಣ ಅತ್ಯುತ್ತಮವಾದುದು. ಈ ವರ್ಗೀಕರಣ ದಲ್ಲಿ ಶಿಲೆಗಳು ಜನಿಸಿದ ಸನ್ನಿವೇಶವಿನ್ಯಾಸ, ಖನಿಜ ಸಂಯೋಜನೆ, ವರ್ಣಸೂಚಿ ಮುಂತಾದ ಅಂಶಗಳನ್ನೆಲ್ಲಾ ಪರಿಗಣಿಸಲಾಗಿದೆ.

ಕೆಲವು ಅಗ್ನಿಶಿಲೆಗಳನ್ನು ಮೇಲೆ ತಿಳಿಸಿದ ಯಾವೊಂದು ವಿಧಾನದಿಂದಲೂ ವರ್ಗೀಕರಿಸಲು ಸಾಧ್ಯವಿರುವುದಿಲ್ಲ. ಹಾಗಾಗಿ, ಈ ಎಲ್ಲ ವಿಧಾನಗಳು ಕೆಲವು ನ್ಯೂನ್ಯತೆಗಳಿಂದ ಕೂಡಿದ್ದು ವಿಜ್ಞಾನಿಗಳಲ್ಲಿ ಒಮ್ಮತವಿರಲಿಲ್ಲ. ಅದಕ್ಕಾಗಿಯೇ 1989ರಲ್ಲಿ ಅಂತಾರಾಷ್ಟ್ರೀಯ ಭೂವಿಜ್ಞಾನ ಸಮಿತಿಯ (ಐ.ಯುಜಿ.ಎಸ್.) ಉಪಸಮಿತಿ ನೀಡಿದ ಶಿಫಾರಸ್ಸಿನ ಮೇರೆಗೆ ಅಗ್ನಿಶಿಲೆಗಳನ್ನು ವರ್ಗೀಕರಿಸಬಹುದು. ಇದರ ಶಿಫಾರಿಸ್ಸಿನಂತೆ ಅಗ್ನಿಶಿಲೆಗಳಲ್ಲಿರುವ ಖನಿಜಗಳನ್ನು A = ಕ್ವಾರ್ಟ್ಸ್, ಟ್ರಿಡಿಮೈಟ್, ಕ್ರಿಸೊಬೊಲೈಟ್; Q= ಆಲ್ಕಲೀ ಫೆಲ್ಡ್‌ಸ್ಪಾರ್; P= ಪ್ಲೇಜಿಯೊಕ್ಲೇಸ್; F= ಫೆಲ್ಡ್‌ಸ್ಪಾತಾಯಿಡ್; M= ಕೃಷ್ಣ ಖನಿಜಗಳು ಮತ್ತು ಇತರ ಪ್ರಮುಖ ಖನಿಜಗಳು ಎಂದು ಗುಂಪುಗಳನ್ನಾಗಿ ಮಾಡಿ, ಅವುಗಳ ಪ್ರಮಾಣವನ್ನು ಕಂಡು ಹಿಡಿಯಬೇಕು. ಅನಂತರ ಈ ಪ್ರಮಾಣವನ್ನು 100ಕ್ಕೆ ಮರುಲೆಕ್ಕಚಾರ ಮಾಡಿ ವಜ್ರಾಕಾರದ QAPF ರೇಖಾಚಿತ್ರದಲ್ಲಿ ಶಿಲೆಯ ಸ್ಥಾನವನ್ನು ಬಿಂದುವಿನ ಮೂಲಕ ತೋರಿಸುವುದರಿಂದ ಅದು ಯಾವ ವರ್ಗಕ್ಕೆ ಸೇರಿದೆ ಎಂಬುದನ್ನು ತಿಳಿಯಬಹುದು.

ಈ QAPF ರೇಖಾಚಿತ್ರದಲ್ಲಿ ವಿವಿಧ ಅಂತಸ್ಥ ಶಿಲೆಗಳ ವರ್ಗಗಳನ್ನು ಕ್ಷೇತ್ರವಾರು ತೋರಿಸಲಾಗಿದೆ. ಇದರಿಂದ ಪ್ರತಿ ವರ್ಗದಲ್ಲಿ QAP ಅಥವಾ QFP ಖನಿಜಗಳ ಪ್ರಮಾಣದ ಮಿತಿಯನ್ನು ತಿಳಿಯಬಹುದು. ಇದೇ ರೇಖಾಚಿತ್ರದಲ್ಲಿ ಬಾಹ್ಯಸ್ಥ ಶಿಲಾವರ್ಗಗಳ ಕ್ಷೇತ್ರವನ್ನೂ ಸಹ ತೋರಿಸಬಹುದು.

ಈ ಎರಡು ಸಂದರ್ಭಗಳಲ್ಲೂ $M < 90$ ಆಗಿರುತ್ತದೆ. ಅಗ್ನಿಶಿಲೆಯಲ್ಲಿನ M ಖನಿಜಗಳು 90ಕ್ಕಿಂತಲೂ ಹೆಚ್ಚಾಗಿದ್ದರೆ, ಈ ರೇಖಾಚಿತ್ರವನ್ನು ಉಪಯೋಗಿಸಲು ಸಾಧ್ಯವಿಲ್ಲ ಹಾಗೂ ಕೆಲವು ವಿಶೇಷ ಅಗ್ನಿಶಿಲೆಗಳಾದ ಕಾರ್ಬಾನೊಟೈಟ್, ಪೈರೋಕ್ಲಾಸ್ಟಿಕ್, ಲ್ಯಾಂಪ್ರೊಫೈರ್, ಲ್ಯಾಂಪ್ರಾಯಿಟ್ ಅಥವಾ ಕಿಂಬರ್ಲೈಟ್, ಚಾರ್ನೋಕೈಟ್ ಇತ್ಯಾದಿಗಳನ್ನು ಸಹ ವರ್ಗೀಕರಿಸಲು ಈ ರೇಖಾಚಿತ್ರವನ್ನು ಬಳಸಲಾಗದು. ಅದಕ್ಕಾಗಿ ಐ.ಯುಜಿ.ಎಸ್.ನವರು ಶಿಫಾರಸ್ಸು ಮಾಡಿರುವ ಸಮಂಜಸ ಇತರ ರೇಖಾಚಿತ್ರಗಳನ್ನು ಉಪಯೋಗಿಸಿ ಗುರುತಿಸಬೇಕಾಗಿದೆ.

ಈ ವಿಧಾನವನ್ನು ಸ್ಟ್ರೆಕಿಸೆನ್ (Streckeisen) ವಿಜ್ಞಾನಿ ಕಂಡು ಹಿಡಿದಿರುವುದರಿಂದ ಇದು ಸ್ಟ್ರೆಕಿಸೆನ್ ವಿಧಾನವೆಂದೇ ಪ್ರಸಿದ್ಧಿಯಾಗಿದೆ. ಆದ್ದರಿಂದ ಐ.ಯುಜಿ.ಎಸ್. ಶಿಫಾರಸ್ಸಿನ ರೇಖಾಚಿತ್ರ ವರ್ಗೀಕರಣ ವಿಧಾನವು ಬಹಳ ಅತ್ಯುತ್ತಮ ಮತ್ತು ಉಪಯುಕ್ತ ವಿಧಾನವಾಗಿ ಪರಿಣಮಿಸಿದೆ.

**ಅಗ್ನಿಶಿಲೆಗಳ ಜನನ:** ಮಾತೃ ಶಿಲಾದ್ರವವು ಘನೀಕರಣಗೊಂಡಾಗ ಅಗ್ನಿಶಿಲೆಗಳು ರೂಪುಗೊಳ್ಳುತ್ತವೆ. ಶಿಲೆಗಳನ್ನು ದ್ರವೀಕರಣಕ್ಕೆ ಒಳಪಡಿಸಿದರೆ ಶಿಲೆಯಲ್ಲಿನ ವಿವಿಧ ಖನಿಜ ಘಟಕಗಳು ಬೇರೆ ಬೇರೆ ದ್ರವೀಕರಣ ಬಿಂದುವಿನಲ್ಲಿ ದ್ರವೀಕರಿಸುತ್ತದೆ. ಶ್ವೇತವರ್ಣದ ಖನಿಜಗಳು ಕಡಿಮೆ ಉಷ್ಣಾಂಶದಲ್ಲಿ ದ್ರವೀಕರಿಸಿದರೆ (700° ಸೆ–800° ಸೆ ವರೆಗೆ) ಕೃಷ್ಣವರ್ಣದ ಖನಿಜಗಳು ಹೆಚ್ಚಿನ ಉಷ್ಣಾಂಶದಲ್ಲಿ (1300° ಸೆ – 1400° ಸೆ ವರೆಗೆ) ದ್ರವರೂಪ ತಾಳುತ್ತವೆ. ಭೂಮಿಯ 50ಕಿಮೀ. (– 700° ಸೆ.) ನಿಂದ 25ಕಿಮೀ. (1400° ಸೆ.) ವರೆಗಿನ ಆಳದಲ್ಲಿ ಈ ಸ್ಥಿತಿಯು ಇರುವ ಸಾಧ್ಯತೆಗಳಿವೆ. ಈ ಭಾಗವು ಭೂಮಿಯ ಒಳರಚನೆಯಲ್ಲಿ ಮೇಲು ಪ್ರಾಕಾರ (Upper mantle) ಅಸ್ಥಿರ ಭಾಗವಾಗಿರುತ್ತದೆ (asthenosphere). ಈ ಭಾಗದಲ್ಲಿನ ಶಿಲೆಗಳು ಅಸ್ಥಿರ ಸ್ಥಿತಿಯಲ್ಲಿದ್ದು (ದ್ರವೀಕರಣ ಬಿಂದುವಿನ ಸಮೀಪ)ಕೊಂಚ ಉಷ್ಣಾಂಶ ಏರಿದರೆ ಪಾರ್ಶ್ವದ್ರವೀಕರಣ ಕ್ರಿಯೆ ಜರಗುತ್ತದೆ. ಇದರಿಂದ ಉತ್ಪತ್ತಿಯಾದ ಶಿಲಾದ್ರವವು ಬಸಾಲ್ಟಿಕ್ ಶಿಲೆಯ ರಾಸಾಯನಿಕ ಸಂಯೋಜನೆಗಳಿಗೆ ಹೋಲುತ್ತದೆ ಹಾಗೂ ಅಗ್ನಿಶಿಲೆಗಳಲ್ಲಿ ಬಹು ಪಾಲು ಬಸಾಲ್ಟ್ ಶಿಲೆಗಳಾಗಿರುವುದರಿಂದ ಮಾತೃಶಿಲಾ ದ್ರವವು ಬೆಸ್ಸಾಲಿಕ್ ಸಂಯೋಜನೆಯಿಂದ ಕೂಡಿದ್ದು ಎಲ್ಲ ಅಗ್ನಿಶಿಲೆಗಳಿಗೆ ಮಾತೃಪ್ರಾಯವಾಗಿದೆ ಎಂದು ಹೇಳಬಹುದು.

ಆದರೆ, ಮಾತೃಶಿಲಾ ದ್ರವವು ಮೂಲರೂಪದಲ್ಲಿಯೇ ಅಥವಾ ಕಲುಷಿತಗೊಂಡಿದೆಯೇ ಎಂಬ ಬಗ್ಗೆ ಸಾಕಷ್ಟು ಜಿಜ್ಞಾಸೆಗಳಿವೆ. ಕೆಲವರ ಪ್ರಕಾರ ಗ್ರ್ಯಾನಿಟಿಕ್ ಮತ್ತು ಬಸಾಲ್ಟಿಕ್ ಸಂಯೋಜನೆಯನ್ನು ಹೊಂದಿರುವ ಎರಡು ಮೂಲ ಮಾತೃಶಿಲಾ ದ್ರವಗಳಿವೆ. ಇವೆರಡು ವಿವಿಧ ಪ್ರಮಾಣದಲ್ಲಿ ಬೆರೆತು ವಿವಿಧ ಬಗೆಯ ಅಗ್ನಿಶಿಲೆಗಳ ಜನನಕ್ಕೆ ಕಾರಣವಾಗಿದೆ ಎಂಬ ವಾದವನ್ನೂ ಮುಂದಿಡಲಾಗಿದೆ. ತಮ್ಮ ಸಂಶೋಧನೆಯಿಂದ ಬಸಾಲ್ಟಿಕ್ ಸಂಯೋಜನೆ ಹೊಂದಿರುವ ಏಕಮಾತ್ರ ಮಾತೃಶಿಲಾ ದ್ರವವು ಅನೇಕ ಕ್ರಿಯೆಗಳಿಗೆ ಒಳಪಟ್ಟು ವಿವಿಧ ಅಗ್ನಿಶಿಲೆಗಳನ್ನು ನೀಡಿರುತ್ತದೆ ಎಂದೂ ಇನ್ನು ಕೆಲವು ವಿಜ್ಞಾನಿಗಳ ಅಭಿಮತ. ಆದರೆ, ಬೃಹದಾಕಾರದ ಗ್ರ್ಯಾನಿಟಿಕ್ ಬ್ಯಾತೊಲಿಕ್‌ಗಳನ್ನು ಗಮನಿಸಿದರೆ, ಬಸಾಲ್ಟಿಕ್ ಸಂಯೋಜನೆಯುಳ್ಳ ಏಕಮಾತ್ರ ಮಾತೃಶಿಲಾ ದ್ರವದಿಂದ ಈ ಬೃಹದಾಕಾರದ ಗ್ರ್ಯಾನೈಟ್ ಶಿಲೆಗಳು ಜನಿಸಿರುವುದು ಅಸಾಧ್ಯವೆಂಬುದು ಖಚಿತವಾಗುತ್ತದೆ. ಗ್ರ್ಯಾನಿಟಿಕ್ ಬ್ಯಾತೊಲಿಕ್‌ಗಳ ಜನನವನ್ನು ನಾಡ ಶಿಲೆಗಳ  ಕಾಯಂತರದಿಂದ ಉಂಟಾಗಿದೆ. ಎಂದು ವಿವರಿಸಬಹುದು. ನಾಡಶಿಲೆಗಳು ಸು 30ಕಿಮೀ.–50 ಕಿಮೀ. ವರೆಗಿನ ಆಳಕ್ಕೆ ತಳಲ್ಪಟ್ಟರೆ ಅವು ಪಾರ್ಶ್ವ ದ್ರವೀಕರಣಕ್ಕೆ ಒಳಪಟ್ಟು ಅವುಗಳಲ್ಲಿ ಶ್ವೇತವರ್ಣದ ಖನಿಜಗಳು ದ್ರವರೂಪವನ್ನು ಪಡೆದು, ಶೇಖರಗೊಂಡು ಬ್ಯಾತೊಲಿಕ್‌ಗಳಾಗಿ ಗ್ರ್ಯಾನೈಟ್ ಶಿಲೆಯು ಜನಿಸಬಹುದು. ಇದನ್ನು ಗ್ರ್ಯಾನಿಟೀಕರಣ ಕ್ರಿಯೆ ಎಂದು ಕರೆಯಲಾಗಿದೆ. ನಾಡಶಿಲೆಗಳ ಪುನರ್ ಸ್ಫಟಿಕೀಕರಣದಿಂದಲೂ ಗ್ರ್ಯಾನೈಟ್ ಜನಿಸಲು ಸಾಧ್ಯವೆಂದು ಕೆಲವರು ವಾದಿಸಿದ್ದಾರೆ. ಈ ರೀತಿಯ ಪುನರ್ ಸ್ಫಟಿಕೀಕರಣ ಕ್ರಿಯೆಯನ್ನು ಪ್ಯಾಲಿಂಜೆನಿಸ್ ಎಂದು ಕರೆಯುತ್ತಾರೆ. ಗ್ರ್ಯಾನೈಟ್ ಶಿಲೆಯನ್ನು ಸಣ್ಣ ಪ್ರಮಾಣದಲ್ಲಿ ಮಾತ್ರ ಶಿಲಾದ್ರವದಿಂದಲೂ ಪಡೆಯಬಹುದು. ಆದುದರಿಂದಲೇ, ಭೂಮಿಯಲ್ಲಿ ಗ್ರ್ಯಾನೈಟ್ (ಗ್ರ್ಯಾನಿಟೀಕರಣ ಜನನ) ಮತ್ತು ಗ್ರ್ಯಾನೈಟ್ (ಶಿಲೆ)ಗಳಿವೆ ಎಂಬ ವಾದವಿದೆ.

ಮಾತೃಶಿಲಾ ದ್ರವವು ಘನೀಕರಣಕ್ಕೊಳಗಾಗಿರುವ ಸಮಯದಲ್ಲಿ ಸಾಕಷ್ಟು ಸುಧಾರಿತಗೊಂಡು ಅನೇಕ ಅಗ್ನಿಶಿಲೆಗಳ ಜನನಕ್ಕೆ ಕಾರಣವೆನಿಸುತ್ತದೆ. ಇದನ್ನೇ ಮಾತೃಶಿಲಾ ದ್ರವದ ವಿಕಾಸ ಎಂದೂ ಹೇಳಬಹುದು. ಮಾತೃ ಶಿಲಾದ್ರವ ವಿಕಾಸದಲ್ಲಿ ಅನೇಕ ವಿಧಾನಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಬಹುಮುಖ್ಯವಾದವು: ಮಾತೃಶಿಲಾದ್ರವ ವಿಭೇದೀಕರಣ; ಶಿಲಾಭಕ್ಷಣ ಮತ್ತು ಸಮ್ಮಿಶ್ರಣ.

ಸಮರೂಪ ಸಂಯೋಜನೆಯಿಂದ ಕೂಡಿರುವ ಮಾತೃಶಿಲಾ ದ್ರವವು ವೈವಿಧ್ಯಮಯ ಲಕ್ಷಣಗಳಿಂದ ಕೂಡಿರುವ ವಿವಿಧ ಘಟಕಗಳಾಗಿ ಮಾರ್ಪಡುವ ಕ್ರಿಯೆಯೇ ವಿಭೇದಾತ್ಮಕ ಕ್ರಿಯೆ. ಈ ಕ್ರಿಯೆಯು ಅನೇಕ ರೀತಿಯಲ್ಲಿ ನಡೆಯುತ್ತದೆ. ಶಿಲಾ ದ್ರವದಿಂದ ಜನಿಸುವ ಖನಿಜಗಳು ಏಕ ಕಾಲದಲ್ಲಿ ಜನಿಸದೆ ಹಂತ ಹಂತವಾಗಿ ಹುಟ್ಟುತ್ತವೆ. ಮೊದಲನೆ ಹಂತದಲ್ಲಿ ಜನಿಸಿದ ಖನಿಜಗಳು ಸಾರೀಕೃತಗೊಂಡಾಗ, ಉಳಿಕೆ ದ್ರವದ ರಾಸಾಯನಿಕ ಸಂಯೋಜನೆಯು ಮಾತೃಶಿಲಾ ದ್ರವದ ಸಂಯೋಜನೆಗಿಂತ ವಿಭಿನ್ನವಾಗಿರುತ್ತದೆ. ಹೀಗೆ ಮಾತೃಶಿಲಾ ದ್ರವವು ಹಂತ ಹಂತವಾಗಿ ವಿವಿಧ ಘಟಕಗಳಾಗಿ ಮಾರ್ಪಟ್ಟು ವಿಭೇದಾತ್ಮಕ ಕ್ರಿಯೆಯು ಜರಗುವುದು ಮತ್ತು ವಿವಿಧ ಅಗ್ನಿಶಿಲೆಗಳ ಜನನಕ್ಕೆ ಕಾರಣವಾಗುತ್ತದೆ. ಕೆಲವೊಮ್ಮೆ ಶಿಲಾದ್ರವದಲ್ಲಿ ಸ್ಫಟಿಕೀಕರಣ ಮುಂದುವರೆದಂತೆ ಮೊದಲ ಹಂತದಲ್ಲಿ ಸ್ಫಟಿಕೀಕರಣಗೊಂಡ ಹರಳುಗಳು ಗುರುತ್ವಾಕರ್ಷಣ ಶಕ್ತಿಯಿಂದ ತಳದಲ್ಲಿ ಶೇಖರವಾದಾಗಲೂ (gravity setting), ಶಿಲಾ ದ್ರವವು ಹಂತ ಹಂತವಾಗಿ ವಿವಿಧ ಘಟಕಗಳಾಗಿ ಮಾರ್ಪಾಡು ಹೊಂದುತ್ತದೆ. ಶಿಲಾ ದ್ರವವು ವಿಭೇದಾತ್ಮಕ ದ್ರವ ಬೇರ್ಪಡಿಕೆಯೂ (Liquid immiscibility) ಕಾರಣವಾಗಬಹುದು. ಸಮರೂಪ ಸಂಯೋಜನೆಯಿಂದ ಕೂಡಿರುವ ಶಿಲಾದ್ರವವು ಕೆಲವು ಸಂದರ್ಭಗಳಲ್ಲಿ ಕಡಿಮೆ ಉಷ್ಣಾಂಶದಲ್ಲಿ ಎರಡು ರೂಪದ ದ್ರವಗಳು ಬೇರ್ಪಡುವ ಕ್ರಿಯೆಯನ್ನು ದ್ರವ–ಬೇರ್ಪಡಿಕೆ ಅಥವಾ ದ್ರವಗಳ ಅಮಿಶ್ರಣ ಕ್ರಿಯೆ ಎನ್ನುತ್ತಾರೆ. ಶಿಲಾ ದ್ರವದಲ್ಲಿ ವ್ಯತ್ಯಾಸಾತ್ಮಕತೆಯು ಶೋಧಕ ವಿಭೇದಾತ್ಮಕ ಕ್ರಿಯೆಯಿಂದಲೂ (Filter pressing differentation) ಕೂಡ ನಡೆಯಬಹುದು. ಈ ಕ್ರಿಯೆಯಲ್ಲಿ ಶಿಲಾದ್ರದ ಸ್ಫಟಿಕೀಕರಣ ಮೊದಲ ಹಂತದಲ್ಲೇ ಹರಲುಗಳ ಮುಳಗಡೆ ಪ್ರಾರಂಭವಾಗುತ್ತದೆ. ಸ್ಫಟಿಕೀಕರಣ ಮುಂದುವರೆದಂತೆ ಹೆಚ್ಚು ಹೆಚ್ಚು ಹರಳುಗಳುಂಟಾಗಿ, ಹರಳುಗಳ ನಡುವೆ ಶೇಷದ್ರವ ತುಂಬಿಕೊಂಡಿರುತ್ತದೆ. ಈ ತೆರನಾದ ಶಿಲಾದ್ರವದ ಕೋಷ್ಠ ಭೂ ಚಲನೆಗಳ ಪ್ರಭಾವಕ್ಕೆ ಅಥವಾ ಒತ್ತಡಕ್ಕೆ ಸಿಲುಕಿದಾಗ

ಶೇಷದ್ರವವು ಕಡಿಮೆ ಒತ್ತಡವಿರುವ ಸ್ಥಳಗಳಿಗೆ ಚಲಿಸಿ ಹೊಸ ಸನ್ನಿವೇಶದಲ್ಲಿ ಸ್ಫಟಿಕೀಕರಣ ಮುಂದುವರೆಯುತ್ತದೆ. ಈ ರೀತಿಯು ವಿಭೇದೀಕರಣವನ್ನು ಶೋಧಕ ವಿಭೇದೀಕರಣ ಎಂದು ಕರೆಯುತ್ತಾರೆ.

ಮಾತೃಶಿಲಾದ್ರವ ವಿಕಾಸಕ್ಕೆ ಶಿಲಾಭಕ್ಷಣವು ಒಂದು ಮೂಲ. ಶಿಲಾದ್ರವವು ನಾಡ ಶಿಲೆಗಳ ಮೂಲಕ ಹೊರಹೊಮ್ಮುವಾಗ ನಾಡಶಿಲೆಗಳ ಛಿದ್ರಗಳನ್ನು ಕಬಳಿಸಿದಾಗ ನಾಡಶಿಲೆಗಳು ಕರಗಿ ಮಾತೃಶಿಲಾ ಸಂಯೋಜನೆಯಲ್ಲಿ ಬದಲಾವಣೆ ತರುತ್ತವೆ. ಇವಲ್ಲದೆ ಬೇರೆ ಬೇರೆ ಮೂಲಗಳಿಂದ ಸೃಷ್ಟಿಯಾದ ಶಿಲಾದ್ರವದ ಬೆರೆಯುವಿಕೆಯಿಂದಲೂ (ವಿಲೀನಿಕರಣ) ಕೂಡ ಮಾತೃಶಿಲಾ ದ್ರವವು ವಿಕಾಸಗೊಳ್ಳುತ್ತದೆ.

**ಬವೆನ್‌ರವರ ಪ್ರತಿಕ್ರಿಯಾ ತತ್ತ್ವ:** ಮಾತೃಶಿಲಾದ್ರವ ಶೈತ್ಯೀಕರಣಕ್ಕೆ ಒಳಪಟ್ಟರೆ ಸ್ಫಟಿಕೀಕರಣ ಕ್ರಿಯೆ ನಡೆಯುತ್ತದೆ. ಸ್ಫಟಿಕೀಕರಣ ಮುಂದುವರೆದಂತೆ ರೂಪುಗೊಂಡಿರುವ ಹರಳುಗಳು ಮತ್ತು ಶೇಷ ಮಾತೃಶಿಲಾ ದ್ರವಗಳ ನಡುವೆ ಸಮಸ್ಥಿತಿ ಕಾಪಾಡುವ ಪ್ರಯತ್ನಗಳು ಸತತವಾಗಿ ನಡೆಯುತ್ತವೆ. ಈ ಪ್ರಯತ್ನದಲ್ಲಿ ಹರಳುಗಳು ಮತ್ತು ಶೇಷದ್ರವದ ನಡುವೆ ಪ್ರತಿಕ್ರಿಯೆ ನಡೆದು ಹೊಸ ಖನಿಜಗಳನ್ನು ಸೃಷ್ಟಿ ಮಾಡುತ್ತವೆ. ಹೀಗಾಗಿ ಸ್ಫಟಿಕೀಕರಣ ಕ್ರಿಯೆಯ ಉದ್ದಕ್ಕೂ ಈ ಪ್ರಕ್ರಿಯೆ ನಡೆಯುತ್ತಲೇ ಇದ್ದು ಹೊಸ ಹೊಸ ಖನಿಜಗಳು ಜನಿಸಿ ವಿವಿಧ ಅಗ್ನಿಶಿಲೆಗಳ ಉಗಮಕ್ಕೆ ಕಾರಣವಾಗಿವೆ. ಬವೆನ್ ಅವರು ಈ ತತ್ತ್ವವನ್ನು ಮೊದಲ ಬಾರಿಗೆ ಪ್ರತಿಪಾದಿಸಿದವರಾದ್ದರಿಂದ ಇದು ಬವೆನ್‌ರವರ ಪ್ರತಿಕ್ರಿಯಾ ತತ್ತ್ವವೆಂದೇ ಪ್ರಸಿದ್ಧಿಯಾಗಿದೆ. ಈ ಪ್ರತಿಕ್ರಿಯಾ ತತ್ತ್ವದ ಅನ್ವಯ ಮಾತೃ ಶಿಲಾದ್ರದ ಸ್ಫಟಿಕೀಕರಣ ಕ್ರಿಯೆಯಲ್ಲಿ ಕ್ರಮಾನುಗತವಾದ ಪ್ರತಿಕ್ರಿಯಾ ಶ್ರೇಣಿಯನ್ನು ಸಾದರ ಪಡಿಸಲಾಗಿದೆ. ಈ ಪ್ರತಿಕ್ರಿಯಾ ಶ್ರೇಣಿಯಲ್ಲಿ ಎರಡು ವಿಧಗಳಿವೆ: 1. ವಿಚ್ಛಿನ್ನ ಶ್ರೇಣಿ (discontinuous series), 2. ಅವಿಚ್ಛಿನ್ನ ಶ್ರೇಣಿ (continuous series).

ವಿಚ್ಛಿನ್ನ ಶ್ರೇಣಿಯಲ್ಲಿ ಆಲಿವೀನ್, ಪೈರಾಕ್ಸಿನ್, ಆಂಫಿಬೋಲ್ ಮುಂತಾದ ಕೃಷ್ಣವರ್ಣ ಖನಿಜಗಳಿರುತ್ತವೆ. ಈ ಶ್ರೇಣಿಯ ಖನಿಜಗಳ ನಡುವೆ ಸಂಯೋಜನೆಯಲ್ಲಾಗಲೀ ಒಳರಚನೆಯಲ್ಲಾಗಲೀ ಕ್ರಮಾನುಗತವಾದ ಬದಲಾವಣೆಗಳಿರುವುದಿಲ್ಲ, ಆದ್ದರಿಂದಲೇ ಇದು ವಿಚ್ಛಿನ್ನ ಶ್ರೇಣಿ ಎನ್ನಲಾಗಿದೆ. ಅವಿಚ್ಛಿನ್ನ ಶ್ರೇಣಿಯಲ್ಲಿ ಪ್ಲೇಜಿಯೋಕ್ಲೇಸ್ ಶ್ರೇಣಿಯ ವಿವಿಧ ಪ್ರಭೇದಗಳನ್ನು ಕಾಣಬಹುದು. ಅಂದರೆ ಈ ಶ್ರೇಣಿಯ ಖನಿಜಗಳ ಒಳರಚನೆ ಒಂದೇ ಆಗಿದ್ದು, ಸಂಯೋಜನೆ ದೃಕ್ (optical) ಮತ್ತು ಭೌತ ಲಕ್ಷಣಗಳಲ್ಲಿ ಕ್ರಮಾನುಗತವಾದ ಬದಲಾವಣೆಯನ್ನು ಕಾಣಬಹುದು. ಈ ಎರಡು ಶ್ರೇಣಿಗಳು ಅಂತಿಮವಾಗಿ ಪೊಟ್ಯಾಸ್ ಫೆಲ್ಡ್‌ಸ್ಪಾರ್, ಮಸ್ಕೊವೈಟ್, ಕ್ವಾರ್ಟ್ಸ್ ಖನಿಜಗಳ ಉತ್ಪತ್ತಿಯೊಂದಿಗೆ ಸ್ಫಟಿಕೀಕರಣವು ಅಂತ್ಯಗೊಳ್ಳುತ್ತದೆ.

| ವಿಚ್ಛಿನ್ನ ಶ್ರೇಣಿ | ಅವಿಚ್ಛಿನ್ನ ಶ್ರೇಣಿ |
|---|---|
| ಆಲಿವೀನ್ | ಕ್ಯಾಲ್ಸಿಕ್ ಪ್ಲೇಜಿಯೊಕ್ಲೇಸ್ |
| ಮೆಗ್ನಿಷಿಯಂ ಪೈರಾಕ್ಸಿನ್ | ಕ್ಯಾಲ್ಸಿಯಂ ಪೈರಾಕ್ಸಿನ್ |
| ಕ್ಯಾಲ್ಕ್–ಆಲ್ಕಲಿ ಪ್ಲೇಜಿಯೊಕ್ಲೇಸ್ | ಆಲ್ಕಲಿ–ಕ್ಯಾಲ್ಕ್ ಪ್ಲೇಜಿಯೊಕ್ಲೇಸ್ |
| ಆಂಫಿಬೋಲ್ | ಆಲ್ಕಲಿ ಪ್ಲೇಜಿಯೊ ಕ್ಲೇಸ್ |
| ಬಯೊಟೈಟ್ | |

ಪೊಟ್ಯಾಷ್ ಫೆಲ್ಡ್‌ಸ್ಪಾರ್

↓

ಮಸ್ಕೊವೈಟ್

↓

ಕ್ವಾರ್ಟ್ಸ್

ಈ ಪ್ರತಿಕ್ರಿಯಾ ತತ್ತ್ವ ನಿರೂಪಿಸುವ ಅನೇಕ ಕುರುಹುಗಳನ್ನು ಅಗ್ನಿಶಿಲೆಗಳಲ್ಲಿ ಕಾಣಬಹುದು. ಆಲಿವೀನ್ ಸುತ್ತಲೂ ಪೈರಾಕ್ಸಿನ್ ಇದ್ದು ಪೈರಾಕ್ಸಿನ್ ಸುತ್ತಲೂ ಹಾರ್ನ್‌ಬ್ಲೆಂಡ್ ಇರುವುದನ್ನು ಅನೇಕ ಶಿಲಾಭೇದದಲ್ಲಿ ಗುರುತಿಸಬಹುದು. ಹಾಗೆಯೆ ಪ್ಲೇಜಿಯೋಕ್ಲೇಸ್‌ನ ಒಂದು ಕಣದ ವಿವಿಧ ಪ್ಲೇಜಿಯೋಕ್ಲೇಸ್ ಪ್ರಭೇದದ ವಲಯಗಳು ಸುತ್ತುವರಿಸಿರುವುದನ್ನು ಕೂಡ ಕಾಣಬಹುದು. ಈ ಪ್ಲೇಜಿಯೋಕ್ಲೇಸ್‌ನ ಮಧ್ಯಭಾಗವು ಅನಾರ್ಥೈಟ್ ಆಗಿದ್ದು ಹೊರವಲಯವು ಆಲ್ಬೈಟ್ ಪ್ರಭೇದವಾಗಿರುತ್ತದೆ. ಆದ್ದರಿಂದ ಮಾತೃಶಿಲಾ ದ್ರವವು ಘನೀಕರಣಕ್ಕೆ ಒಳಪಟ್ಟಾಗ ಒಂದು ನಿರ್ದಿಷ್ಟ ಉಷ್ಣತೆಯಲ್ಲಿ ಸ್ಫಟಿಕೀಕರಣ ಪ್ರಾರಂಭವಾಗಿ ಕೊಂಚಕಾಲ ಅಥವಾ ದೀರ್ಘಕಾಲದವರೆಗೆ ಮುಂದುವರೆಯುವುದು. ಕಡೆಯ ಹನಿ ಘನೀಕರಿಸುವ ತನಕ ಸ್ಫಟಿಕೀಕರಣ ನಡೆದು ಖನಿಜಗಳು ರೂಪಗೊಂಡು ಬಗೆಬಗೆಯ ಅಗ್ನಿಶಿಲೆಗಳಿಗೆ ಕಾರಣವೆನಿಸಿವೆ. ಈ ಕ್ರಿಯೆಯೇ ಆಂಶಿಕ ಸ್ಫಟಿಕೀಕರಣ (Fractional Crystalisation).

ಹೀಗೆ ಮಾತೃಶಿಲಾ ದ್ರವದ ಘನೀಕರಣವು ವಿವಿಧ ಹಂತಗಳಿಂದ ಕೂಡಿದೆ.

(ಅ) ಆರ್ಥೋಮ್ಯಾಗ್ಮಾಟಿಕ್ ಹಂತ: ಮೊದಲ ಹಂತದಲ್ಲಿ ಅನಿಲಾಂಶವು ಕಡಿಮೆಯಿರುವುದರಿಂದ ಅಗ್ನಿಜನ್ಯ ಖನಿಜಗಳು (Pyrogenic minerals) ಮತ್ತು ಅನಂತರದ ಹಂತಗಳಲ್ಲಿ ಜಲಜನ್ಯ ಖನಿಜಗಳು ಜನಿಸುತ್ತವೆ.

(ಆ) ಪೆಗ್ಮಟಿಟಿಕ್ ಹಂತ: ಈ ಹಂತದ ಉಷ್ಣತೆ ಸು 600° ಸೆ. – 800° ಸೆ. ವರೆಗೆ ಇರುತ್ತದೆ. ಈ ಪರಿಸ್ಥಿತಿಯಲ್ಲೂ ಸ್ಫಟಿಕೀಕರಣ ಮುಂದುವರೆಯುತ್ತದೆ. ದ್ರವದಲ್ಲಿ ಜಲಾಂಶ ಮತ್ತು ಸಿಲಿಕೇಟ್ ಅಂಶ ಅಧಿಕವಾಗಿದ್ದು, ದೊಡ್ಡ ದೊಡ್ಡ ಕ್ವಾರ್ಟ್ಜ್ ಮತ್ತು ಫೆಲ್ಡ್‌ಸ್ಪಾರ್ ಹರಳುಗಳು ಉತ್ಪತ್ತಿಯಾಗುತ್ತವೆ.

(ಇ) ನ್ಯೂಮೆಟಾಲಿಟಿಕ್ ಹಂತ: ಈ ಹಂತದಲ್ಲಿ ಶಾಖವು 400° ಸೆ. – 600° ಸೆ. ವರೆಗೆ ಇರುತ್ತದೆ, ಹಾಗೂ ಶೇಷದ್ರವದಲ್ಲಿ ಜಲವಿಶ್ಲೇಷಣೆ ಹೆಚ್ಚಾಗುತ್ತಾ ಹೋಗುತ್ತದೆ.

(ಈ) ಹೈಡ್ರೋಥರ್ಮಲ್ ಹಂತ: ಇದು ಘನೀಕರಣದ ಕೊನೆಯ ಹಂತ. ಇದರಲ್ಲಿನ ಶಾಖವು 100° ಸೆ. – 400 ಸೆ. ವರೆಗೆ ಇರುತ್ತದೆ.ಈ ಹಂತದಲ್ಲಿ ಸ್ಫಟಿಕ ವಸ್ತು, ದ್ರಾವಣಗಳು ಮತ್ತು ದ್ರವಾನಿಲಗಳು ಸಮಸ್ಥಿತಿಯಲ್ಲಿರುತ್ತವೆ.

(ಉ) ಡ್ಯೂಟಿರಿಕ್ ಹಂತ: ಈ ಹಂತವನ್ನು ಮುಟ್ಟುವ ವೇಳೆಗೆ ಮಾತೃಶಿಲಾ ದ್ರವದ ಬಹು ಭಾಗವು ಘನೀಕರಣಗೊಂಡಿರುತ್ತದೆ. ಕೇವಲ ಅನಿಲಾಂಶ ಉಳಿದಿರುತ್ತದೆ. ಇವು ಈಗಾಗಲೇ ರೂಪುಗೊಂಡಿರುವ ಖನಿಜಗಳ ಮೇಲೆ ದಾಳಿ ಮಾಡಿ ಕ್ಲೋರೈಟ್, ಸೆರಿಸೈಟ್, ಸರ್ಪಂಟಿನ್, ಜಿಯೋಲೈಟ್, ಕಯೋಲಿನ್ ಮುಂತಾದ ಆನುಷಂಗಿಕ ಖನಿಜಗಳಾಗಿ ಪರಿವರ್ತನೆಗೊಳ್ಳುತ್ತದೆ. ಈ ಹಂತದ ಕ್ರಿಯೆಯನ್ನು ಆಲ್ಬಟೀಕರಣ, ಕ್ಲೋರಿಟೀಕರಣ, ಸೆರಿಸಿಟೀಕರಣ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ಮಾತೃ ಶಿಲಾದ್ರವದ ಘನೀಕರಣ ಕ್ರಿಯೆಯಲ್ಲಿ ಮೇಲೆ ಪಟ್ಟಿ ಮಾಡಿರುವ ಎಲ್ಲ ಹಂತಗಳನ್ನು ದಾಟಿ ಘನೀಕರಿಸಬೇಕೆಂಬ ನಿಯಮವೇನು ಇಲ್ಲ. ಈ ಹಂತಗಳು ಶಿಲಾದ್ರವದ ಸಂಯೋಜನೆ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಜರಗುತ್ತವೆ.

ಹೀಗೆ ಅಗ್ನಿಶಿಲೆಗಳು ಮಾತೃ–ಶಿಲಾದ್ರವ–ವಿಕಾಸ ಮತ್ತು ಘನೀಕರಣ– ಕ್ರಿಯೆಗಳಿಂದಲೂ ಹಾಗೂ ಇತರ ಕಾಯಂತರ ಕ್ರಿಯೆಗಳಿಂದಲೂ (ನಾಡಶಿಲೆಗಳ ಗ್ರ್ಯಾನಿಟೀಕರಣ, ಪ್ಯಾಲೆಂಜೆನಿಸಿಸ್ ಪಾರ್ಶ್ವ ದ್ರವೀಕರಣ ಮುಂತಾದವು) ಜನಿಸುತ್ತವೆ.

**(ಎಸ್.ಎ.ಎಂ) (ಪರಿಷ್ಕರಣೆ: ಎಂ.ಎನ್. ಮಾಲೂರ್)**

**ಅಗ್ನಿಷ್ಟೋಮ :** ವೇದೋಕ್ತ ಯಜ್ಞಗಳಲ್ಲಿನ ಅನೇಕ ಪ್ರಕಾರಗಳಲ್ಲಿ ಸೋಮಯಾಗಗಳಿಗೆ ಪ್ರಾಶಸ್ತ್ಯವುಂಟು. ಸೋಮಯಾಗಗಳಲ್ಲಿಯೂ ಒಂದರಿಂದ ಹನ್ನೆರಡು ದಿನಗಳವರೆಗೆ ನಡೆಯುವ ಅತಿರಾತ್ರ, ಉಕ್ಥ್ಯ ಮುಂತಾದ ಬೇರೆ ಬೇರೆ ಏಳು ಪ್ರಕಾರಗಳುಂಟು. ಈ ಪ್ರಕಾರಗಳಲ್ಲಿ (ಸಂಸ್ಥಾ) ಅಗ್ನಿಷ್ಟೋಮ ಮೊದಲನೆಯದು ಅತ್ಯಂತ ಸರಳವೂ ಆದುದು. ಈ ಯಾಗದ ಅವಧಿ ಒಂದೇ ದಿನ. ಬೇಕಾಗುವ ಯಾಜ್ಞಿಕರು ಹದಿನಾರು. ಅಗ್ನಿಯನ್ನು ನುತಿಸುವ ಸ್ತೋಮ ಎಂದರೆ ತೃಚ (ಮೂರು ಋಕ್ಕುಗಳ ಗುಂಪುಗಳು) ಕಡೆಯಲ್ಲಿ ಬರುವುದರಿಂದ ಈ ಹೆಸರು ಯಾಗಕ್ಕೆ ಅನ್ವರ್ಥಕವಾಗಿದೆ. ಇದರಲ್ಲಿ ಹನ್ನೆರಡು ಶಸ್ತ್ರಗಳು (ಹಾಡದ ಮಂತ್ರಗಳು) ಮತ್ತು ಮೂರು ಸವನಗಳು, ಕಡೆಗೆ ಸಾಮಗಾನ ಬರುತ್ತವೆ. ವಿಧಿಯ ವಿವರಗಳು ತಾಂಡ್ಯ ಮಹಾಬ್ರಾಹ್ಮಣದ ಆರನೆಯ ಅಧ್ಯಾಯದಲ್ಲಿವೆ. ಇದು ಅಗ್ನಿದೇವತಾಕಪಶುಯಾಗ. **(ಕೆ.ಕೆ.)**

**ಅಗ್ನಿಹೋತ್ರ :** ವೈದಿಕ ಪರಂಪರೆಯಲ್ಲಿ ಗೃಹಸ್ಥನಿಗೆ ಉಕ್ತವಾಗಿರುವ ನಿತ್ಯಕರ್ಮ. ಯಾವಜ್ಜೀವವೂ ಅಗ್ನಿಹೋತ್ರ ಮಾಡಬೇಕೆಂದು ಶ್ರುತಿಯಿದೆ.

ಇದು ಹವಿರ್ಯಜ್ಞಗಳಲ್ಲಿ ಒಂದು. ತುಪ್ಪ ಅಥವಾ ಹಾಲು ಅಥವಾ ಬೇರೆ ಹವಿಸ್ಸನ್ನು ಬೆಳಗ್ಗೆ ಮತ್ತು ಸಂಜೆ ಹೋಮಾಹುತಿ ಕೊಡುತ್ತ ಸತತವೂ ಅಗ್ನಿಯನ್ನು ನಂದದಂತೆ ಸಂರಕ್ಷಿಸಿಕೊಂಡು ಪೂಜೆ ಮಾಡುವುದು ಇದರ ಮುಖ್ಯಾಂಶ.

ನಿತ್ಯವಿಧಿಯಾದ ಅಗ್ನಿಹೋತ್ರದಲ್ಲಿ ಸೂರ್ಯ ಮತ್ತು ಪ್ರಜಾಪತಿಗಳಿಗೆ ಬೆಳಗ್ಗೆಯೂ ಅಗ್ನಿ ಮತ್ತು ಪ್ರಜಾಪತಿಗಳಿಗೆ ಸಂಜೆಯೂ ಪ್ರಾರ್ಥನಾಮಂತ್ರಗಳಿರುತ್ತವೆ. ಇವನ್ನು ಉಪಸ್ಥಾನ ಮಂತ್ರಗಳೆನ್ನುತ್ತಾರೆ. ವೈದಿಕಧರ್ಮದಲ್ಲಿ ಹೆಚ್ಚಿನ ಆಸ್ಥೆಯಿದ್ದಾಗ ಅಗ್ನಿಹೋತ್ರ ಮನೆ ಮನೆಯಲ್ಲಿಯೂ ಆಚರಣೆಯಲ್ಲಿತ್ತು. ಈಗಲೂ ಅಗ್ನಿಹೋತ್ರಿಗಳು ನಮ್ಮ ನಾಡಿನಲ್ಲಿ ಕೆಲವರು ಸಿಕ್ಕುತ್ತಾರೆ. ಕೃಷ್ಣಯಜುರ್ವೇದದ ತೈತ್ತಿರೀಯ ಸಂಹಿತೆ, ಬ್ರಾಹ್ಮಣ, ಆರಣ್ಯಕಗಳಲ್ಲಿ ಈ ವಿಷಯ ವಿಸ್ತಾರವಾಗಿ ಬರುತ್ತದೆ. **(ಕೆ.ಕೆ.)**

**ಅಗ್ನ್ಯಬಾಧಿತ ಕಟ್ಟಡ :** ಅಲ್ಯೂಮಿನಸ್ ಸಿಲಿಕೇಟ್, ಸುಣ್ಣ, ಕಾರ್ಬೊನೇಟುಗಳು, ಗಂಧಕಾಂಶವಿರುವ ಕಬ್ಬಿಣ, ಮೂಲರೂಪದ ಸಿಲಿಕ, ಪೊಟ್ಯಾಷ್, ಸೋಡ ಮತ್ತು ನೀರು–ಇವುಗಳನ್ನು ಸೂಕ್ತಪ್ರಮಾಣದಲ್ಲಿ ಹೊಂದಿರುವ ವಿಶೇಷ ರೀತಿಯ ಜೇಡಿ ಮಣ್ಣಿನಂಥ (ಫೈರ್‌ಕ್ಲೇ) ರಚನಾಸಾಮಗ್ರಿಯನ್ನು ಉಪಯೋಗಿಸಿ ಕಟ್ಟಲಾಗುವ ಕಟ್ಟಡಗಳಿಗೆ ಈ ಹೆಸರಿದೆ. ಈ ಜೇಡಿಮಣ್ಣಿಗೆ ಅಧಿಕವಾಗಿ ಸುರುಟಿಕೊಳ್ಳದೆ ಅಥವಾ ವಕ್ರವಾಗದೆ, ಅತ್ಯಧಿಕ ಉಷ್ಣತೆಯನ್ನು ತಡೆದುಕೊಳ್ಳಬಲ್ಲ ಗುಣವಿದೆ. ಇಂಥ ವಸ್ತುಗಳಿಂದ ಕಟ್ಟಲಾಗುವ ಕಟ್ಟಡಗಳು ಅಗ್ನಿಯಿಂದಾಗುವ

ಎಲ್ಲ ಬಗೆಯ ಅನಾಹುತಗಳನ್ನು ಎದುರಿಸಿ ನಿಲ್ಲಬಲ್ಲುವಾಗಿವೆ. ಇದಲ್ಲದೆ ದಹಿಸದ, ಉಷ್ಣತೆಯನ್ನು ಹೊರ ಬಿಡದ ಸಾಮಗ್ರಿಗಳನ್ನು ಇಂಥ ಕಟ್ಟಡಗಳ ರಚನೆಗೆ ಉಪಯೋಗಿಸುತ್ತಾರೆ. ವಿಶೇಷ ರೀತಿಯ ಘನ ಜೇಡಿಮಣ್ಣಿನ ಇಟ್ಟಿಗೆಗಳು, ಕಾಂಕ್ರೀಟ್– ಇವೇ ಸೂಕ್ತವಸ್ತುಗಳು. ಉಕ್ಕು ದಹಿಸದ ವಸ್ತುವಾದರೂ ಬೆಂಕಿಯ ನೇರಸಂಪರ್ಕದಲ್ಲಿ ವಿಕಾಸಗೊಂಡು ಕಟ್ಟಡಕ್ಕೆ ಧಕ್ಕೆ ತರುವುದಲ್ಲದೆ ತನ್ನ ರಚನೆಯ ಸಾಮರ್ಥ್ಯವನ್ನು (ಸ್ಟ್ರಕ್ಚುರಲ್ ಸ್ಟ್ರೆಂತ್) ಕಳೆದುಕೊಳ್ಳುತ್ತದೆ. ಆದ್ದರಿಂದ ಉಕ್ಕಿನಿಂದಾದ ವಸ್ತುಗಳ ಹೊರಮೈಯನ್ನೂ ನಿರೋಧಕವಸ್ತುಗಳಿಂದ ಮುಚ್ಚಿ ಕಟ್ಟಡದ ರಚನೆಗೆ ಬಳಸಿದ್ದಾದರೆ ಈ ತೊಂದರೆ ನೀಗುತ್ತದೆ. ಆರುವಾಸಿಯಾಗಿರುವ (ಹದಮಾಡಿದ) ಚೌಬೀನೆ ಮರ ಹೆಚ್ಚು ಕಾಲ ಅಗ್ನಿಯನ್ನು ನಿರೋಧಿಸುತ್ತದಾದ ಕಾರಣ ಉಕ್ಕಿಗಿಂತ ಉತ್ತಮ.

ಕಟ್ಟಡಗಳ ರಚನಾ ಸಾಮಗ್ರಿಗಳನ್ನು ಅವುಗಳ ಅಗ್ನಿನಿರೋಧಕ ಸಾಮರ್ಥ್ಯಕ್ಕನುಗುಣವಾಗಿ ವರ್ಗೀಕರಣ ಮಾಡಲಾಗಿದೆ. ಈ ಕಾರ್ಯದಲ್ಲಿ ಮೌಲ್ಯವನ್ನು ನಿರ್ಧರಿಸುವ ವ್ಯಾಪಕವಾದ ಪರೀಕ್ಷೆಗಳ ಪಾತ್ರ ಮಹತ್ವದ್ದು. ಈ ಕೆಲಸವನ್ನು ಸಾಮಾನ್ಯವಾಗಿ ತಾಂತ್ರಿಕ ಹಾಗೂ ಅಗ್ನಿವಿಭಾಗದ ಸಿಬ್ಬಂದಿ ವರ್ಗದವರು ನಡೆಸುತ್ತಾರೆ. ಇದರಿಂದಾಗಿ ತಮ್ಮ ತಮ್ಮ ಅಗತ್ಯಗಳಿಗೆ ಇರಬೇಕಾದಂಥ ಅಗ್ನಿನಿರೋಧಪ್ರಮಾಣವನ್ನು (1/2–6 ಗಂಟೆಯ ವರೆಗೆ) ಇಂಜಿನಿಯರು, ನಿರ್ಮಾತೃಗಳು ಮೊದಲಾದವರು ನಿರ್ಧರಿಸಿಕೊಳ್ಳುತ್ತಾರೆ. ಭಿತ್ತಿಫಲಕ (ವಾಲ್ ಬೋರ್ಡ್) ಅಥವಾ ಕಟ್ಟಡಫಲಕಗಳನ್ನು ಒಳಗೆಲಸಗಳಿಗಾಗಿ ಬಳಸಿ ಅವುಗಳ ಮೇಲ್ಮೈ ಮೇಲಿನ ಜ್ವಾಲೆಯನ್ನು ಹರಡುವ ಗುಣಗಳಿಗನುಸಾರವಾಗಿ ಅವುಗಳ ಯೋಗ್ಯತೆಯನ್ನು ನಿರ್ಧರಿಸುತ್ತಾರೆ. ಅಗ್ನಿನಿರೋಧಕ ಒಳಗೋಡೆಗಳನ್ನುಳ್ಳ ದೊಡ್ಡ ದೊಡ್ಡ ಕಟ್ಟಡಗಳಿಗೆ ಇಡುವ ಬಾಗಿಲು ಮತ್ತು ಕಿಟಕಿಗಳನ್ನು ಯಾವುದೇ ಬಗೆಯ ಅಗ್ನಿಯನ್ನು ಒಳಬಿಡದಂತೆ ಅಳವಡಿಸಿರಬೇಕು. ಅವು ಇನ್ನೂ ಪರಿಣಾಮಕಾರಿಯಾಗಿರಬೇಕಾದರೆ, ಅಗ್ನಿಯಿಂದ ಉಂಟಾಗುವ ಉಷ್ಣತೆಯನ್ನನುಸರಿಸಿ ತಾವಾಗಿಯೇ ಮುಚ್ಚಿಕೊಳ್ಳುವಂತಿರಬೇಕು. ಇಂಥವನ್ನು ಬ್ಯಾಂಕು, ಆಹಾರಸಂಗ್ರಹಣಾಕೇಂದ್ರ ಮೊದಲಾದುವುಗಳಲ್ಲಿ ಇತ್ತೀಚೆಗೆ ಬಳಸುತ್ತಿದ್ದಾರೆ. (ಎಸ್.ಆರ್.ಪಿ.)

**ಅಗ್ನ್ಯಬಾಧಿತ ವಸ್ತ್ರ :** ಮುಖ್ಯವಾಗಿ ಯುದ್ಧ ಕಾಲದಲ್ಲಿಯೂ ನಿತ್ಯದಲ್ಲಿ ಅಗ್ನಿಶಾಮಕ ದಳದವರಿಗೂ ಆವಶ್ಯಕ. ಇದರ ತಯಾರಿಕೆಯಲ್ಲಿ ಉಪಯೋಗಿಸುವ ಕೆಲವು ಮುಖ್ಯವಸ್ತುಗಳೆಂದರೆ ಫಾಸ್‌ಫೇಟ್, ಸಲ್ಫೇಟ್ ಮತ್ತು ಬೋರೇಟ್ ಲವಣಗಳು; ತವರ, ಆ್ಯಂಟಿಮೊನಿ, ಸತುವಿನ ಲವಣಗಳು ಮತ್ತು ಕೆಲವು ಕೃತಕ ರಾಳಗಳು (ರೆಸಿನ್ಸ್) – ಇವೇ ಮೊದಲಾದುವು. ಈ ವಸ್ತುಗಳಲ್ಲಿ ಕೆಲವನ್ನು ಮಿಶ್ರಣ ರೂಪದಲ್ಲಿಯಾಗಲೀ ಬೇರೆ ಬೇರೆಯಾಗಿಯಾಗಲೀ ಸೂಕ್ತಪ್ರಮಾಣದಲ್ಲಿ ವಸ್ತ್ರಗಳ ಮೇಲೆ ಲೇಪಿಸಬೇಕು. ಲವಣಗಳನ್ನು ಕರಗಿಸಿದ ದ್ರಾವಣದಲ್ಲಿ ಬಟ್ಟೆಗಳನ್ನು ಅದ್ದುವುದರಿಂದಲೂ ಸಿಂಪಡಿಸುವುದರಿಂದಲೂ ಬಳಿಯುವುದರಿಂದಲೂ ಅವುಗಳನ್ನು ಅಗ್ನ್ಯಬಾಧಿತ ವಸ್ತ್ರಗಳನ್ನಾಗಿ (ಫೈರ್‌ಪ್ರೂಫ್ ಕ್ಲಾತ್) ಮಾಡಬಹುದು.

ಹೀಗೆ ತಯಾರಾದ ಈ ವಸ್ತ್ರಗಳು ಅವುಗಳಲ್ಲಿನ ರಾಸಾಯನಿಕ ವಸ್ತುಗಳ ಗುಣಗಳಿಗೆ ತಕ್ಕಂತೆ ಕೆಲವು ಒಗೆತಕ್ಕೆ ಜಗ್ಗುವುದಿಲ್ಲ; ಕೆಲವು ಜಗ್ಗುತ್ತವೆ. (ಬಿ.ಎಲ್.)

**ಅಗ್ರಗಾಮಿ :** ಯುದ್ಧಕ್ಕೆ ಸಂಬಂಧಿಸಿದ ಈ ಮಾತು 19ನೆಯ ಶತಮಾನದ ಎರಡನೆಯ ಭಾಗದಲ್ಲಿ ಸಮಾಜಸ್ಥಿತಿಗೂ ಸಂಸ್ಕೃತಿಗೂ ಲಲಿತಕಲೆಗಳಿಗೂ ಅನ್ವಯವಾಗಲಾರಂಭಿಸಿತು. ಸಾಂಪ್ರದಾಯಿಕ ಆಚರಣೆಗಳನ್ನು ಕಂಡು ಅಸಹ್ಯಪಟ್ಟು, ಅವುಗಳನ್ನು ಬಿಟ್ಟುಕೊಟ್ಟು ನೂತನ ಪ್ರಯೋಗಗಳನ್ನು ಜಾರಿಗೆ ತರುವುದು ಅಗ್ರಾಮಿಗಳ (ಮುನ್ನೇತ್ರರು) (ಅವಾಂತ್ ಗಾರ್ಡ್) ಮುಖ್ಯ ಉದ್ಯೋಗ. ಯಾವ ದೇಶದಲ್ಲೇ ಆಗಲಿ ಜನತೆ ಸಾಮಾನ್ಯವಾಗಿ ಸಂಪ್ರದಾಯಬದ್ಧವಾದದ್ದು; ಅಂಥ ಜನತೆಯನ್ನು ಬಡಿದು ಬೆರಗಾಗಿಸುವುದು ಮುನ್ನೇತ್ರರ ಹವ್ಯಾಸ. ಈ ದಂಗೆಕೋರರು ಮೊದಲು ಚಿತ್ರಕಲೆಯಲ್ಲಿ ಉದ್ಭವಿಸಿದರು. ಕೂರ್ಬೆ, ಮೋನ, ಮಾನ, ಡೆಗಾಸ್, ರೆನ್ವಾರ್, ಮುಂತಾದವರಿಂದ ಫ್ರಾನ್ಸ್ ದೇಶ ಚಕಿತವಾಯಿತು. ಕ್ರಮೇಣ ಅದೇ ಬಗೆಯ ಅತಿನವೀನರು ಇತರ ಕಲೆಗಳಲ್ಲೂ ಸಾಹಿತ್ಯದಲ್ಲೂ ಹುಟ್ಟಿ ಬಂದರು. ವಿಮರ್ಶಕಗೋಷ್ಠಿ ಅವರನ್ನು ಹುಚ್ಚರೆಂದು ಹಳಿದರೂ ಅವರ ಆವೇಶ ಕುಂದಲಿಲ್ಲ. ಅವರ ಕೃಷಿ ನಿಲ್ಲಲಿಲ್ಲ.

ಯಾವ ಲಲಿತಕಲೆಯ ಚರಿತ್ರೆಯನ್ನು ನಾವು ಲಕ್ಷ್ಯಕ್ಕೆ ತಂದುಕೊಂಡರೂ ಒಂದು ಅಂಶ ಸ್ಪಷ್ಟವಾಗಿ ಕಾಣಬರುತ್ತದೆ. ಅದಕ್ಕೆ ಹೊಸ ಪ್ರಯೋಗಗಳ ಮೂಲಕವೇ ಪ್ರಗತಿ, ಅಭಿವೃದ್ಧಿ. ಪ್ರತಿಯೊಂದು ತಲೆಮಾರಿನಲ್ಲೂ ಸಾಧಾರಣವಾಗಿ ಹಿಂದಣ ಒಂದೆರಡು ತಲೆಮಾರುಗಳ ಕಲಾಭಿರುಚಿಯೇ ತನ್ನ ಅಧಿಕಾರವನ್ನು ಮುಂದುವರಿಸಲು ಪ್ರಯತ್ನಪಡುತ್ತದೆ. ಆದ್ದರಿಂದ ಯಾವ ಹೊಸ ಪ್ರಯೋಗವೂ ರಸಿಕ ಜನಕ್ಕೆ ತಕ್ಷಣ ರಸವತ್ತಾಗಿ ತೋರಿಬರುವುದಿಲ್ಲ. ಅದರಲ್ಲೂ ಸ್ವಾರಸ್ಯವಿದೆಯೆಂಬುದನ್ನು ದೊಡ್ಡ ಕೂಗುಗಳ ಮೂಲಕ ಡಂಗುರ ಹೊಯ್ಯುವುದು ಅತ್ಯಗತ್ಯವೆಂದು ಅಗ್ರಗಾಮಿ ಕಲಾವಿದರಿಗೆ ಎನಿಸಿರಬೇಕು. ಅವರು ಹಾಗೆ ಎಬ್ಬಿಸುವ ಗಲಭೆಯ ಫಲವಾಗಿ ಅವರ ನವೀನತೆಗಳಲ್ಲಿ ಕೆಲವಾದರೂ ಸ್ವೀಕೃತವಾಗಬಹುದು. ಕಲೆಯ ಚರಿತ್ರೆಯಲ್ಲಿ ಮುನ್ನೇತ್ರರಿಗೆ ಸ್ಥಾನವಿದೆ. ಈ ದೃಷ್ಟಿಯಿಂದ ಕನ್ನಡದಲ್ಲಿ ಹಾಗೂ ಭಾರತದ ಇತರ ಭಾಷೆಗಳಲ್ಲಿ ನವ್ಯ ಕವಿಗಳು ಹಾಗೂ ಪ್ರಗತಿಶೀಲ ಪಂಥಗಳವರು ನಡೆಸುತ್ತಿರುವ ಚಳವಳಿಗಳನ್ನು ಗಮನಿಸಬೇಕಾದುದು ಅಗತ್ಯ.

ಆದರೆ ಪ್ರತಿಯೊಂದು ಲಲಿತಕಲೆಯಲ್ಲೂ ಹಲಕೆಲವು ಗುಣಲಕ್ಷಣಗಳು ಯಾವಾಗಲೂ ಇದ್ದುಕೊಂಡು ಆ ಕಲೆಯ ಪರಂಪರೆಯನ್ನು ಕಾಪಾಡಿಕೊಳ್ಳುತ್ತವೆ. ತಮ್ಮ ಹೊಸತನವನ್ನು ಅನುಷ್ಠಾನಕ್ಕೆ ತರುವಾಗ ಅಗ್ರಾಮಿಗಳು ಈ ರೂಢಮೂಲ ಸಂಗತಿಯನ್ನು ಮರೆಯಬಾರದು, ನಿರ್ಲಕ್ಷಿಸಬಾರದು. ತಾವು ಈಗ ಮಾಡುತ್ತಿರುವುದೇ ಸರಿ, ಹಿಂದೆ ಆಗಬಂದಿರುವುದೆಲ್ಲ ತಪ್ಪು ಎಂಬ ಅತಿರೇಕ ಕೆಲವು ಮುನ್ನೇತ್ರರ ಪ್ರಬಲದೋಷ. ತಾವು ಮಾಡುತ್ತಿರುವುದು ವಿಕಾರವಾದದ್ದು, ಕಲಾಹೀನವಾದದ್ದು ಎಂಬುದನ್ನು ಅವರು ಎಷ್ಟೋ ಸಾರಿ ಅರಿಯರು.

ಪ್ರತಿಭಾವಂತರಾದ ಘನಕವಿಗಳು ಅಲ್ಲಿ ಇಲ್ಲಿ ಕೂಗಾಡದೆ, ಗಲಭೆಯನ್ನೂ ಎಬ್ಬಿಸದೆ, ಸಾಹಿತ್ಯದಲ್ಲಿ ಕ್ರಾಂತಿಯನ್ನು ಉಂಟುಮಾಡಿದ್ದಾರೆ ಎಂಬ ವಿಷಯವನ್ನು ನಾವು ಮರೆಯುವಂತಿಲ್ಲ. (ಎಸ್.ವಿ.ಆರ್.)

**ಅಗ್ರಚಾರ :** ಆತ್ಮರಕ್ಷಣೆಗಾಗಲಿ ಆಕ್ರಮಣಕ್ಕಾಗಲಿ ಸ್ವಂತ ಸೈನ್ಯಕ್ಕೆ ತಕ್ಕ ಕಾಲದಲ್ಲಿ ಉಪಯೋಗಕ್ಕೆ ಒದಗುವ ಹಾಗೆ ಶತ್ರುವಿನ ನೆಲೆ, ಸಂಖ್ಯಾಬಲ, ಚಲನವಲನ ಇತ್ಯಾದಿ ವಿಷಯಗಳನ್ನು ಕಂಡುಕೊಂಡು ಸಮಾಚಾರವನ್ನು ಸಂಗ್ರಹಿಸುವ ಸೈನಿಕನಿಗೆ ಸೈನಿಕಶಾಸ್ತ್ರದಲ್ಲಿ ಈ ಹೆಸರಿದೆ. ಆತ ಸೈನಿಕ ತಂಡದ ಅಥವಾ ಘಟಕ ಒಂದು ಅಂಗ. ಬೇಹುಗಾರಿಕೆಯಲ್ಲಿ ವಿಶೇಷವಾದ ಶಿಕ್ಷಣವನ್ನು ಪಡೆದ ಕಾರಣ ಆತನನ್ನು ಶತ್ರುವಿನ ಸಮಾಚಾರ ಸಂಗ್ರಹಿಸುವ ಕಾಲಕ್ಕೆ ಆಯ್ದುಕೊಳ್ಳುತ್ತಾರೆ. ಅಗ್ರಚಾರ (ಸ್ಕೌಟ್) ಬಾಲಚಾರನಿಗಿಂತ (ಬಾಯ್ ಸ್ಕೌಟ್) ಭಿನ್ನ. (**ನೋಡಿ– ಬಾಲಚಾರ**). (ಎ.ಎನ್.ಎಸ್.ಎಂ.)

**ಅಗ್ರಲೇಖನ :** ವೃತ್ತಪತ್ರಿಕೆಯ ನಿಯತವಾದ ಪುಟಭಾಗದಲ್ಲಿ ಸಂಪಾದಕ ವರ್ಗದವರು ಅಂದಿನ ಅತಿಮುಖ್ಯ ಸಮಸ್ಯೆಗಳನ್ನು ಕುರಿತ ಪರಿಚಯಾತ್ಮಕವಾಗಿ ವಿಮರ್ಶಾತ್ಮಕವಾಗಿ ಬರೆಯುವ ಲೇಖನ (ಲೀಡರ್ ಅಥವಾ ಲೀಡಿಂಗ್ ಆರ್ಟಿಕಲ್).

ರಾಜಕಾರಣವಾಗಿರಲಿ, ಆರ್ಥಿಕ ಪ್ರಶ್ನೆಯಾಗಿರಲಿ, ಸಾಮಾಜಿಕ ಸಮಸ್ಯೆಯಾಗಿರಲಿ, ಏನೇ ಆಗಿರಲಿ, ಅಗ್ರಲೇಖನ ಆ ಪತ್ರಿಕೆಯ ನೀತಿ, ದೃಷ್ಟಿ, ಆದರ್ಶ ಏನೆಂಬುದನ್ನು ಸೂಚಿಸುತ್ತದೆ. ವಿಷಯ ಯಾವುದೇ ಆಗಿರಲಿ, ಅಗ್ರಲೇಖನ ಓದಿದ ಕೂಡಲೇ ಪತ್ರಿಕೆಯ ಅಭಿಪ್ರಾಯ ಇಂಥದೇ ಎಂಬುದು ಸ್ಪಷ್ಟವಾಗುತ್ತದೆ. ರಾಜಕೀಯ ಪಕ್ಷಗಳಿಗಿರುವಂತೆ ಪತ್ರಿಕೆಗೂ ಒಂದು ನೀತಿ, ಒಂದು ಗುರಿ ಉಂಟು. ಆ ನೀತಿಯನ್ನು ನಿಷ್ಠೆಯಿಂದ ಪಾಲಿಸುವುದು ಪತ್ರಿಕೆಯ ಪ್ರಥಮ ಕರ್ತವ್ಯ. ನೀತಿ ನಿಯಂತ್ರಣ ಅಂದರೆ ತನ್ನ ನಿಶ್ಚಿತನೀತಿಯನ್ನು ಆಚರಣೆಗೆ ತರುವ ರೀತಿ ಪತ್ರಿಕೆಯ ಇಡೀ ಜೀವನವನ್ನೆಲ್ಲ ಆವರಿಸಿರುತ್ತದೆ. ಆದ್ದರಿಂದ ಅಗ್ರಲೇಖನ ಈ ನೀತಿ ನಿಯಂತ್ರಣ ಕರ್ತವ್ಯವನ್ನು ನಿಷ್ಠುರತೆಯಿಂದ ನಿರ್ವಹಿಸುತ್ತದೆ. ವಿಷಯ ಯಾವುದೇ ಆಗಿರಲಿ, ಸಮಸ್ಯೆ ಎಂಥದೇ ಆಗಿರಲಿ, ಪತ್ರಿಕೆ ತನ್ನ ನೀತಿಗೆ ಆದರ್ಶಕ್ಕೆ ಅನುಗುಣವಾಗಿ ಪ್ರಭುತ್ವ ತನ್ನ ನೀತಿಯನ್ನು ಮಾರ್ಪಡಿಸಿಕೊಳ್ಳುವಂತೆ ಮಾಡಲು ಅಗ್ರಲೇಖನವನ್ನು ಪರಿಣಾಮಕಾರಿ ಸಾಧನವನ್ನಾಗಿ ಮಾಡಿಕೊಳ್ಳುತ್ತದೆ. ಸಾರ್ವಜನಿಕಾಭಿಪ್ರಾಯವನ್ನೂ ತನ್ನ ಕಡೆಗೇ ಎಳೆದುಕೊಂಡು ತನ್ನ ಕೈ ಬಲಪಡಿಸಿಕೊಳ್ಳಲು ಯತ್ನಿಸುತ್ತದೆ. ಪ್ರಜಾತಂತ್ರ ಪ್ರಧಾನವಾದ ಈ ಯುಗದಲ್ಲಿ ಪತ್ರಿಕೆಯ ಸ್ಥಾನ ಬಹು ದೊಡ್ಡದು. ಚತುರಂಗಬಲದಲ್ಲಿ ಪತ್ರಿಕೆ ನಾಲ್ಕನೆಯ ಅಂಗವೆಂದು ರಾಜನೀತಿಜ್ಞರು ಹೇಳುತ್ತಾರೆ.

ಪತ್ರಿಕೆಯ ನೀತಿಯನ್ನು ನಿಯಂತ್ರಣ ಮಾಡುವವ ಮುಖ್ಯ ಸಂಪಾದಕ. ವಿಶೇಷ ಪರಿಶ್ರಮವುಳ್ಳ ಸಹಸಂಪಾದಕರು ಆಯಾ ವಿಷಯಗಳನ್ನು ಕುರಿತು ಬರೆಯುತ್ತಾರಾದರೂ ಧೋರಣೆಯ ದೃಷ್ಟಿಯಿಂದ ಅವನ್ನು ಒಪ್ಪಬೇಕಾದವನು ಪ್ರಧಾನಸಂಪಾದಕನೇ. ಈ ರೀತಿ ಪತ್ರಿಕೆಯ ನಿರ್ವಾಹ ನಡೆದಾಗ ಆ ಪತ್ರಿಕೆಗೊಂದು ಮರ್ಯಾದೆಯ ಸ್ಥಾನ ಏರ್ಪಡುತ್ತದೆ. ಪ್ರಭುತ್ವವಾಗಲಿ, ಪ್ರಜಾವರ್ಗವಾಗಲಿ, ಜಟಿಲವಾದೊಂದು ಸಮಸ್ಯೆ ತಲೆದೋರಿದಾಗ 'ಈ ಪತ್ರಿಕೆ ಏನು ಹೇಳುತ್ತದೆ' ಎಂದು ಕುತೂಹಲದಿಂದ ಕಾದು ನೋಡುತ್ತಿರುತ್ತದೆ. ಅಂದರೆ ಪತ್ರಿಕೆ ತನ್ನ ನಿರ್ಮಲ, ನಿರ್ಮಮನೀತಿಯಿಂದ, ತತ್ತ್ವನಿಷ್ಠೆಯಿಂದ, ಪ್ರಜಾಹಿತಸಾಧನಾಧ್ಯೇಯದಿಂದ ಸಮಾಜದಲ್ಲೊಂದು ಅಪೂರ್ವಸ್ಥಾನ, ಮರ್ಯಾದೆಯನ್ನು ಕಲ್ಪಿಸಿಕೊಂಡಿರುತ್ತದೆ. ಸತ್ಯವೇ ಅಗ್ರಲೇಖನದ ಸರ್ವಾಧಾರವೆಂಬುದರ ಮೂಲಕ ಪತ್ರಿಕೆ ಜನತೆಯ ನಂಬಿಕೆಯನ್ನು ಗಳಿಸಿ ಉಳಿಸಿಕೊಳ್ಳುವ ಸಾಮರ್ಥ್ಯ ತೋರಿಸುತ್ತದೆ. ಅಗ್ರಲೇಖನ ಬರೆಯುವ ಸಂಪಾದಕನ ಈ ಸತ್ಯಶ್ರದ್ಧೆ, ಧರ್ಮಬೋಧೆ, ಸೇವಾತತ್ಪರತೆ, ಅತಿ ಪ್ರಮುಖವಾದುವು. ಆದಕಾರಣ ಬರೆಯುವವನ ಜವಾಬ್ದಾರಿ ಬಹಳ ದೊಡ್ಡದು. ಅಗ್ರಲೇಖನಕಾರ ಒಳಗೂ ಹೊರಗೂ ನಿರ್ಮಲನಾಗಿದ್ದು ಪರಮ ನಿಷ್ಪಕ್ಷಪಾತಿಯಾಗಿ (ಆಸ್ತಿಕನಂತೆ) ವರ್ತಿಸಬೇಕು. ಅವನ ಮನಸ್ಸು ಸರಳ, ಮಾತು ಸ್ಪಷ್ಟ, ಶೈಲಿ ಗಂಭೀರ, ಧೋರಣೆ ಸತ್ಯ ಆದಾಗ ಅವನು ಬರೆದದ್ದು ಹೃದಯವನ್ನು ತಾಕುತ್ತದೆ.

ಅಗ್ರಲೇಖನಕಾರ ತಾನು ಬರೆಯುತ್ತಿರುವ ವಿಷಯ ಕುರಿತು ಪೂರ್ಣ ತಿಳಿವಳಿಕೆಯುಳ್ಳವನಾಗಿರಬೇಕು. ಪೂರ್ವಾಪರಗಳನ್ನು ನಿಷ್ಪಕ್ಷಪಾತವಾಗಿ ತೂಗಿ ನೋಡಿ, ನಿರ್ಭಯವಾಗಿ, ತನ್ನ ಅಂತರಂಗಕ್ಕೆ ಒಪ್ಪಿಗೆಯಾದುದನ್ನು ಬರೆಯಬೇಕು. ಪೂರ್ವಸಿದ್ಧತೆ, ಹೃದಯ

ಸಿದ್ಧತೆಗಳಿಂದ ಬರೆಯಲಾರಂಭಿಸಿದಾಗ ಅಗ್ರಲೇಖನದ ಪದಪ್ರಯೋಗ ಸೂಕ್ಷ್ಮ ಮಾತ್ರವಲ್ಲ, ಸರಳವೂ ಸುಂದರವೂ ಆಗುತ್ತದೆ. ಏಕೆಂದರೆ ಸತ್ಯ ಸರಳತೆಯನ್ನೇ ಆಶ್ರಯಿಸುತ್ತದೆ; ಸೌಂದರ್ಯವನ್ನೇ ಅಪ್ಪುತ್ತದೆ. ಶೈಲಿ ಲಲಿತವೂ ಗಂಭೀರವೂ ಆಗುತ್ತದೆ. ಅಗ್ರಲೇಖನಕ್ಕೆ ಆರಿಸುವ ವಿಷಯವೂ ಪವಿತ್ರತೆಯ, ಗಾಂಭೀರ್ಯದ, ಮಟ್ಟವನ್ನು ಹೆಚ್ಚಿಸುತ್ತದೆ. ಆಗ ತಾನು ಬರೆದ ಲೇಖನದಲ್ಲಿ ಅನಪೇಕ್ಷಿತವಾಗಿ ಭಾಷೆಯ, ಉತ್ತಮೋತ್ತಮ ಸಾಹಿತ್ಯದ, ಲಕ್ಷಣಗಳು ಕಂಡುಬರುತ್ತವೆ. ಹಿರಿಯ ಸಾಹಿತಿ ಪತ್ರಿಕಾಸಂಪಾದಕನೆನಿಸುವುದು ಕಷ್ಟ. ಯಶಸ್ವಿ ಸಂಪಾದಕ ಉತ್ತಮ ಸಾಹಿತಿಯೆನಿಸುವುದೂ ಕಷ್ಟವೇ. ಒಂದು ವೇಳೆ ಇದು ಸಾಧ್ಯವಾದರೆ ಅದೊಂದು ಅಪೂರ್ವ ಸಂಗಮವೇ ಸರಿ.

ಅಗ್ರಲೇಖನದಲ್ಲಿ ಸರ್ವತೋಮುಖವಾದ ತಿಳಿವಳಿಕೆಯನ್ನು ಎಷ್ಟು ಅಪೇಕ್ಷಿಸುವೆವೋ ಅಷ್ಟೇ ಲೋಕಾನುಭವ ಮತ್ತು ವಿಮರ್ಶಾಗುಣವನ್ನೂ ಅಪೇಕ್ಷಿಸುತ್ತೇವೆ. ದಿನದಿನ, ಕ್ಷಣ ಕ್ಷಣ, ನಮ್ಮನ್ನು ದುರುಗುಟ್ಟಿಕೊಂಡು ನೋಡುವ, ಹೆದರಿಸುವ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕುರಿತು ಆಲೋಚನೆ ಮಾಡುವಾಗ ಅಗ್ರಲೇಖನಕಾರ ದೂರದೃಷ್ಟಿಯುತನಾಗಿ, ಉದಾರಹೃದಯಿಯಾಗಿ, ಪ್ರತಿಪಕ್ಷಕ್ಕೆ ಯಾವ ರೀತಿಯಿಂದಲೂ ಯಾವ ಪ್ರಮಾಣದಲ್ಲೂ ನೋವಾಗದಂತೆ ತನ್ನ ವಾದ ಸಮರ್ಥನೆ ಮಾಡುವ ಮಧುರಮಾರ್ಗವನ್ನು ಹಿಡಿಯಬೇಕು. ಅವನಲ್ಲಿ ಪರಿಹಾಸ ಮನೋಧರ್ಮವಿರಬೇಕು. ಉಗ್ರತೆಯನ್ನು ತೋರುವ ಅಗ್ರಲೇಖನ ಅಗ್ಗದ ಲೇಖನವಾಗಿ ಪರಿಣಾಮದಲ್ಲಿ ನಿರೀಕ್ಷಿಸಿದ್ದಕ್ಕೆ ವಿರುದ್ಧವೇ ಆದೀತು.

ಅಗ್ರಲೇಖನ ಒಂದು ಸ್ವಸಂಪೂರ್ಣಪ್ರಬಂಧ; ಸಾಂಗವಾಗಿ, ತೀಡಿ ತಿದ್ದಿದ, ಕಣ್ಡರಿಸಿದ ಒಂದು ರೂಪಕರ್ಮ. ಇದರಲ್ಲಿ ಯಾವ ಕಳಂಕವೂ ಇರಬಾರದು. ನಿಜವನ್ನು ಮುಚ್ಚಿಡುವುದೂ ಸುಳ್ಳನ್ನು ಸೂಚಿಸುವುದೂ ನ್ಯಾಯವಲ್ಲ, ನೀತಿಯಲ್ಲ, ಅಗ್ರಲೇಖನ ಕ್ಷೇತ್ರ ಕುರುಕ್ಷೇತ್ರ ಧರ್ಮಕ್ಷೇತ್ರಗಳ ಐಕ್ಯಸ್ಥಳ. (ಟಿ.ಟಿ.ಎಸ್.)

**ಅಗ್ರವಾರ್ತೆ :** ವೃತ್ತಪತ್ರಿಕೆಯಲ್ಲಿ ಪ್ರಕಟವಾಗುವ ನಾನಾರೀತಿಯ ಸುದ್ದಿ ಸಮಾಚಾರಗಳಲ್ಲಿ ಅತಿಮುಖ್ಯವಾದುದು. ಸಾಮಾನ್ಯವಾಗಿ ಪತ್ರಿಕೆಯ ಮೊದಲ ಪುಟದ ಮೊದಲ ಸಾಲಿನಲ್ಲೇ ಅತಿ ದೊಡ್ಡ ಅಕ್ಷರಗಳಲ್ಲಿ ಅಚ್ಚುಗೊಳ್ಳುವ ಯೋಗ್ಯತೆಯುಳ್ಳದ್ದು. ಇದನ್ನು ನಿಶ್ಚಯ ಮಾಡಬೇಕಾದರೆ ಸುದ್ದಿಯ ಮೌಲ್ಯವೊಂದನ್ನೇ ಅಲ್ಲ, ವಾಚಕರ ಆತುರ, ಅಪೇಕ್ಷೆ, ಮನೋಧರ್ಮ, ಆತಂಕ, ಕ್ಷೇಮ ಇವುಗಳನ್ನೆಲ್ಲ ಗಮನಕ್ಕೆ ತೆಗೆದುಕೊಳ್ಳಬೇಕು. ನಿಷ್ಕಾರಣವಾಗಿ ಜನತೆಯ ಚಿತ್ತಸ್ವಾಸ್ಥ್ಯವನ್ನು ಕೆಡಿಸಿ ಗುಲ್ಲೆಬ್ಬಿಸುವ ವಾರ್ತೆ ಎಷ್ಟೇ ಕೌತುಕಕಾರಿಯಾಗಿರಲಿ ಅದು ಪತ್ರಿಕೆಯ ಅಗ್ರವಾರ್ತೆಯಾಗಬಾರದು. ಪತ್ರಿಕೆ ಜನತೆಯನ್ನು ಸನ್ಮಾರ್ಗದಲ್ಲಿ ನಡೆಸುವ ಕೈದೀವಿಗೆ, ಹಿತವನ್ನು ರಕ್ಷಿಸುವ ಕಾವಲುನಾಯಿ ಎಂಬ ಮಾತು ಸದಾ ನೆನಪಿನಲ್ಲಿರಬೇಕು. ಒಂದೆರಡು ದಿನಗಳ ಅಥವಾ ತಿಂಗಳ ಅಭ್ಯಾಸದಿಂದ ಲೇಖಕನಿಗೆ ಈ ಶಕ್ತಿ ಲಭ್ಯವಾಗುವುದಿಲ್ಲ; ಆ ವೃತ್ತಿಯ ದೀರ್ಘಕಾಲದ ಅನುಭವದಿಂದ ಇದಕ್ಕೆ ಬೇಕಾದೊಂದು ಅಪೂರ್ವಶಕ್ತಿ ಕೈಗೂಡುತ್ತದೆ.

ಅಗ್ರವಾರ್ತಾನಿರೂಪಣೆಯಲ್ಲಿ ಬಳಸುವ ಪ್ರತಿಯೊಂದು ಮಾತಿನಲ್ಲೂ ರಚಿಸುವ ಒಂದೊಂದು ವಾಕ್ಯದ ಸರಳತೆಯಲ್ಲೂ ಎಲ್ಲಕ್ಕಿಂತ ಹೆಚ್ಚಾಗಿ ತೋರಿಸುವ ಪ್ರಾಮಾಣಿಕತೆಯಲ್ಲೂ ಆ ಸಮಾಚಾರದ ಬೆಲೆ ಅಡಗಿರುತ್ತದೆ. ಅನಂತರ ಒಟ್ಟು ರಚನೆಗೆ ಒಂದು ಹೆಸರನ್ನೂ ಕೊಡಬೇಕು. ಇದು ಮೂಲರಚನೆಗಿಂತಲೂ ಕಷ್ಟವಾದ ಕೆಲಸ. ಅಗ್ರವಾರ್ತೆಯನ್ನು ವಾಚಕರು ಓದುವಾಗ, ಅವರ ಮನಸ್ಸಿನ ಮೇಲಾಗಬಹುದಾದ ಒಳಿತಿಗಿಂತ ಹೆಚ್ಚಾಗಿ ವಿಪತ್ತಿನ ಪ್ರಜ್ಞೆ ಬರೆಯುವ ಸಂಪಾದಕನಿಗೆ ಇರಬೇಕು. ಇಂಥ ವಿಪತ್ತಿನಿಂದ ಸಮಾಜ ಸುರಕ್ಷಿತವಾಗಿರಬೇಕು. ಸದುದ್ದೇಶ ಉಳ್ಳವರ ಮೂಲಕವಾಗಿ ಬಂದ ಬರೆಹದಿಂದ ದುಷ್ಟಜನ ಶಿಕ್ಷೆ, ಶಿಷ್ಟಜನ ಸಂರಕ್ಷಣೆ, ಇವೆರಡೂ ಆಗುತ್ತವೆ. ಮನೋವಿಜ್ಞಾನದಲ್ಲಿ ಕೊಂಚ ಪಳಗಿದವನಾಗಿ, ಉದಾರಿಯೂ ನಿರ್ಮಲನೂ ಆಗಿದ್ದರೆ ಲೇಖಕ ಬಳಸುವ ಮಾತು ಸಹಜವಾಗಿ ಸಾಧುವೂ ಸೂಟಿಯೂ ಆಗಿರುತ್ತದೆ; ಗಂಭೀರ ಮಾತ್ರವಲ್ಲ, ಪವಿತ್ರತೆಯ ಪ್ರಭೆಯಿಂದ ಬೆಳಗುತ್ತಿರುತ್ತದೆ. ಪತ್ರಿಕಾವಾಚಕನಿಗೆ ಆಸಕ್ತಿ ಇಲ್ಲದ ಸಮಾಚಾರವೇ ಇಲ್ಲ. ಆದಕಾರಣ ಈ ಆಸಕ್ತಿಗೆ ಒಳ್ಳೆ ಸಂಸ್ಕಾರ ಕೊಡುವ ಸಾರ್ಥಕ ಶಬ್ದಗಳನ್ನು ಲೇಖಕ ಬಳಸಬೇಕು; ಒಳ್ಳೆ ಸಂಯಮವನ್ನು ಕೊಡುವ ಸಾತ್ತ್ವಿಕ ಶೈಲಿಯನ್ನು ಆಶ್ರಯಿಸಬೇಕು. ಆಗ ಅಗ್ರವಾರ್ತೆಯ ಪೂರ್ಣ ಪ್ರಯೋಜನ ದೊರಕಿದಂತಾಗುತ್ತದೆ.

(ಟಿ.ಟಿ.ಎಸ್.)

**ಅಗ್ರಶೀರ್ಷಿಕೆ :** ವೃತ್ತಪತ್ರಿಕೆಗಳಲ್ಲಿ ಬಹು ಮುಖ್ಯವೆಂದು ಕಂಡುಬಂದ ಸುದ್ದಿಗಳಿಗೆ ಒಂದೊಂದಕ್ಕೂ ಒಂದೊಂದು ಶೀರ್ಷಿಕೆ ಇರುತ್ತದೆಯಾದರೂ ಎಲ್ಲ ಸುದ್ದಿಗಳನ್ನೂ ಮೀರಿಸಿದ ಬಿಸಿ ಬಿಸಿ ಸುದ್ದಿಗೆ ಸಾಮಾನ್ಯ ಶೀರ್ಷಿಕೆಗಿಂತ ಮುಖ್ಯವಾದ ದೊಡ್ಡಕ್ಷರದ ಶೀರ್ಷಿಕೆ ಅಗತ್ಯವಾಗುತ್ತದೆ. ಅದನ್ನು ಅಗ್ರಶೀರ್ಷಿಕೆ ಎನ್ನುತ್ತಾರೆ. ಸಾಮಾನ್ಯವಾಗಿ ಇದು ಪತ್ರಿಕೆಯ ಮೊದಲ ಪುಟದ ಮೊದಲ ಸಾಲಿನಲ್ಲಿ ಅತಿದೊಡ್ಡ ಅಕ್ಷರಗಳಲ್ಲಿರುತ್ತದೆ. ಅದರ ಕೆಳಗಡೆ ವಿಷಯಕ್ಕೆ ಸಂಬಂಧಪಟ್ಟ ಶೀರ್ಷಿಕೆ ಉಪಶೀರ್ಷಿಕೆ ವಿಷಯಸಾರಾಂಶ ಅನಂತರ ವಿಷಯದ ವಿವರಗಳು ಒಂದಕ್ಕಿಂತ ಒಂದು ಸಣ್ಣ ಅಕ್ಷರಗಳಲ್ಲಿ ಅಚ್ಚಾಗುತ್ತವೆ. ವಾಚಕರ ಗಮನವನ್ನು ಮೊಟ್ಟಮೊದಲಿಗೆ ತನ್ನ ಕಡೆ ಸೆಳೆಯುವ ಉದ್ದೇಶ ಅಗ್ರಶೀರ್ಷಿಕೆಯದು. ಅದರ ಗಾತ್ರವಷ್ಟೇ ದೊಡ್ಡದಾಗಿದ್ದರೆ ಸಾಲದು. ಅದರ ಒಕ್ಕಣೆ ಚಿಕ್ಕದಾಗಿ, ಕಣ್ಮನಗಳನ್ನು ಸೆಳೆವಂತಿದ್ದು ಗಂಭೀರವಾಗಿರಬೇಕಾದ್ದೂ ಅಷ್ಟೇ ಅಗತ್ಯ. (ಟಿ.ಟಿ.ಎಸ್.)

**ಅಗ್ರಹಾರ :** ವಿಶೇಷವಾಗಿ ಬ್ರಾಹ್ಮಣರಿಗೆ ಜೀವನಾಧಾರವಾಗಿ ಬಿಟ್ಟು ಕೊಟ್ಟ ಗ್ರಾಮ. ಇದನ್ನು ಚತುರ್ವೇದಿ ಮಂಗಲ, ಶ್ರೋತ್ರೀಯ ಗ್ರಾಮ ಎಂದೂ ಶಾಸನಗಳಲ್ಲಿ ಕರೆಯಲಾಗಿದೆ.

ವೇದವೇದಾಂಗಪಾರಂಗತರಾದ, ಷಟ್ಕರ್ಮನಿರತರಾದ ಬ್ರಾಹ್ಮಣೋತ್ತಮರಿಗೆ ಆಳರಸರು ನೆಲಹೊಲಗಳನ್ನು ಬ್ರಹ್ಮದೇಯ ಅಥವಾ ಬ್ರಹ್ಮದಾಯವಾಗಿ ದಾನಕೊಡುವ ಪದ್ಧತಿ ಕರ್ನಾಟಕವೂ ಸೇರಿದಂತೆ ಭಾರತದ ಎಲ್ಲೆಡೆಗಳಲ್ಲಿಯೂ ಹಿಂದಿನಿಂದಲೂ ವಾಡಿಕೆಯಲ್ಲಿತ್ತು. ನಾನಾ ಗೋತ್ರಗಳಿಗೆ, ಪ್ರವರಗಳಿಗೆ, ಶಾಖೆಗಳಿಗೆ ಸೇರಿದ ನಿರ್ದಿಷ್ಟ ಸಂಖ್ಯೆಯ ಬ್ರಾಹ್ಮಣರಿಗೆ, ಅವರು ಗೃಹಸ್ಥಾಶ್ರಮ ನೀತಿನಿಯಮಗಳನ್ನೂ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಈ ಸ್ಮೃತಿಸಿದ್ಧವಾದ ಕಾರ್ಯಗಳನ್ನೂ ನೆರವೇರಿಸಿಕೊಂಡು ಹೋಗಲೆಂದು ಒಂದು ಗ್ರಾಮದ ನೆಲಹೊಲಗಳನ್ನೂ ಮನೆಯ ನಿವೇಶನಗಳನ್ನೂ ವೃತ್ತಿಗಳಾಗಿ ವಿಂಗಡಿಸಿ ಸಾಮೂಹಿಕವಾಗಿ ದಾನ ಕೊಟ್ಟಲ್ಲಿ ಅಗ್ರಹಾರವೊಂದರ ಸೃಷ್ಟಿಯಾಯಿತಂತೆ. ಕೆಲವು ಶಾಸನಗಳಲ್ಲಿ ಈ ಪಾರಿಭಾಷಿಕ ಪದವನ್ನು ಅಗ್ರಾಹಾರ ಎಂದೂ ಬರೆಯಲಾಗಿದೆ. ಅಗ್ರಹಾರದ ಮೂಲರೂಪ 'ಅಗ್ರಾಹಾರ' (ಅಗ್ರ+ಆಹಾರ) ಎಂದೇ ಇದ್ದಿರಬೇಕೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ.

ಕರ್ನಾಟಕದಲ್ಲಿ ಗೌತಮಸಗೋತ್ರದ ಶುಕ್ಲಯಜುರ್ವೇದದಲ್ಲಿ ಪಾರಂಗತನಾದ ಬದಿರಕುಲದ ಬ್ರಾಹ್ಮಣನೊಬ್ಬನಿಗೆ ಮಹಿಷ ವಿಷಯದ ಪೆರ್ಬ್ಬಟ ಗ್ರಾಮವನ್ನು ಬ್ರಹ್ಮದೇಯನ್ಯಾಯದ ರೀತ್ಯ ಅಗ್ರಹಾರವಾಗಿ ಕೊಡಲಾಯಿತೆಂದು 5ನೆಯ ಶತಮಾನದ ಉತ್ತರಾರ್ಧದ್ದೆನ್ನಬಹುದಾದ ಕದಂಬ ಕೃಷ್ಣವರ್ಮನ ಹೆಬ್ಬಟ ತಾಮ್ರಶಾಸನದಲ್ಲಿ ಹೇಳಲಾಗಿದೆ. 10–11ನೆಯ ಶತಮಾನಗಳ ಶಾಸನಗಳಿಂದ ತಿಳಿದುಬರುವಂತೆ ಸ್ಥಾನಕುಂದೂರ (ಇಂದಿನ ತಾಳಗುಂದ) ನಿಷಾವಿವಂತ ವೈದಿಕ ಬ್ರಾಹ್ಮಣರ ವಾಸಸ್ಥಾನವಾಗಿತ್ತು. ವಾತಾಪಿ (ಇಂದಿನ ಬಾದಾಮಿ) ಎರಡುನೂರು ಸದಸ್ಯರನ್ನೊಳಗೊಂಡ ಮಹಾಚಾತುರ್ವಿದ್ಯ ಸಮುದಾಯದ (ವೈದಿಕ ಬ್ರಾಹ್ಮಣರ ಸಂಘ) ನೇರ ಆಡಳಿತಕ್ಕೊಳಗಾಗಿದ್ದು, ಚತುರ್ದಶ ವಿದ್ಯಾಸ್ಥಾನ ಎಂದು ಅದು ಹೆಸರುವಾಸಿಯಾಗಿತ್ತು. ಅದರಂತೆಯೇ ಆರ್ಯಪುರ (ಇಂದಿನ ಐಹೊಳೆ) ಐದುನೂರು ಸದಸ್ಯರನ್ನೊಳಗೊಂಡ ಮಹಾಚಾತುರ್ವಿದ್ಯ ಸಮುದಾಯದ ಆಡಳಿತಕ್ಕೊಳಗಾಗಿತ್ತು. ಇವು ಅಗ್ರಹಾರಗಳೆಂದು ಶಾಸನಗಳಲ್ಲಿ ಸ್ಪಷ್ಟವಾಗಿ ಹೇಳಿಲ್ಲವಾದರೂ ಈ ಮೂರೂ ಪ್ರಸಿದ್ಧ ಕೇಂದ್ರಗಳೂ ಅಗ್ರಹಾರಗಳೇ ಆಗಿರಬೇಕು. ಕಾಲ ಕಳೆದಂತೆ ಇಂಥ ಪ್ರಾಚೀನ ಅಗ್ರಹಾರಗಳ ನಿಜವಾದ ಇತಿಹಾಸ ಮಾಸಿಹೋಗಿ, ಮಧ್ಯಯುಗದ ಶಾಸನಗಳಲ್ಲಿ ಇವನ್ನು ಅನಾದಿ ಅಗ್ರಹಾರ, ಜನಮೇಜಯ ದತ್ತಿಯ ಮಹಾಗ್ರಹಾರ, ಶ್ರೀ ರಾಮದತ್ತಿ ಮಹಾಗ್ರಹಾರ ಎಂದು ಮುಂತಾಗಿ ಕರೆಯಲಾಗಿದೆ.

ಕರ್ನಾಟಕದ ಇತಿಹಾಸದ ಮಧ್ಯಯುಗದಲ್ಲಿ ಅನೇಕಾನೇಕ ಅಗ್ರಹಾರಗಳು ಅಸ್ತಿತ್ವಕ್ಕೆ ಬಂದವು. ಆ ಕಾಲದ ಹಲವು ಶಾಸನಗಳು ಅಗ್ರಹಾರಗಳ ದೀರ್ಘ ವರ್ಣನೆಗಳನ್ನು ನೀಡಿವೆ. ಶಿವಮೊಗ್ಗ ಜಿಲ್ಲೆಯ ಸರ್ವನಮಸ್ಯದನಾದಿ ಅಗ್ರಹಾರ ಕುಪ್ಪಟೂರನ್ನು ಶಾಸನವೊಂದರಲ್ಲಿ ವಿಪ್ರಸುರ ಚಿತ್ತನಿಕೇತನ ಮಾಳೆಯಿಂದೆ ಕಣ್ಗೊಳಿಪುದು ಕುಪ್ಪಟೂರ್ ಸಕಳವಿದ್ಯೆಗೆ ತಾನೆನೆ ಜನ್ಮ ಭೂತಳಂ ಎಂದು ಪ್ರಶಂಸಿಸಲಾಗಿದೆ.

ಕಲ್ಯಾಣದ ಚಾಳುಕ್ಯ ಚಕ್ರವರ್ತಿ 6ನೆಯ ವಿಕ್ರಮಾದಿತ್ಯ ನಾನಾ ಗೋತ್ರಗಳಿಗೆ ಸೇರಿದ ಸಕಲಶಾಸ್ತ್ರವೇತ್ತರಾದ ಹಲವು ಬ್ರಾಹ್ಮಣರನ್ನು ದ್ರಾವಿಡ ದೇಶದಿಂದ ಬರಮಾಡಿಕೊಂಡು, ಕೋಗಳಿ–500ರ ನೀರಗುಂದ ಗ್ರಾಮವನ್ನು ಅಗ್ರಹಾರವೆಂದು ಘೋಷಿಸಿ (ಅಗ್ರಹಾರೀಕೃತ್ಯ) ಅವರಿಗೆ ದಾನ ಮಾಡಿದನೆಂಬ ವಿಷಯ ಅವನ 1087ರ ನೀಲಗುಂದ ತಾಮ್ರಶಾಸನದಿಂದ ತಿಳಿದುಬರುತ್ತದೆ. ಅಗ್ರಹಾರಗಳನ್ನು ನಿರ್ಮಿಸುವ ಪದ್ಧತಿ ಇತ್ತೀಚಿನವರೆಗೂ ರೂಢಿಯಲ್ಲಿತ್ತು.

ರಾಜಕೀಯ ರಂಗದಲ್ಲಿ ಅಸ್ತವ್ಯಸ್ತತೆ ಉಂಟಾದಾಗಲೆಲ್ಲ ಹಿಂದೆ ಸೃಷ್ಟಿಸಲಾದ ಅಗ್ರಹಾರಗಳು ದುರ್ಜನರ ಕೈಗೆ ಸಿಕ್ಕಿ ದುರುಪಯೋಗಕ್ಕೆ ತುತ್ತಾಗುತ್ತಿದ್ದವು ಎಂಬುದಕ್ಕೆ ಶಾಸನಗಳಲ್ಲಿ ಸೂಚನೆಗಳಿವೆ. 2ನೆಯ ಪುಲಕೇಶಿಯ ಆಳ್ವಿಕೆ ಕೊನೆಗೊಂಡು, ಕರ್ನಾಟಕ ಪಲ್ಲವರ ಆಕಮಣಕ್ಕೆ ಒಳಗಾದಾಗ ವಿನಷ್ಟವಾದ ಬ್ರಹ್ಮಾದೇಯಗಳನ್ನು ಪುಲಕೇಶಿಯ ಮಗನಾದ 1ನೆಯ ವಿಕ್ರಮಾದಿತ್ಯ ತಾನು ಪುನಃ ಅಗ್ರಹಾರಗಳನ್ನಾಗಿ ಸೃಷ್ಟಿಸಿದನಂತೆ. ವಿಜಯನಗರದ ಸಾಮ್ರಾಟರು ಸ್ವತಃ ಅನೇಕ ಹೊಸ ಅಗ್ರಹಾರಗಳನ್ನು ಸೃಷ್ಟಿಸಿದರಲ್ಲದೆ, ಪ್ರಾಯಶಃ ಮುಸಲ್ಮಾನರ ದಾಳಿಗಳಿಂದಾಗಿ ವಿನಷ್ಟವಾಗುತ್ತಿದ್ದ ಹಲವು ಅಗ್ರಹಾರಗಳನ್ನು ಪುನಃ ಸ್ಥಾಪಿಸಿದರೆಂದು ಅಂದಿನ ಶಾಸನಗಳಿಂದ ತಿಳಿದುಬರುತ್ತದೆ.

ಅಗ್ರಹಾರ ಎಂಬುದು ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿದ್ದ ಗ್ರಾಮವನ್ನು ಸೂಚಿಸುತ್ತವೆಯಾದರೆ, ಬ್ರಹ್ಮಪುರಿ ಎಂಬುದು ನಗರ ಪಟ್ಟಣಗಳಲ್ಲಿ ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿದ್ದ ಕೇರಿಗಳನ್ನು ಸೂಚಿಸುತ್ತದೆ. ಅಲ್ಲದೆ ಶೈವಧರ್ಮಾವಲಂಬಿಗಳ, ಅದರಲ್ಲೂ ಮುಖ್ಯವಾಗಿ ವೀರಶೈವರ ವಾಸಕ್ಕೆಂದು ಸೃಷ್ಟಿಸಲಾದ ಅಗ್ರಹಾರಗಳನ್ನು ಶಿವಪುರಗಳೆಂದು ಶಾಸನಗಳಲ್ಲಿ ಹೆಸರಿಸಲಾಗಿದೆ.

ಅಗ್ರಹಾರಗಳಲ್ಲಿ ಬ್ರಾಹ್ಮಣೇತರರೂ ಮುಖ್ಯವಾಗಿ ಪಾರಂಪರ್ಯ ಕಸಬುದಾರರೂ ತಮ್ಮ ತಮ್ಮ ಕೇರಿಗಳಲ್ಲಿ ವಾಸಿಸುತ್ತಿದ್ದರಾದರೂ ಅಲ್ಲಿಯ ನೆಲಹೊಲಗಳ ಮೇಲಿನ ಸರ್ವಸ್ವಾಮ್ಯವೂ ಬ್ರಾಹ್ಮಣರದೇ ಆಗಿತ್ತು. ಅಗ್ರಹಾರದ ಆಡಳಿತಸೂತ್ರ ಅಲ್ಲಿಯ ಬ್ರಾಹ್ಮಣ ಗೃಹಪತಿಗಳನ್ನೊಳಗೊಂಡ ಮಹಾಜನರ ಕೈಯಲ್ಲಿತ್ತು. ಕರ್ನಾಟಕದ ಅಗ್ರಹಾರಗಳ ಮಹಾಜನರ ಗುಣಗಾನಗಳು ಅನೇಕ ಶಾಸನಗಳಲ್ಲಿ ಕಾಣಸಿಗುತ್ತವೆ. ಉದಾಹರಣೆಗೆ ಸವಸಿಯ (ಧಾರವಾಡ ಜಿಲ್ಲೆಯ ಸಂಶಿ) 400 ಮಹಾಜನರನ್ನು 1148ರ ಒಂದು ಶಾಸನದಲ್ಲಿ ಯಮನಿಯಮಸ್ವಾಧ್ಯಾಯ ಧ್ಯಾನಧಾರಣ ಮೋನಾನುಷ್ಠಾನ ಪರಾಯಣರು ಋಗ್ಯಜುಸ್ಸಾಮಾಥರ್ವವೇದಪಾರಗರು ಅಶೇಷವೈಶೇಷಿಕ ನೈಯಾಯಿಕ ಲೋಕಾಯತ ಸಾಂಖ್ಯ ಬೌದ್ಧ ಮೀಮಾಂಸಾದ್ಯನೇಕ ತರ್ಕಶಾಸ್ತ್ರಪರಿಣತರು ಮನ್ವಾದ್ಯಷ್ಟಾದಶ ಧರ್ಮಕುಶಳರು ಅಗ್ನಿಷ್ಟೋಮಾದಿ ಸಪ್ತಸೋಮ ಸಂಸ್ಥಾವಭೃಥಾವಗಾಹನ ಪವಿತ್ರೀಕೃತಗಾತ್ರರು ಸರ್ವಾತಿಥ್ಯಾಭ್ಯಾಗತವಿಶೇಷಾಪ್ಪ ವಿದ್ವಜ್ಜನಪೂಜಿತರು ಸ್ವಧರ್ಮ ಪ್ರತಿಪಾಲಕರು ವಿಚಾರಸಂಪನ್ನರು ಶಾಪಾನುಗ್ರಹ ಸಮರ್ಥರು ಶ್ರೀಮನ್ಮಹಾವಡ್ಡಗ್ರಾಮ ಅಗ್ರಹಾರಂ ಸವಸಿಯ ಅಶೇಷ ಮಹಾಜನಂ ನಾಲ್ನೂರ್ವರು ಎಂದು ವರ್ಣಿಸಲಾಗಿದೆ. ಕುಪ್ಪಟೂರಿನ ಮಹಾಜನರು ಋಗ್ಯಜುಸ್ಸಾಮಾಥರ್ವಣ ವೇದಾರ್ಥ ತತ್ತ್ವಜ್ಞರೂ ನಾಟಕ ಇತಿಹಾಸ ಮೀಮಾಂಸಾ ವಾತ್ಸ್ಯಾಯನ ಭರತ ಗಣಿತ ಇತ್ಯಾದಿ ಶಾಸ್ತ್ರಗಳಲ್ಲಿ ಪ್ರವೀಣರೂ ಆಗಿದ್ದರು.

ಮಹಾಜನರು ಮಾಡಬೇಕಾಗಿದ್ದ ಷಟ್ಕರ್ಮಗಳಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳೂ ಮುಖ್ಯವಾಗಿದ್ದುದರಿಂದ ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯಾಕೇಂದ್ರಗಳನ್ನೇ ಸ್ಥಾಪಿಸಿದಂತಾಗಿ, ವಿದ್ಯಾಪ್ರಸಾರಕಾರ್ಯ ಸತತ ಹಾಗೂ ಸುಗಮವಾಗಿ ನಡೆಯುತ್ತಿತ್ತು.

ಮಹಾಜನರ ಸಂಸ್ಥೆ ಸಾಕಷ್ಟು ಸ್ಥಿರವಾಗಿ ಸ್ಥಾಪಿತವಾಗಿತ್ತು. ಆದರೆ 10ನೆಯ ಶತಮಾನದ ಉತ್ತರ ಮೇರೂರಿನ ಶಾಸನ ಇತ್ಯಾದಿಗಳಿಂದ ತಿಳಿದುಬರುವ ರೀತಿಯ ಚುನಾವಣೆಗಳು ಮತ್ತು ಸಮಿತಿಗಳನ್ನೊಳಗೊಂಡಿದ್ದ ತಮಿಳುನಾಡಿನ ಸಭಾ ರೀತಿಯ ಆಡಳಿತ ವ್ಯವಸ್ಥೆಯನ್ನು ಕರ್ನಾಟಕದ ಮಹಾಜನರೂ ರಚಿಸಿಕೊಳ್ಳುತ್ತಿದ್ದುದು ಬೆಳಕಿಗೆ ಬಂದಿಲ್ಲ. ಅವರೇ ಸಾಮೂಹಿಕವಾಗಿ ಗ್ರಾಮಾಡಳಿತವನ್ನು ನಿರ್ವಹಿಸುತ್ತಿದ್ದರೆಂದು ಕಾಣುತ್ತದೆ. ಇನ್ನೂರು, ಐನೂರು ಎಂದು ಮುಂತಾದ ಈ ಮಹಾಜನರ ಸಂಖ್ಯೆಗಳೂ ಇದನ್ನೇ ಸೂಚಿಸುತ್ತವೆ. ಇಷ್ಟು ಸಂಖ್ಯೆಯಲ್ಲಿ ಸದಸ್ಯರನ್ನು ಆರಿಸುವುದಾಗಲಿ ಚುನಾಯಿಸುವುದಾಗಲೀ ವ್ಯಾವಹಾರ್ಯವೆನಿಸಿರಲಾರದು. ಇವು ಬಹುಶಃವಯಸ್ಕ ಬ್ರಾಹ್ಮಣರ, ಇಲ್ಲವೇ ಬ್ರಾಹ್ಮಣ ಗೃಹಸ್ಥರ ಸಂಖ್ಯೆಯನ್ನು ಸೂಚಿಸುವಂತಿವೆ. ಈ ಮಹಾಜನರು ಒಂದು ದೇವಸ್ಥಾನದಲ್ಲೋ ಮಂಟಪದಲ್ಲೋ ಸಭೆ ಸೇರಿ, ಗ್ರಾಮಾಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತಿದ್ದರು. ಸಾಮಾನ್ಯವಾಗಿ, ಎಲ್ಲ ಮುಖ್ಯಗ್ರಾಮಕಾರ್ಯಗಳೂ ನಡೆಯುತ್ತಿದ್ದುದು ಅವರ ಸನ್ನಿಧಿಯಲ್ಲೇ. ಕೆರೆ ಕಾಲುವೆಗಳನ್ನು ನಿರ್ಮಾಣ ಮಾಡುವುದರ ಮೂಲಕ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದು, ಮಠ ದೇವಸ್ಥಾನಗಳ ಆಡಳಿತವನ್ನು ನಿರ್ವಹಿಸುವುದು, ದಾನಿಗಳು ಭೂಮಿಯನ್ನೋ ಹಣವನ್ನೋ ದಾನ ಮಾಡಿದರೆ ಅದನ್ನು ರಕ್ಷಿಸಿ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸುವುದು–ಇವು ಈ ಅಗ್ರಹಾರದ ಮಹಾಜನಗಳ ಕರ್ತವ್ಯಗಳಾಗಿದ್ದುವು.

ಊರಿನಲ್ಲಿ ಯಾವುದಾದರೂ ವಿವಾದ ತಲೆದೋರಿದಾಗ ಅದು ಮಹಾಜನರ ಸಮಕ್ಷಮದಲ್ಲಿ ಇತ್ಯರ್ಥವಾಗುತ್ತಿತ್ತು. ಕೆಲವು ಅಗ್ರಹಾರಗಳಲ್ಲಿ ಸುಶಿಕ್ಷಿತ ರಕ್ಷಣಾಪಡೆಗಳಿದ್ದುದೂ ಕೋಟೆಕಂದಕಗಳಿದ್ದುದೂ ಹಲವು ಬಾರಿ ಮಹಾಜನರು ಶಾಸ್ತ್ರಗಳಲ್ಲಿ ಮಾತ್ರವಲ್ಲದೆ ಶಸ್ತ್ರಗಳಲ್ಲಿಯೂ ಪರಿಣತ ರಾಗಿದ್ದರೆಂಬುದೂ ಶಾಸನಗಳಿಂದ ತಿಳಿಯುತ್ತದೆ. ಕೆಲವು ಸಂದರ್ಭಗಳಲ್ಲಿ ಮಹಾಜನರೇ ಶೌರ್ಯಪ್ರದರ್ಶನ ಮಾಡಿದ ಉದಾಹರಣೆಗಳೂ ಇವೆ. ಅಗ್ರಹಾರಗಳು ಉನ್ನತ ವಿದ್ಯಾಕೇಂದ್ರಗಳಾಗಿದ್ದುವಷ್ಟೇ ಅಲ್ಲದೆ, ಸ್ವಯಂ ಆಡಳಿತ ಪದ್ಧತಿಯ ಮಾದರಿಗಳೂ ಆಗಿದ್ದುವು. ಪ್ರಾಚೀನ ಸಂಪ್ರದಾಯ ಮತ್ತು ವಿದ್ವತ್‌ಧಾರೆ ಅವಿಚ್ಛಿನ್ನವಾಗಿ ಹರಿದು ಬರಲು ಈ ಅಗ್ರಹಾರಗಳು ಬಹು ಸಹಾಯಕವಾಗಿದ್ದುವು. (*)

**ಅಗ್ರಹಾರ ಬಾಚಹಳ್ಳಿ :** ಮಂಡ್ಯಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಸು.5ಕಿಮೀ ದೂರದಲ್ಲಿರುವ ಗ್ರಾಮ. 13ನೆಯ ಶತಮಾನದಲ್ಲಿ ಹೊಯ್ಸಳ ಸೋಮೇಶ್ವರ ವಿಜಯಮಹೋತ್ಸವವನ್ನು ಆಚರಿಸುವಾಗ ಈ ಗ್ರಾಮ ಸ್ಥಾಪಿತವಾದಂತೆ ತೋರುತ್ತದೆ. ಇಲ್ಲಿ ಹುಣಸೇಶ್ವರ ದೇವಾಲಯವಿದೆ. ದೇವಾಲಯದ ಆಗ್ನೇಯಕ್ಕೆ ಇರುವ ಮೂರು ಗರುಡಗಂಬಗಳು ಕುತೂಹಲಕಾರಿಯಾದವು. ಅವುಗಳ ಎತ್ತರ 12'. ಪ್ರತಿಯೊಂದು ಕಂಬದ ಮೇಲೂ ಮಟ್ಟಸ ಚಪ್ಪಡಿಗಳಿವೆ. ಅವುಗಳ ಮೇಲೆ ಸು.2' ಎತ್ತರದ ಆನೆಯ ಶಿಲ್ಪಗಳಿವೆ. ಮಧ್ಯದ ಕಂಬದ ಆನೆಯ ಮೇಲೆ ಒಬ್ಬ ಪುರುಷ ಮತ್ತು ಅವನ ಹಿಂದೆ ಒಬ್ಬ ಸ್ತ್ರೀ, ಉಳಿದೆರಡು ಕಂಬಗಳ ಮೇಲೆ ಒಬ್ಬರ ಹಿಂದೆ ಒಬ್ಬರಂತೆ ಮೂವರು ಪುರುಷರು ಕುಳಿತಿರುವಂತೆ, ಅಲ್ಲದೆ ಪ್ರತಿಯೊಂದರಲ್ಲೂ ಮುಂದುಗಡೆ ಇರುವ ಗಂಡಾನೆಯ ಗಂಡಸ್ಥಳದ ಮೇಲೆ ಕುಳಿತಿರುವ ಗರುಡನೊಡನೆ ಹೋರಾಡುತ್ತಿರುವಂತೆ ತೋರಿಸಲಾಗಿದೆ. ಈ ಕಂಬಗಳ ಕೆಳಭಾಗದಲ್ಲಿ ಕಂಡರಿಸಲಾಗಿರುವ ಶಾಸನಗಳು ಮೇಲಿನ ಶಿಲ್ಪಗಳಿಗೆ ಮತ್ತು ಹೊಯ್ಸಳರ ಕಾಲದಲ್ಲಿ ಪ್ರಚಲಿತವಾಗಿದ್ದ ಗರುಡ ಸಂಪ್ರದಾಯದ ಬಗ್ಗೆ ವಿವರಗಳನ್ನು ಒದಗಿಸುತ್ತವೆ. ಗರುಡರು ತಮ್ಮ ಅರಸ ಮೃತರಾದರೆ ತಾವು ಸಾಯುವೆವು ಎಂದು ಪ್ರತಿಜ್ಞೆ ಕೈಗೊಳ್ಳುತ್ತಿದ್ದರು. 2ನೆಯ ಬಲ್ಲಾಳನೊಡನೆ ಸಿವನೆಯ ನಾಯಕ ಎಂಬುವನು ತನ್ನ ಐವರು ಲೆಂಕರೊಂದಿಗೆ ಭಾಷೆಯನ್ನು ಪೂರೈಸಿದ, 2ನೆಯ ನರಸಿಂಹನೊಡನೆ ಲಖ್ಖೆಯ ನಾಯಕ ಎಂಬುವನು ತನ್ನ ಹೆಂಡತಿ ಗಂಗಾದೇವಿ ಮತ್ತು ಮೂವರು ಲೆಂಕರೊಂದಿಗೆಯೂ ಸೋಮೇಶ್ವರನೊಡನೆ (1253) ಕಂನೆಯ ನಾಯಕ ಎಂಬುವನು ತನ್ನ ಮೂವರು ಹೆಂಡಿರು, ಹತ್ತು ಜನ ಲೆಂಕಿತಿಯರು ಮತ್ತು 21ಜನ ಲೆಂಕರ ಜೊತೆಯಲ್ಲಿ ಗರುಡನನ್ನು ಅಪ್ಪಿ ಭಾಷೆಯನ್ನು ಪೂರೈಸಿದರು; 3ನೆಯ ನರಸಿಂಹನೊಡನೆ (1292) ಸಿಂಗಯನಾಯಕ ತನ್ನ ಮೂವರು ಹೆಂಡಿರು, ಅಷ್ಟು ಜನ ಲೆಂಕಿತಿಯರು ಮತ್ತು ಇಪ್ಪತ್ತು ಲೆಂಕರೊಡನೆ ಭಾಷೆಯನ್ನು ಪೂರೈಸಿದ ಎಂದು ಈ ಶಾಸನಗಳು ತಿಳಿಸುತ್ತವೆ. ಈ ವ್ಯಕ್ತಿಗಳು ವಂಶಪಾರಂಪರ್ಯವಾಗಿ ಅರಸರ ಸೇವೆಯಲ್ಲಿರುತ್ತಿದ್ದಂತೆ ತೋರುತ್ತದೆ. ಸ್ವಾಮಿನಿಷ್ಠೆಯಲ್ಲಿ ಗರುಡರು ವಿಷ್ಣುವಿನ ಗರುಡನಿಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲ ಎಂಬ ಮನೋಭಾವವನ್ನು ಗರುಡನೊಂದಿಗೆ ಹೋರಾಡುತ್ತಿರುವ ಹುಣಸೇಶ್ವರ ದೇವಾಲಯದ ಗರುಡಗಂಬದ ಶಿಲ್ಪರಚನೆಗಳು ಸೂಚಿಸುತ್ತವೆ. (ಕೆ.)

**ಅಗ್ರಹಾರ ಬೆಳಗುಲಿ :** ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಚನ್ನರಾಯಪಟ್ಟಣದಿಂದ ಈಶಾನ್ಯಕ್ಕೆ 27ಕಿಮೀ ದೂರದಲ್ಲಿದೆ. ಈ ಗ್ರಾಮದ ಪ್ರಾಚೀನ ಹೆಸರು ಬೆಳ್ಗುಲಿ ಅಥವಾ ಪನಜಾಡಿಯ ಬೆಳ್ಗುಲಿ. 1210ರಲ್ಲಿ 2ನೆಯ ಬಲ್ಲಾಳನ ಅಧಿಕಾರಿ ಕೇಶಿರಾಜ ಈ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ಕೇಶವಪುರ ಎಂಬ ಹೆಸರಿಟ್ಟು ಅಲ್ಲಿ ಕೇಶವಸಮುದ್ರ ಮತ್ತು ಲಕ್ಷ್ಮೀಸಮುದ್ರವೆಂಬ ಕೆರೆಗಳನ್ನು ಕಟ್ಟಿಸಿ ಕೇಶವ ಮತ್ತು



ಬೆಟ್ಟೇಶ್ವರ ದೇವಾಲಯ

ಈಶ್ವರ ದೇವರನ್ನು ಪ್ರತಿಷ್ಠಾಪಿಸಿದ. ಗ್ರಾಮದ ಈಶಾನ್ಯ ದಿಕ್ಕಿನಲ್ಲಿ ಕೇಶವಸಮುದ್ರವಿದೆ. ಈ ಕೆರೆಯ ಬಳಿ ಬೆಟ್ಟೇಶ್ವರ ಅಥವಾ ಕೇಶವೇಶ್ವರ ದೇವಾಲಯ ಇದೆ. ಈ ದೇವಾಲಯದ ದ್ವಾರ ದಕ್ಷಿಣ ಮುಖವಾಗಿದೆ. ದೇವಾಲಯ ಪೂರ್ವದಿಂದ ಪಶ್ಚಿಮಕ್ಕೆ ವಿಶಾಲ ಜಗತಿಯ ಮೇಲೆ ಹರಡಿಕೊಂಡಿದೆ. ಇದರಲ್ಲಿ ಒಂದು ನವರಂಗ, ದಕ್ಷಿಣದ ಮುಖಮಂಟಪಯುತ ಪ್ರವೇಶದ್ವಾರ, ಪಶ್ಚಿಮದ ಕಡೆ ಶಿವಲಿಂಗವಿರುವ ಅಂತರಾಳಯುತ ಗರ್ಭಗೃಹ ಮತ್ತು ಉತ್ತರದ ಕಡೆ ಕೇಶವ ವಿಗ್ರಹವಿರುವ ಗರ್ಭಗುಡಿ ಇವೆ. ಪೂರ್ವದಲ್ಲಿ ಹಲವು ಕಂಬಗಳ ಮೇಲೆ ಎತ್ತಿದ, ಸುತ್ತಲೂ ಕಕ್ಷಾಸನವಿರುವ, ತೆರೆದ ಮಹಾಮಂಟಪವಿದೆ. ಹೊರಮೈ ಕೇವಲ ಅರೆಗಂಬಗಳಿಂದ ಅಲಂಕೃತವಾಗಿದೆ. ಈಗಿರುವ ಗೋಪುರಗಳು ಇತ್ತೀಚಿನವು. ಒಳಗಿನ ಕಂಬಗಳನ್ನು ತಿರುಗಣೆಯಿಂದ ಮಾಡಲಾಗಿದೆ. ಒಳಗಿರುವ ಬೃಹತ್ ನಂದಿ, ಷಣ್ಮುಖ, ಭೈರವ, ದುರ್ಗ, ಸರಸ್ವತಿ, ವಿನಾಯಕ ವಿಗ್ರಹಗಳು ಉತ್ತಮ ಶಿಲ್ಪಗಳು.

ಈಗ ಶಿಥಿಲವಾಗಿರುವ ಸೋಮೇಶ್ವರ (1154) ಮತ್ತು ಅಮೃತೇಶ್ವರ (1134) ದೇವಾಲಯಗಳೂ ಇಲ್ಲಿವೆ. (ಕೆ.)

**ಅಗ್ರಿಕೋಲ :** ಪ್ರ.ಶ.ಪೂ. ಸು. 37–ಪ್ರ.ಶ. 93. ಸಮರ್ಥ ರೋಮನ್ ಸೇನಾಪತಿ, ದಕ್ಷ ಆಡಳಿತಗಾರ. ಕಾರ್ಯರಂಗ ಹೆಚ್ಚಾಗಿ ಬ್ರಿಟನ್. ಪ್ರ.ಶ. 77ರಲ್ಲಿ ಕಾನ್ಸಲ್ ಪದವಿಗೇರಿ, ಮುಂದೆ ಬ್ರಿಟನ್ನಿನ ಪ್ರಾಂತಾಧಿಪತಿಯಾದ. ವೇಲ್ಸ್, ಸ್ಕಾಟ್ಲೆಂಡ್ ಮುಂತಾದ ಕಡೆಗಳಲ್ಲಿ ದಂಗೆಯೇಳುತ್ತಿದ್ದವರನ್ನು ಅಡಗಿಸಿ ಬ್ರಿಟನ್ನಿನ ಬಹುಭಾಗವನ್ನು ಹತೋಟಿಗೆ ತಂದ. ಉದಾರಹೃದಯಿಯಾದ ಈತ, ತನ್ನ ಪ್ರಾಂತ್ಯದ ಜನರೆಲ್ಲ ಶಾಂತಿ ನೆಮ್ಮದಿಗಳಿಂದ ಬದುಕುವಂತಾಗಬೇಕೆಂಬ ಧ್ಯೇಯದಿಂದ ರೋಮನ್ ಸಂಸ್ಕೃತಿಯನ್ನು ಅವರಲ್ಲಿ ಹರಡಲು ಯತ್ನಿಸಿದ. ಇವನ ಆಡಳಿತದಲ್ಲಿ ಸೌಮ್ಯತೆ ಜನಾನುರಾಗಗಳಿದ್ದುವು. ಇವನ ಅಳಿಯ ಟಾಸಿಟಸ್ ಎಂಬ ಪ್ರಸಿದ್ಧ ರೋಮನ್ ಚರಿತ್ರಕಾರ ಇವನ ಜೀವನಚರಿತ್ರೆಯನ್ನು ಬರೆದಿದ್ದಾನೆ. ಇದರಲ್ಲಿ ಆ ಕಾಲದ ರೋಮನರು ಹೊಂದಿದ್ದ ಸದ್ಗುಣಗಳಿಗೆ ತನ್ನ ಮಾವ ಮಾದರಿಯಾಗಿದ್ದ ಎಂದು ಬರೆದಿದ್ದಾನೆ. (ಎ.ಎಂ.)

**ಅಗ್ರಿಪ :** ಪ್ರ.ಶ.ಪೂ. ಸು. 63–12. ರೋಮನ್ ಸೇನಾಪತಿ ಮತ್ತು ಸಮರ್ಥ ರಾಜ್ಯನೀತಿನಿಪುಣನಾದ ಇವನು ಆಕ್ಟೇವಿಯಸ್ (ಅಗಸ್ಟಸ್) ರೋಮನ್ ಚಕ್ರವರ್ತಿಯಾಗಲು ಸಹಾಯ ಮಾಡಿದ. ಗಾಲ್‍ನಲ್ಲಿ (ಈಗಿನ ಫ್ರಾನ್ಸ್) ಸೇನಾಪತಿಯಾಗಿದ್ದ. ಶತ್ರುಗಳ ಹಾವಳಿಯನ್ನು ಅಡಗಿಸಿ ಅನಂತರ ಪ್ರ.ಶ.ಪೂ. 37ರಲ್ಲಿ ಕಾನ್ಸಲ್ ಪದವಿಗೇರಿದ. ರೋಮನ್ ಚಕ್ರಾಧಿಪತ್ಯದ ನೌಕಾಬಲವನ್ನು ಬೆಳೆಸಿದ. ಮೈಲೆ ಮತ್ತು ನೌಲೋಕಸ್ ನೌಕಾಕದನಗಳಲ್ಲಿ (ಪ್ರ.ಶ.ಪೂ. 36) ಸಮರ್ಥನಾದ ಸೆಕ್ಸ್‍ಟಸ್ ಪಾಂಪೇಯಸ್ ಸೋತದ್ದು ಇವನ ಮುನ್ನೆಚ್ಚರಿಕೆಯ ಪರಿಣಾಮವಾಗಿ. ಪ್ರ.ಶ.ಪೂ. 31ರಲ್ಲಿ ಮಾರ್ಕ್ ಆಂಟೋನಿ ನಿರ್ಣಾಯಕ ಆಕ್ಟಿಯಂ ನೌಕಾಕದನದಲ್ಲಿ ಸೋತದ್ದೂ ಇವನು ಆಕ್ಟೇವಿಯಸ್‍ಗೆ ನೀಡಿದ ನೆರವಿನಿಂದ. ಅಗಸ್ಟಸ್ ಎಂಬ ಹೆಸರಿನಿಂದ ಆಕ್ಟೇವಿಯಸ್ ಚಕ್ರವರ್ತಿಯಾದ ಮೇಲೆ ಸಾಮ್ರಾಜ್ಯದ ನಾನಾಕಡೆಗಳಲ್ಲಿ ತಿರುಗಿ ಅಗ್ರಿಪ ವಿರೋಧಿಗಳನ್ನು ಅಡಗಿಸಿದ. ಇವನು ವಾಸ್ತುಶಿಲ್ಪದಲ್ಲೂ ನಿಪುಣ. ಪ್ಯಾಂಥಿಯಾನ್ ಎಂಬ ಭವ್ಯವಾದ ದೇವಾಲಯವನ್ನು ಕಟ್ಟಿಸಿದವನು ಈತನೇ. (ಎ.ಎಂ.)

**ಅಗ್ರೋಮೈಸಿಡೀ :** ಈ ಕುಟುಂಬಕ್ಕೆ ಸೇರಿದ ನೊಣದ ಮರಿಗಳು ಎಲೆಗಳಲ್ಲಿ ಸುರಂಗ ಮಾಡಿಕೊಂಡು ಜೀವಿಸುವುದರಿಂದ ಇವನ್ನು ಎಲೆಸುರಂಗದ ನೊಣಗಳು (ಲೀಫ್ ಮೈನರ್ಸ್) ಎಂದು ಕರೆಯುತ್ತಾರೆ. ಈ ನೊಣಗಳ ಶರೀರ ಸೂಕ್ಷ್ಮವಾಗಿದ್ದು ಕಪ್ಪು ಅಥವಾ ಹಳದಿ ಬಣ್ಣದ್ದಾಗಿರುತ್ತದೆ. ಮರಿಗಳ ಶರೀರ ಆಕಾರದಲ್ಲಿ ದುಂಡಗಿದ್ದು ಮುಂಭಾಗದಲ್ಲಿ ಚೂಪಾಗಿರುತ್ತದೆ. ಕೊನೆಯ ಉಂಗುರದ ಕೆಳಭಾಗದಲ್ಲಿ ಹೀರುನಳಿಕೆ ಯಂಥ ಅಂಗವಿರುತ್ತದೆ. ಮರಿಗಳು ತಾವು ಎಲೆಗಳಲ್ಲಿ ಮಾಡಿದ ಸುರಂಗದಲ್ಲಿ ಅಥವಾ ಮಣ್ಣಿನಲ್ಲಿ ಕೋಶಾವಸ್ಥೆ ಕಳೆಯುತ್ತವೆ. ಈ ಕುಲದ ನಾನಾ ಜಾತಿಗಳಿಗೆ ಸೇರಿದ ನಾನಾ ಪ್ರಭೇದಗಳನ್ನು ಗುರುತಿಸಲು ಆಯಾ ಜಾತಿ ಮತ್ತು ಪ್ರಭೇದಗಳಿಗೆ ಸೇರಿದ ನೊಣಗಳ ಪರಿಶೀಲನೆಗಿಂತ ಮರಿಗಳು ಎಲೆಗಳಲ್ಲಿ ಮಾಡುವ ಸುರಂಗಗಳ ಮಾದರಿಯ ಪರಿಶೀಲನೆ ಹೆಚ್ಚು ಸಹಕಾರಿಯೆನಿಸಿದೆ. ಸಾಮಾನ್ಯವಾಗಿ ಮರಿಗಳು ವಿವಿಧ ರೀತಿಯ ನುಲಿಕೆಗಳಾಗಿ ಎಲೆಗಳಲ್ಲಿ ಸುರಂಗ ಮಾಡುತ್ತವೆ. ಆದರೆ ತೊಗರಿಕಾಯಿಗೆ ಬೀಳುವ ಅಗ್ರೋಮಿಕ್ಸೋಸ್ ಅಬ್ಸ್ಟಸ ಎಂಬ ನೊಣ ತನ್ನ ಸೂಕ್ಷ್ಮವಾದ ಮೊಟ್ಟೆಗಳನ್ನು ಎಳೆ ತೊಗರಿಕಾಯಿಯೊಳಗೆ ಇಡುತ್ತದೆ. ಈ ಮೊಟ್ಟೆಗಳಿಂದ ಹೊರಬಂದ ಮರಿಗಳು ಕಾಳಿಗೆ ಹೋಗಿ ಅದನ್ನು ತಿಂದು ಜೀವಿಸುತ್ತವೆ. ಕ್ರಿಪ್ಟೋಕೀಟಂ ಮುಂತಾದ ಜಾತಿಯ ಮರಿಗಳು ಕಾಕ್ಸಿಡಿ ಕುಲಕ್ಕೆ ಸೇರಿದ ಕೀಟಗಳ ಶರೀರದಲ್ಲಿ ಸೇರಿಕೊಂಡು ಜೀವನ ನಡೆಸುತ್ತವೆ. ಕ್ರಿಪ್ಟೋಕೀಟಂ ಐಸರ್ಯೆ ಎಂಬ ನೊಣ ಕಿತ್ತಳೆ ಮತ್ತು ಸರ್ವೆ ಮರಕ್ಕೆ ಬಿದ್ದು ಹಾನಿಮಾಡುವ ಐಸರ್ಯೆ ಪರ್ಚೇಸಿ ಎಂಬ ಕಾಕ್ಸಿಡಿ ಕುಲದ ಕೀಟಗಳ ಶರೀರದಲ್ಲಿ ಮೊಟ್ಟೆಯಿಡುತ್ತದೆ. ಅದರಿಂದ ಬಂದ ಮರಿಗಳು ಆ ಕೀಟಗಳ ಶರೀರದೊಳಗೆ ಸೇರಿಕೊಂಡು ತಮ್ಮ ಜೀವನ ನಡೆಸುತ್ತವೆ. ಹಾಗೂ ಆಶ್ರಯದಾತ ಕೀಟವನ್ನು ನಾಶಪಡಿಸುತ್ತವೆ. ನೀಲಗಿರಿ ಮತ್ತು ಕೊಡೈಕನಾಲ್ ಪ್ರದೇಶಗಳ ಕಿತ್ತಳೆ ತೋಟಗಳಿಗೆ ಐಸರ್ಯೆ ಪರ್ಚೇಸಿ ಒಂದು ಅಪಾಯಕಾರಿ ಕೀಟವಾಗಿ ಪರಿಣಮಿಸಿದೆ; ಅದನ್ನು ನಿವಾರಿಸಲು ಈಚೆಗೆ ಈ ಕ್ರಿಪ್ಟೋಕೀಟಂ ಐಸರ್ಯೆವನ್ನು ಬಳಸಿಕೊಳ್ಳುತ್ತಿರುವರು. ಇದು ಒಂದು ಜೈವಿಕ ನಿಯಂತ್ರಣ ವಿಭಾಗ. (ಟಿ.ಎಸ್.ಟಿ.)

**ಅಗ್ಲೋನಿಮ :** ಏರೇಸೀ ಕುಟುಂಬಕ್ಕೆ ಸೇರಿದ ಅಲಂಕಾರ ಸಸ್ಯ ಜಾತಿ. ಸುಂದರ ಎಲೆಗಳಾಗಿ ಪ್ರಸಿದ್ಧವಾಗಿದೆ. ಇದನ್ನು ಉದ್ಯಾನಗಳಲ್ಲೂ ಮನೆಗಳಲ್ಲೂ ಬೆಳೆಸುತ್ತಾರೆ. ಇದರ ಎಲೆಗಳು ಹಚ್ಚಹಸಿರಾಗಿದ್ದು ಅವುಗಳ ಮೇಲೆ ವಿವಿಧ ಆಕಾರದ ಮತ್ತು ವಿವಿಧ ವಿನ್ಯಾಸದ ಅಲಂಕೃತ ಮಚ್ಚೆಗಳು ಇರುವುದರಿಂದ ಬಹಳ ಭವ್ಯವಾಗಿ ಕಾಣುತ್ತದೆ. ಜೊತೆಗೆ ಎಲೆಯ ತೊಟ್ಟುಗಳು ಉದ್ದವಾಗಿ, ವಿವಿಧ ಬಣ್ಣ ಮತ್ತು ರೆಕ್ಕೆಗಳಿಂದ ಕೂಡಿರುವುದರಿಂದ ಅವುಗಳ ಅಂದ ಇನ್ನೂ ಹೆಚ್ಚಿರುತ್ತದೆ.

ಅಗ್ಲೋನಿಮ ಜಾತಿಯಲ್ಲಿ ಸದಾ ಹಸಿರಾಗಿರುವ 40 ಪ್ರಭೇದಗಳಿವೆ. ಇವೆಲ್ಲವೂ ಬಹುವಾರ್ಷಿಕಸಸ್ಯಗಳು. ಇವುಗಳ ಪೈಕಿ ಕೆಲವು ಪ್ರಭೇದಗಳು ಮಾತ್ರ ಜನಪ್ರಿಯವಾಗಿವೆ. ಮುಖ್ಯವಾದುವು ಇಂತಿವೆ:

**ಅಗ್ಲೋನಿಮ ಕಾಸ್ಟೆಟಮ್:** ಇದು ಕುಳ್ಳಾಗಿ ನೆಲದ ಮೇಲೆ ಹರಡಿಕೊಳ್ಳುವ ಸಸ್ಯ. ಇದರ ಕಾಂಡದ ಮೇಲೆ ಎಲೆಗಳು ನಿಬಿಡವಾಗಿ ಇರುತ್ತವೆ. ಎಲೆ ಕರನೆಯಾಕಾರವಾಗಿಯೋ ಆಯತಾಕಾರ ಅಥವಾ ಹೃದಯಾಕಾರವಾಗಿಯೋ ಇರುತ್ತವೆ. ಅಂಚು ನಯವಾಗಿರುತ್ತದೆ. ತುದಿ ಮೊನಚಾಗಿರುತ್ತದೆ. ಎಲೆಯ ಮೇಲಿನ ನಾಳಗಳು ತುದಿಯಲ್ಲಿ ಕಮಾನಿನಂತೆ ಬಾಗಿರುತ್ತವೆ. ಹೂಗೊಂಚಲು ಕವಚ ಬಿಳುಪುಮಿಶ್ರಿತ ಹಸಿರುಬಣ್ಣದ್ದಾಗಿದ್ದು ಈ ಹೂಗೊಂಚಲು ಬಹು ಸುಂದರವಾಗಿ ಕಾಣುತ್ತದೆ. ಉಗಮಸ್ಥಾನ ಮಲಯ ದೇಶ.

**ಅಗ್ಲೋನಿಮ ಕಮ್ಯುಟಿಟಮ್:** ಈ ಪ್ರಭೇದ ಸುಮಾರು ಅರ್ಧಮೀಟರ್ ಎತ್ತರದ ತುಂಡು ಗಿಡವಾಗಿ ಬೆಳೆಯುತ್ತದೆ. ಎಲೆಯ ತೊಟ್ಟು ಎಲೆಯಷ್ಟೇ ಉದ್ದ ಅಥವಾ ಸ್ವಲ್ಪ ಚಿಕ್ಕದು; ಆಯತಾಕಾರವಾಗಿರುವ ಎಲೆಗೆ ಲಂಬಾಗ್ರ ತುದಿಯಿರುತ್ತದೆ. ಬಣ್ಣ ಹಸಿರಾಗಿದ್ದು ಮೇಲು ಭಾಗದಲ್ಲಿ ಬೂದಿಬಣ್ಣದ ಮಚ್ಚೆಗಳಿರುತ್ತವೆ. ಕವಚ ಹಸಿರುಮಿಶ್ರಿತ ಬಿಳುಪುಬಣ್ಣ. ಹಣ್ಣು ಕೆಂಪು ಅಥವಾ ಕಂದು ಬಣ್ಣದ ಬೆರಿ ಮಾದರಿಯದು. ಇದು ಮಲಯ ದೇಶದ ಮೂಲದ್ದು.

**ಅಗ್ಲೋನಿಮ ಪಿಕ್ಟಮ್:** ಈ ಪ್ರಭೇದ ಸುಮಾರು 1 ಮೀ ಎತ್ತರಕ್ಕೆ ನೇರವಾಗಿ ಬೆಳೆಯುತ್ತದೆ. ಇದರ ಎಲೆ ಆಯತಾಕಾರ ಅಥವಾ ಕದಿರನಾಕಾರವಾಗಿದ್ದು ತುದಿ ಮೊಂಡಾಗಿರುತ್ತದೆ. ಪಕ್ಕದ ನಾಳಗಳು ಎರಡುಕಡೆ ಅಂಚುಗಳಲ್ಲಿ ಕಮಾನಿನಂತೆ ಬಾಗಿರುತ್ತವೆ. ಎಲೆಯ ಮೇಲುಭಾಗದಲ್ಲಿ ಬಿಳಿಯ ಮಚ್ಚೆಗಳು ಇರುತ್ತವೆ. ಹೂಗೊಂಚಲ ಕವಚ ಲಂಬಾಗ್ರ ತುದಿಯನ್ನು ಹೊಂದಿದೆ. ಈ ಪ್ರಭೇದದಲ್ಲಿ ಎಲೆಯ ಮೇಲೆ ಬಿಳುಪು, ಹಳದಿ ಮತ್ತು ಹಸಿರುಮಿಶ್ರಿತ ಮಚ್ಚೆಗಳಿರುವ ತಳಿಗಳೂ ಇವೆ. ಇದನ್ನು ಮೂರು ಬಣ್ಣದ ತಳಿ ಎಂದೂ ಕರೆಯುತ್ತಾರೆ.

**ಅಗ್ಲೋನಿಮ ಮಾಡೆಸ್ಟಮ್:** ಈ ಪ್ರಭೇದ ಉಳಿದವುಗಳಿಗಿಂತ ಹೆಚ್ಚು ಎತ್ತರವಾಗಿದೆ. ತಳಭಾಗದ ನಡುಗಿಣ್ಣು ಸುಮಾರು 2.5ಸೆಂಮೀ ದಪ್ಪವಾಗಿರುತ್ತದೆ. ಎಲೆ ಕರನೆಯಾಕಾರವಾಗಿದ್ದು ಲಂಬಾಗ್ರತುದಿಯನ್ನು ಹೊಂದಿರುತ್ತದೆ. ಹೂಗೊಂಚಲು ಕಂಕುಳಲ್ಲಿರುತ್ತದೆ. ಕವಚ 8ಸೆಂಮೀ ಉದ್ದದ್ದು ಮತ್ತು ಹಸುರು ಬಣ್ಣದ್ದು. ಇದು ಫಿಲಿಪಿನ್ಸ್ ದೇಶದ ಮೂಲದ್ದು.

ಅಗ್ಲೋನಿಮ ಸಸ್ಯವನ್ನು ಕಾಂಡದ ತುಂಡುಗಳಿಂದಲು ಮೋಸುಗಳಿಂದಲೂ ವೃದ್ಧಿಮಾಡಬಹುದು. ಅದಕ್ಕೆ ಮಳೆಗಾಲ ಯೋಗ್ಯವಾದ ಕಾಲ. ಬೇಸಾಯಕ್ಕೆ ಗೋಡು, ಎಲೆಗೊಬ್ಬರ, ಮರಳು, ಇದ್ದಲು ಮತ್ತು ಹಳೆಯ ಗಾರೆ ಮುಂತಾದುವುಗಳ ಮಿಶ್ರಣದ ಮಣ್ಣು ಉತ್ತಮ. ಸರಾಗವಾಗಿ ಗಾಳಿ, ಬೆಳಕು ಬರುವ ಪಾರ್ಶ್ವ ನೆರಳಿನಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ. ಪ್ರತಿನಿತ್ಯ ನೀರು ಸಿಂಪಡಿಸಿದಲ್ಲಿ ಲವಲವಿಕೆಯಿಂದ ಹೊಳಪಾಗಿ ಬೆಳೆಯುತ್ತದೆ. ಬಿಸಿಲಿನಲ್ಲಿ ಇಟ್ಟರೆ ಝಳವನ್ನು ತಡೆಯಲಾರದೆ ಸೊರಗಿ, ಮೇಲಿರುವ ಬಣ್ಣದ ಮಚ್ಚೆಗಳು ನಶಿಸಿಹೋಗುತ್ತವೆ. ಸದಾ ತೇವಾಂಶ ಬೇಕಿದ್ದರೂ ಅತಿಯಾದ ಜೌಗನ್ನು ಇದು ಸಹಿಸುವುದಿಲ್ಲ. (ಡಿ.ಎಂ.)

**ಅಘೋರಶಿವ :** ದೇವೀತಾಲೋತ್ತರಂ ಎಂಬ ವೀರಶೈವಧರ್ಮ ಗ್ರಂಥದ ಲೇಖಕ. ಇವನನ್ನು ಅನೇಕ ಪ್ರಾಚೀನ ವೀರಶೈವ ಕವಿಗಳು ತಮ್ಮ ಕೃತಿಗಳಲ್ಲಿ ಸ್ಮರಿಸಿದ್ದಾರೆ. ಪದ್ಮಣಾಂಕ (ಸು. 1385) ತನ್ನ ಪದ್ಮರಾಜ ಪುರಾಣದಲ್ಲಿ ಪೂರ್ವಕವಿಗಳನ್ನು ಸ್ಮರಿಸುವಾಗ ಅಘೋರಶಿವನನ್ನು ಸ್ಮರಿಸಿದ್ದನಾದ ಕಾರಣ ಈತ 14ನೆಯ ಶತಮಾನಕ್ಕಿಂತ ಹಿಂದಿನವನೆಂದು ತಿಳಿಯಬಹುದು. ಅಘೋರಶಿವಪದ್ಧತಿ, ತತ್ತ್ವತ್ರಯನಿರ್ಣಯವ್ಯಾಖ್ಯೆ, ತತ್ತ್ವಪ್ರಕಾಶವೃತ್ತಿ, ತತ್ತ್ವಸಂಗ್ರಹ, ಲಘುಟೀಕಾ, ನಾದಕಾರಿಕಾವೃತ್ತಿ, ಸರ್ವಜ್ಞಾನೋತ್ತರವೃತ್ತಿ, ದೀಕ್ಷಾವಿಧಿ, ವಿಗೇಂದ್ರವೃತ್ತಿದೀಪಿಕಾ, ಮಹೋತ್ಸವನಿಧಿ, ರತ್ನತ್ರಯವೃತ್ತಿ, ಭೋಗಕಾರಿಕಾವೃತ್ತಿ ಮೊದಲಾದವುಗಳನ್ನು ರಚಿಸಿದ್ದಂತೆ ತಿಳಿದಿದೆ. ಈತ ಚಿದಂಬರದ ಆಮರ್ದಕ ಮಠದ ಗುರುವಾಗಿದ್ದ. (ಬಿ.ಎಸ್.)

**ಅಘೋರೀ ಪಂಥ :** ನರಮಾಂಸಭಕ್ಷಣವೇ ಮೊದಲಾದ ವಾಮಾಚಾರಗಳನ್ನುಳ್ಳ ಸಂನ್ಯಾಸಿಗಳ ಪಂಥ. ಇವರು ಅಘೋರ (ಘೋರನಲ್ಲದ) ಶಿವನ ಉಪಾಸಕರು. ಭಾರತದಲ್ಲಿ ಬಹಳ ಹಿಂದಿನಿಂದಲೂ ಬಿಹಾರ, ಪಶ್ಚಿಮ ಬಂಗಾಲ, ಅಜ್ಮೀರ, ಮೇವಾಡ, ಬೀರಾರ್ ಮೊದಲಾದ ಪ್ರಾಂತಗಳಲ್ಲಿ ಇವರು ಆಗಾಗ ಕಾಣಿಸಿಕೊಂಡಿದ್ದಾರೆ. 1901ರ ಸುಮಾರಿನಲ್ಲಿ ಇವರ ಸಂಖ್ಯೆ 5580 ಇತ್ತೆಂದು ತಿಳಿದುಬರುತ್ತದೆ. ಮುಂಬಯಿಯ ಮಾನವಶಾಸ್ತ್ರಸಂಘಕ್ಕಾಗಿ ಲೀಕ್ ತೆಗೆದಿರುವ ಕೆಲವು ಛಾಯಾಚಿತ್ರಗಳ ಪ್ರಕಾರ ಅಘೋರಿಗಳ ವೇಷಭೂಷಣಗಳು ಬಹು ವಿಚಿತ್ರವಾಗಿವೆ. ಮೈಗೆ ಶ್ಮಶಾನಭಸ್ಮಲೇಪ, ಎದೆಗೆ ತ್ರಿಮೂರ್ತಿಗಳ ಐಕ್ಯವನ್ನು ತೋರುವ ಕೆಲವು ಚಿಹ್ನೆಗಳು, ರುದ್ರಾಕ್ಷಿ ಮಾಲೆ, ಕಾಡಿನ ಕರಡಿಯ ಹಲ್ಲುಗಳು ಮತ್ತು ಹಾವಿನ ಮೂಳೆಗಳಿಂದ ಮಾಡಿದ ಸರಗಳು. ಕೈಯಲ್ಲಿ ನರಕಪಾಲ. ಈ ಫಕೀರರ ಸಂಖ್ಯೆ ಈಚೆಗೆ ಬಹು ಕಡಿಮೆಯಾಗಿದೆ. (ಜಿ.ಎಚ್.)

**ಅಘೋರೇಶ್ವರ :** ಪರಮೇಶ್ವರನ ಪಂಚಮುಖಗಳಲ್ಲಿ (ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ) ಒಂದರ ಹೆಸರು. ಕೆಳದಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ದೊಡ್ಡ ಸಂಕಣ್ಣನಾಯಕ (1540–59) ಅಘೋರೇಶ್ವರನ ಹೆಸರಿನಲ್ಲಿ ಒಂದು ದೊಡ್ಡ ದೇವಾಲಯವನ್ನು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಇಕ್ಕೇರಿಯಲ್ಲಿ ಕಟ್ಟಿಸಿದ್ದಾನೆ. ಮಲೆನಾಡಿನ ಜನ ಈ ದೇವರ ಬಗ್ಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಶಿಲ್ಪಕಲಾ ದೃಷ್ಟಿಯಿಂದಲೂ ದೇವಾಲಯ ಭವ್ಯವಾಗಿದೆ. (ಬಿ.ಎಸ್.)

**ಅಚರಗಳು, ಸಹಚರಗಳು :** ಅಚರವೆಂದರೆ ಬದಲಾವಣೆಯಾಗದಿರುವಿಕೆ. $x$, $y$ಗಳಲ್ಲಿ ಒಂದು ದ್ವಿಘಾತ ಸಮೀಕರಣ ಒಂದು ವಕ್ರರೇಖೆಯನ್ನು (ಶಂಕುಜ) ಚಿತ್ರಿಸುತ್ತದೆ. ಮೂಲಬಿಂದುವನ್ನೂ ಅಕ್ಷಗಳನ್ನೂ ಬದಲಾಯಿಸುವುದರಿಂದ, ರೇಖೆಯ ಸ್ವರೂಪವಾಗಲಿ ಸ್ಥಾನವಾಗಲಿ ಬದಲಾಯಿಸುವುದಿಲ್ಲ. ಆದರೆ ಅದರ ಸಮೀಕರಣ ಬದಲಾವಣೆ ಹೊಂದುತ್ತದೆ.

ಎರಡು ಸಮೀಕರಣಗಳಲ್ಲೂ ವ್ಯತ್ಯಸ್ತ ಹೊಂದದೆ ಇರುವ ಕೆಲವು ಸಂಖ್ಯೆಗಳನ್ನು ನಿರೀಕ್ಷಿಸಬಹುದು. ವಕ್ರರೇಖೆಯ ಗುಣಗಳಿಗೆ ಇವು ಅನ್ವಯಿಸುತ್ತವೆ. ಈ ಸಂಖ್ಯೆಗಳೇ ಅಚರಗಳು (ಇನ್‌ವೇರಿಯಂಟ್ಸ್).

Ox, Oy ಅಕ್ಷರೇಖೆಗಳ ನಡುವಣ ಕೋನ $\omega$ ಆಗಿದ್ದು ಇವುಗಳನ್ನು ಕುರಿತು ಯಾವುದೇ ಬಿಂದುವಿನ ನಿರ್ದೇಶಕಗಳು (x, y ) ಆಗಿರಲಿ, ಮೂಲಬಿಂದುವನ್ನು ಬದಲಾಯಿಸದೆ, ಬೇರೊಂದು ಜೊತೆ ಅಕ್ಷಗಳಾದ ನಡುವೆ ಕೋನ $\omega'$ ಇದ್ದು, ಬಿಂದುವಿನ ನಿರ್ದೇಶಕಗಳು (x',y') ಆಗಿರಲಿ. ಎಂಬ ಉತ್ಪನ್ನ $a'x'^2 + 2h'x'y' + b'y'^2$ ಆಗಿ ಮಾರ್ಪಾಟಾದರೆ,

$$= \frac{a+b-2h\cos\omega}{\sin^2\omega}$$

ಮತ್ತು $$\frac{a'b'-h'^2}{\sin^2\omega'} = \frac{ab-h^2}{\sin^2\omega}$$

ಎಂಬ ಗುಣಗಳಿರುತ್ತವೆ. $\frac{a+b-2h\cos\omega}{\sin^2\omega}$ ಮತ್ತು

ಎಂಬವುಗಳನ್ನು $ax^2+2hxy+by^2$ ಎಂಬ ಉತ್ಪನ್ನಕ್ಕೆ ಅನ್ವಯಿಸುವ ಅಚರಗಳು ಎನ್ನುತ್ತೇವೆ. $ax^2+2hxy+by^2 = 0$ ಎಂಬ ಸರಳ ರೇಖಾಯುಗ್ಮದ ನಡುವೆ ಇರುವ ಕೋನ

$$\tan^{-1}\left[\frac{\sqrt{ab-h^2}.\sin\omega}{a+b-2h\cos\omega}\right]$$

ಸಹಜವಾಗಿಯೇ ಇದು ಅಕ್ಷಗಳನ್ನು ಬದಲಾಯಿಸುವುದರಿಂದ ಮಾರ್ಪಾಡನ್ನು ಹೊಂದುವುದಿಲ್ಲ. $ax^2+2hxy+by^2+2gx+2fy+c = 0$ ಎಂಬ ಶಂಕುಜದ ಅನಂತ ಸ್ಪರ್ಶರೇಖೆಗಳ ನಡುವೆ ಇರುವ ಕೋನ ಇದುವೇ ಆದ್ದರಿಂದ ಮೇಲಿನ ಸಂಖ್ಯೆಯನ್ನು ಈ ಶಂಕುಜದ ಅಚರ ಎನ್ನಬಹುದು.

ಮೇಲಿನ ಶಂಕುಜಕ್ಕೆ $$\begin{vmatrix} a & h & g \\ h & b & f \\ g & f & c \end{vmatrix} \div \sin^2\omega$$

ಎಂಬುದು ಮತ್ತೊಂದು ಅಚರ, ಅಕ್ಷ ಪರಿವರ್ತನೆ ಮಾಡಿದ ಮೇಲೆ, ಶಂಕುಜದ ಸಮೀಕರಣ $a'x'^2 + 2h'x'y' + b'y'^2 + 2g'x' + 2f'y' + c' = 0$ ಆದರೆ, ಮೇಲಿನ ಅಚರ

$$\begin{vmatrix} a' & h' & g' \\ h' & b' & f' \\ g' & f' & c' \end{vmatrix} \div \sin^2\omega$$

ಎಂಬುದಕ್ಕೆ ಸಮನಾಗಿರುತ್ತದೆ.

ಮತ್ತು

$$s' \equiv a'x^2 + b'y^2 + c'z^2 + 2f'yz + 2g'zx + 2h'xy = 0$$

ಯಾವುದೇ ಸಮಘಾತದ (ಹೋಮೋಜಿನಿಯಸ್) ನಿರ್ದೇಶಕಗಳಲ್ಲಿ ಎರಡು ಶಂಕುಜಗಳಾಗಿರಲಿ. $s + ks' = 0$ ಎಂಬುದು (ಇಲ್ಲಿ $k$ ಯಾವುದಾದರೊಂದು ಸ್ಥಿರ ಸಂಖ್ಯೆ) ಈ ಶಂಕುಜಗಳ ಸಾಮಾನ್ಯ ಬಿಂದುಗಳ ಮೂಲಕ ಹೋಗುವ ಮತ್ತೊಂದು ಶಂಕುಜ. $s + ks' = 0$ ಸರಳರೇಖಾಯುಗ್ಮವಾಗುವಂತೆ $k$ ಯನ್ನು ಆರಿಸಿದರೆ,

$$\Delta'k^3 + \theta k^2 + \theta k + \Delta = 0$$

ಆಗುತ್ತದೆ. ಇಲ್ಲಿ

$$\Delta = abc + 2fgh - af^2 - bg^2 - ch^2$$

$$\Delta' = a'b'c' + 2f'g'h - a'f'^2 - b'g'^2 - c'h'^2$$

$$\theta = Aa' + Bb' + Cc' + 2Ff' + 2Gg' + 2Hh'$$

[ A, B, C,......ಗಳು ನಿರ್ಧಾರಕದ ಸಹ ಅಪವರ್ತನಗಳು. ಹೀಗೆಯೇ A', B', C',.....]

ಆದ್ದರಿಂದ ಗೆ ಮೂರು ಬೆಲೆಗಳಿರುತ್ತವೆ. ಈಗ ನಿರ್ದೇಶಕಗಳನ್ನು ಮಾರ್ಪಡಿಸಿದರೆ $s, s'$ ಎಂಬವು $\bar{s}, \bar{s}'$ ಆಗಲು $k$ ಯು ಅದೇ ಮೂರು ಬೆಲೆಗಳಿಗೆ $\bar{s} + k\bar{s}' = 0$ ಎಂಬುದು ಸರಳರೇಖಾಯುಗ್ಮವನ್ನು ಕೊಡಬೇಕು. ಆದ್ದರಿಂದ

$$\frac{\theta}{\Delta'} = \frac{\bar{\theta}'}{\bar{\Delta}'}; \frac{\theta}{\Delta} = \frac{\bar{\theta}}{\bar{\Delta}}; \frac{\Delta}{\Delta'} = \frac{\bar{\Delta}}{\bar{\Delta}'}$$

ಎಂದರೆ $\Delta : \Delta' : \theta : \theta'$ ಇವು ಅಚರಗಳು.

ಬೇರೊಂದು ರೀತಿಯಲ್ಲೂ ಇದರ ಅರ್ಥವನ್ನು ಗ್ರಹಿಸಬಹುದು. $s = 0$, $\bar{s}' = 0$ ಆದರೆ ಎಂಬುವನ್ನು ಒಂದು ತಳದಲ್ಲಿರುವ ಶಂಕುಜಗಳೆನ್ನೋಣ. ಬೇರೊಂದು ತಳಕ್ಕೆ ಇವುಗಳನ್ನು ಪ್ರಕ್ಷೇಪಿಸಿದರೆ (ಪ್ರೊಜೆಕ್ಟ್) ಆ ತಳದಲ್ಲಿ ಬರುವ ಶಂಕುಜಗಳ ಸಮೀಕರಣಗಳು, ಯಾವುದೇ ನಿರ್ದೇಶಕಗಳನ್ನು ಕುರಿತು $\bar{s} = 0, \bar{s}' = 0$ ಆದರೆ

$$\Delta : \Delta' : \theta : \theta' = \bar{\Delta} : \bar{\Delta}' : \bar{\theta} : \bar{\theta}' \quad .$$

ಆದ್ದರಿಂದ ಈ ನಿಷ್ಪತ್ತಿಗಳು ಎರಡೂ ಶಂಕುಜಗಳ ಸ್ಥಿರಾಂಕಗಳಾಗುತ್ತವೆ. $s, s'$ಗಳನ್ನು ಅತ್ಯಂತ ಸುಲಭರೂಪದಲ್ಲಿ ತೆಗೆದುಕೊಂಡು ಅವುಗಳ $\theta, \theta', \Delta, \Delta'$ ಗಳ ನಡುವೆ ಸಮಪ್ರಮಾಣದ ಒಂದು ಸಂಬಂಧ ದೊರಕಿದರೆ, ಗಳ ಸಾರ್ವತ್ರಿಕ ರೂಪದಲ್ಲಿಯೂ ಅದೇ ಸಂಬಂಧ ಇರಲೇಬೇಕು.

ಎರಡು ಶಂಕುಜಗಳ ನಡುವೆ ಇರಬಹುದಾದ ಯಾವುದೇ ಸಂಬಂಧವಿರಲು ಆವಶ್ಯಕವಾದ ನಿರ್ಬಂಧವನ್ನು ಈ ಅಚರಗಳ ಮೂಲಕ ಪಡೆಯಬಹುದು. ಉದಾಹರಣೆಗಾಗಿ $s \equiv ax^2 + .... + 2hxy = 0$ ಮತ್ತು $s' \equiv a'x^2 + ... + 2h'xy = 0$. ಇವುಗಳಲ್ಲಿ $s'$ ನಲ್ಲಿ ಅಂತಸ್ಥವಾಗಿರುವ ತ್ರಿಭುಜವೊಂದರ ಬಾಹುಗಳು $s$ ನ್ನೇ ಸ್ಪರ್ಶಿಸಬೇಕಾದರೆ ಯಾವ ನಿರ್ಬಂಧವಿರಬೇಕು ಎಂಬುದನ್ನು ಪರಿಶೀಲಿಸೋಣ. ತ್ರಿಭುಜವನ್ನು *ABC* ಎಂದು ಕರೆದು ಇದನ್ನು ಆಧಾರ ತ್ರಿಭುಜವಾಗಿ ತೆಗೆದುಕೊಂಡರೆ,

$$s' \equiv 2fyz + 2gzx + 2hxy$$

ಎಂಬ ಸುಲಭ ರೂಪಕ್ಕೆ ತರಬಹುದು. ಇವುಗಳಿಗೆ [illegible] ಆದ್ದರಿಂದ , $\theta^2 = 4\Delta\theta''$ ಇದು ಸಮಪ್ರಮಾಣದ ಸಂಬಂಧವಾದ್ದರಿಂದ ಈ ಸಂಬಂಧ $s, s'$ಗಳ ಪೂರ್ವರೂಪಕ್ಕೂ ಅನ್ವಯಿಸುತ್ತದೆ. ಎಂದರೆ ಬೇಕಾಗಿರುವ ನಿರ್ಬಂಧ ಇದೇ.

$s, s'$ ಪರಸ್ಪರ ಸ್ಪರ್ಶಿಸಿದರೆ, ಅವುಗಳ ಸಾಮಾನ್ಯ ಬಿಂದುಗಳಲ್ಲಿ ಎರಡು ಒಂದಾಗಬೇಕು. $\Delta k^3 + \theta k^2 + \theta'' k + \Delta' = 0$ ಸಮೀಕರಣದಲ್ಲಿ, $k$ ಯು ಎರಡು ಮೂಲಗಳು ಒಂದಾಗಬೇಕು. ಆದ್ದರಿಂದ $(\theta\theta'' - 9\Delta\Delta')^2 = 4 .(\theta^2 - 3\Delta\theta'')(\theta''^2 - 3\Delta'\theta)$ ಇದು ಶಂಕುಜಗಳು ಸ್ಪರ್ಶಿಸಲು ಬೇಕಾದ ನಿರ್ಬಂಧ. ಸಾಮಾನ್ಯ ಬಿಂದುಗಳಲ್ಲಿ ಮೂರು ಒಂದಾದರೆ, $k$ ಯು ಮೂರು ಮೂಲಗಳು ಒಂದಾಗಬೇಕು. ಆದ್ದರಿಂದ ಶಂಕುಜಗಳ ಸ್ನಿಗ್ಧ ಸ್ಪರ್ಶಕ್ಕೆ (ಆಸ್ಕ್ಯುಲೇಷನ್) ಆವಶ್ಯಕವಾದ ನಿರ್ಬಂಧಗಳು $\frac{3\Delta}{\theta} = \frac{\theta}{\theta''} = \frac{\theta''}{3\Delta'}$

$$x = l_1X + m_1Y + n_1Z$$

$$z = l_3X + m_3Y + n_3Z$$

ಎಂಬ ಸಮೀಕರಣಗಳಿಂದ ಗಳನ್ನು ಪರಿವರ್ತಿಸಿದರೆ $\Delta, \theta, \theta'', \Delta$ ಗಳ ಹೊಸ ಬೆಲೆಗಳು ಹಿಂದಿನ ಬೆಲೆಗಳನ್ನು

ಎಂಬುದರಿಂದ ಗುಣಿಸಿದಷ್ಟಾಗುತ್ತದೆ.

ಎರಡೂ ಶಂಕುಜಗಳ ಗುಣಕಗಳನ್ನೂ ಚರಾಂಕಗಳನ್ನೂ ಒಳಗೊಂಡಿರುವ ಯಾವುದೇ ಉತ್ಪನ್ನ ಮೇಲಿನ ಪರಿವರ್ತನೆಯಿಂದ $l, m, n$ ಗಳ ಉತ್ಪನ್ನವೊಂದರಿಂದ ಗುಣಿಸಲ್ಪಟ್ಟ ಹೊರತು, ಮಾರ್ಪಾಟಾಗದೆ ನಿಂತರೆ ಇಂಥ ಉತ್ಪನ್ನಗಳನ್ನು ಸಹಚರಗಳು (ಕೋವೇರಿಯಂಟ್ಸ್) ಎನ್ನುತ್ತೇವೆ. ಉದಾಹರಣೆಗಾಗಿ

$$s \equiv ax^2 + by^2 + cz^2 + 2fyz + 2gzx + 2hxy = 0$$

$$s' \equiv a'x^2 + b'y^2 + c'z^2 + 2f'yz + 2g'zx + 2h'xy = 0$$

ಎರಡು ಶಂಕುಜಗಳಾದರೆ, $F^2 - 4\Delta\Delta' ss' = 0$ ಎಂಬುದು ಅವುಗಳ ಸಾಮಾನ್ಯ ಸ್ಪರ್ಶರೇಖೆಗಳ ಸಮೀಕರಣ. ಇಲ್ಲಿ

$$F = (BC' + B'C - 2FF')x^2 + (CA' + C'A - 2GG')y^2$$
$$+ (AB' + A'B - 2HH')z^2 + 2(GH' + G'H - AF' - A'F)y^2$$
$$+ 2(HF' + H'F - BG' - B'G)zx$$
$$+ 2(FG' + F'G - CH' - C'H)xy$$

ನಿರ್ದೇಶಕಗಳನ್ನು ಸರಳ ಪರಿವರ್ತನೆಯಿಂದ ಪರಿವರ್ತಿಸುವುದರಿಂದ, $s, s'$ ಎಂಬವು $\bar{s}, \bar{s}'$ಆದರೆ , ಸಾಮಾನ್ಯ ಸ್ಪರ್ಶರೇಖೆಗಳ ಸಮೀಕರಣ $\bar{F}^2 - 4\overline{\Delta\Delta}'\bar{s}\bar{s}' = 0$ ಆಗುತ್ತದೆ

$$\frac{\bar{F}^2 - 4\overline{\Delta\Delta}'\bar{s}\bar{s}'}{F^2 - 4\Delta\Delta' ss'} = \begin{vmatrix} l_1 & m_1 & n_1 \\ l_2 & m_2 & n_2 \\ l_3 & m_3 & n_3 \end{vmatrix}^2$$

ಎಂದು ನೋಡಬಹುದು.

$F$ ಮತ್ತು $F^2 - 4\Delta\Delta' ss'$ ಇವೆರಡೂ ಸಹಚರಗಳು.

ಅಚರಗಳ ಹಾಗೂ ಸಹಚರಗಳ ಸ್ವರೂಪ ಒಂದೇ. ಅಕ್ಷರೇಖೆಗಳನ್ನು ಅಥವಾ ನಿರ್ಧಾರಕಗಳನ್ನು ಬದಲಾಯಿಸುವುದರಿಂದ, ಇವುಗಳ ರೂಪ ವ್ಯತ್ಯಸ್ತವಾಗುವುದಿಲ್ಲ. ಅಚರಗಳಲ್ಲಿ ಗುಣಕಗಳು ಮಾತ್ರ ಸೇರಿರುತ್ತವೆ. ಸಹಚರಗಳಲ್ಲಿ ಚರಸಂಖ್ಯೆಗಳೂ ಸೇರಿರುತ್ತವೆ. ಕೊಟ್ಟಿರುವ ರೇಖೆಗಳಿಗೆ ಸಂಬಂಧಿಸುವ ಯಾವುದೇ ಪಥದ ಸಮೀಕರಣ $U=0$ ಆಗಿದ್ದರೆ, ನಿರ್ದೇಶಕಗಳನ್ನು ಬದಲಾಯಿಸುವುದರಿಂದ ಈ ಪಥ ಬದಲಾಯಿಸುವುದಿಲ್ಲವಾಗಿ, ಅದರ ಸಮೀಕರಣ ಮೊದಲ ರೂಪವನ್ನೇ ತಾಳಿರುತ್ತದೆ. ಆದ್ದರಿಂದ ಕೊಟ್ಟ ರೇಖೆಗಳು ಒಂದು ಸಹಚರ. (ಡಿ.ಎಂ)

**ಅಚಲಗಢ :** ರಾಜಸ್ತಾನದಲ್ಲಿ ಅಬೂಪರ್ವತದಿಂದ ಸು.6 ಕಿಮೀ ದೂರದಲ್ಲಿರುವ ಒಂದು ಜೈನಕ್ಷೇತ್ರ. ಇಲ್ಲಿ ಬಂಗಾರದ ಹಲವು ಜಿನಮೂರ್ತಿಗಳಿವೆ. (ಜ.ಬಿ.)

**ಅಚಲಪುರ :** ಮಹಾರಾಷ್ಟ್ರ ರಾಜ್ಯದ ಅಮರಾವತಿ ಜಿಲ್ಲೆಯಲ್ಲಿನ ತಾಲ್ಲೂಕು ಕೇಂದ್ರ ಮತ್ತು ಮುಖ್ಯ ಪಟ್ಟಣವಾಗಿದ್ದು ಅಮರಾವತಿಯಿಂದ 48ಕಿಮೀ ದೂರದಲ್ಲಿದೆ. ಜನಸಂಖ್ಯೆ 107,304 (2001); ವಿಸ್ತೀರ್ಣ 7 ಚ.ಕಿಮೀ ಸಮುದ್ರ ಮಟ್ಟಕ್ಕಿಂತ 366 ಮೀ ಎತ್ತರದಲ್ಲಿರುವ ಇದರ ಸುತ್ತಮುತ್ತಲ ಪ್ರದೇಶ ಹತ್ತಿ ಬೆಳೆಗೆ ಪ್ರಾಮುಖ್ಯ ಪಡೆದಿದೆ. ಹತ್ತಿ, ರೇಷ್ಮೆ ಮತ್ತು ಅರಣ್ಯ ಸಂಪತ್ತಿನ ಪ್ರಮುಖ ವ್ಯಾಪಾರಕೇಂದ್ರ, ಐತಿಹಾಸಿಕ ಮಹತ್ವ ಪಡೆದಿದ್ದು, 1318ರಲ್ಲಿ ಹಿಂದೂಗಳಿಂದ ಮುಸಲ್ಮಾನರ ಅಧೀನಕ್ಕೆ ಹೋಯಿತು. 1869ರಲ್ಲಿ ಪೌರಸಭೆ ಸ್ಥಾಪಿಸಲ್ಪಟ್ಟಿತು. ಸಾರಿಗೆ ಹೆದ್ದಾರಿಯ ಮೂಲಕ ಅಮರಾವತಿ ಮತ್ತು ಚಿಕಲಡಗಳಿಗೆ ಸಂಬಂಧ ಹೊಂದಿದೆ. (ಪಿ.ಡಿ.ಎಂ.)

**ಅಚಲಾನಂದದಾಸ :** ಸು.15ನೆಯ ಶತಮಾನದಲ್ಲಿದ್ದ ಹರಿದಾಸರು. ದಾಸಸಾಹಿತ್ಯದ ಮೊದಲಿಗರೆಂದೂ ಕಾಲ 9ನೆಯ ಶತಮಾನವೆಂದೂ ಪ್ರತೀತಿ ಇತ್ತು. ಇವರ ಒಂದು ಉಗಾಭೋಗದ 'ಕೇಳೂ ಜೀವವೆ ನೀ ಮಧ್ವಮತವನನುಸರಿಸಿ, ಶ್ರೀಲೋಲನಂಘ್ರಿಗಳ ನೆನೆದು ಸುಖಿಸೋ' ಎಂಬ ಒಂದು ಪಾದದಲ್ಲಿ ಮಧ್ವಮತದ ಉಲ್ಲೇಖವಿದೆ. 13ನೆಯ ಶತಮಾನದಲ್ಲಿ ಪ್ರಚಾರಕ್ಕೆ ಬಂದ ಮಧ್ವಮತವನ್ನು 9ನೆಯ ಶತಮಾನದಲ್ಲಿ ಉಗಾಭೋಗಗಳಿದ್ದ ಕುರುಹುಗಳಿಲ್ಲವಾದ್ದರಿಂದಲೂ ಇವರ ಕಾಲ 15ನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವರು ಅಚಲಾನಂದವಿಠಲ ಎಂಬ ಅಂಕಿತವನ್ನಿಟ್ಟುಕೊಂಡು ಪದಗಳನ್ನು ರಚಿಸಿದ್ದಾರೆ. ಪಾತಕರೊಳಗೆಲ್ಲ ನಾನೆ ಮೆಗ್ಗಳನಯ್ಯ, ಪ್ರಾಯಶ್ಚಿತ್ತಕ್ಕೆ ನಿನ್ನ ನಾಮವೇ ಘನವಯ್ಯ, ಪಾತಕವನು ಮಾಡಿದ್ದು ನಾನು, ಪಾತಕ ಪಾವನ ಎರಡೂ ನಿನ್ನಾಧೀನ, ಪಾತಕವೆನಗಿಲ್ಲ ಪ್ರಾಯಶ್ಚಿತ್ತವೆನಗಿಲ್ಲ, ಕೇಳಯ್ಯ ದೇವ ಅಚಲಾನಂದವಿಠಲ ಎಂಬ ಒಂದು ಉಗಾಭೋಗ, ವಚನಗಳ ಶೈಲಿಯನ್ನು ನೆನಪಿಗೆ ತರುತ್ತದೆ. (ಎಚ್.ಆರ್.ಡಿ.)

**ಅಚ್ಚಿನ ಧಾರಕ :** ಚಲಿಸುತ್ತಿರುವ ಯಂತ್ರದ ಒಂದು ಭಾಗಕ್ಕೆ ಆಧಾರವಾಗಿರುವ ಮತ್ತೊಂದು ಯಂತ್ರಭಾಗಕ್ಕೆ ಧಾರಕವೆಂದು (ಬೇರಿಂಗ್) ಹೆಸರು. ಮಟ್ಟ ದಂಡಗಳಿಗೆ (ಹಾರಿಸಾಂಟಲ್ ಷಾಫ್ಟ್) ಆಧಾರವಾಗಿರಲು ಉಪಯೋಗಿಸುವ ಅಚ್ಚಿನ ಧಾರಕದಲ್ಲಿ (ಜರ್ನಲ್ ಬೇರಿಂಗ್) ಆಧಾರ ಒತ್ತಡ ದಂಡದ ಅಕ್ಷಕ್ಕೆ ಲಂಬವಾಗಿದ್ದು, ದಂಡ ಧಾರಕದ ಮೂಲಕ ಹಾದುಹೋಗುತ್ತದೆ. ಈ ಧಾರಕಗಳಲ್ಲಿ ಸರಳ ಅಚ್ಚಿನಧಾರಕ (ಸಿಂಪಲ್ ಜರ್ನಲ್ ಬೇರಿಂಗ್) ಮತ್ತು ಕವಚದ ಅಚ್ಚಿನಧಾರಕ (ಬುಷ್ ಜರ್ನಲ್ ಬೇರಿಂಗ್) ಎಂಬ ಎರಡು ಬಗೆಗಳುಂಟು.

ಸರಳ ಅಚ್ಚಿನ ಧಾರಕ: ಇದು ಎರಕಹೊಯ್ದ ಒಂದು ಘಟಕವಾಗಿದ್ದು ಅದರಲ್ಲಿ ಮಟ್ಟ ರಂಧ್ರವಿರುತ್ತದೆ. ಈ ಘಟಕಯಂತ್ರದ ಒಂದು ಸಮಗ್ರ ಭಾಗವಾಗಿರಬಹುದು ಅಥವಾ ಬೇರೆಯಾಗಿರಬಹುದು. ತಿರುಪುಗ ಳಿಂದ (ಬೋಲ್ಟ್) ಬಂಧಿಸಲು ಅನುಕೂಲವಾಗುವಂತೆ ಕೆಳಭಾಗ ವಿಸ್ತರಿಸಲ್ಪಟ್ಟಿರುತ್ತದೆ. ಇದನ್ನು ಚಿತ್ರ 1 ರಲ್ಲಿ ತೋರಿಸಿದೆ. ಈ ಬಗೆಯ ಧಾರಕ ದಲ್ಲಿ ದಂಡವನ್ನು ಒಂದು ತುದಿಯಿಂದ ಮಾತ್ರ ಜೋಡಿಸಲು ಸಾಧ್ಯ. ಕೆಲವು ಕಾಲದ ಅನಂತರ ಅಚ್ಚು ಮತ್ತು ಧಾರಕಗಳ ನಡುವಣ ಘರ್ಷಣೆಯ ಪರಿಣಾಮವಾಗಿ ಸಂಪರ್ಕ ಪ್ರದೇಶ ಸವೆಯುವುದುಂಟು. ಇದನ್ನು ಸರಿಪಡಿಸಲು ಈ ಧಾರಕದಲ್ಲಿ ಯಾವ ಸೌಲಭ್ಯವೂ ಇಲ್ಲ. ಆದುದರಿಂದ ಧಾರಕವನ್ನೇ ಬದಲಿಸಬೇಕಾಗುತ್ತದೆ. ಆದ್ದರಿಂದ ಈ ಧಾರಕ ನಿಧಾನಗತಿಯಲ್ಲಿ ಅಥವಾ ಕೆಲವೊಮ್ಮೆ ಮಾತ್ರ ಸುತ್ತುವ ದಂಡಗಳಿಗೆ ಉಪಯೋಗಿಸಲ್ಪಡುತ್ತದೆ.



ಸರಳ ಅಚ್ಚಿನ ಧಾರಕ



ಕವಚದ ಅಚ್ಚಿನ ಧಾರಕ

ಕವಚದ ಅಚ್ಚಿನ ಧಾರಕ: ಇದು ಸರಳ ರೀತಿಯ ಧಾರಕದ ಒಂದು ಸುಧಾರಣೆ. ಇದರಲ್ಲಿ ಬ್ಯಾಬಿಟ್ ಲೋಹ ಅಥವಾ ಗನ್ ಲೋಹದ ಒಂದು ಕವಚವನ್ನು ರಂಧ್ರದ ಒಳಭಾಗಕ್ಕೆ ತೊಡಿಸಲಾಗಿರುತ್ತದೆ. ಈ ಕವಚದ ಒಳಭಾಗದಲ್ಲಿ ದಂಡ ಸುತ್ತುತ್ತದೆ. ಕವಚ ಸವೆದಾಗ ಬದಲಿಸಬಹುದು. ಜೋಡಣೆ ಕಷ್ಟವಲ್ಲ. ವೆಚ್ಚವೂ ಹೆಚ್ಚಲ್ಲ.




ಅಚ್ಚಿನ ಸುತ್ತುವಿಕೆಯ ವಿವಿಧ ಘಟ್ಟಗಳಲ್ಲಿ ತೈಲದ ಹಾಳೆ

ಜೋಡಣೆಗೆ ಅನುಕೂಲವಾಗುವಂತೆ ಧಾರಕವನ್ನು ಎರಡು ಭಾಗಗಳಲ್ಲಿ ತಯಾರಿಸುವುದುಂಟು, ಇದನ್ನು ಲೋಹಕೋಶಧಾರಕದಲ್ಲಿ ನೋಡಬಹುದು.

ಧಾರಕ ಮತ್ತು ಅಚ್ಚಿನ ಸಂಪರ್ಕ ಭಾಗಗಳ ನಡುವಣ ಘರ್ಷಣೆಯನ್ನು ಕಡಿಮೆ ಮಾಡಲು ಮೃದುಚಾಲಕವನ್ನು (ಹೆರೆ, ಲೂಬ್ರಿಕೆಂಟ್) ಉಪಯೋಗಿಸಬೇಕು. ಅದಕ್ಕಾಗಿ ಇರುವ ರಂಧ್ರವನ್ನು ಚಿತ್ರ 2 ರಲ್ಲಿ ಕಾಣಬಹುದಾಗಿದೆ.

ಸುತ್ತುತ್ತಿರುವ ದಂಡದ ಆಧಾರವಾಗಿರುವ ಧಾರಕಗಳಲ್ಲಿ ಸಾಮಾನ್ಯವಾಗಿ ತೈಲವೇ ಮೃದುಚಾಲಕವಾಗಿರುತ್ತದೆ. ಕೆಲವೊಮ್ಮೆ ಗ್ರೀಸ್, ನೀರು ಮುಂತಾದುವುಗಳನ್ನು ಉಪಯೋಗಿಸಲಾಗುತ್ತದೆ. ಅಚ್ಚಿನ ಸುತ್ತುವಿಕೆಯ ವಿವಿಧ ಘಟ್ಟಗಳಲ್ಲಿ ತೈಲದ ಹಾಳೆ ಹಾಗೂ ದಂಡ ಮತ್ತು ಅಚ್ಚುಗಳ ನಡುವಣ ಸಂದುಗಳು ಹೇಗಿರುತ್ತವೆನ್ನುವುದನ್ನು ಚಿತ್ರ 3 ರಲ್ಲಿ ತೋರಿಸಿದೆ. ಅಚ್ಚು ಕೆಲಸ ಮಾಡದಿರುವಾಗ ಅದರ ಭಾರದಿಂದ ತೈಲ ಪಕ್ಕಕ್ಕೆ ಸರಿದು ಅಚ್ಚು ಮತ್ತು ಧಾರಕಗಳ ನಡುವೆ ಒಂದು ಬಿಂದುವಿನಲ್ಲಿ (ಚಿತ್ರ (ಅ), ಕ್ಷ–ಬಿಂದು) ಸಂಪರ್ಕ ವೇರ್ಪಡುತ್ತದೆ. ಅಚ್ಚು ತನ್ನ ಚಲನೆಯನ್ನು ಪ್ರಾರಂಭಿಸಿದಾಗ ಬಲಕ್ಕೆ ಉರುಳಿ ಒಂದು ಬಿಂದುವಿನಲ್ಲಿ (ಚಿತ್ರ (ಆ), ಕ್ಷ–ಬಿಂದು) ಸಂಪರ್ಕವೇರ್ಪಡುತ್ತದೆ. ತೈಲ ಒಂದು ಬೆಣೆಯ ರೂಪದಲ್ಲಿರುತ್ತದೆ. ವೇಗ ಹೆಚ್ಚಾದಂತೆ ಅಚ್ಚು ಒಂದು ಪಂಪಿನಂತೆ ಕೆಲಸ ಮಾಡಿ ತೈಲದ ಒತ್ತಡವನ್ನು ಹೆಚ್ಚಿಸುತ್ತದೆ. ಈ ಒತ್ತಡದಿಂದ ಅಚ್ಚು ಮೇಲಕ್ಕೆತ್ತಲ್ಪಟ್ಟು ತೈಲದಲ್ಲಿ ತೇಲುತ್ತದೆ. ಕನಿಷ್ಠ ಸಂದನ್ನು ಚಿತ್ರ (ಇ) ಶ–ಬಿಂದುವಿನಲ್ಲಿ ಕಾಣಬಹುದು. ಇಲ್ಲಿ ತೈಲ ಒಂದು ತೆಳು ಹಾಳೆಯ ರೂಪದಲ್ಲಿದ್ದು ಅಚ್ಚು ಮತ್ತು ಧಾರಕಗಳನ್ನು ಬೇರ್ಪಡಿಸುತ್ತದೆ. ಅಚ್ಚಿನ ಧಾರಕದ ದಕ್ಷತೆ ಅಚ್ಚು ಮತ್ತು ಧಾರಕಗಳನ್ನು ಪ್ರತ್ಯೇಕಿಸಿಡುವ ತೈಲದ ಶಕ್ತಿಯನ್ನು ಅವಲಂಬಿಸಿದೆ. ತೈಲದ ಅಧಿಕ ಬಳಕೆ ಅಪಾಯಕಾರಿ. ಹೆಚ್ಚು ವೇಗದಲ್ಲಿ ಸುತ್ತುವಾಗ ತೈಲ ಅಧಿಕವಾದರೆ ಅದು ತಡೆಯಲ್ಪಟ್ಟು, ಘರ್ಷಣೆಯುಂಟಾಗಿ ಶಾಖ ಉತ್ಪತ್ತಿಯಾಗುತ್ತದೆ. ಕಡಿಮೆ ಪ್ರಮಾಣದ ತೈಲದ ಬಳಕೆ ಸಹ ಅಪಾಯಕಾರಿ. ಹೆಚ್ಚು ವೇಗದಲ್ಲಿ ಸುತ್ತುವಾಗ ತೈಲ ಕಡಿಮೆಯಾದರೆ ಅಚ್ಚು ಮತ್ತು ಧಾರಕಗಳ ನಡುವೆ ಸಂಪರ್ಕವೇರ್ಪಟ್ಟು, ಘರ್ಷಣೆಯಿಂದ ಶಾಖೋತ್ಪತ್ತಿಯಾಗುತ್ತದೆ. ಆದ್ದರಿಂದ ಕ್ಲುಪ್ತ ಪ್ರಮಾಣದಲ್ಲಿ ತೈಲವನ್ನು ಬಳಸುವುದು ಆವಶ್ಯಕ.



ಪಾದಪೀಠಧಾರಕ

ಪ್ರಾರಂಭದಲ್ಲಿ ಘರ್ಷಣೆ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಅದನ್ನು ಎದುರಿಸಲು ಶಕ್ತಿ ವ್ಯಯವಾಗುತ್ತದೆ. ಆದ್ದರಿಂದ ಆಗಾಗ್ಗೆ ನಿಲ್ಲಿಸಿ ಚಲಿಸಬೇಕಾದ ಯಂತ್ರಗಳಿಗೆ ಅಚ್ಚಿನ ಧಾರಕವನ್ನು ಉಪಯೋಗಿಸಲಾಗುವುದಿಲ್ಲ.

ಪಾದಪೀಠಧಾರಕ (ಫುಟ್‌ಸ್ಟೆಪ್ ಬೇರಿಂಗ್): ಪಾದಪೀಠ ಎರಕಹೊಯ್ದ ಒಂದು ಘಟಕವಾಗಿದ್ದು ಅದರಲ್ಲಿ ಮೇಲಿಂದ ಕೆಳಕ್ಕೆ ಒಂದು ಕುರುಡು ರಂಧ್ರವನ್ನು ಕೊರೆದಿರಲಾಗುತ್ತದೆ. ಈ ರಂಧ್ರಕ್ಕೆ ತೊಡಿಸಿರುವ ಒಂದು ಬ್ಯಾಬಿಟ್ ಲೋಹ ಕವಚದ ಒಳಭಾಗದಲ್ಲಿ ಸುತ್ತುವ ದಂಡ ಧಾರಕದ ಒಳಗಡೆಯೇ ಕೊನೆಗೊಳ್ಳುತ್ತದೆ. ಪಾದಪೀಠದ ಸಂಪರ್ಕಭಾಗ ಸವೆದುಹೋಗದಂತೆ ದಂಡದ ತುದಿಯ ಕೆಳಗೆ ಗನ್ ಲೋಹದ ಒಂದು ಬಿಲ್ಲೆಯನ್ನು ಜೋಡಿಸಿರುತ್ತಾರೆ. ತಿರುಪುಗಳಿಂದ ಬಂಧಿಸಲು ಅನುಕೂಲವಾಗುವಂತೆ ಕೆಳಭಾಗವನ್ನು ವಿಸ್ತರಿಸಲಾಗಿರುತ್ತದೆ.

ಈ ಧಾರಕವನ್ನು ಲಂಬದಂಡಗಳಿಗೆ (ವರ್ಟಿಕಲ್ ಷಾಫ್ಟ್) ಮಾತ್ರ ಉಪಯೋಗಿಸಲಾಗುತ್ತದೆ. **(ನೋಡಿ– ಧಾರಕ)** (ಎಚ್.ವಿ.ಸಿ.)

**ಅಚ್ಚಿನ ಹಲಗೆ :** ಅಚ್ಚು ಮೊಳೆ ಜೋಡಣೆಯಿಂದ ಮುದ್ರಣ (ಲೆಟರ್ ಪ್ರೆಸ್ ಪ್ರಿಂಟಿಂಗ್) ಮಾಡುವಾಗ ಅನೇಕ ವೇಳೆ, ಅದರಲ್ಲೂ ವರ್ತಮಾನ ಪತ್ರಿಕೆ ಮುದ್ರಣ ಮಾಡುವಾಗ ಅಚ್ಚು ಮೊಳೆಗಳ ಫಲಕದಿಂದ (ಟೈಪ್ ಫಾರಂ) ಸ್ಟೀರಿಯೋ ಟೈಪ್ ಎಂಬ ಸೀಸದ ಪ್ರತಿಫಲಕವನ್ನು ತಯಾರುಮಾಡಬೇಕಾಗುತ್ತದೆ. ಇದೇ ಅಚ್ಚಿನ ಹಲಗೆ ಅಥವಾ ಮುದ್ರಣದ ತಗಡು. ಆಗ ಪೇಪಿಯರ್ ಮ್ಯಾಷೆ ಎಂಬ ದಪ್ಪ ಮತ್ತು ಮೃದುವಾಗಿರುವ ರುಬ್ಬಿದ ಕಾಗದವನ್ನು ಅಚ್ಚುಮೊಳೆಗಳ ಫಲಕದ ಮೇಲಿಟ್ಟು ಜೋರಾಗಿ ಒತ್ತಿದರೆ ಮುದ್ರಣವಾಗಬೇಕಾದ್ದೆಲ್ಲ ಈ ಕಾಗದದಲ್ಲಿ ಮೂಡುತ್ತದೆ. ಇದನ್ನು ಒಂದು ಎರಕಹೊಯ್ಯುವ ಯಂತ್ರೋಪಕರಣದಲ್ಲಿಟ್ಟು (ಕ್ಯಾಸ್ಟಿಂಗ್ ಬಾಕ್ಸ್) ಅದರ ಮೇಲೆ ಕರಗಿಸಿದ ಸೀಸವನ್ನು ಎರಕ ಹೊಯ್ದರೆ ತೆಳುವಾದ ಸೀಸದ ಮುದ್ರಣ ಫಲಕ ದೊರೆಯುತ್ತದೆ. (ಡಿ.ಎಸ್.ಜಿ.)

**ಅಚ್ಚು :** ರಸ್ತೆ ವಾಹನ ಅಥವಾ ರೈಲುಬಂಡಿಯ ಒಂದು ಜೊತೆ ಚಕ್ರಗಳನ್ನು ಕೂಡಿಸುವ ಮರದ ಅಥವಾ ಲೋಹದ ತೊಲೆ ಅಥವಾ ಸರಳಿಗೆ ಅಚ್ಚು (ಆಕ್ಸಲ್) ಎನ್ನುತ್ತಾರೆ. ಇದರ ಮೂಲಕ ಬಂಡಿಯ ತೂಕ ಚಕ್ರಕ್ಕೆ ಒಯ್ಯಲ್ಪಡುತ್ತದೆಯಲ್ಲದೆ ಚಕ್ರಗಳೂ ಒಂದೇ ಅಂತರದಲ್ಲಿ ನಿಂತಿರುತ್ತವೆ. ಅಚ್ಚು ಸ್ಥಿರವಾಗಿದ್ದು ಅದರ ತುದಿಗಳಲ್ಲಿ ಚಕ್ರ ಸುತ್ತುತ್ತಿರಬಹುದು ಅಥವಾ ಚಕ್ರಗಳು ಅಚ್ಚಿಗೇ ಬಂಧಿಸಲ್ಪಟ್ಟು ಇಡೀ ಅಚ್ಚೇ ಧಾರಕದ (ಬೇರಿಂಗ್ಸ್) ಮೇಲೆ ತಿರುಗಬಹುದು. ರಸ್ತೆ ಬಂಡಿಗಳಲ್ಲಿ ನಡುವಿನ ಸ್ಥಿರ ಭಾಗವನ್ನು ಇರಚು ಎಂದೂ ತುದಿಗಳನ್ನು ಅಚ್ಚು ಎಂದೂ ಕರೆಯುತ್ತಾರೆ. ಚಕ್ರ ಆಚೆಗೆ ಹೊರಳದಂತೆ ತಡೆಯಲು ಕಡಾಣಿಗಳಿರುತ್ತವೆ. ರೈಲು ಎಂಜಿನ್ನು, ಬಂಡಿ ಮತ್ತು ಕ್ರೇನು ಇಂಥವುಗಳಲ್ಲಿ ಅಚ್ಚು ಬೇರಿಂಗುಗಳೊಳಗೆ ಸುತ್ತುತ್ತಿದ್ದು, ಬೇರಿಂಗಿನೊಳಗಿನ ಅಚ್ಚಿನ ಅಷ್ಟು ಭಾಗವನ್ನು ಜರ್ನಲ್ ಎಂದು ಕರೆಯಲಾಗುತ್ತದೆ. ರೈಲು ಎಂಜಿನ್ನಿನಲ್ಲಿ ಅಚ್ಚನ್ನು ತಿರುಗಿಸುವ ಕೂಡುಸರಳಿಗೆ ಹೊರಭಾಗದಲ್ಲಿ ಜಾಗವಿರಬೇಕಾದ್ದರಿಂದ ಬೇರಿಂಗುಗಳು ಚಕ್ರಗಳ ನಡುವೆ ಇರುತ್ತವೆ; ಆದರೆ ಬಂಡಿಗಳಲ್ಲಿ ಬೇರಿಂಗುಗಳು ಚಕ್ರಗಳ ಹೊರಗಡೆ ಇರುತ್ತವೆ.

ಅಚ್ಚು ಎಂಜಿನ್ನಿನಿಂದ ತಿರುಗಿಸಲ್ಪಡುವ ಸನ್ನಿವೇಶದಲ್ಲಿ ರೈಲು ಎಂಜಿನ್ನಿನಲ್ಲಿನಂತೆ ಸೀದಾ ಕೂಡುಸರಳಿನಿಂದ ಆಗಬಹುದು ಅಥವಾ ಮೋಟಾರು ಗಾಡಿಗಳಂತೆ ಹಲ್ಲು ಚಕ್ರಗಳ ಸರಣಿಯ (ಗಿಯರ್ ಮಾಲೆ) ಮೂಲಕವಿರಬಹುದು. ಮೋಟಾರ್ ಬಂಡಿಯ ಅಚ್ಚುಗಳಲ್ಲಿ ಮುಂಚೆ ಎರಡು ರೀತಿಯವಿರುತ್ತಿದ್ದುವು. 1. ಎಂಜಿನ್ನಿನಿಂದ ಚಾಲಿತವಾದ ಹಿಂಬದಿಯ ಅಚ್ಚು; ಇದು ನಡುವೆ ಡಿಫರೆನ್ಷಿಯಲ್ ಗಿಯರ್ ಉಳ್ಳ ಎರಡು ಭಾಗಗಳಾಗಿದ್ದು ಒಂದೊಂದೂ ಒಂದೊಂದು ಕೊಳವೆಯ ಅಥವಾ ಬೆಂಬಲಿಗ ಅಚ್ಚಿನ ಒಳಗೆ ಇರುವುದು. 2. ಮುಂಬದಿಯ ಅಚ್ಚು: ಸ್ಥಿರವಾದ ಸರಳಾಗಿದ್ದು ಅದರ ತುದಿಗಳಲ್ಲಿ ತುಂಡು ಅಚ್ಚುಗಳು ತಿರುಗಾಣಿಯಾಗಿರುತ್ತಿದ್ದುವು. ಈಚೀಚೆಗೆ ತಯಾರಕರು ಈ ಮುಂಬದಿಯ ಸರಳು ಅಚ್ಚನ್ನು ಕೈಬಿಟ್ಟು ಅದರ ಬದಲು ಮುಂದಿನ ಎರಡು ಚಕ್ರಗಳನ್ನು ಬಂಡಿಯ ಚೌಕಟ್ಟಿಗೇ ಪ್ರತ್ಯೇಕವಾಗಿ ಕೂಡಿಸುವ ಏರ್ಪಾಡು ಮಾಡಿರುತ್ತಾರೆ.

ಮೋಟಾರಿನ ಮತ್ತು ಇತರ ಇಂಥ ಅಚ್ಚುಗಳಿಗೆ ಸಾದಾ ಬೇರಿಂಗುಗಳ ಬದಲು ಬಾಲ್ ಮತ್ತು ರೋಲರ್ ಬೇರಿಂಗುಗಳು ಉಪಯೋಗಿಸಲ್ಪಡುತ್ತಿದ್ದರೆ, ರೈಲುಬಂಡಿಗಳಲ್ಲಿ ರೋಲರ್ ಬೇರಿಂಗುಗಳನ್ನು ಕೆಲವು ಕಡೆ ಬಳಸಿದ್ದರೂ ಹೆಚ್ಚಾಗಿ ಸಾದಾ ಅಕ್ಷಪುಟವೇ (ಆಕ್ಸಲ್ ಬಾಕ್ಸ್) ಇನ್ನೂ ಬಳಕೆಯಲ್ಲಿದೆ. ಇಲ್ಲಿ ಅಚ್ಚಿನ ಮೇಲರ್ಧಕ್ಕೆ ಮಾತ್ರ ಬೇರಿಂಗ್ ತಳದ ಆವಶ್ಯಕತೆಯಿದ್ದು ಕೆಳ ಅರ್ಧಕ್ಕೆ ಬರಿಯ ರಕ್ಷಕ ಕೋಶವಿರುತ್ತದೆ. ಬೇರಿಂಗ್ ತಳ ಸಾಮಾನ್ಯವಾಗಿ ಫಿರಂಗಿ ಲೋಹದ್ದಿದ್ದು ಅದಕ್ಕೆ ಬಿಳಿ ಮಿಶ್ರಲೋಹದ ಕವಚ ಎರಕವಾಗಿರುತ್ತದೆ. ಗ್ರೀಸ್ ಅಥವಾ ಎಣ್ಣೆಯ ಮೃದು ಚಾಲಕ ಇಲ್ಲಿ ಧಾರಾಳವಾಗಿ ಸರಬರಾಜಾಗುವಂತೆ ರಚನೆಯಿರಬೇಕು.

ರೈಲುಬಂಡಿಯ ಅಚ್ಚು ಏನಾದರೂ ಮುರಿದುಹೋದರೆ ಆಗುವ ಅಗಾಧ ಅಪಾಯ ದೃಷ್ಟಿಯಿಂದ ಅತ್ಯುತ್ತಮ ದರ್ಜೆಯ ಹಾಗೂ ಅದರ ವಿಶಿಷ್ಟ ಗುಣಗಳಿಗಾಗಿ ತೀವ್ರ ಪರೀಕ್ಷೆಗೊಳಗಾದ ಮಿಶ್ರ ಉಕ್ಕಿನಿಂದಲೇ ಇದನ್ನು ಮಾಡಲಾಗುತ್ತದೆ. ರೈಲುಗಾಡಿಗಳಿಗೆ ಅಗತ್ಯವಾದ ಅಚ್ಚುಗಳ ಅಪಾರ ಸಂಖ್ಯೆಯ ಗಣನೆಯಿಂದಾಗಿ, ಅವುಗಳ ಎರಡೂ ಕಡೆಯ ಜರ್ನಲುಗಳನ್ನು ಒಂದೇ ಸಮನಾಗಿ ಏಕಕಾಲದಲ್ಲಿ ಸುತ್ತಿಸುವುದಕ್ಕೆ ವಿಶೇಷ ರಚನೆಯ ಲೇತ್‌ಗಳನ್ನು ಉಪಯೋಗಿಸಲಾಗುತ್ತದೆ. ಅಲ್ಲದೆ ಗಡಸು ಮಾಡಿದ ಉಕ್ಕಿನ ಸುತ್ತು ಕವಚವನ್ನು ವಿಶೇಷ ಬಲಪ್ರಯೋಗದಿಂದ ತಿರುಗುವ ಜರ್ನಲುಗಳಿಗೆ ಒತ್ತಿ ಬಿಗಿಯುವುದರಿಂದ, ಉಜ್ಜಿ ಮೆರಗುಕೊಟ್ಟ ಮತ್ತು ಹೆಚ್ಚು ಸವೆತ ನಿರೋಧಿಯಾದ ಮೇಲ್ಮೈ ಇರುವಂತೆ ಮಾಡಲಾಗುತ್ತದೆ. (ಕೆ.ವಿ.ಎಸ್.)

**ಅಚ್ಚು, ಎರಕದ :** ಕರಗಿದ ಪದಾರ್ಥವನ್ನು (ಲೋಹ, ಪಾಕ ಇತ್ಯಾದಿ) ಎರಕ ಹೊಯ್ದು ಬೇಕಾದ ಆಕೃತಿಗಳನ್ನು ಸಿದ್ಧಮಾಡಲು ಉಪಯೋಗಿಸುವ ಮೂಲಮಾತೃಕೆಗಳಿಗೆ ಈ ಹೆಸರಿದೆ. ಅದನ್ನು ತಯಾರಿಸುವ ವಿಧಾನವನ್ನು ಮುಂದಿನ ಚಿತ್ರಗಳ ಸಹಾಯದಿಂದ ತಿಳಿದುಕೊಳ್ಳಬಹುದು.

ನಮಗೆ ಬೇಕಾದ ಎರಕದ ಮಾದರಿಯನ್ನು (ಚಿತ್ರ 1) ಒಂದು ಮಣೆಯ ಮೇಲೆ, ತಲ ಮತ್ತು ಮುಚ್ಚಳವಿಲ್ಲದ ಒಂದು ಪೆಟ್ಟಿಗೆಯಲ್ಲಿಟ್ಟು ಸುತ್ತಲೂ ಅಚ್ಚಿನ ಮರಳನ್ನು ಘಟ್ಟಿಸಲಾಗಿದೆ. ಘಟ್ಟಿಸುವ ಕೆಲಸವನ್ನು ಕೈಯಿಂದ ಇಲ್ಲವೆ ಘಟ್ಟಿಸುವ ಯಂತ್ರಗಳಿಂದ ಮಾಡಬಹುದು (ಚಿತ್ರ 2). ಮಾದರಿ ಮತ್ತು ಘಟ್ಟಿಸಿದ ಮರಳಿನ ಸಮೇತ ಈ ಪೆಟ್ಟಿಗೆಯನ್ನು ತಿರುಗಿಸಿ ಇದರ ಮೇಲೆ ಇನ್ನೊಂದು ತಳ ಮತ್ತು ಮುಚ್ಚಳವಿಲ್ಲದ ಪೆಟ್ಟಿಗೆಯನ್ನಿಟ್ಟು (ಮೇಲಿನ ಪೆಟ್ಟಿಗೆ) ಅದರಲ್ಲೂ ಅಚ್ಚಿನ ಮರಳನ್ನು ಘಟ್ಟಿಸಲಾಗಿದೆ. ಮೇಲಿನ ಪೆಟ್ಟಿಗೆಯ ಮರಳಿನಲ್ಲಿ ಇಳಿಕೊಳವಿ ಮತ್ತು ಏರುಕೊಳವಿ ಎಂಬ ನಳಿಕೆಗಳನ್ನು ಬಿಡಲಾಗಿದೆ (ಚಿತ್ರ 3). ಕರಗಿದ ಲೋಹ ಇಳಿ ಕೊಳವೆಯಿಂದ ಅಚ್ಚಿನೊಳಗಿಳಿದು ಏರುಕೊಳವಿಯಿಂದ ಮೇಲಕ್ಕೆ ಬರುತ್ತದೆ. ಅಲ್ಲದೆ ಲೋಹ ಆರಿ ಕುಗ್ಗುತ್ತಿರುವಾಗ, ಏರುಕೊಳವಿಯಲ್ಲಿನ ದಾಸ್ತಾನು ಉಪಯೋಗಕ್ಕೆ ಬರುತ್ತದೆ. ಈಗ ಮೇಲಿನ ಪೆಟ್ಟಿಗೆಯನ್ನು ಜೋಪಾನವಾಗಿ ತೆಗೆದಿಟ್ಟು, ಕೆಳಗಿನ ಪೆಟ್ಟಿಗೆಯ ಮೇಲ್ಭಾಗದಲ್ಲಿರುವ ಮಾದರಿಯನ್ನು ಜೋಪಾನವಾಗಿ ಹೊರತೆಗೆಯಬೇಕು. ಅನಂತರ ಮೇಲಿನ ಪೆಟ್ಟಿಗೆಯನ್ನು ಕೆಳಗಿನ ಪೆಟ್ಟಿಗೆಯ ಮೇಲೆ ಇಡಬೇಕು.

ದ್ರವರೂಪ ಲೋಹದ ಒತ್ತಡದ ಪ್ರಭಾವದಿಂದ ಮೇಲಿನ ಪೆಟ್ಟಿಗೆ ಅದರ ಜಾಗದಿಂದ ಸರಿಯುವುದನ್ನು ತಪ್ಪಿಸುವುದಕ್ಕಾಗಿ, ಅದರ ಮೇಲೆ ಭಾರ ಹೊರಿಸಬೇಕು. ಇದಾದ ಅನಂತರ ಅಚ್ಚು ಎರಕ ಹೊಯ್ಯಲು ಸಿದ್ಧವಾಗುತ್ತದೆ.

ಅಚ್ಚು ಹಾಕಲು ಉಪಯೋಗಿಸುವ ಮರಳು ವಿಶೇಷ ಬಗೆಯದಾಗಿರುತ್ತದೆ. ಅದರಲ್ಲಿ ಮುಖ್ಯವಾಗಿ ನದೀ ಮರಳು, ಜೇಡಿಮಣ್ಣು ಮತ್ತು ನೀರು ಇರುತ್ತವೆ. ಈ ಮರಳಿಗೆ ಶಾಖ ಮತ್ತು ಒತ್ತಡವನ್ನು ತಡೆದುಕೊಳ್ಳುವ ಶಕ್ತಿಯಿದೆ. ಅಲ್ಲದೆ ನದೀ ಮರಳಿನ ಕಣಗಳನ್ನು



ಅಚ್ಚು ಎರಕದ ಯಂತ್ರ

ಒಂದಕ್ಕೊಂದು ಅಂಟಿಸಿ, ಘಟ್ಟಿಸಿದಾಗ ಯಾವ ರೂಪದಲ್ಲಾದರೂ ನಿಲ್ಲುವ ಗುಣವನ್ನು ಮರಳಿಗೆ ಕೊಡುವ ಶಕ್ತಿಯೂ ಇದೆ. ಮಣ್ಣಿನ ಅಂಟುಗುಣ ಕಾರ್ಯರೂಪಕ್ಕೆ ಬರುವುದು ನೀರು ಸೇರಿದಾಗ ಮಾತ್ರ. ಆದರೆ ನೀರು ಹೆಚ್ಚಾದರೆ ಎರಕದಲ್ಲಿ ದೋಷಗಳುಂಟಾಗುತ್ತವೆ.

ಅತಿಸೂಕ್ಷ್ಮವಾದ ವಸ್ತುಗಳನ್ನು ಎರಕ ಹೊಯ್ಯಲು ಮತ್ತು ಎರಕದ ಮೈ ಬಹಳ ನುಣುಪಾಗಿರಬೇಕಾದ ಮರಳಿಗೆ ಬದಲು ಬೇರೆ ವಸ್ತುಗಳನ್ನು ಎರಕ ಹೊಯ್ಯಲು ಉಪಯೋಗಿಸುತ್ತಾರೆ. ಷೆಲ್ ಎರಕದಲ್ಲಿ (ಷೆಲ್ ಮೌಲ್ಡಿಂಗ್) ರಾಳಗಳನ್ನು, ಲಾಸ್ಟ್‌ವ್ಯಾಕ್ಸ್ ವಿಧಾನದಲ್ಲಿ ಮೇಣವನ್ನು, ಪ್ಲಾಸ್ಟರ್ ಎರಕದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ಸನ್ನು ಮತ್ತು ಛಾಪ ಎರಕದ ಪದ್ಧತಿಯಲ್ಲಿ (ಡೈಕ್ಯಾಸ್ಟಿಂಗ್) ಲೋಹದ ಅಚ್ಚುಗಳನ್ನೂ ಉಪಯೋಗಿಸುತ್ತಾರೆ. (ವೈ.ವಿ.ಆರ್.)

**ಅಚ್ಚುಕೂಟ** : ನೋಡಿ – ಮುದ್ರಣಾಲಯ

**ಅಚ್ಚುಮೊಳೆ** : ಯಾವುದೇ ಭಾಷೆಯ ಅಕ್ಷರ, ಅಂಕಿ, ಸಂಕೇತಗಳನ್ನು ಕಾಗದದ ಮೇಲೆ ಮುದ್ರಿಸಲು ವಿಶೇಷ ರೀತಿಯಲ್ಲಿ ತಯಾರಿಸಲಾಗಿರುವ ಮೊಳೆಗಳಿಗೆ ಈ ಹೆಸರಿದೆ.


ಅಚ್ಚುಮೊಳೆ

ಇವನ್ನು ತಯಾರಿಸಲು ಪ್ರತಿ ಅಕ್ಷರ ಅಥವಾ ಚಿಹ್ನೆಗೂ ಪ್ರತ್ಯೇಕ ಮಾತೃಕೆಯನ್ನು (ಮ್ಯಾಟ್ರಿಕ್ಸ್) ಮೊದಲು ತಯಾರಿಸಿಕೊಂಡು ಅನಂತರ ಸೀಸ, ತವರ ಮತ್ತು ಆಂಟಿಮೊನಿ ಲೋಹಗಳಿಂದ ಸೂಕ್ತ ಮಿಶ್ರಣವನ್ನು ತಯಾರಿಸಿ ಮಾತೃಕೆಗಳಲ್ಲಿ ತುಂಬಿ ಮೊಳೆಯನ್ನು ಎರಕ ಹೊಯ್ಯುವರು. ಕೆಲವು ವೇಳೆ ಈ ಮಿಶ್ರ ಲೋಹದಲ್ಲಿ ತಾಮ್ರ ಮತ್ತು ನಿಕ್ಕಲ್‌ಗಳೂ ಸೇರಿರುತ್ತವೆ.

ಅಚ್ಚುಮೊಳೆಗಳು ಸಮಕೋನಾಕಾರದಲ್ಲಿದ್ದು, 23317ಮಿಮೀ ಎತ್ತರ ಇರುತ್ತದೆ. ಇವುಗಳ ಅಗಲ ಮತ್ತು ದಪ್ಪವನ್ನು ಅಂತಾರಾಷ್ಟ್ರೀಯ ಮುದ್ರಣ ಸಂಘದ ನಿಯಮವನ್ನನುಸರಿಸಿ ನಿಗದಿ ಮಾಡಲಾಗಿದೆ. **(ನೋಡಿ– ಮುದ್ರಣ ಕಲೆ)**

(ಎಂ.ಎ.ಎಸ್.)

**ಅಚ್ಚುಮೊಳೆ ಎರಕಹೊಯ್ಯುವ ಯಂತ್ರಗಳು** : ಪೂರ್ವಕಾಲದಲ್ಲಿ ಬಿಡಿ ಅಚ್ಚುಮೊಳೆಗಳನ್ನು ತಯಾರಿಸಲು ಕೈಯಿಂದಲೇ ಆಯಾ ಮಾತೃಕೆಯನ್ನು ಒಂದು ಗೊತ್ತಾದ ಅಳತೆಯ ಆಕಾರದ ಮೂಸೆಗೆ (ಮೌಲ್ಡ್) ಜೋಡಿಸಿ ಕಾದ ಸೀಸವನ್ನು ಹೊಯ್ದು ದಿನಕ್ಕೆ 10–12 ಪೌಂಡುಗಳಷ್ಟನ್ನು ತಯಾರಿಸುತ್ತಿದ್ದರು. ಈಗ ಅನೇಕ ಸಂಸ್ಥೆಯವರು


ಅಚ್ಚುಮೊಳೆ ಎರಕಹೊಯ್ಯುವ ಯಂತ್ರ

ಪ್ರತಿ ಅಚ್ಚುಮೊಳೆಗೆ ವಿಶೇಷ ರೀತಿಯ ಮಾತೃಕೆಯನ್ನು ತಯಾರಿಸಿ ತಮ್ಮ ಸಂಸ್ಥೆಯಲ್ಲಿ ನಿರ್ಮಿಸಲ್ಪಟ್ಟ ಎರಕ ಹೊಯ್ಯುವ ಯಂತ್ರದಲ್ಲಿ ಗಂಟೆಗೆ 8–10 ಪೌಂಡುಗಳಷ್ಟು ತಯಾರಿಸುತ್ತಾರೆ. ಥಾಮ್‌ಸನ್ ಕಂಪನಿ, ಮಾನೋಟೈಪ್ ಸಂಸ್ಥೆಯವರ ಸೂಪರ್ ಕ್ಯಾಸ್ಟರ್ ಯಂತ್ರದಲ್ಲಿ ಟೈಪುಗಳಲ್ಲದೆ, ಅಚ್ಚುಮೊಳೆ ಜೋಡಣೆಗೆ (ಕಂಪೋಸಿಂಗ್) ಬೇಕಾಗುವ ಅನೇಕ ಸಾಮಗ್ರಿಗಳನ್ನೂ ತಯಾರಿಸಲು ಸಾಧ್ಯ. (ಎಂ.ಎ.ಎಸ್.)

**ಅಚ್ಚುಮೊಳೆಗಳ ಸಂಯೋಜಕ** : ಬಿಡಿ ಅಚ್ಚಿನ ಮೊಳೆಗಳನ್ನು ಆವಶ್ಯಕತೆಗನುಗುಣವಾಗಿ ಅಳತೆಯ ಕ್ರಮಾನುಸಾರ ಒಂದೊಂದು ಪದವಾಗಿ ಜೋಡಿಸಿ ಅವುಗಳನ್ನು ಪ್ರತ್ಯೇಕ ಪುಟಗಳಾಗುವಂತೆ ವಿಭಾಗಿಸಿ ವಿನ್ಯಾಸಗೊಳಿಸುವ ಕುಶಲ ಕೆಲಸಗಾರ, ಕೈ ಬರೆಹದ ಪ್ರತಿಯ ಆಧಾರದ ಮೇಲೆ ಅಚ್ಚಿನ ಪುಟವನ್ನು ಸಿದ್ಧಗೊಳಿಸುವವನು.

ಒಂದೊಂದು ಭಾಷೆಯಲ್ಲಿಯೂ ಮುದ್ರಣಕ್ಕೆ ಆವಶ್ಯಕವಾದ ಅಚ್ಚುಮೊಳೆಗಳ ಸಂಖ್ಯೆ ಬೇರೆ ಬೇರೆಯಾಗಿರುತ್ತದೆ. ಇಂಗ್ಲಿಷ್ ಮುದ್ರಣಕ್ಕೆ ಸುಮಾರು 154 ತರಹದ ಮೊಳೆಗಳು ರೋಮನ್ ಲಿಪಿಯಲ್ಲಿಯೂ 90 ತರಹದ ಮೊಳೆಗಳು ಓರೆ (ಇಟಾಲಿಕ್) ಲಿಪಿಯಲ್ಲಿಯೂ ಬೇಕಾಗುತ್ತವೆ. ಹಾಗೆಯೇ ಕನ್ನಡ ಮುದ್ರಣಕ್ಕೆ ಸುಮಾರು 255 ಮೊಳೆಗಳು ಬೇಕು. ದೇವನಾಗಿರಿ ಲಿಪಿಯಲ್ಲಿ ಮುದ್ರಿಸುವುದಕ್ಕೆ 338 ಮೊಳೆಗಳು ಬೇಕಾಗುತ್ತವೆ. ಒಂದೊಂದು ಭಾಷೆಯ ಮುದ್ರಣಕ್ಕೆ ಬೇಕಾಗುವ ಅಚ್ಚುಮೊಳೆಗಳನ್ನು ಅನೇಕ ಖಾನೆಗಳುಳ್ಳ ಎರಡು ಮರದ ತಟ್ಟೆ (ಟೈಪ್ ಕೇಸ್) ಗಳಲ್ಲಿ ತುಂಬಿಡಬೇಕು. ಇದರಲ್ಲಿಯೂ ಹೆಚ್ಚಾಗಿ ಬಳಕೆಯಲ್ಲಿರುವ ಅಚ್ಚುಮೊಳೆಗಳನ್ನು ಅಚ್ಚುಮೊಳೆ ಸಂಯೋಜಕನ ಕೈಗೆ ಹತ್ತಿರವಿರುವಂತೆ ಮರದ ತಟ್ಟೆಯ ಮಧ್ಯದಲ್ಲಿಯೂ ಕಡಿಮೆ ಬಳಕೆಯಲ್ಲಿರುವ ಅಚ್ಚು ಮೊಳೆಗಳನ್ನು ತಟ್ಟೆಯ ಅಂಚಿನಲ್ಲಿರುವ ಖಾನೆಗಳಲ್ಲಿಯೂ ಇಡಬೇಕು.

ತಟ್ಟೆಗಳನ್ನು ಸುಮಾರು $3^1/_2$'–4' ಎತ್ತರದ ಮರದ ಚೌಕಟ್ಟಿನ (ಫ್ರೇಮ್) ಮೇಲೆ ಇಡಬೇಕು. ಕೆಳಗಿನ ತಟ್ಟೆಯನ್ನು (ಲೋಯರ್ ಕೇಸ್) ಸಮತಳವಾಗಿಯೂ ಮೇಲಿನ ತಟ್ಟೆಯನ್ನು (ಅಪ್ಪರ್ ಕೇಸ್) ಸ್ವಲ್ಪ ಇಳಿಜಾರಾಗಿಯೂ ಇಡಬೇಕು. ಸಂಯೋಜಕ

ಯಾವ ಖಾನೆಗಳಲ್ಲಿ ಯಾವ ಅಚ್ಚುಮೊಳೆ ಇದೆ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದ್ದು ಬಹಳ ಆವಶ್ಯಕ. ಸಂಯೋಜಿಸಬೇಕಾದ ಹಸ್ತಪ್ರತಿಯನ್ನು ಮೇಲಿನ ತಟ್ಟೆಯ ಎಡಭಾಗದಲ್ಲಿಟ್ಟು ಅದರ ಬಲಭಾಗದಲ್ಲಿ ಸಂಯೋಜಿಸಿದ ಮೊಳೆಗಳ ಸಾಲುಗಳನ್ನು ಇಡುವುದಕ್ಕೆ ಲೋಹದ ಮೂರು ಅಂಚಿನ ಒಂದು ತಟ್ಟೆಯನ್ನು ಇಡಬೇಕು.

ಅಚ್ಚುಮೊಳೆ ಸಂಯೋಜಕ ಈ ತಟ್ಟೆಗಳ ಎದುರಿಗೆ ನಿಂತು ಹಸ್ತಪ್ರತಿಯನ್ನು ನೋಡಿ ಒಂದೆರಡು ಶಬ್ದಗಳನ್ನು ಮಾತ್ರ ನೆನಪಿಟ್ಟುಕೊಂಡು ಅವಕ್ಕೆ ಬೇಕಾದ ಅಚ್ಚುಮೊಳೆಗಳನ್ನು ಒಂದೊಂದಾಗಿ ತನ್ನ ಬಲಗೈ ಹೆಬ್ಬೆರಳು ಮತ್ತು ತೋರುಬೆರಳುಗಳಿಂದ ತೆಗೆದುಕೊಂಡು, ಎಡಗೈಯಲ್ಲಿರುವ ಸಂಯೋಜನಾ ಸಲಕರಣೆಯಲ್ಲಿಡಬೇಕು (ಕಂಪೋಸಿಂಗ್ ಸ್ಟಿಕ್).



ಮೇಲಿನ ತಟ್ಟೆ



ಕೆಳಗಿನ ತಟ್ಟೆ

ಈ ಸಲಕರಣೆಯಲ್ಲಿ ಮೊದಲೇ ಗೊತ್ತುಮಾಡಲ್ಪಟ್ಟ ಅಗಲದ 10–12 ಅಚ್ಚುಮೊಳೆಗಳ ಸಾಲುಗಳನ್ನು ಜೋಡಿಸಬಹುದು. ಸಾಲುಗಳೆಲ್ಲ ಒಂದೇ ಉದ್ದವಿರಬೇಕು. ಒಂದು ಸಾಲನ್ನು ಜೋಡಿಸುತ್ತಿರುವಾಗ ಒಂದೊಂದು ಶಬ್ದವನ್ನು ಜೋಡಿಸಿದ ಅನಂತರ ಒಂದೊಂದು ತೆರಪುಮೊಳೆಯನ್ನು (ಬ್ಲ್ಯಾಂಕ್ ಸ್ಪೇಸ್) ಇಡಬೇಕು. ಸಾಲಿನ ಅಂತ್ಯ ಸಮೀಪಿಸಿದಾಗ ಕಡೆಯ ಶಬ್ದವನ್ನು ಪೂರ್ತಿಯಾಗಿ ಅದೇ ಸಾಲಿನಲ್ಲಿ ಜೋಡಿಸುವುದಕ್ಕೆ ಸಾಧ್ಯವಿಲ್ಲದಿದ್ದರೆ ಶಬ್ದಗಳ ನಡುವೆ ಹಾಕಿರುವ ತೆರಪುಮೊಳೆಗಳನ್ನು ಬದಲಾಯಿಸುವುದರಿಂದ ಅಥವಾ ಆ ಶಬ್ದವನ್ನು ಎರಡು ಭಾಗ ಮಾಡಿ ಪೂರ್ವಭಾಗದ ಜೊತೆಗೆ ಒಂದು ಅಡ್ಡಗೆರೆ ಮೊಳೆಯನ್ನು (ಹೈಫನ್) ಸಾಲಿನ ಕಡೆಯಲ್ಲಿಯೂ ಮತ್ತು ಉತ್ತರಾರ್ಧವನ್ನು ಮುಂದಿನ ಸಾಲಿನ ಪ್ರಾರಂಭದಲ್ಲಿಯೂ ಜೋಡಿಸಿ ಸರಿಪಡಿಸಬೇಕು. ಈ ತೆರಪು ಮೊಳೆಗಳು 3–4 ಅಳತೆಗಳಲ್ಲಿ ದೊರೆಯುತ್ತವೆ. ಹೀಗೆ 10–12 ಅಚ್ಚುಮೊಳೆಗಳ ಸಾಲುಗಳನ್ನು ಜೋಡಿಸಿ ಅವುಗಳನ್ನು ಕೈಸಲಕರಣೆಯಿಂದ, ಮೇಲ್ತಟ್ಟೆಯ ಮೇಲಿರುವ ಲೋಹದ ತಟ್ಟೆಯಲ್ಲಿಡಬೇಕು.

ಹೀಗೆ ಒಂದು ತಟ್ಟೆಯ (ಗ್ಯಾಲಿ) ತುಂಬ 50–60 ಸಾಲುಗಳನ್ನು ಜೋಡಿಸಿದ ಮೇಲೆ ಅವನ್ನೆಲ್ಲ ಒಂದು ಗಟ್ಟಿಯಾದ ದಾರದಿಂದ ಕಟ್ಟಿ ಕರಡುಪ್ರತಿ ತೆಗೆಯುವ ಯಂತ್ರದಲ್ಲಿಟ್ಟು (ಪ್ರೂಫ್ ಮೆಷಿನ್), ಮಸಿ ಲೇಪಿಸಿ ಕರಡುಪ್ರತಿ ತೆಗೆಯಬೇಕು. ಇದರಲ್ಲಿ ಕಂಡುಬಂದ ತಪ್ಪುಗಳನ್ನು ಗುರುತು ಮಾಡಿ ಅವುಗಳನ್ನು ಅಚ್ಚುಮೊಳೆಗಳಿಂದ ತಿದ್ದಬೇಕು. ಈ ತಿದ್ದುಪಡಿಯನ್ನು ಎರಡು ಮೂರು ಕರಡುಪ್ರತಿಗಳನ್ನು ತೆಗೆದು ತಿದ್ದುಪಡಿ ಮಾಡಿ, ಸಂಯೋಜಿತ ಅಚ್ಚುಮೊಳೆಗಳ ಸಮೂಹ ಎಲ್ಲ ರೀತಿಯಲ್ಲಿಯೂ ಸರಿಯಾಗಿದೆ ಎಂಬುದನ್ನು ನಿರ್ಧಾರ ಮಾಡಿಕೊಂಡು ಇದನ್ನು ಒಂದೇ ಉದ್ದದ ಪುಟಗಳನ್ನಾಗಿ ವಿಭಾಗಿಸಿ, ಪ್ರತಿ ಪುಟದ ಪ್ರಾರಂಭದಲ್ಲಿ ಪುಟಸಂಖ್ಯೆ ಮತ್ತು ಪುಟಶೀರ್ಷಿಕೆ ಇರುವ ಒಂದು ಸಾಲನ್ನಿಟ್ಟು ಪುಟ ಕಟ್ಟಬೇಕು.

(ಡಿ.ಎಸ್.ಜಿ.)

**ಪುಟ ಕಟ್ಟುವ ಕೆಲಸ:** ವಿಂಗಡಣೆಯಾದ ಅಚ್ಚುಪುಟಗಳ ಕರಡು ಪ್ರತಿಯನ್ನು ಎತ್ತಿ ಅದರಲ್ಲಿ ಕಂಡುಬರಬಹುದಾದ ತಪ್ಪುಗಳನ್ನು ಗುರುತಿಸಿ ತಿದ್ದುಪಡಿ ಮಾಡಿದ ಅನಂತರ ಪುಟಗಳನ್ನು ನಿರ್ದಿಷ್ಟ ಕ್ರಮದಲ್ಲಿ ಎರಡು, ನಾಲ್ಕು, ಎಂಟು ಅಥವಾ ಹದಿನಾರು ಪುಟಗಳ ಗುಂಪು ಮಾಡಿ ಒಂದು ಕಬ್ಬಿಣದ ಚೌಕಟ್ಟಿನಲ್ಲಿ (ಛೇಸ್) ಇಡಬೇಕು. ಪುಟಗಳ ತಲೆ ಮತ್ತು ಬೆನ್ನು ಭಾಗದಲ್ಲಿ ಗೊತ್ತಾದ ಪ್ರಮಾಣದಲ್ಲಿ ಕಡಿಮೆ ಎತ್ತರವಿರುವ ಮರದ ಅಥವಾ ಕಬ್ಬಿಣದ ಪಟ್ಟಿಯ ತುಂಡುಗಳನ್ನು ಜೋಡಿಸಿ ಪಕ್ಕದಲ್ಲೂ ಕೆಳಭಾಗದಲ್ಲೂ ಬೆಣೆಯಾಕಾರದ ತುಂಡುಗಳನ್ನಿಟ್ಟು ಸಣ್ಣ ಬೆಣೆಗಳಿಂದ, ಷೂಟಿಂಗ್ ಸ್ಟಿಕ್ ಮತ್ತು ಕೊಡತಿಗಳಿಂದ ಬಿಗಿ ಮಾಡಬೇಕು (ಇಂಪೋಸಿಂಗ್). ಬೆಣೆಯಾಕಾರದ ತುಂಡುಗಳ ಮತ್ತು ಸಣ್ಣ ಬೆಣೆಗಳಿಗೆ ಬದಲಾಗಿ ಲೋಹದಿಂದ ತಯಾರಿಸಿದ ಸಲಕರಣೆಗಳಿಂದಲೂ (ಮೆಕ್ಯಾನಿಕಲ್ ಕಾಯಿನ್ಸ್) ಪುಟಗಳನ್ನು ಬಿಗಿ ಮಾಡಬಹುದು. ಈ ಕ್ರಮದಿಂದ ಅನೇಕ ಅನುಕೂಲಗಳುಂಟು. ಹೀಗೆ ಬಿಗಿ ಮಾಡಿದ ಪುಟಗಳ ಸಮೂಹಕ್ಕೆ ಒಂದು ಫಾರಂ ಎಂದು ಹೆಸರು. ಅನೇಕ ಸಹಸ್ರ ಅಚ್ಚು ಮೊಳೆ, ತೆರಪುಮೊಳೆ ಮುಂತಾದವುಗಳಿಂದ ಮಾಡಿದ ಈ ಫಾರಮ್ಮನ್ನು ಒಂದು ಹಲಗೆಯೋಪಾದಿಯಲ್ಲಿ ಎತ್ತಿ ಎಲ್ಲಿಗಾದರೂ ತೆಗೆದುಕೊಂಡು ಹೋಗಬಹುದು.

ಇದರಲ್ಲಿ ಎರಡು ವಿಧಗಳಿವೆ. ಒಂದು ಹಾಳೆಯ ಎರಡು ಕಡೆಗಳಲ್ಲಿಯೂ ಒಂದೇ ಫಾರಂನಿಂದ ಮುದ್ರಿಸಿ, ಮುದ್ರಿಸಿದ ಹಾಳೆಯನ್ನು ಎರಡಾಗಿ ಕತ್ತರಿಸಿದರೆ, ಎರಡು ಪ್ರತಿಗಳು ದೊರಕುತ್ತವೆ. ಈ ವಿಧಾನಕ್ಕೆ ಅರ್ಧ ಹಾಳೆ ವಿಧಾನ ಎಂದು ಹೆಸರು. ಇದಕ್ಕೆ ಬದಲು ಒಂದು ಹಾಳೆಯ ಒಂದೊಂದು ಕಡೆಗೂ ಬೇರೆ ಬೇರೆ ಪುಟಗಳುಳ್ಳ ಎರಡು ಫಾರಂಗಳಿಂದ ಮುದ್ರಿಸಿದಮೇಲೆ ದೊರಕುವ ಹಾಳೆಯನ್ನು ಕತ್ತರಿಸದೆಯೇ ಉಪಯೋಗಿಸುವ ವಿಧಾನಕ್ಕೆ ಪೂರ್ಣ ಹಾಳೆ ವಿಧಾನ ಎಂದು ಹೆಸರು. (ಉದಾ ಹದಿನಾರು ಅಚ್ಚು ಪುಟಗಳಲ್ಲಿ 1, 4, 5, 8, 9, 12, 13, 16ನೆಯ ಪುಟಗಳನ್ನು ಒಂದು ಚೌಕಟ್ಟಿನಲ್ಲೂ ಉಳಿದವನ್ನು ಇನ್ನೊಂದು ಚೌಕಟ್ಟಿನಲ್ಲೂ ಇಟ್ಟು ಬಿಗಿ ಮಾಡಿ ಕಾಗದದ ಹಾಳೆಯ ಒಂದು ಪಕ್ಕವನ್ನು ಒಂದು ಫಾರಂನಿಂದಲೂ ಇನ್ನೊಂದು ಪಕ್ಕವನ್ನು ಇನ್ನೊಂದು ಫಾರಂನಿಂದಲೂ ಮುದ್ರಿಸಿ ಮಡಿಸಿದರೆ 16 ಪುಟಗಳ ಒಂದು ಪ್ರತಿ ಬರುತ್ತದೆ.) ಈ ವಿಧಾನದಲ್ಲಿ ಮೊದಲನೇ ಪುಟವುಳ್ಳ ಫಾರಂ ಅನ್ನು ಹೊರಫಾರಂ ಎಂದೂ ಮತ್ತೊಂದನ್ನು ಒಳ ಫಾರಂ ಎಂದೂ ಕರೆಯುತ್ತಾರೆ. ಹೀಗೆ ಒಂದು ಪುಸ್ತಕದಲ್ಲಿರುವ ಪುಟಗಳನ್ನು ಅನೇಕ ಫಾರಂಗಳಾಗಿ ವಿಭಾಗಿಸಬಹುದು. ಪುಸ್ತಕ ಮುದ್ರಿಸುವವನ (ಪ್ರಿಂಟರ್) ಮತ್ತು ರಟ್ಟು ಕಟ್ಟುವವನ (ಬೈಂಡರ್) ಅನುಕೂಲಕ್ಕಾಗಿ, ಪ್ರತಿಯೊಂದು ಫಾರಂನಲ್ಲಿ ಅದರಲ್ಲಿರುವ ಮೊದಲನೆಯ ಅಚ್ಚುಪುಟದ ಕೆಳಭಾಗದಲ್ಲಿ ಪುಸ್ತಕದ ಸಂಕೇತ ಅಕ್ಷರಗಳನ್ನು ಎಡಗಡೆಯೂ ಮತ್ತು ಫಾರಂನ ಕ್ರಮಸಂಖ್ಯೆಯನ್ನು ಬಲಗಡೆಯೂ ಮುದ್ರಿಸುತ್ತಾರೆ. ಈ ಕ್ರಮಸಂಖ್ಯೆಗಳು ಮೊದಮೊದಲು ಅಕ್ಷರಗಳಲ್ಲಿದ್ದು ಈಗ ರೋಮನ್ ಸಂಖ್ಯೆಗಳಲ್ಲಿರುತ್ತವೆ. ಇವಕ್ಕೆ ಸಿಗ್ನೇಚರ್ ಎಂದು ಹೆಸರು.

(ಎಂ.ಎ.ಎಸ್.)

**ಅಚ್ಚುಮೊಳೆ ಜೋಡಿಸುವ ಯಂತ್ರಗಳು :** ಮುದ್ರಣಾಲಯಗಳಲ್ಲಿ ಕೈಯಿಂದ ಅಚ್ಚಿನ ಮೊಳೆ ಜೋಡಿಸುವುದು ಕಷ್ಟದ ಕೆಲಸ. ಈ ವಿಧಾನ ಬಹು ನಿಧಾನ. ಎಂಥ ನಿಪುಣ ಕೆಲಸಗಾರನಿಗಾದರೂ ಕೈಯಿಂದ ಅಚ್ಚುಮೊಳೆ ಜೋಡಿಸುವಾಗ ತಪ್ಪುಗಳಾಗುವುದು ಅನಿವಾರ್ಯ. ಆದುದರಿಂದ ಈ ಕೆಲಸವನ್ನು ಸುಲಭವಾಗಿ, ಸುಗಮವಾಗಿ ಮಾಡುವ ವಿಧಾನಗಳನ್ನು ಕುರಿತ ಪಾಶ್ಚಾತ್ಯ ದೇಶಗಳಲ್ಲಿ ಮುದ್ರಣಕಲೆಯನ್ನು ಅರಿತ ಅನೇಕ ನಿಪುಣರು ಹತ್ತೊಂಬತ್ತನೆಯ ಶತಮಾನದಲ್ಲಿ ಸಂಶೋಧನೆ ನಡೆಸಿದರು. ಇದರ ಪರಿಣಾವಾಗಿ ಅಚ್ಚಿನ ಮೊಳೆ ಜೋಡಿಸುವ ಅನೇಕ ಯಂತ್ರಗಳು ಬಳಕೆಗೆ ಬಂದುವು.

**ಆರಂಭದ ಕಾಲದ ಯಂತ್ರಗಳು:** ವಿಲಿಯಂ ಚರ್ಚ್ ಅಚ್ಚುಮೊಳೆ ಜೋಡಿಸುವ ಪೂರ್ಣ ಯಂತ್ರವನ್ನು ಮೊಟ್ಟಮೊದಲು ಕಂಡುಹಿಡಿದು (1822) ಕೀಲಿಮಣೆಯನ್ನು ಅಳವಡಿಸಿ ಯಂತ್ರವನ್ನು ನಡೆಸುವ ವಿಧಾನವನ್ನು ಪ್ರಾರಂಭಿಸಿದ. ಇವನ ಯಂತ್ರದಲ್ಲಿ ಅಕ್ಷರಗಳು ಎರಕವಾಗಿ ಅಕ್ಷರಪಥಕ್ಕೆ ಬಂದು ಬೀಳುತ್ತಿದ್ದುವು. ಆ ಅಕ್ಷರಗಳನ್ನು ಬೇಕಾದ ಪಂಕ್ತಿಯ ಅಳತೆಗೆ ಕೈಯಿಂದ ಅನುಗೊಳಿಸಬೇಕಾಗಿತ್ತು. ಮುದ್ರಣವಾದ ಮೇಲೆ ಅಚ್ಚಿನ ಮೊಳೆಗಳನ್ನು ಕರಗಿಸುವ ಪಾತ್ರೆಗೆ ಸುರಿದು ಬೇರೆ ಅಚ್ಚಿನ ಮೊಳೆಗಳನ್ನು ಎರಕ ಹೊಯ್ದು ಮುದ್ರಿಸುವ ವಿಧಾನ ಇವನಿಂದ ಪ್ರಾರಂಭವಾಯಿತು. ಆದರೆ ಇವನ ಯಂತ್ರ ಬಳಕೆಗೆ ಬರಲಿಲ್ಲ.



ಲೈನೋಟೈಪ್ ಯಂತ್ರ

ಯಂಗ್ ಮತ್ತು ಡೆಲ್‌ಕಾಂಬರ್ ಕಂಡುಹಿಡಿದ (1840) ಅಚ್ಚಿನ ಮೊಳೆ ಜೋಡಿಸುವ ಯಂತ್ರ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಸ್ವಲ್ಪ ಪ್ರಚಾರಕ್ಕೆ ಬಂದಿತು. ಈ ಯಂತ್ರದಲ್ಲಿಯೂ ಬೇಕಾದ ಅಳತೆಗೆ ಪಂಕ್ತಿಗಳನ್ನು ಅಳವಡಿಸುವ ಕಾರ್ಯವನ್ನು ಕೈಯಿಂದಲೇ ಮಾಡಬೇಕಾಗಿತ್ತು. ಆರಂಭಕಾಲದ ಎಲ್ಲ ಜೋಡಿಸುವ ಯಂತ್ರಗಳೂ ಮೊಳೆಗಳನ್ನು ಎರಕ ಹೊಯ್ದು ಜೋಡಿಸುವ ಕೆಲಸಕ್ಕೆ ಮಾತ್ರ ಸಂಬಂಧಿಸಿದ್ದುವು. ಪಂಕ್ತಿಗಳನ್ನು ಸರಿಯಾದ ಅಳತೆಗೆ ಹೊಂದಿಸುವ ಮತ್ತು ಮುದ್ರಣವಾದ ಮೇಲೆ ಅಚ್ಚಿನ ಮೊಳೆಗಳನ್ನು ವಿಂಗಡಿಸಿ, ಸಂಬಂಧಿಸಿದ ಖಾನೆಗೆ ಹಂಚುವ ಕೆಲಸವನ್ನು ಯಂತ್ರದಿಂದಲೇ ಸಾಧಿಸುವ ಸಲುವಾಗಿ ಮುದ್ರಣ ಕೆಲಸದಲ್ಲಿ ನುರಿತ ಅನೇಕ ನಿಪುಣರು ಹೊಸ ಬಗೆಯ ಯಂತ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿದರು. ಆದರೆ ಯಾರೂ ಪೂರ್ಣ ಜಯವನ್ನು ಸಾಧಿಸಲಿಲ್ಲ.

ಇಂಗ್ಲೆಂಡಿನಲ್ಲಿ ಚಾರಲ್ಸ್ ಕಾಸ್ಟೆನ್ ಬೆಯಿನ್ ಒಂದು ಯಂತ್ರವನ್ನು ತಯಾರಿಸಿದ (1869). ಈ ಯಂತ್ರವನ್ನು ಟೈಮ್ಸ್ ಪತ್ರಿಕೆಯ ಮುದ್ರಣಕ್ಕೆ 1904ರಲ್ಲಿ ಬಳಸಲಾಯಿತು. ಅದೇ ವರ್ಷ ರಾಬರ್ಟ್ ಹಾಟರ್‌ಸ್ಲಿ ಎಂಬುವವ ಕಂಡುಹಿಡಿದ ಮತ್ತೊಂದು ಯಂತ್ರವನ್ನು ವೆಲ್ಸ್ ಡೇಯ್ಲಿ ಎಂಬ ಸಮಾಚಾರ ಪತ್ರಿಕೆಯ ಮುದ್ರಣಕ್ಕೆ ಉಪಯೋಗಿಸಲಾಯಿತು. ನ್ಯೂಯಾರ್ಕಿನಲ್ಲಿ ಜೆ.ಡಬ್ಲ್ಯೂ. ಪಾಯ್‌ಗೆ ಎಂಬುವನು ಅಪಾರ ಹಣ ವೆಚ್ಚ ಮಾಡಿ ತಯಾರಿಸಿದ (1887) ಮೊಳೆಜೋಡಿಸುವ ಯಂತ್ರ ಅನೇಕರ ಗಮನ ಸೆಳೆಯಿತು.

ಮತ್ತೊಂದು ಸ್ವಾರಸ್ಯಕರ ಯಂತ್ರವನ್ನು ಕೋರ್ನೆ ಕಂಡುಹಿಡಿದ (1880). ನ್ಯೂಜೆರ್ಸಿಯ ಸಿ.ಎಚ್.ವೆಸ್ಟ್‌ಕಾಟ್ ನವೀನ ಯಂತ್ರವೊಂದನ್ನು ಕಂಡು ಹಿಡಿಯುವುದಕ್ಕೆ (1871) ಮೊದಲು ಮೊಳೆ ಎರಕಹೊಯ್ಯುವ, ಜೋಡಿಸುವ ವಿಭಾಗಗಳು ಒಟ್ಟಿಗಿರಲಿಲ್ಲ. ತರುವಾಯ ಮುದ್ರಣಾಕ್ಷರಗಳನ್ನು ರೂಪಿಸುವ ಮಾತೃಕೆಗಳನ್ನು ನಿರ್ಮಿಸುವ ಕಾರ್ಯದತ್ತ ಅನೇಕರ

ಗಮನ ಹರಿಯಿತು. 1879 ಮತ್ತು 1885ರ ಸುಮಾರಿನಲ್ಲಿ ಜೆ.ಡಬ್ಲ್ಯೂ. ಚುಕರ್ಸ್ ಪಂಕ್ತಿಗಳನ್ನು ಬೇಕಾದ ಅಳತೆಗೆ ಅನುಗೊಳಿಸಲು ಯೋಗ್ಯವಾದ ಡಬಲ್ ವೆಡ್ಜ್ ತೆರಪುಗಳನ್ನು ಕಂಡುಹಿಡಿದ. ಇದು ಮೊಳೆ ಜೋಡಿಸುವ ಯಂತ್ರಗಳ ಇತಿಹಾಸದಲ್ಲಿ ಬಹಳ ಮುಖ್ಯವಾದ ಬೆಳೆವಣಿಗೆ.

ಗಡಿಯಾರ ಮಾಡುವ ಕಸುಬಿನ ಅಮೆರಿಕದ ಒಟ್‌ಮರ್ ಮೆರ್‌ಗೆನ್‌ಥ್ಲರ್ ಅಚ್ಚಿನ ಮೊಳೆ ಜೋಡಿಸುವ ಯಂತ್ರಗಳ ನಿರ್ಮಾಣಕಾರ್ಯದಲ್ಲಿ ತೊಡಗಿ ಅನೇಕ ವರ್ಷಗಳ ಕಾಲ ಸತತವಾಗಿ ಶ್ರಮಿಸಿ ಅನೇಕ ವಿಧದಲ್ಲಿ ಸಂಶೋಧನೆ ನಡೆಸಿದ. ಕಡೆಗೆ ಪ್ರತಿಯೊಂದು ಅಕ್ಷರಕ್ಕೂ ಪ್ರತ್ಯೇಕವಾದ ಮಾತೃಕೆಗಳನ್ನು ಉಪಯೋಗಿಸಿ ಒಂದು ಪಂಕ್ತಿಯನ್ನು ಏಕಕಾಲದಲ್ಲಿ ಎರಕ ಹೊಯ್ಯುವ ಹೊಸ ಯಂತ್ರವನ್ನು ಕಂಡುಹಿಡಿದ. ಚುಕರ್ಸ್‌ನ ಡಬಲ್ ವೆಡ್ಜ್ ತೆರಪು ಮೊಳೆಗಳನ್ನು ತನ್ನ ಎರಡನೆಯ ಯಂತ್ರಕ್ಕೆ ಅಳವಡಿಸಿಕೊಂಡ (1885), ಮಾತೃಕೆಗಳನ್ನು ಸರಿಯಾದ ಸ್ಥಾನದಲ್ಲಿ ನಿಲ್ಲಿಸಲು ಕೃತಕ ಗಾಳಿಯನ್ನು ಬಳಸಿ ಮೂರನೆಯ ಯಂತ್ರವನ್ನು ಅದೇ ವರ್ಷ ಕಂಡುಹಿಡಿದ. ಬ್ಲೋಯರ್ ಎಂಬ ಹೆಸರಿನ ಈ ಯಂತ್ರ ಹೆಚ್ಚು ಪ್ರಚಾರಕ್ಕೆ ಬಂದಿತು. ಆಮೇಲೆ ಈ ಬಗೆಯ ಸುಮಾರು ಇನ್ನೂರು ಯಂತ್ರಗಳನ್ನು ತಯಾರಿಸಿದರು. ಅನೇಕ ಯಂತ್ರಗಳನ್ನು ಇಂಗ್ಲೆಂಡ್ ದೇಶಕ್ಕೂ ಕಳುಹಿಸಿದರು. ಇವನ್ನು ಸಮಾಚಾರ ಪತ್ರಿಕೆಗಳ ಮುದ್ರಣಕ್ಕೆ ಹೆಚ್ಚಾಗಿ ಬಳಸಿದರು. ಕೃತಕ ಗಾಳಿಯನ್ನು ಒಯ್ಯಲು ಮೆರ್‌ಗನ್‌ಥ್ಲರ್ ಯಂತ್ರಕ್ಕೆ ಅಳವಡಿಸಿದ್ದ ಉಪಕರಣವನ್ನು 1890ರಲ್ಲಿ ತಯಾರಿಸಿದ ಅವನ ಮತ್ತೊಂದು ಯಂತ್ರದಲ್ಲಿ ಕೈಬಿಡಲಾಯಿತು. ಇದು ಹೆಚ್ಚು ಕಡಿಮೆ ಈಗಿನ ಲೈನೋ ಯಂತ್ರದ ಗುಣವೈಶಿಷ್ಟ್ಯವನ್ನು ಹೊಂದಿದೆ.



ಮಾನೋಟೈಪ್ ಯಂತ್ರದ ಕೈಮಣೆ

ಅಮೆರಿಕದ ಓಹಿಯೋದಲ್ಲಿ ಜನಿಸಿದ ಟಾಲ್‌ಬರ್ಟ್ ವಾಷಿಂಗ್‌ಟನ್ನಿನಲ್ಲಿ ಹೊಸ ಮಾದರಿಯ ಯಂತ್ರದ ನಿರ್ಮಾಣ ಕಾರ್ಯದಲ್ಲಿ ತೊಡಗಿ ಈಗಿನ ಮಾದರಿಯ ರಂಧ್ರಗಳ ಪಟ್ಟಿಯನ್ನು ಉಪಯೋಗಿಸಿ ಅಚ್ಚಿನ ಮೊಳೆಪಟ್ಟಿಯನ್ನು ತಯಾರಿಸಿದ (1885). ಅನಂತರ ಲಾನ್‌ಸ್ಟನ್ನನು ಟಾಲ್‌ಬರ್ಟ್‌ನ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಬದಲಾಯಿಸಿ ಪ್ರತಿ ಅಕ್ಷರಕ್ಕೂ ಪ್ರತ್ಯೇಕ ಅಚ್ಚಿನಮೊಳೆ ತಯಾರಿಸುವ ಯಂತ್ರವನ್ನು ಕಂಡು ಹಿಡಿದ (1890). ಅವನು ತಯಾರಿಸಿದ (1897) ಮತ್ತೊಂದು ಯಂತ್ರದಲ್ಲಿ ಈಗಿನ ಮಾನೋಟಯಪ್ ಯಂತ್ರದ ಮುಖ್ಯ ತತ್ತ್ವಗಳನ್ನು ಕಾಣಬಹುದು.

ಅಮೆರಿಕದ ಡಬ್ಲ್ಯೂ.ಐ.ಲಡ್ಲೋ ಎಂಬುವವ ಮೊಳೆ ಜೋಡಿಸುವ ಯಂತ್ರಗಳ ತಯಾರಿಕೆಯಲ್ಲಿ ಕೆಲವು ಹೊಸ ತತ್ತ್ವಗಳನ್ನು ನಿರೂಪಿಸಿ 1906ರಲ್ಲಿ ಒಂದು ಕಂಪನಿಯನ್ನು ಸ್ಥಾಪಿಸಿದ ಡಬ್ಲ್ಯೂ.ಎ. ರೀಡೆಗೆ ತನ್ನ ತತ್ತ್ವಗಳನ್ನು ಅರಿವು ಮಾಡಿಕೊಟ್ಟ. ರೀಡೆ ಅನೇಕ ಸಂಶೋಧನೆಗಳನ್ನು ನಡೆಸಿ ಕೈಯಿಂದ ಮಾತೃಕೆಗಳನ್ನು ಜೋಡಿಸಿ ಪ್ರತ್ಯೇಕವಾಗಿ ಅಲಂಕರಣ ಪಂಕ್ತಿಯನ್ನು ತಯಾರಿಸುವ ಯಂತ್ರವನ್ನು ಕಂಡುಹಿಡಿದ. ಅನಂತರ ಈಗಿನ ಲಡ್ಲೊ ಯಂತ್ರದಲ್ಲಿನ ಮುಖ್ಯ ತತ್ತ್ವಗಳನ್ನು ಅಳವಡಿಸಿ ಹೊಸ ಯಂತ್ರವನ್ನು ನಿರ್ಮಿಸಲಾಯಿತು (1911). ನ್ಯೂಯಾರ್ಕಿನ ಅಂತಾರಾಷ್ಟ್ರೀಯ ಮೊಳೆ ಜೋಡಿಸುವ ಯಂತ್ರ ಪರಿಷತ್ತಿನವರು ಮೂರು ಬಗೆಯ ಯಂತ್ರಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದರು (1911). 1912ರಲ್ಲಿ ಎಮ್‌ಬ್ರೊ ಇಂಟರ್ ಟೈಪ್ ಯಂತ್ರ ತಯಾರಾಯಿತು. 1914ರಲ್ಲಿ ಮಹಾಯುದ್ಧ ಯುರೋಪನ್ನು ಸುತ್ತುವರಿಯುವ ಹೊತ್ತಿಗೆ ಮೊಳೆ ಜೋಡಿಸುವ ಯಂತ್ರಗಳು ಹೆಚ್ಚು ಪ್ರಚಾರಕ್ಕೆ ಬಂದಿದ್ದುವು. (ಎಚ್.ಎನ್.)



ಮಾನೋಟೈಪ್ ಕ್ಯಾಸ್ಟಿಂಗ್ ಯಂತ್ರ

**ಅಚ್ಚುಮೊಳೆ ಮುದ್ರಣ :** ಈ ಕಲೆಯಲ್ಲಿ ಮುದ್ರಣವಾಗುವ ವಿಷಯ ಪ್ರಮುಖವಾದದ್ದು, ರೂಪರೇಷೆಗೆ ಅಂದಕ್ಕೆ ದ್ವಿತೀಯ ಸ್ಥಾನ. ಇದರಲ್ಲಿ ವರ್ಣಮಾಲೆಯ ಅಕ್ಷರಗಳು ಹೆಚ್ಚಾಗಿ ಬಳಕೆಯಾಗುತ್ತವೆ.

ಎಲ್ಲ ಮುದ್ರಣಕಾರರೂ ಸಾಧಾರಣವಾಗಿ ಮುದ್ರಣಕಲೆಗೆ ಸಂಬಂಧಿಸಿದ ಕೆಲವು ಸಾಮಾನ್ಯ ನಿಯಮಗಳನ್ನು ಅನುಸರಿಸಬೇಕು. ಮುದ್ರಕನ ರೋಮನ್ ವರ್ಣಮಾಲೆಯಲ್ಲಿ. ಕ್ಯಾಪಿಟಲ್, ಸಣ್ಣ ಕ್ಯಾಪಿಟಲ್ ಸಣ್ಣ ಅಕ್ಷರಗಳು, ಅಂಕಿಗಳು, ಓರೆ (ಇಟ್ಯಾಲಿಕ್) ಕ್ಯಾಪಿಟಲ್ ಅಕ್ಷರಗಳು ಮತ್ತು ಓರೆ ಸಣ್ಣ ಅಕ್ಷರಗಳು ಮುಂತಾಗಿ ಸು. 200 ವಿಧವಾದ ಅಚ್ಚುಮೊಳೆಗಳಿವೆ. ನಮ್ಮ ದೇಶದ ಭಾಷೆಗಳಲ್ಲಿ ಪೂರ್ಣಾಕ್ಷರಗಳು ಅರ್ಧ ಅಕ್ಷರಗಳು ತಲೆಕಟ್ಟುಗಳು ಒತ್ತುಗಳು ಅಂಕಿಗಳು ಮುಂತಾದ ವಿವಿಧ ಮೊಳೆಗಳಿವೆ. ಅಲ್ಲದೆ ಶಬ್ದಗಳ ಮಧ್ಯದಲ್ಲಿ ಸೇರಿಸುವ (ಸ್ಪೇಸ್) ಸಾಲುಗಳ ಮಧ್ಯದಲ್ಲಿ ಸೇರಿಸುವ (ಲೆಡ್ಸ್) ತೆರಪುಗಳೂ ರೇಖೆಗಳನ್ನು ಮುದ್ರಿಸುವ ರೂಲುಗಳೂ ಆಲಂಕಾರಿಕ ಅಂಚುಗಳೂ ಚಿತ್ರಗಳನ್ನು ಮುದ್ರಿಸುವ ಮರದ ಅಥವಾ ಲೋಹದ ಫಲಕಗಳೂ ಮುದ್ರಕನಿಗೆ ಬೇಕಾದ ಸಾಮಗ್ರಿಗಳಲ್ಲಿ ಸೇರಿವೆ. ತೆರಪುಗಳು ವಿನಾ ಇತರ ಎಲ್ಲವೂ ಒಂದೇ ಮಟ್ಟದಲ್ಲಿರಬೇಕು.

ಅಚ್ಚುಮೊಳೆ ವರ್ಣಮಾಲೆಯಲ್ಲಿ ಅನೇಕ ತರದ ಆಕೃತಿಗಳನ್ನು (ಸ್ಟೈಲ್) ಕಲಾನಿಪುಣರು ತಯಾರಿಸಿದ್ದಾರೆ. ಕೆಲವು ಸಾಮಾನ್ಯ ದುಂಡಾಕೃತಿಯವು. ಕೆಲವು ಸಂಕುಚಿತ (ಕಂಡೆನ್ಸ್‌ಡ್) ಆಕೃತಿಯವು. ಮತ್ತೆ ಕೆಲವು ಉಬ್ಬಿದ ಆಕೃತಿಯವು (ಎಕ್ಸ್‌ಪ್ಯಾಂಡೆಡ್). ಕೆಲವು ಅಕ್ಷರಗಳ ರೂಪರೇಷೆಗಳು ಸಾಮಾನ್ಯ ಗಾತ್ರದಲ್ಲಿರುತ್ತವೆ. ಇನ್ನು ಕೆಲವು ತೆಳುವಾಗಿರುತ್ತವೆ. ಮತ್ತೆ ಕೆಲವು ದಪ್ಪವಾಗಿರುತ್ತವೆ (ಬೋಲ್ಡ್). ಮುದ್ರಿಸಬೇಕಾದ ವಿಷಯಕ್ಕೆ ಸೂಕ್ತಶೈಲಿಯ ಅಚ್ಚುಮೊಳೆಗಳನ್ನು ಚುನಾಯಿಸಿಕೊಂಡು ಜೋಡಣೆ ಮಾಡುವುದೇ ಒಂದು ಕಲೆ. ಈ ಕಲೆಯಲ್ಲಿ ಪ್ರಯೋಗದ ಆಧಾರದ ಮೇಲೆ ನಿರ್ಮಿಸಲ್ಪಟ್ಟ ಕೆಲವು ತತ್ತ್ವಗಳನ್ನು ಅನುಸರಿಸುವುದುಂಟು.

ಮೊಳೆಗಳನ್ನು ಎಲ್ಲ ವಿಧವಾದ ಎಂದರೆ ಬೈಬಲ್, ವಿಶ್ವಕೋಶ ಮುಂತಾದುವುಗಳಿಗೆ ಉಪಯೋಗಿಸುವ ಸಣ್ಣ ಗಾತ್ರದಿಂದ (6 ಪಾಯಿಂಟ್ ಮೊಳೆಗಳು) ಭಿತ್ತಿಪತ್ರಗಳಿಗೆ (ಪೋಸ್ಟರ್) ಉಪಯೋಗಿಸುವ ದೊಡ್ಡ ಗಾತ್ರದ 2"–3"ದಲ್ಲಿಯೂ ತಯಾರಿಸುತ್ತಾರೆ. ಮುದ್ರಿಸಬೇಕಾದ ಪುಸ್ತಕ ಅಥವಾ ಕಾಗದದ ಹಾಳೆಯ ಅಗಲಕ್ಕೆ ಅನುಗುಣವಾಗಿ, ಅಚ್ಚು ಮೊಳೆಯ ಸಾಲುಗಳು ಸಹ ಇರುತ್ತವೆ. ಕಾಗದದಲ್ಲಿ ಅಚ್ಚಾದ ಮೇಲೆ ಅದರ ಸುತ್ತಲೂ ಕೈಯಾಡಿಸಲಿಕ್ಕೂ ಅಂದವಾಗಿ ಕಾಣುವುದಕ್ಕೂ ಸಾಕಾದಷ್ಟು ಖಾಲಿ ಅಂಚು (ಮಾರ್ಜಿನ್) ಸ್ಥಳವಿರಬೇಕು. ಒಂದು ಪುಸ್ತಕದ ಬೆನ್ನಿಗಿಂತ ತಲೆಯ ಮೇಲೆ ಜಾಸ್ತಿ ಸ್ಥಳ ಇರಬೇಕು. ಮೇಲ್ಭಾಗ ಮುಂಭಾಗಕ್ಕಿಂತ ಕೆಳಗಡೆ ಹೆಚ್ಚಿಗೆ ಸ್ಥಳವಿರಬೇಕು. ಒಂದೇ ಹಾಳೆಯಲ್ಲಿ ಮುದ್ರಿಸುವಾಗ ಎರಡೂ ಪಕ್ಕಗಳಲ್ಲಿ ಒಂದೇ ಸಮನಾದ ಸ್ಥಳ ಬಿಟ್ಟಿರಬೇಕು. ತಲೆಯ ಭಾಗಕ್ಕಿಂತ ಕೆಳಗಡೆ ಜಾಸ್ತಿ ಸ್ಥಳವಿರಬೇಕು. ವಿಶೇಷ ಸಂಪುಟಗಳಲ್ಲಿ ಅಚ್ಚಾದ ಪುಟಗಳ ಸುತ್ತಲೂ ಈ ಖಾಲಿ ಸ್ಥಳ ಹೇರಳವಾಗಿರಬೇಕು.

ಅಚ್ಚಿನ ಮೊಳೆ ಜೋಡಿಸುವಾಗ ಮೊಳೆಯ ಗಾತ್ರಕ್ಕೆ ತಕ್ಕಂತೆ ಸಾಲುಗಳ ಉದ್ದವನ್ನು ನಿರ್ಧರಿಸಬೇಕಾಗುತ್ತದೆ. ಅಕ್ಷರವೂ ಸಣ್ಣದಾಗಿದ್ದು ಸಾಲೂ ಉದ್ದವಾಗಿದ್ದರೆ ಓದುಗನ ಕಣ್ಣಿಗೆ ಹೆಚ್ಚು ಶ್ರಮವಾಗುತ್ತದೆ. ಆದ್ದರಿಂದ ಅಕ್ಷರ ಸಣ್ಣದಾಗಿದ್ದಲ್ಲಿ ಸಾಲುಗಳ ಉದ್ದ ಸಣ್ಣದಾಗಿಯೂ ಅಕ್ಷರ ದಪ್ಪವಾಗಿದ್ದಲ್ಲಿ ಉದ್ದ ಹೆಚ್ಚಾಗಿಯೂ ಇರಬೇಕಾಗುತ್ತದೆ. ತೀರ ದಪ್ಪವಾದ ಅಕ್ಷರಗಳಲ್ಲಿ ಅಚ್ಚಾಗುವ ಭಿತ್ತಿಪತ್ರಗಳ ಸಾಲಿನ ಉದ್ದ ಮೂರು ನಾಲ್ಕು ಅಡಿಗಳಿದ್ದರೂ ಬಾಧಕವಿಲ್ಲ. ಆದುದರಿಂದಲೇ 10 ಪಾಯಿಂಟ್ ಮೊಳೆಗಳಲ್ಲಿ ಅಚ್ಚಾಗುವ ದಿನಪತ್ರಿಕೆ ಮಾಸಪತ್ರಿಕೆಗಳಲ್ಲಿ ಪ್ರತಿಪುಟದಲ್ಲೂ ತೀರಾ ಚಿಕ್ಕ ಸಾಲುಗಳನ್ನುಳ್ಳ ಹಲವಾರು ಕಾಲಂಗಳನ್ನು ಅಳವಡಿಸಿರುತ್ತಾರೆ.

ಮುದ್ರಿಸಿದ ಪುಸ್ತಕ ಹೆಚ್ಚು ಸುಲಭಗ್ರಾಹ್ಯವೂ ಆಗಬೇಕಾದರೆ ಪ್ರತಿಸಾಲಿನ ಮಧ್ಯೆ ಸಾಕಷ್ಟು ಜಾಗವಿರಬೇಕು. ಅದಕ್ಕಾಗಿ ಒಂದೇ ಗಾತ್ರದ ಲೆಡ್‌ಗಳನ್ನು ಬಳಸಲಾಗುತ್ತದೆ. ಹಾಗಿಲ್ಲದಿದ್ದಲ್ಲಿ ಸಾಲುಗಳ ಮಧ್ಯದ ಜಾಗ ತೀರ ಕಡಿಮೆಯಾಗಿ ಓದುಗನಿಗೆ ತೊಂದರೆಯಾಗುತ್ತದೆ.

ರೋಮನ್ ಲಿಪಿಯ ಕ್ಯಾಪಿಟಲ್ ಅಚ್ಚುಮೊಳೆಗಳನ್ನು ಪ್ರಾರಂಭದ ಒಂದೆರಡು ಶಬ್ದಗಳಿಗೆ, ಪುಸ್ತಕದ ಅಥವಾ ಇತರ ವಿಭಾಗದ ಶೀರ್ಷಿಕೆ ಮುಂತಾದುವುಗಳಿಗೆ ಮಾತ್ರ ಉಪಯೋಗಿಸಬಹುದು. ಆದ್ಯಂತ ಅದನ್ನೇ ಉಪಯೋಗಿಸಬಾರದು. ಅನಿವಾರ್ಯ ಸಂದರ್ಭಗಳಲ್ಲಿ ಕ್ಯಾಪಿಟಲ್ ಮತ್ತು ಸಣ್ಣ ಕ್ಯಾಪಿಟಲ್‌ಗಳನ್ನು ಸೇರಿಸಿ ಉಪಯೋಗಿಸಬಹುದು. ಪುಸ್ತಕದ ಆಕೃತಿ, ಅದರಲ್ಲಿ ಮುದ್ರಿತವಾದ ವಿಷಯದ ಆಕೃತಿ ಸಾಮಾನ್ಯವಾಗಿ ಆಯಾಕಾರವಾಗಿರಬೇಕು. ಮೇಲೆ ಹೇಳಿದಂತೆ ಅಚ್ಚಿನ ಮೊಳೆ ಜೋಡಿಸುವಾಗ ಪುಸ್ತಕದ ಮೊದಲನೆಯ ಪ್ಯಾರಾದ ಪ್ರಥಮ ಶಬ್ದದ ಪ್ರಥಮಾಕ್ಷರವನ್ನು ಮುಂಬರುವ ಅಕ್ಷರಗಳಿಗಿಂತ

ದೊಡ್ಡ ಅಚ್ಚು ಮೊಳೆಯಲ್ಲಿ ಜೋಡಿಸುವುದು ಒಂದು ವಿಶೇಷ ಪದ್ಧತಿಯಾಗಿದೆ. ಪುಸ್ತಕದ ಹಾಗೂ ಅಧ್ಯಾಯದ ಶೀರ್ಷಿಕೆಗಳನ್ನು ಪ್ರತಿ ಪುಟದ ಮೇಲ್ಭಾಗದಲ್ಲಿಯಾಗಲಿ ತಳಭಾಗದಲ್ಲಿಯಾಗಲಿ ಪುಟ ಸಂಖ್ಯೆಗಳ ಜೊತೆಗೆ ಅಚ್ಚು ಮಾಡುತ್ತಾರೆ. ಸಾಮಾನ್ಯವಾಗಿ ಪುಸ್ತಕ ಶೀರ್ಷಿಕೆ ಎಡಪುಟದಲ್ಲೂ ಅಧ್ಯಾಯಶೀರ್ಷಿಕೆ ಬಲಪುಟದಲ್ಲೂ ಬರಬೇಕು. ಈ ವಿನ್ಯಾಸದಲ್ಲಿ ಹೆಚ್ಚು ವೈವಿಧ್ಯಕ್ಕೆ ಅವಕಾಶವಿದೆ.

ಮುಖಪತ್ರ ವಿನ್ಯಾಸದಲ್ಲಿ (ಟೈಟ್ಲ್ ಪೇಜ್) ಉಪಯೋಗಿಸುವ ಮೊಳೆಗಳ ಗಾತ್ರ ಒಳಪುಟಗಳ ಮೊಳೆಯ ಗಾತ್ರಕ್ಕಿಂತ ಎರಡರಷ್ಟಾದರೂ ಹೆಚ್ಚಾಗಿರಬೇಕು. **(ನೋಡಿ–ಮುದ್ರಣ ಕಲೆ)** (ಎಂ.ಎ.ಎಸ್.)

**ಅಚ್ಚುಮೊಳೆಯ ಲೋಹ :** ಮುದ್ರಣಕಲೆಯ ಇತಿಹಾಸವನ್ನು ಅವಲೋಕಿಸಿದರೆ ಮುದ್ರಣಕ್ಕೆ ಲೋಹದಿಂದ ಮಾಡಿದ ಅಚ್ಚಿನ ಮೊಳೆಗಳನ್ನು ಉಪಯೋಗಿಸುವ ಮೊದಲು ಕಲ್ಲು ಮತ್ತು ಮರಗಳ ಮೇಲೆ ಕೆತ್ತನೆ ಮಾಡಿ ಮುದ್ರಿಸುತ್ತಿದ್ದರೆಂಬ ವಿಷಯ ತಿಳಿಯುತ್ತದೆ. ಎರಕದ ಅಚ್ಚನ್ನು ಕಂಡುಹಿಡಿದ ಮೇಲೆ. ಈ ಕೆಲಸಕ್ಕೆ ಸೀಸ ಬಹಳ ಉಪಯುಕ್ತ ಲೋಹ ಎಂಬುದನ್ನು ಮನಗಂಡರೂ ಮೊಟ್ಟ ಮೊದಲು ಯಾವ ಲೋಹವನ್ನು ಉಪಯೋಗಿಸಿ ಮೊಳೆಗಳನ್ನು ತಯಾರಿಸಿದರು ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಬಹುಶಃ ಬಿಸ್ಮತ್ ಎಂಬ ಮೂಲ ಲೋಹವನ್ನು ಮೊದಲ ಪ್ರಯೋಗಗಳಲ್ಲಿ ಬಳಸಿರಬಹುದು.

ಮೊಳೆಯ ಲೋಹ ಕಡಿಮೆ ಶಾಖದಲ್ಲಿ ಕರಗಬೇಕು. ಕರಗಿದ ಲೋಹ ಎರಕ ಹೊಯ್ಯುವಾಗ ಯಾವ ಅಡಚಣೆಗಳಿಗೂ ಒಳಗಾಗದೆ ಸರಾಗವಾಗಿ ಹರಿಯಬೇಕು. ಲೋಹ ಅಕ್ಷರಮುಖದ ಪೂರ್ಣ ಎರಕಕ್ಕೆ ತಕ್ಕದ್ದಾಗಿರಬೇಕು. ಅಚ್ಚಿನ ಒತ್ತಡವನ್ನು ತಡೆಯುವ ಶಕ್ತಿ ಲೋಹಕ್ಕಿರಬೇಕು. ಬಹುಬೇಗ ಸವೆದು ಹೋಗಬಾರದು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಲೋಹವಿದ್ಯೆಯಲ್ಲಿ ಪಳಗಿದವರು ಸಂಶೋಧನೆ ನಡೆಸಿ ಸೀಸ, ತವರ ಮತ್ತು ಆಂಟಿಮೊನಿ ಉಚಿತ ಪ್ರಮಾಣದಲ್ಲಿರುವ ಮಿಶ್ರಲೋಹ ಅತ್ಯುತ್ತಮವಾದುದೆಂಬುದನ್ನು ಮನಗಂಡರು.

ಸೀಸ 327.2$^{o}$ ಫ್ಯಾ. ಉಷ್ಣತೆಯಲ್ಲಿ ಕರಗುತ್ತದೆ. ಬಹುಬೇಗ ತಣ್ಣಗಾಗುತ್ತದೆ. ಭೂಮಿಯಿಂದ ತೆಗೆದ ಸೀಸದ ಅದುರು ಸೀಸ ಮತ್ತು ಗಂಧಕದ ಮಿಶ್ರಣದಿಂದ ಕೂಡಿರುತ್ತದೆ. ಶುದ್ಧಿ ಮಾಡಿದ ಸೀಸ ಬಹಳ ಮೆತು. ಆದ್ದರಿಂದ ಅಕ್ಷರದ ಮುಖವನ್ನು ಸ್ಪಷ್ಟವಾಗಿ ಎರಕ ಮಾಡಲು ಯೋಗ್ಯವಾದ ಲೋಹವಲ್ಲ. ಆದ್ದರಿಂದ ಅಚ್ಚಿನ ಮೊಳೆಗೆ ಅದೊಂದೇ ಸರಿಯಾಗದು.

ತವರ 449$^{o}$ ಫ್ಯಾ. ಉಷ್ಣತೆಯಲ್ಲಿ ಕರಗುತ್ತದೆ. ಮೃದುವಾದ ಲೋಹವಾದರೂ ಸೀಸಕ್ಕಿಂತ ಹೆಚ್ಚು ಗಟ್ಟಿಯಾದ ಜಿಗುಟಾದ ಲೋಹ. ತವರವನ್ನು ಸೀಸದೊಡನೆ ಉಚಿತ ಪ್ರಮಾಣದಲ್ಲಿ ಸೇರಿಸಿದರೆ ಸೀಸ ಗಟ್ಟಿಯಾಗುವುದು ಮಾತ್ರವಲ್ಲದೆ ಒಡೆದು ಹೋಗುವ ಸ್ವಭಾವವನ್ನು ಕಳೆದುಕೊಳ್ಳುತ್ತದೆ. ಮುದ್ರಣಕಾಲದಲ್ಲಿ ಅಕ್ಷರಗಳು ಒಡೆದು ಹೋಗದಂತೆ ತಡೆಯುವ ಶಕ್ತಿಯನ್ನು ತವರ ಸೀಸಕ್ಕೆ ಕೊಡುತ್ತದೆ. ಲೋಹವನ್ನು ಕರಗಿಸುವಾಗ ತವರ ಆ ಲೋಹವನ್ನು ದ್ರವ ರೂಪಕ್ಕೆ ತರಲು ಕಾರಣವಾಗುವುದಲ್ಲದೆ ಅಕ್ಷರದ ಮುಖವನ್ನು ಅಂದವಾಗಿ ಎರಕ ಹೊಯ್ಯಲು ಸಹಾಯಕವಾಗುತ್ತದೆ.

ಆಂಟಿಮೊನಿ 1167$^{o}$ ಫ್ಯಾ. ಉಷ್ಣತೆಯಲ್ಲಿ ಕರಗುತ್ತದೆ. ಭೂಮಿಯಿಂದ ತೆಗೆದ ಆಂಟಿಮೊನಿ ಅದುರಿನಲ್ಲಿ ಆಂಟಿಮೊನಿ ಮತ್ತು ಗಂಧಕದ ಮಿಶ್ರಣವಿರುತ್ತದೆ. ಪೆಡಸಾದ ಲೋಹವಾದರೂ ಕರಗಿ ಗಟ್ಟಿಯಾಗುವಾಗ ವಿಕಾಸಗೊಳ್ಳುವ ಗುಣವನ್ನು ಪಡೆದಿದೆ. ಉಚಿತ ಪ್ರಮಾಣದಲ್ಲಿ ಸೀಸದೊಡನೆ ಸೇರಿಸಿದರೆ ಸೀಸದ ಬಲವನ್ನು ವೃದ್ಧಿಪಡಿಸುವುದು ಮಾತ್ರವಲ್ಲದೆ ಅಕ್ಷರದ ಮುಖ ಅಂದವಾಗಿ ಎರಕವಾಗಲು ಸಹಾಯಕವಾಗುತ್ತದೆ.

ಲೈನೋಟೈಪ್ ಯಂತ್ರದಲ್ಲಿ ಅಚ್ಚಿನ ಮೊಳೆ ಪಂಕ್ತಿಗಳನ್ನು ಎರಕ ಹೊಯ್ಯಲು ಶೇ.4 ಭಾಗ ತವರ, ಶೇ.11 1/2 ಭಾಗ ಅಂಟಿಮೊನಿ ಮತ್ತು ಶೇ.84 1/2 ಭಾಗ ಸೀಸವಿರುವ ಮಿಶ್ರಲೋಹವನ್ನು ಬಳಸುತ್ತಾರೆ. ಕರಗಿದ ಈ ಮಿಶ್ರಣ ಬಹುಬೇಗ ಗಟ್ಟಿಯಾಗುತ್ತದೆ. ಮೇಲೆ ಹೇಳಿದ್ದಕ್ಕಿಂತ ಕಡಿಮೆ ಪ್ರಮಾಣ ಆಂಟಿಮೊನಿ ಇರುವ ಮಿಶ್ರಲೋಹವನ್ನು ಉಪಯೋಗಿಸಿದರೆ ಎರಕದ ಪಂಕ್ತಿ ಬಹಳ ಮೃದುವಾಗುವುದರಿಂದ ಮುದ್ರಣ ಕಾರ್ಯಕ್ಕೆ ಯೋಗ್ಯವಾಗಿರುವುದಿಲ್ಲ. ಒಂದು ವೇಳೆ ಸಾಕಷ್ಟು ಪ್ರಮಾಣದ ತವರವಿಲ್ಲದ ಮಿಶ್ರಲೋಹವನ್ನು ಉಪಯೋಗಿಸಿ ಎರಕ ಹೊಯ್ದರೆ ಎರಕದ ಪಂಕ್ತಿ ಟೊಳ್ಳಾಗುವುದು ಮಾತ್ರವಲ್ಲದೆ ಅಕ್ಷರಗಳ ಮುಖ ಅಂದವಾಗಿ ಬರುವುದಿಲ್ಲ.

ಮಾನೋಟೈಪ್ ಯಂತ್ರದಲ್ಲಿ ಬಿಡಿ ಅಚ್ಚಿನ ಮೊಳೆಗಳನ್ನು ಎರಕ ಮಾಡಲು ಸಾಮಾನ್ಯವಾಗಿ ಶೇ.10 ಭಾಗ ತವರ, ಶೇ.10 ಭಾಗ ಆಂಟಿಮೊನಿ ಮತ್ತು ಶೇ.74 ಭಾಗ ಸೀಸದ ಮಿಶ್ರಲೋಹವನ್ನು ಉಪಯೋಗಿಸುತ್ತಾರೆ. ಅಂದರೆ ಲೈನೋಟೈಪ್ ಯಂತ್ರದಲ್ಲಿ ಉಪಯೋಗಿಸುವ ಲೋಹಕ್ಕಿಂತ ಗಟ್ಟಿಯಾದ ಮಿಶ್ರಲೋಹವನ್ನು, ಮಾನೋಟೈಪ್ ಯಂತ್ರದಲ್ಲಿ ಬಿಡಿ ಅಚ್ಚಿನ ಮೊಳೆಗಳನ್ನು ಎರಕ ಮಾಡಲು ಬಳಸಬೇಕು. ಸಾಮಾನ್ಯ ಕೆಲಸಕ್ಕೆ ಬೇಕಾಗುವ ಅಚ್ಚಿನ ಮೊಳೆಗಳನ್ನು ಮಾನೋಟೈಪ್ ಯಂತ್ರದಲ್ಲಿ ಎರಕ ಮಾಡಲು ಶೇ.6 ಭಾಗ ತವರ, ಶೇ.15 ಭಾಗ ಆಂಟಿಮೊನಿ, ಶೇ.79 ಭಾಗ ಸೀಸದ ಮಿಶ್ರಲೋಹವನ್ನು ಉಪಯೋಗಿಸುವುದುಂಟು. ಹೆಚ್ಚಿನ ಸಂಖ್ಯೆಯ ಪುಸ್ತಕಗಳನ್ನು ಅಚ್ಚು ಮಾಡಲು ಬೇಕಾದ ಅಚ್ಚಿನ ಮೊಳೆಗಳ ತಯಾರಿಕೆಗೆ ಶೇ.13 ಭಾಗ ತವರ, ಶೇ.17 ಭಾಗ ಆಂಟಿಮೊನಿ ಮತ್ತು ಶೇ.70 ಭಾಗ ಸೀಸದ ಮಿಶ್ರಲೋಹವನ್ನು ಉಪಯೋಗಿಸುತ್ತಾರೆ. ಹೆಚ್ಚು ಕಾಲ ಉಪಯೋಗಿಸಲು ಯೋಗ್ಯವಾದ ಅಲಂಕರಣ ಮುದ್ರಣಕ್ಕೆ ಬೇಕಾದ ಮೊಳೆಗಳನ್ನು ತಯಾರಿಸಲು ಶೇ.12 ಭಾಗ ತವರ, ಶೇ.24 ಭಾಗ ಆಂಟಿಮೊನಿ ಮತ್ತು 64% ಭಾಗ ಸೀಸದಿಂದ ಕೂಡಿದ ಮಿಶ್ರಲೋಹವನ್ನು ಉಪಯೋಗಿಸಬೇಕು.

ಸ್ಟೀರಿಯೋ ಫಲಕಗಳನ್ನು ತಯಾರಿಸಲು ಶೇ.6.4 ಭಾಗ ತವರ, ಶೇ.13.95 ಭಾಗ ಆಂಟಿಮೊನಿ ಮತ್ತು ಶೇ. 79.65 ಭಾಗ ಸೀಸವಿರುವ ಮಿಶ್ರಲೋಹವನ್ನು ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಮಾನೋಟೈಪ್ ಯಂತ್ರಕ್ಕೆ ಉಪಯೋಗಿಸುವ ಶೇ.10 ಭಾಗ ತವರ, ಶೇ.16 ಭಾಗ ಆಂಟಿಮೊನಿ ಮತ್ತು ಶೇ.74 ಭಾಗ ಸೀಸವಿರುವ ಮಿಶ್ರಲೋಹವನ್ನು ಸ್ಟೀರಿಯೋ ಫಲಕಗಳನ್ನು ಮಾಡಲು ಉಪಯೋಗಿಸಬಹುದು. ಆದರೆ ಕಡಿಮೆ ಪ್ರಮಾಣದ ತವರ ಮತ್ತು ಆಂಟಿಮೊನಿ ಇರುವ ಮಿಶ್ರಲೋಹವನ್ನು ಈ ಕೆಲಸಕ್ಕೆ ಬಳಸುವುದು ಹೆಚ್ಚು ರೂಢಿಯಲ್ಲಿದೆ.

ಯಂತ್ರಗಳಿಂದ ಎರಕ ಮಾಡಿ, ಜೋಡಿಸಿದ ಅಚ್ಚಿನ ಮೊಳೆಗಳನ್ನು ಯಾವುದಾದರೂ ಒಂದು ಕೆಲಸದ ಮುದ್ರಣ ಕಾರ್ಯ ಮುಗಿದ ಕೂಡಲೇ ಮೊಳೆ ಕಾಯಿಸುವ ಪಾತ್ರೆಗೆ ಸುರಿದು ಕರಗಿಸಿ ಹೊಸ ಮೊಳೆಗಳನ್ನು ತಯಾರಿಸುತ್ತಾರೆ. ಆದ್ದರಿಂದ ಯಂತ್ರಗಳಿಂದ ಎರಕ ಮಾಡಿ ಜೋಡಿಸುವ ಬಿಡಿ ಅಚ್ಚಿನ ಮೊಳೆಗಳಿಗೆ ಮತ್ತು ಎರಕದ ಪಂಕ್ತಿಗಳಿಗೆ ಹೆಚ್ಚು ಶಕ್ತಿಯುತವಾದ ಲೋಹವನ್ನು ಬಳಸುವುದಿಲ್ಲ. ಆ ಕೆಲಸಕ್ಕೆ ಸುಲಭವಾಗಿ ಕರಗಿಸಿ ಸರಾಗವಾಗಿ ಎರಕ ಮಾಡಲು ಉಚಿತವಾದ ಲೋಹವನ್ನು ಉಪಯೋಗಿಸುತ್ತಾರೆ. ಪದೇ ಪದೇ ಅದೇ ಲೋಹವನ್ನು ಅಚ್ಚಿನ ಮೊಳೆಗಳ ತಯಾರಿಕೆಗೆ ಕರಗಿಸುವಾಗ ಆಮ್ಲಜನಕದೊಡನೆ ಸಂಯೋಗವಾಗಿ ತವರ ಮತ್ತು ಆಂಟಿಮೊನಿ ಸೀಸಕ್ಕಿಂತ ಬಹು ಬೇಗ ದುರ್ಬಲವಾಗುತ್ತದೆ. ಆದ್ದರಿಂದ ಹೆಚ್ಚು ಹೆಚ್ಚು ಭಾಗ ತವರ ಮತ್ತು ಆಂಟಿಮೊನಿ ಇರುವ ಮಿಶ್ರಲೋಹವನ್ನು ಹಳೆಯ ಮಿಶ್ರ ಲೋಹಕ್ಕೆ ಬೆರೆಸಿ ಎರಕ ಮಾಡಬೇಕಾಗುತ್ತದೆ.

ಕೈಯಿಂದ ಜೋಡಿಸುವ ಅಚ್ಚಿನ ಮೊಳೆಗಳಿಗೆ ಉಪಯೋಗಿಸುವ ಲೋಹ, ಯಂತ್ರಗಳಲ್ಲಿ ಜೋಡಿಸುವ ಅಚ್ಚಿನ ಮೊಳೆಗಳಿಗೆ ಉಪಯೋಗಿಸುವ ಲೋಹಕ್ಕಿಂತ ಶಕ್ತಿಯುತವಾಗಿರಬೇಕು. ಕೈಯಿಂದ ಜೋಡಿಸುವ ಅಚ್ಚಿನ ಮೊಳೆಗಳನ್ನು ದೀರ್ಘ ಕಾಲ ಬಳಸಬೇಕಾಗುವುದರಿಂದ ಈ ಮೊಳೆಗಳ ತಯಾರಿಕೆಗೆ ಶೇ.22 ಭಾಗ ತವರ, ಶೇ.27 ಭಾಗ ಆಂಟಿಮೊನಿ ಮತ್ತು ಶೇ.51 ಭಾಗ ಸೀಸವಿರುವ ಮಿಶ್ರಲೋಹವನ್ನು ಉಪಯೋಗಿಸಿದರೆ ಮೊಳೆಗಳು ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಮುದ್ರಣ ಕೆಲಸದಲ್ಲಿ ಅಚ್ಚಿನ ಮೊಳೆಗಳ ಸವೆಯುವಿಕೆಯನ್ನು ತಡೆಗಟ್ಟಲು ಕೆಲವು ವೇಳೆ ಅಲ್ಪ ಪ್ರಮಾಣದ ತಾಮ್ರವನ್ನು ಮಿಶ್ರಲೋಹಕ್ಕೆ ಸೇರಿಸುವುದುಂಟು. ಸು. ಶೇ.0.5 ಭಾಗದಿಂದ 1.5% ಭಾಗದವರೆಗೆ ತಾಮ್ರವನ್ನು ಮಿಶ್ರಲೋಹಕ್ಕೆ ಸೇರಿಸುತ್ತಾರೆ. ಉತ್ತಮ ದರ್ಜೆ ಮಿಶ್ರಲೋಹಕ್ಕೆ ಉಚಿತ ಪ್ರಮಾಣದಲ್ಲಿ ತಾಮ್ರವನ್ನು ಸೇರಿಸಿದರೆ ತಕ್ಕ ಫಲ ದೊರಕುವುದು. ಕಡಿಮೆ ದರ್ಜೆಯ ಮಿಶ್ರಲೋಹಕ್ಕೆ ತಾಮ್ರ ಬೆರೆಸಿದರೆ ತೊಂದರೆ ಹೆಚ್ಚು. (ಎಚ್.ಎಸ್.)

**ಅಚ್ಯುತರಾಯ :** ವಿಜಯನಗರದ ತುಳುವ ವಂಶದ ರಾಜ (1520–42) ತುಳುವ ನರಸನಾಯಕನ ಮಗ. ಕೃಷ್ಣದೇವರಾಯನ ಬಲತಮ್ಮ. ನಾಗಲಾದೇವಿ ಈತನ ತಾಯಿ.

ಅರಮನೆಯಲ್ಲಿ ಪಿತೂರಿಗಳನ್ನು ತಪ್ಪಿಸಲು ಕೃಷ್ಣದೇವರಾಯ ಇವನನ್ನು ಚಂದ್ರಗಿರಿಯಲ್ಲಿ ಸ್ವಲ್ಪಕಾಲ ಬಂಧನದಲ್ಲಿಟ್ಟಿದ್ದ. ಆದರೆ ಕೊನೆಗೆ ಇವನನ್ನೇ ಸಿಂಹಾಸನಕ್ಕೆ ಉತ್ತರಾಧಿಕಾರಿಯೆಂದು ನೇಮಿಸಿದ್ದರಿಂದ ಅವನ ಆಳ್ವಿಕೆಯ ಕೊನೆಯಲ್ಲಿ ಇವನೂ ಆಡಳಿತದಲ್ಲಿ ಸಹಕರಿಸುತ್ತಿದ್ದನೆಂದು ಕಾಣುತ್ತದೆ. 1528ರ ಒಂದು ಶಾಸನದಿಂದ ಇವನು ಚಕ್ರವರ್ತಿ ಬಿರುದನ್ನು ಹೊಂದಿ ರಾಜ್ಯವನ್ನಾಳುತ್ತಿದ್ದನೆಂದು ತಿಳಿದುಬರುತ್ತದೆ.

ಕೃಷ್ಣದೇವರಾಯ ಮೃತನಾದಾಗ ಅಚ್ಯುತರಾಯ ಚಂದಗಿರಿಯಲ್ಲಿದ್ದ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅಳಿಯ ರಾಮರಾಯ ತನ್ನ ಮೈದುನನನ್ನು (ಕೃಷ್ಣದೇವರಾಯನ ಕಿರಿಯ ಮಗ) ರಾಜನನ್ನಾಗಿ ಮಾಡಲು ಪ್ರಯತ್ನಿಸಿದ. ಅವನನ್ನು ರಾಜನೆಂದು ಘೋಷಿಸಿ ರಾಜ್ಯವನ್ನು ಕಸಿದುಕೊಳ್ಳಲು ಪ್ರಯತ್ನಿಸಿದ. ಇದರಲ್ಲಿ ರಾಮರಾಯನಿಗೆ ಹಲವು ಅಧಿಕಾರಿಗಳ ಬೆಂಬಲವೂ ಇತ್ತು. ಆದರೆ ಮೂವತ್ತು ಸಾವಿರ ಕಾಲಾಳುಗಳು, ಮೂರು ಸಾವಿರ ಆನೆಗಳ ಅಶ್ವ ಸೈನಿಕರು ಮತ್ತು ಮೂವತ್ತು ಸಾವಿರ ಪಬಲ ಸೈನ್ಯವಿದ್ದ ಚೋಳ ಪ್ರಾಂತ್ಯಾಧಿಕಾರಿ ನರಸಿಂಗರಾಯ ದಂಡನಾಯಕ ಇವನ ಬೆಂಬಲಿಗನಾಗಿದ್ದ. ಅಚ್ಯುತರಾಯ ಚಂದಗಿರಿಯಿಂದ ಬರುವವರೆಗೆ ಇವನ ಪರವಾಗಿ ರಾಜ್ಯವನ್ನು ನರಸಿಂಗರಾಯನೇ ವಹಿಸಿಕೊಂಡ. ಕೃಷ್ಣದೇವರಾಯನ ಮರಣದ ಸುದ್ದಿ ತಿಳಿದ ಕೂಡಲೆ ರಾಮರಾಯನ ಪಿತೂರಿಯನ್ನು ತಿಳಿದಿದ್ದ ಅಚ್ಯುತರಾಯ ಚಂದಗಿರಿಯಿಂದ ಮೊದಲು ತಿರುಪತಿಗೆ ಹೋಗಿ ಅಲ್ಲಿ ರಾಜ್ಯಪಟ್ಟಾಭಿಷೇಕ ಮಾಡಿಕೊಂಡ. ಅಲ್ಲಿಂದ ಕಾಳಹಸ್ತಿಗೆ ಹೋಗಿ ಅಲ್ಲಿ ಎರಡನೆಯ ಸಲ ರಾಜ್ಯಾಭಿಷೇಕ ಮಾಡಿಕೊಂಡ. ಅನಂತರ

ತನ್ನ ಬೆಂಬಲಿಗರು ರಾಮರಾಯನ ಬಲವನ್ನು ಮುರಿದಿದ್ದನ್ನು ತಿಳಿದು 1530ರ ಪೂರ್ವಾರ್ಧದಲ್ಲಿ ವಿಜಯನಗರಕ್ಕೆ ಬಂದ. ರಾಮರಾಯನೊಡನೆ ಒಪ್ಪಂದ ಮಾಡಿಕೊಂಡು, ಕೃಷ್ಣದೇವರಾಯನ ಮಗನ ಪರವಾಗಿ ತಾವಿಬ್ಬರೂ ಆಳ್ವಿಕೆಯಲ್ಲಿ ಸಹಭಾಗಿಗಳಾಗಿರುವಂತೆ ಒಪ್ಪಿದ. ಇದಾದ ಅನಂತರ ಮೂರನೆಯ ಸಲ ಇವನ ಪಟ್ಟಾಭಿಷೇಕ ವಿಜಯನಗರದಲ್ಲಿ ನಡೆಯಿತು. ಈ ಏರ್ಪಾಡು 1535ವರೆಗೆ ಸಮರ್ಪಕವಾಗಿ ಮುಂದುವರಿಯಿತು. ಆ ಹೊತ್ತಿಗೆ ಕೃಷ್ಣದೇವರಾಯನ ಕಿರಿಯ ಮಗ ಮೃತನಾದ್ದರಿಂದ ರಾಮರಾಯನ ಬಲಕುಗ್ಗಿತು. ಇದರಿಂದ ಅಚ್ಯುತರಾಯನ ಧೋರಣೆ ಬದಲಾಯಿತು, ಅಂತರ್ಯುದ್ಧ ಪ್ರಾರಂಭವಾಯಿತು. ಕೊನೆಗೆ ರಾಮರಾಯ ಅಚ್ಯುತರಾಯನನ್ನೇ ಸೆರೆಹಿಡಿದು ತಾನೇ ರಾಜನೆಂದು ಘೋಷಿಸಿಕೊಂಡ. ಆದರೆ ಇದಕ್ಕೆ ಶ್ರೀಮಂತರ ವಿರೋಧವಿದ್ದುದರಿಂದ ಅಚ್ಯುತರಾಯನ ತಮ್ಮನ ಮಗನಾದ ಸದಾಶಿವರಾಯನ ಹೆಸರಿನಲ್ಲಿ ಆಡಳಿತವನ್ನು ನಡೆಸಲಾರಂಭಿಸಿದ. ಅದೇ ವೇಳೆಗೆ ರಾಜ್ಯದ ದಕ್ಷಿಣ ಭಾಗದಲ್ಲಿ ಉದ್ಭವವಾದ ದಂಗೆಗಳನ್ನು ಅಡಗಿಸಲು ರಾಮರಾಯ ರಾಜಧಾನಿಯನ್ನು ಬಿಡಬೇಕಾಯಿತು. ಆ ಸಂದರ್ಭದಲ್ಲಿ ಅಚ್ಯುತರಾಯ ಬಿಡುಗಡೆ ಹೊಂದಿದ. ಕೂಡಲೇ ರಾಮರಾಯ ಹಿಂದಿರುಗಿ ಅಚ್ಯುತರಾಯನೊಡನೆ ಒಪ್ಪಂದ ಮಾಡಿಕೊಂಡ. ಈ ಒಪ್ಪಂದದ ಪ್ರಕಾರ ಅಚ್ಯುತರಾಯನ ರಾಜತ್ವ ಭದ್ರವಾಯಿತು.

ಈ ಅಂತಃಕಲಹಗಳ ಜೊತೆಗೆ ಕೃಷ್ಣದೇವರಾಯನ ಮರಣದ ತರುಣದಲ್ಲೇ 1530–31ರಲ್ಲಿ ಬಿಜಾಪುರದ ಸುಲ್ತಾನನಾಗಿದ್ದ ಆದಿಲ್‌ಷಾ ವಿಜಯನಗರದ ಮೇಲೆ ದಂಡೆತ್ತಿ ಬಂದು, ರಾಯಚೂರು ಮತ್ತು ಮುದ್ಗಲ್ ಪ್ರದೇಶವನ್ನು ಆಕ್ರಮಿಸಿಕೊಂಡ. ಮತ್ತೆ ಎರಡನೆಯ ಬಾರಿ ನಾಗಲಾಪುರದವರೆಗೆ ದಂಡೆತ್ತಿ ಬಂದು ಅದನ್ನು ಹಾಳುಮಾಡಿದ. ಆದರೆ ಅಚ್ಯುತರಾಯ ಅವನ್ನು ಪುನಃ ಸ್ವಾಧೀನಪಡಿಸಿಕೊಂಡ. 1531–32ರಲ್ಲಿ ತಿರುವಡಿ (ಈಗಿನ ತಿರುವನಂತಪುರ ಮತ್ತು ತಿನ್ನವೆಲ್ಲಿ ಜಿಲ್ಲೆಯ ಭಾಗಗಳು) ರಾಜನ ಮೇಲೆ ದಂಡೆತ್ತಿ ಹೋದ. ಇದರ ಫಲವಾಗಿ ತಿರುವಡಿ ರಾಜ ಅಧೀನನಾಗಿ ಕಪ್ಪ ಕೊಡಲು ಒಪ್ಪಿದ. ಆಗ ದಂಗೆ ಎದ್ದಿದ್ದ ಉಮ್ಮತ್ತೂರು ಪಾಳೆಯಗಾರರನ್ನೂ ಅಡಗಿಸಿದ. ಸ್ವಲ್ಪ ಕಾಲಾನಂತರ ತಿರುವಡಿ ರಾಜ ಪಾಂಡ್ಯ ರಾಜ್ಯದ ದೊರೆ ಜಟಾವರ್ಮನ್ ತ್ರಿಭುವನ ಚಕ್ರವರ್ತಿ ವಲ್ಲಭ ದೇವನನ್ನು ಸೋಲಿಸಿ ಅವನನ್ನು ಪದಚ್ಯುತಗೊಳಿಸಿದ. ಅಚ್ಯುತರಾಯ ಪಾಂಡ್ಯ ರಾಜನಿಗೆ ಅವನ ರಾಜ್ಯವನ್ನು ಪುನಃ ಕೊಟ್ಟು ಅವನ ಮಗಳಾದ ವರದಾಂಬಳನ್ನು ವಿವಾಹವಾದ. 1531ರಲ್ಲಿ ಒರಿಸ್ಸ ರಾಜನಾಗಿದ್ದ ಪ್ರತಾಪರುದ್ರ ಹಿಂದೆ ಕೃಷ್ಣದೇವರಾಯನಿಗೆ ಒಪ್ಪಿಸಿದ್ದ ಕೃಷ್ಣಾನದಿಯ ದಕ್ಷಿಣಭಾಗದ ಪ್ರದೇಶಗಳನ್ನು ಸುಲ್ತಾನ ಕುತ್ಬ್‌ಷಾನ ಬೆಂಬಲದೊಡನೆ ಆಕ್ರಮಿಸಿದ. ಅಚ್ಯುತರಾಯ ಅವನನ್ನು ಸೋಲಿಸಿ, ಒರಿಸ್ಸದವರೆಗೆ ಹೋಗಿ ಅಲ್ಲಿ ತನ್ನ ವಿಜಯಸ್ತಂಭವನ್ನು ನೆಟ್ಟ. ಶಾಸನದ ಹೇಳಿಕೆಗಳ ಪ್ರಕಾರ ಸಿಂಹಳ ಅಚ್ಯುತರಾಯನ ಅಧೀನರಾಜ್ಯವಾಗಿತ್ತು. 1534ರಲ್ಲಿ ಇಸ್ಮಾಯಿಲ್ ಆದಿಲ್ ಷಾನ ಮರಣಾನಂತರ ಅಚ್ಯುತರಾಯ ರಾಯಚೂರು ಪ್ರದೇಶವನ್ನು ಆಕ್ರಮಿಸಿಕೊಂಡ. ಕೃಷ್ಣದೇವರಾಯನ ಕಾಲದಲ್ಲಿ ಸ್ನೇಹಿತರಾಗಿದ್ದ ಪೋರ್ಚುಗೀಸರು ಇವನ ಕಾಲದಲ್ಲಿ ವಿರೋಧಿಗಳಾದರು, ತೀರಪ್ರದೇಶದಲ್ಲಿ ವಸಾಹತುಗಳನ್ನು ಸ್ಥಾಪಿಸಿದರು, ದೇವಸ್ಥಾನಗಳನ್ನು ಕೊಳ್ಳೆ ಹೊಡೆದರು, ಜನರ ಕಗ್ಗೊಲೆ ಮಾಡಿದರು. ಇವನು ಅವರೊಡನೆ ಸ್ನೇಹಕ್ಕೆ ಪ್ರಯತ್ನಿಸಿದ. 1536–37ರಲ್ಲಿ ಗುತ್ತಿಯ ದಂಗೆಯನ್ನು ಅಡಗಿಸಿದ.

ತನ್ನ ಆಳ್ವಿಕೆಯ ಉದ್ದಕ್ಕೂ ಇವನು ರಾಜಕೀಯ ಪ್ರಕ್ಷುಬ್ಧತೆಯ ಮಧ್ಯೆ ತೊಳಲಾಡಬೇಕಾಗಿ ಬಂದರೂ ಈ ರಾಜ್ಯದ ಒಟ್ಟು ಕ್ಷೇಮಕ್ಕೆ ಭಂಗಬರದಂತೆ ಧೈರ್ಯ ಹಾಗೂ ಉಪಾಯದಿಂದ ಆಡಳಿತ ನಿರ್ವಹಿಸಿದನೆಂದೇ ಹೇಳಬಹುದು.

ಅಚ್ಯುತರಾಯ ದೇವಸ್ಥಾನಗಳಿಗೆ ಮತ್ತು ಬ್ರಾಹ್ಮಣರಿಗೆ ಅನೇಕ ದಾನವನ್ನು ಮಾಡಿದ್ದಾನೆ. ವೈಷ್ಣವಮತಾವಲಂಬಿಯಾಗಿದ್ದ ಈತ ಕಂಚಿಯ ವರದರಾಜ ದೇವಸ್ಥಾನಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟ. ಅಲ್ಲಿ ಲಕ್ಷ ಹೋಮವನ್ನು ಮಾಡಿದ ಅನೇಕ ತೆರಿಗೆಗಳಿಗೆ ವಿನಾಯತಿ ನೀಡಿದ. ವಿಜಯನಗರದ ವಿಠಲ ಸ್ವಾಮಿ ದೇವಸ್ಥಾನದಲ್ಲಿ ಹನ್ನೆರಡು ಶ್ರೀವೈಷ್ಣವ ಆಳ್ವಾರರ ಪ್ರತಿಮೆಗಳನ್ನು ಸ್ಥಾಪಿಸಿದ. ಆನಂದನಿಧಿ ಎಂಬ ಪುದುವಟ್ಟನ್ನು ಸ್ಥಾಪಿಸಿದ. ಕಂಚಿಯಲ್ಲಿ ತುಲಾಭಾರವನ್ನು ಮಾಡಿಕೊಂಡು ಒಂದು ಸಾವಿರ ಗೋವುಗಳನ್ನು ದಾನಮಾಡಿದ.

ಅಚ್ಯುತರಾಯಾಭ್ಯುದಯಮ್ ಮತ್ತು ಭಾಗವತ ಚಂಪೂಗಳನ್ನು ಬರೆದ ರಾಜನಾಥ ಡಿಂಡಿಮ, ವರದಾಂಬಿಕಾಪರಿಣಯದ ಕರ್ತೃ ತಿರುಮಲಾಂಬಾ ಇವನ ಪೋಷಣೆಯಲ್ಲಿದ್ದ ಮುಖ್ಯ ಕವಿಗಳು.

ಅಚ್ಯುತರಾಯನಿಗೆ ವರದಾಂಬಿಕಾ ಅಲ್ಲದೆ ಇನ್ನಿಬ್ಬರು ಪತ್ನಿಯರೂ ಇದ್ದರು. ಈತನಿಗೆ ವೆಂಕಟಾದ್ರಿ ಎಂಬ ಮಗನಿದ್ದು. ಅವನಿಗೆ 1530ರಲ್ಲಿ ಯುವರಾಜಪಟ್ಟವೂ ಆಗಿತ್ತು. ಅಚ್ಯುತರಾಯ 1542ರಲ್ಲಿ ಮೃತನಾದ. (ಎ.ವಿ.ವಿ.)

**ಅಜಂತ** : ಈಗಿನ ಮಹಾರಾಷ್ಟ್ರದ (ಹಿಂದಿನ ಹೈದರಾಬಾದ್ ಸಂಸ್ಥಾನದ) ಔರಂಗಾಬಾದ್ ಜಿಲ್ಲೆಯಲ್ಲಿರುವ ಐತಿಹಾಸಿಕ ಸ್ಥಳ. ಇದು ಮಲೆಸೀಮೆ. ಚಂದರ್, ಶತಮಾಲ, ವಿಂಧ್ಯಾದ್ರಿ, ಸಹ್ಯಾದ್ರಿ ಎಂದು ಕರೆಯಲ್ಪಡುವ ಪಶ್ಚಿಮಘಟ್ಟಗಳ ಬೆಟ್ಟಗಳು ಸುತ್ತಲೂ ಇವೆ. ಇವುಗಳ ಸರಾಸರಿ ಎತ್ತರ 1,220ಮೀ. ಇವು ಮನಮಾಡದಿಂದ ಬೀರಾರಿನವರೆಗೆ ವಿಸ್ತರಿಸಿವೆ. ಅಲ್ಲಲ್ಲಿ ವ್ಯಾಪಾರಿಗಳ, ಸೈನ್ಯದ ಓಡಾಟ ಸಾಗಣೆಗಳಿಗನು ಕೂಲವಾದ ಕಣಿವೆ ದಾರಿಗಳಿವೆ. ದಕ್ಷಿಣ ಪ್ರಸ್ಥಭೂಮಿಯ ಉತ್ತರಗಡಿಯಾದ ಈ ಶ್ರೇಣಿ ಬೀರಾರಿನಲ್ಲಿ 610ಮೀ. ಎತ್ತರವಾಗಿದೆ. ಮಾರ್ಕಂಡ (1,336ಮೀ), ಸಪ್ತಶೃಂಗ (1,420ಮೀ), ಧೊಡಕ್ (1,445ಮೀ), ತುದ್ರೆ (1,380ಮೀ)–ಇವು ಇಲ್ಲಿನ ಮುಖ್ಯ ಶಿಖರಗಳು. ಅಜಂತ ಕಣಿವೆ ಔರಂಗಾಬಾದ್ ಮತ್ತು ಎಲ್ಲೋರಗಳಿಂದ 152 ಕಿ.ಮೀ ದೂರದಲ್ಲಿದೆ. (ಎಸ್.ಡಿ.ಎಂ.)

ಊರಿಗೆ $3^1/_2$ 5,63ಕಿಮೀ ದೂರದಲ್ಲಿ ಜಗತ್ಪ್ರಸಿದ್ಧವಾದ ಅಜಂತ ಗುಹಾಂತರ್ದೇವಾಲಯಗಳು ವಾಘ್ ಕಣಿವೆಯ ಮನೋಹರವಾದ ನೈಸರ್ಗಿಕ ಸನ್ನಿವೇಶದಲ್ಲಿವೆ. ಕಲೆಯ ಪ್ರಭೇದಗಳಾದ ಶಿಲ್ಪ, ಕೆತ್ತನೆ ಹಾಗೂ ವರ್ಣಲೇಪನ ಇವುಗಳ ಕೇಂದ್ರವೆನಿಸಿರುವ ಅಜಂತ ಭಾರತೀಯ ಪರಮೋತ್ಕೃಷ್ಟ ಕಲಾನೈಪುಣ್ಯಕ್ಕೆ ಚಿರಂತನಸಾಕ್ಷಿಯಾಗಿದೆ. ಇಲ್ಲಿ ಬೆಟ್ಟವನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ ಚಿತ್ರಗಳನ್ನು ಬಿಡಿಸುವ ಕಾರ್ಯ



19ನೆಯ ಗುಹಾಚೈತ್ಯಾಲಯ

ಪ್ರ.ಶ.ಪೂ. 2ನೆಯ ಶತಮಾನದಲ್ಲಿ ಪ್ರಾರಂಭವಾಗಿ ಅವಿಚ್ಛಿನ್ನವಾಗಿ ಪ್ರ.ಶ. 7ನೆಯ ಶತಮಾನದವರೆಗೂ ಮುಂದುವರಿಯಿತು. ಸಾತವಾಹನ, ವಾಕಾಟಕ ಮತ್ತು ಬಾದಾಮಿ ಚಳುಕ್ಯ ಸಂತತಿಗಳ ಅರಸರು ಬೌದ್ಧಭಿಕ್ಷುಗಳಿಗಾಗಿ ಗುಹಾಂತರ್ದೇವಾಲಯಗಳನ್ನು ನಿರ್ಮಿಸಿದರು. ಶಿಲ್ಪಿಗಳು ಗುಹಾಲಯಗಳ ನಿರ್ಮಾಣ ಹಾಗೂ ಕಲಾವಿನ್ಯಾಸದಲ್ಲಿ ತಮ್ಮ ಚಾತುರ್ಯವನ್ನು ತೋರಿಸಿರುವರು. ಮತನಿಷ್ಠೆ ಹಾಗೂ ಪರಂಪರಾನುಗತವಾಗಿ ಬೆಳೆಸಿಕೊಂಡು ಬಂದ ಕಲಾಪರಿಪೂರ್ಣತೆಯನ್ನು ವರ್ಣಲೇಪನದಲ್ಲಿ ಬೌದ್ಧಭಿಕ್ಷುಗಳು ಅತ್ಯುನ್ನತವಾಗಿ ಪ್ರದರ್ಶಿಸಿರುವರು.

7ನೆಯ ಶತಮಾನದಲ್ಲಿ ಅಜಂತಕ್ಕೆ ಭೇಟಿಯಿತ್ತಿದ್ದ ಯುವಾನ್ ಚಾಂಗ್ ಬರೆವಣಿಗೆಗಳಿಂದ, ಇಲ್ಲಿ ಬಹು ಸಂಖ್ಯೆಯಲ್ಲಿ ಬೌದ್ಧಭಿಕ್ಷುಗಳು ವಾಸಿಸುತ್ತಿದ್ದರೆಂದೂ ಅವರು ಹತ್ತಿರದಲ್ಲಿದ್ದ ಇಂದ್ರಕಾಂತವೆಂಬ ಪಟ್ಟಣಕ್ಕೆ ಆಗಾಗ ಭಿಕ್ಷಾಟನೆಗಾಗಿ ಹೋಗುತ್ತಿದ್ದರೆಂದೂ ತಿಳಿದುಬರುತ್ತದೆ. ಇವನು ಅಜಂತ ಕಲಾಕೇಂದ್ರದ ಪ್ರಕೃತಿ ಸೌಂದರ್ಯವನ್ನೂ ಗುಹಾಂತರ್ದೇವಾಲಯಗಳ ಸೌಂದರ್ಯವನ್ನೂ ವಿಶೇಷವಾಗಿ ಪ್ರಶಂಸಿಸಿರುವನು. ಬೌದ್ಧಧರ್ಮ ಕ್ಷೀಣಿಸಿದ ಮೇಲೆ ಈ ಸ್ಥಳ ನಿರ್ಲಕ್ಷಿಸಲ್ಪಟ್ಟು ಪೊದೆಗಳು

ಬೆಳೆದು ಮೃಗಪಕ್ಷಿಗಳ ಆವಾಸಸ್ಥಾನವಾಗಿ ಮಾನವ ಸ್ಮೃತಿಗೋಚರದಿಂದ ಮರೆಯಾಯಿತು. ಇವು ಪ್ರ.ಶ. 19ನೆಯ ಶತಮಾನದ ಪೂರ್ವಾರ್ಧದಲ್ಲಿ ಆಂಗ್ಲ ವಿದ್ವಾಂಸರ ಗಮನಕ್ಕೆ ಬಂದು ಅವರಲ್ಲಿ ವಿಸ್ಮಯವನ್ನೂ ಕುತೂಹಲವನ್ನೂ ಕೆರಳಿಸಿ ನಮ್ಮ ನಾಡಿನ ಹಾಗೂ ಪ್ರಪಂಚದ ಕಲಾತಜ್ಞರ ಗಮನವನ್ನು ಅತ್ತ ಸೆಳೆದುವು. ಅಜಂತದಲ್ಲಿ ಒಟ್ಟು 30 ಗುಹಾಂತರ್ದೇವಾಲಯಗಳಿವೆ. ಅನೇಕ ಗುಹಾಲಯಗಳಲ್ಲಿ ಕಾಲ ಮತ್ತು ಪ್ರಕೃತಿಯ ಹೊಡೆತದಿಂದ ಚಿತ್ರಗಳು ನಾಶವಾಗಿವೆ. ಆದಾಗ್ಯೂ ಅವುಗಳ ಭವ್ಯಕಲ್ಪನೆಯನ್ನು ಚಿತ್ರಿಸಿಕೊಳ್ಳಲು ಎಡೆಯಿದೆ. ಪಳೆಯುಳಿಕೆಗಳನ್ನು ಇತ್ತೀಚೆಗೆ ಉದ್ಧಾರಮಾಡಿ ಕಾಪಾಡಿಕೊಂಡು ಬರುವ ಏರ್ಪಾಡು ಮಾಡಲಾಗಿದೆ. ಹಾಳಾಗಿರುವ ಭಾಗಗಳ ಪಡಿಯಚ್ಚು ಮಾಡಿಕೊಳ್ಳಲಾಗಿದೆ.

ಇವುಗಳಲ್ಲಿ 16ನೆಯ ಗುಹಾಲಯ ಕಲೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು. ಇದನ್ನು ಬೆಟ್ಟದೊಳಕ್ಕೆ 20 ಮೀ ಕೊರೆದು ನಿರ್ಮಿಸಲಾಗಿದೆ. 20 ಕಂಬಗಳನ್ನು ಅಂದವಾಗಿ ಕೊರೆದಿದ್ದಾರೆ. ಮುಖಮಂಟಪದಲ್ಲಿ 5 ಕಂಬಗಳಿವೆ. ರಂಗಮಂಟಪದಲ್ಲಿ ಪ್ರತಿಯೊಂದು ಕಡೆಯೂ 7 ಚಿಕ್ಕ ಚಿಕ್ಕ ಕೋಣೆಗಳಿವೆ. ಗರ್ಭಗೃಹದಲ್ಲಿ ಪ್ರಲಂಬ-ಪಾದಾಸನನಾಗಿರುವ

ಬೋಧಿಸತ್ವ ಪದ್ಮಪಾಣಿ (ಗುಹೆ 1)

ಬುದ್ಧದೇವನ ಮೂರ್ತಿ ಇದೆ. 14ನೆಯ ಗುಹಾಲಯ ಸರಿಸುಮಾರಾಗಿ ಇದೇ ಮಾದರಿಯನ್ನು ಹೋಲುವುದು. ಇಲ್ಲಿ 75[1] ವಿಸ್ತಾರವಾದ ಹಜಾರವಿದೆ. 20 ಸುಂದರವಾದ ಕಂಬಗಳನ್ನು ಕೊರೆದು ಬಿಡಿಸಲಾಗಿದೆ. ಈ ಗುಹಾಲಯವನ್ನು ಅತ್ಯಂತ ಸುಂದರವಾದ ಮಂದಿರವನ್ನಾಗಿಸಬೇಕೆಂಬ ಇಚ್ಛೆಯಿಂದ ಕೊರೆದಂತಿದೆ. ಆದರೆ ಕೊರೆಯುವ ಕೆಲಸ ಪೂರ್ಣವಾಗಿಲ್ಲ. ಜೊತೆಗೆ ಗುಹಾಲಯ ಬಹುವಾಗಿ ಶಿಥಿಲವಾಗಿದೆ. 1, 2 4 ಮತ್ತು 24 ನೆಯ ಗುಹಾಲಯಗಳು ಕಲಾದೃಷ್ಟಿಯಿಂದ ಉನ್ನತವಾದ ಕಟ್ಟಡ ವಿನ್ಯಾಸವನ್ನು ಪ್ರದರ್ಶಿಸುತ್ತವೆ. 1 ಮತ್ತು 2ನೆಯ ಗುಹಾಲಯಗಳು ಮನೋಜ್ಞವಾದ ಶಿಲ್ಪ ಹಾಗೂ ಕೆತ್ತನೆಯ ಕೆಲಸಗಳಿಗೆ ಉದಾಹರಣೆಯಾಗಿವೆ. ಕಂಬಗಳು ಅಂದವಾದ ಕೆತ್ತನೆಯ ಕೆಲಸ ಹಾಗೂ ಸುಂದರವಾಗಿ ಕಡೆದ ಬೋದಿಗೆಗಳನ್ನು ಹೊಂದಿವೆ. 19 ಮತ್ತು 26ನೆಯ ಗುಹಾಲಯಗಳಲ್ಲಿಯೂ ಉತ್ತಮ ಕೆತ್ತನೆಯ ಕೆಲಸಗಳನ್ನು ನೋಡಬಹುದು. ಈ ಕೆಲಸಗಳು ಮುಂಬರಲಿದ್ದ ದಕ್ಷಿಣ ಭಾರತದ ಶಿಲ್ಪ ಕಲಾಸಂಪನ್ನತೆಯ ಮುಂಬೆಳಗಿನ ಪ್ರಜ್ಞೆಯಂತಿದೆ ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಅಜಂತದ ಚಿತ್ರಗಳ ಮುಖ್ಯಗುರಿ ಮತಬೋಧನೆ. ಬೌದ್ಧ ಭಿಕ್ಷುಗಳು, ಕೆಂಪು, ಹಸಿರು, ಹಳದಿ, ಊದ, ಧೂಮ್ರ ಮತ್ತು ನೀಲವರ್ಣಗಳಿಂದ ಬಿಡಿಸಿರುವ ಭಿತ್ತಿಚಿತ್ರಗಳು



ಒಂದನೆಯ ಗುಹೆಯ ಮುಂಭಾಗ

ವರ್ಣನಾತೀತವಾದ ಸೌಂದರ್ಯವನ್ನೂ ಕೌಶಲವನ್ನೂ ಪ್ರದರ್ಶಿಸುತ್ತವೆ. ಚಿತ್ರಕಾರರು ಸಾಂಪ್ರದಾಯಿಕ ನೀತಿಯನ್ನನುಸರಿಸಿದಾಗ್ಯೂ ತಮ್ಮ ಪ್ರತಿಭೆ ಮತ್ತು ಸ್ವಾತಂತ್ರ್ಯವನ್ನು ತೋರ್ಪಡಿಸಿದ್ದಾರೆ. ಬೋಧಿಸತ್ವ ಬುದ್ಧದೇವನ ಜೀವನದ ಪ್ರಮುಖ ಘಟನೆಗಳು ಸಜೀವವಾಗಿ ಪಡಿಮೂಡಿವೆ. ಹೂಬಳ್ಳಿಗಳ, ಗೂಳಿ, ಕಪಿ, ನವಿಲು ಮುಂತಾದ ಪ್ರಾಣಿ ಪಕ್ಷಿಗಳ ಚಿತ್ರಗಳು ನೈಜವಾಗಿವೆ. ಸ್ತ್ರೀ ಚಿತ್ರಗಳು ಭಾರತೀಯ ಸ್ತ್ರೀಯರ ಸಹಜವಾದ ಶರೀರಭಂಗಿ, ಪ್ರಮಾಣ, ಅಲಂಕಾರ, ಮಾರ್ದವ, ಲಾವಣ್ಯಗಳನ್ನು ನಿದರ್ಶಿಸುತ್ತವೆ.

ದೇವಾನುದೇವತೆಗಳ, ಅಪ್ಸರೆಯರ, ಕಿನ್ನರರ, ಪ್ರಭು, ಪ್ರಭೃತಿಗಳ, ಗಣ್ಯರ, ವೀರರ, ಹಳ್ಳಿ, ನಗರಗಳ, ಸಂತರ ಮತ್ತು ಮಹರ್ಷಿಗಳ ಚಿತ್ರಗಳು ಸಹಜವಾಗಿ, ಸುಂದರವಾಗಿ, ಮನೋಜ್ಞವಾಗಿ ಒಡಮೂಡಿವೆ. ಒಂದು ಮತ್ತು ಎರಡನೆಯ ಗುಹಾಲಯಗಳಲ್ಲಿ ಪುಲಿಕೇಶಿಯ ಆಸ್ಥಾನವನ್ನೂ ಪರ್ಷಿಯಾ ರಾಯಭಾರಿಗಳ ಆಗಮನವನ್ನೂ ಜೀವಂತವಾಗಿ ಚಿತ್ರಿಸಿದ್ದಾರೆ. ಈ ಗುಹೆಗಳಲ್ಲಿರುವ ಜಿಂಕೆಗಳ ಹಾಗೂ ಶಿವಪಾರ್ವತಿಯರ ಭಿತ್ತಿಚಿತ್ರಗಳು ಅತ್ಯಂತ ಸುಂದರವಾಗಿವೆ. 17ನೆಯ ಗುಹೆಯಲ್ಲಿ ಬೌದ್ಧಧರ್ಮದ ನಿಯಮನಿಷ್ಠೆಯಲ್ಲಿದ್ದ ನಿರಂತರ ಶ್ರದ್ಧೆ ಹಾಗೂ ಪರಂಪರಾನುಗುತವಾಗಿ ಬೆಳೆಸಿಕೊಂಡು ಬಂದ ಚಿತ್ರಕಲಾಭ್ಯಾಸ ಇವುಗಳ ಅನುಭವದ ಆನಂದ ಪರವಶತೆಯನ್ನೂ ಕೌಶಲವನ್ನೂ ಅನಾಮಧೇಯ ಬೌದ್ಧಭಿಕ್ಷುಗಳು ಪರಮೋತ್ಕೃಷ್ಟವಾಗಿ ಅಜಂತ ಗುಹಾಂತರ್ದೇವಾಲಯಗಳಲ್ಲಿ ಪ್ರದರ್ಶಿಸಿದ್ದಾರೆ. ಸೌಮ್ಯತೆ, ಅಸದೃಶವಾದ ಕುಂಚಕೌಶಲ, ಎಣೆಯಿಲ್ಲದ ವರ್ಣವಿನ್ಯಾಸದ ವೈಖರಿ, ಅಸಾಧಾರಣ ಪ್ರೌಢಿಮೆ-ಇವುಗಳಿಗೆ ಅಜಂತ ಭಿತ್ತಿಚಿತ್ರಗಳು ಅದ್ವಿತೀಯ ನಿದರ್ಶನಗಳಾಗಿವೆ ಯೆಂದು ಕಲಾವಿಮರ್ಶಕರು ಪ್ರಶಂಸಿಸಿದ್ದಾರೆ. (ಜಿ.ಆರ್.ಆರ್.)

**ಅಜಂತದ ವಾಸ್ತುಶಿಲ್ಪ :** ಅಜಂತದ ಗುಹಾಂತರ್ದೇವಾಲಯಗಳು ಜಗತ್ಪ್ರಸಿದ್ಧವಾಗಿವೆ. ಇದಕ್ಕೆ ಕಾರಣ ಅಲ್ಲಿನ ನೈಸರ್ಗಿಕ ಸೌಂದರ್ಯ, ಶಿಲ್ಪಕಲೆ, ಚಿತ್ರಕಲೆ. ಎದುರಿಗೆ ಸಮೀಪದಲ್ಲಿಯೇ ಜುಳು ಜುಳು ಎಂದು ಮಂಜುಳ ಧ್ವನಿಗೈಯುತ್ತ ಹರಿಯುವ ವಾಘೋರಾ ನದಿ ಚಿಕ್ಕ ಏಳು ಜಲಪಾತಗಳಿಂದ ಕೂಡಿಕೊಂಡು ರಮ್ಯವಾಗಿದೆ. ನದಿಯ ಕೊಳ್ಳ ಗಂಭೀರ ಶಾಂತತೆಯಿಂದ ಮೆರೆಯುತ್ತಿದೆ.

ಸು. 200 ಬೌದ್ಧ ಭಿಕ್ಷುಗಳು ಇಲ್ಲಿನ ಗುಹೆಗಳಲ್ಲಿ ವಾಸಮಾಡಿಕೊಂಡಿದ್ದಿರಬೇಕು. ಅವರು ಸುತ್ತಮುತ್ತಲಿನ ನಿಸರ್ಗ ರಮಣೀಯತೆಯಲ್ಲಿ ತಮ್ಮ ಅಧ್ಯಾತ್ಮ ಸಾಧನೆಯನ್ನು ಮಾಡುತ್ತಿದ್ದರು. ಅವರ ದರ್ಶನ ಪಡೆದು ಅವರಿಗೆ ಅನ್ನ, ಬಟ್ಟೆಗಳನ್ನೊದಗಿಸಿ ಅವರಿಂದ ಆಶೀರ್ವಾದ ಪಡೆಯಲು ಜನರು ಇಲ್ಲಿಗೆ ಮೇಲಿಂದ ಮೇಲೆ ಬರುತ್ತಿದ್ದರು.

ಸು. 1.2ಮೀ ಉದ್ದವಾದ ಕುದುರೆಲಾಳದ ಆಕಾರದ ಬೆಟ್ಟದ ನಿಡಿದಾದ ಓರೆಯಲ್ಲಿ ಈ ಗುಹಾಂತರ್ದೇವಾಲಯಗಳನ್ನು ಕೊರೆದಿದ್ದಾರೆ. ಇವು ಹೆಚ್ಚಾಗಿ ಬೌದ್ಧಮತಕ್ಕೆ ಸಂಬಂಧಿಸಿದುವು. ಸ್ಥೂಲವಾಗಿ ಹೀನಯಾನ ಮತ್ತು ಮಹಾಯಾನ ಎಂಬ ಎರಡು ಬೌದ್ಧಪಂಥಗಳಿಗೆ ಸಂಬಂಧಪಟ್ಟುವೆಂದು ಅವುಗಳಲ್ಲಿ ಕೆತ್ತಿದ ಬೌದ್ಧ ಮೂರ್ತಿಗಳು, ಬಣ್ಣದ ಚಿತ್ರಗಳು ಮತ್ತು ಕಂಬಗಳ ರಚನೆಯಿಂದ ವಿಂಗಡಿಸಬಹುದು. ಇವುಗಳ

ರಚನೆ ಪ್ರ.ಶ.ಪೂ. 2ನೆಯ ಶತಮಾನದಿಂದ ಆರಂಭವಾಗಿ ಪ್ರ.ಶ. 7ನೆಯ ಶತಮಾನದವರೆಗೂ ನಡೆಯಿತು. ಪರ್ಸಿ ಬ್ರೌನ್‌ನ ಅಭಿಪ್ರಾಯದಂತೆ ಇವುಗಳ ಕಾಲಮಾನ ಈ ಪ್ರಕಾರವಿದೆ:

| | |
|---|---|
| 1 ಹೀನಯಾನ ಗುಹಾಂತರ್ದೇವಾಲಯಗಳ ಗುಂಪು (ಪ್ರ.ಶ.ಪೂ 2ನೆಯ ಶತಮಾನದಿಂದ ಪ್ರ.ಶ. 2ನೆಯ ಶತಮಾನ) | 8, 12, 13ನೆಯ ವಿಹಾರಗಳು. 9, 10ನೆಯ ಚೈತ್ಯ ಗೃಹಗಳು. |
| 2 ಮಧ್ಯಂತರ (ಪ್ರ.ಶ. 2ನೆಯ ಶತಮಾನದಿಂದ ಸು. 450 ರವರೆಗೆ.) | ——————- |
| 3 ಮಹಾಯಾನ ಗುಹಾಂತರ್ದೇವಾಲಯಗಳ ಗುಂಪು (ಪ್ರ.ಶ. 450 ರಿಂದ 642 ರವರೆಗೆ) | 11. 7, ಮತ್ತು 6ನೆಯ ವಿಹಾರಗಳು (ಪ್ರ.ಶ.450–500) 15. 10, 16, 17, 20ನೆಯ ವಿಹಾರಗಳು ಮತ್ತು 19ನೆಯ ಚೈತ್ಯಾಲಯ (ಸು. ಪ್ರ.ಶ. 550) 21 ರಿಂದ 25ರ ವರೆಗಿನ ವಿಹಾರಗಳು ಮತ್ತು 26ನೆಯ ಚೈತ್ಯಗೃಹ (ಪ್ರ.ಶ. 550ರಿಂದ 600). 1 ರಿಂದ 5 ರವರೆಗಿನ ವಿಹಾರಗಳು (ಪ್ರ.ಶ. 600–25) 26 ಮತ್ತು 27ನೆಯ ಗುಹಾಂತರ್ದೇವಾಲಯಗಳು (ಪ್ರ.ಶ. 625–42). |

ಮೇಲಿನವು 28. ಜೊತೆಗೆ ಹೊಸದಾಗಿ 2 ಗುಹೆಗಳನ್ನು ಪತ್ತೆ ಮಾಡಲಾಗಿದೆ. ಅವುಗಳ ಆಕಾರಾದಿಗಳು ಉಳಿದವುಗಳಿಗಿಂತ ಭಿನ್ನವಾಗಿವೆ. ಒಟ್ಟಿನಲ್ಲಿ ಈ ಮೂವತ್ತರ ಕ್ರಮಾಂಕಗಳನ್ನು ಪಶ್ಚಿಮದ ತುದಿಯಿಂದ ಪ್ರಾರಂಭ ಮಾಡಿ ಪೂರ್ವದಲ್ಲಿರುವ 8ನೆಯ ಗುಹಾಂತರ್ದೇವಾಲಯದವರೆಗೂ ಕೊಟ್ಟಿದ್ದಾರೆ.

ಅಜಂತದ ವಾಸ್ತು ಶಿಲ್ಪ, ಮೂರ್ತಿಶಿಲ್ಪಗಳಲ್ಲಿನ ಕಲೆ ಸಾಕಷ್ಟು ಉತ್ತಮಮಟ್ಟದ್ದಾಗಿದ್ದು ವೈವಿಧ್ಯಮಯವಾಗಿದೆ. ಕಂಬಗಳ ಮಾಟ, ಅಲಂಕಾರ ಪದ್ಧತಿ, ಮೂರ್ತಿಗಳ ಮೈಕಟ್ಟು, ಪ್ರಮಾಣ, ಅಲಂಕಾರ ಕಲೆ ಮನ ಮೆಚ್ಚುವಂತಿವೆ. ನಿರ್ಮಾತೃಗಳಾದ ಸ್ಥಪತಿಗಳು ಒಳ್ಳೆ ದಕ್ಷತೆಯಿಂದ ಕೆಲಸ ಮಾಡಿ ಮೂರ್ತಿಗಳಲ್ಲಿ, ವರ್ಣಚಿತ್ರಗಳಲ್ಲಿ ಜೀವಕಳೆ ತುಂಬಿದ್ದಾರೆ.

ಅಜಂತದ ಚೈತ್ಯಗಳಿಗೆ ಕಂಬಗಳುಳ್ಳ ಮುಖಮಂಟಪ, ಹಿಂಬದಿಯಲ್ಲಿ ಅರ್ಧವರ್ತುಲಾಕಾರದ ನಡು ಅಂಕಣ, ಅದರ ಪಕ್ಕಗಳಲ್ಲಿ ಕಂಬಗಳ ಸಾಲಿನಿಂದ ಬೇರ್ಪಡಿಸಿದ ಬದಿಯ ಅಂಕಣಗಳು, ಸ್ತೂಪ, ಗುಮ್ಮಟ, ಚಾವಣಿಯ ಕೋಣೆ–ಇತ್ಯಾದಿ ಇರುತ್ತವೆ. ಹೀನಯಾನ ಪಂಥದ ವಿಹಾರಗಳಲ್ಲಿ ಬಾಗಿಲು ದಾಟಿದ ಕೂಡಲೆ ಒಂದು ವಿಶಾಲವಾದ ನಡುಸಾಲೆ ಕಾಣುತ್ತದೆ. ಅದರ ಮೂರು ಗೋಡೆಗಳಲ್ಲಿ ಕಲ್ಲಿನ ಹಾಸಿಗೆಯುಳ್ಳ ಸಣ್ಣ ಕೋಣೆಗಳಿವೆ. ಇವುಗಳ ಕಾಲ ಪ್ರ.ಶ.ಸು. 3ನೆಯ ಶತಮಾನದವರೆಗೆ. ಮಹಾಯಾನ ತಲೆದೋರಿದಂದಿನಿಂದ ವಿಹಾರಗಳ ರಚನೆಯಲ್ಲಿ ಮಾರ್ಪಾಡಾಯಿತು. ಮಧ್ಯದ ಮಂಟಪದ ಸುತ್ತ ನಾಲ್ಕು ಕಡೆಗೂ ಹೋಗಲು ಬರುವಂತೆ ಮೊಗಸಾಲೆಗಳಾದುವು. ಎದುರಿನ ಗೋಡೆಯ ಮಧ್ಯದಲ್ಲಿ ಗರ್ಭಗುಡಿ ಬಂದಿತು. ಅದರಲ್ಲಿ ಬುದ್ಧನ ಮೂರ್ತಿಯನ್ನು ಕಡೆದು ಪೂಜಿಸಹತ್ತಿದ್ದರು. ಮಹಾಯಾನದಲ್ಲಿ ಚಿತ್ರ ಮತ್ತು ಮೂರ್ತಿಗಳಿಗೆ ಅವಕಾಶ ದೊರೆತದ್ದರಿಂದ ಬದಿಯ ಅಂಕಣಗಳಲ್ಲಿ ಮಾಡಗಳನ್ನು ಕೊರೆಯುವ ಮತ್ತು ಹೆಚ್ಚು ಹರವಾದ ಒಳಗೋಡೆಗಳನ್ನು ನಿರ್ಮಿಸುವ ಆವಶ್ಯಕತೆ ಉಂಟಾಯಿತು. ಇದಕ್ಕೆ ಕಂಬಗಳು ನೆರವಾದುವು.

11, 7 ಮತ್ತು 6ನೆಯ ವಿಹಾರಗಳು ಮಧ್ಯಂತರದ ಅವಸ್ಥೆಯನ್ನು ಸೂಚಿಸುತ್ತವೆ. ಅವುಗಳ ರಚನೆ ಹೀನಯಾನ ವಿಹಾರಗಳ ರಚನೆಯಿಂದ ಬೇರೆಯಾಗಿದ್ದರೂ ಮಂಟಪದಲ್ಲಿಯ ಕಂಬಗಳ ರಚನೆಯಲ್ಲಿ ಕಟ್ಟಡಗಳಲ್ಲಿ ಹಿಂದೆ ಬಳಸಲಾದ ನಮೂನೆಯಿದೆ. ಈ ಮೂರು ವಿಹಾರಗಳಲ್ಲಿ 11ನೆಯದು ಎಲ್ಲಕ್ಕೂ ಮೊದಲು ಹುಟ್ಟಿದೆ. ಇದರಲ್ಲಿಯ ನಾಲ್ಕು ಕಂಬಗಳು ಪ್ರಾಕಾರದ ಮಧ್ಯದಲ್ಲಿ ತಯಾರಿಸಿದ ಒಂದು ಚಪ್ಪರವನ್ನು ನಿರ್ದೇಶಿಸುತ್ತವೆ. 7ನೆಯದರಲ್ಲಿ ಇಂಥ ಎರಡು ಚಪ್ಪರಗಳನ್ನು ಕಾಣುತ್ತೇವೆ. ಮುಂದೆ ಅನೇಕ ಕಂಬಗಳು ಕೂಡಿಕೊಂಡು ದೊಡ್ಡ ಮಂಟಪದ ರಚನೆಗೆ ಕಾರಣವಾದುವು.

1, 4, 16, 17, 21, ಮತ್ತು 23ನೆಯ ಗುಹಾಂತರದೇವಾಲಯಗಳಲ್ಲಿ ಶಿಲ್ಪಕಲಾ ಕುಶಲತೆಯ ಉತ್ತಮ ವೈವಿಧ್ಯ ಕಾಣಬರುತ್ತದೆ. ಪ್ರ.ಶ. 6ನೆಯ ಶತಮಾನದಲ್ಲಿ ನಿರ್ಮಾಣವಾದ 16ನೆಯದು ಇವುಗಳಲ್ಲಿ ಅತ್ಯುತ್ತಮವಾದುದು. ಇದು ಮತ್ತು 1ನೆಯ ಗುಹಾಂತರ್ದೇವಾಲಯಗಳು ಸಾಮಾನ್ಯವಾಗಿ ಒಂದೇ ರೀತಿಯವು. ಇವೆರಡಕ್ಕೂ 65' ಉದ್ದವಾದ ಮೊಗಸಾಲೆ, 65' ಚಚ್ಚೌಕದ 20 ಕಂಬಗಳ ಸಾಲಿನಿಂದೊಡಗೂಡಿದ ನಡುಸಾಲೆಗಳಿರುವುವು. 16ನೆಯದರ ನಡುಸಾಲೆ, ಮೊಗಸಾಲೆಗಳ ಗೋಡೆಗಳಲ್ಲಿ 16 ಚಚ್ಚೌಕದ ಸಣ್ಣ ಕೋಣೆಗಳಿವೆ. ಮತ್ತು ಹಿಂಬದಿಯ ಗೋಡೆಯಲ್ಲಿ ಒಂದು ಅಗಲವಾದ ಗರ್ಭಗುಡಿಯನ್ನು ನಿರ್ಮಿಸಿದ್ದಾರೆ. ಅದರಲ್ಲಿ ಬುದ್ಧನ ದೊಡ್ಡ ವಿಗ್ರಹ ವಿರಾಜಮಾನವಾಗಿದೆ. ಈ ಗುಹೆಯಲ್ಲಿ ವಾಕಾಟಕ ಹರಿಷೇಣನ ಶಿಲಾಶಾಸನವಿದೆ.

2ನೆಯ ಗುಹಾಂತರದೇವಾಲಯದಲ್ಲಿ ಬ್ರಾಹ್ಮೀಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿರುವ ಕ್ಷಾಂತಿವಾದಿ (ತಾಳ್ಮೆಯ ಬೋಧಕ), ಸುರಸುತಿ (ಸರಸ್ವತಿ) ಮೈತ್ರೀ, ಬಲಜಾತಕ ಕ್ಷಾಂತಿಜಾತಕದ ಒಂದೆರಡು ಶ್ಲೋಕಗಳನ್ನು ಬಣ್ಣದಲ್ಲಿ ಬರೆಯಲಾಗಿದೆ. 19ನೆಯದು ಉತ್ತಮರೀತಿಯಲ್ಲಿ ರಚಿತವಾದ ಚೈತ್ಯಾಲಯ. ಇದೇನೂ ಅಷ್ಟು ದೊಡ್ಡದಲ್ಲ. ಹೊರಗೆ 11.5'ಮೀ ಉದ್ದ 9.7'ಮೀ ಅಗಲವಾಗಿದೆ. ಒಳಭಾಗದ ಉದ್ದ 14'ಮೀ, ಅಗಲ 7.3'ಮೀ. ಹಿಂದೆ ಒಂದು ಹೊರಪ್ರಾಕಾರವೂ ಎರಡೂ ಬದಿಗಳಲ್ಲಿ ಕಿರುದೇವಾಲಯಗಳೂ ಇದ್ದಿರಬೇಕು. ಮುಂದಿನ ಗೋಡೆಗೆ ಮೂರು ಪ್ರವೇಶದ್ವಾರಗಳ ಬದಲಾಗಿ ಒಂದೇ ಇದೆ. ಮುಂದುಗಡೆ ಹೊರಮಂಟಪ ಇದ್ದು ಚೈತ್ಯಾಲಯಕ್ಕೆ ಕಳೆ ತಂದುಕೊಟ್ಟಿದೆ.

**ಬೌದ್ಧಗುಹಾಲಯಗಳ ಸಮಗ್ರ ನೋಟ**

26ನೆಯದೂ ಒಂದು ಚೈತ್ಯಾಲಯ. 20.7'ಮೀ ಉದ್ದ, 10.9'ಮೀ ಅಗಲ ಮತ್ತು 9.4'ಮೀ ಎತ್ತರವಿದೆ. ಪ್ರವೇಶದ್ವಾರದಲ್ಲಿಯ ಎರಡು ಕಂಬಗಳಲ್ಲದೆ ಇದಕ್ಕೆ 12' ಎತ್ತರವಾದ 26 ಕಂಬಗಳಿವೆ. ಅಲಂಕಾರ ಹೆಚ್ಚು. ಸ್ತೂಪದ ಮೇಲೆ ಹಲವು ಕೆತ್ತನೆಗಳಿವೆ. ಆದರೆ, ಮೊದಲಿನ ಚೈತ್ಯಗಳಲ್ಲಿದ್ದ ನಯ ಮತ್ತು ಲಯ ಇಲ್ಲಿ ತಪ್ಪಿದೆ. ಚೈತ್ಯ ಕಿಂಡಿಯ ಹತ್ತಿರ ಸುಂದರವಾದ ಅನೇಕ ಆಕೃತಿಗಳನ್ನು ಕೆತ್ತಿದ್ದಾರೆ. ಇಲ್ಲಿಯ ಮೂರ್ತಿಗಳು ವಿಶೇಷ ಪ್ರಮಾಣದಲ್ಲಿದ್ದರೂ ವೈವಿಧ್ಯವಿಲ್ಲದ್ದರಿಂದ ಮನಸ್ಸನ್ನು ಸೆಳೆಯುವುದಿಲ್ಲ.

1ನೆಯ ಗುಹಾಂತರದೇವಾಲಯದಲ್ಲಿಯ ಶಿಲಾಮೂರ್ತಿಗಳು ಬಹು ಸುಂದರವಾಗಿದ್ದು. ಮುಂಭಾಗದಲ್ಲಿ ಉತ್ತಮ ರೀತಿಯ ಕೆತ್ತನೆ ಕೆಲಸ ಮಾಡಿದ್ದಾರೆ. 26ನೆಯ ಗುಹಾಂತರದೇವಾಲಯದಲ್ಲಿ ಬುದ್ಧ ನಿರ್ವಾಣದ ಬೃಹತ್ ಚಿತ್ರವನ್ನು ಕೆತ್ತಿದ್ದಾರೆ. ಆನಂದನೇ ಮೊದಲಾದ ಅವನ ಅನುಯಾಯಿಗಳು ದೇಹದ ಹತ್ತಿರ ಕುಳಿತು ಶೋಕಿಸುತ್ತಿದ್ದಾರೆ. ಚಿತ್ರಸಂಯೋಜನೆ ಸುಂದರವಾಗಿದೆ. 1ನೆಯ ಗುಹಾಂತರ್ದೇವಾಲಯದ ಒಂದು ಕಂಬದ ಬೋದಿಗೆಯ ಮೇಲೆ ನಾಲ್ಕು ದೇಹ, ಒಂದೇ ಮುಖವುಳ್ಳ ನಾಲ್ಕು ಜಿಗರೆಗಳನ್ನು ಬಹು ಸುಂದರವಾಗಿ, ಜೀವಂತವೋ ಎನ್ನುವಂತೆ ಕೆತ್ತಿದ್ದಾರೆ. ಚೌಕಟ್ಟಿನ ಮೇಲಿರುವ ಕೆತ್ತನೆ ಮನಮೋಹಕವಾಗಿದೆ. ಅಜಂತದ ಒಂದು ವಿಹಾರದಲ್ಲಿ ಗರ್ಭಗುಡಿಯಲ್ಲಿಯ ಬುದ್ಧನ ಮೂರ್ತಿ, ಎದುರಿನಿಂದ ನೋಡಿದರೆ ಗಂಭೀರ ಮೌನದಲ್ಲಿದ್ದಂತೆ ತೋರುತ್ತದೆ. ಅದನ್ನೇ $45^{o}$ ಕೋನದಲ್ಲಿ ನಿಂತು ನೋಡಿದರೆ ನಗುವಂತೆ ತೋರುತ್ತದೆ. (ಎ.ಎಂ.ಎ.)

**ಅಜಂತದ ಭಿತ್ತಿ ಚಿತ್ರಗಳು** : ಅಜಂತದ ಗುಹೆಗಳ ಉತ್ಕೃಷ್ಟವಾದ ಶಿಲ್ಪ, ಚಿತ್ರ ರಚನೆಗಳು ಗುಪ್ತರ ಕಾಲದ ಕಲಾ ಔನ್ನತ್ಯವನ್ನೂ ಗಾಂಧಾರ, ಪಾರಸಿಕ, ಚೀನಾ ಸಂಪರ್ಕದ ಸಂಕೀರ್ಣತೆಯನ್ನೂ ಸೂಚಿಸುತ್ತವೆ. ಆದರೆ ಹೈಂದವ ಕಲಾ ಸಂಸ್ಕೃತಿ ಬೌದ್ಧರ ಯುಗಕ್ಕಿಂತ ಅತಿ ಪ್ರಾಚೀನವಾದದ್ದು. ಈ ಸಂಸ್ಕೃತಿಯಿಂದ ಸಂಗ್ರಹಿಸಲಾದ ಚಿತ್ರ ಲಕ್ಷಣಗಳನ್ನು ವಾತ್ಸಾಯನ ತನ್ನ ಕಾಮಸೂತ್ರದಲ್ಲಿ ಹೀಗೆ ವರ್ಣಿಸಿರುತ್ತಾನೆ: 'ರೂಪಭೇದ ಪ್ರಮಾಣಾನಿ ಭಾವಲಾವಣ್ಯ ಯೋಜನಂ। ಸಾದೃಶ್ಯಂ ವರ್ಣಿಕಾ ಭಂಗಮಿತಿ ಚಿತ್ರಂ ಷಡಂಗಕಮ್॥. ಅಜಂತದ ಚಿತ್ರಕಾರರು ಈ ಷಡಂಗಗಳನ್ನು ನಿಷ್ಠೆಯಿಂದ ತಮ್ಮ ಕೃತಿಗಳಲ್ಲಿ ಅನುಸರಿಸಿದ್ದಾರೆ.

ಸರ್ವಾನುಮತವಾಗಿ ಅಜಂತದ 30 ಗುಹೆಗಳನ್ನು ಕಾಲಾನುಕ್ರಮವಾಗಿ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ:

1ನೆಯ ಗುಂಪು – 8 – 13 ಗುಹೆಗಳು (ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರ.ಶ.ಪೂ. 1ನೆಯ ಶತಮಾನದವರೆಗೆ ಸಾತವಾಹನರ ಪೋಷಣೆ).

2ನೆಯ ಗುಂಪು – 14 – 19 ಗುಹೆಗಳು. (ಪ್ರ.ಶ.ಪೂ. 1ನೆಯ ಶತಮಾನದಿಂದ ಪ್ರ.ಶ. 6ನೆಯ ಶತಮಾನದವರೆಗೆ ವಾಕಾಟಕ ರಾಜರ ಪೋಷಣೆ.)

3ನೆಯ ಗುಂಪು – 1 – 6 ಗುಹೆಗಳು. (ಪ್ರ.ಶ. 3ನೆಯ ಶತಮಾನದಿಂದ ಪ್ರ.ಶ. 6ನೆಯ ಶತಮಾನದವರೆಗೆ).

4ನೆಯ ಗುಂಪು–20 – 30ರವರೆಗೆ. (ಪ್ರ.ಶ.4ನೆಯ ಶತಮಾನದಿಂದ ಪ್ರ.ಶ. 7ನೆಯ ಶತಮಾನದವರೆಗೆ).

7ನೆಯ ಗುಹೆಯ ನಿರ್ಮಾಣದ ಕಾಲ ನಿರ್ಣಯವಾಗಿಲ್ಲ. ಸಿಸ್ಟರ್ ನಿವೇದಿತಾ ಪ್ರ.ಶ. 3ನೆಯ ಶತಮಾನವೆಂದೂ ಮುಕುಲ್ ಡೇ ಪ್ರ.ಶ. ಮೊದಲನೆಯ ಶತಮಾನವೆಂದೂ ನಿರ್ಣಯಿಸುತ್ತಾರೆ. ಆದರೆ 9, 10ನೆಯ ಗುಹೆಗಳು ಅತಿ ಪ್ರಾಚೀನವಾದುವೆನ್ನುವುದರಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ (ಪ್ರಪೂ. 350 – ಪ್ರಪೂ. 200). ನೀಹಾರ್ ರಂಜನ್‌ರಾಯ್ ಅವರ ಅಭಿಪ್ರಾಯದಂತೆ ಇವು ಪ್ರ.ಶ. ಮೊದಲನೆಯ ಶತಮಾನದ ಮಧ್ಯಕಾಲಕ್ಕೆ ಸೇರುತ್ತವೆ.

2, 3, 4, 5, 23, 24, 27ನೆಯ ಗುಹೆಗಳು ಮತ್ತು 21ನೆಯ ಗುಹೆಯ ಮುಂಭಾಗ ಅಸಂಪೂರ್ಣವಾದವು. ಮಿಕ್ಕವೆಲ್ಲವೂ ಸಂಪೂರ್ಣವಾದವು. 7, 8, 11ನೆಯ ಗುಹೆಗಳು ಪ್ರಾಕೃತಿಕ ಗವಿಗಳಾಗಿದ್ದು ಕೆಲವು ಮಾರ್ಪಾಡುಗಳಿಂದ ದೇವಾಲಯಗಳಾಗಿವೆ. ಈ 30 ಗುಹೆಗಳ ಪೈಕಿ 2, 9, 10, 15, 16, 19, 26, 29 ಪೂಜಾರ್ಹವಾದ ಚೈತ್ಯಗಳು. ಮಿಕ್ಕವು ಭಿಕ್ಕುಗಳ ವಾಸಕ್ಕೆ ಕೊರೆದ ವಿಹಾರ ಅಥವಾ ಸಂಗ್ರಾಮಗಳು. ಆದರೆ, 15, 25ರ ಗುಹೆಗಳು ಎರಡೂ ಉದ್ದೇಶಗಳಿಗೆ ಅನುಕೂಲವಾದವು. 8ನೆಯ ಗುಹೆ ಬೆಟ್ಟದ



ಹತ್ತನೆಯ ಬೌದ್ಧ ಗುಹಾಲಯ

ಬುಡದಲ್ಲಿಯೂ 29ನೆಯದು ಬೆಟ್ಟದ ಶಿಖರದಲ್ಲೂ ನಿರ್ಮಿತವಾಗಿವೆ. 8, 9, 10, 12, 13ನೆಯ ಗುಹೆಗಳು ಬೌದ್ಧರ ಹೀನಯಾನ ಪಂಗಡಕ್ಕೂ ಮಿಕ್ಕವು ಮಹಾಯಾನ ಪಂಗಡಕ್ಕೂ ಸೇರಿವೆ. ಹೀನಯಾನ ಗುಹೆಗಳಲ್ಲಿ ಶಿಲ್ಪಚಿತ್ರಗಳು ಕಡಿಮೆ; ಮಹಾಯಾನದವುಗಳಲ್ಲಿ ಹೆಚ್ಚು. ಏಕೆಂದರೆ ಹೀನಯಾನ ಮತದಲ್ಲಿ ಬುದ್ಧನ ಸಂಕೇತಗಳಾದ ಪಾದಗಳು, ಧರ್ಮಚಕ್ರ, ದಂತಗಳು, ಸಂಪುಟಗಳಲ್ಲಿಟ್ಟು ಜೋಪಾನ ಮಾಡಿದ ಬೂದಿ – ಇವಕ್ಕೆ ಮಾತ್ರ ಆರಾಧನೆ ಸಲ್ಲತಕ್ಕದ್ದು. ದೈಹಿಕರೂಪವನ್ನು ಶಿಲ್ಪಚಿತ್ರಾದಿಗಳಲ್ಲಿ ಕೂಡ ನಿಷೇಧಿಸಲಾಗಿತ್ತು. (ದಶಧಮ್ಮಿಕಸುತ್ತ; ವಿಶುದ್ಧಿಮಗ್ಗ) ಹೀನಯಾನ ಯುಗದಲ್ಲಿ ಬುದ್ಧನ ಜನನ, ತ್ಯಾಗ, ಜ್ಞಾನಸಂಪಾದನೆ, ಮಹಾಪರಿ ನಿರ್ವಾಣ– ಇವು ಮಾತ್ರ ಶಿಲ್ಪದಲ್ಲಿ ಪ್ರದರ್ಶಿತವಾದವು. ಏಕೆಂದರೆ ಧರ್ಮಸೂತ್ರದ ಪ್ರಕಾರ ದೀಕ್ಷೆ ಪಡೆದವರು ಬಣ್ಣಗಳಿಂದ ಚಿತ್ರಿತವಾದುವನ್ನು, ಒಡವೆ ನವರತ್ನಗಳು ಮುಂತಾದ ಅಲಂಕಾರ ವಸ್ತುಗಳನ್ನು ನೋಡಲು ಕೂಡ ಪ್ರಯತ್ನಿಸಬಾರದು. ಪಂಚೇಂದ್ರಿಯಗಳಿಗೆ ಹಿತವಾದ ಸಂಗೀತ, ಸಾಹಿತ್ಯ, ಮೃಷ್ಟಾನ್ನ ಮುಂತಾದುವೆಲ್ಲವೂ ಅವರಿಗೆ ನಿಷಿದ್ಧ. ಮಹಾಯಾನ ಸಮಾರಂಭದಲ್ಲಿ (ನಾಗಾರ್ಜುನ; ಪ್ರ.ಶ. 200) ಬುದ್ಧನ ದೈಹಿಕ ನಿರೂಪಣೆ ಮತ್ತು ಅವನ ಪೂರ್ವಜನ್ಮದ ಕಥನ ರೂಢಿಗೆ ಬಂತು. ಅಜಂತದ ಗುಹೆಗಳಲ್ಲಿ ಕೆಲವು (1, 2) ಚಿತ್ರರಚನೆಯಲ್ಲೂ ಕೆಲವು (19, 26) ವಾಸ್ತುಶಿಲ್ಪದಲ್ಲೂ ಮತ್ತೆ ಕೆಲವು (16, 17) ವಾಸ್ತುಶಿಲ್ಪ, ಮೂರ್ತಿ ಶಿಲ್ಪ, ಚಿತ್ರಾಲಂಕಾರಗಳಲ್ಲೂ ಅಗ್ರಸ್ಥಾನ ಪಡೆದಿವೆ. ಹೀನಯಾನ ಕ್ಷೀಣಿಸಿದ ಅನಂತರ ಅಂದರೆ ಅಶೋಕನ ತರುವಾಯ ಮಹಾಯಾನ ವೃದ್ಧಿ ಹೊಂದಿದ ಮೇಲೆ, ಪಾರಸಿಕ, ಚೀನ, ಗಾಂಧಾರ, ಕಲಾಸಂಪ್ರದಾಯಗಳು ಹೈಂದವ ಸಂಸ್ಕೃತಿಯ ಮೇಲೆ ಪರಿಣಾಮ ಬೀರಿದ ಅನಂತರ, ಚಿತ್ರದ ವಸ್ತು ವಿಸ್ತೃತವಾಯಿತು. ಬುದ್ಧನ ಜೀವಿತಕ್ಕೆ ಹೊಂದಿದ ಜಾತಕ ಕಥಾನಕ, ಆರ್ಯದೇವನ ಜಾತಕಮಾಲೆ, ಅಶ್ವಘೋಷನ ಬುದ್ಧ ಚರಿತ್ರೆ, ಸೌಂದರನಂದ, ಸಾರಿಪುತ್ರ ಪ್ರಕರಣ, ಪ್ರಾಮುಖ್ಯ ಪಡೆದ ಭಿಕ್ಕುಗಳ ಜೀವಿತಗಳು, ಚರಿತ್ರಾತ್ಮಕ ಘಟನೆಗಳು, ಸಾಧಾರಣ ಜೀವಿತಗಳು, ಸಾಧಾರಣ ಜೀವಿತದಲ್ಲಿನ ಸನ್ನಿವೇಶಗಳು, ಪ್ರಕೃತಿ ಸೌಂದರ್ಯವನ್ನು ಸಾರುವ ಮೃಗ, ಪಕ್ಷಿ, ವೃಕ್ಷ, ಪುಷ್ಪಸಂಪತ್ತುಗಳು ಮುಂತಾದುವು ವರ್ಣಚಿತ್ರಗಳಲ್ಲಿಯೂ ಶಿಲ್ಪದಲ್ಲಿಯೂ ಅತ್ಯಂತ ಸೊಬಗಿನಿಂದ ರೂಪುಗೊಂಡವು. ಈ ಸಂದರ್ಭದಲ್ಲಿ ಅಜಂತ ಚಿತ್ರಕಾರನ ಮೇಲ್ಮಟ್ಟದ ಕಲಾದೃಷ್ಟಿ ಗಣನೀಯವಾದುದು. ಅವನ ಯೋಗದೃಷ್ಟಿಯಲ್ಲಿ, ಜೀವಿಗಳೆಲ್ಲ ಸಮಾನತೆ ಪಡೆದು ಅವರವರ ಸೊಬಗನ್ನು ಸ್ವೇಚ್ಛೆಯಿಂದ ಪ್ರಪಂಚಕ್ಕೆ ಬೀರುತ್ತ ಮಾನವ ಜಾತಿಯನ್ನು ಶಾಂತಿಯುತವಾದ ಉನ್ನತಮಟ್ಟಕ್ಕೆ ಎತ್ತುವುದಲ್ಲದೆ, ಎಲ್ಲರ ಜನಸ್ಥಾನವಾದ ಪರಮಾತ್ಮನಲ್ಲಿ ಐಕ್ಯತೆ ಪಡೆಯಲು ಸಹಕಾರಿಯಾಗುತ್ತಿದ್ದವು. ಅವನ ದೇವತಾರಾಧನೆಯಲ್ಲಿ ಪ್ರಕೃತಿಸೌಂದರ್ಯಾರಾಧನೆ ಮೊದಲ ಮೆಟ್ಟಿಲಾಗಿತ್ತು. ಅವನ ಕಾಂಕ್ಷೆ ಜೀವನ ಸಮನ್ವಯ; ಗುರಿ ಪರಮಾತ್ಮನನ್ನು ಸೇರುವಿಕೆ; ಅವನ ವೃತ್ತಿ ಬ್ರಹ್ಮಚರ್ಯ, ಅವನ ಮನೋಭಾವ ಬುದ್ಧನ ಮನೋಭಾವದಂತೆ ಅತಿ ಮೃದು. ಸೂರ್ಯಚಂದ್ರಾದಿಗಳ ಬೆಳಕಿನಂತೆ ಅವನ ಕರುಣೆ ವಿಶ್ವಾದ್ಯಂತ ಹರಡುತ್ತ ಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡುವ ಚೇತನವನ್ನು ಹೊಂದಿತ್ತು. ಚಿತ್ರದ ಹಿನ್ನೆಲೆಯಾದ ಪಶು ಪಕ್ಷಿ ಪ್ರಾಣಿಗಳ ಸಮುದಾಯದ ಚಟುವಟಿಕೆಗಳಿಗೂ ಮುನ್ನೆಲೆಯಾದ ಮಾನವ ಪ್ರವೃತ್ತಿಗಳಿಗೂ (ಜಾತಕ ಕಥನ ದೃಶ್ಯಗಳು) ಇರುವ ಅನುಪಮ ಸಮ್ಮೇಳನ ಪ್ರತಿಯೊಂದು ವರ್ಣಚಿತ್ರದಲ್ಲೂ ಮನೋಜ್ಞವಾಗಿ ರೂಪಿತವಾಗಿದೆ. ಇಂಥ ಸಮ್ಮೇಳನ ಅವನ ಕಲ್ಪನಾಶಕ್ತಿಯಲ್ಲಿ, ರಚನಾವಿಧಾನದಲ್ಲಿ ನಿರ್ದಿಷ್ಟವಾಗಿ ಕಂಡುಬರುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಆಧ್ಯಾತ್ಮಿಕ ಒಕ್ಕಟ್ಟನ್ನು ಇವನು ತನ್ನ ಹಲವಾರು ವರ್ಣಚಿತ್ರಗಳಲ್ಲಿ ಸಾಧಿಸಿರುತ್ತಾನೆ. ಅವನ ದಯೆ, ಸರ್ವಾಂತರ್ಯಾಮಿಯಾದ ದೇವತಾ ಸ್ವರೂಪವನ್ನು ತಾಳಿ, ಕುಂಚರೇಖೆಗಳಲ್ಲಿ ತುಂಬಿ ತುಳುಕಾಡುತ್ತಿದೆ. ಅವನ ಚಿತ್ರ ಕೇವಲ ಬಣ್ಣಗಳ ಸಮ್ಮಿಲನ ಮಾತ್ರವಲ್ಲ ತನ್ನ ಮನೋವೃತ್ತಿಯಲ್ಲಿ ಸಾಧಿಸಿದ ಮಾಧುರ್ಯವನ್ನು ತನ್ನ ಕೃತಿಗಳಲ್ಲಿ ಅವಿಚ್ಛಿನ್ನವಾಗಿ ಇಳಿಸಿದ್ದಾನೆ.

ಪ್ರಾಚೀನ ಹೈಂದವ ಕಲಾಸಂಸ್ಕೃತಿಯಲ್ಲಿ ಬುದ್ಧನ ಮಹಾನಿರ್ವಾಣದ (ಪ್ರ.ಶ.ಪೂ. 480) ಹಿಂದೆ ಚಿತ್ರರಚನೆಯಲ್ಲಿ 3 ಶೈಲಿಗಳಿದ್ದವೆಂದೂ ಅವುಗಳ ಮೊದಲನೆಯದಾದ ದೇವಶೈಲಿ ದೇವತೆಗಳಿಗೆ ಸಂಬಂಧಿಸಿದ್ದು, ಆ ರೀತಿಯಲ್ಲಿ ಅಜಂತದ ಅತಿ ಪ್ರಾಚೀನವಾದ ಚಿತ್ರಗಳು ರಚಿತವಾದುವೆಂದೂ ಎರಡನೆಯದು ಯಕ್ಷರ ಶೈಲಿ ಪುಣ್ಯಯಾನರಿಗೆ (ಒಳ್ಳೆಜನ, ಶೀಲವಂತರು) ಸಂಬಂಧಿಸಿದ್ದು. ಅಶೋಕನ ಕಾಲದ ಚಿತ್ರಕಾರರು (ಪ್ರ.ಶ.ಪೂ. 250) ಅದನ್ನು ಅನುಸರಿಸಿದರೆಂದೂ ಮೂರನೆಯ ನಾಗಾಶೈಲಿ ನಾಗಾರ್ಜುನರಿಂದ (ಪ್ರ.ಶ. 200) ಪೋಷಿತವಾಯಿತೆಂದೂ ಟಿಬೆಟ್ಟಿನ ಚರಿತ್ರಕಾರನಾದ ತಾರಾನಾಥ (ಪ್ರ.ಶ. 17 ಶ.) ತಿಳಿಸಿರುತ್ತಾನೆ. ದೇವಶೈಲಿಯನ್ನು ಮಗಧರಾಜನಾದ ಬುದ್ಧಪಕ್ಷನ ಕಾಲದಲ್ಲಿ (ಪ್ರ.ಶ. 5–6 ಶ.) ಶಿಲ್ಪಿ ಮತ್ತು ಚಿತ್ರಕಾರನಾದ ಬಿಂಬಸಾರ ಜೀರ್ಣೋದ್ಧಾರ ಮಾಡಿದನೆಂದೂ ಯಕ್ಷಶೈಲಿಯನ್ನು ಉದಯಪುರದ ರಾಜನಾದ ಶಿಲಾದಿತ್ಯಗಹಿಳನ ಕಾಲದಲ್ಲಿ (ಪ್ರ.ಶ. 7 ಶ.) ಶೃಂಗಧಾರನೆಂಬ ಚಿತ್ರಕಾರ ಜೀರ್ಣೋದ್ಧಾರ ಮಾಡಿದನೆಂದೂ ಮೂರನೆಯ ನಾಗಾಶೈಲಿಯನ್ನು ವಂಗದೇಶದ ರಾಜನಾದ ಧರ್ಮಪಾಲ, ಮಗ ದೇವಪಾಲರ ಕಾಲದಲ್ಲಿ (ಪ್ರ.ಶ. 9 ಶ.) ಚಿತ್ರಕಾರನಾದ ಧೀಮನ್, ಮಗ ಬಿತ್ಫಲೋ ಜೀರ್ಣೋದ್ಧಾರ ಮಾಡಿದರೆಂದೂ ತಾರಾನಾಥನ ಬರೆಹದಿಂದ ಗೊತ್ತಾಗುತ್ತದೆ. ಅಜಂತದ ಭಿತ್ತಿಚಿತ್ರಗಳಲ್ಲಿ ಈ ಮೂರು ಶೈಲಿಗಳು ಅಲ್ಲಲ್ಲಿ ಕಂಡುಬರುತ್ತವೆ.

ಅಜಂತ ಚಿತ್ರಗಳನ್ನು ಸ್ಥೂಲವಾಗಿ 3 ಪಂಗಡಗಳಾಗಿ ವಿಂಗಡಿಸಬಹುದು : 1. ಅಶುದ್ಧಾಲಂಕಾರದವು; 2 ಶುದ್ಧರೂಪಾತ್ಮಕವಾದವು; 3 ಕಥನಾತ್ಮಕವಾದವು. 3ನೆಯ ಪಂಗಡದಲ್ಲಿ ಮತ್ತೂ 3 ಭಾಗಗಳಿವೆ. i ಸಮಕಾಲೀನ ಚರಿತ್ರಾತ್ಮಕ ಕಥನ; ii ಗೌತಮನ ಸಂಸಾರತ್ಯಾಗ, ಬುದ್ಧತ್ವ ಸಂಪಾದನೆ ಮತ್ತು ಮಹಾನಿರ್ಯಾಣಗಳ ಕಥನ ; iii ಆರ್ಯದೇವ (ಆರ್ಯಸೂರ್ಯ ಪ್ರ.ಶ. 3 ಶ.) ಜಾತಕಮಾಲೆಯಲ್ಲಿ ಅಶ್ವಘೋಷ, ಬುದ್ಧಚರಿತ್ರೆ, ಸೌಂದರನಂದ, ಸಾರಿಪುತ್ರ ಪ್ರಕರಣಗಳಲ್ಲಿ ಬೌದ್ಧರ ದಿವ್ಯಾವಧಾನ ಮುಂತಾದುವುಗಳಲ್ಲಿ ವರ್ಣಿಸಿದ ಚರಿತ್ರೆ – ಇವೆಲ್ಲವೂ ಸೇರಿರುತ್ತವೆ.

ಶುದ್ಧಾಲಂಕಾರಕ್ಕೆ, ಅತಿ ಸಹಜವಾಗಿ, ಚಿತ್ರವಿಚಿತ್ರವಾಗಿ, ಅಸಂಖ್ಯಾತವಾಗಿ, ಮನೋಹರವಾಗಿ, ಆಕರ್ಷಕವಾಗಿ ರಚಿತವಾದ ಕಿನ್ನರ ಕಿಂಪುರುಷ ಮಾನವ ಪಶುಪಕ್ಷಿ ಪರ್ಣ ಲತಾಸಮುದಾಯಗಳನ್ನೊಳಗೊಂಡ ನಕ್ಷೆಗಳ ಸುರುಳಿಗಳು ಸೇರಿರುತ್ತವೆ. ಇವುಗಳಲ್ಲಿ ಗಮನಿಸಬೇಕಾದ್ದು ಚಿತ್ರಕಾರನ ದಯಾರ್ದ್ರಹೃದಯ ಮತ್ತು ಜೀವಕೋಟಿಯಲ್ಲಿನ ಸೂಕ್ಷ್ಮಪರಿಚಯ (1, 2ನೆಯ ಗುಹೆಗಳ ಒಳಮಾಳಿಗೆಯ ಮತ್ತು 17ನೆಯದರಲ್ಲಿರುವ ವಿಜಯನ ಸಿಂಹಳವಿಜಯದ ಅಂಚುಗಳ ಶೃಂಗಾರ). ಇವುಗಳಲ್ಲಿ ಅತಿ ಉತ್ಕೃಷ್ಟವಾದದ್ದು ಈ ಅಂಚುಗಳು (ಗುಹೆ 17). ಖಗವರ್ಗಕ್ಕೆ ಸೇರಿದ ಹಂಸ, ಕೊಕ್ಕರೆ, ಬಾತು, ಕಲಹಂಸ– ಇವುಗಳ ಜಲಕ್ರೀಡೆಯ ದೃಶ್ಯಗಳು ಅಸಂಖ್ಯಾತ ಮಾದರಿಗಳಲ್ಲಿವೆ. ಶುದ್ಧರೂಪಾತ್ಮಕ ಪಂಗಡಕ್ಕೆ ಸೇರಿದವು: ಅತ್ಯುತ್ತಮವಾದ ಪ್ರಣಯದಂಪತಿಗಳು (ಗುಹೆ 17). ಬೆನ್ನು ತಿರುಗಿಸಿ ಕುಳಿತ ಬಾಲೆ (ಗುಹೆ 17). ಕಮಲಪುಷ್ಪ ಹಿಡಿದ ಆಪ್ತಸಖಿಯೊಡನಿರುವ ಕಪ್ಪು ಭಾಮೆಯದ ಯುವರಾಣಿ (ಗುಹೆ 17). ನಾಟ್ಯದ ಅನಂತರ ವಿಶ್ರಾಂತಿಗಾಗಿ ಕಂಬಕ್ಕೆ ಒರಗಿದ ಅಪ್ಸರೆ

(ಗುಹೆ 2). ಅಲಂಕರಣ (ಗುಹೆ 17). ಗಾಂಧರ್ವ ದಂಪತಿಗಳ ಪ್ರಣಯ (ಗುಹೆ 1). ನಾಲ್ಕು ದೇಹಗಳಿಗೆ ಒಂದೇ ಶಿರಸ್ಸುಳ್ಳ ಜಿಂಕೆಗಳು (ಗುಹೆ 1). ಹೋರಿಗಳ ಗುದ್ದಾಟ (ಗುಹೆ 1). ಅಂತರಿಕ್ಷದಲ್ಲಿ ಸಂಚರಿಸುವ ಸ್ವರ್ಗೀಯರು (ಗುಹೆ 17). ಒಂಟಿಯಾಗೋ ಒಟ್ಟಾರೆಯೋ ಇರುವ ಜಾತಕ ಕಥೆಗಳನ್ನು ವರ್ಣಿಸುವ ಮಾನುಷ ರೂಪಗಳು – ಮುಂತಾದವು ಸೇರಿರುತ್ತವೆ. ಬುದ್ಧ ಜೀವನದ ದೃಶ್ಯಗಳ ಪೈಕಿ ಬೋಧಿಸತ್ವ ಪದ್ಮಪಾಣಿ (ಗುಹೆ 1). ಗೌತಮನ ಜನನ (ಗುಹೆ 2). ಮಹಾಜನಕ ಜಾತಕಕ್ಕೆ ಸೇರಿದ ಅಂತಃಪುರ ಪ್ರವೇಶದಲ್ಲಿನ ಭಿಕ್ಕು (ಗುಹೆ 1), ಕಂಬದ ಮೇಲಿನ ಬುದ್ಧ(ಗುಹೆ 10), ಛಾದಂತ ಜಾತಕ (ಗುಹೆ 10, 17), ಅಂತಃಪುರ ದೃಶ್ಯ, ನರ್ತಕಿಯರು (ಗುಹೆ 1), ವೃತ್ತಾಕಾರವಾದ ರಂಗಮಂಟಪ (ಗುಹೆ 16), ಮಹಾಸರ್ಪಜಾತಕ (ಗುಹೆ 1)—ಇವು ಅತ್ಯುತ್ಕೃಷ್ಟವಾದವು. ಇವು ಪ್ರಪಂಚ ಪ್ರಸಿದ್ಧವಾದ ಲಿಯೊನಾರ್ಡೋ–ಡ–ವಿಂಚಿಯ ಪ್ರಪಂಚ ಪ್ರಸಿದ್ಧವಾದ ಮೋನಲಿಸ, ಕಡೆಯ ಔತಣ (ಲಾಸ್ಟ್ ಸಪ್ಪರ್) ಎಂಬ ಎರಡು ಚಿತ್ರಗಳನ್ನು ಮೀರಿಸುವಂತಿವೆ. ಈ ಬೋಧಿಸತ್ವ ಪದ್ಮಪಾಣಿ (ಗುಹೆ 1), ಭಿಕ್ಷಾಟನಕ್ಕೆ ಹೊರಟ ಬುದ್ಧ, ಅವನ ಹೆಂಡತಿ, ಮಗು (ಗುಹೆ 17), 9, 10ನೆಯ ಗುಹೆಗಳ ಚಿತ್ರಗಳು—ಇವು ವಾಕಾಟಕ ರಾಜರ ಪೋಷಣೆಯಲ್ಲೂ 16, 17ನೆಯ ಗುಹೆಗಳ ಚಿತ್ರಗಳು ಪ್ರ.ಶ. 626–628 ರಲ್ಲೂ ಚಿತ್ರಿಸಲಾದವೆಂದು ಪಾರಸಿಕ ಖುಸ್ರು ಕಳುಹಿಸಿದ ರಾಯಭಾರದ ದೃಶ್ಯ ಸೂಚಿಸುತ್ತದೆ (ಗುಹೆ 1). ಈಗ ಉಳಿದಿರುವ ಚಿತ್ರಗಳಿಂದ ಛಾದಂತ ಜಾತಕ 10,17ನೆಯ ಗುಹೆಗಳಲ್ಲೂ ಬ್ರಾಹ್ಮಣ, ವಿದುರ, ಸಿಬಿ, ಶಂಖಪಾಲಿ, ಕ್ಷಾಂತಿವಾದ ಜಾತಕಗಳು 2ನೆಯ ಗುಹೆಯಲ್ಲೂ ಹಸ್ತಿ, ಛಾದಂತದ ಉತ್ತರಭಾಗ, ಉನ್ನಗ್ಗ ಮುಂತಾದ ಜಾತಕಗಳು, ಅಶ್ವಘೋಷನ, ಸೌಂದರನಂದದ ಜೊತೆಯಲ್ಲಿ 16ನೆಯ ಗುಹೆಯಲ್ಲೂ ರೂರೂ, ಮಹಾಕಪಿ, ಶಶಕ, ಮಾತೃಪೋಷಕ, ಸಿಬಿ, ವಿಶ್ವಂತರ, ನಾಲಗಿರಿ, ಹಂಸ, ಯುವರಾಜ, ಮಹಾನಾಗ ಮುಂತಾದವು 17ನೆಯ ಗುಹೆಯಲ್ಲೂ ಮಾರನ ಪರೀಕ್ಷೆ, ಮಹಾಜಿನಕ, ಛಾಂಪೇಯ, ಸಿಬಿ, ಮಹಾನಾಗ ಪಂಚಿಕ ಮುಂತಾದವು 1ನೆಯ ಗುಹೆಯಲ್ಲೂ ಮತ್ಸ್ಯ, ಮಹೇಶ, ಸಿಬಿ, ನಿಕ್ರೋಧ, ಶರಭಂಗ, ವೆಸ್ಸಾಂತರ, ಸೂತಸೋಮ ಮಾತೃಪೋಷಕ, ಮೈತ್ರಿಬಲ, ವಲಹಸ್ಸಾ ಮುಂತಾದವು 2ನೆಯ ಗುಹೆಯಲ್ಲೂ ಕೆಟ್ಟಿರುವ ಗುಹೆಗಳಲ್ಲೂ ಅತ್ಯಂತ ಭಕ್ತಿ, ಶ್ರದ್ಧೆಗಳಿಂದ ಚಿತ್ರಿತವಾಗಿವೆ. ಕೆಲವು ಜಾತಕ ಚಿತ್ರಗಳ ರಚನೆ ಆರ್ಯದೇವನ ಜಾತಕಮಾಲೆಯ ವಿವರಗಳನ್ನು ಅನುಸರಿಸಿವೆ. ಅಲ್ಲದೆ ಕೆಲವು ಚಿತ್ರಗಳ ಮೇಲೆ ಜಾತಕಮಾಲೆಯ ನುಡಿಗಳು ಬರೆಯಲ್ಪಟ್ಟಿವೆ. ಉದಾಹರಣೆಗೆ E—ಹೆಣ್ಣು ಹುಲಿಗೆ ಬೋಧಿಸತ್ತ್ವ ಗೌತಮನ ದೇಹಾರ್ಪಣದ ಚಿತ್ರ.

ಸಮಕಾಲೀನ ಚರಿತ್ರಾತ್ಮಕ ದೃಶ್ಯಗಳಲ್ಲಿ ಮುಖ್ಯವಾದವು: ಇಮ್ಮಡಿ ಪುಲಿಕೇಶಿ ರಾಜನು ತನ್ನ ದರ್ಬಾರಿನಲ್ಲಿ ಪಾರಸಿಕ ರಾಜ ಖುಸ್ರುವಿನ ರಾಯಭಾರಿಯನ್ನು ಸ್ವಾಗತಿಸುವುದು (ಗುಹೆ 1). ಇದರಲ್ಲಿ ಖುಸ್ರು, ಅವನ ರಾಣಿಯರ ಚಿತ್ರಗಳಿವೆ. ಅಶೋಕನ ಮಗನಾದ ವಿಜಯನ ಸಿಂಹಳವಿಜಯ (ಗುಹೆ 17) ವೆಂಬುದರಲ್ಲಿ ನರ್ತಕಿಯರ ಬೃಂದ ಅತಿ ಮನೋಹರವಾಗಿದೆ.

ಕಣ್ಣು ಕೋರೈಸುವಂಥ ಬಣ್ಣಗಳು, ನೈಜವಲ್ಲದ ಭಂಗಿಗಳು, ಪ್ರವೃತ್ತಿಗಳು, ಅಜಂತದ ಚಿತ್ರರಚನೆಗೆ ಅತಿ ದೂರವಾದವು. ಆತ್ಮಸಂತೋಷ, ಸಂಘಸುಧಾರಣೆ, ಜ್ಞಾನಾಭಿವೃದ್ಧಿ—ಇವೇ ಆ ಎಲ್ಲ ಚಿತ್ರಗಳ ಪರಮೋದ್ದೇಶ. ಆಧ್ಯಾತ್ಮಿಕ ಶಾಂತಿಯಲ್ಲದೆ ಮನೋವಿಕಾರಗಳ ಚಿತ್ರಣ ಅಲ್ಲೆಲ್ಲೂ ಕಂಡುಬರುವುದಿಲ್ಲ. ಪ್ರಕೃತಿಯಲ್ಲಿನ ಖಗ, ಮೃಗ, ಜಲ, ತರು, ಪತ್ರ, ಪುಷ್ಪಾದಿಗಳನ್ನು ಅನುಕರಿಸಿರುವುದರಿಂದ ಕೃತಿಗಳು ಶೋಭಾಯಮಾನವಾಗಿವೆ. ಅತ್ಯುತ್ತಮವಾದ ಮಾನುಷಸೌಂದರ್ಯಕ್ಕೆ ಅವು ಸಂಕೇತಗಳಾಗಿವೆ. ಉದಾಹರಣೆಗೆ ಬೋಧಿಸತ್ತ್ವ ಪದ್ಮಪಾಣಿ (ಗುಹೆ 1), ಹಸ್ತದಲ್ಲಿ ದಳದಳವಾಗಿ ವಿಕಸಿಸುತ್ತಿರುವ ಕಮಲ ಪ್ರಪಂಚದ ಸೃಷ್ಟಿಗೆ ಸಂಕೇತವಾಗಿದೆ. ಸುಂದರ ಯುವತಿಯ ಪಾದ, ಕಣ್ಣು, ಬೆರಳು, ಮುಖಲಾಲಿತ್ಯ, ಅಂಗಚ್ಛಾಯೆ–ಮುಂತಾದವು ಅವಳ ಸೌಂದರ್ಯಕ್ಕೆ ಸಂಕೇತಗಳಾಗಿವೆ. ಭಗವದ್ಗೀತೆಯ ಪದ್ಮಪತ್ರಮಿವಾಂಭಸ ಎಂಬ ನುಡಿಗಳು ಕಮಲದ ನಿರ್ಲಿಪ್ತತೆಯನ್ನೂ, ಅಶ್ಲೇಷಿತ ಜೀವನವನ್ನೂ ಸೂಚಿಸುತ್ತವೆ. ಕೊಳಲನ್ನೂದುವ ಬೆರಳುಗಳ ವಿನ್ಯಾಸ, ಕೊಳಲಿನ ಸ್ವರದಂತೆ ಅತಿಮಧುರವಾಗಿದೆ (ಗುಹೆ 1, 17). ಸಾಂಸಾರಿಕ ವಿಷಯಗಳಿಂದ ಮಲಿನವಾಗದಂಥ ಜೀವಿತವನ್ನು ಕಮಲಪುಷ್ಪ ಸೂಚಿಸಿದರೆ, ಮಾಲಿನ್ಯರಹಿತವಾಗಿ ಮನೋಹರವಾದ ಭಂಗಿಗಳಲ್ಲಿ ಕ್ರೀಡಿಸುವ ಹಂಸ ಮುಂತಾದ ಜಲಪಕ್ಷಿಗಳು (ಗುಹೆ 2, 17) ಮಾನವನ ಜೀವನ್ಮುಕ್ತಿಯ ಆನಂದವನ್ನು ಸಾರುತ್ತವೆ. ಇಂಥ ದೃಶ್ಯಗಳೆಲ್ಲ ಮಾನವನ ದೈವಿಕ ಪ್ರವೃತ್ತಿಯನ್ನು ಮುದ್ರಿಸಿಟ್ಟಂತೆ ತೋರುತ್ತವೆ.

ಅಜಂತದ ಶಿಲ್ಪ, ಚಿತ್ರರಚನೆಗಳು ದಕ್ಷಿಣ ಹಿಂದೂಸ್ಥಾನದ್ದೆಂದು ನಿಸ್ಸಂಶಯವಾಗಿ ಹೇಳಬಹುದು. ಇಂಥ ವಿಶಾಲದೃಷ್ಟಿ, ಆಧ್ಯಾತ್ಮಿಕ ವಿಜ್ಞಾನ, ಲಲಿತಕಲೆಗಳಲ್ಲಿನ ಕೌಶಲ, ಹಿಂದೂದೇಶದ ಮತ್ತಾವ ಭಾಗದಲ್ಲೂ ಕಂಡುಬರುವುದಿಲ್ಲ. ಕಲೆಗಾರರ ದೃಷ್ಟಿಯಲ್ಲಿ ಚಿಕ್ಕದು, ದೊಡ್ಡದು ಎನ್ನುವ ಭಾವನೆ ಇರಲಿಲ್ಲ. ಕ್ರಿಮಿಕೀಟಗಳಿಂದ ಹಿಡಿದು ಘನದೇವತೆಗಳವರೆಗೆ ಎಲ್ಲವೂ ಸಮಾನತೆಯನ್ನು ಹೊಂದಿದ್ದವು. ಅವರ ಕಣ್ಣಿಗೆ ಆನಂದದಾಯಕವಾದ ಪರಮೇಶ್ವರನ ಮಾಧುರ್ಯ ಸೃಷ್ಟ್ಯವ್ಯಂತ ಸುತ್ತುವರಿದು ಸಕಲ ಚರಾಚರವಸ್ತುಗಳಲ್ಲಿ ತುಂಬಿ ತುಳುಕಿ ತಾಂಡವವಾಡುತ್ತಲಿತ್ತು. ಬುದ್ಧನಿಗೆ ಮತ್ತು ಬೌದ್ಧಮತಕ್ಕೆ ಸಂಬಂಧಿಸಿದವಾದರೂ ಆ ಶಿಲ್ಪದಲ್ಲಿ ಚಿತ್ರಗಳಲ್ಲಿ ಸಾರ್ವಕಾಲಿಕ ಮೌಲ್ಯವನ್ನುಳ್ಳ ಧರ್ಮ ಮತ್ತು ಕಲೆ ಪ್ರತಿಬಿಂಬಿತವಾಗಿವೆ.

ಚಿತ್ರಗಳಲ್ಲಿನ ಸ್ತ್ರೀಯರೆಲ್ಲ ಯುವತಿಯರು. ಆನಂದದಿಂದ ಪ್ರಫುಲ್ಲಿತವಾದ ನೇತ್ರ, ವದನಗಳನ್ನು ಪಡೆದಿದ್ದರೂ ಭಂಗಿಗಳ ನಿರೂಪಣೆ ಅತ್ಯಂತ ರಸಯುತವಾಗಿದ್ದರೂ ನೋಡುವವರಿಗೆ ಕಾಮುಕ ಭಾವನೆಗಳನ್ನು, ಮನೋವಿಕಾರಗಳನ್ನು ಅವು ಉಂಟುಮಾಡುವುದಿಲ್ಲ. ಅವರೆಲ್ಲರೂ ಸ್ತ್ರೀ ಜಾತಿಗೆ ಸೇರಿದ ಪರಮ ಪತಿವ್ರತೆಯರು. ಚಲನವಲನಗಳಲ್ಲಿ ಮಾತೃಭಾವನೆ ವಿನಾ ಇತರ ಭಾವನೆಗಳನ್ನು ಅವರು ಪ್ರಕಟಿಸುವುದಿಲ್ಲ. (ನರ್ತಕಿ, ಗುಹೆ 2; ನರ್ತಕಿಯರು, ಗುಹೆ 1, 17: ಅಲಂಕರಣೆ, ಗುಹೆ 17; ಕಪ್ಪು ಛಾಯೆಯದ ಯುವರಾಣಿ, ಗುಹೆ 1; ದಂಪತಿಗಳು, ಗುಹೆ 17). ತಮ್ಮ ನೃತ್ಯಭಂಗಿಗಳಲ್ಲೆಲ್ಲ ಅವರು ಆತ್ಮಸಂಯಮವನ್ನು, ದೈವಿಕ ಕ್ರಮದ ಜೀವಾಳವನ್ನು ಪ್ರಚುರಮಾಡುತ್ತಲಿದ್ದಾರೆ.

ಅಜಂತದ ಕಲೆಗಾರನ ಸ್ಫೂರ್ತಿ ಅವನ ಹೃದಯ ಸೌಂದರ್ಯದಿಂದ ಜನಿಸಿರುವುದೇ ಹೊರತು ಬಾಹ್ಯ ಪ್ರಪಂಚದಲ್ಲಿನ ಸೌಂದರ್ಯದಿಂದ ಅಲ್ಲ. ವಿನಯ, ಗಾಂಭೀರ್ಯ ಮತ್ತು ಸಮತೋಲನ ಅವನ ಕೃತಿಗಳಲ್ಲಿ ಶಾಂತಿಯುತವಾಗಿ ತಾಂಡವವಾಡುತ್ತಲಿವೆ.

ವಿವಿಧ ಬಣ್ಣದ ತಂತುಗಳಿಂದ ನೆಯ್ದ ವಸ್ತ್ರದಂತೆ ಕಾಣುವ ದೇವತಾಂಶ ಸಂಭೂತ ಚಿತ್ರಗಳು ಮಾತ್ರವೇ ಅಲ್ಲ; ಸಾಮಾನ್ಯ ಜೀವನದ ದೃಶ್ಯಗಳು ಕೂಡ ಅಲ್ಲಿವೆ. ಎಲ್ಲ ಕಾಲಕ್ಕೂ ಎಲ್ಲರ ಜೀವನಾವಸ್ಥೆಗಳಿಗೂ ಸಂಬಂಧಿಸಿದಂತೆ ಚೈತನ್ಯವನ್ನು ನೀಡುವ ರೂಪಲಕ್ಷಣಗಳನ್ನು ಅವು ಒದಗಿಸುತ್ತವೆ. ರೂಪಗಳ ರೇಖಾವಿಲಾಸ ನಿರ್ಮಲ ಶಾಂತತ್ವದಿಂದ ವಿರಾಜಿಸುತ್ತಿದೆ. ಆನಂದಮಯವಾದ ರೇಖೆಗಳ ಹಿನ್ನೆಲೆಯಲ್ಲಿ ಪರವಸ್ತುವಿನ ಛಾಯೆ ಕಂಡುಬರುತ್ತದೆ. ಚಿತ್ರಗಳಲ್ಲಿ ಅಪಾರವಾದ ಹುಮ್ಮಸ್ಸು, ಅನಂತವಾದ ಕರುಣೆ ಹೊಮ್ಮುತ್ತಿವೆ. ಇಂಥ ಗಂಭೀರತೆ ಇತರೆಡೆಗಳಲ್ಲಿ ಅಪರೂಪ. ಚಿತ್ರಗಳಲ್ಲಿ ಎಲ್ಲೆಲ್ಲಿಯೂ ಯೌವನದ ಉತ್ಸಾಹ, ಸಂತೋಷ ಗೋಚರವಾಗಿ ಆಶಾಭಾವದ ಪ್ರವೃತ್ತಿ ಇರುವುದಾದರೂ ಪ್ರಾಪಂಚಿಕ ಜೀವನ ಸರ್ವಾವಸ್ಥೆಗಳಲ್ಲೂ ಕ್ಷಣಿಕವಾದದ್ದೆಂಬ ಸೂಚನೆ, ಶಾಶ್ವತ ಜೀವನವನ್ನು ಬಯಸುವ ಇಚ್ಛೆ ಎಲ್ಲೆಡೆಯೂ ಪ್ರಕಟಿತವಾಗಿದೆ.

ಅಜಂತದಲ್ಲಿನ ಚಿತ್ರಗಳನ್ನು ಕೊರೆದಿರುವ ಗೋಡೆಗಳ ರಚನಾಕ್ರಮಕ್ಕೆ ಕುತೂಹಲಕಾರಿಯಾಗಿದೆ. ಕಲ್ಲಿನ ಗೋಡೆಯನ್ನು ಸಂತ್ರಾಸು ಕೆಲಸದಿಂದ ಸಮಪಡಿಸಲಾಗಿದೆ. ಮರಳು, ಧಾತುಮಿಶ್ರಿತ ಮಣ್ಣು, ಬತ್ತದ ಹುಲ್ಲು, ಹೊಟ್ಟು ಅಥವಾ ತೌಡು, ಪಾಚಿ, ಕಪ್ಪೆಚಿಪ್ಪು ಮುಂತಾದುವನ್ನು ಬೆಲ್ಲದ ನೀರಿನಲ್ಲಿ ಆರು ತಿಂಗಳು ಕೊಳೆಸಿ ನುಣ್ಣಗೆ ಮಾಡಿದ ಗಾರೆಯನ್ನು ಗೋಡೆಗೆ ಗಿಲಾವು ಮಾಡಲಾಗಿದೆ. ಅದರ ಹಸಿ ಆರುವುದರೊಳಗೆ ಧಾತುರಾಗದ ಕಡ್ಡಿಗಳಿಂದ ಸ್ಥೂಲ ಚಿತ್ರಗಳನ್ನು ಗುರುತು ಮಾಡಿಕೊಂಡು ಅನಂತರ ಬಣ್ಣ ಹಾಕಲಾಗಿದೆ. ಈ ಕ್ರಮವನ್ನು ಫ್ರೆಸ್ಕೊ ಬುವಾನೊ ಎಂದು ಕರೆಯುತ್ತಾರೆ. ಹಿನ್ನೆಲೆ ಒಣಗಿದ ಮೇಲೆ ಚಿತ್ರ ಬರೆದರೆ, ಕೆತ್ತಿದರೆ ಅವು ಹೆಚ್ಚು ಕಾಲ ನಿಲ್ಲವು. ಈ ವಿಧಾನವನ್ನು ಫ್ರೆಸ್ಕೊ ಸೆಕ್ಕೊ ಎನ್ನುತ್ತಾರೆ. ಫ್ರೆಸ್ಕೊ ಬುವಾನೊ ವಿಧಾನದಲ್ಲಿ ರಚಿತವಾದ ಅಜಂತ ಚಿತ್ರಗಳು 2,000 ವರ್ಷಗಳಾದರೂ ಇನ್ನೂ ಉಳಿದು ಬಂದಿವೆ. ಆದರೆ ಎರಡನೆಯ ವಿಧಾನದಂತೆ ಬರೆಯಲ್ಪಟ್ಟ ಲೇಪಾಕ್ಷಿ ಚಿತ್ರಗಳು ಈ 400 ವರ್ಷಗಳಲ್ಲಿ ಕೆಟ್ಟಿವೆ.

ಫ್ರೆಸ್ಕೊ ಬುವಾನೊ ವಿಧಾನವನ್ನು ಇಟಲಿ ದೇಶ ಭಾರತೀಯರಿಂದ ಕಲಿತು ಬಳಸಿಕೊಂಡು ಪಾಂಪೇಯ ಮ್ಯೂರಲ್‍ಗಳನ್ನು ನಿರ್ಮಿಸಿದೆ. ಭಾರತೀಯರಿಗೆ ಯಥಾ ದೃಷ್ಟಿ ನಿರೂಪಣೆ, ಬೆಳಕು ನೆರಳುಗಳ ವಿನ್ಯಾಸ ಗೊತ್ತಿರಲಿಲ್ಲವೆನ್ನುವುದು ಸುಳ್ಳು. ಬೋಧಿಸತ್ತ್ವ ಪದ್ಮಪಾಣಿ, ಅಭಿಷೇಕ ದೃಶ್ಯ, ಕಪ್ಪುಛಾಯೆಯ ಯುವರಾಣಿ (ಗುಹೆ 1), ಅಪ್ಸರೆ (ಗುಹೆ 2); ಗುಂಡಾದ ರಂಗಮಂಟಪ (ಗುಹೆ 16); ಬುದ್ಧ, ಅವನ ಹೆಂಡತಿ ಮತ್ತು ಮಗ, ಅಂತಃಪುರದ ಪ್ರವೇಶದಲ್ಲಿನ ಭಿಕ್ಕು (ಗುಹೆ 17) ಮುಂತಾದವು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. (ಪಿ.ಎಸ್.)

**ಅಜಗಣ್ಣ :** 12ನೆಯ ಶತಮಾನದ ಶಿವಶರಣರಲ್ಲಿ ಒಬ್ಬ, ಅಂದಿನ ವಚನಕಾರರಲ್ಲಿ ಮೊದಲ ಸಾಲಿಗೆ ಸೇರಿದವನು.

ಇವನು ತನ್ನ ಎಳವೆಯಲ್ಲಿ ಒಂದು ಅದ್ಭುತ ದೃಶ್ಯವನ್ನು ಕಂಡನಂತೆ; ಸರ್ಪವೊಂದು ತನ್ನ ಹೆಡೆಯಲ್ಲಿ ರತ್ನವನ್ನು ನೆಲದ ಮೇಲಿರಿಸಿ, ಅದರ ಬೆಳಕಿನಲ್ಲಿ ತನ್ನ ಆಹಾರವನ್ನು ಹುಡುಕಿ ನುಂಗಿದ ಮೇಲೆ ಆ ರತ್ನವನ್ನು ಮತ್ತೆ ಹೆಡೆಯಲ್ಲಿ ಅಡಗಿಸಿಟ್ಟುಕೊಂಡು ಸಳಸಳನೆ ಹರಿದು ಅದೃಶ್ಯವಾಯಿತು. ಈ ದೃಶ್ಯದಿಂದ ಅಜಗಣ್ಣನಿಗೆ ತನ್ನ ಇಷ್ಟಲಿಂಗವನ್ನು ಗೋಪ್ಯವಾಗಿ ಧರಿಸಬೇಕು ಎಂಬ ತತ್ತ್ವದರ್ಶನ ಹೃದ್ಗತವಾಯಿತು. ಅಂದಿನಿಂದ ಶಿವಭಕ್ತಿಯನ್ನು ಹೊರಗೆ ತೋರಗೊಡದೆ ನಿರಾಡಂಬರದ ಹಾಗೂ ಋಜುಮಾರ್ಗದ ದಿವ್ಯಜೀವನವನ್ನು ನಡೆಸುವ ಕನಸನ್ನು ಕಟ್ಟಿಕೊಂಡ. ಆ ಧ್ಯೇಯದತ್ತ ತನ್ನ ಆಚಾರವನ್ನು ದೃಢವಾಗಿ ತಿದ್ದಿಕೊಂಡ. ಬಹಿರಂಗದ ಪೂಜೋಪಚಾರಗಳು ಅವನಿಗೆ ಒಗ್ಗದೇ ಹೋದವು. ಅಂತರಂಗದ ಧ್ಯಾನಧಾರುಣಗಳೇ ಅವನ ಸಾಧನೆಯ ಸೂತ್ರಗಳಾದವು.

ಸುತ್ತಮುತ್ತಲಿನ ಜನಕ್ಕೆ ಇದು ಅರ್ಥವಾಗಲಿಲ್ಲ. ಲಿಂಗಪೂಜೆಯನ್ನು ಎಲ್ಲರಂತೆ ಮಾಡದ ಅಜಗಣ್ಣ ಅನಾಚಾರಿ ಎಂಬ ಮಾತು ಪ್ರಚಲಿತವಾಯಿತು. ಬಹಿರಂಗ ಮುಗ್ಧನೂ ಅಂತರಂಗಸಿದ್ಧನೂ ಆದ ಬಾಲಕ ಅಜಗಣ್ಣನನ್ನು ಅವನ ಒಡನಾಡಿಗಳು ಗೇಲಿಮಾಡಿ ಹಿಂಸಿಸತೊಡಗಿದರು. ಅವರು ಒಂದು ದಿನ ವಿನೋದಕ್ಕಾಗಿ ಅಜಗಣ್ಣನನ್ನು ತಡೆದು

ನಿಲ್ಲಿಸಿ 'ಬೆಲ್ಲ ಕೊಡುತ್ತೇವೆ ನಿನ್ನ ಇಷ್ಟಲಿಂಗವನ್ನು ಕೊಡು' ಎಂದು ಪೀಡಿಸಿದರು. ಆಗ ಅಜಗಣ್ಣ ತನ್ನ ಇಷ್ಟಲಿಂಗವನ್ನು ಅಂಗೈಯೊಳಗೆ ಬಿಗಿಯಾಗಿ ಹಿಡಿದು, ದೃಷ್ಟಿ ನುಸುಳಿಸಿ, ನಟ್ಟು ನೋಡಿ, ಬಾಯಲ್ಲಿ ಹಾಕಿಕೊಂಡು ಓಂ ನಮಃಶಿವಾಯ ಎನ್ನುತ್ತ ನುಂಗಿಬಿಟ್ಟ. ಆಗ ಅದು ಅವನ ಹೃದಯಕಮಲಕರ್ಣಿಕಾ ಮಧ್ಯದಲ್ಲಿ ಜ್ಯೋತಿರ್ಲಿಂಗವಾಗಿ ಥಳಥಳಿಸಿತಂತೆ. ಆದರೇನು ಅವನು ಜನರ ಕಣ್ಣಿಗೆ ಮಾತ್ರ ಅರೆಮರುಳನಂತೆ ವಿಪರೀತವಾಗಿ ಕಂಡ.

ತಂಗಿಯಾದ ಮುಕ್ತಾಯಿ ಪೇಚಿನ ಪರಿಸ್ಥಿತಿಯಲ್ಲಿದ್ದ ಅಜಗಣ್ಣನನ್ನು ಮನೆಗೆ ಕರೆತಂದಳು. ಆದರೆ ದೇಹದ ಮೇಲೆ ಲಿಂಗವಿಲ್ಲದ ಹುಡುಗನನ್ನು ಆಚಾರವಂತರೆನಿಸಿಕೊಂಡಿದ್ದ ಅವನ ತಂದೆತಾಯಿಗಳು ಮನೆಯೊಳಗೆ ಇಟ್ಟುಕೊಳ್ಳಲಿಲ್ಲ; ಮೇಲಾಗಿ ಅವನನ್ನೇಕೆ ಮನೆಗೆ ಕರೆತಂದುದೆಂದು ಮುಕ್ತಾಯಿಯನ್ನು ಹೊರನೂಕಿದರು. ಅಣ್ಣ ತಂಗಿಯರಿಬ್ಬರೂ ಅಡಕ ಎಂಬ ಊರಿಗೆ ಹೋಗಿ ಅಲ್ಲಿದ್ದ ಸೋದರಮಾವನ ಮನೆ ಸೇರಿದರು. ಸೋದರಮಾವ ತನ್ನ ಮಗಳನ್ನು ಅಜಗಣ್ಣನಿಗೆ ಕೊಟ್ಟು ಮದುವೆ ಮಾಡಿದ. ಆ ಮಾವನ ಮಗಳು ತನ್ನನ್ನು ಅನಾಚಾರಿಯಾದೊಬ್ಬನಿಗೆ ಕೊಟ್ಟರೆಂದು ತೀವ್ರ ಅಸಮಾಧಾನಪಟ್ಟಳು. ಸಮರಸದಿಂದ ಒಗೆತನಮಾಡದೆ ಗಂಡನೊಡನೆ ಉದಾಸೀನದಿಂದ ವರ್ತಿಸಿದಳು.

ತನಗೆ ಇಕ್ಕಟ್ಟಾದರೂ ತನ್ನ ಹೆಂಡತಿಯ ಶಿವಾಚಾರನಿಷ್ಠೆಯನ್ನು ಕಂಡು ಒಂದು ವಿಧವಾದ ಸಮಾಧಾನ, ಅಜಗಣ್ಣನಿಗೆ. ತನ್ನನ್ನು ಅವಳು ಪುರಸ್ಕರಿಸದಿರುವುದಕ್ಕೆ ಅನಾಚಾರಿಯಾದವನು ಗಂಡನಾದನಲ್ಲಾ ಎಂಬ ಒಳಗುದಿ ಕಾರಣವೇ ಹೊರತು ಅನ್ಯಥಾ ಅಲ್ಲವೆಂಬ ಸಹಾನುಭೂತಿಯೇ ಅವನ ಸಮಾಧಾನಕ್ಕೆ ಪ್ರೇರಕವಾಗಿತ್ತು. ತನ್ನ ಭಕ್ತಿ ತಾನು ಕೈ ಹಿಡಿದ ಹೆಂಡತಿಗೂ ತಿಳಿಯಬಾರದೆಂಬುದೇ ಅವನ ಮಹದಾಕಾಂಕ್ಷೆ. ಇದನ್ನು ಸಾಧಿಸುವಲ್ಲಿ ಮನೆಯೊಳಗೆ ಹೆಂಡತಿ ಮಕ್ಕಳಿಂದಾಗಲಿ, ಮನೆಯಿಂದ ಹೊರಗೆ ಜನಜಂಗುಳಿಯಿಂದಾಗಲಿ ಏನೇ ಅವಜ್ಞೆ ತಿರಸ್ಕಾರ ಬಂದರೂ ಅವನ್ನೆಲ್ಲ ನಿತ್ತರಿಸಿ ನಿರಾಡಂಬರದ ಸಾತ್ವಿಕ ಜೀವನದ ಸ್ಮಾರಕವಾಗಬಯಸಿದ ಅಜಗಣ್ಣನೊಬ್ಬ ಅಪೂರ್ವ ಮಹನೀಯ.

ಇತ್ತಕಡೆ ಮುಕ್ತಾಯಿಗೂ ಮದುವೆಯಾಯಿತು. ಅವಳು ಗಂಡನ ಮನೆಗೆ ಹೋಗುವಾಗ ಅಣ್ಣನನ್ನು ಅಗಲಲಾರದೆ ಅಣ್ಣನ ಸಾವಿನ ಸೂಚನೆಯೇನೆಂದು ಕೇಳಿದಳು. ಅದಕ್ಕೆ ಅಜಗಣ್ಣ, 'ನಿನ್ನ ಹಿತ್ತಲಲ್ಲಿ ಒಂದು ಮಲ್ಲಿಗೆಯ ಗಿಡವನ್ನು ನೆಡು, ನೆಟ್ಟು ಆರೈಕೆ ಮಾಡುತ್ತಿರು. ಅದು ಒಣಗಿದರೆ ನಾನು ಸತ್ತೆನೆಂದು ತಿಳಿ' ಎಂದ. ತಂಗಿ ಗಂಡನ ಮನೆಗೆ ಹೋದಳು.

ಪರಪೀಡಕಪ್ರವೃತ್ತಿಯ ಪುಂಡರು ಕೆಲವರು ಒಂದು ದಿನ ಭಾರವಾದ ಒಂದು ಗೋದಿಯ ಮೂಟೆಯನ್ನು ಅಜಗಣ್ಣನ ಮೇಲೆ ಹೇರಿ ತಮ್ಮ ಮನೆಗೆ ಅಟ್ಟಿಕೊಂಡು ಹೋದರು. ಆ ರಭಸದಲ್ಲಿ ಮನೆಯ ಒಳಗೆ ಹೋಗುವಾಗ ಅಜಗಣ್ಣನ ತಲೆ ಬಾಗಿಲುವಾಡಕ್ಕೆ ಘಟ್ಟಿಸಿ ಒಡೆದು ಹೋಯಿತು; ಪ್ರಾಣಪಕ್ಷಿ ಹಾರಿ ಹೋಗಿ ಶಿವನ ಗೂಡು ಸೇರಿತು.

ಅಣ್ಣನ ಸಾವಿನ ಸುದ್ದಿಯನ್ನು ತಿಳಿದು ತಂಗಿ ಮುಕ್ತಾಯಿ ಕಣ್ಣೀರಿಟ್ಟು, ಕಂಗಾಲಾದಳು. ಅವಳಿಂದ ಮೊಸಳೆಕಲ್ಲೆಂಬ ಊರಿಗೆ ಆಕಸ್ಮಿಕವಾಗಿ ಬಂದ ಪ್ರಭುದೇವ ಅವಳನ್ನು ಸಂತೈಸಿ, ಅಜಗಣ್ಣನಂಥವರು ಸಾಯುವವರ ಸಾಲಿಗೆ ಸೇರುವವರಲ್ಲವೆಂಬುದನ್ನೂ ಅವರ ದಿವ್ಯಾತ್ಮಗಳು ಮಾನವರ ಮನೋಮಂದಿರದಲ್ಲಿ ಮಸುಕಾಗದೆ ಎಂದೆಂದಿಗೂ ಮಿನುಗುತ್ತಿರುವ ಅಮರದೀವಿಗೆಗಳೆಂಬುದನ್ನೂ ಮನದಟ್ಟು ಮಾಡಿಕೊಟ್ಟ.

ಚೆನ್ನಬಸವಣ್ಣ ಅಜಗಣ್ಣನ ಬಗ್ಗೆ ಹೀಗೆ ಹೇಳಿದ್ದಾನೆ; 'ಆದ್ಯರ ಅರುವತ್ತು ವಚನಕ್ಕೆ ಪ್ರಭುದೇವರ ಹತ್ತುವಚನ. ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ. ಅಜಗಣ್ಣನ ಐದು ವಚನಕ್ಕೆ (ಕೂಡಲ ಚೆನ್ನಸಂಗಯ್ಯನಲ್ಲಿ) ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ.

ಮಹಾದೇವಿಯಕ್ಕನನ್ನು ಬಿಟ್ಟರೆ ಎರಡನೆಯ ಸ್ಥಾನವೇ ಅಜಗಣ್ಣನದು. ಶ್ರೇಷ್ಠ ವಚನಕಾರರಾದ ಪ್ರಭುದೇವ, ಬಸವಣ್ಣ ಮತ್ತು ಅವರಿಗಿಂತ ಪೂರ್ವದವರಾದ ದೇವರ ದಾಸಿಮಯ್ಯ ಮುಂತಾದವರಿಂದ ಸಂತಸಾಹಿತಿಗಳ ಪ್ರಥಮಶ್ರೇಣಿಯಲ್ಲಿ.

ಅಜಗಣ್ಣನ ವಚನಗಳು ಇಂದು ನಮಗೆ ಒಂದೂ ಸಿಕ್ಕಿಲ್ಲ. ಆದರೂ ಶೂನ್ಯ ಸಂಪಾದನೆಯಲ್ಲಿ ಬರುವ ಮುಕ್ತಾಯಕ್ಕಗಳ ಪ್ರಸಂಗಗಳನ್ನು ಅವಲೋಕಿಸಿದರೆ ಅಜಗಣ್ಣನ ನಡೆನುಡಿಗಳ ಪ್ರಭೆ ಅಲ್ಲಿನ ಮುಕ್ತಾಯಿ ಅಲ್ಲಮರ ವಾಣಿಯ ಮೂರೇಣಿನ ಸ್ಫಟಿಕದ ಮೂಲಕ ಹಾಯ್ದು, ಒಡೆದು ಬಣ್ಣ ಬಣ್ಣವಾಗುವ ಬೆಡಗು ದೃಗ್ಗೋಚರವಾಗುವುದು.(ಎಲ್.ಬಿ.)

**ಅಜಗರ[1] (ಹೆಬ್ಬಾವು) :** ಬೃಹತ್ ಗಾತ್ರದ ವಿಷಕಾರಿಯಲ್ಲದ ಹಾವು. ಇವು 8 – 9ಮೀ ಉದ್ದದವರೆಗೂ ಬೆಳೆಯಬಹುದು. ಸಂಪೂರ್ಣವಾಗಿ ಬೆಳೆದ ಚಿರತೆಯನ್ನು ಕೂಡ ಬೇಟೆಯಾಡುವ ಸಾಮರ್ಥ್ಯ ಹೊಂದಿದೆ. ಕುರುಚಲ ಅರಣ್ಯ ಪ್ರದೇಶ, ದಟ್ಟವಾದ ಕಾಡುಗಳಲ್ಲಿ ಬಂಡೆಗಳ ಸಂದು, ಮರದ ಪೊಟರೆಗಳಲ್ಲಿ ವಾಸಿಸುವವು. ಭಾರತದ ಎಲ್ಲೆಡೆ ಕಾಣಬರುತ್ತದೆ.

ಬೇಟೆಯನ್ನು ಬಲವಾಗಿ ಸುತ್ತಿಕೊಂಡು ಉಸಿರುಕಟ್ಟಿ ಸಾಯಿಸುತ್ತವೆ. ಅನಂತರ ಅದನ್ನು ನುಂಗಿ ಮರಕ್ಕೆ ಬಿಗಿಯಾಗಿ ಸುತ್ತಿಕೊಂಡು ಬೇಟೆಯ ಮೂಳೆಗಳನ್ನು ಪುಡಿಪುಡಿಯಾಗುವಂತೆ ಮಾಡುತ್ತವೆ. ಬೇಟೆಯನ್ನು ನುಂಗಿದ ಅನಂತರ ಅದು ಪೂರ್ಣವಾಗಿ ಜೀರ್ಣವಾಗುವವರೆಗೂ ಚಲಿಸದೆ ಸತ್ತಂತೆ ಬಿದ್ದಿರುತ್ತದೆ.

ಶರೀರವು ಸಪೂರವಾಗಿದ್ದು ದಪ್ಪವಾಗಿದೆ, ಬಾಲ ತೀರ ಮೊಂಡಾಗಿದೆ. ಮೈಮೇಲೆ ಚಿತ್ತಾಕಾರದ ಕಲೆಗಳಿದ್ದು, ಅಲೆಯಾಕಾರದ ಪಟ್ಟೆಗಳಿಂದ ಮತ್ತು ನಯವಾಗಿ ಹೊಳೆಯುವ ಶಲ್ಕಗಳಿಂದ ಆಕರ್ಷಕವಾಗಿ ಕಾಣುತ್ತದೆ. ನಿಶಾಚರಿ. ಕಾಲುಗಳಿಲ್ಲ. ಆದರೆ ಇವು ಹಲ್ಲಿಯ ರೂಪದ ಸರೀಸೃಪಗಳಿಂದ ವಿಕಾಸ ಹೊಂದಿರಬಹುದೆಂಬ ಊಹೆಗೆ ಕುರುಹು ನೀಡಬಲ್ಲ ಸ್ಪರ್ ಎಂಬ ಕ್ಷೀಣಾಂಗವನ್ನು ಹೊಂದಿ. ತಿಂಗಳುಗಟ್ಟಲೆ ಉಪವಾಸವಿರುವ ಸಾಮರ್ಥ್ಯ ಹೊಂದಿದೆ. ಒಮ್ಮೆಗೆ ಸು. 100 ಮೊಟ್ಟೆಗಳನ್ನು ಇಡಬಲ್ಲದು. ಹೆಣ್ಣು ಹೆಬ್ಬಾವು ಸು. 80 ದಿನಗಳು ಮೊಟ್ಟೆಗಳಿಗೆ ಕಾವು ಕೊಟ್ಟು ಮರಿ ಮಾಡುತ್ತದೆ. ಮೊಟ್ಟೆಗಳನ್ನು ಸುರಕ್ಷಿತ ಸ್ಥಳದಲ್ಲಿಟ್ಟು, ಅದರ ಸುತ್ತ ಸುರುಳಿ ಸುತ್ತಿಕೊಂಡು ತನ್ನ ಸ್ನಾಯುಗಳ ಏರಿಳಿತದ ಸಂಕೋಚನ–ವಿಕಸನಗಳಿಂದ ಶಾಖವನ್ನು ನಿಯಂತ್ರಣದಲ್ಲಿಡುವ ಕ್ರಿಯೆ ತೋರುತ್ತದೆ.

ಭಾರತದಲ್ಲಿ ಕಾಣಬರುವ ಅಜಗರ ಪೈಥಾನ್ ಮಾಲ್ಯುರಸ್. ಪೂರ್ವ ಭಾರತ, ಬರ್ಮಾ, ಮಲೇಷ್ಯ ಮತ್ತು ಥೈಲೆಂಡ್‌ಗಳಲ್ಲಿ ಪೈಥಾನ್ ರೆಟಿಕ್ಯುಲಾರಿಸ್ ಪ್ರಭೇದ ಕಾಣಬರುತ್ತದೆ. ಆಫ್ರಿಕದಲ್ಲಿ ಇದರ ಪ್ರಭೇದವಿದೆ. ಇದರ ಹತ್ತಿರ ಸಂಬಂಧಿಯಾದ ಜಲವಾಸಿ ಹೆಬ್ಬಾವು ದಕ್ಷಿಣ ಅಮೆರಿಕದಲ್ಲಿ ಕಾಣಬರುವ ಅನಕೊಂಡ ಯೂನೆಕ್ಟೆಸ್ ಮ್ಯುರಿನಸ್. (ಎನ್.ಎಸ್.ಎಲ್.ಬಿ)

**ಅಜಗರ[2] :** ಹೆಬ್ಬಾವು. ಆಡನ್ನು ನುಂಗುವುದರಿಂದ ಈ ಹೆಸರು ಬಂದಿದೆ. ನಹುಷ ಚಕ್ರವರ್ತಿ ಬ್ರಹ್ಮನಿಂದ ಇಂದ್ರಪದವಿಗೆ ನಿಯುಕ್ತನಾಗಿದ್ದ ಕಾಲದಲ್ಲಿ ಶಚಿಯನ್ನು ಕಾಡಬೇಕೆಂಬ ದುರಭಿಲಾಷೆ ತಲೆದೋರಿ ಸಪ್ತರ್ಷಿಗಳನ್ನು ವಾಹನವಾಗಿ ಮಾಡಿಕೊಂಡು ಅವಳಲ್ಲಿಗೆ ಹೋಗುತ್ತಿರುವಾಗ ಸರ್ಪ ಸರ್ಪ ಎಂದು ಹೇಳುತ್ತ ಪಲ್ಲಕ್ಕಿಯನ್ನು ಹೊತ್ತಿದ್ದ ಅಗಸ್ತ್ಯನ ತಲೆಯ ಮೇಲೆ ಒದೆಯಲು ಕೋಪಗೊಂಡ ಅಗಸ್ತ್ಯ ಸರ್ಪೋಭವ ಎಂದು ಶಾಪಕೊಟ್ಟ ಕೂಡಲೇ ನಹುಷ ಒಂದು ಅಜಗರವಾದ. ಒಮ್ಮೆ ಬೇಟೆಯಾಡಲು ಬಂದಿದ್ದ ಭೀಮಸೇನ ಅಜಗರಕ್ಕೆ ಸಿಕ್ಕಿಬಿದ್ದು ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಭೀಮನನ್ನು ಹುಡುಕಿಕೊಂಡು ಬಂದ ಧರ್ಮರಾಜನನ್ನು ಅಜಗರ ಕೆಲವು ಪ್ರಶ್ನೆಗಳನ್ನು ಕೇಳಲು ಅದಕ್ಕೆ ಅವನು ಸಮರ್ಪಕವಾದ ಉತ್ತರವನ್ನು ಕೊಟ್ಟ ಬಳಿಕ ಸರ್ಪ ಭೀಮನನ್ನು ಬಿಟ್ಟುಕೊಟ್ಟಿತು. ಕೂಡಲೇ ಶಾಪವಿಮೋಚನೆಯಾಗಿ ನಹುಷ ಸರ್ಪದೇಹವನ್ನು ಬಿಟ್ಟು ಸ್ವರ್ಗಲೋಕಕ್ಕೆ ಹೋದ.

(*)

**ಅಜಲಧಾವನ :** ನೀರನ್ನು ಬಳಸದೆ ಶುಚಿ ಮಾಡುವ ವಿಧಾನ (ಒಣಚಲುವೆ; ಡ್ರೈಕ್ಲೀನಿಂಗ್). ಜಿಡ್ಡು ಮತ್ತು ಜಿಡ್ಡಿನ ಕಲೆಗಳು ನೀರಿನಿಂದ ತೊಳೆದರೆ ಹೋಗಲಾರವು. ಅಲ್ಲದೆ ಬೆಲೆಬಾಳುವ ರೇಷ್ಮೆ ಮತ್ತು ಉಣ್ಣೆಯ ಬಟ್ಟೆಗಳನ್ನು ನೀರಿನಿಂದ ತೊಳೆದರೆ ಅವುಗಳ ಹೊಳಪು ಮತ್ತು ಮೃದುತ್ವ ನಾಶವಾಗಬಹುದು. ಇಂಥ ಸಂದರ್ಭಗಳಲ್ಲಿ ಪೆಟ್ರೋಲಿಯಂ ಈಥರ್ ಅಥವಾ ಬೆಂಜೀನ್ ದ್ರವ್ಯಗಳನ್ನು ಉಪಯೋಗಿಸಿ ಜಿಡ್ಡನ್ನೂ ಕೊಳೆಯನ್ನೂ ತೆಗೆಯಬಹುದು.

ಇತ್ತೀಚೆಗೆ, ಹೊಸದಾಗಿ ತಯಾರಿಸಿದ ಯಂತ್ರದ ಬಿಡಿ ಭಾಗಗಳಲ್ಲಿರುವ ಜಿಡ್ಡನ್ನು ಮತ್ತು ಲೋಹದ ಕಣಗಳನ್ನು (ಮೆಟ್ಯಾಲಿಕ್ ಡಸ್ಟ್) ತೆಗೆಯಲು, ಶ್ರವಣಾತೀತ ಶಬ್ದದ (ಅಲ್ಟ್ರಾಸಾನಿಕ್) ಅಲೆಗಳನ್ನು ಉಪಯೋಗಿಸುವ ಪದ್ಧತಿ ಜಾರಿಗೆ ಬಂದಿದೆ. ಇವನ್ನು ಬಟ್ಟೆ ಶುಚಿ ಮಾಡಲೂ ಉಪಯೋಗಿಸಬಹುದು. (ಎಚ್.ಎಸ್.ಎಸ್.)

**ಅಜಾತಶತ್ರು :** ಪ್ರ.ಶ.ಪೂ. 500–470. ಬಿಂಬಸಾರನ ಮಗ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಮಗಧ ಸಿಂಹಾಸನವನ್ನೇರಿದ ಶಿಶುನಾಗನ ವಂಶದವನು. ಇವನ ಆಳ್ವಿಕೆಯ ಘಟನೆಗಳನ್ನು ತಿಳಿಯಲು ಪುರಾಣಗಳೂ ಜೈನ ಹಾಗೂ ಬೌದ್ಧ ಧರ್ಮಗ್ರಂಥಗಳೂ ಸಹಕಾರಿಯಾಗಿವೆ. ಜೈನಗ್ರಂಥಗಳ ಪ್ರಕಾರ ಅಜಾತಶತ್ರು ತಂದೆಯಾದ ಬಿಂಬಸಾರನನ್ನು ಸೆರೆಯಲ್ಲಿಟ್ಟು ಸಿಂಹಾಸನವನ್ನು ಆಕ್ರಮಿಸಿದನೆಂದೂ ಬೌದ್ಧ ಗ್ರಂಥಗಳ ಪ್ರಕಾರ ತಂದೆಯನ್ನು ಸಂಹರಿಸಿ ರಾಜನಾದನೆಂದೂ ತಿಳಿದುಬರುತ್ತದೆ. ಅಲ್ಲದೆ ತನ್ನ ಈ ತಪ್ಪಿಗಾಗಿ ಬುದ್ಧನಲ್ಲಿ ಕ್ಷಮೆ ಯಾಚಿಸಿದನೆಂದೂ ಪ್ರತೀತಿ.

ಪರಾಕ್ರಮಿಯಾದ ಅಜಾತಶತ್ರು ಮಗಧ ರಾಜ್ಯವನ್ನು ವಿಸ್ತರಿಸಿದ. ಕೋಸಲಾಧಿಪತಿಯಾದ ಪ್ರಸೇನಜಿತನನ್ನು ಸೋಲಿಸಿ ಕಾಶಿಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಲಿಚ್ಛವಿ, ವಿಜ್ಜಿ ಮುಂತಾದ ಗಣರಾಜ್ಯಗಳನ್ನು ಸೋಲಿಸಿದ. ವೈಶಾಲಿ ರಾಜ್ಯದ ಮೇಲೆ ಯುದ್ಧ ಹೂಡಿ ವಶಪಡಿಸಿಕೊಂಡ. ಅಲ್ಲದೆ ಸೌವೀರ, ವತ್ಸ್ಯ ಮತ್ತು ಅವಂತಿ ರಾಜ್ಯಗಳೊಡನೆ ವೈವಾಹಿಕ ಮತ್ತು ರಾಜತಾಂತ್ರಿಕ ಸಂಬಂಧವನ್ನೇರ್ಪಡಿಸಿಕೊಂಡು ಮಗಧ ರಾಜ್ಯದ ಪ್ರಭಾವವನ್ನು ದ್ವಿಗುಣಗೊಳಿಸಿದ. ಈತನ ಪೂರ್ವಿಕರ ಕಾಲದಲ್ಲಿ ರಾಜಗೃಹ ಮಗಧ ರಾಜ್ಯದ ರಾಜಧಾನಿಯಾಗಿತ್ತು. ಅಜಾತಶತ್ರು ಇತಿಹಾಸಪ್ರಸಿದ್ಧವಾದ ಪಾಟಲೀಪುತ್ರ ನಗರವನ್ನು ಕಟ್ಟಿ, ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಬುದ್ಧನನ್ನೂ ಪಾಟಲೀಪುತ್ರಕ್ಕೆ ಆಹ್ವಾನಿಸಿ

ದ್ದಲ್ಲದೆ ಕೋಟೆಯ ಹೆಬ್ಬಾಗಿಲೊಂದಕ್ಕೆ ಬುದ್ಧದೇವನ ಹೆಸರನ್ನಿಟ್ಟ. ಪ್ರ.ಶ.ಪೂ. 2ನೆಯ ಶತಮಾನದಲ್ಲಿ ಭಾರಹಟ್‌ನ ಚಿತ್ರಕಲೆಯಲ್ಲಿ ಅಜಾತಶತ್ರು ಬುದ್ಧನನ್ನು ಸ್ವಾಗತಿಸುವ ಚಿತ್ರವಿದೆ. ಬುದ್ಧನ ನಿರ್ವಾಣಾನಂತರ ಪಾಟಲೀಪುತ್ರದಲ್ಲಿ ಸಮಾವೇಶವಾಗಿದ್ದ ಬೌದ್ಧ ಮಹಾಸಮ್ಮೇಳನದಲ್ಲಿ ಬೌದ್ಧಭಿಕ್ಷುಗಳಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟ. ಇವನ ಅನಂತರ ಮಗನಾದ ಉದಯನ ಮಗಧರಾಜ್ಯದ ಚಕ್ರವರ್ತಿಯಾದ. (ಜಿ.ಆರ್.ಆರ್.)

**ಅಜ಼ಾದ್, ಮೌಲಾನಾ ಅಬುಲ್ ಕಲಾಂ :** 1888–1958. ಭಾರತದಲ್ಲಿ ಹಿಂದೂಗಳು, ಮುಸ್ಲಿಮರು ಇಬ್ಬರೂ ಒಂದೇ ತಾಯ್ನಾಡಿನವರೆಂಬುದನ್ನು ಮನಗಂಡು ಅದಕ್ಕಾಗಿ ತಮ್ಮ ಜೀವನವನ್ನು ಸವೆಸಿದ ಭಾರತೀಯರಲ್ಲೊಬ್ಬರು.

ತಂದೆ, ತಾಯಿ ಇಬ್ಬರ ಕಡೆಯವರೂ ಪ್ರಸಿದ್ಧ ವಿದ್ವಾಂಸ ಮನೆತನಕ್ಕೆ ಸೇರಿದವರು. ತಂದೆ ಮೌಲಾನಾ ಮೊಹಮ್ಮದ್ ಖೈರುದ್ದೀನ್ ವಿಖ್ಯಾತ ವಿದ್ವಾಂಸರಷ್ಟೇ ಅಲ್ಲದೆ ಧರ್ಮಗುರುವೂ ಆಗಿದ್ದರು. ಹಜ್ ಯಾತ್ರೆ ಮುಗಿಸಿದ ಮೇಲೆ ಅವರು ಕಲ್ಕತ್ತೆಯಲ್ಲಿ ನೆಲೆಸಿದರು. ಮುಸ್ಲಿಂ ಧರ್ಮದ ವಿಚಾರವಾಗಿ ಅವರು ಬರೆದ ಗ್ರಂಥಗಳು ಇಂದಿಗೂ ವಿದ್ವಾಂಸರಿಂದ ಮಾನ್ಯತೆ ಪಡೆದಿವೆ, ಪ್ರಮಾಣ ಗ್ರಂಥಗಳಾಗಿವೆ. ತಾಯಿಯೂ ದೊಡ್ಡ ವಿದ್ವಾಂಸ ಮನೆತನದವಳು; ಇಸ್ಲಾಂ ಧರ್ಮದ ವಿಷಯದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದವಳು. ಹೀಗೆ ಆಜ಼ಾದರಿಗೆ ಪಾಂಡಿತ್ಯ ಎರಡು ಕಡೆಯಿಂದಲೂ ರಕ್ತಗತವಾಗಿ ಬಂದಿತ್ತು. ಧರ್ಮಗುರುವಾಗಿರಬೇಕಾದ ಸರಳ ಸ್ವಾತ್ವಿಕ ಮನೋಭಾವ, ಜ್ಞಾನಾರ್ಜನೆಯಲ್ಲಿ ಉತ್ಕಟೇಚ್ಛೆ, ಅಸದೃಶ ಪ್ರತಿಭೆ–ಇಷ್ಟೆಲ್ಲವನ್ನೂ ಹೊಂದಿದ್ದ ಆಜ಼ಾದರು, ತಮ್ಮ 16ನೆಯ ವಯಸ್ಸಿನಲ್ಲೇ ಧರ್ಮಶಾಸ್ತ್ರ, ಕಾವ್ಯ ಮತ್ತು ಇತಿಹಾಸಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿ ದೊಡ್ಡ ದೊಡ್ಡ ವಿದ್ವಾಂಸರೊಂದಿಗೆ ಗಹನವಾದ ವಿಷಯಗಳ ಮೇಲೆ ಚರ್ಚೆ ನಡೆಸುತ್ತಿದ್ದುದೇನೂ ಹೆಚ್ಚಲ್ಲ. ತುರ್ಕಿ, ಇರಾಕ್, ಈಜಿಪ್ಟ್, ಸಿರಿಯಾ ಮುಂತಾದ ದೇಶಗಳಲ್ಲಿ ಪ್ರವಾಸ ಮಾಡಿ ತಮ್ಮ ಜ್ಞಾನಭಂಡಾರವನ್ನು ಬೆಳೆಸಿದರು.

ತಮ್ಮ ಭಕ್ತರ ಕೋರಿಕೆಯನ್ನು ಮನ್ನಿಸಿ ಆಜ಼ಾದರ ತಂದೆ 1907ರಲ್ಲಿ ಭಾರತಕ್ಕೆ ಬಂದು ಕೋಲ್ಕತದಲ್ಲಿ ನೆಲೆಸಿ ಮರುವರ್ಷವೇ ಕಾಲಾಧೀನರಾದರು. ಆಜ಼ಾದರು ಪಾಶ್ಚಾತ್ಯ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಇಂಗ್ಲಿಷಿನಲ್ಲೂ ತಕ್ಕಮಟ್ಟಿಗೆ ಪರಿಶ್ರಮ ಸಂಪಾದಿಸಿದ್ದರು. ತಂದೆಯಂತೆ ಧರ್ಮಗುರುವಾಗಿರಬೇಕೆಂಬ ಆಸೆ ಅವರಿಗಿರಲಿಲ್ಲ. ನಾಡಿನ ದಾಸ್ಯ, ಬಡತನ, ಅಜ್ಞಾನ–ಇವು ಅವರ ಮನಸ್ಸನ್ನು ಸೆಳೆದವು.

ಬಾಲ್ಯದಿಂದಲೂ ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ ಇದ್ದುದರಿಂದ ಆಜ಼ಾದರು, ಹದಿನೈದನೆಯ ವಯಸ್ಸಿನಲ್ಲೇ ಒಂದು ಪತ್ರಿಕೆ ಹೊರಡಿಸಿದರು. ಅವರ ಬರಹದ ಪಾಂಡಿತ್ಯ, ಪ್ರೌಢಿಮೆ, ಲಲಿತವೂ ಸರಳವೂ ಆದ ಶೈಲಿ ಇವೆಲ್ಲಾ ವಿದ್ವಾಂಸರ ಮನಸ್ಸನ್ನು ಸೆಳೆದವು. ಹಾಲಿ ಎಂಬ ಪ್ರಸಿದ್ಧ ಉರ್ದು ಕವಿ ಅವರ ಬರಹವನ್ನು ತುಂಬಾ ಮೆಚ್ಚಿದ. ಕೊಂಚ ಕಾಲಾನಂತರ ಆಜ಼ಾದರು ಆತನಿಗೆ ಭೇಟಿಯಾದರು. ತಾನು ಅಷ್ಟೊಂದು ಮೆಚ್ಚಿದ ಬರಹದ ಕರ್ತೃ ಹದಿನಾರು ವಯಸ್ಸಿನ ಬಾಲಕನೆಂದು ತಿಳಿದಾಗ

ಹಾಲಿ ವಿಸ್ಮಯಗೊಂಡ. ಹದಿನಾಲ್ಕನೆಯ ವಯಸ್ಸಿನಲ್ಲೇ ಆಜ಼ಾದರು ಬೊಂಬಾಯಿಯ ಪ್ರಸಿದ್ಧ ವಿದ್ವಾಂಸರಾಗಿದ್ದ ಮೌಲಾನಾ ಷಿಬ್ಲಿಯವರೊಂದಿಗೆ ಉರ್ದು ಸಾಹಿತ್ಯದ ವಿಷಯವಾಗಿ ಪತ್ರಮುಖೇನ ವಿಚಾರವಿನಿಮಯ ಪ್ರಾರಂಭಿಸಿದರು. ಅವರ ಬರೆವಣಿಗೆಯಲ್ಲಿ ಕಂಡುಬಂದ ವಿದ್ಯಾಪ್ರೌಢಿಮೆ, ಶೈಲಿ ಇವುಗಳನ್ನು ನೋಡಿ ಷಿಬ್ಲಿಯವರು ಅವರೊಬ್ಬ ಇಳಿವಯಸ್ಸಿನ ಮೌಲ್ವಿಯಿರಬೇಕೆಂದು ಭಾವಿಸಿದರು. ಎರಡು ವರ್ಷ ಹೀಗೆ ಕಳೆಯಿತು. ಆಜ಼ಾದರು ಬೊಂಬಾಯಿಗೆ ಹೋಗಿ ಷಿಬ್ಲಿಯವರನ್ನು ಭೇಟಿ ಮಾಡಿದರು. ಹದಿನಾರು ವಯಸ್ಸಿನ ಆ ಬಾಲಕ ತಮ್ಮೊಂದಿಗೆ ಪತ್ರ ವ್ಯವಹಾರ ಮಾಡುತ್ತಿದ್ದ ಆಜ಼ಾದರ ಮಗನೆಂದು ಭಾವಿಸಿ, ಅವರ ತಂದೆಯ ಪಾಂಡಿತ್ಯವನ್ನು ಬಹುವಾಗಿ ಶ್ಲಾಘಿಸಿದರು. ಅವರು ಭಾವಿಸಿದ್ದ ತಂದೆ, ಎದುರು ಕೂತಿದ್ದ ಮಗ, ಇಬ್ಬರೂ ಒಂದೇ ಎಂದು ತಿಳಿದಾಗ ಅವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

20ನೆಯ ಶತಮಾನದ ಪ್ರಾರಂಭದಲ್ಲಿ ಭಾರತದ ಮುಸ್ಲಿಂ ಜನತೆ ಬಹಳ ಹಿಂದುಳಿದಿತ್ತು. ಅವರಲ್ಲಿ ಶ್ರೀಮಂತರಾದ ಕೆಲವರು ಸ್ವಹಿತಸಾಧನೆಗೆ ಬ್ರಿಟಿಷರ ಅನುಯಾಯಿಗಳಾಗಿದ್ದರು. ಮಿಕ್ಕವರು ಅವಿದ್ಯಾವಂತರಾಗಿ ಬಡತನದಿಂದ ನರಳುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಭಾರತದ ಮುಸ್ಲಿಮರು ಎಚ್ಚೆತ್ತು, ವಿದ್ಯಾವಂತರಾಗಿ, ರಾಷ್ಟ್ರೀಯ ಭಾವನೆ ಬೆಳೆಸಿಕೊಂಡು ಹಿಂದೂಗಳೊಂದಿಗೆ ಬೆರೆತು, ನಾಡಿನ ಉದ್ಧಾರಕ್ಕಾಗಿ ಶ್ರಮಿಸುವುದು ಅತಿಮುಖ್ಯವಾಗಿತ್ತು. ಇದನ್ನು ಸಾಧಿಸುವುದಕ್ಕಾಗಿ ಆಜ಼ಾದರು 1912ರಲ್ಲಿ ಅಲ್ ಹಿಲಾಲ್ ಎಂಬ ಉರ್ದು ಪತ್ರಿಕೆಯನ್ನು ಹೊರಡಿಸಿ ಕಲಂ ಆಜ಼ಾದ್ (ಸ್ವತಂತ್ರ ಲೇಖನಿ) ಎಂಬ ಗುಪ್ತನಾಮದಿಂದ ವಿಪುಲವಾಗಿ ಬರೆದರು. ಅವರ ಮನನಾಟುವಂಥ ಬರೆಹ, ಅದರಲ್ಲಿ ಕಂಡುಬಂದ ಅವರ ರಾಷ್ಟ್ರಾಭಿಮಾನ, ಭಾರತದ ಏಳಿಗೆಯ ವಿಚಾರದಲ್ಲಿ ಅವರ ಗಾಢಾನುರಕ್ತಿ–ಇವೆಲ್ಲ ಜನಮನವನ್ನು ಸೆಳೆದವು. ಪ್ರಾರಂಭವಾದ ಆರು ತಿಂಗಳಲ್ಲೇ ಆ ಪತ್ರಿಕೆಯ ಪ್ರಸಾರಸಂಖ್ಯೆ ಹತ್ತು ಸಾವಿರಕ್ಕೇರಿತು. ಮುಸ್ಲಿಮರಲ್ಲಿ ರಾಷ್ಟ್ರೀಯ ಭಾವನೆ ಬೆಳೆಯತೊಡಗಿತು. ಹೀಗೆ ಉದ್ರಿಕ್ತರಾದ ತರುಣರಲ್ಲಿ ಆಗ ಅಲಿಘರ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದ ಖಾನ್ ಅಬ್ದುಲ್ ಗಫಾರ್ ಖಾನರೂ ಒಬ್ಬರು.

ಕೊಂಚಕೊಂಚವಾಗಿ ಭಾರತೀಯರಲ್ಲಿ ರಾಷ್ಟ್ರೀಯತಾಭಾವನೆ ಬೆಳೆಯುತ್ತಿದ್ದ ಆ ಕಾಲದಲ್ಲಿ, ಒಂದನೆಯ ಮಹಾಯುದ್ಧ ಪ್ರಾರಂಭವಾಯಿತು. ಭೇದೋಪಾಯದಿಂದ ಹಿಂದೂ ಮುಸ್ಲಿಮರಲ್ಲಿ ವೈಮನಸ್ಯ ಹುಟ್ಟಿಸಿ ಅವರನ್ನು ಪ್ರತ್ಯೇಕಿಸಿದ್ದಲ್ಲದೆ, ತಮ್ಮ ಅಧಿಕಾರ ಭಾರತದಲ್ಲಿ ನಿಲ್ಲಲಾರದೆಂಬುದನ್ನರಿತಿದ್ದ ಬ್ರಿಟಿಷ್ ಸರ್ಕಾರ, ಆಜ಼ಾದರ ಚಟುವಟಿಕೆಗಳನ್ನು ಕಂಡು ಗಾಬರಿಗೊಂಡು ಅವರ ಪತ್ರಿಕೆಯ ಈಡು ಹಣವನ್ನು ವಶಪಡಿಸಿಕೊಂಡಿದ್ದಲ್ಲದೇ ಮೇಲೆ ಹತ್ತುಸಾವಿರ ರೂಪಾಯಿ ಠೇವಣಿ ಕೇಳಿತು. ಅಲ್ ಹಿಲಾಲ್ ನಿಲ್ಲಬೇಕಾಗಿ ಬಂತು. ಆದರೆ ಆಜ಼ಾದರು ಸುಮ್ಮನಿರಲಿಲ್ಲ; ಸರಕಾರಕ್ಕೆ ಅಷ್ಟೇ ಖಾರವಾದ ಅಲ್ ಬಲಾಗ್ ಪತ್ರಿಕೆ ಹೊರಡಿಸಿದರು. ಆಗ ಸರಕಾರ ಅವರಿಗೆ ಪ್ರಾದೇಶಿಕ ನಿರ್ಬಂಧ ವಿಧಿಸಿ ರಾಂಚಿಯಲ್ಲೇ ನಿಲ್ಲುವಂತೆ ಮಾಡಿತು. ಅವರ ನಿರ್ಬಂಧವನ್ನು ರದ್ದು ಮಾಡಿದ್ದು 1919 ರಲ್ಲಿ, ಮಹಾಯುದ್ಧ ನಿಂತು ಒಂದು ವರ್ಷ ಕಳೆದ ಮೇಲೆ.

ಈ ಮಧ್ಯೆ, ಯುದ್ಧಕಾಲದಲ್ಲಿ ಬ್ರಿಟಿಷ್ ಸರಕಾರ ಖಿಲಾಫತ್ ವಿಚಾರದಲ್ಲಿ ಮುಸ್ಲಿಮರಿಗೆ ಕೊಟ್ಟಿದ್ದ ವಾಗ್ದಾನದಂತೆ ಯುದ್ಧಾನಂತರ ನಡೆದುಕೊಳ್ಳಲಿಲ್ಲ; ಇದರಿಂದ ಭಾರತದ ಮುಸ್ಲಿಮರೂ ಬ್ರಿಟಿಷರಿಗೆ ವಿರೋಧಿಗಳಾದರು. ಆಜ಼ಾದರ ಬೋಧನೆಯಿಂದ ಪ್ರಭಾವಿತರಾಗಿದ್ದ ಅವರು, ಕಾಂಗ್ರೆಸ್ಸಿನೊಡನೆ ಮೈತ್ರಿ ಬೆಳೆಸಿದರು. ರಾಷ್ಟ್ರೀಯ ಭಾವನೆಯಿಂದ ಪ್ರೇರಿತರಾಗಿ ಅನೇಕ ಮುಸ್ಲಿಮರು ಕಾಂಗ್ರೆಸ್ಸಿಗೆ ಸೇರಿದರು. ಕೆಲವು ಕಾಲ ಈ ಹಿಂದೂ ಮುಸ್ಲಿಂ ಮೈತ್ರಿ ರಾಷ್ಟ್ರದಲ್ಲಿ ಏಕತೆಯನ್ನುಂಟು ಮಾಡಿ, ದಾಸ್ಯ ವಿಮೋಚನೆ ಬಹು ದೂರವಿಲ್ಲ ಎಂಬ ಆಸೆಯನ್ನು ಜನರಲ್ಲಿ ಮೂಡಿಸಿತು. ಗಾಂಧೀಜಿಯ ಕರ ನಿರಾಕರಣೆ, ಸತ್ಯಾಗ್ರಹ, ಇವೆಲ್ಲ ಜನರಲ್ಲಿ ಹರಡಿದವು. ಆದರೆ ಬ್ರಿಟಿಷರು ಅರೆಮನಸ್ಸಿನಿಂದ ನೀಡಿದ ರಾಜಕೀಯ ಸುಧಾರಣೆಗಳನ್ನು ಒಪ್ಪಬೇಕೆ, ಬೇಡವೆ ಎಂಬ ವಿಷಯದಲ್ಲಿ ಕಾಂಗ್ರೆಸ್ಸಿಗರಲ್ಲೇ ಭಿನ್ನಾಭಿಪ್ರಾಯವುಂಟಾಗಿ ಏಕತೆಗೆ ಭಂಗವುಂಟಾಯಿತು. ಆಜ಼ಾದರು ಈ ಸುಧಾರಣೆಗೆ ವಿರೋಧವಾಗಿ ನಿಂತು, ಅಸಹಕಾರ ಚಳವಳಿಯನ್ನು ಮುಂದುವರಿಸಲೇಬೇಕು ಎಂದು ಜನರಿಗೆ ಕರೆ ಕೊಟ್ಟರು. ಅವರನ್ನು ಬಂಧಿಸಿ ಸರಕಾರಕ್ಕೆ ವಿರುದ್ಧವಾಗಿ ಚಳವಳಿ ನಡೆಸಿದರೆಂಬ ಆಪಾದನೆ ಹೊರಿಸಿ ಒಂದು ವರ್ಷ ಸಜಾ ವಿಧಿಸಿದರು. ತಾವು ನ್ಯಾಯಸ್ಥಾನದಲ್ಲಿ ಕೊಟ್ಟ ಹೇಳಿಕೆಯ ಕೊನೆಯಲ್ಲಿ ಆಜ಼ಾದರು ಈ ರೀತಿ ನುಡಿದರು: "ನೀವು ನ್ಯಾಯಮೂರ್ತಿಯಾಗಿಯೇ ಮುಂದುವರಿಯಿರಿ, ನಾನು ಅಪರಾಧಿಯಾಗಿಯೇ ಮುಂದುವರಿಯುತ್ತೇನೆ, ಮತ್ತೆ ಮತ್ತೆ, ಈ ನಾಟಕ ಕೊನೆಗೆ ಮುಗಿಯಲೇಬೇಕು, ಆಗ ಭಗವಂತನ ನ್ಯಾಯಸ್ಥಾನದಲ್ಲಿ ನಾವು ಸಂಧಿಸುತ್ತೇವೆ. ಕಾಲಪುರುಷನೇ ಅಲ್ಲಿ ನ್ಯಾಯಮೂರ್ತಿ, ಅವನು ಕೊಡುವ ತೀರ್ಪನ್ನು ನೀವಾಗಲಿ, ನಾನಾಗಲಿ ಉಲ್ಲಂಘಿಸಲಾರೆವು". ಒಂದು ವರ್ಷ ಕಾರಾಗೃಹ ವಿಧಿಸಿದ ವಿಷಯವಾಗಿ ಗಾಂಧೀಜಿಗೆ ಬರೆದ ಕಾಗದದಲ್ಲಿ ಆಜ಼ಾದರ ಪತ್ನಿ, ತನ್ನ ಪತಿಯ ದೇಶಪ್ರೇಮಕ್ಕೆ ಆ ಶಿಕ್ಷೆ ಏನೇನೂ ಸಾಲದೆಂದೂ ಯಾರೂ ಅವರ ಬಿಡುಗಡೆಯ ಯೋಚನೆಯನ್ನು ಮಾಡಕೂಡದೆಂದು ತಿಳಿಸಿದ್ದರು.

ಮುಂದೆ ಬ್ರಿಟಿಷ್ ಸರಕಾರ ನೀಡಿದ ಅಲ್ಪಸ್ವಲ್ಪ ಸುಧಾರಣೆಗಳನ್ನು ಒಪ್ಪಿಕೊಳ್ಳುವ ವಿಷಯದಲ್ಲಿ ಕಾಂಗ್ರೆಸ್ಸಿನಲ್ಲೇ ಎರಡು ಪಂಗಡಗಳು ಹುಟ್ಟಿಕೊಂಡವು; ಗಾಂಧೀಜಿಯವರ ನೇತೃತ್ವದಲ್ಲಿ ಏರ್ಪಟ್ಟಿದ್ದ ಹಿಂದೂ ಮುಸ್ಲಿಂ ಏಕತೆ ಒಡೆಯಿತು; ಆಳರಸರು ತಮ್ಮ ಒಡೆದು ಆಳುವ (ಡಿವೈಡ್ ಅಂಡ್ ರೂಲ್) ನೀತಿಗನುಸಾರವಾಗಿ ವೈಮನಸ್ಯ ಬೆಳೆಯುವುದಕ್ಕೆ ನೆರವು ನೀಡಿದರು; ಹಿಂದೂ ಮುಸ್ಲಿಂ ಏಕತೆ ಸಾಧ್ಯವೇ ಇಲ್ಲ, ಹಿಂದುಗಳು ಮುಸ್ಲಿಮರು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಎರಡು ಪ್ರತ್ಯೇಕ ಜನಾಂಗಗಳು ಎಂಬ ಭಾವನೆ ಬೆಳೆಯುತ್ತ ಬಂದು, ಕೊನೆಗೆ ಜಿನ್ನಾರವರ ಪಾಕಿಸ್ತಾನ್ ಬೇಡಿಕೆ ಏಕತೆಯ ಚರಮಗೀತೆಯಾಯಿತು. ಆದರೂ ಹಿಂದೂಗಳು ರಾಷ್ಟ್ರೀಯತಾಭಾವನೆಯನ್ನುಳಿಸಿಕೊಂಡಿದ್ದ ಮುಸ್ಲಿಮರು ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮುಂದುವರಿಸಿದರು; ಅನೇಕರು ಮಡಿದರು, ಲಕ್ಷಾಂತರ ಜನ ಕಷ್ಟನಷ್ಟಗಳನ್ನನುಭವಿಸಿದರು. ಕೊನೆಗೆ 1947ರಲ್ಲಿ ಸ್ವಾತಂತ್ರ್ಯದ ಹೂ ಮೊಗ್ಗು ಅರಳಿತು. ಈ ಪರ್ವಕಾಲದಲ್ಲಿ ಆಜ಼ಾದರು ಗಾಂಧೀಜಿಯವರ ಬಲಗೈಯಾಗಿ ನಿಂತು ರಾಷ್ಟ್ರದ ಸ್ವಾತಂತ್ರ್ಯ ಏಕತೆಗಳಿಗಾಗಿ ದುಡಿದರು; ಎರಡು ಬಾರಿ ದೇಶದ ಅತ್ಯಂತ ಬಿಕ್ಕಟ್ಟಿನ ಕಾಲಗಳಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನಿಂತು ಅಸಾಧಾರಣ ಸಾಮರ್ಥ್ಯದಿಂದ ಈ ಸಂಸ್ಥೆಯ ಕಾರ್ಯಕಲಾಪಗಳನ್ನು ನಿಯಂತ್ರಿಸಿದರು; ವಿರೋಧಿ ಮುಸ್ಲಿಂ ಪಂಗಡದವರ ಈರ್ಷೆ,

ಅವಹೇಳನ, ಉಪದ್ರವಗಳನ್ನು ಕಡೆಗಣಿಸಿ ದೃಢನಿಶ್ಚಯದಿಂದ ದೇಶಸೇವೆಯನ್ನು ಮುಂದುವರಿಸಿದರು; ಸ್ವಾತಂತ್ರ್ಯ ಬಂದ ಮೇಲೆ ಕೇಂದ್ರ ಸರ್ಕಾರದ ವಿದ್ಯಾಮಂತ್ರಿಯಾದರು. ಅವರ ಪಾಂಡಿತ್ಯ ಅನೇಕ ವೇಳೆ ನಮ್ಮನ್ನು ಭಾವಪರವಶರನ್ನಾಗಿ ಮಾಡುತ್ತಿತ್ತು ಎಂಬುದಾಗಿ ಜವಾಹರಲಾಲ್ ನೆಹರು ತಮ್ಮ ಆತ್ಮಚರಿತ್ರೆಯಲ್ಲಿ ಒಂದೆಡೆ ಬರೆದಿದ್ದಾರೆ. (ಕೆ.ಎಸ್.)

**ಅಜಾಮಿಳ :** ಕನ್ಯಾಕುಬ್ಜದ ಒಬ್ಬ ಬ್ರಾಹ್ಮಣ. ಶೂದ್ರಸ್ತ್ರೀಸಂಪರ್ಕ ಹೊಂದಿದ್ದು, ತಂದೆ–ತಾಯಿಯರನ್ನೂ ಸಹಧರ್ಮಿಣಿಯನ್ನೂ ಪರಿತ್ಯಾಗ ಮಾಡಿ ಅನೇಕ ದುರಾಚಾರಗಳಿಂದ ಪತಿತನಾಗಿದ್ದ. ಸಾಯುವ ಕಾಲದಲ್ಲಿ ನಾರಾಯಣನೆಂಬ ತನ್ನ ಮಗನನ್ನು ಹೆಸರು ಹಿಡಿದು ಕರೆದುದರಿಂದ ಉಂಟಾದ ನಾರಾಯಣ ಸ್ಮರಣೆಯ ಮಹಿಮೆಯಿಂದ ದಿವ್ಯಗತಿಯನ್ನು ಪಡೆದ. ಭಾಗವತ ಸಂಪ್ರದಾಯದಲ್ಲಿ ಈ ಕಥೆಗೆ ಹೆಚ್ಚಿನ ಪ್ರಾಧಾನ್ಯವಿದೆ. ಹರಿದಾಸರು ತಮ್ಮ ಕೀರ್ತನೆಗಳನ್ನು ನಾಮಸ್ಮರಣೆಯ ಪ್ರಾಮುಖ್ಯವನ್ನು ಹೇಳುವಾಗ ಅಜಾಮಿಳನ ಹೆಸರನ್ನೂ ಕಥೆಯನ್ನೂ ಅನೇಕ ಕಡೆ ಬಳಸಿದ್ದಾರೆ. (ಜಿ.ಎಚ್.)

**ಅಜಿತ :** ಪ್ರ.ಶ.ಪೂ 5ನೆಯ ಶತಮಾನದ ಒಬ್ಬ ನಾಸ್ತಿಕ. ಭೌತಿಕವಾದಿ, ನಿಶ್ಚಯಜ್ಞಾನ ಸಾಧ್ಯವಿಲ್ಲವೆಂದು ವಾದಿಸಿದವ. ಮಾನವಕೇಶದಿಂದ ರಚಿತವಾದ ನೀಳುಡುಪನ್ನು ಧರಿಸುತ್ತಿದ್ದುದರಿಂದ ಇವನನ್ನು ಕೇಶಕಂಬಲಿನ್ ಎಂದೂ ಕರೆಯುತ್ತಾರೆ.

ಇವನ ವಾದ ಹೀಗಿದೆ: ಮನುಷ್ಯ ಮತ್ತು ಪ್ರಪಂಚ ಇವು ನೀರು, ಗಾಳಿ, ಬೆಂಕಿ ಮತ್ತು ಭೂಮಿ ಎಂಬ ನಾಲ್ಕು ಪದಾರ್ಥಗಳಿಂದ ಉಂಟಾಗಿವೆ; ಇವುಗಳ ವ್ಯತ್ಯಸ್ತ ಪ್ರಮಾಣದ ಸಂಯೋಜನೆಯಿಂದಲೇ ಪ್ರಪಂಚ ಹುಟ್ಟಿಕೊಂಡಿತು. ಇಂದ್ರಿಯಗಳ ಮೂಲಕ ಮಾತ್ರವೇ ಜ್ಞಾನಾರ್ಜನೆ ಸಾಧ್ಯವಾದ್ದರಿಂದ ಕೇವಲ ಒಳನೋಟದ ಮೂಲಕ ಅದು ಎಂದಿಗೂ ಸಾಧನೆಯಾಗಲಾರದು. ಗ್ರಹಿಕೆಯನ್ನು ತರ್ಕದಿಂದ ಶಾಸ್ತ್ರೀಕರಿಸಿದಾಗ ಅದು ಇನ್ನಷ್ಟು ಮಿಥ್ಯವಾಗುತ್ತದೆ. ಭಾವೋದ್ರೇಕದಿಂದ ಈ ಇಂದ್ರಿಯಗಳು ಮತ್ತು ಆಲೋಚನಾಶಕ್ತಿ ದಾರಿತಪ್ಪುತ್ತವೆ. ಜ್ಞಾನವೆನ್ನಿಸಿಕೊಂಡದ್ದು ಕೂಡ ದುರಾಶೆ ಮತ್ತು ದುರಹಂಕಾರಗಳಿಂದ ಇನ್ನಷ್ಟು ಕಲುಷಿತಗೊಳ್ಳುತ್ತದೆ. ವೇದಗಳು ಅಹಂಕಾರಮೂಲವಾಗಿ ಬ್ರಾಹ್ಮಣರ 'ವಾಂತಿ'ಯಾಗಿವೆ. ದಡ್ಡರೇ ಆಗಲಿ, ಜಾಣರೇ ಆಗಲಿ ದೇಹದಿಂದ ಬೇರ್ಪಡುವುದು ಮಾತ್ರವೇ ಅಲ್ಲದೆ, ಅವರೆಲ್ಲ ನಿರ್ನಾಮರಾಗುತ್ತಾರೆ. ಸಾವನ್ನಪ್ಪಿದವನು ಸಂಪೂರ್ಣವಾಗಿ ಇಲ್ಲವಾಗುತ್ತಾನೆ. ತ್ಯಾಗದಿಂದ ಲಾಭವೂ ಇಲ್ಲ, ದುಷ್ಟತನದಿಂದ ಮತ್ತು ದುರಾಚಾರದಿಂದ ನಷ್ಟವೂ ಇಲ್ಲ. ಆಹ್ಲಾದದಂಥ ವಿಷಯದಲ್ಲಿ ಯಾರಿಗಾದರೂ ಸಂಬಂಧವಿದ್ದರೆ ಅದು ಅವರಿಂದ ಸ್ವೀಕೃತವಾಗಬಹುದು ಅಥವಾ ಆಗದಿರಬಹುದು ಮತ್ತು ಅವರು ಅದನ್ನು ಅನುಭವಿಸಬಹುದಿತ್ತು ಅಥವಾ ಬಿಡಬಹುದಿತ್ತು. ಅದು ಯಾವ ವ್ಯತ್ಯಾಸವನ್ನೂ ಉಂಟುಮಾಡುವುದಿಲ್ಲ. ದಾನಧರ್ಮಗಳನ್ನೇ ಆಗಲಿ, ಯಜ್ಞಯಾಗಗಳನ್ನೇ ಆಗಲಿ ಮಾಡುವುದರಲ್ಲಿ ಹುರುಳಿಲ್ಲ. ಜೀವ ಹೋದ ಮೇಲೆ ಏನೂ ಇಲ್ಲ. ಮುಂದಿನ ಪ್ರಪಂಚ ಅಥವಾ ಮುಂದಿನ ಜನ್ಮಗಳೂ ಇಲ್ಲ; ಒಳಿತು ಕೆಡುಕುಗಳ ಆಚಾರದಿಂದ ಫಲವೂ ಇಲ್ಲ. ಬೌದ್ಧರಿಂದ, ಜೈನರಿಂದ ಮತ್ತು ಹಿಂದೂಗಳಿಂದ ಈ ಪಂಥಕ್ಕೆ ಪ್ರೋತ್ಸಾಹ ಸಿಕ್ಕಲಿಲ್ಲ. (ಆರ್.)

**ಅಜಿತಸೇನಾಚಾರ್ಯ:** 10ನೆಯ ಶತಮಾನದಲ್ಲಿದ್ದ ಕನ್ನಡ ನಾಡಿನಲ್ಲಿ ಅತ್ಯಂತ ಪ್ರತಿಷ್ಠೆ ಪಡೆದ ಜೈನಗುರು. ಇವರಿಗೆ ಭುವನಗುರುವೆಂಬ ಬಿರುದೂ ಇತ್ತು. ಇವರ ವಿದ್ಯಾಮಂಡಲ ಅನೇಕ ಕವಿಗಳಿಂದ ಮತ್ತು ಹಿರಿಯರಿಂದ ಕೂಡಿತ್ತಲ್ಲದೆ ಇವರ ಶಿಷ್ಯಪರಿವಾರ ಬಹು ದೊಡ್ಡದಾಗಿತ್ತು. ಶ್ರವಣಬೆಳಗೊಳದ ಗೊಮ್ಮಟೇಶ್ವರ ವಿಗ್ರಹವನ್ನು ಕೆತ್ತಿಸಿದ ಮಹಾಮಾತ್ಯ ಚಾವುಂಡರಾಯ ಮತ್ತು ಗಂಗವಂಶದ ಮಾರಸಿಂಹ ಇವರ ಶಿಷ್ಯರಾಗಿದ್ದರು. ಕನಕಸೇನ ಮತ್ತು ಮಲ್ಲಿಷೇಣರೂ ಇವರ ಶಿಷ್ಯವರ್ಗಕ್ಕೆ ಸೇರಿದವರು. ಅಜಿತಸೇನಾಚಾರ್ಯರು ತನಗೆ ಗುರುವಾಗಿದ್ದ ವಿಷಯವನ್ನು ಕನ್ನಡ ಕವಿ ರನ್ನ ತನ್ನ ಅಜಿತಪುರಾಣದಲ್ಲಿ ಹೇಳಿಕೊಂಡಿದ್ದಾನೆ. (ಎ.ಎನ್.ಯು.)

**ಅಜಿರೇಟಮ್ :** ಈ ಕುಲದ ಸಸ್ಯಗಳ ಹೂವು ದೀರ್ಘಕಾಲ ಲವಲವಿಕೆಯಾಗಿ ಉಳಿದಿರುವುದರಿಂದ ಈ ಹೆಸರು ಬಂದಿದೆ. ಇದು ವರ್ಷದ ಎಲ್ಲ ಕಾಲಗಳಲ್ಲಿಯೂ ಬೆಳೆಯುವುದರಿಂದ ತೋಟಗಾರಿಕೆಯಲ್ಲಿ ಜನಪ್ರಿಯತೆ ಗಳಿಸಿದೆ. ಇವುಗಳನ್ನು ಅಂಚು ಸಸ್ಯ, ಮಡಿ ಸಸ್ಯ ಮತ್ತು ಕಲ್ಲೇರಿ ಸಸ್ಯಗಳಾಗಿ ಬೆಳೆಸುತ್ತಾರೆ. ಹೂಗೊಂಚಲುಗಳು ಬಿಳುಪು ಮತ್ತು ನೀಲಿ ಬಣ್ಣಗಳಲ್ಲಿ, ಆಕರ್ಷಕ ಆಕಾರಗಳಲ್ಲಿರುತ್ತವೆ.

ಅಜಿರೇಟಮ್ ಜಾತಿಯಲ್ಲಿ ಸು. 30ಕ್ಕೂ ಹೆಚ್ಚು 2' ಬೆಳೆಯುವ ಏಕಋತುವಿನ ವರ್ಣಸಸಿ ಪ್ರಭೇದಗಳಿವೆ. ಎಲೆಗಳು ಅಭಿಮುಖರಚನೆಯನ್ನು ಹೊಂದಿದ್ದು ಕರನೆಯಾಕಾರದಲ್ಲಿರುವ ಅವುಗಳ ಗರಗಸದಂಥ ಅಂಚು ಗುಂಡಾದ ಹಲ್ಲುಗಳಾಗಿ ಒಡೆದಿದೆ. ಪ್ರತಿ ಗೊಂಚಲಲ್ಲೂ ಅನೇಕ ಚೆಂಡುಗಳಿರುತ್ತವೆ. ಚಪ್ಪಟೆಯಾಗಿರುವ ಹೂದಿಂಡಿನ ಮೇಲೆ ಅಸಂಖ್ಯಾತ ಪ್ರತ್ಯೇಕಲಿಂಗ ಅಥವಾ ದ್ವಿಲಿಂಗ ಪುಷ್ಪಗಳು ಇರುತ್ತವೆ. ಬಿಡಿ ಹೂಗಳು ಕಿರಿದಾದ ಕೊಳವೆಯಾಕಾರದ ಬಿಳುಪು ಅಥವಾ ನೀಲಿ ಬಣ್ಣದವಾಗಿರುತ್ತವೆ; ಪುಷ್ಪಪತ್ರಗಳಿಂದ ಆವೃತವಾಗಿರುತ್ತವೆ. ಹಣ್ಣು ಒಂದು ಬೀಜದ ಅಕೀನ್ ಮಾದರಿಯದು. ಇದನ್ನು ಐದು ಕೋಣೆಗಳ ಹೂ ತೊಟ್ಟು ಆವರಿಸಿರುತ್ತದೆ.

ಅಜಿರೇಟಮ್ ಸಸ್ಯವನ್ನು ಸುಲಭವಾಗಿ ಬೀಜಗಳಿಂದ ವೃದ್ಧಿ ಮಾಡಬಹುದು. ಬೀಜಗಳನ್ನು ನೇರವಾಗಿ ಸಸಿ ನೆಡುವ ಸ್ಥಳಗಳಲ್ಲೊ, ಮೊಳಕೆ ಕುಂಡಗಳಲ್ಲೊ ಚೆಲ್ಲಿ ಸಸ್ಯಗಳನ್ನು ಬೆಳೆಸಬಹುದು.

ಮಳೆಗಾಲದ ಮತ್ತು ಚಳಿಗಾಲದ ವಾರ್ಷಿಕ ಹೂ ಬಿಡುವುದಾದರೂ ಈ ಸಸ್ಯವನ್ನು ಎಲ್ಲ ಕಾಲಗಳಲ್ಲಿಯೂ ಬೆಳೆಯಬಹುದು. ಬಿತ್ತನೆ ಮಾಡಿದ 4–5 ದಿನಗಳಲ್ಲಿ ಪೂರ್ತಿಯಾಗಿ ಬೆಳೆಯುತ್ತದೆ. 20 ದಿನಗಳ ಅನಂತರ, ಬೇರುಬಿಟ್ಟು ನೆಡಲು ಸಿದ್ಧವಾಗುತ್ತದೆ. ಸಸಿ ನೆಟ್ಟ 10 ದಿನಗಳ ಅನಂತರ ಮೇಲುಗೊಬ್ಬರ ಕೊಡಬೇಕು. ತಳಭಾಗದಲ್ಲಿರುವ ಬಲಿತ ಹಳದಿಬಣ್ಣದ ಎಲೆಗಳನ್ನು ಕ್ರಮವಾಗಿ ತೆಗೆಯುತ್ತಿದ್ದರೆ ಒಳ್ಳೆಯದು. ಸಸಿ ನೆಟ್ಟ ಒಂದೂವರೆ ತಿಂಗಳಿಗೆ ಹೂಗಳು ಅರಳುತ್ತವೆ. ಸಸ್ಯಗಳು ಎತ್ತರವಾಗಿ ಬೆಳೆದು ನೆಲದ ಮೇಲೆ ಮಲಗುವಂತಿದ್ದರೆ, ಸುತ್ತಲೂ ಬಿದಿರು ಕಡ್ಡಿಗಳನ್ನು ಸಿಕ್ಕಿಸಿ ದಾರದಿಂದ ಕಟ್ಟಬೇಕು. ಮೊದಲು ಅರಳಿದ ಹೂಗಳನ್ನು ತೆಗೆದುಹಾಕುವುದರಿಂದ ಹೆಚ್ಚಿನ ಹೊಸ ಹೂಗೊಂಚಲು ಬರುತ್ತದೆ. ಸಸಿ ನೆಟ್ಟ ಎರಡೂವರೆ ತಿಂಗಳ ಅನಂತರ ಬೀಜ ಬಿಡಿಸಲು ಪ್ರಾರಂಭಿಸಬೇಕು. ಸಸ್ಯದ ಜೀವಾವಧಿ ಸು. 31/2 ತಿಂಗಳು. (ಡಿ.ಎಂ.)

**ಅಜಿಮತ್ :** ನಕ್ಷತ್ರ ಮೊದಲಾದ ಆಕಾಶಕಾಯಗಳನ್ನು ಖಗೋಳದ ಮೇಲೆ ಸೂಚಿಸಲು ಉಪಯೋಗಿಸುವ ಒಂದು ನಿರ್ದೇಶಕ.




ಚಿತ್ರದಲ್ಲಿ z ಬಿಂದು ವೀಕ್ಷಕನ ಖಮಧ್ಯ (ಜೆನಿತ್); P ಧ್ರುವಬಿಂದು ; ZPZ' ಮಹಾವೃತ್ತ ವೀಕ್ಷಕನ ಮಧ್ಯಾಹ್ನರೇಖೆ. ಗೋಳದ ಮೇಲೆ ಯಾವುದಾದರೂ ನಕ್ಷತ್ರ ಅಥವಾ ಗ್ರಹಸ್ಥಾನ ó ಆಗಿದ್ದರೆ ó ದ ಸ್ಥಾನ ನಿರ್ದೇಶಕಗಳು Zó ಮತ್ತು ಕಛ ಕೋನ. ಈ ಕೋನಕ್ಕೆ ಅಜಿಮತ್ ಎಂದು ಹೆಸರು. ಕೆಲವರು ಇದನ್ನು ದಕ್ಷಿಣದ ಕಡೆಯಿಂದ ಅಳೆಯುತ್ತಾರೆ. ಆಗ ನಕ್ಷತ್ರ ಅಥವಾ ಗ್ರಹದ ಅಜಿಮತ್ $180^0$– PZó. ನಕ್ಷತ್ರದ ಅಜಿಮತ್ ಸ್ಥಳ ಮತ್ತು/ಅಥವಾ ಕಾಲ ವ್ಯತ್ಯಾಸವಾದಾಗ ಬದಲಾಗುತ್ತದೆ. (ಸಿ.ಎನ್.ಎಸ್.)

**ಅಜಿಲರು :** ವಿಜಯನಗರ ಸಾಮ್ರಾಜ್ಯದೊಂದಿಗೆ ತುಳುನಾಡು ವಿಲೀನಗೊಂಡ ಅನಂತರ ಅಲ್ಲಿ ತಲೆಯೆತ್ತಿದ ಹಲವು ಸ್ಥಳೀಕ ಮನೆತನಗಳಲ್ಲಿ ಒಂದು. ಮೊದಲು ವೇಣೂರಿನಿಂದ ಮತ್ತು ಅನಂತರ ಆಲದಂಗಡಿಯಿಂದ ಇವರು ಆಳಿದ ಸಂಸ್ಥಾನಕ್ಕೆ ಪೂಂಜಳಿ ಅಥವಾ ಪುಂಜಳಿಕೆಯ ರಾಜ್ಯ ಮತ್ತು ಅಜುವ ರಾಜ್ಯ ಎಂಬ ಹೆಸರುಗಳಿದ್ದುವು. ಇವರು ತಮ್ಮನ್ನು ಸಾಳುವ ವಂಶದವರೆಂದು ಕರೆದುಕೊಳ್ಳುತ್ತಿದ್ದರು. ವೇಣೂರಿನ ಮಹಾಲಿಂಗೇಶ್ವರ ಇವರ ಕುಲದೇವತೆಯಾದರೂ ಇವರು ಜೈನಧರ್ಮಾವಲಂಬಿಗಳಾಗಿದ್ದರು.

1408ರ ವಿಜಯನಗರದ ಶಾಸನವೊಂದರಲ್ಲಿ ಅಜಿಲರು ಬಂಗ ಮತ್ತು ಚೌಟ ಮನೆತನಗಳ ಅರಸುಗಳೊಂದಿಗೆ ಆಡಳಿತ ಕ್ಷೇತ್ರದಲ್ಲಿ ವಿಜಯನಗರ ರಾಜ್ಯಪಾಲನ ಸಹಾಯಕರಾಗಿ 1405ರಲ್ಲಿ ಕಾಣಿಸಿಕೊಳ್ಳುತ್ತಾರೆ. ಅಜಿಲ ಅರಸುಗಳ ಪೈಕಿ ಮುಖ್ಯನಾದವನು 4ನೆಯ ವೀರತಿಮ್ಮರಾಜ ಒಡೆಯ. ರಾಜಕುಮಾರನ ಅಳಿಯನೂ ಪಾಂಡ್ಯಕದೇವಿಯ ಮಗನೂ ಜೈನಗುರು ಚಾರುಕೀರ್ತಿದೇವರ ಪ್ರಿಯಾಗ್ರಶಿಷ್ಯನೂ ಆಗಿದ್ದ ಈ ತಿಮ್ಮರಾಜನೇ ವೇಣೂರಿನ ಗೊಮ್ಮಟ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದ. ಇವನ ರಾಣಿ ಪಾಂಡ್ಯಕದೇವಿ ಅಥವಾ ವರ್ಧಮಾನಕ್ಕ ಗೊಮ್ಮಟನ ಎಡಭಾಗದಲ್ಲಿ ಚಂದ್ರನಾಥ ಚೈತ್ಯಾಲಯವನ್ನೂ ಇವನ ಮತ್ತೊಬ್ಬ ರಾಣಿ ಪಾರ್ಶ್ವದೇವಿ ಅಥವಾ ಬಿನ್ನಾಣಿ ಗೊಮ್ಮಟನ ಬಲಭಾಗದಲ್ಲಿ ಶಾಂತೀಶ್ವರ ಚೈತ್ಯಾಲಯವನ್ನೂ ಕಟ್ಟಿಸಿದರು. ಅಜಿಲರ ರಾಣಿ ಮದುರಕದೇವಿಯನ್ನು 1622ರ ಒಂದು ಶಾಸನದಲ್ಲಿ ಜೈನಗುರು ಲಲಿತಕೀರ್ತಿ ಭಟ್ಟಾರಕದೇವರ ಪ್ರಿಯಾಗ್ರಶಿಷ್ಯೆಯೆಂದು ವರ್ಣಿಸಲಾಗಿದೆ. ಇವಳು ತನ್ನ ರಾಜಧಾನಿ ಆಲದಂಗಡಿಯಲ್ಲಿ ಒಂದು ಅರಮನೆಯನ್ನೂ ಒಂದು ಜೈನಬಸದಿಯನ್ನೂ ಅರ್ಧನಾರೀಶ್ವರ ಮತ್ತು ಸೋಮನಾಥ ದೇವಾಲಯಗಳನ್ನೂ ಕಟ್ಟಿಸಿದಳು.

ವೇಣೂರಿನಲ್ಲಿ ಅಜಿಲರು ಕಟ್ಟಿಸಿಕೊಂಡಿದ್ದ ಅರಮನೆಗೆ ಏಳುಪ್ಪರಿಗೆಗಳಿದ್ದವೆಂಬ ಪ್ರತೀತಿಯಿದ್ದು, ಇಂದು ಆ ಅರಮನೆಯ ನಿವೇಶನದಲ್ಲಿ ತಳಪಾಯದ ಕುರುಹುಗಳೂ ಕಲ್ಲಿನ ಎರಡು ಆನೆಗಳೂ ಕಾಣಸಿಗುತ್ತವೆ. ಅಜಿಲಮೊಗರು ಎಂಬ ಸಣ್ಣ ಗ್ರಾಮದಲ್ಲಿರುವ ಮಸೀದಿಯ ನಿರ್ಮಾಪಕ ಒಬ್ಬ ಅಜಿಲ ಅರಸು ಎಂಬ ಐತಿಹ್ಯವಿದೆ. ಆ ಅರಸ ಯಾವುದೋ ರೋಗದಿಂದ ಬಳಲುತ್ತಿದ್ದಾಗ ಸೈಯದ್ ಬಾಬಾ ಫಕ್ರುದ್ದೀನ್ ಎಂಬ ಪರ್ಷಿಯ ದೇಶದ ಗುರು ಆ ರೋಗವನ್ನು ಗುಣಪಡಿಸಿದ ಕಾರಣ ಅಜಿಲ ಆ ಮಸೀದಿಯನ್ನು ಕಟ್ಟಿಸಿದನಂತೆ.

ಹೈದರನ ಕಾಲದಲ್ಲಿ ಅಜಿಲರ ಆಳ್ವಿಕೆ ಕೊನೆಗಂಡಿತು. ಆಲದಂಗಡಿ ಮತ್ತು ಬಂಗಾಡಿ ಎಂಬೀ ಸ್ಥಳಗಳಲ್ಲಿ ಅಜಿಲ ವಂಶದವರು ಇಂದಿಗೂ ವಾಸಿಸುತ್ತಿದ್ದಾರೆ. (ಕೆ.ವಿ.ಆರ್.)

**ಅಜೀಗರ್ತ :** ಭೃಗುವಂಶದ ಒಬ್ಬ ದೊಡ್ಡ ಋಷಿ. ಕ್ಷಾಮಕಾಲದಿಂದ ತನ್ನ ಸಂಸಾರವನ್ನು ಕಾಪಾಡಲು ಅಶಕ್ತನಾದಾಗ ಈತ ತನ್ನ ಮಗ ಶುನಶ್ಯೇಫನನ್ನು ನರಯಜ್ಞ ಪಶುವಾಗಿ ಹರಿಶ್ಚಂದ್ರನಿಗೆ ಮಾರಿದ. ಈ ಪಾಪದ ಸಲುವಾಗಿ ಪಿಶಾಚಿಯಾಗಬೇಕಾಯಿತು. ಶುನಶ್ಯೇಫ ತನ್ನ ತಪೋಬಲದಿಂದ ತಂದೆಯ ಈ ದುರವಸ್ಥೆಯನ್ನು ಹೋಗಲಾಡಿಸಿದ. (ಜಿ.ಎಚ್.)

**ಅಜೀರ್ಣ :** ಆಹಾರನಾಳದಲ್ಲಿ ಏನಾದರೂ ಕೆಟ್ಟೋ ತಿನ್ನಬಾರದ್ದನ್ನು ತಿಂದೋ, ಕುಡಿದೋ ಹೊಟ್ಟೆ, ಎದೆಯ ಕೆಳಭಾಗ, ಇಲ್ಲವೇ ಕಿಬ್ಬೊಟ್ಟೆಯಲ್ಲಿ ನೋವು, ನುಲಿತ, ಭಾರವಿರುವಂಥ ಅನುಭವ ಆಗುವುದೇ ಅಜೀರ್ಣ (ಅಗ್ನಿಮಾಂದ್ಯ). ಇದು ಇನ್ನೂ ಹೆಚ್ಚಿಕೊಂಡು ಓಕರಿಕೆ, ವಾಂತಿ, ತೇಗು, ಸುಸ್ತೂ ಆಗಬಹುದು. ಹಲವಾರು ಒಳಾಂಗಗಳ ಬೇನೆಗಳ, ನಿಜಗೆಲಸ ಕೆಟ್ಟುದರ, ಹೊರಗಣ ಚಿಹ್ನೆ ಅಥವಾ ಲಕ್ಷಣವೇ ಹೊರತು ಅಜೀರ್ಣ ಒಂದು ರೋಗವಲ್ಲ. ನೋವು ನುಲಿತದೊಂದಿಗೆ ಹಸಿವಿನ ನಾಶ, ನಾಲಗೆ ರುಚಿಗೆಡಿಕೆ, ಬಾಯಲ್ಲಿ ನೀರೂರಿಕೆ, ಎದೆಮುಗುಳಲ್ಲಿ ಭಾರದ ಅನುಭವ ಆಗಬಹುದು. ಮಲ ಕಟ್ಟುವುದು ಅಜೀರ್ಣದಲ್ಲಿ ಸಾಮಾನ್ಯವಾದರೂ ಉಚ್ಚಾಟ ಅಪೂರ್ವವಲ್ಲ.

ತಿಂದ ಆಹಾರ ಚೆನ್ನಾಗಿ ಪಚನ ಆಗದಿದ್ದರೆ ಅಜೀರ್ಣ ಆಗುತ್ತದೆ. ಬಾಯಿಂದ ಹಿಡಿದು ಗುದದ ತನಕ ಆಹಾರನಾಳದಲ್ಲಿ ಎಲ್ಲಾದರೂ ಹೀಗಾಗಿ, ಹಲವಾರು ಪಚನ ರಸಗಳ ಸುರಿಕೆಗಳ ವ್ಯತ್ಯಾಸ, ಆಹಾರ ಮುಂದೆ ಸಾಗುವ ವೇಗದಲ್ಲಿ ಹೆಚ್ಚೂ ಕಡಿಮೆ ಪಚನವಾದ ಉಣಿಸು ಹೀರಿಕೊಂಡು ರಕ್ತಗತವಾಗುವುದರಲ್ಲಿ ನಿಧಾನ, ಜಠರ ಕರುಳುಗಳಲ್ಲಿ ಏಳುವ ಹುಣ್ಣು ಇವುಗಳಿಂದಲೂ ಅಜೀರ್ಣ ಕಾಣಿಸಿಕೊಳ್ಳುವುದು ಸಾಮಾನ್ಯ. ಅಜೀರ್ಣಕ್ಕೆ ಮನಸ್ಸಿನ ಇರುಸುಮುರುಸುಗಳೂ ಕಾರಣವಾಗಬಹುದು. ಆದುದರಿಂದಲೇ ಊಟದ ಹೊತ್ತಿನಲ್ಲಿ ಯಾವ ಚಿಂತೆಗಳನ್ನೂ ಹತ್ತಿರ ಸುಳಿಯಗೊಡಬಾರದು. ಜಠರವನ್ನು ಕೆರಳಿಸುವ ಮಸಾಲೆ, ಕರಿದ ತಿಂಡಿಗಳನ್ನು ಬಿಟ್ಟು, ತಿನ್ನುವುದನ್ನು ಚೆನ್ನಾಗಿ ನಿಧಾನವಾಗಿ ಅಗಿದು ಜೊಲ್ಲಿನೊಂದಿಗೆ ನುಂಗುವುದರಿಂದ ಅಜೀರ್ಣ ತುಸುಮಟ್ಟಿಗೆ ತಗ್ಗುವುದು. ಒಬ್ಬರ ಪಚನ ಬಲವನ್ನು ನಾಲಗೆಯನ್ನು ನೋಡಿ ತಿಳಿಯಬಹುದು. ಹುಳುಕು ಹಲ್ಲು, ಹಲ್ಲಿರದಿರುವಿಕೆ, ಒಸಡುಹುಣ್ಣು ಇವು ಅಜೀರ್ಣಕ್ಕೆ ದಾರಿ ಮಾಡಿಕೊಡುತ್ತವೆ. ಮಿತಿಗೆಟ್ಟು ತಿನ್ನುವುದು, ಕುಡಿತ, ರಾತ್ರಿ ಹೊತ್ತುಮೀರಿ ಹೊಟ್ಟೆಬಿರಿಯ ತಿನ್ನುವುದು–ಇವುಗಳಿಂದ ಅಜೀರ್ಣ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಊಟಗಳ ನಡುವೆ ತಿಂಡಿಗಳನ್ನು ಕುರುಕುತ್ತಿರುವುದು ಕೆಟ್ಟದ್ದು. ಈಲಿ (ಲಿವರ್), ಮಾಂಸಲಿ (ಪ್ಯಾಂಕ್ರಿಯಾಸ್), ಪಿತ್ತಕೋಶ, ಕರುಳುವಾಳ (ಅಪೆಂಡಿಕ್ಸ್), ಅಲ್ಲದೆ ಆಹಾರ ನಾಳದಲ್ಲಿ ಎಲ್ಲಾದರೂ ಏಳುವ ಸಾಮಾನ್ಯ ಗಂತಿಗಳೂ ಏಡಿಗಂತಿಗಳೂ ಅಜೀರ್ಣಸೂಚಕಗಳಾಗಬಹುದು. ಹೊಗೆಸೊಪ್ಪು, ಮದ್ಯಸಾರ ಎರಡೂ ಅಜೀರ್ಣಕಾರಿಗಳು. ಅಂತಃಸ್ರಾವ ಗ್ರಂಥಿಗಳ ಕೆಲಸ ಕೆಟ್ಟಿದ್ದರೂ ಅಜೀರ್ಣವಾಗಬಹುದು. ಅಡ್ರಿನಲ್ ಗ್ರಂಥಿಯ ರೋಗವಾದ ಅಡಿಸನ್ನಿನ ರೋಗದಲ್ಲಿ ವಾಂತಿ, ಸುಸ್ತು ಸಾಮಾನ್ಯ. ಗುರಾಣಿಕ (ಥೈರಾಯ್ಡ್) ಗ್ರಂಥಿ ರೋಗದಲ್ಲೂ ಅಜೀರ್ಣ, ಕೆಲವೇಳೆ ಇದ್ದಕ್ಕಿದ್ದಂತೆ ಉಚ್ಚಾಟ ಸಾಮಾನ್ಯ. ಆದ್ದರಿಂದ ಕೆಲವೇ ದಿನಗಳಲ್ಲಿ ಅಜೀರ್ಣ ಕಳೆಯದಿದ್ದರೆ, ವೈದ್ಯರ ಸಲಹೆಯನ್ನು ಕೂಡಲೇ ಪಡೆಯಬೇಕು. (ಡಿ.ಎಸ್.ಎಸ್.)

**ಅಜೀವಿಕರು :** ಬುದ್ಧ ಮತ್ತು ಮಹಾವೀರರ ಕಾಲದಲ್ಲಿ (ಪ್ರ.ಶ.ಪೂ. 6ನೆಯ ಶತಮಾನ) ಭಿಕ್ಷಾಟನೆಯಿಂದ ಜೀವಿಸುತ್ತಿದ್ದ ಒಂದು ಪಂಥದ ಅನುಯಾಯಿಗಳು. ಗೊಸಾಲ ಮಂಖಲಿ ಪುತ್ತ ಈ ಪಂಥದ ಸ್ಥಾಪಕ. ಅಜೀವವೆಂದರೆ ಜೀವನಕ್ರಮ, ಕರ್ಮದ ಶೃಂಖಲೆಯಿಂದ ಮುಕ್ತನಾಗುವವನೇ ಅಜೀವಿಕ; ಭಿಕ್ಷಾಟನೆಯೇ ಇವನ ಜೀವನವೃತ್ತಿ ಎಂದು ಗೊಸಾಲ ಹೇಳಿರುವನು. ಬೌದ್ಧಧರ್ಮದ ಪ್ರಕಾರ ಭಿಕ್ಷುಗಳು ಅನುಸರಿಸಬೇಕಾದ 8 ಮಾರ್ಗಗಳಲ್ಲಿ ಸಮ್ಯಕ್–ಜೀವನ ಒಂದು ಮುಖ್ಯ ಮಾರ್ಗ. ಮಹಾವೀರನಿಗೆ ಗೊಸಾಲನ ಪರಿಚಯವಿತ್ತು. ಅಪ್ರಾಮಾಣಿಕನೆಂದು ತಿಳಿದ ಮೇಲೆ ಗೋಸಾಲನ ಸ್ನೇಹ ಬಿಟ್ಟನು. ಮತ್ತೆ ಇವರಿಬ್ಬರು ಕಕ್ಷಿ–ಪ್ರತಿಕಕ್ಷಿಗಳಾಗಿ ಸಂಧಿಸಿ ಹೋರಾಡಿದರು. ಕೊನೆಗೆ ತನ್ನ ಹೀನ ಕೃತ್ಯಗಳನ್ನು ಒಪ್ಪಿಕೊಂಡ ಗೋಸಾಲ ಮಹಾವೀರನ ಶಿಷ್ಯನಾದ. ಅಜೀವಿಕರಿಗೆ ದಶರಥ (ಅಶೋಕನ ಮೊಮ್ಮಗ) ಗುಹೆಗಳಲ್ಲಿ ಕೆಲವು ಆಶ್ರಮಗಳನ್ನು ಕೊಟ್ಟಿದ್ದ.

ಪುರುಷಪ್ರಯತ್ನದ ಮೇಲೆ ಯಾವುದೂ ಆಧಾರಗೊಂಡಿಲ್ಲ. ಮನುಷ್ಯರಲ್ಲಿ ಕಂಡುಬರುವ ವ್ಯತ್ಯಾಸಕ್ಕೆ, ಭ್ರಷ್ಟತೆಗೆ, ಪತನಕ್ಕೆ ವಿಧಿ (ವಾತಾವರಣ, ಸ್ವಭಾವ) ಕಾರಣವೆಂದು ಈ ಪಂಥದ ತತ್ತ್ವ. (ಎಚ್.ಕೆ.)

**ಅಜೀಲಿಯನ್ ಸಂಸ್ಕೃತಿ :** ದಕ್ಷಿಣ ಫ್ರಾನ್ಸ್, ಮಧ್ಯ ಯುರೋಪ್, ಬೆಲ್ಜಿಯಂ ಮತ್ತು ಉತ್ತರ ಬ್ರಿಟನ್ ಪ್ರದೇಶಗಳಲ್ಲಿ ಹರಡಿದ್ದ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿ. ಫ್ರಾನ್ಸಿನ ಪಿರನೆಸ್ ಪರ್ವತ ಪ್ರದೇಶದಲ್ಲಿರುವ ಮಜ್–ದ–ಅಜ಼ಿಲ್ ಎಂಬ ಸ್ಥಳದಲ್ಲಿ ಮೊದಲು ಗುರುತಿಸಲ್ಪಟ್ಟಿದ್ದರಿಂದ ಅಜ಼ೀಲಿಯನ್ ಎಂಬ ಹೆಸರು ರೂಢವಾಯಿತು. ಹಳೆಯ ಶಿಲಾಯುಗದ ಮ್ಯಾಗ್ಡಲೀಯನ್ ಅವಶೇಷಗಳ ಮೇಲ್ಪದರಗಳಲ್ಲಿ ಇದರ ಅವಶೇಷಗಳು ಸಿಕ್ಕುವುದರಿಂದ ಇದರ ಕಾಲ ಪ್ರ.ಶ.ಪೂ. 8,000 ಇರಬಹುದೆಂದು ಹೇಳಬಹುದು. ಬೇಟೆಯಿಂದಲೇ ಜೀವಿಸುತ್ತಿದ್ದ ಈ ಜನ, ಬಹು ಸಣ್ಣ ಶಿಲಾಯುಧಗಳನ್ನೂ ಎಲುಬಿನ ಆಯುಧಗಳನ್ನೂ ಮೀನಿನ ಬೇಟೆಗಾಗಿ ಕೆಂಪು ಜಿಂಕೆಯ ಕೊಂಬಿನಿಂದ ಮಾಡಿದ ಹಾರ್ಪೂನ್ ಎಂಬ ಆಯುಧವನ್ನು ಉಪಯೋಗಿಸುತ್ತಿದ್ದರು. ಈ ಕಾಲದಲ್ಲಿ ಪಶುಪಾಲನೆ ಬಳಕೆಯಿರಲಿಲ್ಲವಾದರೂ ನಾಯಿ ಮಾತ್ರ ಪಳಗಿದ ಪ್ರಾಣಿಯಾಗಿದ್ದಿತು. ಚುಕ್ಕೆಗಳು, ಉದ್ದ ಅಡ್ಡ ಗೆರೆಗಳು, ವೃತ್ತಗಳು, ಮುಂತಾದ ಕಪ್ಪು ಬಣ್ಣದ ಚಿಹ್ನೆಗಳಿಂದ ಚಿತ್ರಿತವಾದ ಸಣ್ಣ ಗುಂಡುಕಲ್ಲುಗಳು ಅವಶೇಷಗಳೊಡನೆ ದೊರಕುತ್ತವೆ. ಬವೇರಿಯದ ಆಫ್ನೆಟ್‌ನಲ್ಲಿ ದೊರಕಿರುವ ಈ ಕಾಲದ ತಲೆಬುರುಡೆಗಳ ಗುಡ್ಡೆಗಳು. ಈ ಜನರು ಆಚರಿಸುತ್ತಿದ್ದ ಶವಸಂಸ್ಕಾರ ರೀತಿಯ ಬಗ್ಗೆ ಮಾಹಿತಿ ನೀಡುತ್ತವೆ. (ಎಸ್.ಎನ್.)

**ಅಜ಼ೇಲಿಯ :** ಎರಿಕೇಸೀ ಕುಟುಂಬಕ್ಕೆ ಸೇರಿದ ಸುಂದರ ಸಸ್ಯ. ಇದರ ಅನೇಕ ಪ್ರಭೇದಗಳು ಹೆಚ್ಚಾಗಿ 200ಮೀ ಎತ್ತರವಿರುವ ತಂಪಾದ ಸಹ್ಯಾದ್ರಿ, ಹಿಮಾಲಯ, ಊಟಿಗಳಂಥ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಸಣ್ಣ ಮರಗಳಾಗಿ ಬೆಳೆಯುತ್ತವೆ. ಇದರ ಸಮೀಪಬಂಧು ರೋಡೋಡೆಂಡ್ರನ್. ಇವೆರಡೂ ಒಂದೇ ಜಾತಿಯವೆಂಬುದು ಸಸ್ಯಶಾಸ್ತ್ರಜ್ಞರ ಅಭಿಪ್ರಾಯ. ಅಜ಼ೇಲಿಯದ ಸು. 850 ಪ್ರಭೇದಗಳು ಪ್ರಪಂಚದ ನಾನಾ ಭಾಗಗಳಲ್ಲಿ ಹರಡಿಕೊಂಡಿವೆ. ಚೀನದ ಪಶ್ಚಿಮ ಭಾಗದಲ್ಲಿರುವ ಯುನಾನ್ ಎಂಬ ಸಣ್ಣ ಪ್ರದೇಶ ವೊಂದರಲ್ಲಿಯೇ ಸು. 200 ಪ್ರಭೇದಗಳು ಕಂಡುಬರುವುದರಿಂದ, ಅದೇ ಈ ಸಸ್ಯಗಳ ಮೂಲಸ್ಥಾನ ಆಗಿರಬೇಕೆಂದು ಬಹು ಜನರ ಅಭಿಪ್ರಾಯ. ಈ ಸಸ್ಯವನ್ನು ಸು. 75–80 ವರ್ಷಗಳ ಹಿಂದೆ ಲಂಡನ್ ನಗರದ ಉದ್ಯಾನದಲ್ಲಿ ಮೊದಲು ಬೆಳೆಸಿದವರು ವರ್ಗೀಕರಣ ಶಾಸ್ತ್ರಜ್ಞ ಹೂಕರ್. ಪುಷ್ಪಮಂಜರಿ ಸ್ವಲ್ಪಮಟ್ಟಿಗೆ ಗುಲಾಬಿಯಂತೆ ಕಾಣುವುದರಿಂದ ಇತ್ತೀಚೆಗೆ ಉದ್ಯಾನಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಸುತ್ತಿದ್ದಾರೆ. ಗುಲಾಬಿ ಸೌಂದರ್ಯದ ದೃಷ್ಟಿಯಲ್ಲಿ ಪುಷ್ಪರಾಣಿ ಎನಿಸಿಕೊಂಡರೆ, ಅಜ಼ೇಲಿಯ ರೋಡೋಡೆಂಡ್ರನ್‌ಗಳು ಪುಷ್ಪರಾಜ ಎಂಬ ಅಭಿಪ್ರಾಯವಿದೆ. (ಎ.ಎನ್.ಎಸ್.)

**ಅಜ಼ೋರ್ಸ್ ದ್ವೀಪಗಳು :** ಅಟ್ಲಾಂಟಿಕ್ ಮಹಾಸಾಗರಲ್ಲಿ 30°–40° ಉ, ಅ; 25°–31° ಪ.ರೇ.ಗಳವರೆಗೆ ಹರಡಿವೆ. ಸಾವೋ ಮಿಗಲ್ ದೊಡ್ಡ ದ್ವೀಪ. ಇತರ ದ್ವೀಪಗಳೆಂದರೆ–ಸಾಂತಾ ಮೇರಿಯಾ, ಫಾರ್ಮಿಗಸ್, ರಾಕ್ಸ್, ಟೆರಿಸೀರಾ, ಗ್ರೇಷಿಯಸಾ, ಸಾವೊ, ಜೋರ್ಗಾ, ಪಿಕೊ, ಫಯಾಲ ಮತ್ತು ಫ್ಲೋರ್ಸ್ ಕಾರ್ವೊ. ಈ ದ್ವೀಪಗಳ ಒಟ್ಟು ವಿಸ್ತೀರ್ಣ 2331 ಚ.ಕಿಮೀ. ಜನಸಂಖ್ಯೆ: 2,42,073 (2001). ರಾಜಧಾನಿ: ಪೊಂಟಾಡೆಲ್ಗಾಡ ಸಾವೋಮಿಗಲ್ ದ್ವೀಪದಲ್ಲಿದೆ.

1445ರಲ್ಲಿ ದ್ವೀಪಗಳನ್ನು ಪೋರ್ಚುಗೀಸರು ಕಂಡುಹಿಡಿದರು. 1580 ರಿಂದ 1640ರವರೆಗೆ ಈ ದ್ವೀಪಗಳು ಸ್ಪೇನಿನ ವಶದಲ್ಲಿದ್ದವು. 1823 ರಿಂದ 1833 ರವರೆಗೆ ಪೋರ್ಚುಗೀಸರಿಗೂ ಸ್ಪೇನಿನವರಿಗೂ ಹೋರಾಟ ನಡೆದು, ಪೋರ್ಚುಗೀಸರು ಪುನಃ ಈ ದ್ವೀಪಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈಗಲೂ ಇವು ಪೋರ್ಚುಗಲ್ ಸಾಮ್ರಾಜ್ಯಕ್ಕೆ ಸೇರಿವೆ. ಇಲ್ಲಿನ ಜನಸಂಖ್ಯೆಯಲ್ಲಿ ಅವರದೇ ಮೇಲುಗೈ. ಈ ದ್ವೀಪಗಳು ಪ್ರಧಾ ಯುರೋಪಿನಿಂದ 1600ಕಿಮೀ ದೂರದಲ್ಲಿವೆ.

ಈ ದ್ವೀಪಗಳು ಹೆಚ್ಚು ಮಲೆಸೀಮೆಯಾಗಿದ್ದು, ಇಲ್ಲಿ ಅನೇಕ ಜ್ವಾಲಾಮುಖಿಗಳಿವೆ. ಆದ್ದರಿಂದ ಆಗಾಗ್ಗೆ ಭೂಕಂಪಗಳುಂಟಾಗುತ್ತವೆ. ಬಿಸಿನೀರಿನ ಅನೇಕ ಬುಗ್ಗೆಗಳಿವೆ. ಹವಾಮಾನ ಸಮಶೀತೋಷ್ಣವಾಗಿದೆ. ದ್ವೀಪ ಸ್ತೋಮಗಳ ಬಹಳಷ್ಟು ಭಾಗವು ವೃಕ್ಷಪ್ರಧಾನ ಸಸ್ಯವರ್ಗದಿಂದಾವೃತವಾಗಿದೆ. ಜನರ ಮುಖ್ಯ ಉದ್ಯೋಗ ಬೇಸಾಯ ಮತ್ತು ಪಶುಪಾಲನೆ. ಇಲ್ಲಿಯ ಮುಖ್ಯ ಹುಟ್ಟುವಳಿಗಳೆಂದರೆ–ಗೋದಿ, ದ್ವಿದಳ ಧಾನ್ಯಗಳು, ತಂಬಾಕು, ಆಲೂಗಡ್ಡೆ, ಅನಾನಸ್, ಕಿತ್ತಳೆ ಮತ್ತು ಬಾಳೆ. ಮದ್ಯ, ಹಣ್ಣು ಹಂಪಲು, ಗಿಣ್ಣು, ಬೆಣ್ಣೆ, ದನ ಮತ್ತು ಹಂದಿಗಳ ಮಾಂಸ–ಇವು ರಫ್ತಾಗುತ್ತವೆ. ಫಯಾಲ ದ್ವೀಪದಲ್ಲಿ ಹೋರ್ಟಾ ಎಂಬುದು ಉತ್ತಮ ಬಂದರು. ವಾಣಿಜ್ಯ ಚಟುವಟಿಕೆಗಳಲ್ಲಿ ಹೆಚ್ಚು ಜನರು ತೊಡಗಿರುತ್ತಾರೆ. ಈ ದ್ವೀಪದಲ್ಲಿ ವಾಸಿಸುವವರಲ್ಲಿ ಪೋರ್ಚುಗೀಸರ ಸಂಖ್ಯೆಯೇ ಹೆಚ್ಚು. (ಬಿ.)

**ಅಜ಼ೋಲ :** ಫರ್ನ್ ಅಥವಾ ಜರೀಗಿಡದ ಜಾತಿಗೆ ಸೇರಿದ್ದು, ನೀರಿನಲ್ಲಿ ತೇಲಿಕೊಂಡು ಬೆಳೆಯುವ ಅತಿ ಸಣ್ಣ ಗಾತ್ರದ ಸಸ್ಯ. ಇದು ಸಾಲ್ವೀನಿಯೇಸಿ ಎಂಬ ಕುಟುಂಬಕ್ಕೆ ಸೇರಿದೆ. ಉಷ್ಣವಲಯ ವಾಯುಗುಣದಲ್ಲಿ ಬೆಳೆಯುವುದು ಹೆಚ್ಚು. ಇದರ ಗಾತ್ರ ಕೆಲವು ಸೆಂಟಿಮೀಟರ್‌ಗಳು ಮಾತ್ರ. ಕಾಂಡ ಮೃದುವಾಗಿ, ಚಪ್ಪಟೆಯಾಗಿ, ಸಣ್ಣ ಕವಲುಗಳಿಂದ ಕೂಡಿರುತ್ತದೆ. ಕಾಂಡದ ಎರಡೂ ಕಡೆ ಸಣ್ಣ ಎಲೆಗಳಿರುತ್ತವೆ. ಪ್ರತಿ ಎಲೆಯಲ್ಲಿ ಎರಡು ಹೋಳುಗಳಿರುತ್ತವೆ. ಮೇಲ್ಭಾಗದ ಹೋಳಿನ ಹರಿತ್ತಿರುವ ಜೀವಕೋಶಗಳು ದ್ಯುತಿಸಂಶ್ಲೇಷಣಕ್ರಿಯೆ ನಡೆಸುತ್ತವೆ. ಕೆಳಭಾಗದ ಹೋಳಿನಲ್ಲಿ ಬೇರೊಂದು ಜಾತಿಯ ಸೂಕ್ಷ್ಮವಾದ ಒಳ ಸಸ್ಯಗಳುಳ್ಳ ಸಂದುಗಳಿವೆ. ಇವು ನೀರಿನಲ್ಲಿ ಮುಳುಗಿರುತ್ತವೆ. ಬೇರುಗಳು ಕಾಂಡದಿಂದ ಹುಟ್ಟಿ ನೀರೊಳಗೆ ಜೋತುಬಿದ್ದಿರುತ್ತವೆ.

ಎಲೆಗಳುಳ್ಳ ಕವಲುಗಳು ತಾಯಿಗಿಡದಿಂದ ಬೇರ್ಪಟ್ಟು ಹೊಸ ಗಿಡಗಳಾಗಿ ಬೆಳೆದು ನೀರಿನ ಮೇಲ್ಭಾಗವನ್ನೆಲ್ಲ ಮುಚ್ಚುವಂತೆ ಆವರಿಸುತ್ತವೆ. ಇದು ಒಂದು ರೀತಿಯ ವಂಶಾಭಿವೃದ್ಧಿ. ಎರಡನೆಯ ಬಗೆಯ ವಂಶಾಭಿವೃದ್ಧಿಯಲ್ಲಿ ಕೆಲವು ಎಲೆಗಳು ಮೈಕ್ರೋ ಮತ್ತು

ಮೆಗಸ್ಪೋರೋಕಾರ್ಪ್ ಎಂಬ ವಂಶಾಭಿವೃದ್ಧಿಯ ಅಂಗಗಳಾಗುತ್ತವೆ. ಮೈಕ್ರೋಸ್ಪೋರೋಕಾರ್ಪಿನ ಒಳಾಂಗಗಳಲ್ಲಿ, ಮೈಕ್ರೋಸ್ಪೋರ್‌ಗಳೆಂಬ ಸೂಕ್ಷ್ಮ ಕಣಗಳು ಅಧಿಕ ಸಂಖ್ಯೆಯಲ್ಲಿ ಉತ್ಪಾದನೆಯಾಗುತ್ತವೆ. ಮೈಕ್ರೋಸ್ಪೋರೋಕಾರ್ಪ್ ಮತ್ತು ಮೈಕ್ರೋಸ್ಪೋರ್‌ಗಳಿರುವ ಒಳಾಂಗಗಳು ಬಿರಿದಾಗ ಇವು ಹೊರಕ್ಕೆ ಬರುತ್ತವೆ. ಬಿರಿದ ಮೆಗಸ್ಪೋರೊಕಾರ್ಪ್‌ಗೆ ಈ ಕಣಗಳು ಅಂಟಿಕೊಂಡಾಗ ಸೂಕ್ಷ್ಮ ಗಂಡು ಜನನಾಂಗವಾಗಿ ಅತ್ಯಂತ ಸೂಕ್ಷ್ಮವಾದ ಗಂಡು ಜನನ ಕಣಗಳನ್ನು ಉತ್ಪಾದಿಸುತ್ತವೆ. ಬಲಿತ ಮೆಗಸ್ಪೋರೋಕಾರ್ಪ್ ಬಿರಿದಾಗ ಒಳಾಂಗದಲ್ಲಿರುವ ಮೆಗಸ್ಪೋರ್ ಕಣ ಬೆಳೆದು ತತ್ತಿಯಿರುವ ಆರ್ಕಿಗೋನಿಯಂ ಎಂಬ ಹೆಣ್ಣು ಜನನಾಂಗವನ್ನು ಉತ್ಪಾದಿಸುತ್ತದೆ. ಯಾವುದೋ ಒಂದು ಗಂಡು ಕಣ ಚಲಿಸಿ ತತ್ತಿಯನ್ನು ಸೇರಿ ಗರ್ಭಧಾರಣೆಯಾಗುತ್ತದೆ. ಗರ್ಭ ಧರಿಸಿದ ತತ್ತಿ ಒಡೆದು ಭ್ರೂಣವಾಗುತ್ತದೆ. ಭ್ರೂಣ ಬೆಳೆದು ಎಲೆ, ಕಾಂಡ ಮತ್ತು ಬೇರಿರುವ ಅಜ್ಹೋಲ ಸಸ್ಯವಾಗುತ್ತದೆ. ಇದರ ಜೀವನಚರಿತ್ರೆಯಲ್ಲಿ ನಿರ್ಲಿಂಗ ಮತ್ತು ಸಲಿಂಗ ಪೀಳಿಗೆಗಳ ಪರ್ಯಾಯಕ್ರಮವಿದೆ.

ಇದು ವಾತಾವರಣದಲ್ಲಿನ ನೈಟ್ರೋಜನನ್ನು ಸ್ಥಿರೀಕರಿಸುವಲ್ಲಿ ಅದನ್ನು ಇತರೆ ಸಸ್ಯಗಳಿಗೆ ಲಭ್ಯವಾಗುವಂತೆ ಮಾಡುವಲ್ಲಿ ಅತ್ಯಂತ ಸಮರ್ಥ ಎಂದು ಇದನ್ನು ಬತ್ತದ ಗದ್ದೆಗಳಲ್ಲಿ ಬೆಳೆಯುವ ಪದ್ಧತಿ ಜನಪ್ರಿಯವಾಗಿದೆ. (ಎನ್.ಆರ್.)

**ಅಜ್ಜಂಪುರ :** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಒಂದು ದೊಡ್ಡ ಊರು. ಬೆಂಗಳೂರು ಪುಣೆ ರೈಲುಮಾರ್ಗದಲ್ಲಿನ ಒಂದು ನಿಲ್ದಾಣ. ತರೀಕೆರೆ ಹೊಸದುರ್ಗ ರಸ್ತೆಯಲ್ಲಿ ತರೀಕೆರೆಗೆ 22ಕಿಮೀ ದೂರದಲ್ಲಿರುವ ಈ ಊರು ಹೋಬಳಿಯ ಕೇಂದ್ರ ಸ್ಥಳವಾಗಿದ್ದು, ಪುರಸಭೆಯನ್ನು ಹೊಂದಿದೆ.

ಹಿಂದೆ ಈ ಊರಿನ ಸ್ಥಳದಲ್ಲಿ ಕೆರಾಲವೆಂಬ ಹಳ್ಳಿಯಿತ್ತು. 17ನೆಯ ಶತಮಾನದಲ್ಲಿ ಶಿರಾ ರಾಜ್ಯದ ಮುಗಲ್ ಪ್ರತಿನಿಧಿಯ ಅಧಿಕಾರಿಯಾದ ಅಜೀಂಖಾನ್ ಎಂಬುವನು ಇಲ್ಲಿಗೆ ಬೇಟೆಗಾಗಿ ಬಂದಾಗ ಅವನ ಬೇಟೆನಾಯಿಗಳನ್ನು ಇಲ್ಲಿನ ಮೊಲವಿಂಡು ಪ್ರತಿಭಟಿಸಿ ಅಟ್ಟಿಸಿಕೊಂಡು ಬಂದಿತಂತೆ. ಅದನ್ನು ಕಂಡು ಚಕಿತನಾದ ಖಾನ್ ಅದೊಂದು ಗಂಡು ಮೆಟ್ಟಿನ ಭೂಮಿಯೆಂದು ಬಗೆದು ಅಲ್ಲಿ ಕೋಟೆ ಕಟ್ಟಿಸಿ, ಆ ಊರಿಗೆ ಅಜೀಂಪುರವೆಂದು ಹೆಸರಿಟ್ಟ. ಕಾಲಕಮದಲ್ಲಿ ಅದು ಅಜ್ಜಂಪುರವೆಂದು ಪ್ರಚಾರಕ್ಕೆ ಬಂತು ಎಂದು ಸ್ಥಳ ಪ್ರತೀತಿ. ಮುಂದೆ ತರೀಕೆರೆಯ ಪಾಳೆಯಗಾರ ಹನುಮಪ್ಪ ನಾಯಕ ಇಲ್ಲಿ ಶಿಥಿಲವಾಗಿದ್ದ ಅಜೀಂಖಾನನ ಕೋಟೆಯನ್ನು ದುರಸ್ತು ಮಾಡಿಸಿ ವಿಜಯನಗರದ ಬುಕ್ಕರಾಯ ಕಟ್ಟಿಸಿದ್ದ ದೇವಾಲಯವನ್ನೂ ಜೀರ್ಣೋದ್ಧಾರ ಮಾಡಿಸಿದ. 1766ರಲ್ಲಿ ಹೈದರ್ ಈ ನಗರವನ್ನು ವಶಪಡಿಸಿಕೊಂಡ. ಅಂದಿನಿಂದ ಇದು ಮೈಸೂರು ರಾಜ್ಯದ ಆಡಳಿತಕ್ಕೆ ಸೇರಿತು.

ಅಜ್ಜಂಪುರದಲ್ಲಿ ನೇಯ್ಗೆ ಚೆನ್ನಾಗಿಬೆಳೆದಿದೆ. ಸುತ್ತಿನ ಪ್ರದೇಶಕ್ಕೆ ಈ ಊರು ಮುಖ್ಯ ವ್ಯಾಪಾರಸ್ಥಳ. ಪ್ರತಿ ಮಂಗಳವಾರ ಇಲ್ಲಿ ದೊಡ್ಡ ಸಂತೆ ನಡೆಯುತ್ತದೆ. ಊರಿನ ಸುತ್ತಲೂ ಫಲವತ್ತಾದ ಎರೆಮಣ್ಣಿನ ಜಮೀನಿನಲ್ಲಿ ಹತ್ತಿ ಬೆಳೆಯುತ್ತದೆ. ಹಿಂದೆ ಈ ಊರಿನ ಹತ್ತಿರ ಚಿನ್ನ ತೆಗೆಯುತ್ತಿದ್ದ ಕ್ಷೇತ್ರಗಳಿದ್ದುವು. 1897ರಲ್ಲಿ ಯುರೋಪಿನ ಸಂಸ್ಥೆಯೊಂದು ಚಿನ್ನದ ಗಣಿ ಉದ್ಯಮವನ್ನು ಇಲ್ಲಿ ಆರಂಭಿಸಿತು. ಆದರೆ ಕೆಲವು ವರ್ಷಗಳ ಅನಂತರ ಆರ್ಥಿಕ ತೊಂದರೆಯಿಂದಾಗಿ ಅದು ಕೆಲಸವನ್ನು ನಿಲ್ಲಿಸಿಬಿಟ್ಟಿತು. (ಎಸ್.ವಿ.ಎಸ್.)

**ಅಜ್ಜಿಕಥೆ :** ಜನಪದ ಸಾಹಿತ್ಯದ ಬಹುಮುಖ್ಯವಾದ ಭಾಗಗಳಲ್ಲೊಂದು. ಅದ್ಭುತವೂ ರಮ್ಯವೂ ಆದ ಪವಾಡಗಳನ್ನೊಳಗೊಂಡ ಈ ಕಥೆಗಳನ್ನು ಯಕ್ಷಿಣಿ ಕಥೆಗಳೆಂದೂ ಕಿನ್ನರಿ ಕಥೆಗಳೆಂದೂ ಕರೆಯುತ್ತಾರೆ. ಸರ್ವಸಾಮಾನ್ಯವಾಗಿ ಅಜ್ಜಿ ಮೊಮ್ಮಕ್ಕಳಿಗೆ ಇಂಥ ಕಥೆಗಳನ್ನು ಹೇಳುವ ವಾಡಿಕೆ ಇದೆಯಾಗಿ ಇವಕ್ಕೆ ಅಜ್ಜಿಕಥೆಗಳು ಎಂಬ ಹೆಸರೂ ಒಪ್ಪುತ್ತದೆ. ಅಜ್ಜಿಯ ಕಥೆಗಳು ಯಾವ ಯಾವುದೋ ದೇಶದಲ್ಲಿ, ಯಾವ ಯಾವುದೋ ಭಾಷೆಯಲ್ಲಿ ಹುಟ್ಟಿ ಬೆಳೆದು ಪ್ರಪಂಚ ಪರ್ಯಟನ ಮಾಡಿ, ವಿವಿಧ ದೇಶಭಾಷೆಗಳಲ್ಲಿ ರೂಪತಾಳಿ, ಆಯಾ ಜನಜೀವನದ ಸಂಸ್ಕೃತಿಯ ಪ್ರಭಾವದಿಂದ ಬಣ್ಣ ಬದಲಾಯಿಸಿಕೊಂಡು ಬೇರೆ ಬೇರೆ ಕಥೆಗಳಾಗಿ ಹರಡಿಕೊಂಡುವು.

ಪಾಶ್ಚಾತ್ಯ ಸಾಹಿತ್ಯದಲ್ಲಿ, ಈಗ ಅಜ್ಜಿಯ ಕಥೆಯೆಂದು ಪರಿಗಣಿಸುವ ಅನೇಕ ಕಥೆಗಳು ಜನರ ಬಾಯಿಯಲ್ಲೇ ಬಹುಕಾಲದವರೆಗೂ ಉಳಿದಿದ್ದುವು. ಬಹುಕಾಲ ಅವುಗಳನ್ನು ಸಂಗ್ರಹಿಸಿ ಪ್ರಕಾಶಿಸುವ ಪ್ರಯತ್ನ ನಡೆದಿರಲಿಲ್ಲ. ಜರ್ಮನಿಯ ಜೇಕಬ್ ಮತ್ತು ವಿಲ್ಹೆಲ್ಮ್ ಗ್ರಿಮ್ ಸಹೋದರರನ್ನು ಈ ಸಾಹಸದ ಪುರೋಗಾಮಿಗಳೆಂದು ನಾವು ಕರೆಯಬಹುದು. ಆದರೆ ಕಲೆಯ ದೃಷ್ಟಿಯಿಂದ ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್ಸನ್ನನ ಕಥೆಗಳು ತುಂಬ ಪ್ರಶಂಸನೀಯವಾಗಿವೆ. ಈ ಕಥೆಗಳ ಮುಖ್ಯ ಗುಣಲಕ್ಷಣಗಳ ವಿಶ್ಲೇಷಣೆ ಕಷ್ಟಸಾಧ್ಯ. ಆದರೂ ಯುರೋಪಿನ ಅಜ್ಜಿಕಥೆಗಳಲ್ಲಿ ಕಾಣುವ ಕೆಲವು ಮುಖ್ಯ ಮಾದರಿಗಳ ಲಕ್ಷಣಗಳನ್ನು ಸ್ಥೂಲವಾಗಿ ವಿವೇಚಿಸಬಹುದು.

ಮುಖ್ಯವಾಗಿ ಇವು ಯಾವನೋ ಒಬ್ಬ ರಾಜ ಅಥವಾ ರಾಜಕುಮಾರಿಯ ಸುತ್ತಲೂ ಹೆಣೆದ ಕಥೆಗಳು; ಧೈರ್ಯ, ಸಾಹಸ, ಇಂದ್ರಜಾಲ, ಮಾಯ, ಮಾಟ–ಇವುಗಳಿಂದ ತುಂಬಿದಂಥ ಈ ಕಥೆಗಳಲ್ಲಿನ ಪಾತ್ರಗಳಾಗಲಿ, ಕಥೆಯ ಹಿನ್ನೆಲೆಯಾಗಲಿ, ಯಾವುದೊಂದು ದೇಶಕಾಲದ ಪರಿಮಿತಿಗೆ ಸೇರಿರುವುದಿಲ್ಲ. ಯುರೋಪಿನ ಅಜ್ಜಿಕಥೆಗಳನ್ನು ಮುಖ್ಯವಾಗಿ ಮೂರು ರೀತಿಯವೆಂದು ವಿಂಗಡಿಸುತ್ತಾರೆ. ಮೊದಲನೆಯದು, ಕಾಮದೇವ ಮತ್ತು ಮನೋದೇವತೆ ರೀತಿಯವು (ಕ್ಯೂಪಿಡ್ ಮತ್ತು ಸೈಕಿ ಮಾದರಿ); ಎರಡನೆಯದು, ಸ್ವಾಮಿನಿಷ್ಠೆಯುಳ್ಳ ಸೇವಕನ ರೀತಿಯವು (ಫೇತ್‌ಫುಲ್ ಜಾನ್ ಟೈಪ್); ಮೂರನೆಯ ರೀತಿಯ ಕಥೆಗಳಲ್ಲಿ ಚಿಕ್ಕವರು ನಿಸ್ಸಹಾಯಕರು, ಗುಜ್ಜಾರಿಗಳು, ದರ್ಜಿ, ಬಡ ಸಿಪಾಯಿ ಮುಂತಾದ ಸಾಮಾನ್ಯ ಜನರು ಅಸಾಧಾರಣ ಸಾಹಸಗಳಲ್ಲಿ ತೊಡಗಿ ಜಯಶೀಲರಾಗುವುದು ಇತ್ಯಾದಿ. ಮೊದಲನೆಯ ರೀತಿಯ ಕಥೆಗಳಲ್ಲಿ ಪದೇ ಪದೇ ಬರುವ ತಿರುಳಿನ ಭಾಗ ಹೀಗಿರುತ್ತದೆ: ಒಬ್ಬ ಸುಂದರ ಯುವತಿಯನ್ನು ದಿವ್ಯ ಸುಂದರ ಪುರುಷನೊಬ್ಬ ಪ್ರೀತಿಸುವುದು, ರಾತ್ರಿ ಅವನು ಪ್ರತ್ಯಕ್ಷನಾಗಿ ಅವಳು ತನ್ನ ಕಡೆ ತಿರುಗಿ ನೋಡಬಾರದೆಂಬ ಅಥವಾ ತನ್ನನ್ನು ದಿಟ್ಟಿಸಿ ನೋಡಬಾರದೆಂಬ ನಿಯಮವನ್ನು ವಿಧಿಸುವುದು, ಅವಳು ನಿಯಮವನ್ನುಪೇಕ್ಷಿಸಿ ಪ್ರಿಯನನ್ನು ಕಳೆದುಕೊಳ್ಳುವುದು, ಅವನನ್ನು ಹುಡುಕುತ್ತಾ ಹೋದಾಗ ತನಗೆ ವಿಧಿಸುವ ಹಲವಾರು ಕಠಿಣ ಕೆಲಸಗಳಲ್ಲಿ ತೊಡಗುವುದು, ಕಟ್ಟ ಕಡೆಗೆ ತನ್ನ ಪ್ರಿಯನನ್ನು ಸಂಧಿಸುವುದು ಇತ್ಯಾದಿ. ಎರಡನೆಯ ರೀತಿಯ ಕಥೆಗಳಲ್ಲಿ ಯಥಾಪ್ರಕಾರ ಒಬ್ಬ ರಾಜಕುಮಾರ. ಅವನನ್ನು ಅಪಾಯಗಳಿಂದ ರಕ್ಷಿಸುವ ನಿಷ್ಠಾವಂತ ಸೇವಕ. ವಂಚಿತನಾದ ರಾಜ ತಪ್ಪಿನಿಂದ ತನ್ನ ಸೇವಕನನ್ನು ಶಿಕ್ಷಿಸಿದಾಗ ಅವನು ಶಿಲಾರೂಪಿಯಾಗುವುದು, ರಾಜಕುಮಾರ, ಅವನ ಪ್ರಿಯೆ–ಇಬ್ಬರೂ ಪಶ್ಚಾತ್ತಾಪದಿಂದ ಕಂಬನಿಗರೆದಾಗ, ಸೇವಕನ ಶಾಪವಿಮೋಚನೆಯಾಗುವುದು ಇತ್ಯಾದಿ.

ಎಲ್ಲ ಸಂದರ್ಭಗಳಲ್ಲೂ ಕಥಾನಾಯಕ, ನಾಯಕಿಯರು ಸದ್ಗುಣಸಂಪನ್ನರು. ಅವರ ವಿರೋಧಿಗಳೆಲ್ಲರೂ ದುಷ್ಟರು, ನೀಚರು, ಕುಹಕಿಗಳು, ಕಪಟಿಗಳು ಆಗಿರುತ್ತಾರೆ. ನಾಯಕ–ನಾಯಕಿಯರು ಸಾಹಸ ಕೆಲಸಗಳಲ್ಲಿ ತೊಡಗಿದಾಗ ನಿರ್ಜೀವ ವಸ್ತುಗಳೂ ಮೃಗಪಕ್ಷಿಗಳೂ ಅವರಿಗೆ ಅನಿರೀಕ್ಷಿತವಾಗಿ ಸಹಾಯಕವಾಗುತ್ತವೆ. ಈ ಕಥೆಗಳಲ್ಲಿ ಕೆಲವು ವಿಶಿಷ್ಟಸಂಖ್ಯೆಗಳಿಗೆ (ಎರಡು, ಮೂರು, ಏಳು ಇತ್ಯಾದಿ) ಪ್ರಾಧಾನ್ಯ. ವಿಭಿನ್ನ ಸ್ವಭಾವದ ಇಬ್ಬರು ರಾಕ್ಷಸರನ್ನು ಕೊಲ್ಲುವುದು, ಅದರಲ್ಲಿ ಮೂರನೆಯವನು ಅತಿಭಯಂಕರ, ಅಪ್ರತಿಮ ಸಾಹಸಿ, ಮೂವರು ರಾಜಪುತ್ರಿಯರು, ಅವರಲ್ಲಿ ಮೂರನೆಯವಳು ಅತಿ ಸುಂದರಿ, ಏಳು ಸಮುದ್ರಗಳಾಚೆಯ ದ್ವೀಪದಲ್ಲಿ ಏಳು ಸುತ್ತಿನ ಕೋಟೆ–ಇತ್ಯಾದಿ.

ಇಂಥ ಪ್ರಸಂಗಗಳು ಬೇರೆ ಬೇರೆ ದೇಶದ ಕಥೆಗಳಲ್ಲಿ ತೆರತೆರನಾದ ಬದಲಾವಣೆ ಹೊಂದುತ್ತವೆ. ಈ ಕಥೆಗಳು ಎಲ್ಲಿ, ಹೇಗೆ ಹುಟ್ಟಿದವೆಂಬ ವಿಷಯದಲ್ಲಿ ಬಹಳ ಭಿನ್ನಾಭಿಪ್ರಾಯಗಳಿವೆ. ಪುರಾಣಕಥೆಗಳಿಂದ ಹುಟ್ಟಿದವೆಂಬ ವಾದವನ್ನು ವಿದ್ವಾಂಸರು ಒಪ್ಪುವುದಿಲ್ಲ. ಯಾವುದೋ ಒಂದು ಕಾಲದಲ್ಲಿ ಒಂದೇ ಮೂಲದಿಂದ ಹುಟ್ಟಿದ ಈ ಕಥೆಗಳು ಅಸಂಖ್ಯಾತ ರೂಪಗಳನ್ನು ತಾಳಿ, ಬೇರೆ ಬೇರೆಯಾಗಿರಬಹುದು. ಕೆಲವು ವಿಮರ್ಶಕರು ಅಜ್ಜಿಯ ಕಥೆಗಳು ಯುರೋಪಿನಲ್ಲಿ ಹುಟ್ಟಿ ಇಂಡೋ–ಯುರೋಪಿಯನ್ ಪರಂಪರೆಗೆ ಸೇರಿದುವೆಂದು ಅಭಿಪ್ರಾಯಪಡುತ್ತಾರೆ. 1859ರಲ್ಲಿ ಟಿ. ಬೆನ್‌ಫೆ ಎಂಬ ವಿದ್ವಾಂಸ ಅಜ್ಜಿಕಥೆಗಳು ಭಾರತದಲ್ಲಿ ಹುಟ್ಟಿದವೆಂಬುದನ್ನು ಖಚಿತವೆನ್ನುತ್ತಾನೆ. ಸುಪ್ರಸಿದ್ಧ ಕಥಾಸಾಹಿತ್ಯ ವಿದ್ವಾಂಸನಾದ ಸ್ಟಿತ್ ಥಾಮ್ಸನ್ ಪ್ರ.ಶ.ಪೂ. 1300ಕ್ಕಿಂತ ಹಿಂದೆ ಈಜಿಪ್ಟ್ ದೇಶದಲ್ಲಿ ಉಪಲಬ್ಧವಾಗಿದ್ದ ಕಥಾಸಂಗ್ರಹಗಳಲ್ಲಿ ಅಜ್ಜಿಕಥೆಯ ಮೂಲವನ್ನು ಕಾಣಬಹುದೆನ್ನುತ್ತಾನೆ.

ಅಲ್ಲದೆ ಈ ಕಥೆಗಳ ಮಾದರಿಗಳನ್ನು ಒಂದು ದೇಶ ಇನ್ನೊಂದು ದೇಶದಿಂದ ಎರವಲು ಪಡೆಯಿತೆಂದು ಹೇಳುವುದು ಸರಿಯಿಲ್ಲ. ಕಥೆ ಹೇಳುವುದು ಕೇಳುವುದು ಮಾನವಸಹಜವಾದ ಗುಣ ಎಂಬುದನ್ನು ನಾವು ಮರೆಯುವಂತಿಲ್ಲ. ಕಲ್ಪನೆ, ಸೃಷ್ಟಿ, ಮಾಟಗಳಲ್ಲಿ ಸಾಮ್ಯವಿದ್ದರೂ ಇವು ಆಯಾ ನೆಲದಲ್ಲೇ ಸ್ವತಂತ್ರವಾಗಿ ಹುಟ್ಟಿಬಂದಿರಲೂಬಹುದು.

ಅರೇಬಿಯನ್ ನೈಟ್ಸ್, ಕಥಾಸರಿತ್ಸಾಗರ, ದಶಕುಮಾರಚರಿತೆ, ವಿಕ್ರಮಾದಿತ್ಯನ ಕಥೆಗಳು–ಈ ಮೊದಲಾದವುಗಳಲ್ಲಿ ಅಜ್ಜಿಕಥೆಗಳಿಗೆ ಚಿತ್ರವಿಚಿತ್ರವಾದ ನಿದರ್ಶನಗಳಿವೆ. ಈಚೆಗೆ ಈ ಬಗೆಯ ಸಾಹಿತ್ಯದ ಬಹುಭಾಗ ಕನ್ನಡಕ್ಕೆ ಅನುವಾದಗೊಂಡಿದೆ.

ಇದು ಹೇಗೇ ಇರಲಿ, ಈ ಕಥೆಗಳು ಜನರ ಮನೋರಂಜನೆಗಾಗಿ ರಚಿತವಾದುವೆನ್ನುವುದರಲ್ಲಿ ಸಂಶಯವಿಲ್ಲ. ಈ ಕಥೆಗಳಲ್ಲಿ ಸೂಕ್ಷ್ಮವಾದ ಕಲ್ಪನಾಚಾತುರ್ಯ, ಸರಳವೂ ನೇರವೂ ಆದ ಕಥನಕಲೆ, ರಸಮಯ ಸನ್ನಿವೇಶಗಳಿರುತ್ತವೆ. ಅತ್ಯಂತ ಹಿರಿಯ ಕವಿಗಳೂ ಇಂಥ ಕಥೆಗಳಿಗೆ ಮಾರುಹೋಗಿದ್ದಾರೆ. ಇವು ಸ್ವತಂತ್ರವಾದ ಬಿಡಿಕಥೆಗಳಾಗಿದ್ದರೂ ಹಲವಾರು ಮಹಾಕಾವ್ಯಗಳಲ್ಲೂ ಪುರಾಣಕಥೆಗಳಲ್ಲೂ ಸೇರಿಹೋಗಿವೆ. ಹೋಮರನ ಒಡಿಸ್ಸಿಯಲ್ಲಿ ಬರುವ ಒಕ್ಕಣ್ಣ ರಾಕ್ಷಸ–ಪಾಲಿ ಫೀಮಸ್‌ನ ಕಥೆ, ಸಿಸಿರೋವಿನ ಗ್ರಂಥದಲ್ಲಿ ಮತ್ತು ಕಲ್ಪಿತ ಪ್ರಮಾಣಗ್ರಂಥವಾದ ಬುಕ್ ಆಫ್ ಟಾಬಿಟ್‌ನಲ್ಲಿ ಬರುವ ಗ್ರೇಟ್‌ಫುಲ್ ಡೆಡ್ ಕಥೆಗಳೂ ಗಯಟೆ ಕವಿಯ ಫೌಸ್ಟ್ ನಾಟಕದಲ್ಲಿ ಬರುವ ಜೂನಿಫರ್ ವೃಕ್ಷದ ಕಥೆಯೂ ಇದಕ್ಕೆ ಅತ್ಯುತ್ತಮ ನಿದರ್ಶನಗಳು. (ಎಚ್.ಕೆ.ಆರ್.)

**ಅಜ್ಞಾತನಾಮ : ನೋಡಿ: ಹುಸಿ ಹೆಸರು**

**ಅಜ್ಞೇಯತಾವಾದ :** ಒಂದು ರೀತಿಯ ಸಂದೇಹವಾದ. ನಮ್ಮ ಆಲೋಚನಾಶಕ್ತಿ ಇಂದ್ರಿಯಾನುಭವಕ್ಕಿಂತ ಮುಂದೆ ಹೋಗಲಾರದು, ಆಧ್ಯಾತ್ಮಿಕ ವಿಷಯಗಳನ್ನು, ಅದರಲ್ಲೂ ದೇವರ ಅಸ್ತಿತ್ವ ವಿಚಾರವನ್ನು ಸಕಾರಣವಾಗಿ ಸಿದ್ಧಿಸುವುದಕ್ಕಾಗುವುದಿಲ್ಲ ಎಂಬುದು ಈ ವಾದದ ಸಾರಾಂಶ. ಅಜ್ಞೇಯತಾವಾದ (ಅಗ್ನಾಸ್ಟಿಸಿಸಮ್) ಆಸ್ತಿಕ್ಯವನ್ನು ಒಪ್ಪದಿದ್ದರೂ

ನಾಸ್ತಿಕ್ಯವನ್ನು ಪ್ರತಿಪಾದಿಸುವುದಿಲ್ಲ. ಅದು ನಮಗೆ ತಿಳಿದ ಅಥವಾ ತಿಳಿಯುವಂಥ ವಿಷಯವಲ್ಲ. ಅಲ್ಲದೆ ನಮಗೆ ಈಗ ತಿಳಿದಿಲ್ಲ ಎಂದು ಮಾತ್ರ ಹೇಳುವುದಲ್ಲ, ನಮಗೆ ಎಂದೂ ತಿಳಿಯಲು ಶಕ್ಯವಲ್ಲದ್ದು–ಎಂಬುದೇ ಈ ವಾದದ ತಿರುಳು. ಸಾಧಾರಣವಾಗಿ, ವಿಜ್ಞಾನ ಪರಿಣಿತರು ಈ ವಾದವನ್ನು ಮುಂದಿಡುತ್ತಾರೆ. ಅವರವರ ವಿಜ್ಞಾನದ ಪರಿಮಿತಿಯ ದೃಷ್ಟಿಯಿಂದ ಈಶ್ವರನ ಅಸ್ತಿತ್ವದಂಥ ವಿಷಯವನ್ನು ಕುರಿತು ವಿಜ್ಞಾನವೇನನ್ನೂ ಹೇಳಲಾರದೆಂದು ಇವರ ಅಭಿಮತ. ಅಗ್ನಾಸ್ಟಿಸಿಸಮ್ ಅನ್ನುವ ಶಬ್ದವನ್ನು ಮೊದಲು ಸೃಷ್ಟಿಸಿದವನು ಪ್ರಸಿದ್ಧ ಆಂಗ್ಲ ವೈಜ್ಞಾನಿಕ ಟಿ. ಎಚ್. ಹಕ್ಸ್ಲೆ ಎನ್ನುವವನು. ಹೊಸದಾದರೂ ಈ ಭಾವ ಬಹಳ ಹಳೆಯದು ಎನ್ನುವುದರಲ್ಲಿ ಸಂಶಯವಿಲ್ಲ. ಪಾಶ್ಚಾತ್ಯ ತತ್ತ್ವಜ್ಞಾನದಲ್ಲಿ ಪಾರಮಾರ್ಥಿಕ ತತ್ತ್ವಗಳು ನಮ್ಮ ಪ್ರತ್ಯಕ್ಷ ಅನುಮಾನ ಪ್ರಮಾಣಗಳಿಗೆ ಗೋಚರವಾಗುವುದಿಲ್ಲವೆಂದೂ ಕೇವಲ ತರ್ಕದಿಂದ, ಯುಕ್ತಿಯಿಂದ, ಆತ್ಮ, ಪರಮಾತ್ಮ, ಮೋಕ್ಷ ಇವುಗಳ ಸ್ವರೂಪವನ್ನು ನಿರ್ಣಯಿಸಲು ಸಾಧ್ಯವಿಲ್ಲವೆಂದೂ ವಾದ ಹೂಡಿದವ ಇಮ್ಯಾನ್ಯುಯಲ್ ಕ್ಯಾಂಟ್ ಎಂಬ ಜರ್ಮನಿಯ ತತ್ತ್ವಶಾಸ್ತ್ರಜ್ಞ. ಹರ್ಬರ್ಟ್ ಸ್ಪೆನ್ಸರ್, ಅಗಸ್ಟ ಕ್ಯಾಂಟ್ ಮೊದಲಾದವರು ಈ ವಾದವನ್ನು ಪುಷ್ಟವಾದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. ವೇದಾಂತದಲ್ಲಿಯೂ ಈ ವಾದದ ಛಾಯೆ ಇಲ್ಲದಿಲ್ಲ. (ಎಂ.ವೈ.)

**ಅಜ್ಮಲ್‌ಖಾನ್, ಹಕೀಂ :** 1865–1928. ಪ್ರಸಿದ್ಧ ಹಕೀಂ ಮನೆತನವೊಂದರಲ್ಲಿ ಜನಿಸಿ, ವೈದ್ಯದಲ್ಲಿ ಅಸಾಧಾರಣ ಪಾಂಡಿತ್ಯ ಗಳಿಸಿ, ಹಿಂದುಳಿದ ಮುಸ್ಲಿಮರ ಏಳಿಗೆಗಾಗಿ ಶ್ರಮಿಸಿ, ಉಜ್ಜ್ವಲ ರಾಷ್ಟ್ರಭಕ್ತರಾಗಿ ನಾಡಿನ ಸೇವೆ ಮಾಡಿದ ಮುಸ್ಲಿಂ ನಾಯಕರಲ್ಲಿ ಒಬ್ಬರು. ಇವರು ಯುನಾನಿ ವೈದ್ಯದಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ್ದ ದೆಹಲಿ ವೈದ್ಯ ಮನೆತನವೊಂದಕ್ಕೆ ಸೇರಿದವರು. ಈ ಮನೆತನದವರೇ ಸ್ಥಾಪಿಸಿ, ಬೆಳೆಸಿಕೊಂಡು ಬಂದಿದ್ದ ತಿಬಿಯಾ ಯುನಾನಿ ವೈದ್ಯ ಶಿಕ್ಷಣಶಾಲೆ ಅಜ್ಮಲ್ ಖಾನರ ಶ್ರಮದ ಫಲವಾಗಿ ಪ್ರೌಢ ವಿದ್ಯಾಸಂಸ್ಥೆಯಾಯಿತು. ಇವರ ಶಿಕ್ಷಣ ನಡೆದದ್ದು ಮನೆಯಲ್ಲಿಯೇ; ಚಿಕ್ಕ ವಯಸ್ಸಿನಲ್ಲಿಯೇ ಅಸಾಧಾರಣ ಪಾಂಡಿತ್ಯ ಗಳಿಸಿದರು. 1904ರಲ್ಲಿ ಪಶ್ಚಿಮ ಏಷ್ಯ ಪ್ರವಾಸಮಾಡಿ, ಎರಡು ಸಲ ಯುರೋಪು ದೇಶಗಳಲ್ಲೂ ಸಂಚರಿಸಿ, ಅಲ್ಲಿನ ವೈದ್ಯಕೀಯ ವಿಧಾನಗಳನ್ನೂ ಅಭ್ಯಾಸಮಾಡಿದರು. ವೈದ್ಯಶಾಸ್ತ್ರದ ಮೇಲೆ ಇವರು ಬರೆದಿರುವ ಗ್ರಂಥಗಳು ಪ್ರಮಾಣ ಗ್ರಂಥಗಳಾಗಿವೆ. ಅಲಿಘರ್‌ನ ಮುಸ್ಲಿಂ ಪ್ರೌಢವಿದ್ಯಾಶಾಲೆಯನ್ನು ಬೆಳೆಸಿ, ಅದು ವಿಶ್ವವಿದ್ಯಾನಿಲಯವಾಗಲು ಶ್ರಮಿಸಿದವರಲ್ಲಿ ಅಜ್ಮಲ್ ಖಾನರೂ ಒಬ್ಬರು.

1918ರ ದೆಹಲಿ ಕಾಂಗ್ರೆಸ್ಸಿನ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಇವರು ಮರು ವರ್ಷವೇ ರಾಜಕೀಯದಕ್ಕೆ ಧುಮುಕಬೇಕಾಯಿತು. 1919ರ ರೌಲತ್ ಕಾನೂನು, ಜಲಿಯನ್‌ವಾಲಾ ಬಾಗ್ ಕಗ್ಗೊಲೆ, ಖಿಲಾಫತ್ ವಿಷಯದಲ್ಲಿ ಬ್ರಿಟಿಷರು ಮುಸ್ಲಿಮರಿಗೆ ಮಾಡಿದ ಅನ್ಯಾಯ–ಇವೆಲ್ಲ ಅವರನ್ನು ರಾಜಕೀಯಕ್ಕೆ ಸೆಳೆದುವು. 1919ರಲ್ಲಿ ಬ್ರಿಟಿಷರು ನಡೆಸಿದ ಅತ್ಯಾಚಾರಗಳಿಂದ ತಮ್ಮ ರಾಜಕೀಯ ಅಭಿಪ್ರಾಯಗಳು ಒಮ್ಮೆಲೇ ಬದಲಾಯಿಸಿದುವು ಎಂದು ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ ಅವರು ಹೇಳಿದ್ದಾರೆ. 1921ರಲ್ಲಿ ನಡೆದ ಅಹಮದಾಬಾದ್ ಕಾಂಗ್ರೆಸ್ಸಿಗೆ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟು ಅಧ್ಯಕ್ಷಪೀಠದಿಂದ, ಸ್ವಾತಂತ್ರ್ಯದ ಹಾಗೂ ಹಿಂದೂ ಮುಸ್ಲಿಮ್ ಐಕ್ಯದ ಬಗ್ಗೆ ಭಾವೋದ್ರೇಕದಿಂದ ಜನತೆಗೆ ಕರೆಕೊಟ್ಟರು. ಮಹಾತ್ಮಾ ಗಾಂಧೀಜಿಯವರೊಂದಿಗೆ ಇವರ ಗೆಳೆತನ ಬೆಳೆಯಿತು. ಸೆರೆಮನೆಯಲ್ಲೇ ನಡೆದ ಗಾಂಧೀಜಿಯವರ ಶಸ್ತ್ರಚಿಕಿತ್ಸೆ, ದೆಹಲಿಯಲ್ಲಿ ಗಾಂಧೀಜಿಯವರು ಮಾಡಿದ ಮೂರು ವಾರಗಳ ಉಪವಾಸ (1924)–ಇಂಥ ಸಂದರ್ಭಗಳಲ್ಲಿ ಅಜ್ಮಲ್‌ಖಾನರು ತೋರಿಸಿದ ಕಾಳಜಿ, ಆಸಕ್ತಿಗಳು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದಲ್ಲಿ ಹೃದಯಸ್ಪರ್ಶಿಯಾದ ಪ್ರಸಂಗಗಳು. (ಎ.ಎಂ.)

**ಅಜ್ಮೀರ್ :** ರಾಜಸ್ಥಾನದಲ್ಲಿನ ಈ ನಗರ 11ನೆಯ ಶತಮಾನದ ಕೊನೆಯಲ್ಲಿ ಚೌಹಾನ್ ವಂಶದ ರಾಜ ಅಜಯದೇವನಿಂದ ನಿರ್ಮಿತವಾಯಿತು. ಊರು ಅರಾವಳಿ ಬೆಟ್ಟಗಳ ಉತ್ತರದ ತುದಿಯ ಇಳಿಜಾರಿನಲ್ಲಿದೆ. ($26^0$, 28' ಉ. ಅ–$74^0$,41' ಪೂ.ರೇ). ಇದರ ಉತ್ತರಕ್ಕೆ ಆನಾಸಾಗರ, ಮೇಲುಭಾಗದಲ್ಲಿ ಫಾಯ್ ಸಾಗರ. ಎರಡನೆಯ ಸರೋವರ ಅಜ್ಮೀರ್ ಪಟ್ಟಣಕ್ಕೆ ನೀರನ್ನು ಸರಬರಾಜು ಮಾಡುತ್ತದೆ.

ಈ ಪಟ್ಟಣದಲ್ಲಿ ಖ್ಯಾತ ಮಹಮದೀಯ ಸಂತ ಮುಯಿನ್–ಉದ್–ದೀನ್ ಚಿಸ್ತಿ ಸಮಾಧಿಯಿದೆ. ಇಲ್ಲಿ ಬಿಳಿ ಅಮೃತಶಿಲೆಯ ಕಟ್ಟಡಗಳುಂಟು. ಅಕ್ಬರ್ ದೊರೆ ತನ್ನ ರಾಣಿಯ ಸಂಗಡ ಆಗ್ರಾದಿಂದ ಇಲ್ಲಿಗೆ ನಡೆದುಬಂದು ಮಗನನ್ನು ಪಡೆಯುವುದಕ್ಕಾಗಿ ಪ್ರಾರ್ಥಿಸಿದನೆಂದು ಪ್ರತೀತಿ. 1200ರಲ್ಲಿ ಇಲ್ಲಿದ್ದ ಒಂದು ಜೈನ ದೇವಾಲಯವನ್ನು ಮಸೀದಿಯಾಗಿ ಪರಿವರ್ತಿಸಲಾಯಿತೆಂದು ತಿಳಿದುಬರುತ್ತದೆ. ಇದು ತಾರಗರ್ ಬೆಟ್ಟದ ಇಳಿಜಾರಿನಲ್ಲಿದೆ. ಇದರ ಕಲೆಯ ಸೌಂದರ್ಯ ಇಂದಿಗೂ ಅಲ್ಪಸ್ವಲ್ಪ ಉಳಿದಿದೆ. ಇಲ್ಲಿರುವ ಒಂದು ದೊಡ್ಡ ಛಾವಣಿಗೆ 40 ಆಧಾರಸ್ತಂಭಗಳಿವೆ. ಬೆಟ್ಟದ ತುದಿಯಲ್ಲಿರುವ ಕೋಟೆಯ ಗೋಡೆ ಸು. 3ಕಿಮೀಗಳಷ್ಟಿದೆ. ಈ ಕೋಟೆಗೆ ಕಾಲುದಾರಿ ಮಾತ್ರವುಂಟು.

ಅಜ್ಮೀರ್ ನಗರ ಒಂದು ಮುಖ್ಯ ಆಡಳಿತ ಕೇಂದ್ರ ಮತ್ತು ರೈಲ್ವೆನಿಲ್ದಾಣ. ಜನಸಂಖ್ಯೆ: 4,85,197 (2001) ನಗರ ನಿರ್ಮಾಣ ಉತ್ತಮ ಯೋಜನೆಯಿಂದ ಕೂಡಿದ್ದು ಅದಕ್ಕೆ ಸೌಂದರ್ಯವನ್ನಿತ್ತಿದೆ. ಸಾಂಬಾರ್ ಸರೋವರ ಹಾಗೂ ರಾಮ್‌ಸುರ್‌ನಿಂದ ಬರುವ ಉಪ್ಪು ಇಲ್ಲಿ ವ್ಯಾಪಾರವಾಗುತ್ತದೆ. ಈ ನಗರ ಎಣ್ಣೆ ತಯಾರಿಕೆಗೆ, ಹತ್ತಿ ಬಟ್ಟೆಗಳಿಗೆ ಬಣ್ಣಹಾಕುವ ಕೈಗಾರಿಕೆಗೆ ಹೆಸರುವಾಸಿಯಾಗಿದೆ. 1875ರಲ್ಲಿ ಮೇಯೋ ರಾಜಕುಮಾರ ಕಾಲೇಜನ್ನು ಸ್ಥಾಪಿಸಲಾಯಿತು. ಮೊದಲು ಇದು ರಾಜಪುತ್ರಸ್ಥಾನದ ಶ್ರೀಮಂತ ವರ್ಗದ ಮಕ್ಕಳಿಗೆ ಮೀಸಲಾಗಿತ್ತು. ಆಗ್ರಾ ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಾಲೇಜುಗಳು ಈ ನಗರದಲ್ಲಿವೆ.



ಹಿಂದೂ ದೇವಾಲಯ, ಪುಷ್ಕರ್

ಭಾರತದಲ್ಲಿ ಕಂಡುಬರುವ ಏಕಮಾತ್ರ ಬ್ರಹ್ಮ ದೇವಸ್ಥಾನ ಅಜ್ಮೀರ್‌ನಿಂದ 11ಕಿಮೀ ದೂರದಲ್ಲಿನ ಪುಷ್ಕರ್ ಸರೋವರದ ಹತ್ತಿರ ಇದೆ. ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿ ದೊರಕುವ ನೀರು ಬಹು ಶ್ರೇಷ್ಠ ಹಾಗೂ ಪಾವನವಾದುದೆಂಬ ಭಾವನೆಯಿದೆ. (ಎಂ.ಎಸ್.)

**ಅಟಕಾಮ :** ಚಿಲಿ ದೇಶದ ಉತ್ತರ ಮಧ್ಯ ಭಾಗದಲ್ಲಿ $30^o$ ದ.ಅ.ದಿಂದ ಉತ್ತರಕ್ಕೆ ಸು. 960ಕಿಮೀಗಳವರೆಗೆ ಹಬ್ಬಿರುವ ಮರುಭೂಮಿ. ಕೋಪಿಯಾಪೊ ನಗರದಿಂದ ಉತ್ತರಕ್ಕೆ ಈ ಮರುಭೂಮಿ ವಿಸ್ತರಿಸುತ್ತ ದಕ್ಷಿಣೋತ್ತರವಾಗಿ 1,000 ದಿಂದ 1,100ಕಿಮೀ ಉದ್ದವಾಗಿದೆ. ಆಂಟೊಫಾಗಸ್ಟದ ಬಹಳಷ್ಟು ಪ್ರದೇಶವನ್ನಾವರಿಸಿದೆ. ಜನಸಂಖ್ಯೆ ಸು. 1000 (2005) ಇಲ್ಲಿಯ ನಿವಾಸಿಗಳು ಅಮೆರಿಕನ್ ಇಂಡಿಯನ್ನರು ಮತ್ತು ಯುರೋಪಿಯನ್ನರು. ಯುರೋಪಿಯನ್ನರು ಇಲ್ಲಿ ಸಿಕ್ಕುವ ಪೆಟ್ಲುಪ್ಪು (ಯವಕ್ಷಾರ) ಮತ್ತು ಖನಿಜ ಸಂಪತ್ತಿನಿಂದ ಆಕರ್ಷಿತರಾಗಿ ಇಲ್ಲಿ ಬಂದು ನೆಲಸಿದರು. ಮೊದಲು ಇದರ ಒಡೆತನಕ್ಕಾಗಿ ಚಿಲಿ, ಬೊಲಿವಿಯ ಮತ್ತು ಪೆರು ದೇಶಗಳ ನಡುವೆ ಯುದ್ಧಗಳಾದುವು. ಕೊನೆಗೆ ಚಿಲಿ ದೇಶ ಜಯಶಾಲಿಯಾಯಿತು. ಇದಕ್ಕೆ ಇಕ್ಕಟ್ಟಾದ ಸಮುದ್ರತೀರವಿದೆ. ಉಳಿದ ಭಾಗ ಎತ್ತರವಾದ ಪ್ರಸ್ಥಭೂಮಿ. ಬೇಸಗೆಯ ಸರಾಸರಿ ಉಷ್ಣಾಂಶ $18^0$ ಸೆ. ಸಾಕಷ್ಟು ಮಂಜು ವೃಷ್ಟಿಯಿದ್ದರೂ ಮರುಭೂಮಿಯ ಪ್ರಪಂಚದಲ್ಲೇ ಅತಿ ಶುಷ್ಕ ಹವಾಮಾನವುಳ್ಳದ್ದು. ಅನೇಕ ವರ್ಷಗಳವರೆಗೆ ಮಳೆಯೇ ಆಗುವುದಿಲ್ಲ ; ಐದು ಆರು ವರ್ಷಗಳಿಗೊಮ್ಮೆ ಮಳೆಯಾಗುತ್ತದೆ. ಅದೂ ಒಂದು ಅಂಗುಲದಷ್ಟು ಮಾತ್ರ, ಆದ್ದರಿಂದ ಭೂಮಿ ಪೂರ್ತ ಶುಷ್ಕವಾಗಿದೆ. ಕೇವಲ ಒಂದು ನದಿ ಹರಿಯುತ್ತದೆ. ಇಕ್ವಿಕ್ ಮತ್ತು ಆಂಟೊಫಗಸ್ಟ ಇಲ್ಲಿಯ ಬಂದರುಗಳು. ಇಲ್ಲಿಂದ ಪೆಟ್ಲುಪ್ಪು ಮತ್ತು ಬೊಲಿವಿಯದ ಖನಿಜ ರಫ್ತಾಗುತ್ತವೆ. ಪೆಟ್ಲುಪ್ಪು ಯುರೋಪು, ಅಮೆರಿಕದ ಸಂಯುಕ್ತಸಂಸ್ಥಾನಗಳಿಗೆ ರಫ್ತಾಗುತ್ತದೆ. ನೈಟ್ರೇಟ್ ತೆಗೆಯುವ ಯಾಂತ್ರಿಕ ವಿಧಾನವನ್ನು ಕಂಡುಹಿಡಿದಾಗಿನಿಂದ ಇದರ ಪ್ರಾಮುಖ್ಯ ಕಡಿಮೆಯಾಗಿದೆ ; ಈ ವಿಧಾನದಿಂದ ಅಯೊಡಿನ್ ಎಂಬ ಉಪವಸ್ತು ಸಿಗುತ್ತದೆ. ಅಮೆರಿಕದ ಸಂಯುಕ್ತಸಂಸ್ಥಾನದ ಶೇ.30 ಆವಶ್ಯಕತೆಯನ್ನು ಚಿಲಿ ಒದಗಿಸುತ್ತದೆ. ಇದಲ್ಲದೆ ಅದರ ಮಧ್ಯಭಾಗಗಳಲ್ಲಿ ಬೆಳ್ಳಿ ಮತ್ತು ತಾಮ್ರ ದೊರೆಯುತ್ತವೆ;ಆದರೆ ಅವುಗಳ ನಿಕ್ಷೇಪ ಈಗ ಕಡಿಮೆಯಾಗಿದೆ. ಇಲ್ಲಿಯ ಇಂಡಿಯನ್ ಜನರು ಮೊದಲು ಉತ್ತರದಿಂದ ದಕ್ಷಿಣಕ್ಕೆ ರಸ್ತೆ ನಿರ್ಮಾಣ ಮಾಡಿದ್ದರು. ಸ್ಪೇನಿನ ಜನರು ಪೂರ್ವ–ಪಶ್ಚಿಮ ಮಾರ್ಗವಾಗಿ ರಸ್ತೆ ನಿರ್ಮಿಸಿದ್ದಾರೆ. ತೀರಪ್ರದೇಶದಲ್ಲಿ ಸ್ವಲ್ಪ ಮಳೆ ಬೀಳುತ್ತದೆ. ಹವಾಮಾನ ಹಿತಕರ. ಓಯಸಿಸ್‌ಗಳಲ್ಲಿ ಕುರಿ, ಲಾಮಾ ಮತ್ತು ಮೇಕೆಗಳನ್ನು ಸಾಕುತ್ತಾರೆ. ಆಲ್ಫಾಲ್ಫಾ ಹುಲ್ಲು ಬೆಳೆಯುತ್ತಾರೆ. ಇವರ ಆಹಾರ ಮೆಕ್ಕೆಜೋಳ, ಕುರಿಯ ಮಾಂಸ, ಹಾಲು, ಬೆಣ್ಣೆ, ಗಿಣ್ಣು ಮುಂತಾದವು. ಹೆಣ್ಣುಮಕ್ಕಳು ಉಣ್ಣೆಬಟ್ಟೆ ಮತ್ತು ಮಣ್ಣಿನ ಮಡಕೆಗಳನ್ನು ತಯಾರಿಸುತ್ತಾರೆ. (ಬಿ.ಜಿ.)

**ಅಟಪ್ ಪ್ಯುರುಕ್ :** ಸ್ಪೇನ್ ದೇಶದ ಉತ್ತರದಲ್ಲಿರುವ ಪುರಾತತ್ತ್ವ ನೆಲೆ. ಈ ಸ್ಥಳದಲ್ಲಿ ಪುರಾತತ್ತ್ವಜ್ಞರು ಸು.13 ಲಕ್ಷ ವರ್ಷ ಹಿಂದಿನ ಮಾನವನ ಕೆಳದವಡೆಯ ಪಳೆಯುಳಿಕೆಯನ್ನು ಶೋಧಿಸಿದ್ದಾರೆ (2007). ಇದರೊಡನೆ ಪ್ರಾಣಿಗಳ ಎಲುಬು ಮತ್ತು ಕಲ್ಲಿನ ಉಪಕರಣಗಳೂ ದೊರೆತಿವೆ. ಇದು ನಿಯಾಂಡರ್‌ತಾಲ್ ಮಾನವ ಮತ್ತು ಆಧುನಿಕ ಮಾನವನ ಮೂಲದ ಹಂತಕ್ಕೆ ಸೇರಿದ್ದಿರಬಹುದೆಂದು ಶೆಟಲ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಪೇಲಿಯೊ ಇಕಾಲಾಜಿ ಅಂಡ್ ಸೋಷಿಯಲ್ ಎವಲ್ಯೂಷನ್ ನಿರ್ದೇಶಕರಾದ ಯು. ಡರಡ್ ಕಾರ್ಬೊನೆಲ್ ಆ ಸಂಸ್ಥೆಯ ನಿಯತಕಾಲಿಕ ನೇಚರ್‌ನಲ್ಲಿ

ವರದಿ ಮಾಡಿದ್ದಾರೆ. ಇದು ಯುರೋಪ್ ಖಂಡದಲ್ಲಿ ಇದುವರೆಗೂ ದೊರೆತ ಅತ್ಯಂತ ಪ್ರಾಚೀನ ಮಾನವನ ಪಳೆಯುಳಿಕೆ. 1997ರಲ್ಲಿ ದೊರೆತ ಈ ಪ್ರಕಾರದ ಪಳೆಯುಳಿಕೆ ಸು.8 ಲಕ್ಷ ವರ್ಷಗಳ ಹಿಂದಿನದಾಗಿತ್ತು. ಇದನ್ನು ಹೋಮೊ ಅಂಟಿಸೆಸರ್ ಅಥವಾ ಪಯೋನೀಲ್ ಮಾನವ ಎಂದು ಹೆಸರಿಸಲಾಗಿತ್ತು. ಏಕೆಂದರೆ ಇದು ನಿಯಾಂಡರ್‌ತಾಲ್ ಮತ್ತು ಹೋಮೊಸೆಪಿಯನ್ ಮಾನವರ ಮೂಲ ಎಂಬ ಅಭಿಪ್ರಾಯವಿತ್ತು. ಇದೇ ನೆಲೆಯ ಇನ್ನೊಂದು ಭಾಗದಲ್ಲಿ ಮತ್ತು ಇಟಲಿಯ ಸೆಪ್ರನೊ ಎಂಬಲ್ಲಿ ಇದೇ ರೀತಿಯ ಮಾನವನ ತಲೆಬುರುಡೆಯ ಪಳೆಯುಳಿಕೆ ಶೋಧವಾಗಿತ್ತು. ಆದ್ದರಿಂದ ಈಗ ದೊರೆತ ಪಳೆಯುಳಿಕೆ ಹೋಮೊ ಅಂಟಿಸೆಸರಿನ ಪೂರ್ವದ ಹಂತದ್ದೆಂದು ತಿಳಿಯಬಹುದಾಗಿದೆ. ಅಷ್ಟೇ ಅಲ್ಲ 1983ರಲ್ಲಿ ಕಾಕಸ್ಸ್ ಪ್ರದೇಶದ ಮನಿಸಿಯಲ್ಲಿ (ಜಾರ್ಜಿಯ ಗಣರಾಜ್ಯ) ಸು.18 ಲಕ್ಷ ವರ್ಷದ ಹಿಂದಿನ ಪಳೆಯುಳಿಕೆಯ ಲಕ್ಷಣಗಳನ್ನು ಇವು ಹೆಚ್ಚು ಹೋಲುತ್ತವೆ. ಈ ಮೂರು ಪಳೆಯುಳಿಕೆಗಳಿಂದ ಯುರೋಪ್ ಖಂಡದಲ್ಲಿ ಆದಿಮಾನವನ ವಿಕಾಸದ ಹೆಜ್ಜೆ ಗುರುತುಗಳನ್ನು ತಿಳಿಯಲು ಸಾಧ್ಯವಾಗಿದೆ. (ಎ.ಎಸ್.)

**ಅಟಾಟರ್ಕ್, ಕೆಮಾಲ್** : 1880–1938. ಆಧುನಿಕ ತುರ್ಕಿಯ ನಿರ್ಮಾಪಕ, ಮೊದಲನೆಯ ರಾಷ್ಟ್ರಾಧ್ಯಕ್ಷ. 1934ರ ಮೊದಲಿಗೆ ಈತನನ್ನು ಮುಸ್ತಫ ಕೆಮಾಲ್, ಕೆಮಾಲ್ ಪಾಷ ಎಂದು ಕರೆಯುತ್ತಿದ್ದರು. ಮಧ್ಯಮವರ್ಗದ ಕುಟುಂಬವೊಂದರಲ್ಲಿ ಜನಿಸಿದ.

ಸೈನ್ಯಕ್ಕೆ ಸೇರಿ 1908ರ ತುರ್ಕಿ ಯುವಕ ಕ್ರಾಂತಿಯಲ್ಲಿ ಭಾಗವಹಿಸಿದ. 1914–18ರ ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿ ಗ್ಯಾಲಿಪೊಲಿ, ಮೆಸಪೊಟೇಮಿಯ ಮುಂತಾದ ಕಡೆಗಳಲ್ಲಿ ಹೋರಾಡಿ ಸಮರ್ಥ ಸೇನಾಧಿಪತಿಯೆಂದು ಹೆಸರು ಗಳಿಸಿದ. ತುರ್ಕಿ ಯುದ್ಧದಲ್ಲಿ ಸೋತ ಅನಂತರ ರಾಷ್ಟ್ರೀಯ ಪಕ್ಷವೊಂದನ್ನು ನಿರ್ಮಿಸಿ ತುರ್ಕಿಯ ಸ್ವಾತಂತ್ರ್ಯ ಸಾಧನೆಗಾಗಿ ಪಣತೊಟ್ಟು ನಿಂತು, 1921–22 ರಲ್ಲಿ ಅನಟೋಲಿಯವನ್ನು

ಆಕ್ರಮಿಸಿದ್ದ ಗ್ರೀಕರನ್ನು ಹೊಡೆದೋಡಿಸಿ, ಸುಲ್ತಾನನ ಆಳ್ವಿಕೆಯನ್ನೇ ರದ್ದುಮಾಡಿ,

1923ರ ಲಾಸೇನ್ ಸಮ್ಮೇಳನದಲ್ಲಿ ಸ್ವತಂತ್ರ ತುರ್ಕಿ ರಾಜ್ಯಕ್ಕೆ ಮನ್ನಣೆ ಸಂಪಾದಿಸಿದ. 1923ರಲ್ಲಿ ಜನರು ಕೃತಜ್ಞತೆಯಿಂದ ಅವನನ್ನೇ ರಾಷ್ಟ್ರದ ಅಧ್ಯಕ್ಷನನ್ನಾಗಿ ಆರಿಸಿದರು. ತನ್ನ ಮರಣದವರೆಗೂ ಕೆಮಾಲ್ ಅಧ್ಯಕ್ಷನಾಗಿಯೇ ಮುಂದುವರಿದ. ಜೀವನದ ಎಲ್ಲ ರಂಗಗಳಲ್ಲೂ ತುರ್ಕಿಯ ಜನತೆ ಆಧುನಿಕ ಪಾಶ್ಚಾತ್ಯರಂತಾಗಬೇಕೆಂದು ನಿರ್ಣಯಿಸಿ ನಾನಾ ಸುಧಾರಣೆಗಳನ್ನು ಜಾರಿಗೆ ತಂದ. ಸಂಪ್ರದಾಯಬದ್ಧರಾದ ತುರ್ಕಿ ಜನರು ಅಷ್ಟೊಂದು ನವೀನ ರೀತಿನೀತಿಗಳನ್ನು ಅಂಗೀಕರಿಸಿದ್ದು ಸೋಜಿಗವಾದ ಸಂಗತಿಯಾದರೂ ಅದರಿಂದ ಅತ್ಯಲ್ಪಕಾಲದಲ್ಲೇ ದೇಶ ಮುಂದುವರಿದಂತಾಯಿತು. (ಎ.ಎಂ.)

**ಅಟಾರ್ನಿ** : ಏಜೆಂಟ್ ಅಥವಾ ವ್ಯವಹಾರ ಪ್ರತಿನಿಧಿ. ಖಾಸಗಿ ಕೆಲಸದಲ್ಲಿ ಪ್ರಾತಿನಿಧ್ಯ ವಹಿಸುವ ಜನರಿಗೆ ಏಜೆಂಟ್ ಏನ್ನುವ ಶಬ್ದ ವಿಶೇಷವಾಗಿದ್ದರೂ 'ಪವರ್ ಆಫ್ ಅಟಾರ್ನಿ' (ಮೊಖ್ತ್ಯಾರುನಾಮೆ) ಧಾರಕ ಎಂಬ ಅರ್ಥದಲ್ಲಿ ಅಟಾರ್ನಿ ಶಬ್ದ ಈಗಲೂ ರೂಢಿಯಲ್ಲಿದೆ. ಅಟಾರ್ನಿ ವಕೀಲಿವೃತ್ತಿ ಮುಂಬಯಿ, ಚೆನ್ನೈ ಕೋಲ್ಕತ್ತ ನಗರಗಳಲ್ಲಿ ಇಂಗ್ಲಿಷ್ ಕಾಯಿದೆಯೊಡನೆ ನಮ್ಮ ದೇಶವನ್ನು ಪ್ರವೇಶಿಸಿತು. ಅಟಾರ್ನಿಗೆ ಪ್ರಚಲಿತವಿದ್ದ ಇನ್ನೊಂದು ಹೆಸರು ಸಾಲಿಸಿಟರ್. ಇಂಗ್ಲೆಂಡಿನಲ್ಲಿ 1873ರವರೆಗೆ ಕಾಮನ್ ಲಾ ಕೋರ್ಟುಗಳಲ್ಲಿ ಕೆಲಸಮಾಡುವವರಿಗೆ ಅಟಾರ್ನಿ ಅನ್ನುತ್ತಿದ್ದರು. ಚಾನ್ಸರಿ ಕೋರ್ಟುಗಳ ಸಮನ್ವಯವಾದ ಮೇಲೆ ಇಬ್ಬರಿಗೂ ಸಾಲಿಸಿಟರ್ ಎಂಬ ಪದವನ್ನೇ ಉಪಯೋಗಿಸುವಂತೆ ಕಾಯಿದೆಯಾಯಿತು. ಈ ಪದ್ಧತಿ ಈಗ ಮುಂಬಯಿ ಮತ್ತು ಕೋಲ್ಕತ್ತ ಹೈಕೋರ್ಟುಗಳಲ್ಲಿ ಮೂಲ ದಾವಾ ವಿಚಾರಣೆಗಳಲ್ಲಿ ರೂಢವಾಗಿದೆ. ಈ ಪದ್ಧತಿಯಂತೆ ಪ್ರತಿಯೊಂದು ಕೇಸಿನ ವಿಚಾರಣೆ ಹಾಗೂ ನ್ಯಾಯ ಪ್ರತಿಪಾದನೆಗಿಂತ ಪೂರ್ವದ ಕೆಲಸವನ್ನು ಸಾಲಿಸಿಟರ್ ಮಾಡುತ್ತಾರೆ. ಕಾಗದಪತ್ರಗಳನ್ನು ತಯಾರಿಸುವುದು, ದಾಖಲು ಮಾಡುವುದು, ಅವುಗಳ ಮೇಲೆ ಸಹಿ ಹಾಕುವುದು, ಸಾಕ್ಷಿ–ಪುರಾವೆಗಳ ಸಂಗ್ರಹ, ಸಾಕ್ಷಿದಾರರಿಗೆ ಸಮನ್ಸ್ ಕಳುಹಿಸುವುದು, ಹಕೀಕತ್ ಮತ್ತು ಕಾಯಿದೆಗಳ ಸ್ಥೂಲ ಟಿಪ್ಪಣಿಗಳನ್ನು ತಯಾರಿಸುವುದು, ಯೋಗ್ಯವೆನಿಸಿದಾಗ ಪ್ರತಿವಾದಿ ಸಾಲಿಸಿಟರ್ ಜೊತೆ ರಾಜಿ ಮಾಡುಕತೆ ನಡೆಸುವುದು– ಇವೇ ಮೊದಲಾದ ಕೆಲಸಗಳನ್ನು ಸಾಲಿಸಿಟರ್ ಕೈಗೊಳ್ಳುತ್ತಾನೆ. ಈತ ಕೊಟ್ಟ ಮಾಹಿತಿಗಳ ಮೇಲೆ ಕೋರ್ಟಿನ ಮುಂದೆ ಪ್ರತಿಪಾದನೆ ಮಂಡಿಸುವುದು ಅಡ್ವೊಕೇಟ್ ಅಥವಾ ಬ್ಯಾರಿಸ್ಟರನ ಕಾರ್ಯ. ಇದರಿಂದ ಕೇಸುಗಳ ನಿರ್ವಹಣ ಕೌಶಲ್ಯ ಹೆಚ್ಚುವುದೆಂದು ಕೆಲವು ತಜ್ಞರ ವಾದ. ಈ ದ್ವಿವಿಧ ಪದ್ಧತಿ ಖರ್ಚಿಗೆ ಕಾರಣವೆಂದು ತದ್ವಿರೋಧಿಗಳ ವಾದ. ವಕೀಲರೊಳಗಿನ ಈ ಶ್ರಮ ವಿಭಜನೆ ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮೊದಲಾದ ಕೆಲವು ದೇಶಗಳಲ್ಲಿ ರೂಢಿಯಲ್ಲಿದೆ. ಅಡ್ವೊಕೇಟ್ ಆ್ಯಕ್ಟಿನ ಸೆಕ್ಷನ್ 31 ಮುಂಬಯಿ, ಕೋಲ್ಕತ್ತ ಹೈಕೋರ್ಟುಗಳಿಗೆ ಅಟಾರ್ನಿಗಳ ಅರ್ಹತೆ, ಪ್ರವೇಶ, ಶಿಸ್ತಿನ ಕ್ರಮ ಮೊದಲಾದುವುಗಳ ಬಗ್ಗೆ ಕಾಯಿದೆ ಮಾಡಲು ಅಧಿಕಾರವನ್ನು ಕೊಟ್ಟು ಈ ಪದ್ಧತಿಯನ್ನು ಉಳಿಸಿದೆ. ಸಾಲಿಸಿಟರ್‌ಗಳು ವಿಶೇಷವಾಗಿ ಫರ್ಮ (ಬಾಗೇದಾರಿ) ಮಾಡಿಕೊಂಡು ಕೆಲಸಮಾಡುವರು. ಸಾಲಿಸಿಟರ್ ಆಗುವವನು ಆರ್ಟಿಕಲ್ಡ್ ಕ್ಲಾರ್ಕ್ ಆಗಿ ಕೆಲವು ವರ್ಷ ಸಾಲಿಸಿಟರ್ ಕೈಕೆಳಗೆ ಕೆಲಸಮಾಡಿ ಅನುಭವ ಪಡೆದ ಅನಂತರ ನಿರ್ದಿಷ್ಟ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾಗುವುದು. (ವಿ.ಆರ್.ಬಿ.)

**ಅಟಿಲ** : 434–53. ಸು. 20ಯ ವರ್ಷಗಳ ಕಾಲ ಯುರೋಪು ಖಂಡದಲ್ಲೆಲ್ಲ ದಾಳಿ ನಡೆಸಿ ಅನೇಕ ಚಕ್ರವರ್ತಿಗಳಿಗೆ ಸಿಂಹಸ್ವಪ್ನವಾಗಿದ್ದ ಹೂಣರ ಮುಖಂಡ. ಇವನ ಸಾಮ್ರಾಜ್ಯವೂ ಶಾಸನವೂ ಪಶ್ಚಿಮದಲ್ಲಿ ಆಲ್ಪ್ಸ್ ಪರ್ವತಪ್ರದೇಶ ಮತ್ತು ಅಟ್ಲಾಂಟಿಕ್ ಸಾಗರದಿಂದ ಹಿಡಿದು ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೂ ಹರಡಿತ್ತು. ಈತ ಚೀನ ದೇಶದ ಚಕ್ರವರ್ತಿಯೊಡನೆಯೂ ವ್ಯವಹಾರ ನಡೆಸುತ್ತಿದ್ದಂತೆ ಕಂಡುಬರುತ್ತದೆ. ನಿಜವಾಗಿಯೂ ಈತನ ರಾಜಧಾನಿ ಯಾವುದೇ ಒಂದು ಪಟ್ಟಣವಾಗಿರಲಿಲ್ಲ. ಈ ದೊಡ್ಡ ಸಾಮ್ರಾಜ್ಯದ ಆಡಳಿತ ಡ್ಯಾನ್ಯೂಬ್ ನದಿಯ ದಡದ ಮೇಲಿನ ಅನೇಕ ಪಟ್ಟಣಗಳಿಂದ ನಡೆಸಲ್ಪಡುತ್ತಿತ್ತು. ಅನೇಕ ವೇಳೆ ಒಂದು ದೊಡ್ಡ ಮೈದಾನವೇ ರಾಜ್ಯಭಾರ ಕಾರ್ಯಕಲಾಪಗಳ ಮೂಲಸ್ಥಾನವಾಗುತ್ತಿತ್ತು.

ಇಷ್ಟು ವೈಭವದಿಂದಲೂ ಬಿಗಿಯಿಂದಲೂ ಆಡಳಿತ ನಡೆಸುವ ಶಕ್ತಿಗೆ ಇವನ ವೈಯಕ್ತಿಕ ಮಹಿಮೆಯೇ ಕಾರಣವಾಗಿತ್ತು. ಆಳು ಕುಳ್ಳ, ಶರೀರ ದಪ್ಪ, ತಲೆ ದೊಡ್ಡದು. ಕಣ್ಣುಗಳು ಒಳಗೆ ಅಡಗಿದ್ದು ಹೊಳೆಯುವಂಥವು. ಮೂಗು ಚಪ್ಪಟೆ. ದಾಡಿ ಸಾಧಾರಣ. ಜನರನ್ನಾಕರ್ಷಿಸಿ ಕೆಲಸ ಸಾಧಿಸುವ ಪ್ರತಿಭೆಯೋ ಅಪಾರ. ಈತ ಅಪಜಯವೆಂಬುದನ್ನೇ ಕಂಡರಿಯದ ವೀರಯೋಧ.

ಇವನ ಮುಖ್ಯವಾದ ದಂಡಯಾತ್ರೆಗಳು ರೋಮ್ ಸಾಮ್ರಾಜ್ಯದ ಅನೇಕ ಪಶ್ಚಿಮ ದೇಶಗಳ ಮೇಲೆ ನಡೆದುವು. 434ರಲ್ಲಿ ಗಳಿಸಿದ ಒಂದು ದೊಡ್ಡ ಜಯದ ಪರಿಣಾಮವಾಗಿ ರೋಮ್ ಚಕ್ರವರ್ತಿ ವರ್ಷಕ್ಕೆ 700 ಪೌಂಡುಗಳಷ್ಟು ಬಂಗಾರವನ್ನು ಈತನಿಗೆ ಕಪ್ಪವಾಗಿ ಸಲ್ಲಿಸುವುದಾಗಿ ಒಪ್ಪಂದ ಮಾಡಿಕೊಂಡ. ಈ ಪ್ರಕಾರ ನಡೆದುಕೊಳ್ಳಲಿಲ್ಲವೆಂದು ಕೋಪಗೊಂಡು ಅಟಿಲ 441ರಲ್ಲಿ ಮತ್ತೆ ರೋಮ್ ಸಾಮ್ರಾಜ್ಯದ ಮೇಲೆ ದಂಡೆತ್ತಿಹೋಗಿ, ಡ್ಯಾನ್ಯೂಬ್ ನದಿಯ ದಡದಲ್ಲಿದ್ದ ವಿಮಿ ನೇಸಿಯಂ, ಮಾರ್ಗಸ್, ಸಿಂಗಿಡುನಂ (ಈಗಿನ ಬೆಲ್‌ಗ್ರೇಡ್) ಮತ್ತಿತರ ಪಟ್ಟಣಗಳನ್ನು ವಶಪಡಿಸಿಕೊಂಡ. ಮರುವರ್ಷ ಮಾಡಿಕೊಂಡ ಕೌಲಿನ ಪ್ರಕಾರ ಸ್ವಲ್ಪ ಕಾಲ ಮಾತ್ರ ಶಾಂತಿ ನೆಲಸಿತು. ಆದರೆ 443ರಲ್ಲಿ ಇನ್ನೂ ಕೆಲವು ಪಟ್ಟಣಗಳ ಮೇಲೆ ದಾಳಿ ನಡೆಯಿತು. ಕೊನೆಗೆ ಇವನ ಸೈನ್ಯಗಳು ಕಾನ್‌ಸ್ಟಾಂಟಿನೋಪಲ್ ಮೇಲೆ ಬಿದ್ದುವು. ರೋಮನ್ ಸೈನ್ಯಗಳು ಅನೇಕ ಸಮರಗಳಲ್ಲಿ ಸೋತುವು. ಹಿಂದಿನಿಂದ ಕೊಡಬೇಕಾದ ಕಪ್ಪ ಕಾಣಿಕೆಗಳ ಬಾಕಿಯೆಂದು 6,000 ಪೌಂಡುಗಳ ತೂಕದಷ್ಟು ಚಿನ್ನವನ್ನು ತೆಗೆದುಕೊಂಡುದಲ್ಲದೆ, ಮುಂದೆ ಪ್ರತಿವರ್ಷವೂ 700 ಪೌಂಡಿಗೆ ಬದಲಾಗಿ ಅದಕ್ಕೆ ಮೂರರಷ್ಟು, ಅಂದರೆ 2,100 ಪೌಂಡುಗಳಷ್ಟು ಬಂಗಾರವನ್ನು ರೋಮನರು ತೆರಬೇಕೆಂದು ವಿಧಿಸಿದನು. ರೋಮನರು ತಲೆಬಾಗಿ ಒಪ್ಪಿಕೊಂಡರು.

ಇಷ್ಟಕ್ಕೇ ಸಮಾಧಾನಪಡದೆ 447ರಲ್ಲಿ ರೋಮ್ ಸಾಮ್ರಾಜ್ಯದ ಮತ್ತೆ ಕೆಲವು ಭಾಗಗಳನ್ನೂ ಹಿಡಿದು ಅಟಿಲನು ತನ್ನ ಅತುಲ ಪರಾಕ್ರಮವನ್ನು ಪ್ರದರ್ಶಿಸುತ್ತ, ಸೈನ್ಯವನ್ನು ಬಾಲ್ಕನ್ ಪರ್ಯಾಯದ್ವೀಪಕ್ಕೆ ನುಗ್ಗಿಸಿ ಗ್ರೀಸ್ ದೇಶದ ಥರ್ಮಾಪಿಲೆ ನಗರದ ಬಾಗಿಲವರೆಗೆ ಬಂದನು. 449ರಲ್ಲಿ ಒಪ್ಪಂದವಾಯಿತು. ರೋಮ್ ಸಾಮ್ರಾಜ್ಯಕ್ಕೆ ಬಹಳ ಅಪಮಾನಕರವಾದ ಒಪ್ಪಂದ ಇದು. ಇನ್ನೂ ಅನೇಕ ರಾಜ್ಯಗಳು ಹೂಣರ ವಶವಾದುವು. ಪಶ್ಚಿಮ ಯುರೋಪಿನ ಜನರು ಅಟಿಲ ತಮ್ಮನ್ನು ಅಡಗಿಸಲೆಂದೇ ಜನಿಸಿದ ದೈವದಂಡ (ಸ್ಕಾರ್ಜ್ ಆಫ್ ಗಾಡ್) ಎಂದು ಭಾವಿಸತೊಡಗಿದರು.

ಈ ಹೆಸರನ್ನು ಸಾರ್ಥಕಗೊಳಿಸಲೋ ಎಂಬಂತೆ ಅಟಿಲ 451ರಲ್ಲಿ ಗಾಲ್‌ದೇಶದ (ಫ್ರಾನ್ಸ್) ಮೇಲೆ ತನ್ನ ದೃಷ್ಟಿ ಬೀರಿದ. ಉತ್ತರದಿಂದ ಆರಂಭಿಸಿ ಅನೇಕ ಪಟ್ಟಣಗಳನ್ನು ಹಿಡಿದು ದಕ್ಷಿಣ ಫ್ರಾನ್ಸಿನ ಆರ್ಲಿಯನ್ಸ್‌ವರೆಗೆ ಬಂದನು. ಆದರೆ ಫ್ರಾನ್ಸಿನ ಯೋಧರು ಧೈರ್ಯ ಮತ್ತು ಒಗ್ಗಟ್ಟಿನಿಂದ ಕಾದಿದರು. ಅಟಿಲನ ಸೈನ್ಯಗಳು ಹಿಮ್ಮೆಟ್ಟಬೇಕಾಯಿತು. ಅವನ ಜೀವನದಲ್ಲೇ ಯುದ್ಧರಂಗದಲ್ಲಿ ಅನುಭವಿಸಿದ ಸೋಲು ಇದು ಒಂದೇ.

ಆದರೆ ಮಾರನೆಯ ವರ್ಷವೇ 452ರಲ್ಲಿ ಉತ್ತರ ಇಟಲಿಯನ್ನು ಪ್ರವೇಶಿಸಿ ಅಕ್ವಿಲಿಯ, ಪಡುವ ಪಟ್ಟಣಗಳನ್ನು ಸುಟ್ಟು ಬೂದಿಮಾಡಿದನು. ಮಿಲಾನ್ ನಗರವೂ ತನ್ನ ಐಶ್ವರ್ಯವನ್ನು ಈತನಿಗೆ ಒಪ್ಪಿಸಿತು. ಪೋಪನೊಂದಿಗೆ ಒಪ್ಪಂದವಾದುದರ ಫಲವಾಗಿ ದಾಳಿ ನಿಂತು ಶಾಂತಿ ಸ್ಥಾಪನೆಯಾಯಿತು.

ಈ ಶೂರನಿಗೆ ಸಾವು ಬಹು ವಿಚಿತ್ರರೀತಿಯಲ್ಲಿ ಬಂತೆಂದು ಹೇಳಲಾಗಿದೆ. 453ರಲ್ಲಿ ಇಲ್ಡಿಕೋ ಎಂಬಾಕೆಯನ್ನು ಮದುವೆಯಾದನೆಂದೂ ಅದಾದ ಮಾರನೆಯ ದಿನ ರಾತ್ರಿ ನಿದ್ರಾವಸ್ಥೆಯಲ್ಲಿಯೇ ನಿಧನನಾದನೆಂದೂ ವರದಿಯಾಗಿದೆ. (ಬಿ.ಎಸ್.ಎನ್.)

**ಅಟ್ಟರ್‌ಬರ್ಗನ ನಿಬಂಧನೆಗಳು :** ಹಲವಾರು ವಿಧದ ಮಣ್ಣುಗಳನ್ನು ವಿಂಗಡಿಸುವ ಮತ್ತು ಗುರುತಿಸುವ ಒಂದು ವಿಧಾನ. ಭೂಮಿಯ ಮೇಲ್ಪದರ ಒಳಗೊಂಡಿರುವ ಮಣ್ಣುಗಳು ಅನೇಕರೀತಿಯ ಭೌತಿಕರೂಪಗಳನ್ನೂ ವರ್ಣಗಳನ್ನೂ ಹೊಂದಿದ್ದರೂ ಅವುಗಳ ಯಾಂತ್ರಿಕ ಗುಣಗಳ ದೃಷ್ಟಿಯಿಂದ ಅವು ಕೆಲವೇ ವರ್ಗಗಳಿಗೆ ಸೇರುತ್ತವೆ. ಈ ಯಾಂತ್ರಿಕ ಗುಣ ವಿಂಗಡಣೆಯ ವಿಧಾನಗಳಲ್ಲಿ ಅಟ್ಟರ್‌ಬರ್ಗನ ನಿಬಂಧನೆಗಳ ಮೂಲಕ ವಿಂಗಡಿಸುವ ವಿಧಾನ ಮುಖ್ಯವಾದುದು. ಈ ನಿಬಂಧನೆಗಳಿಗೆ ಮಂದತೆ ಅಥವಾ ಸಾಂದ್ರತೆ ನಿಬಂಧನೆಗಳು ಎಂದೂ ಹೆಸರು. ಮಣ್ಣುಗಳ ಸಾಂದ್ರತೆ ಅವುಗಳಲ್ಲಿ ಸೇರಿರುವ ಜಲಪ್ರಮಾಣ, ಮಣ್ಣುಕಣಗಳ ಗಾತ್ರ ವಿನ್ಯಾಸ, ಮತ್ತು ಇತರ ರಾಸಾಯನಿಕ ಗುಣಗಳನ್ನು ಅವಲಂಬಿಸಿರುತ್ತದೆ. ಇವುಗಳಲ್ಲಿ ಜಲಪ್ರಮಾಣ ಮುಖ್ಯವಾದುದು. ಇದು ಹೆಚ್ಚಿದಂತೆಲ್ಲ ಮಣ್ಣು ಮೆದುವಾಗುತ್ತ ಕಡೆಗೆ ದ್ರವರೂಪಕ್ಕೆ ಬರುತ್ತದೆ; ಕಡಿಮೆಯಾದಂತೆಲ್ಲ ಕ್ರಮೇಣ ಗಡಸಾಗಿ ಕಡೆಗೆ ಘನರೂಪಕ್ಕೆ ಬರುತ್ತದೆ. ಅಟ್ಟರ್‌ಬರ್ಗ್ ಸೂಚಿಸಿರುವಂತೆ ಯಾವ ಜಲಪ್ರಮಾಣ ಮಣ್ಣನ್ನು ದ್ರವರೂಪ ಮತ್ತು ಅತ್ಯಂತ ಮೆದುರೂಪ ಇವುಗಳ ಮಧ್ಯಸ್ಥಿತಿಗೆ ತರುವುದೋ ಆ ಜಲಪ್ರಮಾಣಕ್ಕೆ ದ್ರವನಿಬಂಧನೆ ಎಂದೂ ಅತ್ಯಂತ ಮೆದುರೂಪ ಮತ್ತು ಸಾಧಾರಣ ಮೆದುರೂಪ ಇವುಗಳ ಮಧ್ಯಸ್ಥಿತಿಯ ಜಲಪ್ರಮಾಣಕ್ಕೆ ಮೆದುನಿಬಂಧನೆ ಎಂದೂ ಸಾಮಾನ್ಯ ಮೆದುರೂಪ ಮತ್ತು ಘನರೂಪ ಇವುಗಳ ಮಧ್ಯಸ್ಥಿತಿಯ ಜಲಪ್ರಮಾಣಕ್ಕೆ ಉಡುಗುನಿಬಂಧನೆ ಎಂದೂ ಕರೆಯಲಾಗುತ್ತಿದೆ. ಇವು ಮೂರೂ ಅಟ್ಟರ್‌ಬರ್ಗನ ನಿಬಂಧನೆಗಳು. ಪ್ರಯೋಗಶಾಲೆಗಳಲ್ಲಿ ಕಂಡುಹಿಡಿಯುವುದಕ್ಕೆ ಬೇಕಾಗುವ ಸಾಧನೆಗಳನ್ನೂ ಇವುಗಳಲ್ಲಿ ನಮೂದಿಸಲಾಗಿದೆ. ಅಟ್ಟರ್‌ಬರ್ಗನ ನಿಬಂಧನೆಗಳನ್ನು ಸೂಕ್ತವಾದ ರೀತಿಯಲ್ಲಿ ಉಪಯೋಗಿಸಿಕೊಂಡು ಆಯಾ ಮಣ್ಣುಗಳ ಯಾಂತ್ರಿಕ ಗುಣಗಳನ್ನು ಅಂದಾಜು ಮಾಡಬಹುದು. (ಕೆ.ಎಸ್.ಕೆ.)

**ಅಟ್ರೊಪೀನ್ :** ವೈದ್ಯಚಿಕಿತ್ಸೆಯಲ್ಲಿ ಬಳಸುವ ಹರಳಿನಂಥ ವಿಷಕಾರಕ ಕ್ಷಾರರೂಪಿ (ಆಲ್ಕಲಾಯ್ಡ್). ಇದರ ಬಳಕೆ ಮುಖ್ಯವಾಗಿ ಸುತ್ತಂಚಿನ (ಪೆರಿಫೆರಲ್) ಪ್ರಭಾವಗಳ ಮೇಲಿದೆ. ಕಣ್ಣೊಳಗಿನ ಅಕ್ಷಿಪಟಲ (ರೆಟೀನ) ಪರೀಕ್ಷಿಸಲೂ ಮಸೂರಕ್ಕೂ ಕರಿಯಾಲಿಗೂ ನಡುವೆ ಅಂಟಿಕೊಳ್ಳದಂತೆ ಇಲ್ಲವೇ ಅಂಟಿರುವುದನ್ನು ಬಿಡಿಸಲೂ ಇದರ ದ್ರಾವಣದ ತೊಟ್ಟುಗಳನ್ನು ಹಾಕುವುದು ಸಾಮಾನ್ಯ ಬಳಕೆಯಲ್ಲಿದೆ. ಉಬ್ಬಸದಲ್ಲಿ ಎದೆಸೆಳೆತವನ್ನು ತಗ್ಗಿಸಲು ಹಿಂದೆ ಬಳಕೆಯಲ್ಲಿತ್ತು ; ಈಗ ಅಡ್ರಿನಲೀನ್ ಬಂದಮೇಲೆ ಇಲ್ಲ. ಮೂಗಿನ ಇಲ್ಲವೇ ಕಣ್ಣೀರಿನ ಸುರಿಕೆಗಳನ್ನು ಸುಮ್ಮನೆ ಒಣಗಿಸುವುದರಿಂದಲೇ ಇದು ನೆಗಡಿ ಬೇನೆಯ ಲಕ್ಷಣಗಳನ್ನು ಶಮನಗೊಳಿಸುತ್ತದೆ.

ಉಪಾನುವೇದನ (ಪ್ಯಾರಾಸಿಂಪತೆಟಿಕ್) ಚೋದನೆಯಿಂದಾದ ಕರುಳಿನ ಸೆಡೆತಗಳನ್ನು ಅಟ್ರೊಪೀನ್ ಸಡಿಲಿಸುವುದರಿಂದ, ಕರುಳಿನ ನುಲಿತಗಳನ್ನು ತಗ್ಗಿಸುವ ಮದ್ದಾಗೂ ಅದೇ ಉದ್ದೇಶಕ್ಕಾಗಿ ಉಚ್ಚಾಟಿಕಗಳೊಂದಿಗೂ ಕೊಡುವುದುಂಟು. ಎಳೆಯ ಮಕ್ಕಳು ರಾತ್ರಿ ಹೊತ್ತು ಹಾಸಿಗೆ ಒದ್ದೆಗೊಳಿಸುವುದರ ಚಿಕಿತ್ಸೆಯಲ್ಲೂ ಕೆಲವೇಳೆ ಮೂತ್ರನಾಳದ, ಪಿತ್ತನಾಳದ ಸೆಡೆತಗಳನ್ನು ಕಳೆಯಲೂ ಬಳಕೆಗೆ ಬರುವುದು. ಅಟ್ರೊಪೀನನ್ನು ಹೊಂದಿರುವ ಬೆಲಡೊನ್ನ ಕ್ಷಾರರೂಪಿಗಳ ಕೇಂದ್ರದ ನರಮಂಡಲದ ಮೇಲಿನ ಪ್ರಭಾವಗಳಿಂದ, ಆ ಮಂಡಲದ ಕೆಲವು ರೋಗಗಳಲ್ಲಿ ಕೊಡುವುದಾದರೂ ಉಸಿರಾಟದ ಚೋದಕವಾಗಿ ಅಟ್ರೊಪೀನ್ ಈಗ ಬಳಕೆಯಲ್ಲಿಲ್ಲ.

ಅಟ್ರೊಪೀನನ್ನು ಕೊಟ್ಟಾಗ ಮೈಯಲ್ಲಿ ಎಲ್ಲೆಲ್ಲೂ ಅದರ ಪ್ರಭಾವ ಕಂಡುಬರುವುದೊಂದು ವೈದ್ಯಚಿಕಿತ್ಸೆಯಲ್ಲಿ ಅನಾನುಕೂಲ. ಇನ್ನೂ ಚೆನ್ನಾಗಿ ಖಚಿತವಾದ ಒಂದೋ ಎರಡೋ ಗುಣಗಳಿರುವ ಇದರ ಕೃತಕ ಬದಲಿಗಳ ತಯಾರಿಕೆಗಳು ಬರುತ್ತಿವೆ. ಹೀಗೆ ಬಂದವಲ್ಲಿ ಒಂದಾದ ಹೋಮಟ್ರೊಪೀನ್ ಕಣ್ಣಿಗೆ ಹಾಕಿದಾಗ, ಇದರ ಪ್ರಭಾವ ಬೇಗನೆ ಇಳಿಯುತ್ತದೆ. ಕೇಂದ್ರದ ನರಮಂಡಲದ ಮೇಲೆ ಪ್ರಭಾವ ಏನೂ ಇಲ್ಲವೆನ್ನಬಹುದು. ಅದೇ ಅಡಿಫೆನೀನ್, ಸಿಂಟ್ರೊಪಾನ್‌ಗಳಲ್ಲಿ, ಕಣ್ಣಿನ ಪಾಪೆಯಗಲಿಸದೆ, ಬಾಯೊಣಗಿಸದೆ, ಗುಂಡಿಗೆ ವೇಗಗೊಳಿಸದೆ, ಅಟ್ರೊಪೀನಿನ ಸೆಡೆತರೋಧಕ ಗುಣಗಳಿವೆ.

**ಔಷಧ ಗುಣಗಳು:** ಕೇಂದ್ರದ ನರಮಂಡಲವನ್ನು ಮೊದಲು ಚೋದಿಸಿ, ಆಮೇಲೆ ಕುಗ್ಗಿಸುವ ಕೇಂದ್ರದ ಪ್ರಭಾವ ಅಟ್ರೊಪೀನಿಗಿದೆ. ಆದರೂ ಉಪಾನುವೇದನ ನರಮಂಡಲದ ಮೇಲಿನ ಕುಗ್ಗಿಸುವ ವರ್ತನೆಯೇ ಈ ಮದ್ದಿನ ವಿಶಿಷ್ಟ ಗುಣ. ನರದ ಆವೇಗಗಳು ಕೆಲಸಾಗುವುದರಿಂದ ಉಪಾನುವೇದನ ನರತಂತುಗಳ ಕೊನೆಗಳಲ್ಲಿ ಅಸಿಟೈಲ್‌ಕೋಲೀನ್ ಬಿಡುಗಡೆಯಾಗಿ ಹೇಗೋ ಕೆಲಸಗಾರಿ ಜೀವಕಣವನ್ನು ಚೋದಿಸುವುದು.

ನರದ ಕೊನೆಯಲ್ಲಿ ಅಸಿಟೈಲ್‌ಕೋಲೀನ್ ತಯಾರಿಕೆಯಲ್ಲಿ ಅಟ್ರೊಪೀನ್ ಕೈ ಹಾಕದಿದ್ದರೂ ಅಂತೂ ಗ್ರಾಹಕ (ರಿಸೆಪ್ಟಾರ್) ಜೀವಕಣದ ಮೇಲೆ ಅದರ ಪ್ರಭಾವಕ್ಕೆ ಅಡ್ಡಿಯಾಗುತ್ತದೆ. ಅಂಗರಚನೆಯಲ್ಲಿ ಅನುವೇದನ ನರದ ಮಂಡಲಕ್ಕೆ ಸೇರಿದ್ದರೂ ಅದರ ನರ ಕೊನೆಗಳಲ್ಲಿ ನಾರಡ್ರಿನಲೀನ್‌ಗಿಂತಲೂ ಅಸಿಟೈಲ್‌ಕೋಲೀನೇ ಬಿಡುಗಡೆ ಆಗುವುದರಿಂದ ಮಾನವನ ಬೆವರಿನ ಗ್ರಂಥಿಗಳ ಸುರಿಕ ನರಗಳನ್ನು ಕುಗ್ಗಿಸುತ್ತದೆ. ಅನುವೇದನ, ಉಪಾನುವೇದನ ನರದ ಮಂಡಲಗಳು ಎರಡರ ನರಗಂಟುಗಳ (ಗ್ಯಾಂಗ್ಲಿಯಾನ್ಸ್) ನರಸಂಧಿಗಳಲ್ಲೂ (ಸೈನ್ಯಾಪ್ಸಸ್) ಅಸಿಟೈಲ್‌ಕೋಲೀನ್ ಬಿಡುಗಡೆ ಆಗುವುದಾದರೂ ಬಲು ದೊಡ್ಡ ಪ್ರಮಾಣಗಳಲ್ಲಿ ಕೊಟ್ಟ ಹೊರತು ಈ ಎಡೆಗಳಲ್ಲಿ ಆವೇಗಗಳ ಸಾಗಣೆಯನ್ನು ತಡೆಗಟ್ಟದು.

ಸುತ್ತಂಚಿನ ಪ್ರಭಾವಗಳಿಂದ ಆಗುವ ಅಟ್ರೊಪೀನಿನ ಗೊತ್ತಾದ ಪರಿಣಾಮಗಳಲ್ಲಿ ಬೆವರು, ಲೋಳೆ, ಜೊಲ್ಲು ಸುರಿಕೆಗಳೂ ಅಲೆಮಾರಿ (ವೇಗಸ್) ನರವನ್ನು ಕುಗ್ಗಿಸುವುದರಿಂದ ಆಗುವ ಗುಂಡಿಗೆಯ ಏರಿದ ವೇಗವೂ ಕಣ್ಣಪಾಪೆಯಗಲಿಕೆಯೊಂದಿಗೆ ನೋಟದ ಹೊಂದುವಳಿಯ (ಅಕಾಮಡೇಷನ್) ನಿಸ್ಸತ್ವತೆಯೂ ಪಂಗುಸಿರ್ನಾಳದ (ಬ್ರಾಂಕಿಯಲ್), ಕರುಳಿನ ಮತ್ತಿತರ ನಯಸ್ನಾಯುಗಳ ಸಡಿಲತೆಯೂ ಸೇರಿವೆ. ಉದ್ವೇಗ, ಸನ್ನಿ ಆಗಿ ಜಡತೆಯೂ ಮಿದುಳಕಾಂಡದ ನಿಸ್ಸತ್ವಕತೆಯೂ ಇದರ ಕೇಂದ್ರದ ಮೇಲಿನ ಪ್ರಭಾವಗಳಲ್ಲಿ ಸೇರಿವೆ.

**ವಿಷಗುಣಗಳು:** ಅಟ್ರೊಪೀನ್ ವಿಷವೇರಿದ ರೋಗಿಯ ಪಾಡನ್ನು ಸರಳವಾಗಿ ಹೀಗೆ ಹೇಳಬಹುದು : ಮೊಲದಂತೆ ಬಿಸಿ, ಬಾವಲಿಯಂತೆ ಕುರುಡು, ಎಲುಬಿನಂತೆ ಒಣಕಲು, ಬೀಟ್ ಗೆಡ್ಡೆಯಷ್ಟು ಕೆಂಪು, ಕೋಳಿಯಂತೆ ಹುಚ್ಚು. ಬೆವರುವುದು ಕುಗ್ಗಿ, ಚಡಪಡಿಕೆಯಿಂದ ಮೈ ಕಾವೇರುತ್ತದೆ; ಕಣ್ಣುಪಾಪೆ ಅಗಲವಾಗಿ ಹಿಗ್ಗಿ, ನೋಟ ಮಂಜಾಗುತ್ತದೆ ; ಚರ್ಮ ಬಿಸಿಯಾಗಿ ಒಣಕಲಾಗಿ ಕೆಂಪೇರಿ, ಕೆಂಜ್ವರವೇನೋ (ಸ್ಕಾರ್ಲೆಟ್ ಫೀವರ್) ಎಂಬಂತೆ ದದ್ದುಗಳು ಕಾಣಿಸಬಹುದು; ರೋಗಿ ಉದ್ರೇಕಗೊಂಡು ತಬ್ಬಿಬ್ಬಾಗಿ ಭ್ರಮೆಗೊಳ್ಳುವನು. ಹಲವೇಳೆ ರೋಗಿಯಲ್ಲಿ ನಡುಕ ಸನ್ನಿಯಂತೆ (ಡೆಲೀರಿಯಂ ಟ್ರೆಮೆನ್ಸ್) ಆಗುತ್ತದೆ. ಬಾಯಿಂದ ತೆಗೆದುಕೊಂಡಿದ್ದರೆ ಹೊಟ್ಟೆ ತೊಳೆವುದೇ ಚಿಕಿತ್ಸೆ. ಸೆಳವುಗಳನ್ನು ತಡೆಯಲು ಮಾರ್ಫೀನ್ ಚುಚ್ಚಿ ಹೋಗಿಸಬೇಕಾಗಬಹುದು. ಸುತ್ತಂಚಿನ ಲಕ್ಷಣಗಳನ್ನು ಪೈಲೊಕಾರ್ಪೀನ್ ಕೊಟ್ಟು ಅಡಗಿಸಬಹುದು. ಜಡತೆ, ಮಾಂದ್ಯಗಳಿಗೆ ಕೆಫೀನ್ ಮತ್ತಿತರ ಚೋದಕಗಳನ್ನು ಕೊಡಬಹುದು. ಕೃತಕ ಉಸಿರಾಟವೂ ಬೇಕಾಗಬಹುದು.

**ರಾಸಾಯನಿಕ ರಚನೆ :** ನಿಸರ್ಗದಲ್ಲಿ ಅಟ್ರೊಪೀನ್ ($CH_3.N.C_6H_{10}CH.O.CO.CH[C_6H_5]CH_2.OH$) ಸಾಕಷ್ಟು ಸಿಗದಿದ್ದರೂ ಲೀವೊ–ಹಯೊಸಯ ಮೀನ್‌ನಿಂದ ಪಡೆಯಬಹುದು, ಬೆಲಡೊನ್ನ (ಅಟ್ರೋಪ), ಕುರಾಸಾನಿ (ಹಯೊಸಯಮಸ್), ಉಮ್ಮತ್ತಿ (ದತ್ತೂರ) ಗಿಡಗಳಲ್ಲೂ ಇದು ದೊರೆಯತ್ತದೆ. ನೀರು ಬೆರೆಸಿದಾಗ ಮದ್ಯಸಾರದಿಂದ ಅಟ್ರೊಪೀನನ್ನು $114^o$–$116^o$ ಸೆಂ.ಗ್ರೇ.ನಲ್ಲಿ ವಿಲೀನ ಬಣ್ಣವಿರದ ಹರಳುಗಳಾಗಿ ಪಡೆಯಬಹುದು. ಮದ್ಯಸಾರ ಕ್ಲೋರೊಫಾರ್ಮ್‌ಗಳಲ್ಲಿ ಸರಾಗವಾಗಿ ವಿಲೀನವಾಗುವುದಾದರೂ ಈಥರಿನಲ್ಲಿ ಅಷ್ಟಾಗಿಲ್ಲ. ನೀರಿನಲ್ಲಿ ವಿಲೀನವಾಗದು.

ಕಚ್ಚಾ ಲೀವೊ–ಹಯಸಯಮೀನ್‌ನೊಂದಿಗೆ ತುಸು ಕ್ಷಾರವನ್ನು ಸೇರಿಸಿ ಅಟ್ರೊಪೀನನ್ನು ಗೊಂಚಲಿಕೆಯಿಂದ (ರೇಸಿಮೈಜೇಷನ್) ಪಡೆಯಬಹುದು. ಈಜಿಪ್ಟಿನ ಕುರಾಸಾನಿ ಇದಕ್ಕೆ ಒಳ್ಳೆಯದು. ಚೆನ್ನಾಗಿ ಹರಳಾಗುವ ಲವಣಗಳ ರೂಪದಲ್ಲಿ ಅಟ್ರೊಪೀನ್ ದೊರೆಯುವುದು. ವೈದ್ಯದಲ್ಲಿ ಹೆಚ್ಚಿನ ಬಳಕೆಯಲ್ಲಿರುವುದು ಇದರ ಸಲ್ಫೇಟು ಲವಣ. ಇದು ಉದ್ದನೆಯ ತೆಳ್ಳಗಿನ ಬಣ್ಣವಿರದ ಸೂಜಿಗಳಂತಿದ್ದು, ಗಾಳಿಗೆ ಸೋಕಿದರೆ ಪುಡಿಯಾಗುತ್ತದೆ. $194^o$ ಸೆಂ. ಗ್ರೇ. ನಲ್ಲಿ ವಿಲೀನವಾಗುವುದು. ಕೃತಕವಾಗಿ ಟ್ರೋಪೀನಿನ ಎಸ್ಟರಾಗಿ ಅಟ್ರೊಪೀನ್ ತಯಾರಾಗಿದೆ. ಇದನ್ನು ಉತ್ತಮಗೊಳಿಸುವ ಯತ್ನದಲ್ಲಿ ಹೋಮಟ್ರೊಪೀನೂ ಒಂದು. (ಎ.ಆರ್.ಜಿ.)

**ಅಟ್ಲಾಂಟಾ :** ಅಮೆರಿಕ ಸಂಯುಕ್ತಸಂಸ್ಥಾನದ ಜಾರ್ಜಿಯ ಪ್ರಾಂತದ ರಾಜಧಾನಿ; ಚಟ್ಟಹೂಚಿ ನದಿಯಿಂದ 13ಕಿಮೀ ದೂರದಲ್ಲಿದೆ. ಅನೇಕ ರಸ್ತೆಗಳೂ ರೈಲುಮಾರ್ಗಗಳೂ ವಿಮಾನಮಾರ್ಗಗಳೂ ಸಂಧಿಸುವ ಸ್ಥಳ; ಆದ್ದರಿಂದ ಕೈಗಾರಿಕೆಗಳ ಮತ್ತು ವಿದ್ಯೆಯಕೇಂದ್ರ ಆಗಿದೆ. ವಾಷಿಂಗ್‌ಟನ್ ಮತ್ತು ನ್ಯೂ ಆರ್ಲಿಯನ್ಸ್ ಪಟ್ಟಣಗಳ ಮಧ್ಯದಲ್ಲಿರುವುದರಿಂದಲೂ ಇಲ್ಲಿಂದ ಅಲಬಾಮ, ಟೆನ್ನೆಸಿ, ದಕ್ಷಿಣ ಕೆರೋಲಿನ ಮತ್ತು ಫ್ಲಾರಿಡಗಳ ನೈಸರ್ಗಿಕ ಉತ್ಪಾದನೆಗಳಿಗೆ ಸಂಪರ್ಕಸಾಧನಗಳಿರುವುದರಿಂದಲೂ ಇದರ ಪ್ರಾಮುಖ್ಯ ಹೆಚ್ಚಾಗಿ ಬೆಳೆದಿದೆ. ಜನಸಂಖ್ಯೆ: 41,12,198 (2000)

ಹಿಂದಿನ ಪಟ್ಟಣದ ಹೆಚ್ಚು ಭಾಗ 1866ರಲ್ಲಿ ಜರ್ಮನ್ ದಾಳಿಯಿಂದ ನಾಶವಾದುದರಿಂದ, ಈಗ ಅಲ್ಲಿ ಆಧುನಿಕ ಕಟ್ಟಡಗಳೂ ಉತ್ತಮ ರಸ್ತೆಗಳೂ ಕಂಡು ಬರುತ್ತವೆ. ಈ ಪಟ್ಟಣಕ್ಕೆ ಚಟ್ಟಹೂಚಿ ನದಿಯಿಂದ ನೀರನ್ನು ಪೂರೈಸಲಾಗಿದೆ. ಇದರ ವಾಣಿಜ್ಯ ದೇಶದ ಆಗ್ನೇಯ ಪ್ರದೇಶವನ್ನೆಲ್ಲ ವ್ಯಾಪಿಸಿದೆ. ಜಾರ್ಜಿಯಲ್ಲೆ ಅತಿ ದೊಡ್ಡ ಆಧುನಿಕ ನಗರ. ಆಕರ್ಷಣೀಯ ಗೋಪುರಗಳು, ಹೋಟೆಲ್ ಮತ್ತು ಕಛೇರಿಕಟ್ಟಡಗಳಿವೆ. ವಿಮಾನ ನಿಲ್ದಾಣ, ವಿವಿಧ ಕೈಗಾರಿಕೆಗಳು ಅಭಿವೃದ್ಧಿಗೊಂಡಿದೆ. ಉದಾ: ರಾಸಾಯನಿಕ, ಉದ್ದಿಮೆ, ಕಾಗದ, ಉಕ್ಕು, ಪೀಠೋಪಕರಣ ಮತ್ತು ಹಿಟ್ಟಿನ ಗಿರಣಿಗಳು. ಕೋಕೊಕೋಲಾ ಪ್ರಾರಂಭವಾದದ್ದು ಈ ನಗರದಲ್ಲೆ. (ಎ.ಆರ್.)

**ಅಟ್ಲಾಂಟಿಕ್ ಸನ್ನದು :** ವಿಶ್ವಸಂಸ್ಥೆಯನ್ನು ಸ್ಥಾಪಿಸಲು ಪ್ರಪಂಚದ ಅನೇಕ ರಾಷ್ಟ್ರಗಳೂ ಅವುಗಳ ನಾಯಕರೂ ನಡೆಸಿದ ಅನೇಕ ಪ್ರಯತ್ನಗಳಲ್ಲಿ ಈ ಸನ್ನದು ಬಹು ಮುಖ್ಯವಾದ ಒಂದು ಮೈಲಿಗಲ್ಲಾಗಿ ಪರಿಗಣಿಸಲಾಗಿದೆ. ಅದು ಈಗಿನ ವಿಶ್ವಸಂಸ್ಥೆಯ ಅಡಿಗಲ್ಲೆಂದೇ ಹೇಳಬಹುದು. ಈ ಸನ್ನದು 1941 ಆಗಸ್ಟ್ 14ನೆಯ ತಾರೀಖು ಪ್ರಪಂಚದ ಎರಡು ಮುಖ್ಯ ರಾಷ್ಟ್ರಗಳಾದ ಅಮೆರಿಕ ಸಂಯುಕ್ತಸಂಸ್ಥಾನಗಳು ಮತ್ತು ಇಂಗ್ಲೆಂಡ್ ದೇಶಗಳಿಂದ ಪ್ರಕಟಿಸಲಾಯಿತು. ಸಂಯುಕ್ತಸಂಸ್ಥಾನಗಳ ಪರವಾಗಿ ಆಗಿನ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ರೂಸ್ವೆಲ್ಟರೂ ಇಂಗ್ಲೆಂಡ್ ದೇಶದ ಪರವಾಗಿ ಆಗಿನ ಮಹಾ ಪ್ರಧಾನಿಗಳಾಗಿದ್ದ ವಿನ್‌ಸ್ಟನ್ ಚರ್ಚಿಲರೂ ಉತ್ತರ ಅಟ್ಲಾಂಟಿಕ್‌ನಲ್ಲಿ ಒಂದು ಯುದ್ಧದ ಹಡಗಿನಲ್ಲಿ ಸಂಧಿಸಿ ಒಂದು ತೀರ್ಮಾನಕ್ಕೆ ಬಂದಾದಮೇಲೆ ಅವರಿಬ್ಬರ ಹೆಸರಿನಲ್ಲಿ ಈ ಸನ್ನದನ್ನು ಪ್ರಕಟಿಸಲಾಯಿತು. ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೂ ವಿಶ್ವದಲ್ಲಿ ಯುದ್ಧಗಳನ್ನು ತಡೆಗಟ್ಟುವುದಕ್ಕೂ ವಿಶ್ವಸಂಸ್ಥೆಯನ್ನು ಸ್ಥಾಪಿಸುವುದಕ್ಕೂ ಮತ್ತು ವಿಶ್ವದ ಭವಿಷ್ಯದ ಏಳಿಗೆಗೂ ಪ್ರಯತ್ನಿಸಬೇಕೆಂದು ಎರಡು ರಾಷ್ಟ್ರಗಳೂ ಈ ಕೆಲವು ತತ್ತ್ವಗಳನ್ನು ಪಾಲಿಸಬೇಕೆಂದು ಒಪ್ಪಿಕೊಳ್ಳಲಾಯಿತು.

1. ಎರಡು ರಾಷ್ಟ್ರಗಳೂ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಸ್ವಪ್ರತಿಷ್ಠೆಯಿಂದ ಪ್ರಾದೇಶಿಕ ವಿಸ್ತರಣೆಗೆ ಪ್ರಯತ್ನಿಸಬಾರದು. 2. ಯಾವುದೇ ಒಂದು ದೇಶದ ಜನಗಳ ಅಭಿಲಾಷೆಗೆ ವಿರುದ್ಧವಾಗಿ ಪ್ರಾದೇಶಿಕ ಬದಲಾವಣೆಗಳಾವುದೂ ಆಗಕೂಡದು. ಅಂಥ ಬದಲಾವಣೆಗಳಿಗೆ ಎರಡು ದೇಶಗಳೂ ಉತ್ತೇಜನ ಕೊಡುವುದಿಲ್ಲ. 3. ಎಲ್ಲ ರಾಷ್ಟ್ರಗಳ ಜನರೂ ತಮಗೆ ಯಾವ ವಿಧವಾದ ಸರ್ಕಾರ ಬೇಕೊ ಅಂಥದನ್ನು ರಚಿಸಿಕೊಳ್ಳುವುದನ್ನು ಮತ್ತು ಅವರ ಹಕ್ಕುಗಳನ್ನು ಕಾಪಾಡಿಕೊಳ್ಳುವುದನ್ನು ಎರಡು ರಾಷ್ಟ್ರಗಳೂ ಗೌರವಿಸುತ್ತವೆ. 4. ಎಲ್ಲ ರಾಷ್ಟ್ರಗಳ ವಾಣಿಜ್ಯ ವ್ಯಾಪಾರಗಳ ಮತ್ತು ಆರ್ಥಿಕ ಅಭಿವೃದ್ಧಿಗೂ ಎರಡು ರಾಷ್ಟ್ರಗಳೂ ಪ್ರಯತ್ನಿಸುತ್ತವೆ. 5. ಎರಡು ರಾಷ್ಟ್ರಗಳು ಎಲ್ಲ ರಾಷ್ಟ್ರಗಳ ಸಾಮಾಜಿಕ ಭದ್ರತೆ, ಆರ್ಥಿಕ ಅಭಿವೃದ್ಧಿ ಮತ್ತು ಜನರ ಜೀವನಮಟ್ಟ ಹೆಚ್ಚಿಸಲು ಶ್ರಮಿಸುತ್ತವೆ. 6. ವಿಶ್ವದಲ್ಲಿ ಶಾಂತಿಯನ್ನು ಏರ್ಪಡಿಸಿ, ಜನಗಳನ್ನು ಯುದ್ಧಭೀತಿಯಿಂದ ಮತ್ತು ಸಾಮಾನ್ಯ ಕೊರತೆಗಳಿಂದ ಪಾರುಮಾಡಲು ಎರಡು ರಾಷ್ಟ್ರಗಳೂ ಕೆಲಸ ಮಾಡುತ್ತವೆ. 7. ಸಮುದ್ರಯಾನದ ಹತೋಟಿ ಯಾವ ಒಂದು ರಾಷ್ಟ್ರದ ಹಕ್ಕಲ್ಲ. ಪ್ರಪಂಚದ ಎಲ್ಲ ರಾಷ್ಟ್ರಗಳ ಜನರೂ ವಿಶ್ವದ ಯಾವ ಭಾಗಕ್ಕಾದರೂ ಹೋಗುವಂತೆ ಅವಕಾಶ ಕಲ್ಪಿಸಲು ಎರಡು ರಾಷ್ಟ್ರಗಳೂ ಸಹಾಯಮಾಡುತ್ತವೆ. 8. ಯುದ್ಧವನ್ನೂ ಆಕ್ರಮಣ ಭೀತಿಯನ್ನುಂಟು ಮಾಡುವುದನ್ನೂ ಸಾರ್ವತ್ರಿಕವಾಗಿ ನಿಷೇಧಿಸುವುದಲ್ಲದೆ ಪ್ರಪಂಚದ ಯಾವ ರಾಷ್ಟ್ರವೂ ಬಲಪ್ರಯೋಗ ಮಾಡದಂತೆ ಎರಡು ರಾಷ್ಟ್ರಗಳೂ ನೋಡಿಕೊಳ್ಳುತ್ತವೆ.

ಈ ಮೇಲಿನ ಎಂಟು ತತ್ತ್ವಗಳು ಅಟ್ಲಾಂಟಿಕ್ ಸನ್ನದಿನಲ್ಲಿ ಸೇರಿವೆ. ಇವು ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ಬಹು ಮುಖ್ಯವಾಗಿವೆ. ಆದುದರಿಂದ ಅಂತಾರಾಷ್ಟ್ರೀಯ ರಾಜಕೀಯ ಕ್ಷೇತ್ರದಲ್ಲಿ ಅಟ್ಲಾಂಟಿಕ್ ಸನ್ನದಿಗೆ ಒಂದು ಮುಖ್ಯವಾದ ಸ್ಥಾನ ಏರ್ಪಟ್ಟಿದೆ. (ಎಂ.ಕೆ.ಆರ್.)

**ಅಟ್ಲಾಂಟಿಕ್ ಸಾಗರ :** ಭೂಮಿಯ ವಿಸ್ತೀರ್ಣದಲ್ಲಿ ಶೇ.20 ಪ್ರದೇಶವನ್ನು ಆವರಿಸಿರುವ. ಇದು ದೊಡ್ಡ ಮಹಾಸಾಗರಗಳಲ್ಲಿ ಎರಡನೆಯದು. ಇದು ಉತ್ತರದಲ್ಲಿ ಗ್ರೀನ್‌ಲೆಂಡ್ ಐಸ್‌ಲೆಂಡ್ ಪ್ರದೇಶದಿಂದ ದಕ್ಷಿಣದಲ್ಲಿ ಬೋವೆಟ್ ದ್ವೀಪದವರೆಗೆ ವ್ಯಾಪಿಸಿದೆ. ಪೂರ್ವಕ್ಕೆ ಯುರೋಪು, ಆಫ್ರಿಕ ಖಂಡಗಳು, ಪಶ್ಚಿಮಕ್ಕೆ ಉತ್ತರ, ದಕ್ಷಿಣ ಅಮೆರಿಕ ಖಂಡಗಳೂ ಇವೆ. ವಿಸ್ತೀರ್ಣ 82,440,000 ಚ.ಕಿಮೀ. ಈ ಸಾಗರಕ್ಕೆ ಸೇರಿದ ಅನೇಕ ಸಮುದ್ರಗಳೊಡನೆ ಇದರ ಒಟ್ಟು ವಿಸ್ತೀರ್ಣ ಸುಮಾರು 106,450,000 ಚ.ಕಿಮೀ. ಮೆಕ್ಸಿಕೊ ಆಖಾತ, ಉತ್ತರ ಸಮುದ್ರ, ಬಾಲ್ಟಿಕ್ ಸಮುದ್ರ, ಮೆಡಿಟರೇನಿಯನ್ ಸಮುದ್ರ, ಕೆರಿಬಿಯನ್ ಸಮುದ್ರ, ಸ್ಕಾಷಿಯ ಸಮುದ್ರ ಮುಂತಾದವು ಈ ಸಾಗರದ ಶಾಖೆಗಳು. ಇದಕ್ಕಲ್ಲದೆ ಬೇರಾವ ಸಾಗರಕ್ಕೂ ಅಷ್ಟೊಂದು ದೊಡ್ಡ ನದಿಗಳು ಬಂದು ಸೇರುವುದಿಲ್ಲ. ಈ ಸಾಗರದ ಮೂಲಕ ಸಮಭಾಜಕವೃತ್ತ ಹಾದು ಹೋಗುವುದರಿಂದ, ಇದನ್ನು ಉತ್ತರ ಅಟ್ಲಾಂಟಿಕ್ ಮತ್ತು ದಕ್ಷಿಣ ಅಟ್ಲಾಂಟಿಕ್ ಎಂದು ವಿಭಾಗಿಸಲಾಗಿದೆ.

ಅಟ್ಲಾಂಟಿಕ್ ಸಾಗರದ ಸರಾಸರಿ ಆಳ 3,330 ಕಿಮೀ. ದಕ್ಷಿಣ ಅಟ್ಲಾಂಟಿಕ್ ಸಾಗರ ಹೆಚ್ಚು ಆಳವಾಗಿದೆ. ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಖಂಡಾವರಣ ಪ್ರದೇಶ ಹೆಚ್ಚಾಗಿರುವುದರಿಂದ ಆಳ ಕಡಿಮೆ. ಅಟ್ಲಾಂಟಿಕ್ ಸಾಗರದ ಮಧ್ಯದಲ್ಲಿ ಐಸ್‌ಲೆಂಡ್‌ನಿಂದ ದಕ್ಷಿಣದಲ್ಲಿರುವ ಬೊವೆಟ್ ದ್ವೀಪದವರೆಗೆ ಹಾವಿನಾಕಾರದ ಮಧ್ಯ ಅಟ್ಲಾಂಟಿಕ್ ಶ್ರೇಣಿ ಎಂಬ ಜಲಾಂತರ್ಗತ ಪರ್ವತದ ಸಾಲು ಇದೆ. ಇದರ ಮೇಲೆ ಸುಮಾರು 2745ಕಿಮೀ ನೀರಿದೆ. ಸಮಭಾಜಕವೃತ್ತ ಹಾದುಹೋಗುವ ಭಾಗದಲ್ಲಿ ರೊಮಾಚ್ ಫೆರ್‍ರೊ ಎಂಬ ಕಣಿವೆಯುಂಟು. ಇದರ ಆಳ 4572ಕಿಮೀ ಉತ್ತರಕ್ಕಿರುವ ಶ್ರೇಣಿಯ ಭಾಗಕ್ಕೆ ಡಾಲ್ಫಿನ್ ಶ್ರೇಣಿ ಎಂದೂ, ದಕ್ಷಿಣದ ಶ್ರೇಣಿಗೆ ಛಾಲೆಂಜರ್ ಶ್ರೇಣಿಯೆಂದೂ ಹೆಸರು. ಈ ಮಧ್ಯಶ್ರೇಣಿಯ ಮುಳುಗದಿರುವ ಭಾಗ ಅಝೋರ್ಸ್, ಸೇಂಟ್ ಪಾಲ್, ಅಸೆನ್ಷಿಯನ್, ಸೇಂಟ್ ಹೆಲಿನಾ, ಟ್ರಿಸ್ಟಾನ್ ಡ ಕೂನ್ಯಾ, ಗಾಫ್, ಬೋವೆಟ್ ಮುಂತಾದ ದ್ವೀಪಗಳಂತೆ ಕಾಣುವುದು. ಈ ಶ್ರೇಣಿಯಿಂದ ಪೂರ್ವಕ್ಕೂ ಪಶ್ಚಿಮಕ್ಕೂ ಕೆಲವು ಶ್ರೇಣಿಗಳ ಶಾಖೆಗಳಿವೆ. ವಾಲ್ವಿಸ್ ರಿಡ್ಜ್ ಎಂಬುದು ಪೂರ್ವದ ಕಡೆಗೆ $20^{o}$ ದ. ಅಕ್ಷಾಂಶದ ಭಾಗದಲ್ಲಿ ಆಫ್ರಿಕದತ್ತ ಹಬ್ಬಿದೆ. ರಯೋಗ್ರ್ಯಾಂಡ್ ರೈಜ್ ಎಂಬುದು ಪಶ್ಚಿಮದಲ್ಲಿ ದಕ್ಷಿಣ ಅಮೆರಿಕದ ಕಡೆಗೆ $30^{0}$ ದ. ಅಕ್ಷಾಂಶದವರೆಗೆ ಹಬ್ಬಿದೆ. ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ವೈವಿಲೆ ಥಾಮ್ಸನ್ ರಿಡ್ಜ್ ಮತ್ತು ಸೇಂಟ್ ವಿನ್ಸೆಂಟ್ ರೈಜ್ ಎಂಬ ಶ್ರೇಣಿಗಳು ಪೂರ್ವದ ಕಡೆಗೆ ಹಬ್ಬಿವೆ. ಈ ಎಲ್ಲ ಶ್ರೇಣಿಗಳೂ ಈ ಸಾಗರವನ್ನು ಬ್ರೆಜ಼ಿಲ್, ಅರ್ಜೆಂಟೀನ, ಅಂಗೋಲ, ಕೇಪ್ ದ್ರೋಣಿಗಳೆಂದೂ ಉತ್ತರ ಅಮೆರಿಕದ ಹತ್ತಿರದ ಕೇಪ್ ವರ್ಡೆ ದ್ರೋಣಿ, ಗಿನಿಯಾ ದ್ರೋಣಿಗಳೆಂದೂ ವಿಭಾಗಿಸಿದ್ದಾರೆ. ವೆಸ್ಟ್‌ಇಂಡೀಸ್ ದ್ವೀಪಗಳಿರುವ ಕರಿಬ್ಬಿಯನ್ ಸಮುದ್ರ ಅಟ್ಲಾಂಟಿಕ್ ಸಾಗರದ ಉಪಸಮುದ್ರ.

ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ 1,600ಕಿಮೀ ಅಗಲವುಳ್ಳ ಕೇವಲ 366ಕಿಮೀ ಆಳದಲ್ಲಿರುವ ವಿಶಾಲವಾದ ಟೆಲಿಗ್ರಾಫ್ ಜಲಾಂತರ ಪ್ರಸ್ಥಭೂಮಿಯಿದೆ. ಇದು ಉತ್ತರ ಬ್ರಿಟನ್ನಿನಿಂದ ಗ್ರೀನ್‌ಲೆಂಡ್ ಮತ್ತು ಲ್ಯಾಬ್ರಡಾರ್ ಪ್ರದೇಶಗಳವರೆಗೆ ಹಬ್ಬಿದೆ. ಈ ಸಾಗರದಲ್ಲಿ ಪೋರ್ಟೊರಿಕೋ (9,220ಕಿಮೀ), ದಕ್ಷಿಣ ಸ್ಯಾಂಡ್‌ವಿಚ್ (8,264ಕಿಮೀ), ನಾರೆಪ್ (6,995ಕಿಮೀ) ಎಂಬ ಆಳವಾದ ಕೂಪ (ತಗ್ಗು) ಭಾಗಗಳಿವೆ.

ಈ ಸಾಗರದಲ್ಲಿ ಪಶ್ಚಿಮ ಯುರೋಪ್, ಉತ್ತರ ಅಮೆರಿಕದ ಈಶಾನ್ಯಭಾಗ, ಮೆಕ್ಸಿಕೊ ಕೊಲ್ಲಿ–ಈ ಭಾಗಗಳು ವಿಶಾಲವಾದ ಖಂಡಾವರಣ ಪ್ರದೇಶಗಳು.

ಅಟ್ಲಾಂಟಿಕ್ ಸಾಗರದಲ್ಲಿ ಗಿನಿ ಆಖಾತದಿಂದ ಮೆಕ್ಸಿಕೊ ಆಖಾತದವರೆಗಿರುವ ಪ್ರದೇಶದಲ್ಲಿ ಅಧಿಕ ಉಷ್ಣತೆ ಇದೆ. ಉತ್ತರದಲ್ಲಿ ಗ್ರೀನ್‌ಲೆಂಡಿನ ಹತ್ತಿರವೂ $40^{o}$ ದ ಅಕ್ಷಾಂಶದ ದಕ್ಷಿಣ ಭಾಗದಲ್ಲೂ ಅತಿ ಶೀತಭಾಗಗಳಿವೆ. ಈ ಸಾಗರದಲ್ಲಿ ಸಮಭಾಜಕವೃತ್ತಪ್ರದೇಶದಲ್ಲಿರುವ ಸಾರ್ಗಾಸೋ ಸಮುದ್ರವೆಂಬ ಭಾಗದಲ್ಲಿ ಸಮುದ್ರಪಾಚಿ ಮುಂತಾದ ಸಸ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ವಾಯವ್ಯ ಭಾಗದಲ್ಲಿ ದಟ್ಟವಾದ ಮಂಜು ಕವಿದಿರುವುದು ಇನ್ನೊಂದು ವಿಶೇಷ ಅಂಶ.

ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಗಿನಿ ಪ್ರವಾಹ, ಗಯಾನಾಪ್ರವಾಹ, ಫ್ಲಾರಿಡಾ, ಗಲ್ಫ್‌ಸ್ಟ್ರೀಮ್ (ಉಷ್ಣ), ಉತ್ತರ ಅಟ್ಲಾಂಟಿಕ್ ಪ್ರವಾಹ, ಕ್ಯಾನರೀಸ್ ಪ್ರವಾಹಗಳೂ ಗ್ರೀನ್‌ಲೆಂಡ್ ಮತ್ತು ಲ್ಯಾಬ್ರಡಾರ್ (ಶೀತ) ಪ್ರವಾಹಗಳೂ ಕಂಡುಬರುವುವು. ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿ ಬ್ರೆಜ಼ಿಲ್ ಪ್ರವಾಹ, ದಕ್ಷಿಣ ಪ್ರವಾಹ, ಬೆಂಗ್ವೆಲ್ಲಾ ಪ್ರವಾಹಗಳು ಅಪ್ರದಕ್ಷಿಣೆಯಾಗಿ ಹರಿಯುವುವು. ಸಮಭಾಜಕವೃತ್ತದ ಭಾಗದಲ್ಲಿ ಒಂದು ಪ್ರತಿ ಪ್ರವಾಹ ಪೂರ್ವದ ಕಡೆಗೆ ಚಲಿಸುತ್ತದೆ. ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಆಗಾಗ್ಗೆ ಆವರ್ತ ಮಾರುತ(ಸೈಕ್ಲೋಸ್) ಗಳುಂಟಾಗಿ ಬಿರುಗಾಳಿಗಳುಂಟಾಗುತ್ತವೆ. ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿ $40^{0}$ ದ. ಅಕ್ಷಾಂಶದ ಭಾಗದಲ್ಲಿ ಮಾತ್ರ ಬಿರುಗಾಳಿಗಳು ಬೀಸುವುವು.

ಅಟ್ಲಾಂಟಿಕ್ ಸಾಗರದಲ್ಲಿರುವ ಗ್ರ್ಯಾಂಡ್ ಬ್ಯಾಂಕ್ಸ್, ಬಹಾಮಾ ಬ್ಯಾಂಕ್ಸ್, ಜಾರ್ಜ್ ಬ್ಯಾಂಕ್ಸ್, ಸ್ಕಾಷಿಯ ಪ್ರದೇಶ, ಐರಿಷ್ ಸಮುದ್ರ, ಉತ್ತರ ಸಮುದ್ರ, ದಕ್ಷಿಣ ಆಫ್ರಿಕದ ನೈರುತ್ಯಭಾಗ–ಇವು ಮೀನುಗಾರಿಕೆಯ ಮುಖ್ಯ ಜಲಪ್ರದೇಶಗಳು. ಈ ಸಾಗರ ಪ್ರಪಂಚದ ಮುಖ್ಯ ವಾಣಿಜ್ಯ ಹೆದ್ದಾರಿಯಾಗಿವೆ. ಪ್ರಪಂಚದ ಪ್ರಮುಖ ಸಾಗರ ಮಾರ್ಗಗಳಲ್ಲಿ ಉತ್ತರ ಅಟ್ಲಾಂಟಿಕ್ ಸಾಗರ ಮಾರ್ಗದಲ್ಲಿ ಹೆಚ್ಚಾಗಿ ಹಡಗುಗಳು ಸಂಚರಿಸುತ್ತವೆ. (ಎ.ಕೆ.)

**ಅಟ್ಲಾಸ್ ಪರ್ವತಗಳು :** ಆಫ್ರಿಕದ ವಾಯವ್ಯತೀರಕ್ಕೆ ಸಮಾಂತರವಾಗಿ 1,500 ಕಿಮೀ ವಿಸ್ತಾರವಾಗಿ ಮೊರಾಕೊ ಆಲ್ಜೀರಿಯ ಟ್ಯುನಿಸಿಯಗಳ ಮುಖಾಂತರ ಹಾದುಹೋಗುತ್ತವೆ. ಇದರ ಉತ್ತರಕ್ಕೆ ಮೆಡಿಟರೇನಿಯನ್ ಸಮುದ್ರವೂ ದಕ್ಷಿಣಕ್ಕೆ ಸಹರ ಮರುಭೂಮಿಯೂ ಇವೆ. ಮುಖ್ಯಶ್ರೇಣಿ ಮಧ್ಯಸ್ಥಾನದಲ್ಲಿದೆ. ಸರಾಸರಿ ಎತ್ತರ 1100 ಅಡಿ ವರ್ಷದ ಹೆಚ್ಚುಕಾಲ ಇಲ್ಲಿಯ ಶಿಖರಗಳು ಹಿಮದಿಂದ ಕೂಡಿರುತ್ತವೆ. ಉತ್ತರದ ಹಾಗೂ ಶಿಖರಗಳ ಇಳಿಜಾರಿನ ಭಾಗಗಳು ದಟ್ಟವಾದ ಕಾಡುಗಳಿಂದ ಕೂಡಿವೆ.

ಈ ಪರ್ವತಗಳನ್ನು ಎರಡು ಮುಖ್ಯ ಶ್ರೇಣಿಗಳನ್ನಾಗಿ ವಿಂಗಡಿಸಬಹುದು : 1. ಸೆಂಟಾ ದಿಂದ ಟಾನ್ ಭೂಶಿರದವರೆಗೆ ಹರಡಿರುವ ಸಾಗರಿಕ ಶ್ರೇಣಿ 2. ಘಿರ್ ಭೂಶಿರದಿಂದ ದಕ್ಷಿಣತೀರಕ್ಕೆ ಹರಡಿರುವ ಒಳ ಹಾಗೂ ಹೆಚ್ಚು ಎತ್ತರದ ಶ್ರೇಣಿ. ಇಲ್ಲಿಯ ಗಣಿಗಳಲ್ಲಿ ಫಾಸ್ಫೇಟುಗಳು ಹೇರಳವಾಗಿ ಸಿಗುತ್ತವೆ. (ಎಂ.ಎಸ್.ಎಂ.)

**ಅಟ್ಲಿ, ಕ್ಲೆಮೆಂಟ್ ಆರ್ :** ಇಂಗ್ಲೆಂಡಿನ ಪ್ರಧಾನಿಯಾಗಿದ್ದ ಕಾರ್ಮಿಕ ಮುಖಂಡ. ಮಧ್ಯಮವರ್ಗದ ಮನೆತನವೊಂದರಲ್ಲಿ ಹುಟ್ಟಿ ಹೆಸರಾಂತ ಹೇಲ್‌ಬರಿ ಕಾಲೇಜು, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗಮಾಡಿ ಆಧುನಿಕ ಇತಿಹಾಸದಲ್ಲಿ ಪದವೀಧರರಾದರು. ಕಾನೂನನ್ನು ಅಭ್ಯಾಸಮಾಡಿ 1905ರಲ್ಲಿ ವಕೀಲರಾದರು. ಮುಂದೆ 4ವರ್ಷ ವಕೀಲಿ ವೃತ್ತಿಯ ಸಮಯದಲ್ಲಿ ಹೇಲ್‌ಬರಿಯ ಸಾಮಾಜಿಕ ಪರಿಸ್ಥಿತಿಯನ್ನು ಪ್ರತ್ಯಕ್ಷಕಂಡು ಅವರ ದಾರಿದ್ರ್ಯವನ್ನು ಅರಿತುಕೊಂಡರು. ಒಂದನೆಯ ಮಹಾಯುದ್ಧದಲ್ಲಿ ಒಂದು ವರ್ಷ ಸೇನಾಸೇವೆ ಸಲ್ಲಿಸಿ 1922ರ ತನಕ ದೀನದಲಿತರ ಉದ್ಧಾರದಲ್ಲಿ ತೊಡಗಿದರು. 1913ರಲ್ಲಿ ಲಂಡನ್ ವಿಶ್ವವಿದ್ಯಾನಿಲಯದ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಸಮಾಜ ವಿಜ್ಞಾನದ ಅಧ್ಯಾಪಕರಾಗಿ ಸೇರಿ 1923ರ ತನಕ ಸೇವೆಸಲ್ಲಿಸಿದರು. ಒಂದನೆಯ ಮಹಾಯುದ್ಧ ದಲ್ಲಿ ಭಾಗವಹಿಸಿದ ಅನಂತರ ಫ್ರಾನ್ಸಿಗೆ ಮರಳಿ ಅಲ್ಲಿ ಮೇಜರ್ ಹುದ್ದೆಗೇರಿದರು.

1913ರಲ್ಲಿ ಲಂಡನ್ನಿನ ಪೂರ್ವದ ಕೊನೆಗಿರುವ ಸ್ಟೆಪ್ನೆಯ ಮೇಜರ್ ಆದ ಅಟ್ಲಿ 1921ರಲ್ಲಿ ಲೇಮ್ ಹೌಸಿನಿಂದ ಪಾರ್ಲಿಮೆಂಟ್ ಸದಸ್ಯರಾಗಿ ಆರಿಸಿಬಂದರು. 1923ರಲ್ಲಿ ಮರಳಿ ಕಾಮನ್ಸ್ ಸಭೆಗೆ ಆರಿಸಿಬಂದು 1924ರಲ್ಲಿ ರಾಮಸೇ ಮೆಕ್‌ಡೋನಾಲ್ಡ್ ಮೊದಲಬಾರಿಗೆ ರಚಿಸಿದ ಕಾರ್ಮಿಕಪಕ್ಷದ ಮಂತ್ರಿಮಂಡಲದಲ್ಲಿ ಯುದ್ಧಖಾತೆಯ ಕಾರ್ಯದರ್ಶಿಯಾಗಿ ಕೆಲಸಮಾಡಿದರು. 1927–28ರಲ್ಲಿ ಭಾರತ ಮತ್ತು ಬರ್ಮಾಗಳಲ್ಲಿ ಅಧಿಕಾರಿಯಾಗಿದ್ದು 1929ರಲ್ಲಿ ಮತ್ತೆ ಕಾರ್ಮಿಕಪಕ್ಷದ ಆಡಳಿತವನ್ನು ವಹಿಸಿಕೊಂಡರು. 1931ರ ಮೆಕ್‌ಡೋನಾಲ್ಡ್ ಇವರನ್ನು ಪೋಸ್ಟ್‌ಮಾಸ್ಟರ್ ಜನರಲ್ ಆಗಿ ನೇಮಿಸಿದರು. 1932ರಲ್ಲಿ ಮತ್ತೆ ಕಾರ್ಮಿಕಪಕ್ಷ ಪರಾಭವಗೊಂಡಿತು. ಅಟ್ಲಿ ಕಾಮನ್ಸ್ ಸಭೆಯಲ್ಲಿ ತಮ್ಮ ಸ್ಥಾನವನ್ನುಳಿಸಿಕೊಂಡು 1935ರಲ್ಲಿ ಕಾರ್ಮಿಕಪಕ್ಷದ ನಾಯಕರಾದರು.

ಎರಡನೆಯ ಮಹಾಯುದ್ಧಾವಧಿಯಲ್ಲಿ ಚರ್ಚಿಲ್ಲರ ಸಂಯುಕ್ತಮಂತ್ರಿಮಂಡಲದ ಲಾರ್ಡ್ ಪ್ರೀವಿಸೀಲ್ ಆಗಿಯೂ 1942ರಲ್ಲಿ ಡೆಪ್ಯೂಟಿ ಪ್ರಧಾನ ಮಂತ್ರಿಗಳಾಗಿಯೂ ಮತ್ತು ಗಡಿ ವ್ಯವಹಾರಶಾಖೆಯ ಕಾರ್ಯದರ್ಶಿಗಳಾಗಿಯೂ ನೇಮಿತಗೊಂಡರು. 1943ರಲ್ಲಿ ಕೌನ್ಸಿಲ್‌ನ ಅಧ್ಯಕ್ಷರಾದರು. ಸ್ಯಾನ್‌ಫ್ರಾನ್‌ಸಿಸ್ಕೋವಿನಲ್ಲಿ 1945ರಲ್ಲಿ ನಡೆದ ಅಂತಾರಾಷ್ಟ್ರೀಯ ವ್ಯವಸ್ಥೆಯ ಸಲುವಾಗಿ ಸೇರಿದ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಬ್ರಿಟಿಷ್ ಪ್ರತಿನಿಧಿಯಾಗಿದ್ದರು. ಅದೇ ಮೇ ಮಾಹೆಯಲ್ಲಿ ಜರ್ಮನಿ ಸೋತಕೂಡಲೆ ತಮ್ಮ ಮಂತ್ರಿಪದವಿಯನ್ನು ಬಿಟ್ಟುಕೊಟ್ಟು ಮುಂಬರಲಿದ್ದ ಚುನಾವಣಾ ಪ್ರಚಾರಕ್ಕಾಗಿ ಇಂಗ್ಲೆಂಡಿಗೆ ಹಿಂತಿರುಗಿದರು. ಜುಲೈ 17ರಂದು ನಡೆದ ಪಾಟ್ಸ್ ಡ್ಯಾಮ್ ಸಮ್ಮೇಳನದಲ್ಲಿ ಭಾಗವಹಿಸಲು ಚರ್ಚಿಲರು ಅಟ್ಲಿಯವರನ್ನು ಆಹ್ವಾನಿಸಿದರು. ಬ್ರಿಟನ್ನಿನ ಒಬ್ಬ ವಿರೋಧಪಕ್ಷದ ನಾಯಕ ಇಂಥ ಸಮ್ಮೇಳನದಲ್ಲಿ ಭಾಗವಹಿಸಿದುದು ಅದೇ ಮೊದಲ ಬಾರಿ. 1945ರಲ್ಲಿ ಲೇಬರ್‌ಪಕ್ಷ ಪ್ರಚಂಡ ಬಹುಮತದಿಂದ ಆರಿಸಿಬಂದು ಅಟ್ಲಿ ಪ್ರಧಾನಿಪಟ್ಟಕ್ಕೆ ಬಂದರು. ಯುದ್ಧದ ಭಯಪೂರಿತ ವಾತಾವರಣದಲ್ಲಿದ್ದ ಆರ್ಥಿಕ ಪರಿಸ್ಥಿತಿಯನ್ನು ಬದಲಾಯಿಸಿ, ವ್ಯಕ್ತಿಸ್ವಾತಂತ್ರ್ಯಕ್ಕೆ ಧಕ್ಕೆಬಾರದ ರೀತಿಯಲ್ಲಿ ಸಮಾಜವಾದಿ ತತ್ತ್ವಕ್ಕನುಸಾರವಾಗಿ ಸರ್ಕಾರವನ್ನು ರೂಪಿಸುವುದೇ ಅವರ ಮುಂದಿದ್ದ ದೊಡ್ಡ ಯೋಜನೆ. ಅಟ್ಲಿಯವರ ಅಧಿಕಾರಾವಧಿಯಲ್ಲಿ ಇಂಗ್ಲೆಂಡಿನ ಬ್ಯಾಂಕು, ಕಲ್ಲಿದ್ದಲು ತೆಗೆಯುವ ಗಣಿಗಳು, ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು, ಸಾರಿಗೆ ಸಂಬಂಧ ಮುಂತಾದುವು ರಾಷ್ಟ್ರೀಕರಣಗೊಂಡುವು. 1946ರ ಆರೋಗ್ಯ ಸೇವಾ ನಿಬಂಧನೆ 1948ರಲ್ಲಿ ಜಾರಿಗೆ ಬಂದು ಪ್ರತಿಯೊಬ್ಬ ಪ್ರಜೆಗೂ ವೈದ್ಯಕೀಯ ಸವಲತ್ತುಗಳು ಉಚಿತವಾದಾಗ ಮೊದಮೊದಲಿಗೆ ಅಟ್ಲಿ ಪ್ರಬಲ ವಿರೋಧನ್ನು ಎದುರಿಸಬೇಕಾಯಿತು. 1948ರ ಸಾಮಾಜಿಕ ಕ್ಷೇಮನಿಬಂಧನೆಯ ಅನ್ವಯದಿಂದ ಸಾಮಾಜಿಕ ಕ್ಷೇಮ ಹೆಚ್ಚಿತು. ವಿಲ್ ಅಂಡ್ ವೇ ಟು ಸೋಷಿಯಲಿಸಮ್ ಮತ್ತು ದಿ ಲೇಬರ್ ಪಾರ್ಟಿ ಇನ್ ಪರ್ಸ್ಪೆಕ್ಟಿವ್ ಎಂಬ ಗ್ರಂಥಗಳನ್ನು ಅಟ್ಲಿ ಬರೆದಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತದ್ದು ಮತ್ತು ಪಾಕಿಸ್ತಾನ ರೂಪುಗೊಂಡದ್ದು ಇವರು ಪ್ರಧಾನಿಯಾಗಿದ್ದಾಗ (1947). (ಕೆ.ಎಸ್.ಎನ್.)

**ಅಡಕಪುಟ್ಟನ ಗಿಡ :** ನಿಕ್ಟಾಜಿನೇಸೀ ಕುಟುಂಬಕ್ಕೆ ಸೇರಿದ ಒಂದು ಮೂಲಿಕೆ. ಬೊಯೆರ್‌ಹಾವಿಯ ಇದರ ಶಾಸ್ತ್ರೀಯ ನಾಮ. ಹೂವಿನವರ್ಣ ವ್ಯತ್ಯಾಸಾನುಸಾರ ಇದರಲ್ಲಿ ಎರಡು ಪ್ರಭೇದಗಳನ್ನು ಗುರುತಿಸಬಹುದು. .



1. ಬೋಹರ್‌ಹಾವಿಯ ರಿಪೆನ್ಸ್, ವೆರೈಟಿ–ಡಿಫ್ಯೂಸಾ: ಇದನ್ನು ಬಿಳೀಕೊಮ್ಮೆ, ಬಳವಡಿಕೆ ಗಿಡ, ಸನಾಡಿಕಾ, ಅಡಕಪುಟ್ಟನ ಗಿಡ, ಶ್ವೇತ ಪುನರ್ನವ, ನೊನಜಾಲಿ ಗಣಜಲು ಎಂದೂ ಕರೆಯುತ್ತಾರೆ. 2. ಬೋಹರ್ ಹಾವಿಯ ರಿಪ್ಪಂಡ : ಇದನ್ನು ಬೆಕ್ಕಿನ ಅಜ್ಜಿ ಬಳ್ಳಿ, ನಡುಮುರುಕನಬಳ್ಳಿ, ರಕ್ತಪುನರ್ನವ, ಕೆಂಪು ಗಣಜಲು ಎಂದೂ ಕರೆಯುತ್ತಾರೆ.

ಭಾರತ ಹಾಗೂ ಉಷ್ಣವಲಯ ಮತ್ತು ಸಮಶೀತೋಷ್ಣವಲಯಗಳ ಹಲವಾರು ಪ್ರದೇಶಗಳಲ್ಲಿ ಈ ಗಿಡ ಬೇಲಿಯಲ್ಲೂ ಮತ್ತಿತರ ಪಾಳು ಜಮೀನುಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ. ನೀರಿನ ಅನುಕೂಲತೆ ಇರುವೆಡೆ ವಿಶೇಷವಾಗಿ ಕಂಡು ಬರುತ್ತದೆ. ಇದೊಂದು ವಾರ್ಷಿಕ ಮೂಲಿಕೆ. ಗಿಡ ರೋಮಪೂರಿತವಾಗಿಯೊ ರೋಮರಹಿತ ವಾಗಿಯೊ 0.6–0.9 ಮೀ ಎತ್ತರಕ್ಕೆ ಬೆಳೆಯುತ್ತದೆ. ಗಿಡ ಸಾಕಷ್ಟು ಕವಲೊಡೆದಿರುತ್ತದೆ; ಎಲೆಯ ಮೇಲ್ಭಾಗ ಹಸುರಾಗಿಯೂ ಗಡಸಾಗಿಯೂ ಇದ್ದು ತಳಭಾಗ ಬಿಳುಪಾಗಿ ಮೃದುವಾಗಿರುತ್ತದೆ. ರೆಂಬೆಗಳಲ್ಲಿ ಅನೇಕ ಹೂಗಳು ಬರುತ್ತವೆ. ಇವು ಎಲೆಯ ಕಂಕುಳಿನಲ್ಲಿರುತ್ತವೆ. ಪ್ರಭೇದಕ್ಕನುಸಾರವಾಗಿ ಗಿಡಗಳು ಬಿಳಿ ಅಥವಾ ಕೆಂಪುಬಣ್ಣದ ಹೂ ಬಿಡುತ್ತವೆ. ಹಣ್ಣು 6 ಮಿಮೀ ಉದ್ದಕ್ಕಿದ್ದು ರಸಭರಿತವಾಗಿರುತ್ತದೆ.

ಕಾಂಡದಲ್ಲಿ ಆನ್ತೋಸಯನಿನ್ ವರ್ಣಕಾರಕಗಳಿರುವುದರಿಂದ ಬಣ್ಣವಾಗಿರುತ್ತದೆ. ಎಲೆಗಳಲ್ಲಿ ಕಿತ್ತಳೆಬಣ್ಣದ ಸೂಜಿಯಾಕಾರದ ಕ್ಯಾಲ್ಸಿಯಂ ಆಕ್ಸಲೇಟ್ ಹರಳುಗಳಿವೆ. ಈ ಗಿಡದಲ್ಲಿ ಪುನರ್ನವೈನ್ ಎಂಬ ಒಂದು ಬಗೆಯ ಸಸ್ಯಕ್ಷಾರ ಅಥವಾ ಉದ್ರೇಕಕಾರಕ (ಆಲ್ಕಲಾಯ್ಡ್) ವಸ್ತುವಿರುತ್ತದೆ. ಇದು ಗಿಡದಲ್ಲಿ 0.01 ಭಾಗವಿದ್ದು ಇದರೊಡನೆ ಪೊಟ್ಯಾಸಿಯಂ ನೈಟ್ರೇಟ್ ಸಲ್ಫೇಟುಗಳು, ಕ್ಲೋರೈಡುಗಳು, ಮತ್ತು ಜಿಡ್ಡಿನ ಎಣ್ಣೆಗಳು ಸೇರಿಕೊಂಡಿರುತ್ತವೆ. ಈ ಗಿಡದ ಬೇರಿನಿಂದ ಚೂರ್ಣ, ಕಷಾಯ, ತೈಲ ಮುಂತಾದ ಔಷಧಗಳನ್ನು ತಯಾರಿಸುತ್ತಾರೆ.

ಪುನರ್ನವದ ಕಷಾಯವನ್ನು ಉದರ ಕ್ರಿಮಿನಾಶಕವಾಗಿಯೂ ಅಸ್ತಮಾ ರೋಗದಲ್ಲಿ ಕಫಹಾರಿಯಾಗಿಯೂ ಕಾಮಾಲೆರೋಗ, ಕೆಮ್ಮು, ಹಾಗೂ ಹಲ್ಲು ಮತ್ತು ಚರ್ಮರೋಗಗಳ ನಿವಾರಣೆಗೂ ಉಪಯೋಗಿಸುತ್ತಾರೆ. ಕಷಾಯ ಖಾರ ಹಾಗೂ ಕಹಿಯಾಗಿದ್ದು ಚೈತನ್ಯದಾಯಕವಾಗಿದೆ. ಪುನರ್ನವದ ತೈಲವನ್ನು ಅಭ್ಯಂಜನಕ್ಕೂ ಹೃದ್ರೋಗಗಳಿಗೂ ಮೇಹಸಂಬಂಧರೋಗಕ್ಕೂ ಶೋಫರೋಗಕ್ಕೂ ಉಪಯೋಗಿಸುವುದುಂಟು. ಪರಿಮಳ ವಸ್ತುಗಳ ತಯಾರಿಕೆಯಲ್ಲೂ ಇದರ ಬಳಕೆ ಇದೆ. ಪುನರ್ನವ ಲೇಹ್ಯವನ್ನು ಉರಿಮೂತ್ರ ಅಥವಾ ಅಲ್ಪಮೂತ್ರ ಕಾಯಿಲೆಗಳಿಗೂ ಕೊಡುತ್ತಾರೆ. ಈ ಔಷಧಿಗಳನ್ನು ಮಿತಿಮೀರಿ ತೆಗೆದುಕೊಂಡರೆ ವಾಂತಿಯಾಗುತ್ತದೆ. (ಎಚ್.ಕೆ.ಎಂ.)

**ಅಡಕೆ :** ಒಂದು ವಾಣಿಜ್ಯ ಬೆಳೆ ಕರ್ನಾಟಕದ ಅತಿ ಮುಖ್ಯ ತೋಟದ ಬೆಳೆ. ಅಡಕೆಗೆ ಜನರ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಅಮೂಲ್ಯ ಸ್ಥಾನ ಉಂಟು. ಅಡಕೆಮರದ ಪತಿಯೊಂದು ಭಾಗವೂ ಹಲವು ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ. ಕಾಯಿ ಎಳೆಯದಾಗಿದ್ದಾಗ, ಬಲಿತ ಮೇಲೆ ಅಥವಾ ಹದಗೊಳಿಸಿದ ಅನಂತರ ವೀಳೆಯದೆಲೆಯೊಡನೆ ತಿನ್ನುವುದಕ್ಕೂ ಕೆಲವು ಔಷಧೋಪಚಾರಗಳಿಗೂ ಉಪಯುಕ್ತವೆನಿಸಿದೆ. ಅಡಕೆಯ ಮರ, ಮನೆ ಕಟ್ಟುವುದಕ್ಕೂ ನೀರು ಹಾಯಿಸುವ ಕೊಳವೆಗೂ ಉಪಯೋಗಕ್ಕೆ ಬರುತ್ತದೆ. ಒಣಗಿದ ಸೋಗೆಯನ್ನು ಮನೆ ಛಾವಣಿಗೆ ಹೊದಿಸಲು ಬಳಸುವುದುಂಟು. ಇದರ ಹಾಳೆಯಿಂದ ಟೋಪಿ, ಬೀಸಣಿಗೆ, ಬುಟ್ಟಿ ಇತ್ಯಾದಿ ವ್ಯವಸಾಯದ ಸಲಕರಣೆಗಳನ್ನು ಮಾಡುತ್ತಾರೆ. ಅಡಕೆ ಹೂವನ್ನು ದೇವರ ಪೂಜೆಗೂ ಮುಡಿಯುವುದಕ್ಕೂ ಉಪಯೋಗಿಸುತ್ತಾರೆ. ಅಡಕೆ ತೆಂಗಿನಮರದಂತೆ ಅನೇಕ ಬಗೆಯಾಗಿ ಉಪಯುಕ್ತವೆನಿಸಿದೆ. ಕರ್ನಾಟಕದಲ್ಲಿ ಅಡಕೆಯ ಬೇಸಾಯ, ಕೊಯ್ಲು, ಹದಗೊಳಿಸುವುದು, ವರ್ಗೀಕರಣ, ವ್ಯಾಪಾರ ಮತ್ತು ಕೈಗಾರಿಕೆಯಿಂದ ಲಕ್ಷಾಂತರ ಜನರು ಜೀವಿಸುತ್ತಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಮಳೆಬೀಳುವ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡಗಳಲ್ಲೂ ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು ಪ್ರದೇಶಗಳಲ್ಲೂ ಒಟ್ಟು ಅಡಕೆಯ ಸೇಕಡ 75 ಭಾಗದಷ್ಟನ್ನು ಬೆಳೆಯಲಾಗುವುದು. ಮೈದಾನ ಪ್ರದೇಶದ ತುಮಕೂರು, ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ನೀರಾವರಿ ಅನುಕೂಲವಿರುವ ಕಡೆಗಳಲ್ಲಿಯೂ ಇದರ ಬೇಸಾಯ ಉಂಟು. ಮೈಸೂರು, ಮಂಡ್ಯ, ಬೆಂಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಬಹಳ ಸ್ವಲ್ಪ ಭಾಗದಲ್ಲಿ ಅಡಕೆಯನ್ನು ಬೆಳೆಯಲಾಗುತ್ತಿದೆ. ಮಲೆನಾಡಿನ ತೋಟಗಳಲ್ಲಿ ಹೆಚ್ಚಾಗಿ ಅಡಕೆಯನ್ನು ಶುದ್ಧಬೆಳೆಯಾಗಿ ಮಾತ್ರ ಬೆಳೆದರೆ ಮೈದಾನ ಸೀಮೆಗಳಲ್ಲಿ ತೆಂಗು, ಹಣ್ಣಿನಗಿಡ ಮೊದಲಾದುವುಗಳೊಂದಿಗೆ ಇದನ್ನು ಮಿಶ್ರಬೆಳೆಯಾಗಿ ಬೆಳೆಯುವರು.

ಭಾರತದ ರಾಜ್ಯಗಳಲ್ಲಿ ಕರ್ನಾಟಕ ಅಡಕೆ ತೋಟಗಳ ವಿಸ್ತೀರ್ಣದಲ್ಲಿ ಎರಡನೆಯ ಸ್ಥಾನವನ್ನೂ ಮತ್ತು ಉತ್ಪತ್ತಿಯಲ್ಲಿ ಮೊದಲನೆಯ ಸ್ಥಾನವನ್ನೂ ಪಡೆದಿದೆ.

ರಾಜ್ಯದಲ್ಲಿ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕಮಗಳೂರು, ಜಿಲ್ಲೆಗಳಲ್ಲಿ ಸಾಂದ್ರವಾಗಿಯೂ ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ಮಂಡ್ಯ, ಕೊಡಗು, ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಅಲ್ಲಲ್ಲಿ ಅಡಕೆ ಬೆಳೆಯನ್ನು ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಅಡಕೆಯನ್ನು ಒಟ್ಟು 1,28,042 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದ್ದು ವಾರ್ಷಿಕ ಉತ್ಪನ್ನ 1,93,562 ಟನ್ನುಗಳು (1999–2000).

**ಬಿತ್ತನೆ:** ಅಡಕೆ ಬಹುವಾರ್ಷಿಕ ಪೈರಾದುದರಿಂದ ಉತ್ತಮ ತಳಿಯ ಬೀಜ ಆರಿಸುವುದು ಬಹಳ ಮುಖ್ಯ. ಜಾಗತೆ ಫಸಲು ಕೊಡುವ, ಪತಿವರ್ಷವೂ ಒಳ್ಳೆಯ ಫಸಲನ್ನು ನೀಡುವ, ಆರೋಗ್ಯವಾದ ತಾಯಿಮರಗಳಿಂದ ಒಳ್ಳೆಯ ಆಕಾರ ಗಾತ್ರ ಹಾಗೂ ತೆಳುಸಿಪ್ಪೆಯಿದ್ದು ಹೆಚ್ಚಿನ ಸಂಖ್ಯೆ ಕಾಯಿಗಳಿಂದ ಕೂಡಿದ ಗೊನೆಗಳನ್ನು ಆರಿಸಲಾಗುವುದು. ಕಾಯಿಗಳು ಚೆನ್ನಾಗಿ ಬಲಿತು ಹಣ್ಣಾಗಿ ಉದುರಲು ಪ್ರಾರಂಭವಾದ ಅನಂತರ ಗೊನೆಗಳನ್ನು ಕೊಯ್ಲುಮಾಡಿ

ಎಚ್ಚರಿಕೆಯಿಂದ ಇಳಿಸಿ ಕಾಯಿಗಳನ್ನು ಬಿಡಿಸಿ ಅವುಗಳಲ್ಲಿ ಹೆಚ್ಚು ತೂಕ, ಒಳ್ಳೆಯ ಆಕಾರ ಹಾಗೂ ಗಾತ್ರವುಳ್ಳ ಕಾಯಿಗಳನ್ನು ಆರಿಸಿ ಮರಳು ಮಣ್ಣು ಮಿಶ್ರಮಾಡಿದ ಪಾತಿಗಳಲ್ಲಿ ಪ್ರತಿಕಾಯಿಗೂ 6ಸೆಂಮೀ ಅಂತರವಿರುವಂತೆ ಹಾಗೂ ತೊಟ್ಟು ಮೇಲಕ್ಕೆ ಬರುವಂತೆ ಸ್ವಲ್ಪ ಓರೆಯಾಗಿ 2.5ಸೆಂಮೀ ಆಳದಲ್ಲಿ ನೆಟ್ಟು ಮರಳಿನಿಂದ ಮುಚ್ಚಲಾಗುತ್ತದೆ. ಪಾತಿಗಳಿಗೆ ಸ್ವಲ್ಪ ನೆರಳು ಬೀಳುವಂತೆ ಮಾಡಿ ಕ್ರಮವಾಗಿ ನೀರು ಕೊಡಲಾಗುತ್ತದೆ. ಅಡಕೆ ಬೀಜಗಳು 40 ದಿನಗಳಲ್ಲಿ ಮೊಳೆಯಲು ಆರಂಭಿಸುವುವು. 3 ತಿಂಗಳಲ್ಲಿ 2 ರಿಂದ 3 ಎಲೆ ಹೊರಡುತ್ತವೆ. ಸಸಿಗಳನ್ನು 150ಸೆಂಮೀ ಅಗಲ ಮತ್ತು ಉದ್ದದ ಪಾತಿಗಳಲ್ಲಿ 30ಸೆಂಮೀ ಅಂತರವಿರುವಂತೆ ನಾಟಿ ಮಾಡಲಾಗುತ್ತದೆ. ಬಾಳೆ ಅಥವಾ ಹಸಿರೆಲೆಗೊಬ್ಬರದ ಗಿಡಗಳನ್ನು ಬೆಳೆಸಿ ಸಸಿಗಳಿಗೆ ನೆರಳು ಕೊಡುವುದುಂಟು. ಚಪ್ಪರ ಹಾಕಿ ಅದರ ಮೇಲೆ ತೊಂಡೆ ಅಥವಾ ಸೀಮೆಬದನೆಬಳ್ಳಿ ಹಬ್ಬಿಸುವುದೂ ಉಂಟು. ಸಸಿಪಾತಿಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಲಾಗುತ್ತದೆ.

ಅಡಕೆ ಗೊನೆ ಇರುವ ಅಡಕೆಮರ

ಅಡಕೆ ತೋಟ ಮಾಡಲು ಕೆಂಪು ಮಣ್ಣು, ಮರಳುಮಿಶ್ರಿತ ಗೋಡು, ಜಂಬಿಟ್ಟಿಗೆ, ಕೆಂಪುಗೋಡು ಮೊದಲಾದ ಮಣ್ಣುಗಳುಳ್ಳ ಭೂಮಿ ಯೋಗ್ಯ. ಭೂಮಿಯಲ್ಲಿ ಜೌಗು ನಿಲ್ಲಬಾರದು. ಅಡಕೆಯನ್ನು ಸಮುದ್ರಮಟ್ಟದಿಂದ ಹಿಡಿದು ಒಂದು ಸಾವಿರ ಮೀಟರ್ ಎತ್ತರವರೆಗಿನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಬಹುದು. ಅಡಕೆ ತೋಟ ಮಾಡುವ ಸ್ಥಳದಲ್ಲಿ ನೀರಾವರಿ ಅನುಕೂಲ ಇರುವುದು ಅಪೇಕ್ಷಣೀಯ. ನೈರುತ್ಯ ದಿಕ್ಕಿನಿಂದ ಮಧ್ಯಾಹ್ನದ ಬಿಸಿಲು ಬೀಳದಂತೆ ನೆರಳು ಕೊಡುವ ಮರಗಳನ್ನು ಬೆಳೆಸುವರು. ಭೂಮಿಯನ್ನು ಹದಗೊಳಿಸಿ ಬಸಿಕಾಲುವೆಗಳನ್ನು ತೋಡಿದ ಅನಂತರ 2.7ಮೀ ಅಂತರದಲ್ಲಿ ಭೂಗುಣಕ್ಕನುಸಾರವಾಗಿ 60ಸೆಂಮೀ x 60ಸೆಂಮೀ x 60ಸೆಂಮೀ ಅಥವಾ 90ಸೆಂಮೀ x 90ಸೆಂಮೀ x 90ಸೆಂಮೀ ಅಳತೆಯ ಗುಣಿಗಳಲ್ಲಿ ಆರಿಸಿದ ಸಸಿಗಳನ್ನು ನೆಡಲಾಗುತ್ತದೆ. ಮಳೆ ಹೆಚ್ಚಾಗಿ ಬೀಳುವ ಪ್ರದೇಶಗಳಲ್ಲಿ ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲೂ ಉಳಿದ ಪ್ರದೇಶಗಳಲ್ಲಿ ಮೇ–ಜೂನ್ ತಿಂಗಳಲ್ಲೂ ಅಡಕೆ ಗಿಡಗಳನ್ನು ನೆಡುವುದು ರೂಢಿಯಲ್ಲಿದೆ.

**ಅಡಕೆತೋಟದಕೃಷಿ :** ಅಡಕೆ ಸುಮಾರು 80–100 ವರ್ಷಗಳವರೆಗೂ ಬದುಕಿದ್ದು ನೆಟ್ಟ 5–6 ವರ್ಷಗಳಿಂದ ಜೀವನಪರ್ಯಂತ ಫಸಲು ಕೊಡುತ್ತದೆ. ಆದ್ದರಿಂದ ಮರ ಆರೋಗ್ಯವಾಗಿ ಚೆನ್ನಾಗಿ ಬೆಳೆದು ಉತ್ತಮ ಫಲ ಕೊಡುವಂತೆ ಮಾಡಲು ಪ್ರತಿವರ್ಷವೂ ನಿರ್ದಿಷ್ಟ ಪ್ರಮಾಣದಲ್ಲಿ ಕಾಲಕ್ಕೆ ಸರಿಯಾಗಿ ರಸಗೊಬ್ಬರ, ಹಸುರೆಲೆಗೊಬ್ಬರ, ಕೊಟ್ಟಿಗೆಗೊಬ್ಬರ ಕೊಡುವುದುಂಟು.

ಮರ ಒಂದಕ್ಕೆ 100ಗ್ರಾಂ ನೈಟ್ರೊಜನ್, 40ಗ್ರಾಂ ಫಾಸ್ಫರಸ್ ಮತ್ತು 140ಗ್ರಾಂ ಪೊಟ್ಯಾಷನ್ನು ಎರಡು ಪಾಲು ಮಾಡಿ ವರ್ಷದಲ್ಲಿ ಎರಡು ಸಲ ಕೊಡುವರು. ಇದರೊಂದಿಗೆ ಪ್ರತಿವರ್ಷವೂ 12ಕಿಗ್ರಾಂ ಹಸುರೆಲೆಗೊಬ್ಬರ ಮತ್ತು 12ಕಿಗ್ರಾಂ ಕೊಟ್ಟಿಗೆಗೊಬ್ಬರವನ್ನು ಎಲ್ಲ ವಯಸ್ಸಿನ ಮರಗಳಿಗೂ ಕೊಡುವುದುಂಟು. ಮೊದಲನೆಯ ವರ್ಷ ದೊಡ್ಡಮರಗಳಿಗೆ ಕೊಡುವ ಮೊತ್ತದ 1/3 ಭಾಗ ರಸಗೊಬ್ಬರವನ್ನೂ ಎರಡನೆಯ ವರ್ಷ 2/3 ಭಾಗವನ್ನೂ ಮೂರನೆಯ ವರ್ಷದಿಂದ ಪೂರ್ತಿ ಪ್ರಮಾಣದಲ್ಲೂ ಕೊಡುವರು. ಗೊಬ್ಬರವನ್ನು ಮಲೆನಾಡಿನಲ್ಲಿ ಸೆಪ್ಟಂಬರ್–ಅಕ್ಟೋಬರಿನಲ್ಲೂ ಉಳಿದ ಕಡೆ ಮೇ–ಜೂನ್ ತಿಂಗಳಲ್ಲೂ ಕೊಡುವುದುಂಟು. ಗೊಬ್ಬರವನ್ನು ಅಡಕೆ ಮರದ ಸುತ್ತ 50ಸೆಂಮೀ ಅಂತರದಲ್ಲಿ ಮಾಡಲಾಗುವ 1ಮೀ ಅಗಲ 15–20ಸೆಂಮೀ ಆಳದ ತೋಡುಗಳಲ್ಲಿ ಸೇರಿಸಲಾಗುತ್ತದೆ. ಎರಡನೆಯ ಸಲ ಕೊಡುವಾಗ ಮರದ ಸುತ್ತ ಕಳೆ ಕಿತ್ತು ಬುಡ ಕೆದಕಿ ಗೊಬ್ಬರ ಸೇರಿಸುವುದುಂಟು. ಪ್ರತಿಯೊಂದು ತೋಟದ ಮಣ್ಣನ್ನು ಪರೀಕ್ಷಿಸಿ ಗೊಬ್ಬರದ ಪ್ರಮಾಣವನ್ನು ನಿಗದಿ ಮಾಡಲಾಗುತ್ತದೆ. ಅಡಕೆಗೆ ಕೊಳೆರೋಗ, ಸುಳಿಕೊರೆವರೋಗ, ಹಿಡಿಮುಂಡಿಗೆರೋಗ, ಅಣಬೆರೋಗ ಮೊದಲಾದ ರೋಗಗಳೂ ಬೇರುಹುಳು, ತಿಗಣೆ, ಹೇನು, ಹೂವಿಗೆ ತಗಲುವ ಕಂಬಳಿಹುಳು ಮೊದಲಾದ ಕೀಟಗಳ ಬಾಧೆಯೂ ತಲೆದೋರುವುದುಂಟು.

ಕರ್ನಾಟಕದಲ್ಲಿ ಅಡಕೆಯನ್ನು ಆಗಸ್ಟ್‌ನಿಂದ ಜನವರಿವರೆಗಿನ ಅವಧಿಯಲ್ಲಿ ಕೊಯ್ಯುತ್ತಾರೆ. ಪ್ರತಿಯೊಂದು ಮರವೂ ವರ್ಷಕ್ಕೆ 2 ಅಥವಾ 3 ಗೊನೆ ಬಿಡುತ್ತದೆ. ಪ್ರತಿ ಗೊನೆಯಲ್ಲೂ 200–250 ಕಾಯಿಗಳಿರುತ್ತವೆ. ಅಡಕೆ ಕೊಯ್ಲನ್ನು ವಿವಿಧ ಪ್ರದೇಶಗಳ ಅಭಿರುಚಿಗೆ ಅನುಕೂಲಗಳಿಗೆ ತಕ್ಕಂತೆ ವಿವಿಧ ಹಂತಗಳಲ್ಲಿ ಬೇರೆ ಬೇರೆ ರೀತಿ ಹದಗೊಳಿಸುತ್ತಾರೆ. ಕಾಯಿ ಎಳೆಯದಾಗಿದ್ದಾಗಲೇ ಕೊಯ್ಲು ಮಾಡಿ ಸಿಪ್ಪೆ ತೆಗೆದು ತಿರುಳನ್ನು ಇಡಿ ಇಡಿಯಾಗಿ ಅಥವಾ ಎರಡು ಇಲ್ಲವೆ ಅನೇಕ ಚೂರುಗಳಾಗಿ ಮಾಡಿ ಬಣ್ಣದಲ್ಲಿ ಬೇಯಿಸಿ ಒಣಗಿಸಿ ಹದ ಮಾಡಿ ವಿಂಗಡಿಸಿ ಪೇಟೆಗೆ ಸಿದ್ಧಗೊಳಿಸುತ್ತಾರೆ. ಕೆಲವು ಕಡೆಗಳಲ್ಲಿ ಕಾಯಿಗಳನ್ನು ಪೂರ್ತಿ ಹಣ್ಣಾಗುವವರೆಗೂ ಮರದಲ್ಲಿಯೇ ಬಿಟ್ಟು ಅನಂತರ ಕೊಯ್ಲು ಮಾಡಿ ಸುಮಾರು 40ದಿನ ಬಿಸಿಲಿನಲ್ಲಿ ಒಣಗಿಸಿ ಸಿಪ್ಪೆ ಬಿಡಿಸಿ ಬಣ್ಣ ಕಟ್ಟುವುದುಂಟು.

**ಇಳುವರಿ:** ಒಂದು ಎಕರೆಗೆ ಸುಮಾರು 400 ಮರಗಳಿದ್ದು 1ಳಿ ಲಕ್ಷದಿಂದ 3ಳಿ ಲಕ್ಷದವರೆಗೂ ಕಾಯಿ ಬಿಡುತ್ತವೆ. ಸಂಸ್ಕರಿಸಿದ ಮೇಲೆ ಇವುಗಳ ಒಟ್ಟು ತೂಕ 300–500 ಕೆಜಿ. ಒಂದು ಎಕರೆಗೆ ಒಂದು ವರ್ಷಕ್ಕೆ ಸರಾಸರಿ 350 ಕೆಜಿ. ಸಂಸ್ಕರಿಸಿದ ಅಡಕೆ ಉತ್ಪತ್ತಿಯಾಗುತ್ತದೆ.

ಅಡಕೆಯನ್ನು ಚಾಲಿ, ಕೋಕ, ಸರಕು, ಹಸ, ಬೆಟ್ಟೆ, ಗೊರಬಲು, ಬಿಳಿಗೋಟು, ರಾಶಿ, ತಟ್ಟಿಬೆಟ್ಟೆ, ಕೆಂಪುಗೋಟು, ಚೂರು ಮೊದಲಾದ ಹಲವು ವಿಧಗಳಾಗಿ ಮಾರುಕಟ್ಟೆಗೆ ಸಿದ್ಧಗೊಳಿಸಲಾಗುವುದು. ಕರ್ನಾಟಕದ ಅಡಕೆ ಭಾರತದ ಇತರ ಪ್ರದೇಶಗಳಲ್ಲಿ ಬೆಳೆಯುವ ಅಡಕೆಗಿಂತ ಗುಣದಲ್ಲಿ ಮೇಲಾದುದು.

ಅಡಕೆಯೊಂದಿಗೆ ವೀಳೆಯದೆಲೆ, ಮೆಣಸು, ಬಾಳೆ, ಸಿಹಿಗೆಣಸು, ಮರಗೆಣಸು, ಕೋಕೋ, ಶುಂಠಿ ಮುಂತಾದ ಉಪಬೆಳೆಗಳನ್ನು ಸಹ ಲಾಭದಾಯಕವಾಗಿ ಬೆಳೆಯಬಹುದು. ಇತ್ತೀಚೆಗೆ ಮಂಗಳ ಎಂಬ ಸುಧಾರಿಸಿದ ಅಡಕೆ ತಳಿಯನ್ನು ಬಿಡುಗಡೆ ಮಾಡಲಾಗಿದೆ. (ಕೆ.ಟಿ.ಕೆ.)

**ಅಡಕೆ ಬೆಳೆಯ ಆರ್ಥಿಕ ಪರಿಸ್ಥಿತಿ ಮತ್ತು ತಾಂತ್ರಿಕತೆ:** ಆರ್ಥಿಕ ಉದಾರೀಕರಣದ ಬಳಿಕ ಅಡಕೆ ಕೃಷಿಕರಿಗೆ ಕೆಲವು ಸಮಸ್ಯೆಗಳು ತಲೆದೋರಿದವು. ಇದಕ್ಕೆ ಕಾರಣ ಬೆಲೆಗಳ ಕುಸಿತ ಮತ್ತು ಅಡಕೆಯ ಮೇಲೆ ವಿಧಿಸಲಾಗಿರುವ ವ್ಯವಸಾಯ ತೆರಿಗೆ.

ಅಡಕೆ ಬೆಲೆ ಇಳಿಮುಖವಾದಾಗ, ಕರ್ನಾಟಕ ರಾಜ್ಯಸರ್ಕಾರ ಕೃಷಿಕರ ಕುಂದುಕೊರತೆಗಳನ್ನು ನಿವಾರಿಸಲು ಮತ್ತು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಒಂದು ಸಮಿತಿಯನ್ನು ರಚಿಸಿತು (1971). ಈ ಸಮಿತಿ ಬೆಳೆಯ ಇಳಿತಕ್ಕೆ ಅಧಿಕ ಉತ್ಪಾದನೆ, ಅಡಕೆಯ ಆಮದು, ರಫ್ತಿಗೆ ಸಾಕಷ್ಟು ಅವಕಾಶವಿಲ್ಲದೆ ಇರುವುದು, ಅಡಕೆಯ ಬಳಕೆ ಕಡಿಮೆಯಾಗಿರುವುದು, ಮಾರುಕಟ್ಟೆಯ ವೈಪರೀತ್ಯಗಳು, ರೈತರ ಸಣ್ಣ ಹಿಡುವಳಿ, ಮಾರುಕಟ್ಟೆಯಲ್ಲಿ ದಳ್ಳಾಳಿಗಳ ಕಾಟ ಮುಂತಾದ ಕಾರಣಗಳನ್ನು ನೀಡಿತು. ಈ ಸಮಿತಿಯ ನಿರ್ಧಾರದ ಮೇರೆಗೆ ಸಂಘಟಿತ ಸಂಸ್ಥೆಯೊಂದು ಮಂಗಳೂರಿನಲ್ಲಿ ಸ್ಥಾಪಿತವಾಯಿತು (ದಿ ಸೆಂಟ್ರಲ್ ಅರೆಕನಟ್ ಮಾರ್ಕೆಟಿಂಗ್ ಅಂಡ್ ಪ್ರೋಸೆಸಿಂಗ್ ಕೋ–ಆಪರೇಟಿವ್ ಸೊಸೈಟಿ). ಇದರ ಮೂಲ ಧನ 1 ಕೋಟಿ ರೂ. ಇದರಲ್ಲಿ ತಲಾ 37.5 ಲಕ್ಷವನ್ನು ಕರ್ನಾಟಕ ಮತ್ತು ಕೇರಳ ಸರ್ಕಾರ ನೀಡಿವೆ. ಉಳಿದ 30 ಲಕ್ಷವನ್ನು ಕೆಲವರು ವೈಯಕ್ತಿಕವಾಗಿಯೂ ಮತ್ತು ಇತರ ಸಹಕಾರ ಸಂಘಗಳೂ ನೀಡಿವೆ. ಇದರ ಮುಖ್ಯ ಉದ್ದೇಶ ಅಡಕೆ ಕೃಷಿಕರಿಗೆ ನ್ಯಾಯಬೆಲೆ ದೊರಕಿಸುವುದು. ಕಳೆದ ಅಡಕೆ ಬೆಲೆಗಳ ಏರುವಿಕೆಯನ್ನು ನೋಡಿದರೆ, ಈ ಸಂಘದ ಉದ್ದೇಶ ಸಫಲವಾಯಿತೆನ್ನಬಹುದು. ಆದರೆ ಗುಟ್ಕ ನಿಷೇಧ ವಿದೇಶಗಳಲ್ಲಿ ಅಡಕೆಗೆ ಕುಸಿದ ಬೇಡಿಕೆಯಿಂದಾಗಿ ಸದ್ಯ ಅದರ ಬೆಲೆ ಕುಸಿದಿದೆ. ಕೆಲವು ವರ್ಗದ ಅಡಕೆ ಬೆಲೆಗಳು ಕುಸಿಯುವುದನ್ನು ತಡೆಯಲು ರಾಜ್ಯ ಸರ್ಕಾರ ಮಾರುಕಟ್ಟೆ ಪ್ರವೇಶಿಸುವುದೂ ಉಂಟು. ಇದಲ್ಲದೆ ಶಿವಮೊಗ್ಗದಲ್ಲಿ ಅಡಕೆ ಮಾರಾಟ ಸಹಕಾರಸಂಘ ಕಳೆದ 20–25 ವರ್ಷಗಳಿಂದ ಕೆಲಸಮಾಡುತ್ತ ಇದೆ. ಬೆಳೆಗಾರರೇ ಇದರ ಸದಸ್ಯರು.

**ಅಡಕೆಯ ತಾಂತ್ರಿಕತೆ:** ಅಡಕೆ ಮರದಲ್ಲಿ ಅಡಕೆಯ ಜೊತೆಗೆ, ಅಡಕೆ ಮೇಲಿರುವ ಸಿಪ್ಪೆ ಸಿಗುತ್ತದೆ. ಸಿಪ್ಪೆಯಲ್ಲಿ ಸೆಲ್ಯುಲೋಸ್, ಹೆಮಿಸೆಲ್ಯುಲೋಸ್ ಅಂಶ ಜಾಸ್ತಿ ಇರುವುದರಿಂದ ಇವುಗಳ ವಿಸರ್ಜನೆ ಒಂದು ಸಮಸ್ಯೆ. ಇವು ಭೂಮಿಯಲ್ಲಿ ಸಹ ಬೇಗನೆ ಕೊಳೆಯುವುದಿಲ್ಲ. ಆದುದರಿಂದ ಇವುಗಳ ಉಪಯೋಗ ಕಡಿಮೆ.

ಕೇಂದ್ರ ಸರ್ಕಾರದ ಅಡಕೆ ಸಂಸ್ಥೆ 1959ರಲ್ಲಿ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಅಡಕೆಯ ತಾಂತ್ರಿಕತೆಯ ಬಗ್ಗೆ ಕೆಲವು ಪರಿಶೋಧನೆಗಳನ್ನು ಕೈಗೊಂಡಿತ್ತು ಮತ್ತು ಮದರಾಸಿನ ಅರಣ್ಯ ಸಂಶೋಧನೆಯ ಕೇಂದ್ರದ ಕೆಲವು ಪರಿಶೋಧನೆಗಳಿಗೆ ಧನಸಹಾಯ ಮಾಡಿತು. ಈ ಸಂಸ್ಥೆಗಳ ಮುಖ್ಯ ಉದ್ದೇಶ (1) ಅಡಕೆಯ ಇತರ ಉಪಯೋಗ (2) ಬೇರೆ ಬೇರೆ ಅಡಕೆ ತಳಿಗಳಲ್ಲಿರುವ ಪದಾರ್ಥಗಳು (3) ಅವು ಕಟಾವಿಗೆ ಬರಬೇಕಾದ ಕಾಲಾವಧಿ–ಇವುಗಳನ್ನು ಕಂಡುಹಿಡಿಯುವುದು.

ಡೆಹರಾಡೂನಿನಲ್ಲಿರುವ ಅರಣ್ಯವಿಜ್ಞಾನ ಕೇಂದ್ರದಲ್ಲಿ ಅಡಕೆ ಸಿಪ್ಪೆಯನ್ನು ಕಾಗದದ ತಯಾರಿಕೆಯಲ್ಲಿ ಉಪಯೋಗಿಸುವ ಬಗ್ಗೆ ಪರಿಶೀಲಿಸುತ್ತಿದ್ದಾರೆ. ಅಡಕೆ ಸಿಪ್ಪೆಯನ್ನು ಬಾಳೆಯ ದಿಂಡಿನೊಂದಿಗೆ ಸರಿಯಾದ ಪ್ರಮಾಣದಲ್ಲಿ ಮಿಶ್ರಮಾಡಿದರೆ ಕ್ರಾಫ್ಟ್ ಮಾದರಿಯ ಕಾಗದವನ್ನು ತಯಾರಿಸಬಹುದೆಂದು ತಿಳಿದುಬಂದಿದೆ.

ಅಡಕೆ ಎಲೆಗಳನ್ನು ಸಣ್ಣ ತುಂಡುಗಳಾಗಿ ಮಾಡಿ ದನಗಳ ಮೇವಾಗಿ ಉಪಯೋಗಿಸಬಹುದು. ಅಡಕೆ ಹಾಳೆಯನ್ನು ವಿವಿಧ ಮಾದರಿಯ ಹಲಗೆಗಳಾಗಿಯೂ ಚಪ್ಪಲಿಗಳಿಗೆ ಹಾಕುವ ಅಟ್ಟೆಯನ್ನಾಗಿಯೂ ಸಾಮಾನು ಸುತ್ತುವ ಕಾಗದವನ್ನಾಗಿಯೂ ಉಪಯೋಗಿಸುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ.

ಅಡಕೆ ಬೆಲೆ ಇಳಿಮುಖವಾದಾಗಿನಿಂದ ಅಡಕೆಯನ್ನು ಎಣ್ಣೆ, ಪ್ರೊಟೀನ್, ರೆಸಿನ್, ಆಲ್ಕಾಲಾಯ್ಡ್‌ಗಳ ಉತ್ಪಾದನೆಗೆ ಉಪಯೋಗಿಸುವ ಬಗ್ಗೆ ಪರಿಶೋಧನೆ ನಡೆಸಲಾಗುತ್ತಿದೆ. ಅಡಕೆ ತೋಟಗಳಲ್ಲಿ ವಾಣಿಜ್ಯ ಬೆಳೆ ವೆನಿಲಾವನ್ನೂ ಇತ್ತೀಚೆಗೆ ಬೆಳೆಯಲಾಗುತ್ತಿದೆ.(ಬಿ.ವಿ.ವಿ.)

**ಅಡಗಟ್ಟು :** ಮೋಟರು ಬಂಡಿಯ ಬಲೋತ್ಪಾದಕ ಎಂಜಿನ್ನು ಮತ್ತು ವಾಹನ ಚಾಲನೆಗೆ ಅಗತ್ಯವಾದ ಯಾಂತ್ರಿಕ ಸಜ್ಜನ್ನು ಒಳಗೊಂಡಿರುವ ಭಾಗ (ಛಾಸಿಸ್, ನ್ಯಾಧಾರ) ನಾಲ್ಕು ಚಕ್ರಗಳಿಂದ ಸ್ಪ್ರಿಂಗುಗಳ ಮೂಲಕ ಸೂಕ್ತ ರೀತಿಯಲ್ಲಿ ನೇತುಹಾಕಿರುವ ಲೋಹದ ಒಂದು ಚೌಕಟ್ಟು ಸಾಧಾರಣವಾಗಿ ಇದರ ಆಧಾರ. ಈಗಿನ ಸಮೂಹ ಉತ್ಪಾದನೆಗೆ ಹೊಂದಿಕೊಂಡಂತೆ ಇದ್ದು ಒಡಲಿನ (ಬಾಡಿ) ಪ್ರತ್ಯೇಕ ವಿಭಿನ್ನ ಶೈಲಿಗಳಿಗೂ ಹೊಂದಿಕೊಂಡು, ಅದಕ್ಕೇ ಕೂಡಿಕೊಳ್ಳುವಂತೆ ಅಡಗಟ್ಟು ರಚಿತವಾಗಿರುತ್ತದೆ.

ಚೌಕಟ್ಟು: ಮೋಟಾರು ವಾಹನಗಳಿಗೆ ಚೌಕಟ್ಟೇ ಆಧಾರ. ಬಂಡಿಯ ಒಡಲು ಮತ್ತು ಇತರ ಸಜ್ಜುಗಳು ಅದಕ್ಕೆ ಬಂಧಿಸಲ್ಪಟ್ಟಿರುವುದರಿಂದಲೂ ಇಂಜಿನ್ನು ಮತ್ತು ಚಾಲಕ ಸಜ್ಜುಗಳನ್ನು ಅದು ಹೊತ್ತಿರುವುದರಿಂದಲೂ ಚಕ್ರಗಳು ಮತ್ತು ಅಚ್ಚಿನ ಮೂಲಕ ರಸ್ತೆಯ ಸ್ಥಿತಿಯಿಂದಾಗಿ ಅದಕ್ಕೆ ತಗಲುವ ಧಕ್ಕೆ ಮತ್ತು ಬಡಿತಗಳನ್ನು ತಡೆದು ಲೀನವಾಗಿಸಿಕೊಳ್ಳುವ ದೃಢತ್ವ (ರಿಜಿಡಿಟಿ) ಅದಕ್ಕಿರಬೇಕು. ಅದರ ರಚನೆಗೆ ಪರಿಗಣಿಸಬೇಕಾದ ಅಗತ್ಯ ಅಂಶಗಳೆಂದರೆ ಭದ್ರತೆ ಮತ್ತು ಅಂಗೀಕಾರಾರ್ಹವಾದ ಕನಿಷ್ಠ ಮಿತಿಯ ತೂಕ. ಎರಡೂ ಪಾರ್ಶ್ವಗಳಲ್ಲಿ ಉಕ್ಕಿನ ಒಂದೊಂದು ದ್ವಾರಕೊಳವೆ (ಚಾನಲ್) ವಿಭಾಗಗಳು ಮತ್ತು ಅವುಗಳನ್ನು ಪರಸ್ಪರ ಬಂಧಿಸುವ ಅದೇ ವಿಭಾಗದ ಅಡ್ಡ ಅಥವಾ ಕತ್ತರಿಗಟ್ಟಿನಿಂದ ಚೌಕಟ್ಟು ರಚಿತವಾಗಿರುತ್ತದೆ. ತೂಕವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಈ ಪಕ್ಕದ ವಿಭಾಗಗಳು ಅಧಿಕಬಾಗುವ ಮಹತ್ವವಿರುವ (ಬೆಂಡಿಂಗ್ ಮೊಮೆಂಟ್) ನಡುಭಾಗದಲ್ಲಿ ಆಳವಾಗಿದ್ದು, ತುದಿಗಳತ್ತ ಬಾಗುವ ಮಹತ್ವ ಕಡಿಮೆಯಾದಂತೆ ಇವೂ ಕ್ರಮೇಣ ಚೂಪಾಗುತ್ತವೆ. ವಾಹನ ಚಲಿಸುತ್ತಿರುವಾಗ ಮುಂದಿನ ಚಕ್ರಗಳಿಗೆ ಸಲೀಸಾಗಿ ತಿರುಗಿಕೊಳ್ಳಲು ಅವಕಾಶವಾಗುವಂತೆ ಚೌಕಟ್ಟಿನ ಮುಂಭಾಗದ ಅಗಲ ಕಡಿಮೆಯಾಗಿರುವುದಲ್ಲದೆ ವಾಹನದ ಗುರುತ್ವಕೇಂದ್ರ ಆದಷ್ಟು ಕೆಳಮಟ್ಟದಲ್ಲಿದ್ದು ಹಿಂಭಾಗದ ಸ್ಪ್ರಿಂಗ್ ಜೋಡಣೆಗೆ ಹೊಂದಿಕೊಳ್ಳುವಂತೆ ಚೌಕಟ್ಟಿನ ಹಿಂದಿನ ತುದಿಯನ್ನು ಎತ್ತರಿಸಲಾಗಿರುತ್ತದೆ. ವಾಹನದ ಒಡಲು ಈ ಚೌಕಟ್ಟಿಗೆ ನೇರವಾಗಿ ಬಂಧಿತವಾಗಿರುವುದರಿಂದ ಈ ಚೌಕಟ್ಟಿನಲ್ಲೇನಾದರೂ ಬಾಗು ಅಥವಾ ತಿರಿಚು (ಟ್ವಿಸ್ಟ್) ಉಂಟಾದರೆ ಅದು ಒಡಲಿಗೂ ಸಾಗಿ ವಾಹನ ಕೀಚುಗುಟ್ಟುವುದು ಮತ್ತು ರಟ–ರಟಗುಟ್ಟುವುದರಿಂದ ಅದನ್ನು ಚೌಕಟ್ಟಿನ ಕತ್ತರಿಗಟ್ಟು ತಡೆಯುತ್ತದೆ. ದ್ವಾರಕೊಳವೆಗಳ ಬದಲು ಪೆಟ್ಟಿಗೆಯಾಕಾರದ ಉಕ್ಕಿನ ದೂಲಗಳನ್ನು (ಗರ್ಡರ್) ಉಪಯೋಗಿಸುವುದರಿಂದ ದೃಢತ್ವವನ್ನು ಸಾಧಿಸಿದಂತಾಗಿ ಕತ್ತರಿಗಟ್ಟನ್ನು ಉಪಯೋಗಿಸದಿರಬಹುದು. ಹಾಗೆಯೇ ವಾಹನದ ಒಡಲನ್ನೇ ಸೂಕ್ತರೀತಿಯಲ್ಲಿ ಭದ್ರಪಡಿಸಿ, ಚೌಕಟ್ಟಿನ ಕಾರ್ಯವನ್ನೂ ಉಕ್ಕಿನ ದೂಲವೇ ವಹಿಸುವಂತೆ ಕೆಲವು ತಯಾರಕರು ಮಾಡಿರುತ್ತಾರೆ. ಪ್ರತ್ಯೇಕ ಚೌಕಟ್ಟಿನ ಬದಲು ಸಮಗ್ರ ಒಡಲು ಚೌಕಟ್ಟನ್ನು ಉಪಯೋಗಿಸುವುದರಿಂದ ವಾಹನದ ತೂಕವನ್ನು ಲಘುವಾಗಿರಿಸಿ ರಚನೆಯನ್ನು ಸರಳಗೊಳಿಸಿರುವುದೂ ಉಂಟು.

ಮುಂತುದಿಯ ಜೋಲಣೆ: ಇತ್ತೀಚಿನ ಮೋಟಾರು ವಾಹನಗಳ ಮುಂದಿನ ಚಕ್ರಗಳು ಚೌಕಟ್ಟಿನಿಂದ ಸ್ವತಂತ್ರವಾಗಿ ಜೋಲಣೆಯಾಗಿದ್ದು, ಹಿಂದೆ ಬಳಕೆಯಲ್ಲಿದ್ದ ಮುಂದಿನ ಚಕ್ರಗಳ ಸ್ಥಿರ ಅಚ್ಚಿನ ದೆಸೆಯಿಂದುಂಟಾಗುತ್ತಿದ್ದ ಮುಂಭಾಗದ ಅದಿರಾಟವನ್ನು ಎಷ್ಟೋ ಕಡಿಮೆ ಮಾಡಿವೆ. ಒಂದೊಂದು ಚಕ್ರದ ಚಲನೆಯೂ ಒಂದು ಮಿತಿಗೊಳಪಟ್ಟು ಮತ್ತೊಂದರಿಂದ ಅಬಾಧಿತವಾಗಿರುತ್ತದೆ. ಸಾಮಾನ್ಯವಾಗಿ ಚಕ್ರ ಎರಡು ಸಮಾನಾಂತರ ಕೊಂಡಿಗಳ ಅಥವಾ ಹತೋಟಿಯ ತೋಳುಗಳ ಹಿಡಿತದಲ್ಲಿದ್ದು, ಕೆಳತೋಳಿಗೂ ಚೌಕಟ್ಟಿಗೂ ನಡುವೆ ಸುರುಳಿ (ಸ್ಪ್ರಿಂಗ್) ಇರುತ್ತದೆ. ಚಲನೆಯಲ್ಲಿ ಒಂದು ಚಕ್ರ ಸ್ವಲ್ಪ ಮೇಲಕ್ಕೂ ಮತ್ತೊಂದು ಕೆಳಕ್ಕೂ ಹೋದಾಗ ಹೆಚ್ಚು ಕಡಿಮೆ ಲಂಬವಾದ ನಿಲುವುಂಟಾಗುವಂತೆಯೂ ಇದ್ದು ಬಾಗಿ ತಿರುಗುವಾಗ ಚಾಲಕ ಚಕ್ರ (ಸ್ಟಿಯರಿಂಗ್) ವಾಸ್ತವಿಕ ಹತೋಟಿಗೊಳಪಟ್ಟಿರುವಂತೆಯೂ ಎರಡೂ ಚಕ್ರಗಳ ನಡುವೆ ತಿರುಗಿಸುವ ಮತ್ತು ದೃಢಗೊಳಿಸುವ ಕೊಂಡಿಗಳಿರುತ್ತವೆ.

ಹಿಂತುದಿಯ ಜೋಲಣೆ: ಹಿಂಭಾಗದ ಚಕ್ರಗಳಿಗೂ ಸ್ವತಂತ್ರ ಜೋಲಣೆಯ ಪ್ರಯತ್ನ ನಡೆದಿದ್ದರೂ ಇದು ಸಾಮಾನ್ಯವಾಗಿ ಬಳಕೆಯಲ್ಲಿರದೆ, ರೇಕು ಪದರದ (ಲ್ಯಾಮಿನೇಟೆಡ್ ಲೀಫ್) ಸ್ಪ್ರಿಂಗು ಅಥವಾ ಸುರುಳಿ ಮತ್ತು ನಾಭಿ ಕೊಂಡಿ (ರೇಡಿಯಸ್ ರಾಡ್) ಇವುಗಳ ಮೂಲಕ ಜೋಲಣೆಯಾಗಿರುವ ಹಿಂಬದಿಯ ಅಚ್ಚಿನ ರಚನೆಯೇ ಹೆಚ್ಚು ಬಳಕೆಯಲ್ಲಿದೆ. ರಸ್ತೆಯ ಧಕ್ಕೆಯನ್ನು ಲೀನಗೊಳಿಸುವುದನ್ನು, ಬಿರಿ (ಬ್ರೇಕ್) ಹಾಕುವಾಗ ಮತ್ತು ಚಾಲನೆಯಲ್ಲಿನ ತಿರುಗು ಪ್ರತಿಕ್ರಿಯೆಯನ್ನು ತಡೆದುಕೊಳ್ಳುವುದನ್ನು ಗಮನದಲ್ಲಿರಿಸಿ ಜೋಲಣೆಯ ರಚನೆಗೆ ಲಕ್ಷ್ಯಕೊಡಬೇಕಾಗುತ್ತದೆ. ರೇಕುಪದರದ ಸುರುಳಿಯನ್ನು ಉಪಯೋಗಿಸಿರುವಲ್ಲಿ ಅದರ ಒಂದು ತುದಿಯನ್ನು ಚೌಕಟ್ಟಿಗೆ ತಿರುಗಣಿಯಾಗಿರುವಂತೆ ನೇರವಾಗಿ ಕಟ್ಟಿ ಮತ್ತೊಂದು ತುದಿಯನ್ನು ಒಂದು ತೂಗು ಕೊಂಡಿಯ ಮೂಲಕ ಬಂಧಿಸಿರುವುದರಿಂದ, ಸುರುಳಿ ಬಾಗುವುದರಿಂದ ಆಗುವ ಅದರ ಉದ್ದದಲ್ಲಿನ ವ್ಯತ್ಯಾಸಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಹಿಂಬದಿಯ ಅಚ್ಚಿನ ಆವರಣ (ಹೌಸಿಂಗ್) ಕೋಶವನ್ನು ಸುರುಳಿಯ ಎರಡೂ ತುದಿಗಳ ನಡು ಭಾಗದಲ್ಲಿ ಬಂಧಿಸಲಾಗಿರುತ್ತದೆ.

ಧಕ್ಕಾ ಲೀನಕ ಹಾಗೂ ದೃಢಕಾರಕಗಳು: ಸುರುಳಿಗಳ ಪ್ರವಣತೆ ಮತ್ತು ಆರಂಭದಲ್ಲಿನ ಅಧಿಕ ಸಂಕೋಚನ ಅಥವಾ ವಿಸ್ತರಣ ಇವುಗಳನ್ನು ತಡೆಯಲು ಧಕ್ಕಾ ಲೀನಕಗಳನ್ನು (ಷಾಕ್ ಅಬ್‌ಸಾರ್ಬರ್) ಉಪಯೋಗಿಸಲಾಗುತ್ತದೆ. ವಿವಿಧ ಬಗೆಯಲ್ಲಿದ್ದು ಸಾಮಾನ್ಯವಾಗಿ ದ್ರವ ಸಾಮರ್ಥ್ಯದ (ಹೈಡ್ರಾಲಿಕ್) ರೀತಿಯವಾಗಿದ್ದು ನಾಲ್ಕು ಚಕ್ರಗಳೂ ಅವುಗಳ ಅಚ್ಚು ಮತ್ತು ಚೌಕಟ್ಟಿನ ನಡುವೆ ಇವನ್ನು ಅಳವಡಿಸಿರಲಾಗುತ್ತದೆ. ರಸ್ತೆಯ ತಿರುವಿನಲ್ಲಿ ಬಂಡಿಯೂ ಉರುಳುವಂತಾಗುವ ಪ್ರವೃತ್ತಿ ದೃಢಕಾರಕ ಕೊಂಡಿಯ ತಿರಿಚುವಿಕೆಯಿಂದಾಗಿ ತಡೆಯಲ್ಪಡುವುದಾಗಿದ್ದು ಹಿಂದಿನ ಮತ್ತು ಮುಂದಿನ ಚಕ್ರಗಳೆರಡಕ್ಕೂ ಉಪಯೋಗದಲ್ಲಿರುತ್ತದೆ.

ಬಿರಿಗಳು: ಮೋಟಾರು ವಾಹನಗಳು ಸಾಮಾನ್ಯವಾಗಿ ಎರಡು ರೀತಿಯ ಪ್ರತ್ಯೇಕ ಬಿರಿಗಳಿಂದ (ಬ್ರೇಕ್ಸ್) ಸಜ್ಜಾಗಿರುತ್ತವೆ. ವಾಹನ ಚಲಿಸುತ್ತಿರುವಾಗ ಉಪಯೋಗಿಸುವ ಕಾಲುಮೆಟ್ಟಿನಿಂದ ಪ್ರಚಲಿತವಾಗುವ ದ್ರವಚಾಲಿತ ಬಿರಿಯೊಂದು, ವಾಹನವನ್ನು ನಿಲ್ಲಿಸಿರುವಾಗ ಬಳಸುವ ಮೀಟು ಸರಳಿನಿಂದ ಪ್ರಚಲಿತವಾಗುವುದಿನ್ನೊಂದು, ಕಾಲುಮೆಟ್ಟಿನ ಒತ್ತಡಕ್ಕಿಂತ ಹೆಚ್ಚು ಬಲ ಅಗತ್ಯವಾಗುವ ಭಾರವಾದ ಟ್ರಕ್ಕು ಮತ್ತು ಬಸ್ಸುಗಳಲ್ಲಿ ವಾಯುಪ್ರೇರಿತ ಬಿರಿಗಳನ್ನು ಉಪಯೋಗಿಸಲಾಗುತ್ತದೆ.

ಚಕ್ರಗಳು ಮತ್ತು ಟೈರುಗಳು: ಪ್ರಾರಂಭದಿಂದಲೂ ಹಲವು ರೀತಿಯ ಮಾರ್ಪಾಡುಗಳಿಗೊಳಗಾಗಿರುವ ಮೋಟಾರು ವಾಹನ ಚಕ್ರದ ಈಗಿನ ಮಾದರಿ ಸಮಗ್ರ ಅಂಚುಳ್ಳ ಒತ್ತಿಕ್ಕಿ ರೂಪಿಸಿದ ಉಕ್ಕಿನ ಪಾಳೆಯದಾಗಿದ್ದು ಸಮಗ್ರವಾಗಿ ಅದನ್ನು ಹೊರತೆಗೆದು ಟೈರನ್ನು ಬದಲಾಯಿಸುವುದು ಸಾಧ್ಯವಾಗಿದೆ. ಹಾಗೆಯೇ ಟೈರೂ ಸಹ. ಹಿಂದೆ ನೀಡುತ್ತಿದ್ದ ಅಧಿಕ ಒತ್ತಡದಿಂದ ಇಂದಿನ ಕೆಳ ಒತ್ತಡಕ್ಕಿಳಿದಿರುವುದಲ್ಲದೆ ಅದರ ಮೇಲೆ ಬೀಳುವ ಹೊರೆಯಿಂದಾಗಿ ಅದರ ಆಯುಷ್ಯ ಕ್ಷೀಣಿಸುವುದನ್ನು ತಡೆಗಟ್ಟುವ ವೈಜ್ಞಾನಿಕ ರೀತಿಯ ಮೆಟ್ಟುಗಳ ವಿನ್ಯಾಸ. ಗಾಳಿ ಇಳಿದುಹೋಗದ ಟ್ಯೂಬುಗಳು–ಇತ್ಯಾದಿ ವಿಧಾನಗಳಿಂದ ಟೈರಿನ ತಯಾರಿಕೆಯಲ್ಲಿ ಪ್ರಗತಿಯನ್ನು ಸಾಧಿಸಲಾಗುತ್ತಿದೆ.

ಚಾಲಕ (ಸ್ಟಿಯರಿಂಗ್) ಗೇರ್: ಮೋಟಾರು ವಾಹನದ ಚಾಲಕಚಕ್ರವನ್ನು ಒಂದು ಉದ್ದನೆಯ ಚಾಲಕಸ್ತಂಭದ ಮೂಲಕ ಅದರ ಸುತ್ತುಚಲನೆಯನ್ನು ನೇರ ಚಲನೆಯನ್ನಾಗಿ ಮಾರ್ಪಾಡಿಸುವ ವರ್ಮ್ ಮತ್ತು ವರ್ಮ್ ವೃತ್ತಖಂಡದ ವ್ಯೂಹಕ್ಕೆ ಸೇರಿಸಲಾಗಿರುತ್ತದೆ. ಈ ನೇರಚಲನೆ ಸೂಕ್ತ ಕೊಂಡಿವ್ಯೂಹದ ಮೂಲಕ ಮುಂದಿನ ಎರಡು ಚಕ್ರಗಳಿಗೂ ಒಯ್ಯಲ್ಪಟ್ಟು ಅವು ತಿರುಗುವಂತೆ ಮಾಡುತ್ತದೆ. (ಕೆ.ವಿ.ಎಸ್.)

**ಅಡಪು :** ನೇರವಾಗಿ ನಾಯಿಯಿಂದಲೋ ಅದರ ತಳಹಾಸು, ಬಟ್ಟೆ ಬರೆ, ಕುಂಚಗಳ ಮೂಲಕವೋ ಮಾನವನಿಗೂ ಅಂಟಬಹುದಾದ ಕಜ್ಜಿ. ಮೈಕೈಗೆಲ್ಲ ಹರಡುವುದು ಅಪೂರ್ವ. ಕೈ ಬೆರಳುಗಳಿಗೆ ಅಂಟಿ ಕೆಲವು ಕಾಲ ಇದ್ದು ಹೋಗುವ ಅಂಟುರೋಗ, ಕಜ್ಜಿ ಹತ್ತಿಸುವ ಹುಳದ ಜಾತಿಗಳು ಒಂದೊಂದು ಪ್ರಾಣಿಯಲ್ಲೂ ಬೇರೆ ಬೇರೆ ಆಗಿರುವುದರಿಂದ ಇನ್ನೊಂದು ಪ್ರಾಣಿಯನ್ನು ಸೇರಿದಾಗ ಬೇಗನೆ ಸಾಯುತ್ತವೆ. ನಾಯಿಕಜ್ಜಿಯ ಹುಳ ಮಾತ್ರ ಹೀಗೆ ಬೇಗ ಸಾಯದು. ನಾಯಿಯಿಂದ ಬಂದ ಕಜ್ಜಿಗೂ ಮನುಷ್ಯನ ಕಜ್ಜಿಯ ಚಿಕಿತ್ಸೆಯೇ ಸಾಕಾಗುವುದು.

ಕುರಿಗಳಲ್ಲಿ ಅಪೂರ್ವವಾಗಿ ಈ ಕಜ್ಜಿ ಅಂಟುವುದಾದರೂ ಸಾಕಿದ ಪ್ರಾಣಿಗಳಲ್ಲಿ ನಾಯಿ, ಬೆಕ್ಕು, ಕುದುರೆಗಳಲ್ಲಿ ಸಾಮಾನ್ಯ. ದನಕರುಗಳಿಗೂ ನರಿ, ಹಂದಿಗಳಿಗೂ ಹತ್ತಬಹುದು. ಹಕ್ಕಿಗಳಲ್ಲಿ ಕಜ್ಜಿ ಎದ್ದರೆ ಪುಕ್ಕಗಳು ಉದುರುತ್ತವೆ. ಒಂದೊಂದು ಪ್ರಾಣಿಯ ಕಜ್ಜಿಹುಳವೂ ಬೇರೆಯಾಗಿದ್ದರೂ ನಾಯಿಗೆ ಮಾತ್ರ ಎರಡು ಜಾತಿ ಹುಳದ ಕಜ್ಜಿ ಹತ್ತಬಹುದು. ಅದರಲ್ಲೂ ಕರಿಕಜ್ಜಿ ಹತ್ತಿದರಂತೂ ವಾಸಿಯಾಗುವುದು ತೀರ ಕಷ್ಟ. (ಡಿ.ಎಸ್.ಎಸ್.)

**ಅಡರುಬಳ್ಳಿಗಳು :** ದುರ್ಬಲವಾದ ಕಾಂಡಗಳನ್ನು ಪಡೆದಿದ್ದು ತಮಗೆ ತಾವೇ ನೇರವಾಗಿ ಇತರ ಗಿಡಗಳಂತೆ ಬೆಳೆಯಲಾರದ ಸಸ್ಯಗಳು (ಕ್ಲೈಂಬರ್ಸ್). ಇವು ಮೇಲ್ಮುಖವಾಗಿ ಬೆಳೆಯಲು ಬೇರೆ ಆಧಾರಗಳು ಬೇಕು. ಇಂಥ ಬೆಂಬಲ ದೊರೆತಾಗ, ಆಶ್ರಯದಾತ ಸಸ್ಯಗಳನ್ನೊ, ಯಾವುದೇ ರೀತಿಯ ಕಂಬ ಇತ್ಯಾದಿ ವಸ್ತುಗಳನ್ನೊ, ತಮ್ಮ ಮುಖ್ಯ ಕಾಂಡದಿಂದ ಇಲ್ಲವೆ ಕೆಲವು ರೀತಿಯ ವಿಶೇಷ ರೀತಿಯ ಅಂಗಾಂಗಗಳ ನೆರವಿನಿಂದ, ಸುತ್ತಿಕೊಂಡು, ಏರಿಕೊಂಡು ಬೆಳೆಯುತ್ತವೆ. ಇವಕ್ಕೆ ಸುರುಳಿಬಳ್ಳಿಗಳು (ಟ್ವೈನರ್ಸ್), ಏರುಬಳ್ಳಿಗಳು (ಸ್ಕ್ರಾಗ್ಲರ್ಸ್) ಎಂಬ ಇನ್ನಿತರ ಹೆಸರುಗಳೂ ಉಂಟು.

ಎಲ್ಲ ಅಡರುಬಳ್ಳಿಗಳೂ ಬೆಂಬಲವಿತ್ತ ವಸ್ತುಗಳನ್ನು ಹತ್ತಿ, ಹಬ್ಬಿ ಬೆಳೆಯದೇ ಇರಬಹುದು. ಅನೇಕ ಪೊದೆಗಳು ಮಂದಗತಿಯಲ್ಲಿ ಬೆಳೆದು ಬೆಂಬಲ ದೊರೆತಾಗ ಮಾತ್ರ ವಿಶೇಷ ಉಪಾಂಗಗಳನ್ನು ಬೆಳೆಸಿಕೊಂಡು ವೃದ್ಧಿಯಾಗುವುವು. ಕೆಲವು ಗುಲಾಬಿ

ಪ್ರಭೇದಗಳು ಮತ್ತು ಬೆತ್ತದ ಗಿಡಗಳು ಬಾಗಿದ ಮೇಲ್ಮುಳ್ಳುಗಳನ್ನು ಪಡೆದಿದ್ದು ಉಷ್ಣವಲಯದ ಕಾಡುಗಳಲ್ಲಿ ಹೇರಳವಾಗಿ, ಶ್ರೀಮಂತವಾಗಿ ಬೆಳೆದಿರುತ್ತವೆ. ಮನೋರಂಜಿನಿ ಗಿಡದ ಹೂದಂಡೆಯ ಬಾಗಿದ ಮುಳ್ಳುಗಳೂ ಲಾಂಟಾನ ಗಿಡದ ಬರೀ ಮುಳ್ಳುಗಳೂ, ಎಲಚಿ ಪ್ರಭೇದದ ಎಲೆಯ ಕಿವಿಗಳೂ ಹಬ್ಬಿ ಬೆಳೆಯಲು ಸ್ವಲ್ಪ ಮಟ್ಟಿಗೆ ಸಹಕಾರಿಯಾಗಿವೆ.

ವರ್ಗೀಕರಣ: ನೈಜವಾಗಿ ಹಬ್ಬಿ, ಅಡರಿಕೊಂಡು ಬೆಳೆಯುವ ರೀತಿಯ ಆಧಾರದ ಮೇಲೆ, ಇವುಗಳನ್ನು ಪ್ರಮುಖವಾಗಿ ಮೂರು ಪಂಗಡಗಳಾಗಿ ವರ್ಗೀಕರಣ ಮಾಡಬಹುದು: 1. ಕುಡಿ ಸುರುಳಿಯ ಅಡರುಬಳ್ಳಿಗಳು (ಟೆಂಡ್ರಿಲ್ ಕ್ಲೈಂಬರ್ಸ್). 2. ಬೇರು ಅಡರುಬಳ್ಳಿಗಳು (ರೂಟ್ ಕ್ಲೈಂಬರ್ಸ್) . 3. ಉಯ್ಯಾಲೆ ಅಡರುಬಳ್ಳಿಗಳು (ಲಯಾನಾಗಳು).




ಅಡರುಗಳು : 1. ಬೆತ್ತ 2. ಶಿವಶಕ್ತಿ ಬಳ್ಳಿ 3. ಬಟಾಣಿ 4. ಗುಲಗಂಜಿಬಳ್ಳಿ 5. ಮನೋರಂಜಿನಿ 6. ಮಿಂಚಿನಬಳ್ಳಿ 7. ದ್ರಾಕ್ಷಿಬಳ್ಳಿ 8. ಕುಂಬಳಜಾತಿಬಳ್ಳಿ 9. ಜುಮಕಿ ಹೂಬಳ್ಳಿ 10.ವೀಳೆಯದೆಲೆ ಬಳ್ಳಿ 11. ಕಸ್ಕುಟ

1. ಕುಡಿ ಸುರುಳಿಯ ಅಡರುಬಳ್ಳಿಗಳಲ್ಲಿ ಎರಡು ರೀತಿಯ ಸಸ್ಯಗಳಿವೆ. ಅವುಗಳಲ್ಲಿ ಒಂದು ಎಲೆಯ ಕುಡಿ ಸುರುಳಿಗಳ ಸಹಾಯದಿಂದಲೂ ಮತ್ತೊಂದು ಕಾಂಡದ ಕುಡಿ ಸುರುಳಿಯ (ಸ್ಟೆಮ್ ಟೆಂಡ್ರಿಲ್ಸ್) ಸಹಾಯದಿಂದಲೂ ಬೆಳೆಯುತ್ತವೆ. ಎಲೆಯ ಕುಡಿ ಸುರುಳಿ ಅಡರುಬಳ್ಳಿಗಳಲ್ಲಿ ಎಲೆಯ ಒಂದು ಭಾಗವೂ ಉಪಪತ್ರವೂ ಅಥವಾ ಇಡೀ ಎಲೆಯೊ ರೂಪಾಂತರಗೊಂಡು ಕುಡಿ ಸುರುಳಿಯಾಗುತ್ತದೆ. ಕುಡಿ ಸುರುಳಿಗಳು ಮೃದುವಾಗಿಯೂ, ಕೆಲವು ಸಾರಿ ಸುರುಳಿ ಸುತ್ತಿದ ತಂತಿಗಳಂತೆಯೂ ಚಾವಟಿ ಯಂತೆಯೂ ಇರುತ್ತವೆ. ಇವುಗಳ ಪ್ರಮುಖ ಕಾರ್ಯವೆಂದರೆ ಬಳ್ಳಿಗಳಿಗೆ ಹಬ್ಬುವ ಅಥವಾ ನೇರವಾಗಿ ಏರುವ ಅಂಗಗಳಾಗಿ ಕೆಲಸ ಮಾಡುವುದು. ಇವಕ್ಕೆ ಆಸರೆಯ ಸಂಪರ್ಕವಾದಾಗ, ಬಹು ಸೂಕ್ಷ್ಮಗ್ರಾಹಿಗಳಾಗಿ, ಒತ್ತಾಸೆಯಿತ್ತ ವಸ್ತುವನ್ನು ಸುತ್ತುಬಳಸಿ ಗಿಡ ಹಬ್ಬಿ ಬೆಳೆಯಲು, ಏರಲು ಅವಕಾಶ ಮಾಡಿಕೊಡುತ್ತವೆ. ಕರಡಿಕಣ್ಣಿನ ಗೆಡ್ಡೆ ಬಳ್ಳಿಯ (ಗ್ಲೋರಿಯೋಸ ಸುಪರ್ಬ) ಎಲೆಯ ತುದಿ ನೀಳವಾದ ಕುಡಿ ಸುರುಳಿಯಾಗಿ ಮಾರ್ಪಾಟು ಹೊಂದಿದ್ದು, ಗಿಡ ಅಡರಿ ಬೆಳೆಯಲು ನೆರವಾಗುತ್ತದೆ. ಬಟಾಣಿ ಗಿಡದಲ್ಲಿ ಮೇಲ್ತುದಿಯ ಎಲೆಗಳೂ ಸಿಹಿ ತೊಗರಿ ಗಿಡದಲ್ಲಿ ಇಡೀ ಎಲೆಯೂ ಕುಡಿ ಸುರುಳಿಗಳಾಗಿ ಮಾರ್ಪಾಟು ಹೊಂದಿವೆ. ಸೊಗದೆಬೇರಿನಲ್ಲಿ (ಸರ್ಸಪರಿಲ್ಲ) ಎಲೆಯ ಕಿವಿಗಳೂ ನರವೇಲಿಯದಲ್ಲಿ ಮೇಲ್ಭಾಗದ ಎಲೆಯೂ ಕುಡಿ ಸುರುಳಿಗಳಾಗಿರುತ್ತವೆ. ಕಾಡು ಸಾಸಿವೆ (ನಾಸ್ಟೂರ್ಸಿಯಮ್) ಮತ್ತು ಕ್ಲೆಮಾಟಿಸ್ ಗಿಡಗಳಲ್ಲಿ ಎಲೆಯ ತೊಟ್ಟು ಕುಡಿ ಸುರುಳಿಯಾಗಿರುತ್ತದೆ. ಮಿಂಚಿನ ಬಳ್ಳಿ (ಕಾರ್ಡಿಯೊಸ್ಪರ್ಮಮ್ ಹ್ಯಾಲಿಕಾಕ್ಯಾಬಮ್) ಮತ್ತು ಆಂಟಿಗೊನಾನ್ ಗಿಡಗಳಲ್ಲಿ ಹೂಗೊಂಚಲ ಹೂಗಳ ಪೈಕಿ ಕೆಲವು ಕುಡಿ ಸುರುಳಿಯ ರೂಪಾಂತರಗಳಾಗಿವೆ.

ಕಾಂಡದ ಕುಡಿಸುರುಳಿಯ ಅಡರುಬಳ್ಳಿಗಳಲ್ಲಿ ಕಾಂಡ ಎಳವೆಯಲ್ಲಿ ಸಾಮಾನ್ಯವಾಗಿ ದುರ್ಬಲವಾಗಿರುತ್ತದೆ. ಕಾಂಡದಿಂದ ಹೊರಟು ಮಾರ್ಪಟ್ಟ ಕುಡಿಸುರುಳಿಗಳು ಬೆಳವಣಿಗೆಯ ಚಲನೆಯನ್ನು ಪ್ರದರ್ಶಿಸುತ್ತವೆ. ಆಸರೆ ದೊರೆತ ಕೂಡಲೇ ಆ ವಸ್ತುವನ್ನು ಸುತ್ತಿಕೊಂಡು ಬೆಳೆಯಲಾರಂಭಿಸುತ್ತವೆ. ಬೆಳವಣಿಗೆಯುಳ್ಳ ಕಾಂಡದ ತುದಿ ವೃತ್ತಾಕಾರಕ್ಕೆ ಚಲಿಸಿ, ಆಸರೆಯಿತ್ತ ವಸ್ತುವನ್ನೇ ಸುತ್ತಿಕೊಳ್ಳುತ್ತದೆ. ಈ ರೀತಿ ಸುತ್ತಿಕೊಳ್ಳುವ ಕ್ರಿಯೆಗೂ ಭೂಮ್ಯಾಕರ್ಷಣೆಗೂ ಸಂಬಂಧವುಂಟೆಂದು ತಿಳಿದುಬಂದಿದೆ. ಇದಕ್ಕನುಸಾರವಾಗಿ ಅಡರುಬಳ್ಳಿ ಪ್ರದಕ್ಷಿಣೆ ಹಾಕಿಯೊ ಅಪ್ರದಕ್ಷಿಣೆ ಹಾಕಿಯೊ ಹಬ್ಬಿ ಬೆಳೆಯುತ್ತದೆ. ಜುಮುಕಿ ಹೂಬಳ್ಳಿಯಲ್ಲಿ (ಪ್ಯಾಸಿಫ್ಲೋರ) ಕೊಂಕುಳ ಮೊಗ್ಗು ಸುರುಳಿ ಸುತ್ತಿದ ಕುಡಿ ಸುರುಳಿಯಾಗಿ ಮಾರ್ಪಾಟು ಹೊಂದಿದೆ.

ಬಳ್ಳಿಯಲ್ಲಿ ಕಾಂಡದ ತುದಿಯೊ ಕವಲು ರೆಂಬೆಗಳೂ ಕುಡಿ ಸುರುಳಿಗಳಾಗಿರುತ್ತವೆ. ವರ್ಜಿನಿಯಾ ಹಂಬು ಮತ್ತು ಜಪಾನೀ ಐವಿ ಗಿಡಗಳ ಕುಡಿಸುರುಳಿಗಳ ತುದಿಗಳಲ್ಲಿ ಅಂಟಿನ ತಟ್ಟೆಗಳಿದ್ದು, ಅವು ಆಸರೆಯೀಯುವ ಗೋಡೆಯನ್ನು ಬಿಗಿಯಾಗಿ ಅಪ್ಪಿ, ಬಳ್ಳಿಗಳು ಮೇಲೇರಿ ಬೆಳೆಯಲು ಸಹಕಾರಿಯಾಗುತ್ತವೆ.

2. ಬೇರು ಅಡರುಬಳ್ಳಿಗಳು: ಈ ವರ್ಗದ ಗಿಡಗಳಲ್ಲಿ ಗೆಣ್ಣಿನ ಭಾಗದಿಂದ (ನೋಡ್) ಬಿಳಲು ಬೇರುಗಳು (ಅಡ್ವೆಂಟಿಷಸ್ ರೂಟ್ಸ್) ಬೆಳೆದುಕೊಂಡಿದ್ದು, ಅಡರುಬಳ್ಳಿಗಳು ಹಬ್ಬಿ ಬೆಳೆಯಲು ಸಹಕಾರಿಗಳಾಗಿವೆ. ಇಂಥ ಬೇರುಗಳ ತುದಿಯಲ್ಲೂ ಅಂಟುಬಟ್ಟಲುಗಳಿರುವು ದುಂಟು. ಅಂಟುದ್ರವ ಗಾಳಿಯ ಸಂಪರ್ಕ ಹೊಂದಿದ ಕೂಡಲೆ ಒಣಗಿ ಹೋಗುವುದರಿಂದ, ಬೇರುಗಳು ಆಸರೆಯನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತವೆ. ವೀಳೆಯದೆಲೆ, ಕಾಳುಮೆಣಸು ಮುಂತಾದ ಬಳ್ಳಿಗಳಲ್ಲಿ ಇಂಥ ಬೇರುಗಳನ್ನು ನೋಡಬಹುದು. ಪರಾವಲಂಬಿ ಸಸ್ಯವಾದ ಕಸ್ಕುಟ ಆಶ್ರಯ ಸಸ್ಯದ ಕಾಂಡವನ್ನು ಸುತ್ತಿಕೊಂಡು ಬೆಳೆಯುತ್ತದೆ. ಈ ಸುತ್ತುಬಳ್ಳಿ ವಿಶೇಷ ರೀತಿಯ ಹೀರುಬೇರು ಅಥವಾ ಶೋಷಣಾವಯವಗಳನ್ನು (ಸಕಿಂಗ್ ರೂಟ್ಸ್) ಆಶ್ರಯ ಸಸ್ಯದ ಕಾಂಡದೊಳಕ್ಕೆ ಕಳಿಸಿ ಆಹಾರವನ್ನು ಹೀರಿ ಬೆಳೆಯುತ್ತದೆ.

3. ಉಯ್ಯಾಲೆ ಅಡರುಬಳ್ಳಿಗಳು: ಬಹುವಾರ್ಷಿಕಗಳಾದ ಈ ಲತೆಗಳು ದಂಡಕಾರಣ್ಯದಲ್ಲಿ ಬೆಳೆಯುತ್ತವೆ. ಅರಣ್ಯದಲ್ಲಿ ಎತ್ತರವಾಗಿ ಬೆಳೆದಿರುವ ಮರಗಳ ಕಾಂಡವನ್ನು ಸುತ್ತಿಕೊಂಡು, ಮರದ ತುದಿಯೇರಿ, ಅಲ್ಲಿ ಸೂರ್ಯರಶ್ಮಿಗೆ ಎಲೆಗಳನ್ನು ವಿಸ್ತಾರವಾಗಿ ಹರಡುತ್ತವೆ. ಕಾಂಡಗಳು ಗಡುಸಾಗಿ ಬಲಯುತವಾಗಿದ್ದು, ಮರದಿಂದ ಮರಕ್ಕೆ ಹೆಣೆದುಕೊಂಡಿದ್ದು ಜೋತುಬಿದ್ದು ಉಯ್ಯಾಲೆಯಂತಾಗಿರುತ್ತವೆ. ಪರಿಣಾಮವಾಗಿ ಇಂಥ ಅರಣ್ಯಗಳಲ್ಲಿ ನುಸುಳಿಹೋಗುವುದೇ ಕಷ್ಟವೆನಿಸುತ್ತದೆ. ಮಾಧವೀಲತೆ, ಹೆಪ್ಪರಿಕೆ ಬಳ್ಳಿ (ಬಾಹಿನಿಯ ವಹ್ಲೀ), ತುರಿಬೀಳಬಳ್ಳಿ (ಮುಕೂನ ಅಟ್ರೋಪರ್ಪೂರ), ಕೈವಲ್ಯ ಬಳ್ಳಿ (ಮ್ಯೂಕೂನ ಮಾನೊಸ್ಪರ್ಮ), ಗಣಪೆ ಬಳ್ಳಿ (ಎಂಟಾಡ ಪ್ಯೂಸಿತ) ಇವು ಅಂಥ ಸಸ್ಯಗಳಿಗೆ ಉದಾಹರಣೆಗಳು.

ಉಪಯುಕ್ತ ಅಡರುಬಳ್ಳಿಗಳು: ಅಲಂಕಾರ, ನೆರಳು, ಫಲಪುಷ್ಪ, ಆಹಾರ ಮತ್ತು ಔಷಧಿಗಳಿಗಾಗಿ ಕೆಲವನ್ನು ಕೃಷಿ ಮಾಡಲಾಗಿದೆ. ಹಳದಿಹೂ (ಅಲ್ಲಮಂಡಾ ಕೆಥಾರ್ಟಿಕ), ಆಡು ಹೂಬಳ್ಳಿ (ಐಪೊಮಿಯ ಪಸ್ಕ್ಯಾಪ್ರ), ಕಾಮನಬಿಲ್ಲು ಬಳ್ಳಿ (ಥಂಬರ್ಜಿಯ ಮೈಸೊರೆನ್ಸಿಸ್) ಶಂಖ ಪುಷ್ಪಬಳ್ಳಿ (ಕ್ಲೈಟೋರಿಯ ಟರ್ನೆಶಿಯಾ), ರಂಗೂನ್ ಕೆಂಪು ಮೊಲ್ಲೆ (ಕ್ವಿಸ್ಕಾಲಿಸ್ ಇಂಡಿಕ), ಬೊಗೆನ್‌ವಿಲ್ಲಾ, ಜಾಜಿಮೊಲ್ಲೆ, ಮಲ್ಲಿಗೆ-ಇವೆಲ್ಲ ಅಲಂಕಾರದವು. ಕುಂಬಳಕಾಯಿ ಬಳ್ಳಿ, ಚಪ್ಪರ ಬದನೆ, ಬಸಳೆ ಬಳ್ಳಿ (ಬಸೆಲ್ಲ), ಬಟಾಣಿ (ಪೀ), ತೊಂಡೆಕಾಯಿ, ಹೀರೆ ಬಳ್ಳಿ, ಕಲ್ಲಂಗಡಿ ಬಳ್ಳಿ ಮುಂತಾದುವು ಹಣ್ಣು, ತರಕಾರಿಗಳಾಗಿ ಪ್ರಸಿದ್ಧ. ಶತಾವರಿ (ಆಸ್ಪ್ಯಾರಗಸ್), ಸೊಗದೆ ಬೇರು, ಆಡುಮುಟ್ಟದ ಬಳ್ಳಿ (ಟೈಲೊಫೋರ ಆಸ್ತೆಮ್ಯಾಟಿಕ), ಗುಲಗಂಜಿ ಬಳ್ಳಿ (ಅಬ್ರಸ್ ಪ್ರಿಕೆಟೋರಿಯಸ್), ಆಕಾಶಗರುಡ ಬಳ್ಳಿ (ಬ್ರೈಯೋನಿಯ ಅಪಿಗಾಲ), ಉಗುರುಸುತ್ತು ಬಳ್ಳಿ (ಡೀಮಿಯ ಎಕ್ಸ್‌ಟೆನ್ಸ), ಅಮೃತ ಬಳ್ಳಿ (ಟೈನೊಸ್ಪೊರ ಕಾರ್ಡಿಫೋಲಿಯ) ಮುಂತಾದವಕ್ಕೆ ಔಷಧಿ ಮಹತ್ವವಿದೆ. (ಎಚ್.ಕೆ.ಎಂ.)

**ಅಡಲುಗಳು** : ಬಳೆಯಾಕಾರದಲ್ಲಿದ್ದು ತಮ್ಮ ನಡುವಿನಲ್ಲಿ ಸರೋವರವನ್ನೊಳ ಗೊಂಡಿರುವ ಹವಳದ ದಿಬ್ಬಗಳು (ಅಟೋಲ್ಸ್) ಹಿಂದೂ, ಪೆಸಿಫಿಕ್ ಸಾಗರಗಳ ಉಷ್ಣವಲಯದ ಪ್ರದೇಶಗಳಲ್ಲಿ ಇಂಥ ಅಡಲುಗಳಿವೆ. ಉದಾ: ಭಾರತದ ಪಶ್ಚಿಮಕ್ಕೆ ಅರಬ್ಬೀಸಮುದ್ರದಲ್ಲಿರುವ ಲಕ್ಷದ್ವೀಪ, ಮಾಲ್ಡಿವ್ಸ್ ದ್ವೀಪಗಳು; ಹಿಂದೂ ಸಾಗರದ ಚಾಗೋಸ್

ದ್ವೀಪ ಸಮೂಹ, ಪೆಸಿಫಿಕ್ ಸಾಗರದ ಎಲ್ಲಿಸ್, ಫ಼ಿಜಿ ಮತ್ತು ಹವಾಯಿ ಮೊದಲಾದ ದ್ವೀಪಗಳು. ಮಲದೀವಿಗಳ ದಕ್ಷಿಣದ ತುದಿಯಲ್ಲಿರುವ ಸುವದಿವ ಪ್ರಪಂಚದ ಅತಿ ದೊಡ್ಡ ಅಡಲು. ಅದರ ಸುತ್ತುವರಿಯ ದಿಬ್ಬಗಳ ನಡುವೆ ನೂರಕ್ಕೂ ಹೆಚ್ಚು ದ್ವೀಪಗಳಿವೆ. ಅಡಲುಗಳ ಅಂಚಿನ ಸುತ್ತ ತೆಂಗು ಮತ್ತು ತಾಳೆ ಮರಗಳು ಹುಲುಸಾಗಿ ಬೆಳೆದಿವೆ.

ಭರತದ ವೇಳೆಅಡಲು ದ್ವೀಪಗಳು ಸಮುದ್ರದ ಅಲೆಗಳಡಿಯಲ್ಲಿ ಮುಳುಗಿರುವುದರಿಂದ, ನೌಕಾಸಂಚಾರಕ್ಕೆ ಆತಂಕವನ್ನು ಉಂಟುಮಾಡಬಲ್ಲವು.

ಈ ಅಡಲುಗಳ ರಚನೆಯ ಮೂಲವನ್ನು ತಿಳಿಯಲು ಭೂವಿಜ್ಞಾನಿಗಳು ಅನೇಕ ಹವಳದ ದ್ವೀಪಗಳನ್ನು ಶೋಧನೆ ಮಾಡಿದ್ದಾರೆ. ಸು. 1800$^{\circ}$ಮೀ ವರೆಗೂ ಹವಳದ ಹುಳುಗಳಿಂದ ನಿರ್ಮಿತವಾದ ಭಾಗಗಳೇ ಕಂಡಿವೆ. ಹವಳದ ಹುಳುಗಳು 36ಮೀ ಗಿಂತ ಹೆಚ್ಚು ಆಳದಲ್ಲಿ ಜೀವಿಸುವುದಿಲ್ಲವಾದುದರಿಂದ 550ಮೀ ವರೆಗೂ ವ್ಯಾಪಿಸಿರುವ ಅಡಲುಗಳ ರಚನೆ ಭೂವಿಜ್ಞಾನದ ಸಮಸ್ಯೆಗಳಲ್ಲೊಂದೆನಿಸಿದೆ. ಬಹುಜನರಿಗೆ ಸಮರ್ಪಕವೆನಿಸಿದ ಡಾರ್ವಿನನ ವಾದದಂತೆ, ಪ್ರಾರಂಭದಲ್ಲಿ ಹವಳದ ಅಂಚುದಿಬ್ಬಗಳಾಗಿದ್ದು, ಅನಂತರ ತಡೆದಿಬ್ಬಗಳಾಗಿ ಮಾರ್ಪಟ್ಟು, ನೆಲ ನೀರಿನಡಿಯಲ್ಲಿ ಕುಸಿಯುತ್ತ ಹೋದಂತೆ ಹವಳದ ಗೂಡುಗಳು ಬೆಳೆಯುತ್ತ ಬಂದು ಅಡಲುಗಳು ನಿರ್ಮಾಣವಾದವೆಂದು ನಂಬಲಾಗಿದೆ. (ಎಂ.ವಿ.)

**ಅಡವಿ ಗೋರಂಟಿ :** ಎರಿತ್ರೊಸೈಲೇಸೀ ಕುಟುಂಬಕ್ಕೆ ಸೇರಿದ ಒಂದು ಕಾಡುಸಸ್ಯ. ಎರಿತ್ರೊಸೈಲಾನ್ ಮಾನೋಗೈನಮ್ ಎಂಬುದು ಇದರ ಶಾಸ್ತ್ರೀಯ ಹೆಸರು. ಇಂಗ್ಲಿಷಿನಲ್ಲಿ ಇದನ್ನು ಬಾಸ್ಟರ್ಡ್ ಸ್ಯಾಂಡಲ್ ಎಂದೂ, ಕನ್ನಡದಲ್ಲಿ ದೇವದಾರಿ, ಚಂಬುಳಿಕೆ, ಗಂಧಗಿರಿ ಇತ್ಯಾದಿ ಇನ್ನಿತರ ಹೆಸರುಗಳಿಂದಲೂ ಕರೆಯಲಾಗುತ್ತದೆ. ಇದು ಶುಷ್ಕತೆ ಹೆಚ್ಚಾಗಿರುವಂಥ ಮುಳ್ಳುಕಂಟಿಗಳಿಂದ ಕೂಡಿರುವ ಬಂಜರು ಕುರುಚಲು ಪ್ರದೇಶಗಳಲ್ಲಿ ಬೆಳೆಯುತ್ತದೆ.

ಇದು ಪೊದೆರೂಪದಲ್ಲಿ ಬೆಳೆಯುವ ಸಸ್ಯ. ಕೆಲವೊಮ್ಮೆ ಮರವಾಗಿ ಬೆಳೆಯುವುದೂ ಉಂಟು. ಎಲೆಗಳು ಅರಳ ರೀತಿಯವು. ಕಾಂಡದ ಮೇಲೆ ಪರ್ಯಾಯ ರೀತಿಯಲ್ಲಿ ಜೋಡಣೆಗೊಂಡಿರುವುವು. ಎಲೆಗಳ ಕಕ್ಷದಲ್ಲಿ ಚಿಕ್ಕ ಗಾತ್ರದ ಬಿಳಿ ಹಸುರು ಬಣ್ಣದ ಹೂಗಳು ಅರಳುವುವು. ಹಣ್ಣು ಮಾಗಿದಾಗ ಕೆಂಪುಬಣ್ಣದ್ದಾಗಿರುತ್ತದೆ.

ಇದಕ್ಕೆ ಔಷಧೀಯ ಮಹತ್ತ್ವ ಇದೆ. ಇದರ ಬೇರು ಮತ್ತು ತೊಗಟೆ ಉದರಶೂಲೆಗೆ ಮದ್ದಾಗಿ ಬಳಕೆಯಾಗುತ್ತವೆ. ಇದರ ತೈಲಕ್ಕೆ ಚರ್ಮರೋಗ (ಕಜ್ಜಿ, ತುರಿ) ವಾಸಿಮಾಡುವ ಗುಣ ಇದೆ. ಅಡವಿಗೋರಂಟಿಯ ಎಲೆಯ ರಸವನ್ನು ಜೇನುತುಪ್ಪದೊಂದಿಗೆ ಸೇವಿಸಿದರೆ ಬಲ, ವೀರ್ಯ ವೃದ್ಧಿಯಾಗುವುವು. (ಎ.ಎನ್.ಎಸ್.)

**ಅಡವಿ ಬಾಪಿರಾಜು :** ಪ್ರಸಿದ್ಧ ತೆಲುಗು ಲೇಖಕ. 1895ರಲ್ಲಿ ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮವರವೆಂಬ ಗ್ರಾಮದಲ್ಲಿ ಹುಟ್ಟಿ ರಾಜಮಹೇಂದ್ರಿ (ಆರ್ಟ್ಸ್) ಕಲಾಶಾಲೆಯಲ್ಲಿ ಪದವೀಧರರಾದರು. ಸ್ವರಾಜ್ಯ ಚಳವಳಿಯಲ್ಲಿ ಕಾರಾಗೃಹವಾಸವನ್ನು ಅನುಭವಿಸಿದರು. ಬಂದರ್ ಕಲಾಶಾಲೆಯಲ್ಲಿ ಪ್ರಮೋದಕುಮಾರ ಚಟರ್ಜಿ ಅವರಲ್ಲಿ ಚಿತ್ರಲೇಖನವನ್ನು ಅಭ್ಯಸಿಸಿ ಸಿದ್ಧಹಸ್ತರಾದರು. ಮದರಾಸು ಲಾ ಕಾಲೇಜಿನಲ್ಲಿ ಬಿ.ಎಲ್. ಪದವಿಯನ್ನು ಪಡೆದು ಸ್ವಲ್ಪಕಾಲ ವಕೀಲಿವೃತ್ತಿಯಲ್ಲಿದ್ದರು. ಆಂಧ್ರಜಾತೀಯ ಕಲಾಶಾಲೆಗೆ ಅಧ್ಯಕ್ಷರಾಗಿಯೂ ತ್ರಿವೇಣಿ ಸಂಪಾದಕರಾಗಿಯೂ ಹೆಸರು ಗಳಿಸಿದರು.

ಕಲೆಯೇ ಜೀವನದ ಉಸಿರು. ಕವಿತ್ವ ಅಭಿನಯ, ಚಿತ್ರಲೇಖನ ಹೀಗೆ ಇವರು ಅನುಸರಿಸದೇ ಇರುವ ಕಲೆಯೇ ಇಲ್ಲ. ಇವರ ನಾರಾಯಣರಾವ್ ಎಂಬ ಕಾದಂಬರಿಗೂ ತಿಕ್ಕನಸೋಮಯಾಜಿ ಎಂಬ ಚಿತ್ರಕ್ಕೂ ಆಂಧ್ರ ವಿಶ್ವವಿದ್ಯಾನಿಲಯದ ಬಹುಮಾನಗಳು ಬಂದುವು. ನಾರಾಯಣರಾವ್ ಕಾದಂಬರಿ ಕನ್ನಡಕ್ಕೆ ಭಾಷಾಂತರವಾಗಿದೆ. ಹಿಮಬಿಂದು, ತುಫಾನು, ಗೋನಗನ್ನಾರೆಡ್ಡಿ, ಜಾಜಿಮಲ್ಲೆ, ಕೋನಂಗಿ–ಇವು ಇವರ ಇತರ ಕಾದಂಬರಿಗಳು. ಅಂಜಲಿ, ಹಂಪೀ ಶಿಥಿಲಾಲು ಇವರ ಕಥಾನಕಗಳು. ಗೋಧೂಳಿ, ರಾತಿರಥ, ಶಶಿಕಲಾ, ತೊಲಕರಿ, ಹಾರತಿ–ಇವು ಪದ್ಯಸಂಕಲನಗಳು. ಭೋಗಿಲೋಯ, ಉಷಾ ಸುಂದರಿ ಇವರ ರೇಡಿಯೋ ನಾಟಕಗಳು.

ಬಾಪಿರಾಜುರವರದು ರಸಾತ್ಮಕ ಹೃದಯ, ಮಧುರವಾಣಿ, ಆಕರ್ಷಣೀಯ ಆಕೃತಿ. ಜನ್ಮಾಂತರ ಸಂಸ್ಕಾರಸಿದ್ಧವಾದ ಪಾಂಡಿತ್ಯ, ಪ್ರಾಚ್ಯ, ಪಾಶ್ಚಾತ್ಯಕಲೆಗಳ ಸಂಸ್ಕಾರ ಇವನ್ನು ಅವರಲ್ಲಿ ಕಾಣಬಹುದು. ಅವರ ವ್ಯಾಖ್ಯಾನದ ಮಾರ್ಗವೇ ಅಪೂರ್ವ ಮತ್ತು ನವೀನ. ಅವರ ಗೋದಾವರೀ ಪ್ರಸಿದ್ಧವಾದ ಗೇಯ. ಅವರ ತೊಲಕರಿ ಜಾನಪದ ಜೀವನಮಾಧುರ್ಯವನ್ನೂ ಶಶಿಕಲಾ ಭಾವತೀವ್ರತೆಯನ್ನೂ ನಾರಾಯಣ ರಾವ್ ಜನಜೀವನವನ್ನೂ ಬಣ್ಣಿಸುತ್ತವೆ. ರವೀಂದ್ರರ ಊರ್ವಶಿಯಾಗಿ ಅವರ ಶಶಿಕಲಾ ಅತೀಂದ್ರಿಯ ಭೋಗ್ಯವಾದ ಯಕ್ಷಿಣಿಯಂತೆ ಕೈಗೆ ಸಿಕ್ಕದೆ ಮರೆಯುತ್ತದೆ.

ಕಾದಂಬರಿಗಳೇ ಬಾಪಿರಾಜುರನ್ನು ಅಜರಾಮರ ಸ್ಥಾನಕ್ಕೆ ಏರಿಸಿವೆ. ಪ್ರಾಚೀನ ಭಾರತ ಧರ್ಮಕ್ಕೆ ಹಿಮಬಿಂದು, ಕಾಕತೀಯರ ಆಚಾರವ್ಯವಹಾರಗಳಿಗೆ ಗೋನಗನ್ನಾರೆಡ್ಡಿ, ಆದುನಿಕ ಗಾಂಧೀಯುಗಕ್ಕೆ ನಾರಾಯಣರಾವ್ ಎಂಬ ಕಾದಂಬರಿಗಳು ಪ್ರತಿಬಿಂಬಗಳು. ಆಧುನಿಕ ತೆಲುಗು ಸಾಹಿತ್ಯದಲ್ಲಿ ವೀರೇಶಲಿಂಗಂ ಪಂತಲು ನವಯುಗ ಕರ್ತ, ಅಭ್ಯುದಯಗಾಮಿ; ವಿಶ್ವನಾಥ್ ಸತ್ಯನಾರಾಯಣ ಪ್ರಾಚೀನತಾವಾದಿ. ಬಾಪಿರಾಜು ಮಧ್ಯಮಾರ್ಗದಲ್ಲಿ ನಡೆಯುವ ಸಮನ್ವಯಶೀಲರು; ಆಂಧ್ರನಾಗಿ ಹುಟ್ಟಿ ಭಾರತೀಯನಾಗಿ ಬಾಳಿದ ಖ್ಯಾತ ಪುರುಷರು. (ಬಿ.ಆರ್.)

**ಅಡಿಗಟ್ಟು :** ಲೋಹದಿಂದ ಅಥವಾ ಮರದ ದಿಮ್ಮಿಗಳಿಂದ ಮಾಡಿರುವ ತೊಲೆಗಳು (ಕೀಲ್). ಇವನ್ನು ವಿಮಾನ, ದೋಣಿ, ಹಡಗು, ಮುಂತಾದುವುಗಳ ಕೆಳಭಾಗದಲ್ಲಿ ಉದ್ದದಲ್ಲಿ ಹಾಕಿರುತ್ತಾರೆ. ಇವು ವಿಮಾನದ ಅಥವಾ ಹಡಗಿನ ಮೇಲಿನ ಎಲ್ಲ ತೂಕಗಳನ್ನೂ ಸಮನಾಗಿ ಹೊರಬಲ್ಲುವು. ಕೇಂದ್ರೀಕೃತವಾದ ಭಾರವನ್ನು ಸಮನಾಗಿ ಹೊರಲು, ಬಾಗದಂತೆ ತಿರಿಚದಂತೆ ಇರಲು, ಅಡಿಗಟ್ಟಿನ ಗಾತ್ರವನ್ನು ಅದು ಹೊರಬಲ್ಲ ತೂಕವನ್ನು ನಿರ್ಧರಿಸಿ ಲೆಕ್ಕಾಚಾರ ಮಾಡುತ್ತಾರೆ. ನಿಜವಾಗಿ ಇವು ವಿಮಾನ ಅಥವಾ ಹಡಗಿನ ತಳಭಾಗದ ಆಧಾರಸ್ತಂಭಗಳು. (ಜಿ.ಟಿ.ಜಿ.)

**ಅಡಿಗಾಲುವೆ :** ರಸ್ತೆ ಸಣ್ಣ ಹಳ್ಳವನ್ನು ಇಲ್ಲವೆ ಕೊರಕಲನ್ನು ದಾಟುವಾಗ ಅಡಿಯಲ್ಲಿ ಕಟ್ಟುವ ಕಲ್ಲುಗಾರೆಯ ಚಿಕ್ಕ ಕಟ್ಟಡ (ಕಲ್ವರ್ಟ್). ಇದು ಮೇಲುಗಡೆಯಿಂದ ಬರುವ ಮಳೆ ನೀರನ್ನು ರಸ್ತೆಗೆ ಅಪಾಯವಾಗದಂತೆ ಕೆಳಗಡೆಗೆ ಸಾಗಿಸುತ್ತದೆ. ಸಾಮಾನ್ಯವಾಗಿ ಅಡಿಗಾಲುವೆಯಲ್ಲಿ ಒಂದು ಕಣ್ಣಿರುವುದೇ ಹೆಚ್ಚು. ಎರಡು ಕೊನೆಗಳಲ್ಲಿಯೂ ಇರುವ ಕಂಬಗಳನ್ನು ಕಲ್ಲಿನ ಅಡಿಪಾಯದ ಮೇಲೆ ಕಾಂಕ್ರೀಟು ಹಾಕಿ ಅದರ ಮೇಲೆ ಕಲ್ಲುಗಾರೆಯಿಂದ ಕಟ್ಟುತ್ತಾರೆ. ಕಣ್ಣಿನ ಅಗಲ 0.61–1.82 ಮೀ ಇರುತ್ತದೆ. ಈ ಕಣ್ಣುಗಳಿಗೆ ಅಡ್ಡಲಾಗಿ ಮೇಲಿನ ರಸ್ತೆ ಹೊರಬೇಕಾದ ತೂಕಕ್ಕೆ ಅನುಸಾರವಾಗಿ 152.4–203 ಮಿಮೀ. ದಪ್ಪದ ಹಸಿ ಕಲ್ಲು ಚಪ್ಪಡಿಗಳನ್ನು ಎಳೆಯುವುದೇ ರೂಢಿ ಕಣ್ಣಿನ ಅಗಲ ಹೆಚ್ಚಾದರೆ ಇಟ್ಟಿಗೆ ಗಾರೆಯ ಇಲ್ಲವೆ ಕಲ್ಲುಗಾರೆಯ ಕಮಾನುಗಳನ್ನು ಕಟ್ಟುತ್ತಾರೆ. ಈಚೆಗೆ ಅಡಿಗಾಲುವೆಗಳ ಚಪ್ಪಡಿಗಳನ್ನು ಎಲ್ಲೆಲ್ಲಿಯೂ ಪ್ರಬಲಿತಕಾಂಕ್ರೀಟಿನಿಂದ (ರಿಇನ್‌ಫೋರ್ಸ್ಡ್) ತಯಾರಿಸುತ್ತಿದ್ದಾರೆ. ಕಣ್ಣುಗಳ ಸಂಖ್ಯೆಯೂ ಹೆಚ್ಚುತ್ತಿದೆ. ಕಂಬಗಳ ಕೊನೆಗಳಿಂದ ಏರಿಯ ಕಡೆಗೆ ರೆಕ್ಕೆಗೋಡೆಗಳನ್ನು (ವಿಂಗ್ ವಾಲ್ಸ್) ಹಳ್ಳದ ಮಹಾಪ್ರವಾಹದ ಮಟ್ಟದವರೆಗೂ ಕಟ್ಟಿ ಏರಿಯ ಮಣ್ಣು ಕೊರೆಯದ ಹಾಗೆ ನೋಡಿಕೊಳ್ಳುತ್ತಾರೆ. ಇಂಥ ಕಡೆಗಳಲ್ಲಿ ರಸ್ತೆ ಅಡಿಗಾಲುವೆಯ ಎರಡು ಕಡೆಗಳಲ್ಲಿಯೂ ಸ್ವಲ್ಪ ದೂರ ಬಹಳ ಎತ್ತರವಿಲ್ಲದ ಏರಿಯ ಮೇಲೆ ಹೋಗುತ್ತದೆ. (ಎಚ್.ಸಿ.ಕೆ.)

**ಅಡಿಗೆ ಉಪ್ಪು :** ಸಾಮಾನ್ಯವಾಗಿ ಉಪ್ಪು ಎಂದು ಚಿರಪರಿಚಿತವಾದ ಈ ವಸ್ತು ಸೋಡಿಯಂ ಕ್ಲೋರೈಡ್ ಎಂಬ ರಾಸಾಯನಿಕ ಸಂಯುಕ್ತ. ಇದರ ಅಣುಸೂತ್ರ $NaCl$ 804$^{\circ}$ ಸೆಂ.ಗ್ರೇ. ಉಷ್ಣತೆಯಲ್ಲಿ ಕರಗುತ್ತದೆ. ದ್ರವಿತವಸ್ತು 1413$^{\circ}$ ಸೆಂ.ಗ್ರೇ. ಉಷ್ಣತೆಯಲ್ಲಿ ಕುದಿಯುತ್ತದೆ. ಕಲ್ಲುಪ್ಪಿನ (ರಾಕ್‌ಸಾಲ್ಟ್) ರೂಪದಲ್ಲಿ ಇದು ಪ್ರಕೃತಿಯಲ್ಲಿ ಹೇರಳವಾಗಿ ದೊರೆಯುತ್ತದೆ. ಸಮುದ್ರದ ನೀರಿನಲ್ಲಿ ಸು. ಶೇ.3 ರಷ್ಟು ಇದು ಸೇರಿಕೊಂಡಿದೆ. ಉಪ್ಪುನೀರಿನ ಚಿಲುಮೆ ಮತ್ತು ಸರೋವರಗಳೂ ಉಂಟು. ಶತಮಾನಗಳ ಕಾಲಾವಧಿಯಲ್ಲಿ ಇಂಥ ಸರೋವರದ ನೀರು ಇಂಗಿ, ಕಲ್ಲುಪ್ಪಿನ ಗಣಿಗಳು ರೂಪುಗೊಂಡಿವೆಯೆಂದು ಭಾವಿಸಲಾಗಿದೆ. ವಿಶ್ವದಲ್ಲೇ ಅತಿ ದೊಡ್ಡ ಕಲ್ಲುಪ್ಪಿನ ಗಣಿ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿದೆ.

ಉಪ್ಪನ್ನು ತಯಾರಿಸಲು ಮೂರು ಮುಖ್ಯ ವಿಧಾನಗಳಿವೆ. 1 ಸಮುದ್ರದ ನೀರಿನಿಂದ: ಮದ್ರಾಸ್ ಮತ್ತು ಬೊಂಬಾಯಿ–ಇವುಗಳೇ ಭಾರತದ ಪ್ರಮುಖ ಉಪ್ಪುತಯಾರಿಕಾ ಕೇಂದ್ರಗಳು. ಭಾರತದಲ್ಲಿ ಇದರ ವಾರ್ಷಿಕ ಉತ್ಪಾದನೆ ಸುಮಾರು 5 ಲಕ್ಷ ಟನ್ನುಗಳು. ತೇವವಾದ ಹವೆ ಮತ್ತು ಗಂಗ, ಬ್ರಹ್ಮಪುತ್ರ, ಇರವಾಡಿ ನದಿಗಳು ಸಮುದ್ರಕ್ಕೆ ಒಯ್ಯುವ ಹೊಸ ಹಾಗೂ ಸಿಹಿ ನೀರಿನ ದೆಸೆಯಿಂದಾಗಿ ಬಂಗಾಳ ಮತ್ತು ಮಾಯನ್ಮಾರ್‌ಗಳಲ್ಲಿ ಉಪ್ಪಿನ ಕೈಗಾರಿಕೆ ಸಾಧ್ಯವಾಗಿಲ್ಲ. ಇತರ ಉಷ್ಣದೇಶಗಳಂತೆ ಭಾರತದಲ್ಲೂ ಸಮುದ್ರದ ನೀರನ್ನು ಸೂರ್ಯನ ಶಾಖದಿಂದ ಇಂಗಿಸಿ ಉಪ್ಪನ್ನು ಪಡೆಯಲಾಗುತ್ತದೆ. ಸಮುದ್ರತೀರದಲ್ಲಿ ಅದರ ಹಿನ್ನೀರಿಗೆ (ಬ್ಯಾಕ್‌ವಾಟರ್) ಹೊಂದಿಕೊಂಡಂತೆ ಅನುಕೂಲವಾದ ಪ್ರದೇಶವನ್ನು ಆಯ್ಕೆಮಾಡಿಕೊಂಡು ಮಣ್ಣಿನ ಅಡ್ಡಗಟ್ಟೆಗಳನ್ನು ಹಾಕಿ, ವಿವಿಧ ಮಟ್ಟದ ಕೊಳಗಳನ್ನು ನಿರ್ಮಿಸಲಾಗುವುದು. ಇವುಗಳ ನಡುವೆ ಕಾಲುವೆಗಳ ಮೂಲಕ ಸಂಪರ್ಕವಿರುತ್ತದೆ. ಸಮುದ್ರದ ನೀರನ್ನು ಹೆಚ್ಚು ಆಳವಾಗಿರುವ ಕೊಳಗಳಿಗೆ ಹಾಯಿಸಲಾಗುವುದು. ಈ ಕೊಳಗಳಲ್ಲಿ ಹಲವು ದಿನಗಳವರೆಗಿರುವ ನೀರು ಸೂರ್ಯನ ತಾಪದಿಂದ ಭಾಗಶಃ ಆವಿಯಾಗಿ, ಉಪ್ಪಿನ ದ್ರಾವಣ ಸಾಂದ್ರೀಕರಿಸುತ್ತದೆ. ಅನಂತರ ಈ ದ್ರಾವಣವನ್ನು ಒಳಭಾಗದ ಅಷ್ಟು ಆಳವಲ್ಲದ ಕಟ್ಟೆಗಳಿಗೆ ರವಾನಿಸುತ್ತಾರೆ. ಕಾಲಕ್ರಮದಲ್ಲಿ ಉಪ್ಪು ಹರಳಿನ ರೂಪದಲ್ಲಿ ಹೊರಬೀಳುತ್ತದೆ. ಹರಳುಗಳನ್ನು ಕೆರೆದು, ಹೊರತೆಗೆದು, ಜರಡಿ ಹಿಡಿದು, ದಪ್ಪ ಮತ್ತು ಸಣ್ಣ ಹರಳುಗಳಾಗಿ ವಿಂಗಡಿಸಿ ಅನಂತರ ಮಾರಾಟಕ್ಕಿಡುತ್ತಾರೆ. ಅಡಿಗೆಗೆಂದು ನಾವು ಬಳಸುವ ಉಪ್ಪಿನ ಶೇ.60ರಷ್ಟು ಹೀಗೆ ಒದಗುತ್ತದೆ. ಫ್ರಾನ್ಸ್, ಇಟಲಿ, ಸ್ಪೇನ್, ಪೋರ್ಚುಗಲ್ ಮತ್ತು ಚೀನ ದೇಶಗಳಲ್ಲೂ ಅಮೆರಿಕ ಸಂಯುಕ್ತಸಂಸ್ಥಾನದ ಕ್ಯಾಲಿಫೋರ್ನಿಯಾದಲ್ಲೂ ಈ ವಿಧಾನ ರೂಢಿಯಲ್ಲಿದೆ. ಶೀತ ಪ್ರದೇಶಗಳಾದ ರಷ್ಯ ಮತ್ತು ಇಂಗ್ಲೆಂಡ್‌ಗಳಲ್ಲಿ ಸಮುದ್ರದ ನೀರನ್ನು ಹೆಪ್ಪುಗಟ್ಟಿಸುವ ವಿಧಾನ ಬಳಕೆಯಲ್ಲಿದೆ. ಈ ಕ್ರಮದಿಂದಾಗಿ ಉಪ್ಪಿನ ಸಾಂದ್ರದ್ರಾವಣ ದೊರೆಯುತ್ತದೆ. ಇದನ್ನು ಇಂಗಿಸಿ ಉಪ್ಪಿನ ಹರಳುಗಳನ್ನು ಪಡೆಯುತ್ತಾರೆ. 2 ಉಪ್ಪಿನ ಸರೋವರಗಳಿಂದ ಮತ್ತು ಭೂಗತ ನೀರಿನಿಂದ: ದೇಶೀಯ ಉಪ್ಪಿನ ಶೇ.30 ಭಾಗ ಈ ವಿಧಾನದಿಂದ ತಯಾರಾಗುತ್ತದೆ. ಕಚ್ (ರನ್–ಆಫ್–ಕಚ್) ಪ್ರದೇಶದ ಲವಣ ಸಂಗ್ರಹದ ಮೇಲೆ ಹಿಂದೆ ವೇಗವಾಗಿ ಬೀಸಿದ ಗಾಳಿಯೊಡನೆ ತೂರಿಬಂದ

ಉಪ್ಪಿನ ಧೂಳು ರಾಜಸ್ತಾನದ ಮರಳುಗಾಡಿನಲ್ಲಿ ಶೇಖರವಾದಂತೆ ತೋರುತ್ತದೆ. ಇಲ್ಲಿರುವ ಸಾಂಬಾರ್ ಲವಣಸರೋವರದ ವಿಸ್ತೀರ್ಣ ಮಳೆಗಾಲದಲ್ಲಿ ಸು. 232.20 ಚ.ಕಿ.ಮೀಆಗುತ್ತದೆ. ಇದೇ ರಾಜ್ಯದ ಪಚ್‌ಬಿದ್ರ ಎಂಬಲ್ಲಿ ಭೂಗತ ಉಪ್ಪುನೀರನ್ನು ಮೇಲೆತ್ತಿ ಉಪ್ಪಿಗಾಗಿ ಸಾಂದ್ರೀಕರಿಸುತ್ತಾರೆ. ಈ ವಿಧಾನದಲ್ಲಿನ ಬಾಷ್ಪೀಕರಣಕ್ಕೆ ನಾನಾ ಬಗೆಯ ಪರಿಣಾಮತಂತ್ರವನ್ನಾಗಲೀ (ಮಲ್ಟಿಪಲ್ ಇಫೆಕ್ಟ್ ಟೆಕ್ನಿಕ್) ಅಥವಾ ಕಲ್ಲಿದ್ದಲಿನಿಂದ ಕಾಯಿಸಿದ ದೊಡ್ಡ ಬೋಗುಣಿಗಳನ್ನಾಗಲೀ ಉಪಯೋಗಿಸುವುದು ಪದ್ಧತಿ. 3 ಉಪ್ಪಿನ ಗಣಿಗಳಿಂದ: ಈ ವಿಧಾನದಿಂದ ತಯಾರಾಗುವ ಉಪ್ಪಿನ ಪ್ರಮಾಣ ಶೇ.10. ತೈಲಯಂತ್ರದಿಂದ (ಆಯಿಲ್ ಎಂಜಿನ್) ಚಲಿಸುವ ಗಾಳಿಯ ಅದುಮು ಯಂತ್ರಗಳು ಲವಣ ಸಂಗ್ರಹವನ್ನು ಕೊರೆದು ಉಪ್ಪನ್ನು ಮೇಲೆತ್ತುತ್ತವೆ. ಉಪ್ಪಿನ ಹೆಂಟೆಗಳನ್ನು ಪುಡಿಮಾಡಿ, ಜರಡಿ ಹಿಡಿದು, ಹರಳುಗಳ ಗಾತ್ರಾನುಸಾರ ವಿಂಗಡಿಸಿದ ಅನಂತರವೇ ಮಾರುಕಟ್ಟೆಗೆ ಕಳುಹಲಾಗುವುದು. ಇಂಗ್ಲೆಂಡಿನ ಚೆಪ್ರೆರಿನಲ್ಲಿರುವಂತೆ, ಉಪ್ಪಿನ ಸಂಗ್ರಹ ಭೂಮಟ್ಟಕ್ಕಿಂತ ಕೆಳಗಿದ್ದರೆ ಯಂತ್ರ ನಿರ್ಮಿತ ರಂಧ್ರದ ಮೂಲಕ ನೀರನ್ನು ಹಾಯಿಸಿ, ದ್ರಾವಣರೂಪದಲ್ಲಿ ಉಪ್ಪನ್ನು ಮೇಲೆತ್ತಿ, ಅನಂತರ ಇಂಗಿಸಿ, ಹರಳಿನ ರೂಪಕ್ಕೆ ತರಬಹುದು.

ಶುದ್ಧೀಕರಣ : ಮಳೆಗಾಲದಲ್ಲಿ ಉಪ್ಪು ಕರಗಿಹೋಗುವ ಸಂಭವ ಹೆಚ್ಚು. ಅಶುದ್ಧ ಉಪ್ಪಿನಲ್ಲಿರುವ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಕ್ಲೋರೈಡ್– ಇವುಗಳೇ ಇದಕ್ಕೆ ಕಾರಣ. ಶುದ್ಧ ಉಪ್ಪಿಗೆ ನೀರನ್ನಾಕರ್ಷಿಸುವ ಗುಣವಿಲ್ಲ. ಆದ್ದರಿಂದ ಅಶುದ್ಧ ಉಪ್ಪನ್ನು ಅಲ್ಪಪ್ರಮಾಣದ ನೀರಿನಲ್ಲಿ ವಿಲೀನ ಮಾಡಿ ಶೋಧಿಸಿದರೆ ಅದ್ರಾವ್ಯ ವಸ್ತುಗಳಿಂದ ಉಪ್ಪು ದೂರವಾಗುತ್ತದೆ. ಹೈಡ್ರೋಜನ್ ಕ್ಲೋರೈಡ್ ಅನಿಲವನ್ನು ದ್ರಾವಣದೊಳಕ್ಕೆ ಅದು ಹೀರುವಷ್ಟು ಕಾಲ ಹಾಯಿಸಿದರೆ, ಶುದ್ಧ ಸೋಡಿಯಂ ಕ್ಲೋರೈಡ್ ಒತ್ತರಿಸುವುದು. ಅನಂತರ ಶೋಧಿಸುವುದರಿಂದ ಉಪ್ಪಿನ ಹರಳುಗಳು ಬೇರ್ಪಡುತ್ತವೆ. ಪ್ರಬಲ ಹೈಡ್ರೋಕ್ಲೋರಿಕ್ ಆಮ್ಲದಿಂದ ತೊಳೆದು, ಒಣಗಿಸಿ, ಕಾಯಿಸಿದರೆ, ದ್ರಾವಣದಲ್ಲಿನ ಅಲ್ಪಸ್ವಲ್ಪ ಹೈಡ್ರೋಜನ್ ಕ್ಲೋರೈಡ್ ಶೇಷಾಂಶವೂ ಹೋಗಿ, ಶುದ್ಧ ಉಪ್ಪು ಉಳಿಯುತ್ತದೆ.

ಗುಣಗಳು : ಉಪ್ಪು ಘನಾಕೃತಿಯ, ಬಣ್ಣವಿಲ್ಲದ ಹರಳು. ನೀರಿನಲ್ಲಿ ವಿಲೀನವಾದರೂ ಮದ್ಯಸಾರದಲ್ಲಿ ವಿಲೀನವಾಗದು. ಇದರ ದ್ರಾವಣತೆ (ಸಾಲ್ಯುಬಿಲಿಟಿ) ಉಷ್ಣತೆಯ ವ್ಯತ್ಯಾಸ ದಿಂದಾಗಿ ಅಷ್ಟೇನೂ ಹೆಚ್ಚಾಗುವುದಿಲ್ಲ. ಉದಾಹರಣೆಗೆ, 100 ಗ್ರಾ. ನೀರನ್ನು ಪರ್ಯಾಪ್ತ ಗೊಳಿಸಲು $0^{o}$ ಸೆಂ.ಗ್ರೇ.ನಲ್ಲಿ 35.7 ಗ್ರಾ. ಮತ್ತು $100^{o}$ ಸೆಂ.ಗ್ರೇನಲ್ಲಿ ಕೇವಲ 39.8 ಗ್ರಾ. ಉಪ್ಪು ಸಾಕು.

ಉಪ್ಪನ್ನು ಪ್ರಬಲ ಸಲ್ಫ್ಯೂರಿಕ್ ಆಮ್ಲದೊಡನೆ ಕಾಯಿಸಿದಾಗ ಹೈಡ್ರೋಜನ್ ಕ್ಲೋರೈಡ್, ಮ್ಯಾಂಗನೀಸ್ ಡೈಆಕ್ಸೈಡ್, ಇದ್ದರೆ ಕ್ಲೋರಿನ್ ಅನಿಲವೂ ಬಿಡುಗಡೆಯಾಗುತ್ತವೆ. ಕೈಗಾರಿಕಾ ಪ್ರಮಾಣದಲ್ಲಿ ಹೈಡ್ರೋಜನ್ ಕ್ಲೋರೈಡ್ ತಯಾರಿಸುವುದು ಹೀಗೆಯೇ. ದ್ರವಿತ ಉಪ್ಪನ್ನು ವಿದ್ಯುದ್ವಿಭಜನೆಗೆ ಒಳಪಡಿಸಿದರೆ ಧನ ಧ್ರುವದಲ್ಲಿ ಕ್ಲೋರಿನ್ ಋಣಧ್ರುವದಲ್ಲಿ ಸೋಡಿಯಂ ಲೋಹ ಬರುತ್ತದೆ. ಇದಕ್ಕೆ ಡೌನ್ ವಿಧಾನವೆನ್ನುವರು. ಪಾದರಸದ ಋಣದ್ರವವನ್ನು ಬಳಸಿ, ಸೋಡಿಯಂ ಕ್ಲೋರೈಡ್ ಕ್ಷಾರವೂ ಜಲಜನಕ (ಹೈಡ್ರೋಜನ್) ಮತ್ತು ಕ್ಲೋರಿನ್ ಉಪ ವಸ್ತುಗಳೂ ದೊರೆಯುತ್ತವೆ.

ಉಪಯೋಗಗಳು: ಅನುದಿನದ ಆಹಾರದಲ್ಲಿ ಉಪ್ಪಿನ ಆವಶ್ಯಕತೆ ಅತ್ಯಧಿಕ. ನಿತ್ಯಬಳಕೆಯ ಅಡಿಗೆ ಉಪ್ಪಿನಲ್ಲಿರುವ ಇತರ ಪೌಷ್ಟಿಕಾಂಶಗಳ ವಿವರ ಹೀಗಿದೆ: ಶೇ.1 ಕ್ಯಾಲ್ಸಿಯಂ ಸಿಲಿಕೇಟ್ ಅಥವಾ ಮೆಗ್ನೀಸಿಯಂ ಕಾರ್ಬೋನೇಟ್, ಅಯೋಡೀನ್ ಕೊರತೆಯನ್ನು ನಿವಾರಿಸಲು ಶೇ.0.01 ಪೊಟ್ಯಾಸಿಯಂ ಅಯೊಡೈಡ್, ಇದರಲ್ಲಿರುವ ಅಯೋಡೀನ್ ಅಂಶವನ್ನು ಕಾಪಾಡಲು ಶೇ.0.1 ಸೋಡಿಯಂ ಕಾರ್ಬೋನೇಟ್ ಮತ್ತು ಸೋಡಿಯಂ ಥಯೋಸಲ್ಫೇಟ್, ಪ್ರಾಣಿಗಳಿಗೂ ಉಪ್ಪಿನ ಅಗತ್ಯವುಂಟು. ವನ್ಯಮೃಗ ಸಂರಕ್ಷಣಾರಣ್ಯಗಳಲ್ಲಿ (ಗೇಮ್ ಸ್ಯಾಂಕ್ಚುಅರಿ) ವಾಸಿಸುವ ಕಾಡುಪ್ರಾಣಿಗಳ ಸಲುವಾಗಿ ಆಗಿಂದಾಗ್ಗೆ ನಿಯೋಜಿತ ಸ್ಥಳಗಳಲ್ಲಿ ಉಪ್ಪನ್ನು ಚೆಲ್ಲುತ್ತಾರೆ. ಉಪ್ಪಿನಲ್ಲಿಟ್ಟ ಮೀನು, ಮಾಂಸ ಮತ್ತು ಬೆಣ್ಣೆ ಬಹುಕಾಲ ಕೆಡುವುದಿಲ್ಲ. ಅಡಿಗೆ ಸೋಡ (ಬೇಕಿಂಗ್ ಪೌಡರ್ ಅಥವಾ ಸೋಡಿಯಂ ಬೈಕಾರ್ಬೊನೇಟ್) ಮತ್ತು ವಾಷಿಂಗ್ ಸೋಡ (ಸೋಡಿಯಂ ಕಾರ್ಬೋನೇಟ್) ತಯಾರಿಸುವುದು ಉಪ್ಪಿನಿಂದಲೇ. ಸೋಡಿಯಂ ಪರ್ಮುಟೈಟ್ ಎಂಬ ರಾಸಾಯನಿಕ ವಸ್ತು ಗಡಸುನೀರನ್ನು ಮೆದುಗೊಳಿಸಿ ತಾನು ನಿಷ್ಕ್ರಿಯವಾಗುತ್ತದೆ. ಮತ್ತೆ ಉಪ್ಪಿನ ಪ್ರಬಲ ದ್ರಾವಣದಿಂದ ತೊಳೆದರೆ ಪುನಶ್ಚೇತನಗೊಳ್ಳುತ್ತದೆ. ವನಸ್ಪತಿ ತೈಲಗಳೊಡನೆ (ಹೈಡ್ರಾಜಿನೇಟಿಡ್ ಆಯಿಲ್) ಸೋಡಿಯಂ ಹೈಡ್ರಾಕ್ಸೈಡನ್ನು ಬೆರೆಸಿ ಕುದಿಸಿದರೆ ಸಾಬೂನು ಲಭಿಸುತ್ತದೆ. ಅದಕ್ಕೆ ಉಪ್ಪನ್ನು ಸೇರಿಸದ ಹೊರತು ಸಾಬೂನು ಒತ್ತರಿಸುವುದಿಲ್ಲ. ಸಂಶೋಧನೆಯೇ ಮೊದಲಾದ ವೈಜ್ಞಾನಿಕ ಪ್ರಯೋಗಗಳಲ್ಲಿ ಉಪ್ಪು ಮತ್ತು ಮಂಜುಗೆಡ್ಡೆಯ ಶೈತ್ಯ ಮಿಶ್ರಣ ಬಳಕೆಯಾಗುತ್ತದೆ. ಪಿಂಗಾಣಿ ಮತ್ತು ಇತರ ಮಣ್ಣಿನ ಪಾತ್ರೆ, ಕೊಳಾಯಿ, ಜಾಡಿ–ಇತ್ಯಾದಿಗಳಿಗೆ ಹೊಳಪು ಕೊಡಲು, ವೈದ್ಯದಲ್ಲಿ, ರಾಸಾಯನಿಕ ವಿಶ್ಲೇಷಣೆಯಲ್ಲಿ, ಗಾಜು, ಚರ್ಮ, ಕಾಗದ ಮತ್ತು ಬಟ್ಟೆ ಉದ್ಯಮಗಳಲ್ಲಿ ಉಪ್ಪಿನ ಬಳಕೆ ವ್ಯಾಪಕವಾಗಿದೆ. (ಎಚ್.ಜಿ.ಎಸ್.)

**ಅಡಿಗೆ ಸೋಡ :** ದೋಸೆ, ಇಡ್ಲಿ, ಬೋಂಡ ಮುಂತಾದುವುಗಳಿಗೆ ಹಾಕುವ ಸೋಡಿಯಮ್ ಬೈಕಾರ್ಬೋನೇಟ್. ಬಿಸಿಯಲ್ಲಿ ಇದು ವಿಭಜಿಸಲ್ಪಟ್ಟು ಇಂಗಾಲಾಮ್ಲ ಉತ್ಪತ್ತಿಯಾಗಿ ಪದಾರ್ಥಗಳನ್ನು ಉಬ್ಬಿಸಿ ಮೃದುವಾಗುವಂತೆ ಗರಿಗರಿಯಾಗುವಂತೆ ಮಾಡುತ್ತದೆ. ಇದು ಕ್ಷಾರ ಗುಣವುಳ್ಳದ್ದು. ಆದ್ದರಿಂದ ಕೇಕ್ ಬಿಸ್ಕತ್ ಮುಂತಾದುವನ್ನು ಉಬ್ಬುವಂತೆ ಮಾಡಲು ಉಪಯೋಗಿಸುವ ಬೇಕಿಂಗ್ ಪೌಡರ್‌ನಲ್ಲಿ ಅಡಿಗೆ ಸೋಡ, ಟಾರ್ಟಾರಿಕ್ ಆಮ್ಲ ಅಥವಾ ಪೊಟಾಸಿಯಮ್ ಆಸಿಡ್ ಟಾರ್ಟರೇಟ್ ಇವುಗಳ ಸೂಕ್ತ ಮಿಶ್ರಣವಿರುತ್ತದೆ. ತೇವದಲ್ಲಿ ಬಿಸಿ ಮಾಡಿದಾಗ ಇವೆರಡರ ರಾಸಾಯನಿಕ ಕ್ರಿಯೆಯಿಂದ ಇಂಗಾಲಾಮ್ಲ ಉತ್ಪತ್ತಿಯಾಗಿ ಒಲೆಯಲ್ಲಿ ಇಟ್ಟ ಕೇಕ್ ಉಬ್ಬುತ್ತದೆ. ಕ್ಷಾರಪದಾರ್ಥ ಆಮ್ಲ ಪದಾರ್ಥದೊಂದಿಗೆ ಬೆರೆಯುವುದರಿಂದ ಬೇಯಿಸಿದ ಕೇಕ್‌ನಲ್ಲಿ ಕ್ಷಾರಗುಣ ಉಳಿಯುವುದಿಲ್ಲ.

ಇದರ ಉಪಯೋಗದಿಂದ ಪದಾರ್ಥಗಳು ರುಚಿಯಾಗುತ್ತವಾದರೂ ಆರೋಗ್ಯ ದೃಷ್ಟಿಯಿಂದ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಬಾರದು. (ವೈ.ಎಸ್.ಎಲ್.)

**ಅಡಿಮದ್ದು :** ಯುದ್ಧಕಾರ್ಯಾಚರಣೆಯಲ್ಲಿ ಬಳಸುವ ಸ್ಫೋಟಕಸಾಧನ (ಮೈನ್). ಇದನ್ನು ನೀರಿನಲ್ಲೂ ಭೂಮಿಯ ಮೇಲೂ ಉಪಯೋಗಿಸುತ್ತಾರೆ. 1487ರಲ್ಲಿ ತುಪಾಕಿ ಮದ್ದನ್ನು ಪ್ರಥಮ ಬಾರಿ ಅಡಿಮದ್ದಾಗಿ ಉಪಯೋಗಿಸಲಾಯಿತು. ಒಂದನೆಯ ಮಹಾಯುದ್ಧದಲ್ಲಿ ಇದರಲ್ಲಿಯೇ ತರಬೇತಿಹೊಂದಿದ ಸೈನಿಕರ ಒಂದು ತುಕಡಿಯೇ ಇತ್ತು. ಫ್ಲಾಂಡರ್ಸ್ ಯುದ್ಧದಲ್ಲಿ (1914) ಅಡಿಮದ್ದನ್ನು ಉಪಯೋಗಿಸುವುದರಲ್ಲಿ ಜರ್ಮನರು ಮೊದಲಿಗರಾಗಿದ್ದರು. ಮೆಸ್ಸೈನ್ಸ್ ಯುದ್ಧದಲ್ಲಿ (1917) ಬ್ರಿಟಿಷರು 1,000,000 ಪೌಂ ಸಿಡಿಮದ್ದನ್ನು ಅಡಿಮದ್ದಾಗಿ ಉಪಯೋಗಿಸಿದರು. ಭೂಮಿಯಲ್ಲಿ ಹುದುಗಿದ್ದು, ಮೇಲೆ ಒತ್ತಡಬಿದ್ದಾಗ ಅಥವಾ ವಿದ್ಯುತ್ ಸ್ಪರ್ಶವಾದಾಗ ಸಿಡಿಯುವ ಸಾಧನಕ್ಕೆ ಅಡಿಮದ್ದು ಎಂಬ ಹೆಸರು ಬಳಕೆಗೆ ಬಂದಿತು. ಅನಂತರ ವಿನಾಶಕ್ಕಲ್ಲದೆ ಸ್ವರಕ್ಷಣೆಗಾಗಿಯೂ ಅಡಿಮದ್ದಿನ ಬಳಕೆ ಹೆಚ್ಚಾಯಿತು.

ಸಮುದ್ರದಲ್ಲಿ ಬಳಸುವ ಅಡಿಮದ್ದುಗಳಲ್ಲಿ ಎರಡು ವಿಧ. 1. ನಿಯಂತ್ರಿತ ಅಡಿಮದ್ದು; ಇದನ್ನು ಸಮುದ್ರದ ದಂಡೆಯಿಂದಲೇ ನಿಯಂತ್ರಿಸಿ ಸಿಡಿಯುವಂತೆ ಮಾಡುತ್ತಾರೆ. ಶತ್ರುನೌಕೆ ಅಡಿಮದ್ದಿನ ಸಮೀಪಕ್ಕೆ ಬಂದಾಗ, ದಂಡೆಯಿಂದ ಅಡಿಮದ್ದಿನಲ್ಲಿರುವ ವಿದ್ಯುನ್ಮಂಡಲವನ್ನು ಪೂರ್ತಿಗೊಳಿಸಿ ಅದನ್ನು ಸಿಡಿಯುವಂತೆ ಮಾಡುತ್ತಾರೆ. ಇದನ್ನು ಪ್ರಮುಖವಾಗಿ ಬಂದರುಗಳ ರಕ್ಷಣೆಗಾಗಿ ಬಳಸುತ್ತಾರೆ. 2. ಅನಿಯಂತ್ರಿತ ಅಥವಾ ಸ್ವಯಂನಿಯಂತ್ರಿತ ಅಡಿಮದ್ದು; ಶತ್ರುನೌಕೆಗಳು ಅಡಿಮದ್ದಿನ ಮೇಲೆ ಬಂದಾಗ ಇದು ತಾನಾಗೇ ಸಿಡಿಯುವಂತೆ ತಂತಿಸುರುಳಿ ಯಿಂದ (ಸ್ಪ್ರಿಂಗ್) ಯಾಂತ್ರಿಕ ವ್ಯವಸ್ಥೆ ಅಥವಾ ವಿದ್ಯುನ್ಮಂಡಲ ವ್ಯವಸ್ಥೆಯನ್ನು ಮಾಡಿರುತ್ತಾರೆ. ಸಮುದ್ರದಲ್ಲಿ ಉಪಯೋಗಿಸುವ ಅಡಿಮದ್ದುಗಳನ್ನು ಶತ್ರುನೌಕೆಗಳ ಮೇಲೆ ದಾಳಿಮಾಡಲೂ ಶತ್ರುಪಕ್ಷದ ಜಲಾಂತರ್ಗಾಮಿಗಳಿಂದ (ಸಬ್‌ಮೆರಿನ್) ರಕ್ಷಣೆ ಪಡೆಯಲೂ ಸಮುದ್ರದ ವಿವಿಧ ಆಳಗಳಲ್ಲಿ ತೇಲುವಂತೆ ಹೊಂದಿಸುತ್ತಾರೆ. ಮೊದಲ ಮಹಾಯುದ್ಧದಲ್ಲಿ ಜರ್ಮನರು ಅಯಸ್ಕಾಂತೀಯ ಅಡಿಮದ್ದನ್ನು (ಮ್ಯಾಗ್ನೆಟಿಕ್ ಮೈನ್) ಉಪಯೋಗಿಸಿದರು. ಕಬ್ಬಿಣದಿಂದ ಕೂಡಿದ ಹಡಗು ಇದನ್ನು ತನ್ನೆಡೆಗೆ ಆಕರ್ಷಿಸಿದಾಗ, ಅಡಿಮದ್ದು ಅದಕ್ಕೆ ತಾಗಿ ಸಿಡಿಯುತ್ತಿತ್ತು.

ಭೂಮಿಯ ಮೇಲೆ ಬಳಸುವ ಅಡಿಮದ್ದುಗಳಲ್ಲೂ ನಿಯಂತ್ರಿತ ಅನಿಯಂತ್ರಿತ ಎಂಬ ಭೇದವಿದ್ದರೂ ಅವುಗಳನ್ನು ಪ್ರಮುಖವಾಗಿ ಹೀಗೆ ವಿಂಗಡಿಸಿದ್ದಾರೆ: 1 ಟ್ಯಾಂಕು ಪ್ರತಿರೋಧಕ (ಆ್ಯಂಟಿಟ್ಯಾಂಕ್) – ಇವನ್ನು ಪ್ರಮುಖವಾಗಿ ಟ್ಯಾಂಕುಗಳನ್ನು ನಾಶಪಡಿಸಲು ಭೂಮಿಯೊಳಗೆ ಹುದುಗಿಸಿಡುತ್ತಾರೆ. ದೂರದಿಂದಲೇ ವಿದ್ಯುನ್ಮಂಡಲ ಪೂರ್ತಿ ಮಾಡುವುದ ರಿಂದ ಇವುಗಳನ್ನು ಸಿಡಿಯುವಂತೆ ಮಾಡಬಹುದು ಅಥವಾ ಟ್ಯಾಂಕು ಹಾದು ಹೋದಾಗ ಅದರ ಮೇಲೆ ಉಂಟಾದ ಒತ್ತಡದಿಂದಾಗಿ ತಾನಾಗೇ ಸಿಡಿಯುವಂತೆ ಮಾಡಬಹುದು. 2 ವ್ಯಕ್ತಿ ಪ್ರತಿರೋಧಕ (ಆ್ಯಂಟಿ ಪರ್ಸನಲ್) ; ಇವನ್ನು ಭೂಮಿಯ ಮಟ್ಟದಲ್ಲೇ ನೆಟ್ಟು, ಹೊರಗೆ ಕಾಣದಂತೆ ಮಾಡಿರುತ್ತಾರೆ. ಹೊರ ಮುಚ್ಚಳದ ಮೇಲೆ ಭಾರಬಿದ್ದಾಗ, ತಂತಿಸುರಳಿಯಿಂದೇರ್ಪಟ್ಟ ಕ್ರಿಯೆಯಿಂದಾಗಿ ಅಡಿಮದ್ದು ಮನುಷ್ಯನ ಟೊಂಕದಮಟ್ಟಕ್ಕೆ ಹಾರಿ ಅನಂತರ ಚೂರುಚೂರಾಗಿ ಸಿಡಿಯುತ್ತದೆ. ಇದರಲ್ಲಿ ಕಬ್ಬಿಣದ ಚೂರುಗಳನ್ನು ಇಟ್ಟಿರುವುದರಿಂದ ಇದರ ಸಿಡಿತದಿಂದಾಗುವ ಹಾನಿ ಹೆಚ್ಚು.

**ಅಡಿಮದ್ದಿಡುವಿಕೆ, ಗುಡಿಸಿಹಾಕುವಿಕೆ (ಮೈನ್ ಲೇಯಿಂಗ್, ಮೈನ್ ಸ್ವೀಪಿಂಗ್) :** ಸಮರ ವಿಜ್ಞಾನದಲ್ಲಿ ಆತ್ಮರಕ್ಷಣೆಗಾಗಿ ಅಥವಾ ಯುದ್ಧ ಕ್ಷೇತ್ರದಲ್ಲಿ ಶತ್ರುಗಳ ಮುನ್ನಡೆಗೆ ಅಡ್ಡಿಯನ್ನೊಡ್ಡಲು ಹುದುಗಿಸಿಟ್ಟ ಅಡಿಮದ್ದನ್ನು ಕಂಡುಹಿಡಿದು ಅದನ್ನು ಹೊರತೆಗೆಯುವುದೂ ಗುಡಿಸಿಹಾಕುವುದೂ ಒಂದು ಮುಖ್ಯ ಘಟನೆ. ಹೊಸ ಹೊಸ ರೀತಿಯ ಅಡಿಮದ್ದುಗಳಿಗೆ ಪ್ರತಿರೋಧಕಗಳನ್ನು ಕಂಡು ಹಿಡಿಯುವುದು ಸಮರಯಂತ್ರ ಶಿಲ್ಪಿಗಳ (ಮಿಲಿಟರಿ ಇಂಜಿನಿಯರ್ಸ್) ಪ್ರಮುಖ ಕೆಲಸ ಕೆಲಸ.

ಸಮುದ್ರದ ಕೆಳಗೆ ಅಳವಡಿಸುವ ಅಡಿಮದ್ದುಗಳು ತಮ್ಮ ಮೇಲೆ ನೀರಿನ ಒತ್ತಡ ಹೆಚ್ಚಿದಾಗ ಸಿಡಿಯುತ್ತವೆ. ಶತ್ರು ಪಕ್ಷದ ಜಲಾಂತರ್ಗಾಮಿಗಳಿಂದ ರಕ್ಷಣೆ ಪಡೆಯಲು ಅಡಿಮದ್ದುಗಳನ್ನು ಪ್ಲವನಶಕ್ತಿ (ಬಾಯನ್ಸಿ) ಸೂತ್ರಗಳ ಸಹಾಯದಿಂದ ಸಮುದ್ರದ ವಿವಿಧ ಆಳಗಳಲ್ಲಿ ತೇಲುವಂತೆ ಮಾಡುತ್ತಾರೆ. ಇವುಗಳನ್ನು ಸಮುದ್ರದೊಳಗೆ 1,000 ಫ್ಯಾದಮ್

ಆಳದವರೆಗೂ ಅಳವಡಿಸಬಹುದು. ಅಯಸ್ಕಾಂತೀಯ ಅಡಿಮದ್ದುಗಳಿಂದ ರಕ್ಷಣೆಪಡೆಯಲು, ಎರಡು ದೂರದ ಚಿಕ್ಕ ನೌಕೆಗಳ ಮಧ್ಯೆ ಎರಡು ತಂತಿಗಳನ್ನು ಕಟ್ಟಿ ಅದರಲ್ಲಿ ವಿದ್ಯುತ್ತನ್ನು ಹರಿಸಿ ಕೃತಕ ಅಯಸ್ಕಾಂತಕ್ಷೇತ್ರವನ್ನುಂಟುಮಾಡುತ್ತಾರೆ. ಈ ಅಯಸ್ಕಾಂತಕ್ಷೇತ್ರದಿಂದ ಅಡಿಮದ್ದು ಮೇಲೆ ಬಂದು ಇದ್ದಲ್ಲಿಯೇ ಸಿಡಿಯುತ್ತದೆ. ಸುತ್ತಮುತ್ತ ನೈಸರ್ಗಿಕ ತಡೆಗಳಿಲ್ಲದ ಸ್ಥಳಗಳಲ್ಲಿ ಶತ್ರುಗಳಿಂದ ರಕ್ಷಣೆ ಪಡೆಯಲು ಇವುಗಳ ಬಳಕೆ ಹೆಚ್ಚಾಗಿ ಆಗುತ್ತದೆ. ಉತ್ತರ ಆಫ್ರಿಕದ ಟೋಬ್ರುಕ್ ಯುದ್ಧದಲ್ಲಿ (1940–41) ಸುತ್ತಲೂ ಮರುಭೂಮಿ ಇದ್ದುದರಿಂದ ಈ ಅಡಿಮದ್ದುಗಳನ್ನು ಬಹಳವಾಗಿ ಬಳಸಲು ಅವಕಾಶವಾಯಿತು.

ಅಡಿಮದ್ದುಗಳನ್ನು ಸಾಮಾನ್ಯವಾಗಿ ಲೋಹದ ಪಾತ್ರೆಗಳಲ್ಲಿ ಅಳವಡಿಸಿರುತ್ತಾರೆ. ಲೋಹದ ಚೂರುಗಳು ಅಲೆಗಳನ್ನು ಪ್ರತಿಫಲಿಸುತ್ತವೆ. ಈ ಸೂತ್ರವನ್ನುಪಯೋಗಿಸಿ ನೆಲದಲ್ಲಿ ಹುದುಗಿಸಿಟ್ಟ ಅಡಿಮದ್ದುಗಳನ್ನು ಕಂಡುಹಿಡಿಯುತ್ತಾರೆ. ಹಾಗೆ ಕಂಡುಹಿಡಿಯದಿರಲೆಂದು ಈಗ ಅಡಿಮದ್ದುಗಳನ್ನು ಅಲೋಹಗಳಾದ ಮರ, ಪ್ಲಾಸ್ಟಿಕ್ಕು, ಕಾಗದ ಮುಂತಾದುವುಗಳಲ್ಲಿ ಹೊಂದಿಸುತ್ತಾರೆ. ಒಳಗೆ ಲೋಹದ ಬದಲು ಗಾಜು ಮತ್ತು ಪಿಂಗಾಣಿ ಚೂರುಗಳನ್ನು ಅಲೋಹ ಭಾಗಗಳಾಗಿ ಉಪಯೋಗಿಸುತ್ತಾರೆ.

ಅಡಿಮದ್ದುಗಳಲ್ಲಿ ಟೆಲ್ಲರ, ಅಯಸ್ಕಾಂತೀಯ, ವಿಶೇಷ ರೀತಿಯ ಅಕೌಸ್ಟಿಕ್, ಆಯಿಸ್ಟರ್ ಹಾಗೂ ಜರ್ಮನಿಯ 5 ಅಡಿಮದ್ದುಗಳು ಪ್ರಮುಖವಾದುವು. (ಎ.ಎನ್.ಎಸ್.ಎಂ.; ಪಿ.ಕೆ.)

**ಅಡಿಲೇಡ್ :** ದಕ್ಷಿಣ ಆಸ್ಟ್ರೇಲಿಯ ಪ್ರಾಂತದ ರಾಜಧಾನಿ ನಗರ. ಟಾರೆನ್ಸ್ ನದೀಮುಖ ಪ್ರದೇಶದಲ್ಲಿದೆ. ಆಸ್ಟ್ರೇಲಿಯದ ನಗರಗಳಲ್ಲಿ 4ನೆಯ ಸ್ಥಾನ ಪಡೆದಿದೆ. 4ನೆಯ ವಿಲಿಯಮ್‌ನ ರಾಣಿಯ ಸ್ಮರಣಾರ್ಥವಾಗಿ ಸ್ಥಾಪಿಸಲ್ಪಟ್ಟಿತು. ಜನಸಂಖ್ಯೆ 1,072,585 (2001). ಮಳೆಗಾಲದ ಅವಧಿ 122 ದಿನಗಳು. ವಾರ್ಷಿಕ ಮಳೆ ಸರಾಸರಿ 50–60ಸೆಂ.ಮೀ. ವಾಯುಗುಣ ಹಿತಕರ. ಗೋಧಿ ಇಲ್ಲಿನ ಮುಖ್ಯ ಬೆಳೆ. ಈಗ ದೊಡ್ಡ ಉದ್ದಿಮೆಗಳು ತಲೆ ಎತ್ತಿವೆ. ಇಲ್ಲಿ



ಅಡಿಲೇಡ್ ವಿಶ್ವವಿದ್ಯಾನಿಲಯ

ಅಡಿಲೇಡ್ ವಿಶ್ವವಿದ್ಯಾನಿಲಯವಿದೆ (1874). ಇತರ ಸ್ಮಾರಕಗಳೆಂದರೆ; ಪಾರ್ಲಿಮೆಂಟ್‌ಭವನ, ಸರ್ಕಾರಿ ಭವನ ಮತ್ತು ಎರಡು ಬೃಹತ್ತಾದ ಕತೀಡ್ರಲ್‌ಗಳು. ಅಡಿಲೇಡ್ ಬಂದರು 1839ರಲ್ಲಿ ಸ್ಥಾಪನೆಗೊಂಡಿತು. 1840ರಲ್ಲಿ ನಗರ ಸಭೆ ರಚನೆಯಾಯಿತು. ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆ ಕೇಂದ್ರ. ಜೊತೆಗೆ ಖನಿಜಗಣಿಗಳಿಗೆ ಸಮೀಪದಲ್ಲಿ ನೆಲೆಸಿದೆ. ಕೈಗಾರಿಕಾ ಕೇಂದ್ರ. ತೈಲ ಶುದ್ಧೀಕರಣ ಕೇಂದ್ರಗಳಿದ್ದು, ಅಲ್ಲಿಂದ ನೈಸರ್ಗಿಕ ಅನಿಲ ಉತ್ಪಾದನಾ ಮತ್ತು ಬಳಕೆ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಉತ್ತಮ ಕೊಳವೆ ಮಾರ್ಗಗಳ ವ್ಯವಸ್ಥೆಯಿದೆ. (ಎನ್.ಸಿ.ವಿ.)

**ಅಡಿವರಸೆ :** ಗೋಡೆ ಮೊದಲಾದುವುಗಳ ತಳದಲ್ಲಿ ಮುಂದಕ್ಕೆ ಚಾಚಿಕೊಂಡಿರುವ ವರಸೆಗೆ ಈ ಹೆಸರಿದೆ. ಕಟ್ಟಡದ ಗೋಡೆಯನ್ನು ಕಟ್ಟುವಾಗ ಗಟ್ಟಿಯಾದ ಅಡಿಪಾಯ ಸಿಕ್ಕುವವರೆಗೂ ಅಗೆಯುತ್ತಾರಷ್ಟೆ. ಅಡಿಪಾಯದಲ್ಲಿ ಎಲ್ಲ ಕಡೆಗಳಲ್ಲೂ ಕಲ್ಲನ್ನು ನಿರೀಕ್ಷಿಸಲಾಗುವುದಿಲ್ಲ. ಸಾಮಾನ್ಯವಾದ ಅಡಿಪಾಯದ ಮಣ್ಣು ಒಂದು ಚದರಡಿಯ ಮೇಲೆ ಇಟ್ಟಿಗೆಗೋಡೆ ಹೊರುವಷ್ಟು ಭಾರವನ್ನು ಹೊರಲಾರದು. ಅದಕ್ಕಾಗಿ ಮಹಡಿಯ ಮನೆಯ 1 $^1/_2$ಮೀ ದಪ್ಪದ ಇಟ್ಟಿಗೆ ಗೋಡೆಯ ಅಡಿಪಾಯ 1.2ಮೀ ವರೆಗೂ ಅಗಲವಾಗಿರಬೇಕಾಗುತ್ತದೆ. ತಳಪಾಯದಲ್ಲಿ 152–228ಮೀ ವರೆಗೂ ಕಾಂಕ್ರೀಟನ್ನು ತುಂಬುತ್ತಾರೆ. ನೆಲಮಟ್ಟದ ಕೆಳಗಿರುವ ಗೋಡೆಯ ಭಾಗವನ್ನು ಮೇಲ್ಪಾಯ (ಬೇಸ್‌ಮೆಂಟ್) ಎನ್ನುತ್ತಾರೆ. ಮೇಲ್ಪಾಯದ ಕೆಳಗಡೆ ತಳಪಾಯದ ಕಾಂಕ್ರೀಟಿನ ಮೇಲಿನ ಮಟ್ಟದವರೆಗೂ ಇರುವ ಕಲ್ಲುಗಾರೆಯ ಕಟ್ಟಡವೇ ಅಡಿವರಸೆ. ಈಗ ಮೇಲ್ಪಾಯದ ಅಗಲ 2' ಇದ್ದು ಅಡಿಪಾಯದ ಕಾಂಕ್ರೀಟಿನ ಅಗಲ 1.2ಮೀ ಆಗಿದ್ದರೆ ಕಲ್ಲುಗಾರೆಯಿಂದ ಎರಡು ಅಡಿವರಸೆಗಳನ್ನು 0.75ಮೀ ಅಗಲವಾಗಿಯೂ ಇನ್ನೆರಡು ಅಡಿವರಸೆಗಳನ್ನು 1ಮೀ ಅಗಲವಾಗಿಯೂ ಕಟ್ಟಿ ಕೆಳಗಡೆ ಕಾಂಕ್ರೀಟ್ ಒಂದೊಂದು ಕಡೆಯಲ್ಲಿಯೂ 152ಮೀಮೀ ಹೊರಚಾಚುವ ಹಾಗೆ ಮಾಡಬಹುದು. ಆಗ ಗೋಡೆಯ ಮೇಲೆ ಬರುವ ಭಾರ ಅಡಿವರಸೆಗಳ ಮೂಲಕ ಅಡಿಪಾಯದ ಮೇಲೆ ಅದರ ಶಕ್ತಿಗೆ ತಕ್ಕಂತೆ ಹರಡುವುದು ಸಾಧ್ಯವಾಗುತ್ತದೆ. (ಎಚ್.ಸಿ.ಕೆ., ಎಸ್.)

**ಅಡಿಸನ್, ಜೋಸೆಫ್ :** 1672–1719. ಇಂಗ್ಲಿಷ್ ಪ್ರಬಂಧಕಾರ, ಕವಿ, ವಿಮರ್ಶಕ, ನಾಟಕಕಾರ ಹಾಗೂ ರಾಜಕಾರಣಿ. ಆಕ್ಸ್‌ಫರ್ಡ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಪ್ರಾಚೀನ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದ. 1706ರಲ್ಲಿ ಸರ್ಕಾರದಲ್ಲಿ ಉಪಕಾರ್ಯದರ್ಶಿಯಾದ. 1708ರಿಂದ ಜೀವಮಾನ ಪರ್ಯಂತ ಪಾರ್ಲಿಮೆಂಟಿನ ಸದಸ್ಯನಾಗಿದ್ದ. ಇವನನ್ನು ಅಲೆಕ್ಸಾಂಡರ್ ಪೋಪ್ 'ಆ್ಯಟಿಕಸ್' ಎಂಬ ಹೆಸರಿನ ಪಾತ್ರದಲ್ಲಿ ವಿಡಂಬನೆ ಮಾಡಿದ್ದಾನೆ.

1710ರಲ್ಲಿ ಇವರ ಸ್ನೇಹಿತ ರಿಚರ್ಡ್ ಸ್ಟೀಲ್ ಪ್ರಾರಂಭಿಸಿದ ದಿ ಟ್ಯಾಟ್ಲರ್ ಪತ್ರಿಕೆ ಆ್ಯಡಿಸನ್ನನ ಕಲ್ಪನಾಶಕ್ತಿಗೆ ಉತ್ತಮವಾದ ಅವಕಾಶವನ್ನು ಒದಗಿಸಿತು. ಇದರಲ್ಲೂ ದಿ ಸ್ಪೆಕ್ಟೇಟರ್ ಪತ್ರಿಕೆಯಲ್ಲೂ (1710–12) ಆ್ಯಡಿಸನ್ ಸ್ಟೀಲ್‌ನೊಂದಿಗೆ ಕೆಲಸ ಮಾಡಿದ. ಸ್ಪೆಕ್ಟೇಟರ್ ಕ್ಲಬ್ಬು ಸ್ಟೀಲ್‌ನ ಸೃಷ್ಟಿ ; ಕ್ಲಬ್ಬಿನ ಒಂದು ಪಾತ್ರ–ಸರ್ ರೋಜರ್ ಡಿ ಕವರ್‌ಲಿಯನ್ನು ಪೂರ್ಣವಾಗಿ, ಮನೋಹರವಾಗಿ ಬೆಳೆಸಿದವನು ಆ್ಯಡಿಸನ್. ಇವನ ಪ್ರಬಂಧಗಳ ಉದ್ದೇಶ ತತ್ತ್ವಶಾಸ್ತ್ರವನ್ನು ವಿದ್ಯಾಲಯ ಪುಸ್ತಕಭಂಡಾರಗಳಿಂದ ಮನೆ ಮನೆಗೆ, ಸಾಮಾನ್ಯ ಮನುಷ್ಯನಿಗೆ ತಂದುಕೊಡುವುದು. ಆ್ಯಡಿಸನ್ನನ ಪ್ರಬಂಧಗಳಲ್ಲಿ ಸುವರ್ಣಮಾಧ್ಯಮನೀತಿ ಬೆಳಗುತ್ತದೆ. ಸುತ್ತಮುತ್ತಲಿನ ಜೀವನವನ್ನು ಸಾಮಾನ್ಯ ವಿವೇಚನೆಯ ದೃಷ್ಟಿಯಿಂದ ಇವನು ಕಾಣುತ್ತಾನೆ. ಸ್ಟೀಲ್‌ನಲ್ಲಿ ಕಾಣುವ ಸ್ನೇಹಪರತೆ, ಸಹಾನುಭೂತಿ ಇವನಲ್ಲಿಲ್ಲ. ಉದಾತ್ತ ಆದರ್ಶಗಳೇನೂ ಇಲ್ಲದಿದ್ದರೂ ಅಪಹಾಸ್ಯಕ್ಕೀಡಾಗಬಾರದೆಂಬ ಮರ್ಯಾದೆಯ ಅಭಿಮಾನ ಇವನಿಗೆ ಕೈದೀವಿಗೆಯಾಗಿತ್ತು. ಇವನ ಪ್ರಬಂಧಗಳು ರಂಜನೆ ಮತ್ತು ಉಪದೇಶಗಳ ಮಧುರ ಸಂಗಮವಾಗಿದೆ. ಲಾಲಿತ್ಯ ಮತ್ತು ನಿರ್ದುಷ್ಟತೆಗಳು ಇವನ ಶೈಲಿಯ ಮುಖ್ಯ ಲಕ್ಷಣಗಳು. ಲಲಿತಪ್ರಬಂಧದ ರೂಪ, ಧ್ವನಿ ಮತ್ತು ಶೈಲಿಗಳ ಮೇಲೆ ಇವರ ಪ್ರಭಾವ ಅಪಾರವಾದುದು. ಗೋಲ್ಡ್‌ಸ್ಮಿತ್ ಅಥವಾ ಸ್ಟೀಲ್‌ನಂತೆ ಅಡಿಸನ್ ತನ್ನ ಹೃದಯವನ್ನು ತೆರೆದು ತೋರಿಸುವುದಿಲ್ಲ.

ಆದರೆ ಗಾಂಭೀರ್ಯ, ಸಂಯಮ ಮತ್ತು ಸದಾ ಎಚ್ಚೆತ್ತ ಅಭಿರುಚಿ ಇವರ ಬರಹವನ್ನು ಉತ್ತಮಗೊಳಿಸಿವೆ. ಶಬ್ದಸಂಪತ್ತು ಮಿತವಾಗಿದ್ದರೂ ಪರಿಣಾಮ ಕಾರಿಯಾಗಿ ಕಟಕಿಯನ್ನು ಇವನು ಬಳಸಬಲ್ಲ. ತನ್ನ ಪ್ರಬಂಧಗಳ ಮೂಲಕ ಸಮಾಜದ ಮೇಲೆ ವಿಶೇಷ ಪ್ರಭಾವವನ್ನು ಈತ ಬೀರಿದ. ಸಭಾನಡತೆ, ಸಾರ್ವಜನಿಕ ಸ್ಥಳಗಳಲ್ಲಿ ಮಾತುಕತೆ ; ಉಡುಗೆತೊಡುಗೆಗಳು, ಅಭಿರುಚಿ, ರಾಜಕೀಯ, ಸಾಹಿತ್ಯಕೃತಿಗಳ ಮೌಲ್ಯದ ನಿರ್ಧಾರ, ಅಪ್ಪೇಕೆ, ಪ್ರಿಯ ಪ್ರೇಯಸಿಯನ್ನು ಕಾಣಬೇಕಾದ ರೀತಿ–ಈ ಎಲ್ಲ

ವಿಷಯಗಳಲ್ಲಿ ಮಿ. ಸ್ಪೆಕ್ಟೇಟರ್‌ನ ಮಾತೇ ಶಾಸನವಾಯಿತು. 1719ರಲ್ಲಿ ಈತ ತೀರಿಕೊಂಡರೂ ಇನ್ನೂ ಅರ್ಧ ಶತಮಾನ ಈತ ಚಿತ್ರಿಸಿದ ಸಭ್ಯನಡತೆಯೇ ಆದರ್ಶವಾಗಿ ಉಳಿಯಿತು. ಆಸ್ಥಾನದ ಮತ್ತು ನಗರದ ಸಾಮಾಜಿಕ ಜೀವನ ನೈತಿಕವಾಗಿ ಹೀನಸ್ಥಿತಿಗಿಳಿದಿದ್ದಾಗ ಇವನ ಮತ್ತು ಸ್ಟೀಲ್‌ನ ಪ್ರಬಂಧಗಳು ಇದನ್ನು ಸ್ವಚ್ಛಗೊಳಿಸಿ ಉದಾತ್ತಗೊಳಿಸಿದುವು.

ಈತ ರೋಸಮಂಡ್ (1707) ಎಂಬ ಗೀತರೂಪಕವನ್ನೂ ಕೇಟೋ (1713) ಎಂಬ ಗಂಭೀರ ನಾಟಕವನ್ನೂ ದಿ ಡ್ರಮ್ಮರ್ (1715) ಎಂಬ ಹರ್ಷನಾಟಕವನ್ನೂ ಬರೆದಿದ್ದಾನೆ. ಕೃತಿ ಹೊರಬಿದ್ದ ವರ್ಷದಲ್ಲಿಯೇ ಅಭಿನಯಿಸಲ್ಪಟ್ಟ. ಇವನ ದುರಂತ ನಾಟಕ ಕೇಟೋ ಬಹು ಯಶಸ್ವಿಯಾಯಿತು. ಪ್ರ.ಶ.ಪೂ. 46 ರಲ್ಲಿ ಜೂಲಿಯಸ್ ಸೀಸರನಿಗೂ ಮಾರ್ಕಸ್ ಪಾರ್‌ಸಿಅಸ್ ಕೇಟೋವಿಗೂ ನಡೆದ ಘರ್ಷಣೆ ನಾಟಕದ ವಸ್ತು. ತಾನು ನಂಬಿದವರು ದ್ರೋಹವೆಸಗಿದ ಮೇಲೆ, ಕೇಟೋ ಶತ್ರುವಿನ ವಶವಾಗಲು ಇಚ್ಛಿಸದೆ, ಗೆಳೆಯರು ತಪ್ಪಿಸಿಕೊಳ್ಳುವಂತೆ ಸಹಾಯಮಾಡಿ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ದುರಂತಕಥೆಯೊಂದಿಗೆ ಅಡಿಸನ್ ಎರಡು ಪ್ರೇಮದ ಕಥೆಗಳನ್ನು ಹೆಣೆದಿದ್ದಾನೆ. ನಾಟಕ ಪಡೆದ ಯಶಸ್ಸಿಗೆ ಕರ್ತೃವಿನ ಕೀರ್ತಿ ಒಂದು ಕಾರಣ. ಇಂಗ್ಲೆಂಡಿನ ರಾಣಿ ಆ್ಯನ್‌ಳ ಆರೋಗ್ಯಸ್ಥಿತಿ ಕೆಡುತ್ತಿದ್ದುದರಿಂದ ಉತ್ತರಾಧಿಕಾರಿಯ ಪ್ರಶ್ನೆಗೆ ಬಂದಿದ್ದ ಮಹತ್ವ ಮತ್ತೊಂದು ಕಾರಣ. ಪ್ರಾಚೀನ ನಾಟಕ ಪದ್ಧತಿಯನ್ನು ಅನುಸರಿಸಿದ ಅಡಿಸನ್ ಐಕ್ಯಗಳನ್ನು ಬೆಳೆಸಿದ ರೀತಿ ಅಲ್ಲಲ್ಲಿ ಅಸಮರ್ಪಕವಾಗಿದೆ; ಕೆಲವು ಘಟನೆಗಳು ಅಸಂಭವ ಎಂದು ತೋರುತ್ತದೆ. ಶೈಲಿಯೂ ಕೃತಕ.

ಅಡಿಸನ್ ತನ್ನ ವಿದ್ಯಾರ್ಥಿದೆಶೆಯಲ್ಲೆ ಪ್ರಾಚೀನ ಕಾವ್ಯಗಳನ್ನು ಅಭ್ಯಾಸಮಾಡಿದ್ದು, ಲ್ಯಾಟಿನ್ನಿನಲ್ಲಿ ಕವನಗಳನ್ನು ರಚಿಸಿದ. ಬ್ಲೇನ್‌ಹೇಮ್ ಕಾಳಗದ ವಿಜಯವನ್ನು ಶ್ಲಾಘಿಸಿ ದಿ ಕ್ಯಾಂಪೇನ್ (1704) ಎಂಬ ಕವನವನ್ನು ಲಾರ್ಡ್ ಹ್ಯಾಲಿಫ್ಯಾಕ್ಸರ ಆದೇಶದಂತೆ ರಚಿಸಿದ. ಇದು ಒಂದು ವಿಶಿಷ್ಟ ಘಟನೆಯನ್ನು ಕುರಿತ ಕವನ. ರಚಿತವಾದಾಗ ಜನಪ್ರಿಯವಾಗಿದ್ದು ಈಗ ಮರೆತುಹೋದ ಕೃತಿ. ಆದರೆ ಆಗ ಇದರ ಯಶಸ್ಸು ಆ್ಯಡಿಸನ್ನನಿಗೆ ರಾಜ್ಯದ ಉಪಕಾರ್ಯದರ್ಶಿತ್ವವನ್ನು ತಂದುಕೊಟ್ಟಿತ್ತು.

ಸಾಮಾನ್ಯ ವಾಚಕರಲ್ಲಿ ಸಾಹಿತ್ಯಾಭಿರುಚಿ ಹುಟ್ಟುವುದಕ್ಕೂ ಬೆಳೆಯುವುದಕ್ಕೂ ಅಡಿಸನ್ ಮಾಡಿದ ಪ್ರಯತ್ನ ಅವನಿಗೆ ಇಂಗ್ಲಿಷ್ ವಿಮರ್ಶೆಯ ಚರಿತ್ರೆಯಲ್ಲಿ ಒಂದು ಸ್ಥಾನವನ್ನು ತಂದುಕೊಟ್ಟಿದೆ. ವಿಮರ್ಶೆಯ ವಿಚಾರದಲ್ಲಿ ಅವನಿಗಿದ್ದ ಅಭಿಪ್ರಾಯವೂ ಅವನ ವಿಮರ್ಶನ ವಿಧಾನವೂ ಅವನು ದಿನವಹಿ ಪ್ರಕಟಿಸುತ್ತಿದ್ದ ಸ್ಪೆಕ್ಟೇಟರ್ ಪ್ರಬಂಧಗಳಲ್ಲಿ ಪ್ರಕಾಶಗೊಂಡವು. ಅದಕ್ಕೆ ಮೊದಲು 1693 ರಲ್ಲಿ ಅಕೌಂಟ್ ಆಫ್ ದಿ ಗ್ರೇಟ್ ಇಂಗ್ಲಿಷ್ ಪೊಯೆಟ್ಸ್ ಎಂಬ ಲೇಖನವನ್ನು ಅವನು ಬರೆದಿದ್ದರೂ ಅದನ್ನು ಮುಖ್ಯ ಪ್ರಬಂಧವೆನ್ನಲಾಗದು. ಏಕೆಂದರೆ, ಅದರಲ್ಲಿ ಹಿಂದಿನ ಕವಿಗಳಲ್ಲಿ ಚಾಸರ್ ಮತ್ತು ಸ್ಪೆನ್ಸರ್, ಅಂದಿನವರಲ್ಲಿ ಕೌಲಿ–ಇವರಿಗೆ ಮಾತ್ರವಲ್ಲದೆ ಮತ್ತಾವ ಹಿರಿಯ ಕವಿಗೂ ಪ್ರಾಶಸ್ತ್ಯ ಬಂದಿಲ್ಲ.



ತುಂಬ ಜನಪ್ರಿಯವಾದ ಸ್ಪೆಕ್ಟೇಟರ್ ಪ್ರಬಂಧಗಳಲ್ಲಿ ಅಡಿಸನ್ನನ ವಿಮರ್ಶನ ಸಾಮರ್ಥ್ಯ ಎದ್ದು ತೋರುತ್ತದೆ. ಈತ ಇಂಗ್ಲಿಷ್ ಕವಿ ಮಿಲ್ಟನ್ನನ ಪ್ಯಾರಡೈಸ್‌ಲಾಸ್ಟ್ ಮಹಾ ಕಾವ್ಯವನ್ನು ಕುರಿತು ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದಿದ್ದಾನಲ್ಲದೆ ಅರಿಸ್ಟಾಟಲನ ಕಾವ್ಯಮೀಮಾಂಸಾ ಸೂತ್ರಗಳನ್ನು ಮಿಲ್ಟನ್ನನಿಗೆ ಅನ್ವಯಿಸಿ, ಅವನು ಹೋಮರ್ ಮತ್ತು ವರ್ಜಿಲ್ ರಂಥ ಭವ್ಯ ಕವಿಗಳಿಗೆ ಸರಿತೂಗತಕ್ಕ ವನು ಎಂದು ತೀರ್ಮಾನಿಸಿದ್ದಾನೆ. ಅಡಿಸನ್ನನ ಪ್ರಬಂಧಗಳು ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಿಗೆ ತರ್ಜುಮೆಯಾದುವು; ಅಲ್ಲದೆ ಅವು ಹಲವು ತಲೆಮಾರುಗಳವರೆಗೆ ಉಳಿದು ನಿಂತು ವಿಮರ್ಶೆಯ ತತ್ತ್ವ ಮತ್ತು ರೀತಿಗಳನ್ನು ಮುಂದಿನವರ ಅರಿಮೆಗೆ ತಂದುವು.

ಅಡಿಸನ್ ಬರೆದ ದಿ ಪ್ಲೆಷರ್ಸ್ ಆಫ್ ದಿ ಇಮ್ಯಾಜಿನೇಷನ್ ಎಂಬ ಲೇಖನಮಾಲೆ ಓದುವುದಕ್ಕೆ ಸ್ವಾರಸ್ಯವಾಗಿದೆ.

ಸುಲಭವೂ ತಿಳಿಯೂ ಗಂಭೀರವೂ ಆದ ಅವನ ಲೇಖನಶೈಲಿ ಇಂಗ್ಲಿಷ್ ಸಾಹಿತ್ಯದಲ್ಲಿ ವೈಶಿಷ್ಟ್ಯವನ್ನು ಹೊಂದಿದೆ.

ರಿಚರ್ಡ್ ಸ್ಟೀಲ್‌ನೊಂದಿಗೆ ಸಂಪಾದಿಸುತ್ತಿದ್ದ ಸ್ಪೆಕ್ಟೇಟರ್ ಪತ್ರಿಕೆಯ ಲೇಖನಗಳಲ್ಲಿ ಅಡಿಸನ್ನನ ಸೌಂದರ್ಯಮೀಮಾಂಸೆ ವ್ಯಕ್ತಗೊಂಡಿದೆ.

ವಿಭಾವನೆ ನೀಡುವ ಸಂತೋಷವನ್ನು ಎರಡು ರೀತಿಯಾಗಿ ಕಾಣಬಹುದು– ಮುಖ್ಯ ಮತ್ತು ಗೌಣ ಅಥವಾ ವಾಸ್ತವಿಕ ಮತ್ತು ಮಾನಸಿಕ. ಕಣ್ಣಿಗೆ ಕಾಣುವ ವಸ್ತುಗಳಿಂದ ಪ್ರಚೋದಿತವಾದ ಸಂತಸ ಮೊದಲನೆಯದು. ವಸ್ತುಗಳ ನೆನಪು ಮಾತ್ರದಿಂದ ಹುಟ್ಟುವ ಸಂತಸ ಮತ್ತೊಂದು. ಸೃಷ್ಟಿಯಲ್ಲಿ ಮಹತ್ತರವಾದ, ನೂತನವಾದ ಮತ್ತು ಚೇತನಯುಕ್ತ ಅಥವಾ ಜೀವಯುಕ್ತವಾದ ಘಟನೆಗಳಿವೆ. ವಿಸ್ತಾರವಾದ ಮರುಭೂಮಿ, ದಿಗಂತವ್ಯಾಪಕ ಸಮುದ್ರ, ಉನ್ನತ ಪರ್ವತಶ್ರೇಣಿ ಮತ್ತು ಶಿಖರಗಳು. ಇವು ಮಹಾನ್ ಅಥವಾ ಮಹತ್ತರ ಎನ್ನಬಹುದಾದ ದೃಶ್ಯಗಳು. ಸೃಷ್ಟಿಯಲ್ಲಿ ಸಾಮಾನ್ಯವಾಗಿ ನಮಗೆ ಕಾಣಸಿಗದ, ಆಕಸ್ಮಿಕವಾಗಿಯೇ ಲಭ್ಯವಾಗುವ ಹಲವು ಘಟನೆಗಳನ್ನು ನೂತನ ಎನ್ನಬಹುದು.

ನಾವು ಕಲಾಕೃತಿಗಳೆಂದು ಸಾಮಾನ್ಯವಾಗಿ ಹೇಳುವ ಚಿತ್ರ, ಶಿಲ್ಪ, ಸಂಗೀತ ಮುಂತಾದುವು ನಿಸರ್ಗವನ್ನು ನೆನಪಿಗೆ ತಂದುಕೊಡುವ ಸಾಧನಗಳು. ಪ್ರಕೃತಿಯ ಸಾದೃಶ್ಯವನ್ನು ಅಥವಾ ಪ್ರಕೃತಿಯೊಂದಿಗೆ ಇರಬಹುದಾದ ಸಂಬಂಧವನ್ನು ತೋರಿಸುವ ಭಾವನೆಗಳನ್ನು ಪ್ರೇರೇಪಿಸುವುದರ ಮೂಲಕ ಈ ಕಲಾಕೃತಿಗಳು ನಮಗೆ ಸಂತೋಷವನ್ನು ತಂದುಕೊಡುತ್ತವೆ. ಇಲ್ಲಿಯ ಆನಂದದ ತಳಹದಿ ಮನಸ್ಸಿನ ಭಾವನೆ. ಈ ಕಾರಣದಿಂದಲೇ ರೌದ್ರ, ಭಯಾನಕ ಮತ್ತು ಕರುಣರಸ ಪ್ರಚೋದಕ ಕಲೆಗಳಿಂದ ನಮ್ಮ ನಿಜಸ್ಥಿತಿಯ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಎಂದರೆ ಗಂಭೀರ ನಾಟಕ ನಮಗೆ ಆನಂದ ನೀಡುವುದು ಈ ರೀತಿಯಲ್ಲಿ. ಅಲ್ಲಿನ ಅನುಭವ ಕಾಲ್ಪನಿಕ, ಭಾವನಾಯುಕ್ತ ; ಆದರೂ ಸಹಜವಲ್ಲ, ನಿಜವಲ್ಲ.

ನೈಸರ್ಗಿಕ ಅಥವಾ ದೃಶ್ಯಪ್ರಚೋದಿತ ಹರ್ಷವನ್ನು ಮೂಲಭೂತವೆಂದು ಆ್ಯಡಿಸನ್ನನು ಕರೆದಿದ್ದರೂ ಮಾನಸಿಕ ಅಥವಾ ವಿಭಾವನಾಪ್ರಚೋದಿತ ಆನಂದವನ್ನು ಉತ್ತಮವೆಂದು ಪರಿಗಣಿಸುತ್ತಾನೆ. ಇದಕ್ಕೆ ಕಾರಣ ಆ ಕಾಲದಲ್ಲಿ ಹರಡಿದ್ದ ತತ್ತ್ವದ ಪ್ರಭಾವ, ಅರ್ಥಾತ್ ಜಾನ್‌ಲಾಕ್ ಬರೆದಿದ್ದ ಎಸ್ಸೆ ಕನ್ಸರ್ನಿಂಗ್ ಹ್ಯೂಮನ್ ಅಂಡರ್‌ಸ್ಟ್ಯಾಂಡಿಂಗ್ ಎಂಬ ಗ್ರಂಥದ ಸಾರಾಭಿಪ್ರಾಯ. ಒಂದೆಡೆ ಆ್ಯಡಿಸನ್ ಈ ರೀತಿ ಬರೆಯುತ್ತಾನೆ : ವಸ್ತುಗಳಲ್ಲಿ ನಾವು ಕಾಣುವ ಬೆಳಕು, ಬಣ್ಣ, ವಸ್ತುಗಳಲ್ಲಿಲ್ಲ; ಅವು ಕೇವಲ ಮನಸ್ಸಿನ ಭಾವನೆಗಳು. ವಸ್ತುಗಳಿಂದ ಪ್ರತ್ಯೇಕವಾದ ಭಾವನೆಗಳನ್ನು ಮನಸ್ಸು ಸೃಷ್ಟಿಸುವುದರಿಂದಲೇ ನಾವು ಅಲೌಕಿಕ ಆನಂದವನ್ನು ಅನುಭವಿಸಲು ಸಾಧ್ಯ. ಸೌಂದರ್ಯಮೌಲ್ಯ ಕೇವಲ ನಿಸರ್ಗ ಅಥವಾ ಪ್ರಕೃತಿನಿಷ್ಠವಲ್ಲ.

ಆನಂದದ ಅಂತಿಮ ಕಾರಣವನ್ನು ನಿಶ್ಚಯಿಸುವುದು ಅಸಾಧ್ಯ. ಆನಂದ ಅಥವಾ ಸುಖವನ್ನು ನೀಡುವ ಕೇವಲ ಬಾಹ್ಯಕಾರಣಗಳನ್ನು ಮಾತ್ರ ನಾವು ಗ್ರಹಿಸಿ ಗಣಿಸಬಹುದು. ಅಂತಿಮವಾದ ಸತ್ಯ ಅಥವಾ ಕಾರಣವೊಂದಿದೆ. ನಾವು ಊಹಿಸಬಹುದಾದರೆ ಅದು ನಮ್ಮನ್ನು ಸೃಷ್ಟಿಸಿದ ದೇವರೇ ಎನ್ನಬೇಕು. ನಾವು ಕಾಣುವ, ಅನುಭವಿಸುವ ಎಲ್ಲ ವಸ್ತುಗಳಲ್ಲೂ ಆತನನ್ನೇ ಕಾಣಬೇಕೆನ್ನುವ ಅನುಭವಿಸಬೇಕೆನ್ನುವ ನಿಯಮದಿಂದಲೇ ನಮ್ಮ ಆತ್ಮವನ್ನು ಸೃಷ್ಟಿಕರ್ತ ರಚಿಸಿದ್ದಾನೆಂದು ಕಾಣುತ್ತದೆ; ಅಥವಾ ನಿರುತ್ಸಾಹದಿಂದ ಔದಾಸೀನ್ಯದಿಂದ ಸೃಷ್ಟಿಯನ್ನು ನಾವು ನೋಡಲೇಬಾರದೆಂಬ ನಿಯಮದಿಂದ, ನಮ್ಮನ್ನು ದೇವರು ಸೃಷ್ಟಿಮಾಡಿರುವನೆಂದು ಕಾಣುತ್ತದೆ.

ಆ್ಯಡಿಸನ್ನನ ಲೇಖನಗಳಲ್ಲಿ ಮೂರು ಹಂತಗಳು ನಮಗೆ ಕಾಣುತ್ತವೆ. ಮೊದಲನೆಯದು ದೃಶ್ಯವಸ್ತುಗಳಿಂದ, ಎರಡನೆಯದು ಮಾನಸಿಕ ಭಾವನೆಗಳಿಂದ, ಮೂರನೆಯದು ದೈಹಿಕ ಕಾರಣದಿಂದ ಉಂಟಾಗುವ ಆನಂದಾನುಭವ. ಜಗತ್ತಿನಿಂದ ಜಗತ್ಕರ್ತೃವಿನೆಡೆಗೆ ಕೊಂಡೊಯ್ಯುವ ಎಲ್ಲವನ್ನೂ ಆ ದೃಷ್ಟಿಯಿಂದಲೇ ನೋಡಬೇಕೆನ್ನುವ ವಾದ ಇಲ್ಲಿ ಕಂಡುಬರುತ್ತದೆ. (*)

**ಅಡಿಸನ್, ತಾಮಸ್ :** 1793–1860. ಇಂಗ್ಲೆಂಡಿನ ವೈದ್ಯ ; ಅಡ್ರಿನಲ್ ಗ್ರಂಥಿಯ ರಗಟೆಯ (ಕಾರ್ಟೆಕ್ಸ್) ಅಡಿಸನ್ನನ ರೋಗವನ್ನೂ ಕೇಡಿನ ರಕ್ತಕೊರೆಯನ್ನೂ (ಪರ್ನಿಷಸ್ ಅನೀಮಿಯ) ಚೆನ್ನಾಗಿ ವಿವರಿಸಿ ಹೆಸರಾದವ. ಲಂಡನ್ನಿನ ಗೈಸ್ ಆಸ್ಪತ್ರೆಯಲ್ಲಿ ರಿಚರ್ಡ್ ಬ್ರೈಟ್‌ನೊಂದಿಗೆ ವೈದ್ಯವಿದ್ಯೆ ಕಲಿಸುವವನಾಗಿದ್ದ. ಅವನ ಹೆಸರಿನ ಎರಡು ರೋಗಗಳನ್ನೂ

ಮೊದಲು (1849) ಸೂಚಿಸಿ, ಮುಂದೆ ವಿವರಗಳಿರುವ ಪುಸ್ತಕ ವನ್ನೂ (1855) ಪ್ರಕಟಿಸಿದ. ಅವನು ಕೊಟ್ಟಿರುವ ಅಂದಿನ ವಿವರಗಳು ಈಗಲೂ ನಿಜವೆನಿಸಿವೆ. ಒಳಸುರಿಕ ಗ್ರಂಥಿಗಳಲ್ಲಿ ಒಂದರ ರೋಗದ ಬದಲಾವಣೆಗಳನ್ನು ರೋಗಿಯ ಲಕ್ಷಣಗಳಿಗೆ ಸಂಬಂಧ ಮೊದಮೊದಲು ಕಲ್ಪಿಸಿದವ ಇವನೇ. ಇವನು ಮೊದಲು ಸೂಚಿಸಿದ ದಿನವನ್ನೇ (ಮಾರ್ಚ್ 15, 1849) ಒಳಸುರಿಕ ಶಾಸ್ತ್ರ ಹುಟ್ಟಿದ ದಿನ ಎನ್ನುವುದು. ಜಾನ್ ಮಾರ್ಗನ್‌ನೊಂದಿಗೆ, ಮೈಮೇಲೆ ವಿಷಕಾರಕಗಳ ಪ್ರಭಾವವನ್ನು ಇಂಗ್ಲಿಷಿನಲ್ಲಿ ಮೊತ್ತಮೊದಲು (1829) ಪ್ರಕಟಿಸಿದ. ಬ್ರೈಟ್‌ನೊಂದಿಗೆ ಬರೆದ ವೈದ್ಯವಿದ್ಯೆಯ ಮೂಲಪಾಠಗಳ ಮೊದಲನೆಯ ಸಂಪುಟ ಮಾತ್ರ (1839) ಹೊರಬಿತ್ತು. ಪುಪ್ಪುಸುರಿತ (ನ್ಯುಮೋನಿಯ), ಕ್ಷಯ, ಚರ್ಮರೋಗಗಳ ಮೇಲಿನ ಇವನ ಮುಖ್ಯ ಬರೆಹಗಳು ಬಹುವಾಗಿ ಗೈಸ್ ವರದಿಗಳಲ್ಲಿ ಬಂದುವು. (ಡಿ.ಎಸ್.ಎಸ್.)

**ಅಡಿಸನ್ನನ ರೋಗ :** ಮೂತ್ರಪಿಂಡಗಳ ಮೇಲಣ (ಅಡ್ರಿನಲ್) ನಾಳವಿರದ ಗ್ರಂಥಿಗಳ ರಗಟೆ (ಕಾರ್ಟೆಕ್ಸ್) ಕೆಟ್ಟಿರುವ ಈ ಅಪೂರ್ವ ರೋಗದ ಲಕ್ಷಣಗಳನ್ನು ಮೊದಲು (1855) ಥಾಮಸ್ ಅಡಿಸನ್ ವಿವರಿಸಿದ. ಈ ರೋಗವನ್ನು ಅಡ್ರಿನಲ್ ರಗಟೆಯ ನಿಜಕೆಲಸದಿಳಿತವೆಂದೂ ಕರೆಯಬಹುದು. ರಕ್ತಕೊರೆ, ಕಂದು ಬಣ್ಣಕ್ಕೇರಿದ ಚರ್ಮ, ಬಾಯೊಳಗೆ ಕಂದು ಕಲೆಗಳು, ಅತಿಯಾದ ಅಲಸಿಕೆ, ನಿತ್ರಾಣ, ಗುಂಡಿಗೆಯ ದುರ್ಬಲ ಬಡಿತ, ರಕ್ತ ಒತ್ತಡದ ಇಳಿವರಿ, ಮನೋದೌರ್ಬಲ್ಯ, ನಿಧಾನವಾಗಿ ಈ ರೋಗದಲ್ಲಿ ಕಾಣಿಸಿಕೊಳ್ಳುತ್ತವೆ. ಈ ರೋಗ ಹೆಂಗಸರಿಗಿಂತ ಗಂಡಸರಲ್ಲಿ ಹೆಚ್ಚು, ಎಳೆಯರಿಗಿಂತಲೂ 30 ವರ್ಷ ದಾಟಿದವರಲ್ಲಿ ಬರುವುದು ಸಾಮಾನ್ಯ.

ಅಡ್ರಿನಲ್ ಗ್ರಂಥಿಗಳಿಗೆ ಹತ್ತುವ ಕ್ಷಯ, ಕಾರಣವಿಲ್ಲದ ಅನುವಳಿಕೆ, ಗಂತಿ ಬೆಳೆತ ಇಲ್ಲವೇ ಅದರ ಒತ್ತಡ, ಮೈ ತನ್ನ ಅಂಗವನ್ನೇ ಹೊರದೂಡುವ ಕ್ರಿಯೆ–ಇವು ಈ ರೋಗದ ಕಾರಣಗಳು. ಈ ಗ್ರಂಥಿಗಳನ್ನು ತೆಗೆದು ಹಾಕಿದರೂ ಅಷ್ಟೇ. ಈ ರೋಗಕ್ಕೆ ಕ್ಷಯ ಕಾರಣವಾಗಿದ್ದರೆ, ಬೇರೆ ಅಂಗಗಳಲ್ಲೂ ಕ್ಷಯ ಇರುವುದು ಸಾಮಾನ್ಯ. ಮೈಯಲ್ಲಿನ ಸೋಡಿಯಂ, ಪೊಟ್ಯಾಸಿಯಂ, ಕ್ಲೋರೈಡುಗಳ ಹತೋಟಿ, ಮೈಯಲ್ಲಿನ ನೀರಿನ ಸಮತೋಲ, ಹಿಟ್ಟು, ಕೊಬ್ಬು, ಪ್ರೋಟೀನುಗಳ ಜೀವವಸ್ತುಕರಣದ (ಮೆಟಬಾಲಿಸಮ್)

ಸಮತೋಲಗಳಂಥ, ಅಡ್ರಿನಲ್ ಗ್ರಂಥಿಯ ರಗಟೆಯ ಮುಖ್ಯವಾದ ನಿಜಗೆಲಸಗಳು ಕೆಟ್ಟಿರುವುದರಿಂದ ಹೀಗಾಗುತ್ತದೆ. ಪೂರಾ ಬಲಿತಿರುವ ರೋಗವನ್ನು ಗುರುತಿಸುವುದು ಕಷ್ಟವಲ್ಲ. ಎಳೆಯದರಲ್ಲಿ ರೋಗವನ್ನು ಗುರುತಿಸಲು ಪ್ರಯೋಗಾಲಯದ ಪರೀಕ್ಷೆಗಳ ನೆರವು ಬೇಕು. ಮೈಚರ್ಮ ವಿಚಿತ್ರ ತೆರನ ಮಂಕುಹಳದಿ ಇಲ್ಲವೇ ಕಂದುಬಣ್ಣಕ್ಕೆ ತಿರುಗುವುದು ಮೊದಲ ಚಿಹ್ನೆಯಾಗಿರಬಹುದು. ಹಿಂದಿನ ಕಾಲದಲ್ಲಿ ಅಡಿಸನ್ನನ ರೋಗದವನ ಪಾಡು ಯಾರಿಗೂ ಬೇಡದಂತಿತ್ತು. ವಿಪರೀತ ಬೆವರಿಕೆ, ವಾಂತಿ, ಉಚ್ಚಾಟ, ಸೋಡಿಯಂ ಕಡಿಮೆಯಿರುವ ಆಹಾರ ಸೇವನೆ, ಹೀಗೆ ಮೈಯಿಂದ ಸೋಡಿಯಂ, ಕ್ಲೋರೈಡುಗಳನ್ನು ಕಳೆಯುವ ಯಾವ ಸ್ಥಿತಿಯಾದರೂ ಸರಿಯೇ, ರೋಗಿಯನ್ನು ಸುಸ್ತುಮಾಡಿ ಸಾಯಿಸುತ್ತಿತ್ತು. ಮೈದುಡಿತ, ಶಸ್ತ್ರಕ್ರಿಯೆಯ ಒತ್ತರ, ಅರಿವಳಿಕಗಳ (ಅನೀಸ್ತೆಟಿಕ್ಸ್) ಸೇವನೆ ಒಂದೊಂದು ರೋಗಿಗೆ ಗಂಡಾಂತರ ಆಗುತ್ತಿತ್ತು.

ಅಡ್ರಿನಲ್ ರಗಟೆಯ ಕಚ್ಚಾ ಸಾರಕವನ್ನು 1930ರಲ್ಲಿ ತಯಾರಿಸಿ, ಜೀವಕುತ್ತಿನಲ್ಲಿ ಸಿಕ್ಕಿರುವ ರೋಗಗಳಿಗೆ ಕೊಟ್ಟಾಗ ಆಶಾಕಿರಣ ಮೂಡಿತು. ಈ ಸಾರಕ ಸುಲಭವಾಗಿ ದೊರೆಯದೆ, ದುಬಾರಿ ಬೆಲೆಯದಾಗಿ ಗುಣದಲ್ಲೂ ನೆಚ್ಚಿಕೊಳ್ಳುವ ಹಾಗಿರಲಿಲ್ಲ. ಅಡಿಗೆ ಉಪ್ಪನ್ನು ಹೇರಳವಾಗಿ ಕೊಟ್ಟರೆ ರೋಗಿ ತುಸು ಚೇತರಿಸಿಕೊಳ್ಳುವನೆಂದು ರಾಬರ್ಟ್ ಲೋಯೆಬ್ (1932) ಕಂಡುಕೊಂಡ. ಮೈಯಲ್ಲಿ ಪೊಟ್ಯಾಸಿಯಂ ಹೆಚ್ಚಾದರೂ ರೋಗ ಹೆಚ್ಚುವುದು (1937) ಗೊತ್ತಾಯಿತು. ಅದೇ ವರ್ಷ ತಯಾರಾದ, ಡಿಸಾಕ್ಸಿಕಾರ್ಟಿಕೊಸ್ಟಿರೋನ್ ಮದ್ದಿನಿಂದ ಮೈಯಲ್ಲಿನ ಖನಿಜದ ಜೀವವಸ್ತುಕರಣವನ್ನು ಅಂಕೆಗೊಳಿಸುವಂತಾಗಿ ಅನೇಕ ರೋಗಿಗಳಿಗೆ ಹೆಚ್ಚಿನ ಗುಣ ಕಂಡಿತು. ಆದರೂ ಪೂರ್ತಿ ವಾಸಿ ಮಾಡಲಿಲ್ಲ. ರಕ್ತದಲ್ಲಿನ ಖನಿಜಗಳನ್ನು ಅಂಕೆಗೊಳಿಸುವು ದೊಂದೇ ಅಲ್ಲದೆ, ಇನ್ನೂ ಏನೋ ಕೊರೆ ಇದೆ ಎನ್ನಿಸುತ್ತಿತ್ತು.

ಕೊನೆಯದಾಗಿ 1948ರಲ್ಲಿ ತಯಾರಾದ ಕಾರ್ಟಿಸೋನನ್ನು ಡಿಸಾಕ್ಸಿಕಾರ್ಟಿ ಕೊಸ್ಟಿರೋನ್‌ನೊಂದಿಗೆ ಸೇರಿಸಿ ದಿನವೂ ರೋಗಿಗೆ ಕೊಟ್ಟಾಗ ರೋಗಿ ಎಂದಿನ ಲವಲವಿಕೆ, ಚಟುವಟಿಕೆಗಳನ್ನು ಮರಳಿ ಪಡೆವಂತಾದ. ಈ ರೋಗಿಗಳಲ್ಲಿ ಕೊರೆಯಾಗಿರುವ ಕಾರ್ಟಿಸೋನ್ ಮಾತ್ರ ಕೊಟ್ಟರೆ ಮೈಯಿಂದ ಉಪ್ಪು ಹೆಚ್ಚಾಗಿ ಹೊರಬೀಳುವುದರಿಂದ, ಜೊತೆಗೆ ಡಿಸಾಕ್ಸಿಕಾರ್ಟಿ ಸೋನನ್ನೂ ಕೊಡುತ್ತಿದ್ದರೆ, ರೋಗಿ ಆರೋಗ್ಯವಾಗಿರಬಹುದು. ಅಡ್ರಿನಲ್ ರಗಟೆಯ ಅಸಮರ್ಥತೆಯನ್ನು ಹೊರಗಿನಿಂದ ಗ್ಲುಕೋಕಾರ್ಟಿಕಾಯಿಡ್‌ಗಳನ್ನು ನಿರಂತರವಾಗಿ ಕೊಟ್ಟು ಅದರ ಕೊರತೆಯನ್ನು ನೀಗಿಸಿ ರೋಗ ಲಕ್ಷಣಗಳನ್ನು ದೂರ ಮಾಡಿಕೊಳ್ಳಬೇಕು. (ಪಿ.ಎಸ್.ಎಸ್.)

**ಅಡೆನೋಸೀನ್ ಟ್ರೈಫಾಸ್ಫೇಟ್ :** ಇದೊಂದು ರಾಸಾಯನಿಕ ವಸ್ತು. (ಎ ಟಿ ಪಿ) ಇದನ್ನು ಮೊದಲು 1929ರಲ್ಲಿ ಜರ್ಮನಿಯಲ್ಲಿ ಲೋಮಾನ್, ಅಮೆರಿಕದಲ್ಲಿ ಫಿಸ್ಕ್ ಮತ್ತು ಸುಬ್ಬರಾವ್ ಇವರು ಮೊಲದ ಮಾಂಸಖಂಡದಿಂದ ಪ್ರತ್ಯೇಕಿಸಿದರು. ಅನಂತರ ಇದರ ರಚನೆ ವಿಶ್ಲೇಷಣಾ ಮಾರ್ಗದಿಂದ ನಿರ್ಧಾರವಾಯಿತು. ಅಲ್ಲದೆ 1948ರಲ್ಲಿ ರಾಸಾಯನಿಕ ಸಂಶ್ಲೇಷಣೆಯಿಂದಾಗಿ ಖಚಿತವಾಯಿತು. ಎಲ್ಲ ಜೀವಿಗಳ ಕಣದ್ರವ್ಯದಲ್ಲಿ ಒಂದು ಮಿ.ಲೀ. ಗೆ 0.5–2.5 ಮಿ.ಗ್ರಾಂ ಗಳಷ್ಟು ಇರುತ್ತದೆ.




ಅಡೆನೋಸೀನ್ ಟ್ರೈಫಾಸ್ಫೇಟ್

ಎ.ಟಿ.ಪಿ. ಮೂರು ವಿಧದ ರಾಸಾಯನಿಕ ಸಂಯುಕ್ತಗಳಿಂದಾಗಿದೆ: ಪ್ಯೂರೀನ್ ಗಳಲ್ಲೊಂದಾದ ಅಡೆನೀನ್, 5–ಇಂಗಾಲ ಮಾನೋಸ್ಯಾಕರೈಡ್ ಆದ ಡಿ. ರೈಬೋಸ್ ಮತ್ತು ಫಾಸ್ಫೇಟು ಗುಂಪುಗಳು. ಅಡೆನೀನಿನ ಒಂಬತ್ತನೆಯ ಸಾರಜನಕದ ಪರಮಾಣು ಒಂದು ಗ್ಲೈಕೊಸೈಡಿಕ್ ಬಂಧದಿಂದ ಡಿ. ರೈಬೋಸಿನ ಒಂದನೆಯ ಇಂಗಾಲದ ಪರಮಾಣು ವಿನೊಡನೆ ಬಂಧಿತವಾದಾಗ ಅಡೆನೋಸೀನ್ ಲಭಿಸುತ್ತದೆ. ಇದೊಂದು ನ್ಯೂಕ್ಲಿಯೊಸೈಡ್. ಅಂದರೆ, ಒಂದು ಶರ್ಕರ ಒಂದು ಪ್ಯೂರಿನ್ ಅಥವಾ ಪಿರಿಮಿಡೀನ್ ಕ್ಷಾರ. ಅಡೆನೋಸೀನ್ ನಲ್ಲಿರುವ ಡಿ. ರೈಬೋಸಿನ ಐದನೆಯ ಇಂಗಾಲದ ಪರಮಾಣುವಿನ ಮೇಲಿನ ಹೈಡ್ರಾಕ್ಸಿಲ್ (OH) ಗುಂಪು ಒಂದು ಫಾಸ್ಫಾರಿಕ್ ಆಮ್ಲದೊಡನೆ ಸಂಯುಕ್ತವಾದರೆ 5–ಅಡೆನಿಲಿಕ್ ಆಮ್ಲ ಅಥವಾ ಅಡೆನೋ ಸೀನ್–5 ಮಾನೋಫಾಸ್ಫೇಟು ಲಭಿಸುತ್ತದೆ. ಇದು ಮಾನೊನ್ಯೂಕ್ಲಿಯೊಟೈಡ್. ಎ.ಎಂ.ಪಿ.ಯ ಫಾಸ್ಫಾರಿಕ್ ಭಾಗಕ್ಕೆ ಮತ್ತೆರಡು ಫಾಸ್ಫಾರಿಕ್ ಅವಶೇಷಗಳು ಸೇರಿಕೊಂಡರೆ ಎ.ಟಿ.ಪಿ. ಲಭಿಸುತ್ತದೆ.

ಎ.ಟಿ.ಪಿ.ಯನ್ನು $5^{o}$ ಸೆ. ನಲ್ಲಿ ತೇವ ಸೋಕದಂತೆ ಇಟ್ಟಿದ್ದರೆ ಅದರಲ್ಲಿರುವ ಸೋಡಿಯಂ ಲವಣ ಕೆಡುವುದಿಲ್ಲ– $15^{o}$ ಸೆ.ನಲ್ಲಿರುವ ತಟಸ್ಥ ದ್ರಾವಣಗಳೂ ಸ್ಥಿರವಾಗಿರು ತ್ತವೆ. ಈ ದ್ರಾವಣಗಳನ್ನು ಏಳುನಿಮಿಷ ಕ್ಷಾರಗಳ ದುರ್ಬಲ ದ್ರಾವಣದೊಂದಿಗಾಗಲೀ ಹೈಡ್ರೋಕ್ಲೋರಿಕ್ ಆಮ್ಲದ ಸಮಾನ ದ್ರಾವಣದೊಂದಿಗಾಗಲೀ ಕುದಿಸಿದರೆ ಎ.ಟಿ.ಪಿ. ವಿಭಜನೆ ಹೊಂದಿ ಎ.ಎಂ.ಪಿ. ಮತ್ತು ನಿರವಯವ ಫಾಸ್ಫೇಟು ದೊರಕುತ್ತದೆ. ಎ.ಟಿ.ಪಿ. ಜಲದ್ರಾವಣ ವರ್ಣರಹಿತವಾಗಿದ್ದು ಅತಿನೇರಿಳೆ ರಶ್ಮಿಗಳನ್ನು (260–280 ಮಿ.ಮೈ.) ಚೆನ್ನಾಗಿ ಹೀರುತ್ತದೆ.

ಎ.ಟಿ.ಪಿ. ಜೀವರಸಾಯನ ಶಾಸ್ತ್ರದಲ್ಲಿ ಬಹು ಮುಖ್ಯ ಸಂಯುಕ್ತ. ಶಕ್ತಿದಾಯಕ ಮತ್ತು ಶಕ್ತಿಗ್ರಾಹಕ ಜೀವರಾಸಾಯನಿಕ ಕ್ರಿಯೆಗಳಲ್ಲಿ ಇದೊಂದು ಸಾಮಾನ್ಯ ವರ್ತನಕಾರಿ. ಜೀವಿಗಳಲ್ಲಿ ಉಳಿದ ಶಕ್ತಿಭರಿತ ಸಂಯುಕ್ತಗಳಿಗಿಂತ ಇದು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದಕ್ಕೆ ಸಂಬಂಧಿಸಿದ ಗ್ವಾನೊಸೀನ್, ಸೈಟೋಸೀನ್, ಯೂರಿಡಿನ್, ಥೈಮಿಡಿನ್ ಟ್ರೈಫಾಸ್ಫೇಟುಗಳೂ ಅವುಗಳ ಡಿ ಆಕ್ಸಿ ರೈಬೋಸ್ ಉತ್ಪನ್ನಗಳೂ ಇದರ ಮಧ್ಯಸ್ಥಿಕೆಯಿಂದಲೇ ಉತ್ಪತ್ತಿಯಾಗುತ್ತವೆ.

ಎ.ಟಿ.ಪಿ. ಶಕ್ತಿಭರಿತ ಸಂಯುಕ್ತವಾಗಿರಲು ಅದರಲ್ಲಿರುವ ಎರಡು ಉತ್ಪನ್ನಶಕ್ತಿ ಫಾಸ್ಫೇಟು ಬಂಧಗಳೇ ಕಾರಣ. ಇದರ ಅಣುವಿನ ತುದಿಯಲ್ಲಿರುವ ಎರಡು ಫಾಸ್ಫೇಟು ಗುಂಪುಗಳು ಜಲವಿಶ್ಲೇಷಣ ಹೊಂದಿದಾಗಿ ಎ.ಟಿ.ಪಿ.ಯು ಎ.ಡಿ.ಪಿ. ಅಥವಾ ಎ.ಎಂ.ಪಿ. ಆಗಿ ಅಧಿಕ ಪ್ರಮಾಣದಲ್ಲಿ ಉಪಯುಕ್ತಶಕ್ತಿ ಬಿಡುಗಡೆಯಾಗುತ್ತದೆ. ($\Delta G'$=ಒಂದು ಮೋಲಿಗೆ –8000 ಕೆಲೊರಿಗಳು). ಉಪಯುಕ್ತಶಕ್ತಿ ಎಂದರೆ ರಾಸಾಯನಿಕ, ವಿದ್ಯುತ್ ಅಥವಾ ಚಲನಾತ್ಮಕ ಕ್ರಿಯೆಗಳಲ್ಲಿ ಉಪಯೋಗವಾಗುವ ಶಕ್ತಿ. ಎ.ಟಿ.ಪಿ.ಯ ಜಲವಿಶ್ಲೇಷಣದಿಂದ ಈ ಅಧಿಕ ಪ್ರಮಾಣದ ಉಪಯುಕ್ತಶಕ್ತಿ ಸಿಗಲು ಮೂರು ಮುಖ್ಯ ಕಾರಣಗಳಿವೆ. ಮೊದಲನೆಯದಾಗಿ ದೇಹದಲ್ಲಿ ಎ.ಟಿ.ಪಿ. ಚೆನ್ನಾಗಿ ಅಯಾನೀಕೃತವಾಗಿ (ಅಯೋನೈಸ್) ನಾಲ್ಕು ಋಣ ವಿದ್ಯುತ್ಕಣಗಳು ಹತ್ತಿರ ಹತ್ತಿರ ಇರುತ್ತವೆ. ಇವು ಒಂದನ್ನೊಂದು ವಿಕರ್ಷಿಸುವುದರಿಂದ ಅಲ್ಲಿಯ ಉಷ್ಣಚಲನ (ಥರ್ಮೊಡೈನಮಿಕ್) ಸನ್ನಿವೇಶ ಚಂಚಲವಾಗುತ್ತದೆ. ಎರಡನೆಯದಾಗಿ ಈ ಜಲವಿಶ್ಲೇಷಣೆಯ ಉತ್ಪನ್ನಗಳಾದ $\Delta G$.ಡಿ.ಪಿ. ಮತ್ತು ನಿರವಯವ ಫಾಸ್ಫೇಟುಗಳೊಂದರಲ್ಲೂ ಋಣ ವಿದ್ಯುತ್ಕಣ ಕಡಿಮೆ ಇದ್ದು ಅವು ಒಂದರಿಂದೊಂದು ಸುಲಭವಾಗಿ ಬೇರ್ಪಡುತ್ತವೆ. ಕೊನೆಯದಾಗಿ ಇವು ಸುಲಭವಾಗಿ ಅಯಾನೀಕರಣ ಹೊಂದಿ ಸಂಸ್ಪಂದನದ (ರೆಸೊನೆನ್ಸ್) ಮುಖಾಂತರ ಸ್ಥಿರವಾಗುತ್ತವೆ. ಇನ್ನಿತರ ಶಕ್ತಿಭರಿತ ಸಂಯುಕ್ತಗಳನ್ನು ಈ ಕೆಳಗೆ ಕೊಡಲಾಗಿದೆ. ಫಾಸ್ಫೊ ಇನಾಲ್ ಪೈರುವೇಟ್ ( = –12800); ಫಾಸ್ಫೋ ಕ್ರಿಯೆಟಿನ್ ( = –10500); 1.3 – ಡೈಫಾಸ್ಫೋಗ್ಲಿಸರೇಟ್ ( = –11800); ಅಸೆಟಲ್ ತೊ ಎಂಜೈಮ್ ಎ ( = –9000) ಮತ್ತು ಎ.ಟಿ.ಪಿ.ಗೆ ಬಹುವಾಗಿ ಸಂಬಂಧಿಸಿದ ಜಿ.ಟಿ.ಪಿ., ಯು.ಟಿ.ಪಿ., ಸಿ.ಟಿ.ಪಿ., ಎ.ಟಿ.ಪಿ.ಯು ಮೆಗ್ನೀಷಿಯಂ ಮತ್ತು ಕ್ಯಾಲ್ಸಿಯಂ ಅಯಾನುಗಳೊಂದಿಗೆ ಸ್ಥಿರವಾದ ಸಂಯೋಜನೆಗಳನ್ನು ರಚಿಸಿಕೊಳ್ಳುತ್ತದೆ. ಹೀಗಾಗಿ ಜೀವಕಣಗಳಲ್ಲಿ ಬಹು ಸ್ವಲ್ಪ ಬಿಡಿಯಾಗಿರುವ ಎ.ಟಿ.ಪಿ. ಇರುತ್ತದೆ.

ಎ.ಡಿ.ಪಿ.ಯಿಂದ ಎ.ಟಿ.ಪಿ.ಯ ಉತ್ಪತ್ತಿ ಒಂದು ಶಕ್ತಿಗ್ರಾಹಕ ಕ್ರಿಯೆ. ಅಂದರೆ ಇದು ಶಕ್ತಿದಾಯಕ ಕ್ರಿಯೆಗಳೊಂದಿಗೆ ನಿಕಟ ಸಂಬಂಧ ಪಡೆದಿರಲೇಬೇಕು. ಶಕ್ತಿದಾಯಕ ಕ್ರಿಯೆಗಳಿಂದ ಬರುವ ಶಕ್ತಿಯನ್ನು ಹಿಡಿದಿಡುವುದಕ್ಕೆ ಇದೊಂದು ಮುಖ್ಯ ಮಾರ್ಗ. ಜೀವಿಗಳು ಮೂರು ಮುಖ್ಯ ಕ್ರಿಯೆಗಳಿಂದ ಶಕ್ತಿಯನ್ನು ಪಡೆಯುತ್ತವೆ. ಈ ಎಲ್ಲ ಕ್ರಿಯೆಗಳಲ್ಲೂ ಎ.ಟಿ.ಪಿ. ಸಂಯೋಜನೆ ಅತ್ಯಂತ ಮುಖ್ಯ ಹಂತ. ಮಾಂಸ ಖಂಡಗಳು ಕೆಲಸಮಾಡುವಾಗ ಗ್ಲೂಕೋಸು ನಿರ್ವಾಯು ಪಥದಲ್ಲಿ ವ್ಯಯವಾಗಿ ಲ್ಯಾಕ್ಟಿಕ್ ಆಮ್ಲವಾಗುತ್ತದೆ. ಆಗ ಬಿಡುಗಡೆಯಾದ ಶಕ್ತಿಯ ಸ್ವಲ್ಪ ಭಾಗ ಎ.ಡಿ.ಪಿ.ಯು ಎ.ಟಿ.ಪಿ.ಯಾಗುವ ಕ್ರಿಯೆಯಲ್ಲಿ ಉಪಯೋಗವಾಗುತ್ತದೆ. ಎ.ಟಿ.ಪಿ. ಮಾಂಸಖಂಡಗಳ ಸಂಕೋಚನೆಗೆ ಶಕ್ತಿ ಒದಗಿಸುತ್ತದೆ (ಇಲ್ಲಿ ಶಕ್ತಿಸಾಮರ್ಥ್ಯ ಶೇ.28). ಇಂಗಾಲ ಸಂಯುಕ್ತಗಳ ಬಿಡಿಶಕ್ತಿಯ ಹೆಚ್ಚುಭಾಗ ಮೈಟೊಕಾಂಡ್ರಿಯಾಗಳಲ್ಲಿ ನಡೆಯುವ ಉತ್ಕರ್ಷಕ ಫಾಸ್ಫಾರೀಕರಣ (ಫಾಸ್ಫರೈಸೇಷನ್) ಕ್ರಿಯೆಯಲ್ಲಿ ಎ.ಡಿ.ಪಿ.ಯು ಎ.ಟಿ.ಪಿ.ಯಾಗುವುದರ ಮೂಲಕ ಹಿಡಿಯಲ್ಪಡುತ್ತದೆ. ಶೇ.42 ಶಕ್ತಿಸಾಮರ್ಥ್ಯದ ಈ ಕ್ರಿಯೆಯಲ್ಲಿ ಇಂಗಾಲ ಸಂಯುಕ್ತಗಳು ಪೂರ್ಣವಾಗಿ ಉತ್ಕರ್ಷಣ ಹೊಂದಿ, ಇಂಗಾಲಾಮ್ಲ ಮತ್ತು ನೀರು ಉತ್ಪನ್ನವಾಗುತ್ತವೆ. ಜೀವಿಗಳೆಲ್ಲ ಮೂಲಭೂತವಾಗಿ ಶಕ್ತಿ ಪಡೆಯುವ ದ್ಯುತಿಸಂಶ್ಲೇಷಣೆ ಯಲ್ಲಿ ಸೂರ್ಯನ ಕಿರಣಗಳ ಶಕ್ತಿ ಸಸ್ಯಗಳ ಕ್ಲೋರೋಪ್ಲಾಸ್ಟುಗಳಲ್ಲಿ ಎ.ಡಿ.ಪಿ.ಯು ಎ.ಟಿ.ಪಿ.ಯಾಗುವುದರ ಮೂಲಕ ಹಿಡಿಯಲ್ಪಡುತ್ತದೆ. ಥಯೋಸಲ್ಫೇಟು, ಜಲಜನಕ ಸಲ್ಫೈಡು, ಗಂಧಕ, ಅಮೋನಿಯ, ನೈಟ್ರೇಟುಗಳು ಮತ್ತು ಜಲಜನಕ–ಇಂಥ ಪದಾರ್ಥಗಳ

ಉತ್ಕರ್ಷಣದಿಂದ ಕೆಲವು ಜೀವಿಗಳು ಶಕ್ತಿ ಪಡೆಯುತ್ತವೆ. ಇಲ್ಲಿಯೂ ಎ.ಡಿ.ಪಿ. ತಯಾರಾಗುತ್ತದೆ. ಎಲೆಕ್ಟ್ರಾನುಗಳು ಶಕ್ತಿ ಉನ್ನತಮಟ್ಟದಿಂದ ಕೆಳಮಟ್ಟಕ್ಕೆ ಇಳಿಯುವುದರಿಂದಲೇ ಶರ್ಕರ ವ್ಯಯಪಥವನ್ನು ಬಿಟ್ಟು ಉಳಿದ ಸಂದರ್ಭಗಳಲ್ಲಿ ಎ.ಡಿ.ಪಿ.ಯಿಂದ ಎ.ಟಿ.ಪಿ. ಉಂಟಾಗುವುದು.

ಈ ಎಲ್ಲ ರೀತಿಗಳಲ್ಲಿ ಉತ್ಪತ್ತಿಯಾದ ಎ.ಟಿ.ಪಿ. ಅಷ್ಟೂ ಜೀವಿಗಳಲ್ಲಿ ಶೇಖರಣೆಯಾಗುವುದಿಲ್ಲ. ಶಕ್ತಿ ಪ್ರಕೃತಿಯಲ್ಲಿ ಜಿಡ್ಡು ಮತ್ತು ಕಾರ್ಬೊಹೈಡ್ರೇಟುಗಳ ರೂಪದಲ್ಲಿ ಶೇಖರವಾಗುತ್ತದೆ.

ಎ.ಟಿ.ಪಿ. ಅನೇಕ ಜೀವರಾಸಾಯನಿಕ ವಿಶ್ಲೇಷಣೆ ಮತ್ತು ಸಂಶ್ಲೇಷಣೆಗಳಿಗೆ ಅತ್ಯಗತ್ಯವಾದುದು. ಉದಾಹರಣೆಗೆ, ಇದಿಲ್ಲದಿದ್ದರೆ ಪ್ರೋಟೀನು ಸಂಶ್ಲೇಷಣೆ ಆಗುವುದಿಲ್ಲ. ಅಮೈನೋ ಆಮ್ಲಗಳು ಕ್ರಿಯಾಶೀಲವಾಗಲು ಮತ್ತು ಪೆಪ್ಟೈಡು ಬಂಧಗಳ ರಚನೆಯಲ್ಲಿ ಬೇಕಾಗುವ ಜಿ.ಟಿ.ಪಿ. ಪುನರುತ್ಪತ್ತಿಯಾಗಲು ಇದು ಅವಶ್ಯ. ನ್ಯೂಕ್ಲಿಯಕ್ ಆಮ್ಲಗಳ ಜೈವಿಕ ಸಂಶ್ಲೇಷಣೆಗೂ ಇತರ ನ್ಯೂಕ್ಲಿಯೊಸೈಡ್ ಟ್ರೈಫಾಸ್ಫೇಟುಗಳ ಉತ್ಪಾದನೆಗೂ ಇದು ಬೇಕಾಗುತ್ತದೆ. ಮೇದಸ್ಸು ಮತ್ತು ಮೇದಸ್ಸಿನ ಆಮ್ಲಗಳು ಟರ್ಪೀನುಗಳು, ಸಿಟ್ರಾಲ್‌ಗಳು ಮತ್ತು ಫಾಸ್ಫೊಲಿಪಿಡ್ಡುಗಳ ಉತ್ಪಾದನೆಯ ಬೇರೆ ಬೇರೆ ಹಂತಗಳಲ್ಲಿ ಎ.ಟಿ.ಪಿ. ಆವಶ್ಯಕ. ಎ.ಟಿ.ಪಿ. ಒಂದು ವಿಧದಲ್ಲಿ ರಾಸಾಯನಿಕ ಶಕ್ತಿಯ ಬಳಕೆರೂಪ. ಶಕ್ತಿ ಬೇಕಾಗುವ ಜೀವರಾಸಾಯನಿಕ ಸಂಶ್ಲೇಷಣಾ ಕ್ರಿಯೆಗಳೆಲ್ಲದಕ್ಕೂ ಅತ್ಯಾವಶ್ಯಕ. ಗ್ಲೂಕೋಸ್ ವ್ಯಯಪಥ ಕೊನೆಯ ಹಂತಗಳಲ್ಲಿ ಎರಡಕ್ಕೆ ಎ.ಟಿ.ಪಿ. ಸಂಶ್ಲೇಷಣೆ ನಡೆದರೂ ಶರೀರಶಾಸ್ತ್ರ ದೃಷ್ಟಿಯಿಂದ ಹೇಳುವುದಾದರೆ ಶಕ್ತಿಗ್ರಾಹಕ ಕ್ರಿಯೆಗಳಾದ ಮಾಂಸಖಂಡಗಳ ಸಂಕೋಚನೆ, ಫ್ಲಾಜೆಲ್ಲಾ ಮತ್ತು ಸೀಲಿಮಗಳ ಚಲನೆ, ಶ್ರಮಪೂರ್ವಕ ಚಾಲನೆ (ಆ್ಯಕ್ಟಿವ್ ಟ್ರಾನ್ಸ್‌ಪೋರ್ಟ್) ಮತ್ತು ನರಗಳಲ್ಲಿ ನಡೆಯುವ ವಿದ್ಯುತ್‌ಕ್ರಿಯೆಗಳಲ್ಲಿ ಹೆಚ್ಚಿನ ಕ್ರಿಯೆ–ಇವೆಲ್ಲಕ್ಕೂ ಇದು ಬೇಕಾಗುತ್ತದೆ.

ಒಟ್ಟಿನಲ್ಲಿ ಎ.ಟಿ.ಪಿ. ಜೀವಪ್ರಪಂಚದ ಎಲ್ಲೆಡೆಯಲ್ಲೂ ಶಕ್ತಿ ವಿನಿಮಯಕ್ಕಾಗಿ ಚಲಾವಣೆಯಲ್ಲಿರುವ ನಾಣ್ಯ ಎನ್ನಬಹುದು. (ಎಂ.ಆರ್.ಆರ್.)

**ಅಡ್ಜುಟೆಂಟ್ ಹಕ್ಕಿ :** ಆಫ್ರಿಕ ಮತ್ತು ಏಷ್ಯ ಖಂಡಗಳ ಕೊಕ್ಕರೆಗಳಲ್ಲಿ ಅತ್ಯಂತ ದೊಡ್ಡದೂ 2–2.3ಮೀ ವಿಕಾರವೂ ಆಗಿರುವ ಪಕ್ಷಿ. ತಲೆ ನುಣ್ಣಗಿದೆ. ಕೊಕ್ಕು ತುಂಬ ದೊಡ್ಡದು; ಕತ್ತಿನ ಕೆಳಭಾಗದಲ್ಲಿ ಒಂದು ಚೀಲ ನೇತಾಡುತ್ತದೆ. ಮಿಲಿಟರಿ ಅಧಿಕಾರಿಗಳಂತೆ ಇದು ಗಂಭೀರವಾಗಿ ನಡೆಯುವುದರಿಂದ ಇದಕ್ಕೆ ಈ ಹೆಸರು ಬಂತು.

ಕೊಕ್ಕು ಗಟ್ಟಿಯಾಗಿ ಬೋಳಾಗಿದೆ. ತಲೆಯನ್ನು ಎಳೆಗೂದಲು ಆವರಿಸಿದೆ. ಗರಿಗಳು ಬಿರುಸಾಗಿವೆ; ನಾಜೂಕಾಗಿಲ್ಲ. ಕಾಲುಗಳು ಉದ್ದ, ಬಲವುಳ್ಳವು; ಅವುಗಳ ಮೇಲೆ ಯಾವ ಹೊದ್ದಿಕೆಯೂ ಇಲ್ಲ. ರೆಕ್ಕೆ ಹರವಾಗಿದೆ. ಮನುಷ್ಯರ ವಾಸಸ್ಥಾನಗಳಿಗೆ ಈ ಹಕ್ಕಿ ಹೊಂದಿಕೊಂಡಿದೆ ಮತ್ತು ಹೊಲಸನ್ನು ನಿರ್ಮೂಲ ಮಾಡುವುದರಲ್ಲಿ ಒಳ್ಳೆಯ ಪಾತ್ರವಹಿಸುತ್ತದೆ. ಹಾವುಗಳನ್ನು ತಿನ್ನುತ್ತದಾದರೂ ಹೆಚ್ಚಾಗಿ ಹೆಣಗಳೇ ಇದರ ಆಹಾರ. ಅಲುಗಾಡದೆ ಬೆನ್ನಿಗೆ ಕೊರಳನ್ನು ಚಾಚಿಕೊಂಡು ದೀರ್ಘಕಾಲ ನಿಲ್ಲಬಲ್ಲದು. ಓಡಾಟಗಳೆಲ್ಲ ಹಗಲಿನಲ್ಲೇ. ಉತ್ತರ ಭಾಗದಲ್ಲಿರುವುವು ಪಯಣಿಗ ಹಕ್ಕಿಗಳು. ಭಾರತಕ್ಕೆ ಬೇಸಗೆಯಲ್ಲಿ ಬರುತ್ತವೆ; ಬೇಸಗೆ ಮುಗಿವ ಹೊತ್ತಿಗೆ ಬಂಗಾಲದಲ್ಲಿ ಸಾಧಾರಣವಾಗಿ ಕಾಣಿಸಿಕೊಳ್ಳುತ್ತವೆ. ಇವನ್ನು ಕೊಲ್ಲಬಾರದೆಂದು ಭಾರತ ಸರ್ಕಾರ ಕಾಯಿದೆ ಮಾಡಿದೆ.

ಸಾಮಾನ್ಯವಾಗಿ ಇವು ದೊಡ್ಡ ದೊಡ್ಡ ಹಿಂಡುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಹಾರಾಟ ಅಷ್ಟು ಹಗುರವಲ್ಲ, ರೆಕ್ಕೆಗಳ ಬಡಿತ ಹೆಚ್ಚು; ಆದರೂ ವೇಗವಾಗೂ ತುಂಬ ಎತ್ತರಕ್ಕೂ ಹಾರಬಲ್ಲವು. ಆಫ್ರಿಕದ ಜಾತಿಯ ಹಕ್ಕಿಯ ತಲೆ ಮಾಂಸದಂತೆ ಕೆಂಪಾಗಿದೆ; ಬೆನ್ನಿನ ತುಪ್ಪಳದ ಬಣ್ಣ ಲೋಹದ ಕಪ್ಪು ಹಸಿರು, ಕೊರಳು ಮತ್ತು ಕೆಳಭಾಗ ಬಿಳಿ. (ಎಂ.ವಿ.ಎ.)

**ಅಡ್ಡಗಟ್ಟು :** ಅಧಿಕ ನೀರಿನಾಳವನ್ನು ಪಡೆಯಲು ಹರಿಯುವ ನದಿಗಡ್ಡಲಾಗಿ ನಿರ್ಮಿಸುವ ಕೃತಕ ತಡೆಗೆ ಇಂಜಿನಿಯರಿಂಗ್‌ನಲ್ಲಿ ಈ ಹೆಸರಿದೆ (ಬ್ಯಾರಾಜ್). ಸಾಮಾನ್ಯವಾಗಿ ನೀರಿನ ಮಟ್ಟಕ್ಕಿಂತ ಎತ್ತರವಾಗಿರುವ ಈ ತಡೆಗಳಲ್ಲಿ ಹಲವು ಅಂಕಣಗಳಿರುತ್ತವೆ (ಸ್ಪ್ಯಾನ್). ಒಂದೊಂದು ಅಂಕಣವನ್ನೂ ದೊಡ್ಡ ದೊಡ್ಡ ಉಕ್ಕಿನ ಬಾಗಿಲುಗಳಿಂದ ಮುಚ್ಚಿ ಅಗತ್ಯವಿದ್ದಾಗ ತೆರೆಯಲನುಕೂಲವಾಗುವಂತೆ ಮಾಡಿರುತ್ತಾರೆ. ಅಡ್ಡಗಟ್ಟಿನ ಮೇಲುಭಾಗದಲ್ಲಿ ಸಂಚಾರಕ್ಕನುಕೂಲವಾಗುವಂಥ ಸೇತುವೆ ಇರುತ್ತದೆ. ನದಿಯಲ್ಲಿ ಮಹಾಪ್ರವಾಹವುಂಟಾದರೂ ನೀರಿನ ಮಟ್ಟವನ್ನು ಅಂಕಣಬಾಗಿಲುಗಳ ಸಹಾಯದಿಂದ ನಿಯಂತ್ರಿಸಿ ನೀರು ಮೇಲೆ ಹರಿಯದಂತೆ ಮಾಡಬಹುದು. ಅಡ್ಡಗಟ್ಟುಗಳಿಂದ ನೀರಾವರಿ ವ್ಯವಸಾಯಕ್ಕೆ ಹೆಚ್ಚಿನ ಉಪಯೋಗವಾಗಿದೆ.

ಉತ್ತರಭಾರತದ ಸಿಂಧು ಪ್ರಾಂತದಲ್ಲಿ ಸುಕ್ಕೂರಿಗೆ ಸು. 5ಕಿಮೀ ದೂರದಲ್ಲಿ ನಿರ್ಮಿಸಲಾದ (1927) ಇಂಥ ಒಂದು ಅಡ್ಡಗಟ್ಟು ಹಿಂದೆ ಭಾರತಕ್ಕೆ ಸೇರಿದ್ದು ಈಗ ಪಾಕಿಸ್ತಾನಕ್ಕೆ ಸೇರಿದೆ. ಇದು ಅತ್ಯಂತ ವ್ಯಾಪಕವಾದ ನೀರಾವರಿ ಯೋಜನೆಗಳಲ್ಲೊಂದಾಗಿದೆ. ಇದರಿಂದ ಏಳು ದೊಡ್ಡ ನೀರಾವರಿ ನಾಲೆಗಳು ಹೊರಟು 53 ಲಕ್ಷ ಎಕರೆಗಳಿಗೆ ನೀರನ್ನೊದಗಿಸಲಾಗಿದೆ. ಅಡ್ಡಗಟ್ಟಿನಲ್ಲಿ 18'ಮೀ ಅಗಲದ 36 ಅಂಕಣಗಳಿದ್ದು ಇವುಗಳ ನಡುವಣ ಕಲ್ಲುಗಾರೆಯ ಕಂಬಗಳು 2'ಮೀ ಅಗಲವಾಗಿವೆ. ಒಂದೊಂದು ಅಂಕಣವನ್ನು 46 ಟನ್‌ತೂಕದ 63 $^1/_4$ ಅಗಲ, 18 $^1/_2$ ಎತ್ತರದ ಉಕ್ಕಿನ ಬಾಗಿಲಿನಿಂದ ಮುಚ್ಚಲಾಗಿದೆ. ಒಂದೊಂದು ಬಾಗಿಲನ್ನೂ ಭದ್ರವಾದ ಕಾಂಕ್ರೀಟಿನ ಭಾರದಿಂದ ಸರಿತೂಗಿಸಿದ್ದಾರೆ. ಅಡ್ಡಗಟ್ಟಿನ ಮೇಲುಗಡೆ ತಳದಿಂದ 39' ಎತ್ತರದಲ್ಲಿ ಒಂದು ಮತ್ತು 62 1/2 ಎತ್ತರದಲ್ಲಿ ಒಂದು–ಹೀಗೆ ಎರಡು ಸಂಚಾರಾನುಕೂಲವಾದ ಸೇತುವೆಗಳಿವೆ. ಅಡ್ಡಗಟ್ಟಿನ ಒಟ್ಟು ಉದ್ದ ಒಂದೂವರೆ ಕಿಮೀಗಿಂತ ಸ್ವಲ್ಪ ಹೆಚ್ಚಾಗಿದೆ. ಅದು ನದಿ ನೀರಿನ ಮಟ್ಟವನ್ನು ಎಂಥ ಮಹಾಪ್ರವಾಹದಲ್ಲಾದರೂ ಸಂಪೂರ್ಣವಾಗಿ ನಿಯಂತ್ರಣ ಮಾಡಬಲ್ಲುದು. (ಎಚ್.ಸಿ.ಕೆ.)

**ಅಡ್ಡಗೂಡಣೆ :** ವೈದ್ಯದಲ್ಲಿ, ಎರಡು ರಕ್ತನಾಳಗಳ (ಧಮನಿಗಳು, ಸಿರಗಳು), ಜಠರ ಕರುಳುಗಳ ಇಲ್ಲವೇ ನರಗಳ ನಡುವೆ ಆಗಿರುವ ಸಂಬಂಧ ಕಲ್ಪನೆ. ಕರುಳಲ್ಲೋ ಜಠರದಲ್ಲೋ, ವಿಷಮಗಂತಿ ಹುಣ್ಣಿಗಾಗಿ ಆ ಭಾಗವನ್ನು ಪೂರ್ತಿ ತೆಗೆದು ಹಾಕಿದಾಗ ಆಹಾರ ಮುಂದೆ ಸಾಗಿಸುವಂತೆ, ಶಸ್ತ್ರಕ್ರಿಯೆಯಿಂದ ಸಹಜವಾಗಿ ದೂರವಿರುವ ಕರುಳುಗಳಂಥ ಪೊಳ್ಳುಗಳನ್ನೋ, ಅಂಗಗಳನ್ನೋ ಕೂಡಿಸುವ ದಾರಿ ಮಾಡುವುದುಂಟು. ಅದೇ ಅಡ್ಡಗೂಡಣೆ (ಅನಾಸ್ಟಮೋಸಿಸ್).

ಧಮನಿಗಳು ಕವಲೊಡೆದು ಕಿರಿಯ ಶಾಖೆಗಳಾಗುತ್ತ ಹೋದಂತೆಲ್ಲ ಪಕ್ಕದವೊಂದಿಗೆ ಕೂಡಿಕೊಳ್ಳುತ್ತವೆ. ಆದರೆ ಪುಪ್ಪುಸ, ತೊರಳೆ, ಮೂತ್ರಪಿಂಡ, ಕಣ್ಣಿನ ಕಣ್ಪಾಲ (ರೆಟಿನ), ಮಿದುಳು, ಗುಂಡಿಗೆಗಳ ಧಮನಿಗಳು ಹೀಗೆ ಒಂದರೊಡನೊಂದು ಕೂಡದಿರುವುದರಿಂದ ಎಲ್ಲಾದರೂ ಒಂದು ಕವಲಿಗೆ ಆತಂಕವಾದರೂ ರಕ್ತ ಮುಂದೆ ಹರಿಯದೆ ಆ ಭಾಗವೇ ಸಾಯುತ್ತದೆ. ಸಿರಗಳಲ್ಲಿ ಹೀಗಾಗದು. ಇವು ಒಂದಕ್ಕೊಂದು ಬಹಳ ಕಡೆಗಳಲ್ಲಿ ಕೂಡುತ್ತವೆ. ಈಲಿಯೊಳಕ್ಕೆ ರಕ್ತ ಸಾಗಿಸುವ ದೊಡ್ಡ ಸಿರ ಮಾತ್ರ ಇದಕ್ಕೆ ಹೊರತು. ಕಿರೀಕಿರಿಯ ಧಮನಿಗಳಿಗೂ ಸಿರಗಳಿಗೂ ನಡುವೆ ಲೋಮನಾಳಗಳು ಮೈಯಲ್ಲಿ ಎಲ್ಲೆಲ್ಲೂ ಅಡ್ಡಗೂಡಿಸುತ್ತವೆ. ಒಂದು ಅಂಗದ ನರ ಕೆಟ್ಟಿದ್ದರೆ, ಪಕ್ಕದಲ್ಲಿರುವ ಬೇರೊಂದು ನರವನ್ನು ಇದಕ್ಕೆ ಅಡ್ಡಗೂಡಿಸಿದರೆ ಅದಕ್ಕೆ ತಗಲಿರುವ ಸ್ನಾಯುಗಳು ಮತ್ತೆ ಚಲಿಸುವಂತಾಗುತ್ತವೆ. (ಡಿ.ಎಸ್.ಎಸ್)

**ಅಡ್ಡಗೋಡೆ :** ಗೃಹ, ಸೌಧ, ಕಚೇರಿಗಳು, ಕಾರ್ಯಾಲಯಗಳು ಇವುಗಳಲ್ಲಿ ಒಂದು ಕೊಠಡಿಯಿಂದ ಮತ್ತೊಂದು ಕೊಠಡಿಯನ್ನು ಬೇರ್ಪಡಿಸಲು ಕಟ್ಟುವ ಗೋಡೆ. ಅಡ್ಡಗೋಡೆಗಳನ್ನು ಕಟ್ಟಡದ ಅಂಗಳದಿಂದ ಊಟದ ಕೊಠಡಿ, ಶಯನಗೃಹದಿಂದ ಶೌಚಾಗೃಹ, ಅಡಿಗೆಯ ಕೊಠಡಿಯಿಂದ ಉಗ್ರಾಣದ ಕೊಠಡಿ, ಇಂತಹವುಗಳ ನಡುವೆ ಕಟ್ಟುತ್ತಾರೆ. ದೊಡ್ಡ ಸೌಧಗಳಲ್ಲಿ ಇಂಥ ಗೋಡೆಗಳನ್ನು ಅಗತ್ಯವಾದ ಸ್ಥಳಗಳಲ್ಲಿ ಅನುಕೂಲಕ್ಕೆ ತಕ್ಕಂತೆ ಕಟ್ಟುತ್ತಾರೆ. ಇದರ ಎತ್ತರ ಸಾಮಾನ್ಯವಾಗಿ ನೆಲದಿಂದ ಮೇಲ್ಛಾವಣಿಯವರೆಗೂ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಎತ್ತರವನ್ನು 120 – 200 ಸೆಂಮೀಗಳಿಗೆ ನಿಲ್ಲಿಸಿರುತ್ತಾರೆ. ಇಂಥ ಗೋಡೆಯನ್ನು ಮೋಟು ಗೋಡೆ ಎನ್ನಬಹುದು. ಈ ಗೋಡೆಗಳು ಮೇಲ್ಛಾವಣಿಯ ಭಾರ ಅಥವಾ ಅಕ್ಕಪಕ್ಕದ ಭಾರಗಳನ್ನು ತಡೆಯಲಾರವು. ಆದ್ದರಿಂದ ತಳಪಾಯವಿಲ್ಲದೆ ನೆಲದ ಮಟ್ಟದಿಂದ ಕೂಡ ಇವನ್ನು ಕಟ್ಟಬಹುದು. ಅಡ್ಡಗೋಡೆಯ ದಪ್ಪ $^1/_2$ ಇಟ್ಟಿಗೆ, ಅಂದರೆ 4 $^1/_2$" ಅಥವಾ 10 ಸೆಂಮೀಗಳು; ಪ್ರಬಲಿತ ಕಾಂಕ್ರೀಟ್‌ನಲ್ಲಿ ಕಟ್ಟಿದರೆ ದಪ್ಪವನ್ನು 6.5 ಸೆಂಮೀಗೆ ಇಳಿಸಬಹುದು. ಅಡ್ಡಗೋಡೆಗಳಲ್ಲಿ ಬಾಗಿಲುಗಳನ್ನೂ ಇರಿಸಬಹುದು.

ಇಟ್ಟಿಗೆಯಿಂದ ಕಟ್ಟುವ ಅಡ್ಡಗೋಡೆಗಳಿಗೆ ಸಿಮೆಂಟು ಗಾರೆ ಚೆನ್ನಾಗಿ ತುಳಿದು ಹದ ಮಾಡಿದ ಮಣ್ಣಿನ ಗಾರೆ ಮುಂತಾದವುಗಳನ್ನು ಉಪಯೋಗಿಸಬೇಕು. ಗೋಡೆ ಭದ್ರವಾಗಿರಲು ಪ್ರತಿ 90 ಸೆಂಮೀ ಎತ್ತರದಲ್ಲಿ 6 ಮಿಮೀ ದುಂಡು ಕಂಬಿಯನ್ನು ಇಟ್ಟು 7.5 ಸೆಂಮೀ ದಪ್ಪದ ಕಾಂಕ್ರೀಟ್ ಹಾಕುತ್ತಾರೆ. ಅನಂತರ ಗೋಡೆಯ ಎರಡೂ ಪಕ್ಕಗಳಲ್ಲಿ ಸಿಮೆಂಟ್ ಅಥವಾ ಸುಣ್ಣದ ಗಾರೆಗಳಿಂದ ಗಿಲಾವು ಮಾಡುತ್ತಾರೆ. ಕಾಂಕ್ರೀಟ್‌ನಲ್ಲಿ ಅಡ್ಡಗೋಡೆ ಕಟ್ಟಿದಾಗ 3 ನೂಲು ದಪ್ಪದ ಕಂಬಿಯನ್ನು ಎತ್ತರದಲ್ಲೂ 1 ನೂಲು ದಪ್ಪದ ಕಂಬಿಯನ್ನು ಅಡ್ಡದಲ್ಲೂ ಪ್ರತಿ ಕಂಬಿಗಳೂ 15 ಸೆಂ.ಮೀ. ದೂರ ಇರುವಂತೆ ಎಳೆದು ನೆಲದ ಮೇಲೆ ನಿಲ್ಲಿಸಿ ಕಾಂಕ್ರೀಟ್ ಹಾಕುತ್ತಾರೆ. ಅನಂತರ ಸಿಮೆಂಟ್ ಗಿಲಾವು ಮಾಡಿ 21 ದಿನಗಳ ಕಾಲ ಗೋಡೆಯನ್ನು ಒದ್ದೆಯಾಗಿ ಇಟ್ಟಿರುತ್ತಾರೆ.

ಮರದ ಹಲಗೆಗಳು ಮತ್ತು ಗಾಜುಗಳನ್ನು ಉಪಯೋಗಿಸಿ ಅಡ್ಡಗೋಡೆಗಳನ್ನು ತಯಾರಿಸಬಹುದು. ಮರದ ಹಲಗೆಯ ಮೇಲೆ ಅಂದ ಚೆಂದದ ಕೆತ್ತನೆಯ ಕೆಲಗಳನ್ನು ಮಾಡಿಸಿರುತ್ತಾರೆ. ಇಂಥ ಅಡ್ಡಗೋಡೆಗಳು ಬೇಕಾದಾಗ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸಾಗಿಸಲು ಯೋಗ್ಯವಾದುವುಗಳು. (ಜಿ.ಟಿ.ಜ.)

**ಅಡ್ಡತಡೆ :** ಶತ್ರುವಿನ ಮುನ್ನಡೆಯನ್ನು, ಮುಖ್ಯವಾಗಿ ಆತನ ವಾಹನಗಳ ಮುನ್ನಡೆಯನ್ನು ತಡೆಯುವುದಕ್ಕಾಗಿ ಬೀದಿ ಅಥವಾ ಹಾದಿಗೆ ಅಡ್ಡಲಾಗಿ ಮಣ್ಣು, ಇಟ್ಟಿಗೆ, ಕಲ್ಲು, ಮರದ ದಿಮ್ಮಿ ಇವುಗಳಲ್ಲಿ ಯಾವುದಾದರೊಂದನ್ನು ಅಥವಾ ಹಲವನ್ನು ಬಳಸಿ ಮಾಡಿದ ಅಡ್ಡಗೋಡೆ (ಬ್ಯಾರಿಕೇಡ್); ಅವಸರವಸರವಾಗಿ ಮಾಡಿದ ಆಳ್ವೇರಿ.

(ಎ.ಎನ್.ಎಸ್.ಎಂ., ಎಂ.ಜಿ.ಎಸ್.)

**ಅಡ್ಡತಳಿಯೆಬ್ಬಿಕೆ :** ಅಪೇಕ್ಷಿತ ಗುಣ, ಲಕ್ಷಣಗಳನ್ನು ಪಡೆಯಲು ಜೀವಿಗಳನ್ನು ಕೃತಕ ವೀರ್ಯಪೂರಣ ಅಥವಾ ಪರಕೀಯ ಪರಾಗಸ್ಪರ್ಶದ ಮೂಲಕ ಫಲೀಕರಿಸಿ ಉತ್ಪಾದಿಸುವ ಸಂಕರ/ಮಿಶ್ರ ತಳಿ ವಿಧಾನ (ಕ್ರಾಸ್‌ಬ್ರೀಡ್). ಸಿಂಧಿ ಹಸುವಿನ ಮೇಲೆ

ಜರ್ಸಿ ಹೋರಿಯನ್ನೋ ಇಲ್ಲವೇ ಇದರ ಅದಲುಬದಲನ್ನೋ ಫಲೀಕರಿಸುವುದು, ಒಂದೇ ತಳಿಯಲ್ಲಿ ಅಡ್ಡತಳಿಯಬ್ಬಿಸುವ ಉದಾಹರಣೆ. ಹೆಣ್ಣು ಕುದುರೆಯೊಂದಿಗೆ ಗಂಡು ಕತ್ತೆಯನ್ನು ಕೂಡಿಸಿದರೆ ಬೇರೆ ಬೇರೆ ಜಾತಿ ಪ್ರಾಣಿಗಳಿಂದ ಅಡ್ಡತಳಿ ಎಬ್ಬಿಸಿದಂತೆ ಆಗುವುದು. ಗಂಡು ಕತ್ತೆ ಹೆಣ್ಣು ಕುದುರೆಯೊಂದಿಗೆ ಕೂಡಿದ ಮೇಲೆ ಹೇಸರಕತ್ತೆ ಹುಟ್ಟುತ್ತದೆ. ಹೆಣ್ಣುಕತ್ತೆಯೊಂದಿಗೆ ಗಂಡು ಕುದುರೆ ಕೂಡಿದರೆ ಹುಟ್ಟುವುದೂ ಹೇಸರ ಕತ್ತೆಯೇ (ಹಿನ್ನಿ). ಗಂಡು ಕಾಡುಕೋಣ ಸಾಕಿದ ಹಸುವನ್ನು ಕೂಡಿದರೆ ಕೋಣಸು (ಕ್ಯಾಟೆಲ್ಲೊ) ಹುಟ್ಟುವುದು. ಹೀಗೆ ಪಟ್ಟೆಕುದುರೆಯೂ (ಜೀಬ್ರ) ಕುದುರೆಯೂ ಸೇರಿದರೆ ಪಟ್ಟೆಕುದುರೆತರ (ಜೀಬ್ರಾಯಿಡ್) ಆಗುತ್ತದೆ. ದನಗಳ, ಚಮರೀ ಮೃಗಗಳ ನಡುವೆ ಹುಟ್ಟುವ ಪ್ರಾಣಿ ದನಚಮರೀ (ಪಿಯೆನ್ ನಿಯೊ). ಬೇರೆ ಬೇರೆ ಜಾತಿಗಳಿಗಿಂತಲೂ ತಳಿಗಳ ನಡುವಣ ಅಡ್ಡತಳಿಯೆಬ್ಬಿಕೆಯೇ ಹೆಚ್ಚು ಬಳಕೆಯಲ್ಲಿದೆ.

**ಅಡ್ಡತಳಿಯೆಬ್ಬಿಸುವ ವಿಧಾನಗಳಲ್ಲಿ ಮುಖ್ಯವಾದವು ಮೂರು** : 1 ಶುದ್ಧ ತಳಿಯ ಹೆಣ್ಣಿನೊಂದಿಗೆ ಅದೇ ತಳಿಯ ಇನ್ನೊಂದು ಶುದ್ಧ ತಳಿಯ ಗಂಡನ್ನು ಕೂಡಿಸುವುದು; 2 ಅಡ್ಡತಳಿಯಲ್ಲಿ ಹುಟ್ಟಿದವುಗಳ ಮೇಲೆ ಒಂದಾದ ಮೇಲೊಂದರಂತೆ ಎರಡು ಶುದ್ಧ ತಳಿಯ ಜೀವಿಗಳ ನಡುವೆ ಅಡ್ಡ ತಳಿಯೆಬ್ಬಿಸುವುದು; 3 ಎರಡಕ್ಕೂ ಹೆಚ್ಚಿನ ಶುದ್ಧತಳಿ ಜೀವಿಗಳನ್ನು ಸರದಿಯಲ್ಲಿ ಅವುಗಳ ಅಡ್ಡ ತಳಿಯ ಪೀಳಿಗೆಯೊಂದಿಗೆ ಕೂಡಿಸುವ, ಸರದಿಯ ಅಡ್ಡತಳಿಯೆಬ್ಬಿಕೆ.

ಅಡ್ಡತಳಿಯೆಬ್ಬಿಸುವುದು ಪಶುಪಾಲಕರಲ್ಲಿ ಸಾಮಾನ್ಯ. ಇದರಿಂದ ಒಂದೇ ಮಂದೆಯಲ್ಲಿರುವ ಸಾಕುಪ್ರಾಣಿಗಳ ನಡುವೆ ಸಂತಾನೋತ್ಪತ್ತಿ ಜರುಗಿಸುವ ಬದಲಿಗೆ ಹೊಸ ತಳಿಗಳನ್ನು (ಜೀನ್ಸ್) ಬಳಸುವುದು. ಇದರಿಂದ ವಿಶೇಷ ಲಕ್ಷಣಗಳುಳ್ಳ ಹೊಸ ತಳಿಗಳನ್ನು ಪಡೆಯಬಹುದು. ಸಂಕರದ (ಹೈಬ್ರಿಡ್) ಫಲವನ್ನೂ ಪಡೆಯಬಹುದು. ಇಂತಹ ಅಡ್ಡತಳಿಯೆಬ್ಬಿಸುವ ವಿಧಾನದ ಮೂಲಕ ಉತ್ತಮ ಸಾಕುಪ್ರಾಣಿ ಅಥವಾ ಸಸ್ಯಗಳನ್ನು ಪಡೆಯುವುದರಿಂದ ಆರ್ಥಿಕವಾಗಿ ಲಾಭದಾಯಕ.

ಹೈನಿನ ದನ, ಮಾಂಸದ ದನ, ಕುರಿಗಳು, ಹಂದಿ, ಕೋಳಿ, ಬಾತುಗಳೇ ಮೊದಲಾದ ಜೀವಿಗಳಲ್ಲಿ ಅಡ್ಡ ತಳಿ ವಿಧಾನದಿಂದ ಅನೇಕ ಸಂಕರ/ಮಿಶ್ರ ತಳಿಗಳನ್ನು ಪಡೆಯಲಾಗಿದೆ. ಹೈನಿನ ದನಗಳಲ್ಲಿ ಅಡ್ಡತಳಿಯವು ಬೇಗನೆ ಬೆದೆಗೆ ಬರುತ್ತವೆ. ಹಾಲು ಹೆಚ್ಚಿಗೆ ನೀಡುತ್ತವೆ. ಹಾಲಿನಲ್ಲಿ ಕೊಬ್ಬಿನ ಪ್ರಮಾಣ ಹೆಚ್ಚು. ಅವುಗಳ ಶುದ್ಧತಳಿಯವು ಮೂಲ ಸಂತಾನದವಕ್ಕಿಂತಲೂ ಕ್ರಮ ತಪ್ಪದೆ ಈಲಾಗುತ್ತದೆ. ಮಾಂಸದ ದನಗಳಲ್ಲಿ, ಅಡ್ಡತಳಿಯವು ಅವುಗಳದೇ ಶುದ್ಧತಳಿಗಿಂತಲೂ ಗುಣಮಟ್ಟದ ಮಾಂಸವನ್ನು ರೂಪಿಸುತ್ತವೆ. ಕರುಗಳು, ಹಾಲು ಬಿಡಿಸುವ ಹೊತ್ತಿಗೆ ಬಲು ಚೆನ್ನಾಗಿ ಬೆಳೆದಿರುವುವಲ್ಲದೆ, ಬೇಗನೆ ಮೈಗೂಡುತ್ತವೆ. ಮುಂಡದ ತೂಕ ಹೆಚ್ಚು. ಹದವಾಗುವ ಅಟ್ಟೆ ಭರ್ಜರಿ. ಹಾಗೇ ಕುರಿಗಳಲ್ಲೂ ಶುದ್ಧತಳಿಗಿಂತಲೂ ಅಡ್ಡತಳಿಯವೇ ತೂಕವಾದ ಮರಿಗಳನ್ನು ಹಾಕುತ್ತವೆ. ಬೆಳವಣಿಗೆಯೂ ಶೀಘ್ರಗತಿಯಲ್ಲಾಗಬಹುದು. ಕೋಳಿ, ಬಾತುಗಳಲ್ಲಿ ಕೂಡ ಅಡ್ಡತಳಿಯವೇ ಚೆನ್ನಾಗಿ ತಿಂದು ಬೇಗನೆ ಬೆಳೆಯುತ್ತ ತೂಕದ ಮೊಟ್ಟೆಗಳನ್ನು ಹೆಚ್ಚಾಗಿ ಕೊಡುವುವಲ್ಲದೆ, ಮರಣಪ್ರಮಾಣವೂ ಕಡಿಮೆಯಾಗುವುದು. ಅಡ್ಡತಳಿ ಹಂದಿಗಳು ಒಂದೊಂದು ಸೂಲಿಗೂ ಹೆಚ್ಚು ಮರಿಗಳನ್ನು ಹಾಕುತ್ತವೆ. ಮರಿಗಳು ಹುಟ್ಟುವಾಗಲೇ ಸಾಯುವುದು ಕಡಿಮೆ. ಹಾಲು ಬಿಡಿಸುವ ಹೊತ್ತಿಗೆ ಹೆಚ್ಚಿನ ಸಂಖ್ಯೆಯ ಮರಿಗಳು ಬದುಕುಳಿದಿರುತ್ತವೆ. ಕತ್ತೆ, ಕುದುರೆಗಳಿಗಿಂತಲೂ ಹೇಸರಕತ್ತೆಗಳು ಇನ್ನಷ್ಟು ಗಟ್ಟಿಮುಟ್ಟಾಗಿ, ಹೆಚ್ಚು ಚುರುಕು ಬುದ್ಧಿಯವಾಗಿ, ಬಹುಕಾಲ ಬದುಕಿರುತ್ತವೆ.

ಶುದ್ಧತಳಿಗಳಿಗೂ ಅಡ್ಡತಳಿಗಳೇ ಮೂಲತಳಿ. ಕಳೆದ ಕೆಲವು ದಶಕಗಳಿಂದಲೂ ಹಲವಾರು ಹೊಸ ತಳಿಗಳು ಬೆಳೆದುಬಂದಿವೆ. ಆಮೇಲೆ ಬೇಕಾದುವುಗಳ ಆಯ್ಕೆ, ಒಳತಳಿಯ ಆಯ್ಕೆ ಹೀಗೇ ಹೋಗುತ್ತದೆ. ಬೆಳೆಸಿದ ಕೆಲವು ಮುಖ್ಯ ತಳಿಗಳನ್ನೂ ಮೂಲತಳಿಗಳಾಗಿ ಬಳಕೆಯಲ್ಲಿರುವ ಅಚ್ಚತಳಿಗಳನ್ನೂ ಇಲ್ಲಿ ಹೆಸರಿಸಿದೆ. (ಎಸ್.ಕೆ.ಜಿ.)

**ಅಡ್ರಿನಲ್ ಗ್ರಂಥಿಗಳ ರೋಗಗಳು** : ಇವನ್ನು ಕುಸುರಿಯವೆಂದೂ (ಮೆಡುಲ್ಲ) ರಗಟೆಯವೆಂದೂ (ಕಾರ್ಟೆಕ್ಸ್) ವಿಂಗಡಿಸಬಹುದು. ಕುಸುರಿಯಲ್ಲಿ ಏಳುವ ರೋಗಕ್ಕೆ, ಒಂದು ಗಂತಿ (ಮಬ್ಬಣ ಕಣಗಂತಿ, ಫ್ಯಾಗ್ರೆಮೋಸಿಟೋಮ) ಕಾರಣ. ಆಗ ಈ ಗಂತಿಯಿಂದ ಅಡ್ರಿಲೀನ್, ನಾರಡ್ರಿನಲೀನ್ ವಿಪರೀತ ಸುರಿವುದರಿಂದ, ಕೈಕಾಲುಗಳು ತಣ್ಣಗೆ ನೀಲಿಗಟ್ಟಿ, ಆಗಿಂದಾಗ್ಗೆ ರಕ್ತದ ಒತ್ತಡದೇರಿಕೆ, ಎದೆಯಲ್ಲಿನ ಗುಂಡಿಗೆಯ ಡವಡವಿಕೆ, ಬೆವರಿಕೆ, ಚಿಟ್ಟಾಗುವ ತಲೆನೋವುಗಳು, ಕಳವಳ, ಓಕರಿಕೆ, ವಾಂತಿ ಆಗುತ್ತವೆ. ಗಂತಿಯನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕುವುದೇ ವಾಸಿಮಾಡುವ ಉಪಾಯ.

ಅಡ್ರಿನಲ್ ಗ್ರಂಥಿಯ ರಗಟೆಯ ರೋಗವನ್ನು ಅದರ ನಿಜಗೆಲಸ ಏರುಪೇರಾದಂತೆ ವಿಂಗಡಿಸಬಹುದು: ಅತಿಗೆಲಸ, ಕೆಲಸಗೊರೆ. ಈ ಎರಡನೆಯದಕ್ಕೆ ಅಡಿಸನ್ನನ ರೋಗ (ನೋಡಿ– ಅಡಿಸನ್ನನ–ರೋಗ) ಎಂಬ ಹೆಸರಿದೆ.

ಅಡ್ರಿನಲ್ ರಗಟೆಯ ಅತಿಗೆಲಸ ಹುಟ್ಟುತ್ತಲೇ ಬಂದಿರಬಹುದು, ಆಮೇಲೆ ಗಳಿಸಿದ್ದಾಗಿರಬಹುದು. ಹುಟ್ಟುತ್ತಾ ಬಂದಿದ್ದು ಇಕ್ಕೆಡೆಯಲ್ಲೂ ಮಲೆತವಾಗಿ (ಹೈಪರ್‌ಟ್ರೊಫಿ) ಹಿರಿದಾಗಿರಬಹುದು. ಗಳಿಸಿದ್ದಾದರೆ ಗಂತಿಯಿಂದಲೂ ಆಗಿರಬಹುದು. ಹೆಣ್ಣುಕೂಸಿನಲ್ಲಿ ಹುಟ್ಟುತ್ತಲೇ ಹಿರಿದಾಗಿದ್ದರೆ, ಮೈಮೇಲೆಲ್ಲ ಕೂದಲು ಬೆಳೆದು, ಮುಟ್ಟು ನಿಂತು, ಗಂಡಿನ ಲಕ್ಷಣಗಳೊಂದಿಗೆ ಹುಸಿಯಿರ್ಲಿಂಗಿತನ (ಸ್ಯೂಡೊ ಹರ್ಮಫ್ರೊಡಿಟಿಸಮ್) ಕಾಣಿಸಿಕೊಳ್ಳುತ್ತದೆ. ಗಂಡುಕೂಸಿನಲ್ಲಿ ಜನನಾಂಗಗಳ ಮುನ್ನೆರತ (ಪ್ರಿಕಾಸಿಟಿ) ಕಾಣುವುದು. ಸಂತಾನಬಲ ಕಳೆದು ಬೊಜ್ಜು ಮೈ ಬರುವುದು. ಇಬ್ಬರಲ್ಲೂ ಗಂಡುತನದೊಂದಿಗೆ, ಮೈಯಿಂದ ಉಪ್ಪು ಕಳೆವ ಲಕ್ಷಣ ಕೂಟವೂ (ಸಿಂಡ್ರೋಮ್) ಕಾಣಬರುತ್ತದೆ. ಗಳಿಸಿದ ಅಡ್ರಿನಲ್ ರಗಟೆಯ ಅತಿಗೆಲಸಕ್ಕೆ ಮೆಲುಪಿನ (ಬಿನೈನ್) ಇಲ್ಲವೇ ವಿಷಮ (ಮ್ಯಾಲಿಗ್ನೆಂಟ್) ಅಡ್ರಿನಲ್ ಗಂತಿಯೋ, ಅಡ್ರಿನಲ್ ಗ್ರಂಥಿಯ ಮಲೆತವೋ ಕಾರಣವಾಗಿರಬಹುದು. ಗಂತಿಯಾಗದ ಅಡ್ರಿನಲ್ ಗ್ರಂಥಿ ಅತಿಗೆಲಸದಲ್ಲಿ ಗ್ರಂಥಿಗಳು ಹಿರಿದಾಗದೆ ಇರುವುದು ಅಪರೂಪವಲ್ಲ. ಅಂಥದಕ್ಕೆ ತೆಮಡಿಕ ಗ್ರಂಥಿಯಲ್ಲಿ (ಪಿಟ್ಯೂಟರಿ ಗ್ಲಾಂಡ್) ಏಳುವ ಗಂತಿ ಕಾರಣ.

ಅಡ್ರಿನಲ್ ರಗಟೆಯ ಗಳಿಸಿದ ಅತಿಗೆಲಸ ಕಷಿಂಗನ ಲಕ್ಷಣಕೂಟವಾಗೋ ಅಡ್ರಿನಲ್ ಜನನಾಂಗದ (ಅಡ್ರಿನೋಜೆನಿಟಲ್) ಲಕ್ಷಣಕೂಟವಾಗೋ ಇವೆರಡೂ ಇದ್ದೋ ತೋರಿಬರುತ್ತದೆ. ಕಷಿಂಗನ ಲಕ್ಷಣಕೂಟದಲ್ಲಿ ಹೆಗ್ಗುರುತುಗಳಾಗಿ ಬೊಜ್ಜುತನ, ಎಲುತೂತುಗಳಾಗಿ (ಆಸ್ಟಿಯೊಪೊರೊಸಿಸ್), ಚರ್ಮ ತೆಳುಕಲಾಗಿ ಸುಲಭವಾಗಿ ಬಿರಿಯುವುದರಿಂದ ಊದಾ ಬಣ್ಣದ ಪಟ್ಟೆಗಳು, ಸಿಹಿಮೂತ್ರ, ಮೊಗ ಹೊಟ್ಟೆ ಕಾಲುಗಳ ಕೆಂಪೇರಿಕೆ, ನಿತ್ರಾಣ, ಹಲವೇಳೆ ಮನೋಬೇನೆಗಳೂ ಇರಬಹುದು. ಹೆಣ್ಣಿನಲ್ಲಿ ಗಂಡಿನ ಲಕ್ಷಣಗಳು ಕಾಣುವುದೂ ಎಳೆಯವರಲ್ಲಿ ಜನನಾಂಗದ ಮುನ್ನೆರತವೂ ವಯಸ್ಕನಲ್ಲಿ ಹಲಮಟ್ಟದ ಪುಂಸ್ತ್ವ ಕಳೆವುದೇ ಅಡ್ರಿನಲ್ ಜನನಾಂಗದ ಲಕ್ಷಣ ಕೂಟ ಎನಿಸಿಕೊಳ್ಳುತ್ತದೆ.

ಶಸ್ತ್ರಕ್ರಿಯೆಯಿಂದ ತೆಗೆವುದೇ ಅಡ್ರಿನಲ್ ಗಂತಿಯ ಚಿಕಿತ್ಸೆ. ಹುಟ್ಟುತ್ತಬಂದ ಮಲೆತಕ್ಕೆ ಕೊನೆಯ ತನಕವೂ ಕಾರ್ಟಿಸೋನ್ ಇಲ್ಲವೇ ಅದರಂಥ ಕೃತಕ ಸಮಗೂಲಿಗಳನ್ನು (ಅನಲೋಗ್) ಕೊಡುವುದೇ ಚಿಕಿತ್ಸೆ. ಮೈಯಿಂದ ಉಪ್ಪು ಕಳೆದು ಹೋಗುತ್ತಿದ್ದರೆ, ಉಪ್ಪನ್ನು ಉಳಿಸಿಕೊಳ್ಳುವ ಡಿಸಾಕ್ಸಿಕಾರ್ಟಿಕೊಸ್ಟಿರೋನನ್ನೂ ಕೊಡಬೇಕು. ಕಷಿಂಗನ ಲಕ್ಷಣಕೂಟದೊಂದಿಗಿನ ಗಂತಿಯಿಂದೇಳದೆ, ಗಳಿಸಿದ ಅಡ್ರಿನಲ್ ಅತಿಗೆಲಸಕ್ಕೆ ಬರುವ ಚಿಕಿತ್ಸೆಗಳಿವು: ತೆಮಡಿಕ ಗ್ರಂಥಿಯ ವಿಕಿರಣಿಡಿತ (ಇರ್ರೇಡಿಯೇಷನ್) ದೊಂದಿಗೆ, ಒಂದು ಅಡ್ರಿನಲ್ ಗ್ರಂಥಿ ತೆಗೆತ; ಅಡ್ರಿನಲ್ ಗ್ರಂಥಿಗಳಲ್ಲಿ ಬಲುಪಾಲು ತೆಗೆತ; ತೆಮಡಿಕದ ತೆಗೆತ; ಅಡ್ರಿನಲ್‌ಗಳನ್ನೋ ತೆಮಡಿಕ ಗ್ರಂಥಿಯನ್ನೋ ಪೂರ್ತಿ ತೆಗೆದರೆ, ಹಾಳುಮಾಡಿದರೆ, ಅಡ್ರಿನಲ್ ಚೋದನಿಕಗಳನ್ನು ಬದಲುಸೇವಿಕ ಚಿಕಿತ್ಸೆಯಾಗಿ ಕೊಡುತ್ತಿರಬೇಕು.

ಮುಮ್ಮೊದಲ ಆಲ್ಡೊಸ್ಟಿರೋನ್ ವಿಷತೆ (ಪ್ರೈಮರಿ ಅಲ್ಡೊಸ್ಟಿರೋನಿಸಮ್). ಅಡ್ರಿನಲ್ ರಗಟೆಯ ಅತಿಗೆಲಸದ ಒಂದು ಬಗೆ. ಗಂತಿಯಾಗಿರುವುದೇ ಸಾಮಾನ್ಯ ಕಾರಣವಾದರೂ ಗಂತಿಯಿಲ್ಲದೆ ಕೂಡ ಅಲ್ಡೊಸ್ಟಿರೋನ್ ಅತಿಯಾಗಿ ಸುರಿಯಲೂಬಹುದು. ರಕ್ತದ ಏರಿದೊತ್ತಡ ರಕ್ತರಸಿಕೆಯಲ್ಲಿನ ಪೊಟ್ಯಾಸಿಯಂ ಇಳಿತ, ರಕ್ತದಲ್ಲಿನ ಇಂಗಾಲಾಮ್ಲದ ಏರಿಕೆ, ಮೂತ್ರಪಿಂಡ ಕೆಟ್ಟಿರುವ ಪುರಾವೆಗಳು, ಮೂತ್ರದಲ್ಲಿ ಹೆಚ್ಚಾಗಿ ಪೊಟ್ಯಾಸಿಯಂ ಕಳೆತ, ಮೂತ್ರದಲ್ಲಿ ಬಹುವಾಗಿ ಆಲ್ಡೊಸ್ಟಿರೋನ್ ಹೆಚ್ಚು ಕಳೆತವೂ ಅಂಥ ಲಕ್ಷಣಕೂಟದಲ್ಲಿ ಇರುತ್ತವೆ. ಹಲವೇಳೆ ಎಡೆಸೆಳೆವು (ಟೆಟ್ಯನಿ). ಸ್ನಾಯು ನಿತ್ರಾಣ, ಹೇರಳವಾಗಿ ಮೂತ್ರ ಸುರಿತವೂ ರೋಗಿಯಲ್ಲಿ ಕಂಡುಬರುತ್ತದೆ. ಅಡ್ರಿನಲ್ ಗ್ರಂಥಿ ತೆಗೆದುಹಾಕಿದರೆ ರೋಗ ಲಕ್ಷಣಗಳು ಇಲ್ಲವಾಗುತ್ತವೆ. (**ನೋಡಿ– ಕಷಿಂಗ್, ಹಾರ್ವೆ**) (ಡಿ.ಎಸ್.ಎಸ್.)

**ಅಡ್ರಿನಲ್ ಗ್ರಂಥಿಗಳು** : ಹೊಟ್ಟೆಯಲ್ಲಿ ಬೆನ್ನಿಗಂಟಿಕೊಂಡಿರುವ ಎರಡು ಮೂತ್ರಪಿಂಡಗಳ ಮೇಲೂ ಕುಲಾವಿಗಳಂತಿರುವ ಇವೆರಡು ಸಣ್ಣ ಗ್ರಂಥಿಗಳಿಗೂ ಮೂತ್ರಪಿಂಡ ಮೇಲಣ (ಅಡ್ರಿನಲ್) ಗ್ರಂಥಿಗಳೆಂದು ಹೆಸರಿದೆ. ನೇರವಾಗಿ ರಕ್ತದೊಳಕ್ಕೆ ಒಳಸುರಿವ, ನಾಳವಿರದ ಗ್ರಂಥಿಗಳಿವು. ಬಲಗಡೆಯದು ಮುಕ್ಕೋನಾಕಾರದಲ್ಲೂ ಎಡಗಡೆಯದು ಅರೆಚಂದ್ರಾಕಾರದಲ್ಲೂ ಇವೆ. ಅನುವೇದನ (ಸಿಂಪತೆಟಿಕ್) ನರದ ಮಂಡಲದ ಅಲ್ಲದೆ ರಕ್ತನಾಳಗಳ ಸಂಬಂಧ ಇವೆರಡಕ್ಕೂ ಧಾರಾಳವಾಗಿದೆ. ಒಂದೊಂದು ಗ್ರಂಥಿಯಲ್ಲೂ ಎರಡು ಬೇರೆ ಬೇರೆ ಭಾಗಗಳಿವೆ: ಕವಚದಂಥ ರಗಟೆ; ತಿರುಳಿನಂಥ ಕುಸುರಿ (ಮೆಡುಲ್ಲ). ರಗಟೆಯ ಭಾಗವೇ ಹೆಚ್ಚು ದಪ್ಪ. ಮೂರು ವಲಯಗಳಲ್ಲಿ ಜೀವಕಣಗಳೂ ಕಂಬಗಳಂತೆ ಜೋಡಣೆಯಾಗಿವೆ. ಜೀವಿಗೆ ಬೇಕೇಬೇಕಿರುವ ಬಸಿರಣಿಕಕ್ಕೆ (ಪ್ರೊಜೆಸ್ಟಿರೋನ್) ಸಂಬಂಧಿಸಿದ ಸ್ಟಿರಾಯ್ಡ್‌ಗಳು ಎನಿಸಿಕೊಂಡಿರುವ, ಹಲವಾರು ಚೋದನಿಕಗಳು (ಹಾರ್ಮೋನ್ಸ್) ಇಲ್ಲಿ ತಯಾರಾಗುತ್ತವೆ. ನರಗಳ ಸಂಬಂಧದಿಂದ ಬಂದ ಜೀವಕಣಗಳಿರುವ ಕುಸುರಿನಲ್ಲಿ ಬಹುವಾಗಿ ಅಡ್ರಿನಲೀನೂ ಸ್ವಲ್ಪ ನಾರಡ್ರಿನಲೀನೂ ತಯಾರಾಗುತ್ತವೆ.

**ಸಾರಕದ ತಯಾರಿಕೆ** : ಪ್ರಾಣಿಗಳಿಂದ ತಂದ ಹಿಮಗಟ್ಟಿಸಿದ ಅಡ್ರಿನಲ್ ಗ್ರಂಥಿಗಳನ್ನು ನುಣ್ಣಗೆ ಕತ್ತರಿಸಿ, ತಣ್ಣನೆಯ ಮದ್ಯಸಾರದಲ್ಲಿ ಸಾರವಿಳಿಸುವುದರಿಂದ, ಇದರ ಸಾರಕ ತಯಾರಾಗುತ್ತದೆ. ಗ್ರಂಥಿಯಲ್ಲಿನ ನೀರು ಮದ್ಯಸಾರದಲ್ಲಿ ಸೇರಿಕೊಂಡು ರಗಟೆಯ

ಚೋದನಿಕಗಳನ್ನು ಕರಗಿಸಿಕೊಳ್ಳುತ್ತದೆ. ಗಟ್ಟಿವಸ್ತುವನ್ನು ಬಿಸಾಡಿ ಉಳಿದ ನೀರಾದ ಮದ್ಯಸಾರವನ್ನು ಇಳಿಸಿದ ಒತ್ತಡದಲ್ಲಿ ಬಟ್ಟಿಯಿಳಿಸಿದಾಗ ಸಾರಕ ದೊರೆಯುವುದು. ಇದರಲ್ಲಿ ಅಡ್ರಿನಲ್ ಕುಸುರಿನಲ್ಲಿರುವ ಅಡ್ರಿನಲೀನ್, ನೋರಡ್ರಿನಲೀನ್ ಕೂಡ ಇರುವುದರಿಂದ, ಇದನ್ನು ಕ್ಲೋರೊಫಾರ್ಮ್‌ನಲ್ಲಿ ಕರಗಿಸಿ ಇಮರಿಸಿದರೆ, ರಗಟೆಯ ಚೋದನಿಕಗಳು ಮಾತ್ರ ದೊರೆಯುತ್ತವೆ. ಉಳಿದುದನ್ನು ಸಾಂದ್ರಗೊಳಿಸಿ, ಅಮೋನಿಯ ಸೇರಿಸಿ ಸೋಸಿದರೆ ಅಡ್ರಿನಲೀನ್ ಬಿಳಿಯ ಹರಳುಗಳಾಗಿ ಬರುತ್ತದೆ. ಈ ತೆರನ ವಿಧಾನಗಳಿಂದ ಅಡ್ರಿನಲ್ ಗ್ರಂಥಿಯ ಸಾರಕವನ್ನು ಮೊಟ್ಟಮೊದಲು 1929ರಲ್ಲಿ ಪರಿಶೋಧಕರ ಎರಡು ತಂಡಗಳು ತಮಗೆ ತಾವಾಗಿ ತಯಾರಿಸಿದುವು. 1930ರ ತನಕ ಅಡ್ರಿನಲ್ ಗ್ರಂಥಿಯ ಕೊರೆಯಾಗಿ, ಅಡಿಸನ್ನನ ರೋಗ ಅನುಭವಿಸುತ್ತಿದ್ದವರು ಯಾರೂ ಉಳಿಯುತ್ತಿರಲಿಲ್ಲ. ಆದರೆ ಈಗ ಈ ರಗಟೆಯ ಚೋದನಿಕವಾದ ಕಾರ್ಟಿಸೋನೊಂದಿಗೆ ಡಿಸಾಕ್ಸಿಕಾರ್ಟಿಕೊಸ್ಟಿರೋನ್ ಕೊಡುವುದರಿಂದ ಪೂರಾ ಗುಣ ಕಂಡಿದೆ.

ಅಡ್ರಿನಲ್ ಗ್ರಂಥಿಯ ರಗಟೆಯಿಂದ ಮೊದಲಾಗಿ (1930–1938) ಸುಮಾರು 30 ಬೇರೆಬೇರೆ ಹರಳಂಥ ರಾಸಾಯನಿಕಗಳು ತಯಾರಾಗಿವೆ. 1937ರಲ್ಲಿ ಡಿಸಾಕ್ಸಿಕಾರ್ಟಿಕೊಸ್ಟಿರೋನ್ ಕೃತಕ ತಯಾರಿ ಆಯಿತು. ಕಾರ್ಟಿಸೋನ್ (1948), ಹೈಡ್ರೊಕಾರ್ಟಿಸೋನ್ (1951) ಅಷ್ಟೂ ಇಷ್ಟೂ ತಯಾರಾಯಿತು. ಈ ಸರಣಿಯ ಕೊನೆಯ ಮುಖ್ಯ ರಾಸಾಯನಿಕವಾದ ಆಲ್ಡೊಸ್ಟಿರೋನ್ 1953ರಲ್ಲಿ ಬೇರ್ಪಟ್ಟು, 1955ರಲ್ಲಿ ಕೃತಕವಾಗೂ ತಯಾರಾಯಿತು.

**ಸಾರಕದ ಪ್ರಭಾವಗಳು :** ರಗಟೆಯಲ್ಲಿನ ಚೋದನಿಕಗಳ ಪ್ರಭಾವಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು: 1 ಖನಿಜದ ಜೀವ ವಸ್ತುಕರಣದಲ್ಲಿ (ಮೆಟಬಾಲಿಸಂ), ರಕ್ತದಲ್ಲಿರುವ ಸೋಡಿಯಂ, ಪೊಟ್ಯಾಸಿಯಂ, ಕ್ಲೋರೈಡುಗಳ ಪ್ರಮಾಣಗಳನ್ನು ಬಹುಮಟ್ಟಿಗೆ ಸರಿಸಮವಾಗಿ ಇರಿಸುವುದು ಜೀವಿಗೆ ಮುಖ್ಯ. ಆಲ್ಡೊಸ್ಟಿರೋನ್ ಸುರಿಸುವುದರಿಂದ ಈ ರಗಟೆ ಇದನ್ನು ಅಂಕೆಗೊಳಿಸುತ್ತದೆ. 2. ಜೈವಿಕ ಜೀವವಸ್ತುಕರಣದಲ್ಲಿ, ಹಿಟ್ಟು ಸಕ್ಕರೆಗಳು, ಪ್ರೋಟೀನುಗಳು, ಕೊಬ್ಬುಗಳ ಬಳಕೆಯನ್ನೂ ಹಂಚಿಕೆಯನ್ನೂ ಇದರಲ್ಲಿರುವ ಕಾರ್ಟಿಸೋನ್, ಹೈಡ್ರೊಕಾರ್ಟಿಸೋನುಗಳು ಅಂಕೆಯಲ್ಲಿಡುತ್ತವೆ. 3 ಒಗ್ಗದಿಕೆ (ಅಲರ್ಜಿ), ಅಂಟುಜನಕದ (ಕೊಲ್ಲೆಜನ್) ರೋಗಗಳು, ಹೇರೀಡುವಳಿಯಂಥ (ಹೈಪರ್‌ಸೆನ್ಸಿಟಿವಿಟಿ) ಕಣಜಾಲಗಳ ಪ್ರತಿಕ್ರಿಯೆಗಳಲ್ಲಿ, ಕಾರ್ಟಿಸೋನ್, ಹೈಡ್ರೊಕಾರ್ಟಿಸೋನುಗಳ ಸುಗುಣಗಳು ಶೀತಸ್ರಾವಂದದ ಕೀಲುರಿತವೇ (ರುಮೆಟಾಯ್ಡ್ ಆರ್ತ್ರೈಟಿಸ್) ಮೊದಲಾದ 50 ಇನ್ನಿತರ ರೋಗಚಿಕಿತ್ಸೆಗಳಲ್ಲಿ ತೋರಿವೆ. ಈ ರೋಗಗಳಲ್ಲಿ ಯಾವುದರಲ್ಲೂ ಅಡ್ರಿನಲ್ ಗ್ರಂಥಿಯ ರಗಟೆಯ ಪಾತ್ರ ಏನೂ ಇಲ್ಲದಿದ್ದರೂ ಕಾರ್ಟಿಸೋನ್, ಹೈಡ್ರೊಕಾರ್ಟಿಸೋನ್ ಮದ್ದುಗಳು ಹೇಗೆ ಗುಣಪಡಿಸುತ್ತವೆಂದು 1960ರ ಮೊದಲಿನ ತನಕ ಗೊತ್ತೇ ಇರಲಿಲ್ಲ. ಅಡ್ರಿನಲ್ ರಗಟೆಯ ಚಟುವಟಿಕೆಯನ್ನು ಅಡ್ರಿನಲ್ ರಗಟೆ ಪಾಲಿಕ ಚೋದನಿಕದ (ಎಸಿಟಿಹೆಚ್) ಮೂಲಕ ತೆಮಡಿಕ (ಪಿಟುಯಿಟರಿ) ಗ್ರಂಥಿ ಅಂಕೆಗೊಳಿಸುತ್ತದೆ.

ಅಡ್ರಿನಲೀನ್ (ಎಪಿನೆಫ್ರೀನ್) ನಲ್ಲಿರುವ ಅಮೈನೊ ಗುಂಪಿನ ಬದಲಾಗಿ ಮೆತಿಲ್ ಗುಂಪು ಸೇರಿರದಿರುವುದೇ ನಾರಡ್ರಿನಲೀನ್ (ನಾರೆಪಿನೆಫ್ರೀನ್). ಇವೆರಡೂ ಅಡ್ರಿನಲ್ ಕುಸುರಿಯಲ್ಲಿ ಒಳಸುರಿಯುತ್ತವೆ. ವಾಲ್ಟರ್ ಕ್ಯಾನನ್ ಮೊದಲು ಹೇಳಿದಂತೆ, ಅಡ್ರಿನಲೀನನ್ನು ಚುಚ್ಚಿ ಹೊಗಿಸಿದರೆ, ಅನುವೇದನ ನರದ ಮಂಡಲವನ್ನು ಚೋದಿಸಿದಂಥ ಪರಿಣಾಮಗಳನ್ನೇ ತೋರಿ, ಇದ್ದಕ್ಕಿದ್ದಂತೆ ಅಂಜಿಕೆಯಾದಾಗ, ರೇಗಿದಾಗ, ಕಾದಾಡಬೇಕೆಂದಾಗ, ಮೈಗೆ ಬಲಗೊಡುತ್ತದೆ. ಬೇಗನೆ ರಕ್ತದ ಒತ್ತಡದ ಏರಿಕೆ, ರಕ್ತದ ಸಕ್ಕರೆ ಹೆಚ್ಚಳಿಕೆ, ಸ್ನಾಯುಗಳಿಗೆ ಹೆಚ್ಚು ರಕ್ತದ ಹರಿವು, ಪಚನ ಕುಂದುವುದೇ ಮೊದಲಾದುವು ಈ ಪರಿಣಾಮಗಳು. ಚಟುವಟಿಕೆ, ಹುಮ್ಮಸ್ಸು, ಲವಲವಿಕೆಗಳಿಗೆ ಕಾರಣ ಈ ಚೋದನಿಕದ ಸುರಿಕೆ. ಇಷ್ಟಾದರೂ, ಯಾವ ಜೀವಿಯೇ ಆಗಲಿ, ಅಡ್ರಿನಲ್ ಗ್ರಂಥಿಯ ಕುಸುರಿ ಇಲ್ಲದೆಯೇ ಬದುಕಿರಬಹುದು. ಅನುವೇದನ ನರಗಳು ಚೋದಿಸುವುದರಿಂದಲೂ ಅಸಿಟೈಲ್‌ಕೋಲೀನ್, ಇನ್ಸುಲಿನ್‌ನಂಥ ಕಾರಕಗಳಿಂದಲೂ ಬಹುವಾಗಿ ಅಡ್ರಿನಲ್ ಕುಸುರಿನ ಅಂಕೆಗೊಳಿಸುವುದರಲ್ಲಿ ಕೆಲಸ ಮಾಡುತ್ತವೆ. ಅಡ್ರಿನಲಿನ್‌ನ ಉಡುಗಿಸುವ ಗುಣಗಳಿಗಿಂತಲೂ ಚೋದಿಸುವ ಗುಣಗಳನ್ನೇ ಬಹುವಾಗಿ ನಾರಡ್ರಿನಲೀನ್ ತೋರುವುದು. (ಡಿ.ಎಸ್.ಎಸ್.)

**ಅಡ್ರಿನಲಿನ್, ನಾರಡ್ರಿನಲಿನ್ :** ಮೂತ್ರಪಿಂಡದ ಮೇಲಣ (ಅಡ್ರಿನಲ್) ಗ್ರಂಥಿಗಳ ತಿರುಳಿನಲ್ಲಿ (ಮೆಡುಲ್ಲ) ತಯಾರಾಗುವ, ಒಳಸುರಿಕ ಕ್ರಿಯಾಂಶಗಳಿವು. ಕಾರ್ಯಕಾರಿ ಅಂಗಗಳಿಗೆ ನರ ಆವೇಗಗಳನ್ನು ಸಾಗಿಸುವ ರಾಸಾಯನಿಕ ನಡುಹಾಯಿಕಗಳಾಗಿ, ಅನುವೇದನಾ (ಸಿಂಪತೆಟಿಕ್) ನರತಂತುಗಳ ಕೊನೆಗಳಲ್ಲೂ ಇವು ಬಿಡುಗಡೆಯಾಗುತ್ತವೆ. ರಾಸಾಯನಿಕವಾಗಿ ಇವೆರಡೂ ಸ್ವಲ್ಪಮಟ್ಟಿಗೆ ಬೇರೆಬೇರೆಯಾದರೂ ಅನುವೇದನಾ ನರಮಂಡಲವನ್ನು ಚೋದಿಸುವುದರಿಂದಾಗುವ ಪ್ರಭಾವಗಳನ್ನು ಹೋಲುವ ಪರಿಣಾಮಗಳನ್ನೇ ತೋರುತ್ತವೆ. ಇದಕ್ಕಾಗಿ ಇವಕ್ಕೆ ಅನುವೇದನ ಅಣಕದ ಕಾರಕಗಳೆಂದು ಹೆಸರಿದೆ. ಅಡ್ರಿನಲ್ ಗ್ರಂಥಿಯ ತಿರುಳಿನಲ್ಲಿ ಹೆಚ್ಚೂ ಕಡಿಮೆ ಶೇ.80 ರಷ್ಟು ಅಡ್ರಿನಲಿನ್ನೂ 20% ರಷ್ಟು ನಾರಡ್ರಿನಲಿನ್ನೂ ಸುರಿವುದು. ಬಹುಪಾಲು ನಾರಡ್ರಿನಲಿನ್ ಒಂದನ್ನೇ ಬಿಡುವ ಅನುವೇದನಾ ನರ ಕೊನೆಗಳಲ್ಲಿ ಇದರ ಅದಲುಬದಲು ಇರುವುದು.

ರೋಗಿಗಳ ಚಿಕಿತ್ಸೆಯಲ್ಲಿ ಬಳಸುವ ಇದರ ಚೊಕ್ಕವಾದ ಚುರುಕಾದ ಸಂಯುಕ್ತಗಳು ಸಾಕಿದ ಪ್ರಾಣಿಗಳ ಗ್ರಂಥಿಗಳ ಸಾರಕವಾಗೋ ಕೃತಕವಾಗೋ ತಯಾರಾಗುತ್ತವೆ. ಅಡ್ರಿನಲಿನ್ ಚುಚ್ಚಿದರೆ ರಕ್ತದ ಒತ್ತಡ ಏರುತ್ತದೆ; ಗುಂಡಿಗೆ ಕುಗ್ಗುವ ಬಲ, ವೇಗಗಳೂ ಹೆಚ್ಚುವುವಲ್ಲದೆ ಸುತ್ತಂಚಿನ ರಕ್ತನಾಳಗಳೂ ಕುಗ್ಗುತ್ತವೆ. ನವಿರುಸಿರ್ನಾಳಗಳನ್ನು ಹಿಗ್ಗಲಿಸುವುದರಿಂದ ಗೂರಲಿನವರಲ್ಲಿ ಉಸಿರಾಟ ಸರಾಗವಾಗುತ್ತದೆ. ಯಕೃತ್ ಉಪಾಪಚಯದ (ಮೆಟಬಾಲಿಸಮ್) ಮೇಲಿನ ಪ್ರಭಾವದಿಂದ ಈಲಿಯಲ್ಲಿರುವ (ಲಿವರ್) ಗ್ಲೂಕೋಸನ್ನು ಹೊರತೆಗೆದು ರಕ್ತದಲ್ಲಿ ಹೆಚ್ಚಿಸುತ್ತದೆ. ನಾರಡ್ರಿನಲಿನ್ನಿನ ಪ್ರಭಾವಗಳೂ ಇದೇ ತೆರನಾದರೂ ಜೀವವಸ್ತು ಕರಣದ ಅಲ್ಲದೆ ಗುಂಡಿಗೆಯ ಮೇಲಣ ಪ್ರಭಾವಗಳು ಅಷ್ಟಾಗಿಲ್ಲ. ನಾರಡ್ರಿನಲಿನ್ ರಕ್ತನಾಳದೊಳಕ್ಕೆ ಚುಚ್ಚಿ ಹೊಗಿಸಿದಾಗ ಸರಕ್ಕನೆ ರಕ್ತದ ಒತ್ತಡ ಅತಿಯಾಗಿ ಏರಲು ಕಾರಣ ರಕ್ತನಾಳಗಳನ್ನು ಬಲವಾಗಿ ಕುಗ್ಗಿಸುವುದೇ.

ಸ್ಥಳೀಯ ಅರಿವಳಿಕಗಳು (ಲೋಕಲ್ ಅನೀಸ್ಥೆಟಿಕ್ಸ್) ಬೇಗನೆ ಹೀರಿಹೋಗದಂತೆ, ಅಡ್ರಿನಲಿನ್ ಕಿರಿಯ ಧಮನಿಗಳನ್ನು ಕುಗ್ಗಿಸಿ, ಅರಿವಳಿಕದ ಪ್ರಭಾವ ಮುಂದುವರಿಸಿ, ಅದರ ವಿಷತೆಯನ್ನೂ ಇಳಿಸುವುದರಿಂದ, ಸ್ಥಳೀಯ ಅರಿವಳಿಕೆಗಳೊಂದಿಗೆ ತುಸು ಅಡ್ರಿನಲಿನ್ ಸೇರಿಸುವುದುಂಟು. ಮದ್ದುಗಳೆದುರಿನ ಪ್ರತಿಕ್ರಿಯೆಗಳು, ತುರುಚೆ ದದ್ದುಗಳು, ಕರಡ ಜ್ವರಗಳಂಥ ತೀವ್ರ ಒಗ್ಗದಿಕೆಯ (ಅಕ್ಯೂಟ್ ಅಲರ್ಜಿ) ಬೇನೆಗಳಲ್ಲೂ ಗುಣಕಾರಕ. ಕೆಲವು ಬಗೆಗಳ ಆಘಾತಗಳಲ್ಲಿ (ಷಾಕ್) ರೋಗಿ ನಾಡಿ ಬಡಿತ ನಿಂತು ಸುಸ್ತು ಬಿದ್ದಿರುವಾಗ, ರಕ್ತದ ಒತ್ತಡವನ್ನು ಮತ್ತೆ ಏರಿಸಲು ಇದನ್ನು ನಿಧಾನವಾಗಿ ರಕ್ತನಾಳದ ಮೂಲಕ ಕೊಡಬಹುದು. ಇವೆರಡನ್ನೂ ಮಿತಿಮೀರಿ ಕೊಟ್ಟರೆ ಮಿದುಳಿನಲ್ಲಿ ರಕ್ತನಾಳ ಒಡೆದು ರಕ್ತಸುರಿತ, ಗುಂಡಿಗೆಯ ಏರುಪೇರುಗಳಾಗಿ ಮಾರಕವಾಗಬಹುದು. ಅಲ್ಲದೆ ಸ್ನಾಯುಗಳ ಬಿಗುಪನ್ನೂ ರಕ್ತದ ಒತ್ತಡವನ್ನೂ ಸಮನಾಗಿ ಇರಿಸಿರಲೂ ಅಡ್ರಿನಲಿನ್ ನೆರವಾಗುವುದು.

ಚರ್ಮ, ಸ್ಥಳೀಯ ಅಂಗಗಳಿಂದ ಹಾಗೂ ದೇಹದ ಇತರ ಅಂಗಗಳ ಲೋಳ್ಪೊರೆ (ಮ್ಯೂಕಸ್ ಮೆಂಬ್ರೇನ್) ಯಿಂದ ಆಗುವ ರಕ್ತ ಸ್ರಾವ (ಉದಾಹರಣೆಗೆ ಹೊರ ಮೂಗಿನ ಲೋಳ್ಪೊರೆಯಿಂದ ಆಗುವ ರಕ್ತ ಸ್ರಾವ – ಎಪಿಸ್‌ಟ್ಯಾಕ್ಸಿಸ್) ವನ್ನು ಅಡ್ರಿನಲೀನ್ ಹಾಗೂ ಇತರ ಔಷಧಿಗಳಿಂದ ಪಡೆಯಬಹುದು. ಅಡ್ರಿನಲಿನ್ ಕಿರಿಯ ಧಮನಿಗಳನ್ನು ಕುಗ್ಗಿಸಿ ರಕ್ತ ಸ್ರಾವವನ್ನು ಕಡಿಮೆಗೊಳಿಸುತ್ತದೆ. (ಡಿ.ಎಸ್.ಎಸ್.)

**ಅಡ್ವೊಕೇಟ್ :** ಮತ್ತೊಬ್ಬರನ್ನು ಪ್ರತಿನಿಧಿಸುವ ಅರ್ಹತೆ ಅಥವಾ ಅಧಿಕಾರ ಹೊಂದಿ ಅವರ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವ ವ್ಯಕ್ತಿ. ಭಾರತದಲ್ಲಿ ಪೋರ್ಚುಗೀಸರ ಕಾಲದಿಂದ ಅಂದರೆ ವಾಸ್ಕೋ ಡಿ ಗಾಮ ಬಂದಾಗಲಿನಿಂದಲೇ – ಕಾನೂನಿನ ಇತಿಹಾಸ ಪ್ರಾರಂಭವಾಯಿತು. ಆಗ ಈಗಿನಂತೆ ಪ್ರತ್ಯೇಕವಾಗಿ ವಾದಿಸುವವರು ಬೇಕಾಗಿರಲಿಲ್ಲ. ಕ್ರಮೇಣ, ಕಾನೂನಿನ ಚರಿತ್ರೆ ಬೆಳೆದುಬಂದಂತೆ–ಪ್ಲೀಡರ್, ಲಾಯರ್, ವಕೀಲ, ಅಟಾರ್ನಿ ಮುಂತಾದ ವಿವಿಧ ನಾಮಗಳಿಂದ ನ್ಯಾಯಾಲಯಗಳಲ್ಲಿ ವಾದಿಸುವವರು ಹುಟ್ಟಿಕೊಂಡರು. ಇದು ಇಂದಿಗೂ ನಡೆದು ಬಂದಿದೆ. ಆದರೆ, ಕಾನೂನಿನ ಕ್ರೋಡೀಕರಣಕ್ಕೋಸ್ಕರ 1961ರಲ್ಲಿ ಒಂದು ಹೊಸ ಕಾನೂನು–ಅಡ್ವೊಕೇಟ್ ಕಾಯಿದೆ 1961 ಜಾರಿಗೆ ಬಂದಿದೆ. ಇದರ ಪ್ರಕಾರ ಮೊದಲಿನ ಪ್ಲೀಡರ್ ಮತ್ತಿತರರು ಬೇಕಾದರೆ ಅವರಿರುವ ತನಕ ಹಾಗೆಯೇ ಮುಂದುವರಿಯಬಹುದಾದರೂ ಇನ್ನುಮುಂದೆ ಅಡ್ವೊಕೇಟುಗಳು ಮಾತ್ರ ಉಳಿಯುತ್ತಾರೆ. ಈಗಿನ ಕಾಯಿದೆಯಂತೆ, ಅಡ್ವೊಕೇಟರು ತಮ್ಮ ತಮ್ಮ ರಾಜ್ಯಗಳ ಬಾರ್‌ಕೌನ್ಸಿಲ್‌ಗಳಿಂದ ಸನ್ನದನ್ನು ಪಡೆದು ಆಯಾ ರಾಜ್ಯದಲ್ಲಿ ಎಲ್ಲಿ ಬೇಕಾದರೂ ಯಾರನ್ನಾದರೂ ಪ್ರತಿನಿಧಿಸಬಹುದು. ಆದರೆ, ಸರ್ಕಾರ ಇದಕ್ಕೂ ಮಿತಿಯನ್ನು ಒಡ್ಡಿದೆ. ಉದಾಹರಣೆಗೆ ಸಹಕಾರ ಸಂಘಗಳ ನ್ಯಾಯಾಲಯದಲ್ಲಿ ಅಪ್ಪಣೆ ಇಲ್ಲದೆ ವಾದಮಾಡಲಾಗುವುದಿಲ್ಲ.

ಇಂಗ್ಲೆಂಡಿನಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ವಾದಿಸುವವರಿಗೆ ಮಾತ್ರ, ಅಡ್ವೊಕೇಟರು ಎಂದು ಹೆಸರಿದೆ. ಅಲ್ಲಿಯ ಹಾಗೆ ಇಲ್ಲಿಯೂ ಅಡ್ವೊಕೇಟ್ ಜನರಲ್ ಎಂಬುವರು ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವರು.

ಅಮೆರಿಕದಲ್ಲಿ ಅಡ್ವೊಕೇಟ್ ಪದ, ಮಿಕ್ಕ ಹೆಸರುಗಳಾದ, ಅಟಾರ್ನಿ, ಕೌನ್ಸೆಲ್ ಮತ್ತು ಲಾಯರ್ ಪದಗಳ ಜೊತೆಯಲ್ಲಿಯೇ ಉಪಯೋಗಿಸಲ್ಪಡುತ್ತದೆ.

ಫ್ರಾನ್ಸ್ ದೇಶದಲ್ಲಿ ಎರಡು ಬಗೆಯ ಅಡ್ವೊಕೇಟರಿದ್ದಾರೆ. ಒಬ್ಬರು ಬರಿಯ ಕಾನೂನಿನ ಸಲಹೆಗಾರರು; ಇವರು ಕಾನೂನಿನ ತಿಳಿವಳಿಕೆಯನ್ನು ಕೊಡುವುದೇ ಅಲ್ಲದೆ ದಾವೆಯನ್ನು ಬರೆದು ಸಿದ್ಧಪಡಿಸಿ ದಾವೆ ನಡೆಸಲು ಸಹಾಯಮಾಡುತ್ತಾರೆ. ಇತರರು ಬೇರೆಯವರ ಪರವಾಗಿ ನ್ಯಾಯಾಲಯದಲ್ಲಿ ಕಾರ್ಯ ನಡೆಸುತ್ತಾರೆ.

ಸ್ಕಾಟ್ಲೆಂಡಿನಲ್ಲಿ ಸೆಷನ್ಸ್ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ವಾದಿಸಲು ಅಡ್ವೊಕೇಟುಗಳು ಆಯಾ ಪ್ರಾಂತ್ಯಗಳ ಬಾರ್‌ಕೌನ್ಸಿಲ್‌ಗಳ ಅಧಿಕಾರಕ್ಕೊಳಪಟ್ಟಿರುವರು. (ವಿ.ಎಸ್.)

**ಅಣಕುಬರೆಹ :** ಹಾಸ್ಯಸಾಹಿತ್ಯದ ಒಂದು ಪ್ರಭೇದ (ಪ್ಯಾರಡಿ). ಪ್ಯಾರಡಿ ಎನ್ನುವ ಮೂಲ ಗ್ರೀಕ್ ಶಬ್ದಕ್ಕೆ, ಹಾಡಿಗೆ ಪ್ರತಿಯಾಗಿ ಹೇಳಿದ ಹಾಡು (ಕೌಂಟರ್ ಸಾಂಗ್) ಎಂದು ಅರ್ಥವಿದ್ದರೂ ಈಗ ಅಣಕುಬರೆಹವೆನ್ನುವ ಅರ್ಥದಲ್ಲಿ ಅದರ ಬಳಕೆ ಇದೆ. ಒಬ್ಬ ಸಾಹಿತಿ ಇನ್ನೊಬ್ಬ ಸಾಹಿತಿಯ ಶೈಲಿ, ವಿಲಕ್ಷಣ ರೀತಿನೀತಿಗಳನ್ನು ಬೇರೊಂದು

ವಿರುದ್ಧ ಅರ್ಥವುಳ್ಳ ವಸ್ತುವಿನ ಅಭಿವ್ಯಕ್ತಿಗಾಗಿ ಬಳಸಿ, ಗೇಲಿ ಮಾಡುವುದು ಪ್ಯಾರಡಿಯ ಗುರಿ. ಇಂಥ ಅಣಕುಬರೆಹ ಸೃಜಿಸುವ ಉತ್ತಮ ಸಾಹಿತಿ ಕೇವಲ ವಿಕಟಾನುಕರಣ (ಟ್ರ್ಯಾವೆಸ್ಟಿ) ಮಾಡದೆ, ಅತಿಯಾದ ಉತ್ಪ್ರೇಕ್ಷೆಯಿಂದ ಕೂಡಿದ ಹುಚ್ಚಾಟ (ಬರ್ಲೆಸ್ಕ್)ಬರೆಯದೆ, ತನ್ನ ರಸಮಯ ಕಲ್ಪನೆಯ ಮೂಲಕ ಕಲಾತ್ಮಕ ಸಾಹಿತ್ಯರೂಪ ಸೃಷ್ಟಿಸುತ್ತಾನೆ. ಮೂಲದ ದೌರ್ಬಲ್ಯಗಳನ್ನು ಕೃತಕತೆಯನ್ನೂ ಎತ್ತಿ ತೋರಿಸುತ್ತಾನೆ. ಯಾವುದನ್ನು ತಪ್ಪೆಂದು ಟೀಕಿಸಿ, ಖಂಡಿಸುತ್ತಾನೋ ಅದರ ಬದಲು ಒಪ್ಪಾದುದನ್ನು ಸೃಷ್ಟಿಸಿ ಕೃತಕೃತ್ಯನಾಗುತ್ತಾನೆ. ಅವನೊಬ್ಬ ಕ್ರಿಯಾತ್ಮಕ ವಿಮರ್ಶಕ. ಯೂರಿಪಿಡೀಸನನ್ನು ಟೀಕಿಸಲು ಹೊರಟ ಅರಿಸ್ಟೋಫೆನಿಸ್ ತನ್ನ ನಾಟಕದಲ್ಲಿ (ದಿ ಫ್ರಾಗ್ಸ್) ಸೃಷ್ಟ್ಯಾತ್ಮಕ ಚಿರಂತನ ಮೌಲ್ಯಗಳನ್ನು ಕುರಿತು ವಿವೇಚನೆ ಮೂಡಿಸಿದ. ರಿಚರ್ಡ್‌ಸನ್ ಬರೆದ ಅತಿಭಾವುಕ ವಸ್ತುವಿನ ಕಾದಂಬರಿಯನ್ನು ಒಪ್ಪದ ಫೀಲ್ಡಿಂಗ್ ತಾನೇ ಸೊಗಸಾದ ಕಾದಂಬರಿ ಸೃಷ್ಟಿಸಿದ. ಶ್ಲೇಷೆ, ವ್ಯಂಗ್ಯದ ಮೂಲಕ ವಿರೋಧ ಅರ್ಥಗಳ ವೈದೃಶ್ಯ ತೋರಿಸುವುದು (ಐರಾನಿಕ್ ಕಾಂಟ್ರಾಸ್ಟ್), ಹದಿರು ನುಡಿ–ಇವು ಅಣಕು ಸಾಹಿತಿಯ ಸಾಧನಗಳು. ಪುರಾತನ ಗ್ರೀಕ್ ದೇಶದಲ್ಲಿ ಹುಟ್ಟಿ, ಅರಿಸ್ಟೋಫೆನಿಸ್‌ನಿಂದ ಹಿಡಿದು ಜೇಮ್ಸ್ ಜಾಯ್ಸನವರೆಗೆ ಪ್ರಪಂಚದ ಎಲ್ಲ ಸಾಹಿತ್ಯದಲ್ಲೂ ಹಬ್ಬಿದ ಈ ತೆರನಾದ ಅಣಕುಬರವಣಿಗೆಯನ್ನು ಹಲವು ಸಾಹಿತಿಗಳು ರಚಿಸಿದ್ದಾರೆ. ತಾನು ಒಪ್ಪಿಯೋ ಒಪ್ಪದೆಯೋ ಅಳವಡಿಸಿಕೊಳ್ಳುವ ರಮ್ಯ ಪ್ರಣಯವಸ್ತು, ಹಳೆಯ ನಾಟಕಗಳ ಆಡಂಬರದ ವಾಗ್ವಿಲಾಸ. ಹಳ್ಳಿಗಾಡಿನ ಜೀವನ ಚಿತ್ರಿಸುವ ಕವನ ಸಂಪ್ರದಾಯ (ಪ್ಯಾಸ್ಟೊರಲ್) ಇವುಗಳನ್ನು ತಾನೇ ಅಣಕಿಸುವ ಷೇಕ್ಸ್‌ಪಿಯರನ ರಮ್ಯವಿನೋದ ನಾಟಕಗಳಲ್ಲಿ ಅಣಕುಬರೆಹದ ವಿವಿಧ ಸ್ತರಗಳನ್ನು ಕಾಣಬಹುದು. ತನ್ನನ್ನು ತಾನೇ ಗೇಲಿ ಮಾಡಿಕೊಳ್ಳುವ, ನಕ್ಕು ನಗಿಸುವ ಷೇಕ್ಸ್‌ಪಿಯರನ ಈ ಮನೋಧರ್ಮ ಅಣಕುಬರೆಹಗಾರರಿಗೆ ಒಳ್ಳೆಯ ಪ್ರೇರಣೆ, ಸ್ಫೂರ್ತಿ.

ಕನ್ನಡದಲ್ಲಿ ನಾ. ಕಸ್ತೂರಿ, ಬುಳ್ಳ ಮೊದಲಾದವರು ಪ್ರಸಿದ್ಧ ಹೊಸಗನ್ನಡ ಕವಿಗಳ ಹಾಗೂ ದಾಸರ ಕವನಗಳ ಪ್ರಶಸ್ತ ಅಣಕರೂಪಗಳನ್ನು ರಚಿಸಿದ್ದಾರೆ. ಬೇಂದ್ರೆಯವರು ತಮ್ಮ ಕವನಗಳನ್ನೇ ಬಳಸಿಕೊಂಡು ಅಣಕವಾಡುಗಳನ್ನು ಕಟ್ಟಿದ್ದಾರೆ. ರಾಶಿಯವರ ಕೆಣಕೋಣ ಬಾರ ಒಂದು ಗಮನಾರ್ಹ ಅಣಕು. ನಾರಣಪ್ಪನ ಭಾರತದ ಶೈಲಿಯಲ್ಲಿ ಜಿ.ಪಿ. ರಾಜರತ್ನಂ ರಚಿಸಿರುವ ಪುರುಷಸರಸ್ವತಿಯ ಬಹುಭಾಗ ಗ್ರಂಥಸಂಪಾದನಾ ಕಾರ್ಯವನ್ನು ಬಹು ಚೆನ್ನಾಗಿ ಅಣಕಿಸುತ್ತದೆ. (ನೋಡಿ– ವಿಡಂಬನೆ)

(ಎಚ್.ಕೆ.ಆರ್.ಎಲ್.ಎಸ್.ಎಸ್)

**ಅಣಬೆಗಳು :** ಭೂಮಿಯ ಮೇಲ್ಮೈ ಮತ್ತು ಕೆಲವೊಮ್ಮೆ ಭೂಒಳಪದರಗಳಲ್ಲಿ ಹೊರಚಿಮ್ಮುವ ರಸವತ್ತಾದ ಶಿಲೀಂಧ್ರಂಗಾಂಶ (ಮಶ್ರೂಮ್). ಇವುಗಳನ್ನು ಹರಿತ್ತಿಲ್ಲದ ಸಸ್ಯಗಳು, ನಾಯಿಕೊಡೆಗಳು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಇವು ಹೆಚ್ಚು ತೇವಾಂಶ ಮತ್ತು ಆರ್ದ್ರತೆಯಿರುವ ವಾತಾವರಣದಲ್ಲಿ ಹುಲುಸಾಗಿ ಬೆಳೆಯುತ್ತವೆ. ಅಣಬೆಗಳು ಸಸ್ಯಗಳಂತೆ ಸಾವಯವ ಮಣ್ಣು ಮತ್ತು ಸತ್ತೆಗಳ ಮೇಲೆ ಬೆಳೆಯುತ್ತವೆ. ಅಣಬೆಗಳ ರಚನಾಂಗಗಳು ಬಹಳ ಸರಳವಾಗಿದ್ದು ಸಸ್ಯಗಳಿಗಿಂತ ಭಿನ್ನವಾಗಿರುತ್ತವೆ. ಅಣಬೆಯ ಬೀಜಾಣು ಬಹಳ ಚಿಕ್ಕದಾಗಿದ್ದು ಸೂಕ್ಷ್ಮದರ್ಶಕಗಳ ಸಹಾಯದಿಂದ ವೀಕ್ಷಿಸಬಹುದು. ಅಣಬೆಗಳು ಸೂಕ್ಷ್ಮ ಜೀವಿಜಗತ್ತಿನಲ್ಲಿ ಶಿಲೀಂಧ್ರಗಳ ಗುಂಪಿಗೆ ಸೇರಿವೆ.

ಅಣಬೆಗಳಲ್ಲಿ ಖಾದ್ಯ ಅಣಬೆಗಳು ಮತ್ತು ವಿಷ ಅಣಬೆಗಳು ಎಂಬ ಎರಡು ವಿಧಗಳಿವೆ. ವಿಷ ಅಣಬೆಗಳು ತಿನ್ನಲು ಯೋಗ್ಯವಿರುವುದಿಲ್ಲ. ಅನೇಕ ಜಾತಿಯ ವಿಷ ಅಣಬೆಗಳು ಜೀವಕ್ಕೆ ಮಾರಕವಾಗಿವೆ. ಆದರೆ, ಖಾದ್ಯ ಅಣಬೆಗಳು ಪುಷ್ಟಿಕರ ಆಹಾರಾಂಶವನ್ನು ಹೊಂದಿದ್ದು, ರುಚಿಕರ ಮತ್ತು ಆರೋಗ್ಯಕರ ಭೋಜನಕ್ಕೆ ಅಮೂಲ್ಯ ತರಕಾರಿಗಳಾಗಿವೆ. ಮಳೆಗಾಲದ ದಿನಗಳಲ್ಲಿ ಕಾಡುಮೇಡುಗಳು ಮತ್ತು ಹೊಲಗದ್ದೆಗಳ ಬದುಗಳಲ್ಲಿ ಬೆಳೆಯುವ ಖಾದ್ಯ ಅಣಬೆಗಳನ್ನು ಪತ್ತೆ ಹಚ್ಚಿ ತಂದು ತರಕಾರಿಗಳಂತೆ ಉಪಯೋಗಿಸುವುದನ್ನು ಈಗಲೂ ಸಹ ನಮ್ಮ ರೈತ ಮಹಿಳೆಯರಲ್ಲಿ ವಾಡಿಕೆಯಲ್ಲಿದೆ. ಪ್ರತಿವರ್ಷ ಅಣಬೆಗಳು ಮೂಡುತ್ತಿದ್ದ ಜಾಗಕ್ಕೆ ಹೋಗಿ ಅಣಬೆಗಳನ್ನು ಹುಡುಕುವುದು ಇಂದಿಗೂ ವಾಡಿಕೆಯಾಗಿದೆ.

ಸ್ವಾಭಾವಿಕವಾಗಿ ಅಣಬೆಗಳು ವಿವಿಧ ಬಣ್ಣ ಮತ್ತು ರಚನೆಗಳನ್ನು ಹೊಂದಿದ್ದು ಮಾನವನಲ್ಲಿ ಕುತೂಹಲ ಕೆರಳಿಸಿವೆ. ಅವುಗಳ ಈ ವಿಸ್ಮಯ ರೂಪವನ್ನು ಪ್ರಕೃತಿಯಲ್ಲಿ ನೋಡಲು ಬಹಳ ಸುಂದರ. ಆದರೆ, ಇಂತಹ ಅಣಬೆಗಳು ವಿಷಕಾರಕಗಳೆಂಬುದನ್ನು ಮರೆಯಬಾರದು. ಏಕೆಂದರೆ, ಬಹುತೇಕ ವರ್ಣರಂಜಿತ ಅಣಬೆಗಳು ವಿಷ ಅಣಬೆಗಳ ಗುಂಪಿಗೆ ಸೇರಿರುತ್ತವೆ. ಆದ್ದರಿಂದ, ಸ್ವಾಭಾವಿಕವಾಗಿ ಬೆಳೆಯುವ ಅಣಬೆಗಳನ್ನು, ಖಾದ್ಯ ಅಣಬೆಯೆಂದು ಖಚಿತವಾಗಿ ತಿಳಿಯದಿದ್ದಲ್ಲಿ ಉಪಯೋಗಿಸಬಾರದು. ಹಾಗೆಂದು ವರ್ಣರಂಜಿತ ಅಣಬೆಗಳೆಲ್ಲ ವಿಷ ಅಣಬೆಗಳೆಂದು ಹೇಳಲಾಗುವುದಿಲ್ಲ. ಏಕೆಂದರೆ ಕೆಲವು ಜಾತಿಯ ಬಣ್ಣದ ಅಣಬೆಗಳು ಸಹ ಖಾದ್ಯ ಅಣಬೆಗಳಾಗಿವೆ. ಉದಾಹರಣೆಗೆ ಬೋಲಿಟಸ್ ಮತ್ತು ಪ್ಲೋರೋಟಸ್ ಇಯಸ್ ಅಣಬೆಗಳು ಬಣ್ಣ ಹೊಂದಿದ್ದು ತಿನ್ನಲು ಯೋಗ್ಯವಾಗಿವೆ. ಅಣಬೆಯ ಪದಾರ್ಥಗಳು ಬಹಳ ರುಚಿಕರವಾಗಿದ್ದು, ಮೊಟ್ಟೆ ಮಾಂಸಗಳ ರುಚಿಯನ್ನು ಮೀರಿಸಬಲ್ಲವು. ಆದ್ದರಿಂದಲೇ ರೋಮನ್ ದೇಶದ ಜನರು ಅಣಬೆಗಳನ್ನು ದೇವರ ಆಹಾರವೆಂದು ವರ್ಣಿಸಿದ್ದಾರೆ. ಚೀಣಿಯರು ಅಣಬೆಯ ತಿಂಡಿಗಳು ಆರೋಗ್ಯ ಮತ್ತು ಹರ್ಷದಾಯಕವೆಂದು ಬಣ್ಣಿಸಿದ್ದಾರೆ. ಹೀಗೆ ಅಣಬೆಯಿಂದ ತಯಾರಿಸಿದ ತಿಂಡಿಗಳು ರುಚಿಕರ ಮಾತ್ರವೇ ಅಲ್ಲ ಅವು ಪುಷ್ಟಿದಾಯಕವೂ ಹೌದು. ಅಣಬೆಗಳಲ್ಲಿ ನಮ್ಮ ಶರೀರಕ್ಕೆ ಆವಶ್ಯಕವಾದ ಪ್ರೋಟೀನುಗಳು, ಅಮೈನೋ, ಆಮ್ಲಗಳು (ಅಲಾನಿನ್, ಲೈಸಿನ್, ಲೂಸಿನ್, ವೇಲಿನ, ಮಿಥಿಯಾನಿನ್, ಗ್ಲೈಸಿನ್, ಆಸ್ಪಾರ್ಟಿಕ್ ಆಮ್ಲ, ಗ್ಲುಟಾಮಿಕ್ ಆಮ್ಲ ಮುಂತಾದವು) ಜೀವಸತ್ವಗಳಾದ ರೈಬೋ, ಫ್ಲೇವಿನ್, ನಿಯಾಸಿನ್, ಥೈಯಾಮಿನ್, ಪೆಂಟ್‌ಥೋನಿಕ್ ಆಮ್ಲ, ಬಯೋಟಿನ್, ಆಸ್ಕಾರ್ಬಿಕ್ ಆಮ್ಲ, ನಿಕೋಟಿನಿಕ್ ಆಮ್ಲ ಹಾಗೂ ಖನಿಜಾಂಶಗಳಾದ, ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ಸೋಡಿಯಂ, ಪೊಟ್ಯಾಸಿಯಂಗಳು ಅಧಿಕ ಪ್ರಮಾಣದಲ್ಲಿವೆ. ಅಣಬೆಯಲ್ಲಿ ಸಕ್ಕರೆ ಮತ್ತು ಕೊಬ್ಬಿನ ಅಂಶ ಕಡಿಮೆ ಪ್ರಮಾಣದಲ್ಲಿರುವುದರಿಂದ ಸಿಹಿಮೂತ್ರ ಮತ್ತು ಹೃದ್ರೋಗಿಗಳಿಗೆ ಉತ್ತಮ ಆಹಾರವೆಂದು ಪರಿಗಣಿಸಲಾಗಿದೆ.



ಅಣಬೆಗಳು ಕೇವಲ ಆಹಾರ ಪದಾರ್ಥಗಳಿಗೆ ಮೀಸಲಾಗಿರದೆ, ಬೇರೆ ಬೇರೆ ಉದ್ದಿಮೆಗಳಲ್ಲಿ ಅದರದೇ ಆದ ಪ್ರಾಮುಖ್ಯವನ್ನು ಪಡೆದಿವೆ. ಚಿತ್ರಕಾರರಿಗೆ ಅವು ಸೌಂದರ್ಯದ ವಸ್ತುಗಳಾಗಿವೆ. ಗಿಡಮೂಲಿಕೆಗಳಂತೆ ಅಣಬೆಗಳನ್ನು ಔಷಧಿಯ ತಯಾರಿಕೆಯಲ್ಲಿ ಬಳಸಲಾಗುತ್ತದೆ. ವಾಸ್ತುಶಿಲ್ಪಿಗಳಿಗೆ ಅವು ಮಾದರಿಗಳಾಗಿದ್ದು, ಅಣಬೆಗಳ ಮಾದರಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ನೆರವಾಗಿವೆ. ಅಕ್ಕಸಾಲಿಗರು ಒಡವೆಗಳನ್ನು ಸಹ ಅಣಬೆಗಳ ಮಾದರಿಯಲ್ಲಿ ವಿನ್ಯಾಸಗೊಳಿಸಿದ್ದಾರೆ. ವಸ್ತ್ರವಿನ್ಯಾಸಕಾರರು ಅಣಬೆಗಳ ಚಿತ್ರಗಳನ್ನು ಬಟ್ಟೆಗಳ ಮೇಲೆ ಮುದ್ರಿಸಿರುವುದನ್ನು ಕಾಣಬಹುದು.

ಅಣಬೆಯ ರಸದಲ್ಲಿನ ರಾಸಾಯನಿಕಗಳು ಹಲವರು ಕ್ರಿಮಿಕೀಟಗಳ ಹತೋಟಿಯಲ್ಲಿ ಫಲಕಾರಿಯಾಗಿವೆ. ಆದರೂ ಸಹ ಇಂತಹ ಅನೇಕ ಅಣಬೆಗಳ ಉಪಯೋಗಗಳನ್ನು ಇನ್ನೂ ಪರಿಶೋಧಿಸಬೇಕಾಗಿದೆ. ಉದಾಹರಣೆಗೆ ಜಪಾನಿನ ಅಣಬೆ ಶಿಲೀಂಧ್ರ ನಿರೋಧಕವೆಂದು ಹೇಳಲಾಗಿದೆ. ಓಂಫಲೋಟಸ್ ಒಲೆರಿಯಸ್ ಎಂಬ ವಿಷ ಅಣಬೆಯ ರಾಸಾಯನಿಕವು ಪ್ಲಾಸ್ಮೋಡಿಯಂ ಗ್ಯಾಲಿನೇಸಿಯಸ್ ಎಂಬ ಪ್ರೋಟೋಜೋವಾ ಕ್ರಿಮಿಯ ಮೇಲೆ ಹತೋಟಿಕಾರಿಯಾಗಿದೆ. ಪಾಲಿಪೋರಸ್ ಅಫಿಸಿನೇಲಿಸ್ ಮತ್ತು ಫೋಮ್ಸ್ ಇಗ್ನೇರಿಸಿ ಎಂಬ ಅಣಬೆಗಳನ್ನು ರಕ್ತ ಹೆಪ್ಪುಗಟ್ಟಲು ಬಳಸಲಾಗಿದೆ. ಕ್ಯಾಲ್ವೇಸಿಯಾ ಜೈಗಾಂಸಿಯಾ ಎಂಬ ಅಣಬೆಯನ್ನು ಮತ್ತು ಬರುವಿಕೆಗೆ ಬಳಸಲಾಗಿದೆ.

ಅರಣ್ಯ ಪ್ರದೇಶದಲ್ಲಿ ಅಣಬೆಗಳ ಪಾತ್ರ ಬಹುಮುಖ್ಯ. ಇವು ಅರಣ್ಯದಲ್ಲಿ ಬಿದ್ದ ಕಡ್ಡಿ ಕಸ ಮುಂತಾದ ಸಾವಯವ ವಸ್ತುಗಳ ಕೊಳೆಯುವಿಕೆಗೆ ಕಾರಣವಾಗಿವೆ. ಇದರಿಂದ ಆ ಪ್ರದೇಶದ ಭೂಮಿ ಫಲವತ್ತಾಗುವುದಲ್ಲದೆ, ಅಲ್ಲಿನ ಕಸಕಡ್ಡಿಗಳ ವಿಲೇವಾರಿ ಆದಂತಾಗುತ್ತದೆ. ಅರಣ್ಯ ಸಸ್ಯಗಳ ಬೇರುಗಳಲ್ಲಿ ಅನೇಕ ಮೈಕೋರೈಜಾ ಅಣಬೆಗಳ ಸಂಬಂಧವಿರುವುದರಿಂದ ಅವು ಅರಣ್ಯ ಸಸ್ಯಗಳ ಹಾಗೂ ಇತರೆ ಸಸ್ಯಗಳಿಗೆ ಬೇಕಾದ ರಂಜಕ ಮುಂತಾದ ಆಹಾರಾಂಶಗಳನ್ನು ಒದಗಿಸುತ್ತವೆ. ಈ ಒಂದು ಸ್ವಾಭಾವಿಕ ಸಂಬಂಧದಿಂದ ಶಿಲೀಂಧ್ರಗಳು ಬಾಹ್ಯವಾಗಿ ಬೇರುಗಳನ್ನು ಸುತ್ತುವರಿಯುವುದರಿಂದ ಸಸ್ಯವು ತೇವಾಂಶ ಕೊರತೆಯಿಂದ ಬಳಲದಂತೆ ಸಹಾಯಕಾರಿಯಾಗಿವೆ. ಈ ಅಣಬೆಗಳು ಆಂಟಿಬೈಯೋಟಿಕ್ ಎಂಬ ಕ್ರಿಮಿನಾಶಕ ರಾಸಾಯನಿಕಗಳನ್ನು ಬಿಡುಗಡೆ ಮಾಡುವುದರಿಂದ ಬೇರುಗಳಿಗೆ ಬರುವ ರೋಗಗಳನ್ನು ತಡೆಗಟ್ಟಬಲ್ಲವಾಗಿವೆ.

ಇದಲ್ಲದೆ ಫೋಮ್ಸ್ ಪೊಮೆಂಟಾರಿಯಸ್ ಮತ್ತು ಗ್ಯಾನೋಡೆರ್ಮಾ ಅಪುಲಾಟೂಸ್ ಎಂಬ ಅಣಬೆಗಳನ್ನು ಉಡುಪು ಮತ್ತು ಆಟಿಕೆಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. ಪಾಲಿಪೋರಸ್ ಸ್ಕ್ವಾಮೋಸ ಎಂಬ ಅಣಬೆಯಿಂದ ಸೀಸೆಗಳ ಮುಚ್ಚಳಗಳನ್ನು ತಯಾರಿಸಬಹುದು. ಪಾಲಿಪೋರಸ್ ಗಿಸ್ಪಿಡಸ್ ಎಂಬ ಅಣಬೆಯಿಂದ ಕಂದು ರಸವನ್ನು ತೆಗೆದು, ರೇಷ್ಮೆ, ಹತ್ತಿ ಮತ್ತು ಉಣ್ಣೆ ಬಟ್ಟೆಗಳಿಗೆ ಬಣ್ಣಹಾಕಲು ಉಪಯೋಗಿಸುತ್ತಾರೆ. ಪಾಲಿಪೋರಸ್ ಪೋಮೆಂಟಾರಿಯಸ್ ಮತ್ತು ಪಾಲಿಪೋರಸ್ ಇಗ್ನೇರಿಯಸ್ ಎಂಬ ಅಣಬೆಗಳು ಆಕರ್ಷಿತ ಅಂಗರಚನೆ ಹೊಂದಿದ್ದು ಅವುಗಳನ್ನು ಹೂದಾನಿಗಳಲ್ಲಿ ಬಳಸಲಾಗುತ್ತಿದೆ. ಕೆಲವು ಅಣಬೆಗಳಿಗೆ ಬೆಳಕು ಚಿಮ್ಮುವ ಸಾಮರ್ಥ್ಯವಿರುವುದರಿಂದ ವಿಜ್ಞಾನಿಗಳು ಹಾಗೂ ಶಿಲೀಂಧ್ರ ತಜ್ಞರನ್ನು ಗಾಢವಾಗಿ ಆಕರ್ಷಿಸಿವೆ. ಇದುವರೆಗೂ, ಸು. 2000 ಖಾದ್ಯ ಅಣಬೆಗಳನ್ನು ಗುರುತಿಸಿದ್ದು, ಕೇವಲ 20 ಪ್ರಭೇದಗಳನ್ನು ಕೃಷಿ ಮಾಡಲಾಗುತ್ತಿದೆ. ಭಾರತದಲ್ಲಿ ಸದ್ಯಕ್ಕೆ ಕೃಷಿಯಲ್ಲಿರುವ ಮುಖ್ಯ ಅಣಬೆಗಳೆಂದರೆ– ಗುಂಡಿ ಅಣಬೆ, ಚಿಪ್ಪಣಬೆ, ಭತ್ತದಹುಲ್ಲಿನ ಅಣಬೆ, ಶಿಟಾಕೆ ಅಣಬೆ, ಆರಿಕ್ಯುಲೇರಿಯಾ ಅಣಬೆ ಇತ್ಯಾದಿಗಳು.

**ಅಣಬೆ ಕೃಷಿಯ ಪ್ರಯೋಜನಗಳು:**

1 ಅಣಬೆ ಕೃಷಿಗೆ ಕಡಿಮೆ ಜಾಗಬೇಕಾಗಿದ್ದು, ಸಣ್ಣ ರೈತರು, ಭೂರಹಿತರು ಮತ್ತು ನಿರುದ್ಯೋಗಿಗಳು ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಬಹುದಾಗಿದೆ.

2 ಅಣಬೆಗಳು ಗೋದಿ, ಬತ್ತದ ಹುಲ್ಲು ಇತ್ಯಾದಿ ಸಾವಯವ ವಸ್ತುಗಳ ಮೇಲೆ ಹುಲುಸಾಗಿ ಬೆಳೆಯುವುದರಿಂದ ಇಂತಹ ವಸ್ತುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾಗಿದೆ. ಇವು ದನಕರುಗಳಿಗೆ ಅಷ್ಟೇನೂ ಪುಷ್ಟಿಕರ ಮೇವಲ್ಲ.

3 ಅಣಬೆಗಳಲ್ಲಿ ತರಕಾರಿಗಳಿಗಿಂತ ಉತ್ತಮ ಪೌಷ್ಟಿಕಾಂಶಗಳಿರುವುದರಿಂದ ಕುಟುಂಬದ ಸಲುವಾಗಿ ಸಣ್ಣ ಪ್ರಮಾಣದಲ್ಲಿ ಬೆಳೆದು, ತಮ್ಮ ಆಹಾರದಲ್ಲಿನ ಪೌಷ್ಟಿಕಾಂಶದ ಕೊರತೆಯನ್ನು ನೀಗಿಸಬಹುದು.

4 ಅಣಬೆ ಕೃಷಿಯನ್ನು ವೈಜ್ಞಾನಿಕವಾಗಿ ದೊಡ್ಡ ಪ್ರಮಾಣದಲ್ಲಿ ಕೈಗೊಂಡಲ್ಲಿ ಹೆಚ್ಚಿನ ವಿದೇಶಿ ವಿನಿಮಯಗಳಿಸಬಹುದಾಗಿದೆ.

5 ಅಣಬೆ ಉದ್ದಿಮೆಯಲ್ಲಿ ರಸಾಯನಿಕ ಉದ್ದಿಮೆಗಳಂತೆ ಪರಿಸರ ಮಾಲಿನ್ಯವಿರುವುದಿಲ್ಲ.

6 ಪಾಶ್ಚಿಮಾತ್ಯ ದೇಶಗಳಲ್ಲಿ ಔಷಧೀಯ ಅಣಬೆಗಳಿಗೆ ಬಹಳಷ್ಟು ಬೇಡಿಕೆಯಿರುವುದರಿಂದ, ಉತ್ತಮ ಸಂಶೋಧನೆಯಿಂದ ನಮ್ಮ ದೇಶದಲ್ಲಿರುವ ಇಂತಹ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

ನಮ್ಮ ರಾಜ್ಯದ ಮಲೆನಾಡು ಮತ್ತು ಬಯಲುಸೀಮೆಗಳಲ್ಲಿ ಅನೇಕ ಜಾತಿಯ ಅಣಬೆಗಳ ಸ್ವಾಭಾವಿಕ ಸಂಪನ್ಮೂಲಗಳಿದ್ದು, ಅವುಗಳ ಬಗ್ಗೆ ಕೂಲಂಕಷ ಅಧ್ಯಯನ ನಡೆಯಬೇಕಾಗಿದೆ. ಇಂತಹ ಅಧ್ಯಯನಗಳನ್ನು ಕೈಗೆತ್ತಿಕೊಂಡು, ಅಣಬೆಗಳ ಶೋಧನೆ ಸ್ವಾಭಾವಿಕವಾಗಿ ಲಭ್ಯವಿರುವ ಖಾದ್ಯ ಅಣಬೆಗಳ ಕೃಷಿಗೈಯುವ ಸಾಧ್ಯತೆ ಹಾಗೂ ಕರ್ನಾಟಕ ರಾಜ್ಯ ಭೂಪಟದಲ್ಲಿ ಅಣಬೆಗಳ ನಿಕ್ಷೇಪಗಳನ್ನು ಗುರುತಿಸುವಂಥ ಸಂಶೋಧನೆ, ಕೃಷಿ ವಿಶ್ವವಿದ್ಯಾನಿಲಯಗಳ, ಸಂಶೋಧನಾ ಸಂಸ್ಥೆಗಳ ಹಾಗೂ ಸರ್ಕಾರದ ಆದ್ಯ ಕರ್ತವ್ಯವಾಗಿದೆ.

**ಖಾದ್ಯ ಅಣಬೆಗಳು :** ತಿನ್ನಲು ಯೋಗ್ಯವಾದ ಅಣಬೆಗಳಿಗೆ ಖಾದ್ಯ ಅಣಬೆಗಳು ಅಥವಾ ಆಹಾರ ಅಣಬೆಗಳೆಂದು ಕರೆಯಲಾಗಿದೆ. ಈಗಾಗಲೇ ತಿಳಿಸಿರುವಂತೆ ಅಣಬೆಗಳು ಹೇರಳವಾಗಿ ಪ್ರೋಟೀನ್‌ಗಳು, ಜೀವಸತ್ವಗಳು ಹಾಗೂ ಲವಣಗಳನ್ನು ಹೊಂದಿರುವುದರಿಂದ ಅವು ಪುಷ್ಟಿದಾಯಕ ಆಹಾರಕವಾಗಿವೆ. ಇವುಗಳು ಇತರೆ ಅಣಬೆಗಳಿಗೇನೂ ಭಿನ್ನವಾಗಿರುವುದಿಲ್ಲ. ಕೆಲವೊಮ್ಮೆ ವಿಷ ಅಣಬೆಗಳಂತೆಯೇ ಇರುತ್ತವೆ. ಒಂದೇ ಜಾತಿಯ ಅಥವಾ ವರ್ಗಕ್ಕೆ ಸೇರಿದ ಅಣಬೆಗಳಲ್ಲಿಯೇ ಕೆಲವು ಪ್ರಭೇದಗಳು ಖಾದ್ಯ ಅಣಬೆಗಳಾಗಿದ್ದು ಮತ್ತೆ ಕೆಲವು ವಿಷ ಅಣಬೆಗಳಾಗಿರುತ್ತವೆ.

**ವಿಷ ಅಣಬೆಗಳು :** ಮಾನವನ ಶರೀರಕ್ಕೆ ಹಾನಿಕಾರಕ ಅಥವಾ ಮಾರಕವಾದ ಅಣಬೆಗಳನ್ನು ವಿಷ ಅಣಬೆಗಳೆಂದು ಕರೆಯುತ್ತಾರೆ. ವಿಷ ಅಣಬೆಗಳಲ್ಲಿ ವಿವಿಧ ಬಗೆಯ ವಿಷಗಳಿದ್ದು ಅವು ಶರೀರದ ಅಂಗಾಂಗಗಳ ಮೇಲೆ ಪರಿಣಾಮ ಬೀರಬಲ್ಲವು. ಅಣಬೆಗಳ ವಿಷಕ್ಕೆ ಬಲಿಯಾದ ಅನೇಕ ರಾಜಮಹಾರಾಜರುಗಳ ಹೆಸರುಗಳು ಚರಿತ್ರೆಯಲ್ಲಿ ಅಚ್ಚಳಿಯದೇ ಉಳಿದಿವೆ. ಸೀಸರ್‌ನನ್ನು ತನ್ನ ಪತ್ನಿಯೇ ಅಮಾನಿಟ ಮಸ್ಕಾರಿಯಾ ಎಂಬ ವಿಷ ಅಣಬೆಯ ಭೋಜನದಿಂದ ಕೊಂದಿದ್ದಾಳೆಂದು ಹೇಳಲಾಗಿದೆ. ಆದ್ದರಿಂದಲೇ ಈ ಅಣಬೆಯ ಒಂದು ಪ್ರಭೇದಕ್ಕೆ ಅಮ್ಯಾನಿಟ ಸಿಸೇರಿಯಾ ಎಂದು ಕರೆಯಲಾಗಿದೆ. ಆದರೆ, ಈ ಅಣಬೆ ವಿಷ ಅಣಬೆಯಲ್ಲ. ಬಹುಶಃ ಈ ಎರಡು ಅಣಬೆಗಳು ಒಂದೇ ಗುಂಪಿನವಾದ್ದರಿಂದ ಅಮ್ಯಾನಿಟಾ ಮಸ್ಕೇರಿಯಾ ಬದಲಾಗಿ ಅಮ್ಯಾನಿಟ ಸಿಸೇರಿಯಾ ಎಂದು ಕರೆದಿರಬಹುದು.

**ಔಷಧೀಯ ಅಣಬೆಗಳು :** ಅನೇಕ ಬಗೆಯ ಗಿಡಮೂಲಿಕೆಗಳಂತೆ ಶಿಲೀಂಧ್ರ ಜನಿತ ಔಷಧಿಗಳ ಬಳಕೆಯು ಮಾನವನಿಗೆ ತಿಳಿದಿತ್ತು. ದಿವ್ಯೌಷಧಿಗಳೆಂದು ಹೆಸರುವಾಸಿಯಾದ ಪೆನಿಸಿಲಿನ್ ಇತ್ಯಾದಿಗಳು ಜೀವನಿರೋಧಕಗಳು. ಶಿಲೀಂಧ್ರ ಮತ್ತು ಇತರೆ ಸೂಕ್ಷ್ಮ ಜೀವಿಗಳಿಂದ ಸ್ರವಿಸುವ ರಸಾಯನಿಕಗಳಾಗಿದ್ದು ಅದೇ ಗುಂಪಿನ ಜೀವಾಣುಗಳಿಗೆ ಮಾರಕವಾಗಿವೆ. ಇದೇ ರೀತಿ ಹಲವು ಜಾತಿಯ ಅಣಬೆಗಳು ಸಹ ಔಷಧೀಯ ಗುಣಗಳನ್ನು ಹೊಂದಿದ್ದು ಅವುಗಳನ್ನು ಔಷಧಿಯಲ್ಲಿ ಬಳಸಲಾಗುತ್ತಿದೆ. ಆಹಾರ ಅಣಬೆಗಳು ಮತ್ತು ವಿಷ ಅಣಬೆಗಳು ಎರಡರಲ್ಲೂ, ಔಷಧೀಯ ಗುಣಗಳಿದ್ದು ಅವುಗಳನ್ನು ಔಷಧಿಯಾಗಿ ಬಳಸಲಾಗುತ್ತಿದೆ. ಇತ್ತೀಚೆಗೆ ಅನೇಕ ರೀತಿಯ ಅಣಬೆಗಳಿಂದ ಸಿದ್ಧಪಡಿಸಿದ ಔಷಧಿಗಳನ್ನು ಗುಳಿಗೆ, ಕ್ಯಾಪ್ಸೂಲ್ ಮತ್ತು ಸಿರಪ್‌ಗಳ ರೂಪದಲ್ಲಿ ಮಾರಾಟ ಮಾಡಲಾಗುತ್ತಿದೆ. 1991 ರಲ್ಲಿ ಜಗತ್ತಿನ ಅಣಬೆ ಉತ್ಪತ್ತಿಯನ್ನು ಮೌಲ್ಯವನ್ನು 8.5 ಬಿಲಿಯನ್ ಡಾಲರುಗಳಷ್ಟು ಎಂದು ಅಂದಾಜು ಮಾಡಲಾಗಿದ್ದು, ಅದೇ ವರ್ಷ 1.2 ಬಿಲಿಯನ್ ಡಾಲರ್‌ಗಳಷ್ಟು ಔಷಧಿಯ ಅಣಬೆಗಳಿಂದಲೇ ಉತ್ಪತ್ತಿಯಾಗಿದೆಯೆಂದೂ ಸಹ ಅಂದಾಜು ಮಾಡಲಾಗಿದೆ. ಗ್ಯಾನೋಡರ್ಮ ಲುಸಿಡಮ್ ಎಂಬುದು ಪ್ರಮುಖ ಔಷಧಿಯ ಅಣಬೆಯಾಗಿದೆ.

**ವಿವಿಧ ಬಗೆಯ ಅಣಬೆಗಳು :** ಪ್ರಕೃತಿಯಲ್ಲಿ ಕಾಣಸಿಗುವ ವಿವಿಧ ಬಗೆಯ ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿಗಳಂತೆ, ಅಣಬೆಗಳ ಸುಂದರ ಲೋಕವೂ ಒಂದು. ಅನೇಕ ರೀತಿಯ ಅಣಬೆಗಳ ನಾನಾ ಬಗೆಯ ರೂಪು ರೇಖೆಗಳನ್ನು ತಳೆದು ಪ್ರಕೃತಿಯಲ್ಲಿ ವರ್ಣರಂಜಿತವಾಗಿ ರಾರಾಜಿಸುತ್ತವೆ. ಇಂತಹ ಅಣಬೆಗಳ ಸುಂದರ ಜಗತ್ತನ್ನು ನಾವು ಮಳೆಗಾಲದಲ್ಲಿ ಕಾಣಬಹುದು.

**1. ಕಿವಿರು ಅಣಬೆಗಳು :** ಈ ಅಣಬೆಗಳು ಸಾಮಾನ್ಯವಾಗಿ ಎಲ್ಲಾ ಕಡೆ ಕಂಡುಬರುತ್ತವೆ. ಕೊಡೆಯಾಕಾರದಲ್ಲಿರುವುದರಿಂದ ಇವುಗಳನ್ನು ನಾಯಿಕೊಡೆಗಳೆಂದು ಕರೆಯುವುದುಂಟು. ಅಗ್ಯಾರಿಕೇಲ್ಸ್ ವರ್ಗಕ್ಕೆ ಸೇರಿದ ಈ ಅಣಬೆಗಳ ಬಾಹ್ಯರೂಪವನ್ನು ಕೊಡೆ, ಕಾಂಡ, ಕಿವಿರು ಮುಂತಾದ ಭಾಗಗಳಾಗಿ ವಿಂಗಡಿಸಬಹುದು. ಕೆಲವು ಜಾತಿಯ ಅಣಬೆಗಳ ತಳದಲ್ಲಿ ಬಟ್ಟಲಾಕಾರದ ರಚನೆಯಿದ್ದು ಅದನ್ನು ಕಪ್ ಎಂದು ಕರೆಯಲಾಗುತ್ತದೆ. ಇನ್ನು ಕೆಲವು ಅಣಬೆಗಳ ಕಾಂಡದ ಮೇಲೆ ಉಂಗುರಾಕಾರದ ಪೊರೆಯಿದ್ದು ಇದಕ್ಕೆ ಉಂಗುರ ಅಥವಾ ಅನ್ಯುಲಸ್ ಎಂದು ಹೆಸರು. ಇವುಗಳ ಬೀಜೋತ್ಪತ್ತಿಯ ಕಿವಿರುಗಳ ಪದರಿನೊಳಗಿರುವ ಬೆಸಿಡಿಯಂ ಮೇಲೆ ಆಗುತ್ತದೆ. ಅಗ್ಯಾರಿಕಸ್ ಬೈಸ್ಪೋರಸ್, ಅಗ್ಯಾರಿಕಸ್ ಬೈಟಾರ್ಕಿಸ್ ಎಂಬುವು ಪ್ರಮುಖ ಖಾದ್ಯ ಅಣಬೆಗಳಾಗಿವೆ. ಹಾಗೂ ಇದೇ ವರ್ಗದ ಅಮ್ಯಾನಿಟಾ ಜಾತಿಯ ಅಣಬೆಗಳು ಪ್ರಮುಖವಾಗಿ ವಿಷ ಅಣಬೆಗಳಾಗಿವೆ.

**2. ಕೊಡೆಯಲ್ಲಿ ಕಿವಿರಿಲ್ಲದ ಅಣಬೆಗಳು :** ಈ ರೀತಿಯ ಅಣಬೆಗಳ ಕೊಡೆಯ ತಳಭಾಗದಲ್ಲಿ ಜೇನುಗೂಡಿನಂತಹ ಕೊಳವೆ ರಂಧ್ರಗಳಿರುತ್ತವೆ. ಈ ರಂಧ್ರಗಳಲ್ಲಿ ಬೆಸಿಡಿಯೋಸ್ಪೋರ್ ಎಂಬ ಬೀಜಾಣುವು ಉತ್ಪತ್ತಿಯಾಗುತ್ತದೆ ಹಾಗೂ ಅಣಬೆಗಳು ಜಿಗುಟಾಗಿರುತ್ತವೆ. ಬೋಲಿಟಸ್ ಜಾತಿಯ ಅಣಬೆಗಳು ಇದಕ್ಕೆ ಉದಾಹರಣೆಗಳಾಗಿವೆ.

**3. ಭೂ ಚೆಂಡುಗಳು :** ಇವು ಚೆಂಡಿನಾಕಾರದ ಮೇಲ್ಮೈ ರಚನೆ ಹೊಂದಿದ್ದು, ಹಳದಿ, ಮಾಸಲು ಬಿಳಿ ಇತ್ಯಾದಿ ಬಣ್ಣಗಳಿಂದ ಕೂಡಿರುತ್ತವೆ. ಇವು ದಪ್ಪವಾದ ಹೊರಪದರ ಹೊಂದಿದ್ದು, ಬೀಜೋತ್ಪತ್ತಿ ಒಳಗಡೆಯೇ ನಡೆಯುತ್ತದೆ. ಕಾಡಿನಲ್ಲಿ ಪ್ರಾಣಿಗಳು ಇವುಗಳನ್ನು ತುಳಿದಾಗ ಮತ್ತು ಕೆಲವೊಮ್ಮೆ ಒತ್ತಡದಿಂದ ಬೀಜಗಳು ತಾವಾಗಿಯೇ ಹೊರಚಿಮ್ಮಿ ಬೀಜ ಪ್ರಸಾರವಾಗುತ್ತದೆ. ಭೂ ಚೆಂಡುಗಳು ಇತರೆ ಅಣಬೆಗಳಿಗಿಂತ ಭಿನ್ನವಾಗಿದ್ದು, ಶಿಲೀಂಧ್ರ ವರ್ಗೀಕರಣದಲ್ಲಿ ಗ್ಯಾಸ್ಟ್ರೊಮೈಸೆಟ್ಸ್ ವರ್ಗಕ್ಕೆ ಸೇರಿವೆ. ಇವುಗಳಲ್ಲಿಯೂ ಸಹ ಸಾಮಾನ್ಯ ಅಣಬೆಗಳಂತೆ ಬೇರೆ ಬೇರೆ ಜಾತಿಗಳಿದ್ದು, ಅವುಗಳಲ್ಲಿ ಕ್ಯಾಲ್ವೇಸಿಯಾ ಜೈಗಾಂಸಿಯಾ ಎನ್ನುವುದು ಜಗತ್ತಿನಲ್ಲಿ ಅತಿದೊಡ್ಡ ಭೂಚೆಂಡು (ಅಣಬೆ) ಎಂದು ವರದಿಯಾಗಿದೆ. (ಗಿನ್ನಿಸ್ ದಾಖಲೆ 1991).

**4. ಭೂ ನಕ್ಷತ್ರಗಳು :** ಈ ಶಿಲೀಂಧ್ರಗಳೂ ಗ್ಯಾಸ್ಟ್ರೋ ಮೈಸಿಟೀಸ್ ಗುಂಪಿಗೆ ಸೇರಿವೆ. ಇವು ಭೂಮಿಯ ಮೇಲೆ ನಕ್ಷತ್ರಾಕಾರವಾಗಿ ಅರಳುವುದರಿಂದ ಈ ಹೆಸರು ಬಂದಿದೆ. ಇವುಗಳ ಹೊರಪದರ ಬಿಚ್ಚಿ ನಕ್ಷತ್ರಗಳಂತೆ ಅರಳುತ್ತದೆ ಮತ್ತು ಒಳಗಿನ ಪೊರೆ ಮುಚ್ಚಿದ್ದು ಒಂದು ಅಥವಾ ಹೆಚ್ಚು ರಂಧ್ರಗಳಿರುತ್ತವೆ. ಈ ರಂಧ್ರಗಳು ಬೀಜಾಣುಗಳು ಹೊರಬರಲು ಸಹಾಯ ಮಾಡುತ್ತವೆ.

**5. ಹಕ್ಕಿಗೂಡಿನ ಅಣಬೆ :** ಇವು ಸಹ ಗ್ಯಾಸ್ಟ್ರೋ ಮೈಸಿಟೀಸ್ ವರ್ಗಕ್ಕೆ ಸೇರಿವೆ. ಇವುಗಳ ಬಟ್ಟಲಾಕಾರದ ಆವರಣದಲ್ಲಿ ಮೊಟ್ಟೆಗಳಂತಹ ಪೆರಿಡಿಯೋಲ್‌ಗಳಿರುತ್ತವೆ. ಈ ಪೆರಿಡಿಯೋಲ್‌ಗಳು ಹಕ್ಕಿಗಳು ಗೂಡಿನಲ್ಲಿಟ್ಟ ಮೊಟ್ಟೆಗಳಂತೆ ಕಾಣುತ್ತವೆ. ಆದ್ದರಿಂದ ಇವುಗಳಿಗೆ ಹಕ್ಕಿಗೂಡಿನ ಅಣಬೆ ಎಂದು ಕರೆಯಲಾಗಿದೆ.

**6. ಬಟ್ಟಲು ಅಣಬೆ :** ಇವು ಡಿಸ್ಕೋಮೈಸಿಟೀಸ್ ವರ್ಗಕ್ಕೆ ಸೇರಿವೆ. ಬಟ್ಟು ಅಣಬೆಗಳು ಬೋಗುಣಿಯಾಕಾರದಲ್ಲಿದ್ದು, ಜಿಗುಟಾಗಿರುತ್ತವೆ ಮತ್ತು ವಿವಿಧ ಬಣ್ಣಗಳನ್ನು ಹೊಂದಿರುತ್ತವೆ.

**7. ಸ್ಟಿಂಕ್ ಹಾರ್ನ್ ಶಿಲೀಂಧ್ರಗಳು :** ಈ ಗುಂಪಿನ ಅಣಬೆಗಳು ಸಾಮಾನ್ಯವಾಗಿ ಕೆಟ್ಟ ವಾಸನೆಯಿಂದ ಕೂಡಿದ್ದು, ಈ ಹೆಸರು ಬಂದಿದೆ. ಇವು ಕೊಳೆತ ಸಾವಯವ ವಸ್ತುಗಳ ಮೇಲೆ ಬೆಳೆಯುತ್ತವೆ. ಈ ಗುಂಪಿನ ಕೆಲವು ಅಣಬೆಗಳ ಅಂಗ ರಚನೆಗಳು ಎಲೆ ಅಥವಾ ಪುಷ್ಪ ದಳಗಳ ಹೋಲಿಕೆಯನ್ನು ಹೊಂದಿದ್ದು, ಬಗೆ ಬಗೆಯ ಬಣ್ಣಗಳಿಂದ ಕೂಡಿರುತ್ತವೆ. ಆದ್ದರಿಂದ ಇವುಗಳನ್ನು ಶಿಲೀಂಧ್ರ ಪುಷ್ಪಗಳೆಂದು ಕರೆಯುವುದುಂಟು. ಈ ಗುಂಪಿನ ಒಂದು ಅಣಬೆಗೆ ಬಲೆಯಾಕಾರದ ಮುಸುಕಿದ್ದು ಇದನ್ನು ಕನ್ಯಾಸ್ತ್ರೀ ಎಂದು ಕರೆಯಲಾಗುತ್ತದೆ.

**8. ಮಾರೆಲ್‌ಗಳು :** ಈ ಅಣಬೆಗಳು ಅಸ್ಕೊಮೈಸಿಟೀಸ್ ವರ್ಗದಲ್ಲಿ ಡಿಸ್ಕೊಮೈಸಿಟೀಸ್ ಗುಂಪಿಗೆ ಸೇರಿವೆ. ಇವುಗಳ ಮೇಲ್ಮೈ ಸ್ಪಂಜುಗಳಂತಿದ್ದು ಗದೆಯಾಕಾರದ ಸುಕ್ಕುಗಟ್ಟಿದ ತಲೆಯನ್ನು ಹೊಂದಿವೆ. ಈ ಗುಂಪಿನಲ್ಲಿ ಮಾರ್ಚೆಲ ಎಸ್ಕುಲೆಂಟ ಎಂಬ ಅಣಬೆ ತುಂಬಾ ರುಚಿಕರವಾದ ಖಾದ್ಯ ಅಣಬೆಯಾಗಿದ್ದು, ಬ್ರಿಟನ್ ದೇಶದ ಅತ್ಯಂತ ಬೆಲೆಬಾಳುವ ಮತ್ತು ಹೆಸರುವಾಸಿಯಾದ ಅಣಬೆಯಾಗಿದೆ. ಭಾರತದ ಹಿಮಾಚಲಪ್ರದೇಶದಲ್ಲಿ ಇದು ದೊರೆಯುತ್ತದೆ. ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶದಲ್ಲಿ ಇದನ್ನು ಶೋಧನೆ ಮಾಡಬೇಕಾಗಿದೆ.

**ಅಣಬೆಯ ರಚನೆ :** ಸಾಮಾನ್ಯ ಅಣಬೆ ಸಂಪೂರ್ಣವಾಗಿ ಬಲಿತಾಗ, ಅದನ್ನು 4 ಭಾಗಗಳಾಗಿ ವಿಂಗಡಿಸಬಹುದು. ಕೊಡೆ ಅಥವಾ ತಲೆ, ಕಾಂಡ, ಕಾಂಡದ ಸುತ್ತಲೂ ಕಾಣುವ ಉಂಗುರ, ಬಟ್ಟಲು ಇವುಗಳು. ಈ ಭಾಗಗಳಲ್ಲಿ ಕೆಲವು ಅಂಗಗಳು ಕೆಲವು ಅಣಬೆಯಲ್ಲಿ ಇರುವುದಿಲ್ಲ. ಕೆಲವು ಅಣಬೆಗಳಲ್ಲಿ ಪೂರ್ಣವಾಗಿರುತ್ತವೆ. ಇದ್ದಾಗ ಅವು ವಿವಿಧ ಆಕಾರದಲ್ಲಿ ಇರಬಹುದು. ಎಲ್ಲಾ ರೀತಿಯ ಅಣಬೆಯಲ್ಲೂ ಇವು ಒಂದೇ ರೀತಿಯಾಗಿರುವುದಿಲ್ಲ. ಉದಾಹರಣೆಗೆ, ತಲೆಯು (ಕೊಡೆ) ಮೇಲಕ್ಕೆ ಬಾಗಿರಬಹುದು, ಕೆಲವಲ್ಲಿ ಕಾಂಡವಿಲ್ಲದೇ ಇರಬಹುದು, ಕೆಲವು ಅಣಬೆಗಳಲ್ಲಿ ತಳದಲ್ಲಿಯ ಬಟ್ಟಲು

ಇರುವುದಿಲ್ಲ, ಕೆಲವು ಅಣಬೆಗಳಲ್ಲಿ ಕೊಡೆ ಗಂಟೆಯಾಕಾರವಿರಬಹುದು. ಈ ರೀತಿಯ ವಿಶಿಷ್ಟ ಲಕ್ಷಣಗಳು ಅಣಬೆಗಳನ್ನು ಯಾವ ಗುಂಪಿಗೆ ಸೇರಿರುತ್ತವೆಂದು ಗುರುತಿಸಲು ಸಹಾಯಕವಾಗಿವೆ.

**1. ಕೊಡೆ :** ಇದು ಕೊಡೆಯಾಕಾರದ, ಹೊರಹೊಮ್ಮಿದ ಅಣಬೆಯ ಭಾಗ ಇದು ದಪ್ಪವಾಗಿ, ರಸಭರಿತವಾಗಿ ಅಥವಾ ದಪ್ಪಪೊರೆಯಂತೆ ಅಥವಾ ಜಿಗುಟಾಗಿರಬಹುದು. ಇದರ ಆಕಾರಗಳು ಬೇರೆ ಬೇರೆ ಅಣಬೆಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ಗಾತ್ರ ಮತ್ತು ಬಣ್ಣಗಳು ಸಹ ವ್ಯತ್ಯಾಸವನ್ನು ಹೊಂದಿರುತ್ತವೆ. ಇದರ ಮೇಲ್ಮೈ ಪದರ, ಮೆತ್ತೆಯಾಗಿರ ಬಹುದು ಅಥವಾ ಒರಟಾಗಿಯೂ ಇರಬಹುದು ಮತ್ತು ಕೆಲವು ಅಣಬೆಗಳಲ್ಲಿ ಹುರುಕಾದಂತೆ ಇರುತ್ತದೆ. ಇದರ ತಳಭಾಗದಲ್ಲಿ ನೆರಿಗೆಯಾಕಾರದ ಕಿವಿರುಗಳಿದ್ದು ಅವುಗಳೊಳಗೆ ಬೀಜಾಣುಗಳು ಉತ್ಪತ್ತಿಯಾಗುತ್ತವೆ.

**2. ಕಿವಿರುಗಳು :** ತಲೆಯ ಕೆಳಭಾಗದಲ್ಲಿರುವ ನೆರಿಗೆಯಂತಹ ಜೋಡಣೆಗೆ ಕಿವಿರುಗಳೆಂದು ಕರೆಯುತ್ತಾರೆ. ಅವು ಕಾಂಡದಿಂದ ಪ್ರಾರಂಭವಾಗಿ ಕೊಡೆಯ ತುದಿಯವರೆಗೂ ನೇರವಾಗಿ ಬೆಳೆದಿರುತ್ತವೆ. ಈ ಕಿವಿರುಗಳ ಒಳಭಾಗದ ಮೇಲ್ಮೈಯಲ್ಲಿ ಬೀಜಾಣುಗಳು ಉತ್ಪತ್ತಿಯಾಗುತ್ತವೆ. ಇದರಿಂದ ಅವುಗಳ ಬಣ್ಣವು ಸಹ ಬೀಜಾಣುಗಳ ಬಣ್ಣಕ್ಕೆ ಸರಿಯಾಗಿ ಬದಲಾಗುತ್ತವೆ. ಉದಾ: ಅಗ್ಯಾರಿಕಸ್ ಬೈಸ್ಪೋರಸ್ ಅಣಬೆ ಚಿಕ್ಕದಿದ್ದಾಗ, ಕಿವಿರಿನ ಬಣ್ಣ ನಸುಗೆಂಪು ಬಣ್ಣವಾಗಿದ್ದು ಅದು ಬಲಿತಂತೆ ಕಂದು ಬಣ್ಣಕ್ಕೆ ತಿರುಗುತ್ತವೆ. ಈ ಕಿವಿರುಗಳು ವಿವಿಧ ಜಾತಿಯ ಅಣಬೆಗಳಲ್ಲಿ ಬೇರೆ ಬೇರೆ ವಿಧವಾಗಿ ಕಾಂಡಕ್ಕೆ ಅಂಟಿಕೊಂಡಿರುತ್ತವೆ. ಮತ್ತು ಕಿವಿರಿನ ಕೆಳಭಾಗದ ಆಕಾರದಲ್ಲಿಯೂ ಸಹ ಒಂದು ಗುಂಪಿನ ಅಣಬೆಗೂ ಇನ್ನೊಂದು ಗುಂಪಿನ ಅಣಬೆಗೂ ವ್ಯತ್ಯಾಸವನ್ನು ಕಾಣಬಹುದು. ಈ ವ್ಯತ್ಯಾಸಗಳು ಅಣಬೆಗಳ ವರ್ಗಗಳನ್ನು ಗುರುತಿಸುವಲ್ಲಿ ಸಹಾಯವಾಗುತ್ತವೆ. ಉದಾಹರಣೆಗೆ ಕಿವಿರುಗಳು ಅಣಬೆಯ ಕಾಂಡಕ್ಕೆ ಮುಟ್ಟದೇ ಇದ್ದಲ್ಲಿ ಅದನ್ನು ಫ್ರೀ ಕಿವಿರುಗಳೆಂದು, ಅವುಗಳು ನೇರವಾಗಿ ಕಾಂಡಕ್ಕೆ ಸೇರಿಕೊಂಡಿದ್ದಲ್ಲಿ ಅವುಗಳಿಗೆ ಅಡ್ನೇಟ್ ಎಂದೂ, ಹಾಗೂ ಪಾರ್ಶ್ವವಾಗಿ ಸೇರಿಕೊಂಡಿದ್ದರೆ (ಒಂದು ಬದಿ ಮಾತ್ರ) ಅಂತಹವನ್ನು ಅಡ್ನೆಕ್ಸೆಡ್ ಕರೆಯಲಾಗುತ್ತದೆ. ಕಿವಿರುಗಳು ಕಾಂಡದುದ್ದಕ್ಕೂ (ಚಿಪ್ಪಣಬೆಯಲ್ಲಿದ್ದಂತೆ) ಬೆಳೆದಿದ್ದಾಗ ಅವುಗಳನ್ನು ಡಿಕರೆಂಟ್ ಎಂದೂ, ಅವು ಕಾಂಡದ ಬದಿಯಲ್ಲಿ ಕತ್ತರಿಸಿದಂತಿದ್ದಲ್ಲಿ ಸಿನುಯೇಟ ಎಂತಲೂ ಕರೆಯಲಾಗುತ್ತದೆ. ಕಿವಿರುಗಳು ಕೆಲವು ಅಣಬೆಗಳಲ್ಲಿ ಗರಗಸದ ಹಲ್ಲುಗಳಂತಿದ್ದರೆ ಅವುಗಳನ್ನು ಸೆರೇಟ್ ಎಂದು ಕರೆಯಲಾಗುತ್ತದೆ.

**3. ಮುಸುಕು ಅಥವಾ ವೇಲ್ :** ಫಲೋತ್ಪಾದಕ ಎಳೆ ಅಣಬೆಗಳಲ್ಲಿ ಕಿವಿರುಗಳು ಹೊರಪೊರೆಯ ಅಂಗಾಂಶವೊಂದರಿಂದ ಸಂಪೂರ್ಣವಾಗಿ ಆವರಿಸಲ್ಪಟ್ಟಿರುತ್ತವೆ. ಇದನ್ನು ವೇಲ್ ಅಥವಾ ಮುಸುಕು ಎಂದು ಕರೆಯುತ್ತೇವೆ. ಈ ಮುಸುಕು ಕ್ರಮೇಣವಾಗಿ ಅಣಬೆ ಬಲಿತ ನಂತರ ಹರಿದು ಹೋಗಿರುತ್ತದೆ. ಇದರಲ್ಲಿ ಸ್ವಲ್ಪಭಾಗ ಅಣಬೆಯ ಕೊಡೆಯಲ್ಲಿ ಅಂಟಿಕೊಂಡಿದ್ದು ಉಳಿದ ಭಾಗವು ಕಾಂಡದ ಮೇಲೆ ಉಂಗುರವಾಗಿ ಮಾರ್ಪಾಡಾಗುತ್ತದೆ. ಈ ಉಂಗುರವು ತುಂಬಾ ಸೂಕ್ಷ್ಮವಾಗಿರುತ್ತದೆ.

**4. ಕಾಂಡ :** ಇದು ಕೊಡೆಗೆ ಆಧಾರವನ್ನು ಕೊಡುತ್ತದೆ. ಇದು ಕೆಲವು ಅಣಬೆಗಳಲ್ಲಿ ಇರುವುದಿಲ್ಲ (ಉದಾ: ಚಿಪ್ಪಣಬೆ) ಹಾಗೂ ತಲೆಗೆ ಬೇರೆ ಬೇರೆ ಕೋನದಲ್ಲಿ ಸೇರಿಕೊಂಡಿರುತ್ತದೆ. ಸಾಮಾನ್ಯವಾಗಿ ಇದು ಕೊಡೆಯ ಮಧ್ಯೆಯಿರುತ್ತದೆ. ಅಣಬೆಯನ್ನು ಛತ್ರಿಯಂತೆ ಹಿಡಿದಿರುತ್ತದೆ. ಹೀಗೆ ಅಣಬೆಯ ಕಾಂಡಭಾಗವು ಕೊಡೆ ತಲೆಯ ಮಧ್ಯ ಭಾಗದಲ್ಲಿದ್ದರೆ ಅದಕ್ಕೆ ಕೇಂದ್ರಿತ ಎಂದೂ ಹಾಗೂ ಕಾಂಡವು ತಲೆಯ ಮಧ್ಯದಿಂದ ದೂರವಿದ್ದರೆ ಅದಕ್ಕೆ ವಿಕೇಂದ್ರೀಯ ಎಂದು ಕರೆಯಲಾಗುತ್ತದೆ. ಕಾಂಡವು ಗಟ್ಟಿಯಿರಬಹುದು ಅಥವಾ ಟೊಳ್ಳಾಗಿರಬಹುದು. ಕೆಲವು ಜಾತಿಯ ಅಣಬೆಗಳಲ್ಲಿ ಬೇರೆ ಬೇರೆ ಆಕಾರವನ್ನು ಸಹ ಹೊಂದಿರುತ್ತವೆ. ಈ ಎಲ್ಲಾ ರಚನೆಗಳೂ ಅಣಬೆಯನ್ನು ಯಾವ ಜಾತಿಯದೆಂದು ಗುರುತಿಸಲು ಸಹಾಯಕವಾಗುತ್ತದೆ. ಕೆಲವು ಅಣಬೆಗಳ ಕಾಂಡವು ಭೂಮಿಯ ಒಳಗೆ ಹೋದಂತೆಲ್ಲಾ ಬೇರಿನಂತಾಗುತ್ತದೆ. (ಉದಾ: ಬೇರಣಬೆ ಅಥವಾ ಹುತ್ತದ ಅಣಬೆ) ಇನ್ನು ಕೆಲವು ಅಣಬೆಗಳಲ್ಲಿ ಕಾಂಡದ ತಳವು ಊದಿಕೊಂಡಿರುತ್ತದೆ ಇದನ್ನು ಬಲ್ಬಸ್ ಎಂದು ಕರೆಯುತ್ತಾರೆ.

**5. ಬಟ್ಟಲು :** ಎಳೆಯ ಅಣಬೆಯು ವಿವಿಧ ಅಂಗಗಳಾಗಿ ಬೇರ್ಪಡುವುದಕ್ಕಿಂತ ಮೊದಲು ಹೊರಭಾಗವು ಸರ್ವೆ ಸಾಧಾರಣ ಪೊರೆಯಿಂದ ಆವರಿಸಿಕೊಂಡು ಮೊಟ್ಟೆಯಾಕಾರವಾಗಿರುತ್ತದೆ. ಕ್ರಮೇಣ ಅಣಬೆಯು ಬಲಿತು ವಿಕಾಸ ಹೊಂದುತ್ತ, ಹೊರಗಿನ ಪೊರೆಯು ಸಮಾನಾಂತರವಾಗಿ ಹರಿದು ತಳ ಭಾಗವು ಬಟ್ಟಲಾಗುತ್ತದೆ. ಮೇಲ್ಭಾಗವು ಕೊಡೆಯೊಂದಿಗೆ ಸೇರಿ ಕೊಡೆಯ ಮೇಲ್ಮೈಯಲ್ಲಿ ಪೊರೆಯಾಗಿ ಮಾರ್ಪಾಡು ಹೊಂದುತ್ತದೆ.

ಅಣಬೆಯಲ್ಲಿ ಈ ಉಂಗುರ ಮತ್ತು ಬಟ್ಟಲುಗಳ ಅನುಪಸ್ಥಿತಿ ಮತ್ತು ಉಪಸ್ಥಿತಿಗಳ ಆಧಾರದ ಮೇಲೆ ಅಣಬೆಗಳನ್ನು ವಿವಿಧ ಪಂಗಡಗಳಲ್ಲಿ ವಿಗಂಡಿಸಲಾಗಿದೆ. ಉದಾ: ಉಂಗುರ ಮತ್ತು ಬಟ್ಟಲುಗಳಿರುವ ಅಣಬೆಗಳು ಅಮ್ಯಾನಿಟ ಗುಂಪಿಗೆ ಸೇರಿವೆ. (2) ಉಂಗುರವಿದ್ದು, ಬಟ್ಟಲು ಇಲ್ಲದಿದ್ದರೆ ಅದು ಅಗ್ಯಾರಿಕಸ್ ಅಣಬೆಯ ಗುಂಪಿಗೆ ಸೇರುತ್ತದೆ. (3) ಉಂಗುರವಿಲ್ಲದೆ ಬರೀ ಬಟ್ಟಲು ಇದ್ದಲ್ಲಿ ಅದು ಭತ್ತದ ಹುಲ್ಲಿನ ಅಣಬೆ ಗುಂಪಿಗೆ ಸೇರಿರುತ್ತದೆ. ಉಂಗುರ ಮತ್ತು ಬಟ್ಟಲು ಎರಡೂ ಇಲ್ಲದಿದ್ದರೆ ಅವು ಪ್ರೈರಿರಿಂಗ್ ಅಣಬೆಗಳ ಗುಂಪಿಗೆ ಸೇರುತ್ತದೆ.

ಹೀಗೆ ಅಣಬೆಯ ರಚನಾಂಗಗಳಾದ ತಲೆ (ಕೊಡೆ), ಕಾಂಡ, ಕಿವಿರು, ಉಂಗುರ, ಬಟ್ಟಲುಗಳ ಉಪಸ್ಥಿತಿ ಮತ್ತು ಅನುಪಸ್ಥಿತಿ ಹಾಗೂ ಇವುಗಳ ಆಕಾರ, ಬಣ್ಣ ಇತ್ಯಾದಿಗಳು ಅಣಬೆಗಳ ವರ್ಗೀಕರಣಕ್ಕೆ ಸಹಾಯಕವಲ್ಲದೆ, ಅವು ವಿಷ ಅಣಬೆಗಳ ಗುಂಪಿನವೇ ಅಥವಾ ಖಾದ್ಯ ಗುಂಪಿನವೇ ಎಂದು ತಿಳಿಯಲು ಸಹ ಕೆಲವೊಮ್ಮೆ ಅನುಕೂಲವಾಗುತ್ತದೆ.

**ಪ್ರಮುಖ ಖಾದ್ಯ ಅಣಬೆಗಳು:**

**1. ಅಗ್ಯಾರಿಕಸ್ ಬೈಸ್ಪೋರಸ್ :** ಜನಪ್ರಿಯ ಖಾದ್ಯ ಅಣಬೆ. ಇದನ್ನು ಸಮಶೀತೋಷ್ಣವಲಯದ ಅಣಬೆ, ಯುರೋಪಿನ ಅಣಬೆ ಹಾಗೂ ಗುಂಡಿ ಅಣಬೆ ಎಂದು ಕರೆಯುವುದುಂಟು.

**2. ಅಗ್ಯಾರಿಕಸ್ ಕಾಂಪೆಸ್ಟ್ರೀಸ್ :** ಜನಪ್ರಿಯ ಅಣಬೆ. ಹೊಲಗಳಲ್ಲಿ, ಹುಲ್ಲು ಬಯಲಿನಲ್ಲಿ ಕಂಡುಬರುತ್ತದೆ. ಕೊಡೆಯ ಮೇಲ್ಭಾಗ ಸ್ವಲ್ಪ ಉರುಕಾಗಿರಬಹುದು. ಬಿಳಿ ಅಥವಾ ಸ್ವಲ್ಪ ಕಂದು ಬಣ್ಣವನ್ನು ಹೊಂದಿರುತ್ತದೆ.

**3. ಮಾರ್ಚೆಲ್ಲಾ ಕೊನಿಕಾ :** ಇದು ಕಾಡಿನಲ್ಲಿ ಬೆಳೆಯುತ್ತದೆ. ಇದರ ತಲೆ ಶಂಕುವಿನಾಕೃತಿಯಲ್ಲಿದ್ದು ಅದರ ಸುತ್ತಲೂ ಸಾಲಾಗಿ ಗುಂಡಿಗಳಿರುತ್ತವೆ ಅವುಗಳ ಉದ್ದ ಅಗಲಕ್ಕಿಂತ ಹೆಚ್ಚಾಗಿರುತ್ತದೆ. ಇದು ಎಳೆಯದಾಗಿದ್ದಾಗ ಹಳದಿಯಾಗಿದ್ದು ಬಲಿತಂತೆ ನಸುಕಪ್ಪಾಗುತ್ತದೆ.

**4. ಮಾರ್ಚೆಲ್ಲಾ ಡೆಲಿಸಿಯೋಸಾ :** ಇದರ ತಲೆ ಕೊಳವೆಯಾಕಾರವಾಗಿದ್ದು ತುದಿಯು ಮೊಂಡಾವಾಗಿರುತ್ತದೆ. ಇದು ಕಾಡಿನಲ್ಲಿ ಮರಗಳ ಬೇರುಗಳ ಹತ್ತಿರ ಕಾಣಿಸಿಕೊಳ್ಳುತ್ತದೆ. ಇದರ ಕೊಡೆಯ ಮೇಲಿನ ಗುಂಡಿಗಳು ಉದ್ದವಾಗಿರುತ್ತವೆ.

**5. ಫ್ಲುರೋಟಸ್ ಫ್ಲಾಬೆಲೇಟಸ್ :** ಇದು ಚಿಪ್ಪಣಬೆಯಾಗಿದ್ದು ಒಣಗಿದ ಮರಗಳ ಮಳೆಯಲ್ಲಿ ನೆನೆದಾಗ ಮರಗಳ ಮೇಲೆ ಮತ್ತು ನೆಲದಲ್ಲಿ ಬೆಳೆಯುತ್ತದೆ. ಇದರ ಫಲೋತ್ಪಾದಕ ಸ್ಪಂಜಿನಂತಿದ್ದು ಅದರ ತಲೆ ಫ್ಯಾನಿನ ರೆಕ್ಕೆಯಾಕಾರದಲ್ಲಿರುತ್ತದೆ. ಮೊದಲು ಸ್ವಲ್ಪ ಗುಲಾಬಿ ಬಣ್ಣದಲ್ಲಿದ್ದು ಬಲಿತ ನಂತರ ಬಿಳಿಬಣ್ಣಕ್ಕೆ ತಿರುಗುತ್ತದೆ.

**6. ಫ್ಲುರೋಟಸ್ ಆಯಸ್ಟ್ರೇಟಸ್ :** ಇದು ಒಣಗಿದ ಮರ ಮಳೆಯಲ್ಲಿ ನೆನೆದಾಗ ಅದರ ಬಿರುಕುಗಳಲ್ಲಿ ಗೊಂಚಲು ಗೊಂಚಲಾಗಿ ಬೆಳೆಯುತ್ತದೆ. ಇದು ಬೂದಿ ಅಥವಾ ಬಿಳಿಬಣ್ಣದ್ದಾಗಿದ್ದು, ಒಣಗಿದಾಗ ಸ್ವಲ್ಪ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದರ ಕಾಂಡ ಚಿಕ್ಕದಾಗಿದ್ದು ಮೇಲ್ಮೈ ಮೃದುವಾಗಿರುತ್ತದೆ.

**7. ಫ್ಲುರೋಟಸ್ ಸಜೋರ್‌ಕಾಜು :** ಇದು ಕೊಳೆಯುತ್ತಿರುವ ಮರದಲ್ಲಿ ಒಂಟಿಯಾಗಿ ಅಥವಾ ಗುಂಪಾಗಿ ಬೆಳೆಯುತ್ತದೆ. ಇದರ ಬಣ್ಣ ಬಿಳಿ ಅಥವಾ ಮುಸುಕಾಗಿದ್ದು ತಲೆಯ ಅಂಚು ಅಸಮಾನವಾಗಿರುತ್ತದೆ, ಮೇಲ್ಮೈ ಮೃದುವಾಗಿರುತ್ತದೆ.

**8. ರಸುಲ್ಲಾ ಎಮಿಟಿಕಾ :** ಇದು ಒಂಟಿಯಾಗಿ ಅಥವಾ ಅಲ್ಲಲ್ಲಿ, ಕಾಡುಗಳಲ್ಲಿ ಕೊಳೆಯುತ್ತಿರುವ ಮರಗಳ ದಿಮ್ಮಿಗಳಲ್ಲಿ, ಇನ್ನೂ ಅನೇಕ ಜಾಗಗಳಲ್ಲಿ ಬೆಳೆಯುತ್ತದೆ. ಇದರ ಮೇಲ್ಮೈ ಮೃದುವಾಗಿದ್ದು, ಗುಲಾಬಿ ಅಥವಾ ಕೆಂಪು ಬಣ್ಣವನ್ನು ಹೊಂದಿರುತ್ತದೆ. ಇದರಲ್ಲಿ ತಲೆಯ ಪೊರೆ ಸುಲಭವಾಗಿ ತೆಗೆಯಬಹುದಾಗಿದೆ.

**9. ವಲ್ವೇರಿಯಲ್ಲಾ ವಲ್ವೇಸಿಯಾ :** ಇದನ್ನು ಬತ್ತದ ಹುಲ್ಲಿನ ಅಣಬೆ ಎಂದು ಕರೆಯಲಾಗುತ್ತದೆ. ಇದು ಉಷ್ಣವಲಯದ ಅಣಬೆಯಾಗಿದೆ. ಇದರ ತಳದಲ್ಲಿ ಎದ್ದುಕಾಣುವ ಬಟ್ಟಲಿದೆ. ಆದ್ದರಿಂದಲೇ ಇದಕ್ಕೆ ಈ ಹೆಸರು ಬಂದಿದೆ. ಇದರ ಇತರ ಪ್ರಭೇದಗಳೆಂದರೆ, ವಲ್ವೇರಿಯಲ್ಲಾ, ಡಿಪ್ಲೇಸಿಯಾ, ವಲ್ವೇರಿಯಲ್ಲಾ ಎಸ್ಕುಲೆಂಟಾ ಇತ್ಯಾದಿಗಳು.

**10. ಲೆಂಟಿನಸ್ ಇಡೋಡಸ್ :** ಇದನ್ನು ಜಪಾನಿನ ಶಿಟಾಕೆ ಅಣಬೆಯೆಂದು ಕರೆಯಲಾಗುತ್ತದೆ. ಇದು ಮರಗಳ ದಿಮ್ಮಿಗಳ ಮೇಲೆ ಬೆಳೆಯುತ್ತದೆ. ಇತರ ಫಲೋತ್ಪಾದಕ ಅಂಗ ಕಂದು ಬಣ್ಣದ್ದಾಗಿರುತ್ತದೆ. ಈ ಅಣಬೆಯು ಆಹಾರ ಅಣಬೆಯಲ್ಲದೆ, ಔಷಧೀಯ ಗುಣಗಳನ್ನು ಹೊಂದಿರುತ್ತದೆ. ಮೇಲೆ ಹೆಸರಿಸಿದ ಅಣಬೆಗಳಲ್ಲದೆ, ಅನೇಕ ತಿನ್ನುವ ಅಣಬೆಗಳಾದ ಬೇರಣಬೆ, ತುಪ್ಪದ ಅಣಬೆ, ಅರಿಕ್ಯುಲೇರಿಯಾ, ಇತ್ಯಾದಿ ಜಾತಿಗಳನ್ನು ಸ್ವಾಭಾವಿಕವಾಗಿ ಕಾಣಬಹುದಾಗಿದೆ.

**11. ಹಾಲಣಬೆ :** ಇದು ಅನೇಕ ರೀತಿಯ ಸಾವಯವ ವಸ್ತುಗಳ ಮೇಲೆ ಬೆಳೆಯಬಲ್ಲದು. ಇದು ಇತ್ತೀಚೆಗೆ ಜನಪ್ರಿಯ ವಾಣಿಜ್ಯ ಅಣಬೆಯಾಗಿದೆ. (*)

**ಅಣಬೆ ಸೋಂಕುಗಳು :** ಮಾನವನಲ್ಲೂ ಪ್ರಾಣಿಗಳಲ್ಲೂ ಐವತ್ತಕ್ಕೂ ಮೀರಿದ ಬಗೆಗಳ ಅಣಬೆ (ಬೂಜು, ಬೂಷ್ಟು, ಶಿಲೀಂಧ್ರ) ಗಳಿಂದ ಸೊಂಕುರೋಗಗಳು ಕಾಣಿಸಿ ಕೊಳ್ಳುತ್ತವೆ. ಚರ್ಮ, ಕೂದಲು ಉಗುರುಗಳ ಮೇಲ್ಮೇಲಿನ ಸೊಂಕುಗಳು ಚರ್ಮಜೀವಿಸಸಿ ಬೇನೆಗಳು (ಡರ್ಮಟೋಫೈಟೋಸಸ್) ಎಂದೂ ಇನ್ನೂ ಆಳದ ಕಣಜಾಲಗಳಲ್ಲೂ

ಅಂಗಗಳಲ್ಲೂ ಆಗುವುವು ಅಣಬೇನೆಗಳು (ಮೈಕೋಸಸ್) ಎಂದೂ ಹೆಸರಾಗಿವೆ. ಬಹುಮಟ್ಟಿಗೆ ಈ ಅಣಬೇನೆಗಳೆಲ್ಲ ನಿರಪಾಯಕರವಾದುವು. ಆದರೂ ಕೆಲವು ಮಾರಕ. ಏಕಾಣುಜೀವಿಗಳಿಂದಾದ ರೋಗಗಳಲ್ಲಿ ಬಳಸುವ ಎಂದಿನ ಸಾಮಾನ್ಯ ಜೀವಿರೋಧಕಗಳು (ಆ್ಯಂಟಿಬಯಾಟಿಕ್ಸ್) ಅಣಬೆಗಳ ಎದುರಾಗಿ ಚಿಕಿತ್ಸೆಗೆ ಬಾರದಿದ್ದರೂ ಅಣಬೆಗಂತಿಗಳಲ್ಲಿ (ಮೈಸಿಟೋಮಾಸ್) ಕೆಲವಕ್ಕೆ ಸಲ್ಫ ಮತ್ತು ಸಲ್ಫೋನು ಮದ್ದುಗಳಿಂದ ಚಿಕಿತ್ಸೆ ಆಗುತ್ತಿದೆ. ಮೈಯೊಳಗಿನ ಕೆಲವು ಅಣಬೇನೆಗಳು ಆಂಟೆರಿಸಿನ್ ಬಿ ಇಂದ ವಾಸಿಯಾಗಿವೆ. ಜಗ್ಗದಿರುವ ಚರ್ಮಜೀವಿಸಸಿಗಳಲ್ಲಿ ಕೆಲವಂತೂ ಜೀವಿರೋಧಕವಾದ ಗ್ರಿಸಿಯೊಫಲ್ವಿನ್‌ನಿಂದ ಗುಣವಾಗಿವೆ.

**ಮೇಲ್ಮೇಲಿನ ಸೋಂಕುಗಳು :** ಚರ್ಮದ ತೀರ ಹೊರಗಣ ಕೊಂಬಿನಂಥ ಪದರದ ಪ್ರೋಟೀನಾದ ಕೊಂಪೊರೆಗದಿಂದ (ಕೆರ‍್ಯಾಟಿನ್) ಪುಷ್ಟಿಗೊಳ್ಳುವ ಅಣಬೆಗಳ ಒಂದು ಗುಂಪಾದ ಚರ್ಮಜೀವಿಸಸಿಗಳ ಸುಮಾರು 20 ಜಾತಿಗಳಲ್ಲಿ ಯಾವುದರಿಂದಲಾದರೂ ಚರ್ಮಜೀವಿಸಸಿಬೇನೆ ಹತ್ತಬಹುದು. ಹುಳುಕಡ್ಡಿ (ಗಜಕರ್ಣ) ಒಂದು ಸಾಮಾನ್ಯ ಚರ್ಮಜೀವಿಸಸಿ. ಸಾಮಾನ್ಯವಾಗಿ ಇನ್ನೊಬ್ಬರಿಂದಲೋ ಬೆಕ್ಕು, ನಾಯಿ, ಕುದುರೆ, ದನಗಳಿಂದಲೋ ಬರುವ ಅಂಟುರೋಗವಿದು. ಮಕ್ಕಳಲ್ಲಿ ಏಳುವ ಸಾಂಕ್ರಾಮಿಕ ರೂಪದ ನೆತ್ತಿಯ ಮೇಲಿನ ಹುಳುಕಡ್ಡಿಗೆ ಒಂದು ಬಗೆಯ ಮಿಣಿಬೀಜಕಣ (ಮೈಕ್ರೊಸ್ಪೊರಾನ್) ಕಾರಣ. ಹುಳುಕಡ್ಡಿಯ ವಿಪರೀತ ರೂಪವಾದ ಹುಟ್ಟಿ ಸಿಪ್ಪು (ಫೇವಸ್) ದೊಡ್ಡವರಲ್ಲೂ ಮಕ್ಕಳಲ್ಲೂ ಕಾಣಿಸಿಕೊಳ್ಳುತ್ತದೆ. ಇದರ ಚಿಕಿತ್ಸೆ ಆಗದಿದ್ದರೆ ಸಾಯುವ ತನಕ ಇರಬಹುದು. ಅಂಗಸಾಧಕನ ಪಾದ (ಅಥ್ಲೆಟ್ಸ್ ಫುಟ್) ಕೂದಲ ಜೀವಿಸಸಿ, ಮೇಲ್ಚರ್ಮಜೀವಿಸಸಿಗಳ ಜಾತಿಗಳಿಂದಾಗುವ ಸೋಂಕು. ಎಳೆತನ ದಾಟಿದವರಲ್ಲಿ ಕಾಣುವುದಿದು. ಎಳೆಯ ಹುಡುಗರಲ್ಲಿ ಅನೇಕ ವೇಳೆ ಕಾಣುವ ತೊಡೆಸಿಬ್ಬಿಗೂ ಅದೇ ರೋಗಾಣುವಿನ ಇನ್ನೊಂದು ಬಗೆ ಕಾರಣ. ಚರ್ಮದ ಮೇಲ್ಮೇಲಿನ ಸೋಂಕಿಗೆ ಕಾರಣವಾದ ಒಂದು ಬಗೆಯ ಸಿಬ್ಬು ಹಲಬಣ್ಣದ ಹೊದರೊಟ್ಟಿಗೆ (ಪಿಟರಿಯಾಸಿಸ್ ವರ್ಸಿಕಲರ್) ಕಾರಣವಾದ ಜೀವಾಣು ಮೈ ಚರ್ಮದ ಬಣ್ಣ ಕೆಡಿಸುತ್ತದೆ.

ಬಿಳಿಚ ಕಾಂತಿಕದಿಂದ (ಕ್ಯಾಂಡಿಡ ಆಲ್ಬಿಕಾನ್ಸ್) ಆಗುವ ಕಾಂತಿಕಬೇನೆಗಳಾದ (ಕ್ಯಾಂಡಿಡಿಯಾಸಿಸ್) ಮಣಿಮಾಲಣಬೇನೆ (ಮೊನಿಲಿಯಾಸಿಸ್), ಹುಗುಳು (ತ್ರಷ್) ಇವು ಲೋಳೆಯ ಪೊರೆಗಳ ಚರ್ಮದ ಮಡಿಕೆಗಳಲ್ಲಿ ಕಾಣಿಸಿಕೊಳ್ಳುವ ಸೋಂಕುಗಳು. ಬಸಿರಿನಲ್ಲಿ ಯೋನಿಯ ಕಾಂತಿಕಬೇನೆಯಾಗೂ ಹಸುಗೂಸುಗಳಲ್ಲಿ ಬಾಯಿಯ ಹುಗುಳಾಗೂ ಇದು ತಲೆದೋರುವುದು. ಇದು ಮೈಗೆಲ್ಲ ಹತ್ತುವುದು ಅಪರೂಪ. ಪುಪ್ಪುಸ ರೋಗಿಗಳ ಉಗುಳಲ್ಲೂ ಎಲ್ಲರ ಕರುಳುಗಳಲ್ಲೂ ಈ ಅಣಬೆಗಳು ಸಾಮಾನ್ಯವಾಗಿ ಇದ್ದೇ ಇರುವುವು. ಬೇರೆ ಬೇರೆ ರೋಗಗಳಲ್ಲಿ ಬಹಳ ಕಾಲ ಹೆಚ್ಚುಹೆಚ್ಚಾಗಿ ರೋಗಿಗಳಿಗೆ ಚಿಕಿತ್ಸೆಗಾಗಿ ಜೀವಿರೋಧಕಗಳನ್ನು ಕೊಡುತ್ತಲೇ ಇದ್ದರೆ, ಕರುಳು ಮತ್ತಿತರ ಅಂಗಗಳಲ್ಲಿ ಕಾಂತಿಕಬೇನೆಯಾಗಲು ಇದು ಬಲು ಸಾಮಾನ್ಯ ಕಾರಣ.

ದನಗಳಲ್ಲೂ ಮಾನವನಲ್ಲೂ ಕಾಣಬರುವ ಕಿರಣ ಬೇನೆಗೆ (ಆಕ್ಟಿನೊಮೈಕೋಸಿಸ್), ಕಾರಣ ಕಿರಣಬೆವರ್ಗದ ಜೀವಾಣುಗಳು. ಈ ರೋಗ ಚರ್ಮ, ದವಡೆಯ ಚರ್ಮದಡಿಯ ಕಣಜಾಲಗಳು, ದವಡೆಲುಬುಗಳಲ್ಲೂ (ಗಲ್ಲಕಟ್ಟು, ಲಂಪಿ ಜಾ), ಪುಪ್ಪುಸಗಳು ಕರುಳವಾಳ, ಈಗಲಿಗಳಂಥ ಒಳಾಂಗಗಳಲ್ಲೂ ಕಾಣುತ್ತದೆ. ಗಟ್ಟಿಯಾಗಿ ಊದಿಕೊಂಡು ಈ ಅಣಬೆಯ ಕಿರಿಯ ತಂಡಗಳಿರುವ, ಕೀವು ಸುರಿಸುವ, ಬಟವೆ ನಾಳಿಗಳು (ಸೈನಸ್ ಟ್ರಾಕ್ಟ್ಸ್) ಆಗುವುದು ಇದರ ವಿಶೇಷ ಲಕ್ಷಣ. ಆರೋಗ್ಯವಂತರಲ್ಲಿ ಮೆಂಡಿಕೆಗಳಲ್ಲೂ ಹಲ್ಲುಗಳ ಮೇಲೂ ಈ ಅಣಬೆ ಇರುವುದರಿಂದ ಹಲ್ಲು ಪಾಲನೆ ಕೆಟ್ಟಿದ್ದರೆ, ಕಿತ್ತಾಗ ಕೆಲವೇಳೆ ಸೋಂಕು ಕಾಣಿಸಿ ಕೊಳ್ಳಬಹುದು.

**ಮೈಗೂಡುವ ಅಣಬೇನೆಗಳು :** ಯಾವ ರೋಗವನ್ನೂ ತೋರದೆಯೇ ಮೈಮೇಲಿರುವ ಅಣಬೆಗಳಿಂದ ಕೆಲವು ಸಂದರ್ಭಗಳಲ್ಲಿ ಮೇಲ್ಮೇಲಿನ ಸೋಂಕುಗಳಾಗುವುವು. ಇದರೆದುರಾಗಿ, ಇನ್ನೂ ಕಟ್ಟುನಿಟ್ಟಾದ ಮೈಗೂಡಿದ ಅಣಬೇನೆಗಳಿಗೆ ಕಾರಣವಾಗುವ ಬಹುಪಾಲು ಅಣಬೆಗಳು ಮಾನವನ ಒಳಗಾಗಲಿ ಮೈಮೇಲಾಗಲಿ ಇರದೆ, ಮಣ್ಣಿನಲ್ಲೂ ಕೊಳೆವೆ ಜೀವಿಕ ಕಸ, ಕೊಳಕಿನಲ್ಲೂ ಬಿಡಿಯಾಗಿ ಉಳಕಲಜೀವಿ ಸಿಸಿಗಳಾಗಿ (ಸ್ಯಾಪ್ರೊಫೈಟ್ಸ್) ಬೆಳೆದು ಬದುಕುಳಿದಿರುತ್ತವೆ. ಇದರಿಂದಾಗಿ, ಅನೇಕ ವೇಳೆ ಇವು ಮಾನವನಿಗೂ ಹತ್ತುವುದು ಹೆಚ್ಚಲ್ಲ. ಸೋಂಕು ಹತ್ತುವ ಸಂದರ್ಭಗಳು ಪೂರ್ತಿ ಗೊತ್ತಿಲ್ಲದಿದ್ದರೂ ಗಾಳಿಯಲ್ಲಿ ತೇಲಿಬರುವ ಬೀಜಕಣಗಳನ್ನು (ಸ್ಪೋರ್ಸ್) ಉಸಿರಲ್ಲಿ ಎಳೆತ, ಬಾಯಿ ಸೇವನೆ, ಇಲ್ಲವೇ ಗಾಯಗಳಾದಾಗ ಚರ್ಮದಲ್ಲಿ ಅಣಬೆಯ ಒಳಸೇರಿಕೆ, ಇವು ಅಂಥ ಹಲವಾರು ಸಂದರ್ಭಗಳು. ಪುಪ್ಪುಸದ ಅಣಬೇನೆಗಳಲ್ಲಿ ಸೋಂಕಿಗೆ ಹೆಚ್ಚಾಗಿ ಒಡ್ಡಿದಷ್ಟೂ ರೋಗವೂ ಉಗ್ರವಾಗಿರುವುದು. ಈ ಸೋಂಕನ್ನು ತಡೆವುದರಲ್ಲೂ ಈಡಾಗುವುದರಲ್ಲೂ ಒಬ್ಬೊಬ್ಬನೂ ಒಂದೊಂದು ತೆರ. ತುಸು ಬೇನೆ ಬಿದ್ದು ಚೇತರಿಸಿಕೊಂಡ ಮೇಲೆ ಮತ್ತೆ ಸೋಂಕು ಹತ್ತುವುದು ಅಪರೂಪ.

ಕಾಯ್ಬೀಜಾಣಣಬೇನೆ (ಕಾಕ್ಸಿಡಿಯಾಯ್ಡೊಮೈಕೋಸಿಸ್) ಎರಡು ತೆರನಾಗಿ ಕಾಣಿಸಿಕೊಳ್ಳಬಹುದು. ಕಣಿವೆ ಜ್ವರವೆಂಬ ಕೂರಾದರೂ ಮೆಲುಪಿನ ಪುಪ್ಪುಸದ ಸೋಂಕಾಗಬಹುದು. ಇಲ್ಲವೇ ಕಾಯ್ಬೀಜಾಣುವಿನ ಹರಳಗಂತಿ (ಗ್ರಾನ್ಯುಲೋಮ) ಎಂಬ ಎಲ್ಲೆಲ್ಲೂ ಹರಡಿ ಹೆಚ್ಚಿಕೊಳ್ಳುವ ಹರಳಗಂತಿಯಂಥ ರೋಗವಾಗಿರಬಹುದು. ಕೆರಳಿಕ ಕೇಂದ್ರದ ಸುತ್ತಲೂ ಮುಖ್ಯವಾಗಿ ಹರಳಂಥ ಕಣಜಾಲವಿರುವ ಬೆಳೆತಗಳೇ ಹರಳಗಂತಿಗಳು. ಪುಪ್ಪುಸದ ಸೋಂಕು ಇದರ ಮೂಲ. ಬೇನೆಯ ಮೊದಲಲ್ಲಿ ಇದು ಪುಪ್ಪುಸದ ಕ್ಷಯವನ್ನು ಹೋಲುತ್ತದೆ. ಸಾಮಾನ್ಯವಾಗಿ ರೋಗಿಯ ರೋಗತಡೆವ ಬಲದಿಂದ ಕೊನೆಗೆ ರೋಗ ನೀಗುತ್ತದೆ. ಆದರೆ ಕರುಳುಗಳ ಹೊರತು ಯಾವ ಅಂಗಗಳಿಗಾದರೂ ಇದು ತಟ್ಟಬಹುದು. ಅಮೆರಿಕಗಳ ನಡುಪ್ರದೇಶಗಳಲ್ಲಿ ಈ ರೋಗ ಸಾಮಾನ್ಯ. ಈ ಅಣಬೆ ಮಣ್ಣಿನಲ್ಲಿ ಇರುತ್ತದೆ. ನಾಯಿ, ಇಲಿ, ದನ, ಮನುಷ್ಯರಲ್ಲೂ ರೋಗಕ್ಕೆ ಇದೇ ಕಾರಣ.

ಜಾಲಮಾಟಕಣದ (ಹಿಸ್ಟೊಪ್ಲಾಸ್ಮ) ಒಂದು ಬಗೆಯಿಂದಾಗುವ ಜಾಲಮಾಟಕಣತೆ (ಹಿಸ್ಟೊಪ್ಲಾಸ್ಮೋಸಿಸ್) ಕೂಡ ಪುಪ್ಪುಸದ ಕೂರಾದ ರೋಗವಾದರೂ ತಂತಾನಾಗಿ ಇಳಿದುಹೋಗುವುದು. ಆದರೆ ಕೆಲವೇಳೆ ತೊರಳೆ (ಗುಲ್ಮ), ಈಲಿ, ಹಾಲುರಸಗಂಟುಗಳು ಮತ್ತಿತರ ಅಂಗಗಳಿಗೆ ಸೋಂಕುಹತ್ತಿಸಿ ಸಾಯಿಸಲೂಬಹುದು. ಪುಪ್ಪುಸದಲ್ಲಿ ವಾಸಿಯಾದ ಅಂಗಾಯಗಳಲ್ಲಿ (ಲೀಷನ್ಸ್) ಸುಣ್ಣ ಸೇರಿಕೊಂಡಾಗ, ಕ್ಷಯವೆಂದು ತಪ್ಪು ತಿಳಿಯಬಹುದು. ಕೆಲವು ನಾಡುಗಳಲ್ಲಿ ಇದು ಜಗ್ಗದೆ ನೆಲೆಸಿರುವುದು. ಹಲವೇಳೆ ಬೆಕ್ಕು, ನಾಯಿ, ಮತ್ತಿತರ ಪ್ರಾಣಿಗಳಿಗೂ ಹತ್ತಬಹುದು. ಮಣ್ಣು, ಗೊಬ್ಬರ, ಕಚಡ ಗುಂಡಿಗಳಲ್ಲೂ ಕೋಳಿಗಳ, ಬಾವಲಿಗಳ ಇಕ್ಕೆಗಳಲ್ಲೂ ಈ ಅಣಬೆ ಜೀವಾಣು ಇರಬಹುದು.

ಉತ್ತರ ಅಮೆರಿಕದ ನನೆಯಣಬೇನೆ (ಬ್ಲಾಸ್ಟೊಮೈಕೋಸಿಸ್) ಚರ್ಮ, ಪುಪ್ಪುಸಗಳು, ಮತ್ತಿತರ ಅಂಗಗಳಿಗೆ ಹತ್ತುತ್ತದೆ. ದಕ್ಷಿಣ ಅಮೆರಿಕದ ಬಗೆಯದು ಚರ್ಮ, ಲೋಳೆಪೊರೆಗಳ ಹಾಲುರಸ ಗಂಟುಗಳು, ಕರುಳುಗಳಿಗೆ ಹತ್ತುವ ಹರಳಗಂತಿಯ ರೋಗ. ಬಹಳ ಮಂದಿ ಇದರಿಂದ ಸಾಯುವರು. ಇದರ ಅಣಬೆಯ ಬೀಜಕಣಗಳು ಹೊಟೆಗೆ ಸೇರುವುದರಿಂದ ರೋಗ ಏಳುತ್ತದೆ.

ಸಾಮಾನ್ಯವಾಗಿ ಕೆಮ್ಮಿನಿಂದ ಆರಂಭವಾಗುವ ಹುದುಗುಮಣಿಯಣಬೇನೆ (ಟೊರುಲೋಸಿಸ್; ಮೋಟುಕಾಯ್ಬೀವಿಬೇನೆ; ಕ್ರಿಪ್ಟೊಕಾಕೋಸಿಸ್) ರೋಗ ಮೋಟು ಕಾಯ್ಬೀವಿ ಬಗೆಯೊಂದರಿಂದ ಬಂದು, ಸಾಮಾನ್ಯವಾಗಿ ಮಿದುಳು, ಬೆನ್ನು ಹುರಿಗಳ ಪದರಗಳ ಉರಿತವಾಗುತ್ತದೆ. ಅಲ್ಲದೆ ಚರ್ಮ, ಮೂಳೆಗಳು, ಒಳಾಂಗಗಳಿಗೂ ಬೇನೆ ತಪ್ಪಿದ್ದಲ್ಲ. ಪ್ರಪಂಚದಲ್ಲಿ ಎಲ್ಲೆಲ್ಲೂ ಹರಡಿರುವ ರೋಗವಿದು. ಉಳಿದ ರೋಗಾಣುಗಳಂತೆ, ಮೈಯಲ್ಲಿ ಯಾವ ಪ್ರತಿಕ್ರಿಯೆಯನ್ನೂ ಏಳಿಸದು. ಮಣ್ಣಿನಲ್ಲೂ ಪಾರಿವಾಳದ ಹಿಕ್ಕೆಯಲ್ಲೂ ಇವು ಕಂಡುಬಂದಿವೆ. ಸೋಂಕಿನ ಇನ್ನಾವ ಮೂಲವೂ ತಿಳಿದಿಲ್ಲ. ಮೈಗೆ ಹತ್ತುವ ಉಳಿದೆಲ್ಲ ಬೇನೆಗಳಂತೆ ಇದು ಅಂಟುವ ರೋಗವಲ್ಲ.

ಬೇರೂರಿ ನಿಧಾನವಾಗಿ ಹರಡುವ ಹರಳಗಂತಿಯಂಥ ರೋಗ ಬಣ್ಣನನೆಯಣ ಬೇನೆ (ಕ್ರೋಮೊಬ್ಲಾಸ್ಟೊಮೈಕೊಸಿಸ್). ಸಾಮಾನ್ಯವಾಗಿ ಕಾಲುಗಳ ಚರ್ಮ, ಚರ್ಮದಡಿಯ ಕಣಜಾಲಗಳಲ್ಲಿ ಕಾಣುತ್ತದೆ. ಬರಿಗಾಲಲ್ಲಿ ಅಡ್ಡಾಡುವಾಗ ಕಲ್ಲು ಮುಳ್ಳು ತಗುಲಿ ಈ ಅಣಬೇನೆ ಹತ್ತಬಹುದು.

**ಅಣಬೆಗಂತಿಗಳು :** ಸೋಂಕು ಹತ್ತಿರುವ ಮುಳ್ಳು, ಸಿಬರುಗಳು ಚುಚ್ಚಿದಾಗ ಬೀಜ ಕಣಗಳು ಒಳಹೊಕ್ಕು ನೆಡುವುದರಿಂದಾಗುವ ಒಂದೇ ತೆರನಾಗಿ ತೋರುವ ಕಿರಣಬೇನೆವರ್ಗ ಮತ್ತು ಅಣಬೆಗಳ ಸುಮಾರು 15 ಜಾತಿಗಳಿಂದ ಏಳುವ ರೋಗ ತಂಡಗಳಿವು. ಸಾಮಾನ್ಯವಾಗಿ ಮೈಗೆ ಮುಳ್ಳು ತಗಲುವೆಡೆಗಳಲ್ಲೆಲ್ಲ ಇದರ ಸೋಂಕೇಳುವುದು. ಪಾದಗಳಲ್ಲಿ ಏಳುವುದು ತೀರ ಸಾಮಾನ್ಯ. ಊದಿಕೊಂಡು ಗಂಟುಗಂಟಾಗಿ ಮೂಳೆಯೂ ಸೇರಿದಂತೆ ಕಣಜಾಲಗಳು ಹಾಳಾಗಿ, ಹುಣ್ಣಿನಿಂದ ಕೀವು ಸುರಿಸುವ ನಾಳಿಗಳು, ಈ ಅಣಬೆಯ ದಟ್ಟ ತಂಡಗಳಾದ ರವೆಗಾಳುಗಳು ಕೀವಿನಲ್ಲಿರುವುದೂ ಇದರ ಲಕ್ಷಣಗಳು. ಆಯಾ ಜಾತಿಗೆ ತಕ್ಕಂತೆ ಈ ರವೆಗಾಳುಗಳ ಗಾತ್ರ, ಆಕಾರ, ಮೆತುವು, ಘನತ್ವ, ಬಣ್ಣಗಳು ಇರುತ್ತವೆ. ಸೋಂಕು ಅಕ್ಕಪಕ್ಕದ ಕಣಜಾಲಗಳಿಗೆ ಹರಡಿಕೊಂಡು ಬೇರೂರಿದ ಊನಯಿಸುವ ರೋಗ ತಲೆದೋರುತ್ತದೆ. ಸಹರಾ ಮರುಭೂಮಿಯ ಕೆಳಗಣ ಆಫ್ರಿಕದಲ್ಲಿ ಇದೊಂದು ವೈದ್ಯರ, ಆರೋಗ್ಯಪಾಲಕರ ಮುಖ್ಯ ಸಮಸ್ಯೆ. ಪ್ರಪಂಚದ ಬೇರೆಡೆಗಳಲ್ಲೂ ಉಂಟು. ನಮ್ಮಲ್ಲಿ ಇದಕ್ಕೆ ಮಧುರಾ ಪಾದವೆಂದು ಹೆಸರಿದೆ. (ಮದುರಣಬೇನೆ : ಮಧುರ ಮೈಕೋಸಿಸ್).

ಕೆಲವು ಬಗೆಯ ಕಿರಣಣಬೆ ವರ್ಗದವಿಂದ ಏಳುವ ಅಣಬೆಗಂತಿಗಳು ಸಲ್ಫ ಮತ್ತು ಸಲ್ಫೋನ್ ಮದ್ದುಗಳಿಗೆ ಮಣಿಯುತ್ತವೆ. ಆದರೆ ಮೂಳೆ ಮತ್ತಿತರ ಭಾಗಗಳೆಲ್ಲ ತಿಂದುಹೋಗಿ ಹಾಳಾಗುವ ತನಕ ರೋಗಿ ಆಸ್ಪತ್ರೆಗೆ ಕಾಲಿಡದ್ದರಿಂದ, ಆ ಅಂಗಭಾಗವನ್ನು ಕತ್ತರಿಸಿ ಹಾಕುವುದೊಂದೇ ಗುಣಕಾರಕ ಚಿಕಿತ್ಸೆ.

**ಕಡಲ್ಕಳೆಯಣಬೆ ಬೇನೆಗಳು:** ಸಿಹಿಮೂತ್ರದ ರೋಗಿಗಳಿಗೆ ಕಡಲ್ಕಳೆಯಣಬೆ ಬೇನೆಗಳು (ಫೈಕೊಮೈಕೋಸಸ್) ಹತ್ತಿ, ಮೊಗದ ಎಲುಗಳಿಗಳ (ಸೈನಸಸ್) ಮೂಲಕ ಮಿದುಳಿಗೂ ಹರಡಬಹುದು. ಕೆಲವು ಬಗೆಯ ಮೂಗಿನ ಹಲಗಾಲಿಗಳಿಗೂ (ಪಾಲಿಪ್ಸ್) ಕಾರಣವಾಗ ಬಹುದು.

(ಡಿ.ಪಿ.ಜೆ.)

**ಅಣಿಗೆ :** ಕಲಸಿದ ಕಾಂಕ್ರೀಟನ್ನು ಕಟ್ಟಡದ ನಾನಾ ಭಾಗಗಳಿಗೆ ಉಪಯೋಗಿಸುವಾಗ ಅದು ಪ್ರಥಮ ಸ್ಥಿರತೆಯನ್ನು ಪಡೆಯುವವರೆಗೂ ಕಾಂಕ್ರೀಟ್‌ನ ತಳಕ್ಕೆ ಮತ್ತು ಸುತ್ತಲೂ ಕೊಡುವ ಆಧಾರಕ್ಕೆ ಈ ಹೆಸರಿದೆ. ಸಾಮಾನ್ಯವಾಗಿ ಅಣಿಗೆಗಳನ್ನು (ಫಾರಂ ವರ್ಕ್) ಸುಲಭ ಬೆಲೆಯ ಮರದ ಹಲಗೆಗಳಿಂದ ತಯಾರಿಸುತ್ತಾರೆ. ಮರದ ಹಲಗೆಗಳು ಪೂರ್ತಾ ಹಸಿಯಾಗಿರಬಾರದು ಅಥವಾ ಒಣಗಿರಬಾರದು. ಇಂಥ ಹಲಗೆಗಳನ್ನು ತೆಗೆದುಕೊಂಡು ಕಟ್ಟುವ ಕಟ್ಟಡದ ರೂಪವನ್ನು ಅನುಸರಿಸಿ ಅಣಿಗೆಗಳನ್ನು ತಯಾರಿಸುತ್ತಾರೆ. ಹಲಗೆಯ ದಪ್ಪ ಹಸಿ ಕಾಂಕ್ರೀಟ್‌ನ ಒತ್ತಡವನ್ನು ತಡೆಯುವಂತಿರಬೇಕು. ಸಾಮಾನ್ಯವಾಗಿ ಇದರ ದಪ್ಪ 1"–11/2" ವರೆಗೂ ಇರುತ್ತದೆ. ಅಣಿಗೆಯ ಒಳಭಾಗವನ್ನು ನುಣುಪಾಗಿಸಲು, ಒಳಗಡೆ ಸುತ್ತಲೂ ತಗಡಿನ ಪಟ್ಟಿಯನ್ನು ಹೊಡೆದಿರುತ್ತಾರೆ. ಮರದ ಅಣಿಗೆಗಳು ನಾಲ್ಕು ಸಾರಿ ಉಪಯೋಗಕ್ಕೆ ಬರುತ್ತವೆ.

ಈಚೆಗೆ ಅಣಿಗೆಗಳನ್ನು ಕಬ್ಬಿಣದ ತಗಡಿನಿಂದ ತಯಾರಿಸುತ್ತಾರೆ. ಇಂಥ ಅಣಿಗೆಗಳಿಂದ ಕರಾರುವಾಕ್ಕಾದ ತೂಕ, ಗಾತ್ರದ ಕಾಂಕ್ರೀಟ್ ಭಾಗಗಳನ್ನು ಪಡೆಯಬಹುದು. ಅದೂ ಅಲ್ಲದೆ ಇವುಗಳನ್ನು ಬಹಳ ಸಾರಿ ಉಪಯೋಗಿಸಬಹುದು.

ಅಣಿಗೆಗಳನ್ನು ತಳಪಾಯ, ತೊಲೆ, ಗೋಡೆಗಳು, ಕಂಬಿಗಳು, ಮೇಲ್ಛಾವಣಿಗಳು ಮತ್ತು ಅಂತಸ್ತಿನ ಕಟ್ಟಡಗಳಲ್ಲಿ ಕಾಂಕ್ರೀಟನ್ನು ಹಾಕುವಾಗ ಉಪಯೋಗಿಸುತ್ತಾರೆ. ಕಾಂಕ್ರೀಟ್ ಪೂರ್ಣ ಸ್ಥಿರತೆಯನ್ನು 21 ದಿನಗಳ ಕಾಲಾವಧಿಯ ಅನಂತರ ಪಡೆದಾಗ ಅಣಿಗೆಗಳನ್ನು ತೆಗೆದು ಬೇರೆ ಕಡೆಗಳಲ್ಲಿ ಉಪಯೋಗಿಸುತ್ತಾರೆ. (ಜಿ.ಟಿ.ಜಿ.)

**ಅಣಿಮೀನು :** ಕ್ಲಾರಿಯಿಡೆ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಮೀನಿನ ಸಾಮಾನ್ಯ ಹೆಸರು. ಇದರ ವೈಜ್ಞಾನಿಕ ನಾಮ ಕ್ಲೇರಿಯಸ್ ಬ್ಯೂಟ್ರಾಕಸ್. ಮೀಸೆ ಮೀನುಗಳ ಸಂಬಂಧಿ. ಬೆನ್ನಿನ ಈಜು ರೆಕ್ಕೆ ಬಹಳ ಉದ್ದವಾಗಿದ್ದು 62 ರಿಂದ 76 ಕದಿರುಗಳಿವೆ. ತೋಳಿನ ಈಜುರೆಕ್ಕೆಯಲ್ಲಿ ಒಂದು ಬಲವಾದ ಮುಳ್ಳು ಮತ್ತು 8 ರಿಂದ 11 ಕದಿರುಗಳಿವೆ. ನಡುವಿನ ಈಜು ರೆಕ್ಕೆಯಲ್ಲಿ 6, ಗುದದ ಈಜು ರೆಕ್ಕೆಯಲ್ಲಿ 45 ರಿಂದ 58, ಬಾಲದ ಈಜುರೆಕ್ಕೆಯಲ್ಲಿ 15 ರಿಂದ 17 ಕದಿರುಗಳಿವೆ. 4 ಜೊತೆ ಮೀಸೆ (ಬಾರ್ಬಲ್ಸ್) ಗಳಿವೆ. ಇದರ ಬೆನ್ನಿನ ಈಜುರೆಕ್ಕೆ ಉದ್ದವಾಗಿದೆ. ದೇಹ ತಲೆಗಿಂತ 5 ರಿಂದ 6 ರಷ್ಟು ಉದ್ದವಾಗಿದೆ. ತಲೆ ಸ್ವಲ್ಪ ಮಟ್ಟಿಗೆ ಚಪ್ಪಟೆಯಾಗಿದೆ. ಇದರ ಬಣ್ಣ ಕೆಂಪು ಮಿಶ್ರಿತ ಕಂದು ಅಥವಾ ಊದಾಮಿಶ್ರಿತ ಕಪ್ಪು. ಸು. 45 ಸೆಂಮೀ ಉದ್ದ ಬೆಳೆಯುತ್ತದೆ.

ಈ ಮೀನು ದೇಶದ ಎಲ್ಲ ಭಾಗಗಳಲ್ಲೂ ಸಿಗುತ್ತದಾದರೂ ಚೇಳುಮೀನಿನಂತೆ ವಿಶೇಷವಾಗಿ ಸಿಕ್ಕುವುದಿಲ್ಲ. ಇದು ಆಹಾರ ದೃಷ್ಟಿಯಿಂದ ಹೆಚ್ಚು ಪ್ರಸಿದ್ಧಿಯಾಗಿದ್ದು ಬಹು ಬೆಲೆಯುಳ್ಳದ್ದಾಗಿದೆ.

ಸಣ್ಣ ಅಕಶೇರುಕಗಳು, ನೀರಿನ ಕೀಟ, ಪಾಚಿಯವಸ್ತು, ಇದು ಆಹಾರವಾಗಿ ಬಳಸುತ್ತದೆ. ವಂಶಾಭಿವೃದ್ಧಿ ಏಪ್ರಿಲ್–ಜೂನ್ ತಿಂಗಳುಗಳಲ್ಲಿ, ಮರಿಗಳನ್ನು ಕೆರೆಯ ಅಂಚಿನ ಪ್ರದೇಶದಲ್ಲಿ ಹುಲ್ಲು ಬೆಳೆದಿರುವ ಚೌಗುಗಳಲ್ಲಿ ಶೇಖರಿಸಬಹುದು. ಇತ್ತೀಚೆಗೆ ಈ ಮೀನಿನ ಜೀವನಚರಿತ್ರೆಯ ಬಗ್ಗೆ ಸಾಕಷ್ಟು ಅಧ್ಯಯನ ಮಾಡಲಾಗುತ್ತಿದ್ದು ಇದರ ಕೃತಕ ಸಂತಾನೋತ್ಪತ್ತಿ ಮಾಡಿಸಿ ಮರಿಗಳನ್ನು ಉತ್ಪಾದಿಸಲು ಪ್ರಯತ್ನಿಸಲಾಗುತ್ತಿದೆ. ಇದು ಸ್ವಲ್ಪ ನಿಧಾನವಾಗಿ ಬೆಳೆಯತ್ತದಾದರೂ, ಉತ್ತಮ ಬೆಲೆ ಇರುವುದರಿಮದ ಸಾಕಾಣಿಕೆ ಮಾಡಬಹುದಾಗಿದೆ. **(ನೋಡಿ– ಮೀಸೆಮೀನು)** (ಬಿ.ಎನ್.)

**ಅಣು[1] : (ನೋಡಿ– ಅಣುಸಿದ್ಧಾಂತ).**

**ಅಣು[2] :** ಜೈನ ಸಿದ್ಧಾಂತದ ಪ್ರಕಾರ ಉತ್ಪತ್ತಿ, ಸ್ಥಿತಿ, ವಿನಾಶ ಈ ಮೂರು ಸ್ವಭಾವಗಳಿಂದ ಕೂಡಿದ ಅಜೀವತತ್ತ್ವದ ಅತಿಸೂಕ್ಷ್ಮ ಭಾಗಗಳಾದ ಕೆಲವು ಪರಮಾಣುಗಳು ಸೇರಿ ಅಣುಗಳು ರೂಪುಗೊಂಡಿವೆ. ಇಂಥ ಹಲವು ಅಣುಗಳು ಸೇರಿದಾಗ ಪುದ್ಗಲ ಸ್ಕಂಧ ಸಿದ್ಧವಾಗುತ್ತದೆ. ಈ ಪುದ್ಗಲ ಪರಮಾಣುಗಳಲ್ಲಿ ಗಮನಾಗಮನ ಕ್ರಿಯೆ ಇದೆ. ಪುದ್ಗಲ ಪರಮಾಣುಗಳು ಒಂದಕ್ಕೊಂದು ಸೇರುವುದು ಸಂಘಾತ. ಪುದ್ಗಲ ಸ್ಕಂಧ ಒಡೆದು ಅಣುಗಳು ಚದರುವುದೇ ಭೇದ. ಈ ಸಂಘಾತಭೇದಗಳು ಪುದ್ಗಲ ಅಣುವಿನ ಸ್ನಿಗ್ಧರೂಕ್ಷ ಸ್ವಭಾವದಿಂದ ಉಂಟಾಗುತ್ತವೆ. ಸ್ಕಂಧ ಒಡೆದು ಚದುರಿದ ಪುದ್ಗಲ ಪರಮಾಣುಗಳು ಅದೃಶ್ಯವಾಗಿರುತ್ತವೆ. ಆದ್ದರಿಂದಲೇ ಪುದ್ಗಲ ಅದೃಷ್ಟವೆಂದು ಜೈನಾಗಮಗಳಲ್ಲಿ ಹೇಳಿದೆ. ಇವುಗಳನ್ನು ಸೂಕ್ಷ್ಮದರ್ಶಕ ಯಂತ್ರದಿಂದಲೂ ಕಾಣಲಿಕ್ಕೆ ಸಾಧ್ಯವಿಲ್ಲ. ಈ ಪುದ್ಗಲಾಣುಗಳು ಜೀವಾಣುಗಳೊಡನೆ ಸೇರಿದಾಗ, ಭೌತವಸ್ತುಗಳು ಉತ್ಪನ್ನವಾಗುತ್ತವೆ. ಈ ಪ್ರತಿಯೊಂದು ಭೌತವಸ್ತುವೂ ಸಾಮಾನ್ಯವಾಗಿ ತನ್ನ ಲಕ್ಷಣವನ್ನು ಕಳೆದುಕೊಳ್ಳದೆ, ಬೇರೆ ಬೇರೆ ಪುದ್ಗಲ ಸ್ಕಂಧಗಳೊಡನೆ ಸಂಪರ್ಕ ಬೆಳೆಸಿ, ತನ್ನ ಶಕ್ತಿಯನ್ನೂ ಅಸ್ತಿತ್ವವನ್ನೂ ಪ್ರಕಟಿಸುತ್ತದೆ. ಇದರಿಂದ ವೈಚಿತ್ರ್ಯಪೂರ್ಣವಾದ ಈ ಸೃಷ್ಟಿ ರೂಪುಗೊಂಡಿದೆ. ಅಜೀವತತ್ತ್ವದಲ್ಲಿ ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಎಂದು ಐದು ವಿಧಗಳು. ಪುದ್ಗಲಾಣುವಿನಲ್ಲಿ ಮೂರ್ತಿತ್ವವಿದೆ. ರೂಪ, ರಸ, ಗಂಧ ಹಾಗೂ ಸ್ಪರ್ಶದಿಂದ ನಮಗೆ ಇದರ ಅರಿವು ಆಗುತ್ತದೆ. ಪುದ್ಗಲಾಣು ಜೀವಾಣುವಿನೊಡನೆ ಸೇರಿದಾಗ ಆಗುವ ಕರ್ಮಾಣುವನ್ನು ಒಂದು ದ್ರವ್ಯವೆಂದು ಸ್ವೀಕರಿಸಿದ್ದು ಜೈನದರ್ಶನದ ವೈಶಿಷ್ಟ್ಯ. ಅಣುಸ್ಕಂಧ, ಅಣು, ಪರಮಾಣು ಇವು ಪುದ್ಗಲದ್ರವ್ಯದ ಸೂಕ್ಷ್ಮಾತಿಸೂಕ್ಷ್ಮತರ ಭಾಗಗಳು. (ಎಂ.ಎ.)

**ಅಣುಚಲನವಾದ, ವಸ್ತುವಿನ :** ವಸ್ತು ಅಣುರೂಪದಲ್ಲಿದೆ ಮತ್ತು ಅಣುಗಳ ಯಾದೃಚ್ಛಿಕ ಚಲನೆಯ ರೂಪ ಉಷ್ಣ–ಎಂಬ ಎರಡು ಆಧಾರ ಕಲ್ಪನೆಗಳ ಸಹಾಯದಿಂದ ವಸ್ತುವಿನ ಸಮಗ್ರ ರಚನೆಯನ್ನು ವಿವರಿಸುವ ವಾದ (ಕೈನೆಟಿಕ್ ಥಿಯೊರಿ ಆಫ್ ಮ್ಯಾಟರ್). ಅನಿಲಗಳ ಅಣುಚಲನವಾದ, ದ್ರವಗಳ ಅಣುಚಲನವಾದ ಮತ್ತು ಘನಪದಾರ್ಥಗಳ ಅಣುಚಲನವಾದ ಎಂಬ ಮೂರು ಹಂತಗಳಲ್ಲಿ ಈ ವಿಷಯವನ್ನು ಚರ್ಚಿಸಲಾಗುತ್ತದೆ.

ಅನಿಲಗಳ ಅಣುಚಲನವಾದ : ಒತ್ತಡ (ಪ್ರೆಷರ್) ಅತಿಯಾಗಿಲ್ಲದೆ ಇರುವಾಗ, ಅಂದರೆ ಸಾಂದ್ರತೆ (ಡೆನ್ಸಿಟಿ) ತಗ್ಗಿನಮಟ್ಟದಲ್ಲಿರುವಾಗ ಅನಿಲಗಳು ಪಾಲಿಸುವ ಕೆಲವು ನಿಯಮಗಳನ್ನು ಅನೇಕ ಪ್ರಯೋಗ ಮತ್ತು ಪರೀಕ್ಷೆಗಳ ಆಧಾರದಿಂದ ನಿರ್ಧರಿಸಲಾಗಿದೆ. ಅವು ಹೀಗಿವೆ.

**1. ಬಾಯ್ಲ್ ನಿಯಮ :** ದ್ರವ್ಯ ರಾಶಿಯ (ಮಾಸ್) ಅನಿಲದ ಉಷ್ಣತೆ (ಟೆಂಪರೇಚರ್) ಸ್ಥಿರವಾಗಿರುವಾಗ ಒತ್ತಡವನ್ನು (p) ಮಾತ್ರ ಹೆಚ್ಚಿಸುತ್ತ ಹೋದರೆ ಅದರ ಘನಗಾತ್ರ (v) ಕುಗ್ಗಲಾರಂಭಿಸುವುದು. ಪ್ರತಿಯೊಂದು ಸಲವೂ p,v ಗಳು pv=ಸ್ಥಿರಾಂಕ ಎಂಬ ನಿಯಮವನ್ನು ಪಾಲಿಸುವುವು.

**2. ಚಾರ್ಲ್ಸ್ ನಿಯಮ :** ದ್ರವ್ಯರಾಶಿಯ ಅನಿಲದ ಒತ್ತಡ ಸ್ಥಿರವಾಗಿರುವಾಗ ಅದರ ಘನಗಾತ್ರ ನಿರಪೇಕ್ಷ ಉಷ್ಣತೆಗೆ ಅನುಪಾತೀಯವಾಗಿರುವುದು. ಇದನ್ನು $^{v}/_{t}$ = ಸ್ಥಿರಾಂಕ ಎಂದು ಬರೆಯಬಹುದು. ಗೇಲ್ಯುಸಾಕ್ ನಿಯಮವೆಂದರೂ ಇದೇ : ಸ್ಥಿರ ಗಾತ್ರದಲ್ಲಿ ಅನಿಲದ ಒತ್ತಡ (p) ನಿರಪೇಕ್ಷ ಉಷ್ಣತೆಗೆ (t) ಅನುಪಾತೀಯವಾಗಿರುವುದು. ಅಂದರೆ $^{p}/_{t}$ =ಸ್ಥಿರಾಂಕ ಈ ಮೂರು ನಿಯಮಗಳು ಆದರ್ಶ ಅನಿಲಗಳಿಗೆ ಮಾತ್ರ ಅನ್ವಯಿಸುತ್ತವೆ. ಒತ್ತಡ, ಗಾತ್ರ ಮತ್ತು ಉಷ್ಣತೆಗಳಲ್ಲಿ ವ್ಯತ್ಯಾಸವಾದಾಗ :

$$\frac{P_1V_1}{T_1} = \frac{P_2V_2}{T_2}$$

ಎಂದು ಬರೆಯಬಹುದು.

**3. ಡಾಲ್ಟನ್ ಆಂಶಿಕ ಒತ್ತಡಗಳ ನಿಯಮ :** ಒಂದು ಪಾತ್ರೆಯಲ್ಲಿ ಎರಡು ಅಥವಾ ಹೆಚ್ಚು ಅನಿಲಗಳಿದ್ದು ಅವು ರಾಸಾಯನಿಕನ್ನಡ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲವೆಂದು ಊಹಿಸ್ಕೋಣ. ಈ ಅನಿಲಗಳ ಎಲ್ಲಾ ಅಣುಗಳೂ ಪಾತ್ರೆಯ ಒಟ್ಟಾರೆ ಗಾತ್ರವನ್ನು ಆವರಿಸುತ್ತವೆ. ಅನಿಲಗಳ ಮಿಶ್ರಣದ ಒಟ್ಟು ಒತ್ತಡ ಆ ಮಿಶ್ರಣದ ಘಟಕ ಅನಿಲಗಳು ಒಂಟಿಯಾಗಿದ್ದಾಗ ಉಂಟುಮಾಡುವ ಆಂಶಿಕ ಒತ್ತಡಗಳ ಮೊತ್ತಕ್ಕೆ ಸಮನಾಗಿರುತ್ತದೆ. ಜಾನ್ ಡಾಲ್ಟನ್ (1766–1844) ಆವಿಷ್ಕರಿಸಿದ್ದರಿಂದ ಇದಕ್ಕೆ ಈ ಹೆಸರು ಬಂದಿದೆ.

**4. ಜೌಲ್ ನಿಯಮ :** ಈ ನಿಯಮದಂತೆ ಒಂದು ಅನಿಲದ ರಾಶಿ ಸ್ಥಿರವಾಗಿರುವಾಗ ಅದರಲ್ಲಿ ಅಡಕವಾಗಿರುವ ಶಕ್ತಿ ಅನಿಲದ ಘನಗಾತ್ರವನ್ನವಲಂಬಿಸಿರುವುದಿಲ್ಲ. ಗಾಳಿ ಹಿಗ್ಗಿ ಶೂನ್ಯ ಪ್ರದೇಶವನ್ನು ತುಂಬುವಂತೆ ಮಾಡಿದಾಗ ಅದರ ಶಕ್ತಿಯಲ್ಲಿ ಯಾವ ವ್ಯತ್ಯಾಸವೂ ಏರ್ಪಡುವುದಿಲ್ಲ. ಇಲ್ಲಿ ಅನಿಲದ ಉಷ್ಣತೆ ವ್ಯತ್ಯಾಸವಾಗುವುದಿಲ್ಲ. ಈ ಬಗೆಯ ಬದಲಾವಣೆಗಳನ್ನು ಸಮೋಷ್ಣತಾರೇಖೆಗಳ (ಐಸೋಥರ್ಮಲ್ಸ್) ನಕ್ಷೆಗಳಿಂದ ತೋರಿಸಬಹುದು.

**5. ಗೇಲ್ಯುಸಾಕ್ ನಿಯಮ :** ಅನಿಲಗಳು ರಾಸಾಯನಿಕವಾಗಿ ಪ್ರತಿಕ್ರಿಯಿಸಿದಾಗ ಅವುಗಳ ಘನಗಾತ್ರಗಳನ್ನೂ ಅನಿಲ ಸ್ಥಿತಿಯಲ್ಲಿ ಫಲಿಸುವ ವಸ್ತುಗಳ ಘನಗಾತ್ರಗಳನ್ನೂ ಒಂದೇ ಉಷ್ಣತೆ ಮತ್ತು ಒತ್ತಡಗಳಲ್ಲಿ ಅಳೆದಾಗ ಸರಳ ಅನುಪಾತೀಯವಾಗಿರುತ್ತವೆ. ಜೋಸೆಫ್ ಲೂಯಿ ಗೇಲ್ಯುಸಾಕ್ (1778–1850) ಗೌರವಾರ್ಥ ಈ ಹೆಸರು. **ನೋಡಿ: ಚಾರ್ಲ್ಸ್ ನಿಯಮ** ಉದಾ: 2 ಲೀಟರ್ ಜಲಜನಕ + 1 ಲೀಟರ್ ಆಮ್ಲಜನಕ = 2 ಲೀಟರ್ ನೀರಿನ ಆವಿ; 2 ಲೀಟರ್ ಜಲಜನಕ + 1 ಲೀಟರ್ ಕ್ಲೋರಿನ್ = 2 ಲೀಟರ್ ಹೈಡ್ರೊಕ್ಲೋರಿಕ್ ಆಮ್ಲ ಅನಿಲ.

**6. ಅವೊಗ್ಯಾಡ್ರೊ ನಿಯಮ :** ಉಷ್ಣತೆ ಮತ್ತು ಒತ್ತಡಗಳು ಒಂದೇ ಆಗಿರುವಾಗ ಎಲ್ಲ ಅನಿಲಗಳ ಸಮ ಘನಗಾತ್ರಗಳು ಸಮಸಂಖ್ಯೆಯ ಅಣುಗಳಿಂದ ಕೂಡಿರುತ್ತವೆ. ಇದು ಆದರ್ಶ ಅನಿಲಗಳ ವಿಷಯದಲ್ಲಷ್ಟೆ ಸತ್ಯ. ಕೌಂಟ್ ಅಮೆಡಿಯೊ ಅವೊಗ್ಯಾಡ್ರೊ (1776–1856) 1811 ರಲ್ಲಿ ಮೊದಲು ಪ್ರತಿಪಾದಿಸಿದ.

ಅವೊಗ್ಯಾಡ್ರೊ ನಿಯಮದ ಪ್ರಕಾರ, ಪರಮಾಣುಗಳ / ಅಯಾನ್‌ಗಳ / ಎಲೆಕ್ಟ್ರಾನ್‌ಗಳ ಸಂಖ್ಯೆ [ಯಾವುದೇ ಪದಾರ್ಥಗಳ 1 ಮೋಲ್‌ನಲ್ಲಿರುವ ಅಣುಗಳ / 1 ಮೋಲ್‌ನಲ್ಲಿನ ಅಣುಗಳ ಸಂಖ್ಯೆ $(6 \cdot 0248 \pm 0 \cdot 0002) \times 10^{23}$. **(ನೋಡಿ– ಪರಮಾಣುತೂಕ)**

ಎಲ್ಲ ಅನಿಲಗಳೂ ಒತ್ತಡ ಅತ್ಯಲ್ಪವಾಗಿರುವ ಸ್ಥಿತಿಯಲ್ಲಿ ವರ್ತಿಸುವ ರೀತಿಯನ್ನು ಈವರೆಗೂ ತಿಳಿಸಿರುವ ಸುಲಭರೂಪದ ನಿಯಮಗಳಿಂದ ವಿವರಿಸಬಹುದು. ಈ ಅನುಭವದಿಂದ ಇವೆಲ್ಲದರ ರಚನೆ ಬಹುಮಟ್ಟಿಗೆ ಒಂದೇ ರೀತಿಯಲ್ಲಿರುವುದು ಕಂಡುಬರುತ್ತದೆ.

ವಾಸ್ತವಿಕವಾಗಿ ಯಾವ ಅನಿಲವೂ ಚಾರ್ಲ್ಸ್ ಮತ್ತು ಬಾಯ್ಲ್ ನಿಯಮಗಳೆರಡನ್ನೂ ಕರಾರುವಕ್ಕಾಗಿ ಪಾಲಿಸುವುದಿಲ್ಲ. ಆದ್ದರಿಂದ ಈ ನಿಯಮಗಳನ್ನು ಕರಾರುವಕ್ಕಾಗಿ ಪಾಲಿಸುವ ಅನಿಲವೊಂದಿದೆ ಎಂದು ಭಾವಿಸಿ ಅದನ್ನು ಆದರ್ಶ ಅನಿಲ (ಐಡಿಯಲ್ ಗ್ಯಾಸ್) ಎಂದು ಕರೆಯುತ್ತೇವೆ. ಇಂಥ ಆದರ್ಶ ಅನಿಲದ ಅಭ್ಯಾಸದಿಂದ ಇದುವರೆಗೆ ವಿವರಿಸಿದ ನಿಯಮಗಳು ಹೇಗೆ ಹುಟ್ಟುತ್ತವೆ ಎಂದು ತಿಳಿಯುವುದು ಸಾಧ್ಯ.

**ಆದರ್ಶ ಅನಿಲದ ರಚನಾವಿಶೇಷ :** ಅನಿಲ ಗುಣಗಳನ್ನು ನಿರೂಪಿಸುವ ಮಾದರಿಯನ್ನು ನಾವು ತಯಾರಿಸುವಾಗ ರಾಸಾಯನಿಕ ದೃಷ್ಟಿಯಿಂದ ಕಾಣಬರುವ ವಿವಿಧ ಗುಣಗಳೊಂದಿಗೆ ಮತ್ತೊಂದು ಸಂಗತಿಯನ್ನು ನೆನಪಿನಲ್ಲಿಡಬೇಕು. ಉಷ್ಣ ಅಥವಾ ಶಾಖವನ್ನು ಒಂದು ವಿಧವಾದ ಶಕ್ತಿ (ಎನರ್ಜಿ) ಎಂದು ಸಾಮಾನ್ಯವಾಗಿ ಭಾವಿಸುತ್ತೇವೆ. ಪದಾರ್ಥದಲ್ಲಿನ ಎಲ್ಲ ಅಣುಗಳೂ ಸ್ಥಿರವಾಗಿರದೆ ರಭಸದಿಂದ ಚಲಿಸುತ್ತಿವೆ. ಈ ಕಾರಣದಿಂದ ಏರ್ಪಡುವ ಶಕ್ತಿಗೆ ಚಲನಶಕ್ತಿ (ಕೈನಟಿಕ್ ಎನರ್ಜಿ) ಎಂದು ಹೆಸರು. ನಾವು ಪರೀಕ್ಷಿಸುತ್ತಿರುವ ಅನಿಲದಲ್ಲಿರುವ ಬೇರೆಬೇರೆ ಅಣುಗಳ ಈ ಶಕ್ತಿಯನ್ನು ಒಟ್ಟುಗೂಡಿಸಿದರೆ ಅದರ ಒಟ್ಟು ಉಷ್ಣ ಸುಲಭವಾಗಿ ತಿಳಿಯುತ್ತದೆ.



**ಚಿತ್ರ 1. ಅಣುಚಲನವಾದ**

H ಏಕಮಾನದಷ್ಟು ಉಷ್ಣಶಕ್ತಿಯು W ಏಕಮಾನಗಳಷ್ಟು ಯಾಂತ್ರಿಕ ಶಕ್ತಿಯಾಗಿ ಪೂರ್ಣ ಪರಿವರ್ತನೆಗೊಂಡರೆ ಆಗ W=JH. ಇಲ್ಲಿ J ಉಷ್ಣದ ಯಾಂತ್ರಿಕ ಸಮಾನ. ಇದೊಂದು ಸ್ಥಿರಾಂಕ=$4.185\times10^7$ ಎರ್ಗ್ಸ್ / ಕ್ಯಾಲೊರಿ. ಪದಾರ್ಥಕ್ಕೆ ನಾವು ಉಷ್ಣವನ್ನು ಕೊಟ್ಟರೆ ಅದರಲ್ಲಿರುವ

ಶಕ್ತಿ ಹೆಚ್ಚುತ್ತದೆ. ಈ ಕಾರಣದಿಂದ ಅಣುಗಳೆಲ್ಲಾ ಹಿಂದೆ ಇದ್ದುದಕ್ಕಿಂತಲೂ ಹೆಚ್ಚು ವೇಗದಿಂದ ಚಲಿಸುತ್ತವೆ. ಇದಕ್ಕೆ ಪ್ರತಿಯಾಗಿ ಉಷ್ಣವನ್ನು ಕಳೆದುಕೊಂಡರೆ ಅದರ ಶಕ್ತಿ ಕುಂದಿ, ಅದರ ಅಣುಗಳ ಚಲನೆಯ ವೇಗ ಕಡಿಮೆಯಾಗುತ್ತದೆ.

ಅನಿಲದ ರಚನೆಯನ್ನು ನಾವು ಚಿತ್ರಿಸಿಕೊಳ್ಳುವಾಗ ಮಾಡುವ ಊಹೆಗಳು ಹೀಗಿರುತ್ತವೆ. 1 ಪ್ರತಿಯೊಂದು ಅಣುವೂ ಗೋಳಾಕಾರದ-ಗಟ್ಟಿಯಾದ, ಬಿಲಿಯರ್ಡ್ಸ್ ಎಂಬ ಆಟದಲ್ಲಿ ಉಪಯೋಗಿಸುವ ಗುಂಡುಗಳಂತಿವೆ. ಅಣುಗಳ ಸರಾಸರಿ ಅಂತರಕ್ಕೆ ಹೋಲಿಸಿದಾಗ ಇವು ಅತ್ಯಲ್ಪ ಗಾತ್ರದವೆಂದು ಪರಿಗಣಿಸಬಹುದು. ಈ ಅಣುಗಳು ನಿರಂತರ ಚಲಿಸುತ್ತಿರುತ್ತವೆ. ಒಂದಕ್ಕೊಂದು ಡಿಕ್ಕಿ (ಕೊಲಿಷನ್) ಹೊಡೆದಾಗ ಅಥವಾ ಒಂದು ಅಣು ಪಾತ್ರೆಯ ಗೋಡೆಗೆ ತಗುಲಿದಾಗ ಅದರ ವೇಗ ಸಾಮಾನ್ಯವಾಗಿ ಪರಿಮಾಣದಲ್ಲೂ ದಿಕ್ಕಿನಲ್ಲೂ ವ್ಯತ್ಯಸ್ತವಾಗುತ್ತದೆ. ಡಿಕ್ಕಿ ಹೊಡೆದಾಗ ಎರಡು ಅಣುಗಳು ಒಂದಕ್ಕೊಂದು ಅಂಟಿಕೊಳ್ಳುವ ಕಾಲದ ಪರಿಮಾಣ ತೀರ ಅಲ್ಪ. ಆದ್ದರಿಂದ ನಮ್ಮ ಮಾದರಿಯಲ್ಲಿ ಅಣುಗಳನ್ನು ಸೂಚಿಸುವ ಪ್ರತಿಯೊಂದು ಗುಂಡೂ ತನ್ನ ಆಯುಷ್ಯವನ್ನೆಲ್ಲಾ ಅತ್ತ ಇತ್ತ ಚಲನೆಯಲ್ಲಿ ಕಳೆಯುತ್ತದೆ. ಅನಿಲವನ್ನು ತುಂಬಿರುವ ಪಾತ್ರೆಯ ಅಳತೆ ಒಂದು ಲೀಟರ್ ಇದ್ದರೆ ಅಣುಗಳ ಒಟ್ಟಾರೆ ಘನಗಾತ್ರ 1 ಘನ ಮಿ ಮೀ ಗೂ ಕಡಿಮೆ ಇರುತ್ತದೆ.

ಈ ಅಣುಗಳು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಪರಸ್ಪರ ಶಕ್ತಿ ವರ್ಗಾವಣೆಯಾಗುತ್ತದೆ. ಆದರೆ ಒಟ್ಟು ಶಕ್ತಿ ಯಾವ ರೀತಿಯಲ್ಲೂ ಬದಲಾವಣೆ ಹೊಂದುವುದಿಲ್ಲ. ರಭಸವಾಗಿ ಬೀಸುವ ಗಾಳಿಯಿಂದ ಮರಳ ಕಣಗಳು ಒಂದು ಪದಾರ್ಥದ ಮೇಲೆ ಬೀಳುವಾಗ ಅದನ್ನು ಒತ್ತುತ್ತವೆ. ಹಾಗೆಯೇ ಈ ಅಣುಗಳು ಪಾತ್ರೆಯ ಗೋಡೆಗಳ ಮೇಲೆ ಸಂತತವಾಗಿ ಬಿದ್ದು ಪ್ರತಿಫಲಿತವಾಗುವುದರಿಂದ ಒತ್ತಡ ಉಂಟಾಗುತ್ತದೆ.

ಆದರ್ಶ ಅನಿಲದ ರಚನೆಯ ಹಿನ್ನೆಲೆಯಲ್ಲಿರುವ ಊಹೆಗಳನ್ನು ಆಧರಿಸಿ ಒಂದು ಅನಿಲದ ಒತ್ತಡವನ್ನು $p=\frac{1}{3}mn\overline{C}^2$ ಎಂಬ ಸಮೀಕರಣರೂಪದಲ್ಲಿ ಪಡೆಯಬಹುದು. ಇಲ್ಲಿ $m$ ಎಂಬುದು ಪ್ರತಿಯೊಂದು ಅನಿಲಾಣುವಿನ ರಾಶಿ ; $n$ ಎಂಬುದು 1 ಘ. ಸೆಂಮೀ ನಲ್ಲಿರುವ ಅಣುಗಳ ಸಂಖ್ಯೆ ; $\overline{C}^2$ ಎಂಬುದು ಅನಿಲಾಣುಗಳ ವೇಗಗಳ ವರ್ಗಗಳ ಸರಾಸರಿ (ಮೀನ್‌ಸ್ಕ್ವೇರ್ ವೆಲಾಸಿಟಿ) ಅಂದರೆ,

$$\overline{C}^2=\frac{c_1^{\,2}+c_2^{\,2}+\cdots\cdots+c_n^{\,2}}{n}$$

$c_1+c_2+\cdots\cdots+c_n$ ಎಂಬುದು ಅನಿಲಾಣುಗಳ ಒಂದೊಂದರ ವೇಗ.

$\sqrt{\overline{C}^2}$ ಎಂಬುದನ್ನು ವೇಗಗಳ ವರ್ಗಗಳ ಸರಾಸರಿಯ ವರ್ಗಮೂಲ (ರೂಟ್ ಮೀನ್ ಸ್ಕ್ವೇರ್ ವೆಲಾಸಿಟಿ) ಎನ್ನುತ್ತಾರೆ. ಹೀಗೆ ಅನಿಲಗಳ ಅಣುಚಲನವಾದ ಅಣುಗಳ ವರ್ತನೆಯನ್ನು ಕೆಲವು ಮೂಲಭೂತ ಊಹೆಗಳ ಆಧಾರದ ಮೇಲೆ ವಿವರಿಸುವುದು. ಈ ವಾದದಲ್ಲಿ ಲಭಿಸುವ ಫಲಿತಾಂಶಗಳ ಸಹಾಯದಿಂದ 1 ಬಾಯ್ಲ್, ಚಾರ್ಲ್ಸ್ ಮುಂತಾದ ವಿವಿಧ ನಿಯಮಗಳನ್ನು ಪಡೆಯಬಹುದು. 2 ಅನಿಲಾಣುಗಳ ವೇಗಗಳ ವಿತರಣೆ ಹೇಗೆ ಇದೆಯೆಂದು ಅರಿಯಬಹುದು.

**ಮಾಧ್ಯಮುಕ್ತಪಥ (ಮೀನ್ ಫ್ರೀ ಪಾತ್) :** ಅಣುಚಲನವಾದದಲ್ಲಿ ಈ ಪದಸಮೂಹ ಬಹುವಾಗಿ ಬಳಕೆಯಲ್ಲಿದೆ. ಒಂದು ಅನಿಲದಲ್ಲಿರುವ ಕೋಟ್ಯಂತರ ಅಣುಗಳು ಸದಾ ಎಲ್ಲ ದಿಕ್ಕುಗಳಲ್ಲಿಯೂ ಚಲಿಸುತ್ತಿರುವುದರಿಂದ ಪರಸ್ಪರ ಡಿಕ್ಕಿ ಹೊಡೆಯುವುದು ಸಹಜ. ಯಾವುದಾದರೂ ಒಂದು ಅಣುವನ್ನು ಗಮನದಲ್ಲಿರಿಸಿ ನೋಡುತ್ತಿದ್ದರೆ ಅದು ಮತ್ತೊಂದು ಅಣುವಿಗೆ ಡಿಕ್ಕಿ ಹೊಡೆದು ಬೇರೆ ದಿಕ್ಕಿನಲ್ಲಿ ಬೇರೆ ವೇಗದಿಂದ ಸಾಗುತ್ತದೆ. ಸ್ವಲ್ಪ ದೂರ ಸಾಗಿದ ನಂತರ ಮತ್ತೊಂದು ಅಣುವಿನೊಡನೆ ಡಿಕ್ಕಿ ಹೊಡೆಯುತ್ತದೆ. ಇದರ ಪರಿಣಾಮವಾಗಿ ಅದರ ವೇಗ, ದಿಕ್ಕು ಬದಲಾಗುತ್ತವೆ. ಹೀಗೆ ಅದರ ಜೀವಮಾನವೆಲ್ಲ ಡಿಕ್ಕಿ ಹೊಡೆಯುವುದು, ಕೊಂಚದೂರ ಮೂಲಕವಾಗಿ ಸಾಗುವುದು, ಮರಳಿ ಡಿಕ್ಕಿ ಹೊಡೆದು ಮರಳಿ ಮೂಲಕವಾಗಿ ಸಾಗುವುದು. ಒಂದಾದ ಮೇಲೆ ಒಂದರಂತೆ ಎರಡುಸಲ ಆಗುವ ಡಿಕ್ಕಿಗಳ ನಡುವೆ ಅಣು ಚಲಿಸಿರುವ ದೂರ ಏಕಪ್ರಕಾರವಾಗಿರುವುದಿಲ್ಲ. ಕೆಲವು ವೇಳೆ ಈ ದೂರ ಹೆಚ್ಚಾಗಿಯೂ ಇನ್ನು ಕೆಲವು ವೇಳೆ ಕಡಿಮೆಯಾಗಿಯೂ ಇರುತ್ತದೆ. ಸಾವಿರಾರು ಸಲ ಆಗುವ ಡಿಕ್ಕಿಗಳನ್ನು ಪರೀಕ್ಷಿಸಿ, ಅಣು ಮುಕ್ತವಾಗಿ ಸಂಚರಿಸಿದ ದೂರಗಳನ್ನೆಲ್ಲ ಪರಿಶೀಲಿಸಿದರೆ ಅವುಗಳ ಸರಾಸರಿ ಬೆಲೆಯನ್ನು ಪಡೆಯಬಹುದು. ಈ ಬೆಲೆಯೇ ಸರಾಸರಿ ಮಾಧ್ಯ ಮುಕ್ತಪಥ.

ಒಂದು ನಿರ್ದಿಷ್ಟ ಗಾತ್ರದಲ್ಲಿರುವ ಅಣುಗಳ ಒಟ್ಟು ಸಂಖ್ಯೆ ಮತ್ತು ಅವುಗಳ ಡಿಕ್ಕಿವ್ಯಾಸ (ಕೊಲಿಷನ್ ಡಯಾಮೀಟರ್) ಇವು ತಿಳಿದಿದ್ದರೆ ಸರಾಸರಿ ಮಾಧ್ಯ ಮುಕ್ತಪಥವನ್ನು ಗುಣಿಸಬಹುದು.

ಎರಡು ಅಣುಗಳು ಒಂದರ ಸಮೀಪ ಮತ್ತೊಂದು ಬಂದಾಗ ಅವುಗಳ ನಡುವಿನ ದೂರ ಕಡಿಮೆಯಾಗುತ್ತಾ ಬರುತ್ತದೆ. ಕೊನೆಗೆ ಒಂದು ಸ್ಥಿತಿಗೆ ಬಂದಾಗ ಅವುಗಳ ನಡುವೆ ಏರ್ಪಡುವ ಪರಸ್ಪರ ವಿಕರ್ಷಣ ಬಲ ಅತ್ಯಂತ ಪ್ರಬಲವಾಗಿ ಅವು ದೂರ ದೂರಕ್ಕೆ ಓಡಿಹೋಗುತ್ತವೆ. ಹೀಗೆ ವಿಕರ್ಷಣೆ ಏರ್ಪಡಲು ಅಣುಗಳ ನಡುವೆ ಇರಬೇಕಾದ ಕನಿಷ್ಠ ದೂರವನ್ನು $\sigma$ (ಸಿಗ್ಮ) ಎಂಬ ಪ್ರತೀಕದಿಂದ ಸೂಚಿಸಲಾಗುತ್ತದೆ.

ಅಣುಗಳು ಗಾತ್ರದಲ್ಲಿ ಅತ್ಯಂತ ಸೂಕ್ಷ್ಮವಾಗಿದ್ದರೂ ಆದರ್ಶ ಅನಿಲದ ಅಣು ಬಿಂದುಗಳೂ ಸಹ ಈ ಡಿಕ್ಕಿವ್ಯಾಸವನ್ನು ಪಡೆದಿವೆ. ಇದಕ್ಕೆ ಮುಖ್ಯ ಕಾರಣ ಇಷ್ಟೆ: ಇಂಥ ಎರಡು ಅಣುಗಳ ನಡುವೆ ಇರುವ ದೂರ ಆದಾಗ ಅವುಗಳ ನಡುವೆ ಏರ್ಪಡುವ ಪರಸ್ಪರ ವಿಕರ್ಷಣ ಬಲ ಹೆಚ್ಚಾಗಿ ಅಣುಗಳು ದೂರದೂರಕ್ಕೆ ಬೇರೆ ಬೇರೆಯಾಗಿ ಸರಿಯುತ್ತವೆ.

ಒಂದು ಪಾತ್ರೆಯೊಳಗಿರುವ ಅಣುಗಳಲ್ಲಿ ಒಂದನ್ನು ಬಿಟ್ಟು ಮಿಕ್ಕವುಗಳೆಲ್ಲಾ ನಿಂತಲ್ಲಿಯೇ ನಿಂತು ಚಲನರಹಿತವಾಗಿವೆ ಎಂದು ಊಹೆಮಾಡಿ, ಒಂದು ಅಣು ಮಾತ್ರ ಚಲಿಸುತ್ತಿದೆ ಎಂದೂ ಪ್ರತಿಯೊಂದು ಸಲ ಡಿಕ್ಕಿ ಆದಾಗಲೆಲ್ಲಾ ಅದರ ವೇಗ ವ್ಯತ್ಯಾಸವಾಗುತ್ತಿದ್ದರೂ ಸರಾಸರಿಯಾಗಿ ಇರುತ್ತದೆ ಎಂದೂ ಭಾವಿಸಬಹುದು. ಚಲಿಸುತ್ತಿರುವ ಈ ಅಣುವಿನ ಸರಾಸರಿ ಚಲನದೂರವನ್ನು $\lambda$ ಎಂದು ನಿರ್ದೇಶಿಸಿದರೆ ಈ ಚಿತ್ರದಿಂದ ಒಂದು ಸಂಗತಿಯನ್ನು ಸುಲಭವಾಗಿ ಗ್ರಹಿಸಬಹುದು.

ಚಿತ್ರ-ಅಣುಚಲನವಾದ-1

$\lambda$ ಉದ್ದದ ಮತ್ತು 2 ದೂರ ಎತ್ತರದ ಉರುಳೆಯಲ್ಲಿ ಒಂದು ಅಣು ಮಾತ್ರ ಇದ್ದಿರಬೇಕು. ಹೀಗಾದ್ದರಿಂದ ಪ್ರತಿಯೊಂದು ಅಣು ಸರಾಸರಿ ಗಾತ್ರದಷ್ಟು ಪ್ರದೇಶದಲ್ಲಿರುತ್ತದೆ. ಒಂದು ಘ. ಸೆಂ. ಮೀ. ಗಾತ್ರದಲ್ಲಿರುವ ಅಣುಗಳ ಒಟ್ಟು ಸಂಖ್ಯೆ n ಆಗಿದ್ದರೆ ಅಥವಾ $\lambda'=\frac{1}{\pi n\sigma^2}$ ಎಲ್ಲ ಅಣುಗಳು ಓಡಾಡುತ್ತಿರುವುದನ್ನು ಗಮನಿಸಿದರೆ ಆಗ ಈ ಸರಾಸರಿ ದೂರವನ್ನು $\lambda$ ಎಂದು ನಿರ್ದೇಶಿಸಿ ಅದರ ಬೆಲೆಯನ್ನು ಎಂದು ಸಾಧಿಸಬಹುದು.

**ಶಕ್ತಿಯ ಸಮವಿಭಜನೆ :** ಇದೊಂದು ಅಣುಚಲನವಾದದಿಂದ ದೊರೆತ ಸ್ವಾರಸ್ಯಕರ ಫಲಿತಾಂಶ. ಇದರ ಪ್ರಕಾರ, ಸಮಉಷ್ಣತೆಯಲ್ಲಿ ಎಲ್ಲ ಅನಿಲಗಳ ಅಣುಗಳ ಚಲನಶಕ್ತಿಯ ಸರಾಸರಿ ಒಂದೇ ಆಗಿರುತ್ತದೆ. ಸಮಾನ ಉಷ್ಣತೆಯಲ್ಲಿರುವ A ಮತ್ತು B ಎಂಬ ಎರಡು ಬೇರೆ ಬೇರೆ ಅನಿಲಗಳ ಒಂದೊಂದು ಅಣುವನ್ನು ಪರಿಶೀಲಿಸಿದರೆ ಅವುಗಳ ಚಲನಶಕ್ತಿ $\frac{1}{2}m_Au_A^{\,2}=\frac{1}{2}m_Bu_B^{\,2}$ ಎಂಬ ಫಲಿತಾಂಶ ದೊರೆಯುವುದು. ಇಲ್ಲಿ $m_A$ ಮತ್ತು $m_B$ ಎನ್ನುವುದು ಆಯಾ ಅನಿಲಗಳ ಒಂದೊಂದು ಅಣುವಿನ ರಾಶಿ. $u_A$ ಮತ್ತು $u_B$ ಎನ್ನುವುದು ಅನಿಲಾಣುಗಳ ವೇಗಗಳ ವರ್ಗಗಳ ಸರಾಸರಿ. ಚಲನೆಯಲ್ಲಿರುವ ಅಣುಗಳಿಗೆ ಸ್ವಾತಂತ್ರ್ಯಾಂಕ (ಡಿಗ್ರಿ ಆಫ್ ಫ್ರೀಡಮ್) ಗಳಿರುತ್ತವೆ. ಉಷ್ಣತೆಯಲ್ಲಿರುವ ಅಣುಗಳ

ಒಂದು ವ್ಯವಸ್ಥೆಯಲ್ಲಿ, ಪ್ರತಿ ಅಣುವಿಗೂ ಸ್ವಾತಂತ್ರ್ಯಾಂಕಗಳಿರುವಾಗ, ಅಣುಗಳ ಸರಾಸರಿ ಯಾಂತ್ರಿಕ ಶಕ್ತಿ ಪ್ರಮಾಣವು $^1/_2$ hT (h = ಬೋಲ್ಟ್ಸ್‌ಮನ್ ಸ್ಥಿರಾಂಕ ಆಗಿರುತ್ತದೆ. ಇದನ್ನು ಶಕ್ತಿ ವಿಭಜನಾ ಪ್ರಮೇಯವೆಂದು ಕರೆಯುತ್ತಾರೆ.

**ವಾಸ್ತವಿಕ ಅನಿಲಗಳು :** ಈವರೆಗೂ ನಾವು ಪರಿಶೀಲಿಸಿದ ಅಣುಗಳು ಆದರ್ಶ ವರ್ಗಕ್ಕೆ ಸೇರಿದುವು. ಇದು ಕೇವಲ ಊಹೆಯಲ್ಲಿ ಮಾತ್ರ ಇರುವಂಥವು. ಆದರೆ ನಾವು ನಮ್ಮ ದೈನಂದಿನ ವ್ಯವಹಾರದಲ್ಲಿ ಕಾಣುವ ಹೈಡ್ರೋಜನ್, ಆಕ್ಸಿಜನ್, ಕ್ಲೋರಿನ್ ಮುಂತಾದ




ಚಿತ್ರ 2.

ಅನಿಲಗಳನ್ನು ವಾಸ್ತವಿಕ (ರಿಯಲ್) ಅನಿಲಗಳೆನ್ನಬಹುದು. ಒತ್ತಡ ಅಲ್ಪವಾಗಿದ್ದು, ಉಷ್ಣತೆ ತಕ್ಕಮಟ್ಟಿಗೆ ಹೆಚ್ಚಾಗಿರುವ ಈ ವಾಸ್ತವಿಕ ಅನಿಲಗಳು $pv=RT$ ಎಂಬ ಸಮೀಕರಣ ಸೂಚಿಸುವ ಬಾಯ್ಲ್ ಮತ್ತು ಚಾರ್ಲ್ಸ್ ನಿಯಮಗಳನ್ನು ಬಹುಮಟ್ಟಿಗೆ ಪಾಲಿಸುತ್ತವೆ. ಆದರೆ ಇವುಗಳ ಒತ್ತಡ ಹೆಚ್ಚುತ್ತ ಬಂದು, ಉಷ್ಣತೆ ಕಡಿಮೆಯಾದಾಗ ಈ ಸುಲಭರೂಪದ ನಿಯಮಗಳಿಂದ ಹೆಚ್ಚು ಹೆಚ್ಚಾಗಿ ದೂರವಿರುತ್ತವೆ. ಯಾವ ರೀತಿಯಲ್ಲಿ ವಾಸ್ತವಿಕ ಅನಿಲಗಳು ಆದರ್ಶ ಅನಿಲದಿಂದ ಬೇರೆಯಾಗಿವೆ ಎಂಬುದನ್ನು ತೋರಿಸುವ ನಕ್ಷೆಯನ್ನು ಇಲ್ಲಿ ಕೊಟ್ಟಿದೆ.

ಆದರ್ಶ ಅನಿಲಕ್ಕೆ P ಹೆಚ್ಚಿದಂತೆಲ್ಲಾ PV ಬದಲಾಯಿಸುವ ರೀತಿಯನ್ನು ತೋರಿಸುವ ರೇಖೆ ಸಮತಲವಾಗಿ ಬರೆದಿರುವ PV=1 ಮಟ್ಟದಲ್ಲಿರುವ ಸರಳರೇಖೆ. ಒತ್ತಡ ಎಷ್ಟೇ ಇರಲಿ, ಈ ಅನಿಲದ ಗಾತ್ರ ಅದಕ್ಕೆ ಅನುಸಾರವಾಗಿ ಬದಲಾಯಿಸಿ, ಪ್ರತಿಸಲವೂ PV=1 ಆಗಿರುತ್ತದೆ. ಆದರೆ ವಾಸ್ತವಿಕ ಅನಿಲಗಳ ಕ್ರಮವೇ ಬೇರೆ, P ಹೆಚ್ಚಿದಾಗ PV ಹೇಗೆ ಬದಲಾಯಿಸುತ್ತದೆ ಎಂದು ತೋರಿಸುವ ವಕ್ರರೇಖೆಗಳನ್ನು ಗಮನಿಸಬೇಕು. ಸಾಮಾನ್ಯವಾಗಿ ಈ ಅನಿಲಗಳ ಒತ್ತಡ 1 ವಾಯುಮಾನದಷ್ಟು ಇರುವಾಗ ಈ ಅನಿಲಗಳ ನಡತೆಗೂ ಆದರ್ಶ ಅನಿಲದ ರೀತಿಗೂ ಅಷ್ಟು ಹೆಚ್ಚಾದ ವ್ಯತ್ಯಾಸ ಇಲ್ಲದಿರಬಹುದು. ಆದರೆ ಒತ್ತಡವನ್ನು ಹೆಚ್ಚಿಸುತ್ತಾ ಹೋದರೆ ಈ ವಕ್ರ ರೇಖೆಗಳು ಮೊದಲು ಕೆಳಕ್ಕಿಳಿದು ಅನಂತರ ಮೇಲಕ್ಕೆ ಹೋಗುತ್ತವೆ. ಹೈಡ್ರೋಜನ್ ಅನಿಲದ ಒಂದು ವಿಶೇಷ ಏನೆಂದರೆ, ಆರಂಭದಲ್ಲಿ ಇತರ ಅಣುಗಳಲ್ಲಿ ನಾವು ಕಾಣುವ PV ಮೊತ್ತದ ಇಳಿತದಲ್ಲಿ, ಒಂದೇ ರೀತಿಯಾಗಿ ಹೆಚ್ಚುತ್ತ, ವಾಲಿರುವ ಸರಳರೇಖೆಯಾಗಿದೆ (ಚಿತ್ರ 3). ಉಷ್ಣತೆ ಸಾಮಾನ್ಯ ಮಟ್ಟದಲ್ಲಿರುವಾಗ ಹೀಲಿಯಮ್ ಮತ್ತು ನಿಯಾನ್ ಅನಿಲಗಳೂ ಸಹ ಹೈಡ್ರೋಜನ್ ರೀತಿಯಲ್ಲಿ ವರ್ತಿಸುತ್ತವೆ. ಆದರೆ ಉಷ್ಣತೆಯನ್ನು ಬಹಳವಾಗಿ ಕುಗ್ಗಿಸಿದರೆ ಆಗ ಇವುಗಳ PV-p ರೇಖೆಗಳೂ $0^0$C.ನಲ್ಲಿ ನೈಟ್ರೋಜನ್ ಅನಿಲದ ರೇಖೆ ಇದ್ದಂತೆಯೇ ಕಾಣುತ್ತದೆ. ಇದಕ್ಕೆ ಪ್ರತಿಯಾಗಿ ಉಷ್ಣತೆಯನ್ನು ಹೆಚ್ಚಿಸಿದಾಗ ಈ ಅನಿಲಗಳ ರೇಖೆಗಳು ಹೈಡ್ರೋಜನ್ ರೇಖೆಯ ಆಕಾರವನ್ನು ಪಡೆಯುತ್ತವೆ.

ವಿವಿಧ ಉಷ್ಣತೆಯ ಮಟ್ಟಗಳಲ್ಲಿ PV-p ರೇಖೆಗಳ ಆಕಾರ ಹೇಗೆ ಮಾರ್ಪಡುತ್ತದೆ ಎಂಬುದನ್ನು ನೈಟ್ರೋಜನ್ ಅನಿಲದ ಪರೀಕ್ಷೆಯಿಂದ ದೊರೆತ ಅಳತೆಗಳ ಆಧಾರದ ಮೇಲೆ ತಯಾರಿಸಲಾಗಿದೆ. ನಿಜವಾಗಿಯೂ ಈ ರೇಖೆಗಳ ಸ್ವರೂಪವನ್ನು ನಿರ್ಧರಿಸುವ ಅಂಶ ಆ ಅನಿಲದ ಉಷ್ಣತೆಯ ಮಟ್ಟ ಅದರ ಅವಧಿಕ (ಕ್ರಿಟಿಕಲ್) ಉಷ್ಣತೆಗೆ (Tc) ಎಷ್ಟು ಸಮೀಪದಲ್ಲಿದೆ ಎಂಬುದನ್ನು ಅವಲಂಬಿಸಿದೆ. ಪ್ರತಿಯೊಂದು ಅನಿಲವೂ ಉಷ್ಣತೆಯಲ್ಲಿ Tc ಮಟ್ಟದ ಸಮೀಪದಲ್ಲಿರುವಾಗ ಅದರ ರೇಖೆ ಕಾರ್ಬನ್ ಡೈ ಆಕ್ಸೈಡು ಸಾಮಾನ್ಯ ಉಷ್ಣತೆಯಲ್ಲಿ ತೋರುವ ರೇಖೆಯಂತಿರುತ್ತದೆ. ಆದರೆ ಉಷ್ಣತೆ ವಿಪರೀತವಾಗಿ ಏರಿದಾಗ, ಅಂದರೆ Tc ಗಿಂತ ಅತಿ ಹೆಚ್ಚಾದಾಗ, ಅದರ ರೇಖೆಗಳು ಹೈಡ್ರೋಜನ್ ಅನಿಲದ ರೇಖೆಗಳನ್ನು ಹೋಲುತ್ತವೆ.

ಬಾಯ್ಲ್ ನಿಯಮಕ್ಕೆ ದೂರವಾಗಿರುವುದು ಮಾತ್ರವಲ್ಲ, ವಾಸ್ತವಿಕ ಅನಿಲಗಳು ಗೇಲ್ಯುಸಾಕ್ ನಿಯಮವನ್ನು ಸರಿಯಾಗಿ ಅನುಸರಿಸುವುದಿಲ್ಲ. ಪ್ರತಿಯೊಂದು ಅನಿಲದ PV-P ರೇಖೆಯ ಆಕಾರ ಉಷ್ಣತೆ ವ್ಯತ್ಯಾಸವಾದಂತೆಲ್ಲ ಬದಲಾಯಿಸುತ್ತದೆ ಎಂಬ ಅನುಭವದಿಂದ ಗೇಲ್ಯುಸಾಕ್ ನಿಯಮವೂ ಸರಿಯಾಗಿ ಪಾಲನೆಯಾಗುತ್ತಿಲ್ಲ ಎಂದು ತಿಳಿಯಬರುತ್ತದೆ. ಒಟ್ಟಿನಲ್ಲಿ ಸಂಗ್ರಹವಾಗಿ ಹೇಳಿದರೆ, ಒಂದು ಅನಿಲದ ಒತ್ತಡ ಅತ್ಯಧಿಕವಾಗುತ್ತ ಬಂದಾಗ, ಅದರ ಉಷ್ಣತೆ ಆ ಅನಿಲದ Tc ತಾಪದ ಮಟ್ಟಕ್ಕೆ ಹತ್ತಿರ ಬಂದಂತೆಲ್ಲಾ–ಒಂದು ದೃಷ್ಟಿಯಿಂದ ಆ ಅನಿಲವನ್ನು ಒತ್ತಡದಿಂದ ದ್ರವವನ್ನಾಗಿ ಮಾಡಲು ಸಾಧ್ಯವಾಗುವ ಸ್ಥಿತಿಗೆ ಹತ್ತಿರ ಬಂದಾಗ–ಆದರ್ಶ ಅನಿಲದ ರೀತಿಗೂ ಈ ವಾಸ್ತವಿಕವಾದ ಅನಿಲದ ಚರ್ಯೆಗೂ ಹೆಚ್ಚು ಹೆಚ್ಚು ವ್ಯತ್ಯಾಸ ಕಾಣಬರುತ್ತದೆ.

ಈಗ ಅವೊಗ್ಯಾಡ್ರೊ ನಿಯಮ ಯಾವ ರೀತಿಯಲ್ಲಿ ವಾಸ್ತವಿಕ ಅನಿಲಗಳಲ್ಲಿ ಕಾಣಬರುತ್ತದೆ ಎಂದು ನೋಡಬಹುದು. ಪ್ರತಿಯೊಂದು ಅನಿಲವನ್ನು ಅದರ ಅಣುತೂಕದಷ್ಟು ತೆಗೆದುಕೊಂಡು $0^0$C ಮತ್ತು 1 ವಾಯುಮಂಡಲ ಒತ್ತಡ ಸ್ಥಿತಿಯಲ್ಲಿ ಅದರ ಗಾತ್ರ ಎಷ್ಟೆಂಬುದನ್ನು ತಿಳಿದರೆ ಈ ನಿಮಯವನ್ನು ಪರೀಕ್ಷಿಸುವುದು ಸಾಧ್ಯವಾಗುತ್ತದೆ. ಕೆಲವು ಅನಿಲಗಳಿಗೆ ಈ ರೀತಿಯ ಗಾತ್ರವನ್ನು ಕೆಳಗೆ ಕೊಡಲಾಗಿದೆ.

| **ಅನಿಲ** | **ಅಣುತೂಕ** | **$0^0$C ಸೆಂ.ಗ್ರೇ. ಮತ್ತು 760ಮಿಮೀ ಒತ್ತಡದಲ್ಲಿ ಗಾತ್ರ** |
|---|---|---|
| ಜಲಜನಕ | 2.016 | 22.427 ಲೀಟರ್ |
| ಸಸಾರಜನಕ | 28.020 | 22.405 " |
| ಆಮ್ಲಜನಕ | 32.000 | 22.394 " |
| ಇಂಗಾಲಾಮ್ಲ | 44.010 | 22.264 " |
| ಅಮೋನಿಯ | 17.030 | 22.084 " |
| ಈಥೈಲ್ ಕ್ಲೋರೈಡ್ | 50.490 | 21.879 " |

ಈ ಪಟ್ಟಿಯನ್ನು ಪರಿಶೀಲಿಸಿದರೆ, ಅತಿಸುಲಭವಾಗಿ ದ್ರವರೂಪಕ್ಕೆ ಬದಲಾಯಿಸಬಲ್ಲ ಅನಿಗಳು ಆದರ್ಶ ಅನಿಲದ ರೀತಿಗೆ ಹೊಂದಾಣಿಕೆಯಾಗದ ರೀತಿಯಲ್ಲಿ ನಡೆದುಕೊಳ್ಳುತ್ತವೆ ಎಂಬ ಅಂಶ ಸ್ಪಷ್ಟವಾಗಿ ಕಾಣುತ್ತದೆ. ಅಮೋನಿಯ ಮತ್ತು ಈಥೈಲ್ ಕ್ಲೋರೈಡುಗಳು ಈ ತೀರ್ಮಾನವನ್ನು ಪುಷ್ಟೀಕರಿಸುತ್ತವೆ.

$0^0$C ಉಷ್ಣತೆಯಲ್ಲಿ, ಒಂದೊಂದು ಅನಿಲವೂ ಬೇರೆ ಬೇರೆ ಒತ್ತಡಗಳಿರುವಾಗ ಪಡೆದಿರುವ ಗಾತ್ರಗಳನ್ನು ಅಳೆದು ದೊರೆತ ಅಂಶಗಳನ್ನು ನಕ್ಷೆಯಲ್ಲಿ ತೋರುವುದರಿಂದ, PV ಮೊತ್ತ $p\rightarrow 0$ ಸ್ಥಿತಿಯಲ್ಲಿ ಎಷ್ಟು ಇರುತ್ತದೆ ಎಂದು ರೇಖೆಯನ್ನು ಶೂನ್ಯ ಒತ್ತಡದ ಸ್ಥಿತಿಗೆ ವರ್ಧಿಸಿ, ಆದರ್ಶ ಅನಿಲ 1 ಅಣುತೂಕದಷ್ಟು $0^0$C ಮತ್ತು 1 ವಾಯುಮಂಡಲದ ಒತ್ತಡದಲ್ಲಿ 22.414 ಲೀಟರ್ ಇರುತ್ತದೆ ಎಂದು ನಿರ್ಧರಿಸಿದ್ದಾರೆ.




ಚಿತ್ರ 3.

ವಾಸ್ತವಿಕ ಅನಿಲಗಳು ಆದರ್ಶ ಅನಿಲಗಳಂತೆ ಇರದೆ ಬೇರೆ ರೀತಿಯಲ್ಲಿ ವರ್ತಿಸಲು ಏನು ಕಾರಣ ಎಂಬ ಪ್ರಶ್ನೆಗೆ, ಆದರ್ಶ ಅನಿಲಕ್ಕೆ ಇರಬೇಕಾದ ಮುಖ್ಯ ಗುಣಗಳು ವಾಸ್ತವಿಕ ಅನಿಲಗಳಿಗೆ ಎಷ್ಟು ಮಟ್ಟಿಗಿವೆ ಎಂದು ಪರೀಕ್ಷಿಸಿದರೆ ಉತ್ತರ ದೊರೆಯುತ್ತದೆ.

ಅನಿಲ ಆಕ್ರಮಿಸಿರುವ ಪಾತ್ರೆಯ ಘನ ಅಳತೆಗೆ ಹೋಲಿಸಿದಾಗ ಪ್ರತಿಯೊಂದು ಅಣುವಿನ ನಿಜವಾದ ಗಾತ್ರ ತೀರ ಸಣ್ಣಗಿದ್ದು ಅದು ಕೇವಲ ಒಂದು ಬಿಂದು, ಗಾತ್ರವಿಲ್ಲದ್ದು ಎಂದು ಊಹಿಸಿದ್ದೇವೆ. ಆದರ್ಶ ಅನಿಲದಲ್ಲಿ $N_2$, $Cl_2$, $O_2$ ಮುಂತಾದ ವಾಸ್ತವಿಕ ಅನಿಲಗಳನ್ನು ಗೋಲಿಗಳಂತೆ ಇರುವ ಅಣುಗಳ ಸಮುದಾಯವೆಂದು ಭಾವಿಸುತ್ತೇವೆ. ಈ ಗೋಲಿಗಳ ವ್ಯಾಸ ಸೊನ್ನೆಯಲ್ಲ. ಆದ್ದರಿಂದ ಅವುಗಳಿಗೆ ಸ್ವಲ್ಪ ಗಾತ್ರವಿದೆ. ಎರಡು ಅಣುಗಳು ಒಂದಕ್ಕೊಂದು ಡಿಕ್ಕಿ ಹೊಡೆಯುವಾಗ ಅವುಗಳ ಕೇಂದ್ರಗಳು ಅತ್ಯಲ್ಪವಾದರೂ

ಸ್ವಲ್ಪ ದೂರದಲ್ಲಿರುತ್ತವೆ. ಅಣುಗಳ ಗಾತ್ರವನ್ನು ಶೂನ್ಯವೆಂದು ಭಾವಿಸುವುದು ಸರಿಯಲ್ಲ. ಗಾಳಿಯ, ಅನಿಲದ ಇಳಿಸಿ ಒತ್ತಡವನ್ನು ಹೆಚ್ಚಿಸಿದರೆ ಅನಿಲದ ಗಾತ್ರ ಕುಗ್ಗಿ ಕೊನೆಗೆ ದ್ರವವಾಗುತ್ತದೆ. ಹೀಗೆಯೇ ಮುಂದುವರಿಸಿದರೆ ಈ ದ್ರವ ಘನರೂಪಕ್ಕೆ ಬರುತ್ತದೆ. ಈ ಸ್ಥಿತಿಗೆ ಬಂದಾಗ ಅದರ ಗಾತ್ರವನ್ನು ಕುಗ್ಗಿಸಲು ಪ್ರಯತ್ನಿಸಿ ಅಪಾರ ಪ್ರಮಾಣದ ಒತ್ತಡವನ್ನು ಏರ್ಪಡಿಸಿದರೂ ಹೆಚ್ಚು ಪರಿಣಾಮಕಾರಿಯಾಗುವುದಿಲ್ಲ. ಈ ಅಂಶದಿಂದ ಅನಿಲದಲ್ಲಿನ ಎಲ್ಲ ಅಣುಗಳ ಒಟ್ಟು ಗಾತ್ರ ಶೂನ್ಯವಲ್ಲ ಎಂದು ತಿಳಿದುಬರುತ್ತದೆ. ಘನಸ್ಥಿತಿಯಲ್ಲಿರುವಾಗ ಅದರ ಗಾತ್ರಕ್ಕೆ ಹತ್ತಿರ ಹತ್ತಿರ ಇರಬಹುದು.

ಅನಿಲದ ಅಣುಗಳ ನಡುವೆ ಇರುವ ಪರಸ್ಪರ ಆಕರ್ಷಣೆ ಇಲ್ಲದಿದ್ದಲ್ಲಿ ಆ ಅನಿಲವನ್ನು ದ್ರವರೂಪಕ್ಕೆ ತರುವುದು ಸಾಧ್ಯವಾಗುತ್ತಿರಲಿಲ್ಲ. ಸೂಕ್ತವಾದ ಉಷ್ಣತೆ ಮತ್ತು ಒತ್ತಡಗಳ ನೆರವಿನಿಂದ ಈ ಕೆಲಸವನ್ನು ಸಾಧಿಸಬಹುದು. ಎಲ್ಲ ದ್ರವಗಳಿಗೂ ಸಾಮಾನ್ಯವಾಗಿ ಒಂದು ಗುಣವಿದೆ. ಇದನ್ನು ಸಂಸಕ್ತಿ (ಕೊಹಿಷನ್) ಎನ್ನುತ್ತಾರೆ. ಈ ಗುಣದ ಪ್ರಭಾವದಿಂದ ಅನಿಲದ ಅಣುಗಳು ಒಂದನ್ನೊಂದು ಕಚ್ಚಿಕೊಂಡಿರುತ್ತವೆ. ಅಣುಗಳ ನಡುವೆ ಇರುವ ಪರಸ್ಪರ ಆಕರ್ಷಣೆಯ ಬಲದಿಂದ ಹೀಗಾಗುತ್ತದೆ. ದ್ರವಸ್ಥಿತಿಯಲ್ಲಿ ಸ್ಪಷ್ಟವಾಗಿ ಕಾಣಬರುವ ಈ ಗುಣ ಅನಿಲಾವಸ್ಥೆಯಲ್ಲೂ ತನ್ನ ಇರವನ್ನು ತೋರಿಸಿಕೊಳ್ಳುತ್ತದೆ. ಈ ಪರಸ್ಪರ ಆಕರ್ಷಣೆಗಳು ಇರುವ ಸತ್ಯ ಜೂಲ್ ಮತ್ತು ಥಾಮ್ಸನ್ ನಡೆಸಿದ ಅಧಿಕ ಒತ್ತಡದಲ್ಲಿರುವ




**ಚಿತ್ರ 4.**

ಅನಿಲ ಸರಂಧ್ರ ಬೆಣೆಯ ಮೂಲಕ ಜಿನುಗುವ ಪ್ರಯೋಗಪರೀಕ್ಷೆಯಲ್ಲಿ ಹೆಚ್ಚು ಸ್ಪಷ್ಟವಾಗಿ ರುಜುವಾತಾಗಿದೆ. ಏಕ ರೀತಿಯಾದ ಒತ್ತಡದಲ್ಲಿ ಒಂದು ಅನಿಲ ಕೊಳವೆಯೊಂದರಲ್ಲಿ ಹರಿದು ಅದರಲ್ಲಿರುವ ಅನೇಕ ಸಣ್ಣ ಸಣ್ಣ ರಂಧ್ರಗಳಿರುವ, ರೇಷ್ಮೆ ಅಥವಾ ಉಣ್ಣೆಯ ಉಂಡೆಯ ಮೂಲಕ ಆಚೆ ಕಡೆಗೆ ಬಂದಾಗ ಆ ಅನಿಲದ ಉಷ್ಣತೆ ಸ್ವಲ್ಪ ಕಡಿಮೆಯಾಗಿತ್ತು. ಬೇರೆ ಬೇರೆ ಅನಿಲಗಳನ್ನು ಉಪಯೋಗಿಸಿದಾಗಲೂ ಇದೇ ಪರಿಣಾಮ ಕಂಡುಬಂತು. ಇದರ ಕಾರಣ ಹೀಗಿದೆ. ವೇಗವಾಗಿ ಹರಿಯುತ್ತಿದ್ದ ಗಾಳಿ ಈಗ ನಿಧಾನವಾಗಿ ಹೋಗುತ್ತಿದೆ. ಈ ಕಾರಣದಿಂದ ಅದರ ಅಣುಗಳ ಚಲನಶಕ್ತಿಯ ಮಟ್ಟ ಇಳಿದುಹೋಗಿದೆ. ರಂಧ್ರಗಳಿರುವ ಬಿರಡೆಯ ಮೂಲಕ ಹರಿದು, ತಗ್ಗಿನ ಒತ್ತಡದ ಕಡೆಗೆ ಬರುವಾಗ ಅನಿಲದ ಗಾತ್ರ ದೊಡ್ಡದಾಗಿರುತ್ತದೆ. ಬೇರೆ ಬೇರೆ ಅಣುಗಳ ಮಧ್ಯೆ ಇರುವ ದೂರ ಹೆಚ್ಚಿರುತ್ತದೆ. ಹೀಗಾಗ ಬೇಕಾದರೆ, ಪರಸ್ಪರ ಆಕರ್ಷಣೆಗೆ ವಿರುದ್ಧವಾಗಿ ಅಣುಗಳು ದೂರದೂರಕ್ಕೆ ಸರಿಯಲು ಶಕ್ತಿಯನ್ನು ಒದಗಿಸಬೇಕು. ಈ ಶಕ್ತಿಯನ್ನು ಪ್ರತ್ಯೇಕವಾಗಿ ಒದಗಿಸದಿದ್ದರೆ ಅನಿಲದ ಆಂತರಿಕ ಶಕ್ತಿಯಲ್ಲಿ ಅಷ್ಟು ಮಟ್ಟಿಗೆ ಕೊರತೆ ಬೀಳುತ್ತದೆ. ಹೀಗಾಗಿ ಅದರ ಉಷ್ಣತೆ ಕುಗ್ಗುತ್ತದೆ.

ಅಣುಗಳು ಪರಸ್ಪರ ಆಕರ್ಷಿಸುವುದು ಮಾತ್ರವೇ ಅಲ್ಲ ; ಅವುಗಳ ನಡುವೆ ಪರಸ್ಪರ ವಿಕರ್ಷಣ ಬಲಗಳೂ ಇವೆ. ಈ ಭಾವನೆಗೆ ಮುಖ್ಯವಾದ ಆಧಾರ, ಅಣುಗಳು ಡಿಕ್ಕಿ ಹೊಡೆದಾಗ ಬಹುಮಟ್ಟಿಗೆ ಖಚಿತವಾದ ಡಿಕ್ಕಿವ್ಯಾಸ ಎಂಬ ಸಂಗತಿಯೇ. ಎರಡು ಅಣುಗಳ ಕೇಂದ್ರಗಳು ಈ ದೂರದಲ್ಲಿರುವಾಗ ಅವುಗಳ ನಡುವೆ ಏರ್ಪಡುವ ವಿಕರ್ಷಣ ಶಕ್ತಿ ಆಕರ್ಷಣೆಗಿಂತಲೂ ಅಧಿಕವಾಗುತ್ತದೆ. ಈ ಕಾರಣದಿಂದ ಅವುಗಳ ಚಲನೆ ತಿರುಗು ಮುರುಗಾಗುತ್ತದೆ. ಈವರೆಗೂ ಹತ್ತಿರ ಹತ್ತಿರಕ್ಕೆ ಬರುತ್ತಿದ್ದ ಅಣುಗಳು ಈಗ ದೂರ ದೂರಕ್ಕೆ ಹೋಗಲು ಆರಂಭಿಸುತ್ತವೆ. ಆದರೆ ಅಣುಗಳ ನಡುವೆ ಇರುವ ದೂರ ಹೆಚ್ಚಿದಂತೆಲ್ಲಾ ಈ ವಿಕರ್ಷಣ ಬಲ ಕ್ಷಿಪ್ರದಲ್ಲಿ ರಭಸವಾಗಿ ಕುಗ್ಗುತ್ತದೆ. ಹೀಗಾಗುವುದರಿಂದ, ಇಂಥ ದೂರಗಳಲ್ಲಿರುವಾಗ ಆಕರ್ಷಣೆಯ ಕೈ ಮೇಲಾಗಿ, ಅಣುಗಳು ಒಂದನ್ನೊಂದು ತಮ್ಮೆಡೆಗೆ ಸೆಳೆಯುವಂತೆ ಕಾಣುತ್ತದೆ. ಅಣುಗಳ ಅಥವಾ ಪರಮಾಣುಗಳ ನಡುವೆ ಕಾಣಬರುವ ಈ ವಿಕರ್ಷಣ ಮತ್ತು ಆಕರ್ಷಣ ಬಲಗಳನ್ನು ನಕ್ಷೆಯ ಮೂಲಕ ನಿರೂಪಿಸ ಬಹುದು. ಈ ನಕ್ಷೆಯನ್ನು ವಿಭವಶಕ್ತಿ (ಪೊಟೆನ್‌ಷಿಯಲ್ ಎನರ್ಜಿ) ನಕ್ಷೆ ಎನ್ನಬಹುದು.

ಎರಡು ಪರಮಾಣುಗಳ ಅಥವಾ ಅಣುಗಳ ಕೇಂದ್ರಗಳ ಮಧ್ಯೆ ಇರುವ ದೂರ ಬದಲಾಯಿಸಿದರೆ ಅವುಗಳ ಮಧ್ಯೆ ಏರ್ಪಡುವ ಆಕರ್ಷಣೆ ಮತ್ತು ವಿಕರ್ಷಣೆಯ ಪರಿಣಾಮವಾಗಿ ಏರ್ಪಡುವ ವಿಭವ ಶಕ್ತಿಯನ್ನು V ಎಂಬ ರೇಖೆ ತೋರಿಸುತ್ತದೆ. ಆಕರ್ಷಣೆ ಮತ್ತು ವಿಕರ್ಷಣೆಗಳು ಏಕಕಾಲದಲ್ಲಿ ನಡೆಯುತ್ತಿದ್ದರೂ ಅವುಗಳ ಪ್ರಭಾವವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರೀಕ್ಷಿಸುವುದು ಅನುಕೂಲ. ಚಿತ್ರ 4 ರಲ್ಲಿ R ಎಂಬ ವಕ್ರರೇಖೆ ವಿಕರ್ಷಣ ಬಲದಿಂದ ಏರ್ಪಡುವ ವಿಭವಶಕ್ತಿಯನ್ನೂ A ಎಂಬ ಆಕರ್ಷಣದ ಬಲದಿಂದ ಏರ್ಪಡುವ ವಿಭವಶಕ್ತಿಯನ್ನೂ ತೋರಿಸುತ್ತದೆ. ಪರಸ್ಪರ ವಿಕರ್ಷಣಾಬಲವನ್ನು ಎದುರಿಸಿ ಅಣುಗಳನ್ನು ಹತ್ತಿರ ಹತ್ತಿರಕ್ಕೆ ಬರುವಂತೆ ಮಾಡಲು ಶಕ್ತಿ ವ್ಯಯವಾಗಬೇಕು. ಈ ದೂರ (ಪರಸ್ಪರ) ಒಂದು ಮಿತಿಗಿಂತ ಕಡಿಮೆ ಆದಾಗ ನಕ್ಷೆಯಲ್ಲಿ ರೇಖೆ ಬಹುಬೇಗ ಉನ್ನತಮಟ್ಟಕ್ಕೆ ಏರುತ್ತದೆ. ಅಧಿಕ ಪ್ರಮಾಣದ ವಿಕರ್ಷಣ ಶಕ್ತಿಯನ್ನು ಹೀಗೆ ಕಾಣಬಹುದು. ಆಕರ್ಷಣೆಯ ಬಲದಿಂದ ಹುಟ್ಟುವ ಶಕ್ತಿ (–) ಎಂದರೆ ಋಣಚಿಹ್ನೆಯನ್ನು ಪಡೆಯುತ್ತದೆ. ಅಂತರ ತೀರ ಕಡಿಮೆಯಾಗುತ್ತ ಬಂದಾಗ ವಿಕರ್ಷಣೆಯ ಕೈವಾಡ ಆಕರ್ಷಣೆಯದಕ್ಕಿಂತ ಅಧಿಕವಾಗುತ್ತದೆ ಎಂಬುದನ್ನು ಗಮನಿಸಬೇಕು.

ನಕ್ಷೆಯಿಂದ ವ್ಯಕ್ತವಾಗುವ ಇನ್ನೊಂದು ಮುಖ್ಯವಾದ ಸಂಗತಿಯನ್ನು ಗಮನಿಸಬೇಕು. ಅಣುಗಳ ಮಧ್ಯದಲ್ಲಿರುವ ಅಂತರ ದೊಡ್ಡದಾಗಿರುವಾಗ ವಿಭವಶಕ್ತಿ (–) ಆಗಿರುತ್ತದೆ. ಆಗ ಪರಸ್ಪರ ಆಕರ್ಷಣೆಯ ಪ್ರಭಾವ ಹೆಚ್ಚು. ಆದರೆ ವಿಭವಶಕ್ತಿ ಅತ್ಯಂತ ತಗ್ಗಿನ ಮಟ್ಟವನ್ನು ಪಡೆದ ನಂತರ, ದೂರ ಇನ್ನೂ ಕಡಿಮೆಯಾದಾಗ ವಿಕರ್ಷಣ ಬಲ ಹೆಚ್ಚುತ್ತ ಬಂದು ಒಟ್ಟು ಶಕ್ತಿ ಹೆಚ್ಚುತ್ತ + ಎಂದರೆ ಧನವಾಗುತ್ತದೆ. ಪರಸ್ಪರ ಆಕರ್ಷಣೆ ಮತ್ತು ವಿಕರ್ಷಣೆಗಳು ಸರಿಸಮವಾಗುವ ಅಂತರ ಡಿಕ್ಕಿವ್ಯಾಸವೇ ಆಗಿರುತ್ತದೆ.

**ವ್ಯಾನ್‌ಡೆರ್‌ವಾಲ್ಸ್ ಸಮೀಕರಣ :** ಆದರ್ಶ ಅನಿಲಕ್ಕೆ ಅನ್ವಯವಾಗುವ PV=RT ಎಂಬ ಸಮೀಕರಣವನ್ನು ಸ್ವಲ್ಪಮಟ್ಟಿಗೆ ಮಾರ್ಪಡಿಸಿ ನಿಜವಾದ ಅನಿಲಗಳ ರೀತಿಯನ್ನು ತೋರಿಸಲು ಪ್ರಯತ್ನಗಳು ನಡೆದಿವೆ. ಈ ಕಾರ್ಯದಲ್ಲಿ ವ್ಯಾನ್‌ಡೆರ್‌ವಾಲ್ಸ್ ಎಂಬುವನೇ ಮೊದಲಿಗ. ಇವನ ತರುವಾಯ ಸುಮಾರು 100–120 ವಿವಿಧ ಪ್ರಯತ್ನಗಳು ನಡೆದು ಬೇರೆ ಬೇರೆ ಸಮೀಕರಣಗಳು ಏರ್ಪಟ್ಟಿವೆ. ಆದರೂ ಅನೇಕ ದೃಷ್ಟಿಗಳಿಂದ ವ್ಯಾನ್‌ಡೆರ್‌ವಾಲ್ಸ್‌ನ ಸಮೀಕರಣಕ್ಕೆ ಇಂದಿಗೂ ಹೆಚ್ಚು ಮನ್ನಣೆ ಇದೆ.

ಒಂದು ಪಾತ್ರೆಯಲ್ಲಿರುವ ಕೋಟ್ಯಂತರ ಅಣುಗಳ ಸಮುದಾಯದಲ್ಲಿ ಮಧ್ಯದಲ್ಲಿರುವ ಯಾವುದೇ ಒಂದು ಅಣುವನ್ನು ಗಮನಿಸಿದರೂ ಅದರ ಸುತ್ತಲೂ ಎಲ್ಲ ದಿಕ್ಕುಗಳಲ್ಲೂ ಇತರ ಅಣುಗಳು ಏಕರೀತಿಯಾದ ಸಾಂದ್ರತೆಯಿಂದ ಕೂಡಿರುತ್ತವೆ. ಹೀಗಿರುವುದರಿಂದ, ಮಧ್ಯದಲ್ಲಿರುವ ಅಣುವಿನ ಮೇಲೆ ಅದನ್ನು ಆವರಿಸಿರುವ ಇತರ ಅಣುಗಳ ಸೆಳೆತಗಳನ್ನು ಸಮಗ್ರವಾಗಿ ನೋಡಿದಾಗ ಪರಿಣಾಮ ಶೂನ್ಯವಾಗಿರುತ್ತದೆ. ಆದರೆ ಅದೇ ಅಣು ಪಾತ್ರೆಯ ಗೋಡೆಯ ಹತ್ತಿರಕ್ಕೆ ಬಂದಾಗ ಒಳಕ್ಕೆ ಎಳೆಯುತ್ತಿರುವ ಸೆಳೆತಗಳ ಪ್ರಭಾವದಿಂದ ಗೋಡೆಗೆ ಡಿಕ್ಕಿ ಹೊಡೆಯುವಾಗ ಅದರ ರಭಸ ಸ್ವಲ್ಪಮಟ್ಟಿಗೆ ಕುಗ್ಗುತ್ತದೆ. ಹೀಗಾಗಿ ಅಣು ತೋರಿಸುವ ಒತ್ತಡ ಆದರ್ಶ ಅನಿಲದ ಒತ್ತಡಕ್ಕಿಂತ ಸ್ವಲ್ಪಮಟ್ಟಿಗೆ ಕಡಿಮೆ ಇರುತ್ತದೆ. ಈ ವ್ಯತ್ಯಾಸ ಅನಿಲದ $P$ ಎಂದರೆ ಸಾಂದ್ರತೆಯ ವರ್ಗಕ್ಕೆ ಸಂಬಂಧಿಸಿದೆ. ಈ ಧಾಟಿಯಲ್ಲಿ ಚರ್ಚಿಸಿ ಅನಿಲದ ಒತ್ತಡ $P$ ಇದ್ದರೆ, $P + ap^2$ ಅಥವಾ $\left(p+\frac{a}{v^2}\right)$ ಎಂಬುದನ್ನು ಆದರ್ಶ ಅನಿಲದ $P$ ಎಂಬ ಸ್ಥಾನದಲ್ಲಿ ಬರೆಯುತ್ತಾರೆ.

ಅಣುಗಳಿಗೆ ಗಾತ್ರವಿಲ್ಲ ಎಂದು ಊಹಿಸುವುದು ಸರಿಯಲ್ಲವೆಂದು ಕಂಡುಬಂದದ್ದರಿಂದ V ಗಾತ್ರದ ಪಾತ್ರೆಯಲ್ಲಿ (v-b) ಎಂಬಷ್ಟು ಪ್ರದೇಶ ಮಾತ್ರ ಶೂನ್ಯವಾಗಿದೆ ಎಂದೂ ಇದರಲ್ಲಿ ಎಲ್ಲ ಅಣುಗಳೂ ಚಲಿಸುತ್ತಿರುವುದೆಂದೂ ಭಾವಿಸಿ V ಬದಲು (v-b) ಎಂದು ಬರೆಯುತ್ತಾರೆ. ಈಗ $\left(p+\frac{a}{v^2}\right)\ (v-b)=RT$ ಎಂಬ ರೂಪವನ್ನು ತಾಳುವ ಸಮೀಕರಣಕ್ಕೆ ವ್ಯಾನ್‌ಡೆರ್‌ವಾಲ್ಸ್‌ನ ಸಮೀಕರಣ ಎನ್ನುತ್ತಾರೆ.

ಅನೇಕ ದೃಷ್ಟಿಕೋನಗಳಿಂದ ನಿಜವಾದ ಅನಿಲಗಳ ನಡವಳಿಕೆಯನ್ನು ಈ ಸಮೀಕರಣ ಚೆನ್ನಾಗಿ ನಿರೂಪಿಸುತ್ತದೆ.

**ದ್ರವಗಳ ಮತ್ತು ಘನವಸ್ತುಗಳ ಅಣುಚಲನವಾದ :** ವಸ್ತುವಿನ ಉಳಿದ ಎರಡು ಸ್ಥಿತಿಗಳಾದ ದ್ರವ ಮತ್ತು ಘನ ಸ್ಥಿತಿಗಳಿಗೆ ಅನ್ವಯಿಸುವ ಅಣುಚಲನವಾದ ಇನ್ನೂ ಸ್ಪಷ್ಟವಾಗಿ ರೂಪುಗೊಂಡಿಲ್ಲ. ಅವುಗಳನ್ನು ಕುರಿತು ಈ ಕೆಳಕಂಡ ಅಂಶಗಳನ್ನು ಮಾತ್ರ ಹೇಳಬಹುದಾಗಿದೆ.

ದ್ರವ ಪದಾರ್ಥಗಳಲ್ಲಿ ಅಣುಗಳು ಹೆಚ್ಚು ಸುಲಭವಾಗಿ ತಮ್ಮ ಸ್ಥಾನದಿಂದ ದೂರ ದೂರಕ್ಕೆ ಚಲಿಸಬಲ್ಲುವು. ಅಲ್ಲದೆ ವಿಸರಣ (ಡಿಫ್ಯೂಷನ್) ಕ್ರಮದಲ್ಲಿ ಇವು ದೂರಕ್ಕೆ ಹರಡಬಲ್ಲವು. ಘನ ವಸ್ತುಗಳಲ್ಲೂ ದ್ರವಗಳಲ್ಲೂ ಅಣುಗಳ ನಡುವೆ ಇರುವ ಅಂತರ ತೀರ ಕಡಿಮೆ. ಈ ಕಾರಣದಿಂದ ಪ್ರತಿಯೊಂದು ಅಣುವೂ ತನ್ನ ಸಮೀಪದಲ್ಲಿರುವ ಇತರ ಅಣುಗಳ ಮೇಲೆ ಅಪಾರ ಪ್ರಭಾವವನ್ನು ಬೀರುತ್ತದೆ. ಇದರಿಂದ ಸಹಜವಾಗಿ

ಆಂತರಿಕ ಒತ್ತಡ ಏರ್ಪಡುತ್ತದೆ. ಇದನ್ನು ಅಂತಸ್ಥ ಒತ್ತಡ (ಇಂಟ್ರಿನ್ಸಿಕ್ ಪ್ರೆಷರ್) ಎಂದು ಕರೆದಿದ್ದಾರೆ. ಇದರ ದೆಸೆಯಿಂದ ಬೇರೆ ಬೇರೆ ಅಣುಗಳು ಒಂದನ್ನೊಂದು ಬಲವಾಗಿ ಕಚ್ಚಿಕೊಂಡು ಇರುವುದು ಮಾತ್ರವೇ ಅಲ್ಲದೆ ಪದಾರ್ಥದ ಗಾತ್ರವನ್ನು ಕುಗ್ಗಿಸಲು ನಾವು ಮಾಡುವ ಎಲ್ಲ ಪ್ರಯತ್ನಗಳನ್ನೂ ತೀವ್ರವಾಗಿ ವಿರೋಧಿಸುತ್ತವೆ. ಈ ವಿಚಾರ ನಮ್ಮ ಅನುದಿನದ ಅನುಭವದಲ್ಲಿದೆ.

ಘನ ಪದಾರ್ಥಗಳಿಗೆ ನಿರ್ದಿಷ್ಟವಾದ ರೂಪ ಅಥವಾ ಆಕಾರ ಮತ್ತು ಗಾತ್ರಗಳಿವೆ. ಅವುಗಳ ಮೇಲೆ ಹೊರಗಿನಿಂದ ಯಾವ ಬಗೆಯ ಬಲವನ್ನೂ ಪ್ರಯೋಗಿಸದಿರುವವರೆಗೆ ಆ ಘನಪದಾರ್ಥಗಳ ರೂಪ ಮತ್ತು ಗಾತ್ರ ತಮ್ಮ ನಿರ್ದಿಷ್ಟವಾದ ಸ್ಥಿತಿಯಲ್ಲಿರುತ್ತವೆ. ಘನ ಪದಾರ್ಥದಲ್ಲಿನ ಅಣುಗಳು ಸ್ವಸ್ಥಾನದಿಂದ ದೂರಕ್ಕೆ ಹೋಗದೆ, ಅಲ್ಲಲ್ಲಿ ಹತ್ತಿರದ ಸ್ವಸ್ಥಾನದಲ್ಲಿ, ಹಿಂದಕ್ಕೂ ಮುಂದಕ್ಕೂ ಗಡಿಯಾರದ ಲೋಲಕದಂತೆ ಸ್ಪಂದಿಸುತ್ತಿರುತ್ತವೆ. ಈ ಸ್ಪಂದನ ಬಹಳ ರಭಸದಿಂದ ನಡೆಯುತ್ತಿರುತ್ತದೆ. ಅಣು ಸ್ವಸ್ಥಾನದಿಂದ ಹೆಚ್ಚು ದೂರ ಯಾವ ದಿಕ್ಕಿಗೂ ಕದಲುವುದಿಲ್ಲ. ಘನ ವಸ್ತುವಿನಲ್ಲಿನ ಅಣುಗಳ ರಚನೆಯಲ್ಲಿ ಸೇರಿರುವ ಪರಮಾಣುಗಳು ಸ್ಪೇಸ್ ಲ್ಯಾಟಿಸ್ ಎಂಬ ಕ್ರಮಬದ್ಧ ಆವರ್ತನೀಯ ಜಾಲಕ ವ್ಯವಸ್ಥೆಯಲ್ಲಿರುತ್ತವೆ ಎಂದು ಡಬ್ಲ್ಯೂ. ಎಚ್. ಬ್ರ್ಯಾಗ್ ಮತ್ತು ಡಬ್ಲ್ಯೂ. ಎಲ್. ಬ್ರ್ಯಾಗ್ ತಮ್ಮ ಶೋಧನೆಗಳಿಂದ ಕಂಡುಕೊಂಡು ತಿಳಿಸಿದ್ದಾರೆ. ಪದಾರ್ಥದ ಉಷ್ಣತೆಯನ್ನು ಹೆಚ್ಚಿಸಿದರೆ ಪರಮಾಣುಗಳು ಈ ಜಾಲರಿಯಲ್ಲಿ ಸ್ಪಂದಿಸುವುದು ಹೆಚ್ಚು ಪರಿಣಾಮಕಾರಿಯಾಗಿಯೂ ಶಕ್ತಿಯುತವೂ ಆಗಿರುತ್ತದೆ ಎಂದೂ ತಿಳಿಸಿದ್ದಾರೆ. (ಪಿ.ಎಸ್.)

**ಅಣುಬಟ್ಟಿ ಇಳಿಸುವ ವಿಧಾನ (ಅಣುಬಟ್ಟೀಕರಣ) :** ಸಂಯುಕ್ತವಸ್ತುಗಳನ್ನು ಅಧಿಕ ಶೂನ್ಯತೆ ಮತ್ತು ಕಡಿಮೆ ಉಷ್ಣತೆಯ ಮಟ್ಟದಲ್ಲಿ ಭಟ್ಟಿ ಇಳಿಸುವ ಕ್ರಮವಿದು (ಮಾಲಿಕ್ಯುಲರ್ ಡಿಸ್ಟಿಲೇಷನ್). ಹೀಗೆ ಮಾಡುವಾಗ ವಸ್ತುವಿನ ರಚನೆ ಮತ್ತು ಸ್ವರೂಪಕ್ಕೆ ಅಪಾಯ ಸಂಭವಿಸದಂತೆ ಎಚ್ಚರವಹಿಸಲಾಗುವುದು. ಈ ಪದ್ಧತಿಯಲ್ಲಿ ದ್ರವೀಕರಿಸುವ ಮೇಲ್ಮೈ ಬಟ್ಟಿ ಇಳಿಸಲಾಗುವ ದ್ರವಕ್ಕೆ (ಡಿಸ್ಟಿಲೆಂಡ್) ಸಾಧ್ಯವಾದ ಮಟ್ಟಿಗೆ ಸಮೀಪದಲ್ಲಿರುವಂತೆ ಮಾಡಲಾಗುವುದು. ಇದರಿಂದಾಗಿ ನಿರ್ಗಮಿಸುವ ಅಣಗಳು ಒಂದಕ್ಕೊಂದು ಡಿಕ್ಕಿ ಹೊಡಿದು ಮತ್ತೆ ದ್ರವ ರೂಪಕ್ಕೆ ಹಿಂದಿರುಗುವುದಕ್ಕೆ ಬದಲಾಗಿ ಸಾಂದ್ರಕ (ಕಂಡೆನ್ಸರ್) ಮುಖಾಂತರ ಜಾಡಿಯನ್ನು ಪ್ರವೇಶಿಸುತ್ತವೆ.


ಅಣುಬಟ್ಟಿ ಇಳುಸುವ ವಿಧಾನ

ಅಣುಬಟ್ಟಿ ಇಳಿಸುವುದಕ್ಕೆ ಉಪಯೋಗಿಸುವ ಸಲಕರಣೆಗೆ ಮಾಲಿಕ್ಯೂಲರ್ ಸ್ಟಿಲ್ ಎಂದು ಹೆಸರು. ಇವುಗಳಲ್ಲಿ ಎರಡು ಬಗೆಗಳಿವೆ–ಒಂದು ತೆರೆದ ಮಾರ್ಗದ ಬಟ್ಟಿಯಂತ್ರ (ಓಪನ್ ಪಾತ್ ಸ್ಟಿಲ್) ಮತ್ತೊಂದು ಹ್ರಸ್ವ ಮಾರ್ಗದ ಬಟ್ಟಿಯಂತ್ರ (ಷಾರ್ಟ್ ಪಾತ್ ಸ್ಟಿಲ್). ಸಾಮಾನ್ಯವಾಗಿ ತೆರೆದ ಮಾರ್ಗದ ಸಲಕರಣೆ ದೀರ್ಘಮಾರ್ಗದ್ದಾಗಿದ್ದು ಹ್ರಸ್ವಮಾರ್ಗದ್ದನ್ನೂ ಒಳಗೊಂಡಿರುತ್ತದೆ. ಇವುಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಒಂದು ಸಲಕರಣೆಯನ್ನು ಚಿತ್ರದಲ್ಲಿ ತೋರಿಸಲಾಗಿದೆ.

ಬಹಳ ಉಪಯುಕ್ತವಾದ ಈ ಯಂತ್ರ ಪ್ರಯೋಗಶಾಲೆಯಲ್ಲಿ ನಿತ್ಯಬಳಕೆಯಲ್ಲಿದೆ. ಈ ಸಲಕರಣೆಯಲ್ಲಿ ಸಾಂದ್ರಕವನ್ನು ಬಟ್ಟಿಇಳಿಸಬೇಕಾದ ದ್ರವದ ಸಮೀಪದಲ್ಲಿ ಇಡಲಾಗುತ್ತದೆ. ದ್ರವೀಕರಿಸುವ ಮೇಲ್ಮೈಗೂ ಬಟ್ಟಿಇಳಿಸಬೇಕಾದ ದ್ರವಕ್ಕೂ ನಡುವಣ ಅಂತರ ಕಡಿಮೆಯಾದಂತೆ ಬಟ್ಟಿಯಂತ್ರದ ದಕ್ಷತೆ ಹೆಚ್ಚುತ್ತದೆ. ಈ ರೀತಿ ಮಾಡುವುದರಿಂದ ಅಣಬಟ್ಟಿ ಇಳಿಸುವ ವೇಗ ಹೆಚ್ಚಾಗಿ ಕನಿಷ್ಠಪಕ್ಷ ಶೇ. 90ರಷ್ಟು ಅಣುಗಳನ್ನು ಅವು ನಿರ್ಗಮಿಸುವ ಮೊದಲೇ ದ್ರವೀಕರಿಸಬಹುದು.

ಸ್ಥಿರವಲ್ಲದ ಅನೇಕ ಸಂಯುಕ್ತವಸ್ತುಗಳನ್ನು ಅವುಗಳ ರಚನೆಗೆ ಸ್ವಲ್ಪವೂ ಧಕ್ಕೆ ಬಾರದಂತೆ ಈ ಬಟ್ಟಿಯಂತ್ರದಲ್ಲಿ ಕಾಯಿಸಬಹುದು. ಆದರೆ, ಇತರ ಅಣಬಟ್ಟಿ ಯಂತ್ರಗಳಲ್ಲಿ ಅವು ತಮ್ಮ ಸ್ವರೂಪವನ್ನು ಕಳೆದುಕೊಳ್ಳಬಹುದು ಇಲ್ಲವೇ ಆಸ್ಫೋಟನೆ ಹೊಂದಬಹುದು.

ಅಣಬಟ್ಟಿ ಇಳಿಸುವ ಈ ವಿಧಾನವನ್ನು ಕಡಿಮೆ ಬಾಷ್ಪಶೀಲ (ಲೋ ವಾಲಟೈಲ್) ಸಂಯುಕ್ತವಸ್ತುಗಳನ್ನು ಶುದ್ಧೀಕರಿಸಲು ಇಲ್ಲವೇ ಪೂರ್ವಭಾವಿಯಾಗಿ ಬೇರ್ಪಡಿಸಲು ಬಳಸಿಕೊಳ್ಳಬಹುದು. ಕಡಿಮೆ ಬಾಷ್ಪಶೀಲ ಅಂದರೆ ಪದಾರ್ಥವೊಂದು ಸಾಧಾರಣ ಉಷ್ಣತೆಗಳಲ್ಲಿಯೇ ಬೇಗ ಆವಿಯಾಗುವ ಗುಣ. ಉದಾಹರಣೆಗಾಗಿ, ಎ ಅನ್ನಾಂಗ ಮತ್ತು ಬಿ ಅನ್ನಾಂಗಗಳೆಂಬ ಸೂಕ್ಷ್ಮ ಸಂಯುಕ್ತವಸ್ತುಗಳನ್ನು ಮೀನೆಣ್ಣೆ ಮತ್ತು ಸಸ್ಯಸಂಬಂಧವಾದ ಎಣ್ಣೆಗಳಿಂದ ಅನುಕ್ರಮವಾಗಿ ಬೇರ್ಪಡಿಸಲು ಈ ವಿಧಾನವನ್ನು ಹೆಚ್ಚಾಗಿ ಬಳಸಲಾಗುತ್ತಿದೆ. (ಎಂ.ಪಿ.ವಿ.)

**ಅಣುರಚನಾಸ್ವರೂಪ, ರಾಸಾಯನಿಕ :** ರಾಸಾಯನಿಕ ಪದಾರ್ಥಗಳ ಅತ್ಯಂತ ಸಣ್ಣ ಕಣಗಳಾಗಿರುವ ಅಣುಗಳು ಒಂದೇ ಜಾತಿಯ ಅಥವಾ ಹಲವಾರು ಜಾತಿಯ ಹಲವು ಪರಮಾಣುಗಳಿಂದ ರಚಿತವಾಗಿವೆ. ಈ ಪರಮಾಣುಗಳು ರಾಸಾಯನಿಕ ಬಂಧಗಳಿಂದ (ಬಾಂಡ್ಸ್) ಒಂದಕ್ಕೊಂದು ಹಿಡಿಯಲ್ಪಟ್ಟಿವೆ. ಈ ಬಂಧಗಳಲ್ಲಿ ನಡುವೆ ಒಂದು ನಿರ್ದಿಷ್ಟ ಅಂತರವಿರುತ್ತದೆ. ಇದನ್ನು ಕ್ರಮವಾಗಿ ಬಂಧನ ಕೋನ (ಬಾಂಡ್ ಆ್ಯಂಗಲ್) ಮತ್ತು ಬಂಧನ ಅಂತರ (ಬಾಂಡ್ ಡಿಸ್ಟೆನ್ಸ್) ಎಂದು ಕರೆಯಬಹುದು. ಇವುಗಳನ್ನೇ ಅಣುವಿನ ಪ್ರಸಕ್ತ ನಿಯತಾಂಕಗಳು (ಮಾಲೆಕ್ಯುಲರ್ ಪಾರಾಮೀಟರ್ಸ್) ಎಂದು ಕರೆಯಲಾಗುತ್ತದೆ.

ಸಾಧಾರಣವಾಗಿ, ಅಣು ರಚನಾಸ್ವರೂಪವನ್ನು ತಿಳಿಯಬೇಕಾದರೆ, ಅದರಲ್ಲಿಯೂ ಪರಮಾಣುಗಳು ಒಂದಕ್ಕೊಂದು ವಹಿಸಿಕೊಂಡಿರುವ ನಿರ್ದಿಷ್ಟಸ್ಥಾನಗಳನ್ನೂ ಅವುಗಳ ಮಧ್ಯೆ ಇರುವ ಬಂಧನಾಂತರಗಳನ್ನೂ ಬಂಧನಗಳ ಮಧ್ಯೆ ಅಡಕವಾದ ಬಂಧನ ಕೋನಗಳನ್ನೂ ಅರಿತುಕೊಳ್ಳಬೇಕು. ಅಣುರಚನಾಸ್ವರೂಪವನ್ನು ಸಂಶೋಧಿಸುವವರು ಇದರ ಜೊತೆಗೆ ಪರಮಾಣುಗಳ ಸನಿಹದ ವಿದ್ಯುದಂಶಸಾಂದ್ರತೆ ಮತ್ತು ಸನ್ನಿವೇಶಗಳು, ಬಂಧನಗಳನ್ನು ಮುರಿಯಲು ಬೇಕಾಗುವ ಶಕ್ತಿ (ಬಂಧನಶಕ್ತಿ–ಬಾಂಡ್ ಎನರ್ಜಿ) ಮುಂತಾದುವುಗಳನ್ನು ತಿಳಿಯಬೇಕಾಗುತ್ತದೆ.

ಅಣುರಚನಾಸ್ವರೂಪದ ತಿಳಿವು ಬಹು ವಿಧಗಳಲ್ಲಿ ಪ್ರಯೋಜನಕಾರಿಯಾಗುತ್ತದೆ. ಎಷ್ಟೋ ರಾಸಾಯನಿಕ ಪದಾರ್ಥಗಳ ಜೀವ ವೈಜ್ಞಾನಿಕ ಕ್ರಿಯಾಶಕ್ತಿಗಳು ಅಣುರಚನಾ ಸ್ವರೂಪವನ್ನು ಅವಲಂಬಿಸಿವೆ. ಪ್ರಸಿದ್ಧ ವಿಜ್ಞಾನಿಗಳಾದ ಪಾಲಿಂಗ್ ಮತ್ತಿತರು, ಮಾನವ ದೇಹದಲ್ಲಿನ ರಾಸಾಯನಿಕ ಪದಾರ್ಥಗಳಲ್ಲಿ ಕೆಲವು ಅಸಾಮಾನ್ಯ ಸ್ವರೂಪ ಹೊಂದಿರುವುದರ ಪರಿಣಾಮವೇ ಅವನ ಮಾನಸಿಕ ವಿಕಾರಗಳಿಗೆ ಕಾರಣವಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

19ನೆಯ ಶತಮಾನದಲ್ಲಿ, ಕೆಲವು ಇಂಗಾಲದ ಸಂಯುಕ್ತಪದಾರ್ಥಗಳ ಸ್ವರೂಪ ಸಿದ್ಧಾಂತಗಳು (ಆರ್ಗ್ಯಾನಿಕ್ ಸ್ಟ್ರಕ್ಚರಲ್ ಥಿಯರಿ) ಇದ್ದುವು. ಆದರೆ ಅವೆಲ್ಲವೂ ಬಹಳ ಪರೋಕ್ಷ ಸಾಕ್ಷಿಗಳನ್ನವಲಂಬಿಸಿದ್ದುವಲ್ಲದೆ, ಕೇವಲ ಕೆಲವೇ ಸರಳ ರಾಸಾಯನಿಕ ಕ್ರಿಯೆಗಳನ್ನು ಮಾತ್ರ ವಿಶದಪಡಿಸುತ್ತಿದ್ದುವು. 1895ರ ಈಚೆಗೆ, ವಿಕಿರಣಶಕ್ತಿ (ರೇಡಿಯೋ ಆ್ಯಕ್ಟಿವಿಟಿ), ಪರಮಾಣು ಮತ್ತು ಅಣುಗಳಲ್ಲಿಯ ವಿದ್ಯುದಂಶದ ತಿಳಿವು ಉಂಟಾದಮೇಲೆಯೇ ಒಂದೊಂದು ಪರಮಾಣುವಿನ ಗುಣವಿಶೇಷಗಳನ್ನೂ ವಿಶದಪಡಿಸಲು ಸಾಧ್ಯವಾಯಿತು. ಮಧ್ಯಸ್ಥ ಧನವಿದ್ಯುದಂಶದ ಸುತ್ತ ತಿರುಗುವ ಋಣವಿದ್ಯುದಂಶಗಳ ಮಾದರಿಯ ಪರಮಾಣುಗಳು ಮತ್ತು ಇಂಥ ಪರಮಾಣುಗಳಿಂದ ಕೂಡಿದ ಅಣುಗಳು ಕ್ವಾಂಟಂ ಸಿದ್ಧಾಂತದ ಆಧಾರದ ಮೇಲೆ ಬಳಕೆಗೆ ಬಂದುವು. ಕ್ವಾಂಟಂ ಸಿದ್ಧಾಂತದ ತತ್ತ್ವಗಳ ಬಳಕೆಯಿಂದ ರಾಸಾಯನಿಕ ಬಂಧನ ಮತ್ತು ಅಣುರಚನಾಸ್ವರೂಪದ ಮೂಲ ಅರಿವೂ ವ್ಯಾಪಕವಾಯಿತು.

ಅಣುರಚನಾಸ್ವರೂಪವನ್ನು ಅರಿಯುವಲ್ಲಿ ಸಾಮಾನ್ಯವಾಗಿ ಅನುಸರಿಸುವ ಕೆಲವು ವಿಧಾನಗಳನ್ನು ಇಲ್ಲಿ ಕೊಡಲಾಗಿದೆ :

**I. ರೋಹಿತದರ್ಶಕ ವಿಧಾನಗಳು (ಸ್ಪೆಕ್ಟ್ರೋಸ್ಕೋಪಿಕ್ ಮೆಥಡ್ಸ್) :**

(i) ಅತಿರಕ್ತವರ್ಣರೋಹಿತ ವಿನ್ಯಾಸ ವಿಜ್ಞಾನ (ಇನ್‌ಫ್ರಾರೆಡ್‌ಸ್ಪೆಕ್ಟ್ರೋಸ್ಕೋಪಿ)

(ii) ರಾಮನ್ ವರ್ಣರೋಹಿತ ವಿನ್ಯಾಸ ವಿಜ್ಞಾನ

(iii) ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ಅನುನಾದ (ರೆಸೊನೆನ್ಸ್)

**II ನಮನ ವಿಧಾನಗಳು (ಡಿಫ್ರಾಕ್ಷನ್ ಮೆಥಡ್ಸ್)**

(i) ಕ್ಷ–ಕಿರಣಗಳ ನಮನ (ಎಕ್ಸ್‌ರೇ ಡಿಫ್ರಾಕ್ಷನ್)

(ii) ಋಣವಿದ್ಯುದಂಶ ಕಿರಣಗಳ ನಮನ (ಎಲೆಕ್ಟ್ರಾನ್ ಡಿಫ್ರಾಕ್ಷನ್)

**III ಭೌತಗುಣಪ್ರಮಾಣಗಳನ್ನು ಆಧರಿಸಿದ ವಿಧಾನಗಳು :**

(i) ವಿದ್ಯುತ್ ಧ್ರುವಯುಗ್ಮ ಭ್ರಮಣಶಕ್ತಿ (ಎಲೆಕ್ಟ್ರಿಕ್ ಡೈಪೋಲ್ ಮೊಮೆಂಟ್)

(ii) ಮೋಲಾರ್ ವಕ್ರೀಭವನ (ಮೋಲಾರ್ ರಿಫ್ರಾಕ್ಷನ್)

(iii) ಕಾಂತತಾ ಭ್ರಮಣಶಕ್ತಿ (ಮಾಗ್ನೆಟಿಕ್ ಮೊಮೆಂಟ್ಸ್).

ಈ ವಿಧಾನಗಳಿಗೆ ಮತ್ತು ಅಣುರಚನಾಸ್ವರೂಪಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನು ಇಲ್ಲಿ ಕೊಡಲಾಗಿದೆ.

**I ರೋಹಿತ ದರ್ಶಕ ವಿಧಾನಗಳು :**

i. ಅತಿರಕ್ತವರ್ಣರೋಹಿತ ವಿನ್ಯಾಸ ವಿಜ್ಞಾನ : ಪದಾರ್ಥಗಳ ಮತ್ತು ಈ ಅತಿರಕ್ತವರ್ಣ ಕಿರಣಗಳ ಪರಸ್ಪರ ಪ್ರತಿಕ್ರಿಯೆಯಿಂದ ಉಂಟಾಗುವ ಪರಿಣಾಮಗಳ ಪರಿಶೀಲನೆಯಿಂದ ಪದಾರ್ಥಗಳ ಗುಣವಿಶೇಷಗಳನ್ನು ಅರಿಯಲು ಭೌತವಿಜ್ಞಾನಿಗೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ತರಂಗಮಾನ 2.5–50 ಮೈಕ್ರಾನ್ (1 ಮೈಕ್ರಾನ್= $10^{-4}$ ಸೆಂಮೀ) ಇರುವ ವಿದ್ಯುತ್ಕಾಂತ ರಕ್ತ ತರಂಗಗಳ ಭಾಗವೇ ಈ ಅತಿರಕ್ತ ವರ್ಣಕಿರಣಗಳ ಬಹುಮುಖ್ಯ ಭಾಗವೆನ್ನಬಹುದು. ಅಣುಗಳಲ್ಲಿ ಮತ್ತು ರಾಸಾಯನಿಕ ಹರಳುಗಳಲ್ಲಿ (ಕ್ರಿಸ್ಟಲ್) ಇರುವ ಪರಮಾಣುಗಳ ಸಹಜಸ್ಪಂದನದ ಕಂಪನಾವರ್ತಗಳು (ನ್ಯಾಚುರಲ್ ವೈಬ್ರೇಷನ್ ಫ್ರೀಕ್ವೆನ್ಸಿ) ಈ ಭಾಗದಲ್ಲಿ ಅಡಕವಾಗಿರುತ್ತವೆ. ಕೆಲವು ಅನಿಲರೂಪದ ಪದಾರ್ಥಗಳಲ್ಲಿ ಅಣುಗಳ ಚಕ್ರಗತಿಗೆ ಸಂಬಂಧಿಸಿದ ಕಂಪನಾವರ್ತಗಳು (ರೊಟೇಷನಲ್ ಫ್ರೀಕ್ವೆನ್ಸೀಸ್). ಬಹು ದೂರದ ಅತಿರಕ್ತವರ್ಣದ (ತರಂಗಮಾನ 50 ಮೈಕ್ರಾನ್‌ಗಳ) ಆಚೆ ಇರುತ್ತವೆ. ಪದಾರ್ಥಗಳು ಈ ಕಿರಣಗಳನ್ನು ಹೀರುವುದರಿಂದ ಅತಿರಕ್ತವರ್ಣರೋಹಿತ ಉದ್ಭವಿಸುತ್ತದೆ. ವಿವಿಧ

ಕಂಪನಾವರ್ತಗಳ ಈ ಕಿರಣಗಳನ್ನು ಒಂದು ಪದಾರ್ಥದ ಮೇಲೆ ಕ್ರಮೇಣ ಹಾಯಿಸಿದರೆ, ನಿರ್ದಿಷ್ಟವಾದ ಕೆಲವು ಕಂಪನಾವರ್ತಗಳ ಕಿರಣಗಳನ್ನು ಪದಾರ್ಥ ಹೀರುತ್ತದೆ; ಹೀಗೆ ಹೀರಲ್ಪಟ್ಟ ಕಂಪನಾವರ್ತಗಳು ಪದಾರ್ಥದ ಸಹಜ ಸ್ಪಂದನಕ್ಕೆ ಅಥವಾ ಚಕ್ರಗತಿಗೆ ಸಂಬಂಧಿಸಿರುತ್ತದೆ. ಇದರಿಂದ ಉದ್ಭವಿಸುವ ರೋಹಿತ ಪದಾರ್ಥದ ವಿಶಿಷ್ಟಗುಣವಾಗಿರುತ್ತದೆ; ಏಕೆಂದರೆ, ಈ ರೋಹಿತ ಪದಾರ್ಥದಲ್ಲಿಯ 1 ಪರಮಾಣುಗಳು, 2 ಪರಮಾಣುಗಳ ನಡುವಿನ ಬಂಧನ ಶಕ್ತಿಗಳು ಮತ್ತು 3 ಬಾಹ್ಯಾಕಾಶದಲ್ಲಿನ (ಸ್ಪೇಸ್) ಅಣುವಿನ ಆಕೃತಿ ಅಥವಾ ರಚನಾ ಸ್ವರೂಪಗಳನ್ನು ಅವಲಂಬಿಸಿದೆ. ಪದಾರ್ಥಗಳಲ್ಲಿ ಗುಣವ್ಯತ್ಯಾಸಗಳನ್ನುಂಟು ಮಾಡುವ ಮುಖ್ಯಾಂಶಗಳೇ ಇವುಗಳಾದ್ದರಿಂದ, ಅತಿರಕ್ತವರ್ಣ ರೋಹಿತ ಪದಾರ್ಥದ ವಿಶಿಷ್ಟ ಗುಣವಾಗಿರುತ್ತದೆ. ಇವುಗಳಲ್ಲಿ ಯಾವ ಒಂದು ಅಂಶವನ್ನು ಬದಲಿಸಿದರೂ ರೋಹಿತದ ಸ್ವರೂಪವೇ ಬದಲಾಗುತ್ತದೆ. ಆದ್ದರಿಂದ ಈ ರೋಹಿತವನ್ನು ಅಣುವಿನ ಹಸ್ತಮುದ್ರಿಕೆ (ಮಾಲೆಕ್ಯುಲರ್ ಫಿಂಗರ್‌ಪ್ರಿಂಟ್) ಎಂದು ಕರೆಯುತ್ತಾರೆ. ಇದರಿಂದ ಗೊತ್ತಾಗುವ ಸ್ಪಂದನ ಮತ್ತು ಚಕ್ರಗತಿಗೆ ಸಂಬಂಧಪಟ್ಟ ಕಂಪನಾವರ್ತಗಳಿಂದ ಅಣುವಿನಲ್ಲಿರುವ ವಿವಿಧ ಪರಮಾಣುಬಂಧಗಳನ್ನೂ ಅದರಲ್ಲಿರುವ ನಿರ್ದಿಷ್ಟ ಪರಮಾಣು ಸಮುದಾಯಗಳನ್ನೂ (ಅಟಾಮಿಕ್ ಗ್ರೂಪಿಂಗ್) ಅರಿಯಬಹುದು. ಪರಮಾಣು ಸಮುದಾಯದಲ್ಲಿ ಮಾತ್ರ ವ್ಯತ್ಯಾಸವಿದ್ದು, ಅಣುಸೂತ್ರಗಳು ಒಂದೇ ಆಗಿದ್ದಲ್ಲಿ, ಇದನ್ನು ಅತಿರಕ್ತವರ್ಣರೋಹಿತಗಳ ಸಹಾಯದಿಂದ ಗುರುತಿಸಲು ಸಾಧ್ಯ.

ಈ ರೋಹಿತಗಳ ಸಹಾಯದಿಂದ ಅಣುಗಳ ರಚನಾಸ್ವರೂಪವನ್ನು ಎಲ್ಲ ಸಂದರ್ಭದಲ್ಲೂ ಸಂಪೂರ್ಣವಾಗಿ ಅರಿಯಲು ಕಷ್ಟಸಾಧ್ಯವಾಗಬಹುದು. ಒಂದೊಂದು ಅಣುವಿನ ಗಾತ್ರ ಮತ್ತು ಅದರಲ್ಲಿಯ ತೊಡಕುಗಳಿಗನುಗುಣವಾಗಿ ವಿವಿಧಮಟ್ಟದ ಸಾಫಲ್ಯವನ್ನು ಸಾಧಿಸಬಹುದು. ಈ ರೋಹಿತವಿನ್ಯಾಸದಲ್ಲಿ ಅಣುವಿನ ವಿಶಿಷ್ಟಾನುರೂಪತೆ (ಸಿಮೆಟ್ರಿ) ಬಹಳ ಪ್ರಾಮುಖ್ಯವನ್ನು ಹೊಂದಿದೆ. ಕೆಲವು ಸಣ್ಣ ಮತ್ತು ಕೆಲವು ಹೆಚ್ಚಿನ ಮಟ್ಟದ ವಿಶಿಷ್ಟಾನುರೂಪತೆಯನ್ನು ಹೊಂದಿದ ಅಣುಗಳಲ್ಲಿ, ಅತಿ ಕಡಿಮೆ ಸ್ವತಂತ್ರನಿಯತಾಂಕಗಳು ಸಾಕಾಗಬಹುದು. ಕೇವಲ ಒಂದೆರಡು ಬಂಧನಾಂತರ ಅಥವಾ ಬಂಧನಕೋನಗಳ ಸಹಾಯದಿಂದ ಅಣುವಿನ ಪೂರ್ಣಸ್ವರೂಪವನ್ನು ವಿಶದಪಡಿಸಬಹುದು. ಸಮಪಾರ್ಶ್ವಗಳಿರುವ ಚಿಕ್ಕ ಅಣುಗಳಲ್ಲಿ ಕೇವಲ ಚಕ್ರಗತಿಯ ಕಂಪನಾವರ್ತಗಳಿಂದಲೇ ಈ ಅರಿವನ್ನು ಪಡೆಯಬಹುದು. ಸ್ಪಂದನ ಗತಿಯಲ್ಲಿ ಹೀರಲ್ಪಟ್ಟ ರಶ್ಮಿಗಳ ಅತಿಸೂಕ್ಷ್ಮ ರಚನೆಗಳಿಂದಾಗಿ (ಫೈನ್ ಸ್ಟ್ರಕ್ಚರ್ ಇನ್ ವೈಬ್ರೇಷನಲ್ ಅಬ್ಸಾರ್ಪ್‌ಷನ್), ಅಣುವಿನ ಬಂಧನಾಂತರಗಳನ್ನು ಕಂಡುಹಿಡಿಯಬಹುದು. ಒಂದಕ್ಕಿಂತ ಹೆಚ್ಚು ಬಂಧನಾಂತರಗಳಿದ್ದಲ್ಲಿ, ಅಣುವಿನಲ್ಲಿನ ಕೆಲವು ಮೂಲಧಾತುಗಳನ್ನು, ಅವುಗಳ ಸಮಸ್ಥಾನಿ (ಐಸೊಟೋಪ್) ಮೂಲಧಾತುಗಳಿಂದ ಸ್ಥಾನಪಲ್ಲಟಗೊಳಿಸಿ, ಪರೀಕ್ಷೆಮಾಡುವ ಆವಶ್ಯಕತೆ ಉಂಟಾಗುತ್ತದೆ.

ಬಹುದೊಡ್ಡ ಅಣುಗಳ ರಚನಾಸ್ವರೂಪವನ್ನು ಕಂಡುಹಿಡಿಯುವಾಗ ಈ ನಿಯತಾಂಕಗಳ ಸಂಖ್ಯೆ ಬಹಳ ದೊಡ್ಡದಾಗುತ್ತದೆ. ಈ ಸಂದರ್ಭದಲ್ಲಿ ಅಣುವಿನ ಎಲ್ಲ ಬಂಧನಾಂತರಗಳನ್ನು ಮತ್ತು ಈ ಬಂಧನಕೋನಗಳನ್ನು ಖಚಿತವಾಗಿ ಹೇಳಲು ಕಷ್ಟವಾದರೂ ಅಣುವಿನ ರೂಪವೈಶಿಷ್ಟ್ಯವನ್ನು ಸಾಧಾರಣವಾಗಿ ಹೇಳಬಹುದು. ಅಣುವಿನ ವಿಶಿಷ್ಟಾನುರೂಪತೆಯನ್ನು ಪದಾರ್ಥದ ಅತಿರಕ್ತವರ್ಣರೋಹಿತದ ಅಧ್ಯಯನದಿಂದ ನಿರ್ಣಯಿಸಬಹುದು. ಈ ವಿಶಿಷ್ಟಾನುರೂಪತೆಯ ಜ್ಞಾನದಿಂದ ಅಣುವಿನ ಸ್ಪಂದನ ಕಂಪನಾವರ್ತಗಳ ಸಂಖ್ಯೆಯನ್ನೂ ತಿಳಿಯಬಹುದು. ಇದರ ಜೊತೆಗೆ ರಾಮನ್‌ರೋಹಿತದಿಂದ ಪಡೆದ ಜ್ಞಾನವನ್ನೂ ಸೇರಿಸಿಕೊಂಡರೆ ಇನ್ನೂ ಹೆಚ್ಚಿನ ದೃಢತೆಯಿಂದ ಅಣುಸ್ವರೂಪವನ್ನು ನಿರ್ಣಯಿಸಬಹುದು.

**ii. ರಾಮನ್ ವರ್ಣರೋಹಿತ ವಿನ್ಯಾಸ :** ತೀಕ್ಷ್ಣವಾದ ಏಕವರ್ಣೀಯ ಬೆಳಕಿನ ಕಿರಣಗಳನ್ನು ಒಂದು ಪದಾರ್ಥದ ಮೇಲೆ ಲಂಬವಾಗಿ ಬೀಳುವಂತೆ ಮಾಡಿದಾಗ, ಅವು ಚದುರುತ್ತವೆ. ಹೀಗೆ ಪಾರ್ಶ್ವಕ್ಕೆ ಚದರಿಸಲ್ಪಟ್ಟ ಕಿರಣಗಳನ್ನು ರೋಹಿತಗ್ರಾಹಕದ (ಸ್ಪೆಕ್ಟ್ರೋಗ್ರಾಫ್) ಸಹಾಯದಿಂದ ಛಾಯಾಗ್ರಹಣಮಾಡಬಹುದು. ಇಂಥ ಛಾಯಾಗ್ರಹಣವನ್ನು ಪರೀಕ್ಷಿಸಿದಲ್ಲಿ ಪತನರಶ್ಮಿಗೆ (ಇನ್ಸಿಡೆಂಟ್ ರೇ) ಸಂಬಂಧಿಸಿದ ಕಂಪನಾವರ್ತದ ಬಹು ತೀಕ್ಷ್ಣರೇಖೆಯೂ ಅದರ ಎರಡು ಪಾರ್ಶ್ವದಲ್ಲಿಯೂ ಸಮನಾದ ಅಂತರದಲ್ಲಿ ಮೂಡಿರುವ ಬಹುಸೂಕ್ಷ್ಮ ರೇಖೆಗಳೂ ಕಂಡುಬರುತ್ತವೆ. ಈ ಸೂಕ್ಷ್ಮರೇಖೆಗಳ ಕಂಪನಾವರ್ತಗಳು ಪತನರಶ್ಮಿರೇಖೆಗಿಂತ ಒಂದು ಪಕ್ಕದಲ್ಲಿ ಸಣ್ಣವೂ ಇನ್ನೊಂದು ಪಕ್ಕದಲ್ಲಿ ದೊಡ್ಡವೂ ಆಗಿರುತ್ತವೆ. ಈ ಸೂಕ್ಷ್ಮ ರೇಖೆಗಳನ್ನು ಮೊದಲಬಾರಿಗೆ (1928) ಭಾರತದ ಸರ್ ಸಿ. ವಿ. ರಾಮನ್ ಮತ್ತು ಅವರ ಸಹೋದ್ಯೋಗಿ ಕೆ.ಎಸ್. ಕೃಷ್ಣನ್‌ರವರು ಸಂಶೋಧನೆ ಮಾಡಿದರು. ಇದಕ್ಕೆ ಮೊದಲು ಜರ್ಮನಿಯ ಸ್ಮೆಕಲ್‌ರವರು ಈ ಸೂಕ್ಷ್ಮರೇಖೆಗಳ ಅಸ್ತಿತ್ವವನ್ನು ತತ್ತ್ವಶಃ ಪ್ರತಿಪಾದಿಸಿದ್ದರು. ಈ ಭೌತಿಕ ಘಟನೆಗೆ ರಾಮನ್ ಪರಿಣಾಮ ಎಂದೂ ಪತನರಶ್ಮಿ ರೇಖೆ ಮತ್ತು ಇತರ ಸೂಕ್ಷ್ಮರೇಖೆಗಳನ್ನೊಳಗೊಂಡ ಛಾಯಾಗ್ರಹಣಕ್ಕೆ ರಾಮನ್ ರೋಹಿತ ಎಂದೂ ಕರೆಯುತ್ತಾರೆ.

ಈ ವರ್ಣರೋಹಿತದ ಸೂಕ್ಷ್ಮರೇಖೆಗಳನ್ನೂ ರಾಮನ್ ರೇಖೆಗಳು ಎಂದು ಕರೆಯಲಾಗಿದೆ. ರಾಮನ್ ರೇಖೆಗಳಲ್ಲಿ ಪತನರಶ್ಮಿರೇಖೆಗಳಿಗಿಂತ ಕಡಿಮೆ ಕಂಪನಾವರ್ತವುಳ್ಳ ರೇಖೆಗಳನ್ನು ಸ್ಟೋಕ್ಸ್–ರಾಮನ್ ರೇಖೆಗಳೆಂದೂ ಅದಕ್ಕೂ ಹೆಚ್ಚಿನ ಕಂಪನಾವರ್ತವುಳ್ಳ ರೇಖೆಗಳನ್ನು ಆ್ಯಂಟಿಸ್ಟೋಕ್ಸ್–ರಾಮನ್ ರೇಖೆಗಳೆಂದೂ ಕರೆಯುತ್ತಾರೆ.

ಪದಾರ್ಥದಲ್ಲಿನ ಅಣುಗಳು ಪತನರಶ್ಮಿಯ ಜ್ಯೋತಿಬಿಂದುಗಳನ್ನು (ಫೋಟಾನ್) ಸಂಧಿಸಿದಾಗ ಅವೆರಡರ ಮಧ್ಯೆ ಶಕ್ತಿ ಸ್ಥಳಾಂತರವಾಗುವುದೇ ಈ ಕಂಪನಾವರ್ತದಲ್ಲಿನ ಬದಲಾವಣೆಗೆ ಕಾರಣವೆಂದು ನಂಬಲಾಗಿದೆ. ಹಾಗೆ ಸ್ಥಳಾಂತರವಾದ ಶಕ್ತಿ ಅಣುವಿನ ಸ್ಪಂದನ ಅಥವಾ ಚಕ್ರಗತಿಯಲ್ಲಿ ಬದಲಾವಣೆಯನ್ನುಂಟುಮಾಡಬಹುದು. ಆದ್ದರಿಂದ ಪತನರಶ್ಮಿರೇಖೆ ಮತ್ತು ರಾಮನ್ ರೇಖೆಗಳ ನಡುವಿನ ವ್ಯತ್ಯಾಸಗಳು, ಅಣುವಿನ ಸ್ಪಂದನ ಅಥವಾ ಚಕ್ರಗತಿಯ ಕಂಪನಾವರ್ತಗಳೇ ಆಗಿದ್ದು ಪದಾರ್ಥದ ವಿಶಿಷ್ಟ ಗುಣಗಳಾಗಿವೆ. ಹೀಗಾಗಿ ಈ ಮಾರ್ಗದಿಂದ ಅತಿರಕ್ತವರ್ಣರೋಹಿತ ವಿನ್ಯಾಸದಿಂದ ಪಡೆಯಬಹುದಾದಂಥ ಅರಿವನ್ನೇ ಪಡೆಯಲು ಸಾಧ್ಯವಾಗಿದೆ.

ಅಣುವಿನ $3_n$-6 (ಅಥವಾ $3_n$-5) ಪ್ರಮುಖ ಸ್ಪಂದನಗಳಲ್ಲಿ $n$ = ಅಣುವಿನಲ್ಲಿಯ ಪರಮಾಣುಗಳ ಸಂಖ್ಯೆ) ಎಲ್ಲ ಸ್ಪಂದನಕಂಪನಾವರ್ತನಗಳನ್ನೂ ಅತಿರಕ್ತವರ್ಣ ರೋಹಿತದಲ್ಲಿಯೇ ಆಗಲಿ, ರಾಮನ್‌ರೋಹಿತದಲ್ಲಿಯೇ ಆಗಲಿ ಕಾಣಲು ಸಾಧ್ಯವಾಗದಿರಬಹುದು. ಕೆಲವು ನಿಶ್ಚಿತವರ್ಗದ ಸ್ಪಂದನಗಳನ್ನು ಮಾತ್ರ ಯಾವುದೋ ಒಂದರಲ್ಲಿ ಕಾಣಲು ಸಾಧ್ಯ. ರಾಮನ್‌ರೋಹಿತದಲ್ಲಿ ಕಾಣದ ಕೆಲವನ್ನು ಅತಿರಕ್ತವರ್ಣ ರೋಹಿತದಲ್ಲಿ ಕಾಣಬಹುದು. ಇವೆರಡರ ಸಂಯುಕ್ತಜ್ಞಾನದಿಂದ ಅಣುವಿನ ಎಲ್ಲ ಸ್ಪಂದನಗತಿಗಳನ್ನೂ ಅರಿಯಬಹುದು; ಅಣುರಚನಾಸ್ವರೂಪವನ್ನು ಅರಿಯುವುದಕ್ಕೆ ಇವೆರಡರ ಸಹಾಯ ಆವಶ್ಯಕ. ಕೆಲವು ವಿಶೇಷಸಂದರ್ಭಗಳಲ್ಲಿ, ಈ ಎರಡು ರೋಹಿತಗಳಿಂದ ವ್ಯಕ್ತವಾಗುವ ಕಂಪನಾವರ್ತಗಳ ಹೋಲಿಕೆಯಿಂದಲೇ ಅಣುವಿನ ವಿಶಿಷ್ಟಾನುರೂಪತೆ ಸೂಚಿತವಾಗುವುದು. ಉದಾಹರಣೆಗಾಗಿ, ಕೇಂದ್ರ ಬಿಂದು ಅನುರೂಪತೆಯುಳ್ಳ ಅಣುಗಳಲ್ಲಿ ಯಾವ ಒಂದು ಕಂಪನಾವರ್ತವೂ ರಾಮನ್ ಮತ್ತು ಅತಿರಕ್ತವರ್ಣರೋಹಿತಗಳೆರಡರಲ್ಲೂ ಇರುವುದಿಲ್ಲ. ಬೆಂಜೀನ್ ಮತ್ತು ಎಥಿಲೀನ್‌ಗಳು ಇದಕ್ಕೆ ಸಾಕ್ಷಿ. ಇಂಗಾಲದ ಡೈಆಕ್ಸೈಡ್‌ನಲ್ಲಿ ಕೂಡ ಇದೇ ಪರಿಸ್ಥಿತಿಯಿರುವುದರಿಂದ, ಅದರಲ್ಲಿಯ ಅ ಮತ್ತು ಔ ಪರಮಾಣುಗಳು ಒಂದೇ ರೇಖೆಯಲ್ಲಿದ್ದು, ಈ ಬಗೆಯ ಅನುರೂಪತೆಯನ್ನು ಹೊಂದಿರಬೇಕೆಂದು ನಿರ್ಣಯಿಸಲಾಗಿದೆ.




**ಚಿತ್ರ 1.**
**ಅಣುರಚನಾಸ್ವರೂಪ, ರಾಸಾಯನಿಕ**

ಈ ರೋಹಿತವಿನ್ಯಾಸ ಮಾರ್ಗಗಳಿಂದ. $CO_2$ ಮತ್ತು $H_2O$ ಅಣುಗಳ ರಚನಾ ಸ್ವರೂಪಕ್ಕೆ ಸಂಬಂಧಿಸಿದ ನಿರ್ಣಯಗೊಂಡ ಮುಖ್ಯಾಂಶಗಳು ಈ ರೀತಿ ಇವೆ:

$CO_2$ ನ ಸ್ವರೂಪ *O-C-O* ಎಂಬಂತೆ ಇದ್ದು ಇಲ್ಲಿ *C* ಮತ್ತು ಪರಮಾಣುಗಳೆಲ್ಲವೂ ಸಮರೇಖೆಯಲ್ಲಿರುತ್ತವೆ. *C-O* ಬಂಧನಾಂತರ ಈ ಅಣುವಿನಲ್ಲಿ $1.1615^0A$ ಎಂದು ಕಂಡುಬರುತ್ತದೆ. ಆದರೆ $H_2O$ ಅಣುವಿನಲ್ಲಿ *H* ಮತ್ತು *O* ಪರಮಾಣುಗಳು ಸಮರೇಖೆಯಲ್ಲಿರದೆ ಬಾಗಿದ ಆಕೃತಿಯಲ್ಲಿವೆ.

ಇಲ್ಲಿ *HOH* ಕೋನವು $104^0 27'$ ಮತ್ತು *O-H* ಬಂಧನಾಂತರ $0.9584^0A$ ಆಗಿರುತ್ತವೆ. ಆದ್ದರಿಂದ ಈ ಎರಡು ಅಣುಗಳು ಬೇರೆ ಬೇರೆ ವಿಶಿಷ್ಟಾನುರೂಪತೆಯುಳ್ಳ ಗುಂಪುಗಳಿಗೆ ಸೇರಿರುತ್ತವೆ.

**iii. ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ಅನುನಾದ (ರೆಸೊನೆನ್ಸ್) :** ದೊಡ್ಡ ಅಣುಗಳ ರಚನಾಸ್ವರೂಪವನ್ನು ನಿರ್ಣಯಿಸುವಲ್ಲಿ ಯಾವ ಮಾರ್ಗವೂ ಸ್ವಯಂಪೂರ್ಣ ಅರಿವನ್ನು ನೀಡದೆ ಇರಬಹುದು. ಇಂಥ ಸಂದರ್ಭದಲ್ಲಿ, ಬೇರೆ ಬೇರೆ ಮಾರ್ಗಗಳಿಂದ ದೊರೆತ ಅಪೂರ್ಣ ಅಂಶಗಳನ್ನೆಲ್ಲ ಸಂಗ್ರಹಿಸಿ, ಅಣುವಿನ ನೈಜಸ್ವರೂಪವನ್ನು ಅರಿಯಬಹುದು. ಹೀಗೆ ಆಂಶಿಕವಾದರೂ ಬಹು ಉಪಯುಕ್ತಜ್ಞಾನವನ್ನು ಕೊಡುವ ಮಾರ್ಗಗಳಲ್ಲಿ ಈ ವಿಧಾನ ಮುಖ್ಯವಾದದ್ದು.

ಇಂಗಾಲದ ಸಂಯುಕ್ತಗಳ ರಸಾಯನವಿಜ್ಞಾನದಲ್ಲಿ ಕಂಡುಬರುವ ಎಲ್ಲ ಪದಾರ್ಥಗಳಲ್ಲೂ ಅವಶ್ಯ ಘಟಕವಾದ ಜಲಜನಕ ಪರಮಾಣುಕೇಂದ್ರಗಳು *OH* ಗುಂಪಿನಲ್ಲಿರುವ $^1H$ ಕೇಂದ್ರ, ಈ ದೃಷ್ಟಿಯಲ್ಲಿ, $CH_3$ ಗುಂಪಿನಲ್ಲಿರುವ $^1H$ ಕೇಂದ್ರದಿಂದಾಗಲೀ ಅಥವಾ *NH* ಗುಂಪಿನಲ್ಲಿರುವ ಕೇಂದ್ರದಿಂದಾಗಲೀ ಭಿನ್ನವಾಗಿರುತ್ತದೆ. ಹೀಗೆ ಇವುಗಳ ಪ್ರತ್ಯೇಕ ವೈಶಿಷ್ಟ್ಯದ ಆಧಾರದ ಮೇಲೆ ಎಷ್ಟೊ ಅಣುರಚನಾಸ್ವರೂಪದ ಸಮಸ್ಯೆಗಳನ್ನು ಬಿಡಿಸಬಹುದು.

ರಾಸಾಯನಿಕ ವಿಜ್ಞಾನದ ಸಂಯುಕ್ತಗಳಲ್ಲಿ ಸಾಮಾನ್ಯ ಪರಮಾಣುಕೇಂದ್ರಗಳಾದ $^1H$, $^{19}F$ ಮತ್ತು $^{31}P$ ಇವುಗಳ ಭ್ರಮಣ ಕೋನೀಯವೇಗವನ್ನೂ (ಸ್ಪಿನ್ ಆಂಗ್ಯುಲರ್ ಮೊಮೆಂಟಮ್) ಹೊಂದಿವೆ. ಇವುಗಳಿಗೆ ಸಂಬಂಧಿಸಿದ ಭ್ರಮಣ ಕ್ವಾಂಟಂ ಸಂಖ್ಯೆ $^1/_2$ ಇರುತ್ತದೆ. ಇನ್ನೂ ಹೇರಳವಾಗಿ ದೊರೆಯುವ ಪರಮಾಣು ಕೇಂದ್ರಗಳಾದ 12*c*

ಮತ್ತು 16o ಗಳಿಗೆ ಭ್ರಮಣ ಕ್ವಾಂಟಂ ಸಂಖ್ಯೆ ಸೊನ್ನೆಯಾಗಿರುತ್ತದೆ. ಸೊನ್ನೆಯಲ್ಲದ ಭ್ರಮಣಸಂಖ್ಯೆಯುಳ್ಳ ಪರಮಾಣುಕೇಂದ್ರಗಳು (ಉದಾ: $^1H$ ಪ್ರೋಟಾನ್) ಅಯಸ್ಕಾಂತದ ಪಟ್ಟಿಯ ಹಾಗೆ ಕಾಂತಭ್ರಮಣ ಶಕ್ತಿಯನ್ನು (ಮ್ಯಾಗ್ನೆಟಿಕ್ ಮೊಮೆಂಟ್) ಹೊಂದಿರುತ್ತದೆ. ಜೊತೆಗೆ ಕಾಂತ ಕ್ಷೇತ್ರದ ದಿಕ್ಕಿಗೆ ಕೆಲವು ಗೊತ್ತಾದ ಕೋನಗಳಲ್ಲಿ ನೆಲಸುತ್ತವೆ. ಈ ಕೋನಮೌಲ್ಯ ಪರಮಾಣು ಕೇಂದ್ರದ ಭ್ರಮಣಶಕ್ತಿಮೌಲ್ಯವನ್ನು ಅವಲಂಬಿಸಿದೆ. ಇವೆರಡೂ ನಿರ್ದಿಷ್ಟಮೌಲ್ಯಗಳನ್ನು ಮಾತ್ರ ಹೊಂದಬಲ್ಲುವು. ಈ ನಿರ್ದಿಷ್ಟಮೌಲ್ಯಶಕ್ತಿ ಸ್ಥಿತಿಗಳಲ್ಲಿ (ಎನರ್ಜಿ ಸ್ಟೇಟ್ಸ್) ಪರಿವರ್ತನೆಯಾಗಬೇಕಾದರೆ–ಅಂದರೆ ಒಂದರಿಂದ ಇನ್ನೊಂದಕ್ಕೆ ಸಾಗಣೆಯಾಗಬೇಕಾದರೆ ಆ ಸ್ಥಿತಿಗಳ ಶಕ್ತಿವ್ಯತ್ಯಾಸಕ್ಕೆ ಅನುಗುಣವಾದ ಕಂಪನಾವರ್ತದ ಕಿರಣಗಳು ಲಭ್ಯವಾಗಬೇಕು. ಕೆಳಮಟ್ಟದ ಸ್ಥಿತಿಯಿಂದ ಈ ಕಿರಣಗಳನ್ನು ಹೀರಿ ಮೇಲ್ಮಟ್ಟದ ಶಕ್ತಿಸ್ಥಿತಿಗೆ ಹೋಗಲು ಸಾಧ್ಯ.

ಭ್ರಮಣಕ್ವಾಂಟಂ ಸಂಖ್ಯೆ $^1/_2$ ಉಳ್ಳ ಪರಮಾಣುಕೇಂದ್ರಗಳಿಗೆ ಸಾಧ್ಯವಾದ ಶಕ್ತಿ ಸ್ಥಿತಿಗಳು ಎರಡೇ ಎರಡು. ಅಂದರೆ, ಕಾಂತಕ್ಷೇತ್ರದಲ್ಲಿ ಇವು ಎರಡು ನಿರ್ದಿಷ್ಟ ಕೋನದಲ್ಲಿ ಮಾತ್ರ ನೆಲಸಬಲ್ಲವು. ಇದರಿಂದ ಶಕ್ತಿಪರಿವರ್ತನೆಗೆ ಎರಡೇ ಸ್ಥಿತಿಗಳು ಸಾಧ್ಯ. ಇವೆರಡು ಸ್ಥಿತಿಗಳ ಶಕ್ತಿವ್ಯತ್ಯಾಸವನ್ನು ಪ್ಲಾಂಕನ ವಿಶ್ವವ್ಯಾಪಿಸಂಖ್ಯೆ h ನಿಂದ ಭಾಗಿಸಿದಾಗ ಲಭಿಸುವ ಕಂಪನಾವರ್ತವುಳ್ಳ ಕಿರಣಗಳಿದ್ದಾಗ ಮಾತ್ರ ಕೆಳಗಿನ ಶಕ್ತಿಸ್ಥಾನದಿಂದ ಮೇಲಿನ ಶಕ್ತಿಸ್ಥಾನಕ್ಕೆ ಹೋಗಲು ಸಾಧ್ಯ. ಈ ನಿರ್ದಿಷ್ಟ ಕಂಪನಾವರ್ತದ ಕಿರಣಗಳನ್ನು ಮಾತ್ರ ಇಂಥ ಪರಮಾಣುಕೇಂದ್ರಗಳು ಹೀರುತ್ತವೆ ; ನೀರಿನಲ್ಲಿರುವ $^1H$ ಕೇಂದ್ರಗಳಿಗೆ 10,000 ಗೌಸ್ ಕಾಂತಕ್ಷೇತ್ರದಲ್ಲಿ ಈ ನಿರ್ದಿಷ್ಟ ಕಂಪನಾವರ್ತ ಪ್ರತಿ ಸೆಕಂಡಿಗೆ 42.57ಎಂ. ಸಿ. ಆಗಿರಬೇಕು ; ಅಂದರೆ ಇದು ಹ್ರಸ್ವ ರೇಡಿಯೋ ತರಂಗಗಳ ವ್ಯಾಪ್ತಿಯಲ್ಲಿರುತ್ತದೆ. ಅದೇ ಕಾಂತಕ್ಷೇತ್ರದಲ್ಲಿ $^{19}F$ ಕೇಂದ್ರಕ್ಕೆ ಪ್ರತಿ ಸೆಕಂಡಿಗೆ 17.24 ಎಂ. ಸಿ. ಯ ಕಂಪನಾವರ್ತಗಳು ಬೇಕಾಗುತ್ತವೆ.

ಹೀಗೆ $^1H$ ಗಳುಳ್ಳ $H_2O$ ಅಣುಗಳನ್ನು, ಪ್ರತಿ ಸೆಕೆಂಡಿಗೆ 42.57 ಎಂ.ಸಿ.ಯ ಕಂಪನಾರ್ತಕ್ಕೆ ಗುರಿಮಾಡಿ ಕಾಂತಕ್ಷೇತ್ರಶಕ್ತಿಯನ್ನು ಕ್ರಮೇಣ ಹೆಚ್ಚಿಸುತ್ತಾ ಹೋಗಿ, ಶಕ್ತಿಪ್ರಮಾಣ ಸರಿಯಾಗಿ 10,000 ಗೌಸ್ ಆದಾಗ ಮಾತ್ರ ಈ ಶಕ್ತಿಸ್ಥಾನಪಲ್ಲಟ ಸಾಧ್ಯವಾಗುತ್ತದೆ. ಆದರೆ, $^1H$ ಗಳನ್ನುಳ್ಳ ಎಲ್ಲ ಅಣುಗಳಲ್ಲಿಯೂ ಅಥವಾ ಒಂದೇ ಪದಾರ್ಥದಲ್ಲಿನ ಎಲ್ಲ $^1H$ ಗಳಿಗೂ ಇದು ನಿಷ್ಕೃಷ್ಟವಾಗಿ 10,000 ಗೌಸ್‌ಗಳಿಗೆ ಸಂಭವಿಸುವುದಿಲ್ಲ; ಏಕೆಂದರೆ ಈ ಎಲ್ಲ $^1H$ ಗಳಿಗೂ ಒಂದೇ ಸಮನಾದ ಋಣ ವಿದ್ಯುತ್ ಸನ್ನಿವೇಶವಿರುವುದಿಲ್ಲ. ಈ ವಿವಿಧ ಸನ್ನಿವೇಶಗಳಲ್ಲಿ ಈ ಪರಮಾಣು ಕೇಂದ್ರಗಳಿಗೆ 10,000 ಗೌಸ್‌ನ ಪೂರ್ಣಕಾಂತಶಕ್ತಿ ಪಸರಿಸುವುದಿಲ್ಲ. ಈ ಕಾಂತ ಶಕ್ತಿಯ ಪ್ರಭಾವವನ್ನು $^1H$ ಗಳ ಸನ್ನಿವೇಶದಲ್ಲಿರುವ ಋಣವಿದ್ಯುದಂಶಗಳು ನೀರಿನಲ್ಲಿರುವ $^1H$ ಕೇಂದ್ರಗಳಿಗಿಂತ ಸ್ವಲ್ಪ ಹೆಚ್ಚಾಗಲೀ ಕೊಂಚ ಕಡಮೆಯಾಗಲೀ ಮರೆ ಮಾಡುತ್ತವೆ (ಷೀಲ್ಡಿಂಗ್). ಉದಾಹರಣೆಗೆ, $CH_3CH_2OH$ ಅಣುವಿನಲ್ಲಿ, $CH_3$ ಗುಂಪಿನ ಮೂರು $^1H$ ಈ ಘಟನೆಯನ್ನು 10,000.04 ಗೌಸ್ ಕಾಂತಕ್ಷೇತ್ರದಲ್ಲಿ ಅನುಭವಿಸಿದರೆ, $CH_2$ ಗುಂಪಿನ ಎರಡು $^1H$ ಕೇಂದ್ರಗಳು 10,000.07 ಗೌಸ್ ಆದಾಗಲೂ $OH$ ಗುಂಪಿನ ಒಂದು $^1H$, 9999.99 ಗೌಸ್ ಆದಾಗಲೂ ಅನುಭವಿಸುತ್ತವೆ. ಈ ಪ್ರಕಾರ ವಿಶಿಷ್ಟಗುಂಪಿಗೆ ಸೇರಿದ $^1H$ ಗಳನ್ನು ಕಂಡು ಹಿಡಿಯಲು ಸಾಧ್ಯ. ಇದರಿಂದ ಉದ್ಭವಿಸುವ ಗೆರೆಗಳ ತೀಕ್ಷ್ಣತಾಪ್ರಮಾಣದಿಂದ ಒಂದೊಂದು ಗುಂಪಿಗೆ ಸೇರಿದ ಪರಮಾಣುಕೇಂದ್ರಗಳ ಸಂಖ್ಯೆಯನ್ನು ಊಹಿಸಬಹುದು. ಮೇಲಿನ ಉದಾಹರಣೆ ಈ ಪ್ರಮಾಣ ಅನುಕ್ರಮವಾಗಿ 3:2:1 ಇದ್ದು, ಅಣುವಿನಲ್ಲಿನ ತ್ರಿವಿಧ $2H$ ಗಳ ಸಂಖ್ಯಾಪ್ರಮಾಣವನ್ನು ತಿಳಿಸುತ್ತದೆ.

**II ನಮನ ವಿಧಾನಗಳು :**

i. ಕ್ಷ–ಕಿರಣಗಳ ನಮನ : ನಮನ ವಿಧಾನಗಳಲ್ಲಿ ಶಕ್ತಿಸ್ಥಳಾಂತರವಿಲ್ಲ; ಇಲ್ಲಿ ಪತನ ಕಿರಣಗಳ ತರಂಗಮಾನವೂ ಬದಲಾಗುವುದಿಲ್ಲ. ವಿಶಿಷ್ಟ ತರಂಗಮಾನ ಕ್ಷ–ಕಿರಣಗಳು (ಕ್ಯಾರೆಕ್ಟರಿಸ್ಟಿಕ್ ಎಕ್ಸ್–ರೇಸ್) ರಾಸಾಯನಿಕ ಹರಳುಗಳ ಮೇಲೆ ಬಿದ್ದಾಗ ಅವು ಈ ಕಿರಣಜಾಲವನ್ನು ಬಾಗಿಸಿ, ವಿಶಿಷ್ಟ ರೀತಿಯ ಸಮನಾಕೃತಿಗಳನ್ನು (ಡಿಫ್ರಾಕ್ಷನ್ ಪ್ಯಾಟರ್ನ್ಸ್) ಕೊಡುತ್ತವೆ. ಹರಳುಗಳಲ್ಲಿರುವ ಪರಮಾಣುಗಳು ಕ್ಷ–ಕಿರಣಗಳನ್ನು ಚದುರಿಸುವುದ ರಿಂದ ಈ ವಿಶಿಷ್ಟಾಕೃತಿಗಳು ಉದ್ಭವಿಸುತ್ತವೆ. ಇದರಿಂದಾಗಿ ಬೇರೆಬೇರೆ ನಮನ ಆಕೃತಿಗಳು ರೂಪುಗೊಳ್ಳುತ್ತವೆ. ಯಾವುದಾದರೊಂದು ಪದಾರ್ಥದ ವಿಶಿಷ್ಟ ಗುಣವೇ ಈ ಆಕೃತಿ ಎಂದು ತಿಳಿಯಬಹುದು.

ಹರಳಿನಲ್ಲಿರುವ ಪರಮಾಣುಗಳಿಂದ ಕೂಡಿದ ಹಲವಾರು ಸಮತಲಗಳು (ಪ್ಲೇನ್ಸ್) ಕಿರಣಗಳನ್ನು ಚದುರಿಸುವುದರಿಂದ ಚದುರಿದ ಅನೇಕ ರಶ್ಮಿಗಳು ಪರಸ್ಪರ ಸಂಘರ್ಷಣೆಯಿಂದ ನಾಶಗೊಳ್ಳುತ್ತವೆ. ಕೆಲವು ರಶ್ಮಿಗಳು ಮಾತ್ರ ಒಂದಕ್ಕೊಂದು ಬಲವರ್ಧನೆಮಾಡಿಕೊಂಡು ಹೊರಬೀಳುತ್ತವೆ. ಹೀಗೆ ಹೊರಬೀಳುವ ನಮನ ರಶ್ಮಿಗಳ ತೀಕ್ಷ್ಣತೆಗಳು ಹರಳಿನ ಆಂತರಿಕ ಅಣುರಚನಾ ಸ್ವರೂಪವನ್ನು ಅವಲಂಬಿಸಿರುತ್ತವೆ. ಚದರಿದ ಕಿರಣಗಳ ತೀಕ್ಷ್ಣತೆಯನ್ನು ಅಳತೆಮಾಡಿ ಅದರ ಸಹಾಯದಿಂದ ಅಣುರಚನಾಸ್ವರೂಪವನ್ನು ಕಂಡುಹಿಡಿಯಲು ಪ್ರಯತ್ನಿಸಬಹುದು.

ಸ್ವಲ್ಪ ದೊಡ್ಡ ಅಣುಗಳ ವಿಷಯದಲ್ಲಿ, ರಾಸಾಯನಿಕ ಗುಣಸಾಕ್ಷ್ಯಗಳ ಆಧಾರದ ಮೇಲೆ ಒಪ್ಪಬಹುದಾದ ಬಹುಸಂಖ್ಯಾತ ಮಾದರಿಗಳನ್ನು ಕಲ್ಪಿಸಲು ಸಾಧ್ಯ. ಆ ಸಂದರ್ಭದಲ್ಲಿ ಮೇಲಿನ ಮಾರ್ಗ ಕಠಿಣವಾಗುತ್ತದೆ. ಸುಧಾರಿತ ಉತ್ತಮಮಾರ್ಗಗಳಲ್ಲೊಂದು ಫೋರಿಯರ್ ಸಂಯೋಜನೆಯನ್ನು ಅವಲಂಬಿಸಿದೆ. ಗಣಿತಶಾಸ್ತ್ರದಿಂದ ಅಳವಡಿಸಿಕೊಂಡ ಈ ವಿಧಾನದಲ್ಲಿ, ಪ್ರಯೋಗದಿಂದ ಕಂಡುಹಿಡಿದ ಕಿರಣಗಳ ತೀಕ್ಷ್ಣತೆಗಳನ್ನು ಉಪಯೋಗಿಸಿಕೊಂಡು ಅಣುವಿನಲ್ಲಿನ ವಿದ್ಯುದಂಶಸಾಂದ್ರತೆಯ (ಎಲೆಕ್ಟ್ರಾನ್ ಡೆನ್ಸಿಟಿ) ನಕಾಶೆಗಳನ್ನು ತಯಾರಿಸ ಬಹುದು. ಈ ನಕಾಶೆಗಳಲ್ಲಿ ಪರಮಾಣುಗಳ ಸಾಧನೆಗಳು ಅತಿ ಉನ್ನತ ವಿದ್ಯುದಂಶ ಸಾಂದ್ರತೆಯ ಸ್ಥಾನಗಳಾಗಿ ಪರಿಣಮಿಸುತ್ತವೆ.

ಅತಿ ದೊಡ್ಡ ಮತ್ತು ಬಹಳ ಕಡಿಮೆ ವಿಶಿಷ್ಟಾನುರೂಪತೆಯುಳ್ಳ (ಲೋ ಸಿಮೆಟ್ರಿ) ಅಣುಗಳ ಸ್ವರೂಪವನ್ನು ಖಚಿತಪಡಿಸಲು ಕೆಲವು ವೇಳೆ ಅಸಾಧ್ಯವೆನ್ನಿಸಬಹುದು.

ii. ಋಣವಿದ್ಯುದಂಶ ಕಿರಣಗಳ ನಮನ : ಇಲ್ಲಿ ಕ್ಷ–ಕಿರಣಗಳ ಬದಲು ವೇಗೋತ್ಕರ್ಷ ಹೊಂದಿದ ಋಣವಿದ್ಯುದಂಶ ಕಿರಣಗಳನ್ನು ನಮನ–ಕ್ರಿಯಾಭ್ಯಾಸ ಮಾಡಲು ಬಳಸುತ್ತಾರೆ. ಈ ಮಾರ್ಗದಿಂದ ಪದಾರ್ಥಗಳನ್ನು ಅನಿಲರೂಪದಲ್ಲಿ ಮಾತ್ರ ಅಧ್ಯಯನಮಾಡಲು ಸಾಧ್ಯ. ಅನಿಲರೂಪದಲ್ಲಿರುವ ಅಣುವಿನ ಪರಮಾಣುಗಳಿಂದ ನಮನ ಹೊಂದಿದ ಕಿರಣಗಳು ಛಾಯಾಗ್ರಾಹಕದ ಮೇಲೆ ಬಿದ್ದಾಗ, ಸಮಾನ ಕೇಂದ್ರವುಳ್ಳ ಹಲವು ಬೆಳಕಿನ ಛಾಯಾವೃತ್ತಗಳು ರೂಪುಗೊಳ್ಳುತ್ತವೆ. ಈ ವೃತ್ತಗಳ ಪರಸ್ಪರತೀಕ್ಷ್ಣತೆಗಳನ್ನು (ರಿಲೆಟಿವ್ ಇನ್ಟೆನ್ಸಿಟಿ) ಅಳತೆಮಾಡಿ ನಿರ್ಣಯಿಸಬಹುದು. ಇವುಗಳ ಪರಸ್ಪರ ತೀಕ್ಷ್ಣತೆಗಳ ನೆರವಿನಿಂದ ಅಣುರಚನಾಸ್ವರೂಪವನ್ನು ತಿಳಿಯುವುದು ಸಾಧ್ಯವಾಗುತ್ತದೆ.

ಅಧಿಕ ವಿಶಿಷ್ಟಾನುರೂಪತೆಯುಳ್ಳ ಅಣುಗಳ ಸ್ವರೂಪವನ್ನು ಕೆಲವೇ ಸ್ವತಂತ್ರ ನಿಯತಾಂಕಗಳ ಸಹಾಯದಿಂದ ವ್ಯಕ್ತಪಡಿಸಲು ಸಾಧ್ಯ. 2 ಅಥವಾ 3 ಸ್ವತಂತ್ರ ನಿಯತಂಕಗಳ ಸಹಾಯದಿಂದ ವ್ಯಕ್ತಪಡಿಸಬಹುದಾದ ಅಣುಗಳ ವಿಷಯದಲ್ಲಿ ಮಾತ್ರ ಈ ಮಾರ್ಗ ಸಫಲವಾಗಬಲ್ಲುದು. ಒಂದೊಂದು ನಿಯತಾಂಕಕ್ಕೂ ಪ್ರತ್ಯೇಕವಾಗಿ, ಒಪ್ಪಬಹುದಾದ ಹಲವು ಮೌಲ್ಯಗಳನ್ನು ಕೊಟ್ಟು ಪ್ರತಿಯೊಂದು ಆಯ್ದ ಮೌಲ್ಯದಿಂದಲೂ ಬರುವ ಕಿರಣಗಳ ತೀಕ್ಷ್ಣತೆಗಳನ್ನು ಲೆಕ್ಕಾಚಾರಹಾಕಿ ನಿರ್ಣಯಿಸಬಹುದು. ಅನಂತರ ತೀಕ್ಷ್ಣತೆಯನ್ನೂ ಪ್ರತಿಯೊಂದು ಆಯ್ದ ಮೌಲ್ಯಕ್ಕೂ ನಮನ ಕೋನದ ಸಂಬಂಧವನ್ನೂ ನಮೂದಿಸುವ ನಕಾಶೆಗಳನ್ನು ತಯಾರಿಸಿ, ಅವುಗಳನ್ನು ಪ್ರಯೋಗದಿಂದ ದೊರೆತ ನಕಾಶೆಗಳೊಂದಿಗೆ ಹೋಲಿಸಿನೋಡಬೇಕಾಗುವುದು. ಯಾವ ನಿಯತಾಂಕ ಮೌಲ್ಯಕ್ಕೆ, ಪ್ರಯೋಗದಿಂದ ಮತ್ತು ಲೆಕ್ಕಾಚಾರದಿಂದ ಲಭಿಸಿದ ನಕಾಶೆಗಳು ಉತ್ತಮ ಹೊಂದಾಣಿಕೆಯನ್ನು

$$\mu = (-Q)(-x_1) + (+Q)(+x_2) = \sum_i Q_i x_i$$

ತೋರಿಸುವುವೋ ಅದೇ ನೈಜಮೌಲ್ಯವೆಂದು ಪರಿಗಣಿಸಲಾಗುವುದು. ಹೀಗೆ, ಅಣುವಿನ ಬಂಧನಾಂತರಗಳನ್ನು ಕನಿಷ್ಠ. $\pm 0 \cdot 01\ \mathring{A}$ ನಷ್ಟು ಖಚಿತವಾಗಿ ಗೊತ್ತುಮಾಡಬಹುದು.

**III ಭೌತಗುಣ ಪ್ರಮಾಣಗಳನ್ನು ಆಧರಿಸಿದ ವಿಧಾನಗಳು :**

i. ವಿದ್ಯುತ್ ಧ್ರುವಯುಗ್ಮ ಭ್ರಮಣಶಕ್ತಿ ಮತ್ತು ಅಣುರಚನಾಸ್ವರೂಪ : ಕೇಂದ್ರಬಿಂದು ಅನುರೂಪತೆಯುಳ್ಳ ಅಣುಗಳು ಮತ್ತು ಗೋಳಾಕಾರದ ಪರಿಭ್ರಾಮಕಗಳಾದ (ಸ್ಫೆರಿಕಲ್ ಟಾಪ್ಸ್) ಅಣುಗಳ ಹೊರತು, ಮಿಕ್ಕ ಅಣುಗಳಿಗೆ ಒಂದು ನಿರ್ದಿಷ್ಟ ವಿದ್ಯುತ್ ಧ್ರುವಯುಗ್ಮ ಭ್ರಮಣ ಶಕ್ತಿ (ಎಲೆಕ್ಟ್ರಿಕ್ ಡೈಪೋಲ್ ಮೊಮೆಂಟ್ ) ಇರುತ್ತದೆ. ವಿದ್ಯುದಂಶಗ ಳಿಂದ ಕೂಡಿದ AB ಅಣುವಿನ $\mu$ ಹೀಗಿದೆ.

ಚಿತ್ರ 2.

ಇಲ್ಲಿ $Q_i = A$ ಮತ್ತು $B$ ಗಳ ಮೇಲಿರುವ ವಿದ್ಯುದಂಶಗಳ ಮೌಲ್ಯ;

ಧ್ರುವಕೇಂದ್ರದಿಂದ (ಸೆಂಟರ್ ಆಫ್ ಮಾಸ್) $A$ ಮತ್ತು $B$ ಗಳ ಅಂತರ. ಅಣುಗಳ ವಿಶಿಷ್ಟಾನುರೂಪತೆ ಎಷ್ಟೋ ಸಾರಿ ಅವುಗಳ ವಿದ್ಯುತ್ ಧ್ರುವಯುಗ್ಮ ಭ್ರಮಣಶಕ್ತಿಯಿಂದಲೇ ವಿದಿತವಾಗುತ್ತದೆ. $CO_2$ ಮತ್ತು $CS_2$ ಅಣುಗಳಿಗೆ ಇದು ಸೊನ್ನೆ ಎಂದ ಮಾತ್ರಕ್ಕೆ, ಅವುಗಳು ಕೇಂದ್ರ ಬಿಂದು ಅನುರೂಪತೆಯನ್ನು ಹೊಂದಿರಬೇಕಲ್ಲದೆ ಅವುಗಳಲ್ಲಿನ ಪರಮಾಣುಗಳು ಒಂದೇ ರೇಖೆಯಲ್ಲಿರಬೇಕು ಎಂಬುದು ಸುಲಭವಾಗಿ ಗೊತ್ತಾಗುತ್ತದೆ. ಹಾಗೆಯೇ $H_2O$ ಮತ್ತು $SO_2$ ಅಣುಗಳಲ್ಲಿ ಸೊನ್ನೆಯಲ್ಲವಾದ್ದರಿಂದ ಇವುಗಳಲ್ಲಿನ ಪರಮಾಣುಗಳು ಒಂದೇ ರೇಖೆಯಲ್ಲಿಲ್ಲವೆಂಬುದಕ್ಕೆ ಸಾಕ್ಷಿ ದೊರೆಯುತ್ತದೆ. ಅದೇ ರೀತಿ $\mu$ ಸೊನ್ನೆಯಾಗಿರುವ ಟ್ರಾನ್ಸ್ ಡೈಕ್ಲೋರೋ ಎಥಿಲೀನ್ ಅಣುವನ್ನು ಸಾಕಷ್ಟು ಹೆಚ್ಚಿನ $\mu$ ಹೊಂದಿರುವ ಸಿಸ್–ಡೈಕ್ಲೋರೋ ಎಥಿಲೀನ್‌ನಿಂದ ಸುಲಭವಾಗಿ ಗುರುತಿಸಬಹುದು.

ಕೆಲವು ಸಂದರ್ಭಗಳಲ್ಲಿ, ಈ ಅಳತೆಗಳಿಂದ ಬಂಧನಕೋನಗಳನ್ನೂ ಗೊತ್ತುಮಾಡ ಬಹುದು. ಬಂಧನಭ್ರಮಣಶಕ್ತಿಗಳ ದಿಕ್‌ಪ್ರಮಾಣರೇಖೆಗಳ ಸಂಕಲನ (ವೆಕ್ಟರ್ ಅಡಿಟಿವಿಟಿ) ಸಾಧ್ಯತೆಯ ಆಧಾರದ ಮೇಲೆ ಇದು ಸಾಧ್ಯವಾಗುವುದು. ಉದಾಹರಣೆಗಾಗಿ, ಬೆಂಜೀನ್‌ನಲ್ಲಿರುವ ಒಂದು $H$ ನ್ನು $X$ ಎಂಬ ಪರಮಾಣುವಿನಿಂದ ಸ್ಥಾನ ಪಲ್ಲಟಮಾಡಿಸಿದರೆ, ಬರುವ ಪದಾರ್ಥದ $\mu$ ವನ್ನು, $C\text{-}X$ ಬಂಧನದ ಭ್ರಮಣಶಕ್ತಿ ಎಂದು ಕರೆಯಬಹುದು.

ಪಕ್ಕದಲ್ಲಿರುವ ಚಿತ್ರಿಸಿರುವ ಅಣುವಿನಲ್ಲಿ $\mu_1 = C\text{-}X$ ಮತ್ತು $\mu_2 = C\text{-}CH_2\text{-}Y$ ಎಂಬುದನ್ನು ಬಂಧನಭ್ರಮಣಶಕ್ತಿಗಳೆಂದು ಕರೆದರೆ, ಈ ಪದಾರ್ಥದ $\mu$ ವನ್ನು ಕೆಳಗಿನ ಸಮೀಕರಣದಿಂದ ಪಡೆಯಬಹುದು: ಇಂಥ ಸಮೀಕರಣದಿಂದ ಕೋನದ ಮೌಲ್ಯವನ್ನು ಕಂಡುಹಿಡಿಯಬಹುದು.

ಚಿತ್ರ 3.

ii. ಮೋಲಾರ್ ವಕ್ರೀಭವನ ಮತ್ತು ಅಣು ರಚನಾಸ್ವರೂಪ : ಮೋಲಾರ್ ವಕ್ರೀಭವನ ($P_M$) ಒಂದು ಪದಾರ್ಥದ ವಕ್ರೀಭವನ ಸೂಚ್ಯಂಕ (ರಿಫ್ರಾಕ್ಟಿವ್ ಇಂಡೆಕ್ಸ್) $n$ ಅದರ ಸಾಂದ್ರತೆ $P$ ಮತ್ತು ಅಣುಭಾರ $M$ ಇವುಗಳನ್ನು ಅವಲಂಬಿಸಿದೆ :

$$P_M = \frac{n^2 - 1}{n^2 + 1} \cdot \frac{M}{P}$$

ವಿದ್ಯುತ್‌ಕ್ಷೇತ್ರದಲ್ಲಿ ಅಣುವಿನಲ್ಲಿನ ಋಣವಿದ್ಯುದಂಶಗಳು, ಪರಮಾಣು ಕೇಂದ್ರಕ್ಕೆ ಸಂಬಂಧಿಸಿದಂತೆ ತಮ್ಮ ಸಹಜಸ್ಥಾನದಿಂದ ಸರಿಯುವುದರಿಂದ, ಈ ವಕ್ರೀಭವನ ಉಂಟಾಗುತ್ತದೆ. ಪದಾರ್ಥಗಳ ಈ ಗುಣಮೌಲ್ಯ ಅಣುರಚನಾಸ್ವರೂಪವನ್ನು ಅವಲಂಬಿಸಿದೆ. ಪರಮಾಣುಗಳು ಮತ್ತು ಹಲವು ಪರಮಾಣು ಗುಂಪುಗಳು, ಪದಾರ್ಥದ ಮೋಲಾರ್ ವಕ್ರೀಭವನಕ್ಕೆ ತಮ್ಮ ಒಂದು ಗೊತ್ತಾದ ಪಾಲನ್ನು ನೀಡುತ್ತವೆ. ಯಾವ ಪದಾರ್ಥದಲ್ಲಿ ಅಡಕವಾಗಿದ್ದರೂ ಇವು ತಮ್ಮ ಈ ನಿರ್ದಿಷ್ಟ ಪಾಲನ್ನು ನೀಡುತ್ತವೆಂಬುದು ಅನೇಕ ಪದಾರ್ಥಗಳ ಪರೀಕ್ಷೆಯಿಂದ ನಿರ್ಣಿತವಾದ ಸಂಗತಿ. ಉದಾಹರಣೆಗೆ, ಕೇವಲ $CH_2$ ಗುಂಪಿನಿಂದ ಮಾತ್ರ ಬದಲಾದ ಎಷ್ಟೋ ಪದಾರ್ಥಗಳು, ತಮ್ಮ ಮೋಲಾರ್ ವಕ್ರೀಭವನದಲ್ಲಿ ಯಾವಾಗಲೂ 4.618ನಷ್ಟೆ ವ್ಯತ್ಯಾಸವನ್ನು ತೋರಿಸುತ್ತವೆ. ಅಂದರೆ, ಇದನ್ನು $CH_2$ ಗುಂಪಿನ ಕೊಡುಗೆ ಎಂದು ಹೇಳಬಹುದು. ಹೀಗೆಯೇ ಎಲ್ಲ ಪರಮಾಣುಗಳಿಗೂ ಅವುಗಳ ನಿಯತಮೌಲ್ಯಗಳನ್ನು ಗೊತ್ತುಮಾಡಬಹುದು. ಪದಾರ್ಥದ ಮೋಲಾರ್ ವಕ್ರೀಭವನವನ್ನೇ ಅದರಲ್ಲಿಯ ಎಲ್ಲ ಪರಮಾಣುಗಳ ನಿಯತ ಮೌಲ್ಯಗಳ ಮೊತ್ತವೆಂದು ಪರಿಗಣಿಸಬಹುದು. ಹೀಗೆ ಮಾಡುವಾಗ, ಪದಾರ್ಥದಲ್ಲಿ ದ್ವಿಗುಣ (ಡಬಲ್) ಮತ್ತು ತ್ರಿಗುಣ (ಟ್ರಿಪಲ್) ಬಂಧನಗಳಿದ್ದರೆ, ಅವುಗಳಿಗೂ ಕೆಲವು ನಿಯತ ಮೌಲ್ಯಗಳನ್ನು ಕೊಡಬೇಕಾಗುವುದು.

ಹಲವಾರು ಪದಾರ್ಥಗಳ ಮೋಲಾರ್ ವಕ್ರೀಭವನಗಳ ಪರೀಕ್ಷೆಯಿಂದ ನಿರ್ಣಯಿಸಲ್ಪಟ್ಟ ಪರಮಾಣು ಮತ್ತು ಬಂಧನವಕ್ರೀಭವನಗಳನ್ನು ಪಟ್ಟಿ ಮಾಡಲಾಗಿದೆ. ಒಂದು ನಿರ್ದಿಷ್ಟ ರಚನಾಸ್ವರೂಪದ ಸಾಧ್ಯಾಸಾಧ್ಯತೆಯನ್ನು ನಿರ್ಣಯಿಸುವಾಗ, ಮೋಲಾರ್ ವಕ್ರೀಭವನ ಬಹಳ ಉಪಯುಕ್ತವಾಗುತ್ತದೆ.

iii. ಕಾಂತಭ್ರಮಣಶಕ್ತಿ ಮತ್ತು ಅಣುರಚನಾಸ್ವರೂಪ : ಅಯಸ್ಕಾಂತ ಧ್ರುವಗಳಿಂದ ಆಕರ್ಷಿಸಲ್ಪಡುವ ಅನೇಕ ಪದಾರ್ಥಗಳನ್ನು ಅನುಕಾಂತ (ಪ್ಯಾರಾ ಮ್ಯಾಗ್ನೆಟಿಕ್) ಪದಾರ್ಥಗಳೆಂದು ಕರೆಯಬಹುದು. ಇದಕ್ಕೆ ವಿರುದ್ಧವಾಗಿ, ಅಯಸ್ಕಾಂತದ ಧ್ರುವಗಳಿಂದ ಮಾಡಲ್ಪಡುವ ಪದಾರ್ಥಗಳನ್ನು ಪ್ರತಿಕಾಂತ (ಡಯಾಮ್ಯಾಗ್ನೆಟಿಕ್) ಪದಾರ್ಥಗಳೆನ್ನಬಹುದು.

ಅನುಕಾಂತ ಪದಾರ್ಥಗಳು ಕಾಂತಕ್ಷೇತ್ರದಲ್ಲಿ ತೋರುವ ವರ್ತನೆಯಿಂದ ಅಣುರಚನಾ ಸ್ವರೂಪಕ್ಕೆ ಸಂಬಂಧಿಸಿದ ತಿಳಿವನ್ನು ಪಡೆಯಬಹುದು. ಅನುಕಾಂತತೆ ಸಾಧಾರಣವಾಗಿ, ಭ್ರಮಣಜೋಡಣೆ ಇಲ್ಲದ (ಅನ್‌ಪೇರ್ಡ್ ಸ್ಪಿನ್ಸ್) ಋಣವಿದ್ಯುದಂಶಗಳಿಂದ ಉಂಟಾಗುತ್ತದೆ. ಎಲ್ಲ ಋಣವಿದ್ಯುದಂಶಗಳೂ ಜೋಡಿಯಾಗಿದ್ದರೆ ಆ ಪದಾರ್ಥ ಪ್ರತಿಕಾಂತವಾಗಿ ಪರಿಣಮಿಸುತ್ತದೆ. ಹೈಪೋಫಾಸ್ಫಾರಿಕ್ ಆಮ್ಲದ ಎಲ್ಲ ಲವಣಗಳೂ ಪ್ರತಿಕಾಂತ ಪದಾರ್ಥಗಳಾಗಿರುವುದರಿಂದ ಅದರ ಸರಿಯಾದ ರಾಸಾಯನಿಕಸೂತ್ರ ಎಲ್ಲ ಋಣವಿದ್ಯುದಂಶಗಳೂ ಜೋಡಣೆಯಾಗಿರುವ $H_4P_2O_6$ ಆಗಿರಬೇಕು ಎಂದು ನಿರ್ಧರಿಸಲಾಗಿದೆ. ಇದೇ ಕಾರಣದಿಂದ ಮರ್ಕ್ಯೂರೆಸ್ ಕ್ಲೋರೈಡ್ Hgcl ಆಗಿರದೆ $Hg_2Cl_2$ ಆಗಿರಬೇಕು ಎಂದು ನಿರ್ಧರಿಸಲಾಗಿದೆ.

ಇನ್ನೂ ಮುಖ್ಯವಾದ ನಿದರ್ಶನಗಳೆಂದರೆ ಅಪೂರ್ವ ಖನಿಜಗಳ (ರೇರ್ ಅರ್ತ್ಸ್) ಗುಂಪು ಮತ್ತು ಆ್ಯಕ್ಟಿನೈಡ್ ಗುಂಪುಗಳಿಗೆ ಸೇರಿದ ಸಂಧಿ ಸ್ಥಾನದ ಮೂಲಧಾತುಗಳು (ಟ್ರಾನ್ಸಿಷನ್ ಎಲಿಮೆಂಟ್ಸ್) ಇವುಗಳಲ್ಲಿ ಅನುಕಾಂತತೆ, ಅಪೂರ್ಣವಾಗಿರುವ ಒಳಗಿನ ಋಣವಿದ್ಯುದಂಶವಲಯದ ಕಾರಣದಿಂದಾಗಿ ಉದ್ಭವಿಸುತ್ತವೆ. ಇವುಗಳಲ್ಲಿ ಮೊದಲನೆಯ ಸಂಧಿಸ್ಥಾನ ಮೂಲಧಾತುಗಳ ಗುಂಪಿನಲ್ಲಿ, ಕಾಂತಭ್ರಮಣಶಕ್ತಿ, ಜೋಡಣೆಯಿಲ್ಲದ ವಿದ್ಯುದಂಶಗಳ ಭ್ರಮಣದಿಂದ ಮಾತ್ರವೇ ಹುಟ್ಟುತ್ತದೆ. ಕಾಂತಭ್ರಮಣಶಕ್ತಿಯ ಸಾತ್ವಿಕಮೌಲ್ಯ (ಎಫೆಕ್ಟಿವ್ ಮ್ಯಾಗ್ನೆಟಿಕ್ ಮೊಮೆಂಟ್) ಇಲ್ಲಿ ಒಂಟಿ ಋಣವಿದ್ಯುದಂಶಗಳ ಸಂಖ್ಯೆಯನ್ನು ($n$) ಅವಲಂಬಿಸಿದೆ.

$_{eff}=$

ಹೀಗೆ ಕಾಂತತಾಭ್ರಮಣಶಕ್ತಿಯನ್ನು ಅಳತೆ ಮಾಡಿದಲ್ಲಿ ಒಂಟಿ ಋಣವಿದ್ಯುದಂಶಗಳ ಸಂಖ್ಯೆಯನ್ನು ಅನುಕಾಂತಕಣದ (ಪಾರಾಮ್ಯಾಗ್ನೆಟಿಕ್ ಅಯಾನ್) ಸಂಯೋಗ ಶಕ್ತಿಯನ್ನೂ ಪಡೆಯಬಹುದು. ಸಂಕೀರ್ಣ ಪದಾರ್ಥಗಳಲ್ಲಿ (ಕಾಂಪ್ಲೆಕ್ಸ್) ಕೇಂದ್ರದಲ್ಲಿರುವ ಲೌಕಿಕ ಪರಮಾಣುವಿನ ಸುತ್ತ ಇರುವ ಸಂಯೋಗಸಮುದಾಯಗಳ (ಲಿಗಂಡ್ಸ್) ಆಂತರಿಕ ರಚನೆಯನ್ನೂ ಅನುಕಾಂತತೆಯ ಮೂಲಕ ಅರಿಯಬಹುದು. ಯಾವ ಯಾವ ಒಂಟಿ ಋಣವಿದ್ಯುದಂಶಗಳು ಸಂಯೋಗ ಸಮುದಾಯಗಳೊಡನೆ ಕೂಡಿ ರಾಸಾಯನಿಕ ಬಂಧನಗಳನ್ನು ರೂಪಿಸುತ್ತವೆಂಬುದನ್ನಾಧರಿಸಿ ಬಹುವಿಧ ಆಂತರಿಕ ರಚನೆ ಏರ್ಪಡುತ್ತದೆ. ಈ ಕೂಡಣಿಯಲ್ಲಿ ಹುಟ್ಟುವ ಮಿಶ್ರಜ ಬಂಧನಗಳು (ಹೈಬ್ರಿಡ್ ಬಾಂಡ್ಸ್) ನಿಶ್ಚಿತ ದಿಕ್ಕಿನಲಿ ಮಾತ್ರ ಸಂಯೋಜನೆಗೆ ನೆರವಾಗುತ್ತವೆ; ಆದ್ದರಿಂದ ಆಂತರಿಕ ರಚನೆಯ ಮೇಲೆ ಪರಿಣಾಮವನ್ನುಂಟುಮಾಡುತ್ತವೆ. ಉದಾಹರಣೆಗೆ, ಎರಡು ಒಂಟಿ ಋಣವಿದ್ಯುದಂಶಗಳನ್ನು ಹೊಂದಿದ [ಸಂಯೋಗ ಸಂಖ್ಯೆ (ಕೋಆರ್ಡಿನೇಷನ್ ನಂಬರ್)=2 Ni ಎರಡು ಬಗೆಯ ಸಂಕೀರ್ಣ ಪದಾರ್ಥಗಳನ್ನು ಕೊಡುತ್ತದೆ.

1 ಸಮತಲ ಚೌಕಾಕಾರದ (ಸ್ಕ್ವೇರ್ ಪ್ಲೇನಾರ್) ಸಮ್ಮಿಶ್ರ ಪದಾರ್ಥಗಳು : ಇವು Niನ ಎರಡೂ ಒಂಟಿ ಋಣವಿದ್ಯುಂಶಗಳ ಜೋಡಣೆಯಿಂದ ಹುಟ್ಟುತ್ತವೆ. ಆದ್ದರಿಂದ ಈ ಪದಾರ್ಥಗಳಿಗೆ ಕಾಂತಭ್ರಮಣಶಕ್ತಿ ಸೊನ್ನೆಯಾಗಿರುತ್ತದೆ.

2. ನಾಲ್ಕುಮುಖದ ಗೋಪುರಾಕೃತಿಯ (ಟೆಟ್ರಾಹೆಡ್ರಲ್) ಸಂಕೀರ್ಣ ಪದಾರ್ಥಗಳು : ಇಲ್ಲಿ Niನ ಎರಡು ಒಂಟಿ ಋಣವಿದ್ಯುದಂಶಗಳು ಮಿಶ್ರಜ ಬಂಧನಗಳನ್ನು ರೂಪಿಸುವುದರಲ್ಲಿ ಭಾಗವಹಿಸದೆ ಹಾಗೆಯೇ ಒಂಟಿಯಾಗಿ ಉಳಿಯುತ್ತವೆ. ಇದರಿಂದ ಈ ಪದಾರ್ಥಗಳಲ್ಲಿ ಅನುಕಾಂತತೆ ಉಳಿಯುತ್ತದೆ. ಕಾಂತಭ್ರಮಣಶಕ್ತಿಯನ್ನು ಅಳತೆ ಮಾಡಿದಲ್ಲಿ, ಈ ಎರಡು ವಿಧದ ರಚನಾಸ್ವರೂಪವನ್ನು ತತ್‌ಕ್ಷಣ ಗುರುತಿಸಬಹುದು.

ಹೀಗೆ ವಿವಿಧ ಸನ್ನಿವೇಶಗಳಲ್ಲಿ ಮೇಲೆ ವಿವರಿಸಿದ ವಿಧಾನಗಳು ಅಣುರಚನಾ ಸ್ವರೂಪವನ್ನು ನಿರ್ಣಯಿಸುವಲ್ಲಿ ಉಪಯುಕ್ತವಾಗುತ್ತವೆ. ಈ ಎಲ್ಲ ಮಾರ್ಗಗಳೂ ನಿರ್ದಿಷ್ಟ ವ್ಯಾಪ್ತಿ ಮತ್ತು ಮಿತಿಗಳಿಂದ ಕೂಡಿವೆ. ಅನೇಕ ವೇಳೆ ಈ ಮಾರ್ಗಗಳನ್ನು ಪರಸ್ಪರ ಪೂರಕಗಳಾಗಿ ಉಪಯೋಗಿಸಲಾಗುವುದು. (ಇ.ಎಸ್.ಜೆ.)

**ಅಣುರೋಹಿತ :** ರಾಸಾಯನಿಕಕ್ರಿಯೆಗೆ ಒಳಗಾಗಿ ಉರಿಯುತ್ತಿರುವ ಅನಿಲಗಳ ಜ್ವಾಲೆಯ ಬೆಳಕಿನ ರೋಹಿತ (ಉದಾ:ಗಾಳಿಯಲ್ಲಿ ಉರಿಯುತ್ತಿರುವ ಕಲ್ಲಿದ್ದಲಿನ ಅನಿಲ) ಅವಿಚ್ಛಿನ್ನವಾಗಿ ಇರುವುದಿಲ್ಲ; ಅದು ಪ್ರಕಾಶಮಾನವಾದ ಅಥವಾ ಪಟ್ಟಿಗಳಿಂದ ಕೂಡಿರುವಂತೆ

$\mu^2 = \mu_1^2 + \mu_2^2 + 2\mu_1\mu_2\cos\theta$ $\sqrt{n(n+2)}$

ಕಾಣುತ್ತವೆ. ಇದು ಅಣುರೋಹಿತದ (ಮಾಲೆಕ್ಯುಲರ್ ಸ್ಪೆಕ್ಟ್ರಮ್) ವೈಶಿಷ್ಟ್ಯ. ಪರಮಾಣು ರೋಹಿತದಲ್ಲಿ ಗೆರೆಗಳು ವಿಚ್ಛಿನ್ನವಾಗಿರುವುವು. ಪರಮಾಣುರೋಹಿತವನ್ನು ರೇಖಾರೋಹಿತ (ಲೈನ್ ಸ್ಪೆಕ್ಟ್ರಮ್) ಎಂದೂ ಅಣುರೋಹಿತವನ್ನು ಪಟ್ಟಿರೋಹಿತ (ಬ್ಯಾಂಡ್ ಸ್ಪೆಕ್ಟ್ರಮ್) ಎಂದೂ ಕರೆಯುತ್ತಾರೆ.

1 ಸೆಂ.ಮೀ. ತರಂಗದೂರದಿಂದ ತೊಡಗಿ ಸುಮಾರು $10^{-5}$ ಸೆಂ.ಮೀ. ವರೆಗೂ (ಅಥವಾ 1,000 ಆಂಗ್‌ಸ್ಟ್ರಾಂ, 1ಆ= $10^{-8}$ ಸೆಂ.ಮೀ.) ಅಣುರೋಹಿತವನ್ನು ನೋಡಬಹುದು.

ಸೂಕ್ಷ್ಮತರಂಗ (ಮೈಕ್ರೋವೇವ್) ಮತ್ತು ಅವರಕ್ತ (ಇನ್‌ಫ್ರಾರೆಡ್) ಪ್ರದೇಶಗಲ್ಲಿ ಶೋಷಣರೋಹಿತಗಳ ಅಭ್ಯಾಸವೇ ಇದುವರೆಗೆ ಬಹುಮುಖ್ಯವಾಗಿದೆ. ಈ ರೀತಿ ಪರೀಕ್ಷಿಸಲಾದ ಆಕರಗಳಲ್ಲಿ ಚಾಪಗಳು (ಆರ್ಕ್ಸ್), ಜ್ವಾಲೆಗಳು (ಫ್ಲೇಮ್ಸ್), ಅನಿಲಗಳ ಮತ್ತು ಆವಿಗಳ ಮೂಲಕ ಹೋಗುವ ವಿದ್ಯುತ್ಪ್ರವಾಹ ಮತ್ತು ಆಕಾಶ ಕಾಯಗಳು ಸೇರಿವೆ ಈ ಆಕರಗಳ ಅಣುರಚನೆಯನ್ನು ವಿಶ್ಲೇಷಿಸುವಲ್ಲಿ ಅಣುರೋಹಿತದ ಪಾತ್ರ ಹಿರಿದು.

ಅಣುಗಳು ಬೇರೆ ಬೇರೆ ಶಕ್ತಿಸ್ಥಿತಿಗಳಲ್ಲಿರುತ್ತವೆ. ಅಣು ಒಂದು ಶಕ್ತಿಸ್ಥಿತಿಯಿಂದ ಇನ್ನೊಂದು ಶಕ್ತಿಸ್ಥಿತಿಗೆ ಜಿಗಿಯುವಾಗ ರೋಹಿತ ರೇಖೆಗಳು ಉಂಟಾಗುತ್ತವೆ. ಇಂಥ ಎರಡು ಶಕ್ತಿಸ್ಥಿತಿಗಳು $E_1, E_2$ ಆಗಿದ್ದರೆ $E_1\text{-}E_2=h\nu$ ಎಂಬ ಮೂಲಭೂತ ಸಂಬಂಧದಿಂದ ಸೂಚಿಸಬಹುದು. ಇಲ್ಲಿ $\nu$ ಎಂಬುದು ಹೊಮ್ಮಿದ ಅಥವಾ ಹೀರಿದ ಕಿರಣದ ಆ ವೃತ್ತಿ; $h$ ಎಂಬುದು ಪ್ಲಾಂಕ್‌ನ ಸ್ಥಿರಾಂಕ.

ಬೆಳಕಿನ ಚದರಿಕೆ (ಸ್ಕ್ಯಾಟರಿಂಗ್) ಪರಿಣಾಮಗಳಿಂದ ಅಣುಗಳ ಭ್ರಮಣ ಮತ್ತು ಕಂಪನಶಕ್ತಿಯ ಸ್ಥಿತಿಗಳ ವಿಷಯವನ್ನು ಅರಿಯಬಹುದು. ಪರಮಾಣು ಅಥವಾ ಅಣುವಿನ ಮೇಲೆ ಬೆಳಕು ಬಿದ್ದಾಗ ಬೆಳಕು ಚದರುತ್ತದೆ. ಸೂರ್ಯನ ಬೆಳಕನ್ನು ವಾತಾವರಣ ಚದುರಿಸುವುದರಿಂದ ಆಕಾಶ ನೀಲವರ್ಣವಾಗಿದೆ. ಇಲ್ಲಿ ಆಪಾತ ಬೆಳಕಿನ ತರಂಗ ದೂರವು ಚದರಿಕೆಯಿಂದ ಬದಲಾಗುವುದಿಲ್ಲ. ರಾಮನ್ ಪರಿಣಾಮದಲ್ಲಿ ತೋರುವಂತೆ ಚದರಿಕೆಯಿಂದ ತರಂಗದೂರದಲ್ಲಿ ಬದಲಾವಣೆಯಾಗಬಹುದು. **(ನೋಡಿ– ರಾಮನ್–ಪರಿಣಾಮ)**

ಅಣುವಿನ ಎರಡು ಬೇರೆ. ಎಲೆಕ್ಟ್ರಾನಿಕ್ ಸ್ಥಿತಿಗಳಲ್ಲಿ ಭ್ರಮಣದ ಮತ್ತು ಕಂಪನದ ಮಟ್ಟಗಳ ಮಧ್ಯೆ ಉಂಟಾಗುವ ಬದಲಾವಣೆಯಿಂದ ಎಲೆಕ್ಟ್ರಾನಿಕ್ ರೋಹಿತ ಉದಯಿಸುತ್ತದೆ. ಅನೇಕ ವೇಳೆ ಇದು ಊದಾಬಣ್ಣದಿಂದ (ಸು. 4000 ಆ.) ಕೆಂಪು ಬಣ್ಣದ ವರೆಗೆ (ಸು. 7000 ಆ.) ಇರುವ ಗೋಚರ ಭಾಗದಲ್ಲಿದೆ. ಇದನ್ನು ಎಲೆಕ್ಟ್ರಾನಿಕ್ ಪಟ್ಟಿ ವ್ಯವಸ್ಥೆ (ಎಲೆಕ್ಟ್ರಾನಿಕ್ ಬ್ಯಾಂಡ್ ಸಿಸ್ಟಮ್) ಎಂದು ಕರೆಯುತ್ತಾರೆ.

ಅಣುರಚನೆಸ್ನು ತಿಳಿಯಬಹುದು ಅಣುರೋಹಿತದಿಂದಾ ದ್ವಿಪರಮಾಣು (ಅಂದರೆ ಎರಡು ಪರಮಾಣುಗಳಿಂದ ಕೂಡಿದ) ಅಣುವಿನ ಗಾತ್ರವನ್ನು ನಿಖರವಾಗಿ ಅದರ ರೋಹಿತದಿಂದ ತಿಳಿಯಬಹುದು. ಇಲ್ಲಿಯವರೆಗೂ ಬಹುಪರಮಾಣು ಅಣುಗಳ ಅಭ್ಯಾಸ ದಲ್ಲಿ ಅವಕೆಂಪು ರಾಮನ್ ಮತ್ತು ಸೂಕ್ಷ್ಮತರಂಗ ರೋಹಿತಗಳು ಅತ್ಯಂತ ಸಹಕಾರಿಯಾಗಿವೆ. ಬಹುಪರಮಾಣು ಅಣುಗಳ ಎಲೆಕ್ಟ್ರಾನಿಕ್ ರೋಹಿತಗಳು ಸಾಮಾನ್ಯವಾಗಿ ಕ್ಲಿಷ್ಟವಾಗಿವೆ. ಅಣುವಿನ ಸಮಸ್ಥಿತಿ ವಿನ್ಯಾಸ ಮತ್ತು ಕಂಪನದ ಕ್ರಮವನ್ನು ಸರಳ ಸಂದರ್ಭಗಳಲ್ಲಿ ರೋಹಿತ ತಿಳಿಸುತ್ತದೆ. (ಎಸ್.ಎಸ್.)

**ಅಣುವ್ರತ :** ಜೈನಧರ್ಮದಂತೆ ಗೃಹಸ್ಥನಾದವನು ತನಗಿರುವ ಪರಿಮಿತಿಯಲ್ಲಿ ಪಾಪದೂರನಾಗಿ ಪುಣ್ಯವಂತನಾಗಿ ಬಾಳು ಆಚರಿಸಬೇಕಾದ ಸಣ್ಣ ವ್ರತಗಳಿಗೆ ಈ ಹೆಸರಿದೆ. ಸುಖಕ್ಕಾಗಿ, ಆಸೆಯಿಂದ ಅವನು ಮಾಡಬಹುದಾದ ಅಪಚಾರಗಳನ್ನು ತಡೆಗಟ್ಟಿ ಅವನನ್ನು ಶೀಲವಂತನನ್ನಾಗಿ ಮಾಡಬಲ್ಲ ಈ ವ್ರತ ಐದು ತೆರನಾಗಿದ್ದು ಪಂಚಾಣುವ್ರತಗಳೆಂದು ಪ್ರಸಿದ್ಧವಾಗಿದೆ.

**1. ಅಹಿಂಸೆ :** ಸುಖವನ್ನು ಅಪೇಕ್ಷಿಸುವಾಗ ಪ್ರಮಾದದಿಂದಾಗಲಿ ಇತರ ಕಾರಣಗಳಿಂದಾ ಗಲಿ ಶರೀರದಿಂದ ಆತ್ಮವನ್ನು ಪ್ರತ್ಯೇಕಿಸುವುದಕ್ಕೆ ಹಿಂಸೆ ಎಂದು ಹೆಸರು. ಅಂಥ ಹಿಂಸೆಯನ್ನು ಮಾಡದಿರುವುದಕ್ಕೆ ಅಹಿಂಸೆ ಎಂದು ಹೆಸರು. ಆರಂಭಹಿಂಸೆ. ಉದ್ಯೋಗಹಿಂಸೆ, ವಿರೋಧಿ ಹಿಂಸೆ, ಸಂಕಲ್ಪಹಿಂಸೆ ಎಂದು ಹಿಂಸೆ ನಾಲ್ಕು ಪ್ರಕಾರವಾಗಿದೆ. ಅವುಗಳಲ್ಲಿ ಆರಂಭಹಿಂಸೆ, ಉದ್ಯೋಗಹಿಂಸೆಗಳನ್ನು ಗೃಹಸ್ಥನಾದವನು ಮಾಡದೆ ಜೀವಿಸುವುದು ಕಷ್ಟಸಾಧ್ಯ. ನಮ್ಮನ್ನು ಕೊಲ್ಲಲು ಬಂದವರೊಡನೆ ಹೋರಾಡಿ ಆತ್ಮರಕ್ಷಣೆ ಮಾಡಿಕೊಳ್ಳುವುದು ವಿರೋಧಿಹಿಂಸೆ; ಸಂಕಲ್ಪಮಾಡಿ ಪ್ರಾಣಿಗಳನ್ನು ಕೊಲ್ಲುವುದು ಸಂಕಲ್ಪಹಿಂಸೆ. ಹಿಂಸೆಯಿಂದ ಪ್ರಾಣಿಗಳಿಗೆ ಬಹಳ ದುಃಖವಾಗುವುದರಿಂದ ಅಹಿಂಸೆಯನ್ನು ವ್ರತವೆಂಬಂತೆ ಆಚರಿಸಬೇಕು.

**2. ಸತ್ಯ :** ಸುಳ್ಳನ್ನು ಎಂದೂ ಹೇಳಬಾರದು; ಅದರಿಂದ ಅನೇಕ ಅನರ್ಥಗಳು ಸಂಭವಿಸುತ್ತವೆ. ಸತ್ಯವನ್ನು ಹೇಳುವುದರಿಂದ ಇಹದಲ್ಲಿ ಕೀರ್ತಿಯೂ ಪರದಲ್ಲಿ ಸುಖವೂ ಪ್ರಾಪ್ತವಾಗುತ್ತವೆ.

**3. ಅಸ್ತೇಯ :** ತನಗೆ ಸೇರದುದನ್ನು ಮೋಸದಿಂದಾಗಲಿ ಬಲತ್ಕಾರವಾಗಿಯಾಗಲಿ ತೆಗೆದುಕೊಳ್ಳುವುದಕ್ಕೆ ಕಳ್ಳತನವೆಂದು ಹೆಸರು. ಪರರ ವಸ್ತುಗಳನ್ನು ಮಣ್ಣಿನ ಹೆಂಟೆಗೆ ಸಮಾನವಾಗಿ ತಿಳಿದು ಅವುಗಳನ್ನು ತೆಗೆದುಕೊಳ್ಳದಿರುವುದಕ್ಕೆ ಅಸ್ತೇಯವೆಂದು ಹೆಸರು.

**4. ಬ್ರಹ್ಮಚರ್ಯ :** ಪರಸ್ತ್ರೀಯರನ್ನು ಮನಸ್ಸು ವಚನ ಕಾಯಗಳಿಂದ ಅಪೇಕ್ಷಿಸದೆ ಇರುವುದಕ್ಕೆ ಬ್ರಹ್ಮಚರ್ಯವೆಂದು ಹೆಸರು.

**5. ಅಪರಿಗ್ರಹ :** ಲೋಕದಲ್ಲಿರುವ ಸಮಸ್ತ ಭೋಗೋಪಭೋಗಗಳನ್ನು ನೋಡಿ ಜೀವನು ಮೋಹಿಸುತ್ತಾನೆ. ಮೋಹ ಆಸೆಗೆ ಮೂಲವಾಗುತ್ತದೆ. ಆಗ ದಾನವಾಗಿಯೋ ಬೇರೆ ಇನ್ನಾವ ವಿಧದಲ್ಲೋ ಮನುಷ್ಯ ಅನೇಕಾನೇಕ ವಸ್ತುಗಳನ್ನು ಸ್ವೀಕರಿಸುತ್ತಾನೆ. ಹಾಗೆ ಮಾಡದೆ ತನಗೆ ಅಗತ್ಯವಿದ್ದಷ್ಟು ಮಾತ್ರ ಪರಿಗ್ರಹಿಸಿ ನಿಯಮಕ್ಕನುಸಾರವಾಗಿ ಜೀವಿಸುವುದು ಈ ವ್ರತದ ಕಟ್ಟಳೆ.

ಸಂಪೂರ್ಣವಾಗಿ ಸಂಸಾರ, ಶಾರೀರಕ ಭೋಗೋಪಭೋಗಗಳನ್ನು ತ್ಯಜಿಸಿದ ಮುನಿಗಳೂ ಪಂಚಮಹಾವ್ರತಗಳನ್ನು ಆಚರಿಸುವರು. **(ನೋಡಿ – ಮಹಾವ್ರತ)** (ಎಂ.ಸಿ.ಪಿ.)

**ಅಣುಶಕ್ತಿವಿಭಾಗ, ಭಾರತದ :** ರಾಷ್ಟ್ರದ ಕಲ್ಯಾಣಕ್ಕಾಗಿ ಪರಮಾಣು ಶಕ್ತಿಯನ್ನು ವೈಜ್ಞಾನಿಕರೀತಿಯಲ್ಲಿ ಬಳಸಿಕೊಳ್ಳುವ ಸಲುವಾಗಿ 1948ರಲ್ಲಿ ಭಾರತದ ಅಣುಶಕ್ತಿಮಂಡಲಿ (ವಾಸ್ತವದಲ್ಲಿ ಇದು ಪರಮಾಣು ಶಕ್ತಿ ಮಂಡಲಿ. ಹೆಚ್ಚು ಬಳಕೆಯಲ್ಲಿರುವುದು ಅಣುಶಕ್ತಿ ಎಂಬ ಪದ. ಹೀಗಾಗಿ ಪರಮಾಣು ಶಬ್ದ ಬಳಸಬೇಕಾದಲ್ಲೆಲ್ಲ ಅಣು ಎಂದು ಬಳಸಲಾಗಿದೆ) ರಚಿತವಾಯಿತು. ಪರಮಾಣುಶಕ್ತಿಯನ್ನು ವ್ಯವಸಾಯ, ಜೀವವಿಜ್ಞಾನದ ಕೈಗಾರಿಕಾ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಬಳಸಿಕೊಳ್ಳಲು ಐಸೊಟೋಪ್‌ಗಳೆಂಬ ಉಪವಸ್ತುಗಳ ತಯಾರಿಕೆ ಹಾಗೂ ಅವುಗಳನ್ನು ಬಳಸುವ ವಿಧಾನಗಳಿಗೆ ಸಂಬಂಧಿಸಿದ ಯೋಜನೆ ಗಳನ್ನು ಈ ಮಂಡಳಿ ರೂಪಿಸುತ್ತದೆ. ಎಲ್ಲ ಯೋಜನೆಗಳೂ ಅಣುಶಕ್ತಿ ವಿಭಾಗದ ವತಿಯಲ್ಲಿ ನಡೆಯುತ್ತವೆ.

ಅಣುಶಕ್ತಿವಿಭಾಗವನ್ನು 1954 ಆಗಸ್ಟ್‌ನಲ್ಲಿ ಸ್ಥಾಪಿಸಲಾಯಿತು. ಈ ವಿಭಾಗದ ಅಂಗವಾದ ಅಣುಶಕ್ತಿಮಂಡಲಿ 1955ರಲ್ಲಿ ಮುಂಬಯಿ ಹತ್ತಿರವಿರುವ ಟ್ರಾಂಬೆ ಎಂಬಲ್ಲಿ ಈಜುಕೊಳದ ಆಕಾರದಲ್ಲಿರುವ ಪರಮಾಣು ರಿಯಾಕ್ಟರ್ ಒಂದನ್ನು ಸ್ಥಾಪಿಸಲು ತೀರ್ಮಾನ ಕೈಗೊಂಡಿತು. 1956ರಲ್ಲಿ ಭಾರತದ ಪ್ರಪ್ರಥಮ ಅಪ್ಸರಾ ಎಂಬ ಅಣುರಿಯಾಕ್ಟರ್ ಕೆಲಸಮಾಡಲು ಪ್ರಾರಂಭಿಸಿತು. 35ಲಕ್ಷ ರೂ. ಬೆಲೆ ಬಾಳುವ ಈ ರಿಯಾಕ್ಟರ್ ವ್ಯವಸಾಯದಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ, ಕೈಗಾರಿಕೆಯಲ್ಲಿ ಹಾಗೂ ವಿಶ್ವವಿದ್ಯಾನಿಲಯಗಳು ನಡೆಸುವ ಸಂಶೋಧನೆಯಲ್ಲಿ ಅಗತ್ಯವಿರುವ ರೇಡಿಯೋ ಐಸೊಟೋಪ್‌ಗಳನ್ನು ತಯಾರಿಸುತ್ತಿದೆ. ಇದರ ಜೊತೆಗೆ ಅಲ್ಪಪ್ರಮಾಣದ ವಿದ್ಯುಚ್ಛಕ್ತಿಯನ್ನೂ ಒದಗಿಸುತ್ತಿದೆ. ಅಣುಶಕ್ತಿವಿಭಾಗ ಸ್ಥಾಪಿಸಿದ ಈ ರಿಯಾಕ್ಟರಿನಿಂದ ರಿಯಾಕ್ಟರ್‌ತಂತ್ರಶಾಸ್ತ್ರದಲ್ಲಿ ಅಲ್ಲಿನ ಸಿಬ್ಬಂದಿಗೆ ತರಬೇತಿಯನ್ನೂ ಪ್ರತಿಭಾವಂತ ಯುವಕರಿಗೆ ಭೌತವಿಜ್ಞಾನ, ಎಂಜಿನಿಯರಿಂಗ್ ಹಾಗೂ ಜೀವವಿಜ್ಞಾನದಲ್ಲಿ ಮೂಲಭೂತ ಸಂಶೋಧನೆಯನ್ನು ನಡೆಸಲು ಅನೇಕ ಉತ್ತಮ ಅವಕಾಶಗಳನ್ನೂ ಒದಗಿಸಿಕೊಡುತ್ತಿದೆ.

ಅಣುಶಕ್ತಿವಿಭಾಗದ ವೈಜ್ಞಾನಿಕ ಹಾಗೂ ತಾಂತ್ರಿಕ ಕೆಲಸಕಾರ್ಯಗಳು ಅಟಾಮಿಕ್ ಎನರ್ಜಿ ಎಸ್ಟಾಬ್ಲಿಷ್‌ಮೆಂಟ್ ಎಂಬ ಸಂಸ್ಥೆಯಲ್ಲಿ ವೈಜ್ಞಾನಿಕ ವಿಷಯಗಳ ಬಗ್ಗೆ ಮೂಲಭೂತ ಸಂಶೋಧನೆಗಳನ್ನೊಳಗೊಂಡಂತೆ ನಡೆಯುತ್ತಿವೆ. ಈ ಸಂಸ್ಥೆಯ ಹೆಸರನ್ನು 1966ರ ಮೇ ತಿಂಗಳಿನಿಂದ ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್ ಎಂದು ಅದರ ನಿರ್ದೇಶಕ ರಾಗಿದ್ದ ಹೋಮಿ ಜೆ ಭಾಭಾರವರ ಜ್ಞಾಪಕಾರ್ಥ ನಾಮಕರಣಮಾಡಲಾಯಿತು. ಜೊತೆಗೆ ಟ್ರಾಂಬೆ ಪರಮಾಣುಶಕ್ತಿ ಖನಿಜಗಳ ವಿಭಾಗವೂ ಈಚೆಗೆ ಕೆಲಸಮಾಡುತ್ತಿದೆ. ಅಣುಶಕ್ತಿ ವಿಭಾಗದ ಕಾರ್ಯಚಟುವಟಿಕೆಗಳು ಇಂಡಿಯನ್ ರೇರ್ ಅರ್ತ್ಸ್ ಲಿಮಿಟೆಡ್ ಮತ್ತು ಟ್ರಾವೆಂಕೂರ್ ಮಿನರಲ್ಸ್ ಲಿಮಿಟೆಡ್ ಎಂಬ ಸಂಸ್ಥೆಗಳ ಮೂಲಕ ನಡೆಯುತ್ತಿದೆ.

ಅಣುಶಕ್ತಿಮಂಡಲಿಯ ಆದೇಶದ ಮೇಲೆ ಭಾರತದ ಅಣುಶಕ್ತಿವಿಭಾಗ ಕೈಕೊಂಡಿ ರುವ ಇತರ ಪ್ರಗತಿಪರ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ವಿಭಾಗಿಸಲಾಗಿದೆ

**1. ಪರಮಾಣು ಇಂಧನ ತಯಾರಿಕೆ :** ವಿಕಿರಣಪಟು ವಸ್ತುಗಳಾದ ಯುರೇನಿಯಮ್ ಮತ್ತು ಥೋರಿಯಮ್ ವಸ್ತುಗಳ ತಯಾರಿಕೆ ಇದರ ಉದ್ದೇಶ.

2. ಪರಮಾಣು ವಿಕಿರಣಗಳ ಅಧ್ಯಯನಕ್ಕೆ ಬೇಕಾದ ಸಲಕರಣೆಗಳ ತಯಾರಿಕೆ.

3. ರೇಡಿಯೋ ಐಸೊಟೋಪ್‌ಗಳು : ಪರಮಾಣುಯುಗದ ಅತ್ಯಂತ ಉಪಯೋಗಕಾರಿಗಳಾದ ಈ ವಸ್ತುಗಳನ್ನು ಟ್ರಾಂಬೆಯಲ್ಲಿ ತಯಾರಿಸುತ್ತಿದ್ದಾರೆ.

**4. ವಿಕಿರಣ ವೈದ್ಯಕೀಯ ಸಂಸ್ಥೆ :** ಮುಂಬಯಿಯಲ್ಲಿದೆ. ಕಾಯಿಲೆಗಳನ್ನು ಪತ್ತೆ ಹಚ್ಚುವುದು ಹಾಗೂ ಅವುಗಳಿಗೆ ರೇಡಿಯೋ ಐಸೊಟೋಪ್‌ಗಳನ್ನು ಉಪಯೋಗಿಸಿ ಚಿಕಿತ್ಸೆ ನಡೆಸುವುದು–ಇತ್ಯಾದಿ ಈ ಸಂಸ್ಥೆಯ ಕೆಲಸಗಳು.

5. ಇಂಡಿಯನ್ ರೇರ್ ಅರ್ತ್ಸ್ ಲಿಮಿಟೆಡ್ ಮತ್ತು ಟ್ರಾವೆಂಕೂರ್ ಮಿನರಲ್ಸ್ ಲಿಮಿಟೆಡ್.

**6. ಪರಮಾಣುವಿದ್ಯುತ್‌ಕೇಂದ್ರಗಳು :** ಮುಂಬಯಿಗೆ 90 ಕಿಮೀ ದೂರದಲ್ಲಿರುವ ತಾರಾಪೂರ್ ಪರಮಾಣು ವಿದ್ಯುತ್‌ಕೇಂದ್ರ 400 ಮೆಗಾ ವಾಟ್ ಶಕ್ತಿಯ ಉತ್ಪಾದನಾ ಸಾಮರ್ಥ್ಯವುಳ್ಳ ಉತ್ಪಾದನಾ ಸಾಮಗ್ರಿಯನ್ನು ಹೊಂದಿದೆ. ಮತ್ತೊಂದು ಪರಮಾಣು ವಿದ್ಯುತ್‌ಕೇಂದ್ರ ರಾಜಸ್ಥಾನದ ಕೋಟಾ ಜಿಲ್ಲೆಯ ರಾಣಾಪ್ರತಾಪ್‌ಸಾಗರ್ ಎಂಬ ಸ್ಥಳದಲ್ಲಿದೆ. ಮತ್ತೊಂದು ಪರಮಾಣುವಿದ್ಯುತ್‌ಕೇಂದ್ರವನ್ನು ತಮಿಳುನಾಡಿನ ಮಹಾಬಲಿಪುರಂ ಹತ್ತಿರವಿರುವ ಕಲ್ಪಾಕಂ ಎಂಬಲ್ಲಿ ಸ್ಥಾಪಿಸಲಾಗಿದೆ.

**7. ಅಂತರಿಕ್ಷ ಸಂಶೋಧನೆ :** ಅಂತರಿಕ್ಷ ಸಂಶೋಧನೆಯಲ್ಲಿ ಭಾರತವೂ ಕೆಲಸ ನಡೆಸಿ ಗಮನಾರ್ಹ ಪ್ರಗತಿ ಸಾಧಿಸಿದೆ. ರಾಕೆಟ್ಟುಗಳನ್ನು ವಾತಾವರಣದ ಬಹು ಎತ್ತರಕ್ಕೆ ಕಳುಹಿಸಿ ಅಲ್ಲಿನ ವಿದ್ಯಮಾನಗಳನ್ನು ಅಧ್ಯಯನ ಮಾಡುವ ಸಲುವಾಗಿ ಇಂಡಿಯನ್ ನ್ಯಾಷನಲ್ ಕಮಿಟಿ ಆನ್ ಸ್ಪೇಸ್ ರೀಸರ್ಚ್ ಎಂಬ ಒಂದು ಮಂಡಲಿಯನ್ನು ಅಣುಶಕ್ತಿವಿಭಾಗ ಸ್ಥಾಪಿಸಿದೆ. 1963 ನವೆಂಬರ್ 21ರಿಂದ ಕೇರಳದ ತುಂಬಾ ಈಕ್ವಿಟೋರಿಯಲ್ ಸೆಂಟರ್ ಎಂಬ ಸ್ಥಳದಿಂದ ಪರೀಕ್ಷಾರ್ಥ ರಾಕೆಟ್‌ಗಳನ್ನು ಹಾರಿಸಲಾಗುತ್ತಿದೆ. ಅಂತರಿಕ್ಷದ ಅಧ್ಯಯನದಲ್ಲಿ ಈ ಮಂಡಲಿ ಇತ್ತೀಚೆಗೆ ಸಾಧಿಸಿರುವ ಪ್ರಗತಿ ಗಮನಾರ್ಹವಾಗಿದ್ದು ಬಾಹ್ಯಾಕಾಶ ಸಂಶೋಧನೆಯ ಸಲುವಾಗಿ ಭಾರತ ತನ್ನದೇ ಆದ ಕೃತಕ ಭೂ ಉಪಗ್ರಹಗಳನ್ನು ಹಾರಿಸುವ ಪ್ರಯತ್ನ ನಡೆಸುತ್ತಿದೆ.

8. ಸಂಶೋಧನಾವೇತನ ಹಾಗೂ ಆರ್ಥಿಕ ನೆರವು : ಪರಮಾಣುವಿಜ್ಞಾನ ವಿಭಾಗದಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುವಂತೆ ದೇಶದ ಪ್ರತಿಭಾವಂತ ಯುವಕರನ್ನು ಬಳಸಿಕೊಂಡು ಅಗತ್ಯವಾದ ತರಬೇತಿಯನ್ನು ನೀಡಲು ಅಣುಶಕ್ತಿ ವಿಭಾಗ ಒಂದು ವ್ಯವಸ್ಥೆಯನ್ನು ಮಾಡಿದೆ. ಮುಂಬಯಿಯಲ್ಲಿರುವ ತಾತಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯಲ್ಲಿ ಈ ಯೋಜನೆ ಕಾರ್ಯಗತವಾಗಿದೆ. ಇಲ್ಲಿ ಭೌತವಿಜ್ಞಾನ, ಗಣಿತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿಭಾವಂತರು ಕೈಗೊಳ್ಳುವ ಸಂಶೋಧನೆಗಳಿಗೆ ವಿದ್ಯಾರ್ಥಿವೇತನಗಳನ್ನು ಕಲ್ಪಿಸಲಾಗಿದೆ. ಇದಲ್ಲದೆ ಆರ್ಥಿಕ ನೆರವನ್ನು ಪಡೆದು ಅಣುಶಕ್ತಿಯ ಬಗ್ಗೆ ಅಧ್ಯಯನ ಸಂಶೋಧನೆಗಳನ್ನು ನಡೆಸುತ್ತಿರುವ ಇತರ ಸಂಸ್ಥೆಗಳೆಂದರೆ ಕೋಲ್ಕತದಲ್ಲಿರುವ ಸಹಾ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಫಿಸಿಕ್ಸ್ ಮತ್ತು ಅಹಮದಾಬಾದಿನಲ್ಲಿರುವ ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿ. ಇವಲ್ಲದೆ ಕಾಶ್ಮೀರದಲ್ಲಿ ಹಾಗೂ ಚೆನ್ನೈನಲ್ಲಿ ಇತರ ಸಂಶೋಧನೆ ಮತ್ತು ಅಧ್ಯಯನ ಕೇಂದ್ರಗಳು ವಿಭಾಗದ ನೆರವಿನಿಂದ ಸ್ಥಾಪಿತವಾಗಿವೆ ಹಾಗೂ ಸ್ಥಾಪಿತವಾಗಲಿವೆ.

9. ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಭಾರತದ ಶಾಂತಿಯುತ ಪರಮಾಣು ಸ್ಫೋಟನೆ 1974ರ ಮೇ 18ರಂದು ರಾಜಸ್ಥಾನದ ಥಾರ್ ಮರುಭೂಮಿಯಲ್ಲಿನ ಪೋಖ್ರಾನ್‌ನಲ್ಲಿ ಜರುಗಿತು. ಸು. 12000–15000 ಕಿಲೋಗ್ರಾಂ ತೂಕದ ಟ್ರೈನೈಟ್ರೊ

ಟಾಲ್ವಿನ್ ಎಂಬ ದಕ್ಷ ರಾಸಾಯನಿಕ ಸ್ಫೋಟಕ ವಸ್ತುವನ್ನು ಆಸ್ಫೋಟಿಸುವುದರಿಂದ ಉತ್ಪನ್ನವಾಗುವಷ್ಟೇ ಸ್ಫೋಟಕ ಶಕ್ತಿಯು ಒಂದು ದೊಡ್ಡ ಉಂಡೆಯಷ್ಟಿದ್ದ ಪ್ಲೂಟೋನಿಯಮ್ ವಿದಲನದಿಂದ ಹೊರಹೊಮ್ಮಿತು. (ಎಸ್.ಆರ್.ಪಿ.)

**ಅಣುಸಿದ್ಧಾಂತ :** ಡಾಲ್ಟನ್ನನ ಪರಮಾಣುವಾದದ ಪ್ರಕಾರ ಪ್ರತಿಯೊಂದು ಪದಾರ್ಥವೂ ಅತಿಸೂಕ್ಷ್ಮವಾದ ಮತ್ತು ಅಭೇದ್ಯವಾದ ಪರಮಾಣುಗಳೆಂಬ ಕಣಗಳಿಂದ ಆಗಿವೆ; ಪ್ರತಿಯೊಂದು ಪದಾರ್ಥದ (ಅದು ರಾಸಾಯನಿಕ ಧಾತುವಾಗಿರಲಿ, ಸಂಯುಕ್ತವಾಗಿರಲಿ) ಪರಮಾಣುವೂ ಅದಕ್ಕೆ ವಿಶಿಷ್ಟವಾದ ಗಾತ್ರ, ತೂಕ, ಮುಂತಾದ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಡಾಲ್ಟನ್ನನ ಈ ಪರಮಾಣುವಿನ ಕಲ್ಪನೆಯನ್ನು ಕೆಲಕಾಲಾನಂತರ ಬದಲಾಯಿಸಬೇಕಾಗಿ ಬಂತು. ಅನಿಲಗಳು ರಾಸಾಯನಿಕ ಕ್ರಿಯೆಗಳಲ್ಲಿ ಭಾಗವಹಿಸುವಾಗ ಪಾಲಿಸುವ ನಿಯಮಗಳನ್ನು ಡಾಲ್ಟನ್ನನ ಪರಮಾಣು ವಾದದ ಆಧಾರದ ಮೇಲೆ ಅರ್ಥಪೂರ್ಣವಾಗಿ ವಿವರಿಸುವುದು ಸಾಧ್ಯವಾಗದೆ ಹೋಯಿತು. ಈ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಪಾರಾಗಲು ಅಣುವಿನ ಕಲ್ಪನೆ ಅವಶ್ಯವಾಯಿತು. ಅಣುಸಿದ್ಧಾಂತವನ್ನು (ಮಾಲೆಕ್ಯೂಲರ್ ಥಿಯೊರಿ) ಪ್ರತಿಪಾದಿಸಿದವನು ಇಟಲಿಯ ಅಮಿಡಿಯೊ ಅವೊಗ್ಯಾಡ್ರೊ.

ಅಣುಸಿದ್ಧಾಂತದ ಪ್ರಕಾರ ಒಂದು ಪದಾರ್ಥ ಅನಿಲಸ್ಥಿತಿಯಲ್ಲಿದ್ದಾಗ, ಇಲ್ಲವೇ ಒಂದು ದ್ರವದಲ್ಲಿ ವಿಲೀನವಾಗಿ ದ್ರಾವಣರೂಪದಲ್ಲಿದ್ದಾಗ ಆ ಪದಾರ್ಥದ ರಾಸಾಯನಿಕ ಸಂಯೋಜನೆ ಮತ್ತು ರಾಸಾಯನಿಕ ಗುಣಲಕ್ಷಣಗಳನ್ನು ಹೊಂದಿರುವ ಮತ್ತು ಸ್ವತಂತ್ರವಾಗಿ ಇರುವ ಅದರ ಅತಿ ಚಿಕ್ಕ ಕಣವನ್ನು ಅಣು (ಮಾಲಿಕ್ಯೂಲ್) ಎಂದು ಕರೆಯಲಾಗುವುದು. ಈ ಅಣುವಿನಲ್ಲಿ ರಾಸಾಯನಿಕ ಧಾತುಗಳ ಪರಮಾಣುಗಳು ಹಲವಾರು ಇರಬಹುದು. ಜಲಜನಕ (ಹೈಡ್ರೊಜನ್), ಆಮ್ಲಜನಕ (ಆಕ್ಸಿಜನ್), ಕ್ಲೋರೀನ್–ಮುಂತಾದ ಧಾತುಗಳ ಅಣುಗಳಲ್ಲಿ ಆಯಾ ಧಾತುವಿನ ಪರಮಾಣುಗಳು ಮಾತ್ರ ಇರುತ್ತವೆ. ನೀರು, ಅಮೋನಿಯ–ಮುಂತಾದ ಸಂಯುಕ್ತಗಳ ಅಣುಗಳಲ್ಲಿ ಬೇರೆ ಬೇರೆ ಧಾತುಗಳ ಪರಮಾಣುಗಳು ಒಂದು ನಿರ್ದಿಷ್ಟ ಸಂಖ್ಯೆಯಲ್ಲಿರುತ್ತವೆ. ಹೀಲಿಯಮ್, ಆರ್ಗಾನ್ ಮುಂತಾದ ಅನಿಲ ಧಾತುಗಳಲ್ಲಿರುವ ಅಣುಗಳು ಏಕ ಪರಮಾಣ್ವಕ ಅಣುಗಳು. ಅಂದರೆ, ಅವುಗಳ ಬಿಡಿ ಪರಮಾಣುಗಳೇ ಅವುಗಳ ಅಣುಗಳು.

ಈ ಅಣುಗಳೇ ವಸ್ತುವಿನ ಚಲನಸಿದ್ಧಾಂತದಲ್ಲಿ (ಅಣುಚಲನವಾದ; ಕೈನೆಟಿಕ್ ಥಿಯೊರಿ ಆಫ್ ಮ್ಯಾಟರ್) ಪ್ರಸ್ತಾಪಿಸಲಾಗಿರುವ ಅಣುಗಳು. ಅನಿಲಗಳಲ್ಲಿಯೇ ಆಗಲಿ ದ್ರಾವಣಗಳಲ್ಲಿಯೇ ಆಗಲಿ ವಿವಿಧ ದಿಕ್ಕುಗಳಲ್ಲಿ ಮತ್ತು ವಿವಿಧ ವೇಗಗಳಿಂದ ಸದಾ ಚಲಿಸುತ್ತಿರುತ್ತವೆ.

ಅಣುವಿನ ಕಲ್ಪನೆ ಅನಿಲ ಮತ್ತು ದ್ರವಸ್ಥಿತಿಗಳಿಗೆ ಸೀಮಿತವಾಗಿರದೆ ಘನಸ್ಥಿತಿಗೂ ಅನ್ವಯಿಸುವಂತಾಗಬೇಕಾದರೆ ಮೇಲೆ ಕೊಟ್ಟಿರುವ ಲಕ್ಷಣ ನಿರೂಪಣೆಯನ್ನು ಕೊಡಬೇಕಾಗುತ್ತದೆ. ಯಾವುದೇ ವಸ್ತುವಿನಲ್ಲಿ ಹಲಕೆಲವು ಪರಮಾಣಗಳು ಪ್ರಬಲವಾದ ಪರಸ್ಪರ ಆಕರ್ಷಣ ಬಲಗಳಿಂದ ಒಂದುಗೂಡಿ ಪರಮಾಣುಪುಂಜಗಳಾಗಿದ್ದು ಅವು ಅಂಥದೇ ಆದ ಇತರ ಪರಮಾಣುಪುಂಜಗಳಿಂದ ಪ್ರತ್ಯೇಕವಾದ ಘಟಕಗಳಾಗಿದ್ದರೆ ಅಂಥ ಪರಮಾಣುಪುಂಜಗಳೇ ಅಣುಗಳು. ಈ ಲಕ್ಷಣನಿರೂಪಣೆ ಅನಿಲ ಮತ್ತು ದ್ರವಗಳಿಗೆ ಅನ್ವಯಿಸುವುದು ಮಾತ್ರವಲ್ಲದೆ ಘನಪದಾರ್ಥಗಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ, ಸಾಮಾನ್ಯ ಸಕ್ಕರೆಯಲ್ಲಿ 12 ಇಂಗಾಲ ಪರಮಾಣುಗಳು, 22 ಜಲಜನಕ ಪರಮಾಣುಗಳು ಮತ್ತು 11 ಆಮ್ಲಜನಕ ಪರಮಾಣುಗಳು ($C_{12}H_{22}O_{11}$) ಪರಸ್ಪರ ಪ್ರಬಲ ಆಕರ್ಷಣಬಲಗಳಿಂದ ಒತ್ತಾಗಿ ಗುಂಪುಕೂಡಿಕೊಂಡಿದ್ದು, ಅಂಥ ಪರಮಾಣುಪುಂಜಗಳು ಒಂದರಿಂದ ಒಂದು ಸ್ವಲ್ಪ ಸ್ವಲ್ಪ ದೂರದಲ್ಲಿ ಹಂಚಿಕೊಂಡಿರುತ್ತವೆ. ಒಂದೊಂದು $C_{12}H_{22}O_{11}$ ಪುಂಜವೂ ಒಂದೊಂದು ಅಣು.

ಕೆಲವು ಘನಪದಾರ್ಥಗಳಿಗೆ ಅಣು ಶಬ್ದ ಅನ್ವಯವಾಗುವುದಿಲ್ಲ. ಉದಾಹರಣೆಗೆ, ಸಾಮಾನ್ಯ ಉಪ್ಪಿನಲ್ಲಿ ಸೋಡಿಯಮ್ ಮತ್ತು ಕ್ಲೋರೈಡ್ ಅಯಾನುಗಳು (ಧನ ಮತ್ತು ಋಣ ವಿದ್ಯುದಂಶ ಹೊತ್ತಿರುವ ಸೋಡಿಯಮ್ ಮತ್ತು ಕ್ಲೋರೀನ್ ಪರಮಾಣುಗಳು) ಉಪ್ಪಿನ ಹರಳಿನಲ್ಲಿ ಎಲ್ಲೆಡೆಯಲ್ಲಿಯೂ ಸಮಾಂತರವಾಗಿ ಹಂಚಿಕೊಂಡಿರುತ್ತವೆ. ಪ್ರತಿ ಸೋಡಿಯಮ್ ಅಯಾನಿನ ಸುತ್ತಲೂ ಆರು ದಿಕ್ಕುಗಳಲ್ಲಿ ಆರು ಕ್ಲೋರೈಡ್ ಅಯಾನುಗಳು, ಹಾಗೆಯೇ ಪ್ರತಿ ಕ್ಲೋರೈಡು ಅಯಾನಿನ ಸುತ್ತಲೂ ಆರು ಸೋಡಿಯಮ್ ಅಯಾನುಗಳು ಹಂಚಿಕೊಳ್ಳುತ್ತಾ ಹೋಗಿ ಹರಳು ಬೆಳೆದಿರುತ್ತದೆ. ಅಂಥ ಹರಳಿನಲ್ಲಿ ಅಣು ಎಂಬ ಶಬ್ದಕ್ಕೆ ಅರ್ಥವಿಲ್ಲ.

ಸಾಮಾನ್ಯವಾಗಿ ಸರಳ ಅಣುಗಳ ಗಾತ್ರ $10^{-8}$ ಸೆಂ.ಮೀ. ನಿಂದ $10^{-7}$ ಸೆಂ.ಮೀ. ವರೆಗೂ ಇದ್ದು ಅವುಗಳ ತೂಕ $10^{-23}$ ಗ್ರಾಂ. ನಿಂದ $10^{-20}$ ವರೆಗೂ ಇರುತ್ತದೆ. ಆದರೆ ಪ್ರೋಟೀನುಗಳು, ನ್ಯೂಕ್ಲೆಯಿಕ್ ಆಮ್ಲಗಳು, ಸೆಲ್ಯುಲೋಸ್, ಪಿಷ್ಟ, ರಬ್ಬರ್ ಮುಂತಾದ ಪದಾರ್ಥಗಳ ಅಣುಗಳು ಸಾವಿರಾರು ಪರಮಾಣುಗಳಿಂದ ಕೂಡಿದ್ದು, ದೈತ್ಯಾಣುಗಳೆನಿಸಿಕೊಂಡಿವೆ. ಅವುಗಳ ತೂಕ, ಗಾತ್ರಗಳು, ಬಹು ಹೆಚ್ಚಾಗಿದ್ದು ಅವುಗಳನ್ನು ಅತಿಸೂಕ್ಷ್ಮದರ್ಶಕದ (ಅಲ್ಟ್ರ ಮೈಕ್ರೊಸ್ಕೋಪ್) ಸಹಾಯದಿಂದ ನೋಡಲೂಬಹುದು.

ಈ ದೈತ್ಯಾಣುಗಳಲ್ಲಿ ಕೆಲವು ನಿರ್ದಿಷ್ಟ ಪರಮಾಣುಗುಂಪುಗಳು ಅಣುವಿನುದ್ದಕ್ಕೂ ಪುನರಾವರ್ತಿಸುತ್ತಾ ಹೋಗಿ ಅಣು ಅಗಾಧಗಾತ್ರಕ್ಕೆ ಬೆಳೆಯುತ್ತದೆ. ಪ್ರಕೃತಿಯಲ್ಲಿ ಕಂಡುಬರುವ ಈ ಚಮತ್ಕಾರವನ್ನು ಮಾನವ ಅನುಕರಿಸಿ ಕೆಲವು ನಿರ್ದಿಷ್ಟ ಪರಮಾಣು ಗುಂಪುಗಳನ್ನು ಪುನರಾವರ್ತಿಸಿ ಕೃತಕವಾಗಿ ಅನೇಕಬಗೆಯ ದೈತ್ಯಾಣುಗಳನ್ನು ನಿರ್ಮಿಸಿದ್ದಾನೆ. ಅವೇ ಆಧುನಿಕ ಪ್ಲಾಸ್ಟಿಕ್‌ಗಳು. (ಜೆ.ಆರ್.ಎಲ್.)

**ಅಣೆಕಟ್ಟು :** ಹೊಳೆಗೆ ಅಡ್ಡಲಾಗಿ ಕಲ್ಲುಗಾರೆಯಿಂದ ಇಲ್ಲವೆ ಇಟ್ಟಿಗೆಗಾರೆಯಿಂದ ಕಟ್ಟಿದ ನೀರಾವರಿಯ ಕಟ್ಟಡ (ವಿಯರ್). ಕಟ್ಟೆಯೂ (ಡ್ಯಾಮ್) ಹೀಗೆ ಹೊಳೆಗೆ ಅಡ್ಡಲಾಗಿ ಕಲ್ಲುಗಾರೆಯಿಂದ ಕಟ್ಟಿದ ನೀರಾವರಿಯ ಕಟ್ಟಡವೇ. ಇವೆರಡಕ್ಕೂ ಒಂದು ದೊಡ್ಡ ವ್ಯತ್ಯಾಸವಿದೆ. ಹೊಳೆಯಲ್ಲಿ ಪ್ರವಾಹಬಂದಾಗ ಅಣೆಕಟ್ಟಿನ ಮೇಲೆ ನೀರು ಉರುಳಿ ಕೆಳಕ್ಕೆ ಹೋಗುತ್ತದೆ. ಕಟ್ಟೆಯಾದರೋ ಎತ್ತರವಾಗಿದ್ದು ಎಂಥ ಪ್ರವಾಹ ಬಂದರೂ ತಡೆದು ನಿಲ್ಲಿಸುತ್ತದೆ ; ಮೇಲುಗಡೆಯಿಂದ ಹರಿಯಲು ಬಿಡುವುದಿಲ್ಲ.

ಅಣೆಕಟ್ಟುಗಳನ್ನು ಹಿಂದಿನ ಕಾಲದಲ್ಲಿ ಒರಟು ಕಲ್ಲುಗಳಿಂದ ಕಟ್ಟುತ್ತಿದ್ದರು. ಈಗ ಕಲ್ಲುಗಾರೆಯಿಂದ ಕಟ್ಟುವುದೇ ರೂಢಿ ; ಇಟ್ಟಿಗೆ ಗಾರೆಯಿಂದ ಕಟ್ಟುವುದು ನಿಂತುಹೋಗಿದೆ. ಅಣೆಕಟ್ಟು ಕಟ್ಟೆಯ ಹಾಗೆ ನಾಲೆಗಳ ಕೆಳಗಿನ ಜಮೀನಿಗೆಲ್ಲಾ ಸಾಕಾಗುವಷ್ಟು ನೀರನ್ನು



ಕೃಷ್ಣರಾಜಸಾಗರ ಅಣೆಕಟ್ಟು

ಕೊಡಿಡುವುದಿಲ್ಲ. ಹೊಳೆಯಲ್ಲಿ ಬರುವ ಪ್ರವಾಹ ಅಣೆಕಟ್ಟಿನ ಮೇಲಿನಿಂದ ದುಮುಕಿ ಕೆಳಕ್ಕೆ ಹೋಗುತ್ತದೆ. ಆಗ ಎತ್ತರವಾದ ಮಟ್ಟದಲ್ಲಿರುವ ಪ್ರವಾಹದ ನೀರು ನಾಲೆಯೊಳಕ್ಕೆ ನುಗ್ಗಿ ತಗ್ಗಿನ ಜಮೀನುಗಳಿಗೆ ನೀರನ್ನು ಒದಗಿಸುತ್ತದೆ.

ಅಡಿಪಾಯದ ದೃಷ್ಟಿಯಿಂದ ಅಣೆಕಟ್ಟುಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದು. 1. ಅಡಿಪಾಯದಲ್ಲಿ ಗಟ್ಟಿಬಂಡೆ ಇರತಕ್ಕವು. ನದಿಯ ಮೊದಲ ಮಜಲಿನಲ್ಲಿ ಭೂಮಿ ಉಬ್ಬು ತಗ್ಗುಗಳಿಂದ ಕೂಡಿರುತ್ತದೆ. ಇಲ್ಲಿ ಅಡಿಪಾಯದಲ್ಲಿ ಒಳ್ಳೆಯ ಬಂಡೆ ದೊರೆಯ ಬಹುದು. ಆದರೆ ಇಲ್ಲಿ ನೀರಾವರಿಗೆ ಹೆಚ್ಚು ಭೂಮಿ ಸಿಕ್ಕುವುದಿಲ್ಲ. 2. ಅಡಿಪಾಯದಲ್ಲಿ ಗಟ್ಟಿಬಂಡೆ ಇರದವು. ಅಣೆಕಟ್ಟಿನ ನೀರಿನಿಂದ ಪರಮೋಪಕಾರವಾಗುವುದು ನದಿಯ ಕೊನೆಯ ಮಜಲಾದ ಡೆಲ್ಟ ಪ್ರದೇಶದಲ್ಲಿ. ನೀರಿನಲ್ಲಿ ಬರುವ ಗೋಡು ಪ್ರತಿವರ್ಷವೂ ಗದ್ದೆಗಳ ಮೇಲೆ ಹಾದು ಭೂಮಿಯನ್ನು ಫಲವತ್ತಾಗಿ ಮಾಡುತ್ತದೆ. ಇಲ್ಲಿ ನದಿಯೇ ದಿಬ್ಬಗಳ ಮೇಲೆ ಹರಿದು ಗದ್ದೆಗಳು ಅದಕ್ಕಿಂತ ಕೆಳಮಟ್ಟದಲ್ಲಿರುವುದರಿಂದ ಕಾಲುವೆಗಳನ್ನು ತೆಗೆಯುವುದು ಸುಲಭ. ದಕ್ಷಿಣ ಭಾರತದಲ್ಲಿ ಕಾವೇರಿ, ಕೃಷ್ಣಾ, ಗೋದಾವರಿ, ಉತ್ತರದಲ್ಲಿ ಮಹಾನದಿ, ಗಂಗಾ, ಸಿಂಧು, ಯಮುನಾ–ಈ ನದಿಗಳ ಬಯಲುಗಳಲ್ಲಿ ಜನ ಪುಷ್ಟರಾಗಿ ಬಾಳುತ್ತಿರುವುದಕ್ಕೆ ಅಣೆಕಟ್ಟುಗಳಿಂದ ಸಾಧ್ಯವಾದ ನೀರಾವರಿಯೇ ಮುಖ್ಯ ಕಾರಣ. ತಂಜಾವೂರು ಜಿಲ್ಲೆಯ ಕಾವೇರಿ ಡೆಲ್ಟದಲ್ಲಿ ಜನ ತುಷ್ಟರೂ ಪುಷ್ಟರೂ ಮೇಧಾವಿಗಳೂ ಆಗಿರುವುದಕ್ಕೆ ಸರ್ ಆರ್ಥರ್ ಕಾಟನ್ ನಿರ್ಮಿಸಿದ ನೀರಾವರಿ ಕೆಲಸಗಳು ಬುನಾದಿಯಾಗಿವೆ.

ಒಂದು ಅಣೆಕಟ್ಟಿನ ಯೋಜನೆಯ ಮುಖ್ಯವಾದ ಭಾಗಗಳು ಇವು : 1. ಅಣೆಕಟ್ಟು : ಇದು ಕೆಳಗಿನ ನಾಲೆಗಳಿಂದ ನೀರಾವರಿಯಾಗುವ ಗದ್ದೆಗಳಿಗೆ ಸಾಕಷ್ಟು ನೀರು ಒದಗಿಸುವಷ್ಟು ಎತ್ತರವಾಗಿರಬೇಕು. 2. ಅಣೆಕಟ್ಟಿನ ಎರಡು ದಡಗಳಿಂದ ಹೊರಡುವ ನಾಲೆಗಳು : ಇವುಗಳ ನೀರಿನ ಮಟ್ಟ ಗದ್ದೆಗಳಿಗಿಂತ ಸಾಕಷ್ಟು ಎತ್ತರವಾಗಿರಬೇಕಲ್ಲದೆ ಸಾಕಷ್ಟು ನೀರು ಒದಗಿಸುವಷ್ಟು ದೊಡ್ಡದಾಗಿರಬೇಕು. 3. ಅಣೆಕಟ್ಟಿನಿಂದ ಎರಡು ದಡಗಳಲ್ಲೂ ನಾಲೆಗೆ ಬಿಡುವ ನೀರನ್ನು ನಿಯಂತ್ರಣ ಮಾಡುವ ತೂಬು. 4. ಹೊಳೆಯ ಪ್ರವಾಹದಲ್ಲಿ ಬರುವ ಮೆಕ್ಕಲುಮಣ್ಣನ್ನು ಆಚೆಗೆ ಸಾಗಿಸಲು ತಗ್ಗಿನ ಮಟ್ಟದಲ್ಲಿರುವ ಬಾಗಿಲುಗಳು. 5. ಮಹಾ ಪ್ರವಾಹ ನದಿಯ ದಡಗಳಮೇಲೆ ಉರುಳುವುದನ್ನು ತಡೆಯುವುದಕ್ಕೆ ಏರಿಗಳು (ಬ್ಯಾಂಕ್ಸ್). ಕಲ್ಲಿನ ಅಡಿಪಾಯದ ಮೇಲೆ ನದಿಯ ಪ್ರಾರಂಭದ ಗುಡ್ಡಗಾಡಿನ ಪ್ರದೇಶದಲ್ಲಿ ಕಟ್ಟಿರುವ ಸಣ್ಣ ಅಣೆಕಟ್ಟಿಗೆ ಭದ್ರಾವತಿಯ ಮೇಲುಗಡೆ ಕಟ್ಟಿರುವ ಭದ್ರಾ ಅಣೆಕಟ್ಟು ಒಳ್ಳೆಯ

ಉದಾಹರಣೆ. ಈ ಸ್ಥಳದಲ್ಲಿ ನದಿಯ ಜಲಾನಯನಭೂಮಿಯ ವಿಸ್ತೀರ್ಣ 2805 ಚ.ಕಿಮೀ ಗಳು. ನದಿಯ ಮೇಲುಭಾಗದಲ್ಲಿ ವರ್ಷಕ್ಕೆ ಸರಾಸರಿ 300 ಸೆಂಮೀ ಮಳೆ ಬೀಳುತ್ತದೆ. ಇಲ್ಲಿ ನದಿಯ ಮಹಾಪ್ರವಾಹದ ಅಳತೆ 1,18,000 ಕ್ಯೂಸೆಕ್ಕುಗಳು. ಭದ್ರಾನದಿಯ ತಳದ ಅಗಲ 253 ಮೀ ದಡಗಳು ಕಡಿದಾಗಿರುವುದರಿಂದ ಮಹಾಪ್ರವಾಹದ ಮಟ್ಟದಲ್ಲಿ ಅಗಲ 275 ಮೀ ನದಿಯ ತಳದಮೇಲೆ ಅಣೆಕಟ್ಟಿನ ಸರಾಸರಿ ಎತ್ತರ 3ಮೀ ಮಹಾಪ್ರವಾಹ ಅಣೆಕಟ್ಟಿನ ಮೇಲೆ 3.48ಮೀ ಹರಿಯುತ್ತದೆ. ಆಗ ಅಣೆಕಟ್ಟಿನ ಕೆಳಗಿನ ನೀರಿನಮಟ್ಟ ತಲೆಮಟ್ಟದ ಮೇಲೆ 1.98 ಮೀ ಇರುತ್ತದೆ. ಎಂದರೆ ಮಹಾ ಪ್ರವಾಹ ಬಂದಾಗ ಅಣೆಕಟ್ಟು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿರುತ್ತದೆ.

ಈ ನಮೂನೆಯ ಅಣೆಕಟ್ಟುಗಳನ್ನು ಮೈಸೂರು ಸೀಮೆಯಲ್ಲಿ ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿ, ಕಬಿನಿ ನದಿಗಳ ಮೇಲೆ ಮೊದಲನೆಯ ಗುಡ್ಡಗಾಡಿನ ಮಜಲಿನಲ್ಲೂ ಎರಡನೆಯ ಬಯಲುಸೀಮೆಯ ಮಜಲಿನಲ್ಲೂ ಒಂದರ ಕೆಳಗೆ ಒಂದನ್ನು ಕಟ್ಟಿ ವಿಶಾಲವಾದ ಪ್ರದೇಶದಲ್ಲಿ ಬತ್ತದ ಬೆಳೆಗೆ ನೀರನ್ನು ಶಾಶ್ವತವಾಗಿ ಒದಗಿಸಿದ್ದಾರೆ.

**ಮಹಾನದಿಯ ಮಜಲುಗಳು :** ನೀರಿನ ಪ್ರವೇಶಕ್ಕೆ ಎಡೆಗೊಡುವಂಥ ಮರಳಿನ ಅಡಿಪಾಯದ ಮೇಲೂ ಅಣೆಕಟ್ಟುಗಳನ್ನು ಕಟ್ಟುವುದು ಅನಿವಾರ್ಯವಾಗುತ್ತದೆ. ನಮ್ಮ ನದಿಗಳ ಮಲೆನಾಡಿನ ಮಜಲಿನಲ್ಲಿ ಮಳೆಯೇ ಸಮೃದ್ಧವಾಗಿ ಬೀಳುವುದರಿಂದ ನೀರಾವರಿಯ ಆವಶ್ಯಕತೆ ಕಡಿಮೆ. ಎರಡನೆಯ ಮಜಲಿನಲ್ಲಿ ಬಯಲುಸೀಮೆಯಲ್ಲಿ ಅಣೆಕಟ್ಟುಗಳಿಗೆ ಕಲ್ಲಿನ ಅಡಿಪಾಯ ಸಿಕ್ಕುತ್ತದೆ. ಈ ಮಜಲಿನ ಕೃಷ್ಣರಾಜಸಾಗರದಲ್ಲಿ ಕಾವೇರಿಗೆ ಅಡ್ಡಲಾಗಿ ನದಿಯಮಟ್ಟದ ಮೇಲೆ 39.43 ಮೀ. ಎತ್ತರವಾದ ಕಲ್ಲುಗಾರೆಯ ಕಟ್ಟೆಯನ್ನು ಕಟ್ಟಿದ್ದಾರೆ. ನದಿಯ ಮೂರನೆಯ ಮಜಲಿನಲ್ಲಿ ಜಲಾನಯನಭೂಮಿ ವಿಸ್ತಾರವಾಗಿರುವುದರಿಂದ ನದಿಯಲ್ಲಿ ಹರಿಯುವ ನೀರು ಹೆಚ್ಚು. ಇಲ್ಲಿ ದಡಗಳು ಕಡಿದಾಗಿರುವುದಿಲ್ಲ. ನದಿಗೆ ಅಡ್ಡಲಾಗಿ ಭೂಮಿಯೂ ಅಷ್ಟು ಇಳಿಜಾರಾಗಿರುವುದಿಲ್ಲ. ಅಣೆಕಟ್ಟಿನ ನೀರಾವರಿಯಿಂದ ಈ ಭಾಗದಲ್ಲಿ ವಿಶಾಲವಾದ ಫಲವತ್ತಾದ ಬಯಲುಗಳಲ್ಲಿ ಬತ್ತವನ್ನು ಬೆಳೆಯುತ್ತಾರೆ. ನದಿಯ ನಾಲ್ಕನೆಯ ಮಜಲೇ ಡೆಲ್ಟ ಪ್ರದೇಶ. ಇಲ್ಲಿ ನೆಲ ಮಟ್ಟವಾಗಿರುತ್ತದೆಯಲ್ಲದೆ ನದಿ ನಿಧಾನವಾಗಿ ಹರಿದು ಕವಲು ಕವಲಾಗಿ ಒಡೆಯುತ್ತದೆ. ಸಮುದ್ರದ ಹತ್ತಿರವಿರುವ ಈ ಪ್ರದೇಶದಲ್ಲಿ ಎಲ್ಲೆಲ್ಲೂ ಮರಳು ತುಂಬಿರುತ್ತದೆ.

ಮೇಲೆ ಭಾರ ಬಿದ್ದಾಗ ಮರಳು ಕುಗ್ಗುವುದಿಲ್ಲ. ಅದು ಇತ್ತ ಕಡೆ ಅತ್ತ ಕಡೆ ಚಲಿಸದಂಥ ಆವರಣವನ್ನು ಒದಗಿಸಿದರೆ ಎಷ್ಟು ಭಾರವನ್ನಾದರೂ ಹೊರಬಲ್ಲದು. ಆದರೆ ಅದು ಜಾರಿ ಹೋಗುವುದಕ್ಕೆ ಮಾತ್ರ ಅವಕಾಶವನ್ನು ಕೊಡಬಾರದು. ಅದಕ್ಕಾಗಿ ಇಟ್ಟಿಗೆಯ ಬಾವಿಗಳು, ದಸಿಗಳು (ಪೈಲ್ಸ್) ಮೊದಲಾದ ಉಪಾಯಗಳಿಂದ ಮರಳು ಕದಲದ ಹಾಗೆ ಮಾಡಿ ಮೇಲೆ ಕಲ್ಲುಗಾರೆಯ ಅಣೆಕಟ್ಟುಗಳನ್ನು ಕಟ್ಟುತ್ತಾರೆ.

ಮರಳಿನ ಅಡಿಪಾಯದ ಮೇಲೆ ನಿಂತಿರುವ ಅಣೆಕಟ್ಟುಗಳು ಮೂರು ಬಗೆಯಾಗಿವೆ: 1. ಅಣೆಕಟ್ಟಿನ ಮೇಲಿನಿಂದ ನೀರು ನೇರವಾಗಿ ಮಟ್ಟವಾದ ಕಲ್ಲುಗಾರೆಯ ನೆಲಹಾಸಿನ ಮೇಲೆ ದುಮುಕುವುದು. 2. ಕೆಳಗಿನ ಕಲ್ಲುಹಾಸು ಇಳಿಜಾರಾಗಿರುವುದು. 3. ನೆಲಹಾಸು (ಏಪ್ರಾನ್) ಇಳಿಜಾರಾಗಿ ಕಲ್ಲುಗುಂಡುಗಳಿಂದ ತುಂಬಿರುವುದು.

ಮೊದಲ ನಮೂನೆಯ ಅಣೆಕಟ್ಟಿನಲ್ಲಿ ನೆಲಹಾಸಿನ ಮಟ್ಟ ಕೆಳನೀರಿನ ಮಟ್ಟದಲ್ಲಿ ಅಥವಾ ಅದಕ್ಕಿಂತ ತಗ್ಗಾಗಿ ಇರುವುದು ಒಂದು ಬಗೆಯಾದರೆ ಕೆಳನೀರಿನ ಮಟ್ಟಕ್ಕಿಂತ ಎತ್ತರವಾಗಿರುವುದು ಇನ್ನೊಂದು ಬಗೆ.

ನೀರಿನ ಕೊಳ (ವಾಟರ್ ಕುಷನ್). ಇದು ಮೊದಲ ನಮೂನೆಯ ನೆಲಹಾಸಿನ ರೂಪಾಂತರ. ಇಲ್ಲಿ ದೊಡ್ಡ ನೆಲಹಾಸಿಗೆ ಬದಲಾಗಿ ನೀರಿನ ಕೊಳದ ಮೇಲೆ ಅಣೆಕಟ್ಟಿನ ಮೇಲಿನಿಂದ ದುಮುಕುವ ನೀರು ಬೀಳುತ್ತದೆ. ನಿಂತ ನೀರೇ ಬೀಳುವ ನೀರಿನ ರಭಸವನ್ನು ತಡೆಯುವುದರಿಂದ ನದಿಯ ತಳದ ಮೇಲಿನ ತ್ರಾಸ ಬಹಳ ಕಡಿಮೆಯಾಗುತ್ತದೆ.

ಅಧಿಕ ನಿಯತಾಂಕದ ಅಣೆಕಟ್ಟು (ಹೈಕೋಎಫಿಷೆಂಟ್ ವಿಯರ್) : ಮೇಲುಗಡೆ ಕಡಿಮೆ ಅಗಲವುಳ್ಳ ಅಣೆಕಟ್ಟಿನ ಮೇಲಿನಿಂದ ದುಮುಕುವ ನೀರು ಅಣೆಕಟ್ಟಿನ ಕಡೆಗೆ ಸರಿದಾಗ ನೀರಿನ ಪ್ರವಾಹದ ಹಿಂದುಗಡೆ ಗಾಳಿಯ ಒತ್ತಡ ಕಡಿಮೆಯಾಗಿ ಸ್ವಲ್ಪಮಟ್ಟಿಗೆ ನಿರ್ವಾಯುತ್ವ ಒದಗುವ ಅಪಾಯವಿದೆ. ಇದಕ್ಕೆ ಪ್ರತಿಯಾಗಿ ಅಣೆಕಟ್ಟಿನ ಮುಂಭಾಗ ಲಂಬವಾಗಿಯೇ ಇದ್ದು ಹಿಂಭಾಗವನ್ನು ಬೀಳುವ ನೀರಿನ ಆಕೃತಿಗೆ ಸರಿಯಾಗಿ ಕಟ್ಟಿದಾಗ ಮೇಲೆ ಹರಿಯುವ ನೀರಿನ ಆಳ ಸಂವಿಧಾನದ ಆಳಕ್ಕಿಂತ ಹೆಚ್ಚಾದ ಹಾಗೂ ನಿಯತಾಂಕವೂ ಹೆಚ್ಚಾಗುತ್ತದೆ. ಅದಕ್ಕಾಗಿ ಈ ನಮೂನೆಯನ್ನು ಹೆಚ್ಚಿನ ನಿಯತಾಂಕದ ಅಣೆಕಟ್ಟು ಎನ್ನುತ್ತಾರೆ (ಶಿವಮೊಗ್ಗ ಜಿಲ್ಲೆಯ ತುಂಗಾ ಅಣೆಕಟ್ಟು).

ಈಗ ಅಧಿಕ ನಿಯತಾಂಕದ ಅಣೆಕಟ್ಟುಗಳನ್ನು ಬಹಳ ಎತ್ತರವಾಗಿ ಕಟ್ಟುತ್ತಿದ್ದಾರೆ. ಪಂಜಾಬಿನ ಭಾಕ್ರಾ ನಂಗಲ್ ಅಣೆಕಟ್ಟಿನ ಎತ್ತರ 224.47ಮೀ. ಇಷ್ಟು ಎತ್ತರದಿಂದ ನೀರು ಕೆಳಕ್ಕೆ ದುಮುಕುವಾಗ ಪ್ರಾಪ್ತವಾಗುವ ವೇಗವನ್ನು ಎಷ್ಟು ಗಟ್ಟಿಯಾದ ಕಲ್ಲೂ ತಡೆಯಲಾರದು. ಇವುಗಳಲ್ಲಿ ಲಂಬವಾಗಿ ಬೀಳುವ ನೀರಿನ ವೇಗವನ್ನು ಮಟ್ಟವಾಗಿ ಬದಲಾಯಿಸಲು ಬಕೆಟ್ ಎಂಬ ಉಪಕರಣವನ್ನು ಬಳಸುತ್ತಾರೆ. (ಎಚ್.ಸಿ.ಕೆ.)

**ಅಣ್ಣಮಾಚಾರ್ಯ, ತಾಳ್ಳಪಾಕಂ :** ಕರ್ನಾಟಕ ಸಂಗೀತದ ಪ್ರಾಚೀನ ವಾಗ್ಗೇಯಕಾರರಲ್ಲಿ ಒಬ್ಬರು; ಅನ್ನಮಯ್ಯನೆಂದೇ ಖ್ಯಾತಿ. ತಾಳ್ಳಕವಿಗಳಲ್ಲಿ ಆದ್ಯರು. ತಾಳ್ಳಪಾಕದವರಾದ ನಾರಾಯಣಸೂರಿ ತಂದೆ. ಅಕ್ಕಮಾಂಬ ತಾಯಿ. ಜನನ 1424ರಲ್ಲಿ. ಚಿಕ್ಕಂದಿನಿಂದಲೇ ಇವರಿಗೆ ಅಸೀಮವಾದ ಭಗವದ್ಭಕ್ತಿ, ಆಶುಕವಿತೆಯ ಪ್ರತಿಭೆಗಳಿದ್ದುವು. ಇವರೊಮ್ಮೆ ತಿರುಪತಿಗೆ ಯಾತ್ರೆಗಾಗಿ ಬಂದಿದ್ದಾಗ ಗುರೂಪದೇಶವೂ ಮದುವೆಯೂ ಆದುವು. ಅನಂತರ ಅಹೋಬಲಕ್ಕೆ ತೆರಳಿ ಅಲ್ಲಿ ಆದಿವನ್ ಶಠಗೋಪಯತಿಗಳಲ್ಲಿ ವೇದಾಂತವನ್ನು ಅಧ್ಯಯನಮಾಡಿದರು. ಅದೇ ಕಾಲದಲ್ಲಿ ವಾಲ್ಮೀಕಿರಾಮಾಯಣವನ್ನು ಸಂಕೀರ್ತನರೂಪವಾಗಿ ರಚಿಸಿದರು. ಇವರ ಪ್ರತಿಭೆಗೆ ಮಾರುಹೋದ ಸಾಳುವ ಗುಂಡ ನರಸಿಂಹರಾಯ ಇವರನ್ನು ಟಂಗಟೂರಿಗೆ ಕರೆದೊಯ್ದು ಅಲ್ಲಿ ತನ್ನ ಆಸ್ಥಾನ ಕವಿಯಾಗಿ ನಿಯಮಿಸಿಕೊಂಡ. ಆಡಿದ ಮಾತೆಲ್ಲ ಅಮೃತಕಾವ್ಯ, ಹಾಡಿದ ಹಾಡೆಲ್ಲ ಅಮರಗಾನವೆಂದು ಜನರು ಕವಿಯನ್ನು ಹೊಗಳಿದರು. ವಿಜಯನಗರದ ಪ್ರಭುವಾಗಿದ್ದ ನರಸಿಂಗರಾಯನು ತನ್ನ ಮೇಲೆ ಶೃಂಗಾರ ಕೀರ್ತನೆಗಳನ್ನು ರಚಿಸಿ ಹಾಡೆಂದು ಅಪ್ಪಣೆಮಾಡಲು ಅಣ್ಣಮಾಚಾರ್ಯರು "ಹರಿಮುಕುಂದನನ್ನು ಹೊಗಳಿ ಹಾಡುವ ನನ್ನ ಜಿಹ್ವೆ ನಿನ್ನನ್ನು ಹೊಗಳಿ ಹಾಡದು" ಎಂದು ನಿರಾಕರಿಸಿದರು. ರಾಜಾಗ್ರಹಕ್ಕೆ ತುತ್ತಾಗಿ ತಿರುಪತಿಗೆ ಬಂದು ನೆಲೆಸಿ ವೆಂಕಟೇಶ್ವರ ಸ್ವಾಮಿಯ ಅಂಕಿತದಲ್ಲಿ ಸಾವಿರಾರು ಸುಂದರ ಶೃಂಗಾರ ಸಂಕೀರ್ತನಗಳನ್ನು ರಚಿಸಿದರು. ಅವೆಲ್ಲವನ್ನೂ ವೆಂಕಟೇಶ್ವರನೇ ಅನುಗ್ರಹಿಸಿ ಸ್ವೀಕರಿಸಿದನೆಂದೂ ಆದ್ದರಿಂದ ಅವರ ಕೀರ್ತನೆಗಳನ್ನು ದೇವರೆದುರು ದಿನವೂ ಸುಪ್ರಭಾತದ ವೇಳೆ ಹಾಡುವ ಪದ್ಧತಿ ಬೆಳೆದುಬಂದಿತೆಂದೂ ಕೀರ್ತನೆಗಳ ತಾಮ್ರಫಲಕಗಳನ್ನು ದೇವಾಲಯದ ಭಂಡಾರದಲ್ಲೇ ಇಟ್ಟರೆಂದೂ ದೇವಾಲಯದ ಇತಿಹಾಸದಿಂದ ತಿಳಿಯುತ್ತದೆ. ಅನ್ನಮಾಚಾರ್ಯ, ಅವರ ಮಗ ಪೆದ್ದ ತಿರುಮಲಾಚಾರ್ಯ ಹಾಗೂ ಮೊಮ್ಮಗ ತಾಳ್ಳಪಾಕಂ ಚಿನ್ನಯ್ಯ, ಈ ಮೂವರೂ ಸೇರಿದಂತೆ ರಚಿಸಿದ ಕೀರ್ತನೆಗಳು 20 ಸಹಸ್ರದಷ್ಟಿದ್ದು ಇವುಗಳಲ್ಲಿ ಉತ್ಸವ ಸಂಪ್ರದಾಯದ ಕೀರ್ತನೆಗಳೂ ಇವೆ. ಹೆಚ್ಚು ಕೀರ್ತನೆಗಳು ಭಜನ ಪದ್ಧತಿಗೆ ಸೇರಿವೆಯಾಗಿ ಇವರನ್ನು ಭಜನಪದ್ಧತಿಯ ಮೂಲಪುರುಷರೆಂದು ಪರಿಗಣಿಸುತ್ತಾರೆ. ಈ ಗೇಯರಚನೆಗಳನ್ನು ಅಧ್ಯಾತ್ಮ ಹಾಗೂ ಶೃಂಗಾರಪದವೆಂದು ತಾಳ್ಳಪಾಕ ಸಂಕೀರ್ತನಕಾರರು ವಿಂಗಡಿಸಿದ್ದಾರೆ. ತಿರುಪತಿಯಲ್ಲೇ ನೆಲೆಸಿದ್ದ ಇವರು 1503ಕ್ಕೆ ಸರಿಯಾದ ದುಂದುಭಿನಾಮಸಂವತ್ಸರದ ಫಾಲ್ಗುಣ ಬಹುಳ ದ್ವಾದಶಿಯಂದು ದಿವ್ಯನಾಮಸಂಕೀರ್ತನ ಮಾಡುತ್ತಲೇ ವೆಂಕಟೇಶ್ವರನಲ್ಲಿ ಸೇರಿ ಮರೆಯಾದರೆಂದು ಐತಿಹ್ಯವಿದೆ.

ಇವರು ಸಂಸ್ಕೃತದಲ್ಲಿಯೂ ತೆಲುಗಿನಲ್ಲಿಯೂ ಕೃತಿಗಳನ್ನು ರಚಿಸಿದ್ದಾರೆ. ಸಂಸ್ಕೃತದ ವೆಂಕಟಾಚಲಮಾಹಾತ್ಮೆಯನ್ನು ಅವರ ಮಗ ಪೆದ್ದತಿರುಮಲಾಚಾರ್ಯ ಸ್ವಾಮಿಯ ಸನ್ನಿಧಿಯಲ್ಲಿ ಪಠಿಸುತ್ತಿದ್ದ. ಸಂಸ್ಕೃತದಲ್ಲೇ ಸಂಕೀರ್ತನ ಲಕ್ಷಣವೆಂಬ ಗ್ರಂಥವನ್ನೂ ರಚಿಸಿದ್ದರೆಂದು ಮೊಮ್ಮಗ ಚಿನ್ನತಿರುಮಲಾಚಾರ್ಯ ತನ್ನ ಅನ್ನಮಯ್ಯಚರಿತ್ರವೆಂಬ ದ್ವಿಪದಕಾವ್ಯದಲ್ಲಿ ತಿಳಿಸಿದ್ದಾನೆ. ಗ್ರಂಥ ಉಪಲಬ್ಧವಿಲ್ಲ. ತೆಲುಗು ಭಾಷೆಯಲ್ಲಿ ದ್ವಿಪದರಾಮಾಯಣ, ಶೃಂಗಾರಮಂಜರಿ, ವೆಂಕಟೇಶ್ವರಶತಕ–ಈ ಗ್ರಂಥಗಳನ್ನು ರಚಿಸಿದ್ದರು. ಛಂದೋಮಯವಾದ ಶೃಂಗಾರಮಂಜರಿ ತಿರುಪತಿಯ ಭಕ್ತಿಪಾರವಶ್ಯದಿಂದ, ಆವೇಶದ ಭರದಲ್ಲಿ ತಿರುಪತಿ ಬೆಟ್ಟವನ್ನು ಹತ್ತುತ್ತ ಹತ್ತುತ್ತ ರಚಿಸಿದ ಆಶುಕವಿತೆ. ವೆಂಕಟೇಶ್ವರ ಎಂಬ ಅಂಕಿತ ಪ್ರತಿಪದ್ಯದ ಕೊನೆಯಲ್ಲೂ ಕಾಣಿಸುತ್ತದೆ. ಇದರಂತೆಯೇ ಇನ್ನೂ ಕೆಲವು ಶತಕಗಳನ್ನು ಅವರು ರಚಿಸಿದ್ದರಂತೆ; ಅವು ಯಾವುವೂ ಇಂದು ದೊರೆತಿಲ್ಲ.

ಪುರಂದರದಾಸರು ತಿರುಪತಿಗೆ ಬಂದಿದ್ದಾಗ ವೃದ್ಧಾಪ್ಯದಲ್ಲಿ ಇವರನ್ನು ಸಂಧಿಸಿದರೆಂದೂ ದಾಸರು ಆಚಾರ್ಯರಲ್ಲಿ ವೆಂಕಟೇಶ್ವರನನ್ನೂ ಆಚಾರ್ಯರು ದಾಸರಲ್ಲಿ ಪಾಂಡುರಂಗ ವಿಠಲನನ್ನೂ ಕಂಡರೆಂದೂ ಕಥೆಯಿದೆ. ಕಥೆಗೆ ಆಧಾರ ಸಾಲದು. ಆದರೆ ದಾಸರಿಗೆ ಇವರಿಂದ ಸ್ಫೂರ್ತಿ ದೊರೆತಿರಬಹುದು. ಇವರ ಕೀರ್ತನಾಪದ್ಧತಿಗೆ ಮುಂಚೆ ಕರ್ನಾಟಕ ಸಂಗೀತದಲ್ಲಿ ಲಕ್ಷ್ಯಗೀತವನ್ನು ಸಂಸ್ಕೃತದಲ್ಲಿಯೇ ರಚಿಸುವ ಪದ್ಧತಿಯಿದ್ದಿತು; ಆಚಾರ್ಯರು ದೇಶಭಾಷೆಯಾದ ತೆಲುಗನ್ನು ಈ ಕೆಲಸಕ್ಕೆ ಉಪಯೋಗಿಸಿಕೊಂಡು ಹೊಸದಾರಿಯನ್ನು ತೋರಿಸಿದರು. ಇದನ್ನು ದಾಸರೂ ಅನುಸರಿಸಿ ಕನ್ನಡದಲ್ಲಿ ಲಕ್ಷ್ಯಸಂಗೀತವನ್ನು ಸಿದ್ಧಪಡಿಸಿದರು. ಆಚಾರ್ಯರ ಕೀರ್ತನೆಗಳಿಗೆ ರಾಗಗಳನ್ನು ನಿರ್ದೇಶಿಸಿದ್ದಾರೆ, ತಾಳಗಳು ಹೆಸರಿಸಲ್ಪಟ್ಟಿಲ್ಲ.

ವೆಂಕಟೇಶ್ವರ ವಿಶ್ವವಿದ್ಯಾನಿಲಯ ಸ್ಥಾಪಿತವಾದ ನಂತರ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ವೇಟೂರಿ ಪ್ರಭಾಕರಶಾಸ್ತ್ರಿಗಳು, ನೇದನೂರಿ ಕೃಷ್ಣಮೂರ್ತಿ ಮುಂತಾದವರಿಂದ ಸಂಪಾದಿತವಾಗಿ ಅನೇಕ ಕೀರ್ತನೆಗಳು ಸ್ವರ ಸಂಯೋಜನೆಯೊಂದಿಗೆ ಪ್ರಕಟವಾಗುತ್ತಿವೆ. ರಾಳ್ಳಪಲ್ಲಿ ಅನಂತಕೃಷ್ಣಶರ್ಮರೂ ವೇಟೂರಿ ಪ್ರಭಾಕರ ಶಾಸ್ತ್ರಿಗಳೂ ಇವುಗಳಿಗೆ ಸ್ವರಸಂಯೋಜನೆ ಮಾಡಿ ಸಂಪಾದಿಸಿದ್ದಾರೆ. (ಎಸ್.ಕೆ.ಆರ್.)

**ಅಣ್ಣಾಜಿ :** 63 ಪುರಾತನರಲ್ಲಿ ಒಬ್ಬನಾದ ನಂಬಿಯಣ್ಣನನ್ನು ಕುರಿತು ಸೌಂದರವಿಳಾಸ ಎಂಬ ಕಾವ್ಯವನ್ನು ಬರೆದಿದ್ದಾನೆ. ಇವನು ವೀರೇಂದ್ರನ ಮೊಮ್ಮಗ. ಅಯ್ಯಣಭೂಪನ ಮಗ. ಕಾವ್ಯದಲ್ಲಿ ಸುಮಾರು 600 ಪದ್ಯಗಳಿವೆ. ಸಂಧಿ ಆಶ್ವಾಸಾದಿ ವಿಭಾಗ ಇಲ್ಲ. ಕಾವ್ಯದ

ಬಹುಭಾಗ ವಾರ್ಧಕ ಷಟ್ಪದಿಯಲ್ಲಿದೆ. ಮಧ್ಯದಲ್ಲಿ ಕೆಲವು ಭಾಮಿನೀ ಷಟ್ಪದಿಗಳೂ ಇವೆ. ಕಾವ್ಯಾರಂಭದಲ್ಲಿ ಗಂಗಾಧರ ಮತ್ತು ಗಿರಿಜೆಯರ ಸ್ತುತಿ ಇದೆ. ಮೊದಲಲ್ಲಿ ಕೆರೆಯ ಪದ್ಮರಸ ಹಂಪೆಯ ಹರೀಶ್ವರ, ಪಾಲ್ಕುರಿಕೆ ಸೋಮಾರಾಧ್ಯ, ಮಲುಹಣರನ್ನೂ ಸ್ಮರಿಸಿ ಬಳಿಕ ವೀರಶೈವ ಸಂಪ್ರದಾಯದಂತೆ ಹೆಸರಾಂತ ಸಂಸ್ಕೃತ ಕವಿಗಳಾದ ಬಾಣ, ಮಯೂರ, ಭವಭೂತಿ, ಶ್ರೀಹರ್ಷ, ಧನಂಜಯ, ದಂಡಿ, ಕಾಳಿದಾಸ ಇವರಿಗೆ ಮಣಿದು ವೀರಶೈವರಲ್ಲದ ರುದ್ರಭಟ್ಟ ಅಗ್ಗಳ ನೇಮಿಚಂದ್ರರನ್ನೂ ಕವಯಿತ್ರಿಯಾದ ಕಂತಿಯನ್ನೂ ಕವಿರಾಜಮಕುಟಮಣಿಯಾದ ಶ್ರೀನಾಥನನ್ನೂ ವಂದಿಸಿದ್ದಾನೆ. ವೀರಶೈವೇತರ ಕವಿಗಳನ್ನು ತನ್ನ ಕಾವ್ಯದಲ್ಲಿ ಸ್ಮರಿಸಿರುವುದು ಈ ಕವಿಯ ಒಂದು ವೈಶಿಷ್ಟ್ಯ. ಇದಲ್ಲದೆ ಶಿವನ ಆಸ್ಥಾನ ವರ್ಣನೆಯ ಸಂದರ್ಭದಲ್ಲಿ ಬಸವ, ಮಡಿವಾಳಯ್ಯ, ಮರುಳಶಂಕರ, ಓಹಿಲಯ್ಯ, ಮಾದಾರಚನ್ನ ಕಿನ್ನರ ಬ್ರಹ್ಮ, ಹಡಪದ ಅಪ್ಪಣ್ಣ, ಚನ್ನಬಸವಣ್ಣ, ಸಿದ್ಧರಾಮ, ಘಟ್ಟಿವಾಳಯ್ಯ, ಅಲ್ಲಮ ಪ್ರಭುದೇವ, ಅನಿಮಿಷಯ್ಯ ಮೊದಲಾದ ಪ್ರಮಥಗಣಗಳು ಆ ಸಭೆಯಲ್ಲಿ ಇದ್ದರೆಂದು ತಿಳಿಸಿರುವುದರಿಂದ ಕವಿ ವೀರಶೈವ ಮತಾನುಯಾಯಿ ಎಂದು ಸ್ಪಷ್ಟಪಡುತ್ತದೆ.

ತನ್ನನ್ನು ಅಯ್ಯಣಭೂಪನ ಸುಕುಮಾರ, ಅಣ್ಣಾಜಿ ರಾಜೇಂದ್ರ, ರಸಿಕ ರಾಜೇಂದ್ರ ನಣ್ಣಾಜಿ ಎಂದು ವಿಶ್ಲೇಷಿಸಿಕೊಂಡಿರುವುದರಿಂದ ಈತ ರಾಜವಂಶಕ್ಕೆ ಸೇರಿದವನಾಗಿರ ಬಹುದು. ಯಾವ ಊರಿನವನು ಎನ್ನುವುದು ತಿಳಿಯದು.

ಸು. 17ನೆಯ ಶತಮಾನದ ಅಂತ್ಯಭಾಗದಲ್ಲಿ ಅಂದರೆ ಇಕ್ಕೇರಿ ಸಂಸ್ಥಾನ ಅಸ್ತಿತ್ವದಲ್ಲಿದ್ದ ಕಾಲದಲ್ಲಿ ಕವಿ ಇದ್ದಿರಬಹುದು.

ಶಂಕರನ ಆದೇಶದಂತೆ ಅಲಂಕಾರ ಭಾವ ರಸಪೂರಿತವಾದ ಸೌಂದರವಿಲಾಸ ಕಾವ್ಯವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಅದನ್ನು ಬಿಟ್ಟು ಮತ್ತಾವ ಕೃತಿಯನ್ನೂ ಈ ಕವಿ ರಚಿಸಿರುವಂತೆ ತಿಳಿದುಬರುವುದಿಲ್ಲ.

ಶೂನ್ಯಸಿದ್ಧಾಂತವ, ಸೂಳೆಯರ ಮನೆಯ ಸಂಭಾಷಣೆಯ ಮಾಳ್ಪೆನೆಂದಾಲೋಚಿಸಿದ ರುಂಟೆ ಕುಕವಿಜನರೆಂಬ ಬಹು ಕೀಳು ಮಾನವರ ನಾಲಗೆಯ ಕೊನೆಯೊಳಗುಚಿತರಚನೆ ರಂಜಿಸಿ ಮೆರೆವುದೇ–ಎಂದು ಹೇಳಿ ತನ್ನ ಈ ಕೃತಿ ಶೂನ್ಯ ಸಿದ್ಧಾಂತಕ್ಕೆ ಸಂಬಂಧಪಟ್ಟುದು ಎಂಬುದನ್ನು ಸ್ಪಷ್ಟಪಡಿಸಿದ್ದಾನೆ.

ಈ ಶೃಂಗಾರಕಾವ್ಯದಲ್ಲಿ ಸಮಯವರಿತು ಕವಿ ವರ್ಣನೆಗಳನ್ನು ಜೋಡಿಸಿದ್ದಾನಾದರೂ ಪುನರುಕ್ತಿ ಇದೆ; ಕಾವ್ಯಬಂಧ ಸಾಮಾನ್ಯವಾಗಿದೆ.

ಈಶ್ವರಪ್ರತಿಬಿಂಬರೂಪನಾದ ಪುಷ್ಪದತ್ತ ಮತ್ತು ರುದ್ರಕನ್ಯೆಯರಾದ ಕನಕಲತೆ ಮತ್ತು ಕಾಂತಿಮತಿ ಇವರು ಪುಷ್ಪಾಪಚಯ ಮಾಡಲು ಒಂದೇ ಸ್ಥಳಕ್ಕೆ ಬಂದು ಪರಸ್ಪರ ನೋಡಿ ಅನುರಕ್ತರಾದುದನ್ನು ತಿಳಿದ ಈಶ್ವರ ಗಿರಿಜೆಯರ ಆದೇಶದಂತೆ ಪುಷ್ಪದತ್ತನು ಜಡೆಯ ನಾಯನಾರು ಮತ್ತು ಯಸ್ವಜ್ಞಾನಸಂಬಂಧಿ ಇವರಿಗೆ ಸೌಂದರನೆಂಬ (ನಂಬಿಯಣ್ಣ) ಹೆಸರಿನಿಂದ ಮಗನಾಗಿ ಹುಟ್ಟುತ್ತಾನೆ. ರುದ್ರಕನ್ಯೆಯರು ಶಿವದೇವಿ ಮಂಗಲನಾಚಿಯರ ಉದರದಲ್ಲಿ ಪರವೆ, ಸಂಕಿಲೆಯರಾಗಿ ಜನಿಸುತ್ತಾರೆ. ಸೌಂದರನಂಬಿ ಈ ಕನ್ಯೆಯರೊಡನೆ ನಡೆಸಿದ ಶೃಂಗಾರ ಈ ಕೃತಿಯ ವಸ್ತು. (*)

**ಅಣ್ಣಾಮಲೈ :** ತಮಿಳುನಾಡು ರಾಜ್ಯದ ಕೊಯಮತ್ತೂರು ಜಿಲ್ಲೆಯಲ್ಲಿವೆ ಪರ್ವತ ಶ್ರೇಣಿಗಳು (೧೦°೧೩'–೧೦°೩೧' ಉ. ಅ. ೭೬°೫೨' –೭೭°೨೩' ಪೂ. ರೇ.). ಇವು ಪಶ್ಚಿಮಘಟ್ಟಗಳ ಭಾಗವಾಗಿದ್ದು, ಪಾಲ್ಘಾಟ್ ಕಣಿವೆಯ ದಕ್ಷಿಣಕ್ಕೆ ವಿಸ್ತರಿಸಿವೆ. ಶ್ರೇಣಿಗಳ ಎತ್ತರ 2440 ಇಳಕಲು ಪ್ರದೇಶಗಳು ದಟ್ಟವಾದ ಕಾಡುಗಳಿಂದಲೂ ಚಿಕ್ಕ ಪ್ರಸ್ಥಭೂಮಿಗಳು ಹುಲ್ಲುಗಾವಲುಗಳಿಂದಲೂ ಆವೃತವಾಗಿವೆ. ಈಸರಣಿಯಲ್ಲೇ ಅತಿಎತ್ತರವಾಗಿರುವ ಅಣ್ಣಾಮುಡಿ ಶಿಖರ ದಕ್ಷಿಣಭಾರತದಲ್ಲೇ ಅತ್ಯಂತ ಉನ್ನತವಾದುದು 2695ಮೀ

ಈ ಶ್ರೇಣಿಗಳಲ್ಲಿ ನೈಸ್ ರೂಪಾಂತರಿತ ಶಿಲೆಗಳೊಂದಿಗೆ ಫೆಲ್ಸ್ಪಾರ್ ಮತ್ತು ಕ್ವಾರ್ಟ್ಜ್ ಎಳೆಗಳು ಮತ್ತು ಕೆಂಪು ಪಾರ್ಫೈರೈಟ್‌ಗಳನ್ನು ಬೆರೆತಿರುವ ಶಿಲಾಭಾಗಗಳೂ ಇವೆ. ಮೇಲಿನ ಇಳಿಜಾರಿನಲ್ಲಿ 915–1375 ಮೀ ಎತ್ತರದ ವರೆಗೆ ಕಾಫಿ ಮುಖ್ಯಬೆಳೆ. ಕೆಳಮಟ್ಟದ ಇಳಿಜಾರುಗಳಲ್ಲಿ ದಕ್ಷಿಣಭಾರತದಲ್ಲೇ ಉತ್ತಮದರ್ಜೆಯ ತೇಗದ ಮರಗಳಿವೆ.

ಇಲ್ಲಿ ಕಾಟಿ, ಕಡವೆ, ಹುಲಿ, ಚಿರತೆ, ಕರಡಿ ಮುಂತಾದ ಪ್ರಾಣಿಗಳು ಕಂಡುಬರುತ್ತವೆ. ಭಾರತದ ಉತ್ತರ ಭಾಗಗಳಲ್ಲಿ ಕಂಡುಬರದ ನೀಲಗಿರಿ ಕಾಡು ಟಗರುಗಳು (ಹೆಮಿಟ್ರೇಗಸ್) ಇಲ್ಲಿ ಇವೆ. (ಎಂ.ಎಸ್.ವಿ.ಡಿ.)

**ಅಣ್ಣಾಮಲೈ ವಿಶ್ವವಿದ್ಯಾನಿಲಯ :** ಚೆಟ್ಟಿನಾಡಿನ ಅಣ್ಣಾಮಲೈ ಚೆಟ್ಟಿಯಾರ್ ಅವರ ವಿದ್ಯಾಪ್ರೇಮ, ಔದಾರ್ಯಗಳ ಫಲವಾಗಿ 1929ರಲ್ಲಿ ಅಣ್ಣಾಮಲೈ ನಗರದಲ್ಲಿ ಸ್ಥಾಪಿತವಾಯಿತು. ಇದೊಂದು ಏಕರೂಪದ, ಬೋಧನೆಗೆ ಮೀಸಲಾದ, ವಿದ್ಯಾರ್ಥಿಗಳು ಸ್ಥಳದಲ್ಲೇ ವಾಸಿಸಬೇಕೆಂಬ ನಿಯಮವನ್ನು ಪಾಲಿಸುವ ವಿದ್ಯಾ ಕೇಂದ್ರ. ಚಿದಂಬರಂನಲ್ಲಿ 1929ಕ್ಕೆ ಮುಂಚೆಯೇ ಚೆಟ್ಟಿಯಾರರ ಮನೆತನದವರೇ ಸ್ಥಾಪಿಸಿ ಪೋಷಿಸಿಕೊಂಡು ಬಂದಿದ್ದ ಒಂದು ಪ್ರೌಢಶಾಲೆ ಇತ್ತು. ಚೆಟ್ಟಿಯಾರ್ ಅವರು 1920ರಲ್ಲಿ ಅದನ್ನು ಶ್ರೀ ಮೀನಾಕ್ಷಿ ಕಾಲೇಜು ಎಂಬ ಉನ್ನತ ವಿದ್ಯಾಶಾಲೆಯನ್ನಾಗಿ ಮಾರ್ಪಡಿಸಿದರು. 1927ರಲ್ಲಿ ಒಂದು ತಮಿಳು ಕಾಲೇಜು, ಒಂದು ಸಂಸ್ಕೃತ ಕಾಲೇಜು ಸ್ಥಾಪಿತವಾದುವು. ಪೌರಸ್ತ್ಯ ಶಿಕ್ಷಣ ಕಾಲೇಜು ಮತ್ತು ಸಂಗೀತ ಶಿಕ್ಷಣ ಕಾಲೇಜು ಸ್ಥಾಪಿತವಾದದ್ದು 1929ರಲ್ಲಿ.

ಪ್ರೌಢಶಾಲೆಗಳು ಹೆಚ್ಚಬೇಕು, ಯುವಕರು ಉಚ್ಚಶಿಕ್ಷಣ ಪಡೆಯಲು ಅವಕಾಶ ದೊರಕಬೇಕು, ಎಂಬ ಕೂಗು ಈ ಮಧ್ಯೆ ನಾಡಿನಲ್ಲೆಲ್ಲಾ ಹರಡಿತ್ತು. ಇದನ್ನು ಮನಗಂಡ ಅಣ್ಣಾಮಲೈ ಚೆಟ್ಟಿಯಾರರು ಸರ್ಕಾರ ವಿಶ್ವವಿದ್ಯಾನಿಲಯವೊಂದನ್ನು ತೆರೆಯುವುದಾದರೆ ತಮ್ಮ ಮೀನಾಕ್ಷಿ ಕಾಲೇಜು, ತಮಿಳು ಮತ್ತು ಸಂಸ್ಕೃತ ಕಾಲೇಜುಗಳು, ಕಟ್ಟಡಗಳು, ಅವುಗಳಲ್ಲಿನ ಸಾಮಾನು ಸರಂಜಾಮುಗಳು, ಎಲ್ಲವನ್ನೂ ಕೊಟ್ಟು ಮೇಲೆ 20 ಲಕ್ಷ ರೂಪಾಯಿಗಳನ್ನು ಕೊಡಲು ಮುಂದೆ ಬಂದರು. ಇವರ ಧಾರಾಳ ಕೊಡುಗೆಯನ್ನು ಸರಕಾರ ಆಸಕ್ತಿಯಿಂದ ಸ್ವೀಕರಿಸಿತು; ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಆವಶ್ಯಕವಾದ ಕಾನೂನನ್ನು 1928ರಲ್ಲಿ ರಚಿಸಿತು. ಮರು ವರ್ಷ ಜುಲೈನಲ್ಲಿ ಈ ವಿದ್ಯಾನಿಲಯದ ಕೆಲಸ ಅಣ್ಣಾಮಲೈ ನಗರದ ಹೊರವಲಯದಲ್ಲಿ ಪ್ರಾರಂಭವಾಯಿತು. ಚಿದಂಬರಂಗೆ ಹತ್ತಿರ

ಅಣ್ಣಾಮಲೈ ವಿಶ್ವವಿದ್ಯಾನಿಲಯ

ಇರುವ ಅಣ್ಣಾಮಲೈನಗರ ಮನೋಹರವಾದ ಸ್ಥಳದಲ್ಲಿದೆ; ಜನಸಂಖ್ಯೆ ಸು. 6,000 ಪುರಾತನ ಚರಿತ್ರೆಗೆ ಸಂಬಂಧಿಸಿದ ಪುಣ್ಯಸ್ಥಳ ಅದು. ವಿಶ್ವವಿದ್ಯಾನಿಲಯದ ಅಧಿಕಾರವ್ಯಾಪ್ತಿ ಅದರ ಸುತ್ತಣ 4 ಕಿಮೀ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದೆ. ಅಂದವಾದ ಕಟ್ಟಡಗಳು ಆ ಸ್ಥಳದ ರಮ್ಯತೆಯನ್ನು ಇಮ್ಮಡಿಸಿವೆ.

ವಿಶ್ವವಿದ್ಯಾನಿಲಯದ ಶಾಸಕಸಭೆ ಅಥವಾ ಸೆನೆಟ್‌ನಲ್ಲಿ 85 ಸದಸ್ಯರಿದ್ದಾರೆ. ಎಲ್ಲ ಪಕ್ಷಗಳೂ ಪಂಗಡಗಳೂ ಇದರಲ್ಲಿ ಪ್ರಾತಿನಿಧ್ಯವನ್ನು ಪಡೆದಿವೆ. 17 ಸದಸ್ಯರನ್ನೊಳಗೊಂಡ ಆಡಳಿತ ಸಮಿತಿ (ಸಿಂಡಿಕೇಟ್) ದೈನಂದಿನ ಆಡಳಿತದ ಮೇಲ್ವಿಚಾರಣೆ ನಡೆಸುತ್ತದೆ. ಪ್ರೌಢವಿದ್ಯಾಪರಿಣತಮಂಡಲಿ (ಅಕೆಡಮಿಕ್ ಕೌನ್ಸಿಲ್), ಆಯ್ಕೆ ಸಮಿತಿ (ಬೋರ್ಡ್ ಆಫ್ ಸೆಲೆಕ್ಷನ್), ಶಿಕ್ಷಣ ಸಮಿತಿ, ಕುಲಸಚಿವ (ರಿಜಿಸ್ಟ್ರಾರ್)–ಇವರು ಆಡಳಿತದ ವಿವಿಧ ಅಂಗಗಳನ್ನು ನಡೆಸುತ್ತಾರೆ. ಆಡಳಿತಾಧಿಪತಿ ವಿಶ್ವವಿದ್ಯಾನಿಲಯದ ಉಪಕುಲಪತಿ (ವೈಸ್ ಛಾನ್ಸಲರ್). ವಿ. ಎಸ್. ಶ್ರೀನಿವಾಸಶಾಸ್ತ್ರಿ, ಕೆ. ವಿ. ರೆಡ್ಡಿ, ಎಂ. ರತ್ನಸ್ವಾಮಿ, ಆರ್. ಕೆ. ಷಣ್ಮುಗಂ ಚೆಟ್ಟಿಯಾರ್, ಸಿ. ಪಿ. ರಾಮಸ್ವಾಮಿ ಅಯ್ಯರ್‌ಗಳಂಥ ಅತ್ಯಂತ ಸಮರ್ಥರೂ ಘನಪಂಡಿತರೂ ಆದ ಉಪಕುಲಪತಿ ಶ್ರೇಣಿಯನ್ನೇ ಪಡೆದಿರುವುದು ಈ ವಿಶ್ವವಿದ್ಯಾನಿಲಯದ ಹೆಗ್ಗಳಿಕೆ.

ಪ್ರಾರಂಭವಾದಾಗ, ಈ ವಿಶ್ವವಿದ್ಯಾನಿಲಯದಲ್ಲಿ ಮೂರು ಶಾಖೆಗಳು (ಫ್ಯಾಕಲ್ಟೀಸ್) ಮಾತ್ರ ಇದ್ದುವು ; ಕುಶಲವಿದ್ಯೆಗಳು (ಆರ್ಟ್ಸ್), ವಿಜ್ಞಾನ ಮತ್ತು ಪೌರಸ್ತ್ಯ ಭಾಷಾಧ್ಯಯನ (ಓರಿಯಂಟಲ್ ಸ್ಟಡೀಸ್). 1932ರಲ್ಲಿ ಪೌರಸ್ತ್ಯ ಶಿಕ್ಷಣ ಪ್ರೌಢಶಾಲೆ ಮತ್ತು ಗಾಯನ ಕಲಾಪ್ರೌಢಶಾಲೆಗಳನ್ನು ಅಣ್ಣಾಮಲೈ ಚೆಟ್ಟಿಯಾರರೇ ಯೋಗ್ಯ ಶಾಶ್ವತ ವರಮಾನದೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಬಿಟ್ಟುಕೊಟ್ಟರು. ಆಧುನಿಕ ಕಾಲಕ್ಕೆ ಅವಶ್ಯವಾದ ಔದ್ಯೋಗಿಕ ವಿಜ್ಞಾನ, ಅದಕ್ಕೆ ಸಂಬಂಧಪಟ್ಟಂತೆ ಸಂಶೋಧನೆಗಳೂ–ಇವಕ್ಕೂ ಉತ್ತೇಜನ ದೊರಕಿತ್ತು. 1945ರಲ್ಲಿ ಯಂತ್ರಶಿಲ್ಪ ಪ್ರೌಢವಿದ್ಯಾಶಾಲೆ ಪ್ರಾರಂಭವಾಗಿ ಆಧುನಿಕ ಸಂಶೋಧನೆಗಳನ್ನೊಳಗೊಂಡು ನಾನಾ ಮುಖವಾಗಿ ಬೆಳೆಯುತ್ತಿದೆ. ಜೀವವಿಜ್ಞಾನದಲ್ಲಂತೂ ಇಲ್ಲಿ ನಡೆಯುತ್ತಿರುವ ಸಂಶೋಧನೆಗಳು ಪ್ರಖ್ಯಾತ ಪಾಶ್ಚಾತ್ಯ ವಿದ್ವಾಂಸರ ಮೆಚ್ಚುಗೆಯನ್ನೂ ಸಂಪಾದಿಸಿವೆ. ಕೃಷಿವಿಜ್ಞಾನ, ವಾಣಿಜ್ಯಶಾಸ್ತ್ರ–ಮುಂತಾದವುಗಳ ಅಧ್ಯಯನ ಸಂಶೋಧನೆಗಳು ತೀವ್ರಗತಿ ಯಿಂದ ಸಾಗುತ್ತಿವೆ. ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗವೂ ಉದಾರವಾಗಿ ಸಹಾಯ ನೀಡುತ್ತಿದೆ.

ವಿದ್ಯಾರ್ಥಿವಸತಿಗೃಹಗಳು ಸಾಕಷ್ಟಿವೆ. ಉತ್ತಮ ಗ್ರಂಥಾಲಯವಿದೆ. 1955 ಫೆಬ್ರುವರಿ 9ರಂದು ಈ ವಿಶ್ವವಿದ್ಯಾಲಯದ ಬೆಳ್ಳಿಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಅದರ ಪ್ರಾರಂಭೋತ್ಸವವನ್ನು ನಡೆಸಿದವರು ಮೈಸೂರಿನ ರಾಜಪ್ರಮುಖರಾಗಿದ್ದ ಜಯಚಾಮರಾಜೇಂದ್ರ ಒಡೆಯರ್‌ರವರು. ವಿಶ್ವವಿದ್ಯಾಲಯದ ಆವರಣದಲ್ಲಿ ಸ್ಥಾಪಿಸಿದ್ದ ಅಣ್ಣಾಮಲೈ ಚೆಟ್ಟಿಯಾರ್‌ರವರ ಭವ್ಯ ಪ್ರತಿಮೆಯನ್ನು ಅವರೇ ಅನಾವರಣ ಮಾಡಿದರು.

ಅಣ್ಣಾಮಲೈ ವಿಶ್ವವಿದ್ಯಾನಿಲಯ : ಸಂಸ್ಥಾಪಕ ಅಣ್ಣಾಮಲೈ ಚೆಟ್ಟಿಯಾರರ ಅನಂತರ ಅವರ ಪುತ್ರ ಪದ್ಮಭೂಷಣ ಡಾ.ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರರು 1948 ರಿಂದ 1984ರವರೆಗೆ ಪ್ರೋ–ಛಾನ್ಸಲರ್ ಆಗಿದ್ದರು. ಈಗಿನ ಪ್ರೋ–ಛಾನ್ಸಲರ್ ಎಂ.ಎ.ರಾಮಸ್ವಾಮಿ

ಯವರು. ಡಾ.ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರರ ಮಗ. ಕಳೆದ 82 ವರ್ಷಗಳಲ್ಲಿ ವಿಶ್ವವಿದ್ಯಾನಿಲಯವು ಬೃಹದಾಕಾರವಾಗಿ ಬೆಳೆದು, ವಸತಿ ವಿಶ್ವವಿದ್ಯಾನಿಲಯವಾಗಿ, ನಲವತ್ತೊಂದು ವಿಭಾಗಗಳನ್ನು ಹೊಂದಿದೆ. ಸು. 3240 ಜನ ಶಿಕ್ಷಕರಿದ್ದಾರೆ. ವಿಶ್ವವಿದ್ಯಾನಿಲಯದ ಕ್ಯಾಂಪಸ್ ಸು. 1000 ಎಕರೆ ವಿಸ್ತಾರವಾಗಿದೆ. (ಎ.ಎಂ.)

**ಅಣ್ಣಿಗೇರಿ :** ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ಮುಖ್ಯ ಊರು. ಹುಬ್ಬಳ್ಳಿ–ಗುಂತಕಲ್ಲು ರೈಲುಮಾರ್ಗದ ಮೇಲೆ ಹುಬ್ಬಳ್ಳಿಯಿಂದ 35ಕಿಮೀ ದೂರದಲ್ಲಿದೆ. ಗದಗ–ಹುಬ್ಬಳ್ಳಿ ಹೆದ್ದಾರಿ ಈ ಊರ ಮೇಲಿಂದ ಹಾದುಹೋಗುತ್ತದೆ. ಕೃತಪುರಮಹಾತ್ಮೆ ಎಂಬ ಸ್ಥಳಪುರಾಣದ ಪ್ರಕಾರ ಈ ಊರಿಗೆ ಅನ್ನಗಿರಿ, ಅನ್ನತಟಾಕ ಎಂಬ ಹೆಸರುಗಳಿದ್ದುವು. ಪಾಂಡವರು ಅಣ್ಣಿಗೇರಿಗೆ ಬಂದಿದ್ದರೆಂಬ ನಂಬಿಕೆಯಿದೆ. 2ನೆಯ ಪುಲಕೇಶಿಯಿಂದ ಹಿಡಿದು ಬಿಜಾಪುರದ ಮಹಮ್ಮದ್‍ಷಾನ ಕಾಲದ ವರೆಗೆ ಆಳಿದ ರಾಜಮನೆತನಗಳವರ 28 ಶಾಸನಗಳು ಇಲ್ಲಿ ದೊರಕಿವೆ. ಅಣ್ಣಿಗೇರಿ ಪ್ರಾಚೀನ ಕಾಲದಲ್ಲಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಮಹತ್ತ್ವ ಪಡೆದಿತ್ತೆಂದು ಆ ಶಾಸನಗಳಿಂದ ತಿಳಿದುಬರುತ್ತದೆ. ಇದು ಬೆಳ್ವೊಲ 300ರ ನಾಡಿನ ರಾಜಧಾನಿಯಾಗಿತ್ತು. ದಕ್ಷಿಣ ವಾರಾಣಸಿ ತೀರ್ಥವೆಂದೂ ಕರೆಯುತ್ತಿದ್ದ ಈ ಊರಲ್ಲಿ ಐದು ಬ್ರಹ್ಮಪುರಿಗಳೂ ತ್ರಿವರ್ಗದವರೂ ಸಾವಿರ ದೇವಪುತ್ರರೂ ಇದ್ದರು. ಪಂಪನ ಮಾತಾಮಹ ಜೋಯಿಸ ಸಿಂಗ ಇಲ್ಲಿಯವನು.



ಅಮೃತೇಶ್ವರ ದೇವಾಲಯ

ಚಾಳುಕ್ಯ 4ನೆಯ ಸೋಮೇಶ್ವರನಿಗೆ ಪುನಃ ರಾಜ್ಯವನ್ನು ಸಂಪಾದಿಸಲು ಸಹಾಯ ಮಾಡಿದ ದಂಡನಾಯಕ ಬಮ್ಮಿದೇವ ಮತ್ತು ಕಳಚುರಿ ರಾಯಮುರಾರಿ ಸೋವಿದೇವನ ದಂಡನಾಯಕ ಧನ್ನುಗಿ ಅಣ್ಣಿಗೇರಿಯಲ್ಲಿದ್ದವರು. ಕಳಚುರಿ ಬಿಜ್ಜಳನಿಗೆ ಹೆದರಿ ಚಾಳುಕ್ಯ 3ನೆಯ ತೈಲ ಅಣ್ಣಿಗೇರಿಗೆ ಓಡಿಬಂದಿದ್ದ. ಬ್ರಿಟಿಷರ ಆಳ್ವಿಕೆಯ ಪ್ರಾರಂಭದಲ್ಲಿ ಇದು ನಿಪ್ಪಾಣಿ ಜಹಗೀರಿಯಲ್ಲಿತ್ತು. 1839ರಲ್ಲಿ ಇದು ಕಂಪನಿಯ ನೇರ ಆಳ್ವಿಕೆಗೆ ಸೇರಿತು.

ಅಣ್ಣಿಗೇರಿಯಲ್ಲಿ ಬನಶಂಕರಿ, ಬಸಪ್ಪ, ಗರ್ಚ್ಚಿಬಸಪ್ಪ, ಕೋಳಿವಾಡ ಹನುಮಪ್ಪ, ಮೈಲಾರ, ಪುರದ ವೀರಪ್ಪ ಮೊದಲಾದ ಗುಡಿಗಳಿವೆ. ಇಲ್ಲಿರುವ ಅಮೃತೇಶ್ವರ ಗುಡಿ ಎಲ್ಲಕ್ಕೂ ದೊಡ್ಡದು ಮತ್ತು ಊರಿನ ಮುಖ್ಯ ದೇವಾಲಯ. ಹಸುರು ಮೋಡಿಯ ಕರಿಯ ಕಲ್ಲಿನಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಶಿಲ್ಪಶೈಲಿಯಲ್ಲಿ ಇದನ್ನು ಕಟ್ಟಿದೆ. ಈ ಗುಡಿಯಲ್ಲಿ ಸ್ವಯಂಭು ಅಮೃತೇಶ್ವರ ಲಿಂಗವುಳ್ಳ ಗರ್ಭಗುಡಿ, ಅದರ ಮುಂದೆ ಸುಕನಾಸಿ, ಅದರ ಮುಂದೆ ನಾಲ್ಕು ದಪ್ಪ ಮತ್ತು ದುಂಡಾದ ಕಂಬಗಳುಳ್ಳ ಒಳಮಂಟಪ, ಮುಖಮಂಟಪ ಮತ್ತು ಮಹಾಮಂಟಪಗಳಿವೆ. ಮುಖಮಂಟಪದ ಛತ್ತನ್ನು ಎತ್ತಿಹಿಡಿದ ಕಂಬಗಳು ಬೇರೆ ಬೇರೆ ಆಕಾರವಾಗಿವೆ. ಅವು ಇಟ್ಟಗಿಯ ಪ್ರಾಚೀನ ಗುಡಿಯಲ್ಲಿಯ ಕಂಬಗಳನ್ನೂ ಸ್ವಲ್ಪಮಟ್ಟಿಗೆ ಡಂಬಳದ ದೊಡ್ಡ ಬಸಪ್ಪನ ಗುಡಿಯ ಮುಖಮಂಟಪದ ಕಂಬಗಳನ್ನೂ ಹೋಲುವವು. ಮಹಾಮಂಟಪದೊಳಗಿಂದ ಒಳಮಂಟಪದೊಳಗೆ ಪ್ರವೇಶಿಸುವಲ್ಲಿ ಇರುವ ಶಿಲಾದ್ವಾರ ನಾಗ–ನಾಗಿಣಿ ಮುಂತಾದ ಕೆತ್ತನೆಗಳಿಂದ ಸುಂದರವಾಗಿ ಅಲಂಕೃತವಾಗಿದೆ. ಇಲ್ಲಿ ಚಿತ್ರಗಳನ್ನು ಪೊಳ್ಳುಮಾಡಿ ಅವು ಪ್ರತ್ಯೇಕವಾಗಿ ನಿಂತಂತೆ ಭಾಸವಾಗುವ ಹಾಗೆ ಕೆತ್ತಿದೆ. ಇಲ್ಲಿಯ ಕಲಾಕುಸುರಿನ ಕೆಲಸ ಅತ್ಯಂತ ಪ್ರೇಕ್ಷಣೀಯ. ವಿಮಾನ ಮತ್ತು ಒಳಮಂಟಪದ ಹೊರಗೋಡೆಗಳ ಮೇಲೆ ಕಲಶ, ದೇವತೆಗಳು, ಮಂಗಗಳು, ನೃತ್ಯಗಣಪತಿ, ಮಕರದ ಹರನಾಳಿಗೆ ಮೊದಲಾದವೂ ಶಿವನ ಹಲವು ರೂಪುಗಳೂ ಇವೆ.

ಕೆಲವು ಕಂಬಗಳ ಮೇಲೆ ಮಹಾಮಂಟಪ ನಿಂತಿದೆ. ಅಲ್ಲಿ ನಂದಿಯ ಮೂರ್ತಿ ಇದೆ. ದೇವಾಲಯದ ಸುತ್ತ ಪ್ರಾಕಾರವೂ ಸಣ್ಣ ಗುಡಿಗಳೂ ಇವೆ.

ಈ ಊರ ಜೈನ ಬಸ್ತಿಯೂ ದೊಡ್ಡದು. ಅದರ ಮುಂದೆ ಕಲ್ಲಿನ ಮಹಾದ್ವಾರವಿದೆ. ಊರ ಹೊರಗೆ ಪೂರ್ವಭಾಗದಲ್ಲಿದ್ದ ಪ್ರಾಚೀನ ಗುಡಿಯ ಹೊರಗೋಡೆಗಳ ಮೇಲೆ ವಿಜಯನಗರ ಕಾಲದ ಶಿಲ್ಪವನ್ನು ನೋಡಬಹುದು. (ಎ.ಎಂ.ಎ.)

**ಅಣ್ಣೆಸೊಪ್ಪು :** ಅಮರ್ಯಾಂತೇಸೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಸೊಪ್ಪು. ಸಿಲೋಷಿಯ ಅರ್ಜೆಂಷಿಯ ಇದರ ಸಸ್ಯ ವೈಜ್ಞಾನಿಕ ಹೆಸರು. ಹೊಲಗಳಲ್ಲಿ ಕಳೆಗಿಡವಾಗಿ ಬೆಳೆಯುತ್ತದೆ. ಎಳೆಯ ಗಿಡ ಒಳ್ಳೆಯ ಸೊಪ್ಪು ತರಕಾರಿ ಎಂದು ಜನಪ್ರಿಯವಾಗಿದೆ. ಇದರಲ್ಲಿ ಪ್ರೋಟೀನುಗಳೂ ಕಾರ್ಬೊಹೈಡ್ರೇಟುಗಳೂ ಹೇರಳವಾಗಿವೆ. ಇದರ ಸಾರು, ಹುಳಿ ರುಚಿಯಾಗಿರುತ್ತದೆ. ಬಲಿತ ಗಿಡ ದನಕ್ಕೆ ಮೇವು. ಈ ಗಿಡ ಮುಂಗಾರು ಮಳೆ ಬಿದ್ದಮೇಲೆ ಹೊಲ ತೋಟಗಳಲ್ಲಿ ಕಳೆಯಾಗಿ ಬೆಳೆದು ಚಳಿಗಾಲ ಮುಗಿಯುವವರೆಗೂ ಇದ್ದು, ಬೀಜ ಬಿಟ್ಟು ತನ್ನ ಜೀವನಚಕ್ರವನ್ನು ಮುಗಿಸುತ್ತದೆ.

ಸಿಲೋಷಿಯ ಜಾತಿಯಲ್ಲಿ ಒಟ್ಟು 60 ಪ್ರಭೇದಗಳಿದ್ದು ಕೆಲವನ್ನು ಅಲಂಕಾರಕ್ಕಾಗಿ ಬೆಳೆಸುವುದೂ ಉಂಟು. ಇವುಗಳ ಎಲೆ ತೊಟ್ಟಿನಿಂದ ಕೂಡಿದ್ದು ಪರ್ಯಾಯ ಜೋಡಣೆಯನ್ನು ಪ್ರದರ್ಶಿಸುತ್ತದೆ; ಎಲೆಯ ಅಲುಗು ಕದರಿನಾಕಾರವಾಗಿದ್ದು ತುದಿ ಮೊನಚಾಗಿರುತ್ತದೆ. ಹೂಗೊಂಚಲು ಸ್ಪೈಕ್ ಮಾದರಿಯದು, ಗಿಡದ ತುದಿಯಲ್ಲಿ ಅರಳುತ್ತದೆ. ಹೂ ದ್ವಿಲಿಂಗಿ. ಅದಕ್ಕೆ ಪುಷ್ಪಪತ್ರಗಳೂ ಕೂಡಿಕೊಂಡಿರುವ ಐದು ದಳಗಳೂ ಇದ್ದು ವಿವಿಧ ವರ್ಣಗಳಿಂದ ಕೂಡಿರುತ್ತದೆ. ಬುಡದಲ್ಲಿ ಕೂಡಿ ಕೊಂಡಿರುವ ಐದು ಕೇಸರಗಳ ತುದಿಗಳು ಬಿಡಿಯಾಗಿರುತ್ತವೆ. ಉನ್ನತ ಸ್ಥಿತಿಯ ಅಂಡಾಶಯವೂ ಅದರೊಳಗೆ ಎರಡು ಅಥವಾ ಹೆಚ್ಚು ಅಂಡಗಳೂ ಇರುತ್ತವೆ. ವಂಶಾಭಿವೃದ್ಧಿ ಬೀಜಗಳಿಂದ.

ಅಣ್ಣೆಸೊಪ್ಪಿಗೆ ಔಷಧಿಯ ಗುಣಗಳೂ ಉಂಟು. ಇದರ ಎಲೆಯ ರಸ, ಕಷಾಯ ಅಥವಾ ಚೂರ್ಣವನ್ನು ಸೇವಿಸಿದರೆ ಪಿತ್ತಕೋಶ ಬಲಗೊಳ್ಳುತ್ತದೆ. ಬೀಜದ ಚೂರ್ಣವನ್ನು ಅರೆದು ಸೇವಿಸುವುದರಿಂದ ಭೇದಿ ನಿಲ್ಲುವುದಲ್ಲದೆ ವೀರ್ಯವೃದ್ಧಿಗೂ ಅನುಕೂಲ. ಬೀಜವನ್ನು ಅರೆದು ನುಣ್ಣಗೆ ಮಾಡಿಕೊಂಡು ಕಣ್ಣಿಗೆ ಲೇಪಿಸಿದರೆ ಕಣ್ಣಿನ ರೋಗಗಳು ವಾಸಿಯಾಗುವುವು. *

**ಅತಿಕ್ರಮ :** ತನಗೆ ಸ್ವಂತ ಹಕ್ಕಿಲ್ಲದೆ ಬೇರೊಬ್ಬ ವ್ಯಕ್ತಿಯ ಮೇಲೆ ಅಥವಾ ಅವನ ಸ್ಥಿರ, ಚರಾಸ್ತಿಯ ಮೇಲೆ ಮಾಡುವ ಆಕ್ರಮಣಕ್ಕೆ, ಅತಿಚಾರಕ್ಕೆ ಈ ಹೆಸರಿದೆ (ಟ್ರೆಸ್‍ಪಾಸ್). ಈಗ ಸಾಮಾನ್ಯವಾಗಿ ಇದು ಸ್ಥಿರಾಸ್ತಿಗೇ ಸಂಬಂಧಿಸುತ್ತದೆ. ಒಬ್ಬನ ಅಧೀನ ಮತ್ತು ಅನುಭೋಗದಲ್ಲಿರುವ, ಸ್ಪಷ್ಟವಾದ ರೂಪರೇಖೆಯಿಂದ ಸೀಮಿತವಾದ ಸ್ಥಿರಾಸ್ತಿಯ ಮೇಲೆ ನಿಷ್ಕಾರಣ ಆಕ್ರಮಣ ಮಾಡುವುದು ಸಿವಿಲ್, ಕ್ರಿಮಿನಲ್ ಅಥವಾ ಎರಡೂ ಬಗೆಯ ಅತಿಕ್ರಮವಾಗಬಹುದು. ಹೀಗೆಯೇ ಮೀನುಗಾರಿಕೆಯ ಹಕ್ಕು, ನೀರಿನ ಹಕ್ಕು, ಹೊಳೆ ದಾಟಿಸುವ ದೋಣಿ ನಡೆಸುವ ಹಕ್ಕು, ಒಕ್ಕಲುತನದ ಹಕ್ಕು ಮುಂತಾದ ಅಮೂರ್ತಸ್ವರೂಪದ ಹಕ್ಕುಗಳನ್ನು ಅತಿಕ್ರಮಿಸುವುದೂ ಸ್ಥಿರಾಸ್ತಿಯ ಆಕ್ರಮಣದ ಅರ್ಥವ್ಯಾಪ್ತಿಯೊಳಗೆ ಬರುತ್ತದೆ. ಆಕ್ರಮಣಕಾರನಿಂದ ಉಚ್ಚಾಟನೆಗೊಂಡ ಒಡೆಯ ಪುನಃ ಸಂಬಂಧಪಟ್ಟ ಆಸ್ತಿಯನ್ನು ಪ್ರವೇಶಿಸಿದರೆ ಒಡೆಯನ ಸ್ವಾಧೀನದ ಹಕ್ಕು ಪುನಃ ಊರ್ಜಿತಗೊಳ್ಳುತ್ತದೆ. ಆದರೆ ಆಸ್ತಿಯ ಪರಿಪೂರ್ಣ ಸ್ವಾಧೀನವನ್ನು ಕಳೆದುಕೊಂಡ ಒಡೆಯ ಆಕ್ರಮಣ ಪ್ರತಿಬಂಧದ ಬಗ್ಗೆ ಆಕ್ರಮಣಕಾರನನ್ನು ಆಸ್ತಿಯಿಂದ ಉಚ್ಚಾಟನೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಶಕ್ಯವಿಲ್ಲ. ತಾನು ಬಾಡಿಗೆಗೆ ಅಥವಾ ಗೇಣಿಗೆ ಕೊಟ್ಟ ಆಸ್ತಿಯಲ್ಲಿ ಅಂಥ ಬಾಡಿಗೆ ಅಥವಾ ಗೇಣಿಯ ಅವಧಿ ಊರ್ಜಿತದಲ್ಲಿರುವಾಗ ಒಡೆಯ ಅದನ್ನು ಪ್ರವೇಶಿಸುವುದು ಆಕ್ರಮಣವಾಗುತ್ತದೆ. ಅಲ್ಲದೆ ಅಂಥ ಆಸ್ತಿಯ ಮೇಲೆ ಅಕ್ರಮಣ ಮಾಡುವ ಮೂರನೆಯವನೊಬ್ಬನ ಮೇಲೆ ಒಡೆಯನಾದವನು ಸ್ವತಂತ್ರವಾಗಿ ಕ್ರಮ ಕೈಗೊಳ್ಳಲಾರ. ಆದರೆ ಬಾಡಿಗೆದಾರ ಅಥವಾ ಗೇಣಿದಾರ ಅಂಥ ಕ್ರಮವನ್ನು ಕೈಗೊಳ್ಳಬಲ್ಲ.

ತನಗೆ ಸೇರದ ಆಸ್ತಿಯಲ್ಲಿ (ಉದಾ: ಜಮೀನು) ಇರುವುದು, ಆಸ್ತಿಯ ರೂಪ ಕೆಡಿಸುವುದು, ಜಾನುವಾರುಗಳನ್ನು ಆಸ್ತಿಯೊಳಗೆ ಹೋಗಬಿಡುವುದು–ಇವೆಲ್ಲ ಅತಿಕ್ರಮಗಳೇ ಆಗಿವೆ. ಇನ್ನೊಬ್ಬನ ಆಸ್ತಿಯೊಳಗೆ ಕಾಲಿಡದಿದ್ದರೂ ಅದನ್ನು ಬೆರಳಿನಿಂದ ಮುಟ್ಟುವುದೂ ಆಕ್ರಮಣವೇ. ತಾನು ಸ್ವತಃ ಅಲ್ಲದಿದ್ದರೂ ತನ್ನ ಸೇವಕನಿಂದ ಅಥವಾ ಪ್ರತಿನಿಧಿಗಳ ಅಥವಾ ಜಾನುವಾರುಗಳ ಮೂಲಕ ಇತರರ ಆಸ್ತಿಯಲ್ಲಿ ಅಕ್ರಮಪ್ರವೇಶ ಮಾಡುವುದು, ಆಸ್ತಿಯನ್ನು ಜಫ್ತಿಮಾಡುವುದು ಆಕ್ರಮಣಗಳೇ. ಆಸ್ತಿಯ ಆಕ್ರಮಣ ನೆಲದಡಿಯಲ್ಲಿ ಅಗೆಯುವುದರ ಮೂಲಕವೂ ನಡೆಯಬಲ್ಲದು. ಸ್ಥಿರಾಸ್ತಿಯ ಒಡೆಯ ನೆಲದಿಂದ ಆಕಾಶದವರೆಗೂ ಒಡೆಯನೆಂಬ ಶಾಸನ ಸೂಕ್ತವಿದ್ದರೂ ಕಟ್ಟಡಗಳಿಂದ ಎತ್ತರದಲ್ಲಿನ ವಿಮಾನಗಳ ಹಾರಾಟ ಅತಿಕ್ರಮವೆನಿಸುವುದಿಲ್ಲ. ಆದರೆ ಕಟ್ಟಡಗಳಿಗಿಂತ ಕೆಳಗೆ ಅವು ಬಂದಾಗ ಅತಿಕ್ರಮವಾಗುತ್ತದೆ. ಒಬ್ಬನ ಸ್ಥಿರಾಸ್ತಿಯ ಮೇಲೆ ಬೇರೆ ಆಸ್ತಿಯಿಂದ ಬಾಗಿರುವ ಮರ ಹಬ್ಬಿರುವ ಕೊಂಬೆ ಹಾದಿರುವ ಕಟ್ಟಡದ ಅಂಶಗಳು ಆಕ್ರಮಣಗಳು.

ಅವಿಭಕ್ತ ಕುಟುಂಬಕ್ಕೆ ಸೇರಿದವರು ಅಥವಾ ಅವಿಭಕ್ತ ಬಾಡಿಗೆದಾರರು ಅಥವಾ ಗೇಣಿದಾರರು ಆಸ್ತಿಯ ಅನುಭೋಗ ಮಾಡುತ್ತಿರುವಾಗ ಒಬ್ಬನ ಪಾಲಿನ ಆಸ್ತಿಗೆ ಇನ್ನೊಬ್ಬನು ಪ್ರವೇಶಿಸಿದರೆ ಅದು ಅಕ್ರಮ ಪ್ರವೇಶವಾಗುವುದಿಲ್ಲ. ಅಂತೆಯೇ ಅಧಿಕಾರಿಗಳು ಅಥವಾ ನೌಕರರು ತಮ್ಮ ಶಾಸನಬದ್ಧ ಕಾರ್ಯನಿರ್ವಹಣೆಯ ಕಾಲದಲ್ಲಿ ಯಾರಾದರೊಬ್ಬರು ಆಸ್ತಿಯನ್ನು ಪ್ರವೇಶಿಸುವುದು ಆಕ್ರಮಣವಲ್ಲ.

ಮತ್ತೊಬ್ಬನಿಂದಾಗಿ ಇಲ್ಲವೇ ದೈವಲೀಲೆಯಿಂದ (ಪ್ರವಾಹದಿಂದ ಕೊಚ್ಚಿ, ಬಿರುಗಾಳಿಯಿಂದ ಹಾರಿ) ತನ್ನದೊಂದು ಸಾಮಾನು ಇನ್ನೊಬ್ಬನ ಆಸ್ತಿಯೊಳಗೆ ಇಡಲ್ಪಟ್ಟಿದ್ದರೆ ಅದನ್ನು ವಾಪಸು ತೆಗೆದುಕೊಳ್ಳಲು ಆ ಆಸ್ತಿಯೊಳಗೆ ಪ್ರವೇಶಿಸುವುದು ಆಕ್ರಮಣವಾಗದು. ಆದರೆ ತನ್ನದೇ ಅಕೃತ್ಯದಿಂದ ಹಾಗೆ ಸಾಮಾನು ಇಡಲ್ಪಟ್ಟಿದ್ದು ಅದಕ್ಕಾಗಿ ಪ್ರವೇಶಿಸಿದರೆ ಅಕ್ರಮ ಪ್ರವೇಶವಾಗುತ್ತದೆ. ತನಗೆ ಸ್ವಾಮಿತ್ವ ಅಥವಾ ಇತರ ಹಕ್ಕಿದೆಯೆಂಬ ಪ್ರಾಮಾಣಿಕ ನಂಬಿಕೆಯ ಬಲದಲ್ಲಿ ಇನ್ನೊಬ್ಬನ ಆಸ್ತಿಯನ್ನು ಪ್ರವೇಶಿಸುವುದು ಆಕ್ರಮಣವಲ್ಲವಾದರೂ ಸಂದೇಹನಿವಾರಣೆಯಾದ ಮೇಲೆ ಕಾನೂನಿನಂತೆ ನಡೆಯಬೇಕಾಗುವುದು.

ಕ್ರಮಬದ್ಧವಾಗಿಯೇ ಒಬ್ಬನ ಆಸ್ತಿಯೊಳಗೆ ಪ್ರವೇಶಿಸಿ ಬಳಿಕ ಅಲ್ಲಿ ಕಳ್ಳತನವೇ ಮುಂತಾದ ಅಕೃತ್ಯವನ್ನು ಮಾಡಿದರೆ ಅಂಥ ಪ್ರವೇಶ ಮೂಲದಿಂದಲೇ ಅಕ್ರಮ ಪ್ರವೇಶವಾಗುತ್ತದೆ; ಇದು ಆಸ್ತಿಯ ಪ್ರವೇಶಾನಂತರ ತಮ್ಮ ಅಧಿಕಾರ ದುರುಪಯೋಗ ಪಡಿಸುವ ಅಧಿಕಾರಿಗಳ ಕೃತ್ಯಕ್ಕೂ ಅನ್ವಯಿಸುತ್ತದೆ.

ಯೋಗ್ಯವಾದ ಬಲಪ್ರಯೋಗದ ಮೂಲಕ ಆಕ್ರಮಣಕಾರನನ್ನು ಹೊರದಬ್ಬುವ ಹಕ್ಕು ಆಸ್ತಿಯ ಒಡೆಯನಿಗೆ ಇದೆ. ಅಕ್ರಮಪ್ರವೇಶದ ವಿರುದ್ಧ ಕ್ಷಿಪ್ರಕ್ರಮ ಕೈಗೊಳ್ಳದಿದರೆ ತನ್ನ ಒಡೆತನ ಮತ್ತು ಸ್ವಾಧೀನತೆಗಳನ್ನು ಸಿದ್ಧಪಡಿಸುವುದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಅಕ್ರಮಪ್ರವೇಶಮಾಡಿದವನು ಪರಿಹಾರ ಧನವನ್ನೂ ತಾನು ಅನುಭೋಗಿಸಿದ ಅದರ ಆದಾಯವನ್ನೂ ಒಡೆಯನಿಗೆ ತೆರಲು ಬದ್ಧ. (ಎನ್.ಎಸ್.ಎಂ.)

**ಆಪರಾಧಿಕ ಅತಿಕ್ರಮ :** ಯಾವನು ಅಪರಾಧ ಮಾಡುವ, ಆಸ್ತಿಯ ಸ್ವಾಧೀನತೆ ಇರುವ ಮನುಷ್ಯನಿಗೆ ಹೆದರಿಕೆ ಹುಟ್ಟಿಸುವ, ಅಪಮಾನ ಮಾಡುವ, ಅಥವಾ ತೊಂದರೆ ಕೊಡುವ ಉದ್ದೇಶದಿಂದ ಬೇರೊಬ್ಬನ ಆಸ್ತಿಯನ್ನು ಪ್ರವೇಶಿಸುತ್ತಾನೊ ಅಥವಾ ನ್ಯಾಯಸಮ್ಮತವಾಗಿ ಆಸ್ತಿಯನ್ನು ಪ್ರವೇಶಿಸಿರುತ್ತಾ ಮೇಲೆ ಹೇಳಿದ ಉದ್ದೇಶಗಳಿಗಾಗಿ ಅಲ್ಲಿ ನ್ಯಾಯಬಾಹಿರವಾಗಿ ಉಳಿಯುತ್ತಾನೊ ಅವನು ಆಪರಾಧಿಕ ಅತಿಕ್ರಮಪ್ರವೇಶ ಮಾಡುತ್ತಾನೆಂದು ಪೀನಲ್ ಕೋಡಿನಲ್ಲಿ ವ್ಯಾಖ್ಯೆ ಇದೆ.

ಆಪರಾಧಿಕ ನ್ಯಾಯಶಾಸ್ತ್ರದಲ್ಲಿ ಸಾಧಾರಣವಾಗಿ ಉದ್ದೇಶದಷ್ಟೇ ತಿಳಿವಳಿಕೆಗೂ ಮಹತ್ತ್ವ ಕೊಡಲಾಗುತ್ತದೆ. ಹಾಗೂ ಯಾವುದೇ ಕೃತ್ಯವನ್ನು ಮಾಡುವವನ ಮೇಲೆ ಈ ಎರಡೂ ಸಂದರ್ಭಗಳಲ್ಲಿ ಕಾಯಿದೆ ಒಂದೇ ರೀತಿಯ ಹೊಣೆಗಾರಿಕೆಯನ್ನು ಹೊರಿಸುತ್ತದೆ. ಒಬ್ಬ ಒಂದು ಕೃತ್ಯವನ್ನು ಮಾಡುವಾಗ, ಅದರ ಸಹಜ ಹಾಗೂ ಸಂಭವನೀಯ ಪರಿಣಾಮವನ್ನು ಅಪೇಕ್ಷಿಸುತ್ತಾನೆ ಎಂಬುದೇ ನ್ಯಾಯಶಾಸ್ತ್ರದ ಮೂಲ ತತ್ತ್ವ. ಆದರೆ, ಅಪರಾಧಿಕ ಅತಿಕ್ರಮ ಪ್ರವೇಶದ ವ್ಯಾಖ್ಯೆ ಇದಕ್ಕೆ ಅಪವಾದವಾಗಿದೆ. ಅದರಲ್ಲಿ ಹೇಳಿದ ಹೆದರಿಕೆ ಇತ್ಯಾದಿ ಪರಿಣಾಮವಾಗುವುದೆಂಬ ತಿಳಿವಳಿಕೆ ಇದ್ದು ಅತಿಕ್ರಮಪ್ರವೇಶಮಾಡಿದರೂ ಅಂಥ ಉದ್ದೇಶ ವಿಲ್ಲದಿದ್ದರೆ, ಅದು ಅಪರಾಧವಾಗುವುದಿಲ್ಲ.

ಅಪರಾಧವಲ್ಲದ ಅತಿಕ್ರಮಪ್ರವೇಶದ ನಿವಾರಣೆ ಅಥವಾ ಪರಿಹಾರ ಸಿವಿಲ್ ನ್ಯಾಯಾಲಯಕ್ಕೆ ಸಂಬಂಧಿಸಿದ್ದು. (ಆರ್.ಆರ್.ಟಿ)

**ಅತಿಥಿಸತ್ಕಾರ :** ಆಗಂತುಕರಿಗೆ ಅನ್ನಾಹಾರಗಳನ್ನೂ ವಸತಿಯನ್ನೂ ನೀಡುವ ಪದ್ಧತಿ. ಪ್ರಾಚೀನರಲ್ಲಿ ಇದನ್ನು ಕೃಷಿಕಜನರಲ್ಲಿ ಹೆಚ್ಚಾಗಿ ಕಾಣುತ್ತೇವೆ. ಬೇಟೆಗಾಗಿ ವಲಸೆಹೋಗುವ ಗುಂಪಿನಲ್ಲಿ ಈ ಪದ್ಧತಿ ಕಂಡುಬರುವುದಿಲ್ಲ. ಅಲ್ಲದೆ ಬಂದವರೆಲ್ಲರಿಗೂ ಸಹಾನುಭೂತಿಯ ಸತ್ಕಾರ ಸಿಗುತ್ತಿರಲಿಲ್ಲ; ತಮ್ಮ ಜಾತಿಗೆ ಸೇರಿದವರನ್ನು ಸತ್ಕರಿಸುವ ಸಂಪ್ರದಾಯ ಬೆಳೆದಿತ್ತು. ಅತಿಥಿಗಳಾದ ತಮಗೂ ಅದೇ ರೀತಿ ಸತ್ಕಾರ ಸಿಗಲೆಂಬ ನಿರೀಕ್ಷೆಯೂ ಇತ್ತೆನ್ನಬಹುದು. ಕೆಲವು ನಾಗರಿಕ ಜನರಲ್ಲಿ ಪ್ರವಾಸಿಗಳನ್ನು ಸತ್ಕರಿಸುವ ರೂಢಿ ಕಾಣಬಹುದಾಗಿತ್ತು. ಕೆಲವು ಪಂಗಡಗಳವರು ಅತಿಥಿಗಳಿಗೆ ತಮ್ಮ ಪತ್ನಿಯನ್ನೂ ಒಪ್ಪಿಸುತ್ತಿದ್ದರು. ಕೃಷಿಕ ಜನಾಂಗದಲ್ಲಿ ಅತಿಥಿಸತ್ಕಾರ ಸದ್ವರ್ತನೆಯನ್ನೂ ಔದಾರ್ಯವನ್ನೂ ಸೂಚಿಸುತ್ತಿತ್ತು. ಅತಿಥಿಗೆ ಊಟಣವೇರ್ಪಡಿಸಿ ಅವನು ಅಪೇಕ್ಷಿಸಿದುದನ್ನು ನೀಡುತ್ತಿದ್ದರಲ್ಲದೆ ಉಡುಗೊರೆಯನ್ನು ಕೊಡುತ್ತಿದ್ದರು.

ಅತಿಥಿಸತ್ಕಾರ ಮಾಡುವುದಕ್ಕೆ ಕೆಲವು ಸಾಮಾಜಿಕ ಅಂಶಗಳೂ ಕಾರಣವಾಗಿದ್ದುವು. ಮತಧರ್ಮದ ನಿಯಮಗಳು, ಅಭ್ಯಾಗತರಿಂದ ಕೇಡು ಸಂಭವಿಸಬಹುದೆಂಬ ಭೀತಿ, ವ್ಯಾಪಾರಕ್ಕಾಗಿ ಸ್ವಾಗತಿಸುವುದು, ತಮ್ಮ ವೈಭವವನ್ನು ಪ್ರದರ್ಶಿಸಬೇಕೆಂಬ ಹಂಬಲ ಮತ್ತು ಅತಿಥಿಯಿಂದ ಪರಸ್ಥಳದ ವಿಚಾರ ತಿಳಿದುಕೊಳ್ಳುವ ಬಯಕೆ–ಇವು ಇಂಥ ಅಂಶಗಳು. ನಾಗರಿಕರಲ್ಲಿ ಅತಿಥಿಸತ್ಕಾರಕ್ಕೆ ನೈತಿಕ ಬೆಲೆಯನ್ನೂ ಕೊಡಲಾಗಿತ್ತು. ಅದನ್ನು ಪವಿತ್ರಕರ್ತವ್ಯವೆಂದೂ ಭಾವಿಸಲಾಗಿತ್ತು. ಅತಿಥಿ ಸ್ನೇಹಸೂಚಕ ವರ್ತನೆಯನ್ನು ತೋರಿಸಬೇಕೆಂಬ ನಿಬಂಧಗಳಿದ್ದುವು. ಹೋಮರ್ ತನ್ನ ಕಾವ್ಯದಲ್ಲಿ ಗ್ರೀಕರ ಅತಿಥಿಸತ್ಕಾರದ ಸಂಪ್ರದಾಯವನ್ನು ಚಿತ್ರಿಸಿದ್ದಾನೆ. ಅತಿಥಿಗೆ ಆಹಾರ, ವಸ್ತ್ರ, ವಸತಿ–ಇವುಗಳನ್ನು ಒದಗಿಸಿ ಅನಂತರ ಅವನ ಪೂರ್ವೋತ್ತರವನ್ನು ಕೇಳುತ್ತಿದ್ದರು. ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಕ್ರೈಸ್ತರಲ್ಲಿಯೂ ಮಧ್ಯಯುಗದಲ್ಲಿ ಅತಿಥಿಸತ್ಕಾರಕ್ಕೆ ಮತಧರ್ಮದ ಅಂಗವಾಗಿ ಸ್ಥಾನವನ್ನು ಕೊಡಲಾಗಿತ್ತು, ಕ್ರೈಸ್ತಮಠಗಳು ಅತಿಥಿಸತ್ಕಾರಕ್ಕೆ ವಿಶೇಷ ಏರ್ಪಾಟುಗಳನ್ನು ಮಾಡಿದ್ದುವು. ಅತಿಥಿಗೆ ಅನಾದರ ಮಾಡಿದವರನ್ನು ಗೌರವದಿಂದ ಕಾಣುತ್ತಿರಲಿಲ್ಲ. ಕೆಲವು ಪಂಗಡದವರು ಅತಿಥಿಗೆ ಅಗೌರವ ತೋರುವುದನ್ನು ಶಿಕ್ಷಾರ್ಹವಾದ ಅಪರಾಧವೆಂದೂ ಭಾವಿಸಿದ್ದರು.

ಅತಿಥಿಸತ್ಕಾರವನ್ನು ಸರ್ಕಾರದಿಂದ ಕಾನೂನು ಬದ್ಧವಾಗಿ ಮಾಡಿರುವುದನ್ನೂ ಕೆಲವು ಜನಾಂಗಗಳಲ್ಲಿ ಕಾಣುತ್ತೇವೆ. ಇಂಥ ಸತ್ಕಾರದಿಂದ ರಾಜಕೀಯ ಒಪ್ಪಂದಗಳನ್ನೂ ಮಾಡಿಕೊಳ್ಳಲಾಗುತ್ತಿತ್ತು. ಪೆರಿಕ್ಲೀಸನು ಸ್ಪಾರ್ಟದೇಶದ ದೊರೆಯೊಂದಿಗೆ ಇಂಥ ಒಪ್ಪಂದವನ್ನು ಮಾಡಿಕೊಂಡನೆಂದು ಇತಿಹಾಸದಲ್ಲಿ ಕಾಣುತ್ತೇವೆ. ರಾಯಭಾರಿಗಳಂತೆ ಮುಖ್ಯಸ್ಥರನ್ನು ಅತಿಥಿಗಳನ್ನಾಗಿ ಪರದೇಶಗಳಿಗೆ ಕಳುಹಿಸುವುದನ್ನು ರಾಜಕೀಯದಲ್ಲಿ ಈಗಲೂ ಕಾಣುತ್ತೇವೆ.

ಹಿಂದೂ ಜನಾಂಗದಲ್ಲಿ ಪ್ರಾಚೀನ ಕಾಲದಿಂದಲೂ ಅತಿಥಿಸತ್ಕಾರಕ್ಕೆ ಮಹತ್ತ್ವ ಕೊಡಲಾಗಿದೆ. 'ಅತಿಥಿದೇವೋ ಭವ' ಅಂದರೆ ಅತಿಥಿ ದೇವರ ಸಮಾನ ಎಂದು ಶಾಸ್ತ್ರಗಳು ಹೇಳಿವೆ. ಬಲಿಚಕ್ರವರ್ತಿ ಯಾಗಸಮಯದಲ್ಲಿ ಬಂದ ವಾಮನನಿಗೆ ತನ್ನ ರಾಜ್ಯವನ್ನೇ ದಾನಮಾಡಿ ತಾನು ಅವನ ದಾಸನಾದ ಕಥೆ ಇದೆ. ಅತಿಥಿಗಳು ಏನು ಅಪೇಕ್ಷಿಸಿದರೂ ಅದನ್ನು ನಡೆಸಿಕೊಡಲೇಬೇಕೆಂಬ ಧರ್ಮವನ್ನು ಅಂದಿನವರು ಅವಲಂಬಿಸಿದ್ದರು.

ಉಪ್ಪು ತಿಂದ ಮನೆಗೆ ಎರಡೆಣಿಸಬಾರದೆಂದು ಅತಿಥಿಯೂ ತನ್ನ ಧರ್ಮವನ್ನು ಪಾಲಿಸಬೇಕಾಗಿತ್ತು; ದುರ್ಯೋಧನನ ಮನೆಯಲ್ಲಿ ಆಶ್ರಯವನ್ನು ಪಡೆದ ಕರ್ಣ ಸ್ವಾಮಿದ್ರೋಹಮಾಡಲೊಪ್ಪದೆ ತನಗಾಗಬಹುದಾದ ಅಮಿತ ಲಾಭವನ್ನೂ ನಿರಾಕರಿಸಿ ಸಾವನ್ನೇ ಸ್ವಾಗತಿಸಿದ. ದುರ್ವಾಸ ತನ್ನ ಶಿಷ್ಯಪರಂಪರೆಯೊಂದಿಗೆ ಪಾಂಡವರ ಸತ್ತ್ವಪರೀಕ್ಷೆಗಾಗಿ ಅತಿಥಿಯಾಗಿ ಹೋದ ಕಥೆ ಜನಪ್ರಿಯವಾಗಿದೆ.

ಕೃಷ್ಣನಿಗೆ, ವಿದುರನ ಆತಿಥ್ಯ, ಕೃಷ್ಣ ತನ್ನ ಬಾಲ್ಯಸ್ನೇಹಿತನಾದ ಅತಿದರಿದ್ರನಾದ ಕುಚೇಲನಿಗೆ ಮಾಡಿದ ಆತಿಥ್ಯ, ಶ್ರೀರಾಮಚಂದ್ರನಿಗೆ ಅರಣ್ಯದಲ್ಲಿ ಋಷಿಗಳು ನೀಡಿದ ಅತಿಥಿಸತ್ಕಾರ–ಇವು ಹಿಂದೂಗಳು ಅತಿಥಿಸತ್ಕಾರಕ್ಕೆ ಕೊಡುವ ಮಹತ್ತ್ವದ ಪ್ರಸಿದ್ಧ ನಿದರ್ಶನಗಳಾಗಿವೆ. (ಎಸ್.ಎಸ್.ಆರ್.)

**ಅತಿನಿಯಮ ಪದ್ಧತಿ :** ನೌಕರಶಾಹಿ ಆಡಳಿತ ಪದ್ಧತಿಯ ಅನೇಕ ಲೋಪದೋಷಗಳಲ್ಲಿ ಇದೂ (ರೆಡ್ ಟೇಪಿಸಮ್) ಒಂದು. ಆಡಳಿತ ವ್ಯವಸ್ಥೆಯಲ್ಲಿ ಸಂಪ್ರದಾಯಬದ್ಧವಾಗಿ ಕಾನೂನು ಮತ್ತು ಕಟ್ಟಳೆಗಳನ್ನು ಅನುಸರಿಸುವುದು ಒಳ್ಳೆಯದೇ ಆದರೂ ಅದನ್ನು ತೀರ ಹೆಚ್ಚುಮಾಡಿದರೆ ಕೆಲಸ ಅನಾವಶ್ಯಕವಾಗಿ ತಡವಾಗಬಹುದು. ಕೆಲವು ಬಾರಿ ಕೆಲಸವೇ ಆಗದೆ ಕೆಟ್ಟುಹೋಗಬಹುದು. ಕೆಲಸ ನ್ಯಾಯಸಮ್ಮತವಾಗಿ ನೆರವೇರಬೇಕಾದರೆ ಕಾನೂನು ನಿಯಮಗಳ ಅಗತ್ಯ ಇದ್ದೇ ಇದೆ. ಅವು ಕೆಲಸ ಸಾಧನೆಯ ಮಾರ್ಗ ಮಾತ್ರ. ಮಾರ್ಗವೇ ಗುರಿಯೆಂದು ತಿಳಿದರೆ ಅತಿನಿಯಮ ಪದ್ಧತಿಗೆ ಎಡೆಗೊಟ್ಟಂತಾಗುತ್ತದೆ. ಆಡಳಿತದಲ್ಲಿ ಕೆಲಸಗಳು ಸುಸೂತ್ರವಾಗಿ ಬೇಗ ನಡೆಯಲಾರವು

ಸರ್ಕಾರಿ ಕಚೇರಿಗಳಲ್ಲಿ ಒಂದೊಂದು ವಿಷಯದ ಪತ್ರಕ್ಕೂ ಒಂದೊಂದು ಫೈಲು ಇದ್ದು ಅದನ್ನು ಕೆಂಪುಪಟ್ಟಿಗಳಿಂದ ಬಿಗಿದಿರುತ್ತಾರೆ. ಆ ಫೈಲು ಮೇಜಿನಿಂದ ಮೇಜಿಗೆ, ಕೈಯಿಂದ ಕೈಗೆ, ಅಧಿಕಾರಿಯಿಂದ ಅಧಿಕಾರಿಗೆ, ಊರಿಂದ ಊರಿಗೆ ಹಿಂದೆ ಮುಂದೆ ಓಡಾಡಿ ವಿಷಯ ತೀರ್ಮಾನಕ್ಕೆ ಬರಬೇಕಾದರೆ ಹೆಚ್ಚುಕಾಲ ಹಿಡಿಯುತ್ತದೆ. ಅತಿನಿಯಮ ಬದ್ಧತೆ ಅಥವಾ ದೀರ್ಘಸೂತ್ರತೆಯನ್ನು ಈ ದೃಷ್ಟಿಯಿಂದ ವಿಳಂಬ ರೀತಿ ಎಂದೂ ಕರೆಯಬಹುದು. ಇದನ್ನು ಸಾಕಷ್ಟು ಕಡಿಮೆಮಾಡಿ, ಅಧಿಕಾರಿಯಾದವನು ತನ್ನ ಕೈಗೆ ಬಂದ ಸಮಸ್ಯೆಯನ್ನು ನ್ಯಾಯಬದ್ಧವಾಗಿ ಆದರೂ ಬೇಗ ಇತ್ಯರ್ಥ ಮಾಡುವುದರಿಂದ ದೇಶಕ್ಕೆ ಹಿತ. (ಎಂ.ಕೆ.ಆರ್.)

**ಅತಿನೇರಿಳೆ ಕಿರಣಗಳು :** ಸೂರ್ಯನ ಬೆಳಕನ್ನು ಅಶ್ರಗವೊಂದರ ಮೂಲಕ ಹಾದುಹೋಗುವಂತೆ ಮಾಡಿದರೆ ಬಿಳಿಯ ಬೆಳಕಿಗೆ ಬದಲಾಗಿ ಕಾಮನ ಬಿಲ್ಲಿನಲ್ಲಿ ಕಾಣುವಂತೆ ನೇರಿಳೆ, ನೀಲಿ, ನೀಲ, ಹಸುರು, ಕಿತ್ತಳೆ, ಹಳದಿ ಮತ್ತು ಕೆಂಪು–ಈ 7 ಬಣ್ಣಗಳು ಕಂಡುಬರುತ್ತವೆ. ಇದಕ್ಕೆ ಗೋಚರರೋಹಿತ (ವಿಸಿಬಲ್ ಸ್ಪೆಕ್ಟ್ರಮ್) ಎಂದು ಹೆಸರು. ಇದರಲ್ಲಿ ಕೆಂಪುರಶ್ಮಿಯ ಅಲೆಯುದ್ದ 8000 ಆಂಗ್‌ಸ್ಟ್ರಾಂಗಳು (ಆ.) [1 ಸೆಂಮೀ. ಉದ್ದವನ್ನು ಒಂದು ದಶಕೋಟಿಯಿಂದ ಭಾಗಿಸಿದಾಗ ಬರುವ ಅತ್ಯಲ್ಪಪ್ರಮಾಣ ಒಂದು ಆಂಗ್‌ಸ್ಟ್ರಾಂ] ಮತ್ತು ನೇರಿಳೆರಶ್ಮಿಯ ಅಲೆಯುದ್ದ ಸು. 4000 ಆ.ಗಳು. ಇವೆರಡೂ ಗೋಚರರೋಹಿತದ ಎರಡು ಕೊನೆಗಳು. ಹೀಗೆ ಪಡೆದ ಗೋಚರರೋಹಿತ ಅಖಂಡವ್ಯಾಪ್ತಿಯುಳ್ಳ ವಿದ್ಯುತ್ಕಾಂತರೋಹಿತದಲ್ಲಿ (ಎಲೆಕ್ಟ್ರೊಮ್ಯಾಗ್ನೆಟಿಕ್ ಸ್ಪೆಕ್ಟ್ರಮ್), ಅತ್ಯಲ್ಪವ್ಯಾಪ್ತಿಯುಳ್ಳ ಒಂದು ಭಾಗ ಮಾತ್ರ. ವಿದ್ಯುತ್ಕಾಂತರೋಹಿತದಲ್ಲಿ ನೇರಿಳೆಕಿರಣಕ್ಕಿಂತಲೂ ಕಡಿಮೆ ಹಾಗೂ ಕೆಂಪು ರಶ್ಮಿಗಿಂತಲೂ ಹೆಚ್ಚು ತರಂಗದೂರವುಳ್ಳ ಅಧಿಕಪ್ರಮಾಣದ ಕಿರಣಗಳು ಅಡಕವಾಗಿವೆ. ವಿದ್ಯುತ್ಕಾಂತ ವಿಕಿರಣ ಪಸರಿಸಿರುವ ಅಲೆಯುದ್ದಗಳ ವ್ಯಾಪ್ತಿಗೆ ವಿದ್ಯುತ್ಕಾಂತ ರೋಹಿತವೆಂದು ಹೆಸರು. ಅತಿ ದೀರ್ಘ ಅಲೆಯುದ್ದದವು ರೇಡಿಯೊ ತರಂಗಗಳು (ಅಲೆಯುದ್ದ $10^5$–$10^{-3}$ ಮೀ); ಅತಿ ಕಡಿಮೆ ಅಲೆಯುದ್ದದವು ಗ್ಯಾಮ ಕಿರಣಗಳು ($10^{11}$–$10^{-14}$ ಮೀ)

ನೇರಿಳೆವಿಕಿರಣದ ಅಂಚಿನಿಂದ ಇನ್ನೂ ಕಡಿಮೆ ತರಂಗದೂರದ ($10^{-7}$–$10^{-9}$ ಮೀ) ಅಂದರೆ ಎಕ್ಸ್–ರಶ್ಮಿಗಳ ಪ್ರಾರಂಭದವರೆಗೂ ವ್ಯಾಪಿಸಿರುವ ವಿದ್ಯುತ್ಕಾಂತರೋಹಿತದ ಭಾಗಕ್ಕೆ ಅತಿನೇರಿಳೆ ವಿಕಿರಣ (ಅಲ್ಟ್ರವಯೊಲೆಟ್ ರೇಡಿಯೇಷನ್) ಎಂದು ಹೆಸರು. ಕಣ್ಣಿಗೆ ಅಗೋಚರವಾದ ಕಿರಣವಾದರೂ ಇದನ್ನು ಅತಿನೇರಿಳೆ ಬೆಳಕು ಎಂದು ಕರೆಯುವುದು ವಾಡಿಕೆ.

ಅತಿನೇರಿಳೆ ಕಿರಣ ಪಟ್ಟಿಯನ್ನು ಹಲವಾರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳಲ್ಲಿ ಮುಖ್ಯವಾದುವು: 1 ಹತ್ತಿರದ ಅತಿನೇರಿಳೆ (ನಿಯರ್ ಅಲ್ಟ್ರವಯೊಲೆಟ್). ಇದು 4000 ಆ.ಗಳಿಂದ ಸುಮಾರು 3000 ಆ.ವರೆಗೂ ವ್ಯಾಪಿಸಿದೆ. ಸೂರ್ಯನ ಬೆಳಕಿನಲ್ಲೂ ಇದು ಅಡಕವಾಗಿದೆ. 2 ಮಧ್ಯಾತಿನೇರಿಳೆ (ಮಿಡ್ಲ್ ಅಲ್ಟ್ರವಯೊಲೆಟ್). ಇದು 3000 ಆ.ಗಳಿಂದ 2000 ಆ.ವರೆಗೂ ವ್ಯಾಪಿಸಿದೆ. ಸೂರ್ಯನ ಬೆಳಕಿನಲ್ಲಿ ಅಡಕವಾಗಿದ್ದರೂ ಇದು ಭೂಮಿಯನ್ನು ತಲಪುವುದಿಲ್ಲ. ಗಾಳಿ ಇದಕ್ಕೆ ಅಪಾರ. 3 ದೂರಾತಿನೇರಿಳೆ (ಫಾರ್ ಅಲ್ಟ್ರವಯೊಲೆಟ್) ಇದು 2000 ಆ.ಗಳಿಗಿಂತ ಕಡಿಮೆ ತರಂಗದೂರವುಳ್ಳ ಅತಿನೇರಿಳೆಯ ವಿಭಾಗ. ಗಾಳಿ ಇದಕ್ಕೆ ಅಪಾರದರ್ಶಕವಾದ್ದರಿಂದ ಇದನ್ನು ನಿರ್ವಾತಾತಿನೇರಿಳೆ (ವ್ಯಾಕ್ಯೂಮ್ ಅಲ್ಟ್ರವಯೊಲೆಟ್) ಎಂದೂ ಕರೆಯಬಹುದು. ಇದು ಎಕ್ಸ್–ರಶ್ಮಿಯನ್ನೂ ಅತಿನೇರಿಳೆ ಕಿರಣವನ್ನೂ ಕೂಡಿಸುವ ವಿಭಾಗ.

ಸಿಲ್ವರ್ ಕ್ಲೋರೈಡ್ ಎಂಬ ರಾಸಾಯನಿಕ ವಸ್ತುವಿನ ಮೇಲೆ ಅತಿನೇರಿಳೆ ವಿಕಿರಣ ಉಂಟುಮಾಡಿದ ಪರಿಣಾಮದ ಮೂಲಕ ಇದನ್ನು ಸಂಶೋಧಿಸಿದ (1801) ಮೊದಲನೆಯ ವಿಜ್ಞಾನಿ ರಿಟ್ಟರ್ ಜಾನ್ ವಿಲ್ಹೆಲ್ಮ್.

ಸೂರ್ಯನೇ ಅಲ್ಲದೆ ಹೆಚ್ಚುಕಡಿಮೆ ಎಲ್ಲ ಬೆಳಕಿನ ಆಕರಗಳೂ ಸ್ವಲ್ಪಮಟ್ಟಿಗೆ ಅತಿನೇರಿಳೆಯನ್ನು ವಿಸರಿಸುತ್ತವೆ. ಸಾಮಾನ್ಯವಾಗಿ ಆಕರದ ಉಷ್ಣತೆ ಹೆಚ್ಚಿದಷ್ಟು ಅಥವಾ ಉದ್ರಿಕ್ತತೆ ಹೆಚ್ಚು ತೀವ್ರವಾದಷ್ಟೂ ಅತಿನೇರಿಳೆಯ ತರಂಗದೂರ ಕಡಿಮೆಯಾಗತೊಡಗುವುದು. ಕ್ವಾರ್ಟ್ಸ್ ಆವರಣವುಳ್ಳ ಟಂಗ್ಸ್ಟನ್ ದೀಪ, ಸುಮಾರು $3800^{0}C$ ಉಷ್ಣತೆಯುಳ್ಳ ಇಂಗಾಲ ವಿದ್ಯುತ್‌ಚಾಪ (ಕಾರ್ಬನ್ ಆರ್ಕ್), ಅನಿಲಗಳ ಮುಖಾಂತರ ವಿದ್ಯುತ್ ವಿಸರ್ಜನೆ (ಡಿಸ್‌ಛಾರ್ಜ್)–ಇವೆಲ್ಲವೂ ಅತಿನೇರಿಳೆಯ ಉತ್ತಮ ಆಕರಗಳು. ಆದರೆ ಬಹಳ ಹೆಚ್ಚಾಗಿ ಉಪಯೋಗಿಸಲಾಗುವ ಆಕರವೆಂದರೆ ಕ್ವಾರ್ಟ್ಸ್–ಪಾದರಸದ ವಿದ್ಯುತ್‌ಚಾಪ (ಕ್ವಾರ್ಟ್ಸ್–ಮರ್ಕ್ಯುರಿ ಆರ್ಕ್), ಅತ್ಯಂತ ಕಡಿಮೆ ತರಂಗದೂರವುಳ್ಳ ಅತಿನೇರಿಳೆ ಬೇಕಾದಲ್ಲಿ ಅತ್ಯಂತ ಹೆಚ್ಚು ಉಷ್ಣತೆಯುಳ್ಳ ಆಕರಗಳು ಬೇಕಾಗುತ್ತವೆ. ಉದಾಹರಣೆಗೆ, ಜ಼ೀಟಾ ಮತ್ತು ಥೀಟಾ ಪಿಂಚ್ ಎಂದು ಕರೆಯಲಾಗುವ ಸಾಧನದಿಂದ ಉತ್ಪತ್ತಿಯಾದ, ಕಾಂತೀಯವಾಗಿ ಸಂಪೀಡಿಸಲ್ಪಟ್ಟ (ಮ್ಯಾಗ್ನೆಟಿಕಲಿ ಕಂಪ್ರೆಸ್ಡ್) ಪ್ಲಾಸ್ಮ. ಇಲ್ಲಿ ಉಷ್ಣತೆ ಸುಮಾರು 5 ಲಕ್ಷ ಡಿಗ್ರಿ ಸೆಂ.ಗ್ರೇ. ನಷ್ಟಿರುತ್ತದೆ.

ಸ್ಟೋಕ್ ಎಂಬ ಭೌತವಿಜ್ಞಾನಿ ಎರಡು ಅಲ್ಯುಮಿನಿಯಂ ವಿದ್ಯುತ್‌ದ್ವಾರಗಳ (ಎಲೆಕ್ಟ್ರೋಡ್) ನಡುವಿನ ಕಿಡಿವಿಸರ್ಜನೆಯನ್ನು (ಸ್ಪಾರ್ಕ್ ಡಿಸ್‌ಛಾರ್ಜ್) ಆಕರವನ್ನಾಗಿಯೂ ಪ್ರತಿದೀಪ್ತ ಪೊರೆಯನ್ನು (ಫ್ಲೂರೆಸೆಂಟ್ ಫಿಲ್ಮ್) ಸಂಶೋಧಕವನ್ನಾಗಿಯೂ ಉಪಯೋಗಿಸಿಕೊಂಡು ಕ್ವಾರ್ಟ್ಸ್‌ನಿಂದ ಮಾಡಿದ ಶ್ರಗದ ಸಹಾಯದಿಂದ, ನೇರಿಳೆಕಿರಣದ ಅಂಚಿನಿಂದ ಸುಮಾರು 1830 ಆ.ವರೆಗೂ ಅತಿನೇರಿಳೆ, ವ್ಯಾಪಿಸಿದೆ ಎಂಬುದನ್ನು ಸಂಶೋಧಿಸಿದ (1862).

ಇದಲ್ಲದೆ ಇನ್ನೂ ಕೆಳಗೆ ಅಂದರೆ 1300 ಆ.ವರೆಗೆ ಸಂಶೋಧನೆಯನ್ನು ವಿಸ್ತರಿಸಿದವ ವಿಕ್ಟರ್ ಸ್ಕ್ಯೂಮನ್. ಜೆಲಟಿನ್ ಒಳಗೊಂಡ ವಿದ್ರಾವಣ್ಯಪರೆಗಳು (ಎಮಲ್ಷನ್ ಫಿಲ್ಮ್) ದೂರಾತಿನೇರಿಳೆಗೆ ಸಚೇತನವಾಗಿರುವುದಿಲ್ಲ ಮತ್ತು ಕ್ವಾರ್ಟ್ಸ್‌ನಿಂದ ಮಾಡಿದ ಅಶ್ರಗಗಳು ಮತ್ತು ಮಸೂರಗಳು ಕೂಡ ದೂರಾತಿನೇರಿಳೆಗೆ ಅಪಾರಕವಾಗಿವೆ ಎಂದು ಮೊದಲು ಮನಗಂಡವನು ಇವನೇ.

ಜೆಲಟಿನ್‌ರಹಿತ ವಿದ್ರಾವಣ್ಯಪೊರೆಯನ್ನು ತಯಾರಿಸಿದ್ದೇ ಅಲ್ಲದೆ ಈತ ಫ್ಲೂರೈಟ್ ಸ್ಫಟಿಕದಿಂದ ಮಾಡಿದ ಅಶ್ರಗವಿರುವ ರೋಹಿತಮಾಪಕವನ್ನು (ಸ್ಪೆಕ್ಟ್ರೋಮೀಟರ್) ತನ್ನ ಸಂಶೋಧನೆಗೆ ಉಪಯೋಗಿಸಿಕೊಂಡ. ಹೈಡ್ರೊಜನ್ ಮೂಲದ ಶ್ರೇಣಿಯಾಗಿದ್ದು 1300 ಆ. ಮಿತಿಯನ್ನು ಮೀರಿರುವ, ರಚನೆಯಲ್ಲಿ ಸರಳವಾಗಿದ್ದು ಹೆಚ್ಚು ಪ್ರಚಾರದಲ್ಲಿರುವ ಲೈಮನ್‌ಶ್ರೇಣಿಯನ್ನು ಸಂಶೋಧಿಸಿ ಈ ಕ್ಷೇತ್ರದಲ್ಲಿ ಶ್ಲಾಘನೀಯವಾದ ಕೆಲಸ ಮಾಡಿದವನು ಥಿಯೊಡರ್ ಲೈಮನ್. ಈತ ತನ್ನ ಸಂಶೋಧನೆಯನ್ನು ಲೈಮನ್‌ಶ್ರೇಣಿಯ ಪರಮಾವಧಿಯಾದ 911.7 ಆ.ಗಳಿಗಿಂತಲೂ ಕೆಳಕ್ಕೆ ವಿಸ್ತರಿಸಿದ. ಅಶ್ರಗ ಮತ್ತು ಮಸೂರಗಳ ಬದಲು ಈತ ವಿವರ್ತನ ಗ್ರೇಟಿಂಗ್ ಉಪಯೋಗಿಸಿದ. ಆರ್.ಎ.ಮಿಲಿಕನ್, ಓಸ್‌ಗುಡ್ ಮತ್ತು ಡಾವಿಲ್ಲಿಯರ್ ಮುಂತಾದವರು ಸಂಶೋಧನೆಯನ್ನು ಮುಂದುವರಿಸಿ ಸುಮಾರು 120 ಆ.ಗಳವರೆಗೆ ವಿಸ್ತರಿಸಿ ಮತ್ತೂ ಹೆಚ್ಚಿನ ಪ್ರಗತಿಯನ್ನು ಸಾಧಿಸಿದರು.

ಅತಿನೇರಿಳೆ ಉಪಕರಣಗಳಿಗೆ ಬೇಕಾಗುವ ಮಸೂರ ಮತ್ತು ಅಶ್ರಗಗಳನ್ನು ತಯಾರಿಸಲು ಬೇಕಾದ ಅಮೂಲ್ಯವಾದ ಸಾಮಗ್ರಿಗಳೆಂದರೆ, ಸ್ಫಟಿಕರೂಪದಲ್ಲಿರುವ ಅಥವಾ ಕರಗಿಸಿ ಪುನಃ ಗಟ್ಟಿಮಾಡಿದ ಕ್ವಾರ್ಟ್ಸ್, ಲಿಥಿಯಂಫ್ಲೋರೈಡ್ ಮತ್ತು ಕ್ಯಾಲ್ಸಿಯಂ ಫ್ಲೋರೈಡ್. ಇವು ಅತಿನೇರಿಳೆಯ ಬಹುಭಾಗಕ್ಕೆ ಪಾರಕಗಳಾಗಿವೆ. ಬಹಳ ತೆಳುವಾದ ಪೊರೆಯ ರೂಪದಲ್ಲಿರುವ ಕೆಲವು ಘನವಸ್ತುಗಳು ಸ್ವಲ್ಪಮಟ್ಟಿಗೆ ದೂರಾತಿ ನೇರಿಳೆಯ ಪೂರ್ಣಭಾಗಕ್ಕೆ ಪಾರಕಗಳಾಗಿರುತ್ತವೆ. ಉದಾಹರಣೆಗೆ, ಬಹಳ ತೆಳುವಾದ ಅಲ್ಯುಮಿನಿಯಮ್ ಪೊರೆ ಮತ್ತು ಸು. 300 ಆ.ಗಳಷ್ಟು ದಪ್ಪವಿರುವ ಅಸ್ಫಟಿಕದಂಥ (ಕಲಾಡಿಯನ್) ಪ್ಲಾಸ್ಟಿಕ್ ಪೊರೆ. ಇವು ಅತಿನೇರಿಳೆಯ ಸೋಸಕಗಳಾಗಿ (ಫಿಲ್ಟರ್ಸ್) ಪ್ರಯೋಜನಕ್ಕೆ ಬರುತ್ತವೆ.

ಗಾಳಿಯಲ್ಲಿನ ಅನಿಲಗಳು ಅತಿನೇರಿಳೆ ಕಿರಣದಲ್ಲಿ ಬೇರೆ ಬೇರೆ ಶೋಷಣ (ಅಬ್ಸಾರ್ಪ್‌ಷನ್) ವೈಶಿಷ್ಟ್ಯಗಳನ್ನು ಹೊಂದಿವೆ. ಅಣುರೂಪದಲ್ಲಿರುವ ಆಕ್ಸಿಜನ್ ಗಾಳಿ 1850 ಆ.ಗಳಿಗಿಂತ ಕಡಿಮೆ ತರಂಗದೂರದ ಅತಿನೇರಿಳೆಗೆ ಅಪಾರಕವಾಗಿರುವುದಕ್ಕೆ ಕಾರಣವಾಗಿದೆ. ಹೀಗೆಯೇ ಗಾಳಿ ಅತಿನೇರಿಳೆಯ ಬೇರೆ ಬೇರೆ ಭಾಗಗಳಿಗೆ ಪಾರಕವಾಗಿಲ್ಲದಿರುವುದಕ್ಕೆ ಅಣುರೂಪದಲ್ಲಿರುವ ನೈಟ್ರೋಜನ್, ಹೈಡ್ರೋಜನ್, ಕಾರ್ಬನ್ ಡೈ ಆಕ್ಸೈಡ್, ನೈಟ್ರಿಕ್ ಆಕ್ಸೈಡ್, ನೀರಿನ ಹಬೆ ಮುಂತಾದವು ಕಾರಣವಾಗಿವೆ.

ಗೋಚರವಿಕಿರಣದಂತೆಯೆ ಅತಿನೇರಿಳೆಗೂ ಪ್ರತಿಫಲಿಸುವ ಗುಣವಿದೆ. ತರಂಗದೂರ ಕಡಿಮೆಯಾದಂತೆಲ್ಲ ಪ್ರತಿಫಲಿಸುವಿಕೆಯೂ ಕಡಿಮೆಯಾಗುತ್ತದೆ.

ಅತಿನೇರಿಳೆ ದೃಗ್ಗೋಚರವಲ್ಲದಿದ್ದರೂ ಅದರ ಇರುವಿಕೆಯನ್ನು ಬೇರೆ ಬೇರೆ ವಿಧಾನಗಳಿಂದ ಪತ್ತೆಹಚ್ಚಬಹುದು. ಇದಕ್ಕಾಗಿ ಪದಾರ್ಥಗಳ ಮೇಲೆ ಅತಿನೇರಿಳೆರಶ್ಮಿ ಬಿದ್ದಾಗ ಉಂಟಾಗುವ ಪರಿಣಾಮಗಳನ್ನೇ ಬಳಸಬಹುದು. ಅತಿನೇರಿಳೆಯ ಬೆಳಕಿನ ಕಣಗಳು (ಫೋಟಾನುಗಳು) ಗೋಚರಫೋಟಾನುಗಳಿಗಿಂತ ಸುಮಾರು 10 ಸಾವಿರದಷ್ಟು ಶಕ್ತಿಯುತವಾದ್ದರಿಂದ ಅವು ಉಂಟುಮಾಡುವ ಪರಿಣಾಮಗಳ ಅವಲೋಕನ ಸುಲಭಸಾಧ್ಯ.

ಕೆಲವು ಪದಾರ್ಥಗಳ ಮೇಲೆ ಪ್ರತಿಮೆ ಬಿದ್ದಾಗ ಉಂಟಾಗುವ ಪ್ರತಿದೀಪ್ತತೆಯಿಂದ, ಮತ್ತೆ ಕೆಲವು ಪದಾರ್ಥಗಳ ಮೇಲೆ ಬಿದ್ದಾಗ ಉಂಟಾಗುವ ರಾಸಾಯನಿಕಕ್ರಿಯೆಗಳಿಂದ, ಇನ್ನು ಕೆಲವು ಘನವಸ್ತುಗಳ ಮೇಲೆ ಬಿದ್ದಾಗ ಉಂಟಾಗುವ ಅಯಾನುಗಳಿಂದ ಇದನ್ನು ಪತ್ತೆಹಚ್ಚಬಹುದು. ದೂರಾತಿನೇರಿಳೆಯನ್ನು ಪತ್ತೆ ಹಚ್ಚಲು ಇನ್ನೂ ಸುಲಭವಾದ ಮಾರ್ಗವೆಂದರೆ, ಕ್ಯಾಲ್ಸಿಯಂ ಟಂಗ್‌ಸ್ಟೇಟ್, ಸೋಡಿಯಂ ಸ್ಯಾಲಿಸಿಲೇಟ್ ಮುಂತಾದ ವಸ್ತುಗಳನ್ನುಪಯೋಗಿಸಿಕೊಂಡು ಪ್ರತಿದೀಪ್ತಿವಿಧಾನದಿಂದ ಹತ್ತಿರದ ಅತಿನೇರಿಳೆಯದನ್ನಾಗಿಯಾಗಲಿ ಅಥವಾ ಗೋಚರಕಿರಣವನ್ನಾಗಿಯಾಗಲಿ ಬದಲಾಯಿಸಬಹುದು. ಹೀಗೆ ಬದಲಾಯಿಸಿದ ಅನಂತರ ಅದನ್ನು ಛಾಯಾಗ್ರಹಿಸಬಹುದು ಅಥವಾ ರೂಢಿಯಲ್ಲಿರುವ ದ್ಯುತಿಗುಣಕಗಳ (ಫೋಟೋಮಲ್ಟಿಪ್ಲಯರ್ಸ್) ಸಹಾಯದಿಂದ ಅಳೆಯಬಹುದು. 2500 ಆ.ಗಳಿಗಿಂತಲೂ ಕೆಳಗಿನ ಅತಿನೇರಿಳೆಯನ್ನು ಛಾಯಾಗ್ರಹಿಸಲು ಜೆಲಟಿನ್‌ರಹಿತವಾದ ಮತ್ತು ಸೋಡಿಯಂ ಸ್ಯಾಲಿಸಿಲೇಟ್ ಅಥವಾ ಕೆಲವು ವಿಶೇಷ ರೀತಿಯ ಎಣ್ಣೆಗಳ ಲೇಪನಹೊಂದಿದ ಛಾಯಾಗ್ರಾಹಕ ತಟ್ಟೆಗಳು ಬೇಕಾಗುತ್ತವೆ. ಅತಿನೇರಿಳೆಯನ್ನು ಶಾಖವನ್ನಾಗಿ ಪರಿವರ್ತಿಸಿ ಶಾಖಯುಗ್ಮಗಳನ್ನು (ಥರ್ಮೋಕಪಲ್ಸ್) ಉಪಯೋಗಿಸಿಕೊಂಡು ಈ ಶಾಖವನ್ನಳೆದು ಕೂಡ ಪತ್ತೆಹಚ್ಚಬಹುದು. ಗೈಗರ್‌ಮುಲ್ಲರ್ ಗಣಕಗಳು (ಕೌಂಟರ್ಸ್) ಮತ್ತು ಅಯಾನೀಕರಣ ಸಂಪುಟ (ಅಯನೈಸೇಷನ್ ಛೇಂಬರ್) ಉಪಯುಕ್ತ ಅತಿನೇರಿಳೆ ಸಂಸೂಚಕಗಳಾಗಿವೆ.

ಅತಿನೇರಿಳೆವಿಕಿರಣ ಚರ್ಮದ ಮೇಲೆ ಕೆಲವು ಹಾನಿಕಾರಕ ಪರಿಣಾಮಗಳನ್ನುಂಟುಮಾಡಬಲ್ಲುದು. ಇದನ್ನು ಮೊದಲು ವಿವರಿಸಿದವ ಡೆನ್ಮಾರ್ಕಿನ ವಿಜ್ಞಾನಿ ನೈಸ್ಬರ್ಗ್ ಫಿನ್‌ಸನ್. ಕಡಿಮೆ ತರಂಗದೂರದ ಅತಿನೇರಿಳೆ ವಿಕಿರಣ ಚರ್ಮದ ಮೇಲೆ ಹೆಚ್ಚು ಹಾನಿಕಾರಕ ಪರಿಣಾಮವನ್ನುಂಟುಮಾಡುತ್ತದೆ. ಭೂಮಿಯ ಮೇಲ್ಮೈಯನ್ನು ತಲಪುವ ಸೂರ್ಯರಶ್ಮಿಯಲ್ಲಿ ಇದು ಬಹಳ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಇಲ್ಲಿ ಆಗುವ ಪರಿಣಾಮ ಅಷ್ಟು ಗಣನೀಯವಲ್ಲ. ಆದರೆ ಭೂಮಿಯಿಂದ ಮೇಲೆ ಬಹಳ ಎತ್ತರಕ್ಕೆ ಹೋದಾಗ ಆಗುವ ಪರಿಣಾಮ ಗಣನೀಯ. ಸೂರ್ಯನ ಬೆಳಕಿಗೆ ಅತಿಯಾಗಿ ಮೈಯೊಡ್ಡುವುದು ಚರ್ಮದ ಕ್ಯಾನ್ಸರ್ ರೋಗಕ್ಕೆ ಒಂದು ಕಾರಣವೆಂದೂ ಹೇಳುತ್ತಾರೆ. 3000 ಆ. ಗಳಿಗಿಂತ ಕಡಿಮೆ ತರಂಗದೂರದ ಅತಿನೇರಿಳೆಗೆ ಕಣ್ಣನ್ನು ಅತಿಯಾಗಿ ಒಡ್ಡುವುದೂ ಅಪಾಯಕಾರಿ. ಇದು ಕಣ್ಣುಗುಡ್ಡೆಯ ಮುಂಭಾಗದಿಂದ (ಕಾರ್ನಿಯಾ) ಹೀರಲ್ಪಟ್ಟು ಆ ಭಾಗದಲ್ಲಿ ಉರಿ (ಕಂಜಂಕ್ಟಿವೈಟಿಸ್) ಉಂಟಾಗಬಹುದು. ಈ ಕಾರಣದಿಂದಲೇ ತೀವ್ರವಾದ ಮಧ್ಯಾತಿನೇರಿಳೆ ವಿಕಿರಣದ ಮುಂದೆ ಇದ್ದಾಗ ಬಿಸಿಲುಕನ್ನಡಕಗಳನ್ನು (ಗಾಗಲ್ಸ್) ಧರಿಸಿಕೊಳ್ಳುವುದು ಆವಶ್ಯಕ.

ಹಿಮದಿಂದಾವೃತವಾದ ಪ್ರದೇಶಗಳಲ್ಲಿ ಮತ್ತು ಹಿಮನದಿಗಳ ಮೇಲೆ ಸಂಚರಿಸುವಾಗ ಬಿಸಿಲುಕನ್ನಡಕವನ್ನು ಧರಿಸುವುದು ಆವಶ್ಯಕ. ಇಲ್ಲವಾದಲ್ಲಿ ಇಲ್ಲೂ ಅತಿನೇರಿಳೆ ಕಿರಣದ ಪ್ರಭಾವದಿಂದ ಹಿಮಾಂಧತೆ (ಸ್ನೋ ಬ್ಲೈಂಡ್‌ನೆಸ್) ಬರಬಹುದು.

ಅತಿನೇರಿಳೆಯ ಪ್ರಯೋಜನಗಳು ಹೀಗಿವೆ : 1 ಅತಿನೇರಿಳೆ ಕಿರಣವನ್ನು ಉಕ್ಕಿನ ಮುಖಾಂತರ ಹಾಯಿಸಿ ಹೊರಬಂದ ಕಿರಣವನ್ನು ದ್ಯುತಿಗುಣಕ ಮತ್ತು ಬಹುಮಾರ್ಗದ (ಮಲ್ಟಿಛಾನಲ್) ರೋಹಿತಮಾಪಕಗಳ ಸಹಾಯದಿಂದ ವಿಶ್ಲೇಷಿಸಿ ಉಕ್ಕಿನ ಸಂಯೋಜನೆಯನ್ನು ಕೆಲವೇ ಮಿನಿಟುಗಳಲ್ಲಿ ತಿಳಿಯಬಹುದು. ತಾಂತ್ರಿಕ ಮತ್ತು ಕೈಗಾರಿಕಾಕ್ಷೇತ್ರಗಳಲ್ಲಿ ಅತಿನೇರಿಳೆಯಿಂದಾಗಿರುವ ಅನೇಕ ಉಪಯೋಗಗಳಲ್ಲಿ ಇದೂ ಒಂದು. 2 ಬೆಳಕನ್ನು

ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸುವ ಕ್ರಿಯೆಯನ್ನು ಇದರ ಸಹಾಯದಿಂದ ಇನ್ನೂ ಸಮರ್ಪಕವಾಗಿ ಮಾಡಬಹುದು. 3 ಜೀವಸಂಬಂಧಿ ಮತ್ತು ವೈದ್ಯಕೀಯಕ್ಷೇತ್ರಗಳಲ್ಲಿ ಇದರ ಪ್ರಯೋಜನ ಅಪಾರ. ಆಸ್ಪತ್ರೆಗಳಲ್ಲಿ ಬ್ಯಾಕ್ಟೀರಿಯ ಮತ್ತು 'ಫಂಗಸ್'ಗಳನ್ನು ಕೊಲ್ಲಲು ಅದರಲ್ಲೂ ಶಸ್ತ್ರಚಿಕಿತ್ಸೆಯ ಕೊಠಡಿಗಳಲ್ಲಿ ರಕ್ತನಾಳಗಳಲ್ಲಿನ ಯಕೃತ್ತುವಿಷಾಣುಗಳನ್ನು ಕೊಲ್ಲಲು ಆಹಾರವನ್ನು ಕ್ರಿಮಿ ಶುದ್ಧೀಕರಿಸಲು (ಸ್ಟೆರಿಲೈಜೇಶನ್) ಇದನ್ನು ಉಪಯೋಗಿಸುತ್ತಾರೆ. ಚರ್ಮವನ್ನು ಅತಿನೇರಿಳೆ ರಶ್ಮಿಪುಂಜಕ್ಕೆ ಒಡ್ಡಿದಾಗ ಡಿ–ಅನ್ನಾಂಗ ಉತ್ಪತ್ತಿಯಾಗುತ್ತದೆ ಎಂದು ಕಂಡುಹಿಡಿಯಲಾಗಿದೆ. ಇದಕ್ಕೆ ಅತಿನೇರಿಳೆ ಚಿಕಿತ್ಸೆ ಎಂದು ಹೆಸರು. 4 ಕ್ವಾರ್ಟ್ಸ್ ಮಸೂರಗಳನ್ನು ಹೊಂದಿರುವ ಅತಿನೇರಿಳೆ ಸೂಕ್ಷ್ಮದರ್ಶಕ ರೂಢಿಯಲ್ಲಿರುವ ಸೂಕ್ಷ್ಮದರ್ಶಕಗಳಿಗಿಂತಲೂ ಹೆಚ್ಚು ವಿಘಟನ ಸಾಮರ್ಥ್ಯ ಹೊಂದಿರುವುದರಿಂದ ಭೌತಿಕ, ವೈದ್ಯಕೀಯ ಮತ್ತು ಜೀವವೈಜ್ಞಾನಿಕವೇ ಮುಂತಾದ ಕ್ಷೇತ್ರಗಳಲ್ಲಿ ಬಹಳ ಪ್ರಯೋಜನಕಾರಿ. 5 ಸೂರ್ಯಾತಿನೇರಿಳೆ, ಅದರಲ್ಲೂ ಅಲ್ಲಿನ ದೂರಾತಿನೇರಿಳೆ ಕಿರಣ ವಾಯುಮಂಡಲದೊಡನೆ ವರ್ತಿಸಿ ಅಯಾನುಮಂಡಲದ ಅನೇಕ ಪದರಗಳನ್ನು ಉಂಟುಮಾಡುತ್ತದೆ. ಈ ಪದರಗಳು ರೇಡಿಯೋತರಂಗಗಳಿಗೆ ಒಳ್ಳೆಯ ಪ್ರತಿಫಲಕಗಳಾಗಿ ಕೆಲಸಮಾಡಿ ರೇಡಿಯೋಸಂದೇಶಗಳನ್ನು ಬಹಳ ದೂರದವರೆಗೂ ಕಳುಹಿಸಲು ಸಹಾಯಮಾಡುತ್ತವೆ. 6 ಅತಿನೇರಿಳೆಯ ಸೋಸಕವೊಂದನ್ನು ಇಂಗಾಲ ವಿದ್ಯುತ್ ಚಾಪಪ್ರಕ್ಷೇಪಕದ (ಪ್ರೊಜೆಕ್ಟರ್) ಮುಂದಿಟ್ಟು ಹೊರಬರುವ ಅತಿನೇರಿಳೆ ವಿಕಿರಣವನ್ನು ಸೂಕ್ತವಾಗಿ ಅಳವಡಿಸಿರುವ ರಾಸಾಯನಿಕ ವಸ್ತುಗಳ ಮೇಲೆ ಬೀಳುವಂತೆ ಮಾಡಿದರೆ ಅವು ತಮ್ಮ ಅಣುಗಳ ರಚನೆಗನುಗುಣವಾಗಿ ವಿಧವಿಧವಾದ ಬಣ್ಣಗಳಿಂದ ಬೆಳಗುತ್ತವೆ. ಈ ಕ್ರಿಯೆಯನ್ನು ಚಲನಚಿತ್ರಮಂದಿರಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ. 7 ಮಾನವನ ಉಳಿವು 2000 ಆ.–1300 ಆ.ಗಳವರೆಗೆ ವಿಸ್ತರಿಸಲ್ಪಟ್ಟ ಸೂರ್ಯಾತಿನೇರಿಳೆ ಕಿರಣವನ್ನು ಅವಲಂಬಿಸಿದೆ. ಇದು ವಾಯುಮಂಡಲದಲ್ಲಿನ ಆಕ್ಸಿಜನ್ ಅಣುವಿನಿಂದ ಹೀರಲ್ಪಟ್ಟು ಆಕ್ಸಿಜನ್ ಪರಮಾಣುಗಳನ್ನು ಉತ್ಪತ್ತಿಮಾಡುತ್ತದೆ. ಇದು ಮತ್ತೆ ಅಣುವಾಗಿ ಸಂಯೋಗಗೊಂಡು ಸಂಯೋಗವಾಗಿ ವಾಯುಮಂಡಲದಲ್ಲಿ ಓಜೋನಿನ ಶಾಶ್ವತಪದರಗಳನ್ನು ಉತ್ಪತ್ತಿ ಮಾಡುತ್ತವೆ. ಹಾನಿಕಾರಕ ಅತಿನೇರಿಳೆ ವಿಕಿರಣಗಳನ್ನು ಓಜೋನ್ ಪದರ ಹೀರಿಕೊಂಡು ಜೀವ ಸಂಕುಲವನ್ನು ರಕ್ಷಿಸುತ್ತದೆ. (ಎಚ್.ಎಚ್.ಎಸ್.)

**ಅತಿಪರವಲಯ :** ಶಂಕುವನ್ನು ಅದರ ಕೇಂದ್ರದಿಂದ ಎರಡು ಕಡೆಗೂ ವಿಸ್ತರಿಸಿ ಬರುವ ಯುಗ್ಮಶಂಕುವನ್ನು ಎರಡೂ ಕಡೆಯೂ ಛೇದಿಸುವಂತೆ ಒಂದು ತಳವನ್ನು ತೆಗೆದುಕೊಂಡರೆ ತಳದ ಛೇದವೇ ಅತಿಪರವಲಯ (ಹೈಪರ್‌ಬೋಲ). ನೋಡಿ – ಶಂಕುಜ (ಸಿ.ಎನ್.ಎಸ್.)

**ಅತಿಪರವಲಯಿಕ ಉತ್ಪನ್ನಗಳು :** ಲ್ಯಾಂಬರ್ಟ್ 1768ರಲ್ಲಿ ಸೃಷ್ಟಿಸಿದ ಕೆಲವು ಗಣಿತೀಯ ಉತ್ಪನ್ನಗಳಿಗೆ ಈ ಹೆಸರು (ಹೈಪರ್‌ಬೋಲಿಕ್ ಫಂಕ್ಷನ್ಸ್). ಗಣಿತದಲ್ಲೂ ಭೌತಶಾಸ್ತ್ರದಲ್ಲೂ ಅನೇಕ ಪ್ರಯೋಗಗಳಲ್ಲಿ ಬರುವ ಘಾತೋತ್ಪನ್ನ (ಎಕ್ಸ್‌ಪೊನೆನ್ಷಿಯಲ್ ಫಂಕ್ಷನ್) ಗಳಾದ $e^x$ ಮತ್ತು $e^{-x}$ ಎಂಬುವುಗಳಿಗೆ ಸಮೀಪ ಬಾಂಧವ್ಯವನ್ನು ಇವು ಪಡೆದಿವೆ. ಇವುಗಳ ವ್ಯಾಖ್ಯೆ ಈ ರೀತಿ ಇದೆ :

$$\sinh x = \frac{1}{2}\left(e^x - e^{-x}\right)$$

$$\cosh x = \frac{1}{2}\left(e^x + e^{-x}\right)$$

$$\tanh x = \frac{e^x - e^{-x}}{e^x + e^{-x}}$$

$$\operatorname{sech} x = \frac{2}{e^x + e^{-x}}$$

$$\operatorname{cosech} x = \frac{2}{e^x - e^{-x}}$$

$$\coth x = \frac{e^x + e^{-x}}{e^x - e^{-x}}$$

$\sinh x$ ಮತ್ತು $\cosh x$ ಗಳಿಗೆ ಅನಂತ ಶ್ರೇಣಿಗಳು

$$\sinh x = x + \frac{x^3}{3!} + \frac{x^5}{5!} + \cdots\cdots;$$

$$\cosh x = 1 + \frac{x^2}{2!} + \frac{x^4}{4!} + \cdots\cdots;$$

ತ್ರಿಕೋನಮಿತೀಯ ಅಥವಾ ವೃತ್ತೀಯ ಉತ್ಪನ್ನಗಳು ವೃತ್ತಕ್ಕೆ ಸಂಬಂಧಿಸಿರುವಂತೆಯೇ ಈ ಉತ್ಪನ್ನಗಳು ಅತಿಪರವಲಯಕ್ಕೆ (ಹೈಪರ್‌ಬೋಲ) ಸಂಬಂಧಿಸಿವೆ. ಆದ್ದರಿಂದಲೇ ಇವುಗಳಿಗೆ ಅತಿಪರವಲಯಿಕ ಉತ್ಪನ್ನಗಳು ಎಂಬ ಹೆಸರು ಬಂದಿದೆ. ಇದಕ್ಕೆ ನಿದರ್ಶನ ಕೆಳಗೆ ಕಂಡುಬರುತ್ತದೆ.

$x^2 + y^2 = a^2$ ಎಂಬ ವೃತ್ತದ ಮೇಲೆ $P$ ಒಂದು ಬಿಂದುವಾದರೆ, ಇದರ ನಿರ್ದೇಶಕಗಳನ್ನು ಎಂದು ಬರೆಯಬಹುದು. $(a \cos\theta, a \sin\ \ )$ $AOP$ ವೃತ್ತಖಂಡದ (ಸೆಕ್ಟರ್) ಕ್ಷೇತ್ರಫಲ $^1/_2\, a^2$ . $x^2 - y^2 = a^2$ ಎಂಬ ಲಂಬೀಯ ಅತಿಪರವಲಯದ ಮೇಲೆ $P$ ಒಂದು ಬಿಂದುವಾದರೆ, $P$ ಯ ನಿರ್ದೇಶಕಗಳನ್ನು $(a \cos\ \ , a \sin\ \ )$ ಎಂದು ಬರೆಯಬಹುದು. $O$ ಕೇಂದ್ರವೂ, $OA$ ಅಡ್ಡ ಅರ್ಧಾಕ್ಷರವೂ ಆಗಿದ್ದರೆ, $AOP$ ಖಂಡದ ಕ್ಷೇತ್ರಫಲ $^1/_2\, a^2$ .

ಅತಿಪರವಲಯಿಕ ಉತ್ಪನ್ನಗಳನ್ನು ಪರಸ್ಪರ ಸಂಬಂಧಿಸತಕ್ಕ ಕೆಳಗಿನ ಉಕ್ತಿಗಳು ತ್ರಿಕೋನಮಿತೀಯ ಉತ್ಪನ್ನಗಳನ್ನು ಬಂಧಿಸತಕ್ಕ ಉಕ್ತಿಗಳಿಗೆ ಅನುರೂಪವಾಗಿವೆ.

1. $\cos h^2 x - \sin h^2 x = 1$
2. $1 - \tan h^2 x = \sec h^2 x$
3. $\cot h^2 x - 1 = \operatorname{cosech}^2 x$
4. $\sin h\,(x \pm y) = \sinh x \cosh y \pm \cosh x \sinh y$
5. $\cos h\,(x \pm y) = \cosh x \cosh y \pm \sinh x \sinh y$
6. $\tan h\, y\,(x \pm y) = \dfrac{\tanh x \pm \tanh y}{1 + \tanh x \tanh y}$

$\theta, a \sin\theta)$

7. $\sin h\, u \pm \sin h\, v = 2 \sin h\, ^1/_2 (u+v) \cosh\, ^1/_2 (u-v)$
8. $\sin h\, u - \sin h\, v = 2 \cos h\, ^1/_2 (u+v) \sinh\, ^1/_2 (u-v)$
9. $\cos h\, u + \cos h\, v = 2 \cos h\, ^1/_2 (u+v) \cosh\, ^1/_2 (u-v)$
10. $\cos h\, u - \cos h\, v = 2 \sin h\, ^1/_2 (u+v) \sinh\, ^1/_2 (u-v)$
11. $\sin h\, 2x = 2 \sin h\, x \cos h\, x$
12. $\cos h\, 2x = \cos h^2 x + \sin h^2 x$
    $= 2 \cosh^2 x - 1$
    $= 2 \sinh^2 x + 1$
13. $\tan h\, 2x = \dfrac{2 \tan h\, x}{1 + \tan h^2 x}$
14. $\sin h\,(-x) = -\sin h\, x$
    $\cos h\,(-x) = \cosh x$
    $\tan h\,(-x) = -\tan h\, x$

ಅತಿಪರವಲಯಿಕ ಉತ್ಪನ್ನಗಳ ಅವರ್ತಾಂಕ ಒಂದು ಕಾಲ್ಪನಿಕ ಸಂಖ್ಯೆ (ಇಮ್ಯಾಜಿನರಿ ನಂಬರ್). ಇದರ ಬೆಲೆ $\sin h\, x$ ಮತ್ತು $\cos h\, x$ ಗಳಿಗೆ 2 $i$ ಆಗಿಯೂ $\tan h\, x$ ಗೆ $i$ ಆಗಿಯೂ ಇದೆ.

ತ್ರಿಕೋನಮಿತೀಯ ಮತ್ತು ಅತಿಪರವಲಯಿಕ ಉತ್ಪನ್ನಗಳ ನಡುವೆ ಕೆಳಗಿನ ಸಂಬಂಧಗಳು ಏರ್ಪಡುತ್ತವೆ:

$\sin iz = i \sinh z$ ; $\cos iz = \cos h\, z$ ; $\tan iz = i \tan h\, z$

$\sin iz = i \sin z$ ; $\cos iz = \cos\ z$ ; $\tan iz = i \tan\ z$

ಅತಿಪರವಲಯಿಕ ಉತ್ಪನ್ನಗಳ ನಕ್ಷೆಗಳನ್ನು ಈ ಕೆಳಗೆ ಚಿತ್ರಿಸಲಾಗಿದೆ.

ಅತಿಪರವಲಯಿಕ ಉತ್ಪನ್ನಗಳ ನಿಷ್ಪನ್ನಗಳು (ಡೆರಿವೇಟಿವ್ಸ್) ಈ ಕೆಳಕಂಡಂತಿವೆ :

$^{d}/_{dx} \sin h\, x = \cos h\, x$ ; $^{d}/_{dx} \cos h\, x = \sin h\, x$

$^{d}/_{dx} \tan h\, x = \sec h^2\, x$ ; $^{d}/_{dx} \cot h\, x = -\operatorname{cosec} h^2 x$

$^{d}/_{dx} \operatorname{cosec} h\, x = -\operatorname{cosec} h\, x\ \cot h\, x$ ; $^{d}/_{dx} \sec h\, x = -\sec h x \tan h\, x$

ಅತಿಪರವಲಯಿಕ ಪ್ರತಿಲೋಮ (ಇನ್ವರ್ಸ್) ಉತ್ಪನ್ನಗಳನ್ನು ಇತರ ಪ್ರತಿಲೋಮ ಉತ್ಪನ್ನಗಳಂತೆಯೇ ವ್ಯಾಖ್ಯೆ ಮಾಡಲಾಗುವುದು. ಹೇಗೆಂದರೆ, $x = \sin h\, y$ ಆದರೆ, $y = \sin h^{-1} y$ ಸಮಾಸಕಲನಗಳಿಂದಲೂ ಅವನ್ನು ವ್ಯಾಖ್ಯೆ ಮಾಡಬಹುದು:

$$\sin^{-1} h\ \ y = \int_{0}^{y} \frac{dy}{\sqrt{y^2+1}}\ ;\quad \cos h^{-1}\ \ y = \int_{0}^{y} \frac{dy}{\sqrt{y^2-1}}$$




ಚಿತ್ರ 1




ಸ್ವಾಭಾವಿಕ ಪ್ರತಿಘಾತಗಳ (ಕಾಮನ್ ಲಾಗರಿತಮ್ಸ್) ಮೂಲಕವೂ ಅವನ್ನು ಸೂಚಿಸಬಹುದು: ಹೇಗೆಂದರೆ,

$$\sin h^{-1}\ \ x = \log\ \ \left(x + \sqrt{1+x^2}\right)$$

$$\cos h^{-1}\ \ x = \log\ \ \left(x \pm \sqrt{x^2-1}\right),\quad (x \geq 1 \text{ ಆದಾಗ})$$

$$\tan h^{-1}\ \ x = \frac{1}{2} \log \frac{1+x}{1-x},\quad \left(\int x \int < 1 \text{ ಆದಾಗ}\right)$$

$$\cot h^{-1}\ \ x = \frac{1}{2} \log \frac{x+1}{x-1},\quad \left(\int x \int > 1 \text{ ಆದಾಗ}\right)$$

$$\sec h^{-1}\ \ x = \log\ \ \frac{1 \pm \sqrt{1-x^2}}{x},\quad (0 < x < 1 \text{ ಆದಾಗ})$$

$$\operatorname{cosec} h^{-1}\ \ x = \log\ \ \frac{1 \pm \sqrt{1+x^2}}{x}$$

ಈ ಪ್ರತಿಲೋಮ ಉತ್ಪನ್ನಗಳ ನಿಷ್ಪನ್ನಗಳು ಕೆಳಕಂಡಂತಿವೆ :

$$\frac{d}{dx}\ \sin h^{-1}\ \ x = \frac{1}{\sqrt{1+x^2}}$$

$$\frac{d}{dx}\ \cos h^{-1}\ \ x = \frac{1}{\sqrt{x^2-1}}$$

$$\frac{d}{dx}\ \tan h^{-1}\ \ x = \frac{1}{1-x^2},\ \left(|x| < 1\right) \text{ ಆದಾಗ}$$

$$\frac{d}{dx} \operatorname{cosec} h^{-1}\ \ x = -\frac{1}{|x|\sqrt{x^2-1}}$$

$$\frac{d}{dx}\ \sec h^{-1}\ \ x = \frac{-1}{x\sqrt{1-x^2}}$$

$$\frac{d}{dx} \cot h^{-1}\ \ x = \frac{-1}{x^2-1},\ \left(|x| > 1\right) \text{ ಆದಾಗ}$$

(ಎನ್.ಆರ್.ಎ.)

**ಅತಿಪೂರೈಕೆ :** ಅಂತರ್ದಹನಯಂತ್ರದ ಕೊಳವೆಯೊಳಕ್ಕೆ ಪ್ರವೇಶಿಸುವ ವಾಯುವಿನ ತೂಕ ಅಥವಾ ಸಾಂದ್ರತೆಯನ್ನು ಹೆಚ್ಚಿಸುವ ಕಾರ್ಯವಿಧಾನಕ್ಕೆ ಈ ಹೆಸರಿದೆ (ಸೂಪರ್ ಚಾರ್ಜಿಂಗ್). ಸಾಮಾನ್ಯವಾಗಿ ತಿದಿ (ಬ್ಲೋಯರ್) ಅಥವಾ ಅತಿಪೂರಕಗಳೆಂದು (ಸೂಪರ್ ಚಾರ್ಜರ್ಸ್) ಕರೆಯಲಾಗುವ ವಾಯುರೇಚಕ ಅಂದರೆ ಯಾವುದೇ ಧಾರಕದೊಳಕ್ಕೆ ವಾಯು ತುಂಬಲು ಇಲ್ಲವೇ ಅದರಿಂದ ವಾಯು ತೆಗೆಯಲು ಬಳಸುವ ಸಲಕರಣೆಯಿಂದ ಈ ಕೆಲಸ ಮಾಡಿಸಬಹುದು.

**ಕಿಡಿಯಂತ್ರಗಳ ಅತಿಪೂರೈಕೆ :** ವಾಯುಮಂಡಲದ ಒತ್ತಡಕ್ಕಿಂತ ಅಧಿಕ ಒತ್ತಡದ ವಾಯುವನ್ನು ಚತುರ್ಘಾತ ಕಿಡಿಜ್ವಲನ ಯಂತ್ರದ (4–ಸ್ಟ್ರೋಕ್ ಸ್ಪಾರ್ಕ್ ಇಗ್‌ನಿಷನ್ ಎಂಜಿನ್) ಕೊಳವೆಯೊಳಕ್ಕೆ ಒದಗಿಸುವುದರಿಂದ ಅದರ ಗಾತ್ರಮಾಪಕ ದಕ್ಷತೆ (ವಾಲ್ಯುಮೆಟ್ರಿಕ್ ಎಫಿಷಿಯನ್ಸಿ)ಯನ್ನು ತತ್ಪರಿಣಾಮವಾಗಿ ಆಂಶಿಕ ಅಥವಾ ಪೂರ್ಣವೇಗದಲ್ಲಿನ ಮಧ್ಯಮ ಪರಿಣಾಮಕಾರಿ ಒತ್ತಡವನ್ನು (ಮೀಡಿಯಂ ಎಫೆಕ್ಟಿವ್ ಪ್ರೆಷರ್) ಉತ್ತಮಗೊಳಿಸಬಹುದು.

ಚತುರ್ಘಾತದ ಕಿಡಿಜ್ವಲನ ಯಂತ್ರಗಳ ಅತಿಪೂರೈಕೆಗೆ ಇರುವ ಮೂರು ಪ್ರಮುಖ ಕಾರಣಗಳೆಂದರೆ : 1 ಯಂತ್ರದ ಅಧಿಕವೇಗದಲ್ಲಿ ಕ್ರಮೇಣ ಕಡಿಮೆಯಾಗುವ ಮಧ್ಯಸ್ಥಪ್ರಮಾಣ ಪರಿಣಾಮಕಾರಿ ಒತ್ತಡದ ಪ್ರಮಾಣವನ್ನು ಕಡಿಮೆ ಮಾಡುವುದು. 2 ಎತ್ತರ ಹೆಚ್ಚಿದಂತೆಲ್ಲ ಕಡಿಮೆಯಾಗುವ ವಾತಾವರಣದ ಸಾಂದ್ರತೆಯಿಂದಾಗಿ, ವಿಮಾನ ಹೆಚ್ಚು ಹೆಚ್ಚು ಎತ್ತರಕ್ಕೆ ಹಾರಿದಂತೆಲ್ಲ ಉಂಟಾಗುವ ಶಕ್ತಿನಷ್ಟವನ್ನು ತಡೆಗಟ್ಟುವುದು. 3 ಎಲ್ಲ ವೇಗಗಳಲ್ಲೂ ಅಧಿಕ ಭ್ರಾಮಕ ಶಕ್ತಿ (ಟಾರ್ಕ್) ಉತ್ಪಾದಿಸುವುದು.

ಎತ್ತರ ಹೆಚ್ಚಿದಂತೆ ವಾತಾವರಣದ ಒತ್ತಡ ತೀವ್ರವಾಗಿ ಕಡಿಮೆಯಾಗುತ್ತದೆ. ಇದಕ್ಕನುಗುಣವಾಗಿ ಅತಿಪೂರೈಕೆಯಿಲ್ಲದ ಕೊಂತದ (ಪಿಸ್ಟನ್) ವಿಮಾನ ಯಂತ್ರಗಳ ಶಕ್ತಿಯೂ ಇಳಿಮುಖವಾಗುತ್ತದೆ. ಅತಿಪೂರಕಗಳನ್ನು ಬಳಸುವುದರಿಂದ ಸಾಕಷ್ಟು ಎತ್ತರಗಳ ವರೆಗೂ ಒಳಹಾಯಿಕೆದ್ವಾರದ (ಇನ್‌ಲೆಟ್) ಬಳಿ, ಸಮುದ್ರ ಮಟ್ಟದಲ್ಲಿದ್ದಂತಹ ವಾಯು ಸಾಂದ್ರತೆಯನ್ನು ಪಡೆಯಬಹುದು. ಕೆಲವು ವಿಮಾನಯಂತ್ರಗಳು ಅತಿಪೂರಕಗಳನ್ನು ಅಳವಡಿಸಿಕೊಂಡಿದೆ. ಇದರಿಂದಾಗಿ ಶೀಘ್ರವೇಗಬದಲಾವಣೆ ಸಾಧ್ಯವಾಗುವುದರಿಂದ, ಅತಿ ಹೆಚ್ಚಿನ ಅತಿಪೂರೈಕೆಯಾಗಿ ಶಕ್ತಿ ನಷ್ಟವಾಗುವ ಸಾಧ್ಯತೆಯನ್ನು ತಡೆಯಬಹುದು. ಅತಿಹೆಚ್ಚಿನ ಮಧ್ಯಮ ಪರಿಣಾಮಕಾರಿ ಒತ್ತಡದಿಂದಾಗಲೀ ಸ್ಫೋಟದಿಂದಾಗಲೀ ಉದ್ಭವಿಸ ಬಹುದಾದ ಅಪಾಯವನ್ನು ತಡೆಗಟ್ಟಲು, ಸಮುದ್ರಮಟ್ಟದಲ್ಲಿ, ಅತಿಪೂರೈಕೆಯಾದ ವಿಮಾನಯಂತ್ರಗಳ ನಿಯಂತ್ರಣ ಅತ್ಯವಶ್ಯ.

ಅತ್ಯಧಿಕ ಪ್ರಮಾಣದ ಮಧ್ಯಮಪ್ರಮಾಣ ಪರಿಣಾಮಕಾರಿ ಒತ್ತಡವನ್ನು ಪಡೆಯಲು ಮತ್ತು ಉರುವಲಿನ ಮಿತವ್ಯಯ ದೃಷ್ಟಿಯಿಂದ, ಯಂತ್ರಗಳ ರಚನೆ, ಬಡಿತ (ನಾಕಿಂಗ್) ಶಬ್ದವಿಲ್ಲದೆ ಕಾರ್ಯ ನಡೆಸುವುದೆಂದು ನಿರೀಕ್ಷಿಸಲಾಗಿರುವ, ಉರುವಲಿನ ಮಹತ್ತಮ ಸಂಪೀಡನ ನಿಷ್ಪತ್ತಿಗೆ (ಹೈಯೆಸ್ಟ್ ಕಂಪ್ರೆಷನ್ ರೇಷಿಯೋ) ಅನುಗುಣವಾಗಿರಬೇಕಾಗುತ್ತದೆ. ಇಂಥ ಯಂತ್ರಗಳ ಪರಿಮಾಣಾತ್ಮಕ ಕಾರ್ಯಸಾಮರ್ಥ್ಯ ಹೆಚ್ಚಾದಾಗ ಅಧಿಕ ಆಕ್ಟೇನ್ ಸಂಖ್ಯೆಯ ಉರುವಲನ್ನು ಉಪಯೋಗಿಸದಿದ್ದಲ್ಲಿ ಅಥವಾ ದಟ್ಟಣಿಸುವಿಕೆಯ ಪ್ರಮಾಣವನ್ನು ಇಳಿಸದಿದ್ದಲ್ಲಿ ದಬದಬ ಶಬ್ದಕ್ಕೆಡೆಗೊಡುತ್ತದೆ. ದಟ್ಟಣಿಸುವಿಕೆಯ ಪ್ರಮಾಣವನ್ನು ಇಳಿಸಿರುವಾಗ,

ದಬದಬ ಶಬ್ದದಿಂದಾಗಿ ಸೀಮಿತಗೊಂಡಿರುವ ಮಧ್ಯಸ್ಥಪ್ರಮಾಣ ಪರಿಣಾಮಕಾರೀ ಒತ್ತಡವನ್ನು ಅತಿಪೂರೈಕೆಯಿಂದ ಹೆಚ್ಚಿಸಬಹುದು. ಆದರೆ ಇದರಿಂದಾಗಿ ಉಷ್ಣದಕ್ಷತೆ (ಥರ್ಮಲ್ ಎಫಿಷಿಯನ್ಸಿ) ಕುಗ್ಗುತ್ತದೆ. ಯಂತ್ರ ಉತ್ಪಾದನಾಶಕ್ತಿ ಮುಖ್ಯವಾಗಿರುವೆಡೆಗಳಲ್ಲಿ ಉರುವಲಿನ ಮಿತವ್ಯಯಕ್ಕಿಂತ, ಅತಿಪೂರೈಕೆಯೇ ಸೂಕ್ತಪರಿಹಾರ.

**ಡೀಸೆಲ್ ಯಂತ್ರಗಳಲ್ಲಿ ಅತಿಪೂರೈಕೆ :** ಚತುರ್ಘಾತದ ಡೀಸೆಲ್ ಯಂತ್ರಗಳಲ್ಲಿ ಅತಿಪೂರೈಕೆಯಿಂದಾಗಿ ದಹನಕ್ರಿಯೆ ಭೌತಿಕವಾಗಿ ಉತ್ತಮಗೊಳ್ಳುತ್ತದೆ. ಹೆಚ್ಚು ಹೊಗೆಯಾಡುವ ಮತ್ತು ಸೂಕ್ತವೇಳೆಯಲ್ಲಿ ಹೊತ್ತಿಕೊಳ್ಳದ ಉರುವಲುಗಳು ಅತಿಪೂರೈಕೆಯಿಂದಾಗಿ ತೃಪ್ತಿಕರವಾಗಿ ಕೆಲಸ ಮಾಡಬಲ್ಲುವು.

ಅತಿಪೂರಕಗಳು ಯಾಂತ್ರಿಕವಾಗಿ ಕೆಲಸಮಾಡುವಾಗ, ಬಳಸುವ ಶಕ್ತಿ, ಯಂತ್ರದ ಉತ್ಪನ್ನದ ಮೇಲೆ ಪರಿಣಾಮ ಬೀರುತ್ತದೆ. ಅತ್ಯಧಿಕ ಕಾರ್ಯಸಾಮರ್ಥ್ಯವನ್ನು ಪಡೆಯಲು ಯಾವುದೇ ಯಂತ್ರಕ್ಕೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಅತಿಪೂರೈಕೆ ನಡೆಯಬೇಕಾಗುತ್ತದೆ. ಹೆಚ್ಚಿನ ಅತಿಪೂರೈಕೆಯಾದಾಗ, ಪ್ರಮುಖವಾಗಿ ಕಡಿಮೆ ವೇಗಗಳಲ್ಲಿ, ಯಂತ್ರದಿಂದ ಗಳಿಸಬಹುದಾದ ಹೆಚ್ಚಿನ ಶಕ್ತಿಗಿಂತ ಅಧಿಕತರವಾದ ಶಕ್ತಿಯನ್ನು ಅತಿಪೂರಕವೇ ಬಳಸಿಕೊಳ್ಳುತ್ತದೆ. ಯಂತ್ರದ ನಿಷ್ಕಾಸ (ಎಗ್ಸಾಸ್ಟ್) ವ್ಯರ್ಥವಾಗಬಹುದಾದ ಶಕ್ತಿಯನ್ನು ಬಳಸಿಕೊಂಡು, ರೇಚಕಟರ್ಬೈನುಗಳ ಸಹಾಯದಿಂದ ಅತಿಪೂರಕಗಳನ್ನು ನಡೆಸುವುದು ಮತ್ತೊಂದು ವಿಧಾನ.

ಎರಡು ಘಾತಗಳ ಡೀಸೆಲ್ ಯಂತ್ರಗಳಿಗೆ ಅತಿಪೂರೈಕೆ ಮಾಡಬೇಕಾದಲ್ಲಿ ಸಂಪೀಡನ ಘಾತದ (ಕಂಪ್ರೆಷನ್ ಸ್ಟ್ರೋಕ್) ಮೊದಲು ನಿಷ್ಕಾಸ ನಿರ್ಬಂಧ ಅನಿವಾರ್ಯ. ಅದರಿಂದಾಗಿ ಕೇವಲ ಕೆಲವೇ ಯಂತ್ರಗಳಿಗೆ ಇದರ ಉಪಯೋಗ ಸೀಮಿತಗೊಂಡಿದೆ. ಸಾಮಾನ್ಯವಾಗಿ ಮಧ್ಯಮ ಪ್ರಮಾಣದ ಮತ್ತು ದೊಡ್ಡ ಪ್ರಮಾಣದ ಎರಡು ಘಾತದ ಡೀಸೆಲ್ ಯಂತ್ರಗಳು ಕಾರ್ಯಘಾತದ ಅನಂತರ ಕೊಳವೆಗಳನ್ನು ಸ್ವಚ್ಛಗೊಳಿಸಲು ಮತ್ತು ಅನಂತರದ ಘಾತಗಳಿಗೆ ಬೇಕಾದ ವಾಯುವನ್ನೊದಗಿಸಲು ತಿದಿಗಳನ್ನು ಹೊಂದಿರುತ್ತವೆ. ಆದರೆ ಈ ತಿದಿಗಳು ಘಾತದ ಮೊದಲಿನಲ್ಲಿ, ಕೊಳವೆಗಳಲ್ಲಿ, ಅತಿಪೂರಕಗಳಷ್ಟು ಹೆಚ್ಚು ಒತ್ತಡವನ್ನುಂಟು ಮಾಡಲಾರವು. (ಬಿ.ಎಲ್.ಎಸ್.)

**ಅತಿಮಧುರ :** ಫ್ಯಾಬೇಸೀ ಕುಟುಂಬದ ಫ್ಯಾಬಾಯ್ಡೀ (ಪ್ಯಾಪಿಲಿಯೊನಾಯ್ಡೀ) ಉಪಕುಟುಂಬಕ್ಕೆ ಸೇರಿದ ಉಪಯುಕ್ತ ಸಸ್ಯ. ಯಷ್ಟಿಮಧುಕ ಪರ್ಯಾಯನಾಮ. ಇಂಗ್ಲಿಷಿನಲ್ಲಿ ಇದನ್ನು ಲಿಕರೈಸ್ ಎಂದು ಕರೆಯಲಾಗುತ್ತದೆ. ಗ್ಲೈಸಿರೈಜ ಗ್ಲಾಬ್ರ ಇದರ ಸಸ್ಯ ವೈಜ್ಞಾನಿಕ ನಾಮ. ಇದು ಮುಖ್ಯವಾಗಿ ಮೆಡಿಟರೇನಿಯನ್ ದೇಶಗಳು ಮತ್ತು ಚೀನ ದೇಶದ ಉಷ್ಣ ಮತ್ತು ಸಮಶೀತೋಷ್ಣ ಪ್ರದೇಶಗಳಲ್ಲಿ ಬೆಳೆಯುವ ಸಸ್ಯ. ನಮ್ಮ ದೇಶದಲ್ಲಿ ಸ್ವಾಭಾವಿಕವಾಗಿ ಬೆಳೆಯುವುದಿಲ್ಲ. ಶ್ರೀನಗರ, ಬಾರಾಮುಲ್ಲ, ಜಮ್ಮು, ಡೆಹ್ರಾಡೂನ್ ಮತ್ತು ದೆಹಲಿ ಪ್ರದೇಶಗಳಲ್ಲಿ ಬೆಳೆಸುವ ಪ್ರಯತ್ನಗಳು ನಡೆದಿವೆ. ಸಮಶೀತೋಷ್ಣ ಹವೆಯಿರುವ ಹಿಮಾಲಯ ಪ್ರದೇಶಗಳಲ್ಲಿ, ದಕ್ಷಿಣ ಭಾರತದ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಈ ಸಸ್ಯ ಚೆನ್ನಾಗಿ ಬೆಳೆಯಬಲ್ಲುದೆಂದು ಕಂಡುಬಂದಿದೆ. ಇದು ಚಿಕ್ಕ ಪೊದೆಯಂತಿದ್ದು, ಸು. 2 ಮೀ ಎತ್ತರಕ್ಕೆ ಬೆಳೆಯುತ್ತದೆ. ಇದರ ಎಲೆಗಳು ಬಿಡಿಬಿಡಿಯಾಗಿರುತ್ತವೆ. ಹೂಗಳು ಸ್ಪೈಕ್ ಮಾದರಿಯ ಹೂಗೊಂಚಲು ಗಳಲ್ಲಿರುವುವು. ಇವು ಪಾಟಲ ವರ್ಣದವು. ಕಾಯಿಗಳು ಚಪ್ಪಟೆ. ಬೀಜಗಳು ಮೂತ್ರ ಪಿಂಡದಾಕಾರದಲ್ಲಿವೆ. ನೆಲದೊಳಗಡೆ ಇರುವ ಇದರ ಗುಪ್ತಕಾಂಡ ಮತ್ತು ಬೇರಿನ ಭಾಗಗಳು ಕೆಲವು ಬಗೆಗಳಲ್ಲಿ ಕವಲೊಡೆದಿರುತ್ತವೆ. ಒಣಗಿದ ಹೊರಕವಚ, ಸುಲಿದ ಅಥವಾ ಸುಲಿಯದಿರುವ ಬೇರು ಮತ್ತು ಗುಪ್ತಕಾಂಡದ ಭಾಗಗಳೇ ಅತಿಮಧುರ (ಲಿಕರೈಸ್) ಅಥವಾ ಯಷ್ಟಿಮಧುಕ ಬೇರುಗಳಾಗಿವೆ.



ಒಣಹವೆಯೂ ಚೆನ್ನಾದ ಬಿಸಿಲು ಇರುವಂಥ ಪ್ರದೇಶಗಳ ಹಸಿಯಾದ ನೆಲದಲ್ಲಿ ಅತಿಮಧುರ ಚೆನ್ನಾಗಿ ಬೆಳೆಯುತ್ತದೆ. ನೆಲವನ್ನು ಹದಮಾಡಿ, ಹೆಚ್ಚು ಗೊಬ್ಬರ ಹಾಕಿದರೆ ಬೆಳೆ ಚೆನ್ನಾಗಿ ಬರುತ್ತದೆ. ನೆಟ್ಟ 3–4 ವರ್ಷಗಳಲ್ಲೇ ಬೇರುಗಳು ಕೊಯ್ಲಿಗೆ ಬರುತ್ತವೆ. ಚೆನ್ನಾಗಿ ಬೆಳೆದಲ್ಲಿ, ಉತ್ಪಾದನೆ ಎಕರೆಗೆ 60 ಮಣಗಳಷ್ಟಾಗುತ್ತದೆ.

ಅತಿಮಧುರದ ಪ್ರಭೇದವಾದ ಗ್ಲಾಬ್ರದಲ್ಲಿ ಅನೇಕ ಬಗೆಗಳಿವೆ. ಇವುಗಳಲ್ಲಿ ಟಿಪಿಕಾ ಎಂಬುದು ಸ್ಪೇನ್ ಮತ್ತು ಸಿಸಿಲಿಗಳಲ್ಲಿ ಬೆಳೆಯುವ ಬಗೆ. ತನ್ನದೇ ಆದ ವಿಶಿಷ್ಟವಾಸನೆಯಿಂದ ಕೂಡಿ ಸ್ವಲ್ಪವೂ ಕಹಿಯಾಗಿರದೆ ಬಹು ಮಧುರವಾಗಿರುತ್ತದೆ. ಬಣ್ಣ ಕಡುಗೆಂಪು ಅಥವಾ ನೀಲಿಮಿಶ್ರಿತ ಕಂದು. ಮಾರುಕಟ್ಟೆಗಳ ಎಲ್ಲ ಅತಿ ಮಧುರದ ಬಗೆಗಳಿಗಿಂತಲೂ ಇದಕ್ಕೆ ಹೆಚ್ಚು ಬೇಡಿಕೆ ಮತ್ತು ಬೆಲೆ. ಇರಾಕಿನಲ್ಲಿ ಗ್ಲಾಬ್ರದ ಇನ್ನೊಂದು ಬಗೆ ವಯೊಲೇಸಿಯಾವನ್ನು ಹೆಚ್ಚು ಬೆಳೆಯುತ್ತಾರೆ. ಬೇರೆ ಎಲ್ಲ ವಿಧಗಳಿಗಿಂತಲೂ ಇದು ಹೆಚ್ಚು ದಪ್ಪವಾಗಿದ್ದು, ಹೊರಕವಚಸಹಿತವಾಗಿಯೇ ಮಾರಾಟವಾಗುತ್ತದೆ. ರಷ್ಯದಲ್ಲಿ ಗ್ಲಾಬ್ರದ ಇನ್ನೊಂದು ಬಗೆ ಗ್ಲಾಂಡುಲಿಫೆರ ಸಿಕ್ಕುತ್ತದೆ. ಹೆಚ್ಚಾಗಿ ಕಾಡುಗಳಿಂದ ಸಂಗ್ರಹಿಸುವ ಈ ಗಿಡದ ಗುಪ್ತಕಾಂಡಗಳು 3ಮೀ. ಉದ್ದವಾಗಿದ್ದು, 0.6ಮೀ. ದಪ್ಪವಾಗಿರುತ್ತದೆ. ಬಣ್ಣ ತಿಳಿಗೆಂಪು. ತಿನ್ನುವಾಗ ರುಚಿಯಾಗಿದ್ದರೂ ತಿಂದಮೇಲೆ ಕಹಿ ಎನಿಸುತ್ತದೆ.

ಅತಿಮಧುರದಲ್ಲಿ, ಮಧುರವಾದ ರುಚಿ ಇರುವುದಕ್ಕೆ ಮುಖ್ಯ ಕಾರಣ ಅದರಲ್ಲಿರುವ ಗ್ಲೈಸಿರೈಸಿನ್ ಎಂಬ ವಸ್ತು. ಬೇರೆ ಬೇರೆ ಬಗೆಗಳಲ್ಲಿ ಶೇ.2–ಶೇ.14 ಭಾಗಗಳಿರುವ ಈ ವಸ್ತು ಸಸ್ಯದ ಮೇಲ್ಭಾಗಗಳಲ್ಲಿ ಕಂಡುಬರುವುದಿಲ್ಲ. ಜೊತೆಗೆ ಸುಮಾರು ಶೇ.3.8 ಗ್ಲುಕೋಸ್, ಶೇ.2.4–ಶೇ.6.5 ಸುಕ್ರೋಸ್, ಶೇ.30 ಪಿಷ್ಟಪದಾರ್ಥ, ಅಸ್ಪರಜಿನ್, ರೈಸಿನ್, ಕಹಿಪದಾರ್ಥಗಳು ಮತ್ತು ಸ್ವಲ್ಪಮಟ್ಟಿಗೆ ಎಣ್ಣೆ ಇರುತ್ತವೆ. ಅತಿಮಧುರದಲ್ಲಿ ಗ್ಲೈಸಿರೈಸಿನ್, ಗ್ಲಿಸಿರೈಸಿಕ್ ಆಮ್ಲದ ಕ್ಯಾಲ್ಸಿಯಂ ಅಥವಾ ಪೊಟಾಸಿಯಂ ಲವಣದ ರೂಪದಲ್ಲಿರುತ್ತದೆ. ಈ ವಸ್ತು ಸಿಹಿಯಲ್ಲಿ ಸಕ್ಕರೆಯನ್ನು 50 ಪಟ್ಟು ಮೀರಿಸುತ್ತದೆ. 20,000 ಭಾಗದಲ್ಲಿ ಒಂದು ಭಾಗದಷ್ಟು ಈ ವಸ್ತು ಇದ್ದರೂ ಅದರ ಸಿಹಿಯನ್ನು ನಾವು ಗುರುತಿಸಬಹುದು.

ಅತಿಮಧುರ ಬಹಳ ಉಪಯುಕ್ತ ವಸ್ತು. ಇದನ್ನು ಮುಖ್ಯವಾಗಿ ಗಂಟಲಿನ ಉರಿ, ಶ್ಲೇಷ್ಮಪದರದ ಉರಿ, ಮೂತ್ರವಿಸರ್ಜನೆಗೆ ಸಂಬಂಧಪಟ್ಟ ಅಂಗಗಳ ಉರಿ, ಕೆಮ್ಮು ಮುಂತಾದುವುಗಳಿಗೆ ಉಪಯೋಗಿಸುತ್ತಾರೆ. ಕೆಮ್ಮಿನ ಎಲ್ಲ ಕಷಾಯಗಳಲ್ಲೂ ಕೆಮ್ಮಿದಾಗ ಚೀಪಲು ಕೊಡುವ ಎಲ್ಲ ಮಾತ್ರೆಗಳಲ್ಲೂ ಅತಿಮಧುರವಿದ್ದೇ ಇರುತ್ತದೆ. ಕಷಾಯಗಳಿಗೆ ಮತ್ತು ಇನ್ನಿತರ ಔಷಧಿಗಳಿಗೆ ಇದು ಒಳ್ಳೆಯ ವಾಸನೆ ಕೊಡುತ್ತದೆ. ಅತಿಮಧುರ ಲಘುವಿರೇಚಕವೂ ಹೌದು. ಅತಿಮಧುರದ ಸಾರಕ್ಕೆ ಕರುಳಿನ ಹುಣ್ಣನ್ನು ಗುಣಪಡಿಸುವ ಶಕ್ತಿ ಇದೆ. ಈ ರಸ ಕರುಳಿನಲ್ಲಿ ಹೈಡ್ರೊಕ್ಲೋರಿಕ್ ಆಮ್ಲದ ಉತ್ಪತ್ತಿಯನ್ನು ತ್ವರಿತಗೊಳಿಸುತ್ತದೆ. ಅತಿಮಧುರವನ್ನು ವೀಳೆಯದೆಲೆಯೊಂದಿಗೆ ಹಾಕಿಕೊಳ್ಳುವ ಅಭ್ಯಾಸ ಇದೆ. ಇದರ ಪುಡಿಯನ್ನು ತುಪ್ಪ ಮತ್ತು ಜೇನು ತುಪ್ಪದೊಂದಿಗೆ ಬೆರಸಿ ಗಾಯಗಳನ್ನು ಗುಣಪಡಿಸಲು ಉಪಯೋಗಿಸುತ್ತಾರೆ.

ಮಾತ್ರೆಗಳಲ್ಲಿ ಪುಡಿಮದ್ದುಗಳನ್ನು ಹಿಡಿದಿಡಲು ಅತಿಮಧುರದ ಸಾರಕ ಬಳಕೆಯಲ್ಲಿತ್ತು. ಮೆಲುವಿರೇಚಕವಾಗಿ ಮಕ್ಕಳಿಗೂ ಬಸುರಿಯರಿಗೂ ಇದನ್ನು ಕೊಡುವುದುಂಟು. ಇದಕ್ಕೆ ಮೆತುಲದ (ಡೆಮಲ್ಸೆಂಟ್) ಗುಣಗಳು ಇರುವುವಾದರೂ ಇದು ಸಿಹಿಯಾಗಿರುವುದರಿಂದ, ಓಕರಿಕೆ ಬರಿಸುವ ಹಲವಾರು ಮದ್ದುಗಳ ಕಹಿಯನ್ನು ಚೆನ್ನಾಗಿ ಮುಚ್ಚಲು ಇದರ ಸಿದ್ಧರಸವೂ (ಎಲಿಕ್ಸರ್) ಸೀಪಾಕವೂ (ಸಿರಪ್) ಹೆಚ್ಚು ಬಳಕೆಯಲ್ಲಿವೆ. (ಡಿ.ಎಸ್.ಎಸ್.)

**ಅತಿಮಾನಸಶಾಸ್ತ್ರ :** ಅತಿಮಾನಸ ಸಂಶೋಧನೆಯಲ್ಲಿ ಜಾಗೃತಾವಸ್ಥೆಯ ಹೊಸ್ತಿಲನ್ನು ಮೀರುವ ಮನುಷ್ಯನ ವ್ಯಕ್ತಿತ್ವದ ಅಧ್ಯಯನ (ಪ್ಯಾರಾ ಸೈಕಾಲಜಿ).

ಮನಶ್ಶಾಸ್ತ್ರ ಮನಸ್ಸನ್ನು ಕುರಿತದ್ದು. ಮನಸ್ಸು ಎಂಬುದು ಸಾಧಾರಣಪ್ರಜ್ಞೆಯಿಂದ ಹೊರಗಿರುವ ಅನೇಕ ಅಂಶಗಳಿಂದ ಕೂಡಿದೆ. ಅಂಥ ಪ್ರಜ್ಞಾತೀತವಾದ ಅಂಶಗಳ ಆಳವನ್ನೂ ದಿಕ್ಕುಗಳನ್ನೂ ಆಕಾರಗಳನ್ನೂ ಕಂಡುಹಿಡಿಯುವುದೇ ಮನಶ್ಶಾಸ್ತ್ರದ ಉದ್ದೇಶ. ಸಿಗ್ಮಂಡ್ ಫ್ರಾಯ್ಡ್ ಪ್ರಜ್ಞಾಸ್ಥಿತಿಯಲ್ಲಿ ಮನಸ್ಸು ಮನುಷ್ಯನ ಪೂರ್ಣವ್ಯಕ್ತಿತ್ವವನ್ನು ತೋರುವುದಿಲ್ಲವೆಂಬುದನ್ನು, ಅಂಥ ಪ್ರಜ್ಞೆಗಿಂತಲೂ ಆಳದಲ್ಲಿ ನಮಗೆ ಅಗೋಚರವಾಗಿಯೂ ಹೆಚ್ಚು ಚಲನಾತ್ಮಕವಾಗಿಯೂ ಮೂಲಭೂತವಾಗಿಯೂ ಇರುವ ಅಂಶಗಳು ಯಥೇಚ್ಛವಾಗಿವೆ ಎಂಬುದನ್ನು ಕಂಡುಹಿಡಿದ ಮೇಯರ್ಸ್ ಎಂಬ ವಿದ್ವಾಂಸ ದೇಹಾತೀತ ಪುರುಷವಾದವನ್ನು (ಸಬ್ಲಿಮಿನಲ್ ಸೆಲ್ಫ್) ವಿಕಾಸಪಡಿಸಿ ಸಾಧಾರಣಪ್ರಜ್ಞೆ ಸೀಮಿತಾಂಶಮಾತ್ರ ಎಂದು ಒತ್ತಿ ಹೇಳಿ, ಸುಪ್ತಚೇತನ (ಸಬ್‍ಕಾನ್ಷಸ್‍ನೆಸ್) ಅವರೋಧಿತ ಹಾಗೂ ವಿವೇಚನಾ ರಹಿತ, ವಿಶಾಲಮನಸ್ಸಿನ ಒಂದು ವಿಭಾಗ ಎಂದು ಅರ್ನೆಸ್ಟ್ ಜೋನ್ಸ್ ಹೇಳಿದ. ಗೋಲ್ಡ್ ವಿನ್ ಬೇಯರ್ಸ್‌ನ ಅಭಿಪ್ರಾಯದಲ್ಲಿ ಅಪ್ರಜ್ಞಾವಸ್ಥೆ ಎಂಬುದು ವೈಯಕ್ತಿಕ ಪ್ರಜ್ಞಾವಸ್ಥೆಯ ಆವರಣವನ್ನು ಮೀರಿದುದೂ ತ್ರಿಕಾಲದಲ್ಲಿಯೂ ಇರುವ ಸರ್ವ ಅಗೋಚರವಸ್ತುಗಳನ್ನೂ ಒಳಗೊಂಡಿರುವುದೂ ಆಗಿದೆ. ಅದು ಏನೇ ಇರಲಿ, ಮನುಷ್ಯನ ಮನಸ್ಸಿನ ಅದ್ಭುತಸೃಷ್ಟಿಗಳು ಪ್ರಜ್ಞಾಭಾಗದಿಂದ ಹೊರಬರುವುದಿಲ್ಲ ಎಂಬುದು ಗಮನಾರ್ಹ. ಪ್ರಜ್ಞಾವಸ್ಥೆ ಚಿಂತನೆಯ ಉತ್ಪತ್ತಿಸ್ಥಾನವಲ್ಲ; ಅದರ ಮುಲುಕುವ ಕವಾಟ ಮಾತ್ರ, ಚಿಂತನೆಯ ಒಳನುಗ್ಗನ್ನು ಗ್ರಹಿಸಿ ಅಭಿವ್ಯಕ್ತಪಡಿಸುವ ದ್ವಾರ ಮಾತ್ರ.

ಕಾಲಕಾಲಕ್ಕೂ ವಿರಳವಾದ, ಅನಿಯತವಾದ, ಮುನ್ಸೂಚಿಸಲಸಾಧ್ಯವಾಗಿ ಕಾಣುವ ಘಟನೆಗಳು ಆಗಿಂದಾಗ್ಗೆ ಸಾಮಾನ್ಯ ನಿತ್ಯಜೀವನದ ಘಟನೆಗಳೊಡನೆ ಬೆರೆಯುವುದು ಮನುಷ್ಯನ ಗಮನಕ್ಕೆ ಬಂದಿದೆ. ಇವುಗಳನ್ನು ಅಲ್ಪಮಾನುಷಿಕ ವಿಷಯಗಳಲ್ಲಿ ಅಮಾನುಷ ದೈವೀಶಕ್ತಿಗಳ ಪ್ರವೇಶಗಳೆಂದು ಪರಿಗಣಿಸಲಾಗದು. ಅಂಥ ಘಟನೆಗಳು ಅಸಾಮಾನ್ಯವಾದಾಗ್ಯೂ ವೈಜ್ಞಾನಿಕ ವಿವರಣೆಗೆ ನಿಲುಕುವಂತಿರಬೇಕು. ಈಚಿನ 50 ವರ್ಷಗಳಲ್ಲಿ ಬಾಹ್ಯಪ್ರಪಂಚವನ್ನು ಕಂಡರಿಯಲು ನಮ್ಮ ಪಂಚೇಂದ್ರಿಯಗಳ ವ್ಯಾಪ್ತಿ ಮತ್ತು ಅವಕಾಶ ಎಷ್ಟು ಸೀಮಿತವಾಗಿದೆ ಎಂಬುದನ್ನು ವಿಜ್ಞಾನ ಕಂಡುಕೊಂಡಿದೆ. ಅತಿಮಾನಸ ಸಂಶೋಧನೆ

ಪ್ರೇತವಾದವೂ ಅಲ್ಲ, ಯಾಕ್ಷಣಿಕವಾದವೂ ಅಲ್ಲ, ಅವುಗಳ ಅವಶೇಷವೂ ಅಲ್ಲ. ಅತಿಮಾನಸಶಾಸ್ತ್ರವನ್ನು ಎರಡು ವಿಧವಾಗಿ ವಿಭಾಗಿಸಬಹುದು. 1. ನಮ್ಮ ಇಂದ್ರಿಯಗಳಿಗೆ ಗೋಚರವಾದಾಗ್ಯೂ ತಿಳಿದ ಸಂಗತಿಗಳಿಂದ ಉದ್ಭವಿಸದ ವಿಷಯಗತ ಘಟನೆಗಳು. ಅವು ಭೌತಿಕಶಾಸ್ತ್ರದ ಗೊತ್ತಾದ ಅಂಗೀಕೃತ ನಿಯಮಗಳಿಗೆ ನಿಲುಕುವುದಿಲ್ಲ. ಉದಾಹರಣೆಗೆ, ದೆವ್ವದಮನೆಗಳು, ವಸ್ತುಗಳ ಅನಿರೀಕ್ಷಿತ ಚಲನೆ ಅಥವಾ ಪ್ರೇತಚೇಷ್ಟೆ. 2. ಮನಸ್ಸಿಗೆ ಅರಿವಾಗಿದ್ದರೂ ನಮ್ಮ ಇಂದ್ರಿಯಗಳಿಗೆ ಗೋಚರವಾಗದಿರುವ ಘಟನೆಗಳು. ಇದು ಅರಿವಿನ ಒಂದು ವಿಚಿತ್ರ ರೀತಿ. ಉದಾಹರಣೆಗೆ, ಭವಿಷ್ಯವಾಣಿ, ಅನ್ಯಮನಃಸ್ಪರ್ಶನ, ಇತ್ಯಾದಿ. ಮನಸ್ಸಿನೊಳಗೆ ಅಪ್ರಕಾಶವಾಗಿ ಹುದುಗಿರುವ, ಗುರುತಿಲ್ಲದ ಕಾರಣಗಳಿಂದ ಉದ್ಭವಿಸುವ ಇಂಥ ಅಸಾಮಾನ್ಯಘಟನೆಗಳನ್ನು ಪ್ರಾಯೋಗಿಕವಾಗಿ ಅಧ್ಯಯನ ಮಾಡುವುದೇ ಅತಿಮಾನಸಶಾಸ್ತ್ರದ ಗುರಿ. ಭೌತವಾದಪ್ರೇರಿತ ಒಲವು (ಮೆಟೀರಿಯಲಿಸ್ಟಿಕ್ ಬಯಾಸ್) ಈ ವಿಷಯಗಳನ್ನು ಮೂಢನಂಬಿಕೆಗಳೆಂದು ವಿಸರ್ಜಿಸುತ್ತದೆ; ಅಥವಾ ಮನುಷ್ಯನ ಇಹಪರಗಳೆರಡೂ ಅವನ ಮಾಂಸ, ರಕ್ತ, ಮೂಳೆ–ಇವುಗಳನ್ನು ಬಿಟ್ಟು ಇನ್ನೇನು ಇಲ್ಲ ಎಂಬ ಕೇವಲ ದೇಹಸೀಮಿತ ವಿವರಣೆಯನ್ನು ಕೊಡಲು ಯತ್ನಿಸುತ್ತದೆ. ಅದರ ದೃಷ್ಟಿಯಲ್ಲಿ ಧಾರ್ಮಿಕ ಅಥವಾ ನೈತಿಕ ಸಂಪೂರ್ಣತೆಗೆ ಸ್ಥಾನವೇ ಇಲ್ಲ. ಭಾವನೆ, ಚಿಂತನೆ ಮತ್ತು ಮಿದುಳಿನ ಕ್ರಿಯೆಗಳು ಸಮಾನಾಂತರದಲ್ಲಿ ಒಂದಕ್ಕೊಂದು ಬಹು ಹತ್ತಿರವಾಗಿವೆ ಎಂದೂ ಮಿದುಳೇ ನಮ್ಮ ನಡೆವಳಿಕೆಯ ಸಹಜವಾದ ಕೇಂದ್ರ ಎಂದೂ ಅವರು ನಂಬುತ್ತಾರೆ. ಮನುಷ್ಯನು ಸಮಗ್ರವಾಗಿ ಭೌತಿಕವಸ್ತು ಎಂದೂ ಮನಸ್ಸು ಮಿದುಳಿನ ಕೇವಲ ಹೊರಪ್ರಕೃತಿ ಎಂದೂ ಅವರು ತಿಳಿಯುತ್ತಾರೆ. ಆದರೆ ನಮ್ಮ ನಡೆವಳಿಕೆಯನ್ನು ಹತೋಟಿಯಲ್ಲಿಡುವುದು ಮನಸ್ಸೇ. ನಮ್ಮ ನಂಬಿಕೆಗಳು ರೀತಿಗಳು ನೀತಿಗಳು ಆಕಾಂಕ್ಷೆಗಳು ಮೌಲ್ಯಗಳು ತತ್ತ್ವಗಳು–ಇವುಗಳನ್ನು ಲಾಲಿಸುವುದು, ಪಾಲಿಸುವುದು ನಮ್ಮ ಮನಸ್ಸೇ. ವ್ಯಕ್ತಿಯ ಸ್ವಂತ ಪ್ರಪಂಚದಲ್ಲಿ ಹತೋಟಿಕೇಂದ್ರ ಅವನ ವೈಯಕ್ತಿಕ ಅನುಭವಕಾರಣವಾದ ಮನಸ್ಸೇ ಅಥವಾ ವಿಷಯಗೋಚರವಾದ ಆಂಗಿಕ ಮಿದುಳೇ ಎಂಬುದನ್ನು ಇಂದಿನ ಚಿಂತನಶೀಲರು ಇತ್ಯರ್ಥಪಡಿಸಬೇಕು. ಈ ವಿಚಾರಸರಣಿಯಲ್ಲಿ ಯಾವುದು ಸರಿ ಅಥವಾ ಸತ್ಯಕ್ಕೆ ಹೆಚ್ಚು ಸಮೀಪ, ಮನೋಕೇಂದ್ರಿತ ದೃಷ್ಟಿಯೋ ಅಥವಾ ಮಿದುಳುಕೇಂದ್ರಿತ ದೃಷ್ಟಿಯೋ ಎಂಬುದನ್ನು ಸಂಶೋಧನೆಯಿಂದ ಮಾತ್ರ ನಿರ್ಧರಿಸಬೇಕಾಗಿದೆ. ಈಗಿನ ಮನಶ್ಶಾಸ್ತ್ರ ಬಹುತೇಕ ಮಿದುಳುಕೇಂದ್ರಿತವಾಗಿದ್ದು ಅದರ ಗಮನ ಮಿದುಳಿನ ಚಲನಶಕ್ತಿಯ ಕಡೆ ಬಿದ್ದಿದೆ. ವಿಜ್ಞಾನದ ಆಗಮನದಿಂದ ಪರಂಪರಾಗತವಾಗಿ ಬಂದ ಮನುಷ್ಯನ ಆಧ್ಯಾತ್ಮಿಕ ನಂಬಿಕೆಗೆ ನಿರ್ಗಮನವಾಗಿದೆ. ಹೀಗೆ ಮನಶ್ಶಾಸ್ತ್ರ ಹೆಚ್ಚು ಹೆಚ್ಚಾಗಿ ಭೌತಿಕಕಲ್ಪನೆಗಳಿಂದಲೇ ತುಂಬಿಹೋಗಿದೆ.

ಆದಾಗ್ಯೂ ಅನೇಕ ಮೇಧಾವಿಗಳು ತಮಗೆ ಬಹುದೂರದ ವಾಸ್ತವ್ಯಗಳ ಸ್ಪಷ್ಟ ದರ್ಶನವನ್ನು ಇಂದ್ರಿಯಗಳ ಮೂಲಕವೂ ತರ್ಕಮೀಮಾಂಸೆಯಿಂದಲೂ ಅಲ್ಲದೆ ನೇರವಾಗಿಯೂ ಪಡೆದಿರುತ್ತಾರೆ. ಅವರು ಬಹುದೂರದಲ್ಲಿನ ಆಪ್ತರಿಗೆ ಒದಗಿದ ಕಷ್ಟಗಳ, ಮುಂದೆ ನಡೆಯಲಿರುವ ಘಟನೆಗಳ, ರೂಪರೇಖೆಗಳ ದರ್ಶನವನ್ನು ಸ್ಪಷ್ಟವಾಗಿ ಕಂಡಂತೆ ವರದಿ ಮಾಡಿದ್ದಾರೆ. ಗಣನೀಯ ಸಂಖ್ಯೆಯ ಜನರು, ಸತ್ತವರ ಆಭಾಸವಾದಂತೆಯೂ ಗತಿಸಿದವರೊಡನೆ ಸಂದೇಶ ಪ್ರಚಾರ ಮಾಡಿದಂತೆಯೂ ವರದಿ ಮಾಡಿದ್ದಾರೆ. ಈ ಅನುಭವಗಳು ತರ್ಕಜ್ಞಾನವನ್ನು ಪ್ರತಿಭಟಿವೆಂದೂ ತೋರುತ್ತವೆ. ಇಂಥ ಘಟನೆಗಳು ಅಪರೂಪವೂ ಅಸಾಧಾರಣವೂ ದೃಢಪಡಿಸುವುದಕ್ಕೆ ಕಷ್ಟವೂ ಆಗಿದ್ದು ಮಡಿವಂತ ವಿಜ್ಞಾನದ ಅನಾದರಣೆಗೆ ಒಳಗಾದುದರಲ್ಲಿ ಆಶ್ಚರ್ಯವಿಲ್ಲ. ಆದರೆ ಕೆಲವು ಧೀರ ವಿಜ್ಞಾನಿಗಳು ಅಂಥ ವಿದ್ಯಮಾನಗಳನ್ನುಪರೀಕ್ಷಿಸುವ ಧೈರ್ಯಮಾಡಿದ್ದಾರೆ.

ಅಂಥ ಘಟನೆಗಳು ಅತಿಮಾನಸಿಕವೆಂದೂ ಅವುಗಳ ಅಧ್ಯಯನ ಅತಿಮಾನಸಿಕ ಸಂಶೋಧನೆ ಎಂದೂ ಕರೆಯಲ್ಪಟ್ಟವು. ಅಮೆರಿಕದ ವಿಶ್ವವಿದ್ಯಾನಿಲಯವೃತ್ತಗಳಲ್ಲಿ ರೂಢಿತತತ್ತ್ವಗಳಿಗೆ ಹೊರತಾದ ಈ ತರಹ ವಿದ್ಯಮಾನಗಳ ಅಧ್ಯಯನಕ್ಕೆ ಅತಿಮಾನಸಶಾಸ್ತ್ರವೆಂಬ ಹೆಸರಿದೆ. ಇದರ ಅಂಗವಾಗಿ ಯುಕ್ತ ಅಧ್ಯಯನ ಮಾಡಲು ಒತ್ತಾಸೆಯಾಗುವ ಸಂಘಗಳು ವಿವಿಧ ದೇಶಗಳಲ್ಲಿ ಸ್ಥಾಪಿತವಾಗಿವೆ. ಅವುಗಳಲ್ಲಿ ಮೊದಲನೆಯದು 1852ರಲ್ಲಿ ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾದ ಅತಿಮಾನಸಸಂಶೋಧನಸಂಘ. ಭೌತವಿಜ್ಞಾನಿ ವಿಲಿಯಂ ಬ್ಯಾರೆಟ್‌ರವರ ಮುಂದಾಳುತನದಲ್ಲಿ ಮೋಸೆಸ್ ಎಂಬ ಪಾದ್ರಿಯೂ ಪ್ರೌಢ ಪ್ರಾಚೀನ ಸಾಹಿತ್ಯಧುರೀಣ ಫ್ರೆಡರಿಕ್ ಡಬ್ಲ್ಯೂ. ಎಚ್. ಮೈಯರ್ಸ್ ಎಂಬವರೂ ಸೇರಿ ಪ್ರಾಯೋಗಿಕ ಅನ್ಯಮನಃಸ್ಪರ್ಶನ, ಚಿತ್ತವಿಭ್ರಮೆ, ಪ್ರೇತವಾಹಕರತೆ ಮುಂತಾದ ವಿಷಯಗಳಲ್ಲಿ ಶೋಧನೆ ಮಾಡಿದರು. ದೇಶದ ಅನೇಕ ಗಣನೀಯ ಬುದ್ಧಿವಂತರು ಬೇಗನೆ ಈ ಕಾರ್ಯಕ್ರಮಕ್ಕೆ ಸೇರಿದರು. ಇದಕ್ಕೆ ಮುನ್ನ ಕೇಂಬ್ರಿಡ್ಜ್‌ನಲ್ಲಿ ಪ್ರೇತ ಸಂಘ ಎಂಬುದಿತ್ತು. ಆಕ್ಸ್‌ಫರ್ಡ್‌ನಲ್ಲಿಯೂ ಇದೇ ಮಾದರಿಯ ಸಂಘ ಮಾರ್ಗನ್, ಆಲ್ಫ್ರೆಡ್ ರಸೆಲ್ ವ್ಯಾಲೆಸ್, ಮತ್ತು ಸರ್ ವಿಲಿಯಂ ಕ್ರುಕ್ಸ್ ಇವರುಗಳಿಂದ ಸ್ಥಾಪಿಸಲ್ಪಟ್ಟಿತು. ಅಮೆರಿಕದಲ್ಲೂ ಇಂಥ ಸಂಸ್ಥೆಯೊಂದನ್ನು ಸ್ಥಾಪಿಸಿ ಅತಿಮಾನಸಿಕ ವಿದ್ಯಮಾನಗಳನ್ನು ತನಿಖೆ ಮಾಡಲು ವಿಲಿಯಂ ಜೇಮ್ಸ್ ವಿಶೇಷವಾಗಿ ಶ್ರಮಿಸಿದ.

ವಿಜ್ಞಾನಿಗಳು, ಈ ಮೊದಲಿನ ಸಂಶೋಧಕರ ವಿರುದ್ಧ ತೀವ್ರ ಖಂಡನೆಗಳನ್ನು ಒಡ್ಡಿದರು. ಅದೆಲ್ಲ ತಳಹದಿಯಿಲ್ಲದ ಕಾಡುಹರಟೆ, ವಾಹಕರೆನಿಸಿಕೊಂಡವರೆಲ್ಲ ಮೋಸಗಾರರು, ಬೂಟಾಟಿಗರು ಎಂದರು. ಅನೇಕ ವಿಜ್ಞಾನಿಗಳು ಆ ವಿಚಾರವನ್ನು ತಾಟಸ್ಥ್ಯದಿಂದಲೂ ವೈಷಮ್ಯದಿಂದಲೂ ಅವಹೇಳನದಿಂದಲೂ ಕಂಡರು. ಅತಿಮಾನಸಸಂಶೋಧಕರನ್ನು ಯಾಕ್ಷಣಿಕರೆಂದು ಹೀಯಾಳಿಸಿದರು. ಆದಾಗ್ಯೂ ಸರ್ ಆಲಿವರ್ ಲಾಡ್ಜ್, ಫ್ಲಮೇರಿಯನ್, ಗಿಲ್ಬರ್ಟ್ ಮರ್ರೆ, ಜೇಮ್ಸ್ ಹೈಸ್ಲೋಪ್ ಇನ್ನೂ ಇತರ ಗಣ್ಯವ್ಯಕ್ತಿಗಳು ತಾವು ಕೈಗೊಂಡ ಪ್ರಯೋಗಗಳನ್ನು ಧೃತಿಗೆಡದೆ ಮುಂದುವರಿಸಿದರು. ವಿಜ್ಞಾನದ ಚರಿತ್ರೆಯಲ್ಲಿ ಯಾವಾಗಲೂ ನೂತನ ಸಂಶೋಧನೆಗಳು ಪ್ರಚಲಿತ ನಂಬಿಕೆಗಳಿಗೆ ಹೊಂದುವುದಿಲ್ಲವೆಂದು ನಿರಾಕರಿಸಲ್ಪಟ್ಟಿವೆ. ಇದೇ ಗತಿ ಮುಂಚಿನ ಅನೇಕ ಅತಿಮಾನಸಸಂಶೋಧನೆಗಳಿಗೂ ಒದಗಿತ್ತು. ವಿಜ್ಞಾನ ಎರಡು ಬಗೆ: ಒಂದು ಅವಲೋಕನದ (ಅಬ್ಸರ್ವೇಷನ್) ಅಸ್ತಿಭಾರದ ಮೇಲೆ ನಿಂತದ್ದು; ಇನ್ನೊಂದು ಪ್ರಯೋಗಿಕ ಆಯಕಟ್ಟನ್ನುಳ್ಳದ್ದು. ಅತಿಮಾನಸಶಾಸ್ತ್ರ ಈ ಎರಡು ಗುಂಪಿಗೂ ಸೇರಿದೆ. ಅವಲೋಕನದ ದೃಷ್ಟಿಯಿಂದ ಅದಕ್ಕೆ ಯಥೇಚ್ಛ ಲಿಖಿತ ಸಾಕ್ಷ್ಯಗಳಿವೆ. ಹಿಂದೆಯೇ ಸೂಚಿಸಿರುವಂತೆ, ಇಂದ್ರಿಯಗಳ ಸಹಾಯವಿಲ್ಲದೆ ವಿಷಯಗಳ ಪ್ರತಿರೂಪ ದರ್ಶನಾನುಭವವನ್ನು ಪಡೆಯಲು ಅರ್ಹತೆ ಕೊಡುವ ಶಕ್ತಿಯನ್ನು ವ್ಯಕ್ತಿ ಹೊಂದಿರುವುದು ಅಸಂಭಾವ್ಯವೇನಲ್ಲ. ಅಂಥ ಶಕ್ತಿಯುತ ವ್ಯಕ್ತಿ ಸಹಜಂತರ್‌ದೃಷ್ಟಿಯುಳ್ಳವನೂ ಬಹುಸೂಕ್ಷ್ಮನೂ ಆಗಿ, ಯಾವ ಪ್ರತ್ಯಕ್ಷ ಸೌಲಭ್ಯವೂ ಇಲ್ಲದೆ, ವಿಷಯಗಳನ್ನು ನೋಡಲೂ ಕೇಳಲೂ ನಿವೇದಿಸಲೂ ಸಮರ್ಥನಾಗುತ್ತಾನೆ. ಆದರೆ, ಸಾಮಾನ್ಯವಾಗಿ ಒಬ್ಬರ ಮನಸ್ಸು ಇನ್ನೊಬ್ಬರ ಮನಸ್ಸಿನೊಡನೆ ಸಂಪರ್ಕಹೊಂದುವುದು ಇಂದ್ರಿಯಗಳ ಮೂಲಕವಲ್ಲದೆ ಅಗೋಚರವಾದ, ವಿಶೇಷ ರೀತಿಯಲ್ಲೂ ಸಾಧ್ಯ ಎಂದು ಭಾವಿಸುವುದಕ್ಕೂ ವೈಜ್ಞಾನಿಕ ನಂಬಿಕೆಗಳು ಎಡೆಗೊಡುವುದಿಲ್ಲ. ಪ್ರೌಢಪಾಂಡಿತ್ಯವಲಯಗಳಲ್ಲಿ ಇಂಥ ನಂಬಿಕೆಗೆ ಮೀರಿದ ಘಟನೆಗಳನ್ನು ತಾರ್ಕಿಕವಾಗಿ ಚರ್ಚಿಸುವುದಕ್ಕೆ ಕೂಡ ವಿಶ್ವಾಸವಿಲ್ಲದಿದ್ದಾಗಲೂ ಹಾರ್ವರ್ಡ್, ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯಗಳಲ್ಲೂ ಇನ್ನೂ ಕೆಲವಡೆಗಳಲ್ಲೂ 1930ರವರೆಗೂ ಸಾಗಿದ ಪ್ರಯತ್ನ. ವಲಯ ಮಗ್ಡೂಗಲ್ ಮತ್ತು ಜೆ. ಬಿ. ರೈನ್ ಇವರ ನಾಯಕತ್ವಗಳ ಫಲ–ಇವುಗಳಿಂದಾಗಿ ಡ್ಯೂಕ್ ವಿಶ್ವವಿದ್ಯಾನಿಲಯದಲ್ಲಿ ಒಂದು ಅತಿಮಾನಸ ಪ್ರಯೋಗಶಾಲೆ ಸ್ಥಾಪಿಸಲ್ಪಟ್ಟು ಗಮನಾರ್ಹ ಪ್ರಮಾಣದಲ್ಲಿ ಸಂಶೋಧನೆಗಳು ಹೊರಬಿದ್ದುವು. ಹೀಗೆಯೆ ಲಂಡನ್, ಅಮೆರಿಕ, ಯುರೋಪುಗಳಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಮನಸ್ಸಿನ ಸರಹದ್ದು, ವ್ಯಕ್ತಿತ್ವದ ಪರಿಮಿತಿ ದೇಹವ್ಯಾಪರಗಳನ್ನೆಲ್ಲ ಮೀರಿದ್ದಾಗಿವೆ ಎಂದು ಈ ಶೋಧನೆಗಳು ತೋರಿಸುತ್ತವೆ. ರೈನ್‌ರವರ ಶ್ರಮಫಲಗಳಾದ ನ್ಯೂ ಫ್ರಾನ್‌ಟಿಯರ್ಸ್ ಆಫ್ ಮೈಂಡ್ ಮತ್ತು ರೀಚ್ ಆಫ್ ಮೈಂಡ್ ಎಂಬ ಗ್ರಂಥಗಳು ಈ ಬಗ್ಗೆ ಹೆಚ್ಚಿನ ಮಾಹಿತಿಗಳನ್ನೊಳಗೊಂಡಿವೆ.

**ಪದಪ್ರಯೋಗಗಳು** : ಮನಶ್ಶಾಸ್ತ್ರ ಮನೋಜೀವನದ ಅಧ್ಯಯನವಾದರೆ ಅತಿಮಾನಸಶಾಸ್ತ್ರ (ಪ್ಯಾರಾಸೈಕಾಲಜಿ) ಅಥವಾ ಫ್ರೆಂಚರು ಕರೆವಂತೆ ಮಾನಸ ಪ್ರೇತಾವಾಹನೆ (ಮೆಟಸೈಕಾಲಜಿ) ಅಸಾಮಾನ್ಯ ಮನೋಘಟನೆಗಳನ್ನು ಪರಿಶೀಲಿಸುತ್ತದೆ. ಹಿಂದಿನಿಂದ ವರದಿಯಾಗಿರುವ ಸ್ವಯಂಪ್ರೇರಿತ ಅತಿಮಾನಸವಿದ್ಯಮಾನಗಳನ್ನು ಎಷ್ಟರಮಟ್ಟಿಗೆ ಶಾಸ್ತ್ರೀಯವಾಗಿ ಇತ್ಯರ್ಥಪಡಿಸಬಹುದು ಎಂಬುದನ್ನು ಕಂಡುಕೊಳ್ಳುವುದು ಅದರ ಉದ್ದೇಶ. ಈ ಶಾಸ್ತ್ರ ಆಧ್ಯಾತ್ಮಿಕ ಸಿದ್ಧಾಂತಗಳಿಂದ ಬೇರೆಯಾಗಿರುವುದು. ಅದರ ಅಧ್ಯಯನ ಅಂತೆಕಂತೆಗಳ ಪರಿಶೀಲನವಾಗಿರದೆ ಶುದ್ಧ ಪ್ರಾಯೋಗಿಕ ಮಾರ್ಗವನ್ನು ಅನುಸರಿಸಿದೆ. ಅತಿಮಾನಸ ಸಂಶೋಧನಕ್ರಮ ಮೆಟಸೈಕಿಕ್ಸ್ ಪ್ರೇತಾವಾಹನೆಯ ವಿಚಾರವಾದ ಶೋಧನೆ. ಈ ಪದವನ್ನು ಮನಶ್ಶಾಸ್ತ್ರದ ಗೊತ್ತಾದ ಸೂತ್ರ ಸಿದ್ಧಾಂತಗಳನ್ನು ಮೀರುವ ಘಟನೆಗಳು ಎಂದು ಅರಿಸ್ಟಾಟಲನು ವಿವರಿಸಿದ್ದರೂ ಕೆಲವರು ಅದನ್ನು ಅತಿಮಾನಸಿಕ ಘಟನೆಗಳು ಎಂದು ಥೌಲೆಸ್, ರೀಷೆ ಮುಂತಾದ ವಿದ್ವಾಂಸರು ಸೈ–ಘಟನೆಗಳು ಎಂದೂ ಮತ್ತೆ ಕೆಲವರು ದೂರಸಾಕ್ಷಾತ್ಕಾರ (ಟೆಲೆಸ್ಥೆಸಿಸ್), ಪೂರ್ವವಿಜ್ಞಾನ (ಫೋರ್ ನಾಲೆಡ್ಜ್), ಅತಿಪ್ರೇಕ್ಷೆ (ಅಲ್ಟ್ರ ಕಾಕ್ಷಿಷನ್) ಎಂದೂ ಕರೆದರು. ಆದರೆ ಈ ಅಸಾಧಾರಣ ಜ್ಞಾನಸೋಪಾನ, ಅರಿವು ಕೊಡುವ ಇಂದ್ರಿಯಕ್ರಿಯೆಗಳಿಂದ ಬೇರೆಯಾಗಿರುವುದರಿಂದ ರೈನ್ ಎಂಬುವನು ಇದನ್ನು ಅತೀಂದ್ರಿಯಜ್ಞಾನ ಎಂದಿದ್ದಾನೆ. ಒಟ್ಟಿನಲ್ಲಿ ಈ ಎಲ್ಲ ಪದಗಳು ಸ್ವಂತ ಅಭಿಪ್ರಾಯಗಳನ್ನು ಸೂಚಿಸತಕ್ಕವು.

ಇದೇ ರೀತಿಯಲ್ಲಿ, ವಸ್ತುಚಲನವಲನಗಳನ್ನೊಳಗೊಂಡ ವ್ಯಕ್ತ, ಅಸಾಮಾನ್ಯ ಘಟನೆಗಳನ್ನು ಸೂಚಿಸಲು ಕೆಲವು ಪದಗಳು ಪ್ರಯೋಗಕ್ಕೆ ಬಂದಿವೆ. ಯಾವ ಬಾಹ್ಯ ಶಕ್ತಿಯ ಪ್ರಚೋದನೆಯೂ ಇಲ್ಲದೆ ಮೇಜು ತಿರುಗುವುದು, ದೆವ್ವದ ಮನೆಗಳಲ್ಲಿ ಕಲ್ಲುಗಳ ಹಾರಾಟ–ಮುಂತಾದ ನಿರ್ಜೀವ ವಸ್ತುಗಳ ಚಲನೆಯನ್ನುಂಟುಮಾಡುವ ವಿದ್ಯಮಾನಗಳಿಗೆ ದೂರಕ್ರಿಯಾಶಕ್ತಿ (ಟೆಲೆಕೈನೆಸಿಸ್) ಎಂಬ ಪದವನ್ನು ರೀಷೆ ಉಪಯೋಗಿಸಿದ. ಅದೇ ವಿದ್ಯಮಾನಗಳನ್ನು ಸೂಚಿಸಲು ಮಾನಸಿಕಕ್ರಿಯಾಶಕ್ತಿ (ಸೈಕೊಕೈನೆಸಿಸ್) ಎಂಬ ಪದವನ್ನು ಉಪಯೋಗಿಸಿ, ಅಶರೀರಶಕ್ತಿಯ ವಾಸ್ತವ್ಯ ದರ್ಶನ, ಲಘಿಮ, ಪರಕಾಯಪ್ರವೇಶ ಮುಂತಾದ ಅಲೌಕಿಕ ವಿದ್ಯಮಾನಗಳ ಆಗುವಿಕೆಯನ್ನು ರೈನ್ ಸೂಚಿಸುತ್ತಾನೆ.

**ಅನ್ಯಮನಃಸ್ಪರ್ಶನ :** ಅಕ್ಷರಶಃ ಇದರ ಅರ್ಥ ದೂರಭಾವಪ್ರೇಕ್ಷಣೆ (ಟೆಲೆಪತಿ). ಮೈಯರ್ಸ್ ಈ ಪದಕ್ಕೆ ಇಂದ್ರಿಯ ಕ್ರಿಯಾತೀತವಾದ ಮನಸ್ಸು. ಮನಸ್ಸಿನ ಸಂಪರ್ಕ ಎಂಬ ಅರ್ಥ ಕೊಟ್ಟ. ಅವರಿಗೆ ಭಾವಪ್ರೇಕ್ಷಣೆ (ಥಾಟ್ ಟ್ರಾನ್ಸ್‌ಫರೆನ್ಸ್) ಎಂಬ ಪದ ಅಷ್ಟಾಗಿ ಹಿಡಿಸಲಿಲ್ಲ. ಜಾನ್ ಇರ್‌ಹ್ಯನ್ ವಾಲ್ಡರ್‌ನ ಪ್ರಕಾರ ಅಸಮೀಪಾನುಕಂಪ ಎಂಬುದು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಮಾನಸಿಕ ಪ್ರಕಾರ ವಿಕಾರಗಳನ್ನು ಇಂದ್ರಿಯ ಸಹಾಯವಿಲ್ಲದೆ ಮನಗಾಣುವುದು. ಒಂದು ಮನಸ್ಸಿಗೂ ಇನ್ನೊಂದು ಮನಸ್ಸಿಗೂ–ವಿಜ್ಞಾನಕ್ಕೆ ಇನ್ನೂ ಎಟುಕದಿರುವ ರೀತಿಯಲ್ಲಿ ಉಂಟಾಗುವ ನೇರಸಂಪರ್ಕಕ್ರಿಯೆ ಎಂದು ಸರ್ ಆಲಿವರ್ ಲಾಡ್ಜ್ ಇದೇ ಪದಕ್ಕೆ ಅರ್ಥ ಕೊಟ್ಟಿದ್ದಾನೆ. ದೂರಭಾವಪ್ರೇಕ್ಷಣೆ ಇತರ ಅತಿರೇಕ ಅರಿವಿಕೆಯಿಂದ ಕಳುಹಿಸುವವ, ಸ್ವೀಕರಿಸುವವ ಹೀಗೆ ಎರಡು ವ್ಯಕ್ತಿಗಳನ್ನೊಳಗೊಂಡ ವಿಶೇಷ ಅನುಭವ ಎಂದು ಕಾಣಿಸಿಕೊಂಡು ಬೇರೆಯಾಗಿರುತ್ತದೆ. ಅನ್ಯಮನಃಸ್ಪರ್ಶನ ಚಿತ್ತವಿಭ್ರಮೆಗಳ (ಹೆಲೂಸಿನೇಷನ್ಸ್) ಮುಖೇನ ತೋರಬಹುದು. ಸಾಧಾರಣ ಭ್ರಮಣೆಯಲ್ಲಿ ಜಾಗೃತಾವಸ್ಥೆಯ ಕೆಳಗಿರುವ ಯಾವುದೋ ಅಂಶ ವ್ಯಕ್ತಿಯಲ್ಲಿ ಒಂದು ಪ್ರತಿಮೆಯನ್ನು ಸೃಷ್ಟಿಸುತ್ತದೆ. ಆದರೆ ಅಸಮೀಪಾನುಕಂಪದಲ್ಲಿ ಕಂಪನ ಅದನ್ನು ಉಂಟುಮಾಡುವ ಬೇರೊಬ್ಬ ವ್ಯಕ್ತಿಯ ಪ್ರೇರಣೆಯಿಂದ ಉಂಟಾಗುತ್ತದೆ. ಅಸಮೀಪಾನುಕಂಪನದಿಂದುಂಟಾದ ಭ್ರಮಣೆ ಅಭೌತಿಕ. ಇದರ ಕಾರಣ ಅನುಕಂಪವನ್ನು ಪ್ರೇರಿಸುವ ವ್ಯಕ್ತಿಯ ಮನಸ್ಸಿನ ಪ್ರಭಾವಕ್ಕೊಳಗಾಗಿದ್ದು ಅನುಕಂಪ ಸ್ವೀಕೃತವ್ಯಕ್ತಿಯಲ್ಲಿ ಜಾಗೃತ ಅನುಭವದ ಅರಿವನ್ನುಂಟುಮಾಡುತ್ತದೆ. ಅನುಕಂಪಸ್ವೀಕೃತವ್ಯಕ್ತಿಗೆ ಕಳುಹಿಸಿದೆ ಸಂಜ್ಞೆಗಳು ಇಂದ್ರಿಯವಾಗಿರಬೇಕಾಗಿಲ್ಲ. ಅಲ್ಲದೆ ಅವು ಆಂತರಿಕಭಾವನೆಗಳೂ ಭಾವೋದ್ರೇಕಗಳೂ ಅಥವಾ ಪ್ರೇರಣೆಯೂ ಆಗಬಹುದು. ಅತಿ ದೂರದಲ್ಲಿರುವ ಆತ್ಮೀಯ ವ್ಯಕ್ತಿಯ ಸಾವುನೋವುಗಳ ದುಃಖದ ಸಮಾಚಾರ ತಿಳಿಯುವ ಮುನ್ನವೇ ಅನುಕಂಪಸ್ವೀಕೃತ ವ್ಯಕ್ತಿಯಲ್ಲಿ ಅಸಮೀಪಾನುಕಂಪದ ಉದ್ರೇಕವಾಗಬಹುದು. ಅಜಮ್ ಅಸಮೀಪಾನುಕಂಪವಶೀಕೃತ (ಹಿಪ್ನೊಟೈಸ್ಡ್) ವ್ಯಕ್ತಿಗಳಲ್ಲಿ ಉಂಟಾಗುವುದನ್ನು ಕಂಡುಕೊಂಡ. ಆತ ರೀಷೆ ಅಸಮೀಪಾನುಕಂಪದ ಪ್ರಯೋಗಗಳನ್ನು ಸಾಮಾನ್ಯಸ್ಥಿತಿ ಮತ್ತು ವಶೀಕರಣಸ್ಥಿತಿಗಳಲ್ಲಿ ನಿರ್ಗಂಧವಸ್ತುಗಳನ್ನುಪಯೋಗಿಸಿ ಆ ಬಗೆಯ ಅನುಕಂಪನದ ಇರುವಿಕೆಗೆ ಸಾಕ್ಷ್ಯವನ್ನು ಕಂಡರು.

ಹೀಗೆ ಅನೇಕಾನೇಕ ಸ್ವಯಂ ಮತ್ತು ಪ್ರಾಯೋಗಿಕ ಅಸಮೀಪಾನುಕಂಪದ ಇರವನ್ನು ಸೂಚಿಸಿವೆ. ಈ ವಿಚಾರದಲ್ಲಿ ಟೈರಲ್, ಯಾನ್, ಹೆನ್ರಿ ಸಿಡ್ಜ್‌ವಿಕ್, ಶ್ರೀಮತಿ ಸಿಂಕ್ಲೇರ್, ಡೆಚ್ನರ್ ಅಲ್ಲದೆ ಡ್ಯೂಕ್, ಹಾರ್ವರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳ ಅಧ್ಯಯನಶೀಲರೂ ಈ ಅನುಭವದ ಅನೇಕ ದೃಷ್ಟಾಂತಗಳನ್ನು ವರದಿ ಮಾಡಿದ್ದಾರೆ.

ಅತೀಂದ್ರಿಯ ದೃಷ್ಟಿ : ಇದು ಅಸಮೀಪಾನುಕಂಪದ ಸಹೋದರಿಯಂತಿದೆ (ಕ್ಲೇರ್ವಾಯೆನ್ಸ್). ರ್‍ರೈನರ ಅಭಿಪ್ರಾಯದಲ್ಲಿ ಅವೆರಡೂ ಸಾಧಾರಣವಾಗಿ ಒಂದೇ. ಅತೀಂದ್ರಿಯ ದೃಷ್ಟಿ ಎಂದರೆ ಇಂದ್ರಿಯಗಳ ಸಹಾಯವಿಲ್ಲದೆ ಆಗುವ ದೂರದ ವಸ್ತುಗಳ ಅಥವಾ ಘಟನೆಗಳ ಅರಿವಿನ ಅನುಭವ. ಆದರೆ ಅಸಮೀಪ ಅನುಕಂಪದಲ್ಲಿ ಒಂದು ವ್ಯಕ್ತಿಯ ಚಿಂತನದ ಅರಿವು ಇನ್ನೊಂದು ವ್ಯಕ್ತಿಗೆ ಇಂದ್ರಿಯಾತೀತವಾಗಿ ಆಗುವುದು.

ಮೆಸ್ಮರ್ ಕೃತಕ ನಿದ್ರಾವಸ್ಥೆಗೊಳಪಡಿಸಿದ ವ್ಯಕ್ತಿಯ ಅತೀಂದ್ರಿಯ ದೃಷ್ಟಿಶಕ್ತಿಯನ್ನು ಉಪಯೋಗಿಸಿಕೊಂಡು ಕಾಯಿಲೆಗಳ ಸ್ಥಿತಿಗತಿಗಳನ್ನು ನಿರ್ಧರಿಸುತ್ತಿದ್ದ. ಕೆಲಕಾಲಾನಂತರ ಟಿಚ್ನರ್ ಅತೀಂದ್ರಿಯ ದೃಷ್ಟಿ ಕೆಲವು ವ್ಯಕ್ತಿಗಳ ಆಂತರಿಕ ಸ್ವಾಂತ ದೈವದತ್ತ ಯೋಗ್ಯತೆ ಎಂದು ಕಂಡುಕೊಂಡ. ಈ ಅತೀಂದ್ರಿಯ ದೃಷ್ಟಿಶಕ್ತಿಯ ಪ್ರಯೋಗವನ್ನು ಬಹು ಜನರು ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಪ್ರೈಜ್ ಎಂಬುವನು ಅನೇಕರನ್ನು ಪರೀಕ್ಷಿಸಿ ಈ ಪೈಕಿ ಅನೇಕರು ಕಪಟಿಗಳಾದರೂ ಕೆಲವರಾದರೂ ಸಾಚಾ ಎಂದು ಹೇಳುತ್ತಾನೆ. ಹೆಸ್‌ಲಾಪ್ ಎಂಬುವನು ಒಬ್ಬ ಅತೀಂದ್ರಿಯ ದೃಷ್ಟಿಯುಳ್ಳ ಹೆಂಗಸು ಕಾಯಿಲೆಯವರು ಬಂದಾಗ ತನ್ನ ಶರೀರವನ್ನೆ ನೆತ್ತಿಯಿಂದ ಅಂಗುಷ್ಟದವರೆಗೂ ಸೂಕ್ಷ್ಮವಾಗಿ ಪರೀಕ್ಷಿಸಿಕೊಂಡು ರೋಗಿಗಳ ರೋಗರುಜಿನಗಳನ್ನು ನಿರ್ಧರಿಸುತ್ತಿದ್ದುದನ್ನು ಉದಾಹರಿಸಿದ್ದಾರೆ. ಈ ವಿಶೇಷ ಶಕ್ತಿಯ ನಿರೂಪಣೆ ಭಾರತೀಯ ಪ್ರಾಚೀನ ಕೃತಿಗಳಲ್ಲಿ ಛಾಯಾಪುರುಷ ಸಾಕ್ಷಾತ್ಕಾರ ಯೋಗ ಎಂಬಲ್ಲಿ ಬಂದಿದೆ. ಅತೀಂದ್ರಿಯ ದೃಷ್ಟಿಯುಳ್ಳವನು ದೂರಸ್ಥಳದಲ್ಲಿ ನಡೆಯುವ ಘಟನೆಗಳ ಅಕಾಯ ಅನುದರ್ಶನ ಪಡೆದು, ಕೊಡುವ ಸಮಾಚಾರಗಳನ್ನು ಅನಂತರ ರುಜುವಾತು ಮಾಡಿದ್ದಾರೆ. ತನ್ನ ಪರೀಕ್ಷೆಗೊಳಗಾದ ನಿದ್ರಾಸಂಚರಣ ವ್ಯಕ್ತಿ ನಿಷ್ಪಾರದರ್ಶಕ ಲಕೋಟೆಗಳಲ್ಲಿಟ್ಟ ಇಸ್ಪೀಟ್ ಎಲೆಗಳನ್ನು ಗುರುತಿಸಿದ್ದನ್ನು ರೀಷೆ ನಿದರ್ಶಿಸಿದ್ದಾನೆ. ಹಿಸ್ಲಾಪ್, ಸಿಂಕ್ಲೇರ್ ಮತ್ತಿತರರು ಜಾಗೃತಾವಸ್ಥೆಯಲ್ಲೂ ಅತೀಂದ್ರಿಯ ದೃಷ್ಟಿ ಪ್ರದರ್ಶಿತವಾಗಿರುವುದನ್ನು ಪ್ರಾಯೋಗಿಕವಾಗಿ ಕಂಡಿರುವುದನ್ನು ವರದಿಮಾಡಿದ್ದಾರೆ. ಅತೀಂದ್ರಿಯ ದೃಷ್ಟಿಯಿಂದ ರೋಗಗಳನ್ನು ಪತ್ತೆಹಚ್ಚಿರುವ ಹಲವು ಸಂದರ್ಭಗಳನ್ನು ಪೇಯ್ನ್ ಮತ್ತು ಬೆಂಡಿಟ್ ವರದಿಮಾಡಿದ್ದಾರೆ. ಮೇಲೆ ಹೇಳಿದ ಎಲ್ಲ ವಿಷಯಗಳು ಅಸಾಮಾನ್ಯ ರೀತಿಯಲ್ಲಿ ತಿಳಿಯುವ ಸಾಧ್ಯತೆಯ ನಿದರ್ಶನಗಳು.

**ಪೂರ್ವಬೋಧೆ :** ಆಗಬಹುದಾದ್ದನ್ನು ಘಟನೆಗೆ ಮೊದಲೇ ಗುರುತಿಸುವ ಶಕ್ತಿ (ಪ್ರಿಕಾಗ್ನಿಷನ್). ಗ್ರಹಣಗಳು, ಋತುಗಳು ಮತ್ತು ಸ್ವಾಭಾವಿಕ ಘಟನೆಗಳ ವಿಚಾರವಾಗಿ ಅವು ನಡೆವ ಮೊದಲೆ ನಿಶ್ಚಿತ ನಿಯಮಗಳನುಸಾರ ನುಡಿಯಬಹುದು. ಮುನ್ನರಿವಿನಲ್ಲಿ ಮುಂಬರುವ ಸಾವು, ರೋಗ, ಆಕಸ್ಮಿಕಗಳು, ಆಸ್ತಿಕ್ಷಯ, ಉತ್ತರಾಧಿಕಾರಿ, ಕಷ್ಟನಷ್ಟಗಳು–ಮುಂತಾದವನ್ನು ಹಿನ್ನೆಲೆಯ ಸಹಾಯವಿಲ್ಲದೆ, ಇನ್ನಾವ ತಿಳಿದ ಕುರುಹೂ ಇಲ್ಲದೆ, ಮೊದಲೇ ಕಾಣಬಹುದು. ಸ್ವತಃಪ್ರೇರಿತ ಪೂರ್ವಬೋಧೆಯ ಅನೇಕ ನಿದರ್ಶನಗಳು ವರದಿಯಾಗಿವೆ. ಮುಂಬರುವ ಕೇಡುಗಳ ಎಚ್ಚರಿಕೆಯೂ ಒಳಧ್ವನಿಯಾಗಿ ಕಾಣಿಸಿಕೊಂಡು ಜನರ ಕಷ್ಟನಷ್ಟಗಳನ್ನು ನಿವಾರಿಸಲು ಸಾಧ್ಯವಾಗಿದೆ. ಕೆಲವು ವೇಳೆ ಮುಂದೆ ಆಗಲಿರುವ ಘಟನೆಗಳನ್ನು ಕನಸಿನಲ್ಲಿ ಕಂಡಂತೆ ಹೇಳಲಾಗಿದೆ. ಒಬ್ಬಾತ ತಾನು ಪ್ರಯಾಣ ಮಾಡಬೇಕೆಂದಿದ್ದ ಟೈಟಾನಿಕ್ ಎಂಬ ಹಡಗು ಪ್ರಯಾಣಮಧ್ಯದಲ್ಲಿ ಉರಿಯುತ್ತಿದ್ದಂತೆ ಕನಸು ಕಂಡಿದ್ದನ್ನೂ ಅದೇ ಕನಸು ಪುನಃ ಆಗಲು ತನ್ನ ಉದ್ದೇಶಿತ ಪ್ರಯಾಣವನ್ನು ರದ್ದುಮಾಡಿದ್ದನ್ನೂ ಅನಂತರ 1912ರ ಏಪ್ರಿಲ್ 14ನೆಯ ತಾರೀಖು ಆ ಹಡಗು ಛಿದ್ರವಾಗಿ ಕನಸು ನನಸಾದದ್ದನ್ನೂ ಓ ಕೋನರ್ ವರದಿ ಮಾಡಿದ್ದಾನೆ. ಇಂಥ ಸ್ವತಃಪ್ರೇರಿತ ಎಚ್ಚರಿಕೆಗಳು ರಕ್ಷಾಕವಚಗಳಿದ್ದಂತೆ. 1934ರಲ್ಲಿ ಅತಿಮಾನಸ ಸಂಶೋಧನಸಂಘ ಸಾಲ್ಟ್‌ಮಾರ್ಷ್‌ನ ಮುಂದಾಳುತನದಲ್ಲಿ ಕುತೂಹಲಕಾರಿಯಾದ 349 ಪೂರ್ವಬೋಧೆಯ ನಿದರ್ಶನಗಳನ್ನು ಪ್ರಕಟಿಸಿದೆ. ಡೇಲಿ ಪೋಸ್ಟ್ ಪತ್ರಿಕೆಯ ಮೊದಲ ಪುಟದಲ್ಲಿ ಯಾವ ಜಾಹೀರಾತು ಪ್ರಕಟಗೊಳ್ಳುವುದೆಂದು ಪತ್ರಿಕೆಯ ಪ್ರಕಟಣೆಯ 37 ದಿನಗಳ ಮುಂಚೆಯೇ ಭವಿಷ್ಯ ನುಡಿದ ವ್ಯಕ್ತಿಯೊಬ್ಬನ ವಿಷಯವನ್ನು ಪ್ರಿನ್ಸ್ ವರದಿಮಾಡಿದ್ದಾನೆ. ಟಿಲ್‌ಯಾರ್ಡ್ ಯಾವ ರೀತಿಯಲ್ಲಿ ಮರಣ ಹೊಂದುವನೆಂಬುದನ್ನು ಲಾಪ್ಲಾಸ್ ಎಂಬುವನು ನಿಶ್ಚಿತವಾಗಿ ಮುಂಚೆಯೇ ಹೇಳಿದ್ದ. ಶ್ರೀಮತಿ ಎಡಿತ್ ತನ್ನ ಆಕಾಶವಾಣಿ ಪ್ರಸಾರಭಾಷಣದಲ್ಲಿ ಕೆಲವು ಕನಸುಗಳು ಸಾಂಕೇತಿಕವಾಗಿ ಭವಿಷ್ಯದ ಸೂಚನೆ ಕೊಟ್ಟಿದ್ದನ್ನು ಪ್ರಸ್ತಾಪಿಸಿದ್ದಾಳೆ.

1933ರಿಂದ ಈಚೆಗೆ ಡ್ಯೂಕ್ ವಿಶ್ವವಿದ್ಯಾನಿಲಯದಲ್ಲಿ ಪೂರ್ವಬೋಧೆಯ ಪ್ರಾಯೋಗಿಕ ಅಧ್ಯಯನ ಪ್ರಾರಂಭವಾಗಿದೆ. ವಿದ್ವಾಂಸರಾದ ಸ್ಟೋಯರ್ಟ್, ಹಚಿಸನ್, ಪ್ರ್ಯಾಟ್, ಹಂಫ್ರಿ ಮತ್ತು ಗಿಬ್ಬನ್ ಮೊದಲಾದವರು ಗಮನಾರ್ಹ ಫಲಿತಾಂಶಗಳನ್ನು ವರದಿ ಮಾಡಿದ್ದಾರೆ. ಹೀಗೆಯೇ ಇಂಗ್ಲೆಂಡಿನಲ್ಲೂ ಟೈರಲ್ ಎಂಬುವರು ಸ್ವಯಂಚಾಲಿತ ವಿದ್ಯುತ್‌ಯಂತ್ರವನ್ನು ಉಪಯೋಗಿಸಿ ಪೂರ್ವ ಬೋಧನಸಾಮರ್ಥ್ಯವನ್ನು ಪರೀಕ್ಷಿಸಿ ಬಹು ಉಪಯುಕ್ತ ಫಲಿತಾಂಶಗಳನ್ನು ವರದಿಮಾಡಿದ್ದಾರೆ.

ಪೂರ್ವಬೋಧನವಿಚಾರ ವಿಜ್ಞಾನಕ್ಕೆ ಅಪರಿಚಿತ, ಹೊಸದು. ಇದಕ್ಕೆ ನಮ್ಮ ಮನಸ್ಸಿನ ಸ್ವಭಾವದ ಅಜ್ಞಾನವೇ ಕಾರಣ.

**ಮನೋಗತಿ :** ವಸ್ತುವಿನ ಮೇಲೆ ಮನಸ್ಸಿನ ಪ್ರಭಾವ (ಸೈಕೊಕೈನೆಸಿಸ್). ಇದು ಅತಿಮಾನಸಶಾಸ್ತ್ರದ ಇನ್ನೊಂದು ಕೊಡುಗೆ. ಮೇಲು ಕುರ್ಚಿಗಳು ತಮಗೆ ತಾವೇ ಗಿರಿಕೆ ಹೊಡೆಯುವುದು, ಮೇಲಕ್ಕೇಳುವುದು, ಓಡಾಡುವುದು–ಇವು ಬಹು ಹಿಂದಿನಿಂದಲೂ ಗಮನಕ್ಕೆ ಬಂದಿದೆ. ರೀಷೆ ಈ ವಿದ್ಯಮಾನಗಳನ್ನು ದೂರಚಲನೆ (ಟೆಲೆಕೈನೆಸಿಸ್) ಎಂದು, ಯಾರ ಸಂಪರ್ಕವೂ ಇಲ್ಲದೆ ನಡೆಯುವ ವಸ್ತುಚಲನೆ ಎಂಬ ವಿವರಣೆ ನೀಡಿದ್ದಾನೆ. ತಾನಾಗೇ ಬಾಗಿಲ ಗಂಟೆ ಬಾರಿಸುವುದು, ಆಕಾಶವಾಣಿ, ಪ್ರೇತಧ್ವನಿಗಳು, ತಟ್ಟೆಗಳ ಒಡೆತ, ದೆವ್ವದ ಮನೆಗಳಲ್ಲಿ ನಿದ್ರಿಸುತ್ತಿರುವವರಿಗೆ ವಿಚಿತ್ರ ಧ್ವನಿ ಶಬ್ದಗಳಿಂದ ನಿದ್ರಾಭಂಗವಾಗುವುದು–ಇವನ್ನೆಲ್ಲಾ ನಿಶ್ಚಿತವಾಗಿ ವಿವರಿಸಲು ಸಾಧ್ಯವಾಗದಿದ್ದರೂ ಇವೆಲ್ಲ ಕಪಟವೆಂದು ನಿರಾಕರಿಸುವುದೂ ಅಸಾಧು.

ಇಂಥ ಸಾಮರ್ಥ್ಯವುಳ್ಳ ಅನೇಕ ವ್ಯಕ್ತಿಗಳು, ವಿಜ್ಞಾನಿಗಳ ಎದುರು ಈ ಚಮತ್ಕಾರಗಳನ್ನು ಮಾಡಿ ತೋರಿಸಿದ್ದಾರೆ. ತೋರಿಸಿದ್ದನ್ನು ಕಂಡವರಿದ್ದಾರೆ. ಪದಾರ್ಥಗಳ, ಅಥವಾ ವ್ಯಕ್ತಿಗಳ ಲಘಿಮಾವಸ್ಥೆ ಅನೇಕ ಸಂಶೋಧಕರಿಂದ ವರದಿಮಾಡಲ್ಪಟ್ಟ ಇನ್ನೊಂದು ಭೌತಿಕ ವಾಸ್ತವಿಕಘಟನೆ. ಯೂಸೆಫಿಯಾ ಎಂಬ ಖ್ಯಾತವಾಹಕ ವ್ಯಕ್ತಿ (ಮೀಡಿಯಂ) ಒಂದು ಚೌಕಮೇಜನ್ನು ಲಘಿಮಾಶಕ್ತಿಯಿಂದ ನೆಲದಿಂದ ಮೇಲಕ್ಕೆಬ್ಬಿಸಿದ ಪ್ರದರ್ಶನವನ್ನು ರೀಷೆಯ ಸೂಚನೆಯ ಮೇಲೆ ಮಾಡಿತೋರಿಸಿದಳು. ಆ ವಾಹಕವ್ಯಕ್ತಿಯ ಬೆರಳತುದಿ ತಾಕಿದೊಡನೆ ಮೇಜು ವಾಲಿ, ತೂಗಾಡಿ ನೆಲದಿಂದ ಮೇಲಕ್ಕೆದ್ದಿತು. ವೀಕ್ಷಕರಲ್ಲಿ ಸರ್ ಆಲಿವರ್ ಲಾಡ್ಜ್, ಮೈಯರ್ಸ್ ಮುಂತಾದವರಿದ್ದರು. ಈ ಘಟನೆ ಹೇಗಾಯಿತೆಂಬುದನ್ನು ಚಲನಶಾಸ್ತ್ರ ಸ್ಪಷ್ಟಪಡಿಸಲಾರದು.

ರ್‍ರೈನರು ಈ ಘಟನೆಗಳನ್ನು ಮನೋಗತಿಗೆ ಸಂಬಂಧಿಸಿದವೆಂದು ಹೇಳಿ ಇವು ಅತೀಂದ್ರಿಯ ಪ್ರತ್ಯಕ್ಷದ ದೃಷ್ಟಾಂತಗಳು ಎಂದು ಸೂಚಿಸಿದ್ದಾರೆ. ಅವರು ಮನಸ್ಸು ಭೌತವಸ್ತುಗಳ ಚಲನೆಯನ್ನುಂಟುಮಾಡಬಲ್ಲದೇ ಎಂಬುದನ್ನು ಕಂಡುಹಿಡಿಯಲು ಪ್ರಯೋಗಗಳನ್ನು ನಡೆಸಿದರು. ಅತೀಂದ್ರಿಯ ದೃಷ್ಟಿಯಲ್ಲಿ ಯಾವುದೋ ರೀತಿಯಲ್ಲಿ, ವಸ್ತು ಮನಸ್ಸಿನ ಮೇಲೆ ಪರಿಣಾಮ ಮಾಡುತ್ತದೆ. ಆದರೆ ಮನೋಗತಿಯಲ್ಲಿ ಮನಸ್ಸು ವಸ್ತುವಿನ ಮೇಲೆ ಪರಿಣಾಮ ಮಾಡುತ್ತದೆ. ರ್‍ರೈನರು ಭೌತಿಕ ವಸ್ತುಗಳ ಮೇಲೆ ಮನಸ್ಸಿನ ಪರಿಣಾಮಗಳನ್ನು ಗುರುತಿಸಲು ಸೂಕ್ಷ್ಮ ಪ್ರಯೋಗ ತಂತ್ರಗಳನ್ನು ಅಳವಡಿಸಿದರು. ನಾವು ಮನಸ್ಸು ಮತ್ತು ಭೂತವಸ್ತುಗಳ ಮೇಲೆ ಪರಸ್ಪರ ಕ್ರಿಯೆ ಇದೆ ಎಂದು ಭಾವಿಸಿಕೊಂಡರೆ ಅಯತ್ನಚಲನೆಯ (ಎಕ್ಸ್‌ಟ್ರಾ ಮೋಟಲ್ ಆ್ಯಕ್ಷನ್) ಇರುವಿಕೆಯನ್ನು ತೋರಿಸಿದಂತಾಗುವುದು. ಮನೋಗತಿ ಅಥವಾ ವಸ್ತುವ್ಯೂಹಗಳ ಮೇಲೆ ಮಾನಸಕ್ರಿಯೆಯ ವಿಷಯ ಹೊಸದೇನಲ್ಲ. ಅನೇಕ

ತನಿಖೆಗಾರರು ಆ ರೀತಿಯ ಭೌತಿಕ ವಿದ್ಯಮಾನಗಳನ್ನು ವರದಿಮಾಡಿದ್ದಾರೆ. ಅಲೆಕ್ಸಿಸ್ ಕ್ಯಾರಲ್‌ರವರ ಮ್ಯಾನ್ ದಿ ಅನ್ನೋನ್ ಎಂಬ ಗ್ರಂಥದಲ್ಲಿ ನಂಬಿಕೆ ಮತ್ತು ವಿಶ್ವಾಸದಿಂದ ರೋಗನಿವಾರಣೆ ಮಾಡುವ ಪದ್ಧತಿಯ (ಫೇತ್ ಹೀಲಿಂಗ್) ಹಿಂದೆ ಸಲಹೆ ಮತ್ತು ಮಾನಸೇಚ್ಛಿತ ಭೌತಕ್ರಿಯೆಯ ಪರಿಣಾಮಗಳಿವೆ ಎಂದು ಹೇಳಲಾಗಿದೆ. ಹಾಗಿದ್ದಲ್ಲಿ, ಮಾನಸೇಚ್ಛಿತ ಭೌತಕ್ರಿಯೆ ವೈದ್ಯಕ್ಷೇತ್ರಕ್ಕೆ ನುಸುಳಿಕೊಂಡಿದೆ ಎಂದು ಹೇಳಬಹುದು. ಅನೇಕ ಚರ್ಮದ, ಜೀರ್ಣಾಂಗವ್ಯೂಹದ ಮತ್ತು ಇತರ ದೇಹಭಾಗಗಳ ವ್ಯಾಧಿಗಳಿಗೆ ಮನೋಸ್ಥಿತಿ ಕಾರಣ ಎಂದು ಹೇಳಲಾಗಿದೆ. ವಶ್ಯಸುಪ್ತಸ್ಥಿತಿಯಲ್ಲಿ ಮೈಮೇಲೆ ಬೊಬ್ಬೆಗಳನ್ನು ಬರಿಸಿರುವುದು ವರದಿಯಾಗಿದೆ. ಇನ್ನೂ ಬೆರಗುಗೊಳಿಸುವ ವಿದ್ಯಮಾನವೆಂದರೆ ಚರ್ಮಬರಹ (ಡರ್ಮೊಗ್ರಫಿ). ಇಂಥ ವಾಸ್ತವ ಸಂಗತಿಗಳು ನಮ್ಮ ಆಸಕ್ತಿ ಮತ್ತು ವಿಚಾರಪರತೆಯನ್ನು ಕೆರಳಿಸಲು ಸಾಕು.

ಆದಿಮಾನವ ಯಕ್ಷಿಣಿವಿದ್ಯೆಯಲ್ಲಿ, ಇಂದ್ರಜಾಲದಲ್ಲಿ ನಂಬಿಕೆ ಇಟ್ಟಿದ್ದನೆಂಬುದಕ್ಕೆ ಪುರಾತನ ಜನರ ವಿಶಿಷ್ಟಸಂಸ್ಕೃತಿ ಮತ್ತು ಪವಾಡಗಳಲ್ಲಿನ ನಂಬಿಕೆಗಳು ನಿದರ್ಶನಗಳಾಗಿವೆ. ಭಾರತದ ಜ್ಞಾನಿಗಳು ಮನುಷ್ಯ ತನ್ನ ದೇಹದಲ್ಲಡಗಿರುವ ಕುಂಡಲಿನೀಶಕ್ತಿಯನ್ನು ಸುಷುಮ್ನಾನಾಡಿಯ ಮೂಲಕ ಕ್ರಮ ಕ್ರಮವಾಗಿ ಊರ್ಧ್ವಗೊಳಿಸಿದಲ್ಲಿ ಆವರ್ತಕೇಂದ್ರಗಳಲ್ಲಿ ನಿಶ್ಚಿತಕ್ರಮದಲ್ಲಿ ಅಣಿಮಾದಿ ಅಷ್ಟಸಿದ್ಧಿಗಳುಂಟಾಗಿ ಅತಿ ಪ್ರಾಜ್ಞವಾಗಿ ಅತೀಂದ್ರಿಯನಾಗಿ ಕಾಲ ದೇಶ ನಾಮ ರೂಪ ಆಕಾರಗಳ ಸೀಮೆ ಮೀರಿ ವಿಶ್ವಜ್ಞಾನಿಯಾಗಬಹುದೆಂದು ಹೇಳುತ್ತಾರೆ. ಅಂಥವರಿಗೆ ದೂರವಾಣಿ, ದೂರದರ್ಶನ, ದೂರಸ್ಪರ್ಶನ, ಭವಿಷ್ಯವಾಣಿ, ದೂರಗಮನ, ಅಣಿಮಾ, ಲಘಿಮಾ ಮುಂತಾದ ವಿಶೇಷಯೋಗ್ಯತೆಗಳು ಸಿದ್ಧಿಸಿ ಅವರು ಮಹಾತ್ಮರೂ ಅಥವಾ ಪವಾಡಪುರುಷರೂ ಎನಿಸಿಕೊಳ್ಳುತ್ತಾರೆ. ಪತಂಜಲಿಯ ಯೋಗಸೂತ್ರದ ಹಠಯೋಗಸಂಹಿತೆಯಲ್ಲೂ ಇತ್ತೀಚಿನ ಯೋಗವಾಸಿಷ್ಠ ಎಂಬ ಗ್ರಂಥದಲ್ಲೂ ಗೂಢವೂ ದುರ್ಗಮವೂ ಆದ ಈ ವಿಷಯಗಳ ವಿವರಗಳಿವೆ.

19ನೆಯ ಶತಮಾನದ ಆದಿಯಲ್ಲಿ ಮೆಸ್ಮರ್ ಎಂಬುವನು ಆಗಿಂದಾಗ್ಗೆ ತನ್ನ ಪರೀಕ್ಷೆಗೊಳಗಾದ ಅಪ್ರಜ್ಞಾವಸ್ಥಿತ ವ್ಯಕ್ತಿಗಳಲ್ಲಿ ಅತೀಂದ್ರಿಯ ದೃಷ್ಟಿಯಂತೆ ತೋರುವ ಚಿಹ್ನೆಗಳನ್ನು ಕಂಡ. ಅಲ್ಲದೆ ನಿದ್ರೆಯಲ್ಲಿ ಓಡಾಡುವ ಕೆಲವು ವ್ಯಕ್ತಿಗಳು ಭೂತ ಭವಿಷ್ಯದ್ವಿದ್ಯಮಾನಗಳನ್ನು ಸ್ಪಷ್ಟವಾಗಿಕಾಣುವುದನ್ನು ತೋರಿಸಿದ. 1825ರಲ್ಲಿ ಹಸ್ಸನ್ ನಿದ್ರಾವಸ್ಥೆಯಲ್ಲಿ ಅಯತ್ನಚಲನೆಯಾಗುವುದನ್ನು ತೋರಿಸಿ, ಈ ವಿಶೇಷಾವಸ್ಥೆಗಳು ಅತೀಂದ್ರಿಯ ದೃಷ್ಟಿಗೆ ಪೋಷಕವಾಗಿವೆಯೆಂದು 19ನೆಯ ಶತಮಾನದುದ್ದಕ್ಕೂ ಫ್ಲೆಮೇರಿಯನ್, ಮೈಯರ್ಸ್, ಗರ್ನಿ, ಪ್ಯಾಡ್‌ಮೋರ್, ರೀಷೆ, ಟಿಚ್ನರ್, ಸಿಡ್ಜ್‌ವಿಕ್, ಬ್ಯಾರೆಟ್, ಸಿಂಕ್ಲೇರ್ ಮತ್ತು ಇತರರು ಅಮೆರಿಕ, ಇಂಗ್ಲೆಂಡ್ ಮತ್ತು ಜರ್ಮನಿಗಳಲ್ಲಿ ವಿವಿಧವಿಧಾನಗಳಲ್ಲಿ ಅತೀಂದ್ರಿಯ ಅರಿವಿನ ಮೇಲೆ ಪ್ರಯೋಗಗಳನ್ನು ನಡೆಸಿದರು.

ರೈನ್, ಆ್ಯಡಮ್, ಮೆಗ್ಡುಗಲ್, ಝೆನರ್, ಲಂಡ್‌ಹೋಮ್ ಇವರು ಇಸ್ಪೀಟು ಎಲೆ ಊಹಿಸುವ (ಕಾರ್ಡ್ ಗೆಸ್ಸಿಂಗ್) ವಿಧಾನದಿಂದ ಅತೀಂದ್ರಿಯ ಅರಿವಿನ ಬಗ್ಗೆ ಪ್ರಯೋಗಗಳನ್ನು ನಡೆಸಿದರು. ಇಂದು ಈ ಪ್ರಯೋಗಗಳಿಗೆ ರೇಖಾ ಚಿತ್ರಗಳು, ಝೆನರ್ ಎಲೆಗಳು ಎಲ್ಲೆಲ್ಲೂ ಬಳಕೆಯಲ್ಲಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲೂ ದಿವಂಗತ ಎಂ. ವಿ. ಗೋಪಾಲಸ್ವಾಮಿಯವರ ಮಾರ್ಗದರ್ಶನದಲ್ಲಿ ಅತೀಂದ್ರಿಯ ಅರಿವಿನ ಪರೀಕ್ಷೆಗಳಿಗೆ ಚಿತ್ರ ರೂಪ ಪ್ರಾಣಿ ಬಣ್ಣ ಶಬ್ದ ಭಾವನೆ–ಇವುಗಳನ್ನೂ ಮನೋಗತಿ ಪರೀಕ್ಷೆಗಳಿಗೆ ಉರುಳುವ ದಾಳ ಕವಡೆ ನಾಣ್ಯ ಮುಂತಾದುವನ್ನೂ ಉಪಯೋಗಿಸಲಾಯಿತು. ಆ ಪ್ರಯೋಗಗಳನ್ನು ಸ್ನೇಹಿತರು ಮಕ್ಕಳು ಗಂಡ–ಹೆಂಡಿರು ತಂದೆ–ಮಕ್ಕಳು ಒಂದೇ ಬಗೆಯ ಅವಳಿಜವಳಿಗಳು, ಬ್ರಾತ್ರೀಯ ಅವಳಿಮಕ್ಕಳು – ಇವರುಗಳ ಮೇಲೆ ವಿವಿಧ ಸ್ಥಿತಿಗತಿಗಳಲ್ಲಿ ನಡೆಸಲಾಯಿತು. ದಾಳಗಳನ್ನು ಕೈಯಿಂದಲೂ ಯಾಂತ್ರಿಕವಾಗಿಯೂ ಉರುಳಿಸಲು ಸುಧಾರಿತ ಸಲಕರಣೆಗಳನ್ನು ಅಳವಡಿಸಿಕೊಳ್ಳಲಾಗಿತ್ತು.

1957–59ರಲ್ಲಿ ಇದೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕುಪ್ಪಸ್ವಾಮಿಯವರ ಮಾರ್ಗದರ್ಶನದಲ್ಲಿ ಎಲ್.ನಾರಾಯಣರಾವ್ ಪವಾರರೊಡನೆ ಅಮೆರಿಕದ ಗಾರ್ಡಿನರ್ ಮರ್ಫಿಯವರ ಕೋರಿಕೆಯ ಮೇಲೆ ಅತೀಂದ್ರಿಯ ಅರಿವಿನ ಮೇಲೆ ಬೌದ್ಧಿಕ ಶಿಕ್ಷಣದ ಪ್ರಭಾವ, ಸಾಮೂಹಿಕ ಅಥವಾ ವೈಯಕ್ತಿಕ ಪ್ರಭಾವ, ವರ್ಗಾವಣೆಯ ಮೇಲೆ ಅಂತರದ ಪ್ರಭಾವ – ಇವುಗಳನ್ನು ಕುರಿತು ಅನೇಕ ಪರೀಕ್ಷೆಗಳನ್ನು ನಡೆಸಲಾಯಿತು. ಅವುಗಳ ಫಲಿತಾಂಶಗಳು ಅರ್ಥಗರ್ಭಿತವೂ ಕುತೂಹಲ ಪ್ರಚೋದಕವೂ ಆಗಿವೆ.

ಕೇವಲ ಬೌದ್ಧಿಕ ಕುತೂಹಲದಿಂದ ಹುಟ್ಟಿ, ವಿಹಾರಕ್ಷೇತ್ರವಾಗಿ ಬೆಳೆದರೂ ಅತಿಮಾನಸಕ್ಷೇತ್ರದ ಅಧ್ಯಯನ ಶಾಸ್ತ್ರೀಯತೆಯ ಶಿಸ್ತು, ಕಟ್ಟುನಿಟ್ಟು, ಪ್ರೌಢಿಮೆಗಳನ್ನು ಈ ಶತಮಾನದಲ್ಲಿ ಪಡೆಯಿತು. ಇತರ ವಿದ್ಯಾಂಗಗಳ ಪ್ರಗತಿಗೆ ಹೋಲಿಸಿದರೆ ಇದರ ಬೆಳವಣಿಗೆ ನಿಧಾನವೆಂದು ತೋರುವುದಾದರೂ ಈ ಅಧ್ಯಯನ ಮನಶ್ಶಾಸ್ತ್ರದ ಒಂದು ಮಹತ್ತರ ವಿಭಾಗವಾಗಿ ಬೆಳೆದುಬಂದಿದ್ದು, ತನ್ನದೇ ಆದ ವಿಶಿಷ್ಟ ಅಸ್ತಿತ್ವವನ್ನು ಪಡೆದಿರುವುದು ವಿಶೇಷ ಆಶಾದಾಯಕ ಸಂಗತಿ. ಮನುಷ್ಯನ ವ್ಯಕ್ತಿತ್ವದ ನಿರಂತರ ಪೂರ್ಣವಿಕಾಸಕ್ಕೆ ಅತಿಮಾನಸದಿಂದ ಪಡೆಯಬಹುದಾದ ಸ್ಫೂರ್ತಿ, ಶಕ್ತಿ ಮತ್ತು ಸಹಾಯ ಅಮಿತವಾಗಿದೆ ಎಂಬ ಅರಿವು ಈಗೀಗ ದೃಢವಾಗುತ್ತಿದೆ. (ಎಲ್.ಎನ್.ಪಿ.)

**ಅತಿರಕ್ತ ರಶ್ಮಿಪುಂಜ :** 1800ನೆಯ ಇಸವಿಯಲ್ಲಿ ಸೂರ್ಯರಶ್ಮಿಯ ರೋಹಿತವನ್ನು ಪರಿಶೀಲಿಸುತ್ತಿದ್ದ ಇಂಗ್ಲೆಂಡಿನ ಖ್ಯಾತ ಖಗೋಳಶಾಸ್ತ್ರಜ್ಞ ಸರ್ ವಿಲಿಯಂ ಹರ್ಷೆಲ್ ಬೆಳಕಿನ ಭಾಗದಲ್ಲಿ ಮಾತ್ರವಲ್ಲದೆ ಅದರ ಆಚೆಯೂ ಸೂರ್ಯ ರಶ್ಮಿಯ ಶಕ್ತಿ ರೋಹಿತದಲ್ಲಿದೆ ಎಂಬ ಒಂದು ವಿಶೇಷವನ್ನು ಕಂಡ. ಬಿಳಿ ಬೆಳಕಿನ ರೋಹಿತದಲ್ಲಿ ನೀಲಿಯಿಂದ ರಕ್ತ ಬಣ್ಣದವರೆಗೂ ವಿವಿಧ ವರ್ಣಗಳು ಕಾಣಿಸುತ್ತವೆ. ರಕ್ತವರ್ಣಕ್ಕೂ ಆಚೆ ಇರುವ ರಶ್ಮಿಗಳನ್ನು ಅತಿರಕ್ತವಿಕಿರಣಗಳು (ಇನ್ಫ್ರ ರೆಡ್ ರೇಡಿಯೇಷನ್) ಎಂದು ಕರೆದ. ಸೂರ್ಯರಶ್ಮಿಗಳಲ್ಲಿ ಶೇ.ಸು.60 ಅತಿರಕ್ತವಿಕಿರಣಗಳಾಗಿವೆ.

**ವಿದ್ಯುತ್ಕಾಂತ ವಿಕಿರಣಗಳಲ್ಲಿ ಅತಿರಕ್ತರಶ್ಮಿಗಳ ಸ್ಥಾನ :** ಅತಿರಕ್ತರಶ್ಮಿಪುಂಜ ನಮ್ಮ ಚರ್ಮದ ಮೇಲೆ ಬಿದ್ದಾಗ ಶಾಖದ ಅನುಭವವನ್ನುಂಟುಮಾಡುತ್ತದೆ. ದೃಷ್ಟಿಗೋಚರ ರಶ್ಮಿಗಳಿಗೆ ಇರುವ ಗುಣಗಳೆಲ್ಲವೂ ಈ ರಶ್ಮಿಗಳಿಗೂ ಇರುತ್ತವೆ; ಆದರೆ ಪ್ರಮಾಣದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. ಇದರ ಚಲಿಸುವ ವೇಗವೂ ಬೆಳಕಿನ ವೇಗದಷ್ಟೇ. ಅಂದರೆ $3\times10^{10}$ಸೆಂಮೀ./ಸೆ. ಈ ಕಿರಣಗಳೂ ಕೆಲವು ಪಾರಕ ವಸ್ತುಗಳ ಮೂಲಕ ಹಾಯಬಲ್ಲುವು. ಅಪಾರಕ ವಸ್ತುಗಳು ಇವನ್ನು ಪ್ರತಿಫಲಿಸುತ್ತವೆ. ಆದರೆ ಬೆಳಕಿಗೆ ಪಾರಕವಾದ ವಸ್ತುಗಳು ಅತಿರಕ್ತರಶ್ಮಿಪುಂಜಕ್ಕೆ ಅಪಾರಕವಾಗಿಯೂ ಬೆಳಕಿಗೆ ಅಪಾರಕವಾದ ವಸ್ತುಗಳು ಅತಿರಕ್ತರಶ್ಮಿಪುಂಜಕ್ಕೆ ಪಾರಕವಾಗಿಯೂ ಇರುವುದೂ ಉಂಟು.



ಚಿತ್ರ 1.

ಹೀಗೆ ಹಲವು ಸಾಮಾನ್ಯ ಗುಣಗಳನ್ನುಳ್ಳ ವಿದ್ಯುದ್ಕಾಂತ ಸೂತ್ರವನ್ನು ಪರಿಪಾಲಿಸುವ ಹಲವು ರಶ್ಮಿಪುಂಜಗಳನ್ನು ಒಂದು ಪಂಗಡಕ್ಕೆ ಸೇರಿಸಿ ಇವನ್ನು ವಿದ್ಯುದಯಸ್ಕಾಂತ ರಶ್ಮಿಪುಂಜಗಳೆಂದು ಹೆಸರಿಸುತ್ತೇವೆ. ಈ ಹಲವು ರಶ್ಮಿಗಳ ಮೂಲವೂ ಕಂಡುಹಿಡಿಯುವ ಸಾಧನಗಳಲ್ಲಿ ಕೆಲವು ಗುಣಗಳೂ ಬೇರೆ ಬೇರೆಯಾಗಿದ್ದರೂ ಇವೆಲ್ಲ ಒಂದೇ ಬಗೆಯ ಅಲೆಗಳಾಗಿವೆ. ಅಲೆಗಳ ತರಂಗದೂರದ ವ್ಯತ್ಯಾಸವೇ ಹಲವು ರಶ್ಮಿಗಳ ಗುಣಗಳ ವೈವಿಧ್ಯಕ್ಕೆ ಕಾರಣ. ಅತಿ ಹ್ರಸ್ವತರಂಗದೂರದ ರಶ್ಮಿಪುಂಜಗಳು ಗ್ಯಾಮ ರಶ್ಮಿಪುಂಜಗಳಾಗಿದ್ದು, ಅತಿ ದೀರ್ಘ ತರಂಗಮಾನದವು ರೇಡಿಯೋ ರಶ್ಮಿಪುಂಜಗಳಾಗಿರುತ್ತವೆ. ಈ ಎರಡು ತುದಿಗಳ ನಡುವೆ ಎಕ್ಸ್–ಕಿರಣ, ಅತಿನೇರಿಳೆ ವಿಕಿರಣ, ದೃಷ್ಟಿಗೋಚರ ಬೆಳಕು, ಅತಿರಕ್ತವಿಕಿರಣ, ರೇಡಿಯೋ ಅಲೆಗಳು ಕ್ರಮವಾಗಿ ಬರುತ್ತವೆ.

**ಅಳತೆಗೋಲುಗಳು :** ಅತಿರಕ್ತವಿಕಿರಣದ ತರಂಗದೂರವನ್ನು ಮೈಕ್ರಾನ್‌ಮಾನಗಳಲ್ಲಿ ಅಳೆಯುತ್ತೇವೆ. ಇದನ್ನು ಸೂಚಿಸುವ ಚಿಹ್ನೆ ಗ್ರೀಕ್ ಅಕ್ಷರವಾದ ì(ಮ್ಯೂ) 1ಮೀಟರ್ = 1,000,000 ì; 1ಮಿಲಿ ಮೀಟರ್ = 1000 ì; 1 ì= 10,000 ಆಂಗ್‌ಸ್ಟ್ರಾಂ ಮಾನಗಳು. 0.8–2.5 ì ವರೆಗಿರುವ ಕಿರಣಗಳಿಗೆ ಮಧ್ಯಾತಿರಕ್ತಕಿರಣಗಳು, 50–1,000 ì ವರೆಗಿರುವ ಕಿರಣಗಳಿಗೆ ದೂರಾತಿರಕ್ತಕಿರಣಗಳು ಎಂದು ಹೆಸರು.

**ಅತಿರಕ್ತವಿಕಿರಣದ ಮೂಲಗಳು :** ಕೃಷ್ಣ ವಸ್ತುವಿನ ರಶ್ಮಿಪುಂಜ ಮತ್ತು ಸೂರ್ಯರಶ್ಮಿ ಪುಂಜದಲ್ಲಿ ಅತಿರಕ್ತ ರಶ್ಮಿಗಳು ಹೇರಳವಾಗಿವೆ. ಬಿಸಿಯಾದ (ಎಂದರೆ $0^{o}$Ė ಉಷ್ಣತೆಗಿಂತ ಹೆಚ್ಚಾದ ಉಷ್ಣತೆಯನ್ನುಳ್ಳ) ಎಲ್ಲ ವಸ್ತುಗಳೂ ಅತಿರಕ್ತವಿಕಿರಣವನ್ನು ಉತ್ಸರ್ಜಿಸುತ್ತವೆ. ವಸ್ತುವಿನ ಉಷ್ಣತೆಯನ್ನು ಅವಲಂಬಿಸಿ ಹಾಗೂ ಅದರ ಮೇಲ್ಮೈಯ ಗುಣಗಳಿಗೆ ಹೊಂದಿಕೊಂಡು ರಶ್ಮಿಗಳು ಯಾವ ಯಾವ ತರಂಗದೂರದಲ್ಲಿ ಯಾವ ಯಾವ ಪ್ರಮಾಣದಲ್ಲಿ ಇರುತ್ತವೆಯೆಂಬುದು ನಿಶ್ಚಿತವಾಗುತ್ತದೆ. ಸಂಪೂರ್ಣ ಕೃಷ್ಣ ವಸ್ತುವಿನ ಉತ್ಸರ್ಜನೆಯೇ ಈ ವಸ್ತುಗಳ ಉತ್ಸರ್ಜನೆಗೆಲ್ಲ ಮಾದರಿಯಾಗಿರುತ್ತದೆ. ಉಷ್ಣತೆ ಹೆಚ್ಚಾಗಿದ್ದಾಗ ಅತಿನೇರಿಳೆ ರಶ್ಮಿಗಳು ಮತ್ತು ದೃಷ್ಟಿಗೋಚರ ರಶ್ಮಿಗಳು ಅಧಿಕವಾಗಿದ್ದು ಅತಿರಕ್ತರಶ್ಮಿಗಳ ಪ್ರಮಾಣ ಸ್ವಲ್ಪವಾಗಿರುತ್ತದೆ. ಉಷ್ಣತೆ ಕಡಿಮೆಯಾದ ಹಾಗೆಲ್ಲ ಹೆಚ್ಚು ಹೆಚ್ಚು ಪ್ರಮಾಣದ ಶಕ್ತಿ ಅತಿರಕ್ತ ರಶ್ಮಿಗಳ ರೂಪದಲ್ಲಿ ಉತ್ಸರ್ಜಿತವಾಗುತ್ತದೆ. ಸು. $1000^{o}$.K ಗಿಂತ ಕಡಿಮೆ ಉಷ್ಣತೆಯ ವಸ್ತುವಿನಲ್ಲಿ ದೃಷ್ಟಿಗೋಚರ ಶಕ್ತಿ ಅತ್ಯಲ್ಪವಾಗಿದ್ದು ಅತಿರಕ್ತರಶ್ಮಿಪುಂಜವೇ ಹೆಚ್ಚಾಗಿ ಹೊರಬೀಳುತ್ತದೆ. ಆದ್ದರಿಂದ ಕಾದ ವಸ್ತುಗಳೆಲ್ಲವೂ ಅತಿರಕ್ತರಶ್ಮಿಪುಂಜದ ಮೂಲವಾಗಿ ಪರಿಣಮಿಸುತ್ತವೆ. ಉದಾಹರಣೆಗೆ, ನರ್ನ್‌ಸ್ಟ್ ಫಿಲಮೆಂಟ್ ದೀಪದಲ್ಲಿ ವಿದ್ಯುಚ್ಛಕ್ತಿಯಿಂದ ಕಾಯಿಸಲಾದ ಒಂದು ತಂತಿ ಅತಿರಕ್ತರಶ್ಮಿಪುಂಜದ ಮೂಲವಾಗಿರುತ್ತದೆ. ಮಾನವನ ಶರೀರವೂ ಅತಿರಕ್ತರಶ್ಮಿಪುಂಜಗಳನ್ನು ಹೊರಸೂಸುತ್ತದೆ.

ಉಷ್ಣತೆಯಿಂದೊಡಗೂಡಿದ ಘನವಸ್ತುಗಳಲ್ಲದೆ ಹಲವು ಅನಿಲಗಳೂ ತಮ್ಮಲ್ಲಿರುವ ಅಣುಗಳು ಉದ್ರಿಕ್ತಗೊಂಡಾಗ ನಿರ್ದಿಷ್ಟತರಂಗದೂರದ ಅತಿರಕ್ತರಶ್ಮಿಪುಂಜವನ್ನು ಹೊರಸೂಸುತ್ತವೆ. ಲೇಸರ್ ಉಪಕರಣಗಳು ಏಕವರ್ಣೀಯವಾದ (ಎಂದರೆ ಒಂದೇ ತರಂಗದೂರದ) ಅತಿರಕ್ತರಶ್ಮಿಪುಂಜದ ಪ್ರಬಲಮೂಲಗಳಾಗಿವೆ.

**ವಾತಾವರಣದಲ್ಲಿ ಅತಿರಕ್ತರಶ್ಮಿಪುಂಜದ ಪ್ರಸಾರ :** ಬೆಳಕಿನಂತೆಯೇ ಅತಿರಕ್ತ ರಶ್ಮಿಗಳೂ ವಾತಾವರಣದಲ್ಲಿ ಬೆಳಕಿನ ವೇಗದಲ್ಲಿ ಚಲಿಸುತ್ತವೆ. ಆದರೆ ವಾತಾವರಣದಲ್ಲಿರುವ ನೀರಿನ ಹಬೆ ಅತಿರಕ್ತರಶ್ಮಿಯ ಕೆಲವು ಭಾಗಗಳನ್ನು ಹೀರುವುದರಿಂದ ಅತಿರಕ್ತರಶ್ಮಿಗಳ ಕೆಲವು ತರಂಗದೂರಗಳು ಮಾತ್ರ ವಾತಾವರಣದ ಮೂಲಕ ಪ್ರಸಾರವಾಗುತ್ತವೆ. ಇವನ್ನು ವಿಕಿರಣ ಪಾರಕ ಕಿಟಕಿಗಳೆಂದು ಕರೆಯುತ್ತಾರೆ. ಇತರ ಯಾವ ತರಂಗಾಂತರಗಳೂ ಪ್ರಸಾರವಾಗದೆ ಜೀರ್ಣವಾಗಿ ಹೋಗುತ್ತವೆ. ಉದಾಹರಣೆಗೆ, $8u$–$13\ u$ ಮಧ್ಯೆ ಇಂಥ ಮುಖ್ಯವಾದ ಒಂದು ಕಿಟಕಿ ಇದೆ.

**ಪಾರಕತೆ :** ಬೇರೆ ಬೇರೆ ವಸ್ತುಗಳು ಬೇರೆ ಬೇರೆ ಪ್ರಮಾಣದಲ್ಲಿ ಅತಿರಕ್ತಕಿರಣಗಳು ಮತ್ತು ಬೆಳಕು ಪ್ರಸಾರವಾಗಲು ಅವಕಾಶ ಮಾಡಿಕೊಡುತ್ತವೆ. ಉದಾಹರಣೆಗೆ, ಬೆಳಕಿಗೆ ಪೂರ್ಣಪಾರಕವಾದ ಸಾಧಾರಣವಾದ ಗಾಜು ಅತಿರಕ್ತಕಿರಣಗಳ ಮುಖ್ಯಾಂಶಗಳಿಗೆ ಅಪಾರಕವಾಗಿದೆ; ಬೆಳಕಿಗೆ ಅಪಾರಕವಾದ ಜರ್ಮೇನಿಯಂ ಧಾತು ಪಾರಕವಾಗಿದೆ. ಈ ಗುಣಗಳನ್ನು ಪಾರಗಮ್ಯತೆ (ಟ್ರಾನ್ಸ್‌ಮಿಟೆನ್ಸ್) ಮತ್ತು ಹೀರುವ ಶಕ್ತಿ (ಅಬ್ಸಾರ್‌ಬನ್ಸ್) ಎಂಬ ಮಾನಗಳಿಂದ ಅಳೆಯಬಹುದು.

**ಅತಿರಕ್ತ ವಿಕಿರಣವನ್ನು ಗುರುತಿಸುವಿಕೆ :** ಎರಡು ಮುಖ್ಯವಾದ ತತ್ತ್ವಗಳನ್ನು ಉಪಯೋಗಿಸಿಕೊಂಡು ಅತಿರಕ್ತವಿಕಿರಣವನ್ನು ಪತ್ತೆಮಾಡಬಹುದು ಹಾಗೂ ಅಳೆಯಬಹುದು.

ಉಷ್ಣತೆಯ ತತ್ತ್ವವನ್ನು ಉಪಯೋಗಿಸಿಕೊಂಡು ಹಲವು ಯಂತ್ರಗಳು ಅತಿರಕ್ತವಿಕಿರಣವನ್ನು ಪತ್ತೆಮಾಡಿ ಅಳೆಯುತ್ತವೆ. ಇವುಗಳಲ್ಲಿ ವಿಕಿರಣದಿಂದ ಉಂಟಾದ ಉಷ್ಣತೆಯನ್ನು ವಿವಿಧ ವಿಧಾನಗಳಿಂದ ಅಳೆಯಲಾಗುತ್ತದೆ.

**ರಶ್ಮಿಪುಂಜ ಥರ್ಮೋಪೈಲ್:** ಎರಡು ವಿವಿಧ ಲೋಹಗಳ ಕಂಬಿಗಳನ್ನು ತುದಿಗಳಲ್ಲಿ ಸೇರಿಸಿ ಆ ಎರಡು ಸಂಗಮಗಳ(ಜಾಯಿಂಟ್ಸ್) ನಡುವಿನ ಉಷ್ಣತೆಯನ್ನು ವ್ಯತ್ಯಾಸ ಮಾಡಿದರೆ ಸಂಗಮಗಳ ನಡುವೆ ವಿದ್ಯುತ್‌ಪ್ರವಾಹ ಉಂಟಾಗುತ್ತದೆ. ಇದನ್ನು ಥರ್ಮೋಕಪಲ್ ಎಂದು ಕರೆಯುತ್ತೇವೆ. ಹಲವು ಥರ್ಮೋಕಪಲ್‌ಗಳನ್ನು ಅವುಗಳ ತಂಪು ಸಂಗಮಗಳು ಹಾಗೂ ತಪ್ತ ಸಂಗಮಗಳು ಸಮನಾದ ಉಷ್ಣತೆಗಳಲ್ಲಿ ಇರುವಂತೆ ಮಾಡಿದರೆ ಆಗ ವಿದ್ಯುತ್ಪ್ರವಾಹ ಇನ್ನೂ ಅಧಿಕವಾಗುತ್ತದೆ. ಈ ಥರ್ಮೋಕಪಲ್‌ಗಳ ಸಮೂಹವನ್ನು ಥರ್ಮೋಪೈಲ್ ಎಂದು ಕರೆಯುತ್ತೇವೆ. ತಪ್ತ ಸಂಗಮಗಳನ್ನೆಲ್ಲಾ ಒಳಬರುವ ರಶ್ಮಿಪುಂಜಕ್ಕೆ ಎದುರಾಗಿದ್ದರೆ ರಶ್ಮಿಪುಂಜದಿಂದುಂಟಾದ ಉಷ್ಣತೆಯನ್ನು ಅಳೆಯಬಹುದು. ಇದರ ಪ್ರಭಾವ ಹೆಚ್ಚಾಗಬೇಕಾದರೆ ತಪ್ತಸಂಗಮಗಳಿಗೆ ಕಪ್ಪು ಬಣ್ಣವನ್ನು ಬಳಿಯಬಹುದು. ಕಪ್ಪುಬಣ್ಣ ರಶ್ಮಿಪುಂಜವನ್ನೆಲ್ಲ ಚೆನ್ನಾಗಿ ಹೀರಿ ಉಷ್ಣತೆಯನ್ನು ಹೆಚ್ಚಾಗಿ ಒದಗಿಸುತ್ತದೆ. ಗಾತ್ರದಲ್ಲಿ ದೊಡ್ಡದಾಗಿರುವ ಈ ಯಂತ್ರ ಸೂಕ್ಷ್ಮವಾದ ರಶ್ಮಿಪುಂಜವನ್ನು ಪತ್ತೆ ಹಚ್ಚುತ್ತದೆ.

**ಬೋಲೋಮೀಟರ್ :** ಉಷ್ಣತೆಯಿಂದ ಸೂಕ್ಷ್ಮವಾದ ಪ್ರತಿರೋಧ ತಂತಿಯಲ್ಲಿ ವಿದ್ಯುತ್‌ಪ್ರತಿರೋಧ ಹೆಚ್ಚಾದುದನ್ನು ಅಳೆಯುವುದರಿಂದ ರಶ್ಮಿಪುಂಜದ ಶಕ್ತಿಯನ್ನು ಅಳೆಯಬಹುದು. ಇದು ಬಹು ಸಣ್ಣ ಉಪಕರಣ. ಉಷ್ಣತೆಯಿಂದ ವ್ಯತ್ಯಾಸವಾಗುವ ಥರ್ಮಿಸ್ಟರ್ ಎಂಬ ವಿದ್ಯುತ್‌ಪ್ರತಿರೋಧ ಸಲಕರಣೆಗಳನ್ನೂ ಈ ಯಂತ್ರದಲ್ಲಿ ಉಪಯೋಗಿಸಲಾಗಿದೆ.

**ಕ್ವಾಂಟಂ ಸಾಧನೆಗಳು :** ಅತಿರಕ್ತರಶ್ಮಿಪುಂಜಶಕ್ತಿಯ ಕ್ವಾಂಟಂಗಳು (ಶಕ್ತಿಯ ಅತಿಸಣ್ಣವಾದ ರೂಪ, ಶಕಲ) ಒಂದು ವಿಶೇಷ ಸಾಧನದಿಂದ ವಿದ್ಯುತ್ಪ್ರವಾಹವಾಗಿ ಪರಿಣಮಿಸುತ್ತವೆ. ವಿದ್ಯುತ್ಪ್ರವಾಹದ ಶಕ್ತಿ ರಶ್ಮಿಪುಂಜದ ಶಕ್ತಿಯನ್ನು ಅಳೆಯುತ್ತದೆ. ಈಚೆಗೆ ಇವುಗಳ ಬಳಕೆ ಹೆಚ್ಚಿದೆ.

**ಫೋಟೋವೋಲ್ಟಾಯಿಕ್ ಕೋಶಗಳು :** ಈ ಕೋಶಗಳಲ್ಲಿರುವ ಲೆಡ್ ಸಲ್ಫೈಡ್, ಲೆಡ್ ಸೆಲೆನೈಡ್ ಮೊದಲಾದ ವಸ್ತುಗಳ ಮೇಲೆ ಬೆಳಕು ಅಥವಾ ಅತಿರಕ್ತರಶ್ಮಿಪುಂಜ ಬಿದ್ದರೆ ವಿದ್ಯುತ್ಪ್ರವಾಹ ಉತ್ಪತ್ತಿಯಾಗುತ್ತದೆ. ಈ ಕ್ರಮದಿಂದಲೂ ಅತಿರಕ್ತರಶ್ಮಿಪುಂಜವನ್ನು ಗುರುತಿಸಬಹುದು.

ಜರ್ಮೇನಿಯಂ, ಸಿಲಿಕಾನ್ ಮೊದಲಾದ ಅರೆವಾಹಕಗಳನ್ನು (ಸೆಮಿ ಕಂಡಕ್ಟರ್) ಉಪಯೋಗಿಸಿ ತಯಾರಿಸಿದ ಡಯೋಡ್ ಮತ್ತು ಟ್ರಾನ್ಸಿಸ್ಟರುಗಳಲ್ಲಿನ ವಿದ್ಯುತ್ ಪ್ರತಿರೋಧದ ಮೇಲೆ ಅತಿರಕ್ತರಶ್ಮಿಪುಂಜಗಳು ಪರಿಣಾಮಬೀರುತ್ತವೆ. ಈ ಪರಿಣಾಮದಿಂದಾಗಿ ಅತಿರಕ್ತರಶ್ಮಿಪುಂಜಗಳನ್ನು ಪತ್ತೆ ಮಾಡುವಲ್ಲಿ ಅತಿವಾಹಕಗಳನ್ನು ಉಪಯೋಗಿಸಲಾಗುತ್ತಿದೆ.

**ಉಪಯೋಗಗಳು :** ಅತಿರಕ್ತರಶ್ಮಿಪುಂಜದ ಉಪಯೋಗಗಳಿಗೆ ಮಿತಿಯೇ ಇಲ್ಲ. ಕೆಲವು ಮುಖ್ಯ ಉಪಯೋಗಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ:

**1. ಬಿಸಿಲಿನ ಮೂಲಕ :** ಸೂರ್ಯನ ಬಿಸಿಲನ್ನು ನಾವು ಲೆಕ್ಕವಿಲ್ಲದಷ್ಟು ವಿಧಗಳಲ್ಲಿ ಉಪಯೋಗಿಸುತ್ತೇವೆ. ಬಿಸಿಲಿನ ಶಾಖದಿಂದ ಬಟ್ಟೆಗಳನ್ನು ಒಗೆದ ಅನಂತರ ಅವುಗಳನ್ನು ಒಣಗಿಸಲು, ತರಕಾರಿಗಳನ್ನು ಒಣಗಿಸಿ ಬಾಳಕಮಾಡಲು, ಹಪ್ಪಳ, ಸಂಡಿಗೆಗಳನ್ನು ತಯಾರಿಸಲು ಅಥವಾ ಸೌರ ಒಲೆ ಮೊದಲಾದ ಉಪಕರಣಗಳಲ್ಲಿ ನೀರನ್ನು ಕಾಯಿಸಲು ಶಾಖ ನೀಡುವ ಅತಿರಕ್ತ ವಿಕಿರಣಗಳ ಬಳಕೆಯಾಗುತ್ತದೆ.

**2. ಕೃತಕಮೂಲಗಳಿಂದ :** ವಿವಿಧ ಅತಿರಕ್ತ ದೀಪಗಳು, ವಿದ್ಯುತ್ಪ್ರವಾಹದಿಂದಲೊ ಬೇರೆ ವಿಧಾನದಿಂದಲೊ ಕಾದ ಲೋಹದಿಂದಲೊ ಅತಿರಕ್ತರಶ್ಮಿಪುಂಜ ಉತ್ಪತ್ತಿಯಾಗಿ ಒಣಗಿಸುವ, ಕಾಯಿಸುವ, ಕೆಲವು ರಾಸಾಯನಿಕ ಕ್ರಿಯೆಗಳನ್ನು ಪ್ರಚೋದಿಸುವ ಅಥವಾ ವೈದ್ಯಕೀಯ ಕಾರ್ಯಗಳು–ಹೀಗೆ ಅನೇಕ ಉಪಯೋಗಕ್ಕೆ ಬರುತ್ತವೆ. ಲೇಸರ್ ಉಪಕರಣವನ್ನು ಬಳಸಿ ಈ ರಶ್ಮಿಪುಂಜವನ್ನು ಪಡೆಯಬಹುದು.

**3. ಕತ್ತಲಲ್ಲಿ ನೋಡುವ ದೃಷ್ಟಿ :** ಎರಡನೆಯ ಮಹಾಯುದ್ಧದಲ್ಲಿ ಕತ್ತಲಲ್ಲಿ ಶತ್ರುಗಳಿಗೆ ಗೊತ್ತಾಗದಂತೆಯೇ ಅವರನ್ನೂ ಅವರ ವಾಹನ ಶಸ್ತ್ರಾದಿಗಳನ್ನೂ ಕಂಡುಹಿಡಿಯುವ ಮತ್ತು ಕತ್ತಲಲ್ಲಿ ಬೆಳಕಿನ ಉಪಯೋಗವಿಲ್ಲದೆಯೇ ವಾಹನಗಳನ್ನು ಓಡಿಸಲು ಸಹಾಯ ಮಾಡುವ ಯಂತ್ರಗಳನ್ನು ತಯಾರಿಸಲು ಈ ಪುಂಜವನ್ನು ಉಪಯೋಗಿಸಲಾಯಿತು. ಇವುಗಳಲ್ಲಿ ಸ್ನೂಪರ್‌ಸ್ಕೋಪ್ ಮತ್ತು ಸ್ನೈಪರ್‌ಸ್ಕೋಪ್ ಪ್ರಸಿದ್ಧವಾಗಿವೆ. ಈ ಯಂತ್ರಸಾಧನಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.



ಚಿತ್ರ 2.

**3a. ಸಾಕ್ಷಿಯಂತ್ರಗಳು :** ಈ ಯಂತ್ರಗಳು ಶತ್ರುಗಳೂ ಅವರ ವಾಹನಾದಿಗಳೂ ಹೊರಸೂಸುವ ಅತಿರಕ್ತಕಿರಣಗಳನ್ನು ಉಪಯೋಗಿಸಿಕೊಂಡು ಇವನ್ನು ವಿಶೇಷಸಾಧನಗಳಿಂದ ದೃಗ್ಗೋಚರ ಬೆಳಕಿಗೆ ಪರಿವರ್ತಿಸಿ ನೋಡುವುದಕ್ಕೆ ಅವಕಾಶವನ್ನುಂಟುಮಾಡುತ್ತವೆ. ಈ ಸಾಧನೆಯಲ್ಲಿನ ಮುಖ್ಯಭಾಗವೆಂದರೆ ಪ್ರತಿಬಿಂಬವನ್ನು ಮಾರ್ಪಡಿಸುವ ಕೊಳವೆ.

**ಪ್ರತಿಬಿಂಬವನ್ನು ಮಾರ್ಪಡಿಸುವ ಕೊಳವೆ :** ಇದು ಒಂದು ವಿಧವಾದ ಶೂನ್ಯ ನಳಿಕೆ. ಮೃದಂಗದ ಆಕಾರವನ್ನು ಹೊಂದಿದ ಈ ಸಣ್ಣ ಸಾಧನದ ಒಂದು ಪಾರ್ಶ್ವದ ಮೇಲೆ ಬಿದ್ದ ಅತಿರಕ್ತರಶ್ಮಿಗಳಿಂದ ಉಂಟಾದ ಚಿತ್ರ ಅದರ ಎದುರು ಪಾರ್ಶ್ವದ ಮೇಲೆ ದೃಗ್ಗೋಚರ ಬೆಳಕಿನ ಚಿತ್ರವಾಗಿ ಮಾರ್ಪಡುತ್ತದೆ. ಮೊದಲ ಪಾರ್ಶ್ವದ ಒಳಭಾಗದಲ್ಲಿನ ಅತಿರಕ್ತರಶ್ಮಿಪುಂಜಕ್ಕೆ ಪ್ರತಿಕ್ರಿಯೆ ತೋರುವ ವಸ್ತುವೊಂದನ್ನು ಲೇಪಿಸಲಾಗುತ್ತದೆ. ಅತಿರಕ್ತರಶ್ಮಿಪುಂಜಗಳು ಬಿದ್ದ ಎಲ್ಲ ಭಾಗಗಳಿಂದಲೂ ರಶ್ಮಿಗಳ ತೀವ್ರತೆಗೆ ಅನುಗುಣವಾದ ಸಂಖ್ಯೆಯ ಎಲೆಕ್ಟ್ರಾನ್‌ಗಳನ್ನು ಆ ವಸ್ತು ಹೊರದೂಡುತ್ತದೆ. ಹೊರಬಿದ್ದ ಎಲೆಕ್ಟ್ರಾನ್‌ಗಳನ್ನು ವಿದ್ಯುಚ್ಛಕ್ತಿಯಿಂದ ಆಕರ್ಷಿಸಿ ಎದುರು ಪಾರ್ಶ್ವದ ಮೇಲೆ ಬೀಳುವಂತೆ ಮಾಡಲಾಗುತ್ತದೆ. ಈ ಪಾರ್ಶ್ವದಲ್ಲಿ ಜಿಂಕ್ ಸಲ್ಫೈಡ್ ಮೊದಲಾದ ವಸ್ತುಗಳನ್ನು ಉಪಯೋಗಿಸಿ ತಯಾರಿಸಿದ ಪರದೆಯೊಂದು ಇರುತ್ತದೆ. ಎಲೆಕ್ಟ್ರಾನ್‌ಗಳು ತಗುಲಿದ ಭಾಗಗಳಲ್ಲೆಲ್ಲಾ ಎಲೆಕ್ಟ್ರಾನ್‌ಗಳ ಸಂಖ್ಯೆಗನುಗುಣವಾದ ತೀವ್ರತೆಯ ಬೆಳಕಿನ ಚುಕ್ಕೆಗಳು ಕಾಣಿಸುತ್ತವೆ. ಮೊದಲು ಪಾರ್ಶ್ವದ ಮೇಲೆ ಬಿದ್ದ ಈ ಚುಕ್ಕೆಗಳಿಂದಾದ ಅತಿರಕ್ತರಶ್ಮಿಪುಂಜದ ಚಿತ್ರವನ್ನು ಭೂತಗನ್ನಡಿಯ ಸಹಾಯದಿಂದ ದೊಡ್ಡದನ್ನಾಗಿಸಿ ನೋಡಬಹುದು. ಈ ಸಾಧನಕ್ಕೆ ಹೆಚ್ಚಿನ ವಿದ್ಯುತ್ಪ್ರವಾಹ ಆವಶ್ಯಕ.

**ಕಾರ್ಯಕಾರಿ ಯಂತ್ರಗಳು :** ಇವು ಸಾಕ್ಷಿಯಂತ್ರಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿವೆ. ಏಕೆಂದರೆ ಇವು ಅತಿರಕ್ತರಶ್ಮಿಪುಂಜ ದೀಪಗಳನ್ನು ಉಪಯೋಗಿಸಿ ನೋಡಬೇಕಾದ ಕ್ಷೇತ್ರವನ್ನು ಬೆಳಗುತ್ತವೆ. ದೀಪದ ಮುಂದೆ ಇರುವ ಒಂದು ಶೋಧಕ ಅತಿರಕ್ತಪುಂಜವನ್ನು ಮಾತ್ರ ಹೊರಸೂಸುತ್ತಿರುವುದರಿಂದ ಈ ಬೆಳಕು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆದರೆ ಪ್ರತಿಬಿಂಬ ಮಾರ್ಪಡಿಸುವ ಕೊಳವೆಗೆ ಮಾತ್ರ ಕಾಣಿಸುತ್ತದೆ. ಈ ಬಗೆಯ ಯಂತ್ರಗಳ ಉಪಯೋಗಗಳಲ್ಲಿ ಮೊದಲನೆಯದು–ಕತ್ತಲಲ್ಲಿಯೇ ವಾಹನಸಂಚಾರ. ವಾಹನದ ತಲೆದೀಪಗಳಲ್ಲಿ ಶೋಧಕಗಳನ್ನು (ಫಿಲ್ಟರ್) ಜೋಡಿಸಿ ಅವು ಅತಿರಕ್ತರಶ್ಮಿಪುಂಜವನ್ನು ಮಾತ್ರ ಹೊರಗೆಡಹುವಂತೆ ಮಾಡಿ ಚಾಲಕ ಪ್ರತಿಬಿಂಬ ಮಾರ್ಪಡಿಸುವ ಕೊಳವೆಗಳನ್ನೊಳಗೊಂಡ ಕನ್ನಡಕಗಳನ್ನು ಧರಿಸಿಕೊಂಡರೆ ಅವನಿಗೆ ರಸ್ತೆಚೆನ್ನಾಗಿ ಕಾಣುತ್ತದೆ. ಇತರರಿಗೆ ಕಾಣುವುದಿಲ್ಲ.

ಆಕಾಶದಲ್ಲಿ ವೇಗದಿಂದ ಚಲಿಸುವ ವಿಮಾನ ಮುಂತಾದವುಗಳನ್ನು ಹಿಂಬಾಲಿಸಿಕೊಂಡು ಹೋಗಿ ಅವನ್ನು ನಾಶಪಡಿಸಬಲ್ಲ ರಾಕೆಟ್ಟುಗಳನ್ನು ಅತಿರಕ್ತರಶ್ಮಿಪುಂಜದ ಸಹಾಯದಿಂದ ತಯಾರಿಸಲಾಗಿದೆ. ಉದಾಹರಣೆಗೆ, ವಿಮಾನದಿಂದ ವಿಮಾನಕ್ಕೆ ಹಾರುವ ಸೈಡ್‌ವೈಂಡರ್ ಎಂಬ ಅಮೆರಿಕದ ಶಸ್ತ್ರ; ಹಿಂದೆ ರಷ್ಯದಲ್ಲಿ ಅಮೆರಿಕದ ಯು–2 ವಿಮಾನವನ್ನು ಹೊಡೆದುರುಳಿಸಿದ. ನೆಲದಿಂದ ವಿಮಾನಕ್ಕೆ ಹಾರುವ ಶಸ್ತ್ರ. ಈ ಶಸ್ತ್ರಗಳಲ್ಲಿ ಅತಿರಕ್ತರಶ್ಮಿಪುಂಜವನ್ನು ಪತ್ತೆಮಾಡುವ ಸಾಧನವಿರುತ್ತದೆ. ವಿಮಾನ ಮೊದಲಾದ ಗುರಿಗಳು ಅತಿರಕ್ತರಶ್ಮಿಪುಂಜದ ಆಕರಗಳಾಗಿರುವುದರಿಂದ ಅವುಗಳನ್ನು ಇಂಥ ಶಸ್ತ್ರಗಳು ಗುರುತಿಸುತ್ತವೆ. ಶಸ್ತ್ರದಲ್ಲಿರುವ ಯಂತ್ರವಿಶೇಷಗಳು ಅದರ ಚಲನೆಯ ಗತಿಯನ್ನು ಗುರಿಯ ದಿಕ್ಕಿಗೇ ತಿರುಗಿಸುತ್ತವೆ. ಶಸ್ತ್ರದ ವೇಗ ಗುರಿಯ ವೇಗಕ್ಕಿಂತ ಹೆಚ್ಚಾಗಿರುವುದರಿಂದ ಹಾಗೂ ಚಲನೆಯ ಗತಿ ಶೀಘ್ರವಾಗಿ, ಎಡೆಬಿಡದೆ ಗುರಿಯನ್ನೇ ಅನುಸರಿಸುವುದರಿಂದ ಗುರಿಗೆ ಪೆಟ್ಟು ಬಿದ್ದೇ ಬೀಳುತ್ತದೆ.

**ಸಂಪರ್ಕ ಸಾಧನಗಳು :** ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಯ ಸೈನ್ಯ ಆಫ್ರಿಕದಲ್ಲಿ ಅತಿರಕ್ತರಶ್ಮಿಪುಂಜವನ್ನು ಸಂಪರ್ಕಸಾಧನಗಳ ತಯಾರಿಕೆಗೆ ಉಪಯೋಗಿಸಿತ್ತು. ಸುದ್ದಿಯ ಪ್ರೇಷಕಸ್ಥಾನದಲ್ಲಿ ಅತಿರಕ್ತದ ಒಂದು ಪ್ರಬಲವಾದ ದೀಪದಿಂದ ಕಿರಣವೊಂದನ್ನು 4–5 ಮೈಲಿ ದೂರದಲ್ಲಿದ್ದ ಗ್ರಾಹಕ ಸ್ಥಾನಕ್ಕೆ ಕಳುಹಿಸಿ ಅಲ್ಲಿ ಅದನ್ನು ಪತ್ತೆ ಮಾಡುವ ಯಂತ್ರಗಳಿಂದ ಸ್ವೀಕರಿಸಲಾಯಿತು. ಕಳುಹಿಸಬೇಕಾದ ಸಂಕೇತದ ರೂಪದಂತೆಯೇ ಕಿರಣದ ಶಕ್ತಿಯನ್ನೂ ಬದಲಿಸಿದರೆ ಗ್ರಾಹಕಸ್ಥಾನದಲ್ಲಿ ಕಿರಣದ ಬದಲಾಗುವ ರೂಪಗಳಿಂದ ಸಂಕೇತವನ್ನು ಪಡೆಯಬಹುದು. ಸಂಕೇತ ಸಂಜ್ಞೆಗಳು ಧ್ವನಿಯ ರೂಪವನ್ನು ತಳೆದಿದ್ದರೆ, ಸ್ವೀಕೃತವಾದ ಕಿರಣದಲ್ಲಿಯೂ ಧ್ವನಿಸಂಕೇತಗಳು ದೊರೆಯುತ್ತವೆ. ಧ್ವನಿಯ ಸಂಕೇತವನ್ನು ವಿದ್ಯುಚ್ಛಕ್ತಿಯ ಸಂಕೇತವಾಗಿ ಪರಿವರ್ತಿಸಲು ಸೂಕ್ಷ್ಮ ಧ್ವನಿವರ್ಧಕವನ್ನು ಉಪಯೋಗಿಸಬಹುದು. ಈ ವಿದ್ಯುಚ್ಛಕ್ತಿಯ ಸಂಕೇತವನ್ನೇ ದೀಪದಲ್ಲಿ ಉಪಯೋಗವಾಗುತ್ತಿರುವ ವಿದ್ಯುಚ್ಛಕ್ತಿಯ ಜೊತೆಗೆ ಸೇರಿಸಿದರೆ ಧ್ವನಿಸಂಕೇತ ಕಿರಣದ ಮೇಲೆ ಹೇರಲ್ಪಡುತ್ತದೆ. ಗ್ರಾಹಕ ಕೇಂದ್ರದಲ್ಲಿ ಅತಿರಕ್ತರಶ್ಮಿಗಳನ್ನು ಸ್ವೀಕರಿಸುವ ಶಕ್ತಿಯನ್ನುಳ್ಳ ದ್ಯುತಿವಿದ್ಯುತ್ ಕೋಶವನ್ನು ಉಪಯೋಗಿಸಿ ಕಿರಣದ ಸಂಕೇತವನ್ನು ಪ್ರವಾಹವನ್ನಾಗಿ ಮಾರ್ಪಡಿಸಬಹುದು. ವಿದ್ಯುತ್ಪ್ರವಾಹವನ್ನು ಧ್ವನಿವರ್ಧಕದ ಮೂಲಕ ಧ್ವನಿಯನ್ನಾಗಿ ಬದಲಾಯಿಸಬಹುದು. ವಿದ್ಯುತ್ಪ್ರವಾಹಗಳು ಸೂಕ್ಷ್ಮವಾಗಿದ್ದಾಗ ಅವುಗಳ ಶಕ್ತಿಯನ್ನು ಹೆಚ್ಚಿಸಲು ಸೂಕ್ತರೀತಿಯ ಪ್ರವರ್ಧಕಗಳನ್ನು ಉಪಯೋಗಿಸಬಹುದು.

ಅತಿರಕ್ತ ಟೆಲಿವಿಷನ್: ಅತಿರಕ್ತರಶ್ಮಿಪುಂಜವನ್ನುಪಯೋಗಿಸುವ ಟೆಲಿವಿಷನ್ ಬಿಂಬಗ್ರಾಹಿಯನ್ನು (ಕ್ಯಾಮರ) ಉಪಯೋಗಿಸಿ ರಾತ್ರಿವೇಳೆಯೂ ಬೆಳಕಿನ ಸಹಾಯವಿಲ್ಲದೆಯೇ ಟೆಲಿವಿಷನ್ ಚಿತ್ರಗಳನ್ನು ಪಡೆಯಲು ಅವಕಾಶವಾಗಿದೆ.

**ವೈಜ್ಞಾನಿಕ ಉಪಯೋಗಗಳು :** ವಿಜ್ಞಾನದಲ್ಲೂ ಕೈಗಾರಿಕೆಯಲ್ಲೂ ಈ ರಶ್ಮಿಪುಂಜದ ಉಪಯೋಗ ಅನೇಕ ವಿಧಗಳಲ್ಲಾಗಿದೆ. ಇವುಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಅತಿರಕ್ತರೋಹಿತದರ್ಶಕ (ಸ್ಪೆಕ್ಟ್ರಸ್ಕೋಪ್): ಇಪ್ಪತ್ತನೆಯ ಶತಮಾನದ ಮೊದಲಲ್ಲಿ ನಿರ್ಮಿಸಲಾದ ಈ ಯಂತ್ರ ರಸಾಯನವಿಜ್ಞಾನದ ಅತಿಪ್ರಬಲ ಮತ್ತು ಪ್ರಚಲಿತ ಯಂತ್ರಗಳಲ್ಲೊಂದಾಗಿದೆ. ರಸಾಯನ ವಸ್ತುಗಳನ್ನು ಪತ್ತೆಮಾಡುವುದರಲ್ಲಿ, ಅವುಗಳ ಪ್ರಮಾಣಗಳನ್ನು ಅಳೆಯುವುದರಲ್ಲಿ ಇದು ಸಹಾಯಕಾರಿಯಾಗಿದೆ. ಯಂತ್ರದ ಮುಖ್ಯಭಾಗಗಳೆಂದರೆ ಅತಿರಕ್ತದ ಮೂಲಭೂತ ವಿಶೇಷದೀಪ. ಇದು ವಿದ್ಯುತ್ಪ್ರವಾಹದಿಂದ ಕಾದ ತಂತಿ. ಮೂಲದಿಂದ ಹೊರಟ ರಶ್ಮಿಪುಂಜವನ್ನು ಒಂದೇ ದಿಕ್ಕಿನಲ್ಲಿ ಹೋಗುವ ಕಿರಣವನ್ನಾಗಿ ಪರಿವರ್ತಿಸುವ ಭೂತ ಕನ್ನಡಿಗಳು. ರಶ್ಮಿಪುಂಜದ ವಿವಿಧ ಅಲೆಯುದ್ದದ ಶಕ್ತಿಯನ್ನು ವಿವಿಧ ದಿಕ್ಕುಗಳಲ್ಲಿ ವಿಂಗಡಿಸುವ ಜಾಲರಿ (ಗ್ರೇಟಿಂಗ್). ಪರಿಶೀಲನೆಗೊಳಗಾದ ವಸ್ತುವನ್ನು ಧರಿಸಿದ ಪಾರಕ ಪಾತ್ರೆ. ವಸ್ತುವಿನ ಮೂಲಕ ಹಾಯ್ದ ರಶ್ಮಿಯನ್ನು ಅಳೆಯುವ ಪತ್ತೇದಾರ (ಥರ್ಮೋಪೈಲ್ ಅಥವಾ ಥರ್ಮಿಸ್ಟರ್). ಪತ್ತೇದಾರಕ ವಿದ್ಯುತ್ಪ್ರವಾಹವನ್ನು ವರ್ಧಿಸುವ ಪ್ರವರ್ಧಕ. ರಶ್ಮಿಯ ಶಕ್ತಿಯನ್ನು ಬರೆದಿಡುವ ಲೇಖಕ. ನಾಳಿ (ಡ್ರಮ್) ಜಾಲರಿಯನ್ನು ಮತ್ತು ಲೇಖಕನಾಳಿಯನ್ನು ನಿಧಾನವಾಗಿ ತಿರುಗಿಸುವ ಮೋಟರ್ ಯಂತ್ರಗಳು.

ಆಧುನಿಕ ವೈದ್ಯವಿಜ್ಞಾನದಲ್ಲಿ ಈ ರಶ್ಮಿಪುಂಜವನ್ನು ಉಳುಕಿದ ಅಥವಾ ಹೊರಳಿದ ಮಾಂಸಖಂಡಗಳ ಮತ್ತು ನರಗಳ ಚಿಕಿತ್ಸೆಗಾಗಿ ಬಳಸಲಾಗುತ್ತಿದೆ. ಇದಕ್ಕಾಗಿ ವಿಶೇಷ ದೀಪಗಳ ರಚನೆಯಾಗಿದೆ. ಲೇಸರ್ ಉಪಕರಣದಿಂದ ಈ ರಶ್ಮಿಪುಂಜವನ್ನು ತೀವ್ರವಾದ ಹಾಗೂ ಪ್ರಬಲಕಿರಣವನ್ನಾಗಿ ಪರಿವರ್ತಿಸಬಹುದು. ಇಂಥ ಕಿರಣವನ್ನು ಶಸ್ತ್ರಕ್ರಿಯೆಗಳಲ್ಲಿ ಉಪಯೋಗಿಸಿ ಅಪಾಯಕಾರಿಯಾದ ದುರ್ಮಾಂಸದಿಂದ ದೇಹದ ಇತರ ಪ್ರದೇಶಗಳ ಆರೋಗ್ಯಯುತವಾದ ಅವಯವಗಳಿಗೆ ಯಾವ ಕುಂದೂ ಆಗದಂತೆ ಕತ್ತರಿಸಿಹಾಕಬಹುದು.

ಲೇಸರ್ ಉಪಕರಣದ ಪ್ರಯೋಜನಗಳು ಹಲವು. ಇದನ್ನು ರೇಡಾರ್‌ನಂತೆ ಯುದ್ಧದಲ್ಲಿಯೂ ಇತರ ಕ್ಷೇತ್ರಗಳಲ್ಲಿಯೂ ಗುರಿಗಳ ದೂರ ಹಾಗೂ ರೂಪಗಳನ್ನು ಅಳೆಯಲು ಉಪಯೋಗಿಸಲಾಗಿದೆ. ಸುಳ್ಳು ಪತ್ರಗಳನ್ನು ಹಾಗೂ ಮೊದಲಿದ್ದ ಸಹಿಯನ್ನು ಅಳಿಸಿಹಾಕಿ ಸುಳ್ಳು ರುಜುಮಾಡಿರುವುದನ್ನು ಪತ್ತೆ ಹಚ್ಚುವಲ್ಲಿ ಇದು ಯಶಸ್ವಿಯಾಗಿ ಬಳಕೆಯಾಗುತ್ತಿದೆ. ಕೈಗಾರಿಕೆ, ವೈದ್ಯವಿಜ್ಞಾನ, ವಿಜ್ಞಾನಕ್ಷೇತ್ರಗಳಲ್ಲಿ ಇದರ ಉಪಯೋಗ ಯಾವ ರೀತಿ ಆಗಬಹುದೆಂದು ಊಹಿಸಲೂ ಸಾಧ್ಯವಾಗದಷ್ಟು ಉತ್ತಮ ಭವಿಷ್ಯ ಈ ಸಾಧನಕ್ಕಿದೆ. (ಎನ್.ಕೆ.ಎಸ್.)

**ಅತಿಶಬ್ದ:** ವಾಯುಚಲನ ವಿಜ್ಞಾನದಲ್ಲಿ (ಏರೋಡೈನಾಮಿಕ್ಸ್) ಶಬ್ದವೇಗವನ್ನು ಮೀರಿದ ಚಲನೆಯ ಸಂಬಂಧವಾಗಿ ಈ ಪದ (ಸೂಪರ್‌ಸೋನಿಕ್) ಬಳಕೆಯಲ್ಲಿದೆ. ಎರಡನೆಯ ಮಹಾಯುದ್ಧದಲ್ಲಿ ಅತ್ಯಧಿಕ ವೇಗದ ವಿಮಾನಗಳು, ರಾಕೆಟ್ಟುಗಳು, ಜೆಟ್ ಚಾಲಿತ ಕ್ಷಿಪಣಿಗಳು – ಇವುಗಳ ಬಳಕೆಯಾದಾಗಿನಂದಲೂ ಈ ಪದಕ್ಕೆ ಪ್ರಾಮುಖ್ಯ ಬಂದಿದೆ.

**ಮ್ಯಾಖ್ ಅಂಕ:** ಸಾಮಾನ್ಯ ಸ್ಥಿತಿಗತಿಗಳಲ್ಲಿ ಹಾಗೂ ಸಮುದ್ರಮಟ್ಟದಲ್ಲಿ ಶಬ್ದದ ವೇಗ ಸೆಕೆಂಡಿಗೆ ಸುಮಾರು 1100' ಅಥವಾ ಗಂಟೆಗೆ 760 ಮೈ. ಇದ್ದು ಸಮುದ್ರಮಟ್ಟದಿಂದ ಇರುವ ಎತ್ತರ, ವಾಯುವಿನ ಒತ್ತಡ ಹಾಗೂ ಉಷ್ಣತೆಗಳಿಗನುಗುಣವಾಗಿ ಅಲ್ಪಸ್ವಲ್ಪ ಬದಲಾವಣೆಯಾಗುತ್ತದೆ. ಸ್ಫೋಟಕ ಗುಂಡುಗಳು ಮತ್ತು ಕ್ಷಿಪಣಿಗಳು ಈ ವೇಗವನ್ನು ಮೀರಿರುತ್ತವೆಯಾದರೂ ವಿಮಾನಯಾನದಲ್ಲಿ ಈ ವೇಗಕ್ಕೆ ಸಂಬಂಧಪಟ್ಟ ಅಂಶ ಹಲವು ಸಮಸ್ಯೆಗಳನ್ನೊಡ್ಡುತ್ತದೆ. ವಾಯುವಿನ (ಅಥವಾ ಯಾವುದೇ ಸಂಕೋಚನಶೀಲ ಪ್ರವಾಹಿಯ) ಮತ್ತು ಅದರಲ್ಲಿ ಚಲಿಸುವ ಒಂದು ಘನಪದಾರ್ಥದ ಸಾಪೇಕ್ಷ (ಘನವಸ್ತು ಸ್ಥಿರವಾಗಿದ್ದು ಪ್ರವಾಹಿ ಅದರ ಮೇಲೆ ಚಲಿಸುತ್ತಿರಬಹುದು) ವೇಗವನ್ನು ಅಡಿ, ಮೈಲಿ ಅಥವಾ ಮೀಟರುಗಳಲ್ಲಿ ನಮೂದಿಸದೆ, ಆ ಪ್ರವಾಹಿಮಾಧ್ಯಮದಲ್ಲಿ ಶಬ್ದ ಪ್ರವಹಿಸುವ ವೇಗಕ್ಕೆ ಹೋಲಿಸಿ ಒಂದು ಸೂಚ್ಯಂಕವಾಗಿ ನಮೂದಿಸುತ್ತಾರೆ. ಇದಕ್ಕೆ ಮ್ಯಾಖ್ ಅಂಕ ಎನ್ನುತ್ತಾರೆ. ಇದರ ಬೆಲೆ ಒಂದಕ್ಕಿಂತ ಕಡಿಮೆಯಿದ್ದರೆ ವಸ್ತುವಿನ ವೇಗ ಶಬ್ದವೇಗಕ್ಕಿಂತ ಕಡಿಮೆಯೆಂತಲೂ ಒಂದಾಗಿದ್ದಾಗ ಶಬ್ದವೇಗಕ್ಕೆ ಸಮವೆಂದೂ ಒಂದಕ್ಕಿಂತ ಹೆಚ್ಚಿಗೆ ಇದ್ದರೆ ವಸ್ತುವಿನ ವೇಗ ಆ ಮಾಧ್ಯಮದಲ್ಲಿನ ಶಬ್ದವೇಗಕ್ಕಿಂತ ಅಷ್ಟು ಪಟ್ಟು ಹೆಚ್ಚು ಎಂದೂ ಅರ್ಥವಾಗುತ್ತದೆ.

**ಆವೇಗದ ಪ್ರಸಾರ:** ಒಂದು ಸಂಕೋಚನಶೀಲ ಪ್ರವಾಹಿಮಾಧ್ಯಮದಲ್ಲಿ ಒಂದು ಒತ್ತಡದ ಅಥವಾ ಕ್ಷೋಭೆಯ (ಪ್ರೆಷರ್ ಇಂಪಲ್ಸ್ ಅಥವಾ ಡಿಸ್ಟರ್‌ಬೆನ್ಸ್) ಆವೇಗದ ಪ್ರಸಾರ ಹೇಗೆ ಆಗುತ್ತದೆ ಎಂಬುದನ್ನು ಮೊದಲು ಪರಿಗಣಿಸಬಹುದು. ಮಾಧ್ಯಮ ನಿಶ್ಚಲವಾಗಿರುವಾಗ, ಕ್ಷೋಭೆ ಶಬ್ದದ ವೇಗದಲ್ಲಿ ಹಾಗೂ ಸಮಪ್ರಮಾಣದಲ್ಲಿ ಸುತ್ತಲಿನ ಎಲ್ಲ ದಿಕ್ಕುಗಳಲ್ಲೂ ಪ್ರಸಾರವಾಗುತ್ತ, ಕ್ಷೋಭೆಯ ಮೂಲವನ್ನೇ ಕೇಂದ್ರವಾಗುಳ್ಳ, ಉಬ್ಬುತ್ತಲೇ ಹೋಗುವ, ಒಂದು ಗೋಳದ ವಲಯಭಾಗದಲ್ಲಿ ಅದರ ಪ್ರಭಾವ ಕಾಣಿಸಿಕೊಳ್ಳುತ್ತಿರುತ್ತದೆ. ಮಾಧ್ಯಮ ಪ್ರವಹಿಸುತ್ತಿದ್ದರೆ ಕ್ಷೋಭೆಯ ಶಬ್ದವೇಗದ ದಿಕ್ಕಿನಲ್ಲಿ ಹೆಚ್ಚು ವೇಗವಾಗಿಯೂ ವಿರುದ್ಧ ದಿಕ್ಕಿನಲ್ಲಿ ಕಡಿಮೆಯಾಗಿಯೂ ಇರುತ್ತದೆ. ಪ್ರವಾಹದ ವೇಗ ಶಬ್ದವೇಗಕ್ಕೆ ಸಮನಾದರೆ ಕ್ಷೋಭೆಯ ಪ್ರಭಾವ ಎಲ್ಲ ದಿಕ್ಕುಗಳಲ್ಲಿಯೂ ಪ್ರಸಾರವಾಗುವುದು ಸಾಧ್ಯವಾಗದೆ ಅದು ಹೊರಟ ಮೂಲಸ್ಥಾನದ ವಿರುದ್ಧ ದಿಕ್ಕಿನ ಮಾರ್ಗಮಧ್ಯದಲ್ಲಿದ್ದು ಅದರ ಪ್ರಭಾವ ಶೂನ್ಯವಾಗುತ್ತದೆ.

ಕ್ಷೋಭೆಯ ಮೂಲದ ಮೇಲಿನ ಪ್ರವಾಹವೇಗ ಶಬ್ದಾತೀತವಾದರೆ ಆವೇಗದ ಪ್ರಭಾವ ಒಂದು ಶಂಕು ಆಕಾರದ ವಲಯಕ್ಕೆ ಸೀಮಿತವಾಗಿರುತ್ತದೆ. ಕ್ಷೋಭೆಯ ಮೂಲ ಈ ಶಂಕುವಿನ ಶೃಂಗವಾಗಿದ್ದು, ಪ್ರವಾಹದ ಮ್ಯಾಖ್ ಅಂಕ ಹೆಚ್ಚಾದಷ್ಟೂ ಅದರ ಶೃಂಗಕೋನ ಸಮಕೋನಕ್ಕಿಂತ (ಮ್ಯಾಖ್ ಅಂಕದ ಬೆಲೆ ಒಂದಾದಾಗ) ಕಡಿಮೆಯಾಗುತ್ತ ಹೋಗುತ್ತದೆ. ಈ ಶಂಕುವಿನ ಮೈ ಒಂದು ಪ್ರಭಾವ ವಲಯವನ್ನು ಒಂದು ಮೌನ (ಜೋನ್ ಆಫ್ ಸೈಲೆನ್ಸ್) ವಲಯದಿಂದ ಪ್ರತ್ಯೇಕಿಸಿರುತ್ತದೆ. ಒಂದು ಪದಾರ್ಥದ ಶಬ್ದಮಿತ (ಸಬ್‌ಸೋನಿಕ್) ಮತ್ತು ಶಬ್ದಾತೀತ (ಸೂಪರ್‌ಸೋನಿಕ್) ಚಲನೆಯ ಮುಖ್ಯ ವ್ಯತ್ಯಾಸ ಇದರಲ್ಲಿದೆ. ಶಬ್ದಮಿತ ಚಲನೆಯಲ್ಲಿ ಕ್ಷೋಭೆಯ ಪ್ರಭಾವ, ದೂರ ಹೆಚ್ಚಾದಂತೆ ಕಡಿಮೆಯಾದರೂ ಪದಾರ್ಥದ ಸುತ್ತಲಿನ ಎಲ್ಲ ದಿಕ್ಕುಗಳಿಗೂ ಪ್ರಸಾರವಾಗುತ್ತದೆ; ಶಬ್ದಾತೀತ ಚಲನೆಯಲ್ಲಿ ಕ್ಷೋಭೆಯ ಪ್ರಭಾವ ಈ ಮ್ಯಾಖ್ ಶಂಕುವಿನ

ಒಳಭಾಗಕ್ಕೆ ಸೀಮಿತವಾಗಿರುತ್ತದೆ. ಈ ಕಾರಣ ಒಂದು ಕ್ಷಿಪಣಿ ಶಬ್ದಾತೀತ ವೇಗದಲ್ಲಿ ನಮ್ಮ ತಲೆಯ ಮೇಲೇ ಹಾದುಹೋದರೂ ಅದರ ಶಬ್ದ ನಮಗೆ ಕೇಳಿ ಬರುವುದು ಅದು ಬಹುದೂರ ಹೋದ ಮೇಲೆಯೇ.

**ನೋಡಿ – ಮ್ಯಾಖ್ ಅಂಕ.**

ಈ ಪರಿಶೀಲನೆಯಿಂದಾಗಿ ಮೂರು ಸಾಮಾನ್ಯ ನಿಯಮಗಳು ನಿರ್ದಿಷ್ಟವಾಗುತ್ತವೆ.

1. ಸಂಕೇತ ನಿಷೇಧ ನಿಯಮ: ಒತ್ತಡದ ಬದಲಾವಣೆ ಮಾಡುವುದರಿಂದಾಗಿ ಯಾವ ಸಂಕೇತವೂ ಶಬ್ದವೇಗದಿಂದ ಮಾತ್ರ ಪ್ರಸಾರವಾಗುವುದರಿಂದ ಶಬ್ದಾತೀತ ವೇಗದಲ್ಲಿ ಗಮಿಸುವ ವಸ್ತುವಿನಿಂದ ಅದರ ಮುಂದಿರುವ ಪ್ರದೇಶಕ್ಕೆ ಈ ರೀತಿಯ ಸಂಕೇತ ಕಳುಹಿಸಲು ಸಾಧ್ಯವಿಲ್ಲ.




**ಚಿತ್ರ 1.** **ಮ್ಯಾಕ್ ತರಂಗದ ಉತ್ಪತ್ತಿ**

2. ಕ್ರಿಯಾ (ಆಕ್ಷನ್) ಮತ್ತು ಮೌನವಲಯಗಳು: ಶಬ್ದಾತೀತ ಪ್ರವಾಹದಲ್ಲಿನ ಒಂದು ನಿಶ್ಚಲ ಬಿಂದುಮೂಲ ತನ್ನಂದಾಚೆ ಪ್ರವಾಹದ ದಿಕ್ಕಿನಲ್ಲಿನ ಮ್ಯಾಖ್ ಶಂಕುವಿನ ಒಳವಲಯದಲ್ಲಿ ಮಾತ್ರ ಕ್ರಿಯೆಯನ್ನುಂಟು ಮಾಡಬಲ್ಲುದು ಅಥವಾ ವಿಲೋಮ ರೀತಿಯಲ್ಲಿ ಹೇಳುವುದಾದರೆ, ಪ್ರವಾಹದ ಯಾವುದಾದರೊಂದು ಬಿಂದುವಿನ ವೇಗ, ಒತ್ತಡಗಳು ಅದರಿಂದ ಪ್ರವಾಹದ ಎದುರು ದಿಕ್ಕಿನಲ್ಲಿ ಅದೇ ಶೃಂಗಕೋನವುಳ್ಳ ಮ್ಯಾಖ್ ಶಂಕುವಿನ ಒಳಭಾಗದಲ್ಲಿರುವ ಬಿಂದುಗಳಿಂದ ಮಾತ್ರ ಉಂಟಾದ ಆವೇಗಗಳಿಂದ ಪ್ರಭಾವಿತವಾಗಬಲ್ಲದು.

3. ಕೇಂದ್ರೀಕೃತ ಕ್ರಿಯಾನಿಯಮ: ಶಬ್ದಾತೀತ ವೇಗದಲ್ಲಿ ಒಂದು ವಸ್ತು ಗಮಿಸುತ್ತಿದ್ದರೆ ಅದರ ಪ್ರಭಾವದ ಬಹುಭಾಗ ಕ್ರಿಯಾವಲಯದ ಬಾಹ್ಯ ಸೀಮೆಯಾಗಿರುವ ಮ್ಯಾಖ್ ಶಂಕುವಿನ ಸಮೀಪಕ್ಕೇ ಕೇಂದ್ರೀಕೃತಗೊಂಡಿರುತ್ತದೆ.

ಧಕ್ಕಾ ತರಂಗ: ಶಬ್ದ ಮಿತ ವೇಗದಲ್ಲಿ ಒಂದು ವಸ್ತು ಚಲಿಸುತ್ತಿರುವಾಗ, ಆ ವಸ್ತು ತಲುಪುವ ಮುನ್ನವೇ ಅದರ ಗಮನದ ಮುಂದಿನ ಪ್ರದೇಶದಲ್ಲಿ ಪ್ರವಾಹಿ ಮಾಧ್ಯಮದ ಒತ್ತಡ ಹಾಗೂ ಸಾಂದ್ರತೆಗಳಲ್ಲಿ ಕ್ರಮೇಣ ಬದಲಾವಣೆ ಕಂಡುಬರುತ್ತಿದ್ದು ಚಲಿಸುವ ವಸ್ತು ಅಲ್ಲಿ ಬಂದಾಗ ಪ್ರವಾಹಿಮಾಧ್ಯಮ ಅದರ ಮೇಲಿನ ಪ್ರವಾಹಕ್ಕೆ ಹೊಂದಿಕೊಳ್ಳುತ್ತದೆ. ಮ್ಯಾಖ್ ಅಂಕದ ಬೆಲೆ ಒಂದಾದಾಗ ಅಥವಾ ಮೀರಿದಾಗ, ಮೇಲೆ ಹೇಳಿದ ಮೊದಲ ನಿಯಮದಂತೆ, ನಿಶ್ಚಲ ಪ್ರವಾಹಿ ಮಾಧ್ಯಮದ ಮೇಲೆ ಚಲಿಸುವ ವಸ್ತು ಆ ಸ್ಥಳವನ್ನು ಮುಟ್ಟುವವರೆಗೂ ಯಾವ ಪ್ರಭಾವವೂ ಇಲ್ಲದೆ ಇದ್ದು, ವಸ್ತು ಮುಟ್ಟಿದೊಡನೆಯೇ ಪ್ರವಾಹಿಮಾಧ್ಯಮದ ಒತ್ತಡ, ಸಾಂದ್ರತೆ ಹಾಗೂ ಉಷ್ಣತೆ – ಇತ್ಯಾದಿ ಗುಣಲಕ್ಷಣಗಳು ಇದ್ದಕ್ಕಿದ್ದಂತೆ ವ್ಯತ್ಯಾಸವಾಗುವುದರಿಂದ ಒಂದು ಧಕ್ಕಾ ತರಂಗವೇಳುತ್ತದೆ (ಷಾಕ್ ವೇವ್). ಈ ತರಂಗ ಚಲಿಸುವ ವಸ್ತುವಿನ ಮೇಲ್ಮೈ ಅಥವಾ ಅದರ ಸಮೀಪದಲ್ಲೇ ಉತ್ಪತ್ತಿಯಾಗಿ ಹೊರಗಡೆಗೆ ಹರಡುವುದಲ್ಲದೆ ಚಲಿಸುವ ವಸ್ತುವನ್ನೇ ನಾಶ ಮಾಡಿಬಿಡಬಹುದಾದಷ್ಟು ಸಾಂದ್ರತೆಯುಳ್ಳದ್ದಾಗಿರಲೂ ಸಾಧ್ಯ.

ತರಂಗ ಸೆಳೆತ: ಅತಿಶಬ್ದ ವೇಗದಲ್ಲಿ ಗಮಿಸುವ ರೆಕ್ಕೆಯೊಂದು ಎಬ್ಬಿಸುವ ತರಂಗಗಳನ್ನು ಚಿತ್ರ 2ರಲ್ಲಿ ತೋರಿಸಿದೆ. ರೆಕ್ಕೆಯ ಮುಂಚೂಣಿಯಲ್ಲಿ ಒತ್ತಡ ಅಧಿಕಗೊಂಡು, ಒತ್ತರಿತ ವಾಯು ರೆಕ್ಕೆಯ ಮೈಮೇಲೆ ಕ್ರಮೇಣ ವಿಸ್ತರಿಸಿದಂತೆ ಒತ್ತಡ ಕಡಿಮೆಯಾಗುತ್ತ ಹೋಗುತ್ತದೆ. ಸುತ್ತಲಿನ ವಾಯು ಒತ್ತಡಕ್ಕಿಂತ ರೆಕ್ಕೆಯ ಮುಂಚೂಣಿಯಲ್ಲಿನ ಒತ್ತಡ ಹೆಚ್ಚಾಗಿಯೂ ಹಿಂಚೂಣಿಯಲ್ಲಿ ಕಡಿಮೆಯಾಗಿಯೂ ಇರುವುದರಿಂದ ಈ ಒತ್ತಡ ವ್ಯತ್ಯಾಸ ರೆಕ್ಕೆಯ ಮೇಲೆ ಪಾರ್ಶ್ವಘರ್ಷಣೆ ಮತ್ತು ಪ್ರವಾಹದ ಬೇರ್ಪಡೆ ಇವುಗಳಿಂದಾಗುವುದಲ್ಲದೆ ಪ್ರತ್ಯೇಕವಾದ ಒಂದು ಹಿಂದುಸೆಳೆತವನ್ನು ಉಂಟುಮಾಡುತ್ತದೆ. ಹೀಗೆ ರೆಕ್ಕೆ ತನ್ನ ಜೊತೆಗೇ ಚಲಿಸುವ, ಒತ್ತರಿಸಲ್ಪಟ್ಟ, ವಿಸ್ತೃತ ತರಂಗಮಾಲೆಯನ್ನು ಎಬ್ಬಿಸುತ್ತದೆ. ಈ ಹಿಂದುಸೆಳೆತವನ್ನು ವಿರೋಧಿಸಿ ಮುಂದೆ ಕ್ರಮಿಸಲು ಇತರ ಬಾಬುಗಳಿಗಿಂತ ಅಧಿಕ ಶಕ್ತಿಯ ಅವಶ್ಯಕತೆಯಿರುತ್ತದೆ. ಹರಿಯುವ ನೀರಿನ ಮೇಲಿನ ಅಲೆಗಳ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ದೋಣಿಯೊಂದು ಕ್ರಮಿಸುವಾಗ ದೋಣಿಯ ಮುಂದೆ ನೀರು ಶೇಖರಣೆಯಾದಂತಾಗಿ ಒಂದು ದೊಡ್ಡ ಅಲೆ ಸೃಷ್ಟಿಗೊಂಡು ದೋಣಿಯೊಡನೇ ಚಲಿಸುವುದನ್ನು ಇದು ಹೋಲುವುದರಿಂದ ಇದಕ್ಕೆ ತರಂಗ ಸೆಳೆತ (ವೇವ್ ಡ್ರ್ಯಾಗ್) ಎಂದು ಹೆಸರು. ಇದರ ವಿವರವಾದ ಪರಿಶೀಲನೆಯಿಂದಾಗಿ ಅತಿಶಬ್ದವೇಗದ ರೆಕ್ಕೆಗಳ ಮುಂಚೂಣಿ ಮತ್ತು ಹಿಂಚೂಣಿ ಎರಡು ಕಡೆಯೂ ಚೂಪಾಗಿರಬೇಕಲ್ಲದೆ, ಅವುಗಳ ದಪ್ಪ ಉದ್ದಗಳ ಪ್ರಮಾಣ ಸಾಧ್ಯವಿದ್ದಷ್ಟೂ ಕಡಿಮೆಯಿರಬೇಕೆಂದು ವ್ಯಕ್ತಪಟ್ಟಿದೆ. ಶಬ್ದಮಿತವೇಗದಲ್ಲಿ ಇದು ಕೇವಲ S! ಇರಬಹುದಾದರೆ, ಶಬ್ದಾತೀತ ವೇಗದ ಯಾನದಲ್ಲಿ ಕ್ಕೆ ಮಿತಗೊಳ್ಳಬೇಕಾಗಬಹುದು.

ನೆಗಪು: ಶಬ್ದ ಮಿತ ವೇಗದಲ್ಲಿ ಚಲಿಸುವ ರೆಕ್ಕೆಯಲ್ಲುಂಟಾಗುವ ನೆಗಪು (ಲಿಫ್ಟ್) ರೆಕ್ಕೆಯ ಮೈಮೇಲೆ ಗಾಳಿಯ ಪರಿಚಲನೆಯ ದೆಸೆಯಿಂದ ಉಂಟಾಗುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ ಇಂಥ ರೆಕ್ಕೆಯ ಮುಂಚೂಣಿ ಗುಂಡಾಗಿದ್ದು, ಪ್ರವಾಹದ ದಿಕ್ಕಿಗೆ ಸ್ವಲ್ಪ ಓರೆಯಾಗಿರುವುದರಿಂದ ಗಾಳಿಯ ಪದರಗಳು ಮುಂತುದಿಗೆ ತಗಲಿ ಇಬ್ಭಾಗವಾಗುತ್ತವೆ. ಕೆಲವು ಪದರಗಳು ರೆಕ್ಕೆಯ ಮೇಲಿನಿಂದಲೂ ಕೆಲವು ಕೆಳಗಡೆಯೂ ಹರಿಯುವಾಗ ಮೇಲಿನ ಪದರಗಳು ಹೆಚ್ಚು ದೂರವನ್ನೂ ಕೆಳಗಿನವು ಕಡಿಮೆ ದೂರವನ್ನೂ ಕ್ರಮಿಸಿ ಏಕಕಾಲಕ್ಕೆ ಹಿಂತುದಿಯ ಬಳಿ ಸೇರಿಕೊಳ್ಳುವ ದೆಸೆಯಿಂದ, ಮೇಲಿನ ಪದರಗಳ ವೇಗ ಸ್ವಲ್ಪ ಹೆಚ್ಚಾಗಿಯೂ ಕೆಳಗಿನದೆರಡು ಸ್ವಲ್ಪ ಕಡಿಮೆಯಾಗಿಯೂ ಆಗುತ್ತದೆ. ಪ್ರಸಿದ್ಧ ಬರ್ನೌಲಿ ನಿಯಮದಂತೆ, ರೆಕ್ಕೆಯ ಮೇಲಿನ ಒತ್ತಡ ಕೊಂಚ ಕಡಿಮೆಯೂ ಕೆಳಗಿನದು ಅಧಿಕವೂ ಆಗಿ, ರೆಕ್ಕೆಯನ್ನು ಮೇಲಕ್ಕೆ ಎತ್ತುವಂಥ ಪ್ರತಿಕ್ರಿಯೆಯುಂಟಾಗುತ್ತದೆ. ಇದನ್ನೇ ನೆಗಪು ಎಂದು ಕರೆಯುತ್ತಾರೆ. ಶಬ್ದಾತೀತ ವೇಗದಲ್ಲೂ ಇಂಥದೇ ಪ್ರತಿಕ್ರಿಯೆಯಿಂದ ನೆಗಪು ಉಂಟಾಗುವುದಾದರೂ ಹರಿವಿನ ಆಕೃತಿ ಪರಿಗಣಿತ ಬಿಂದುವನ್ನು ಶೃಂಗವಾಗುಳ್ಳ ಮ್ಯಾಖ್ ಶಂಕುವಿನ ಪರಿಮಿತಿಗೆ ಒಳಪಟ್ಟಿರುತ್ತದೆ. ನೆಗಪಿನ ಬಲವರ್ಗ ಪ್ರಮಾಣದಲ್ಲಿ ಹಿಂದುಸೆಳವಿರುತ್ತದೆ.

ಸೀಮಾ ಶಬ್ದದಲ್ಲಿ (ಸೌಂಡ್ ಬ್ಯಾರಿಯರ್) ಉಂಟಾಗುವ ಧಕ್ಕಾ ತರಂಗವನ್ನು ಸಬಲವಾಗಿ ಎದುರಿಸಿ, ವೇಗವನ್ನು ಇನ್ನೂ ಹೆಚ್ಚಿಸಿಕೊಂಡ ಮೇಲೆ ಒಂದು ವಿಮಾನ ವಾಯುಮಂಡಲದಲ್ಲಿ ಕಡಿಮೆ ಪ್ರಮಾಣದ ಪ್ರಕ್ಷುಬ್ಧತೆಯನ್ನೆದುರಿಸುತ್ತಾ ಎಂದಿನಂತೆ ತನ್ನ ಹಾರಾಟವನ್ನು ಮುಂದುವರೆಸುತ್ತದೆ. ವೇಗವನ್ನು ಕಡಿಮೆ ಮಾಡಿಕೊಂಡು ಭೂಮಿಗೆ ಇಳಿಯುವಾಗ ಇನ್ನೊಮ್ಮೆ ಶಬ್ದ ಸೀಮಾರೇಖೆಯನ್ನು ದಾಟಬೇಕಾಗುತ್ತದೆ.



**ಚಿತ್ರ 2.** **ರೆಕ್ಕೆಯ ಸುತ್ತಿಲಿನ ತರಂಗ ವಿನ್ಯಾಸ**

ಸೀಮಾ ಶಬ್ದದ ಮೊಳಗು (ಬೂಮ್, ಬ್ಯಾಂಗ್): ಅತಿಶಬ್ದ ವೇಗದಲ್ಲಿ ಗಮಿಸುವ ವಿಮಾನ ವಾಯುಮಂಡಲದಲ್ಲಿ ಧಕ್ಕಾ ತರಂಗವನ್ನೆಬ್ಬಿಸುವುದರಿಂದ, ಅದರ ಹಾದಿಯ ಕೆಳಗಿರುವ ನೆಲದ ಮೇಲಿನವರಿಗೆ ಇದರ ಮೊಳಗು ಸಾಮಾನ್ಯವಾದ ದೂರದ ಗದ್ದಲ, ಆರ್ಭಟಕ್ಕಿಂತ ಬೇರೆಯಾಗಿ ಆದರೆ ಪ್ರಬಲವಾದ ಒಂದು ಸಿಡಿತದಂತೆ ಕೇಳಿಬರುತ್ತದೆ. ಮೊಳಗಿನ ಸಾಂದ್ರತೆಯನ್ನು ಅದು ನೆಲದ ಮೇಲೆ ಉಂಟುಮಾಡುವ ಒತ್ತಡ ವ್ಯತ್ಯಾಸದಿಂದ ಅಳೆಯಬಹುದಾಗಿದ್ದು, ಸಧ್ಯದಲ್ಲಿ ಅದನ್ನು ವಿಮಾನ ಮೇಲಕ್ಕೇರುವಾಗ ಒಂದು ಚ.ಅ. ಗೆ ಎರಡು ಪೌಂಡುಗಳಿಗೂ ಪ್ರಯಾಣ ಕಾಲದಲ್ಲಿ ಚ.ಅ. ಗೆ 1.5 ಪೌಂಡಿಗೂ ಮಿತಿಗೊಳಿಸಲು ಉದ್ದೇಶಿಸಿದೆ. ಮೊಳಗಿನ ಪ್ರಭಾವವನ್ನು ಆದಷ್ಟು ಕಡಿಮೆ ಮಾಡುವುದಕ್ಕೋಸ್ಕರ ಅತಿಶಬ್ದ ವೇಗದ ವಿಮಾನಗಳು ಬಹಳ ಎತ್ತರದಲ್ಲಿ ಸಾಗುವಂತೆ ಯೋಜಿಸಲಾಗಿರುತ್ತದೆ. ಭೂಮಿಯ ಮೇಲಿನಿಂದ ಸುಮಾರು 40,000' ಎತ್ತರಕ್ಕೇರುವವರೆಗೂ ವೇಗ ಶಬ್ದಮಿತಿಯಲ್ಲೇ ಇದ್ದು ಕೊಂಚ ಕಾಲ ಮಾತ್ರ ಅಧಿಕ ವೇಗೋತ್ಕರ್ಷದಿಂದ ಯಾನದ ಸುಮಾರು

60,000' – 70,000' ಎತ್ತರಕ್ಕೆ ಮುಟ್ಟಿ, ಮ್ಯಾಖ್ ಅಂಕ 2–3ರ ವರೆಗಿನ ಅತಿಶಬ್ದ ವೇಗದಲ್ಲಿ ವಿಮಾನ ಕ್ರಮಿಸುತ್ತದೆ, ಮೊಳಗಿನ ಸಾಂದ್ರತೆ ವಿಮಾನದ ಗಾತ್ರ ಮತ್ತು ತೂಕಗಳಿಗೂ ಅನುಗುಣವಾಗಿರುವುದರಿಂದ ಅತಿಶಬ್ದ ವಿಮಾನ ಯಾನ ಅಭಿವೃದ್ಧಿ ಹೊಂದುವುದರೊಡನೆಯೇ ಈ ಮೊಳಗಿನ ಸಮಸ್ಯೆಗೂ ಪರಿಹಾರ ಕಾಣಬೇಕಾಗಿರುತ್ತದೆ.

ಯಾನದ ಆಕೃತಿ (ಪ್ಲಾನ್ ಫಾರಮ್): ಅತಿಶಬ್ದ ವೇಗ ಯಾನದ ತರಂಗ ಸೆಳೆತವನ್ನು ಮಿತಿಯಲ್ಲಿಡಲೋಸುಗ ಅದರ ದಪ್ಪ, ಉದ್ದ – ಇವುಗಳ ಪ್ರಮಾಣವನ್ನು ಆದಷ್ಟು ಕಡಿಮೆ ಮಾಡಬೇಕಾದ್ದು ಉಚಿತವಾದರೂ ಯಾನದ ಆವಶ್ಯಕ ತೂಕ ಮತ್ತು ಸದೃಢತೆಗಳನ್ನು ಗಮನದಲ್ಲಿಟ್ಟಿರಬೇಕಾಗುತ್ತದೆ. ಆದ್ದರಿಂದ ಈ ತರಂಗ ಸೆಳೆತವನ್ನು ಬೇರೆ ರೀತಿಗಳಲ್ಲಿ ಕಡಿಮೆಗೊಳಿಸಬಹುದಾದ ಸಾಧ್ಯತೆಯನ್ನು ಅನ್ವೇಷಿಸಲಾಗುತ್ತಿದೆ.

ಬೂಸ್‍ಮಾನ್‍ನಿಂದ ಸೂಚಿತವಾದ ದ್ವಿಫಲಕ ವಿಮಾನ (ಬೈ ಪ್ಲೇನ್) ಇವುಗಳಲ್ಲೊಂದು. ಇದು ಒಂದರ ಮೇಲೊಂದರಂತೆ ಎರಡು ಆಧಾರ ಫಲಕಗಳುಳ್ಳದ್ದಾಗಿದ್ದು, ಮೇಲಿನ ರೆಕ್ಕೆಯಿಂದ ಉತ್ಪಾದಿತವಾದ ತರಂಗಗಳು ಕೆಳಗಿನ ರೆಕ್ಕೆಯಿಂದಾದ ತರಂಗಗಳಿಂದ ಸರಿದೂಗಿಸಲ್ಪಟ್ಟು ಪರಸ್ಪರ ಅಡ್ಡೈಸುವುದರಿಂದ ಪ್ರಭಾವ ಮಿತವಾಗುತ್ತವೆ, ತರಂಗ ಸೆಳವೂ ಇಲ್ಲವಾಗುತ್ತದೆ.

ರೆಕ್ಕೆಗಳು ಹಿಂದಕ್ಕೆ ಬೀಸಿಕೊಂಡಂತಿರುವುದು (ಸ್ವೆಪ್ಟ್ ಬ್ಯಾಕ್) ಇನ್ನೊಂದು ರಚನಾವೈಖರಿ. ರೆಕ್ಕೆಯ ಮುಂಚೂಣಿಯ ಏಣಿನ ಲಂಬದಿಶೆಯ ವೇಗಪರಿಮಾಣಕ್ಕೆ ಅನುಗುಣವಾಗಿ ಸೆಳೆತ ಇರುವುದರಿಂದ ರೆಕ್ಕೆಯನ್ನು ಆದಷ್ಟು ಹಿಂಬದಿಗೆ ಬೀಸುವುದರಿಂದ ಅದರ ವೇಗ ಎಷ್ಟೇ ಇದ್ದರೂ ಈ ದಿಶೆಯ ಅದರ ವೇಗ ಪರಿಮಾಣವನ್ನು ಶಬ್ದಮಿತಿಗೆ ಒಳಪಡಿಸಲು ಸಾಧ್ಯ. ಅತಿಶಬ್ದವೇಗದ ಸೈನಿಕವಿಮಾನಗಳು ಈ ರೀತಿ ಬಾಣದ ತುದಿಯ ಅಥವಾ ಡಬ್ಬದ (Ä) ಆಕಾರವನ್ನು ಹೊಂದಿರುತ್ತವೆ. ಇಲ್ಲಿ ಒಂದು ಸಮಸ್ಯೆ ಉದ್ಭವಿಸುತ್ತದೆ. ಒಂದು ಶಬ್ದಾತೀತ ವೇಗಕ್ಕೆ ಸರಿಹೊಂದುವಂತೆ ರೆಕ್ಕೆಗೆ ಹಿಂಬೀಸಿದಂತೆ ಯಾವ ಆಕಾರವನ್ನು ಕೊಟ್ಟರೂ ಮಿಕ್ಕ ವೇಗಗಳಿಗೆ ಅದರ ಗುಣಲಕ್ಷಣ ಸರ್ವಸಮರ್ಪಕವಾಗಿ ಹೊಂದಿಕೊಳ್ಳದಿದ್ದರಿಂದ ಬಗೆ ಬಗೆಯ ರೇಖಾವಿನ್ಯಾಸಗಳನ್ನು ವಿವರವಾಗಿ ಪರೀಕ್ಷಿಸಲಾಯಿತು. ರೆಕ್ಕೆಗಳ ವಿನ್ಯಾಸ ಒಂದೇ ರೇಖಾವಿನ್ಯಾಸಗಳನ್ನು ವಿವರವಾಗಿ ಪರೀಕ್ಷಿಸಲಾಯಿತು. ರೆಕ್ಕೆಗಳ ವಿನ್ಯಾಸ ಒಂದೇ ಆಕೃತಿಯಲ್ಲಿರುವ ಬದಲು ವೇಗಕ್ಕನುಗುಣವಾಗಿ ಮಡಿಸಿಕೊಳ್ಳುವಂತಿದ್ದರೆ ಅಧಿಕ ಮ್ಯಾಖ್ ಅಂಕದ ಯಾನದಲ್ಲಿ, ಬಾಣದ ತುದಿಯಂತೆ ರೆಕ್ಕೆಗಳನ್ನು ಹಿಂದಕ್ಕೆ ಮಡಚಿಕೊಂಡು ಅಧಿಕ ದಕ್ಷತೆಯಿಂದ ಹಾರುವುದಲ್ಲದೆ, ಕಡಿಮೆ ವೇಗದ ಮತ್ತು ಶಬ್ದಮಿತ ನಿರ್ವಹಣೆಯಲ್ಲಿ ರೆಕ್ಕೆಗಳನ್ನು ಮುಂದಕ್ಕೆ ಚಾಚುವುದರಿಂದ ಅಗತ್ಯವಾದ ನೆಗಪನ್ನು ಉಂಟುಮಾಡಿಕೊಳ್ಳಲಾಗುವುದಲ್ಲದೆ ಯಾನದ ದಕ್ಷತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿರುತ್ತದೆ.




**ಚಿತ್ರ 3. ರೆಕ್ಕೆಯ ಸುತ್ತಲಿನ ವಿವಿಧ ವೇಗದ ಪ್ರವಾಹ (V) ಮತ್ತು ಉಂಟಾಗುವ ನೆಗಪು (L)**

ಬಲೋತ್ಪಾದಕದ ವಿಕಾಸ: ಸದ್ಯದಲ್ಲಿನ ಅತಿಶಬ್ದ ವೇಗದ ಸೈನಿಕವಿಮಾನಗಳ ಉರುವಲಿನ ವ್ಯಯ ಅಧಿಕವಾಗಿರುತ್ತದೆ. ಸಾಮಾನ್ಯವಾಗಿ ಇವು ಶಬ್ದಾತೀತ ವೇಗದಲ್ಲಿ ಬಹುದೂರಕ್ಕೆ ಹೋಗುವಂತೆ ರೂಪುಗೊಂಡವಲ್ಲ. ವಾಸ್ತವವಾಗಿ ಇವು ಶಬ್ದ ಮಿತಗಮನದ ವಿಮಾನಗಳೇ ಆಗಿದ್ದು, ಶಬ್ದಾತೀತ ವೇಗಕ್ಕೆ ನುಗ್ಗಬಲ್ಲ ಸಾಮರ್ಥ್ಯವುಳ್ಳವಾಗಿರುತ್ತವೆ. ಟರ್ಬೋ ಜೆಟ್ ಎಂಜಿನ್ನಿನಲ್ಲಿ ತರುವಾಯದ ದಹನವನ್ನುಂಟು ಮಾಡುವುದರಿಂದ ಇದು ಸಾಧ್ಯವಾಗುತ್ತದೆ. ಸಣ್ಣ ಎಂಜಿನ್ನಿನಲ್ಲೂ ಈ ರೀತಿ ಅಧಿಕ ನೂಕು ಬಲವನ್ನು ಉತ್ಪಾದಿಸಬಹುದಾದರೂ ವೆಚ್ಚ ಅಧಿಕವಾಗುತ್ತದೆ. ಅತಿಶಬ್ದವೇಗದ ವಾಹಕಗಳಿಗಾಗಿಯೇ ರೂಪುಗೊಂಡ ಎಂಜಿನ್ನು ತನ್ನ ಸಾಮಾನ್ಯ ಯಾನದ ವೇಗದಲ್ಲಿ ಒಟ್ಟಾರೆ ದಕ್ಷತೆಯನ್ನು ಅಧಿಕವಾಗಿ ಹೊಂದಿದ್ದಾಗಿರಬೇಕು. ಹೊಸದಾಗಿ ರೂಪುಗೊಳ್ಳುತ್ತಿರುವ ಟರ್ಬೋ ಫ್ಯಾನ್ ಎಂಜಿನ್ನುಗಳು, ಶಬ್ದರೇಖೆಯನ್ನು ದಾಟಲು ಬೇಕಾದ ವೇಗೋತ್ಕರ್ಷಕ್ಕೆ ಅಗತ್ಯವಾದಷ್ಟು ಮಾತ್ರ ತರುವಾಯದ ದಹನವನ್ನುಂಟುಮಾಡಿ ಅನಂತರ ವಿಮಾನ ತನ್ನ ರೂಪಿತ ಮ್ಯಾಖ್ ಅಂಕದಲ್ಲಿ ಮಿತ ಉರುವಲಿನ ವ್ಯಯದಿಂದ ಯಾನ ಮಾಡಲು ಸಾಧ್ಯವಾಗುವಂತೆ ರಚಿತವಾಗುತ್ತವೆ. ಅಲ್ಲದೆ ಇದು ಕಡಿಮೆ ಆರ್ಭಟ ಮಾಡುವವಾಗಿದ್ದು ಹೆಚ್ಚದಂತೆ ಮಿತಗೊಳಿಸುತ್ತವೆ.




**ಚಿತ್ರ 4. ಬೂಸ್‍ಮಾನ್ ದ್ವಿಫಲಕ ವಿಮಾನ ಸುತ್ತಲಿನ ಪ್ರವಾಹ**

ಅಮೆರಿಕದ ಅತಿಶಬ್ದವೇಗದ ವಾಹಕಯಾನ ಕಾರ್ಯಕ್ರಮದಂತೆ, 1970ರಲ್ಲಿ ಪ್ರಥಮ ಹಾರಾಟ ನಡೆಸಿ 1974ರ ವೇಳೆಗೆ ವಾಣಿಜ್ಯಸೇವೆಗೆ ಒದಗುವಂತೆ ರೂಪುಗೊಳ್ಳುತ್ತಿರುವ, ಗಂಟೆಗೆ 1800 ಮೈಲಿ ವೇಗದಲ್ಲಿ ಯಾನಮಾಡಬಲ್ಲ ವಿಮಾನಗಳನ್ನು ಈಗಾಗಲೇ ಸಿದ್ಧಗೊಳಿಸಲಾಘುತ್ತಿದೆ. ಇವು ಮಡಿಚಬಲ್ಲ ರೆಕ್ಕೆಗಳನ್ನು ಹೊಂದಿದ್ದು ರೆಕ್ಕೆಗಳ ಹರಹನ್ನು $20^0$–$72^0$ ವರೆಗೆ ಬದಲಾಯಿಸಿಕೊಳ್ಳುವಂತಿರುತ್ತವೆ. ಇಂಥ ವಿಮಾನದ ಉದ್ದ 306', ಅಗಲ 197', ಒಳಗಿನ ಎತ್ತರ 88'.

ಅತಿಶಬ್ದ ವೇಗದಲ್ಲಿ ಯಾನಮಾಡುವ ವಿಮಾನಗಳ ವಿಶಿಷ್ಟ ಅಗತ್ಯಗಳ ಪೂರೈಕೆಗಾಗಿ ಅಧಿಕತಾಪವನ್ನು ತಡೆದುಕೊಳ್ಳಬಲ್ಲ, ಹಗುರವಾಗಿದ್ದೂ ಗಟ್ಟಿಮುಟ್ಟಾಗಿರುವ ಟೈಟ್ಯಾನಿಯಂ ಮಿಶ್ರಲೋಹಗಳನ್ನು ವಿಮಾನ ರಚನೆಯಲ್ಲಿ ಉಪಯೋಗಿಸಲಾಗುತ್ತದೆ. (ಕೆ.ವಿ.ಎಸ್.)

**ಅತಿಶೀತಶಾಸ್ತ್ರ :** ಅತಿಶೀತೋತ್ಪಾದನೆ, ಅದರ ಮಾಪನ, ಅತಿಶೀತಾವಸ್ಥೆಯಲ್ಲಿ ಉಂಟಾಗುವ ಪರಿಣಾಮಗಳು ಮತ್ತು ಅವುಗಳ ವಿವರಣೆಯನ್ನೊಳಗೊಂಡಿರುವ ಶಾಸ್ತ್ರ (ಕ್ರಯೋಜೆನಿಕ್ಸ್: ಲೋಟೆಂಪರೇಚರ್ ಫಿಸಿಕ್ಸ್). ಸಾಮಾನ್ಯವಾಗಿ ಪ್ರಯೋಗಶಾಲೆಗಳಿಗಿಂತ ಕಡಿಮೆ ಉಷ್ಣತೆಯಲ್ಲಿ ನಡೆಸುವ ಅಧ್ಯಯನ ಅತಿಶೀತಶಾಸ್ತ್ರದ ವ್ಯಾಪ್ತಿಗೆ ಒಳಪಟ್ಟಿದೆ. ನಿಖರವಾಗಿ ಹೇಳುವುದಾದರೆ ಆಕ್ಸಿಜನ್‍ನ ಕುದಿಬಿಂದುವಿಗಿಂತ ಕಡಿಮೆ ಉಷ್ಣತೆಗೆ ಸೇರಿದ ಪ್ರಯೋಗಗಳನ್ನು ಇದರಲ್ಲಿ ಗಣಿಸುತ್ತಾರೆ.

ಅತಿಶೀತೋತ್ಪಾದನೆ: ಅತಿಕನಿಷ್ಠ ಉಷ್ಣತೆಯನ್ನು ಸೃಜಿಸುವ ಕಾರ್ಯ ಒಂದು ಸಾಹಸವೇ ಆಗಿದೆ. ಒತ್ತಡ ಮತ್ತು ಉಷ್ಣತೆಗಳ ಪರಸ್ಪರ ಸಂಬಂಧವನ್ನು ಕುರಿತು ಆಮನ್‍ಟನ್ಸ್ ನಡೆಸಿದ ಪ್ರಯೋಗಗಳಿಂದ ನಿರಪೇಕ್ಷ ಶೂನ್ಯಾಂಶ–$273^0$ ಸೆಂ.ಗ್ರೇ. ಎಂದು ಮೊದಲಬಾರಿಗೆ ತಿಳಿಸಿದ. ಮುಂದೆ ಉಷ್ಣಚಲನಶಾಸ್ತ್ರದ ಭದ್ರ ತಾತ್ತ್ವಿಕ ತಳಹದಿಯ ಪ್ರಕಾರ ಇದರ ನಿಖರವಾದ ಬೆಲೆ–$273.16^o$ ಸೆಂ.ಗ್ರೇ. ಎಂದು ಸ್ಥಿರವಾಯಿತು. ಇದನ್ನು ಕೆಲ್ವಿನ್ನನ ನಿರಪೇಕ್ಷ ಶೂನ್ಯ (ಆ್ಯಬ್‍ಸೊಲ್ಯೂಟ್) ಉಷ್ಣಚಲನಮಾಪಕದಲ್ಲಿ (ಅಥವಾ ಸರಳವಾಗಿ ನಿರಪೇಕ್ಷ ಉಷ್ಣತಾಮಾಪಕದಲ್ಲಿ) $0^o$ ಕೆಲ್ವಿನ್ ಅಥವಾ $0^o$ K ಎಂದು ಪರಿಗಣಿಸುತ್ತಾರೆ. ಈ ಮಾಪಕದಲ್ಲಿ ನೀರಿನ ಕುದಿಬಿಂದುವಿನ ಉಷ್ಣತೆ $373.16^o$ ಏ ($100^o$ ಸೆಂ. ಗ್ರೇ.) ಅತಿಶೀತವನ್ನುಂಟುಮಾಡುವುದೆಂದರೆ, ಪ್ರಾಯೋಗಿಕವಾಗಿ ಆಕ್ಸಿಜನ್, ಗಾಳಿ ಹಾಗೂ ಶಾಶ್ವತ ಅನಿಲಗಳೆಂದು ಕರೆಯಲಾಗುವ ಹೈಡ್ರೋಜನ್, ಹೀಲಿಯಂಗಳನ್ನು ದ್ರವೀಕರಿಸುವುದು ಎಂದು ತಿಳಿಯುತ್ತೇವೆ. ಈ ಕ್ರಿಯೆಯನ್ನು ಸಾಮಾನ್ಯವಾಗಿ ಎರಡು ವಿಧಾನಗಳಿಂದ ನೆರವೇರಿಸುತ್ತೇವೆ. 1. ಬಾಹ್ಯ ಕೆಲಸವನ್ನು ಮಾಡುವ ಸಮೋಷ್ಣವಿಕಾಸವಿಧಾನ (ಏಡಿಯಾಬಿಟಿಕ್ ಎಕ್ಸ್‍ಪ್ಯಾನ್ಷನ್) 2. ಜೌಲ್–ಕೆಲ್ವಿನ್ ಪರಿಣಾಮವನ್ನು ಆಧರಿಸುವ ನಿಯಂತ್ರಕ ಕವಾಟವಿಕಾಸ (ಥ್ರಾಟಲ್ ಎಕ್ಸ್‍ಪ್ಯಾನ್ಷನ್) ವಿಧಾನ.

ಈ ಎರಡು ವಿಧಾನಗಳಲ್ಲಿಯೂ ದ್ರವೀಕರಿಸಬೇಕಾದ ಅನಿಲವನ್ನು ಮೊದಲು ಸಮತಾಪಸಂಪೀಡನೆಗೆ (ಐಸೊಥರ್ಮಲ್ ಕಂಪ್ರೆಶನ್) ಒಳಪಡಿಸಲಾಗುವುದು. ಅನಂತರ, ಮೊದಲನೆಯ ವಿಧಾನದಲ್ಲಿ, ಅವಧಿಕ (ಕ್ರಿಟಿಕಲ್) ಉಷ್ಣತೆಗಿಂತ ಕಡಿಮೆ ಉಷ್ಣತೆಗೆ

ಇಳಿಸಿದ ಅನಿಲವನ್ನು ಉಷ್ಣತೆ ಹೊರಕ್ಕೆ ಹೋಗದೆ ಮತ್ತು ಒಳಕ್ಕೆ ಬರದೆ ಇರುವಂತೆ ಏರ್ಪಡಿಸಿ ಸಮೋಷ್ಣದಲ್ಲಿ ಸ್ವಚ್ಛಂದವಾಗಿ ವಿಕಾಸವಾಗಲು ಮತ್ತು ಬಾಹ್ಯ ಕೆಲಸವನ್ನು ಮಾಡಲು ಬಿಡುತ್ತಾರೆ. ಆಗ ಅಣುಗಳಲ್ಲಿನ ಆಕರ್ಷಣಶಕ್ತಿಯಿಂದ ಬಿಡಿಸಿಕೊಂಡು ವಿಕಾಸವಾಗಲು ಮತ್ತು ಬಾಹ್ಯಕೆಲಸ ಮಾಡಲು ಬೇಕಾದ ಶಕ್ತಿಯನ್ನು ಅನಿಲ ಅದರ ಅಂತಃಶಕ್ತಿಯಿಂದಲೇ ಪಡೆದುಕೊಳ್ಳಬೇಕಾಗುವುದು. ಅನಿವಾರ್ಯವಾಗಿ ಅದರ ಉಷ್ಣತೆ ಇಳಿಮುಖವಾಗುತ್ತದೆ. ಎರಡನೆಯ ವಿಧಾನದಲ್ಲಿ ಸಂಪೀಡನೆಗೆ ಒಳಪಟ್ಟ ಅನಿಲವನ್ನು ವಿಪರ್ಯ ಉಷ್ಣತೆಗಿಂತ (ಇನ್ವರ್ಷನ್ ಟೆಂಪರೇಚರ್) ಕಡಿಮೆ ಉಷ್ಣತೆಗೆ ಇಳಿಸಿ, ರೇಷ್ಮೆ ಎಳೆಗಳನ್ನೊಳಗೊಂಡ ಕವಾಟದ (ವಾಲ್ವ್) ಮೂಲಕ ವಿಕಾಸಗೊಳ್ಳಲು ಬಿಡುತ್ತಾರೆ. ಹೀಗೆ ಸಣ್ಣರಂಧ್ರದ ಮೂಲಕ ಧಾವಿಸುವ ಅನಿಲದ ಉಷ್ಣತಾಪಾತ ಬಾಯಿಲ್ ನಿಯಮದ ಅತಿಕ್ರಮಣ ಮತ್ತು ಅಣುಗಳ ಅಂತರಾಕರ್ಷಣಶಕ್ತಿಯನ್ನು (ಇಂಟರ್ ಮಲೆಕ್ಯುಲರ್ ಅಟ್ರ್ಯಾಕ್ಷನ್) ಅವಲಂಬಿಸಿರುತ್ತದೆ. ಮೇಲೆ ವಿವರಿಸಿದ ಎರಡು ವಿಧಾನಗಳನ್ನು ಪುನರಾವರ್ತಿಸುವುದರಿಂದ ಕ್ರಮಶಃ ಅತಿಕನಿಷ್ಠ ಉಷ್ಣತೆಯನ್ನು ಮುಟ್ಟಬಹುದು.




**ಅತಿಶೀತೀಕರಣದ ಸಾಮಾನ್ಯ ತತ್ತ್ವ** : ಉಷ್ಣ ನಿಯಮರಹಿತಸ್ಥಿತಿಯಲ್ಲಿರುವ ಒಂದು ಶಕ್ತಿ. ಯಾವುದಾದರೂ ಒಂದು ಭೌತಿಕ ವಸ್ತುವಿನ ಸೂಕ್ಷ್ಮ ವಿಭಾಗಗಳಲ್ಲಿ (ಮೈಕ್ರೊ ಯೂನಿಟ್ಸ್) ಇರುವ ಶಕ್ತಿ ಒಂದು ಕನಿಷ್ಠ ಪ್ರಮಾಣದ ಶಕ್ತಿಯ ಪೂರ್ಣಾಂಕ ಅಪವರ್ತ್ಯವಾಗಿದೆ. ಅಂದರೆ ವಸ್ತುವಿನ ಅಣುಗಳು ನಿರ್ದಿಷ್ಟ ಮೊತ್ತದ ಶಕ್ತಿಗಳ ಹಂತಗಳಲ್ಲಿ (ಎನರ್ಜಿ ಲೆವೆಲ್ಸ್) ಮಾತ್ರ ಇರಬಲ್ಲುವು. ವಿವಿಧ ಅಣುಗಳ ಹಂತ ವಿವಿಧವಾಗಿರುವುದರಿಂದ ವಸ್ತುವಿನಲ್ಲಿ ಒಂದು ವಿಧದ ನಿಯಮ ರಾಹಿತ್ಯವಿರುವುದು. ಇಂಥ ನಿಯಮರಹಿತಸ್ಥಿತಿಯ ಮಟ್ಟವನ್ನು ಉಷ್ಣಚಲನಶಾಸ್ತ್ರದಲ್ಲಿ ಅಲಭ್ಯತೆ (ಎಂಟ್ರೊಪಿ) ಎಂದು ಕರೆಯುತ್ತಾರೆ. ನಿರಪೇಕ್ಷಶೂನ್ಯದಲ್ಲಿ ($0^oK$) ಅಣುಗಳು ಪೂರ್ಣ ನಿಯಮಸ್ಥಿತಿಯಲ್ಲಿರುತ್ತವೆ. ಆಗ ವಿಂಟ್ರೊಪಿ ಸೊನ್ನೆ. ಉಷ್ಣತೆ ಹೆಚ್ಚು ಕಡಿಮೆ ಆದಂತೆ ಎಂಟ್ರೊಪಿ ವ್ಯತ್ಯಾಸಗೊಳ್ಳುವುದು.

ಒಂದು ವಸ್ತುವನ್ನು ಅಥವಾ ವ್ಯವಸ್ಥೆಯನ್ನು (ಸಿಸ್ಟಮ್) ಪರಿಶೀಲಿಸಿದರೆ, ಈ ಹಿಂದೆ ಹೇಳಿದಂತೆ, ಅದರ ಸೂಕ್ಷ್ಮ ವಿಭಾಗಗಳು ವಿವಿಧ ಶಕ್ತಿ ಹಂತಗಳಲ್ಲಿರುತ್ತವೆ. ವ್ಯವಸ್ಥೆಯ ಉಷ್ಣತೆ $T^0K$ ಆಗಿರುವಾಗ ಅದರ ಬಹುಪಾಲು ಸೂಕ್ಷ್ಮ ವಿಭಾಗಗಳು ಇಖಿ ಶಕ್ತಿ ಹಂತದಲ್ಲಿರುತ್ತವೆ. (k ಯ ಬೋಲ್ಟ್ಸ್‌ಮಾನ್ ಸ್ಥಿರಾಂಕ). ಕೆಲವೇ ವಿಭಾಗಗಳು ಮಾತ್ರ $kT$ ಯ ಎರಡು ಪಕ್ಕದ ಬೇರೆ ಬೇರೆ ಹಂತಗಳಲ್ಲಿರುತ್ತವೆ. ಸಮೋಷ್ಣತೆಯಲ್ಲಿ ಈ ವ್ಯವಸ್ಥೆಯನ್ನು ಬಾಹ್ಯವ್ಯತ್ಯಾಸಗಳಿಗೆ ಒಳಪಡಿಸಿದಾಗ ಸೂಕ್ಷ್ಮ ವಿಭಾಗಗಳ ಶಕ್ತಿಹಂತಗಳ ಅಂತರ ಕಡಿಮೆ ಆಗುತ್ತದೆ. ಅಂದರೆ ಅವು ಕ್ರಮಸ್ಥಿತಿಗೆ ಬರುತ್ತವೆ. ಇದರಿಂದ ಎಂಟ್ರೊಪಿ ಇಳಿಯುತ್ತದೆ. ಈಗ ವ್ಯವಸ್ಥೆಯನ್ನು ಸಮೋಷ್ಣವಾಗಿ ಮೊದಲಿನ ಸ್ಥಿತಿಗೆ ತಂದಾಗ ಹಂತಗಳ ಅಂತರ ಮೊದಲಿನ ಸ್ಥಿತಿಯನ್ನು ಹೊಂದುತ್ತದೆ. ಈ ವ್ಯವಸ್ಥೆಯನ್ನು ಬೇರೆ ವಸ್ತುಗಳಿಂದ ದೂರಮಾಡುವುದರಿಂದ ಎಂಟ್ರೊಪಿ ಅಥವಾ ನಿಯಮಸ್ಥಿತಿ ವ್ಯತ್ಯಾಸ ಹೊಂದುವುದಿಲ್ಲ. ಹಳೆಯ ಶಕ್ತಿಹಂತಗಳ ಅಂತರದಲ್ಲೇ ಅಲಭ್ಯತೆ ಇಳಿದಿರುವುದರಿಂದ ಉಷ್ಣತೆ ಇಳಿದಂತಾಯಿತು. ಕೀಸಮ್ ಮತ್ತು ಕ್ಯಾಮರ್ಲಿಂಗ್ ಓನೆಸ್ ಎಂಬುವರು ಮೇಲೆ ಹೇಳಿದ ವಿಧಾನಗಳಿಂದ ತಲುಪಿದ ಅತ್ಯಂತ ಕನಿಷ್ಠ ಉಷ್ಣತೆ $0.83^o$ K. ಹೀಲಿಯಂ ದ್ರವವನ್ನು ಕಡಿಮೆ ಒತ್ತಡದಲ್ಲಿ ಕುದಿಸಿ ಘನೀಕರಿಸಿದುದರಿಂದ ಈ ಉಷ್ಣತೆಯನ್ನು ತಲುಪಿದರು.

ಸಮೋಷ್ಣಕಾಂತಾಪಕರ್ಷಕ ವಿಧಾನ (ಏಡಿಯಾಬೆಟಿಕ್ ಡೀಮೆಗ್ನೆಟೈಸೇಷನ್ ಮೆಥಡ್): 1926ರಲ್ಲಿ ಡಿಬಾಯ್ ಮತ್ತು ಜೀಯಾಕ್ ಎಂಬುವರು ಈ ವಿಧಾನವನ್ನು ಸೂಚಿಸಿದರು. ಇದು ಅವಕಾಶಕ್ರಮವನ್ನು (ಸ್ಪೇಸಿಯಲ್ ಆರ್ಡರ್) ದಾಟಿ ಅಣು ದ್ವಿಧ್ರುವಗಳನ್ನು ಏಕದಿಙ್ಮುಖವನ್ನಾಗಿ ಮಾಡುವುದನ್ನವಲಂಬಿಸಿದೆ. ಅನುಕಾಂತೀಯ ವಸ್ತು (ಪ್ಯಾರಾಮ್ಯಾಗ್ನೆಟಿಕ್ ಸಬ್‌ಸ್ಟೆನ್ಸ್) ಆಗಿರುವ ಗಾಡೋಲೀನಿಯಂ ಸಲ್ಫೇಟನ್ನು ಸಮಉಷ್ಣತೆಯಲ್ಲಿ ಪ್ರಬಲ ಕಾಂತಕ್ಷೇತ್ರಕ್ಕೆ ಒಳಪಡಿಸುವುದು ಮೊದಲ ಹೆಜ್ಜೆ. ಇದರಿಂದ ದ್ವಿಧ್ರುವಗಳು ಏಕಮುಖವಾಗುತ್ತವೆ. ನಿಯಮಸ್ಥಿತಿ ಹೆಚ್ಚುತ್ತದೆ. ಎಂಟ್ರೊಪಿ ಇಳಿಯುತ್ತದೆ. ಅನುಕಾಂತವಸ್ತುವನ್ನು ತಂಪುಗೊಳಿಸಿ ಅತಿಕ್ಷಿಪ್ರವಾಗಿ ಸಮೋಷ್ಣಕಾಂತಾಕರ್ಷಣಕ್ಕೆ ಒಳಪಡಿಸಿದರೆ ಉಷ್ಣತೆ ಬಹಳವಾಗಿ ಇಳಿಯುತ್ತದೆ. ಈ ವಿಧಾನಕ್ಕೆ ಬಲವಾದ ಕಾಂತಕ್ಷೇತ್ರ ಮತ್ತು ಆರಂಭಪೂರ್ವ ಕಡಿಮೆ ಉಷ್ಣತೆ (ಪ್ರಿ ಕೂಲಿಂಗ್) ಇರಬೇಕು. ಕಾಂತಾಪಕರ್ಷಕ ವಿಧಾನದಿಂದ ಪಡೆದಿರುವ ಕನಿಷ್ಠ ಉಷ್ಣತೆ $0.0014^0$ K. ಎರಡು ಅನುಕಾಂತೀಯ ವಸ್ತುಗಳ ಸಂಯೋಜನೆಯಿಂದ ಕನಿಷ್ಠ ಉಷ್ಣತೆಯನ್ನು ಮತ್ತಷ್ಟು ತಗ್ಗಿಸಬಹುದು. ಪರಮಾಣುಬೀಜಭ್ರಮಣದಲ್ಲೂ (ಸ್ಪಿನ್) ಅನುಕಾಂತತೆ ಇರುವುದನ್ನು ಶುಬ್ನಿಕೊವ್ ಮತ್ತು ಲಝರೊವ್ 1936ರಲ್ಲಿ ಪ್ರಕಟಿಸಿದರು. ಬೀಜಾನುಕಾಂತತೆಯ ಉಪಯೋಗದಿಂದ ಸೈಮನ್ ಮತ್ತು ಕುರ್ಟಿಯವರು 1956ರಲ್ಲಿ $0.00016^o$ K ಉಷ್ಣತೆಯನ್ನು ತಲುಪಿದರು.

ಕಡಿಮೆ ಉಷ್ಣತೆಯಲ್ಲಿ ಕೆಲಸಮಾಡಲು ಮತ್ತು ಆ ಉಷ್ಣತೆಯನ್ನು ಹೆಚ್ಚು ಕಾಲ ಉಳಿಸಿಕೊಳ್ಳಲು ಒಂದು ವಿಶೇಷರೀತಿಯ ದೀವಾರ್ ಜಾಡಿಯನ್ನು ಉಪಯೋಗಿಸುತ್ತಾರೆ. ಜಾಡಿಯ ಸುತ್ತ ನಿರ್ವಾತ ಆವರಣವಿರುತ್ತದೆ; ಮತ್ತು ಹೊರಸುತ್ತಿನಲ್ಲಿ ಹೀಲಿಯಂ ದ್ರವ ಇರುತ್ತದೆ.

ಕಡಿಮೆ ಉಷ್ಣತೆಯನ್ನು ಅಳೆಯಲು ಪೂರ್ವಕ್ರಮಗೊಳಿಸಿದ ಹಬೆ ಒತ್ತಡ ಉಷ್ಣತಾಮಾಪಕ, ಕ್ಯೂರಿ ನಿಯಮವನ್ನಾವರಿಸಿದ ಅನುಕಾಂತೀಯ ಉಷ್ಣತಾಮಾಪಕಗಳನ್ನು ಉಪಯೋಗಿಸುತ್ತಾರೆ.

20ನೆಯ ಶತಮಾನದ ಆದಿಭಾಗದವರೆಗೆ ಸ್ವೀಕೃತವಾಗಿದ್ದವೆಷ್ಟೋ ತತ್ತ್ವಗಳು ಅತಿಶೀತೋತ್ಪಾದನಾನಂತರ ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡುವು. ಅತಿಶೀತಾವಸ್ಥೆಯಲ್ಲಿ ವಸ್ತುಸ್ಥಿತಿ ಬದಲಾಗಿ ಅದು ಹಲವಾರು ಹೊಸ ಗುಣಗಳನ್ನು ಪಡೆಯುವುದು.

ಅತಿಶೀತಾವಸ್ಥೆಯ ಗ್ರಾಹ್ಯೋಷ್ಣ (ಸ್ಪೆಸಿಫಿಕ್ ಹೀಟ್): ಡ್ಯೂಲಾಂಗ್ ಮತ್ತು ಪೆಟಿಟ್ ನಿಯಮದ ಮಹತ್ತ್ವ ಅತಿಶೀತವಲಯದಲ್ಲಿ ಇಲ್ಲವಾಗುತ್ತದೆ. ಈ ಅವಸ್ಥೆಯಲ್ಲಿ ಗ್ರಾಹ್ಯೋಷ್ಣ ಕ್ರಮೇಣ ಕಡಿಮೆಯಾಗಿ ಸೊನ್ನೆಯಾಗುತ್ತದೆ. ಇದನ್ನು ಪ್ರಾಯೋಗಿಕವಾಗಿ ತೋರಿಸಲಾಗಿದೆ.

ಕಾಂತೀಯ ಪರಿಣಾಮ (ಮ್ಯಾಗ್ನೆಟಿಕ್ ಇಫೆಕ್ಟ್): ಸ್ಟೋಕ್, ವರ್‌ವೇ, ನೀಲ್ – ಇವರು ವೀಕ್ಷಿಸಿದ ವಿರೋಧಿ ಫೆರ್ರೊಕಾಂತತ್ವ ಅಯಸ್ಕಾಂತೀಯತೆ (ಆ್ಯಂಟಿಫೆರ್ರೊಮ್ಯಾಗ್ನೆಟಿಸಂ) ಮತ್ತು ಫೆರ್ರಿಕಾಂತತ್ವದ ಕಾರಣ ಅತಿಶೀತಾವಸ್ಥೆಯಲ್ಲಿ ಉಂಟಾಗುವ ನಿಯಮಸ್ಥಿತಿಯೇ. ಕಾಂತಧ್ರುವಗಳ ಅಂತಃಕ್ರಿಯೆಯಿಂದ ನಿರ್ದೇಶಿತವಾದ ವಿವಿಧ ಕ್ರಮಗಳು ಈ ಎರಡು ರೀತಿಯ ಕಾಂತತತ್ತ್ವಗಳಿಗೆ ಕಾರಣವಾಗಿದೆ.

ಅತಿತರಲತ್ವ (ಸೂಪರ್ ಫ್ಲೂ ಇಡಿಟಿ): ಓನೆಸ್ ಮತ್ತು ಡಾನಾ ಎಂಬುವರು ದ್ರವೀಕೃತ ಹೀಲಿಯಂ ಬಗ್ಗೆ ಪ್ರಯೋಗ ನಡೆಸುತ್ತಿದ್ದಾಗ $2.2^0K$ ಯಲ್ಲಿ ಸಾಂದ್ರತೆ ಮತ್ತು ಗ್ರಾಹ್ಯೋಷ್ಣಗಳಲ್ಲಿ ವ್ಯತಿಕ್ರಮವನ್ನು ಕಂಡರು. ಈ ಉಷ್ಣತೆಯಲ್ಲಿ ಕುದಿಯುವ ಹೀಲಿಯಂ ಸ್ತಬ್ಧವಾಯಿತು. ಕೀಸಮ್ ಇದೊಂದು ಮೂಲಭೂತ ವ್ಯತ್ಯಾಸದ ಸೂಚನೆ ಇರಬಹುದೆಂದು ತಿಳಿಸಿದ. ತೀವ್ರ ಸಂಶೋಧನೆಯಿಂದ ದ್ರವೀಕೃತ ಹೀಲಿಯಂನಲ್ಲಿ ಒಂದು ಹೊಸ ಬಗೆಯ ಹೀಲಿಯಂ ಅನ್ನು ಗುರುತಿಸಲಾಯಿತು. ಹೀಲಿಯಂ II ಎಂದು ಕರೆಯಲಾದ ಈ ಹೊಸ ರೂಪಕ್ಕೆ ಅತ್ಯಾಶ್ಚರ್ಯಕರ ಗುಣಗಳಿವೆ.

ಅದು ಅತ್ಯುತ್ತಮ ಉಷ್ಣವಾಹಕವಾಗಿರುತ್ತದೆ. ಒಂದು ಪ್ರನಾಳದಲ್ಲಿ (ಟೆಸ್ಟ್‌ಟ್ಯೂಬ್) ಹೀಲಿಯಂ ಅನ್ನು ತುಂಬಿ ಅದನ್ನು ಹೀಲಿಯಂ ತುಂಬಿದ ಪಾತ್ರೆಯಲ್ಲಿ ಅದ್ದಿದಾಗ, ಪ್ರನಾಳದಲ್ಲಿ ಮಟ್ಟ ಕಡಿಮೆ ಇದ್ದರೆ ಪಾತ್ರೆಯ ಹೀಲಿಯಂ ಪ್ರನಾಳದಲ್ಲಿ ಗೋಡೆಯಂಚಿನಲ್ಲಿ ಏರಿ ಒಳಗೆ ಇಳಿದು ಆ ಮಟ್ಟವನ್ನು ಪಾತ್ರೆಯ ಮಟ್ಟಕ್ಕೆ ಸಮಾನವಾಗಿಸುತ್ತದೆ. ಹೀಲಿಯಂ ತುಂಬಿದ ಪ್ರನಾಳವನ್ನು ಹೀಲಿಯಂ ಪಾತ್ರೆಯ ಮೇಲೆ ಹಿಡಿದಾಗ ಪ್ರನಾಳದ ಹೀಲಿಯಂ ಗೋಡೆಯ ಅಂಚಿನಲ್ಲಿ ಹರಿದು ಪಾತ್ರೆಗೆ ಬೀಳುತ್ತದೆ. ಈ ಹೊಸ ದ್ರವರೂಪಕ್ಕೆ (ಹೀಲಿಯಂ II) ಸ್ನಿಗ್ಧತೆಯೇ (ವಿಸ್ಕಾಸಿಟಿ) ಇರುವುದಿಲ್ಲ. ಅದು ಅತ್ಯಲ್ಪವ್ಯಾಸದ ನಳಿಕೆಯಲ್ಲೂ ಸುಲಭವಾಗಿ ಪ್ರವಹಿಸಬಲ್ಲುದು. U-ಆಕಾರದ ಕೊಳವೆಯಲ್ಲಿ ಕುರುಂದದ ಪುಡಿ (ಎಮರಿಪೌಡರ್) ತುಂಬಿ ಹೀಲಿಯಂ ತುಂಬಿದ ಪಾತ್ರೆಯೊಳಗೆ ಪೂರ್ಣವಾಗಿ ಮುಳುಗಿಸಿಟ್ಟು ಕೊಳವೆಯ ಮೇಲ್ಭಾಗಕ್ಕೆ ಬೆಳಕು ಬೀಳುವಂತೆ ಮಾಡಿದರೆ ಹೀಲಿಯಂ ಹೊರಚಾಚಿದ ನಳಿಕೆಯ

ಮೂಲಕ ಚಿಲುಮೆಯಂತೆ ಮೇಲೆ ಏರುತ್ತದೆ. ಉಷ್ಣಶಕ್ತಿ ಹೀಲಿಯಂ IIರ ಚಲನಶಕ್ತಿಯಾಗಿ ಮಾರ್ಪಡುವುದೇ ಇದರ ಕಾರಣ. ಉಷ್ಣತೆಯ ಏರಿಳಿತವನ್ನುಂಟುಮಾಡಿದಾಗ ಅದಕ್ಕನುಗುಣವಾಗಿ ಹೀಲಿಯಂ ಖಿಖರಲ್ಲಿ ಒತ್ತಡದ ಏರಿಳಿತ ಉಂಟಾಗುತ್ತದೆ. ಒತ್ತಡದ ಏರಿಳಿತದ ಪರಿಣಾಮವೇ ಚಿಲುಮೆ.

ಲಾಂಡೋ, ಕಪೀತ್ಸಾ, ಅನ್ಸಾಗರ್, ಲಿಫ್‌ಶಿಟ್ಜ್, ಫೀಮಾನ್ ಈ ವಿಜ್ಞಾನಿಗಳು ಹೀಲಿಯಂನ ಮೇಲೆ ಹೇಳಿದ ಗುಣಗಳನ್ನು ವಿವರಿಸುವ ಗಣಿತ ತತ್ತ್ವವನ್ನು ನಿರೂಪಿಸಿದ್ದಾರೆ. ಯಾವುದಾದರೂ ಉಷ್ಣತೆಯಲ್ಲಿ ಹೀಲಿಯಂ ದ್ರವ ಅತಿ ತರಲ ಹೀಲಿಯಂ II ಮತ್ತು ಸಾಧಾರಣ ದ್ರವಹೀಲಿಯಂಗಳ ಮಿಶ್ರಣವಾಗಿರುವುದೆಂದು ದ್ವಿತತ್ವ (ಟೂ ಫ್ಲೂಯ್‌ಡ್ ಥಿಯೋರಿ) ಪ್ರತಿಪಾದಿಸುತ್ತದೆ. $2.2^0$ K– $0^0$ K ವರೆಗೆ ಪೂರ್ಣವಾಗಿ ಅತಿತರಲ ಹೀಲಿಯಂ ಆಗಿರುತ್ತದೆ. ಬೋಸ್–ಐನ್‌ಸ್ಟೀನ್ ಸಂಖ್ಯಾಶಾಸ್ತ್ರದ ಪ್ರಕಾರ ಇದೇ ಅಣುಗಳ ಸಾಂದ್ರೀಕರಣ.

ಅತಿಪ್ರವಾಹಿತ್ವ (ಸೂಪರ್ ಕಂಡಕ್ಟಿವಿಟಿ): ಪಾದರಸದ ವಿದ್ಯುನ್ನಿರೋಧವನ್ನು ಅತಿಶೀತಾವಸ್ಥೆಯಲ್ಲಿ ಕ್ಯಾಮರ್ಲಿಂಗ್‌ಓನ್ಸನು ಅಳೆಯುತ್ತಿದ್ದ (1911). $4.2^o$ K ಯಲ್ಲಿ ಅದು ವಿದ್ಯುನ್ನಿರೋಧತ್ವವನ್ನು ಪೂರ್ಣವಾಗಿ ಕಳೆದುಕೊಂಡಿತು. ಈ ಅಸಾಧಾರಣ ಅಂಶವನ್ನು ಓನ್ಸ್ ಗಮನಿಸಿದ. ಅವನು ನಿಯತಪ್ರಮಾಣದ ವಿದ್ಯುತ್ತನ್ನು ಅತಿವಾಹದ ತವರದ ತಂತಿಯಲ್ಲಿ ಪ್ರವಹಿಸಿ ಆ ತಂತಿಯ ನಿರೋಧತ್ವವನ್ನು ಕಂಡುಹಿಡಿಯಲು ಪ್ರಯತ್ನಿಸಿದ. ಹಾಗೆ ಪ್ರವಹಿಸಿದ ವಿದ್ಯುತ್ ಮೊದಲಿನ ಪ್ರಮಾಣದಲ್ಲಿಯೇ ಇತ್ತು. ಇದೇ ಚಿರವಿದ್ಯುತ್ (ಪರ್ಸಿಸ್ಟೆಂಟ್ ಕರೆಂಟ್).

ಇದುವರೆಗೆ ನಡೆಸಿದ ಸಂಶೋಧನೆಗಳಿಂದ ಇಪ್ಪತ್ತೆರಡು ಮೂಲಧಾತುಗಳು ಅತಿವಾಹಕಗಳಾಗಬಲ್ಲವೆಂದು ತಿಳಿದಿದೆ. ಕೆಲವು ಅಂತರ್ಲೋಹ ಸಂಯುಕ್ತಗಳು $17^o$ K ವರೆಗೂ ಅತಿವಾಹಕಗಳಾಗಿರಬಲ್ಲುವು. ಅತಿವಾಹಕಗಳಲ್ಲದ ಚಿನ್ನ ಮತ್ತು ಬಿಸ್ಮತ್‌ಗಳ ಮಿಶ್ರಣ ಅತಿವಾಹಕವಾಗಿರುತ್ತದೆ. ಹಾಗೆಯೇ ಮಾಲಿಬ್ಡಿನಂ ಮತ್ತು ಇಂಗಾಲಗಳ ಮಿಶ್ರಣ ಅತಿವಾಹಕ.

ಪ್ರತಿವಸ್ತುವೂ ಒಂದು ನಿರ್ದಿಷ್ಟ ಪ್ರಮಾಣದ ಉಷ್ಣತೆ ಮತ್ತು ಕಾಂತಕ್ಷೇತ್ರಗಳನ್ನು ತಲಪುವಾಗ ಅತಿವಾಹಕತ್ವವನ್ನು ಕಳೆದುಕೊಳ್ಳುತ್ತದೆ. ಕಾಂತಕ್ಷೇತ್ರ ಸೊನ್ನೆಯಲ್ಲಿದ್ದಾಗ, ಅತಿವಾಹಕತ್ವ ಖಿಛಿ ಉಷ್ಣತೆಯಲ್ಲಿ ನಾಶವಾದರೆ ಆಗ $T_C$ ಯನ್ನು ಅವಧಿಕ (ಕ್ರಿಟಿಕಲ್) ಉಷ್ಣತೆಯೆನ್ನುತ್ತಾರೆ; ಉಷ್ಣತೆ ಸೊನ್ನೆಯಲ್ಲಿದ್ದಾಗ, ಅತಿವಾಹಕತ್ವ $H_C$ ಕಾಂತಕ್ಷೇತ್ರದಲ್ಲಿ ನಾಶವಾದರೆ ಆಗ ಊಛಿ ಯನ್ನು ಅವಧಿಕ ಕಾಂತಕ್ಷೇತ್ರವೆನ್ನುತ್ತಾರೆ. ಕಾಂತಕ್ಷೇತ್ರದಲ್ಲಿರುವ ಲೋಹದ ಗೋಳ ಅತಿವಾಹಕವಾದಾಗ ಅದರಲ್ಲಿನ ಕಾಂತಕ್ಷೇತ್ರ ಹೊರದೂಡಲ್ಪಡುತ್ತದೆ ಎಂಬ ಒಂದು ಹೊಸ ವಿಚಾರವನ್ನು ಮೈಸ್ನರ್ ಮತ್ತು ಓನ್‌ಫೀಲ್ಡ್ ವಿಜ್ಞಾನಿಗಳು ಪ್ರಕಟಿಸಿದರು. ಇದರ ಮೊದಲು ಕಾಂತೀಯದ್ವಿಧ್ರುವ ಉಂಟಾಗುವುದೆಂದು ನಂಬಲಾಗಿತ್ತು. ತಾತ್ತ್ವಿಕ ತಳಹದಿಯ ಮೇಲೆ ಇದನ್ನು ವಿವರಿಸಲು ಪ್ರಯತ್ನ ನಡೆಯಿತು. ಮೊದಲಿಗೆ ಮೈಸ್ನರ್ ಪರಿಣಾಮಾಧಾರಿತ ಅತಿವಾಹಕತ್ವದ ಉಷ್ಣಚಲನಸೂತ್ರಗಳನ್ನು ಗಾರ್ಟರ್ ಮತ್ತು ಕ್ಯಾಸಿಮಿರ್ ವಿಜ್ಞಾನಿಗಳು ತಿಳಿಸಿದರು. ಇವುಗಳಿಂದ ಕೆಲವು ವಿಚಾರಗಳನ್ನು ಮಾತ್ರ ವಿವರಿಸಲು ಸಾಧ್ಯವಾಯಿತು. ಮುಂದೆ ನಾಝಿ ಜರ್ಮನಿಯಿಂದ ನಿರಾಶ್ರಿತರಾಗಿ ಲಂಡನ್ನಿಗೆ ಬಂದ ಫ್ರಿಟ್ಜ್ ಮತ್ತು ಹೀನ್ಜ್ ಸಹೋದರರು ಮ್ಯಾಕ್ಸ್‌ವೆಲ್‌ನ ವಿದ್ಯುತ್ಕಾಂತೀಯತತ್ತ್ವಗಳನ್ನು (ಮಾಕ್ಸ್‌ವೆಲ್ಸ್ ಎಲೆಕ್ಟ್ರೋಮ್ಯಾಗ್ನೆಟಿಕ್ ಥಿಯೊರಿ) ಮಾರ್ಪಡಿಸಿ ಇದನ್ನು ವಿವರಿಸಲು ಪ್ರಯತ್ನಿಸಿದರು. ಇವೇ ಲಂಡನ್ ಸಮೀಕರಣಗಳು. ಅತಿವಾಹಕತ್ವದ ಸಮಾಂಗತ್ವವನ್ನು (ಸಿಮೆಟ್ರಿ) ಬಿಡಿಸಿ ತೋರಿಸಿದುವು. ಸಾಮಾನ್ಯವಾಗಿ ವಿದ್ಯುತ್ ಪ್ರವಾಹವಾದಾಗ ಸಂಗಡ ಒಂದು ಕಾಂತಕ್ಷೇತ್ರವಿರುತ್ತದೆ. ಆದರೆ ಅಸ್ಥಿರ ಕಾಂತಕ್ಷೇತ್ರದಿಂದ ಮಾತ್ರ ವಿದ್ಯುತ್ಪ್ರವಾಹ ಸಾಧ್ಯ. ಈ ತತ್ತ್ವ ಚಿರವಿದ್ಯುತ್ತಿನ ಮೇಲ್ಮೈ ಆಳವನ್ನು (ಸ್ಕಿನ್ ಡೆಪ್ತ್) ವಿವರಿಸಬಲ್ಲುದು. ಆದರೆ ಕೆಲವು ಧಾತುಗಳು ಮಾತ್ರ ಅತಿವಾಹಕತ್ವ ಹೊಂದಿರುವುದರ ಕಾರಣವನ್ನು ವಿವರಿಸಲು ಇದು ಸಮರ್ಥವಾಗಲಿಲ್ಲ.

ಮುಂದೆ ಬಾರ್ಡೀನ್, ಕೂಪರ್, ಷೀಫರ್ ಮತ್ತು ಬೋಗಲ್ಯುಬೊವ್ ವಿಜ್ಞಾನಿಗಳು ಶಕಲ ಸಿದ್ಧಾಂತದ (ಕ್ವಾಂಟಂ ಥಿಯೊರಿ) ಆಧಾರದ ಮೇಲೆ ಅತಿವಾಹಕತ್ವವನ್ನು ವಿವರಿಸಿದರು. ಇದರ ಸಾರವಿಷ್ಟು– ಪರಮಾಣುಜಾಲದ ಮಾಧ್ಯಮದ (ಅಟಾಮಿಕ್ ಲ್ಯಾಟ್ಟಿಸ್) ಮೂಲಕ ಎಲೆಕ್ಟ್ರಾನ್‌ಗಳ ಪರಸ್ಪರ ತರಂಗಗಳ ಮೇಲೆ ಎಲೆಕ್ಟ್ರಾನ್‌ಗಳು ತೇಲಿಕೊಂಡು ಹೋಗುತ್ತವೆ. ಇದರಿಂದ ಎಲೆಕ್ಟ್ರಾನ್‌ಗಳ ನಡುವೆ ಎಲೆಕ್ಟ್ರಾನ್ ಮತ್ತು ಪರಮಾಣುಜಾಲದ ನಡುವೆ ಉಂಟಾಗುವ ಘರ್ಷಣೆಯ ಫಲವಾದ ವಿದ್ಯುನ್ನಿರೋಧವಿರುವುದಿಲ್ಲ. ಈ ತತ್ತ್ವ ಒಂದು ಅತಿವಾಹಕ ಬಳೆಯಲ್ಲಾಗುವ (ಸೂಪರ್ ಕಂಡಕ್ಟಿಂಗ್ ರಿಂಗ್) ಹೊನಲಿನ (ಫ್ಲಕ್ಸ್) ಶಕಲವ್ಯಾಪ್ತಿಯನ್ನು ವಿವರಿಸಬಲ್ಲುದು. ಇದು ಪ್ರಾಯೋಗಿಕವಾಗಿ ಸಾಧಿತವಾಗಿದೆ. ಅತಿವಾಹಕಗಳನ್ನು ಅತಿಹೆಚ್ಚಿನ ಸ್ಥಿರಕಾಂತಕ್ಷೇತ್ರಗಳನ್ನುಂಟುಮಾಡಲು, ಬಾಹ್ಯಾಂತರಿಕ್ಷದಿಂದ ರೇಡಿಯೋ ದೂರದರ್ಶಕಗಳು ಸ್ವೀಕರಿಸುವ ಸಂಜ್ಞಾವಿದ್ಯುತ್‌ಪ್ರವಾಹವನ್ನು (ಸಿಗ್ನಲ್ ಕರೆಂಟ್) ನಷ್ಟವಾಗುವಂತೆ ವೀಕ್ಷಣಕೇಂದ್ರಕ್ಕೆ ತಲುಪಿಸಲು ಉಪಯೋಗಿಸುತ್ತಾರೆ. ದ್ರವ ಆಕ್ಸಿಜನ್ ಮತ್ತು ದ್ರವ ಹೈಡ್ರೋಜನ್‌ಗಳನ್ನು ಆಕಾಶನೌಕೆಗಳಲ್ಲಿ ಇಂಧನವನ್ನಾಗಿ ಬಳಸುತ್ತಾರೆ.

**(ನೋಡಿ– ಅನಿಲ ದ್ರವೀಕರಣ)** **(ಜಿ.ಎಸ್.)**

**ಅತಿಸವಲತ್ತು ಪಡೆದ ರಾಷ್ಟ್ರ ವ್ಯವಹಾರ :** ದೇಶಗಳ ನಡುವಣ ವ್ಯಾಪಾರಕ್ಕೆ ಆರ್ಥಿಕ ವ್ಯವಹಾರಗಳಿಗೆ ಇರಬಹುದಾದ ಪ್ರತಿಬಂಧಕಗಳನ್ನು ನಿವಾರಿಸಿ ಅಂತರ್ದೇಶೀಯ ವ್ಯಾಪಾರ ಸುಗಮವಾಗಿ, ವಿಪುಲವಾಗಿ ನಡೆಯುವಂತೆ ಮಾಡುವುದೇ ಇದರ ಗುರಿ. ಅತಿ ಸವಲತ್ತು ಪಡೆದ ರಾಷ್ಟ್ರಕ್ಕೆ ತೋರಿಸುವ ಎಲ್ಲ ರಿಯಾಯಿತಿಗಳನ್ನು ವ್ಯವಹರಿಸುವ ಇತರ ಎಲ್ಲ ರಾಷ್ಟ್ರಗಳಿಗೂ ತೋರಿಸಬೇಕೆಂಬುದು ಈ ವ್ಯವಹಾರದ ಅರ್ಥ. ಇದರಿಂದ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಒಂದು ಬಗೆಯ ಸಮಾನತೆ ಏರ್ಪಡುತ್ತದೆ. ಹದಿನೇಳನೆಯ ಶತಮಾನದಲ್ಲಾಗಲೇ ಇಂಥ ಕರಾರುಗಳನ್ನು ವಾಣಿಜ್ಯ ವ್ಯಾಪಾರ ಕಾನೂನುಗಳಲ್ಲಿ ಸೇರಿಸುವ ಕೆಲಸ ನಡೆದಿತ್ತು. ಈ ವ್ಯವಹಾರದ ಸೂಕ್ಷ್ಮ ವಿವರ ಹೀಗಿದೆ:

ಒಪ್ಪಂದವನ್ನು ಮಾಡಿಕೊಂಡು ವ್ಯಾಪಾರ ನಡೆಸಬಯಸುವ ಎರಡು ರಾಷ್ಟ್ರಗಳು, ಮುಂದೆ ತಾವು ಮೂರನೆಯ ರಾಷ್ಟ್ರಕ್ಕೆ ನೀಡಬಹುದಾದ ರಿಯಾಯಿತಿಗಳನ್ನು ಪರಸ್ಪರ ನೀಡಬೇಕು. ಇವು ಮುಖ್ಯವಾಗಿ ಸುಂಕದ ತೆರಿಗೆಗೆ ಸಂಬಂಧಿಸಿದುವು. ಜೊತೆಗೆ ಇತರ ರಿಯಾಯಿತಿಗಳೂ ಇರಬಹುದು. ಉದಾಹರಣೆಗೆ, ಭಾರತ ಮತ್ತು ಈಜಿಪ್ಟ್‌ಗಳ ನಡುವಣ 1953ರ ವಾಣಿಜ್ಯ ಒಪ್ಪಂದ ಕಾಯಿದೆಯ 1 ಮತ್ತು 11ನೆಯ ಕಟ್ಟಳೆಗಳನ್ನು ನೋಡಬಹುದು.

ಒಂದು ರಾಷ್ಟ್ರ ಇತರ ಅನೇಕ ರಾಷ್ಟ್ರಗಳೊಡನೆ ಅತಿ ಸವಲತ್ತು ಪಡೆದ ರಾಷ್ಟ್ರ ವ್ಯವಹಾರಗಳನ್ನು ಹೊಂದಿದ್ದು, ಯಾವುದೇ ವಿಶೇಷ ಸುಂಕ ರಿಯಾಯಿತಿ ತೋರಿಸಿದ್ದರೆ, ಆ ರಿಯಾಯಿತಿ ಇತರ ಎಲ್ಲಾ ರಾಷ್ಟ್ರಗಳಿಗೂ ಏಕಕಾಲದಲ್ಲಿ ಅನ್ವಯವಾಗುತ್ತದೆ. ಆದರೆ ಯಾವ ರಾಷ್ಟ್ರವಾದರೂ ಅತಿಸವಲತ್ತು ಪಡೆದ ರಾಷ್ಟ್ರ ಸಂಬಂಧದಲ್ಲಿ ತನಗಿರುವ ರಿಯಾಯಿತಿಯ ಹಕ್ಕನ್ನು ಚಲಾಯಿಸದೆ ಇರುವ ಅವಕಾಶ ಅದಕ್ಕೆ ಸೇರಿದ್ದು.

ಅತಿಸವಲತ್ತು ಪಡೆದ ರಾಷ್ಟ್ರ ಒಪ್ಪಂದ ಜಿ.ಎ.ಟಿ.ಟಿ.ಯ ಮೂಲ ವೈಶಿಷ್ಟ್ಯಗಳಲ್ಲೊಂದು (ಜನರಲ್ ಅಗ್ರಿಮೆಂಟ್ ಆನ್ ಟಾರೀಫ್ಸ್ ಅಂಡ್ ಟ್ರೇಡ್). ಇದರ 1ನೆಯ ಕಟ್ಟಳೆಯಲ್ಲಿರುವಂತೆ ಕರಾರುಮಾಡಿಕೊಳ್ಳುವ ಪಕ್ಷಗಳು ಮಾತ್ರ ಅತಿಸವಲತ್ತು ಪಡೆದ ರಾಷ್ಟ್ರ ಒಪ್ಪಂದದ ಅನುಕೂಲಗಳನ್ನು ಅನುಭವಿಸುವುವು. ಇದರ ಪರಿಣಾಮವಾಗಿ ಎರಡು ಪಕ್ಷಗಳು ಒಂದೇ ಕಾಲದಲ್ಲಿ ತಮ್ಮತಮ್ಮೊಳಗೆ ಸಮಾಲೋಚನೆ ನಡೆಸಿಕೊಂಡಿದ್ದರೂ ಜಿ.ಎ.ಟಿ.ಟಿ.ಯ ಸುಂಕ ಸಮಾವೇಶಗಳಲ್ಲಿ ಸಮಾಲೋಚಿಸಲ್ಪಟ್ಟ ಸುಂಕ ರಿಯಾಯಿತಿಗಳು ಅದರ ಎಲ್ಲಾ ಸದಸ್ಯ ರಾಷ್ಟ್ರಗಳಿಗೂ ದೊರೆಯುತ್ತವೆ.

ಪ್ರಪಂಚದ ವಾಣಿಜ್ಯವನ್ನು ಅಭಿವೃದ್ಧಿಪಡಿಸುವ ಬದಲು ಅದರ ವಿಸ್ತರಣೆಯನ್ನು ಕುಂಠಿತಮಾಡುವ ವಿಷಯವೂ ಅತಿಸವಲತ್ತು ಪಡೆದ ರಾಷ್ಟ್ರ ಷರತ್ತಿನಲ್ಲಿ ಇದೆ. ಕೆಲವು ರಾಷ್ಟ್ರಗಳು ಎಲ್ಲಿ ತಮ್ಮ ರಿಯಾಯಿತಿಗಳನ್ನು ಯಾವ ಒಂದು ಉಪಯೋಗವೂ ಇಲ್ಲದೆ ಇತರ ರಾಷ್ಟ್ರಗಳಿಗೆ ನೀಡಬೇಕಾಗುತ್ತದೊ ಎಂಬ ಹೆದರಿಕೆಯಿಂದ ಈ ಸುಂಕ ರಿಯಾಯಿತಿ ಸಮಾಲೋಚನೆಯ ಗೊಡವೆಗೆ ಹೋಗುವುದೇ ಇಲ್ಲ. ರಾಷ್ಟ್ರಗಳ ಒಕ್ಕೂಟ ಈ ಅತಿಸವಲತ್ತು ಪಡೆದ ರಾಷ್ಟ್ರ ವಿಷಯದ ವ್ಯಾಪ್ತಿ ಸುಂಕ ರಿಯಾಯಿತಿಗೂ ಹರಡುವುದಕ್ಕೆ ಅನೇಕ ರಾಷ್ಟ್ರಗಳ ವಿರೋಧವಿದೆ ಎಂಬುದನ್ನು 1927 – 1931ರ ಅವಧಿಯಲ್ಲಿ ಕಂಡುಕೊಂಡಿತು. ಈಚೆಗೆ ವಿಶ್ವಸಂಸ್ಥೆ ಕೂಡ ಈ ವ್ಯವಹಾರದ ಉಪಯುಕ್ತಾಂಶಗಳನ್ನು ಉಳಿಸಿಕೊಳ್ಳಲು ಶ್ರಮಿಸಿದೆ. **(ಎಚ್.ವಿ.)**

**ಅತಿಸಾರ :** ಹೊಟ್ಟೆಗೆ ತೆಗೆದುಕೊಂಡ ವಸ್ತುಗಳು ಕರುಳಿನ ಮೂಲಕ ಎಂದಿಗಿಂತಲೂ ಬೇಗನೆ ಹೆಚ್ಚಾಗಿ ಮೆತುವಾಗೋ ನೀರುನೀರಾಗೋ ಹೊರಬೀಳುವಿಕೆ. ಈ ಉಚ್ಚಾಟ (ಭೇದಿ) ರೋಗಗಳ ಲಕ್ಷಣವೇ ಹೊರತು ಇದೇ ರೋಗವಲ್ಲ. ಮೈಗೆ ಬೇಡದಿರುವ, ಒಗ್ಗದಿರುವ, ಕರುಳಿನ ಒಳಪೊರೆಗಳನ್ನು ಕೆರಳಿಸುವ ವಸ್ತುಗಳಿಂದ ಮೈಗಾಗುವ ಅಪಾಯ ತಪ್ಪಿಸಲು ನಿಸರ್ಗ ಬೇರೆ ಬೇರೆ ಕಾರಣಗಳಿಂದ, ಬೇಗನೆ ಹೊರದೂಡುವ ಉಪಾಯವಿದು. ಉಚ್ಚಾಟ ಬೇರೆಯಾಗಿ, ಇಲ್ಲವೇ ಬೇಸಗೆ ಕಾಲದಲ್ಲಿ ಹೆಚ್ಚಾಗುವ ಇತರ ಅಂಟುರೋಗಗಳೊಂದಿಗೆ ಕಾಣಿಸಿಕೊಳ್ಳಬಹುದು.

ದೊಡ್ಡವರಲ್ಲೂ ಮಕ್ಕಳಲ್ಲೂ ಇದರ ಕಾರಣ ಹಲವಾರಿವೆ. ಹರೆಯದವರಲ್ಲಿನ ಕಾರಣಗಳು: ಆಹಾರ ವಿಷವೇರಿಕೆ, ಆಸಪಾಕ (ಸ್ಪ್ರೂ), ವಿಷಮಶೀತಜ್ವರ, ಕ್ಷಯ, ಕಾಲರ, ರಕ್ತಭೇದಿಗಳಂಥ ಅಂಟುರೋಗಗಳು, ಜೀವವಿಷದ ಬೇನೆಗಳು, ಜೀವಾತು ಕೊರೆ, ಜೀವಿರೋಧಕ ಮದ್ದುಗಳ ಕೊಡುಗೆ, ಹೆಗ್ಗರುಳುರಿತ (ಕೊಲೈಟಿಸ್), ಹಲಪಾದಿಬೇನೆ (ಪಾಲಿಪೋಸಿಸ್), ನೆಟ್ಟಗರುಳಿನಲ್ಲಿ ಸೇರುವ ಹೆರವಸ್ತುಗಳು, ಕರುಳಿನ ಪರಪಿಂಡಿ ಜೀವಿಗಳು, ಮನೋರೋಗಗಳು ಮುಂತಾದುವು. ಮಕ್ಕಳಲ್ಲೂ ಇವೆಲ್ಲ ಕಾರಣಗಳಿಂದಲೂ ಮತ್ತು ರೊಟೋವೈರಸ್‌ಸೋಂಕಿನಿಂದಲೂ ಉಚ್ಚಾಟ ಆಗಬಹುದು. ಅಲ್ಲದೆ, ಹಣ್ಣು ತರಕಾರಿಗಳ ಮಿತಿಗೆಟ್ಟ ಸೇವನೆಯಿಂದಾದ ಆಹಾರದ ವ್ಯತ್ಯಾಸಗಳು, ದಂಡಾಣುಜೀವಿಯ (ಬ್ಯಾಸಿಲರಿ) ಇಲ್ಲವೇ ಅಪೂರ್ವವಾಗಿ ಚಲ್ಕಣದ (ಅಮೀಬಿಕ್) ಆಮಶಂಕೆಗಳು, ಜಿಡ್ಡಿನ ಉಚ್ಚಾಟ (ಸೀಲಿಯಾಕ್ ಡಿಸೀಸ್), ಕರುಳಿನ ಒಳತೂರಿಕೆ (ಇಂಟಸ್‌ಸಸೆಪ್ಷನ್), ಹಲಪಾದಿ ಬೇನೆ ಇವು ಮಕ್ಕಳಲ್ಲೇ ಹೆಚ್ಚು. ಸರಕ್ಕನೆ ಮೈಯಲ್ಲಿನ ಬಹುಪಾಲು

ನೀರು ಉಚ್ಚಾಟದಿಂದ ಕಳೆದುಹೋದರೆ ಮಕ್ಕಳಿಗೂ ವಯಸ್ಸಾದವರಿಗೂ ತೀರ ತೊಂದರೆ, ಅಪಾಯಕರ. ಏಕಾಣುಜೀವಿಗಳಿಂದಾದ ಉಚ್ಚಾಟಕ್ಕೆ ಸಲ್ಲ ಮದ್ದುಗಳು ಹೆಚ್ಚು ಗುಣಕರ ಅನಾರೋಗ್ಯ, ಸೋಂಕುಗಳ ನಿವಾರಣೆಯಲ್ಲಿ ಇದು ಬಲು ಮುಖ್ಯ. **(ನೋಡಿ– ಆಮಶಂಕೆ)**

(ಎಸ್.ಡಿ.ಎನ್.)

**ಅತೀತರು :** ಎಲ್ಲ ಸಾಮಾಜಿಕ ಭೇದಗಳನ್ನೂ ತೊರೆದ ಶೈವ, ವೈಷ್ಣವ ಸಂನ್ಯಾಸಿಗಳು; ಶಂಕರಾಚಾರ್ಯರಿಂದ ಉಪದೇಶ ಪಡೆದ ಹತ್ತು ಗುಂಪಿನವರು (ದಶನಾಮಾ). ಇವರಲ್ಲಿ ದಂಡಿಗಳೆಂಬುವರು ಶಂಕರಾಚಾರ್ಯರ ಶುದ್ಧತತ್ತ್ವವನ್ನು ಅನುಸರಿಸುತ್ತಾರೆ. ವನ, ಅರಣ್ಯ, ಪುರ, ಗಿರಿ, ಪರ್ವತ, ಸಾಗರ, ಭಾರತಿಗಳು ಅದಂಡಿಗಳು, ಮೊದಲಿನವರಂತೆ ಶುದ್ಧರಲ್ಲ. **(ನೋಡಿ– ಅವಧೂತ)**

(ಜಿ.ಎಚ್.)

**ಅತೀಶ ದೀಪಂಕರ :** 982–1054. ಟಿಬೆಟ್ಟಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಚಿರಸ್ಥಾಯಿ ಹೆಸರು ಪಡೆದವನು. ಬುದ್ಧ ಮತ್ತು ಪದ್ಮಸಂಭವರನ್ನು ಬಿಟ್ಟರೆ, ಇವನೇ ಅತ್ಯಂತ ಪ್ರತಿಭಾವಂತ ವ್ಯಕ್ತಿ. ಈತ ಪೂರ್ವಭಾರತದಲ್ಲಿ ಜನಿಸಿದ. ಬಾಲ್ಯದಿಂದಲೇ ಧಾರ್ಮಿಕ ವಿಷಯಗಳಲ್ಲಿ ಇವನಿಗೆ ವಿಶೇಷ ಆಸಕ್ತಿ ಇತ್ತು. ನಾಲಂದ ವಿಶ್ವವಿದ್ಯಾನಿಲಯದಲ್ಲಿ ಬೋಧಿಭದ್ರನಿಂದ ದೀಕ್ಷೆಪಡೆದ. ದೀಪಂಕರ ಶ್ರೀಜ್ಞಾನ ಎಂಬ ಹೆಸರಿನಿಂದ ಪ್ರಖ್ಯಾತನಾದ. ಅನಂತರ ವಜ್ರಾಸನ ಮಹಾವಿಹಾರಕ್ಕೆ ಹೋಗಿ ಶೀಲರಕ್ಷಿತನಲ್ಲಿ ವಿನಯಪಿಟಕಗಳ ಅಧ್ಯಯನವನ್ನು ನಡೆಸಿದ. ಆದರೂ ಇವನ ಜ್ಞಾನತೃಷೆ ಕಡಿಮೆಯಾಗಲಿಲ್ಲ. ಸುವರ್ಣದ್ವೀಪಕ್ಕೆ ಹೋಗಿ ಧರ್ಮಪಾಲನೆಂಬ ಪಂಡಿತನ ಆಶ್ರಯದಲ್ಲಿ ತಾಂತ್ರಿಕ ಗ್ರಂಥಗಳನ್ನು 12ವರ್ಷ ಅಭ್ಯಾಸಮಾಡಿ, ಹಿಂದಿರುಗಿ ವಿಕ್ರಮಶೀಲ ವಿಶ್ವವಿದ್ಯಾನಿಲಯವನ್ನು ಸೇರಿದ. ಜ್ಞಾನಪ್ರಭನೆಂಬ ವಿದ್ವಾಂಸನ ಆಶಯದಂತೆ ಟಿಬೆಟ್ಟಿಗೆ ಹೋಗಿ ಬೌದ್ಧಗ್ರಂಥಗಳನ್ನು ಸಂಪಾದಿಸುವ ಮತ್ತು ಭಾಷಾಂತರಿಸುವ ಮಹಾಕಾರ್ಯವನ್ನು ಕೈಗೊಂಡ. ಸಂಸ್ಕೃತದಿಂದ ಟಿಬೆಟ್ ಭಾಷೆಗೆ ಅನುವಾದ ಮಾಡಿರುವ ಇವನ ಗ್ರಂಥಗಳು ಕಾಂಜೂರ್ ಎಂಬ ಟಿಬೆಟ್ಟಿನ ತ್ರಿಪಿಟಕದಲ್ಲಿ ಸೇರಿವೆ. ಸಾಮ್ಯೆ ಎಂಬ ವಿಹಾರದಲ್ಲಿ ಅತ್ಯಮೂಲ್ಯವಾದ ಬೌದ್ಧಗ್ರಂಥಗಳ ಭಂಡಾರ ಸ್ಥಾಪಿತವಾಯಿತು. ಇಲ್ಲಿಯೇ ಕಾಲಚಕ್ರ ಎಂಬ ಬೃಹದ್ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆದ. ಟಿಬೆಟ್ಟಿನಲ್ಲಿ ಮೊದಲಿಂದ ಇದ್ದ ಭೂತಾರಾಧನೆಯ ಪಂಥದಿಂದ ಬೌದ್ಧಮತ ಖಿಲವಾಗುತ್ತಿದ್ದುದನ್ನು ಗಮನಿಸಿ ವಿನಯವೂ ಧರ್ಮವೂ ಉಳಿಯುವಂತೆ ಭಾರತೀಯ ದೃಷ್ಟಿಗನುಗುಣವಾದ ಆಚಾರ ವ್ಯವಹಾರಗಳನ್ನೊಳಗೊಂಡ ಮತವೊಂದನ್ನು ಏರ್ಪಡಿಸಿದ. ಮೊದಲಿಗೆ ವಿನಯ ಪಂಥವೆಂದು ಹೆಸರುಗೊಂಡ ಈ ಶಾಖೆ ಕಾಲಾಂತರದಲ್ಲಿ ಪೀತಮುಕುಟಪಂಥವೆಂದು ಪ್ರಸಿದ್ಧವಾಯಿತು. ಈ ಶಾಖೆ ಟಿಬೆಟ್ಟಿನಲ್ಲಿ ಇಂದಿಗೂ ಇದೆ. ಮುಂದೆ ಮಾರ್ಪ, ಮಿಲರೇಪ ಎಂಬುವರು ಈ ಶಾಖೆಯನ್ನು ಬೆಳೆಸಿದರು. ಅತೀಶನಿಂದಾಗಿ ಬೌದ್ಧಧರ್ಮದಲ್ಲಿ ಬ್ರಹ್ಮಚರ್ಯದ ಅನುಷ್ಠಾನ ಏರ್ಪಟ್ಟಿತಲ್ಲದೆ ತಾಂತ್ರಿಕವಿಧಿಗಳ ವಿಸರ್ಜನೆಯಾಯಿತು. ಈತ ಅತೀಶಲ್ಹಾಸ ಬಳಿ ನೆಕಾಂಗ್ ಎಂಬಲ್ಲಿ ತೀರಿಕೊಂಡ. ಅಲ್ಲಿ ಇವನ ಸಮಾಧಿ ಇದೆ.

(ಎ.ವಿ.ಎನ್.)

**ಅತ್ತಿಮಬ್ಬೆ :** 10ನೆಯ ಶತಮಾನದ ಉತ್ತರಾರ್ಧ ಮತ್ತು 11ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಜೈನ ಶ್ರಾವಕಿ. ಪ್ರಾಚೀನ ಕರ್ನಾಟಕದ ಸ್ತ್ರೀಯರಲ್ಲಿ ಅಗ್ರಗಣ್ಯಳು. ಇವಳ ಬಗ್ಗೆ ಅನೇಕ ಸಂಗತಿಗಳು ರನ್ನನ ಅಜಿತಪುರಾಣದಿಂದಲೂ ಅವನೇ ಬರೆದಿರ ಬಹುದಾದ ಲಕ್ಕುಂಡಿಯ ಶಾಸನದಿಂದಲೂ ಇವಳ ತೌರುಮನೆಯ ಹಲವು ಸಂಗತಿಗಳು ಪೊನ್ನನ ಶಾಂತಿಪುರಾಣದಿಂದಲೂ ತಿಳಿದುಬರುತ್ತವೆ.

ಅತ್ತಿಮಬ್ಬೆಯ ಅಜ್ಜ ನಾಗಮಯ್ಯ, ಈಗ ಆಂಧ್ರ ಪ್ರದೇಶಕ್ಕೆ ಸೇರಿರುವ ವೆಂಗಿಮಂಡಲದ ಕಮ್ಮೆನಾಡಿನ ಪುಂಗನೂರಿನ ಜೈನಬ್ರಾಹ್ಮಣ. ಇವನ ಮಕ್ಕಳು ಮಲ್ಲಪಯ್ಯ ಮತ್ತು ಪೊನ್ನಮಯ್ಯ. ಇವರಲ್ಲಿ ಮಲ್ಲಪಯ್ಯ ಮತ್ತು ಅಪ್ಪಕಬ್ಬೆಯರ ಮಗಳೇ ಅತ್ತಿಮಬ್ಬೆ. ಮಲ್ಲಪಯ್ಯ ಪಂಡಿತ ಮಂಡಳಿಗಂ ಕವಿಮಂಡಳಿಗಂ ತನ್ನ ಮನೆ ತವರ್ಮನೆಯೆನೆ ಬಾಳಿದವನು. ಈ ಸೋದರರಿಬ್ಬರ ಆಶ್ರಯದಲ್ಲಿ ಪೊನ್ನ ಶಾಂತಿಪುರಾಣವನ್ನು ಬರೆದ. ಪೊನ್ನಮಯ್ಯ ತನ್ನ ದೊರೆ ತೈಲಪನಿಗಾಗಿ ಕಾವೇರೀತೀರದ ಯುದ್ಧದಲ್ಲಿ ಪ್ರಾಣವನ್ನು ಒಪ್ಪಿಸಿದ.

ಅತ್ತಿಮಬ್ಬೆಯನ್ನು ಇವಳ ತಂಗಿ ಗುಂಡಮಬ್ಬೆಯ ಜೊತೆಯಲ್ಲಿ ಚಾಳುಕ್ಯ ಚಕ್ರವರ್ತಿ ಅಹವಮಲ್ಲನ ಭುಜಾದಂಡದಂತಿದ್ದ ನಾಗದೇವನಿಗೆ ಕೊಟ್ಟಿದ್ದರು (ಈ ನಾಗದೇವ, ಚಾಳುಕ್ಯ ಚಕ್ರವರ್ತಿಯ ಮಹಾಮಂತ್ರಿ ಧಲ್ಲಪನ ಹಿರಿಯ ಮಗ). ಅತ್ತಿಮಬ್ಬೆಗೆ ಅಣ್ಣಿಗದೇವನೆಂಬ ಕಿರಿವಯಸ್ಸಿನ ಮಗನೂ ಇದ್ದ. ಇವಳು ಇನ್ನೂ ಯೌವನದಲ್ಲಿರುವಾಗಲೇ ಗಂಡ ನಾಗದೇವ ಸ್ವರ್ಗಸ್ಥನಾದ. ಆಗ ಇವಳ ತಂಗಿ ಗುಂಡಮಬ್ಬೆ ಅಕ್ಕನನ್ನು ಕಷ್ಟದಿಂದ ಒಪ್ಪಿಸಿ, ತಾನು ಗಂಡನೊಡನೆ ಸಹಗಮನ ಮಾಡಿದಳು. ಪತಿಯ ಅಗಲಿಕೆಯಿಂದನೊಂದ ಅತ್ತಿಮಬ್ಬೆ ಮಗನ ಲಾಲನೆಪಾಲನೆಗಾಗಿ ಕಷ್ಟದಿಂದ ಉಳಿದು ಉಗ್ರ ವ್ರತನೇಮಾದಿಗಳಲ್ಲಿ ಜೀವನ ಸಾಗಿಸಿದಳು. ತನ್ನ ಬಳಿಯಿದ್ದ ಐಶ್ವರ್ಯವನ್ನು ಉದಾರವಾಗಿ ಜೈನಧರ್ಮಕ್ಕಾಗಿ ವ್ಯಯಿಸಿದಳು. ಇವಳು ಮಾಡಿದ ಧಾರ್ಮಿಕ ಕಾರ್ಯಗಳಲ್ಲಿ ಕೆಲವು ಇಂತಿವೆ. ಮಣಿಖಚಿತವಾದ 1500 ಜಿನಪ್ರತಿಮೆಗಳನ್ನು ಮಾಡಿಸಿ ದಾನ ಮಾಡಿದಳು. ಲಕ್ಕುಂಡಿಯಲ್ಲಿ ದೊಡ್ಡ ಬಸದಿಯನ್ನು ಕಟ್ಟಿಸಿ (1007) ಅದಕ್ಕೆ ದತ್ತಿಗಳನ್ನು ಬಿಡಿಸಿದಳು. ರನ್ನನಿಂದ ಅಜಿತಪುರಾಣವನ್ನು ಹೇಳಿಸಿದ್ದಲ್ಲದೆ. ತನ್ನ ತಂದೆ ಪೊನ್ನನಿಂದ ಹೇಳಿಸಿದ್ದ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿ ಹಂಚಿಸಿದಳು. ತನ್ನ ತಪಸ್ಸು ನಿಷ್ಠೆ ಔದಾರ್ಯ ತ್ಯಾಗ ಧರ್ಮಾನುರಾಗ ಕಾವ್ಯಪ್ರೇಮ ಇತ್ಯಾದಿಗಳಿಂದ ತನ್ನ ಕಾಲದ ಜನರ ಕಣ್ಣಲ್ಲಿ ಮಹಾವ್ಯಕ್ತಿ ಯಾದಳು. ಇವಳು ಮೆರೆದ ಪವಾಡಗಳನ್ನು ಇವಳ ಆಶ್ರಯದಲ್ಲಿದ್ದ ರನ್ನನೂ ಇವಳ ಶಾಸನವೂ ಕೊಂಡಾಡಿವೆ.

ಇವಳಾದ ಮೇಲೆ ಹುಟ್ಟಿದ ಅನೇಕ ಶಾಸನಗಳಲ್ಲಿಯೂ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿಯೂ ಇವಳನ್ನು ಮನಸಾರೆ ಹೊಗಳಲಾಗಿದೆ. ಕನ್ನಡ ನಾಡಿನಲ್ಲಿ ಶೀಲ ಅನುಪಮಗುಣ ಔದಾರ್ಯ ಅಭಿಮಾನಗಳಿಗೆ ಸಂಕೇತವಾಗಿ ಬಾಳಿದ ಮಹಾವ್ಯಕ್ತಿ ಅತ್ತಿಮಬ್ಬೆ ಮುಂದಿನ ಜನಾಂಗದ ಮೇಲೆಯೂ ತನ್ನ ಪ್ರಭಾವವನ್ನು ಬೀರಿದಳು.

(ಎಂ.ಸಿ)

**ಅತ್ತಿಮರ :** ಆಲ, ಅಶ್ವತ್ಥ ಮೊದಲಾದ ವೃಕ್ಷಗಳನ್ನೊಳಗೊಂಡ ಮೋರೇಸೀ ಕುಟುಂಬಕ್ಕೆ ಸೇರಿದ ಮರವಿದು. ಸುಮಾರು 20 ರಿಂದ 30 ಮೀ ಎತ್ತರ ಬೆಳೆಯುತ್ತದೆ. ಇದು ಭಾರತ, ಸಿಂಹಳ ಇತ್ಯಾದಿ ಉಷ್ಣದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ.

ಅತ್ತಿಮರದಲ್ಲಿ ಹೂವು ಬರುವುದಿಲ್ಲ ಎಂಬ ಭಾವನೆ ಇದೆ. ಆದರೆ ಇದು ತಪ್ಪು ಗ್ರಹಿಕೆ. ಅತ್ತಿಮರದಲ್ಲಿ ಹಣ್ಣಿರಬೇಕಾದರೆ ಹೂ ಇದ್ದೇ ಇರಬೇಕು. ಇತರ ಸಸ್ಯಗಳಲ್ಲಿ ಹೂ ಎದ್ದು ಕಾಣುವಂತೆ ಇದರಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅವು ಬಹು ಸಣ್ಣ ಸಣ್ಣವಾಗಿದ್ದು ಮೃದುವೂ ಮಂದವೂ ಆದ ಒಂದು ಕೋಶದೊಳಗಿರುವುದರಿಂದ ಕಣ್ಣಿಗೆ ಬೀಳುವುದಿಲ್ಲ. ಇಂಥ ಹೂಗೊಂಚಲಿಗೆ ಪ್ಯಾಂತೋಡಿಯಮ್ ಎಂದು ಹೆಸರು. ಅವು ತಾಳು, ಮರ ಮತ್ತು ರೆಂಬೆಗಳ ಮೇಲೆಲ್ಲ ಬೆಳೆಯುತ್ತವೆ.

ಪರಾಗಸ್ಪರ್ಶ ಬ್ಲಾಸ್ಟೊಫ್ಯಾಗಸ್ ಎಂಬ ಒಂದು ಜಾತಿಯ ಸೊಳ್ಳೆಯಿಂದ ನಡೆಯುತ್ತದೆ. ಹೆಣ್ಣು ಸೊಳ್ಳೆಗಳು ಹೂಗೊಂಚಲಿನ ಮೇಲ್ಭಾಗದಲ್ಲಿರುವ ರಂಧ್ರದ ಮೂಲಕ ಒಳಹೊಕ್ಕು ಕೋಶದ ಮಧ್ಯಭಾಗದಲ್ಲಿರುವ ಬಂಜೆಹೂಗಳ ಅಂಡಾಶಯದಲ್ಲಿ ಮೊಟ್ಟೆಗಳನ್ನಿಡುತ್ತವೆ. ಅನಂತರ ಇವು ಹೊರಕ್ಕೆ ಬರಲು ಯತ್ನಿಸಿದಾಗ ರಂಧ್ರದ ಸಮೀಪದಲ್ಲಿ ಕೆಳಮುಖವಾಗಿರುವ ಮುಳ್ಳಿನಂಥ ರೋಮಗಳು ಅಡ್ಡಿಪಡಿಸುತ್ತವೆ. ಒಳಗಡೆ ಸುತ್ತುವಾಗ ಕೋಶದ ತಳಭಾಗದಲ್ಲಿ ರುವ ಹೆಣ್ಣು ಹೂವುಗಳಿಗೆ ಬೇರೊಂದು ಹೂವಿನಿಂದ ತಂದಿರುವ ಪರಾಗರೇಣುವಿನಿಂದ ಸ್ಪರ್ಶವನ್ನುಂಟು ಮಾಡುತ್ತವೆ. ಕೋಶದ ಮೇಲ್ಭಾಗದಲ್ಲಿರುವ ಗಂಡುಹೂಗಳು ಬಲಿತು ಪರಾಗವನ್ನು ಚೆಲ್ಲುವ ಕಾಲಕ್ಕೆ ಸರಿಯಾಗಿ, ಸೊಳ್ಳೆಗಳು ಗಂಡು ಹೂಗಳು ಚೆಲ್ಲಿದ ಪರಾಗವನ್ನು ಹೊತ್ತು ಹೊರಬರುತ್ತವೆ. ಇವು ಇನ್ನೊಂದು ಹೂಕೋಶವನ್ನು ಹೊಕ್ಕಾಗ ಅಲ್ಲಿರುವ ಹೆಣ್ಣುಹೂಗಳಲ್ಲಿ ಅನ್ಯಪರಾಗಸ್ಪರ್ಶವನ್ನುಂಟುಮಾಡುತ್ತವೆ. ಕೆಲವು ದಿವಸಗಳಲ್ಲಿ ಬಂಜೆ ಅಂಡಾಶಯದಲ್ಲಿಟ್ಟ ಮೊಟ್ಟೆಗಳು ಒಡೆದು ಸೊಳ್ಳೆಗಳಾಗುತ್ತವೆ. ಅತ್ತಿ ಹಣ್ಣನ್ನು ಬಿಡಿಸಿದಾಗ ಅನೇಕ ಸೊಳ್ಳೆಗಳು ಇರುವುದನ್ನು ಗಮನಿಸಿರಬಹುದು.

ಅತ್ತಿಮರದ ಎಲೆ, ತೊಗಟೆ, ಹಣ್ಣು ಎಲ್ಲವೂ ಔಷಧಿಗೆ ಬರುತ್ತವೆ. ಗಾಯದಿಂದಾದ ರಕ್ತಸ್ರಾವವನ್ನು ತಡೆಯುವ ಗುಣ ತೊಗಟೆಗೆ ಇರುವುದರಿಂದ ಅದರ ಕಷಾಯವನ್ನು ಗಾಯ ತೊಳೆಯಲು ಉಪಯೋಗಿಸುತ್ತಾರೆ. ಹುಲಿ ಮತ್ತು ಬೆಕ್ಕಿನಿಂದಾದ ಗಾಯಕ್ಕೆ ಇದನ್ನು ಹಚ್ಚುತ್ತಾರೆ. ಬೇರಿನಿಂದ ಹಾಲನ್ನು ತೆಗೆದು ಕುಡಿಯುತ್ತಾರೆ. ಹಲವಾರು ದಿವಸ ಬೇರಿನ ಹಾಲನ್ನು ಕುಡಿದರೆ ಶಕ್ತಿವೃದ್ಧಿಯಾಗುತ್ತದೆ ಎಂಬ ಅಭಿಪ್ರಾಯವಿದೆ. ಹಾಲನ್ನು ಮೂಲವ್ಯಾಧಿಗೂ ಅತಿಸಾರಬೇನೆಗಳಿಗೂ ಔಷಧಿಯಾಗಿ ಬಳಸುವುದುಂಟು. ಗೊನೊರಿಯ ರೋಗಕ್ಕೆ ಇದು ಪರಿಣಾಮಕಾರಿಯಾದ ಔಷಧವೆಂದು ಹೇಳುವರು. ದೊಡ್ಡರೋಗದಿಂದ ನರಳುವ ದನಕರುಗಳಿಗೆ ತೊಗಟೆಯನ್ನು ಈರುಳ್ಳಿ, ಜೀರಿಗೆ, ತೆಂಗಿನ ಹೊಂಬಾಳೆ, ಎಲೆ ಮತ್ತು ವಿನೆಗರ್ ಸಂಗಡ ಮಿಶ್ರಮಾಡಿ ತಿನ್ನಿಸಿದರೆ ಗುಣಕಾರಿ.

ಎಲೆಯ ಪುಡಿಯನ್ನು ಜೇನಿನೊಡನೆ ಬೆರೆಸಿ ಪಿತ್ತವಿಕಾರವಾದಾಗ ಬಳಸುತ್ತಾರೆ. ಎಲೆಗಳ ಮೇಲೆ ಕೀಟದಿಂದಾಗುವ ಗಂಟುಗಳನ್ನು ಹಾಲಿನಲ್ಲಿ ನೆನೆಹಾಕಿ ಜೇನುತುಪ್ಪದೊಡನೆ ಸೇವಿಸಿದರೆ ಸಿಡುಬು ಕಲೆಗಳಿಂದಾದ ಗುಳಿಗಳು ಹೋಗುತ್ತವೆ ಎಂದು ಆಟ್ಕಿನ್ಸನ್ ಹೇಳಿದ್ದಾನೆ.

ಅತ್ತಿ ಹಣ್ಣಿನೊಳಗಡೆ ಸೊಳ್ಳೆಗಳಿರುವುದರಿಂದ ಜನ ತಿನ್ನಲು ಇಷ್ಟಪಡುವುದಿಲ್ಲ. ಆದರೂ ಹಣ್ಣು ಬಡವರಿಗೆ ಅಭಾವಕಾಲದಲ್ಲಿ ಒಳ್ಳೆಯ ಆಹಾರ. ಕಾಯಿ ಮಾಗುವ ಮೊದಲು ಕಿತ್ತು ಪಲ್ಯಮಾಡಿ ತಿನ್ನುತ್ತಾರೆ. ಮರ ಅಷ್ಟು ಗಟ್ಟಿಯಲ್ಲ. ಈ ಮರದ ಹಲಗೆ ಮತ್ತು ಸರಗಳು ಹೆಚ್ಚು ಬಾಳಿಕೆ ಬರುವುದಿಲ್ಲ. ಸೌದೆ ಉರಿಸುವುದಕ್ಕೂ ಅಷ್ಟು ಉಪಯುಕ್ತವಲ್ಲ.

(ಎಚ್.ಎನ್.ಪಿ.)

**ಅತ್ತಿರಾಂಪಾಕ್ಕಂ :** ದಕ್ಷಿಣಭಾರತದ ಪೂರ್ವಶಿಲಾಯುಗದ ಮುಖ್ಯ ನೆಲೆಗಳ ಲ್ಲೊಂದು. ಮದರಾಸಿನಿಂದ ವಾಯವ್ಯ ದಿಕ್ಕಿನಲ್ಲಿ ಸು.65ಕಿಮೀ ದೂರದಲ್ಲಿ ಹಳೆಯ ಪಾಲಾರ್ ಅಥವಾ ಈಗಿನ ಕೊರ್ತ ಲೈಮಾರ್ ನದೀಕಣಿವೆಯಲ್ಲಿ ಇಲ್ಲಿ ಪ್ಲೀಸ್ಟೋಸೀನ್ ಕಾಲಕ್ಕೆ ಸೇರಿದ ನಾಲ್ಕು ನದೀ ಮಟ್ಟಗಳು (ರೀವರ್ ಟೆರೇಸಸ್) ಇದ್ದು ಅವುಗಳಲ್ಲಿ ಎರಡನೆಯ ಮತ್ತು ಮೂರನೆಯ ಮಟ್ಟಗಳಿಂದ ಆದಿಮಾನವನಿರ್ಮಿತವಾದ ಅಬೆವಿಲಿಯನ್ **(ನೋಡಿ)** ಮತ್ತು ಅಷ್ಯೂಲಿಯನ್ ಹಂತದ ಕೈಕೊಡಲಿಗಳೂ ಕ್ಲಾಕ್ಟೋನಿಯನ್ ಮತ್ತು ಲೆವಲ್ವಾಸಿಯನ್ ರೀತಿಯ ಚಕ್ಕೆಕಲ್ಲಿನ ಉಪಕರಣಗಳು ದೊರಕಿವೆ.

ಭಾರತದಲ್ಲೇ ಮೊದಲ ಬಾರಿಗೆ ಈ ಪ್ರದೇಶದಲ್ಲಿ ರಾಬರ್ಟ್ ಬ್ರೂಸ್‌ಫುಟ್ ಈ ಶಿಲೋಪಕರಣಗಳನ್ನು ಸಂಗ್ರಹಿಸಿದ. ಅನಂತರ ಟಿ.ಟಿ.ಪ್ಯಾಟರ್‌ಸನ್ ಮತ್ತು ವಿ.ಡಿ.ಕೃಷ್ಣಸ್ವಾಮಿಯವರ ಸಂಶೋಧನೆಗಳಿಂದ ಭಾರತೀಯ ಪೂರ್ವಶಿಲಾಯುಗ ಸಂಸ್ಕೃತಿಯಲ್ಲಿ ಈ ಪ್ರದೇಶದ ಪ್ರಾಮುಖ್ಯ ತಿಳಿದುಬಂದಿದೆ. ಅತ್ತಿರಾಂಪಾಕ್ಕಂ ಮತ್ತು ಇಲ್ಲಿಂದ 25ಕಿಮೀ ದೂರದಲ್ಲಿ ನಾರಣಾವರಂ ನದಿಯ ತೀರದಲ್ಲಿರುವ ವಡ ಮಧುರೈ ಎಂಬೆರಡು ನೆಲೆಗಳಿಂದ ಪೂರ್ವಶಿಲಾಯುಗ ಸಂಸ್ಕೃತಿಯ ಬೆಳವಣಿಗೆ ತಿಳಿದುಬರುತ್ತದೆ.



ಆದಿ ಹಳೆಶಿಲಾಯುಗದ ಸಂಸ್ಕೃತಿಯ ನೆಲೆಯ ಉತ್ಖನನ

ಈ ಪ್ರದೇಶಗಳಲ್ಲಿ ಕಂಡುಬರುವ ಮೊದಲ ನದೀಮಟ್ಟದಲ್ಲಿ ಅಬೆವಿಲ್ಲಿಯನ್ ಮತ್ತು ಅಷ್ಯೂಲಿಯನ್ ಹಂತದ ಮೊದಲಭಾಗದ ಕೈಕೊಡಲಿಗಳೂ ಚಕ್ಕೆಕಲ್ಲುಗಳೂ ಮತ್ತಿತರ ಉಪಕರಣಗಳೂ ದೊರಕಿವೆ. ಎರಡನೆಯ ಮಟ್ಟದಲ್ಲಿ ಅಷ್ಯೂಲಿಯನ್ ಹಂತದ ಮುನ್ನಡೆ ಕಂಡುಬಂದು ಉಪಕರಣಗಳು ನೇರವಾಗೂ ಚೂಪಾಗೂ ಮಾರ್ಪಟ್ಟಿವೆ. ಮೂರನೆಯ ಮಟ್ಟದಲ್ಲಿ ಅಷ್ಯೂಲಿಯನ್ ಹಂತದ ಕೊನೆಗಾಲದ ಉಪಕರಣಗಳೂ ಮಿಕಾಕ್ವಿಯನ್ ರೀತಿಯ ಕೈಕೊಡಲಿಗಳೂ ಲೆವಲ್ವಾಸಿಯನ್ ರೀತಿಯ ಚಕ್ಕೆಕಲ್ಲಿನ ಕಂಡುಬಂದಿವೆ. ಕಡೆಯದಾದ ನಾಲ್ಕನೆಯ ಮಟ್ಟದಲ್ಲಿ ಶಿಲಾಯುಗದ ಅಂತ್ಯಕಾಲಕ್ಕೆ ಸೇರಿದ ಉಪಕರಣಗಳು ದೊರಕುತ್ತವೆ. ಇತ್ತೀಚಿನ ಸಂಶೋಧನೆಗಳಿಂದ ಶಿಲಾಯುಗದ ಅಂತ್ಯಕಾಲಕ್ಕೆ ಸೇರಿದ ಆಯುಧಗಳನ್ನು ಮಧ್ಯಶಿಲಾಯುಗದ ಅವಶೇಷಗಳೆಂದು ಪ್ರಾಕ್ತನಶಾಸ್ತ್ರಜ್ಞರು ಗುರುತಿಸಿದ್ದಾರೆ. (ಬಿ.ಕೆ.ಜಿ.)

**ಅತ್ತೂರು :** ತಮಿಳುನಾಡು ರಾಜ್ಯದ ಸೇಲಂ ಜಿಲ್ಲೆಯ ಅತ್ತೂರು ತಾಲ್ಲೂಕಿನ ಆಡಳಿತ ಕೇಂದ್ರ. (2001). ಕಾಲರಾಯನ ಬೆಟ್ಟಗಳಿಂದ 5ಕಿಮೀ ದೂರದಲ್ಲಿ, ವಸಿಷ್ಠ ನದಿಯ ದಂಡೆಯ ಮೇಲಿದೆ. ಪಟ್ಟಣದ ಉತ್ತರಕ್ಕೆ 18ನೆಯ ಶತಮಾನದಲ್ಲಿದ್ದ ಪ್ರಸಿದ್ಧ ಚೆಟ್ಟಿ ಮೊದಲಿಯಾರ್ ಎಂಬುವನಿಗೆ ಸೇರಿದ್ದ ದೊಡ್ಡ ಕೋಟೆಯಿದೆ. ಮುಂದೆ ಈ ಕೋಟೆಯಲ್ಲಿ ಬ್ರಿಟಿಷರು ಸೇನಾ ತುಕಡಿಯನ್ನಿರಿಸಿದ್ದರು. (ಎಂ.ಎನ್.ವಿ.)

**ಅತ್ಯಲ್ಪ ಸಿಲಿಕಾಂಶಶಿಲೆಗಳು :** ಸಿಲಿಕಾಂಶ ಪ್ರಮಾಣ ಶೇ.45ಕ್ಕಿಂತ ಕಡಿಮೆ ಇರುವ ಶಿಲೆಗಳಿಗೆ ಈ ಹೆಸರಿದೆ (ಅಲ್ಟ್ರ ಬೇಸಿಕ್ ರಾಕ್ಸ್). ಸಾಮಾನ್ಯವಾಗಿ ಈ ಶಿಲೆಗಳ ಬಣ್ಣ ಕಪ್ಪು. ಇವುಗಳಲ್ಲಿ ಫೆಲ್ಸ್ಪಾರ್ ಖನಿಜಗಳಿರುವುದಿಲ್ಲ; ಇದ್ದರೂ ಪ್ರಮಾಣ ಬಹಳ ಅಲ್ಪ. ಕ್ಯಾಲ್ಸಿಯಂ ಅಧಿಕವಿರುವ ವಿಧಗಳು ಮಾತ್ರ ಇರುತ್ತವೆ. ಈ ವರ್ಗದ ಶಿಲೆಗಳಲ್ಲಿ ಮುಖ್ಯವಾಗಿ ಆಲಿವೀನ್ ಪೈರಾಕ್ಸೀನ್ ಮತ್ತು ಅದಿರು ಖನಿಜಗಳಿವೆ. ಹಾರನ್‌ಬ್ಲೆಂಡ್ ಮತ್ತು ಅಭ್ರಕಗಳು ಕೆಲವು ಬಗೆಯಲ್ಲಿರುತ್ತವೆ. ನೆಫೆಲೀನ್, ಮೆಲಿಲೈಟ್–ಮುಂತಾದ ಫೆಲ್ಸ್ಪತಾಯಿಡಲ್ ಖನಿಜಗಳು ಇರುವುದುಂಟು. ರೂಪಾಂತರಗೊಂಡ ಶಿಲೆಗಳಲ್ಲಿ ಸರ್ಪೆಂಟೀನ್ ಮತ್ತು ಟಾಲ್ಕ್, ಕ್ಲೋರೈಟ್ ಮತ್ತು ಟ್ರೆಮೊಲೈಟ್–ಮುಂತಾದ ಜಲಸಂಯೋಜಿತ ಖನಿಜಗಳೂ ಇರುತ್ತವೆ.

ಶಿಲಾವಿಧಗಳು: ಮೇಲೆ ತಿಳಿಸಿದ ಬೇರೆ ಬೇರೆ ಖನಿಜಗಳಿರುವ ಅಥವಾ ಖನಿಜಗಳು ವಿವಿಧ ಪ್ರಮಾಣದಲ್ಲಿರುವ ಶಿಲೆಗಳಿಗೆ ಬೇರೆ ಬೇರೆ ಹೆಸರಿದೆ. ಈ ಗುಂಪಿನ ಶಿಲೆಗಳಲ್ಲಿ ಸ್ಥೂಲಕಣಶಿಲೆಗಳು. ಸೂಕ್ಷ್ಮಕಣಶಿಲೆಗಳು ಎಂದು ಎರಡು ಗುಂಪು. ಸ್ಥೂಲಕಣಶಿಲೆಗಳಲ್ಲಿ 1. ಡನೈಟ್, 2. ಪೆರಿಡೊಟೈಟ್, 3. ಪೈರಾಕ್ಸಿನೈಟ್, 4. ಫೆಲ್ಸ್ಪತಾಯಿಡಲ್ ಖನಿಜಗಳಿರುವ ಶಿಲೆಗಳು ಮತ್ತು 5. ಸರ್ಪೆಂಟಿನೈಟ್ ಇವು ಮುಖ್ಯವಾಗಿವೆ.

ಸ್ಥೂಲಕಣಶಿಲೆಗಳು: 1. ಡನೈಟ್: ಈ ವಿಧದ ಶಿಲೆಯನ್ನು ಮೊದಲು ನ್ಯೂಜಿಲೆಂಡಿನ ಡನ್ ಪರ್ವತದಲ್ಲಿ ಕಂಡುಹಿಡಿದುದರಿಂದ ಈ ಹೆಸರು ಬಂದಿದೆ. ಇದರಲ್ಲಿ ಬಹುಭಾಗ ಆಲಿವೀನ್ ಇರುತ್ತದೆ; ಅಲ್ಲದೆ ಕ್ರೋಮೈಟ್ ಮತ್ತು ಪಿಕೊಟೈಟ್‌ಗಳು ವಿವಿಧ ಪ್ರಮಾಣಗಳಲ್ಲಿರುತ್ತವೆ. ಇವಲ್ಲದೆ ಮ್ಯಾಗ್ನಟೈಟ್, ಇಲ್ಮನೈಟ್, ಪಿರ್ಹೊಟೈಟ್ , ಪ್ಲಾಟಿನಂನ ಕಣಗಳು, ಎನ್‌ಸ್ಟಟೈಟ್ ಮತ್ತು ಡಯಲೇಜ್ ಖನಿಜಗಳು ಅಲ್ಪ ಪ್ರಮಾಣದಲ್ಲಿರುತ್ತವೆ. 2. ಪೆರಿಡೊಟೈಟ್: ಈ ಶಿಲೆಯಲ್ಲಿ ಆಲಿವೀನ್‌ನೊಂದಿಗೆ ಪೈರಾಕ್ಸೀನ್ ಖನಿಜವೂ ಸಪ್ರಮಾಣದಲ್ಲಿರುತ್ತದೆ. ಅಲ್ಲದೆ ಕ್ರೋಮೈಟ್, ಕಬ್ಬಿಣದ ಅದಿರಿನ ಕಣಗಳು, ಡಯಾಪ್ಸೈಡ್ ಮತ್ತು ಫೆಲ್ಸ್ಪಾರ್ ಅಲ್ಪ ಪ್ರಮಾಣದಲ್ಲಿರುತ್ತವೆ. ಮಾರ್ಪಾಡಿನಿಂದಾದ ಸರ್ಪೆಂಟೇನ್, ಆಂಫಿಬೋಲ್ ಮತ್ತು ಕಾರ್ಬೋನೇಟುಗಳೂ ಇರುವುದುಂಟು. ಪೈರಾಕ್ಸೀನ್‌ಗೆ ಬದಲಾಗಿ ಅಥವಾ ಅದರೊಂದಿಗೆ ಇತರ ಖನಿಜಗಳು ಸಪ್ರಮಾಣದಲ್ಲಿರಬಹುದು. ಹಾರನ್‌ಬ್ಲೆಂಡ್ ಇದ್ದರೆ ಹಾರನ್–ಬ್ಲೆಂಡ್ ಪೆರಿಡೊಟೈಟ್ ಎಂದೂ ಅಭ್ರಕವಿದ್ದರೆ ಅದಕ್ಕೆ ಮೈಕ ಪೆರಿಡೊಟೈಟ್ ಅಥವಾ ಕಿಂಬರ್ಲೈಟ್ ಎಂದೂ ಹೆಸರು. 3. ಪೈರಾಕ್ಸಿನೈಟ್: ಇವುಗಳಲ್ಲಿ ಬಹುಭಾಗ ಪೈರಾಕ್ಸೀನ್ ಖನಿಜಗಳಿರುತ್ತವೆ. ಆಲಿವೀನ್ ಅಲ್ಪ ಪ್ರಮಾಣದಲ್ಲಿ ಅಪೂರ್ವವಾಗಿರುತ್ತದೆ. ಅಲ್ಲದೆ ಮ್ಯಾಗ್ನಟೈಟ್, ಕ್ರೋಮೈಟ್, ಪಿಕೊಟೈಟ್, ಫೆಲ್ಸ್ಪಾರ್, ಅಪಟೈಟ್ ಮುಂತಾದ ಖನಿಜಗಳು ಅಲ್ಪಪ್ರಮಾಣದಲ್ಲಿರುತ್ತವೆ. ಈ ಶಿಲೆಯಲ್ಲಿ ಕ್ಲೈನೊಪೈರಾಕ್ಸೀನ್ ಬಹುಭಾಗವಿದ್ದರೆ ಕ್ಲೈನೋಪೈರಾಕ್ಸಿನೈಟ್ ಎಂದೂ ಆರ್ಥೋಪೈರಾಕ್ಸೀನ್ ಬಹುವಾಗಿದ್ದರೆ ಆರ್ಥೋಪೈರಾಕ್ಸಿನೈಟ್ ಎಂದೂ ಹೆಸರು. 4. ಫೆಲ್ಸ್ಪತಾಯಿಡಲ್ ಖನಿಜಗಳಿರುವ ವಿಧಗಳು: ಅತ್ಯಲ್ಪ ಸಿಲಿಕಾಂಶ ಶಿಲೆಗಳು ಲೈಮ್‌ಸ್ಟೋನ್ ಅಥವಾ ಡಾಲೊಮೈಟ್ ಶಿಲೆಗಳ ಸಮೀಪದಲ್ಲಿ ರೂಪುಗೊಂಡರೆ ಸಿಲಿಕಾಂಶ ಅತ್ಯಂತ ಕಡಿಮೆಯಾಗಿ ಫೆಲ್ಸ್ಪತಾಯಿಡಲ್ ಖನಿಜಗಳು ಸ್ಫಟಿಕೀಕರಿಸುತ್ತವೆ. ಇವುಗಳಲ್ಲಿ ಮುಖ್ಯವಾದವು ಮೆಲಿಲೈಟ್ ಮತ್ತು ಪೈರಾಕ್ಸೀನ್ ಪ್ರಧಾನವಾಗಿರುವ ಅನ್‌ಕಂಪಾಗ್ರೈಟ್ ಹಾಗೂ ಪೈರಾಕ್ಸೀನ್ ಮತ್ತು ನೆಫಿಲೀನ್ ಪ್ರಧಾನವಾಗಿರುವ ಮೆಲ್ಟೀಗೈಟ್ ಎಂಬುವು. 5. ಸರ್ಪೆಂಟಿನೈಟ್ ಬೃಹದಾಕಾರದ ಸಿಲ್‌ಗಳಾಗಿಯೂ ಮಸೂರಾಕಾರಗಳಲ್ಲಿಯೂ ಇವು ಪರ್ವತಪಂಕ್ತಿಗಳಲ್ಲಿ ಹರಡಿರುತ್ತವೆ. ಪರ್ವತ ರೂಪುಗೊಳ್ಳುವ ಪ್ರಾರಂಭದೆಸೆಯಲ್ಲಿಯೇ ಅಂತಸ್ಸರಣವಾದ ಮತ್ತು ಜಲೋಷ್ಣಕಾರ್ಯಗತಿಯಿಂದ ರೂಪುಗೊಂಡ ಡನೈಟ್ ಮತ್ತು ಪೆರಿಡೊಟೈಟ್‌ಗಳೆಂದು ಇವನ್ನು ಪರಿಗಣಿಸಲಾಗಿದೆ. ಇವುಗಳ ರೂಪಾಂತರಕ್ಕೆ ಕಾರಣವಾದ ದ್ರವಗಳೆಲ್ಲಿದ್ದವೆಂಬುದರ ವಿಚಾರದಲ್ಲಿ ಒಮ್ಮತವಿಲ್ಲ. ಈ ಶಿಲೆಯಲ್ಲಿ ಪೂರ್ಣವಾಗಿ ಸರ್ಪೆಂಟೈನ್ ಗುಂಪಿಗೆ ಸೇರಿದ ಖನಿಜಗಳಿರುತ್ತವೆ. ಈ ಖನಿಜಗಳು ಜಲೋಷ್ಣ ಪರಿಸ್ಥಿತಿಯಲ್ಲಿ $500^{\circ}$ ಸೆಂ.ಗ್ರೇ. ಗಿಂತ ಕಡಿಮೆ ಉಷ್ಣಾಂಶದಲ್ಲಿ ಆಲಿವೀನ್ ಮತ್ತು ಪೈರಾಕ್ಸೀನ್ ಖನಿಜಗಳ ಬದಲಾವಣೆಯಿಂದಾದುವು. ಒತ್ತಡ ಪರಿಸ್ಥಿತಿಯಲ್ಲಿ ರೂಪುಗೊಂಡ ಏಂಟಿಗೊರೈಟ್ ಮತ್ತು ಒತ್ತಡರಹಿತ ಸ್ಥಿತಿಯಲ್ಲಿ ರೂಪುಗೊಂಡ ಕ್ರೈಸೊಟೈಲ್ ಈ ಗುಂಪಿನ ಮುಖ್ಯ ಖನಿಜಗಳು. ಇವುಗಳೊಂದಿಗೆ ಟಾಲ್ಕ್, ಕ್ಲೋರೈಟ್, ಕ್ರೋಮೈಟ್, ಮ್ಯಾಗ್ನಟೈಟ್ ಖನಿಜಗಳು ವಿವಿಧ ಪ್ರಮಾಣಗಳಲ್ಲಿರುತ್ತವೆ.

ಸೂಕ್ಷ್ಮಕಣಶಿಲೆಗಳು: ಇವು ಬಹಿಸ್ಸರಣವಾದ ಅತ್ಯಲ್ಪ ಸಿಲಿಕಾಂಶಶಿಲೆಗಳು. ಇವು ಅಪೂರ್ವ. ಇವುಗಳಲ್ಲಿ ಫೆಲ್ಸ್ಪಾರ್ ಬಹಳ ಕಡಿಮೆ ಇರುವುದಲ್ಲದೆ, ಫೆಲ್ಸ್ಪತಾಯಿಡಲ್ ಖನಿಜಗಳೂ ಇರುತ್ತವೆ. ಅವುಗಳಲ್ಲಿ ಅಂಕಾರಮೈಟ್, ಲಿಂಬರ್ಗೈಟ್ ಎಂಬ ಶಿಲೆಗಳು ಪ್ರಮುಖವಾದುವು.

ಅತ್ಯಲ್ಪ ಸಿಲಿಕಾಂಶಶಿಲೆಗಳು ರೂಪುಗೊಳ್ಳುವಿಕೆ: ಅತ್ಯಲ್ಪ ಸಿಲಿಕಾಂಶಶಿಲೆಗಳು ಸಾಮಾನ್ಯವಾಗಿ ದಪ್ಪವಾದ ಸಿಲ್‌ಗಳ (ಉದಾ: ಗ್ರೀನ್‌ಲೆಂಡಿನಲ್ಲಿರುವುವು) ಮತ್ತು ಲ್ಯಾಕೊಲಿತ್‌ಗಳ ಹರವಿನ ತಳಭಾಗದಲ್ಲಿ (ಉದಾ: ದಕ್ಷಿಣ ಆಫ್ರಿಕ ಪ್ರದೇಶದಲ್ಲಿರುವ ಪ್ರಖ್ಯಾತವಾದ ಬುಷಾವೆಲ್ಡ್ ಶಿಲಾತೊಡಕು, ಉತ್ತರ ಅಮೆರಿಕದಲ್ಲಿರುವ ಸ್ಟಿಲ್‌ವಾಟರ್ ತೊಡಕು ಮತ್ತು ಒರಿಸ್ಸದಲ್ಲಿರುವ ಕಿಯೊಂಜಹಾರ್ ಶಿಲಾತೊಡಕು–ಮುಂತಾದುವು) ರೂಪುಗೊಳ್ಳುತ್ತವೆ. ಶಿಲಾರಸ ಸ್ಫಟಿಕೀಕರಿಸುವಾಗ ಮೊದಲು ರೂಪುಗೊಂಡ ಹರಳುಗಳು ತಳದಲ್ಲಿ ಶೇಖರವಾಗುವುದರಿಂದ ಇವು ಆಗಿವೆ. ಮೊದಲು ಸ್ಫಟಿಕೀಕರಿಸಿ ಶೇಖರವಾದ ಪದರುಗಳು ಪುನಃ ದ್ರವಿಸಿ ಬೇರೆ ಬೇರೆ ಕಡೆ ಡೈಕುಗಳ ರೂಪದಲ್ಲಿ ನಿಂತಾಗ ಇನ್ನೂ ಕೆಲವು ರೂಪುಗೊಂಡವು. ಉಳಿದ ಕೆಲವು ಮೊದಲೆ ರೂಪುಗೊಂಡಿದ್ದ ಮತ್ತು ಅಧಿಕ ಸಿಲಿಕಾಂಶಗಳಿರುವ ಶಿಲೆಗಳ ಮೆಟಸೊಮ್ಯಾಟಿಕ್ ರೂಪಾಂತರದಿಂದಾದುವು. ಮಸೂರಾಕಾರದ ದೊಡ್ಡ ಸರ್ಪೆಂಟಿನೈಟ್ ಹರವುಗಳು ಪರ್ವತೋತ್ಪತ್ತಿ ಕಾರ್ಯಾಚರಣೆಯ ಪ್ರಾರಂಭದೆಸೆಯಲ್ಲಿ ಅಂತಸ್ಸರಣವಾದ ಡನೈಟ್ ಮತ್ತು ಪೆರಿಡೊಟೈಟ್‌ಗಳ ರೂಪಾಂತರದಿಂದಾದುವು. ಇದರಿಂದ ಈ ಶಿಲಾವರ್ಗದ ಹರವಿಗೂ ಪರ್ವತಪಂಕ್ತಿಗಳ ಓಟಕ್ಕೂ ಇರುವ ನಿಕಟ ಸಂಬಂಧವನ್ನು ಬೆನ್ಸನ್ ಮತ್ತು ಹೆಸ್ ತಿಳಿಸಿರುವರು. ಎಂ.ಎಸ್.ಕೃಷ್ಣನ್ ಭಾರತದಲ್ಲಿರುವ ಅತ್ಯಲ್ಪ ಸಿಲಿಕಾಂಶ ಶಿಲಾಹರವನ್ನು ವಿವರಿಸುತ್ತ, ಅವು 5 ಪರ್ವತೋತ್ಪತ್ತಿ ಕಾಲಗಳನ್ನು ಸೂಚಿಸುತ್ತವೆಂದು ತಿಳಿಸಿರುವರು. (ಎಸ್.ವಿ.)

**ಅತ್ಯಾಕಾಶಗಳು :** ನಮಗೆ ಕಾಣುವ ಆಕಾಶಕ್ಕೆ (ಸ್ಪೇಸ್) ಮೂರು ಪರಿಮಾಣಗಳಿವೆ (ಡೈಮೆನ್‌ಷನ್ಸ್). ಇದರ ಅರ್ಥವೇನೆಂದರೆ, ಯಾವುದಾದರೊಂದು ಬಿಂದುವಿನ ಮೂಲಕ ಮೂರು ದಿಕ್ಕುಗಳಲ್ಲಿಯೂ ಪರಸ್ಪರ ಸಮಕೋನದಲ್ಲಿರುವಂತೆ ಮೂರು ರೇಖೆಗಳನ್ನು ಎಳೆಯಬಹುದು. ಆದರೆ ಈ ಮೂರು ರೇಖೆಗಳಿಗೂ ಸಮಕೋನದಲ್ಲಿರುವ ಮತ್ತೊಂದು ನಾಲ್ಕನೆಯ ದಿಕ್ಕನ್ನು ನಿರ್ಣಯಿಸುವುದು ಅಸಾಧ್ಯ. ಈ ಮೂರು ದಿಕ್ಕುಗಳನ್ನು $x_1, x_2$, $x_3$ ಅಕ್ಷಗಳಾಗಿ ತೆಗೆದುಕೊಂಡು, ಇವುಗಳಲ್ಲಿನ ಒಂದೊಂದು ಹೆಜ್ಜೆಗೆ $c_1, c_2, c_3$ ಎಂದು ಹೆಸರಿಟ್ಟರೆ, $x_1c_1 + x_2c_2 + x_3c_3$ ಎಂಬ ಮೂರು ಹೆಜ್ಜೆಗಳು ಒಂದರ ಹಿಂದೆ

ಇನ್ನೊಂದರಂತೆ ಹೋಗಿ $(x_1, x_2, x_3)$ ಬಿಂದುವನ್ನು ಸೇರಬಹುದು. ಮೂಲಬಿಂದು (0,0, 0) ಯಿಂದ ಹೊರಟು $(x_1, x_2, x_3)$ ರಲ್ಲಿ ಅಂತ್ಯಗೊಳ್ಳುವ ಸದಿಶರಾಶಿ $X = x_1c_1 + x_2c_2 + x_3c_3$ ಎಂದಾಗುತ್ತದೆ. $(x_1, x_2, x_3)$ಎಂಬ ಬಿಂದು $a_1x_1 + a_2x_2 + a_3x_3 = a_4$ಎಂಬ ಸಮೀಕರಣಕ್ಕೆ ಅನುಗುಣವಾಗಿದ್ದರೆ ಈ ಬಿಂದುಸಮೂಹ ಒಂದು ತಳವಾಗಿ (ಪ್ಲೇನ್) ಪರಿಣಮಿಸುತ್ತದೆ. ಎರಡು ತಳಗಳ ಛೇದನ ಒಂದು ಸರಳರೇಖೆಯಾಗುತ್ತದೆ. ಈ ರೇಖೆಯನ್ನು ಎರಡು ಬಿಂದುಗಳ ಜೋಡಣೆ ಎಂದು ಭಾವಿಸಬಹುದು.

ಮೂರು ಪರಿಮಾಣಗಳ ಆಕಾಶದಲ್ಲಿ ಅನೇಕ ವಿಧಗಳುಂಟು. ಮೂರು ಸಂಖ್ಯೆಗಳ ಕ್ರಮವನ್ನೇ ಒಂದು ಬಿಂದುವೆಂದು ತಿಳಿದು, $(x_1, x_2, x_3)$ ಮತ್ತು $\sqrt{(x_1 - y_1)^2 + (x_2 - y_2)^2 + (x_3 - y_3)^2}$ ಬಿಂದುಗಳಿಗಿರುವ ದೂರ $(y_1, y_2, y_3)$ ಎಂದು ತೀರ್ಮಾನಿಸಿದರೆ, ಈ ಆಕಾಶ ಮೂರು ಪರಿಮಾಣಗಳ ಆಕಾಶ (ತ್ರೀ ಡೈಮೆನ್‌ಷನಲ್ ಯೂಕ್ಲಿಡಿಯನ್ ಸ್ಪೇಸ್) ಆಗುತ್ತದೆ. ಇದನ್ನು $(E)$ ಎಂದಿಟ್ಟುಕೊಳ್ಳೋಣ. ಈ ಆಕಾಶವನ್ನು ಗೋಳಗಳು ಛೇದಿಸುವಂತೆ ಮಾಡಿದಾಗ ಅವುಗಳಿಂದ ಲಭಿಸುವ ವೃತ್ತಗಳಿಗೂ ಇದರಲ್ಲಿ ಸ್ಥಳವುಂಟು. ಆದರೆ ನಾಲ್ಕು ಸಂಖ್ಯೆಗಳ $(\xi_1, \xi_2, \xi_3, \xi_4)$ ಪರಸ್ಪರ ಸಂಬಂಧಗಳು ಒಂದು ಬಿಂದುವನ್ನು ನಿರ್ಣಯಿಸುವುದಾಗಿ ಭಾವಿಸಿದರೆ ನಮಗೆ ಲಭಿಸುವ ಆಕಾಶಕ್ಕೆ ಮೂರು ಪರಿಮಾಣಗಳ ಪ್ರಕ್ಷೇಪೀಯ ಆಕಾಶ (ತ್ರೀ ಡೈಮೆನ್‌ಷನಲ್ ಪ್ರೊಜೆಕ್ಟಿವ್ ಸ್ಪೇಸ್) ಎಂದು ಹೆಸರು. ಇದನ್ನು $(P)$ ಎಂದಿಟ್ಟುಕೊಳ್ಳೋಣ. ನಾಲ್ಕು ಸಂಖ್ಯೆಗಳಿದ್ದರೂ ಸಹ ಅವುಗಳ ಪರಸ್ಪರ ಸಂಬಂಧಗಳನ್ನು ಮಾತ್ರ ತೆಗೆದುಕೊಳ್ಳುವುದರಿಂದ ಇಲ್ಲಿ ಮೂರು ಪರಿಮಾಣುಗಳ ಆಕಾಶದ ಅಂಶವನ್ನು ಗಮನಿಸಿದಂತಾಗುತ್ತದೆ.

ಇದಲ್ಲದೆ $\xi_1, \xi_2, \xi_3, \xi_4$ ಎಂಬ ಸಂಖ್ಯೆಗಳೂ ಏಕಕಾಲದಲ್ಲಿ ಶೂನ್ಯವಾಗಕೂಡದು. ಅಲ್ಲದೆ ಈ ಸಂಖ್ಯೆಗಳನ್ನು ಎಂಬ ಬಿಂದುವೇ

ನಿರ್ಧರಿಸುತ್ತದೆ. 1 2 3 ಎಂಬ $(P)$ ಆಕಾಶಕ್ಕೂ ಮತ್ತು

$(E)$ ಆಕಾಶಕ್ಕೂ ಹೊಂದಾಣಿಕೆಯನ್ನು ಏರ್ಪಡಿಸಿದರೆ, $(E)$ ಆಕಾಶದ ಬಿಂದುಗಳೆಲ್ಲವೂ $(P)$ ಆಕಾಶದಲ್ಲಿವೆಯೆಂತಲೂ $(x_1, x_2, x_3) \equiv (x_1, x_2, x_3 1)$ ಎಂದಾಗುತ್ತದೆ. ಅಲ್ಲದೆ $(P)$ ಆಕಾಶದಲ್ಲಿ ಇನ್ನೂ ಹಲವು ಬಿಂದುಗಳು ಅಧಿಕವಾಗಿರುವುದು ತಿಳಿದುಬರುತ್ತದೆ. $(\xi_1, \xi_2, \xi_3, 0)$ ಎಂಬುವೇ ಈ ಬಿಂದುಗಳು. ಇವು ಎಂಬ ತಳದಲ್ಲಿರುತ್ತವೆ.

→ ಆದಾಗ, ಇವೆಲ್ಲವೂ ಅನಂತವಾಗುತ್ತವೆ.

ಆದ್ದರಿಂದ $(P)$ ಆಕಾಶಕ್ಕೆ ಒಂದು ಅನಂತತಳವನ್ನು (ಪ್ಲೇನ್ ಎಟ್ ಇನ್‌ಫಿನಿಟಿ) ಕೂಡಿಸಿದರೆ $(P)$ ಆಕಾಶ ಲಭಿಸುತ್ತದೆ. ಎರಡು ಸಮಾನಾಂತರ ರೇಖೆಗಳಿಗೆ $(E)$ ಆಕಾಶದಲ್ಲಿ ಛೇದನ ಬಿಂದುವಿರುವುದಿಲ್ಲ. ಆದರೆ $(P)$ ಆಕಾಶದಲ್ಲಿ ಎರಡು ಬಿಂದುಗಳಿಗೆ ಇರುವ ಅಂತರವನ್ನು ಗಮನಿಸಲಾಗುವುದಿಲ್ಲ. ಹಾಗೆಯೇ ಕೋನಗಳಿಗೆ ಪರಿಮಾಣವಿರುವುದಿಲ್ಲ.

ಪ್ರತ್ಯಕ್ಷ ಅನುಭವವಿಲ್ಲದಿದ್ದರೂ ಗಣಿತರೀತ್ಯ ನಾಲ್ಕು ಪರಿಮಾಣ ಅಥವಾ $n$ ಪರಿಮಾಣದ ಆಕಾಶಗಳನ್ನು ಪರಿಶೀಲಿಸಬಹುದು. $n$ ಪರಿಮಾಣದ $(E)$ ಆಕಾಶದಲ್ಲಿನ ಒಂದು ಬಿಂದು $x_1, x_2 ..., x_n$ಎಂಬ $n$ಸಂಖ್ಯೆಗಳಿಂದ ನಿರ್ಣಯವಾಗುತ್ತದೆ. ಮೂಲಬಿಂದು (0, 0, ..., 0)ಯಿಂದ ಹೊರಟು, ಮೇಲೆ ಸೂಚಿಸಿದ ಬಿಂದುವಿನಲ್ಲಿ ಅಂತ್ಯಗೊಳ್ಳುವ ಸದಿಶರಾಶಿಯ ರೂಪ $X = x_1c_1 + x_2c_2 + ... + x_nc_n$ಎಂದು ಆಗುತ್ತದೆ. ಇದರಲ್ಲಿರುವ $c_1, c_2 ..., c_n$ ಎಂಬುದು $n$ ಪರಸ್ಪರ ಸಮಕೋನದಲ್ಲಿರುವ ಅಕ್ಷಗಳಲ್ಲಿ ಏಕಮಾನ ಹೆಜ್ಜೆಗಳನ್ನು (ಯೂನಿಟ್ ಸ್ಟೆಪ್ಸ್) ಸೂಚಿಸುತ್ತವೆ. $x_1, x_2 ..., x_n$ಸಂಖ್ಯೆಗಳು ಒಂದು ಕ್ಷೇತ್ರಕ್ಕೆ (ಫೀಲ್ಡ್) ಸೇರಿದ್ದಿರಬೇಕು. ಅಂದರೆ, ಅವುಗಳ ಸಂಕಲನ, ವ್ಯವಕಲನ, ಗುಣಾಕಾರ ವಿಭಾಗ (ಶೂನ್ಯಭಾಜಕಗಳ ಕ್ರಮದಲ್ಲಿದ್ದಿರಬಾರದೆಂಬುದು ಒಂದು ನಿಬಂಧನೆ) – ಈ ಪರಿಕರ್ಮಗಳಿಗೆ ಅವಕಾಶ ಕಲ್ಪಿಸಿಕೊಟ್ಟು ಲಬ್ಧವಾದ ಫಲವೂ ಈ ಕ್ಷೇತ್ರದಲ್ಲೇ ಇರಬೇಕು. ವಾಸ್ತವಕ್ಷೇತ್ರದ ಸಂಖ್ಯೆಗಳಾದರೆ ಎರಡು ಸದಿರಾಶಿಗಳ $X, Y$ಅದಿಶಗುಣಾಕಾರ (ಸ್ಕೇಲಾರ್ ಪ್ರಾಡಕ್ಟ್) $X, Y = x_1y_1 + x_2y_2 + ... + x_ny_n$ ವಿವರಿಸುತ್ತದೆ. ಈ ಫಲ ಅಕ್ಷಗಳ ಆಯ್ಕೆಯನ್ನು ಅವಲಂಬಿಸಿರುವುದಿಲ್ಲ. ಸದಿಶರಾಶಿಯ ಉದ್ದ $|X| = \sqrt{X, X}$ ಎಂಬ ಸಮೀಕರಣದಿಂದ ಲಭಿಸುತ್ತದೆ. $X, Y$ ನ ಪರಿಮಾಣ $|X|.|Y| \cos\theta$ ಆಗುತ್ತದೆ. ಇದರಲ್ಲಿ ಎನ್ನುವುದು $X, Y$ಸದಿಶರಾಶಿಗಳ ನಡುವೆ ಇರುವ ಕೋನ. ಆದ್ದರಿಂದ $X, Y = 0$ ಆದರೆ, $X, Y$ ಸಮಕೋನ (ಒಂದಕ್ಕೊಂದು ಲಂಬವಾಗಿರುವ) ಸದಿಶರಾಶಿಗಳಾಗುತ್ತವೆ. ಒಂದು ಸದಿಶರಾಶಿಗೆ ಸಮಕೋನದಲ್ಲಿರುವ ಎಲ್ಲ ಸದಿಶರಾಶಿಗಳೂ ಒಂದು $(n - 1)$ ಪರಿಮಾಣದ ಸಮತಳಾಕಾಶವನ್ನು (ಫ್ಲಾಟ್‌ಸ್ಪೇಸ್) ಉಂಟುಮಾಡುತ್ತವೆ. $n$ ಪರಿಮಾಣದ $(E)$ ಆಕಾಶ ನಮಗೆ ಬೇಕಾದಲ್ಲಿ, ಒಂದು ಕ್ಷೇತ್ರದಲ್ಲಿರುವ $(n + 1)$ ಸಂಖ್ಯೆಗಳನ್ನು ತೆಗೆದುಕೊಂಡು (ಇವೆಲ್ಲವೂ ಏಕಕಾಲದಲ್ಲಿ ಶೂನ್ಯವಾಗಿರಬಾರದೆಂಬ ನಿಬಂಧನೆ ಇರುತ್ತದೆ) ಅವುಗಳ ಸಂಬಂಧವನ್ನು ಒಂದು ಬಿಂದುವಾಗಿ ಭಾವಿಸುತ್ತೇವೆ. ಇದರಿಂದಾಗಿ $(\xi_1, \xi_2 ..... \xi_n)$ ಬಿಂದು




$x_1 = \frac{\ldots}{\xi_4}, x_2 = \frac{\ldots}{\xi_4}, x_3 = \ldots_{n+1}$ $\lambda\, \xi_4\, 0$ ಎಂಬ ಬಿಂದುವೇ ಹೊರತು ಬೇರೆಯಲ್ಲ. ಈ ಬಿಂದು

$(c_1, c_2, ... c_{n+1})$ ಎಲ್ಲವೂ ಏಕಕಾಲದಲ್ಲಿ

ಶೂನ್ಯವಾಗಿರಬಾರದು) ಎಂಬ ಸಮೀಕರಣವನ್ನು ತಾಳೆ ಮಾಡುವುದಾದರೆ, $\xi_1, \xi_2 ..... \xi_{n+1}$ ಎಂಬ ಬಿಂದು $(n - 1)$ ಪರಿಮಾಣದ ಸಮತಳವನ್ನು ಸೂಚಿಸುತ್ತದೆ. ಆದ್ದರಿಂದ $(\xi_1, \xi_2 ..... \xi_n)$ ಬಿಂದುವಿನಿಂದ ನಿರ್ದೇಶಕಗಳು ಇದೇ ರೀತಿಯಲ್ಲಿ $c_1, c_2, ... c_n$ಎಂಬ $(n - 1)$ ಪರಿಮಾಣದ ಸಮತಳಗಳಾಗುತ್ತವೆ. ಇದರಿಂದ ಬಿಂದುಗಳ $(n - 1)$ಸಮತಳಾಕಾಶದ ದ್ವಿತ್ವ (ಡ್ಯುಯಲಿಟಿ) ಗುರುತಿಸುತ್ತೇವೆ. ಎರಡು ಬಿಂದುಗಳನ್ನು ಸೇರಿಸುವುದು ಒಂದು ಸರಳರೇಖೆ. ಎರಡು $(n - 1)$ ಸಮತಳಾಕಾಶಗಳ $r$ ಬಿಂದುಗಳನ್ನು ಸೇರಿಸುವುದು ಒಂದು $(r - 1)$ ವ್ಯಾಪ್ತಿಯ ಸಮತಳಾಕಾಶ. $r$ ಮತ್ತು $(n - 1)$ ಸಮತಳಾಕಾಶದ ಛೇದನವೇ $(n - 1)$ ಪರಿಮಾಣದ ಸಮತಳಾಕಾಶ.

$n$ ಪರಿಮಾಣದ ಆಕಾಶದಲ್ಲಿ ಒಂದು $r$ ಪರಿಮಾಣದ ಸಮತಳಾಕಾಶ ಮತ್ತೊಂದು $s$ ಪರಿಮಾಣದ ಸಮತಳಾಕಾಶವನ್ನು, $r + s < n$ ಆದ ಪಕ್ಷಕ್ಕೆ ಛೇದಿಸುವುದಿಲ್ಲ. ಆದರೆ $(r + s \geq n)$ ಆದರೆ ಇವುಗಳ ಛೇದನಾಕಾಶ ಒಂದು $r + s - n$ ಪರಿಮಾಣದ ಸಮತಳಾಕಾಶವಾಗುತ್ತದೆ.

ರೇಖಾಕಾಶ, ವರ್ತುಳಾಕಾಶ: ಒಂದು ತಳವನ್ನು ಬಿಂದು ಸಮೂಹವೆಂದು ಭಾವಿಸಿದರೆ ಅದು ಎರಡು ಪರಿಮಾಣದ್ದಾಗಿರುತ್ತದೆ. ವೃತ್ತಸಮೂಹಗಳನ್ನು ಪರಿಶೀಲಿಸಿದರೆ ಅದೇ ತಳ ಮೂರು ಪರಿಮಾಣದ ಆಕಾಶವಾಗುವುದು. ಏಕೆಂದರೆ ಒಂದು ವೃತ್ತದ ಸಮೀಕರಣ $a(x^2 + y^2) + 2gx + 2fy + c = 0$ ಎಂದಾಗುತ್ತದೆ. ಇದರಲ್ಲಿನ $a, g, f, c$ಗಳನ್ನು ಮೂರು ಪರಿಮಾಣದ $(P)$ ಆಕಾಶದ ನಿರ್ದೇಶಕಗಳಾಗಿ ಭಾವಿಸಬಹುದು. ಆದ್ದರಿಂದ ತಳವನ್ನು ಅದರಲ್ಲಿನ ವೃತ್ತ ಸಮೂಹವಾಗಿ ಪರಿಗಣಿಸಿದರೆ ಆ ತಳ ಮೂರು ಪರಿಮಾಣದ ಆಕಾಶವಾಗುತ್ತದೆ. ಇದೇ ರೀತಿಯಲ್ಲಿ ತಳವನ್ನು ಅದರಲ್ಲಿರುವ ಶಂಕುಜಗಳ ಸಮೂಹವಾಗಿ ಆದೇಶಿಸಿದರೆ ಐದು ಪರಿಮಾಣಗಳ $(P)$ ಆಕಾಶವಾಗುತ್ತದೆ. ಮೂರು ಪರಿಮಾಣದ ಆಕಾಶದಲ್ಲಿ ಒಂದು ರೇಖೆಯನ್ನು ನಿರ್ಣಯಿಸಲು ನಾಲ್ಕು ಸಂಖ್ಯೆಗಳು ಅವಶ್ಯ. ಆದ್ದರಿಂದ ಮೂರು ಪರಿಮಾಣದ ಆಕಾಶವೇ ರೇಖಾಸಮೂಹದ ದೃಷ್ಟಿಯಲ್ಲಿ ನಾಲ್ಕು ಪರಿಮಾಣದ ಆಕಾಶವಾಗುತ್ತದೆ. ಒಂದು ರೇಖೆ $(x_1, x_2, x_3, x_4)$ ಮತ್ತು $(y_1, y_2, y_3, y_4)$ಎಂಬ

ಮೂರು ಪರಿಮಾಣದ $(P)$ ಆಕಾಶದ ಎರಡು ಬಿಂದುಗಳನ್ನು ಸೇರಿಸುವ ರೇಖೆಯಾಗಿದ್ದು.

$$P_{12} = x_1 y_2 - x_2 y_1 \,;\, P_{23} = x_2 y_3 - x_2 y_3 \,;\, P_{31} = x_3 y_1 - x_1 y_3$$

$$P_{34} = x_3 y_4 - x\,y \,;\, P_{14} = x_1 y_4 - x_4 y_1 \,;\, P_{24} = x_2 y_4 - x_4 y_2$$

ಎಂದು ಬರೆದರೆ, ಆಗ $P_{12}, P_{23}, P_{31}, P_{34}, P_{14}$ ಮತ್ತು $P_{24}$ ಎಂಬುವು ಐದು ಪರಿಮಾಣಗಳ $(P)$ ಆಕಾಶದ ನಿರ್ದೇಶಕಗಳಾಗುತ್ತವೆ. ಆದರೆ, ಯಾವಾಗಲೂ $P_{12}P_{34} + P_{23}P_{14} + P_{31}P_{24} \equiv 0$ ಆಗಿರುತ್ತದೆ. ಆದ್ದರಿಂದ ಮೂರು ಪರಿಮಾಣದ ಆಕಾಶದಲ್ಲಿರುವ ರೇಖೆಗಳನ್ನು ಐದು ಪರಿಮಾಣದ $(P)$ ಆಕಾಶದಲ್ಲಿರುವ ನಾಲ್ಕು ಪರಿಮಾಣದ ಬಿಂದುಗಳಾಗಿ ಪರಿಗಣಿಸಬೇಕು. ಆದರೆ ಮೂರು ಪರಿಮಾಣದ ಆಕಾಶವನ್ನು ಅದರಲ್ಲಿರುವ ಗೋಳಗಳ ಸಮೂಹವಾಗಿ ಪರಿಗಣಿಸಿದಾಗ ಅದು ನಾಲ್ಕು ಪರಿಮಾಣದ $(P)$ ಆಕಾಶವಾಗುತ್ತದೆ.

ಅನಂತವ್ಯಾಪ್ತಿ ಪರಿಮಾಣದ ಆಕಾಶ, ಹರ್ಬರ್ಟ್ ಆಕಾಶ: ಅನಂತ ಸಂಖ್ಯಾ ಕ್ರಮವನ್ನು ಒಂದು ಬಿಂದುವೆಂದು ಪರಿಗಣಿಸಿದರೆ, ಅನಂತ ಪರಿಮಾಣ ಆಕಾಶ ಲಭಿಸುತ್ತದೆ. ಆದರೆ ಉಪಯೋಗಕ್ಕನುಗುಣವಾಗಿ ಕ್ರಮಗಳ ಮೇಲೆ ಕೆಲವು ನಿಬಂಧನೆಗಳನ್ನು ಹೊರಿಸುವುದು ಅಪೇಕ್ಷಾರ್ಹವಾಗುತ್ತದೆ. $\xi_1^2 + \xi_2^2 + .........$ ಎಂಬುದು ಒಂದು ಅಭಿಸರಣಶ್ರೇಣಿಯಾದರೆ (ಕನ್ವರ್‌ಜೆಂಟ್ ಸೀರೀಸ್) ಅದರ ಒಟ್ಟು ಬೆಲೆಯ ವರ್ಗಮೂಲವನ್ನು ಸದಿಶರಾಶಿಯ ಉದ್ದವಾಗಿ ತೆಗೆದುಕೊಳ್ಳಬಹುದು.

ಎಂಬ ಎರಡು ಅಭಿಸರಣ ಶ್ರೇಣಿಗಳು ಎರಡು ಸದಿಶರಾಶಿಗಳನ್ನು ಸೂಚಿಸುತ್ತವೆ. ಅವುಗಳ ಅದಿಶ ಗುಣಲಬ್ಧ $= \sum_1^\infty \xi_n \eta_n$ ಎಂದಾಗುತ್ತದೆ. ಅಥವಾ ಒಂದು ಪರಿಮಾಣದ ಉತ್ಪನ್ನದ ವರ್ಗ ಸಮಾಸೀಯವಾಗಿದ್ದರೆ (ಇಂಟೆಗ್ರಬಲ್), ಆ ಉತ್ಪನ್ನವನ್ನು ಅನಂತ ಪರಿಮಾಣದ ಹರ್ಬರ್ಟ್ ಆಕಾಶದಲ್ಲಿ ಅದೊಂದು ಸದಿಶರಾಶಿ ಎಂಬುದಾಗಿ ಪರಿಗಣಿಸಬಹುದು. ಇಂಥ ಎರಡು ಸದಿಶರಾಶಿಗಳ ಅದಿಶಗುಣಲಬ್ಧ $\int f(x)\, g(x)\, dx$ ಎಂದಾಗುತ್ತದೆ. $f(x)$ನ ಉದ್ದ

ಆಗುತ್ತದೆ. ಇಂಥ ಅನಂತ ಪರಿಮಾಣದ ಸದಿಶರಾಶಿಯನ್ನು ಮತ್ತೊಂದು ಸದಿಶರಾಶಿಯಾಗಿ ಬದಲಾಯಿಸುವ ಪರಿಕರ್ಮಿಗೆ (ಆಪರೇಟರ್) ಉದಾಹರಣೆಯಾಗಿ $\int_\alpha^\beta k(t,x)\, f(x) dx = g(t)$ ಎಂಬುದನ್ನು ಕೊಡಬಹುದು. ಇದು $f$ ಅನ್ನು $g$ ಯನ್ನಾಗಿ ಬದಲಾಯಿಸುತ್ತದೆ. ಇಂಥವುಗಳ ವಿಲೋಮಗಳ ಅನಂತ ಪರಿಮಾಣದ ಆಕಾಶದ ವ್ಯಾಪಾರಗಳು, ಅನ್ವಯ ಗಣಿತಶಾಸ್ತ್ರದಲ್ಲಿ (ಅಪ್ಲೈಡ್ ಮ್ಯಾಥಮ್ಯಾಟಿಕ್ಸ್) ಮುಖ್ಯವಾಗಿ ಕ್ವಾಂಟಂ ಸಿದ್ಧಾಂತದಲ್ಲಿ ಉಪಯೋಗವಾಗುತ್ತಿವೆ. (ಆರ್.ಎನ್.)

**ಅತ್ರಂಜಿಖೇಡ :** ಉತ್ತರ ಪ್ರದೇಶ ರಾಜ್ಯದ ಇಟಾ ಜಿಲ್ಲೆಯಲ್ಲಿ ಗಂಗಾನದಿ ಉಪನದಿಯಾದ ಕಾಳಿನದಿಯ ಬಲದಂಡೆಯಲ್ಲಿರುವ ಪುರಾತತ್ತ್ವ ನೆಲೆ. ಇಲ್ಲಿಗೆ ಗೌತಮಬುದ್ಧ ಭೇಟಿ ನೀಡಿದ್ದನೆಂಬುದಾಗಿ ಊಹಿಸಲಾಗಿದ್ದು, ಅವನು ಭೇಟಿ ನೀಡಿದ್ದರಿಂದ ನದಿಗೆ ವೈರಂಜಾ ಅಥವಾ ವೈರಾಗ್ಯ ಎಂದು ಹೆಸರು ಬಂದಿತೆಂದು ನಂಬಿಕೆಯಿದೆ. ಇದರ ಹೆಚ್ಚಿನ ಮಾಹಿತಿ ಪಾಳಿ ಸಾಹಿತ್ಯದಲ್ಲಿದೆ. ಚೀನದ ಬೌದ್ಧ ಯಾತ್ರಿಕನಾದ ಯುವಾನ್‌ಚಾಂಗ್ ಈ ಪ್ರದೇಶವನ್ನು ಪಿ–ಲೋ–ಸಾನ್–ನ ಎಂದು ಕರೆದಿದ್ದಾನೆ. ಜೈನರು ಇದನ್ನು ಅಂತರಾಂಜಿ ಎಂತಲೂ ಕರೆದಿದ್ದಾರೆ. ಇದು ಅಕ್ಬರನ ಕಾಲದಲ್ಲಿ ಕನೌಜ್ ಆಡಳಿತ ವಿಭಾಗದ ಪರಗಣವಾಗಿತ್ತು. ಈ ನೆಲೆಯಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ 1962–64ರಲ್ಲಿ ಉತ್ಖನನ ಮಾಡಿತು. ಪ್ರ.ಶ.ಪೂ.2ನೆಯ ಸಹಸ್ರಮಾನದ ಆರಂಭಕಾಲದಿಂದ ಮಧ್ಯಯುಗೀನ ಕಾಲದವರೆಗಿನ ಅವಶೇಷಗಳು ಇಲ್ಲಿವೆ. ಇಲ್ಲಿ ಕಂಡುಬಂದಿರುವ ಹಂತಗಳೆಂದರೆ: ಕಾವಿಬಣ್ಣದ ಮಣ್ಪಾತ್ರೆ ಸಂಸ್ಕೃತಿ; ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಸಂಸ್ಕೃತಿ; ವರ್ಣಚಿತ್ರಿತ ಬೂದುಬಣ್ಣದ ಮಣ್ಪಾತ್ರೆ ಸಂಸ್ಕೃತಿ; ಔತ್ತರೇಯ ಮೆರುಗಿನ ಕಪ್ಪು ಮಣ್ಪಾತ್ರೆ ಸಂಸ್ಕೃತಿ, ಕುಷಾಣ ಮತ್ತು ಕುಷಾಣೋತ್ತರ ಕಾಲ; ಮಧ್ಯಯುಗೀನ ಕಾಲ.

ಹಂತ I (ಪ್ರ.ಶ.ಪೂ.2ನೆಯ ಸಹಸ್ರಮಾನದ ಮೊದಲರ್ಧ ಭಾಗ): ಈ ಹಂತದ ಕಾವಿಬಣ್ಣದ ಮಣ್ಪಾತ್ರೆಗಳು ವಿಶಿಷ್ಟವಾಗಿದೆ. ಹೆಚ್ಚಿನ ಪಾತ್ರೆಗಳು ಮಂದವಾಗಿವೆ. ಈ ವಿಧದ ಪಾತ್ರೆಗಳು ಬಹದ್ರಾಬಾದ್, ಅಂಬಖೇರಿ, ಹಸ್ತಿನಾಪುರ, ಸಾಯ್‌ಪಾಯ್ ಮುಂತಾದ ನೆಲೆಗಳಲ್ಲಿ ದೊರೆತಿವೆ. ಬಟ್ಟಲು, ಮಡಕೆ, ಮುಚ್ಚಳ, ಕಾಲಿರುವ ತಟ್ಟೆ ಮುಂತಾದ ಪ್ರಕಾರಗಳ ಪಾತ್ರೆಗಳಿವೆ. ಕೆಲವು ಕಪ್ಪು–ಕಂದು ಮಿಶ್ರಿತ ಬಣ್ಣದ್ದಾಗಿದೆ. ಇವುಗಳ ಮೇಲ್ಮೈಯಲ್ಲಿ ಕಪ್ಪು ಬಣ್ಣದಲ್ಲಿ ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಈ ರೀತಿ ರೇಖಾ ಚಿತ್ರಗಳಿಂದ ಅಲಂಕರಿಸಿದ ಮಣ್ಪಾತ್ರೆಗಳು ಲಾಲ್‌ಕಿಲಾ ಹೊರತುಪಡಿಸಿ ಇನ್ನೆಲ್ಲೂ ದೊರೆತಿಲ್ಲ. ಈ ಹಂತದ ಜನವಸತಿ ನದಿ ಪ್ರವಾಹದಿಂದ ನಾಶವಾಗಿರಬಹುದೆಂದು ಅಭಿಪ್ರಾಯವಿದೆ. ಇಲ್ಲಿನ ಜನರು ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆಯುತ್ತಿದ್ದರು. ಬೇಸಗೆಯಲ್ಲಿ ಬತ್ತವನ್ನು, ಚಳಿಗಾಲದಲ್ಲಿ ಜವೆಯನ್ನು ಬೆಳೆಯುತ್ತಿದ್ದರು. ಇವರು ದ್ವಿದಳ ಧಾನ್ಯಗಳನ್ನೂ ಸಹ ಬೆಳೆಯುತ್ತಿದ್ದರು. ಚಿರ್ ಕಟ್ಟಿಗೆಯನ್ನು ಹಿಮಾಲಯದ ತಪ್ಪಲಿನಿಂದ ತರುತ್ತಿದ್ದರು. ಇವರು ಮಾಂಸಾಹಾರವನ್ನೂ ಸೇವಿಸುತ್ತಿದ್ದರು. ಹಸು ಇವರ ವಿಶೇಷ ಸಾಕುಪ್ರಾಣಿಯಾಗಿತ್ತು. ಈ ಜನರಿಗೆ ಇಟ್ಟಿಗೆಯ ಬಳಕೆ ಗೊತ್ತಿರಲಿಲ್ಲವೆಂಬುದು ಇಲ್ಲಿನ ಕಟ್ಟಡಗಳ ನಿರ್ಮಾಣದಿಂದ ತಿಳಿಯುತ್ತದೆ. ಮನೆಗಳ ಗೋಡೆಗಳನ್ನು ಸಾಮಾನ್ಯವಾಗಿ ತಡಿಕೆ ಜೇಡಿಮಣ್ಣಿನ ಲೇಪನ, ಜೊಂಡು(ಹುಲ್ಲು) ಮುಂತಾದವುಗಳಿಂದ ನಿರ್ಮಿಸಿ ಅವುಗಳಿಗೆ ಮಣ್ಣಿನ ಸಾರಣೆಯನ್ನು ಮಾಡುತ್ತಿದ್ದರು.

ಹಂತ II (ಪ್ರ.ಶ.ಪೂ.1450–1200): ಇಲ್ಲಿ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಕಂಡುಬಂದಿವೆ. ತಾಮ್ರ ಮತ್ತು ಅರೆ–ಅಮೂಲ್ಯ ಕಲ್ಲುಗಳ ಹಲವಾರು ವಸ್ತುಗಳು ಈ ಹಂತದಲ್ಲಿವೆ. ಅರೆ–ಅಮೂಲ್ಯ ಕಲ್ಲನ್ನು ರಾಜಸ್ತಾನದ ರಣತಂಬೋರ್ ಪ್ರದೇಶದಿಂದ ತರಲಾಗಿದೆ. ತಾಮ್ರವನ್ನೂ ರಣತಂಬೋರ್ ಅಥವಾ ಅಕ್ಕ–ಪಕ್ಕದ ಪ್ರದೇಶಗಳಿಂದಲೇ ತರಲಾಗಿದೆ. ಈ ಕಾಲದ ಜನ ಬತ್ತ, ಜವೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಈ ಕಾಲದಲ್ಲಿ ತೇಗದ ಮರ ಹೆಚ್ಚು ಉಪಯೋಗಿಸಲ್ಪಡುತ್ತಿದ್ದು, ಇದನ್ನು ಪಕ್ಕದ ಸಾತ್ಪುರ ಪ್ರದೇಶದಿಂದ ತರಲಾಗುತ್ತಿತ್ತು.

ಹಂತ III (ಪ್ರ.ಶ.ಪೂ. 1200–600): ಈ ಹಂತದ ಮುಖ್ಯ ಅನ್ವೇಷಣೆಯೆಂದರೆ ಕಬ್ಬಿಣದ ವಸ್ತುಗಳು. ಈಟಿಮೊನೆ, ಬಾಣದಮೊನೆ, ಚಾಕುಗಳು, ಉಳಿಗಳು, ಕೊಂಡಿಗಳು, ಕೊಡಲಿ, ಇಕ್ಕುಳ ಮುಂತಾದ ವಸ್ತುಗಳಿವೆ. ಈ ಕಾಲದಲ್ಲಿ ಕಬ್ಬಿಣದ ಕೈಗಾರಿಕೆ ಅಭಿವೃದ್ಧಿ ಹೊಂದಿತ್ತೆಂದು ಈ ನೆಲೆಯಿಂದ ತಿಳಿದುಕೊಳ್ಳಬಹುದಾಗಿದೆ. ಇದಲ್ಲದೆ ಈ ನೆಲೆಯಲ್ಲಿ ತಾಮ್ರದ ವಸ್ತುಗಳು ಸಹ ಲಭ್ಯವಾಗಿವೆ. ಉದಾ: ಉಂಗುರದ ಚೂರುಗಳು, ಬಳೆಗಳು, ಕೊಂಡಿಗಳು, ಸಲಾಕೆಗಳು, ಉಳಿಗಳು, ಮೊಳೆಯಾಕಾರದ ಸೂಜಿ, ಮುಳ್ಳಿನ ಚಿಮಟ, ಚುಚ್ಚುವ ಸೂಜಿಗಳು, ಬಾಣದ ಮೊನೆಗಳು. ಸುಡಾವೆಮಣ್ಣಿನ ಎತ್ತು, ಹಂದಿ ಮೊದಲಾದ ಪ್ರಾಣಿಗಳ ಗೊಂಬೆಗಳೂ ದೊರೆತಿವೆ. (ಎನ್.ಆರ್.)

**ಅತ್ರಿ :** ಬ್ರಹ್ಮನ ಮಾನಸಪುತ್ರ. ಸಪ್ತರ್ಷಿಗಳಲ್ಲಿ ಒಬ್ಬ. ಮಂತ್ರದ್ರಷ್ಟಾರ ಮಹರ್ಷಿ. ಕರ್ದಮ ಬ್ರಹ್ಮನ ಮಗಳಾದ ಅನಸೂಯೆಯನ್ನು ಮದುವೆಯಾಗಿ ಚಂದ್ರ, ದತ್ತಾತ್ರೇಯ ಮತ್ತು ದುರ್ವಾಸರನ್ನು ಪಡೆದ. ವನವಾಸದಲ್ಲಿದ್ದ ಶ್ರೀರಾಮ, ಈತನ ಆಶ್ರಮಕ್ಕೆ ಬಂದಾಗ [illegible]ಗಳನ್ನು ಅವನಿಗೆ ಬೋಧಿಸಿದ. ಕೆಲವು ಕಾಲ ಬ್ರಹ್ಮಪಟ್ಟದಲ್ಲಿದ್ದ.

$\left(\int f(x)^2\, dx\right)$ $\sqrt{\sum_1^\infty \xi_n^2}$ $\xi, \xi_1, \xi_2, \xi_3, ..........\eta_1, \eta_2.......$

(ಜಿ.ಎಚ್.)

**ಅಥಣಿ :** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ತಾಲ್ಲೂಕಿನ ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ರಾಜ್ಯ, ದಕ್ಷಿಣದಲ್ಲಿ ರಾಯಬಾಗ ತಾಲ್ಲೂಕು, ಪೂರ್ವ ಮತ್ತು ಆಗ್ನೇಯಕ್ಕೆ ಬಿಜಾಪುರ ಮತ್ತು ಜಮಖಂಡಿ ತಾಲ್ಲೂಕುಗಳಿವೆ. ತಾಲ್ಲೂಕಿನಲ್ಲಿ ಅಥಣಿ ಪಟ್ಟಣ ಮತ್ತು 89 ಗ್ರಾಮಗಳಿವೆ. ಜನಸಂಖ್ಯೆ 4,61,362.

ತಾಲ್ಲೂಕಿನ ಬಹುಭಾಗ ಒರಟಾದ, ಸಮತಟ್ಟಿಲ್ಲದ ಭೂಮಿಯಿಂದ ಕೂಡಿದೆ. ದೂರದೂರದಲ್ಲಿ ಹಂತಹಂತವಾಗಿ ಏರುವ, ಮರಗಿಡಗಳಿಲ್ಲದ ಸಣ್ಣ ಬೆಟ್ಟಗುಡ್ಡಗಳು ಹರಡಿವೆ. ಇಲ್ಲಿನ ಮೈದಾನ ಪ್ರದೇಶದ ಸಣ್ಣ ಕೊರಕಲುಗಳಲ್ಲಿ ಮಳೆಗಾಲದಲ್ಲಿ ತೊರೆಗಳು ಕಾಣಿಸಿಕೊಳ್ಳುವುದುಂಟು. ದಿಣ್ಣೆ ಮತ್ತು ಇಳಿಜಾರು ಪ್ರದೇಶಗಳು ಕಲ್ಲುಗಳಿರುವ ಒರಟು ಮೇಲ್ಮೈಯಿಂದ ಕೂಡಿದೆ. ಮಣ್ಣಿನ ಪದರ ಒಂದು ಅಥವಾ ಎರಡು ಅಂಗುಲಕ್ಕಿಂತ ಹೆಚ್ಚು ದಪ್ಪವಿರುವುದಿಲ್ಲ. ಕೃಷ್ಣಾ ನದಿಗೆ ಹತ್ತಿರದ ಪ್ರದೇಶಗಳಲ್ಲಿರುವ ಕಪ್ಪು ಮಣ್ಣಿನ ಭೂಮಿ ಫಲವತ್ತಾಗಿದೆ. ಮಹಾರಾಷ್ಟ್ರದೆಡೆಯಿಂದ ಬರುವ ಕೃಷ್ಣಾನಾಲೆಯೊಂದು ಇಲ್ಲಿ ಹರಿಯುವುದರಿಂದ ನೀರಾವರಿ ಸೌಕರ್ಯ ಸಹ ಇದೆ. ಕೃಷ್ಣಾನದಿ ಹೆಚ್ಚು ಮಟ್ಟಿಗೆ ಅಥಣಿಯ ದಕ್ಷಿಣದ ಗಡಿಯಾಗಿದ್ದು ಸ್ವಲ್ಪದೂರ ಮಾತ್ರ ತಾಲ್ಲೂಕಿನ ಒಳಗೆ ಹರಿಯುತ್ತದೆ. ಅಗರಣಿ ನದಿ ತಾಲ್ಲೂಕಿನ ಮಧ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿದು ಕೃಷ್ಣಾನದಿಯನ್ನು ಸೇರುತ್ತದೆ. ಡೋಣಿ ನದಿ ತಾಲ್ಲೂಕಿನ ಈಶಾನ್ಯದಲ್ಲಿ ಸ್ವಲ್ಪ ದೂರ ಹರಿದು ಮುಂದೆ ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮಳೆ ಸಾಮಾನ್ಯವಾಗಿ 600–700ಮಿಮೀ. ಬೇಸಗೆಯಲ್ಲಿ 310ಸೆಲ್ಸಿಯಸ್‌ವರೆಗೂ ಉಷ್ಣತೆ ಇರುತ್ತದೆ. ಕೃಷ್ಣಾ ನದಿ ದಂಡೆಯ ಮೆಕ್ಕಲು ಮಣ್ಣಿನ ಪ್ರದೇಶದಲ್ಲಿ ಹೊಗೆಸೊಪ್ಪಿನ ಬೆಳೆ ವಿಶೇಷ. ಹತ್ತಿ, ಸೇಂಗ, ಜೋಳ, ಗೋದಿ, ದ್ವಿದಳಧಾನ್ಯಗಳು, ಸಜ್ಜೆ, ಕಬ್ಬು ಮತ್ತು ಮೆಣಸಿನಕಾಯಿ ಇವುಗಳನ್ನೂ ಬೆಳೆಯುತ್ತಾರೆ.

ಈ ತಾಲ್ಲೂಕಿನಲ್ಲಿ ಅಥಣಿಯಿಂದ ಸು.10ಕಿಮೀ ವಾಯವ್ಯಕ್ಕಿರುವ ಬೆಳವಂಕಿ ಅಥವಾ ಹಳೆಯ ಪಣ್ಣಾಳದ ಬೆಟ್ಟದ ಮೇಲೆ ಸಿದ್ಧೇಶ್ವರ ಗುಹೆ ಇದೆ. ಮಿರಜ–ಚಿಕ್ಕೋಡಿ ಹಾದಿಯಲ್ಲಿರುವ ಕಾಗವಾಡ ಗ್ರಾಮದಲ್ಲಿರುವ ಬ್ರಹ್ಮನಾಥ (ಕಗ್ಗದ ರಾಯ) ಮತ್ತು ಸತವಾಯಿ ಗುಡಿಗಳು ಬಹುಜನರನ್ನು ಆಕರ್ಷಿಸುತ್ತವೆ. ಇಲ್ಲಿಂದ 14ಕಿಮೀ ಪೂರ್ವಕ್ಕೆ ಅಥಣಿಯ ಹಾದಿಯಲ್ಲಿರುವ ಮಂಗಸುಳಿಯಲ್ಲಿ ಮೇ ತಿಂಗಳಲ್ಲಿ ಮಲ್ಲೇಶ್ವರ ದೇವರ ಜಾತ್ರೆ ನಡೆಯುತ್ತದೆ. ಅಥಣಿಯಿಂದ 16ಕಿಮೀ ಆಗ್ನೇಯಕ್ಕಿರುವ ಕೊಕಟನೂರು ಐತಿಹಾಸಿಕ ಸ್ಥಳ. ಇಲ್ಲಿನ

ಎಲ್ಲಮ್ಮನ ಜಾತ್ರೆ ಬಹು ಜನರನ್ನು ಆಕರ್ಷಿಸುತ್ತದೆ. ಕೃಷ್ಣಾನದಿಯ ಬಲದಂಡೆಯಲ್ಲಿ ಸಪ್ತಸಾಗರ ತೀರ್ಥಕ್ಷೇತ್ರವಿದೆ. ಸಪ್ತಋಷಿಗಳು ಏಳು ಸಮುದ್ರಗಳ ನೀರನ್ನು ಇಲ್ಲಿಗೆ ತಂದು ಬೆರೆಸಿದರೆಂಬುದು ಒಂದು ಐತಿಹ್ಯ. ಅಥಣಿಯಿಂದ ಸು.24ಕಿಮೀ ಈಶಾನ್ಯಕ್ಕಿರುವ ರಾಮತೀರ್ಥದಲ್ಲಿ ಆನಂದಪರ್ವತವೆಂಬ ಬೆಟ್ಟವಿದೆ. ಅದರಲ್ಲಿ ಆನಂದನಾಯಕಿ ದೇವಿಯ ಗುಹಾದೇವಾಲಯವೂ ಸಮೀಪದಲ್ಲಿ ಒಂದು ಸುಂದರ ರಾಮೇಶ್ವರ ದೇವಾಲಯವೂ ಇವೆ. ಇಲ್ಲಿ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ರಾಮೇಶ್ವರ ದೇವರ ವಾರ್ಷಿಕ ಜಾತ್ರೆ ನಡೆಯುತ್ತದೆ.

ಅಮೃತಲಿಂಗೇಶ್ವರ ದೇವಾಲಯ

ತಾಲ್ಲೂಕಿನ ಪಶ್ಚಿಮದಂಚಿನಲ್ಲಿ ಕೃಷ್ಣಾನದಿಯ ಎಡದಂಡೆಯ ಮೇಲಿರುವ ಜುಗಲ ಗ್ರಾಮದಲ್ಲಿ ಮಸಬತಿ ಎಂಬ ಮುಸ್ಲಿಂ ಸಂತರ ಸಮಾಧಿ ಇದ್ದು ಇಲ್ಲಿ ಪ್ರತಿ ರಜ್ಜಬ್ ತಿಂಗಳಲ್ಲಿ ಉರುಸ್ ನಡೆಯುತ್ತದೆ. ಅಥಣಿಯಿಂದ ಸು.20ಕಿಮೀ ನೈರುತ್ಯದಲ್ಲಿರುವ ಐನಾಪುರದಲ್ಲಿ ಪೀರ್‌ಕಾಜಿಯವರ ಸಮಾಧಿ ಇದೆ. ಅಥಣಿಯಿಂದ ಆಗ್ನೇಯಕ್ಕೆ ಕೃಷ್ಣಾನದಿಯ ಎಡದಂಡೆಯ ಮೇಲಿರುವ ಸವದಿ ಗ್ರಾಮದಲ್ಲಿ ಪ್ರಸಿದ್ಧ ಮುಸಲ್ಮಾನ ಸಂತರೊಬ್ಬರ ಸಮಾಧಿ ಇದೆ. ಶೇಡಬಾಳ (ನೋಡಿ) ತಾಲ್ಲೂಕಿನ ಮುಖ್ಯಸ್ಥಳಗಳಲ್ಲೊಂದು.

ಅಥಣಿ ತಾಲ್ಲೂಕಿನ ಮುಖ್ಯ ಪಟ್ಟಣ. ಸಮುದ್ರಮಟ್ಟದಿಂದ 650ಮೀ ಎತ್ತರದಲ್ಲಿದೆ. ಬೆಳಗಾಂವಿಯಿಂದ ಸು.148ಕಿಮೀ ಈಶಾನ್ಯಕ್ಕಿದೆ. ಜನಸಂಖ್ಯೆ 39,200.

ಅಥಣಿ ಈ ಸುತ್ತಿನ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿಂದ ಬಿಜಾಪುರ, ಗೋಕಾಕ, ಚಿಕ್ಕೋಡಿ ಮೊದಲಾದ ಊರುಗಳಿಗೆ ಉತ್ತಮ ರಸ್ತೆ ಸಂಪರ್ಕವಿದೆ. ಪ್ರತಿ ಭಾನುವಾರ ಸಂತೆ ಸೇರುತ್ತದೆ. ಸಿದ್ಧೇಶ್ವರ ಮತ್ತು ಅಮೃತೇಶ್ವರ ದೇವಾಲಯಗಳಿವೆ. ಪ್ರಸಿದ್ಧ ಮುರುಘೇಂದ್ರ ಸ್ವಾಮಿಗಳ ಮಠವಿದೆ. ಅಥಣಿಯನ್ನು 1679ರಲ್ಲಿ ಶಿವಾಜಿಯ ಮಗ ಸಾಂಬಾಜಿಯಿಂದ ಮುಗಲರು ಕಿತ್ತುಕೊಂಡರು. 1720ರಲ್ಲಿ ನಿಜಾಮ್–ಉಲ್–ಮುಲ್ಕ್ ಅಥಣಿಯನ್ನು ಗೆದ್ದು ಕೊಲ್ಹಾಪುರದ ಅರಸನಿಗೆ ಕೊಟ್ಟ. ಬಳಿಕ ಅಥಣಿ ಸಾತಾರಾದ ಶಾಹೂ ರಾಜನಿಗೆ ಸೇರಿತು. ರಾಜನಿಗೆ ಮಕ್ಕಳಿಲ್ಲದ್ದರಿಂದ ಆತ ಸತ್ತ ಮೇಲೆ 1839ರಲ್ಲಿ ಆಂಗ್ಲರ ವಶವಾಯಿತು.

(ಡಿ.ಕೆ.;ಎಸ್.ಜಿ.ಕೆ.)

**ಅಥರ್ವನ್ :** ಈ ಶಬ್ದ ವೇದಕಾಲಕ್ಕಿಂತಲೂ ಪ್ರಾಚೀನವಾದುದು; ಇಂಡೋ–ಇರಾನಿಯನ್ ಯುಗದಲ್ಲಿಯೇ ಪ್ರಚಾರದಲ್ಲಿದ್ದುದಕ್ಕೆ ಅವೆಸ್ತಾ ಗ್ರಂಥದಲ್ಲಿ ಬರುವ ಅಥ್ರವನ್ ಎಂಬ ಶಬ್ದಪ್ರಯೋಗ ಪ್ರಮಾಣವೊದಗಿಸುತ್ತದೆ. ಅಥ್ರವನ್ ಎಂದರೆ ಅಗ್ನಿ–ಪೂಜಕ ಪುರೋಹಿತರೆಂಬ ಅರ್ಥ ಅವೆಸ್ತಾದಲ್ಲಿರುವುದರಿಂದ ವೇದಕಾಲದಲ್ಲೂ ಅದೇ ಮೂಲಾರ್ಥ ಅದಕ್ಕೆ ಇತ್ತೆಂದು ವಿದ್ವಾಂಸರು ಊಹಿಸುತ್ತಾರೆ. ಆದರೆ ಬಹಳ ಹಿಂದೆಯೇ ಆ ಪುರೋಹಿತರ ಕರ್ಮ–ಶಾಂತಿಕ ಹಾಗೂ ಅಭಿಚಾರಿಕ– ಈ ಶಬ್ದದಿಂದ ಬೋಧಿತವಾಗುತ್ತಿದ್ದುದಕ್ಕೂ ಪ್ರಮಾಣಗಳಿವೆ. ಋಗ್ವೇದದ ಏಳನೆಯ ಮಂಡಲದ ಆದಿಯಲ್ಲಿ ಅಗ್ನಿಯನ್ನೇ ಅಥರ್ಯು ಎಂದು ಸ್ತುತಿಸಲಾಗಿದೆ. ಇದರ ಮೇಲಿಂದ ಅಥರ್ ಎಂಬ ಕಲ್ಪಿತ ಶಬ್ದಕ್ಕೆ ಮಂತ್ರವಿದ್ಯಾ ಎಂಬರ್ಥವನ್ನು ಊಹಿಸಿ, ಅಥರ್ವನ್ ಎಂದರೆ ಮಂತ್ರವಿದ್ಯಾಪರಿಣತ ಎಂಬ ವ್ಯುತ್ಪತ್ತಿಯನ್ನು ಹೇಳಬಹುದು. ಭೃಗು, ಅಂಗಿರಸ–ಈ ಹೆಸರುಗಳೊಂದಿಗೆ ಅಥರ್ವರ ಉಲ್ಲೇಖ ಹೆಚ್ಚು. ಆದ್ದರಿಂದ ಈ ಮಾಂತ್ರಿಕ ಪುರೋಹಿತರು ಹೆಚ್ಚಾಗಿ ಆ ಋಷಿವಂಶದವರಿದ್ದಿರ ಬಹುದು. ಇವರ ವೇದವೇ ಅಥರ್ವವೇದ. ಅಥರ್ವವೇದದಲ್ಲಿ ಅಥರ್ವನ್ ಎಂದರೆ ಸೃಷ್ಟಿಕರ್ತ ಪ್ರಜಾಪತಿಯೇ ಎಂದು ಹೇಳಲಾಗಿರುವುದಲ್ಲದೆ ಪುರುಷನ ಶೀರ್ಷ, ಹೃದಯಗಳನ್ನು ಹೊಲಿಗೆ ಹಾಕಿ ಪರಬ್ರಹ್ಮನ ನಿವಾಸವಾಗುವಂತೆ ಮಾಡಿದ ದೇವತೆಯೆಂದು ವರ್ಣಿಸಲಾಗಿದೆ (10.2.26–29). ಬ್ರಹ್ಮವಿದ್ಯಾಸಂಪ್ರದಾಯದ ಋಷಿಗಳನ್ನು ಹೇಳುವಾಗ ಆತ್ಮೋಪನಿಷತ್ತು ಅಥರ್ವಋಷಿಗಳನ್ನೂ ಹೆಸರಿಸಿದೆ.

(ಕೆ.ಕೆ.)

**ಅಥರ್ವವೇದ :** ಚತುರ್ವೇದಗಳಲ್ಲಿ ಎಲ್ಲಕ್ಕಿಂತ ಕಡೆಯದೂ ಎಲ್ಲಕ್ಕಿಂತ ಜನರ ಭಯಭೀತಿಗಳಿಗೆ, ಮುಟ್ಟಲೂ ಅಂಜುವ ಭಕ್ತಿ ಭಾವನೆಗೆ ಆಸ್ಪದವೆನಿಸಿರುವುದೂ ಅತ್ಯಂತ ಕಡಿಮೆ ಪ್ರಚಾರದ್ದೂ ಆದ ಇದಕ್ಕೆ ಅಥರ್ವಾಂಗಿರಸಃ, ಭೃಗ್ವಂಗಿರಸಃ, ಬ್ರಹ್ಮವೇದ ಎಂಬ ನಾಮಾಂತರಗಳೂ ಉಂಟು. ಇಲ್ಲಿಯ ಮಂತ್ರಗಳನ್ನು ಆಥರ್ವಣ, ಆಂಗಿರಸ ಎಂಬ ಶಬ್ದಗಳಿಂದ ವ್ಯವಹರಿಸುವುದೂ ಉಂಟು. ಅಥರ್ವಣ ಮಂತ್ರಗಳು ಪ್ರಾಯಿಕವಾಗಿ ಶಾಂತವೆಂದೂ ಆಂಗಿರಸ ಮಂತ್ರಗಳು ಘೋರ ಎಂದರೆ ಆಭಿಚಾರಿಕವೆಂದೂ ಸಾಮಾನ್ಯವಾಗಿ ಇಂದಿನ ವಿದ್ವಾಂಸರ ಅಭಿಪ್ರಾಯ. ಅಥರ್ವ, ಆಂಗಿರಸ್, ಭೃಗು ಶಬ್ದಗಳು ಅತಿಪ್ರಾಚೀನ ಕಾಲದ ಪುರೋಹಿತರ ಹೆಸರುಗಳಾಗಿದ್ದಿರಬಹುದಾದರೂ ಅಥರ್ವ ವೇದ ಸಂಹಿತೆಯ ವೇಳೆಗೆ ಆ ಶಬ್ದಗಳ ವಿಶಿಷ್ಟಾರ್ಥ ಲುಪ್ತವಾಗಿ, ಸಾಮಾನ್ಯವಾದ ಶಾಂತಿಕ–ಪೌಷ್ಟಿಕ–ಆಭಿಚಾರಿಕ ಕರ್ಮಗಳೆಂಬ ಅರ್ಥ ಬಂದಿರುವುದು ಕಾಣುತ್ತದೆ. ಬ್ರಹ್ಮ–ವೇದವೆನ್ನುವಾಗ ಬ್ರಹ್ಮಶಬ್ದಕ್ಕಾದರೂ ಈ ಸಾಮಾನ್ಯಾರ್ಥವೇ ವಿವಕ್ಷಿತ. ಕಡೆಕಡೆಗೆ ಯಜ್ಞಕರ್ಮಗಳಲ್ಲೂ ಅಥರ್ವವೇದಕ್ಕೆ ಸ್ಥಾನವೊಂದನ್ನು ಕಲ್ಪಿಸಿದಾಗ ಮೊದಮೊದಲು ಋಗ್ವೇದಾದಿ ಸೋಮಯಾಗಗಳಲ್ಲಿ ಅಥರ್ವಣ ಸವಗಳಿಗೆ (ಸೋಮೇತರ ಆಹುತಿಗಳಿಗೆ) ಸ್ಥಾನವಿದ್ದಂತೆ ತೋರುವುದಿಲ್ಲ. ಪುರೋಹಿತರಲ್ಲಿ ಅಧ್ಯಕ್ಷನಾದವನಿಗೆ ಬ್ರಹ್ಮ ಎಂಬ ಹೆಸರು ನಿಯುಕ್ತವಾಯಿತಷ್ಟೇ ಅಲ್ಲ; ಅವನಿಗೆ ಅಥರ್ವವೇದ ತಿಳಿದಿರಬೇಕೆಂಬುದೂ ವಿಹಿತವಾಯಿತು. ಆದರೆ ಪೂರ್ವಪರಂಪರೆಯಲ್ಲಿ ಮುಖ್ಯವಾಗಿ ತ್ರಯೀ ಎಂಬ ಗೌರವಕ್ಕೆ ಪಾತ್ರವಾದ ತ್ರಿವೇದಗಳಿಗೆ ಮಾತ್ರ ಮಹತ್ತ್ವವಿತ್ತು. ಇದನ್ನೇ ಅಮರಕೋಶವೂ ಉಲ್ಲೇಖಿಸುತ್ತದೆ.

ಈ ಅಂಶವನ್ನು ನೆನಪಿನಲ್ಲಿಟ್ಟರೆ ಅಥರ್ವ–ವೇದ–ಸಂಹಿತೆಯ ಕಾರ್ಯನಿರ್ಣಯಕ್ಕೆ ಅನುಕೂಲವಾಗುತ್ತದೆ. ಉಚ್ಚವರ್ಗದ ಪುರೋಹಿತರ ಪೂಜಾಪರಿಕರವನ್ನು ತ್ರಿವೇದಗಳು ಪ್ರತಿಬಿಂಬಿಸುವಂತೆ, ಸಾಮಾನ್ಯ ಜನರ ಜೀವನದಲ್ಲಿ ನಿತ್ಯೋಪಯುಕ್ತ ಕರ್ಮಾಚರಣೆಗಳನ್ನು ಅಥರ್ವವೇದ ತೋರಿಸುತ್ತದೆ. ಮೊದಲನೆಯವು ಹೆಚ್ಚಾಗಿ ನಿತ್ಯಕರ್ಮಗಳು; ದೇವತರ್ಪಣಕ್ಕಾಗಿ ಹೊರಟವು. ಅವಕ್ಕೆ ಸಾರ್ವತ್ರಿಕ ಕಲ್ಯಾಣವೇ ಗುರಿ. ಅಥರ್ವವೇದ ಹೆಚ್ಚಾಗಿ ಕಾಮ್ಯ, ನೈಮಿತ್ತಿಕ ಆಚರಣೆಗಳಿಗೆ ಮೀಸಲು. ಪಿಶಾಚಾದಿಗಳಂತೆ ಕ್ಷುದ್ರದೇವತೆಗಳನ್ನೂ ಒಲಿಸುವ ಉದ್ದೇಶ ಇಲ್ಲಿ ಉಂಟು; ವೈಯಕ್ತಿಕ ಇಷ್ಟಸಾಧನೆಗಳೇ ಇಲ್ಲಿ ಧ್ಯೇಯವಾಗಬಲ್ಲವು. ಹೀಗೆ ಇಲ್ಲಿಯ ಮಂತ್ರಗಳ ರಚನಾಕಾಲ ಋಗ್ವೇದಮಂತ್ರಗಳ ಸೃಷ್ಟಿಕಾಲದಷ್ಟೇ ಪ್ರಾಚೀನವಾಗಿರುವುದು ಶಕ್ಯ. ಭಿನ್ನ ಜನವರ್ಗಗಳ ಈ ವೇದಗಳು ಒಂದೇ ಸಮಾಜದ ಭಿನ್ನ ಧ್ಯೇಯಗಳನ್ನು ಕುರಿತಿರುವುದರಿಂದ ತ್ರಿವೇದಗಳನ್ನು ಆರ್ಯಸಂಸ್ಕೃತಿಯ ಆವಿಷ್ಕಾರವೆಂದೂ ಅಥರ್ವವೇದ ಆರ್ಯೇತರ ಸಂಸ್ಕೃತಿಗಳ ಕುರುಹೆಂದೂ ನಿರ್ಣಯಿಸಲು ಪ್ರಮಾಣ ಸಾಲದು. ಆದರೂ ಋಗ್ವೇದ–ಸಂಹಿತೆಯ ಋಷಿ–ಮಂಡಲಗಳಲ್ಲಿ ಇದರ ಉಲ್ಲೇಖವೇ ಇಲ್ಲದಿರುವುದನ್ನೂ ಐತರೇಯ, ಗೋಪಥ, ಶತಪಥ ಮುಂತಾದ ಬ್ರಾಹ್ಮಣಗಳಲ್ಲಿ ಮಾತ್ರವೇ ಸ್ಪಷ್ಟ ಉಲ್ಲೇಖವಿರುವುದನ್ನೂ ಇಲ್ಲಿ ಋಗ್ವೇದ ದೇವತೆಗಳಿಗೆಲ್ಲ ಗೃಹ್ಯಾದಿ ಕರ್ಮಗಳಲ್ಲಿ ವಿನಿಯೋಗ, ಮಾಟ, ಜಾದು ಮುಂತಾದುವುಗಳ ಜೊತೆಜೊತೆಗೇ ಆಧ್ಯಾತ್ಮಿಕ ಜನಜನಿತ ಹಾಗೂ ಕ್ಷುದ್ರಾಚಾರಗಳ ಸಮಾವೇಶ, ಚಾತುರ್ವರ್ಣ್ಯಗಳ ನಿರೂಪಣೆ, ಹುಲಿಯ ಪರಿಚಯ, ಗಂಗಾತೀರದ ವಸತಿಗಳ ಉಲ್ಲೇಖ–ಇವುಗಳನ್ನೆಲ್ಲ ಗಮನಿಸಿದರೆ ಋಗ್ವೇದ–ಸಂಹಿತೆಯಾದ ಮೇಲೆ ಬ್ರಾಹ್ಮಣಯುಗದಲ್ಲಿ ಅಥರ್ವವೇದ–ಸಂಹಿತೆ ಮೂಡಿದಂತೆ ತೋರುತ್ತದೆ. ವಿಷಯನಿರೂಪಣೆಯಲ್ಲಿ ಮುಂದಿನ ಗೃಹ್ಯ ಸೂತ್ರಗಳೊಡನೆ ಹೆಚ್ಚಿನ ಹೋಲಿಕೆ ಇದಕ್ಕುಂಟೆನ್ನಬಹುದು. ವಾಕ್–ಸಂಸ್ಕಾರಕ್ಕೆ ತ್ರಯೀ ಕಾರಕವಾದರೆ ಮನಸ್ಸಿನ ಸಂಸ್ಕಾರಕ್ಕೆ ಅಥರ್ವವೇದ ಪ್ರಯೋಜಕ ಎಂಬ ಮಾತು ಐತರೇಯ (V–33) ಮತ್ತು ಗೋಪಥ (III–2) ಬ್ರಾಹ್ಮಣಗಳಲ್ಲಿ ಬರುತ್ತದೆ. ಯಜ್ಞಕ್ಕೆ ಎರಡು ಸಂಸ್ಕಾರಗಳೂ ಬೇಕು.

ಅಥರ್ವವೇದದಲ್ಲಿ ಬೇರೆ ಬೇರೆ ವಿಭಾಗಕ್ರಮಗಳ ಪ್ರಕಾರ 20 ಕಾಂಡಗಳು, 34 ಪ್ರಪಾಠಕಗಳು, 111 ಅನುವಾಕಗಳು, 773 ವರ್ಗಗಳು, 731 ಸೂಕ್ತಗಳು, 6,000 ಮಂತ್ರಗಳು ಇವೆ. ಇದು ಪ್ರಸಿದ್ಧವಾದ ಶೌನಿಕ ಶಾಖೆಯನ್ನು ಕುರಿತುದು. ಇವುಗಳಲ್ಲಿ ಕಡೆಯ 20ನೆಯ ಕಾಂಡ ಋಗ್ವೇದ ಮಂತ್ರಗಳಿಂದಲೇ ತುಂಬಿರುವುದರಿಂದ ಇದು ಅನಂತರ ಕೂಡಿಸಿದ ಪ್ರಕ್ಷೇಪವೆನಿಸುತ್ತದೆ. ಉಳಿದ ಕಾಂಡಗಳಲ್ಲಿ ಋಗ್ವೇದ ಮಂತ್ರಗಳ ಉಲ್ಲೇಖ 1/7 ರಷ್ಟು ಮಾತ್ರವಿದೆ. ಈ ಉಲ್ಲೇಖಗಳಲ್ಲಿ ಋಗ್ವೇದದ I, VIII ಮತ್ತು X ನೆಯ ಮಂಡಲಗಳಿಂದ ಮಾತ್ರ ತೆಗೆದವು. ಈ ಕಾಂಡಗಳ ಯೋಜನೆಯಲ್ಲಿ ಒಂದು ನಿಯಮವೂ ಉಂಟು. ಮೊದಲ ಏಳು ಕಾಂಡಗಳಲ್ಲಿ ಸೂಕ್ತಗಳ ಮಂತ್ರಸಂಖ್ಯೆ ಕಾಂಡದಿಂದ ಕಾಂಡಕ್ಕೆ ಹೆಚ್ಚುತ್ತ ಹೋಗುತ್ತದೆ: I ರಲ್ಲಿ 4; II ರಲ್ಲಿ 5; IIIರಲ್ಲಿ 6; IV ರಲ್ಲಿ 7; V ರಲ್ಲಿ 8 – 18; VI ರಲ್ಲಿ 3; VIIರಲ್ಲಿ 2 ಅಥವಾ 1; VII-XIV, XVII, XVIII ಈ ಕಾಂಡಗಳಲ್ಲಿ 21 – 89ರವರೆಗೆ ಮಂತ್ರ ಸಂಖ್ಯೆಯಿರುವ ಉದ್ದುದ್ದನೆಯ ಸೂಕ್ತಗಳಿವೆ. XV ಮತ್ತು XVI ರಲ್ಲಿ ಬ್ರಾಹ್ಮಣದ ಗದ್ಯದಂತಿರುವ ಗದ್ಯವಿದೆ.

ಅಥರ್ವವೇದದಲ್ಲಿ 9 ಶಾಖೆಗಳಿದ್ದುದನ್ನು ಮಹಾಭಾಷ್ಯವೇ ಮೊದಲಾದ ಪೂರ್ವಕೃತಿಗಳು ಹೇಳಿದರೂ ಈಗ ಉಪಲಬ್ಧವಿರುವ ಶಾಖೆಗಳು ಎರಡೇ. ಶೌನಕ ಶಾಖೆಯಷ್ಟು ಕೂಡ ಪ್ರಚಾರವಿಲ್ಲದ ಎರಡನೆಯ ಶಾಖೆಯೇ ಪೈಪ್ಪಲಾದ ಶಾಖೆ. ಇವೆರಡೂ ಶಾಖೆಗಳು ಮೊದಲಿಗೆ ಜರ್ಮನಿಯ ವಿದ್ವಾಂಸರಿಂದ ಪ್ರಕಟಗೊಂಡುವು. ಪತಂಜಲಿ ಶನ್ನೋದೇವೀರಭೀಷ್ಟಯೇ ಎಂದು ಸೂಚಿಸುವ ಆದ್ಯಮಂತ್ರ ಪೈಪ್ಪಲಾದ ಶಾಖೆಗೇ ಅನ್ವಯಿಸುತ್ತದೆ. ಸಾಯಣಭಾಷ್ಯವಿರುವುದು ಶೌನಕಶಾಖೆಗೆ ಮಾತ್ರ. ಇದನ್ನೇ ಈ ಲೇಖನದಲ್ಲಿ ಆಧರಿಸಲಾಗಿದೆ.

ಅಥರ್ವವೇದದ (ಶೌನಕಶಾಖೆ) ಮೊದಲ ಎರಡು ಕಾಂಡಗಳಲ್ಲಿ ತೊನ್ನು, ಕುಷ್ಠ ಮುಂತಾದ ರೋಗಗಳಿಗೆ ಶಾಂತಿಕರ್ಮವನ್ನು ಹೇಳಿದೆ. III ರಲ್ಲಿ ಬಾಲಗ್ರಹ, ಕ್ಷಯ, ವಶೀಕರಣ ಮುಂತಾದುವುಗಳ ಪ್ರಸ್ತಾಪವಿದೆ. IVರಲ್ಲಿ ಧೂಮಕೇತುವೇ ಮುಂತಾದ ಉತ್ಪಾತಗಳ ಶಾಂತಿಗಾಗಿ ವರುಣಸ್ತೋತ್ರ ವಿಹಿತವಾಗಿದೆ. ಗಿರಲ್ಲಿ ದನಗಳ ಕಳ್ಳರು, ಶತ್ರುಗಳು ಮುಂತಾದವರನ್ನು ಅಂಜಿಸುವ ಮಂತ್ರಗಳಿವೆ. ಶೂದ್ರರಲ್ಲಿ ಶೀತಜ್ವರ ಹೆಚ್ಚಾಗಿರುತ್ತದೆಂದು ಇಲ್ಲಿ ತಿಳಿಸಲಾಗಿದೆ (V, XXII, 7). ಗೋಬ್ರಾಹ್ಮಣರಿಗೆ ಪೀಡೆ ಮಾಡುತ್ತಿದ್ದವರಿಗೆ ರಾಜ ದಂಡ ವಿಧಿಸುತ್ತಿದ್ದುದು ಇಲ್ಲಿ ಕಂಡುಬರುತ್ತದೆ (V. XIX). VIರಲ್ಲಿ ಕಾಸ, ಶ್ಲೇಷ್ಮ ಮುಂತಾದ ರೋಗಗಳ ಶಾಂತ್ಯುಪಾಯ, ಅಗ್ನಿಭಯನಿವೃತ್ತಿಗೆ ಮಂತ್ರ ಮುಂತಾದವು ಬರುತ್ತವೆ. VIIರಲ್ಲಿ ಸಭೆಯಲ್ಲಿ ವಿಜಯಪ್ರಾಪ್ತಿಗೆಂದು ಉಕ್ತವಾದ ಮಂತ್ರಗಳುಂಟು.VIIIರಲ್ಲಿ ಒಂದು ಮಂತ್ರ (VIII 4) ಮೃತ್ಯುವನ್ನು ಗೆದ್ದು ದೀರ್ಘಾಯುಷ್ಯವನ್ನು ಪಡೆಯುವುದನ್ನು ಕುರಿತಿದೆ. IXರಲ್ಲಿ ಮಧುಕಶಾ ಮುಂತಾದ ಔಷಧಿಗಳ ಉಲ್ಲೇಖವಿದೆ. Xರಲ್ಲಿ ದೇವತಾವಾದ ಬರುತ್ತದೆ. XIರಲ್ಲಿ ಬ್ರಹ್ಮಚರ್ಯದ ಮಹಿಮೆ ವರ್ಣಿತವಾಗಿದೆ. XII ರಲ್ಲಿ ದೇಶಭಕ್ತಿಯಿಂದ ತುಂಬಿ ತುಳುಕುವ ಪ್ರಸಿದ್ಧ ಪೃಥಿವೀಸೂಕ್ತವಿದೆ. XIII, XIV, XV, XVIರಲ್ಲಿ ಅನೇಕ ಚಿಲ್ಲರೆ ವಿಷಯಗಳೂ ವಿವಾಹ, ಸ್ತ್ರೀಕರ್ಮ ಮುಂತಾದವೂ ಬರುತ್ತವೆ. XVIIರಲ್ಲಿ ಆಧ್ಯಾತ್ಮಿಕ ಮಂತ್ರಗಳು ಹೆಚ್ಚು. XVIIIರಲ್ಲಿ ಶ್ರಾದ್ಧ ಮಂತ್ರಗಳುಂಟು; ಯಮಸ್ತುತಿ ಇಲ್ಲಿ ಬರುತ್ತದೆ. XIXರಲ್ಲಿ ಛಂದಸ್ಸುಗಳ ನಕ್ಷತ್ರಗಳ ಪ್ರಸ್ತಾಪವಿದೆ. ಆಗ ಕೃತ್ತಿಕೆಯಿಂದ ಮೊದಲು ಮಾಡಿ ನಕ್ಷತ್ರಗಳನ್ನು ಎಣಿಸುತ್ತಿದ್ದರು, ಅಶ್ವಿನಿಯಿಂದಲ್ಲ. ಈ ಕಾಂಡದ ಕಡೆಗೆ ರಾಜಸೂಯ ಯಾಗದ ವರ್ಣನೆಯಿದೆ; ಕಡೆಯ XXನೆಯ ಕಾಂಡದಲ್ಲಿ ಸೋಮಯಾಗದ ವಿವರಣೆಯಿದೆ.

ಅತ್ಯಂತ ಸಂಕ್ಷೇಪವಾಗಿ ಹೇಳುವುದಾದರೆ, ಅಥರ್ವವೇದದಲ್ಲಿ ಮೂರು ಬಗೆಯ ಅಂಶಗಳಿಗೆ ಮಹತ್ತ್ವ ಹೆಚ್ಚು : 1. ಮಂತ್ರಗಳು 2. ಔಷಧಿಗಳು 3. ಬಗೆ ಬಗೆಯ ಮೂಲಿಕೆ, ಮಣಿ– ಇತ್ಯಾದಿಗಳು. ಇವುಗಳಿಂದ ಐಹಿಕವಾದ ದುಃಖ ದಾರಿದ್ರ್ಯಗಳನ್ನೂ ವಿಘ್ನವಿಘಾತಗಳನ್ನೂ ರೋಗಶೋಕಗಳನ್ನೂ ನಿವಾರಣೆ ಮಾಡಿಕೊಂಡು ಲೌಕಿಕ ಕಲ್ಯಾಣವನ್ನು ಪಡೆಯುವುದು, ಸವಗಳಿಂದ ಸ್ವರ್ಗವನ್ನು ಸಾಧಿಸುವುದು, ಬ್ರಹ್ಮವಿದ್ಯೆಯಿಂದ ನಿಃಶ್ರೇಯಸವನ್ನು ಗಳಿಸುವುದು. ಹೀಗೆ ಮಾನವನ ಸರ್ವಾಂಗೀಣ ಜೀವನಕ್ಕೆ ಸಾಧಕವಾದ ಸಕಲಾಂಶಗಳೂ ಇಲ್ಲಿ ಸೇರಿರುವ ಕಾರಣ ಮುಂದಿನ ಆಯುರ್ವೇದ, ಅರ್ಥಶಾಸ್ತ್ರ, ಧನುರ್ವೇದ, ನಾಟ್ಯಶಾಸ್ತ್ರ, ಕಾಮಶಾಸ್ತ್ರ ಇತ್ಯಾದಿ ಲೌಕಿಕ ವಿದ್ಯೆಗಳಿಗೆಲ್ಲ ಅಥರ್ವವೇದವೇ ಉಗಮವೆಂಬ ಪ್ರತೀತಿ ಬಹಳಮಟ್ಟಿಗೆ ಸಾಧುವೆಂದೇ ತಿಳಿಯಬಹುದು. ಋಗ್ವೇದದ ಭಾಷೆಗಿಂತ ಅಥರ್ವವೇದದ ಭಾಷೆ ಹೆಚ್ಚು ಒರಟಾದರೂ ಹೆಚ್ಚು ಸತ್ತ್ವಯುತವಾದುದು. ಋಗ್ವೇದಯುಗಕ್ಕಿಂತ ಬ್ರಾಹ್ಮಣಯುಗದ ಭಾಷೆಗೆ ಸಮೀಪಿಸುವ ಶಬ್ದಪ್ರಯೋಗವೇ ಹೆಚ್ಚು; ಆದುದರಿಂದ ಋಗ್ವೇದಕ್ಕಿಂತ ಇದು ಅರ್ಥವಾಗುವುದು ಸುಲಭ; ಸಂಸ್ಕೃತ ಭಾಷೆಗೆ ಮತ್ತು ನಿಕಟವೆನಿಸುವುದರಿಂದ ಛಂದಸ್ಸಿನ ವಿಷಯದಲ್ಲಿ ಕೂಡ ಋಗ್ವೇದದಲ್ಲಿ ಕಾಣದ ನಿರಂಕುಶತೆ ಅಥವಾ ಸ್ವಚ್ಛಂದತೆ ಇಲ್ಲಿ ಹೆಚ್ಚು. ಸಾಮಾನ್ಯವಾಗಿ ಇಲ್ಲಿ ಛಂದಸ್ಸಿನ ಸಾಲುಗಳ ಇಲ್ಲವೆ ಲಯಗಳ ಸೂಕ್ಷ್ಮ ನಿಯಮಗಳ ಪಾಲನೆಯ ಪ್ರವೃತ್ತಿಯಿಲ್ಲ. ಸನ್ನಿವೇಶಕ್ಕೆ ಅನುಸಾರವಾಗಿ ಮೂಲನಿಯಮಗಳನ್ನು ಮರೆಯಾಗಿಸುವ ಮಟ್ಟಿಗೆ ಛಂದಸ್ಸುಗಳನ್ನು ಇಲ್ಲಿ ಬಳಸಲಾಗಿದೆ : ಪದ್ಯದಂತೆ ಗದ್ಯವೂ ಇದೆ.

ಇಷ್ಟಾದರೂ ಅಥರ್ವವೇದದ ಕಾವ್ಯಗುಣ ಒಮ್ಮೊಮ್ಮೆ ಋಗ್ವೇದದ ಕಾವ್ಯಗುಣವನ್ನೂ ಹಿಂದೆ ಹಾಕುತ್ತದೆನ್ನಬಹುದು. ರಾಷ್ಟ್ರಪ್ರೇಮದ ಉಜ್ಜ್ವಲ ಪ್ರಾಥವೆನಿಸುವ ಪೃಥಿವೀಸೂಕ್ತವನ್ನು ಇಲ್ಲಿ ಎತ್ತಿ ಹೇಳಬಹುದಾಗಿದೆ. ದೈವತ ಆವರಣವನ್ನು ಹಿಂದೆ ಬಿಟ್ಟು, ಕೇವಲ ಮಾನವನ ಆಶೆ–ಆಕಾಂಕ್ಷೆಗಳನ್ನು ಹೃದಯಸ್ಫೂರ್ತಿಯಿಂದ ಇಲ್ಲಿ ಮಿಡಿಯುವ ಅನೇಕ ಸೂಕ್ತಗಳಿರುವುದ ರಿಂದ, ಇವನ್ನೇ ಭಾರತೀಯ ಭಾವಗೀತೆಗೆ ಉಗಮಸ್ಥಾನಗಳೆಂದು ಗಣಿಸುವ ವಿದ್ವಾಂಸರೂ ಉಂಟು. ಈ ಎಲ್ಲ ಅಂಶಗಳ ವಿವರಣೆಗಾಗಿ, ಕೆಲವೊಂದು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

1. ಶಾಂತಿ ಮಂತ್ರ

ಶಂ ನೋ ದೇವೀರಭೀಷ್ಟಯ ಆಪೋ ಭವಂತು ಪೀತಯೇ ॥

ಶಂ ಯೋರಭಿ ಸ್ರವಂತು ನಃ ॥ (I, V. 1.)

2. ಕಾಸರೋಗದ ಭೈಷಜ್ಯ

ಯಥಾ ಸೂರ್ಯಸ್ಯ ರಶ್ಮಯಃ ಪರಾಪತನ್ತ್ಯಾಶುಮತ್ ।

ಏವಾ ತ್ವಂ ಕಾಸೇ ಪ್ರ ಪತ ಸಮುದ್ರಸ್ಯಾನು ವಿಕ್ಷರಮ್ ॥ (VII. 106. 3.)

3. ಪಿಶಾಚಿಗಳ ಉಚ್ಚಾಟನೆ

ತಪನೋ ಅಸ್ಮಿ ಪಿಶಾಚಾನಾಂ ವ್ಯಾಘ್ರೋ ಗೋಮತಾಮಿವ ।

ಶ್ವಾನಃ ಸಿಂಹಮಿವ ದೃಷ್ಟ್ವಾ ತೇ ನ ವಿಂದಂತೇ ನ್ಯಂಚನಮ್ ॥ (IV. 36. 6.)

4. ಸ್ವಾಪನ ಮಂತ್ರ

ಸ್ವಪ್ತು ಮಾತಾ ಸ್ವಪ್ತು ಪಿತಾ ಸ್ವಪ್ತು ಶ್ವಾ ಸ್ವಪ್ತು ವಿಶ್ಪತಿಃ ।

ಸ್ವಪಂ ತ್ವಸ್ಯೈ ಜ್ಞಾತಯಃ ಸ್ವಪ್ತ್ವ ಯಮಭಿತೋ ಜನಃ ॥ (IV. 5. 6.)

5. ಸಭಾವಿಜಯಕ್ಕೆ ಮಂತ್ರ

ವಿದ್ಮ ತೇ ಸಭೇ ನಾಮ ನರಿಷ್ಟಾ ನಾಮ ವಾ ಅಸಿ ।

ಯೇ ತೇ ಕೇ ಚ ಸಭಾಮದಸ್ತೇ ಮೇ ಸಂತು ಸವಾಚಸಃ ॥ (VII. 12. 2.)

6. ಪೃಥಿವೀ ಸೂಕ್ತ

ಯಸ್ಯಾಂ ಗಾಯನ್ತಿ ನೃತ್ಯನ್ತಿ ಭೂಮ್ಯಾಂ ಮರ್ತ್ಯಾ ವ್ಯೈಲವಾಃ ॥

ಯುಧ್ಯಂತೇ ಯಸ್ಯಾಮಾಕ್ರನ್ದೋ ಯಸ್ಯಾಂ ವದತಿ ದುಂದುಭಿಃ ।

ಸಾ ನೋ ಭೂಮಿಃ ಪ್ರಣುದತಾಂ ಸಪತ್ನಾನಸಪತ್ನಂ ಮಾ

ಪೃಥಿವೀ ಕೃಣೋತು (XII. i. 41)

ಅಥರ್ವವೇದದ ಮಂತ್ರಗಳನ್ನು ಶಾಸ್ತ್ರೀಯವಾಗಿ ಮುಖ್ಯ ಶೀರ್ಷಿಕೆಗಳ ಕೆಳಗೆ ತರುವ ಪ್ರಯತ್ನವನ್ನು ಕೆಲವು ವಿದ್ವಾಂಸರು ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾದ ಭೈಷಜ್ಯ, ಆಯುಷ್ಯ, ಆಭಿಚಾರಿಕ, ಕೃತ್ಯಾ–ಪ್ರತಿಹರಣ, ಸ್ತ್ರೀಕರ್ಮ, ಸಾಂಮನಸ್ಯ, ರಾಜಕರ್ಮ, ಬ್ರಹ್ಮ–ಪ್ರಶಂಸೆ, ಪೌಷ್ಟಿಕ, ಪ್ರಾಯಶ್ಚಿತ್ತ– ಇವುಗಳ ಹೆಸರನ್ನು ಇಲ್ಲಿ ಉಲ್ಲೇಖಿಸಬಹುದು.

ಹೀಗೆ ವೇದಕಾಲೀನ ಸಂಸ್ಕೃತಿಯ ಸಮಗ್ರ ಪರಿಚಯದಲ್ಲಿ ಕುತೂಹಲಿಗಳಾದವರಿಗೆ ಋಗ್ವೇದ ಸಂಹಿತೆಗಿಂತಲೂ ಸ್ವಲ್ಪ ಹೆಚ್ಚಿನ ಮಹತ್ತ್ವವೇ ಅಥರ್ವವೇದ ಸಂಹಿತೆಯಲ್ಲಿ ಉಂಟೆನ್ನಬಹುದು. ಪೂರ್ವದ ಆರ್ಯರ ದೈನಂದಿನ ಜೀವನ, ಸಾಮಾಜಿಕ ಆಚಾರವಿಚಾರ ಗಳು, ಹೃದಯೋದ್ಗಾರಗಳು, ಈ ಸಂಹಿತೆಯಲ್ಲಿ ಮೂಡಿರುವಷ್ಟು ವೈವಿಧ್ಯಪೂರ್ಣವಾಗಿ ಮತ್ತೆಲ್ಲಿಯೂ ಮೂಡಿಲ್ಲ. ಅಥರ್ವವೇದ ಕೇವಲ ಮಾಟ ಮಂತ್ರಗಳ ತವರೆಂದೂ ಸಾತ್ತ್ವಿಕರು ಅದನ್ನು ಕಣ್ಣೆತ್ತಿ ನೋಡುವುದು ಕೂಡ ತಪ್ಪೆಂದೂ ಇರುವ ಸಾಮಾನ್ಯಭಾವನೆ ಸರಿಯಾದುದಲ್ಲ. ವಸ್ತುತಃ ಮುಂದಿನ ಆಯುರ್ವೇದವೇ ಮೊದಲಾದ ಅನೇಕ ಲೌಕಿಕ ಶಾಸ್ತ್ರಗಳು ಹುಟ್ಟಿ ಬೆಳೆಯಲು ಈ ಸಂಹಿತೆಯಿಂದಲೇ ಪ್ರಚೋದನೆ ದೊರೆಯಿತೆಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಭಾರತದಲ್ಲಿ ಮೊದಲಿಗೆ ಪ್ರಚಾರದಲ್ಲಿದ್ದ ಶಸ್ತ್ರಾಸ್ತ್ರ ವಿದ್ಯೆಯಾದರೂ

ಅಥರ್ವಣವೇ ಎಂಬುದು ಗಮನಾರ್ಹ. ದ್ರೋಣ, ಪರಶುರಾಮ– ಮೊದಲಾದ ಪೌರಾಣಿಕ ಯುಗದ ಧನುರ್ವಿದ್ಯಾಗುರುಗಳೆಲ್ಲರೂ ಅಥರ್ವವೇದ ಪಾರಂಗತರೆಂಬುದನ್ನು ಇಲ್ಲಿ ನೆನೆಯಬಹುದಾಗಿದೆ. ಈ ವೇದದಲ್ಲಿ ಸಂಶೋಧನೆ ಇನ್ನೂ ಬೆಳೆಯಬೇಕಾಗಿದೆ.

**ಧರ್ಮ ಮತ್ತು ತತ್ತ್ವಸ್ವರೂಪ :** ಸ್ತೋತ್ರಗಳಿಂದಲೂ ಆಜ್ಯಾದಿಗಳ ಆಹುತಿಯಿಂದಲೂ ಅಗ್ನಿ, ಇಂದ್ರ, ವರುಣ ಮುಂತಾದ ಸಾತ್ತ್ವಿಕ ದೇವತೆಗಳನ್ನು ಒಲಿಸಿ ಅವರ ಅನುಗ್ರಹವನ್ನು ಪಡೆಯುವ ಪೂಜಾವಿಧಾನ ಋಗ್ವೇದದಲ್ಲಿ ಪ್ರಧಾನ; ಆದರೆ ಅಥರ್ವವೇದದಲ್ಲಿ ಅದೃಶ್ಯದುಷ್ಟಶಕ್ತಿಗಳನ್ನು ಕೂಡ ತಮ್ಮ ಮಂತ್ರಬಲದಿಂದ ವಶಪಡಿಸಿಕೊಂಡು ತಮ್ಮ ಕಾರ್ಯಕ್ಕೆ ಉಪಯೋಗಿಸಿಕೊಳ್ಳುವ ತಂತ್ರಕ್ಕೆ ಅಗ್ರಸ್ಥಾನ. ಋಗ್ವೇದದ ದೇವತೆಗಳೆಲ್ಲ ಸಾತ್ತ್ವಿಕ ದೀಪ್ತಿಯಿಂದ ದ್ಯುಲೋಕದಲ್ಲಿ ಬೆಳಗುತ್ತಾರೆ. ಅಥರ್ವವೇದದಲ್ಲಿ ಮಾತ್ರ ತಾಮಸಶಕ್ತಿಗಳಿಗೂ ಪಿಶಾಚಾದಿ ಕ್ರೂರ ದೇವತೆಗಳಿಗೂ ಸ್ಥಾನವುಂಟು. ಮಂತ್ರಬಲದಿಂದ ಇವುಗಳ ಆವಾಹನೆ, ಉಚ್ಚಾಟನೆ ಎರಡಕ್ಕೂ ಅಥರ್ವವೇದದಲ್ಲಿ ಮಂತ್ರತಂತ್ರಗಳ ಪ್ರಕ್ರಿಯೆಗಳುಂಟು. ಋಗ್ವೇದದ ಯಜ್ಞಕರ್ಮದಲ್ಲಿ ಉತ್ತಮ ದೇವತೆಗಳ ಉಪಾಸನೆಗೆ ಮಾತ್ರ ಸ್ಥಾನ; ಅಥರ್ವವೇದದ ತಂತ್ರಕಲ್ಪದಲ್ಲಿ ಕ್ಷುದ್ರದೇವತೆಗಳ ವಶೀಕರಣವೇ ಪ್ರಬಲ. ಶ್ರೌತ ಉಪಾಸನೆಯ ಗುರಿ ಲೋಕಕಲ್ಯಾಣ ಮತ್ತು ಸಮಾಜದ ಕ್ಷೇಮ. ಆದರೆ ಅಥರ್ವಣ ವಿಧಿಯ ಗುರಿ ಶತ್ರುಮಾರಣ, ಸ್ತ್ರೀವಶೀಕರಣ, ಭೂತೋಚ್ಚಾಟನ, ಸ್ವಕಾರ್ಯಸಾಧನ– ಹೀಗೆ ಋಗ್ವೇದದಲ್ಲಿ ನಾವು ಕಾಣುವ ಧಾರ್ಮಿಕ ಜಗತ್ತಿಗೂ ಅಥರ್ವವೇದದ ಜಗತ್ತಿಗೂ ಗುರಿಯಲ್ಲಿ, ಅನುಸರಿಸುವ ಉಪಾಯದಲ್ಲಿ–ಎರಡರಲ್ಲೂ ಎದ್ದು ತೋರುವ ಅಂತರವಿದೆ. ಒಂದು ಪ್ರಶಾಂತ, ಪ್ರಭಾಮಯವಾದರೆ ಇನ್ನೊಂದು ಕತ್ತಲೆಯ ಉಗ್ರನೆರಳುಗಳಿಂದ ಆವೃತವಾಗಿ ಘೋರವೆನಿಸುತ್ತದೆ. ಭಾರತೀಯ ಜನತೆಯ ಮನಸ್ಸಿನಲ್ಲಿ ಉಳಿದ ತ್ರಿವೇದಗಳನ್ನು ಕಂಡರೆ ಕೇವಲ ಗೌರವ ಭಕ್ತಿಗಳು ಮೂಡುತ್ತವೆ; ಅಥರ್ವವೇದದ ಹೆಸರನ್ನು ಹೇಳಿದರೆ ಸಾಕು, ಅವ್ಯಕ್ತಭಯ ಉತ್ಪನ್ನವಾಗುತ್ತದೆ. ಮನುಷ್ಯ ಗುಪ್ತಮಾರ್ಗಗಳಿಂದ ಪ್ರಕೃತಿಯ ಮೇಲೆ ಅಷ್ಟೇ ಅಲ್ಲ, ಇತರ ವ್ಯಕ್ತಿಗಳ ಮೇಲೂ ತನ್ನ ಪ್ರಭುತ್ವವನ್ನು ಹೇಗೆ ಸ್ಥಾಪಿಸ ಬಹುದೆಂಬುದನ್ನು ಅಥರ್ವವೇದ ತೋರಿಸಿಕೊಡುತ್ತದೆ. ಸಮಾಜವಿಘಾತಕವಾದ ಆಭಿಚಾರಿಕ ರಹಸ್ಯಗಳನ್ನು ಕೂಡ ವಿಶದಪಡಿಸುತ್ತದೆ. ವಿಜ್ಞಾನ ಮುಂದುವರೆಯದ ಆರ್ಯಸಮಾಜದ ಶೈಶವಾವಸ್ಥೆಯಲ್ಲಿ ಸಾಮಾನ್ಯ ಜನತೆಯ ನಿತ್ಯಜೀವನ ಅಥವಾ ಗೃಹಜೀವನ ಹೇಗೆ ಸಾಗಿದ್ದಿತೆಂಬುದನ್ನು ತಿಳಿಯಲು ಇತರ ವೇದಗಳಿಗಿಂತಲೂ ಅಥರ್ವವೇದವೇ ಸಾಮಗ್ರಿಯನ್ನು ಹೆಚ್ಚಾಗಿ ಒದಗಿಸುತ್ತದೆ. ಹಾಗೆಯೇ ವೈದಿಕ ಆರ್ಯರ ಧಾರ್ಮಿಕಭಾವನೆಯನ್ನು ಕೇವಲ ಋಗ್ವೇದಾದಿಗಳಿಂದಲೇ ನಿರ್ಧರಿಸಿದರೆ ಅದು ಏಕಮುಖವಾದ ಅಸಮಗ್ರ ಚಿತ್ರವಾದೀತು; ಅಥರ್ವವೇದದಲ್ಲಿ ಮೂಡುವ ಅವರ ಧಾರ್ಮಿಕಜೀವನದ ಪರಿ ಅದಕ್ಕೆ ಪೂರಕವೆಂದು ಭಾವಿಸಬೇಕು. ಸಮಾಜದಲ್ಲಿ ಹೆಚ್ಚಿನ ಸುಧಾರಣೆಯಿಂದ ಸುಸಂಸ್ಕೃತರಾದ ಕೆಲವರ ಧಾರ್ಮಿಕಜೀವನಕ್ಕೆ ಮಾತ್ರ ಋಗ್ವೇದ ಕನ್ನಡಿಯನ್ನು ಹಿಡಿಯುತ್ತದೆ. ಆದರೆ ಅಥರ್ವವೇದ ಬಹುಜನರ ನಿತ್ಯಜೀವನದಲ್ಲಿ ನೆಲೆಯೂರಿದ್ದ ಭಾವನೆಗಳನ್ನು ನಿಚ್ಚಳವಾಗಿ ನಿರ್ದೇಶಿಸುತ್ತದೆ. ಒಳ್ಳೆಯದನ್ನಾಗಲಿ (ಭೈಷಜ್ಯ) ಕೆಟ್ಟದನ್ನಾಗಲಿ (ಉಗ್ರ) ಬೇಕಾದಂತೆ ಉಂಟುಮಾಡುವ, ಇಲ್ಲವೆ ನಿವಾರಿಸುವ, ಮಹಾರಹಸ್ಯಗಳು ಮಂತ್ರಗಳಲ್ಲಿ ಅಡಗಿವೆಯೆಂದು ಅಂದಿನ ಜನ ತಿಳಿಯುತ್ತಿದ್ದರು. ಕೇವಲ ಅಶಿಕ್ಷಿತರು ಮಾತ್ರವಲ್ಲ; ಶಿಕ್ಷಿತರೂ ಒಮ್ಮೊಮ್ಮೆ ಈ ಅಥರ್ವಣಕ್ರಿಯೆಗಳನ್ನು ಅನುಸರಿಸುತ್ತಿದ್ದರು. ಅಂದಿನ ರಾಜರು ಅಥರ್ವವೇದವನ್ನು ಬಲ್ಲವರನ್ನೇ ಆಯ್ದುಕೊಂಡು ತಮ್ಮ ಪುರೋಹಿತರನ್ನಾಗಿ ಮಾಡಿಕೊಳ್ಳುತ್ತಿದ್ದರು. ಇಂದಿನವರು ಈ ನಂಬಿಕೆಗಳನ್ನು ಕುರುಡುನಂಬಿಕೆಗಳೆನ್ನಬಹುದಾದರೂ ಅಂದಿನವರ ಶ್ರದ್ಧೆ ಮಾತ್ರ ಅಚಲವಾಗಿತ್ತೆನ್ನುವುದರಲ್ಲಿ ಸಂಶಯವಿಲ್ಲ. ಈ ವಿಷಯದಲ್ಲಿ ಪಾಶ್ಚಾತ್ಯರ ಶ್ರದ್ಧೆ ಅದೇ ಪ್ರಮಾಣದಲ್ಲಿ ಭಾರತೀಯರಿಗೆ ಈಗಲೂ ಇದ್ದಂತಿಲ್ಲ. ಮುಂದಿನ ಆಯುರ್ವೇದ, ಧನುರ್ವೇದ, ಜ್ಯೋತಿಷ, ಗೃಹ್ಯಸೂತ್ರ, ಕಡೆಗೆ ರಸಪ್ರಕ್ರಿಯೆ– ಎಲ್ಲಕ್ಕೂ ಅಥರ್ವವೇದವೇ ಮೂಲವೆಂಬುದನ್ನು ನೆನೆದರೆ ಇದೇ ಪ್ರಾಚೀನ ಆರ್ಯರ ಸಕಲ ವಿದ್ಯಾಕೋಶವಾಗಿತ್ತೆಂಬುದು ಸ್ಪಷ್ಟವಾಗುವುದು. ಮುಖ್ಯವಾಗಿ ಅಥರ್ವವೇದದ ಮಹತ್ತ್ವ ಲೌಕಿಕವೇ ಆದರೂ ತಾತ್ತ್ವಿಕ ಕಲ್ಪನೆಗಳಲ್ಲಿ ಋಗ್ವೇದದಂತೆಯೇ ಉಪನಿಷತ್ತುಗಳ ಬ್ರಹ್ಮವಿದ್ಯೆಗೆ ಪೂರ್ವಭೂಮಿಯೆನಿಸಬಲ್ಲ ಅಂಶಗಳೂ ಮಿನುಗುವುದರಿಂದ, ಐತಿಹಾಸಿಕ ದೃಷ್ಟಿಕೋನದಿಂದ ನೋಡುವಾಗ ಅಥರ್ವವೇದದ ಧರ್ಮ ಮತ್ತು ತತ್ತ್ವಗಳ ಅಧ್ಯಯನಕ್ಕೆ ಪ್ರಾಶಸ್ತ್ಯವೊದಗುತ್ತದೆ. ಕ್ಷುದ್ರ ಮಂತ್ರಮಾಟಗಳಿಗೂ ಮಹೋನ್ನತ ಆಧ್ಯಾತ್ಮಿಕ ವಿಚಾರಗಳಿಗೂ ಎಲ್ಲಿಯ ನಂಟೆಂದು ನಮಗೆ ಎನಿಸಬಹುದು. ಆದರೆ ಈ ವಿಚಿತ್ರವಿರೋಧಾಭಾಸವೇ ಅಥರ್ವವೇದದ ಆಕರ್ಷಣೆಯ ರಹಸ್ಯ. ಜಗತ್ತಿನ ಸೃಷ್ಟಿಯನ್ನೂ ಪರಬ್ರಹ್ಮನ ಅಂತರ್ಯಾಮಿತ್ವವನ್ನೂ ವರ್ಣಿಸುವ ಅನೇಕ ಸೂಕ್ತಗಳು ಅಥರ್ವವೇದದಲ್ಲಿ ಅಲ್ಲಲ್ಲಿ ಬರುವುದರಿಂದ, ಇವನ್ನೆಲ್ಲ ಪ್ರಕ್ಷಿಪ್ತವೆಂದು ಕಡೆಗಣಿಸುವುದು ಯೋಗ್ಯವಲ್ಲ.

ಸಾಂಪ್ರದಾಯಿಕವಾಗಿ ಅಥರ್ವವೇದಕ್ಕೆ ಬ್ರಹ್ಮವೇದವೆಂಬ ನಾಮಾಂತರವೂ ಉಂಟು. ಬ್ರಹ್ಮ ಎಂದರೆ ಯಜ್ಞಕರ್ಮದ ಸಮಗ್ರಕಲ್ಪನೆ ಎಂಬ ಅರ್ಥ ಮೊದಲಿಗೆ ಇದ್ದಂತೆ ತೋರುತ್ತದೆ. ಹೋತೃ, ಅಧ್ವರ್ಯ, ಉದ್ಗಾತೃ–ಈ ಋತ್ವಿಕ್ಕುಗಳು ಯಜ್ಞದಲ್ಲಿ ನಿರ್ದಿಷ್ಟ ಕಾರ್ಯಗಳಿಗೆ ನಿಯುಕ್ತರಾದವರು; ಆದರೆ ಯಜ್ಞದ ಸಮಗ್ರಪೂರ್ಣತೆಯ ಹೊಣೆ ಇವರದಲ್ಲ; ಬ್ರಹ್ಮನದು. ಬ್ರಹ್ಮವನ್ನು ತಿಳಿದ ಪುರೋಹಿತನೇ ಬ್ರಹ್ಮ. ಅಥರ್ವವೇದದ ಜ್ಞಾನ ಬ್ರಹ್ಮನಿಗೆ ಅಗತ್ಯವೆಂಬ ಭಾವನೆ ಪೂರ್ವದಿಂದಲೇ ಇದ್ದಂತೆ ತೋರುತ್ತದೆ. ಅಥರ್ವವೇದದ ಸಂಹಿತೆ ಅಸ್ತಿತ್ವಕ್ಕೆ ಬಂದಮೇಲೆ ಈ ಭಾವನೆ ರೂಢವಾಯಿತು. ಯಜ್ಞಕರ್ಮದ ಪರಿಸಮಾಪ್ತಿಗೆ ತ್ರಯೀ ಅಥವಾ ಇತರ ತ್ರಿವೇದಗಳನ್ನು ಬಲ್ಲವರೇ ಸಾಕೆಂಬ ಭಾವನೆಯಿತ್ತು. ತ್ರಿವೇದಿಗಳಲ್ಲಿ ಒಬ್ಬನು ಬ್ರಹ್ಮನಾಗುತ್ತಿದ್ದ. ಆದರೆ ಯಜ್ಞಸಾಂಗವಾಗಲು ಬರಬಹುದಾದ ವಿಘ್ನಗಳ ನಿವಾರಣೆಗಾಗಿ ಅಥರ್ವವೇದಿಯೇ ಬ್ರಹ್ಮನಾಗುವುದು ಯುಕ್ತವೆಂದು ಅಥರ್ವವೇದಿಗಳು ವಾದಿಸಿ ಯಜ್ಞದಲ್ಲಿಯೂ ತಮ್ಮ ವೇದಕ್ಕೆ ಸ್ಥಾನವನ್ನು ಕ್ರಮೇಣ ಸಂಪಾದಿಸಿಕೊಂಡರೆಂದು ತೋರುತ್ತದೆ. ಹೀಗೆ ಶಿಷ್ಟರಿಂದ ಆದರಣೀಯವಾದ ಯಜ್ಞದಲ್ಲಿ ಸ್ಥಾನವನ್ನು ಗಳಿಸಿಕೊಳ್ಳಲೆಂದೇ ಅಥರ್ವವೇದದ ಋಷಿಗಳು ಆಧ್ಯಾತ್ಮಿಕ ಸೂಕ್ತಗಳನ್ನು ಬುದ್ಧಿಪೂರ್ವಕವಾಗಿ ಸಂಯೋಜಿಸಿರುವಂತೆ ಭಾಸವಾಗುತ್ತದೆ. ಅಂತೆಯೇ ಗೋಪಥ ಬ್ರಾಹ್ಮಣದಲ್ಲಿ (1–9) ಶ್ರೇಷ್ಠೋ ಹಿ ವೇದಸ್ತಪಸೋ ಧಿಜಾತೋ ಬ್ರಹ್ಮಜ್ಞಾನಾಂ ಹೃದಯೇ ಸಂಬಭೂವ– ಎಂದು ಅಥರ್ವವೇದವನ್ನು ಶ್ಲಾಘಿಸಲಾಗಿದೆ. ಕಮಜ್ಞರಿಗೆ ತ್ರಿವೇದಗಳಾದರೆ, ಬ್ರಹ್ಮಜ್ಞರ ವೇದವೇ ಅಥರ್ವವೇದ.

ಈ ಮೊದಲೇ ಸೂಚಿಸಿದಂತೆ ಇಲ್ಲಿ ಬ್ರಹ್ಮಶಬ್ದಕ್ಕೆ ಮಂತ್ರಮಾಟಗಳ ಅದ್ಭುತಶಕ್ತಿ, ಯಾಗಪೂರಕ ಶಕ್ತಿ, ಸಂಸ್ಕಾರಗಳಿಂದೊದಗುವ ಅದೃಶ್ಯಸಾಮರ್ಥ್ಯ ಇತ್ಯಾದಿ ಲೌಕಿಕಾರ್ಥಗಳೂ ಉಂಟು; ಔಪನಿಷದತತ್ತ್ವಜ್ಞಾನಕ್ಕೆ ಆಧಾರವಾಗುವಂಥ ವಿಶಾಲಾರ್ಥವೂ ಉಂಟು. ಮೊದಲನೆಯ ಅರ್ಥಗಳು ಅಥರ್ವಣಧರ್ಮವಿಚಾರವನ್ನು ಸೂಚಿಸಿದರೆ, ಕಡೆಯದು ಅಥರ್ವಣತತ್ತ್ವಜ್ಞಾನವನ್ನು ಬೋಧಿಸುತ್ತದೆ. ಮೊದಲನೆಯವು ಕಾಮಕರ್ಮಗಳ ಕಡೆಗೆ ಕೈಮಾಡಿದರೆ, ಕಡೆಯದು ಪರಮಪುರುಷಾರ್ಥವನ್ನು ಧ್ವನಿಸುತ್ತದೆ. ಗೃಹ ಗ್ರಾಮ ನಗರ ದುರ್ಗ ರಾಷ್ಟ್ರ ಪ್ರಜೆಗಳ ಯೋಗಕ್ಷೇಮ–ಇವುಗಳ ರಕ್ಷಣೆ, ಸೌಭಾಗ್ಯ ವಾಣಿಜ್ಯ ಲಾಭ ದೀರ್ಘಾಯುಷ್ಯ ಐಶ್ವರ್ಯ ಆರೋಗ್ಯ–ಇವುಗಳ ಪ್ರಾಪ್ತಿ, ಜ್ವರ ಕಾಮಾಲೆ ತೊನ್ನು ಮುಂತಾದ ರೋಗಗಳಿಂದ ನಿವೃತ್ತಿ, ಶತ್ರುಗಳ ಮಾರಣ ಸಂಮೋಹನ ಉಚ್ಚಾಟ ಸ್ತಂಭನ ಇತ್ಯಾದಿ ಸಿದ್ಧಿ, ಯುದ್ಧದಲ್ಲಿ ವಿಜಯದ ಪ್ರಾಪ್ತಿ, ಸ್ತ್ರೀವಶೀಕರಣ–ಹೀಗೆ ನಾನಾ ವಿಧ ಐಹಿಕಕಾಮನೆಗಳನ್ನು ಇಂದ್ರಾದಿ ದೇವತೆಗಳ ಅನುಗ್ರಹದಿಂದಷ್ಟೇ ಅಲ್ಲ, ನಾರು ಬೇರು ಗಿಡ ಮೂಲಿಕೆ ಮಣಿ ಶಿಲೆ ಮುಂತಾದುವನ್ನಭಿಮಂತ್ರಿಸಿ ಸಾಧಿಸಬಹುದೆಂಬ ನಂಬಿಕೆಯೇ ಅಥರ್ವಣ ಧರ್ಮದ ಸಾರಸರ್ವಸ್ವವೆನ್ನಬಹುದು. ಪ್ರೇತಪಿಶಾಚಾದಿಗಳು ಸ್ವರ್ಗನರಕಗಳು ಶ್ರಾದ್ಧಾದಿ ಕರ್ಮಗಳು ಗೃಹ್ಯಸಂಸ್ಕಾರಗಳು–ಎಲ್ಲಕ್ಕೂ ಈ ವೇದದಲ್ಲಿ ಉಳಿದ ವೇದಗಳಿಗಿಂತ ಹೆಚ್ಚಿನ ಸ್ಥಾನವಿದೆ. ಆತ್ಮರಕ್ಷಣೆಗೂ ಶತ್ರುಧ್ವಂಸಕ್ಕೂ ಅದ್ಭುತ ಬ್ರಹ್ಮಶಕ್ತಿ ಸಾಕೆಂಬ ಅಥರ್ವವೇದದ ಭಾವನೆ ಮುಂದೆ ಪುರಾಣೇತಿಹಾಸಗಳ ಋಷಿಗಳ ಶಾಪಾನುಗ್ರಹ ಕಥೆಗಳಲ್ಲಿ ಪ್ರವೃದ್ಧವಾಗಿರುವುದನ್ನು ನೋಡಬಹುದಾಗಿದೆ. ಇಲ್ಲಿಯ ನೀತಿಯ ಮಟ್ಟ ಬಹಳ ಉನ್ನತವಾದುದೆಂದು ಪ್ರತಿಜ್ಞೆಮಾಡುವಂತಿಲ್ಲ. ಗುರಿಯನ್ನು ಮುಟ್ಟಲು ಏನನ್ನು ಮಾಡಿದರೂ ಸರಿಯೇ ಎಂಬ ಮನೋಭಾವ ಎಷ್ಟೋ ವೇಳೆ ಕಾಣಬರುತ್ತದೆ. ಋಗ್ವೇದದ ಯಜ್ಞಗಳ ಸ್ಥಾನದಲ್ಲಿ ಕಾಮ್ಯಸಿದ್ಧಿಗಾಗಿ ಆಚರಿಸುವ ಅನೇಕ ಸವಗಳನ್ನು ಇಲ್ಲಿ ನೋಡುತ್ತೇವೆ. ಅತಿಮೃತ್ಯುಸವ ಉರ್ವರಾಸವ ಮುಂತಾದುವನ್ನು ಉಲ್ಲೇಖಿಸಬಹುದು. ಸವಗಳಲ್ಲಿಯೂ ಸ್ವರ್ಗಾದಿ ಆಮುಷ್ಮಿಕ ಫಲಾಪೇಕ್ಷೆಯಿಂದ ಆಚರಿಸುವ ಸ್ವರ್ಗೌದನಸವ ಬ್ರಹ್ಮೌದನಸವ ಮುಂತಾದುವು ಬರುವುದು ಗಮನಾರ್ಹ. ಋಗ್ವೇದದಲ್ಲಿ ಪರಿಚಿತರಾದ ದೇವತೆಗಳ ಜೊತೆಗೆ ಅಥರ್ವವೇದದಲ್ಲಿ ಆಭಿಚಾರಿಕ ದೇವತೆಗಳು ಅನೇಕರು ಬರುತ್ತಾರೆ; ಶರ ಅಸಿಕ್ನೀ ಅಸುರೀ ತಲಶಾ ಆಬಯು ಕೇಶವರ್ಧಿನೀ ಶಮೀ ಮಧು ಅಪಾಮಾರ್ಗ ಶಂಖ ಯಕ್ಷ್ಮ ತಕ್ಮನ್ ವಿಷಾಣ ಕೃಮಿ–ಇತ್ಯಾದಿ. ಯಾತು, ಯಾತುಧಾನ, ರಕ್ಷಸ್, ಪಿಶಾಚ, ಕಿಮೀದಿನ್, ಅಸುರ– ಮುಂತಾದ ರಾಕ್ಷಸರ ಉಲ್ಲೇಖವೂ ಯಥೇಚ್ಛವಾಗಿ ಬರುತ್ತದೆ. ಇಂದಿನ ಜಾದೂ ಶಬ್ದಕ್ಕೆ ಇಲ್ಲಿ ಬರುವ ಯಾತುವೇ ಮೂಲ.

ಉಪನಿಷತ್ತುಗಳಲ್ಲಿ ಪ್ರಸಿದ್ಧವಾದ ಪರಬ್ರಹ್ಮತತ್ತ್ವದ ಪೂರ್ವರೂಪವೊ ಎನಿಸುವಂತೆ ಅಥರ್ವವೇದದಲ್ಲಿ ಬರುವ ಅನೇಕ ಸೂಕ್ತಗಳಲ್ಲಿ ಸ್ಕಂಭವನ್ನು ಕುರಿತು ಸೂಕ್ತ (10.7.1.–44) ಎತ್ತಿ ಹೇಳುವಂಥದು. ಬ್ರಹ್ಮವಿದ್ ಬ್ರಹ್ಮೈವ ಭವತಿ ಎಂಬುದರ ಪ್ರತಿಧ್ವನಿಯಂತಿರುವ ಈ ವಾಕ್ಯವನ್ನು ನೋಡಿ.

ಯತ್ರ ದೇವಾ ಬ್ರಹ್ಮವಿದೋ ಬ್ರಹ್ಮ ಜ್ಯೇಷ್ಠಮುಪಾಸತೇ ।

ಯೋವೈ ತಾನ್ವಿದ್ಯಾತ್ ಪ್ರತ್ಯಕ್ಷಂ ಸ ಬ್ರಹ್ಮಾ ವೇದಿತಾ ಸ್ಯಾತ್ ॥ (10, 7, 24)

– – – –

ಭೂತ–ಭವ್ಯ, ಎಲ್ಲಕ್ಕೂ ಬ್ರಹ್ಮನೇ ಅಧಿಷ್ಠಾನನೆಂದು ಸಾರುತ್ತದೆ. (ಎಲ್ಲಿ ಬ್ರಹ್ಮಜ್ಞಾನಿಗಳಾದ ದೇವತೆಗಳು ಪರಬ್ರಹ್ಮನನ್ನು ಪೂಜಿಸುತ್ತಿರುವರೋ–ಎಲ್ಲವನ್ನೂ ಪ್ರತ್ಯಕ್ಷವಾಗಿ ಅರಿತವನೇ ಬ್ರಹ್ಮ ಜ್ಞಾನಿ, ಎನಿಸುವನು). ಕೆಳಗಿನ ಪದ್ಯ–ಸ್ವರ್ಗವೆನ್ನುವುದು ಕೇವಲ ಅವನದೇ–ಎಂಬ ಅಭಿಪ್ರಾಯ ಸೂಚಿಸುತ್ತದೆ.

ಯೋ ಭೂತಂ ಚ ಭವ್ಯಂ ಚ ಸರ್ವಂ ಯಶ್ಚಾಧಿತಿಷ್ಠತಿ ।

ಸ್ವರ್ಯಸ್ಯ ಚ ಕೇವಲಂ ತಸ್ಮೈ ಜ್ಯೇಷ್ಠಾಯ ಬ್ರಹ್ಮಣೇ ನಮಃ ॥

(10, 8, 1)

ಮಣಿಗಳಲ್ಲೆಲ್ಲ ಸೂತ್ರವಡಗಿರುವಂತೆ ಸಕಲಜೀವಗಳಲ್ಲಿಯೂ ಬ್ರಹ್ಮ ಅಂತರ್ಯಾಮಿ ಯಾಗಿರುವನೆಂಬ ತತ್ತ್ವ ಸ್ಪಷ್ಟವಾಗಿ ಕೆಳಗಣ ವಾಕ್ಯದಲ್ಲಿ ಮೂಡಿದೆ. ಪ್ರಜೆಗಳನ್ನೆಲ್ಲ ಕೂಡಿಸುವ ಸೂತ್ರವನ್ನೂ ಆ ಸೂತ್ರದ ಸೂತ್ರವನ್ನೂ ಅರಿತವನೇ ಬ್ರಹ್ಮಜ್ಞಾನಿ.

ಯೋ ವಿದ್ಯಾತ್ ಸೂತ್ರಂ ವಿತತಂ ಯಸ್ಮಿನ್ನೋತಾಃ ಪ್ರಜಾ ಇಮಾಃ ।

ಸೂತ್ರಂ ಸೂತ್ರಸ್ಯ ಯೋ ವಿದ್ಯಾತ್ ಸ ವಿದ್ಯಾದ್ ಬ್ರಾಹ್ಮಣಂ ಮಹತ್ ॥

ಈ ಬ್ರಹ್ಮನೇ ಆತ್ಮನೆಂಬ ಮಾತು ಸ್ಪಷ್ಟವಾಗಿಯೇ ಬಂದಿದೆ:

ಪುಂಡರೀಕಂ ನವದ್ವಾರಂ ತ್ರಿಭಿರ್ಗುಣೇಭಿರಾವೃತಮ್ ।

ತಸ್ಮಿನ್ ಯದ್ಯಕ್ಷಮಾತ್ಮನ್ವತ್ ತದ್ವೈ ಬ್ರಹ್ಮವಿದೋ ವಿದುಃ ॥ (10, 8, 43)

(ಒಂಬತ್ತು ಬಾಗಿಲುಗಳುಳ್ಳ ಹೃದಯಪುಂಡರೀಕ ತ್ರಿಗುಣಗಳಿಂದ ಆವೃತವಾಗಿದೆ. ಅದರಲ್ಲಿ ಅಡಗಿರುವ ಆತ್ಮರಹಸ್ಯವನ್ನು ಬ್ರಹ್ಮಜ್ಞಾನಿಗಳು ಬಲ್ಲರು). ಆತ್ಮನಿಗೆ ಯಕ್ಷನೆಂಬ ನಾಮಾಂತರ ವನ್ನು ಕೊಟ್ಟಿರುವುದಷ್ಟೇ ವಿಶೇಷ. ಅಧಿಭೂತಕ್ಕೂ ಆಧ್ಯಾತ್ಮಕ್ಕೂ ಸ್ಪಷ್ಟ ಸಾಮರಸ್ಯವನ್ನು ಕಲ್ಪಿಸಲಾಗಿದೆ. ಸಾಂಖ್ಯದರ್ಶನದಲ್ಲಿ ಮುಂದೆ ವಿಸ್ತಾರವ್ಯಾಪ್ತಿಗಳನ್ನು ಪಡೆಯುವ ತ್ರಿಗುಣಗಳ ಛಾಯೆಯೂ ಇಲ್ಲಿ ಉಂಟು. ಶಾಕ್ತಾದಿ ತಂತ್ರಗಳು ಮುಂದೆ ವಿಸ್ತರಿಸುವ ಶರೀರದ ದಹರಪುಂಡರೀಕದ ಪ್ರಥಮ ಸ್ಪಷ್ಟೋಕ್ತಿಯನ್ನೂ ಇಲ್ಲಿ ಕಾಣಬಹುದು.

ಶ್ವೇತಾಶ್ವತರೋಪನಿಷತ್ತಿನಲ್ಲಿ (1.3) ಕಾಲವೇ ಸೃಷ್ಟಿಯ ಆದಿಕಾರಣವೆಂದಿದೆಯಷ್ಟೆ. ಅದೇ ಭಾವನೆ ಅಥರ್ವವೇದದಲ್ಲಿಯೂ ಸ್ಪಷ್ಟವಾಗಿ ಮೂಡಿದೆ. ತಪಸ್ಸು ಉತ್ತಮವಸ್ತು ಬ್ರಹ್ಮ ಎಲ್ಲವೂ ಕಾಲದಲ್ಲಿಯೇ ನಿಂತಿವೆ; ಕಾಲವೇ ಸರ್ವೇಶ್ವರ; ಪ್ರಜಾಪತಿಗೂ ಜನಕ:

ಕಾಲೇ ತಪಃ ಕಾಲೇ ಜ್ಯೇಷ್ಠಂ ಕಾಲೇ ಬ್ರಹ್ಮ ಸಮಾಹಿತಮ್ ।

ಕಾಲೋ ಹ ಸರ್ವಸ್ಯೇಶ್ವರೋ ಯಃ ಪಿತಾಸೀತ್ ಪ್ರಜಾಪತೇಃ ॥ (19, 53, 8)

ಆದಿಸೃಷ್ಟಿಗೆ ಪ್ರೇರಣೆ ಬಂದುದೆಲ್ಲಿಂದ ಎಂದರೆ ಕಾಮದಿಂದ ಎಂದುತ್ತರ; ಅದೇ ಮನಸ್ಸಿನ ಉತ್ಪತ್ತಿಬೀಜ:

ಕಾಮಸ್ತದಗ್ರೇ ಸಮವರ್ತತ ಮನಸೋ ರೇತಃ ಪ್ರಥಮಂ ಯದಾಸೀತ್

(19, 52, 1)

ಹಾಗೆಯೇ, ಸೃಷ್ಟಿತತ್ತ್ವದಲ್ಲಿ ಮುಂದೆ ಪ್ರಸಿದ್ಧಿಯನ್ನೈದುವ ಸತ್ ಮತ್ತು ಅಸತ್‌ಗಳ ಮೂಲ ಉಲ್ಲೇಖವನ್ನೂ ಇಲ್ಲಿ ನೋಡಬಹುದು. ಅಸತ್‌ನಲ್ಲಿ ಸತ್ತು, ಸತ್ತಿನಲ್ಲಿ ಭೂತ, ಭೂತಭವ್ಯದಲ್ಲಿ, ಭವ್ಯ ಭೂತದಲ್ಲಿ, ಪ್ರತಿಷ್ಠಿತವಾಗಿದೆಯೆಂದು ಸಾರುವ ಮಂತ್ರವಿದು:

ಅಸತಿ ಸತ್ ಪ್ರತಿಷ್ಠಿತಂ ಸತಿ ಭೂತಂ ಪ್ರತಿಷ್ಠಿತಮ್ ।

ಭೂತಂ ಹ ಭವ್ಯ ಆಹಿತಂ ಭವ್ಯಂ ಭೂತೇ ಪ್ರತಿಷ್ಠಿತಮ್ ॥ ( 17, 1, 19)

ಮರ್ತ್ಯನಾದವನು ಅಮೃತತ್ವವನ್ನು ಪಡೆಯಬೇಕೆಂಬ ಪರಮಲಕ್ಷ್ಯ ಅಥರ್ವವೇದ ದಲ್ಲಿಯೇ ಸ್ಪಷ್ಟವಾಗಿದೆ (18, 4, 37). ದೇಹತ್ಯಾಗದ ಅನಂತರ ಜೀವಾತ್ಮ ಅನುಸರಿಸುವ ಪಿತೃಯಾನದ ಉಲ್ಲೇಖವೂ (18, 4, 4) ಕಡೆಯ ಶಾಶ್ವತ ಬ್ರಹ್ಮಲೋಕದ ಕಲ್ಪನೆಯೂ ಈ ವೇದದಲ್ಲಿವೆ.

ಹೀಗೆ ಪ್ರಾಪಂಚಿಕ ಪ್ರಕ್ರಿಯೆಗಳ ಜೊತೆಜೊತೆಗೆ ಉದಾತ್ತ ಆಮುಷ್ಮಿಕ ತತ್ತ್ವಗಳು ಕ್ಷುದ್ರಮಂತ್ರತಂತ್ರಗಳೊಂದಿಗೇ ಅತ್ಯುಚ್ಚ ಆಧ್ಯಾತ್ಮಿಕ ವಿಚಾರಧಾರೆಗಳೂ ಜಗತ್ ಸೃಷ್ಟಿಯ ಬಗೆಗೆ ಆಳವಾದ ಬಹುದೇವತಾವಾದದ ಜೊತೆಗೆ ಏಕದೇವತಾವಾದವೂ ಕೂಡಿಬರುವುದು ಇಂದಿನ ಸಂಶೋಧಕರಿಗೆ ಒಂದು ಬಿಡಿಸಲಾರದ ಸಮಸ್ಯೆಯಾಗಿದೆ. ಭಾರತೀಯ ತತ್ತ್ವಶಾಸ್ತ್ರದ ಸೆಲೆನೆಲೆಗಳನ್ನು ಅರಸುವವರು ಅಥರ್ವವೇದವನ್ನು ಕಡೆಗಣಿಸುವಂತಿಲ್ಲ. ಮುಂಡಕ ಪ್ರಶ್ನೆ ಮಾಂಡೂಕ್ಯದಂಥ ಪ್ರಸಿದ್ಧ ಉಪನಿಷತ್ತುಗಳು ಅಥರ್ವವೇದಕ್ಕೆ ಸೇರಿದುವೆಂಬ ಅಂಶ ಈ ದೃಷ್ಟಿಯಿಂದ ವಿಚಾರಯೋಗ್ಯವಾಗಿದೆ.

ಋಗ್ವೇದದಲ್ಲಿ ಅಲ್ಲಲ್ಲಿ ಮನಸ್ಸನ್ನು ಸೆಳೆಯುವ ಭಕ್ತಿಕಾವ್ಯದ ಧಾರೆ ಅಥರ್ವವೇದದಲ್ಲಿ ಕೂಡ ಒಮ್ಮೊಮ್ಮೆ ಲೀಲಾಜಾಲವಾಗಿ ಹರಿದು ನಮ್ಮನ್ನು ನಿಬ್ಬೆರಗಾಗಿಸುತ್ತದೆ. ಇಲ್ಲಿ ಯಾಜ್ಞಿಕರ ಶಬ್ದಜಾಲದಿಂದ ಮುಕ್ತವಾದ ಒಂದು ಸ್ವತಂತ್ರ ಸ್ತೋತ್ರವಾಹಿನಿ ನಮ್ಮನ್ನು ಪರವಶಗೊಳಿಸುವು ದಕ್ಕೆ ಒಮ್ಮೆ ಆಗಲೇ ಹಿಂದೆ ಉಲ್ಲೇಖಿಸಿದ ಪೃಥಿವೀ ಸೂಕ್ತವನ್ನು (12, 1) ಮತ್ತೆ ಉಲ್ಲೇಖಿಸಬಹುದು. ಭೂಮಿಯನ್ನು ಯಥಾವತ್ತಾಗಿ ಇಟ್ಟಿರುವ ಶಕ್ತಿಗಳು ಸತ್ಯ ಋತ ದೀಕ್ಷೆ ತಪಸ್ಸು ಬ್ರಹ್ಮ ಯಜ್ಞ ಇತ್ಯಾದಿಗಳು; ಭೂತಭವ್ಯಗಳ ಪತ್ನಿಯೇ ಭೂಮಿತಾಯಿ ಎನ್ನುವ ತಾತ್ತ್ವಿಕ ಪ್ರತಿಭೆಯ ಮಿಂಚಿನಿಂದ ಈ ಸೂಕ್ತ ಆರಂಭವಾಗುತ್ತದೆ:

ಸತ್ಯಂ, ಬೃಹದೃತಮುಗ್ರಂ ದೀಕ್ಷಾ ತಪೋ ಬ್ರಹ್ಮ ಯಜ್ಞಃ

ಪೃಥಿವೀಂ ಧಾರಯಂತಿ ।

ಸಾ ನೋ ಭೂತಸ್ಯ ಭವ್ಯಸ್ಯ ಪತ್ನ್ಯುರಂ ಲೋಕಂ ಪೃಥಿವೀ ನಃ ಕೃಣೋತು ।

ಮುಂದೆ ಎಂಟನೆಯ ಮಂತ್ರದಲ್ಲಿಯೇ ಅರ್ಣವ, ಸಲಿಲ, ಮಾಯಾ, ಪರಮವ್ಯೋಮ, ಸತ್ಯ, ಅಮೃತ ಎಂಬ ನಿಗೂಢ ಸೃಷ್ಟಿಪ್ರಕ್ರಿಯೆಯ ಸಮನ್ವಯವೆಲ್ಲ ಸುಂದರವಾಗಿ ಸಮ್ಮಿಳಿತವಾಗುತ್ತದೆ.

ಯಾರ್ಣವೇ ಧಿ ಸಲಿಲಮಗ್ರ ಆಸೀದ್ಯಾಂ ಮಾಯಾಭಿರನ್ವಚರನ್ಮನೀಷಿಣಃ–

ಯಸ್ಯಾ ಹೃದಯಂ ಪರಮೇ ವ್ಯೋಮನ್ ತ್ಸತ್ಯೇನಾವೃತ

ಮಮೃತಂ ಪೃಥಿವ್ಯಾಃ ।

ಸಾ ನೋ ಭೂಮಿಸ್ತ್ವಿ ಪಾಂ ಬಲಂ ರಾಷ್ಟ್ರೇ ದಧಾತೂತ್ತಮೇ ॥

(ಯಾವ .ಪೃಥಿವಿ ಮೊದಲು ಸಮುದ್ರದಲ್ಲಿ ಸಲಿಲವಾಗಿದ್ದಿತೋ ಯಾವ ಪೃಥಿವಿಯನ್ನು ಮೇಧಾವಿಗಳು ತಮ್ಮ ಅದ್ಭುತ ಶಕ್ತಿಯಿಂದ ಅನುಚರಿಸಿದರೋ ಯಾವುದರ ಸತ್ಯಪೂರ್ಣ ಅಮೃತಹೃದಯ ಪರಮಾಕಾಶದಲ್ಲಿರುವುದೋ ಆ ಭೂಮಿಯೇ ನಮಗೆ ಕಾಂತಿಯನ್ನೂ ಉತ್ತಮ ರಾಷ್ಟ್ರಬಲವನ್ನೂ ಕರುಣಿಸಲಿ.)

ಬರುಬರುತ್ತಾ ಕಾವ್ಯಾವೇಶ ಮಟಗೊಂಡು, ಪೃಥಿವೀಸೂಕ್ತ ರಾಷ್ಟ್ರಗೀತೆಯ ಪ್ರಾಥವೋ ಎನಿಸುವಂತೆ 63 ಮಂತ್ರಗಳಲ್ಲಿ ಮುಂದುವರಿಯುತ್ತದೆ.

ಅಥರ್ವವೇದ ಐಹಿಕವಿದ್ಯೆಗಳ ಮೂಲವಷ್ಟೇ ಅಲ್ಲ, ಅಧ್ಯಾತ್ಮ ವಿದ್ಯೆಗೂ ಮೂಲ; ಶಾಂತಿಕ ಪೌಷ್ಟಿಕ ಕರ್ಮಗಳಿಗೆ ಮಾತ್ರ ಗಣಿಯಲ್ಲ, ಬ್ರಹ್ಮಜ್ಞಾನಕ್ಕೂ ಪ್ರಚೋದಕ; ಸ್ವರ್ಗವನ್ನು ಕೊಡುವ ಯಜ್ಞಾದಿಗಳಿಗೆ ಪ್ರಯೋಜಕವಷ್ಟೇ ಅಲ್ಲ, ಮೃತ್ಯುವನ್ನು ಗೆಲ್ಲುವ ಮಹಾರಹಸ್ಯವನ್ನು ಅರುಹುವುದಕ್ಕೂ ಅದು ಬೆರಳೆತ್ತಿದೆ. ನಿತ್ಯಜೀವನವನ್ನು ಮರೆಯದೆ, ಸತ್ಯದರ್ಶನವನ್ನು ಜರೆಯದೆ, ಸರ್ವರಿಗೂ ಉಪಕಾರವಾಗಬೇಕೆಂದು ಬಂದ ವೇದವೇ ಅದು. ಅದರ ಬೇರೆ ಬೇರೆ ವಿಷಯಗಳ ಬೆಸುಗೆ ಚೆನ್ನಾಗಿಲ್ಲದಿರುವುದೊಂದೇ ಇಂದಿನವರಿಗೆ ತೋರುವ ನ್ಯೂನತೆ. ಅದರ ತತ್ತ್ವಗಳನ್ನು ಕುರಿತ ಪ್ರಾಯೋಗಿಕ ಸಂಶೋಧನೆ ಇನ್ನೂ ನಡೆಯಬೇಕಾಗಿದೆ.

ನಾವು ನೋಡಿದ ಆಧ್ಯಾತ್ಮಿಕ ವಿಚಾರಕಿರಣಗಳು ನಿಜವಾಗಿಯೂ ಅಥರ್ವವೇದದ ಋಷಿಗಳ ಆಳವಾದ ತತ್ತ್ವಚಿಂತನೆಗೆ ದ್ಯೋತಕಗಳಾಗಿವೆಯೇ ಎಂಬ ವಿಷಯದಲ್ಲಿ ವಿದ್ವಾಂಸರು ಭಿನ್ನಾಭಿಪ್ರಾಯಗಳನ್ನು ತಳೆದಿದ್ದಾರೆ. ಒಂದೇ ಮಟ್ಟದಲ್ಲಿ ಉದಾತ್ತವಾದ

ವಿಚಾರಗಳು ಹರಿಯುವುದಿಲ್ಲ. ಒಂದು ಸೂಕ್ತವಿರಲಿ. ಒಂದೇ ಪದ್ಯದ ಪಾದಗಳಲ್ಲಿಯೂ ಉದಾತ್ತಮಟ್ಟದಿಂದ ತಟ್ಟನೆ ಅತಿ ಕೆಳಮಟ್ಟಕ್ಕೆ ವಿಚಾರಗಳು ಇಳಿದುಬಿಡುತ್ತವೆ. ಆಧ್ಯಾತ್ಮಿಕ ಎತ್ತರಗಳಿಂದ ಹೀಗೆ ಅತಿ ಕ್ಷುದ್ರ ಪಾತಾಳಗಳಿಗೆ ಇಳಿಯುವಂಥ ವಿಚಾರಸರಣಿ ಹೊರಗಿನಿಂದ ತತ್ಕಾಲಕ್ಕೆ ಎರವಲಾಗಿ ತಂದ ದೊಡ್ಡ ಶಬ್ದಗಳ ಪ್ರದರ್ಶನಕ್ಕೆ ಸಾಕ್ಷಿಯನ್ನೊದಗಿಸಬಹುದೇ ಹೊರತು, ಹೃದಯದಿಂದ ನೇರವಾಗಿ ಉಕ್ಕಿಬಂದ ಉನ್ನತ ತಾತ್ತ್ವಿಕ ಮಟ್ಟವನ್ನು ನಿದರ್ಶಿಸಲಾರದೆಂದು ವಿಂಟರ್‌ನಿಟ್ಸ್ ಮುಂತಾದ ವಿಮರ್ಶಕರ ಅಭಿಪ್ರಾಯ. ಈ ಕೃತಕವಾದ ಸಾಕ್ಷಿಗಳಿಂದ ಅಥರ್ವವೇದದ ಸೂಕ್ತಿಗಳೇ ಮುಂದಿನ ಉಪನಿಷತ್ತತ್ತ್ವಗಳಿಗೆ ಮೂಲವೆಂದು ಭ್ರಮಿಸಬಾರದೆಂಬುದು ಅವರ ಎಚ್ಚರಿಕೆ. ಆದರೂ ಈಚೆಗೆ ಷೇಂಡೆ ಮುಂತಾದವರು ಇದನ್ನು ಕೊನೆಯ ಮಾತೆಂದು ತಿಳಿಯುತ್ತಿಲ್ಲ. (ಕೆ.ಕೆ.)

**ಅಥೀನ :** ಸು. 2,300 ವರ್ಷಗಳ ಹಿಂದೆ ಗ್ರೀಸಿನ ದೊರೆ ಪೆರಿಕ್ಲೀಸನ ಕಾಲದಲ್ಲಿ ಗ್ರೀಕರು ಕಟ್ಟಿದ ಪಾರ್ಥೆನಾನ್ ಎಂಬ ಸುಂದರ ಅಮೃತಶಿಲೆಯ ಮಂದಿರದೊಳಗಿದ್ದ ಸ್ತ್ರೀ ದೇವತಾಮೂರ್ತಿ. ಒಲಿಂಪಸ್ಸಿನ ಅನುಗ್ರಹ ತೋರುವ ಈ ದೇವತೆ ವಿವೇಕದ, ಶಾಂತಿ–ಸಮಾಧಾನಗಳ ದ್ಯೋತಕಿ. ಕಲಾಪೋಷಕಿ. ಬಿರುಗಾಳಿ ಮುಂತಾದವುಗಳ ಮೇಲೆ ಆಧಿಪತ್ಯ ನಡೆಸುವವಳು. ಅಥೆನ್ಸಿನ ಪೋಷಕಿಯಾಗಿರುವ ಈ ಕನ್ನಿಕಾದೇವತೆ ಝೂಸನ ಹಣೆಯಿಂದ ಜನಿಸಿದವಳು. ಸಾಮಾನ್ಯವಾಗಿ ಈಕೆಯ ತಲೆಯ ಮೇಲೆ ಒಂದು ಶಿರಸ್ತ್ರಾಣವಿದ್ದು ಮೆಡೂಸನ್ ತಲೆಯಿರುವ ಒಂದು ಗುರಾಣಿಯನ್ನು ಹಿಡಿದಿರುತ್ತಾಳೆ. ಈ ದೇವತೆಗೆ ಸಂಬಂಧಿಸಿದಂತೆ ಪ್ಯಾನೆಥೀನಿಯ ಎಂಬ ಹಬ್ಬವೂ ಜರುಗುತ್ತದೆ. ರೋಮನ್ನರ ಪ್ರಜ್ಞಾದೇವತೆ ಮಿನರ್ವಳ ಜೊತೆ ಈಕೆಯನ್ನೂ ಪೂಜಿಸುತ್ತಾರೆ. (ಎಸ್.ಆರ್.ಪಿ.)

**ಅಥೆನ್ಸ್ :** ಮೆಡಿಟರೇನಿಯನ್ ಸಮುದ್ರದ ಈಶಾನ್ಯದ ತೀರದಲ್ಲಿದೆ. ಗ್ರೀಸ್ ದೇಶದ ರಾಜಧಾನಿ. 2000 ವರ್ಷಕ್ಕೂ ಹಿಂದಿನಿಂದ ಪ್ರಸಿದ್ಧಿ ಪಡೆದಿದ್ದು ಎಲ್ಲ ದೇಶಗಳ ವಿದ್ವಾಂಸರ ಕಣ್ಮನಗಳನ್ನು ಸೆಳೆದಿದೆ. ಇದರ ಹೆಸರು ಕೇಳದ ವಿದ್ವಾಂಸರು ಪ್ರಪಂಚದಲ್ಲೆಲ್ಲೂ ಇಲ್ಲವೆನ್ನಬಹುದು. ಕಾರಣ, ಐರೋಪ್ಯ ಜನಾಂಗಗಳ ನಾಗರಿಕತೆ ಬೆಳೆದದ್ದು ಇಲ್ಲಿಂದ. ಪ್ರಪಂಚದ ಸಂಸ್ಕೃತಿಯ ಬೆಳೆವಣಿಗೆಗೆ ಈ ನಗರ ನೀಡಿರುವ ಕಾಣಿಕೆ ಅಪಾರ.

ನಗರದ ಉತ್ತರಕ್ಕೆ, ಈಶಾನ್ಯಕ್ಕೆ ಮತ್ತು ಆಗ್ನೇಯಕ್ಕೆ ಮ್ಯೂಸೆಸ್, ನಿಂಫ್ ಮತ್ತು ನಿಕ್ಸ್ ಪರ್ವತಶ್ರೇಣಿಗಳಿವೆ. ಇವುಗಳಿಗೆ ಏರೋಪೇಗಸ್ ವಿಭಾಗವೆಂದು ಹೆಸರು. ಇವುಗಳ ಮಧ್ಯದ 274 ಮೀ ಎತ್ತರವುಳ್ಳ ಪರ್ವತಶ್ರೇಣಿಗಳ ಬಯಲೇ ಪ್ರಸಿದ್ಧ ಅಟಿಕ ಮೈದಾನ. ಇದರ ಪಶ್ಚಿಮಭಾಗದಲ್ಲಿ ಸೀಫೈಸಸ್ ಮತ್ತು ಪೂರ್ವಭಾಗದಲ್ಲಿ ಇಲಿಸಾಸ್ ನದಿಗಳಿವೆ. 6.4 ಕಿಮೀ ದೂರವಿರುವ ಸಮುದ್ರದವರೆಗೂ ಈ ನಗರ ಬೆಳೆಯಿತು. ಅಕ್ರೋಪೋಲಿಸ್ ಎಂಬುದು ಪ್ರಾಚೀನ ಅಥೆನ್ಸ್ ಪಟ್ಟಣ. ನಿಯೋಪೋಲಿಸ್ ಎಂಬ ಹೊಸನಗರ ಅಕ್ರೋಪೋಲೀಸ್‌ಗೆ ಪಶ್ಚಿಮದಲ್ಲಿದೆ. ಈ ಬೃಹತ್ ಅಥೆನ್ಸ್ ನಗರದ ಜನಸಂಖ್ಯೆ 3,096,775 ಗ್ರೀಸ್ ದೇಶದ ಕೈಗಾರಿಕೋತ್ಪನ್ನದ ಅರ್ಧದಷ್ಟು ಅಥೆನ್ಸ್ ಬಯಲಿನಲ್ಲಿ ಕೇಂದ್ರೀಕೃತವಾಗಿದೆ. ಮುಖ್ಯ ಉತ್ಪನ್ನಗಳು – ರೇಷ್ಮೆ, ಉಣ್ಣೆ, ಹತ್ತಿಬಟ್ಟೆ, ಯಂತ್ರಸಾಧನಗಳು, ಮತ್ತಿತರ ಜೀವನ ಸಾಮಗ್ರಿಗಳು. (ಎ.ಕೆ.)

ಆದರೆ ಅಥೆನ್ಸ್ ನಗರದ ಖ್ಯಾತಿ ಉಳಿದಿರುವುದು ಅಲ್ಲಿ ಗ್ರೀಕರು ಬೆಳೆಸಿ ಪೋಷಿಸಿ ಪ್ರಪಂಚಕ್ಕೆ ನೀಡಿರುವ ಸಂಸ್ಕೃತಿಯಿಂದ. ಒಂದು ದೊಡ್ಡ ವಿಶ್ವವಿದ್ಯಾನಿಲಯ (ಸ್ಥಾಪನೆ–1837), ವಿವಿಧ ಕಲಾಸಂಘ, ವೈಜ್ಞಾನಿಕ ವಿದ್ಯಾಶಾಲೆ, ಪ್ರಾಚ್ಯಶೋಧನ ಸಂಸ್ಥೆಗಳು, ವಿವಿಧ ವಸ್ತುಸಂಗ್ರಹಾಲಯಗಳು ಮತ್ತು ಅನೇಕ ಗ್ರಂಥಾಲಯಗಳು ಇಲ್ಲಿವೆ. ಗ್ರೀಕ್ ಕ್ರೈಸ್ತ ಧರ್ಮಾಧಿಕಾರಿಯ ಆಲೋಚನಾಸಭೆಯೂ ಇಲ್ಲಿದೆ. ಪ್ರಾಚೀನ ಗ್ರೀಕ್ ಸಂಸ್ಕೃತಿಗೆ ಅದರ ಚರಿತ್ರೆಗೆ ಸಂಬಂಧಪಟ್ಟ ಸ್ಮಾರಕಗಳು, ಅವಶೇಷಗಳು, ಇಂದಿಗೂ ನಾನಾ ದೇಶಗಳ ಪ್ರವಾಸಿಗರನ್ನು ಇಲ್ಲಿಗೆ ಸೆಳೆಯುತ್ತಿವೆ. ಬಹುಮಟ್ಟಿಗೆ, ಗ್ರೀಕ್ ಸಂಸ್ಕೃತಿ ಎಂದರೆ ಅಥೆನ್ಸ್ ಎಂದೇ ಹೇಳಬಹುದು.

ಅಥೆನ್ಸ್ ನಗರ ಸ್ಥಾಪಿತವಾದದ್ದು ಪ್ರ.ಶ.ಪೂ. 15ನೆಯ ಶತಮಾನದಲ್ಲಿರಬಹುದು ಎಂದು ಕೆಲವರ ಅಭಿಪ್ರಾಯ. ಆದರೆ ಅದರ ಭವ್ಯ ಭವಿಷ್ಯತ್ತಿನ ಮುನ್ಸೂಚನೆ ಕಂಡುಬಂದದ್ದು ಪ್ರ.ಶ.ಪೂ.6ನೆಯ ಶತಮಾನದ ಕಾಲಕ್ಕೆ. ಅದಕ್ಕೆ ಮೊದಲು ನಿರಂಕುಶಾಧಿಪತಿಗಳು ರಾಜ್ಯವಾಳುತ್ತಿದ್ದರು. ಕ್ರಮೇಣ ಅಧಿಕಾರ ಶ್ರೀಮಂತವರ್ಗದವರ ಹತೋಟಿಗೆ ಬಂದಿತು. 6ನೆಯ ಶತಮಾನದಲ್ಲಿ ಸರ್ವಾಧಿಕಾರಿಯಾಗಿ ಬಂದ ಸೋಲನ್ ಸಾಮಾನ್ಯ ಜನರ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂಬ ಉದ್ದೇಶದಿಂದ ಸುಧಾರಣೆಗಳನ್ನು ಜಾರಿಗೆ ತಂದವರಲ್ಲಿ ಮೊದಲಿಗ. ರೈತರೇ ರಾಷ್ಟ್ರದ ಜೀವನಾಡಿ ಎಂಬುದನ್ನರಿತ ಅವನು, ಅವರು ಶ್ರೀಮಂತರಿಂದ ಪಡೆದಿದ್ದ ಸಾಲಗಳನ್ನೆಲ್ಲ ವಜಾ ಮಾಡಿದ, ಸಾಲಕ್ಕಾಗಿ ರೈತ ತನ್ನ ಹೆಂಡತಿ ಮಕ್ಕಳನ್ನು ಮಾರುವ ಪದ್ಧತಿಯನ್ನು ನಿಲ್ಲಿಸಿದ. ಇದರಿಂದ, ಶ್ರೀಮಂತರ ಹಿಡಿತಕ್ಕೆ ಸಿಕ್ಕಿ ಅವರ ದಾಸರಾಗಿ ಹತಾಶರಾಗಿದ್ದ ರೈತರಲ್ಲಿ ಹೊಸ ಭರವಸೆ ಮೂಡಿತು. ಜೀವನದಲ್ಲಿ ಅವರಿಗೆ ಹೊಸ ಉತ್ಸಾಹ ಬಂದಿತು. ಆಲಿವ್ ಗಿಡ ಬೆಳೆಯುವುದಕ್ಕೆ ಅನುಕೂಲತೆ ಹೊಂದಿದ್ದ ಅಟಿಕ ಬಯಲಿನಲ್ಲಿ ಅದನ್ನು ಬೆಳೆಸಲು ರೈತರಿಗೆ ಪ್ರೋತ್ಸಾಹ ನೀಡಿದ್ದರಿಂದ ಅದರ ಬೆಳೆ ಹೆಚ್ಚಿತು. ಆಲಿವ್ ಎಣ್ಣೆಯನ್ನು ಹೊರದೇಶಗಳಿಗೆ ಮಾರಿ ಅದಕ್ಕೆ ಬದಲಾಗಿ ಗೋದಿ ಮುಂತಾದ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಅನುಕೂಲವಾಯಿತು. ಕೆಳವರ್ಗದ ಜನರ ನೆಮ್ಮದಿಗೆ ಪ್ರತಿಕೂಲವಾಗಿದ್ದ ಕಾಯಿದೆಗಳು ತೊಡೆದು ಹಾಕಲ್ಪಟ್ಟವು. ನೆಮ್ಮದಿಯ ಪರಿಣಾಮವಾಗಿ, ಹೊರದೇಶಗಳಿಂದ ಜನರು ಅಥೆನ್ಸಿಗೆ ಬಂದು ನೆಲಸತೊಡಗಿದರು. ಹೊರದೇಶಗಳೊಡನೆ ವ್ಯಾಪಾರ ಬೆಳೆಯಿತು. ಜನರು ಕುಶಲಕಲೆಗಳ ಕಡೆಗೆ ಗಮನ ಕೊಟ್ಟರು. ಕುಶಲ ವಿದ್ಯೆಗಳಾಗಲಿ ಲಲಿತ ಕಲೆಗಳಾಗಲಿ ಒಂದು ಜನಾಂಗದಲ್ಲಿ ಬೆಳೆಯಬೇಕಾದರೆ, ಅವರಿಗೆ ವ್ಯಕ್ತಿಸ್ವಾತಂತ್ರ್ಯವಿರಬೇಕು; ಆ ವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟು ಐದನೆಯ ಶತಮಾನದಲ್ಲಿ ಅಥೆನ್ಸ್ ನಾಗರಿಕರು ಬೆಳೆಸಿದ ವಿಸ್ಮಯಕರವಾದ ಕಲಾಪ್ರೌಢಿಮೆಗೆ ಸೋಲನ್ ಸ್ಫೂರ್ತಿಯನ್ನಿತ್ತ.



ಅಥೀನ ದೇವತೆ

ಸೋಲನ್ನನ ತರುವಾಯ ಬಂದ ಪಿಸಿಸ್ಟ್ರಾಟಸ್ ಮತ್ತು ಅವನ ಮಕ್ಕಳು ಹಿಪಿಯಾಸ್ ಮತ್ತು ಹಿಪಾರ್ಕಸ್ಸರ ಕಾಲದಲ್ಲೂ ಅಥೆನ್ಸಿನ ಪ್ರಗತಿ ಯಾವ ಅಡೆತಡೆಯೂ ಇಲ್ಲದೆ ಸಾಗಿತು. ನೀರಾವರಿ ಕೆಲಸಗಳು ನಡೆದವು; ಕೈಗಾರಿಕೆ, ವ್ಯಾಪಾರ, ರಸ್ತೆನಿರ್ಮಾಣ, ಹಬ್ಬಹರಿದಿನಗಳಲ್ಲಿ ಸಾರ್ವಜನಿಕ ಸಮಾರಂಭಗಳಿಗೆ ಪ್ರೋತ್ಸಾಹ, ಕಲೆಗಳಿಗೆ ಉತ್ತೇಜನ– ಇವೆಲ್ಲ ಜನರಿಗೆ ದೊರೆತು, ಅಥೆನ್ಸ್ ಗ್ರೀಕ್ ಸಂಸ್ಕೃತಿಯ ಕೇಂದ್ರವಾಯಿತು. ಪ್ರ.ಶ.ಪೂ.507ರಲ್ಲಿ ಕ್ಲೀಸ್ತನೀಸ್ ಅಧಿಕಾರ ವಹಿಸಿ, ಅಥೆನ್ಸಿನಲ್ಲಿ ಪ್ರಜಾಪ್ರಭುತ್ವವನ್ನೇರ್ಪಡಿಸಿದ. ಇವನ ಸುಧಾರಣೆ ಪೂರ್ತ ಯಶಸ್ವಿಯಾಗದಿದ್ದರೂ ಅದು ಮುಂದೆ ಪೆರಿಕ್ಲೀಸ್‌ನ ಕಾಲದ ಅಥೆನ್ಸ್‌ಗೆ ಮಾರ್ಗಸೂಚಿಯಾಯಿತು. ಆದರೆ ಈ ಮಧ್ಯೆ ಪರ್ಷಿಯದೊಡನೆ ಯುದ್ಧ ಮಾಡಬೇಕಾದ ಪ್ರಸಂಗವೊದಗಿ (ಪ್ರ.ಶ.ಪೂ.500–449), ಅಥೆನ್ಸಿನ ಪರಿಸ್ಥಿತಿ ಬದಲಾಯಿಸಿತು. ಸ್ಪಾರ್ಟಾಗಿಂತ ಅಥೆನ್ಸ್ ಚಿಕ್ಕದು, ಯುದ್ಧದಲ್ಲೂ ಅದರಷ್ಟು ಬಲಯುತವಾಗಿರಲಿಲ್ಲ; ಆದರೂ ಕಾರ್ಯಪಟುತ್ವದಲ್ಲಿ, ದಕ್ಷತೆಯಲ್ಲಿ, ಅದಕ್ಕಿಂತ ಮೇಲು. ಈ ಯುದ್ಧದಲ್ಲಿ ಅಥೆನ್ಸಿನ ಮಿಲ್ಟಿಯಾಡಿಸ್, ಥೆಮಿಸ್ಟಾಕ್ಲಿಸ್, ಸೈಮನ್ ಮುಂತಾದ ಅನೇಕ ವೀರರ ಶೌರ್ಯ, ಕದನಕೌಶಲಗಳು ಅಥೆನ್ಸಿಗೆ ಕೀರ್ತಿತಂದುವು. ಮ್ಯಾರಥಾನ್, ಸೆಲ್ಯಾಮಿಸ್ ಮುಂತಾದ ಕದನಗಳಲ್ಲಿ ಅಥೆನ್ಸ್ ಗಳಿಸಿದ ವಿಜಯ ಪ್ರಖ್ಯಾತವಾದದ್ದು; ಆದರೆ ಈ ಕದನಗಳಿಂದ, ತನಗೆ ಬಲಿಷ್ಠ ನೌಕೆಯೊಂದಿಲ್ಲದ ಕೊರತೆಯನ್ನು ಅಥೆನ್ಸ್ ಮನಗಂಡಿತು; ಮತ್ತು ಅಂಥ ನೌಕೆಯೊಂದನ್ನು ತ್ವರಿತವಾಗಿ ನಿರ್ಮಿಸಿತು. ಗ್ರೀಸ್ ಸಣ್ಣದೇಶ; ಅಂಥ ಚಿಕ್ಕ ದೇಶದಲ್ಲೂ ನಗರ ರಾಜ್ಯಗಳಿದ್ದವೇ ವಿನಾ ಇಡೀ ದೇಶ ಒಂದಾಗಿರಲಿಲ್ಲ. ಅಥೆನ್ಸ್ ಆಗ ಯುದ್ಧದಲ್ಲಿ ಅಪ್ರತಿಮ ಸಾಹಸ ಪ್ರದರ್ಶಿಸಿ, ಬಲವಾದ ನೌಕೆಯೊಂದನ್ನು ಪಡೆದುದರ ಪರಿಣಾಮವಾಗಿ ಪ್ರ.ಶ.ಪೂ. 478ರಲ್ಲಿ ಡೇಲಿಯನ್ ಒಕ್ಕೂಟವನ್ನು ಸ್ಥಾಪಿಸಲು ಸಾಧ್ಯವಾಯಿತು. ಆದರೆ, ಸದಾ ವೈಮನಸ್ಯ ಹೊಂದಿದ್ದ ನಗರ ರಾಜ್ಯಗಳು, ಸ್ಪಾರ್ಟದ ಹುರುಡು, ಇವುಗಳಿಂದ ಅಥೆನ್ಸ್ ಪರ್ಷಿಯಾದೊಂದಿಗೆ ಶಾಂತಿ ಒಪ್ಪಂದವನ್ನು ಪ್ರ.ಶ.ಪೂ.449ರಲ್ಲೂ ಸ್ಪಾರ್ಟ ದೊಂದಿಗೆ ರಾಜಿಯನ್ನು ಪ್ರ.ಶ.ಪೂ.445ರಲ್ಲೂ ಮಾಡಿಕೊಂಡಿತು.

ಈ ಪರಿಸ್ಥಿತಿಯಲ್ಲಿ ಪೆರಿಕ್ಲೀಸ್ ಆಡಳಿತಸೂತ್ರಗಳನ್ನು ತನ್ನ ಕೈಗೆ ತೆಗೆದುಕೊಂಡ. ಇವನ ಕಾಲದಲ್ಲೇ ಅಥೆನ್ಸ್ ಏಳಿಗೆಯ ಪರಮಾ ವಧಿಯನ್ನು ತಲುಪಿದ್ದು. ಇವನ ಕಾಲದಲ್ಲೇ ಸಾಕ್ರಟೀಸ್ ಅಥೆನ್ಸಿನ ಬೀದಿಗಳಲ್ಲಿ ಸಂಚರಿಸಿ ಸಂವಾದರೂಪದಲ್ಲಿ ಜನರಲ್ಲಿ ಜ್ಞಾನಪ್ರಸಾರ ಮಾಡಿದ್ದು, ಈಸ್ಕಿಲಸ್ ತನ್ನ ಪ್ರಖ್ಯಾತ ರುದ್ರನಾಟಕಗಳನ್ನು ಬರೆದದ್ದು; ಸೊಫೊಕ್ಲಿಸ್, ಯೂರಿ ಪಿಡೀಸ್ ತಮ್ಮ ಉಜ್ವಲವಾದ ಅಸದೃಶವಾದ ಕೃತಿಗಳನ್ನು ರಚಿಸಿದ್ದು, ವಾಸ್ತುಶಿಲ್ಪ, ಮೂರ್ತಿಶಿಲ್ಪ, ವರ್ಣ ಚಿತ್ರ– ಎಲ್ಲ ಕಲೆಗಳಲ್ಲೂ ವಿಸ್ಮಯಕಾರಕವಾದ

ಪ್ರಗತಿಯನ್ನು ಸಾಧಿಸಿದರು ಅಥೆನ್ಸಿನ ಪ್ರತಿಭಾವಂತರು. ಅನುಪಮವಾದ ಪಾರ್ಥೆನಾನ್ ನಿರ್ಮಿತವಾದದ್ದೂ ಈ ಕಾಲದಲ್ಲೇ. ಪೆರಿಕ್ಲಿಸ್ ಜಾರಿಗೆ ತಂದ ಸುಧಾರಣೆಗಳು, ಅವನ ಕಾಲದಲ್ಲಾದ ಜನಪ್ರಗತಿ, ಇವಾವುದೂ ಬಹುಕಾಲ ಉಳಿಯಲಿಲ್ಲ. ಸ್ಪಾರ್ಟದೊಂದಿಗೆ ಇದ್ದ ವೈಮನಸ್ಯ ಬೆಳೆಯಿತು. ಪ್ರ.ಶ.ಪೂ.431ರಲ್ಲಿ ಅವೆರಡು ರಾಜ್ಯಗಳ ನಡುವೆ ಪೆಲಪೊನೀಸಿಯನ್ ಯುದ್ಧ ಪ್ರಾರಂಭವಾಗಿ 404ರವರೆಗೂ ನಡೆಯಿತು. ಎರಡೂ

ರಾಜ್ಯಗಳಿಗೂ ಅಪಾರ ನಷ್ಟವಾಯಿತು. ಎರಡೂ ಸೋತವು. ಒಕ್ಕೂಟಕ್ಕೆ ಸೇರಿದ್ದ ಮಿತ್ರ ರಾಜ್ಯಗಳು ಎಂದೋ ಅಥೆನ್ಸಿನ ಮೈತ್ರಿಯನ್ನು ತ್ಯಜಿಸಿದ್ದವು. ಪ್ರ.ಶ.ಪೂ.338ರಲ್ಲಿ ಮ್ಯಾಸಿಡೋನಿಯಾದ ದೊರೆ ಫಿಲಿಪ್ಪನು ಗ್ರೀಸ್ ದೇಶವನ್ನು ಗೆದ್ದು ವಶಪಡಿಸಿಕೊಂಡ. ಅವನ ಮಗ ಅಲೆಗ್ಸಾಂಡರ್ ಗ್ರೀಸಿನ ಮೇಲಣ ಹತೋಟಿಯನ್ನು ಇನ್ನೂ ಬಲಪಡಿಸಿದ. ಅಥೆನ್ಸ್ ಒಂದು ಪ್ರಾಂತೀಯ ನಗರವಾಗಿ ಉಳಿಯಿತು.

ಈ ದುರ್ದಶೆಯ ಕಾಲದಲ್ಲೂ ಅಥೆನ್ಸಿನ ಸಾಂಸ್ಕೃತಿಕ ಚಟುವಟಿಕೆಗಳು, ಸಾಧನೆಗಳು ಮುಂದುವರೆದವು. ಅರಿಸ್ಟೋಫೆನೀಸ್ ತನ್ನ ಹರ್ಷನಾಟಕಗಳಲ್ಲಿ ಆಗಿನ ಜನಜೀವನವನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ. ಪ್ಲೇಟೋ ತನ್ನ ಅಕೆಡಮಿಯಲ್ಲಿ ಜೀವನ ರಹಸ್ಯಗಳನ್ನು ಹೊರಗೆಡವಿದ; ಅವನ ಗುರು ಸಾಕ್ರಟೀಸ್, ಜನಸಾಮಾನ್ಯರಲ್ಲಿ ಜ್ಞಾನಪ್ರಸಾರಮಾಡುತ್ತಲಿದ್ದ, ಪ್ಲೇಟೋವಿನ ಶಿಷ್ಯ ಅರಿಸ್ಟಾಟಲ್ ಜ್ಞಾನಭಂಡಾರವನ್ನೇ ಸೂರೆಗೊಳ್ಳಲೆತ್ನಿಸಿದ.

ರೋಮ್ ಸಾಮ್ರಾಜ್ಯ ಸ್ಥಾಪಿತವಾದ ಮೇಲೆ ಅಥೆನ್ಸ್ ಆ ಸಾಮ್ರಾಜ್ಯಕ್ಕೆ ಸೇರಿಹೋಯಿತು. ಅಥೆನ್ಸಿನ ಸಂಸ್ಕೃತಿ ಸಾಮ್ರಾಜ್ಯದ ನಾನಾಕಡೆ ಹರಡಿತು. ಪ್ರ.ಶ 5ನೆಯ ಶತಮಾನದ ಅನಂತರ ಆ ಸಾಮ್ರಾಜ್ಯ ಕೊನೆಗೊಂಡ ಮೇಲೆ, ಯುರೋಪಿನ ಆಗ್ನೇಯ ಏಷ್ಯ ರಾಜ್ಯಗಳ ಕ್ಷೋಭೆಗೊಂಡ ರಾಜಕೀಯಕ್ಕೆ ಸಿಕ್ಕಿ, ಅಥೆನ್ಸ್ ಬಹುಕಾಲ ಯಾವುದಾದರೊಂದು ಬಲಿಷ್ಠ ರಾಜ್ಯದ ಅಧೀನದಲ್ಲುಳಿಯ ಬೇಕಾಯಿತು. ತುರ್ಕಿಯ ಸುಲ್ತಾನರ ಆಳ್ವಿಕೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಸ್ಥಾಪಿತವಾದ ಮೇಲೆ, ಅನೇಕ ಸಲ ಅಥೆನ್ಸ್ ಅವರ ಧಾಳಿಗೆ ಸಿಕ್ಕಿ, ಅಲ್ಲಿನ ಭವ್ಯಮಂದಿರಗಳು ದೇವಾಲಯಗಳು, ಅನುಪಮ ಶಿಲ್ಪಕಲಾ ಮೂರ್ತಿಗಳು ನಾಶ ಹೊಂದಿದವು. 1834ರಲ್ಲಿ ಗ್ರೀಸ್ ಸ್ವತಂತ್ರರಾಜ್ಯವಾಗಿ ಅಥೆನ್ಸ್ ಅದರ ರಾಜಧಾನಿಯಾದ ಮೇಲೆ ಈಗಿನ ಅಥೆನ್ಸ್ ನಗರ ನಿರ್ಮಿತವಾಯಿತು. ಎರಡನೆಯ ಮಹಾಯುದ್ಧದಲ್ಲಿ ಮೂರು ವರ್ಷ ಕಾಲ (1941–44) ಅಥೆನ್ಸನ್ನು ಜರ್ಮನರು ಆಕ್ರಮಿಸಿದ್ದರು. ಆಗ ಪ್ರಜೆಗಳು ನಾನಾ ಕಷ್ಟಗಳಿಗೆ ಈಡಾದರೂ ಊರು ನಾಶವಾಗಲಿಲ್ಲ. ಅಥೆನ್ಸಿನ ಹಿರಿಮೆಯ ಹೆಗ್ಗುರುತಾಗಿ ಹತ್ತಿರದಲ್ಲೇ ಆಕ್ರೋಪೋಲಿಸ್ ಎಂಬ ಗುಡ್ಡವಿದೆ. ಅದರ ಮೇಲೆ ಅಥೀನ ದೇವತೆಗಾಗಿ ಕಟ್ಟಿದ್ದ ಪಾರ್ಥೆನಾನ್ ಎಂಬ ಕಲಾ ಪರಿಪೂರ್ಣತೆಯನ್ನು ಮೆರೆಸುವ ಸುಂದರ ದೇವಾಲಯ, ಪ್ರೊಪೀಲಿಯ ಎಂಬ ಭವ್ಯವಾದ ಮುಖಮಂಟಪ, ಅಥೀನ ದೇವತೆಗಾಗಿ ನಿರ್ಮಿತವಾದ ಪಾರ್ಥೆನಾನ್‌ಗಿಂತಲೂ ಹೆಚ್ಚು ಪುರಾತನವಾದ ಎರೆಕ್ತಿಯಂ ದೇವಾಲಯ– ಇವುಗಳ ಮತ್ತು ಅನೇಕ ಕಟ್ಟಡಗಳ ಅವಶೇಷಗಳು, ಅಥೆನ್ಸಿನ ನಾಗರಿಕರು ಬೆಳೆಸಿದ ಉಚ್ಚತಮ ಸಂಸ್ಕೃತಿಯ ಕುರುಹಾಗಿ ಇಂದಿಗೂ ನಿಂತಿವೆ.

ಅಮೆರಿಕ ಸಂಯುಕ್ತ ಸಂಸ್ಥಾನದ ಅಲಬಾಮ, ಜಾರ್ಜಿಯ, ಓಹಿಯೊ, ಪೆನ್ಸಿಲ್ವೇನಿಯ, ಟೆನೆಸ್ಸಿ ಮತ್ತು ಟೆಕ್ಸಾಸ್ ರಾಜ್ಯಗಳಲ್ಲೂ ಅಥೆನ್ಸ್ ಎಂಬ ಪಟ್ಟಣಗಳಿವೆ. (ಎ.ಎಂ.)

**ಅದಿತಿ :** ಪ್ರಚೇತಸಪುತ್ರ ದಕ್ಷನ ಮಗಳು, ಕಶ್ಯಪನ ಹೆಂಡತಿ. ದೇವತೆಗಳ ವರ್ಗೀಕರಣದಲ್ಲಿ ಸ್ತ್ರೀದೇವತೆಗಳಲ್ಲೆಲ್ಲ ಅದಿತಿಗೆ ಅಗ್ರಸ್ಥಾನವಿದ್ದರೂ (ನಿರುಕ್ತ 11.22) ಋಕ್ಸಂಹಿತೆಯಲ್ಲಿ ಅವಳನ್ನೇ ಉದ್ದೇಶಿಸಿದ ಪ್ರತ್ಯೇಕ ಸೂಕ್ತವಿಲ್ಲ. ಆದರೆ ಜ್ಯೋತಿರೂಪರಾದ ಆದಿತ್ಯರಿಗೆಲ್ಲ ಮಾತೆ ಎಂಬ ಪ್ರಶಂಸೆ ಈ ದೇವತೆಯ ವೈಶಿಷ್ಟ್ಯವನ್ನು ತಿಳಿಸುತ್ತದೆ.

ಅದಿತಿ ಎಂಬ ಪದಕ್ಕೆ ಅನಂತ, ಅಲಂಘ್ಯ, ಅಳೆಯಲು ಸಾಧ್ಯವಿಲ್ಲದ್ದು ಮುಂತಾದ ಅರ್ಥಗಳು ಸಹಜವಾಗಿವೆ. ಆದ್ದರಿಂದ ಈಕೆ ಅನಂತತ್ವವನ್ನೂ ಪ್ರತಿಬಿಂಬಿಸುವ ದೇವತಾ ವಿಶೇಷವೆನ್ನಬಹುದು. ಲೌಕಿಕ ಗೋಚರಕ್ಕೆ ನಿಲುಕದ ನಿತ್ಯತತ್ತ್ವವನ್ನು ಪ್ರತಿಬಿಂಬಿಸುವುದರಿಂದಲೇ ಈ ದೇವತೆಯ ನಿರ್ದಿಷ್ಟರೂಪಾದಿಗಳು ವರ್ಣಿತವಾಗಿರಲು ಸಾಧ್ಯವಿಲ್ಲ. ಆದಿತ್ಯರಿಂದಲೇ ಧರಿಸಲ್ಪಡತಕ್ಕದ್ದಾದ ಈ ನಿತ್ಯತತ್ತ್ವ ಎಲ್ಲ ಲೋಕಗಳನ್ನೂ ಒಳಗೊಂಡು ಎಲ್ಲವನ್ನೂ ಮೀರಿದೆ. ಒಂದು ಮಂತ್ರದಲ್ಲಿ ಅವಳ ವರ್ಣನೆ ಈ ರೀತಿ ಇದೆ:

'ಅಖಂಡಳಾದ ಅದಿತಿ ಸಕಲ ವಿಶ್ವಕ್ಕೂ ಜನನಿ. ಅವಳೆ ಜನಕ. ಅವಳೆ ಸಕಲ ದೇವತೆಗಳು. ಪ್ರಕಾಶಮಾನವಾದ ಸ್ವರ್ಗ ಮತ್ತು ಅಂತರಿಕ್ಷಾದಿಗಳೂ ಅವಳೆ. ಉತ್ಪನ್ನವಾದ ಸಕಲ ವಿಶ್ವವೂ ವಿಶ್ವನಿಯಾಮಕಳೂ ಎಲ್ಲವೂ ಅದಿತಿ' (ಋ.1.89.10).

ಅದಿತಿ ಶಬ್ದಕ್ಕೆ ಪಾಪರಾಹಿತ್ಯ ಬಂಧನರಾಹಿತ್ಯ ಎಂಬ ಅರ್ಥವೂ ಉಂಟು. ಪಾಪದಿಂದ ಬಿಡಿಸುವಂತೆ ಮಿತ್ರಾವರುಣಾದಿಗಳನ್ನು ಪ್ರಾರ್ಥಿಸುವ ರೀತಿಯಲ್ಲಿಯೇ ಅದಿತಿಯನ್ನು ಪಾಪಗಳನ್ನು ನಾಶಗೊಳಿಸುವ ನಾಶಕಳಾಗಬೇಕೆಂದು ಪ್ರಾರ್ಥಿಸಿದೆ. ಬಂಧನರಹಿತರಾದ, ಪ್ರಕಾಶಮಾನರಾದ, ಆದಿತ್ಯರೂಪರಾದ ಪುತ್ರರನ್ನೂ ಹೊಂದಿರುವುದರಿಂದ ಅವಳನ್ನು ರಾಜಪುತ್ರಾ, ಸುಪುತ್ರಾ ಎಂದು ಕರೆದಿದೆ. ಋಗ್ವೇದದಲ್ಲಿ ಹೇಳಿರುವಂತೆ ಅದಿತಿ ದಕ್ಷನಾಮಕನಾದ ಆದಿತ್ಯನ ತಾಯಿ. ಆದರೆ ಅದೇ ಋಕ್ಸಂಹಿತೆಯಲ್ಲಿ ವಿಶ್ವಸೃಷ್ಟಿಯನ್ನು ವಿವರಿಸುವಾಗಿ ಒಂದೇ ಸೂಕ್ತದಲ್ಲೇ ದಕ್ಷನಿಂದ ಅದಿತಿ ಉತ್ಪನ್ನಳಾದಳು, ಹಾಗೆಯೇ ಅದಿತಿಯಿಂದ ದಕ್ಷನು ಉತ್ಪನ್ನನಾದನು ಎನ್ನಲಾಗಿದೆ.**(ನೋಡಿ– ಆದಿತ್ಯ)** (ಜಿ.ಎನ್.ಪಿ.)

**ಅದಿರಾಟ :** ಚಲನಾತ್ಮಕ ವಸ್ತುವಿನ ಜಡತ್ವದಲ್ಲಿ (ಇನರ್ಷಿಯ) ಸಮತೋಲವಿಲ್ಲದಿದ್ದರೆ ಅದು ಮಾಡುವ ಕಂಪನಕ್ಕೆ ಅಥವಾ ಸ್ಪಂದನಕ್ಕೆ ಈ ಹೆಸರು ಇದೆ. ಕಂಪಿಸುವ ವಸ್ತು ತನ್ನ ಸ್ಥಿರಾಸ್ಥಾಯಿಯಿಂದ ಎಡಕ್ಕೂ ಬಲಕ್ಕೂ ಅತಿ ವೇಗದಿಂದ ಅಲುಗಾಡುತ್ತದೆ. ಒಂದು ಗೊತ್ತಾದ ಕಾಲಾವಧಿಯಲ್ಲಿ ಆ ವಸ್ತು ಎಷ್ಟು ಸಲ ಅದಿರಾಡುತ್ತದೆಯೋ ಆ ಸಂಖ್ಯೆಗೆ ಸ್ಪಂದನ ಆವೃತ್ತಿಸಂಖ್ಯೆ (ಫ್ರೀಕ್ವೆನ್ಸಿ) ಎಂದು ಹೆಸರು. ಭೂಮಿಯ ಮೇಲಿನ ಎಲ್ಲ ವಸ್ತುಗಳಲ್ಲಿಯೂ ಅದಿರಾಟದ ಸ್ವಾಭಾವಿಕ ಸ್ಪಂದನ (ನ್ಯಾಚುರಲ್ ಫ್ರೀಕ್ವೆನ್ಸಿ ಆಫ್ ವೈಬ್ರೇಷನ್) ಇರುತ್ತದೆ. ಕಂಪಿಸುವ ವಸ್ತುವೊಂದನ್ನು ಸ್ಥಿರವಸ್ತುವೊಂದಕ್ಕೆ ತಗಲುವಂತೆ ಇಟ್ಟರೆ ಸ್ಥಿರವಸ್ತುವಿನಲ್ಲಿಯೂ ಕಂಪನವುಂಟಾಗುತ್ತದೆ. ಕಂಪಿಸುವ ವಸ್ತುವಿನ ಸ್ಪಂದನವೇನಾದರೂ ಆ ಸ್ಥಿರವಸ್ತುವಿನ ಸ್ವಾಭಾವಿಕ ಸ್ಪಂದನದಷ್ಟೇ ಇದ್ದರೆ, ಸ್ಥಿರವಸ್ತುವಿನ ಕಂಪನ ಇಮ್ಮಡಿಯಾಗುತ್ತದೆ. ಈ ಸ್ಥಿತಿಗೆ ಸಮಕಾಲಿಕ ಕಂಪನ (ಸಿನ್‌ಕ್ರೋನಿಸಮ್) ಎಂದು ಹೆಸರು. ಹೀಗಲ್ಲದೆ ಆ ಎರಡು ವಸ್ತುಗಳ ಸ್ಪಂದನ ಬೇರೆ ಬೇರೆಯಾಗಿದ್ದರೆ ಕಂಪನ ಇಳಿಮುಖವಾಗುತ್ತದೆ. ಅದಿರಾಟವನ್ನು ಅಳೆಯುವ ಅತಿ ಸೂಕ್ಷ್ಮಯಂತ್ರಕ್ಕೆ ಕಂಪನಮಾಪಕ (ಸಿಸ್ಮೊಮೀಟರ್) ಎಂದು ಹೆಸರು. ಕಂಪನದಿಂದ ಉಂಟಾಗುವ ತರಂಗಗಳ ವೈಶಾಲ್ಯವನ್ನೂ (ಆ್ಯಂಪ್ಲಿಟ್ಯೂಡ್) ಮತ್ತು ಸ್ಪಂದನವನ್ನೂ ಈ ಯಂತ್ರ ಅಳೆಯುತ್ತದೆ. ಚಲನವಸ್ತುಗಳನ್ನೂ ಸ್ಥಿರವಸ್ತುಗಳನ್ನೂ ಬೇರ್ಪಡಿಸುವುದರ ಮೂಲಕ ಸ್ಥಿರವಸ್ತುಗಳಲ್ಲಿ ಕಂಪನ ಉಂಟಾಗುವಂತೆ ಮಾಡಬಹುದು. ಯಂತ್ರಗಳಿಗೂ ಮತ್ತು ಅವುಗಳ ಪಾಯಗಳಿಗೂ (ಫೌಂಡೇಷನ್) ಮಧ್ಯೆ, ಕಂಪನ ತಡೆಯುವ ಪದಾರ್ಥಗಳನ್ನು (ವೈಬ್ರೇಷನ್ ಡ್ಯಾಂಪರ್ಸ್) ಉಪಯೋಗಿಸಿ ಪಾಯಗಳನ್ನು ಸಂರಕ್ಷಿಸಬಹುದು. ಉಣ್ಣೆಯಂತಿರುವ ಫೆಲ್ಟ್ ಎಂಬ ಬಟ್ಟೆ, ಬಿರಡೆ ತೊಗಟೆ (ಕಾರ್ಕ್)– ಮುಂತಾದವುಗಳೇ ಈ ಪದಾರ್ಥಗಳು. (ಕೆ.ಎಸ್.ಕೆ.)

**ಅದಿರು:** ಲಾಭದಾಯಕವಾಗಿ ಪಡೆಯಬಹುದಾದ ಒಂದು ಅಥವಾ ಅದಕ್ಕಿಂತ ಹೆಚ್ಚು ಖನಿಜಗಳನ್ನೊಳಗೊಂಡ ಶಿಲೆ(ಓರ್). ಸಾಮಾನ್ಯವಾಗಿ, ಲೋಹ ಸಂಬಂಧಿತ ಖನಿಜ ವಸ್ತುಗಳಿಗೆ ಈ ಹೆಸರು ಅನ್ವಯ. ಉದಾ: ಕಬ್ಬಿಣದ ಅದಿರು, ಚಿನ್ನದ ಅದಿರು, ತಾಮ್ರದ ಅದಿರು. ಶಿಲೆಯಲ್ಲಿರುವ ಲೋಹ / ಖನಿಜ ಲಾಭದಾಯಕವಲ್ಲದಿದ್ದರೆ ಅದು ಅದಿರು ಎನ್ನಿಸುವುದಿಲ್ಲ.

ನಿಸರ್ಗದಲ್ಲಿ ಖನಿಜಗಳು ಬಿಡಿಬಿಡಿಯಾಗಿ ದೊರೆಯುವುದು ವಿರಳ. ಯಾವುದೇ ಅದಿರಿನ ಘಟಕಗಳನ್ನು ಪರಿಶೀಲಿಸಿದಾಗ ಅದರಲ್ಲಿ ಒಂದಕ್ಕಿಂತ ಹೆಚ್ಚು ಖನಿಜಗಳು ಒಟ್ಟಾಗಿ ಇರುವುದು ಕಂಡುಬರುತ್ತದೆ. ಈ ಗುಂಪಿನಲ್ಲಿ ಉಪಯುಕ್ತವಾದ ಹಾಗೂ ನಿರುಪಯುಕ್ತವಾದ ಖನಿಜಗಳು ಇರಬಹುದು. ಆದರೆ ಈ ಖನಿಜಗಳ ಗುಂಪಿಗೆ ಅದಿರು ಎಂದು ಕರೆಯಬೇಕಾದರೆ ಅದರಲ್ಲಿರುವ ಲೋಹಗಳನ್ನು ಲಾಭದಾಯಕವಾಗಿ ಗಣಿಗಾರಿಕೆಯಿಂದ ಹಾಗೂ ಖನಿಜ ಸಂಸ್ಕರಣೆಯಿಂದ ಪಡೆಯಲು ಸಾಧ್ಯವಿರಬೇಕು.

ಅದಿರು ಅನೇಕ ನಿರುಪಯುಕ್ತ ಮಿಶ್ರಣಗಳಿಂದ ಕೂಡಿದ್ದು ಗಣಿಗಾರಿಕೆಯಲ್ಲಿ ಭೂಮಿಯಿಂದ ಹೊರತೆಗೆದು, ಖನಿಜ ಸಂಸ್ಕರಣೆಯಿಂದ ಲಾಭದಾಯಕ ಘಟಕಗಳನ್ನು ಖನಿಜ ಸಂಸ್ಕರಣೆಯಿಂದ ಬೇರ್ಪಡಿಸಲಾಗುವುದು. ಅದಿರು ಬಳಸಿದಂತೆಲ್ಲಾ ಮುಗಿದು ಹೋಗುವ ನೈಸರ್ಗಿಕ ಸಂಪನ್ಮೂಲ. ಒಂದು ಬಾರಿ ಭೂಮಿಯಿಂದ ಹೊರ ತೆಗೆದ ಮೇಲೆ ಅದೇ ಸ್ಥಳದಲ್ಲಿ ಅದಿರು ಉತ್ಪತ್ತಿಯಾಗುವುದಿಲ್ಲ. ಆದ್ದರಿಂದ, ಗಣಿಗಾರಿಕೆಯನ್ನು ಸುಲಿಗೆ ಕೈಗಾರಿಕೆಯೆಂದು ವರ್ಣಿಸಿರುವರು. ಖನಿಜ / ಅದಿರು ಸಂಗ್ರಹವನ್ನು ನವೀಕರಿಸಲು ಬರುವುದಿಲ್ಲ; ಅದು ಕ್ಷೀಣಿಸುವ ಸಂಪನ್ಮೂಲ.

ಭೂವಿಜ್ಞಾನಿಗಳು ಆರ್ಥಿಕ ಲಾಭವನ್ನು ತರುವ ಖನಿಜಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. (1) ಒಂದು ಅಥವಾ ಹೆಚ್ಚಿನ ಲೋಹಗಳನ್ನು ಪಡೆಯಬಹುದಾದ ಅದಿರು ಖನಿಜಗಳು. (2) ನೇರವಾಗಿ ಒಂದು ಅಥವಾ ಹೆಚ್ಚು ಕೈಗಾರಿಕೆಗಳಲ್ಲಿ ಬಳಸಬಹುದಾದ ಕೈಗಾರಿಕಾ ಖನಿಜಗಳು. ಅದಿರು ಖನಿಜಗಳಿಗೆ, ಚಾಲ್ಕೊಪೈರೈಟ್ ಮತ್ತು ಗೆಲೀನ ಉದಾಹರಣೆ. ಇವುಗಳಿಂದ ಕ್ರಮವಾಗಿ ತಾಮ್ರ ಮತ್ತು ಸೀಸಗಳನ್ನು ಪ್ರತ್ಯೇಕಿಸಬಹುದು. ಕೈಗಾರಿಕಾ ಖನಿಜಗಳಿಗೆ, ಬ್ಯರೈಟ್ ಮತ್ತು ಕಲ್ನಾರು (ಆ್ಯಸ್‌ಬೆಸ್ಟಾಸ್) ಉದಾಹರಣೆ. ಈ ಖನಿಜಗಳನ್ನೂ ಕೆಲವೊಮ್ಮೆ ಅದಿರು ಎಂದು ಪರಿಗಣಿಸಿ, ನಿಕ್ಷೇಪವೆಂದು ಗಣನೆಗೆ ತೆಗೆದುಕೊಳ್ಳುವುದುಂಟು. ಅದಿರಿನೊಂದಿಗೆ ಅನುಪಯುಕ್ತ ಶಿಲಾ ಮಿಶ್ರಣಗಳೂ ಇದ್ದು, ಅವುಗಳನ್ನು ಗ್ಯಾಂಗ್ ಎಂದು ಕರೆಯುತ್ತಾರೆ. ಇದನ್ನು ಉಪಯುಕ್ತ ಖನಿಜಗಳಿಂದ ಬೇರ್ಪಡಿಸುವುದು ಖನಿಜ ಸಂಸ್ಕರಣ ತಂತ್ರಜ್ಞರ ಕೆಲಸ. ಹಾಗೆ ಬೇರ್ಪಡಿಸಿದ ಗ್ಯಾಂಗ್ ಎಂಬ ಗಟ್ಟಿ ತ್ಯಾಜ್ಯವನ್ನು ಪರಿಸರಕ್ಕೆ ಹಾನಿ ಬಾರದಂತೆ ನಿರ್ವಹಿಸುವುದು ಅತಿ ಅಗತ್ಯ. ಗಣಿಗಾರಿಕೆ ಪ್ರದೇಶಗಳಲ್ಲಿ ಆಗುತ್ತಿರುವ ಪರಿಸರಮಾಲಿನ್ಯ ಒಂದು ದೊಡ್ಡ ಸಮಸ್ಯೆಯಾಗಿದೆ.

ಅದಿರು ನಿಕ್ಷೇಪಗಳಲ್ಲಿ ಇರಬಹುದಾದ ಹೆಚ್ಚು ಅನುಪಯುಕ್ತ ಶಿಲಾ ಮಿಶ್ರಣಗಳಿಂದಾಗಿ ಅಥವಾ ಉಪಯುಕ್ತ ಖನಿಜಗಳು ಕಡಿಮೆ ಪ್ರಮಾಣದಲ್ಲಿ ಇದ್ದಾಗ, ಅಂತಹ ಕೆಲವು ಅದಿರು ನಿಕ್ಷೇಪಗಳು, ಸದ್ಯದ ಮಾರುಕಟ್ಟೆಯಲ್ಲಿ ಆರ್ಥಿಕವಾಗಿ ಲಾಭ ಗಳಿಸಲಾಗದ ಗುಣಮಟ್ಟದಲ್ಲಿ ಇದ್ದರೆ, ಅವುಗಳನ್ನು ಪ್ರೋಟೋರ್ ಎನ್ನುತ್ತಾರೆ.

ಒಟ್ಟಾರೆ, ನೈಸರ್ಗಿಕವಾಗಿ ದೊರೆಯುವ, ಆರ್ಥಿಕವಾಗಿ ಉಪಯುಕ್ತವಾದ ಎಲ್ಲ ಖನಿಜಗಳನ್ನು ಅದಿರು ಎಂದು ಕರೆಯಬಹುದು. ಇವುಗಳನ್ನು ಅವುಗಳ ಉಪಯೋಗಗಳ ಮೇಲೆ ಈ ಕೆಳಕಂಡಂತೆ ವರ್ಗೀಕರಿಸಬಹುದು:

**1. ಲೋಹ ಖನಿಜಗಳು**

ಅ) ಕಬ್ಬಿಣ ಲೋಹವುಳ್ಳ ಖನಿಜಗಳು. ಉದಾ: ಕಬ್ಬಿಣದ ಅದಿರು

ಆ) ಕಬ್ಬಿಣ–ಮಿಶ್ರಲೋಹವುಳ್ಳ ಖನಿಜಗಳು. ಉದಾ: ಮ್ಯಾಂಗನೀಸ್, ವೆನೇಡಿಯಂ, ಕ್ರೋಮಿಯಂ, ಟಂಗ್‌ಸ್ಟನ್ ಇತ್ಯಾದಿ

ಇ) ಕಬ್ಬಿಣವಿಲ್ಲದ ಲೋಹ ಖನಿಜಗಳು. ಉದಾ: ತಾಮ್ರ, ಬಾಕ್ಸೈಟ್, ಸತು, ತವರ, ಸೀಸ

ಈ) ಅಮೂಲ್ಯ ಲೋಹದ ಖನಿಜಗಳು. ಉದಾ: ಚಿನ್ನ ಮತ್ತು ಪ್ಲಾಟಿನಂ

**2. ಅಲೋಹ ಖನಿಜಗಳು**

ಅ) ರಾಸಾಯನಿಕ ಖನಿಜಗಳು: ಉದಾ: ಸಲ್ಫರ್, ನೈಟ್ರೇಟ್, ಪೊಟ್ಯಾಷ್, ಪಾಸ್ಫೇಟ್, ಉಪ್ಪು

ಆ) ಕಟ್ಟಡ ನಿರ್ಮಾಣದ ಖನಿಜಗಳು: ಉದಾ: ಮರಳು, ಜೇಡಿ

ಇ) ಅಮೂಲ್ಯ ವಸ್ತು: ಉದಾ: ವಜ್ರ, ಚಿನ್ನ, ಬೆಳ್ಳಿ ಇತ್ಯಾದಿ

ಈ) ಇತರ ಖನಿಜಗಳು: ಉದಾ: ಅಭ್ರಕ, ಗ್ರಾಫೈಟ್, ಕಲ್ನಾರು ಇತ್ಯಾದಿ

**3. ಇಂಧನ ಖನಿಜಗಳು:** ಕಲ್ಲಿದ್ದಲು, ಪೆಟ್ರೋಲಿಯಂ, ಸ್ವಾಭಾವಿಕ ಅನಿಲ ಇತ್ಯಾದಿ.

**ಅದಿರು ನಿಕ್ಷೇಪಗಳ ಉತ್ಪತ್ತಿ:** ಖನಿಜಗಳು ಶಿಲೆಗಳಲ್ಲಿ ಆರ್ಥಿಕವಾಗಿ ಬೇರ್ಪಡಿಸುವಷ್ಟು ಪ್ರಮಾಣದಲ್ಲಿ ಸಂಗ್ರಹಿತವಾಗಿದ್ದರೆ, ಅವು ಆರ್ಥಿಕವಾಗಿ ಉಪಯುಕ್ತ ಅದಿರು ನಿಕ್ಷೇಪಗಳು (ಓರ್ ಡಿಪಾಸಿಟ್ಸ್). ಅವು ಒತ್ತಾಗಿರುವ ಮಡಿಗಳಲ್ಲಿಯೂ ರೇಖೆಗಳಲ್ಲಿಯೂ ಪಟ್ಟಿಗಳಲ್ಲಿಯೂ ಮಸೂರ ಆಕೃತಿಗಳಲ್ಲಿ ಶೇಖರಣೆಯಾಗಿದ್ದಲ್ಲಿ, ಅವು ಕಾರ್ಯ ಸಾಧಕ ನಿಕ್ಷೇಪಗಳಾಗುತ್ತವೆ. ಅದಿರು ನಿಕ್ಷೇಪಗಳ ಉತ್ಪತ್ತಿಯಲ್ಲಿ ಅನೇಕ ವಿಧಗಳಿವೆ. ಒಂದೊಂದು ನಿಕ್ಷೇಪವೂ ಒಂದೊಂದು ವಿಧದಿಂದ ಜನಿಸಿರಬಹುದು. ಅಲ್ಲದೆ, ಒಂದೇ ನಿಕ್ಷೇಪವು ಅನೇಕ ವಿಧಗಳಿಂದಲೂ ಉತ್ಪತ್ತಿಯಾಗಬಹುದು. ಅದಿರು ನಿಕ್ಷೇಪಗಳ ರಚನೆಯಲ್ಲಿ ಜಲ ಪ್ರಮುಖ ಪಾತ್ರ ವಹಿಸುತ್ತದೆ. ಜಲದ ಜೊತೆಗೆ ಉಷ್ಣಾಂಶ ಮತ್ತು ಒತ್ತಡವೂ ಸಹಕಾರಿಗಳಾಗುತ್ತವೆ. ಅದಿರು ನಿಕ್ಷೇಪ ರಚನೆಗೆ ಕಾರಣವಾದ ಜಲ (ನೀರಿನ) ಆವಿಯಾಗಿರಬಹುದು; ನೆಲದಾಳದ ಶಿಲಾಪಾಕದಿಂದ ಹೊರಬಂದ ಬಿಸಿ ನೀರಾಗಿರಬಹುದು; ನೆಲದಾಳದಲ್ಲಿರುವ ಬೇರೆ ಬೇರೆ ಉಷ್ಣಾಂಶಗಳಿರುವ ಅಂತರ್ಜಲವಾಗಿರಬಹುದು; ಇಲ್ಲವೆ ನದಿ, ಸರೋವರ, ಸಮುದ್ರಗಳ ನೀರಾಗಿರಬಹುದು. ಜಲ, ಉಷ್ಣಾಂಶ, ಒತ್ತಡಗಳಲ್ಲದೆ ಶಿಲಾಪಾಕ, ಅನಿಲಗಳು, ನೀರಾವಿ, ದ್ರಾವಕ ಧಾತುಗಳು, ಸ್ಥಳೀಯ ಶಿಲೆ ಇವುಗಳೂ ಅದಿರು ನಿಕ್ಷೇಪಗಳ ರಚನೆಯಲ್ಲಿ ಪಾಲ್ಗೊಳ್ಳುವುವು.

ಯಾವ ಖನಿಜದ ಅದಿರಾಗಲೀ ವಿವಿಧ ಪ್ರವೃತ್ತಿಗಳಿಂದ, ವಿವಿಧ ಆಕೃತಿಯ ನಿಕ್ಷೇಪಗಳಾಗಿ ರಚಿತವಾಗಬಹುದು. ಉದಾ: ಕಬ್ಬಿಣದ ಅದಿರು ನಿಕ್ಷೇಪವು ಶಿಲಾಪಾಕ ಲೋಹ ಧಾತು ಸಂಗ್ರಹಣ (ಮ್ಯಾಗ್‌ಮ್ಯಾಟಿಕ್ ಸೆಗ್ರಿಗೇಷನ್); ರೂಪಾಂತರ (ಮೆಟಮಾರ್ಫಿಸಮ್); ವಿನಿಮಯ (ರೀಪ್ಲೇಸ್‌ಮೆಂಟ್) ರಚನಾಕ್ರಮ; ಪ್ರಸ್ತರೀಕರಣ (ಸೆಡಿಮೆಂಟೇಷನ್) ಮುಂತಾದ ಯಾವ ವಿಧಾನಗಳಿಂದಾದರೂ ಉತ್ಪತ್ತಿಯಾಗಬಹುದು. ಹೀಗೆ ಉಗಮಿಸಿದ ನಿಕ್ಷೇಪಗಳ ಆಕೃತಿಗಳೂ ಬೇರೆ ಬೇರೆಯಾಗಿರುವುವು. ಆರ್ಥಿಕ ದೃಷ್ಟಿಯಿಂದ ಯಾವ ಖನಿಜ ನಿಕ್ಷೇಪವಾಗಲೀ ಯಾವ ವಿಧಾನದಿಂದ ಉತ್ಪತ್ತಿಯಾಗಿದೆ ಯೆಂದು ತಿಳಿಯುವುದು ಅಗತ್ಯ. ಖನಿಜ ನಿಕ್ಷೇಪದ ಉತ್ಪತ್ತಿಯ ನಿಷ್ಕರ್ಷೆಯು ಅದರ ಆಳ ಮತ್ತು ಅಗಲದ ವಿಸ್ತಾರವನ್ನು ಊಹಿಸಲು ಸಹಕಾರಿಯಾಗುವುದು. ಅಲ್ಲದೆ ಆ ನಿಕ್ಷೇಪದ ಪರಿಮಾಣವನ್ನೂ ತಿಳಿಯಲು ಅನುಕೂಲವಾಗುವುದು.

ಖನಿಜ ನಿಕ್ಷೇಪಗಳು ಯಾವ ರೀತಿಯಲ್ಲಿ ಉತ್ಪತ್ತಿಯಾಗಿದ್ದರೂ ಅನುಪಯುಕ್ತ ವಸ್ತುಗಳು ವಿವಿಧ ಪ್ರಮಾಣಗಳಲ್ಲಿ ಮಿಶ್ರವಾಗಿರುತ್ತವೆ. ಲೋಹ ನಿಕ್ಷೇಪಗಳಲ್ಲಿ ಉಪಯುಕ್ತ ಲೋಹದೊಡನೆ ಲೋಹೇತರ ಖನಿಜಗಳೂ ಸ್ಥಳೀಯ ಶಿಲಾ ಚೂರುಗಳೂ ಕೂಡಿರುವುದ ಲ್ಲದೆ, ಕೆಲವು ಸಂದರ್ಭಗಳಲ್ಲಿ ಉಪಯೋಗವಿಲ್ಲದ ಲೋಹ ಖನಿಜಗಳೂ ಇರುವುದುಂಟು. ಅದಿರಿನೊಡನೆ ಬೆರೆತಿರುವ ಅಂತಹ ಅನುಪಯುಕ್ತ ಪದಾರ್ಥಗಳ ಒಂದುಗೂಡಿರುವಿಕೆಗೆ ಗ್ಯಾಂಗ್ ಎಂದು ಹೆಸರು. ಲೋಹೇತರ ಖನಿಜ ನಿಕ್ಷೇಪಗಳಲ್ಲಿ ಉಪಯುಕ್ತ ಖನಿಜಗಳೊಡನೆ ಕೂಡಿರುವ ಉಪಯೋಗವಿಲ್ಲದ ಪದಾರ್ಥಗಳನ್ನು ಅನುಪಯುಕ್ತ ವಸ್ತುಗಳು ಎಂದು ಮಾತ್ರ ಕರೆಯುವರು.

**ಅದಿರು ನಿಕ್ಷೇಪಗಳ ವಿಂಗಡನೆ:** ಸ್ಥೂಲವಾಗಿ ನಿಕ್ಷೇಪಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು:

1. ಸ್ಥಳೀಯ ಶಿಲೆಗಳ ಸಹಜನಿತ ನಿಕ್ಷೇಪಗಳು (ಸಿನ್‌ಜೆನೆಟಿಕ್)

2. ಸ್ಥಳೀಯ ಶಿಲೆಗಳು ರೂಪುಗೊಂಡ ಅನಂತರ ಸಂಗ್ರಹವಾದ ನಿಕ್ಷೇಪಗಳು (ಎಪಿಜೆನೆಟಿಕ್).

ಮೊದಲನೆಯ ಗುಂಪಿಗೆ ಸೇರಿದ ನಿಕ್ಷೇಪಗಳಿಗೆ ಮೂಲಜನಿತ (ಪ್ರೈಮರಿ), ಸಹಜನಿತ (ಸಿನ್‌ಜೆನೆಟಿಕ್) ಅಥವಾ ಗರ್ಭಜನಿತ (ಹೈಪೊಜೆನೆಟಿಕ್) ನಿಕ್ಷೇಪಗಳೆಂದು ಹೆಸರು. ಎರಡನೆಯ ಗುಂಪಿಗೆ ಸೇರಿದ ನಿಕ್ಷೇಪಗಳಿಗೆ ಪುನರ್ಭವಿತ (ಸೆಕೆಂಡರಿ), ಉಪರಿಜನಿತ (ಎಪಿಜೆನೆಟಿಕ್) ಅಥವಾ ಬಾಹ್ಯಜನಿತ ನಿಕ್ಷೇಪಗಳೆಂದು ಹೆಸರು.

**ಪ್ರಕೃತಿಯ ಮೂಲ ವಸ್ತುಗಳು:** ಖನಿಜಗಳಲ್ಲಿ ಒಂದು ಅಥವಾ ಹೆಚ್ಚು ಮೂಲ ವಸ್ತುಗಳು ರಾಸಾಯನಿಕ ಸಂಯೋಜನೆಯಲ್ಲಿರುವುವು. ಇದುವರೆಗಿನ ಪರಿಶೋಧನೆಗಳಿಂದ ಪ್ರಕೃತಿಯಲ್ಲಿ ಒಟ್ಟು 98 ಅಂತಹ ಮೂಲ ವಸ್ತುಗಳಿವೆಯೆಂದು ತಿಳಿದುಬಂದಿದೆ. ಅವುಗಳನ್ನು ಲೋಹ ಮೂಲವಸ್ತು (ಧಾತು) ಮತ್ತು ಲೋಹೇತರ ಮೂಲವಸ್ತುಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಲೋಹ ಮೂಲಧಾತುಗಳಿಗೂ ಲೋಹೇತರ ಮೂಲವಸ್ತು ಗಳಿಗೂ ಭೌತಲಕ್ಷಣಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ಲೋಹ ಮೂಲಧಾತುಗಳ ಹೊಳಪು, ಮೆದುವು, ಉಷ್ಣ ಮತ್ತು ವಿದ್ಯುದ್ವಾಹಕತೆ–ಮುಂತಾದ ಲಕ್ಷಣಗಳು ಲೋಹೇತರ ಮೂಲ ವಸ್ತುಗಳಲ್ಲಿಲ್ಲ. ಅಲ್ಲದೆ ಲೋಹಗಳನ್ನು ತಗಡಾಗಿ ಬಡಿಯಬಹುದು; ತಂತಿಯಾಗಿ ಎಳೆಯ ಬಹುದು. ಲೋಹೇತರ ಮೂಲವಸ್ತುಗಳಲ್ಲಿ ಇವು ಸಾಧ್ಯವಿಲ್ಲ. ಆದರೂ ಈ ಎರಡು ವರ್ಗಗಳಿಗೂ ಖಚಿತವಾದ ಎಲ್ಲೆ ಇಲ್ಲ ಆರ್ಸೆನಿಕ್, ಆಂಟಿಮನಿ ಮುಂತಾದ ಕೆಲವು ಮೂಲಧಾತುಗಳಲ್ಲಿ ಎರಡು ಗುಂಪಿನ ಲಕ್ಷಣಗಳೂ ಇವೆ.

ಲೋಹ ಮೂಲವಸ್ತುಗಳಲ್ಲಿ ತಾಮ್ರ, ಬೆಳ್ಳಿ, ಚಿನ್ನ ಮತ್ತು ಪ್ಲಾಟಿನಂ ಗುಂಪಿನ ಮೂಲವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ಗಣಿಗಾರಿಕೆಯಿಂದ ತೆಗೆಯಲಾಗುತ್ತಿದೆ. ಆದರೆ ಚಿನ್ನ ಮತ್ತು ಪ್ಲಾಟಿನಂ ಗುಂಪಿನ ಮೂಲವಸ್ತುಗಳು ನಿಸರ್ಗದಲ್ಲಿ ಬಹಳ ವಿರಳವಿದ್ದು, ಅತಿ ಸಣ್ಣ ಪ್ರಮಾಣದಲ್ಲಿ ದೊರಕಿದರೂ ಗಣಿಗಾರಿಕೆಯಿಂದ ತೆಗೆಯಲಾಗುತ್ತದೆ.

ಚಿನ್ನ ಮೂಲವಸ್ತುವು ಸಣ್ಣ ಕಣಗಳಾಗಿ ಅಥವಾ ಬಂಗಾರ ಹೊಂದಿರುವ ಗಟ್ಟಿ (ಒರಟುಗಟ್ಟಿ) ನಗೆಟ್‌ಗಳಂತೆ ದೊರೆಯುತ್ತದೆ. ಅಗ್ನಿಶಿಲೆಗಳಲ್ಲಿ, ರೂಪಾಂತರ ಶಿಲೆಗಳಲ್ಲಿಯೂ ಚಿನ್ನವು ದೊರೆಯುತ್ತದೆ. ಜಲಗಾರರು ಚಿನ್ನದ ಕಣಗಳನ್ನು ಜಲಜಾನುವಿಕೆಯಿಂದ ಸಂಗ್ರಹಿಸುತ್ತಾರೆ.

ಒಂದು ಅದಿರಿನ ನಿಕ್ಷೇಪದಲ್ಲಿ (ಓರ್ ಡಿಪಾಸಿಟ್) ಲೋಹ ಅದಿರನ್ನು ಗಣಿಗಾರಿಕೆ ಯಿಂದ ತೆಗೆದು, ಅದರ ಮೂಲ ಲೋಹಧಾತುವನ್ನು ಲಾಭದಾಯಕವಾಗಿ ಬೇರ್ಪಡಿಸಲಾಗು ವುದೇ ಎನ್ನುವುದನ್ನು ಮುಖ್ಯವಾಗಿ ಅದಿರಿನ ದರ್ಜೆಯಿಂದಲೂ ಅದರ ಪರಿಮಾಣದಿಂದಲೂ ನಿರ್ಧರಿಸಲಾಗುವುದು. ಇಂದಿನ ಪರಿಸ್ಥಿತಿಯಲ್ಲಿ ಸಾಧಾರಣವಾಗಿ ಅದಿರುಗಳನ್ನು ಗಣಿಗಾರಿಕೆ ಯಿಂದ ಲಾಭದಾಯಕವಾಗಿ ಪಡೆಯುವುದಕ್ಕೆ ಅವುಗಳಲ್ಲಿರಬೇಕಾದ ಲೋಹ ಕನಿಷ್ಠಾಂಶವನ್ನು ಕೆಳಗೆ ತಿಳಿಸಿದೆ:

ಈ ಲೋಹ ಪ್ರಮಾಣಗಳು ಪ್ರತಿ ಲೋಹಕ್ಕೂ ಎಲ್ಲಿ ಸಂದರ್ಭಗಳಲ್ಲಿಯೂ ಅನ್ವಯಿಸುವುದಿಲ್ಲ. ಏಕೆಂದರೆ, ಗಣಿ ಕಾರ್ಯಗತವಾಗುವುದರಲ್ಲಿ ನಿಕ್ಷೇಪದ ಪ್ರಮಾಣ, ಅದಕ್ಕಿರುವ ಸುಗಮ ಪ್ರವೇಶ, ಅದಿರನ್ನು ಉಪಯೋಗಕ್ಕೆ ತರಲು ಇರುವ ಸುಲಭ ವಿಧಾನಗಳು, ಅದಿರಿನೊಡನೆ ಬೆರೆತಿರುವ ಬೆಲೆಯುಳ್ಳ ಉಪಪದಾರ್ಥಗಳು ಮತ್ತು ಅವುಗಳ ಪ್ರಮಾಣ ಮುಂತಾದ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

**ಮೂಲ ಅಥವಾ ಸಹಜನಿತ ನಿಕ್ಷೇಪಗಳು:** ಸಹಜನಿತ ನಿಕ್ಷೇಪಗಳು ಸಾಧಾರಣವಾಗಿ ಅಗ್ನಿಶಿಲೆಗಳಲ್ಲಿಯೇ ಹೆಚ್ಚಾಗಿರುವುದು; ಆದರೂ ಜಲಜಶಿಲೆಗಳಲ್ಲಿಯೂ ಇರಬಹುದು. ಅಗ್ನಿಶಿಲೆಗಳಲ್ಲಿ ಅಂತಹ ನಿಕ್ಷೇಪಗಳು ಅನೇಕ ರೀತಿಯಲ್ಲಿ ಜನಿಸುತ್ತವೆ. ಅವು ಶಿಲಾಪಾಕವು (ಮ್ಯಾಗ್ಮ) ಘನೀಭವಿಸುವಾಗ ಮೂಲ ಧಾತುಗಳ ಸಂಗ್ರಹದಿಂದಲೂ (ಮ್ಯಾಗ್‌ಮ್ಯಾಟಿಕ್ ಸೆಗ್ರಿಗೇಷನ್); ಆವಿ ಮತ್ತು ಹವೆಯ ರೂಪದಲ್ಲಿರುವ ಅನಿಲಗಳ ಪ್ರಕ್ರಿಯೆಗಳಿಂದಲೂ ಶಿಲಾರಸ ಜಲದಲ್ಲಿ ಮೂಲ ಧಾತುಗಳ ಅವಕ್ಷೇಪನದಿಂದಲೂ ಮತ್ತು ಆ ಮೂಲವಸ್ತುಗಳು ಇಕ್ಕೆಡೆಗಳಲ್ಲಿಯೂ ಸ್ಥಳೀಯ ಶಿಲೆಗಳೊಡನೆ ಬೆರೆತು ರಾಸಾಯನಿಕ ಪ್ರತಿಕ್ರಿಯೆಗಳನ್ನುಂಟು ಮಾಡುವುದರಿಂದಲೂ ಉತ್ಪತ್ತಿಯಾಗುತ್ತವೆ.

ಶಿಲಾಪಾಕ ಮೂಲಧಾತು ಸಂಗ್ರಹ ಎಂದರೆ ಶಿಲಾದ್ರವವು ದೀರ್ಘಕಾಲ ನಿಧಾನವಾಗಿ ಆರಿ, ಘನೀಭವಿಸುವ ಕಾರ್ಯಗತಿಯಲ್ಲಿ ಮೊಟ್ಟಮೊದಲು ಅದಿರು ಖನಿಜಗಳು ಹರಳುಗಳಾಗಿ ಬೇರ್ಪಟ್ಟು, ಶಿಲಾರಸಕ್ಕಿಂತ ಭಾರವಾಗಿರುವುದರಿಂದ ದ್ರವದ ತಳದಲ್ಲಿ ಶೇಖರವಾಗುವ ವಿಧಾನ. ಈ ರೀತಿಯಲ್ಲಿ ಕೆಲವು ಮ್ಯಾಗ್ನಟೈಟ್ (ಅಯಸ್ಕಾಂತ ಅಥವಾ ಸೂಜಿಗಲ್ಲು), ಕ್ರೋಮೈಟ್ ಮತ್ತು ಸಲ್ಫೈಡ್ ಅದಿರುಗಳು ಜನಿಸುವುವು, ಶಿಲಾಪಾಕವು ಆರುವಾಗ, ಅದರಲ್ಲಿಯೂ ಕೊನೆಯಲ್ಲಿ ಯಥೇಚ್ಛವಾಗಿ ಲೋಹಸಂಯೋಜಿತ ಆವಿ ಮತ್ತು ಅನಿಲಗಳು ಹೊರಸೂಸುತ್ತವೆ. ಈ ಆವಿ ಅನಿಲಗಳು ತಣ್ಣಗಿರುವ ಮೇಲ್ಭಾಗ

ಮತ್ತು ಇಕ್ಕೆಡೆಯ ಸ್ಥಳೀಯ ಶಿಲೆಗಳೊಡನೆ ಬೆರೆತು, ಸಂಯೋಜಿತ ಲೋಹಧಾತುಗಳು ಆ ಶಿಲೆಗಳ ಬಿರುಕುಗಳಲ್ಲಿಯೂ ರಂಧ್ರಗಳಲ್ಲಿಯೂ ಶೇಖರವಾಗಿ, ಅದಿರು ನಿಕ್ಷೇಪಗಳಾಗುವುವು. ಹೀಗೆ ರೂಪುಗೊಂಡ ಖನಿಜ ನಿಕ್ಷೇಪಗಳಿಗೆ ಅನಿಲರಚಿತ ನಿಕ್ಷೇಪಗಳೆಂದು (ನ್ಯುಮಟಾಲಿಟಿಕ್) ಹೆಸರು. ಅಲ್ಲದೆ ಶಿಲಾಪಾಕವು ಘನೀಭವಿಸುವಾಗ ಕೊನೆ ಕೊನೆಯಲ್ಲಿ ಮೂಲಧಾತು ಸಂಯೋಜಿತ ಉಷ್ಣಜಲವು ಯಥೇಚ್ಛವಾಗಿ ಹೊರಸೂಸುವುದು. ಈ ಜಲವೂ ಸುತ್ತುವರಿದಿರುವ ಸ್ಥಳೀಯ ಶಿಲೆಗಳೊಡನೆ ಬೆರೆತು, ರಾಸಾಯನಿಕ ಪ್ರಕ್ರಿಯೆಗಳಿಂದ ಆ ಶಿಲೆಗಳನ್ನು ಮಾರ್ಪಡಿಸುವುದಲ್ಲದೆ, ದ್ರವಸಂಯೋಜಿತ ಮೂಲವಸ್ತುಗಳನ್ನು ನಿಕ್ಷೇಪಿಸುತ್ತದೆ. ಈ ರೀತಿ ಶೇಖರವಾದ ಖನಿಜಗಳಿಗೆ 'ಉಷ್ಣಜಲರಚಿತ' ಹೈಡ್ರೋಥರ್ಮಲ್ ಮತ್ತು 'ವಿನಿಮಯಜನಿತ' (ರೀಪ್ಲೇಸ್‌ಮೆಂಟ್) ನಿಕ್ಷೇಪಗಳೆಂದು ಹೆಸರು.

ಸಹಜನಿತ ಖನಿಜ ನಿಕ್ಷೇಪಗಳು ಪ್ರಸ್ತರೀ ಶಿಲೆಗಳಲ್ಲಿಯೂ ರೂಪಿಸುವುವು. ಪ್ರಸ್ತರೀ ಶಿಲೆಗಳು ರಚಿತವಾಗುತ್ತಿರುವಾಗ ಮೆಕ್ಕಲಿನೊಡನೆ ತರಲಾದ ಮಾರ್ಪಾಡಾದ ಅದಿರು ಕಣಗಳು ಇತರ ಖನಿಜಗಳೊಂದಿಗೆ ಶೇಖರವಾಗಿ ಖನಿಜ ನಿಕ್ಷೇಪಗಳಾಗುವವು. ಅಲ್ಲದೆ, ದ್ರವರೂಪದಲ್ಲಿರುವ ಮೂಲಧಾತುಗಳು ರಾಸಾಯನಿಕ ಪ್ರಕ್ರಿಯೆಗಳಿಂದ ಖನಿಜ ರೂಪದಲ್ಲಿ ಪ್ರಕ್ಷೇಪಿಸುವುದರಿಂದಲೂ ಕೆಲವು ವೇಳೆ ಏಕಾಣುಜೀವಿಗಳ (ಬ್ಯಾಕ್ಟೀರಿಯ) ಕ್ರಿಯೆಯಿಂದ ಬೇರ್ಪಟ್ಟು, ಸಂಗ್ರಹವಾಗುವುದರಿಂದಲೂ ಖನಿಜ ನಿಕ್ಷೇಪಗಳಾಗುವವು.

**1. ಪುನರ್ಭವಿಕ (ಸೆಕಂಡರಿ) ಅಥವಾ ಉಪರಿಜನಿತ (ಎಪಿಜೆನೆಟಿಕ್) ನಿಕ್ಷೇಪಗಳು:** ಈ ನಿಕ್ಷೇಪಗಳು ಅಗ್ನಿಶಿಲೆ, ಪ್ರಸ್ತರೀಶಿಲೆ ಮತ್ತು ರೂಪಾಂತರ ಶಿಲೆಗಳಲ್ಲಿ ಯಾವುದರಲ್ಲಿ ಯಾದರೂ ರೂಪುಗೊಳ್ಳಬಹುದು. ಅವುಗಳ ರಚನೆಗೆ ಎರಡು ಕಾರ್ಯಗತಿಗಳು ಅಗತ್ಯ. ಮೊದಲು ಲೋಹ ಖನಿಜಗಳು ಶಿಲಾವರಣದಿಂದ ಬೇರ್ಪಟ್ಟು, ಕರಗಿ ದ್ರವರೂಪಕ್ಕೆ ಬರಬೇಕು. ಅನಂತರ ಆ ಖನಿಜ ದ್ರವಗಳು ಹರಿಯುವ ನೀರಿನಲ್ಲಿಯೂ ಅಂತರ್ಜಲ ದಲ್ಲಿಯೂ ಶಿಲಾ ಬಿರುಕುಗಳಲ್ಲಿಯೂ ಒಡಕುಗಳಲ್ಲಿಯೂ ಸೇರಿ, ಸ್ಫಟಿಕೀಕರಣದಿಂದ (ಕ್ರಿಸ್ಟಲೈಜೇಷನ್) ಪುನರ್ಭವಿಸಬೇಕು. ಹೀಗೆ ರೂಪುಗೊಂಡ ನಿಕ್ಷೇಪಗಳು ಖನಿಜಸಿರ ಅಥವಾ ಸೆಲೆಗಳಾಗಿ ಪರಿಣಮಿಸುವುವು. ಅಲ್ಲದೆ ಬಂಡೆಯ ಬಿರುಕು-ಮುರುಕುಗಳಲ್ಲಿ ಹರಿಯುತ್ತ ಈ ಖನಿಜ ದ್ರವಗಳು ಇಕ್ಕೆಡೆಯ ಶಿಲೆಗಳು ವ್ಯಾಪ್ಯವಾಗಿದ್ದಲ್ಲಿ (ಪರ್‌ಮಿಯಬಲ್) ಅವುಗಳ ಒಳಹೊಕ್ಕು ರಾಸಾಯನಿಕ ಪ್ರಕ್ರಿಯೆಗಳಿಂದ ಖನಿಜ ನಿಕ್ಷೇಪಗಳಾಗಿ ಪುನರ್ಭವಿಸುತ್ತವೆ.

**2. ಪೈಸಲಾತಿ ಹಂತ (ಕಟಾಫ್ ಗ್ರೇಡ್): ಅದಿರಿನ ಮೌಲ್ಯಮಾಪನ:** ಅದಿರಿನ ಮೌಲ್ಯಮಾಪನ ಮಾಡುವಾಗ ಈ ಕೆಳಗಿನ ಅಂಶಗಳನ್ನು ಮುಖ್ಯವಾಗಿ ಪರಿಗಣಿಸಬೇಕು.

1) **ಅದಿರಿನ ಶ್ರೇಣಿ:** ಒಂದು ಅದಿರಿನಲ್ಲಿ ಇರುವ ಲೋಹಾಂಶದ ಶೇಖರಣೆ ಆ ಅದಿರಿನ ಶ್ರೇಣಿಯದಾಗಿರುತ್ತದೆ. ಈ ಲೋಹಾಂಶವನ್ನು ಶೇಕಡಾವಾರು ಅಥವಾ ಪಿ.ಪಿ.ಎಮ್.ನಲ್ಲಿ (ಪಾರ್ಟ್ಸ್ ಪರ್ ಮಿಲಿಯನ್) ಅಳೆಯುತ್ತಾರೆ. ಲೋಹಾಂಶವನ್ನು ಕಂಡು ಹಿಡಿಯುವ ವಿಧಾನವನ್ನು ಅಸ್ಸೆಯಿಂಗ್ (ಗುಣ ಪರೀಕ್ಷೆ) ಅಥವಾ ಪ್ರಮಾಣೀಕರಣ ಎನ್ನುವರು. ಬಹಳಷ್ಟು ಸಲ ರಾಜಕೀಯ ಹಾಗೂ ಆರ್ಥಿಕ ಪರಿಗಣನೆಯನ್ನು ಆಧರಿಸಿ ಅದಿರಿನ ಅತಿ ಕಡಿಮೆ ಶ್ರೇಣಿಯ ಲೋಹಾಂಶವನ್ನು ಆ ಅದಿರಿನ ಕೆಳಮಟ್ಟದ ಶ್ರೇಣಿ ಎಂದು ಕರೆಯುವರು. ಒಂದು ಅದಿರಿನಲ್ಲಿ ಸಿಕ್ಕುವ ಖನಿಜ ಸಂಚಯನದ ಮೌಲ್ಯವು ನಿಧಾನವಾಗಿ ಇಳಿಮುಖವಾಗುವ ಎಲ್ಲೆಯನ್ನು (ಸೀಮಾರೇಖೆ ಅಥವಾ ಸರಹದ್ದು) ಗುರುತಿಸಬೇಕಾದರೆ ಬಹಳಷ್ಟು ನಮೂನೆಗಳನ್ನು ಮೌಲ್ಯ ಮತ್ತು ರಾಸಾಯನಿಕ ಅಧ್ಯಯನಕ್ಕೆ ಒಳಪಡಿಸಬೇಕು. ಕಾಲಾನುಸಾರ ಸಂಗ್ರಹಿಸಬೇಕು. ಈ ರೀತಿ ಗುರುತಿಸಿದ ಸೀಮಾರೇಖೆಗಳನ್ನು ರಾಸಾಯನಿಕ ಮೌಲ್ಯದ, ಅಸ್ಸೆ (ಗುಣಪರೀಕ್ಷೆ) ಮಿತಿಗಳು ಎನ್ನುವರು. ಆರ್ಥಿಕವಾಗಿ ಒಂದು ರೇಖೆಯನ್ನು ಗುರುತಿಸಿದ್ದಾಗ್ಯೂ ಭೌಗೋಳಿಕ, ಭೌತಿಕ ಮತ್ತು ಭೂವೈಜ್ಞಾನಿಕ ಲಕ್ಷಣದ ಮೇಲೆ ಗುರುತಿಸಲು ಸಾಧ್ಯವಿಲ್ಲ. ಒಂದು ವಸ್ತುವಿನ ಬೆಲೆ ಏರಿದರೆ ಆಗ ಆ ವಸ್ತುವಿನ ಮೌಲ್ಯವನ್ನು ಪೈಸಲಾತಿ ಹಂತಕ್ಕೆ ಇಳಿಸಬಹುದು. ಆಗ ಅದು ಪ್ರತಿ ಟನ್ ಅದಿರು ನಿಕ್ಷೇಪವನ್ನು ಮೀಸಲಾಗಿರಿಸಬಹುದು. ಇದು ಅದಿರಿನ ಎಲ್ಲ ಶ್ರೇಣಿಯನ್ನು ಕಡಿತಗೊಳಿಸುತ್ತದೆ. ಆದರೆ ದೈನಂದಿನ ಉತ್ಪಾದನೆಯಲ್ಲಿ ಆ ಉದ್ಯಮದ ಜೀವಾವಧಿಯನ್ನು ಹೆಚ್ಚಿಸುತ್ತದೆ. ಅದಿರು ನಿಕ್ಷೇಪಗಳ ಶ್ರೇಣಿ ಪ್ರಾದೇಶಿಕವಾಗಿ ಹಾಗೂ ಅದಿರಿನ ಸಂಚಯನ ಮೂಲಕ್ಕೆ ತಕ್ಕಂತೆ ಬದಲಾಗುತ್ತಾ ಹೋಗುತ್ತದೆ. ಕಡಿಮೆ ಶ್ರೇಣಿಯ ಅದಿರಿನಿಂದ ಹೆಚ್ಚಿನ ಲಾಭ ಬರಬೇಕಾದರೆ ಹೆಚ್ಚು ಪೈಸಲಾತಿ ಹಂತದ ಅದಿರು ಬೇಕಾಗುತ್ತದೆ. ಈ ಶತಮಾನದಲ್ಲಿ ಲೋಹಪೂರಿತ ಗಣಿಗಳನ್ನು ವಿಶ್ಲೇಷಿಸುವಲ್ಲಿ ಹೆಚ್ಚಿನ ಒಲವು ನಾಗರಿಕರು ಹಾಗೂ ಉದ್ದಿಮೆದಾರರು ತೋರುತ್ತಿದ್ದಾರೆ. ತಾಂತ್ರಿಕತೆಯ ಆವಿಷ್ಕಾರಗಳು ಅನುಪಯುಕ್ತ ವಸ್ತುಗಳನ್ನು ಅದಿರಾಗಿ ಮಾರ್ಪಡಿಸಲು ಸಾಧ್ಯವಾಗುತ್ತಿದೆ.

2) **ಉಪೋತ್ಪನ್ನ ಅಥವಾ ಉಪವಸ್ತು (ಬೈಪ್ರಾಡಕ್ಟ್):** ಕೆಲವು ಅದಿರಿನಲ್ಲಿ ಹಲವಾರು ಲೋಹವಸ್ತುಗಳು ಸೇರಿರುತ್ತವೆ. ಒಂದು ಲೋಹದ ವಿನಿಮಯ ಇನ್ನೊಂದು ಲೋಹದ ಗಣಿಗಾರಿಕೆಗೆ ಸಹಕರಿಸುತ್ತದೆ.

3) **ಉಪಯುಕ್ತ ಸರಕಿನ ಬೆಲೆ (ಕಮೊಡಿಟಿ ಪ್ರೈಸ್):** ಲೋಹವಸ್ತುವಿನ ಬೆಲೆ ಬಹು ಮುಖ್ಯವಾದುದು. ಲೋಹದಿಂದ ಲೋಹಕ್ಕೆ ಬೆಲೆ ಬದಲಾಗುತ್ತದೆ. ಕೆಲವು ವಸ್ತುವಿನ ಬೆಲೆ ದಿನಂಪ್ರತಿ ಬದಲಾಗುತ್ತದೆ. ಕೆಲವು ಲೋಹಗಳ ಬೆಲೆ ಅವುಗಳ ಬೇಡಿಕೆ ಹಾಗೂ ಪೂರೈಕೆಯ ಮೇಲೆ ನಿರ್ಧರಿಸಲಾಗುತ್ತದೆ.

4) **ಖನಿಜ ರೂಪ:** ಖನಿಜದ ಗುಣಧರ್ಮಗಳು ಆ ವಸ್ತುವಿನ ಕೈಗಾರಿಕೆ ಹಾಗೂ ಗಣಿಗಾರಿಕೆ ನಿರ್ಧರಿಸುತ್ತವೆ. ಇವು ಪೈಸಲಾತಿ ಹಂತವನ್ನು ನಿರ್ಧರಿಸುತ್ತವೆ.

5) **ಹರಳಿನ ಗಾತ್ರ ಹಾಗೂ ರೂಪ:** ಒಟ್ಟು ಲೋಹದ ಶೇಕಡಾವಾರು ಸ್ವಾಧೀನತೆ ಎಂದರೆ ಆ ವಸ್ತು ಕಡೆ ಪಕ್ಷ 90 ಪ್ರತಿಶತ ಲೋಹಾಂಶ ಪುನರುಜ್ಜೀವನದ ಅನಂತರ ಹೊಂದಿರಬೇಕು. ಉಳಿದ 10 ಪ್ರತಿಶತ ಗಣಿಗಾರಿಕೆಯಲ್ಲಿ ಕಳೆದುಕೊಂಡಿರುತ್ತದೆ. ಕೆಲವೊಮ್ಮೆ ಲೋಹಾಂಶವನ್ನು ಅತಿ ಸಣ್ಣ ಪುಡಿಯಾಗಿ ಅಭಿವೃದ್ಧಿಪಡಿಸಿದರೆ 100 ಪ್ರತಿಶತ ಲೋಹ ಆವಿಷ್ಕಾರಿ ತಾಂತ್ರಿಕತೆಯಿಂದ ಪಡೆಯಬಹುದು.

6) **ನಿರುಪಯುಕ್ತ ವಸ್ತುಗಳು:** ನಿರುಪಯುಕ್ತ ವಸ್ತುಗಳು ಅದಿರಿನಲ್ಲಿ ಗ್ಯಾಂಗ್ ಶಿಲಾಮಿಶ್ರಣವಾಗಿ ಇರುತ್ತವೆ. ಇವು ಅದಿರಿನ ಮೌಲ್ಯವನ್ನು ಕುಂಠಿತಗೊಳಿಸುತ್ತವೆ. ಇವನ್ನು ಸಾಧ್ಯವಾದಷ್ಟು ಹೊರಹಾಕಲು ಪ್ರಯತ್ನಿಸಬೇಕು. ಹಾಗೂ ಅದಿರಿನ ಗುಣಮಟ್ಟವನ್ನು ಹೆಚ್ಚಿಸಬೇಕು.

7) **ನಿಕ್ಷೇಪ ಗಾತ್ರ ಹಾಗೂ ಆಕೃತಿ:** ನಿಕ್ಷೇಪದ ಗಾತ್ರ ಹಾಗೂ ಆಕೃತಿಗಳು ಕೂಡ ಗಣಿಗಾರಿಕೆ ಶ್ರೇಣಿಯ ಮೇಲೆ ಪರಿಣಾಮ ಬೀರುತ್ತವೆ. ಬಹಳ ದೊಡ್ಡವು, ಭೂಮೇಲ್ಮೈನ ದೊಡ್ಡ ದೊಡ್ಡ ನಿಕ್ಷೇಪಗಳನ್ನು ಕಡಿಮೆ ದರದಲ್ಲಿ ತೆರೆದಗಣಿಗಾರಿಕೆಯಿಂದ ಅತಿ ಕಡಿಮೆ ಖರ್ಚಿನಲ್ಲಿ ಅಭಿವೃದ್ಧಿಪಡಿಸಬಹುದು. ಆಗ ಆ ಖನಿಜದ ಬೆಲೆಯೂ ಕೂಡ ಕಡಿಮೆ ಆಗುತ್ತದೆ. ಆದರೆ ಕೆಲವು ವಸ್ತುಗಳು ಭೂ ಅಂತರಾಳದಲ್ಲಿ ಇದ್ದು ಹೊರತೆಗೆಯಬೇಕಾದರೆ ಬಹಳಷ್ಟು ಶ್ರಮಪಡಬೇಕಾಗುತ್ತದೆ. ಆದ್ದರಿಂದ ಬೆಲೆಯು ಕೂಡ ಹೆಚ್ಚುತ್ತದೆ. ಹೆಚ್ಚು ಬೆಲೆಬಾಳುವ ಲೋಹಗಳ ಪ್ರಮಾಣ ಕಡಿಮೆ ಇರುತ್ತದೆ. ಇದಲ್ಲದೆ ಅದಿರಿನ ಗುಣಧರ್ಮಗಳು, ಗಣಿಗಾರಿಕೆಯ ಬಂಡವಾಳ, ದೊರಕುವ ಸ್ಥಳ, ಪರಿಸರ ನೋಟ, ತೆರಿಗೆ ಮತ್ತು ರಾಜಕೀಯ ಸೀಮೆ ಹಾಗೂ ರಾಜ್ಯವಾರು ಪಸರುವಿಕೆಯ ಸೀಮೆ ಬಹಳಷ್ಟು ಪರಿಣಾಮ ಬೀರುತ್ತವೆ.

**3. ಮ್ಯಾಗ್ನಟೈಟ್: (ಆಯಸ್ಕಾಂತ ಅಥವಾ ಸೂಜಿಗಲ್ಲು):** ಇದು ಉತ್ತಮ ದರ್ಜೆಯ ಕಬ್ಬಿಣದ ಅದಿರು. ಇದರಲ್ಲಿ ಶೇ. 72ರಷ್ಟು ಶುದ್ಧ ಕಬ್ಬಿಣಾಂಶವಿದೆ. ಉಳಿದ 28 ಭಾಗ ಆಮ್ಲಜನಕ. ಇದು ಕಪ್ಪು ಬಣ್ಣ ಹೊಂದಿದ್ದು ಬಹಳ ಭಾರ, ಮತ್ತು ಅತ್ಯಂತ ಕಠಿಣ ಹಾಗೂ ಕಬ್ಬಿಣವನ್ನು ಆಕರ್ಷಿಸುವ ಶಕ್ತಿ ಹೊಂದಿದೆ. ಈ ಲೋಹ ಜಗತ್ತಿನಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತದೆ. ಸ್ವೀಡನ್, ರಷ್ಯ, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಯೂಕ್ರೇನ್, ಲಿಬೀರಿಯ ಹಾಗೂ ಭಾರತದಲ್ಲಿ ಯಥೇಚ್ಛವಾಗಿ ದೊರೆಯುವುದು. ಕರ್ನಾಟಕ ರಾಜ್ಯದಲ್ಲಿ ಕಬ್ಬಿಣದ ಅದಿರು ನಿಕ್ಷೇಪಗಳು ವಿಶಾಲವಾಗಿ ಹರಡಿವೆ. ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಸಂಡೂರು, ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿ, ಕುದುರೆಮುಖ ಮತ್ತು ಗಂಗಾಮೂಲಗಳಲ್ಲಿ, ಶಿವಮೊಗ್ಗ ಜಿಲ್ಲೆಯ ಅರಸಲು ಮತ್ತು ಸಿದ್ದರಹಳ್ಳಿ, ತುಮಕೂರು ಜಿಲ್ಲೆಯ ಹುಳಿಯಾರು, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹಿರಿಯೂರು ಮತ್ತು ಸುಸುಲಗಳಲ್ಲಿ ದೊರೆಯುತ್ತವೆ. ಸಂಡೂರು ಹಾಗೂ ಚಿಕ್ಕಮಗಳೂರಿನ ಮ್ಯಾಗ್ನಟೈಟ್ ಅದಿರು ಉತ್ತಮ ದರ್ಜೆಯ ಹಾಗೂ ಉನ್ನತ ಪ್ರಮಾಣದ್ದು. ಈ ಭಾಗಗಳಲ್ಲಿ ಸು. 150 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಅದಿರಿನ ನಿಕ್ಷೇಪ ಇದೆ ಎಂದು ಅಂದಾಜು ಮಾಡಲಾಗಿದೆ.

ಕರ್ನಾಟಕದ ಕಬ್ಬಿಣದ ಅದಿರುಗಳು ಸಂಪರ್ಕ ರೂಪಾಂತರದಿಂದಲು (ಕಾಂಟಾಕ್ಟ್ ಮೆಟಮಾರ್ಫಿಸಮ್) ವಿನಿಮಯ ಪರಿವರ್ತನೆ (ಮೆಟಸೋಮಾಟಿಕ್ ರೀಪ್ಲೇಸ್‌ಮೆಂಟ್) ಕ್ರಿಯೆಯಿಂದಲೂ ಹಾಗೂ ಪ್ರಸ್ತರಿ ವಿಧಾನಗಳಿಂದಲೂ ಲೋಹಸಾಧನೆಗೆ ಅನುಕೂಲದರ್ಜೆಯ ನಿಕ್ಷೇಪಗಳಾಗಿ ಪರಿಣಮಿಸಿರುತ್ತವೆ. ವಿವಿಧ ರೂಪದಲ್ಲಿ ದೊರೆಯುವ ಈ ಖನಿಜ ವಿಶೇಷವಾಗಿ ಮುದ್ದೆಯಾಗಿ ಹಾಗೂ ಹರಳಿನ ರೂಪದಲ್ಲಿ ದೊರೆಯುತ್ತದೆ. ಹರಳಿನ ರೂಪದಲ್ಲಿ ಕ್ಯೂಬಿಕ್ ವ್ಯವಸ್ಥೆಯ ಅಷ್ಟ ಮುಖಾಕೃತಿ ಇರುತ್ತದೆ. ಒರೆ ಹಚ್ಚಿದಾಗ ಇದರ ಪುಡಿಯು ಕಪ್ಪು ಬಣ್ಣವನ್ನು ತೋರುತ್ತದೆ. ಇದರ ಹೊಳಪು ಲೋಹದ ಹೊಳಪು. ಈ ಖನಿಜ ಸೀಳುಗಳಾಗಿ ಒಡೆಯುವುದು ಅಪರೂಪ. ಸೀಳಿದರೂ ಸೀಳು ಅಷ್ಟ ಮುಖಾಕೃತಿಗೆ ಸಮಾನಾಂತರವಾಗಿರುತ್ತದೆ. ಒಡೆದಾಗ ಅದರ ಮೈ ಉಕ್ಕಿನ ಮುರಿದ ಭಾಗದಂತೆ ಮುಳ್ಳುಮುಳ್ಳಾಗಿರುತ್ತದೆ. ಕೆಲವು ವೇಳೆ ಅಸ್ಪಷ್ಟ ಶಂಖಾಕೃತಿಯ ಒಡೆದ ಮೈ ಇರುವುದುಂಟು. ಇದರ ಕಾಠಿಣ್ಯ 5.5–6.5 ಮತ್ತು ಸಾಪೇಕ್ಷ ಸಾಂದ್ರತೆ 5–18.

ಮೂಲತಃ ಅಗ್ನಿಜನ್ಯಶಿಲೆಗಳು ಈ ಖನಿಜಕ್ಕೆ ಆಕರವಾದರೂ ರೂಪಾಂತರ ಶಿಲೆಗಳಲ್ಲಿಯೇ ಇದು ವಿಶೇಷವಾಗಿ ದೊರೆಯುವುದು ಸರ್ವೇಸಾಮಾನ್ಯ.

**4. ವಿರಳ ಧಾತುಗಳು:** ಸು. 70 ಮೂಲವಸ್ತುಗಳು ಆವರ್ತಕೋಷ್ಟಕದಲ್ಲಿ ದಾಖಲಾಗಿವೆ. ಅದರಲ್ಲಿಯೂ ಕೆಲವು ಅತೀ ವಿರಳ ಮತ್ತು ವಿರಳ ವಸ್ತುಗಳು ನಿಸರ್ಗದಲ್ಲಿ ಆಕಸ್ಮಿಕವಾಗಿ ಸಿಕ್ಕುತ್ತವೆ.

ಲ್ಯಾಂಥನಮ್ (Z57) ಮತ್ತು ಸೀರಿಯಂನಿಂದ (Z58), ಲ್ಯುಟೇಷಿಯಂ (Z71) ವರೆಗೆ ಇನ್ನೂ 14 ಲ್ಯಾಂಥನೈಡ್ಸ್‌ಗಳನ್ನು ಸಾಮಾನ್ಯವಾಗಿ ವಿರಳಧಾತುಗಳೆನ್ನುವರು. ಇನ್ನೂ ಎರಡು ಧಾತುಗಳಾದ ಯಿಟ್ರಿಯಂ (Z29) ಮತ್ತು ಸ್ಕ್ಯಾಂಡಿಯಂ (Z21) ಗಳನ್ನು ಈ ಪಟ್ಟಿಯಲ್ಲಿ ಸೇರಿಸಬಹುದು.

ಶಿಲಾವೃತ್ತದಲ್ಲಿ ವಿರಳಧಾತುಗಳು ಭೂಚಿಪ್ಪಿನಲ್ಲಿ ಕೆಲವು ಧಾತುಗಳು ಹೇರಳವಾಗಿ ಸಿಗುತ್ತವೆ. ಭೂರಸಾಯನ ಶಾಸ್ತ್ರದಲ್ಲಿ ವಿರಳ ಶಬ್ದವನ್ನು, ಯಾವ ವಸ್ತು ನಿಸರ್ಗದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತದೆಯೋ ಅದಕ್ಕಾಗಿ ಬಳಸಲಾಗುತ್ತಿದೆ. ಕೆಲವು ವಸ್ತುಗಳು ಖನಿಜಗಳಾಗಿ ಸಿಗದೆ, ಖನಿಜಗಳ ದೋಷಗಳಾಗಿ ಮತ್ತು ಅದಿರಿನ ದೋಷಗಳಾಗಿ ಸಿಗುತ್ತವೆ. ಇಂತಹ ಮೂಲವಸ್ತುಗಳನ್ನು ಈ ಗುಂಪಿಗೆ ಸೇರಿಸಲಾಗಿದೆ. ವಿರಳಧಾತುಗಳ ತಾಂತ್ರಿಕತೆಯಲ್ಲಿ ಆವಿಷ್ಕಾರ ಮತ್ತು ಅವುಗಳ ಹೆಚ್ಚಿನ ಉತ್ಪಾದನೆಯಿಂದಾಗಿ, ನಿಧಾನವಾಗಿ ಈ ಧಾತುಗಳ ಸಂಖ್ಯೆ ಇಳಿಯುತ್ತಿದೆ. ಕೆಲವು ಸಂಶೋಧಕರು ಟೈಟಾನಿಯಂನ್ನು ವಿರಳಧಾತುವಾಗಿ ಪರಿಗಣಿಸುವುದಿಲ್ಲ. ಏಕೆಂದರೆ, ಇದನ್ನು ಕೃತಕ ಅಥವಾ ಸಂಸ್ಲೇಷಿಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ. ಆದ್ದರಿಂದ ಈಗ ವಿರಳವೆಂದು ಗುರುತಿಸಿದ ಧಾತುಗಳು ಮುಂದಿನ ವರ್ಷಗಳಲ್ಲಿ ಹಾಗೆನ್ನಲು ಸಾಧ್ಯವಿಲ್ಲ. ಈ ಎರಡು ದಶಕಗಳ ಹಿಂದಿನಿಂದ ವಿರಳಧಾತುಗಳ ಉತ್ಪಾದನೆ ಗಣನೀಯವಾಗಿ ಏರುತ್ತಿದೆ. ನವೀನ ಕೈಗಾರಿಕೋದ್ಯಮ (ಮಾಡರ್ನ್ ಇಂಡಸ್ಟ್ರಿ) ಈ ಧಾತುಗಳನ್ನು ಉಚ್ಚಸ್ತರದ ಶುದ್ಧತೆಯಲ್ಲಿ, ಅಣುವಿಗಾಗಿ (ನ್ಯೂಕ್ಲಿಯರ್), ಅರೆವಾಹಕ (ಸೆಮಿ ಕಂಡಕ್ಟರ್) ಮತ್ತು ಲೋಹ ಸಂಬಂಧಿತ ಉದ್ದಿಮೆಗಳ ಆವಶ್ಯಕತೆಗಳನ್ನು ಪೂರೈಸಲು ತಯಾರಿಸಲಾಗುತ್ತಿದೆ.

ವಿರಳಧಾತುಗಳ ಗುಣಗಳು ಮತ್ತು ಸಂಯೋಜನೆಯಲ್ಲಿ ವಿಧವಿಧವಾಗಿವೆ. ರಾಸಾಯನಿಕ ವಿಶ್ಲೇಷಣಾ ವಿಧಾನಗಳಿಂದ ಕಚ್ಚಾ ಸಾಮಗ್ರಿಗಳ ಸಂಯೋಜನೆಯನ್ನು ತಿಳಿಯಲು ಬಳಸಲಾಗುತ್ತಿದೆ. ವಿರಳಧಾತುಗಳನ್ನು 1586ರಲ್ಲಿ ಕಂಡುಹಿಡಿಯಲಾಯಿತು. 1550ರ ಮಧ್ಯದವರೆಗೆ ಈ ವಿರಳ ಧಾತುಗಳ ಬಗ್ಗೆ ತಿಳಿದಿರಲಿಲ್ಲ. ಆವರ್ತಕೋಷ್ಟಕದಲ್ಲಿ ಬೇರಿಯಂ ಮತ್ತು ಟ್ಯಾಂಟಲಂ ಮಧ್ಯದ ಹೆಚ್ಚಿನ ಭಾಗ ವಿರಳಧಾತುಗಳು ಆವರಿಸಿವೆ. ಅವುಗಳ ಅಣುತೂಕದ ವ್ಯತ್ಯಾಸ 45 ಯುನಿಟ್‌ಗಳು. ಗುರುತಿಸಿದ ವಿರಳಧಾತು ಹಾಗೂ ಗೊತ್ತಿರದ ವಿರಳಧಾತುಗಳೆಲ್ಲ ಈ ಮಧ್ಯ ಸ್ಥಾನವನ್ನು ಆಕ್ರಮಿಸಿವೆ. ಯಾರಿಗೂ ಇವುಗಳ ಸಂಖ್ಯೆ ಇನ್ನೂ ನಿಖರವಾಗಿ ತಿಳಿದಿಲ್ಲ. ಕೆಲವರು 20, 30 ಹಾಗೂ 40 ಎಂದು ತಮ್ಮ ಅರಿವಿಗೆ ಬಂದಂತೆ ತಿಳಿಸಿದ್ದಾರೆ. ಈ ಅನಿಯಮಿತ ಸ್ಥಾನ ವಿರಳ ಧಾತುಗಳ ಜನನದ ಬಗ್ಗೆ ಹೆಚ್ಚಿನ ಸಂಶೋಧನೆಗೆ ಪ್ರೇರೇಪಿಸಿದೆ. ಈ ಧಾತುಗಳ ವಿಂಗಡನೆಯ ವಿಧಾನಗಳು ಕೂಡ ಕಡಿಮೆ.

**5. ವೆನೇಡಿಯಮ್:** ವೆನೇಡಿಯಂ ಲೋಹವು ಪ್ರಕೃತಿಯಲ್ಲಿ ಇತರ ಮೂಲಧಾತುಗಳೊಂದಿಗೆ ಸಂಯೋಜಿತವಾಗಿ ಅಗ್ನಿಶಿಲೆಗಳಲ್ಲಿಯೂ ಜಲಜಶಿಲೆಗಳಲ್ಲಿಯೂ ವಿರಳವಾಗಿ ಹರಡಿರುತ್ತದೆ. ಆದರೂ ಅದು ದೊರಕುವ ಪ್ರಮಾಣವು ಅತಿ ಕಡಿಮೆ. ಕೆಲವೆಡೆಗಳಲ್ಲಿ ಅಂತಹ ಶಿಲೆಗಳು ನಶಿಸಿ ಹಿಂದುಳಿದ ಕಬ್ಬಿಣ ಮಿಶ್ರಿತ ಮಣ್ಣಿನಲ್ಲಿಯೂ ಜೇಡುಗಳಲ್ಲಿಯೂ ಕೊಂಚ ಸಂಗ್ರಹಿಸಿರುತ್ತದೆ. ಜೀವಶೇಷಗಳಲ್ಲಿಯೂ ಮತ್ತು ಬಿಟ್ಯೂಮಿನ್, ಆಸ್ಫಾಲ್ಟ್, ಕಲ್ಲಿದ್ದಲು ಇವುಗಳ ಬೂದಿಗಳಲ್ಲಿಯೂ ಕಲ್ಲೆಣ್ಣೆಯುರಿದ ಕಜ್ಜಲಿನಲ್ಲಿಯೂ ಶೇ. 12ರವರೆಗೆ ಸಿಗುವುದುಂಟು.

| ಲೋಹಗಳು | ಶೇಕಡವಾರು ಪ್ರಮಾಣ | ಲೋಹಗಳು | ಶೇಕಡವಾರು ಪ್ರಮಾಣ |
|---|---|---|---|
| ಅಲ್ಯೂಮಿನಿಯಂ | 35.00 | ನಿಕ್ಕಲ್ | 1.50 |
| ಕಬ್ಬಿಣ | 30.00 | ತಾಮ್ರ | 1.00 |
| ಮ್ಯಾಂಗನೀಸ್ | 25.00 | ತವರ | 1.00 |
| ಕ್ರೋಮಿಯಂ | 25.00 | ಬೆಳ್ಳಿ | 0.05 |
| ಸತು | 5.00 | ಚಿನ್ನ | 0.001 |
| ಸೀಸ | 5.00 | ಪ್ಲಾಟಿನಂ | 0.001 |

ವೆನೇಡಿಯಂ ಲೋಹದ ಮುಖ್ಯ ಅದಿರುಗಳೆಂದರೆ ಪ್ಯಾಟ್ರೋನೈಟ್, ವೆನೇಡಿನೈಟ್ ಮತ್ತು ಕಾರ್ನೊಟೈಟ್ ಎಂದು ಹೇಳಬಹುದು. ಕರ್ನಾಟಕ ಶಿಲಾಹರವಿನಲ್ಲಿ ಈ ಯಾವ ಖನಿಜಗಳೂ ತಿಳಿದುಬಂದಿಲ್ಲ. ದೇವರನರಸೀಪುರದ ಟೈಟಾನಿಫೆರಸ್ ಮ್ಯಾಗ್ನಟೈಟ್ (ಟೈಟೇನಿಯಂ) ಮಿಶ್ರಿತ ಆಯಸ್ಕಾಂತೀಯ ಅದಿರು ನಿಕ್ಷೇಪದಲ್ಲಿ ಶೇ. 0.53 ಅಂಶದಷ್ಟು ವೆನೇಡಿಯಂ ಇರುವುದಾಗಿ ಅಂದಾಜಿಸಲಾಗಿದೆ. ಇಲ್ಲಿಯೂ ಮತ್ತು ತಗಡೂರು ರಂಗನ ಬೆಟ್ಟದ ಕಬ್ಬಿಣದ ನಿಕ್ಷೇಪಗಳಲ್ಲಿಯೂ ಕೈಗಾರಿಕೆಗೆ ಉಪಯುಕ್ತವಾಗುವಷ್ಟು ವೆನೇಡಿಯಂ ಲೋಹವಿದೆ ಎನ್ನುವುದನ್ನು ಪುಷ್ಟೀಕರಿಸಲು ಹೆಚ್ಚಿನ ಸಂಶೋಧನೆ ಹಾಗೂ ಅಧ್ಯಯನ ಆಗಬೇಕಾಗಿದೆ. ಈ ಲೋಹವು ಉಕ್ಕಿನ ತಯಾರಿಕೆಯಲ್ಲಿ ಅತಿ ಉಪಯುಕ್ತ ವಸ್ತು.

**6. ಶಿಲಾರಸಬಾಷ್ಪಜನ್ಯ ಕ್ರಿಯೆ (ನ್ಯುಮಟಾಲಿಸಿಸ್):** ಶಿಲಾಪಾಕವು ಆರುವಾಗ, ಅದರಲ್ಲಿಯೂ ಕೊನೆಯಲ್ಲಿ, ಅದರಿಂದ ಯಥೇಚ್ಛವಾಗಿ ಲೋಹಸಂಯೋಜಿತ ಆವಿ ಮತ್ತು ಅನಿಲಗಳು ಹೊರಸೂಸುತ್ತವೆ. ಈ ಆವಿ ಅನಿಲಗಳು ತಣ್ಣಗಿರುವ ಮೇಲ್ಭಾಗ ಮತ್ತು ಇಕ್ಕೆಡೆಯ ಸ್ಥಳೀಯ ಶಿಲೆಗಳೊಡನೆ ಬೆರೆತು, ಸಂಯೋಜಿತ ಲೋಹಧಾತುಗಳು ಆ ಶಿಲೆಗಳ ಬಿರುಕುಗಳಲ್ಲಿಯೂ ರಂಧ್ರಗಳಲ್ಲಿಯೂ ಶೇಖರವಾಗಿ, ಅದಿರು ನಿಕ್ಷೇಪಗಳಾಗುವುವು. ಹೀಗೆ ರೂಪಗೊಂಡ ಖನಿಜ ನಿಕ್ಷೇಪಗಳಿಗೆ ಅನಿಲರಚಿತ (ನ್ಯುಮಟಾಲಿಟಿಕ್) ಗಳೆಂದು ಹೆಸರು.

**7. ಶೀಲೈಟ್:** ಶೀಲೈಟ್ ಎಂಬುದು ಟಂಗ್‌ಸ್ಟೇಟ್ ಹೊಂದಿದ ವಸ್ತು ರಾಸಾಯನಿಕವಾಗಿ ಕ್ಯಾಲ್ಸಿಯಂ, ಮತ್ತು ಟಂಗ್‌ಸ್ಟೇಟ್ ಆಕ್ಸೈಡ್‌ನೊಂದಿಗೆ ಜಲೋಷ್ಣ ಕ್ರಿಯೆಯ ಸ್ಥಿತಿಗತಿಗಳು ಇದ್ದಾಗ ಉದ್ಭವಿಸುತ್ತದೆ. ಇದು ಗ್ರಾನೈಟ್ ಹಾಗೂ ನೈಸ್‌ಗಳೊಂದಿಗೆ ಹೊಂದಿಕೊಂಡಿರುವ ಪೆಗ್ಮಟೈಟ್ ಎಳೆ ಅಥವಾ ಪಟ್ಟಿಗಳಲ್ಲಿ ದೊರಕುತ್ತದೆ.

ಹಾಗೆಯೇ ಇದು ಸಂಪರ್ಕ ರೂಪಾಂತರ ಕ್ರಿಯೆ ನಿಕ್ಷೇಪಗಳಲ್ಲಿಯೂ ಸಿಗುತ್ತದೆ. ಟಂಗ್‌ಸ್ಟನ್‌ನ ಅದಿರಾಗಿ ಉಪಯೋಗಕ್ಕೆ ಬರುತ್ತದೆ. ಇದು ಉತ್ತಮವಾಗಿ ಸೀಳುವಿಕೆಗೆ ಒಳಪಡುತ್ತದೆ, ಬಹಳ ಭಾರ ಹಾಗೂ ಮಧ್ಯಮ ಕಾಠಿಣ್ಯತೆ ಹೊಂದಿದೆ.

**8. ಸೈಲೋಮಿಲೇನ್:** ಲೋಹಮಂಡೂರ ಅಥವಾ ಮ್ಯಾಂಗನೀಸ್ ಅದಿರಿನ ಕಲ್ಪನೆ ಪುರಾತನ ನಾಗರಿಕತೆಗೆ ಪರಿಚಯವಿರಲಿಲ್ಲ. ಈಗ ಇದು ಮುಖ್ಯ ಲೋಹಗಳಲ್ಲೊಂದಾಗಿದೆ. ಮ್ಯಾಂಗನೀಸ್ ಅದಿರುಗಳನ್ನು ಕಬ್ಬಿಣ ಮತ್ತು ಉಕ್ಕು ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಒಂದು ಪ್ರಮುಖ ಮಿಶ್ರಲೋಹ ಖನಿಜ. ಭಾರತದಲ್ಲಿ ಮ್ಯಾಂಗನೀಸ್ ಗಣಿಗಾರಿಕೆ 1891ರಲ್ಲಿ ಪ್ರಾರಂಭವಾದರೂ ಕರ್ನಾಟಕಕ್ಕೆ ಪರಿಚಯವಾದದ್ದು 1904ರಲ್ಲಿ. ಮ್ಯಾಂಗನೀಸ್ ಅದಿರುಗಳು ಕರ್ನಾಟಕದ ಮಧ್ಯ ಹಾಗೂ ಉತ್ತರ ಭಾಗಗಳಲ್ಲಿವೆ. ಈ ನಿಕ್ಷೇಪಗಳು ಶೇಷನಿಕ್ಷೇಪಗಳಾಗಿ (ರೆಸಿಡ್ಯುಯಲ್ ನಿಕ್ಷೇಪಗಳು) ಪರಿಣಮಿಸಿವೆ. ಮ್ಯಾಂಗನೀಸ್‌ನ ಮೂಲ ಖನಿಜಗಳು ಯಾವುವೆಂದು ಖಚಿತವಾಗಿ ತಿಳಿದುಬಂದಿಲ್ಲ. ಈ ನಿಕ್ಷೇಪಗಳು ಮ್ಯಾಂಗನೀಸ್ ಬೆರೆತ ಸುಣ್ಣಶಿಲೆಗಳ ಸಂಪರ್ಕ ರೂಪಾಂತರದಿಂದ ರೂಪುಗೊಂಡಿವೆಯೇ ವಿನಃ ಅವು ಮೂಲಖನಿಜಗಳೆಂದು ತಿಳಿದುಬಂದಿಲ್ಲ.

ಸೈಲೋಮಿಲೇನ್ ಮ್ಯಾಂಗನೀಸ್ ಲೋಹದ ಮೂಲವಸ್ತು. ಇದರ ರಾಸಾಯನಿಕ ಸಂಯೋಜನೆ $MnO, MnO_2, 2H_2O$ ರಾಸಾಯನಿಕ ವಸ್ತು ಸಮೂಹದಲ್ಲಿ ಇದು ಕಬ್ಬಿಣದ ಅದಿರುಗಳಲ್ಲೊಂದಾದ ಹೆಮಟೈಟನ್ನು (ಲೋಹಸಿಂಧೂರ) ಹೋಲುವುದಲ್ಲದೇ, ಪ್ರಕೃತಿಯಲ್ಲಿ ಆ ಖನಿಜದೊಂದಿಗೆ ಸಾಮಾನ್ಯವಾಗಿ ಕೂಡಿರುತ್ತದೆ. ಈ ಅದಿರು ಸಾಧಾರಣವಾಗಿ ಬೊಕ್ಕೆ ಬೊಟ್ಟುಗಳ ತಂಡಗಳಂತೆಯೂ ಸಣ್ಣ ಸಣ್ಣಗುಂಡು ಗೆಡ್ಡೆಗಳಂತೆಯೂ ಕೊಂಚ ನೀಳವಾಗಿ ಪೆನಿಲ್ಸ್‌ಗಳಂತೆಯೂ ಇಲ್ಲವೇ ಆಕಾರರಹಿತ ಮುದ್ದೆ ಸ್ವರೂಪದಲ್ಲಿಯೂ ಸಿಗುತ್ತದೆ. ಪರಿಶುದ್ಧ ಸ್ಥಿತಿಯಲ್ಲಿ ಈ ಖನಿಜದಲ್ಲಿ ಶೇ. 60 ಭಾಗ ಮ್ಯಾಂಗನೀಸ್ ಲೋಹವಿರುತ್ತದೆ.

ಪ್ರಕೃತಿಯಲ್ಲಿ ಇದು ಶುದ್ಧ ಲೋಹ ರೂಪದಲ್ಲಿ ಸಿಗುವುದಿಲ್ಲ. ಆದರೆ ಅದಿರಿನ ರೂಪದಲ್ಲಿ ದೊರೆಯುತ್ತದೆ. ಇದರಲ್ಲಿ ಶೇ. 45–60ರಷ್ಟು ಮ್ಯಾಂಗನೀಸ್ ಅಂಶ ಇರುತ್ತದೆ. ವಿಶ್ವದಲ್ಲಿ ಮ್ಯಾಂಗನೀಸ್ ಉತ್ಪಾದಿಸುವ ದೇಶಗಳೆಂದರೆ ರಷ್ಯ, ದಕ್ಷಿಣ ಆಫ್ರಿಕ, ಬ್ರೆಜಿಲ್ ಮತ್ತು ಗ್ಯಾಬನ್. ಇವೆಲ್ಲ ಸೇರಿ ಪ್ರಪಂಚದ ಒಟ್ಟು ಶೇ. 84 ರಷ್ಟನ್ನು ಉತ್ಪಾದಿಸುತ್ತದೆ. ಚೀನ, ಭಾರತ, ಆಸ್ಟ್ರೇಲಿಯ, ಮೊರಾಕ್ಕೊ, ಟರ್ಕಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಪ್ರಪಂಚದಲ್ಲಿ ಮ್ಯಾಂಗನೀಸ್ ಉತ್ಪಾದಿಸುವ ಇತರೆ ದೇಶಗಳು.

ಭಾರತವು ಉತ್ತಮ ಶ್ರೇಣಿಯ ಹಾಗೂ ವಿಪುಲವಾದ ಮ್ಯಾಂಗನೀಸ್ ನಿಕ್ಷೇಪಗಳನ್ನು ಹೊಂದಿದ್ದು, ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ರಾಷ್ಟ್ರಗಳಲ್ಲಿ ಒಂದಾಗಿದೆ. ಮಧ್ಯಪ್ರದೇಶ, ಮಹಾರಾಷ್ಟ್ರ, ಒರಿಸ್ಸ, ಕರ್ನಾಟಕ, ಗುಜರಾತ್, ರಾಜಸ್ಥಾನ, ಗೋವ ಮತ್ತು ಆಂಧ್ರಪ್ರದೇಶ ರಾಜ್ಯಗಳು ಮ್ಯಾಂಗನೀಸ್ ನಿಕ್ಷೇಪಗಳನ್ನೊಳಗೊಂಡಿದ್ದು, ಉತ್ಪಾದಿಸುವ ಕೇಂದ್ರಗಳಾಗಿವೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಒರಿಸ್ಸಾ ರಾಜ್ಯದ ಕೊಡುಗೆ ಶೇ. 60 ರಷ್ಟಾಗಿದೆ. ಈ ಅದಿರು ಕರ್ನಾಟಕದ ಬಳ್ಳಾರಿ, ಉತ್ತರಕನ್ನಡ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ದೊರೆಯುತ್ತದೆ.

**9. ಸ್ವಾಭಾವಿಕ ಧಾತುಗಳು (ನೇಟೀವ್ ಎಲಿಮೆಂಟ್ಸ್):** ನಿಸರ್ಗದಲ್ಲಿ ಶುದ್ಧವಾಗಿ ದೊರಕುವ ಮೂಲಧಾತುಗಳನ್ನು ಸ್ಥಳೀಯ ಧಾತು ಎಂದು ಪರಿಗಣಿಸಲಾಗಿದೆ. ಈ ಧಾತುಗಳು ತಮ್ಮ ಜೊತೆಯಲ್ಲಿ ಖನಿಜ ಕಲ್ಮಶಗಳು ಬರಲು ಅವಕಾಶ ಕೊಡುವುದಿಲ್ಲ. ಇವುಗಳನ್ನು ಲೋಹಗಳು ಹಾಗೂ ಅಲೋಹಗಳು ಎಂಬ ಎರಡು ಮುಖ್ಯ ಭಾಗಗಳಲ್ಲಿ ವಿಂಗಡಿಸಲಾಗಿದೆ. ಈ ಎರಡರ ಮಧ್ಯ ಸಂಕ್ರಮಣ ಧಾತುಗಳು ಮಧ್ಯವರ್ತಿಯಾಗಿ

ಕಾರ್ಯ ನಿರ್ವಹಿಸುತ್ತವೆ, ಹಾಗೂ ಈ ಅರೆ ಲೋಹಗಳು ಸಂಬಂಧವನ್ನು ಕಲ್ಪಿಸುತ್ತವೆ. ಸ್ವಾಭಾವಿಕ ಧಾತುಗಳ ಭೌತಿಕ ಗುಣಗಳಲ್ಲಿ ಹಾಗೂ ರಾಸಾಯನಿಕ ಗುಣಗಳಲ್ಲಿ ಸಾಕಷ್ಟು ಸ್ವಾಭಾವಿಕ ಧಾತುಗಳೆಂದು ಪರಿಗಣಿಸಲಾಗಿದೆ. ಸೆಲೇನಿಯಂ ಲೋಹವು ಒಂದು ಬಹು ರೂಪತೆಯ ಉದಾಹರಣೆ. ಇದು ಟೆಲ್ಯುರಿಯಂ ಎಂಬ ಅರೆ ಅಲೋಹವನ್ನು ಬಹಳಷ್ಟು ಗುಣಗಳಲ್ಲಿ ಹೋಲುತ್ತದೆ. ಈ ಸ್ವಾಭಾವಿಕ ಅರೆ ಲೋಹಗಳನ್ನು ಆವರ್ತಕೋಷ್ಟಕದಲ್ಲಿ (ಪಿರಿಯಾಡಿಕ್ ಟೇಬಲ್) ತಮ್ಮದೇ ಆದ ಒಂದು ಮುಖ್ಯ ಪಂಗಡವನ್ನು ಆಕ್ರಮಿಸಿವೆ.

ಲೋಹಗಳಲ್ಲಿ ಸ್ಫಟಿಕ ವರ್ಗದ ಬಂಗಾರದ ಸಮೂಹವು ಒಂದು ಮುಖ್ಯಪಂಗಡ. ಇದು ಬಂಗಾರ, ಬೆಳ್ಳಿ, ತಾಮ್ರ, ಪಾದರಸ ಹಾಗೂ ಸೀಸ ಎಂಬ ಲೋಹಗಳನ್ನು ಮತ್ತು ಮಿಶ್ರಲೋಹಗಳನ್ನು ಹೊಂದಿವೆ. ಈ ಲೋಹಗಳಿಗೆ ಸಂಬಂಧಿಸಿದಂತೆ ಪ್ಲಾಟಿನಂ, ಇರಿಡಿಯಂ, ಪಲೆಡಿಯಂ ಮತ್ತು ಕಬ್ಬಿಣದಂತಹ ಪ್ರಮುಖ ಲೋಹಗಳು ಇನ್ನೊಂದು ಸಮಾಂತರ ವಿಭಾಗವನ್ನು ಹೊಂದಿವೆ. ಪಾದರಸದ ವಿನಃ ಉಳಿದ ಲೋಹಗಳೆಲ್ಲವೂ ಘನರೂಪದಲ್ಲಿ ದೊರಕುತ್ತದೆ. ಶುದ್ಧ ಪಾದರಸವು ಪ್ರಕೃತಿಯಲ್ಲಿ ದ್ರವರೂಪದಲ್ಲಿ ಸಿಗುತ್ತದೆ. ಚಿನ್ನವು ಲೋಹಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದದ್ದು. ಪುರಾತನ ಕಾಲದಿಂದಲೂ ಅದನ್ನು ಲೋಹರಾಜ ಎಂದು ಪರಿಗಣಿಸಲಾಗಿದೆ. ಅದರ ಭೌತಲಕ್ಷಣಗಳಿಂದಲೂ ವಿರಳತೆ ಯಿಂದಲೂ ಈಗಲೂ ಅದು ಸಿರಿಸಂಪತ್ತುಗಳ ಅಳತೆಯ ರೂಪವಾಗಿದೆ; ಮತ್ತು ಅದರ ಮನರಂಜಕ ವರ್ಣ, ಹೊಳಪು ಮೆದುವು ಎಂದಿಗೂ ಕಾಂತಿಕೆಡದಿರುವ ಸ್ವಭಾವ, ಬಾಳಿಕೆ ಮುಂತಾದ ಲಕ್ಷಣಗಳಿಂದ ಅನೇಕ ಉಪಯೋಗಗಳಿಗೆ ಅತ್ಯುತ್ತಮವಾಗಿದೆ.

ಚಿನ್ನದ ಮೊದಲನೆಯ ಮತ್ತತು ಮುಖ್ಯವಾದ ಉಪಯೋಗವು ನಾಣ್ಯಗಳ ತಯಾರಿಕೆಯಲ್ಲಿರುವುದು. ಚಿನ್ನವು ನಾಣ್ಯಗಳ ಅಥವಾ ಗಟ್ಟಿಗಳ ರೂಪದಲ್ಲಿ ರಾಷ್ಟ್ರದ ಸಾಂಪತ್ತಿಕ ಪರಿಸ್ಥಿತಿಯ ಆಧಾರವಾಗಿರುವುದು. ಒಂದು ದೇಶದಲ್ಲಿ ಸಂಗ್ರಹಿತವಾಗಿರುವ ಚಿನ್ನದ ಭಂಡಾರದಿಂದ ಆ ದೇಶದ ಸಾಂಪತ್ತಿಕ ಪರಿಸ್ಥಿತಿಯ ಮಟ್ಟವನ್ನು ನಿರ್ಧರಿಸಲಾಗುವುದು. ಪ್ರಪಂಚದ ಇಂದಿನ ಒಟ್ಟು ಚಿನ್ನದ ಸಂಗ್ರಹಣದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ (ಯು.ಎಸ್.ಎ.) ಶೇಖರವಾಗಿರುತ್ತದೆ.

ಚಿನ್ನದ ಎರಡನೆಯ ಮುಖ್ಯ ಉಪಯೋಗವು ಆಭರಣಗಳ ತಯಾರಿಕೆಯಲ್ಲಿ ಆ ಕೆಲಸಕ್ಕೆ ಸ್ವಚ್ಛ ಚಿನ್ನವನ್ನು ಬೆಳ್ಳಿ, ತಾಮ್ರ, ಬೆಲೆಡಿಯಂ, ನಿಕ್ಕಲ್ ಮುಂತಾದ ಲೋಹಗಳೊಂದಿಗೆ ಬೆರೆಸಿ ಸ್ವಲ್ಪ ಗಟ್ಟಿಮಾಡಬೇಕಾಗುತ್ತದೆ. ಚಿನ್ನವನ್ನು ಅತಿ ಸೂಕ್ಷ್ಮವಾದ ತಂತಿಯಾಗಿ ಎಳೆಯಬಹುದು. ಕೇವಲ ಒಂದು ಔನ್ಸ್ ತೂಕದ ಚಿನ್ನದಿಂದ 50 ಮೈಲಿ ಉದ್ದದ ತಂತಿಯನ್ನು ಎಳೆಯಬಹುದು, ಅಂದರೆ 1 ತೊಲ ಚಿನ್ನದಿಂದ 20 ಮೈಲಿ ಉದ್ದದ ತಂತಿಯನ್ನು ಪಡೆಯಬಹುದು.

ಮೈಸೂರು ಪ್ರಾಂತ್ಯದ ಕೆಲವು ಪ್ರದೇಶಗಳಲ್ಲಿ ಬೆಳ್ಳಿ ಬೆಟ್ಟ ಎಂಬ ಹೆಸರು ರೂಢಿಯಲ್ಲಿದೆ. ಈ ಹೆಸರು ಬೆಳ್ಳಿಯು ಆ ಪ್ರದೇಶದಲ್ಲಿರುವುದೆಂದು ಸೂಚಿಸಿದರೂ ಇದುವರೆಗೂ ನಡೆದಿರುವ ಪರಿಶೋಧನೆಗಳಿಂದ ಆ ಪ್ರದೇಶಗಳಲ್ಲಿ ಬೆಳ್ಳಿಯು ಸಹಜರೂಪದಲ್ಲಿಯಾಗಲೀ ಸಂಯೋಜಿತರೂಪಗಳಲ್ಲಿಯಾಗಲೀ ಸಿಗುವುದು ಕಂಡುಬಂದಿಲ್ಲ. ಚಿತ್ರದುರ್ಗದ ಸಮೀಪದ ಲ್ಲಿರುವ ಸಲ್ಫೈಡ್ ವಲಯ (ಸಲ್ಫೈಡ್ ಜೋನ್)ದಲ್ಲಿ, ಗೋಣೂರು, ಕರುಬರಮರಡೀಕೆರೆ ಪ್ರದೇಶಗಳಲ್ಲಿ ರಜತ ಗೆಲೀನ (Argentiferous galena) ಎಂಬ ಬೆಳ್ಳಿ ಮಿಶ್ರಿತ ಸೀಸದ ಅದಿರಿನಲ್ಲಿ ಟನ್ ಒಂದಕ್ಕೆ ಉತ್ತಮ ಪಕ್ಷ 80–130 ಔನ್ಸುಗಳ ವರೆಗೆ ಬೆಳ್ಳಿ ಇರುವುದು ಕಂಡುಬಂದಿದೆ. ಅದೇ ವಲಯದಲ್ಲಿ ಇಂಗಳದಹಾಳ್ ಬಳಿ ಇರುವ ತಾಮ್ರದ ಪಿರೈಟೀಸ್ (ಕಾಪರ್ ಪೈರೇಟ್ಸ್) ಅದಿರಿನಲ್ಲಿಯೂ ಟನ್ 1ಕ್ಕೆ 2–3 ಔನ್ಸುಗಳಷ್ಟು ಬೆಳ್ಳಿ ಇರುವುದಾಗಿ ತಿಳಿದು ಬಂದಿದೆ. ಈ ಅದಿರುಗಳು ಸಾಕಾದಷ್ಟು ಪ್ರಮಾಣದಲ್ಲಿಲ್ಲವಾದುದರಿಂದ ಇವುಗಳಿಂದ ಬೆಳ್ಳಿಯನ್ನು ಪ್ರತ್ಯೇಕಿಸಿ ಪಡೆಯಲು ಸಾಧ್ಯವಾಗಲಾರದು.

**10. ಮಾಲಿಬ್ಡಿನೈಟ್:** ಮಾಲಿಬ್ಡಿನೈಟ್ ಮಾಲಿಬ್ಡಿನಂನ ಒಂದು ಸಾಮಾನ್ಯ ಖನಿಜ. ಇದು ಸಾಮಾನ್ಯವಾಗಿ ಅನಿಲಕೃತ (ನ್ಯುಮಟಾಲಿಟಿಕ್) ನಿಕ್ಷೇಪದಲ್ಲಿ, ಕ್ಯಾಸಿಟರೈಟ್, ವುಲ್ಫ್ರಮೈಟ್, ಫ್ಲೋರೈಟ್ ಜೊತೆಗೆ ಸಿಗುತ್ತದೆ. ಇದು ಒಂದು ಸಲ್ಫೈಡ್ ಯುಕ್ತ ವಸ್ತು. ಸೈನೈಟ್ ಮತ್ತು ನೈಸ್‌ಗಳೊಂದಿಗೆ ಹೊಂದಿಕೊಂಡಿರುವ ಪೆಗ್ಮಟೈಟ್ ಮತ್ತು ಬೆಣಚು ಖನಿಜ ಎಳೆ ಅಥವಾ ಪಟ್ಟಿಗಳಲ್ಲಿ ಸಿಗುತ್ತದೆ. ಗಾರ್ನೆಟ್ ಮತ್ತು ಹರಳೀಕೃತ ಸುಣ್ಣ ಶಿಲೆಯಲ್ಲಿ ಕೆಲವೊಮ್ಮೆ ಮಾತ್ರ ಸಿಗುತ್ತದೆ.

ಇದನ್ನು ಮಾಲಿಬ್ಡಿನಂನ ಮುಖ್ಯ ಅದಿರಾಗಿ ಉಪಯೋಗಿಸಲಾಗುತ್ತದೆ, ಸಾಮಾನ್ಯವಾಗಿ ಷಟ್ಕೋನ, ತೆಳುತಟ್ಟೆಗಳಂತೆ ದೊರಕುವುದು. ಕೆಲವು ಸಂದರ್ಭಗಳಲ್ಲಿ ಕಣಗಳಾಗಿಯೂ ಎಸುಳುಗಳಾಗಿಯೂ ರೂಪು ರಚನಾಕೃತಿಯಿಲ್ಲದ ಮುದ್ದೆಯಾಕೃತಿಯಲ್ಲಿಯೂ ಸಿಗುವು ದುಂಟು. ಸೀಸ ವರ್ಣದ, ಸ್ಪರ್ಶಕ್ಕೆ ಬಹುನಯವಾಗಿ ಜಾರುವ ಈ ಖನಿಜವು ಆಕೃತಿ ಮತ್ತು ಮೃದುತ್ವದಲ್ಲಿ ಗ್ರಾಫೈಟ್‌ನ್ನು ಹೋಲುತ್ತದೆ. ಇದನ್ನು ಖನಿಜದಂತೆ ಉಗುರಿನಿಂದ ಸುಲಭವಾಗಿ ಗೀರಬಹುದು (ಕಾಠಿಣ್ಯ 1.5), ಇದರ ಅಧಿಕ ಸಾಂದ್ರತೆಯಿಂದಲೂ ರಾಸಾಯನಿಕ ಪರೀಕ್ಷೆಗಳಿಂದಲೂ ಈ ಖನಿಜವನ್ನು ಗ್ರಾಫೈಟ್‌ನಿಂದ ಬೇರ್ಪಡಿಸಿ ಗುರುತಿಸಬಹುದು. ಆದರೆ ಬಣ್ಣ ಮತ್ತು ಉಜ್ಜುವಿಕೆಯಲ್ಲಿ (ಸ್ಟ್ರೀಕ್) ಬಹು ಬೇಗ ಸಲ್ಫೈಡ್‌ನ ಆವಿಯನ್ನು ಕೊಡುತ್ತದೆ. ಕೃತಕವಾಗಿ ಮಾಲಿಬ್ಡೈಡ್ ಆಕ್ಸೈಡನ್ನು ಹಾಗೂ ಪೊಟ್ಯಾಸಿಯಂ ಕಾರ್ಬೋನೇಟ್ ಮತ್ತು ಸಲ್ಫರ್‌ನ ಮಿಶ್ರಣದೊಂದಿಗೆ ತಯಾರಿಸಬಹುದು. ಹಾಗೆಯೇ ಮಾಲಿಬ್ಡೈಟ್ ಮತ್ತು ಸುಣ್ಣವನ್ನು ಕೂಡಿಸಿ ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಹೈಡ್ರೋಜನ್ ಸಲ್ಫೈಡ್ ಇರುವ ವಾತಾವರಣದಲ್ಲಿ ಕಾಯಿಸಿದಾಗ ದೊರೆಯುತ್ತದೆ. ಇದು ಮೃದು ಆಕೃತಿ ಹೊಂದಿದ್ದು ನೀಳವಾಗಿ ಹಾಗೂ ಚಿಕ್ಕ ಪಟ್ಟಿಕದ (ಪ್ರಿಸಮ್) ರೂಪ ಹೊಂದಿರುತ್ತದೆ. ಉದ್ದವಾಗಿ ಸೀಳುವಿಕೆಯ ಗುಣಧರ್ಮ ಹೊಂದಿದೆ.

ಕರ್ನಾಟಕದಲ್ಲಿ ಈ ಮಾಲಿಬ್ಡಿನೈಟ್ ದೊಡ್ಡಬಳ್ಳಾಪುರದ ಹತ್ತಿರ ಇರುವ ಪೆಗ್ಮಟೈಟ್‌ನಲ್ಲಿ ಅಲ್ಪಪ್ರಮಾಣದಲ್ಲಿ ಒಂದು ಸಣ್ಣ ತೆಳು ತಟ್ಟೆಯಂತೆ ಕಂಡುಬಂದಿದೆ.

**11. ಯಿಟ್ರಿಯಂ:** ಇದು ಒಂದು ಅತಿ ಅಪರೂಪದ ಮೂಲ ಧಾತು. ಕಡಲಿನಲ್ಲಿರುವ ಅಮೂಲ್ಯವಾದ ಖನಿಜ ಕಣಗಳಿರುವ ನಿಕ್ಷೇಪಗಳಲ್ಲಿ ವಿರಳವಾಗಿ ದೊರೆಯುತ್ತದೆ. ಪ್ರಪಂಚದಲ್ಲಿ ಈ ಮೂಲ ವಸ್ತು ಧಾತುಗಳು ಟೈಟಾನಿಯಂ, ಜಿರ್ಕೋನಿಯಂ, ಥೋರಿಯಂ, ಸೀರಿಯಂ ಹಾಗೂ ಯಿಟ್ರಿಯಂ ಕಡಲ ನಿಕ್ಷೇಪಗಳಾಗಿ ಮುಖ್ಯ ಅಪರೂಪ ಧಾತುಗಳ ಉದ್ಭವಕ್ಕೆ ದಾರಿಯಾಗಿವೆ. ವಿರಳಧಾತು ಖನಿಜೀಕರಣವು ಒಂದು ಬಹು ಆರ್ಥಿಕ ಮೂಲವಾಗಿ ವರ್ತಿಸುತ್ತವೆ. ಯಿಟ್ರಿಯಂ ಖನಿಜವು ಕೆಲವೇ ಕಲವು ಪೆಗ್ಮಟೈಟ್ ಸಿರಗಳಲ್ಲಿ ಅತಿ ಅಲ್ಪ ಪ್ರಮಾಣದಲ್ಲಿ ದೊರೆಯುತ್ತದೆ. ಸದ್ಯಕ್ಕೆ ಇವು ಕೇವಲ ವೈಜ್ಞಾನಿಕ ಆಸಕ್ತಿಯ ಖನಿಜ ಮೂಲಗಳಾಗಿರುತ್ತವೆ. ಯಿಟ್ರಿಯಂ ಸದಾ ಸ್ಕ್ಯಾಂಡಿಯಂ ಜೊತೆಗೆ ಸಿಗುತ್ತದೆ. ಆದ್ದರಿಂದ ಅದನ್ನು ರಾಸಾಯನಿಕವಾಗಿ ಸರಳವಾಗಿ ಬೇರ್ಪಡಿಸಲು ಸಾಧ್ಯವಿಲ್ಲ.

**ಅದಿರು ಜನನ :** ನಿಸರ್ಗದಲ್ಲಿ ದೊರೆಯುವ ಉಪಯುಕ್ತ ಖನಿಜಗಳ ಸಂಗ್ರಹಣವೇ ಅದಿರುನಿಕ್ಷೇಪಗಳು. ಇವು ಎಲ್ಲ ಕಡೆಯೂ ದೊರೆಯುವುದಿಲ್ಲ. ಖನಿಜಗಳ ಸ್ಥಿರತೆ, ಭೂ ಚಟುವಟಿಕೆ ಮತ್ತು ಸನ್ನಿವೇಶ ಇವುಗಳನ್ನು ಅವಲಂಬಿಸಿ ಮೈದೋರುತ್ತವೆ. ದೊರೆಯುವ ರೀತಿಯನ್ನನುಸರಿಸಿ ಅದಿರು ನಿಕ್ಷೇಪಗಳನ್ನು ಸಹಜನ್ಯ (ಸಿಂಜೆನಿಟಿಕ್) ಅದಿರುಗಳು ಮತ್ತು ಅನುಜನ್ಯ (ಎಪಿಜೆನಿಟಿಕ್) ಅದಿರುಗಳು ಎಂದು ವರ್ಗೀಕರಿಸಬಹುದು. ಸಹಜನ್ಯನಿಕ್ಷೇಪಗಳು ಅವು ಹುದುಗಿರುವ ಶಿಲೆಗಳೊಡನೆ ಏಕಕಾಲದಲ್ಲಿ ಹುಟ್ಟಿದವು. ಈ ವರ್ಗದಲ್ಲಿ ಮಾತೃಶಿಲಾದ್ರವದಿಂದಾದ ಶೇಖರಣೆಗಳು, ಪ್ರಸರೀ ನಿಕ್ಷೇಪಗಳು ಇತ್ಯಾದಿ ಭೇದಗಳಿವೆ. ಅನುಜನ್ಯನಿಕ್ಷೇಪಗಳು ಅವು ಹುದುಗಿರುವ ಶಿಲೆಗಳು ಮೈದೋರಿದ ನಂತರ ನಾನಾ ಕಾರಣಗಳಿಂದ ಅವುಗಳಲ್ಲಿ ಸೇರಿ ಜನಿಸಿದವು. ಈ ವರ್ಗದಲ್ಲಿ ಜಲೋಷ್ಣ (ಹೈಡ್ರೊಥರ್‌ಮಲ್) ನಿಕ್ಷೇಪಗಳು, ಸಂಪರ್ಕ ರೂಪಾಂತರ ನಿಕ್ಷೇಪಗಳು ಇತ್ಯಾದಿ ಬಗೆಗಳಿವೆ.

ಹಲವು ಅದಿರುನಿಕ್ಷೇಪಗಳು ಉಂಟಾಗಲು ಮಾತೃಶಿಲಾದ್ರವಕ್ಕೆ ಸಂಬಂಧಿಸಿದ ಚಟುವಟಿಕೆಗಳು ಕಾರಣವಾಗಿವೆ. ಮಾತೃಶಿಲಾದ್ರವ ಆರಿ ತಣ್ಣಗಾಗುತ್ತಿರುವ ಸಂದರ್ಭದಲ್ಲಿ ಮೂಲ (ಬೇಸಿಕ್) ಶಿಲೆಗಳು ಉದ್ಭವಿಸುವಾಗ ಸಾಮಾನ್ಯವಾಗಿ ಲೋಹಗಳ ಆಕ್ಸೈಡುಗಳು ಮತ್ತು ಸಲ್ಫೈಡುಗಳು ಅದರಿಂದ ಹೊರಬಂದು, ಉಳಿದಿರುವ ಸಿಲಿಕ ದ್ರವಾಂಶದೊಡನೆ ಬೆರೆಯದೆ ನಿಯತ ಪದರಗಳಲ್ಲೊ ಇಲ್ಲವೆ ನಿರಾಕಾರ ಶೇಖರಣೆಗಳಾಗಿಯೊ ಆಗುತ್ತವೆ. ಇವುಗಳಲ್ಲಿ ಟೈಟೇನಿಯಂನಿಂದ ಕೂಡಿದ ಮ್ಯಾಗ್ನಟೈಟ್, ಕ್ರೋಮೈಟ್, ನಿಕ್ಕಲ್, ಪ್ಲಾಟಿನಂ ಮತ್ತು ವಜ್ರ ನಿಕ್ಷೇಪಗಳು ಮುಖ್ಯವಾದುವು.

ಹೀಗೆಯೆ ಹೆಚ್ಚು ಸಿಲಿಕಾಂಶದಿಂದ ಕೂಡಿದ ಕ್ಷಾರೀಯ ಮಾತೃಶಿಲಾದ್ರವಗಳು ಕಾರ್ಬನ್ ಡೈ ಆಕ್ಸೈಡ್, ಬೋರಾನ್, ಫ್ಲೂರಿನ್, ಕ್ಲೋರಿನ್, ನೀರು ಮತ್ತು ಗಂಧಕ– ಈ ಧಾತುಗಳಿಂದ ಕೂಡಿದ್ದು ಕ್ರಮೇಣ ಅನೇಕ ಖನಿಜಗಳ ಉತ್ಪತ್ತಿಗೂ ಕಾರಣವೆನಿಸುತ್ತವೆ. ಕೆಲವು ವೇಳೆ ಈ ಖನಿಜಗಳಿಂದ ಕೂಡಿದ ಪೆಗ್ಮಟೈಟ್ ನಿಕ್ಷೇಪಗಳು ಮೂಲಶಿಲೆಯ ನಾನಾ ಕಡೆ ತೋರಿಬರುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಇವು ಮೂಲಶಿಲೆಗಳಿಂದ ಹೊರಬಂದು ಸುತ್ತಮುತ್ತಲಿರುವ ಇತರ ಶಿಲೆಗಳಲ್ಲಿ ಡೈಕ್ ಅಥವಾ ಸಿಲ್‌ಗಳೋಪಾದಿಯಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಲಿಥಿಯಂ, ಟ್ಯಾಂಟಲಂ, ಬೆರಿಲಿಯಂ, ಸೀಸಿಯಂ, ಅಭ್ರಕ, ಫೆಲ್ಡ್‌ಸ್ಪಾರ್ ಟೂರ್ಮಲೀನ್, ಕ್ಯಾಸಿಟರೈಟ್, ಷೀಲೈಟ್ ಇತ್ಯಾದಿ ಅನೇಕ ಖನಿಜಗಳು ಉತ್ಪತ್ತಿಯಾಗುತ್ತವೆ.

ಇದಲ್ಲದೆ ಮಾತೃಶಿಲಾದ್ರವದಿಂದ ಹೊರಬರುವ ಅನಿಲಗಳು ವಿಶೇಷ ಒತ್ತಡ ಹಾಗೂ ಶಾಖದಿಂದ ಅಂತರಾಳದಲ್ಲಿರುವ ಶಿಲೆಗಳಿಗೆ, ಅದರಲ್ಲೂ ಪ್ರಮುಖವಾಗಿ ಸುಣ್ಣಶಿಲೆಗಳಿಗೆ ನುಗ್ಗಿದಾಗ ರಾಸಾಯನಿಕ ಕ್ರಿಯೆಯುಂಟಾಗಿ ಸಂಪರ್ಕರೂಪಾಂತರವಾಗುತ್ತದೆ. ಇದರಿಂದ ಅನೇಕ ತೆರನಾದ ಹೆಚ್ಚು ಶಾಖದಿಂದಲೇ ಉಂಟಾಗುವ ಮ್ಯಾಗ್ನಟೈಟ್, ಇಲ್ಮನೈಟ್, ಹಿಮಟೈಟ್, ಕುರಂದ, ಸ್ಪಿನಲ್, ಗ್ರ್ಯಾಫೈಟ್, ಚಿನ್ನ, ಪ್ಲಾಟಿನಂ, ಷೀಲೈಟ್ ಮತ್ತು ವುಲ್ಫ್ರಮೈಟ್ ಖನಿಜಗಳು ರೂಪಗೊಳ್ಳುತ್ತವೆ.

ಹಲವುವೇಳೆ ಅಗ್ನಿಪರ್ವತಗಳಿಂದ ಹೊರಬರುವ ಅನೇಕ ಅನಿಲಗಳು ಘನೀಭೂತ ವಾಗಿ ಅವುಗಳ ಸುತ್ತ ಶೇಖರವಾಗುವ ಉಪಯುಕ್ತವಾದ ಗಂಧಕ, ಕಲ್ಲುಪ್ಪು, ಬೋರಿಕ್ ಆ್ಯಸಿಡ್ ನಿಕ್ಷೇಪಗಳಿಗೆ ನಾಂದಿಯಾಗಿವೆ. ಇದೇ ಸನ್ನಿವೇಶದಲ್ಲಿ ಮಾತೃಶಿಲಾದ್ರವದಿಂದ ಬೇರ್ಪಟ್ಟ ಉಷ್ಣಜಲವು (ಹೈಡ್ರೊಥರ್ಮಲ್ ದ್ರವ) ಕಡಿಮೆ ಒತ್ತಡವಿರುವ ತಮ್ಮ ಸುತ್ತಮುತ್ತಲಿನ

ಶಿಲೆಗಳಲ್ಲಿರುವ ಬಿರುಕು, ಸೀಳು, ರಂಧ್ರ, ಜಾಡುಗಳಲ್ಲಿ ಪ್ರವಹಿಸುತ್ತವೆ. ಹೀಗೆ ಪ್ರವಹಿಸುವಾಗ ಉಷ್ಣಜಲದಲ್ಲಿ ಸಂಯೋಜಿತವಾಗಿರುವ ಅನೇಕ ಖನಿಜಾಂಶಗಳು ನಿಕ್ಷೇಪಗೊಳ್ಳುತ್ತವೆ. ಇವು ಮೂಲಶಿಲೆಗಳ ಸ್ಥಾನವನ್ನು ಆವರಿಸಬಹುದು ಅಥವಾ ಮೂಲಶಿಲೆಗಳಲ್ಲಿರುವ ಬಿರುಕು ಇತ್ಯಾದಿ ಜಾಗಗಳಲ್ಲಿ ಸಂಗ್ರಹಿಸಬಹುದು. ಈ ರೀತಿಯ ಖನಿಜೋತ್ಪತ್ತಿಗೆ ಅಲ್ಲಿಯ ಶಾಖ ಹಾಗೂ ಒತ್ತಡ, ದ್ರವಗಳ ಹಾಗೂ ಹುದುಗುವ ಶಿಲೆಗಳೊಡನೆ ಜರುಗುವ ರಾಸಾಯನಿಕ ಕ್ರಿಯೆ ಇವೇ ಮೂಲ ಕಾರಣಗಳು. ಇವುಗಳನ್ನನುಸರಿಸಿ ಆಳಜಲೋಷ್ಣ, ಮಧ್ಯೋಷ್ಣ ಮತ್ತು ಅಲ್ಪೋಷ್ಣ ನಿಕ್ಷೇಪಗಳೆಂದು ವರ್ಗೀಕರಿಸಿದ್ದಾರೆ. ಹೆಚ್ಚು ಶಾಖದ (ಸು. $300^0$–$400^0$ ಸೆ.) ವಾತಾವರಣದಲ್ಲಿ ಉತ್ಪತ್ತಿಯಾಗುವ ತವರ, ಟಂಗ್‌ಸ್ಟನ್ ಮತ್ತು ಮ್ಯಾಗ್ನಟೈಟ್ ಇವು ಆಳಜಲೋಷ್ಣ ನಿಕ್ಷೇಪಗಳಲ್ಲಿ ಮುಖ್ಯವಾದುವು. ಮಧ್ಯೋಷ್ಣ ನಿಕ್ಷೇಪಗಳ ಉತ್ಪತ್ತಿಗೆ ಶಾಖ (ಸುಮಾರು 150ಹ–300ಹ ಸೆ.) ಮಧ್ಯಸ್ಥವಾಗಿದ್ದು ಸಲ್ಫೈಡು, ಸಲ್ಫ್‌ಆರ್ಸಿನೈಡ್, ಮತ್ತು ಟೆಲ್ಯೂರೈಡ್‌ಗಳು– ಈ ವರ್ಗಕ್ಕೆ ಸೇರಿದ ಖನಿಜಗಳಾಗಿ ರೂಪಗೊಳ್ಳುತ್ತವೆ. ಎಪಿಥರ್ಮಲ್ ಅದಿರು ನಿಕ್ಷೇಪಗಳ ಉತ್ಪತ್ತಿಗೆ ಶಾಖ (ಸು. 50ಹ–150ಹ ಸೆ.) ಇನ್ನೂ ಕಡಿಮೆಯಾಗಿದ್ದು ಆರ್ಸೆನಿಕ್, ಆ್ಯಂಟಿಮನಿ ಮತ್ತು ಪಾದರಸ ಧಾತುಗಳ ಸಲ್ಫೈಡುಗಳಿಂದ ಕೂಡಿರುತ್ತವೆ.

ಖನಿಜೋತ್ಪತ್ತಿಯಲ್ಲಿ ಶಿಥಿಲೀಕರಣ (ವೆದರಿಂಗ್) ಬಹಳ ಮುಖ್ಯ ಪಾತ್ರವಹಿಸಿದೆ. ಅನೇಕ ಖನಿಜಗಳು ಶಿಲೆಗಳೊಡನೆ ಸಂಯೋಜಿತವಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿರದೆ ಉಪಯುಕ್ತ ನಿಕ್ಷೇಪಗಳಾಗಿರುವುದಿಲ್ಲ. ಆದರೆ ಪ್ರಕೃತಿಯಲ್ಲಿ ಜರಗುವ ಶಿಥಿಲೀಕರಣದಿಂದ ಶಿಲೆಗಳು ಒಡೆದು ಚೂರು ಚೂರಾಗಿ ಅವುಗಳಲ್ಲಿರುವ ಅಲ್ಪ ಪ್ರಮಾಣದ ಖನಿಜಗಳು ಬೇರ್ಪಡುತ್ತವೆ. ಹೀಗೆ ಬೇರ್ಪಟ್ಟ ಖನಿಜಗಳು ಅವುಗಳ ಭೌತಗುಣಗಳಿಗನುಗುಣವಾಗಿ ಗಾಳಿಯ ಹಾಗೂ ಮಳೆಯ ನೀರಿನ ಮೂಲಕ ಸ್ಥಳದಲ್ಲೇ ಶೇಖರವಾಗಬಹುದು ಅಥವಾ ಸ್ಥಳಾಂತರಗೊಂಡು ಬೇರೆ ಕಡೆ ಸಂಗ್ರಹವಾಗಬಹುದು. ಸ್ಥಳದಲ್ಲೇ ಶೇಖರವಾದ ಖನಿಜಗಳನ್ನು ಶೇಷಸಾಂದ್ರೀಕರಣ ನಿಕ್ಷೇಪಗಳೆನ್ನುತ್ತಾರೆ. ಇವುಗಳಲ್ಲಿ ಕಬ್ಬಿಣ, ಮ್ಯಾಂಗನೀಸ್, ತವರ, ನಿಕ್ಕಲ್, ಬಾಕ್ಸೈಟು, ಕಯನೈಟ್, ಓಕರ್ಸ್ ಮುಖ್ಯವಾದವುಗಳು. ಹಾಗಲ್ಲದೆ ಸ್ಥಳಾಂತರದಿಂದ ನದಿಗಳ ತಿರುವುಗಳಲ್ಲೊ ಸಮುದ್ರದ ಅಂಚಿನಲ್ಲೊ ಮರುಭೂಮಿಯ ದಿನ್ನಗಳಲ್ಲೊ ಶೇಖರವಾದ ಖನಿಜಗಳನ್ನು ಭೌತಸಾಂದ್ರೀಕರಣ ನಿಕ್ಷೇಪಗಳೆನ್ನುತ್ತಾರೆ. ಇವೇ ಪ್ರಸಿದ್ಧವಾದ ಚಿನ್ನ, ಪ್ಲಾಟಿನಂ, ತವರ ಮತ್ತು ಅಮೂಲ್ಯರತ್ನ ಇವುಗಳು ಮೆಕ್ಕಲು ನಿಕ್ಷೇಪಗಳು. ಸಮುದ್ರದ ಅಂಚಿನ ಮರಳುಗಳಲ್ಲಿ ದೊರೆಯುವ ಇಲ್ಮನೈಟ್, ರೂಟೈಲ್ ಮತ್ತು ಮಾನಜೈಟ್ ಅದಿರುಗಳು ಈ ಗುಂಪಿಗೆ ಸೇರಿದವು.

ಶಿಥಿಲೀಕರಣಕ್ಕೆ ಒಳಗಾದ ಕೆಲವು ಸಲ್ಫೈಡ್ ಖನಿಜಗಳು ರಾಸಾಯನಿಕ ಬದಲಾವಣೆಗಳಿಗೆ ಒಳಗಾಗಿ ದ್ರವರೂಪದಲ್ಲಿ ಶಿಲೆಗಳ ಮೂಲಕ ಜಲಮಟ್ಟದ ಕೆಳಗೆ ಇಂಗಿ ಹೋಗಿ ಅನುಕೂಲವಾದ ವಾತಾವರಣದಲ್ಲಿ ಮೊದಲಿದ್ದ ಖನಿಜಗಳ ಮೇಲೆ ಶೇಖರವಾಗುತ್ತವೆ. ಇದರಿಂದ ಖನಿಜಾಂಶಗಳು ಮೇಲುಭಾಗಗಳಲ್ಲಿ ಕ್ಷಯಿಸಿ (ಕಡಿಮೆಯಾಗಿ), ಕೆಳಭಾಗಗಳಲ್ಲಿ ಸಂಗ್ರಹವಾಗುತ್ತವೆ. ಇದನ್ನು ಅನುಷಂಗಿಕ ಸಲ್ಫೈಡು ವೃದ್ಧೀಕರಣ ಎನ್ನುತ್ತಾರೆ. ಸಾಮಾನ್ಯವಾಗಿ ತಾಮ್ರದ ಗಣಿಗಳಲ್ಲಿ ಈ ಖನಿಜಪ್ರಸರಣೆಯನ್ನು ವಿವಿಧ ಹಂತಗಳಲ್ಲಿ ಗುರುತಿಸಬಹುದು. ಅಲ್ಲದೆ ಇಂಥ ವೃದ್ಧೀಕರಣವನ್ನು ತಾಮ್ರ, ಬೆಳ್ಳಿ, ಚಿನ್ನ, ಸತು, ಸೀಸ, ಕಬ್ಬಿಣ, ಮ್ಯಾಂಗನೀಸ್ ಮತ್ತು ನಿಕ್ಕಲ್ ನಿಕ್ಷೇಪಗಳಲ್ಲೂ ಕಾಣಬಹುದು.

ಶಿಲೆಗಳು ಅಧಿಕ ಉಷ್ಣ ಮತ್ತು ಒತ್ತಡಕ್ಕೆ ಒಳಗಾಗಿ ರೂಪಾಂತರವಾದಾಗ ಅವುಗಳ ಸಂಯೋಜನೆಯಲ್ಲಿರುವ ಅನೇಕ ಅನುಪಯುಕ್ತ ಖನಿಜಗಳು ಅತ್ಯುಪಯುಕ್ತ ಖನಿಜಗಳಾದ ಕಲ್ನಾರು, ಗ್ರಾಫೈಟು, ಟಾಲ್ಕ್, ಕಯನೈಟ್, ಆಂಡಲೂಸೈಟ್, ಸಿಲಿಮನೈಟ್, ಗಾರ್ನೆಟ್ ಮುಂತಾದುವುಗಳಾಗಿ ರೂಪುಗೊಳ್ಳುತ್ತವೆ.

ಪ್ರಕೃತಿಯಲ್ಲಿ ಜರಗುವ ನಗ್ನೀಕರಣ ಹಾಗೂ ಸಂಚಯನಗಳಿಂದ ಶಿಲಾ ಸಮುದಾಯ ಛಿದ್ರವಾಗಿ ಸಣ್ಣ ಸಣ್ಣ ಭಾಗಗಳಾಗಿ ನದಿಗಳ ಮೂಲಕ ಸರೋವರ ಹಾಗೂ ಸಮುದ್ರದ ತಳವನ್ನು ಸೇರುತ್ತವೆ. ಹೀಗೆ ಸೇರುವುದರಿಂದ ಜಲಜಶಿಲೆಗಳೇ ಅಲ್ಲದೆ ಬಹು ಅಮೂಲ್ಯವಾದ ಖನಿಜನಿಕ್ಷೇಪಗಳಾದ ಕಬ್ಬಿಣ, ಮ್ಯಾಂಗನೀಸ್, ರಂಜಕ, ಗಂಧಕ, ತಾಮ್ರ, ಯುರೇನಿಯಮ್, ವೆನೇಡಿಯಮ್, ಸುಣ್ಣಶಿಲೆ ಮತ್ತು ಜೇಡಿಮಣ್ಣು ಉತ್ಪತ್ತಿಯಾಗುತ್ತವೆ.

ಅಂತರ್ಜಲವೂ ಖನಿಜೋತ್ಪತ್ತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದುಂಟು. ಶಿಲೆಯ ನಾನಾ ಭಾಗಗಳಲ್ಲಿ ಪ್ರವಹಿಸುವಾಗ ಅಲ್ಲಿನ ಖನಿಜಗಳನ್ನು ಪ್ರವಾಹ ತನ್ನಲ್ಲಿ ವಿಲೀನಗಳಿಸಿಕೊಂಡು ಸಂದರ್ಭಾನುಸಾರ ಮತ್ತೊಂದೆಡೆ ಶೇಖರಿಸುವುದೂ ಉಂಟು, ಇದಕ್ಕೆ ಅತ್ಯುತ್ತಮ ಉದಾ : ಅಮೆರಿಕದ ಕಾಲರಾಡೊ ಪ್ರಸ್ಥಭೂಮಿಯಲ್ಲಿರುವ ಯುರೇನಿಯಮ್ ಮತ್ತು ವೆನೇಡಿಯಮ್ ಅದಿರು ನಿಕ್ಷೇಪಗಳು.

ಹೀಗೆ ಪ್ರಕೃತಿಯಲ್ಲಿ ನಾನಾ ರೀತಿಯ ಅದಿರು ಜನನವಾಗುತ್ತದೆ. ಅದಿರು ಸಾಮಾನ್ಯವಾಗಿ ಇಕ್ಕಟ್ಟಾದ ಶಿಲೆಯ ಬಿರುಕುಗಳಲ್ಲಿ ನಿಕ್ಷೇಪಗೊಂಡಿರುತ್ತದೆ. ಇಂಥ ನಿಕ್ಷೇಪಗಳಿಗೆ ಸಿರ, ಅದಿರಿನ ರೇಖೆ (ಲೋಡ್) ಎಂಬ ಹೆಸರಿದೆ. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿನ ಛಾಂಪಿಯನ್ ಸಿರ ರಾಯಚೂರಿನ ಹಟ್ಟಿ ಚಿನ್ನದ ಗಣಿಯ ಮೈನ್ ರೀಫ್ ಇದಕ್ಕೆ ಒಳ್ಳೆ ಉದಾ : ಆರ್ಥಿಕದೃಷ್ಟಿಯಿಂದ ಅದಿರು ಸಿರಗಳ ರೂಪದಲ್ಲಿ ಸಿಗುವುದು ಒಳ್ಳೆಯದೆ. ಮಟ್ಟ ಸುರಂಗ, ಅಡ್ಡ ಸುರಂಗಗಳನ್ನಿಟ್ಟು ಅದಿರನ್ನು ಹೊರತೆಗೆಯುತ್ತಾರೆ. **(ಎಂ.ಎನ್.ವಿ.)**

**ಪಟ್ಟೆಕಬ್ಬಿಣ ಶಿಲೆ:** ಅತ್ಯಂತ ಪುರಾತನ ಅದಿರು ಖನಿಜಗಳನ್ನೊಳಗೊಂಡ ಕಪ್ಪು ಪಟ್ಟೆಯುಳ್ಳ ಪ್ರಸ್ತರೀ ವಿಧಾನಗಳಿಂದಾದ ಶಿಲೆ. ಪಟ್ಟೆ ರೂಪದಲ್ಲಿ ದೊರೆಯುವುದು ಈ ಶಿಲೆಯ ಪ್ರಧಾನ ಲಕ್ಷಣಗಳಲ್ಲೊಂದು. ಈ ಶಿಲೆಯ ಬಣ್ಣದಲ್ಲಿ ವೈವಿಧ್ಯತೆಯಿದೆ. ಮಂಕು ಬಿಳಿ, ಹಳದಿ, ಕೆಂಪು, ಕಂದುಬಣ್ಣ ಹಾಗೂ ಕಪ್ಪುಬಣ್ಣದ ವಿವಿಧ ಛಾಯೆಯನ್ನು ತೋರುತ್ತದೆ. ಈ ಶಿಲೆಗಳ ಶಿಲಾಪದರದ ಮಂದ 0.1 – 2.5 ಮಿಮೀ ಆದರೆ ಮಸೂರ ರೂಪದ ಕಬ್ಬಿಣ ಅದಿರಿನ ಪದರ ಕೆಲವೊಮ್ಮೆ 30 ಮೀ ವರೆಗೂ ಇರುತ್ತದೆ. ಪದರದ ಮಂದ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುವುದು ಸರ್ವೇಸಾಮಾನ್ಯ. ಪಟ್ಟೆಕಬ್ಬಿಣ ಶಿಲೆಗಳು ವಿವಿಧ ಭೂವೈಜ್ಞಾನಿಕ ಕಾಲಗಳಲ್ಲಿ ರೂಪುಗೊಂಡಿವೆ. ಪ್ರೀಕೇಂಬ್ರಿಯನ್ ಯುಗದಿಂದ ಆರಂಭವಾಗಿ ಕ್ವಾರ್ಟನರಿವರೆಗೆ ನಿಕ್ಷೇಪಗೊಂಡಿವೆ. ಇವೆಲ್ಲವುಗಳ ಪೈಕಿ ಪ್ರೀಕೇಂಬ್ರಿಯನ್ ಯುಗದಲ್ಲಿನವು ಆರ್ಥಿಕವಾಗಿ ಮಹತ್ತ್ವವನ್ನು ಪಡೆದಿವೆ. ಪ್ರಪಂಚದ ಅತ್ಯುತ್ತಮ ಮತ್ತು ಹೇರಳವಾದ ಕಬ್ಬಿಣದ ಅದಿರು ದೊರೆಯುವುದು ಈ ಯುಗದ ಯುಗದಲ್ಲಿ. ಇತ್ತೀಚಿನ ಗಣಿಗಾರಿಕೆ ಕಾರ್ಯವೆಲ್ಲ ನಡೆಯುತ್ತಿರುವುದು ಈ ಶಿಲೆಗಳು ಪ್ರಧಾನವಾಗಿ ಹರಡಿರುವ ಪ್ರದೇಶಗಳಲ್ಲಿ ಮಾತ್ರ.

ಪ್ರೀಕೇಂಬ್ರಿಯನ್ ಪಟ್ಟೆ ಕಬ್ಬಿಣ ಶಿಲಾಸ್ತರಗಳ ಸಮೂಹಗಳನ್ನು ಸಾಮಾನ್ಯವಾಗಿ ಕಬ್ಬಿಣ ಶಿಲಾಸ್ತರ ಸಮೂಹಗಳೆಂದು ಕರೆಯುವುದು ವಾಡಿಕೆ. ರೂಪಾಂತರಗೊಂಡಿಲ್ಲದ ಸ್ಥಿತಿಯಲ್ಲಿರುವ ಪಟ್ಟೆ ಕಬ್ಬಿಣ ಶಿಲೆಗಳು, ಪಟ್ಟೆ ಹಿಮಟೈಟ್ ಬೆಣಚುಶಿಲೆ, ಪಟ್ಟೆಹಿಮಟೈಟ್ ಜಾಸ್ಪರ್, ಪಟ್ಟೆಹಿಮಟೈಟ್ ಚೆರ್ಟ್ ಇವುಗಳಲ್ಲಿ ಹಿಮಟೈಟ್ ಖನಿಜ ಪ್ರಧಾನವಾಗಿರುತ್ತದೆ. ಹೆಚ್ಚು ರೂಪಾಂತರಕ್ಕೊಳಗಾದ ಪಟ್ಟೆಕಬ್ಬಿಣ ಶಿಲೆಗಳಲ್ಲಿ ಪಟ್ಟೆಮ್ಯಾಗ್ನಟೈಟ್ ಕ್ವಾರ್ಟ್‌ಸೈಟ್ ಆಗಿದೆ. ಇವುಗಳಲ್ಲಿ ಪ್ರಮುಖವಾಗಿ ಮ್ಯಾಗ್ನಟೈಟ್ ಖನಿಜವಿರುತ್ತದೆ. ಭಾರತದ ಕಬ್ಬಿಣ ಅದಿರು ನಿಕ್ಷೇಪಗಳ ಪೈಕಿ ಪಟ್ಟೆಕಬ್ಬಿಣ ಶಿಲೆಗಳು ಮಾತ್ರ ಹೆಚ್ಚು ಪ್ರಾಧಾನ್ಯತೆ ಪಡೆದಿರುವುದರಿಂದ ಇವುಗಳ ಬಗ್ಗೆ ತಿಳಿದುಕೊಳ್ಳುವುದು ಆವಶ್ಯಕ.

ಪಟ್ಟೆ ಕಬ್ಬಿಣ ಶಿಲೆ ರೂಪಗೊಂಡ ಬಗೆ ಅತ್ಯಂತ ಕುತೂಹಲಕಾರಿಯಾದದ್ದು. ಪ್ರಧಾನವಾಗಿ ಇವು ಪ್ರಸ್ತರೀಕರಣ ವಿಧಾನದಿಂದ ರೂಪುಗೊಂಡವು. ಕ್ಷಾರಯುಕ್ತ ಬಾಹ್ಯಸ್ಥ ಶಿಲಾಸ್ವರೂಪಗಳು ದೀರ್ಘಕಾಲದ ಶಿಥಿಲೀಕರಣ ಕ್ರಿಯೆಯಿಂದ ಪುಡಿ ಮತ್ತು ಹುಡಿಯಾಗಿ ನೀರಿನಲ್ಲಿ ಬಹುದೂರ ಸಾಗಿ ಮುಂದುವರೆದು ಪ್ರತ್ಯೇಕಿಸಲ್ಪಟ್ಟು ಧಾತುಗೆ ಆಮ್ಲಜನಕ ಸೇರಿಸಲ್ಪಟ್ಟು, ಮೇಲ್ಮೈ ನೀರಿನ ಸತತ ಜಿನುಗುವಿಕೆ ಮತ್ತು ಪುನರ್‌ಬಂಧನ ಕ್ರಿಯೆ ಮತ್ತು ಪ್ರತಿಯಾಗಿ ಬರುವ ವಸ್ತು ಈ ಎಲ್ಲ ಕ್ರಿಯೆಗಳು ಅವಿರತವಾಗಿ ಮುಂದುವರೆದಾಗ ಒಂದು ಕಬ್ಬಿಣಸ್ತರ ಪಂಕ್ತಿಯೇ ಸಾಗರ ತಳದಲ್ಲಿ ಶೇಖರವಾಗುತ್ತದೆ. ಸಾಮಾನ್ಯವಾಗಿ ಇಂತಹ ಶಿಲೆಗಳು ಆಮ್ಲಜನಕರಹಿತ ಪರಿಸರವುಳ್ಳ ಸಾಗರಗಳಲ್ಲಿ ಸಂಚಿತಗೊಂಡಂತಹವು. ಆರ್ಕೆಯ ಯುಗದ ಸಾಗರಗಳು ಆಮ್ಲೀಯ ಮತ್ತು ಕಬ್ಬಿಣವು ದ್ರವರೂಪದಲ್ಲಿತ್ತು. ಇದರಲ್ಲಿದ್ದ ಮೂಲ ಬ್ಯಾಕ್ಟೀರಿಯಾದ ದ್ಯುತಿಸಂಶ್ಲೇಷಣ ಕ್ರಿಯೆಯಿಂದ ಉತ್ಪತ್ತಿಯಾದ ಆಮ್ಲಜನಕ ಸಾಗರ ನೀರಿನ ಜೊತೆ ವರ್ತಿಸಿ ಕಬ್ಬಿಣ ರೂಪುಗೊಂಡಿದೆ. ಅಂದಿನ ಪರಿಸರ ಪಟ್ಟೆ ಕಬ್ಬಿಣ ಶಿಲೆ ನಿಕ್ಷೇಪಗೊಳ್ಳಲು ಪೂರಕವಾಗಿದ್ದರಿಂದ ಬೃಹತ್ ನಿಕ್ಷೇಪಗಳು ಪ್ರಪಂಚಾದ್ಯಂತ ಹರಡಿರುವುದನ್ನು ಕಾಣಬಹುದು. ಈ ವಿಧದ ಪಟ್ಟೆ ಕಬ್ಬಿಣ ಶಿಲೆಗಳು ಹಲವಾರು ಕಿಮೀ ಉದ್ದ ಹಾಗೂ ಸಾವಿರಾರು ಅಡಿ ಅಗಲ ಮತ್ತು ವಿವಿಧ ಓರೆಯನ್ನು ಹೊಂದಿರುತ್ತವೆ. ಜಲದಲ್ಲಿ ನಿಕ್ಷೇಪಗೊಂಡ ಈ ಸ್ತರ ಪಂಕ್ತಿಗಳು ಅನಂತರ ಭೂಚಲನೆ ಕಾರ್ಯದಿಂದಾಗಿ ಸಮತಲವಾಗಿದ್ದ ಸ್ತರಗಳು ವಿವಿಧ ರೀತಿಯ ಮಡಿಕೆ, ಸ್ತರಭಂಗ, ಬಿರುಕು, ಸೀಳು ಹಾಗೂ ಇತರೆ ಸಂಕೀರ್ಣ ರಚನೆಗಳಿಂದೊಡಗೂಡಿರುತ್ತವೆ. ಶಿಥಿಲತೆ ಮತ್ತು ಪುನಾರಚನೆಯಿಂದ ಅನಿರ್ದಿಷ್ಟವಾದ ಸ್ತರರಚನೆ ಇರುವ ಹಿಮಟೈಟ್ ಮತ್ತು ಲೈಮೊನೈಟ್ ಖನಿಜದ ಮೇಲು ಹೊದಿಕೆ ರೂಪುಗೊಳ್ಳುತ್ತದೆ. ಈ ಶಿಲೆಗಳಿಂದಾದ ಗಿರಿಶ್ರೇಣಿಗಳು ಸಾಮಾನ್ಯವಾಗಿ ದಟ್ಟವಾದ ಅರಣ್ಯಗಳಿಂದ ಕೂಡಿರುವುದು ವೈಶಿಷ್ಟ್ಯ. ಈ ಶಿಲಾಗಿರಿ ಶ್ರೇಣಿಗಳ ಉತ್ತುಂಗದಲ್ಲಿ ಕಬ್ಬಿಣದ ಹೊರಚಾಚುಗಳು ಗೋಡೆಯಂತೆ ಎದ್ದು ಕಾಣುತ್ತವೆ. ಏಕೆಂದರೆ ಈ ಶಿಲೆಯ ಜೊತೆಗಿದ್ದ ನಾಡಶಿಲೆಗಳು ಚಿದ್ರಶಿಥಿಲೀಕರಣಗೊಂಡಿದ್ದು, ಕಬ್ಬಿಣ ಅದಿರಿನ ಶಿಲಾಟೋಪಿ ರಚನೆಯಾಗಿರುವುದನ್ನು ಕಾಣಬಹುದು. ಬೆಟ್ಟದ ನೆತ್ತಿಯ ಮೇಲಿರುವ ಶಿಲೆಗಳಲ್ಲಿ ಉತ್ತಮ ದರ್ಜೆಯ ಅದಿರಿನ ಸಂಗ್ರಹಣೆಯಾಗಿದ್ದರೆ, ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಕೆಳ ದರ್ಜೆಯ ಅದಿರಿರುವುದನ್ನು ಕಾಣಬಹುದು. ಪಟ್ಟೆ ಕಬ್ಬಿಣ ಶಿಲೆಗಳಲ್ಲಿ ಖನಿಜಗಳ ಗಾತ್ರ ಸೂಕ್ಷ್ಮಕಣದಿಂದ ಹಿಡಿದು ದಪ್ಪ ಕಣದವರೆಗೆ ಇರುವುದು. ಈ ರೀತಿಯ ಶಿಲೆಗಳಲ್ಲಿ ಮೂರು ವಿಧದ ಕಬ್ಬಿಣದ ಶಿಥಿಲೀಕರಣ ಕ್ರಿಯೆಯಿಂದ ಹಿಮಟೈಟ್ ಖನಿಜ ಲೈಮೊನಿಟಿಕ್, ಗೋಯಿಥಿಟಿಕ್ ಖನಿಜಗಳಾಗಿ ಪರಿವರ್ತನೆಗೊಳ್ಳುವುದಲ್ಲದೆ ಈ ಕ್ರಿಯೆ ಮುಂದುವರೆದಾಗ ಕೊನೆಗೆ ಕೆಳದರ್ಜೆಯ ಅದಿರುಗಳೆಂದು ವಿಂಗಡಿಸಲಾಗಿದೆ, ಅಲ್ಲದೆ ಕಣಗಾತ್ರದ ಮೇಲೆ ಲಂಪ್ಸ್ ಮತ್ತು ಫೈನ್ಸ್ ಎಂದು ಕರೆಯುವರು. ಈ ಶಿಲೆಗಳು

ಪ್ರಧಾನವಾಗಿ ಕಬ್ಬಿಣ ಖನಿಜಗಳನ್ನು ಹೊಂದಿರುವುದಲ್ಲದೆ ಅನೇಕ ಅನುಪಯುಕ್ತ ಖನಿಜಗಳಾದ ಸಿಲಿಕ, ಅಲ್ಯುಮಿನ, ಸುಣ್ಣ ಮತ್ತು ಮೆಗ್ನೇಶಿಯಂ ಸಂಯೋಜನೆಯ ಖನಿಜಗಳಿರುವುದನ್ನು ಕಾಣಬಹುದು. ರಂಜಕ, ಗಂಧಕ, ಮ್ಯಾಂಗನೀಸ್, ಟೈಟಾನಿಯಂ, ವೆನಿಡಿಯಂ, ತಾಮ್ರ, ಸೀಸ, ಸತು, ತವರ, ಕ್ರೋಮಿಯಂ, ನಿಕ್ಕಲ್, ಚಿನ್ನ, ಪ್ಲಾಟಿನಂಗಳು, ಆನುಷಂಗಿಕ ಖನಿಜಗಳಾಗಿ ಅಪರೂಪವಾಗಿ ಕಂಡುಬರುತ್ತವೆ.

ಪಟ್ಟೆಕಬ್ಬಿಣ ಶಿಲೆ ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರೆಜಿಲ್, ಚೀನ, ಫ್ರಾನ್ಸ್, ಕೆನಡ, ಸ್ವೀಡನ್, ಭಾರತ, ಲಿಬಿರಿಯಾ, ವೆನಿಜೂಲ್ಲಾ ದೇಶಗಳಲ್ಲಿ ಈ ಶಿಲೆಗಳನ್ನು ಪ್ರಧಾನವಾಗಿ ಕಾಣಬಹುದು.

ಭಾರತದ ಎಲ್ಲ ರಾಜ್ಯಗಳಲ್ಲೂ ಈ ವಿಧದ ಶಿಲೆ ದೊರೆತರೂ ಬೃಹತ್ ನಿಕ್ಷೇಪಗಳು ಬಿಹಾರ್, ಒರಿಸ್ಸ, ಮಧ್ಯಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಅಲ್ಲದೇ ಸಣ್ಣ ಪ್ರಮಾಣದ ನಿಕ್ಷೇಪಗಳು ಆಂಧ್ರಪ್ರದೇಶ, ರಾಜಸ್ತಾನ್ ಮತ್ತು ಹರಿಯಾಣ ರಾಜ್ಯಗಳಲ್ಲಿ ದೊರೆಯುವವು.

ಕರ್ನಾಟಕ ರಾಜ್ಯದಲ್ಲಿ ಇವು ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಬಿಜಾಪುರ, ದಕ್ಷಿಣ ಕನ್ನಡ, ಗದಗ್, ಹಾಸನ, ತುಮಕೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹರಡಿವೆ.

ಉತ್ಕೃಷ್ಟ ಕಬ್ಬಿಣದ ಅದಿರಿನ ಮೂಲವಾದ ಈ ಶಿಲೆಗಳು ರಾಜ್ಯದ ರಾಷ್ಟ್ರದ, ಹಾಗೂ ಅಂತಾರಾಷ್ಟ್ರಗಳ ಅಭಿವೃದ್ಧಿಯಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿವೆ. ಇಂತಹ ಶಿಲೆಗಳ ನೆಲೆ ಬೆಳೆಗಳನ್ನು ಅರಿತು ವಿವೇಚನೆಯಿಂದ ಬಳಸಿದಲ್ಲಿ ಇಂದಿನ ಹಾಗೂ ಮುಂದಿನ ಪೀಳಿಗೆಯ ಅಭಿವೃದ್ಧಿಗೆ ಸಹಕಾರಿಯಾಗಬಲ್ಲವು. ಕಾರಣ ಈ ಶಿಲೆಗಳ ಶೋಧನಕಾರ್ಯ, ಸಂಶೋಧನೆ, ಗಣಿಕಾರ್ಯ, ಸಾಗಣೆ, ಖನಿಜ ಸಂಸ್ಕರಣೆ ಹಾಗೂ ಸಂಗ್ರಹಣೆ ಕಾರ್ಯಗಳಲ್ಲಿ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ ಮಾತ್ರ ಶಿಲಾನಿಧಿಯ ಸಂಪೂರ್ಣ ಸದ್ಬಳಕೆ ಸಾಧ್ಯ.

**ಅದಿರು ಕಣಜ :** ಭೂತಳದ ಗಣಿಯಲ್ಲಿ ಅದಿರನ್ನು ಮೇಲ್ಮಟ್ಟದಿಂದ ಕೆಳಮಟ್ಟಕ್ಕೆ ಸಾಗಿಸುವ ಸಾಧನ (ಓರ್ ಬಿನ್).

ಅದಿರನ್ನು ಶೇಖರಿಸುವುದೇ ಇದರ ಮುಖ್ಯ ಉದ್ದೇಶ. ಇದು 50 – 1,000 ಟನ್ ಅದಿರು ಶೇಖರಣಾಸಾಮರ್ಥ್ಯ ಉಳ್ಳದ್ದಾಗಿರುತ್ತದೆ. ಅದಿರು ಸುರಿತದಿಂದ ಅಪಾಯವಾಗದಂತೆ ಇದರ ಪಾರ್ಶ್ವಗಳು 45° ಇಳಿಜಾರಾಗಿರುತ್ತವೆ. ದೊಡ್ಡ ಅದಿರಿನ ಚೂರುಗಳನ್ನು ತಡೆಹಿಡಿಯಲು ಇದರ ಮೇಲ್ಮುಖಕ್ಕೆ ಉಕ್ಕಿನ ಜಾಲರಿಯನ್ನು ಮತ್ತು ಅದಿರನ್ನು ಇಳಿಜಾರು ಡಬ್ಬಿಗೆ ಒಯ್ಯಲು ತಳಭಾಗಕ್ಕೆ ಇಳಿಹೊನಲುಗಳನ್ನು ಅಳವಡಿಸಿರುತ್ತಾರೆ. ಈಗ ಜಾರುವ ಹೊನಲಿಗೆ ಜರಗು ಪೀಠವನ್ನು ಸಹ ಆಳವಡಿಸಿದ್ದಾರೆ. ಇದರ ತಳ ತುದಿ ಇಳಿಬಾವಿಗೆ ಸೇರಿದಂತಿರುತ್ತದೆ. ಈ ಸಾಧನದಿಂದ ಅದಿರಿನ ವರ್ಗಾವಣೆಯಲ್ಲಿ ಕಾಲ ಮತ್ತು ಖರ್ಚಿನ ಅಪವ್ಯಯ ಕಡಿಮೆಯಾಗುತ್ತದೆ. (ಟಿ.ಟಿ.)

**ಅದಿರು ಜನನ :** ನಿಸರ್ಗದಲ್ಲಿ ದೊರೆಯುವ ಉಪಯುಕ್ತ ಖನಿಜಗಳ ಸಂಗ್ರಹಣವೇ ನಿಕ್ಷೇಪಗಳು. ಇವು ಎಲ್ಲ ಕಡೆಯೂ ದೊರೆಯುವುದಿಲ್ಲ. ಖನಿಜಗಳ ಸ್ಥಿರತೆ, ಭೂ ಚಟುವಟಿಕೆ ಮತ್ತು ಸನ್ನಿವೇಶ ಇವುಗಳನ್ನು ಅವಲಂಬಿಸಿ ಮೈದೋರುತ್ತವೆ. ದೊರೆಯುವ ರೀತಿಯನ್ನನುಸರಿಸಿ ಅದಿರು ನಿಕ್ಷೇಪಗಳನ್ನು ಸಹಜನ್ಯ (ಸಿಂಜೆನಿಟಿಕ್) ಅದಿರುಗಳು ಮತ್ತು ಅನುಜನ್ಯ (ಎಪಿಜೆನಿಟಿಕ್) ಅದಿರುಗಳು ಎಂದು ವರ್ಗೀಕರಿಸಬಹುದು. ಸಹಜನ್ಯನಿಕ್ಷೇಪಗಳು ಅವು ಹುದುಗಿರುವ ಶಿಲೆಗಳೊಡನೆ ಏಕಕಾಲದಲ್ಲಿ ಹುಟ್ಟಿದವು. ಈ ವರ್ಗದಲ್ಲಿ ಮಾತೃಶಿಲಾದ್ರವದಿಂದಾದ ಶೇಖರಣೆಗಳು, ಪ್ರಸರೀ ನಿಕ್ಷೇಪಗಳು ಇತ್ಯಾದಿ ಭೇದಗಳಿವೆ. ಅನುಜನ್ಯನಿಕ್ಷೇಪಗಳು ಅವು ಹುದುಗಿರುವ ಶಿಲೆಗಳು ಮೈದೋರಿದ ನಂತರ ನಾನಾ ಕಾರಣಗಳಿಂದ ಅವುಗಳಲ್ಲಿ ಸೇರಿ ಜನಿಸಿದವು. ಈ ವರ್ಗದಲ್ಲಿ ಜಲೋಷ್ಣ (ಹೈಡ್ರೊಥರ್‌ಮಲ್) ನಿಕ್ಷೇಪಗಳು, ಸಂಪರ್ಕ ರೂಪಾಂತರ ನಿಕ್ಷೇಪಗಳು ಇತ್ಯಾದಿ ಬಗೆಗಳಿವೆ.

ಹಲವು ಅದಿರುನಿಕ್ಷೇಪಗಳು ಉಂಟಾಗಲು ಮಾತೃಶಿಲಾದ್ರವಕ್ಕೆ ಸಂಬಂಧಿಸಿದ ಚಟುವಟಿಕೆಗಳು ಕಾರಣವಾಗಿವೆ. ಮಾತೃಶಿಲಾದ್ರವ ಆರಿ ತಣ್ಣಗಾಗುತ್ತಿರುವ ಸಂದರ್ಭದಲ್ಲಿ ಮೂಲ (ಬೇಸಿಕ್) ಶಿಲೆಗಳು ಉದ್ಭವಿಸುವಾಗ ಸಾಮಾನ್ಯವಾಗಿ ಲೋಹಗಳ ಆಕ್ಸೈಡುಗಳು ಮತ್ತು ಸಲ್ಫೈಡುಗಳು ಅದರಿಂದ ಹೊರಬಂದು, ಉಳಿದಿರುವ ಸಿಲಿಕ ದ್ರವಾಂಶದೊಡನೆ ಬೆರೆಯದೆ ನಿಯತ ಪದರಗಳಲ್ಲೊ ಇಲ್ಲವೆ ನಿರಾಕಾರ ಶೇಖರಣೆಗಳಾಗಿಯೊ ಆಗುತ್ತವೆ. ಇವುಗಳಲ್ಲಿ ಟೈಟೇನಿಯಂನಿಂದ ಕೂಡಿದ ಮ್ಯಾಗ್ನಟೈಟ್, ಕ್ರೋಮೈಟ್, ನಿಕ್ಕಲ್, ಪ್ಲಾಟಿನಂ ಮತ್ತು ವಜ್ರ ನಿಕ್ಷೇಪಗಳು ಮುಖ್ಯವಾದುವು.

ಹೀಗೆಯೆ ಹೆಚ್ಚು ಸಿಲಿಕಾಂಶದಿಂದ ಕೂಡಿದ ಕ್ಷಾರೀಯ ಮಾತೃಶಿಲಾದ್ರವಗಳು ಕಾರ್ಬನ್ ಡೈ ಆಕ್ಸೈಡ್, ಬೋರಾನ್, ಫ್ಲೂರಿನ್, ಕ್ಲೋರಿನ್, ನೀರು ಮತ್ತು ಗಂಧಕ– ಈ ಧಾತುಗಳಿಂದ ಕೂಡಿದ್ದು ಕ್ರಮೇಣ ಅನೇಕ ಖನಿಜಗಳ ಉತ್ಪತ್ತಿಗೂ ಕಾರಣವೆನಿಸುತ್ತವೆ. ಕೆಲವು ವೇಳೆ ಈ ಖನಿಜಗಳಿಂದ ಕೂಡಿದ ಪೆಗ್ಮಟೈಟ್ ನಿಕ್ಷೇಪಗಳು ಮೂಲಶಿಲೆಯ ನಾನಾ ಕಡೆ ತೋರಿಬರುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಇವು ಮೂಲಶಿಲೆಗಳಿಂದ ಹೊರಬಂದು ಸುತ್ತಮುತ್ತಲಿರುವ ಇತರ ಶಿಲೆಗಳಲ್ಲಿ ಡೈಕ್ ಅಥವಾ ಸಿಲ್‌ಗಳೋಪಾದಿಯಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಲಿಥಿಯಂ, ಟ್ಯಾಂಟಲಂ, ಬೆರಿಲಿಯಂ, ಸೀಸಿಯಂ, ಅಭ್ರಕ, ಫೆಲ್ಡ್‌ಸ್ಪಾರ್, ಟೂರ್ಮಲೀನ್, ಕ್ಯಾಸಿಟರೈಟ್, ಷೀಲೈಟ್ ಇತ್ಯಾದಿ ಅನೇಕ ಖನಿಜಗಳು ಉತ್ಪತ್ತಿಯಾಗುತ್ತವೆ.

ಇದಲ್ಲದೆ ಮಾತೃಶಿಲಾದ್ರವದಿಂದ ಹೊರಬರುವ ಅನಿಲಗಳು ವಿಶೇಷ ಒತ್ತಡ ಹಾಗೂ ಶಾಖದಿಂದ ಅಂತರಾಳದಲ್ಲಿರುವ ಶಿಲೆಗಳಿಗೆ, ಅದರಲ್ಲೂ ಪ್ರಮುಖವಾಗಿ ಸುಣ್ಣಶಿಲೆಗಳಿಗೆ ನುಗ್ಗಿದಾಗ ರಾಸಾಯನಿಕ ಕ್ರಿಯೆಯುಂಟಾಗಿ ಸಂಪರ್ಕರೂಪಾಂತರವಾಗುತ್ತದೆ. ಇದರಿಂದ ಅನೇಕ ತೆರನಾದ ಹೆಚ್ಚು ಶಾಖದಿಂದಲೇ ಉಂಟಾಗುವ ಮ್ಯಾಗ್ನಟೈಟ್, ಇಲ್ಮನೈಟ್, ಹಿಮಟೈಟ್, ಕುರಂದ, ಸ್ಪಿನಲ್, ಗ್ರ್ಯಾಫೈಟ್, ಚಿನ್ನ, ಪ್ಲಾಟಿನಂ, ಷೀಲೈಟ್ ಮತ್ತು ವುಲ್ಫ್ರಮೈಟ್ ಖನಿಜಗಳು ರೂಪಗೊಳ್ಳುತ್ತವೆ.

ಹಲವುವೇಳೆ ಅಗ್ನಿಪರ್ವತಗಳಿಂದ ಹೊರಬರುವ ಅನೇಕ ಅನಿಲಗಳು ಘನೀಭೂತವಾಗಿ ಅವುಗಳ ಸುತ್ತ ಶೇಖರವಾಗುವ ಉಪಯುಕ್ತವಾದ ಗಂಧಕ, ಕಲ್ಲುಪ್ಪು, ಬೋರಿಕ್ ಆ್ಯಸಿಡ್ ನಿಕ್ಷೇಪಗಳಿಗೆ ನಾಂದಿಯಾಗಿವೆ.

ಇದೇ ಸನ್ನಿವೇಶದಲ್ಲಿ ಮಾತೃಶಿಲಾದ್ರವದಿಂದ ಬೇರ್ಪಟ್ಟ ಉಷ್ಣಜಲವು (ಹೈಡ್ರೊಥರ್ಮಲ್ ದ್ರವ) ಕಡಿಮೆ ಒತ್ತಡವಿರುವ ತಮ್ಮ ಸುತ್ತಮುತ್ತಲಿನ ಶಿಲೆಗಳಲ್ಲಿರುವ ಬಿರುಕು, ಸೀಳು, ರಂಧ್ರ, ಜಾಡುಗಳಲ್ಲಿ ಪ್ರವಹಿಸುತ್ತವೆ. ಹೀಗೆ ಪ್ರವಹಿಸುವಾಗ ಉಷ್ಣಜಲದಲ್ಲಿ ಸಂಯೋಜಿತವಾಗಿರುವ ಅನೇಕ ಖನಿಜಾಂಶಗಳು ನಿಕ್ಷೇಪಗೊಳ್ಳುತ್ತವೆ. ಇವು ಮೂಲಶಿಲೆಗಳ ಸ್ಥಾನವನ್ನು ಆವರಿಸಬಹುದು ಅಥವಾ ಮೂಲಶಿಲೆಗಳಲ್ಲಿರುವ ಬಿರುಕು ಇತ್ಯಾದಿ ಜಾಗಗಳಲ್ಲಿ ಸಂಗ್ರಹಿಸಬಹುದು. ಈ ರೀತಿಯ ಖನಿಜೋತ್ಪತ್ತಿಗೆ ಅಲ್ಲಿಯ ಶಾಖ ಹಾಗೂ ಒತ್ತಡ, ದ್ರವಗಳ ಹಾಗೂ ಹುದುಗುವ ಶಿಲೆಗಳೊಡನೆ ಜರುಗುವ ರಾಸಾಯನಿಕ ಕ್ರಿಯೆ ಇವೇ ಮೂಲ ಕಾರಣಗಳು. ಇವುಗಳನ್ನನುಸರಿಸಿ ಆಳಜಲೋಷ್ಣ, ಮಧ್ಯೋಷ್ಣ ಮತ್ತು ಅಲೋಷ್ಣಿ ನಿಕ್ಷೇಪಗಳೆಂದು ವರ್ಗೀಕರಿಸಿದ್ದಾರೆ. ಹೆಚ್ಚು ಶಾಖದ (ಸು. $300^0$–$400^0$ ಸೆ.) ವಾತಾವರಣದಲ್ಲಿ ಉತ್ಪತ್ತಿಯಾಗುವ ತವರ, ಟಂಗ್‌ಸ್ಟನ್ ಮತ್ತು ಮ್ಯಾಗ್ನಟೈಟ್ ಇವು ಆಳಜಲೋಷ್ಣ ನಿಕ್ಷೇಪಗಳಲ್ಲಿ ಮುಖ್ಯವಾದುವು. ಮಧ್ಯೋಷ್ಣ ನಿಕ್ಷೇಪಗಳ ಉತ್ಪತ್ತಿಗೆ ಶಾಖ (ಸುಮಾರು $150^o$–$300^o$ ಸೆ.) ಮಧ್ಯಸ್ಥವಾಗಿದ್ದು ಸಲ್ಫೈಡು, ಸಲ್ಫ್‌ಆರ್ಸಿನೈಡ್, ಮತ್ತು ಟೆಲ್ಯೂರೈಡ್‌ಗಳು– ಈ ವರ್ಗಕ್ಕೆ ಸೇರಿದ ಖನಿಜಗಳಾಗಿ ರೂಪಗೊಳ್ಳುತ್ತವೆ. ಎಪಿಥರ್ಮಲ್ ಅದಿರು ನಿಕ್ಷೇಪಗಳ ಉತ್ಪತ್ತಿಗೆ ಶಾಖ (ಸು. $50^o$–$150^o$ ಸೆ.) ಇನ್ನೂ ಕಡಿಮೆಯಾಗಿದ್ದು ಆರ್ಸೆನಿಕ್, ಆ್ಯಂಟಿಮನಿ ಮತ್ತು ಪಾದರಸ ಧಾತುಗಳ ಸಲ್ಫೈಡುಗಳಿಂದ ಕೂಡಿರುತ್ತವೆ.

ಖನಿಜೋತ್ಪತ್ತಿಯಲ್ಲಿ ಶಿಥಿಲೀಕರಣ (ವೆದರಿಂಗ್) ಬಹಳ ಮುಖ್ಯ ಪಾತ್ರವಹಿಸಿದೆ. ಅನೇಕ ಖನಿಜಗಳು ಶಿಲೆಗಳೊಡನೆ ಸಂಯೋಜಿತವಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿರದೆ ಉಪಯುಕ್ತ ನಿಕ್ಷೇಪಗಳಾಗಿರುವುದಿಲ್ಲ. ಆದರೆ ಪ್ರಕೃತಿಯಲ್ಲಿ ಜರಗುವ ಶಿಥಿಲೀಕರಣದಿಂದ ಶಿಲೆಗಳು ಒಡೆದು ಚೂರು ಚೂರಾಗಿ ಅವುಗಳಲ್ಲಿರುವ ಅಲ್ಪ ಪ್ರಮಾಣದ ಖನಿಜಗಳು ಬೇರ್ಪಡುತ್ತವೆ. ಹೀಗೆ ಬೇರ್ಪಟ್ಟ ಖನಿಜಗಳು ಅವುಗಳ ಭೌತಗುಣಗಳಿಗನುಗುಣವಾಗಿ ಗಾಳಿಯ ಹಾಗೂ ಮಳೆಯ ನೀರಿನ ಮೂಲಕ ಸ್ಥಳದಲ್ಲೇ ಶೇಖರವಾಗಬಹುದು ಅಥವಾ ಸ್ಥಳಾಂತರಗೊಂಡು ಬೇರೆ ಕಡೆ ಸಂಗ್ರಹವಾಗಬಹುದು. ಸ್ಥಳದಲ್ಲೇ ಶೇಖರವಾದ ಖನಿಜಗಳನ್ನು ಶೇಷಸಾಂದ್ರೀಕರಣ ನಿಕ್ಷೇಪಗಳೆನ್ನುತ್ತಾರೆ. ಇವುಗಳಲ್ಲಿ ಕಬ್ಬಿಣ, ಮ್ಯಾಂಗನೀಸ್, ತವರ, ನಿಕ್ಕಲ್, ಬಾಕ್ಸೈಟು, ಕಯನೈಟ್, ಓಕರ್‌ ಮುಖ್ಯವಾದವುಗಳು. ಹಾಗಲ್ಲದೆ ಸ್ಥಳಾಂತರದಿಂದ ನದಿಗಳ ತಿರುವುಗಳಲ್ಲೊ ಸಮುದ್ರದ ಅಂಚಿನಲ್ಲೊ ಮರುಭೂಮಿಯ ದಿನ್ನಗಳಲ್ಲೊ ಶೇಖರವಾದ ಖನಿಜಗಳನ್ನು ಭೌತಸಾಂದ್ರೀಕರಣ ನಿಕ್ಷೇಪಗಳೆನ್ನುತ್ತಾರೆ. ಇವೇ ಪ್ರಸಿದ್ಧವಾದ ಚಿನ್ನ, ಪ್ಲಾಟಿನಂ, ತವರ ಮತ್ತು ಅಮೂಲ್ಯರತ್ನ ಇವುಗಳು ಮೆಕ್ಕಲು ನಿಕ್ಷೇಪಗಳು. ಸಮುದ್ರದ ಅಂಚಿನ ಮರಳುಗಳಲ್ಲಿ ದೊರೆಯುವ ಇಲ್ಮನೈಟ್, ರೂಟೈಲ್ ಮತ್ತು ಮಾನಜೈಟ್ ಅದಿರುಗಳು ಈ ಗುಂಪಿಗೆ ಸೇರಿದವು.

ಶಿಥಿಲೀಕರಣಕ್ಕೆ ಒಳಗಾದ ಕೆಲವು ಸಲ್ಫೈಡ್ ಖನಿಜಗಳು ರಾಸಾಯನಿಕ ಬದಲಾವಣೆಗಳಿಗೆ ಒಳಗಾಗಿ ದ್ರವರೂಪದಲ್ಲಿ ಶಿಲೆಗಳ ಮೂಲಕ ಜಲಮಟ್ಟದ ಕೆಳಗೆ ಇಂಗಿ ಹೋಗಿ ಅನುಕೂಲವಾದ ವಾತಾವರಣದಲ್ಲಿ ಮೊದಲಿದ್ದ ಖನಿಜಗಳ ಮೇಲೆ ಶೇಖರವಾಗುತ್ತವೆ. ಇದರಿಂದ ಖನಿಜಾಂಶಗಳು ಮೇಲುಭಾಗಗಳಲ್ಲಿ ಕ್ಷಯಿಸಿ (ಕಡಿಮೆಯಾಗಿ), ಕೆಳಭಾಗಗಳಲ್ಲಿ ಸಂಗ್ರಹವಾಗುತ್ತವೆ. ಇದನ್ನು ಅನುಷಂಗಿಕ ಸಲ್ಫೈಡು ವೃದ್ಧೀಕರಣ ಎನ್ನುತ್ತಾರೆ. ಸಾಮಾನ್ಯವಾಗಿ ತಾಮ್ರದ ಗಣಿಗಳಲ್ಲಿ ಈ ಖನಿಜಪ್ರಸರಣೆಯನ್ನು ವಿವಿಧ ಹಂತಗಳಲ್ಲಿ ಗುರುತಿಸಬಹುದು. ಅಲ್ಲದೆ ಇಂಥ ವೃದ್ಧೀಕರಣವನ್ನು ತಾಮ್ರ, ಬೆಳ್ಳಿ, ಚಿನ್ನ, ಸತು, ಸೀಸ, ಕಬ್ಬಿಣ, ಮ್ಯಾಂಗನೀಸ್ ಮತ್ತು ನಿಕ್ಕಲ್ ನಿಕ್ಷೇಪಗಳಲ್ಲೂ ಕಾಣಬಹುದು.

ಶಿಲೆಗಳು ಅಧಿಕ ಉಷ್ಣ ಮತ್ತು ಒತ್ತಡಕ್ಕೆ ಒಳಗಾಗಿ ರೂಪಾಂತರವಾದಾಗ ಅವುಗಳ ಸಂಯೋಜನೆಯಲ್ಲಿರುವ ಅನೇಕ ಅನುಪಯುಕ್ತ ಖನಿಜಗಳು ಅತ್ಯುಪಯುಕ್ತ ಖನಿಜಗಳಾದ ಕಲ್ನಾರು, ಗ್ರಾಫೈಟು, ಟಾಲ್ಕ್, ಕಯನೈಟ್, ಆಂಡಲೂಸೈಟ್, ಸಿಲಿಮನೈಟ್, ಗಾರ್ನೆಟ್ ಮುಂತಾದುವುಗಳಾಗಿ ರೂಪುಗೊಳ್ಳುತ್ತವೆ.

ಪ್ರಕೃತಿಯಲ್ಲಿ ಜರಗುವ ನಗ್ನೀಕರಣ ಹಾಗೂ ಸಂಚಯನಗಳಿಂದ ಶಿಲಾ ಸಮುದಾಯ ಛಿದ್ರವಾಗಿ ಸಣ್ಣ ಸಣ್ಣ ಭಾಗಗಳಾಗಿ ನದಿಗಳ ಮೂಲಕ ಸರೋವರ ಹಾಗೂ ಸಮುದ್ರದ ತಳವನ್ನು ಸೇರುತ್ತವೆ. ಹೀಗೆ ಸೇರುವುದರಿಂದ ಜಲಜಶಿಲೆಗಳೇ ಅಲ್ಲದೆ ಬಹು ಅಮೂಲ್ಯವಾದ ಖನಿಜನಿಕ್ಷೇಪಗಳಾದ ಕಬ್ಬಿಣ, ಮ್ಯಾಂಗನೀಸ್, ರಂಜಕ, ಗಂಧಕ, ತಾಮ್ರ, ಯುರೇನಿಯಮ್, ವನೇಡಿಯಮ್, ಸುಣ್ಣಶಿಲೆ ಮತ್ತು ಜೇಡಿಮಣ್ಣು ಉತ್ಪತ್ತಿಯಾಗುತ್ತವೆ.

ಅಂತರ್ಜಲವೂ ಖನಿಜೋತ್ಪತ್ತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದುಂಟು. ಶಿಲೆಯ ನಾನಾ ಭಾಗಗಳಲ್ಲಿ ಪ್ರವಹಿಸುವಾಗ ಅಲ್ಲಿನ ಖನಿಜಗಳನ್ನು ಪ್ರವಾಹ ತನ್ನಲ್ಲಿ ವಿಲೀನಗಳಿಸಿಕೊಂಡು ಸಂದರ್ಭಾನುಸಾರ ಮತ್ತೊಂದೆಡೆ ಶೇಖರಿಸುವುದೂ ಉಂಟು, ಇದಕ್ಕೆ ಅತ್ಯುತ್ತಮ ಉದಾ : ಅಮೆರಿಕದ ಕಾಲರಾಡೊ ಪ್ರಸ್ಥಭೂಮಿಯಲ್ಲಿರುವ ಯುರೇನಿಯಮ್ ಮತ್ತು ವನೇಡಿಯಮ್ ಅದಿರು ನಿಕ್ಷೇಪಗಳು.

ಹೀಗೆ ಪ್ರಕೃತಿಯಲ್ಲಿ ನಾನಾ ರೀತಿಯ ಅದಿರು ಜನನವಾಗುತ್ತದೆ. ಅದಿರು ಸಾಮಾನ್ಯವಾಗಿ ಇಕ್ಕಟ್ಟಾದ ಶಿಲೆಯ ಬಿರುಕುಗಳಲ್ಲಿ ನಿಕ್ಷೇಪಗೊಂಡಿರುತ್ತದೆ. ಇಂಥ ನಿಕ್ಷೇಪಗಳಿಗೆ ಸಿರ, ಅದಿರಿನ ರೇಖೆ (ಲೋಡ್) ಎಂಬ ಹೆಸರಿದೆ. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿನ ಛಾಂಪಿಯನ್ ಸಿರ ರಾಯಚೂರಿನ ಹಟ್ಟಿ ಚಿನ್ನದ ಗಣಿಯ ಮೈನ್ ರೀಫ್ ಇದಕ್ಕೆ ಒಳ್ಳೆ ಉದಾ : ಆರ್ಥಿಕದೃಷ್ಟಿಯಿಂದ ಅದಿರು ಸಿರಗಳ ರೂಪದಲ್ಲಿ ಸಿಗುವುದು ಒಳ್ಳೆಯದೆ. ಮಟ್ಟ ಸುರಂಗ, ಅಡ್ಡ ಸುರಂಗಗಳನ್ನಿಟ್ಟು ಅದಿರನ್ನು ಹೊರತೆಗೆಯುತ್ತಾರೆ. (ಎಂ.ಎನ್.ವಿ.)

**ಅದಿರುಜೋಗರಿಕೆ :** ಮಿದುಳಿನ ಅರೆಗೋಳಗಳ ನಡುವೆ ಇರುವ ಓಕ್ಕಾಯಿ ಗಾತ್ರದ, ತಳದ ನರಗಂಟುಗಳಲ್ಲಿನ (ಬೇಸಲ್ ಗ್ಯಾಂಗ್ಲಿಯ) ನರಕಣಗಳು ಅನುವಳಿದಿರುವುದ ರಿಂದ ಹೊರಗಾಣುವ, ಕೈಕಾಲುಗಳು ಅದಿರುವ, ಮೈಬಿಗುಪಿನ ಬೇನೆಯಿದು (ಪಾರ್ಕಿನ್ಸನ್ನನ ಬೇನೆ). ಮೈಯೆಲ್ಲ ಸೆಡೆತುಕೊಂಡು ಅದಿರುವುದು ರೋಗದ ಮುಖ್ಯ ಗುರುತು.

ಕಾಲನ್ನು ಎಳೆದೆಳೆವ ನಡಿಗೆ, ಕಾಲು ಭಾರವೆನಿಸಿಕೆ, ಕೈ ಮೆಲ್ಲಗೆ ನಡುಗಿದಂತೆ ಕಾಣುವುದೇ ಅದಿರುಜೋಗರಿಕೆಯ ಮೊದಮೊದಲ ಲಕ್ಷಣಗಳು. ಉಳಿದವು ಒಂದಾದ ಮೇಲೆ ಒಂದರಂತೆ ನಿಧಾನವಾಗಿ ಬರುತ್ತವೆ. ಬರೆವಣಿಗೆ ಕಿರಿಯದಾಗುವುದು. ಕೊನೆಗೆ ಇನ್ನಿತರ ಕೈಚಳಕಗಳು ಇಲ್ಲವಾಗುತ್ತವೆ. ಮಾತು ತೊಡರುತ್ತದೆ. ನುಂಗಣೆ, ಆಹಾರ ಅಗಿಯುವುದೂ ಬಲು ಕಷ್ಟದ ಕೆಲಸವಾಗುತ್ತದೆ. ಸ್ನಾಯುಗಳ ನಿತ್ರಾಣ, ಬಿಗಿತಗಳಿಂದ ನಡಿಗೆ ಇನ್ನೂ ತ್ರಾಸಕರವಾಗುತ್ತದೆ. ಸಮತೋಲ ತಪ್ಪಿ ಬಿದ್ದುಬಿಡುವ ಸಂಭವ ಹೆಚ್ಚು. ಅಡ್ಡಾಡುವುದು ತೀರ ಪೇಚಾಟಕ್ಕಿಟ್ಟುಕೊಂಡು ಕೊನೆಗೆ ಕುರ್ಚಿಯಲ್ಲಿ ಕುಳಿತಲ್ಲಿಂದ, ಹಾಸಿಗೆಯಲ್ಲಿ ಮಲಗಿದಲ್ಲಿಂದ ಏಳುವುದೂ ಆಮೇಲೆ ನಡೆಯುವುದೂ ಶ್ರಮಕರವಾಗುತ್ತದೆ.

ಭಾವತೋರದ ಮುಖ, ಮೊಗವಾಡ ಹಾಕಿದ ಹಾಗೆ ಮುಖವಿರುವುದು. ಹುಬ್ಬುಗಳು ಎತ್ತಿಕೊಂಡಿರುತ್ತವೆ. ಬೆನ್ನು ಗೂನಾಗುತ್ತದೆ. ಮೈ ಮುಂದೆ ಕೈದೋಳುಗಳು ತೂಗುಬಿದ್ದಿರು ವುವು. ಕೈಗಳ ಹೆಬ್ಬೆರಳೂ ತೋರುಬೆರಳೂ ಯಾವಾಗಲೂ ಗುಳಿಗೆ ಮಾಡುತ್ತಿರುವಂತೆ, ಸುರುಳಿ ಸುತ್ತುತ್ತಿರುವಂತೆ ಆಡುತ್ತಿರುತ್ತವೆ. ಬರುಬರುತ್ತ ಇದು ಕೈ, ತೋಳು, ಕಾಲುಗಳಿಗೂ ಹಬ್ಬುತ್ತದೆ. ಹೆಜ್ಜೆ ಹಾಕಬೇಕೆಂದರೆ ಮುಂದಕ್ಕೆ ತಳ್ಳಿಸಿಕೊಂಡವನಂತೆ ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತ ನಿಧಾನವಾಗಿ ನಡೆವನು. ರೋಗ ಬಲಿತಿರುವಾಗ, ಏನು ಮಾಡಬೇಕೆಂದರೂ ಶ್ರಮ. ಕೈಕಾಲುಗಳು ತೀರ ಕುಸಿದು ಬೀಳದಿದ್ದರೂ ತನಗೆ ಬೇಕೆನಿಸಿದ್ದನ್ನು ಮಾಡಲು ಕೈಲಾಗದ ಹೆಳವನಾಗುತ್ತಾನೆ. ಆದರೂ ಸರಕ್ಕನೆ ಇದ್ದಕ್ಕಿದ್ದಂತೆ ಉದ್ವೇಗದಿಂದ ಕೆಲವು ಕೆಲಸಗಳನ್ನು ಸುಲಭವಾಗಿ ಮಾಡಿಬಿಡುವನು. ಪ್ರಾರಂಭದಲ್ಲಿ ಅರಿವೂ ಬುದ್ಧಿಯೂ ಚೆನ್ನಾಗೇ ಇದ್ದರೂ ರೋಗಿ ಚಿಂತೆಯಿಂದ ಖಿನ್ನನಾಗುತ್ತಾನೆ. ಈ ಬೇನೆಯನ್ನು ಮೊದಲು ವಿವರಿಸಿದವನು ಜೇಮ್ಸ್ ಪಾರ್ಕಿನ್ಸನ್ (1817).

ಸಾಮಾನ್ಯವಾಗಿ ವಯಸ್ಸಿಗೆ ಬಂದ ಮೇಲೆ ಈ ರೋಗ ಕಾಣಿಸಿಕೊಂಡರೂ ಮೂರನೆಯ ಹಂತದಲ್ಲೂ ತಲೆಹಾಕಬಹುದು. ಹೆಂಗಸರಿಗಿಂತ ಗಂಡಸರಲ್ಲಿ ಸಾಮಾನ್ಯ. ರೋಗದ ಲಕ್ಷಣಗಳು ಒಂದು ದಿನ ಇದ್ದಂತೆ ಇನ್ನೊಂದು ದಿನ ಇರದು. ಆದರೂ ಬೇರೂರಿರುವ ಈ ರೋಗ ಎಷ್ಟು ಚೆನ್ನಾಗಿ ತೋರುವುದೆಂದರೆ, ಒಂದು ಬಾರಿ ಸುಮ್ಮನೆ ನೋಡಿದರೂ ಗುರುತಿಸಬಹುದು. 10–20ವರ್ಷಗಳಲ್ಲಿ ಬಲಿಯುತ್ತದೆ. ಕೆಲವು ತಲೆಮಾರಿನವರಲ್ಲಿ ಒಬ್ಬರಿಗಿಂತಲೂ ಹೆಚ್ಚು ಮಂದಿಗೆ ಇದೇ ರೋಗ ಕಾಡಬಹುದು.

ನಿಜವಾದ ಕಾರಣ ತಿಳಿದಿಲ್ಲವಾದರೂ ಈಗ ಗೊತ್ತಿರುವಂತೆ, ಈ ಬೇನೆಗೆ ಮೂರು ಕಾರಣಗಳನ್ನು ಹೇಳಬಹುದು; ವಯಸ್ಸಾದವರಲ್ಲಿ ಮಿದುಳಿನ ತಳದ ನರಗಂಟುಗಳಿಗೆ ರಕ್ತ ಒದಗಿಸುವ ರಕ್ತನಾಳಗಳು ಪೆಡಸುಗಟ್ಟುವುದು; ಎಳೆಯರಲ್ಲಿ, ಈಗ ಬಹುಮಟ್ಟಿಗೆ ಮರೆತುಹೋಗಿರುವ ಮಿದುಳುರಿತಾನಂತರದ (ಪೋಸ್ಟ್–ಎಂಕೆಫಾಲಿಟಿಕ್) ವಿಷಕಣದ ಸೋಂಕು; ವಯಸ್ಸಿನ ಮಿತಿಯಿಲ್ಲದೆ, ಸರ್ಪಗಂಧ, ಫೀನೊತಯಜೀನಿನಂಥ ಮದ್ದುಗಳ ಸೇವನೆ. ಈ ಕಾರಣಗಳಲ್ಲಿ ಕೊನೆಯದನ್ನು ಮಾತ್ರ ಚೆನ್ನಾಗಿ ಗುಣಪಡಿಸಬಹುದು. ಏಕೆಂದರೆ, ಮದ್ದುಗಳ ಸೇವನೆ ನಿಂತರೆ, ರೋಗ ಲಕ್ಷಣಗಳು ಮರೆಯಾಗುತ್ತವೆ.

ಮೈಬಿಗಿತ, ನಡುಕಗಳ ಚಿಕಿತ್ಸೆಗಾಗಿ ಹಲವಾರು ಮದ್ದುಗಳಿವೆ. ಟ್ರೈಹೆಕ್ಸಿಫನಿಡಿಲ್ ಹೈಡ್ರೋಕ್ಲೋರೈಡ್, ಲಿವೋಡೋಪ, ಕಾರ್ಬಿಡೋಪ, ಅಮಾಂಟಿಡಿನ್ ಇತ್ಯಾದಿ. ವೈದ್ಯರ ಮಾರ್ಗದರ್ಶನದಲ್ಲಿ ಜೀವನಪರ್ಯಂತ ಔಷಧಿಯನ್ನು ಸೇವಿಸಬೇಕು. ರೋಗಿ ಆದಷ್ಟು ಸ್ವಾವಲಂಬಿಯಾಗಿ ಸಕ್ರಿಯವಾಗಿ ಕೆಲಸ ಮಾಡಲು ಪ್ರೋತ್ಸಾಹಿಸಬೇಕು. ಖಿನ್ನತೆ ತೀವ್ರವಾಗಿದ್ದರೆ ಖಿನ್ನತೆ ನಿವಾರಕ ಔಷಧಗಳೂ, ಆಪ್ತಸಮಾಲೋಚನೆಯೂ ಬೇಕಾಗಬಹುದು. (ಡಿ.ಎಸ್.ಎಸ್.)

**ಅದಿರುಶುದ್ಧಿ :** ಅದಿರನ್ನು ಅದರೊಂದಿಗೆ ಬೆರೆತಿರುವ ಅನುಪಯುಕ್ತ ವಸ್ತುಗಳು ಹಾಗೂ ಕಲ್ಮಶಗಳಿಂದ ಬೇರ್ಪಡಿಸುವ ವಿಧಾನ. ಸಾಮಾನ್ಯವಾಗಿ ಅದಿರನ್ನು ಅದರಲ್ಲಿನ ಲೋಹಾಂಶಗಳ ಪ್ರಮಾಣದ ಮೇಲೆ ಉತ್ತಮ, ಮಧ್ಯಮ ಹಾಗೂ ಕೆಳದರ್ಜೆಯವೆಂದು ವಿಂಗಡಿಸಲಾಗುವುದು. ಉತ್ತಮ ದರ್ಜೆಯ ಅದಿರನ್ನು ಗಣಿಯಿಂದ ತೆಗೆದು ಈಗಾಗಲೇ ಉಪಯೋಗಿಸಿರುವುದರಿಂದ ಈಗ ಹೇರಳವಾಗಿ ಮಧ್ಯಮ ಮತ್ತು ಕೆಳದರ್ಜೆಯ ಅದಿರು ಮಾತ್ರ ಸಿಕ್ಕುತ್ತದೆ. ಅತ್ಯುತ್ತಮ ದರ್ಜೆಯ ಹಿರಿಯ ಅದಿರುನಿಕ್ಷೇಪಗಳು ಈಗ ಸಾಮಾನ್ಯವಾಗಿ ಇಲ್ಲವೆಂದೇ ಹೇಳಬೇಕು. ಆದ್ದರಿಂದ ಮಧ್ಯಮ ಮತ್ತು ಕೆಳದರ್ಜೆಯ ಅದಿರಿಗೆ ಈಗ ಹೆಚ್ಚು ಗಮನ ಕೊಡಬೇಕಾದುದು ಅತ್ಯಾವಶ್ಯಕ.



ಚಿತ್ರ 1. ಅಯಸ್ಕಾಂತೀಯ ವಿಭಜಕ

ಮಧ್ಯಮ ಮತ್ತು ಕೆಳದರ್ಜೆಯ ಅದಿರನ್ನು ಶುದ್ಧಿಮಾಡಲು ಅನೇಕ ವಿಧಾನಗಳಿವೆ. ಅದಿರನ್ನು ಕುಲುಮೆಯಲ್ಲಿ ಹಾಕಿ ಲೋಹಾಂಶವನ್ನು ಬೇರ್ಪಡಿಸುವ ವಿಧಾನದಲ್ಲಿ ಸುಣ್ಣಕಲ್ಲು ಮತ್ತು ಕಲ್ಲಿದ್ದಲನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಬೇಕಾಗುವುದು. ಇದು ನೈಸರ್ಗಿಕ ಸಂಪತ್ತಿನ ದೃಷ್ಟಿಯಿಂದಲೂ ಮತ್ತು ಆರ್ಥಿಕದೃಷ್ಟಿಯಿಂದಲೂ ಲಾಭದಾಯಕವಲ್ಲ.

ಇನ್ನು ಶುದ್ಧೀಕರಣದ ದೊಡ್ಡ ಯಂತ್ರಗಳನ್ನು ನಿಕ್ಷೇಪಗಳ ಬಳಿ ಸ್ಥಾಪಿಸುವುದಾದರೆ ಮೊದಲು ಯೋಜಿತ ಮಾರ್ಗದರ್ಶಕ ಯಂತ್ರೋಪಕರಣಗಳ ಸಹಾಯದಿಂದ ಹಂತ ಹಂತವಾಗಿ ಅದಿರನ್ನು ಶುದ್ಧಿ ಮಾಡುವುದರ ಬಗ್ಗೆ ಪರೀಕ್ಷಿಸಿ ನೋಡಿ, ಲಾಭದಾಯಕ ವಾಗಿರುವುದೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದು. ಏಕೆಂದರೆ ಅದಿರನ್ನು ಶುದ್ಧಿಮಾಡುವಾಗ ಯಾವುದಾದರೊಂದು ಬಗೆಯ ಜಟಿಲ ಸಮಸ್ಯೆ ಇದ್ದೇ ಇರುತ್ತದೆ.

ಅದಿರಿನಲ್ಲಿ ನಾನಾ ಬಗೆಯ ಖನಿಜವಸ್ತುಗಳು ಮಿಶ್ರಗೊಂಡಿರುತ್ತವೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ಸ್ಫಟಿಕ ಮತ್ತು ಸಿಲಿಕೇಟುಗಳು. ಅದಿರನ್ನು ಶುದ್ಧಿಮಾಡುವ ಯಂತ್ರೋಪಕರಣಗಳ ಪೈಕಿ, ಇತ್ತೀಚಿನವರೆಗೆ ಹೆಚ್ಚಿಗೆ ಬಳಕೆಯಲ್ಲಿದ್ದುದು ಉಕ್ಕಿನ ಒನಕೆ ಯಂತ್ರ. ಆದರೆ ಇಂದು ಅದಿರು ಸಂಸ್ಕರಣ ಕಾರ್ಯದಲ್ಲಿ ನೂತನ ಸುಧಾರಿತ ವಿಧಾನಗಳನ್ನು ಕಂಡುಹಿಡಿದು, ಆ ಕಾರ್ಯವನ್ನು ನವೀನಗೊಳಿಸಿದ್ದಾರೆ. ಈ ರೀತಿಯ ಸಂಶೋಧನೆಗಳ ಫಲವಾಗಿ ನಮಗೆ ದೊರೆತಿರುವ ಆಧುನಿಕ ರೀತಿಯ ಅದಿರುಜಜ್ಜುವ ಯಂತ್ರಗಳು, ಪುಡಿಮಾಡುವ ಯಂತ್ರಗಳು, ಅಯಸ್ಕಾಂತೀಯ ವಿಭಜಕಯಂತ್ರಗಳು, ಸ್ವಯಂಚಾಲಿತ ಕುಲುಕುಜರಡಿಗಳು, ಸ್ವಯಂಚಾಲಿತ ಕುಲುಕುಹಲಗೆಗಳು, ಒನೆಯುವ ಕೆರುವ ಸಲಕರಣೆಗಳು ಇವುಗಳ ಸಹಾಯದಿಂದ ಅದಿರು ಶುದ್ಧೀಕರಣ ಕಾರ್ಯದಲ್ಲಿ ಎಂಥ ತೊಡಕಿನ ಸಮಸ್ಯೆಯನ್ನಾದರೂ ಬಿಡಿಸಬಹುದು.

ಅದಿರಿನಲ್ಲಿರುವ ಮುಖ್ಯ ಖನಿಜಗಳನ್ನು ವಿಂಗಡಿಸಬೇಕಾದರೆ ಮೊದಲು ಜಜ್ಜುವ ಯಂತ್ರಗಳಿಂದ ಪುಡಿಮಾಡಬೇಕು. ಅನಂತರ ಯಾವ ಗಾತ್ರದಲ್ಲಿ ಖನಿಜವಸ್ತುಗಳು ಅದಿರಿನಲ್ಲಿ ಅಡಗಿವೆ ಎಂಬುದನ್ನು ವಿಶೇಷರೀತಿಯ ಜರಡಿಗಳ ಸಹಾಯದಿಂದ ಪರೀಕ್ಷಿಸಿ, ಶುದ್ಧಿಮಾಡಬೇಕಾದ ವಿಧಾನವನ್ನು ನಿರ್ಧರಿಸಬೇಕು. ಆಮೇಲೆ ಅದಿರಿನಲ್ಲಿರುವ

ಖನಿಜವಸ್ತುಗಳನ್ನು ನಿರ್ದಿಷ್ಟ ಗುರುತ್ವಾಕರ್ಷಣೆ ಹಾಗೂ ಅಯಸ್ಕಾಂತೀಯ ಆಕರ್ಷಣೆಗೆ ಒಳಪಡಿಸಿ ಅನೇಕ ಖನಿಜಗಳನ್ನು ಸುಲಭವಾಗಿ ಬೇರ್ಪಡಿಸಬಹುದು. ಸಾಮಾನ್ಯವಾಗಿ ಸಣ್ಣ ಸಣ್ಣ ಕಣಗಳ ರೂಪದಲ್ಲಿ ಖನಿಜಾಂಶಗಳು ಅದಿರಿನಲ್ಲಿ ಅಡಗಿರುವುದರಿಂದ ಅದಿರನ್ನು ಹಿಟ್ಟುಮಾಡಿ ಶುದ್ಧಿಮಾಡುವುದು ಸುಲಭವೂ ಅಲ್ಲ, ಲಾಭದಾಯಕವೂ ಅಲ್ಲ. ಆದ್ದರಿಂದ ಸಣ್ಣ ಹಾಗೂ ದಪ್ಪ ರವೆಗಾತ್ರದ ಅದಿರಿನ ಪುಡಿಯನ್ನು ಸ್ವಯಂಚಾಲಿತ ಕುಲುಕುಹಲಗೆ ಯಂತ್ರಗಳಲ್ಲಿ ಅಥವಾ ಕೇರುವ ಯಂತ್ರಗಳಲ್ಲಿ ನೀರಿನೊಂದಿಗೆ ಹಾಕಿ ಜಾಲಿಸಿ ಖನಿಜವನ್ನು ಬೇರ್ಪಡಿಸಬಹುದು.



ಚಿತ್ರ 2. ಕೇರುಕುಲುಕು ಉಪಕರಣ

ರಾಡಿಯಾದ ಅದಿರನ್ನು ವಿಂಗಡಿಸುವ ಯಂತ್ರಗಳ ಸಹಾಯದಿಂದ ಜೇಡಿಮಣ್ಣಿನ ಅಂಶವನ್ನು ಬೇರ್ಪಡಿಸಿ, ಖನಿಜ ಕಣಗಳು ನೀರ್ಗುಳ್ಳೆಗಳಿಗೆ ಅಂಟಿಕೊಳ್ಳುವಂತೆ ಮಾಡಿ ತೇಲಿಸುವ ತಂತುವಿನ ಸಹಾಯದಿಂದ ಸಂಗ್ರಹಿಸುವುದು ಆಧುನಿಕ ಪದ್ಧತಿ. ಒಂದು ವೇಳೆ ಅದಿರಿನಲ್ಲಿ ಎರಡಕ್ಕಿಂತ ಹೆಚ್ಚಿನ ಖನಿಜಾಂಶಗಳಿದ್ದಲ್ಲಿ ಸೂಕ್ತ ರಾಸಾಯನಿಕ ವಸ್ತುಗಳ ಸಹಾಯದಿಂದ ಒಂದಾದ ಮೇಲೊಂದು ಖನಿಜವನ್ನು ತೇಲಿಸುವ ಯಂತ್ರಗಳ ಸಹಾಯದಿಂದ ಸಂಗ್ರಹಿಸುವುದು ಅತ್ಯಾಧುನಿಕ ಪದ್ಧತಿ. ಗಂಧಕಾಂಶವುಳ್ಳ ಅದುರನ್ನು ಈ ವಿಧಾನದಿಂದ ಶುದ್ಧಿಮಾಡಿ ಸಂಗ್ರಹಿಸುವುದು ಅತಿಸುಲಭ



ಚಿತ್ರ 3. ತೇಲುಮುಳುಗು ಉಪಕರಣ

ಹಾಗೂ ಲಾಭದಾಯಕ. ನೀರಿನ ಮಾಧ್ಯಮದೊಂದಿಗೆ ಕೇರುವ ಮತ್ತು ಕುಲುಕುವ ಹಲಗೆಗಳ ಸಹಾಯದಿಂದ ಅದಿರನ್ನು ಶುದ್ಧಿಮಾಡುವುದರ ಬದಲಾಗಿ ಅದಿಮಿದ ಗಾಳಿಯ ಮಾಧ್ಯಮದಿಂದ ಶುದ್ಧಿಮಾಡುವುದು ಬಳಕೆಗೆ ಬರುತ್ತಿದೆ. ಸಾಮಾನ್ಯವಾಗಿ ಯಂತ್ರಗಳಲ್ಲಿ ಕಲ್ಲಿದ್ದಲನ್ನು ಶುದ್ಧಿಮಾಡಿ ಕೇರುವಾಗ ಅದುಮಿದ ಗಾಳಿಯನ್ನು ಮಾಧ್ಯಮವಾಗಿ ಉಪಯೋಗಿಸುವುದು ನವೀನ ಪದ್ಧತಿ.

ತೇಲು–ಮುಳುಗು ವಿಧಾನದಿಂದ ಕಲ್ಲಿದ್ದಲಿನಂಥ ಅದಿರನ್ನು ಶುದ್ಧಿಮಾಡುವುದು ಬಳಕೆಯಲ್ಲಿದೆ. ಈ ವಿಧಾನದಲ್ಲಿ ನುಣ್ಣಗೆ ಹಿಟ್ಟುಮಾಡಿರುವ ಫೆರೋಸಿಲಿಕಾನ್ ಮಿಶ್ರಲೋಹವನ್ನು ನೀರಿನಲ್ಲಿ ಕದಡಿ, ಬೇರ್ಪಡಿಸಬೇಕಾದ ಖನಿಜಗಳ ನಿರ್ದಿಷ್ಟ ಗುರುತ್ವಕ್ಕೆ ತಕ್ಕಂತೆ ರಾಡಿಯ ಗುರುತ್ವವನ್ನು ಸಹ ಸೂಕ್ತವಾಗಿ ಬದಲಾಯಿಸುವ ವಿಧಾನದಿಂದ ಶುದ್ಧಿಮಾಡುವುದು ಈಗ ರೂಢಿಯಲ್ಲಿದೆ. ಈ ವಿಧಾನದಿಂದ ಕಲ್ಲಿದ್ದಲನ್ನು ಶುದ್ಧಿಮಾಡುವುದು ಅತಿ ಲಾಭದಾಯಕವೆಂದು ಪರಿಗಣಿಸಲಾಗಿದೆ. ಪರೀಕ್ಷಾರ್ಥ ಪರಿಶೋಧನೆಯ ಅನಂತರ ಕನಿಷ್ಠ ಖರ್ಚಿನಲ್ಲಿ, ಪ್ರವೀಣ ಯೋಜನೆಯೊಂದಿಗೆ, ಅದಿರುಶುದ್ಧಿ ಮತ್ತು ವಿಂಗಡಣೆಯ ಕಾರ್ಖಾನೆಯನ್ನು ಗಣಿಯ ಸಮೀಪದಲ್ಲೇ ಸ್ಥಾಪಿಸುವುದು ಆರ್ಥಿಕ ಹಾಗೂ ಸಾರಿಗೆಯ ದೃಷ್ಟಿಯಿಂದ ಒಳ್ಳೆಯದು. (ಬಿ.ಎಸ್.ಆರ್.)

**ಅದಿಲಾಬಾದ್** : ಭಾರತದ ಆಂಧ್ರಪ್ರದೇಶ ರಾಜ್ಯದ ತೆಲಂಗಾಣ ವಿಭಾಗದಲ್ಲಿರುವ ಒಂದು ಜಿಲ್ಲೆ, ಹಾಗೂ ಜಿಲ್ಲಾಡಳಿತ ಕೇಂದ್ರ ಪಟ್ಟಣ. ವಿಸ್ತೀರ್ಣ 16.128 ಚಕಿಮೀ. ಜನಸಂಖ್ಯೆ 24,88003. ಕನ್ಯಾಕುಮಾರಿಯಿಂದ ಕಾಶಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ನಾಗಪುರ ಮತ್ತು ಹೈದರಾಬಾದ್‌ಗಳ (ಆಂಧ್ರಪ್ರದೇಶ) ಮಧ್ಯದಲ್ಲಿದೆ. ಮಧ್ಯರೈಲ್ವೆಯ ಮುದ್‌ಖೇಡ್ ಶಾಖೆಯ ಕೊನೆಯ ನಿಲ್ದಾಣ. ನಾಗಪುರದಿಂದ ನೈಋತ್ಯಕ್ಕೆ 183 ಕಿಮೀ ($19^{o}$ 4' ಉ. ಅ. ಮತ್ತು $78^{o}$ 33' ಪೂ. ರೇ.). ಅದಿಲಾಬಾದ್ ತಾಲ್ಲೂಕು ಹಾಗೂ ಜಿಲ್ಲೆ: ಗೋದಾವರಿ ಮತ್ತು ಪೆನಗಂಗಾ ನದಿ ಕಣಿವೆಗಳ ಮಧ್ಯಭಾಗದಲ್ಲಿ ಸಮುದ್ರಮಟ್ಟಕ್ಕೆ 2,000' ಎತ್ತರವಾದ ಪ್ರಸ್ಥಭೂಮಿ ಪ್ರದೇಶದಲ್ಲಿದೆ. ಮುಖ್ಯ ನದಿಗಳು – ಗೋದಾವರಿ ಮತ್ತು ಪೆನಗಂಗಾ.

ಅದಿಲಾಬಾದ್, ಸಿರ್‍ನೂರ್, ರಾಜುರ, ನಿರ್ಮಲ್, ಕಿನ್ವತ್, ಚೆಣ್ಣೂರ್, ಲಕ್ಷೆತಿಪೇಟೆ ಮತ್ತು ಜಂಗೋನ್ ಎಂಬ ಎಂಟು ತಾಲ್ಲೂಕುಗಳು ಇವೆ. ಅದಿಲಾಬಾದ್, ನಿರ್ಮಲ್ ಮತ್ತು ಚೆಣ್ಣೂರು ಈ ಜಿಲ್ಲೆಯ ಮುಖ್ಯ ಪಟ್ಟಣಗಳು. ಜಿಲ್ಲೆಯ ಪೂರ್ವಭಾಗ ಮಧ್ಯ ರೈಲ್ವೆಯ ವಾರ್ಧಾ–ಸಿಕಂದರಾಬಾದ್ ಬ್ರಾಡ್‌ಗೇಜ್ ರೈಲುಮಾರ್ಗಗಳನ್ನು ಹೊಂದಿದೆ. ಅಸಿಫಾಬಾದ್ ಈ ದಾರಿಯಲ್ಲಿರುವ ಮುಖ್ಯ ವ್ಯಾಪಾರ ಕೇಂದ್ರ.

ಸಹ್ಯಾದ್ರಿ ಅಥವಾ ಸತ್ಮಲಪರ್ವತ ಜಿಲ್ಲೆಯ ಆಗ್ನೇಯ–ವಾಯವ್ಯ ದಿಕ್ಕಿನಲ್ಲಿ ಹಬ್ಬಿದೆ. ವಾರ್ಷಿಕ ಮಳೆ 103.6 ಸೆಂಮೀ. ಈ ಜಿಲ್ಲೆ ಸಂಪದ್ಭರಿತ ಕಾಡುಗಳಿಂದ ಕೂಡಿದ್ದು, ತೇಗ, ಎಬೊನಿ ಮುಂತಾದ ಮರಗಳನ್ನು ಇಲ್ಲಿಂದ ಸಾಗಿಸುತ್ತಾರೆ. ವನ್ಯಮೃಗ ಬೇಟೆ ಬಹಳವಾಗಿದೆ. ಜಿಲ್ಲೆಯ ಮುಖ್ಯ ಬೆಳೆ ಬತ್ತ, ಗೋದಿ, ಎಣ್ಣೆಬೀಜಗಳು ಮತ್ತು ಹತ್ತಿ. ಕಣಿವೆ ಪ್ರದೇಶದಲ್ಲಿ ಕಲ್ಲಿದ್ದಲು, ಸುಣ್ಣಕಲ್ಲು, ಕಬ್ಬಿಣದ ಅದಿರು, ಗಂಧಕ ದೊರಕುವುವು. ಇತರ ಸಿದ್ಧವಸ್ತುಗಳಲ್ಲಿ ಮುಖ್ಯವಾದವು. ಕಾಗದ, ರೇಷ್ಮೆ, ರಾಸಾಯನಿಕ ಪದಾರ್ಥಗಳು ಮತ್ತು ಆಟದ ಸಾಮಾನುಗಳು.

ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರ. ಜನಸಂಖ್ಯೆ 2,50,600 (2001) ಅನೇಕ ಸರಕಾರಿ ಕಚೇರಿಗಳಿವೆ. ಇಲ್ಲಿ ಹಿಂದೂ ದೇವಾಲಯವಿದ್ದು, ಪ್ರತಿವರ್ಷ ಪರಿಷೆ ನಡೆಯುತ್ತದೆ; ಅಲ್ಲದೆ ಇದು ಧಾನ್ಯಸರಕುಗಳ ಮಾರುಕಟ್ಟೆ ಮತ್ತು ವ್ಯಾಪಾರ ಸ್ಥಳ.

ಅದಿಲಾಬಾದಿನ ವಾಯವ್ಯದಿಕ್ಕಿಗೆ 60 ಕಿಮೀ ದೂರದಲ್ಲಿ ಮಹುರ್ ಎಂಬಲ್ಲಿ ಪ್ರಾಚೀನ ಕೋಟೆಯಿದೆ. 14–16ನೆಯ ಶತಮಾನದಲ್ಲಾಳಿದ ಮುಸಲ್ಮಾನ್ ಬಹಮನಿ ಮತ್ತು ಇಮಾದ್‌ಷಾಹಿ ಸುಲ್ತಾನರ ಕಾಲದ ಅವಶೇಷಗಳನ್ನು ಅಲ್ಲಿ ನೋಡಬಹುದು. (ಕೆ.ಆರ್.)

ದೆಹಲಿಯಿಂದ 20 ಕಿಮೀ ದಕ್ಷಿಣಕ್ಕೆ ಮೆಹ್ರೌಲಿ ಬಳಿ ತುಗಲಕಾಬಾದಿಗೆ ಸೇರಿದಂತೆ ಅದಿಲಾಬಾದ್ ಎಂಬ ಇನ್ನೊಂದು ಹಳೆಯ ಪಟ್ಟಣವಿದೆ. ಈಗ ಹಾಳು ಬಿದ್ದಿದೆ. ಘಿಯಾಸುದ್ದೀನ್ ತುಘಲಕನಿಂದ 1321ರಲ್ಲಿ ಇದರ ನಿರ್ಮಾಣಕಾರ್ಯ ಪ್ರಾರಂಭವಾಗಿ 1323ರಲ್ಲಿ ಮುಗಿಯಿತು. ಅವನ ಮಗ ಮಹಮ್ಮದ್ ಬಿನ್ ತುಘಲಕ್‌ನ ಆಜ್ಞೆಯಂತೆ 1327ರಲ್ಲಿ ತೆರವು ಮಾಡಲ್ಪಟ್ಟಿತು. (ಎಸ್.ಎನ್.)

**ಅದ್ರಶ್ಯಂತೀ** : ವಸಿಷ್ಠನ ಮಗ ಚಿತ್ರಮುಖ ಶಕ್ತಿಮಹರ್ಷಿಯ ಹೆಂಡತಿ. ತಂದೆ ಚಿತ್ರಮುಖಿ. ಪರಾಶರ ಮುನಿ ಈಕೆಯ ಮಗ. ಈತ ಮೊದಲು ವೈಶ್ಯನಾಗಿದ್ದ. ಇವನು ತಪಸ್ಸು ಮಾಡಿ ಬ್ರಾಹ್ಮಣ್ಯವನ್ನು ಪಡೆದ ಅನಂತರ ಈಕೆ ಹುಟ್ಟಿದಳು. ಮಹಾಭಾರತದಲ್ಲಿ ಈಕೆಯ ಬಗ್ಗೆ ವಿವರಗಳಿವೆ. (ಜಿ.ಎಚ್.)

**ಅದೃಶ್ಯಕವಿ** : 16ನೆಯ ಶತಮಾನದಲ್ಲಿದ್ದ ಈ ಕವಿ ಪ್ರೌಢರಾಯನ ಕಾವ್ಯವನ್ನು ಬರೆದಿದ್ದಾನೆ. ತಂದೆ ಅಣ್ಣೇಂದ್ರ; ಗುರು ಮಳೆಯ ಮಲ್ಲೇಶ; ಸ್ಥಳ ಬಿಜಾಪುರ ಪ್ರಾಂತದ ತೊರೆಸಾಲ ಪರಗಣೆಯ ಕೊಲ್ಲಾಪುರ. ದೇಸಾಯಿ ನಾಡೆರೆಯ ಹಕ್ಕರಿ ವಂಶಕ್ಕೆ ಸೇರಿದವ; ವೀರಶೈವ ಕವಿ. ಇಷ್ಟದೈವ ಉಪ್ಪರಾಗಿರಿಯ ಸಂಗಮನಾಥ. ಈತನಿಗೆ ಅದ್ರೀಶಪ್ಪ ಎಂಬ ಹೆಸರು ಇದ್ದಂತೆ ತೋರುತ್ತದೆ.

ಈ ಕವಿ ಪ್ರೌಢರಾಯನ ಕಾವ್ಯವನ್ನೇ ಅಲ್ಲದೆ ಮತ್ತೆರಡು ಕಾವ್ಯಗಳನ್ನು ಬರೆದಿರಬಹುದೆಂದು ಈ ಕಾವ್ಯದ ಸಂಪಾದಕರಾದ ಸ.ಶಿ.ಭೂಸನೂರಮಠರು ಊಹಿಸಿದ್ದಾರೆ.

ಪ್ರೌಢರಾಯನ ಕಾವ್ಯ ವಾರ್ಧಕಷಟ್ಪದಿಯಲ್ಲಿದೆ. ಇದರಲ್ಲಿ 21 ಸಂಧಿಗಳೂ 1113 ಪದ್ಯಗಳೂ ಇವೆ. ಈ ಕಾವ್ಯದಲ್ಲಿ 40ಕ್ಕಿಂತಲೂ ಹೆಚ್ಚು ಶಿವಶರಣರ ಕಥೆಗಳನ್ನು ನಿರೂಪಿಸಲಾಗಿದೆ. ಇದನ್ನು ವಿಜಯನಗರದ ರಾಜನಾದ ಪ್ರೌಢರಾಯನಿಗೆ ಆತನ ಮಂತ್ರಿಯಾದ ಜಕ್ಕಣಾಚಾರ್ಯ ಬಿತ್ತರಿಸಿದುದನ್ನು ಕವಿ ಈ ಕಾವ್ಯದಲ್ಲಿ ಹೇಳಿದ್ದಾನೆ; 'ಭೂರಮಣ ಪ್ರೌಢಂಗೆ ಜಕ್ಕಣಾರ್ಯರು ಕಥಾಸಾರಮಂ ಪೇಳ್ದುದಂ ವಾರ್ಧಿಕ ಷಟ್ಪದಿಯ ದಾರದಿಂ ದಿವ್ಯಮಣಿಯನು ಪೋಣಿಪಂತೆ ಗುರುವಂಘ್ರಿ ಬಲದಿಂದುಸುರುವೆನು'. ಚಾರಿತ್ರಿಕ ಮಾಹಿತಿಗಳಿಂದ ಕೂಡಿರುವ ಈ ಕಾವ್ಯ ಕೆಲವಾರು ದೃಷ್ಟಿಗಳಿಂದ ಬಹುಮುಖ್ಯವಾದುದು. (ಎನ್.ಬಿ.)

**ಅದೃಷ್ಟವಾದ** : ಅತೀಂದ್ರಿಯ ವಸ್ತುವಾದ ಅದೃಷ್ಟವೇ ವಿಚಿತ್ರವಾದ ಈ ಜಗತ್ತಿಗೆ ಕಾರಣವೆಂದು ಪ್ರತಿಪಾದಿಸುವ ವಾದ. ವೈಶೇಷಿಕರು ಇದನ್ನು ಅದೃಷ್ಟಶಬ್ದದಿಂದಲೂ ನೈಯಾಯಿಕರು ಧರ್ಮಾಧರ್ಮ ಶಬ್ದದಿಂದಲೂ ಮೀಮಾಂಸಕರು ಅಪೂರ್ವಶಬ್ದ

ದಿಂದಲೂ ಪೌರಾಣಿಕರು ಪುಣ್ಯಾಪುಣ್ಯಶಬ್ದದಿಂದಲೂ ವೇದಾಂತಿಗಳು ಈಶ್ವರಾನುಗ್ರಹ ನಿಗ್ರಹ ಶಬ್ದದಿಂದಲೂ ಬೌದ್ಧರು ವಾಸನಾಶಬ್ದದಿಂದಲೂ ಜೈನರು ಪುಣ್ಯಾಪುಣ್ಯಪುದ್ಗಲಶಬ್ದ ದಿಂದಲೂ ಕರೆಯುತ್ತಾರೆ. ಇದು ಇಂದ್ರಿಯ ಗೋಚರವಾಗದ ಕಾರಣ ಇದಕ್ಕೆ ಅದೃಷ್ಟ ಎಂಬ ಹೆಸರು ಇದೆ. ಇದನ್ನು ಆತ್ಮಗತವಾದ ವಸ್ತುವೆಂದು ನೈಯಾಯಿಕರೂ ಸ್ವತಂತ್ರವಸ್ತು ವೆಂದು ಮೀಮಾಂಸಕರೂ ಹೇಳುತ್ತಾರೆ. ಇದರಂತೆ ಧರ್ಮ ಸದ್ಗತಿಗೆ ಸಾಧನ; ಅಧರ್ಮ ಅಧೋಗತಿಗೆ ಸಾಧನ.

ಈಶ್ವರನ ಅಸ್ತಿತ್ವವನ್ನು ಒಪ್ಪಿ ಅವನೇ ಜಗತ್ತಿನ ಎಲ್ಲ ಆಗುಹೋಗುಗಳಿಗೂ ಕಾರಣವೆಂದು ಹೇಳುವವರೂ ಜೀವಾತ್ಮರ ಈ ಅದೃಷ್ಟಕ್ಕೆ ತಕ್ಕಂತೆಯೇ ಈಶ್ವರನು ಎಲ್ಲವನ್ನೂ ಮಾಡುತ್ತಾನೆ, ಇಲ್ಲದಿದ್ದರೆ ಅವನಿಗೆ ಪಕ್ಷಪಾತಾದಿಗಳು ಬರುತ್ತವೆ ಎಂದು ಹೇಳುತ್ತಾರೆ. ವಿಷಯದೃಷ್ಟಿಯಿಂದ ಈಶ್ವರಕಾರಣತ್ವವಾದವೂ ಅದೃಷ್ಟವಾದದ ಒಂದು ಭಾಗವೇ ಆಗುತ್ತದೆ. (ಕೆ.ಎಸ್.ವಿ.)

**ಅದ್ದಿ ತಣಿಸುವಿಕೆ :** ಅಧಿಕ ಉಷ್ಣದ ಮಟ್ಟದಲ್ಲಿರುವ ಲೋಹಗಳನ್ನು ತ್ವರಿತವಾಗಿ ತಣಿಸಲು ದ್ರವಮಾಧ್ಯಮದಲ್ಲಿ ಅದ್ದುವ ವಿಧಾನ (ಕ್ವೆಂಚಿಂಗ್). ಕಾದ ಉಕ್ಕನ್ನು ತಣಿಸುವಾಗ ಎಣ್ಣೆಯ ಮಾಧ್ಯಮವನ್ನು ಬಳಸಿದರೆ ತಣಿಯುವ ದರ ನೀರಿನ ಮಾಧ್ಯಮವನ್ನು ಬಳಸಿದಾಗ ದೊರೆಯುವ ದರಕ್ಕಿಂತ ಕಡಿಮೆಯಾಗಿಯೂ ಉಪ್ಪುನೀರನ್ನು ಬಳಸಿದರೆ ಆ ದರ ಹೆಚ್ಚಾಗಿಯೂ ಇರುವುದು. ಈ ದ್ರವಮಾಧ್ಯಮಗಳನ್ನು ಸಾಧಾರಣವಾಗಿ ಕೋಣೆಯ ತಾಪದ ಮಟ್ಟದಲ್ಲಿಯೇ ಇಡುವುದು ವಾಡಿಕೆ. ವಿಶೇಷ ಸಂದರ್ಭಗಳಲ್ಲಿ (ಉದಾ: ದ್ರವೀಕರಿಸಿದ ಸೀಸವನ್ನು ತಣಿಸುವಾಗ) ಮಾಧ್ಯಮದ ತಾಪವನ್ನು ಏರಿಸಲೂಬಹುದು. ಬಳಕೆಯ ಉಕ್ಕನ್ನು ಅದ್ದಿ ತಣಿಸಿದರೆ ಅದು ಇನ್ನಷ್ಟು ಕಠಿಣವಾಗುವುದು. (ಜಿ.ಬಿ.)

**ಅದ್ಭುತಕಥೆ :** ಗದ್ಯಸಾಹಿತ್ಯದ ಪ್ರಮುಖಪ್ರಕಾರವಾದ ಕಾದಂಬರಿಯ ವಿಕಾಸಕ್ಕೆ ಎಡೆಮಾಡಿಕೊಟ್ಟ ಒಂದು ಬಗೆಯ ಕಥೆಗಳು (ರೊಮಾನ್ಸ್). ಲ್ಯಾಟಿನ್ ಭಾಷೆಯ ಒಂದು ಸ್ವರೂಪವಾದ ರೊಮಾನ್ಸ್ ಭಾಷೆಯಲ್ಲಿ ರಚಿತವಾದ ಹಲವಾರು ಕಥನಕಾವ್ಯ ಮತ್ತು ಗದ್ಯಕಥನಗಳನ್ನು ಕೆಲವು ಕಾಲದವರೆಗೆ ರೊಮಾನ್ಸ್ ಎಂದೇ ಕರೆದರು. ಆ ಮಾತಿಗೆ ವೃತ್ತಾಂತಕಥೆಯೆಂದೂ ಅರ್ಥವಿತ್ತು.

ಅದ್ಭುತಕಥೆಯ ಲಕ್ಷಣಗಳನ್ನು ನಾವು ಮೊಟ್ಟಮೊದಲು ಹೋಮರನ ಒಡಿಸ್ಸಿ ಗ್ರಂಥದಲ್ಲಿ ಕಾಣಬಹುದು. ಆನ್ ದಿ ಸಬ್‌ಲೈಮ್ ಎಂಬ ಗ್ರಂಥವನ್ನು ರಚಿಸಿದ ಲಾಂಜೈನಸ್ ಹೋಮರನ ಒಡಿಸ್ಸಿಯನ್ನು ಪರಿಶೀಲಿಸುತ್ತ ಅದರಲ್ಲಿ ಅಡಕವಾಗಿರುವ ಅದ್ಭುತಕಥೆಯ ಅಂಶಗಳನ್ನು ಟೀಕಿಸುತ್ತಾನೆ. ಅವನ ದೃಷ್ಟಿಯಲ್ಲಿ ಈ ಲಕ್ಷಣಗಳು ಭವ್ಯಕಾವ್ಯದ ಗಾಂಭೀರ್ಯಕ್ಕೆ ಕುಂದನ್ನುಂಟುಮಾಡುವುವು. ಹೋಮರನ ಒಡಿಸ್ಸಿಯಲ್ಲಿ ಮುಖ್ಯ ಕಥಾವಸ್ತುವಿಲ್ಲದಿರುವುದು, ಕಥೆಯ ವಿಕಾಸಕ್ಕೆ ಗಮನ ಕೊಡದೆ ಘಟನಾವಳಿಗಳನ್ನು ಲಂಬಿಸುತ್ತ ಹೋಗಿರುವುದು, ಅಲೌಕಿಕ ಅದ್ಭುತ ಘಟನೆಗಳ ಮಿಶ್ರಣ, ಹಲವಾರು ಪ್ರಣಯ ದೃಶ್ಯಗಳಿಗೆ ಅತಿಯಾದ ಪ್ರಾಧಾನ್ಯ ನೀಡಿರುವುದು, ಗಂಭೀರ ಹಾಗೂ ರುದ್ರಸನ್ನಿವೇಶಗಳನ್ನು ವಿನೋದಕರ ಸಂಗತಿಗಳೊಡನೆ ಅಸಂಬದ್ಧವಾಗಿ ಜೋಡಿಸಿರುವುದು, ಸಾಹಸಘಟನೆಗಳ ಪರಂಪರೆ–ಇವೆಲ್ಲ ಲಾಂಜೈನಸ್ಸನ ದೃಷ್ಟಿಯಲ್ಲಿ ಅದ್ಭುತಕಥೆಯ ಲಕ್ಷಣಗಳು.

ಅನೇಕವೇಳೆ ಮಾನವ ತನ್ನ ವಾಸ್ತವಿಕಜೀವನದ ಕಷ್ಟಕಾರ್ಪಣ್ಯಗಳಿಂದ ದೂರವಾದ ಯಾವ ಕಟ್ಟುಪಾಡುಗಳಿಗೂ ಒಳಪಡದ ಅಲೌಕಿಕ, ಸುಂದರಲೋಕದಲ್ಲಿ ಸ್ವಚ್ಛಂದವಾಗಿ ಹಾರಾಡಲು ಆಶಿಸುತ್ತಾನೆ. ಆಗ ಅವನಲ್ಲಿ ಇಂಥ ಅದ್ಭುತಕಥೆಗಳನ್ನು ರಚಿಸುವ, ಅವುಗಳನ್ನು ಓದಬೇಕೆನ್ನುವ ಅಪೇಕ್ಷೆ ಮೂಡುತ್ತದೆ. ಪುರಾತನ ಹಾಗೂ ಮಧ್ಯಯುಗದ ಯುರೋಪಿನಲ್ಲಿ ವಿವಿಧ ಕಾಲಗಳಲ್ಲಿ ಬೆಳೆದುಬಂದ ಅದ್ಭುತ ಕಥೆಗಳ ರೂಪರೇಖೆಗಳನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು. ಎಲ್ಲ ಅದ್ಭುತ ಕಥೆಗಳಲ್ಲೂ ಯಾವುದೋ ಅನ್ವೇಷಣೆಗೆ ಸಂಬಂಧಿಸಿದ ಕಥಾವಸ್ತುವಿರುತ್ತದೆ. ರಾಜ್ಯವನ್ನು ಕಳೆದುಕೊಂಡಿರುವ ರಾಜಕುಮಾರ, ಅಪಹೃತಳಾದ ರಾಜಕುಮಾರಿ, ಕ್ರಿಸ್ತ ಕಡೆಯ ಊಟಕ್ಕೆ ಬಳಸಿದನೆಂದು ಹೇಳಲಾದ ದಿವ್ಯಪಾತ್ರೆಯನ್ನು ಹುಡುಕಲು ಹೊರಟಿರುವ ವೀರನಾಯಕ, ಕಣ್ಮರೆಯಾಗಿರುವ ಸ್ನೇಹಿತನ ಶೋಧನೆಯಲ್ಲಿ ತೊಡಗಿರುವ ಸಾಹಸಿ ಸೈನಿಕ, ಯಾವುದೋ ದುಷ್ಟನೀತಿಯ ವಿರುದ್ಧ ಹೋರಾಡ ಹೊರಟಿರುವ ಸೈನಿಕತಂಡ–ಹೀಗೆ. ಇಂಥ ಸಾಹಸ ಕೃತ್ಯಗಳಲ್ಲಿ ತೊಡಗಿದಾಗ ಸಂಭವಿಸುವ ಎಡರುತೊಡರುಗಳು ಚಿತ್ರವಿಚಿತ್ರ ಘಟನೆಗಳು, ಪ್ರಣಯಪ್ರಸಂಗಗಳು, ಘೋರ ಕದನಗಳು, ಇಂಥ ಪಾತ್ರಗಳು ಮತ್ತು ಸನ್ನಿವೇಶಗಳೇ ಅದ್ಭುತಕಥೆಯ ಜೀವಾಳ. ಅನೇಕವೇಳೆ ಈ ಕಥೆಗಳಲ್ಲಿ ಯಾವ ಪಾತ್ರವೂ ವಿಶಿಷ್ಟ ವ್ಯಕ್ತಿತ್ವವನ್ನು ಪಡೆಯದೆ ನೆರಳಿನಂತೆ ಅಸ್ಪಷ್ಟ ಆಕೃತಿಗಳಾಗುತ್ತವೆ. ಸನ್ನಿವೇಶಗಳೂ ಘಟನೆಗಳೂ ಯಾವ ವೈವಿಧ್ಯವನ್ನೂ ಹೊಂದದೆ ಬೆಳೆಯುತ್ತ ಹೋಗುತ್ತವೆ. ಆದ್ದರಿಂದ ಇಂಥ ಅದ್ಭುತ ಕಥೆಗಳು 18ನೆಯ ಶತಮಾನದವರೆಗೂ ವಿಮರ್ಶಕರ ಮೆಚ್ಚುಗೆ ಗಳಿಸಲಿಲ್ಲ. ಅಲ್ಲಿಯವರೆಗೂ ಅವರು ಇಂಥ ಕಥೆಗಳನ್ನು ಅನಾಗರಿಕ, ಅಪ್ರಬುದ್ಧ, ಅಜ್ಜಿಕಥೆಗಳೆಂದು ತೆಗಳಿದರು. ಈ ಅಭಿಪ್ರಾಯಕ್ಕೆ ತೀರ ವಿರುದ್ಧವಾದ ದೃಷ್ಟಿ ಆಧುನಿಕ ವಿಮರ್ಶಕರಲ್ಲಿ ಬೆಳೆದುಬಂದಿದೆ. ಅದ್ಭುತಕಥೆಗಳು ಸಾಹಿತ್ಯ ಮತ್ತು ಧರ್ಮವನ್ನು ಒಂದುಗೂಡಿಸುವ ಅತಿ ಸುಂದರಕಥಾಗುಚ್ಛಗಳು ಎಂದು ಅವರು ಹೇಳುತ್ತಾರೆ. 19ನೆಯ ಶತಮಾನದಲ್ಲಿ 'ವಿಭಾವನೆ' (ಇಮ್ಯಾಜಿನೇಷನ್) ಅನ್ನು ಕವಿಗಳು ವಿಮರ್ಶಕರು ಹೊಸ ದೃಷ್ಟಿಯಿಂದ ಕಂಡರು. ಅಮೆರಿಕದ ಪ್ರಸಿದ್ಧ ಕಾದಂಬರಿಕಾರ ನೆಥಾನಿಯಲ್ ಹಾಥಾರ್ನ್‌ನು ಕಾದಂಬರಿ ಮತ್ತು ರೊಮಾನ್ಸ್‌ಗಳನ್ನು ಹೋಲಿಸುತ್ತಾ ರೋಮಾನ್ಸ್‌ನ ಬರೆಹಗಾರನಿಗೆ ಹೆಚ್ಚಿನ ವಿಭಜನೆಯ ಸ್ವಾತಂತ್ರ್ಯವಿರುತ್ತದೆ. ಇದರಿಂದ ಅವನು ಮಾನಸಿಕ ಮತ್ತು ಪೌರಾಣಿಕ ಸತ್ಯಗಳ ಅನ್ವೇಷಣೆಗೆ ಹೆಚ್ಚು ಗಮನ ಕೊಡಬಹುದು ಎಂದ.

ಆದರೆ ಇಷ್ಟು ಮಾತ್ರ ನಿಜ. ಅದ್ಭುತಕಥೆಗಳೇ ಕಾದಂಬರಿಗೆ ಅಡಿಗಲ್ಲು. ಆಕಸ್ಮಿಕ, ಅಲೌಕಿಕ, ಅಸಾಧಾರಣ ಸಾಧನಗಳಿಂದ ಹಂತ ಹಂತವಾಗಿ ಕಥೆಯ ಚಮತ್ಕಾರ ಹೆಚ್ಚುವಂತೆ ಮಾಡುವ ಅದ್ಭುತಕಥೆಯ ತಂತ್ರ ಕಾದಂಬರಿಯ ಬೆಳವಣಿಗೆಗೆ ಹೆಚ್ಚು ಪುಷ್ಟಿದಾಯಕ ವಾಯಿತು. ಪ್ರಣಯ ಅವಹೇಳನವಾದುದಲ್ಲ, ಹೆಣ್ಣು ಕೇವಲ ಕಾಮುಕ ವಸ್ತುವಲ್ಲ, ತನ್ನ ಸೌಂದರ್ಯ ಸದ್ಗುಣಗಳಿಂದ, ಧೈರ್ಯಸಾಹಸಗಳಿಂದ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡು ಪುರುಷನಿಗೆ ಆಕೆ ಮಾರ್ಗದರ್ಶಕಳಾಗಬಲ್ಲಳು ಎಂಬುದನ್ನು ಅದ್ಭುತಕಥೆ ತೋರಿಸಿಕೊಟ್ಟಿತು. ಕ್ರೈಸ್ತಧರ್ಮದ ಪ್ರಭಾವ ಈ ಕಥೆಗಳಲ್ಲಿ ಬೆರೆತು, ಪ್ರೇಮದಿಂದ, ಸಾಹಸದಿಂದ ಧರ್ಮವನ್ನು ಸಾಧಿಸಬಹುದೆಂಬ ವಿಚಾರವನ್ನು ಇವು ಅಭಿವ್ಯಕ್ತಪಡಿಸಿದುವು. (ಎಚ್.ಕೆ.ಆರ್.)

**ಅದ್ಭುತ, ಸಾಹಿತ್ಯದಲ್ಲಿ :** ಮನುಷ್ಯ ತಾನು ವಾಸಿಸುವ ಭೂಮಿಯ ಹಾಗೂ ಅದರಾಚಿನ ಲೋಕಗಳ, ಇಡೀ ಬ್ರಹ್ಮಾಂಡದೊಳಗಣ, ಅದ್ಭುತ, ಅಲೌಕಿಕ, ಗೂಢಶಕ್ತಿಸ್ವರೂಪ ಗಳನ್ನು (ಸೂಪರ್‌ನ್ಯಾಚುರಲ್) ಕುರಿತು ಆಳವಾಗಿ ಚಿಂತಿಸಿದ್ದಾನೆ. ಈ ಚಿಂತನೆಯನ್ನು ವಿಶ್ವಸಾಹಿತ್ಯದ ವಿವಿಧಪ್ರಕಾರಗಳು ವಿಧವಿಧವಾಗಿ ಬಳಸಿಕೊಂಡಿವೆ. ದೇವದಾನವರು, ಭೂತಪಿಶಾಚಿಗಳು, ಮಂತ್ರಮಾಟ, ಇನ್ನಿತರ ಅವ್ಯಕ್ತ ರಹಸ್ಯವ್ಯಾಪಾರಗಳು ಸಾಹಿತ್ಯದ ಅಂಶವಾಗಿ, ಸೂಚ್ಯ ಅಭಿವ್ಯಕ್ತಿ ಪಡೆದು, ಸಾಹಿತಿಯ ಮೂಲಕಲ್ಪನೆಗೆ ಪರಿಪೋಷಕವಾಗಿ, ರೂಪಿತವಾಗದಿದ್ದರೆ ಅವು ಅರ್ಥಹೀನವಾಗಿ ಕೇವಲ ಭಾವೋದ್ರೇಕದ ಕೋಲಾಹಲಕ್ಕೆ ಕಾರಣವಾಗುತ್ತವೆ. ಅವು ಕೇವಲ ಮೂಢಕಥಾನಕ ಆಶಯಗಳಾಗುತ್ತವೆ (ಮೋಟಿಫ್). ಮೇಲೆ ಹೇಳಿದ ಅದ್ಭುತ ಅಂಶಗಳು ಕಲೆಗೆ ಕೇವಲ ಸಾಧನಗಳು ಮಾತ್ರ. ರಾಕ್ಷಸರು, ದೇವತೆಗಳು, ಯಕ್ಷಕಿನ್ನರರು, ವಿಚಿತ್ರ ವ್ಯಕ್ತಿಗಳು ಪಾತ್ರ ವಹಿಸಿದರೂ ಸಾಹಿತಿಯ ಉದ್ದೇಶವೇ ವಿಭಿನ್ನವಾದುದರಿಂದ ವಾಲ್ಟೇರ್, ರಬೆಲೈಸ್, ಪೋಪ್, ಅನತೋಲ್ ಫ್ರಾನ್ಸ್ ಮುಂತಾದವರ ವಿಡಂಬನ ಕೃತಿಗಳು ಅದ್ಭುತಕಥೆಗಳಾಗಿಲ್ಲ. ಭೂತಪಿಶಾಚಿಗಳ ಸುಳಿವೇ ಇಲ್ಲದಿದ್ದರೂ ಮಾಬಿಡಿಕ್ (ಹರ್ಮನ್ ಮೆಲ್ವಿಲ್ಲನ ಕೃತಿ) ಕಾದಂಬರಿಯಲ್ಲಿ ಅತ್ಯಂತ ಅದ್ಭುತ, ಅಲೌಕಿಕ ವಾತಾವರಣ ಸೃಷ್ಟಿಯಾಗುವುದನ್ನೂ ಗಮನಿಸಬಹುದು.

ಪ್ರಪಂಚದ ಸಾಹಿತ್ಯೇತಿಹಾಸದಲ್ಲಿ ಬರುವ ಧರ್ಮಗ್ರಂಥಗಳು ಹಾಗೂ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಅದ್ಭುತ ಅಂಶಗಳ ಪ್ರಸ್ತಾಪ ಬಂದಿದ್ದರೂ ಅವು ಕಥೆ, ಕಾವ್ಯ, ನಾಟಕ, ವಿಡಂಬನಬರೆಹಗಳಲ್ಲಿ ಮಾತ್ರ ಕಲಾತ್ಮಕವಾಗಿ ಅರಳಿವೆ.

ರೋಮಾಂಚಕ ವಿಚಿತ್ರಸನ್ನಿವೇಶದಲ್ಲಿ ವ್ಯಕ್ತವಾಗುವ ಅವ್ಯಕ್ತ ಆತಂಕ, ಭಯ, ಭ್ರಮೆಗಳನ್ನು ಚಿತ್ರಿಸುವುದು ಅದ್ಭುತ ಅಂಶದ ಉದ್ದೇಶವಾದರೂ ಅವು ಆಗಾಗ (ಷೇಕ್ಸ್‌ಪಿಯರ್‌ನ ರಮ್ಯ ವೈನೋದಿಕಗಳಲ್ಲಿ ಬರುವಂತೆ) ಕಲ್ಪನೆಯ ಕನಸಿನ ರಾಜ್ಯ ನಿರ್ಮಿಸಬಲ್ಲುವು. ನಮಗೆ ಎಟುಕಲಾರದ ಶಕ್ತಿಸಂಪತ್ತುಗಳು, ಕೈಗೂಡಲಾರದ ಅತೃಪ್ತ ಆಕಾಂಕ್ಷೆಗಳು ಕಾಲ್ಪನಿಕ ಪ್ರಪಂಚದ ವ್ಯಕ್ತಿಗಳಿಗೆ ಕಾಣಸಿಗುವಂತಾದಾಗ ಅರೇಬಿಯನ್ ನೈಟ್ಸ್, ಕಥಾಸರಿತ್ಸಾಗರಗಳ ಭೂತ–ಬೇತಾಳಗಳ ಕಥೆಗಳು ನಮ್ಮನ್ನು ರಂಜಿಸುತ್ತವೆ.

ಅದ್ಭುತ ಅಂಶ ವೈವಿಧ್ಯಮಯವಾಗಿ ಪರಿಣಾಮಕಾರಿಯಾಗಿ ಒಡಮೂಡಿದೆಯೇ ಇಲ್ಲವೇ ಎನ್ನುವುದಕ್ಕೆ, ಬದಲಾಗುವ ಯುಗಧರ್ಮ, ಮೂಲಭೂತನಂಬಿಕೆಗಳು, ಸಂಪ್ರದಾಯ ಗಳು, ಸಾಹಿತಿಯ ಮನೋಧರ್ಮ–ಎಲ್ಲವೂ ಕಾರಣವಾಗುತ್ತವೆ. ಒಂದು ಕಾಲದಲ್ಲಿ ನಮ್ಮ ಹಾಗೆಯೇ ಸಜೀವವ್ಯಕ್ತಿಗಳೆಂಬ ಭ್ರಮೆ ಕಲ್ಪಿಸಿದ ದೇವದಾನವ, ಭೂತಪಿಶಾಚಿಗಳು ಇನ್ನೊಂದು ಕಾಲದಲ್ಲಿ ವಿವಿಧಶಕ್ತಿಗಳ ಪ್ರತೀಕಗಳಾಗುತ್ತವೆ; ವಿಜ್ಞಾನಪ್ರಪಂಚದ ವಿವೇಚನೆ, ವಿಶ್ಲೇಷಣೆಗೆ ಸಂಬಂಧಿಸಿದ ಸಮಸ್ಯೆಗಳಾಗುತ್ತವೆ. ಆದರೆ ಸಾಹಿತಿಯಾದವನು ಅದ್ಭುತ ಅಂಶವನ್ನು ಸಾಂಕೇತಿಕವಾಗಿ, ಪಾತ್ರಕಲ್ಪನೆ, ವಾತಾವರಣವೈಚಿತ್ರ್ಯ (ಕೇವಲ ಆನುಷಂಗಿಕವಾ ದರೂ) ಜೀವನವನ್ನು ಕುರಿತ ಚಿಂತನದ ಅಭಿವ್ಯಕ್ತಿಯಾಗಿ ಬಳಸಿದಾಗ ಕೋಲ್‌ರಿಜ್ ಕವಿಯ ಏನ್ಷಂಟ್ ಮ್ಯಾರಿನರ್‌ನಂಥ ಅಪೂರ್ವಕೃತಿಗಳು ಹುಟ್ಟುತ್ತವೆ. ತಮ್ಮ ತಮ್ಮ ಅನುಭವದ ಜೀವನದರ್ಶನದ, ಅಭಿವ್ಯಕ್ತಿಗಾಗಿಯೇ ಅದ್ಭುತ ಅಂಶವನ್ನು ಬಳಸುವ ಡಾಂಟೆ, ಮಾರ್ಲೋ, ಮಿಲ್ಟನ್, ಗಯಟೆಯಂಥವರ ಸಾಧನೆಗಿಂತ ಕೋಲ್‌ರಿಜ್‌ನ ಕವನದಲ್ಲಿ ದಟ್ಟಯಿಸಿ ತೋರುವ ಅದ್ಭುತ ಅಂಶ ಹೆಚ್ಚು ಸರಳವೂ ಸಾಂದ್ರವೂ ಆಗಿದೆಯೆನ್ನಬಹುದು.

ಅದ್ಭುತ ಅಂಶವನ್ನು ಮಾನವೀಯ ವಿವೇಚನೆಯ ನೆಲಗಟ್ಟಿನ ಮೇಲೆ ಸ್ಥಾಪಿಸುವ ಗೋಜಿಗೆ ಹೋಗದೆ ಅದನ್ನು ಅರ್ಥಪೂರ್ಣವಾಗಿ ನಾಟಕದಲ್ಲಿ ಬಳಸಿಕೊಳ್ಳಬಹುದೆನ್ನು ವುದನ್ನು ಷೇಕ್ಸ್‌ಪಿಯರ್, ಜೆ.ಎಂ.ಸಿಂಗ್ ಮುಂತಾದವರು ತೋರಿಸಿ ಕೊಟ್ಟಿದ್ದಾರೆ.

ಅದ್ಭುತ ಅಂಶದ ಬಳಕೆ ಕೇವಲ ತಂತ್ರವಾದರೆ, ಯಾಂತ್ರಿಕವಾದರೆ, ಅದು ನೀರಸವಾಗುವುದೆಂಬ ಅಂಶವನ್ನು ಮಿಸೆಸ್ ರ್‍ಯಾಡ್‌ಕ್ಲಿಫ್ ಮುಂತಾದವರ ಕಾದಂಬರಿಗಳೂ ವೆಬ್‌ಸ್ಟರ್ ಮುಂತಾದವರ ನಾಟಕಗಳೂ ಸಮರ್ಥಿಸುತ್ತವೆ. ಅದ್ಭುತ ಅಂಶ ಪರಿಣಾಮಕಾರಿ

ಯಾಗಲು ಒಂದು ತೆರನಾದ ವಿವರಣಾತೀತ ಅಸ್ಪಷ್ಟತೆಯನ್ನೂ ಅಸಂಬದ್ಧವಲ್ಲದ ಆಕಸ್ಮಿಕಗಳನ್ನೂ ಸೃಷ್ಟಿಸುತ್ತಾರೆ. ಹ್ಯಾಮ್‌ಲೆಟ್, ಮ್ಯಾಕ್‌ಬೆತ್ ರುದ್ರನಾಟಕಗಳಲ್ಲಿ ಷೇಕ್ಸ್‌ಪಿಯರ್ ಅದ್ಭುತ ಅಂಶಗಳನ್ನು ಪ್ರಯೋಗಿಸಿದ ರೀತಿ ಗಮನಾರ್ಹ.

ರೊಮ್ಯಾಂಟಿಕ್ ಸಂಪ್ರದಾಯ ಪುನರುಜ್ಜೀವನಗೊಳಿಸಿದ ಅದ್ಭುತ ಅಂಶಗಳು ವೈವಿಧ್ಯಮಯವಾದ ಸಾಹಿತ್ಯಪರಂಪರೆಯನ್ನು ಸೃಜಿಸಿವೆ. ಆಧುನಿಕಕಾಲದಲ್ಲಿ ಲೂಯಿ ಕೆರೋಲ್, ಫ್ರಾನ್ಜ್ ಕಾಫ್ಕ ಮುಂತಾದವರ ವಿಚಿತ್ರಕಥೆಗಳು, ಅತೀವ ವಾಸ್ತವಿಕತೆ (ಸರ್ರಿಯಲಿಸಂ) ಶೈಲಿಯ ಸ್ವಪ್ನಸಾಹಿತ್ಯ ಕೃತಿಗಳು, ಅದ್ಭುತ ಅಂಶಗಳನ್ನು ತಮ್ಮದೇ ಆದ ರೀತಿಯಲ್ಲಿ ಆಳವಡಿಸಿಕೊಂಡಿವೆ. ಐಹಿಕ ಪ್ರಪಂಚದ ಹಿನ್ನೆಲೆಯಲ್ಲಿ ಅವ್ಯಕ್ತಶಕ್ತಿಯ ವಿನ್ಯಾಸ ನಡೆಯುತ್ತಿದೆ ಎಂಬ ಅಭಿಪ್ರಾಯವನ್ನು ಮೂಡಿಸಲು, ವಾಸ್ತವಲೋಕದ ಕಟ್ಟುಪಾಡುಗಳಿಂದ ಮುಕ್ತಿಬಯಸಲು, (ಉದಾ: ಕುವೆಂಪು ಅವರ ಕೆಲವು ನಾಟಕಗಳು, ರಾಮಾಯಣ ದರ್ಶನಂ ಮಹಾಕಾವ್ಯ; ಪು.ತಿ.ನ. ಅವರ ಕೆಲವು ಗೀತರೂಪಕಗಳು) ಅದ್ಭುತ ಅಂಶಗಳನ್ನು ಸಾಹಿತ್ಯದಲ್ಲಿ ಬಳಸಿರುವುದು ಸ್ವಾರಸ್ಯ ಸಂಗತಿ. ಅದೇನೇ ಇರಲಿ, ಈ ಅಂಶಗಳು, ಮಾನವನ ಆತ್ಮಸಂವೇದನೆ, ಜೀವನದ ಗೊತ್ತು ಗುರಿಯನ್ನು ಕುರಿತ ಚಿಂತನೆಗಳನ್ನು ಮೂಡಿಸಲು ನೆರವಾಗಿವೆಯೆನ್ನುವುದಂತೂ ನಿಜ. (ಎಚ್.ಕೆ.ಆರ್.)

ಸಾಹಿತ್ಯ ಕೃತಿಗಳು ಅದ್ಭುತ ಅಂಶಗಳನ್ನು ಹಲವು ರೀತಿಯಲ್ಲಿ ಒಳಗೊಳ್ಳಬಹುದು. ಮಹಾಕಾವ್ಯಗಳ ಕಥಾವಸ್ತುಗಳಿಗೆ ಆಕಾರವಾದ ಪೌರಾಣಿಕ ಕಥೆಗಳನ್ನು ರಚಿಸಿದವರ ಕಲ್ಪನೆಯು ಮಾನವಲೋಕ, ಮಾನವಾತೀತ ಲೋಕ ಎಂಬ ವ್ಯತ್ಯಾಸವನ್ನು ಗುರುತಿಸುವುದೇ ಇಲ್ಲಿ ಎನ್ನಬಹುದು. ಎರಡು ಲೋಕಗಳವರೂ ಅಷ್ಟರಮಟ್ಟಿಗೆ ಪರಸ್ಪರರ ಲೋಕಗಳಿಗೆ ಭೇಟಿ ನೀಡುತ್ತಾರೆ, ವ್ಯವಹರಿಸುತ್ತಾರೆ, ಗಂಡ–ಹೆಂಡತಿಯರಾಗುವುದು ಉಂಟು. ಶಿವರಾಮಕಾರಂತರ 'ಮೂಕಜ್ಜಿಯ ಕನಸು'ಗಳಂತೆ ಈ ಕೃತಿಯು ಅದ್ಭುತದ ಅಂಶವನ್ನು ತಂತ್ರದ ಸೌಲಭ್ಯಕ್ಕಾಗಿ ಮಾತ್ರವೇ ಬಳಸಿಕೊಳ್ಳಬಹುದು. ಕಾಳಿದಾಸನ 'ಅಭಿಜ್ಞಾನ ಶಾಕುಂತಳಂ', ಷೇಕ್ಸ್‌ಪಿಯರ್‌ನ 'ಹ್ಯಾಮ್‌ಲೆಟ್'ಗಳಂತೆ ಕೃತಿಯು ಕೃತಿಕಾರನ ಬದುಕಿನ ದರ್ಶನಕ್ಕೆ ರೂಪಕೊಡುವಲ್ಲಿ ಅನಿವಾರ್ಯವಾದ, ಅರ್ಥವತ್ತಾದ ಭಾಗವನ್ನಾಗಿ ಬಳಸಿಕೊಳ್ಳಬಹುದು. ಕೋಲ್‌ರಿಜ್‌ನ ಇದಕ್ಕೊಂದು ಅದ್ಭುತ ನಿದರ್ಶನ. ಇಂಥ ಕೃತಿಗಳಲ್ಲಿ ಅದ್ಭುತದ ಅಂಶವು ಬದುಕಿನ ಹಿಂದಿರುವ ಒಂದು ನೈತಿಕ ಶಕ್ತಿಯ ಸಂಕೇತವಾಗುತ್ತದೆ. ಬೇಂದ್ರೆಯವರ ಕೆಲವು ಕವನಗಳಲ್ಲಿ ಅದ್ಭುತದ ಅಂಶವು ಮಾತನ್ನು ಮೀರಿದ ಆಧ್ಯಾತ್ಮಿಕ ಅನುಭವಗಳಿಗೆ ಭಾಷಾಶರೀರವನ್ನು ನೀಡುವಲ್ಲಿ ನೆರವಾಗುತ್ತದೆ. 'ಮ್ಯಾಜಿಕ್ ರಿಯಲಿಸಂ' ಒಂದಕ್ಕಿಂತ ಹೆಚ್ಚು ವಾಸ್ತವತೆಗಳನ್ನು ಓದುಗರ ಅನುಭವಕ್ಕೆ ತಂದುಕೊಡಲು ಅದ್ಭುತದ ಅಂಶವನ್ನು ಬಳಸುತ್ತಿದೆ. ಫ್ರಾನ್ಜ್ ಕಾಫ್ಕನ 'ಮೆಟಮಾರ್ಫಸಿಸ್' ಕಥೆ, ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೇಸನ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಕಾದಂಬರಿ ಇದಕ್ಕೆ ನಿದರ್ಶನಗಳು. (ಎಚ್.ಕೆ.ಆರ್)

**ಅದ್ವೈತ :** ಇದು ಒಂದು ತತ್ತ್ವಸಿದ್ಧಾಂತದ (ಮಾನಿಸಮ್) ಹೆಸರು. ಎರಡಲ್ಲದ್ದು ಎಂದು ಪದಶಃ ಈ ಮಾತಿಗೆ ಅರ್ಥ. ತತ್ತ್ವಸಿದ್ಧಾಂತ ವೈಜ್ಞಾನಿಕ ಸಿದ್ಧಾಂತದಂತೆ ಭೌತಿಕವಸ್ತುಗಳು ಪ್ರಾಣಿಗಳು ಮುಂತಾದ ಬಿಡಿವಸ್ತುಗಳ ವಿಚಾರವಾಗಿ ಮಾಡಿದ ಸಿದ್ಧಾಂತವಲ್ಲ; ಅದು ಎಲ್ಲಕ್ಕೂ ಮೂಲವಾದ ಅಂತಿಮವಾದ ವಸ್ತುವನ್ನು ಅಥವಾ ವಸ್ತುಗಳನ್ನು ಕುರಿತು ಮಾಡಿದ ಸಿದ್ಧಾಂತ. ಈ ಸಿದ್ಧಾಂತಗಳು ಹಲವು ಬಗೆಯಾಗಿವೆ. ಅಂತಿಮವಸ್ತುಗಳು ಅನೇಕ ಎಂಬುದು ಒಂದು; ಅವು ಎರಡು ಎಂಬುದು ಇನ್ನೊಂದು; ಅವು ಒಂದೇ ಎಂಬುದು ಮೂರನೆಯದು; ಎರಡಲ್ಲದವು ಎಂಬುದು ನಾಲ್ಕನೆಯ ಸಿದ್ಧಾಂತ; ಮೂರನೆಯದು ಮತ್ತು ನಾಲ್ಕನೆಯದು ಎರಡೂ ಒಂದೇ ಅಲ್ಲವೆ ಎಂಬ ಅತ್ಯಂತಸೂಕ್ಷ್ಮ ಪ್ರಶ್ನೆಗೆ ಒಂದು ಮಾತಿನಲ್ಲಿ ಉತ್ತರ ಹೇಳುವುದು ಸಾಧ್ಯವಿಲ್ಲ. ಈ ಲೇಖನದಲ್ಲಿ ಆ ಸಮಸ್ಯೆಯನ್ನು ನಿರೂಪಿಸಲಾಗಿದೆ. ಇಲ್ಲಿ ಇಷ್ಟು ಮಾತ್ರ ಹೇಳಬಹುದು. ಎಲ್ಲ ಒಂದು ಎಂದು ಹೇಳುವುದರಲ್ಲಿ ಏನೂ ಸ್ವಾರಸ್ಯವಿಲ್ಲ. ಅದನ್ನು ಕೇಳಿದವನು ಜಡನಾಗಬಹುದು. ಆದರೆ ಎಲ್ಲೆಲ್ಲೂ ಎರಡಾಗಿ ಕಾಣುವುದು ನಮಗೆ ಚಿರಪರಿಚಿತ ವಿಷಯ. ಅದು ನಿಜವಾಗಿ ಎರಡಲ್ಲವೆಂದು ತೋರಿಸಲು ತೋರಿಸುವವನ, ತಿಳಿಯುವವನ ಚೈತನ್ಯಗಳೆರಡೂ ಚುರುಕಾಗಿರಬೇಕು. ಏನನ್ನಾದರೂ ಸಾಧಿಸಲಿ, ಬಿಡಲಿ ವಿಚಾರಚೈತನ್ಯವನ್ನು ಚುರುಕಾಗಿ ಮಾಡುವುದು ತತ್ತ್ವದ ಮುಖ್ಯ ಗುರಿ. ಮುಖ್ಯ ಪ್ರಯೋಜನ. ತತ್ತ್ವಶಾಸ್ತ್ರವು ವಿಚಾರಶಾಸ್ತ್ರ.

2. ಅದ್ವೈತ ಎಂದರೆ ಆದಿ ಶಂಕರಾಚಾರ್ಯರು ಪ್ರತಿಪಾದಿಸಿದ ತತ್ತ್ವವೆಂದು ಸಾಮಾನ್ಯ ಭಾವನೆ. ಒಂದು ದೃಷ್ಟಿಯಿಂದ ಅದು ನ್ಯಾಯವೇ. ಅದ್ವೈತ ಲೋಕ ಪ್ರಸಿದ್ಧವಾದದ್ದು ಶಂಕರಾಚಾರ್ಯರ ಅನುಪಮನಿರೂಪಣೆಯಿಂದ. ಆದರೆ ಅದ್ವೈತವಾದ ಬೇರೆ ದೇಶಗಳಲ್ಲೂ ಬೇರೆ ಕಾಲಗಳಲ್ಲೂ ಇತ್ತು. ಬ್ರಾಡ್ಲೆ ಎಂಬ ಆಧುನಿಕ ಆಂಗ್ಲೇಯ ತಾತ್ತ್ವಿಕ ಅದ್ವೈತವನ್ನು ಸ್ವತಂತ್ರವಾಗಿ ಪ್ರತಿಪಾದಿಸಿದ್ದಾನೆ. ಭಾರತದಲ್ಲಿ ಅದ್ವೈತವಾದ ತುಂಬ ಹಿಂದಿನದು. ಅದ್ವೈತವಾದದ ಬೀಜಗಳು ಉಪನಿಷತ್ತುಗಳಲ್ಲೂ ಬುದ್ಧನ ಉಪದೇಶಗಳಲ್ಲೂ ಇವೆ. ಅಮರಕೋಶದಲ್ಲಿ ಬುದ್ಧನನ್ನು ಅದ್ವಯವಾದಿ ಎಂದು ಕರೆಯಲಾಗಿದೆ. ಮಾಧ್ಯಮಿಕದಾರ್ಶನಿಕರು ಪರಮಾರ್ಥದ ವಿಚಾರವಾಗಿ ಕೊಟ್ಟಿರುವ ವಿವರಣೆ ಶಂಕರಾಚಾರ್ಯರು ಕೊಟ್ಟಿರುವ ನಿರ್ಗುಣ ಬ್ರಹ್ಮದ ವಿವರಣೆಯನ್ನು ಬಹುಮಟ್ಟಿಗೆ ಹೋಲುತ್ತದೆ. ಶಂಕರಾಚಾರ್ಯರ ಮಾಯಾವಾದಕ್ಕೂ ಮಾಧ್ಯಮಿಕರ ಮಾಯಾವಾದಕ್ಕೂ ಸಾಮ್ಯವಿದೆ. ವೇದಾಂತಸೂತ್ರಗಳಲ್ಲಿ ಹಿಂದಿನಕಾಲದಲ್ಲಿದ್ದ ಕೆಲವು ವೇದಾಂತಿಗಳ ಹೆಸರುಗಳಿವೆ. ಅವರಲ್ಲಿ ಒಬ್ಬನಾದ ಕಾಶಕೃತ್ಸ್ನ ಎಂಬುವನ ಮತವನ್ನು ಶಂಕರಾಚಾರ್ಯರು ಅಂಗೀಕರಿಸಿರುತ್ತಾರೆ. ಶಂಕರಾಚಾರ್ಯರ ಗುರುಪರಂಪರೆಯಲ್ಲಿ ಸೇರಿರುವ ಗೋವಿಂದರೂ ಗೌಡಪಾದಾಚಾರ್ಯರೂ ಅದ್ವೈತವಾದಿಗಳು. ಗೌಡಪಾದಾಚಾರ್ಯರ ಮಾಂಡೂಕ್ಯ ಕಾರಿಕೆಯಲ್ಲಿ ಅದ್ವೈತದ ಮುಖ್ಯ ಅಂಶಗಳೆಲ್ಲ ಪ್ರತಿಪಾದಿತವಾಗಿವೆ. ಮಾಂಡೂಕ್ಯಕಾರಿಕೆಗೆ ಮಾಂಡೂಕ್ಯೋಪನಿಷತ್ತು ಆಧಾರ. ಗೌಡಪಾದರು ತಮ್ಮ ಕಾರಿಕೆಯಲ್ಲಿ ತಮಗೆ ಒಪ್ಪಿಗೆಯಾದ ಬೌದ್ಧದರ್ಶನಾಂಶಗಳು ಯಾವುವು ಎಂಬುದನ್ನು ತಿಳಿಸಿರುತ್ತಾರಲ್ಲದೆ ಉಪನಿಷತ್ತಿನಲ್ಲಿ ಹೇಳಿರುವ ಯಾವುದನ್ನೂ ಬುದ್ಧ ಹೇಳಿಲ್ಲ ಎಂಬುದನ್ನೂ ಸ್ಪಷ್ಟಪಡಿಸಿರುತ್ತಾರೆ. ಅದನ್ನೇ ಶಂಕರಾಚಾರ್ಯರು ಸಮರ್ಥಿಸಿರುತ್ತಾರೆ. ಶಂಕರಾಚಾರ್ಯರಿಗಿಂತ ಹಿಂದಿನವನಾದ ಪ್ರಸಿದ್ಧ ವೈಯಾಕರಣಿ ಭರ್ತೃಹರಿ ತನ್ನ ವಾಕ್ಯಪದೀಯದಲ್ಲಿ ಸ್ಫೋಟಾದ್ವೈತವಾದಕ್ಕೆ ಪೋಷಕವಾಗಿ ವಿವರ್ತವಾದವನ್ನು ಹೂಡಿರುತ್ತಾನೆ. ಶಂಕರಾಚಾರ್ಯರ ಅದ್ವೈತಕ್ಕೆ ವಿವರ್ತವಾದ ತುಂಬ ಮುಖ್ಯ.

ಹೀಗೆ ಶಂಕರಾಚಾರ್ಯರಿಗಿಂತ ಹಿಂದೆ ಅದ್ವೈತಿಗಳಿದ್ದರೂ ಅವರ ಅದ್ವೈತಸರಣಿ ಪರಿಪೂರ್ಣವಾದುದಲ್ಲ. ಶಂಕರಾಚಾರ್ಯರ ಅದ್ವೈತ ಕಲಾಕೃತಿಯಂತೆ ಪರಿಪೂರ್ಣ. ಉಪನಿಷತ್ತುಗಳ ಕಾಲದಲ್ಲಿ ತಮ್ಮ ಕಾಲದವರೆಗೆ ಬೆಳೆದು ಬಂದ ಸಕಲ ಅದ್ವೈತಾಂಗಗಳನ್ನೂ ತಮ್ಮ ಅದ್ವೈತದಲ್ಲಿ ಸೇರಿಸಿಕೊಂಡು ಅವರು ಅದಕ್ಕೊಂದು ಹೊಸ ರೂಪ ಕೊಟ್ಟಿರುತ್ತಾರೆ. ಅದಕ್ಕೆ ಆಧಾರವಾಗಿ ಕುಮಾರಿಭಟ್ಟರನ್ನು ಅನುಸರಿಸಿ ಅವರು ಅಂಗೀಕರಿಸಿರುವ ಆರು ಪ್ರಮಾಣಗಳನ್ನೂ ಶಂಕರಾಚಾರ್ಯರು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡಿರುತ್ತಾರೆ.

3. ವೇದವನ್ನು ಪ್ರಮಾಣವಾಗಿ ಇಟ್ಟುಕೊಳ್ಳುವುದರಲ್ಲಿ ಏನೂ ವೈಶಿಷ್ಟ್ಯವಿಲ್ಲ. ಇತರರೂ ಅದನ್ನು ಪ್ರಮಾಣವಾಗಿ ಇಟ್ಟುಕೊಂಡಿರುತ್ತಾರೆ. ಆದರೆ ಶಂಕರಾಚಾರ್ಯರು ವೇದವನ್ನು ಪ್ರಮಾಣವಾಗಿ ಬಳಸಿಕೊಂಡಿರುವ, ವೇದದ ಅರ್ಥವನ್ನು ತಿಳಿಸುವ ರೀತಿ ವಿಶಿಷ್ಟವಾದದ್ದು. ಶಂಕರಾಚಾರ್ಯರು ಎಲ್ಲಕ್ಕೂ ವೇದವನ್ನೇ ಕುರಿಯುವುದಿಲ್ಲ. ಲೋಕಾನುಭವಸರ್ವಸ್ವವನ್ನೂ ವಿಚಾರಮಾಡಲು ಅವರು ತಾರ್ಕಿಕವಾದವನ್ನೇ ವಿಶೇಷವಾಗಿ, ವಿಶಿಷ್ಟರೀತಿಯಲ್ಲಿ ಉಪಯೋಗಿಸುತ್ತಾರೆ. ಲೋಕಾನುಭವಸಂಗತವಾದ ಲೋಕಾನುಭವಸಿದ್ಧವಾದ ಲೌಕಿಕ ವಿಷಯಕ್ಕೆ ವಿರುದ್ಧವಾಗಿ ವೇದದಲ್ಲಿ ಏನು ಹೇಳಿದ್ದರೂ ಅದು ಪ್ರಮಾಣವಾಗಲಾರದು ಎಂಬುದನ್ನು ಅವರು ಸ್ಪಷ್ಟಪಡಿಸಿರುತ್ತಾರೆ. ಅಂದರೆ, ತಾರ್ಕಿಕ ಪ್ರಮಾಣಗಳಿಂದ ಸ್ಥಿರಪಡುವ ವಿಷಯಗಳಿಗೆ ವೇದ ಪ್ರಮಾಣವಲ್ಲ. ತರ್ಕಕ್ಕೆ ಎಟುಕದ ವಿಷಯಗಳಿಗೆ ಮಾತ್ರ ವೇದ ಪ್ರಮಾಣ. ವೇದದಲ್ಲೂ ಅದರ ಎಲ್ಲ ವಾಕ್ಯಗಳೂ ಒಂದೇ ಬಗೆಯ ಪ್ರಾಮಾಣ್ಯವನ್ನು ಪಡೆದಿರುವುದಿಲ್ಲ. ಬ್ರಹ್ಮದ ವಿಚಾರವಾಗಿಯೂ ಮೋಕ್ಷದ ವಿಚಾರವಾಗಿಯೂ ವೇದದಲ್ಲಿ ಭಿನ್ನಾರ್ಥವುಳ್ಳ ವಾಕ್ಯಗಳಿವೆ. ಕೆಲವು ಸಗುಣಬ್ರಹ್ಮ ಪರವಾದುವು, ಇನ್ನು ಕೆಲವು ನಿರ್ಗುಣಬ್ರಹ್ಮಪರವಾದುವು. ಕೆಲವು ವಿದೇಹಮುಕ್ತಿ ಪರವಾದುವು, ಮತ್ತೆ ಕೆಲವು ಜೀವನ್ಮುಕ್ತಿಪರವಾದುವು, ಬ್ರಹ್ಮೈಕ್ಯಪರವಾದುವು. ಇವೆರಡು ಬಗೆಯ ವಾಕ್ಯಗಳಿಗೂ ಇರುವ ಅರ್ಥ ಒಂದೇ ಎಂದಾಗಲಿ, ಎರಡೂ ಒಂದೇ ತತ್ತ್ವವನ್ನು ಬೋಧಿಸುತ್ತವೆಯೆಂದಾಗಲಿ ವಾದಿಸುವುದು ಅಶಕ್ಯ. ಹಾಗೆ ವಾದಿಸಿದಾಗ ಆ ವಾದ ಕೃತಕವಾಗಿ ತೋರುವುದಂತೂ ಸ್ಪಷ್ಟ. ಇವೆರಡನ್ನೂ ಸಮನ್ವಯಗೊಳಿಸುವುದೊಂದೇ ದಾರಿ. ಶಂಕರಾಚಾರ್ಯರು ಆ ದಾರಿಯನ್ನು ಅನುಸರಿಸಿದ್ದಾರೆ. ನಿರ್ಗುಣಬ್ರಹ್ಮಪರವಾದ ಮತ್ತು ಜೀವನ್ಮುಕ್ತಿಪರವಾದ ವಾಕ್ಯಗಳು ಪರಾವಿದ್ಯೆಯನ್ನೂ ಅಂದರೆ ಅಂತಿಮತತ್ತ್ವವನ್ನು ಬೋಧಿಸುವುವೆಂದೂ ಸಗುಣಬ್ರಹ್ಮಪರವಾದ ಮತ್ತು ಕ್ರಮಮುಕ್ತಿಪರವಾದ ವಾಕ್ಯಗಳು ಅಪರಾವಿದ್ಯೆಯನ್ನು ಅಂದರೆ ಪರಾವಿದ್ಯೆಗಿಂತ ಕೆಳಮಟ್ಟದ ವಿದ್ಯೆಯನ್ನು ಬೋಧಿಸುವ ವಾಕ್ಯಗಳೆಂದು ಹೇಳಿ ಈ ಎರಡು ಬಗೆಯ ವಾಕ್ಯಗಳ ಅರ್ಥವನ್ನು ಸಮನ್ವಯಗೊಳಿಸಿರುತ್ತಾರೆ. ಈ ರೀತಿಯಾದ ಸಮನ್ವಯಕ್ಕೆ ಉಪನಿಷತ್ತುಗಳಲ್ಲೇ ಪ್ರಬಲವಾದ ಆಧಾರವಿದೆ.

ಆದರೆ ವೇದಾಂತಸೂತ್ರಗಳೂ ಅದ್ವೈತವನ್ನೇ ಬೋಧಿಸುತ್ತವೆ ಎಂಬುದನ್ನು ಸಾಧಿಸುವುದು ಅಷ್ಟು ಸುಲಭವಲ್ಲ. ಏಕೆಂದರೆ ಪರಾವಿದ್ಯೆ ಮತ್ತು ಅಪರಾವಿದ್ಯೆ ಎಂಬ ಎರಡು ಬಗೆಯ ವಿದ್ಯೆಗಳನ್ನೂ ಅವು ತಿಳಿಸುವುದಿಲ್ಲ. ಬ್ರಹ್ಮ ಮತ್ತು ಈಶ್ವರ, ಇವೆರಡಕ್ಕೂ ಶಂಕರಾಚಾರ್ಯರು ಕೊಟ್ಟಿರುವ ಅರ್ಥ ಅಲ್ಲಿ ಕಂಡುಬರುವುದಿಲ್ಲ; ಉಪಸಂಹಾರಭಾಗದ ಕೊನೆಯಸೂತ್ರ ಪರಮಮುಕ್ತಿಯನ್ನು ಬೋಧಿಸುವುದಿಲ್ಲ; ಕ್ರಮಮುಕ್ತಿಯನ್ನು ಬೋಧಿಸುತ್ತದೆ; ಅವುಗಳಲ್ಲಿ ಮಾಯಾವಾದ ಉಕ್ತವಾಗಿರುವುದಿಲ್ಲ; ಬಂಧನಕ್ಕೆ ಅವಿದ್ಯೆ ಕಾರಣವೆಂದು ಅಲ್ಲಿ ಹೇಳಿರುವುದಿಲ್ಲ. ಆದ್ದರಿಂದ ಶಂಕರಾಚಾರ್ಯರ ಮಾಯಾವಾದ ಅವೈದಿಕ, ಅದಕ್ಕೆ ವೇದದ ಆಧಾರವಿಲ್ಲ ಎಂಬ ಆಕ್ಷೇಪ ಅದ್ವೈತಕ್ಕೆ ವಿರೋಧವಾದ ಪಕ್ಷಗಳು ಹುಟ್ಟಿದಂದಿನಿಂದ ಇದ್ದೇ ಇದೆ. ಅಂದಿನಿಂದ ಇಂದಿನವರೆಗೆ ಅದ್ವೈತದ ಅನುಯಾಯಿಗಳೂ ಈ ಕೆಳಗೆ ಕಂಡಂತೆ ಉತ್ತರ ಹೇಳುತ್ತಲೇ ಬಂದಿದ್ದಾರೆ.

ಬ್ರಹ್ಮಸೂತ್ರಗಳಲ್ಲಿ ಉಪಸಂಹಾರಭಾಗಕ್ಕಿಂತಲೂ ಉಪಕ್ರಮವೇ ಮುಖ್ಯ. ಉಪಕ್ರಮ ಭಾಗ ಈಶ್ವರಪರವಾದದ್ದೆಂದು ಹೇಳಲಾಗುವುದಿಲ್ಲ. ಅಪರಬ್ರಹ್ಮದಿಂದ ಗ್ರಂಥವನ್ನು ಪ್ರಾರಂಭಿಸುವುದು ಸಂಭಾವ್ಯವಲ್ಲ. ಬ್ರಹ್ಮ ಬುದ್ಧಿಯಿಂದ ಗ್ರಹಿಸಲಾಗದ ವಸ್ತು. ಆ ಅಗ್ರಾಹ್ಯವಸ್ತುವಿನ ಕಡೆಗೆ ಗಮನವನ್ನು ತಿರುಗಿಸಲು, ಆ ಕಡೆಗೆ ಗಮನಹರಿಯುವಂತೆ ಮಾಡಲು, ತಾಟಸ್ಥ್ಯ ಲಕ್ಷಣಗಳನ್ನು ತಿಳಿಸುವುದು ಅಗತ್ಯವಾಗುತ್ತದೆ. ಎರಡನೆಯ ಸೂತ್ರದಲ್ಲಿ ಕೊಟ್ಟಿರುವ ಲಕ್ಷಣಗಳು ಬ್ರಹ್ಮಾನುಭೂತಿಗೆ ದಾರಿಮಾಡಿಕೊಡುತ್ತವೆ. ಮಾಯಾವಾದ ಬ್ರಹ್ಮಸೂತ್ರಗಳಲ್ಲಿ ಇಲ್ಲ, ನಿಜ. ಆದರೆ ಪರಬ್ರಹ್ಮವನ್ನು ಸಾಧಿಸಬೇಕಾದರೆ ಮಾಯಾವಾದ ಅವಶ್ಯವಾಗುತ್ತದೆ. ಜೀವ ತನ್ನ ಕೇವಲರೂಪದಲ್ಲಿ ಬ್ರಹ್ಮದಿಂದ ಬೇರೆಯಿಲ್ಲ. ತಾನು ಬೇರೆ ಎಂದು ಭಾವಿಸಿದುದಕ್ಕೆ ಅವಿದ್ಯೆ ಕಾರಣವೆಂದು ಹೇಳದೆ ಬೇರೆ ಮಾರ್ಗವಿಲ್ಲ.

ಶಂಕರಾಚಾರ್ಯರ ಭಾಷ್ಯ ಬಾದರಾಯಣರ ಸೂತ್ರದ ಹೃದಯವನ್ನು ಸರಿಯಾಗಿ ತಿಳಿಸುತ್ತದೆಂದು ಖಂಡಿತವಾಗಿ ಹೇಳುವುದು ಕಷ್ಟ. ಬಹುಶಃ ಬೇರೆ ಬೇರೆ ಆಚಾರ್ಯರು ಬರೆದ ಯಾವ ಭಾಷ್ಯವೂ ಸಂಪೂರ್ಣವಾಗಿ ಸೂತ್ರಗಳ ಅಭಿಪ್ರಾಯವನ್ನೇ ತಿಳಿಸುತ್ತವೆಂದು ಹೇಳುವುದೂ ಕಷ್ಟ.

ಅದ್ವೈತಕ್ಕೆ ಆಧಾರವಾಗಿ ಶಂಕರಾಚಾರ್ಯರು ಉಪನಿಷತ್ತುಗಳನ್ನೂ ಭಗವದ್ಗೀತೆಯನ್ನೂ ಕುರಿತದ್ದಾದರೂ ನಮಗೆ ಮೆಚ್ಚುಗೆಯಾಗುವುದು ಅದ್ವೈತವನ್ನು ಸ್ಥಾಪಿಸಲು ಅವರು ಉಪಯೋಗಿಸಿರುವ ತೀಕ್ಷ್ಣವಾದ ತರ್ಕ. ವೇದಕ್ಕಿಂತಲೂ ವಾದ ಮತ್ತು ಅನುಭೂತಿ ಪ್ರಬಲವಾದ ಆಧಾರಗಳಾಗಿ ಕಾಣುತ್ತವೆ. ಶಂಕರಾಚಾರ್ಯರ ದೃಷ್ಟಿಯಲ್ಲಿ ವೇದಗಳು ಕೂಡ ಅಂತಿಮಪ್ರಮಾಣವಾಗುವುದಿಲ್ಲ. ಅನುಭಾವವೇ ಬ್ರಹ್ಮಜ್ಞಾನಕ್ಕೆ ಅಂತಿಮ ಪ್ರಮಾಣ (ವೇದಾಂತಸೂತ್ರ I, i. 2ರ ಮೇಲೆ ಶಂಕರಾಚಾರ್ಯರ ಭಾಷ್ಯ). ಅನುಭೂತಿಯನ್ನು ಹುಟ್ಟಿಸಿದ ವೇದವಾಕ್ಯ ಪ್ರಮಾಣವಾಗಲಾರದು. ಆ ವಾಕ್ಯದಿಂದ ಅನುಭೂತಿ ಹುಟ್ಟಬೇಕಾದರೆ ಅದನ್ನು ಕೇಳುವುದಕ್ಕೆ ಮುಂಚೆ ಕೇಳುವವನ ಮನಸ್ಸು ಎಷ್ಟೊ ಬಗೆಯಾಗಿ ಪರಿಪಕ್ವವಾಗಬೇಕು. ಅದನ್ನು ಕೇಳಿದಮೇಲೆಯೂ ಅವನ ಮನಸ್ಸು ಅನೇಕವಿಧದಲ್ಲಿ ಶ್ರಮಿಸಬೇಕು. ಮೊದಲಲ್ಲಿ ವೈರಾಗ್ಯ ಹುಟ್ಟಬೇಕು. ವೈರಾಗ್ಯ ಹುಟ್ಟಬೇಕಾದರೆ ಯಾವುದು ನಿತ್ಯ, ಯಾವುದು ಅನಿತ್ಯ ಎಂಬ ಅರಿವು ಹುಟ್ಟಬೇಕು. ಈ ಅರಿವು ಹುಟ್ಟಬೇಕಾದರೆ ಈ ಲೋಕ ಶಾಶ್ವತವಾದುದಲ್ಲ, ಸ್ವಪ್ನ, ಜಾಗೃತ್, ಸುಷುಪ್ತಿ ಮುಂತಾದ ಲೌಕಿಕಾನುಭವಗಳು ಚಿರಂತನವಾದ ಸತ್ತನ್ನು ತೋರಿಸುವುದಿಲ್ಲ, ಲೌಕಿಕಜ್ಞಾನಕ್ಕೆ ಕಾರಣಗಳಾದ ಕಾರ್ಯ ಕಾರಣಭಾವಗಳು, ಕಾಲ ದೇಶ ಗುಣ ಕರ್ಮಸಂಬಂಧ ಮುಂತಾದವುಗಳನ್ನು ತರ್ಕದ ಒರೆಗಲ್ಲಿಗೆ ಹಚ್ಚಿನೋಡಿದಾಗ ಅವು ಅಸಂಬದ್ಧಪರಿಣಾಮಕಾರಿಗಳು ಎಂದು ಸ್ಪಷ್ಟಪಡಿಸಿಕೊಳ್ಳಬೇಕು. ಶ್ರುತಿಯನ್ನಾಗಲಿ, ತರ್ಕವನ್ನಾಗಲಿ ಪ್ರಮಾಣವಾಗಿ ಇಟ್ಟುಕೊಂಡ ಸರ್ವದರ್ಶನಗಳನ್ನೂ ಪರೀಕ್ಷಿಸಿ ಅವು ಶ್ರುತಿಗೆ ಸಂಗತವಾದುವೆ, ತರ್ಕಸಮ್ಮತವಾದುವೆ, ಎಂಬುದನ್ನು ನಿಶ್ಚಯಿಸಿಕೊಳ್ಳಬೇಕು. ಮಿಥ್ಯಾಭಾವನೆಗಳಿಂದ ಹುಟ್ಟಬಹುದಾದ ಕಾಮಕ್ರೋಧಾದಿಗಳಿಂದ ಬಿಡುಗಡೆ ಹೊಂದಿ ಅಂತರಂಗವನ್ನು ಶುದ್ಧಿಮಾಡಿಕೊಳ್ಳಬೇಕು. ಹೀಗೆ ಶುದ್ಧಾಂತಃಕರಣವುಳ್ಳವನು ವೇದವಾಕ್ಯವನ್ನು ಕೇಳಿ ಅದನ್ನು ಮನನಮಾಡಬೇಕು. ತದೇಕಧ್ಯಾನದಲ್ಲಿ ಲೀನನಾಗಬೇಕು. ಹೀಗೆ ಸತತ ಪ್ರಯತ್ನದಿಂದ ಅನುಭೂತಿ ಹುಟ್ಟಿದಾಗ, ಅಂದರೆ ಆತ್ಮಸಾಕ್ಷಾತ್ಕಾರವಾದಾಗ, ಆ ವಾಕ್ಯದ ಅರ್ಥ ಸಿದ್ಧಿಸುತ್ತದೆ.

ಶಂಕರಾಚಾರ್ಯರು ಗೌಡಪಾದಕಾರಿಕೆಯ ಮೂರನೆಯ ಅಧ್ಯಾಯದಲ್ಲಿ ಒಂದನೆಯ ಕಾರಿಕೆಗೆ ಭಾಷ್ಯವನ್ನು ಬರೆಯುವ ಸಂದರ್ಭದಲ್ಲಿ, ಅದ್ವೈತವನ್ನು ಸ್ಥಾಪಿಸಲು ವೇದವೊಂದೇ ಪ್ರಮಾಣವೇ, ಅದನ್ನು ತರ್ಕದಿಂದ ಸ್ಥಾಪಿಸಲಾಗುವುದಿಲ್ಲವೇ ಎಂಬ ಪ್ರಶ್ನೆಯನ್ನು ಎತ್ತಿ ಅದಕ್ಕೆ ಉತ್ತರವಾಗಿ ತರ್ಕದಿಂದ ಅದ್ವೈತವನ್ನು ಹೇಗೆ ಸಾಧಿಸಬಹುದು ಎಂಬುದನ್ನು ಈ ಅಧ್ಯಾಯ ತೋರಿಸುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಪರಬ್ರಹ್ಮ ಅದ್ವಿತೀಯವಾಗಿ ಇರಬೇಕೆಂದು ತರ್ಕ ತಿಳಿಸುತ್ತದೆ. ಅದ್ವಿತೀಯವಾಗಿದೆ ಎಂದು ವೇದ ತಿಳಿಸುತ್ತದೆ. ಅನುಭೂತಿ ಅದನ್ನು ಸಾಕ್ಷಾತ್ಕರಿಸುತ್ತದೆ. ಅನುಭೂತಿಯೇ ಅಂತಿಮ ಪ್ರಮಾಣ; ಅದು ಸ್ವತಃಪ್ರಮಾಣ.

4. ತತ್ತ್ವವಿಚಾರವನ್ನು ಪ್ರಾರಂಭಿಸಬೇಕಾದರೆ ಮೊಟ್ಟಮೊದಲು ಅದರ ಅಡಿಗಲ್ಲಾಗಿ ನಿಸ್ಸಂದೇಹವಾದದ್ದು ಯಾವುದಾದರೂ ಇದೆಯೇ ಎಂಬುದನ್ನು ನಿಶ್ಚಯಿಸಿಕೊಳ್ಳಬೇಕು. ಅಂಥ ನಿಸ್ಸಂದೇಹವಾದ ವಸ್ತು ಯಾವುದಾದರೂ ಇದೆಯೆ ಎಂಬ ಪ್ರಶ್ನೆಯಿಂದ ಶಂಕರಾಚಾರ್ಯರು ತಮ್ಮ ತತ್ತ್ವವಿಚಾರವನ್ನು ಪ್ರಾರಂಭಿಸುತ್ತಾರೆ. ಪ್ರಶ್ನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಅನುಭವವನ್ನು ಪರೀಕ್ಷಿಸಿದರೆ ನಮ್ಮ ಇಂದ್ರಿಯಾನುಭವಗಳಾಗಲಿ, ಸ್ಮೃತಿಯ ಅನುಭವಗಳಾಗಲಿ, ನಿಸ್ಸಂದೇಹ ಅನುಭವಗಳೆಂದು ಗಣಿಸಲಾಗುವುದಿಲ್ಲ. ಅವು ಭ್ರಮೆಗೆ ಎಡೆಗೊಡುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ನಮ್ಮ ಇಂದ್ರಿಯಗಳಿಗೆ ಗೋಚರವಾದ ವಸ್ತುಗಳೂ ಸಂದೇಹಾಸ್ಪದವಾದುವು. ಆದರೆ ಆ ಸಂದೇಹಕ್ಕೆ ಸಾಕ್ಷಿಯಾದ ಚೇತನವೇ ಸಂದೇಹಾಸ್ಪದವೆಂದು ಹೇಳಲಾಗುವುದಿಲ್ಲ. ಇದು ಸಂದೇಹಾಸ್ಪದವಾದದ್ದು ಅಥವಾ ನಿರಾಕರಿಸಬೇಕಾದದ್ದು ಎಂದು ಯಾವ ಚೇತನ ತಿಳಿಸುತ್ತದೋ ಆ ಚೇತನದ ಸ್ವರೂಪ ಸಂದೇಹಾಸ್ಪದವಲ್ಲ ನಿರಾಕೃತವಲ್ಲ (ವೇದಾಂತಸೂತ್ರ II,iii. 7ರ ಮೇಲಿನ ಶಂಕರಭಾಷ್ಯ). ಸಂದೇಹಕರವಾದದ್ದು ಹಾಗಿರಲಿ, ಎಲ್ಲವೂ ಶೂನ್ಯ ಎಂದು ಹೇಳಬೇಕಾದರೂ ಅದಕ್ಕೆ ಸಾಕ್ಷಿಯಾದ ಚೈತನ್ಯ ಶೂನ್ಯವಾಗಲಾರದು. ಅದು ಇಲ್ಲವೆಂದು ಹೇಳಲಾಗುವುದಿಲ್ಲ. ಹಾಗೆ ಹೇಳಿದಾಗ ಸ್ವವಿಘಾತದೋಷ ಉಂಟಾಗುತ್ತದೆ. ಸರಿಯಾಗಲಿ, ತಪ್ಪಾಗಲಿ, ಸಂದೇಹಾಸ್ಪದವಾಗಲಿ, ಯಾವ ಬಗೆಯ ಅನುಭವವಾಗಲಿ ಅದಕ್ಕೆ ತಳಹದಿಯಾದ ಚೈತನ್ಯ ನಿಸ್ಸಂದೇಹವಾದದ್ದು. ಅದು ಸ್ವಯಂಸಿದ್ಧ. ಎಲ್ಲ ಪ್ರಮಾಣಗಳಿಗೂ ಪ್ರಮೇಯಗಳಿಗೂ ಆಧಾರವಾದ, ಅವೆಲ್ಲಕ್ಕೂ ಸಾಕ್ಷಿಯಾದ ಸಾಕ್ಷಿಗೆ ಯಾವ ಪ್ರಮಾಣದ ಅಗತ್ಯವೂ ಇಲ್ಲ.

ಈ ಸ್ವತಸ್ಸಿದ್ಧಚೇತನವೇ ಆತ್ಮ. ಎಲ್ಲ ಜ್ಞಾನಕ್ಕೂ ಆಧಾರವಾದರೂ ಇದು ಜ್ಞೇಯ ವಿಷಯವಾಗಲಾರದು. ಮೆರವಣಿಗೆಯಂತೆ ನಮ್ಮ ಅರಿವಿನ ಮುಂದೆ ಹಾದುಹೋಗುವ ಯಾವುದೊಂದು ವಿಷಯವೂ ಆ ಚೇತನವಾಗಲಾರದು. ಅರಿವಿನ ವಿಷಯಗಳು ಬದಲಾವಣೆ ಹೊಂದುತ್ತಿವೆ; ಅವು ಅಶಾಶ್ವತ. ಆದರೆ ಅರಿಯುವ ಚೈತನ್ಯವಾದರೋ ಬದಲಾವಣೆಗೆ ಒಳಪಟ್ಟದ್ದಲ್ಲ. ಬೆಳಕು ಕತ್ತಲೆಗೆ ವಿರುದ್ಧವಾದಂತೆ ಆ ಚೈತನ್ಯ ಬದಲಾವಣೆಗೆ ಒಳಗಾದ ವಿಷಯಗಳಿಗೆ ವಿರುದ್ಧವಾದದ್ದು. ಆದ್ದರಿಂದ ಬಾಹ್ಯ ಪ್ರಪಂಚದಂತೆ ಈ ಚೇತನ ಜ್ಞಾನಕ್ಕೆ ವಿಷಯವಾಗಲಾರದು. ಆತ್ಮ ತನ್ನನ್ನು ತಾನು ತಿಳಿಯಬೇಕಾಗಿದೆ; ಅದು ಜ್ಞೇಯ ವಿಷಯವಾಗಬೇಕು. ವಿಷಯರೂಪ ಪಡೆದದ್ದಾದರೆ, ಅದು ಆತ್ಮವಾಗಿ ಉಳಿಯುವುದಿಲ್ಲ. ಆತ್ಮ ತನಗೆ ವಿಷಯವಾಗಿರುತ್ತದೆ ಎಂದು ಹೇಳಿದಾಗ ಸ್ವವಿಘಾತದೋಷವುಂಟಾಗುತ್ತದೆ. ಒಬ್ಬ ಇನ್ನೊಬ್ಬನನ್ನು ತನ್ನ ಭುಜದಮೇಲೆ ಕೂಡಿಸಿಕೊಂಡು ಅವನಿಗೆ ಆಶ್ರಯವಾಗಬಹುದು. ಆದರೆ ಒಬ್ಬ ತನ್ನ ಭುಜದ ಮೇಲೆ ತಾನೇ ಕುಳಿತುಕೊಳ್ಳಲಾಗುವುದಿಲ್ಲ. ಹಾಗೆಯೇ ಆತ್ಮ ವಿಷಯಕ್ಕೆ ಆಶ್ರಯವಾಗಬಲ್ಲುದೇ ಹೊರತು, ಅದೇ ವಿಷಯವಾಗಲಾರದು. ಅದು ಎಲ್ಲ ಪ್ರಮಾಣಗಳಿಗೂ ಆಶ್ರಯವಾದ್ದರಿಂದ ಯಾವ ಪ್ರಮಾಣವೂ ಅದಕ್ಕೆ ಆಶ್ರಯವಾಗಲಾರದು (ವೇ. ಸೂ. II,iii 7ರ ಮೇಲೆ ಶಂಕರಭಾಷ್ಯ). ಆತ್ಮದ ಅಸ್ತಿತ್ವಕ್ಕೆ ಅದೇ ಆಧಾರ. ಅದು ಸ್ವತಂತ್ರ. ಅದಕ್ಕೆ ವಿಷಯವಾದ ಎಲ್ಲವೂ ಪರತಂತ್ರ. ಸ್ವತಂತ್ರವಾದದ್ದು, ತನ್ನ ಇರವಿಗೆ ತಾನೇ ಆಶ್ರಯವಾದದ್ದು, ಬದಲಾವಣೆ ಹೊಂದದ್ದು, ಚಿರವಾದದ್ದು–ಬ್ರಹ್ಮ. ಇದು ಎಲ್ಲರಲ್ಲೂ ಇರುವ ಆತ್ಮ, ಸರ್ವಸ್ಯಾತ್ಮ. ಸರ್ವದ ಆತ್ಮವಾಗಿರುವ ಕಾರಣದಿಂದಲೇ ಬ್ರಹ್ಮದ ಅಸ್ತಿತ್ವ ಪ್ರಸಿದ್ಧ (ವೇ. ಸೂ. I, i, 1 ರ ಮೇಲೆ ಶಂಕರಭಾಷ್ಯ).

ಆತ್ಮ ವಿಷಯವಲ್ಲ. ಆದ್ದರಿಂದ ಅದರಿಂದ ಭಿನ್ನವಾದ ವಿಷಯರೂಪವಾದದ್ದೆಲ್ಲವೂ ಅನಾತ್ಮ. ಆತ್ಮದಿಂದ ಹೊರತಾದ ಹೊರಪ್ರಪಂಚದಲ್ಲಿ ಅಂದರೆ ಅನಾತ್ಮದಲ್ಲಿ ನಮ್ಮ ದೇಹ, ಇಂದ್ರಿಯಗಳು, ಬುದ್ಧಿ, ಎಲ್ಲವೂ ಸೇರಿವೆ. ಅನಾತ್ಮವಾದ ಈ ದೇಹವನ್ನು "ನಾನು" ಎಂದು ಲೋಕ ತಪ್ಪಾಗಿ ತಿಳಿದುಕೊಂಡಿದೆ. ನಾನು ತೆಳ್ಳಗಿದ್ದೇನೆ, ನಾನು ದಪ್ಪವಾಗಿದ್ದೇನೆ, ನಾನು ಮೂಗ, ನಾನು ಕುರುಡ, ಎಂದು ಜನರು ಹೇಳಿಕೊಳ್ಳುವುದು ಲೋಕರೂಢಿ. ಹೀಗೆ ಹೇಳಿಕೊಂಡಾಗ, ಅವರು ನಾನು ಎಂದರೆ ಅರಿಯುವ ಚೇತನವನ್ನು ನಾನಲ್ಲದ್ದಕ್ಕೆ, ಅಂದರೆ ಅಚೇತನಕ್ಕೆ, ಅನಾತ್ಮಕ್ಕೆ ಆರೋಪಿಸುತ್ತಾರೆ. ಜಾಗೃತ್, ಸ್ವಪ್ನ, ಸುಷುಪ್ತಿ, ತುರೀಯ ಎಂಬ ನಾಲ್ಕು ಅವಸ್ಥೆಗಳಿಗೂ ನಿರಂತರ ಆಧಾರವಾಗಿ ಇರುವ ಆತ್ಮಕ್ಕೆ ಸದಾ ಚಲಿಸುತ್ತಿರುವ ಕ್ಷಣಿಕವಾದ ಅನಾತ್ಮವಾದ ಸಕಲ ಅನುಭವ ಪರಂಪರೆಯನ್ನೂ ಆರೋಪಿಸುತ್ತಾರೆ.

ಈ ಶರೀರ ನಾನು, ಇದು ನನ್ನದು ಎಂದು ಅದಕ್ಕೆ ಅಂಟಿಕೊಂಡಿರುವ ಜೀವ ನಮ್ಮ ನಿಜವಾದ ಆತ್ಮವಲ್ಲ. ನಿಜವಾದ ಆತ್ಮ ನಿರ್ವಿಕಾರಚೈತನ್ಯ. ಅದು ಜ್ಞಾತೃಜ್ಞೇಯಗಳೆಂಬ ಭೇದಗಳಿಗೆ ಹೊರತಾದದ್ದು. ಅದು ಲೌಕಿಕ ಜ್ಞಾನದಿಂದ ಬೇರೆ ಯಾವ ನಿರ್ವಿಷಯ ಜ್ಞಾನಸ್ವರೂಪ, ಸ್ವರೂಪಜ್ಞಾನ (ಹರಿಮೀಡೆ). ಸೂರ್ಯನ ಪ್ರಕಾಶದಿಂದ ಬೆಳಗುವ ಒಂದು ವಸ್ತುವೂ ಇಲ್ಲದಿದ್ದರೆ ಸೂರ್ಯ ಮಾತ್ರ ಪ್ರಕಾಶಿಸುತ್ತಲೇ ಇರುವಂತೆ, ತನ್ನಿಂದ ಬೇರೆಯಾದ, ತನ್ನಿಂದ ಪ್ರಕಾಶ ಪಡೆಯುವ ಯಾವ ವಸ್ತುವೂ ಇಲ್ಲದಿದ್ದರೂ ಆತ್ಮ ಮಾತ್ರ ನಿರ್ವಿಷಯಜ್ಞಾನವಾಗಿ ಪ್ರಕಾಶಿಸುತ್ತದೆ. ಆ ಜ್ಞಾನ ಅದರಿಂದ ಅಭಿನ್ನ ಮತ್ತು ನಿತ್ಯ (ವಿಶ್ವನಾಥ ಮುಕ್ತಾವಳಿ, ಪು. 40). ಅದರ ಇರವೇ (ಸತ್) ಜ್ಞಾನರೂಪ, ಜ್ಞಾನವೇ ಅದರ ಇರವು. ಅದಕ್ಕೆ ಹೊರತಾಗಿರದೆ ಅದರಲ್ಲಿ ಐಕ್ಯವಾದ ಎಲ್ಲವೂ ಸ್ವರೂಪಜ್ಞಾನವೇ. ಅದಕ್ಕೆ ಹೊರತಾದ ಜ್ಞಾನವೆಲ್ಲವೂ ನಿಜವಾಗಿ ಅಜ್ಞಾನವೇ. ಅಂತೆಯೇ ಇದನ್ನು ಬುದ್ಧಿ ಪರೀಕ್ಷಿಸಿದಾಗ, ಇದರಿಂದ ಬೇರೆಯಾದ ಲೋಪದೋಷಗಳಿಗೆ ಒಳಗಾಗದ ಜ್ಞಾನವಿರಬೇಕು ಎಂದು ಬೋಧೆಯಾಗುತ್ತದೆ. ಆದರೆ ಆ ಜ್ಞಾನವನ್ನು ಬುದ್ಧಿ ಸಾಕ್ಷಾತ್ಕರಿಸಬೇಕು ಎಂದು ಬೋಧೆಯಾಗುತ್ತದೆ. ಆದರೆ ಆ ಜ್ಞಾನವನ್ನು ಬುದ್ಧಿ ಸಾಕ್ಷಾತ್ಕರಿಸಲಾರದು. ಆ ಜ್ಞಾನ ಬುದ್ಧಿಗೆ ಮೀರಿದ್ದು. ಆ ಜ್ಞಾನವನ್ನು ಶಂಕರಾಚಾರ್ಯರು ಅನುಭೂತಿಯೆಂದೂ ಆರ್ಷಜ್ಞಾನವೆಂದೂ ಕರೆದಿದ್ದಾರೆ. ಆತ್ಮದಿಂದ ಬೇರೆಯಾದ ಯಾವುದೂ ಇಲ್ಲವೆಂಬ ಸ್ವಾತ್ಮದಿಂದ ಸಿದ್ಧಿಸಿದ ದರ್ಶನವೇ ಆರ್ಷಜ್ಞಾನ (ತೈತ್ತಿರೀಯ ಉಪನಿಷತ್ತು. I. 1.30ರ ಮೇಲೆ ಶಂಕರಭಾಷ್ಯ).

5. ಆತ್ಮವಿಚಾರದಿಂದ ಪ್ರಾರಂಭಿಸಿ, ಅದು ಎಲ್ಲದಕ್ಕೂ ಅಧಿಷ್ಠಾನ, ಅನುಭವ ವಸ್ತುಗಳ ವಿಕಾರಗಳಿಗೆ ಒಳಪಡದ ನಿರ್ವಿಕಾರ ಸ್ವರೂಪಜ್ಞಾನ, ಸಕಲ ಜೀವಿಗಳೂ ಸಕಲ ಕಾಲದಲ್ಲೂ ಸಕಲ ದೇಶಗಳಲ್ಲೂ ಸಕಲ ಅವಸ್ಥೆಗಳಲ್ಲೂ ನಿತ್ಯವಾದದ್ದೆ ಆತ್ಮ, ಈ ನಿತ್ಯಾತ್ಮವೇ ಬ್ರಹ್ಮನ್ ಎಂದು ತಿಳಿಸುವುದು ಒಂದು ಕ್ರಮ. ಬಾಹ್ಯಪ್ರಪಂಚದಿಂದ ಪ್ರಾರಂಭಿಸಿ ಅದು ಅನಿತ್ಯವಾದದ್ದು, ಅದು ತನಗೆ ಆಶ್ರಯವಾಗಿ ನಿತ್ಯವಾದದ್ದನ್ನು ಅಪೇಕ್ಷಿಸುತ್ತದೆ, ಆ ನಿತ್ಯವಸ್ತು ಬ್ರಹ್ಮನ್ ಎಂದು ತಿಳಿಸುವುದು ಇನ್ನೊಂದು ಕ್ರಮ. ಈ ಎರಡು ಕ್ರಮಗಳನ್ನೂ ಉಪನಿಷತ್ತುಗಳಲ್ಲಿ ಕಾಣಬಹುದು. ಈ ಎರಡು ಕ್ರಮಗಳನ್ನೂ ಶಂಕರಾಚಾರ್ಯರು ಅನುಸರಿಸಿರುತ್ತಾರೆ.

ಸತ್ ಎಂದರೆ ಇರುವುದು ಎಂದು ಒಂದು ಅರ್ಥ. ನಿತ್ಯವಾದದ್ದು ಎಂದು ಇನ್ನೊಂದು ಅರ್ಥ. ಶಂಕರಾಚಾರ್ಯರ ಪ್ರಕಾರ ನಿತ್ ಎಂಬ ಪದ ನಿಜವಾಗಿ ನಿತ್ಯವಾಗಿರುವುದಕ್ಕೆ ಸಲ್ಲತಕ್ಕದ್ದು. ಬ್ರಹ್ಮವೊಂದೇ ಸತ್ ಎಂದು ಕರೆಯಿಸಿಕೊಳ್ಳಲು ಯೋಗ್ಯವಾದದ್ದು. ಈಗ ಇದ್ದು ಇನ್ನೊಂದು ವೇಳೆ ಇಲ್ಲದಾಗುವುದು ಸತ್ ಅಲ್ಲ. ಈ ಲೋಕದ ಎಲ್ಲ ವಸ್ತುಗಳೂ ಒಂದು ಕಾಲದಲ್ಲಿ ಇದ್ದು ಇನ್ನೊಂದು ಕಾಲದಲ್ಲಿ ಇಲ್ಲದೆ ಹೋಗುವಂಥವು. ಆದ್ದರಿಂದ ಅವು ಸತ್ ಅಲ್ಲ. ಆದರೆ ಅವು ಎಂದೆಂದಿಗೂ ಇಲ್ಲದೆ ಇರುವ ವಸ್ತುಗಳಲ್ಲ; ಅಸತ್ ಅಲ್ಲ. ಬಂಜೆಯ ಮಗ ಇಲ್ಲವೇ ಇಲ್ಲ. ಕೊಂಬಿರುವ ಮೊಲ ಇಲ್ಲವೇ ಇಲ್ಲ. ಇವು ಅಸದ್ವಸ್ತುಗಳು. ಸರ್ವದಾ ಇರುವ ನಿತ್ಯವಸ್ತುವಿಗೂ ಯಾವಾಗಲೂ ಇಲ್ಲದೆಯೇ ಇರುವ ಅಸದ್ವಸ್ತುಗಳಿಗೂ ಮಧ್ಯಸ್ಥವಾದದ್ದು ಈ ಲೋಕ. ಈ ಲೋಕ ಸದಸತ್ ವಸ್ತುಗಳಿಂದ ತುಂಬಿದ್ದು.

ಸದಸತ್ ರೂಪವಾದ ಈ ವಿಶ್ವ ಸದಾ ಬದಲಾಯಿಸುತ್ತಿರುವಂಥದ್ದು. ಅನೇಕಾನೇಕ ಭೇದಗಳಿಂದ ಕೂಡಿದ್ದು. ಅದು ಸಾಪೇಕ್ಷವಾದದ್ದು. ಅಂದರೆ ಕಾಲ, ದೇಶ, ಕಾರ್ಯ, ಕಾರಣ, ದ್ರವ್ಯ, ಗುಣ, ಮುಂತಾದುವುಗಳಿಗೆ ಅಧೀನವಾದದ್ದು. ಒಂದು ವಸ್ತು ಆ ವಸ್ತುವಾಗಿ ಹಿಂದೆ ಇರಲಿಲ್ಲ, ಈಗ ಇರುತ್ತದೆ, ಮುಂದೆ ಒಂದು ಕಾಲದಲ್ಲಿ ಅದು ಇರುವುದಿಲ್ಲ. ಒಂದು ವಸ್ತು ಈಗ ಇಲ್ಲಿ ಇರುತ್ತದೆ, ಇನ್ನೊಂದು ವೇಳೆಯಲ್ಲಿ ಬೇರೆಯ ಕಡೆ ಇರುತ್ತದೆ. ಹಾಗೆಯೇ ಆ ವಸ್ತು ಈಗ ಕಾರ್ಯರೂಪದಲ್ಲಿ ಇರುತ್ತದೆ, ಇನ್ನೊಂದು ವೇಳೆಯಲ್ಲಿ ಕಾರಣರೂಪದಲ್ಲಿ ಇರುತ್ತದೆ; ಈಗ ನೀರಾಗಿ ಇದ್ದದ್ದು ಕಾಯಿಸಿದಾಗ ಹಬೆಯ ರೂಪ ಪಡೆಯುತ್ತದೆ; ಕಾಲ, ದೇಶ, ಕಾರ್ಯಕಾರಣಗಳಿಗೆ ನಿಲುಗಡೆ ಇಲ್ಲ. ನಾವು ಎಷ್ಟೇ ಹಿಂದಿನ ಕಾಲದಿಂದ ಪ್ರಾರಂಭಿಸಿದರೂ ಎಷ್ಟೆಷ್ಟು ಹಿಂದು ಹಿಂದಕ್ಕೆ ಹೋದರೂ ಅದಕ್ಕೆ ಹಿಂದೆ, ಇದ್ದೇ ಇರುತ್ತದೆ. ಎಷ್ಟೆಷ್ಟು ಮುಂದೆ ಹೋದರೂ ಅದಕ್ಕಿಂತ ಮುಂದಿನಕಾಲ ಇದ್ದೇ ಇರುತ್ತದೆ. ಹೀಗೆಯೇ ದೇಶವೂ ಕೂಡ ನಿಲುಗಡೆ ಇಲ್ಲದ್ದು. ಹೀಗೆ ನಿಲುಗಡೆ ಇಲ್ಲದ ವಸ್ತುಗಳೆಲ್ಲ ಸಾಪೇಕ್ಷವಾದುವೆ.

ಕಾರ್ಯಕಾರಣಗಳಿಗೆ ಒಳಗಾದ ವಸ್ತುಗಳೂ ಹೀಗೆಯೆ ನಿಲುಗಡೆ ಇಲ್ಲದುವು. ಅಲ್ಲದೆ ಕಾರ್ಯಕಾರಣ ಭಾವವೇ ಅಸಂಗತ. ಕಾರ್ಯ ಹುಟ್ಟಬೇಕಾದರೆ ಆ ಕಾರ್ಯ ಅದಕ್ಕೆ ಸಂಬಂಧಿಸಿದ ಕಾರಣದಲ್ಲಿ ಇರಬೇಕು; ಅಥವಾ ಅದರಿಂದ ಬೇರೆಯಾಗಿರಬೇಕು. ಕಾರ್ಯಕಾರಣದಿಂದಲೇ ಬೇರೆಯಾದುದಾದರೆ, ಕಾರ್ಯಕ್ಕೂ ಕಾರಣಕ್ಕೂ ಅವಶ್ಯ ಸಂಬಂಧವಿಲ್ಲದಂತಾಗುತ್ತದೆ; ಇಂಥ ಕಾರ್ಯಕ್ಕೆ ಇಂಥ ಕಾರಣವೇ ಇರಬೇಕೆಂದು ಹೇಳಲು ಶಕ್ಯವಾಗುತ್ತದೆ. ನಿಜವಾಗೂ ಕಾರ್ಯ ಬೇರೆ ಕಾರಣ ಬೇರೆ. ಆದರೆ ಯಾವುದರಿಂದ ಯಾವುದು ಬೇಕಾದರೂ ಹುಟ್ಟಬಹುದೆಂದು ಒಪ್ಪಬೇಕಾಗುತ್ತದೆ. ಇದನ್ನು ಯಾರು ತಾನೆ ಒಪ್ಪಬಹುದು? ಹಾಗೆ ಒಪ್ಪುವುದು ಸಾಧ್ಯವೆ? ಈ ಅಸಾಂಗತ್ಯದಿಂದ ತಪ್ಪಿಸಿಕೊಳ್ಳಲು ಕಾರ್ಯ ಕಾರಣದಿಂದ ಬೇರೆಯಲ್ಲ. ಕಾರ್ಯ ಕಾರಣದಲ್ಲಿದೆ, ಕಾರಣರೂಪದಲ್ಲಿರುವುದೇ ಕಾರ್ಯರೂಪವಾಗಿ ವಿಕಾಸವಾಗುತ್ತದೆ ಎಂದು ಹೇಳಬೇಕಾಗುತ್ತದೆ. ಕಾರಣರೂಪದಲ್ಲಿ ತಡೆಗೆ ಒಳಪಟ್ಟುದು ತಡೆ ತೆಗೆದಾಗ ಕಾರ್ಯವಾಗಿ ಪರಿಣಮಿಸುತ್ತದೆ ಎಂದು ಹೇಳಬೇಕಾಗುತ್ತದೆ. ಕಾರ್ಯ ಕಾರಣಕ್ಕಿಂತ ಬೇರೆಯಾದದ್ದು ಎಂಬ ವಾದ ಮೊದಲನೆಯದಾದ ಅಸತ್ಕಾರ್ಯವಾದ. ಅದನ್ನು ಶಂಕರಾಚಾರ್ಯರು ಪೂರ್ಣ ತಿರಸ್ಕರಿಸಿರುತ್ತಾರೆ. ಕಾರ್ಯ ಕಾರಣದಲ್ಲಿದ್ದುದೇ ಎಂಬ ಎರಡನೆಯ ವಾದ ಸತ್ಕಾರ್ಯವಾದ. ಶಂಕರಾಚಾರ್ಯರು ಸತ್ಕಾರ್ಯವಾದ ಅಸತ್ಕಾರ್ಯವಾದಕ್ಕಿಂತ ಉತ್ತಮವೆಂದು ಹೇಳುತ್ತಾರೆ. ಆದರೂ ಅಂತಿಮದಲ್ಲಿ ಸತ್ಕಾರ್ಯವಾದವೂ ಅಸಂಗತವೇ. ಏಕೆಂದರೆ ಕಾರ್ಯಕಾರಣವಾದ ಯಾವ ಬಗೆಯದೇ ಆಗಲಿ, ಮೊಟ್ಟಮೊದಲಿಗೆ ಕಾರ್ಯಕಾರಣಭಾವಕ್ಕೇ ಸರಿಯಾದ ನಿಲುಗಡೆ ಇಲ್ಲ. ಕಾರಣವಿಲ್ಲದೆ ಕಾರ್ಯವಿಲ್ಲ. ಈಗ ಕಾರಣವಾಗಿದ್ದುದು ಇನ್ನೊಂದು ವೇಳೆಯಲ್ಲಿ ಕಾರ್ಯವಾಗುತ್ತದೆ. ಅದು ಮತ್ತೊಂದಕ್ಕೆ ಕಾರಣವಾಗುತ್ತದೆ. ಈ ಕಾರ್ಯ ಕಾರಣ ಸರಪಣಿಗೆ ಮೊದಲೆಲ್ಲಿ, ಕೊನೆಯೆಲ್ಲಿ? ಈ ಕಾರ್ಯಕಾರಣ ಸಂತಾನಕ್ಕೆ ಪ್ರಥಮ ಕಾರಣವಿದೆ ಎಂದು ಹೇಳಿದರೆ, ಆ ಸಂತಾನ ಅಲ್ಲಿಂದಲೇ ಏಕೆ ಪ್ರಾರಂಭವಾಗಬೇಕು ಎಂಬ ಪ್ರಶ್ನೆಗೆ ಸಮಂಜಸವಾದ ಉತ್ತರ ಹೇಳಲು ಸಾಧ್ಯವಿಲ್ಲ. ಕಾರ್ಯವನ್ನು ಬಿಟ್ಟು ಕಾರಣವಿಲ್ಲ, ಕಾರಣವನ್ನು ಬಿಟ್ಟು ಕಾರ್ಯವಿಲ್ಲ. ಆದ್ದರಿಂದ ಈ ಪ್ರಥಮ ಕಾರಣ ಬರಿಯ ಕಾರಣವೇ; ಅದು ಇನ್ನೊಂದರಿಂದ ಹುಟ್ಟಿದ ಕಾರಣವಲ್ಲ ಎಂದು ಹೇಳಿದರೆ ಕಾರ್ಯಕ್ಕೂ ಕಾರಣಕ್ಕೂ ಸ್ವಾಭಾವಿಕವಾಗಿರುವ ಅವಿನಾಸಂಬಂಧ ತಪ್ಪಿಹೋಗುತ್ತದೆ. ಆಗ ಕಾರ್ಯಕಾರಣಭಾವವೇ ಇಲ್ಲದಂತಾಗುತ್ತದೆ. ಕಾರ್ಯವನ್ನು ಬಿಟ್ಟು ಕಾರಣ ಒಂದನ್ನೇ ಆಗಲಿ, ಕಾರಣವನ್ನು ಬಿಟ್ಟು ಕಾರ್ಯ ಒಂದನ್ನೇ ಆಗಲಿ ಇಟ್ಟುಕೊಳ್ಳಲು ಪ್ರಯತ್ನಿಸಿದರೆ ಕಾರ್ಯಕಾರಣಭಾವವೇ ಹೋಗಿಬಿಡುತ್ತದೆ. ಒಂದು ಗಿಡದಲ್ಲಿ ಹಣ್ಣು ಬಿಡದ ಭಾಗವನ್ನು ಹಣ್ಣು ಬಿಡುವ ಭಾಗದಿಂದ ಪ್ರತ್ಯೇಕಿಸಿ, ಹಣ್ಣು ಬಿಡದ ಭಾಗವನ್ನು ಉರಿಸಿ ನೀರು ಕಾಯಿಸಲು ಇನ್ನೊಂದನ್ನು ಬೇರೆಯಾಗಿಟ್ಟು ಹಣ್ಣು ಪಡೆಯಲು ಸಾಧ್ಯವೆ ? ಹಾಗೆ ಪ್ರಯತ್ನಿಸಿದಾಗ ಗಿಡವೇ ಹಾಳಾಗುತ್ತದೆ. ಹಾಗೆಯೇ ಕಾರ್ಯದಿಂದ ಬೇರ್ಪಡಿಸಿ ಕಾರಣವೊಂದನ್ನೆ ಇಟ್ಟುಕೊಳ್ಳಲು ಪ್ರಯತ್ನಿಸಿದರೆ ಕಾರ್ಯವೂ ಉಳಿಯುವುದಿಲ್ಲ. ಕಾರಣವೂ ಉಳಿಯುವುದಿಲ್ಲ.

ಈ ಕಾರ್ಯಕಾರಣಭಾವ ಅಂತಿಮಸತ್ಯವಲ್ಲದಿದ್ದರೂ ಅದನ್ನು ನಿತ್ಯವಾದ ಸತ್ತಿಗೆ ಅನ್ವಯಿಸಲಾಗದಿದ್ದರೂ ಜೀವನವ್ಯವಹಾರಗಳಲ್ಲಿ ಅದಕ್ಕೆ ಉಪಯೋಗವಿದೆ. ಅದನ್ನು ಬಿಟ್ಟರೆ ವಿಜ್ಞಾನವೂ ಸಾಧ್ಯವಿಲ್ಲ. ಲೋಕನಡೆವಳಿಕೆಯೂ ಸಾಧ್ಯವಿಲ್ಲ. ಆದ್ದರಿಂದ ಅದ್ವೈತ ವ್ಯಾವಹಾರಿಕದೃಷ್ಟಿಯಿಂದ ಅದನ್ನು ತಿರಸ್ಕರಿಸುವುದಿಲ್ಲ, ಪುರಸ್ಕರಿಸುತ್ತದೆ. ಆದರೆ ಪಾರಮಾರ್ಥಿಕ ದೃಷ್ಟಿಯಿಂದ, ಅಂದರೆ ಪರಮಾರ್ಥದ ಸ್ವರೂಪದರ್ಶನಕ್ಕೆ ಕಾರ್ಯಕಾರಣಭಾವವನ್ನು ಉಪಯೋಗಿಸಿಕೊಳ್ಳಲಾಗುವುದಿಲ್ಲ. ಬ್ರಹ್ಮ ಈ ವಿಶ್ವಕ್ಕೆ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಈ ವಿಶ್ವ ಅದರ ಕಾರ್ಯವೆಂದು ಹೇಳಲಾಗುವುದಿಲ್ಲ. ಈ ವಿಶ್ವ ಬ್ರಹ್ಮದ ತೋರಿಕೆ, ವಿವರ್ತ. ಅದು ನಿತ್ಯವಾದ ಸತ್ತಿನ ತೋರಿಕೆ. ಅದು ನಿತ್ಯವಾಗಿ ಇರುವ ಸತ್ ಅಲ್ಲ; ಇಲ್ಲದೆಯೆ ಇರುವ ಅಸತ್ ಅಲ್ಲ. ಅದು ಸದಸತ್ ವಿಲಕ್ಷಣ.

6. ಸದಸತ್ ವಿಲಕ್ಷಣವಾದದ್ದು, ಸಾಪೇಕ್ಷವಾದದ್ದು. ಅದು ಆಧಾರವಾಗಿ ಪರಮಾರ್ಥವನ್ನು ಅಪೇಕ್ಷಿಸುತ್ತದೆ. ಅದರ ಕಡೆಗೆ ಕೈತೋರಿಸುತ್ತದೆ. ಎಲ್ಲ ಕಲ್ಪನೆಗಳಿಗೂ ಮೂಲವಾದ ಅಧಿಷ್ಠಾನ ಇರಬೇಕು (ವೇ.ಸೂ. III. ii. 22ರ ಮೇಲೆ ಶಂಕರಭಾಷ್ಯ). ಇದು ಹಾವು ಎಂಬ ಮಿಥ್ಯಾಭಾವನೆಯಲ್ಲಿ ಕೂಡ ಹಾವು ಎಂಬ ಮಿಥ್ಯಾಭಾವನೆ ಹೋಗುತ್ತದೆಯೇ ಹೊರತು ಅದಕ್ಕೆ ಅಧಿಷ್ಠಾನವಾದ ಇದು ಎಂಬುದು ಇದ್ದೇ ಇರುತ್ತದೆ. ಅದು ಸುಳ್ಳಾಗುವುದಿಲ್ಲ. ವಿಶೇಷಣ ಮಿಥ್ಯವಾದರೂ ವಿಶೇಷ ಮಿಥ್ಯವಾಗುವುದಿಲ್ಲ. ಸ್ವಪ್ನದಲ್ಲಿ ಕಾಣುವ ವಸ್ತುಗಳಿಗೆ ಕೂಡ ಜಾಗ್ರದವಸ್ಥೆಯ ವಸ್ತುಗಳು ಆಧಾರ. ಹಾಗೆಯೇ ತೋರಿಕೆಯಾದ ಈ ವಿಶ್ವಕ್ಕೂ ಆಧಾರವಿದ್ದೇ ಇರಬೇಕು. ಬ್ರಹ್ಮವೇ ಅದಕ್ಕೆ ಅಧಿಷ್ಠಾನ. ಚೇತನಾಚೇತನರೂಪವಾದ ಎಲ್ಲ ವಸ್ತುಗಳೂ ಸಾಮಾನ್ಯ ವಿಶೇಷಗಳೂ ಪಾರಂಪರ್ಯವಾಗಿ ಹೆಚ್ಚು ಹೆಚ್ಚು ವಿಶಾಲವಾದ ಸಾಮಾನ್ಯಗಳಲ್ಲಿ ಸೇರಿಹೋಗುತ್ತ ಹೋಗುತ್ತ ಕೊನೆಯಲ್ಲಿ ಪ್ರಜ್ಞಾನಘನವಾದ ಮಹಾಸಾಮಾನ್ಯದಲ್ಲಿ ಐಕ್ಯವಾಗುತ್ತವೆ (ವೇ.ಸೂ. II. iv 9ರ ಮೇಲೆ ಶಂಕರಭಾಷ್ಯ). ಎಲ್ಲ ಅನುಭಾವಗಳಿಗೂ ಅಧಿಷ್ಠಾನವಾದ ಮಹಾಸಾಮಾನ್ಯವೇ ಬ್ರಹ್ಮನ್. ಅದು ಎಲ್ಲಕ್ಕೂ ಅತೀತವಾದದ್ದು. ಅದು ಕಾಲ, ದೇಶ ಮತ್ತು ಕಾರ್ಯಕಾರಣ ಸಂಬಂಧಗಳಿಗೆ ಮೀರಿದ್ದು, ಯಾವುದು ಎಲ್ಲವನ್ನೂ ಮೀರಿದ್ದೊ ಅದನ್ನು ಯಾವುದರಿಂದಲೂ ವರ್ಣಿಸಲಾಗುವುದಿಲ್ಲ. ಅದು ಸ್ವಜಾತಿ ವಿಜಾತಿ ಎಂಬ ಭೇದರಹಿತವಾದದ್ದು. ಆದ್ದರಿಂದ ಅದನ್ನು ಇದಲ್ಲ, ಇದಲ್ಲ (ನೇತಿ, ನೇತಿ) ಎಂಬ ಕ್ರಮವೊಂದರಿಂದಲೆ ವರ್ಣಿಸಲು ಸಾಧ್ಯ. ಆದ್ದರಿಂದಲೇ ಶಂಕರಾಚಾರ್ಯರು ಅದನ್ನು ಅದ್ವಿತೀಯ, ಅದ್ವೈತ ಎಂದು ಕರೆದಿರುವುದು.

ಇದಲ್ಲ, ಇದಲ್ಲ ಎಂದು ಸರ್ವವನ್ನೂ ನಿರಾಕರಿಸಿದರೆ, ಅಂಥದ್ದು ಕೇವಲ ಶೂನ್ಯವಾಗುವುದಿಲ್ಲವೆ ಎಂದು ಆಕ್ಷೇಪಿಸಬಹುದು. ಈ ಆಕ್ಷೇಪಕ್ಕೆ ಅವಕಾಶವಿದೆ ಎಂದು ಶಂಕರಾಚಾರ್ಯರು ತಿಳಿದೇ, ತಮ್ಮ ಅದ್ವೈತ ಈ ಆಕ್ಷೇಪಕ್ಕೆ ಎಡೆಕೊಡುವ ಸತ್ತಾದ್ವೈತವಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ. ತಮ್ಮ ಅದ್ವೈತ ಆತ್ಮಾದ್ವೈತವೆಂದು ತಿಳಿಸಿರುತ್ತಾರೆ. ನಿರ್ಗುಣಬ್ರಹ್ಮ ಆತ್ಮಸ್ವರೂಪವಾದದ್ದು. ಆತ್ಮಕ್ಕೂ ಬ್ರಹ್ಮಕ್ಕೂ ಅಭೇದವನ್ನು ಹೇಳುವುದೇ ಆತ್ಮಾದ್ವೈತ.

ಬ್ರಹ್ಮವು ಸತ್ ಚಿತ್ ಆನಂದ ಸ್ವರೂಪವಾದದ್ದೆಂದು ಉಪನಿಷತ್ತುಗಳು ತಿಳಿಸುತ್ತವೆ. ಹೀಗೆ ಉಪನಿಷತ್ತುಗಳು ಬ್ರಹ್ಮವನ್ನು ಭಾವರೂಪವಾಗಿ ವರ್ಣಿಸಿರುವುದು ಉಪಲಬ್ಧಾರ್ಥಕ್ಕಾಗಿ, ಅಂದರೆ ಇತರರು ಅದನ್ನು ತಿಳಿಯಲು ಸಾಧ್ಯವಾಗಲೆಂಬ ಉದ್ದೇಶದಿಂದ, ಅಥವಾ ಉಪಾಸನೆಗೆ ಅನುಕೂಲವಾಗಲೆಂಬ ಉದ್ದೇಶದಿಂದ. ಸತ್, ಚಿತ್, ಆನಂದ– ಇವು ಕೇವಲ ಗುಣಗಳಲ್ಲ, ಸ್ವರೂಪಲಕ್ಷಣಗಳು. ಬ್ರಹ್ಮ ಕಾರಣಕರ್ತ ಎಂದು ಹೇಳಿದಾಗ, ಈ ಗುಣಗಳು ಕೇವಲ ತಟಸ್ಥವಾದುವು. ಆಂತರಿಕವಾದುವಲ್ಲ. ಒಬ್ಬನಿಗೆ ಒಂದು ನಕ್ಷತ್ರವನ್ನು ಗುರುತಿಸಲು ಕಷ್ಟವಾದಾಗ ನಾವು ಅವನಿಗೆ ಒಂದು ಮರದ ತುದಿಯನ್ನು ತೋರಿಸಿ ಅವನು ಅದನ್ನು ನೋಡಿದಮೇಲೆ, ಅದಲ್ಲ, ಅದಕ್ಕೆ ನೇರವಾಗಿ ಇರುವುದು ಆ ನಕ್ಷತ್ರ ಎಂದು ಹೇಳುತ್ತೇವೆ. ಆಗ ಅವನಿಗೆ ಆ ನಕ್ಷತ್ರವನ್ನು ಗುರುತಿಸಲು ಸಾಧ್ಯವಾಗುತ್ತದೆ. ಮರದ ತುದಿ ನಕ್ಷತ್ರವಲ್ಲ. ಆದರೆ ಅದು ನಕ್ಷತ್ರವನ್ನು ಗುರುತಿಸಲು ಸಹಾಯಕವಾಗುತ್ತದೆ. ಹಾಗೆಯೇ ಕಾರಣತ್ವವೂ ಸೃಷ್ಟಿಕರ್ತೃತ್ವವೂ ಬ್ರಹ್ಮಕ್ಕೆ ಸಂಬಂಧಪಡದಿದ್ದರೂ ಅವುಗಳ ಸಹಾಯದಿಂದ ಬ್ರಹ್ಮವನ್ನು ಗುರುತಿಸಲು ಸಹಾಯವಾಗುತ್ತದೆ. ಆ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಬುದ್ಧಿಯಿಂದ ಸಾಧ್ಯವಿಲ್ಲ. ಅನುಭೂತಿಯಿಂದ ಮಾತ್ರ ಸಾಧ್ಯ. ಈ ಅನುಭೂತಿಯನ್ನು ಯಾವ ಮಾತಿನಿಂದಲೂ ಹೊರಗೆಡಹಲಾಗುವುದಿಲ್ಲ. ಸರ್ವಜ್ಞ ಹೇಳಿರುವಂತೆ ಅದ್ವೈತವರಿತವನು ಸುಮನಿದ್ದಿರಬೇಕು. ಸುಮ್ಮನಿರದೆ ಬಾಯಿಬಿಟ್ಟರೆ ಕದಿಯಹೋದವನು ಕೆಮ್ಮಿದಂತೆ ಆಗುತ್ತದೆ.

7. ಪುರುಷಸ್ವರೂಪನೆಂದು ತಿಳಿದಾಗ ಸಗುಣಬ್ರಹ್ಮ ಈಶ್ವರನಾಗುತ್ತಾನೆ. ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಸುಲಭವಲ್ಲ. ಅದಕ್ಕೆ ಬೇಕಾದ ಜ್ಞಾನ ಲಭಿಸುವುದು ಕೋಟ್ಯಂತರ ಜನರಲ್ಲಿ ಒಬ್ಬರಿಗೂ ಇಬ್ಬರಿಗೊ. ಆದರೆ ಪವಿತ್ರವಾದ ವಸ್ತುವಿನಲ್ಲಿ ಸಾಧಾರಣವಾಗಿ ಎಲ್ಲರಿಗೂ ಆಸಕ್ತಿ ಇದೆ. ಆ ಆಸಕ್ತಿಗೆ ಪುರುಷಸ್ವರೂಪನಾದ ಈಶ್ವರನೇ ಸುಲಭವಾದ ಆಶ್ರಯ. ಸಕಲಗುಣಪರಿಪೂರ್ಣನೂ ಸರ್ವಜ್ಞನೂ ಸರ್ವಶಕ್ತನೂ ಸೃಷ್ಟಿಕರ್ತನೂ ಭಗವಂತನೂ ಆದ ಈಶ್ವರನ ಉಪಾಸನೆ ಎಲ್ಲರಿಗೂ ಅಗತ್ಯವಾದದ್ದು.

ಈಶ್ವರೋಪಾಸನೆ ಅತಿಮುಖ್ಯವಾದದ್ದಾದರೂ ಈಶ್ವರ ಪರಮಾರ್ಥವಲ್ಲವೆಂಬುದನ್ನು ಮರೆಯಲಾಗದು. ಈಶ್ವರ ಕಾರಣಸ್ವರೂಪಿ, ಸೃಷ್ಟಿಕರ್ತ, ಸರ್ವಶಕ್ತ ಎಂದು ಹೇಳಿದಾಗ ಈಶ್ವರಭಾವನೆ ಕೆಲವು ತೊಂದರೆಗಳಿಗೆ ಎಡೆಗೊಡುತ್ತದೆ. ಈಶ್ವರ ವಿಶ್ವಕ್ಕೆ ಕಾರಣ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಹಾಗೆ ಹೇಳಿದಾಗ ಈಶ್ವರ ಕಾಲ ದೇಶಗಳ ಉಪಾಧಿಗೆ ಒಳಪಡಬೇಕಾಗುತ್ತದೆ. ಉಪಾಧಿಗೆ ಒಳಗಾದ ಈಶ್ವರ ಸರ್ವಶಕ್ತನಾಗಲಾರ. ಅವನು

ಧರ್ಮಾಧ್ಯಕ್ಷ ಅಥವಾ ಧರ್ಮರಕ್ಷಕನೆಂದು ಹೇಳಿದರೆ ಎಲ್ಲರ ಪಾಪಕ್ಕೂ ಅನಿಷ್ಟಕ್ಕೂ ಅವನು ಹೊಣೆಯಾಗಬೇಕಾಗುತ್ತದೆ. ಜೀವ ಈಶ್ವರನ ಶರೀರ ಎಂದು ಹೇಳಿದರೆ ಜೀವ ಅನುಭವಿಸುವ ದುಃಖದಲ್ಲಿ ಈಶ್ವರನೂ ಭಾಗಿಯಾಗಬೇಕಾಗುತ್ತದೆ. ಎಲ್ಲರ ಗೋಳಿನಲ್ಲೂ ಅವನು ಭಾಗಿಯಾಗಿ ಅವನ ಗೋಳು ಅಪಾರವಾಗುತ್ತದೆ. ಈ ವಿಶ್ವ ಈಶ್ವರನ ಭೋಗಕ್ಕಾಗಿ ಎಂದು ಹೇಳಿದರೆ, ಈಶ್ವರ ಸಂಸಾರಿಯಾಗುತ್ತಾನೆ.

ಈ ಕಾರಣಗಳ ಸಲುವಾಗಿ ನಾವು ಈಶ್ವರನನ್ನು ಪರಮವೆಂದು ಭಾವಿಸಲಾಗುವುದಿಲ್ಲ. ಈಶ್ವರನನ್ನು ಪರಬ್ರಹ್ಮಕ್ಕೆ ಮೆಟ್ಟಲಾಗಿ ಭಾವಿಸಬೇಕು. ಈಶ್ವರೋಪಾಸನೆ ಮಂದಾಧಿಕಾರಿಗಳಿಗಾಗಿ ಏರ್ಪಡಿಸಿದ್ದು (I. i. 20 ಕಲ್ಪತರು). ಅದರ ಉಪಯೋಗ ವ್ಯಾವಹಾರಿಕ.

8. ವಿಶ್ವ ಸತ್ತೂ ಅಲ್ಲ, ಅಸತ್ತೂ ಅಲ್ಲ, ಸದಸದ್ವಿಲಕ್ಷಣವಾದದ್ದು ಎಂದು ಈಗಾಗಲೇ ತಿಳಿದೆವಷ್ಟೆ ಹೀಗೆ ವಿಶ್ವ ಸದಸದ್ವಿಲಕ್ಷಣವಾಗಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆ ಹುಟ್ಟುತ್ತದೆ. ವಿಶ್ವದ ವಸ್ತುಗಳು ಹೀಗೆ ಸತ್ತಲ್ಲದೆಯೂ ಅಸತ್ತಲ್ಲದೆಯೂ ಕಾಣುವುದಕ್ಕೆ ಅಧ್ಯಾಸ ಕಾರಣ. ನಿರ್ವಿಷಯವಾದ ಆತ್ಮಕ್ಕೆ ವಿಶೇಷಣಗಳನ್ನೂ ವಿಶೇಷರೂಪವಾದ ವಸ್ತುಗಳಿಗೆ ಆತ್ಮತ್ವವನ್ನೂ ಆರೋಪಿಸುವುದರಿಂದ ಈ ವಿಶ್ವ ಸತ್ತೂ ಆಗದೆ ಅಸತ್ತೂ ಆಗದೆ ವೈಲಕ್ಷಣ್ಯವನ್ನು ಪಡೆದಿರುತ್ತದೆ. ಸತ್ತೂ ಅಲ್ಲದ ಈ ವಿಶ್ವ ತೋರಿಕೆ. ಈ ತೋರಿಕೆಯನ್ನು ಶಂಕರಾಚಾರ್ಯರು ವಿವರ್ತವೆಂದು ಕರೆದಿದ್ದಾರೆ. ಇದರಲ್ಲಿ ಸತ್ಯಾಂಶವೂ ಮಿಥ್ಯಾಂಶವೂ ಸೇರಿಕೊಂಡಿವೆ (ವೇ. ಸೂ. ಉಪಕ್ರಮ ಅಧ್ಯಾಯದ ಮೇಲೆ ಶಂಕರಭಾಷ್ಯ). ಈ ವಿಶ್ವ ಸೃಷ್ಟಿಯಾದದ್ದು ಅಥವಾ ಪರಿಣಾಮಗೊಂಡದ್ದು ಎಂದು ಹೇಳಲಾಗುವುದಿಲ್ಲ. ಹಾಗೆ ಹೇಳಿದರೆ ಅದು ಕೇವಲ ಸದ್ವಸ್ತುವಾಗಬೇಕಾಗುತ್ತದೆ. ನಿತ್ಯಸತ್ಯವಾಗಬೇಕಾಗುತ್ತದೆ. ಆದರೆ ಅದು ನಿತ್ಯವಲ್ಲ, ಕೇವಲ ತೋರಿಕೆ, ಕೇವಲ ದೃಶ್ಯರೂಪ ವಾದದ್ದು. ಯಾವುದು ದೃಶ್ಯವೊ ಅದು ನಶ್ವರ. ಜ್ಞಾನೋದಯವಾದಾಗ ಅದು ಕೇವಲ ತೋರಿಕೆ ಎಂದು ಭಾಸವಾಗುವುದರಿಂದ ಅದನ್ನು ಮಾಯೆಯೆಂದು ಕರೆಯಲಾಗಿದೆ.

ಈ ವಿಶ್ವಕ್ಕೂ ಬ್ರಹ್ಮಕ್ಕೂ ಏನು ಸಂಬಂಧ ಎಂದು ಕೇಳುವುದುಂಟು. ಈ ಪ್ರಶ್ನೆ ಅರ್ಥವಿಲ್ಲದ್ದು. ಬ್ರಹ್ಮ ನಿತ್ಯವಾದದ್ದು. ವಿಶ್ವ ಅನಿತ್ಯವಾದದ್ದು. ಇವೆರಡೂ ಒಂದೇ ದರ್ಜೆಯವಲ್ಲ. ಆದ್ದರಿಂದ ಅವೆರಡಕ್ಕೂ ಸಂಬಂಧ ಅಚಿಂತ್ಯ. ಹಾಗೆ ಸಂಬಂಧವೇರ್ಪಡಿಸಲು ಪ್ರಯತ್ನಿಸಿದಾಗ ಅದೊಂದು ಭ್ರಮೆಯಾಗುತ್ತದೆ. ಈ ಭ್ರಮೆಗೆ ಮಾಯೆಯೆಂದು ಹೆಸರು. ಹಗ್ಗವನ್ನು ಹಾವೆಂದು ಭ್ರಮಿಸಿದಾಗ, ಮಾಯೆ ಹಗ್ಗವನ್ನು ಮರೆಮಾಡುತ್ತದೆ. ಇಲ್ಲದ ಹಾವನ್ನು ತೋರಿಸುತ್ತದೆ. ಹಾವು ಹಗ್ಗದ ಪರಿಣಾಮವಲ್ಲ; ಹಗ್ಗ ಹಾವಿಗೆ ಕಾರಣವಲ್ಲ. ಹಾಗೆಯೇ ಈ ವಿಶ್ವವೂ ಬ್ರಹ್ಮದ ಪರಿಣಾಮವಲ್ಲ; ಬ್ರಹ್ಮವು ವಿಶ್ವಕ್ಕೆ ಕಾರಣವಲ್ಲ. ಹಗ್ಗವನ್ನು ಹಾವೆಂದು ಭ್ರಮಿಸಿದಾಗ ಅದರಿಂದ ಹಗ್ಗಕ್ಕೆ ಯಾವ ಬಾಧೆಯೂ ಇಲ್ಲ. ಹಾಗೆಯೇ ವಿಶ್ವ ಬ್ರಹ್ಮದ ಪರಿಣಾಮ ಎಂದು ಭ್ರಾಂತಿಗೊಂಡಾಗ ಬ್ರಹ್ಮಕ್ಕೆ ಯಾವ ಬಾಧೆಯೂ ಇಲ್ಲ. ಹಾವು ಮಿಥ್ಯವೆಂದು ಎಣಿಸಿದಂತೆಯೇ ಈ ಜಗತ್ತು ಮಿಥ್ಯೆಯೆಂದು ಭಾವಿಸಬೇಕು. ಈ ಜಗತ್ತು ಮಿಥ್ಯವೆಂದರೆ ಜಗತ್ತು ಇಲ್ಲವೇ ಇಲ್ಲವೆಂದು ಅರ್ಥವಲ್ಲ. ಇದು ಶೂನ್ಯವೆಂದು ಅರ್ಥವಲ್ಲ. ಜಗತ್ತು ತೋರಿಕೆ; ಅದು ಬ್ರಹ್ಮದಿಂದ ಬೇರೆಯಾದದ್ದು ಎಂಬ ಅಜ್ಞಾನದಿಂದ ಹುಟ್ಟಿದ್ದು; ಆ ಅಜ್ಞಾನ ಹರಿದಾಗ ವಿಶ್ವ ಬ್ರಹ್ಮದಿಂದ ಬೇರೆಯಲ್ಲ ಎಂಬುದು ಸ್ವತಸಿದ್ಧವಾಗುತ್ತದೆ.

ಈ ವಿಶ್ವ ಮಾಯಾರೂಪವಾದದ್ದು ಎಂದು ಹೇಳುವಾಗ ಮಾಯೆ ಎಂಬ ಪದವನ್ನು ಅನಿರ್ವಚನೀಯ ಎಂಬ ಅರ್ಥದಲ್ಲಿ ಉಪಯೋಗಿಸುವುದುಂಟು. ಈ ವಿಶ್ವ ಅನಿರ್ವಚನೀಯ ಎಂದು ಹೇಳಿದಾಗ ಅದರ ಸ್ವರೂಪವನ್ನೂ ತಿಳಿಸಲಾಗುವುದಿಲ್ಲ. ಅದು ತಿಳಿಯದ, ತಿಳಿಸಲಾಗದ ವಸ್ತು ಎಂದು ಅಪಾರ್ಥಮಾಡಿಕೊಳ್ಳುವ ಸಂಭವವುಂಟು. ಅನಿರ್ವಚನೀಯ ಎಂದರೆ ತಿಳಿಯಲಾಗದ್ದು, ತಿಳಿಸಲಾಗದ್ದು ಎಂದು ಅರ್ಥವಲ್ಲ. ಅದು ಸತ್‌ಸ್ವರೂಪವೂ ಅಲ್ಲ, ಅಸತ್‌ಸ್ವರೂಪವೂ ಅಲ್ಲ ಎಂಬುದು ಸ್ಪಷ್ಟ. ಹಾಗೆ ತಿಳಿಯದೆ ಅದು ಸತ್ ಎಂದು ಭಾವಿಸಿದಾಗ ಅದು ಮಿಥ್ಯಾಭಾವನೆಗೆ ಎಡೆಕೊಡುತ್ತದೆ ಎಂಬುದೂ ಸ್ಪಷ್ಟ. ಆದ್ದರಿಂದ ಅದು ತಿಳಿಯಲಾಗದ್ದಲ್ಲ, ಅನಿರ್ವಚನೀಯ ಎಂದರೆ ಸತ್ತಿನಂತೆ ಇರುವುದಲ್ಲ, ಅಸತ್ತಿನಂತೆ ಇಲ್ಲದ್ದಲ್ಲ (ಎಂ. ಹಿರಿಯಣ್ಣ, ದಿ ಎಸೆನ್ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ, ಪು.161), ಎರಡಕ್ಕೂ ಸಾಪೇಕ್ಷವಾದದ್ದು. ಆದ್ದರಿಂದ ಲೋಕರೂಢಿಯನ್ನು ಅನುಸರಿಸಿ ಭಾವರೂಪವಾದ ಅಥವಾ ಅಭಾವರೂಪವಾದ ಒಂದೇ ಅರ್ಥವಿರುವ ವಚನದಿಂದ ಅದನ್ನು ವರ್ಣಿಸಲಾಗುವುದಿಲ್ಲ. ಅದು ಆಗಲೇ ಹೇಳಿರುವಂತೆ ಸದಸದ್ವಿಲಕ್ಷಣವಾದದ್ದು. ಇಲ್ಲಿ ಸದಸದ್ವಿಲಕ್ಷಣ ಮತ್ತು ಅನಿರ್ವಚನೀಯ ಎಂಬುವು ಸಮಾನಾರ್ಥಗಳೆಂದು ತಿಳಿಯಬೇಕು.

ಈ ವಿಶ್ವ ಬರಿಯ ಶೂನ್ಯವಲ್ಲ, ಅನುಭವದಲ್ಲಿ ಅದೂ ಒಂದು ನಿರ್ದಿಷ್ಟವಾದ ಸ್ಪಷ್ಟವಾದ ಅಂತಸ್ತನ್ನು ಪಡೆದಿದೆ. ಅದಕ್ಕೂ ಒಂದು ಸ್ಥಾನಮಾನವಿದೆ ಎಂದು ಸ್ಪಷ್ಟಪಡಿಸಲು ಶಂಕರಾಚಾರ್ಯರು ಸತ್ತನ್ನು ಪಾರಮಾರ್ಥಿಕ ಸತ್ತಾ, ವ್ಯಾವಹಾರಿಕ ಸತ್ತಾ, ಪ್ರಾತಿಭಾಸಿಕ ಸತ್ತಾ ಎಂದು ಮೂರು ಬಗೆಯಾಗಿ ವಿಂಗಡಿಸಿರುತ್ತಾರೆ. ಕನಸಿನ ವಿಷಯಗಳೂ ಭ್ರಮೆಯ ವಿಷಯಗಳೂ ವಿಷಯಗಳೇ. ಅವು ಇರುವಷ್ಟು ಕಾಲ ಇದ್ದೇ ಇರುತ್ತವೆ. ಆದ್ದರಿಂದ ಅವು ಅಸತ್ ಅಲ್ಲ. ಆದರೆ ಅವುಗಳ ಇರವಿಗೆ ಒಬ್ಬ ವ್ಯಕ್ತಿಯ ಅನುಭವ ಆಶ್ರಯ. ಕನಸು ಹರಿದು ನನಸಾದಾಗ, ಭ್ರಮೆ ಹರಿದು ವಾಸ್ತವಸ್ಥಿತಿ ಗೋಚರವಾದಾಗ ಅವು ತೇಲಿಹೋಗುತ್ತವೆ. ವ್ಯಾವಹಾರಿಕವಾದ ಈ ವಿಶ್ವ ಒಬ್ಬ ವ್ಯಕ್ತಿಯನ್ನು ಆಶ್ರಯಿಸಿ ಇರುವುದಿಲ್ಲ. ಒಬ್ಬ ಸತ್ತುಹೋದರೆ ಈ ವಿಶ್ವ ಹಾಳಾಗುವುದಿಲ್ಲ. ಒಬ್ಬ ನಿದ್ರಿಸಿದಾಗ ಈ ವಿಶ್ವ ಅವನ ಅರಿವಿನಿಂದ ಮರೆಯಾಗುತ್ತದೆಯೇ ಹೊರತು, ಇತರರ ಅರಿವಿನಿಂದಲೂ ಮರೆಯಾಗುವುದಿಲ್ಲ. ಒಬ್ಬನಿಗೆ ಬ್ರಹ್ಮ ಸಾಕ್ಷಾತ್ಕಾರವಾಗಿ, ಈ ವಿಶ್ವ ಬ್ರಹ್ಮನಿಂದ ಬೇರೆಯಲ್ಲವೆಂದೂ ಹಾಗೆ ತಿಳಿಯುವುದು ಭ್ರಮೆ ಎಂಬುದು ಸ್ಪಷ್ಟವಾದರೂ ಈ ವಿಶ್ವ ಮಾಯವಾಗುವುದಿಲ್ಲ. ಇತರರ ಕರ್ಮಭೂಮಿಯಾಗಿ ಅದು ಇದ್ದೇ ಇರುತ್ತದೆ. ಈ ವ್ಯಾವಹಾರಿಕಸತ್ತೆ ಪ್ರಾತಿಭಾಸಿಕಸತ್ತೆಗಿಂತ ಮೇಲಿನ ದರ್ಜೆಯದು. ಆದರೆ ಇದೂ ನಿತ್ಯಸತ್ಯವಲ್ಲ. ಇದು ಪಾರಮಾರ್ಥಿಕಸತ್ತೆಗೂ ಪ್ರಾತಿಭಾಸಿಕಸತ್ತೆಗೂ ಮಧ್ಯದರ್ಜೆಯದು. ವ್ಯಾವಹಾರಿಕ ದೃಷ್ಟಿ ಇರುವವರೆಗೂ ಅಂದರೆ ಮಾಯೆಗೆ ಒಳಗಾಗಿರುವಷ್ಟು ಕಾಲವೂ ಅದು ಬ್ರಹ್ಮದ ವಿಚಾರವಾಗಿಯೂ ತನ್ನ ವಿಚಾರವಾಗಿಯೂ ಜನರ ಮನಸ್ಸಿನಲ್ಲಿ ಮಿಥ್ಯಾಭಾವನೆಯನ್ನು ಹುಟ್ಟಿಸುತ್ತ ಇದ್ದೇ ಇರುತ್ತದೆ. ಆದರೆ ಬ್ರಹ್ಮಸಾಕ್ಷಾತ್ಕಾರವಾದವನಿಗೆ ಅದು ಬ್ರಹ್ಮದಿಂದ ಬೇರೆಯಾಗಿ ಉಳಿಯುವುದಿಲ್ಲ. ಉಳಿದವರಿಗೆ ಅದು ಬೇರೆಯಾಗಿ ಇದ್ದೇ ಇರುತ್ತದೆ.

9. ಈಶ್ವರನೂ ಲೋಕವೂ ಬ್ರಹ್ಮದಿಂದ ಬೇರೆಯಾಗಿ ತೋರುವುದು ಮಾಯೆಯಿಂದ. ಹಾಗೆಯೆ ಜೀವನೂ ಬ್ರಹ್ಮದಿಂದ ಬೇರೆ ಎಂದು ತೋರುವುದಕ್ಕೂ ಮಾಯೆ ಕಾರಣ. ಈ ಮಾಯೆ ಈಶ್ವರನಿಗೆ ಉಪಾಧಿಯಾದಾಗ ಅದು ಮೂಲಭೂತವಾದದ್ದು. ಆದ್ದರಿಂದ ಅದಕ್ಕೆ ಮೂಲಾವಿದ್ಯೆ ಎಂದು ಹೆಸರು. ಇದು ತುಂಬ ವ್ಯಾಪಕವಾದದ್ದು; ವಿಶ್ವವನ್ನೆಲ್ಲ ಆವರಿಸಿದೆ. ಈಶ್ವರನಲ್ಲಿ ಸೇರಿರುವ ಮಾಯಾಶಕ್ತಿ ಅವನನ್ನು ಬಾಧಿಸುವುದಿಲ್ಲ. ಏಕೆಂದರೆ ಮಹೇಶ್ವರನೇ ಮಾಟಗಾರ. ಆದರೆ ಜೀವನಲ್ಲಿ ಕಾಣುವ ಮಾಯೆ ತದ್ಗಮ್ಯ. ಅದರ ಒಂದು ಅಂಶವೆಂದು ಹೇಳಬಹುದು. ಅದನ್ನು ತೂಲಾವಿದ್ಯೆ ಎಂದು ಕರೆಯಬಹುದು. ಅದು ಜೀವನವನ್ನು ಬಾಧಿಸುತ್ತದೆ. ಏಕೆಂದರೆ ಅವನು ಅದನ್ನು ತಿಳಿದಿಲ್ಲ. ಪರಿಣಾಮವಾಗಿ ಅನಿತ್ಯವಾದ ಶರೀರವನ್ನು ಅವನು ಆತ್ಮವಾಗಿ ತಿಳಿಯುತ್ತಾನೆ. ಜೀವನಲ್ಲಿ ಎರಡು ಅಂಶಗಳು ಬೆರೆತಿವೆ. ನಾನು ಎಂಬ ನಿತ್ಯವಾದ ಆತ್ಮ, ನನ್ನದು ಎಂಬ ಅನಿತ್ಯವಾದ ಅನಾತ್ಮ. ಈ ಅನಾತ್ಮವಾದುದನ್ನು ಮಾಯಾರೂಪವಾದುದೆಂದು ತಿಳಿದಾಗ, ನಾನು ಎಂಬುದು ನಿತ್ಯಾತ್ಮವಾದ ಬ್ರಹ್ಮದಿಂದ ಬೇರೆಯಲ್ಲ ಎಂಬ ಸ್ವರೂಪಜ್ಞಾನ ಸಿದ್ಧಿಸುತ್ತದೆ. ತತ್ತ್ವಂ ಅಸಿ– ಅದೇ ನೀನು, ಅಹಂ ಬ್ರಹ್ಮಾಸ್ಮಿ– ನಾನೇ ಬ್ರಹ್ಮ, ಎಂಬ ವೇದವಾಕ್ಯಗಳ ಅರ್ಥ ಇದೇ. ಅವಿದ್ಯೆಗೆ ಒಳಗಾದ ಮಾನವನೇ ಬ್ರಹ್ಮವೆಂದು ಅರ್ಥವಲ್ಲ. ಹೀಗೆ ಭಾವಿಸುವುದು ಮಹಾಪಾತಕ. ಪರಿಶುದ್ಧಾತ್ಮವೇ ಪರಮ.

ಪ್ರತಿಯೊಬ್ಬನಲ್ಲೂ ಪರಿಶುದ್ಧಾತ್ಮ ಇದೆ. ಇದಕ್ಕೆ ಸಾಕ್ಷಿ ಎಂದು ಹೆಸರು. ಶ್ವೇತಾಶ್ವತರ ಉಪನಿಷತ್ತು ಹೇಳಿರುವಂತೆ ಈ ಸಾಕ್ಷಿ ಶುದ್ಧಚೇತನ, ಕೇವಲ ನಿರ್ಗುಣ ರೂಪವಾದದ್ದು, ಎಲ್ಲ ಜೀವರುಗಳಲ್ಲಿ ಇದ್ದರೂ ಅದು ಜೀವನಲ್ಲ. ಜೀವ ಕರ್ತೃ, ಭೋಕ್ತೃ, ಸಾಕ್ಷಿಯಾದರೋ ಕೇವಲ ವೀಕ್ಷಕ. ನಾಟಕಮಂದಿರದಲ್ಲಿ ದೀಪ ಸೂತ್ರಧಾರನನ್ನೂ ನಟನಟಿಯರನ್ನೂ ಪ್ರೇಕ್ಷಕರನ್ನೂ ಬೆಳಗಿಸುತ್ತದೆ. ಅವರು ನಾಟ್ಯಮಂದಿರದಲ್ಲಿ ಇಲ್ಲದಾಗಲೂ ಬೆಳಗುತ್ತದೆ. ಹಾಗೆಯೆ ಜೀವ, ಅಂತಃಕರಣ ಮತ್ತು ಇಂದ್ರಿಯ ವಿಷಯಗಳೂ ಎಲ್ಲವನ್ನೂ ಅವು ಕೆಲಸಮಾಡುವಾಗಲೂ ಕೆಲಸ ಮಾಡದಾಗಲೂ ಸರ್ವದಾ ಈ ಸಾಕ್ಷಿ ಬೆಳಗುತ್ತದೆ. ಸಾಕ್ಷಿ ವಿಷಯಜ್ಞಾನವಲ್ಲ; ಎಲ್ಲ ಜ್ಞಾನಕ್ಕೂ ಆಧಾರವಾದ ಸ್ವರೂಪಜ್ಞಾನ.

ಬ್ರಹ್ಮಕ್ಕೂ ಜೀವನಿಗೂ ಸಂಬಂಧವೇನು ಎಂದು ಕೇಳುವುದುಂಟು. ಇದು ಅವಿದ್ಯೆಯಿಂದ ಬಾಧಿತವಾದ ಜೀವ ಕೇಳುವ ಪ್ರಶ್ನೆ. ಬ್ರಹ್ಮ ಬಾಹ್ಯವಸ್ತುವಿನಂತೆ ಜ್ಞಾನವಿಷಯವೆಂಬ ತಪ್ಪುಭಾವನೆ ಇರುವುದೇ ಆ ಪ್ರಶ್ನೆ ಏಳಲು ಕಾರಣ. ಆ ಭಾವನೆ ಹರಿದಾಗ ಸ್ವಾತ್ಮಪ್ರಕಾಶವಾಗಿ ಆ ಆತ್ಮ ಬ್ರಹ್ಮದಿಂದ ಬೇರೆಯಲ್ಲವೆಂಬ ಅನುಭೂತಿ ಸಿದ್ಧಿಸುತ್ತದೆ. ಆತ್ಮ ಬ್ರಹ್ಮವೇ ಆದ್ದರಿಂದ ಅವೆರಡರ ಸಂಬಂಧದ ಪ್ರಶ್ನೆ ಏಳುವುದಿಲ್ಲ.

10. ಜೀವ ಅಜ್ಞಾನಕ್ಕೆ ಒಳಗಾಗಿ ಜೀವನದಲ್ಲಿ ತೊಳಲಿ ಬಳಲುತ್ತಾನೆ. ಆ ಅಜ್ಞಾನವನ್ನು ನೀಗಿಕೊಂಡು ಸ್ವಸ್ವರೂಪವನ್ನು ತಳೆಯುವುದೇ ಜೀವನದ ಅಂತಿಮ ಗುರಿ. ಈ ಅಂತಿಮಗುರಿ ಸಿದ್ಧಿಸಬೇಕಾದರೆ ತನ್ನ ವಿಚಾರದಲ್ಲೂ ಈ ವಿಶ್ವದ ವಿಚಾರದಲ್ಲೂ ಜೀವನದೃಷ್ಟಿ ಪೂರ್ಣವಾಗಿ ಪರಿವರ್ತನೆಯಾಗಬೇಕು. ಶಂಕರಾಚಾರ್ಯರು ಹೇಳಿರುವಂತೆ ಅವಗತಿಯೇ ಗತಿ. (ಶಂ.ಭಾ.ಕಠ, I.iii. 12).

ಈ ಪರಿವರ್ತನೆ ಸುಲಭವಲ್ಲ; ಇದಕ್ಕೆ ತುಂಬ ಸಾಧನೆ ಅಗತ್ಯ. ಈ ಸಾಧನೆಯಲ್ಲಿ ಎರಡು ಮುಖ್ಯ ಘಟ್ಟಗಳಿವೆ: ವೈರಾಗ್ಯವನ್ನು ಬೆಳೆಸುವುದು ಮೊದಲನೆಯದು; ಸ್ವರೂಪಜ್ಞಾನಲಾಭ ಎರಡನೆಯದು. ವೈರಾಗ್ಯ ಹುಟ್ಟಲು ನಿಷ್ಕಾಮಕರ್ಮಯೋಗ ಸಾಧನ. ನಿಷ್ಕಾಮಕರ್ಮಯೋಗ ಸಿದ್ಧಿಸಿದಲ್ಲದೆ ಜೀವ ಮತ್ತು ಬ್ರಹ್ಮ ಇವೆರಡೂ ಪರಿಣಾಮದಲ್ಲಿ ಒಂದೇ ಎಂಬ ಸುದ್ದಿ ಕೇಳಿದಮಾತ್ರಕ್ಕೆ ನಿಜವಾದ ಜ್ಞಾನ ಹುಟ್ಟುವುದಿಲ್ಲ. ಇತರ ವೇದಾಂತಿಗಳು ಅಗತ್ಯವೆಂದು ಹೇಳುವ ಕರ್ಮವನ್ನೂ ಭಕ್ತಿಯನ್ನೂ ಶಂಕರಾಚಾರ್ಯರೂ ಒಪ್ಪಿರುತ್ತಾರೆ. ಶೀಲವಿಲ್ಲದವನಿಗೆ ಜ್ಞಾನೋದಯವಾಗಲಾರದು ಎಂಬುದು ಖಂಡಿತ. ಮೋಕ್ಷ ಬಯಸುವವನಿಗೆ ಈ ಶೀಲ ಎಷ್ಟರಮಟ್ಟಿಗೆ ಬೆಳೆಯಬೇಕೆಂದರೆ ಅದು ಅವನ ಎರಡನೆಯ ಸ್ವಭಾವವಾಗಬೇಕು; ಶೀಲ ಸಹಜವೃತ್ತಿಯಾಗಬೇಕು. ಹಾಗೆ ಒಬ್ಬನಿಗೆ ಶೀಲ ಸ್ವಾಭಾವಿಕವಾದಾಗ,

ಅವನಿಗೆ ಕರ್ತವ್ಯ ಒಂದು ನಿಯೋಗವಾಗುವುದಿಲ್ಲ, ಕಟ್ಟಾಗುವುದಿಲ್ಲ; ತಾನೇ ತಾನಾಗಿ ಅಭಿವ್ಯಕ್ತವಾಗುತ್ತದೆ. ಅಂಥವನಿಗೆ ಕೆಟ್ಟದ್ದನ್ನು ಮಾಡಲು ಸಾಧ್ಯವೇ ಇಲ್ಲ, ಕನಸಿನಲ್ಲೂ ಸಾಧ್ಯವಿಲ್ಲ. ಯಾವ ತಡೆಯೂ ಇಲ್ಲದೆ, ಯಾವ ಕ್ಲೇಶವೂ ಇಲ್ಲದೆ ಅವನು ಸರಿಯಾದದ್ದನ್ನೇ ಮಾಡುತ್ತಾನೆ. ಅವನ ಮಮಕಾರವೂ ಸ್ವಾರ್ಥವೂ ಸಂಪೂರ್ಣವಾಗಿ ಅಳಿದಿರುತ್ತವೆ.

ಕರ್ಮಕ್ಕೆ ಇತರ ವೇದಾಂತಿಗಳು ಕೊಟ್ಟಷ್ಟು ಪ್ರಾಶಸ್ತ್ಯವನ್ನು ಶಂಕರಾಚಾರ್ಯರೂ ಕೊಟ್ಟಿರುತ್ತಾರೆ. ಅದರ ಮೂಲಕ ಇತರರು ಬೋಧಿಸುವ ಕ್ರಮಮುಕ್ತಿಯೂ ಸಿದ್ಧಿಸುತ್ತದೆ ಎಂದೂ ಒಪ್ಪಿರುತ್ತಾರೆ. ಆದರೆ ಇತರ ಆಚಾರ್ಯರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಆತ್ಮ ಬ್ರಹ್ಮದಿಂದ ಬೇರೆಯಲ್ಲ ಎಂಬ ಸ್ವರೂಪಜ್ಞಾನಸಿದ್ಧಿಯೇ ಪರಮಮುಕ್ತಿಯೆಂದು ತಿಳಿಸಿರುತ್ತಾರೆ. ಎರಡನೆಯ ಬಗೆಯಾದ ಸಾಧನದಲ್ಲಿ ಶ್ರವಣ, ಮನನ, ನಿಧಿಧ್ಯಾಸನ– ಇವು ಮುಖ್ಯ ಹಂತಗಳು. ಕೊನೆಯ ಹಂತ ಸಿದ್ಧಿಸಿದಾಗ ತತ್ತ್ವಮಸಿ ಎಂಬ ವೇದವಾಕ್ಯದ ಅರ್ಥ ಸಾಕ್ಷಾತ್ಕಾರವಾಗುತ್ತದೆ; ಆತ್ಮಾನಂದದ ಬುಗ್ಗೆ ಚಿಮ್ಮುತ್ತದೆ. ಜೀವ ಬ್ರಹ್ಮದಿಂದ ಬೇರೆಯಾಗಿ ಉಳಿಯುವುದಿಲ್ಲ. ಅದೇ ಜೀವನ್ಮುಕ್ತಿ. ಅದ್ವೈತಿಗೆ ಕ್ರಮಮುಕ್ತಿಯೂ ಉಂಟು. ಅದಕ್ಕೆ ಹೆಚ್ಚಿನದಾದ ಜೀವನ್ಮುಕ್ತಿಯೂ ಉಂಟು. ಅದ್ವೈತ ಎಲ್ಲ ಸಿದ್ಧಿಗಳನ್ನೂ ಒಳಗೊಂಡು ಪರಮಸಿದ್ಧಿಗೆ ದಾರಿಮಾಡಿಕೊಡುತ್ತದೆ. ಇದಕ್ಕೆ ಶಂಕರಾಚಾರ್ಯರ ಜೀವನವೇ ಸಾಕ್ಷಿ. ಅವರು ಷಣ್ಮತಸ್ಥಾಪನಾಚಾರ್ಯರು.

ಇತರರು ಬೋಧಿಸಿರುವಂತೆ ಈ ಜ್ಞಾನ ಕರ್ಮಕ್ಕಾಗಲಿ, ಭಕ್ತಿಗಾಗಲಿ ಅಂಗವಾದ ಜ್ಞಾನವಲ್ಲ. ಅದಕ್ಕಿಂತ ಮೇಲಿನದಾದ ಪರಮಜ್ಞಾನ. ಆ ಪರಮಜ್ಞಾನವೇ ಮೋಕ್ಷ. ಜ್ಞಾನ ಮೋಕ್ಷಕ್ಕೆ ಮಾರ್ಗ ಎಂದೂ ಶಂಕರಾಚಾರ್ಯರದು ಜ್ಞಾನಮಾರ್ಗವೆಂದೂ ಹೇಳುವುದುಂಟು. ಹೀಗೆ ಹೇಳುವುದೂ ಅವರ ಅದ್ವೈತಕ್ಕೆ ಸಂಗತವಲ್ಲ. ಮಾರ್ಗವಾದ ಜ್ಞಾನ ಪರಮಜ್ಞಾನವಲ್ಲ. ಮಾರ್ಗವಾದ ಜ್ಞಾನದ ಅಂತಸ್ತೂ ಮಾರ್ಗವಾದ ಭಕ್ತಿಯ ಅಂತಸ್ತೂ ಒಂದೇ. ಅವು ಒಂದನ್ನೊಂದು ಬಿಟ್ಟಿರಲಾರವು. ಮಾರ್ಗವಾದ ಜ್ಞಾನ ಪಾರಮಾರ್ಥಿಕ ಜ್ಞಾನವಲ್ಲ. ಕೇವಲ ವ್ಯಾವಹಾರಿಕ. ಅಂಥ ಜ್ಞಾನದಿಂದ ಹುಟ್ಟುವ ಮೋಕ್ಷವೂ ವ್ಯಾವಹಾರಿಕವೇ. ಪಾರಮಾರ್ಥಿಕಜ್ಞಾನಕ್ಕೆ, ಪರಮಜ್ಞಾನಕ್ಕೆ ಬೇರೆ ಲಕ್ಷ್ಯವಿಲ್ಲ, ಬೇರೆ ಪ್ರಯೋಜನವಿಲ್ಲ. ಆ ಜ್ಞಾನವೇ ಮೋಕ್ಷ, ಮೋಕ್ಷವೇ ಆ ಜ್ಞಾನ. ಪರಸ್ಪರ ಅವು ಬೇರೆಯಲ್ಲ.

ಯಾವ ಮಾರ್ಗದ ಗುರುತೂ ಕಲೆಯೂ ಇಲ್ಲದ ಜ್ಞಾನ ಸ್ವರೂಪಜ್ಞಾನ, ಮೋಕ್ಷ ಅದರ ಸ್ವರೂಪ; ಅಭಿನ್ನಜ್ಞಾನವೇ ಅಭಿನ್ನಮೋಕ್ಷವೇ ಅದ್ವೈತ. (ನೋಡಿ– ಅವಸ್ಥೆಗಳು, ಅವಿದ್ಯೆ, ಆತ್ಮ, ಆತ್ಮಸಿದ್ಧಿ, ಆದಿಶಂಕರಾಚಾರ್ಯ, ಏಕತ್ವವಾದ, ಕ್ರಮಮುಕ್ತಿ, ಗೌಡಪಾದ, ಚಿತ್, ಜೀವನ್ಮುಕ್ತಿ, ಮಾಯಾವಾದ)

(ಜಿ.ಎಚ್.)

**ಅಧಿಕರ :** ವ್ಯಕ್ತಿಗಳ ಮೇಲೆ ಆದಾಯ ತೆರಿಗೆಯ ಜೊತೆಗೆ ಹಾಕುವ ಕರ (ಸೂಪರ್ ಟ್ಯಾಕ್ಸ್). ಜಾಯಿಂಟ್ ಸ್ಟಾಕ್ ಕಂಪನಿಗಳೂ ನೋಂದಣಿಮಾಡಿರುವ ವ್ಯಾಪಾರಸಂಸ್ಥೆಗಳೂ ಸಾಮಾನ್ಯ ಅಧಿಕರಗಳ ವ್ಯಾಪ್ತಿಗೊಳಪಡುವುದಿಲ್ಲ. ಆದರೆ ಅವು ಕಂಪನಿಗಳ ಮೇಲಣ ಅಧಿಕರಗಳೆಂಬ ಕಾರ್ಪೊರೇಷನ್ ತೆರಿಗೆಗಳನ್ನು ಕೊಡಬೇಕಾಗುತ್ತದೆ. ಒಂದೇ ಆದಾಯದ ಮೇಲೆ ಆದಾಯತೆರಿಗೆ ಮತ್ತು ಅಧಿಕರಗಳನ್ನು ಹಾಕಿದರೂ ಎರಡು ತೆರಿಗೆಗಳ ಪ್ರಮಾಣವನ್ನು ಗೊತ್ತುಮಾಡುವಾಗಲೂ ಕಟೌತಿಗಳನ್ನು (ರಿಬೇಟು) ಕೊಡಲು ಅವಕಾಶವಿಲ್ಲ. ಇದರಿಂದ ಒಬ್ಬನೇ ಅಧಿಕಾರಿ ಎರಡುಸಲ ತೆರಿಗೆ ಹಾಕಲು ಮಾರ್ಗವಾಗುತ್ತದೆ. ಆದರೆ ಇಂಥ ತೆರಿಗೆಯನ್ನು ಹಾಕುವುದರಿಂದ ತೆರಿಗೆಯ ಭಾರ ನಿಷ್ಪಕ್ಷಪಾತವಾಗಿ ಬೀಳುವುದರಿಂದ ಇದು ನ್ಯಾಯಸಮ್ಮತವೆನಿಸಿದೆ.

ಭಾರತದಲ್ಲಿ ಅಧಿಕರವನ್ನು ಮೊದಲಬಾರಿಗೆ 1917–18ರಲ್ಲಿ ಸರ್ಕಾರದ ಸಮರಾವಶ್ಯಕತೆಗಳ ಪೂರೈಕೆಗಾಗಿ ಹಾಕಲಾಯಿತು. ಅದನ್ನು ಸಾಮಾನ್ಯವಾಗಿ ಪಟ್ಟಿಯ ವ್ಯವಸ್ಥೆಯಂತೆ ಹಾಕುತ್ತಾರೆ. ಈ ಪಟ್ಟಿಗಳ ಸಂಖ್ಯೆಯನ್ನೂ ಹೆಚ್ಚಿಸಬಹುದು ಮತ್ತು ತೆರಿಗೆಯ ದರಗಳನ್ನು ಅವಶ್ಯವೆನಿಸಿದಾಗ ಕಡಿದಾಗಿ ಮೇಲುಮೇಲಕ್ಕೇರಿಸಬಹುದು.

ಅಧಿಕರದ ಭಾರ ಹೆಚ್ಚಾದರೆ ಔದ್ಯೋಗಿಕ ಪ್ರಚೋದನೆಗಳಿಗೆ ಧಕ್ಕೆ ಬರುತ್ತದೆ. ಕರದಿಂದ ತಪ್ಪಿಸಿಕೊಳ್ಳುವ ಪ್ರವೃತ್ತಿ ಅಧಿಕವಾಗುತ್ತದೆ. ಅಧಿಕರ ಕಡಿದಾಗಿ ಏರಿದರೆ ಅದು ಉನ್ನತಶ್ರೇಣಿಯ ಆದಾಯವನ್ನು ಕಸಿದುಕೊಳ್ಳುವ ರೀತಿಯೆನಿಸುತ್ತದೆ ಮತ್ತು ಆ ದೆಸೆಯಿಂದ ಉಳಿತಾಯ ಮಾಡುವುದಕ್ಕೂ ಮತ್ತು ಬಂಡವಾಳವನ್ನು ಕೂಡಿಸುವುದಕ್ಕೂ ನಿರುತ್ಸಾಹವೇರ್ಪಡುತ್ತದೆ.

(ಟಿ.ಕೆ.)

**ಅಧಿಕಲಾಭ ತೆರಿಗೆ :** ವ್ಯಕ್ತಿ ಹಾಗೂ ವ್ಯಾಪಾರಗಾರರು ಗಳಿಸುವ ಅಧಿಕಲಾಭಗಳ ಮೇಲೆ ವಿಧಿಸುವ ತೆರಿಗೆ (ಎಕ್ಸಸ್ ಪ್ರಾಫಿಟ್ ಟ್ಯಾಕ್ಸ್). ವ್ಯಾಪಾರದ ಪ್ರತಿ ವಸ್ತುವಿಗೂ ಲಾಭದ ಪ್ರಮಾಣ ನಿರ್ಣಯವಾಗಿರುತ್ತದೆ. ಆ ಲಾಭಕ್ಕಿಂತಲೂ ಅಧಿಕವಾಗಿ ಬರುವ ಲಾಭ ತೆರಿಗೆಗೆ ಒಳಗಾಗುತ್ತದೆ. ಅಧಿಕಲಾಭ ಉದ್ಯಮಸಾಹಸಕ್ಕಿಂತ ಹೆಚ್ಚಾಗಿ ಅಸಾಧಾರಣಪರಿಸ್ಥಿತಿಯಿಂದ ಉಂಟಾಗುತ್ತದೆ. ಸಾಮಾನ್ಯವಾಗಿ ಯುದ್ಧಕಾಲದಲ್ಲಿ, ಯುದ್ಧಕ್ಕೆ ಮೊದಲು ಸ್ವಲ್ಪಕಾಲ ಮತ್ತು ಯುದ್ಧಾನಂತರ ಸ್ವಲ್ಪ ಕಾಲ ಅಧಿಕಲಾಭವುಂಟಾಗುವುದು ಸರ್ವಸಾಧಾರಣ. ಈ ತೆರಿಗೆಯನ್ನು ಯುದ್ಧಕಾಲದ ಅಧಿಕಲಾಭಕ್ಕೆ ಮಾತ್ರ ಹಾಕಲಾಗುತ್ತಿತ್ತು. ಆದರೆ ಸಾಮಾನ್ಯಪರಿಸ್ಥಿತಿಯಲ್ಲೂ ಅಧಿಕಲಾಭ ಉಂಟಾಗಬಹುದಾದ್ದರಿಂದ ಒಂದು ದೇಶದ ತೆರಿಗೆಯ ಚೌಕಟ್ಟಿನಲ್ಲಿ ಇದು ಖಾಯಂ ಆಗಿ ಉಳಿಯಲು ಸಾಧ್ಯ. ಯುದ್ಧಕಾಲದ ಅಧಿಕಲಾಭತೆರಿಗೆಯನ್ನು (ವಾರ್ ಪ್ರಾಫಿಟ್ ಟ್ಯಾಕ್ಸ್) ಯುದ್ಧಕಾಲದ ತೆರಿಗೆ ಎಂದೂ ಸಾಮಾನ್ಯ ಪರಿಸ್ಥಿತಿಯಲ್ಲಿನ ತೆರಿಗೆಯನ್ನು ಅಧಿಕಲಾಭತೆರಿಗೆ ಎಂದೂ ಕರೆಯಬಹುದು. ಇದು ಈಚಿನ ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ಯುದ್ಧಕಾಲದ ಅಧಿಕಲಾಭತೆರಿಗೆ ಯುದ್ಧಕಾಲಕ್ಕೆ ಮಾತ್ರ ಅನ್ವಯವಾಗುವ ತೆರಿಗೆ. ಯುದ್ಧ ಮುಗಿದಮೇಲೆ ಅದನ್ನು ರದ್ದುಮಾಡುತ್ತಾರೆ. ಯುದ್ಧಕಾಲದಲ್ಲಿ ಬೆಲೆಗಳು ಹೆಚ್ಚಾಗಿರುವುದರಿಂದ ಲಾಭವೂ ಹೆಚ್ಚಾಗಿರುತ್ತದೆ. ಯುದ್ಧಸಾಮಗ್ರಿಗಳ ಉತ್ಪಾದನೆ, ಇತರ ಕೈಗಾರಿಕೆಗಳು, ಅಧಿಕಲಾಭವನ್ನು ಸಂಪಾದಿಸುತ್ತವೆ. ಹೀಗೆ ಅಧಿಕಲಾಭದ ಮೇಲೆ ಬರುವ ತೆರಿಗೆಯೆಲ್ಲ ಸರ್ಕಾರಕ್ಕೆ ಸೇರುತ್ತದೆ. ಯುದ್ಧಕಾಲದ ಅಧಿಕಲಾಭತೆರಿಗೆಯನ್ನು ವಿಧಿಸುವಾಗ ಯುದ್ಧಪೂರ್ವಲಾಭವನ್ನು ಸಾಮಾನ್ಯಲಾಭವೆಂದು ಪರಿಗಣಿಸುತ್ತಾರೆ. ಆದರೆ ಶಾಶ್ವತ ಅಧಿಕಲಾಭತೆರಿಗೆಯನ್ನು ವಿಧಿಸುವಾಗ ಯುದ್ಧಪೂರ್ವಲಾಭವನ್ನು ಸಾಮಾನ್ಯಲಾಭವೆಂದು ಪರಿಗಣಿಸುವುದಿಲ್ಲ. ಸಾಮಾನ್ಯ ಲಾಭವನ್ನು ಕಂಡುಹಿಡಿಯಲು ಬಂಡವಾಳದ ಮೇಲೆ ಬರುವ ಬಡ್ಡಿ, ಕೂಲಿದರ, ಜೀವನಮಟ್ಟ, ಉತ್ಪಾದನಾ ವೆಚ್ಚ, ಬಂಡವಾಳಲಭ್ಯತೆ, ರಾಷ್ಟ್ರೀಯ ಯೋಜನೆಯ ಗುರಿ ಮತ್ತು ಹಾಲಿ ಇರುವ ಲಾಭ– ಇವೆಲ್ಲವನ್ನೂ ಪರಿಗಣಿಸುತ್ತಾರೆ. ಅಧಿಕಲಾಭತೆರಿಗೆ ಯುದ್ಧಕಾಲದಲ್ಲಿ ಪ್ರಾರಂಭವಾದರೂ ಅದರ ಮೂಲ ಉದ್ದೇಶ ಯುದ್ಧಕಾಲದ ಲಾಭವನ್ನು ಮಾತ್ರ ತೆಗೆದುಕೊಳ್ಳುವುದಲ್ಲ. ಸಾಮಾನ್ಯಲಾಭವನ್ನು ನಿರ್ಣಯ ಮಾಡುವಾಗ ಅದು ಒಂದು ನಿರ್ದಿಷ್ಟ ಅಳತೆಗೋಲನ್ನು ಹೊಂದಿ, ಯುದ್ಧ ಕಾರಣದಿಂದಾಗಲಿ ಅಥವಾ ಬೇರಾವ ಕಾರಣದಿಂದಾಗಲಿ ಉಂಟಾಗುವ ಅಧಿಕಲಾಭವನ್ನು ತೆರಿಗೆಗೆ ಒಳಪಡಿಸುತ್ತದೆ. ಅಧಿಕಲಾಭತೆರಿಗೆಯ ಮುಖ್ಯ ಗುರಿ ಸಾಮಾಜಿಕ ಪುರೋಭಿವೃದ್ಧಿ, ಕೇವಲ ಸರ್ಕಾರದ ಆದಾಯವನ್ನು ಹೆಚ್ಚಿಸುವುದೇ ಅಲ್ಲ.

ಈ ತೆರಿಗೆ ಒಂದು ನಿರ್ದಿಷ್ಟ ಸಾಮಾನ್ಯಲಾಭದ ಮೇಲೆ ಬರುವ ಲಾಭಕ್ಕೆ ಮಾತ್ರ ಅನ್ವಯಿಸುತ್ತದಾದ್ದರಿಂದ ಸಾಮಾನ್ಯಲಾಭವನ್ನು ನಿರ್ಣಯಮಾಡುವುದು ಮೊದಲ ಸಮಸ್ಯೆ. ಅನಂತರ ಈ ತೆರಿಗೆ ಮತ್ತು ಆದಾಯತೆರಿಗೆಗೆ ಇರುವ ಸಂಬಂಧ, ಅಧಿಕಲಾಭತೆರಿಗೆಯ ಪರಿಣಾಮಗಳು ಅನುಕೂಲ ಮತ್ತು ಅನಾನುಕೂಲಗಳು– ಇವನ್ನು ಪರಿಶೀಲಿಸಿ ಕೊನೆಗೆ ತೆರಿಗೆಯ ರೀತಿ ಅನುಪಾತಕ್ರಮದಲ್ಲಿರಬೇಕೆ ಆರೋಹಣ ಕ್ರಮದಲ್ಲಿರಬೇಕೆ ಎಂಬುದನ್ನು ನಿರ್ಧರಿಸಬೇಕಾಗುತ್ತದೆ.

ಸಾಮಾನ್ಯಲಾಭ ನಿರ್ಣಯಿಸುವಾಗ ಎರಡು ಮಾನಗಳನ್ನು ಅನುಸರಿಸಬಹುದು. ಮೊದಲನೆಯದು ಆದಾಯಮಾನ (ಇನ್‌ಕಮ್ ಸ್ಟ್ಯಾಂಡರ್ಡ್), ಎರಡನೆಯದು ಬಂಡವಾಳ ಮಾನ (ಕ್ಯಾಪಿಟಲ್ ಸ್ಟ್ಯಾಂಡರ್ಡ್). ಆದಾಯಮಾನದಲ್ಲಿ ಯಾವುದಾದರೂ ಒಂದು ವರ್ಷ ಅಥವಾ ಕೆಲವು ನಿರ್ದಿಷ್ಟವರ್ಷಗಳಲ್ಲಿ ಬಂದಿರುವ ಲಾಭವನ್ನು ಸಾಮಾನ್ಯಲಾಭವೆಂದು ಪರಿಗಣಿಸಬಹುದು. ಇದರ ಗುಣಾವಗುಣಗಳು ಹೀಗಿವೆ: ತೆರಿಗೆಯನ್ನು ವಿಧಿಸುವವರು ಆ ವರ್ಷ ಅಥವಾ ವರ್ಷಗಳ ಲಾಭ ಜಾಸ್ತಿಯೆ ಅಥವಾ ಕಡಿಮೆಯೆ ಎಂಬ ವಿಷಯವನ್ನು ನಿರ್ಧರಿಸಲಿಕ್ಕೆ ಹೋಗುವುದಿಲ್ಲ. ಈ ಮಾನದ ಅನುಸರಣೆಯಿಂದ ಈ ತೆರಿಗೆ ಕೊಡುವ ಎಷ್ಟು ಉದ್ಯಮಗಳು ಇವೆಯೋ ಅಷ್ಟು ಸಾಮಾನ್ಯಲಾಭದರಗಳು ಇರಬಹುದು. ಆದಾಯ ಮಾನವನ್ನು ಎಲ್ಲ ಉದ್ಯಮಗಳಿಗೂ ಅನ್ವಯಿಸಲು ಸಾಧ್ಯವಿಲ್ಲ. ಅಧಿಕಲಾಭತೆರಿಗೆಯ ಪೂರ್ವದಲ್ಲಿ ಇದ್ದ ಉದ್ಯಮಗಳಿಗೆ ಮಾತ್ರ ಇದನ್ನು ಅನ್ವಯಿಸಬಹುದು. ಅಲ್ಲದೆ ಸರಿಯಾದ ಪ್ರಾರಂಭಿಕವರ್ಷ ಅಥವಾ ವರ್ಷಗಳನ್ನು ಪಡೆಯುವುದು ಬಹಳ ಕಷ್ಟ. ಈ ಮಾನ ಹೂಡಿರುವ ಬಂಡವಾಳ ಮತ್ತು ಆ ಹೂಡಿಕೆಯಲ್ಲಿರುವ ಬದಲಾವಣೆ ಇವುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬದಲಾಗುತ್ತಿರುವ ಉದ್ಯಮಸ್ಥಿತಿಗೆ ಹಿಂದಿನ ಯಾವುದಾದರೂ ಒಂದು ವರ್ಷದ ಅಥವಾ ವರ್ಷಗಳ ಲಾಭವನ್ನೇ ಸಾಮಾನ್ಯಲಾಭವೆಂದು ಪರಿಗಣಿಸುವುದು ಸರಿಯೂ ಆಗುವುದಿಲ್ಲ.

ಬಂಡವಾಳಮಾನದಲ್ಲಿ ಶಾಸನದ ಮೂಲಕ ಬಂಡವಾಳದ ಮೇಲೆ ಒಂದು ನಿರ್ದಿಷ್ಟ ಲಾಭವನ್ನು ಸಾಮಾನ್ಯಲಾಭವೆಂದು ನಿರ್ಣಯಿಸಬಹುದು. ಇದರ ಪ್ರಕಾರ ಒಂದು ಉದ್ಯಮದ ಒಟ್ಟು ಲಾಭ ಮುಖ್ಯವಲ್ಲ. ಬಂಡವಾಳ ಹೂಡಿಕೆಯ ಮೇಲೆ ಬರುವ ಲಾಭದ ದರಮುಖ್ಯ. ಬಂಡವಾಳಹೂಡಿಕೆಯಲ್ಲಿ ಬದಲಾವಣೆ, ಉದ್ಯಮಗಳು ಎದುರಿಸಬೇಕಾದ ಅನಿರೀಕ್ಷಿತ ಪರಿಸ್ಥಿತಿ ಇವುಗಳನ್ನು ಅವಲಂಬಿಸಿ ತೆರಿಗೆ ನಿರ್ಧರಿಸಲ್ಪಡಬೇಕು. ಬಂಡವಾಳಮಾನದಲ್ಲಿ ಸಾಮಾನ್ಯಲಾಭನಿರ್ಣಯ ಉದ್ಯಮಗುಂಪುಗಳ ಆಧಾರದ ಮೇಲೆ ನಡೆಯುತ್ತದೆ. ಪ್ರತಿ ಉದ್ಯಮದ ಪ್ರಕಾರ ನಿರ್ಣಯವಾಗುವುದಿಲ್ಲ. ಬಂಡವಾಳಮಾನದಲ್ಲೂ ಕೆಲವು ತೊಂದರೆಗಳಿವೆ. ಶಾಸನದಿಂದ ನಿರ್ಧಾರವಾದ ಯಾವ ಸಾಮಾನ್ಯಲಾಭ ಪ್ರಮಾಣವೇ ಆಗಲಿ ಸ್ವಲ್ಪಮಟ್ಟಿಗೆ ನಿರಂಕುಶವಾಗಿರಬಹುದು (ಆರ್‌ಬಿಟ್ರರಿ) ಮತ್ತು ಹೂಡಿರುವ ಬಂಡವಾಳವನ್ನು ಪ್ರತಿವರ್ಷವೂ ಅಳೆಯುವುದು ಕಷ್ಟ ಮತ್ತು ಬಹಳ ದುಬಾರಿ, ಉದ್ಯಮಿಗೆ ತೊಂದರೆಯೂ ಉಂಟು. ಕೆಲವು ತೊಂದರೆಗಳು ಇದ್ದರೂ ಅಧಿಕಲಾಭತೆರಿಗೆಯ ನೈತಿಕಧ್ಯೇಯವನ್ನು ಅನುಸರಿಸಲು, ಈ ತೆರಿಗೆಯನ್ನು ರಾಷ್ಟ್ರೀಯಯೋಜನೆಯ ಒಂದು

ಸಾಧನವಾಗಿ ಮಾಡಲು ವಿವಿಧ ಬಗೆಯ ಉದ್ಯಮಿಗಳ ಗಳಿಕೆಯಲ್ಲಿ ತೆರಿಗೆ ಎತ್ತುವಾಗ ನ್ಯಾಯವನ್ನು ಪರಿಪಾಲಿಸಲು ಬಂಡವಾಳಮಾನ ಆದಾಯಮಾನಕ್ಕಿಂತ ಉತ್ತಮ. ಈ ತೆರಿಗೆಯನ್ನು ವಿಧಿಸಿರುವ ವಿವಿಧದೇಶಗಳ ಅನುಭವವನ್ನು ನೋಡಿದರೆ ಎರಡು ಮಾನಗಳಲ್ಲಿ ಬಂಡವಾಳಮಾನ ಉತ್ತಮವೆಂಬುದಕ್ಕೆ ಹೇರಳ ನಿದರ್ಶನಗಳು ದೊರೆಯುತ್ತವೆ.

ಈ ತೆರಿಗೆಯನ್ನು ಆರೋಹಣಕ್ರಮದಲ್ಲಿ ವಿಧಿಸಲು ಅನೇಕ ಅರ್ಥಶಾಸ್ತ್ರಜ್ಞರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಮೊದಲನೆಯದಾಗಿ ನೀತಿಯ ದೃಷ್ಟಿಯಿಂದ ಆರೋಹಣ ಕ್ರಮತೆರಿಗೆ ಕೊಡುವವರ ಶಕ್ತಿಯನ್ನು ಪರಿಗಣಿಸುವುದಿಲ್ಲ. ಅಧಿಕಲಾಭ ಶ್ರೀಮಂತರಿಗೇ ಹೋಗುವ ಭರವಸೆ ಇಲ್ಲ. ಅಧಿಕಲಾಭತೆರಿಗೆ ಒಟ್ಟುವರಮಾನವನ್ನು ಗಣನೆಗೆ ತೆಗೆದು ಕೊಳ್ಳುವುದಿಲ್ಲ. ಎರಡನೆಯದಾಗಿ ಆರೋಹಣಕ್ರಮದಿಂದ ಅಧಿಕಲಾಭ ಕೊಡುವ ಉದ್ಯಮಗಳ ಸಂಖ್ಯೆ ಕಡಿಮೆಯಾಗುತ್ತದೆ. ಮೂರನೆಯದಾಗಿ ಆಡಳಿತದೃಷ್ಟಿಯಿಂದ ಆರೋಹಣಕ್ರಮ ಅನುಕೂಲವಾದದ್ದಲ್ಲ.

ತೆರಿಗೆ ಕೊಡುವವರ ಶಕ್ತಿಯ ಮೇಲೆ ತೆರಿಗೆ ನಿರ್ಧರಿಸುವುದಲ್ಲ. ಎಲ್ಲ ಅಧಿಕಲಾಭವೂ ಅಸಮರ್ಥನೀಯ; ತಾತ್ತ್ವಿಕವಾಗಿ ನೋಡಿದರೆ ಶೇಕಡ ನೂರರಷ್ಟು ಅಧಿಕಲಾಭತೆರಿಗೆ ಸಮರ್ಥನೀಯ; ಅಧಿಕಲಾಭತೆರಿಗೆಯೇ ನೈತಿಕ ತೆರಿಗೆ. ಆದ್ದರಿಂದ ಅದಕ್ಕೆ ಆರೋಹಣ ಕ್ರಮದಲ್ಲಿನ ನೈತಿಕ ಆಧಾರ ಅಪ್ರಕೃತ ಎಂದು ಕೆಲವರ ವಿರೋಧಾಭಿಪ್ರಾಯವೂ ಉಂಟು. ಆರೋಹಣಕ್ರಮವನ್ನು ಅನುಸರಿಸಬೇಕೆ ಬೇಡವೆ ಎಂಬುದು ಆಡಳಿತಾನುಕೂಲ ಮತ್ತು ಈ ತೆರಿಗೆಯಿಂದ ನಿರೀಕ್ಷಿಸುವ ಆದಾಯ– ಇವನ್ನು ಅವಲಂಬಿಸಿದೆ. ಅನುಪಾತಕ್ರಮದಿಂದ ಅಧಿಕಲಾಭತೆರಿಗೆಯ ಆದಾಯ ಕಡಿಮೆಯಾಗುತ್ತದೆ. ಆದುದರಿಂದ ಆರೋಹಣಕ್ರಮವನ್ನು ಅನುಸರಿಸಿ ಆಡಳಿತದೃಷ್ಟಿಯಿಂದ ಅದು ಪರಿಣಾಮಕಾರಿಯಾದರೆ ಆರೋಹಣಕ್ರಮ ಉತ್ತಮ. ಒಂದನೆಯ ಮಹಾಯುದ್ಧಕಾಲದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನ, ಆಸ್ಟ್ರೇಲಿಯ, ರಷ್ಯ, ಡೆನ್‍ಮಾರ್ಕ್, ಇಟಲಿ ಮತ್ತು ಸ್ವೀಡನ್ ದೇಶಗಳು ಆರೋಹಣಅಧಿಕಲಾಭತೆರಿಗೆಯನ್ನು ವಿಧಿಸಿದುವು. ಭಾರತ, ಬ್ರಿಟನ್ ಮುಂತಾದ ದೇಶಗಳು ಅನುಪಾತ ಅಧಿಕಲಾಭತೆರಿಗೆಯನ್ನು ವಿಧಿಸಿದುವು. ಎರಡನೆಯ ಮಹಾಯುದ್ಧಕಾಲದಲ್ಲೂ ಭಾರತ ಮತ್ತು ಬ್ರಿಟನ್ ದೇಶಗಳು ಅನುಪಾತಕ್ರಮವನ್ನು ಅನುಸರಿಸಿದರೆ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಕೆನಡ ದೇಶಗಳು ಆರೋಹಣಕ್ರಮ ಅನುಸರಿಸಿದುವು. ಈ ತೆರಿಗೆ ಯುದ್ಧಕಾಲದ ಅಧಿಕಲಾಭವನ್ನು ಮಾತ್ರ ತೆಗೆದುಕೊಳ್ಳುವ ಉದ್ದೇಶ ಹೊಂದಿದ್ದರೆ ಅನುಪಾತಕ್ರಮ ಸಮಂಜಸವಾಗಬಹುದು. ಆದರೆ ಅದು ಶಾಶ್ವತ ತೆರಿಗೆಯೆಂದು ಪರಿಗಣಿಸಲ್ಪಟ್ಟರೆ ಆರೋಹಣಕ್ರಮ ಉತ್ತಮವಾಗುತ್ತದೆ. ಆರೋಹಣ ಅಥವಾ ಅನುಪಾತಕ್ರಮಗಳನ್ನು ಅನುಸರಿಸುವಾಗ ಅಧಿಕಲಾಭತೆರಿಗೆ ವಿಧಿಸುವ ಉದ್ದೇಶಗಳು, ಆರೋಹಣಕ್ರಮದ ಸಾಧ್ಯತೆ, ಅಧಿಕಲಾಭತೆರಿಗೆಯಿಂದ ನಿರೀಕ್ಷಿಸುವ ವರಮಾನ ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಯಾವ ಮಾರ್ಗ ಯೋಗ್ಯವೋ ಅದನ್ನು ಅನುಸರಿಸಬಹುದು.

ಈ ತೆರಿಗೆ ಮತ್ತು ವರಮಾನತೆರಿಗೆಗಳಿಗೆ ಕೆಲವು ಸಾಮ್ಯಗಳಿವೆ. ಒಂದು ಉದ್ಯಮದ ಆದಾಯವನ್ನು ತೆರಿಗೆಗೆ ಒಳಪಡಿಸಿದರೆ ಅದು ಅಧಿಕಲಾಭತೆರಿಗೆಯಾಗುತ್ತದೆ. ಆದರೆ ಒಬ್ಬ ವ್ಯಕ್ತಿಯ ಆದಾಯವನ್ನು ತೆರಿಗೆಗೆ ಒಳಪಡಿಸಿದರೆ ಅದು ವರಮಾನತೆರಿಗೆಯಾಗುತ್ತದೆ. ಲಾಭ ಸಹ ಒಂದು ವಿಧವಾದ ಆದಾಯ. ಯುದ್ಧಕಾಲದ ಅಧಿಕಲಾಭತೆರಿಗೆಯಲ್ಲಿ ವರಮಾನವೇ ಮುಖ್ಯ ಗುರಿಯಾಗಿದ್ದು, ತೆರಿಗೆ ಕೊಡುವ ಶಕ್ತಿಯ ಆಧಾರದ ಮೇಲೆ ಅದನ್ನು ನಿರೂಪಿಸಲಾಗಿತ್ತು. ಆದಾಯ ತೆರಿಗೆ ಕೂಡ ಈ ನಿಯಮಗಳಿಗೆ ಅನುಸಾರವಾಗಿರು ವುದರಿಂದ ಈ ಎರಡು ತೆರಿಗೆಗಳಿಗೆ ಯಾವ ವ್ಯತ್ಯಾಸವೂ ಇಲ್ಲ ಎಂಬ ಭಾವನೆ ಇದೆ. ಆದಾಯತೆರಿಗೆ ಮತ್ತು ಅಧಿಕಲಾಭತೆರಿಗೆಗೆ ಮುಖ್ಯವಾದ ಕೆಲವು ವ್ಯತ್ಯಾಸಗಳಿವೆ. ಆದಾಯತೆರಿಗೆಯ ಮುಖ್ಯ ಗುರಿ ವರಮಾನ. ಅಧಿಕಲಾಭತೆರಿಗೆಯಲ್ಲಿ ಮುಖ್ಯಗುರಿ ಸಾಮಾಜಿಕ ನೀತಿ, ನ್ಯಾಯ. ಉದ್ಯಮಸಂಸ್ಥೆ ನಿಗದಿಯಾದ ಲಾಭಕ್ಕಿಂತ ಹೆಚ್ಚು ಲಾಭ ಪಡೆಯಲು ಯಾವ ಹಕ್ಕೂ ಇಲ್ಲ. ನಿರ್ದಿಷ್ಟ ಲಾಭಕ್ಕಿಂತ ಹೆಚ್ಚು ಲಾಭ ಪಡೆಯುವುದು ಸಮಾಜದ್ರೋಹ. ಆದ್ದರಿಂದ ಗಳಿಸಿದ ಹೆಚ್ಚು ಲಾಭವನ್ನು ತೆರಿಗೆಯ ಮೂಲಕ ಸರ್ಕಾರ ಪಡೆಯಬಹುದು. ಆದಾಯತೆರಿಗೆ ಎಲ್ಲ ಲಾಭವನ್ನೂ ಗಣನೆಗೆ ತೆಗೆದುಕೊಂಡು ವಿಧಿಸಲ್ಪಟ್ಟರೆ ಅಧಿಕಲಾಭತೆರಿಗೆ, ಅಧಿಕಲಾಭ ಮತ್ತು ಸಂಪಾದನೆ ಮಾಡದ ಅಧಿಕಲಾಭಕ್ಕೆ ಮಾತ್ರ ಅನ್ವಯಿಸುತ್ತದೆ. ಆದಾಯತೆರಿಗೆಯ ದೃಷ್ಟಿಯಿಂದ ಒಟ್ಟು ಲಾಭ ಮುಖ್ಯವಾದರೆ, ತೆರಿಗೆಯಲ್ಲಿ ಬಂಡವಾಳದ ಮೇಲೆ ಬರುವ ಲಾಭದ ದರ ಮುಖ್ಯ. ವರಮಾನತೆರಿಗೆಯಲ್ಲಿ ತೆರಿಗೆ ಕೊಡುವ ಶಕ್ತಿ ಮುಖ್ಯ; ಅಧಿಕಲಾಭ ತೆರಿಗೆಯಲ್ಲಿ ಲಾಭಾಧಿಕ್ಯ ಮುಖ್ಯ.

ಅಧಿಕಲಾಭ ಉದ್ಯಮಿಯ ಸಾಹಸ ಪ್ರತಿಭೆಗಳಿಂದ ಉಂಟಾಗುವುದಿಲ್ಲ. ಅದು ಅಸಾಧಾರಣ ಪರಿಸ್ಥಿತಿಯ ಫಲ. ಅಧಿಕಲಾಭ ಒಂದು ರೀತಿಯಲ್ಲಿ ಸಂಪಾದನೆ ಮಾಡದ ಹೆಚ್ಚು ಗಳಿಕೆ. ಈ ಅನಿರೀಕ್ಷಿತ ಲಾಭವನ್ನು ಸಮಾಜದ ಹಿತದೃಷ್ಟಿಯಿಂದ ಸರ್ಕಾರ ತೆಗೆದುಕೊಳ್ಳುವುದರಲ್ಲಿ ಯಾವ ಅನ್ಯಾಯವೂ ಇಲ್ಲ. ಅಲ್ಲದೆ ಸಾಮಾನ್ಯ ಪರಿಸ್ಥಿತಿ ಇರುವ ಕಾಲದಲ್ಲೂ ಒಂದು ನಿರ್ದಿಷ್ಟಪ್ರಮಾಣಕ್ಕಿಂತ ಹೆಚ್ಚು ಲಾಭಪಡೆಯುವುದು ಸಮಾಜವಿರೋಧ ಕಾರ್ಯ. ಆದುದರಿಂದ ಅದಕ್ಕೆ ತೆರಿಗೆ ವಿಧಿಸಬೇಕು. ಅಧಿಕಲಾಭತೆರಿಗೆ ಉದ್ಯಮಿಗಳು ಸಂಪಾದಿಸದ ಅಧಿಕವರಮಾನ ತೆರಿಗೆಯೆಂದು ಪರಿಗಣಿಸಲ್ಪಡಬಹುದು. ಈ ದೃಷ್ಟಿಯಿಂದ ಅದು ಮರಣೋತ್ತರ ಆಸ್ತಿ ತೆರಿಗೆಗಳನ್ನು ಹೋಲುತ್ತದೆ.

ಈ ತೆರಿಗೆಯನ್ನು ವಿರೋಧಿಸುವವರು ಮುಖ್ಯವಾಗಿ ಇದರಲ್ಲಿನ ಅಹಿತ ಪರಿಣಾಮವನ್ನು ಪ್ರಸ್ತಾಪಿಸುತ್ತಾರೆ. 1. ಈ ತೆರಿಗೆಯಲ್ಲಿ ಏಕರೂಪತೆ ಇಲ್ಲ, ಇದು ನಿರಂಕುಶ ರೀತಿಯದು, ತೆರಿಗೆ ಕೊಡುವವರಿಗೆ ಅನಾನುಕೂಲ ಮತ್ತು ವಸೂಲು ಮಾಡುವ ವೆಚ್ಚ ಹೆಚ್ಚು. ಆದುದರಿಂದ ಇದು ತೆರಿಗೆಯ ಮುಖ್ಯ ಸೂತ್ರಗಳಿಗೆಲ್ಲ ವಿರುದ್ಧವಾಗಿದೆ. 2. ಈ ತೆರಿಗೆ ಉದ್ಯಮಿಗಳ ಸಾಹಸ, ಕಾರ್ಯತತ್ಪರತೆಯನ್ನು ತಡೆಯುತ್ತದೆ. 3. ಬಂಡವಾಳ ಶೇಖರಣೆಗೆ ಅಡಚಣೆಯನ್ನುಂಟುಮಾಡುತ್ತದೆ. 4. ಇದು ತೆರಿಗೆ ಕೊಡುವ ಶಕ್ತಿಗೆ ಅನುಸಾರವಾಗಿಲ್ಲ; ಗ್ರಾಹಕರಿಗೆ ಹೆಚ್ಚು ಬೆಲೆಯನ್ನು ಒದಗಿಸುತ್ತದೆ. 5. ಈ ತೆರಿಗೆಯಿಂದ ವ್ಯರ್ಥವೆಚ್ಚ ಜಾಸ್ತಿ. ಹೊಸ ಉದ್ಯಮಗಳು ಪ್ರೋತ್ಸಾಹ ಪಡೆಯುವುದಿಲ್ಲ. ಬುದ್ಧಿವಂತಿಕೆ, ಉದ್ಯಮಸಾಹಸ – ಇವುಗಳಿಗೆ ಅಡಚಣೆ ಒದಗಿ ತೆರಿಗೆಯನ್ನು ತಪ್ಪಿಸಿಕೊಳ್ಳಲು ಉತ್ಪಾದನಾ ವೆಚ್ಚವನ್ನು ಹೆಚ್ಚು ಮಾಡಲು ಪ್ರೋತ್ಸಾಹಿಸುತ್ತದೆ.

ಈ ತೆರಿಗೆಯ ಅಹಿತಪರಿಣಾಮಗಳು ಅನಿವಾರ್ಯವೇನೂ ಅಲ್ಲ. ಸಾಮಾನ್ಯ ಲಾಭವನ್ನು ನಿರ್ಧರಿಸುವಾಗ ಶಾಸ್ತ್ರೀಯವಾಗಿ ಬಂಡವಾಳಹೂಡಿಕೆಯ ಪ್ರಮಾಣ, ಸಾಲರೂಪದಲ್ಲಿ ಇರುವ ಬಂಡವಾಳ, ಬಂಡವಾಳದಮೇಲೆ ಬರುವ ಬಡ್ಡಿದರ, ಕೂಲಿದರ ಮತ್ತು ಸಾಮಾನ್ಯ ಲಾಭದರ– ಇವೆಲ್ಲವನ್ನೂ ಪರಿಗಣಿಸಿ ನಿರ್ಧಾರ ಮಾಡಿದರೆ ಉದ್ಯಮಗಳಿಗೆ ಅನ್ಯಾಯವಾಗುವುದಿಲ್ಲ. ತೆರಿಗೆಯನ್ನು ಶೇಕಡ 100ರಷ್ಟು ವಿಧಿಸಿದರೆ ಅಹಿತಪರಿಣಾಮಗಳಾಗ ಬಹುದು. ಆದರೆ ತೆರಿಗೆಯ ದರವನ್ನು ನಿಗದಿಮಾಡುವಾಗ ವಿವಿಧ ಉದ್ಯಮಿಗಳ ಪರಿಸ್ಥಿತಿಯ ಮೇಲೆ ವ್ಯತ್ಯಾಸವನ್ನು ಮಾಡಿದರೆ ಯಾವ ಉದ್ಯಮಕ್ಕಾಗಲಿ ಅನ್ಯಾಯವಾಗುವುದಿಲ್ಲ. ದರ ನಿಗದಿ ಮಾಡುವಾಗ ಪ್ರಾಮುಖ್ಯ ಉಳ್ಳ ಉದ್ಯಮಕ್ಕೆ ಪ್ರೋತ್ಸಾಹ ಕೊಡಬಹುದು. ಕೆಲವು ಹಿಂದುಳಿದ ಪ್ರದೇಶಗಳಲ್ಲಿ ಉದ್ಯಮಗಳನ್ನು ಪ್ರೋತ್ಸಾಹಿಸಲು ಕಡಿಮೆದರವನ್ನು ನಿಗದಿಮಾಡಬಹುದು. ಉದ್ಯಮದ ಪ್ರಾಮುಖ್ಯ, ಉದ್ಯಮಿಗಳ ಕಾರ್ಯತತ್ಪರತೆ, ಸರಾಸರಿ ಲಾಭ, ಬಡ್ಡಿದರ – ಇವೆಲ್ಲವನ್ನೂ ಪರಿಗಣಿಸಿ ತೆರಿಗೆಯ ದರವನ್ನು ನಿಗದಿಮಾಡಬಹುದು. ಅಧಿಕಲಾಭತೆರಿಗೆ ತೆರಿಗೆಕೊಡುವ ಶಕ್ತಿಗೆ ವಿರೋಧವಾಗಿದೆ ಎಂಬವಾದ ತೆರಿಗೆಕೊಡುವವರುದ ರಿಂದ ಒಬ್ಬ ವ್ಯಕ್ತಿಯ ಮೇಲೆ ಆಗುವ ಪರಿಣಾಮವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತದೆ. ಆದರೆ ತೆರಿಗೆಭಾರವನ್ನು ವಿಧಿಸುವಾಗ ವ್ಯಕ್ತಿಯಮೇಲೆ ಆಗುವ ಪರಿಣಾಮ ಮತ್ತು ಸಮಾಜದ ಮೇಲೆ ಆಗುವ ಪರಿಣಾಮ ಇವೆರಡನ್ನೂ ಗಣನೆಗೆ ತೆಗೆದುಕೊಳ್ಳುತ್ತದೆ. ಸಮಾಜದ ಅತ್ಯಧಿಕ ಕ್ಷೇಮಾಭಿವೃದ್ಧಿ ದೃಷ್ಟಿಯಿಂದ ಕೆಲವು ವ್ಯಕ್ತಿಗಳು ಅಧಿಕಲಾಭದ ಮೇಲೆ ತೆರಿಗೆ ಕೊಡಬೇಕಾದರೆ ಅದು ಅನ್ಯಾಯವೆನಿಸುವುದಿಲ್ಲ. ಅಧಿಕಲಾಭತೆರಿಗೆ ವಿಧಿಸುವಾಗ ಸರಿಯಾಗಿ ಸಾಮಾನ್ಯ ಲಾಭವನ್ನು ನಿರ್ಧರಿಸಿ ಬೇರೆ ಬೇರೆ ದರವನ್ನು ನಿಗದಿ ಮಾಡಿದರೆ, ಉದ್ಯಮಸಾಹಸ, ಬಂಡವಾಳಹೂಡಿಕೆ, ಉದ್ಯಮಿಗಳ ಕಾರ್ಯತತ್ಪರತೆ ಮತ್ತು ಮುಖ್ಯವಾದ ಉದ್ಯಮಗಳಿಗೆ ಉತ್ತೇಜನ ಕೊಡಬಹುದು. ಸಾಮಾನ್ಯಲಾಭನಿರ್ಣಯ ಮತ್ತು ಅಧಿಕಲಾಭ ತೆರಿಗೆಯ ದರ ಇವುಗಳನ್ನು ನಿರ್ಣಯಿಸುವಾಗ ಪ್ರತಿದೇಶದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಬದಲಾವಣೆ ಮಾಡಬಹುದು.

ಒಂದನೆಯ ಮಹಾಯುದ್ಧದ ವೇಳೆಯಲ್ಲಿ ಭಾರತದಲ್ಲಿ ಶೇ.50 ಅಧಿಕಲಾಭ ತೆರಿಗೆಯನ್ನು ವಿಧಿಸಲಾಯಿತು. ಬಂಡವಾಳಹೂಡಿಕೆಯ ಮೇಲೆ ಶೇ.10 ಅಥವಾ ವರಮಾನ ತೆರಿಗೆಗೆ ಒಳಪಟ್ಟ ಯುದ್ಧಪೂರ್ವದ ವರ್ಷ ಅಥವಾ ವರ್ಷಗಳ ಸರಾಸರಿ ಲಾಭವನ್ನು ಸಾಮಾನ್ಯಲಾಭವೆಂದು ಪರಿಗಣಿಸಲಾಯಿತು. ವರ್ಷಕ್ಕೆ 30,000 ರೂ.ಗಳಿಗೆ ಕಡಿಮೆ ವರಮಾನ ಇರುವ ಉದ್ಯಮಿಗಳು ಈ ತೆರಿಗೆಯಿಂದ ವಿನಾಯಿತಿ ಹೊಂದಿದುವು. ಹಾಗೆಯೇ ಸಂಬಳ, ವ್ಯವಸಾಯ, ವೃತ್ತಿಯ ಆದಾಯಗಳಿಗೂ ವಿನಾಯಿತಿ ಕೊಡಲ್ಪಟ್ಟಿತ್ತು. ಈ ತೆರಿಗೆಯನ್ನು 1920ರಲ್ಲಿ ಕೈಬಿಡಲಾಯಿತು.

ಎರಡನೆಯ ಮಹಾಯುದ್ಧ ಪ್ರಾರಂಭವಾದ ಕೆಲವು ಕಾಲದಲ್ಲಿ (1940) ಅಧಿಕಲಾಭ ತೆರಿಗೆಯನ್ನು ಪುನಃ ವಿಧಿಸಲಾಯಿತು. ವರ್ಷಕ್ಕೆ 30,000 ರೂ.ಗಿಂತ ಹೆಚ್ಚು ಇರುವ ಎಲ್ಲ ವರಮಾನಕ್ಕೂ ಶೇ.30 ಅಧಿಕಲಾಭತೆರಿಗೆಯನ್ನು ವಿಧಿಸಲಾಯಿತು. ನಿಗದಿಯಾದ ವರ್ಷಗಳ ಲಾಭದ ಮೇಲೆ ಬರುವ ಲಾಭವನ್ನು ಅಧಿಕಲಾಭವೆಂದು ಪರಿಗಣಿಸಲಾಯಿತು. 1935–36, 1936–37ರ ಲಾಭ ಮತ್ತು 1935–36 ಮತ್ತು 1937–38 ಇವುಗಳ ಸರಾಸರಿ ಲಾಭ, 1936–37 ಮತ್ತು 1937–38 ಅಥವಾ 1938–39 ಇವುಗಳ ಸರಾಸರಿ ಲಾಭ– ಇವುಗಳಲ್ಲಿ ಯಾವುದನ್ನಾದರೂ ತೆರಿಗೆ ಕೊಡುವವರು ಸಾಮಾನ್ಯಲಾಭವೆಂದು ಪರಿಗಣಿಸುವ ಹಕ್ಕನ್ನು ಹೊಂದಿದ್ದರು. 1942ರಲ್ಲಿ ಈ ತೆರಿಗೆ ದರವನ್ನು ಶೇ.66 $^{2}/_{3}$ಕ್ಕೆ ಏರಿಸಲಾಯಿತು. ಇದರ ಜೊತೆಗೆ ಅಧಿಕಲಾಭ ತೆರಿಗೆ ಕೊಡುವವರು ಅಧಿಕಲಾಭದ ಶೇ.13 $^{1}/_{2}$ ಕಡ್ಡಾಯ ಠೇವಣಿಯಾಗಿ ಸರ್ಕಾರದಲ್ಲಿ ಇಡಬೇಕಿತ್ತು. ಈ ಠೇವಣಿ ಯುದ್ಧ ಮುಗಿದ ಒಂದು ವರ್ಷದ ಅನಂತರ ಮರುಪಾವತಿ ಆಯಿತು. ಈ ಅಧಿಕಲಾಭತೆರಿಗೆ 1946 ಮಾರ್ಚ್ 31ರಂದು ರದ್ದಾಯಿತು. ಭಾರತದಲ್ಲಿ ಹಿಂದೆ ವಿಧಿಸಲಾದ ಅಧಿಕಲಾಭತೆರಿಗೆ

ಯುದ್ಧಕಾಲದ ಅಧಿಕಲಾಭತೆರಿಗೆಯಾಗಿತ್ತು. ಈ ತೆರಿಗೆ ಯುದ್ಧಕಾಲದ ಅತೀವ ಲಾಭದ ಮೇಲೆ ವಿಧಿಸಲ್ಪಟ್ಟದ್ದರಿಂದ ಉದ್ಯಮಗಳ ಮೇಲೆ ಯಾವ ದುಷ್ಪರಿಣಾಮವೂ ಆಗಲಿಲ್ಲ. ತೆರಿಗೆಯ ದರ ಕೂಡ ಶೇ.30 ರಿಂದ ಶೇ.66 $^2/_3$ ರವರೆಗೆ ಇದ್ದುದರಿಂದ, ಯುದ್ಧಕಾಲದಲ್ಲಿ ಈ ದರ ಅತಿಯೆನಿಸಲಿಲ್ಲ. ತೆರಿಗೆ ಆರೋಹಣಕ್ರಮವನ್ನು ಅನುಸರಿಸಲಿಲ್ಲ. ಇದರ ವರಮಾನ ಈ ರೀತಿ ಇತ್ತು:

| ವರ್ಷ | ವರಮಾನ (ಕೋಟಿ ರೂಪಾಯಿಗಳಲ್ಲಿ) |
|---|---|
| 1940–41 | 1–55 |
| 1942–44 | 53–51 |
| 1945–46 | 79–51 |
| 1946–47 | 72–00 |

ಯುದ್ಧಾನಂತರವೂ ಅಧಿಕಲಾಭತೆರಿಗೆ ಬೇರೆ ಹೆಸರಿನಲ್ಲಿ ಭಾರತದಲ್ಲಿ ಇದೆ ಎನ್ನಬಹುದು. 1947–48ರಲ್ಲಿ ಉದ್ಯಮಲಾಭ ತೆರಿಗೆಯನ್ನು (ಬಿಸಿನೆಸ್ ಪ್ರಾಫಿಟ್ ಟ್ಯಾಕ್ಸ್) ಹಾಕಲಾಯಿತು. ಈ ತೆರಿಗೆಯನ್ನು ವಿಧಿಸುವುದಕ್ಕೆ ಮುಖ್ಯ ಕಾರಣಗಳು: ಅಧಿಕಲಾಭತೆರಿಗೆ ಯನ್ನು ಅವಸರದಲ್ಲಿ ಕೈಬಿಟ್ಟದ್ದು ಮತ್ತು ಯುದ್ಧಕಾಲದ ಲಾಭ ಜನರಲ್ಲಿ ಇನ್ನೂ ಇದ್ದದ್ದು. ಒಂದು ಲಕ್ಷದ ಮೇಲೆ ಬರುವ ಲಾಭಕ್ಕೆ ಶೇ.25 ಉದ್ಯಮ ತೆರಿಗೆಯನ್ನು ಮೊದಲು ಸೂಚಿಸಲಾಗಿತ್ತು. ಅನಂತರ ಅದನ್ನು ಶೇ.16 $^2/_3$ ಇಳಿಸಲಾಯಿತು. ಈ ತೆರಿಗೆಯನ್ನು 1950–51ರಲ್ಲಿ ಕೈಬಿಡಲಾಯಿತು. 1963–64ರಲ್ಲಿ ವರಿಷ್ಠಲಾಭತೆರಿಗೆ (ಸೂಪರ್ ಪ್ರಾಫಿಟ್ ಟ್ಯಾಕ್ಸ್) ರೂಪದಲ್ಲಿ ಪುನಃ ಪ್ರಾರಂಭವಾಯಿತು. ಇದರ ಪ್ರಕಾರ ಒಂದು ಉದ್ಯಮ ತನ್ನ ಬಂಡವಾಳಹೂಡಿಕೆಯ ಮೇಲೆ 6%ಕ್ಕಿಂತ ಹೆಚ್ಚು ಲಾಭ ಪಡೆದರೆ ವರಿಷ್ಠಲಾಭತೆರಿಗೆಯನ್ನು ಕೊಡಬೇಕು. ಲಾಭದ ದರ 6%ಕ್ಕಿಂತ ಜಾಸ್ತಿಯಾಗಿ ಶೇ.10ಕ್ಕಿಂತ ಜಾಸ್ತಿಯಾಗದಿದ್ದರೆ ತೆರಿಗೆಯ ದರ 50%ರಷ್ಟು ಇರುತ್ತದೆ. ಲಾಭದ ದರ ಶೇ.10ಕ್ಕಿಂತ ಜಾಸ್ತಿಯಾದರೆ ತೆರಿಗೆಯ ದರ 60%ರಷ್ಟು ಇರುತ್ತದೆ. ಉದ್ಯಮಸಂಸ್ಥೆಗಳು ರಾಷ್ಟ್ರೀಯಜವಾಬ್ದಾರಿಯಲ್ಲಿ ಪಾಲುಗೊಳ್ಳಬೇಕು. ಅಧಿಕಲಾಭವನ್ನು ನಿಯಂತ್ರಿಸಬೇಕು ಮತ್ತು ಬೆಲೆಗಳನ್ನು ಇಳಿಸಬೇಕು ಎಂಬುದೇ ಈ ತೆರಿಗೆ ವಿಧಿಸಲು ಇದ್ದ ಕಾರಣ. ಇದು ಉದ್ಯಮಿಗಳ ಕಟುಟೀಕೆಗೆ ಗುರಿಯಾಯಿತು. ಏಕೆಂದರೆ ತೆರಿಗೆ ವಿಧಿಸುವಾಗ ಮುಖ್ಯವಾಗಿ ಸಂಸ್ಥೆಯ ಬಂಡವಾಳವನ್ನು ಸರಿಯಾದ ರೀತಿಯಲ್ಲಿ ನಿರ್ಧರಿಸಲಿಲ್ಲ; ಮತ್ತು ಕಡಿಮೆ ಬಂಡವಾಳ ಹಾಕಿ ಉದ್ಯಮಿಯ ಕಾರ್ಯಸಮರ್ಥತೆಯಿಂದ ಹೆಚ್ಚು ಲಾಭಪಡೆಯುವ ಉದ್ಯಮಗಳು ತೊಂದರೆಗಳನ್ನು ಅನುಭವಿಸಬೇಕಾಯಿತು. 1964–65ರಲ್ಲಿ ಈ ತೆರಿಗೆಯನ್ನು ರದ್ದುಪಡಿಸಿ ಅದರ ಬದಲು ಲಾಭದ ಮೇಲೆ ಹೆಚ್ಚಿನ ತೆರಿಗೆಯನ್ನು (ಸೂಪರ್ ಟ್ಯಾಕ್ಸ್ ಆನ್ ಪ್ರಾಫಿಟ್ಸ್) ವಿಧಿಸಲಾಯಿತು. ಈ ತೆರಿಗೆ ಕೆಲವು ದೃಷ್ಟಿಯಿಂದ ವರಿಷ್ಠಲಾಭ ತೆರಿಗೆಗಿಂತ ಉತ್ತಮವೆನ್ನಬಹುದು. ಒಂದು ಉದ್ಯಮದ ಬಂಡವಾಳವನ್ನು ನಿರ್ಧರಿಸುವಾಗ ಹೂಡಿರುವ ಬಂಡವಾಳ ಕ್ಷೇಮನಿಧಿ, ಅಲ್ಪ ಮತ್ತು ಧೀರ್ಘಾವದಿ ಸಾಲ– ಇವೆಲ್ಲವನ್ನೂ ಪರಿಗಣಿಸಲಾಗುವುದು. ಶೇ.10 ಕ್ಕಿಂತ ಬಂಡವಾಳದಮೇಲೆ ಲಾಭ ಜಾಸ್ತಿಯಾಗಿದ್ದರೆ ಆ ಅಧಿಕಲಾಭದ ಮೇಲೆ ಶೇ.40 ತೆರಿಗೆ ವಿಧಿಸಲಾಗುವುದು. ಈ ತೆರಿಗೆ ಬಂಡವಾಳಕ್ಕೆ ವಿಶಾಲವಾದ ಅರ್ಥವನ್ನು ಕಲ್ಪಿಸಿರುವುದರಿಂದ ಮತ್ತು ಸಾಮಾನ್ಯ ಲಾಭವನ್ನು ಶೇ.10ಕ್ಕೆ ಹೆಚ್ಚಿಸಿರುವುದರಿಂದ ಮತ್ತು ತೆರಿಗೆಯ ದರವನ್ನು ಕಡಿಮೆ ಮಾಡಿರುವುದರಿಂದ ವರಿಷ್ಠಲಾಭತೆರಿಗೆಗಿಂತ ಉತ್ತಮವೆನ್ನಬಹುದು.

ಅಧಿಕಲಾಭತೆರಿಗೆಯನ್ನು ಸಮಾಜದ ಹಿತದೃಷ್ಟಿ ಮತ್ತು ನೈತಿಕ ಆಧಾರದ ಮೇಲೆ ನೋಡಬೇಕು. ಒಂದು ನಿರ್ದಿಷ್ಟಪ್ರಮಾಣಕ್ಕಿಂತ ಹೆಚ್ಚು ಲಾಭ ಪಡೆಯುವುದು ಸಮಾಜದ ಹಿತದೃಷ್ಟಿಯಿಂದ ಸರಿಯಲ್ಲ ಎಂಬುದನ್ನು ಒಪ್ಪಿಕೊಂಡರೆ ಅಧಿಕಲಾಭತೆರಿಗೆಯನ್ನು ತತ್ತ್ವಶಃ ವಿರೋಧಿಸಲಾಗುವುದಿಲ್ಲ. ಹಾಗೆಯೆ ತಾತ್ತ್ವಿಕವಾಗಿ ಆರೋಹಣಕ್ರಮದ ಅಧಿಕಲಾಭತೆರಿಗೆ ನ್ಯಾಯವಾದದ್ದು. ಅಧಿಕಲಾಭತೆರಿಗೆಯನ್ನು ಅನುಷ್ಠಾನಕ್ಕೆ ತರುವಾಗ, ಸಾಮಾನ್ಯಲಾಭ ನಿರ್ಣಯ, ಆರೋಹಣ ಅಥವಾ ಅನುಪಾತಕ್ರಮ ಮತ್ತು ತೆರಿಗೆಯ ದರ– ಇವುಗಳನ್ನು ನಿರ್ಣಯಮಾಡುವಾಗ ಪ್ರತಿದೇಶದ ಆರ್ಥಿಕಸ್ಥಿತಿ, ಆರ್ಥಿಕಪ್ರಗತಿ ಇವುಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧಾರಮಾಡಿದರೆ ಅಧಿಕಲಾಭತೆರಿಗೆಯಿಂದ ಉದ್ಯಮ ಸಾಹಸಕ್ಕಾಗಲಿ, ಆರ್ಥಿಕ ಬೆಳವಣಿಗೆಗಾಗಲಿ, ಕಾರ್ಯದಕ್ಷತೆಗಾಗಲಿ, ಬಂಡವಾಳಶೇಖರಣೆಗಾಗಲಿ, ಅನಾನುಕೂಲ ಆಗುವುದಿಲ್ಲ. ಅಧಿಕಲಾಭತೆರಿಗೆ ಒಂದು ದೇಶದ ತೆರಿಗೆ ಚೌಕಟ್ಟಿನಲ್ಲಿ ಶಾಶ್ವತವಾದ ಸ್ಥಾನಪಡೆಯಲು ಅರ್ಹವಾಗಿದೆ. (*)

**ಅಧಿಕವರ್ಷ :** 4ರಿಂದ ಭಾಗವಾಗುವ ಪ್ರ.ಶ.ದ ವರ್ಷಸಂಖ್ಯೆ (ಲೀಪ್ ಇಯರ್). ಅಥವಾ ಇಂಟರ್‌ಕ್ಯಾಲರಿ ಇಯರ್.

ಶತಮಾನ ವರ್ಷಗಳಿಗೆ ಮಾತ್ರ ಇರುವ ನಿಯಮ ಬೇರೆ. ಶತಾಬ್ದಿ ಇಸವಿಗಳ ಹೊರತಾಗಿ 4 ರಿಂದ ಭಾಗವಾಗುವ ಪ್ರಶಕ ವರ್ಷ ಶತಾಬ್ದಿ ಇಸವಿ ಕುರಿತಂತೆ ಅದು 400 ರಿಂದ ಭಾಗವಾದಾಗ ಮಾತ್ರ ಅಧಿಕ ವರ್ಷವಾಗುತ್ತದೆ. ಉದಾಹರಣೆಗೆ 2000, 2004, 2008, 2012 ಮುಂತಾದವು ಅಧಿಕವರ್ಷಗಳು. ಶತಾಬ್ದಿ ವರ್ಷ 2000ವು 400 ರಿಂದ ಭಾಗವಾಗುತ್ತದೆಂಬುದನ್ನು ಗಮನಿಸಬೇಕು. ಆದರೆ 1700, 1800, 1900, 2100 ಮುಂತಾದವು 400 ರಿಂದ ಭಾಗವಾಗುವುದಿಲ್ಲವಾಗಿ ಇವು ಅಧಿಕ ವರ್ಷಗಳಲ್ಲ. ಈ ಗಣನೆ ರೋಮ್‌ದೊರೆ ಜ್ಯೂಲಿಯಸ್ ಸೀಸರನ (ಪ್ರ.ಶ.ಪೂ. 100 ಅಥವಾ 102–44) ಕಾಲದಲ್ಲಿ ಆರಂಭವಾಯಿತು. ಭೂಮಿ ಸೂರ್ಯನ ಸುತ್ತ ಪರಿಭ್ರಮಿಸುವ ವೇಳೆ 365.25636 ದಿವಸಗಳು, ಸ್ಥೂಲವಾಗಿ 365.25 ದಿವಸಗಳು. ವ್ಯಾವಹಾರಿಕ ಸೌಕರ್ಯದ ದೃಷ್ಟಿಯಿಂದ ವರ್ಷಕ್ಕೆ 365 ದಿವಸಗಳೆಂದು ತೆಗೆದುಕೊಂಡರೆ ನಾಲ್ಕು ವರ್ಷಗಳಿಗೊಮ್ಮೆ ಈ ಲೆಕ್ಕದಂತೆ ಒಂದು ದಿವಸವನ್ನು ಹೆಚ್ಚಿಸಬೇಕಾಗುತ್ತದೆ. ಈ ಹೆಚ್ಚು ದಿವಸ ಬರುವ ವರ್ಷ ಅಧಿಕವರ್ಷ. ಇದರಿಂದ ವರ್ಷದ ಸರಾಸರಿ ಅವಧಿ 365.25 ದಿವಸಗಳು ಆಗುತ್ತವೆ. ಇದು ಋತುಗಳು ರೂಪಿಸುವ ವರ್ಷಕ್ಕಿಂತ ಸ್ವಲ್ಪ ಅಧಿಕವಾಗುತ್ತದೆ. ದೋಷಪ್ರಮಾಣ 400 ವರ್ಷಗಳಲ್ಲಿ ಮೂರು ಅಧಿಕ ದಿವಸಗಳು. ಆದ್ದರಿಂದ 400 ವರ್ಷಗಳಲ್ಲಿ ಮೂರು ದಿವಸಗಳಷ್ಟು ಕಳೆಯಬೇಕು. ಶತಮಾನದ ಸಂಖ್ಯೆ 4ರಿಂದ ಭಾಗವಾದರೆ ಮಾತ್ರ (ಉದಾ: 2000, 2400 ಇತ್ಯಾದಿ; 1900, 2100 (1502–85) ಇತ್ಯಾದಿ ಅಲ್ಲ) ಆ ಶತಮಾನದ ಆರಂಭವರ್ಷ ಅಧಿಕವರ್ಷವೆಂದು ಪೋಪ್ ಗ್ರೆಗೊರಿ ತೀರ್ಮಾನಿಸಿದ. ಈ ತೀರ್ಮಾನದಂತೆ, ವರ್ಷದ ಸರಾಸರಿ ಅವಧಿ 365.2425 ದಿವಸಗಳು ಆಗುತ್ತವೆಲ್ಲದೆ 400 ವರ್ಷಗಳಲ್ಲಿ 97 ಅಧಿಕವರ್ಷಗಳಿರುತ್ತವೆ. ಗ್ರೆಗೊರಿಯ ವರ್ಷಮಾನ ಋತುಗಳ ದೃಷ್ಟಿಯಿಂದ ಕಿಂಚಿತ್ ಅಧಿಕವಾಗಿ, 4000 ವರ್ಷಗಳಲ್ಲಿ ಸುಮಾರು ಒಂದು ದಿವಸದಷ್ಟು ದೋಷ ಪ್ರಮಾಣವುಂಟಾಗುತ್ತದೆ. (ಸಿ.ಎನ್.ಎಸ್.)

**ಅಧಿಕಸಂಮರ್ದ :** ಒಂದು ಬಿಂದುವಿನ ಸುತ್ತಲೂ ಒಂದು ಚ.ಸೆಂಮೀ ಅಥವಾ ಒಂದು ಚ.ಅಂ. ವಿಸ್ತೀರ್ಣದ ಮೇಲೆ ಉಂಟಾಗುವ ಬಲ ಆ ಬಿಂದುವಿನಲ್ಲಿನ ಸಂಮರ್ದವನ್ನು ತಿಳಿಸುತ್ತದೆ. ಯಂತ್ರಶಿಲ್ಪಶಾಸ್ತ್ರದ (ಎಂಜಿನಿಯರಿಂಗ್) ವ್ಯಾಸಂಗಗಳಲ್ಲಿ ಸಂಮರ್ದವನ್ನು ಪೌಂಡ್/ಚ.ಅಂ. ಮಾನದಲ್ಲಿಯೂ ಭೌತವಿಜ್ಞಾನದಲ್ಲಿ ನ್ಯೂಟನ್ (ಚದರ ಮೀಟರ್) ಮಾನದಲ್ಲಿ ಅಥವಾ ಪಾಸ್ಕಲ್‌ಗಳಲ್ಲಿ ಅಳೆಯುವುದು ವಾಡಿಕೆ.



ಸಂಮರ್ದಮಾಪಕ

ನಮ್ಮ ಸುತ್ತಲೂ ಇರುವ ವಾಯುಮಂಡಲದ ಸಂಮರ್ದ (ಅಟ್ಮಾಸ್ಫಿಯರಿಕ್ ಪ್ರೆಷರ್). ಭೂಮಿಯ ಮೇಲೆ ಎಲ್ಲೆಡೆಯಲ್ಲಿಯೂ ಒಂದೇ ಆಗಿರುವುದಿಲ್ಲ. ಸಮುದ್ರಮಟ್ಟದಲ್ಲಿ ಇದರ ಬೆಲೆ 760 ಮಿಮೀ ಪಾದರಸ ಅಥವಾ 101325 ಪಾಸ್ಕಲ್ ವಾಯುಮಂಡಲದ ಸಂಮರ್ದಕ್ಕಿಂತ ಗಮನಾರ್ಹವಾಗಿ ಕಡಿಮೆಯಿರುವ ಸಂಮರ್ದವನ್ನು ಅಲ್ಪ ಸಂಮರ್ದ (ಲೋ ಪ್ರೆಷರ್) ಎಂದೂ ವಾಯುಮಂಡಲದ ಸಂಮರ್ದಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವ ಸಂಮರ್ದವನ್ನು ಅಧಿಕಸಂಮರ್ದ (ಹೈ ಪ್ರೆಷರ್) ಎಂದೂ ಕರೆಯುವುದುಂಟು. ಅಧಿಕ ಸಂಮರ್ದವನ್ನು ಅಳೆಯಲು ವಾಯುಮಂಡಲದ ಸಂಮರ್ದವನ್ನು ಏಕಮಾನವಾಗಿ ಉಪಯೋಗಿಸುತ್ತೇವೆ. ಈ ಮಾನವನ್ನು ವಾಯುಮಾನವೆಂದು (ಅಟ್ಮಾಸ್ಫಿಯರ್) ಕರೆಯಬಹುದು.

**ಅಧಿಕಸಂಮರ್ದವನ್ನು ಉಂಟು ಮಾಡುವ ವಿಧಾನಗಳು :** ಉಕ್ಕಿನಿಂದ ಮಾಡಿರುವ ಉರುಳೆ ಕೋಷ್ಠಗಳಲ್ಲಿ3 (ಸಿಲಿಂಡರ್) ವಸ್ತುವನ್ನು ಇಟ್ಟು ಆ ಕೋಷ್ಠವನ್ನು ಹೊಂದಿಕೊಳ್ಳುವ ಕೊಂತದ ಮೇಲೆ ತೂಕ ಹೇರುವುದರಿಂದ ವಸ್ತುವಿನ ಮೇಲೆ ಅಧಿಕಸಂಮರ್ದ ಉಂಟುಮಾಡಬಹುದು. ಈ ರೀತಿ 1900ರಲ್ಲಿ ಸು. 10,000 ವಾಯುಮಾನ ಸಂಮರ್ದವನ್ನು ಉಂಟುಮಾಡುವ ವಿಧಾನಗಳು ತಿಳಿದಿದ್ದುವು. ಅನಂತರ ಸಂಶೋಧನೆ ತೀವ್ರವಾಗಿ ನಡೆದು 1940ರಲ್ಲಿ ಸು.25,000 ವಾಯುಮಾನದಷ್ಟು ಸಂಮರ್ದವನ್ನು ಉಂಟುಮಾಡುವ ಸಾಧನಗಳ ರಚನೆಯಾಯಿತು. 1960ರ ಹೊತ್ತಿಗೆ ಸು. 1,00,000 ವಾಯುಮಾನದಷ್ಟು ಸಂಮರ್ದವನ್ನು ಉಂಟುಮಾಡುವ ಸಾಧನೆಗಳ ರಚನೆಯಾಯಿತು. ಅಧಿಕಸಂಮರ್ದದಿಂದ ವಸ್ತುಗಳ ಮೇಲೆ ಉಂಟಾಗುವ ಪರಿಣಾಮಗಳನ್ನು ಭೌತಿಕ ಮತ್ತು ರಾಸಾಯನಿಕ ಪರಿಣಾಮಗಳು ಎಂಬ ಎರಡು ವಿಭಾಗಗಳಾಗಿ ವಿಂಗಡಿಸಬಹುದು.

**ಭೌತಿಕ ಪರಿಣಾಮಗಳು:** 1. ಅಧಿಕಸಂಮರ್ದದಿಂದ ವಸ್ತುವಿನ ಅಣುಗಳ ಮಧ್ಯದ ಅಂತರ ಕಡಿಮೆಯಾಗಿ ವಸ್ತುಗಳ ಗಾತ್ರ ಕುಗ್ಗುವುದು. 2. ರೂಪ ಬದಲಾವಣೆ: ಅನಿಲರೂಪದಲ್ಲಿರುವ ವಸ್ತು ದ್ರವರೂಪಕ್ಕೆ ಮಾರ್ಪಾಡಾಗ ಬಹುದು, ದ್ರವರೂಪದಲ್ಲಿರುವ ವಸ್ತು ಘನರೂಪದ ವಸ್ತುವಾಗಬಹುದು ಅಥವಾ ಘನರೂಪದಲ್ಲಿರುವ ವಸ್ತು ತನ್ನ ಪ್ರಾವಸ್ಥೆಯಲ್ಲಿ (ಫೇಸ್) ವ್ಯತ್ಯಾಸ ಹೊಂದಬಹುದು. ಸುಮಾರು 1,00,000 ವಾಯುಮಾನಗಳಷ್ಟು ಸಂಮರ್ದ ಉಂಟುಮಾಡಿದಾಗ ಬರೆಯುವ ಸೀಸ (ಗ್ರಾಫೈಟ್) ವಜ್ರವಾಗಿ ಮಾರ್ಪಾಡಾಗುವುದನ್ನು ಮಾಯ್‌ಸನ್ ಎಂಬ ವಿಜ್ಞಾನಿ ತೋರಿಸಿದ. ಬ್ರಿಡ್ಜ್‌ಮನ್ ಎಂಬವನು ಮಂಜುಗೆಡ್ಡೆಯ ಬೇರೆ ಬೇರೆ ರೂಪಗಳನ್ನು ಅಧಿಕಸಂಮರ್ದದಿಂದ ತಯಾರಿಸಿದ. 3. ಸಂಮರ್ದದಿಂದ ಲೋಹಗಳ ವಿದ್ಯುತ್‌ವಾಹಕತ್ವ ವ್ಯತ್ಯಾಸವಾಗುತ್ತದೆ. ಸಾಮಾನ್ಯವಾಗಿ ಸಂಮರ್ದ ಹೆಚ್ಚಿದಂತೆ ವಿದ್ಯುತ್ ವಾಹಕತ್ವ ಹೆಚ್ಚುತ್ತದೆ. ಇದಕ್ಕೆ ವಿರೋಧವಾಗಿ ನಡೆದುಕೊಳ್ಳುವ ಕೆಲವು ಲೋಹಗಳೂ ಉಂಟು. 4. ಸಂಮರ್ದ ಹೆಚ್ಚಿದಂತೆ ವಸ್ತುಗಳ ಸ್ನಿಗ್ಧತೆ (ವಿಸ್‌ಕೋಸಿಟಿ) ವ್ಯತ್ಯಾಸವಾಗುತ್ತದೆ.



ಬೋರ್ಡನ್ ಮಾಪಕ

**ರಾಸಾಯನಿಕ ಪರಿಣಾಮಗಳು** : 1. ಹೈಡ್ರೊಜನ್ ಮತ್ತು ನೈಟ್ರೊಜನ್ ಅಧಿಕಸಂಮರ್ದದ ವಿಧಾನದಿಂದ ಸಂಯೋಗಮಾಡಿ ಹೇಬರ್ ಎಂಬುವನು ಅಮೋನಿಯವನ್ನು ತಯಾರಿಸಿದ. ಹೈಡ್ರೊಜನ್ ಮತ್ತು ಕಾರ್ಬನ್ ಮಾನಾಕ್ಸೈಡ್–ಇವು ಸು. 200 ವಾಯುಮಾನ ಸಂಮರ್ದ ದಲ್ಲಿ ಸಂಯೋಗವಾಗಿ ಮೆಥನಾಲ್ ಉಂಟಾಗುತ್ತದೆ. 3. ಕ್ಲೋರೋಬೆನ್‌ಜೀನ್ ಮತ್ತು ಸೋಡಿಯಂ ಹೈಡ್ರಾಕ್ಸೈಡ್– ಇವು ಸು 300 ವಾಯುಮಾನ ಸಂಮರ್ದದಲ್ಲಿ ಸಂಯೋಗವಾಗಿ ಫಿನಾಲ್ ಉಂಟಾಗುತ್ತದೆ. ಇದೇ ರೀತಿಯಲ್ಲಿ ಪಾಲಿಎಥಿಲೀನ್ ಅನ್ನು ತಯಾರಿಸಬಹುದು.

ಭೂಗರ್ಭದ ಒಳಗಡೆ ಹೋದಂತೆಲ್ಲ ಸಂಮರ್ದ ಮತ್ತು ಉಷ್ಣತೆ ಹೆಚ್ಚುತ್ತದೆ. ಸಂಮರ್ದ ಮತ್ತು ಉಷ್ಣತೆಯ ಪರಿಣಾಮದಿಂದ ಆಗುವ ಕೆಲವು ರಾಸಾಯನಿಕಕ್ರಿಯೆಯಿಂದ ಭೂಮಿಯಲ್ಲಿ ಶಿಲೆಗಳು ಉಂಟಾಗುತ್ತವೆ. ಭೂಮಿಯ ಒಳಗಡೆ ಇರುವ ಉಷ್ಣತೆ ಮತ್ತು ಸಂಮರ್ದವನ್ನು ಪ್ರಯೋಗಶಾಲೆಯಲ್ಲಿ ಉಂಟುಮಾಡಿ ಭೂಮಿಯಲ್ಲಿರುವ ಶಿಲೆಗಳಿಗೆ ಸಮಾನವಾದ ವಸ್ತುಗಳನ್ನು ತಯಾರಿಸಬಹುದು. ಕೋಸ್ (Coes) ಎಂಬ ವಿಜ್ಞಾನಿ ಈ ರೀತಿಯಲ್ಲಿ ಅನೇಕ ಶಿಲೆಗಳನ್ನು ತಯಾರಿಸಿದ. ಭೂಮಿಯ ಒಳಗಡೆ ಬೇರೆ ಬೇರೆ ಪದರದಲ್ಲಿರುವ ಶಿಲೆಗಳನ್ನು ಪ್ರಯೋಗಶಾಲೆಯಲ್ಲೇ ತಯಾರುಮಾಡುವುದು ಸಾಧ್ಯವಿರುವುದರಿಂದ ಭೂಮಿಯ ಬೇರೆ ಬೇರೆ ಪದರಗಳಲಿರುವ ಉಷ್ಣತೆ ಮತ್ತು ಸಂಮರ್ದವನ್ನು ಅಳೆಯಬಹುದು. ಈ ವ್ಯಾಸಂಗದಿಂದ ಭೂವಿಜ್ಞಾನದ ಬಗ್ಗೆ ಹೆಚ್ಚಿನ ತಿಳಿವಳಿಕೆಗೆ ಅವಕಾಶವುಂಟಾಗಿದೆ.




ಫ್ರೀ ಪಿಸ್ಟನ್ ಗೇಜ್ ಸಂಮರ್ದ ತುಲಾಯಂತ್ರ

ಅಧಿಕಸಂಮರ್ದವನ್ನು ಅಳತೆಮಾಡುವ ವಿಧಾನ: ಸು. 500 ವಾಯುಮಾನ ಇರುವ ಸಂಮರ್ದವನ್ನು ಅಳೆಯಲು ಸಂಮರ್ದಮಾಪಕವನ್ನು (ಮಾನೋಮೀಟರ್) ಉಪಯೋಗಿಸಬಹುದು. ಗ–ಆಕಾರದ ಗಾಜಿನ ಕೊಳವೆಯಲ್ಲಿ ಪಾದರಸವನ್ನಿಟ್ಟು ಕೊಳವೆಯ ಒಂದು ಕೊನೆಯನ್ನು ಸಂಮರ್ದವಿರುವ ಪಾತ್ರೆಗೆ ಸೇರಿಸಿದಾಗ ಪಾದರಸದ ಮಟ್ಟದಲ್ಲಿ ಉಂಟಾಗುವ ವ್ಯತ್ಯಾಸವನ್ನು ಅಳೆಯುವುದರಿಂದ ಸಂಮರ್ದವನ್ನು ಕಂಡುಹಿಡಿಯಬಹುದು.

ಸು. 1,000 ವಾಯುಮಾನಕ್ಕೂ ಹೆಚ್ಚಿನ ಸಂಮರ್ದವನ್ನು ಅಳೆಯಬೇಕಾದರೆ ಬೋರ್ಡನ್ ತಯಾರಿಸಿದ ಮಾಪಕವನ್ನು ಉಪಯೋಗಿಸಬೇಕಾಗುವುದು. ಗಾಜಿನಿಂದ ಅಥವಾ ಲೋಹದಿಂದ ಮಾಡಿರುವ ಕೊಳವೆಯನ್ನು ವೃತ್ತಾಕಾರದಲ್ಲಿ ಬಗ್ಗಿಸಿರುತ್ತಾರೆ. ಕೊಳವೆಯ ಒಂದು ಕೊನೆ ಮುಚ್ಚಿರುತ್ತದೆ. ಕೊಳವೆಯನ್ನು ಒಂದು ಕಡೆಯಿಂದ ನೋಡಿದರೆ ಅದರ ತುದಿ ದೀರ್ಘವೃತ್ತದಂತೆ (ಎಲಿಪ್ಸ್) ಕಾಣಿಸುತ್ತದೆ. ಮುಚ್ಚದೆ ಇರುವ ಕೊಳವೆಯ ಮತ್ತೊಂದು ತುದಿಯನ್ನು ಗಾಳಿತುಂಬಿರುವ ಬೆಲೂನೊಂದಕ್ಕೆ ಅಳವಡಿಸಿರುತ್ತಾರೆ. ಬೆಲೂನಿನಲ್ಲಿರುವ ಗಾಳಿ ಕೊಳವೆಯ ಮೂಲಕ ಹರಿದಾಗ ಕೊಳವೆ ತನ್ನ ಗಾತ್ರದಲ್ಲಿ ವಿಕಾಸಹೊಂದಿ ವೃತ್ತಾಕಾರಕ್ಕೆ ತಿರುಗುತ್ತದೆ. ಕೊಳವೆಗೆ ಸೇರಿದಂತೆ ಇರುವ ಒಂದು ಸೂಚಿ (ಪಾಯಿಂಟರ್) ಅಧಿಕಸಂಮರ್ದವನ್ನು ಸೂಚಿಸುತ್ತದೆ. ಈ ಉಪಕರಣದಿಂದ ಸು. 5,000 ವಾಯುಮಾನದಷ್ಟು ಸಂಮರ್ದವನ್ನು ಅಳೆಯಲು ಸಾಧ್ಯ

ಬೋರ್ಡನ್‌ಟ್ಯೂಬ್ ಎಂಬ ಉಪಕರಣವನ್ನು ಉಪಯೋಗಿಸಿ, ದ್ರವಗಳಿಂದುಂಟಾಗುವ ಸು. 10,000 ವಾಯುಮಾನ ಸಂಮರ್ದವನ್ನು ಅಳೆಯಬಹುದಾಗಿದೆ. ಅಧಿಕಸಂಮರ್ದವನ್ನು ಅಳೆಯುವ ಮತ್ತೊಂದು ಉಪಕರಣ ಸಂಮರ್ದ ತುಲಾಯಂತ್ರ (ಫ್ರೀ ಪಿಸ್ಟನ್ ಗೇಜ್). ಇದರಲ್ಲಿನ ಊರ್ಧ್ವ ಮುಖವಾಗಿ ಚಲಿಸುವ ಹಾಗೂ ಗೊತ್ತಾದ ವಿಸ್ತೀರ್ಣವಿರುವ ಒಂದು ಕೊಂತದ ಮೇಲೆ ವರ್ತಿಸುವ ಸಂಮರ್ದ ಸಾಕಷ್ಟು ನಿಖರತೆಯಿಂದ ಕೂಡಿರುವ ತೂಕದ ಬೊಟ್ಟುಗಳ ತೂಕಕ್ಕೆ ಅನುಗುಣವಾಗಿರುತ್ತದೆ. ಈ ಸಂಮರ್ದ ತುಲಾಯಂತ್ರದಲ್ಲಿ ಎರಡು ವಿಧ: ಒಂದು ಕೊಂತದ (ಸಿಂಗಲ್ ಪಿಸ್ಟನ್) ರೀತಿಯದು, ಇನ್ನೊಂದು ಭೇದದರ್ಶಕ ಕೊಂತ (ಡಿಫರೆನ್ಷಿಯಲ್ ಪಿಸ್ಟನ್) ರೀತಿಯದು. ಈ ಎರಡೂ ಬಗೆಯ ಅಳೆವ ಯಂತ್ರಗಳಲ್ಲಿ ಉಪಯೋಗಿಸುವ ತೂಕದ ಬೊಟ್ಟುಗಳು ಉಂಗುರದಾಕಾರದಲ್ಲಿದ್ದು, ಹೊರೆಯ ಮತ್ತು ಕೊಂತದ ಭಾಗ ಒಂದರೊಡನೊಂದು ತಿರುಗುತ್ತಿರುತ್ತವೆ. ಇದರಿಂದ ಘರ್ಷಣೆ ಕಡಿಮೆಯಾಗುತ್ತದೆ. ಅಧಿಕಸಂಮರ್ದವನ್ನು ಅಳೆಯುವ ಇತರ ಸಾಧನಗಳೆಂದರೆ ನಿಯಂತ್ರಿತ ತೆರಪುಮಾಪನಯಂತ್ರ (ಕಂಟ್ರೋಲ್ಡ್ ಕ್ಲಿಯರೆನ್ಸ್ ಗೇಜ್) ಮತ್ತು ವಿದ್ಯುತ್ ರೋಧ ಸಂಮರ್ದ ಗೇಜ್ (ಎಲೆಕ್ಟ್ರಿಕಲ್ ರೆಸಿಸ್ಟೆನ್ಸ್ ಪ್ರೆಷರ್ ಗೇಜ್). ಇದರಲ್ಲಿ 15,000 ವಾಯುಮಾನ ಇದರ ಸಂಮರ್ದವನ್ನು ಅಳೆಯಬಹುದು.

ಸಂಮರ್ದವನ್ನು ಅಳೆಯಲು ಕೆಲವು ವೇಳೆ ಕ್ರಷರ್ ಗೇಜ್ ಉಪಯೋಗಿಸಬಹುದು. ಮಿಶ್ರಲೋಹದಿಂದ ಮಾಡಿರುವ ಒಂದು ದಂಡದ ಮೇಲೆ ಗೊತ್ತಾದ ಸಂಮರ್ದವನ್ನು ಪ್ರಯೋಗಿಸುವುದರಿಂದ ದಂಡದ ಆಕಾರದಲ್ಲಿ ವ್ಯತ್ಯಾಸ ಉಂಟಾಗುವುದು. ಹೀಗೆ ಗೊತ್ತಾದ ಬೇರೆ ಬೇರೆ ಸಂಮರ್ದವನ್ನು ಪ್ರಯೋಗಿಸಿ ಪ್ರತಿಯೊಂದು ಸಂಮರ್ದದಿಂದ ಉಂಟಾಗುವ ಆಕಾರದಲ್ಲಿನ ವ್ಯತ್ಯಾಸವನ್ನು ತಿಳಿದುಕೊಳ್ಳಬಹುದು. ಅನಂತರ ಯಾವುದೇ ಸಂಮರ್ದವನ್ನು ಲೆಕ್ಕ ಹಾಕಬಹುದು. (ಆರ್.ವಿ.ಪಿ.)

**ಅಧಿಕಸಿಲಿಕಾಂಶಶಿಲೆಗಳು :** ಸಿಲಿಕವನ್ನು ಶೇ. 66 ಭಾಗ ಅಥವಾ ಇನ್ನೂ ಹೆಚ್ಚು ಭಾಗ ಒಳಗೊಂಡಿರುವ ಮತ್ತು ಬೆಣಚು (ಕ್ವಾರ್ಟ್ಸ್), ಆಲ್‌ಕಲೈನ್ ಫೆಲ್ಡ್‌ಸ್ಪಾರ್ ಮತ್ತು ಮಸ್ಕೋವೈಟ್ ಮುಂತಾದ ತಿಳಿಬಣ್ಣದ ಸಿಲಿಕೇಟುಗಳನ್ನು ಪ್ರಧಾನವಾಗಿ ಹೊಂದಿರುವ ಅಗ್ನಿಶಿಲೆಗಳು.

ಈ ವರ್ಗದ ಮುಖ್ಯ ಶಿಲೆಗಳು: 1. ಗ್ರಾನೈಟ್, ಗ್ರಾನೈಟ್‌ಪಾರ್‌ಫಿರಿ, ರೈಯೊಲೈಟ್ ಮತ್ತು ರೈಯೊಲೈಟ್‌ಪಾರ್‌ಫಿರಿ; 2. ಅಡಮೆಲ್ಲೈಟ್ ಕ್ವಾರ್ಟ್ಜ್ (ಬೆಣಚು), ಮಾನ್‌ಜೊನೈಟ್ ಪಾರ್‌ಫಿರಿ, ಕ್ವಾರ್ಟ್ಸ್‌ಟೋನಲೈಟ್; 3. ಗ್ರಾನೊಡಯೊರೈಟ್, ಗ್ರಾನೊಡಯೊರೈಟ್‌ಪಾರ್‌ಫಿರಿ, ಡೇಸೈಟ್ ಮತ್ತು ಡೇಸೈಟ್‌ಪಾರ್‌ಫಿರಿ.

ಮೊದಲನೆಯ ಗುಂಪಿನಲ್ಲಿರುವ ಮುಖ್ಯ ಖನಿಜಗಳಿವು. ಬೆಣಚು ಕ್ವಾರ್ಟ್ಸ್, ಶೇ.10 ಕ್ಕೂ ಹೆಚ್ಚು ಭಾಗ ಪೊಟಾಷ್‌ಫೆಲ್ಡ್‌ಸ್ಪಾರ್. ಇವುಗಳ ಜೊತೆಗೆ ಇರುವ ಉಪಖನಿಜಗಳಲ್ಲಿ ಪ್ರಧಾನವಾದವು –ಬಯೊಟೈಟ್, ಹಾರನ್‌ಬ್ಲೆಂಡ್, ಪೈರಾಕ್ಸೀನ್ ಮತ್ತು ಮಸ್ಕೊವೈಟ್. ಈ ಶಿಲೆಗಳು ಗ್ರಾನಿಟಿಕ್, ಫೆನೆರಿಕ್, ಪಾರ್‌ಫಿರಿಟಿಕ್ ಮತ್ತು ಅಫೆನಿಟಿಕ್ ಹೆಣಿಗೆಗಳನ್ನು ತೋರುತ್ತವೆ. ಈ ಗುಂಪಿನ ಶಿಲೆಗಳು ಅಧಿಕವಾಗಿ ಬ್ಯಾಥೊಲಿತ್, ಸ್ಟಾಕ್, ಡೈಕ್ ಮತ್ತು ಸಿಲ್‌ಗಳ ರೂಪದಲ್ಲಿವೆ. ರೈಯೊಲೈಟ್ ಬಹುಮಟ್ಟಿಗೆ ಲಾವಾಪ್ರಸ್ತರಗಳಂತೆಯೂ ಡೈಕುಗಳಂತೆಯೂ ಕಂಡುಬಂದಿದೆ.

ಎರಡನೆಯ ಗುಂಪು ಫೆನೆರಿಕ್, ಪಾರ್‌ಫಿರಿಟಿಕ್ ಮತ್ತು ಅಫೆನಿಟಿಕ್ ಹೆಣಿಗೆಗಳನ್ನು ತೋರಿಸುತ್ತದೆ. ಈ ಶಿಲೆಗಳ ಮುಖ್ಯ ಖನಿಜಗಳು ಶೇ.10ಕ್ಕೂ ಹೆಚ್ಚು ಬೆಣಚು (ಕ್ವಾರ್ಟ್ಸ್), ಪೊಟಾಷ್ ಫೆಲ್ಡ್‌ಸ್ಪಾರ್. ಇವುಗಳ ಜೊತೆಗೆ ಹೊಂದಿಕೊಂಡಂತೆ ಪ್ರಧಾನವಾಗಿ ಹಾರನ್‌ಬ್ಲೆಂಡ್, ಬಯೊಟೈಟ್ ಮತ್ತು ಪೈರಾಕ್ಸೀನ್. ಇವು ಅಧಿಕವಾಗಿ ಬ್ಯಾಥೊಲಿತ್, ಸ್ಟಾಕ್, ಡೈಕ್ ಮತ್ತು ಸಿಲ್ಲು ರೂಪದಲ್ಲಿವೆ.

ಮೂರನೆಯ ಗುಂಪಿನಲ್ಲಿ ಬೆಣಚು (ಕ್ವಾರ್ಟ್ಸ್) ಮತ್ತು ಪೊಟಾಷ್‌ಫೆಲ್ಡ್‌ಸ್ಪಾರ್‌ಗಳು ಪ್ರಧಾನ ಖನಿಜಗಳಾಗಿವೆ; ಇವುಗಳ ಜೊತೆಗಿರುವ ಇತರ ಖನಿಜಗಳೆಂದರೆ ಹಾರನ್‌ಬ್ಲೆಂಡ್ ಮತ್ತು ಬಯೊಟೈಟ್. ಇವುಗಳ ಹೆಣಿಗೆ ಮತ್ತು ಹೊರ ಆಕಾರ ಮೊದಲೆರಡು ಗುಂಪುಗಳಂತೆಯೆ ಇವೆ.

ಅಧಿಕಸಿಲಿಕಾಂಶಶಿಲೆಗಳು ಅನೇಕ ಪ್ರದೇಶಗಳಲ್ಲಿ ಕಂಡುಬಂದಿವೆ. ಸಾಮಾನ್ಯವಾಗಿ ಇವುಗಳ ವ್ಯಾಪ್ತಿ ಹೆಚ್ಚು; ಮೈಸೂರಿನ ಅಧಿಕಸಿಲಿಕಾಂಶಶಿಲೆಗಳಲ್ಲಿ ನೈಸುಗಳು, ಕ್ಲೋಸ್‌ಪೇಟೆ ಗ್ರಾನೈಟು, ಚಾರ್ನೈಕೈಟ್, ಪಾರ್‌ಫಿರಿಗಳು, ಫೆಲ್‌ಸೈಟು ಸೇರಿವೆ. ಇವುಗಳಲ್ಲಿ ಬಹುಭಾಗ ಧಾರವಾಡ ಗುಂಪಿನ ಇತರ ಹಳೆಯ ಶಿಲೆಗಳನ್ನು ಭೇದಿಸಿಕೊಂಡು ಬಂದಿವೆ. ತಮ್ಮ ಖನಿಜಸಂಯೋಜನೆ, ರಚನಾವಿನ್ಯಾಸ ಮತ್ತು ರೂಪಾಂತರಗಳಿಂದ ಈ ಶಿಲೆಗಳು ಮೈಸೂರಿನ ಭೂ ವಿಜ್ಞಾನಿಗಳ ಗಮನವನ್ನು ಸೆಳೆದಿವೆ. ಅಧಿಕಸಿಲಿಕಾಂಶ ಅಂತರ್ಭೇದಗಳು ಕೆಲವು ಖನಿಜನಿಕ್ಷೇಪಗಳಿಗೆ ಕಾರಣಭೂತವಾಗಿವೆ. ಕೋಲಾರದ ಚಿನ್ನದ ಗಣಿಪ್ರದೇಶದ ಛಾಂಪಿಯನ್

ನೈಸ್– ಇವುಗಳಲ್ಲೆಲ್ಲ ಪ್ರಾಚೀನವಾದುದೆಂದು ಭಾವಿಸಲಾಗಿದೆ. ಅಲ್ಲಿ ಸಿಗುವ ಚಿನ್ನಕ್ಕೆ ಇದೇ ಮೂಲವೆಂದೂ ಹೇಳಲಾಗಿದೆ. ಪೆನಿನ್ಸುಲಾರ್ ನೈಸ್ ಇಡೀ ದೇಶದುದ್ದಕ್ಕೂ ಹರಡಿದೆ. ಹೀಗೆಯೇ ಕ್ಲೋಸ್‌ಪೇಟೆ ಗ್ರಾನೈಟ್ ರಾಮನಗರದಿಂದ ಬಳ್ಳಾರಿಯವರೆಗೆ ದಕ್ಷಿಣೋತ್ತರದ ಒಂದು ಪ್ರಮುಖ ಶಿಲಾಜಾಡಿನಲ್ಲಿ ಬೆಟ್ಟಗುಡ್ಡಗಳೋಪಾದಿಯಲ್ಲಿ ಕಂಡುಬಂದಿದೆ. ಚಾರ್ನೊಕೈಟುಗಳನ್ನು ಕೊಡಗು, ಮೈಸೂರು ಜಿಲ್ಲೆಗಳ ದಕ್ಷಿಣ ಪ್ರಾಂತದಲ್ಲಿ ನೋಡಬಹುದು. ಇವುಗಳ ವ್ಯಾಪ್ತಿ ಬಲು ಕಡಿಮೆ. ಫೆಲ್ಸೈಟ್ ಮತ್ತು ಪಾರ್‌ಫಿರಿಗಳು ಬಹುಮಟ್ಟಿಗೆ ಡೈಕುಗಳೋಪಾದಿಯಲ್ಲಿ ದೇಶದ ಅನೇಕ ಕಡೆ ಹರಡಿವೆ. ಮೈಸೂರು, ಶ್ರೀರಂಗಪಟ್ಟಣ ಮತ್ತು ತುರುವೇಕೆರೆ– ಈ ಊರುಗಳ ಸುತ್ತಮುತ್ತಲಿನ ಫೆಲ್ಸೈಟ್ ಮತ್ತು ಪಾರ್‌ಫಿರಿಗಳು ಉತ್ತಮ ಅಲಂಕಾರ ಶಿಲೆಗಳೆಂದು ಪ್ರಪಂಚ ಪ್ರಸಿದ್ಧವಾಗಿವೆ. (ಎಸ್.ಬಿ.ಎಲ್.)

**ಅಧಿಕಾರ :** ತತ್ತ್ವಶಾಸ್ತ್ರದಲ್ಲಿ ಈ ಮಾತಿಗೆ ಯೋಗ್ಯತೆ, ಅರ್ಹತೆ ಎನ್ನುವ ಅರ್ಥವಿದೆ; ಕೆಲಸ ಮಾಡುವ ಮತ್ತು ಅದರಿಂದ ಉಂಟಾಗತಕ್ಕ ಫಲವನ್ನು ಅನುಭವಿಸುವ ಅರ್ಹತೆ ಇಲ್ಲಿ ಮುಖ್ಯವಾದ ವಿಚಾರ. ವರ್ಣಾಶ್ರಮ ವ್ಯವಸ್ಥೆಯಲ್ಲಿ ಅಧಿಕಾರದ ಪ್ರಸ್ತಾಪವುಂಟು. ಬ್ರಾಹ್ಮಣನಿಗೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಇವುಗಳ ಅಧಿಕಾರವೂ ಕ್ಷತ್ರಿಯ, ವೈಶ್ಯರಿಗೆ ಯಜನ, ಅಧ್ಯಯನ, ದಾನ ಇವುಗಳ ಅಧಿಕಾರವೂ ಇದೆ. ಅಧಿಕಾರವೆನ್ನುವ ಮಾತಿನಲ್ಲಿ ಉದ್ಯಮ, ಪ್ರಯತ್ನ ಎನ್ನುವ ಅರ್ಥವೂ ಸೇರಿಬರುತ್ತದೆ. ಕೃಷ್ಣ ಭಗವದ್ಗೀತೆಯಲ್ಲಿ ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ (3–47) ಎನ್ನುವಾಗ ಕರ್ಮಶೀಲನಾಗು, ಉದ್ಯಮಿಯಾಗು ಎಂದು ತಾತ್ಪರ್ಯ. ವಿಹಿತಕಾರ್ಯಗಳನ್ನು ಮಾಡಲು ಯೋಗ್ಯತೆಯನ್ನು ನಿರ್ಣಯಿಸುವುದಕ್ಕೆ ಅಧಿಕಾರವಿಧಿ ಎಂದು ಹೆಸರು. ಎಲ್ಲರಿಗೂ ಎಲ್ಲ ಕರ್ಮಗಳೂ ದಕ್ಕುವುದಿಲ್ಲ; ಸಾಮರ್ಥ್ಯತಾರತಮ್ಯದಿಂದ ಅವಗಾಹನ, ಅನುಷ್ಠಾನ ಎರಡೂ ಪ್ರಭಾವಿತವಾಗುತ್ತವೆ. ವೇದಾಧ್ಯಯನಕ್ಕೆ, ಜಪತಪಾದಿ ಸಾಧನಗಳಿಗೆ ಯಾರು ಅಧಿಕಾರಿಗಳು ಎಂದು ನಿರ್ಣಯಿಸಬೇಕಾಗುತ್ತದೆ. ಗೃಹಸ್ಥನಲ್ಲದವನಿಗೆ, ಉಪನೀತನಲ್ಲದವನಿಗೆ, ಮಂತ್ರಶಿಕ್ಷಣವಿಲ್ಲದವನಿಗೆ ಯಜ್ಞಮಾಡುವ ಅಧಿಕಾರವಿರದು. ದ್ವಿಜನಲ್ಲದವನಿಗೆ, ಬ್ರಹ್ಮಚಾರಿಯಾಗದವನಿಗೆ ವೇದಾಧ್ಯಯನದ ಅಧಿಕಾರವಿಲ್ಲ. ವೇದಾಧ್ಯಯನಕ್ಕೆ ಅಧಿಕಾರವಿಲ್ಲದ ಸ್ತ್ರೀಶೂದ್ರಾದಿಗಳು ಇತಿಹಾಸ ಪುರಾಣಗಳನ್ನು ಓದಬಹುದು. ಹೀಗೆಯೆ ಭಗವತ್ಸಾಕ್ಷಾತ್ಕಾರವನ್ನು ಪಡೆಯುವ ಇಷ್ಟ ಉಳ್ಳವರಿಗೆ ಅಧಿಕಾರಬೇಕು. ಎಲ್ಲರಿಗೂ ಉಪಾಸನಾಧಿಕಾರವಿರುವುದಿಲ್ಲ. ಅವರವರ ರುಚಿ, ಮನೋಧರ್ಮ, ವಿರಕ್ತಿ, ಶಕ್ತಿಗಳನ್ನು ಪರಿಗಣಿಸಿ ಅಧಿಕಾರವನ್ನು ನಿಶ್ಚಯಿಸುತ್ತಾರೆ. ವೇದಾಂತ ಬ್ರಹ್ಮಜ್ಞಾನವನ್ನೇ ತಾತ್ಪರ್ಯವಾಗಿಟ್ಟುಕೊಂಡಿದೆಯಷ್ಟೆ. ಬ್ರಹ್ಮಜ್ಞಾನವನ್ನು ಪಡೆಯಬೇಕೆಂದರೂ ಅಧಿಕಾರವಿರಬೇಕು. ಬಾದರಾಯಣರ ಬ್ರಹ್ಮಸೂತ್ರಗಳಲ್ಲಿ ಮೊದಲನೆಯ ಸೂತ್ರವಾದ ಅಥಾತೋ ಬ್ರಹ್ಮಜಿಜ್ಞಾಸಾ ಎಂಬಲ್ಲಿ ಅಥ ಎನ್ನುವ ಮಾತಿಗೆ, ಅಧಿಕಾರ ಪಡೆದ ಮೇಲೆ ಎಂದು ಅರ್ಥ ಮಾಡುತ್ತಾರೆ. ಇಲ್ಲಿ ಅಧಿಕಾರವೆಂದರೆ ಶಮದಮಾದಿ ಸಾಧನಸಂಪತ್ತು. ಶೀಲ ಶುದ್ಧಿಯಾಗದೆ ಬ್ರಹ್ಮಜ್ಞಾನ ಸಾರ್ಥಕವಾಗಲಾರದು, ಎಂದು ದಾರ್ಶನಿಕರ ನಿಲುವು. ಸತ್ತ್ವಶುದ್ಧಿ ಮುಖ್ಯವಾದುದೆಂದು ಭಗವದ್ಗೀತೆ ಹೇಳುತ್ತದೆ. ಪ್ರಾಪಂಚಿಕ ವ್ಯವಹಾರಗಳಲ್ಲಿಯೇ ಆಸಕ್ತನಾಗಿರುವವನಿಗೆ ಬ್ರಹ್ಮಜ್ಞಾನದ ಅಧಿಕಾರವಿಲ್ಲ. ಅರತಿರ್ಜನಸಂಸದಿ, ದ್ವಂದ್ವಾತೀತೋ ವಿಮತ್ಸರಃ, ವೀತರಾಗಭಯಕ್ರೋಧಃ, ವಿಗತಜ್ವರಃ ಮುಂತಾದುವು ಅಧಿಕಾರವನ್ನು ಹೇಳುವ ಮಾತುಗಳು. ವೈರಾಗ್ಯವೂ ಅಧಿಕಾರಗಳಲ್ಲಿ ಒಂದು; ವೈರಾಗ್ಯವಿಲ್ಲದೆ ಏಕಾಗ್ರತೆ ಬಾರದು. ಅದು ಬಾರದೆ ಅನುಸಂಧಾನ ಸಿದ್ಧಿಸುವುದಿಲ್ಲ. ಇದಕ್ಕಾಗಿಯೇ ಪತಂಜಲಿಯ ಸೂತ್ರ ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧಃ–ಎಂದು ಚಿತ್ತವೃತ್ತಿ ನಿರೋಧದ ಉಪಾಯವನ್ನು ಹೇಳುತ್ತದೆ. ಶ್ರವಣ, ಮನನ, ನಿಧಿಧ್ಯಾಸನಗಳಿಗೆ ಬೇರೆ ಬೇರೆ ಅಧಿಕಾರವನ್ನೂ ಹೇಳುವ ಪರಿಪಾಠ ಉಂಟು. ಬ್ರಹ್ಮಜಿಜ್ಞಾಸುವಾದವನು ಗುರುವನ್ನು ಪಡೆದು, ಅವನಿಂದ ದೀಕ್ಷೆಯನ್ನು ಹೊಂದಬೇಕು ಎನ್ನುವ ವಿಧಿಯೂ ಇದೆ (ಆಚಾರ್ಯವಾನ್ ಪುರುಷೋ ವೇದ). ಹೀಗೆ ಗುರುವಿನ ಮುಖಾಂತರ ದೀಕ್ಷೆಯನ್ನು ತಳೆಯುವುದು ಅಗ್ರಅಧಿಕಾರ. ಗುರುವಿನ ಬಳಿ ಬ್ರಹ್ಮಚರ್ಯ ನಡೆಸಬೇಕು ಎನ್ನುವ ಮಾತಿನಲ್ಲಿ ಶೀಲಯುಕ್ತನಾಗಿ, ಅಧಿಕಾರಗಳನ್ನು ಪಡೆದುಕೊಳ್ಳಬೇಕು ಎನ್ನುವುದು ಸೂಚಿತವಾಗಿದೆ. (ಎಸ್.ಕೆ.ಆರ್.)

**ಅಧಿಕಾರದಂಡ :** ಫೀಲ್ಡ್‌ಮಾರ್ಷಲ್ ಎಂಬ ಸೈನ್ಯದ ಮುಖ್ಯಾಧಿಪತಿಗೆ ಆತನ ಅಧಿಕಾರಸೂಚಕವಾಗಿ ಕೊಟ್ಟ ಅಲಂಕೃತದಂಡ (ಬ್ಯಾಟನ್). ಒಬ್ಬ ಪೊಲೀಸನು ಹಿಡಿಯುವ ಮರದ ಮೋಟುಕೋಲಿಗೂ ಸಂಗೀತದ ವಾದ್ಯಮೇಳಗಳಲ್ಲಿ ಮೇಳನಾಯಕ ಮಿಕ್ಕ ಸಂಗೀತಗಾರರಿಗೆ ಆದೇಶಗಳನ್ನು ಕೊಡುವುದಕ್ಕಾಗಿ ಉಪಯೋಗಿಸುವ ಚಿಕ್ಕ ಕೋಲಿಗೂ ಇದೇ ಹೆಸರಿದೆ. (ಎ.ಎನ್.ಎಸ್.ಎಂ.)

**ಅಧಿಕಾರದರ್ಜೆ :** ಆಡಳಿತವ್ಯವಸ್ಥೆಯಲ್ಲಿ ಕೆಲಸಗಳು ಸುಸೂತ್ರವಾಗಿ ನಡೆಯಲು ಅನುಕೂಲವಾಗುವಂತೆ ಅಧಿಕಾರದರ್ಜೆಯಲ್ಲಿ ಅನೇಕ ಶ್ರೇಣಿಗಳನ್ನು ನಿರ್ಮಿಸಿ, ಅದರಲ್ಲಿ ಮೇಲಿನಿಂದ ಕೆಳಕ್ಕೂ ಕೆಳಗಿನಿಂದ ಮೇಲಕ್ಕೂ ಅಧಿಕಾರ ಹರಿಯುವಂತೆ ಮಾಡುವ ಕ್ರಮಬದ್ಧವಾದ ವ್ಯವಸ್ಥೆ. ಈ ಅಧಿಕಾರದರ್ಜೆಯನ್ನು (ಹೈರಾರ್ಕಿ) ಕೆಲವುಸಾರಿ ಪಿರಮಿಡ್ಡುಗಳಿಗೂ ಮತ್ತು ದೇವಸ್ಥಾನದ ಗೋಪುರಗಳಿಗೂ ಹೋಲಿಸಿದ್ದಾರೆ. ಪಿರಮಿಡ್ಡುಗಳು ಅಥವಾ ಗೋಪುರಗಳು ಯಾವ ರೀತಿ ಅಡಿಯಲ್ಲಿ ಅಗಲವಾಗಿದ್ದು ಮೇಲಕ್ಕೆ ಹೋಗುತ್ತ ಚೂಪಾಗುವುವೋ ಅದೇ ರೀತಿ ಅಧಿಕಾರದರ್ಜೆಯೂ ಇರಬೇಕು. ಪ್ರತಿ ಇಲಾಖೆಯಲ್ಲೂ ಅನೇಕ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಇಲಾಖೆಯಲ್ಲಿ ಕೆಳಗಿನಿಂದ ಮೇಲಿನವರೆಗೂ ಸರಪಳಿಯೋಪಾದಿಯಲ್ಲಿ ಅವರೆಲ್ಲ ಹೊಂದಿಕೊಂಡಿರುತ್ತಾರೆ. ಅವರ ದರ್ಜೆಗನುಗುಣವಾಗಿ ಅಧಿಕಾರಿಗಳು ಬೇರೆ ಬೇರೆ ಹಂತಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅವರುಗಳಿಗೆ ಕೆಳಗಿನ ಅಧಿಕಾರಿಗಳೂ ಮೇಲಿನ ಅಧಿಕಾರಿಗಳೂ ಇರುತ್ತಾರೆ. ಅವರೆಲ್ಲರ ಮೇಲೆ ಇಲಾಖಾಧಿಕಾರಿಗಳಿರುತ್ತಾರೆ. ಅಧಿಕಾರದರ್ಜೆಯಲ್ಲಿ ಮೇಲಧಿಕಾರಿ ತನ್ನ ಕೆಳ ಅಧಿಕಾರಿಗಳಿಗೆ ನಿರ್ದೇಶನ ಕೊಡುತ್ತಾನೆ. ಅವನು ತನ್ನ ಕೆಳಗಿನ ಅಧಿಕಾರಿಗಳಿಗೆ ಕರ್ತವ್ಯಗಳನ್ನು ಹಂಚಿ, ಅವುಗಳ ಉಸ್ತುವಾರಿಯನ್ನು ನೋಡುತ್ತಾನೆ. ಅವರೆಲ್ಲರ ಮೇಲ್ವಿಚಾರಣೆ ಮುಖ್ಯಾಧಿಕಾರಿಗೆ ಸೇರಿದ್ದು. ಆದ್ದರಿಂದ ಕೆಳ ಅಧಿಕಾರಿಗಳೆಲ್ಲ ಮುಖ್ಯಾಧಿಕಾರಿಗೆ ಜವಾಬ್ದಾರರು. ಈ ತತ್ತ್ವದ ಪ್ರಕಾರ ಅಧಿಕಾರ ಮೇಲಿನಿಂದ ಕೆಳಕ್ಕೂ ಮತ್ತು ಕೆಳಗಿನಿಂದ ಮೇಲಕ್ಕೂ ಹರಿಯುತ್ತಿರುತ್ತದೆ; ಕೆಳ ಅಧಿಕಾರಿಗಳು ಮೇಲಧಿಕಾರಿಗಳ ತೀರ್ಮಾನವನ್ನು ಒಪ್ಪಿಕೊಳ್ಳಲೇ ಬೇಕು. ಹಾಗೇನಾದರೂ ಒಪ್ಪಿಕೊಳ್ಳದಿದ್ದಲ್ಲಿ ಆಡಳಿತವ್ಯವಸ್ಥೆಯಲ್ಲಿ ಆಗಿಂದಾಗ್ಗೆ ಬಿಕ್ಕಟ್ಟುಗಳಿಗೆ ಅವಕಾಶವಾಗುತ್ತದೆ. ಆದ್ದರಿಂದ ಅಧಿಕಾರದರ್ಜೆ ಆಡಳಿತದಲ್ಲಿ ಕೆಲಸಗಳು ಇಮ್ಮಡಿಸದಂತೆಯೂ ಮೇಲುಸೇರುವೆಯಾಗದಂತೆಯೂ ಮತ್ತು ತೊಡಕೇಳದಂತೆಯೂ ಸಮರ್ಪಕವಾಗಿ ಕೆಲಸ ನೆರವೇರಲು ಸಹಕಾರಿಯಾಗುತ್ತದೆ.

ಅಧಿಕಾರದರ್ಜೆ ನಿಯಮದ ಪ್ರಕಾರ ಯಾವ ದರ್ಜೆಯನ್ನೂ ಬಿಟ್ಟು ಕೆಲಸ ಮಾಡುವಂತಿಲ್ಲ. ಕೆಳಗಿನಿಂದ ಕ್ರಮಬದ್ಧವಾಗಿ ಮೇಲ್ದರ್ಜೆಗೆ ಹೋಗಬೇಕೆಂಬ ನಿಯಮ ಶಾಸನಬದ್ಧವಾಗಿಯೂ ಮತ್ತು ಪರಮಪ್ರಧಾನವಾಗಿಯೂ ಇದೆ. ಈ ನಿಯಮದಲ್ಲಿ ಈ ಅಂಶಗಳು ಮುಖ್ಯವಾದುವು: ಇಲಾಖೆಯ ಎಲ್ಲ ಸುದ್ದಿಗಳೂ ಕೆಳಮಟ್ಟದ ನೌಕರನಿಗೆ ಅಥವಾ ಅಧಿಕಾರಿಗೆ ಅವನಿಗೆ ಅತ್ಯಂತ ಹತ್ತಿರವಿರುವ ಮೇಲ್ದರ್ಜೆಯ ಅಧಿಕಾರಿಯಿಂದ ಬರತಕ್ಕದ್ದು; ಹಾಗೆ ಬಂದದ್ದು ಮೇಲಕ್ಕೂ ಹೊರಕ್ಕೂ ಹೋಗತಕ್ಕದ್ದು. ಈ ಕ್ರಮಾನುಸರಣೆಯಿಂದಲೇ ಸರಕಾರ ಅನೇಕ ವಿವಾದಾಂಶಗಳನ್ನು ವಿವೇಕದಿಂದ ತೀರ್ಮಾನಿಸಲು ಸಾಧ್ಯವಾಗುವುದು. ಅಲ್ಲದೆ ಅಧಿಕಾರಿಗಳು ಕೂಡ ತಮ್ಮ ಸಿಬ್ಬಂದಿಯ ಮೇಲೆ ಹತೋಟಿ ಇಟ್ಟುಕೊಂಡು ಕೆಲಸ ನಡೆಸಲು ಸಾಧ್ಯವಾಗುವುದು.

ಈ ನಿಯಮದಲ್ಲೂ ಕೆಲವು ಲೋಪದೋಷಗಳಿವೆ: ಕೆಲಸಕಾರ್ಯಗಳು ಆಗಬೇಕಾದರೆ ವಿಳಂಬವಾಗುತ್ತದೆ, ಕಟ್ಟುನಿಟ್ಟಾಗಿ ಪಾಲಿಸಿದರೆ ಜನರಿಗೆ ತೊಂದರೆಯೂ ಆಗುತ್ತದೆ. ಆದುದರಿಂದ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಅಸಮರ್ಥ ಆಡಳಿತಕ್ಕೆ ಕಾರಣವಾಗುತ್ತದೆಂದು ಕೆಲವರ ಅಭಿಪ್ರಾಯ. (ಎಂ.ಕೆ.ಆರ್.; ಕೆ.ವಿ.ವಿ.)

**ಅಧಿಕಾರ ಪ್ರತಿನಿಯೋಗ :** ಅಧಿಕಾರವನ್ನು ಕೇಂದ್ರ ಸರ್ಕಾರದಿಂದ ಸ್ಥಳೀಯ ಸರ್ಕಾರಕ್ಕಾಗಲೀ ಸರ್ಕಾರದ ಒಂದು ಶಾಖೆಯಿಂದ ಮತ್ತೊಂದು ಶಾಖೆಗಾಗಲೀ ನಿರ್ದಿಷ್ಟ ನಿಯೋಗಕ್ಕಾಗಲೀ ವರ್ಗಾಯಿಸುವುದು (ಡೆಲಿಗೇಷನ್ ಆಫ್ ಪವರ್). ಅಧಿಕಾರವನ್ನು ಪಾರ್ಲಿಮೆಂಟಿನಿಂದ ಅಥವಾ (ಅಮೆರಿಕದಲ್ಲಾದರೆ ಶಾಸನಸಭೆ), ಮಂತ್ರಿಮಂಡಲದ ಸದಸ್ಯರಿಗೆ ಅಥವಾ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿನ ಚುನಾಯಿತ, ನಿಯೋಜಿತ ರಾಷ್ಟ್ರಾಧ್ಯಕ್ಷನಿಗೆ, ಕಾರ್ಯಶಾಖೆಗೆ, ಇಲ್ಲದೆ ಅಧಿಕಾರಿಗಳಿಗೆ ಅಥವಾ ಶಾಸನಾನುಸಾರವಾಗಿ ಅಧಿಕಾರವಿರುವ ಆಡಳಿತಗಾರನಿಗೆ ಇಲ್ಲವೆ ಸ್ವತಂತ್ರವಾದ ಕಾನೂನುಬದ್ಧವಾದ ಒಂದು ಮಂಡಳಿಗೆ ನಿರೂಪದ ಮೂಲಕ ವರ್ಗಾಯಿಸಿದಾಗ ಅಧಿಕಾರ ಪ್ರತಿನಿಯೋಗವಾಯಿತೆನ್ನಬಹುದು.

ಹೆಚ್ಚುಹೆಚ್ಚಾಗಿ ಅಧಿಕಾರವನ್ನು ಮತ್ತೊಂದು ನಿಯೋಗಕ್ಕೆ ಅಥವಾ ನಿಯೋಗಿಗೆ ವಹಿಸಿಕೊಡಬೇಕೆಂಬುದೇ ಈಗಿನ ಪಾರ್ಲಿಮೆಂಟ್, ಕಾಂಗ್ರೆಸ್ ಮತ್ತು ಶಾಸನಸಭೆಗಳ ಉದ್ದೇಶವಾಗಿದೆ. ಸರ್ಕಾರಿ ಆಡಳಿತದಲ್ಲಿ ಅಧಿಕಾರ ಪ್ರತಿನಿಯೋಗದ ಆವಶ್ಯಕತೆ ಇದ್ದೇ ಇದೆ. ಶಾಸನಸಭೆಯ ಕೆಲಸಕಾರ್ಯಗಳು ತುಂಬ ಹೆಚ್ಚಿವೆ; ಕಾನೂನಿನ ಶಾಸ್ತ್ರ ತಂತ್ರಗಳೂ ಹೆಚ್ಚಿವೆ. ಸದಸ್ಯರಿಗೆ ಕಾನೂನುಗಳನ್ನು ವಿಶದವಾಗಿ ಪರಿಶೀಲಿಸುವಷ್ಟು ಅವಕಾಶವೂ ಇರುವುದಿಲ್ಲ. ಅಲ್ಲದೆ ಅಧಿಕಾರ ಪ್ರತಿನಿಯೋಗವಿಲ್ಲದಿದ್ದರೆ ಸರ್ಕಾರಿ ಇಲಾಖೆಗಳ ಮುಖ್ಯಸ್ಥರಿಗೂ ಕೆಲಸಮಾಡಲು ಕಷ್ಟವಾಗುತ್ತದೆ. ಪ್ರತಿನಿಯೋಗ ಶಾಸನಬದ್ಧವಾಗಿ ಕಾನೂನಿಗೊಳಪಟ್ಟು ನಡೆದಿರಬೇಕು. ಹಾಗಾಗದಿದ್ದಲ್ಲಿ ತೊಡಕುಂಟಾಗುತ್ತದೆ. ಉದಾಹರಣೆಗೆ, ಅಮೆರಿಕದಲ್ಲಿ ಅಮೆರಿಕದ ಪರಮಾಧಿಕಾರ ನ್ಯಾಯಸ್ಥಾನ (ಸುಪ್ರೀಂಕೋರ್ಟ್) ಎರಡು ಮಹತ್ತ್ವದ ಮೊಕದ್ದಮೆಗಳಲ್ಲಿ (1935) ನ್ಯಾಷನಲ್ ಇಂಡಸ್ಟ್ರಿಯಲ್ ರಿಕವರಿ ಆ್ಯಕ್ಟನ್ನು (1933) ಹೊಡೆದುಹಾಕಿ ತೀರ್ಪುಕೊಟ್ಟಿತು. ಅಮೆರಿಕದ ಕಾಂಗ್ರೆಸ್ಸಿಗೆ ಶಾಸನಸಭೆಯ ಅಧಿಕಾರವನ್ನು ಅಮೆರಿಕದ ರಾಷ್ಟ್ರಾಧ್ಯಕ್ಷನಿಗಾಗಲಿ ಕಾರ್ಯಶಾಖೆಯ ನಿಯೋಗಕ್ಕಾಗಲಿ ಶಾಸನಬದ್ಧವಾಗಿ ವರ್ಗಾಯಿಸುವುದಕ್ಕೆ, ವಹಿಸಿಕೊಡುವುದಕ್ಕೆ ಅಧಿಕಾರವಿಲ್ಲವೆಂದು ಅದು ಹೇಳಿತು. ಮತ್ತೊಂದು ಮೊಕದ್ದಮೆಯಲ್ಲಿ ಅದೇ ಸುಪ್ರೀಂಕೋರ್ಟು ಕಾಂಗ್ರೆಸ್ ದೇಶೀಯ ಸರ್ಕಾರಗಳಿಗೆ ವ್ಯವಸ್ಥಾಬದ್ಧವಾದ ಅಧಿಕಾರವನ್ನು ವಹಿಸಿಕೊಡಕೂಡದೆಂದು ತೀರ್ಪುಕೊಟ್ಟಿತು. ಅಮೆರಿಕದ ಕಾಂಗ್ರೆಸ್ ದೊಡ್ಡ ಪ್ರಮಾಣದಲ್ಲಿ ನಿಯೋಜಿತ ಅಧಿಕಾರವನ್ನು ವಿದೇಶಿ ವ್ಯವಹಾರಮಾಡಲು ಅನುಕೂಲವಾಗುವಂತೆ ರಾಷ್ಟ್ರಾಧ್ಯಕ್ಷರಿಗೆ ವಹಿಸಿಕೊಟ್ಟಾಗ ಸುಪ್ರೀಂಕೋರ್ಟು ಅದನ್ನು ಎತ್ತಿಹಿಡಿಯಿತು.

ನಿಯೋಜಿತ ಅಧಿಕಾರ ವಹಿಸಿಕೊಟ್ಟದ್ದು ನ್ಯಾಯದೃಷ್ಟಿಯಲ್ಲಿ ಸರಿಯೆಂದು ಎಣಿಸಬೇಕಾದರೆ, ಅಮೆರಿಕದ ಕಾಂಗ್ರೆಸ್ ಮೊದಲು ಸರ್ಕಾರ ಯಾವ ಕಾರ್ಯನೀತಿ ಅನುಸರಿಸಬೇಕೆಂಬುದನ್ನು ನಿರ್ಧರಿಸಬೇಕು ಮತ್ತು ದಾರಿ ತೋರಿ ನಡೆಸುವ ತತ್ತ್ವ ಅಥವಾ ಪ್ರಮಾಣವನ್ನು ನಿಷ್ಕೃಷ್ಟವಾಗಿ ತಿಳಿಯಪಡಿಸಬೇಕು ಎಂಬ ಸಾಮಾನ್ಯ ನಿಯಮವನ್ನು ಅಮೆರಿಕದ ಸುಪ್ರೀಂಕೋರ್ಟು ಹೇಳಿದೆ.

ಅಧಿಕಾರಪ್ರತಿಯೋಗ ಸ್ವಲ್ಪವಾಗಿರಬಹುದು; ಷರತ್ತುಗಳೊಂದಿಗೆ ಅಥವಾ ಯಾವ ಷರತ್ತೂ ಇಲ್ಲದೆ ವಿಧಿವಿಹಿತವಾಗಿ ಅಥವಾ ಯಾವವಿಧಿಯೂ ಇಲ್ಲದೆ ಮಾಡಿದ್ದಾಗಿರಬಹುದು. ನೇರವಾಗಿ ಆಗಲಿ ನೇರವಾದ ಸಂಬಂಧವಿಲ್ಲದೆ ಮತ್ತೊಬ್ಬರ ಅಥವಾ ಮತ್ತೊಂದರ ಮೂಲಕ ಮಾಡಿದ್ದಾಗಿರಬಹುದು. ಯಾವ ಆಡಳಿತವನ್ನು ತೆಗೆದುಕೊಂಡು ನೋಡಿದರೂ ಇದರ ಆವಶ್ಯಕತೆ ಇದ್ದೇ ಇದೆ. ಆದರೆ ಇದಕ್ಕೆ ಒಂದು ಪರಿಮಿತಿ ಇದೆ. ಮಿತಿಯಿಲ್ಲದೆ ಮಾಡುವಹಾಗಿಲ್ಲ. ಈ ಪರಿಮಿತಿ ಇದ್ದರೆ ಮಾತ್ರ ಇಲಾಖೆಗಳ ಮುಖ್ಯಾಧಿಕಾರಿಗಳಿಗೆ ಸಿಬ್ಬಂದಿಯ ಮೇಲೆ ಹತೋಟಿ ಇಟ್ಟುಕೊಂಡು ಕಾರ್ಯನಿರ್ವಹಣೆಮಾಡಲು ಸಾಧ್ಯ.

(ಕೆ.ವಿ.ವಿ.)

**ಅಧಿಕಾರ ಪ್ರಾಬಲ್ಯವಾದ :** ಪ್ರಜಾಪ್ರಭುತ್ವ ವಿಫಲವಾಗಿ ಸರ್ವಾಧಿಕಾರ ಪ್ರಭುತ್ವ ತಲೆಯೆತ್ತಿದಾಗ ಕಂಡುಬರುವ ರಾಜಕೀಯವ್ಯವಸ್ಥೆಗೆ ಈ ಹೆಸರಿದೆ (ಅಥಾರಿಟೇರಿಯನಿಸಂ). ಒಂದನೆಯ ಮಹಾಯುದ್ಧದ ತರುವಾಯ ಯುರೋಪಿನಲ್ಲಿ ಅಲ್ಲಲ್ಲಿ ಇಂಥ ಪ್ರಭುತ್ವಗಳು ಕಾಣಿಸಿಕೊಂಡುವು. ಹೀಗಾಗಿ ಇಟಲಿಯಲ್ಲಿ ಫ್ಯಾಸಿಸ್ಟ್ ಆಳ್ವಿಕೆಯೂ ಜರ್ಮನಿಯಲ್ಲಿ ಹಿಟ್ಲರನ ಆಳ್ವಿಕೆಯೂ ರಷ್ಯದಲ್ಲಿ ಕಮ್ಯೂನಿಸ್ಟ್ ಆಳಿಕೆಯೂ ಬೇರೂರಿದುವು. ಎರಡನೆಯ ಮಹಾಯುದ್ಧದ ಅನಂತರ ಪ್ರಪಂಚದ ಅನೇಕ ಕಡೆಗಳಲ್ಲಿ ಈ ವಾದ ಆವಿರ್ಭವಿಸಿತು. ಚೀನ, ಬರ್ಮ, ಇಂಡೋನೇಷ್ಯ, ಈಜಿಪ್ಟ್, ಯೂಗೋಸ್ಲಾವಿಯ, ಚೆಕೊಸ್ಲೊವಾಕಿಯ ಮೊದಲಾದ ದೇಶಗಳಲ್ಲಿ ಅಧಿಕಾರಪ್ರಾಬಲ್ಯವಾದ ತಲೆ ಎತ್ತಿತು.

ಒಂದು ದೇಶದ ರಾಜಕೀಯ ಅನಿಶ್ಚಿತತೆ, ಆರ್ಥಿಕಮುಗ್ಗಟ್ಟು, ದುರಾಡಳಿತ ಮುಂತಾದ ಸನ್ನಿವೇಶಗಳು ಸರ್ವಾಧಿಕಾರಪ್ರಭುತ್ವಕ್ಕೆ ನಾಂದಿಯಾಗಬಹುದು; ಮುರಿದುಬೀಳುತ್ತಿರುವ ಸಂವಿಧಾನವನ್ನು ಬದಿಗಿರಿಸಿ ಹೊಸರಾಜಕೀಯ ವ್ಯವಸ್ಥೆಯನ್ನು ರೂಪಿಸಿಕೊಂಡು ಮಹತ್ವಾಕಾಂಕ್ಷೆಯುಳ್ಳ ಜನ ತಮ್ಮ ಅಧಿಕಾರ ಸ್ಥಾಪಿಸಿಕೊಳ್ಳಬಹುದು. ಪ್ರಜಾಮುಖಂಡರೇ ಸರ್ವಾಧಿಕಾರಿಗಳಾಗಿ ಮುಂದೆ ಬರಬಹುದು; ಇಲ್ಲವೇ ಸೇನಾಧಿಪತಿಗಳು ತಾವೇ ಸರ್ಕಾರದ ಸೂತ್ರಗಳನ್ನು ಹಿಡಿದು ತಮ್ಮ ಪ್ರಭುತ್ವ ಸ್ಥಾಪಿಸಬಹುದು. ಮತ, ಧರ್ಮ, ಜಾತಿ ಮುಂತಾದ ಒಡಕುಗಳು ಹೆಚ್ಚಾಗಿರುವ, ಶಿಕ್ಷಣಾಭಾವವಿರುವ ಹಿಂದುಳಿದ ಸಮಾಜದಲ್ಲಿ ಸರ್ವಾಧಿಕಾರ ಪ್ರಭುತ್ವ ತಲೆ ಎತ್ತಿ ಬಹುದಿನ ಬಾಳಬಲ್ಲದು. ಜನರಲ್ಲಿ ಸ್ವಾತಂತ್ರ್ಯ ಪ್ರೇಮವಿರದಿದ್ದರಂತೂ ಸರ್ವಾಧಿಕಾರಿಗಳು ಅಡೆತಡೆಯಿಲ್ಲದೆ ಜನರ ಮೇಲೆ ಅಧಿಕಾರವನ್ನು ನಡೆಸಬಹುದು. ಸರ್ವಾಧಿಕಾರವೇರ್ಪಟ್ಟಮೇಲೆ ಸರ್ಕಾರಕ್ಕೆ ತಲೆಬಾಗಿ ನಡೆಯದ ವ್ಯಕ್ತಿ ಮತ್ತು ಪಕ್ಷಗಳನ್ನು ಹತ್ತಿಕ್ಕಲಾಗುವುದರಿಂದ ಪ್ರಜಾಸ್ವಾತಂತ್ರ್ಯ ಮಾಯವಾಗುತ್ತದೆ. ಸರ್ಕಾರದ ನೀತಿಗಳನ್ನು ಟೀಕಿಸುವ ಹಕ್ಕು ಪ್ರಜೆಗಳಿಗೆ ಇರುವುದಿಲ್ಲ. ಹೀಗಾಗಿ ಅಧಿಕಾರ ಪ್ರಾಬಲ್ಯವಾದವಿರುವಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕೆ ಎಡೆಯಿಲ್ಲ; ವ್ಯಕ್ತಿ ಮತ್ತು ಸಂಘಸ್ವಾತಂತ್ರ್ಯಗಳಿಗೆ ಅವಕಾಶವಿಲ್ಲ. ಕ್ರಾಂತಿಯಿಂದ ಮಾತ್ರ ಸರ್ಕಾರವನ್ನು ಬದಲಾಯಿಸಬೇಕಾಗುತ್ತದೆ. ಆದರೆ ಸರ್ವಾಧಿಕಾರ ಪ್ರಭುತ್ವದಲ್ಲಿ ಆಡಳಿತದಕ್ಷತೆಯುಂಟು. ಸರ್ಕಾರ ಜನರ ಆರ್ಥಿಕ ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸಲು ಸಾಧ್ಯವಿದೆ. ಉದಾ: ಜರ್ಮನಿಯ ಆರ್ಥಿಕಸ್ಥಿತಿಯನ್ನು ಹಿಟ್ಲರ್ ಅಲ್ಪಕಾಲದಲ್ಲಿ ಯಶಸ್ವಿಯಾಗಿ ಸುಧಾರಿಸಿದ. ಅಧಿಕಾರವಾದ ಸಂವಿಧಾನಾತ್ಮಕ ಅಥವಾ ನೈತಿಕ ಪರಿಮಿತಿಗಳನ್ನು ಅಂಗೀಕರಿಸುವುದಿಲ್ಲ. ಅಧಿಕಾರದಲ್ಲಿರುವವರು ಹೇಳಿದ್ದೇ ಮಾತು; ನಡೆದದ್ದೇ ದಾರಿ. ಅವರ ಮಾತನ್ನಾಗಲೀ ಕೃತಿಯನ್ನಾಗಲೀ ಪ್ರಶ್ನಿಸುವಂತಿಲ್ಲ. ಪ್ರಜಾಸತ್ತಾತ್ಮಕರಾಜ್ಯದಲ್ಲಿ ಕೂಡ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಆದರೆ ಇಲ್ಲಿ ಅಧಿಕಾರ ಚಲಾಯಿಸುವಾಗ ಸಂವಿಧಾನಾತ್ಮಕ ಅಥವಾ ಬೇರೆ ವಿಧವಾದ ಪರಿಮಿತಿಗಳನ್ನು ಗಮನಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಅಧಿಕಾರವಾದ ಪ್ರಜಾಪ್ರಭುತ್ವ ವಿರೋಧಿ.

ಸರ್ವಾಧಿಕಾರಿಗಳ ಆಳ್ವಿಕೆಯಿಂದ ತಾತ್ಕಾಲಿಕಪರಿಹಾರ ದೊರೆತರೂ ಜನರ ಸ್ವಾತಂತ್ರ್ಯ ದಾಹವನ್ನು ಅನಂತಕಾಲ ಹತ್ತಿಕ್ಕಲು ಸಾಧ್ಯವಿಲ್ಲ. ಮುಸಲೋನಿ ಮತ್ತು ಹಿಟ್ಲರನ ಪ್ರಭುತ್ವಗಳೂ ಕಡೆಗೊಮ್ಮೆ ಕುಸಿದುಬಿದ್ದುವು. ಸೋವಿಯತ್ ರಷ್ಯದಲ್ಲಿ ಸ್ಟಾಲಿನ್ ಮೊದಲಾದ ಸರ್ವಾಧಿಕಾರಿಗಳು ಪ್ರಬಲವಾದ ಪ್ರಭುತ್ವವನ್ನು ರಚಿಸಿ ಅಧಿಕಾರ ನಡೆಸಿ ಯಶಸ್ವಿಯಾಗಿರುವುದು ನಿಜವಾದರೂ ಆ ದೇಶದ ಭವಿಷ್ಯ ಕಾದು ನೋಡಬೇಕಾದ್ದಿದೆ. ಏನೇ ಆಗಲಿ ವ್ಯಕ್ತಿಯ ಆರೋಗ್ಯ ಕೆಟ್ಟಾಗ ಮರಳಿ ತನ್ನ ಆರೋಗ್ಯವನ್ನು ಪಡೆಯುವ ತನಕ ತಾತ್ಕಾಲಿಕ ಸ್ಥಿತ್ಯಂತರವನ್ನು ಅನುಭವಿಸುವಂತೆ ಒಂದು ಸಮಾಜದ ಪರಿಸ್ಥಿತಿ ಕೆಟ್ಟಾಗ ಸರ್ವಾಧಿಕಾರ ಪ್ರಭುತ್ವದ ಮರೆಹೋಗಬೇಕಾಗಬಹುದು. ಆದರೆ ಅದು ಶಾಶ್ವತ ವ್ಯವಸ್ಥೆಯಾಗಲಾರದು. (ಜಿ.ಎಸ್.ಎಚ್.)

**ಅಧಿಕಾರಷಾಹಿ ಆಡಳಿತ :** ದಬ್ಬಾಳಿಕೆಯ ಅಧಿಕಾರವನ್ನು (ಬ್ಯೂರಾಕ್ರಸಿ) ನಿರೂಪಿಸಲು ಈ ಪದವನ್ನು ಬಳಸುತ್ತಾರಾದರೂ ಇದರ ಅರ್ಥ ಮಾತ್ರ ಎಲ್ಲ ದೇಶಗಳಲ್ಲೂ ಎಲ್ಲ ಕಾಲದಲ್ಲೂ ಒಂದೇ ಸಮನಾಗಿಲ್ಲ. ಪ್ರಾಚೀನ ಚೀನದಲ್ಲಿದ್ದ ಆಡಳಿತಾಧಿಕಾರಿಗಳನ್ನು ಆರಿಸುವುದಕ್ಕೆ ಅಭ್ಯರ್ಥಿಗಳಿಗೆ ಪರೀಕ್ಷೆಗಳನ್ನೇರ್ಪಡಿಸುತ್ತಿದ್ದರು; ಇವುಗಳಲ್ಲಿ ಉತ್ತೀರ್ಣರಾದವರನ್ನೇ ಹುದ್ದೆಗಳಿಗೆ ನೇಮಿಸುತ್ತಿದ್ದರು. ಹುದ್ದೆ ದೊರಕಿದ ಮೇಲೆ ಈ ಅಧಿಕಾರಿಗಳು ನಿರಂಕುಶರಾಗಿ ಸ್ವೇಚ್ಛಾಡಳಿತ ನಡೆಸುವುದು ಸಾಮಾನ್ಯವಾಗಿತ್ತು. ರಾಜಪ್ರಭುತ್ವವಿದ್ದ (ಅದರಲ್ಲೂ ನಿರಂಕುಶಪ್ರಭುತ್ವ) ಆ ಕಾಲದಲ್ಲಿ ಅಧಿಕಾರಿಗಳೂ ರಾಜನಂತೆ ನಿರಂಕುಶರಾಗಿದ್ದುದೇನೂ ಆಶ್ಚರ್ಯವಲ್ಲ. ಆಳ್ವಿಕೆ ನಡೆಸುವ ಅಧಿಕಾರಿಗಳ ನೀತಿನಡತೆಗಳನ್ನು ಪ್ರಜೆಗಳು ಪ್ರಶ್ನಿಸುವಂತಿಲ್ಲ. ಬ್ರಿಟಿಷರ ಕಾಲದಲ್ಲೂ ಭಾರತದ ಆಡಳಿತ ಹೀಗೆಯೇ ಇತ್ತೆನ್ನಬಹುದು. ಅವರು ಪರಕೀಯರು; ತಮ್ಮ ಆಧಿಪತ್ಯವನ್ನು ಭದ್ರಪಡಿಸಿಕೊಂಡು ಇಂಗ್ಲೆಂಡಿನ ಹಿತಾರ್ಥಗಳನ್ನು ಸಾಧಿಸುವುದು ಅವರ ಪ್ರಥಮಕರ್ತವ್ಯವಾಗಿತ್ತು. ಅವರ ದೃಷ್ಟಿಯಲ್ಲಿ ಭಾರತೀಯರ ಕ್ಷೇಮ ಚಿಂತನೆಗೆ ಎರಡನೆಯ ಸ್ಥಾನ. ಪ್ರಜಾಕ್ಷೇಮಕ್ಕೆ ಆವಶ್ಯಕವಾದ ಅನೇಕ ಕಾರ್ಯಗಳನ್ನು ಅವರು ಮಾಡಿದರು ಎಂಬುದರಲ್ಲಿ ಸಂಶಯವಿಲ್ಲ; ಆದರೂ ಅವರ ಆಡಳಿತದ ಕುಂದುಕೊರತೆಗಳು ಅನೇಕ. ತಾವೇ ಉಚ್ಚಜನಾಂಗದವರೆಂಬ ಹಮ್ಮು, ಭಾರತೀಯರ ವಿಚಾರದಲ್ಲಿ ಅವರಲ್ಲನೇಕರು ಹೊಂದಿದ್ದ ತಿರಸ್ಕಾರಭಾವನೆ, ಆಡಳಿತನೀತಿಯಲ್ಲಿ ಇಂಗ್ಲೆಂಡಿನ ಹಿತಲಾಭಗಳಿಗೆ ಅವರು ಕೊಟ್ಟ ಸ್ಥಾನ – ಇವು ಅಧಿಕಾರಷಾಹಿ ಆಡಳಿತದಿಂದ ಬಂದುವು. ಇಂದಿಗೂ ಅಧಿಕಾರಷಾಹಿ ಪದಕ್ಕೆ, ಇಂಗ್ಲೆಂಡ್ ಅಮೆರಿಕ ಮುಂತಾದ ದೇಶಗಳಲ್ಲಿ ಅಗೌರವ ಸೂಚಕವಾದ ಒಳಾರ್ಥವಿದ್ದೇ ಇದೆ. ಜರ್ಮನಿಯಲ್ಲಿ ಮಾತ್ರ, ಬ್ಯೂರಾಕ್ರಸಿ ಎಂದರೆ ಪ್ರಾಮಾಣಿಕರಾಗಿ ಕರ್ತವ್ಯನಿಷ್ಠೆಯಿಂದ ಆಡಳಿತ ನಡೆಸುವ ಅಧಿಕಾರವರ್ಗ ಎಂಬ ಶ್ಲಾಘನೀಯ ಅರ್ಥವಿದೆ.

ತಾತ್ತ್ವಿಕವಾಗಿ ವಿವೇಚನೆ ಮಾಡಿದರೆ, ಪ್ರಜಾಪ್ರಭುತ್ವದಲ್ಲಿ ಅಧಿಕಾರಷಾಹಿಗೆ ಸ್ಥಾನವೇ ಇಲ್ಲ. ಅಲ್ಲಿ ಪ್ರಜೆಗಳೇ ಪ್ರಭುಗಳು; ಅವರ ಅಥವಾ ಅವರ ಪ್ರತಿನಿಧಿಗಳ, ತೀರ್ಮಾನಕ್ಕೆ ಎದುರು ಮಾತೇ ಇಲ್ಲ. ಆಡಳಿತ ನಡೆಸುವವರೆಲ್ಲ–ಮಂತ್ರಿಗಳು ಕೂಡ–ಆ ತೀರ್ಮಾನಗಳನ್ನು ಮನ್ನಿಸಿ ಅವಕ್ಕೆ ಅನುಸಾರವಾಗಿ ವರ್ತಿಸಬೇಕು. ಪ್ರಜೆಗಳ ಹಿತ, ಕ್ಷೇಮ, ಅಭ್ಯುದಯಗಳೇ ಅವರ ಗುರಿ. ಹೀಗೆ ಪ್ರಜಾಪ್ರಭುತ್ವದಲ್ಲಿ ಆಡಳಿತಾಧಿಕಾರಿಗಳು ಪ್ರಜಾಸೇವಕರಾಗುತ್ತಾರೆ; ಪ್ರಜೆಗಳಿಗೆ ಅಹಿತವಾದದ್ದೇನನ್ನೂ ಅವರು ಮಾಡಲಾರರು. ಆದರೆ ಇಂದಿನ ಪ್ರಜಾಪ್ರಭುತ್ವಗಳ ಸ್ಥಿತಿಗತಿಗಳನ್ನು ನೋಡಿದರೆ, ಈ ವಾದಸರಣಿ ಕೇವಲ ತತ್ತ್ವಾಧಾರದ್ದೇ ಹೊರತು ವಾಸ್ತವಿಕಪರಿಸ್ಥಿತಿಯನ್ನು ಕುರಿತದ್ದಲ್ಲ ಎಂಬುದು ವೇದ್ಯವಾಗುತ್ತದೆ. ಇತ್ತೀಚೆಗೆ ವಿಜ್ಞಾನ ವಿಸ್ಮಯಕರವಾದ ರೀತಿಯಲ್ಲಿ ಮುಂದುವರಿಯುತ್ತಿದೆ; ಕೈಗಾರಿಕೋದ್ಯಮಗಳು ಬೃಹದಾಕಾರವನ್ನು ತಾಳಿವೆ; ಅಪಾರಧನಗಳಿಸಿ ಪ್ರಜಾಭಿಪ್ರಾಯವನ್ನು ಇಷ್ಟಬಂದಂತೆ ರೂಪಿಸಬಲ್ಲ ಶ್ರೀಮಂತವರ್ಗ ಬೆಳೆದಿದೆ; ಸಂಕೀರ್ಣವಾಗಿ ಮುಂದುವರಿದಿರುವ ಪತ್ರಿಕಾ ಪ್ರಪಂಚ ಅದರ ಬೆಂಬಲಕ್ಕಿದೆ. ಸರ್ಕಾರದ, ಕೈಗಾರಿಕಾ ಸಂಸ್ಥೆಗಳ, ಆಡಳಿತದಲ್ಲಿ ನಾನಾ ಶಾಖೆಗಳುಂಟಾಗಿ ಅವು ನುರಿತ ಪ್ರವೀಣರ ಕೈಸೇರಿವೆ; ಸಾಮಾನ್ಯಜನತೆ ಇವರ ನಿರ್ದೇಶನದಲ್ಲಿ ಮುಂದುವರಿಯಬೇಕು. ಪರಿಣಾಮವಾಗಿ, ಪ್ರಜಾಹಿತವೊಂದನ್ನೇ ಗುರಿಯಾಗಿಟ್ಟುಕೊಂಡು ಆಡಳಿತನೀತಿಯನ್ನು ರೂಪಿಸಿದರೂ ಅದರ ನಿರ್ವಹಣ ಪ್ರತಿಷ್ಠಿತ ಅಥವಾ ಪ್ರಭಾವಿತವ್ಯಕ್ತಿಗಳ ಕೈಗೆ ಸಿಕ್ಕಿ ಉದ್ದೇಶಸಾಧನೆಯಾಗದಿರಬಹುದು. ಪ್ರಾಮಾಣಿಕ, ಉದ್ಯೋಗಶೀಲತೆ, ನಿಷ್ಪಕ್ಷಪಾತ, ಕಾರ್ಯಸಮರ್ಥತೆ, ಪ್ರಗತಿಪರತೆ, ಸೌಜನ್ಯ, ಪ್ರಜಾಸಾಮಾನ್ಯರ ಕ್ಷೇಮಚಿಂತನೆ– ಇವು ಆಡಳಿತವರ್ಗದ ಎಲ್ಲ ಮಟ್ಟದವರಲ್ಲೂ ಬೆಳೆದು, ಅಕ್ರಮ ಸಂಪಾದನೆ, ಲಂಚ ಮೊದಲಾದ ದುರ್ವ್ಯಾಪಾರಗಳು, ಮೈಗಳ್ಳತನ, ಸ್ವಪಕ್ಷಪಾತ, ದುಂದುಗಾರಿಕೆ ಮುಖ್ಯವಾಗಿ ಅಧಿಕಾರದರ್ಪ; ಪ್ರಜಾಹಿತದ ವಿಷಯದಲ್ಲಿ ಉಪೇಕ್ಷೆ–ಇವು ನಿವಾರಿಸಲ್ಪಟ್ಟು, ಪ್ರಜಾಪ್ರಭುತ್ವದ ಆದರ್ಶಗಳಿಗನುಗುಣವಾದ ಆಡಳಿತಕ್ರಮವನ್ನು ರೂಪಿಸುವುದಕ್ಕೋಸ್ಕರ, ಸಂಶೋಧನೆಗಳು ಪ್ರಯೋಗಗಳು ಇತ್ತೀಚೆಗೆ ಹೆಚ್ಚುಹೆಚ್ಚಾಗಿ ನಡೆದಿವೆ. ಅಸಮರ್ಥ ಪ್ರಜಾಪ್ರಭುತ್ವ ಅಧಿಕಾರಷಾಹಿ ಆಡಳಿತಕ್ಕೆ ಎಡೆಮಾಡಿಕೊಡುತ್ತದೆಂಬ ಪ್ಲೇಟೊ ವಾಣಿ ಸದಾ ಜನತೆಯ ನೆನಪಿನಲ್ಲಿರಬೇಕಾದುದು ಅತ್ಯಗತ್ಯ.

(ಎ.ಎಂ.)

**ಅಧಿಕಾರಹಂಚಿಕೆ :** ಒಂದು ರಾಜ್ಯ ತನ್ನ ಅಧಿಕಾರಸೂತ್ರಗಳನ್ನು ಕೇಂದ್ರೀಕರಿಸಿಕೊಂಡಿರಬಹುದು ಅಥವಾ ಪ್ರಾಂತಗಳ ನಡುವೆ ವಿಭಜನೆ ಮಾಡಿಕೊಂಡಿರ ಬಹುದು. ಇಂಥ ಕ್ರಮಬದ್ಧವಾದ ವಿಭಜನಾ ವ್ಯವಸ್ಥೆಯೇ ಅಧಿಕಾರ ಹಂಚಿಕೆ (ಡಿಸ್ಟ್ರಿಬ್ಯೂಷನ್ ಆಫ್ ಪವರ್ಸ್). ಈ ಅಧಿಕಾರ ವಿಭಜನೆ ಆ ರಾಜ್ಯ ವ್ಯವಸ್ಥೆಯ ತಳಹದಿಯ ಮೇಲೆ ನಿಂತಿದೆ. ಅಧಿಕಾರವಿಭಜನೆ ನಡೆದ ಮೇಲೆ ಅದನ್ನು ಸುಲಭವಾಗಿಯೂ ಸಂಯುಕ್ತರಾಜ್ಯದ ಅಂಗಗಳ ಒಮ್ಮತವಿಲ್ಲದೆಯೂ ಬದಲಾಯಿಸಲು ಸಾಧ್ಯವಿರುವುದಿಲ್ಲ.

ರಾಜ್ಯವ್ಯವಸ್ಥೆ ಮೂರು ವಿಧಗಳಲ್ಲಿ ಅಧಿಕಾರವಿಭಜನೆ ಮಾಡಿಕೊಂಡಿರುವುದನ್ನು ನೋಡಬಹುದು. ಉದಾಹರಣೆಗೆ, 1. ಅಮೆರಿಕದ ರಾಜ್ಯದ ವ್ಯವಸ್ಥೆಯಲ್ಲಿ ಸಂಯುಕ್ತ ಸರ್ಕಾರಕ್ಕೆ ನಿರ್ದಿಷ್ಟವಾದ ಅಧಿಕಾರಗಳನ್ನು ನಿರ್ದೇಶಿಸಿದೆ; ಉಳಿದ ಅಧಿಕಾರಗಳೆಲ್ಲವನ್ನೂ ಪ್ರಾಂತಸರ್ಕಾರಗಳಿಗೆ ಬಿಟ್ಟಿದೆ. 2. ಕೆನಡ ಸಂಯುಕ್ತಸರ್ಕಾರದಲ್ಲಿ ಇದಕ್ಕೆ ವಿರುದ್ಧವಾದ ರಚನೆಯಿದೆ. ಅಂದರೆ, ನಿರ್ದಿಷ್ಟವಾದ ಅಧಿಕಾರಗಳನ್ನು ಪ್ರಾಂತಗಳಿಗೆ ಕೊಟ್ಟು ಮಿಕ್ಕ ಅಧಿಕಾರಗಳನ್ನು ಸಂಯುಕ್ತಸರಕಾರಕ್ಕೆ ಕೊಟ್ಟಿದೆ. 3. ಭಾರತದಲ್ಲಿ ಈ ರಚನೆಯೇ ಬೇರೆಯಾಗಿದೆ. ಇಲ್ಲಿ ಅಧಿಕಾರವನ್ನು ಮೂರು ವಿಧದಲ್ಲಿ ವಿಭಜನೆ ಮಾಡಲಾಗಿದೆ.

ಕೇಂದ್ರ ಪಟ್ಟಿ: ಇಲ್ಲಿ ಸಂಯುಕ್ತ ರಾಜ್ಯಕ್ಕೆ ನಿರ್ದಿಷ್ಟವಾದ ವಿಷಯಗಳನ್ನು ತಿಳಿಸಿದೆ. ರಾಜ್ಯಪಟ್ಟಿ: ಇಲ್ಲಿ ರಾಜ್ಯಗಳಿಗೆ ನಿರ್ದೇಶಿಸಿದ ವಿಷಯಗಳನ್ನು ನಮೂದಿಸಿದೆ. ಸಮವರ್ತಿ ಪಟ್ಟಿ: ಇಲ್ಲಿ ಒಕ್ಕೂಟ ಮತ್ತು ರಾಜ್ಯಗಳೆರಡಕ್ಕೂ ಸಂಬಂಧಪಟ್ಟ ವಿಷಯಗಳನ್ನು ನಮೂದಿಸಿದೆ.

ಎಲ್ಲ ರಾಜ್ಯವ್ಯವಸ್ಥೆಯಲ್ಲೂ ಕೇಂದ್ರ ಮತ್ತು ಅಂಗಗಳ ಮಧ್ಯೆ ಸಂಭವಿಸಬಹುದಾದ ವಿವಾದಗಳನ್ನು ಅಂತಿಮವಾಗಿ ಬಗೆಹರಿಸಲು ಒಂದು ನ್ಯಾಯಸ್ಥಾನವಿರುತ್ತದೆ (ಸುಪ್ರೀಂಕೋರ್ಟ್). (ಕೆ.ವಿ.ವಿ.)

**ಅಧಿಕೋಷ್ಣಕ :** ಅಧಿಕ ಒತ್ತಡದಲ್ಲಿರುವ ನೀರಿನ ಆವಿಗೆ ಹೆಚ್ಚಿನ ಉಷ್ಣವನ್ನು ಒದಗಿಸಿ ಆ ಆವಿಯ ಉಷ್ಣತೆ ಸಂತೃಪ್ತ ಉಷ್ಣತೆಯನ್ನು (ಸ್ಯಾಚುರೇಷನ್ ಟೆಂಪರೇಚರ್) ಮೀರಿ ಏರುವಂತೆ ಮಾಡುವ ಸಾಧನ (ಸೂಪರ್ ಹೀಟರ್). ನೀರಿನೊಡನೆ ಇರುವ ಆವಿಯನ್ನು ಎಷ್ಟು ಕಾಯಿಸಿದರೂ ನೀರಿನಿಂದ ಇನ್ನೂ ಹೆಚ್ಚಿನ ಆವಿ ಉತ್ಪನ್ನವಾಗುವುದೇ ವಿನಾ ಆವಿಯ ಉಷ್ಣತೆ ಏರುವುದಿಲ್ಲ. ಆದ್ದರಿಂದ ಆವಿಯನ್ನು ನೀರಿನಿಂದ ಬೇರ್ಪಡಿಸುವುದು ಆವಶ್ಯಕ. ಇದಕ್ಕಾಗಿ ಆವಿಯನ್ನು ಪ್ರತ್ಯೇಕ ನಾಳಗಳಿಗೆ ಸಾಗಿಸಿ ಅಲ್ಲಿ ಅದಕ್ಕೆ ಅಧಿಕ ಉಷ್ಣವನ್ನು ಒದಗಿಸಲಾಗುವುದು. ಹೀಗೆ ಅಧಿಕೋಷ್ಣ ಪಡೆದ ಆವಿಯ ಪ್ರತಿ ಪೌಂಡಿನಲ್ಲಿಯೂ ದೊರೆಯುವ ಚಲನಶಕ್ತಿ ಅಪಾರ. ಈ ಕಾರಣದಿಂದ ಉಗಿಸ್ಥಾವರಗಳಲ್ಲೆಲ್ಲ ಅಧಿಕೋಷ್ಣಕ ಒಂದು ಅನಿವಾರ್ಯ ಅಂಗ. ಆಧುನಿಕ ಉಗಿ ಉತ್ಪಾದಕಗಳಲ್ಲಿ (ಸ್ಟೀಮ್ ಜನರೇಟರ್ಸ್) ಅಧಿಕ ಒತ್ತಡದ ಜೊತೆಗೆ ಅಧಿಕ ಉಷ್ಣತೆಯೂ ಸೇರಿ ಅಧಿಕೋಷ್ಣಕದ ಪ್ರಾಮುಖ್ಯ ಹೆಚ್ಚುತ್ತಲೇ ಇದೆ. ಈ ಕಾರಣದಿಂದ ಅಧಿಕೋಷ್ಣಕಕ್ಕೆ ಹೊಂದುವಂತೆ ಆವಿಗೆಯನ್ನು ರೂಪಿಸಬೇಕೆಂಬ ಅನುಭವಸಿದ್ಧಾಂತ ಪ್ರಚಲಿತವಾಗಿದೆ.

ಉಷ್ಣವನ್ನು ಸ್ವೀಕರಿಸುವ ಬಗೆಯಿಂದಾಗಿ ಅಧಿಕೋಷ್ಣಕಗಳನ್ನು ಪ್ರಜ್ವಲನ ಮತ್ತು ಪ್ರಚಲನ ರೀತಿಯವೆಂದು ವಿಂಗಡಿಸಬಹುದು. ಪ್ರಜ್ವಲನ ಅಧಿಕೋಷ್ಣಕಗಳು ಕುಲುಮೆಯೊಳಗಿನ ಜ್ವಾಲೆಯನ್ನು ಸ್ಪರ್ಶಿಸುತ್ತಿರುವಂತೆ, ಗೋಡೆಯನ್ನು ತಂಪಾಗಿಡುವ ಸಾಧನವಿಸ್ತಾರದ ಒಂದು ಭಾಗವಾಗಿ ಅವನ್ನು ಅಳವಡಿಸಿರುವುದರಿಂದ ಜ್ವಾಲೆಯ ವಿಕಿರಣಉಷ್ಣವನ್ನು ಹೀರಿಕೊಳ್ಳುತ್ತವೆ. ಈ ರೀತಿಯ ಉಷ್ಣಪ್ರವಾಹ ಜ್ವಾಲೆಯ ಮತ್ತು ಅಧಿಕೋಷ್ಣಕದ ಉಷ್ಣತಾವ್ಯತ್ಯಾಸವನ್ನು ಮಾತ್ರ ಅವಲಂಬಿಸಿರುವುದರಿಂದ ಒಂದು ನಿರ್ದಿಷ್ಟ ಅವಧಿಯಲ್ಲಿ ಆಗುವ ಉಷ್ಣಪ್ರವಾಹದ ಮೊತ್ತ ಸುಮಾರು ಒಂದೇ ಸಮವಾಗಿರುತ್ತದೆ. ಇದರ ಪರಿಣಾಮ ಆವಿಯ ಸರಬರಾಜುವೇಗ ಕಡಿಮೆಯಿರುವಾಗ ಈ ಸಾಧನ ಹೆಚ್ಚು ಕಾವುಗೊಳ್ಳುವುದೂ ಮತ್ತು ಆವಿಯ ಸರಬರಾಜುವೇಗ ಹೆಚ್ಚು ಇರುವಾಗ ಕಡಿಮೆ ಕಾವುಗೊಳ್ಳುವುದೂ ಆಗಿರುತ್ತದೆ. ಅಂದರೆ, ತಿರುಬಾನಿಯ ಕಾರ್ಯಭಾರ (ವರ್ಕ್‌ಲೋಡ್) ಹೆಚ್ಚಿದಂತೆ ಅದಕ್ಕೆ ಒದಗಿಸುತ್ತಿರುವ ಆವಿಯ ಉಷ್ಣತೆ ಇಳಿಮುಖವಾಗುತ್ತದೆ.

ಪ್ರಚಲನ ಅಧಿಕೋಷ್ಣಕ ತನ್ನ ಮೈಮೇಲೆ ಹಾದುಹೋಗುವ ಅನಿಲಗಳಿಂದ ಉಷ್ಣವನ್ನು ಸ್ವೀಕರಿಸುತ್ತದೆ. ಇಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಆಗುವ ಉಷ್ಣಪ್ರವಾಹದ ಪ್ರಮಾಣ ಅಧಿಕೋಷ್ಣಕದ ಮೇಲೆ ಹಾಯುವ ಅನಿಲಗಳ ಒಟ್ಟು ಮೊತ್ತವನ್ನು ಅವಲಂಬಿಸಿರುತ್ತದೆ. ಕಾರ್ಯಭಾರ ಹೆಚ್ಚಿದಂತೆ ಅನಿಲಪ್ರವಾಹದ ವೇಗವೂ ಹೆಚ್ಚುವುದರಿಂದ, ಆವಿಯ ಸರಬರಾಜು ಹೆಚ್ಚುತ್ತಿರುವಂತೆ ಅದರ ಉಷ್ಣತೆಯೂ ಏರುತ್ತಿರುತ್ತದೆ. ಈ ಎರಡು ಬಗೆಯ ಅಧಿಕೋಷ್ಣಕಗಳು, ಉಷ್ಣತೆಯ ಬಗ್ಗೆ ತೋರಿಸುವ ವಿರುದ್ಧ ಪ್ರತಿಕ್ರಿಯೆ ಒಂದು ರೀತಿ ಅನುಕೂಲವಾಗಿದೆ ಎಂದೇ ಹೇಳಬೇಕು. ಏಕೆಂದರೆ ಈ ಎರಡೂ ರೀತಿಯ ಅಧಿಕೋಷ್ಣಕಗಳನ್ನು ಲೆಕ್ಕಾಚಾರ ಮಾಡಿದ ಅಳತೆಗಳಲ್ಲಿ ಒಂದು ಆವಿಗೆಯಲ್ಲಿ ಉಪಯೋಗಿಸಿ ಒಂದರ ಅನಂತರ ಇನ್ನೊಂದರಲ್ಲಿ ಆವಿ ಸಾಗುವಂತೆ ಮಾಡುವುದರಿಂದ ಒಂದು ಸಮತೋಲವೇರ್ಪಟ್ಟು ತಿರುಬಾನಿಯನ್ನು ತಲಪುವ ಅಧಿಕೋಷ್ಣಿತ ಆವಿಯ ಉಷ್ಣತೆ ಆವಿಯ ಸರಬರಾಜುವೇಗದಲ್ಲಿ ಏನೇ ಏರಿಳಿತವಿರಲಿ, ಹೆಚ್ಚು ಕಡಿಮೆ ಒಂದೇ ಮಟ್ಟದಲ್ಲಿರುತ್ತದೆ. (ಕೆ.ವಿ.ಎಸ್.)

**ಅಧಿಗಣಕ :** ಸರ್ಕಾರದ ಅಥವಾ ಬಂಡವಾಳ ಸಂಸ್ಥೆಯ, ಆದಾಯವೆಚ್ಚಗಳ ಪಟ್ಟಿಯನ್ನು ವ್ಯವಸ್ಥಿತ ರೀತಿಯಲ್ಲಿ ತಯಾರಿಸಿ, ಲಾಭನಷ್ಟಗಳ ವಿವರವನ್ನು ತಿಳಿಸಿ, ಆ ಸಂಸ್ಥೆಯ ಪುರೋಭಿವೃದ್ಧಿಗೆ ಸಹಾಯ ಮಾಡುವ ಅಧಿಕಾರಿ (ಕಂಟ್ರೋಲರ್). ಇವನ ವ್ಯವಹಾರ ನಾನಾ ಮುಖವಾದದ್ದು, ಮುಖ್ಯವಾದದ್ದು: ನಿಷ್ಪಕ್ಷಪಾತವಾದ ವಿವರಗಳನ್ನೂ ಅಂಕಿಅಂಶಗಳನ್ನೂ ದೊರಕಿಸಿಕೊಂಡು, ಅವುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ವರ್ಷದ ಆಯವ್ಯಯದ ಅಂದಾಜುಪಟ್ಟಿಯನ್ನು ಕ್ರಮವಿಹಿತವಾದ, ಅಧಿಕಾರಯುಕ್ತವಾದ, ಆವಶ್ಯಕ ವರದಿಗಳನ್ನು ತಯಾರಿಸಿ ಸರ್ಕಾರದ ಅಥವಾ ಸಂಸ್ಥೆಯ ಮುಂದಿನ ಕಾರ್ಯಕ್ರಮಕ್ಕೆ ಮಾರ್ಗದರ್ಶನ ಮಾಡುತ್ತಾನೆ. ಖಾಸಗಿಸಂಸ್ಥೆಗಳಲ್ಲಿ ಅವನ ಜವಾಬ್ದಾರಿ ವ್ಯಾಪಕವಾದುದು. ಅವನ ಅಧಿಕಾರ ಆಯವ್ಯಯಗಳ ವಿತರಣೆಗೆ ಮಾತ್ರವಲ್ಲದೆ, ಸಂಸ್ಥೆ ಹಾಕಿಕೊಂಡಿರುವ ಯೋಜನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅಗತ್ಯ ವಿವರಗಳನ್ನೊದಗಿಸಿ ಆಡಳಿತವರ್ಗ ಅಂತ್ಯ ನಿರ್ಧಾರವನ್ನು ಕೈಗೊಳ್ಳುವಂತೆ ಮಾಡುವುದೇ ಆಗಿದೆ. ಅವನ ಕೈಕೆಳಗೆ ಲೆಕ್ಕಪರೀಕ್ಷರು (ಆಡಿಟರ್‌ಗಳು) ಇರುತ್ತಾರೆ; ಅವರ ಕಾರ್ಯಕ್ರಮಗಳನ್ನು ನಿಯೋಜಿಸಿ ಮೇಲ್ವಿಚಾರಣೆ ನಡೆಸುತ್ತಾನೆ; ಅವನ ವರದಿ, ಅವರು ಒದಗಿಸುವ ವಿವರಗಳನ್ನು ಅವಲಂಬಿಸಿರುತ್ತದೆ. ಅವನ ಅಧಿಕಾರಕ್ಕೂ ಕೋಶಾಧ್ಯಕ್ಷನ (ಟ್ರೆಷರರ್) ಅಧಿಕಾರಕ್ಕೂ ವ್ಯತ್ಯಾಸವಿದೆ. ಕೋಶಕ್ಕೆ ಬರುವ ಹಣಕಾಸುಗಳ ಲೆಕ್ಕವನ್ನಿಟ್ಟು ಖರ್ಚಾಗುವ ಹಣದ ವಿವರಗಳನ್ನು ಒದಗಿಸುವುದು ಮಾತ್ರ ಕೋಶಾಧ್ಯಕ್ಷನ ಕೆಲಸ. ಆ ಹಣ ಎಲ್ಲಿಂದ, ಹೇಗೆ ಬರಬೇಕು, ಅದರ ವಿನಿಯೋಗ ಯಾವ ರೀತಿಯಲ್ಲಿರಬೇಕು, ಎಂಬುದನ್ನು ತನ್ನ ವರದಿಯಲ್ಲಿ ಅಧಿಗಣಕ ಸೂಚಿಸುತ್ತಾನೆ.

ಇಂಗ್ಲೆಂಡಿನಲ್ಲಿ ಅಧಿಗಣಕನ (ಕಂಟ್ರೋಲರ್ ಆ್ಯಂಡ್ ಆಡಿಟರ್ ಜನರಲ್) ಅಧಿಕಾರ ಮಹತ್ವದ್ದು. ಅವನದು ಶಾಸನಬದ್ಧ ಅಧಿಕಾರ, ಸರ್ಕಾರವೇ ಅವನನ್ನು ನಿಯಮಿಸಿದರೂ ಪಾರ್ಲಿಮೆಂಟಿಗೆ ಮಾತ್ರ ಜವಾಬ್ದಾರ; ಕೆಲವು ಸಾಮಾನ್ಯ ವಿಷಯಗಳಲ್ಲಿ ಮಾತ್ರ ಅವನು ಸರ್ಕಾರಕ್ಕೆ ಅಧೀನ. ಅಮೆರಿಕ ಸಂಯುಕ್ತಸಂಸ್ಥಾನದ ಕೇಂದ್ರಸರ್ಕಾರದಲ್ಲೂ ಅಧಿಗಣಕ ಕಾಂಗ್ರೆಸ್ಸಿಗೆ ಮಾತ್ರ ಅಧೀನ; ಕಾರ್ಯಶಾಖೆಗೆ (ಎಗ್ಸಿಕ್ಯುಟಿವ್) ಅವನು ಅಧೀನನಲ್ಲ. ಭಾರತ ಸರ್ಕಾರದಲ್ಲೂ ಅವನ ಅಧಿಕಾರ ಶಾಸನಬದ್ಧವಾದದ್ದು. ಕೇಂದ್ರದ ಮತ್ತು ಪ್ರಾಂತಸರ್ಕಾರಗಳ ಆಯವ್ಯಯಗಳ ಮೇಲ್ವಿಚಾರಣೆ ಅವನಿಗೆ ಸೇರಿದ್ದು. ಅವನು ತನ್ನ ವರದಿಗಳನ್ನು ರಾಷ್ಟ್ರಾಧ್ಯಕ್ಷನಿಗೆ ಸಲ್ಲಿಸುತ್ತಾನೆ; ಮುಂದೆ ಶಾಸನಸಭೆಯಲ್ಲಿ ಅವುಗಳ ಪರಿಶೀಲನೆ ನಡೆಯುತ್ತದೆ. (ಕೆ.ವಿ.ವಿ.)

**ಅಧಿಚಕ್ರ :** ಚಿತ್ರದಲ್ಲಿ ಕಾಣಿಸಿರುವಂತೆ ಒಂದು ದೊಡ್ಡ ವೃತ್ತದ ಪರಿಧಿಯ ಮೇಲೆ ಚಲಿಸುವ ಕೇಂದ್ರವಿರು ಚಿಕ್ಕವೃತ್ತ (ಎಪಿಸೈಕಲ್). ದೊಡ್ಡ ವೃತ್ತದ ಹೆಸರು ಡೆಫರೆಂಟ್.



ಆಕಾಶಗೋಳದ ಕೇಂದ್ರ ಭೂಮಿ; ಭೂಮಿ ಸ್ಥಿರವಾಗಿದೆ; ಅದರ ಸುತ್ತಲೂ ಚಂದ್ರ, ಬುಧ, ಶುಕ್ರ, ಸೂರ್ಯ ಮುಂತಾದವು ಅದೇ ಕ್ರಮದಲ್ಲಿ ಪರಿಭ್ರಮಿಸುತ್ತಿವೆ ಎಂಬ ಟಾಲೆಮಿ ಸಿದ್ಧಾಂತವನ್ನು (ಸು. ಪ್ರ.ಶ.150) ಗಣಿತರೀತ್ಯಾ ಸಮರ್ಥಿಸಲು ಅಧಿಚಕ್ರದ ಆವಶ್ಯಕತೆ ಉಂಟಾಯಿತು. ಒಂದೊಂದು ಗ್ರಹಕ್ಕೆ ಒಂದೊಂದು ಅಧಿಚಕ್ರವಿದೆಯೆಂದೂ ಒಂದೊಂದು ಡೆಫರೆಂಟ್ ಇದೆಯೆಂದೂ ಇಂತ ಡೆಫರೆಂಟ್‌ಗಳ ಕೇಂದ್ರ ಭೂಕೇಂದ್ರದಿಂದ ಸ್ವಲ್ಪ ಬೇರೆ ಎಂದೂ ಟಾಲೆಮಿ ಸಿದ್ಧಾಂತದ ಪಾದ. ಈಗ ಅಧಿಚಕ್ರಕ್ಕೆ ಕೇವಲ ಐತಿಹಾಸಿಕಮಹತ್ವ ಮಾತ್ರ ಉಳಿದಿದೆ. (*)

**ಅಧಿಪತಿ :** ಒಂದು ಸೈನ್ಯದ ನೆಲೆಯನ್ನೊ ಒಂದು ಜನದ ತಂಡವನ್ನೊ ತನ್ನ ಅಧಿಕಾರದಲ್ಲಿರಿಸಿಕೊಂಡಿರುವ ಸೈನ್ಯಾಧಿಕಾರಿ (ಕಮಾಂಡೆಂಟ್). ನೆಲೆಯ ಪ್ರಮಾಣ, ತಂಡದ ಜನಸಂಖ್ಯೆ, ನೆಲೆಯ ಮತ್ತು ಸೇನಾಬಲದ ಮಹತ್ವ– ಇವುಗಳನ್ನವಲಂಬಿಸಿ ಅವನ ದರ್ಜೆ ನಿರ್ಧರಿಸಲ್ಪಡುತ್ತದೆ. ಸೈನ್ಯದ ಒಬ್ಬ ಹಿರಿಯ ಅಧಿಕಾರಿಯನ್ನು ನಿರ್ದಿಷ್ಟವಾದ ದೊಂದು ಸೇನಾದಳ (ಕೋರ್) ಅಥವಾ ಸೇನಾವಿಭಾಗದ (ರೆಜಿಮೆಂಟ್) ಯೋಗಕ್ಷೇಮ ವನ್ನು ನೋಡಿಕೊಳ್ಳಲು ನಿಯೋಜಿಸಿದಾಗ ಆ ಅಧಿಕಾರಿಯ ದರ್ಜೆಯನ್ನು ಸೂಚಿಸುವ ಕರ್ನಲ್ ಎಂಬ ಪದದ ಮುಂದೆ ಕಮ್ಯಾಂಡೆಂಟ್ ಎಂಬ ಮತ್ತೊಂದು ಗೌರವಾರ್ಥ ಸೂಚಕಪದ ಸೇರಿ ಆತ ಕರ್ನಲ್ ಕಮ್ಯಾಂಡೆಂಟ್ ಎನಿಸಿಕೊಳ್ಳುತ್ತಾನೆ. (ಎ.ಎನ್.ಎಸ್.ಎಂ.)

**ಅಧಿಭಾರ :** ಒಬ್ಬ ವ್ಯಕ್ತಿಯ ಮೇಲೂ ಹಿರಿಯ ಅವಿಭಕ್ತ ಕುಟುಂಬದ ಮೇಲೂ ಅವರ ಆದಾಯ ಒಂದು ಮಿತಿಗೆ ಮೀರಿದ್ದರೆ ಆದಾಯತೆರಿಗೆ ಮತ್ತು ಅಧಿಕರಗಳ (ಸೂಪರ್ ಟ್ಯಾಕ್ಸ್) ಜೊತೆಗೆ ಹಾಕುವ ತೆರಿಗೆ (ಸರ್‌ಚಾರ್ಜ್).

ಅಧಿಭಾರವನ್ನು ಆದಾಯ ತೆರಿಗೆ ಮತ್ತು ಅಧಿಕರ ಇವುಗಳೆರಡರ ಮೇಲೂ ನಿಗದಿಯಾಗಿರುವ ದರದಲ್ಲಿ ಹಾಕುತ್ತಾರೆ; ಈ ದರವನ್ನು ಕಾಲಕಾಲಕ್ಕೆ ಬದಲಾಯಿಸಬಹುದು.

ಒಂದು ಲಕ್ಷಕ್ಕಿಂತ ಹೆಚ್ಚಿನ ಆದಾಯವಿರುವಲ್ಲಿ ಆದಾಯ ತೆರಿಗೆ ಮತ್ತು ಅಧಿಕರಗಳ ಮೇಲೆ ಶೇ. 5ರಂತೆ ಹೆಚ್ಚುವರಿ ಅಧಿಭಾರವನ್ನು ಹಾಕಲಾಗುತ್ತದೆ. ಕೆಲಸ ಮಾಡದೆ ಸಂಪಾದಿಸಿದ ಆದಾಯದ ಮೇಲೆ ಆದಾಯ ತೆರಿಗೆ ಮತ್ತು ಅಧಿಕರಗಳ ಶೇ. 15ರಷ್ಟು ವಿಶಿಷ್ಟ ಅಧಿಭಾರವನ್ನು ಹಾಕುವುದುಂಟು (1969). ಅಧಿಭಾರದ ಬಗ್ಗೆ ಸೀಮಾಂತ ಪರಿಹಾರವನ್ನು (ಮಾರ್ಜಿನಲ್ ರಿಲೀಫ್) ಕೊಡಲು ಅವಕಾಶಗಳನ್ನು ಕಲ್ಪಿಸಬಹುದು.

ಇಂದಿನ ಆರ್ಥಿಕಲೋಕದಲ್ಲಿ ಎಲ್ಲ ವಲಯಗಳಲ್ಲೂ ಅಧಿಭಾರ ಉಂಟು. ಉದಾಹರಣೆಗೆ ವಿದ್ಯುತ್‌ಕರ, ಪೌರತೆರಿಗೆ, ಮನೆಗಂದಾಯ ಮುಂತಾದವುಗಳ ಮೇಲೂ ಅಧಿಭಾರವನ್ನು ವಸೂಲು ಮಾಡುವ ಪದ್ಧತಿ ಇದೆ. (ಟಿ.ಕೆ.)

**ಅಧಿರಾಜೇಂದ್ರ :** ಚೋಳ ದೊರೆ ವೀರ ರಾಜೇಂದ್ರನ ಮಗ. ಕಲ್ಯಾಣದ ಚಾಳುಕ್ಯಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಸಮಕಾಲೀನ. ವೆಂಗಿಯ ಹಾಗೂ ಕಲ್ಯಾಣದ ಚಾಳುಕ್ಯರ ಪ್ರಭಾವದಿಂದಾಗಿ ಚೋಳ ಸಾಮ್ರಾಜ್ಯದ ವೈಭವ ಕುಂದಿತ್ತು. ತನ್ನ ಸೋದರಿಯನ್ನು

ಮದುವೆಯಾಗಿದ್ದ ಆರನೆಯ ವಿಕ್ರಮಾದಿತ್ಯ ವಿರೋಧಿಗಳನ್ನಡಗಿಸಿ ಅಧಿರಾಜೇಂದ್ರ ಸಿಂಹಾಸನವನ್ನೇರುವುದಕ್ಕೆ ನೆರವು ನೀಡಿದ (1068). 1070ರಲ್ಲಿ ವಿರೋಧಿಗಳು ಪುನಃ ದಂಗೆಯೆದ್ದಾಗ ಅವರೊಂದಿಗೆ ಹೋರಾಡಿ ಅಧಿರಾಜೇಂದ್ರ ಹತನಾದ. (ಎ.ಎಂ.)

**ಅಧಿರಾಜ್ಯಪದ :** ಸ್ವಯಮಾಡಳಿತವನ್ನು ಹೊಂದಿದ್ದರೂ ಸಾರ್ವಭೌಮತ್ವವನ್ನು ಹೊಂದಿರದೆ ಬೃಹತ್ ಸಾಮ್ರಾಜ್ಯವೊಂದರ ಅಧೀನದಲ್ಲಿ ನಾಮಮಾತ್ರ ಉಳಿದಿರುವ ರಾಷ್ಟ್ರದ ಸ್ಥಿತಿಯನ್ನು ಈ ಪದದಿಂದ ವರ್ಣಿಸುತ್ತಾರೆ (ಡೊಮಿನಿಯನ್ ಸ್ಟೇಟಸ್). ಬ್ರಿಟಿಷ್ ಸಾಮ್ರಾಜ್ಯದ ಅಂಗ ರಾಜ್ಯಗಳಾಗಿ ಸ್ವಯಮಾಡಳಿತವನ್ನು ಪಡೆದಿದ್ದ ಕೆಲವು ರಾಷ್ಟ್ರಗಳನ್ನು 1907ರಲ್ಲಿ ಅಧಿರಾಜ್ಯಪದ ಪಡೆದ ರಾಜ್ಯಗಳೆಂದು ಮಾನ್ಯ ಮಾಡಲಾಯಿತು. ವಿಶೇಷ ಸ್ವಾತಂತ್ರ್ಯವನ್ನು ಪಡೆದ ಇಂಥ ರಾಜ್ಯಗಳನ್ನು ಒಳರಾಷ್ಟ್ರಗಳೆಂದೂ ಕರೆಯಲಾಯಿತು. ಕೆನಡ, ಆಸ್ಟ್ರೇಲಿಯ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕ ಮುಂತಾದವು ಈ ವರ್ಗಕ್ಕೆ ಸೇರಿದ ರಾಷ್ಟ್ರಗಳು. 1907ರ ಇಂಪೀರಿಯಲ್ ಕಾನ್‌ಫರೆನ್ಸ್‌ನಲ್ಲಿ ಸ್ವಯಮಾಡಳಿತವನ್ನು ಪಡೆದಿದ್ದ ಅಂಗ ರಾಜ್ಯಗಳು ಮತ್ತು ವಸಾಹತುಗಳಿಗೆ ಪ್ರಮುಖ ಸ್ಥಾನವನ್ನು ಕೊಡಲಾಯಿತಲ್ಲದೆ ಅವುಗಳನ್ನು ಅಧಿರಾಜ್ಯಗಳೆಂದು ಅಧಿಕೃತವಾಗಿ ಮಾನ್ಯ ಮಾಡಲಾಯಿತು. ನಾಲ್ಕು ವರ್ಷಗಳಿಗೊಮ್ಮೆ ಸೇರುತ್ತಿದ್ದ ಇಂಪೀರಿಯಲ್ ಕಾನ್‌ಫರೆನ್ಸ್‌ನ ಸಭೆಗಳಲ್ಲಿ ಅಧಿರಾಜ್ಯಗಳು ಬ್ರಿಟಿಷ್ ಸರ್ಕಾರದ ವಿದೇಶಾಂಗ ನೀತಿ ಮತ್ತು ರಕ್ಷಣಾವ್ಯವಸ್ಥೆ ನಿರೂಪಣೆಯಲ್ಲಿ ಭಾಗವಹಿಸಲು ಅವಕಾಶ ಕೊಡಲಾಯಿತು. ಒಂದನೆಯ ಮಹಾಯುದ್ಧದ ಆಪತ್ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಲ್ಲಿಸಿದ ಸೇವೆ ಸಹಾಯಗಳಿಗಾಗಿ ಅಧಿರಾಜ್ಯಗಳಿಗೆ ಇನ್ನೂ ಹೆಚ್ಚಿನ ಸ್ವಾತಂತ್ರ್ಯ ಮತ್ತು ಪ್ರಾಮುಖ್ಯವನ್ನು ಕೊಡಲಾಯಿತು. ಅಧಿರಾಜ್ಯಪದ ರಾಷ್ಟ್ರಗಳಿಗೂ ಮತ್ತು ಭಾರತದಂಥ ಕೇವಲ ವಸಾಹತುಗಳಾಗಿದ್ದ ರಾಷ್ಟ್ರಗಳಿಗೂ ಸ್ಥಾನಮಾನ ಮತ್ತು ಸರ್ಕಾರ ಪದ್ಧತಿಗಳಲ್ಲಿ ಹೆಚ್ಚು ತಾರತಮ್ಯವಿದ್ದಿತು. ಅಧಿರಾಜ್ಯಪದ ಸಹಜವಾಗಿಯೇ ವಸಾಹತುಗಳಿಗಿಂತ ಹೆಚ್ಚು ಉತ್ತಮ ಮತ್ತು ಗೌರವಯುತವಾಗಿದ್ದಿತು. ಲೀಗ್ ಆಫ್ ನೇಷನ್ಸ್‌ನಂಥ ಅಂತಾರಾಷ್ಟ್ರೀಯ ಸಂಘಗಳಲ್ಲಿ ಈ ರಾಜ್ಯಗಳು ಪ್ರತ್ಯೇಕ ಸದಸ್ಯತ್ವವನ್ನು ಪಡೆಯಬಹುದಾಗಿದ್ದಿತು. ಆಂತರಿಕ ಆಡಳಿತದಲ್ಲಿಯೇ ಅಲ್ಲದೆ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿಯೂ ಈ ರಾಜ್ಯಗಳು ಸ್ವತಂತ್ರರೀತಿಯಲ್ಲಿ ವರ್ತಿಸುತ್ತ ಬಂದುವು. ಈ ಕಾರಣದಿಂದಲೇ ಭಾರತದ ಹಲವು ಮುಖಂಡರು ಸ್ವಾತಂತ್ರ್ಯ ಚಳವಳಿಯ ಪ್ರಾರಂಭದಲ್ಲಿ ಅಧಿರಾಜ್ಯಪದವನ್ನು ದೊರಕಿಸಿ ಕೊಳ್ಳುವುದನ್ನೇ ತಮ್ಮ ಗುರಿಯನ್ನಾಗಿಟ್ಟುಕೊಂಡರು.

ಇಂಪೀರಿಯಲ್ ಕಾನ್‌ಫರೆನ್ಸ್‌ನಲ್ಲಿ ಬ್ರಿಟಿಷ್ ಸರ್ಕಾರದ ವಿದೇಶಾಂಗ ನೀತಿ ಮತ್ತು ರಕ್ಷಣಾವ್ಯವಸ್ಥೆಯ ನಿರೂಪಣೆಯ ಸಂಬಂಧವಾಗಿ ಚರ್ಚಿಸಲು ಸಾಮ್ರಾಜ್ಯದ ಕೆಲವು ರಾಜ್ಯಗಳು ಮಾತ್ರ ಭಾಗವಹಿಸಲು ಅವಕಾಶ ಕೊಡಲಾಗಿದ್ದಿತು. ಆದರೆ ಭಾರತಕ್ಕೆ ಇಂಥ ಅವಕಾಶ ದೊರೆಯಲಿಲ್ಲ. ಒಂದನೆಯ ಮಹಾಯುದ್ಧದಲ್ಲಿ ಭಾರತ ಸಲ್ಲಿಸಿದ ಸೇವೆ ಸಹಕಾರಗಳಿಗಾಗಿ 1917ರ ಇಂಪೀರಿಯಲ್ ಕಾನ್‌ಫರೆನ್ಸ್ ಸಭೆಯಲ್ಲಿ ಭಾರತಕ್ಕೂ ಅಧಿರಾಜ್ಯಪದವನ್ನು ಶಿಫಾರಸು ಮಾಡಲಾಯಿತು. ಈ ಉದ್ದೇಶ ಪೂರೈಸಲು ಭಾರತದಲ್ಲಿ ಮೊದಲು ಸ್ವಯಮಾಡಳಿತ ವ್ಯವಸ್ಥೆ ಅವಶ್ಯವಾಗಿದ್ದಿತು. 1917ರ ಆಗಸ್ಟ್ ತಿಂಗಳ ತಮ್ಮ ಘೋಷಣೆಯಲ್ಲಿ ಭಾರತೀಯರಿಗೆ ಸ್ವಯಮಾಡಳಿತವನ್ನು ಹೊಂದಲು ಅವಕಾಶ ಮಾಡಿಕೊಡುವುದಾಗಿ ಮಾಂಟೆಗೊ ಸಾರಿದರು. 1919ರ ಅನಂತರ ಲೀಗ್ ಆಫ್ ನೇಷನ್ಸ್‌ನಲ್ಲಿ ಭಾರತದ ನಿಯೋಗಕ್ಕೆ ಸ್ಥಾನ ದೊರೆಯಿತು. ಆದರೆ ತದನಂತರ ಬ್ರಿಟಿಷ್ ಸರ್ಕಾರದ ಧೋರಣೆಗಳಿಂದಾಗಿ ಅಧಿರಾಜ್ಯವಾಗಿ ಭಾರತಕ್ಕೆ ದೊರೆಯಬಹುದಾದ ಸ್ಥಾನಮಾನಗಳ ಬಗ್ಗೆ ಭಾರತೀಯ ಮುಖಂಡರು ಮತ್ತು ಬ್ರಿಟಿಷ್ ಸರ್ಕಾರದ ನಡುವೆ ಮತ್ತು ಭಾರತೀಯರಲ್ಲಿಯೇ ಭಿನ್ನಾಭಿಪ್ರಾಯಗಳು ಬೆಳೆದುವು. ಈ ಮಧ್ಯೆ ಮಹಾತ್ಮಾ ಗಾಂಧಿಯವರು ಪೂರ್ಣ ಸ್ವರಾಜ್ಯವೇ ತಮ್ಮ ಗುರಿಯೆಂದು ಸಾರಿದರು. ಬ್ರಿಟಿಷ್ ಸರ್ಕಾರ ಭಾರತಕ್ಕೆ ಅಧಿರಾಜ್ಯಪದವನ್ನು ಕೊಡುವುದಾಗಿ ತಿಳಿಸಿದ್ದಿತಾದರೂ ಅದೇ ಪದದ ಇತರ ರಾಷ್ಟ್ರಗಳೊಡನೆ ಸರಿಸಮಾನ ಸ್ಥಾನಮಾನವನ್ನು ಮಾನ್ಯಮಾಡಲು ಸಿದ್ಧವಿರದದ್ದೇ ಇದಕ್ಕೆ ಕಾರಣ. ಭಿನ್ನಾಭಿಪ್ರಾಯಗಳು ಹೆಚ್ಚಿದಂತೆಲ್ಲ ಬ್ರಿಟಿಷ್ ಸರ್ಕಾರ ಅದನ್ನೇ ನೆಪವಾಗಿ ಮಾಡಿ ತನ್ನ ಆಶ್ವಾಸನೆಯನ್ನು ಕೈಬಿಟ್ಟಿತು. 1930ರ ಸೈಮನ್ ವರದಿಯಲ್ಲಿ ಮತ್ತು 1935ರ ಭಾರತ ಸರ್ಕಾರದ ಶಾಸನದಲ್ಲಿ ಅಧಿರಾಜ್ಯಪದದ ಪ್ರಸ್ತಾಪವನ್ನೇ ಮಾಡಲಿಲ್ಲ. ಭಾರತೀಯರಿಗೆ ತಮ್ಮ ಚಳವಳಿಯನ್ನು ಮುಂದುವರಿಸುವುದರ ಹೊರತು ಇನ್ನಾವ ಮಾರ್ಗವೂ ಉಳಿದಿರಲಿಲ್ಲ. ಭಾರತೀಯರ ಅವಿಶ್ರಾಂತ ಹೋರಾಟದ ಫಲವಾಗಿ 1947ರ ಭಾರತ ಸ್ವಾತಂತ್ರ್ಯಶಾಸನದ ಪ್ರಕಾರ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳು ಉದಯಿಸಿದುವಲ್ಲದೆ ಅವನ್ನು ಅಧಿರಾಜ್ಯಗಳೆಂದು ಕರೆಯಲಾಯಿತು. 1950ರಲ್ಲಿ ಜಾರಿಗೆ ಬಂದ ಭಾರತ ರಾಜ್ಯಾಂಗದ ಪ್ರಕಾರ ಗಣರಾಜ್ಯಸ್ಥಾಪನೆಯೊಂದಿಗೆ ಭಾರತದ ಅಧಿರಾಜ್ಯಪದವೂ ಕೊನೆಗೊಂಡಿತು. *

**ಅಧಿಶೋಷಣೆ ಮತ್ತು ಅಧಿಶೋಷಕಗಳು :** ಅಮೋನಿಯ ಅನಿಲವಿರುವ ಒಂದು ಪಾತ್ರೆಗೆ ತೆಂಗಿನ ಚಿಪ್ಪನ್ನು ಸುಟ್ಟು ತಯಾರಿಸಿದ ಇದ್ದಲಿನ ಚೂರನ್ನು ಹಾಕಿದರೆ, ಅದು ಪಾತ್ರೆಯಲ್ಲಿರುವ ಬಹುಭಾಗ ಅಮೋನಿಯವನ್ನು ಹೀರಿಕೊಳ್ಳುತ್ತದೆ. ಹೀಗೆ ಹೀರಿಕೊಂಡ ಅನಿಲ, ಇದ್ದಲಿನ ಮೇಲ್ಮೈಯಲ್ಲಿಯೇ ಉಳಿದುಕೊಂಡಿರುತ್ತದೆಂದು ತೋರಿಸಬಹುದು. ಒಂದು ಅನಿಲ ಇಲ್ಲವೆ ದ್ರಾವಣದಲ್ಲಿರುವ ವಸ್ತು ಸಾಮಾನ್ಯವಾಗಿ ಇನ್ನೊಂದು ಘನವಸ್ತುವಿನ ಮೇಲ್ಮೈಯಲ್ಲಿ ದಟ್ಟತೆಹೊಂದುವ ಈ ಕ್ರಿಯೆಗೆ ಅಧಿಶೋಷಣೆ (ಅಬ್ಸಾರ್ಪ್‌ಷನ್) ಎಂದು ಹೆಸರು. ಒಂದು ಚೂರು ಸ್ಪಂಜನ್ನು ನೀರಿನಲ್ಲಿ ಹಾಕಿದಾಗ ಅದು ನೀರನ್ನು ಹೀರಿಕೊಳ್ಳುತ್ತದೆ. ಹೀಗೆ ಹೀರಿಕೊಂಡ ನೀರಿನ ಕಣಗಳು ಸ್ಪಂಜಿನ ಹೊರಮೈಯಲ್ಲೇ ಉಳಿಯದೆ ಅದರ ಎಲ್ಲ ಭಾಗಗಳಲ್ಲೂ ಹರಡಿಕೊಂಡಿರುತ್ತದೆ. ಈ ಕ್ರಿಯೆಗೆ ಅವಶೋಷಣೆ (ಅಬ್ಸಾರ್ಪ್‌ಷನ್) ಎಂದು ಹೆಸರು. ಕೆಲವು ಘನವಸ್ತುಗಳು ಅನಿಲ ಮತ್ತು ಲೀನವಸ್ತುಗಳನ್ನು ಅಧಿಶೋಷಿಸಿಕೊಳ್ಳುತ್ತವೆ. ಇಂಥ ವಸ್ತುಗಳಿಗೆ ಅಧಿಶೋಷಕ (ಅಡ್‌ಸಾರ್‌ಬೆಂಟ್) ಎಂದೂ ಅವುಗಳ ಮೇಲ್ಮೈಯಲ್ಲಿ ದಟ್ಟತೆ ಹೊಂದುವ ವಸ್ತುಗಳಿಗೆ ಅಧಿಶೋಷಿತ ವಸ್ತುಗಳೆಂದೂ ಹೆಸರು.



ಚಿತ್ರ 1. ಅಧಿಶೋಷಣೆ

ಸಾಮಾನ್ಯವಾಗಿ ಅಧಿಶೋಷಿತ ವಸ್ತುವಿನ ಪ್ರಮಾಣ ಅಧಿಶೋಷಕದ ಮೇಲ್ಮೈಕ್ಷೇತ್ರವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಒಂದು ಘನವಸ್ತುವನ್ನು ಸಣ್ಣ ಸಣ್ಣದಾಗಿ ವಿಭಾಗಮಾಡಿದರೆ ಅದರಹೊರಮೈಕ್ಷೇತ್ರ ಹೆಚ್ಚಾಗುವುದ ರಿಂದ ಅದು ಹೆಚ್ಚಿನ ಪ್ರಮಾಣದಲ್ಲಿ ಅನಿಲ ಅಥವಾ ಲೀನವಸ್ತುಗಳನ್ನು ಅಧಿಶೋಷಿಸಿ ಕೊಳ್ಳಬಲ್ಲುದು. ಘನ ವಸ್ತುಗಳ ಮೇಲ್ಮೈಕ್ಷೇತ್ರ ಹೆಚ್ಚಾಗಿರುವುದರಿಂದ ಬಹುಮಟ್ಟಿಗೆ ಅಧಿಶೋಷಕಗಳು ಘನವಸ್ತುಗ ಳಾಗಿರುತ್ತವೆ.

ಒಂದು ಘನವಸ್ತುವಿನ ಮೇಲ್ಮೈಯ ಅಣು ಅಥವಾ ಅಯಾನುಗಳ ಬಲವೆಲ್ಲವೂ ಒಳಗಿನ ಕಣಗಳೆಲ್ಲವುಗಳ ಬಲದಿಂದ ಸಂತೃಪ್ತಿ ಹೊಂದಿರುವುದಿಲ್ಲ. ಈ ಅಸಂತೃಪ್ತತೆಯಿಂದಾಗಿ ತಮ್ಮ ಶೇಷಬಲಗಳನ್ನು ಸಂತೃಪ್ತಿಗೊಳಿಸಿಕೊಳ್ಳಲು ಇವು ಅನಿಲ ಅಥವಾ ಲೀನವಸ್ತುಗಳನ್ನು ತಮ್ಮೆಡೆಗೆ ಆಕರ್ಷಿಸಿಕೊಂಡು ಅವನ್ನು ತಮ್ಮ ಮೇಲ್ಮೈಯಲ್ಲಿ ಉಳಿಸಿಕೊಳ್ಳುತ್ತವೆ.

**ಅಧಿಶೋಷಣೆಯಲ್ಲಿ ಸಾಮಾನ್ಯವಾಗಿ ಎರಡು ಬಗೆಗಳಿವೆ:** 1. ಭೌತಿಕ ಅಧಿಶೋಷಣೆ (ಫಿಸಿಕಲ್ ಅಡ್‌ಸಾರ್ಪ್‌ಷನ್). ಇದರಲ್ಲಿ ಅಧಿಶೋಷಿತವಸ್ತುಗಳು ಅಧಿಶೋಷಕಕ್ಕೆ ದುರ್ಬಲವಾದ ವ್ಯಾಂಡರ್‌ವಾಲ್ ಬಲದಿಂದ ಬಂಧಿಸಲ್ಪಟ್ಟಿರುತ್ತವೆ. ಉದಾಹರಣೆಗೆ, ಅಭ್ರಕದಿಂದ ಅಧಿಶೋಷಿಸಲ್ಪಟ್ಟ ಸಾರಜನಕ ಹೀಗಿರುತ್ತದೆ. 2. ರಾಸಾಯನಿಕ ಅಥವಾ ಸಕ್ರಿಯ ಅಧಿಶೋಷಣೆ (ಕೆಮಿಕಲ್ ಅಥವಾ ಆಕ್ಟಿವೇಟೆಡ್ ಅಬ್‌ಸಾರ್ಪ್‌ಷನ್)– ಇದರಲ್ಲಿ ಅಧಿಶೋಷಿತ ವಸ್ತುಗಳು ಅಧಿಶೋಷಕದ ಮೇಲ್ಮೈಯಲ್ಲಿರುವ ಅಣು ಅಥವಾ ಅಯಾನುಗಳೊಡನೆ ರಾಸಾಯನಿಕ ಬಲಗಳಿಂದ ಬಂಧಿಸಲ್ಪಟ್ಟಿರುತ್ತವೆ. ಉದಾಹರಣೆಗೆ, ಆಮ್ಲಜನಕವನ್ನು ಟಂಗ್‌ಸ್ಟನ್ ಅಧಿಶೋಷಿಸಿಕೊಂಡಾಗ ಅದರ ಮೇಲ್ಮೈಯಲ್ಲಿ ಟಂಗ್‌ಸ್ಟನ್ ಆಕ್ಸೈಡ್‌ನ ಒಂದು ಪದರವಿರುತ್ತದೆ.

ಮೇಲೆ ತಿಳಿಸಿರುವಂತೆ ಅಧಿಶೋಷಿತ ವಸ್ತುವಿನ ಪ್ರಮಾಣ ಅಧಿಶೋಷಕದ ಮೇಲ್ಮೈಕ್ಷೇತ್ರ ವನ್ನವಲಂಬಿಸಿರುವುದರಿಂದ ಸಚ್ಛಿದ್ರ ರಚನೆಯುಳ್ಳ ಸಿಲಿಕಾ ಜೆಲ್, ಮರ, ಮೂಳೆ, ತೆಂಗಿನಚಿಪ್ಪಿನಿಂದ ಪಡೆದ ಇದ್ದಲು ಮತ್ತು ಲಿಗ್ನೈಟ್ ಗಣನೀಯ ಪ್ರಮಾಣದಲ್ಲಿ ವಿವಿಧ ಅನಿಲಗಳನ್ನು ಹೀರಿಕೊಳ್ಳುತ್ತವೆ. ಅಲ್ಲದೆ ಮರದಿಂದ ಪಡೆದ ಇದ್ದಲನ್ನು $350^o$ ಸೆಂ.ಗ್ರೇ.– $1000^o$ ಸೆಂ.ಗ್ರೇ.ವರೆಗೆ ಶೂನ್ಯ ವಾತಾರವಣದಲ್ಲಾಗಲೀ ಗಾಳಿ, ಜಡಾನಿಲಗಳು, ಹಬೆ, ಕ್ಲೋರಿನ್ ಅಥವಾ ಇಂಗಾಲದ ಡೈ ಆಕ್ಸೈಡ್‌ನ ಆವರಣದಲ್ಲಾಗಲೀ ಕಾಯಿಸುವುದರಿಂದ ಅದು ಪಟುತ್ವ ಪಡೆಯುತ್ತದೆ. ಹೀಗೆ ಪಟುಗೊಳಿಸಿದ ಇದ್ದಲು ಹೆಚ್ಚಿನ ಪ್ರಮಾಣದಲ್ಲಿ ಅನಿಲಗಳನ್ನು ಅಧಿಶೋಷಿಸುತ್ತದೆ.

ಒಂದು ನಿರ್ದಿಷ್ಟ ಪ್ರಮಾಣದ ಅಧಿಶೋಷಕ ಎಷ್ಟು ಅನಿಲ ಅಥವಾ ಲೀನ ವಸ್ತುಗಳನ್ನು ಅಧಿಶೋಷಿಸಿಕೊಳ್ಳುತ್ತದೆ ಎನ್ನುವುದು ಈ ಕೆಳಕಂಡ ಅಂಶಗಳನ್ನು ಅವಲಂಬಿಸಿರುತ್ತದೆ.

1. ಅಧಿಶೋಷಕ ಮತ್ತು ಅಧಿಶೋಷಿತ ವಸ್ತುಗಳ ಸ್ವಭಾವ, 2. ಅಧಿಶೋಷಕದ ಮೇಲ್ಮೈಕ್ಷೇತ್ರ, 3. ತಾಪ, 4. ಅನಿಲಗಳ ಒತ್ತಡ ಅಥವಾ ಲೀನವಸ್ತುವಿನ ಸಾಂದ್ರತೆ.

ಸುಲಭವಾಗಿ ದ್ರವೀಕರಣ ಹೊಂದುವ ಅನಿಲಗಳು ಬಹು ಸುಲಭವಾಗಿ ಅಧಿಶೋಷಿತಗೊಳ್ಳುತ್ತವೆ ಎಂಬುದು ಪ್ರಯೋಗಗಳಿಂದ ತಿಳಿದುಬಂದಿರುವ ಅಂಶ.

ಅಧಿಶೋಷಕದ ಹೊರಮೈಕ್ಷೇತ್ರವನ್ನು ಅಳೆಯುವುದು ಅಷ್ಟು ಸುಲಭವಲ್ಲ. ಆದ್ದರಿಂದ ಒಂದು ಗ್ರಾಂ ಅಧಿಶೋಷಕ ಎಷ್ಟು ಅನಿಲವನ್ನು ಅಧಿಶೋಷಿಸಿಕೊಳ್ಳುತ್ತದೆ ಎಂಬುದನ್ನು ಗೊತ್ತುಮಾಡಿಕೊಂಡರೆ ಅದರ ಮೇಲ್ಮೈ ಕ್ಷೇತ್ರವನ್ನು ಕಂಡುಹಿಡಿಯಬಹುದು. ಅಧಿಶೋಷಣೆಯ ಕ್ರಿಯೆ ಉಷ್ಣದಿಂದ ಬಹುಮಟ್ಟಿಗೆ ಪ್ರಭಾವಿತವಾಗುತ್ತದೆ. ಒಂದೇ

ಸಮನೆ ಉಷ್ಣ ಹೆಚ್ಚಿಸುವುದರಿಂದ ಅಧಿಶೋಷಣೆಗೊಳ್ಳುವ ಅನಿಲದ ಪ್ರಮಾಣ ಕಡಿಮೆಯಾಗುತ್ತದೆ. ಉದಾಹರಣೆಗೆ 600 ಮಿಮೀ ಒತ್ತಡದಲ್ಲಿ 1 ಗ್ರಾಂ. ಇದ್ದಲು ಸುಮಾರು $0^o$ ಸೆ. ನಲ್ಲಿ 10 ಘನ ಸೆಂಮೀನಷ್ಟು ಸಾರಜನಕವನ್ನು, $-29^o$ ಸೆ. ನಲ್ಲಿ 20 ಘನ ಸೆಂ.ಮೀ.ನಷ್ಟು ಸಾರಜನಕವನ್ನು,– $78^o$ಸೆ. ನಲ್ಲಿ 45 ಘನ ಸೆಂಮೀ ಸಾರಜನಕವನ್ನು ಅಧಿಶೋಷಿಸಿಕೊಳ್ಳುತ್ತದೆ. ಅಧಿಶೋಷಣೆಯಾಗುವಾಗ ಉಷ್ಣತೆ ಉತ್ಪತ್ತಿಯಾಗುತ್ತದೆ. ಇದಕ್ಕೆ ಅಧಿಶೋಷಣೆಯ ಉಷ್ಣತೆ ಎಂದು ಹೆಸರು.



ಚಿತ್ರ 2. ಅಧಿಶೋಷಣೆ

ಸ್ಥಿರೋಷ್ಣತೆಯಲ್ಲಿ ಅನಿಲಗಳ ಒತ್ತಡವನ್ನು ಅಥವಾ ಲೀನವಸ್ತುಗಳ ಸಾಂದ್ರತೆಯನ್ನು ಹೆಚ್ಚಿಸುವುದರಿಂದ ಅಧಿಶೋಷಿತ ವಸ್ತುವಿನ ಪ್ರಮಾಣವನ್ನು ಹೆಚ್ಚಿಸಬಹುದು. ಹೀಗೆ ಸ್ಥಿರೋಷ್ಣತೆಯ ಒಂದು ಅಧಿಶೋಷಕದಿಂದ ಅಧಿಶೋಷಿಸಲ್ಪಟ್ಟ ವಸ್ತುವಿನ ಪ್ರಮಾಣಕ್ಕೂ ಮತ್ತು ಅದರ ಒತ್ತಡ ಅಥವಾ ಸಾಂದ್ರತೆಗೂ ಇರುವ ಸಂಬಂಧವನ್ನು ಸೂಚಿಸುವ ರೇಖೆಗೆ ಅಧಿಶೋಷಣ ಸಮೋಷ್ಣತಾ ರೇಖೆ (ಅಬ್ಸಾರ್ಪ್ಷನ್ ಐಸೋಥರ್ಮ್) ಎನ್ನುತ್ತಾರೆ.

ಸ್ಥಿರೋಷ್ಣತೆಯಲ್ಲಿ ಅಧಿಶೋಷಣೆಗೊಂಡ ವಸ್ತುವಿನ ಪ್ರಮಾಣಕ್ಕೂ ಅದರ ಒತ್ತಡಕ್ಕೂ ಇರುವ ಸಂಬಂಧವನ್ನು ಫ್ರೂಂಡಲೀಷ್, ಒಂದು ಅನುಭವಿಸಿದ್ಧ ಸಮೀಕರಣದಿಂದ ಸೂಚಿಸಿದ್ದಾನೆ. ಇದರ ಪ್ರಕಾರ,

$$\frac{x}{m} = k \cdot p^{\frac{1}{n}}$$

ಇಲ್ಲಿ m ಅಧಿಶೋಷಕದ ತೂಕ, x ಅಧಿಶೋಷಿತವಸ್ತುವಿನ ತೂಕ, P ಒತ್ತಡ ಹಾಗೂ ಟಿ ಮತ್ತು ಇ ಸ್ಥಿರಾಂಕಗಳು. ಈ ಸಮೀಕರಣವನ್ನು

$log\frac{x}{m} = log\, k + \frac{1}{n} log\ p$ ಎಂದು ಬರೆಯಬಹುದು. ಇದರ ಪ್ರಕಾರ $log\frac{x}{m}$ ಅನ್ನು log P ಯೊಡನೆ ನಕ್ಷೆ ತೆಗೆದಾಗ ಒಂದು ಸರಳರೇಖೆ ಬರಬೇಕು. ಆದರೆ ಚಿತ್ರದಲ್ಲಿ ತೋರಿಸಿರುವಂತೆ ಕಡಿಮೆ ಒತ್ತಡದಲ್ಲಿ ಮಾತ್ರ ಸರಳರೇಖೆ ಬರುತ್ತದೆ. ಒತ್ತಡ ಹೆಚ್ಚಾದರೆ ಸರಳರೇಖೆ ಬಾಗುತ್ತದೆ.

ಇದೇ ರೀತಿ ಲೀನವಸ್ತುಗಳ ಸಾಂದ್ರತೆಗೂ ಅಧಿಶೋಷಣೆಗೊಳ್ಳುವ ವಸ್ತುವಿನ ಪ್ರಮಾಣಕ್ಕೂ ಇರುವ ಸಂಬಂಧವನ್ನು $\frac{x}{m} = k c^{\frac{1}{n}}$ ಎಂಬ ಸಮೀಕರಣದಿಂದ ಸೂಚಿಸಬಹುದು. ಇಲ್ಲಿ c ಎಂಬುದು ಲೀನವಸ್ತುವಿನ ಸಾಂದ್ರತೆ.

ಸ್ಥಿರೋಷ್ಣತೆಯಲ್ಲಿ ಒಂದು ಅಧಿಶೋಷಕ ಎಷ್ಟು ಅನಿಲ ಅಥವಾ ಲೀನವಸ್ತುವನ್ನು ಹೀರಿಕೊಂಡಿದೆ ಎಂಬುದನ್ನು ಅನಿಲದ ಒತ್ತಡ ಅಥವಾ ಲೀನವಸ್ತುವಿನ ಸಾಂದ್ರತೆಯೊಡನೆ ನಕ್ಷೆ ತೆಗೆದರೆ ಐದು ರೀತಿಯ ಅಧಿಶೋಷಣಾ ಸಮೋಷ್ಣತಾ ರೇಖೆಗಳು ಬರುತ್ತವೆ.

ಲ್ಯಾಂಗ್ಮ್ಯೂರ್‌ರವರು ಕಾಲ್ಪನಿಕ ಊಹೆಯಿಂದ ಮೊದಲನೆಯ ರೀತಿಯ ಅಧಿಶೋಷಣೆಗೆ ಒಂದು ವಿವರಣೆಯನ್ನು ಕೊಟ್ಟಿದ್ದಾರೆ. ಅವರು, ಘನಮೇಲ್ಮೈನಲ್ಲಿ ಅಧಿಶೋಷಿತಗೊಂಡ ಅನಿಲ ಏಕಾಣು ಪದರದ್ದಾಗಿರುತ್ತದೆ ಎಂದು ಊಹಿಸಿಕೊಂಡರು.

ಇವುಗಳಲ್ಲಿ ಅಧಿಶೋಷಿತ ಮತ್ತು ಬಹ್ವಾಣುಪದರಗಳಿಂದ ಕೂಡಿದುದ ಎಂಬ ವಿವರಣೆಯನ್ನು ಎರಡನೆಯ ಹಾಗೂ ಮೂರನೆಯ ರೀತಿಯ ಸಮೋಷ್ಣತಾರೇಖೆಗಳ ಬಗ್ಗೆ ನೀಡಿದರು. ಈ ಆಧಾರದ ಮೇಲೆ ಬ್ರೂನೋ, ಎಮೆಟ್ ಹಾಗೂ ಟೇಲರ್‌ರವರು ಒಂದು ಸಮೀಕರಣವನ್ನು ಕೊಟ್ಟಿದ್ದಾರೆ:

$$\frac{P}{v\left(P^0 - P\right)} = \frac{1}{v_m \cdot C} + \frac{\left(C-1\right)P}{v_m \cdot C \cdot P^0}$$

ಇದರಲ್ಲಿ  ಎಂಬುದು, T ಉಷ್ಣತೆ ಮತ್ತು P ಒತ್ತಡದಲ್ಲಿ ಅಧಿಶೋಷಿತಗೊಂಡ ಅನಿಲದ ಗಾತ್ರವನ್ನು ಸಾಮಾನ್ಯ ಪ್ರಮಾಣಕ್ಕೆ ಇಳಿಸಿರುವ ಗಾತ್ರ. $P^0$ ಎಂಬುದು, T ಉಷ್ಣತೆಯ ಅಧಿಶೋಷಿತದ ಸಂತೃಪ್ತಿ ಆವಿಯ ಒತ್ತಡ. $v_m$ ಎಂಬುದು ಅಧಿಶೋಷಕದ ಮೇಲ್ಮೈಯನ್ನು ಏಕಾಣುಪದರದಿಂದ ಮುಚ್ಚಿರುವಾಗ ಬೇಕಾದ ಅನಿಲದ ಗಾತ್ರವನ್ನು ಸಾಮಾನ್ಯ ಪ್ರಮಾಣಕ್ಕೆ ಇಳಿಸಿರುವ ಗಾತ್ರ. C ಎಂಬುದು ನಿರ್ದಿಷ್ಟ ಉಷ್ಣತೆಯಲ್ಲಿ ಸ್ಥಿರಾಂಕ, ಇದರ ಬೆಲೆ $C = e^{(E_I - E_L)/RT}$ ಇಲ್ಲಿ $E_I$ ಎಂಬುದು ಮೊದಲ ಪದರದ ಅಧಿಶೋಷಣೆಯ ಉಷ್ಣತೆ. $E_L$ ಎಂಬುದು ಅನಿಲದ ದ್ರವೀಕರಣ ಉಷ್ಣತೆ.

$E_I$ ಗಿಂತ $E_L$ ಹೆಚ್ಚಾಗಿದ್ದರೆ ಎರಡನೆಯ ರೀತಿಯ ಸಮೋಷ್ಣತಾ ರೇಖೆಯನ್ನೂ $E_I$ ಗಿಂತ $E_L$ ಕಡಿಮೆಯಾಗಿದ್ದರೆ ಮೂರನೆಯ ರೀತಿಯ ಸಮೋಷ್ಣತಾರೇಖೆಯನ್ನೂ ಪಡೆಯುತ್ತೇವೆ.

ನಾಲ್ಕನೆಯ ಹಾಗೂ ಐದನೆಯ ಸಮೋಷ್ಣತಾರೇಖೆಗಳನ್ನು ವಿವರಿಸಲು ಈ ರೀತಿಯ ವರ್ತನೆಯನ್ನು ಪ್ರದರ್ಶಿಸುವ ಅನಿಲಗಳು ಬಹುಪದರ ಅಧಿಶೋಷಣೆಯನ್ನು ಮಾತ್ರವಲ್ಲದೆ ಅಧಿಶೋಷಕದ ರಂಧ್ರರಂಧ್ರಗಳಲ್ಲಿ ಹಾಗೂ ಅತಿಸೂಕ್ಷ್ಮ ಪದರಗಳಲ್ಲಿ ಸಾಂದ್ರೀಕರಣವನ್ನು (ಕಂಡೆನ್ಸೇಷನ್) ಹೊಂದಿರುವುದೇ ಕಾರಣವೆಂದು ಸೂಚಿಸಿದ್ದಾರೆ. ಇಲ್ಲಿಯೂ $E_I$ ಗಿಂತ $E_L$ ಕಡಿಮೆಯಾಗಿದ್ದರೆ ನಾಲ್ಕನೆಯ ಬಗೆಯ ಸಮೋಷ್ಣತಾ ರೇಖೆಯೂ $E_I$ ಗಿಂತ $E_L$ ಹೆಚ್ಚಾಗಿದ್ದರೆ ಐದನೆಯ ಬಗೆಯ ಸಮೋಷ್ಣತಾರೇಖೆಯೂ ಬರುತ್ತವೆ. **(ಎಚ್.ಎಂ.ಎನ್.)**

**ಅಧಿಷ್ಠಾನ :** ಎಂದರೆ ಆಶ್ರಯ. ಪ್ರಮುಖವಾಗಿ ಇದು ವೇದಾಂತದ ಪರಿಭಾಷೆಯಲ್ಲಿ ಬಳಕೆಯಲ್ಲಿದೆ. ಅಭ್ಯಾಸವಾದದಲ್ಲಿ ಅಧಿಷ್ಠಾನದ ಪ್ರಸ್ತಾಪ ವಿಶೇಷವಾಗಿ ಬರುತ್ತದೆ. ಅಭ್ಯಾಸಕ್ಕೆ ಸಾಕ್ಷಿ–ಚೈತನ್ಯವೇ ಅಧಿಷ್ಠಾನ; ರಜ್ಜುಸರ್ಪನ್ಯಾಯದಲ್ಲಿ ಸರ್ಪಭ್ರಾಂತಿಗೆ ರಜ್ಜುವೇ ಅಧಿಷ್ಠಾನ. ಹಗ್ಗವಿಲ್ಲದಿದ್ದರೆ ಹಾವೆಂಬ ನೋಟ ಬರಲಾರದಷ್ಟೆ; ಹಾಗೆಯೇ ಸಾಕ್ಷಿಚೈತನ್ಯದ ವಿವರ್ತವೇ ಪ್ರಪಂಚವೆಂದು ಕಾಣಿಸಿಕೊಳ್ಳುವುದು. ಸ್ವರೂಪದಲ್ಲಿ ಮಿಥ್ಯೆಯಾಗಿದ್ದರೂ ದೃಶ್ಯವಾಗಿ ತೋರುವುದು ಅಭ್ಯಾಸದ ಬಲದಿಂದ; ಇದಕ್ಕೆ ಆತ್ಮಪದಾರ್ಥವೇ ಅಧಿಷ್ಠಾನ. ನಿತ್ಯಶುದ್ಧಬುದ್ಧ ಮುಕ್ತವಾದ ಈ ಆತ್ಮದ ಮೇಲೆ ವ್ಯಾವಹಾರಿಕಾತ್ಮ ಅಧ್ಯಾರೋಪಿತವಾಗುತ್ತದೆ; ಹೀಗಾಗಿ ತಾನು ಅಶುದ್ಧ, ಬದ್ಧ, ಅಲ್ಪಜ್ಞ, ಅಶಕ್ತ ಎನ್ನುವ ಭ್ರಮೆ ತಲೆದೋರುತ್ತದೆ. ಅಧಿಷ್ಠಾನದ ಸಾಕ್ಷಾತ್ಕಾರವೇ ಮುಕ್ತಿಯೆನಿಸಿಕೊಳ್ಳುತ್ತದೆ. **(ಎಸ್.ಕೆ.ಆರ್.)**

**ಅಧೀನ ಶಾಸನರಚನೆ :** ಸಾಮಾನ್ಯವಾಗಿ ಕಾನೂನು ಮಾಡುವ ಅಧಿಕಾರ ಶಾಸನಸಭೆಯದು. ಶಾಸನಸಭೆಯ ಅಂಗೀಕಾರ ಪಡೆದ ಮಸೂದೆ ರಾಜಮುದ್ರೆ ಬಿದ್ದಾಗ ಕಾನೂನಾಗುತ್ತದೆ. ಅಲ್ಲದೆ ಶಾಸನಸಭೆ ತನ್ನ ಈ ಹಕ್ಕನ್ನು ವ್ಯಕ್ತಿಗೊ ನಿಯೋಗಕ್ಕೊ ಸ್ಥಳೀಯ ಸರ್ಕಾರಕ್ಕೊ ವಹಿಸಿದಾಗ ಈ ವ್ಯಕ್ತಿ, ನಿಯೋಗ ಅಥವಾ ಸರ್ಕಾರ ಮಾಡುವ ಕಾನೂನುಗಳಿಗೆ ಈ ಹೆಸರಿದೆ (ಸಬಾರ್ಡಿನೇಟ್ ಲೆಜಿಸ್ಲೇಷನ್).

ಅಸಂಖ್ಯಾತ ವಿಷಯಗಳನ್ನು ಒಳಗೊಂಡಿರುವ ಅಧೀನ ನಿಯಮಗಳನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ. ಅವುಗಳನ್ನು ಪ್ರಶಾಸನ ಅಥವಾ ನಿಯಮಗಳೆಂದೂ (ರೂಲ್ಸ್) ವಿನಿಯಮನ ಅಥವಾ ಕ್ರಮಪಡಿಸುವ ನಿಬಂಧನೆಗಳೆಂದೂ (ರೆಗ್ಯುಲೇಷನ್ಸ್) ಆದೇಶ, ಆಜ್ಞೆ ಅಥವಾ ಹುಕುಮುಗಳೆಂದೂ (ಆರ್ಡರ್ಸ್) ಯೋಜನೆ ಅಥವಾ ಕಟ್ಟುಪಾಡುಗಳೆಂದೂ (ಸ್ಕೀಮ್ಸ್) ಉಪನಿಯಮಗಳೆಂದೂ (ಬೈಲಾಸ್), ಅಪ್ಪಣೆ ಚೀಟಿ ಅಥವಾ ಪರವಾನೆಗಳೆಂದೂ (ಲೈಸೆನ್ಸ್) ಮಾರ್ಗತೋರಿಸುವ ಅಪ್ಪಣೆ ಅಥವಾ ಕಾರ್ಯಕ್ರಮದ ವಿಷಯವಾದ ನಿಯಂತ್ರಣಗಳೆಂದೂ (ಡೈರೆಕ್ಷನ್ಸ್) ಸನ್ನದುಗಳೆಂದೂ (ವಾರಂಟ್ಸ್) ವಿಧಿಬದ್ಧವಾಗಿ ಸಮ್ಮತಿಕೊಡುವ ಪತ್ರಗಳೆಂದೂ (ಇನ್‌ಸ್ಟ್ರುಮೆಂಟ್ ಆಫ್ ಅಪ್ರೂವಲ್) ಜ್ಞಾಪಕಪತ್ರ ಅಥವಾ ಒಂದು ಮಾರ್ಗವನ್ನು ಅನುಸರಿಸಬೇಕೆಂದು ಅಧಿಕಾರ ಕೊಡುವ ಅಥವಾ ಶಿಫಾರಸು ಮಾಡುವ ಕಛೇರಿಯ ಸೂಚನಾಪತ್ರಗಳೆಂದೂ (ಮಿನಿಟ್ಸ್) ಕರೆಯಬಹುದು.

ಸಾಮಾನ್ಯವಾಗಿ ಹೆಚ್ಚು ಸಂಖ್ಯೆಯ ಕಾನೂನುಗಳನ್ನು ದಾಖಲೆ ಮಾಡಿ, ಸಂಖ್ಯೆಯಿಂದ ನಿರ್ದೇಶಿಸಿ ಅದನ್ನು ಎಲ್ಲರಿಗೂ ತಿಳಿಯುವಂತೆ ಪ್ರಕಟಿಸುತ್ತಾರೆ. ಉದಾಹರಣೆಗೆ, ಇಂಗ್ಲೆಂಡಿನಲ್ಲಿಯೂ ಭಾರತದಲ್ಲಿಯೂ ಈ ವಾಡಿಕೆ ಇದೆ. ಮಂತ್ರಿಗಳು ಕಾನೂನಿನ ಪ್ರತಿಯೊಂದು ಒಳಪ್ರಕರಣಗಳನ್ನೂ ಕೂಲಂಕಷವಾಗಿ ಸ್ಥಳೀಯ ಆಡಳಿತಗಾರರಿಗೆ ಸುತ್ತೋಲೆಗಳ (ಸರ್ಕ್ಯುಲರ್ಸ್) ಮೂಲಕ ವಿಶದವಾಗಿ ತಿಳಿಸುತ್ತಾರೆ.

ಈ ಪ್ರಕಟಣಪತ್ರಗಳು ಆಡಳಿತ ವಿಷಯಕ್ಕೂ ನ್ಯಾಯಾಸ್ಥಾನಗಳ ಕಾನೂನಿಗೆ ಸಂಬಂಧಪಟ್ಟುವು.

ಕೆಲವುವೇಳೆ ಮೂಲ ಕಾನೂನು ವ್ಯಾಪಕವಾಗಿ ಇರುವುದರಿಂದ ಅದರ ಕೆಳಗೆ ಮಾಡಿದ ಅಧೀನ ವಿಧಿನಿಯಮಗಳೂ ವ್ಯಾಪಕವಾಗಿಯೇ ಇದ್ದಲ್ಲಿ, ಅಂಥವುಗಳನ್ನು ಕಾರ್ಯತಃ ಪ್ರಯೋಗಿಸುವಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ. ಅವುಗಳನ್ನು ನಿವಾರಿಸಲು ಇನ್ನೂ ಇತರ ಅಧೀನ ವಿಧಿನಿಯಮಗಳನ್ನು ಮಾಡಿದಲ್ಲಿ ಆ ನಿಯಮಗಳು ಮೂಲ ಕಾನೂನಿನ ಮೊಮ್ಮಕ್ಕಳಂತೆ ಆಗುತ್ತವೆ. ಶಾಸನವಿಹಿತವಾದ ಸಮಿತಿಗಳು ನಿಯೋಜಿತ ಮಂಡಳಿಗಳು ಮುಂತಾದುವಕ್ಕೆ, ವಿಶೇಷ ಸಂದರ್ಭಗಳಲ್ಲಿ ಈ ರೀತಿಯ ಅಧೀನ ವಿಧಿನಿಯಮಗಳನ್ನು ಮಾಡಲು ಅಧಿಕಾರವಿರುತ್ತದೆ.

ಗ್ರೇಟ್ ಬ್ರಿಟನ್ನಿನಲ್ಲಿ ಮುಖ್ಯವಾಗಿ ವಿಧಿನಿಯತವಾದ ಅನೇಕ ನಮೂನೆಯ ಅಧೀನ ವಿಧಿನಿಯಮಗಳಿವೆ. ಇದಕ್ಕೆ ನಿರ್ದಿಷ್ಟವಾದ ಹೆಸರುಗಳನ್ನು ಕೊಟ್ಟಿರುತ್ತಾರೆ. ಅವು ಯಾವುವೆಂದರೆ, 1. ವಿಧಿಬದ್ಧವಾದ ಪತ್ರಗಳು (ಸ್ಟ್ಯಾಚುಟರಿ ಇನ್‌ಸ್ಟ್ರುಮೆಂಟ್ಸ್). 2. ಕಟ್ಟುಪಾಡುಗಳು (**ಸ್ಕೀಮ್ಸ್**). 3. ವಿಶಿಷ್ಟ ಆಜ್ಞೆಗಳು, ಹುಕುಮುಗಳು (ಸ್ಪೆಷಲ್ ಆರ್ಡರ್ಸ್). ಇನ್ನೂ ಇತರ ಬಗೆಯ ನಿಯಮಗಳಾವುವೆಂದರೆ, 1. ತಾತ್ಕಾಲಿಕ ನ್ಯಾಯ ನಿಯಮಗಳು (ಪ್ರೊವಿಷನಲ್ ಆರ್ಡರ್ಸ್), 2. ಕಡ್ಡಾಯವಾಗಿ ಕೊಡುಕೊಳ್ಳವುದಕ್ಕೆ ಸಂಬಂಧಪಟ್ಟ ನಿಯಮಗಳು, 3. ವಿಶಿಷ್ಟ ಕಾರ್ಯವಿಧಾನದ ನಿಯಮಗಳು. ಗ್ರೇಟ್ ಬ್ರಿಟನ್ನಿನಲ್ಲಿ ಮಂತ್ರಿಗಳಿಗೆ

ಅಧಿಕಾರ ಗೊತ್ತುಮಾಡಿದ ಸಮಿತಿ ನಿಯೋಜಿತ ಅಧಿಕಾರವನ್ನು ಆಯಾ ದರ್ಜೆಯ ಮಟ್ಟಕ್ಕೆ ಒಪ್ಪುವಂತೆ ಕೊಡಬೇಕೆಂದು ವಿಶದಪಡಿಸಿದೆ. ಭಾರತದಲ್ಲಿ, ವ್ಯಕ್ತಿ ಅಥವಾ ಒಂದು ಸಂಸ್ಥೆ ಯಾವುದಾದರೂ ಒಂದು ಕಾರ್ಯವನ್ನು ಮಾಡುವುದಕ್ಕೆ ನ್ಯಾಯ ಸಮ್ಮತ ಅಧಿಕಾರ ಕೊಡುವ ಕಾನೂನು ಎಂದು ವಿಷಯವನ್ನು ಸ್ಪಷ್ಟಪಡಿಸಿದೆ. ಒಂದು ಕಾನೂನಿನ ಕೆಳಗೆ ಮಾಡಿದ ಅಧೀನ ವಿಧಿನಿಯಮಗಳಿಗೆ ಕಾನೂನಿನ ಬಲವಿರುತ್ತದೆಯಾದರೂ ಅವುಗಳನ್ನು ಮುಖ್ಯ ನ್ಯಾಯಾಸ್ಥಾನದಲ್ಲಿ ಪುನರ್ವಿಮರ್ಶೆ ಮಾಡಬಹುದು. ಏಕೆಂದರೆ ನಮ್ಮ ದೇಶದಲ್ಲಿ ಮೂಲ ಕಾನೂನುಗಳ ಪುನರ್ವಿಮರ್ಶೆ ಮಾಡುವ ಹಕ್ಕು ನ್ಯಾಯಾಲಯಕ್ಕಿದೆ.

ಅಧೀನ ವಿಧಿನಿರ್ಮಾಣದಿಂದ ಶಾಸನಸಭೆಯ ಮೇಲಿಂದ ಕಾಲದ ಒತ್ತಡ ಹೊಣೆಗಾರಿಕೆ ಕಡಿಮೆಯಾಗುತ್ತದೆ. ಸಾಮಾನ್ಯ ನಿಯಮಗಳ ಮೇಲೆ ಅದು ತನ್ನ ಗಮನವನ್ನು ಕೇಂದ್ರೀಕರಿಸಲು ಸರ್ಕಾರಕ್ಕೆ ವಿಶಾಲವಾದ ಕಾರ್ಯನೀತಿಯೊಂದನ್ನು ರೂಪಿಸಿಕೊಡಲು ಅನುಕೂಲವಾಗುತ್ತದೆ. ಅಧಿಕಾರಿಗಳಿಗೆ ಸ್ವಂತ ವಿವೇಚನೆಯಿಂದ ನಿಯಮಗಳನ್ನು ಮಾಡಲು ಅವಕಾಶ ಕಲ್ಪಿಸುತ್ತದೆ. ಯುದ್ಧ, ಸಾಂಕ್ರಾಮಿಕ ರೋಗ, ಭೂಕಂಪ ಮೊದಲಾದವುಗಳಿಂದ ಉಂಟಾಗುವ ತುರ್ತುಪರಿಸ್ಥಿತಿಯಲ್ಲಿ ಈ ನಿಯಮದಿಂದ ಹೆಚ್ಚಿನ ಅನುಕೂಲವಿದೆ.

ಅಧೀನ ವಿಧಿನಿರ್ಮಾಣಾಧಿಕಾರವನ್ನು ಬಳಸುವುದರಿಂದ ಮುಖ್ಯವಾಗಿ ಪ್ರಜೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತಟ್ಟಬಹುದು. ಕೆಲವುಸಾರಿ ಅವರಿಗೆ ಅನ್ಯಾಯವಾಗಬಹುದು. ಅಧೀನ ವಿಧಿನಿರ್ಮಾಣ ಮಾಡಲು ಇರುವ ಅಧಿಕಾರವನ್ನು ಸಾಕಷ್ಟು ಪರಿಮಿತಿಗೊಳಿಸುವುದು, ಅದರ ಉದ್ದೇಶವೇನು ಎಂಬುದನ್ನು ವಿಶದಪಡಿಸಿ ಅಧೀನ ವಿಧಿನಿರ್ಮಾಣಗಳ ಬಗ್ಗೆ ಶಾಸನಸಭೆ ಸೂಕ್ಷ್ಮಪರಿಶೀಲನೆ ಮಾಡುವುದು, ನ್ಯಾಯಾಸ್ಥಾನದ ಮೂಲಕ ಅವುಗಳನ್ನು ಸರಿಯಾದ ಪುನರ್ವಿಮರ್ಶನೆಗೆ ಒಳಪಡಿಸುವುದು– ಈ ಕೆಲವು ಅಂಶಗಳನ್ನು ಬಳಕೆಗೆ ತಂದಲ್ಲಿ ಅಧೀನ ವಿಧಿನಿರ್ಮಾಣದಿಂದ ಆಗುವ ಅಪಾಯಗಳನ್ನು ತಡೆಗಟ್ಟಬಹುದು.(ಕೆ.ವಿ.ಎ.)

**ಅಧೋವಾಟ ಕಿರಣಗಳು :** ಸಾಮಾನ್ಯವಾಗಿ ವಿದ್ಯುಜ್ಜನಕ ಯಂತ್ರಗಳಿಗೆ ಎರಡು ಧ್ರುವಗಳಿರುತ್ತವೆ. ಒಂದು ಧನವಿದ್ಯುತ್ ಧ್ರುವ (ಆ್ಯನೋಡ್), ಇನ್ನೊಂದು ಋಣವಿದ್ಯುತ್ ಧ್ರುವ (ಕ್ಯಾತೋಡ್). ವಿದ್ಯುತ್‍ಪ್ರವಾಹ ಸಾಮಾನ್ಯವಾಗಿ ಧನವಿದ್ಯುತ್ ಧ್ರುವದಿಂದ ಋಣವಿದ್ಯುತ್ ಧ್ರುವಕ್ಕೆ ವಾಹಕಗಳ (ಕಂಡಕ್ಟರ್) ಮೂಲಕ ಹರಿಯುವುದು. ಗಾಜಿನ ಒಂದು ಕೊಳವೆಯಲ್ಲಿ (ಡಿಸ್‍ಚಾರ್ಜ್ ಟ್ಯೂಬ್) ಎರಡು ವಾಹಕಗಳನ್ನು (ಚಿತ್ರದಲ್ಲಿ ತೋರಿಸಿರುವಂತೆ) ಅಳವಡಿಸಿ ಒಂದು ವಿದ್ಯುಜ್ಜನಕ ಯಂತ್ರದ ಎರಡು ಧ್ರುವಗಳಿಗೆ ಸೇರಿಸಿದೆ.

ಗಾಜಿನ ಕೊಳವೆಯ ಒಳಗಿರುವ ಗಾಳಿಯನ್ನು ವಾಯುರೇಚಕದ (ಎಗ್‍ಸ್ಟಾಸ್ಟ್ ಪಂಪ್) ಮೂಲಕ ಹೊರ ತೆಗೆದಿದೆ. ಕೊಳವೆಯೊಳಗೆ ಗಾಳಿಯ ಒತ್ತಡ ಸಾಕಷ್ಟು ಕಡಿಮೆಯಾದಾಗ ಮತ್ತು ಸಾಕಷ್ಟು ವಿದ್ಯುಚ್ಛಕ್ತಿಯನ್ನು ಗಾಳಿ ಉಪಯೋಗಿಸಿದಾಗ, ಕೊಳವೆಯಲ್ಲಿನ ಋಣವಿದ್ಯುತ್ ಧ್ರುವದಿಂದ ಧನ ವಿದ್ಯುತ್ ಧ್ರುವಕ್ಕೆ ನೀಲಿ ಬಣ್ಣದ ಬೆಳಕು ಹರಿಯುತ್ತದೆ.

ಚಿತ್ರ 1. ವಿಸರ್ಜನಕೊಳವೆ

ಕೊಳವೆಯೊಳಗಿನ ಗಾಳಿಯ ಒತ್ತಡವನ್ನು ಇನ್ನೂ ಕಡಿಮೆ (0.01 ಮಿಮೀ) ಮಾಡಿದಾಗ ಋಣವಿದ್ಯುತ್ ಧ್ರುವಕ್ಕೆ ಅಭಿಮುಖವಾಗಿರುವ ಗಾಜು ಹಸುರು ಬಣ್ಣದ ಬೆಳಕಿನಿಂದ ಹೊಳೆಯುತ್ತದೆ. ಋಣವಿದ್ಯುತ್ ಧ್ರುವದಿಂದ ಹೊರಬರುವ ಕಿರಣಗಳು ಗಾಜಿಗೆ ಡಿಕ್ಕಿ ಹೊಡೆಯುವುದರಿಂದ ಈ ಬೆಳಕು ಉಂಟಾಗುತ್ತದೆ. ಈ ಕಿರಣಗಳ ಹೆಸರು ಅಧೋವಾಟ ಕಿರಣಗಳು (ಕ್ಯಾಥೋಡ್ ರೇಸ್).

ಅಧೋವಾಟ ಕಿರಣಗಳನ್ನು ಮೊಟ್ಟಮೊದಲಿಗೆ ಜೂಲಿಯಸ್ ಪ್ಲೂಕರ್ ಎಂಬ ಜರ್ಮನಿಯ ಭೌತಶಾಸ್ತ್ರಜ್ಞ ಕಂಡುಹಿಡಿದ (1859). ಈ ಕಿರಣಗಳ ಪ್ರಕೃತಿಯ ಬಗ್ಗೆ ವಿವಾದಗಳಿದ್ದುವು. ಇವುಗಳ ಮೇಲೆ ಕೆಲಸ ಮಾಡುತ್ತಿದ್ದ ಜರ್ಮನಿಯ ಗೋಲ್ಡ್‍ಸ್ಟೈನ್ ಎಂಬ ಮತ್ತೊಬ್ಬ ಭೌತವಿಜ್ಞಾನಿ, ಇವು ಋಣವಿದ್ಯುತ್ ಧ್ರುವದಿಂದ ಬರುತ್ತಿದ್ದುದನ್ನು ಗಮನಿಸಿ

ಇವನ್ನು ಋಣವಿದ್ಯುತ್ ಧ್ರುವ ಕಿರಣಗಳೆಂದು ಕರೆದ. ಡಬ್ಲ್ಯೂಕ್ರೂಕ್ಸ್, ಜೆ.ಜೆ. ಥಾಮ್ಸನ್, ಜೆ. ಪೆರ್ರಿನ್– ಮುಂತಾದವರು ಈ ಕಿರಣಗಳ ಬಗ್ಗೆ ಕ್ರಮಬದ್ಧ ಪರೀಕ್ಷೆಗಳನ್ನು ಮಾಡಿದರು.

**ಈ ಕಿರಣಗಳ ಗುಣವಿಶೇಷಗಳು** 1. ಅಧೋವಾಟ ಕಿರಣಗಳು ಸರಳರೇಖೆಯಲ್ಲಿ ಚಲಿಸುತ್ತವೆ. ಅವುಗಳ ದಾರಿಗೆ ಅಡ್ಡವಾಗಿ ಕಾಗೆಬಂಗಾರದಲ್ಲಿ ಕತ್ತರಿಸಿದ ಒಂದು ಆಕೃತಿಯನ್ನು ಹಿಡಿದರೆ ಅದೇ ಆಕಾರದ ಸ್ಪಷ್ಟವಾದ ನೆರಳು ಋಣವಿದ್ಯುತ್ ಧ್ರುವಕ್ಕೆ ಎದುರಾಗಿರುವ ಗಾಜಿನಮೇಲೆ ಬೀಳುತ್ತದೆ (ಚಿತ್ರ. 2). ಅಲ್ಲದೆ ಈ ಪರಿಣಾಮ ಧನವಿದ್ಯುತ್ ಧ್ರುವದ ಸ್ಥಾನದ ಮೇಲೆ ಅವಲಂಬಿಸಿರುವುದಿಲ್ಲ. ಆದ್ದರಿಂದ ಈ ಕಿರಣಗಳು ಋಣವಿದ್ಯುತ್ ಧ್ರುವದ ಮೇಲ್ಮೈಗೆ ಲಂಬವಾಗಿ ಸರಳರೇಖೆಯಲ್ಲಿ ಹೊರಬೀಳುತ್ತವೆ.

2. ಈ ಕಿರಣಗಳು ಕೆಲವು ವಸ್ತುಗಳ ಮೇಲೆ ಬಿದ್ದರೆ ಅಗೋಚರ ಪ್ರತಿದೀಪ್ತಿ (ಫ್ಲೂರೆಸೆನ್ಸ್) ಉಂಟುಮಾಡುತ್ತವೆ. ಝಿಂಕ್ ಸಲ್ಫೈಡನಂಥ ವಸ್ತುವನ್ನು ಈ ಕಿರಣಗಳ ದಾರಿಯಲ್ಲಿಟ್ಟರೆ, ಆ ವಸ್ತು ಅಗೋಚರ ಕಿರಣಸ್ಫುರಣದಿಂದ ಉಜ್ಜ್ವಲವಾಗಿ ಬೆಳಗುತ್ತದೆ.

3. ಅಯಸ್ಕಾಂತಕ್ಷೇತ್ರ ಈ ಕಿರಣಗಳನ್ನು ಬಾಗಿಸುತ್ತದೆ. ಋಣವಿದ್ಯುತ್ ಧ್ರುವದಿಂದ ಹೊರಟ ಕಿರಣಗಳನ್ನು ಒಂದು ಸೀಳುಕಿಂಡಿಯಿಂದ (ಸ್ಲಿಟ್) ಹಾಯಿಸಿ, ಅಗೋಚರ ಕಿರಣಸ್ಫುರಣ ಮಾಡುವ ವಸ್ತುವಿನಿಂದ ಲೇಪಿಸಲ್ಪಟ್ಟ ಒಂದು ಲೋಹದ ಪಟ್ಟಿಯ ಮೇಲೆ ಹರಿಯುವಂತೆ ಮಾಡಿದರೆ, ಈ ಕಿರಣಗಳ ಪಥ ಬೆಳಗುತ್ತದೆ. ಒಂದು ಲಾಳದಾಕಾರದ ಅಯಸ್ಕಾಂತವನ್ನು ಕಿರಣಗಳ ದಾರಿಯಲ್ಲಿಟ್ಟರೆ, ಕಿರಣಪಥ ಬಾಗುವುದು ಕಂಡುಬರುತ್ತದೆ. ಅಯಸ್ಕಾಂತದ ಧ್ರುವಗಳನ್ನು ಅದಲುಬದಲು ಮಾಡಿದರೆ ಕಿರಣಪಥ ಬಾಗುವದಿಕ್ಕೂ ಅದಲುಬದಲಾಗುತ್ತದೆ.


ಚಿತ್ರ 2.

ಇದೇ ರೀತಿ ವಿದ್ಯುತ್‍ಕ್ಷೇತ್ರದಲ್ಲೂ ಕಿರಣಪಥ ಬಾಗುತ್ತದೆ. ಈ ಎರಡು ಪ್ರಯೋಗಗಳಲ್ಲಿ ಅಧೋವಾಟಕಿರಣಗಳು ಬಾಗುವ ದಿಕ್ಕನ್ನು ಪರಿಶೀಲಿಸಿದರೆ ಈ ಕಿರಣಗಳು ಋಣವಿದ್ಯುತ್ತನ್ನು ಹೊಂದಿವೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಜೆ.ಜೆ. ಥಾಮ್ಸನ್ ತಿಳಿಸಿದ (1897). ಈತ ನಡೆಸಿದ ಪ್ರಯೋಗದಿಂದ ಈ ಋಣವಿದ್ಯುತ್ ಕಣಗಳ ವಿದ್ಯುದಂಶ ಮತ್ತು ಅದರ ತೂಕದ ನಡುವಿನ ಪ್ರಮಾಣ $^e/_m$ ನ್ನು ನಿರ್ಧರಿಸಿ. ಇದು ಎಲೆಕ್ಟ್ರಾನಿನ $^e/_m$ ಪ್ರಮಾಣದಷ್ಟೇ ಇರುವುದನ್ನು ಕಂಡುಕೊಂಡು ಈ ಕಿರಣಗಳ ಪ್ರಕೃತಿಯನ್ನು ಪತ್ತೆಮಾಡಿದ.

ಚಿತ್ರ 3.

4. ಈ ಕಿರಣಗಳಿಗೆ ಶಕ್ತಿಯಿದೆ. ಸುಲಭವಾಗಿ ಚಲಿಸಬಲ್ಲ ಹಗುರವಾದ ಚಕ್ರಾಕಾರದ ವಸ್ತುವನ್ನು ಈ ಕಿರಣಗಳ ದಾರಿಯಲ್ಲಿಟ್ಟರೆ ಆ ವಸ್ತು ಚಲಿಸತೊಡಗುತ್ತದೆ. (ಚಿತ್ರ–3).

5. ಈ ಕಿರಣಗಳು ಯಾವುದಾದರೂ ಒಂದು ವಸ್ತುವಿಗೆ ಡಿಕ್ಕಿ ಹೊಡೆದರೆ, ಆ ವಸ್ತುವಿನಲ್ಲಿ ಉಷ್ಣತೆ ಉತ್ಪತ್ತಿಯಾಗುತ್ತದೆ.

6. ಈ ಕಿರಣಗಳಿಗೆ ಒಂದು ವಸ್ತುವಿನ ಮೂಲಕ ಸ್ವಲ್ಪದೂರ ತೂರಿಕೊಂಡು ಹೋಗುವ ಸಾಮರ್ಥ್ಯವಿದೆ.

7. ಗಾಜಿನ ಕೊಳವೆಯಲ್ಲಿ ಯಾವುದೇ ಅನಿಲವಿದ್ದರೂ ಒಂದೇ ಬಗೆಯ ಅಧೋವಾಟ ಕಿರಣಗಳು ಉತ್ಪತ್ತಿಯಾಗುತ್ತವೆ. ಈ ಕಿರಣಗಳು ಛಾಯಾಚಿತ್ರಗ್ರಾಹಕದ ಮೇಲೆ ಪರಿಣಾಮ ವನ್ನುಂಟುಮಾಡುತ್ತವೆ.

8. ಈ ಕಿರಣಗಳು ಪ್ಲಾಟಿನಂ ಮುಂತಾದ ಘನವಸ್ತುಗಳ ಮೇಲೆ ಬಿದ್ದಾಗ, ಆ ವಸ್ತುಗಳಿಂದ ಕ್ಷ–ಕಿರಣಗಳು ಉತ್ಪತ್ತಿಯಾಗುತ್ತವೆ.

ಅಧೋವಾಟ ಕಿರಣಗಳ ಈ ಗುಣವಿಶೇಷಗಳನ್ನು ಪರಿಶೀಲಿಸಿದರೆ ಅವು ಋಣ ವಿದ್ಯುತ್ತನ್ನು ಹೊಂದಿರತಕ್ಕ ಕಣಗಳ ಪ್ರವಾಹವೆಂದು ತಿಳಿಯುತ್ತದೆ. ಋಣವಿದ್ಯುತ್‍ಧ್ರುವಕ್ಕಾಗಿ ಉಪಯೋಗಿಸಿದ ಲೋಹದ ಮೇಲ್ಮೈಯಿಂದ ಬೇರ್ಪಟ್ಟ ಇತರ ಪ್ರಯೋಗಗಳಿಂದ ಈ ಕಿರಣಗಳು ಋಣವಿದ್ಯುತ್ ಕಣಗಳೇ ಎಂದು ತಿಳಿದಿದೆ.**(ನೋಡಿ– ಎಕ್ಸ್‌ಕಿರಣಗಳು)**(ಪಿ.ಎಸ್.ವಿ.)

**ಅಧ್ಯವಸಾಯ :** ವಿಶಿಷ್ಟರೀತಿಯಲ್ಲಿ ಹುಟ್ಟುವ ಪ್ರತ್ಯಕ್ಷ ಜ್ಞಾನಕ್ಕೆ ಸಾಂಖ್ಯ ದಾರ್ಶನಿಕರು ಕೊಟ್ಟಿರುವ ಪಾರಿಭಾಷಿಕ ಶಬ್ದ.

ಈ ಜ್ಞಾನದ ವಿಚಾರವಾಗಿ ಎರಡು ಮತಗಳಿವೆ. ಯಾವುದರ ಮಧ್ಯಸ್ಥಿಕೆಯೂ ಇಲ್ಲದೆ ನೇರವಾಗಿ ನಮಗೆ ವಸ್ತುಜ್ಞಾನ ಉಂಟಾಗುತ್ತದೆ ಎಂಬುದು ಒಂದು ಮತ. ವಸ್ತುಜ್ಞಾನ ನಮಗೆ ಹಾಗೆ ನೇರವಾಗಿ ಆಗುವುದಿಲ್ಲ, ಅದಕ್ಕೆ ಮಧ್ಯವರ್ತಿಯಾದ ಅಂತಃಕರಣವೃತ್ತಿಗಳ ಸಹಾಯ ಮುಖ್ಯ ಎಂಬುದು ಎರಡನೆಯ ಮತ. ಸಾಂಖ್ಯದರ್ಶನ ಎರಡನೆಯ ಮತವನ್ನು ಸಮರ್ಥಿಸುತ್ತದೆ. ಆ ಮತದ ಪ್ರಕಾರ ಜ್ಞಾನಕ್ಕೆ ತಿಳಿಯುವ ಪುರುಷ, ತಿಳಿಯಬೇಕಾದ

ವಸ್ತು ಮತ್ತು ಇವೆರಡಕ್ಕೂ ಮಧ್ಯವರ್ತಿಯಾದ ಅಂತಃಕರಣವೃತ್ತಿ– ಇವು ಮೂರೂ ಇರಬೇಕು. ಈ ಅಂತಃಕರಣವೃತ್ತಿ ತಿಳಿಯಬೇಕಾದ ವಸ್ತುವಿಗೆ ಸದೃಶವಾದ ಆಕಾರವನ್ನು ಪಡೆಯುತ್ತದೆ. ಈ ಆಕಾರ ಹುಟ್ಟಬೇಕಾದರೆ, ಬುದ್ಧಿಯಲ್ಲಿರುವ ತಮಸ್ ಮತ್ತು ರಜಸ್ ಕರಗಿ, ಸತ್ತ್ವಗುಣ ಮಾತ್ರ ವಿಕಾಸವಾಗಬೇಕು. ಈ ಸತ್ತ್ವಗುಣ ವಿಕಾಸವಾದಾಗಲೇ ನಮಗೆ ಜ್ಞಾನ ಪ್ರಾಪ್ತಿ. ಈ ರೀತಿಯಾಗಿ ಹುಟ್ಟಿದ ಜ್ಞಾನಕ್ಕೆ ಅಧ್ಯವಸಾಯ ಎಂದು ಹೆಸರು.(ಜಿ.ಎಚ್.)

**ಅಧ್ಯಕ್ಷ :** ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯಗಳ ಶಾಸನಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಿಯಂತ್ರಿಸುವುದಕ್ಕೆ, ಆ ಸಭೆಗಳ ಘನತೆಗೌರವಗಳನ್ನು ಕಾಪಾಡುವುದಕ್ಕೆ, ಆರಿಸಲ್ಪಟ್ಟ ಅಧಿಕಾರಿ (ಸ್ಪೀಕರ್). ಶಾಸನಸಭೆಯಲ್ಲಿ ಸದಸ್ಯರು ಚರ್ಚಿಸಿ ಕೈಗೊಳ್ಳುವ ನಿರ್ಣಯಗಳು, ಅನುಮೋದಿಸುವ ಕಟ್ಟಳೆಗಳು ನಾಡಿನ ಭವಿಷ್ಯವನ್ನು ರೂಪಿಸುತ್ತವೆ. ವಿರೋಧಾಭಿಪ್ರಾಯಗಳಿಂದ ಕೂಡಿದ ಆ ಚರ್ಚೆಯಲ್ಲಿ ಭಾಗವಹಿಸುವವರು ಔಚಿತ್ಯ ಸಭ್ಯತೆಗಳನ್ನು ಮರೆತು ಆರೋಪ ಪ್ರತ್ಯಾರೋಪಗಳಿಂದ ಮರ್ಯಾದೆಗೆಟ್ಟ ರೀತಿಯಲ್ಲಿ ನಡೆದುಕೊಂಡರೆ ನಾಡಿಗೆ ಅಪಕೀರ್ತಿ. ನಾನಾ ವಿಷಯಗಳನ್ನು ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಬೇಕಾದ ಈ ಶಾಸನಸಭೆಯಲ್ಲಿ ಕಾಲಕ್ಕೆ ಬಹಳ ಬೆಲೆ; ಅನಾವಶ್ಯಕವಾದ ವಾದಗಳಿಂದ ದೀರ್ಘ ಭಾಷಣಗಳಿಂದ ಸಭೆಯ ಕಾರ್ಯಕ್ಕೆ ಅಡ್ಡಿಯಾಗಕೂಡದು. ಮೊದಲೇ ಹಾಕಿಕೊಂಡ ಪಟ್ಟಿಗನುಸಾರವಾಗಿ ಕಾರ್ಯಕಲಾಪಗಳು ಅಚ್ಚುಕಟ್ಟಾಗಿ ನಡೆಯಬೇಕು. ಇವೆಲ್ಲವನ್ನೂ ನಿಯಂತ್ರಿಸುವ ಗುರುತರ ಜವಾಬ್ದಾರಿ ಅಧ್ಯಕ್ಷರದು.

ಸಭೆಯ ಅಧಿವೇಶನದ ಕಾಲದಲ್ಲಿ ಅಧ್ಯಕ್ಷನಾಗಲಿ, ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷರಾಗಲಿ, ಸಭೆಯ ಕಾರ್ಯಕಲಾಪಗಳನ್ನು ನಡೆಸುತ್ತಾರೆ; ಈ ಕಾರ್ಯಕಲಾಪಗಳಿಗೆ ಸಂಬಂಧಿಸಿದ ನಿಯಮಗಳನ್ನು ಎಲ್ಲರೂ ಪಾಲಿಸುವಂತೆ ನೋಡಿಕೊಳ್ಳುತ್ತಾರೆ. ಅಧ್ಯಕ್ಷನೇ ಈ ನಿಯಮಗಳ ಮೂರ್ತರೂಪವೆನ್ನಬಹುದು; ಆತನ ತೀರ್ಮಾನಕ್ಕೆ ಎಲ್ಲರೂ ತಲೆಬಾಗಬೇಕು. ಕೂಡಲೇ ಚರ್ಚೆ ನಡೆಯಬೇಕೆಂದು ತುರ್ತು ಪರಿಸ್ಥಿತಿಯ ವಿಷಯವೊಂದನ್ನು ಸದಸ್ಯರಲ್ಲೊಬ್ಬರು ಮಂಡಿಸಿದಾಗ, ಆ ವಿಷಯವನ್ನು ಕೂಡಲೆ ತೆಗೆದುಕೊಳ್ಳುವುದು ಬಿಡುವುದು ಅಧ್ಯಕ್ಷನ ತೀರ್ಪಿಗೆ ಸೇರಿದ್ದು. ಸೂಚಿಸಿದ ತಿದ್ದುಪಡಿಗಳಲ್ಲಿ ಯಾವುದನ್ನು ತೆಗೆದುಕೊಳ್ಳಬೇಕು ಯಾವುದನ್ನು ತಳ್ಳಿಹಾಕಬೇಕು ಎಂಬುದನ್ನು ನಿರ್ಧರಿಸುವುದು ಅವನ ಕೆಲಸ. ಅವನು ಅಸಂಬದ್ಧವಾದ ಭಾಷಣಗಳನ್ನೂ ಪುನರಾವೃತ್ತಿಗಳನ್ನೂ ತಡೆಗಟ್ಟುವ ಅಧಿಕಾರ ಹೊಂದಿದ್ದಾನೆ. ಸದಸ್ಯರಲ್ಲಿ ಅಕ್ರಮವಾದ ಅಥವಾ ಗಲಭೆ ಎಬ್ಬಿಸುವ ನಡತೆ ಕಂಡುಬಂದಲ್ಲಿ ಅವರಿಗೆ ಎಚ್ಚರಿಕೆ ಕೊಡುತ್ತಾನೆ, ಆಡಿದ ಮಾತುಗಳನ್ನು ಹಿಂತೆಗೆದುಕೊಳ್ಳುವಂತೆ ಅವರಿಗೆ ಆಜ್ಞೆ ಮಾಡುತ್ತಾನೆ. ಇದನ್ನೂ ಲೆಕ್ಕಿಸದೆ ಮುಂದುವರಿದವರು ಅವಿಧೇಯರೆಂದು ಪರಿಗಣಿಸುವ (ನೇಮಿಂಗ್ ಎ ಮೆಂಬರ್) ಕೆಲಸ ಅಧ್ಯಕ್ಷರದು. ಆಗ ಅವನ ಸದಸ್ಯತ್ವವೇ ತಾತ್ಕಾಲಿಕವಾಗಿ ರದ್ದಾಗುತ್ತದೆ. ಸಾಮೂಹಿಕ ಗಲಭೆಯೆದ್ದ ಸಂದರ್ಭದಲ್ಲಿ ಅಂದಿನ ಅಧಿವೇಶನವನ್ನು ಅಧ್ಯಕ್ಷ ಮುಕ್ತಾಯಗೊಳಿಸಬಹುದು. ಎಲ್ಲ ದೃಷ್ಟಿಕೋನಗಳಿಂದಲೂ ಚರ್ಚಿತ ವಿಷಯದ ಮೇಲೆ ಬೆಳಕು ಬೀಳಬೇಕೆಂಬ ಉದ್ದೇಶದಿಂದ ಚರ್ಚೆಯಲ್ಲಿ ಭಾಗವಹಿಸುವವರ ಕ್ರಮಪಟ್ಟಿಯನ್ನು ಆತನೇ ತಯಾರಿಸುತ್ತಾನೆ.

ಅವನ ಸಮದರ್ಶಿತ್ವ ವ್ಯಾಪಕವಾದ ಅವನ ಅಧಿಕಾರದಷ್ಟೇ ಮುಖ್ಯವಾದದ್ದು. ಅಧ್ಯಕ್ಷನಾಗಿ ಆರಿಸಲ್ಪಟ್ಟ ಕೂಡಲೆ ಅವನು ತನ್ನ ರಾಜಕೀಯ ಪಕ್ಷ ಅಥವಾ ಕೂಟದ ಸಂಬಂಧವನ್ನು ತ್ಯಜಿಸುತ್ತಾನೆ; ನ್ಯಾಯವಾದ ನಿರ್ಣಯ ಹೊರಬೀಳಬೇಕಾದರೆ ನಾನಾ ಪಕ್ಷಗಳಿಂದ ಸಂಸತ್ತಿನಲ್ಲಿ ಪ್ರತಿಯೊಂದು ಪಕ್ಷದವರ ಅಭಿಪ್ರಾಯಕ್ಕೂ ಅವನು ಸಮಾನ ಮನ್ನಣೆ ಗೌರವಗಳನ್ನು ಕೊಡಬೇಕಾಗುತ್ತದೆ. ನಡೆವ ಚರ್ಚೆಯಲ್ಲಿ ತನ್ನ ವೈಯಕ್ತಿಕ ಒಲವು ಅಭಿಪ್ರಾಯಗಳಿಗೆ ಎಡೆಗೊಡುವಂತಿಲ್ಲ. ಸಭೆಯಲ್ಲಿ ಸದಸ್ಯರು ನ್ಯಾಯಸಮ್ಮತರೀತಿಯಲ್ಲಿ ತಮ್ಮ ನಿಶ್ಚಿತಾಭಿಪ್ರಾಯಗಳನ್ನು ಮಂಡಿಸಲು ಅವಕಾಶ ಕೊಡುವುದು ಅವನ ಪ್ರಥಮ ಕರ್ತವ್ಯವಾದ್ದರಿಂದ, ಉದ್ವೆಗಗೊಂಡು ವಿನಯಮೀರಿ ಮಾತನಾಡುವುದು, ವೈಯಕ್ತಿಕದೂಷಣೆ, ಅವಾಚ್ಯಶಬ್ದಗಳ ಪ್ರಯೋಗ, ಅನಾವಶ್ಯಕ ಟೀಕೆ ಮುಂತಾದ ಅಕ್ರಮಗಳನ್ನು ಸಂವಿಧಾನ ತನಗೆ ಕೊಟ್ಟಿರುವ ಅಧಿಕಾರಬಲದಿಂದ ತಡೆಗಟ್ಟುತ್ತಾನೆ. ಪಕ್ಷಾತೀತನಾಗಿರುವುದರಿಂದ ಅವನು ಚರ್ಚೆಗಳಲ್ಲಿ ಭಾಗವಹಿಸುವುದೇ ಇಲ್ಲ. ಮತದಾನದಲ್ಲಿ ಪಕ್ಷಗಳು ನೀಡಿದ ಮತಗಳು ಸಮಸಂಖ್ಯೆಯಲ್ಲಿದ್ದರೆ, ಆಗ ಮಾತ್ರ ತನ್ನ ನಿರ್ಧಾರಕ ಅಭಿಮತವನ್ನು (ಕ್ಯಾಸ್ಟಿಂಗ್ ವೋಟ್) ನೀಡುತ್ತಾನೆ; ಆದರೆ ಆಗಲೂ ವಿಷಯದ ಯುಕ್ತತೆ ಅಥವಾ ಯೋಗ್ಯತೆಯ ವಿಚಾರವಾಗಿ ತನ್ನ ಅಭಿಪ್ರಾಯ ನೀಡಲು ಅವನಿಗೆ ಅಧಿಕಾರವಿಲ್ಲ.

ಹೀಗೆ ಅಧ್ಯಕ್ಷ ಶಾಸನಸಭೆಯ ಪ್ರತಿನಿಧಿ; ಸಭೆಯ ಸ್ವಾತಂತ್ರ್ಯ ಗೌರವಗಳ ಸಂಕೇತ. ಶಾಸನಸಭೆ ಪ್ರಜೆಗಳ ಪ್ರತಿನಿಧಿಯಾಗಿರುವುದರಿಂದ ಅಧ್ಯಕ್ಷ ಒಂದು ದೃಷ್ಟಿಯಲ್ಲಿ ರಾಷ್ಟ್ರಸ್ವಾತಂತ್ರ್ಯವನ್ನೇ ಪ್ರತಿನಿಧಿಸುತ್ತಾನೆ. ಆದ್ದರಿಂದ ಅವನ ಸ್ಥಾನ ಅತ್ಯಂತ ಘನವಾದದ್ದು, ಗೌರವಯುತವಾದದ್ದು, ಆ ಸ್ಥಾನವನ್ನಲಂಕರಿಸುವವನು ಸುವ್ಯಕ್ತವಾದ ಸಾಮರ್ಥ್ಯ ಮತ್ತು ನಿಷ್ಪಕ್ಷಪಾತಗಳನ್ನು ಹೊಂದಿರಬೇಕು.

ಭಾರತದಲ್ಲಿ ಅಧ್ಯಕ್ಷಸ್ಥಾನ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದೆ. ಇಲ್ಲಿ ಅಧ್ಯಕ್ಷರು ಹೊಂದಿರುವಷ್ಟು ಅಧಿಕಾರವನ್ನು ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರ ಸಮುದಾಯದ ಇತರ ಯಾವ ರಾಷ್ಟ್ರವೂ ಹೊಂದಿಲ್ಲ. ಲೋಕಸಭೆಯ ರಚನೆ, ಕಾರ್ಯಕ್ರಮ ಮುಂತಾದವುಗಳಿಗೆ ಇಂಗ್ಲೆಂಡಿನ ಹೌಸ್ ಆಫ್ (ಸಾಮಾನ್ಯರ ಸಭೆ) ಕಾಮನ್ಸ್ ಸಭೆಯನ್ನೇ ಮಾದರಿಯಾಗಿ ಇಟ್ಟುಕೊಳ್ಳಲಾಗಿದೆ. ಆದರೂ ಅಧ್ಯಕ್ಷನ ಅಧಿಕಾರವ್ಯಾಪ್ತಿ ಹೆಚ್ಚಾಗಿರುವುದಕ್ಕೆ ಕಾರಣ– ಮೊದಲಲ್ಲೆ ಅಧ್ಯಕ್ಷಸ್ಥಾನವನ್ನಲಂಕರಿಸಿದ ಇಬ್ಬರು ಭಾರತೀಯರ ದಿಟ್ಟತನ ಮತ್ತು ಸಾಹಸ. 1925ರಲ್ಲಿ ಕೇಂದ್ರ ಶಾಸನಸಭೆಯ ಅಧ್ಯಕ್ಷಸ್ಥಾನಕ್ಕೆ ಚುನಾವಣೆ ನಡೆದಾಗ, ಸರ್ಕಾರದ ಬೆಂಬಲ ಪಡೆದಿದ್ದ ತನ್ನ ಪ್ರತಿಸ್ಪರ್ಧಿಯನ್ನು ಎರಡು ವೋಟುಗಳಿಂದ ಸೋಲಿಸಿ ವಿಠಲ್‌ಭಾಯ್ ಪಟೇಲರು ಅಧ್ಯಕ್ಷರಾದರು. ಸರ್ಕಾರದಿಂದ ಸೂಚಿಸಲ್ಪಟ್ಟ ಸ್ಪರ್ಧಿಯನ್ನೇ ಸೋಲಿಸಿದ್ದರಿಂದ ಇನ್ನು ಮುಂದೆ ತಾವು ಶಾಸನಸಭೆಗೆ ಮಾತ್ರ ಜವಾಬ್ದಾರರೆಂದೂ ಬೇರೆ ಯಾರಿಗೂ ಅಧೀನರಲ್ಲವೆಂದೂ ಸಾಧಿಸಿದರು. ಸಭೆಯ ಕಾರ್ಯಕಲಾಪಗಳಲ್ಲಿ ಸರ್ಕಾರದ ಕಾರ್ಯಾಂಗದ ಕೈವಾಡ ನಿಂತುಹೋಯಿತು. ರಾಷ್ಟ್ರರಕ್ಷಣೆಗೆ ಸಂಬಂಧಪಟ್ಟ ಮಸೂದೆಯೊಂದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಸರಕಾರದಿಂದ ಸೂಚನೆ ಬಂದಾಗ, ಅದನ್ನು ತೆಗೆದುಕೊಳ್ಳುವುದು ಬಿಡುವುದು ತಮ್ಮ ವಿವೇಚನೆಗೆ ಸಂಬಂಧಿಸಿದ್ದೆಂದು ತಿಳಿಸಿ ಅಧ್ಯಕ್ಷರು ಅದನ್ನು ತಳ್ಳಿಹಾಕಿದರು. ತಮ್ಮ ಕೆಲವು ತೀರ್ಮಾನಗಳನ್ನು ಸರ್ಕಾರದ ಪಕ್ಷ ಬಹಿರಂಗವಾಗಿ ಹಳಿಯುತ್ತಿದ್ದುದನ್ನು ಕಂಡು, ಪ್ರತ್ಯೇಕವಾಗಿ ವಿಧಿಗನುಸಾರವಾದ ಸೂಚನೆಯನ್ನು ಸಭೆಯಲ್ಲಿ ಮಂಡಿಸದೆ ಆ ರೀತಿ ಟೀಕಿಸುವುದು ಸಭೆಯ ಗೌರವಕ್ಕೆ ಕುಂದುಂಟು ಮಾಡುತ್ತದೆಂದು ತಿಳಿಸಿದರು. ಸಭೆಯಲ್ಲಿ, ಅದಕ್ಕೆ ಸೇರಿದ ಆವರಣದಲ್ಲಿ, ಶಿಸ್ತುಭದ್ರತೆಗಳನ್ನು ಕಾಪಾಡುವುದು ತಮ್ಮ ಸ್ವಂತ ಅಧಿಕಾರವ್ಯಾಪ್ತಿಗೆ ಒಳಪಟ್ಟದ್ದೆಂಬುದನ್ನು ಸಾಧಿಸಿದರು. ಶಾಸಕಾಂಗದ ಕಚೇರಿಯ ಅಧಿಕಾರಿಗಳು ತಮ್ಮ ಹತೋಟಿಯಲ್ಲಿರಬೇಕು, ಆಡಳಿತದ ಬೇರೆ ಯಾವ ಶಾಖೆಯೂ ಅವರ ಮೇಲೆ ಪ್ರಭಾವ ಬೀರದಂತಿರಬೇಕು ಎಂಬ ನೀತಿಯನ್ನು ಸಮರ್ಥಿಸಿ, 1928ರಲ್ಲಿ ಸರ್ಕಾರ ಅದನ್ನು ಅನುಮೋದಿಸುವಂತೆ ಮಾಡಿದರು.

ಮಾವಳಂಕರ್ ಅಧ್ಯಕ್ಷರಾಗಿದ್ದ ಕಾಲ ಶಾಸನಸಭೆಯ ಘನತೆ ಗೌರವಗಳ ಬೆಳೆವಣಿಗೆಯಲ್ಲಿ ಇನ್ನೊಂದು ಸ್ಮರಣೀಯ ಘಟ್ಟ. 1946: ಭಾರತೀಯರ ಸ್ವಾತಂತ್ರ್ಯ ಸಮರದ ಅಂತಿಮಕಾಲ. ಆಗ ಇವರು ಕೇಂದ್ರ ಶಾಸನಸಭೆಯ ಅಧ್ಯಕ್ಷರಾಗಿ ಚುನಾಯಿತರಾದರು. ಸ್ಪೀಕರ್ ಎಂಬ ಹೆಸರು ಪ್ರಯೋಗಕ್ಕೆ ಬಂದುದು 1947ರಲ್ಲಿ ಸ್ವಾತಂತ್ರ್ಯಘೋಷಣೆಯಾದ ಅನಂತರ. ಸಂವಿಧಾನರಚನೆ (ಕಾನ್‌ಸ್ಟಿಟ್ಯುಎಂಟ್ ಅಸೆಂಬ್ಲಿ) ಶಾಸನಸಭೆಯ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅವರೇ ಅಧ್ಯಕ್ಷರಾಗಿ ಮುಂದುವರಿದರು. ಲೋಕಸಭೆ, ರಾಜ್ಯಸಭೆಗಳ ರಚನೆಯಾದಮೇಲೆ 1956 ಮೇ 27ರಂದು ಲೋಕಸಭೆಯ ಅಧ್ಯಕ್ಷರಾದರು. ಹೊಸ ಸಂವಿಧಾನಕ್ಕನುಸಾರವಾಗಿ ಲೋಕಸಭೆ ನಿರ್ಮಾಣವಾದ ಆ ಪರ್ವಕಾಲದಲ್ಲಿ ನಾಲ್ಕು ವರ್ಷ (1956ರ ವರೆಗೆ) ಅಧ್ಯಕ್ಷರಾಗಿದ್ದು ಆ ಸ್ಥಾನದ ಘನತೆ ಗೌರವಗಳನ್ನು ಭದ್ರಪಡಿಸಿದರು. ಭಾರತ ಸಂವಿಧಾನಕ್ಕನುಗುಣವಾಗಿ ಅಧ್ಯಕ್ಷರ ಅಧಿಕಾರಕ್ಕೆ ರೂಪುಕೊಟ್ಟವರು ಅವರು.

ಭಾರತ ಸಂವಿಧಾನದಲ್ಲಿ ಶಾಸನಸಭೆಯ ರಚನೆ ಕಾರ್ಯಕಲಾಪಗಳ ವಿಷಯವಾಗಿ ನಿರ್ದಿಷ್ಟನಿಯಮಗಳಿವೆ. ಅಧ್ಯಕ್ಷಸ್ಥಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವಲ್ಲಿ ಮಾವ್ಲಂಕರ್‌ರವರು ನಿರ್ವಹಿಸಿದ ಪಾತ್ರ ಶ್ಲಾಘನೀಯ. ಅಧ್ಯಕ್ಷರ ವಿಷಯದಲ್ಲಿ ಇತರ ಅನೇಕ ದೇಶಗಳಲ್ಲಿ–ಇಂಗ್ಲೆಂಡಿನಲ್ಲೂ–ಅನುಕರಣೆಯಲ್ಲಿರುವ ಆಡಂಬರದ ಶಿಷ್ಟಾಚಾರಗಳನ್ನು ತೆಗೆದುಹಾಕಿ, ಭಾರತಸಂಸ್ಕೃತಿಗನುಗುಣವಾದ ಸರಳತೆಯನ್ನು ಆಚರಣೆಗೆ ತರಲಾಗಿದೆ. ಅವರು ಇಂಥ ಉಡುಪನ್ನೇ ಧರಿಸಬೇಕೆಂಬ ನಿಯಮವಿಲ್ಲ. 1946ರಲ್ಲಿ ತಾವು ಅಧ್ಯಕ್ಷರಾಗಿ ಬಂದಕೂಡಲೆ ಮಾವ್ಲಂಕರರು ಅಧಿಕಾರ ಸೂಚಕವಾಗಿ ಧರಿಸಬೇಕಾಗಿದ್ದ ಕೃತಕ ತಲೆಗೂದಲ ಕುಲಾವಿಯನ್ನು (ವಿಗ್) ತ್ಯಜಿಸಿದರು. ಅಧ್ಯಕ್ಷರು ಸಭೆಗೆ ಬರುತ್ತಿದ್ದಾರೆಂಬುದನ್ನು ಶಿಸ್ತುಪಾಲನಾಧಿಕಾರಿಯೊಬ್ಬ ಶ್ರುತಪಡಿಸುತ್ತಾನೆ. ಕೂಡಲೆ ಎಲ್ಲರೂ ಎದ್ದುನಿಲ್ಲುತ್ತಾರೆ. ತಮ್ಮ ಪೀಠದ ಹತ್ತಿರ ಬಂದಕೂಡಲೆ ಅಧ್ಯಕ್ಷರು ಎಲ್ಲರಿಗೂ ಬಾಗಿ ವಂದಿಸಿ ಕುಳಿತುಕೊಳ್ಳುತ್ತಾರೆ. ಅನಂತರ ಎಲ್ಲರೂ ಕೂರುತ್ತಾರೆ. ಶಿಸ್ತುಪಾಲನಾಧಿಕಾರಿ ಸಮವಸ್ತ್ರ ಧರಿಸಿರುತ್ತಾನೆ. ಆದರೆ ಅವನ ಕೈಯಲ್ಲಿ ಅಧಿಕಾರದಂಡ (ಮೇಸ್) ಇಲ್ಲ.

ಯಾವ ಅನುಕ್ರಮದಲ್ಲಿ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದನ್ನು ಅಧ್ಯಕ್ಷರು ನಿರ್ಧರಿಸುತ್ತಾರೆ. ಇದರಲ್ಲಿ ಅನೇಕವೇಳೆ ಸಭೆಯ ಮುಖ್ಯಸ್ಥನ (ಲೀಡರ್ ಆಫ್ ದಿ ಹೌಸ್) ಅಭಿಪ್ರಾಯವನ್ನೂ ತೆಗೆದುಕೊಳ್ಳುತ್ತಾರೆ. ಸಭೆಯಲ್ಲಿ ಆಗಬೇಕಾದ ಕಾರ್ಯವೆಷ್ಟಿದೆಯೆಂಬುದನ್ನು ಗಮನಿಸಿ, ಅದಕ್ಕೆ ಅನುಸಾರವಾಗಿ ಸಭೆಯ ಅಧಿವೇಶನ ಪ್ರತಿನಿತ್ಯ ಯಾವ ಕಾಲದಲ್ಲಿ, ಎಷ್ಟುದಿನ ನಡೆಯಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಸದಸ್ಯರ ಭಾಷಣದ ಕಾಲವನ್ನೂ ನಿರ್ಣಯಿಸುತ್ತಾರೆ. ಸದಸ್ಯರು ಪ್ರಶ್ನೆಗಳ ಯುಕ್ತಾಯುಕ್ತತೆ, ಸೂಕ್ತಕಾಲ ಇವನ್ನೆಲ್ಲ, ನಿರ್ಧರಿಸುವವರು ಅಧ್ಯಕ್ಷರು. ಸಭಿಕರು ಮುಂದೊಡ್ಡುವ ಗೊತ್ತುವಳಿಗಳ, ತಿದ್ದುಪಡಿಗಳ ವಿಚಾರದಲ್ಲೂ ಹೀಗೆಯೇ. ಸ್ಥಾಯೀನಿಬಂಧನೆಗಳ ರಚನೆಯಲ್ಲೂ ಲೋಕಸಭೆ ಅಧ್ಯಕ್ಷರ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆಕೊಟ್ಟಿದೆ. ಸಭೆಯಲ್ಲಿ ಅಧ್ಯಕ್ಷರ ವರ್ತನೆಯ ಬಗ್ಗೆ ಖಂಡನಾಸೂಚನೆಯನ್ನು ಮಂಡಿಸುವುದಕ್ಕೆ ಸದಸ್ಯರಿಗೆ ಅವಕಾಶವಿದೆ. ಆದರೆ ಇದು

ಗುರುತರವಾದ ಲೋಪವಾಗಿರಬೇಕು. ರಾಷ್ಟ್ರದ ಹಿತಕ್ಕೆ, ಸಭೆಯ ಗೌರವಕ್ಕೆ, ಕುಂದುತರುವಂಥ ದ್ದಾಗಿರಬೇಕು. ಇಂಥ ಸೂಚನೆ ಬಂದಿರುವುದು ಒಂದೇ ಸಲ, 1954ರ ಡಿಸೆಂಬರ್ 18ನೆಯ ದಿನ. ಅದರ ಮಂಡನೆಗೆ ಕಾರಣ ಕ್ಷುಲ್ಲಕವಾಗಿತ್ತು. ಆಗ ಜವಾಹರ್‌ಲಾಲ್ ನೆಹರೂರವರು ಕೆರಳಿ, ಮಂಡಿಸಿದವರನ್ನೂ ಅವರ ಬೆಂಬಲಿಗರನ್ನೂ ಉಗ್ರವಾಗಿ ಖಂಡಿಸಿ, ಇಂಥ ಸೂಚನೆಗಳಿಗೆ ಅವಕಾಶವೇನೋ ಇದೆ, ಆದರೆ ಅಧ್ಯಕ್ಷಸ್ಥಾನದ ಗೌರವ, ಶಾಸನಸಭೆಯ ಗೌರವ, ರಾಷ್ಟ್ರ ಗೌರವ–ಇವುಗಳಿಗೆ ಧಕ್ಕೆಯಾಗದಂತೆ ಆ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುವುದು ಹೇಯ ಕಾರ್ಯ ಎಂದು ಹೇಳಿದರು.

ಪ್ರಾಂತ್ಯ ಶಾಸನಸಭೆಗಳಲ್ಲಿ ಅಧ್ಯಕ್ಷಸ್ಥಾನ ಅಷ್ಟೊಂದು ದೋಷರಹಿತವಾಗಿಲ್ಲ. ಪಕ್ಷಪ್ರತಿಪಕ್ಷಗಳ ಒತ್ತಾಯ, ಸರ್ಕಾರದ ಕೈವಾಡ ಮುಂತಾದ ಕಾರಣಗಳಿಂದ ಅಲ್ಲಿನ ಅಧ್ಯಕ್ಷರ ಕಾರ್ಯ ಸುಗಮವಾಗಿಲ್ಲ. ಆದರೆ ಉಚ್ಚ ಸಂಪ್ರದಾಯಗಳನ್ನು ಬೆಳೆಸಿಕೊಂಡು ಬಂದು, ಹೊರದೇಶಗಳೂ ಮೆಚ್ಚುವಂತೆ ಕಾರ್ಯನಡೆಸುತ್ತ ಬಂದಿರುವ ಲೋಕಸಭಾಧ್ಯಕ್ಷರ ಮೇಲ್ಪಂಕ್ತಿಯಿಂದ ಅಲ್ಲೂ ಪರಿಸ್ಥಿತಿ ಉತ್ತಮಗೊಳ್ಳುತ್ತದೆಂಬುದರಲ್ಲಿ ಸಂಶಯವಿಲ್ಲ. (ಎ.ಎಂ.)

**ಅಧ್ಯಾತ್ಮರಹಸ್ಯವಾದ** : ಕ್ರೈಸ್ತಧರ್ಮದಲ್ಲಿ ಮೊದಮೊದಲು ಹುಟ್ಟಿದ ಒಂದು ನವ್ಯಪಂಥ (ಗ್ನಾಸ್ಟಿಸಿಸಮ್). ಪ್ರ.ಶ. ಮೊದಲ 3 ಶತಮಾನಗಳಲ್ಲಿ ಪ್ರಚಲಿತವಾಗಿದ್ದ ಸಂಪ್ರದಾಯ. ಆ ಕಾಲದ ಮೇಧಾವಿಗಳನೇಕರು ಈ ಪಂಥಕ್ಕೆ ಒಲಿದಿದ್ದರು. ಇವರಲ್ಲಾಗಲೇ ಒಂದು ಸಮನ್ವಯದೃಷ್ಟಿ ಹುಟ್ಟಿದ್ದಿತು; ಎಲ್ಲೆಡೆಯಿಂದಲೂ ಒಳ್ಳೆಯದನ್ನು ಆರಿಸಿಕೊಳ್ಳುವ ಪ್ರವೃತ್ತಿ ಬೆಳೆದಿತ್ತು. ಕ್ರೈಸ್ತಧರ್ಮವನ್ನು ಜ್ಞಾನಮಾರ್ಗವಾಗಿ ಪರಿವರ್ತಿಸಲೆಳೆಸಿದ ಪ್ರಯತ್ನವಿದು. ಗ್ನಾಸಿಸ್ ಎಂದರೆ ಜ್ಞಾನ. ಇದು ಬರಿಯ ಶ್ರದ್ಧೆಯಾಗಿರದೆ ಪರತತ್ತ್ವವನ್ನು ಕುರಿತ ನಿಷ್ಕೃಷ್ಟ ಅರಿವೂ ಆಗಿತ್ತು. ಇದು ವಿಶೇಷ ರೀತಿಯ ಜ್ಞಾನವಾಗಿತ್ತು. ಇದನ್ನು ಸಾಕ್ಷಾತ್ಕಾರದ ಜ್ಞಾನವೆನ್ನಬಹುದು. ಎಲ್ಲರಿಗೂ ಇದು ಸಾಮಾನ್ಯವಾಗಿ ನಿಲುಕದುದರಿಂದ ಇದನ್ನು ರಹಸ್ಯವಾದವೆನ್ನಬಹುದು. ಸಾಮಾನ್ಯವಸ್ತುಗಳ ಜ್ಞಾನವಿಲ್ಲದೆ ಪರತತ್ತ್ವಜ್ಞಾನವಾದುದರಿಂದ ಇದನ್ನು ಅಧ್ಯಾತ್ಮರಹಸ್ಯವಾದವೆಂದು ಭಾವಿಸಲಾಯಿತು. ಕ್ರೈಸ್ತರಿಂದ ಶ್ರುತಿ ಎಂದು ಎಣಿಸಲ್ಪಟ್ಟ ಬೈಬಲ್ಲಿನಲ್ಲಿಯೇ ಈ ವಾದವನ್ನು ಸೂಚಿಸಿದೆ ಎಂದು ಗ್ನಾಸ್ಟಿಕರು ವಾದಿಸಿದರು. ಸಮನ್ವಯ ವಾದವೆಂದೂ ಹೆಸರಾದ ಇದರಲ್ಲಿ ಗ್ರೀಕ್ ತತ್ತ್ವಜ್ಞಾನವೂ ಪೌರಸ್ತ್ಯಬ್ರಹ್ಮವೂ ಕ್ರೈಸ್ತತತ್ತ್ವಜ್ಞಾನವೂ ಮಿಳಿತವಾಗಿವೆ. ಸೈಮನ್ ಮ್ಯಾಗ್ನಸ್ ಎಂಬುವನೇ ಇದರ ಪ್ರಥಮ ಪ್ರತಿಪಾದಕನೆಂದು ಸಂಶೋಧಕರು ಒಮ್ಮತದಿಂದ ಹೇಳುತ್ತಾರೆ. ಇದರ ಪ್ರಾಬಲ್ಯ ಪ್ರ.ಶ. 3ನೆಯ ಶತಮಾನಕ್ಕೆ ಮುಗಿದಿದ್ದರೂ ಪರೋಕ್ಷವಾಗಿ ಕ್ರೈಸ್ತಧರ್ಮದಲ್ಲಿ ಅಲ್ಲಲ್ಲಿ ಕಂಗೊಳಿಸಿತು.

ಅಧ್ಯಾತ್ಮರಹಸ್ಯವಾದ ಕೆಲವು ಮುಖ್ಯಾಂಶಗಳನ್ನಿಲ್ಲಿ ಗಮನಿಸಬಹುದು. ಕ್ರೈಸ್ತಧರ್ಮ ಬರಿಯ ಶ್ರದ್ಧೆ, ನೀತಿ, ಅಲ್ಲ. ಅದು ಜ್ಞಾನಮಾರ್ಗ. ವಿಶ್ವದರ್ಶನದ ಭಾವನೆ ಅದರಲ್ಲಿದೆ. ಎರಡನೆಯದಾಗಿ ಸ್ವರ್ಗೀಯ ಕ್ರಿಸ್ತನಿಗೂ ಅವನ ಅಭಿವ್ಯಕ್ತಿಗಾಗಿ ಆರಿಸಿಕೊಂಡ ಐತಿಹಾಸಿಕ ಕ್ರಿಸ್ತನಿಗೂ ವ್ಯತ್ಯಾಸಗಳಿವೆ ಇದನ್ನು ಪಾಷಂಡವಾದ (ಡೊಸೀಟಿಸಮ್) ಎನ್ನುತ್ತಾರೆ. ಮೂರನೆಯದಾಗಿ ಚೇತನರನ್ನು ನಿತ್ಯರು, ಮುಕ್ತರು ಮತ್ತು ಬದ್ಧರು ಎಂದು ಮೂರು ವಿಧವಾಗಿ ವಿಂಗಡಿಸುತ್ತದೆ. ನಿತ್ಯರನ್ನು ವಾಯವಿಕ (ನ್ಯೂಮ್ಯಾಟಿಕ್) ಎಂದೂ ಮುಕ್ತರನ್ನು ಅಭೌತಪ್ರಭಾವಕ್ಕೆ ಒಳಗಾದವರು (ಸೈಕಿಕ್) ಎಂದೂ ಬದ್ಧಜೀವಿಗಳನ್ನು ಪ್ರಾಕೃತಿಕ (ಹೈಲಿಕ್) ಎಂದೂ ಕರೆಯಲಾಗಿದೆ. ನಾಲ್ಕನೆಯದಾಗಿ ಇಂದ್ರಿಯಗೋಚರವಾದ ಜಗತ್ತು ಅಲ್ಪ, ಕ್ಷುದ್ರ ಮತ್ತು ಅಸ್ಥಿರ. ಇವೆಲ್ಲ ಭಾವನೆಗಳೂ ಮುಂದಿನ ಕ್ರೈಸ್ತಧರ್ಮದ ಬೆಳವಣಿಗೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಗೊಳಿಸಿದುವು. ಗ್ನಾಸ್ಟಿಕರಂತೂ ಇವೆಲ್ಲಕ್ಕೂ ಬೈಬಲ್ಲಿನ ಶ್ರುತಿವಾಕ್ಯಗಳಲ್ಲಿ ಪ್ರಮಾಣವಿದೆ ಎಂದು ವಾದಿಸುತ್ತಾ ಬಂದರು. ತಾವು ಹೇಳುವ ವಿಷಯಗಳೆಲ್ಲವೂ ಶ್ರುತಿಬದ್ಧವಾಗಿವೆ, ಈ ಉಪದೇಶಗಳೆಲ್ಲ ಏಸುಕ್ರಿಸ್ತನಿಂದ ಗುರು–ಶಿಷ್ಯ ಪರಂಪರೆಯಲ್ಲಿ ಮುಂದುವರಿದ ರಹಸ್ಯಗಳು ಎಂದೂ ಅವರು ವಾದಿಸಿದರು. ಇವೆಲ್ಲ ಉಪದೇಶಗಳು ಸಾಂಪ್ರದಾಯಿಕ ಕ್ರೈಸ್ತಧರ್ಮಕ್ಕೆ ಒಪ್ಪಿಗೆಯಾಗಲಿಲ್ಲ; ಅಷ್ಟೇ ಅಲ್ಲ, ಗ್ನಾಸ್ಟಿಕರನ್ನು ಸಂಪ್ರದಾಯಸ್ಥರೆಂದೂ ವ್ರಾತ್ಯರೆಂದೂ (ಹೆರೆಟಿಕ್) ಕರೆದರು.

ನಮಗೆ ದೊರಕಿರುವ ಅಧ್ಯಾತ್ಮರಹಸ್ಯವಾದದ ಪ್ರಧಾನಗ್ರಂಥ ಪಿಸ್ಟಿಸ್ ಸೋಫಿಯ ಎಂಬುದು. (ಎಂ.ವೈ.)

**ಅಧ್ಯಾತ್ಮವಿದ್ಯೆ** : ಆತ್ಮವನ್ನು ಕುರಿತ ವಿದ್ಯೆ (ಆತ್ಮಾನಂ ಅಧಿಕೃತ್ಯ). ಆದರೆ ಪಾರಿಭಾಷಿಕವಾಗಿ ಉಪನಿಷತ್ತುಗಳಲ್ಲಿ ಬರುವ ಪರಬ್ರಹ್ಮಸ್ವರೂಪಪ್ರತಿಪಾದಕವಾದ ಭಾಗಕ್ಕೆ ಅಧ್ಯಾತ್ಮವಿದ್ಯೆಯೆಂದು ವ್ಯವಹಾರವಿದೆ. ಆತ್ಮ–ಬ್ರಹ್ಮ ಇವರ ತಾದಾತ್ಮ್ಯವನ್ನು ಗ್ರಹಿಸಿ, ತತ್ತ್ವಮಸಿ, ಅಯಮಾತ್ಮಾ ಬ್ರಹ್ಮ, ಸರ್ವಂ ಖಲ್ವಿದಂ ಬ್ರಹ್ಮ ಮೊದಲಾದ ಮಹಾವಾಕ್ಯಗಳಿಂದ ಸತ್ಪದಾರ್ಥದ ನಿರ್ಧಾರಮಾಡುವುದು ಈ ವಿದ್ಯೆಯ ಉದ್ದೇಶ. ಈ ವಿದ್ಯೆಯ ಜನಕ, ಯಜ್ಞವಲ್ಕ್ಯ, ಪ್ರವಾಹಣ ಜೈವಲಿ, ಆರುಣಿ ಮೊದಲಾದ ದ್ರಷ್ಟಾರರು ಖಚಿತಗೊಳಿಸಿದ್ದಾರೆ. ಸರ್ವಾಂತರ್ಗತವಾದ ಆತ್ಮವೇ ಸಾಕ್ಷಾತ್ತಾಗಿ ಮತ್ತು ಅಪರೋಕ್ಷವಾಗಿ ಬ್ರಹ್ಮವಸ್ತು; ಈ ಅಕ್ಷರವಾದ ಆಕಾಶದಲ್ಲಿ ಎಲ್ಲವೂ ಓತಪ್ರೋತವಾಗಿ ಸೇರಿರುತ್ತಾರೆ. ಇದು ಅವಿನಾಶಿ, ನಿರ್ಗುಣ; ಕರ್ತನೂ ಅಲ್ಲ, ವಿಷಯವೂ ಅಲ್ಲ, ಉಪನಿಷತ್ತುಗಳಲ್ಲಿ ಆತ್ಮದ ಪ್ರಸ್ತಾಪವೇ ಪ್ರಮುಖವಾಗಿ, ವಿಸ್ತಾರವಾಗಿ ಬರುವುದರಿಂದ ಆತ್ಮನನ್ನು ಔಪನಿಷದ ಎಂದು ನಿರ್ದೇಶಿಸುವುದುಂಟು. ಉಪನಿಷತ್ತನ್ನು ಅಧ್ಯಾತ್ಮವಿದ್ಯೆ ಎಂದು ವ್ಯವಹರಿಸುತ್ತಾರೆ. ಎಲ್ಲ ವಿದ್ಯೆಗಳಿಗಿಂತ ಅಧ್ಯಾತ್ಮವಿದ್ಯೆ ಶ್ರೇಷ್ಠವಾದುದು (ಅಧ್ಯಾತ್ಮವಿದ್ಯಾವಿದ್ಯಾನಾಂ) ಎನ್ನುವ ಕಲ್ಪನೆಯ ಹಿನ್ನೆಲೆಯಲ್ಲಿ ಯಾವುದನ್ನು ತಿಳಿದರೆ ಎಲ್ಲವೂ ತಿಳಿಯುವುದೋ (ಯಸ್ಯ ಜ್ಞಾತೇ ಸರ್ವಂ ವಿಜ್ಞಾತಂ ಭವತಿ) ಎನ್ನುವ ಸೂತ್ರವಿದೆ. ಧ್ಯಾನದಿಂದ, ತನ್ಮಯಚಿತ್ತದಿಂದ ಬ್ರಹ್ಮನ ಸಾಕ್ಷಾತ್ಕಾರವಾಗುವುದರಿಂದ ಈ ವಿದ್ಯೆ ಸರ್ವಶ್ರೇಷ್ಠವಾದುದು. (ಎಸ್.ಕೆ.ಆರ್)

**ಅಧ್ಯಾಸ** : ಎಂದರೆ ಆರೋಪ; ಒಂದು ವಸ್ತುವಿಗೆ ಅದರಿಂದ ಬೇರೆಯಾದ ವಸ್ತುವಿನ ಸ್ವಭಾವವನ್ನು ವರ್ಗಾಯಿಸಬಹುದು. ಎಲ್ಲ ಬಗೆಯ ಮಿಥ್ಯಾಜ್ಞಾನದಲ್ಲೂ ಇಂಥ ಅರಿವಿರುವುದೆ ಎಂಬುದನ್ನು ಶಂಕರಾಚಾರ್ಯರು ತಮ್ಮ ವೇದಾಂತಸೂತ್ರಭಾಷ್ಯದ ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ. ಹಗ್ಗವನ್ನು ಹಾವೆಂದು ಭ್ರಮಿಸಿದಾಗ ಹಗ್ಗದ ಸ್ವಭಾವ ಮುಚ್ಚಿಹೋಗಿ ಹಾವಿನ ಸ್ವಭಾವ ಅದರಲ್ಲಿ ಕಾಣುತ್ತದೆ. ಇತರರಿಂದ ಕೇಳಿ ತಿಳಿದಾಗ, ಅಥವಾ ತಾನೇ ಜಾಗರೂಕನಾಗಿ ಪರೀಕ್ಷಿಸಿ ತಿಳಿದಾಗ, ಹಾವು ಹಗ್ಗದಲ್ಲಿ ಆರೋಪವಾಗಿತ್ತೆಂದು ತಿಳಿದು ಭ್ರಮೆ ನಿವಾರಣೆಯಾಗುತ್ತದೆ. ಆದರೆ ಆತ್ಮದ ವಿಚಾರವಾಗಿ ಬ್ರಹ್ಮದ ವಿಚಾರವಾಗಿ ಜಗತ್ತಿನ ವಿಚಾರವಾಗಿ ನಮಗಿರುವ ಮಿಥ್ಯಾಭಾವನೆ ಅಷ್ಟು ಸುಲಭವಾಗಿ ಪರಿಹಾರವಾಗುವು ದಿಲ್ಲ. ಚೇತನರೂಪವಾದ ಆತ್ಮಕ್ಕೆ ಅಚೇತನವಾದ ಶರೀರದ ಧರ್ಮವನ್ನು ದಿನದಿವೂ ನಮ್ಮ ಜೀವನದುದ್ದಕ್ಕೂ ಆರೋಪಿಸುತ್ತಿದ್ದೇವೆಂಬುದು ನಮಗೆ ಸುಲಭವಾಗಿ ವಿಶದವಾಗುವು ದಿಲ್ಲ. ನಾನು ಕುರುಡ, ನಾನು ಕುಂಟ ಎಂದು ನಾವು ಹೇಳಿಕೊಳ್ಳುವುದು ವಾಡಿಕೆಯಲ್ಲವೆ? ಹಾಗೆ ಹೇಳಿಕೊಂಡಾಗ, ತಿಳಿಯುವ ಚೇತನಕ್ಕೆ ಎಂದರೆ ವಿಷಯಿಗೆ, ಅದಕ್ಕೆ ಹೊರತಾದ ಕೇವಲ ವಿಷಯರೂಪವಾದ ಭೌತವಾದ ಕಣ್ಣುಕಾಲುಗಳನ್ನು ಆರೋಪಿಸುತ್ತೇವೆ. ಹಾಗೆಯೇ ಒಳಗೂ ಹೊರಗೂ ಒಂದೇ ಆಗಿರುವ ಬ್ರಹ್ಮಕ್ಕೆ, ಅದಕ್ಕೆ ಹೊರತಾದ ಯಾವುದೂ ಇಲ್ಲದೆ ಎಲ್ಲರನ್ನೂ ಒಳಗೊಂಡಿರುವ ಅಖಂಡವಾದ ಬ್ರಹ್ಮಕ್ಕೆ ಭೇದವನ್ನು ಆರೋಪಿಸಿ ಭ್ರಮೆಗೊಳ್ಳುತ್ತೇವೆ. ಅನಿತ್ಯವಾದ ಜಗತ್ತಿಗೆ ನಿತ್ಯಸ್ವಭಾವವನ್ನು ಆರೋಪಿಸುತ್ತೇವೆ. ಬ್ರಹ್ಮವೊಂದೇ ಸತ್ಯ, ಜಗತ್ತು ಅದಕ್ಕೆ ಸಮಾನವಾದ ನಿತ್ಯಸತ್ಯವಲ್ಲ. ಬ್ರಹ್ಮವೊಂದೇ ನಿಜವಾಗಿ ಆತ್ಮರೂಪವಾ ದದ್ದು, ಅದು ವಿಷಯಿ, ವಿಷಯರೂಪದ್ದಲ್ಲ. ಜಗತ್ತು ಪ್ರತ್ಯೇಕವಾದ ಜೀವಿಗಳು ಬ್ರಹ್ಮದಂತೆ ಸತ್ಯವೆಂದು ಬಗೆಯುವುದು ಮಿಥಾಜ್ಞಾನ. ಆ ಮಿಥ್ಯಾಜ್ಞಾನ ಹುಟ್ಟುವುದು ಆರೋಪ ಅಥವಾ ಅಭ್ಯಾಸವ ಮೂಲಕ. ಇದು ಶಂಕರಾಚಾರ್ಯರ ಸಿದ್ಧಾಂತ. **(ನೋಡಿ – ಅದ್ವೈತ)**(ಜಿ.ಎಚ್.)

**ಅನಂಗಪಾಲ** : ಕನೂಜ ರಾಜರ ಸಾಮಂತರೆಂದು ಹೇಳಲಾದ ತೋರಮಾನರ ವಂಶಕ್ಕೆ ಸೇರಿದ ದೊರೆ. ಈತ ಇಂದಿನ ದೆಹಲಿಯ ಕೆಂಪುಕೋಟೆಯನ್ನು ಕಟ್ಟಿ (993–94) ಆ ನಗರಕ್ಕೆ ಐತಿಹಾಸಿಕ ಪ್ರಾಶಸ್ತ್ಯವನ್ನು ತಂದುಕೊಟ್ಟ. (ಎಂ.ಪಿ.)

**ಅನಂತ** : ಎಂದರೆ ಕೊನೆ ಇಲ್ಲದ್ದು, ಮಿತಿ ಇಲ್ಲದ್ದು, ಅಗಣಿತವಾದದ್ದು. ಈ ಭಾವನೆಗೆ ವಿಶ್ವದಲ್ಲಿ ಮಾನವ ಕಾಣುವ ಅಗಾಧವಾದ ವೈಚಿತ್ರ್ಯ ಮತ್ತು ವೈಶಾಲ್ಯ ಕಾರಣ. ಭೂಮಿಯ ಮೇಲಿರುವ ವಸ್ತುಗಳು, ಸಸ್ಯಗಳು, ಪ್ರಾಣಿಗಳು ಅಗಣಿತ. ಅದರ ಮೇಲಿನ ಆಕಾಶ ಮಿತಿ ಇಲ್ಲದಷ್ಟು ವಿಸ್ತಾರವಾದದ್ದು. ಆಕಾಶದಲ್ಲಿರುವ ತಾರೆಗಳ ಸಂಖ್ಯೆ ಅಮಿತ. ದೇಶಕ್ಕೆ ಎಣೆ ಇಲ್ಲ. ಕಾಲಕ್ಕೆ ಕೊನೆ ಇಲ್ಲ. ನಾವು ದಿಗಂತದ ಕಡೆಗೆ ಎಷ್ಟು ದೂರ ಹೋದರೂ ಆ ದಿಗಂತ ಅಷ್ಟು ಅಷ್ಟು ಹಿಂದಕ್ಕೆ ಸರಿಯುತ್ತದೆ. ಭೂತಕಾಲವೂ ಭವಿಷ್ಯತ್‌ಕಾಲವೂ ಹಾಗೆಯೆ. ನಾವು ಎಷ್ಟು ಎಷ್ಟು ಹಿಂದಕ್ಕೆ ಹೋದರೂ ಅದರ ಹಿಂದೆ ಕಾಲವಿದ್ದೇ ಇರುತ್ತದೆ. ನಾವು ಎಷ್ಟೆಷ್ಟು ಭವಿಷ್ಯದಲ್ಲಿ ಮುನ್ನಡೆದರೂ ಅದರ ಮುಂದೆ ಭವಿಷ್ಯವಿದ್ದೇ ಇರುತ್ತದೆ. ಈ ಅಪರಿಮಿತಭಾವನೆ ಕಾಲದೇಶಗಳಿಗೆ ಮಾತ್ರವಲ್ಲದೆ ಎಲ್ಲ ಬಗೆಯ ಗುಣಗಳಿಗೂ ಅನ್ವಯಿಸುತ್ತದೆ. ನಾವು ಲೋಕದಲ್ಲಿ ಕಾಣುವ ಬಣ್ಣಗಳು ಇಷ್ಟೇ ಎಂದು ಹೇಳುವುದಕ್ಕಾಗುತ್ತದೆಯೆ? ಹಾಗೆಯೇ ಗಾತ್ರದಲ್ಲೂ ಅಪರಿಮಿತ ಭೇದಗಳಿವೆ. ಒಂದು ವಸ್ತುವನ್ನು ಎಷ್ಟೇ ಸಣ್ಣ ಅಣುವಾಗಿ ಒಡೆದರೂ ಅದಕ್ಕಿಂತ ಅಲ್ಪವಾದದ್ದು ಇದ್ದೇ ಇರುತ್ತದೆ. ಎಷ್ಟೇ ದೊಡ್ಡ ಗಾತ್ರವನ್ನು ಕಲ್ಪಿಸಿಕೊಂಡರೂ ಅದಕ್ಕಿಂತ ದೊಡ್ಡದು ಸಂಭಾವ್ಯ. ಈ ಅನಂತತೆಯನ್ನು ವಸ್ತುಗಳಲ್ಲಲ್ಲದೆ ಮಾನವನ ಪ್ರತಿಭೆಯಲ್ಲೂ ಕಾಣಬಹುದು. ಮಾನವನ ಕಾವ್ಯಸೃಷ್ಟಿ ಇಲ್ಲಿಗೇ ಮುಗಿಯಿತು ಎಂದು ಹೇಳಬಹುದೇ? ಇದು ಕಾವ್ಯಕ್ಕಲ್ಲದೆ, ಗೀತ, ನೃತ್ಯ, ಚಿತ್ರ, ಶಿಲ್ಪ ಮುಂತಾದ ಎಲ್ಲ ಕಲೆಗಳಿಗೂ ಅನ್ವಯಿಸುತ್ತದೆ. ಮಾನವನಿಗೆ ಸಹಜವಾದ ಆಶ್ಚರ್ಯ, ಅದ್ಭುತಭಾವ ಈ ಅನಂತತಾಭಾವನೆಯ ಚಿಲುಮೆ; ಅದರ ಚಿಮ್ಮುಹೊಮ್ಮುಗಳಿಗೆ ಕೊನೆಯಿಲ್ಲ.

ಈ ಭಾವನೆಯ ವಿವೇಚನೆ ವಿಶೇಷವಾಗಿ ನಡೆದಿರುವುದು ಗಣಿತಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳಲ್ಲಿ. ಇಲ್ಲಿ ನಮಗೆ ಪ್ರಸಕ್ತವಾದದ್ದು ಮತ ಮತ್ತು ತತ್ತ್ವಶಾಸ್ತ್ರಗಳಲ್ಲಿ ನಡೆದಿರುವ ಅದರ ವಿವೇಚನೆ. ಅದಕ್ಕೆ ಸಂಬಂಧಿಸಿದ ಮುಖ್ಯವಾದ ವಾದಗಳು ಹೀಗಿವೆ:

ಈ ಬಗ್ಗೆ ಗ್ರೀಕ್ ಮತ್ತು ಭಾರತೀಯ ತತ್ತ್ವಶಾಸ್ತ್ರರೀತ್ಯಾ ಸ್ಥೂಲವಾಗಿ ಎರಡು ವಾದಗಳಿವೆ. ಒಂದು ವಾದದವರು ಅನಂತ ಭಾವನೆ ಕೇವಲ ನೇತ್ಯರ್ಥವಾದದ್ದು (ನೆಗೆಟಿವ್), ಅನಿರ್ದಿಷ್ಟವಾದದ್ದು (ಇನ್‌ಡೆಫಿನೆಟ್), ಸ್ಪಷ್ಟ ಮತ್ತು ನಿರ್ದಿಷ್ಟಜ್ಞಾನಾಭಾವ (ಇಗ್ನೊರೆನ್ಸ್) ಸೂಚಕವಾದದ್ದು ಎಂದು ಅದನ್ನು ತುಚ್ಛೀಕರಿಸುತ್ತಾರೆ. ಇನ್ನೊಂದು ವಾದದವರು ಅದು

ಭಾವಪ್ರದವಾದದ್ದು, ಭವ್ಯವಾದದ್ದು, ಭೂಮವಾದದ್ದು, ಜೀವದ ಎಲ್ಲ ಬಗೆಯ ಮೌಲ್ಯಗಳಿಗೂ ಜೀವನದ ಅಭ್ಯುದಯಕ್ಕೂ ನಿಃಶ್ರೇಯಸಕ್ಕೂ ಆಶ್ರಯವಾದದ್ದು ಎಂದು ಹೊಗಳುತ್ತಾರೆ. ಈ ಭಾವನೆ ಜ್ಞಾನಾಭಾವದ ಅಥವಾ ಅಸ್ಪಷ್ಟ ಮತ್ತು ಅನಿರ್ದಿಷ್ಟ ಜ್ಞಾನದ ಕುರುಹೆಂದು ಭಾರತೀಯರಲ್ಲಿ ಚಾರ್ವಾಕರೂ ಪಾಶ್ಚಾತ್ಯರಲ್ಲಿ ಸಂದೇಹವಾದಿಗಳೂ (ಸ್ಕೆಪ್ಟಿಕ್ಸ್) ಅನುಭವವಾದಿಗಳೂ (ಎಂಪಿರಿಸಿಸ್ಟ್) ಅದನ್ನು ಅವಹೇಳನ ಮಾಡುತ್ತಾರೆ. ಸ್ಪಷ್ಟವಾಗಿ ಇಂದ್ರಿಯಾನುಭವವೇದ್ಯವಾದದ್ದೇ ನಂಬಲರ್ಹವಾದದ್ದು. ಅನಂತವೆಂಬುದು ಅನುಭವಾತೀತವಾದ್ದರಿಂದ ಅದು ನಂಬಲರ್ಹವಲ್ಲ. ಅದು ಮಿಥ್ಯಾ ಭಾವನೆ. ಅದನ್ನು ನಂಬಿದರೆ ಪರಸ್ಪರ ವಿರುದ್ಧವಾದ ತಾತ್ತ್ವಿಕ ಆಭಾಸಗಳು ಹುಟ್ಟುತ್ತವೆ ಎಂದು ಡೇವಿಡ್ ಹ್ಯೂಂ ವಾದಿಸಿರುತ್ತಾನೆ. ಈ ವಿಧವಾದ ಪರಸ್ಪರವಿರುದ್ಧ ಭಾವನೆಗಳು ಹುಟ್ಟುವುದಕ್ಕೆ ಇಂದ್ರಿಯಾಶ್ರಯವುಳ್ಳ ಬುದ್ಧಿಯ ಭಾವನೆಗಳ ತಳಪಾಯದ ಮೇಲೆ, ಅಂದರೆ ಭೌತವಿಜ್ಞಾನದ ಭಾವನೆಗಳನ್ನು ಆಶ್ರಯಿಸಿ ತತ್ತ್ವಸೌಧವನ್ನು ಕಟ್ಟಲು ಯತ್ನಿಸುವುದೇ ಕಾರಣ. ಆದರೆ ಪ್ರತಿಭಟನಾರೂಢವಾದ ಆಧ್ಯಾತ್ಮಧರ್ಮವಿಚಾರದಲ್ಲಿ ಈ ಪರಸ್ಪರ ವಿರೋಧಾಭಾಸಗಳಿಗೆ ಅವಕಾಶವಿಲ್ಲ ಎಂದು ಇಮ್ಯಾನ್ಯುಯಲ್ ಕ್ಯಾಂಟ್ ತನ್ನ ತತ್ತ್ವವನ್ನು ಮುಕ್ತಾಯಗೊಳಿಸಿರುತ್ತಾನೆ.

ಅನಂತವೆಂಬ ಭಾವನೆಯನ್ನು ಭಾವರೂಪವಾಗಿ ಎಣಿಸಿ ಪುರಸ್ಕರಿಸಿದ ತತ್ತ್ವಗಳಲ್ಲಿ ಮುಖ್ಯವಾದುವು ಮೂರು: ಅನುಭಾವತತ್ತ್ವ (ಮಿಸ್ಟಿಸಿಸಮ್), ಈಶ್ವರತತ್ತ್ವ (ಥೀಯಿಸಮ್) ಮತ್ತು ಅದ್ವೈತತತ್ತ್ವ.

ಲೋಕವ್ಯವಹಾರದಲ್ಲಿ ಗೋಚರವಾದ ವಸ್ತುಗಳೇ ನಿಜವಾಗಿ ಇರುವುವು ಎಂದು ನಾವು ಭಾವಿಸುತ್ತೇವೆ. ಆದರೆ ವಿಚಾರಮಾಡಿದಾಗ ಇವು ಅಸ್ಥಿರ ಎಂದು ಸ್ಪಷ್ಟವಾಗುತ್ತದೆ. ವ್ಯಾವಹಾರಿಕವಾಗಿ ನಾವು ಇರುವುದೆಂದು ಭಾವಿಸುವ ಒಂದೊಂದಕ್ಕೂ ಹುಟ್ಟು, ಬೆಳವಣಿಗೆ, ಸಾವು ಇದ್ದೇ ಇರುತ್ತದೆ. ಎಷ್ಟೇ ದೀರ್ಘಕಾಲ ಬಾಳಿದರೂ ಅದು ಕೊನೆಗಾಣಲೇಬೇಕು. ಈ ಭೂಮಿ, ಸೂರ್ಯಚಂದ್ರಾದಿಗಳು ಲಕ್ಷಾಂತರ ವರ್ಷಗಳ ಹಿಂದೆ ಹುಟ್ಟಿರಬಹುದು. ಮುಂದೆ ಲಕ್ಷಾಂತರ ವರ್ಷಗಳ ಕಾಲ ಅವು ಇರಬಹುದು. ಇದ್ದರೆ ಅವು ಎಂದಾದರೂ ನಾಶವಾಗುವಂಥವೇ. ಯಾವುದಕ್ಕೆ ಹುಟ್ಟು ಇದೆಯೋ ಅದಕ್ಕೆ ಸಾವೂ ಸಿದ್ಧ. ಅವುಗಳ ಅಸ್ತಿತ್ವ ಸ್ಥಿರಚಿರವಲ್ಲ. ಆದ್ದರಿಂದ ಇವುಗಳನ್ನು ಸತ್ ಎಂದು ಕರೆಯಲಾಗುವುದಿಲ್ಲ. ಇವು ಉಪಾಧಿಗೆ ಒಳಪಟ್ಟುವಾದದ್ದರಿಂದ ಇವುಗಳ ಸ್ವಭಾವಕ್ಕೆ ಸ್ಥಿರವಾದ ಭಾವರೂಪವಿಲ್ಲ. ಸ್ಥಿರವಾದ ಭಾವರೂಪವುಳ್ಳ ವಸ್ತುವೆಂದರೆ ಪರವಸ್ತು ಮಾತ್ರ. ಅನಂತವೆಂದು ಹೆಸರಿಸಲು ಯೋಗ್ಯವಾದ ವಸ್ತು ಪರಮಚೇತನ. ಅದು ಎಲ್ಲದರ ಹುಟ್ಟಿಗೂ ಬೆಳವಿಗೂ ಕಾರಣ; ಅದೊಂದೇ ಪೂರ್ಣವಾದದ್ದು; ಉಳಿದವೆಲ್ಲ ಅಪೂರ್ಣ. ಅದು ಇಂದ್ರಿಯವೇದ್ಯವಲ್ಲ. ಅದು ಬುದ್ಧಿಯಿಂದ ತಿಳಿಯಲಾಗದ ವಸ್ತು. ಅಪರೋಕ್ಷ ಪ್ರತಿಭಾನದಿಂದ ಮಾತ್ರ ಅದು ಸಾಕ್ಷಾತ್ಕಾರ ಮಾಡಿಕೊಳ್ಳಬಹುದಾದದ್ದು. ಅದು ಗುಣಾತೀತ. ಅದಕ್ಕೆ ಯಾವುದೊಂದು ಗುಣವನ್ನು ಆರೋಪಿಸಿದರೂ ಅದನ್ನು ಮೊಟಕು ಮಾಡಿದಂತಾಗುತ್ತದೆ. ಇದು ಅನುಭಾವ ತತ್ತ್ವದ ನಿಲುವು.

ಈಶ್ವರತತ್ತ್ವವಾದರೋ ಅನಂತನಾದ ಈಶ್ವರ ಅನಂತಗುಣಪರಿಪೂರ್ಣನೆಂದೂ ಸರ್ವವ್ಯಾಪಿಯೆಂದೂ ಸರ್ವಜ್ಞನೆಂದೂ ಸರ್ವಶಕ್ತನೆಂದೂ ಆನಂದಮಯನೆಂದೂ ಭಾವಿಸುತ್ತದೆ.

ಈ ಬಗೆಯ ಈಶ್ವರಭಾವನೆ ಪರಮಸತ್ ಅಲ್ಲ. ಪರವಸ್ತುವಿಗೆ ಬುದ್ಧಿಕಲ್ಪಿತವಾದ ಯಾವ ಗುಣವನ್ನು ಆರೋಪಿಸಿದರೂ ಅದನ್ನು ಉಪಾಧಿಗೆ ಒಳಪಡಿಸಿದಂತಾಗುವುದು. ಗುಣಾತೀತವಾದುದೇ ನಿರುಪಾಧಿಕವಾದ ಸತ್. ಆ ಕಾರಣದಿಂದಲೇ ಅದು ಅನಂತವಾಗಬಲ್ಲುದು. ಅದ್ವಿತೀಯವಾಗಬಲ್ಲುದು. ಇದು ಅದ್ವೈತ ತತ್ತ್ವಸಾರ. ಈ ವಾದ ಬಹುಮಟ್ಟಿಗೆ ಅನುಭಾವವಾದವನ್ನು ಒಳಗೊಳ್ಳುತ್ತದೆ. ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಜೀವನ್ಮುಕ್ತಿಯೇ ನಿಜವಾದ ಮುಕ್ತಿ, ಅಭೇದ ಸಿದ್ಧಿಯೇ ಜೀವನ್ಮುಕ್ತಿ ಎಂಬ ಭಾವನೆ. (ಜಿ.ಎಚ್.)

**ಅನಂತಕವಿ :** ಸು.1780. ಜೈನಕವಿ, ಸಾಂಗತ್ಯದಲ್ಲಿ ಈತ ಬರೆದಿರುವ ಗೊಮ್ಮಟೇಶ್ವರ ಚರಿತ್ರೆಯಲ್ಲಿ ಶ್ರವಣಬೆಳಗೊಳಕ್ಕೆ ಸಂಬಂಧಿಸಿದಂತೆ ಅನೇಕ ಐತಿಹಾಸಿಕ ಅಂಶಗಳನ್ನು ವಿವರಿಸಿದ್ದಾನೆ. 1673ರಲ್ಲಿ ಕಟ್ಟಿದ ಚಿನ್ನಣ್ಣನ ಬಸದಿ, 1677ರಲ್ಲಿ ಚಿಕ್ಕದೇವರಾಜನ ಮಂತ್ರಿ ವಿಶಾಲಾಕ್ಷಪಂಡಿತ ಗೊಮ್ಮಟೇಶ್ವರನಿಗೆ ಮಾಡಿಸಿದ ಮಸ್ತಕಾಭಿಷೇಕ, ಬೆಳಗೊಳದ ಕಲ್ಯಾಣಿ ನಿರ್ಮಾಣ, ಚಂದ್ರಗಿರಿಯ ಪ್ರಾಕಾರ, ಮಾನಸ್ತಂಭ–ಇವುಗಳ ಇತಿಹಾಸ ಹೇಳಿರುವುದಲ್ಲದೆ ಅನೇಕ ಜೈನಯತಿಗಳಿಗೂ ಶ್ರವಣಬೆಳಗೊಳಕ್ಕೂ ಇರುವ ಸಂಬಂಧವನ್ನು ಗುರುತಿಸಿದ್ದಾನೆ. ಚಾವುಂಡರಾಯನಿಗಿಂತ ಪೂರ್ವದಲ್ಲಿಯೇ ಗೊಮ್ಮಟಮೂರ್ತಿಯಿದ್ದು ಅದನ್ನು ಚಾವುಂಡರಾಯ ಪ್ರತಿಷ್ಠಿಸಿದನೆಂದು ಹೇಳಿ ಸಂಶೋಧಕರ ದೃಷ್ಟಿ ಅತ್ತ ಹರಿವಂತೆ ಮಾಡಿದ್ದಾನೆ.

ಗೊಮ್ಮಟ ಚರಿತ್ರೆ ಅಸಮಗ್ರವಾಗಿದೆ. ಶೈಲಿ ಸರಳ ಸುಂದರವಾಗಿದೆ. ಅನೇಕ ಐತಿಹಾಸಿಕ ಅಂಶಗಳನ್ನು ಗ್ರಂಥದಲ್ಲಿ ಹೇಳಿರುವುದರಿಂದ ಸಂಶೋಧಕರಿಗೆ ಹೆಚ್ಚಿನ ಅನುಕೂಲವಾಗಿದೆ. (ಬಿ.ಜಿ.)

**ಅನಂತ ಗುಣಲಬ್ಧ :** ಅನಂತ ಅಪವರ್ತನಗಳ ಸಂತತ ಗುಣಲಬ್ಧ (ಇನ್‌ಫಿನಿಟ್ ಪ್ರಾಡಕ್ಟ್). $(1+a_1)(1+a_2)(1+a_3)\ldots\ldots$ ಇದಕ್ಕೆ ಒಂದು ಉದಾಹರಣೆ. ಈ ಅನಂತ ಗುಣಲಬ್ಧವನ್ನು $\prod_{1}^{\infty} u_n$ ಎಂದು ಬರೆಯಬಹುದು. ಇಲ್ಲಿ $\Pi$ ಸಂಕೇತ $n$ ಗೆ ನಿಗದಿಯಾಗುವ ಬೆಲೆಗಳಲ್ಲಿನ ಉತ್ಪನ್ನಗಳ ಸಂತತ ಗುಣಲಬ್ಧವನ್ನೂ.. ಎಂಬುದು $(1+a_n)$ ಅನ್ನೂ ಸಂಕೇತಿಸುವುವು. ಒಂದು ಅನಂತ ಗುಣಲಬ್ಧವನ್ನು ಸರಳೀಕರಿಸಿ ಪರಿಮಿತ ಬೆಲೆ ಅಥವಾ ಮಿತಿಯನ್ನು (ಲಿಮಿಟ್) ಕಂಡುಹಿಡಿಯುವುದು ಸಾಧ್ಯವಾದರೆ ಆ ಗುಣಲಬ್ಧ ಅಭಿಸರಣವಾಗಿದೆಯೆಂದೂ (ಕನ್ವರ್ಜೆಂಟ್) ಇದು ಸಾಧ್ಯವಾಗದಾಗ ಅದು ಅಪಸ (ಡೈವರ್ಜೆಂಟ್) ಹೇಳಲಾಗುತ್ತದೆ.

ಅನಂತಗುಣಲಬ್ಧದ ನಿಖರವಾದ ವ್ಯಾಖ್ಯೆ ಹೀಗಿದೆ: $a_1, a_2, a_3, \ldots$ ಒಂದು ಸಂಖ್ಯಾಶ್ರೇಢಿಯಾಗಿರಲಿ (ನಂಬರ್ ಸೀಕ್ವೆನ್ಸ್); $m$ ಒಂದು ಪೂರ್ಣಾಂಕವಾಗಿರಲಿ; ಮತ್ತು

$\prod_{r=m}^{m}$ ಅದನ್ನು ನಿರ್ಧರಿಸಲಿ; ಪೂರ್ಣಾಂಕ $n > m$ ಆಗಿದ್ದರೆ ಆಗ

$(1+a_r) = (1+a_n)\prod_{r=m}^{n-1}(1+a_r)$., $m$ ಎಂಬ ಒಂದು ಧನಪೂರ್ಣಾಂಕವನ್ನು

$n \xrightarrow{\lim} x\prod_{r=m}^{n}(1+a_r)$ ಮಿತಿ ಶೂನ್ಯವಲ್ಲದ ಒಂದು ಸಂಖ್ಯೆಯಾಗುವಂತೆ ಆರಿಸುವುದು

ಸಾಧ್ಯವಾದರೆ ಆಗ $\prod_{r=1}^{x}(1+a_r)$ ಯನ್ನು ಒಂದು ಅನಂತ ಗುಣಲಬ್ಧವೆಂದು ಕರೆಯುತ್ತೇವೆ;

ಅದರ ಬೆಲೆ $n \xrightarrow[\infty]{\lim} x\prod_{r=1}^{n}(1+a_r)$ ಯಾವುದೇ ಒಂದು ಅಪವರ್ತನ $(1+a_r)$ ಶೂನ್ಯವಾದಾಗ ಮಾತ್ರ ಅನಂತ ಗುಣಲಬ್ಧದ ಬೆಲೆ ಶೂನ್ಯವಾಗುವುದು. ವಿಶ್ಲೇಷಣ ಗಣಿತಶಾಸ್ತ್ರದಲ್ಲಿ ಅನಂತ ಗುಣಲಬ್ಧಗಳ ವ್ಯಾಪ್ತಿ ವಿಶೇಷವಾಗಿ ಇದೆ. (ಬಿ.ಎಸ್.ಎಸ್.)

**ಅನಂತನಾಗ್ :** ಪ್ರಸಿದ್ಧ ಚಲನಚಿತ್ರ ನಟ, ನಿರ್ಮಾಪಕ, ಕರ್ನಾಟಕ ರಾಜ್ಯದ ಮಾಜಿ ಸಚಿವ. ತಂದೆ ಸದಾನಂದ ನಾಗರಕಟ್ಟೆ, ತಾಯಿ ಆನಂದಿ. ತಂದೆ ಉತ್ತರ ಕನ್ನಡ ಜಿಲ್ಲೆಯ ಶಿರಾಲಿಯವರು. ಇವರು ಕಾಸರಗೋಡಿನ ಆನಂದಾಶ್ರಮದಲ್ಲಿ ಪ್ರಬಂಧಕರಾಗಿದ್ದರು. ಅನಂತನಾಗ್ ಅವರು ಚಿತ್ರಾಪುರ ಮತ್ತು ಶಿರಾಲಿಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

$\prod_{r=m}^{m}(1+a_r) = (1+a_n)\prod_{r=m}^{n-1}(1+a_r)$.

ಪಡೆದರು. ಅನಂತರ ಮುಂಬಯಿಯ ಸೇಂಟ್ ಜೇವಿಯರ್ ಶಾಲೆ ಸೇರಿ (1961) ಎಸ್.ಎಸ್.ಎಲ್.ಸಿ. ಪಾಸು ಮಾಡಿದರು (1964–65). ಸಂಕಲ್ಪ ಚಿತ್ರದ ಮೂಲಕ ಇವರು ಕನ್ನಡ ಚಿತ್ರರಂಗ ಪ್ರವೇಶಿಸಿದರು. ಇದಕ್ಕೂ ಮುನ್ನ ಐವತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಭಾಗವಹಿಸಿದ್ದರು. ಇವರ ತಂದೆ–ತಾಯಿ ಬೆಂಗಳೂರಿಗೆ ಬಂದಾಗ (1969) ಇವರೂ ಬೆಂಗಳೂರಿನಲ್ಲೇ ನೆಲೆ ನಿಂತರು. ಸಹೋದರ ಶಂಕರ ನಾಗ್ (ನೋಡಿ) ಅವರೊಂದಿಗೆ ಸಂಕೇತ್ ಲಾಂಛನದಡಿ ಮಿಂಚಿನ ಓಟ ಚಿತ್ರ ನಿರ್ಮಿಸಿದರು (1980). ಅನಂತರ ಜನ್ಮ ಜನ್ಮದ ಅನುಬಂಧ (1981), ನೋಡಿ ಸ್ವಾಮಿ ನಾವಿರೋದೇ ಹೀಗೆ (1983), ಆಕ್ಸಿಡೆಂಟ್ (1984) ಮೊದಲಾದ ಯಶಸ್ವಿ ಚಿತ್ರಗಳ ನಿರ್ಮಾಪಕರಾದರು. ಕರ್ನಾಟಕದಲ್ಲಿ ಜನತಾಪಕ್ಷದ ಪರವಾಗಿ ಚುನಾವಣೆಯ ಪ್ರಚಾರ ಕೈಗೊಂಡರು. 'ಬರ' ಚಿತ್ರದ ಹಿಂದಿ ಡಬ್ಬಿಂಗಿಗೆ ಮುಂಬಯಿಗೆ ತೆರಳಿದಾಗ ಅಲ್ಲಿಯ ರೆಕಾರ್ಡಿಂಗ್ ವ್ಯವಸ್ಥೆಗಳಿಗೆ ಮಾರುಹೋಗಿ ಸಹೋದರ ಶಂಕರನಾಗ್‌ರವರೊಂದಿಗೆ ಬೆಂಗಳೂರಿನಲ್ಲಿ ಸಂಕೇತ್ ಎಲೆಕ್ಟ್ರಾನಿಕ್ಸ್ ಸ್ಟುಡಿಯೋ ಸ್ಥಾಪಿಸಿದರು (1985). ಎಂ.ಎಸ್.ಸತ್ಯು ನಿರ್ದೇಶಿದ, ಸ್ವತಃ ಅಭಿನಯಿಸಿದ 'ಬರ' ಚಿತ್ರವನ್ನು ವಿತರಿಸಿದರು.

ಹಾಸ್ಯ ಲೇಪನವಿರುವ ನಾಯಕ ನಟನಾಗಿ ಅನಂತನಾಗ್ ಜನಪ್ರಿಯತೆ ಗಳಿಸಿದ್ದಾರೆ. ಇಬ್ಬನಿ ಕರಗಿತು, ಮುದುಡಿದ ತಾವರೆ ಅರಳಿತು, ಹಂಸಗೀತೆ, ನಾರದವಿಜಯ, ಬೆಳದಿಂಗಳ ಬಾಲೆ, ತೆನಾಲಿರಾಮಕೃಷ್ಣ, ಬಯಲುದಾರಿ, ಕಾಮನಬಿಲ್ಲು, ನಾ ನಿನ್ನ ಬಿಡಲಾರೆ, ಹೆಂಡ್ತಿಗೆ ಹೇಳ್ಬೇಡಿ, ಸುಖ ಸಂಸಾರಕ್ಕೆ ಹನ್ನೆರಡು ಸೂತ್ರಗಳು, ಉಂಡೂ ಹೋದ ಕೊಂಡೂ

ಹೋದ, ಗೋಲ್‌ಮಾಲ್ ರಾಧಾಕೃಷ್ಣ, ಗೌರಿಗಣೇಶ, ಗಣೇಶನ ಮದುವೆ, ಕನ್ನೇಶ್ವರ ರಾಮ, ಮತದಾನ ಮುಂತಾದವು ಇವರು ಅಭಿನಯಿಸಿದ ಕೆಲವು ಮುಖ್ಯ ಚಿತ್ರ ಗಳು. ಮಿಂಚಿನಓಟ ಇವರಿಗೆ ಶ್ರೇಷ್ಠ ನಟ ರಾಜ್ಯಪ್ರಶಸ್ತಿ ತಂದುಕೊಟ್ಟಿದೆ.

ಹಿಂದಿಯ ಹೊಸ ಅಲೆಯ ಚಲನ ಚಿತ್ರಗಳಲ್ಲಿಯೂ ಇವರು ಅಭಿನಯಿಸಿದ್ದಾರೆ. ಅಂಕುರ್, ನಿಶಾಂತ್ ಇವರು ಅಭಿನಯಿಸಿರುವ ಚಿತ್ರಗಳು. ಇವರು ಅನೇಕ ಯಶಸ್ವಿ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ಬ್ಯಾರಿಸ್ಟರ್ ನಾಟಕದ ಇವರ ಅಭಿನಯ ಸ್ಮರಣೀಯ. ಇವರು ಅಭಿನಯಿಸಿದ 'ನೋಡಿಸ್ವಾಮಿ ನಾವಿರೋದೇ ಹೀಗೆ' ನೂರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡ ಜನಪ್ರಿಯ ನಾಟಕ. ಶಂಕರನಾಗ್ ನಿರ್ದೇಶಿಸಿದ, ಆರ್.ಕೆ. ನಾರಾಯಣರ ಕಾದಂಬರಿ ಆಧಾರಿತ ಮಾಲ್ಗುಡಿಡೇಸ್ ಕಿರುತೆರೆಯ ಹಿಂದಿ ಧಾರಾವಾಹಿಯಲ್ಲೂ ಇವರು ಅಭಿನಯಿಸಿದ್ದಾರೆ. 1988ರಲ್ಲಿ ಚುನಾವಣೆಗೆ ನಿಂತು ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲರ ಆಪ್ತವಲಯದಲ್ಲಿ ಇವರೂ ಒಬ್ಬರಾಗಿದ್ದರು. ರಾಜಕೀಯ ಹಿನ್ನೆಲೆಯ ಚಿತ್ರಗಳಲ್ಲಿ ಇವರಿಗೆ ವಿಶೇಷ ಆಸಕ್ತಿ. ಓದುವ ಹವ್ಯಾಸ ಬೆಳೆಸಿಕೊಂಡಿರುವ ಇವರೊಬ್ಬ ವಿಚಾರವಂತ ನಟ. ಕೆಲವು ವರ್ಷಗಳ ರಾಜಕೀಯ ಜೀವನದ ಬಳಿಕ ಇವರು ಪುನಃ ಚಿತ್ರಗಳಲ್ಲಿ ಹಾಗೂ ಕಿರುತೆರೆಯಲ್ಲಿ ನಟಿಸಲಾರಂಭಿಸಿದ್ದಾರೆ. ಲಂಕೇಶ್‌ಪತ್ರಿಕೆ, ಪ್ರೀತಿ ಪ್ರೇಮ ಪ್ರಣಯ – ಇವರ ಇತ್ತೀಚಿನ ಚಿತ್ರಗಳು (2003). ಈ ಚಿತ್ರಗಳು ಇವರ ಅಭಿನಯ ವೃತ್ತಿಗೆ ಹೊಸ ಆಯಾಮ ನೀಡಿವೆ. ಇವರು ತಮ್ಮ ಸಹೋದರ ಶಂಕರನಾಗ್‌ರವರ ಜೀವನ ಕಥನವನ್ನು ಬರೆದಿದ್ದು 'ನನ್ನ ತಮ್ಮ ಶಂಕರ' ಎಂಬ ಹೆಸರಿನಲ್ಲಿ ಇದು ಪ್ರಕಟವಾಗಿದೆ (2001). ಈ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹೆಸರಾಂತ ನಟಿ ಗಾಯತ್ರಿ ಇವರ ಪತ್ನಿ.

**ಅನಂತಮೂರ್ತಿ, ಯು.ಆರ್. :** 1932–. ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರಸಿದ್ಧ ಲೇಖಕ, ವಿಮರ್ಶಕ, ಸಮಾಜವಾದಿ ಚಿಂತಕರು. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಇವರ ಪೂರ್ಣ ಹೆಸರು. ಶಿವಮೊಗ್ಗ ಜಿಲ್ಲೆಯ ಮೇಳಿಗೆಯಲ್ಲಿ 1932 ಡಿಸೆಂಬರ್ 21ರಂದು ಜನಿಸಿದರು. ಇವರ ಪೂರ್ವಿಕರು ಉಡುಪಿಯ ಶಿವಳ್ಳಿಯವರು. ತಂದೆ ರಾಜಗೋಪಾಲಾಚಾರ್ಯ, ತಾಯಿ ಸತ್ಯಭಾಮಾ. ಈ ದಂಪತಿಗಳ ಐವರು ಮಕ್ಕಳಲ್ಲಿ ಅನಂತಮೂರ್ತಿ ಹಿರಿಯ ಮಗ. ಇವರ ಬಾಲ್ಯದ ಜೀವನ ಕಡುಬಡತನದಲ್ಲಿ ಕಳೆಯಿತು. ಪ್ರಾಥಮಿಕ ವಿದ್ಯಾಭ್ಯಾಸ ಮೇಳಿಗೆ, ಬೇಗವಳ್ಳಿ, ಕೋಣಂದೂರು ತೀರ್ಥಹಳ್ಳಿಗಳಲ್ಲಿ ನಡೆಯಿತು. ಆಗ ಯೋಗಾನರಸಿಂಹ ಎಂಬ ಮುಖ್ಯೋಪಾಧ್ಯಯರೂ ವಿದ್ವಾಂಸರಾದ ಕಮಕೋಡು ನರಸಿಂಹಶಾಸ್ತ್ರಿಯವರೂ ಇವರಿಗೆ ತುಂಬ ಪ್ರೋತ್ಸಾಹ ನೀಡಿದರು.

ಸಂಸ್ಕೃತ ಕಲಿಸಿದ ಸದಾಶಿವ ಭಟ್ಟರು ಇವರ ಬಾಲ್ಯ ಜೀವನದ ಮೇಲೆ ದಟ್ಟ ಪ್ರಭಾವ ಬೀರಿದ ವ್ಯಕ್ತಿಗಳಲ್ಲೊಬ್ಬರು. ಅನಂತರದಲ್ಲಿ ರಾಮಮನೋಹರ ಲೋಹಿಯಾ, ಶಾಂತವೇರಿ ಗೋಪಾಲಗೌಡ, ಗೋಪಾಲಕೃಷ್ಣ ಅಡಿಗ ಅತ್ಯಂತ ಪ್ರಭಾವ ಬೀರಿದ ವ್ಯಕ್ತಿಗಳು. ಲೋಯರ್ ಸೆಕೆಂಡರಿ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ

ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಅನಂತರ ಶಿವಮೊಗ್ಗದ ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿದರು. ಆಗ ಕೆ.ವಿ.ಸುಬ್ಬಣ್ಣ ಇವರ ಸೀನಿಯರ್, ಹಾ.ಮಾ.ನಾಯಕರು ಇವರ ಜೂನಿಯರ್ ಆಗಿದ್ದರು. ಅನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್‌ಗೆ ಸೇರಿ (1950) ಪ್ರಥಮ ಸ್ಥಾನ ಪಡೆದು ಶಿವಮೊಗ್ಗದಲ್ಲಿ ಇಂಗ್ಲಿಷ್ ಉಪನ್ಯಾಸಕರಾದರು (1954–55). ಮೈಸೂರಿನಲ್ಲಿ ಮತ್ತೆ ಓದನ್ನು ಮುಂದುವರಿಸಿ ಚಿನ್ನದ ಪದಕದೊಂದಿಗೆ ಇಂಗ್ಲಿಷ್ ಎಂ.ಎ. ಪದವಿ ಪಡೆದರು. ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ಸಮಾಜವಾದಿ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ್ದರು. ಶಿವಮೊಗ್ಗದಲ್ಲಿ ಓದುವಾಗ ಸಮಾಜವಾದಿ ರಾಜಕೀಯ ಚಟುವಟಿಕೆಗಳು ಮೈಸೂರಿನಲ್ಲಿಯೂ ಮುಂದುವರಿದಿದ್ದವು. ಹಾಸನದ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಸಂದರ್ಭದಲ್ಲಿ ಇವರು ತಮ್ಮ ವಿದ್ಯಾರ್ಥಿನಿ ಎಸ್ತರ್ ಎಂಬುವರನ್ನು ಪ್ರೇಮಿಸಿ ವಿವಾಹವಾದರು. ಮತ್ತೆ ಮೈಸೂರಿನ ಮಹಾರಾಜ ಕಾಲೇಜಿಗೆ ಅಧ್ಯಾಪಕರಾಗಿ ಬಂದರು (1957–63). ಅನಂತರ ಕಾಮನ್‌ವೆಲ್ತ್ ಫೆಲೋಶಿಪ್ ಪಡೆದು ಇಂಗ್ಲೆಂಡಿನ ಬರ್ಮಿಂಗ್‌ಹೆಮ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪಡೆದರು (1963–66). '1930ರ ದಶಕದ ರಾಜಕೀಯ ಮತ್ತು ಕಾದಂಬರಿ' ಇವರ ಸಂಪ್ರಬಂಧದ ವಿಷಯ.

ಇಂಗ್ಲೆಂಡ್‌ನಿಂದ ಬಂದ ಮೇಲೆ ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಶನ್‌ನಲ್ಲಿ ರೀಡರ್ ಆಗಿ ಕೆಲಸ ಮಾಡಿದರು (1967–70). ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗವನ್ನು ಸೇರಿ, ರೀಡರ್ ಆಗಿ (1970–80), ಪ್ರಾಧ್ಯಾಪಕರಾಗಿ (1980–87) ಸೇವೆ ಸಲ್ಲಿಸಿದರು. ಸಂದರ್ಶಕ ಪ್ರಾಧ್ಯಾಪಕರಾಗಿ ಅಮೆರಿಕದ ಅಯೋವ ವಿಶ್ವವಿದ್ಯಾಲಯ (1975 ಮತ್ತು 1985), ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯ (1982) ಗಳಲ್ಲಿ ಕೆಲಸ ಮಾಡಿದರು. ಅಯೋವ ವಿಶ್ವವಿದ್ಯಾನಿಲಯದ ಏಷ್ಯನ್ ಭಾಷೆಗಳ ವಿಭಾಗದಲ್ಲಿ ಫುಲ್‌ಬ್ರೈಟ್ ಪ್ರೊಫೆಸರ್ ಆಗಿದ್ದರು (1986–87). ಅನಂತರ ಕೇರಳದ ಕೊಟ್ಟಾಯಂನ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾದರು (1987–91). ಆಗ ಅನೇಕ ಶೈಕ್ಷಣಿಕ ಸುಧಾರಣೆಗಳನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿದರು.

ಇವರು ಅನಂತರದ ತಮ್ಮ ಜೀವನದಲ್ಲಿ ಅನೇಕ ಸಂಸ್ಥೆಗಳಲ್ಲಿ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿದರು. ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರಾಗಿ (1992–93), ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿ (1993) ದುಡಿದರು. ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದರು (1993–98). ವಿ.ಕೃ.ಗೋಕಾಕರ ಅನಂತರ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎರಡನೆಯ ಕನ್ನಡದ ವ್ಯಕ್ತಿ ಇವರು. ಆಗ ಸಾಕಷ್ಟು ಹೊಸತನವನ್ನು ಅಕಾಡೆಮಿಯ ಚಟುವಟಿಕೆಗಳಲ್ಲಿ ತುಂಬಿದರು. ಕೆಲಕಾಲ ಇವರು ಮಣಿಪಾಲದ ಮಾಹೆ ವಿಶ್ವವಿದ್ಯಾನಿಲಯದ ಮಾನವಿಕ ವಿಭಾಗದ ಗೌರವ ನಿರ್ದೇಶಕರೂ ಆಗಿದ್ದರು (1995–98).

ಕನ್ನಡದ ಸೃಜನಶೀಲ ಬರೆಹಗಾರರಾಗಿ ಅನಂತಮೂರ್ತಿಯವರ ಸಾಧನೆ ಅನನ್ಯವಾದದ್ದು. ಕವಿಯಾಗಿ, ಕಾದಂಬರಿಕಾರರಾಗಿ, ಸಣ್ಣಕತೆಗಾರರಾಗಿ, ವಿಮರ್ಶಕರಾಗಿ, ಚಿಂತಕರಾಗಿ, ಉತ್ತಮ ವಾಗ್ಮಿಯಾಗಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅರ್ಥಪೂರ್ಣ ಚರ್ಚೆ, ಸಂವಾದ, ವಾಗ್ವಾದ ಹಾಗೂ ಕೆಲವೊಮ್ಮೆ ವಿವಾದಗಳಿಗೂ ಕಾರಣರಾದರು. ವೈಚಾರಿಕತೆ ಹಾಗೂ ಸಾಮಾಜಿಕ ಚಿಂತನೆ ಇವರ ಒಟ್ಟು ಸೃಜನ ಹಾಗೂ ಸೃಜನೇತರ ಸಾಹಿತ್ಯದ



ಪ್ರಧಾನ ಎಳೆಗಳಾಗಿವೆ. ಸಮಾಜವಾದ, ಗಾಂಧೀವಾದ, ಮಾರ್ಕ್ಸ್‌ವಾದಗಳ ಒಳಿತಿನ ಆಯ್ಕೆ ಅನಂತಮೂರ್ತಿಯವರ ವಿಚಾರಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಶಿವರಾಮ ಕಾರಂತ, ಗೋಪಾಲಕೃಷ್ಣಅಡಿಗ, ಬೇಂದ್ರೆ, ಕುವೆಂಪು ಇವರ ಸಾಹಿತ್ಯದ ಮೇಲೆ ಹೆಚ್ಚಿನ ಪ್ರಭಾವ ಬೀರಿದವರು. ಸಾಹಿತ್ಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ (1967) ಎಂಬ ಪರಿಕಲ್ಪನೆ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಹೊಸ ಚರ್ಚೆಯನ್ನು ಹುಟ್ಟು ಹಾಕಿತು. ಇಂಗ್ಲಿಷ್ ಬ್ರಾಹ್ಮಣ, ಕನ್ನಡ ಶೂದ್ರ, ದಲಿತರಲ್ಲಿ ಅರಿವಿನ ಸ್ಫೋಟ, ಬೂಸಾ ಪ್ರಕರಣ (1974), ಕುವೆಂಪು ಅವರ ಪುರೋಹಿತಶಾಹಿ ಟೀಕೆಗೆ ಪ್ರತಿಕ್ರಿಯೆ (1986), ಪೇಜಾವರ ಶ್ರೀಗಳ ಹರಿಜನ ಕಾಲೋನಿ ಪಾದಯಾತ್ರೆ (1970), ತುರ್ತು ಪರಿಸ್ಥಿತಿ (1975–77) ಮೊದಲಾದ ಸಂದರ್ಭಗಳಲ್ಲಿ ಇವರ ವಿಚಾರಗಳು ವೈಚಾರಿಕ ವಿವಾದಗಳನ್ನು ಸೃಷ್ಟಿಸಿದ್ದೂ ಉಂಟು.

1955–95ರ ವರೆಗೆ ನಾಲ್ಕು ದಶಕಗಳಲ್ಲಿ ಇಪ್ಪತ್ತಾರು ಕಥೆಗಳನ್ನು ಇವರು ಬರೆದಿದ್ದಾರೆ. ಎಂದೆಂದೂ ಮುಗಿಯದ ಕತೆ (1955), ಪ್ರಶ್ನೆ (1962), ಮೌನಿ (1967), ಆಕಾಶ ಮತ್ತು ಬೆಕ್ಕು (1983), ಸೂರ್ಯನ ಕುದುರೆ (1995) – ಇವು ಕಥಾಸಂಕಲನಗಳು. ಸಂಸ್ಕಾರ (1965), ಭಾರತೀಪುರ (1974), ಅವಸ್ಥೆ (1978), ಭವ (1994), ದಿವ್ಯ (2000) – ಇವು ಕಾದಂಬರಿಗಳು. ಹದಿನೈದು ಪದ್ಯಗಳು (1967), ಅಜ್ಜನ ಹೆಗಲ ಸುಕ್ಕುಗಳು (1989), ಮಿಥುನ (1992)–ಇವು ಕವನ ಸಂಕಲನಗಳು. ಪ್ರಜ್ಞೆ ಮತ್ತು ಪರಿಸರ (1974), ಸಮಕ್ಷಮ (1982),ಪೂರ್ವಾಪರ (1990), ಸಂಸ್ಕೃತಿ ಮತ್ತು ಅಡಿಗ (1996), ಬೆತ್ತಲೆ ಪೂಜೆ ಯಾಕೆ ಕೂಡದು (1996), ಸನ್ನಿವೇಶ/ಸನ್ನಿ... 

ಅನಂತಮೂರ್ತಿಯವರು ವಿದ್ಯಾರ್ಥಿ ದೆಸೆಯಲ್ಲಿಯೇ ಸಾಹಿತ್ಯ ರಚನೆಗೆ ತೊಡಗಿದರು. ಇಂಟರ್ ವಿದ್ಯಾರ್ಥಿಯಾಗಿದ್ದಾಗ ಶಿವಮೊಗ್ಗದ 'ಮಿತ್ರ' ಎಂಬ ಪತ್ರಿಕೆಯಲ್ಲಿ ಇವರ ಕೆಲವು ಕವನಗಳು, ಕತೆಗಳು ಪ್ರಕಟವಾಗಿದ್ದವು. ಅನಂತರ ಮೈಸೂರಿಗೆ ಬಂದಮೇಲೆ ಚಿತ್ರಗುಪ್ತ, ಜನಪ್ರಗತಿ ಪತ್ರಿಕೆಗಳಲ್ಲಿ ಕೆಲವು ಕತೆಗಳನ್ನು ಪ್ರಕಟಿಸಿದರು. ಇವರಿಗೆ ಸಣ್ಣ ಕತೆಗಾರರೆಂಬ ಹೆಸರು ತಂದುಕೊಟ್ಟ ಕತೆ 'ಎಂದೆಂದೂ ಮುಗಿಯದ ಕತೆ'. ಇದು ಮೊದಲಿಗೆ ಮೈಸೂರಿನ 'ವಾರ್ಸಿಟಿ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾಯಿತು. 'ಎಂದೆಂದೂ ಮುಗಿಯದ ಕತೆ' ಇವರ ಮೊದಲ ಕಥಾಸಂಕಲನ. ಅನಂತಮೂರ್ತಿ ಪ್ರಮುಖವಾಗಿ ಕತೆಗಾರರಾಗಿ ಓದುಗರಿಗೆ ಹೆಚ್ಚು ಅರ್ಥಪೂರ್ಣವಾಗುತ್ತಾರೆ. ಇವರ ಕಾದಂಬರಿಗಳಿಗಿಂತ ಕತೆಗಳಲ್ಲಿ ವೈಚಾರಿಕತೆ ಹಾಗೂ ಕಲಾತ್ಮಕತೆಗಳು ಒಂದಕ್ಕೊಂದು ಪೂರಕವಾಗಿವೆ. ಘಟಶ್ರಾದ್ಧ, ಕಾರ್ತೀಕ, ಪ್ರಶ್ನೆ, ಮೌನಿ,

ನವಿಲುಗಳು, ಕ್ಲಿಪ್‌ಜಾಯಿಂಟ್, ಸೂರ್ಯನ ಕುದುರೆ ಇವು ಇವರ ಕೆಲವು ಪ್ರಾತಿನಿಧಿಕ ಕತೆಗಳು. ಕಾದಂಬರಿಗಳಲ್ಲಿ ಸಂಸ್ಕಾರ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ, ಹೆಚ್ಚು ಚರ್ಚೆಗೆ, ವಿವಾದಕ್ಕೆ ಗುರಿಯಾಗಿರುವ ಕೃತಿ. ಸ್ವೀಡಿಷ್ ಚಿತ್ರ ನಿರ್ದೇಶಕ ಇಂಗ್‌ಮರ್ ಬರ್ಗ್‌ಮನ್‌ನ ಸೆವೆಂತ್ ಸೀಲ್ (1956) ಚಲನಚಿತ್ರ ಈ ಕಾದಂಬರಿಯ ರಚನೆಗೆ ಪ್ರೇರಣೆ ನೀಡಿದ ಸಂಗತಿಯನ್ನು ಲೇಖಕರೇ ಹೇಳಿಕೊಂಡಿದ್ದಾರೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿವಾದ, ವಾಗ್ವಾದದ ಅಲೆಯನ್ನು ಸೃಷ್ಟಿಸಿದ ಕೃತಿಯಿದು. ಇವರ ಅತ್ಯುತ್ತಮ ಕತೆಗಳಲ್ಲಿ ಒಂದಾದ ಮೌನಿ ಕತೆಗೆ ಪ್ರೇರಣೆ, ಅಮೆರಿಕನ್ ಲೇಖಕ ಬರ್ನಾರ್ಡ್ ಮಲಮೂಡನ ಮೌರ್‍ನರ್ಸ್ ಎಂಬ ಕತೆ. ಆದರೆ ಕನ್ನಡ ಸತ್ವವನ್ನು ಮೈಗೂಡಿಸಿಕೊಂಡು ಇದು ಸ್ವತಂತ್ರ ಕಥೆಯಾಗಿದೆ. ಸಾಮಾನ್ಯವಾಗಿ ಅನಂತಮೂರ್ತಿಯವರನ್ನು ನವ್ಯ ಸಾಹಿತ್ಯದ ಮುಂಚೂಣಿಯ ಲೇಖಕರಾಗಿ ಗುರುತಿಸುವುದು ವಾಡಿಕೆ. ಆದರೆ ಪರಂಪರೆಯ ಎಲ್ಲ ಪ್ರಭಾವಗಳನ್ನೂ, ಪಾಶ್ಚಾತ್ಯ ಚಿಂತನಧಾರೆಯನ್ನೂ ಅರಗಿಸಿಕೊಂಡಿರುವ ಇವರು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಲೇಖಕರಾಗಿ ಕಂಡುಬರುತ್ತಾರೆ. ಮಾಸ್ತಿ ಅವರ ಅನಂತರ ಸಣ್ಣಕಥಾ ಕ್ಷೇತ್ರದ ಕ್ಷಿತಿಜವನ್ನು ವಿಸ್ತರಿಸಿದವರು ಎಂಬ ಪ್ರಶಂಸೆಗೂ ಇವರು ಪಾತ್ರರಾಗಿದ್ದಾರೆ. ಇವರ ಸಾಹಿತ್ಯ ಕುರಿತು ಕನ್ನಡದಲ್ಲಿ ವಿಪುಲವಾಗಿ ಚರ್ಚೆ, ಸಂವಾದಗಳು ನಡೆದಿವೆ.

ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂವಾದಗಳಿಗೆ ಮೀಸಲಾಗಿದ್ದ ತ್ರೈಮಾಸಿಕ ಪತ್ರಿಕೆ ರುಜುವಾತು (1981) ಇವರ ಸಂಪಾದಕತ್ವದಲ್ಲಿ ಮೈಸೂರಿನಿಂದ ಪ್ರಕಟವಾಗುತ್ತಿತ್ತು. ಅನಂತರ ಹೆಗ್ಗೋಡಿನ ಕವಿ–ಕಾವ್ಯ ಟ್ರಸ್ಟ್ ಮೂಲಕ ಕೆಲಕಾಲ ಪ್ರಕಟವಾಯಿತು.

ಇವರ 'ಸಂಸ್ಕಾರ' ವನ್ನು ಎ.ಕೆ. ರಾಮಾನುಜನ್ (1976), 'ಅವಸ್ಥೆ'ಯನ್ನು ಶಾಂತಿನಾಥ ದೇಸಾಯಿ (1986), 'ಭಾರತೀಪುರ'ವನ್ನು ಪಿ.ಶ್ರೀನಿವಾಸರಾವ್ (1996), 'ಭವ'ವನ್ನು ಜುಡಿತ್‌ಕ್ರೋಲ್ ಮತ್ತು ಅನಂತಮೂರ್ತಿ (1998) ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಸಂಸ್ಕಾರ ಕಾದಂಬರಿ ರಷ್ಯನ್, ಫ್ರೆಂಚ್, ಹಂಗೇರಿಯನ್, ಜರ್ಮನ್, ಹಿಂದಿ, ಬಂಗಾಲಿ, ಮಲಯಾಳಂ, ಮರಾಠಿ, ಉರ್ದು, ಗುಜರಾತಿ ಭಾಷೆಗಳಿಗೆ ಅನುವಾದಗೊಂಡಿದೆ. 'ಅವಸ್ಥೆ' ತಮಿಳಿಗೆ ಭಾಷಾಂತರವಾಗಿದೆ (ಕಾರ್ಲೋಸ್, 1997). ಸಾಹಿತ್ಯ ಕಾರಣಕ್ಕಾಗಿ ಅನಂತಮೂರ್ತಿಯವರಷ್ಟು ವಿಶ್ವಸಂಚಾರ ಮಾಡಿದವರು ಕನ್ನಡದಲ್ಲಿ ಬಹಳ ವಿರಳ. ಕರ್ನಾಟಕ, ಭಾರತ ಹಾಗೂ ಹೊರ ದೇಶಗಳಲ್ಲಿ ಸಾಹಿತ್ಯ ಹಾಗೂ ಸಂಸ್ಕೃತಿ ವಿಚಾರವಾಗಿ ಅನೇಕ ಉಪನ್ಯಾಸಗಳನ್ನು ಇವರು ನೀಡಿದ್ದಾರೆ.

ಇವರ ಸಂಸ್ಕಾರ (ನಿರ್ದೇಶನ: ಪಟ್ಟಾಭಿರಾಮರೆಡ್ಡಿ,1970), ಅವಸ್ಥೆ (ನಿರ್ದೇಶನ: ಕೃಷ್ಣಮಾಸಡಿ,1987) ಕಾದಂಬರಿಗಳೂ ಘಟಶ್ರಾದ್ಧ (ನಿರ್ದೇಶನ: ಗಿರೀಶ್‌ಕಾಸರವಳ್ಳಿ,1978), ಬರ (ನಿರ್ದೇಶನ: ಎಂ.ಎಸ್.ಸತ್ಯು, 1982), ಮೌನಿ (ನಿರ್ದೇಶನ: ಲಿಂಗದೇವರು,2002) ಸಣ್ಣಕತೆಗಳೂ ಚಲನಚಿತ್ರಗಳಾಗಿವೆ. ಸಂಸ್ಕಾರ ಹಾಗೂ ಘಟಶ್ರಾದ್ಧ ಚಿತ್ರಗಳು ರಾಷ್ಟ್ರಪತಿಯವರ ಚಿನ್ನದ ಪದಕ ಪ್ರಶಸ್ತಿ ಪಡೆದಿವೆ.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರಕಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1983), ಕರ್ನಾಟಕ ಸರ್ಕಾರದ ಪ್ರಶಸ್ತಿ (1984), ಮಾಸ್ತಿ ಪ್ರಶಸ್ತಿ (1994), ಹಿಮಾಚಲಪ್ರದೇಶ ಸರ್ಕಾರದ ಶಿಖರ್‌ಸಮ್ಮಾನ್ (1995), ಪದ್ಮಭೂಷಣ (1998) – ಇವು ಕೆಲವು ಮುಖ್ಯ ಪ್ರಶಸ್ತಿಗಳು. ಇವರ ಅದ್ವಿತೀಯ ಸಾಹಿತ್ಯಕ ಸಾಧನೆಗಾಗಿ 1994ರಲ್ಲಿ ಇವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಇದು ಕನ್ನಡಕ್ಕೆ ದೊರೆತ ಆರನೆಯ ಜ್ಞಾನಪೀಠ ಪ್ರಶಸ್ತಿ. ಕೋಲ್ಕತದ ರವೀಂದ್ರಭಾರತಿ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್. ಪ್ರಶಸ್ತಿ ನೀಡಿದೆ (1995). ಇವರು ತುಮಕೂರಿನಲ್ಲಿ ಜರುಗಿದ 69ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (2002). ಇವರ ಹೆಸರು ನೊಬೆಲ್ ಪ್ರಶಸ್ತಿಗೂ ಶಿಫಾರಸ್ಸಾಗಿತ್ತು.

*

**ಅನಂತಪದ್ಮನಾಭ :** ಭಾದ್ರಪದ ಶುಕ್ಲಪಕ್ಷ ಚತುರ್ದಶಿ ದಿವಸ ಈ ದೇವರ ವ್ರತವನ್ನು ಆಚರಿಸುತ್ತಾರೆ. ವ್ರತಾಚರಣೆಯ ಕೊನೆಯಲ್ಲಿ ಕೈಗೆ ಕಟ್ಟಿಕೊಳ್ಳುವ ಹದಿನಾಲ್ಕು ಗಂಟುಗಳುಳ್ಳ ಕೆಂಪು ರೇಷ್ಮೆದಾರಕ್ಕೆ ಅನಂತ ಎಂದು ಹೆಸರು. ಅರಣ್ಯವಾಸಿಗಳಾಗಿ ದುಃಖಾರ್ತರಾದ ಪಾಂಡವರ ಬಳಿಗೆ ಬಂದ ಶ್ರೀಕೃಷ್ಣ ದುಃಖಿ ಧರ್ಮರಾಯನಿಗೆ ಹೇಳಿದ ವ್ರತವೆಂದು ಭವಿಷ್ಯೋತ್ತರ ಪುರಾಣದಲ್ಲಿ ಹೇಳಿದೆ. ಈ ವ್ರತಾಚರಣೆಯಿಂದ ಇಹದಲ್ಲಿ ಅಷ್ಟೈಶ್ವರ್ಯಗಳೂ ಪರದಲ್ಲಿ ಮುಕ್ತಿಯೂ ದೊರಕುವುದು. ತಿರುವಹಿಂದ್ರಂ ಅನಂತಪದ್ಮನಾಭಸ್ವಾಮಿಯ ಪ್ರಸಿದ್ಧ ಪುರಾತನ ಕ್ಷೇತ್ರ. ಹದಿನಾಲ್ಕನೆಯ ತೀರ್ಥಂಕರನಾದ ಅನಂತನಾಥನಿಗೆ ಸಂಬಂಧಿಸಿದಂತೆ ಜೈನರೂ ಅನಂತವ್ರತವನ್ನು ಆಚರಿಸುತ್ತಾರೆ. (ಜಿ.ಎಚ್.)

**ಅನಂತಪುರ :** ಆಂಧ್ರಪ್ರದೇಶದ ಒಂದು ಜಿಲ್ಲೆ ಹಾಗೂ ಮುಖ್ಯಪಟ್ಟಣ. ಜಿಲ್ಲೆಯ ವಿಸ್ತೀರ್ಣ 19,125 ಚಕಿಮೀ. ಜನಸಂಖ್ಯೆ 36,40,478 (2001). ಇದು ಕರ್ನಾಟಕದ ಪ್ರಸ್ಥಭೂಮಿಯ ಉತ್ತರಭಾಗದಲ್ಲಿದೆ. ಜಿಲ್ಲೆಯ ಪೂರ್ವದಲ್ಲಿ ಎರ್ರಕೊಂಡ ಎಂಬ ಬೆಟ್ಟಗಳಿವೆ. ಅನಂತಪುರ ಜಿಲ್ಲೆ ಅತ್ಯಂತ ಶುಷ್ಕಪ್ರದೇಶ. ಬಹುಭಾಗ ಕೆಂಪುಮಣ್ಣಿನಿಂದಲೂ ಬಂಜರುಗುಡ್ಡಗಳಿಂದಲೂ ಕೂಡಿದೆ. ನವಣೆ, ಸಜ್ಜೆ, ಎಣ್ಣೆಕಾಳು ಮತ್ತು ದ್ವಿದಳ ಧಾನ್ಯಗಳು ಮುಖ್ಯ ಬೆಳೆಗಳು. ಹತ್ತಿ ಮತ್ತು ಬತ್ತವನ್ನು ಸ್ವಲ್ಪಭಾಗದಲ್ಲಿ ಮಾತ್ರ ಬೆಳೆಯುತ್ತಾರೆ. ಕೊರಂಡಂ, ಸ್ಟೀಟೈಟ್ ಹಾಗೂ ವಜ್ರಗಳ ನಿಕ್ಷೇಪಗಳು ವಜಕರೂರು ಎಂಬಲ್ಲಿ ಲಭ್ಯ. ಅನಂತಪುರ ಪಟ್ಟಣ ಬೆಂಗಳೂರು–ಗುಂತಕಲ್ ರೈಲುಮಾರ್ಗದಲ್ಲಿದೆ. ಜನಸಂಖ್ಯೆ 50000 (2001). ಇತಿಹಾಸದ ಪ್ರಕಾರ ಅನಂತಪುರವನ್ನು ವಿಜಯನಗರದ ಒಬ್ಬ ದಿವಾನ ತನ್ನ ಪತ್ನಿ ಆನಂದಳ ಜ್ಞಾಪಕಾರ್ಥವಾಗಿ ಕಟ್ಟಿಸಿದನೆಂದು ತಿಳಿದುಬರುತ್ತದೆ. (ಎಂ.ಎಸ್.)

**ಅನಂತ ಮತ್ತು ಅನಂತಸೂಕ್ಷ್ಮ :** ಗಣಿತಶಾಸ್ತ್ರದಲ್ಲಿ ಪ್ರಚಲಿತಭಾವನೆಗಳು (ಇನ್‌ಫಿನಿಟಿ ಮತ್ತು ಇನ್‌ಫಿನಿಟೆಸಿಮಲ್). ಅನಂತದ ಸಂಕೇತ ¥. "ಯಾವುದಾದರೂ ಇತರ ಸಂಖ್ಯೆಯನ್ನು ಸೊನ್ನೆಯಿಂದ ಭಾಗಿಸಿದರೆ ಅನಂತವಾಗುತ್ತದೆ ಎಂಬ ಭಾವನೆ ಮೊಟ್ಟಮೊದಲು ಭಾಸ್ಕರನಲ್ಲಿ (1114–ಸು.1185) ಕಂಡುಬರುತ್ತದೆ."

ಗಣಿತಶಾಸ್ತ್ರದ ಬೆಳವಣಿಗೆಯ ದಾರಿಯಲ್ಲಿ ತಲೆದೋರುವ ಕೊರತೆಗಳನ್ನು ನಿವಾರಿಸಿ, ಪ್ರಮೇಯಗಳಿಗೆ ಫಲಿತಾಂಶಗಳಿಗೆ ಪರಿಪೂರ್ಣತೆ ನೀಡಿ, ಗಣಿತಸೌಧದ ಸೌಂದರ್ಯ ವರ್ಧಿಸಲು ಅನಂತ ಮತ್ತು ಅನಂತಸೂಕ್ಷ್ಮ ಭಾವನೆಗಳ ಆವಶ್ಯಕತೆ ಇದೆ. **(ನೋಡಿ– ಕಲನಶಾಸ್ತ್ರ–1)**

ಅನಂತ ಒಂದು ಸಂಖ್ಯೆಯಲ್ಲ. ಅದೊಂದು ಭಾವನೆ. ಆದ್ದರಿಂದ ಅನಂತದ ಮೇಲೆ ಗಣಿತದ ಸಾಮಾನ್ಯ ಪರಿಕರ್ಮವೆಸಗುವಂತಿಲ್ಲ. ಹಾಗೆ ಮಾಡಿದರೆ ಸಂದಿಗ್ಧ ಮತ್ತು ಅಸಂಬದ್ಧ ಫಲಿತಾಂಶಗಳು ದೊರೆಯುತ್ತವೆ. 'ಅನಂತವನ್ನು ಸಮೀಪಿಸಿದಾಗ ಮಿತಿ' (ಲಿಮಿಟ್ ವೆನ್ ಟೆಂಡಿಂಗ್ ಟು ಇನ್‌ಫಿನಿಟಿ) ಎಂದು ಹೇಳುವುದು ವಾಡಿಕೆ. ಅನಂತ ಮತ್ತು ಅದರಿಂದ ಜನಿಸಿದ ಅನಂತಸೂಕ್ಷ್ಮ ಎಂಬ ಭಾವನೆಗಳ ಕೂಲಂಕಷಾಭ್ಯಾಸ ಮಾಡುವ ಗಣಿತವಿಭಾಗದ ಹೆಸರು ವಿಶ್ಲೇಷಣ ಗಣಿತ "ಅನಂತದ ಸ್ವರಮೇಳವೇ (ಸಿಮ್‌ಫನಿ) ವಿಶ್ಲೇಷಣಗಣಿತ" "ಪ್ರಾಚೀನ ಕಾಲದಿಂದಲೂ ಮನುಷ್ಯನ ರಾಗಭಾವಗಳನ್ನು ಅನಂತದಷ್ಟು ಕಲಕಿದ ಪ್ರಶ್ನೆ ಬೇರೊಂದಿಲ್ಲ, ಬೇರಾವ ಭಾವನೆಯೂ ಇಷ್ಟು ಫಲಪ್ರದವಾಗಿ ಅವನನ್ನು ಪ್ರಚೋದಿಸಿರುವುದಿಲ್ಲ. ಹಾಗಿದ್ದರೂ ಬೇರಾವುದಕ್ಕೂ ಸ್ಪಷ್ಟೀಕರಣ ಇದಕ್ಕಿಂತ ಹೆಚ್ಚು ಬೇಡ" ಎಂದು ಹಿಲ್‌ಬರ್ಟನೇ ಬೇರೆಡೆ ಹೇಳಿದ್ದಾನೆ.

ವಿಶ್ಲೇಷಣಗಣಿತದ ಮಿತಿಯಿಂದಾಚೆಗೆ ಅನಂತದ ಭಾವನೆ ಇರುವುದು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರ 1845–1918ರಲ್ಲಿದ್ದ ಜಾರ್ಜ್ ಕ್ಯಾಂಟರ್ ಸೃಜಿಸಿದ ಗಣಸಿದ್ಧಾಂತ (ನೋಡಿ – ಗಣಸಿದ್ಧಾಂತ).

"ವಾಸ್ತವಿಕ ಪರಿಸ್ಥಿತಿಯಲ್ಲೆಲ್ಲೂ ಅನಂತವನ್ನು ಅರಿಯಲಾಗುವುದಿಲ್ಲ. ಅದಕ್ಕೆ ನಿಸರ್ಗದಲ್ಲಿ ಅಸ್ತಿತ್ವವಿಲ್ಲ ಅಥವಾ ಒಂದು ವೈಚಾರಿಕ ಭಾವನೆಗೆ ಅದು ಸಮರ್ಪಕ ತಳಹದಿಯನ್ನು ಒದಗಿಸುವುದಿಲ್ಲ–ಇರುವಿಕೆಗೂ ಕಲ್ಪನೆಗೂ ಇರುವ ಅದ್ಭುತ ಬಾಂಧವ್ಯ ಅನಂತ" (ಹಿಲ್‌ಬರ್ಟ್).

*

**ಅನಂತವಾದ :** ಜೈನಶಾಸ್ತ್ರರೀತ್ಯ ಪ್ರತಿವಸ್ತುವೂ ಅನಂತಧರ್ಮಗಳನ್ನು ಹೊಂದಿರುವುದು (ಅನಂತಧರ್ಮಾತ್ಮಕಂ) ಎನ್ನುವ ವಾದ. ಅನೇಕಾಂತವಾದಕ್ಕೂ ಸ್ಯಾದ್ವಾದಕ್ಕೂ ಪೂರಕವಾಗಿ ಈ ವಾದ ನಿಂತಿದೆ. ಇದರ ಮೂಲಭೂತ ಪ್ರಕ್ರಿಯೆಗಳು ಇವು: ಪ್ರತಿಯೊಂದು ವಸ್ತು ಎಲ್ಲಿಯೂ ಇರಬಲ್ಲುದು; ಪ್ರತಿ ವಸ್ತುವಿಗೂ ಇರಬಹುದಾದ ಧರ್ಮಗಳಿಗೆ ಲೆಕ್ಕವಿಲ್ಲ; ಅವು ಅನಂತ. ಅವುಗಳಲ್ಲಿ ಕೆಲವು ಸ್ವಪರ್ಯಾಯ ಧರ್ಮಗಳು; ಉಳಿದವು ಪರಪರ್ಯಾಯ ಧರ್ಮಗಳು. ಸ್ವಪರ್ಯಾಯವೆಂದರೆ ಸತ್ತಾತ್ಮಕವಾದುವು. ಪರಪರ್ಯಾಯವೆಂದರೆ ನಿಷೇಧಾತ್ಮಕವಾದುವು. ಈ ಎರಡರ ಹಂದರದಲ್ಲಿ ಪ್ರತಿಯೊಂದು ವಸ್ತುವೂ ವಿಧವಿಧವಾಗಿ ಕಾಣಬರುತ್ತದೆ. ಈ ಅನಂತಮುಖಗಳನ್ನೂ ಕಲಸಿದರೇನೇ ವಸ್ತುವಿನ ಸ್ವರೂಪ ಸಿದ್ಧವಾಗುವುದು. ಬಟ್ಟೆಯಲ್ಲಿ ದಾರದ ಎಳೆಗಳಿದ್ದಂತೆ ವಸ್ತುವಿನಲ್ಲಿ ಧರ್ಮಗಳು. ಎಳೆ ಎಳೆಗಳನ್ನು ಬಿಡಿಸಿದರೆ ಹೇಗೆ ಬಟ್ಟೆಯಾಗುವುದಿಲ್ಲವೋ ಹಾಗೆಯೇ ಧರ್ಮಗಳಿಂದ ಬೇರ್ಪಟ್ಟ ವಸ್ತುವಿಲ್ಲ. ಬಟ್ಟೆ ಒಂದಾದರೂ ಎಳೆಗಳು ಅಸಂಖ್ಯಾತವಾಗಿರುವಂತೆ ಒಂದೇ ವಸ್ತುವಿನಲ್ಲಿ ಅನಂತಧರ್ಮಗಳು ಇರುತ್ತವೆ. ರಾಶಿಯಿಂದ ಪ್ರಯೋಜನವಿಲ್ಲ; ಅವು ಕ್ರಮವರಿತು ವ್ಯವಸ್ಥೆಗೊಂಡಾಗ ಮಾತ್ರ ಬಟ್ಟೆಯೆನಿಸಿಕೊಂಡು ಉಪಯೋಗಕ್ಕೆ ಬರುತ್ತವೆ. ಹಾಗೆಯೆ ಕೇವಲ ಧರ್ಮಗಳು ಅವ್ಯವಹಾರ್ಯ; ಸತ್ತಾತ್ಮಕವಾದ ಧರ್ಮ ಎನ್ನುವಲ್ಲಿ ಸತ್ತು ನಿತ್ಯವೂ ಅಲ್ಲ, ಅನಿತ್ಯವೂ ಅಲ್ಲ. ನಿತ್ಯ ಎಂದರೆ ವ್ಯಯವಿಲ್ಲ; ಅನಿತ್ಯ ಎಂದರೆ ಸ್ಥಿತಿಯಿಲ್ಲ. ನಿತ್ಯ ಅಥವಾ ಅನಿತ್ಯ ಎಂದು ಸಾಧಿಸುವುದು ಏಕಪಕ್ಷೀಯ. ಉತ್ಪತ್ತಿ, ಸ್ಥಿತಿ, ಲಯ ಮೂರೂ ಅವಸ್ಥೆಗಳಲ್ಲಿ ದ್ರವ್ಯ ಇರುತ್ತದೆ ಎಂದು ಪರಿಗಣಿಸುವುದು ಸಾಧುವಾದ ಮತ. ವಸ್ತು ಹೀಗೆ ಅನಂತಧರ್ಮಾತ್ಮಕವಾಗಿರುವಾಗ ಒಂದೇ ಧರ್ಮವನ್ನು ಹಿಡಿದು ವ್ಯವಹರಿಸುವುದು ತಪ್ಪು. ಈ ಏಕಾಂತವಾದವನ್ನು ಜೈನದಾರ್ಶನಿಕರು ನಿರಸನ ಮಾಡಿ ಅನೇಕಾಂತವಾದವನ್ನು ಪೋಷಣೆ ಮಾಡಿದ್ದಾರೆ.

ವಸ್ತುವಿನ ಅನಂತಧರ್ಮಗಳನ್ನೂ ಒಮ್ಮೆಲೇ ಕಾಣುವುದು ಸಾಮಾನ್ಯದೃಷ್ಟಿಗೆ ಸಾಧ್ಯವಿಲ್ಲ; ಈ ಕೇವಲಜ್ಞಾನ ಅರ್ಹಂತರಿಗೆ ಮಾತ್ರ ಸಾಧ್ಯ. ಸಾಮಾನ್ಯ ವ್ಯವಹಾರದಲ್ಲಿ ಸ್ಯಾದ್ವಾದ ಬಳಕೆಗೆ ಬರುತ್ತದೆ. ಕೆಲವೇ ಧರ್ಮಗಳನ್ನು ಅವಲಂಬಿಸಿ ಅಥವಾ ಗ್ರಹಿಸಿ ಪಾಕ್ಷಿಕವಾದ

ಅನುಭವವನ್ನು ಪಡೆದಾಗ ವಸ್ತುವಿನ ಏಕದೇಶವಿಶಿಷ್ಟವಾದ ಸ್ವರೂಪ ತಿಳಿಯುತ್ತದೆ; ಇದಕ್ಕೆ ನಯ ಎಂದು ಹೆಸರು. ಒಂದು ವಿಧವಾಗಿ ನೋಡಿದರೆ ಕಾಣಬಹುದಾದ ಧರ್ಮಗಳು ಮತ್ತೊಂದು ವಿಧವಾಗಿ ನೋಡಿದರೆ ಕಾಣದೆ ಇರಬಹುದು. ಒಂದೊಂದು ದೃಷ್ಟಿವಿಧಕ್ಕೂ ಭಂಗಿ ಎನ್ನುವ ಹೆಸರಿದೆ. ಜೈನರು ವಸ್ತುವನ್ನು ನೋಡುವ ವಿಧಗಳಲ್ಲಿ ಏಳನ್ನು ಹೇಳಿ ಸಪ್ತಭಂಗೀನಯ ಎನ್ನುವ ಕಲ್ಪನೆಯನ್ನು ಸಿದ್ಧಪಡಿಸಿದ್ದಾರೆ. ಇರಬಹುದು (ಸ್ಯಾತ್ ಅಸ್ತಿ), ಇರದಿರಬಹುದು (ಸ್ಯಾತ್ ನಾಸ್ತಿ) ಇದ್ದೂ ಇರದಿರಬಹುದು (ಸ್ಯಾದಸ್ತಿ ಚ ನಾಸ್ತಿ ಚ) ಹೀಗೆ ಮುಂತಾಗಿ ವಸ್ತುವಿನ ಅನಂತಧರ್ಮಗಳನ್ನು ನಿರ್ದೇಶಿಸುವ ಕ್ರಮ ಜೈನದರ್ಶನಕ್ಕೆ ವಿಶಿಷ್ಟವಾದುದು. ವಿರುದ್ಧವಾದ ಧರ್ಮಗಳು ಒಟ್ಟಿಗೆ ವ್ಯಕ್ತವಾಗುವುದು ಅಸಂಭವವಾದುದರಿಂದ ಸಪ್ತಭಂಗೀನಯದಲ್ಲಿ ಸ್ಯಾದವ್ಯಕ್ತಂ ಎನ್ನುವ ನಯ ಸ್ವಾರಸ್ಯವಾದುದು. ಇರುವ ಎಲ್ಲ ಗುಣಗಳೂ ಎಲ್ಲ ಕಾಲಗಳಲ್ಲೂ ಎಲ್ಲ ದೇಶದಲ್ಲೂ ವ್ಯಕ್ತವಾಗಿರುವುದಿಲ್ಲ. ಕೆಲವೊಮ್ಮೆ ಕೆಲವು ಧರ್ಮಗಳು ಕಾಣಿಸಿಕೊಂಡು ಉಳಿದವು ಹುದುಗಿಯೇ ಇರುತ್ತವೆ. ಬೇರೆ ಸಂದರ್ಭಗಳಲ್ಲಿ ಈ ಅವ್ಯಕ್ತಧರ್ಮಗಳಿಗೆ ಅಭಿವ್ಯಕ್ತಿ ದೊರೆತು ಈಗ ವ್ಯಕ್ತವಾದವು ಅವ್ಯಕ್ತವಾಗಬಹುದು. ಈ ದೃಷ್ಟಿಯಿಂದ ಇರಬಹುದು, ಇರದಿರಬಹುದು, ಇದ್ದೂ ಇರಬಹುದು, ತೋರದೆ ಇರಬಹುದು ಎನ್ನುವ ನಾಲ್ಕು ನೆಲೆಗಳು ಅನಂತವಾದದಲ್ಲಿ ಮುಖ್ಯ ವಿವರಗಳು. ತಾತ್ಪರ್ಯವೇನೆಂದರೆ ಯಾವ ವಸ್ತುವನ್ನಾಗಲಿ ಇದು ಹೀಗೆಯೇ (ಇದಮಿತ್ಥಂ) ಎಂದು ಖಚಿತವಾಗಿ, ಸಾರ್ವಕಾಲಿಕವಾಗಿ, ಸಾರ್ವದೇಶಿಕವಾಗಿ ನಿರ್ಧರಿಸುವುದಾಗಲಿ ನಿರ್ದೇಶಿಸುವುದಾಗಲಿ ಸಾಧ್ಯವಿಲ್ಲ. ಹೆಚ್ಚೆಂದರೆ ಸಂಭವಪ್ರಧಾನವಾಗಿ ಸ್ಯಾತ್ (ಇದ್ದೀತು) ಎನ್ನಬಹುದು ಅಷ್ಟೆ. ಈ ವಾದವನ್ನು ಆತ್ಮತತ್ತ್ವಕ್ಕೆ ಅನ್ವಯಿಸಿ ಆತ್ಮ ಇದೆ, ಆತ್ಮ ಇಲ್ಲ, ಆತ್ಮ ಅವ್ಯಕ್ತ ಎಂಬ ಮೂರು ಪಕ್ಷಗಳನ್ನು ಬೆರೆಸಿ, ತ್ರಿಭಂಗಿಗಳನ್ನು ಸಪ್ತಭಂಗೀನಯದಲ್ಲಿ ನಿಲ್ಲಿಸಬಹುದು ಎಂಬುದು ಜೈನತತ್ತ್ವಪ್ರತಿಪಾದಕರ ನಿಲುವು.

ಈ ವಾದ ಈಚೆಗೆ ಸಾಪೇಕ್ಷವಾದ (ರಿಲೆಟಿವಿಟಿ) ಮತ್ತು ಸಂಭಾವ್ಯದೃಷ್ಟಿಯಲ್ಲಿ (ಪ್ರಾಬಬಿಲಿಟಿ) ಕೂಡ ಕಂಡುಬರುತ್ತದೆ. ಸಮಗ್ರದೃಷ್ಟಿಯ ಅಸಂಭವ, ಆತ್ಯಂತಿಕ ನಿರ್ಧಾರದ ಅಸಾಧ್ಯತೆ ಇವುಗಳನ್ನು ಮನಗಂಡೇ ಅನಂತವಾದ ಸಿದ್ಧವಾಯಿತು. ಯಾವ ವಸ್ತುವನ್ನಾಗಲಿ ಏಕಾಂತವಾಗಿ, ಏಕಪಕ್ಷೀಯವಾಗಿ, ವರ್ಣಿಸುವುದು ಸಾಧ್ಯವಿಲ್ಲ. ಹೀಗೆ ನಾವು ನಿರ್ದೇಶಿಸುವುದು ಪಾಕ್ಷಿಕದೃಷ್ಟಿ ಎನಿಸಿಕೊಳ್ಳುತ್ತದೆ. ಇದಕ್ಕೆ ವ್ಯತಿರಿಕ್ತವಾದ್ದು ಸಮ್ಯಕ್‌ದೃಷ್ಟಿ. ಇದು ಕೇವಲಿಗಳಿಗೆ ಮಾತ್ರ ಸಾಧ್ಯ. ಉಳಿದವರ ದೃಷ್ಟಿಯೆಲ್ಲ ಸಾಪೇಕ್ಷವಾದುದೇ. ಇಂದ್ರಿಯಜನ್ಯವಾದುದೂ ಅನುಮಾನಾದಿ ಪ್ರಮಾಣಗಳಿಂದ ಲಭ್ಯವಾದುದೂ ಮನಃಪೂರ್ವಕ ವಾಗಿ ಒದಗುವುದೂ ಸಾಪೇಕ್ಷಜ್ಞಾನವೇ. ಯೋಗದಿಂದ ಕಷಾಯಗಳನ್ನು ಹೊರದೂಡಿ, ಇಂದ್ರಿಯ ವ್ಯಾಪಾರದಿಂದ ವಿರತರಾಗಿ, ಕ್ಲೇಶಗಳಿಂದ ಮುಕ್ತರಾದ ಕೇವಲಿಗಳು ಮಾತ್ರವೇ ನಿರಪೇಕ್ಷವಾದ ಸಮಗ್ರವಾದ ಸನಾತನವಾದ ವಸ್ತುಜ್ಞಾನವನ್ನು ಯಥಾರ್ಥವಾಗಿ ಪಡೆಯಬಲ್ಲರು. ಹೀಗೆ ವಸ್ತುವನ್ನು ಇರುವಂತೆಯೇ ಗ್ರಹಿಸುವ ದೃಷ್ಟಿ ಸಮ್ಯಕ್‌ದೃಷ್ಟಿ. ವಸ್ತು ಅನಂತಧರ್ಮಾತ್ಮಕ ವಾದುದೆಂಬುದು ಈ ದೃಷ್ಟಿಯಿಂದಲೇ ತಿಳಿಯುವುದು.

ಪಾಶ್ಚಾತ್ಯ ದಾರ್ಶನಿಕರಲ್ಲಿಯೂ ವಾಸ್ತವಿಕವಾದಿಗಳು (ರಿಯಲಿಸ್ಟ್ಸ್) ಅನಂತವಾದವನ್ನು ಪ್ರತಿಪಾದಿಸಿದ್ದಾರೆ. ವಿಷಯವಾಸ್ತವಿಕತೆ (ಆಬ್ಜೆಕ್ಟಿವ್ ರಿಯಾಲಿಟಿ) ಎನ್ನುವುದು ಇಂದ್ರಿಯಾಪೇಕ್ಷವಾದುದೆಂದೂ ಇದಕ್ಕೆ ಅತೀತವಾದುದು ಸಾಮಾನ್ಯ (ಯೂನಿವರ್ಸಲ್) ಎಂದೂ ಇವರ ಜ್ಞಾನಮೀಮಾಂಸೆ ಹೇಳುತ್ತದೆ. ಇವರೂ ಧರ್ಮಗಳ ಅನಂತವಾದವನ್ನು ಮುಂದಿಡುತ್ತಾರೆ. ಇವರಲ್ಲಿ ಪ್ರಮುಖರಾದ ದಾರ್ಶನಿಕರೆಂದರೆ ಜೆ.ಇ.ಮೂರ್ ಮತ್ತು ಬರ್ಟ್ರ್ಯಾಂಡ್ ರಸಲ್. ಇವರು ಭಾವವಾದಕ್ಕೆ ವಿರುದ್ಧವಾಗಿ ಸತ್ತಾತ್ಮಕವಾದ ಧರ್ಮಗಳ ಅನುಸಂಧಾನದಲ್ಲಿ ಜ್ಞಾನದ ಪ್ರಯೋಜನವನ್ನು ಕಾಣುತ್ತಾರೆ. ಜೈನರನ್ನೂ ವಾಸ್ತವಿಕತಾವಾದಿಗಳೆಂದೂ ಅನಂತವಾದಿಗಳೆಂದೂ (ಪ್ಲೂರಲಿಸ್ಟ್ಸ್) ನಿರ್ದೇಶಿಸಬಹುದು. ಭಾರತೀಯ ದರ್ಶನದಲ್ಲಿ ಅನಂತಧರ್ಮವಾದವನ್ನು ಜೈನರು ಪ್ರತಿಪಾದಿಸಿದ ಹಾಗೆ ಉಳಿದ ವಾಸ್ತವಿಕತಾವಾದಿಗಳು ಪ್ರತಿಪಾದಿಸಿಲ್ಲ. (ಎಸ್.ಕೆ.ಆರ್.)

**ಅನಂತಸ್ಪರ್ಶಕ :** ವಕ್ರರೇಖೆ ಮತ್ತು ಅದರ ಸ್ಪರ್ಶಕಗಳು ಪರಸ್ಪರ ಅನಂತದಲ್ಲಿ ಸ್ಪರ್ಶಿಸಿದಾಗ ಆ ಸ್ಪರ್ಶಕದ ಹೆಸರು (ಅಸಿಮ್‌ಟೋಟ್).

$n$ ಘಾತದ (ಡಿಗ್ರಿ) ಒಂದು ಸಮತಳವಕ್ರರೇಖೆ ಅನಂತಸರಳರೇಖೆಯನ್ನು $n$ ಬಿಂದುಗಳಲ್ಲಿ ಛೇದಿಸುತ್ತದೆ. ಈ ಬಿಂದುಗಳಲ್ಲಿನ ಸ್ಪರ್ಶಕಗಳೇ ಅನಂತಸ್ಪರ್ಶಕಗಳು. ಇಂಥ ಬಿಂದು ಕೆಲವು ವಿಶೇಷ ಸಂದರ್ಭದಲ್ಲಿ ದ್ವಿಗುಣಬಿಂದು (ಡಬಲ್ ಪಾಯಿಂಟ್) ಆಗಿರಬಹುದು. ಹೀಗಾದಾಗ ವಕ್ರರೇಖೆಗೆ ಎರಡು ಸಮಾನಾಂತರ ಅನಂತಸ್ಪರ್ಶಕಗಳು ಲಭಿಸುತ್ತವೆ.

ಶಂಕುಜಗಳ (ಕಾನಿಕ್ಸ್) ಪೈಕಿ, ಅತಿಪರವಲಯಕ್ಕೆ (ಹೈಪರ್‌ಬೋಲ) ಎರಡು ಅನಂತಸ್ಪರ್ಶಕಗಳಿವೆ. ಇವು ಅತಿಪರವಲಯದ ಕೇಂದ್ರದಲ್ಲಿ ಸಂಧಿಸುತ್ತವೆ. ದೀರ್ಘವೃತ್ತಕ್ಕೆ (ಎಲಿಪ್ಸ್) ಅನಂತಸ್ಪರ್ಶಕಗಳು ಊಹ್ಯ. ಪರವಲಯ (ಪ್ಯರಾಬೊಲ) ಅನಂತಸರಳರೇಖೆಯನ್ನು ಸ್ಪರ್ಶಿಸುವುದರಿಂದ, ಈ ರೇಖೆಯೇ ಅದರ ಅನಂತಸ್ಪರ್ಶಕವಾಗುತ್ತದೆ. ಶಂಕುಜಗಳಲ್ಲಿ ಕೇಂದ್ರಬಿಂದುವಿನಿಂದ ಎಳೆದ ಸ್ಪರ್ಶಕಗಳೇ ಅನಂತಸ್ಪರ್ಶಕಗಳು. (ಸಿ.ಎನ್.ಎಸ್.)

ಅನಂತಸ್ಪರ್ಶಕೀಯವಾಗಿ (ಅಸಿಮ್‌ಟಾಟಿಕಲೀ) ಅಂದರೆ ಸ್ಪರ್ಶಿಸುವಂತೆ ತೋರುವ ಆದರೆ ಎಷ್ಟು ಮುಂದುವರಿದರೂ ಸ್ಪರ್ಶಿಸದ ಎಂಬ ರೂಢಿಯ ಅರ್ಥ ಅನಂತಸ್ಪರ್ಶಕದಿಂದ ಬಂದಿದೆ. *

**ಅನಂತಾಚಾರಿ, ಅತ್ತಾವರದ :** ಕನ್ನಡದ ಅಚ್ಚುಮೊಳೆಗಳನ್ನು ಎರಕ ಹಾಕುವ ಕ್ರಮವನ್ನು ಮೊದಲು ಕಂಡುಹಿಡಿದ ಕೀರ್ತಿಶಾಲಿ. ಹುಟ್ಟೂರಾದ ಮಂಗಳೂರಿನಲ್ಲಿ ಅಚ್ಚಿನ ಕೆಲಸದ ಮೊದಲ ಅನುಭವ ಪಡೆದು ಆಮೇಲೆ ಮುಂಬಯಿಯ ಹೆಸರಾಂತ ನಿರ್ಣಯಸಾಗರ ಮುದ್ರಣಾಲಯದಲ್ಲಿ ಶಿಕ್ಷಣ ಗಳಿಸಿದರಲ್ಲದೆ ಅಲ್ಲಿಯೆ ಗುಜರಾತಿ ಮೊಳೆಗಳನ್ನು ಸಿದ್ಧಮಾಡುವ ಕಾರ್ಖಾನೆಯಲ್ಲಿ ಸೇರಿ ದೇವನಾಗರಿ ಲಿಪಿಯನ್ನು ಕೆತ್ತಿ ಎರಕ ಹಾಕುವ ಕೆಲಸದಲ್ಲಿ ಸಹಾಯಕರಾದರು. ಅನಂತರ ಧಾರವಾಡಕ್ಕೆ ಬಂದು ಕರ್ನಾಟಕ ಮುದ್ರಣಾಲಯದಲ್ಲಿ ಕೆಲಸಕ್ಕೆ ಸೇರಿ ಅಲ್ಲಿ ಕನ್ನಡ ಅಚ್ಚುಮೊಳೆ ತಯಾರಿಸಿದರು. ಕೆಲವು ಕಾಲದ ಮೇಲೆ ಧಾರವಾಡದಿಂದ ಮಂಗಳೂರಿಗೆ ಬಂದರು. ಇವರು ಸಿದ್ಧಪಡಿಸಿದ ಕನ್ನಡ ಅಚ್ಚುಮೊಳೆಗಳನ್ನು ಅಂದಿನ ದೊಡ್ಡ ಮುದ್ರಣಾಲಯಗಳಾದ ಕೆನರಾ ಪ್ರೆಸ್, ಶಾರದಾ ಪ್ರೆಸ್, ಬಾಸೆಲ್ ಮಿಶನ್ ಪ್ರೆಸ್, ಧರ್ಮಪ್ರಕಾಶ ಪ್ರೆಸ್‌ಗಳಲ್ಲಿ ಬಳಸಲಾಯಿತು. ಪ್ರಾರಂಭದಲ್ಲಿ ಇವರಿಂದ ಕೆತ್ತಲ್ಪಟ್ಟ ದೇವನಾಗರಿ ಲಿಪಿಯ ವರ್ಣಮಾಲೆ ಅನಂತಷೇಡ್ ಎಂದೇ ಪ್ರಸಿದ್ಧವಾಗಿದೆ. (ಎಚ್.ಪಿ.ಎನ್.)

**ಅನಟೋಲಿಯ :** ಟರ್ಕಿಯ ಮಧ್ಯಭಾಗದಲ್ಲಿರುವ ಪ್ರಸ್ಥಭೂಮಿ. ವಿಸ್ತೀರ್ಣ 4,59,387 ಚಕಿಮೀ. ಜನಸಂಖ್ಯೆ ಸು. 25 ಮಿಲಿಯನ್. ಉತ್ತರದಲ್ಲಿ ಪಾಂಟಿಕ್ ಪರ್ವತವೂ ದಕ್ಷಿಣದಲ್ಲಿ ಟಾರಸ್ ಪರ್ವತ ಇವೆ. ಈ ಪ್ರಸ್ಥಭೂಮಿ ಪೂರ್ವದಲ್ಲಿ ಎತ್ತರವಾಗುತ್ತ ಆರ್ಮೀನಿಯ ಪ್ರದೇಶವನ್ನು ಸೇರುವುದು; ಆದರೆ ಪಶ್ಚಿಮದಲ್ಲಿ ಇಕ್ಕಟ್ಟಾದ ಕರಾವಳಿ ಮೈದಾನವನ್ನು ತಲುಪುವುದು. ಸರಾಸರಿ ಎತ್ತರ 760 ಮೀ ಟರ್ಕಿಯ ರಾಜಧಾನಿ ಅಂಕಾರ ಪಟ್ಟಣ ಈ ಪ್ರಸ್ಥಭೂಮಿಯ ಮಧ್ಯಭಾಗದಲ್ಲಿದೆ.

ಇದು ವಿಚಿತ್ರ ವಾಯುಗುಣವನ್ನು ಹೊಂದಿದೆ. ಚಳಿಗಾಲದಲ್ಲಿ ಅತಿಶೀತದಿಂದ ಕೂಡಿ ಕೆಲವು ಭಾಗಗಳು ಹಿಮಾಚ್ಛಾದಿತವಾಗುತ್ತವೆ. ಬೇಸಗೆಯಲ್ಲಿ ಶಾಖದಿಂದ ಕೂಡಿದ ಶುಷ್ಕ ವಾತಾವರಣವಿರುತ್ತದೆ. ಮಳೆ ಕಡಿಮೆ. ಸ್ವಾಭಾವಿಕ ಸಸ್ಯವರ್ಗ ರಷ್ಯದ ಸ್ಟೆಪ್ಪಿ ಮಾದರಿಯದು. ಫಲವತ್ತಾದ ಹುಲ್ಲುಗಾವಲುಗಳಿವೆ. ಪಶುಪಾಲನೆ ಜನರ ಮುಖ್ಯ ಕಸುಬು. ಅನಟೋಲಿಯ ಅಂಗೋರ ಮೇಕೆಗಳಿಗೆ ಪ್ರಸಿದ್ಧವಾದುದು. ಮಳೆ ಸಾಕಷ್ಟು ಬೀಳುವ ಪ್ರದೇಶಗಳಲ್ಲಿ ಬೇಸಾಯ ನಡೆಯುತ್ತದೆ. ಗೋದಿ ಮುಖ್ಯವಾದ ಬೆಳೆ. ದ್ರಾಕ್ಷಿ, ಸೇಬು ಮೊದಲಾದ ಹಣ್ಣುಗಳನ್ನೂ ಬೆಳೆಯುತ್ತಾರೆ; ಅಫೀಮನ್ನೂ ಉತ್ಪಾದಿಸುತ್ತಾರೆ.

ಪ್ರಸ್ಥಭೂಮಿಯ ಉತ್ತರ ಸರಹದ್ದಿನ ಪರ್ವತಶ್ರೇಣಿಯಲ್ಲಿ ಕಲ್ಲಿದ್ದಲು ದೊರಕುವುದು. ಮಧ್ಯ ಅನಟೋಲಿಯದಲ್ಲಿ ಕಬ್ಬಿಣದ ಅದಿರು ಸಿಗುವುದು. ಈ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರನ್ನು ಕಾರಾಬುಕ್ ಉಕ್ಕಿನ ಕಾರ್ಖಾನೆ ಉಪಯೋಗಿಸುತ್ತದೆ. ತಾಮ್ರ, ಕ್ರೋಮೈಟ್, ಮ್ಯಾಂಗನೀಸ್ ಮತ್ತು ಪಾದರಸ ಇಲ್ಲಿ ಸಿಗುವ ಇತರ ಖನಿಜಗಳು. ಸಕ್ಕರೆ ಕಾರ್ಖಾನೆಗಳು ಇವೆ. (ಎಂ.ಎಸ್.ಎಂ)

**ಅನತ್ತವಾದ :** ವೈದಿಕಧರ್ಮದ ಆತ್ಮವಾದಕ್ಕೆ ವ್ಯತಿರಿಕ್ತವಾಗಿ ಬೌದ್ಧರು ಈ ವಾದದಲ್ಲಿ ದೇಹೇಂದ್ರಿಯಗಳಿಂದ ಭಿನ್ನವಾದ, ಶಾಶ್ವತವಾದ ಆತ್ಮವಸ್ತು ಇಲ್ಲವೆಂದು ಸಾಧಿಸುತ್ತಾರೆ. ಪುರುಷನನ್ನು ವಿಶ್ಲೇಷಣೆ ಮಾಡಿದರೆ ನಾಮ, ರೂಪವೆಂಬ ದೇಹವೆಂದೂ ನಾಮವೆಂಬುದು ವೇದನಾ–ಸುಜ್ಞಾ–ಸಂಚಾರ–ವಿಜ್ಞಾನಗಳೆಂಬ ನಾಲ್ಕು ಖಂದಗಳೆಂದೂ ಇವನ್ನು ಬಿಟ್ಟು ಮತ್ತೆ ಯಾವ ವಸ್ತುಗಳಾಗಲಿ ಇರದೆಂದೂ ಈ ವಾದ ಹೇಳುತ್ತದೆ. ಪುರುಷನೆಂಬುದು ಈ ಐದು ಖಂದಗಳ ಸಂಘಾತವಷ್ಟೆ; ಇದನ್ನು ಪುದ್ಗಲವೆಂದೂ ಪರ್ಯಾಯವಾಗಿ ಹೇಳುತ್ತಾರೆ. ಆದರೆ ಅನುಭವಸಿದ್ಧವಾದ ಆತ್ಮದ ಕಲ್ಪನೆಯನ್ನು ಒಪ್ಪಿಕೊಳ್ಳುತ್ತಾರೆ; ನಾನು, ನನ್ನದು ಮುಂತಾದ ಅನುಭವಗಳಲ್ಲಿರುವ ಸ್ವಪ್ರತ್ಯಯ ಜೀವನದಲ್ಲಿ ಉದ್ಭೂತವಾದದ್ದಷ್ಟೆ; ವ್ಯಾವಹಾರಿಕವಾದ ಈ ಸತ್ಯ ನಿಜವಾಗಿ ಇರದು. ಇದನ್ನು ಮಹಾಯಾನಪಂಥದವರು ನೈರಾತ್ಮ್ಯವೆಂದು ಕರೆದು ಶೂನ್ಯವಾದವನ್ನು ಪ್ರತಿಪಾದಿಸುತ್ತಾರೆ. (ಎಸ್.ಕೆ.ಆರ್)

**ಅನಬಾಸ್ :** ಪೆರ್ಸಿಫೋರ್ಮೆಸ್ ಗಣದ ಅನಬಾಂಟಿಡೆ ಕುಟುಂಬಕ್ಕೆ ಸೇರಿದ ಅಸ್ಥಿಮೀನು. ಇದನ್ನು ಇಂಗ್ಲಿಷಿನಲ್ಲಿ ಕ್ಲೈಂಬಿಂಗ್ ಪರ್ಚ್, ಬಂಗಾಲಿಯಲ್ಲಿ ಕೋಯ್ ಮತ್ತು ಕೋವ್ರು, ಮಲಯಾಳಿಯಲ್ಲಿ ಊಂಡಿಕೊಲ್ಲಿ, ತಮಿಳಿನಲ್ಲಿ ಸೆನ್ನಾಲ್ ಮತ್ತು ಪನ್ನೈ ಎರಿಕ್ಕೊಡಯ್ ಎಂದು ಕರೆಯುತ್ತಾರೆ. ಭಾರತ, ಆಗ್ನೇಯ ಏಷ್ಯ, ಆಫ್ರಿಕಗಳ ಜೊಂಡು ತುಂಬಿದ ನದಿ, ತೊರೆ, ಕೊಳ ಮತ್ತು ನೀರು ಹಾಯಿಸಿದ ಗುಂಡಿಗಳೇ ಇದರ ವಾಸಸ್ಥಾನ. ಭಾರತದಲ್ಲಿ ಅ. ಸ್ಕಾಂಡೆನ್ಸ್ ಮತ್ತು ಅ. ಟೆಸ್ಟುಡೀನೆಯಸ್ ಎಂಬ ಎರಡು ಪ್ರಭೇದಗಳಿವೆ. ಸು. 20 ಸೆಂಮೀ ಉದ್ದ ಬೆಳೆಯುವ ಈ ಮೀನನ್ನು ಬಂಗಾಲ ಮತ್ತು ಪೂರ್ವ ಕರಾವಳಿಯ ಜನ ಆಹಾರವಾಗಿ ಉಪಯೋಗಿಸುತ್ತಾರೆ. ಈ ಮೀನಿನ ಪೃಷ್ಠ ಮತ್ತು ಗುದದ ಈಜುರೆಕ್ಕೆಗಳಲ್ಲಿ ಹಲವು ಕಂಟಕಗಳಿವೆ. ಶ್ರೋಣಿಯ ಈಜುರೆಕ್ಕೆಗಳು ಮುನ್ಸರಿದು ವಕ್ಷದ ಈಜು ರೆಕ್ಕೆಗಳ ತಳಭಾಗದಲ್ಲಿ ಉಪಸ್ಥಿತವಾಗಿದೆ. ಈ ಮೀನಿನ

ಶ್ವಸದಲ್ಲಿ ಒಂದು ವೈಶಿಷ್ಟ್ಯವಿದೆ. ಇತರ ಮೀನುಗಳಂತೆ ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ಕಿವಿರುಗಳ ಸಹಾಯದಿಂದ ಪಡೆಯುವುದೇ ಅಲ್ಲದೆ ಗಾಳಿಯಲ್ಲಿರುವ ಆಮ್ಲಜನಕವನ್ನು ನೇರವಾಗಿ ಪಡೆಯುವ ಸಾಮರ್ಥ್ಯವನ್ನೂ ಇದು ಪಡೆದಿದೆ. ಇದರ ನೆರವಿಗೆ ಒಂದು ಆನುಷಂಗಿಕ ಶ್ವಸನಾಂಗ ಕಿವಿರುಗಳ ಮೇಲ್ಭಾಗದಲ್ಲಿ ಚಾಚಿರುವ ಗೂಡಿನಲ್ಲಿ ರೂಪುಗೊಂಡಿದೆ. ಬಾಯಿಂದ ಪಡೆದ ಗಾಳಿ ಈ ಗೂಡನ್ನು ಸೇರುತ್ತದೆ. ಆದರೆ ಈ ಮೀನು ನೀರಿನಿಂದ ಹೊರಬಂದು ನೇರವಾಗಿ ಗಾಳಿ ಸೇವಿಸಿ ಬದುಕಲಾರದು. ನೀರಿನಿಂದ ಹೊರಬಂದ 6–8 ಗಂಟೆಗಳಲ್ಲಿ ಸತ್ತುಹೋಗುತ್ತದೆ. ಅನಬಾಸ್ ಎಂಬ ಪದ ಆ ಮೀನಿನ ಚಲನೆಗೆ ಸಂಬಂಧಿಸಿದ್ದು. ಮುಂಜಾನೆಯಲ್ಲಿ ಮತ್ತು ಮಳೆ ಸುರಿಯುವ ಕಾಲದಲ್ಲಿ ಈ ಮೀನು ನೀರಿನಲ್ಲಿ ಬಿದ್ದಿರುವ ತೊಲೆ ಮತ್ತು ಬಂಡೆಗಳನ್ನು ತನ್ನ ವಕ್ಷದ ಈಜುರೆಕ್ಕೆ ಮತ್ತು ಕಿವಿರುಮುಚ್ಚಳಗಳ ನೆರವಿನಿಂದ ಹತ್ತಬಲ್ಲುದು. ನೀರಿನ ಅಂಚಿನಲ್ಲಿ ಇಳಿಜಾರಾಗಿ ಬೆಳೆದಿರುವ ಮರವನ್ನೂ ಹತ್ತಬಲ್ಲುದು. ಜಲಾಶಯ ಬತ್ತಿಹೋಗುವ ಸಂದರ್ಭಗಳಲ್ಲಿ ಮತ್ತೊಂದನ್ನು ಹುಡುಕಿಕೊಂಡು ಒಣ ನೆಲದ ಮೇಲೆ ತೆವಳಬಲ್ಲುದು. ನೀರು ತೀರಾ ಬತ್ತಿಹೋದರೆ ನೆಲವನ್ನು ಕೊರೆದು ಒಳಸೇರಿ ವಾಸಿಸಬಲ್ಲುದು. (ಬಿ.ಎನ್.ಬಿ)

**ಅನರ್ಘರಾಘವ :** ಏಳು ಅಂಕಗಳ ಸಂಸ್ಕೃತ ದೃಶ್ಯಕಾವ್ಯ. ಕರ್ತೃ ಮುರಾರಿ. ಇವನ ಕಾಲ ನಿರ್ಧಾರವಾಗಿಲ್ಲ. ಪ್ರಾಯಶಃ ಭವಭೂತಿಗಿಂತ ಈಚೆಗೂ ರತ್ನಾಕರನಿಗಿಂತ (9ನೆಯ ಶತಮಾನ) ಆಚೆಗೂ ಇದ್ದಿರಬೇಕು. ಕೆಲವರು 11ನೆಯ ಶತಮಾನದವನೆನ್ನುತ್ತಾರೆ. ರಾಜಶೇಖರನ ನಾಟಕಗಳ ಪ್ರಸ್ತಾವನೆಗೂ ಅನರ್ಘರಾಘವದ ಪ್ರಸ್ತಾವನೆಗೂ ಹಲವು ಅಂಶಗಳಲ್ಲಿ ಸಾದೃಶ್ಯವಿರುವುದರಿಂದ ರಾಜಶೇಖರನ ಸಮಕಾಲೀನ ಎನ್ನುತ್ತಾರೆ. ರತ್ನಾಕರ ತನ್ನ ಹರವಿಜಯದಲ್ಲೂ ಮುಂಬಕ ಪ್ರ.ಶ.1135 ತನ್ನ ಶ್ರೀಕಂಠಚರಿತ್ರೆಯಲ್ಲೂ ಈತನನ್ನು ಹೊಗಳಿದ್ದಾರೆ. ಈತ ನರ್ಮದಾತೀರದ ಮಾಹಿಷ್ಮತೀ ನಗರದ ಕಾಲಚೂರ್ಯ ರಾಜನೊಬ್ಬನ ಆಶ್ರಯದಲ್ಲಿದ್ದು ತನ್ನ ನಾಟಕವನ್ನು ರಚಿಸಿದ. ಇವನದು ಮೌದ್ಗಲ್ಯ ಗೋತ್ರ; ತಂದೆ ತಾಯಿಗಳು ಭಟ್ಟವರ್ಧಮಾನ ಮತ್ತು ತಂತುಮತಿ; ತನ್ನನ್ನು ಬಾಲವಾಲ್ಮೀಕಿ ಎಂದು ಕರೆದುಕೊಂಡಿದ್ದಾನೆ. ಎ.ಬಿ.ಕೀತ್ ಮೊದಲಾದ ಪಂಡಿತರ ಅಭಿಪ್ರಾಯದಂತೆ ಈತ ದ್ವಿತೀಯ ದರ್ಜೆಯ ಕವಿ. ಈತನ ಶೈಲಿ ಮತ್ತು ಭಾವನಾತರಂಗಗಳನ್ನು ಸಿದ್ಧಾಂತ ಕೌಮುದಿಯಲ್ಲಿ ಹೊಗಳಿದೆ.

ನಾಟಕದ ಕಥಾವಸ್ತು ರಾಮಾಯಣ. ಶ್ರೀರಾಮನಂಥ ಉದಾತ್ತ ನಾಯಕನಿಗೆ ಸಲ್ಲಬೇಕಾದ ಭಕ್ತಿ ಗೌರವಗಳನ್ನು ಆವರೆಗೆ ಯಾರೂ ಸಲ್ಲಿಸದಿದ್ದ ಕಾರಣ ತಾನು ಈ ಅನರ್ಘರಾಘವ ಬರೆಯಬೇಕಾಯಿತೆಂದು ಹೀಗೆ ಹೇಳಿದ್ದಾನೆ :

ಯದಿ ಕ್ಷುಣ್ಣಂ ಪೂರ್ವೈರಿತಿ ಜಹತಿ ರಾಮಸ್ಯ ಚರಿತಂ
ಗುಣೈರೇತಾವದ್ಭಿರ್ಜಗತಿ ಪುನರನ್ಯೋ ಜಯತಿ ಕಃ
ಸ್ವಮಾತ್ಮಾನಂ ತತ್ತದ್ಗುಣಗರಿಮಗಂಭೀರ ಮಧುರ
ಸ್ಫುರದ್ವಾಗ್ಬ್ರಹ್ಮಾಣಃ ಕಥಮುಪಕರಿಷ್ಯಂತಿ ಕವಯಃ

ಭವಭೂತಿಯಲ್ಲದೆ ಮತ್ತಾವ ಪೂರ್ವಕವಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಾತುಗಳನ್ನು ಹೇಳಿದ್ದಾನೋ ತಿಳಿಯದು.

ನಾಟಕದ ಏಳು ಅಂಕಗಳ ಮುಖ್ಯ ವಿಷಯಗಳಿವು: 1. ವಿಶ್ವಾಮಿತ್ರ ರಾಮಲಕ್ಷ್ಮಣರನ್ನು ಕರೆತರುವುದು; 2. ತಾಟಕಾಸಂಹಾರ; 3. ಹರಧನುರ್ಭಂಗ; ರಾವಣನಿಗಾಗಿ ಸೀತೆಯನ್ನು ಕೇಳಲು ಬಂದ ಶೌಷ್ಕಲ ಇದನ್ನು ಅವನಿಗೆ ತಿಳಿಸಲು ಹೋಗುವುದು; 4. ಪರಶುರಾಮಪ ರಾಜಯ; ರಾಮಾದಿಗಳ ಅರಣ್ಯಗಮನ; 5. ಸೀತಾಪಹರಣ; ವಾಲಿವಧ; 6. ವಿದ್ಯಾಧರರಿಂದ ರಾವಣವಧ ವರ್ಣನೆ; 7. ವಿಮಾನದಲ್ಲಿ ರಾಮಾದಿಗಳ ಪುನರಾಗಮನ. ಕಥಾಸಂಕ್ಷೇಪದಲ್ಲಿ ನೈಪುಣ್ಯವಿದೆ. ನಾಟಕದಲ್ಲಿ ಒಟ್ಟು 567 ಪದ್ಯಗಳಿವೆ.

ಮುರಾರಿಯ ದಾರಿ ಮೂರನೆಯ ದಾರಿ–ಮುರಾರೇಸ್ತೃತೀಯಃಪಂಥಾಃ–ಎಂದು ಹೇಳುವುದುಂಟು. ಇದು ಅವನು ಹೇಳಿಕೊಳ್ಳುವ ಮಾತುಕಥೆಗಳ ಗಂಭೀರತೆಯನ್ನು ನಿರ್ದೇಶಿಸುತ್ತದೆ. ಅವನದು ಜಯದೇವ ಮುಂತಾದವರಿಗಿಂತ ಘನವಾದ ಪಾಂಡಿತ್ಯ. ಅವನ ಪಾತ್ರಗಳು ಪಾಂಡಿತ್ಯಪೂರ್ಣವಾಗಿ ಮಾತನಾಡುತ್ತವೆ. ವರ್ಣನೆಗಳು ಹೆಚ್ಚು. ಅಪೂರ್ವಪದಗಳೂ ಕ್ಲಿಷ್ಟವ್ಯಾಕರಣಪ್ರಯೋಗಗಳೂ ಉಂಟು. ಶೈಲಿ ಜಟಿಲ. ವಾಲಿ ಎನ್ನುವ ಕಡೆ ವಿಕರ್ತನತನಯ, ಶಿವಧನುಸ್ಸು ಎಂಬ ಕಡೆ ಕಾತ್ಯಾಯನಿಕಾಮುಕಕಾರ್ಮುಕ ಎಂದರೇ ಕವಿಗೆ ಸಂತೋಷ. ಈ ಕಾರಣದಿಂದಾಗಿ ಅವನು ಪಂಡಿತಪ್ರಿಯನಾಗಿದ್ದಾನೆ. ಮುರಾರಿಯ ಮುಂದೆ ಭವಭೂತಿ ಏಕೆ ಎನ್ನುವ ಒಂದು ಪ್ರಶಂಸೆಯ ಶ್ಲೋಕ ಕೂಡ ಇದೆ:

ಮುರಾರಿ ಪದ ಚಿಂತಾಯಾಂ ಭವಭೂತೇಸ್ತು ಕಾ ಕಥಾ
ಭವಭೂತಿಂ ಪರಿತ್ಯಜ್ಯ ಮುರಾರಿ ಮುರರೀಕುರು

ಒಟ್ಟಿನಲ್ಲಿ ಮುರಾರಿ ತನ್ನದೇ ದಾರಿಯಲ್ಲಿ ನಡೆದು ಸಾಮಾನ್ಯ ದರ್ಜೆಯ ಕವಿಗಳ ಸಾಲನ್ನು ಬಿಟ್ಟು ತನ್ನದೇ ಆದ ಸ್ಥಾನವೊಂದನ್ನು ಕಾವ್ಯ ಪ್ರಪಂಚದಲ್ಲಿ ಗಳಿಸಿದ್ದಾನೆ. (ಜಿ.ಎಂ.)

**ಅನವಸ್ಥೆ :** ತರ್ಕಶಾಸ್ತ್ರದಲ್ಲಿ ಹೇಳಿರುವ ಒಂದು ದೋಷ. ಕಾರ್ಯಕಾರಣಗಳಿಗೆ ಕೊನೆ ಇಲ್ಲದಿರುವ ಅಪ್ರಾಮಾಣಿಕವಾದ ಪ್ರಸಂಗಪರಂಪರೆ. (ಎಸ್.ಎನ್.ಕೆ.)

**ಅನವೇಮರೆಡ್ಡಿ :** ಕೊಂಡವೀಡು ರೆಡ್ಡಿರಾಜ್ಯದ ಸಮರ್ಥ ದೊರೆ (1364–86). ಇವನ ಅಣ್ಣ ಅನಪೋತರಾಜನ ಮರಣಸಮಯದಲ್ಲಿ, ಅವನ ಮಗನಾದ ಕುಮಾರಗಿರಿ ಇನ್ನೂ ಬಾಲಕನಾಗಿದ್ದುದರಿಂದ ಇವನೇ ಪಟ್ಟಕ್ಕೆ ಬಂದ. ರಾಜನಾದ ಕೂಡಲೆ ಪಶ್ಚಿಮ ಗೋದಾವರಿ ಜಿಲ್ಲೆಯ ಅನ್ನದೇವನನ್ನು ಸೋಲಿಸಿದ. ನಿಡದವೋಲು ಮತ್ತು ರಾಜಮಹೇಂದ್ರಿಯ ಕೋಟೆಗಳನ್ನು ವಶಪಡಿಸಿಕೊಂಡು ಸಿಂಹಾಚಲದವರೆಗೂ ರಾಜ್ಯವನ್ನು ವಿಸ್ತರಿಸಿ, ಕೆಳಗಣ ಗೋದಾವರಿ ಜಿಲ್ಲೆಗಳಲ್ಲಿ ರೆಡ್ಡಿ ರಾಜ್ಯಸ್ಥಾಪನೆ ಮಾಡಿದ. ವೆಲಮ ರಾಜ್ಯದ ಮೇಲೆ ದಂಡೆತ್ತಿ ಹೋಗಿ ವಿಜಯವನ್ನು ಸಂಪಾದಿಸಿದ. ಶ್ರೀಶೈಲ ಪ್ರಾಂತದ ಮೇಲೆ ಯುದ್ಧಮಾಡಿ, ವಿಜಯನಗರದ ರಾಜರು ಆಕ್ರಮಿಸಿಕೊಂಡಿದ್ದ ಭಾಗಗಳನ್ನು ಅವರಿಂದ ಕಿತ್ತುಕೊಂಡ. ಈ ರೀತಿಯಲ್ಲಿ ಅವನು ಕೈಕೊಂಡ ಎಲ್ಲ ಯುದ್ಧಗಳಲ್ಲಿಯೂ ಜಯಶಾಲಿಯಾಗಿ ರೆಡ್ಡಿ ಸಾಮ್ರಾಜ್ಯದ ವಿಜಯಪತಾಕೆಯನ್ನು ಮೆರೆಸಿದ. (ಎ.ವಿ.ಎನ್.)

**ಅನಸೂಯೆ :** ಕರ್ದಮ ಮುನಿ ಹಾಗೂ ದೇವಹೂತಿಯರ ಮಗಳು. ಅತ್ರಿ ಮಹರ್ಷಿಯ ಹೆಂಡತಿ. ಪರಮ ಪತಿವ್ರತೆ. ಇವಳ ಪಾತಿವ್ರತ್ಯವನ್ನು ಪರೀಕ್ಷಿಸಲು ಬಂದ ತ್ರಿಮೂರ್ತಿಗಳನ್ನು ಮೆಚ್ಚಿಸಿ ವರ ಪಡೆದು, ದತ್ತಾತ್ರೇಯ, ದುರ್ವಾಸ, ಚಂದ್ರರೆಂಬ ಮೂವರು ಮಕ್ಕಳನ್ನು ಪಡೆದಳು. ಶ್ರೀರಾಮನ ಅರಣ್ಯವಾಸದಲ್ಲಿ ಸೀತೆಗೆ ಈಕೆ ಮಾಂಗಲ್ಯವೃದ್ಧಿಯ ಧರ್ಮರಹಸ್ಯಗಳನ್ನು ತಿಳಿಸಿದಳು. **(ನೋಡಿ– ಅತ್ರಿ)** (ಜಿ.ಎಚ್.)

**ಅನಾಕ್ರಿಯಾನ್ :** ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಉತ್ಕೃಷ್ಟ ಭಾವಗೀತೆಗಳನ್ನು ಬರೆದ ಗ್ರೀಕ್ ಕವಿ. ಅನಾಕ್ರಿಯಾನ್‌ಟಿಕ್ಸ್ ಎಂಬ ಹೊಸ ಛಂದಸ್ಸು ಮತ್ತು ಹೊಸ ಭಾವಕಲ್ಪನೆಯ ಮೂಲಪುರುಷ. ನಿರಂಕುಶ ಪ್ರಭುಗಳೇ ಹೆಚ್ಚಾಗಿದ್ದ ಆ ಕಾಲದಲ್ಲಿ ಒಂದು ಕಡೆ ನೆಲೆಯಾಗಿ ನಿಲ್ಲಲು ಅವನಿಗೆ ಸಾಧ್ಯವಾಗಲಿಲ್ಲ. ಸೇಮಾಸ್ ರಾಜ್ಯದ ಪಾಲಿಕ್ರಟೀಸ್‌ನ ಆಶ್ರಯದಲ್ಲಿ ಕೆಲಕಾಲ ಇದ್ದು, ಆ ದೊರೆಯ ಕೊಲೆಯಾದ ಮೇಲೆ ಅಥೆನ್ಸ್ ನಗರಕ್ಕೆ ಬಂದು ನೆಲೆಸಿದ. 85ನೆಯ ವಯಸ್ಸಿನಲ್ಲಿ ತೀರಿಕೊಂಡ. ಪಾಸೇನಿಯಸ್ ಎಂಬ ಪ್ರಸಿದ್ಧ ದಳಪತಿ ಇವನ ವಿಗ್ರಹವನ್ನು ಅಥೆನ್ಸಿನ ಅಕ್ರೊಪೋಲಿಸ್‌ನಲ್ಲಿ ನಿಲ್ಲಿಸಿದ್ದನೆಂದು ಹೇಳಿರುವುದರಿಂದಲೂ 5 ಮತ್ತು 4ನೆಯ ಶತಮಾನದ ಕವಿಗಳು ಇವನ ಕೃತಿಗಳಿಂದ ಉದ್ಧರಿಸಿರುವುದರಿಂದಲೂ ಇವನು ಅಥೆನ್ಸಿನಲ್ಲಿ ತುಂಬ ಮಾನ್ಯತೆ ಪಡೆದಿದ್ದನೆಂದು ಹೇಳಬಹುದು. ಇವನು ರಚಿಸಿದ ಯಾವ ಕಾವ್ಯವೂ ಸಂಪೂರ್ಣವಾಗಿ ಉಳಿದಿಲ್ಲ; ದೊರೆತಿರುವುದೆಲ್ಲ ತುಂಡುಗಳು ಮಾತ್ರ. ಆದರೂ ಅವುಗಳಲ್ಲಿ, ಅವನು ಆರಿಸಿರುವ ಛಂದಸ್ಸಿನ ಔಚಿತ್ಯ, ಶೈಲಿಯ ಸರಳತೆ, ಲಾಲಿತ್ಯ ಎದ್ದು ಕಾಣುತ್ತವೆ. ದೊರೆತಿರುವ ಕವಿತೆಗಳಲ್ಲಿ ಕಾಣುವ ವಿಷಯ ಮದ್ಯ, ಮಾನಿನಿಯನ್ನು ಕುರಿತವು; ಗಂಭೀರ ವಿಷಯಗಳನ್ನುಳ್ಳವು ಇಲ್ಲವೇ ಇಲ್ಲ. ಅನಾಕ್ರಿಯಾನ್‌ಟಿಕ ಎಂಬ ಹೆಸರಿನಿಂದ ಲಭ್ಯವಾಗಿರುವ ಕವನಗಳನ್ನು ಅವನ ಕಾಲದ ಐದಾರು ಶತಮಾನಗಳ ಅನಂತರ ಅವನನ್ನು ಅನುಕರಿಸಿದವರು ರಚಿಸಿದರು (ಎ.ಎಂ.)

**ಅನಾಟಮಿ ಆಫ್ ಮೆಲಂಕಲಿ, ದಿ :** 17ನೆಯ ಶತಮಾನದ ಇಂಗ್ಲಿಷ್ ಗದ್ಯಸಾಹಿತಿ ಹಾಗೂ ಕ್ರೈಸ್ತ ಉಪದೇಶಕ ರಾಬರ್ಟ್ ಬರ್ಟನ್‌ನ ಕೃತಿ (1621). ಉತ್ತಮ ಶೈಲಿ, ಕುತೂಹಲಕಾರಿ ವಿಷಯಸಂಗ್ರಹಣ, ಕರ್ತೃವಿನ ಜೀವನ ವಿವೇಕ, ಹಾಸ್ಯ ಹಾಗೂ ಸಹಾನುಭೂತಿ, ತನ್ನ ಕಾಲದ ಎಲ್ಲ ತಾತ್ತ್ವಿಕ ಹಾಗೂ ಮನಶ್ಶಾಸ್ತ್ರೀಯ ಜ್ಞಾನಸಂಗ್ರಹಣ– ಇವುಗಳಿಂದಾಗಿ ಈ ಗ್ರಂಥ ಒಂದು ಮಹಾಕೃತಿಯಾಗಿದೆ. ಇಲ್ಲಿ ಮೆಲಂಕಲಿ ಅಥವಾ ವಿಷಣ್ಣತೆ ಎಂದರೆ ವಿದ್ವತ್ತು ಮತ್ತು ಜೀವನವನ್ನು ಕುರಿತು ಆಳವಾದ ವಿವೇಚನೆಯಿಂದ ಬರುವ, ಮುಂದೆ ರೊಮ್ಯಾಂಟಿಕ್ ಬರಹಗಾರರು ಹೊಗಳಿದ, ವಿಷಣ್ಣತೆಯಲ್ಲ. ಇದು ಒಂದು ದೈಹಿತ ಅಸ್ವಸ್ಥತೆ, ಮಾನಸಿಕ ಆರೋಗ್ಯವನ್ನು ಕೆಡಿಸಿ ಹುಚ್ಚನ್ನೇ ತರಬಲ್ಲದ್ದು. ಎಲ್ಲರಲ್ಲಿ ಹುದುಗಿರುವ ವಿಷಣ್ಣತೆಯನ್ನು ಕುರಿತ ವೈದ್ಯಕೀಯ ಗ್ರಂಥ ಎನ್ನುವ ದೃಷ್ಟಿಯಿಂದ ರಚಿತವಾದರೂ ಇದರಲ್ಲಿ ಧಾರ್ಮಿಕ ಹಾಗೂ ವೈದ್ಯಶಾಸ್ತ್ರರೀತ್ಯ ವಿಷಣ್ಣತೆಯನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ವಿವೇಚನೆ ಮತ್ತು ಸಹಾನುಭೂತಿ ಬೆರೆತ ಇವನ ಜೀವನದೃಷ್ಟಿ ಮತ್ತು ವ್ಯಂಗ್ಯಗಳು ಮಾಂಟೇನ್‌ನನ್ನು ನೆನಪಿಗೆ ತರುತ್ತವೆ. ಇವನು ಅಸಾಧಾರಣಪಾಂಡಿತ್ಯದ ಪ್ರಭು. ಈ ಕೃತಿಯಲ್ಲಿ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಈತ ಪ್ರಸ್ತಾಪಿಸುವ ಎಲ್ಲ ಕೃತಿಗಳ ಪಟ್ಟಿ ಇಂದಿಗೂ ಸಂಪೂರ್ಣವಾಗಿ ಸಿದ್ಧವಾಗಿಲ್ಲ. ಆದರೂ ಒಣಪಾಂಡಿತ್ಯವನ್ನು ಬರ್ಟನ್ ಹಾಸ್ಯ ಮಾಡಬಲ್ಲ, ತನ್ನನ್ನು ತಾನೇ ಕಂಡು ನಗಬಲ್ಲ, ತನ್ನ ನಾಡಿನ ಗುಣಾವಗುಣಗಳನ್ನು ಬೆರಳಿಟ್ಟು ತೋರಿಸಬಲ್ಲ. ಈ ಕೃತಿ ಒಂದು ದೃಷ್ಟಿಯಿಂದ ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ್ದು. ಈತ ನೀಡುವ ಬುದ್ಧಿವಾದ ಎಷ್ಟೋ ಬಾರಿ ಆಧುನಿಕ ಮನಶ್ಶಾಸ್ತ್ರಕ್ಕೆ ಒಪ್ಪಿಗೆಯಾಗುವಂಥದ್ದು. ಶಬ್ದಸಂಪತ್ತು ಮತ್ತು ವಾಕ್ಯಲಯದ ವಿಷಯದಲ್ಲಿ ಈತ ತುಂಬ ಎಚ್ಚರಿಕೆ ವಹಿಸಿದ್ದಾನೆ. ಬರೆದುದನ್ನು ಮತ್ತೆಮತ್ತೆ ತಿದ್ದಿ ಅದಕ್ಕೆ

ಕಲೆಯ ಮೆರುಗು ಕೊಟ್ಟಿದ್ದಾನೆ. ವಿಚಾರಪ್ರವೃತ್ತಿಯೊಡನೆ ಬೆರೆತು. ಎದ್ದು ಕಾಣದಿರುವ ಹಾಸ್ಯ ಇವನ ಕೃತಿಯ ಒಂದು ಸಾಧನೆ. ದೀರ್ಘವಾಕ್ಯಗಳ ಶೈಲಿ ಪ್ರಿಯವಾಗಿರುವ ಇವನ ಯುಗದಲ್ಲಿಯೂ ಇವನ ಅನೇಕ ವಾಕ್ಯಗಳು ಆಶ್ಚರ್ಯವನ್ನು ಉಂಟು ಮಾಡುವಷ್ಟು ದೀರ್ಘವಾಗಿವೆ. ವಾಕ್ಯದ ಬೇರೆ ಬೇರೆ ಭಾಗಗಳಲ್ಲಿ ಇತರರಿಂದ ಉದ್ಧರಿಸಿದ ಭಾಗಗಳನ್ನೂ ಇತರರಿಂದ ಪ್ರಚೋದಿತವಾದ ವಿಚಾರಗಳನ್ನೂ ಹೆಣೆಯುತ್ತಾನೆ. ಇಷ್ಟಾದರೂ ಇವನದು ಅರ್ಥವಾಗುವ ಶೈಲಿಯಲ್ಲ. ಇವನ ಕೃತಿಯಲ್ಲಿ ಅಪೂರ್ವ ವಿದ್ವತ್ತು. ಅಷ್ಟೇ ಅಪೂರ್ವ ಸೂಚನೆಗಳು (ಅಲ್ಯೂಷನ್ಸ್) ಇದ್ದರೂ ಶೈಲಿ ಆಡಂಬರರಹಿತ (ಹೋಮ್ಲಿ) ಎನ್ನಿಸುತ್ತದೆ. ಸಹಜವಾಗಿ ಸಂಭಾಷಣೆಯ ರೀತಿಯಲ್ಲಿ ತನ್ನ ವಿಚಾರಸರಣಿಯನ್ನು ಈತ ನಿರೂಪಿಸಿಲ್ಲ. ಇವನ ವ್ಯಕ್ತಿತ್ವ ಕೃತಿಯಲ್ಲಿ ಎದ್ದು ಕಾಣುತ್ತದೆ. ಮನುಷ್ಯನ ಸ್ವಭಾವವನ್ನು ನಿಚ್ಚಳ ದೃಷ್ಟಿಯಿಂದ ಈತ ವಿಭಜನೆ ಮಾಡಿ ಅವನ ಗುಣದೋಷಗಳನ್ನು ಮತ್ತು ವೈಚಿತ್ರ್ಯಗಳನ್ನು ಬೆರಳಿಟ್ಟು ತೋರಿಸುತ್ತಾನೆ. ಆದರೆ ತನ್ನೆಲ್ಲ ವಿಮರ್ಶೆಯಲ್ಲೂ ಮಾನವೀಯ ಸಹಾನುಭೂತಿಯನ್ನೂ ತೋರುತ್ತಾನೆ. (ಎಲ್.ಎಸ್.ಎಸ್)

**ಅನಾಟೋ** : ಬಿಕ್ಸೇಸೀ ಕುಟುಂಬಕ್ಕೆ ಸೇರಿದ ಬಿಕ್ಸ ಒರೆಲ್ಲಾನ ಎಂಬ ಗಿಡದ (ರಂಗುಮಾ ಗಿಡ) ಬೀಜಗಳಿಂದ ತಯಾರಿಸಿದ ಹಳದಿ ಬಣ್ಣದ ಅನಾಟೋವನ್ನು ಕೊಡುವಂಥ ಈ ಸಸ್ಯಕ್ಕೆ ಅನಾಟೋಸಸ್ಯವೆಂದು ಕೂಡ ಕರೆಯುತ್ತಾರೆ. ಈ ಸಸ್ಯ ಮಧ್ಯ ಹಾಗೂ ದಕ್ಷಿಣ ಅಮೆರಿಕದ ಮೂಲವಾಸಿ. ಇದರ ಬೀಜದ ಸುತ್ತ ಮೇಣದಂತಿರುವ ಪೊರೆಯಿದೆ; ಸಾಕಷ್ಟು ನೆನೆದಾಗ ಬೀಜದಿಂದ ಬೇರ್ಪಟ್ಟು ನೀರಿನಲ್ಲಿ ಉಳಿಯುತ್ತದೆ. ಹಾಗೆ ತೊಳೆದ ನೀರನ್ನು ಸೋಸಿ, ಬಂದ ಜಿಗುಟಾದ ತಿರುಳನ್ನು (ಪಲ್ಪ್) ಒಂದು ಕಡೆ ಶೇಖರಿಸಿ ಒಣಗಲು ಬಿಡುವರು. ನೀರಿನ ಅಂಶ ಆವಿಯಾಗಿ ಹೋದಂತೆ ತಿರುಳು ಗಟ್ಟಿಯಾದ ವರ್ಣಪಾಕದಂತೆ ನಿಲ್ಲುತ್ತದೆ. ಈ ರೀತಿಯ ಪಾಕದ ಸ್ಥಿತಿಗೆ ರೋಲ್ ಅಥವಾ ಫ್ಲೇಅನಾಟೋ ಎಂದು ಕರೆಯುತ್ತಾರೆ. ಈ ಪಾಕವನ್ನು ಮತ್ತಷ್ಟು ಒಣಗಿಸಿ, ಶೈತ್ಯಾಂಶವನ್ನು ಪೂರ್ಣವಾಗಿ ತೆಗೆದುಹಾಕಿ ಅನಾಟೋ ಬಿಲ್ಲೆಗಳನ್ನು ತಯಾರಿಸುತ್ತಾರೆ. ಹೀಗೆ ಒಣಗಿಸಿದ ವರ್ಣಪಾಕವನ್ನು ದೇಹದ ಮೇಲೆ ಬಣ್ಣ ಹಾಕುವುದಕ್ಕೂ ಬೆಣ್ಣೆಗೆ ಬಣ್ಣ ಹಾಕುವುದಕ್ಕೂ ಕ್ಯಾಲಿಕೋ ಪ್ರಿಂಟಿಂಗ್‌ನಲ್ಲಿ ಬಟ್ಟೆಗೆ ಬಣ್ಣ ಹಾಕುವುದಕ್ಕೂ ಬಳಸುತ್ತಾರೆ. (ಎಂ)

**ಅನಾಥಾಲಯಗಳು** : ತಂದೆ ತಾಯಿಗಳಿಲ್ಲದ, ನಿರಾಶ್ರಿತ ಹಾಗೂ ಅಲಕ್ಷಿತ ಮಕ್ಕಳಿಗೆ ಆಶ್ರಯ ನೀಡುವ ಸಂಸ್ಥೆಗಳು (ಆರ್ಫನೇಜಸ್). ಅನಾಥಸಂರಕ್ಷಣೆ ಅತ್ಯಂತ ಪ್ರಾಚೀನಕಾಲದಿಂದಲೂ ನಡೆದು ಬಂದಿರುವ ಒಂದು ಸಾಮಾಜಿಕ ವ್ಯವಸ್ಥೆ. ವಿಧವೆಯರಿಗೂ ತಬ್ಬಲಿಗಳಿಗೂ ಹಿಂಸೆ ಕೊಡಬಾರದು; ಅವರು ತಿಂದು ತೃಪ್ತರಾದರೆ ಭಗವಂತ ಪ್ರಸನ್ನನಾಗುವನು ಎಂಬ ಮಾತು ಅತ್ಯಂತ ಪ್ರಾಚೀನವಾದ ಹೀಬ್ರೂ ಮತಗ್ರಂಥಗಳಲ್ಲಿದೆ. ಬೈಬಲ್ಲಿನ ಹೊಸ ಒಡಂಬಡಿಕೆಯಲ್ಲಿ ವಿಧವೆಯರ ಮತ್ತು ತಬ್ಬಲಿಗಳ ದುಃಖದಲ್ಲಿ ನೆರವಾಗಬೇಕೆಂಬ ಉಪದೇಶವಿದೆ. ಆದ್ದರಿಂದ ಮೊಟ್ಟಮೊದಲಿನ ಚರ್ಚುಗಳು ಅನಾಥರಕ್ಷಣೆ ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಿದುವು. ಕಾನ್‌ಸ್ಟೆಂಟೈನ್ ಕ್ರೈಸ್ತಧರ್ಮವನ್ನು ಸ್ವೀಕರಿಸಿದ ಮೇಲೆ ತಾನು ಅನಾಥರಕ್ಷಕನೆಂದು ಹೇಳಿಕೊಂಡಿದ್ದಾನೆ. 17ನೆಯ ಶತಮಾನಕ್ಕೂ ಹಿಂದೆ ಜರ್ಮನಿಯಲ್ಲಿ ಅನೇಕ ಅನಾಥ ಸಂರಕ್ಷಣಾಲಯಗಳು ಸ್ಥಾಪಿತವಾದುವು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಅಂತರ್ಯುದ್ಧವಾದ ಮೇಲೆ ಸೈನಿಕರ ನಿರ್ಗತಿಕ ಮಕ್ಕಳಿಗಾಗಿ ಅನಾಥಾಲಯಗಳು ಪ್ರಾರಂಭವಾದುವು. ಭಾರತದಲ್ಲಿ ರಾಜಮಹಾರಾಜರೂ, ಚಕ್ರವರ್ತಿಗಳೂ, ಧಾರ್ಮಿಕಗುರುಗಳೂ, ಮಠಗಳೂ ಅನಾಥರ ಬಗ್ಗೆ ಅನುಕಂಪೆಯ ಮನೋಭಾವವನ್ನು ತಳೆದಿದ್ದು ವಿವಿಧ ರೀತಿಯಲ್ಲಿ ಅವರ ರಕ್ಷಣೆಯ ಹೊಣೆಯನ್ನು ಅನಾದಿಕಾಲದಿಂದಲೂ ನಿರ್ವಹಿಸುತ್ತ ಬಂದಿರುವ ವಿಷಯ ಸ್ಪಷ್ಟವಾಗಿದೆ.

**ಅನಾಥಾಲಯಗಳಲ್ಲಿ ಎರಡು ವಿಧ** : 1. ಒಕ್ಕೂಟಪದ್ಧತಿ. 2. ಗುಡಿಸಲಪದ್ಧತಿ.

ಒಕ್ಕೂಟಪದ್ಧತಿಯಲ್ಲಿ ಅಡಿಗೆಮನೆ, ಊಟದಮನೆ, ಶಯನಗೃಹ, ಕ್ರೀಡಾ ಸದನ ಮತ್ತು ಶಾಲಾಕೊಠಡಿಗಳು–ಇವೆಲ್ಲ ಒಂದು ದೊಡ್ಡ ಮನೆಯಲ್ಲಿದ್ದು ಮಕ್ಕಳೆಲ್ಲರೂ ಅಲ್ಲಿಯೇ ವಾಸಿಸುತ್ತಾರೆ. ಗುಡಿಸಲ ಪದ್ಧತಿಯಲ್ಲಿ ಮಕ್ಕಳನ್ನು 15–20ರಂತೆ ವಿಂಗಡಿಸಿ ಬೇರೆ ಬೇರೆ ಗುಡಿಸಲುಗಳಲ್ಲಿ ವಾಸಿಸುವಂತೆ ಏರ್ಪಾಡು ಮಾಡಲಾಗುತ್ತದೆ. ಈ ಪದ್ಧತಿಯಲ್ಲಿ ಮನೆಯ ವಾತಾವರಣವಿದ್ದು ಪಾಠಶಾಲೆ, ಶಾಲೆಯ ಕೊಠಡಿ, ಊಟದಮನೆ, ಇವು ಮಾತ್ರ ಕೇಂದ್ರಗೃಹದಲ್ಲಿರುತ್ತವೆ. ಈಗ ಅನಾಥಾಲಯಗಳನ್ನು ಸಾರ್ವಜನಿಕ, ಸಾಮಾನ್ಯ ಮತ್ತು ಧಾರ್ಮಿಕ ಅನಾಥಾಲಯಗಳೆಂದು ವಿಂಗಡಿಸಬಹುದು. ಧಾರ್ಮಿಕ ಅನಾಥಾಲಯಗಳು ಧರ್ಮೋಪದೇಶದ ಅಡಿಪಾಯದ ಮೇಲೆ ನಿಂತಿವೆ. ಇವುಗಳ ಉದ್ದೇಶ ಮತೀಯ ಭಾವನಾ ಪ್ರಚೋದನೆಯೇ ಆಗಿದೆ.

ಈಚಿನವರೆಗೂ ಇವು ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಅತ್ಯಲ್ಪ ಆಸಕ್ತಿಯನ್ನು ವಹಿಸಿದ್ದುವು. ಸಂಕುಚಿತ ಮತಪಂಥಗಳ ಹಿನ್ನೆಲೆಯನ್ನು ಪಡೆದ ಅನಾಥಾಲಯಗಳು ದಿಕ್ಕಿಲ್ಲದ ಮಕ್ಕಳನ್ನು 12–14 ವರ್ಷಗಳವರೆಗೆ ತಮ್ಮಲ್ಲಿಟ್ಟುಕೊಂಡು ಅನಂತರ ಅವರ ಸಂಬಂಧಿಗಳ ಮನೆಗೂ ಸಂಬಳವಿಲ್ಲದೆ ಆಳುಗಳಾಗಿ ದುಡಿಯಲು ಇತರರ ಮನೆಗಳಿಗೂ ಕಳುಹಿಸುತ್ತಿದ್ದುವು. ಅನೇಕ ಅನಾಥ ಸಂರಕ್ಷಣಾ ಸಂಸ್ಥೆಗಳು ತಮ್ಮದೇ ಆದ ವಿದ್ಯಾಮಂದಿರಗಳನ್ನು ಹೊಂದಿರುವುದುಂಟು. ಅಲ್ಲಿ ಮಕ್ಕಳು ಪ್ರಾಥಮಿಕ ಮಟ್ಟವನ್ನು ಮುಟ್ಟುವುದು ಅಪರೂಪ. ಸಂಬಂಧಿಗಳ ಮನೆಯನ್ನೋ ಸಂಸಾರಿಗಳ ಮನೆಯನ್ನೋ ಸೇರಿದ ಮೇಲೆ ಶಾಲೆಯ ವಿದ್ಯಾಭ್ಯಾಸ ಪೂರ್ತಿ ನಿಲ್ಲುತ್ತದೆ. ಈ ಮಕ್ಕಳು ಜೀವನದ ಆಸೆ ಅಭಿವೃದ್ಧಿಗಳನ್ನು ಪ್ರಚೋದಿಸುವ ಶಾಲೆಯ ಅನುಭವದಿಂದ ವಂಚಿತರಾಗುತ್ತಾರೆ. ಈಚೆಗೆ ಈ ಬಗ್ಗೆ ಪ್ರಜ್ಞಾಪೂರ್ವಕದೃಷ್ಟಿ ಬೆಳೆದು ಸ್ವಪ್ರಯೋಜನಕ್ಕಾಗಿ ಬಾಲ್ಯಜೀವನವನ್ನು ಬಲಿಕೊಡುವುದು ಸಾಮಾಜಿಕ ನಷ್ಟವೆಂದು ಪರಿಗಣಿಸಲಾಗಿದೆ. ಪ್ರಗತಿಪರ ವಿದ್ಯಾಮಂದಿರಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಅಳವಡಿಸಲಾಗಿದೆ. ಬುದ್ಧಿವಂತ ಮಕ್ಕಳಿಗೆ ಉನ್ನತಮಟ್ಟದ ವಿದ್ಯಾಭ್ಯಾಸ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಕಸಬು ಕಲೆಗಳಲ್ಲಿ ವಿಶೇಷ ತರಬೇತಿಯನ್ನು ಪಡೆದ ಉಪಾಧ್ಯಾಯರನ್ನು ನೇಮಿಸಿ ಗಂಡುಮಕ್ಕಳಿಗೆ ಮರದ ಕೆಲಸ, ತೋಟದ ಕೆಲಸ, ಕೋಳಿಸಾಕಣೆ ಮೊದಲಾದವುಗಳಲ್ಲಿಯೂ, ಹೆಣ್ಣುಮಕ್ಕಳಿಗೆ ಅಡಿಗೆ ಮಾಡುವುದು, ಉಡುಪುಗಳನ್ನು ಹೊಲಿದು ಸಿದ್ಧಪಡಿಸುವುದು ಮುಂತಾದ ವಿದ್ಯೆಗಳಲ್ಲಿ ತರಬೇತಿಯನ್ನು ಕೊಡಲಾಗುತ್ತಿದೆ. ಹೀಗೆ ಗೃಹಜೀವನಕ್ಕೂ ತರಗತಿಯ ಜೀವನಕ್ಕೂ ಸಮನ್ವಯ ಏರ್ಪಟ್ಟು ಗೃಹಜೀವನದ ಬೆಳವಣಿಗೆಗೆ ಸಹಾಯ ಒದಗಿದೆ. ಈ ಮಂದಿರಗಳು ಮಕ್ಕಳ ಅಗತ್ಯಗಳೊಂದಿಗೆ ಹೊಂದಿಕೊಳ್ಳುವುದರಿಂದ ಸಾರ್ವಜನಿಕ ಶಾಲೆಗಳು ವಿಫಲವಾದರೂ ಇವು ಸಫಲವಾಗಬಲ್ಲವು.

ಆದರೆ ದೇಶದ ಅನೇಕ ಸಂಸ್ಥೆಗಳು ಈ ವಿದ್ಯಾಸೌಲಭ್ಯವನ್ನು ರೂಢಿಸುವ ಮಟ್ಟಕ್ಕೆ ಏರಿಲ್ಲ. ಅನೇಕ ಅನಾಥಾಲಯಗಳು ಪರಿವರ್ತನೆಯ ಮಟ್ಟದಲ್ಲಿವೆ. ಬೋಧನ ಕ್ರಮದಲ್ಲಿಯೂ ಬದಲಾವಣೆಗಳಾಗುತ್ತಿವೆ. ಈ ಮಂದಿರಗಳು ಶಾಲೆಯ ಬದಲು ಮನೆಗಳೆಂಬ ಭಾವನೆಯಿದ್ದುದರಿಂದ ಶಿಕ್ಷಣಸೇವೆಯಲ್ಲಿ ಹಿಂದುಳಿದಿದ್ದವು. ಆದರೆ ಈಗ ಬಾಲ್ಯವನ್ನು ವಿದ್ಯೆಯ ದೃಷ್ಟಿಯಿಂದ ಅರ್ಥಮಾಡಿಕೊಳ್ಳುತ್ತಿರುವುದರಿಂದ ಅನಾಥಾಲಯಗಳ ಜೀವನವೂ ಬೌದ್ಧಿಕ, ಕೈಗಾರಿಕಾ ಮತ್ತು ಸಾಮಾಜಿಕ ತರಬೇತಿಯಲ್ಲಿ ಉನ್ನತಮಟ್ಟದ ಶಿಕ್ಷಣವಿತ್ತು ಅನಾಥರ ಮುಂದಿನ ಜೀವನಪಥ ಸುಗಮವಾಗಲು ನೆರವು ನೀಡುತ್ತಿವೆ. (ಕೆ.ಬಿ.)

**ಅನಾದಿವೀರಶೈವಾಚಾರಸಂಗ್ರಹ** : ಇದೊಂದು ವೀರಶೈವ ಧರ್ಮಗ್ರಂಥ. ಸುಮಾರು 1600ರಲ್ಲಿ ತುಮಕೂರು ಜಿಲ್ಲೆಯ ಗೂಳೂರಿನಲ್ಲಿದ್ದ, ಕನ್ನಡ ಶೂನ್ಯ ಸಂಪಾದನೆಯ ಧರ್ಮತತ್ತ್ವ ಗ್ರಂಥಕರ್ತೃ ಸಿದ್ಧವೀರಣಾಚಾರ್ಯರು ಈ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾರೆಂದು ಕರ್ನಾಟಕ ಕವಿಚರಿತೆಯಿಂದ ತಿಳಿಯುತ್ತದೆ. (ಬಿ.ಎಸ್.)

**ಅನಾನಸ್ (ಪೈನ್‌ಆ್ಯಪಲ್)** : ರುಚಿಕರವಾದ ಉಷ್ಣವಲಯದ ಹಣ್ಣು ಹಣ್ಣು ರಸಭರಿತವಾಗಿದ್ದು ಆಹ್ಲಾದಕರ ಸುವಾಸನೆಯನ್ನು ಒಳಗೊಂಡಿದೆ. ಈ ಹಣ್ಣಿನಲ್ಲಿ ಎ, ಬಿ, ಸಿ ಜೀವಸತ್ವಗಳು ಮತ್ತು ಕೆಲವು ಖನಿಜಗಳು ಹೇರಳವಾಗಿವೆ.

ಮಣ್ಣು : ಅನಾನಸ್ ಎಲ್ಲ ವಿಧವಾದ ಮಣ್ಣಿನಲ್ಲಿ ಬೆಳೆಯಬಹುದಾದರೂ ಮರಳು ಮಿಶ್ರಿತ ಹಗುರ ಮಣ್ಣುಗಳು ಈ ಬೆಳೆಗೆ ಸೂಕ್ತ. ಜೇಡಿಮಣ್ಣು ಉತ್ತಮವಲ್ಲ. ಉತ್ತಮ ನೀರಾವರಿ ಸೌಲಭ್ಯ ಮತ್ತು ಚೆನ್ನಾಗಿ ನೀರು ಬಸಿದು ಹೋಗುವಂತಹ ಮಣ್ಣು ಬೇಕು. ಭೂಮಿಯೊಳಗಿನ ನೀರಿನ ಮಟ್ಟ ಮೇಲಿರುವಂತಹ ತಗ್ಗು ಪ್ರದೇಶಗಳು ಈ ಬೆಳೆಗೆ ಯೋಗ್ಯವಿಲ್ಲ.

ಹವಾಗುಣ : ಬೆಚ್ಚಗಿರುವ ಹಾಗೂ ತೇವಾಂಶವಿರುವ ಎರಡೂ ಹವಾಮಾನಗಳಲ್ಲಿ ಈ ಬೆಳೆ ಚೆನ್ನಾಗಿ ಬರುತ್ತದೆ. ಈ ಬೆಳೆಯನ್ನು 600–4000 ಮಿಮೀ ಮಳೆ ಬರುವ ಪ್ರದೇಶಗಳಲ್ಲಿ ಬೆಳೆಯಬಹುದು. ಜೂನ್ ತಿಂಗಳು ಅನಾನಸ್ ನಾಟಿಗೆ ಸೂಕ್ತ. ಗುಡ್ಡಗಾಡು ಪ್ರದೇಶಗಳಲ್ಲಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳು ಸೂಕ್ತ.

ತಳಿಗಳು : 1. ಕ್ಯೂ : ಈ ಹಣ್ಣುಗಳನ್ನು ಸಂಸ್ಕರಿಸಿ ಡಬ್ಬಗಳಲ್ಲಿ ಶೇಖರಿಸಿಡಲು ಯೋಗ್ಯವಾಗಿದೆ. ಹಣ್ಣಿನ ಗಾತ್ರ ದೊಡ್ಡದಾಗಿದ್ದು (1.5 ರಿಂದ 3 ಕಿ.ಗ್ರಾಂ) ಎಲೆಗಳಲ್ಲಿ ಮುಳ್ಳುಗಳಿರುವುದಿಲ್ಲ.

2. ಕ್ವೀನ್ : ಈ ತಳಿಯ ಹಣ್ಣು ತಾಜಾ ಸೇವನೆಗೆ ಸೂಕ್ತವಾಗಿದ್ದು, ಹಣ್ಣಿನ ಗಾತ್ರ ಚಿಕ್ಕದಾಗಿದ್ದು, ಬಹಳ ರುಚಿಯಾಗಿರುತ್ತದೆ. ಎಲೆಗಳಲ್ಲಿ ಮುಳ್ಳುಗಳಿದ್ದು, ಹಣ್ಣಿನ ತೂಕ 0.5 ರಿಂದ 1 ಕೆ.ಜಿ. ಇರುತ್ತದೆ.

**ಬೇಸಾಯ ಸಾಮಗ್ರಿಗಳು**

1. ನಾಟಿ ಸಾಮಗ್ರಿಗಳು

| | | |
|---|---|---|
| (ಕಂದುಗಳು ಅಥವಾ ಸ್ಲಿಪ್‌ಗಳು | | ಪ್ರತಿ ಹೆಕ್ಟೇರಿಗೆ |
| ದಕ್ಷಿಣ ಒಣ ಪ್ರದೇಶ ಮತ್ತು ಗುಡ್ಡಗಾಡು | 45,000 | |
| ಕರಾವಳಿ ಪ್ರದೇಶ | 43,600 | |
| 2. ಕೊಟ್ಟಿಗೆ ಗೊಬ್ಬರ : | | 30 ಟನ್‌ಗಳು |
| 3. ರಾಸಾಯನಿಕ ಗೊಬ್ಬರಗಳು | | ಪ್ರತಿ ಹೆಕ್ಟೇರಿಗೆ (ಕಿ.ಗ್ರಾಂ.ಗಳಲ್ಲಿ) |

| | ದಕ್ಷಿಣ ಒಣ ಹಾಗೂ ಗುಡ್ಡಗಾಡು ಪ್ರದೇಶ | ಕರಾವಳಿ ಪ್ರದೇಶ |
|---|---|---|
| ಸಾರಜನಕ | 350 | 525 |
| ರಂಜಕ | 130 | 130 |
| ಪೊಟ್ಯಾಷ್ | 440 | 175 |

ನಾಟಿ ಸಾಮಗ್ರಿಗಳು : ಕಂದುಗಳು, ಸ್ಲಿಪ್ (ಬಗಲು ಮರಿ) ಮತ್ತು ಕ್ರೌನ್ (ತುದಿ ಮರಿ) ಇವು ನಾಟಿಗೆ ಬಳಸುವ ಪ್ರಮುಖ ಸಸ್ಯ ಭಾಗಗಳು. ಕಂದುಗಳು ಗಿಡದ ಪಕ್ಕದಲ್ಲಿ ಬುಡದಿಂದ ಬರುವ ಕವಲುಗಳು. ಸ್ಲಿಪ್ಸ್‌ಗಳು ಹಣ್ಣಿನ ಕೆಳಭಾಗದಲ್ಲಿ ಕವಲುಗಳಂತೆ ಬರುತ್ತವೆ. ಕ್ರೌನ್ಗಳು ಹಣ್ಣಿನ ಮೇಲ್ಭಾಗದಲ್ಲಿ ಇರುತ್ತವೆ. ಕಂದು ಮತ್ತು ಸ್ಲಿಪ್ಸ್‌ಗಳನ್ನು ನಾಟಿಗೆ ಉಪಯೋಗಿಸುವುದರಿಂದ ಕ್ರೌನ್‌ಗಳಿಗಿಂತ ಬೇಗ ಇಳುವರಿ ಬರುತ್ತದಲ್ಲದೆ ಹಣ್ಣಿನ ಗಾತ್ರ ಕೂಡ ದೊಡ್ಡದಿರುತ್ತದೆ. ದೊಡ್ಡ ಗಾತ್ರದ ಕಂದುಗಳು ಮತ್ತು ಸ್ಲಿಪ್ಸ್‌ಗಳು ನಾಟಿಗೆ ಮುಂಚೆ ಕಂದು ಮತ್ತು ಸ್ಲಿಪ್ಸ್‌ಗಳನ್ನು ಕೆಳಮುಖವಾಗಿ ನೆರಳಿನಲ್ಲಿ ಜೋಡಿಸಿಡಬೇಕೆ ವಿನಃ ಒತ್ತಾಗಿ ಗುಂಪು ಮಾಡಿ ಇಡಬಾರದು. ನಾಟಿಗೆ ಮುಂಚೆ ಕೆಳಗಿನ ಒಂದೆರಡು ಎಲೆಗಳನ್ನು ತೆಗೆದು ಹಾಕಿ ಕೆಳಭಾಗವನ್ನು ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳಿಂದ ಉಪಚರಿಸಿ ಹಿಟ್ಟು ತಿಗಣೆ ಮತ್ತು ಕಾಂಡ ಕೊಳೆ ರೋಗವನ್ನು ತಡೆಗಟ್ಟಬಹುದು.

**ಬೇಸಾಯ ಕ್ರಮಗಳು**


ಅನಾನಸ್‌ಹಣ್ಣು

ನಾಟಿ ಅಂತರ : ಎರಡು ಸಾಲು ನಾಟಿ ವಿಧಾನದಲ್ಲಿ 90x60x30 ಸೆಂಮೀಗಳ ಅಂತರದಲ್ಲಿ ಸಸಿಗಳನ್ನು ನಾಟಿ ಮಾಡಬಹುದು. ಅನಾನಸ್ ನಾಟಿ ಮಾಡಲು ಬೆಳೆ ಪ್ರದೇಶವನ್ನು ಹರಿ ಮತ್ತು ಬೋದುಗಳನ್ನು ಒಂದಾದ ನಂತರ ಒಂದರಂತೆ ತಯಾರಿಸಬೇಕು. ಬೆಟ್ಟ ಪ್ರದೇಶಗಳಲ್ಲಿ ಇಳುಕಲಿಗೆ ಅಡ್ಡವಾಗಿ ಹರಿಗಳನ್ನು ತೆಗೆಯಬೇಕು. ಹರಿಗಳ ಅಳತೆ 90 ಸೆಂಮೀ ಅಗಲ 22–30 ಸೆಂಮೀ ಆಳ ಮತ್ತು ಅನುಕೂಲಕ್ಕೆ ತಕ್ಕ ಉದ್ದವಿರುವಂತೆ ತೆಗೆಯಬೇಕು. ಅನಂತರ ಹರಿ ಮತ್ತು ಬೋದುಗಳನ್ನು ಮಾಡಿಕೊಳ್ಳಬೇಕು. ಹರಿಗಳನಲ್ಲಿ ಮೇಲ್ಮಣ್ಣು ಮತ್ತು ಕೊಟ್ಟಿಗೆ ಗೊಬ್ಬರ ಹಾಕಿ ಚೆನ್ನಾಗಿ ಬೆರೆಸಬೇಕು. ಹರಿಗಳು ಒಂದಕ್ಕೊಂದು 60 ಸೆಂಮೀ ಅಂತರದಲ್ಲಿಬೇಕು. ನಂತರ ಹರಿಯಲ್ಲಿ ಕಂದುಗಳು ಅಥವಾ ಬಗಲುದಾರಿ ಎರಡು ಸಾಲುಗಳಲ್ಲಿ ಸಾಲುಗಳ ಮಧ್ಯೆ 60 ಸೆಂಮೀ ಮತ್ತು ಸಾಲುಗಳ ಒಳಗೆ 30 ಸೆಂಮೀ ಅಂತರ ಇರುವಂತೆ ಕರ್ಣಾಕೃತಿಯಲ್ಲಿ ನಾಟಿ ಮಾಡಬೇಕು. ನಂತರ ಮಣ್ಣನ್ನು ಸಸಿಗಳ ಸುತ್ತಲೂ ಚೆನ್ನಾಗಿ ಒತ್ತಬೇಕು. ನಾಟಿ ಮಾಡುವಾಗ ಮಣ್ಣು ಸಸಿಯ ಸುಳಿಯಲ್ಲಿ ಬೀಳದಂತೆ ಎಚ್ಚರವಹಿಸಿ ನಾಟಿ ಮಾಡಿದ ಅನಂತರ ನೀರು ಒದಗಿಸಬೇಕು.

ಅಂತರ ಬೇಸಾಯ : ಗೊಬ್ಬರಗಳನ್ನು ಒದಗಿಸುವುದು, ಕಳೆ ತೆಗೆಯುವುದು, ಮಣ್ಣು ಏರಿಸುವುದು ಮತ್ತು ನೀರಾವರಿ ಮುಂತಾದವು ಪ್ರಮುಖ ಬೇಸಾಯ ಕ್ರಮಗಳು. ನಾಟಿ ಸಮಯದಲ್ಲಿ ಪೂರ್ತಿ ಪ್ರಮಾಣದ ರಂಜಕ ಕೊಡಬೇಕು. ಸಾರಜನಕ ಮತ್ತು ಪೊಟ್ಯಾಷ್ ಗೊಬ್ಬರಗಳನ್ನು ನಾಲ್ಕು ಸಮಕಂತುಗಳಲ್ಲಿ ನಾಟಿ ಮಾಡಿದ ಮೂರು ತಿಂಗಳ ನಂತರ ಮೂರು ತಿಂಗಳಿಗೊಮ್ಮೆ ಒದಗಿಸಬೇಕು. ಪ್ರತಿ ಸಾರಿ ಗೊಬ್ಬರ ಒದಗಿಸಿದಾಗ ಸಸಿಗಳ ಸುತ್ತಲೂ ಮಣ್ಣು ಏರಿಸಬೇಕು. ಇದರಿಂದ ಸಸಿಗಳಿಗೆ ಉತ್ತಮ ಆಸರೆ ಸಿಗುತ್ತದೆಯಲ್ಲದೆ ಬೇರುಗಳು ಚೆನ್ನಾಗಿ ಬೆಳೆಯುತ್ತವೆ.

ಹೊದಿಕೆ ಉಪಯೋಗಿಸಿ ಭೂಮಿಯಲ್ಲಿನ ನೀರು ಸಂರಕ್ಷಣೆ ಮತ್ತು ಕಳೆ ನಿಯಂತ್ರಣ ಮಾಡಬೇಕು. ಮಣ್ಣಿನ ಗುಣಧರ್ಮಕ್ಕೆ ಅನುಗುಣವಾಗಿ ಬೇಸಿಗೆಯಲ್ಲಿ ಪ್ರತಿ 15–20 ದಿನಗಳಿಗೊಮ್ಮೆ ನೀರು ಒದಗಿಸಬೇಕು.

ಸಸ್ಯ ಪ್ರಚೋದಕಗಳ ಉಪಯೋಗ : ಅನಾನಸ್‌ನಲ್ಲಿಯ ಅಸಮ ಹೂ ಬಿಡುವಿಕೆಯನ್ನು ತಡೆಗಟ್ಟಲು ನಾಟಿ ಮಾಡಿದ 13–14 ತಿಂಗಳ ಅನಂತರ ಅಥವಾ 37–38 ಎಲೆಗಳನ್ನು ಸಸಿಗಳು ಹೊಂದಿದಾಗ ಅವುಗಳಿಗೆ ಕೆಳಗಿನಂತೆ ಉಪಚರಿಸಬೇಕು.

ನ್ಯಾಫ್ತಲಿನ್ ಅಸಿಟಿಕ್ ಆಮ್ಲವನ್ನು (NAA) 10 ಪಿ.ಪಿ.ಎಂ. ಪ್ರಮಾಣದಲ್ಲಿ ಶೇಕಡ 2ರ ಯೂರಿಯ ಜೊತೆಗೆ ಅಥವಾ ಕೇವಲ 100 ಪಿ.ಪಿ.ಎಂ. (1 ಗ್ರಾಂ ಪ್ರತಿ ಲೀಟರ್‌ಗೆ) ಇಥ್ರೇಲ್ ಅಥವಾ 25 ಪಿ.ಪಿ.ಎಂ, ಇಥ್ರೇಲ್, ಶೇ. 2ರ ಯೂರಿಯಾ ಹಾಗೂ ಶೇ. 0.04ರ ಸೋಡಿಯಂ ಕಾರ್ಬೊನೇಟ್‌ಗಳ ಮಿಶ್ರಣವನ್ನು ತಯಾರಿಸಿ, ಪ್ರತಿ ಸಸಿಯ ಸುಳಿಯಲ್ಲಿ 50 ಮಿಲೀ ದ್ರಾವಣವನ್ನು ಹಾಕಿ, ಸಸಿಗಳನ್ನು ಉಪಚರಿಸಬೇಕು. ಅನಂತರ 40–45 ದಿನಗಳಲ್ಲಿ ಸಸಿಗಳು ಹೂ ಬಿಡಲು ಆರಂಭಿಸುತ್ತದೆ. ಹಣ್ಣಿನ ಗಾತ್ರ ಹೆಚ್ಚಿಸಲು 200 ಪಿ.ಪಿ.ಎಂ. ನ್ಯಾಫ್ತಲಿನ್ ಅಸಿಟಿಕ್ ಆಮ್ಲವನ್ನು ಕಾಯಿ ಕಚ್ಚಿದ 2–3 ತಿಂಗಳುಗಳ ನಂತರ ಉಪಚರಿಸಬೇಕು.

**ಸಸ್ಯ ಸಂರಕ್ಷಣೆ**

ಕೀಟಗಳು : ಹಿಟ್ಟು ತಿಗಣೆ, ಗೆದ್ದಲು.

**ರೋಗಗಳು :** ಸೊರಗು ರೋಗ, ಸುಳಿಕೊಳೆ ರೋಗ, ಕಾಂಡಕೊಳೆ ರೋಗ ಹಾಗೂ ನಂಜುರೋಗ.

ಹತೋಟಿ ವಿಧಾನ

1. ನಾಟಿ ಮಾಡುವಾಗ ಕಂದುಗಳ ತಳ ಭಾಗದಲ್ಲಿ ಕಂದು ಬಣ್ಣಕ್ಕೆ ತಿರುಗಿದ ಮತ್ತು ಒಣಗಿದ ಎಲೆಗಳನ್ನು ತೆಗೆಯಿರಿ.

2. ನಾಟಿಗೆ ಮುಂಚೆ ಕಂದುಗಳನ್ನು 1 ಮಿಲೀ ಮಿಥೈಲ್ ಪ್ಯಾರಾಥಿಯಾನ್ ಅಥವಾ 1.7 ಮಿಲೀ ಡೈಮಿಥೋಯೇಟ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿದ ದ್ರಾವಣದಲ್ಲಿ ಅದ್ದಿ ತೆಗೆಯಿರಿ.

3. ಹಿಟ್ಟು ತಿಗಣೆಯನ್ನು ನಿಯಂತ್ರಿಸಲು ಪ್ರತಿ ಹೆಕ್ಟೇರ್ ಭೂಮಿಗೆ 17.5 ಕಿ.ಗ್ರಾಂ ಫೋರೇಟ್ ಹರಳು ಹಾಕಬೇಕು.

4. ಹಿಟ್ಟು ತಿಗಣೆ ಬಾಧೆ ಮತ್ತೆ ಕಾಣಿಸಿದಾಗ 100 ದಿನಗಳ ಅಂತರವಿಟ್ಟು ಕ್ರಮಾಂಕ 3ರಲ್ಲಿ ಸೂಚಿಸಲಾದ ಕೀಟನಾಶಕವನ್ನೇ ಬಳಸಬೇಕು.

5. ಸುಳಿ ಮತ್ತು ಕಾಂಡಕೊಳೆ ರೋಗದ ಹತೋಟಿಗಾಗಿ 2 ಗ್ರಾಂ ಜೈನಬ್ ಅಥವಾ ಮ್ಯಾಂಕೋಜೆಬ್ ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸಿ.

6. ರೋಗಮುಕ್ತ ಪ್ರದೇಶಗಳಿಂದ ಕಂದುಗಳನ್ನು ಆರಿಸುವುದರಿಂದ ಸೊರಗು ಮತ್ತು ನಂಜು ರೋಗಗಳನ್ನು ನಿಯಂತ್ರಿಸಬಹುದು.

7. ಗೆದ್ದಲಿನ ಬಾಧೆ ಕಂಡಲ್ಲಿ 5 ಮಿಲೀ ಕ್ಲೋರ್‌ಪೈರಿಫಾಸ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಬಾಧೆಗೊಳಗಾದ ಗಿಡದ ಸುತ್ತಲು ಮಣ್ಣಿಗೆ ಸುರಿಯಿರಿ.

ಕಳೆ ನಿಯಂತ್ರಣ : ಗರಿಕೆ ಮತ್ತು ಅನಾನಸ್ ಬೆಳೆಯಲ್ಲಿ ಸಾಮನ್ಯವಾಗಿ ಕಂಡುಬರುವ ಕಳೆಗಳು. ಪ್ರತಿ ತಿಂಗಳು ಕಳೆ ತೆಗೆಯಬೇಕು. ಇತ್ತೀಚೆಗೆ ರಾಸಾಯನಿಕ ಕಳೆನಾಶಕಗಳ ಬಳಕೆ ಜನಪ್ರಿಯವಾಗುತ್ತಿದೆ. ಪ್ರತಿ ಹೆಕ್ಟೇರಿಗೆ 1 ಕಿ.ಗ್ರಾಂ ಡೈಯುರಾನ್ 900 ಲೀಟರ್ ನೀರಿನಲ್ಲಿ ಕರಗಿಸಿ ನಾಟಿ ಮಾಡುವ ಮುಂಚೆ ಸಿಂಪರಣೆ ಮಾಡಿರಿ. ನಂತರ 1 ಕಿ.ಗ್ರಾಂ. ಗ್ಲೈಫೋಸೇಟ್‌ಅನ್ನು ನಾಟಿ ಮಾಡಿದ 45 ದಿನಗಳಲ್ಲಿ ಸಿಂಪರಿಸಿ. ಈ ಸಿಂಪರಿಸಿ, ಈ ಸಿಂಪರಣೆ ಎಲ್ಲಾ ತರದ ಕಳೆಗಳನ್ನು 9–15 ತಿಂಗಳುಗಳವರೆಗೂ ನಿಯಂತ್ರಿಸುತ್ತದೆ.

ಇಳುವರಿ : ನಾಟಿ ಮಾಡಿದ 12 ತಿಂಗಳ ಅನಂತರ ಅನಾನಸ್ ಬೆಳೆ ಹೂ ಬಿಡುತ್ತದೆ. ಅನಂತರ ನಾಲ್ಕೂವರೆಯಿಂದ ಐದೂವರೆ ತಿಂಗಳುಗಳಲ್ಲಿ ಹಣ್ಣು ಕೊಯ್ಲಿಗೆ ಸಿದ್ಧವಾಗುತ್ತದೆ. ಸಂಸ್ಕರಿಸಿ ಡಬ್ಬಿಗಳಲ್ಲಿ ಶೇಖರಿಸಿಡಲು ಹಣ್ಣುಗಳ ಬಣ್ಣ ಹಳದಿ ವರ್ಣಕ್ಕೆ ತಿರುಗಿದಾಗ ಕೊಯ್ಲು ಮಾಡಬೇಕು. ನೇರ ಸೇವನೆಗೆ ಹಣ್ಣು ಪೂರ್ಣ ಪಕ್ವವಾಗುವವರೆಗೆ ಗಿಡದಲ್ಲಿ ಬಿಡುವುದು ಒಳ್ಳೆಯದು. ಹಣ್ಣುಗಳನ್ನು ಚಾಕುವಿನಿಂದ ತಳಭಾಗದಲ್ಲಿ 2–4ಸೆಂಮೀ ಉದ್ದಕಾಂಡದೊಂದಿಗೆ ಕತ್ತರಿಸಿ ಕೊಯ್ಲು ಮಾಡಬೇಕು. ಕೊಯ್ಲಿನ ಅನಂತರ ಹಣ್ಣುಗಳನ್ನು ತುದಿ ತೆಗೆಯದೆ 3–4 ವಾರ ಕೆಡದಂತಿಡಬಹುದು.

**ಅನಾಫಿಲೀಸ್ ಸೊಳ್ಳೆ :** ಪ್ರಪಂಚದ ಎಲ್ಲ ಭಾಗಗಳಲ್ಲೂ ಕಾಣಬರುವ ಸೊಳ್ಳೆ. ಸೊಳ್ಳೆಗಳಲ್ಲಿ ಅನಾಫಿಲಿನಿ ಮತ್ತು ಕ್ಯುಲಿಸಿನಿ ಎಂಬ ಎರಡು ಪ್ರಮುಖ ಪಂಗಡಗಳಿವೆ. ಅನಾಫಿಲೀಸ್ ಸೊಳ್ಳೆ ಅನಾಫಿಲಿನಿ ಪಂಗಡಕ್ಕೆ ಸೇರಿದೆ. ಕ್ಯುಲಿಸಿನಿ ಪಂಗಡದಲ್ಲಿ ಕ್ಯುಲೆಕ್ಸ್, ಏಡಿಸ್ ಮತ್ತು ಮಾನಸೋನಿಯ ಜಾತಿಗಳನ್ನು ಕಾಣಬಹುದು. ನಿಧಾನವಾಗಿ ಹರಿಯುವ ಸ್ವಚ್ಛವಾದ ನೀರಿನಲ್ಲಿ ಮೊಟ್ಟೆಗಳನ್ನಿಡುತ್ತವೆ. ಅವು 10–12 ದಿನಗಳಲ್ಲಿ ಬೆಳೆದು ದೊಡ್ಡದಾಗಿ ಹಳದಿ ಜ್ವರ, ಮಲೇರಿಯ ಜ್ವರ ಹರಡುವಿಕೆಗೆ ಸಹಕಾರಿಯಾಗುತ್ತವೆ. ಗಂಡು ಸಸ್ಯಾಹಾರಿ. ಹೆಣ್ಣುಸೊಳ್ಳೆಗಳು ಮಾತ್ರ ಮನುಷ್ಯನ ಅಥವಾ ಪ್ರಾಣಿಗಳ ರಕ್ತವನ್ನು ಹೀರಬಲ್ಲವು. ರೋಗ ಹರಡುವಿಕೆಯಲ್ಲಿ ಹೆಣ್ಣಿನ ಪಾತ್ರವೇ ಹೆಚ್ಚು.

ಪ್ರಪಂಚದಲ್ಲಿ ಸು. 400 ಜಾತಿಯ ಅನಾಫಿಲೀಸ್ ಸೊಳ್ಳೆಗಳಿವೆ. ಅವುಗಳಲ್ಲಿ 56 ಜಾತಿಗಳು ಭಾರತದಲ್ಲಿವೆ. ಈ ಪೈಕಿ 45 ಜಾತಿಗಳನ್ನು ಕರ್ನಾಟಕ ರಾಜ್ಯದಲ್ಲಿ ಕಾಣಬಹುದು. ಇವುಗಳಲ್ಲಿ 61 ಪ್ರಭೇದಗಳು ಮಾತ್ರ ಪ್ರಪಂಚದಲ್ಲಿ ಮಲೇರಿಯ ರೋಗ ಹರಡಲು ಕಾರಣವಾಗಿವೆ.

ಅ. ಫಿಲಿಫೆನಿನ್ಸಿಸ್ ಸಮತಟ್ಟಾದ ಮೈದಾನ ಪ್ರದೇಶಗಳು ಅ. ಕುಲಿಸಿಫ್ಯಾಲಿಸ್ ಅ. ಫ್ಲೊವಿಟಿಲಿಸ್ ಗುಡ್ಡಗಾಡು ಮತ್ತು ಮಲೆನಾಡು ಪ್ರದೇಶ ಅ. ಮಿನಿಮಸ್ ಅ. ಸುಂಡೈಕಸ್ ಕರಾವಳಿ ಅ. ಸ್ಟಿಫೆನ್ಸಿ

ಇವು ಕರ್ನಾಟಕ ರಾಜ್ಯದಲ್ಲಿ ಮಲೇರಿಯ ರೋಗವನ್ನು ಹರಡುತ್ತವೆ.

ಈ ಸೊಳ್ಳೆಗಳು ಒಂದು ರೀತಿಯ ಕಪ್ಪು ಮತ್ತು ಬಿಳಿ ಚುಕ್ಕೆಗಳಿಂದ ಕೂಡಿವೆ. ರೆಕ್ಕೆಗಳ ಮಧ್ಯಭಾಗದಲ್ಲಿ ಬೆನ್ನುಭಾಗ ಅರ್ಧ ಚಂದ್ರಾಕಾರವಾಗಿ ಬಾಗಿದೆ. ರಕ್ತವನ್ನು ಹೀರುವ ಹೀರುನಳಿಕೆಯ (ಪ್ರೊಬೊಸಿಸ್) ಪಕ್ಕದಲ್ಲಿರುವ ಪ್ಯಾಲ್ಪ್‌ಗಳು ಹೆಣ್ಣಿನಲ್ಲಿ ಉದ್ದನಾಳದಂತೆಯೂ ಗಂಡಿನಲ್ಲಿ ಅದರ ತುದಿ ಗದೆಯ ರೂಪದಲ್ಲೂ ಇರುತ್ತದೆ.

(ಟಿ.ಎಸ್.ಆರ್.)

ಅನಾಫಿಲಿಸ್ ಪ್ಲೂವೆಟಿಲಿಸ್‌ಗಳಿಗೆ ರೋಗ ಹರಡುವ ಸಾಮರ್ಥ್ಯ ಹೆಚ್ಚಿದ್ದು ಅ. ಕುಲಿಸಿಫ್ಯಾಲಿಸ್‌ಗಳಿಗೆ ಅಂತಹ ಸಾಮರ್ಥ್ಯ ಕಡಿಮೆ ಇರುತ್ತದೆ. ಸೊಳ್ಳೆಗಳು ಮಾನವರ ಬೆವರಿನ ವಾಸನೆ, ಕಾರ್ಬನ್ ಡೈ ಆಕ್ಸೈಡ್‌ಗಳ ಪ್ರಮಾಣಗಳ ಸುಳಿವಿನಿಂದ ಕತ್ತಲಲ್ಲಿ ತಮ್ಮ ಕಾರ್ಯ ನಡೆಸಬಲ್ಲವು.

ಅನಾಫಿಲಿಸ್ ಮಲೇರಿಯ ರೋಗಿಯನ್ನು ಕಚ್ಚಿದಾಗ ನಿರ್ಲಿಂಗ ಮತ್ತು ಲೈಂಗಿಕ ಸ್ವರೂಪದ ಮಲೇರಿಯ ಸೂಕ್ಷ್ಮಾಣುಗಳು ಸೊಳ್ಳೆಯ ಹೊಟ್ಟೆಯನ್ನು ಸೇರುತ್ತವೆ. ಇಲ್ಲಿ ನಿರ್ಲಿಂಗ ಸ್ವರೂಪದ ಜೀವಿಗಳು ಬದುಕುಳಿಯಲಾರವು. ಲೈಂಗಿಕ ಸ್ವರೂಪಿಗಳು ಬದಲಾವಣೆ ಹೊಂದಿ ಗಂಡು ಮತ್ತು ಹೆಣ್ಣು ಕೂಟಕಣ ಜೀವಿಗಳು ಸಂಯೋಗಗೊಂಡು ಚಲಾಂಡ ಅಥವಾ ಕೈನೈಟ್‌ಗಳನ್ನುಂಟುಮಾಡುತ್ತದೆ. ಇದರಿಂದ ಅಸಂಖ್ಯ ಬೀಜಕಣ ಜೀವಿಗಳು ಉತ್ಪತ್ತಿಯಾಗಿ ಅನಾಫಿಲೀಸ್ ಸೊಳ್ಳೆಯ ಜೊಲ್ಲುಗ್ರಂಥಿಗಳ ಮೂಲಕ ಮತ್ತೊಬ್ಬ ಆರೋಗ್ಯವಂತನ ದೇಹಕ್ಕೆ ಸೇರುವುದರಿಂದ ಸೊಳ್ಳೆ ರೋಗವಾಹಕವಾಗಿ ಕಾರ್ಯ ನಿರ್ವಹಿಸುತ್ತದೆ.

ರಕ್ತ ಹೀರಿದ ಹತ್ತು ದಿನಗಳ ನಂತರವೇ ಸೊಳ್ಳೆ ರೋಗವನ್ನು ಹರಡಲು ಸಾಧ್ಯ. ಈ ಅವಧಿಯಲ್ಲಿ ಸೊಳ್ಳೆಯ ಜಠರದಲ್ಲಿ ಮಲೇರಿಯ ಸೂಕ್ಷ್ಮಾಣುಗಳ ಜೀವನಕ್ರಮ ಮುಂದುವರಿಯುವುದು. ಈ ಅಂಶವನ್ನು ಬಳಸಿಕೊಂಡು ಸೊಳ್ಳೆಗಳ ನಿರ್ಮೂಲನಾ ಕ್ರಮವನ್ನು ಪರಿಗಣಿಸಬಹುದು. (ಎನ್.ಎಸ್.ಎಲ್)

**ಅನಾಮಿಕತೆ :** ರಚಿಸಿದ ಗ್ರಂಥಕ್ಕೆ ತನ್ನ ಹೆಸರನ್ನು ಗ್ರಂಥಕರ್ತೃ ಹಾಕದಿರುವುದೇ ಅನಾಮಿಕತೆ. ನಾಚಿಕೆಯಿಂದಲೊ ವಿನಯದಿಂದಲೊ ಲೇಖಕರು ಅನಾಮಿಕರಾಗಿ ಉಳಿಯ ಬಯಸುವುದುಂಟು. ಕೆಲವು ವೇಳೆ ಯಾವುದೋ ಕಾರಣದಿಂದ ಕರ್ತೃವಿನ ಅಂಕಿತ ಕಣ್ಮರೆಯಾಗಿ ಕೃತಿ ಅಜ್ಞಾತನಾಮಕವಾಗಿ ನಿಲ್ಲಬಹುದು. ಬರೆಹ ಇನ್ನೂ ಬಳಕೆಗೆ ಬಾರದಿದ್ದ ಕಾಲದಲ್ಲಿ ಕಾವ್ಯ ಅಥವಾ ಕಾವ್ಯಭಾಗಗಳು ಬಾಯಿಂದ ಬಾಯಿಗೆ ನಡೆದು ಬರುತ್ತಿದ್ದಾಗ ಜನ ಕಾವ್ಯವನ್ನು ಉಳಿಸಿಕೊಂಡರೇ ಹೊರತು ಕವಿಗಳ ಹೆಸರುಗಳನ್ನಲ್ಲ. ಹೀಗಾಗಿ ಅನೇಕ ಬರೆಹಗಳ ಕರ್ತೃಗಳು ಯಾರೆಂಬುದು ತಿಳಿಯದಾಗಿದೆ. ಎಷ್ಟೋ ಜಾನಪದ ಗೀತೆಗಳು ಉತ್ಕೃಷ್ಟವಾದ ಪದ್ಯಗಳಾಗಿ ನಮ್ಮ ಕುತೂಹಲ ಕೆರಳಿಸುತ್ತಿದ್ದರೂ ಅವನ್ನು ಕಟ್ಟಿದ ಕವಿಗಳಾರೊ ನಾವು ತಿಳಿಯುವಂತಿಲ್ಲ. ಕರ್ತೃವಿನ ಹೆಸರು ಗೊತ್ತಾದರೆ ಒಳ್ಳೆಯದು; ಗೊತ್ತಾಗದಿದ್ದರೆ ಕೆಟ್ಟದ್ದಲ್ಲ. ಏತಕ್ಕೆಂದರೆ ಕೃತಿ ಹೆಚ್ಚೇ ಹೊರತು ಕರ್ತೃವಲ್ಲ. ಒಂದು ಕಾವ್ಯದ ನಿಷ್ಪಕ್ಷಪಾತವಾದ ವಿಮರ್ಶೆ ನಡೆಯಬೇಕಾದರೆ ಕವಿಯನ್ನು ಹಿಂಬದಿಗೆ ತಳ್ಳಬೇಕು ಅಥವಾ ಮರೆತುಬಿಡಬೇಕು. ಬೈರನ್, ಗಯಟೆ ಮೊದಲಾದವರ ಸುಂದರ ಕವಿತೆಯನ್ನು ಓದುವಾಗ ಅವರೆಂಥ ಮನುಷ್ಯರಾಗಿದ್ದರು ಎಂಬುದು ಲಕ್ಷ್ಯಕ್ಕೆ ಬಾರದಿದ್ದರೇ ಲೇಸು. ಅನಾಮಿಕತೆಯಿಂದ ಲೇಖಕನಿಗೂ ಓದುಗ ಸಮಾಜಕ್ಕೂ ಪ್ರಯೋಜನ ಇಲ್ಲದಿಲ್ಲ.

ಅನಾಮಿಕತೆಯನ್ನು ದುರುಪಯೋಗಕ್ಕೆ ಸೆಳೆದುಕೊಳ್ಳುವುದೂ ಸಾಧ್ಯ. ಬಿಡಿ ವ್ಯಕ್ತಿಗಳನ್ನೊ ಇಡೀ ಸಮಾಜವನ್ನೊ ಕಟುವಾಗಿ ನಿಂದಿಸಿ ಅವಹೇಳನಕ್ಕೆ ಗುರಿಯಾಗಿಸುವ ಪ್ರಸಂಗದಲ್ಲಿ ವಿಡಂಬನಕಾರ ಸ್ವಂತ ಹಿತಕ್ಕೋಸ್ಕರ ಮರೆಯಲ್ಲಿ ಅಡಗಿರುತ್ತಾನೆ. ಮೇಲಣವರ್ಗದವರನ್ನೂ ಬಲಿಷ್ಠರನ್ನೂ ಅಧಿಕಾರ ಪ್ರಮತ್ತರನ್ನೂ ಎದುರಿಗೆ ನಿಂತು ಆಕ್ಷೇಪಿಸಿದಲ್ಲಿ ಅಂಥವನಿಗೆ ಅಪಾಯದ ಸಂಭವ ಹೆಚ್ಚು. ವಿಮರ್ಶಕರಿಗೆ ಬಹಳ ಕಾಲ ಅನಾಮಿಕತೆ ಅಭೇದ್ಯ ದುರ್ಗವಾಗಿತ್ತು. ನೂತನ ಲೇಖಕರನ್ನು ಜರಿದು ಖಂಡನೆಮಾಡಿ ನೆಮ್ಮದಿಯಿಂದ ಇರುತ್ತಿದ್ದರು. ನೈಜಕವಿಗೆ ದುಷ್ಟಟೀಕೆಯಿಂದ ಹಾನಿಯೇನೂ ಇಲ್ಲದಿದ್ದರೂ ಮನುಷ್ಯಮಾತ್ರನಾದ್ದರಿಂದ ಕೊಂಚ ನೋವು ಅವನನ್ನು ತಟ್ಟಿಯೇ ತಟ್ಟುತ್ತದೆ; ಸಾಮಾನ್ಯ ಕವಿಗಂತೂ ತುಂಬ ನರಳಾಟ.

ಈಗ ಅನಾಮಿಕತೆ ಯಾರಿಗೂ ಬೇಕಾಗಿಲ್ಲ. ಪ್ರಾಮಾಣಿಕ ಅಭಿಪ್ರಾಯವನ್ನು ನೇರವಾಗಿ ಹೇಳುವುದಕ್ಕೆ ಹಿಂಜರಿಯುವುದು ಸಮರ್ಪಕ ನೀತಿಯಲ್ಲ. ಗ್ರಂಥಕರ್ತನಿಗೆ ತನ್ನ ಹೆಸರು ಪ್ರಕಟವಾಗಲೆಂಬ ಉತ್ಕಟಾಪೇಕ್ಷೆ ಇದ್ದೇ ಇರುತ್ತದೆ. ಕೃತಿ ಒಳ್ಳೆಯದಾದರೆ ನಾನು ಬರೆದೆ ತಾನು ಬರೆದೆ ಎಂದು ಇತರರು ಅದನ್ನು ಅಪಹರಿಸಬಹುದು. (ಎಸ್.ಎ.ಆರ್.)

**ಅನಾರ್ಜಿತ ವರಮಾನ :** ಯಾವ ರೀತಿಯಲ್ಲೂ ಮಾನಸಿಕ ಅಥವಾ ಕಾಯಕ ಪ್ರಯತ್ನವಿಲ್ಲದೆ ಆತಂಕ ಆಯಾಸಗಳಿಲ್ಲದೆ ಅಕಸ್ಮಾತ್ತಾಗಿ ಒದಗುವ ವರಮಾನ (ಅನ್‌ಅರ್ನ್ಡ್ ಇನ್‌ಕಮ್). ಈ ತೆರನಾದ ವರಮಾನ ಬರುವುದು ಮಾನವಜೀವನದಲ್ಲಿ ಅತಿ ವಿರಳವೆಂದೇ ಹೇಳಬೇಕು. ಸಾಧಾರಣವಾಗಿ ಶ್ರಮಪಡದೆ, ದೈಹಿಕ ಅಥವಾ ಮಾನಸಿಕ ಆಯಾಸವಿಲ್ಲದೆ ವರಮಾನ ಬರಬೇಕೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಕೈ ಕೆಸರಾದರೆ ಮಾತ್ರ ಬಾಯಿ ಮೊಸರೆನ್ನುವುದು ಎಲ್ಲರಿಗೂ ತಿಳಿದ ವಿಷಯ.

ಆದರೆ ಹಲವು ಅಪರೂಪ ಸಂದರ್ಭಗಳಲ್ಲಿ ಪೂರ್ವಾರ್ಜಿತ ಪುಣ್ಯ ಫಲವೆಂಬಂತೆ, ವರಮಾನ ಅಥವಾ ಸಂಪತ್ತು ವಿಪುಲವಾಗಿ ಕೆಲವರಿಗೆ ದೊರೆಯಬಹುದು. ಬೆಂಗಳೂರಿನಂಥ ನಗರದಲ್ಲಿ ಸುಮಾರು 50 ವರ್ಷಗಳ ಹಿಂದೆ ಒಬ್ಬ ವ್ಯಕ್ತಿ ಹಲವು ಎಕರೆ ಜಮೀನನ್ನು ಅತಿ ಸ್ವಲ್ಪ ಬೆಲೆಗೂ ಅಥವಾ ದಾನವಾಗಿಯೊ ಪಡೆದಿದ್ದು, ನಗರ ವಿಶೇಷವಾಗಿ ಬೆಳೆದು ಅನೇಕ ಉಪನಗರ ಅಥವಾ ಬಡಾವಣೆಗಳು ಬೆಳೆಯುತ್ತಿರುವುದರಿಂದ ಆ ವ್ಯಕ್ತಿಯ ಮಗನೊ ಮೊಮ್ಮಗನೊ ಆ ಜಮೀನನ್ನು ಸೈಟುಗಳಾಗಿ ಮಾಡಿ ಮಾರುವುದರಿಂದ ಆಯಾಸವಿಲ್ಲದೆ ಕೋಟ್ಯಾಂತರ ರೂಪಾಯಿಗಳನ್ನು ಪಡೆಯುತ್ತಿರುವ ನಿದರ್ಶನಗಳು ಹಲವಾರಿವೆ. ಹಾಗೆಯೆ ಹಳೆಯ ನಗರಪ್ರದೇಶಗಳಲ್ಲಿ ಒಬ್ಬಾತ ಹಳೆಯ ಮನೆಯನ್ನು ಕೊಂಡು ಅದನ್ನು ಕೆಡವಿಸಿ ಹೊಸದಾಗಿ ಭವ್ಯವಾದ ಮಂದಿರವನ್ನು ಕಟ್ಟಿಸುವ ಪ್ರಯತ್ನದಲ್ಲಿ ತಳಪಾಯಕ್ಕಾಗಿ ಅಗೆತ ಮಾಡುತ್ತಿರುವಾಗ ನಾಲ್ಕು ಮಡಕೆಗಳ ತುಂಬ ಚಿನ್ನದ ನಾರಸಿಂಹವರಹಗಳು ಸಿಕ್ಕಿದರೆ ಆತ ಇದ್ದಕ್ಕಿದ್ದ ಹಾಗೆ ಶ್ರೀಮಂತನಾದನೆಂದು ಸೋಜಿಗಪಟ್ಟು ಆತನನ್ನು ಜನ ಲಕ್ಷ್ಮೀಪುತ್ರನೆಂದು ಕರೆಯುವುದು ಸಹಜ. ಇದರಂತೆ ಡರ್ಬಿಸ್ವೀಪ್ ಮುಂತಾದ ಲಾಟರಿ, ಕುದುರೆಜೂಜು, ಸಟ್ಟಾ ವ್ಯಾಪಾರ, ಷೇರು ಮತ್ತು ಸ್ಟಾಕುಗಳ ವ್ಯವಹಾರ ಬೋನಸ್ ಷೇರುಗಳು–ಮುಂತಾದವು ಗಳಿಂದ ಅದೃಷ್ಟಶಾಲಿಗಳಾದ ಕೆಲವರು ಊಹಿಸಲಾರದಷ್ಟು ವಿಪುಲವಾಗಿ ಹಣಗಳಿಸಿ ಶ್ರೀಮಂತರಾಗಬಹುದು. ಅನೇಕ ಶ್ರೀಮಂತ ಕುಟುಂಬಗಳು ತಾವು ಹೇರಳವಾಗಿ ಸಂಪಾದಿಸಿ ರುವ ಹಣ, ಚಿನ್ನ, ಆಸ್ತಿಪಾಸ್ತಿಗಳನ್ನು ವಾರಸುದಾರರಿಲ್ಲದೆ ಬಿಟ್ಟುಹೋದಾಗ ಆ ಕುಟುಂಬದ ದೂರದ ಸಂಬಂಧಿಗಳಿಗೆ ಆ ಸಂಪತ್ತು ಅನಾಯಾಸವಾಗಿ ಸೇರಬಹುದು. ದೈಹಿಕ ಅಥವಾ ಮಾನಸಿಕಶ್ರಮದಿಂದ ದುಡಿದು ಸಂಪಾದಿಸುವ ವರಮಾನಕ್ಕೂ ಆಸ್ತಿರೂಪದಲ್ಲಿರುವ ಕಟ್ಟಡ, ಜಮೀನುಗಳಿಂದ ಬಾಡಿಗೆ ರೂಪದಲ್ಲಿ ಬರುವ ವರಮಾನಕ್ಕೂ ವ್ಯತ್ಯಾಸವಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಮೊದಲನೆಯದು ಅರ್ಜಿತವರಮಾನ. ಎರಡನೆಯದು ಅನಾರ್ಜಿತವರಮಾನ.

ಸ್ವಲ್ಪವೂ ಕಷ್ಟಪಡದೆ ಅನಾರ್ಜಿತವಾಗಿ ಬಂದ ಸಂಪತ್ತು ಬಹುಕಾಲ ನಿಲ್ಲುವುದಿಲ್ಲವೆಂಬ ನಂಬಿಕೆ ನಮ್ಮ ಜನರಲ್ಲಿ ರೂಢಿಮೂಲವಾಗಿದೆ. ಈ ಅನಾರ್ಜಿತ ಸಂಪತ್ತು ವ್ಯಕ್ತಿಗೆ ಸೇರಿದ್ದಾದರೂ ಸಮತಾವಾದಿಗಳ ಅಭಿಪ್ರಾಯದಂತೆ ಕಷ್ಟಪಡದೆ ಅನಾಯಾಸವಾಗಿ ವ್ಯಕ್ತಿಗೆ ದೊರೆತ ವರಮಾನ ಮತ್ತು ಆಸ್ತಿಪಾಸ್ತಿಗಳಲ್ಲಿನ ಹೆಚ್ಚಿನ ಭಾಗ ಸಮಾಜಕ್ಕೆ ಅಥವಾ ಸರ್ಕಾರಕ್ಕೆ ಸೇರಬೇಕು. ಈ ತತ್ತ್ವವನ್ನು ಒಪ್ಪಬಹುದಾದರೂ ವ್ಯಕ್ತಿಗಳ ಆಸ್ತಿಪಾಸ್ತಿ ವರಮಾನಗಳನ್ನು ರಕ್ಷಿಸುವ ಭಾರವನ್ನು ಹೊತ್ತಿರುವ ಸರ್ಕಾರ, ವ್ಯಕ್ತಿಗಳ ಹಕ್ಕುಬಾಧ್ಯತೆಗಳನ್ನು ಮನ್ನಣೆ ಮಾಡಲೇಬೇಕು. ಸಮಾಜದ ಬೆಳವಣಿಗೆಯಿಂದ ಅನಾಯಾಸವಾಗಿ ವ್ಯಕ್ತಿಗಳಿಗೆ ದೊರೆಯುವ ಅನಾರ್ಜಿತ ವರಮಾನದಲ್ಲಿ ಸಮಾಜಕ್ಕೆ ಹಕ್ಕಿರುತ್ತದೆ ಎಂಬುದನ್ನು ನಾವು ಒಪ್ಪಲೇಬೇಕಾಗುತ್ತದೆ. ಇದರಿಂದ ಈ ತೆರನಾದ ವರಮಾನ ಸುಗಮವಾಗಿ ಬರುವಂತೆ ದೇಶದಲ್ಲಿ ಶಾಂತಿಪಾಲನೆ ಮಾಡುತ್ತಿರುವ ಸರ್ಕಾರ ಹಲವಾರು ತೆರಿಗೆಗಳ ರೂಪದಲ್ಲಿ ತನ್ನ ಭಾಗವನ್ನು ಪಡೆಯುತ್ತದೆ. ಮೃತರ ಆಸ್ತಿಪಾಸ್ತಿ ತೆರಿಗೆ, ಜೂಜು, ಸಟ್ಟಾ ವ್ಯಾಪಾರದ ತೆರಿಗೆ, ಅಧಿಕ ಲಾಭದ ತೆರಿಗೆ, ಸೂಪರ್ ಟ್ಯಾಕ್ಸ್, ಸಂಪತ್ತಿನ ತೆರಿಗೆ, ದಾನ ತೆರಿಗೆ, ಖರ್ಚಿನ ತೆರಿಗೆ, ನಗರ ಪ್ರದೇಶಗಳ ಖಾಲಿ ನಿವೇಶನಗಳ ತೆರಿಗೆ ಮುಂತಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಆಸ್ತಿ ಪಡೆಯುವ ವ್ಯಕ್ತಿಗೂ ಮೃತರಿಗೂ ಸಂಬಂಧ ದೂರವಾದಷ್ಟು ತೆರಿಗೆ ದರ ಹೆಚ್ಚಬೇಕೆಂಬ ತತ್ತ್ವಕ್ಕೆ ಮನ್ನಣೆ ದೊರೆತಿದೆ. ಈ ಹಲವು ತೆರಿಗೆಗಳನ್ನು ಸಂದರ್ಭೋಚಿತವಾಗಿ ಹೆಚ್ಚುಕಡಿಮೆ ಮಾಡುವ ಪರಮಾಧಿಕಾರ ಸರಕಾರಕ್ಕಿದೆ. ವ್ಯಕ್ತಿಯ ವರಮಾನವೇ ಆಗಲಿ ಆಸ್ತಿಪಾಸ್ತಿಯೇ ಆಗಲಿ ಅನಿರೀಕ್ಷಿತವಾದಂತೆಯೂ ಅನಾರ್ಜಿತವಾದಂತೆಯೂ ಆತನ ಕರಧಾರಣಶಕ್ತಿ ಹೆಚ್ಚುವುದು ನ್ಯಾಯಸಮ್ಮತವಾಗಿದೆ ಎಂದು ಭಾವಿಸಬಹುದು. ಹೆಚ್ಚು ತೆರಿಗೆ ತೆತ್ತರೂ ಆ ವ್ಯಕ್ತಿಗೆ ಯಾವ ತೊಂದರೆಯೂ ಇಲ್ಲದೆ ಸಾಮಾಜಿಕವಾಗಿ ಸಂಪತ್ತಿನ ಉತ್ಪಾದನೆ, ಅನುಭೋಗ ಮತ್ತು ವಿನಿಯೋಗಗಳಲ್ಲಿ ಏರುಪೇರುಗಳಾಗದೆ, ರಾಷ್ಟ್ರದಲ್ಲಿರಬಹುದಾದ ಬಡವ ಬಲ್ಲಿದರ ಅಂತರವನ್ನು ಕಡಿಮೆಮಾಡಿ ಸಮತಾವಾದ ಸಮಾಜವನ್ನು ಸ್ಥಾಪಿಸುವ ಸುಖೀರಾಜ್ಯದ ಧ್ಯೇಯಸಾಧನೆಗೆ ಅನಾರ್ಜಿತ ವರಮಾನದ ಮತ್ತು ಆಸ್ತಿಪಾಸ್ತಿಯ ತೆರಿಗೆಗಳು ಸಾಧಕವಾಗುವುದೆಂದು ಒಪ್ಪಬಹುದು.

(ಬಿ.ಆರ್.ಎಸ್.)

**ಅನಾರ್ಥೊಸೈಟ್ :** ಅಗ್ನಿಶಿಲೆಗಳ ಸಮುದಾಯದಲ್ಲೇ ಬಹಳ ವೈಶಿಷ್ಟ್ಯವುಳ್ಳದ್ದೂ ಸ್ವಾರಸ್ಯಕರವಾದದ್ದೂ ಆಗಿರುವ ಗ್ಯಾಬ್ರೋ ಅಗ್ನಿಶಿಲೆಯ ಗುಂಪಿಗೆ ಸೇರಿದ ಒಂದು ವಿಶೇಷ ಪ್ರಭೇದ. ಇದು ಅಂತರಗ್ನಿಶಿಲೆಗಳ (ಪ್ಲುಟಾನಿಕ್ ರಾಕ್ಸ್) ಗುಂಪಿಗೆ ಸೇರಿದೆ. ಸಾಮಾನ್ಯವಾಗಿ ದಪ್ಪ ಕಣಗಳಿಂದ ಕೂಡಿದ ಸಮಕಣ (ಗ್ರಾನಿಟಿಕ್) ಒಳರಚನೆಯನ್ನು ಹೊಂದಿರುತ್ತದೆ.

ಈ ಶಿಲೆಯ ಉತ್ಪತ್ತಿಯ ಬಗ್ಗೆ ಅನೇಕ ಸಮಸ್ಯೆಗಳಿದ್ದಿವೆ. ಇದರ ಖನಿಜ ಸಂಯೋಜನೆಯಲ್ಲಿ ಬಹುಭಾಗ ಲ್ಯಾಬ್ರಡೊರೈಟ್ ಫೆಲ್ಡ್‌ಸ್ಪಾರ್‌ನಿಂದ ಕೂಡಿರುತ್ತದೆ. ಈ ಕಾರಣದಿಂದಾಗಿ ಇದನ್ನು ಫೆಲ್‌ಸಿಕ್ ಶಿಲೆಯೆಂದು ಪರಿಗಣಿಸಲಾಗಿದೆ.

ಪ್ರೀ–ಕೇಂಬ್ರಿಯನ್ ಯುಗದ ಶಿಲಾಪ್ರಾಂತಗಳಲ್ಲಿ ಈ ಶಿಲೆಯ ಒಡ್ಡುಗಳನ್ನು (ಡೈಕು) ಗುರುತಿಸಿದ್ದಾರೆ. ಮಿನಿಸೊಟಾ, ಕ್ವಿಬೆಕ್, ಅಮೆರಿಕದ ಅಡಿರೋಂಡಾಕ್, ಲ್ಯಾಬ್ರಡಾರ್ ಮತ್ತು ನಾರ್ವೆ ದೇಶಗಳಲ್ಲಿ ಈ ಶಿಲೆ ಅಂತಸ್ಸರಣವರ್ಗದ ಲ್ಯಾಕೊಲಿತ್‌ಗಳಾಗಿ ಉದ್ಭವಿಸಿದೆ.

ಇವಲ್ಲದೆ, ದಕ್ಷಿಣ ಆಫ್ರಿಕದ ಬುಷ್‌ವೆಲ್ಡ್, ಅಮೆರಿಕದ ಮೊಂಟಾನ, ಸ್ಟಿಲ್‌ವಾಟರ್ ಕಾಂಪ್ಲೆಕ್ಸ್ ಮತ್ತು ತಮಿಳುನಾಡಿನ ಸೀತಂಪುಂಡಿ ಪ್ರದೇಶಗಳಲ್ಲಿ ಅನಾರ್ಥೊಸೈಟ್, ಪ್ರಸ್ತರೀಕೃತ ಲೋಪೋಲಿತ್ ಆಕಾರದಲ್ಲಿ ಕಂಡುಬಂದಿದೆ, ನಮ್ಮ ದೇಶದ ಬಿಹಾರ್, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಹಲವೆಡೆ ಈ ಶಿಲೆಗಳಿವೆ. ಸಾಮಾನ್ಯವಾಗಿ ಅಗ್ನಿಶಿಲೆಗಳು ಶಿಲಾರಸದಿಂದಲೋ (ಲಾವಾ) ಅಥವಾ ಶಿಲಾಪಾಕಗಳಿಂದಲೋ (ಮ್ಯಾಗ್ಮ) ಜನ್ಮತಾಳಿದುವು. ಆದರೆ ಈ ಶಿಲೆಗಳು ಘನರೂಪದಲ್ಲೇ ಉತ್ಪನ್ನವಾಗಿರಬಹುದೆಂಬ ನಂಬಿಕೆಗೆ ಪೋಷಕವಾಗಿರುವ ಅನೇಕ ನಿದರ್ಶನಗಳು ಪ್ರಕೃತಿಯಲ್ಲಿ ದೊರೆಕಿವೆ. ಈ ಕಾರಣಗಳಿಂದ ಇದನ್ನು ವಿಶೇಷರೀತಿಯ ಅಗ್ನಿಶಿಲೆಯೆಂದು ಪರಿಗಣಿಸಬಹುದು.

ಇದರ ಖನಿಜ ಸಂಯೋಜನೆಯಲ್ಲಿ ಸಾಮಾನ್ಯವಾಗಿ ಶೇ.90 ಲ್ಯಾಬ್ರಡರೈಟ್ ಫೆಲ್ಡ್‌ಸ್ಪಾರ್ ಇದ್ದು, ಇನ್ನುಳಿದ ಶೇ. 10ರಲ್ಲಿ ಮೆಗ್ನೀಸಿಯಂ ಮತ್ತು ಕಬ್ಬಿಣಾಂಶ ಹಾರನ್‌ಬ್ಲೆಂಡ್ ಮತ್ತು ಬಯೊಟೈಟ್ ಖನಿಜಗಳೂ ವಿರಳವಾಗಿ ಇದರಲ್ಲಿ ಇರುವುದುಂಟು. ಪೈರೋಪ್ ಮತ್ತು ಸ್ಪಿನೆಲ್ ಎಂಬ ಖನಿಜಗಳೂ ಸಂದರ್ಭಾನುಸಾರ ಇದರಲ್ಲಿ ಸಿಗುತ್ತವೆ.

ಕೆಲವು ಅನಾರ್ಥೊಸೈಟ್ ಶಿಲೆಗಳ ಫೆಲ್ಡ್‌ಸ್ಪಾರ್ ಖನಿಜದಲ್ಲಿ ಕ್ಯಾಲ್ಸಿಯಂ ಪ್ರಮಾಣ ಅಧಿಕವಿದ್ದು ಲ್ಯಾಬ್ರಡರೈಟ್‌ಗೆ ಬದಲಾಗಿ ಅನಾರ್ಥೈಟ್ ಎಂಬ ಫೆಲ್ಡ್‌ಸ್ಪಾರ್‌ನ ಮತ್ತೊಂದು ಬಗೆಯನ್ನು ಕಾಣಬಹುದು. ಇಂಥ ಶಿಲೆಗಳನ್ನು ಅನಾರ್ಥೈಟ್ ಶಿಲೆ ಎಂದೇ ಕರೆಯಲಾಗುತ್ತದೆ. ದಕ್ಷಿಣ ಕ್ಯಾಲಿಫೋರ್ನಿಯದ ಸ್ಯಾನ್‌ಮಾರ್ಕೋಸ್ ಪ್ರದೇಶದಲ್ಲಿ ಈ ತರದ ಶಿಲೆಯನ್ನು ವರ್ಣಿಸಲಾಗಿದೆ. ಇಲ್ಲಿ ಸಿಕ್ಕುವ ಶಿಲೆಯಲ್ಲಿ ಶೇ. 85 ಅನಾರ್ಥೈಟ್ ಫೆಲ್ಡ್‌ಸ್ಪಾರ್ ಇದ್ದು ಇನ್ನುಳಿದ ಶೇ. 5 ಹಾರನ್‌ಬ್ಲೆಂಡ್ ಮತ್ತು ಅಗೈಟ್ ಖನಿಜಗಳಿಂದ ಕೂಡಿದೆ. ಬುಷ್‌ವೆಲ್ಡ್‌ನಲ್ಲಿ ದೊರೆಯುವ ಶಿಲೆಯಲ್ಲಿ ಬಹುಭಾಗ ಬೈಟೊನೈಟ್ ಫೆಲ್ಡ್‌ಸ್ಪಾರ್ ಖನಿಜವಿದ್ದು ಅದರೊಡನೆ ಬ್ರಾನ್‌ಜೈಟ್ ಕಂಡುಬಂದಿದೆ.

ಕೆಲವು ಅನಾರ್ಥೊಸೈಟ್‌ಗಳಲ್ಲಿ ಅಲ್ಯುಮಿನ ($Al_2O_3$) ಹೆಚ್ಚು ಪ್ರಮಾಣದಲ್ಲಿದ್ದು, ಅಗೈಟ್, ಹೈಪರ್‌ಸ್ತೀನ್ ಖನಿಜಗಳು ರೂಪುಗೊಳ್ಳಲು ಕಾರಣವಾಗಿದೆ. ಅತಿ ಹೆಚ್ಚಿನ ಪ್ರಮಾಣದಲ್ಲಿ ಅಲ್ಯುಮಿನ ಇದ್ದರೆ ಕೊರಂಡಮ್ ಖನಿಜ ರೂಪುಗೊಳ್ಳುತ್ತದೆ. ಈ ಗುಂಪಿನ ಶಿಲೆಗಳಲ್ಲಿ ಟೈಟಾನಿಫರಸ್ ಮ್ಯಾಗ್ನಟೈಟ್ ಇಲ್ಮನೈಟ್, ಕಬ್ಬಿಣ ಮತ್ತು ತಾಮ್ರದ ಸಲ್ಫೈಡ್ ಮತ್ತು ರೂಟೈಲ್ ಖನಿಜಗಳು ಉಪಖನಿಜಗಳಾಗಿ ಇರುತ್ತದೆ. *

**ಅನಾರ್ಯ :** ಶಾಸ್ತ್ರದಲ್ಲಿ ವಿಹಿತವಾದ ಕರ್ತವ್ಯಗಳನ್ನು ಆಚರಿಸದೆ ದೂರೀಕರಿಸಿ, ಶಾಸ್ತ್ರನಿಷಿದ್ಧಕಾರ್ಯಗಳನ್ನು ಮಾಡುವವನು, ಆರ್ಯಸಂಸ್ಕೃತಿಗೆ ಹೊರತಾದವನು. ಅನಾರ್ಯ ಮಾಡುವ ಯಜ್ಞಯಾಗಾದಿಗಳು ಫಲಪ್ರದವಲ್ಲ ಹಾಗೂ ಮಂಗಳಕರವಲ್ಲವೆಂದು ಶಬ್ದಕಲ್ಪದ್ರುಮದಲ್ಲಿ ಹೇಳಿದೆ. (ಎಸ್.ಎನ್.ಕೆ.)

**ಅನಿಮಿಷದೇವರು :** ಈತ ಬಿಜಾಪುರ ಜಿಲ್ಲೆಯ ಇತಿಹಾಸಪ್ರಸಿದ್ಧವಾದ ಪಟ್ಟದಕಲ್ಲಿನವ. ನಂದಿಕೇಶ್ವರನ ಶಿಷ್ಯ, ಅಲ್ಲಮಪ್ರಭುವಿನ ಗುರು. ಈತನ ತಪೋಭೂಮಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಅನಿಮಿಷಯ್ಯನ ಕೊಪ್ಪಲು ಎಂದು ಪ್ರಸಿದ್ಧವಾಗಿದೆ. ರಾಜೇಂದ್ರ, ಮನುರಾಜ ಎಂಬ ಹೆಸರುಗಳಿಂದ ಪ್ರಸಿದ್ಧನಾಗಿರುವ ಈತನ ಬಗ್ಗೆ ಸು. 1560ರಲ್ಲಿ ಚಿತ್ರದುರ್ಗದಲ್ಲಿದ್ದ ಮುರುಘೀದೇಶಿಕನೆಂಬ ಕವಿ ಹಮ್ಮೀರ ಕಾವ್ಯ ಎಂಬ ಒಂದು ಚಂಪೂಗ್ರಂಥವನ್ನು ಬರೆದಿದ್ದಾನೆಂದು ಕವಿಚರಿತ್ರೆಯಲ್ಲಿ ಹೇಳಿದೆ. ಇವನೇ ಅನಿಮಿಷದೇವರೆಂಬ ಒಂದು ಊಹೆ ಇದೆ. (ಬಿ.ಎಸ್.)

**ಅನಿಯತಶ್ರಮ :** ವರ್ಷದ ಎಲ್ಲ ಕಾಲಗಳಲ್ಲೂ ಏಕಪ್ರಕಾರವಾಗಿ ಪಡೆಯಲಾರದ ಹಾಗೂ ನಿಯತವಲ್ಲದ ಉದ್ಯೋಗಗಳಲ್ಲಿ ನೇಮಿತವಾಗುವವರ ಶ್ರಮ. (ಕ್ಯಾಷುಅಲ್ ಲೇಬರ್) ಎನ್ನುತ್ತಾರೆ. ಇದು ಎಲ್ಲ ಉದ್ಯಮಗಳಲ್ಲೂ ಕಾಣಬರುತ್ತದೆ. ಇದರ ಪ್ರಮಾಣ ಕೆಲವು ಅಂಶಗಳಿಂದ ನಿರ್ಧರಿಸಲ್ಪಡುತ್ತದೆ. ಮೊದಲನೆಯದಾಗಿ ಇದು ದೇಶದ ನಿರುದ್ಯೋಗ ಪರಿಸ್ಥಿತಿಯನ್ನು ಅವಲಂಬಿಸಿದೆ. ಅಂದರೆ ನಿರುದ್ಯೋಗದ ಪ್ರಮಾಣ ಹೆಚ್ಚಾದ ಹಾಗೆಲ್ಲ ಅನಿಯತಶ್ರಮದ ಪ್ರಮಾಣವೂ ಹೆಚ್ಚಾಗುತ್ತದೆ. ಎರಡನೆಯದಾಗಿ ಉದ್ಯಮಗಳ ಲಕ್ಷಣಗಳಿಗನು ಸಾರವಾಗಿ ಅನಿಯತಶ್ರಮದ ಪ್ರಮಾಣದಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಉದಾಹರಣೆಗಾಗಿ ಹಡಗುಕಟ್ಟೆಗಳಲ್ಲಿ ಸರಕು ಸಾಗಾಣಿಕೆಯ ಕಾರ್ಯದಲ್ಲಿ ಹವಾಮಾನ ವ್ಯತ್ಯಾಸಗಳಿಂದಾಗಿ ಏರುಪೇರುಂಟಾದಲ್ಲಿ ಅಲ್ಲಿ ನೇಮಿತವಾಗುವ ಅನಿಯತಶ್ರಮದ ಪ್ರಮಾಣದಲ್ಲಿಯೂ ಅದೇರೀತಿ ವ್ಯತ್ಯಾಸಗಳುಂಟಾಗುತ್ತವೆ. ಆದರೆ ನಿಯತಕಾಲಿಕವಾಗಿ ಪುನರಾವರ್ತಿಸುವ ಋತುಮಾನ ಉದ್ಯಮಗಳಲ್ಲಿ ಅಂದರೆ ವ್ಯವಸಾಯ ಇತ್ಯಾದಿ ಉದ್ಯಮಗಳಲ್ಲಿ ಉತ್ಪಾದನಾಕಾರ್ಯಗಳು ಹೆಚ್ಚು ಏರುಪೇರುಗಳಿಗೆ ಅಧೀನವಾಗಿಲ್ಲದಿರುವುದರಿಂದ ಅವುಗಳಲ್ಲಿ ನಿರತವಾಗಿರುವ ಅನಿಯತಶ್ರಮದ ಪ್ರಮಾಣದಲ್ಲಿ ಹೆಚ್ಚು ವ್ಯತ್ಯಾಸಗಳಿರುವುದಿಲ್ಲ. ಆದರೂ ಒಟ್ಟಿನಲ್ಲಿ ಅನಿಯತ ಶ್ರಮ ಋತುಮಾನ ಹಾಗೂ ವರ್ಷಪೂರ್ತಿ ಏಕಪ್ರಕಾರವಾಗಿ ಕೆಲಸವಿಲ್ಲದಿರುವ ಉದ್ಯಮಗಳಲ್ಲಿ ಅಂದರೆ ಕಟ್ಟಡನಿರ್ಮಾಣ, ಉಡುಪುತಯಾರಿಕೆ, ವ್ಯವಸಾಯ, ಹಡಗುಕಟ್ಟೆಗಳಲ್ಲಿ ಹಡಗುಗಳಿಗೆ ಸರಕುಗಳನ್ನು ಭರ್ತಿಮಾಡುವುದು ಮತ್ತು ಅವುಗಳಿಂದ ಇಳಿಸಿಕೊಳ್ಳುವುದು–ಇವೇ ಮುಂತಾದ ಉದ್ಯಮಗಳಲ್ಲಿ ಮಾತ್ರ ಅಧಿಕಪ್ರಮಾಣ ದಲ್ಲಿ ಕಾಣಬರುವುದು.

ಅನಿಯತಶ್ರಮಗಾರ ಸಾಮಾನ್ಯವಾಗಿ ಅನುಕ್ರಮವಾಗಿ ಪುನರಾವರ್ತಿಸುವ ಅಲ್ಪಕಾಲದ ಉದ್ಯೋಗಗಳಲ್ಲಿ ನೇಮಿಸಲ್ಪಡುವ ಶ್ರಮಗಾರ. ಅವನು ಸಾಮಾನ್ಯವಾಗಿ ಕಾಯಂ ಶ್ರಮಗಾರನಂತೆ ತನ್ನ ಕೆಲಸದಲ್ಲಿ ಸಂಪೂರ್ಣ ನೈಪುಣ್ಯ ಹೊಂದಿರುವುದಿಲ್ಲ ಮತ್ತು ಅವನಂತೆ ವರ್ಷದ ಎಲ್ಲ ಕಾಲಗಳಲ್ಲೂ ಏಕಪ್ರಕಾರವಾಗಿ ಉದ್ಯೋಗವನ್ನು ಹೊಂದಿರುವು ದಿಲ್ಲ. ಬಹಳಮಟ್ಟಿಗೆ ಮಧ್ಯಮರೀತಿಯ ನೈಪುಣ್ಯ ಹೊಂದಿದ ಕೆಲಸಗಾರನಾಗಿಯೊ ನೈಪುಣ್ಯ ಹೊಂದಿದ ಬರಿಯ ದೈಹಿಕ ಶ್ರಮಗಾರನಾಗಿಯೊ ಇರುತ್ತಾನೆ. ಅನೇಕವೇಳೆ ಅವನು ಉದ್ಯೋಗಗಳಲ್ಲಿ ನೇಮಿತವಾಗುವ ರೀತಿಯನ್ನು ನೋಡಿದರೆ, ಅವನಿಗೆ ಬೆಳಗ್ಗೆ ಕೆಲಸವಿದ್ದರೆ ಅಂದೇ ಮಧ್ಯಾಹ್ನ ಕೆಲಸವಿಲ್ಲದೆ ಇರುವುದನ್ನು ಕಾಣಬಹುದು. ಇದಕ್ಕೆ ನಿದರ್ಶನವಾಗಿ ಹಡಗುಕಟ್ಟೆಗಳಲ್ಲಿ ಕೆಲಸಮಾಡುವ ಅನಿಯತಕೂಲಿಗಾರರನ್ನು ಉದಾಹರಿಸ ಬಹುದು. ಹಡಗುಕಟ್ಟೆಗಳಲ್ಲಿ ಹಡಗುಗಳಲ್ಲಿ ತರುವ ಮತ್ತು ಸಾಗಿಸುವ ಸರಕುವ್ಯಾಪಾರದ ಪ್ರಮಾಣ ಹವಾಮಾನ ಇತ್ಯಾದಿ ಕಾರಣಗಳಿಂದ ಏರುಪೇರುಗಳಿಗೊಳಗಾಗಿರುತ್ತದೆ. ಹವಾಮಾನ ಚೆನ್ನಾಗಿದ್ದು ಹೆಚ್ಚು ಸಂಖ್ಯೆಯಲ್ಲಿ ಹಡಗುಗಳು ಸರಕುಗಳನ್ನು ಹೊತ್ತು ಕಟ್ಟೆಗೆ ಅಥವಾ ಕಟ್ಟೆಯಿಂದ ಹೊರಗೆ ಹೊರಟಾಗ, ಇಂಥ ಶ್ರಮಗಾರರಿಗೆ ಹೆಚ್ಚು ಬೇಡಿಕೆ ಉಂಟಾಗುತ್ತದೆ. ಆದರೆ ಸರಕು ಸಾಗಾಣಿಕೆಯ ಪ್ರಮಾಣ ಮೇಲೆ ಹೇಳಿದ ಕಾರಣಗಳಿಂದ ಕಡಿಮೆಯಾದಾಗ ಈ ಶ್ರಮಗಾರರಿಗೆ ಬೇಡಿಕೆ ಕಡಿಮೆಯಾಗುತ್ತದೆ ಅಥವಾ ಇಲ್ಲವಾಗುತ್ತದೆ. ಇದೇ ರೀತಿಯಲ್ಲಿ ಋತುಮಾನ ಉದ್ಯಮಗಳಾದ ವ್ಯವಸಾಯ ಇತ್ಯಾದಿ ಉದ್ಯಮಗಳಲ್ಲಿಯೂ ಅನಿಯತ ಶ್ರಮಗಾರರಿಗೆ ವರ್ಷಪೂರ್ತಿ ಏಕಪ್ರಕಾರವಾಗಿ ಕೆಲಸವಿರುವುದಿಲ್ಲ.

ಅಧಿಕಸಂಖ್ಯೆಯಲ್ಲಿರುವ ಅನಿಯತಕೂಲಿಗಾರವರ್ಗ ಮಾರುಕಟ್ಟೆಗೋಸ್ಕರ ಉತ್ಪಾದನೆಯನ್ನು ಕೈಗೊಳ್ಳುವ ಬಂಡವಾಳಶಾಹೀ ಉತ್ಪಾದನೆಯ ಆರಂಭಕಾಲದಿಂದಲೂ ಅಸ್ತಿತ್ವಕ್ಕೆ ಬಂದಿತೆಂದು ಹೇಳಬಹುದು. ರೈಲು ಮತ್ತು ಹಡಗು ಮಾರ್ಗಗಳ ಸಹಾಯದಿಂದ ಮಾರುಕಟ್ಟೆಯ ವೈಶಾಲ್ಯ ಹೆಚ್ಚಿ ಅನಿಯತಕೂಲಿಗಾರವರ್ಗದ ಪ್ರಮಾಣ ಗಂಭೀರಮಟ್ಟವನ್ನು ಮುಟ್ಟಿತು. ಮಾರುಕಟ್ಟೆಯ ವೈಶಾಲ್ಯ ಹೆಚ್ಚಿದಂತೆಲ್ಲ ಅಧಿಕಪ್ರಮಾಣದ ಉತ್ಪಾದನೆ ಮತ್ತು ತಾಂತ್ರಿಕಜ್ಞಾನದ ಶೀಘ್ರಬೆಳೆವಣಿಗೆಯಾಗಿ ಮಾರುಕಟ್ಟೆಯಲ್ಲಿ ಒಂದು ಅನಿಶ್ಚಿತ ಪರಿಸ್ಥಿತಿ ಉಂಟಾಯಿತು. ಪ್ರತಿಯೊಂದು ಉದ್ಯಮಸಂಸ್ಥೆಯೂ ತನ್ನ ವ್ಯಾಪಾರದ ಏರುತಗ್ಗುಗಳನ್ನು ತನ್ನ ಉದ್ಯಮಕ್ಷೇತ್ರದ ಇನ್ನೊಂದು ಸಂಸ್ಥೆಯ ಸಹಕಾರವಿಲ್ಲದೆ ತಾನೇ ಅನುಭವಿಸಬೇಕಾಯಿತು. ಹೀಗೆ ಪ್ರತಿಯೊಂದು ಉದ್ಯಮಸಂಸ್ಥೆಯೂ ತನ್ನ ಸಿದ್ಧವಸ್ತುಗಳ ಬೇಡಿಕೆಯ ವ್ಯತ್ಯಾಸಗಳಿಗೆ ತಾನೇ ಸ್ವತಂತ್ರವಾಗಿ ಒಳಪಟ್ಟಿರುವುದರಿಂದ ತನ್ನ ವ್ಯಾಪಾರದಲ್ಲಿ ಅತಿ ಹೆಚ್ಚು ಹೊರೆಯುಂಟಾದಾಗ ಆ ಹೊರೆಯನ್ನು ತಾನೇ ಯಶಸ್ವಿಯಾಗಿ ಹೊರುವುದಕ್ಕೋಸ್ಕರ ಯಾವಾಗಲೂ ಸಾಕಷ್ಟು ಪ್ರಮಾಣದಲ್ಲಿ ಶ್ರಮಗಾರರನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ನೈಪುಣ್ಯವನ್ನು ಹೊಂದದ ಅಥವಾ ಅಪೂರ್ಣ ನೈಪುಣ್ಯ ಹೊಂದಿರುವ ಶ್ರಮಗಾರರ ಮೀಸಲುಗುಂಪಿನ ಪ್ರಮಾಣ ಹೆಚ್ಚಾಗುತ್ತಾ ಹೋಗುತ್ತದೆ. ಕೆಲಸದ ಒತ್ತಡ ಹೆಚ್ಚಿದ ಹಾಗೆಲ್ಲ ಈ ಗುಂಪಿನವರಿಗೆ ಉದ್ಯೋಗ ದೊರೆಯುತ್ತದೆ; ಒತ್ತಡ ಕಡಿಮೆಯಾದಾಗ ಉದ್ಯೋಗವಿರುವುದಿಲ್ಲ. ಆದರೆ ಇವರಲ್ಲಿ ಯಾರೂ ವರ್ಷಪೂರ್ತಿ ನಿರುದ್ಯೋಗಿಗಳಾಗಿರುವುದಿಲ್ಲ.

ಅನಿಯತಶ್ರಮಗಾರರು ಉದ್ಯೋಗಕ್ಕೆ ಅನರ್ಹರೇನೂ ಅಲ್ಲ. ಆದರೆ ಅವರು ವರ್ಷಪೂರ್ತಿ ನಿರುದ್ಯೋಗಿಗಳಾಗಿರದೆ ಕೆಲವುಕಾಲ ಉದ್ಯೋಗದಲ್ಲಿರುವುದು ಅವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಉದ್ಯೋಗವನ್ನು ಹುಡುಕಿಕೊಂಡು ಹೋಗುವುದನ್ನು ತಡೆಗಟ್ಟಿದೆಯೆಂದು ಹೇಳಬಹುದು. ಈ ಕಾರಣದಿಂದ ಅವರು ಒಂದು ವ್ಯವಸ್ಥಿತ ಜೀವನವನ್ನು ನಡೆಸಲು ಸಾಧ್ಯವಾಗಿಲ್ಲ. ಅವರ ಗಳಿಕೆ ಅವರ ಕುಟುಂಬಕ್ಕೆ ಯೋಗ್ಯರೀತಿಯ ಜೀವನವನ್ನು ನಡೆಸಲು ಶಕ್ತಿಯನ್ನು ಒದಗಿಸಿ ಕೊಡುವುದಿರಲಿ ಅನೇಕವೇಳೆ ಅದು ಒಬ್ಬನ ಜೀವನ ನಿರ್ವಹಿಸಲೂ ಸಾಲದಾಗಿರುತ್ತದೆ. ಇದರಿಂದ ಅನಿಯತಕೂಲಿಗಾರರಿಗೆ ನಿಶ್ಚಿತರೀತಿಯಲ್ಲಿ ತಮ್ಮ ಜೀವನ ನಡೆಸಲು ಕಷ್ಟವಾಗುತ್ತದೆ. ಅವರ ಜೀವನದ ಆಗುಹೋಗುಗಳು ದುಷ್ಪರಿಣಾಮಕಾರಿಯಾಗಿವೆ. ಅವ್ಯವಸ್ಥಿತ ಉದ್ಯೋಗ ಹಾಗೂ ಅನಿಶ್ಚಿತಗಳಿಕೆಗಳಿಂದಾಗಿ ಅನಿಯತಶ್ರಮಗಾರ ಅನೇಕ ತೊಂದರೆಗಳಿಗೆ ಒಳಗಾಗುತ್ತಾನೆ. ಹೆಚ್ಚುಕಾಲ ಕೆಲಸವಿಲ್ಲದಿರುವುದರಿಂದ ಅವನು ಸೋಮಾರಿಯಾಗುವ ಸಂಭವವೂ ಉಂಟು. ಹೀಗೆ ಕೆಲಸವಿಲ್ಲದೆ ಸೋಮಾರಿಯಾಗುವುದರಿಂದ ಮತ್ತು ಅವನ ಗಳಿಕೆ ಅವನಿಗೆ ಸಾಲದುದರಿಂದ ಅವನು ಕೆಲವು ಸಮಾಜಘಾತಕ ಕೆಲಸಗಳಿಗೆ ಇಳಿಯುವುದು ಅಸಂಭವವೇನೂ ಅಲ್ಲ.

ಮೇಲೆ ಹೇಳಿದ ಕಷ್ಟ ಪರಿಸ್ಥಿತಿಗಳಿಂದ ಅನಿಯತಕೂಲಿಗಾರರಲ್ಲಿ ಒಂದು ವಿಧವಾದ ಅಸಮಾಧಾನವುಂಟಾಗಿ ಅವರಿಗೆ ಯಾವ ಉದ್ಯಮದಲ್ಲಾಗಲಿ, ಕಾರ್ಮಿಕಸಂಘ ಚಟುವಟಿಕೆಗಳಲ್ಲಾಗಲಿ ಪಾರ್ಲಿಮೆಂಟರಿ ಕಾರ್ಯವಿಧಾನಗಳಲ್ಲಿಯಾಗಲಿ ಆಸಕ್ತಿ ಇರುವುದಿಲ್ಲ. ಇತ್ತೀಚೆಗೆ ಇಂಗ್ಲೆಂಡ್, ಆಸ್ಟ್ರೇಲಿಯ, ಭಾರತ–ಇವೇ ಮುಂತಾದ ದೇಶಗಳಲ್ಲಿ ಅನಿಯತಕೂಲಿಗಾರರ ಕಾರ್ಮಿಕಸಂಘಗಳು ಸ್ವಲ್ಪಮಟ್ಟಿಗೆ ಯಶಸ್ವಿಯಾಗಿವೆ. ಇವುಗಳಿಗೆ ಇಂಗ್ಲೆಂಡಿನ ನ್ಯೂ ಯೂನಿಯನಿಸಂ, ಭಾರತ ಮತ್ತು ಆಸ್ಟ್ರೇಲಿಯ ದೇಶಗಳ ಹಡಗುಕಟ್ಟೆಗಳ ಕಾರ್ಮಿಕಸಂಘಗಳು ನಿದರ್ಶನವಾಗಿವೆ.

ಕೆಲವು ಉದ್ಯಮಸಂಸ್ಥೆಗಳಲ್ಲಿನ ಪ್ರಸ್ತುತಬೆಳೆವಣಿಗೆಗಳು ಅನಿಯತಶ್ರಮದ ಭಾಗಶಃ ವಿಸರ್ಜನೆಯತ್ತ ವಾಲಿದೆ. ಉತ್ಪಾದನಾವಿಧಾನಗಳಲ್ಲಿ ಹೆಚ್ಚು ಹೆಚ್ಚು ಯಾಂತ್ರೀಕರಣ, ಉದ್ಯಮಗಳಲ್ಲಿ ವರ್ಷಪೂರ್ತಿ ನಿಶ್ಚಿತ ಉತ್ಪಾದನೆ ಮತ್ತು ವ್ಯವಸಾಯದಲ್ಲಿ ಬೆಳೆಗಳ ವೈವಿಧ್ಯ–ಇವುಗಳ ಮೂಲಕ ಅನಿಯತಕೆಲಸಗಾರರ ಸಮಸ್ಯೆ ಬಹುಮಟ್ಟಿಗೆ ಪರಿಹಾರ ವಾಗುತ್ತಿದೆಯೆಂದು ಹೇಳಬಹುದು. ಇದಕ್ಕೆ ನಿದರ್ಶನವಾಗಿ ಕೆಲವು ಪಾಶ್ಚಾತ್ಯ ಉಡುಪು ತಯಾರಿಕಾಸಂಸ್ಥೆಗಳಲ್ಲಿ ಕಾರ್ಮಿಕಸಂಘಗಳ ನೇತೃತ್ವದಲ್ಲಿ ಕೆಲಸಮಾಡುವ ಕೇಂದ್ರೀಯ ಉದ್ಯೋಗವ್ಯವಸ್ಥೆಯೂ ಕಾರ್ಮಿಕಮಾಲೀಕರುಗಳ ಜಂಟೀ ಮೇಲ್ವಿಚಾರಣೆಯಲ್ಲಿ ನಡೆಯಲ್ಪಡುವ ನಿರುದ್ಯೋಗಿ ವಿಮೆಯ ಏರ್ಪಾಡೂ ಅನಿಯತಕೂಲಿಗಾರರ ಸಂಖ್ಯೆಯನ್ನು ಕಡಿಮೆ ಮಾಡಿರುವುದಲ್ಲದೆ ಆ ಗುಂಪಿಗೆ ಹೊಸಬರು ಸೇರಿ ಅವರ ಸಂಖ್ಯೆಯನ್ನು ಹೆಚ್ಚಿಸದಂತೆ ತಡೆಗಟ್ಟಿವೆ.

ಕೆಲವು ಉದ್ಯಮಗಳ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಯೋಚಿಸಿದಾಗ ಅನಿಯತಶ್ರಮಗಾರರ ಸೇವೆ ದೇಶದಲ್ಲಿ ಅನಿವಾರ್ಯವೆಂಬುದು ತಿಳಿಯುತ್ತದೆ. ಆದುದರಿಂದಲೇ ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ರಾಷ್ಟ್ರಗಳ ಸುವ್ಯವಸ್ಥಿತ ಕೈಗಾರಿಕೋದ್ಯಮಗಳಲ್ಲೂ ಅನಿಯತಶ್ರಮಗಾರರ ಗುಂಪಿನ ಸಂಪೂರ್ಣ ವಿಸರ್ಜನೆ ಸಾಧ್ಯವಾಗುವುದಿಲ್ಲ. ಅದು ಸರಿಯೂ ಅಲ್ಲವೆನಿಸುತ್ತದೆ. ಆದ್ದರಿಂದಲೇ ಅನಿಯತಶ್ರಮಗಾರರ ಸಂಖ್ಯೆಯನ್ನು ಪ್ರತಿಯೊಂದು ದೇಶದಲ್ಲೂ ಕನಿಷ್ಠಮಟ್ಟಕ್ಕೆ ಇಳಿಸಬೇಕೆಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಹೀಗೆ ಅವರ ಸಂಖ್ಯೆಯನ್ನು ಕನಿಷ್ಠಮಟ್ಟಕ್ಕೆ ತಂದಮೇಲೆ ಮಾನವೀಯದೃಷ್ಟಿಯಿಂದ ಅವರ ಕಷ್ಟಪರಿಸ್ಥಿತಿಗಳನ್ನು ಹೋಗಲಾಡಿಸಿ ಅವರು ಯೋಗ್ಯ ರೀತಿಯ ಜೀವನವನ್ನು ನಡೆಸಲು ತಕ್ಕ ಅವಕಾಶಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಮತ್ತು ಖಾಸಗಿ ಉದ್ಯಮಿಗಳ ಕರ್ತವ್ಯ.

ಭಾರತದಲ್ಲಿ ಅಧಿಕಪ್ರಮಾಣದ ನಿರುದ್ಯೋಗಸಮಸ್ಯೆ, ಜನಸಂಖ್ಯೆಯ ಏರುವಿಕೆ, ಆರ್ಥಿಕ ಹಿಂದುಳಿಕೆ–ಇವೇ ಮೊದಲಾದ ಕಾರಣಗಳಿಂದ ಅನಿಯತಶ್ರಮಗಾರರ ಸಂಖ್ಯೆ ಅಧಿಕವಾಗಿದೆಯೆಂದು ಹೇಳಬಹುದು. ಇದರ ಭಾಗವಾದ ಬದಲಿಪದ್ಧತಿ ಅಂದರೆ ಕಾಯಂ ಕೆಲಸಗಾರರು ಉದ್ಯಮ ಸಂಸ್ಥೆಗಳಲ್ಲಿ ದೀರ್ಘಕಾಲ ರಜೆ ತೆಗೆದುಕೊಂಡು ಹೋದರೆ ಅವರ ಸ್ಥಾನಗಳಲ್ಲಿ ಅನಿಯತಶ್ರಮಗಾರರನ್ನು ತಾತ್ಕಾಲಿಕವಾಗಿ ನೇಮಿಸುವುದು–ಈ ಪದ್ಧತಿ ಸಮಸ್ಯೆ ಅನಿಯತಕೆಲಸಗಾರರ ಸಂಖ್ಯೆ ಹೆಚ್ಚಿದ ಹಾಗೆಲ್ಲ ಉಲ್ಬಣವಾಗುತ್ತಿದೆ. ಈ ಸಮಸ್ಯೆಯನ್ನು ಆದಷ್ಟು ಶೀಘ್ರವಾಗಿ ಬಗೆ ಹರಿಸುವ ದೃಷ್ಟಿಯಿಂದ ಕೇಂದ್ರೀಯ ಉದ್ಯೋಗ ಮತ್ತು ಪುನರ್ವಸತಿ ಡೈರೆಕ್ಟರ್ ಜನರಲ್ ಅವರ ಅಧೀನದಲ್ಲಿ ನಾಡಿನಾದ್ಯಂತ ಪಸರಿಸಿ ಕೆಲಸಮಾಡುವ ಉದ್ಯೋಗವಿನಿಮಯ ಕೇಂದ್ರಗಳು ಹೆಚ್ಚುತ್ತಿವೆ. ಈ ಕೇಂದ್ರಗಳು ಅನಿಯತಶ್ರಮಗಾರರ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಳ್ಳುವ ಮತ್ತು ಅವರನ್ನು ಅವರ ಯೋಗ್ಯತೆಗೆ ತಕ್ಕಂಥ ಕೆಲಸಗಳಲ್ಲಿ ನಿಯಮಿಸುವ ಕಾರ್ಯಗಳ ಮೂಲಕ ಅನಿಯತಕೆಲಸಗಾರರನ್ನು ನಿಯತಕೆಲಸಗಾರರನ್ನಾಗಿ ಪರಿವರ್ತಿಸುವುದಕ್ಕೆ ಪ್ರಯತ್ನ ಮಾಡುತ್ತಿವೆ. ಈ ಪ್ರಯತ್ನದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿವೆ. ಇಷ್ಟೇ ಅಲ್ಲದೆ ಅನಿಯತಕೆಲಸಗಾರರನ್ನು ಅವರ ನಿರುದ್ಯೋಗ ಕಾಲದಲ್ಲಿ ಇತರ ನಿರುದ್ಯೋಗಿಗಳ ಜೊತೆಗೆ ಸೇರಿಸಿ ಅವರಿಗೆಲ್ಲ ನಿರುದ್ಯೋಗವಿಮೆಯ ಸೌಕರ್ಯವನ್ನು ಒದಗಿಸಿ ಕೊಡುವುದು ತುಂಬ ಸೂಕ್ತವಾಗಿದೆ. (ಎಸ್.ಎನ್.ಎ.)

**ಅನಿರುದ್ಧ :** ಭಾಗವತ ಸಿದ್ಧಾಂತದಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರು ಪರಬ್ರಹ್ಮನ ಅಭಿವ್ಯಕ್ತಿಯ ನಾಲ್ಕು ವ್ಯೂಹಗಳು. ಬ್ರಹ್ಮನ ಪರ ಸ್ವರೂಪ ವಾಸುದೇವ. ಈ ಕಾರಣದಿಂದ, ಸಂಕರ್ಷಣ ಬ್ರಹ್ಮನಿಂದ ಅಭಿವ್ಯಕ್ತವಾದ ಜೀವಾತ್ಮ, ಸಂಕರ್ಷಣನಿಂದ ಪ್ರದ್ಯುಮ್ನನೆಂಬ ಅಂತಃಕರಣ ಸೃಷ್ಟಿಯಾಯಿತು. ಪ್ರದ್ಯುಮ್ನನಿಂದ ಅಹಂಕಾರತತ್ತ್ವವಾದ ಅನಿರುದ್ಧತತ್ತ್ವ ಹುಟ್ಟಿತು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರಿಗೂ ಬ್ರಹ್ಮನಿಗೂ ಇರುವ ಸಂಬಂಧವನ್ನು ಶರೀರ ಶರೀರಿ ಸಂಬಂಧವೆಂದು ವಿಶಿಷ್ಟಾದ್ವೈತಪ್ರತಿಪಾದಕರಾದ ರಾಮಾನುಜರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಹೇಳಿದ್ದಾರೆ.

ಅನಿರುದ್ಧ ರುಕ್ಮಿಣಿ–ಕೃಷ್ಣರ ಮೊಮ್ಮಗ. ಪ್ರದ್ಯುಮ್ನ ಹಾಗೂ ರುಕ್ಮವತಿಯರ ಮಗ. ರುಕ್ಮಿಯ ಮೊಮ್ಮಗಳು ರೋಚನೆಯನ್ನು ಮದುವೆಯಾಗಿ ವಜ್ರನೆಂಬ ಮಗನನ್ನು ಪಡೆದನೆಂದು ಭಾಗವತದಲ್ಲೂ ಬಾಣಾಸುರನ ಮಗಳು ಉಷೆ ಇವರ ಹೆಂಡತಿಯೆಂದು ಭಾರತದಲ್ಲೂ ಹೇಳಿದೆ. (ಎಂ.ವೈ.)

**ಅನಿರ್ದಿಷ್ಟರಚನೆ :** ಸಮತೋಲ ಸಮೀಕರಣಗಳಿಂದಲೇ (ಈಕ್ವೇಷನ್ಸ್ ಆಫ್ ಈಕ್ವಿಲಿಬ್ರಿಯಂ) ಉತ್ತರಗಳನ್ನು ಪಡೆಯಲು ಅಸಾಧ್ಯವಾದಾಗ ಒಂದು ರಚನೆ ಅನಿರ್ದಿಷ್ಟ (ಇಂಡೆಫನೇಟ್) ಎಂದು ಅನ್ನಿಸಿಕೊಳ್ಳುತ್ತದೆ; ಎಂದರೆ $H=0, \sum U=0$ ಮತ್ತು $\sum M=0$, ಎಂಬ ಮೂರು ಸ್ಥಿತಿ (ಸ್ಟ್ಯಾಟಿಕ್) ಸಮತೋಲದ ಮೂಲನಿಯಮಗಳಿಂದಲೇ ರಚನಾವಿನ್ಯಾಸದ ಎಲ್ಲ ಪ್ರತಿಕ್ರಿಯಾ ಘಟಕಗಳನ್ನೂ ಅಂತಸ್ಥ ಒತ್ತಡಗಳನ್ನೂ (ಇಂಟರ್ನಲ್ ಸ್ಟ್ರೆಸಸ್) ಕಂಡು ಹಿಡಿಯಲು ಅಸಾಧ್ಯ. ಒಂದು ದತ್ತ ರಚನೆಯಲ್ಲಿರುವ ಅಜ್ಞಾತಗಳ ಸಂಖ್ಯೆ ಮತ್ತು ಆ ರಚನೆಯ ಸಮತೋಲ ಸ್ಥಿತಿಯನ್ನು ನಿರ್ಧರಿಸುವ ಸಮೀಕರಣಗಳ ಸಂಖ್ಯೆ ಇವೆರಡರ ವ್ಯತ್ಯಾಸವನ್ನು ತಿಳಿಸುವ ಸಂಖ್ಯೆಯೇ ಅದರ ಅನಿರ್ದಿಷ್ಟತೆಯ ಪ್ರಮಾಣ.

ವಿಲೋಮವಾಗಿ ಸ್ಥಿತಿಸಮತೋಲನ ಮೂರು ನಿಯಮಗಳಿಂದಲೇ ಎಲ್ಲ ಪ್ರತಿಕ್ರಿಯಾ ಘಟಕಗಳನ್ನು ರಚನೆಯ ಅಂಗಭಾಗಗಳಲ್ಲಿನ ಎಲ್ಲ ಬಲವನ್ನೂ ಹಾಗೂ ಮಹತ್ತ್ವವನ್ನೂ (ಬೆಂಡಿಂಗ್ ಮೊಮೆಂಟ್) ಕಂಡುಹಿಡಿಯಲು ಸಾಧ್ಯವಾದಲ್ಲಿ ಆ ರಚನೆ ನಿರ್ದಿಷ್ಟರಚನೆ ಎಂದೆನಿಸುತ್ತದೆ.

ಸಮತೋಲ ಸಮೀಕರಣಗಳಿಂದ ಪ್ರತಿಕ್ರಿಯೆಗಳನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದಲ್ಲಿ ಆ ರಚನೆ ಬಾಹ್ಯ ಅನಿರ್ದಿಷ್ಟವೆಂದೆನಿಸುತ್ತದೆ (ಎಕ್ಸ್‌ಟರ್ನಲ್ ಇಂಡೆಫನೆಟ್). ಪ್ರತಿಕ್ರಿಯೆಗಳು ತಿಳಿದಿದ್ದು, ಎಲ್ಲ ಅಥವಾ ಯಾವುದಾದರೂ ಅಂಗಭಾಗದಲ್ಲಿನ ಒತ್ತಡಗಳನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದಲ್ಲಿ ಆ ರಚನೆ ಒಳಗಣ ಅನಿರ್ದಿಷ್ಟವೆಂದೆನಿಸುತ್ತದೆ (ಇಂಟರ್ನಲ್ ಇಂಡೆಫನೆಟ್). ರಚನೆಯೊಳಗಿನ ಮಾರ್ಪಾಟುಹೊಂದಿದ ರೂಪದ ಪರಿಗಣನೆಯಿಂದ ಒಳಗಣ ಅಥವಾ ಹೊರಗಣ ಅನಿರ್ದಿಷ್ಟ ಬಲಗಳನ್ನು ಕಂಡುಹಿಡಿಯಬಹುದು.

ದೃಢರಚನೆಗಳು (ರಿಜಿಡ್ ಫ್ರೇಮ್ಸ್) ಅಥವಾ ತುದಿಯಿಂದ ತುದಿಯವರೆಗೆ ಬದಲಿಸಿದ ದೂರವಿರುವ ತುದಿಗಳು, ನಿರ್ಬಂಧಿಸಿರುವ ಕಮಾನುಗಳು (ರಿಸ್ಟ್ರೇನ್ಡ್) ಮತ್ತು ಎರಡು ಅಥವಾ ಹೆಚ್ಚು ಆಧಾರಗಳನ್ನು ಹೊಂದಿದ್ದು, ಸುತ್ತುವಿಕೆಯನ್ನು ತಡೆಗಟ್ಟಲು ತುದಿಗಳನ್ನು ನೆಲೆಗೊಳಿಸಿರುವ ತೊಲೆ ಅಥವಾ ರಚನೆಗಳು– ಇವೇ ಹೊರಗಿನ ಸ್ಥಿರ ಅನಿರ್ದಿಷ್ಟತೆಯ ಸಾಮಾನ್ಯ ಉದಾಹರಣೆಗಳಾಗಿವೆ. ಸ್ಥಿರವಾಗಿ ಹೊರೆಯನ್ನು ಹೊರಬಲ್ಲ ಎರಡು ಅಥವಾ ಹೆಚ್ಚು ಸ್ವತಂತ್ರ ಅಂಗಗಳು ಅಥವಾ ಅಂಗಗಳ ವ್ಯವಸ್ಥೆಗಳನ್ನು ಹೊಂದಿರುವ ರಚನೆ ಒಳಗಿನ ಸ್ಥಿರ ಅನಿರ್ದಿಷ್ಟರಚನೆ (ಇಂಟರ್ನಲಿ ಸ್ಟ್ಯಾಟಿಕಲಿ ಇಂಡೆಫನೆಟ್ ಸ್ಟ್ರಕ್ಚರ್) ಎಂದು ಅನ್ನಿಸಿಕೊಳ್ಳುತ್ತದೆ. b = 2ಎ –∑r ಎಂಬ ಸಮೀಕರಣದ ಸಹಾಯದಿಂದ ರಚನೆಯ ಅನಿರ್ದಿಷ್ಟತೆಯನ್ನು ಪರೀಕ್ಷಿಸಬಹುದು. ಈ ಸಮೀಕರಣದಲ್ಲಿ ಥ ಎಂಬುದು ತೊಲೆಗಳ ಸಂಖ್ಯೆ, ಎ ಎಂಬುದು ಕೂಡೆಗಳ ಸಂಖ್ಯೆ (ಜಾಯಿಂಟ್ಸ್), ∑r ಎಂಬುದು ಪ್ರತಿಕ್ರಿಯಾ ಘಟಕಗಳ ಸಂಖ್ಯೆ. b>2ಎ – ∑r ಆಗಿದ್ದಲ್ಲಿ ಆ ರಚನೆ ಒಳಸ್ಥಿರ ಅನಿರ್ದಿಷ್ಟವಾಗುತ್ತದೆ. (ಎಸ್.ಟಿ.ಎನ್.)

**ಅನಿರ್ದಿಷ್ಟ ಸಮೀಕರಣಗಳು :** $ax + by = c$ ಎಂಬ ಸಮೀಕರಣದಲ್ಲಿ $a, b$ ಮತ್ತು $c$ ಗಳು ದತ್ತ ಸ್ಥಿರಾಂಕಗಳೆಂದೂ ಈ ಸಮೀಕರಣವನ್ನು ತಾಳೆ ಮಾಡುವಂತೆ $x$ ಮತ್ತು $y$ ಗಳ ಬೆಲೆಗಳನ್ನು ಕಂಡುಹಿಡಿಯಬೇಕಾಗಿದೆಯೆಂದೂ ಭಾವಿಸೋಣ. ಈಗ $y = c\,(c - ax) / b$ ಆಗುವುದರಿಂದ, $x$ ಗೆ ನಾವು ಯಾವ ಬೆಲೆಯನ್ನು ಕೊಟ್ಟರೂ ಅದಕ್ಕೆ ಅನುಗುಣವಾಗಿ $y$ ಗೆ ಒಂದು ನಿರ್ದಿಷ್ಟ ಬೆಲೆ ದೊರೆಯುತ್ತದೆ. $x$ ಗೆ ನಾವು ಯಾವ ಬೆಲೆಯನ್ನಾದರೂ ಕೊಡಬಹುದಾದ್ದರಿಂದ, ದತ್ತ ಸಮೀಕರಣವನ್ನು ತಾಳೆಮಾಡುವಂಥ $x$ ಮತ್ತು $y$ ಗಳ ಬೆಲೆಗಳು ಅಸಂಖ್ಯಾತವಾಗಿರುತ್ತವೆ. ಇಂಥ ಸಮೀಕರಣಗಳಿಗೆ ಅನಿರ್ದಿಷ್ಟ (ಇಂಡಿಟರ್ಮಿನೇಟ್) ಸಮೀಕರಣಗಳೆಂದು ಹೆಸರು. ಆದರೆ $x$ ಮತ್ತು $y$ ಗಳ ಬೆಲೆಗಳು ಮೇಲಿನ ಸಮೀಕರಣವನ್ನು ತಾಳೆ ಮಾಡುವುದೇ ಅಲ್ಲದೆ ಧನಪೂರ್ಣಾಂಕಗಳಾಗಿಯೂ ಇರಬೇಕೆಂಬ ನಿಬಂಧನೆಯನ್ನು ವಿಧಿಸಿದರೆ, ಆಗ ಈ ಸಮೀಕರಣವನ್ನು ಬಿಡಿಸುವ ವಿಧಾನಗಳಾವುವು ಮತ್ತು ಇದರ ಧನಪೂರ್ಣಾಂಕ ಮೂಲಗಳ ಸಂಖ್ಯೆ ಎಷ್ಟು ಎಂಬುದೇ ಇಲ್ಲಿರುವ ವಿಚಾರ.

$lx + my = n$ .......... (i)

$lx - my = n$ .......... (ii)

ಎಂಬ ಎರಡು ಸಮೀಕರಣಗಳನ್ನು ಗಮನಿಸೋಣ.

ಇದರಲ್ಲಿ $l, m$ ಮತ್ತು $n$ ಎಂಬುವು ಸ್ಥಿರಾಂಕಗಳು ಧನ ಪೂರ್ಣಾಂಕಗಳೆಂದೂ $l$ ಮತ್ತು $m$ ಪರಸ್ಪರ ನಿರಪವರ್ತನೀಯಗಳೆಂದೂ ಭಾವಿಸೋಣ. ಈ ಸ್ಥಿರಾಂಕಗಳು ಈ ನಿಬಂಧನೆಗಳಿಗೆ ಒಳಪಡದಿದ್ದರೆ ಆಗ $x, y$ ಗಳ ಬೆಲೆಗಳು ಧನಪೂರ್ಣಾಂಕಗಳಾಗಿರಲಾರವೆಂಬುದು ಸ್ಪಷ್ಟವಾಗುತ್ತದೆ.

ಈ ವಿಚಾರವನ್ನು ರೇಖಾರೀತಿಯಲ್ಲಿ ಗ್ರಹಿಸೋಣ. $ox, oy$ ಎಂಬುವು ಎರಡು ಪರಸ್ಪರ ಲಂಬಾಕ್ಷಗಳಾಗಿರಲಿ ಮತ್ತು ಒಂದನೆಯ ಪಾದದಲ್ಲಿ (ಕ್ವಾಡ್ರೆಂಟ್) ಮೂಲ ಬಿಂದುವಿನಿಂದ 1,2,3 ಇತ್ಯಾದಿ ದೂರಗಳಲ್ಲಿ $ox, oy$ ಅಕ್ಷಗಳಿಗೆ ಸಮಾನಾಂತರ ರೇಖೆಗಳನ್ನು ಎಳೆಯೋಣ. ಆಗ ಒಂದನೆಯ ಪಾದದಲ್ಲಿ ಹಲವು ಚೌಕಗಳು ಕಂಡುಬರುತ್ತವೆ. ಅನಂತರ $ax + by = c$ ಎಂಬ ಸರಳರೇಖೆಯನ್ನು ಎಳೆಯೋಣ. ಈ ಸರಳರೇಖೆ ಆ ಚೌಕಗಳ ಯಾವ ಶೃಂಗಗಳಲ್ಲಾದರೂ ಹಾದು ಹೋಗುತ್ತದೆಯೇ, ಹಾಗಾದರೆ ಆ ಶೃಂಗಗಳ ನಿರ್ದೇಶಕಗಳಾವುವು ಎಂಬುದನ್ನು ಪರೀಕ್ಷಿಸಬೇಕು. ದತ್ತ ಸರಳರೇಖೆ ಒಂದನೆಯ ಪಾದವನ್ನು ಪ್ರವೇಶಿಸಬೇಕಾದರೆ ಅದರ ಸಮೀಕರಣ ಈ ಮೇಲೆ ಉಕ್ತವಾಗಿರುವ $lx \pm my = n$ ಎಂಬ ರೂಪದಲ್ಲಿ ಇರಬೇಕಾಗುತ್ತದೆ.

ಮೊದಲು, $l$ ಮತ್ತು $m$ ಎಂಬ ಸ್ಥಿರಾಂಕಗಳು ಮೇಲಿನ ನಿಬಂಧನೆಗಳಿಗೆ ಒಳಪಟ್ಟಿವೆಯೆಂದು ಭಾವಿಸಿ,

$lx - my = 1$ .......... (iii)

ಎಂಬ ಸಮೀಕರಣವನ್ನು ತೆಗೆದುಕೊಳ್ಳೋಣ. ಈ ಸಮೀಕರಣವನ್ನು ತಾಳೆ ಮಾಡುವಂತೆ $x, y$ ಗಳಿಗೆ ಪೂರ್ಣಾಂಕಗಳ ಜೊತೆಯೊಂದನ್ನು ಕಂಡುಹಿಡಿಯುವುದು ಯಾವಾಗಲೂ ಸಾಧ್ಯ. ಹೇಗೆಂದರೆ $l/m$ ಎಂಬ ಭಿನ್ನರಾಶಿ ಸಂತತ ಭಿನ್ನರಾಶಿಯಾಗಿ (ಕಂಟಿನ್ಯೂಡ್ ಫ್ರಾಕ್ಷನ್) ಪರಿವರ್ತಿತವಾಗಲಿ. ಅದರ ಉಪಾಂತ್ಯಅಭಿಸರಣ (ಪೆನಲ್ಟಿಮೇಟ್ ಕನ್ವರ್ಜೆಂಟ್) $p/q$ ಆಗಿರಲಿ. ಆಗ $lq - mp = \pm 1$ ಆಗುತ್ತದೆ. ಒಂದು ವೇಳೆ $lq - mp = - 1$ ಆದರೆ, ಆಗ $l(m-q) - m(l-p) = 1$ ಆಗುತ್ತದೆ. ಆದ್ದರಿಂದ $lq - mp = 1$ ಆದರೆ, $x = q, y = p$ ಎಂಬ ಪೂರ್ಣಾಂಕಗಳು ಸಮೀಕರಣ (iii)ನ್ನು ತಾಳೆ ಮಾಡುತ್ತವೆ; ಹಾಗಲ್ಲದೆ, $lq - mp = - 1$ ಎಂದಾದಾಗ, ಆಗ $x = m - q$ ಮತ್ತು $y = l - p$ ಎಂಬ ಪೂರ್ಣಾಂಕಗಳು ಸಮೀಕರಣ (iii)ನ್ನು ತಾಳೆ ಮಾಡುತ್ತವೆ.

ಈಗ ಸಮೀಕರಣ (i)ರ ಧನಪೂರ್ಣಾಂಕ ಸಾಧನೆಯ ವಿಧಾನವನ್ನು ತಿಳಿಯೋಣ. $lx + my = n$ ಎಂಬುದು ದತ್ತ ಸಮೀಕರಣ. ಮೇಲೆ ವಿವರಿಸಿದಂತೆ $lh - mk = 1$ ಆಗುವಂತೆ $h$ ಮತ್ತು $k$ ಎಂಬ ಪೂರ್ಣಾಂಕಗಳನ್ನು ಕಂಡು ಹಿಡಿಯೋಣ. ಆಗ, $n(lh - mk) = n$ ಆಗುತ್ತದೆ. ಈ ಸಮೀಕರಣದಿಂದ ದತ್ತ ಸಮೀಕರಣವನ್ನು ಕಳೆದರೆ, $nl\,(nh - x)\,m\,(nk + y)$ ಎಂಬ ಸಮೀಕರಣ ದೊರೆಯುತ್ತದೆ. ಇದರಲ್ಲಿ $l$ ಮತ್ತು

$m$ ಗಳು ಪರಸ್ಪರ ನಿರಪವರ್ತನೀಯವಾದ್ದರಿಂದ ಪ್ರಾಚಲ (ಪೆರಾಮಿಟರ್) $t$ ಪೂರ್ಣಾಂಕ.

$x = nh - mt$ ಮತ್ತು $y = lt - nk$ . . . . . . . . . (iv)

ಈಗ $x$ ಮತ್ತು $y$ ಗಳು ಧನ ಪೂರ್ಣಾಂಕಗಳಾಗಬೇಕಾದರೆ, $nh > mt$ ಆಗಿಯೂ $lt > nk$ ಆಗುವಂತೆಯೂ ಆಗಬೇಕು ಎಂದರೆ $\frac{nk}{l} < t < \frac{nh}{m}$..........(v)

ಆದ್ದರಿಂದ (v) ಎಂಬ ಅಸಮತೆಗಳಿಗೆ ಹೊಂದುವಂಥ $t$ ಯ ಪ್ರತಿಯೊಂದು ಪೂರ್ಣಾಂಕ ಬೆಲೆಗೂ (iv) ಎಂಬ ಸಮೀಕರಣಗಳು $x, y$ ಗಳಿಗೆ ಒಂದು ಜೊತೆ ಧನಪೂರ್ಣಾಂಕ ಬೆಲೆಗಳನ್ನು ಕೊಡುತ್ತವೆ. (v) ಎಂಬ ಅಸಮತೆಗಳನ್ನು ತಾಳೆಮಾಡುವ $t$ ಯ ಪೂರ್ಣಾಂಕ ಬೆಲೆಗಳು ಪರ್ಯಾಪ್ತ ಸಂಖ್ಯೆಯಲ್ಲಿರುವುದರಿಂದ, ದತ್ತ ಸಮೀಕರಣವನ್ನು ತಾಳೆ ಮಾಡುವ $x, y$ ಗಳ ಧನ ಪೂರ್ಣಾಂಕ ಬೆಲೆಗಳ ಸಂಖ್ಯೆಯೂ ಪರ್ಯಾಪ್ತವಾಗಿರುತ್ತದೆ. ಒಂದು ವೇಳೆ, ಅಂಥ ಬೆಲೆಗಳು ಇಲ್ಲದಿರಲೂಬಹುದು.

ಮತ್ತೆ, ದತ್ತ ಸಮೀಕರಣ $lx - my = n$ ಎಂಬ ರೂಪದಲ್ಲಿದ್ದರೆ, ಮೇಲಿನ ವಿಧಾನದಿಂದ $x = mt + nh$ ಮತ್ತು $y = lt + nk$ ಆಗುತ್ತವೆ; ಹಿಂದಿನಂತೆ ಇಲ್ಲಿಯೂ $t$ ಯ ಬೆಲೆಗಳು ಪೂರ್ಣಾಂಕಗಳಾಗಿರುತ್ತವೆ. ಈಗ $x, y$ ಗಳು ಧನ ಪೂರ್ಣಾಂಕಗಳಾಗಬೇಕಾದರೆ $t$ ಯ ಪೂರ್ಣಾಂಕ ಬೆಲೆಗಳು $-nh/m$ ಮತ್ತು $-nk/l$ ಎಂಬ ಎರಡು ಸಂಖ್ಯೆಗಳಿಗಿಂತಲೂ ಅಧಿಕವಾಗಿರಬೇಕು. $t$ ಗೆ ಅಂಥ ಬೆಲೆಗಳು ಅಸಂಖ್ಯಾತವಾಗಿರುವುದರಿಂದ ದತ್ತ ಸಮೀಕರಣವನ್ನು ತಾಳೆ ಮಾಡುವ $x, y$ ಗಳ ಧನಪೂರ್ಣಾಂಕ ಬೆಲೆಗಳೂ ಅಸಂಖ್ಯಾತವಾಗಿರುತ್ತವೆ.

ಅನೇಕ ವೇಳೆ, $lx + my = n$ ಎಂಬ ಸಮೀಕರಣವನ್ನು ತಾಳೆಮಾಡುವಂತೆ $x = c, y = d$ ಎಂಬ ಒಂದು ಜೊತೆ ಧನಪೂರ್ಣಾಂಕ ಬೆಲೆಗಳನ್ನು ಊಹೆಯಿಂದ ಕಂಡುಹಿಡಿಯಬಹುದು. ಆಗ $lc + md = n$ ಆಗುತ್ತದೆ. ಈ ಎರಡು ಸಮೀಕರಣಗಳ ವ್ಯವಕಲನದಿಂದ $\frac{x-c}{m} = \frac{d-y}{l} = t$, ಪ್ರಾಚಲ $t$ ಪೂರ್ಣಾಂಕ.

$\therefore x = c + mt$ ಮತ್ತು $y = d - lt$ ಅಲ್ಲದೆ $x, y$ ಗಳು ಧನಪೂರ್ಣಾಂಕಗಳಾಗಬೇಕಾದರೆ, . ಇದೇ ವಿಧಾನದಿಂದ $lx - my = n$ ಎಂಬ ಸಮೀಕರಣವನ್ನೂ ಬಿಡಿಸಬಹುದು.

3ನೆಯ ಶತಮಾನದ ಡಯೊಫ್ಯಾಂಟಸ್ ಎಂಬ ಗಣಿತಶಾಸ್ತ್ರಜ್ಞ $ax^2 + b = y^2$, $ax + b = y^2$ ಎಂಬ ರೂಪದ ಅನಿರ್ದಿಷ್ಟ ವರ್ಗ ಸಮೀಕರಣಗಳನ್ನು ಬಿಡಿಸಿದ. ಪೂರ್ವಕಾಲದ ಹಿಂದೂ ಗಣಿತಜ್ಞರ ಕೃತಿಗಳಲ್ಲಿ, ಕುಟ್ಟಕ ವ್ಯವಹಾರವೆಂಬ ಹೆಸರಿನಲ್ಲಿ, ಅನಿರ್ದಿಷ್ಟ ಸಮೀಕರಣಗಳ ಬಿಡಿಸುವಿಕೆಯ ವಿಚಾರವಿದೆ. ಉದಾಹರಣೆಗೆ, 12ನೆಯ ಶತಮಾನದ ಭಾಸ್ಕರಾಚಾರ್ಯರ ಲೀಲಾವತೀ ಗಣಿತದಲ್ಲಿ

ಏಕವಿಂಶತಿಯುಂ ಶತದ್ವಯಂ ಯದ್ಗುಣಂ ಗಣಕಪಂಚಷಷ್ಟಿಯುಕ್
ಪಂಚವರ್ಜಿತ ಶತದ್ವಯೋದ್ಧೃತಂ ಶುದ್ಧಿಮಿತಿಗುಣಕಂ ನದಾಶು ॥

ಎಂಬ ಲೆಕ್ಕವಿದೆ; ಎಂದರೆ,

$(22ly + 65) \div 195 = x$ ಅಥವಾ $15x - 17y = 5$ ಎಂಬ ಅನಿರ್ದಿಷ್ಟ ಸಮೀಕರಣದ ಬಿಡಿಸಿಕೆ. ಇದರ ಉತ್ತರ $x = 5 + 15t$, ಪ್ರಾಚಲ $t = 1, 2, 3$ ಇತ್ಯಾದಿ. **(ನೋಡಿ– ಡಯೊಫೆಂಟೈನ್ ಸಮೀಕರಣಗಳು)** (ಬಿ.ಎಸ್.ಎಸ್.)

**ಅನಿರ್ಬಂಧ ರ್‍ಯಾಡಿಕಲ್ :** ಅಸಮ ಸಂಖ್ಯೆಯಲ್ಲಿ ಋಣ ವಿದ್ಯುತ್ಕಣಗಳನ್ನುಳ್ಳ (ಎಲೆಕ್ಟ್ರಾನ್) ಪರಮಾಣು ಅಥವಾ ಪರಮಾಣುಪುಂಜಗಳು (ಫ್ರೀ ರ್‍ಯಾಡಿಕಲ್ಸ್). ಅಸಮತೆಗೆ ಕಾರಣವಾಗಿರುವ ವಿದ್ಯುತ್ಕಣವನ್ನು ಪ್ರತ್ಯೇಕ ಚುಕ್ಕೆಯೊಂದರ ಮೂಲಕ ನಿರೂಪಿಸಲಾಗುತ್ತದೆ. $CH_3^0$ (ಒಟ್ಟು ಒಂಬತ್ತು ವಿದ್ಯುತ್ಕಣಗಳು) ಮತ್ತು $C_6H_5^0$ (ಒಟ್ಟು ನಲವತ್ತೊಂದು ವಿದ್ಯುತ್ಕಣಗಳು) ಪರಮಾಣು ಪುಂಜಗಳು ಅನಿರ್ಬಂಧ ರ್‍ಯಾಡಿಕಲ್‌ಗಳ ಉದಾಹರಣೆಗಳಾಗಿವೆ.

ಪರಮಾಣುಗಳ ನಡುವಣ ಪ್ರತಿಯೊಂದು ಬಂಧವೂ ಎರಡು ವಿದ್ಯುತ್ಕಣಗಳು ಕೂಡಿ ಆಗಿದೆ. ಈ ರಾಸಾಯನಿಕಬಂಧಗಳನ್ನು ಭೇದಿಸಲು ಎರಡು ಹಾದಿಗಳಿವೆ– ಹೆಟರಾಲಿಸಿಸ್ ಮತ್ತು ಹೋಮಾಲಿಸಿಸ್. ಬಂಧದಲ್ಲಿ ಭಾಗವಹಿಸಿರುವ ವಿದ್ಯುತ್ಕಣಗಳೆರಡೂ ಒಂದು ಪರಮಾಣು ಅಥವಾ ಪರಮಾಣುಪುಂಜಕ್ಕೆ ಸೇರಿ ಬಂಧ ಭೇದವಾದಾಗ ಎರಡು ಅಯಾನುಗಳ ಸೃಷ್ಟಿಯಾಗಿ ಈ ಬಗೆಯ ಭೇದನ ಹೆಟರಾಲಿಸಿಸ್ ಎಂದೆನ್ನಿಸಿಕೊಳ್ಳುತ್ತದೆ. ಹೋಮಾಲಿಸಿಸ್‌ನಲ್ಲಿ ಬಂಧದ ವಿದ್ಯುತ್ಕಣಗಳ ಸಮಹಂಚಿಕೆಯಾಗಿ ಬೇರ್ಪಡುವ ಎರಡು ಭಾಗಗಳಿಗೂ ಒಂದೊಂದು ವಿದ್ಯುತ್ಕಣ ಸೇರಿ ಎರಡು ಅನಿರ್ಬಂಧ ರ್‍ಯಾಡಿಕಲ್‌ಗಳ ಸೃಷ್ಟಿಯಾಗುತ್ತದೆ.

. ಹೆಟರಾಲಿಸಿಸ್

ಹೋಮಾಲಿಸಿಸ್

ಬಹುಮಟ್ಟಿನ ರ್‍ಯಾಡಿಕಲ್‌ಗಳಿಗೆ ಅಧಿಕ ಕ್ರಿಯಾಶಕ್ತಿ ಇದೆ. ದುರ್ಬಲ (ಡೈಲ್ಯೂಟ್) ದ್ರಾವಣಗಳಲ್ಲಿ ಮಾತ್ರ ಅಂಥ ರ್‍ಯಾಡಿಕಲ್‌ಗಳು ಇರಲು ಸಾಧ್ಯ. ತನ್ನ ಅಕ್ಷದ ಮೇಲೆ ಆವರ್ತಿಸುತ್ತಿರುವ ಅಸಮವಿದ್ಯುತ್ಕಣಕ್ಕೆ ಅಯಸ್ಕಾಂತ ಶಕ್ತಿ ಇರುವುದರಿಂದ

ಅಯಸ್ಕಾಂತ ವಲಯದಲ್ಲಿ ರ್‍ಯಾಡಿಕಲ್‌ಗಳನ್ನಿಟ್ಟಾಗ ಉಂಟಾಗುವ ಆಕರ್ಷಣೆಯ ದೆಸೆಯಿಂದ ತೂಕವ್ಯತ್ಯಾಸ ಕಂಡುಬರುತ್ತದೆ. ಇದನ್ನು ಅಳತೆ ಮಾಡುವುದರಿಂದ ರ್‍ಯಾಡಿಕಲ್‌ಗಳ ಇರುವಿಕೆಯನ್ನು ಗುರುತಿಸಬಹುದು. ಈಗ ಸುಮಾರು 20 ವರ್ಷಗಳಿಂದ ಎಲೆಕ್ಟ್ರಾನ್ ಅನುಕಾಂತೀಯ ಅನುನಾದ (ಎಲೆಕ್ಟ್ರಾನ್ ಪ್ಯಾರಮ್ಯಾಗ್ನೆಟಿಕ್ ರೆಸೊನೆನ್ಸ್, ಇ.ಪಿ.ಆರ್.) ಅಥವಾ ಎಲೆಕ್ಟ್ರಾನ್ ಭ್ರಮಣ ಅನುನಾದ (ಎಲೆಕ್ಟ್ರಾನ್ ಸ್ಪಿನ್ ರೆಸೊನೆನ್ಸ್, ಇ.ಎಸ್.ಆರ್.) ಎಂಬ ಸುಧಾರಿಸಿದ ವಿಧಾನವನ್ನು ಅನಿರ್ಬಂಧ ರ್‍ಯಾಡಿಕಲ್‌ಗಳ ಇರುವಿಕೆಯನ್ನು ಗುರುತಿಸಲು ಉಪಯೋಗಿಸಲಾಗುತ್ತಿದೆ. ಹಲವು ಪ್ರತ್ಯೇಕ ಸಂದರ್ಭಗಳಲ್ಲಿ ರ್‍ಯಾಡಿಕಲ್‌ಗಳು ಮಾತ್ರ ಸಂಯುಕ್ತದಲ್ಲಿಲ್ಲದ ಬಣ್ಣಗಳನ್ನು ಪಡೆದಿರುವುದು ಕಂಡುಬಂದಿದೆ. ಈ ವಿಶಿಷ್ಟಗುಣವನ್ನು ಆ ಸಂದರ್ಭಗಳಲ್ಲಿ ರ್‍ಯಾಡಿಕಲ್‌ಗಳ ಇರುವಿಕೆಯನ್ನು ಕಂಡುಹಿಡಿಯಲು ಉಪಯೋಗಿಸಬಹುದು. ಗೋಂಬರ್ಗ್ ಎಂಬ ವಿಜ್ಞಾನಿ ಟ್ರೈಫೀನೈಲ್ ಮೀಥೈಲ್ ರ್‍ಯಾಡಿಕಲ್‌ನ $[(C_6H_5)_3C_0]$ ಇರುವಿಕೆಯನ್ನು ಕಂಡುಹಿಡಿದುದು ಹೀಗೆಯೇ.

$(C_6H_5)_3C \ominus C\,(C_6H_5) \rightarrow 2\,(C_6H_5)_3C_0$

(ವರ್ಣರಹಿತ ಸಂಯುಕ್ತ) (ಹಳದಿ ಬಣ್ಣದ ರ್‍ಯಾಡಿಕಲ್)

ಇತರ ರ್‍ಯಾಡಿಕಲ್‌ಗಳನ್ನು ಕ್ರಿಯಾಮಿಶ್ರಣಗಳಿಗೆ (ರಿಆಕ್ಷನ್ ಮಿಕ್ಸ್‌ಚರ್) ಸೇರಿಸಿದಾಗ, ರ್‍ಯಾಡಿಕಲ್‌ಗಳನ್ನು ಮಧ್ಯವರ್ತಿಗಳನ್ನಾಗುಳ್ಳ ರಾಸಾಯನಿಕಕ್ರಿಯೆಗಳ ವೇಗ ಸಾಮಾನ್ಯವಾಗಿ ಕಡಿಮೆಯಾಗುತ್ತದೆ. ಹೊಸದಾಗಿ ಸೇರಿಸಿದ ರ್‍ಯಾಡಿಕಲ್‌ಗಳು ಮಿಶ್ರಣದಲ್ಲಿರುವ ಮಧ್ಯವರ್ತಿ ರ್‍ಯಾಡಿಕಲ್‌ಗಳೊಡನೆ ಸೇರಿ ಉದ್ದೇಶಿಸಿದ ಕ್ರಿಯೆಗೆ ಮಧ್ಯವರ್ತಿಗಳು ದೊರಕದಂತೆ ಮಾಡುವುದೇ ಈ ಕ್ರಿಯೆಯ ವೇಗ ಕಡಿಮೆಯಾಗಲು ಕಾರಣ. ರ್‍ಯಾಡಿಕಲ್‌ಗಳನ್ನು ಮಧ್ಯವರ್ತಿಗಳಾಗುಳ್ಳ ಸ್ಟೈರೀನ್ ಪಾಲಿಮರೈಸೇಷನ್ ಕ್ರಿಯೆಯನ್ನು ಡೈಫೀನೈಲ್ ಪಿಕ್ರೈಲ್ ಹೈಡ್ರಜಿಲ್‌ನಂಥ (ಡಿ.ಪಿ.ಪಿ.ಎಚ್.) ರ್‍ಯಾಡಿಕಲ್‌ಗಳು ಪೂರ್ಣವಾಗಿ ಪ್ರತಿಬಂಧಿಸಬಲ್ಲುವು. ಅನಿರ್ಬಂಧ ರ್‍ಯಾಡಿಕಲ್‌ಗಳ ಈ ವಿಶಿಷ್ಟ ಗುಣ ಯಾವುದಾದರೊಂದು ಕ್ರಿಯೆಯಲ್ಲಿ ರ್‍ಯಾಡಿಕಲ್‌ಗಳು ಮಧ್ಯವರ್ತಿಗಳೇ ಅಲ್ಲವೇ ಎಂಬುದನ್ನು ಕಂಡುಹಿಡಿಯಲು ಸಹಾಯಕವಾಗಿದೆ.

ಅನಿರ್ಬಂಧ ರ್‍ಯಾಡಿಕಲ್‌ಗಳ ಸೃಷ್ಟಿ ಮೂರು ಬಗೆಗಳಲ್ಲಿ ಆಗಬಹುದು: 1. ಶಾಖದಿಂದ ಬಂಧಭೇದನ. 2. ಬೆಳಕಿನ ಅಥವಾ ಅಗೋಚರಕಿರಣಗಳಿಂದ ಬಂಧಭೇದನ. 3. ಏಕ ಋಣವಿದ್ಯುತ್ಕಣ ಉತ್ಕರ್ಷಣ, ಅಪಕರ್ಷಣ ವಿಧಿಗಳು (ಒನ್ ಎಲೆಕ್ಟ್ರಾನ್ ಆಕ್ಸಿಡೇಷನ್ ಆ್ಯಂಡ್ ರಿಡಕ್ಷನ್ ಪ್ರೊಸೆಸಸ್).

$400^o$–$600^o$ ಸೆಂ.ಗ್ರೇ. ಉಷ್ಣತೆಯವರೆಗೆ ಕಾಯಿಸುವುದರ ಮೂಲಕ ಅಣುಗಳಲ್ಲಿನ ಪರಮಾಣುಗಳ ನಡುವಣ ಬಂಧಗಳ ಭೇದನಕ್ಕೆ ಬೇಕಾಗುವ ಶಕ್ತಿಯನ್ನು ಒದಗಿಸಬಹುದು. ಆದರೆ ಹಲವು ಪ್ರತ್ಯೇಕ ಸಂಯುಕ್ತಗಳಲ್ಲಿ ದುರ್ಬಲ ಬಂಧಗಳಿದ್ದು, ಬಂಧ ಭೇದ

ಕೇವಲ $50^o$– $150^o$ ಸೆ. ಉಷ್ಣತೆಯಲ್ಲಿಯೇ ಆಗಬಲ್ಲುದು. ಇಂಥ ಸಂಯುಕ್ತಗಳನ್ನು ರ್ಯಾಡಿಕಲ್ ಕ್ರಿಯೆಗಳಲ್ಲಿ ಆರಂಭಕಾರಿಗಳನ್ನಾಗಿ (ಇನಿಷಿಯೇಟರ್ಸ್) ಉಪಯೋಗಿಸಬಹುದು. ಇಂಥ ಆರಂಭಕಾರಿಗಳಿಂದ ಉತ್ಪತ್ತಿಯಾದ ರ್ಯಾಡಿಕಲ್‌ಗಳು ಇತರ ಸಂಯುಕ್ತಗಳ ಅಣುಗಳಲ್ಲಿ ಬಂಧಭೇದನವನ್ನು ಪ್ರಚೋದಿಸಿ, ಸಾಮಾನ್ಯ ಪರಿಸ್ಥಿತಿಯಲ್ಲಿ ಬೇಕಾಗುವ ಉಷ್ಣಾಂಶಕ್ಕಿಂತ ಅತಿಕಡಿಮೆ ಉಷ್ಣಾಂಶದಲ್ಲಿಯೇ ಅನೇಕ ಬಗೆಯ ಅನಿರ್ಬಂಧ ರ್ಯಾಡಿಕಲ್‌ಗಳ ಸೃಷ್ಟಿಯನ್ನು ಸಾಧಿಸಬಲ್ಲವು. ಸಾಮಾನ್ಯವಾಗಿ ಪರ್‌ಆಕ್ಸೈಡ್ ಮತ್ತು ಆಜೋ ಸಂಯುಕ್ತಗಳನ್ನು ಈ ಬಗೆಯ ಆರಂಭಕಾರಿಗಳಾಗಿ ಉಪಯೋಗಿಸಲಾಗುತ್ತದೆ. ಅಲ್ಲದೆ ಅವುಗಳಿಂದ ಆಗುವ ರ್ಯಾಡಿಕಲ್ ಸೃಷ್ಟಿಯನ್ನು ಕೆಳಗೆ ತೋರಿಸಿರುವ ಸಮೀಕರಣಗಳಿಂದ ನಿದರ್ಶಿಸಬಹುದು:–

1 $$R-O-O-R \xrightarrow{50^0-150^0} 2R-O^0$$
(ಪರ್ ಆಕ್ಸೈಡ್)

$$R-O^0 + R'-H \longrightarrow R-OH + R'^0$$
ಅಥವಾ
$$R-O^0 + R'-H \longrightarrow R-O-R' + H^0$$

2 $$R-N=N-R \longrightarrow 2R^0 + N_2$$
(ಆಜೋ ಸಂಯುಕ್ತ)

$$R^0 + R'-H \longrightarrow R-H + R'^0$$
ಅಥವಾ
$$R^0 + R'-H \longrightarrow R-R' + H^0$$

ಈ ರೀತಿ ಸೃಷ್ಟಿಯಾದ ರ್ಯಾಡಿಕಲ್‌ಗಳು ಇತರ ಅಣುಗಳೊಡನೆ ರ್ಯಾಡಿಕಲ್ ಕ್ರಿಯೆಗಳಲ್ಲಿ ಭಾಗವಹಿಸಿ ಬೇರೆ ಬಗೆಯ ರ್ಯಾಡಿಕಲ್‌ಗಳನ್ನು ಸೃಷ್ಟಿಸಬಲ್ಲವು. ಹೀಗೆ ಒಂದಾದ ಮೇಲೊಂದರಂತೆ ರ್ಯಾಡಿಕಲ್‌ಗಳ ಸೃಷ್ಟಿಯನ್ನು ಪರಂಪರೆಯಾಗಿ ನಡೆಸಿಕೊಂಡು ಬರುವ ಕ್ರಿಯೆಗಳಿಗೆ ವ್ಯಾಪಕಕ್ರಿಯೆಗಳೆಂದು(ಪ್ರೊಪಗೇಷನ್ ರಿಆಕ್ಷನ್) ಹೆಸರು. ರ್ಯಾಡಿಕಲ್ ಕ್ರಿಯೆಗಳ ಅಂತ್ಯ ರ್ಯಾಡಿಕಲ್‌ಗಳೊಡನೆ ರ್ಯಾಡಿಕಲ್‌ಗಳು ಕೂಡಿ ಸ್ಥಿರ ಅಣುಗಳು ಸಂಯೋಗವಾದಾಗ ಆಗುತ್ತದೆ.ಇಂಥ ಅಂತ್ಯ ಕ್ರಿಯೆಗಳನ್ನು (ಟರ್ಮಿನೇಷನ್ ರಿಆಕ್ಷನ್) ಕೆಳಗಿನ ಸಮೀಕರಣದಿಂದ ನಿದರ್ಶಿಸಬಹುದು.

$$R-O^0 + R'^0 \longrightarrow R-O-R'$$
$$2R'^0 \longrightarrow R'-R'$$
$$R'^0 + H^0 \longrightarrow R'-H$$
$$R'^0 + R^0 \longrightarrow R'-R$$

ಈ ಬಗೆಯ ಅಂತ್ಯ ಕ್ರಿಯೆಗಳಿಂದ ರ್ಯಾಡಿಕಲ್‌ಗಳ ನಷ್ಟ ಸಂಭವಿಸಿದಾಗ ರ್ಯಾಡಿಕಲ್ ಕ್ರಿಯೆಗಳು ಪರಿಮಿತಿಗೊಂಡು ಕ್ರಿಯಾಂತ್ಯಕ್ಕೆ ದಾರಿಯಾಗುತ್ತವೆ. ವ್ಯಾಪಕ ಕ್ರಿಯೆಯೇ ಪ್ರಮುಖವಾಗುಳ್ಳ ಪರ್‌ಆಕ್ಸೈಡ್ ಮತ್ತು ಅಜೋ ಸಂಯುಕ್ತಗಳ ರಾಸಾಯನಿಕ ಕ್ರಿಯೆಗಳಲ್ಲಿ ಶಕ್ತಿ ಶಾಖರೂಪದಲ್ಲಿ ಬಿಡುಗಡೆಯಾಗುವುದರಿಂದ ಸ್ಫೋಟನೆಗಳಿಗೆ ಅವಕಾಶ ಉಂಟು. ಆದ್ದರಿಂದ ಈ ಬಗೆಯ ಸಂಯುಕ್ತಗಳನ್ನು ಉಪಯೋಗಿಸುವಾಗ ಜಾಗರೂಕತೆ ಅತ್ಯವಶ್ಯಕ.

ಬಂಧಭೇದಕ್ಕೆ ಬೇಕಾಗುವ ಶಕ್ತಿಯನ್ನು ಶಾಖರೂಪದಲ್ಲಿ ಮಾತ್ರವಲ್ಲದೆ ಬೆಳಕಿನ ಕಿರಣ ಮತ್ತು/ಅಥವಾ ಅಗೋಚರ ಕಿರಣಗಳ ಮೂಲಕವೂ ಒದಗಿಸಬಹುದು. ಇಂಥ ಶಕ್ತಿಯನ್ನು ನೇರವಾಗಿ ಅಥವಾ ಇತರ ಅಣುಗಳ ಮೂಲಕವಾಗಿ ಉಪಯೋಗಿಸಬಹುದು. ಈ ಬಗೆಯ ಶಕ್ತಿ ವರ್ಗಾವಣೆ ಮಾಡಿ ರ್ಯಾಡಿಕಲ್‌ಗಳನ್ನು ಸೃಷ್ಟಿಸಬಲ್ಲ ಸಾಮರ್ಥ್ಯ ಪಾದರಸಕ್ಕಿದೆ.

$Hg$ + ಶಕ್ತಿ $\longrightarrow$ $Hg^*$ (ಶಕ್ತಿಪೂರಿತ ಅಣು)

$$Hg^* + R\text{-}H \longrightarrow Hg + R^0 + H^0$$

ಕ್ರಿಯಾಂತ್ಯದಲ್ಲಿ ಪಾದರಸದ ಅಣುವಿನಲ್ಲಿ ಯಾವ ಬದಲಾವಣೆಯೂ ಆಗದಿರುವುದರಿಂದ ಅದನ್ನು ಈ ಕ್ರಿಯೆಯಲ್ಲಿ ವೇಗವರ್ಧಕವೆಂದು ಭಾವಿಸಬಹುದು. ಏಕ ಋಣವಿದ್ಯುತ್ಕಣ ಉತ್ಕರ್ಷಣ ಅಪಕರ್ಷಣಗಳು ವಿದ್ಯುದ್ವಿಭಜನೆ ಗಳಲ್ಲೂ (ಎಲೆಕ್ಟ್ರೊಲಿಸಿಸ್) ಪರ್ ಆಕ್ಸೈಡ್ ಮತ್ತು ಲೋಹಗಳನ್ನುಪ ಯೋಗಿಸುವ ಕ್ರಿಯೆಗಳಲ್ಲೂ ಸಾಧ್ಯ. ಈ ಬಗೆಯ ಹಲವು ಕ್ರಿಯೆಗಳ ನಿದರ್ಶನಗಳನ್ನು ಕೆಳಗೆ ತೋರಿಸಲಾಗಿದೆ.

$R\text{-}COO^{\ominus} \xrightarrow{e^{\ominus}} R\text{-}COO^0$
ಉತ್ಕರ್ಷಣ

$$H_2O_2 + Fe^{++} \longrightarrow Fe^{+++} + OH^{\ominus} + OH^0$$



ಅನಿಲಿನ್

ಅನಿರ್ಬಂಧ ರ್ಯಾಡಿಕಲ್‌ಗಳನ್ನು ಮಧ್ಯವರ್ತಿಗಳಾಗುಳ್ಳ ಕ್ರಿಯೆಗಳು ನಮಗೆ ಪರಿಚಿತವಾದ ಅನೇಕ ವಸ್ತುಗಳ ಸಂಯೋಜನೆಯಲ್ಲಿ ನಡೆಯುತ್ತವೆ. ಹ್ಯಾಲೋ ಹೈಡ್ರೋಕಾರ್ಬನ್‌ಗಳು ಮತ್ತು ಕೃತಕ ರಬ್ಬರ್. ಪಾಲಿಎಥಿಲೀನ್, ಪಾಲಿಸ್ಟೈರೀನ್, ಟೆಫ್ಲಾನ್, ಪಾಲಿವಿನೈಲ್‌ಗಳೇ ಮೊದಲಾದ ವಿವಿಧ ಬಗೆಯ ಪ್ಲಾಸ್ಟಿಕ್ ವಸ್ತುಗಳ ಅನೇಕ ಸಂಯೋಜನೆಗಳಲ್ಲಿ ಅನಿರ್ಬಂಧ ರ್ಯಾಡಿಕಲ್‌ಗಳ ಪಾತ್ರ ಪ್ರಮುಖವಾದುದು. ಪ್ರಕೃತಿಯಲ್ಲಿ ಬೆಳಕಿನ ನೆರವಿನಿಂದ ನಡೆಯುವ ಕ್ಲೋರೋಫಿಲ್ ಮೊದಲಾದ ಬಹು ಸಂಖ್ಯೆಯ ಕ್ಲಿಷ್ಟ ಸಂಯುಕ್ತಗಳ ಸಂಯೋಜನೆಗಳಲ್ಲಿ ಅನಿರ್ಬಂಧ ರ್ಯಾಡಿಕಲ್‌ಗಳು ಮಧ್ಯವರ್ತಿಗಳಾಗಿರುವುದು ತಿಳಿದು ಬಂದಿದೆ. (ಕೆ.ಟಿ.ಎಸ್.)

**ಅನಿರ್ಬಂಧಿತ ಆರ್ಥಿಕ ವ್ಯವಸ್ಥೆ :** ಜನತೆಯ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು, ದೇಶದ ಆರ್ಥಿಕವ್ಯವಸ್ಥೆ ಅನಿರ್ಬಂಧವಾಗಿರಬೇಕು, ಎನ್ನುವುದೇ ಈ ವ್ಯವಸ್ಥೆಯ (ಅಬಂಧನೀತಿ, ಅನಿರ್ಬದ್ಧ ವ್ಯವಹಾರ, ಕಾರ್ಯಸ್ವಾತಂತ್ರ್ಯ, ಲೇಸೇ ಪೇರ್) ಮುಖ್ಯಾಂಶ.

ಐತಿಹಾಸಿಕವಾಗಿ ಈ ವಿಚಾರಸರಣಿ ನೈಸರ್ಗಿಕ ಆರ್ಥಿಕವ್ಯವಸ್ಥೆಯಲ್ಲಿ ನಂಬುಗೆಯನ್ನಿರಿಸಿದ ಫಿಸಿಯೊಕ್ರ್ಯಾಟ್ ಪಂಥದ ಅರ್ಥಶಾಸ್ತ್ರಜ್ಞರ ಕಾಲದಿಂದ ಅಂದರೆ 18ನೆಯ ಶತಮಾನದ ಮಧ್ಯಕಾಲದಿಂದ 19ನೆಯ ಶತಮಾನದ ಮಧ್ಯಕಾಲದವರೆಗೆ ಪ್ರಚಲಿತವಾಗಿತ್ತು. ಈ ಅವಧಿಯಲ್ಲಿ ಬ್ರಿಟನ್ನಿನಲ್ಲಿ ಆ್ಯಡಂಸ್ಮಿತ್ ಎಂಬ ಅರ್ಥಶಾಸ್ತ್ರಜ್ಞನ ವಿಚಾರಗಳ ಪ್ರಭಾವಕ್ಕೊಳಪಟ್ಟು ಬೆಳೆದುಬಂದ ಕ್ಲಾಸಿಕಲ್ ಅರ್ಥಶಾಸ್ತ್ರ. ಜನಜೀವನದಲ್ಲಿ ಸರ್ಕಾರದ ಪಾತ್ರವೇನೆಂಬುದರ ಮೇಲೆ ಸಾಕಷ್ಟು ಬೆಳಕು ಚೆಲ್ಲುವಂಥದಾಗಿತ್ತು. ಸರ್ಕಾರವಾಗಲೀ ಬಲಾತ್ಕಾರಮಾಡಲು ಅಧಿಕಾರವುಳ್ಳ ಯಾವುದೇ ಮಂಡಲಿಯಾಗಲೀ ಜನತೆಯ ಆರ್ಥಿಕ ವ್ಯವಹಾರಗಳಲ್ಲಿ ಕೈಹಾಕದೆ. ಅವುಗಳನ್ನು ಸಂಬಂಧಪಟ್ಟ ವ್ಯಕ್ತಿಗಳ ಸ್ವಯಂನಿರ್ಣಯಕ್ಕೆ ಬಿಟ್ಟುಕೊಟ್ಟರೆ. ಅವರು ತಮ್ಮ ಹಿತ ರಕ್ಷಣೆಯನ್ನು ತಾವೇ ಮಾಡಿಕೊಳ್ಳುತ್ತಾರೆ ಎಂದು ಈ ಅರ್ಥಶಾಸ್ತ್ರ ಸಾರಿ ಹೇಳುತ್ತದೆ. ಆಶಾದಾಯಕವಾದ ವಿಶ್ವದ ಸ್ವರೂಪ, ನೈಸರ್ಗಿಕ ಪದ್ಧತಿಯ ಭಾವನೆ, ಸಮನ್ವಯಗಳಿಂದೊಡಗೂಡಿದ ಆರ್ಥಿಕವ್ಯವಸ್ಥೆ ಇವೆಲ್ಲವೂ ನಿರ್ದಿಷ್ಟ ನಿಯಂತ್ರಣದಿಂದ ವಿಮುಕ್ತವಾದಾಗ, ಮಾನವನ ಹಿತಗಳನ್ನು ಅಧಿಕಗೊಳಿಸುವುವೆಂಬ ನಂಬುಗೆ ಆಗ್ಗೆ ಪ್ರಬಲವಾಗಿದ್ದು ಅದೇ ಅರ್ಥಶಾಸ್ತ್ರದ ಮೂಲಾಧಾರವಾಗಿತ್ತು. ಆ್ಯಡಂಸ್ಮಿತ್ ಈ ಮೂಲ ವಿಚಾರವನ್ನು ಫಿಸಿಯೋಕ್ರ್ಯಾಟ್ ಪಂಥದವರಿಂದ ತೆಗೆದುಕೊಂಡ. ಆದರ ಲೇಸೇ ಫೇರ್ ಎಂಬ ಮಾತು ಮಾತ್ರ, ಜೆ. ಎಸ್. ಮಿಲ್ ತನ್ನ ಅರ್ಥಶಾಸ್ತ್ರದಲ್ಲಿ ಉಪಯೋಗಿಸುವವರೆಗೆ (1848) ಅಷ್ಟೊಂದು ಬಳಕೆಗೆ ಬರಲಿಲ್ಲ. ಇಂಗ್ಲೆಂಡಿನಲ್ಲಿ ಕಾಬ್ಡೆನ್ ತತ್ತ್ವ ಎಂಬ ಮಾತನ್ನು ಇದಕ್ಕೆ ಪ್ರತಿಯಾಗಿ ಉಪಯೋಗಿಸಲಾಗುತ್ತಿತ್ತು.

ಈ ವಿಚಾರಗಳನ್ನು ಸಾರಿ ಹೇಳುವಲ್ಲಿ ಆ್ಯಡಂ ಸ್ಮಿತ್ ಪ್ರಮುಖ ಪಾತ್ರವಹಿಸಿದ. ಅಲ್ಲದೆ 18ನೆಯ ಶತಮಾನದ ಕೊನೆಯಭಾಗದಿಂದ 19ನೆಯ ಶತಮಾನದ ಪೂರ್ವ ಕಾಲದವರೆಗೆ ಇತರ ಎಲ್ಲ ಶ್ರೇಷ್ಠತರಗತಿಯ ಅರ್ಥಶಾಸ್ತ್ರಜ್ಞರೂ ಈ ವಿಚಾರವನ್ನು ಎತ್ತಿ ಹಿಡಿದಿದ್ದಾರೆ. ಅನಿರ್ಬಂಧ ಸ್ಪರ್ಧೆ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಕೈವಾಡದ ಅಭಾವ–ಇವು ರಾಷ್ಟ್ರವನ್ನು ಆರ್ಥಿಕವಾಗಿ ಅಭಿವೃದ್ಧಿಗೊಳಿಸಲು ಹಾಗೂ ಜನತೆಯ ಬೇಡಿಕೆಗಳನ್ನು ಪೂರೈಸಲು ಇರಬೇಕಾದ ಪ್ರಥಮ ಅವಶ್ಯಕತೆಗಳೆಂದು ಇವರು ಹೇಳುತ್ತಾರೆ. ಇಂಗ್ಲೆಂಡಿನಲ್ಲಿಯ ಸಮಕಾಲೀನ ಔದ್ಯಮಿಕ ಕ್ರಾಂತಿಯೇ ಈ ವಿಚಾರಗಳ ಹಿನ್ನೆಲೆಯಾಗಿತ್ತು. ಆ್ಯಡಂ ಸ್ಮಿತ್ ಕೂಡ ಔದ್ಯಮಿಕ ಬಂಡವಾಳಗಾರರ ಪ್ರಭಾವಕ್ಕೆ ಒಳಗಾಗಿದ್ದ. ತಮ್ಮ ಸ್ವಾರ್ಥಕ್ಕಾಗಿ ಅವನ ವಿಚಾರಗಳನ್ನು ಎತ್ತಿಹಿಡಿಯುತ್ತಿದ್ದ ಈ ಬಂಡವಾಳಗಾರರಿಂದಲೇ ಅವನಿಗೆ ಪ್ರೋತ್ಸಾಹ ದೊರೆಯಿತೆಂದು ಹೇಳಬಹುದು. ಆದ್ದರಿಂದಲೇ ಆತ ವಾಣಿಜ್ಯವಾದದ ಅನೇಕ ಮೂಲಾಂಶಗಳನ್ನು ವಿರೋಧಿಸಿದ. ಅಂತೆಯೇ ವಿದೇಶೀ ವ್ಯಾಪಾರ ಸಂಬಂಧದಲ್ಲಿ ರಕ್ಷಣಾನೀತಿಯನ್ನು ವಿರೋಧಿಸಿ ಅನಿರ್ಬಂಧ ವಿದೇಶೀ ವ್ಯಾಪಾರವನ್ನು (ಫ್ರೀಟ್ರೇಡ್) ಪ್ರಚಲಿತಗೊಳಿಸಿದ. ಇಂಥ ವಿದೇಶೀ ವ್ಯವಹಾರನೀತಿ ಸರಕುಗಳನ್ನು ತಯಾರಿಸುವವರಿಗೆ ಹೆಚ್ಚು ಅನುಕೂಲವಾಗಿದ್ದರೂ ಅದರಿಂದ ಗ್ರಾಹಕರಿಗೇ ಹೆಚ್ಚು ಉಪಯೋಗವೆಂದು ವಾದಿಸಲಾಗುತ್ತಿತ್ತು. ಅದೇ ರೀತಿ, ದರಗಳ ಏರಿಕೆಯನ್ನು ತಡೆಹಿಡಿದು ಗ್ರಾಹಕನ ಹಿತವನ್ನು ಸಾಧಿಸುವ ದೃಷ್ಟಿಯಿಂದ, ಏಕಸ್ವಾಮ್ಯಸಂಯೋಗ ಪದ್ಧತಿಯನ್ನು (ಮೊನೊಪೊಲಿಸ್ಟಿಕ್ ಕಾಂಬಿನೇಷನ್) ವಿರೋಧಿಸಲಾಗುತ್ತಿತ್ತು. ಆದರೆ ಏಕಸ್ವಾಮ್ಯಸಂಯೋಗಪದ್ಧತಿಯನ್ನು ತಡೆಹಿಡಿಯಬೇಕಾದರೆ ಸರ್ಕಾರ ಆರ್ಥಿಕ ವ್ಯವಹಾರಗಳಲ್ಲಿ ಹೆಚ್ಚು ಹೆಚ್ಚು ಕೈಹಾಕುವುದು ಅನಿವಾರ್ಯವಾಯಿತು. ವ್ಯಕ್ತಿ ಹಾಗೂ ಸಮಾಜ ಇವೆರಡರ ಹಿತಗಳೂ ಒಂದೇ ಆಗಿದೆ ಎಂದು ಹೇಳಿ, ವಿಶ್ವ ವ್ಯಾಪಕವಾಗಿದ್ದ ಈ ವಿಚಾರ ಪ್ರಣಾಲಿ, ಸಮಾಜ ಹಾಗೂ ರಾಜ್ಯ ಇವುಗಳ ಬಗ್ಗೆ ಒಂದು ವಿಶಿಷ್ಟದೃಷ್ಟಿಯನ್ನೇ ಬೆಳೆಯಿಸಿತು. ಸರ್ಕಾರ ಮುಖ್ಯವಾಗಿ ಖಾಸಗಿ

ಒಡೆತನದಲ್ಲಿದ್ದ ಸಂಪತ್ತನ್ನು ಸಂರಕ್ಷಿಸುವ ಹೊಣೆಯನ್ನು ಹೊರಬೇಕಾಯಿತು. ಇಂಗ್ಲೆಂಡ್‌ದೇಶ ಪ್ರಥಮವಾಗಿ ಔದ್ಯಮಿಕಕ್ರಾಂತಿಯನ್ನು ಅನುಭವಿಸಬೇಕಾಗಿ ಬಂದದ್ದರಿಂದ, ಅಲ್ಲಿ ಲೇಸೇ ಪೇರ್ ಇಲ್ಲವೆ ವ್ಯಕ್ತಿವಾದದ ತೀವ್ರಪ್ರಚಾರ ಪಡೆಯಿತು. ಆದರೆ ಇತರ ದೇಶಗಳಲ್ಲಿ ಅದರ ಪ್ರಚಾರಕ್ಕೆ ಅನೇಕ ವರ್ಷಗಳು ಬೇಕಾದುವು.

ಆಲ್ಫ್ರೆಡ್ ಮಾರ್ಷಲ್ ಮತ್ತು ಇತರ ಅರ್ಥಶಾಸ್ತ್ರಜ್ಞರು ಎತ್ತಿತೋರಿಸಿದಂತೆ, ಅನಿರ್ಬಂಧಿತ ಆರ್ಥಿಕನೀತಿಯನ್ನು ಪರೀಕ್ಷಿಸಿ ನೋಡಿದಾಗ ಅದರಲ್ಲಿ ಕೆಲವು ಅಸಂಬದ್ಧತೆಗಳು ಕಾಣಿಸಿಕೊಳ್ಳುತ್ತವೆ. ಗ್ರಾಹಕವಸ್ತುವಿಗೆ ಕೊಡುವ ಬೆಲೆ ಅವನ ವರಮಾನದ ಪ್ರಮಾಣವನ್ನು ಅವಲಂಬಿಸಿರುತ್ತದೆಯಲ್ಲದೆ ಅದರ ಉಪಯುಕ್ತತೆಯನ್ನಲ್ಲ. ಆದ್ದರಿಂದ ಅವನ ವರಮಾನವನ್ನು ಹೆಚ್ಚಿಸಲಿಕ್ಕೂ ಆರ್ಥಿಕ ಅಸಮಾನತೆಗಳನ್ನು ನಿವಾರಿಸಲಿಕ್ಕೂ ಸರ್ಕಾರ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾಗುವುದು. ಅದೇ ಪ್ರಕಾರ, ಈ ಮೊದಲೇ ಕಾಣಿಸಿದಂತೆ ಸರ್ಕಾರ ಏಕಸ್ವಾಮ್ಯಸಂಯೋಗ ಪದ್ಧತಿಯನ್ನು ತಡೆಯಲಿಕ್ಕೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಅನಿರ್ಬಂಧಿತ ಆರ್ಥಿಕಪದ್ಧತಿ ವಾಸ್ತವಿಕತೆಗೆ ವಿರುದ್ಧವಾಗಿದೆ ಎಂದು ಹೇಳಬಹುದು. ಸಾಕಷ್ಟು ಲಾಭಕ್ಕೆ ಅವಕಾಶವಿತ್ತು ಬಂಡವಾಳವನ್ನು ಹೆಚ್ಚು ಹೆಚ್ಚಾಗಿ ತೊಡಗಿಸಲಿಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸುವಲ್ಲಿ ಮಾತ್ರ ಕೆಲಮಟ್ಟಿಗೆ ಈ ನೀತಿಯ ಉಪಯುಕ್ತತೆಯನ್ನು ಕಂಡುಕೊಳ್ಳಬಹುದು.

ಇನ್ನು 19ನೆಯ ಶತಮಾನದ ಉತ್ತರಾರ್ಧದಲ್ಲಿ, ತಾಂತ್ರಿಕ ಕ್ರಾಂತಿಯಿಂದಾಗಿ ಖಾಸಗೀ ಸಂಘಟನೆಯ ಪದ್ಧತಿಯಲ್ಲಿ (ಪ್ರೈವೆಟ್ ಎಂಟರ್‌ಪ್ರೈಸ್) ವಿಶೇಷ ಬದಲಾವಣೆಗಳಾದುವು. ವ್ಯವಹಾರವ್ಯವಸ್ಥೆಯ ಪ್ರಮಾಣಗಳು ಬೆಳೆದದ್ದರ ಪರಿಣಾಮವಾಗಿ ಗ್ರಾಹಕನ ಆರ್ಥಿಕಶಕ್ತಿ ಕುಗ್ಗಿತು; ಆದರೆ ರಾಜಕೀಯದಲ್ಲಿ ಪ್ರಜಾಪ್ರಭುತ್ವದ ಪ್ರಭಾವದಿಂದಾಗಿ, ಅವನ ರಾಜಕೀಯ ಬಲ ಬೆಳೆದಿತ್ತು. ಕಾಬ್ಡೆನ್ ಹಾಗೂ ಬ್ರಾಯಿಟ್ ಮುಂತಾದ ಅರ್ಥಶಾಸ್ತ್ರಜ್ಞರು ರಾಜಕೀಯ ಶಕ್ತಿಯನ್ನು ಆರ್ಥಿಕಬಲದ ಸಂಪಾದನೆಗಾಗಿ ಉಪಯೋಗಿಸಬೇಕೆಂದು ಹೇಳುತ್ತಿದ್ದರು. ಅವರು ಈ ಗುರಿಗಳನ್ನು ನಿಶ್ಚಿತವಾದವುಗಳೆಂದು (ಪಾಸಿಟಿವ್) ತಿಳಿಯದೆ ನಿಷೇಧವಾದವುಗಳೆಂದು (ನೆಗೆಟಿವ್) ಅಭಿಪ್ರಾಯಪಟ್ಟರು. ಆದರೆ ಆರ್ಥಿಕಬಲ ಸುಸಂಘಟಿತವಾಗಿ ಬೆಳೆದಂತೆ ಇಂಥ ಯಾವುದೇ ನಿಬಂಧವನ್ನು ಹಾಕುವುದು ಅಶಕ್ಯವಾಯಿತು. ಈ ಕಾರಣಗಳಿಗಾಗಿ, ಆಧುನಿಕ ರಾಜ್ಯಗಳಲ್ಲಿ ಅನಿರ್ಬಂಧತೆ ತಾತ್ತ್ವಿಕವಾಗಿ ಅಸಮ್ಮತವೂ ನೈತಿಕವಾಗಿ ಅನುಪಯುಕ್ತವೂ ಆಗಿದೆ. ತಾತ್ತ್ವಿಕವಾಗಿ ಇದು ಈಗ ನಿರರ್ಥಕವಾಗಿದ್ದರೂ ಆರ್ಥಿಕರಂಗದಲ್ಲಿ ವ್ಯಕ್ತಿಸ್ವಾತಂತ್ರ್ಯವನ್ನು ಎತ್ತಿಹಿಡಿಯಲು, ಅನೇಕಕಡೆಗಳಲ್ಲಿ ಇದನ್ನು ಹೆಚ್ಚು ಉಪಯೋಗಿಸಿಕೊಳ್ಳಲಾಗುತ್ತಿದೆ.

ಅರ್ಥಶಾಸ್ತ್ರ ಹಾಗೂ ರಾಜ್ಯಶಾಸ್ತ್ರಗಳ ವಿಂಗಡಣೆಯ ಆಧಾರದ ಮೇಲೆಯೇ ನಿಂತಿದ್ದ ಈ ತತ್ತ್ವ, ರಾಜಕೀಯ ಶಕ್ತಿಯನ್ನು ಆರ್ಥಿಕಸಾಧನೆಗಳಿಗಾಗಿ ಸಾಮಾನ್ಯವಾಗಿ ಉಪಯೋಗಿಸುವ ಆಧುನಿಕಯುಗದಲ್ಲಿ ಅರ್ಥಹೀನವಾಗಿದೆ. ವ್ಯಕ್ತಿ ಪ್ರಾಧಾನ್ಯ ಹಾಗೂ ಅನಿರ್ಬಂಧಸ್ಪರ್ಧೆ ಈ ತತ್ತ್ವಕ್ಕೆ ಮೂಲವಾಗಿದ್ದು. ಬಂಡವಾಳ ಪ್ರಧಾನ ಆರ್ಥಿಕವ್ಯವಸ್ಥೆಯಲ್ಲಿ ಅದಕ್ಕೆ ಸ್ಥಾನವಿಲ್ಲದಂತಾಗಿದೆ. (ಬಿ.ಬಿ.ಕೆ.)

**ಅನಿಲ್‌ಕುಂಬ್ಳೆ :** 1970–. ಪ್ರಸಿದ್ಧ ಕ್ರಿಕೆಟ್ ಆಟಗಾರ. 1970 ಅಕ್ಟೋಬರ್ 17ರಂದು ಬೆಂಗಳೂರಿನಲ್ಲಿ ಜನಿಸಿದರು. ಬೆಂಗಳೂರಿನ ಆರ್.ವಿ.ಶಿಕ್ಷಣ ಸಂಸ್ಥೆ ಯಲ್ಲಿ ಓದಿ ಬಿ.ಇ. ಪದವಿ ಪಡೆದರು. ಎತ್ತರದ ನಿಲುವುಳ್ಳ ಇವರು ಸಾಂಪ್ರದಾಯಿಕ ಶೈಲಿಯಲ್ಲಿ ಸ್ಪಿನ್, ಗೂಗ್ಲಿ, ಮಧ್ಯಮ ವೇಗದ ಬೌಲರ್ ಆಗಿ ಪರಿಣಿತರು. ಬ್ಯಾಟಿಂಗ್‌ನಲ್ಲಿ ಪರಿಶ್ರಮವುಳ್ಳವರು. ಆರಂಭದಲ್ಲಿ ಇವರು ಬ್ಯಾಟ್ಸ್‌ಮನ್ ಆಗಿಯೇ ಭರವಸೆ ಮೂಡಿಸಿದ್ದರು.

19 ವರ್ಷದ ಒಳಗಿನ ಆಟಗಾರರಾಗಿ ಭಾರತವನ್ನು ಪ್ರತಿನಿಧಿಸಿ ಪಾಕಿಸ್ತಾನದ ವಿರುದ್ಧ 1990ರಲ್ಲಿ ನಡೆದ ಪಂದ್ಯವೊಂದರಲ್ಲಿ 113 ರನ್ ಬಾರಿಸಿದ್ದರು. ಇದೇ ವರ್ಷ ಆಸ್ಟ್ರೇಲಿಯ ಕಪ್‌ಗಾಗಿ ಷಾರ್ಜದಲ್ಲಿ ನಡೆದ ಶ್ರೀಲಂಕ ವಿರುದ್ಧದ ಪಂದ್ಯದಲ್ಲಿ ಭಾರತದ ಪರ ಆಡಿದರು. ಇದು ಇವರು ಆಡಿದ ಮೊದಲ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯ. ಇವರು ಭಾರತ ತಂಡದ ಉಪನಾಯಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. 1999 ಫೆಬವರಿ 4ರಂದು ಪಾಕಿಸ್ತಾನದ ವಿರುದ್ಧ ದೆಹಲಿಯ ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ ನಡೆದ ಟೆಸ್ಟ್ ಮ್ಯಾಚ್ 2ನೆಯ ಇನ್ನಿಂಗ್ಸ್‌ನಲ್ಲಿ 23.3

ಓವರ್‌ಗಳಲ್ಲಿ 74 ರನ್‌ಗಳನ್ನಿತ್ತು 10 ವಿಕೆಟ್‌ಗಳನ್ನು ಪಡೆದು ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದರು. ವಿಶ್ವ ಕ್ರಿಕೆಟ್ ರಂಗದಲ್ಲಿ ಇಂಥ ಸಾಧನೆಮಾಡಿದ ಎರಡನೆಯ ವ್ಯಕ್ತಿಯಾಗಿ ವಿಶ್ವಕ್ಕೆ ಪರಿಚಯಗೊಂಡರು. ಈ ಹಿಂದೆ ಇಂಗ್ಲೆಂಡ್ ತಂಡದ ಆಫ್ ಸ್ಪಿನ್ನರ್ ಜಿಮ್‌ಲೇಕರ್ ಇಂಥ ಸಾಧನೆಮಾಡಿದ ಮೊದಲ ವ್ಯಕ್ತಿಯಾಗಿದ್ದರು (1956). ಕುಂಬ್ಳೆಯವರು ಈ ದಾಖಲೆಯನ್ನು ಸರಿಗಟ್ಟಿದ ಏಕೈಕ ಭಾರತೀಯ. ಭಾರತದಲ್ಲಿ 200 ವಿಕೆಟ್ ಪಡೆದವರಲ್ಲಿ ಕುಂಬ್ಳೆ ಎರಡನೆಯವರು. ಕ್ರಿಕೆಟ್ ಇತಿಹಾಸದಲ್ಲಿ ಟೆಸ್ಟ್ ಹಾಗೂ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯಗಳು ಸೇರಿದಂತೆ 300 ವಿಕೆಟ್ ಪಡೆದ ಶ್ರೇಷ್ಠರಲ್ಲಿ ಕುಂಬ್ಳೆಯೂ ಒಬ್ಬರು. ಉಳಿದ ಇಬ್ಬರು ಪಾಕಿಸ್ತಾನದ ವಾಕರ್‌ಯೂನಿಸ್ ಹಾಗೂ ವಾಸಿಂ ಅಕ್ರಮ್. ಕೋಲ್ಕತ್ತದಲಿ 1993– 94ರಲ್ಲಿ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯದಲ್ಲಿ 12 ರನ್ ನೀಡಿ 6 ವಿಕೆಟ್ ಪಡೆದಿದ್ದು ಇವರ ಇನ್ನೊಂದು ಸಾಧನೆ.

ಇವರು ಹಲವಾರು ಅಂತಾರಾಷ್ಟ್ರೀಯ ಟೆಸ್ಟ್ ಹಾಗೂ ಒಂದು ದಿನ ಪಂದ್ಯಗಳಲ್ಲಿ ಆಡಿದ್ದಾರೆ. ತಮ್ಮ ಮಾಂತ್ರಿಕ ಬೌಲಿಂಗ್ ಮೂಲಕ ಭಾರತಕ್ಕೆ ಅನೇಕ ಸಂದರ್ಭಗಳಲ್ಲಿ ಗೆಲುವು ತಂದಿತ್ತಿದ್ದಾರೆ. ಅತ್ಯಂತ ಕಡಿಮೆ ಅವಧಿಯಲ್ಲಿ (21 ಟೆಸ್ಟ್) 100 ವಿಕೆಟ್‌ಗಳನ್ನು ಪಡೆದ ಭಾರತದ ಕೆಲವೇ ಬೌಲರ್‌ಗಳಲ್ಲಿ ಇವರೂ ಒಬ್ಬರು. ಅನೇಕ ಸಂದರ್ಭಗಳಲ್ಲಿ ಬೌಲಿಂಗ್‌ನಲ್ಲಿ ತಮ್ಮ ಅಮೋಘ ಕೈಚಳಕವನ್ನು ಪ್ರದರ್ಶಿಸಿದ್ದಾರೆ. 1994ರ ಹೀರೋ ಕಪ್ ಅಂತಾರಾಷ್ಟ್ರೀಯ ಪಂದ್ಯವೊಂದರಲ್ಲಿ ಅದ್ವಿತೀಯ ಸಾಧನೆಗೈದದ್ದು ಇಂದಿಗೂ ದಾಖಲೆಯೇ. ಆಗ ನ್ಯೂಜಿಲೆಂಡ್ ತಂಡಕ್ಕೆ 10 ಓವರ್‌ಗಳಲ್ಲಿ 33 ರನ್ ನೀಡಿ 5 ವಿಕೆಟ್ ಪಡೆದರು. ವಿಲ್ಸ್‌ವರ್ಲ್ಡ್ ಕಪ್‌ನಲ್ಲಿನ ಇವರ ಸಾಧನೆ ಇಂದಿಗೂ ಕ್ರಿಕೆಟ್ ರಂಗದಲ್ಲಿ ಅಚ್ಚಳಿಯದೆ ಉಳಿದಿದೆ.

ಇವರಿಗೆ ಸಂದ ಗೌರವ, ಪ್ರಶಸ್ತಿಗಳು ಅನೇಕ. ಇವರ ಸಾಧನೆಯನ್ನು ಗಮನಿಸಿ ಕರ್ನಾಟಕ ಸರ್ಕಾರ ರಾಜ್ಯ ಪ್ರಶಸ್ತಿಯನ್ನಿತ್ತು ಗೌರವಿಸಿದೆ. 1995ರಲ್ಲಿ ಭಾರತ ಸರ್ಕಾರ ಅರ್ಜುನ ಪ್ರಶಸ್ತಿಯನ್ನಿತ್ತು ಇವರನ್ನು ಗೌರವಿಸಿದೆ. (ಎಸ್.ಆರ್.ಯು.)

**ಅನಿಲ :** ಅಷ್ಟ ವಸುಗಳಲ್ಲಿ ಒಬ್ಬ. ಗಾಳಿ, ವಾಯು, ಅನಿಲದೇವತೆ, ಆವಹ, ನಿವಹ, ಉದ್ವಹ, ಸಂವಹ, ವಿವಹ, ಪ್ರಹವ, ಪರಿವಾಹ ಎಂದು ಏಳು ಬಗೆಗಳುಳ್ಳದ್ದು. (ಬಿ.ಕೆ.ಎಸ್.)

ಶಿವೆಯೆಂಬುವಳನ್ನು ಮದುವೆಯಾಗಿ ಮನೋಜ, ಅವಿಜ್ಞಾತಗತಿ ಎಂಬ ಇಬ್ಬರು ಮಕ್ಕಳನ್ನು ಪಡೆದನೆಂದು ಭಾರತದಲ್ಲಿ ಹೇಳಿದೆ. ಕ್ಷತ್ರಿಯ ಕುಮಾರ. ತಂದೆ ವೃಷಾದರ್ಭಿ, ತಾನು ಮಾಡಿದ ಯಜ್ಞದಲ್ಲಿ ಋತ್ವಿಜರಿಗೆ ಕೊಡುವ ದಕ್ಷಿಣೆಗೆ ಬದಲಾಗಿ ಅನಿಲದ ಹೆಣವನ್ನು ಕೊಟ್ಟ. ಋತ್ವಿಜರಾಗಿದ್ದ ಸಪ್ತರ್ಷಿಗಳು ಶವವನ್ನೇ ತಿಂದರು ಎಂದು ಭಾರತದಿಂದ ತಿಳಿದುಬರುತ್ತದೆ. ವಸ್ತುವಿನ ಮೂರು ಸ್ಥಿತಿಗಳಲ್ಲಿ ಒಂದು. **(ನೋಡಿ – ವಾಯು)**

**ಅನಿಲಗ್ರಸನ :** ಪ್ಲಾಟಿನಂ, ಪೆಲೇಡಿಯಂ ಮೊದಲಾದ ಲೋಹಗಳು ಅಧಿಕ ಪ್ರಮಾಣದಲ್ಲಿ ಜಲಜನಕವನ್ನು ಹೀರಿಕೊಳ್ಳಬಲ್ಲವು. ಈ ಬಗೆಯ ಹೀರುವಿಕೆಯಿಂದ ಪೆಲೇಡಿಯಂ ಲೋಹದ ಗಾತ್ರ ಹೆಚ್ಚುತ್ತದೆ. ಆದರೆ ಸಾಮಾನ್ಯವಾಗಿ ಅದರ ಹೊರ ಲಕ್ಷಣವಾಗಲಿ ಗುಣಗಳಾಗಲಿ ಹೆಚ್ಚು ಮಾರ್ಪಾಡಾಗುವುದಿಲ್ಲ. ಇಂಥ ಕ್ರಿಯೆ ಅನಿಲಗ್ರಸನ (ಅಕ್ಲೂಷನ್ ಆಫ್ ಗ್ಯಾಸಸ್). ಸಾಧಾರಣ ಉಷ್ಣತೆಯಲ್ಲಿ ಪೆಲೇಡಿಯಂ ಲೋಹ ತನ್ನ ಗಾತ್ರದ 276ರಷ್ಟು ಮತ್ತು ಸುಮಾರು 600–800 ಸೆಂ. ಉಷ್ಣತೆಯಲ್ಲಿ. 35ರಷ್ಟು ಜಲಜನಕವನ್ನು ಹೀರಿಕೊಳ್ಳುತ್ತದೆ. ಹೀಗೆ ಹೀರಿಗೊಂಡ ಅನಿಲಪ್ರಮಾಣ ಲೋಹದ ಭೌತಸ್ಥಿತಿಯನ್ನು ಅವಲಂಬಿಸಿರುತ್ತದೆ. ಈ ಲೋಹವನ್ನು ಕಾಯಿಸಿದಾಗ ಜಲಜನಕ ಬಿಡುಗಡೆಯಾಗುವುದು. ಇದನ್ನು ಮೊದಲು ಗ್ರಹ್ಯಾಂ ಅಧ್ಯಯನ ಮಾಡಿದ. ಜಲಜನಕವನ್ನು ಶುದ್ಧಿಮಾಡುವಲ್ಲಿ, ಅದನ್ನು ತೂಕಮಾಡುವ ವಿಧಾನದಲ್ಲಿ ಪೆಲೇಡಿಯಂ ಲೋಹದ ಈ ಗುಣ ಆಧಾರವಾಗಿದೆ. ಜಲಜನಕ–ಆಮ್ಲಜನಕಗಳ ಸಂಯೋಗ ತೂಕವನ್ನು (ಕಂಬೈನಿಂಗ್ ವೇಟ್) ಕಂಡುಹಿಡಿಯುವ ಪ್ರಯೋಗದಲ್ಲಿ ಮಾರ್ಲೆ ಎಂಬಾತ ಈ ವಿಧಾನವನ್ನು ಬಳಸಿಕೊಂಡ. ಲೋಹದ ಹರಳುಗಳ ನಡುವಿನ ಜಾಗವನ್ನು ಜಲಜನಕ ವ್ಯಾಪಿಸುವುದೇ ವಸ್ತುವಿನ ಗಾತ್ರದ ಹೆಚ್ಚುವರಿಗೆ ಕಾರಣವೆಂದು ಭಾವಿಸಿ ಪ್ರಯೋಗಗಳನ್ನು ಈ ದಿಶೆಯಲ್ಲಿ ಮುಂದುವರಿಸಲಾಗಿದೆ. ಇದು ಜಲಜನಕ ಮಾತ್ರ ಹೊಂದಿರುವ ವಿಶಿಷ್ಟಗುಣವಲ್ಲ. ಸೂಕ್ತಸನ್ನಿವೇಶಗಳಲ್ಲಿ ಇತರ ಅನಿಲಗೂ ಇಂಥ ಗುಣವನ್ನು ಪ್ರದರ್ಶಿಸುತ್ತದೆ. (ಎನ್.ಎಸ್)

**ಅನಿಲ ತಯಾರಿಕೆ :** ಕೈಗಾರಿಕಾ ಕ್ಷೇತ್ರದಲ್ಲಿ ಈ ಶಬ್ದವನ್ನು ಬಳಸುವುದು ಸಾಮಾನ್ಯವಾಗಿ ಇಂಧನಾನಿಲಗಳ ಬಗ್ಗೆ ಮಾತ್ರ. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಮೂಲಗಳಿಂದ ತಯಾರಿಸುವ ಹಲವಾರು ಬಗೆಯ ಈ ದಹ್ಯಾನಿಲಗಳನ್ನು ಹಿಂದೆ ದೀಪಗಳನ್ನುರಿಸಲು ಮಾತ್ರ ಉಪಯೋಗಿಸುತ್ತಿದ್ದರು. ವಿದ್ಯುದ್ದೀಪಗಳು ಹೆಚ್ಚು ಪ್ರಚಾರಕ್ಕೆ ಬಂದ ಮೇಲೆ ಈ ಅನಿಲಗಳ ಉಪಯೋಗ ಬೇರೆ ದಿಕ್ಕಿಗೆ ತಿರುಗಿತು. ಕೈಗಾರಿಕೋದ್ಯಮದಲ್ಲಿ ಮತ್ತು ಮನೆಗಳಲ್ಲಿ ಕಾಯಿಸುವುದಕ್ಕೆ, ಶೈತ್ಯಕಾರಕಗಳನ್ನು ನಡೆಸುವುದಕ್ಕೆ, ವಾಯು ನಿಯಂತ್ರಣಕ್ಕೆ

ಮುಂತಾಗಿ ಅನೇಕ ಬಗೆಯ ಕೆಲಸಗಳಿಗೆ ಈ ಅನಿಲಗಳನ್ನು ಬಳಸಲಾಗುತ್ತಿದೆ. ಅಮೆರಿಕದಲ್ಲಿ ತಯಾರಿಸಿದ ಅನಿಲಗಳ ಬಳಕೆ ಈಚೆಗೆ ಕಡಿಮೆಯಾಗಿ ನಿಸರ್ಗಾನಿಲದ ಬಳಕೆ ಹೆಚ್ಚಿದೆ. ಸಾವಿರಾರು ಮೈಲಿ ಕೊಳವೆ ಸಾಲುಗಳನ್ನು ಹಾಕಿ ದೂರ ದೂರದ ಸ್ಥಳಗಳಿಗೆ ನಿಸರ್ಗಾನಿಲವನ್ನು ಸರಬರಾಜು ಮಾಡಲಾಗುತ್ತಿದೆ. ಯುರೋಪಿನಲ್ಲಿ ಮಾತ್ರ ತಯಾರಿಸಿದ ಅನಿಲಗಳೇ ಈಗಲೂ ಪ್ರಚಾರದಲ್ಲಿವೆ.

ಇತಿಹಾಸ : ಕಲ್ಲಿದ್ದಲನ್ನು ಗಾಳಿಯ ಸಂಪರ್ಕವಿಲ್ಲದೆ ಕಾಯಿಸಿದಾಗ ದಹಿಸಬಲ್ಲ ಒಂದು ಅನಿಲ ಉತ್ಪತ್ತಿಯಾಗುವುದೆಂಬುದನ್ನು ಮೊದಲು ಗಮನಿಸಿದವ ಹದಿನೇಳನೆಯ ಶತಮಾನದ ಬೆಲ್ಜಿಯಂ ವಿಜ್ಞಾನಿ ವ್ಯಾನ್ ಹೆಲ್ಮಾಂಟ್. ಆದರೂ ಅಲ್ಲಿಂದ ನೂರೈವತ್ತು ವರ್ಷಗಳವರೆಗೆ ಆ ಅನಿಲವನ್ನು ದೀಪ ಉರಿಸಲು ಬಳಸಬಹುದೆಂದು ಯಾರಿಗೂ ಗೊತ್ತಾಗಲಿಲ್ಲ. ನಮ್ಮಲ್ಲಿ ಹರಳೆಣ್ಣೆ ಮುಂತಾದ ಎಣ್ಣೆಗಳನ್ನು ದೀಪಗಳಿಗೆ ಉಪಯೋಗಿಸುತ್ತಿದ್ದಂತೆಯೇ ಆ ಕಾಲದಲ್ಲಿ ಪಾಶ್ಚಾತ್ಯರು ಸ್ಪರ್ಮ್ ತಿಮಿಂಗಿಲದ ಎಣ್ಣೆಯನ್ನು ಮೇಣ ಮತ್ತು ಪ್ರಾಣಿಗಳ ಕೊಬ್ಬಿನಿಂದ ಮಾಡಿದ ಮೋಂಬತ್ತಿಗಳನ್ನೂ ಉಪಯೋಗಿಸು ತ್ತಿದ್ದರು. 1792ರಲ್ಲಿ ಮೊಟ್ಟಮೊದಲು ಇಂಗ್ಲೆಂಡಿನ ವಿಲಿಯಂ ಮುರ್ಡಾಕ್ ಎಂಬಾತ ಕಲ್ಲಿದ್ದಲನ್ನು ಕಬ್ಬಿಣದ ಬಟ್ಟಿ ಪಾತ್ರೆಯಲ್ಲಿ ಕಾಯಿಸಿ, ಹೊರಬಂದ ಅನಿಲದ ಸಹಾಯದಿಂದ ಕಾರ್ನ್‌ವಾಲ್‌ನಲ್ಲಿರುವ ತನ್ನ ಮನೆಯನ್ನು ಬೆಳಗಿದ. ಉಗಿಯಂತ್ರವನ್ನು ನಿರ್ಮಿಸಿದ ಜೇಮ್ಸ್ ವಾಟ್‌ನ ಹತ್ತಿರ ಎಂಜಿನಿಯರ್ ಆಗಿದ್ದ ಮುರ್ಡಾಕ್ ಆಮೇಲೆ ವಾಟ್‌ನ ಕಾರ್ಖಾನೆಗೂ ಅನಿಲದ ದೀಪಗಳನ್ನು ಒದಗಿಸಿದ.

ಅನಿಲವನ್ನು ಸಾರ್ವಜನಿಕರಿಗೆ ಸರಬರಾಜು ಮಾಡುವುದಕ್ಕೆ ಅನಿಲ ತಯಾರಿಕೆಯ ಕಂಪನಿಯೊಂದನ್ನು ಮೊಟ್ಟಮೊದಲು ಸ್ಥಾಪಿಸಿದ ಕೀರ್ತಿ ಫ್ರೆಡರಿಕ್ ಆಲ್ಬರ್ಟ್ ವಿನ್ಸರ್ ಎಂಬಾತನಿಗೆ ಸಲ್ಲಬೇಕು. ಜರ್ಮನ್ ರಾಷ್ಟ್ರೀಯನಾದ ವಿನ್ಸರ್ 1804ರಲ್ಲಿ ಇಂಗ್ಲೆಂಡಿನಲ್ಲಿ ಸ್ವಾಮ್ಯ (ಪೇಟೆಂಟ್) ಪಡೆದು 1813ರ ವೇಳೆಗೆ ಸಾರ್ವಜನಿಕವಾಗಿ ಅನಿಲವನ್ನು ಸರಬರಾಜು ಮಾಡತೊಡಗಿದ. ಅಲ್ಲಿಂದ ಅನಿಲದ ಉಪಯೋಗ ಇತರ ದೇಶಗಳಿಗೆ ಹರಡಿತು. ಅಮೆರಿಕದಲ್ಲಿ ಮೊಟ್ಟಮೊದಲು (1817) ಅನಿಲದೀಪಗಳು ಬಂದದ್ದು ಬಾಲ್ಟಿಮೋರ್ ನಗರದಲ್ಲಿ.

ನೀಲಜ್ವಾಲೆಯ ಅನಿಲಜ್ವಾಲಕ (ಗ್ಯಾಸ್ ಬರ್ನರ್) ಬಳಕೆಗೆ ಬಂದದ್ದು 1855ರಲ್ಲಿ. ಇದನ್ನು ಕಂಡುಹಿಡಿದವರು ಯಾರು ಎಂಬ ಬಗ್ಗೆ ಸ್ವಲ್ಪ ಸಂಶಯವಿದೆ. ಆದರೆ ಜರ್ಮನಿಯ ರಾಬರ್ಟ್ ವಿಲ್ಹೆಲ್ಮ್ ವಾನ್ ಬುನ್ಸನ್ ಇದನ್ನು ಮೊದಲು ನಿರ್ಮಿಸಿದನೆಂಬುದು ಸಾಮಾನ್ಯ ನಂಬಿಕೆ. ಈ ಜ್ವಾಲಕದಲ್ಲಿ ಗಾಳಿ ಮತ್ತು ದಹ್ಯಾನಿಲಗಳನ್ನು ಸೂಕ್ತಪ್ರಮಾಣದಲ್ಲಿ ಬೆರೆಸಿ ಉರಿಸುವುದರಿಂದ ಹೊಗೆಯಿಲ್ಲದ ನಸುನೀಲವರ್ಣದ ಮತ್ತು ಹೆಚ್ಚು ತಾಪದ ಜ್ವಾಲೆ ಒದಗುತ್ತದೆ. ಪದಾರ್ಥಗಳನ್ನು ಕಾಯಿಸಲು ಇದು ಬಹಳ ಸಮರ್ಪಕವಾದ ಜ್ವಾಲಕವಾದುದರಿಂದ ಅನಿಲದ ಬಳಕೆಗೆ ಇದರಿಂದ ಹೆಚ್ಚಾದ ಉತ್ತೇಜನ ದೊರಕಿತ್ತು.

ಅಮೆರಿಕದಲ್ಲಿ ಹೆಚ್ಚು ಬಳಕೆಯಲ್ಲಿರುವ ನಿಸರ್ಗಾನಿಲದ ಕಥೆ ಪ್ರಾರಂಭವಾದದ್ದು ಸ್ವಲ್ಪಕಾಲಾನಂತರ. 1775ರಲ್ಲಿ ವೆಸ್ಟ್ ವರ್ಜೀನಿಯ ಸಂಸ್ಥಾನದಲ್ಲಿನ ಚಾರಲ್ಸ್‌ಟನ್ ನಗರದ ಬಳಿ ಒಂದು ಉರಿವ ಚಿಲುಮೆ (ಬರ್ನಿಂಗ್ ಸ್ಪ್ರಿಂಗ್) ಕಂಡುಬಂದದ್ದರ ಬಗ್ಗೆ ಪ್ರಸ್ತಾಪವಿದೆ. ಅದು ಭೂಮಿಯೊಳಗಿನಿಂದ ಸೂಸುತ್ತಿದ್ದ ನಿಸರ್ಗಾನಿಲವಿರಬೇಕು. 1821ರಲ್ಲಿ ನ್ಯೂಯಾರ್ಕ್ ಸಂಸ್ಥಾನದ ಫ್ರೆಡೋನಿಯ ಎಂಬಲ್ಲಿದ್ದ ಒಂದು ಉರಿವ ಚಿಲುಮೆಯ ಬಳಿ ಮೊಟ್ಟಮೊದಲ ಅನಿಲದ ಬಾವಿಯನ್ನು ತೋಡಲಾಯಿತು. ಅದರ ಆಳ ಕೇವಲ 27'. 1200'ಯಷ್ಟು ಹೆಚ್ಚು ಆಳದ ಬಾವಿಯನ್ನು ಮೊಟ್ಟ ಮೊದಲು ತೋಡಿದ್ದು 1854ರಲ್ಲಿ. ಫ್ರೆಡೋನಿಯದಲ್ಲಿ ಮೊದಲಬಾರಿಗೆ (1858) ನಿಸರ್ಗಾನಿಲದ ಕಂಪನಿಯೊಂದು ಸ್ಥಾಪಿತವಾಯಿತು. ಅಲ್ಲಿಂದ ಈ ಉದ್ಯಮ ಅಗಾಧವಾಗಿ ಬೆಳೆದಿದೆ. ಈ ದಶಕದ ಮಧ್ಯದಲ್ಲಿ ಮಾಡಿದ ಒಂದು ಅಂದಾಜಿನ ಪ್ರಕಾರ ಅಮೆರಿಕದಲ್ಲಿ ಒಂದು ಲಕ್ಷ ಅನಿಲದ ಬಾವಿಗಳಿವೆ, ವರ್ಷ ಒಂದಕ್ಕೆ 15,500,000,000,000 ಘನ ಅಡಿ ಅನಿಲವನ್ನು ಉತ್ಪಾದಿಸಲಾಗುತ್ತಿದೆ.

ತಯಾರಿಕೆ : ನಿಸರ್ಗಾನಿಲವನ್ನು ಕೊಳವೆಸಾಲುಗಳ ಮೂಲಕ ದೂರ ದೂರದ ಸ್ಥಳಗಳಿಗೆ ಸಾಗಿಸುತ್ತಾರೆ. ಆದರೆ ಕೃತಕ ಅನಿಲವನ್ನು ಮಾತ್ರ ಸಾಮಾನ್ಯವಾಗಿ ಬಳಕೆಯಾಗುವ ಸ್ಥಳದ ಹತ್ತಿರದಲ್ಲೇ ತಯಾರಿಸುತ್ತಾರೆ. ತಯಾರಿಸಿದ ಅನಿಲಗಳನ್ನು ಮುಖ್ಯವಾಗಿ ಎರಡು ವಿಧ ಎಂದು ಹೇಳಬಹುದು.

1 ಶಾಖದ ಸಹಾಯದಿಂದ ಕಲ್ಲಿದ್ದಲಿನಲ್ಲಿರುವ ಸಂಕೀರ್ಣವಾದ ಕಾರ್ಬನ್ ಸಂಯುಕ್ತಗಳನ್ನೊ, ನಿಸರ್ಗದತ್ತವಾದ ಪೆಟ್ರೋಲಿಯಂ ಅಥವಾ ನಿಸರ್ಗಾನಿಲದಲ್ಲಿರುವ ಹೈಡ್ರೊಕಾರ್ಬನ್ನುಗಳನ್ನೊ ವಿಭಜಿಸಿ ಉತ್ಪಾದಿಸುವ ಅನಿಲಗಳು ಒಂದು ಗುಂಪಿನವು. ಕಲ್ಲಿದ್ದಲ ಅನಿಲ, ಕೋಕ್ ಒಲೆ ಅನಿಲ, ತೈಲಾನಿಲ–ಇವು ಈ ಗುಂಪಿನ ಇಂಧನಾನಿಲಗಳು.

2 ಕೋಕ್ ಅಥವಾ ಇದ್ದಲಿನ ಮೇಲೆ ಗಾಳಿ ಅಥವಾ ಉಗಿಯ ವರ್ತನೆಯಿಂದ ಉತ್ಪಾದಿಸುವ ಅನಿಲಗಳು ಎರಡನೆಯ ಗುಂಪಿನವು. ಜಲಾನಿಲ ಮತ್ತು ಉತ್ಪಾದಕಾನಿಲಗಳು (ಪ್ರೊಡ್ಯೂಸರ್ ಗ್ಯಾಸ್) ಈ ಗುಂಪಿನ ಅನಿಲಗಳು.

ಇವು ಮಾತ್ರವಲ್ಲದೆ ಕಾರ್ಬಾನಿಕ್ ಜಲಾನಿಲದಂಥ (ಕಾರ್ಬುರೇಟೆಡ್ ವಾಟರ್ ಗ್ಯಾಸ್) ಮಿಶ್ರಿತ ಅನಿಲಗಳೂ ಬಳಕೆಯಲ್ಲಿವೆ.

ಕಲ್ಲಿದ್ದಲ ಅನಿಲ ಕೋಕ್‌ಒಲೆ ಅನಿಲ, ಇವೆರಡನ್ನು ತಯಾರಿಸುವುದೂ ಒಂದೇ ವಿಧಾನದಿಂದ. ಕಲ್ಲಿದ್ದಲನ್ನು, ಅದರಲ್ಲೂ ಮುಖ್ಯವಾಗಿ ಬಿಟುಮಿನಸ್ ಕಲ್ಲಿದ್ದಲನ್ನು ಕಬ್ಬಿಣದ ಬಟ್ಟಿ ಪಾತ್ರೆಗಳಲ್ಲಿ ಗಾಳಿಯ ಸಂಪರ್ಕವಿಲ್ಲದಂತೆ ಸುಮಾರು $1000^{o}$ ಸೆಂ.ಗ್ರೇ. ತಾಪಕ್ಕೆ ಕಾಯಿಸಿ ಅನಿಲವನ್ನು ತಯಾರಿಸುತ್ತಾರೆ. ಸ್ವಲ್ಪ ಮಟ್ಟಿಗೆ ಸನ್ನಿವೇಶಗಳನ್ನು ಬದಲಾಯಿಸಿ ಮೊದಲ ವಿಧಾನದಲ್ಲಿ ಅನಿಲದ ಕಡೆಗೂ ಎರಡನೆಯ ವಿಧಾನದಲ್ಲಿ ಕೋಕ್ ಕಡೆಗೂ ಗಮನಕೊಡುತ್ತಾರೆ. ಮೊದಲ ವಿಧಾನದಲ್ಲಿ ಅನಿಲವೇ ಮುಖ್ಯ ಉತ್ಪನ್ನ, ಕೋಕ್ ಉಪೋತ್ಪನ್ನ. ಎರಡನೆಯ ವಿಧಾನದಲ್ಲಿ ಲೋಹಗಾರಿಕೆಗೆ ಅಗತ್ಯವಾದ ಹಸನಾದ ಕೋಕ್ ಉತ್ಪಾದನೆಗೆ ಗಮನ ಕೊಡುವುದರಿಂದ ಅನಿಲ ಉಪೋತ್ಪನ್ನವೆನ್ನಿಸಿಕೊಳ್ಳುತ್ತದೆ.

ಕಲ್ಲಿದ್ದಲ ಅನಿಲ ಅಥವಾ ಕೋಕ್‌ಒಲೆ ಅನಿಲದ ಶಾಖೋತ್ಪಾದಕ ಸಾಮರ್ಥ್ಯ ಸ್ವಲ್ಪಮಟ್ಟಿಗೆ ಕಲ್ಲಿದ್ದಲಿನ ಗುಣ, ಕಾಯಿಸುವ ತಾಪ, ಕಾಲ–ಇವುಗಳನ್ನವಲಂಬಿಸಿರುತ್ತದೆ. ಸಾಮಾನ್ಯವಾಗಿ ಅದರ ಶಾಖೋತ್ಪಾದಕ ಸಾಮರ್ಥ್ಯ 550 – 600 ಬ್ರಿಟಿಷ್ ಶಾಖಮಾನ (ಬಿ.ಟಿ.ಯು.) ಇರುತ್ತದೆ; ಅಂದರೆ ಒಂದು ಘನ ಅಡಿ ಅನಿಲದ ದಹನದಿಂದ ಅಷ್ಟು ಶಾಖ ಒದಗುತ್ತದೆ. ಈ ಅನಿಲದ ಶೇ.60 ಜಲಜನಕ (ಹೈಡ್ರೊಜನ್) ಮತ್ತು ಕಾರ್ಬನ್ ಮಾನಾಕ್ಸೈಡು ಶೇ.30 ಮೀಥೇನು ಇದ್ದು ಉಳಿದದ್ದು ವಿವಿಧ ಹೈಡ್ರೊಕಾರ್ಬನ್ನುಗಳು, ಕಾರ್ಬನ್ ಡಯಾಕ್ಸೈಡು. ನೈಟ್ರೋಜನ್, ಹೈಡ್ರೊಜನ್ ಸಲ್ಫೈಡು–ಇವುಗಳಿಂದ ಕೂಡಿರುತ್ತದೆ. ಕಲ್ಲಿದ್ದಲು ಕಾಯಿಸಿದಾಗ ಬರುವ ಅಮೋನಿಯ, ಬೆಂಜೀನ್ ಮುಂತಾದ ಆರೊಮ್ಯಾಟಿಕ್ ಸಂಯುಕ್ತಗಳು, ಹೈಡ್ರೊಜನ್ ಸಲ್ಫೈಡು, ಸಯನೈಡು ಮುಂತಾದುವುಗಳನ್ನು ತೆಗೆದು ಶುದ್ಧೀಕರಿಸಿ ಅನಿಲವನ್ನು ಬಳಕೆದಾರರಿಗೆ ಒದಗಿಸುತ್ತಾರೆ. ಈ ಅನಿಲ ಬಹು ಹಗುರವಾಗಿರುತ್ತದೆ. ಗಾಳಿಗೆ ಹೋಲಿಸಿದರೆ ಅದರ ಸಾಂದ್ರತೆ 0.4ರಷ್ಟಿರುತ್ತದೆ.

ಬಟ್ಟಿ ಪಾತ್ರೆಗಳನ್ನು ಕಾಯಿಸಲು ಸಾಮಾನ್ಯವಾಗಿ ಉತ್ಪಾದಕಾನಿಲ. ಊದುಗುಲುಮೆ ಅನಿಲ ಮುಂತಾದ ಅನಿಲಗಳನ್ನುಪಯೋಗಿಸುವುದು ವಾಡಿಕೆ. ಹಾಗಿಲ್ಲದಿದ್ದರೆ ತಯಾರಿಸಿದ ಅನಿಲದಲ್ಲಿ ಶೇ.35 ಭಾಗ ಬಟ್ಟಿ ಪಾತ್ರೆಗಳನ್ನು ಕಾಯಿಸುವುದಕ್ಕೆ ಉಪಯೋಗಿಸಬೇಕಾಗಿ ಬರುತ್ತದೆ.

ತೈಲಾನಿಲವನ್ನು ತಯಾರಿಸುವುದು ಪೆಟ್ರೋಲಿಯಂ ಮೂಲದಿಂದ ಬರುವ ವಿವಿಧ ರೀತಿಯ ಎಣ್ಣೆಗಳಿಂದ. ಈ ಎಣ್ಣೆಗಳಲ್ಲಿ ಅಧಿಕ ಅಣುತೂಕದ ಹೈಡ್ರೊಕಾರ್ಬನ್ನುಗಳಿರುತ್ತವೆ. ಅವುಗಳನ್ನು ಹೆಚ್ಚುತಾಪಕ್ಕೆ ಕಾಯಿಸುವುದರಿಂದ, ಇಲ್ಲವೆ ಈಚೀಚೆಗೆ ರೂಢಿಗೆ ಬಂದಿರುವಂತೆ ನಿಕಲ್ ಆಕ್ಸೈಡ್ ಮುಂತಾದ ವೇಗವರ್ಧಕಗಳೊಡನೆ ಕಾಯಿಸುವುದರಿಂದ, ಆ ಹೈಡ್ರೊಕಾರ್ಬನ್ನುಗಳು ವಿಭಜನೆ ಹೊಂದಿ ಕಡಿಮೆ ಅಣು ತೂಕದ ಹೈಡ್ರೊಕಾರ್ಬನ್ನುಗಳಾಗುತ್ತವೆ. ಇಂಥ ಕಡಿಮೆ ಅಣುತೂಕದ ಹೈಡ್ರೊಕಾರ್ಬನ್ನುಗಳು ಸಾಮಾನ್ಯ ತಾಪದಲ್ಲಿ ಅನಿಲಗಳಾಗಿರುತ್ತವೆ. ತೈಲಾನಿಲದ ಶಾಖೋತ್ಪಾದಕ ಸಾಮರ್ಥ್ಯ 900–1200 ಬಿ.ಟಿ.ಯು. ಅಷ್ಟಿರುವುದರಿಂದ ಇದನ್ನು ಜಲಾನಿಲದಂಥ ಕಡಿಮೆ ಶಾಖೋತ್ಪಾದಕ ಸಾಮರ್ಥ್ಯದ ಅನಿಲಗಳೊಡನೆ ಬೆರೆಸಿ ಸರಾಸರಿ ಶಾಖಸಾಮರ್ಥ್ಯವನ್ನು 500–600ಕ್ಕೆ ತರಲು ಉಪಯೋಗಿಸುತ್ತಾರೆ.

ಜಲಾನಿಲವನ್ನು ನೀಲಾನಿಲವೆಂದೂ (ಬ್ಲೂ ಗ್ಯಾಸ್) ಕರೆಯುತ್ತಾರೆ. ಬಿಳಿಗಾವಿಗೆ ಕಾಯಿಸಿದ ಕೋಕ್‌ನ ಮೇಲೆ ಉಗಿಯನ್ನು ಹಾಯಿಸಿದಾಗ ನಡೆಯುವ ರಾಸಾಯನಿಕ ಕ್ರಿಯೆಯಿಂದ ಕಾರ್ಬನ್ ಮಾನಾಕ್ಸೈಡ್ ಮತ್ತು ಹೈಡ್ರೊಜನ್‌ಗಳ ಮಿಶ್ರಣ ಉತ್ಪತ್ತಿಯಾಗುತ್ತದೆ. ಈ ಮಿಶ್ರಣವೇ ಜಲಾನಿಲ.

$$C+H_2O \rightarrow CO+H_2$$

ಇಲ್ಲಿ ನಡೆಯುವ ರಾಸಾಯನಿಕಕ್ರಿಯೆ ಶಾಖಶೋಷಕ ಕ್ರಿಯೆಯಾದುದರಿಂದ ಬಿಳಿಗಾವಿನ ಕೋಕ್ ಶಾಖ ಕಳೆದುಕೊಂಡು ಕೆಂಗಾವಿಗೆ ಇಳಿಯುತ್ತದೆ. ಅದನ್ನು ಪುನಃ ಬಿಳಿಗಾವಿಗೆ ತರಲು ಅದರ ಮೇಲೆ ಗಾಳಿಯನ್ನು ಹಾಯಿಸಬೇಕು. ಗಾಳಿಯಲ್ಲಿರುವ ಆಮ್ಲಜನಕದೊಡನೆ ನಡೆಯುವ ಶಾಖಜನಕಕ್ರಿಯೆಯಿಂದ ಪುನಃ ಕೋಕ್ ಬಿಳಿಗಾವಿಗೆ ಏರುತ್ತದೆ.

$$2C+O_2 \rightarrow 2CO$$

ಹೀಗೆ ಸರತಿಯ ಮೇಲೆ ಉಗಿಯನ್ನೂ ಗಾಳಿಯನ್ನೂ ಕಾದ ಕೋಕ್ ಮೇಲೆ ಹಾಯಿಸಿ ಬರುವ ಉತ್ಪನ್ನಗಳನ್ನು ಬೇರೆಬೇರೆಯಾಗಿ ಸಂಗ್ರಹಿಸುತ್ತಾರೆ.

ಜಲಾನಿಲದ ಸಾಂದ್ರತೆ ಸುಮಾರು 0.57 ಇದ್ದು ಅದರ ಶಾಖಸಾಮರ್ಥ್ಯ 300 ಬಿ.ಟಿ.ಯು ಅಷ್ಟಿರುತ್ತದೆ. ಸ್ಥಳೀಯವಾಗಿ ಅದನ್ನು ಉಪಯೋಗಿಸದೆ, ಮನೆಗಳಿಗೆ ಮತ್ತು ಕಾರ್ಖಾನೆಗಳಿಗೆ ಒದಗಿಸುವಾಗ ಅದರೊಡನೆ ತೈಲಾನಿಲವನ್ನು ಬೆರೆಸಿ ಶಾಖಸಾಮರ್ಥ್ಯವನ್ನು 500–600 ಬಿ.ಟಿ.ಯು.ಗೆ ತರುತ್ತಾರೆ. ಈ ಮಿಶ್ರಣವನ್ನು ಕಾರ್ಬಾನಿಕ್ ಜಲಾನಿಲ ಎಂದು ಕರೆಯುವುದುಂಟು.

ಉತ್ಪಾದಕಾನಿಲವೆನ್ನುವುದು ನೈಟ್ರೋಜನ್ ಮತ್ತು ಕಾರ್ಬನ್ ಮಾನಾಕ್ಸೈಡುಗಳ ಮಿಶ್ರಣ. ಕಾದ ಕೋಕ್‌ಮೇಲೆ ಗಾಳಿಯನ್ನು ಹಾಯಿಸಿದಾಗ ಇದು ಉತ್ಪತ್ತಿಯಾಗುತ್ತದೆ.

$$2C+[4N_2+O_2]\ 4N_2+2CO$$

ಈ ರಾಸಾಯನಿಕಕ್ರಿಯೆ ಶಾಖಜನಕ ಕ್ರಿಯೆಯಾಗಿದ್ದು ಕೋಕ್ ಬೇಗ ಕಾದುಹೋಗುವುದರಿಂದ, ಉತ್ಪತ್ತಿಯಾಗುವ ಶಾಖವನ್ನು ಸಮತೂಗಿಸಲು ಸೂಕ್ತ ಪ್ರಮಾಣದಲ್ಲಿ ಉಗಿಯನ್ನು ಗಾಳಿಯೊಡನೆ ಬೆರೆಸುವುದುಂಟು. ಉತ್ಪಾದಕಾನಿಲದಲ್ಲಿ ಹೆಚ್ಚು ಭಾಗ ನೈಟ್ರೊಜನ್ನೇ ಆಗಿರುವುದರಿಂದ ಅದರ ಸಾಂದ್ರತೆ ಗಾಳಿಗಿಂತ ಸ್ವಲ್ಪ ಮಾತ್ರ ಕಡಿಮೆ ಇರುತ್ತದೆ. ಅದರ ಶಾಖೋತ್ಪಾದಕ ಸಾಮರ್ಥ್ಯ ಬಹಳ ಕಡಿಮೆ. 130–140 ಅಷ್ಟೇ. ಸಾಮಾನ್ಯವಾಗಿ ಇದನ್ನು ತಯಾರಿಸುವುದು ಸ್ಥಳೀಯ ಉಪಯೋಗಕ್ಕೆ.

ದ್ರವೀಕೃತ ಪೆಟ್ರೋಲಿಯಂ ಅನಿಲ ಕಚ್ಚಾ ಪೆಟ್ರೋಲಿಯಂ ಅಥವಾ ನಿಸರ್ಗಾನಿಲಗಳಿಂದ ಬರಬಹುದು; ಇಲ್ಲವೆ ಪೆಟ್ರೋಲಿಯಂ ಶುದ್ಧೀಕರಣ ಸ್ಥಾವರಗಳಿಂದ ಬರಬಹುದು. ನಿಸರ್ಗಾನಿಲದಲ್ಲಿರುವ ಹೈಡ್ರೊಕಾರ್ಬನ್‌ಗಳಿಗಿಂತ ಸ್ವಲ್ಪ ಕಡಿಮೆ ಅಣುತೂಕವಿರುವ, ಆದರೆ ಪೆಟ್ರೋಲ್ ಹೈಡ್ರೊಕಾರ್ಬನ್‌ಗಳಿಗಿಂತ ಸ್ವಲ್ಪ ಕಡಿಮೆ ಅಣುತೂಕವಿರುವ ಹೈಡ್ರೊಕಾರ್ಬನ್‌ಗಳ ಮಿಶ್ರಣ. 3, 4 ಕಾರ್ಬನ್ ಪರಮಾಣುಗಳಿರುವ ಹೈಡ್ರೊಕಾರ್ಬನುಗಳು ಇದರಲ್ಲಿರುತ್ತವೆ. ಈ ಮಿಶ್ರಣ ಸಾಮಾನ್ಯತಾಪದಲ್ಲಿ ಅನಿಲವಾಗಿದ್ದರೂ ಅದೇ ತಾಪದಲ್ಲಿ ಅಧಿಕ ಒತ್ತಡಕ್ಕೊಳಪಡಿಸಿ ದ್ರವೀಕರಿಸಬಹುದು. ಹಾಗೆ ದ್ರವೀಕರಿಸಿದ ಅನಿಲಗಳನ್ನು ಸಿಲಿಂಡರುಗಳಲ್ಲಿ ಸರಬರಾಜು ಮಾಡುತ್ತಾರೆ.

ಅಮೆರಿಕದಲ್ಲಿ ಅನಿಲ ಸರಬರಾಜು ಕಂಪನಿಯವರು ಅನಿಲಕ್ಕೆ ಅಧಿಕ ಬೇಡಿಕೆ ಇರುವಾಗ ಬೇಕಾಗಬಹುದೆಂದು ಕೈಗಾವಲಿಗಾಗಿ ಇದನ್ನು ಇಟ್ಟುಕೊಂಡಿರುತ್ತಾರೆ. ಅಲ್ಲದೆ ಸರಬರಾಜು ಕೊಳವೆ ಸಾಲುಗಳು ಹತ್ತಿರ ಇಲ್ಲದಿರುವಂಥ ಗ್ರಾಮಾಂತರ ಪ್ರದೇಶಗಳಲ್ಲೂ ಇದರ ಬಳಕೆ ರೂಢಿಯಲ್ಲಿದೆ. ಪೆಟ್ರೋಲಿಯಂ ಶುದ್ಧೀಕರಣ ಸ್ಥಾವರಗಳು ಭಾರತದಲ್ಲಿ ಪ್ರಾರಂಭವಾದ ತರುವಾಯ ಇಲ್ಲಿಯೂ ದ್ರವೀಕೃತ ಪೆಟ್ರೋಲಿಯಂ ಅನಿಲದ ಬಳಕೆ ಹೆಚ್ಚಾಗುತ್ತಿದೆ. (ಜಿ.ಆರ್.ಎಲ್.)

**ಅನಿಲದ ಕೋಣೆ :** ಮರಣ ದಂಡನೆಗೆ ಗುರಿಯಾದ ಅಪರಾಧಿಗಳನ್ನು ತಲೆ ಕಡಿದೋ ನೇಣು ಹಾಕೋ ಸಾಯಿಸುವ ಕ್ರೂರ ವಿಧಾನವನ್ನು ಬಿಟ್ಟು ಮಾನವೀಯ ರೀತಿಯಲ್ಲಿ ಸಾಯಿಸಲು, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬಳಕೆಯಲ್ಲಿರುವ ಕೋಣೆ (ಗ್ಯಾಸ್ ಚೇಂಬರ್).

ಮೊಟ್ಟಮೊದಲು (1924) ನೆವಾಡ ಸಂಸ್ಥಾನದಲ್ಲಿ ಜಾರಿಗೆ ತಂದರೂ ಕೇವಲ ನಾಲ್ಕರಲ್ಲಿ ಒಂದು ಸಂಸ್ಥಾನದಲ್ಲಿ ಈ ತೆರನ ದಂಡನೆ ವಿಧಿಸಿದ್ದಾರೆ. ಎಲ್ಲ ಕಡೆಗಳಲ್ಲೂ ಮುಚ್ಚಿರುವ ಒಂದು ಚಿಕ್ಕ ಕೋಣೆಯಲ್ಲಿ ಅಪರಾಧಿಯನ್ನು ಕುರ್ಚಿಯಲ್ಲಿ ಕೂರಿಸಿ, ಬಿಗಿದು ವಿಷದ ಅನಿಲವನ್ನು ಒಳಕ್ಕೆ ಬಿಡುವರು. ಬಂದಿ ಆಳವಾಗಿ ಉಸಿರು ಎಳೆದುಕೊಂಡಾಗ ವಿಷದ ಅನಿಲದ ಹೊಗೆಯಿಂದ ತಟಕ್ಕನೆ ಕುಸಿದುಬಿದ್ದು ನೋವಿಲ್ಲದೆ ಅಸು ನೀಗುತ್ತಾನೆ. ಆದರೆ ಬಹಳ ಮಂದಿ ಉಸಿರು ಕಟ್ಟಿ ಹಿಡಿದು ನಿಧಾನವಾಗಿ ಸ್ವಲ್ಪ ಸ್ವಲ್ಪವಾಗಿ ಉಸಿರಾಡುವರು. ಅಂಥವರು ಸಾಯುವ ಮುನ್ನ ತುಂಬ ಹೊತ್ತು ನರಳಾಡಬೇಕಾಗುವುದು. **(ನೋಡಿ – ಮರಣದಂಡನೆ; ನಾಜಿಗಳು)** (ಡಿ.ಎಸ್.ಎಸ್.)

**ಅನಿಲದ ಮೊಗವಾಡ :** ಮನುಷ್ಯ ಜೀವಕ್ಕೆ ಅಪಾಯಕಾರಕ ಅನಿಲ ಸೇವನೆಯಿಂದ ತಟ್ಟಬಹುದಾದ ಹಾನಿಯಿಂದ ಮನುಷ್ಯನನ್ನು ರಕ್ಷಿಸುವ ಸಾಧನ (ಗ್ಯಾಸ್ ಮಾಸ್ಕ್).

ಇದಕ್ಕೆ ಈಗ ಉಸಿರಾಟಿಕವೆಂದೂ (ರೆಸ್ಪಿರೇಟರ್) ಹೆಸರಿದೆ. ಯುದ್ಧದ ಸಲುವಾಗಿ ಮೊಟ್ಟಮೊದಲು (ಜನವರಿ 31, 1915) ಒಂದನೆಯ ಮಹಾಯುದ್ಧದ ಕಾಲದಲ್ಲಿ ಪೋಲೆಂಡಿನಲ್ಲಿ ಜರ್ಮನರು ರಷ್ಯನರ ಮೇಲೆ ವಿಷಾದನಿಲಗಳನ್ನು ಹಾಕಿದರು. ಮತ್ತೆ ಬೆಲ್ಜಿಯಮ್ಮಿನಲ್ಲಿ ಮಿತ್ರರಾಷ್ಟ್ರಗಳ ಸೇನೆಗಳ ಮೇಲೂ ಬಳಸಿದರು. ಆಗ ಅನಿಲ ಮೊಗವಾಡದ ಆವಶ್ಯಕತೆ ಉಂಟಾಯಿತು.

ವಿಷಾನಿಲದ ಕೆಡುಕು ತಾಗದಂತೆ ತಡೆಯಲು ಮೊದಲು ತಯಾರಿಸಿ ಬಳಸಿದ ಸೈನಿಕನ ಮೊಗವಾಡ ಒಡ್ಡೊಡ್ಡಾಗಿತ್ತು. ಮೊಗದ ಸುತ್ತ ತಗುಲಿಸಿರುವ ಮೊಗವಾಡ ಸೈನಿಕನ ಎದೆಯ ಮುಂದೆ ಕೊರಳಿಗೆ ತೂಗುಕಟ್ಟಿರುವ, ಮೊಗವಾಡದೊಂದಿಗೆ ಕೊಳವೆಯಿಂದ ಕೂಡಿರುವ ಕರಾಟವನ್ನು (ಕ್ಯಾನಿಸ್ಟರ್) ಹೊತ್ತುಕೊಂಡಿರಬೇಕಿತ್ತು. ಒಣ ಇದ್ದಲು ತುಂಬಿದ ಕವಾಟದ ಮೂಲಕ ಬರುವ ಕೊಳವೆಯನ್ನು ಸೈನಿಕ ಬಾಯಲ್ಲಿ ಇರಿಸಿಕೊಂಡು ಉಸಿರು ಎಳೆದುಕೊಂಡಾಗ ವಿಷಾನಿಲ ಸೋಸಿ ಬರುತ್ತಿತ್ತು. ಮೂಗಿನಲ್ಲಿ ಗಾಳಿ ತೂರದಂತೆ ಒಂದು ಬಂಧನಿ (ಕ್ಲಿಪ್)ಹಾಕುತ್ತಿದ್ದರು. ಇವನ್ನು ತೊಟ್ಟ ಸೈನಿಕನ ಚಲನವಲನವೂ, ಕಾದಾಡುವ ಸಾಮರ್ಥ್ಯವೂ ಕುಗ್ಗಿತ್ತು. ಗುಂಡಿನ ಸುರಿಮಳೆಯಿಂದ ತಪ್ಪಿಸಿಕೊಳ್ಳಲು ಸೈನಿಕ ನೆಲದ ಮೇಲೆ ಕವುಚಿ ಬೀಳಲು ಆತಂಕವಾಗಿತ್ತು.

ಎರಡನೆಯ ಮಹಾಯುದ್ಧದ ಹೊತ್ತಿಗೆ ಅನುಕೂಲವಾದ ಮೊಗವಾಡಗಳು ಬಂದಿದ್ದುವು. ಇವು ಹಗುರವಾಗಿದ್ದು, ತೊಡಲು ಚೆನ್ನಾಗಿದ್ದುವು. ಕಣ್ಣುಗಳಿಗೆ ಅಡ್ಡ ಬರುತ್ತಿರಲಿಲ್ಲ. ಮೂಗಿನ ಬಂಧನ, ಬಾಯಲ್ಲಿನ ಕೊಳವೆ ಇಲ್ಲದೆ ಉಸಿರಾಟ ಸರಾಗವಾಯಿತು. ಅಲ್ಲದೆ ಕರಾಟವನ್ನು ಹೆಗಲಮೇಲೆ ಹಾಕಿ, ಕಂಕುಳಿನ ಕೆಳಗೆ ಇರಿಸುತ್ತಿದ್ದುದರಿಂದ ಸೈನಿಕನ ಓಡಾಟಗಳಿಗೆ ಏನೂ ಅಡ್ಡ ಬರುತ್ತಿರಲಿಲ್ಲ.

ಮೊಗವಾಡದಲ್ಲಿ ಹಲವಾರು ತಿದ್ದುಪಾಟುಗಳು ಆಗಿಬಂದರೂ ವಿಷಾನಿಲ ತುಂಬಿದ ಗಾಳಿಯನ್ನು ಸೋಸಲು ಬಳಸುತ್ತಿದ್ದ ರಾಸಾಯನಿಕಗಳು ಮಾತ್ರ ಬದಲಾಗಿಲ್ಲ. ಕರಾಟಗಳಲ್ಲಿನ ಇದ್ದಲು ಸೋಡಾ ಲೈಮು ಎಂತಹ ವಿಷಾನಿಲಗಳನ್ನೂ ಹೀರಿಕೊಂಡು ಸಯ್ಯೊಳಿಸುತ್ತಿದ್ದುವು. ಆದರೆ ವಿಷಾನಿಲ ಹುಟ್ಟಿಸುವ ಕೆಲವು ರಾಸಾಯನಿಕಗಳು ಎಷ್ಟೋ ಹೊತ್ತು ನುಣ್ಣನೆಯ ಪುಡಿಯಂತೆ ಗಾಳಿಯಲ್ಲಿ ತೇಲಾಡುತ್ತಿದ್ದುವು. ಇವನ್ನು ತಡೆವಂತೆ ಗಾಳಿಯನ್ನೂ ಸೋಸಿಬಿಡುವ ಉಣ್ಣೆ ತಡಿಯ ಪಟ್ಟಿಗಳು ಕರಾಟಗಳಲ್ಲಿವೆ.

ಅಮೆರಿಕದ ನೆಲ, ಜಲ, ಆಕಾಶಸೇನೆಗಳಲ್ಲಿ ಹಲವಾರು ವರ್ಷಗಳಿಂದಲೂ ಜಾರಿಯಲ್ಲಿರುವ, ವಿಷಾನಿಲದ ಮೊಗವಾಡ ಇನ್ನೂ ಚೆನ್ನಾಗಿದೆ. ಇದರಲ್ಲಿ ಬಿಡಿಯಾಗಿ ಯಾವ ಕರಾಟವೂ ಇಲ್ಲ. ಜೋಡಿಸಬೇಕಾದ ಕೊಳವೆಯೂ ಇಲ್ಲ. ಬದಲಾಗಿ, ಮೊಗವಾಡದ ಮುಂಭಾಗದಲ್ಲಿ ಅಚ್ಚೊತ್ತಿರುವ ಸ್ಪಂಜಿನಂಥ ಪದರ ಪಟ್ಟಿಗಳ ಮೂಲಕ ವಿಷಾನಿಲ ಸೋಸಿ ಒಳಹೋಗುತ್ತದೆ. ರಾಸಾಯನಿಕ, ಏಕಾಣುಜೀವಿಕ, ವಿಕಿರಣಕ ಕಾರಕಗಳಿಂದ ಬರುವ ವಿಷಾನಿಲಗಳನ್ನೂ ಗಾಳಿ ತೂರುದ್ರವಗಳನ್ನೂ ಇದು ಚೆನ್ನಾಗಿ ತಡೆಗಟ್ಟುತ್ತದೆ.

ಸೈನ್ಯದಲ್ಲೇ ಅಲ್ಲದೆ, ಅನಿಲದ ಮೊಗವಾಡಗಳು ಕೈಗಾರಿಕೆಗಳಲ್ಲೂ ಬಳಕೆಯಲ್ಲಿವೆ. ಗಣಿ ಕೆಲಸದ, ಸಹಜವಾಗಿಯೇ ತಯಾರಿಕೆಯ ವಿಧಾನ ಕ್ರಮಗಳಿಂದಲೆ ಏಳುವ, ಹಾನಿಕರವೆನಿಸುವ ಹೊಗೆಗಳನ್ನೂ ಅನಿಲಗಳನ್ನೂ ಹೊರಬಿಡುವ, ರಾಸಾಯನಿಕ ಮತ್ತಿತರ ಕಾರ್ಖಾನೆಗಳ ಕೆಲಸಗಾರರಿಗೆ ಹಾನಿ ತಟ್ಟದಂತೆ ತಡೆಯಲು ಇವು ಕೆಲಸಕ್ಕೆ ಬರುತ್ತವೆ. ಬೆಂಕಿ ಆರಿಸುವವರೂ ನೆರವಿಗೆ ತಂಡದವರೂ ತಮ್ಮ ಎಂದಿನ ಸಲಕರಣೆಗಳೊಂದಿಗೆ ಅನಿಲದ ಮೊಗವಾಡಗಳನ್ನೂ ಇಟ್ಟುಕೊಂಡಿರಬೇಕು. ಅದರಲ್ಲೂ ವಿಶೇಷವಾಗಿ, ಕಳೆದ ಎರಡನೆಯ ಮಹಾಯುದ್ಧದ ಕಾಲದಲ್ಲಿ ಯುರೋಪಿನಲ್ಲಿ ವಿಷಾನಿಲದ ಮೊಗವಾಡಗಳನ್ನು ಜನರಿಗೂ ಕೊಟ್ಟಿದ್ದರಂತೆ. (ಡಿ.ಎಸ್.ಎಸ್.)

**ಅನಿಲ ದ್ರವೀಕರಣ :** ಘನ, ದ್ರವ, ಅನಿಲ–ಇವು ಒಂದು ವಸ್ತುವಿನಲ್ಲಿ ಅಡಕವಾಗಿರುವ ಉಷ್ಣವನ್ನು ಅವಲಂಬಿಸಿ ಇರುವ ಸ್ಥಿತಿತ್ರಯಗಳು. ವಸ್ತುವಿನ ಅನಿಲಸ್ಥಿತಿಯಲ್ಲಿ ಅಣುಗಳ ಚಲನಶಕ್ತಿ ಮತ್ತು ಪರಸ್ಪರ ಅಂತರ ಹೆಚ್ಚಾಗಿದ್ದು ಆಕರ್ಷಣಬಲ ಕನಿಷ್ಠವಾಗಿರುವುದು. ಆದ್ದರಿಂದ ಒಂದು ಅನಿಲವನ್ನು ದ್ರವೀಕರಿಸಬೇಕಾದರೆ ಅದನ್ನು ತಂಪುಮಾಡುವುದರ ಮೂಲಕ ಅಣುಗಳ ಚಲನಶಕ್ತಿಯನ್ನು ಕಡಿಮೆಮಾಡಬೇಕು. ದ್ರವದಲ್ಲಿರುವಂತೆ ಅಣುಗಳು ಪರಸ್ಪರ ಹತ್ತಿರ ಬರುವಂತೆ ಮಾಡಲು ಒತ್ತಡ ಹೆಚ್ಚಿಸಬೇಕು.

ಅನಿಲಗಳನ್ನು ದ್ರವೀಕರಿಸುವ ಅಭಿಪ್ರಾಯ ಮೊಟ್ಟಮೊದಲು ಯಾರಿಂದ ಉದ್ಭವಿಸಿತೆಂಬುದು ವಿವಾದಾಸ್ಪದ. ಬಾಹ್ಯಾಕಾಶದ ಉಷ್ಣತೆಗೆ ಭೂಮಿಯನ್ನು ಶೈತ್ಯೀಕರಿಸಿದರೆ ಭೂಮಿಯ ವಾತಾವರಣ ದ್ರವೀಕರಣಗೊಳ್ಳುವುದೆಂಬ ಅಭಿಪ್ರಾಯವನ್ನು ಲವ್‌ವಸ್ಯೇ ಎಂಬಾತ ವ್ಯಕ್ತಪಡಿಸಿದ್ದ. ಈತ ಯಾವ ಅನಿಲವನ್ನು ದ್ರವೀಕರಿಸದಿದ್ದರೂ ಈತನ ಸಹೋದ್ಯೋಗಿಗಳಾದ ಮಾಂಗೆ ಮತ್ತು ಕ್ಲೂಏ ಎಂಬುವರು ಸು. 1790ರಲ್ಲಿ ಮಂಜುಗಡ್ಡೆ ಮತ್ತು ಉಪ್ಪು–ಇವುಗಳ ಮಿಶ್ರಣದಿಂದ ಶೈತ್ಯಗೊಳಿಸಿದ ಗಾಜಿನ ಕೊಳವೆಯಲ್ಲಿ ಗಂಧಕದ ಡೈ ಆಕ್ಸೈಡ್ ಅನಿಲವನ್ನು ದ್ರವೀಕರಿಸಿದರು. ಸುಮಾರು ಇದೇ ಕಾಲದಲ್ಲಿ ವಾನ್ ಮೇರಂ ಮತ್ತು ಪೀಟ್ಸ್ ವಾನ್ ಟ್ರೂಸ್ಟ್‌ವಿಕ್ ಎಂಬುವರು ಅಮೋನಿಯ ಅನಿಲ ಬಾಯಿಲ್ ನಿಯಮಕ್ಕನುಗುಣವಾಗಿ ವರ್ತಿಸುವುದೇ ಇಲ್ಲವೇ ಎಂಬುದನ್ನು ಪರೀಕ್ಷಿಸಲು, ಅದನ್ನು ಒಂದು ನಿರ್ದಿಷ್ಟ ಒತ್ತಡಕ್ಕೊಳಪಡಿಸಿದಾಗ ಅದು ದ್ರವೀಕರಣಹೊಂದುವುದನ್ನು ಗಮನಿಸಿದರು. 1799ರಲ್ಲಿ ಗೀಟಾನ್ ಡ ಮಾರ್ವೊ ಎಂಬ ವಿಜ್ಞಾನಿ ಅಮೋನಿಯ ಅನಿಲವನ್ನು ಉಪ್ಪು ಮತ್ತು ಕ್ಯಾಲ್ಸಿಯಂ ಕ್ಲೋರೈಡ್ ಮಿಶ್ರಣದ ಉಷ್ಣತೆಗೆ ತಂಪುಮಾಡಿ ದ್ರವೀಕರಿಸಿದ. 1805ರಲ್ಲಿ ನಾರ್ತ್ ಮೋರ್ ಎಂಬಾತ ಯಾಂತ್ರಿಕವಾಗಿ 15 ವಾಯುಮಾನಗಳವರೆಗೆ ಅನಿಲಗಳ ಒತ್ತಡ ಹೆಚ್ಚಿಸುವ ವಿಧಾನ ಕಂಡುಹಿಡಿದು ಕ್ಲೋರೀನ್ ಅನಿಲವನ್ನು ದ್ರವೀಕರಿಸಬಹುದೆಂದು ತೋರಿಸಿದ.

1823ರವರೆಗೆ ಈ ದಿಶೆಯಲ್ಲಿ ಮತ್ತೆ ಯಾವ ಪ್ರಯೋಗವೂ ಕಾಣಬರುವುದಿಲ್ಲ. ಇದೇ ವರ್ಷದಲ್ಲಿ ಫ್ಯಾರಡೆ ಅನಿಲಗಳ ದ್ರವೀಕರಣವನ್ನು ಪ್ರಯತ್ನಿಸಿದ.

ಅವನು ಚಿತ್ರ 1ರಲ್ಲಿ ತೋರಿಸಿರುವ ಉಪಕರಣ ವನ್ನುಪಯೋಗಿಸಿ ಕ್ಲೋರೀನ್ ಅನಿಲ ವನ್ನು ದ್ರವೀಕರಿಸಿದ. ಕಡಿಮೆ ಉದ್ದದ ಒಂದು ಗಾಜಿನ ಕೊಳವೆಯಲ್ಲಿ ರಾಸಾಯನಿಕ ಕ್ರಿಯೆಯಿಂದ ಕ್ಲೋರೀನ್ ಅನಿಲ ಉತ್ಪತ್ತಿ ಮಾಡಿದರೆ ಮತ್ತೊಂದು ಭಾಗದಲ್ಲಿ ಶೇಖರಗೊಳ್ಳುವುದು. ಶೇಖರಣೆಯಾಗುತ್ತ ಒತ್ತಡ ಹೆಚ್ಚುತ್ತಿರುವುದು ಉದ್ದದ

ಕೊಳವೆಯನ್ನೂ ಮಂಜಿನಿಂದ ಶೈತ್ಯಗೊಳಿಸಿದರೆ ಅನಿಲ ದ್ರವವಾಗಿ ಪರಿವರ್ತನೆ ಹೊಂದಿ ಶೇಖರವಾಗುವುದು.

ಈ ವಿಧಾನವನ್ನನುಸರಿಸಿ 1834ರಲ್ಲಿ ಥಿಲೋರಿಯರ್ ಇಂಗಾಲದ ಡೈ ಆಕ್ಸೈಡ್ ಅನಿಲವನ್ನು ಹೆಚ್ಚಿನ ಪ್ರಮಾಣದಲ್ಲಿ ದ್ರವೀಕರಿಸಿದ. ಕಾಯಿಸಿದಾಗ ಈ ದ್ರವ ಶೀಘ್ರ ವಿಕಾಸ ಹೊಂದುವುದನ್ನು ಈ ಪ್ರಯೋಗಗಳಲ್ಲಿ ನೋಡಿ, ಅವಾಹಕದ ಒಳ ಹೊದಿಕೆಯಿರುವ ಪೆಟ್ಟಿಗೆಯೊಳಕ್ಕೆ ಒಂದು ರಂಧ್ರದ ಮುಖಾಂತರ ಈ ದ್ರವ ಹೋಗುವಂತೆ ಮಾಡಿದ. ಮಂಜಿನೋಪಾದಿಯಲ್ಲಿರುವ ಘನವಸ್ತು ಉತ್ಪತ್ತಿಯಾಗುವುದೆಂದು

ಕಂಡುಹಿಡಿದು ಹಾಗೆಯೇ ಪ್ರಯೋಗ ಮುಂದುವರಿಸಿ ಘನ ಇಂಗಾಲದ ಡೈ ಆಕ್ಸೈಡ್‌ಗಿಂತಲೂ ಘನ ಇಂಗಾಲದ ಡೈ ಆಕ್ಸೈಡ್ ಮತ್ತು ಈಥರ್–ಇವುಗಳ ಮಿಶ್ರಣ ಒಳ್ಳೆಯ ಶೀತಕ (ರಿಫ್ರಿಜರಂಟ್) ಎಂಬುದನ್ನೂ ಕಂಡುಹಿಡಿದ.

ಮೇಲಿನ ದ್ರವೀಕರಣ ವಿಧಾನಕ್ಕೆ ಅಳವಡದ ಆಮ್ಲಜನಕ, ಸಾರಜನಕ, ಜಲಜನಕ, ನೈಟ್ರಿಕ್ ಆಕ್ಸೈಡ್ ಮುಂತಾದ ಅನಿಲಗಳನ್ನು ಶಾಶ್ವತ ಅನಿಲಗಳೆಂದು ಕರೆಯಲಾಯಿತು.

1822 ರಲ್ಲಿ ಕ್ಯಾನ್ಯಾರ್ ಡಿ ಲ ಟೂರ್ ಎಂಬ ವಿಜ್ಞಾನಿ ಚಿತ್ರದಲ್ಲಿ ತೋರಿಸಿರುವ ಗಾಜಿನ ಉಪಕರಣವನ್ನುಪಯೋಗಿಸಿ ದ್ರವದ ಉಷ್ಣತೆಯನ್ನು ಒಂದು ನಿರ್ದಿಷ್ಟ ಉಷ್ಣತೆಗಿಂತ ಹೆಚ್ಚು ಮಾಡಿದರೆ ಪೂರ್ಣವಾಗಿ ಅನಿಲರೂಪಕ್ಕೆ ಪರಿವರ್ತನೆಗೊಳ್ಳುವುದೆಂದು ತೋರಿಸಿದ.

U–ಆಕಾರದಲ್ಲಿರುವ ಈ ಉಪಕರಣದ ಒಂದು ಭಾಗ ಅತಿ ಚಿಕ್ಕದಾಗಿಯೂ ಉದ್ದವಾಗಿಯೂ ಮತ್ತೊಂದು ಭಾಗ ಅಗಲವಾಗಿಯೂ ಇರುತ್ತದೆ. ಅಗಲವಾಗಿರುವ ಭಾಗದಲ್ಲಿ ದ್ರವವನ್ನು ಇಟ್ಟು ಚಿಕ್ಕದಾಗಿರುವ ಭಾಗದಲ್ಲಿ ಸ್ವಲ್ಪ ಗಾಳಿಯಿರುವಂತೆ ಅಳವಡಿಸಿ ಉಳಿದ ಭಾಗದಲ್ಲಿ ಪಾದರಸವನ್ನು ತುಂಬ ಲಾಗುವುದು. ಚಿಕ್ಕದಾಗಿರುವ ಭಾಗ ವನ್ನು ದ್ರವದ ಆವಿಯ (ವೇಪರ್) ಒತ್ತಡವನ್ನು ಅಳತೆ ಮಾಡಲು ಉಪಯೋಗಿಸಲಾಗುತ್ತದೆ. $175^{0}$ ಸೆ. ಉಷ್ಣತೆ ಮತ್ತು 38 ವಾಯುಮಾನ ಒತ್ತಡದಲ್ಲಿ ಈಥರ್ ಅನಿಲರೂಪ ಹೊಂದುವುದೆಂದೂ $258^{0}$ಸೆ. ಉಷ್ಣತೆ ಮತ್ತು 71 ವಾಯುಮಾನ ಒತ್ತಡದಲ್ಲಿ ಇಂಗಾಲದ ಟ್ರೈಸಲ್ಫೈಟ್ ಅನಿಲರೂಪ ಹೊಂದುವುದೆಂದೂ ಕಂಡುಹಿಡಿದ. ಅನಂತರ ಈ ರೀತಿಯ ಪ್ರಯೋಗಗಳು ಮುಂದುವರಿಯಲಿಲ್ಲ. 1860ರಲ್ಲಿ ಆ್ಯಂಡ್ರ್ಯೂಸ್ ಎಂಬ ವಿಜ್ಞಾನಿ ಅಂಥದೇ ಪ್ರಯೋಗಗಳನ್ನು ಪುನಃ ಮಾಡಿದ.



ಚಿತ್ರ 1. ಫ್ಯಾರಡೆ ಉಪಕರಣ

**ಆ್ಯಂಡ್ರ್ಯೂಸ್ ಪ್ರಯೋಗ :** ಒತ್ತಡ ಬಹಳ ಹೆಚ್ಚಿಸಿ, $-110^{0}$ ಸೆ. ಉಷ್ಣತೆಗೆ ಶೈತ್ಯೀಕರಿಸಿ ಶಾಶ್ವತ ಅನಿಲಗಳನ್ನು ದ್ರವೀಕರಿಸಲು ಆ್ಯಂಡ್ರ್ಯೂಸ್ ಪ್ರಯತ್ನಪಟ್ಟ. ಆದರೆ ಸಾಧ್ಯವಾಗಲಿಲ್ಲ. ಅನಂತರ ಇಂಗಾಲದ ಡೈ ಆಕ್ಸೈಡ್ ಅನಿಲವನ್ನು ದ್ರವೀಕರಿಸಲು ಹೊರಟು ಮುಖ್ಯವಾದ ಒಂದು ಅಂಶವನ್ನು ಮನಗಂಡ. ಅದರ ಉಷ್ಣತೆ ಮತ್ತು ಒತ್ತಡಗಳನ್ನು ವ್ಯತ್ಯಾಸ ಮಾಡುತ್ತಿರುವಾಗ $31^{0}$ ಸೆ.ಗಿಂತ

ಉಷ್ಣತೆ ಕಡಿಮೆಯಾದಾಗ ಇಂಗಾಲದ ಡೈ ಆಕ್ಸೈಡ್ ಅನಿಲದ ಕೊಳವೆಯಲ್ಲಿ ದ್ರವ ಕಾಣಿಸಿಕೊಂಡಿತು; ದ್ರವೀಕರಣ ಪ್ರಾರಂಭವಾದ ಮೇಲೆ ಒತ್ತಡ ಹೆಚ್ಚಿಗೆ ಮಾಡದಿದ್ದರೂ ಅನಿಲ ದ್ರವೀಕರಣ ಹೊಂದುವುದು ತಿಳಿದುಬಂತು; $31^{0}$ ಸೆ. ನಲ್ಲಿ ಮಾತ್ರ ಒಂದು ನಿರ್ದಿಷ್ಟ ಒತ್ತಡಕ್ಕೆ ಬಂದ ಕೂಡಲೆ ಕಡಿಮೆ ಉಷ್ಣತೆಯಲ್ಲಿ ದ್ರವ ತುಂಬಿದ್ದ ಜಾಗದಲ್ಲಿ ಪೂರ್ತಿ ಸಮರೂಪ ಪ್ರವಾಹಿ (ಹೋಮೋಜೀನಿಯಸ್ ಫ್ಲುಯಿಡ್) ತುಂಬಿರುವುದು ಕಂಡಿತು. ಈ ಸ್ಥಿತಿಯಲ್ಲಿ ಉಷ್ಣತೆ ಸ್ವಲ್ಪ ಕಡಿಮೆ ಮಾಡಿದ ಕೂಡಲೆ ಕೊಳವೆಯ ಎಲ್ಲ ಭಾಗದಲ್ಲೂ ಒಂದು ವಿಚಿತ್ರ ರೀತಿಯ ಅಲುಗಾಟ (ಫ್ಲಿಕರ್) ಗೋಚರಿಸುವುದೆಂದು ಆ್ಯಂಡ್ರ್ಯೂಸ್ ತಿಳಿಸಿದ. $31^{0}$ ಸೆ. ಗಿಂತ ಹೆಚ್ಚಿನ ಉಷ್ಣತೆಯಲ್ಲಿ ಒತ್ತಡ ಹೆಚ್ಚಿಸಿದರೆ ಇಂಗಾಲದ ಡೈಆಕ್ಸೈಡ್ ಅನಿಲದ ಗಾತ್ರ ಕಡಿಮೆಯಾಗುವುದೇ ವಿನಾ ದ್ರವೀಕರಣ ಸಾಧ್ಯವಿಲ್ಲ.

ಈ ಉಷ್ಣತೆಯನ್ನು ಇಂಗಾಲದ ಡೈಆಕ್ಸೈಡ್ ಅವಧಿಕ ಉಷ್ಣತೆಯೆಂದು (TC) ಮತ್ತು ಈ ಉಷ್ಣತೆಯಲ್ಲಿ ಅನಿಲ ಸಮರೂಪದ ಪ್ರವಾಹಿ ಆಗಿ ಪರಿವರ್ತನೆ ಹೊಂದುವ ಒತ್ತಡ ಮತ್ತು ಗಾತ್ರಗಳನ್ನು ಅವಧಿಕ ಒತ್ತಡ (PC)ಮತ್ತು ಅವಧಿಕ ಗಾತ್ರಗಳೆಂದು (VC) ಆ್ಯಂಡ್ರ್ಯೂಸ್ ಕರೆದ. ಮೇಲಿನ ಪ್ರಯೋಗಗಳಿಂದ ತಿಳಿದ ಒಂದು ಮುಖ್ಯಾಂಶವೆಂದರೆ, ಪ್ರತಿ ಅನಿಲಕ್ಕೂ ಒಂದು ಅವಧಿಕ ಉಷ್ಣತೆಯಿದೆ. ಅನಿಲವನ್ನು ಅದರ ಅವಧಿಕ ಉಷ್ಣತೆಗಿಂತ ಕಡಿಮೆ ಉಷ್ಣತೆ ಗಳಿಸಿದರೆ ಮಾತ್ರ, ಒತ್ತಡ ಹೆಚ್ಚು ಮಾಡುವುದರಿಂದ ದ್ರವೀಕರಣ ಸಾಧ್ಯ. ಆ್ಯಂಡ್ರೂಸ್‌ನ ಉಪಕರಣವನ್ನು ಈಗ ದಕ್ಷಿಣ ಕೆನ್ಸಿಂಗ್‌ಟನ್ ವಸ್ತು ಸಂಗ್ರಹಾಲಯ ದಲ್ಲಿಡಲಾಗಿದೆ.

ಅನಿಲಗಳನ್ನು ಒಂದೇ ಬಾರಿಗೆ ಯಾವುದಾದರೂ ಶೀತಕವನ್ನು ಪಯೋಗಿಸಿ, ಅವುಗಳ ಅವಧಿಕ ಉಷ್ಣತೆಯನ್ನು ಗಳಿಸಲಾಗದಿದ್ದರೂ ಹಂತ ಹಂತವಾಗಿ ಉಷ್ಣತೆ ಇಳಿಸುತ್ತಾ ಹೋದರೆ ಬೇಕಾದ ನಿರ್ದಿಷ್ಟ ಉಷ್ಣತೆ ಪಡೆಯಬಹುದು. ಅನಂತರ ಒತ್ತಡ ಹೆಚ್ಚಿಸಿ ಅನಿಲಗಳನ್ನು ದ್ರವೀಕರಿಸಬಹುದು. ಈ ರೀತಿ ಗಾಳಿ ಮತ್ತು ಇತರ ಅನಿಲಗಳನ್ನು ದ್ರವೀಕರಿಸಲು ಅನುಸರಿಸುವ ಕೆಲವು ಮುಖ್ಯ ವಿಧಾನಗಳು: 1.ಪಿಕ್ಟೆಟ್‌ರವರ ಕ್ಯಾಸ್ಕೇಡ್ ವಿಧಾನ, 2.ಜೌಲ್–ಥಾಮ್ಸನ್ ಪರಿಣಾಮವನ್ನು ಪಯೋಗಿಸಿಕೊಂಡು ರಚಿಸಿರುವ ಲಿಂಡೆ ಮತ್ತು ಹ್ಯಾಂಪ್‌ಸನ್‌ರವರ ವಿಧಾನ. 3. ಕ್ಲಾಡೆ ಮತ್ತು ಹೆಲಾಂಡ್ಸ್‌ರವರ ವಿಧಾನ.

1. ಪಿಕ್ಟೆಟ್‌ರವರ ಕ್ಯಾಸ್ಕೇಡ್ ವಿಧಾನವನ್ನನುಸರಿಸಿ ಕ್ಯಾಮರ್‌ಲಿಂಗ್ ಓನ್ಸ್‌ರವರು ಆಮ್ಲಜನಕವನ್ನು ದ್ರವೀಕರಿಸಿದರು. ಈ ವಿಧಾನದಲ್ಲಿ ಮೂರು ಅಥವಾ ಹೆಚ್ಚು ಯಂತ್ರಗಳ ಜೋಡಣೆಯಿದೆ. ಪ್ರತಿಯೊಂದರಲ್ಲಿಯೂ ಒಂದು

ಸಂಮರ್ದಕ ಇರುವುದು. ಮೊದಲನೆಯ ಭಾಗ ಮೀಥೈಲ್ ಕ್ಲೋರೈಡನ್ನು ಉಪಯೋಗಿಸಿಕೊಳ್ಳುವುದು. ಈ ಅನಿಲದ ಅವಧಿಕ ಉಷ್ಣತೆ $143^{o}$ ಸೆ. ಪ್ರಯೋಗಶಾಲೆಯ ನೀರಿನಿಂದ ಈ ಅನಿಲ ಹರಿಯುವ ಕೊಳವೆಯನ್ನು ತಂಪುಗೊಳಿಸಿದರೆ ಒತ್ತಡ ಹೆಚ್ಚು ಮಾಡುವುದರಿಂದ ಇದನ್ನು ದ್ರವೀಕರಿಸಬಹುದು. ಚಿತ್ರ 4ರಲ್ಲಿ ತೋರಿಸಿರುವಂತೆ ಈ ದ್ರವ ಎರಡನೆಯ ಭಾಗದಲ್ಲಿರುವ ಹೊರ ಕೊಳವೆಯಲ್ಲಿ ಬೀಳುವುದು. ಈ ಕೊಳವೆ ಸಂಮರ್ದಕ ಪಂಪಿನ ಅನಿಲವನ್ನು ಸೆಳೆದುಕೊಳ್ಳುವ ಭಾಗಕ್ಕೆ ಸೇರಿರುವುದರಿಂದ ಅದರ ಒತ್ತಡ ಬಹುಪಾಲು ಕಡಿಮೆಯಾಗಿ ಅದರ ಉಷ್ಣತೆ ಸುಮಾರು $-90^{o}$ ಸೆ.ಗೆ ಇಳಿಯುವುದು. $-90^{o}$ ಸೆ.ನಲ್ಲಿರುವ ಈ ದ್ರವ ಎರಡನೆಯ ವಿಭಾಗದ ಕೊಳವೆಯಲ್ಲಿ ಬರುವ ಎಥಿಲೀನ್ ಅನಿಲವನ್ನು ಶೈತ್ಯೀಕರಿಸುವುದು. ಎಥಿಲೀನಿನ ಅವಧಿಕ ಉಷ್ಣತೆ $9.5^{o}$ ಸೆ. ಆಗಿರುವುದರಿಂದ ಒತ್ತಡ ಹೆಚ್ಚಿಸಿ ಈ ಅನಿಲವನ್ನು ದ್ರವೀಕರಿಸಬಹುದು. ದ್ರವವಾದನಂತರ ಎಥಿಲೀನ್ ಮೂರನೆಯ ವಿಭಾಗದ ಹೊರ ಕೊಳವೆಯೊಳಗೆ ಬೀಳುವುದು. ಮೀಥೈಲ್ ಕ್ಲೋರೈಡಿನಂತೆಯೇ ಕಡಿಮೆ ಒತ್ತಡದಿಂದ ಅದರ ಉಷ್ಣತೆ $-160^{o}$ ಸೆ. ವರೆಗೂ ಇಳಿಯುವುದು. ಆಮ್ಲಜನಕದ ಅವಧಿಕ ಉಷ್ಣತೆ $-118.82^{o}$ ಸೆ. ಆದ್ದರಿಂದ $-160^{o}$ ಸೆ. ಉಷ್ಣತೆಯಲ್ಲಿರುವ ಎಥಿಲೀನ್‌ನಿಂದ ತಂಪು ಮಾಡಿ ಒತ್ತಡ ಹೆಚ್ಚು ಮಾಡಿದರೆ ಆಮ್ಲಜನಕವನ್ನು ದ್ರವೀಕರಿಸಬಹುದು. ಈ ದ್ರವವನ್ನು ಡಿವಾರ್ ಜಾಡಿಯಲ್ಲಿ ಶೇಖರಿಸಬಹುದು. ದ್ರವ ಆಮ್ಲಜನಕವನ್ನು ಕಡಿಮೆ ಒತ್ತಡದಲ್ಲಿ ಕುದಿಯುವಂತೆ ಮಾಡಿದರೆ ಅದರ ಉಷ್ಣತೆ $-218^{o}$ ಸೆ.ವರೆಗೂ ಇಳಿಯುವಂತೆ ಮಾಡಬಹುದು.



ಚಿತ್ರ 2.
ಕಾಗ್‌ನಿಯರ್ಡ್ ಉಪಕರಣ

ಮೇಲಿನ ವಿಧಾನದಿಂದ ಶಾಶ್ವತ ಅನಿಲ ಎಂದು ತಿಳಿದಿದ್ದ ಆಮ್ಲಜನಕವನ್ನು ದ್ರವೀಕರಿಸಲಾಯಿತು. ಆದರೆ ಉಳಿದ ಅನಿಲಗ ಳಾದ ಜಲಜನಕ, ಹೀಲಿಯಂ ಮತ್ತು ನಿಯಾನ್ ಅನಿಲಗಳನ್ನು ದ್ರವೀಕರಿಸಲಾಗಲಿಲ್ಲ. ಕಾರಣ, ದ್ರವ ಆಮ್ಲಜನಕದಿಂದ ಪಡೆದ ಕನಿಷ್ಠ ಉಷ್ಣತೆ $-218^{o}$ ಸೆ. ಮೇಲಿನ ಅನಿಲಗಳ ಅವಧಿಕ ಉಷ್ಣತೆಗಳಿಗಿಂತ ಹೆಚ್ಚು. ಬೇರಾವ ವಿಧಾನದಲ್ಲೂ ಈ ಅನಿಲಗ ಳನ್ನು ಶೈತ್ಯೀಕರಿಸಲು ಸಾಧ್ಯವಾಗದಿದ್ದುದರಿಂದ ಇವುಗಳ ದ್ರವೀಕರಣ ಆಗಲಿಲ್ಲ.

**2. ಜೌಲ್–ಥಾಮ್ಸನ್ ಪರಿಣಾಮದಿಂದ ಅನಿಲ ದ್ರವೀಕರಣ :** ಸಂಮರ್ದಿತ ಅನಿಲವನ್ನು ನೀರಿನಲ್ಲಿ ಮುಳುಗಿಸಿ ರುವ ತಾಮ್ರದಸುರುಳಿ ಕೊಳವೆಯ ಮುಖಾಂತರ ಹೋಗುವಂತೆ ಮಾಡಿದರೆ ಅದರ ಉಷ್ಣತೆ ಹೊರಗಿರುವ ನೀರಿನ ಉಷ್ಣತೆಯನ್ನು ಪಡೆಯುತ್ತದೆ. ಈ ಅನಿಲವನ್ನು ಒಂದು ಅತಿ ಸಣ್ಣ ರಂಧ್ರಗಳನ್ನು ಹೊಂದಿರುವ ಬೆಣೆಯ (ಪೋರಸ್ ಪ್ಲಗ್) ಮುಖಾಂತರ ಹಾಯಿಸಿದರೆ ಅದರ ಒತ್ತಡ ಕಡಿಮೆಯಾಗಿ ಅದು ವಿಕಾಸ ಹೊಂದುವುದು. ಈ ರೀತಿ ರಂಧ್ರದ ಮೂಲಕ ಬಂದು ವಿಕಾಸಗೊಂಡ ಅನಿಲದ ಉಷ್ಣತೆ ಕಡಿಮೆಯಾಗುವುದೆಂದು ಜೌಲ್ ಮತ್ತು ಥಾಮ್‌ಸನ್ ತಮ್ಮ ಪ್ರಯೋಗಗಳಿಂದ ತೋರಿಸಿದ್ದಾರೆ. ಅನಿಲದ ಉಷ್ಣತೆ $T < 2a/bR$ ಆಗಿದ್ದರೆ (ಇಲ್ಲಿ $a$, $b$ ವಾಂಡಲ್ ವಾಲ್ಸ್ ನಿಯತಾಂಕಗಳು ಮತ್ತು $R$ ಎಂಬುದು ಅನಿಲದ ನಿಯತಾಂಕ) ಆಗುವ ವಿಕಾಸದಿಂದ ಉಷ್ಣತೆ ಕಡಿಮೆಯಾಗುವುದೆಂದೂ $T < 2a/bR$ ಆಗಿದ್ದರೆ ಉಷ್ಣತೆ ಹೆಚ್ಚುವುದೆಂದೂ ಪ್ರಯೋಗದಿಂದ ತೋರಿಸಿದ್ದಾರೆ. $T_i = 2a/bR$ ಎಂಬ ವಿಶಿಷ್ಟಉಷ್ಣತೆಯನ್ನು ಅನಿಲದ ವಿಪರ್ಯ ಉಷ್ಣತೆಯೆಂದು (ಇನ್ವರ್ಷನ್) ಕರೆಯುವರು.

ಈ ಪರಿಣಾಮದಿಂದ ಉಂಟಾಗುವ ಉಷ್ಣತಾವ್ಯತ್ಯಾಸ ಅತ್ಯಲ್ಪ. 50 ವಾಯುಮಾನ ಒತ್ತಡದಿಂದ ಒಂದು ವಾಯುಮಾನ ಒತ್ತಡಕ್ಕಿಳಿದರೆ ಉಷ್ಣತಾವ್ಯತ್ಯಾಸ $11.7^{o}$ ಸೆ. ಆದರೂ ಈ ವಿಧಾನವನ್ನನುಸರಿಸಿ ಅನಿಲ ದ್ರವೀಕರಣ ಸಾಧ್ಯ. ಸಂಮರ್ದಕದಿಂದ ಅತಿ ಹೆಚ್ಚಿನ ಒತ್ತಡದಲ್ಲಿರುವ ಅನಿಲ ತಾಮ್ರದ ಸುರುಳಿ ಕೊಳವೆಯನ್ನು ಪ್ರವೇಶಿಸುತ್ತದೆ. ಈ ಕೊಳವೆಯನ್ನು ಶೀತದ್ರವದಿಂದ (ಉದಾ : ದ್ರವ ಇಂಗಾಲದ ಡೈ ಆಕ್ಸೈಡ್, ದ್ರವ ಸಾರಜನಕ, ದ್ರವ

ಆಮ್ಲಜನಕ–ಇತ್ಯಾದಿ) ತಂಪು ಮಾಡಿದ ಅನಂತರ ಮುಂದೆ ಒಂದು ಕವಾಟದಲ್ಲಿ ವಿಕಾಸ ಹೊಂದುವಂತೆ ಏರ್ಪಡಿಸಲಾಗಿರುತ್ತದೆ. ವಿಕಾಸ ಹೊಂದಿದ ಅನಿಲ ಜೌಲ್–ಥಾಮ್‌ಸನ್ ಪರಿಣಾಮದಿಂದ ತನ್ನ ಉಷ್ಣತಾ ಮಟ್ಟವನ್ನು ಕಡಿಮೆಮಾಡಿಕೊಳ್ಳುತ್ತದೆ. ತಂಪಾದ ಅನಿಲ ಹೊರಗೊಳವೆಯ ಮುಖಾಂತರ ಸಂಮರ್ದಕದ ಕಡೆಗೆ ಚಲಿಸುವಾಗ, ಕವಾಟದೆಡೆಗೆ ಬರುತ್ತಿರುವ ಅನಿಲದ ಶಾಖವನ್ನು ಹೀರಿಕೊಂಡು ಅದನ್ನೂ ತಂಪುಮಾಡಿ ಸಂಮರ್ದಕಕ್ಕೆ ಬರುವ ವೇಳೆಗೆ ಕವಾಟದೆಡೆಗೆ ನುಗ್ಗುತ್ತಿರುವ ಅನಿಲದಷ್ಟೇ ಉಷ್ಣತೆಯನ್ನು ಪಡೆದಿರುತ್ತದೆ. ಈ ಅನಿಲದ ಒತ್ತಡವನ್ನು ಪುನಃ ಹೆಚ್ಚಿಸಿ ಶೀತದ್ರವದ ಹೊರಕವಚದಿಂದ (ಜಾಕೆಟ್) ತಂಪು ಮಾಡಿ ಪುನಃ ವಿಕಾಸ ಹೊಂದುವಂತೆ ಮಾಡಲಾಗುತ್ತದೆ. ಈ ಕ್ರಿಯೆ ಪದೇ ಪದೇ ಜರುಗುತ್ತಿದ್ದಂತೆ ಕವಾಟದಲ್ಲಿ ವಿಕಾಸಗೊಳ್ಳುವ ಅನಿಲದ ಉಷ್ಣತೆ ಕ್ರಮೇಣ ಕಡಿಮೆಯಾಗುತ್ತ ಹೋಗಿ ಯಾವುದೋ ಒಂದು ನಿರ್ದಿಷ್ಟ ಉಷ್ಣತೆಗೆ ಬಂದಾಗ ಅನಿಲದ ಸ್ವಲ್ಪ ಭಾಗ ದ್ರವವಾಗಿ ಪರಿವರ್ತನೆ ಹೊಂದಿ ಡಿವಾರ್ ಜಾಡಿಯಲ್ಲಿ ಶೇಖರವಾಗುತ್ತದೆ. ಈ ವಿಧಾನಕ್ಕೆ ಪುನರಾವರ್ತಿತ ಶೀತಲೀಕರಣ (ರಿಜನೆರೇಟಿವ್ ಕೂಲಿಂಗ್) ಎಂದು ಹೆಸರು. ಮೇಲಿನ ತತ್ತ್ವ ಹಾಗೂ ವಿಧಾನವನ್ನನುಸರಿಸಿ ಜರ್ಮನಿಯಲಿಂಡೆ ಮತ್ತು ಇಂಗ್ಲೆಂಡಿನ ಹ್ಯಾಂಪ್‌ಸನ್ ಎಂಬುವರು ಗಾಳಿಯನ್ನು ದ್ರವೀಕರಿಸಿದರು.



ಚಿತ್ರ 3. ಆ್ಯಂಡ್ರೂಸ್ ಉಪಕರಣ

**ಹ್ಯಾಂಪ್‌ಸನ್ ವಿಧಾನ :** ಜೌಲ್–ಥಾಮ್‌ಸನ್ ಪರಿಣಾಮವನ್ನೊಳಗೊಂಡ ಈ ವಿಧಾನದಲ್ಲಿ ಹ್ಯಾಂಪ್‌ಸನ್ ರಚಿಸಿರುವ ಸುರುಳಿಯೇ ಒಂದು ವೈಶಿಷ್ಟ್ಯ. ಅಧಿಕ ಒತ್ತಡದಲ್ಲಿರುವ ಗಾಳಿ ತಾಮ್ರದ ಸಣ್ಣ ಕೊಳವೆಯ ಏಕಕೇಂದ್ರೀಯ ಸುರುಳಿಯಲ್ಲಿ ಹರಿದು ತುದಿಯಲ್ಲಿರುವ ಒಂದು ಕವಾಟದಲ್ಲಿ ವಿಕಾಸಗೊಂಡು ತಂಪಾಗುವುದು. ಈ ರೀತಿ ತಂಪಾದ ಗಾಳಿ ಸುರುಳಿಪದರಗಳ ಸಂದುಗಳಲ್ಲಿ ಮೇಲಕ್ಕೇರುತ್ತ ಕೊಳವೆಯೊಳಗಿನಿಂದ ಕೆಳಕ್ಕೆ ಬರುತ್ತಿರುವ ಗಾಳಿಯನ್ನು ತಂಪು ಮಾಡುವುದು. ಮೇಲಿನ ಪರಿಣಾಮ ಪದೇ ಪದೇ ಜರುಗುತ್ತಿದ್ದು, ಸ್ವಲ್ಪ ಕಾಲಾನಂತರ ಹೆಚ್ಚು ಒತ್ತಡದಲ್ಲಿರುವ ಅನಿಲದ ಉಷ್ಣತೆ ಬಹಳ ಕಡಿಮೆಯಾಗಿ ವಿಕಾಸಗೊಂಡ ಅನಂತರ ದ್ರವವಾಗಿ ಪರಿವರ್ತನೆಗೊಳ್ಳುತ್ತದೆ. ಹ್ಯಾಂಪ್‌ಸನ್ನರ ರಚನೆಯನ್ನನುಸರಿಸಿ ಡಿವಾರ್, ಓನ್ಸ್ ಮುಂತಾದವರು ಜಲಜನಕ ಮತ್ತು ಹೀಲಿಯಂ ಅನಿಲಗಳನ್ನು ದ್ರವೀಕರಿಸಿದರು.

**ಲಿಂಡೆ ವಿಧಾನ :** ಇಲ್ಲಿ ಪುನರಾವರ್ತಿತ ಶೈತ್ಯೀಕರಣ ವಿಧಾನವನ್ನನುಸರಿಸಿದರೂ ಹ್ಯಾಂಪ್‌ಸನ್ ವಿಧಾನಕ್ಕಿಂತ ಸ್ವಲ್ಪ ವ್ಯತ್ಯಾಸವಿದೆ. ಗಾಳಿಯನ್ನು ವಾತಾವರಣದಿಂದ ತೆಗೆದುಕೊಂಡು ಎರಡು ಹಂತಗಳಲ್ಲಿ 1–20 ಮತ್ತು 20–200 ವಾಯುಮಾನಗಳವರೆಗೆ ಒತ್ತಡ ಹೆಚ್ಚಿಸಿ ನೀರಿನಿಂದ ಮೊದಲು ತಂಪುಮಾಡಲಾಗುವುದು. ಗಾಳಿಯಲ್ಲಿರುವ ಇಂಗಾಲದ ಡೈ ಆಕ್ಸೈಡ್ ಅನಿಲವನ್ನು ತೆಗೆದು ಹಾಕಲು ಕಾಸ್ಟಿಕ್‌ಸೋಡ ಇರುವ ಗಾಳಿಯ ಅಧಿಕ ಒತ್ತಡವನ್ನು ತಡೆಯಬಲ್ಲ ಒಂದು ದಪ್ಪನೆಯ ತಾಮ್ರದ ಕೊಳವೆಯ ಮುಖಾಂತರ ಈ ಗಾಳಿ ಹೋಗುವಂತೆ ಮಾಡಲಾಗುವುದು.

ಅನಂತರ ಗಾಳಿ–$20^{o}$ ಸೆ. ಉಷ್ಣತೆಯಲ್ಲಿರುವ ಮತ್ತೊಂದು ಕೊಳವೆಯಲ್ಲಿ ಹರಿಯುವುದು. ಅಲ್ಲಿಂದ ಒಂದು ಲೋಹದ ಕೊಳವೆಯ ಮುಖಾಂತರ ಹೊರಟು ದೊಡ್ಡ ಕೊಳವೆಯ ಹೊದಿಕೆಯಿರುವ ಮತ್ತೊಂದು ಸಣ್ಣಕೊಳವೆಯ ಸುರುಳಿಯಲ್ಲಿ ಹರಿದು ಕವಾಟವೊಂದರ ಸಣ್ಣನಾಳದಲ್ಲಿ 200–20 ವಾಯುಮಾನ ಒತ್ತಡಕ್ಕೆ ವಿಕಾಸಗೊಂಡು ಜೌಲ್–ಥಾಮ್‌ಸನ್ ಪರಿಣಾಮದಿಂದ ಶೀತಲೀಕರಣ ಹೊಂದುತ್ತದೆ. ಈ ಗಾಳಿ ದೊಡ್ಡ ಕೊಳವೆಯ ಮುಖಾಂತರ ಮೇಲೇರುತ್ತಾ ಒಳಬರುತ್ತಿರುವ ಗಾಳಿಯನ್ನು ತಂಪುಗೊಳಿಸುವುದಲ್ಲದೆ ಪುನಃ 20–200 ವಾಯುಮಾನಗಳವರೆಗೆ ಒತ್ತಡ ಹೆಚ್ಚು ಮಾಡುವ ಸಂಮರ್ದಕಕ್ಕೆ ಹೋಗುವುದು. ಒತ್ತಡ 200–20 ವಾಯುಮಾನಗಳವರೆಗೆ ಇಳಿದರೆ ಉಷ್ಣತೆ ಸುಮಾರು–$78^{o}$ ಸೆ. ನಷ್ಟಾಗುತ್ತದೆ. ಸಂಮರ್ದಕದ ಎರಡನೆಯ ಹಂತದಲ್ಲಿ ವಿಕಾಸಹೊಂದಿದ ಗಾಳಿ ಮೊದಲಿನ ಹಂತದಲ್ಲಿ ಅಧಿಕ ಒತ್ತಡಕ್ಕೇರಿಸಿದ ಹೊಸ ಗಾಳಿಯೊಡನೆ ಬೆರೆತು ಪುನಃ ಅದೇ ಪಥವನ್ನವಲಂಬಿಸುವುದು. ಈ ರೀತಿ ಅನೇಕಾವರ್ತಿ ವಿಕಾಸಗೊಂಡ ಗಾಳಿಯ ಉಷ್ಣತೆ ಬಹಳ ಕಡಿಮೆಯಾದಾಗ ಎರಡನೆಯ ಕವಾಟದ ನಾಳದಲ್ಲಿ ಅದರ ಒತ್ತಡ 1 ವಾಯುಮಾನ ಆಗುವಂತೆ ಮಾಡಿದರೆ ಜೌಲ್–ಥಾಮ್‌ಸನ್ ಪರಿಣಾಮದಿಂದ ದ್ರವೀಕರಣ ಪ್ರಾರಂಭವಾಗಿ ದ್ರವವಾಗದೆ ಉಳಿದ ಗಾಳಿ ಹೊರಕೊಳವೆಯಲ್ಲಿ ಚಲಿಸಿ ಉಳಿದೆರಡು ಕೊಳವೆಗಳನ್ನು ತಂಪುಗೊಳಿಸುವುದು. ದ್ರವವಾಗಿ ಪರಿವರ್ತನೆಗೊಂಡ ಗಾಳಿ ಡಿವಾರ್ ಜಾಡಿಯಲ್ಲಿ ಶೇಖರವಾಗುವುದು. ಗಾಳಿಯನ್ನು ವಾತಾವರಣದಿಂದ ಅವಿರತವಾಗಿ ತೆಗೆದುಕೊಂಡು ಈ ವಿಧಾನದಿಂದ ಅದನ್ನು ದ್ರವೀಕರಿಸಬಹುದು.

**ಕ್ಲೋಡ್ ಮತ್ತು ಹೆಲಾಂಟ್ ವಿಧಾನ :** ಅನಿಲ ವಿಕಾಸಗೊಳ್ಳುವಾಗ ಉಷ್ಣವನ್ನು ತನ್ನಿಂದ ಹೊರಗೆ ಬಿಟ್ಟುಕೊಡದೆ ಮತ್ತು ಹೊರಗಡೆಯಿಂದ ಉಷ್ಣವನ್ನು ತೆಗೆದುಕೊಳ್ಳದಿದ್ದರೆ ಇದನ್ನು ಸ್ಥಿರೋಷ್ಣವಿಕಾಸವೆನ್ನಲಾಗುತ್ತದೆ. ಈ ವಿಕಾಸದಿಂದಾಗಿ ಅನಿಲದ ಅಣುಗಳು ಪರಸ್ಪರ ಹೊರಹೋಗುವುದರಿಂದ ಆಕರ್ಷಣಬಲದ ವಿರುದ್ಧ ಕೆಲಸ ಜರುಗುತ್ತದೆ. ಈ ಕಾರ್ಯಕ್ಕೆ ಅನಿಲದಲ್ಲಿನ ಶಕ್ತಿಯನ್ನೇ ಉಪಯೋಗಿಸಿಕೊಳ್ಳುವುದರಿಂದ ಅನಿಲದ ಉಷ್ಣತೆ ಕಡಿಮೆಯಾಗುವುದು.

ಸ್ಥಿರೋಷ್ಣ ವ್ಯತ್ಯಾಸಹೊಂದುವ ಅನಿಲದ ಒತ್ತಡ $P$ ಮತ್ತು ಗಾತ್ರಗಳು $V$ ಎಂಬುದು $PV^{\gamma}=K$ (ನಿಯತಾಂಕ) ಎಂಬ ಸೂತ್ರಕ್ಕನುಗುಣವಾಗಿ ವರ್ತಿಸುತ್ತವೆ. ಇಲ್ಲಿ $\gamma=\frac{C_P}{C_v}.C_p$ ಎಂಬುದು ನಿಯತ ಒತ್ತಡದಲ್ಲಿರುವ ಅನಿಲದ ಗ್ರಾಹ್ಯೋಷ್ಣ. $C_V$ ಎಂಬುದು ನಿಯತ ಗಾತ್ರದಲ್ಲಿರುವ ಅನಿಲದ ಗ್ರಾಹ್ಯೋಷ್ಣ, ಆದರ್ಶ ಅನಿಲ ಸೂತ್ರವನ್ನು ಉಪಯೋಗಿಸಿಕೊಂಡು ಅನಿಲದ ಒತ್ತಡವನ್ನು $P_1$ ರಿಂದ $P_2$ ವಾಯುಮಾನಕ್ಕೆ ಇಳಿಸಿದರೆ ಉಂಟಾಗುವ ಉಷ್ಣತಾವ್ಯತ್ಯಾಸಗಳನ್ನು $\frac{T_1}{T_2}=\left(\frac{P_1}{p_2}\right)^{\frac{\gamma-1}{\gamma}}$ ಎಂಬ ಸೂತ್ರದಿಂದ ತಿಳಿಯಬಹುದು; ಇದರಲ್ಲಿ $T_1$ ಎಂಬುದು ಪ್ರಾರಂಭದ ಉಷ್ಣತೆ $T_2$ ಎಂಬುದು ಅಂತಿಮ ಉಷ್ಣತೆ.




ಚಿತ್ರ 4. ಕ್ಯಾಸ್ಕೇಡ್ ವಿಧಾನದ ಉಪಕರಣ D –ಡಿವಾರ್ ಜಾಡಿ

ಸ್ಥಿರೋಷ್ಣವಿಕಾಸಗೊಂಡ ಅನಿಲ ಸ್ವಲ್ಪ ಕೆಲಸ ಮಾಡುವಂತೆ ಮಾಡಿದರೆ ಆಗುವ ಉಷ್ಣತಾವ್ಯತ್ಯಾಸ ಜೌಲ್–ಥಾಮ್‌ಸನ್ ಪರಿಣಾಮದಿಂದುಂಟಾಗುವ ವ್ಯತ್ಯಾಸಕ್ಕಿಂತ ಹೆಚ್ಚಿನದಾಗಿರುತ್ತದೆ. ಸ್ಥಿರೋಷ್ಣವಿಕಾಸ ಮತ್ತು ಜೌಲ್–ಥಾಮ್‌ಸನ್ ಪರಿಣಾಮ ಇವೆರಡನ್ನೂ ಒಳಗೊಂಡು ಗಾಳಿಯ ದ್ರವೀಕರಣವನ್ನು ಕ್ಲೋಡ್ ಮತ್ತು ಹೆಲಾಂಟ್ ಮಾಡಿದರು.

ವಾತಾವರಣದಿಂದ ತೆಗೆದುಕೊಂಡ ಗಾಳಿಯನ್ನು ಸಂಮರ್ದಕಗಳ ಸಹಾಯದಿಂದ 40 ವಾಯುಮಾನಗಳವರೆಗೆ ಸಂಮರ್ದಿಸಿ $A$ ಕೊಳವೆಯಲ್ಲಿ ಚಿತ್ರದಲ್ಲಿ ಕೆಳನುಗ್ಗುವಂತೆ ಮಾಡಲಾಗಿದೆ. $A$ ಬಿಂದುವಿನಲ್ಲಿ ಈ ಗಾಳಿ ಎರಡು ಭಾಗವಾಗಿ ಬೇರ್ಪಟ್ಟು ಸ್ವಲ್ಪ ಭಾಗ $B$ ವಿಕಾಸಯಂತ್ರಕ್ಕೂ ಉಳಿದ ಭಾಗ ನೇರವಾಗಿಯೂ ಮುಂದುವರಿಯುವುವು. ವಿಕಾಸಯಂತ್ರದೆಡೆಗೆ ನುಗ್ಗಿದ ಗಾಳಿಯ ಒತ್ತಡ ಹೆಚ್ಚುವುದು. ಕವಾಟದಲ್ಲಿ ಜೌಲ್–ಥಾಮ್‌ಸನ್ ಪರಿಣಾಮದಿಂದ ಗಾಳಿಯ ಉಷ್ಣತೆ ಕಡಿಮೆಯಾಗುವುದು. ಈ ಗಾಳಿ ಒಳಬರುತ್ತಿರುವ ಗಾಳಿಯನ್ನು ತಂಪುಮಾಡುತ್ತ ಸಂಮರ್ದಕದ ಕಡೆ ಚಲಿಸುವುದು. ಸಂಮರ್ದಕದಿಂದ ಬರುವ ಗಾಳಿ ಕವಾಟಕ್ಕೆ ಹೋಗುವ ಮುನ್ನ $I, II$ ಮತ್ತು $III$ ಎಂಬ

ಉಷ್ಣ ವಿನಿಮಯಕಾರಿಗಳ ಸಂಪರ್ಕದಲ್ಲಿ ತನ್ನ ಉಷ್ಣವನ್ನು ಕಡಿಮೆಮಾಡಿಕೊಳ್ಳುತ್ತದೆ. ಮೊದಲನೆಯದರಲ್ಲಿ ಅದರ ಉಷ್ಣತೆ ಸುಮಾರು $-80^0$ ಸೆ. ಇದ್ದು ಉಳಿದೆರಡರಲ್ಲಿ ಇನ್ನೂ ಕಡಿಮೆಯಾಗಿ, ಅಲ್ಲಿನ ಒತ್ತಡ ಹೆಚ್ಚಿರುವುದರಿಂದ ಗಾಳಿಯ ಸ್ವಲ್ಪ ಭಾಗ ದ್ರವೀಕರಣಗೊಳ್ಳುತ್ತದಲ್ಲದೆ ಕವಾಟದಲ್ಲಿ ಜೌಲ್–ಥಾಮ್ಸನ್ ಪರಿಣಾಮದಂತೆ ವಿಕಾಸಹೊಂದಿ ಅದರ ಒತ್ತಡ 1 ವಾಯುಮಾನ ಆಗುವುದು. ದ್ರವದ ಸ್ವಲ್ಪ ಭಾಗ ಕವಾಟದ ಹತ್ತಿರ ಆವಿಯಾಗಿ ಉಳಿದ ದ್ರವ ಡಿವಾರ್ ಜಾಡಿಯಲ್ಲಿ ಶೇಖರಣೆಯಾಗುವುದು. ದ್ರವದ ಆವಿ ಮೇಲಕ್ಕೇರುವಾಗ ಕೆಳಬರುತ್ತಿರುವ ಗಾಳಿಯನ್ನು ಬಹುಪಾಲು ತಂಪುಮಾಡುವುದು.



ಚಿತ್ರ 5. ಪುನರಾವರ್ತಿ ಶೈತ್ಯೀಕರಣ
A - ಶೀತದ್ರವದ ಹೊರಕವಚ, C - ಕವಾಟ
D - ಡಿವಾರ್‌ಜಾಡಿ, E - ಒಳಕೊಳವೆ , F - ಹೊರಕೊಳವೆ

ಕ್ಲೋಡ್ ದ್ರವೀಕಾರಿಗಿಂತ ಹೆಲಾಂಟ್ ದ್ರವೀಕಾರಿಯಲ್ಲಿ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ. ಕ್ಲೋಡ್ ವಿಧಾನವನ್ನನುಸರಿಸಿ ರಷ್ಯದ ಕೆಪಿಟ್‌ಜ಼ಾ ಗಾಳಿ ದ್ರವೀಕಾರಿಗಳನ್ನು ರಚಿಸಿದ್ದಾನೆ. ಇದರಲ್ಲಿ 5.6–1.5 ವಾಯು ಮಾನಗಳವರೆಗೆ ಒತ್ತಡ ವ್ಯತ್ಯಾಸ ಹೊಂದುವುದ ರಿಂದ ಹೆಚ್ಚಿನ ಒತ್ತಡದಲ್ಲಿ ಪ್ರಯೋಗ ಗಳನ್ನು ನಡೆಸುವಾಗ ಅಪಾಯ ಉದ್ಭವಿಸುವುದಿಲ್ಲ.

**ಜಲಜನಕ ದ್ರವೀಕರಣ :** ಬಹುವರ್ಷಗಳವರೆಗೆ ಜಲಜನಕದ ದ್ರವೀಕರಣ ಬಹಳ ಕಷ್ಟವೆಂದೇ ತಿಳಿಯಲಾಗಿತ್ತು. ರೋಬ್ಲವ್‌ಸ್ಕಿ ಯವರು ಬಲು ಜಾಗರೂಕತೆ ಯಿಂದ ಪ್ರಯೋಗಗಳನ್ನು ಮಾಡಿ ಜಲಜನಕದ ಅವಧಿಕ ಉಷ್ಣತೆ

$240^o$ ಸೆ. ಎಂದು ಅಂದಾಜು ಮಾಡಿದರು. ಓಲ್‌ಸ್ಜೆವ್‌ಸ್ಕಿ ಎಂಬುವರು ಜಲಜನಕದ ವಿಪರ್ಯ ಉಷ್ಣತೆ $-79^o$ ಸೆ. ಎಂದು ಪ್ರಯೋಗರೀತ್ಯಾ ಕಂಡುಹಿಡಿದರು. ಆದ್ದರಿಂದ ಜಲಜನಕವನ್ನು ದ್ರವ ಗಾಳಿಯಿಂದ $-194^o$ ಸೆ. ಉಷ್ಣತೆಯವರೆಗೆ ತಂಪುಮಾಡಿ ಜೌಲ್–ಥಾಮ್ಸನ್ ಪರಿಣಾಮವನ್ನನುಸರಿಸಿ ಮತ್ತೆ ಪುನರಾವರ್ತಿತ ಶೈತ್ಯೀಕರಣದಿಂದ ದ್ರವಜಲಜನಕವನ್ನು ಪಡೆಯಬಹುದು. ಜೌಲ್–ಥಾಮ್ಸನ್ ಪರಿಣಾಮವನ್ನವಲಂಬಿಸಿ ಡಿವಾರ್ (1902), ಟ್ರ್ಯಾವರ್ಸ್ (1903), ನರ್ನ್‌ಸ್ಟ್ (1911), ಓನ್ಸ್ (1906) ಮತ್ತು ಮೆಯಿಸ್‌ನರ್ (1925)–ಇವರು ಜಲಜನಕವನ್ನು ದ್ರವೀಕರಿಸಿದ್ದಾರೆ.

**ಹೀಲಿಯಂ ದ್ರವೀಕರಣ :** ಕೊನೆಯದಾಗಿ ದ್ರವೀಕರಣಮಾಡಿದ ಶಾಶ್ವತ ಅನಿಲವೆಂದರೆ ಹೀಲಿಯಂ. ಜಲಜನಕದ ದ್ರವೀಕರಣಕ್ಕಿಂತಲೂ ಹೀಲಿಯಂನ ದ್ರವೀಕರಣ ಮತ್ತೂ ಜಟಿಲವಾದುದೆಂದು ತಿಳಿಯಲಾಗಿತ್ತು. ಇದರ ದ್ರವೀಕರಣ ಭೌತಶಾಸ್ತ್ರಜ್ಞರ ಮತ್ತು ಎಂಜಿನಿಯರುಗಳ ಒಂದು ಮಹಾ ಸಾಧನೆಗಳಲ್ಲೊಂದೆಂದು ಹೇಳಬಹುದು. ದ್ರವಜಲಜನಕವನ್ನು ಘನವನ್ನಾಗಿ ಪರಿವರ್ತಿಸಿ ಆ ಉಷ್ಣತೆಗೆ ಹೆಚ್ಚು ಒತ್ತಡದಲ್ಲಿರುವ ಹೀಲಿಯಂ ಅನಿಲವನ್ನು ತಂಪುಮಾಡಿ ತತ್‌ಕ್ಷಣ ವಿಕಾಸಗೊಳಿಸಿ ದ್ರವೀಕರಣಮಾಡಲು ಡಿವಾರ್ ಮಾಡಿದ ಪ್ರಯತ್ನ ವಿಫಲಗೊಂಡಿತು. ಇದೇ ರೀತಿಯಲ್ಲಿ ಓಲ್‌ಸ್ಜೆವ್‌ಸ್ಕಿಯವರೂ ವಿಫಲಗೊಂಡರು. ಆದರೆ ಓನ್ಸ್‌ರವರು ತಮ್ಮ ಪ್ರಯೋಗಗಳನ್ನು ಕ್ರಮವಾಗಿ ಮಾಡಿ ಹೀಲಿಯಂ ಅನಿಲದ ಉತ್ಕಟ ನಿಯತಾಂಕಗಳು P ಎಂಬುದು $2.26^o$ ವಾಯುಮಾನಗಳು, $T_C=5.25^o$ ಆ್ಯ. ಎಂದು ಕಂಡುಹಿಡಿದು ಹೀಲಿಯಂ ಅನಿಲದ ಅವಧಿಕ ಉಷ್ಣತೆ 35ಲಿ ಆ್ಯ. ಎಂಬುದಾಗಿ ನಿರ್ಧರಿಸಿದರು. ಆ ಪ್ರಕಾರ ಹೀಲಿಯಂ ಅನಿಲವನ್ನು ದ್ರವಜಲಜನಕದಿಂದ ಶೈತ್ಯೀಕರಿಸಿ ಲಿಂಡೆ ವಿಧಾನದಿಂದ 1908ರಲ್ಲಿ ದ್ರವೀಕರಿಸಿದರಲ್ಲದೆ ತಮ್ಮ ಉಪಕರಣ ಪುನಃ 1922ರಲ್ಲಿ ಸ್ವಲ್ಪ ಮಾರ್ಪಾಟು ಮಾಡಿದರು.


ಚಿತ್ರ 6. ಲಿಂಡೆ ಉಪಕರಣ

1934ರಲ್ಲಿ ಕೆಪಿಟ್‌ಜ಼ಾರವರು ಗಾಳಿಯನ್ನು ದ್ರವೀಕರಿಸಲು ಉಪಯೋಗಿಸುವ ಕ್ಲೋಡ್ ಮತ್ತು ಹೆಲಾಂಟ್ ವಿಧಾನದಿಂದ ಹೀಲಿಯಂ ಅನಿಲವನ್ನು ದ್ರವೀಕರಿಸಬಹುದೆಂದು ತೋರಿಸಿದರು. ಉಷ್ಣತೆ ಕಡಿಮೆಯಾದಂತೆ ಸಾಮಾನ್ಯವಾಗಿ ಉಪಯೋಗಿಸುವ ಮೃದುಚಾಲಕಗಳೆಲ್ಲವೂ (ಲ್ಯೂಬ್ರಿಕೆಂಟ್ಸ್) ಘನರೂಪ ಹೊಂದುತ್ತಿದ್ದುದು ಈ ವಿಧಾನದಲ್ಲಿ ಎದುರಿಸಬೇಕಾಗಿದ್ದ ಸಮಸ್ಯೆ. ಕೆಪಿಟ್‌ಜ಼ಾ ಸಂಮರ್ದಕದ ಕೊಂತಕ್ಕೆ ಯಾವ ಮೃದುಚಾಲಕವನ್ನೂ ಉಪಯೋಗಿಸಲಿಲ್ಲ. ತತ್ಪರಿಣಾಮವಾಗಿ ಅನಿಲ ಕೊಂತ ಮತ್ತು ಸಿಲಿಂಡರಿನ ಮಧ್ಯವಿರುವ ಸಂದುಗಳಲ್ಲಿ ಹೊರಬರಬಹುದು. ವಿಕಾಸಯಂತ್ರದಲ್ಲಿ ವಿಕಾಸದ ಕಾಲ ಬಹಳ ಕಡಿಮೆಯಿರು ವಂತೆ ಮಾಡಿದರೆ ಹೊರಹೋಗುವ ಅನಿಲದ ಪ್ರಮಾಣ ಕಡಿಮೆಯಿರುವಂತೆ ಮಾಡಬಹುದು. ಸ್ಥಿರೋಷ್ಣ ವಿಕಾಸದಿಂದ ತಂಪಾದ ಅನಿಲ ಕ್ಲೋಡ್ ವಿಧಾನದಂತೆಯೇ ಅತಿ ಒತ್ತಡದ ಅನಿಲವನ್ನು ಶೈತ್ಯೀಕರಿಸುವುದು. ಶೈತ್ಯೀಕರಣಹೊಂದಿ ಅಲ್ಪದ್ರವೀಕರಣಹೊಂದಿದ ಮೇಲೆ ದ್ರವಹೀಲಿಯಂ ಸಂಮರ್ದಕದ ಕೊಂತ ಮತ್ತು ಸಿಲಿಂಡರ್‌ಗಳ ಮಧ್ಯೆ ಮೃದುಚಾಲಕದಂತೆ ವರ್ತಿಸುವುದು. ಅಂತಿಮವಾಗಿ ಅನಿಲ ಜೌಲ್–ಥಾಮ್ಸನ್ ವಿಕಾಸದಿಂದ ದ್ರವೀಕರಣಗೊಳ್ಳುವುದು.



$C_1, C_2$ ಸಂಮರ್ದಕಗಳು
D ವಿಕಸಿತ ಅನಿಲ ತೆರಳುವ ಮಾರ್ಗ
I, II, III ಉಷ್ಣ ವಿನಿಮಯಕಾರಿಗಳು
B ವಿಕಾಸಯಂತ್ರ

ಚಿತ್ರ 7. ಕ್ಲಾಡೆ ಹೆಲಾಂಟ್ ವಿಧಾನ

ಮೇಲಿನ ವಿಧಾನದಲ್ಲಿ ಹೀಲಿಯಂ ಅನಿಲವನ್ನು ದ್ರವಜಲಜನಕದಿಂದ ಮೊದಲೇ ತಂಪುಮಾಡಬೇಕಾಗಿಲ್ಲ. ಇದನ್ನೇ ಮುಂದುವರಿಸಿ 1947ರಲ್ಲಿ ಕಾಲಿನ್ಸ್ ಹೀಲಿಯಂ ದ್ರವೀಕರಣ ಯಂತ್ರಗಳನ್ನು ರಚಿಸಿ ಮಾರಾಟಕ್ಕಿಟ್ಟರು. ಕಾಲಿನ್ಸ್ ದ್ರವೀಕಾರಿಯಲ್ಲಿ ಗಂಟೆಗೆ ಸುಮಾರು 0.7–1.3 ಲೀಟರ್‌ನಷ್ಟು ದ್ರವಹೀಲಿಯಂ ಉತ್ಪತ್ತಿಯಾಗುವುದು. ಇದಕ್ಕಿಂತ ಹೆಚ್ಚಿನ ಪರಮಾಣದ ದ್ರವಹೀಲಿಯಂ ಉತ್ಪತ್ತಿಮಾಡುವ ಹೀಲಿಯಂ ದ್ರವೀಕಾರಿಗಳನ್ನು ಪ್ರಪಂಚದ ವಿವಿಧ ಪ್ರಯೋಗಶಾಲೆಗಳಲ್ಲಿ ನಿರ್ಮಿಸಲಾಗಿದೆ. (ಪಿ.ವಿ.)

**ಅನಿಲಮಾಪಕ :** ಅನಿಲಗಳ ಗಾತ್ರವನ್ನು ಅಳೆಯಲು ಉಪಯೋಗಿಸುವ ಸಾಧನ (ಗ್ಯಾಸ್ ಮೀಟರ್). ನಿತ್ಯಬಳಕೆಯಲ್ಲಿ (ಅಡುಗೆ, ಕೊಠಡಿ ಬೆಚ್ಚಗಿಡುವುದು ಇತ್ಯಾದಿ) ಅನಿಲದ ಉಪಯೋಗ ಅಧಿಕವಾಗಿರುವ ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಮನೆಯಲ್ಲೂ ಇದರ ಉಪಯೋಗವಿದೆ. ಗಾತ್ರವನ್ನು ಅಳೆಯಲು ಬೇರೆ ಬೇರೆ ತತ್ತ್ವಗಳ ಆಧಾರದ ಮೇಲೆ ರಚಿತವಾಗಿರುವ ಮಾಪಕಗಳನ್ನು ಸಾಮಾನ್ಯವಾಗಿ ಈ ರೀತಿ ವಿಂಗಡಿಸಬಹುದು: 1 ಸ್ಥಾನಾಂತರ ಮಾಪಕ (ಡಿಸ್‌ಪ್ಲೇಸ್‌ಮೆಂಟ್ ಮೀಟರ್), 2 ತಿರುಗುಮಾಪಕ (ರೋಟರಿ ಮೀಟರ್), 3 ರಂಧ್ರಮಾಪಕ (ಆರಿಫಿಸ್ ಮೀಟರ್) ಮತ್ತು 4 ಉಷ್ಣಧಾರಣಮಾಪಕ (ಹೀಟ್ ಕೆಪ್ಯಾಸಿಟಿ ಮೀಟರ್).

ಮನೆಗಳಲ್ಲಿ ಬಳಸುವ ಅನಿಲದ ಗಾತ್ರವನ್ನು ತಿಳಿಯಲು ಸ್ಥಾನಾಂತರಮಾಪಕ ಉಪಯೋಗದಲ್ಲಿದೆ. ಇದನ್ನು ಶುಷ್ಕಮಾಪಕವೆಂದೂ ಕರೆಯುವರು. ಇದರಲ್ಲಿ ಸಂಯೋಗ ವಸ್ತು ಅಥವಾ ಚರ್ಮದಿಂದ ಮಾಡಿದ ಜೋಡಿ ತಿದಿಯಿದೆ. ಇದರ ಎರಡು ಭಾಗಗಳ ಕ್ರಮಾನುಗತ ಹಿಗ್ಗು ಮತ್ತು ಕುಗ್ಗುವಿಕೆಯಿಂದ ಅನಿಲದ ಗಾತ್ರವನ್ನು ಅಳೆಯಬಹುದು. ಕಬ್ಬಿಣ, ತವರ ಅಥವಾ ಅಲ್ಯೂಮಿನಿಯಂ ಹೊದಿಕೆಯಿರುವ ಈ ಮಾಪಕದಲ್ಲಿ ನಿರ್ದಿಷ್ಟ ಗಾತ್ರವುಳ್ಳ ಎರಡು ಕಾರ್ಯವಿಭಾಗಗಳಿದ್ದು ಇವುಗಳಲ್ಲಿ ತಿದಿಯ ಜೋಡಣೆ ಇದೆ. ತಿದಿಯ ಮೇಲಿರುವ ಒಂದು ಸಮತಲ ವಿಭಾಗದಲ್ಲಿ ಕವಾಟ ಮತ್ತಿತರ ಸಲಕರಣೆಗಳಿವೆ. ಒಳದ್ವಾರದಿಂದ ಬಂದ ಅನಿಲ ತಿದಿಯನ್ನು ತುಂಬಿಕೊಂಡು ಹೊರದ್ವಾರದ ಮೂಲಕ ಹೊರಹೋದಾಗ, ಅದಕ್ಕೆ ಅಳವಡಿಸಿರುವ ಹಲ್ಲುಚಕ್ರಜೋಡಣೆಯ ಮತ್ತು ಚಲಿಸುವ ಮಾಪಕದ ದರ್ಶಿನಿಯಿಂದ ಹೊರಬಂದ ಅನಿಲದ ಗಾತ್ರವನ್ನು ಅಳೆಯಬಹುದು.

ಮಾಪಕದ ಮೇಲ್ಭಾಗದಲ್ಲಿ ಅನೇಕ ಸೂಚೀಫಲಕಗಳಿದ್ದು ಅವುಗಳ ಸಂಖ್ಯೆ ಶುಷ್ಕ ಮಾಪಕದ ಅಳತೆಯ ಸಾಮರ್ಥ್ಯವನ್ನವಲಂಬಿಸುವುದು. ಚಿತ್ರದಲ್ಲಿ ತೋರಿಸಿರುವ A ಮತ್ತು B ಸೂಚೀಫಲಕಗಳನ್ನು ಪರೀಕ್ಷೆಗಾಗಿ ಉಪಯೋಗಿಸುವರು. ಅನಿಲದ ಕೊಳವೆಯಲ್ಲಿ ಬಿರುಕೇನಾದರೂ ಇದ್ದು ಅನಿಲ ಹೊರಹೋಗುತ್ತಿರುವುದೇ ಎಂಬುದನ್ನು A ಫಲಕವನ್ನು ಪಯೋಗಿಸಿ ಪತ್ತೆ ಹಚ್ಚುವರು. B ಫಲಕವನ್ನುಪಯೋಗಿಸಿ ಮಾಪಕ ಸರಿಯಾಗಿರುವುದನ್ನು ಪರೀಕ್ಷಿಸುವರು. ಉಪಯೋಗಿಸಿದ ಅನಿಲದ ಒಟ್ಟು ಗಾತ್ರವನ್ನು ಕೆಳಗಿರುವ ಸೂಚೀಫಲಕಗಳು ತೋರಿಸುವುವು. ಬಲಗಡೆಯ ಫಲಕದ ದರ್ಶಿನಿ ಪ್ರದಕ್ಷಿಣವಾಗಿ ತಿರುಗಿದರೆ ಅದರ

ಪಕ್ಕದಲ್ಲಿರುವುದು ಅಪ್ರದಕ್ಷಿಣವಾಗಿ ತಿರುಗುವುದು. ಹೀಗೆಯೇ ಇತರ ಫಲಕದ ದರ್ಶಿನಿಗಳು. ಬಳಸಿದ ಅನಿಲದ ಗಾತ್ರವನ್ನು ಎಡಗಡೆಯಿಂದ ಬಲಗಡೆ ಸೂಚೀಫಲಕಗಳಲ್ಲಿರುವ ದರ್ಶಿನಿಗಳು ತೋರಿಸುವ ಮಾಪನಗಳಿಂದ (ರೀಡಿಂಗ್ಸ್) ತಿಳಿಯಬಹುದು. ಅನಿಲದ ಗಾತ್ರವನ್ನು ದಶಲಕ್ಷ, ಲಕ್ಷ, ದಶಸಾವಿರ, ಸಾವಿರ ಹೀಗೆ ವಿವಿಧ ಘನಅಡಿಗಳಲ್ಲಿ ಅಳತೆಮಾಡಬಹುದು.

ಅನಿಲ ಹೆಚ್ಚಿನ ವೇಗದಲ್ಲಿ ಸರಬರಾಜಾಗುವಾಗ ಅದರ ಗಾತ್ರವನ್ನು ಅಳೆಯಲು ತಿರುಗುಮಾಪಕಗಳನ್ನು ಉಪಯೋಗಿಸುತ್ತಾರೆ. ಇದರ ಹೊದಿಕೆ ಭಾಗಶಃ ಉರುಳೆಯಾಕಾರದಲ್ಲಿದ್ದು ಮಧ್ಯದಲ್ಲಿ ಎರಡು ಅಥವಾ ಮೂರು ತಿರುಗುವ ಚಿಮ್ಮು ಸಾಧನಗಳು (ಇಂಪೆಲರ್ಸ್) ಇರುತ್ತವೆ. ಪ್ರತಿ ಚಿಮ್ಮುಸಾಧನವೂ ಪಕ್ಕದ ಸಾಧನ ತಿರುಗುವ ದಿಕ್ಕಿಗೆ ವಿರುದ್ಧವಾಗಿ ತಿರುಗುವುದು. ಮಾಪಕದೊಳಗೆ ಬರುವ ಅನಿಲ ಮಧ್ಯದಲ್ಲಿ ಸಿಕ್ಕಿ



ಸ್ಥಾನಾಂತರಮಾಪಕದ ಮೇಲ್ಭಾಗ

ಹೊರಬರುವಾಗ ಈ ಚಿಮ್ಮು ಸಾಧನಗಳನ್ನು ಚಲಿಸುವಂತೆ ಮಾಡುತ್ತದೆ. ಮಧ್ಯದಲ್ಲಿ ಸಿಕ್ಕಿಕೊಳ್ಳುವ ಅನಿಲದ ಗಾತ್ರ ನಿಯತವಾಗಿದ್ದು ಇದನ್ನು ಹಲ್ಲುಚಕ್ರಜೋಡಣೆ ಸಹಾಯದಿಂದ ಸೂಚೀಫಲಕದ ದರ್ಶಿನಿ ಸೂಚಿಸುತ್ತದೆ. ಕೆಲವು ತಿರುಗುಮಾಪಕಗಳನ್ನುಪಯೋಗಿಸಿ ಚಿಕ್ಕ ಪಟ್ಟಣವೊಂದಕ್ಕೆ ಸರಬರಾಜು ಮಾಡುವ ಒಟ್ಟು ಅನಿಲಪ್ರಮಾಣವನ್ನು ಅಳತೆ ಮಾಡಬಹುದು.

ಅನಿಲದ ಗಾತ್ರ ಬಹಳ ಜಾಸ್ತಿಯಿದ್ದರೆ ಅದನ್ನು ಅಳತೆ ಮಾಡಲು ರಂಧ್ರ ಮಾಪಕಗಳನ್ನು ಉಪಯೋಗಿಸುವರು. ಇದರಲ್ಲಿ ಅನಿಲದ ಕೊಳವೆಯೊಳಗಡೆ ಮಧ್ಯದಲ್ಲಿ ರಂಧ್ರವಿರುವ ಒಂದು ಉಕ್ಕಿನ ತಟ್ಟೆಯನ್ನು ಜೋಡಿಸಿದೆ. ಈ ತಡೆಯಿಂದ ರಂಧ್ರದ ಮೂಲಕ ಅನಿಲ ಹೊರಚಿಮ್ಮಿ ಅದು ಹೊರಸೂಸುವ ಕಡೆ ಆಂಶಿಕ ನಿರ್ವಾತ (ಪಾರ್ಷಿಯಲ್ ವ್ಯಾಕ್ಯೂಮ್) ಉಂಟಾಗುತ್ತದೆ. ಇದರಿಂದ ತಟ್ಟೆಯ ಇಕ್ಕೆಡೆಗಳಲ್ಲಿ ಅನಿಲದ ಒತ್ತಡ ವ್ಯತ್ಯಾಸವಾಗುವುದು. ಎರಡು ಭಾಗಗಳನ್ನು ಒಂದು ಒತ್ತಡಮಾಪಕಕ್ಕೆ ಸೇರಿಸಿ ಆಗುವ ಒತ್ತಡವ್ಯತ್ಯಾಸ ಕಂಡುಹಿಡಿಯಬಹುದು. ಒತ್ತಡವ್ಯತ್ಯಾಸ ಅನಿಲದ ಪ್ರವಾಹವನ್ನು ಅಂದರೆ, ಚಲಿಸಿದ ಅನಿಲದ ಗಾತ್ರವನ್ನು ಅವಲಂಬಿಸುವುದು. ರಂಧ್ರಮಾಪಕಗಳು ರಚನೆಯಲ್ಲಿ ಸರಳವಾಗಿಯೂ ದೃಢವಾಗಿಯೂ ಅಳತೆಯಲ್ಲಿ ನಿಖರವಾಗಿಯೂ ಇರುವುವು. ಇವುಗಳಲ್ಲಿ ಕೆಲವು ಪ್ರತಿಕೂಲಗಳೂ ಉಂಟು: 1 ಹೊರಬರುವ ಅನಿಲದ ಒತ್ತಡ ಬಹುಪಾಲು ಕಡಿಮೆಯಾಗುವುದು; 2 ಹೊರಬರುವ ಅನಿಲದ ಗಾತ್ರಕ್ಕೂ ಅದರ ಒತ್ತಡ ವ್ಯತ್ಯಾಸಕ್ಕೂ ಸಂಬಂಧ ನಿರೂಪಿಸುವ ಗಣಿತಸೂತ್ರಗಳು ಬಹಳ ಜಟಿಲ. ಮೊದಲನೆಯ ಪ್ರತಿಕೂಲವನ್ನು ಪ್ರಕೃತಿಯೇ ವಿವರಿಸಿದೆ. ಹೇಗೆಂದರೆ ಪ್ರಕೃತಿಯಲ್ಲಿ ಸಿಗುವ ಅನಿಲದ ಒತ್ತಡ ಬಳಕೆದಾರರಿಗೆ ಬೇಕಾಗಿರುವ ಅನಿಲದ ಒತ್ತಡಕ್ಕಿಂತ ಬಹುಪಾಲು ಹೆಚ್ಚಾಗಿರುತ್ತದೆ. ಗಣಿತ ಸೂತ್ರಗಳನ್ನು ಬಲು ಜಾಗರೂಕತೆಯಿಂದ ವಿಶ್ಲೇಷಿಸಿ ಬೇರೆ ಬೇರೆ ಒತ್ತಡವ್ಯತ್ಯಾಸಗಳಿಗೆ ಸರಿದೂಗುವ ಗಾತ್ರಗಳನ್ನು ಪಟ್ಟಿ ಮಾಡಿರುವುದರಿಂದ ಈ ಮಾಪಕದ ಮಾಪನಗಳಿಂದ ಅನಿಲದ ಗಾತ್ರ ತಿಳಿಯುವುದು ಸುಲಭ.

ಯಾವುದಾದರೂ ಅನಿಲದಲ್ಲಿ ಮೂಲಮಾನಗಾತ್ರದ ಗ್ರಾಹ್ಯೋಷ್ಣ ತಿಳಿದಿದ್ದರೆ ಹೊರಬರುವ ಅನಿಲದ ಒಟ್ಟು ಉಷ್ಣಸಾಮರ್ಥ್ಯದ ಅಳತೆಯಿಂದ ಗಾತ್ರ ಅಳತೆಮಾಡಬಹುದು. ಈ ತತ್ತ್ವವನ್ನು ಅನುಸರಿಸಿ ರಚಿಸಿರುವ ಅನಿಲಮಾಪಕಗಳಿಗೆ ಉಷ್ಣ ಧಾರಣಮಾಪಕಗಳೆಂದು ಹೆಸರು. ಅನಿಲದ ಕೊಳವೆಯೊಳಗೆ ಸ್ವಲ್ಪದೂರದ ಅಂತರದಲ್ಲಿ ಎರಡು ವಿದ್ಯುದುಷ್ಣತಾ ಮಾಪಕಗಳಿದ್ದು ಇವೆರಡರ ನಡುವೆ ಶಾಖೋತ್ಪತ್ತಿ ಮಾಡುವ ವಿದ್ಯುದ್ವಾಹಕದ ಸುರುಳಿಯೊಂದನ್ನು ಇಟ್ಟಿರುತ್ತಾರೆ. ವಿದ್ಯುತ್‌ಸುರುಳಿಯನ್ನು ಅನಿಲ ಹಾದು ಹೋದರೆ ಹೊರಬರುವ ಅನಿಲದ ಉಷ್ಣತೆ ಒಳಹೊಕ್ಕ ಅನಿಲದ ಉಷ್ಣತೆಗಿಂತ ಹೆಚ್ಚಿರುವುದು. ಈ ಉಷ್ಣತೆಯ ಅಂತರವನ್ನು ಉಷ್ಣತಾಮಾಪಿಗಳು ತಿಳಿಸುತ್ತವೆ. ವೇಗ ಹೆಚ್ಚಿದ್ದರೆ ಉಷ್ಣತೆಯ ಅಂತರ ಕಡಿಮೆಯಾಗುವುದು ಮತ್ತು ವೇಗ ಕಡಿಮೆಯಾದರೆ ಅಂತರ ಹೆಚ್ಚುವುದು. ವೇಗವೆಷ್ಟಿದ್ದರೂ ಉಷ್ಣತೆಯ ಅಂತರ ಒಂದೇ ಇರುವಂತೆ ಇತರ ವಿದ್ಯುತ್ ಸಲಕರಣೆಗಳಿಂದ ವಿದ್ಯುತ್ ಸುರುಳಿಯಲ್ಲಿ ಉಷ್ಣತಾಮಾಪಿಗಳು ವಿದ್ಯುತ್‌ಪ್ರವಾಹವನ್ನು ನಿಯಂತ್ರಿಸುವುವು. ಹೀಗಾಗಿ ಸುರುಳಿಯಲ್ಲಿ ಹರಿಯುವ ವಿದ್ಯುತ್ತಿನ ವ್ಯತ್ಯಾಸ ವೇಗವ್ಯತ್ಯಾಸಕ್ಕೆ ಅನುಗುಣವಾಗಿರುತ್ತದೆ. ಆದ್ದರಿಂದ ಸುರುಳಿಗೆ ವಿದ್ಯುತ್ ಸರಬರಾಜನ್ನು ಅಳತೆಮಾಡುವ ವಿದ್ಯುತ್ ವ್ಯಾಟ್ ಮಾಪಕದ ಮಾಪನಗಳು ಹೊರಬರುತ್ತಿರುವ ಅನಿಲದ ಗಾತ್ರವನ್ನು ತಿಳಿಸುವುವು. ಹೆಚ್ಚು ಕಲ್ಮಷವಿರುವ ಅನಿಲಗಳ ಗಾತ್ರದ ಅಳತೆಗೆ ಇಂಥ ಮಾಪಕವನ್ನು ಉಪಯೋಗಿಸುವುದಿಲ್ಲ. (ಪಿ.ವಿ.)

**ಅನಿಲೀನ್ :** ಆರೊಮ್ಯಾಟಿಕ್ ಗುಂಪಿಗೆ ಸೇರಿದ, ಸಾರಜನಕ ಹೊಂದಿರುವ ಸಾವಯವ ರಾಸಾಯನಿಕ ವಸ್ತು (ಅಮೈನೊ ಬೆಂಜೀನ್, ಫೀನೈಲ್ ಅಮೀನ್); ದುರ್ಬಲಕ್ಷಾರ. ಸಸ್ಯಜನ್ಯವಾದ ನೀಲಿ ಅಥವಾ ಇಂಡಿಗೊವನ್ನು ಪೊಟ್ಯಾಸಿಯಂ ಹೈಡ್ರಾಕ್ಸೈಡ್‌ನೊಂದಿಗೆ ಕುದಿಸಿದಾಗ ದೊರೆತ ವಸ್ತುವಿಗೆ, ಈ ಹೆಸರನ್ನು 1841ರಲ್ಲಿ ಫ್ರಿಟ್ಸ್ ಎಂಬವನು ನೀಡಿದ. ಇದಕ್ಕೆ ಮುಂಚೆ ಅಂದರೆ 1826ರಲ್ಲಿ ಇಂಡಿಗೊದಿಂದಲೂ 1834ರಲ್ಲಿ ಟಾರಿನಿಂದಲೂ ಇದನ್ನೂ ತಯಾರಿಸಲಾಗಿತ್ತು. 1856ರಲ್ಲಿ ಪರ್ಕಿನ್ ಎಂಬವನು ಅನಿಲಿನ್ನಿನಿಂದ ಮೋವ್ ಕೆನ್ನೀಲಿ ಬಣ್ಣದ ಮೊದಲ ಸಂಶ್ಲೇಷಿತಬಣ್ಣವನ್ನು ತಯಾರಿಸಿದ. ಅಂದಿನಿಂದ ಅದರ ಅನೇಕ ಗುಣಗಳಿಂದಾಗಿ–ಮುಖ್ಯವಾಗಿ ನೈಟ್ರಸ್ ಆಮ್ಲದೊಂದಿಗೆ ಸೇರಿಕೊಂಡು ಡೈ ಆಜೋನಿಯಂ ಸಂಯುಕ್ತವಸ್ತುವಾಗುವುದು; ಹೀಗೆ ಆದ ವಸ್ತು ಫೀನಾಲ್ ಮತ್ತು ಆರೊಮ್ಯಾಟಿಕ್ ಅಮೀನ್‌ಗಳ ಗುಂಪಿನ ರಾಸಾಯನಿಕ ವಸ್ತುಗಳೊಂದಿಗೆ ಸೇರಿಕೊಂಡು ವಿವಿಧ ಬಣ್ಣದ ವಸ್ತುಗಳಾಗುವುದು, ಬಣ್ಣದ ತಯಾರಿಕೆಯಲ್ಲಿ ಅನಿಲಿನ್ನು ಪ್ರಾರಂಭದ ಹೆಚ್ಚು ಉಪಯುಕ್ತ ಸಾಮಗ್ರಿಯಾಗುವಂತೆ ಮಾಡಿವೆ. ಇದಲ್ಲದೆ ಔಷಧಗಳು, ಸಂಶ್ಲೇಷಿತ ರಬ್ಬರ್, ಸ್ಫೋಟಕಗಳು, ಮುಂತಾದವುಗಳಿಗೆ ಪ್ರಾರಂಭದ ರಸಾಯನವಸ್ತು ಅನಿಲೀನ್.

ತಯಾರಿಕೆ : ಟಾರ್‌ನಲ್ಲಿ ಸ್ವಲ್ಪ ಮಾತ್ರ ಅನಿಲೀನ್ ಇರುವುದು. ಆದುದರಿಂದ ನೈಟ್ರೋಬೆಂಜೀನನ್ನು ಅಪಕರ್ಷಣಕ್ಕೆ ಒಳಪಡಿಸಿ ಅನಿಲೀನ್‌ಅನ್ನು ತಯಾರಿಸುತ್ತಾರೆ. ಬೆಂಜೀನನ್ನು ಗಂಧಕಾಮ್ಲ ಮತ್ತು ನೈಟ್ರಿಕ್ ಆಮ್ಲದೊಂದಿಗೆ ಹೆಚ್ಚು ಉಷ್ಣತೆಯಲ್ಲಿ ಕುದಿಸಿ, ಬಟ್ಟಿಯಿಳಿಸಿ ಬಂದ ನೈಟ್ರೋಬೆಂಜೀನ್‌ನನ್ನು ಕಬ್ಬಿಣದ ಅರಪುಡಿ, ನೀರು, ಸ್ವಲ್ಪ ಹೈಡ್ರೊಕ್ಲೋರಿಕ್ ಆಮ್ಲಗಳೊಂದಿಗೆ ಕುದಿಸಲಾಗುವುದು; ಈ ಹಬೆಯನ್ನು ಜಲಜನಕದ ಅಪಕರ್ಷಣಕ್ಕೆ ಒಳಪಡಿಸಿ ಬಂದ ಅನಿಲೀನ್ ಅನ್ನು ಕಡಿಮೆ ಮಾಡಿದ ಒತ್ತಡದಲ್ಲಿ ಹಬೆಯ ಬಟ್ಟಿಯಿಳಿಸಿ ಬೇರ್ಪಡಿಸುತ್ತಾರೆ. ಹೆಚ್ಚು ಉಷ್ಣತೆ ಮತ್ತು ಒತ್ತಡದಲ್ಲಿ ತಕ್ಕ ವೇಗೋತ್ಕರ್ಷಕಗಳ ಸಹಾಯದಿಂದ ಕ್ಲೋರೋಬೆಂಜೀನನ್ನು ಅಮೋನಿಯದೊಂದಿಗೆ, ರಾಸಾಯನಿಕಕ್ರಿಯೆ ಹೊಂದುವಂತೆ ಮಾಡುವುದು ತಯಾರಿಕೆಯ ಇನ್ನೊಂದು ಮಾರ್ಗ.

ಗುಣಗಳು ಮತ್ತು ಉಪಯೋಗಗಳು : ಇದರ ಅಣುಸೂತ್ರ $C_6H_5NH_2$ ಶುದ್ಧವಾದ ಅನಿಲೀನ್ ಬಣ್ಣವಿಲ್ಲದ. ಎಣ್ಣೆಯಂತಿರುವ ದ್ರವ. ಇದರ ಕುದಿಯುವ ಬಿಂದು $184.4^o$ ಸೆಂ.ಗ್ರೇ. ಮತ್ತು ದ್ರವಿಸುವ ಬಿಂದು– $8^o$ ಸೆಂಗ್ರೇ ನೀರಿನಲ್ಲಿ ಅತಿ ಸ್ವಲ್ಪ ಭಾಗ ಅಂದರೆ, 31 ಭಾಗ ನೀರಿನಲ್ಲಿ 1 ಭಾಗ ಮಾತ್ರ, ಕರಗುತ್ತದೆ. ಸುಲಭವಾಗಿ ಗುರುತಿಸಬಹುದಾದ ವಿಶಿಷ್ಟವಾಸನೆ ಮತ್ತು ರುಚಿ ಇದಕ್ಕೆ ಇವೆ. ಗಾಳಿಗೆ ತೆರೆದಿಟ್ಟಾಗ ಆಮ್ಲಜನಕದೊಂದಿಗೆ ಸೇರಿ ಅದರ ಬಣ್ಣ ನಿಧಾನವಾಗಿ ಬದಲಾವಣೆ ಹೊಂದಿ ಕಡೆಗೆ ಕೆಂಪುಮಿಶ್ರಿತ ಕಂದುಬಣ್ಣವಾಗುತ್ತದೆ.

ಅನಿಲೀನ್ ಆರೊಮ್ಯಾಟಿಕ್ ಅಮೀನ್ ಅಗಿರುವುದರಿಂದ ಇದಕ್ಕೆ ಸಹಜವಾಗಿಯೇ ಆರೊಮ್ಯಾಟಿಕ್ ರಾಸಾಯನಿಕವಸ್ತುಗಳ ಪ್ರತಿಸ್ಥಾಪನೆ (ಸಬ್‌ಸ್ಟಿಟ್ಯೂಷನ್) ಮುಂತಾದ ಗುಣಗಳೂ ಅಮೀನ್‌ಗಳ ಗುಣಗಳೂ ಇವೆ. ಇದು ದುರ್ಬಲಕ್ಷಾರವಾಗಿರುವುದರಿಂದ ಆಮ್ಲಗಳೊಡನೆ ವರ್ತಿಸುವುದು. ಗಂಧಕಾಮ್ಲದೊಂದಿಗೆ ವರ್ತಿಸಿ ಅನಿಲೀನ್ ಸಲ್ಫೇಟ್ ಆಗುತ್ತದೆ. ಈ ಅನಿಲೀನ್ ಸಲ್ಫೇಟನ್ನು $200^o$ ಸೆಂಗ್ರೇ ಉಷ್ಣತೆಯಲ್ಲಿ ಕಾಯಿಸಿದರೆ ಬ್ಯಾಕ್ಟೀರಿಯಾನಾಶಕಗಳಾದ ಗಂಧಕಯುಕ್ತ ರಾಸಾಯನಿಕಗಳ ಸಲ್ಫನಿಲಮೈಡ್ ತಯಾರಾಗುತ್ತದೆ. ಸಾವಯವ ಆಮ್ಲವಾಗಿರುವ ಅಸಿಟಿಕ್ ಆಮ್ಲದೊಂದಿಗೆ ಸೇರಿ ಅಸಿಟನಿಲೈಡ್ ಆಗುತ್ತದೆ. ಅನಿಲೀನ್ ಸುಲಭವಾಗಿ ಉತ್ಕರ್ಷಣ ಹೊಂದಿ ವಿವಿಧ ಬಣ್ಣದ ವಸ್ತುಗಳಾಗುತ್ತದೆ. ಕ್ರೋಮಿಕ್ ಆಮ್ಲದಿಂದ ಕ್ವಿನೋನು, ಮೈಲುತುತ್ತ, ಪರ್‌ಮ್ಯಾಂಗನೇಟ್‌ನಿಂದ ಆಜೊಬೆಂಜೀನ್–ಈ ವಸ್ತುಗಳು ಆಗುತ್ತವೆ. ಹೀಗೆ ಉತ್ಕರ್ಷಣಕ್ರಿಯೆಯಿಂದ ಬರುವ ವಸ್ತುಗಳು ಉತ್ಕರ್ಷಕಗಳನ್ನು ಅವಲಂಬಿಸಿವೆ. ಬಟ್ಟೆಯ ಮೇಲೆಯೇ ಈ ರಾಸಾಯನಿಕ ಕಾರ್ಯ ಆಗುವಂತೆ ಮಾಡಿ ಬಣ್ಣದ ಬಟ್ಟೆಯನ್ನು ತಯಾರಿಸುತ್ತಾರೆ. ಹೈಡ್ರೊಕ್ಲೋರಿಕ್ ಆಮ್ಲದಲ್ಲಿ ಕರಗಿದ ಅನಿಲೀನ್ನನ್ನು ಮಂಜಿನ ಉಷ್ಣತೆಗೆ ತಗ್ಗಿಸಿ ಸೋಡಿಯಂ ನೈಟ್ರೈಟ್ ದ್ರಾವಣವನ್ನು ಹಾಕಿದರೆ ಡೈ ಆಜೊಸಂಯುಕ್ತವಸ್ತುವಾಗುತ್ತದೆ. ಈ ವಸ್ತು ಸಾಧಾರಣ

ಉಷ್ಣತೆಯಲ್ಲಿ ಸುಲಭವಾಗಿ ವಿಭಜನೆ ಹೊಂದಿ ಫೀನಾಲ್ ಆಗುತ್ತದೆ. ಕಡಿಮೆ ಉಷ್ಣತೆಯಲ್ಲಿ ಬೇರೆ ಬೇರೆ ರಾಸಾಯನಿಕಗಳೊಂದಿಗೆ ಸೇರಿಕೊಂಡು ಬಲು ಉಪಯುಕ್ತವಾಗಿರುವ ಆಜೊ಼ ಬಣ್ಣಗಳನ್ನು ನೀಡುತ್ತದೆ.

ಆಜೊ಼ ಬಣ್ಣಗಳು, ಸಂಶ್ಲೇಷಿತ ನೀಲಿ, ಬ್ಯಾಕ್ಟೀರಿಯಮಾರಕ ಸಲ್ಫನಿಲಮೈಡ್ ಮತ್ತು ಉಳಿದ ಔಷಧಗಳೂ ಪ್ರಪಂಚದ ಮೊದಲ ಯುದ್ಧದಲ್ಲಿ ಮುಖ್ಯ ಸ್ಫೋಟಕವಾಗಿದ್ದ ಟ್ರೈನೈಟ್ರೋ ಅನಿಲಿನ್–ಇವೆಲ್ಲ ವಸ್ತುಗಳ ತಯಾರಿಕೆಗೂ ಅನಿಲೀನ್ ಪ್ರಾರಂಭದ ಸಾಮಗ್ರಿ. ಸಮುದ್ರದ ನೀರಿನಿಂದ ಬ್ರೋಮಿನನ್ನು ತಯಾರಿಸಲು ಅನಿಲೀನನ್ನು ಉಪಯೋಗಿಸುತ್ತಾರೆ. ಇದಲ್ಲದೆ ಛಾಯಾಚಿತ್ರ ಕೈಗಾರಿಕೆಯಲ್ಲಿ ಬೇಕಾಗುವ ರಾಸಾಯನಿಕಗಳು, ಪ್ಲಾಸ್ಟಿಕ್ ಕೈಗಾರಿಕೆಗೆ ಬೇಕಾದ ಡೈಐಸೋ ಸಯನೇಟ್ ಉತ್ಪಾದನೆ. ರಾಕೆಟ್ಟಿನ ಇಂಧನ, ಪೆಟ್ರೋಲಿಯಂ ಶುದ್ಧೀರಣ–ಈ ಮುಂತಾದವುಗಳಲ್ಲಿ ಅನಿಲಿನ್ನಿನ ಉಪಯೋಗ ಹೆಚ್ಚು. ಅನಿಲೀನ್ ಒಂದು ವಿಷ ಪದಾರ್ಥ. ಇದಕ್ಕೆ ರಕ್ತದಲ್ಲಿನ ಕೆಂಪುರಕ್ತಕಣಗಳನ್ನು ಹಾಳು ಮಾಡುವ ಶಕ್ತಿಯಿದೆ. ಆದುದರಿಂದ ಇದನ್ನು ತಯಾರಿಸುವ ಮತ್ತು ಇದನ್ನುಪಯೋಗಿಸಿಕೊಂಡು ಇತರ ರಾಸಾಯನಿಕಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಸಾಕಷ್ಟು ಎಚ್ಚರಿಕೆ ವಹಿಸಲಾಗುತ್ತದೆ. **(ನೋಡಿ– ಆಜೊ಼ ಸಂಯುಕ್ತಗಳು)** (ಎಚ್.ಎಸ್.ಎಸ್.; ಎ.ಎಸ್.ಆರ್.)

**ಅನಿಶ್ಚಿತತ್ತ್ವ ನಿಯಮ :** ಶಕಲಬಲವಿಜ್ಞಾನದ (ಕ್ವಾಂಟಮ್ ಮೆಕ್ಯಾನಿಕ್ಸ್) ಸಾರಭೂತವಾದ ನಿಯಮ (ಅನ್‌ಸರ್ಟನ್ಟಿ ಪ್ರಿನ್ಸಿಪಲ್). ಇದನ್ನು ಹೈಸನ್‌ಬರ್ಗ್ ಎಂಬ ಜರ್ಮನ್ ವಿಜ್ಞಾನಿ 1927ರಲ್ಲಿ ಬಹಿರಂಗಪಡಿಸಿದ. ಐನ್‌ಸ್ಟೈನನ ರಿಲೆಟಿವಿಟಿ ತತ್ತ್ವಶಾಸ್ತ್ರದಲ್ಲಿ ಉಂಟುಮಾಡಿದ ಕ್ರಾಂತಿಯಷ್ಟೇ ಪರಿಣಾಮಕಾರಿಯಾದ ಆಂದೋಳನವನ್ನು ಹೈಸನ್‌ಬರ್ಗ್‌ನ ನಿಯಮ ಪ್ರೇರೇಪಿಸಿದೆ. ಕಾರ್ಯಕಾರಣತತ್ತ್ವಕ್ಕೂ (ಪ್ರಿನ್ಸಿಪಲ್ ಆಫ್ ಕಾಸಾಲಿಟಿ) ಸ್ವಾತಂತ್ರ್ಯತತ್ತ್ವಕ್ಕೂ (ಪ್ರಿನ್ಸಿಪಲ್ ಆಫ್ ಫ್ರೀವಿಲ್) ನಿಕಟವಾದ ಸಂಬಂಧವಿರುವುದೇ ಇದರ ಪ್ರಾಮುಖ್ಯಕ್ಕೆ ಕಾರಣ. ಭೌತವಿಜ್ಞಾನದ ಅನುಭವದಿಂದಲೂ ಅಲ್ಲಿ ಚರ್ಚಿಸಲಾಗುವ ಸಂದರ್ಭಗಳಿಂದಲೂ ಹೊರಪಟ್ಟು ಈ ತತ್ತ್ವ ಆ ವಿಜ್ಞಾನದ ಮೇರೆಯನ್ನು ಬಿಟ್ಟು ಪ್ರಯೋಗಾರ್ಹವೇ ಅಲ್ಲವೇ ಎಂಬುದನ್ನು ದೃಢಪಡಿಸುವುದು ಕಷ್ಟ. ಆದ್ದರಿಂದ ಈ ವಿಷಯದಲ್ಲಿ ಅಂತಿಮ ನಿರ್ಧಾರ ಸಾಧ್ಯವಾಗಿಲ್ಲ. ಮತಭೇದಗಳು ಬೇಕಾದಷ್ಟಿದೆ. ಪ್ರಮುಖ ಭೌತವಿಜ್ಞಾನಿಗಳಲ್ಲಿಯೇ ಒಮ್ಮತವಿಲ್ಲ. ಪ್ಲಾಂಕ್ ಮತ್ತು ಐನ್‌ಸ್ಟೈನ್ ಒಂದು ಅಭಿಪ್ರಾಯವನ್ನು ಎತ್ತಿ ಹಿಡಿದರೆ, ಬೋರ್ ಮತ್ತು ಅವನ ಅನುಯಾಯಿಗಳು ಇದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಮಂಡಿಸಿದರು. ಅಲ್ಲದೆ ಶಕಲಬಲವಿಜ್ಞಾನದ ನಿಜವಾದ ಅರ್ಥ ಇನ್ನೂ ಅಪೂರ್ಣವಾಗಿರುವುದರಿಂದ ಈ ನಿಯಮದ ವಿವೇಚನೆಗೆ ಅತ್ಯಂತ ಎಚ್ಚರ ಅವಶ್ಯ.

ನ್ಯೂಟನ್ನಿನ ಶೋಧನೆಗಳಿಂದ ಖಗೋಳವಿಜ್ಞಾನದ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿ, ಬಲವಿಜ್ಞಾನದ ತತ್ತ್ವಗಳು ಸರ್ವತೋಮುಖವಾಗಿ ಪ್ರಯೋಗಾರ್ಹಗಳೆಂಬ ಭಾವನೆ ಮೂಡಿತು. ಈ ಭಾವನೆಯನ್ನು ಲಾಪ್ಲಾಸ್ ಎಂಬಾತ ಈ ರೀತಿ ವಿವರಿಸಿದ: ಪ್ರಪಂಚದ ಈಗಿನ ಸ್ಥಿತಿ ಹಿಂದಿನ ಸ್ಥಿತಿಯಿಂದ ಉಂಟಾದುದೆಂದೂ ಮುಂದಿನ ಸ್ಥಿತಿಗೆ ಕಾರಣವೆಂದೂ ತಿಳಿಯಬೇಕು. ಒಂದು ಕಾಲದಲ್ಲಿ ಪ್ರಪಂಚದಲ್ಲಿರುವ ಎಲ್ಲ ಕಣಗಳ ಮೇಲೆ ಪ್ರಯುಕ್ತಗಳಾದ ಬಲಗಳನ್ನೂ ಆ ಕಣಗಳ ಸ್ಥಾನ ಮತ್ತು ಚಲನೆಯನ್ನೂ ಗಮನಕ್ಕೆ ತೆಗೆದುಕೊಂಡು ಬಲವಿಜ್ಞಾನ ನಿಯಮಗಳನ್ನು ಆ ಎಲ್ಲ ಕಣಗಳಿಗೂ ಅನ್ವಯಿಸಿ ಲೆಕ್ಕಮಾಡಬಲ್ಲ ಮಹಚ್ಚೇತನವೊಂದಿದ್ದರೆ ಆ ಚೇತನಕ್ಕೆ ಭೂತಭವಿಷ್ಯದ್ವರ್ತಮಾನಗಳಲ್ಲಿ ಅಜ್ಞಾತವೆನಿಸಿದ ವಿಷಯವೇ ಇರುವುದಿಲ್ಲ. ಈ ಅಭಿಪ್ರಾಯಕ್ಕೆ ನಿಶ್ಚಿತತ್ವ ನಿಯಮವೆಂದು (ಡಿಟರ್‌ಮಿನಿಸಮ್) ಹೆಸರು. ಒಂದು ಕ್ಷಣದಲ್ಲಿ ಒಂದು ವ್ಯವಸ್ಥೆಗೆ (ಸಿಸ್ಟಮ್) ಸಂಬಂಧಪಟ್ಟ ಯಾವುದೋ ಒಂದು ಗುಣ ಒಂದು ಸ್ಥಿತಿಯಲ್ಲಿದೆಯೆಂದು ನಮಗೆ ತಿಳಿದಿದ್ದರೆ, ಲೋಕದಲ್ಲಿ ಎಲ್ಲ ಪದಾರ್ಥಗಳ ಸ್ಥಿತಿಗಳೂ ಆ ಕ್ಷಣದಲ್ಲಿದ್ದಂತೆಯೇ ಇದ್ದು, ಆ ಗುಣ ಮಾತ್ರ ಆ ಸ್ಥಿತಿಯಲ್ಲಿಲ್ಲ ಅಥವಾ ಬದಲಾಯಿಸುತ್ತಿದೆ ಎಂದು ಹೇಳುವುದು ಸಾಧ್ಯವಿಲ್ಲ ಎಂದು ತತ್ತ್ವಶಾಸ್ತ್ರಜ್ಞನೊಬ್ಬ ನಿಶ್ಚಿತತ್ವ ನಿಯಮವನ್ನು ವಿವರಿಸಿದ್ದಾನೆ. ಇದರಲ್ಲಿ ಸ್ಥಿತಿ ಒಂದೇ ಆಗಿದೆ ಎಂಬುದಕ್ಕೆ ಅರ್ಥವೇನೆಂಬುದು ಅಷ್ಟು ಸ್ಪಷ್ಟವಾಗಿಲ್ಲ. ಲಾಪ್ಲಾಸನ ಭಾವನೆಯಲ್ಲಿ ವ್ಯವಸ್ಥೆಗೆ ಸಂಬಂಧಪಟ್ಟ ಎಲ್ಲ ಕಣಗಳ ಸ್ಥಾನ, ವೇಗ ಮತ್ತು ಅವುಗಳ ಮೇಲೆ ಪ್ರಯುಕ್ತವಾದ ಬಲಗಳು ತಿಳಿದಿದ್ದರೆ ಆ ವ್ಯವಸ್ಥೆಯ ಸ್ಥಿತಿ ಗೊತ್ತಿದೆಯೆಂದು ಹೇಳಬಹುದು. ಬಲಗಳು ಗೊತ್ತಿರುವುದರಿಂದ ಚಲನೆಯ ಸಮೀಕರಣಗಳು ಗೊತ್ತಿವೆ. ಒಂದು ಕ್ಷಣದಲ್ಲಿ ಪ್ರತಿಯೊಂದೂ ಕಣದ ಸ್ಥಾನ ಮತ್ತು ವೇಗಗಳು ಗೊತ್ತಿದ್ದರೆ ಈ ಸಮೀಕರಣಗಳ ಸಹಾಯದಿಂದ ಮತ್ತೆ ಯಾವ ಕ್ಷಣದಲ್ಲಿ ಬೇಕಾದರೂ ಆ ಕಣಗಳ ಸ್ಥಾನ ಮತ್ತು ವೇಗಗಳನ್ನು ಲೆಕ್ಕ ಮಾಡಬಹುದು ಎಂಬುದು ಲಾಪ್ಲಾಸನ ಭಾವನೆ. ಒಂದು ಕ್ಷಣದಲ್ಲಿ ಎಲ್ಲ ಕಣಗಳ ಸ್ಥಾನ ಮತ್ತು ವೇಗಗಳನ್ನು ಕಂಡುಹಿಡಿಯಲು ಸಾಧ್ಯವೋ ಎಂದು ಕೇಳಿದರೆ ತತ್ತ್ವಶಃ ಸಾಧ್ಯವೆಂದು ಭೌತವಿಜ್ಞಾನಿಗಳ ಆಗಿನ ನಂಬಿಕೆ. ಪ್ರಯೋಗರೀತ್ಯಾ ಸ್ಥಾನ, ವೇಗಗಳನ್ನು ಕಂಡುಹಿಡಿಯುವಾಗ ಅನಿವಾರ್ಯವಾಗಿ ನ್ಯೂನತೆಗಳುಂಟಾಗುವುವಾದರೂ ತತ್ತ್ವಶಃ ಈ ನ್ಯೂನತೆಗಳನ್ನು ನಮಗೆ ಬೇಕಾದಷ್ಟು ಅಲ್ಪವಾಗುವಂತೆ ಮಾಡಬಹುದು–ಎಂಬ ನಂಬಿಕೆಯೂ ಹರಡಿತ್ತು. ಆದರೆ ಹೈಸನ್‌ಬರ್ಗ್‌ನ ವಾದದಿಂದ ಸ್ಥಾನ ಮತ್ತು ವೇಗಗಳನ್ನು ಏಕಕ್ಷಣದಲ್ಲಿ ಕಂಡುಹಿಡಿಯುವ ಪ್ರಯತ್ನ ಒಂದು ರೀತಿಯಲ್ಲಿ ವಿಫಲವಾಗುವುದೆಂದು ಕಂಡುಬಂದಿತು. ಸ್ಥಾನವನ್ನು ಕಂಡುಹಿಡಿಯಲು ಹೆಚ್ಚು ನಿಷ್ಕೃಷ್ಟವಾದ ಮಾರ್ಗವನ್ನು ಅನುಸರಿಸಿದಷ್ಟೂ ಈ ಪ್ರಯತ್ನದ ಫಲವಾಗಿಯೇ ವೇಗದ ಮೌಲ್ಯ ಬದಲಾಯಿಸಿಹೋಗುವುದರಿಂದ ವೇಗವನ್ನು ನಿಷ್ಕೃಷ್ಟವಾಗಿ ಕಂಡುಹಿಡಿಯಲಾಗುವುದಿಲ್ಲ ಎಂಬುದೇ ಹೈಸನ್‌ಬರ್ಗ್‌ನ ತತ್ತ್ವ.

ಸ್ಥಾನ, ವೇಗ ಎಂಬವುಗಳಿಗೆ ಬದಲಾಗಿ ಹೆಚ್ಚು ವ್ಯಾಪ್ತಿಯುಳ್ಳ ಮತ್ತೊಂದು ರೀತಿಯಲ್ಲಿ ಈ ತತ್ತ್ವವನ್ನು ಒಕ್ಕಣಿಸಬಹುದು. $q$ ಎಂಬ ಸ್ಥಾನಸೂಚಕ ಚರವೂ ಅದಕ್ಕೆ ಅನುವರ್ತಿಯಾದ (ಕಾಂಜುಗೇಟ್) $p$ ಎಂಬ ಚಲನಪರಿಮಾಣಸೂಚಕ ಚರವೂ ಏಕಕಾಲದಲ್ಲಿ ತಿಳಿಯ ಬೇಕಾದರೆ, ಅವುಗಳಲ್ಲಿ $\Delta q$, $p$ ಎಂಬ ಅನಿಶ್ಚಿತತ್ವ ಸಹಜವಾಗಿ ಉದ್ಭವಿಸುವುದಲ್ಲದೆ $\Delta q.\Delta p$ ಎಂಬ ಗುಣಲಬ್ಧ ಪ್ಲಾಂಕನ ಭೇದರಹಿತ ಸಂಖ್ಯೆಯಾದ $h$ ಎಂಬುದಕ್ಕಿಂತ ಕಡಿಮೆಯಾಗಿರಲಾರದು ಎಂಬುದೇ ಹೈಸನ್‌ಬರ್ಗ್‌ನ ತತ್ತ್ವ. ಶಕಲಬಲವಿಜ್ಞಾನದ ಪ್ರಕಾರ, ಒಂದು ಕಣದ ಸ್ಥಾನ ತಿಳಿಯಬೇಕಾದರೆ ಅದಕ್ಕೆ ಸಂಬಂಧಪಟ್ಟ ವಸ್ತುತರಂಗದ (ಮ್ಯಾಟರ್ ವೇವ್) ಪಾರದ ವರ್ಗವನ್ನು ಗುಣಿಸಿದರೆ ಆ ಕಣ ಆ ಸ್ಥಾನದಲ್ಲಿರಬಹುದಾದ ಸಂಭಾವ್ಯತೆ (ಪ್ರಾಬಬಿಲಿಟಿ) ಮಾತ್ರ ಗೊತ್ತಾಗುತ್ತದೆ. ಅದರ ಸ್ಥಾನ $x=x_2-x_1$ ಎಂಬ ಪರಿಮಿತಿಯೊಳಗೆ ಇರಬೇಕಾದರೆ ವಸ್ತುತರಂಗದ ಪಾರ ಈ ಎಲ್ಲೆಗಳಿಂದಾಚೆ ಸೊನ್ನೆಯಾಗಬೇಕು. ಎರಡು ಸುಲಭ ಸಂಗತ ಚಲನೆಗಳಿಗೆ (ಸಿಂಪಲ್ ಹಾರ್ಮೊನಿಕ್ ಮೋಷನ್ಸ್) ಸಂಬಂಧಿಸಿದ ಆಂದೋಳನ ಸೊನ್ನೆಯಾಗಬೇಕಾದರೆ ಅವುಗಳ ದಶಾಂತರ (ಫೇಸ್ ಡಿಫರೆನ್ಸ್) ಅಥವಾ $-\pi$ ಆಗಿರಬೇಕು. $P_1$ ಮತ್ತು $P_2$ ಎಂಬ ಚಲನ ಪರಿಮಾಣಗಳಿಗೆ ಸಂಬಂಧಪಟ್ಟ ತರಂಗಗಳ ದಶಾಂತರ $x_1$ ಎಂಬಲ್ಲಿ

— ಎಂದೂ $x_2$ ಎಂಬಲ್ಲಿ

$$-\frac{2\pi}{\lambda_1}x_2+\frac{2\pi}{\lambda_2}x_2=-\frac{2\pi p_1}{h}x_2+\frac{2\pi p_2}{h}x_2\geq\pi$$

ಎಂದೂ ಇರಬೇಕಾದುದರಿಂದ

$$\frac{2\pi}{h}(p_2-p_1)(x_2-x_1)\geq 2\pi$$ ಎಂದಾಗಿ $\Delta p.\ X \geq h$ ಎಂದು ಬರುತ್ತದೆ.

$$-\frac{2\pi}{\lambda_1}x_1+\frac{2\pi}{\lambda_2}x_1=-\frac{2\pi p_1}{h}x_1+\frac{2\pi p_2}{h}x_1\leq -\pi$$

ಇಲ್ಲಿ $\lambda_1=\frac{h}{p_1}$ ಮತ್ತು $\lambda_2=\frac{h}{p_2}$ ಎಂಬುದನ್ನು ಬಳಸಿದೆ.

ಈ ತತ್ತ್ವವನ್ನು ಪ್ರಯೋಗಮಾರ್ಗಕ್ಕೆ ಅನ್ವಯಿಸುವ ವಿಧಾನವನ್ನು ಹೈಸನ್‌ಬರ್ಗ್‌ನೇ ವಿವರಿಸಿದ. ಕಣದ ಸ್ಥಾನವನ್ನು ಹೆಚ್ಚು ನಿಷ್ಕೃಷ್ಟವಾಗಿ ಕಂಡುಹಿಡಿಯಬೇಕಾದರೆ ಸೂಕ್ಷ್ಮದರ್ಶಕವನ್ನು ಬಳಸಬೇಕಲ್ಲದೆ ಕಣವನ್ನು ವೀಕ್ಷಿಸಲು ಆದಷ್ಟು ಕಡಿಮೆ ತರಂಗಮಾನದ ಬೆಳಕನ್ನು ಉಪಯೋಗಿಸಬೇಕಾಗಿ ಬರುವುದು. ಹಾಗೆ ಕಡಿಮೆ ತರಂಗಮಾನದ ಬೆಳಕನ್ನು ಬಳಸಿದರೆ ಅದರ ಶಕಲ ಸ್ವಭಾವ (ಕ್ವಾಂಟಮ್ ನೇಚರ್) ಹೆಚ್ಚು ಮುಖ್ಯವಾಗಿ ಕಾಂಪ್ಟನ್ ಪರಿಣಾಮ (ಕಾಂಪ್ಟನ್ ಎಫೆಕ್ಟ್) ನಡೆದು ಶಕಲಚಲನಪರಿಮಾಣ ಅನಿಶ್ಚಿತವಾಗಿ ಬದಲಾಯಿಸುವುದರಿಂದ ನಿಷ್ಕೃಷ್ಟವಾಗಿ ಚಲನಪರಿಮಾಣವನ್ನು ಕಂಡುಹಿಡಿಯಲಾಗುವುದಿಲ್ಲ ವೆಂದು ಹೈಸನ್‌ಬರ್ಗ್ ತೋರಿಸಿದ. ಹಾಗೆಯೇ ಚಲನಪರಿಮಾಣವನ್ನು ಹೆಚ್ಚು ನಿಷ್ಕೃಷ್ಟವಾಗಿ ಕಂಡುಹಿಡಿಯಲು ಯತ್ನಿಸಿದರೆ ಕಣದ ಸ್ಥಾನ ಅನಿಶ್ಚಿತವಾಗಿ ಬದಲಾಯಿಸುವುದೆಂದೂ ತೋರಿಸಿದ.

ಹೀಗೆ ಸ್ಥಾನ ಮತ್ತು ವೇಗಗಳನ್ನು ಏಕಕಾಲದಲ್ಲಿ ನಿಷ್ಕೃಷ್ಟವಾಗಿ ಕಂಡುಹಿಡಿಯುವುದು ತತ್ತ್ವಶಃ ಅಸಾಧ್ಯವಾದರೆ ಲಾಪ್ಲಾಸನ ಭಾವನೆ ನಿಷ್ಪ್ರಯೋಜಕವಾಗುವುದು. ಇದರಿಂದಲೇ ಶಕಲಬಲವಿಜ್ಞಾನದಲ್ಲಿ ಸಂಭಾವ್ಯತೆಯನ್ನು ನಿಯಮಾನುಸಾರ ಕಂಡು ಹಿಡಿಯಬಹುದೆಂದು ಮಾತ್ರ ಅಂಗೀಕರಿಸಿ ಒಂದು ವೀಕ್ಷಣದ ಫಲವನ್ನು ಅನಿಶ್ಚಿತತ್ವವಿಲ್ಲದೆ ಲೆಕ್ಕಮಾಡಲಾಗುವುದಿಲ್ಲ ವೆಂದು ಪ್ರತಿಪಾದಿಸಲಾಗಿದೆ. ಆದರೆ ಇಂಥ ಅನಿಶ್ಚಿತತ್ವ ಜೀವನದಲ್ಲಿ ಯಾವ ರೀತಿ ಪರಿಣಾಮಕಾರಿಯಾಗಬಹುದೆಂಬುದನ್ನು ಹೇಳುವುದು ಕಷ್ಟ. $h$ ಎಂಬುದು ಬಹು ಅಲ್ಪ ಸಂಖ್ಯೆಯಾದುದರಿಂದ $(6x10^{-27})$ ಪರಮಾಣುಗಳು, ಎಲೆಕ್ಟ್ರಾನುಗಳು ಮುಂತಾದವುಗಳ ವಿಷಯದಲ್ಲಿ ಹೊರತು ಸಾಮಾನ್ಯವಾಗಿ ಈ ಅನಿಶ್ಚಿತತ್ವ ಗಮನಾರ್ಹವಾಗಿಲ್ಲ. ಕಸೀರರ್‌ನಂಥ ತತ್ತ್ವಶಾಸ್ತ್ರಜ್ಞರೂ ಕಾರ್ಯಕಾರಣತತ್ತ್ವವನ್ನು ಹೇಗೆ ಒಕ್ಕಣಿಸಿದರೆ ಹೈಸನ್‌ಬರ್ಗ್‌ನ ಅನಿಶ್ಚಿತತ್ವ ನಿಯಮ ಅಡ್ಡಿಯಾಗಿ ಬರದಂತೆ ಮಾಡಬಹುದೆಂದು ತೋರಿಸಿದ್ದಾರೆ. ಶ್ರೋಡಿಂಗರ್, ಜೋರ್ಡನ್ ಮೊದಲಾದವರು ಜೀವವಿಜ್ಞಾನದಲ್ಲಿ ಶಕಲಬಲವಿಜ್ಞಾನದ ನಿಯಮಗಳನ್ನು ಹೇಗೆ ಅನ್ವಯಿಸಬಹುದೆಂದು ತೋರಿಸಲು ಪ್ರಯತ್ನಗಳನ್ನು ನಡೆಸಿದ್ದಾರೆ. ಆದರೆ ಈ ವಿಷಯ ಸರ್ವಾನುಮತದಿಂದ ಒಂದು ಘಟ್ಟಕ್ಕೆ ಬಂದಂತಿಲ್ಲ. ನಿಜಸ್ಥಿತಿಯೆಂಬುದನ್ನು ಹೇಗೆ ವಿವರಿಸಬೇಕು. ಈ ರೀತಿಯ ವಿವರಣೆಯಿಂದ ಶಕಲಬಲವಿಜ್ಞಾನ ನಿಜಸ್ಥಿತಿಯನ್ನು

ವರ್ಣಿಸುವುದೆಂಬ ವಿಷಯ ಸ್ಥಿರಪಡುವುದೇ ಎಂಬ ಅಂಶದಲ್ಲಿ ಐನ್‌ಸ್ಟೈನ್ ಮತ್ತು ಬೋರ್ ಇವರಲ್ಲಿ ಭಿನ್ನಾಭಿಪ್ರಾಯವಿತ್ತು. ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯ ಎಷ್ಟರಮಟ್ಟಿಗೆ ಇರಬಹುದೆಂಬುದನ್ನು ಅನುವಂಶೀಯತೆಯ (ಹೆರಿಡಿಟಿ) ನಿಯಮಗಳು ಸ್ವಲ್ಪಮಟ್ಟಿಗೆ ಸ್ಪಷ್ಟಪಡಿಸುತ್ತವೆ. ಆದರೆ ಅನುವಂಶೀಯತೆಯ ಕಾರಕಗಳಾದ ಜೀನ್‌ಗಳು ಕಡಿಮೆ ತರಂಗಮಾನದ ಕಿರಣಗಳಿಂದ ಬದಲಾವಣೆ ಹೊಂದುವುದರಿಂದಲೂ ಜೀನ್‌ಗಳ ಮೇಲಿನ ಪರಿಣಾಮ ಶಕಲವಿಜ್ಞಾನದ ನಿಯಮಗಳಿಗೆ ಒಳಪಡುವುದರಿಂದಲೂ ಹೈಸನ್‌ಬರ್ಗ್‌ನ ನಿಯಮಕ್ಕೂ ಇಚ್ಛಾಸ್ವಾತಂತ್ರ್ಯಕ್ಕೂ ಸಂಬಂಧವಿರಬಹುದೆಂಬುದನ್ನು ಒಪ್ಪಬೇಕಾಗುವುದು. ಆದರೆ ಸಾಧಾರಣ ಜೀವನಕ್ಕೆ ಸಂಬಂಧಪಟ್ಟ ಕಾಯಿದೆಗಳನ್ನು ರೂಢಿಸುವಾಗ ಈ ಸಂಬಂಧವನ್ನು ಗಮನದಲ್ಲಿಡಬೇಕಾಗಿ ಬರುವ ಸಂದರ್ಭದ ವೇಳೆಗೆ ಶಕಲಬಲವಿಜ್ಞಾನದ ಬೆಳವಣಿಗೆಯ ಸ್ಥಿತಿ ಊಹಾತೀತವಾಗುತ್ತದೆ. (ಟಿ.ಎಸ್.ಎಸ್.)

**ಅನಿಶ್ಚಿತತ್ತ್ವವಾದ** : ಪಾಶ್ಚಾತ್ಯ ತತ್ತ್ವಶಾಸ್ತ್ರದಂತೆ ಅಗ್ನಾಸ್ಟಿಸಿಸಂ ವಾದಕ್ಕೆ ಸಮಾನವಾದುದು. ಅಗ್ನಾಸ್ಟಿಸಿಸಂ ಎಂಬ ಪದವನ್ನು ಮೊಟ್ಟಮೊದಲಿಗೆ ಉಪಯೋಗಿಸಿದ ಹಕ್ಸ್ಲೆ ಅದು ಹುಟ್ಟಿದ ಬಗೆಯನ್ನು ಈ ರೀತಿ ವಿವರಿಸಿರುತ್ತಾನೆ: ನಾನು ನಿರೀಶ್ವರವಾದಿಯೆ (ಏಥಿಯಿಸ್ಟ್), ಸೇಶ್ವರವಾದಿಯೆ (ಥೀಯಿಸ್ಟ್), ವಿಶ್ವದೇವೈಕ್ಯವಾದಿಯೆ (ಪ್ಯಾನ್‌ಥೀಯಿಸ್ಟ್), ಭೌತವಾದಿಯೆ (ಮೆಟೀರಿಯಲಿಸ್ಟ್), ಧ್ಯೇಯವಾದಿಯೆ (ಐಡಿಯಲಿಸ್ಟ್), ಕ್ರೈಸ್ತ ಧರ್ಮಾವಲಂಬಿಯೆ (ಕ್ರಿಶ್ಚಿಯನ್), ಸ್ವತಂತ್ರವಾದಿಯೆ (ಫ್ರೀಥಿಂಕರ್), ನನ್ನ ವಿಚಾರ ಪ್ರಜ್ಞೆ ಹೆಚ್ಚಿದಷ್ಟೂ ಆ ಪ್ರಶ್ನೆಗಳಿಗೆ ಉತ್ತರ ಕೊಡಲು ನಾನು ಹಿಂತೆಗೆಯಬೇಕಾಯಿತು. ಕೊನೆಗೆ ಕಟ್ಟಕಡೆಯ ವಾದವನ್ನು ಬಿಟ್ಟರೆ ಉಳಿದ ಯಾವ ವಾದದಲ್ಲೂ ನನ್ನ ಮನಸ್ಸು ನೆಲೆಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದೆ. ಯಾವ ಒಂದರಲ್ಲಿ ಅನೇಕ ಸಭ್ಯರು ಒಮ್ಮತ ಪಡೆದಿದ್ದರೋ ಆ ಒಂದರಲ್ಲಿ ನನ್ನ ಅಭಿಪ್ರಾಯ ಭಿನ್ನವಾಗಿತ್ತು. ಅವರು ಅಧ್ಯಾತ್ಮರಹಸ್ಯವನ್ನು ತಿಳಿದಿದ್ದೇವೆಂಬ ಭರವಸೆ ಪಡೆದಿದ್ದರು; ಇರವಿನ ಸಮಸ್ಯೆಯನ್ನು ಹೆಚ್ಚು ಕಡಿಮೆ ಬಗೆಹರಿಸಿದ್ದೇವೆಂದು ನಂಬಿದ್ದರು. ನನಗಾದರೋ ಆ ನೆಚ್ಚಿಗೆ ಇರಲಿಲ್ಲ; ಆ ಸಮಸ್ಯೆ ಬಗೆಹರಿಸಲಾಗದ ಸಮಸ್ಯೆಯೆಂಬುದು ನನ್ನ ನೆಚ್ಚಿಕೆ. ಹ್ಯೂಂ ಮತ್ತು ಕ್ಯಾಂಟ್ ಅಭಿಪ್ರಾಯ ನನ್ನ ಪರವಾಗಿದ್ದದ್ದರಿಂದ ಹಾಗೆ ನಾನು ನೆಚ್ಚಿದ್ದು ದುರಹಂಕಾರದಿಂದ ಎಂದು ನಾನು ಭಾವಿಸಲಿಲ್ಲ. ಮೆಟಫಿಸಿಕಲ್ ಸೊಸೈಟಿಯ (ಆಧ್ಯಾತ್ಮ ವಿಚಾರಸಂಸ್ಥೆ) ನನ್ನ ಜೊತೆಯ ಸದಸ್ಯರು ಒಂದಲ್ಲ ಒಂದು ಬಗೆಯ 'ಇಸ್ಟ್ ' ಎಂಬ ಹೆಗ್ಗುರುತನ್ನು ಪಡೆದಿದ್ದರು. ಇಂಥ ಉದ್ದನೆಯ ಬಾಲವುಳ್ಳವರ ಮುಂದೆ ಅದಿಲ್ಲದ ನನಗೆ ಕಥಾಪ್ರಸಿದ್ಧವಾದ ಬಾಲವಿಲ್ಲದ ನರಿಯಂತೆ ಕಾಣಿಸಿಕೊಳ್ಳಲು ನಾಚಿಕೆಯಾಗುತ್ತಿತ್ತು. ಆದ್ದರಿಂದ ಯೋಚಿಸಿ ನನಗೆ ಉಚಿತವೆಂದು ತೋರಿದ ಅಗ್ನಾಸ್ಟಿಕ್ ಎಂಬ ಬಿರುದಾಂಕಿತವನ್ನು ಸೃಷ್ಟಿಸಿಕೊಂಡೆ. ಅದು ಕ್ರೈಸ್ತಚರ್ಚಿನ ಚರಿತ್ರೆಯಲ್ಲಿ ಬಳಕೆಯಾದ ಗ್ನಾಸ್ಟಿಕ್ ಎಂಬ ಪದಕ್ಕೆ ವಿರೋಧ ಸೂಚಕವಾಗಿಯೂ ಇತ್ತು. ನನಗೂ ಅವರಂತೆಯೇ ಬಾಲವಿದೆ ಎಂದು ತೋರಿಸಲು ಅದನ್ನು ನನ್ನ ಸೊಸೈಟಿಯವರ ಮುಂದೆ ಮೆರೆಯಿಸಿದೆ. ಆ ಪದ ಜನರಿಗೆ ಹಿಡಿಸಿದ್ದರಿಂದ ನನಗೆ ತುಂಬ ಸಮಾಧಾನವಾಯಿತು. ಸ್ಪೆಕ್ಟೇಟರ್ ಪತ್ರಿಕೆಯೂ ಅದರ ವಿಚಾರದಲ್ಲಿ ಜವಾಬ್ದಾರಿ ವಹಿಸಿದ್ದರಿಂದ ಆ ಮಾತಿನ ಕರ್ತೃವಿನ ಹೆಸರು ಕೇಳಿ ಮರ್ಯಾದಸ್ಥರಲ್ಲಿ ಹುಟ್ಟಬಹುದಾದ ಸಂದೇಹಕ್ಕೆ ಎಡೆ ಇಲ್ಲದಾಯಿತು (ಎಸ್ಸೇಸ್, ಸಂಪುಟ 5).

ಅನಿಶ್ಚಿತತ್ವವಾದ ಪರಮಸಂಶಯವಾದದಿಂದ (ಸ್ಕೆಪ್ಟಿಸಿಸಂ) ಭಿನ್ನವಾದದ್ದು. ಪರಮಸಂಶಯವಾದ ಯಾವ ಬಗೆಯಾದ ಜ್ಞಾನವೂ ನಿಶ್ಚಯವಲ್ಲವೆಂದು ಹೇಳುತ್ತದೆ. ಆದರೆ ಅನಿಶ್ಚಿತವಾದ ಎಲ್ಲ ಬಗೆಯ ಜ್ಞಾನವೂ ಸಂಶಯಾಸ್ಪದವೆಂದು ಹೇಳುವುದಿಲ್ಲ; ಆತ್ಮ, ಈಶ್ವರ ಇತ್ಯಾದಿ ಲೋಕಾತೀತ ವಸ್ತುಗಳ ವಿಷಯದಲ್ಲಿ ಮಾತ್ರ ನಮ್ಮ ಜ್ಞಾನ ಅನಿಶ್ಚಿತವಾದದ್ದು ಎಂದು ಹೇಳುತ್ತದೆ. ಹಕ್ಸ್ಲೆಯ ಕಾಲದಲ್ಲಿ ಒಂದು ಗುಂಪಿನ ತಾತ್ತ್ವಿಕರು ಭೌತವಸ್ತುವೇ (ಮ್ಯಾಟರ್) ಅಂತಿಮದಲ್ಲಿ ನಿಶ್ಚಿತವಾದದ್ದು ಮತ್ತು ಸತ್ಯವಾದದ್ದು ಎಂದೂ ಇನ್ನೊಂದು ಗುಂಪಿನವರು ಚಿದ್ವಸ್ತುವೇ (ಮೈಂಡ್)ಅಂತಿಮದಲ್ಲಿ ನಿಶ್ಚಿತವಾದದ್ದು ಮತ್ತು ಸತ್ಯವಾದದ್ದು ಎಂದೂ ವಾದಿಸುತ್ತಿದ್ದರು. ಮೊದಲನೆಯ ಗುಂಪಿನವರು ಭೌತವಾದಿಗಳು (ಮೆಟೀರಿಯಲಿಸ್ಟ್ಸ್). ಈ ಎರಡೂ ನಿಶ್ಚಿತವಲ್ಲವೆಂಬುದು ಹಕ್ಸ್ಲೆಯ ವಾದ. ಆತನ ವಾದ ಈ ರೀತಿ ಇದೆ: ಈ ಪ್ರಚಂಡ ಭೌತವಸ್ತುವಿನ ಬಗ್ಗೆ ನಾವು ತಿಳಿದಿರುವುದಾದರೂ ಏನು? ನಮ್ಮ ಮಾನಸಿಕ ವೃತ್ತಿಗಳಿಗೆ ಔಪಾಧಿಕ (ಹೈಪೊತೆಟಿಕಲ್) ವಾದ ಮತ್ತು ಅಜ್ಞಾತವಾದ (ಅನ್‌ನೋನ್) ಕಾರಣವೆಂದು ಹೇಳುವ ಅದರ ವಿಚಾರವಾಗಿ ಅದು ಒಂದು ನಾಮಮಾತ್ರ ಎಂಬುದಕ್ಕಿಂತ ಹೆಚ್ಚಿಗೆ ಏನಾದರೂ ನಮಗೆ ತಿಳಿದಿದೆಯೆ? ಭೌತವಾದವನ್ನು ಒಪ್ಪಿದರೆ ಚಿದ್ವಸ್ತು ವಿನಾಶವಾಗುವುದೆಂದು ಭಯಗೊಂಡು ಚೀತ್ಕಾರ ಮಾಡುತ್ತೇವಲ್ಲ, ಆ ಚಿದ್ವಸ್ತು ಕೂಡ ನಮ್ಮ ಚಿತ್ತವೃತ್ತಿಗಳಿಗೆ ಔಪಾಧಿಕವಾದ ಮತ್ತು ಅಜ್ಞಾತವಾದ ಕಾರಣಕ್ಕೆ ಕೇವಲ ಒಂದು ನಾಮಧೇಯ ಎಂಬುದಕ್ಕಿಂತ ಹೆಚ್ಚಿನದಾದರೂ ನಮಗೆ ತಿಳಿದಿದೆಯೆ? ವಾಸ್ತವಾಂಶ (ಫ್ಯಾಕ್ಟ್) ಎಂದರೆ ಏನು ಎಂಬುದನ್ನು ನಾನು ತಿಳಿದಿದ್ದೇನೆ. ನಿಯಮ (ಲಾ) ಎಂದರೆ ಏನು ಎಂಬುದನ್ನು ನಾನು ತಿಳಿದಿದ್ದೇನೆ, ಆದರೆ 'ನಿಯತಿ' (ನೆಸಿಸಿಟಿ) ಎಂಬುದು ನನ್ನ ಮನಸ್ಸಿನಲ್ಲಿ ಉದ್ಭವವಾದ ಒಂದು ನಿರ್ಗುಣ ಛಾಯೆ (ಎಂಪ್ಟಿ ಷ್ಯಾಡೊ) ಎಂದು ನನ್ನ ಭಾವನೆ. ಭೌತವ್ಯಾಪಾರಗಳನ್ನು ಚೇತನಕ್ಕೆ ಸಂಬಂಧಿಸಿದ ಮಾತುಗಳಲ್ಲಿ ವಿವರಿಸುವುದು ಎಷ್ಟು ಅನುಚಿತವೊ ಚೇತನವೃತ್ತಿಗಳನ್ನು ಭೌತವಸ್ತುವಿಗೆ ಸಂಬಂಧಿಸಿದ ಮಾತುಗಳಲ್ಲಿ ವಿವರಿಸುವುದೂ ಅಷ್ಟೇ ಅನುಚಿತ. ಆ ಒಂದೊಂದು ವಿವರಣೆಯೂ ಒಂದು ಸಾಪೇಕ್ಷವಾದ ಸತ್ಯವನ್ನು ಮಾತ್ರ ಪಡೆದಿದೆ (ಕಲೆಕ್ಟೆಡ್ ಎಸ್ಸೇಸ್).

ಹೀಗೆ ಚಿದ್ವಸ್ತು ಮತ್ತು ಭೌತವಸ್ತು ಎರಡೂ ಕೇವಲ ನಾಮಧೇಯಗಳು ಎಂದು ಒಂದರ ಪರವಾದ ಪರಿಭಾಷೆಯಲ್ಲಿ, ಇನ್ನೊಂದನ್ನು ವಿವರಿಸುವುದು ಅಪ್ರಕೃತ ಎಂದು ಹಕ್ಸ್ಲೆ ಹೇಳಿದರೂ ಅವನು ವೈಜ್ಞಾನಿಕ ವಿಷಯಗಳನ್ನು ವಿವರಿಸುವಾಗ ಭೌತಶಾಸ್ತ್ರಪರಿಭಾಷೆಯ ಬಳಕೆ ಸರ್ವವಿಧದಲ್ಲೂ ಉತ್ತಮವೆಂದು ಕೆಲವೊಮ್ಮೆ ಹೇಳಿರುತ್ತಾನೆ. ಈ ಹೇಳಿಕೆ ಅವನು ಭೌತವಾದಿಗಳ ಪರ ವಹಿಸಿ ಮಾತನಾಡಿದಂತೆ ತೋರುತ್ತದೆ. ಆದರೆ ಭೌತವಾದಿಗಳ ಪಕ್ಷವನ್ನು ಎತ್ತಿ ಹಿಡಿಯಬೇಕೆಂಬುದು ಹಕ್ಸ್ಲೆಯ ಅಭಿಮತವಲ್ಲ. ಭೌತವಸ್ತುವೇ ಪರಮವೆಂಬ ತತ್ತ್ವ ಚಿದ್ವಸ್ತು ಪರಮವೆಂಬ ತತ್ತ್ವದಷ್ಟೇ ಅನಿಶ್ಚಿತವೆಂಬುದು ಅವನ ಸ್ಥಿರವಾದ ನಿಲುವು. ನಿಜವಾಗಿಯೂ ಅವನು ಅನುಭವಾರೂಢವಾದ ವಾಸ್ತವವಾದಿ (ಪಾಸಿಟಿವಿಸ್ಟ್). ಹಕ್ಸ್ಲೆ ವಾಸ್ತವವಾದದ ಪರವಾಗಿ ಹ್ಯೂಮ್ ಮತ್ತು ಕ್ಯಾಂಟರ ವಾದವನ್ನು ಅನಿಶ್ಚಿತ್ತ್ವವಾದ ಎಂದು ಕರೆಯುತ್ತಾನೆ. ಆದರೆ ಕ್ಯಾಂಟ್ ಮತ್ತು ಹ್ಯೂಮ್ ಕೂಡ ಆತ್ಮತತ್ತ್ವವನ್ನೂ ಈಶ್ವರತತ್ತ್ವವನ್ನೂ ವಾದದಿಂದ (ರೀಸನಿಂಗ್) ಸಮರ್ಥಿಸಲಾಗದಿದ್ದರೂ ಆ ನಂಬಿಕೆಗಳು ಜೀವನಕ್ಕೆ ಅಗತ್ಯವೆಂದು ತಮ್ಮ ತತ್ತ್ವವನ್ನು ಪರಿಸಮಾಪ್ತಿಗೊಳಿಸಿರುತ್ತಾರೆ. ಅಪ್ಪಟ ವಿಚಾರಚೇತನದೃಷ್ಟಿಯಿಂದ (ಪ್ಯೂರ್ ರೀಸನಿಂಗ್) ಸಾಧಿಸಲಾಗದ ಆತ್ಮ ಮತ್ತು ಈಶ್ವರತತ್ತ್ವಗಳು ಧಾರ್ಮಿಕ ವಿಚಾರ ಚೇತನದೃಷ್ಟಿಯಿಂದ ಅಗತ್ಯವೆಂದು ಹೇಳಿರುತ್ತಾನೆ.

ಹೀಗೆ ಹಕ್ಸ್ಲೆ ಮತ್ತು ಕ್ಯಾಂಟ್ ಅವರಿಂದ ಆಚೆಗೆ ಬಂದ ಅಗಸ್ಟ ಕಾಂಟ್ ಮತ್ತು ಹರ್ಬರ್ಟ್ ಸ್ಪೆನ್ಸರ್ ಮುಂತಾದವರ ಅನುಭವಾರೂಢವಾಸ್ತವವಾದಕ್ಕೆ ದಾರಿ ಮಾಡಿಕೊಟ್ಟರು.

ಭಾರತದಲ್ಲಿ ಅನಿಶ್ಚಿತತ್ವವಾದ ತುಂಬ ಹಿಂದಿನದು, ಅನೇಕ ಬಗೆಯದು. ಸಾಂಖ್ಯದರ್ಶನ ಈಶ್ವರನ ವಿಷಯದಲ್ಲಿ ಮಾತ್ರ ಅನಿಶ್ಚಿತತ್ವವನ್ನು ಒಪ್ಪುತ್ತದೆ. ಅದರ ಪ್ರಕಾರ ಈಶ್ವರಭಾವನೆ ವಿಚಾರಚೇತನದಿಂದ ಸಿದ್ಧವಲ್ಲ. ಆದರೆ ಪ್ರಕೃತಿ ಮತ್ತು ಪುರುಷ ಎಂಬ ಎರಡು ಅಂತಿಮ ತತ್ತ್ವಗಳನ್ನು ಅದು ಒಪ್ಪುತ್ತದೆ. ಸ್ವಭಾವವಾದ ಕೂಡ ಈಶ್ವರತತ್ತ್ವವನ್ನು ಅನುಮಾನದಿಂದ ಸಾಧಿಸಲಾಗುವುದಿಲ್ಲವೆಂದು ಹೇಳುತ್ತದೆಯಲ್ಲದೆ, ಅನುಮಾನದಿಂದ ಏರ್ಪಟ್ಟ ಅನುಭವಾರೂಢ ಪ್ರತಿಜ್ಞೆಗಳು ಸಂಭಾವ್ಯವೇ (ಪ್ರಾಬಬಲ್) ಹೊರತು ಪರಮನಿಶ್ಚಯವಲ್ಲ ಎಂದು ಭಾವಿಸುತ್ತದೆ. ಜೈನದರ್ಶನ ಕೂಡ ಅನುಭವಾತೀತವಾದ ಪರಮವನ್ನು (ಆಬ್ಸೊಲ್ಯೂಟ್) ಒಪ್ಪುವುದಿಲ್ಲ. ಒಂದು ವಿಷಯವನ್ನು ಕುರಿತು ನಾವು ಯಾವ ಪ್ರತಿಜ್ಞೆಯನ್ನು ಮಾಡಿದರೂ ಅದರ ಅಂತ್ಯ ಸಾಪೇಕ್ಷವೇ ಹೊರತು ಪರಮವಲ್ಲ. ಬುದ್ಧನ ವಾದವನ್ನೂ ಕೂಡ ಅನಿಶ್ಚಿತತ್ವವಾದವೆಂದು ಹೇಳುವುದುಂಟು. ಬುದ್ಧ ಆತ್ಮ ಈಶ್ವರ, ಪರಲೋಕ ಮುಂತಾದವುಗಳ ವಿಚಾರವಾಗಿ ಉತ್ತರ ಕೊಡದೆ ಮೌನ ತಾಳಿದ್ದರಿಂದ ಅವನು ಅನಿಶ್ಚಿತತ್ವವಾದಿಯೆಂದು ಕೆಲವರು ಅಭಿಪ್ರಾಯ ಪಟ್ಟಿರುತ್ತಾರೆ. ಆತ ಈ ಅಂತಿಮ ತತ್ತ್ವಗಳ ವಿಚಾರವಾಗಿ ತರ್ಕಿಸಲು ನಿರಾಕರಿಸಿದುದಕ್ಕೆ ಕನಿಷ್ಠಪಕ್ಷ ಎರಡು ವಿವರಣೆಗಳಿವೆ. ಬುದ್ಧ ಮುಖ್ಯವಾಗಿ ಜನರಿಗೆ ಬೋಧಿಸಿದ್ದು ದುಃಖದ ವಾಸ್ತವಿಕತೆ, ಅದಕ್ಕೆ ಕಾರಣ ಮತ್ತು ಅದರ ನಿವಾರಣೋಪಾಯಗಳನ್ನು. ಇವುಗಳನ್ನು ತಿಳಿದುಕೊಳ್ಳಲು ತಮ್ಮ ಅಂತರಂಗ ಪರೀಕ್ಷೆ ಮತ್ತು ಅದರಲ್ಲಿ ಕಂಡುಬರುವ ಕಾಮ, ಲೋಭ, ಮದ, ಮಾತ್ಸರ್ಯಗಳನ್ನು ತಡೆದು ತಿದ್ದಿಕೊಳ್ಳುವುದೇ ನೇರವಾದ ಮಾರ್ಗ. ನೇರವಾದ ವಾಸ್ತವಾಂಶಗಳಲ್ಲಿ ನಮ್ಮ ತಿಳಿವನ್ನು ಕೇಂದ್ರೀಕರಿಸುವುದನ್ನು ಬಿಟ್ಟು, ಅತೀತವಿಷಯಗಳನ್ನು ಕುರಿತ ಶುಷ್ಕತರ್ಕದಲ್ಲಿ ನಮ್ಮ ಮನಸ್ಸು ಸಿಕ್ಕಿಕೊಂಡರೆ ಅದು ದಿಕ್ಕು ತೋಚದೆ ಅಲೆದಾಡಿ ಬಳಲಿ ಬೆಂಡಾಗುತ್ತದೆ. ಬುದ್ಧನೂ ಉದಾಹರಣೆಯನ್ನು ಕೊಟ್ಟು ಇದನ್ನು ಸ್ಪಷ್ಟಪಡಿಸಿದ್ದಾನೆ: ಬಾಣ ತಗುಲಿ ರಕ್ತ ಸುರಿದು ಸಾಯುವ ಸ್ಥಿತಿಯಲ್ಲಿರುವಾತ ಈ ಬಾಣವನ್ನು ಹೊಡೆದವನು ಯಾರು, ಯಾವ ಊರಿನವನು, ಅವನ ತಂದೆ ಯಾರು, ತಾತ ಯಾರು, ಎಂಬೆಲ್ಲ ವಿವರಗಳನ್ನು ತಿಳಿದ ಹೊರತು ಚಿಕಿತ್ಸೆ ಮಾಡಿಕೊಳ್ಳುವುದಿಲ್ಲವೆಂದು ಹಠ ಹಿಡಿದರೆ, ಇದನ್ನೆಲ್ಲ ವಿಚಾರಿಸುವುದರಲ್ಲಿ ಸತ್ತು ಹೋಗುತ್ತಾನೆ. ಹಾಗೆ ಧಾರ್ಮಿಕಜೀವನ ವಿಚಾರದಲ್ಲೂ ನೇರವಾಗಿ ನಮ್ಮ ಮುಂದಿರುವ ಮುಖ್ಯ ಸಮಸ್ಯೆಯೆಂದರೆ ನಮ್ಮನ್ನಿರಿಯುತ್ತಿರುವ ದುಃಖದ ಕಾರಣವನ್ನೂ ಅದರ ಪರಿಹಾರವನ್ನೂ ನೇರವಾಗಿ ತಿಳಿದು ಅದರಿಂದ ಪಾರಾಗುವುದು. ಇದೇ ನಾವು ಬಯಸಬೇಕಾದ ಬಿಡುಗಡೆ. ಅದನ್ನು ಬಿಟ್ಟು ದೂರದ ಪರತತ್ತ್ವಜಿಜ್ಞಾಸೆಯಿಂದ ನೇರವಾದ ದಾರಿ ಮರೆಯಾಗುತ್ತದೆ. ಸ್ವಾರ್ಥ (ಈಗೋಯಿಸಂ) ನೇರವಾಗಿ ನಮ್ಮ ಮುಂದಿರುವ ಶತ್ರು; ನಮ್ಮಿಂದಲೇ ಕಲ್ಪಿತವಾದ ಶತ್ರು. ನಮ್ಮಿಂದಲೇ ನಮ್ಮ ಪ್ರಯತ್ನದಿಂದಲೇ ಪರಿಹಾರವಾಗತಕ್ಕದ್ದು. ಸ್ವಾನುಭವದಿಂದ, ಸ್ವಪ್ರಯತ್ನದಿಂದ ಸ್ವಂತವಾಗಿ ಪರಿಹರಿಸಿಕೊಳ್ಳಬೇಕಾದ್ದನ್ನು, ಬಾಹ್ಯಪ್ರಮಾಣಗಳನ್ನು ನೆಚ್ಚಿ ಅನುಭವಾತೀತವಾದ ವಸ್ತುಗಳನ್ನು ಹುಡುಕಿಕೊಂಡು ನಡೆಸುವ ಮಾನಸಿಕ ಅಲೆದಾಟದಿಂದ ಪರಿಹರಿಸಿಕೊಳ್ಳಲಾಗುವುದಿಲ್ಲ. ಸ್ವಾರ್ಥವನ್ನು ಗೆದ್ದು ನಿಷ್ಕಾಮ ಕರ್ಮಗಳನ್ನು ಅವಲಂಬಿಸದಿದ್ದವನಿಗೆ ಈಶ್ವರ, ಪರಲೋಕ ಇತ್ಯಾದಿಗಳನ್ನು ನಂಬಿದರಿಂದ ಶ್ರೇಯಸ್ಸಾಗುವುದಿಲ್ಲ. ಇದು ಎಲ್ಲದರ ತಳಹದಿಯಾದ ಸಾರ್ವತ್ರಿಕ ಸ್ವಾನುಭವ ಧರ್ಮ. ಆದ್ದರಿಂದ ಬುದ್ಧ ತನ್ನ ಗಮನವನ್ನೆಲ್ಲ

ಇದರಲ್ಲಿ ಕೇಂದ್ರೀಕರಿಸಲು ಪ್ರಯತ್ನಪಟ್ಟ. ಇದಕ್ಕೆ ತಡೆಯಾಗುವ ಇತರ ವಿಷಯಗಳಿಗೆ ಲಕ್ಷ್ಯ ಕೊಡಕೂಡದೆಂದು ಬೋಧಿಸಿದ. ಆದರೆ ಬೇರೆ ಕಡೆಗಳಲ್ಲಿ ಬುದ್ಧ ತನಗೆ ತಿಳಿದಿರುವುದೆಲ್ಲ ಇಷ್ಟೇ ಎಂದು ಭಾವಿಸಬಾರದೆಂದು ಎಚ್ಚರಿಕೆ ಕೊಟ್ಟಿದ್ದಾನೆ. ತಾನು ವೇದಜ್ಞನೆಂದೂ ಬ್ರಹ್ಮಜ್ಞನೆಂದೂ ಸ್ಪಷ್ಟವಾಗಿ ತಿಳಿಸಿರುತ್ತಾನೆ. ನಾಲ್ಕು ಬ್ರಹ್ಮ ವಿಹಾರಗಳನ್ನು ವರ್ಣಿಸಿರುತ್ತಾನೆ. ಅವನು ವರ್ಣಿಸಿರುವ ನಿರ್ವಾಣ ಶೂನ್ಯವಲ್ಲ. ಭೂಮಿಸ್ಥಿತಿ ಇಂದೂ ನಾಶಹೊಂದುವುದು ಆತ್ಮವಲ್ಲ, ಅಹಂಕಾರಯುತವಾದ ಸ್ವಾರ್ಥಮಾತ್ರವೆಂದೂ ಭಾವಿಸಲಾಗಿದೆ. ಇದು ಅಜ್ಞಾತತ್ವವಾದವಲ್ಲ. ನಿರ್ವಾಣದ ವಿಚಾರವಾಗಿ ಅವನು ಅದು ಅನಿರ್ವಚನೀಯವೆಂದು ಹೇಳಿರುವುದುಂಟು, ವಿಶ್ವದ ಹೊರವಸ್ತುಗಳಂತೆ ಅದು ಇದೆ ಎಂದಾಗಲಿ ಅದು ಇಲ್ಲ ಎಂದಾಗಲಿ ವರ್ಣಿಸುವುದಕ್ಕಾಗುವುದಿಲ್ಲ ಎಂದ ಮಾತ್ರಕ್ಕೆ ಅದರ ಸಿದ್ಧಿರೂಪವಿಲ್ಲವೆಂದು ಅವನು ಹೇಳಲಿಲ್ಲ. ಈ ಸಿದ್ಧಿರೂಪ ಸಾಮಾನ್ಯ ಜ್ಞಾನ ರೂಪಕ್ಕಿಂತ ಕಡಿಮೆಯದಲ್ಲ, ಹೆಚ್ಚಿನದು, ಅದರ ತಿಳಿವು ತಾರ್ಕಿಕವಾದ ಪರೋಕ್ಷ ಜ್ಞಾನವಲ್ಲ. ಈ ದೃಷ್ಟಿಯಿಂದ ಬುದ್ಧನ ಬೋಧೆ ಅನಿಶ್ಚಿತತ್ವವಾದವೆಂದು ಪರಿಗಣಿಸಲಾಗುವುದಿಲ್ಲ. ಬುದ್ಧನ ತತ್ತ್ವ ಅನಿಶ್ಚಿತತ್ವವಾದವೆಂಬ ಪ್ರತೀತಿ ಹುಟ್ಟುವುದಕ್ಕೆ ಕಾರಣ ಅವನ ಅನಂತರ ಹುಟ್ಟಿಕೊಂಡ ಒಂದು ಬಗೆಯ ಮಾಧ್ಯಮಿಕ ವಾದ. ಮಾಧ್ಯಮಿಕರೆಲ್ಲರೂ ನಿರ್ವಾಣವನ್ನು ಕೇವಲ ಶೂನ್ಯವೆಂದು ಹೇಳುವುದಿಲ್ಲ. ಅದು ಉಪನಿಷತ್ತುಗಳಲ್ಲಿ ವರ್ಣಿಸಿರುವ ಭೂಮಸ್ಥಿತಿಯೆಂದು ಹೇಳುವ ಮಾಧ್ಯಮಿಕರೂ ಇದ್ದಾರೆ. ಒಟ್ಟಿನಲ್ಲಿ ಬುದ್ಧನ ಮುಖ್ಯ ಉದ್ದೇಶ ಸ್ವಾರ್ಥತ್ಯಾಗ ಸಿದ್ಧಿಯನ್ನೂ ಸಾರ್ವತ್ರಿಕ ಪ್ರೇಮಜೀವನವನ್ನೂ ಎತ್ತಿಹಿಡಿಯುವುದು. ಈ ಸಿದ್ಧಿಗೆ ನೇರವಾಗಿ ಸಂಬಂಧಿಸದ ಮತ್ತು ಉಪಯುಕ್ತವಾಗದ ಶುಷ್ಕತರ್ಕವನ್ನು ಮಾತ್ರ ಅವನು ವಿರೋಧಿಸಿದನು, ಫಲಪ್ರದವಾದ ಜ್ಞಾನವನ್ನು ಅವನು ವಿರೋಧಿಸಲಿಲ್ಲ. (ಜಿ.ಎಚ್.)

**ಅನು** : ಇವನ ತಾಯಿ ಶರ್ಮಿಷ್ಠೆ, ತಂದೆ ಚಂದ್ರವಂಶದ ನಹುಷಪುತ್ರನಾದ ಯಯಾತಿ. ತಂದೆಯ ಮುಪ್ಪನ್ನು ತೆಗೆದುಕೊಂಡು ಅವನಿಗೆ ಯೌವನವನ್ನು ಕೊಡಲು ನಿರಾಕರಿಸಿದುದರಿಂದ ತಂದೆ ಇವನಿಗೆ ತನ್ನ ರಾಜ್ಯವನ್ನು ಕೊಡಲಿಲ್ಲ. ಅದಕ್ಕೆ ಒಪ್ಪಿದ ಪುರುವಿಗೆ ತನ್ನ ರಾಜ್ಯವನ್ನು ಕೊಟ್ಟ. ಅನಂತರ ಈತ ಉತ್ತರ ದಿಕ್ಕಿನಲ್ಲಿ ಮ್ಲೇಚ್ಛಾಧಿಪತ್ಯವನ್ನು ಪಡೆದ. (ಜಿ.ಹೆಚ್.)

**ಅನುಕರಣೆ[1]** : ಇನ್ನೊಬ್ಬರು ಮಾಡಿದಂತೆ ಮಾಡುವುದು, ಆಡಿದಂತೆ ಆಡುವುದು, ಕೃತಿಯೊಂದನ್ನು ನೋಡಿ ಅದೇ ತೆರನಾದ ಇನ್ನೊಂದನ್ನು ಸೃಷ್ಟಿಸುವುದು– ಇವೇ ಮೊದಲಾದ ಕಾರ್ಯಚಟುವಟಿಕೆಗಳಿಗೆ ಈ ಹೆಸರಿದೆ (ಇಮಿಟೇಷನ್). ಕೋತಿಯೊಂದು ತನ್ನ ಯಜಮಾನ ಕ್ಷೌರ ಮಾಡಿಕೊಳ್ಳುವುದನ್ನು ನೋಡಿ ತಾನು ಹಾಗೆಯೇ ಮಾಡುವುದು. ಮಗು ತಂದೆಯಂತೆ ಬೀಡಿ ಸೇದಲೆಳಸುವುದು ಅನುಕರಣೆಗೆ ಉದಾಹರಣೆಗಳು. ಒಬ್ಬ ವ್ಯಕ್ತಿ ತನ್ನನ್ನು ತಾನೇ ಅನುಕರಣ ಮಾಡುವುದೂ ಸಾಧ್ಯ. ಮನಶ್ಶಾಸ್ತ್ರಜ್ಞರು ಅನುಕರಣೆ ಸ್ಥೂಲವಾಗಿ ಎರಡು ಬಗೆಯದೆಂದು ವಿಂಗಡಿಸುತ್ತಾರೆ; ಉದ್ದೇಶಪೂರ್ವಕವಾಗಿ ಅನುಕರಣೆ ಮಾಡುವುದು ಒಂದು ರೀತಿ, ಇಚ್ಛಾಪೂರ್ವಕವಾಗಿಯಲ್ಲದೆ ಕೇವಲ ಯಾಂತ್ರಿಕವಾಗಿ ಅನುಕರಣೆ ಮಾಡುವುದು ಇನ್ನೊಂದು ರೀತಿ. ಕೆಲವು ವೇಳೆ ಮೊದಲು ಅನಿಚ್ಛಾಪೂರ್ವಕವೆಂದು ಕಂಡುಬರುವ ಅನುಕರಣೆ ಯೋಚನೆ ಮಾಡಿದರೆ ಇಚ್ಛಾಪೂರ್ವಕವೂ ಆಗಿ ಪರಿಣಮಿಸಬಹುದು.

ಅನುಕರಣೆ ಮಾನವರ ಮತ್ತು ಪ್ರಾಣಿಗಳ ಜೀವನದಲ್ಲಿ ಪ್ರಮುಖ ಪಾತ್ರವಹಿಸಿರುತ್ತದೆ. ಮಕ್ಕಳ ಬೆಳವಣಿಗೆ ಬಹುಮಟ್ಟಿಗೆ ಅನುಕರಣೆಯನ್ನು ಅವಲಂಬಿಸಿದೆ. ಮಗುವಿನ ಮೂರನೆಯ ವರ್ಷದಲ್ಲೇ ಈ ಅನುಕರಣೆಯ ಅಭ್ಯಾಸ ಆರಂಭವಾಗುತ್ತದೆ ಎಂದು ಕೆಲವು ತಜ್ಞರ ಅಭಿಪ್ರಾಯ. ಅದು ನಾಲ್ಕನೆಯ ತಿಂಗಳಿಂದಲೇ ಮೊದಲಾಗುವುದೆಂದು ಡಾರ್ವಿನ್ನನ ಮತ. ದೊಡ್ಡವರೂ–ಅವರ ವಯಸ್ಸು ಎಷ್ಟೇ ಇರಲಿ–ಅನುಕರಣ ಪ್ರವೃತ್ತಿಯಿಂದ, ಚಾಪಲ್ಯದಿಂದ ವಿಮುಕ್ತರಲ್ಲ. ಏನೇ ಆಗಲಿ, ಗತಕಾಲದ ಅನೇಕಾನೇಕ ವಿಷಯಗಳು ಪರಂಪರಾಗತವಾಗಿ ಉಳಿದುಬಂದಿರುವುದು ಮಾನವಸಹಜವಾದ ಅನುಕರಣಪ್ರವೃತ್ತಿಯ ಪ್ರಭಾವದಿಂದಲೇ.

ಮನುಷ್ಯರಾಗಲಿ ಪ್ರಾಣಿಗಳಾಗಲಿ ಕಂಡುದನ್ನೆಲ್ಲ ಅನುಕರಣೆ ಮಾಡುತ್ತಾರೆ ಎಂದು ಭಾವಿಸಬಾರದು. ಅನುಕರಣೆಗೂ ಆಯಾ ಪ್ರಾಣಿವರ್ಗದ ಮೂಲಪ್ರವೃತ್ತಿಗೂ ಸಂಬಂಧವಿದೆ. ಬೇರೆ ಬೇರೆ ಜಾತಿಯ ಪ್ರಾಣಿಗಳನೇಕವು ಒಟ್ಟಿಗೆ ಒಂದೇ ಕಡೆ ಇದ್ದರೆ ಒಂದು ಜಾತಿಯ ಪ್ರಾಣಿ ತನ್ನ ಜಾತಿಯ ಪ್ರಾಣಿಗಳನ್ನು ಮಾತ್ರ ಅನುಕರಣೆ ಮಾಡುತ್ತದೆಯೇ ಹೊರತು ಸುತ್ತಮುತ್ತ ಇರುವ ಎಲ್ಲ ಪ್ರಾಣಿಗಳನ್ನೂ ಅಲ್ಲ. ಮನುಷ್ಯರು ಮನುಷ್ಯರನ್ನು ಅನುಕರಣೆ ಮಾಡುತ್ತಾರೆ, ಪ್ರಾಣಿಗಳನ್ನಲ್ಲ. ಕಲೆಗಾಗಿ ಅಲ್ಲದೆ ನಿಜಜೀವನದಲ್ಲಿ ಪ್ರಾಣಿಗಳನ್ನು ಅನುಕರಣೆಗೈಯುವ ಮನುಷ್ಯ ಪಶುಸಮಾನನಾಗುತ್ತಾನೆ.

ಮಾನವ ಸಮಾಜದ ಕಾರ್ಯಕ್ಷೇತ್ರದಲ್ಲಿ ಅನುಕರಣೆ ಹಿರಿಯಪಾತ್ರ ವಹಿಸುತ್ತದೆ. ಅನುಕರಣೆಯ ಸಹಾಯದಿಂದ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಬಹುದೆಂದು ಅನೇಕರು ಭಾವಿಸಿರುತ್ತಾರೆ. ಶತ್ರುಗಳ ಪ್ರತಿಮೆಗಳನ್ನು ತಯಾರಿಸಿ ಅವನ್ನು ಚಿತ್ರಹಿಂಸೆಗೆ ಗುರಿಪಡಿಸುವುದರಿಂದ ಆ ಶತ್ರುಗಳಿಗೆ ಹಾನಿಯುಂಟುಮಾಡಲೆಳಸುವುದು ಅವರ ಪದ್ಧತಿಗಳಲ್ಲೊಂದು. ಕೆಲವು ಕಡೆ ಮಳೆಬರಿಸುವ ಸಲುವಾಗಿ ರೈತರು ನೀರನ್ನು ನೆಲಕ್ಕೆ ಸುರಿಯುತ್ತಾರಂತೆ. ಹೀಗೆಯೇ ಸಮುದ್ರದ ಮೇಲೆ ಗಾಳಿಯನ್ನು ಎಬ್ಬಿಸಲು ನಾವಿಕರು ಸಿಳ್ಳುಹಾಕುತ್ತಾರಂತೆ. ಪ್ರಾಣಿಗಳ ಮತ್ತು ಮಾನವನ ಎಲ್ಲ ಮುಖಗಳ ವಿಕಸನಕ್ಕೂ ಅನುಕರಣೆಯೇ ಮೂಲವೆಂದು ಹೇಳುವ ವಿದ್ವಾಂಸರೂ ಕೆಲವರಿದ್ದಾರೆ. ಹೊಸ ವಸ್ತುಗಳನ್ನು ಕಂಡುಹಿಡಿಯುವುದೂ ಅನುಕರಣೆಯ ಫಲವಾಗಿಯೇ ಎನ್ನಬಹುದು. ಇತರರು ಮಾಡುವುದನ್ನು ವಿರೋಧಿಸಿ ಅದಕ್ಕೆ ವ್ಯತಿರಿಕ್ತವಾಗಿ ಕೆಲಸಮಾಡುವುದೂ ಒಂದು ಬಗೆಯ ಅನುಕರಣೆಯೇ ಎಂಬ ಅಭಿಪ್ರಾಯವೂ ಇದೆ.

ಅನುಕರಣೆಯೆಂಬ ಮಾತನ್ನು ವಿಶೇಷ ಸಂದರ್ಭಗಳಲ್ಲಿ ತಾಂತ್ರಿಕಪದವಾಗಿ ಬಳಸುವುದೂ ವಾಡಿಕೆ. ಸೌಂದರ್ಯಶಾಸ್ತ್ರದಲ್ಲಿ ಅದಕ್ಕೆ ಪ್ರಾಶಸ್ತ್ಯ ಬಂದಿರುವುದು ಗ್ರೀಕ್ ತತ್ತ್ವಜ್ಞಾನಿಗಳಾದ ಪ್ಲೇಟೊ ಮತ್ತು ಅರಿಸ್ಟಾಟಲ್ ಅದನ್ನು ಬಳಸಿರುವುದರಿಂದ. ಸ್ಥೂಲ ಪ್ರಪಂಚದ ಪದಾರ್ಥಗಳೆಲ್ಲ ಆದರ್ಶಲೋಕದ ಅನ್ಯೂನವಸ್ತುಗತ ಮತ್ತು ಕಲ್ಪನೆಗಳ ಅಪೂರ್ಣಾನುಕರಣೆಯ ಫಲಗಳೆಂದು ಪ್ಲೇಟೊ ವಾದಿಸಿದ. ಅವನ ಶಿಷ್ಯ ಅರಿಸ್ಟಾಟಲ್ ಕಾವ್ಯಶಾಸ್ತ್ರವನ್ನು ಕುರಿತು ತಾನು ಬರೆದಿರುವ ಗ್ರಂಥದಲ್ಲಿ ಕಲೆಯ ಕೆಲಸ ಅನುಕರಣೆ ಎಂದಿದ್ದಾನೆ. ಪ್ರಕೃತಿಯಲ್ಲಿ ಅಥವಾ ಸೃಷ್ಟಿಯಲ್ಲಿ ಕಂಡುಬರುವ ವಸ್ತುಗಳ ಅನುಕರಣೆಗೈದು ಅದೇ ತೆರನಾದ ಪ್ರತಿಕೃತಿಗಳನ್ನು ನಿರ್ಮಿಸುವುದೇ ಕಲೆಯ ಉದ್ದೇಶವೆಂದು ಅವನ ಮತ. ಈ ಸಿದ್ಧಾಂತವನ್ನು ಎಲ್ಲರೂ ಸಂಪೂರ್ಣವಾಗಿ ಒಪ್ಪಿಲ್ಲದಿದ್ದರೂ ಅದು ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಸುಪ್ರಸಿದ್ಧವಾಗಿದೆ. ಶುದ್ಧಾನುಕರಣೆಯಿಂದ ಜೀವನದ ಪ್ರತಿಕೃತಿಯನ್ನು ಸಿದ್ಧಮಾಡುವುದೇ ಕಲೆಯ ಕೆಲಸವಲ್ಲ. ಜೀವನದರ್ಶನ, ಪರಿಶೀಲನೆಗಳೇ ಕಲೆಯ ವಸ್ತುವಾದರೂ ಅದರ ಆಯ್ಕೆ ರಚನೆ ಹಾಗೂ ಧ್ಯೇಯ ಧೋರಣೆಗಳಿಂದಾಗಿ ಅದು ಶುದ್ಧಾನುಕರಣೆಯಾಗದೆ, ಶುದ್ಧಪ್ರತಿಕೃತಿಯಾಗದೆ ಕಲಾವಿದನ ಸ್ವಂತ ಕೃತಿಯಾಗುತ್ತದೆ. ಆದರೆ ಸಾಮಾನ್ಯವಾಗಿ ಅನುಕರಣೆ ಕಲಾಸೃಷ್ಟಿಯ ಪ್ರಾರಂಭದ ಮೆಟ್ಟಿಲು. ಅದರಿಂದ ಕಲೆಗಾರನ ಅನುಭವ ಪಕ್ವವಾಗುತ್ತದೆ. ಅನಂತರ ಪ್ರತಿಭಾಶಕ್ತಿ ಕುದುರಿದಂತೆಲ್ಲ ಅವನ ಸ್ವಂತ ಸೃಷ್ಟಿ ಪ್ರಾರಂಭವಾಗುತ್ತದೆ. ವೈಜ್ಞಾನಿಕರೂ ಈ ಮಾತನ್ನು ತಮ್ಮವೇ ಆದ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾರೆ. ಒಂದು ವಸ್ತುವಿನ ಬಾಹ್ಯ ಲಕ್ಷಣಗಳನ್ನು ಇನ್ನೊಂದು ವಸ್ತು ಹೀರಿ ತನ್ನದನ್ನಾಗಿ ಮಾಡಿಕೊಳ್ಳುವುದನ್ನು ಜೀವವಿಜ್ಞಾನಿಗಳ ಅನುಕರಣೆ ಎಂದು ಕರೆವುದುಂಟು. ಸಂಗೀತದಲ್ಲಿ ಒಂದು ರಾಗದಲ್ಲಿ ಹಾಡಲೆಂದು ರಚಿತವಾಗಿರುವ ಹಾಡು ಅಥವಾ ಹಾಡಿನ ಭಾಗವನ್ನು ಇನ್ನೊಂದು ರಾಗಕ್ಕೆ ಅಳವಡಿಸಿಕೊಂಡು ಗಾನಗೈಯುವುದು ಅನುಕರಣೆ ಎನ್ನಿಸಿಕೊಳ್ಳುತ್ತದೆ.

ಅನುಕರಣೆ ಸಾಮಾಜಿಕ ಜೀವನದಲ್ಲಿ ಪ್ರಭಾವಕಾರಿಯಾಗಬಲ್ಲದು. ಅನುಕರಣೆಗೈಯುವವನು ತಾನು ಯಾರಂತೆ ನಡೆದುಕೊಳ್ಳುತ್ತಾನೋ ಅವರ ಗುಣದೋಷಗಳನ್ನೂ ಮನೋಭಾವಗಳನ್ನೂ ಊಹಿಸಿಕೊಳ್ಳಬೇಕು. ಇದರಿಂದ ಜನರಲ್ಲಿ ಪರಸ್ಪರ ಒಪ್ಪಿಗೆ ಅನುಕಂಪಗಳು ಮೂಡಲು–ಅವರ ಸಾಮಾಜಿಕ ಪ್ರಜ್ಞೆ ಬೆಳೆಯಲು–ಸಾಧ್ಯವಾಗುತ್ತದೆ. ಆದಕಾರಣ ಮಕ್ಕಳ ಅನುಕರಣಾಸಕ್ತಿಯನ್ನು ಸರಿಯಾಗಿ ಬಳಸಿಕೊಳ್ಳುವ ಅಗತ್ಯವನ್ನು ಶಿಕ್ಷಣಶಾಸ್ತ್ರಜ್ಞರೂ ಮನಶ್ಶಾಸ್ತ್ರಜ್ಞರೂ ಒತ್ತಿ ಹೇಳಿರುವರು. (ಎಂ.ಆರ್.)

**ಅನುಕರಣೆ[2]** : ಶತ್ರು ಆಕ್ರಮಣದಿಂದ ನಾಶವಾಗದಂತೆ ಕಾಪಾಡಲು ಪ್ರಾಣಿಗಳಿಗೆ ಪ್ರಕೃತಿ ಅಳವಡಿಸಿರುವ ರಕ್ಷಣಾತಂತ್ರ (ಮಿಮಿಕ್ರಿ). ಪ್ರಾಸಂಗಿಕವಾಗಿ ಆಹಾರ ಸಂಪಾದನೆಗಾಗಿ ಬೇಟೆಯಾಡುವ ಪ್ರಾಣಿಗಳಿಗೂ ಇದರಿಂದ ಅನುಕೂಲವುಂಟು. ಆಹಾರ ಸಂಪಾದನೆ, ಆತ್ಮಸಂರಕ್ಷಣೆ ಮತ್ತು ಸಂತಾನೋತ್ಪತ್ತಿ ಎಂಬ ಮೂರು ಮುಖ್ಯ ಉದ್ದೇಶಗಳ ಪೂರೈಕೆಗಾಗಿ ಪ್ರಾಣಿಜೀವನದಲ್ಲಿ ನಿರಂತರ ಹೋರಾಟ ನಡೆದೇ ಇದೆ. ಜೀವನದ ಈ ಹೋರಾಟದಲ್ಲಿ ಪ್ರಾಣಿಗಳು ಅಳಿಯದೆ ಉಳಿಯಬೇಕಾದರೆ ಅವು ತಮ್ಮ ದೇಹರಚನೆ, ಜೀವನಕ್ರಮ ಮತ್ತು ರೀತಿನೀತಿಗಳನ್ನು ಬದಲಾಯಿಸುವ ಪರಿಸ್ಥಿತಿಗೆ ಸರಿಯಾಗಿ ಹೊಂದಿಸಿಕೊಳ್ಳಬೇಕು. ಯಾವ ಪ್ರಾಣಿಗೆ ಈ ಬಗೆಯ ಶಕ್ತಿ ಇರುವುದಿಲ್ಲವೋ ಅದು ಹೋರಾಟದಲ್ಲಿ ಅಳಿಯುವುದಲ್ಲದೆ ಅದರ ವಂಶವೇ ನಾಶವಾಗುವ ಸಂಭವವೂ ಇರುತ್ತದೆ. ಇದು ಡಾರ್ವಿನ್ನನ ವಿಕಾಸವಾದದ ತತ್ತ್ವಗಳ ಸಾರಾಂಶಗಳಲ್ಲಿ ಒಂದು. ಅಳಿವು–ಉಳಿವಿನ ಈ ಸಮರದಲ್ಲಿ ಯಶಸ್ವಿಯಾಗಿ ಹೊಂದಾಣಿಕೆಯಿಂದ ಉಳಿದು ಬಾಳಲು ಪ್ರಾಣಿಗಳಲ್ಲಿ ಮತ್ತು ಅವುಗಳ ಜೀವನದಲ್ಲಿ ಕ್ರಮಬದ್ಧವಾದ ಬದಲಾವಣೆಗಳು ನಿರಂತರವೂ ನಡೆಯುತ್ತಲೇ ಇರುತ್ತವೆ.

ಪ್ರಾಣಿಗಳು ತಮ್ಮ ಆಕೃತಿ (ಸ್ವರೂಪ), ಬಣ್ಣ ಅಥವಾ ವರ್ತನೆಯಿಂದ ಇತರ ಪ್ರಾಣಿಗಳನ್ನಾಗಲಿ ಸಸ್ಯಭಾಗಗಳನ್ನಾಗಲಿ ನಿರ್ಜೀವವಸ್ತುಗಳನ್ನಾಗಲಿ ಅನುಕರಿಸುವ ಕಾರ್ಯಕ್ಕೆ ಅನುಕರಣೆ ಎಂದು ಹೆಸರು. ಈ ಅನುಕರಣೆಯನ್ನು ಪ್ರದರ್ಶಿಸುವ ಪ್ರಾಣಿಯೇ ಅನುಕರಣಜೀವಿ (ಮಿಮಿಕ್, ಮಿಮೆಟಿಕ್ ಫಾರ್ಮ್) ಇದು ಅನುಕರಿಸುವ ವಸ್ತು ಅಥವಾ ಪ್ರಾಣಿ ಅನುಕರಣಮಾದರಿ.

ಕೆಲವು ದುರ್ಬಲಪ್ರಾಣಿಗಳಿಗೆ ತಮ್ಮನ್ನು ಆಹಾರವಾಗಿ ಹಿಡಿದು ತಿನ್ನುವ ಪ್ರಬಲ ಪ್ರಾಣಿಗಳ ಭಯವಿರುವುದರಿಂದ ಅವು ತಮ್ಮ ಶತ್ರುಗಳ ದೃಷ್ಟಿಯಿಂದ ಮರೆಮಾಚಿಕೊಳ್ಳಲು ನಿರ್ಜೀವವಸ್ತುಗಳನ್ನು ಅಥವಾ ಸಸ್ಯಗಳನ್ನು ಅನುಕರಿಸಬಹುದು. ಕೆಲವು ಮಾಂಸಾಹಾರಿ ಪ್ರಾಣಿಗಳು ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ಮೋಸಗೊಳಿಸಿ ಬೇಟೆಯಾಡಲು ಅದೇ ರೀತಿಯಲ್ಲಿ ಮರೆಮಾಚಿಕೊಳ್ಳುವುದೂ ಉಂಟು. ವಿಷೋತ್ಪಾದನೆಯಿಂದ, ದುರ್ನಾತವನ್ನು

ಸೂಸುವುದರಿಂದ ಅಥವಾ ಎಚ್ಚರಿಕೆಯ ಕೃತಕಸಂಕೇತಗಳಿಂದ ಶತ್ರುಗಳನ್ನು ದೂರವಿಡಬಲ್ಲವು. ಒಳ್ಳೆಯ ಭಕ್ಷ್ಯವೆನಿಸಿದ ಕೆಲವು ಪ್ರಾಣಿಗಳು ರುಚಿಯಲ್ಲದ ಪ್ರಾಣಿಗಳನ್ನು ಅನುಕರಿಸುವುದರಿಂದ ಶತ್ರುಗಳನ್ನು ಮೋಸಗೊಳಿಸಬಲ್ಲವು. ಹೀಗೆ ತಮ್ಮನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಾಣಿಗಳು ವಿಧವಿಧವಾದ ಅನುಕರಣತಂತ್ರಗಳನ್ನು ಅನುಸರಿಸುತ್ತವೆ.

ಉದ್ದೇಶದ ಆಧಾರದ ಮೇಲೆ ಮುಖ್ಯವಾಗಿ ಎರಡುಬಗೆಯ ಅನುಕರಣೆಗಳನ್ನು ವಿವರಿಸಬಹುದು. ಒಂದು ರಕ್ಷಣೆಯ ಅನುಕರಣೆ, ಮತ್ತೊಂದು ಆಕ್ರಮಣಕಾರೀ ಅನುಕರಣೆ. ರಕ್ಷಣೆಯ ಅನುಕರಣೆಯನ್ನು ಮರೆಮಾಚಿಕೊಳ್ಳುವ ಅನುಕರಣೆ ಮತ್ತು ಎಚ್ಚರಿಸುವ ಅನುಕರಣೆ ಎಂದು ಎರಡು ವಿದಗಳಾಗಿ ವಿಂಗಡಿಸಲಾಗಿದೆ. ಹೀಗೆಯೇ ಆಕಮಣಕಾರೀ

ಚಿತ್ರ 1. ಒಣಗಿರುವ ರೆಂಬೆಯನ್ನಾಶ್ರಯಿಸಿರುವ ಕಡ್ಡಿಹುಳು. ಚಿತ್ರದಲ್ಲಿ ಅಂಥವು ನಾಲ್ಕು ಇವೆ.

ಅನುಕರಣೆಯನ್ನು ಮರೆಮಾಚಿಕೊಳ್ಳುವ ಮತ್ತು ಮರುಳುಮಾಡುವ ವಿಧಗಳನ್ನಾಗಿ ವಿಂಗಡಿಸಲಾಗಿದೆ. ಪುನಃ ಅನುಕರಣ ಜೀವಿಗಳು ತೋರಿಸುವ ಚಟುವಟಿಕೆಯನ್ನು ಆಧರಿಸಿ ಅನುಕರಣೆಯನ್ನು ಎರಡು ವಿಧವಾಗಿ ವಿವರಿಸಲಾಗಿದೆ. ಚಟುವಟಿಕೆಯೇ ಇಲ್ಲದೆ ಕೇವಲ ಆಕಾರ ಮತ್ತು ಬಣ್ಣಗಳಿಂದ ಅನುಕರಿಸುವುದು ತಟಸ್ಥ ರೀತಿಯ ಅನುಕರಣೆ; ಬುದ್ಧಿಪೂರ್ವಕವಾದದ್ದು ಸಕ್ರಿಯಾನುಕರಣೆ.

ಮರೆಮಾಚಿಕೊಳ್ಳುವ ಉದ್ದೇಶದಿಂದ ರಕ್ಷಣೆಯ ಅನುಕರಣೆಯನ್ನು ಬೆಳೆಸಿಕೊಳ್ಳುವ ಪ್ರಾಣಿಗಳ ಸಂಖ್ಯೆ ಹೆಚ್ಚು. ಈ ರೀತಿಯ ಅನುಕರಣೆಯಲ್ಲಿ ತನ್ನ ವಾತಾವರಣದಲ್ಲಿ ಮರೆಮಾಚಿಕೊಳ್ಳುವ ಬಣ್ಣವನ್ನು ಬೆಳೆಸಿಕೊಳ್ಳುವುದರ ಜೊತೆಗೆ ಅನುಕರಣಮಾದರಿಯ ಸ್ವರೂಪವನ್ನು ಅನುಸರಿಸುವುದು ಬಹಳ ಮುಖ್ಯವಾದದ್ದು. ಈ ಎರಡು ಮುಖಗಳಲ್ಲೂ ಅನುಕರಣಸಾಮರ್ಥ್ಯವನ್ನು ಸಮರಸವಾಗಿ ಪರಿಪಕ್ವವಾಗಿ ಬೆಳೆಸಿಕೊಂಡ ಪ್ರಾಣಿಗಳು ಅತ್ಯಂತ ಯಶಸ್ವಿಯಾಗಿ ಆತ್ಮರಕ್ಷಣೆ ಮಾಡಿಕೊಳ್ಳಬಲ್ಲವು. ಮರೆಮಾಚಿಕೊಳ್ಳುವ ಉದ್ದೇಶದಿಂದ ರಕ್ಷಣಾನುಕರಣೆಯನ್ನು ಬೆಳೆಸಿಕೊಂಡಿರುವ ಪ್ರಾಣಿಗಳಲ್ಲಿ ಕ್ರಿಪ್ಟೋಲಿತೋಡಸ್ ಎಂಬ ಒಂದು ಜಾತಿಯ ಏಡಿ ಒಳ್ಳೆಯ ಉದಾಹರಣೆ. ನುಣುಪಾಗಿ ಗುಂಡಾಗಿರುವ ಇದರ ಬಿಳಿಯ ಕವಚದ ದೇಹ ಸಮುದ್ರದಡದಲ್ಲಿ ಬಿದ್ದಿರುವ ಬೆಣಚುಗಲ್ಲುಗಳನ್ನು ಹೋಲುತ್ತದೆ. ಏಡಿಗಳನ್ನು ಕಲ್ಲು ಎಂದು ಭ್ರಮಿಸಿ ಇದರ ಶತ್ರುಗಳು ಬಿಟ್ಟುಬಿಡುವುವು. ಆದರೆ ಅನೇಕ ವೇಳೆ ದೊಡ್ಡ ಪ್ರಾಣಿಗಳ ತುಳಿತಕ್ಕೆ ಸಿಕ್ಕಿ ಅವು ಪುಡಿಯಾಗುವ ಸಂಭವವುಂಟು. ಈ ಏಡಿ ಬೆಳೆಸಿಕೊಂಡಿರುವ ಅನುಕರಣೆ ಅನಭಿಜ್ಞವಾದ ಅನುಕರಣೆ. ಚಲನೆಯಿಂದ ಅನುಕರಣೆಯ ಧ್ಯೇಯ ಭಂಗವಾಗುವುದರಿಂದ ಜಡತೆಯಿಂದ ಅದು ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುತ್ತದೆ. ಮತ್ತೊಂದು ಜಾತಿಯ ಏಡಿ ಸತ್ತ ಹವಳಗಳನ್ನು ಹೋಲುತ್ತದೆ. ಅದು ಶತ್ರುಗಳಿಂದ ಮರೆಮಾಚಿಕೊಳ್ಳುವ ಅನುಕರಣೆಯಿಂದ ಎರಡು ಬಗೆಯ ಲಾಭವನ್ನು ಪಡೆಯುತ್ತದೆ. ಶತ್ರುವಿನಿಂದ ಪಾರಾಗುವುದರ ಜೊತೆಗೆ ಮೋಸಗೊಳಿಸಿ ಇತರ ಸಣ್ಣಪುಟ್ಟ ಪ್ರಾಣಿಗಳನ್ನು ಹಿಡಿದು ಆಹಾರವಾಗಿ ಬಳಸುತ್ತದೆ.

ಜಿಯೋಮೆಟ್ರಿಡೆ ಕುಟುಂಬದ ಪತಂಗಹುಳುಗಳಿಗೆ ಮರೆಮಾಚಿಕೊಳ್ಳುವ ರಕ್ಷಣಾನುಕರಣೆಯಲ್ಲಿ ತುಂಬ ನೈಪುಣ್ಯವುಂಟು. ದೇಹದ ಬಣ್ಣದಲ್ಲೂ ಚರ್ಮದ ರಚನೆಯಲ್ಲೂ ಅವು ಸಸ್ಯಭಾಗಗಳನ್ನು ಅನುಕರಿಸಬಲ್ಲವು. ಅವುಗಳ ಚರ್ಮ ಗಿಡಗಳ ನುಣುಪಾದ ತೊಗಟೆಯನ್ನು ಹೋಲುತ್ತದೆ. ಈ ಕಾರಣದಿಂದಲೇ ಅವು ಅನೇಕ ವೇಳೆ ರೆಂಬೆಗಳನ್ನೂ ಕವಲು ರೆಂಬೆಗಳನ್ನೂ ಅನುಕರಿಸಬಲ್ಲವು. ಸೆಲಿನಿಯಾ ಟೆಟ್ರಾನುಲೇರಿಯ ಎಂಬ ಪತಂಗದ ಹುಳು ಮರೆಮಾಚಿಕೊಳ್ಳಲು ಕೆಲವು ಸಾಹಸ ಕೃತ್ಯಗಳನ್ನು ಮಾಡುತ್ತದೆ. ಬರ್ಚ್ ಜಾತಿಯ ಗಿಡದ ರೆಂಬೆಯನ್ನು ತನ್ನ ಹಿಂದಿನ ಎರಡು ಹುಸಿಗಾಲುಗಳಿಂದ (ಪ್ರೊಲೆಗ್ಸ್) ಹಿಡಿದುಕೊಂಡು ರೆಂಬೆಯ ಒಂದು ಪಕ್ಕಕ್ಕೆ ಬಾಗಿ, ದೇಹವನ್ನು ಗಡಸು ಮಾಡಿಕೊಂಡು ತಾನೂ ಒಂದು ರೆಂಬೆಯಂತೆಯೇ ನಟಿಸುತ್ತದೆ. ಇಂಥ ಜಡಸ್ಥಿತಿಯಲ್ಲಿ ದೇಹದ ಬಣ್ಣ ಮತ್ತು ರಚನೆಗಳಲ್ಲಿ ಗಿಡದ ಮತ್ತೊಂದು ರೆಂಬೆಯೋ ಎಂಬಂತೆ ಅನುಕರಿಸಬಲ್ಲ ಈ ಹುಳು ಅದರ ಶತ್ರುಗಳ ದೃಷ್ಟಿಗೆ ಸುಲಭವಾಗಿ ಬೀಳಲಾರದು. ದೇಹದ ಬಣ್ಣ ಮತ್ತು ಆಕಾರಗಳಲ್ಲಲ್ಲದೆ ಕೆಲವು ವರ್ತನೆಗಳಿಂದ ಸಸ್ಯದ ಇತರ ಭಾಗಗಳನ್ನೂ ಅನುಕರಿಸಬಲ್ಲ ಕೀಟಕಗಳು ಈ ಕುಟುಂಬದಲ್ಲಿವೆ. ರೆಂಬೆಯ ಕುಡಿಯ ಎಲೆ ಮೊಗ್ಗುಗಳನ್ನು ಅನುಕರಿಸುವ ಕೆಲವು ಕೀಟಕಗಳಿವೆ. ಸಸ್ಯಕಾಂಡದ ಅಥವಾ ರೆಂಬೆಯ ಕೊನೆಯ ತುದಿಮೊಗ್ಗುಗಳನ್ನು ಕೆಲವು ಅನುಕರಿಸಬಲ್ಲವು. ಇದು ಈ ವಿಷಯವನ್ನು ತಿಳಿದ ಮನುಷ್ಯನನ್ನೂ ಮೋಸಗೊಳಿಸಬಲ್ಲ ಪರಿಣಾಮಕಾರಿಯಾದ ರಕ್ಷಣಾತಂತ್ರ. ಪತಂಗಗಳು ದೇಹದ ಬಣ್ಣ ಮತ್ತು ಆಕಾರದಲ್ಲಿರುವ ಹೋಲಿಕೆಗಳಿಂದ ಸಾಧಿಸುವ ಅನುಕರಣೆ ಜಡರೀತಿಯದಾದರೂ ರೆಂಬೆಗಳು ಮತ್ತು ಅದರ ಭಾಗಗಳನ್ನು ಅನುಕರಿಸಲು ಕೆಲವು ವರ್ತನೆಗಳನ್ನು ನಡೆಸುವುದು ಅನಿವಾರ್ಯವಾಗುತ್ತದೆ. ಆದ್ದರಿಂದ ಅದನ್ನು ಬುದ್ಧಿಪೂರ್ವಕವಾದ ಸಕ್ರಿಯಾನುಕರಣೆ ಎಂದೂ ಕರೆಯಬಹುದು.

ಜಿಯೋಮೆಟ್ರಿಡೆ ಕುಟುಂಬದ ಶೈಸೂರಾ ಮ್ಯೂಕ್ರಾನಿಸ್ ಜಾತಿಯ ಪತಂಗದಲ್ಲಿ ಹುಳುವಲ್ಲದೆ ಬೆಳೆದ ಪತಂಗವೂ ಅನುಕರಣತಂತ್ರಗಳನ್ನು ಅನುಸರಿಸುತ್ತದೆ. ಹುಳು ಚರ್ಮದ ರಚನೆ ಮತ್ತು ಬಣ್ಣದಲ್ಲಿ ಒರಟಾದ ತೊಗಟೆಯನ್ನು ಹೋಲುತ್ತದೆ. ಇದು ಜಡರೀತಿಯ ಅನುಕರಣೆ. ಬೆಳೆದ ಪತಂಗ ತನ್ನ ರೆಕ್ಕೆಗಳನ್ನು ಹೊಟ್ಟೆಯ ತಳಭಾಗಕ್ಕೆ ಜೋಡಿಸಿ ತಲೆಯನ್ನು ಕೆಳಭಾಗಕ್ಕೆ ಬಾಗಿಸಿ ದೇಹವನ್ನು ಗಡಸುಮಾಡಿಕೊಳ್ಳುವುದರಿಂದ ಗಿಡದ ತೊಗಟೆಯನ್ನು ಅನುಕರಿಸಬಲ್ಲದು. ಇದು ಬುದ್ಧಿಪೂರ್ವಕವಾದ ಅನುಕರಣೆ.

ಕಪಟರೂಪಧಾರಣೆಯಲ್ಲಿ ಆರ್ಥಾಪ್ಟೆರ ಉಪವರ್ಗದ ಕೀಟಗಳು ಬಹಳ ಪ್ರಸಿದ್ಧಿ ಪಡೆದಿವೆ. ಅವು ಕಡ್ಡಿಗಳನ್ನೂ ರೆಂಬೆ ಮತ್ತು ತೊಗಟೆಗಳನ್ನೂ ಅನುಕರಿಸಬಲ್ಲವು. ಈ ಉಪವರ್ಗದ ಫಾಸ್‌ಮಿಡೆ ಕುಟುಂಬಕ್ಕೆ ಸೇರಿದ ನಡೆಯುವ ಕಡ್ಡಿಕೀಟಗಳು ಒಣಗಿದ ಕಡ್ಡಿಗಳಂಥ ನೀಳವಾದ ದೇಹ ಮತ್ತು ಕೃಶವಾದ ಕಾಲುಗಳನ್ನು ಹೊಂದಿದ್ದು ಮೆಳೆಗಳನ್ನು ಅನುಕರಿಸಬಲ್ಲವು. ಕೆಲವು, ದೇಹವನ್ನು ಗಡಸುಮಾಡಿಕೊಂಡು ಕಾಲುಗಳನ್ನು ಅವಶ್ಯವಾದಂತೆ ಚಾಚಿ, ಹೆಚ್ಚು ಯಶಸ್ವಿಯಾಗಿ ಅನುಕರಣೆಯನ್ನು ಪ್ರದರ್ಶಿಸಬಲ್ಲವು. ಕೆಲವುವೇಳೆ ಹಸಿರು, ಕಂದು ಮತ್ತು ಬೂದು ಬಣ್ಣದ ಕಾಲುಗಳಿಂದ ಮೆಲ್ಲಗೆ ಸಾಗಿ ಮನುಷ್ಯರ ದೃಷ್ಟಿಗೆ ಬಿದ್ದರೂ ಚಲಿಸದೇ ನಿಂತಾಗ ಅದೃಶ್ಯವಾಗಬಲ್ಲವು. ಒಂದು ಜಾತಿಯ ಕಡ್ಡಿಯ ಕೀಟ ನಿಂತಕೂಡಲೇ ತನ್ನ ಕಾಲುಗಳನ್ನು ಹರಡಿಕೊಳ್ಳುತ್ತದೆ. ಆಗ ಅದು ಬೂಷ್ಟು ಹಿಡಿದ ಸತ್ತ ರೆಂಬೆಯ ಕಡ್ಡಿಯಂತೆ ಭಾಸವಾಗುತ್ತದೆ. ಪೊದೆಗಳ ಮೇಲೆ ಕುಳಿತಾಗ ಮೆಲ್ಲಗೆ ತೂಕಡಿಸಿಕೊಂಡು ಹೆಜ್ಜೆ ಹಾಕುವ ಅವುಗಳ ಚಲನೆಯೂ ಕಣ್ಣಿಗೆ ಬೀಳುವುದು ಅಪೂರ್ವ. ಉಷ್ಣವಲಯದಲ್ಲೂ ಮತ್ತು ಸಮಶೀತೋಷ್ಣವಲಯಗಳಲ್ಲೂ ಫಾಸ್‌ಮಿಡೆ ಕುಟುಂಬಕ್ಕೆ ಸೇರಿದ 600 ಪ್ರಭೇದಗಳಿವೆ. ಅವುಗಳಲ್ಲಿ ಬಹುಸಂಖ್ಯಾತ ಕೀಟಗಳು ರಕ್ಷಣೆಯ ಚತುರೋಪಾಯಗಳನ್ನು ಹೂಡಬಲ್ಲವು. ನಡೆಯುವ ಎಲೆ ಎಂದು ಹೆಸರುಗಳಿಸಿರುವ ಫಿಲಿಯಂ ಎಂಬುದರ ದೇಹ ಮತ್ತು ಕಾಲುಗಳು ಚಪ್ಪಟೆಯಾಗಿ ಅಗಲವಾಗಿರುತ್ತವೆ. ರೆಕ್ಕೆಯೂ ಅಗಲವಾಗಿ ಹರಡಿಕೊಂಡಿರುತ್ತದೆ. ದೇಹ, ಕಾಲು ಮತ್ತು ರೆಕ್ಕೆಗಳ ಬಣ್ಣ ಹಸಿರಾಗಿದ್ದು ಅಲ್ಲಲ್ಲಿ ಮಚ್ಚೆಗಳನ್ನು ಹೋಲುವ ಗುರುತುಗಳಿರುತ್ತವೆ. ಈ ಎಲ್ಲ ಗುಣಗಳಿಂದ ಅದು ತನ್ನ ಹೆಸರಿಗೆ ಅನ್ವರ್ಥವಾಗಿದೆ. ಇದೇ ಕುಟುಂಬದಲ್ಲಿ ಕೆಲವು ಹಸಿರು ಬಣ್ಣವಾಗಿದ್ದು ಎಲೆಗಳ ಮಧ್ಯೆ ಮರೆಮಾಚಿಕೊಳ್ಳಬಲ್ಲವು; ಮತ್ತೆ ಕೆಲವು ಅಗಲವಾದ ಉಬ್ಬುತಗ್ಗುಗಳಿಂದ ಕೂಡಿದ ದೇಹ, ಅದರ ಮೇಲೆ ನರಗಳ ಬಲೆಗಟ್ಟು ಛಿದ್ರವಾಗಿ ಒಡೆದ ಗುರುತುಗಳು– ಈ ಲಕ್ಷಣಗಳಿಂದ ಅವು ಹೂಗಳನ್ನು ಹೋಲುತ್ತವೆ. ಒಂದು ಜಾತಿಯ ಕೀಟ ಸತ್ತ ಒಣ ಎಲೆಯನ್ನು ಅನುಕರಿಸುತ್ತದೆ; ಇನ್ನೊಂದು ಜಾತಿ ಆರ್ಕಿಡ್ ಹೂಗಳನ್ನು ಅನುಕರಿಸುತ್ತದೆ.

ಅರಳಿದ ಹೂವಿನ ಮೇಲೆ ಕುಳಿತಾಗ, ಅದರೊಡನೆ ಸಮರಸವಾಗುವುದರಿಂದ ಸುರಕ್ಷಿತವಾಗಿರಬಲ್ಲದು. ಅದರ ಅಗಲವಾಗಿರುವ ತೊಡೆಯಭಾಗ ಹೂವಿನ ದಳವನ್ನು ಹೋಲುತ್ತದೆ. ದೇಹದ ಹಿಂಭಾಗದ ಮೇಲೆ ಲಘುವಾದ ಗೆರೆಗಳಿದ್ದು ಹೂವಿನ ಮಧ್ಯಭಾಗದಂತೆ ಕಾಣುತ್ತದೆ. ಮರೆಮಾಚಿಕೊಂಡು ಹೂವಿನ ಮೇಲೆ ಕುಳಿತಾಗ ತನ್ನ ಶತ್ರುಗಳಿಂದ ಪಾರಾಗುವುದಲ್ಲದೆ, ಇತರ ಸಣ್ಣ ಕೀಟಗಳನ್ನು ಹಿಡಿದು ತಿನ್ನಲೂ ಅನುಕೂಲವಾಗುತ್ತದೆ.

ಲೆಪಿಡಾಪಿಟರ ಉಪವರ್ಗಕ್ಕೆ ಸೇರಿದ ಅನೇಕ ಜಾತಿಗಳಲ್ಲೂ ಅನುಕರಣೆ ಕಂಡುಬರುತ್ತದೆ. ಕೆಲವು ಹಸಿರು ಎಲೆಗಳನ್ನು ಅನುಕರಿಸುತ್ತವೆ. ಕೆಲವು ಉದುರಿದ ಒಣ ಎಲೆಗಳನ್ನು ಕೇವಲ ಛಾಯೆಯಲ್ಲಿ ಮಾತ್ರವಲ್ಲದೆ ದೇಹರಚನೆಯಲ್ಲೂ ಅನುಕರಿಸುತ್ತವೆ. ಬೊಲಿವಿಯಾ ದೇಶದ ಸಿನೊಫ್ಲೇಬಿಯಾ ಅರ್‍ಕಿಡೋನ ಎಂಬ ಚಿಟ್ಟೆಯಲ್ಲಿ ಅದರ ಮುಂದಿನ ಜೋಡಿ ರೆಕ್ಕೆಗಳ ಹೊರ ಅಂಚು ಕಾಂಡ ಅಥವಾ ಎಲೆಯನ್ನು ಹೋಲುತ್ತದೆ. ಭಾರತದ

ಚಿತ್ರ 2. ಗಿಡದ ರೆಂಬೆಯನ್ನಾಶ್ರಯಿಸಿರುವ ಹಸುರು ಹುಳು. ಚಿತ್ರದಲ್ಲಿ ಅಂಥವು ನಾಲ್ಕು ಇವೆ.

ಕಲ್ಲಿಮಾ ಪ್ರಾರಲೆಕ್ಟ ಎಂಬ ಚಿಟ್ಟೆಯ ಅನುಕರಣೆ ಬಹಳ ಪ್ರಸಿದ್ಧವಾಗಿದೆ. ಇದರ ರೆಕ್ಕೆಗಳು ಕಾಂಡ ಮತ್ತು ಎಲೆಯನ್ನು ಏಕಕಾಲದಲ್ಲಿ ಅನುಕರಿಸಬಲ್ಲವು. ರೆಕ್ಕೆಗಳ ಮೇಲಿನ ಮತ್ತು ಕೆಳಗಿನ ವರ್ಣವಿನ್ಯಾಸದಲ್ಲಿ ಗಮನಾರ್ಹವಾದ ವ್ಯತ್ಯಾಸವಿರುತ್ತದೆ. ರೆಕ್ಕೆಯ ಮೇಲ್ಭಾಗ ಮುಗ್ಧಗೊಳಿಸುವ ಬಣ್ಣಗಳಿಂದ ಕೂಡಿರುತ್ತದೆ. (ನೀಲಗಪ್ಪಿನ ಮೇಲೆ ಹಳದಿಗೆಂಪಿನ ಮತ್ತು ನೀಲಿಬಿಳುಪಿನ ಬರೆಗಳು ಆ ಪ್ರಭೇದದ ಗುರುತಿನ ಚಿಹ್ನೆಗಳು). ಆದರೆ ರೆಕ್ಕೆಗಳ ತಳಭಾಗ ಬಣ್ಣದಲ್ಲಿ ಒಣಗಿದ ಎಲೆಯನ್ನು ಹೋಲುತ್ತದೆ. ಕೆಂಪು ಮತ್ತು ಕಂದು ಬಣ್ಣಗಳ ಪರ್ಯಾಯವಾಗಿರುವ ಚುಕ್ಕೆಗಳು ಅದರ ಮಧ್ಯೆ ಇರುವ ಪೊರೆಗಳು (ಸ್ಕೇಲ್) ಎಲೆಯ ಮೇಲೆ ಬಿದ್ದಿರುವ ಮಂಜಿನ ಹನಿಗಳಂತೆ ಕಾಣುತ್ತವೆ. ಇದಲ್ಲದೆ ಎಲೆಯ ಮೇಲೆ ಕಾಣುವಂತೆ ನರಗಳ ಬಲೆಗಟ್ಟೂ ಬೂಷ್ಟುಹಿಡಿದ ಗುರುತುಗಳೂ ಇರುತ್ತವೆ. ಈ ಕಾರಣದಿಂದಾಗಿ ಇದು ಹಾರಾಡುವಾಗ ತನ್ನ ಮೋಹಕ ಬಣ್ಣದಿಂದ ಆಕರ್ಷಿಸುತ್ತದೆ; ಆದರೆ ಯಾವುದಾದರೂ ಪ್ರದೇಶದ ಮೇಲೆ ಕುಳಿತೊಡನೆ ತನ್ನ ರೆಕ್ಕೆಗಳನ್ನು ದೇಹದ ಮೇಲಕ್ಕೆ ಜೋಡಿಸಿ ಒಣಗಿದ ಎಲೆಯನ್ನು ಅನುಕರಿಸಿ ಆತ್ಮರಕ್ಷಣೆ ಮಾಡಿಕೊಳ್ಳುತ್ತದೆ.

ಪ್ರಮುಖಾನುಕರಣೆಯ ತಂತ್ರಗಳು ಎಚ್ಚರಿಕೆ ನೀಡತಕ್ಕ ಮಾದರಿಗೆ ಸೇರಿವೆ. ವಿಷವನ್ನು ರಕ್ಷಣಾ ಆಯುಧವಾಗಿ ಪಡೆದಿರುವ ಪ್ರಾಣಿಗಳನ್ನೂ ತಿಂದರೆ ವಿಷವಾಗಿ ಪರಿಣಮಿಸುವ ಪ್ರಾಣಿಗಳನ್ನೂ ಅವು ಅನುಕರಿಸುತ್ತವೆ. ಸಾಮಾನ್ಯವಾಗಿ ಅನುಕರಣೀಯ ವಸ್ತು ಅಥವಾ ಪ್ರಾಣಿಗಳು ಆಕರ್ಷಣೀಯ ಬಣ್ಣಗಳನ್ನು ಹೊಂದಿರುವುದರಿಂದ ತಾವೂ ಪ್ರಕಾಶಮಾನವಾದ ಬಣ್ಣಗಳನ್ನು ಪಡೆದಿರುತ್ತವೆ. ಇಲಾಪಿಡೆ ಕುಟುಂಬಕ್ಕೆ ಸೇರಿದ ಅನೇಕ ಹಾವುಗಳು ವಿಷಪೂರಿತವಾದುವು. ಅಮೆರಿಕದ ಹವಳದ ಹಾವುಗಳೂ (ಕೋರಲ್ ಸ್ನೇಕ್ಸ್) ಇದೇ ಕುಟುಂಬಕ್ಕೆ ಸೇರಿದವು. ಆ ವಿಷದ ಹಾವುಗಳೆಲ್ಲ ಅತಿಪ್ರಕಾಶಮಾನವಾದ ಬಣ್ಣ ಹೊಂದಿರುತ್ತವೆ. ಸಾಮಾನ್ಯವಾಗಿ ಅವುಗಳ ದೇಹದ ಮೇಲೆ ಪರ್ಯಾಯವಾಗಿ ಕೆಂಪು ಮತ್ತು ಕಪ್ಪು ಬಣ್ಣದ ಪಟ್ಟೆಗಳಿರುತ್ತವೆ. ವಿಷವಿಲ್ಲದ ಹಾವುಗಳು ಹವಳದ ಹಾವುಗಳನ್ನು ಅನುಕರಿಸುತ್ತವೆ. ವಿಷದ ಹಾವಿನ ಮೇಲಿರುವ ಗುರುತನ್ನು ಅಷ್ಟು ಚೆನ್ನಾಗಿ ಹೋಲದಿದ್ದರೂ ದೂರಕ್ಕೆ ಹವಳದ ಹಾವಿನ ರೂಪವನ್ನು ತೋರಿಸಬಲ್ಲ ಈ ಹಾವುಗಳು ಆ ವಿಷದ ಹಾವುಗಳಂತೆಯೇ ತಮ್ಮ ಶತ್ರುಗಳನ್ನು ಹೆದರಿಸಬಲ್ಲವು. ಆದರೆ ವಿಷದ ಹಾವಿನ ದೋಷದಿಂದ ಮನುಷ್ಯ ಈ ವಿಷವಿಲ್ಲದ ಹಾವುಗಳನ್ನೂ ಕೊಲ್ಲಬಹುದಾದ್ದರಿಂದ ಆ ಅನುಕರಣೆ ಸ್ವಲ್ಪಮಟ್ಟಿಗೆ ಅಪಾಯ ಕಾರಿಯೂ ಆಗಬಲ್ಲದು. ಈ ರೀತಿಯ ಅನುಕರಣೆ ಜಡರೀತಿಯ ಮಾದರಿಗೆ ಸೇರಿದ್ದು. ವಿಷವಿಲ್ಲದ ಹಂದಿಮೂತಿಯ ಹಾವುಗಳು ಬಣ್ಣದಲ್ಲಿ ಬಹು ಪರಿಪಕ್ವವಾಗಿ ವಿಷದ ಹಾವುಗಳಂತೆ ನಟಿಸಬಲ್ಲವು. ತಮ್ಮ ತಲೆಯನ್ನು ಅಗಲಿಸಿ, ಬುಸುಗುಟ್ಟಿ ಮತ್ತೆ ಕೆಲವು ವೇಳೆ ತಲೆಯನ್ನು ನೆಲಕ್ಕೆ ಹೊಡೆದು ತಾವು ಕೂಡ ವಿಷದ ಹಾವಿನಷ್ಟೇ ಅಪಾಯಕಾರಿ ಎಂಬ ಭಾವನೆಯನ್ನು ಮೂಡಿಸಿ ಶತ್ರುಗಳಿಂದ ಪಾರಾಗಬಲ್ಲವು. ಹೆಟೆರೋಡಾನ್ ಎಂಬ ಹಾವು ಇದರಲ್ಲಿ ಪ್ರಸಿದ್ಧವಾದುದು. ಆದರೆ ವಿಷದ ಹಾವಿನ ಸ್ವಭಾವವನ್ನು ಅನುಕರಿಸುವುದರಿಂದ ಮನುಷ್ಯನ ಪ್ರಕೋಪಕ್ಕೆ ಬಲಿಯಾಗಿ ಅದು ಸಾಯುವುದೂ ಉಂಟು. ಈ ಹಾವುಗಳ ಅನುಕರಣೆಯಲ್ಲಿ ಕ್ರಿಯಾತ್ಮಕ ವರ್ತನೆಗಳಿರುವುದ ರಿಂದ ಇದು ಬುದ್ಧಿಪೂರ್ವಕವಾದ ಅನುಕರಣೆ.

ಎಚ್ಚರಿಕೆಯನ್ನು ನೀಡುವ ಅನುಕರಣತಂತ್ರವನ್ನು ಪ್ರದರ್ಶಿಸುವ ಕೀಟಗಳೂ ಇವೆ. ಕೂದಲಿಂದ ಆವೃತವಾದ ಆಕರ್ಷಣೀಯವಾದ ಬಣ್ಣವುಳ್ಳ ಕೆಲವು ಹೂ ಚಿಗಟಗಳು (ಫ್ಲವರ್‌ಫ್ಲೈ) ಕುಟುಕಬಲ್ಲ ಜೇನುನೊಣ ಮತ್ತು ಕಣಜಗಳನ್ನು (ವಾಸ್ಪ್) ಅನುಕರಿಸಬಲ್ಲವು. ಶತ್ರುಗಳು ಸಾಮಾನ್ಯವಾಗಿ ಕುಟುಕುವ ಕೀಟಗಳ ಗೋಜಿಗೆ ಹೋಗದಿರುವುದರಿಂದ ಹೂಚಿಗಟಗಳು ಶತ್ರುಗಳಿಂದ ಪಾರಾಗಬಲ್ಲವು. ದರೋಡೆನೊಣಕ್ಕೆ (ರಾಬರ್ ಫ್ಲೈ) ಕುಟುಕುವ ಅಂಗವಿಲ್ಲ. ಆದರೆ ಅದು ಬಣ್ಣ ಮತ್ತು ಆಕಾರದಲ್ಲಿ ಜೇನುನೊಣವನ್ನು ಅನುಕರಿಸುತ್ತದೆ. ಕೀಟಾಹಾರಿ ಬುಲ್ ಜಾತಿಯ ಕಪ್ಪೆ ಜೇನನ್ನು ನಾಲಗೆಯಿಂದ ಹಿಡಿಯಲು ಪ್ರಯತ್ನಿಸಿದಾಗ ಈ ಜೇನು ಕಟುವಾಗಿ ಕಚ್ಚುತ್ತದೆ. ಪದೇ ಪದೇ ಆದ ಆ ಅನುಭವದಿಂದ ಕಪ್ಪೆ ಜೇನಿನ ಬಣ್ಣವನ್ನು ಅದರ ಕಡಿತದೊಡನೆ ಸಮೀಕರಿಸಿಕೊಳ್ಳುತ್ತದೆ. ಇನ್ನು ಮುಂದೆ ಅದು ಆ ಜೇನಿನ ಬಣ್ಣದ ಯಾವ ಕೀಟದ ಗೋಜಿಗೂ ಹೋಗುವುದಿಲ್ಲ. ಈ ಕಾರಣದಿಂದಲೇ ದರೋಡೆನೊಣ ತನ್ನ ಈ ಅನುಕರಣಶಕ್ತಿಯಿಂದ ರಕ್ಷಣೆ ಪಡೆಯುತ್ತದೆ.

ಕೆಲವು ಜಾತಿಯ ಚಿಟ್ಟೆಗಳು ತಿನ್ನಲು ರುಚಿಯಾಗಿರುವುದಿಲ್ಲ. ಸಾಮಾನ್ಯವಾಗಿ ಅವು ಪ್ರಕಾಶಮಾನವಾದ ಬಣ್ಣಗಳಿಂದ ಕೂಡಿರುತ್ತವೆ. ಶತ್ರುಪ್ರಾಣಿಗಳು ಅಭ್ಯಾಸ ಬಲದಿಂದ ಆ ಬಣ್ಣದ ಕೀಟಗಳು ರುಚಿಯಿಲ್ಲದವೆಂದುಕೊಂಡು ಅವುಗಳ ಗೋಜಿಗೆ ಹೋಗುವುದಿಲ್ಲ. ಇಂಥ ವರ್ಣಪ್ರದರ್ಶನಕ್ಕೆ ರಕ್ಷಣಾವರ್ಣತಂತ್ರ ಎಂಬ ಹೆಸರಿದೆ. ಈ ಎಚ್ಚರಿಕೆಯ ವರ್ಣಪ್ರದರ್ಶನದಿಂದ ಆ ಕೀಟಗಳು ರಕ್ಷಣೆ ಪಡೆಯುತ್ತವೆ. ಕೆಲವು ಜಾತಿಯ ರುಚಿಯಾದ ಚಿಟ್ಟೆಗಳು ರುಚಿಯಿಲ್ಲದ ಆ ಕೀಟಗಳನ್ನು ಅನುಕರಿಸಿ ಶತ್ರುಗಳಿಂದ ಪಾರಾಗುತ್ತವೆ. ಬೆಸಿಲಾರ್ಕಿಯ ಆರ್ಕಿಪಸ್ ಎಂಬ ವೈಸರಾಯ್ ಪಂಗಡದ ಚಿಟ್ಟೆ, ಪಕ್ಷಿಗಳಿಗೆ ಬಹಳ ರುಚಿಕರವಾದ ಆಹಾರ, ಆ ಚಿಟ್ಟೆ ಅನೋಸಿಯ ಪ್ಲೆಕ್ಸಿಪಸ್ ಎಂಬ ತಿನ್ನಲಾಗದ ಮಾನಿಟರ್ ಚಿಟ್ಟೆಯನ್ನು ತೀವ್ರವಾಗಿ ಅನುಕರಿಸಿ ರಕ್ಷಣೆ ಪಡೆಯುತ್ತದೆ.

ಕೆಲವುವೇಳೆ ಹೆಣ್ಣುಚಿಟ್ಟೆ ಮಾತ್ರ ಅಬಾಧಿತಮೂರ್ತಿಯನ್ನು (ಇಮ್ಯೂನ್ ಮಾಡೆಲ್) ಅನುಕರಿಸಬಲ್ಲದು. ಅದೇ ಪ್ರಭೇದದ ಗಂಡು ಯಾವ ಬದಲಾವಣೆಯನ್ನೂ ತೋರಿಸುವುದಿಲ್ಲ. ಕೆಲವುವೇಳೆ ಅದು ವಾಸಿಸುವ ಪ್ರದೇಶದಲ್ಲಿರುವ ಬೇರೆ ಬೇರೆ ಶತ್ರುಗಳನ್ನು ಅನುಕರಿಸಲು ಬಗೆ ಬಗೆಯ ರೂಪಾಂತರಗಳನ್ನು ಹೊಂದಿರುತ್ತದೆ. ಆಫ್ರಿಕದ ಪ್ಯಾಪಿಲಿಯೊ ಮಿರೋಪ್ ಎಂಬ ಒಂದು ಪ್ರಭೇದದ ಚಿಟ್ಟೆ ಬಹಳ ರುಚಿಕರವಾದದ್ದು. ಅದೇ ದೇಶದ ಡಾನಾಯ್ಡ್ ಜಾತಿಯ ಚಿಟ್ಟೆಗಳು ರುಚಿಯಿಲ್ಲದವು. ಗಂಡು ಪ್ಯಾಪಿಲಿಯೊ ನೈಜವಾದ ರೂಪವನ್ನು ಇಟ್ಟುಕೊಂಡಿರುತ್ತದೆ; ಹೆಣ್ಣು ಪ್ಯಾಪಿಲಿಯೊಗಳು ಡಾನಾಯ್ಡ್ ಚಿಟ್ಟೆಗಳನ್ನು ಹೊರರೂಪದಲ್ಲಿ ಅಣಕಿಸುತ್ತವೆ. ಡಾನಾಯ್ಡ್ ಜಾತಿಯಲ್ಲೇ ಅನೇಕ ಪ್ರಭೇದಗಳಿವೆ. ಆಯಾ ಪ್ರದೇಶದಲ್ಲಿರುವ ಡಾನಾಯ್ಡ್ ಪ್ರಭೇದವನ್ನು ಹೆಣ್ಣು ಪ್ಯಾಪಿಲಿಯೊ ಅನುಕರಿಸುವುದರಿಂದ, ಹೆಣ್ಣು ಪ್ಯಾಪಿಲಿಯೊಗಳು ಬಹುರೂಪಾಂತರಗಳನ್ನು ತೋರಿಸುತ್ತವೆ. ಒಟ್ಟು ನಾಲ್ಕು ರೀತಿಯ ರೂಪಾಂತರ ಹೊಂದಿದ ಹೆಣ್ಣು ಪ್ಯಾಪಿಲಿಯೊ ಮಿರೋಪ್‌ಗಳು ಆಫ್ರಿಕದಲ್ಲಿ ಕಂಡುಬಂದಿವೆ. ಈ ನಾಲ್ಕು ರೀತಿಯವು ಒಂದೇ ಪ್ರದೇಶದಲ್ಲಿರಬಹುದು ಅಥವಾ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿರಬಹುದು. ಗಂಡು ಪ್ಯಾಪಿಲಿಯೊವಿನಂತೆ ತನ್ನ ನೈಜವಾದ ಮೂಲರೂಪವನ್ನು ಇಟ್ಟುಕೊಂಡಿರುವ ಹೆಣ್ಣು ಪ್ಯಾಪಿಲಿಯೊಗಳು ಅಬಿಸೀನಿಯದಲ್ಲಿ ಮಾತ್ರ ಇವೆಯೆಂದು ತಿಳಿದುಬಂದಿದೆ. ಕೆಲವುವೇಳೆ ಒಂದು ಉಪವರ್ಗದ

ಬೇರೆ ಬೇರೆ ಪ್ರಭೇದಗಳು ಕೂಡ ಹೀಗೆ ಅನುಕರಿಸಬಲ್ಲವು. ಮಿಣುಕುಹುಳುವಿನ ಹತ್ತಿರ ಸಂಬಂಧಿಯಾದ ಲೈಸಿಡ್ ಜೀರುಂಡೆಗಳು, ರುಚಿಯಿಲ್ಲದ ಹುಳುಗಳು. ಆ ಜೀರುಂಡೆಯನ್ನು ಬೇರೆ ಜಾತಿಯ ಜೀರುಂಡೆಗಳೂ ಅಲ್ಲದೆ ತಗಣೆಗಳೂ ಕೀಟಗಳೂ ಅನುಕರಿಸಬಲ್ಲವು.

ರುಚಿಯಿಲ್ಲದ ಪ್ರಭೇದಗಳನ್ನು, ರುಚಿಕರವಾದ ಪ್ರಭೇದಗಳು ಅನುಕರಿಸುವುದನ್ನು ಬೇಟ್ಸಿಯನ್ ಅನುಕರಣೆ ಎಂದು ಕರೆಯುವರು. ಕೆಲವುವೇಳೆ ರುಚಿಯಿಲ್ಲದ ಚಿಟ್ಟೆಯನ್ನು ಮತ್ತೊಂದು ರುಚಿಯಿಲ್ಲದ ಪ್ರಾಣಿ ಅನುಕರಿಸುವುದೂ ಉಂಟು; ಅಂದರೆ ಅನುಕರಿಸಲ್ಪಡುವ ಪ್ರಾಣಿಗಳೂ ಅನುಕರಿಸುವ ಪ್ರಾಣಿಗಳೂ ಅರುಚಿಗಳಾಗಿರುತ್ತವೆ. ಆ ರೀತಿಯ ಅನುಕರಣೆಯನ್ನು ಮುಲ್ಲೇರಿಯನ್ ಅನುಕರಣೆ ಎನ್ನುವರು.

ಆಕ್ರಮಣಕಾರಿ ಅನುಕರಣೆಯನ್ನು ಮಾಂಸಾಹಾರಿಗಳಲ್ಲಿ ಕಾಣಬಹುದು. ಕೀಟಗಳನ್ನು ತಿಂದು ಬದುಕುವ ಕೆಲವುಜಾತಿಯ ಹಳದಿಬಣ್ಣದ ಜೇಡಗಳು ಗೋಲ್ಡನ್‍ರಾಡ್ ಮತ್ತು ಇತರ ಹೂಗಳ ಮೇಲೆ ಕುಳಿತಾಗ ಹೂವಿನ ಬಣ್ಣದೊಡನೆ ಸಮರಸವಾಗುವುದರಿಂದ ಕೀಟಗಳಿಂದ ಮರೆಯಾಗಿರುತ್ತವೆ. ಕೀಟಗಳು ಮಕರಂದಕ್ಕಾಗಿ ಹೂವಿಗೆ ಬಂದೊಡನೆ ವಂಚನೆಯಿಂದ ಅವುಗಳ ಮೇಲೆ ಎರಗುತ್ತವೆ. ಆಕ್ರಮಣಕಾರೀ ಅನುಕರಣೆಯಲ್ಲಿ ಇದು ಮರೆಮಾಚಿಕೊಳ್ಳುವ ಮಾದರಿಗೆ ಸೇರಿದೆ. ಮಾನ್ಟಿಡೆ ಕುಟುಂಬದ ಕೀಟಗಳೂ ಈ ರೀತಿಯ ಅನುಕರಣೆಯನ್ನು ತೋರಿಸುತ್ತವೆ.

ಕೆಲವುಜಾತಿ ಜೇಡಗಳು ಆರ್ಕಿಡ್ ಹೂಗಳನ್ನು ಬಣ್ಣ ಮತ್ತು ಆಕಾರದಲ್ಲಿ ಅನುಕರಿಸಿ ಹೂವಿನಂತೆ ಮೋಹಗೊಳಿಸುವ ಅಥವಾ ಪ್ರಚಾರಮಾಡುವ ಬಣ್ಣಗಳಿಂದ ಕೂಡಿದ್ದು ಕೀಟಗಳನ್ನು ಆಕರ್ಷಿಸುತ್ತವೆ; ಮಕರಂದಕ್ಕಾಗಿ ಬರುವ ಕೀಟಗಳ ಮೇಲೆ ಎರಗುತ್ತವೆ. ಇದು ಆಕ್ರಮಣಕಾರೀ ಅನುಕರಣೆಯಲ್ಲಿ ಮರುಳುಮಾಡುವ ಬಗೆಗೆ ಸೇರಿದೆ. ಆಫ್ರಿಕದ ಒಂದು ಜಾತಿಯ ಓತಿಕೇತ (ಹೆಂಟೆಗೊದ್ದ, ಊಸರವಳ್ಳಿ) ರಕ್ಷಣೆಯ ಬಣ್ಣವನ್ನು ಹೊಂದಿದ್ದು ಬಾಯ ಅಂಚುಗಳಲ್ಲಿ ಆಕರ್ಷಕವಾದ ಹೂವನ್ನು ಹೋಲುವ ಬಣ್ಣವನ್ನು ಹೊಂದಿರುತ್ತದೆ. ಆ ಬಣ್ಣ ಕೀಟಗಳನ್ನು ಮೋಹಗೊಳಿಸುವುದರಿಂದ ಅವು ಓತಿಯ ಬಾಯಿಗೆ ಬಂದು ಬೀಳುತ್ತವೆ.

ಆರ್ಥಾಪ್ಟೆರ ಉಪವರ್ಗದ ಮಾನ್ಟಿಡ್ ಕುಟುಂಬಕ್ಕೆ ಸೇರಿದ ಹೈಮಿನಾಪಸೆ ಕರೋನೇಟಸ್ ಎಂಬ ಪ್ರಭೇದದ ಕೀಟ ತನ್ನ ಜೀವನಚರಿತ್ರೆಯಲ್ಲಿ ಹಿಂದೆ ಹೇಳಿದ ಅನೇಕ ರೀತಿಯ ಅನುಕರಣೆಗಳನ್ನು ಪ್ರದರ್ಶಿಸುತ್ತದೆ. ಇದರ ಹುಳು ಸಾಮಾನ್ಯವಾಗಿ ಪ್ರಕಾಶಮಾನವಾದ ಎಳೆಗೆಂಪಿನಿಂದ ಕೂಡಿರುತ್ತದೆ. ಚಲಿಸದೆ ರೆಂಬೆಗಳ ಮೇಲೆ ಕುಳಿತಾಗ ತನ್ನ ದೇಹದ ಹಿಂಭಾಗವನ್ನು ಬೆನ್ನಿನಮೇಲೆ ತಿರುಗಿಸಿಟ್ಟುಕೊಂಡು ಅಗಲವಾದ ದಳಗಳನ್ನು ಹೋಲುವ ಕಾಲುಗಳನ್ನು ಚಾಚುವುದರಿಂದ ಹೂವನ್ನು ಅನುಕರಿಸಿ ಶತ್ರುಪಕ್ಷಿಗಳಿಂದ ಮರೆಮಾಚಿಕೊಳ್ಳುತ್ತದೆ. ಇದಲ್ಲದೆ ಹೂವೆಂದು ಭ್ರಮಿಸಿ ಸಣ್ಣ ಕೀಟಗಳು ಜೇನಿಗಾಗಿ ಬಂದಾಗ, ಅವುಗಳ ಮೇಲೆರಗಿ ಕಬಳಿಸುತ್ತದೆ. ರೂಪಾಂತರಪರಿವರ್ತನೆಯನ್ನು ಹೊಂದಿದ ಮೇಲೆ ಹೊರಬರುವ ಎಳೆಯ ಕೀಟ ಕಪ್ಪುಚುಕ್ಕೆಗಳುಳ್ಳ ಕೆಂಪುಬಣ್ಣದಿಂದ ಕೂಡಿದ್ದು, ಸಸ್ಯಗಳ ಮೇಲೆ ವಾಸಿಸುವ ಅರುಚಿಯಾದ ಒಂದು ಜಾತಿ ತಿಗಣೆಯನ್ನು (ಪ್ಲಾಂಟ್‍ಬಗ್) ಅಣಕಿಸಿ ಶತ್ರುಪ್ರಾಣಿಗಳಿಂದ ಪಾರಾಗುತ್ತದೆ. ಅದು ಬೆಳೆದಂತೆ ಕೊನೆಯ ಪೊರೆ (ಮಾಲ್ಟ್) ಬಿಟ್ಟ ಅನಂತರ ದೇಹ ಮತ್ತು ಬಣ್ಣದಿಂದ ಹೂವನ್ನು ಅಣಕಿಸಿ ಆಕ್ರಮಣಕೃತ್ಯದ ಜೀವನವನ್ನು ತಾನೇ ಅನುಸರಿಸುತ್ತದೆ.

ಬುದ್ಧಿಪೂರ್ವಕವಾದ ಅನುಕರಣೆಯ ಗುಂಪಿಗೆ ಸೇರಿಸಬಹುದಾದ ಮತ್ತೊಂದು ಬಗೆಯೆಂದರೆ ಸಾವಿನ ಅಣಕ. ಅಮೆರಿಕದ ಒಪಾಸಮ್ ಎಂಬ ಒಂದು ಸ್ತನಿಪ್ರಾಣಿ ತನ್ನ ಮೇಲೆ ಯಾವುದಾದರೂ ಶತ್ರು ಎರಗಿದಾಗ ಸತ್ತಂತೆ ನಟಿಸಿ ಸಾವಿನ ದವಡೆಯಿಂದ ಪಾರಾಗುವುದು. ಅದನ್ನು ಒಪಾಸಮ್ ನಟನೆ ಎಂದು ನಾಣ್ನುಡಿಯಾಗಿ ಕರೆಯುವುದುಂಟು. ಈ ನಟನೆ ಬುದ್ಧಿಪೂರ್ವಕವಾದ ಅನುಕರಣೆ ಎಂದು ಕೆಲವರ ಅಭಿಪ್ರಾಯ : ನಟನೆಯಲ್ಲ, ಅದು ಕೇವಲ ಭಯದಿಂದ ಒದಗಿದ ಮೂರ್ಛೆ ಎಂದು ಕೆಲವರ ಅಭಿಪ್ರಾಯ. ಗಡಸುದೇಹದ ದುಂಬಿಗಳು ಕೂಡ ಇಂಥ ಅನುಕರಣೆಯನ್ನು ತೋರಿಸುತ್ತವೆ. ಅವು ಕೆಳಗೆ ಬಿದ್ದಾಗ ಅಷ್ಟಾಗಿ ದೇಹಕ್ಕೆ ಗಾಯವಾಗುವುದಿಲ್ಲ. ಯಾವುದಾದರೂ ಪ್ರಾಣಿ ಅದನ್ನು ಹಿಡಿಯಲು ಹೋದಾಗ ಕೆಳಕ್ಕೆ ಬಿದ್ದು ಕಲ್ಲಿನ ಚೂರಿನಂತೆ ನಿಶ್ಚೇಷ್ಟಿತವಾಗುತ್ತವೆ. ಬೇಟೆಯ ಪ್ರಾಣಿಗಳು ಎಲೆ ಹುಲ್ಲುಗಳ ಮಧ್ಯೆ ಅವಕ್ಕಾಗಿ ಹುಡುಕಿ ವಿಫಲವಾಗಿ ಹಿಂತಿರುಗುತ್ತವೆ.

ವಾಲಸ್ ಎಂಬ ವಿಜ್ಞಾನಿ ರಕ್ಷಣೆಯ ಅನುಕರಣೆ ಪ್ರಕೃತಿಯಲ್ಲಿ ಸಂಭವಿಸಬೇಕಾದರೆ ಇರಬೇಕಾದ ಕೆಲವು ಅಂಶಗಳನ್ನು ಪಟ್ಟಿಮಾಡಿದ್ದಾನೆ. 1 ಅನುಕರಿಸುವ ಪ್ರಾಣಿಯ ಪ್ರಭೇದ ಮತ್ತು ಅನುಕರಿಸಲ್ಪಡುವ ಪ್ರಾಣಿಯ ಪ್ರಭೇದಗಳು ಒಂದೇ ಪ್ರದೇಶದಲ್ಲಿರಬೇಕು; 2 ಅನುಕರಿಸುವ ಪ್ರಾಣಿಗಳು ಯಾವಾಗಲೂ ರಕ್ಷಣೆಯಿಲ್ಲದವು; 3 ಅನುಕರಿಸುವ ಪ್ರಾಣಿಗಳು ಯಾವಾಗಲೂ ಹೆಚ್ಚು ಸಂಖ್ಯೆಯಲ್ಲಿರುತ್ತವೆ; 4 ಅನುಕರಣೆ ಕೇವಲ ಪ್ರಾಣಿಯ ಬಾಹ್ಯ ರೂಪಕ್ಕೆ ಸಂಬಂಧಪಟ್ಟಿರುತ್ತದೆಯೇ ಹೊರತು ಒಳರಚನೆಯಲ್ಲಿ ಯಾವ ಬದಲಾವಣೆಯನ್ನೂ ಉಂಟುಮಾಡುವುದಿಲ್ಲ.

ಅನುಕರಿಸುವ ಜೀವಿಗಳು ಹೇಗೆ ವಿಕಾಸಗೊಂಡವು ಎಂಬುದರ ಬಗ್ಗೆ ಅನೇಕ ವಾದವಿವಾದಗಳಿವೆ. ಡಾರ್ವಿನ್ ಪ್ರತಿಪಾದಿಸಿದ ನೈಸರ್ಗಿಕ ಆಯ್ಕೆಯೆ ಅದಕ್ಕೆ ಕಾರಣ ಎಂಬುದು ವೀಸ್‍ಮನ್ ಎಂಬುವನ ಅಭಿಪ್ರಾಯ. ಅದರಂತೆ, ಪ್ರಾರಂಭದಲ್ಲಿ ಒಂದು ಪ್ರಭೇದದ ಪ್ರಾಣಿಗಳು ತಾವು ಅನುಕರಿಸಬೇಕಾದ ಮಾದರಿಯನ್ನು ಅಷ್ಟಾಗಿ ಹೋಲಲಾರವು. ಆದರೆ ಒಂದು ಸಂತತಿಯಲ್ಲಿ ಆ ಮಾದರಿಯನ್ನು ಆದಷ್ಟು ಹೆಚ್ಚಾಗಿ ಹೋಲುವ ಪ್ರಾಣಿಗಳು ಜೀವನ ಸಂಗ್ರಾಮದಲ್ಲಿ ಉಳಿಯುತ್ತವೆ. ಮಿಕ್ಕವು ಅಳಿಯುತ್ತವೆ. ಉಳಿದ ಪ್ರಾಣಿಗಳು ಮಾತ್ರ ತಮ್ಮ ಸಂತತಿಯನ್ನು ಮುಂದುವರಿಸುತ್ತವೆ. ಹೀಗೆ ಪ್ರತಿಯೊಂದು ಸಂತತಿಯಲ್ಲೂ ಹೆಚ್ಚು ಹೆಚ್ಚು ಹೋಲಿಕೆಯನ್ನು ತೋರಬಲ್ಲ ಪ್ರಾಣಿಗಳನ್ನು ಮಾತ್ರ ಪ್ರಕೃತಿ ಆಯ್ದು ಉಳಿಸಿ ಬೆಳೆಸುತ್ತದೆ. ಕೊನೆಯಲ್ಲಿ ಚೆನ್ನಾಗಿ ಅನುಕರಿಸಬಲ್ಲ ಪ್ರಾಣಿಜಾತಿಗಳು ವಿಕಸಿಸುತ್ತವೆ. ಈ ವಾದ ನಿಜವಾದರೆ, ಒಂದು ಮಾದರಿಯನ್ನು ಅಸ್ಪಷ್ಟವಾಗಿ ಹೋಲುವ ಅನುಕರಿಸುವ ಪ್ರಾಣಿಗಳು ಇಂದಿಗೂ ಹೇರಳವಾಗಿವೆ. ಇವು ಪ್ರಕೃತಿಯ ಆಯ್ಕೆಯ ವಾದಕ್ಕೆ ಸಮಸ್ಯೆಯನ್ನು ತಂದೊಡ್ಡುತ್ತವೆ. ಅಬಾಧಿತವಾಗಲು ರುಚಿಯಿರದ ಬೇರೆಯ ಜಾತಿಗಳನ್ನು ಅನುಕರಿಸುತ್ತ ಪ್ರಾಣಿಗಳು ವಿಕಸಿಸಿವೆ ಎನ್ನುವುದಾದರೆ. ಒಂದು ರುಚಿಯಿರದ ಪ್ರಾಣಿಯನ್ನು ಮತ್ತೊಂದು ರುಚಿಯಿರದ ಪ್ರಾಣಿ ಅಣಕಿಸುವ ಮುಲ್ಲೇರಿಯನ್ ಅನುಕರಣೆಯೂ ಅಂಥದೇ ಸಮಸ್ಯೆಯನ್ನು ಒಡ್ಡುತ್ತದೆ. ಅನುಕರಿಸಲ್ಪಡುವ ಮಾದರಿಗಳು ಹೇರಳವಾಗಿರುವ ಪ್ರದೇಶದಲ್ಲಿ ಅನುಕರಿಸಲು ಯತ್ನಿಸುವ ಪ್ರಾಣಿಗಳ ಸಂಖ್ಯೆ ಬಹಳ ವಿರಳ: ಅನುಕರಿಸಲ್ಪಡುವ ಮಾದರಿಗಳು ವಿರಳವಾಗಿರುವ ಪ್ರದೇಶದಲ್ಲಿ ಅನುಕರಿಸುವ ಪ್ರಾಣಿಗಳ ಸಂಖ್ಯೆ ಬಹಳ ಹೇರಳವಾಗಿರುತ್ತದೆ. ಇದೂ ಒಂದು ಸಮಸ್ಯೆ. ಈ ಸಮಸ್ಯೆ ಪ್ರಕೃತಿಯಲ್ಲಿ ಪ್ರಚಾರದಲ್ಲಿರುವ ಮರುಟ್ಟುವೆಯ(ಮ್ಯುಟೇಷನ್) ನಿಯಮ ಅನುಕರಿಸುವ ಪ್ರಾಣಿಗಳು ವಿಕಾಸಕ್ಕೆ ಕಾರಣವಿರಬಹುದೇ ಎಂಬ ವಾದಕ್ಕೆ ಅವಕಾಶವೀಯುತ್ತದೆ. ಅನುಕರಿಸುವ ಜೀವಿಗಳ ವಿಕಾಸಕ್ಕೆ ಸಂಬಂಧಪಟ್ಟ ನಿರ್ದಿಷ್ಟವಾದ ಕಾರಣ ಇದೇ ಎಂಬುದಾಗಿ ಹೇಳಲು ಅನೇಕ ಎಡರುತೊಡರುಗಳಿವೆ. ಆದರೂ ಪ್ರಕೃತಿಯ ಆಯ್ಕೆ ಅದಕ್ಕೆ ಪ್ರಮುಖ ಕಾರಣ ಎಂಬ ವಾದಕ್ಕೆ ಪುರಸ್ಕಾರವಿದೆ.

ಮನುಷ್ಯ ವಿವರಿಸಿರುವ ಪ್ರಾಣಿಯ ಅನುಕರಣೆ ಇತರ ಪ್ರಾಣಿಗಳ ದೃಷ್ಟಿಯಲ್ಲಿ ಎಷ್ಟರಮಟ್ಟಿಗೆ ಫಲಕಾರಿಯಾಗಿದೆ ಎಂಬುದು ಒಂದು ಕುತೂಹಲಕಾರಿ ಪ್ರಶ್ನೆ. ಮನುಷ್ಯನ ಕಣ್ಣಿಗೆ ಬೀಳುವ ವರ್ಣವಿನ್ಯಾಸಗಳು ಪ್ರಾಣಿಗಳ ಕಣ್ಣಿಗೆ ಅದೇ ರೀತಿಯಲ್ಲಿ ಬೀಳಲಾರವು ಎಂಬುದು ಕೆಲವರ ಅಭಿಪ್ರಾಯ. ಈ ವಿಷಯವಾಗಿ ಅನೇಕ ಪ್ರಯೋಗಗಳು ನಡೆಯುತ್ತಿವೆ. ಒಬ್ಬ ವಿಜ್ಞಾನಿ ಒಂದು ಪಂಜರದಲ್ಲಿ ಮರೆಮಾಚಿಕೊಳ್ಳುವ ಬಣ್ಣಗಳುಳ್ಳ ಕೀಟಗಳೊಡನೆ ಬೇರೆ ಬೇರೆ ವರ್ಣವಿನ್ಯಾಸಗಳಿದ್ದ ಕೀಟಗಳನ್ನೂ ಬಿಟ್ಟ. ಅದೇ ಪಂಜರದಲ್ಲಿ ಕೀಟಾಹಾರಿಪಕ್ಷಿಗಳನ್ನೂ ಓತಿಕೇತಗಳನ್ನೂ ಬಿಟ್ಟಾಗ ಅವು ಪ್ರಕಾಶಮಾನವಾದ ವರ್ಣವಿನ್ಯಾಸಗಳಿದ್ದ ಕೀಟಗಳ ಗೋಜಿಗೆ ಹೋಗದೆ ಮರೆಮಾಚಿಕೊಳ್ಳುವ ಬಣ್ಣಗಳಿದ್ದ ಕೀಟಗಳನ್ನು ಹಿಡಿದು ತಿಂದುವು. ಆಕ್ರಮಣಕಾರೀ ಪ್ರಾಣಿಗಳು ತಮ್ಮ ಆಹಾರವನ್ನು ವಾಸನೆಯಿಂದ ಆರಿಸಿಕೊಳ್ಳುತ್ತವೆಯೇ ವಿನಾ ದೃಷ್ಟಿಬಲದಿಂದಲ್ಲ ಎಂಬುದು ಆ ಪ್ರಯೋಗದ ತೀರ್ಮಾನ.

ಪ್ರಾಣಿಗಳ ದೃಷ್ಟಿಸಾಮರ್ಥ್ಯದ ಮೇಲೆ ಸಾಕಷ್ಟು ಪ್ರಯೋಗಗಳು ನಡೆಯುವವರೆಗೂ ಪ್ರಾಣಿಗಳ ಅನುಕರಣತಂತ್ರದ ನಿಜಸ್ವರೂಪ ಮತ್ತು ಪ್ರಭಾವಗಳ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಸಾಹಸದ ಮಾತಾಗುತ್ತದೆ. (ಎಚ್.ವಿ.ಕೆ.)

**ಅನುಕೂಲಣೆ :** ಅನುಕೂಲ ಪಡೆವ ಆವೇಗಕ್ಕೆ (ಇಂಪಲ್ಸ್) ಸರಿಸಮನಾದ ಕೊನೆಯ ಪರಿಣಾಮವಿರುವ ಒಂದು ಆವೇಗದ ಸಾಗಣೆಯಿಂದ, ಸಾಗಿಸುವ ದಾರಿಯ ಮೇಲೆ ಆಗುವ ಅನುಕೂಲಕರ ಪ್ರಭಾವಕ್ಕೆ ನರವೈದ್ಯಶಾಸ್ತ್ರದಲ್ಲಿ ಬಳಸುವ ಪದ. ಒಂದು ನರದ ಆವೇಗ ಇನ್ನೊಂದರ ಮೇಲೆ ತೋರುವ ಈ ಅನುಕೂಲಣೆ ಒಂದಾದ ಮೇಲೆ ಇನ್ನೊಂದರಂತೆಯೋ ಒಟ್ಟಾಗಿಯೋ ಆಗಬಹುದು. ಒಂದು ಆವೇಗ ಒಂದು ಬಾರಿ ಸಾಗಿಹೋದ ನರಕಣಗಳ ಹಿಮ್ಮರಿಗೆಯಲ್ಲಿ (ರಿಫ್ಲೆಕ್ಸ್) ಹೇಗೋ ಬದಲಾವಣೆ ಆಗುವುದರಿಂದ ಮುಂದಿನ ಆವೇಗಕ್ಕೆ ಅಷ್ಟೊಂದು ತಡೆಯಿರದು. ಇದರಿಂದಾಗಿ, ಗೊತ್ತಾದ ಒಂದು ಆವೇಗ ಯಾವಾಲೂ ನಿರ್ದಿಷ್ಟ ನರದ ದಾರಿಯಲ್ಲೇ ಮತ್ತೆ ಮತ್ತೆ ಸಾಗುವುದು. ಇನ್ನೆಲ್ಲೋ ಹುಟ್ಟಿದ ಆವೇಗಗಳು ಹಿಮ್ಮರಿಗೆಯ ಕೇಂದ್ರಕ್ಕೆ ಬಂದು ಹಿಮ್ಮರಿಗೆ ಮತ್ತಿರತ ನರದ ಚಟುವಟಿಕೆಯನ್ನು ಬಲಗೊಳಿಸುತ್ತವೆ. ಸಾಕಷ್ಟು ಬಲವಿಲ್ಲದ ಚೋದನೆಗಳನ್ನು (ಸ್ಟಿಮುಲಿ) ಬಳಿ ಅನುಕೂಲಣೆ ಆಗಬಹುದು. ಮುಂಚೆಯೇ ಒಂದು ಆವೇಗದಿಂದ ಚೋದನೆ ಆಗಿರುವುದರ ಪರಿಣಾಮವಾಗಿ, ಒಂದು ನರದ ಸಾಗುದಾರಿಯಲ್ಲಿ ನರದ ಆವೇಗದ ಸಾಗಣೆಯಲ್ಲಿ ಇನ್ನಷ್ಟು ಸುಲಭ ಆಗಿರುವುದಕ್ಕೆ ಬಾನಂಗ್ ಎಂಬ ಜರ್ಮನ್ ಹೆಸರಿದೆ. (ಡಿ.ಎಸ್.ಎಸ್.)

**ಅನುಕ್ರಮ ವಿಶ್ಲೇಷಣೆ :** ಸಂಖ್ಯಾಶಾಸ್ತ್ರದಲ್ಲಿ ನಿರ್ಣಯಕ್ಕೆ ಬರಲು ಅನುಸರಿಸುವ ಒಂದು ವಿಧಾನ (ಸೀಕ್ವೆನ್ಷಿಯಲ್ ಅನ್ಯಾಲಿಸಿಸ್). 1940ರ ಆದಿಭಾಗದಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದ ಪ್ರಧಾನಾಧ್ಯಾಪಕ ಅಬ್ರಹಾಂ ವಾಲ್ಡ್ ಇದನ್ನು ಬಹುಮಟ್ಟಿಗೆ ಬೆಳೆಸಿದರು. ಸಾಂಪ್ರದಾಯಿಕ ವಿಧಾನದಲ್ಲಿ (ಕ್ಲ್ಯಾಸಿಕಲ್ ಮೆಥಡ್) ಎಲ್ಲ ಅವೇಕ್ಷಣೆಗಳನ್ನೂ ಮೊದಲೇಮಾಡಿ

ನಿರ್ಣಯಕ್ಕೆ ಬರಲಾಗುತ್ತದೆ. ನಾನುಕ್ರಮವಿಶ್ಲೇಷಣೆಯಲ್ಲಿ (ನಾನ್‌ಸೀಕ್ವೆನ್ಷಿಯಲ್ ಅನ್ಯಾಲಿಸಿಸ್) ಅವೇಕ್ಷಕ ಪ್ರಯೋಗದ ಮೊದಲೇ ಅವೇಕ್ಷಣೆಗಳ ಸಂಖ್ಯೆ ನಿರ್ಧರಿಸಿ ಪ್ರಯೋಗಾನಂತರ ಸಾಂಪ್ರದಾಯಿಕ ವಿಧಾನದಿಂದ ಫಲಿತಾಂಶಗಳ ವಿಶ್ಲೇಷಣೆ ಮಾಡುತ್ತಾನೆ. ಅನುಕ್ರಮ ವಿಶ್ಲೇಷಣೆಯಲ್ಲಿ ಹೀಗಲ್ಲ. ಇಲ್ಲಿ ಅವೇಕ್ಷಣೆಗಳ ಸಂಖ್ಯೆ ಮೊದಲೇ ನಿರ್ಧಾರಿತವಾಗಿರುವುದಿಲ್ಲ; ಪ್ರಯೋಗವನ್ನು ಕೊನೆಗೊಳಿಸುವ ತೀರ್ಮಾನ ಪ್ರತಿ ಹಂತದಲ್ಲಿಯೂ ಹಿಂದಿನ ಅವೇಕ್ಷಣೆಗಳ ಫಲಿತಾಂಶವನ್ನು ಅವಲಂಬಿಸಿರುತ್ತದೆ. ಅನುಕ್ರಮ ವಿಶ್ಲೇಷಣೆಯ ಈ ವಿಧಾನವನ್ನು ಸಾಮಾನ್ಯವಾಗಿ ಯಾವ ಪ್ರಾಯೋಗಿಕ ಸಮಸ್ಯೆಯ ಬಿಡಿಸಿಕೆಗೂ ಬಳಸಬಹುದು. ಆದರೆ ಇದು ಬಹುವಾಗಿ ಔದ್ಯೋಗಿಕ ಗುಣನಿಯಂತ್ರಣ (ಇಂಡಸ್ಟ್ರಿಯಲ್ ಕ್ವಾಲಿಟಿ ಕಂಟ್ರೋಲ್). ನಮೂನಾಪರೀಕ್ಷಾ ವಿಧಾನ (ಸ್ಯಾಂಪ್ಲಿಂಗ್ ಇನ್‌ಸ್ಪೆಕ್ಷನ್ ಟೆಕ್ನಿಕ್) ಮತ್ತು ಇತ್ತೀಚೆಗೆ ವೈದ್ಯಕೀಯ ಸಂಶೋಧನೆಗಳಲ್ಲಿ ವಿವಿಧ ಔಷಧಿಗಳ ಸಾಮರ್ಥ್ಯ ಹೋಲಿಕೆ–ಇಲ್ಲೆಲ್ಲ ಹೆಚ್ಚಾಗಿ ಬಳಕೆಯಲ್ಲಿದೆ.

ಒಂದು ಆಧಾರಭಾವನೆ ಸಾಧುವೆ ಅಲ್ಲವೆ ಎಂದು ಅನುಕ್ರಮ ವಿಶ್ಲೇಷಣೆಯ ವಿಧಾನದಿಂದ ತೀರ್ಮಾನಿಸಲು ಅನುಸರಿಸುವ ಮುಖ್ಯ ಹಂತಗಳು ಈ ಮುಂದಿನಂತಿವೆ. (ಆಧಾರ ಭಾವನೆಗೆ ಒಂದು ಉದಾ : ಒಂದು ಬಲ್ಬ್ ತಯಾರಿಸುವ ಕಂಪೆನಿ ತಾನು ತಯಾರಿಸಿರುವ ವಿದ್ಯುತ್ ಬಲ್ಬ್‌ಗಳು 1000 ಗಂಟೆಗಳ ಕಾಲ ಉರಿಯುತ್ತವೆ ಎಂಬ ಆಧಾರಭಾವನೆಯನ್ನು ಸಂಖ್ಯಾಶಾಸ್ತ್ರಜ್ಞರ ಮುಂದೆ ಪರೀಕ್ಷೆಗಾಗಿ ನಿರೂಪಿಸಬಹುದು). $H$ ಎಂಬುದು ಆಧಾರಭಾವನೆ ಆಗಿರಲಿ. ಪ್ರಯೋಗದ ಯಾವ ಹಂತದಲ್ಲಾದರೂ ಈ ಮುಂದಿನ ತೀರ್ಮಾನಗಳಲ್ಲಿ ಒಂದನ್ನು ಆರಿಸಬೇಕೆಂದು ನಿಯಮ. 1. $H$ ಸರಿಯೆಂದು ಒಪ್ಪುವುದು; 2. $H$ ಸರಿಯಲ್ಲವೆಂದು ತಿರಸ್ಕರಿಸುವುದು; 3. ಮತ್ತೊಂದು ಅವೇಕ್ಷಣೆಯನ್ನು ಸೇರಿಸಿಕೊಂಡು ಪ್ರಯೋಗವನ್ನು ಮುಂದುವರಿಸುವುದು ಮತ್ತು ತೀರ್ಮಾನಕ್ಕೆ ಬರುವುದು ಅಥವಾ ಮಗದೊಂದು ಅವೇಕ್ಷಣೆಯನ್ನು ಸೇರಿಸಿಕೊಂಡು ಪುನಃ ಮುಂದುವರಿಸುವುದು.



1ನೆಯ ಅಥವಾ 2ನೆಯ ತೀರ್ಮಾನಗಳಲ್ಲಿ ಒಂದನ್ನು ನಿಶ್ಚಯಿಸಿದರೆ ಅಲ್ಲಿಗೆ ಪ್ರಯೋಗಕ್ರಮ ಕೊನೆಗೊಳ್ಳುತ್ತದೆ. 3ನೆಯ ತೀರ್ಮಾನವನ್ನು ನಿಶ್ಚಯಿಸಿದರೆ ಪ್ರಯೋಗವನ್ನು ಮುಂದುವರಿಸಬೇಕಾಗುತ್ತದೆ. ಹೀಗೆ 1ನೆಯ ಅಥವಾ 2ನೆಯ ತೀರ್ಮಾನಗಳಲ್ಲಿ ಒಂದನ್ನು ಕೈಗೊಳ್ಳುವವರೆಗೂ ಪ್ರಯೋಗ ಮುಂದುವರಿಯುತ್ತಲೇ ಇರುವುದು. ಆದ್ದರಿಂದ ಅವೇಕ್ಷಣೆಗಳ ಸಂಖ್ಯೆ $n$ ಎಂದಾದರೆ ಅದರ ಬೆಲೆ ಅವೇಕ್ಷಣೆಗಳ ಫಲಿತಾಂಶಗಳನ್ನು ಅವಲಂಬಿಸಿರುವುದರಿಂದ ಈ ಪ್ರಯೋಗಕ್ಕೆ ಎಷ್ಟು ಅವೇಕ್ಷಣೆಗಳು ಅವಶ್ಯವೆಂದು ನಿಖರವಾಗಿ ಮೊದಲೇ ಹೇಳಲಾಗುವುದಿಲ್ಲ. $n$ ಒಂದು ಯಾದೃಚ್ಛಿಕ ಚರ (ರ್‍ಯಾಂಡಮ್ ವೇರಿಯೆಬಲ್). ಇದನ್ನು ಸಾಮೂಹಿಕ ನಮೂನೆ ಸಂಖ್ಯೆ ಎಂದು ಕರೆಯುತ್ತೇವೆ.

ಅನುಕ್ರಮ ವಿಶ್ಲೇಷಣೆಯ ಮಾದರಿ ವಿಧಾನದ ನಕ್ಷೆಯನ್ನು ಇಲ್ಲಿ ತೋರಿಸಲಾಗಿದೆ. $L_0$ ಮತ್ತು $L_1$ ಎಂಬ ಎರಡು ರೇಖೆಗಳು ನಕ್ಷೆಯಲ್ಲಿ ಪ್ರದೇಶವನ್ನು ಮೂರು ವಲಯಗಳಾಗಿ ವಿಭಾಗಿಸುತ್ತವೆ. ಅಡ್ಡರೇಖೆ ಸಾಮೂಹಿಕ ನಮೂನೆ ಸಂಖ್ಯೆಯನ್ನೂ (ಕ್ಯುಮ್ಯುಲೇಟ್ಯೂ ಸ್ಯಾಂಪಲ್ ಸೈಜ್) ನೀಟರೇಖೆ ಅವೇಕ್ಷಣೆಗಳಿಗೆ ಸಂಬಂಧಿಸಿದ ಅಳತೆ $T$ ಯನ್ನೂ (ಸ್ಟ್ಯಾಟಿಸ್ಟಿಕ್ $T$; ಸರಾಸರಿ, ಅವೇಕ್ಷಣೆಗಳ ಸಂಕಲನ, ಸೇಕಡಾವಾರು ಇತ್ಯಾದಿ) ಸೂಚಿಸುತ್ತವೆ.

ಆಧಾರಭಾವನೆ $H$ ಸಾಧುವೇ ಅಲ್ಲವೇ ಎಂದು ಪರಿಶೀಲಿಸಲು ನಿರ್ಮಿಸಿಕೊಂಡ ಒಂದು ಸೂಚಕವನ್ನು ಅವಲಂಬಿಸಿ $T$ ಇದೆ. $A$ ಮತ್ತು $B$ ವಲಯಗಳು ಕ್ರಮವಾಗಿ $H$ ಭಾವನೆಯ ಅಂಗೀಕಾರ ಮತ್ತು ತಿರಸ್ಕಾರ ವಲಯಗಳನ್ನೂ $C$

ಅನಿಶ್ಚಿತ ವಲಯವನ್ನೂ ಸೂಚಿಸುತ್ತವೆ. ಈ ವಲಯಗಳನ್ನು ನಿರ್ದೇಶಿಸುವ $L_0$, $L_1$ ಗಡಿರೇಖೆಗಳ ಸಮೀಕರಣಗಳನ್ನು ಗೊತ್ತುಪಡಿಸಲು ಒಂದು ಗಣಿತ ನಿಯಮವಿದೆ. ಮೊದಲನೆಯ ಅವೇಕ್ಷಣೆಯನ್ನು (x1) ಫಲಿತಾಂಶವನ್ನು ಗುರುತಿಸಿದಾಗ ಅದು $A$ ವಲಯದಲ್ಲಿದ್ದರೆ $H$ ಅಂಗೀಕೃತವೆಂದೂ $B$ ವಲಯದಲ್ಲಿದ್ದರೆ ತಿರಸ್ಕೃತವೆಂದೂ $C$ ವಲಯದಲ್ಲಿದ್ದರೆ ಇನ್ನೊಂದು ಅವೇಕ್ಷಣೆಯನ್ನು (x 2) ನಡೆಸಿ ಪ್ರಯೋಗವನ್ನು ಮುಂದುವರಿಸಬೇಕೆಂದೂ ನಿರ್ಧರಿಸಲಾಗುತ್ತದೆ. ಪ್ರಯೋಗದ ಯಾವುದೇ ಹಂತದಲ್ಲಿ ಅವೇಕ್ಷಣೆಯ (ಅವೇಕ್ಷಣೆಗಳ) ಫಲಿತಾಂಶ ಈ ಮೂರು ವಲಯಗಳಲ್ಲಿ ಒಂದರಲ್ಲಿ ಇರಲೇಬೇಕೆಂಬುದು ಸ್ಪಷ್ಟ. ಈ (x1), (x 2) ನಮೂನಾವೇಕ್ಷಣೆಗಳನ್ನೊಳಗೊಂಡ $T$ ಬೆಲೆ $A, B$ ಅಥವಾ $C$ ಈ ಮೂರರಲ್ಲೊಂದು ವಲಯದಲ್ಲಿದ್ದರೆ $H$ ಕ್ರಮವಾಗಿ ಅಂಗೀಕೃತ, ತಿರಸ್ಕೃತ ಅಥವಾ ಅನಿಶ್ಚಿತ (ಅವೇಕ್ಷಣೆಯನ್ನು ಮುಂದುವರಿಸಬೇಕು) ಎಂದು ತಿಳಿಯಲಾಗುವುದು. ಹೀಗೆಯೆ ಈ ಪ್ರಯೋಗವನ್ನು ಅಂಗೀಕಾರ ಅಥವಾ ತಿರಸ್ಕಾರ ಎಂಬ ಒಂದು ಖಚಿತ ತೀರ್ಮಾನ ಬರುವವರೆಗೂ ಮುಂದುವರಿಸಬೇಕು. ಆಗಲೇ ಪ್ರಯೋಗ ಕೊನೆಗೊಳ್ಳುವುದು.

ಈ $A, B, C$ ಪ್ರದೇಶಗಳನ್ನು ಹಲವಾರು ವಿಧಗಳಲ್ಲಿ ನಿರ್ದೇಶಿಸಬಹುದು. ಆದರೆ ಇವುಗಳಲ್ಲಿ ಸಮರ್ಪಕರೀತಿಯನ್ನು ಆರಿಸುವುದೇ ಅನುಕ್ರಮ ವಿಶ್ಲೇಷಣೆಯಲ್ಲಿರುವ ಮೂಲ ಸಮಸ್ಯೆ. ಈ ಮುಂದೆ ಹೇಳಿರುವ ಎರಡು ಧ್ಯೇಯಗಳನ್ನು ಸಾಧಿಸಿಕೊಡುವ ರೀತಿಯೇ ಅತ್ಯುತ್ತಮ ಎನ್ನಬಹುದು.

1 ಆಧಾರಭಾವನೆ $H$ ನಿಜವಾಗಿದ್ದಾಗ ಅದನ್ನು ಅಂಗೀಕರಿಸುವ ಸಂಭಾವ್ಯತೆ (ಪ್ರಾಬಬಿಲಿಟಿ ಆಫ್ ಆ್ಯಕ್ಸೆಪ್ಟನ್ಸ್) ಗರಿಷ್ಠತಮವಾಗಿರಬೇಕು; ಅದು ನಿಜವಾಗಿಲ್ಲದಿದ್ದಲ್ಲಿ ಅದರ ಅಂಗೀಕಾರ ಸಂಭಾವ್ಯತೆ ಅತ್ಯಲ್ಪವಾಗಿರಬೇಕು.

2 $H$ ನ ತೀರ್ಮಾನಕ್ಕೆ (ಅಂಗೀಕಾರ ಅಥವಾ ತಿರಸ್ಕಾರ) ಬರಲು ಅನುಕ್ರಮ ವಿಶ್ಲೇಷಣಾ ಪದ್ಧತಿ ಅಪೇಕ್ಷಿಸುವ ಅವೇಕ್ಷಣ ಸಂಖ್ಯೆಗಳು (ಸರಾಸರಿಯ ಅರ್ಥದಲ್ಲಿ) ಅತ್ಯಲ್ಪವಾಗಿರಬೇಕು.

ಹೀಗೆ ಮೊದಲನೆಯ ಧ್ಯೇಯ $H$ ವಿಷಯದಲ್ಲಿ ಸರಿಯಾದ ತೀರ್ಮಾನಕ್ಕೆ ಬರುವ ಸಾಧ್ಯತೆಯ ಆಧಿಕ್ಯವನ್ನು ತೋರಿಸಿದರೆ ಎರಡನೆಯ ಧ್ಯೇಯ ಇದಕ್ಕೆ ಅವೇಕ್ಷಣೆಯ ರೂಪದಲ್ಲಿ ತೆರಬೇಕಾದ ಬೆಲೆಯನ್ನು ಪ್ರತಿನಿಧಿಸುತ್ತದೆ.

ಅಬ್ರಹಾಂ ವಾಲ್ಡನ ಅನುಕ್ರಮ ವಿಶ್ಲೇಷಣಾವಿಧಾನ ಬಳಕೆಗೆ ಬಂದ ಮೇಲೆ, ಹತ್ತಾರು ವರ್ಷಗಳಿಂದೀಚೆಗೆ, ಹಲವಾರು ಹೊಸರೀತಿಗಳು ತಲೆದೋರಿವೆ. ನಿರ್ಬಂಧ ಅನುಕ್ರಮ ವಿಶ್ಲೇಷಣಾವಿಧಾನಗಳು (ರೆಸ್ಟ್ರಿಕ್ಟೆಡ್ ಸೀಕ್ವೆನ್ಷಿಯಲ್ ಪ್ರೊಸೀಜರ್ಸ್) ಎಂಬುದನ್ನು ಆರ್ಮಿಟೇಜ್ ಎಂಬಾತ ಸೂಚಿಸಿದ. ಇವುಗಳನ್ನು ವೈದ್ಯಕೀಯ ಪ್ರಯೋಗಗಳಲ್ಲಿ ಯಾವುದಾದರೂ ಎರಡು ಬಗೆಯ ಚಿಕಿತ್ಸಾವಿಧಾನಗಳಲ್ಲಿ ಒಂದರ ಉತ್ತಮತೆಯನ್ನು ಕಂಡುಹಿಡಿಯುವ ಸಂದರ್ಭಗಳಲ್ಲಿ ಉಪಯೋಗಿಸಬಹುದು. ಟಿ. ಡಬ್ಲ್ಯು. ಆ್ಯಂಡರ್‌ಸನ್ ಇನ್ನೊಂದು ರೀತಿಯನ್ನು ಸೂಚಿಸಿದ್ದಾನೆ.

ವಿವಿಧ ಬೆಲೆಯ ತೀರ್ಮಾನಗಳ ಸಮಸ್ಯೆಗಳ (ಮಲ್ಟಿವ್ಯಾಲ್ಯೂಡ್ ಡಿಸಿಷನ್ ಪ್ರಾಬ್ಲಮ್ಸ್)– ಅಂದರೆ, ಒಂದು ಮೂಲಭಾವನೆಗೆ ಅನೇಕ ಪರಸ್ಪರ ಸಂಬಂಧ ರಹಿತ $K$ ಪರ್ಯಾಯ ಸಿದ್ಧಾಂತಗಳಿದ್ದು ಇವುಗಳೆಲ್ಲದರಲ್ಲಿ ಯಾವುದಾದರೂ ಒಂದರ ತೀರ್ಮಾನಕ್ಕೆ ಬರುವ ಸಂದರ್ಭಗಳಲ್ಲಿ – ಪರಿಹಾರದಲ್ಲಿ ಅನುಸರಿಸಬೇಕಾದ ಅನುಕ್ರಮ ವಿಶ್ಲೇಷಣೆಯ ವಿಧಾನದಲ್ಲಿ ಇನ್ನೂ ಅನೇಕ ಸಂಶೋಧನೆಗಳು ನಡೆಯಬೇಕಾಗಿವೆ. ಇದರಂತೆಯೇ ನಾನುಕ್ರಮ ಸಾಂಪ್ರದಾಯಿಕ ವಿಧಾನದಲ್ಲಿ ಬರುವುದಕ್ಕಿಂತಲೂ ಅಲ್ಪಾಂತರ ವಿಶ್ವಾಸದ ಅವಧಿಗಳನ್ನು (ಷಾರ್ಟರ್ ಕಾನ್ಫಿಡೆನ್ಸ್ ಇಂಟರ್ವಲ್ಸ್) ಸೂಚಿಸುವ ಅನುಕ್ರಮ ಅಂದಾಜಿನ ಸಮಸ್ಯೆಗಳ (ಸೀಕ್ವೆನ್ಷಿಯಲ್ ಎಸ್ಟಿಮೇಷನ್ ಪ್ರಾಬ್ಲೆಮ್ಸ್) ಸಾಧನೆಗಳಲ್ಲಿ ಉಪಯೋಗವಾಗುವ ಈ ಅನುಕ್ರಮ ವಿಶ್ಲೇಷಣೆಯ ವಿಧಾನಗಳಲ್ಲಿಯೂ ಹೆಚ್ಚು ಸಂಶೋಧನೆಗೆ ಅವಕಾಶವಿದೆ. (ಎನ್.ಎಸ್.ಆರ್.)

**ಅನುಗಮನ :** ಆಧುನಿಕ ಪಾಶ್ಚಾತ್ಯ ತಾರ್ಕಿಕರು ತರ್ಕಶಾಸ್ತ್ರವನ್ನು ನಿಗಮನ (ಡಿಡಕ್ಷನ್) ಮತ್ತು ಅನುಗಮನ (ಇನ್‌ಡಕ್ಷನ್) ಎಂದು ಎರಡು ಭಾಗಗಳಾಗಿ ವಿಗಂಡಿಸುತ್ತಾರೆ. ನಮ್ಮ ತಿಳಿವಿಗೆ ಎರಡು ಬಗೆಯಾದ ನಡಿಗೆ ಅಥವಾ ಗಮನಗಳುಂಟು. ಪೃಥಕ್ಕಾದ, ಬಿಡಿಬಿಡಿಯಾದ ವಿಷಯಗಳನ್ನು ಸೂತ್ರಪ್ರಾಯವಾದ ಒಂದು ಸಾಮಾನ್ಯದಲ್ಲಿ ಒಂದುಗೂಡಿಸುವುದು ನಮ್ಮ ಜ್ಞಾನಕ್ರಿಯೆಯ ಒಂದು ಬಗೆಯ ನಡೆ. ಇದೇ ಅನುಗಮನ. ಹೀಗೆ ನಾವು ಬಿಡಿಬಿಡಿಯಾದ ವಿಷಯಗಳನ್ನು ಒಂದು ಸಾಮಾನ್ಯದ ಮೂಲಕ ಒಂದುಗೂಡಿಸಿದಾಗ ಪೃಥಕ್ಕಾದ ಎಲ್ಲ ವಿಷಯಗಳನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ಈ ಕಾರಣದಿಂದ ನಾವು ಏರ್ಪಡಿಸಿದ ಸಾಮಾನ್ಯ ಸ್ವಲ್ಪಮಟ್ಟಿಗೆ ಅವ್ಯಕ್ತವಾಗಿರುವುದು ಸಹಜ. ಈ ಲೋಪವನ್ನು ತಿದ್ದಿಕೊಳ್ಳಲು ಹೊಸಹೊಸದಾಗಿ ಗೋಚರವಾಗುವ ಅದೇ ವಿಧವಾದ ಬಿಡಿವಿಷಯಗಳಿಗೆ ನಾವು ಏರ್ಪಡಿಸಿಕೊಂಡಿದ್ದ ಸಾಮಾನ್ಯವನ್ನು ಅನ್ವಯಿಸಿ, ಅವುಗಳ ಮೂಲಕ ಆ ಸಾಮಾನ್ಯವನ್ನು ಒರೆಹಚ್ಚಿ ನೋಡಬೇಕಾಗುತ್ತದೆ. ಹೀಗೆ ಒರೆಹಚ್ಚಿ ನೋಡಿದಾಗ ಅವು ಆ ಸಾಮಾನ್ಯಕ್ಕೆ ಹೊಂದಿಕೆಯಾದರೆ ಆ ಸಾಮಾನ್ಯ ಹೆಚ್ಚುಮಟ್ಟಿಗೆ ವ್ಯಕ್ತವಾಗುತ್ತದೆ; ಸ್ಥಿರವಾಗುತ್ತದೆ. ಒಂದು ಪಕ್ಷ ಹಾಗೆ ಒರೆಹಚ್ಚಿ ನೋಡಿದಾಗ ಆ ಸಾಮಾನ್ಯ ಅವಕ್ಕೆ ಹೊಂದಿಕೆಯಾಗದಿದ್ದರೆ ಅದನ್ನು ಮಾರ್ಪಡಿಸಿ, ಅದು ಹೆಚ್ಚು ಪರಿಣಾಮಕಾರಿಯಾಗುವಂತೆ ಅದರ ಲಕ್ಷಣವನ್ನು ರೂಪಗೊಳಿಸುತ್ತೇವೆ. ಹೀಗೆ ಸಾಮಾನ್ಯವನ್ನು ವಿಶೇಷಗಳಿಗೆ ಅನ್ವಯಿಸುವ ವಿಧಾನವನ್ನು ನಿಗಮನ ಎನ್ನುತ್ತಾರೆ.

ಈ ಎರಡು ಬಗೆಯ ಆಲೋಚನೆಯ ಗಮನಗಳು ಭಿನ್ನವಲ್ಲ, ವಿರುದ್ಧವಲ್ಲ. ಅವೆರಡೂ ತಿಳಿವಿಗೆ ಅಗತ್ಯವಾದ, ಪರಸ್ಪರಪೂರಕವಾದ ಜ್ಞಾನವಿಧಾನಗಳು. ಒಂದನ್ನು ಬಿಟ್ಟು ಒಂದನ್ನೇ ಹೆಚ್ಚಾಗಿ ಬಳಸಿದರೆ ಜ್ಞಾನದ ಪ್ರಗತಿಗೆ ಅಡಚಣೆಯುಂಟಾಗುತ್ತದೆ. ಅಂಥ ಸಂದರ್ಭ, ಪಾಶ್ಚಾತ್ಯ ದೇಶಗಳಲ್ಲೂ ಭಾರತದಲ್ಲೂ ಒದಗಿತ್ತು. ಪ್ರ.ಶಕದ ಆದಿಯಿಂದ 15ನೆಯ ಶತಮಾನದವರೆಗೆ ಯುರೋಪಿನಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದುದು ನಿಗಮನತರ್ಕವೊಂದೇ. ಅದಕ್ಕೆ ಚಾರಿತ್ರಿಕ ಕಾರಣಗಳುಂಟು. ಆ ಕಾಲದಲ್ಲಿ ತಾರ್ಕಿಕರು ವಿಶೇಷವಾಗಿ ಅರಿಸ್ಟಾಟಲನ ತರ್ಕವನ್ನೇ ಆದರ್ಶವಾಗಿಟ್ಟುಕೊಂಡಿದ್ದರು. ಆತ ತನ್ನ ತರ್ಕಗ್ರಂಥದಲ್ಲಿ ವಿಶೇಷವಾಗಿ ನಿಗಮನತರ್ಕಕ್ಕೆ ಪ್ರಾಶಸ್ತ್ಯಕೊಟ್ಟಿದ್ದ. ಅನುಗಮನತರ್ಕವಿಧಾನವನ್ನು ಸ್ವಲ್ಪಮಟ್ಟಿಗೆ ಸೂಚಿಸಿದ್ದನಾದರೂ ಅದನ್ನು ಮಧ್ಯಯುಗದ ಯುರೋಪಿನ ತಾರ್ಕಿಕರು ಲಕ್ಷಿಸದೆ

ಅವನ ನಿಗಮನತರ್ಕವನ್ನು ಮಾತ್ರ ಆಶ್ರಯಿಸಿದರು. ಹೊಸ ಹೊಸ ವಿಷಯಗಳನ್ನು ತಿಳಿಯಬೇಕೆಂಬ ಕುತೂಹಲವಿಲ್ಲದ್ದರಿಂದ ಅವರಿಗೆ ಅನುಗಮನತರ್ಕ ಅಗತ್ಯವಾಗಿ ತೋರಲಿಲ್ಲ. ಅದರ ಪರಿಣಾಮವಾಗಿ ಅವರ ಜ್ಞಾನ–ಮುಖ್ಯವಾಗಿ ಪ್ರಕೃತಿಗೆ ಸಂಬಂಧಿಸಿದ ಜ್ಞಾನ – ಬೆಳೆಯದೆ ದೀರ್ಘಕಾಲ ಅವರು ಅಂಧಕಾರದಲ್ಲಿ ಮುಳುಗಿದ್ದರು.

ಭಾರತದಲ್ಲಿ ತಾರ್ಕಿಕರು ಬಹಳ ಹಿಂದಿನ ಕಾಲದಲ್ಲೇ ಅನುಗಮನ ನಿಗಮನಗಳು ಒಂದನ್ನೊಂದು ಎಡೆಬಿಡದ ಪ್ರಕ್ರಿಯೆಗಳೆಂದು ತಿಳಿದಿದ್ದರು. ಅವರ ಪಂಚಾವಯವ ಅನುಮಾನ ವಾಕ್ಯದಲ್ಲಿ ಮಧ್ಯದ ಅವಯವದಲ್ಲಿ ಅನುಗಮನಕ್ರಿಯೆ ಅಡಗಿತ್ತು. ಅನುಮಾನವಾಕ್ಯ ಪೂರ್ಣವಾಗಲು ಅದಕ್ಕೆ ನಿಗಮನದಷ್ಟೇ ಅನುಗಮನವೂ ಅಗತ್ಯವೆಂದು ಸ್ಪಷ್ಟವಾಗಿ ತಿಳಿಸಿದ್ದರು. ಆದರೆ ಮಧ್ಯಯುಗದ ಪಾಶ್ಚಾತ್ಯರಂತೆ ಭಾರತೀಯರಿಗೂ ಮುಖ್ಯವಾಗಿ ಪ್ರ.ಶ. 10ನೆಯ ಶತಮಾನದಿಂದ 19ನೆಯ ಶತಮಾನದವರೆಗೆ ಹೊಸ ವಿಷಯಗಳನ್ನು ಕಂಡುಹಿಡಿಯುವ ಕುತೂಹಲವಿರಲಿಲ್ಲ. ಆದ್ದರಿಂದ ಅವರು ಅನುಗಮನಕ್ರಿಯೆಯ ಬಹುರೂಪಗಳನ್ನು ವಿಸ್ತರಿಸದೆ ತರ್ಕಶಾಸ್ತ್ರವನ್ನು ಕುಂಠಿತಗೊಳಿಸಿದರು. ಪ್ರ.ಶ. 16ನೆಯ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ವಿಜ್ಞಾನಶ್ರದ್ಧೆ ಹುಟ್ಟಿದಾಗ ಅನುಗಮನ ನ್ಯಾಯದ ಅಗತ್ಯ ಅವರಿಗೆ ಮನವರಿಕೆಯಾಯಿತು. ಈ ಕಾಲದಲ್ಲಿದ್ದ ಬೇಕನ್ ಎಂಬ ವಿಜ್ಞಾನಪ್ರೇಮಿ, ಗೆಲಿಲಿಯೊ ಮುಂತಾದ ವೈಜ್ಞಾನಿಕರು ಅನುಸರಿಸಿದ ಅನುಗಮನತರ್ಕವಿಧಾನಕ್ಕೆ ಇಂಡಕ್ಷನ್ ಎಂಬ ಹೆಸರುಕೊಟ್ಟು ಅದನ್ನು ಸ್ವಲ್ಪಮಟ್ಟಿಗೆ ವಿವರಿಸಿದನು.

ಬೇಕನ್ ವಿವರಿಸಿರುವ ಅನುಗಮನತರ್ಕವಿಧಾನ ತುಂಬ ಸರಳವಾದದ್ದು. ಅವನು ಮುಖ್ಯವಾಗಿ ಒತ್ತಿಹೇಳಿದ್ದು ಇದು: ಪ್ರಕೃತಿಯ ಸತ್ಯವನ್ನು ತಿಳಿಯಬೇಕಾದರೆ ನಾವು ಎಲ್ಲ ಬಗೆಯ ಪೂರ್ವಕಲ್ಪನೆಗಳನ್ನೂ ಬದಿಗಿಟ್ಟು ಪ್ರಕೃತಿಯ ಒಂದೊಂದು ಅಂಶವನ್ನೂ ಕಣ್ಣಿಟ್ಟುನೋಡಬೇಕು. ಸ್ಪಷ್ಟವಾಗಿ ಕಂಡ ವಿಷಯಗಳನ್ನು ತದ್ವತ್ತಾಗಿ ನಿಷ್ಪಕ್ಷವಾಗಿ ಕರಾರುವಾಕ್ಕಾಗಿ ವರ್ಣಿಸಬೇಕು. ಕಂಡದ್ದರಲ್ಲಿ ಯಾವುದನ್ನೂ ನಮ್ಮ ಮತ ಭಾವನೆಗಳಿಗೆ ವಿರುದ್ಧವೆಂದು ಕೈಬಿಡಬಾರದು; ಹೀಗಿದ್ದರೆ ಚೆನ್ನು ಎಂದು ನಮ್ಮ ಅಭಿಮಾನಗಳಿಗೆ ವಶರಾಗಿ ನಮಗೆ ಮೆಚ್ಚಿಕೆಯಾದುದನ್ನು ಆರೋಪಿಸಲೂಬಾರದು; ಹಾಗೆ ಮಾಡಿದಾಗ ಕಂಡ ವಿಷಯವನ್ನು ವಿರೂಪಗೊಳಿಸಿ ಸತ್ಯದಿಂದ ವಿಮುಖರಾಗುತ್ತೇವೆ. ವಾಸ್ತವವಾಗಿ ಕಂಡ ವಿಷಯಗಳಲ್ಲಿ ಇರಬಹುದಾದ ಸಾಮಾನ್ಯಲಕ್ಷಣಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಅವುಗಳ ಆಧಾರದ ಮೇಲೆ ಪ್ರಕೃತಿಯ ನಿಯಮಗಳನ್ನು ಸ್ಪಷ್ಟವಾಗಿ ನಿರೂಪಣೆಮಾಡಬೇಕು. ಬೇಕನ್ ನಿಯಮ ನಿರೂಪಣೆಗೆ ವಿಷಯಗಳ ಎಣಿಕೆಯನ್ನು (ಎನ್ಯೂಮರೇಷನ್) ಆಧಾರವಾಗಿಟ್ಟುಕೊಂಡ ಸಾಮ್ಯವಿರುವ ವಿಷಯಗಳ ಸಂಖ್ಯೆ ಹೆಚ್ಚಿದಷ್ಟೂ ನಿಯಮ ನಿರೂಪಣೆಯೂ ಹೆಚ್ಚು ಪ್ರಬಲವಾಗುತ್ತದೆ ಎಂದು ಇವನ ಮತ.

ದೃಷ್ಟಾಂತಗಳ ಎಣಿಕೆಯನ್ನು ಮಾತ್ರ ಆಶ್ರಯಿಸುವುದು ಉತ್ತಮಮಾರ್ಗವಲ್ಲ. ಕೇವಲ ಎಣಿಕೆಯ ಮೇಲೆ ರೂಪಿಸಿದ ನಿಯಮ ಭದ್ರವಲ್ಲ. ಅದಕ್ಕೆ ಆಧಾರವಾಗಿ ನಾವು ಸಂಗ್ರಹಿಸಿದ ಸಾವಿರ ವಿಷಯಗಳಲ್ಲಿ ಸಾಮ್ಯವಿರಬಹುದು. ಆದರೆ ವಿರುದ್ಧವಾದ ಒಂದು ವಿಷಯ ಕಾಣಿಸಿಕೊಂಡಾಗ ಅದು ಉರುಳಿ ಬೀಳುತ್ತದೆ. ಅಲ್ಲದೆ ಕೇವಲ ಅವೇಕ್ಷಣ (ಅಬ್ಸರ್‌ವೇಷನ್) ಕೂಡ ಹೆಚ್ಚು ಪರಿಣಾಮಕಾರಿಯಲ್ಲ. ಕಂಡ ವಿಷಯವನ್ನು ವಿಶ್ಲೇಷಿಸಿ (ಅನಲೈಸ್) ನೋಡಿದಾಗ ಅದರ ಮರ್ಮ ತೆರೆದು ಕಾಣುತ್ತದೆ. ವಿಶ್ಲೇಷಣೆಯಿಂದ ನಾವು ವಿಷಯವನ್ನು ಒಳಹೊಕ್ಕು ನೋಡಲು ಸಾಧ್ಯವಾಗುತ್ತದೆ. ನಾವು ತಿಳಿಯಬೇಕೆಂದಿರುವ ಸತ್ಯಕ್ಕೆ ಯಾವ ಅಂಶ ನೇರವಾಗಿ ಸಂಬಂಧಿಸಿದುದು ಯಾವುದು ಆಗಂತುಕ ಎಂಬುದನ್ನು ತಿಳಿಯಲು ವಿಶ್ಲೇಷಣೆ ನೆರವಾಗುತ್ತದೆ. ಈ ವಿಶೇಷಣದ ಅಗತ್ಯತೆಯನ್ನು ಬೇಕನ್ ಸ್ಪಷ್ಟವಾಗಿ ತಿಳಿಯಲಿಲ್ಲ. ಇದಕ್ಕಿಂತ ಇನ್ನೂ ಫಲಕಾರಿಯಾದ ವಿಧಾನ, ಕಲ್ಪನೆಯ ವಿಧಾನ (ಮೆಥಡ್ ಆಫ್ ಹೈಪಾಥಿಸಿಸ್). ಇದಕ್ಕೆ ಪ್ರತಿಭೆ ಅಗತ್ಯ. ವಿಷಯಗಳನ್ನು ಕೂಡಿಹಾಕಬಹುದು. ವಿಶ್ಲೇಷಿಸಬಹುದು. ಆದರೆ ಅವುಗಳಲ್ಲಿ ಅಡಗಿರುವ ಮರ್ಮವನ್ನು ತಿಳಿಯಬೇಕಾದರೆ ಊಹೆ ಮಾಡಬಲ್ಲ ಶಕ್ತಿಬೇಕು. ಅಂಥ ಊಹಾಶಕ್ತಿ ಇದ್ದುದರಿಂದಲೇ ನ್ಯೂಟನ್ ಭೂಮಿಯ ಚಲನವನ್ನೂ ಆಕಾಶದಲ್ಲಿರುವ ಗ್ರಹಗಳ ಚಲನವನ್ನೂ ತನ್ನ ಪ್ರತಿಭೆಯ ಬಲದಿಂದ ಸೂತ್ರಿಸಿ ಗುರುತ್ವಾಕರ್ಷಣ ಕಲ್ಪನೆಯನ್ನು ಏರ್ಪಡಿಸಿಕೊಂಡ. ಕಲ್ಪನೆ ಬರಿಯ ಕಲ್ಪನೆಯಾಗಿಯೇ ಉಳಿದರೆ ಅದಕ್ಕೆ ಅಷ್ಟು ಬಲವಿಲ್ಲ. ಅದು ಫಲಕಾರಿಯಾದ ಕಲ್ಪನೆಯಾಗಬೇಕು. ಅದನ್ನಾಶ್ರಯಿಸಿದಾಗ ವಿಷಯಗಳಲ್ಲಿ ಹೆಚ್ಚು ಹೆಚ್ಚಿನ ಸಾಂಗತ್ಯ ತೋರಬೇಕು. ಅದಕ್ಕಿಂತ ಮುಖ್ಯವಾಗಿ ವಿಷಯದ ಒರೆಗಲ್ಲಿಗೆ ಹಚ್ಚಿದಾಗ, ಪ್ರಯೋಗ ನಡೆಸಿದಾಗ ಅದು ವಾಸ್ತವಕ್ಕೆ ಸರಿತೂಗಬೇಕು. ಅನುಗಮನತರ್ಕಕ್ಕೆ ಸಂಬಂಧಪಟ್ಟ ಈ ಅಂಶಗಳಿಗೆ ಬೇಕನ್ ಗಮನಕೊಡಲಿಲ್ಲ.

ಈ ಎಲ್ಲ ಅಂಶಗಳಿಗೆ ಗಮನಕೊಟ್ಟು ಅನುಗಮನತರ್ಕವನ್ನು ಬೆಳೆಸಿದವನು ಜಾನ್ ಸ್ಟೂವರ್ಟ್ ಮಿಲ್ ಎಂಬ ಆಂಗ್ಲೇಯ ತಾರ್ಕಿಕ. ಅವನು ಅನುಗಮನತರ್ಕವನ್ನು ವಿಸ್ತರಿಸಲು ಅನುಕೂಲವಾದುದಕ್ಕೆ ಭೌತ ಮತ್ತು ರಾಸಾಯನಿಕ ವಿಜ್ಞಾನದಲ್ಲಿ ಅವನ ಕಾಲಕ್ಕಾಗಲೇ ಆಗಿದ್ದ ಪ್ರಗತಿ ಮುಖ್ಯಕಾರಣ. ಪಾಶ್ಚಾತ್ಯರಲ್ಲಿ ಮೊಟ್ಟಮೊದಲಾಗಿ ಅನುಗಮನ ನಿಗಮನವೆರಡನ್ನೂ ಒಳಗೊಂಡ ತರ್ಕಶಾಸ್ತ್ರವನ್ನು ನಿರ್ಮಿಸಿದ ಖ್ಯಾತಿ ಅವನಿಗೆ ಸಲ್ಲುತ್ತದೆ. ಅವನ ನಿಗಮನ ಅನುಗಮನ ತರ್ಕದ ಮುಖ್ಯ ವಿಧಾನಗಳು ಎರಡು: 1 ಅನುಗಮನಕ್ಕೆ ಪೂರ್ವಿಯಾದ ನಿಗಮನವಿಧಾನ, 2 ನಿಗಮನಕ್ಕೆ ಪೂರ್ವಿಯಾದ ಅನುಗಮನವಿಧಾನ. ಮೊದಲನೆಯದನ್ನು ಭೌತವಿಧಾನವೆಂದೂ ಎರಡನೆಯದನ್ನು ಚಾರಿತ್ರಿಕ ವಿಧಾನವೆಂದೂ ಕರೆದಿದ್ದಾನೆ. ಈ ಹೆಸರುಗಳೂ ವಿಂಗಡನೆಯೂ ಅಷ್ಟೇನೂ ಸಮರ್ಪಕವಾದುದಲ್ಲ. ಏಕೆಂದರೆ ಭೌತವಿಜ್ಞಾನದಲ್ಲಿ ಅವನು ಹೇಳಿರುವ ಎರಡು ವಿಧಾನಗಳೂ ಪರಸ್ಪರ ಸಹಕಾರಿಗಳಾಗಿ ಬಳಕೆಯಾಗಿವೆ.

ವಿಷಯದ ಅವೇಕ್ಷಣ, ಸಂಗ್ರಹಣ, ವಿಶ್ಲೇಷಣಗಳ ಮೂಲಕ ಅಗತ್ಯವಾದ ಅಂಶಗಳಿಂದ ಅನಗತ್ಯವಾದ ಅಂಶಗಳ ಪೃಥಕ್ಕರಣ, ವಿಷಯಗಳನ್ನು ಒಂದುಗೂಡಿಸುವ ಭಾವನೆಯ ಊಹೆ, ನಿಗಮನದಿಂದ ವಿಸ್ತರಿಸಿ, ಊಹೆಯನ್ನು ಪ್ರಯೋಗದಿಂದ ರುಜುವಾತುಮಾಡುವುದು–ಇವು ಅನುಗಮನತರ್ಕದ ವಿವಿಧ ಪರಸ್ಪರ ಪೂರಕ ಮಾರ್ಗಗಳು. ಈ ಮಾರ್ಗಗಳನ್ನು ಬಿಡಿಬಿಡಿಯಾಗಿ ಅಥವಾ ಅವುಗಳಲ್ಲಿ ಎರಡನ್ನೂ ಸೇರಿಸಿ ಅಥವಾ ಎಲ್ಲವನ್ನೂ ಸೇರಿಸಿ ಯಾವ ಸಂದರ್ಭದಲ್ಲಿ ಹೇಗೆ ಉಪಯೋಗಿಸಿಕೊಳ್ಳಬಹುದೆಂಬುದು ಅನುಗಮನದ ಒಂದು ಮುಖ್ಯಪ್ರಶ್ನೆ.

ಇದಕ್ಕೆ ಉತ್ತರವಾಗಿ ಮಿಲ್ ಐದು ವಿಧಾನಗಳನ್ನು ಸೂಚಿಸಿದ್ದಾನೆ : 1 ಸಪಕ್ಷ ವಿಧಾನ (ಮೆಥಡ್ ಆಫ್ ಅಗ್ರಿಮೆಂಟ್) ; 2 ವ್ಯತ್ಯಾಸವಿಧಾನ (ಮೆಥಡ್ ಆಫ್ ಡಿಫರೆನ್ಸ್) 3 ಸಪಕ್ಷ ಮತ್ತು ವಿಪಕ್ಷಗಳ ಜೋಡಣೆ ವಿಧಾನ (ಜಾಯಿಂಟ್ ಮೆಥಡ್ ಆಫ್ ಅಗ್ರಿಮೆಂಟ್ ಆ್ಯಂಡ್ ಡಿಫರೆನ್ಸ್); 4 ಸಂಗಾಮಿವ್ಯತ್ಯಯಗಳ ವಿಧಾನ (ಮೆಥಡ್ ಆಫ್ ಕನ್‌ಕಾಮಿಟೆಂಟ್ ವೇರಿಯೇಷನ್) ; 5 ಶೇಷವಿಧಾನ (ಮೆಥಡ್ ಆಫ್ ರೆಸಿಡ್ಯೂಸ್): ಇವನ್ನು ಕಾರ್ಯಕಾರಣ ಸಂಬಂಧಗಳನ್ನು ನಿರ್ಧರಿಸುವ ವಿಧಾನಗಳೆಂದು ಕರೆಯುವುದುಂಟು.'

ಅವೇಕ್ಷಣ ಮತ್ತು ವಿಷಯ ಸಂಗ್ರಹಣಗಳೆರಡನ್ನೂ ಸ್ವಲ್ಪಮಟ್ಟಿಗೆ ವಿಭಜನಮಾರ್ಗವನ್ನೂ ಮಿಲ್ ತನ್ನ ಸಪಕ್ಷವಿಧಾನದಲ್ಲಿ ಉಪಯೋಗಿಸಿಕೊಂಡಿದ್ದಾನೆ. ಜೊತೆಗೆ ವಿಭಜನವಿಧಾನ, ಪ್ರಾಯೋಗಿವಿಧಾನಗಳನ್ನು ವ್ಯತ್ಯಾಸದ ವಿಧಾನದಲ್ಲೂ ಸಂಗಾಮಿ ವ್ಯತ್ಯಯಗಳ ವಿಧಾನದಲ್ಲೂ ಉಪಯೋಗಿಸಿಕೊಂಡಿರುತ್ತಾನೆ. ಆದರೆ ಊಹೆಯ ವಿಧಾನವನ್ನು ಆತ ಉಪಯೋಗಿಸಿ ಕೊಂಡಿಲ್ಲ.

ಸಪಕ್ಷವಿಧಾನಕ್ಕೆ ಒಂದು ಉದಾಹರಣೆ: ಒಂದು ಊರಿನಲ್ಲಿ ವಿಷಮಶೀತಜ್ವರ ಹುಟ್ಟಿತೆಂದಿಟ್ಟುಕೊಳ್ಳೋಣ. ಇದು ಹುಟ್ಟಲು ಕಾರಣವೇನೆಂಬುದನ್ನು ಆ ಊರಿನ ಪುರಸಭೆಯವರು ಪತ್ತೆಮಾಡಬೇಕಾಗುತ್ತದೆ. ಜ್ವರ ಹತ್ತು ಜನರಿಗೆ ಬಂದಿದ್ದರೆ ಅವರೆಲ್ಲರೂ ಒಂದೇ ಬಾವಿಯ ನೀರನ್ನೂ ಒಬ್ಬನೇ ಗೋವಳಿಗ ಕೊಟ್ಟ ಹಾಲನ್ನೂ ಕುಡಿದದ್ದು ಅಥವಾ ಒಂದೇ ಅಂಗಡಿಯಿಂದ ಕೊಂಡ ತರಕಾರಿಯನ್ನು ತಿಂದದ್ದು ಕಾರಣವಾಗಿರಬಹುದು. ಇವುಗಳಲ್ಲಿ ನಿಜವಾಗಿ ಯಾವುದು ಕಾರಣ? ಹತ್ತು ಜನಕ್ಕೂ ಸಮಾನವಾದ ಅಂಶ ಯಾವುದು ಎಂಬುದನ್ನು ಕಂಡುಹಿಡಿದಿದ್ದರೆ ಅದು ಜ್ವರಕ್ಕೆ ಕಾರಣವೆಂದು ಹೇಳಬಹುದು. ಹತ್ತು ಜನರೂ ಒಬ್ಬನೇ ಗೋವಳಿಗ ಕೊಟ್ಟ ಹಾಲನ್ನು ಸೇವಿಸಿದ್ದರೆ ಬಹುಶಃ ಅದು ಅದಕ್ಕೆ ಕಾರಣವಾಗಬಲ್ಲುದು.

ಆದರೆ ಇದು ನಿರ್ದುಷ್ಟವಾದ ವಿಧಾನವಲ್ಲ. ಹತ್ತು ಜನ ಒಬ್ಬ ಗೋವಳಿಗನ ಹಾಲನ್ನು ಕುಡಿದಿದ್ದರೂ ಅದೇ ಆ ಜ್ವರಕ್ಕೆ ಕಾರಣವೆಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಅದಕ್ಕಿಂತ ಬೇರೆ ಕಾರಣವಿರಬಹುದು. ಹಾಲಿಗೆ ಸೇರಿಸಿದ ನೀರು ಕಾರಣವಿರಬಹುದು. ಈ ವಿಧಾನದಲ್ಲಿರುವ ದೌರ್ಬಲ್ಯವನ್ನು ಪರಿಹರಿಸಲು ಎರಡು ಮಾರ್ಗಗಳು ಇವೆ. ವಿಪಕ್ಷದೃಷ್ಟಾಂತಗಳನ್ನು ಪರಿಶೀಲಿಸುವುದು. ವಿಪಕ್ಷದೃಷ್ಟಾಂತಗಳೆಂದರೆ ಕಾಯಿಲೆಗೆ ಒಳಗಾಗದವರೆಲ್ಲರೂ ಸೇವಿಸಿದ ಪದಾರ್ಥಗಳನ್ನು ಪರಿಶೀಲಿಸುವುದು. ಜ್ವರಬಾರದೇ ಇರುವುವವರಲ್ಲಿ ಯಾರೊಬ್ಬರೂ ಆ ಗೋವಳಿಗ ಕೊಟ್ಟ ಹಾಲನ್ನು ಕುಡಿಯದವರಾಗಿದ್ದರೆ ಆಗ ಹಾಲೇ ಕಾರಣವೆಂಬುದು ಹೆಚ್ಚು ದೃಢವಾಗುತ್ತದೆ. ಹೀಗೆ ಸಪಕ್ಷದೃಷ್ಟಾಂತಗಳ ಜೊತೆಯಲ್ಲಿ ವಿಪಕ್ಷ ದೃಷ್ಟಾಂತಗಳನ್ನೂ ಪರಿಶೀಲಿಸಿ ಒಂದು ಅಂಶ ಸಪಕ್ಷದೃಷ್ಟಾಂತಗಳೇ ಇದರಲ್ಲೂ ಇದ್ದುದಾಗಿ, ವಿಪಕ್ಷದೃಷ್ಟಾಂತಗಳಲ್ಲೆಲ್ಲ ಇಲ್ಲದಾಗಿ ತಿಳಿದಾಗ ಸಪಕ್ಷವಿಧಾನಕ್ಕೆ ವಿಪಕ್ಷವಿಧಾನದ ಬೆಂಬಲ ದೊರೆತು ಅದು ಬಲಗೊಳ್ಳುತ್ತದೆ. ಅದಕ್ಕಿಂತ ಹೆಚ್ಚು ದೃಢವಾಗಬೇಕಾದರೆ, ವ್ಯತ್ಯಾಸವಿಧಾನವನ್ನು ಅನುಸರಿಸಬೇಕು. ಪ್ರಯೋಗವೇ ಈ ವಿಧಾನಕ್ಕೆ ಇರುವ ಬಲ. ಉರಿಯುವುದಕ್ಕೆ ಆಮ್ಲಜನಕ ಕಾರಣ ಎಂದು ನಿರ್ದಿಷ್ಟವಾಗಿ ಹೇಳಬೇಕಾದರೆ ಒಂದೇ ಒಂದು ಪ್ರಯೋಗ ಸಾಕು. ಆಮ್ಲಜನಕವಿರುವ ಜಾಡಿಯಲ್ಲಿ ದೀಪವಿಟ್ಟರೆ ಉರಿಯುತ್ತದೆ. ಆಮ್ಲಜನಕವಿಲ್ಲದ ಜಾಡಿಯಲ್ಲಿ ದೀಪವಿಟ್ಟರೆ ಆರಿಹೋಗುತ್ತದೆ. ಈ ವ್ಯತ್ಯಾಸವನ್ನು ಪ್ರಾಯೋಗಿಕವಾಗಿ ತೋರಿಸಿದಾಗ ಸಂಶಯಕ್ಕೆ ಅವಕಾಶವಿಲ್ಲವಾಗುತ್ತದೆ. ಆದ್ದರಿಂದ ವ್ಯತ್ಯಾಸವಿಧಾನ ಸಪಕ್ಷವಿಧಾನಕ್ಕಿಂತ ಪ್ರಬಲವಾದದ್ದು.

ಸಂಗಾಮಿವ್ಯತ್ಯಯಗಳ ವಿಧಾನದಿಂದ ಕಾರ್ಯಕಾರಣದ ಸಂಬಂಧ ಇನ್ನೂ ಹೆಚ್ಚು ನಿರ್ದಿಷ್ಟವಾಗುತ್ತದೆ. ಅದರ ಮೂಲಕ ಕಾರಣದ ಪ್ರಮಾಣಕ್ಕೂ ಕಾರ್ಯದ ಪ್ರಮಾಣಕ್ಕೂ ಸಂಬಂಧವೇರ್ಪಡಿಸಬಹುದು. ಕಾರಣಾಂಶದ ಪ್ರಮಾಣ ಕಡಿಮೆ ಮಾಡಿದರೆ ಕಾರ್ಯದ ಪ್ರಮಾಣ ಅದೇ ಪ್ರಮಾಣದಲ್ಲಿ ಬದಲಾಯಿಸಿದರೆ ಅವೆರಡಕ್ಕಿರುವ ಸಂಬಂಧ ತುಂಬ

ಖಚಿತವಾಗುತ್ತದೆ. ಸಂಗಾಮಿವ್ಯತ್ಯಯ ವಿಧಾನಕ್ಕೆ ಬಾಯಿಲ್ ಎಂಬ ಭೌತವಿಜ್ಞಾನಿ ನಡೆಸಿದ ಒಂದು ಪ್ರಯೋಗ ಒಳ್ಳೆಯ ಉದಾಹರಣೆ. ವಾಯುಮಾಪಕದ ಸಹಾಯದಿಂದ ವಾಯುವಿನ ಒತ್ತಡವನ್ನು ಅಳತೆ ಮಾಡುವುದರ ಮೂಲಕ ಬೆಟ್ಟಗಳ ಎತ್ತರವನ್ನು ಅಳೆಯಲು ಅವನು ಪ್ರಯತ್ನಿಸಿದ. ಅದರಂತೆ ಕಾರಣವಾದ ವಾಯುವಿನ ಪ್ರಮಾಣದಲ್ಲಿ ವ್ಯತ್ಯಾಸವಾದರೆ ತತ್ಪರಿಣಾಮವಾಗಿ ಕಾರ್ಯವಾದ ವಾಯುಮಾಪಕ ಯಂತ್ರ ಪಾದರಸದ ಏರಿಳಿತದಲ್ಲಿ ವ್ಯತ್ಯಾಸವಾಗುತ್ತದೆಂಬುದನ್ನು ತೋರಿಸಿಕೊಟ್ಟ. ಸಮುದ್ರಮಟ್ಟದಲ್ಲಿ ವಾಯುವಿನ ಒತ್ತಡದ ಪ್ರಮಾಣ ಹೆಚ್ಚು, ಆದ್ದರಿಂದ ವಾಯುಮಾಪಕ ಯಂತ್ರದಲ್ಲಿ ಪಾದರಸದ ಮಟ್ಟ 30" ಎತ್ತರಕ್ಕೆ ಏರಿ ನಿಲ್ಲುತ್ತದೆ. ಮೂರುಸಾವಿರ ಅಡಿಗಳಷ್ಟು ಎತ್ತರವಿರುವ ಬೆಟ್ಟದ ತುದಿಯಲ್ಲಿ ವಾಯುವಿನ ಒತ್ತಡ ಆ ಎತ್ತರಕ್ಕೆ ಅನುಸಾರವಾಗಿ ಕಡಿಮೆ. ಒಂದೊಂದು ಸಾವಿರ ಅಡಿ ಮೇಲಮೇಲಕ್ಕೆ ಹೋದಂತೆಲ್ಲ ವಾಯುಮಾಪಕ ಯಂತ್ರದಲ್ಲಿರುವ ಪಾದರಸದ ಮಟ್ಟ ಒಂದೊಂದು ಅಂಗುಲ ಇಳಿಯುತ್ತದೆ. ಬಾಯಿಲ್ ಸಮುದ್ರಮಟ್ಟದಿಂದ ವಾಯುಮಾಪಕ ಯಂತ್ರವನ್ನು 1000 ಅಡಿ ಎತ್ತರಕ್ಕೆ ತೆಗೆದುಕೊಂಡು ಹೋದಾಗ ಪಾದರಸದ ಮಟ್ಟ ಒಂದು ಅಂಗುಲದಷ್ಟು ಇಳಿಯಿತು. ಮೂರು ಸಾವಿರ ಅಡಿ ಇತ್ತರಕ್ಕೆ ತೆಗೆದುಕೊಂಡು ಹೋದಾಗ ಮೂರಂಗುಲದಷ್ಟು ಇಳಿಯಿತು. ಇಲ್ಲಿ ಉಪಯೋಗವಾಗಿರುವುದು ಸಂಗಾಮಿವ್ಯತ್ಯಯಗಳ ವಿಧಾನ.

ಮೇಲಿನ ಉದಾಹರಣೆಯಲ್ಲಿ ಸಂಗಾಮಿವ್ಯತ್ಯಯಗಳ ವಿಧಾನ ಪ್ರಯೋಗಸಹಿತವಾಗಿದೆ. ಆದರೆ ಈ ವಿಧಾನಕ್ಕೆ ಪ್ರಯೋಗಿಕ ನೆರವಿದ್ದೇ ಇರಬೇಕೆಂಬ ನಿರ್ಬಂಧವಿಲ್ಲ. ಪ್ರಯೋಗ ನಡೆಸಲು ಸಾಧ್ಯವಿಲ್ಲದಂಥ ಸಂದರ್ಭಗಳಲ್ಲೂ ಸಂಗಾಮಿವ್ಯತ್ಯಯವಿಧಾನವನ್ನು ಅನುಸರಿಸಿ ಕಾರ್ಯಕಾರಣಸಂಬಂಧವನ್ನು ಖಚಿತವಾಗಿ ತಿಳಿಯಬಹುದು. ಆರ್ಯಪ್ರಮಾಣಕ್ಕೂ ಆರೋಗ್ಯಸೌಕರ್ಯಕ್ಕೂ ಇರುವ ಕಾರ್ಯಕಾರಣಸಂಬಂಧವನ್ನು ಪ್ರಯೋಗ ನಡೆಸಿ ನಿರ್ಧರಿಸುವುದು ಕಷ್ಟ ಆದರೆ ಸಂಗಾಮಿವ್ಯತ್ಯಯ ವಿಧಾನದಿಂದ ಅದನ್ನು ನಿರ್ಧರಿಸಬಹುದು. ನಾವು ಜನನಮರಣ ಲೆಕ್ಕಗಳ ಮೂಲಕ 1950–60ರವರೆಗಿನ ಹತ್ತು ವರ್ಷಗಳಲ್ಲಿ ಸರಾಸರಿ ಆಯುಃಪ್ರಮಾಣವೆಷ್ಟಿತ್ತು? 1940–50ರಲ್ಲಿ, 1930–40ರಲ್ಲಿ, 1920–30ರಲ್ಲಿ ಎಷ್ಟಿತ್ತು ಎಂಬುದನ್ನು ತಿಳಿದುಕೊಳ್ಳಬಹುದು. ಸರ್ಕಾರಿದಾಖಲೆಗಳಿಂದ ಆಯಾ ಅವಧಿಗಳಲ್ಲಿ ಎಷ್ಟೆಷ್ಟು ಆಸ್ಪತ್ರೆಗಳಿದ್ದುವು? ಎಷ್ಟು ಜನಕ್ಕೆ ದೇವಿಹಾಕಲಾಯಿತು? ಎಷ್ಟು ಜನಕ್ಕೆ ಕಾಲರ, ಪ್ಲೇಗು ಮತ್ತು ಇನ್ನಿತರ ಜಾಡ್ಯಗಳಿಗೆ ತಡೆಯಾಗಿ ಚುಚ್ಚುಮದ್ದನ್ನು ಕೊಡಲಾಯಿತು ? ಎಂಬುದನ್ನೂ ತಿಳಿದುಕೊಳ್ಳಬಹುದು. ಆಯುಃ ಪ್ರಮಾಣವನ್ನು, ವೈದ್ಯಕೀಯ ಸೌಕರ್ಯದ ಪ್ರಮಾಣಕ್ಕೆ ಹೋಲಿಸಿದರೆ ಅವೆರಡಕ್ಕಿರುವ ಸಂಬಂಧವನ್ನು ನಿರ್ಧರಿಸಬಹುದು. ಹೀಗೆ ಕಾರ್ಯಕಾರಣಸಂಬಂಧವನ್ನು ಪ್ರಯೋಗಗಳ ನೆರವಿಲ್ಲದೆ ತಿಳಿಯಲು ಅನುಕೂಲವಾಗಿರುವುದು, ಸಂಗಾಮಿವ್ಯತ್ಯಯ ವಿಧಾನದ ಒಂದು ದೊಡ್ಡ ಗುಣ.

ಒಂದು ಸಂಕೀರ್ಣಘಟನೆಯ ಕೆಲವು ಪರಿಣಾಮಗಳಿಗೆ ಕೆಲವು ಅಂಶಗಳು ಕಾರಣವೆಂದು ಈ ಎಲ್ಲ ವಿಧಾನಗಳಿಂದ ತಿಳಿದ ಮೇಲೂ ಘಟನೆಯ ಒಂದು ಅಂಶದ ಕಾರಣ ತಿಳಿಯದೆ ಉಳಿಯಬಹುದು. ಶೇಷವಿಧಾನ ಉಳಿಕೆಯಾದ ಅಂಶಕ್ಕೆ ಕಾರಣ ಹುಡುಕಬೇಕೆಂದು ಸೂಚಿಸುತ್ತದೆ. ಆದರೆ ಅದೇ ಆ ಕಾರಣವನ್ನು ತಿಳಿಸುವುದಿಲ್ಲ. ಉಳಿದ ಕಾರಣವನ್ನು ತಿಳಿಯಲು ಕಲ್ಪನೆಯ ವಿಧಾನವನ್ನು ಉಪಯೋಗಿಸಿಕೊಳ್ಳ ಬೇಕಾಗುತ್ತದೆ. ಈ ಕಲ್ಪನೆಯ ಅಥವಾ ಊಹೆಯ ವಿಧಾನವನ್ನು ಮಿಲ್ ತಿಳಿದಿರಲಿಲ್ಲ. ಅವನು ಅದನ್ನು ವರ್ಣಿಸಿಯೂ ಇಲ್ಲ. ಕಲ್ಪನೆಯ ವಿಧಾನ ಹೀಗಿದೆ: ಪ್ರತಿಭೆಯಿಂದ ಊಹಿಸಿದ್ದನ್ನು ನಿಗಮನತರ್ಕದ ನೆರವಿನಿಂದ ಹೀಗಿದ್ದರೆ ಹೀಗಾಗುತ್ತದೆ ಎಂದು ತರ್ಕಮಾಡಿ ಕೆಲವು ಅನುಮಿತಿಗಳನ್ನು ಪಡೆಯುತ್ತೇವೆ. ಅನಂತರ ಅವೊಂದೊಂದನ್ನೂ ವಾಸ್ತವಕ್ಕೆ ಒರೆಹಚ್ಚಿ ಅವುಗಳಲ್ಲಿ ಯಾವ ಒಂದು ವಾಸ್ತವಕ್ಕೆ ಸಂಗತವಾಗುತ್ತದೋ ಅದನ್ನು ನಿಜವೆಂದು ಒಪ್ಪಿಕೊಳ್ಳುತ್ತೇವೆ.

ಶೇಷವಿಧಾನ ಹಾಗೂ ಕಲ್ಪನೆಯ ವಿಧಾನ–ಎರಡನ್ನೂ ಸ್ಪಷ್ಟಪಡಿಸುವ ದೃಷ್ಟಾಂತ ಇದು. ಬೇರೆ ಬೇರೆ ಸಂಯೋಗವಸ್ತುಗಳನ್ನು ವಿಭಜಿಸಿ ಪಡೆದ ಸಾರಜನಕದ ತೂಕ ಒಂದೇ ರೀತಿಯಾಗಿತ್ತು. ಆದರೆ ಗಾಳಿಯಿಂದ ಪಡೆದ ಸಾರಜನಕದ ತೂಕ ಇತರ ಪದಾರ್ಥಗಳಿಂದ ಪಡೆದ ಸಾರಜನಕದ ತೂಕಕ್ಕಿಂತ ಹೆಚ್ಚಾಗಿ ಕಂಡುಬಂತು. ಈ ಉಳಿಕೆಯ ತೂಕಕ್ಕೆ ಕಾರಣವೇನು ಎಂಬ ಸಮಸ್ಯೆ ಹುಟ್ಟಿತು! ಈ ಸಮಸ್ಯೆಯನ್ನು ಪರಿಹರಿಸಲು ಕಲ್ಪನೆಯ ವಿಧಾನವನ್ನು ಉಪಯೋಗಿಸಿಕೊಳ್ಳಲಾಯಿತು. ಗಾಳಿಯಿಂದ ಪಡೆದ ಸಾರಜನಕದ ತೂಕ ಹೆಚ್ಚಾಗಿದ್ದರೆ ಅದಕ್ಕೆ ಕಾರಣವಿರಬೇಕು. ಹಾಗೆ ಹೆಚ್ಚು ತೂಕವಿರಬೇಕಾದರೆ ಆ ಸಾರಜನಕದೊಡನೆ ಹೆಚ್ಚಿದ ತೂಕದ ಬೇರೊಂದು ಅನಿಲ ಬೆರಕೆಯಾಗಿರಬಹುದೆ ಎಂಬ ಊಹೆ ಹುಟ್ಟಿತು. ಈ ಊಹೆ ಸರಿಯೆ? ತಪ್ಪೆ ? ಇದನ್ನು ನಿರ್ಧರಿಸುವುದು ಹೇಗೆ ? ಸಾರಜನಕವನ್ನು ಯಾವ ಬಗೆಯಿಂದಾದರೂ ವಿಶ್ಲೇಷಿಸಿ ಅದರೊಡನೆ ಬೆರಕೆಯಾದ ಅನಿಲವನ್ನು ಪ್ರತ್ಯೇಕಿಸಿ ತೂಗಿ ಅದರ ತೂಕ ಹೆಚ್ಚಿನದೆಂದು ಕಂಡುಬಂದರೆ ಆ ಊಹೆ ವಾಸ್ತವವಾಗುತ್ತದೆ. ಈ ಅನುಮಿತಿ ಕೇವಲ ಔಪಾಧಿಕವಾದದ್ದು. ವಾಸ್ತವಕ್ಕೆ ಸಂಗತವೆಂದು ತಿಳಿದಾಗ ಮಾತ್ರ ಇದು ನಿರುಪಾಧಿಕವಾಗುತ್ತದೆ. ವಾಸ್ತವಕ್ಕೆ ಸಂಗತವೆಂದು ನಿರ್ಧರಿಸಬೇಕಾದರೆ ಇಲ್ಲ ಅವೇಕ್ಷಣ ವಿಧಾನ ನಿರುಪಯೋಗಿ. ಎಷ್ಟೇ ಜಾಗರೂಕತೆಯಿಂದ ಪರೀಕ್ಷಿಸಿದರೂ ಆ ಅನಿಲ ಬೇರ್ಪಡುವುದಿಲ್ಲ. ಇಲ್ಲಿ ವಿಭಜನೆ ಅಗತ್ಯ. ಆ ವಿಭಜನೆಯೂ ಪ್ರಾಯೋಗಿಕವಾಗಿ ಯಂತ್ರಸೌಕರ್ಯದಿಂದಲೇ ನಡೆಯಬೇಕು. ಅಂಥದೊಂದು ವಿಧಾನವನ್ನು ಕಂಡುಹಿಡಿಯಲಾಯಿತು. ಇದಕ್ಕೆ ಸೋಸುವ (ಫಿಲ್ಟರ್) ವಿಧಾನವೆಂದು ಹೆಸರು. ಹೀಗೆ ಗಾಳಿಯನ್ನು ಸೋಸಿದಾಗ ಅದರ ಹೆಚ್ಚು ಭಾಗ ಸೋಸುವ ಮಾಧ್ಯಮದ ಮೂಲಕ ಹಾದುಹೋಯಿತು. ಸೋಸಿ ಹೋಗದ ಸ್ವಲ್ಪಭಾಗ ಈಚೆಕಡೆ ಉಳಿದುಕೊಂಡಿತು. ಇಷ್ಟಕ್ಕೆ ಸಮಸ್ಯೆ ಪರಿಹಾರವಾಯಿತೆಂದು ತಿಳಿಯಕೂಡದು. ಸೋಸಿಬಂದ ಸಾರಜನಕದ ತೂಕವೂ ಸಂಯೋಜಿತವಸ್ತುಗಳಿಂದ ಪಡೆದ ಸಾರಜನಕದ ತೂಕವೂ ಒಂದೇ ಆಗಿದೆಯೇ ಎಂಬುದನ್ನು ಪರೀಕ್ಷಿಸಬೇಕು. ಈ ಒಂದೊಂದನ್ನೂ ತೂಕಮಾಡಿ ಅವೆರಡೂ ತೂಕದಲ್ಲಿ ವಾಸ್ತವವಾದುವೆಂದು ನಿರ್ಧರಿಸಲಾಯಿತು. ಊಹೆ ಸ್ಥಿರಪಟ್ಟಿತು. ಈ ಹೆಚ್ಚಿನ ತೂಕದ ಅನಿಲಕ್ಕೆ ಆರ್ಗಾನ್ ಎಂದು ಹೆಸರಿಟ್ಟರು. ಇದು ಸಾರಜನಕಕ್ಕೆ ಹತ್ತಿರದ ಸಂಬಂಧಿಯಾದ ಅನಿಲವೆಂಬುದೂ ಸ್ಪಷ್ಟವಾಯಿತು. ಶೇಷವಿಧಾನ, ಕಲ್ಪನೆಯ ವಿಧಾನ, ವಿಶ್ಲೇಷಣ ವಿಧಾನ, ಪ್ರಾಯೋಗಿಕ ವಿಧಾನ, ನಿಗಮನ ವಿಧಾನ–ಈ ಎಲ್ಲ ವಿಧಾನಗಳೂ ಸೇರಿ ತರ್ಕ ಹೇಗೆ ಪರಿಣಾಮಕಾರಿ ಯಾಗುತ್ತದೆಂಬುದು ಈ ಮೇಲಿನ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

ಅನುಗಮನತರ್ಕ ಈ ಎಲ್ಲ ವಿಧಾನಗಳಿಂದ ಮಾತ್ರ ಪೂರ್ಣಗೊಳ್ಳುವುದಿಲ್ಲ. ಅದನ್ನು ಪೂರ್ಣಗೊಳಿಸಲು ಈಚಿನಕಾಲದಲ್ಲಿ ಇನ್ನೆರಡು ವಿಧಾನಗಳನ್ನು ಬಳಸಲಾಗಿದೆ. ಇವುಗಳಲ್ಲಿ ಒಂದಕ್ಕೆ ಪರಿಣಾಮವಿಧಾನ (ಎವಲ್ಯೂಷನರಿ ಮೆಥಡ್) : ಇನ್ನೊಂದಕ್ಕೆ ಬೆಳೆವಣಿಗೆಗಳ ಹೋಲಿಕೆಯ ವಿಧಾನ (ಕಂಪ್ಯಾರಿಟಿವ್ ಮೆಥಡ್) ಎಂದು ಹೆಸರು. ಇವೆರಡೂ ಒಂದೇ ವಿಧಾನದ ಎರಡು ಬಗೆಗಳು. ಇವು ವಿಶೇಷವಾಗಿ ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಭಾಷಾವಿಜ್ಞಾನ, ಸಮಾಜಶಾಸ್ತ್ರ ಮುಂತಾದ ಜ್ಞಾನಶಾಖೆಗಳಲ್ಲಿ ಉಪಯೋಗವಾಗಿವೆ. ಒಂದು ಅವ್ಯಕ್ತವಾದ ಮೂಲಾವಸ್ಥೆಯಿಂದ ವಿವಿಧಸಸ್ಯಗಳೂ ವಿವಿಧ ಪ್ರಾಣಿಗಳೂ ವಿವಿಧಭಾಷೆಗಳೂ ವಿವಿಧ ಸಾಮಾಜಿಕಸಂಸ್ಥೆಗಳೂ ಹೇಗೆ ಕ್ರಮಕ್ರಮವಾಗಿ ಬೆಳೆದಿವೆ ಎಂಬುದನ್ನು ಪರಿಣಾಮವಿಧಾನದಿಂದ ಕಾಣಬಹುದು.

ಈಚೆಗೆ ಹುಟ್ಟಿದ ಇನ್ನೊಂದು ಪದ್ಧತಿಗೆ ಸಂಖ್ಯಾಪದ್ಧತಿ (ಸ್ಟ್ಯಾಟಿಸ್ಟಿಕಲ್ ಮೆಥಡ್) ಎಂದು ಹೆಸರು. ತುಂಬ ಜಟಿಲವಾದ ಘಟನೆಗಳನ್ನು ಮಾನಸಿಕ ಮತ್ತು ಸಾಮಾಜಿಕ ಘಟನೆಗಳನ್ನು ಪ್ರಯೋಗವಿಧಾನದಿಂದ ಅಷ್ಟಾಗಿ ತಿಳಿಯಲಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಸಂಖ್ಯಾವಿಧಾನದ ಉಪಯೋಗ ಅತ್ಯಗತ್ಯವಾಗುತ್ತದೆ. ಇದು ಬೇಕನ್ ಅನುಸರಿಸಿದ ಸರಳ ಎಣಿಕೆಯ ಮಾರ್ಗದ್ದಾಗಿರದೆ ತುಂಬ ವ್ಯವಸ್ಥಿತವಾದ ಎಣಿಕೆಯ ವಿಧಾನವಾಗಿದೆ.

ಸಂಖ್ಯಾಸಂಗ್ರಹಣದ ಮೂಲಕ ಒಂದು ನಿಯಮವನ್ನು ಸ್ಥಾಪಿಸಬೇಕಾದರೆ ನಾಲ್ಕು ಹಂತಗಳಲ್ಲಿ ವಿಚಾರ ನಡೆಸಬೇಕಾಗುತ್ತದೆ.

1 ಒಂದು ಸಮಸ್ಯೆಗೆ ಸಂಬಂಧಪಟ್ಟ ವಿಷಯಗಳನ್ನು ಅಳೆದು ಎಣಿಸಿ ವರ್ಣಿಸಬೇಕು. ಸಮಸ್ಯೆ ತೆಂಗಿನಕಾಯಿಗೆ ಸಂಬಂಧಪಟ್ಟಿದ್ದರೆ, ಪರೀಕ್ಷೆಗಾಗಿ ಇಟ್ಟುಕೊಳ್ಳುವ ತೆಂಗಿನಕಾಯಿಗಳ ಸಂಖ್ಯೆ, ಗಾತ್ರ, ತೂಕ, ಎಷ್ಟೆಂಬುದನ್ನು ಸ್ಪಷ್ಟವಾಗಿ ವರ್ಣಿಸಬೇಕು. 2 ಆ ವರ್ಣನೆಯನ್ನು ಆಧಾರವಾಗಿಟ್ಟುಕೊಂಡು ತೆಂಗಿನಕಾಯಿಗಳನ್ನು ಗುಂಪು ಗುಂಪುಗಳಾಗಿ ವರ್ಗೀಕರಿಸಬೇಕು. 300 ಗ್ರಾಂ ತೂಕದವು. 400 ಗ್ರಾಂ ತೂಕದವು. ಆರಂಗುಲ, ಏಳಂಗುಲ, ಎಂಟಂಗುಲ, ಒಂಬತ್ತಂಗುಲ ವ್ಯಾಸವುಳ್ಳವು ಹೀಗೆ ವರ್ಗೀಕರಿಸಬಹುದು. 3 ವರ್ಗೀಕರಣಮಾಡಿದ ವಿಷಯಗಳ ಗೋಷ್ವಾರೆಯನ್ನು ತಿಳಿದುಕೊಳ್ಳಬೇಕು. ತೆಂಗಿನಕಾಯಿಗಳ ಗೋಷ್ವಾರೆ ತಿಳಿಯುವುದೆಂದರೆ ನೂರು ಕಾಯಿಗಳನ್ನು ವಿಚಾರಕ್ಕೆ ಆಧಾರ ಇಟ್ಟುಕೊಂಡಿದ್ದರೆ ಆ ತೆಂಗಿನಕಾಯಿಗಳ ಸರಾಸರಿ ಗಾತ್ರ, ತೂಕಗಳನ್ನು ನಿಶ್ಚಯಿಸಬೇಕು. 4 ವಿಷಯಗಳ ತಾತ್ಪರ್ಯ ತಿಳಿದಮೇಲೆ ಅವುಗಳಿಗಿರುವ ಸಂಬಂಧವನ್ನು ಕಂಡುಹಿಡಿಯುವುದು ಕೊನೆಯ ಹಂತ, ತೆಂಗಿನಕಾಯಿಯ ವ್ಯಾಸಕ್ಕೂ ಅದರ ತೂಕಕ್ಕೂ ಸಂಬಂಧವಿದೆಯೇ ಎಂಬುದನ್ನು ಕಂಡುಹಿಡಿದು, ಆ ಸಂಬಂಧವನ್ನು ಗಣಿತರೂಪದಲ್ಲಿ ಸೂತ್ರಿಸುವುದು. ಈ ಸಂಬಂಧಕ್ಕೆ ಸಾಹಚರ್ಯ (ಅಸೋಸಿಯೇಷನ್) ಸಂಬಂಧವೆಂದು ಹೆಸರು. ತೆಂಗಿನಕಾಯಿ ಗಾತ್ರಕ್ಕೂ, ತೂಕಕ್ಕೂ ಪೂರ್ಣಸಾಹಚರ್ಯವಿದ್ದರೆ ಆ ಸಾಹಚರ್ಯವನ್ನು 1 ಎಂಬ ಸೂತ್ರಚಿಹ್ನೆಯಿಂದ ಸಂಕೇತಿಸಬಹುದು. ಆ ಸಾಹಚರ್ಯ ಅಪೂರ್ಣವಾಗಿದ್ದರೆ 6 ಅಥವಾ 3 ಎಂಬ ಚಿಹ್ನೆಯಿಂದ ಸಂಕೇತಿಸಬಹುದು. ಈ ಸಾಹಚರ್ಯ ಎರಡು ಬಗೆಯಾಗಿರಬಹುದು. ಒಂದು ಭಾವಸಾಹಚರ್ಯ (ಪಾಸಿಟಿವ್ ಅಸೋಸಿಯೇಷನ್), ಎರಡು ಅಭಾವಸಾಹಚರ್ಯ (ನೆಗೆಟಿವ್ ಅಸೋಸಿಯೇಷನ್), ಪೂರ್ಣ ಭಾವಸಾಹಚರ್ಯದ ಸಂಕೇತ + 1, ಪೂರ್ಣ ಅಭಾವ ಸಾಹಚರ್ಯದ ಸಂಕೇತ–1. ಅಪೂರ್ಣಭಾವಸಾಹಚರ್ಯದ ಸಂಕೇತ 0.1 – 0.9ರ ವರೆಗೆ ಯಾವುದಾದರೂ ಆಗಬಹುದು. ಅಪೂರ್ಣಾಭವಸಾಹಚರ್ಯದ ಸಂಕೇತ –1–9ರವರೆಗೆ ಯಾವುದಾದರೂ ಆಗಬಹುದು.

ಇಂಥ ಸಾಹಚರ್ಯ ಪೂರ್ಣವಾಗಿರುವುದು ಅಸಂಭವ. ಸಂಖ್ಯಾವಿಧಾನದಿಂದ ನಿಶ್ಚಿತಸತ್ಯ ತಿಳಿಯುವುದಿಲ್ಲ. ಅದು ತಿಳಿಸುವುದು ಸಂಭವನೀಯ ಸತ್ಯವನ್ನು ಮಾತ್ರ. ಒಂದು ನಾಣ್ಯವನ್ನು ಹಾರಿಸಿದಾಗ ಅದರ ತಲೆ ಎಷ್ಟು ಸಲ ಮೇಲಾಗಿ ಬೀಳುತ್ತದೆ

ಎಂಬುದನ್ನು ತಿಳಿಯಬೇಕಾದಾಗ ಕೇವಲ ಬೌದ್ಧಿಕವಾಗಿ ತರ್ಕದಿಂದ ಊಹಿಸುವುದಾದರೆ ನಾಣ್ಯವನ್ನು ಎರಡುಸಲ ಹಾರಿಸಿದಾಗ ಒಂದುಸಲ ತಲೆ ಮೇಲಾಗಿ ಬೀಳುತ್ತದೆಂದು ಊಹಿಸಬಹುದು. ಆದರೆ ವಾಸ್ತವವಾಗಿ ಎರಡುಸಲ ನಾಣ್ಯವನ್ನು ಹಾರಿಸಿದಾಗ ಎರಡುಸಲವೂ ತಲೆಮೇಲಾಗಿ ಬೀಳಬಹುದು. ಅಥವಾ ಎರಡುಸಲವೂ ತಲೆಕೆಳಗಾಗಿ ಬೀಳದಿರಬಹುದು, ಆದರೆ ಐದುನೂರು ಸಲ ಹಾರಿಸಿದಾಗ ಅವುಗಳ ಸರಾಸರಿ ಸಾಹಚರ್ಯದಷ್ಟು 1/2 ದಷ್ಟು ಇರುತ್ತದೆ. ಇಲ್ಲಿನದು ಸರಾಸರಿ ಸತ್ಯ. ಆದ್ದರಿಂದ ಹೆಚ್ಚುಸಲ ಹಾರಿಸಿ ಸರಾಸರಿಯನ್ನು ನಿರ್ಧರಿಸಿದರೆ ಅದರ ಸಂಭವನೀಯತೆ ಹೆಚ್ಚು ನಿರ್ದಿಷ್ಟವಾಗುತ್ತದೆ.

ಈ ಎಲ್ಲ ಬಗೆಯ ಅನುಗಮನವಿಧಾನಗಳನ್ನೂ ತಿಳಿದುಕೊಂಡಮೇಲೆ ಮುಖ್ಯವಾಗಿ ಲಕ್ಷಿಸಬೇಕಾದ ತಾರ್ಕಿಕ ಸತ್ಯವೇನೆಂಬುದನ್ನು ನೋಡೋಣ. ತರ್ಕದಲ್ಲಿ ಅನುಗಮನ ಮತ್ತು ನಿಗಮನ ಎಂಬ ಭಾಗಗಳು ಒಂದಕ್ಕೊಂದು ಸೇರದೆ ಒಂದಕ್ಕೊಂದು ಪೋಷಕವಾಗದೆ ಇರಲಾರವು. ಸತ್ತ್ವಯುತವಾದ ಜೀವಂತವಾದ ನಮ್ಮ ಆಲೋಚನೆಯ ನಡೆ ಕೇವಲ ಒಮ್ಮುಖವಾದುದಲ್ಲ. ಅದರ ಗಮನ ಹಿಂದಕ್ಕೂ ಮುಂದಕ್ಕೂ ಹರಿಯುತ್ತದೆ; ಹಿಂದಿನದನ್ನು ಮುಂದಿನದಕ್ಕೂ ಮುಂದಿನದನ್ನು ಹಿಂದಿನದಕ್ಕೂ ಸೇರಿಸುತ್ತ ವ್ಯವಹರಿಸುತ್ತದೆ. ಅದಕ್ಕೆ ಹಿನ್ನೋಟ ಮುನ್ನೋಟಗಳು ಎರಡು ರೆಕ್ಕೆಗಳಿದ್ದಂತೆ. ಆ ಎರಡು ರೆಕ್ಕೆಗಳು ಸಮಸಮನಾಗಿ ಬಡಿದಾಗಲೆಲ್ಲ ಮೇಲೆ ಏರುವುದಕ್ಕೂ ಕೆಳಗೆ ಇಳಿಯುವುದಕ್ಕೂ ಸುತ್ತುವುದಕ್ಕೂ ಸಾಧ್ಯವಾಗುವುದು. ಸತ್ತ್ವಯುತವಾದ ಆಲೋಚನೆಯಲ್ಲಿ ಅನುಗಮನವೂ ನಿಗಮನವೂ ಪರಸ್ಪರವಾಗಿ ಸಹಕರಿಸಿ ಪರಸ್ಪರತೆಯಿಂದ ಪ್ರಬಲಗೊಳ್ಳುತ್ತವೆ. **(ನೋಡಿ– ನಿಗಮನ)** (ಜಿ.ಎಚ್.)

**ಅನುಗ್ರಹ :** ದೇವರು ಮಾನವನಿಗೆ ತೋರುವ ಕೃಪೆ. ಅದರಂತೆ ಗುರು ಶಿಷ್ಯನಿಗೆ, ರಾಜ ಪ್ರಜೆಗೆ, ತಂದೆ ಮಗನಿಗೆ ತೋರುವ ಕೃಪೆಯೂ ಅನುಗ್ರಹವಾಗಬಲ್ಲದು. ಎಲ್ಲ ಆಸ್ತಿಕಮತದವರೂ ದೇವರ ಅನುಗ್ರಹವನ್ನು ನೆಚ್ಚಿರುತ್ತಾರೆ. ಕ್ರೈಸ್ತಧರ್ಮದಲ್ಲಿ ಮುಖ್ಯವಾಗಿ ರೋಮನ್ ಕೆಥೊಲಿಕ್ ಪಂಥದಲ್ಲಿ ಅನುಗ್ರಹಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಹಿಂದೂಧರ್ಮದಲ್ಲಿ ಕರ್ಮ ಮತ್ತು ಕೃಪೆಗಳನ್ನು ಸಮನ್ವಯಗೊಳಿಸುವ ಪ್ರಯತ್ನ ನಡೆದಿದೆ. ಕರ್ಮದ ಶೃಂಖಲೆಯನ್ನು ಬಿಡಿಸಿಕೊಳ್ಳಲು ದುರ್ಬಲಮಾನವನ ಪ್ರಯತ್ನ ಸಾಲದೆಂದು, ಭಗವಂತನ ಅನುಗ್ರಹ ಬೇಕೆಂದು ತಿಳಿಸಿದ್ದಾರೆ. ಇದನ್ನೇ ವೈಷ್ಣವ ಹಾಗೂ ಶೈವಭಕ್ತರು ಅರುಳ್ ಎನ್ನುತ್ತಾರೆ. ಕನ್ನಡ ನಾಡಿನ ಶಿವಶರಣರೂ ಹರಿದಾಸರೂ ತಮ್ಮ ಕೀರ್ತನೆಗಳಲ್ಲಿ ದೇವರ ಅನುಗ್ರಹಕ್ಕೆ ಹಾತೊರೆಯುವುದನ್ನು ಕಾಣುತ್ತೇವೆ.

ದೇವರ ಕೃಪೆ ಎರಡು ವಿಧ : ಒಂದು ಮನುಷ್ಯನ ಪ್ರಯತ್ನವಿಲ್ಲದೆ ದೊರೆಯುವ ಕೃಪೆ; ಮತ್ತೊಂದು ಮನುಷ್ಯಯತ್ನಕ್ಕೆ ದೇವರು ತೋರಿಸುವ ಕೃಪೆ. ವೈಷ್ಣವ ದಾರ್ಶನಿಕರಲ್ಲಿ ಮಾರ್ಜಾಲ ಕಿಶೋರನ್ಯಾಯ, ಮರ್ಕಟ ಕಿಶೋರನ್ಯಾಯ ಎಂಬ ವಾದಗಳಿವೆ. ಮಂಗನ ಮರಿ ಬದುಕಬೇಕಾದರೆ ತನ್ನ ತಾಯಿಯನ್ನು ಅಪ್ಪಿಕೊಳ್ಳಬೇಕು. ಹಾಗೆ ಜೀವಾತ್ಮರು ಪ್ರಯತ್ನ ಮಾಡಿದಾಗ ಮಾತ್ರ ಉದ್ಧಾರದ ಸಲುವಾಗಿ ಭಗವಂತ ಅನುಗ್ರಹ ನೀಡುತ್ತಾನೆ ಎಂಬುದೊಂದು ವಾದ. ಬೆಕ್ಕು ತನ್ನಮರಿಯನ್ನು ತಾನೆ ಎತ್ತಿಕೊಂಡು ಸ್ಥಳಾಂತರಿಸಿ ಸಲಹುವಂತೆ ಪರಮಾತ್ಮ ಜೀವಿಗಳನ್ನು ಉದ್ಧಾರ ಮಾಡಲು ತಾನೇ ಕೈಹಿಡಿದು ನಡೆಸುತ್ತಾನೆ ಎಂಬುದು ಇನ್ನೊಂದು ವಾದ. ಈ ರೀತಿಯ ವಿಭಿನ್ನವಾದಗಳು ಕ್ರೈಸ್ತಧರ್ಮದಲ್ಲೂ ಕಾಣಬರುತ್ತವೆ. ಇದನ್ನು ಪೆಲೇಜಿಯನ್ ವಾದ ಎನ್ನುತ್ತಾರೆ. **(ನೋಡಿ – ಪ್ರಪತ್ತಿ)** (ಜಿ.ಎಚ್.; ಎಂ.ವೈ.)

**ಅನುಜ್ಞೆ, ಅನುಜ್ಞಾಧಾರಿ :** ಒಂದು ಸ್ಥಿರ ಆಸ್ತಿಯನ್ನು ನಿರ್ದಿಷ್ಟ ರೀತಿಯಲ್ಲಿ ಉಪಯೋಗಿಸಲು ಅದರ ಒಡೆಯನಿಂದ ಅನುಜ್ಞೆ (ಅನುಮತಿ; ಲೈಸೆನ್ಸ್) ಪಡೆದವ (ಲೈಸೆನ್ಸೀ). ಇಂಡಿಯನ್ ಈಸ್‍ಮೆಂಟ್ಸ್ ಆಕ್ಟ್‌ನ 52ನೆಯ ಸೆಕ್ಷನ್ ಅನುಜ್ಞೆಯ ಅರ್ಥವನ್ನು ನಿರ್ದಿಷ್ಟಪಡಿಸಿದೆ. ಅಂಥ ಅನುಜ್ಞೆಯಿಲ್ಲದೆ ನಡೆಸುವ ಪರಾಸ್ತಿಯ ಅನುಭೋಗ ನ್ಯಾಯಬಾಹಿರವಾಗುತ್ತದೆ. ಇದರಲ್ಲಿ ಆಸ್ತಿಯ ಹಕ್ಕಿನ ಹಸ್ತಾಂತರವಿಲ್ಲ. ಮನೆಗೆ ಬರುವ ಅತಿಥಿ, ನಾಟಕ ಇತ್ಯಾದಿಯನ್ನು ನೋಡಲು ಟಿಕೇಟು ಪಡೆದವ–ಇಂಥವರ ವಿಚಾರದಲ್ಲಿ ಅನುಜ್ಞೆ ವ್ಯಕ್ತರೂಪದಲ್ಲಿರಬಹುದು, ಇಲ್ಲವೆ ಅನುಜ್ಞಾದಾತನ (ಲೈಸೆನ್ಸರ್) ನಡೆವಳಿಕೆಯನ್ನನುಸರಿಸಿ ಅವ್ಯಕ್ತವಾಗಿರಬಹುದು. ಅನುಜ್ಞೆಯ ಮುಖ್ಯ ಅಂಶಗಳೆಂದರೆ, ಅದು ವೈಯಕ್ತಿಕವಾಗಿ ಅನುಗ್ರಹಿಸಲ್ಪಟ್ಟಿದ್ದು ಹಸ್ತಾಂತರ ಮಾಡಲ್ಪಡುವಂಥದಲ್ಲ; ತಾನು ಆಸ್ತಿಯನ್ನು ಉಪಯೋಗಿಸುವುದಕ್ಕೆ ಇನ್ನೊಬ್ಬ ಬಾಧಕ ಮಾಡಿದನೆಂದು ದೂರುವ ಹಕ್ಕು ಅನುಜ್ಞಾಧಾರಿಗಿಲ್ಲ ; ಅನುಜ್ಞೆಕೊಟ್ಟವ ಅಂಥ ಅನುಮತಿಯನ್ನು ರದ್ದು ಮಾಡಬಹುದು; ಅನುಜ್ಞಾದಾತ ಆಸ್ತಿಯನ್ನು ಹಸ್ತಾಂತರಮಾಡಿದರೆ ಕೊಟ್ಟ ಅನುಮತಿ ರದ್ದಾಗುವುದು. ಅನುಜ್ಞಾಧಾರಿಗೆ ತಾನು ಆಸ್ತಿಯನ್ನು ಅನುಭೋಗಿಸುವಾಗ ಅದಕ್ಕೆ ಲಭ್ಯವಾಗಬಹುದಾದ ಆಸ್ತಿವೃದ್ಧಿಯ ಮೇಲೆ ಹಕ್ಕಿರುವುದಿಲ್ಲ. ಅನುಜ್ಞಾದಾತನಿಗೆ ಆಸ್ತಿಯಲ್ಲಿರುವ ಹಕ್ಕಿಗೆ ಅನುಜ್ಞೆ ಒಳಗಾಗಿರಬೇಕು.

ವಸತಿಗೃಹ, ಪ್ರವಾಸಿ ಮಂದಿರ, ನಾಟ್ಯಗೃಹ ಮುಂತಾದುವುಗಳಿಗೆ ಪ್ರವೇಶ ಪಡೆಯುವ ವ್ಯಕ್ತಿಗಳು ಕೇವಲ ಅನುಜ್ಞಾಧಾರಿಗಳಾಗಿರುತ್ತಾರೆ. ಒಬ್ಬ ಒಡೆಯ ತನ್ನ ಮನೆಯ ಒಂದು ಭಾಗದಲ್ಲಿರಲು ಒಬ್ಬನಿಗೆ ಅನುಮತಿಕೊಟ್ಟು ಆ ಭಾಗವನ್ನು ತನ್ನ ನಿಯಂತ್ರಣದಲ್ಲೇ ಇಟ್ಟುಕೊಂಡರೆ ಅಂಥ ಅತಿಥಿ ಅನುಜ್ಞಾಧಾರಿಯಾಗುತ್ತಾನೆ. ಅನುಮತಿ ನೀಡಿಕೆಗೆ ಮೌಲ್ಯವಿರಬಹುದು. ನಾಟ್ಯಗೃಹಪ್ರವೇಶದ ಅನುಮತಿಗೆ ಅವಧಿ ನಿರ್ದಿಷ್ಟವಿರಬಹುದು; ಅನಂತರ ಅನುಜ್ಞೆ ಪಡೆದವನು ಅಲ್ಲಿರಕೂಡದು. ಆದರೆ ಆ ಅವಧಿಯ ಮಧ್ಯೆ ಅವನನ್ನು ಅನುಜ್ಞೆಕೊಟ್ಟವ ಹೊರಗೆ ಹಾಕಲಾರ. ಜಮೀನಿನಲ್ಲಿರುವ ಮರಗಳನ್ನು ಕಡಿಯುವುದೇ ಮುಂತಾದ ಕಾಮಗಾರಿಗಳಿಗೆ ಪಡೆದ ಅನುಮತಿ ಅಂಥ ಕೆಲಸ ಮುಗಿಯುವ ತನಕ ಊರ್ಜಿತದಲ್ಲಿರುತ್ತದೆ. ಅಲ್ಲದೆ, ಆ ಬಗ್ಗೆ ಆ ಜಮೀನಿಗೆ ಹೋಗುವ ಅವ್ಯಕ್ತ ಅನುಜ್ಞೆಯನ್ನು ಅದು ಒಳಗೊಂಡಿರುತ್ತದೆ.

ಅನುಜ್ಞಾಧಾರಿ ತನ್ನ ಅನುಮತಿಯನ್ನು ಹಸ್ತಾಂತರ ಮಾಡಕೂಡದೆಂಬ ವಿಧಿಗೆ ಅಪವಾದಗಳಿವೆ. ತದ್ವಿರುದ್ಧ ವ್ಯಕ್ತ ಅಥವಾ ಅವ್ಯಕ್ತ ನಿಷೇಧವಿಲ್ಲದಿದ್ದಲ್ಲಿ, ಸಾರ್ವಜನಿಕ ಮನರಂಜನೆಯ ಜಾಗಕ್ಕೆ ಪ್ರವೇಶಿಸುವ ಅನುಮತಿಯನ್ನು ಹಸ್ತಾಂತರ ಮಾಡಬಹುದು. ಒಬ್ಬನ ಜಮೀನಿನಲ್ಲಿ ಕಾಮಗಾರಿ ನಡೆಸಲು ಅನುಮತಿ ಪಡೆದರೆ, ಅನುಜ್ಞಾಧಾರಿಯ ಕೆಲಸದವರು, ತದ್ವಿರುದ್ಧ ವ್ಯಕ್ತ ನಿಷೇಧವಿಲ್ಲದ ಸಂದರ್ಭದಲ್ಲಿ, ಆ ಜಮೀನನ್ನು ಪ್ರವೇಶಿಸಲು ಅವ್ಯಕ್ತಾನುಮತಿ ಪಡೆದವರಾಗುತ್ತಾರೆ.

ಅನುಮತಿ ನೀಡಲ್ಪಟ್ಟ ಆಸ್ತಿಯಲ್ಲಿರುವ ಅಥವಾ ಇರಬಹುದಾದ ದೋಷಗಳನ್ನು ದಾತ ಧಾರಿಗೆ ತಿಳಿಸಬೇಕು. ಧಾರಿಯ ಸುರಕ್ಷಿತತೆಗೆ ದಾತ ಜವಾಬ್ದಾರ. ಆದರೆ ಅವ್ಯಕ್ತ ಅನುಮತಿಧಾರಕ ದಾತನ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಅಪಾಯಕ್ಕೊಳಗಾದರೆ ದಾತ ನಿರ್ದೋಷಿ. ದಾತ ಅನುಜ್ಞೆಗೆ ಸಂಬಂಧಿಸಿದ ಆಸ್ತಿಯಲ್ಲಿ ಧಾರಿಗೆ ಅಥವಾ ಅವನ ಆಸ್ತಿಗೆ ಅಪಾಯವಾಗುವ ಕೃತ್ಯವನ್ನು ಮಾಡಬಾರದು. ಅಪ್ರಾಯಸ್ಥ ಧಾರಿಯನ್ನು ಕುರಿತು ಹೆಚ್ಚಿನ ಎಚ್ಚರಿಕೆ ವಹಿಸಬೇಕು.

ಅನುಮತಿಯ ಜೊತೆಗೆ ಸಂಬಂಧಿಸಿದ ಆಸ್ತಿಯನ್ನು ಹಸ್ತಾಂತರ ಮಾಡಿದ್ದರೆ ಅಂಥ ಹಸ್ತಾಂತರದ ಅವಧಿಯ ತನಕ ಅನುಜ್ಞೆ ಊರ್ಜಿತವಿರುತ್ತದೆ. ಧಾರಿ ಅನುಜ್ಞೆಯಂತೆ ಶಾಶ್ವತರೀತಿಯ ಕೆಲಸ ಮಾಡಿದರೆ ಅನುಮತಿಯನ್ನು ರದ್ದುಮಾಡಲಾಗದು. ಅನುಮತಿಯನ್ನು ವ್ಯಕ್ತ ಅಥವಾ ಅವ್ಯಕ್ತ ರೀತಿಯಲ್ಲಿ ಕೊನೆಗೊಳಿಸಬಹುದು. ಅನುಮತಿಗೆ ಸಂಬಂಧಿಸಿದ ಆಸ್ತಿ ನಾಶವಾದಲ್ಲಿ ಅಥವಾ ಶಾಶ್ವತವಾಗಿ ಬದಲಾದಲ್ಲಿ ಧಾರಿ ಅದರ ಒಡೆತನವನ್ನು ಗಳಿಸಿದಲ್ಲಿ, ಅನುಮತಿಯ ಅವಧಿ ಅಥವಾ ಉದ್ದೇಶ ಮುಗಿದಲ್ಲಿ, ಅನುಮತಿಯನ್ನು ಇಪ್ಪತ್ತುವರ್ಷಕಾಲ ನಿರಂತರ ಉಪಯೋಗಿಸದಿದ್ದಲ್ಲಿ ಅದನ್ನು ರದ್ದುಪಡಿಸಲಾಗಿದೆ ಎಂದು ಪರಿಗಣಿಸಬೇಕು. ಅನುಮತಿಗೆ ಸಂಬಂಧಿಸಿದ ಆಸ್ತಿಯಿಂದ ನಿರ್ಗಮಿಸಲು ಮತ್ತು ತನ್ನ ಸ್ವತ್ತುಗಳೇನಾದರೂ ಇದ್ದರೆ ಅವನ್ನು ತೆಗೆದುಕೊಂಡು ಹೋಗಲು ಧಾರಿಗೆ ಯೋಗ್ಯವಾದ ಕಾಲಾವಕಾಶವನ್ನು ದಾತ ಕೊಡಬೇಕು. ಪ್ರತಿಫಲಯುಕ್ತವಾದ ಅನುಮತಿಯಾದರೆ, ಧಾರಿಯ ತಪ್ಪಿಲ್ಲದೆ ಅವನನ್ನು ಹೊರಹಾಕಿದರೆ ದಾತ ಅವನಿಗೆ ಪರಿಹಾರ ತೆರಲು ಬದ್ಧ.

ಉತ್ಪಾದನೆ, ಮಾರಾಟ ಮುಂತಾದ ವಿಶಿಷ್ಟಕೃತ್ಯಗಳ ಬಗ್ಗೆ ಆಯಾ ಷರತ್ತುಗಳಿಗೊಳಪಟ್ಟು ಅನುಮತಿಯನ್ನು ನೀಡಲಾಗುತ್ತದೆ. (ಎನ್.ಎಸ್.ಎಂ.)

**ಅನುತ್ರಿಜ್ಯವೇಗ :** ವಕ್ರರೇಖೆಯ ಮೇಲೆ ಚಲಿಸುವ ವಸ್ತುವಿನ ವೇಗ ಸ್ಪರ್ಶಕದ ದಿಕ್ಕಿನಲ್ಲಿರುತ್ತದೆ. ಎರಡು ಪರಸ್ಪರ ಲಂಬದಿಕ್ಕುಗಳಲ್ಲಿ ಈ ವೇಗದ ಘಟಕಗಳನ್ನು (ಕಾಂಪೋನೆಂಟ್ಸ್) ತಿಳಿಯಬಹುದು. ಮೂಲ ಬಿಂದುವನ್ನು ವಸ್ತುವಿಗೆ ಜೋಡಿಸುವ ರೇಖೆ ಮತ್ತು ವಸ್ತುವಿನಲ್ಲಿ ಈ ರೇಖೆಗೆ ಲಂಬವಾಗಿ ಎಳೆದ ರೇಖೆ ಇವೇ ಇಂಥ ಎರಡು ದಿಕ್ಕುಗಳು.


ಅನುತ್ರಿಜ್ಯವೇಗ

ಮೊದಲಿನ ರೇಖೆಯ ಹೆಸರು ಅನುತ್ರಿಜ್ಯ ಅಥವಾ ಆರೆ. ಈ ರೇಖೆಯ ದಿಕ್ಕಿನಲ್ಲಿರುವ ವಸ್ತುವಿನ ವೇಗ ಘಟಕ ಅನುತ್ರಿಜ್ಯವೇಗ ಅಥವಾ ಆರೀಯವೇಗ (ರೇಡಿಯಲ್ ವೆಲಾಸಿಟಿ).

$OL$ ದಿಕ್ಕಿನ ಅನುತ್ರಿಜ್ಯವೇಗ

$PM$ ದಿಕ್ಕಿನ ವೇಗ $\frac{1}{r} \frac{d}{dt}\left(r^2\dot{\theta}\right)$

ಗ್ರಹಗಳ ಚಲನೆಯನ್ನು ಕುರಿತು ವಿಚಾರ ಮಾಡುವಾಗ, ಮೂಲಬಿಂದುವನ್ನು ಸೂರ್ಯನ ಸ್ಥಾನದಲ್ಲಿ ತೆಗೆದುಕೊಳ್ಳಬಹುದು. ಗ್ರಹದ ಕಕ್ಷೆ ಸೂರ್ಯ ನಾಭಿಯಲ್ಲಿರುವ ದೀರ್ಘವೃತ್ತ. ಸೂರ್ಯ ಆಕರ್ಷಣಕೇಂದ್ರ. ಗ್ರಹದ ಸ್ಥಾನಗಳನ್ನು ಸೂರ್ಯನಿಗೆ ಸೇರಿಸುವ ರೇಖೆಗಳು ಅನುತ್ರಿಜ್ಯಗಳು. ಗ್ರಹದ ವೇಗವನ್ನು ಅನುತ್ರಿಜ್ಯವೇಗ ಮತ್ತು ಅದಕ್ಕೆ ಲಂಬದ ದಿಕ್ಕಿನಲ್ಲಿರುವ ವೇಗಘಟಕಗಳಾಗಿ ವಿಭಜಿಸಬಹುದು.

ನಕ್ಷತ್ರಗಳಿಗೆ ಎರಡು ವಿಧದ ಚಲನೆ ಇರುತ್ತದೆ. 1. ಅದರ ಸ್ವಕೀಯಚಲನೆ (ಪ್ರಾಪರ್ ಮೋಷನ್). ಇದನ್ನು ಖಗೋಳದ ಮೇಲೆ ನಕ್ಷತ್ರದ ಕೋನೀಯ ಚಲನೆಯಿಂದ (ಆ್ಯಂಗ್ಯುಲರ್ ಮೋಷನ್) ತಿಳಿಯುತ್ತೇವೆ. 2. ದೃಷ್ಟಿರೇಖೆಯ ದಿಕ್ಕಿನಲ್ಲಿಯ ಚಲನೆ. ಇದನ್ನು ಅನುತ್ರಿಜ್ಯ ವೇಗದಿಂದ ಗೊತ್ತು ಮಾಡಬಹುದು. ಒಂದು ನಕ್ಷತ್ರದ ರೋಹಿತದರ್ಶಕದ ಅಭ್ಯಾಸದಿಂದ ಆ ನಕ್ಷತ್ರದ ಅನುತ್ರಿಜ್ಯವೇಗವನ್ನು ತಿಳಿಯಬಹುದು. **(ನೋಡಿ– ಡಾಪ್ಲರ್ ಪರಿಣಾಮ)**

(ಆರ್.ಆರ್.ಯು.)

**ಅನುಪಮಾ ನಿರಂಜನ :** 1934–91. ಕನ್ನಡದ ಪ್ರಸಿದ್ಧ ಲೇಖಕಿ, ವೈದ್ಯೆ. ಇವರ ಹುಟ್ಟು ಹೆಸರು ವೆಂಕಟಲಕ್ಷ್ಮಿ. ಅನಂತರ ಪತಿ ನಿರಂಜನರು ಇಟ್ಟ ಹೆಸರು ಅನುಪಮಾ. ಹಾಗಾಗಿ ಅನುಪಮಾ ನಿರಂಜನ ಎಂಬ ಹೆಸರಿನಲ್ಲಿಯೇ ಸಾಹಿತ್ಯಲೋಕದಲ್ಲಿ ಜನಪ್ರಿಯ ರಾದರು. ಇವರು ಜನಿಸಿದ್ದು 1934 ಮೇ 17ರಂದು, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿ. ತಂದೆ ಶಿವರಾಮಯ್ಯ, ತಾಯಿ ಲಕ್ಷ್ಮೀ ದೇವಮ್ಮ. ತಂದೆ ವಿದ್ಯಾ ಇಲಾಖೆಯಲ್ಲಿದ್ದುದರಿಂದ ಊರೂ ರಿಗೆ ವರ್ಗವಾಗುತ್ತಿತ್ತು. ಇದರಿಂದಾಗಿ ಇವರ ಬಾಲ್ಯದ ವಿದ್ಯಾಭ್ಯಾಸ ಬೇರೆ ಬೇರೆ ಊರುಗಳಲ್ಲಿ ನಡೆಯಿತು. ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿ ಇಂಟರ್ ಮಿಡಿಯಟ್‌ನಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆ ಹೊಂದಿದರು (1951). ಅನಂತರ ಮೈಸೂರಿನ ಮೆಡಿಕಲ್ ಕಾಲೇಜು ಸೇರಿ ವೈದ್ಯಕೀಯ ಪದವಿ ಪಡೆದರು (1956). ಆ ದಿನಗಳಲ್ಲಿಯೇ ಪ್ರಗತಿಶೀಲ ಲೇಖಕರು ಪತ್ರಕರ್ತರು ಎಂಬ ಪ್ರಸಿದ್ಧಿ ಹೊಂದಿದ್ದ ನಿರಂಜನರನ್ನು (ನೋಡಿ) ವಿವಾಹವಾದರು. ಇವರದು ಅಂತರ್ಜಾತೀಯ ವಿವಾಹ.

ಇವರು ವೈದ್ಯಕೀಯ ಪದವಿ ಪಡೆದ ಅನಂತರ ಧಾರವಾಡದಲ್ಲಿ ಅನುಪಮಾ ಚಿಕಿತ್ಸಾಲಯವನ್ನು ಆರಂಭಿಸಿ (1958) ಮುಂದೆ ಬೆಂಗಳೂರಿಗೆ ಸ್ಥಳಾಂತರಿಸಿದರು (1961). ಇವರಿಗೆ ತೇಜಸ್ವಿನಿ (1958), ಸೀಮಂತಿನಿ (1963) ಎಂಬ ಇಬ್ಬರು ಹೆಣ್ಣುಮಕ್ಕಳು. ತೇಜಸ್ವಿನಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

ಅನುಪಮಾರ ಸಾಹಿತ್ಯ ರಚನೆ ವಿದ್ಯಾರ್ಥಿದೆಸೆಯಲ್ಲಿಯೇ ಆರಂಭವಾಯಿತು. ಆಗ ಅನೇಕ ಕಥೆಗಳನ್ನು ಬರೆದರು. ಇವರ ಕಣ್ಮಣಿ ಎಂಬ ಕಥಾಸಂಕಲನ 1952ರಲ್ಲಿ ಪ್ರಕಟವಾಯಿತು. ಅನಂತರ ಅನಂತ ಗೀತ, ಸಂಕೋಲೆಯೊಳಗಿಂದ ಎಂಬ ಕಾದಂಬರಿಗಳು ಪ್ರಕಟವಾದವು (1954). ಇವರು ಬರೆದ ಸ್ನೇಹಪಲ್ಲವಿ ಎಂಬ ಕಾದಂಬರಿ ಸುಧಾ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು ಓದುಗರ ಮೆಚ್ಚುಗೆಯೊಡನೆ ಜನಪ್ರಿಯತೆಯನ್ನೂ ತಂದುಕೊಟ್ಟಿತು (1967). ಇವರು ಇಪ್ಪತ್ತನಾಲ್ಕಕ್ಕೂ ಹೆಚ್ಚು ಕಾದಂಬರಿಗಳನ್ನೂ ಒಂಬತ್ತು ಕಥಾಸಂಕಲನಗಳನ್ನೂ ಪ್ರಕಟಿಸಿದ್ದಾರೆ. ರೂವಾರಿಯ ಲಕ್ಷ್ಮಿ (1960), ನೀರಿಗೆ ನೈದಿಲೆ ಶೃಂಗಾರ (1960), ಏಳು ಸುತ್ತಿನ ಮಲ್ಲಿಗೆ (1966), ಒಂದು ಗಿಣಿಯ ಕಥೆ (1983) – ಇವು ಕಥಾಸಂಕಲನಗಳು. ಇವರ ಬಹುತೇಕ ಕಥೆಗಳು ವಾಸ್ತವತೆಯ ಕ್ರೂರ ಮುಖಕ್ಕೆ ಎದುರಾಗಿ ನಿಲ್ಲುವ, ಭವಿಷ್ಯವನ್ನು ಒಳಿತಾಗಿಸಿಕೊಳ್ಳುವ ಹಂಬಲದವಾಗಿದ್ದು ವರ್ಗಮೂಲವಾದ ಸಂಘರ್ಷ, ಲಿಂಗಭೇದನೀತಿ ಮತ್ತು ಮಾನಸಿಕ ತೊಳಲಾಟಗಳ ಸುತ್ತ ಬೆಳೆದು ನಿಲ್ಲುತ್ತವೆ.

ಸ್ನೇಹಪಲ್ಲವಿ, ಆಕಾಶಗಂಗೆ, ಋಣ, ಮಾಧವಿ, ಶ್ವೇತಾಂಬರಿ, ಹೃದಯವಲ್ಲಭ, ಎಳೆ, ಮೂಡಣ ಪಡುವಣ – ಇವು ಇವರ ಕೆಲವು ಮುಖ್ಯ ಕಾದಂಬರಿಗಳು. ಮಧ್ಯಮವರ್ಗದ ಜನರ ಬದುಕಿನ ಸಂಕೀರ್ಣತೆಯನ್ನು ಎಳೆಎಳೆಯಾಗಿ ಬಿಡಿಸಿ ನೋಡುವುದು ಇವರ ಬಹುಪಾಲು ಕಾದಂಬರಿಗಳ ಆಶಯ. ಶ್ವೇತಾಂಬರಿಯಲ್ಲಿ ವೃತ್ತಿವಲಯದಲ್ಲಿ ಬೆಳೆಯುತ್ತಿರುವ ಪ್ರೇಮವಿವಾಹದ ಬಹುಮುಖಗಳು ಚರ್ಚಿತವಾಗಿದ್ದರೆ, ಹೃದಯವಲ್ಲಭದಲ್ಲಿ ಸಾಂಪ್ರದಾಯಿಕ ವಿವಾಹದಲ್ಲಿ ಕಂಡುಬರುವ ಅರೆಕೊರೆಗಳು ಹಾಗೂ ಪ್ರೇಮವಿವಾಹದಲ್ಲಿ ಕಂಡುಬರುವ ಪ್ರೀತಿಯ ನೆಲೆ ಚಿತ್ರಿತವಾಗಿದೆ. ಎಳೆ ಕಾದಂಬರಿಯಲ್ಲಿ ವಿಧವಾವಿವಾಹದ ಬಗೆಗಿನ ವಿಚಾರಗಳಿವೆ. ಮೂಡಣ ಪಡುವಣ ಕಾದಂಬರಿಯಲ್ಲಿ ಭಿನ್ನದೇಶಗಳ ಸಂಸ್ಕೃತಿ, ದಾಂಪತ್ಯ ಜೀವನದ ಏರುಪೇರುಗಳೊಂದಿಗೆ ಹೋರಾಟದ ಬದುಕು ಬಿಚ್ಚಿಕೊಳ್ಳುತ್ತದೆ. 'ಮಾಧವಿ' ವಿಶೇಷವಾಗಿ ಗಮನ ಸೆಳೆಯುವ ಕಾದಂಬರಿ. ಪುರಾಣದ ವ್ಯಕ್ತಿಗಳನ್ನೂ ಆಗಿನ ಸಮಾಜವನ್ನೂ ವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಈ ಕಾದಂಬರಿಯಲ್ಲಿ ಮಾಡಲಾಗಿದೆ. ಇರಾವತಿ ಕರ್ವೆಯವರ ಮರಾಠಿ ಕೃತಿ 'ಯುಗಾಂತ'ದಿಂದ ಪ್ರೇರಣೆಗೊಂಡು ರಚಿತವಾದ ಕಾದಂಬರಿಯಿದು. ಮಹಾಭಾರತದಲ್ಲಿ ಬರುವ ಉಪಕಥೆಯೊಂದನ್ನು ಇಲ್ಲಿ ಮರುಚಿಂತನೆಗೊಡ್ಡಲಾಗಿದೆ. ಇವರ ಅನೇಕ ಕೃತಿಗಳು ತೆಲುಗು, ಮಲಯಾಳಂ ಮೊದಲಾದ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ಕಲ್ಲೋಲ ಎಂಬುದು ಇವರ ಒಂದು ನಾಟಕ. 'ನೆನಪು: ಸಿಹಿ–ಕಹಿ' ಇವರ ಆತ್ಮಕಥೆ (1985).

ಸ್ನೇಹಯಾತ್ರೆ ಮತ್ತು ಅಂಗೈಯಲ್ಲಿ ಯುರೋ–ಅಮೆರಿಕ ಇವರ ಪ್ರವಾಸ ಕಥನಗಳು. 1975ರಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ಗೆ ಬೆಂಗಳೂರಿನ ಪ್ರತಿನಿಧಿಯಾಗಿ ಹೋಗಿ ಪೂರ್ವಜರ್ಮನಿ, ರಷ್ಯ, ಪೋಲೆಂಡ್‌ಗಳಲ್ಲಿ ಪ್ರವಾಸ ಮಾಡಿದಾಗಿನ ಅನುಭವಗಳು ಸ್ನೇಹಯಾತ್ರೆಯಲ್ಲಿವೆ. ಇವರ ಯುರೋಪ್–ಅಮೆರಿಕ ಪ್ರವಾಸಾನುಭವಗಳು ಅಂಗೈಯಲ್ಲಿ ಯುರೋ–ಅಮೆರಿಕ (1981) ಎಂಬ ಕೃತಿಯಲ್ಲಿ ಸೊಗಸಾಗಿ ಮೂಡಿಬಂದಿವೆ.

ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆ ಅಪಾರವಾದುದು. ಇವರು ಮಕ್ಕಳಿಗಾಗಿ ದಿನಕ್ಕೊಂದು ಕಥೆ ಎಂಬ ಹೆಸರಿನಲ್ಲಿ ಚೈತ್ರದಿಂದ ಫಾಲ್ಗುಣದವರೆಗೆ 12 ಸಂಪುಟಗಳಲ್ಲಿ 365 ಕಥೆಗಳನ್ನು ಕೊಟ್ಟಿದ್ದಾರೆ. ಇತಿಹಾಸ, ಪುರಾಣ, ವಿಜ್ಞಾನ, ಸಾಹಸ, ಹಾಸ್ಯ, ಅತಿಮಾನುಷ ಮೊದಲಾದ ವಿಷಯಕ್ಕೆ ಸಂಬಂಧಿಸಿದ ಕಥೆಗಳು ಈ ಸಂಪುಟಗಳಲ್ಲಿದ್ದು, ಮಕ್ಕಳ ಮನಸ್ಸನ್ನು ಸೂರೆಗೊಂಡು ತಿಳಿವಳಿಕೆ ಮೂಡಿಸುವಲ್ಲಿ ನೆರವಾಗುತ್ತವೆ.

ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಇವರು ಅನೇಕ ಉಪಯುಕ್ತ ಹಾಗೂ ಜನಪ್ರಿಯ ಕೃತಿಗಳನ್ನು ರಚಿಸಿದ್ದಾರೆ. ವಧುವಿಗೆ ಕಿವಿಮಾತು, ದಾಂಪತ್ಯ ದೀಪಿಕೆ –ಇವು ವಿವಾಹದಲ್ಲಿ, ದಾಂಪತ್ಯದಲ್ಲಿ ಲೈಂಗಿಕತೆಯ ಅರಿವನ್ನು ಮೂಡಿಸುವ ಕೃತಿಗಳು. 'ಕೇಳು ಕಿಶೋರಿ' ಹದಿಹರೆಯದ ಹೆಣ್ಣು ಮಕ್ಕಳ ದೈಹಿಕಾರೋಗ್ಯದ ಬಗ್ಗೆ ತಿಳಿವಳಿಕೆ ನೀಡುವ ಕೃತಿ. ಆರೋಗ್ಯ ದರ್ಶನ, ಶಿಶುವೈದ್ಯದೀಪಿಕೆ, ಆಹಾರದಿಂದ ಆರೋಗ್ಯ, ಸ್ತ್ರೀಸ್ವಾಸ್ಥ್ಯಸಂಹಿತೆ, ಕ್ಯಾನ್ಸರ್ ಜಗತ್ತು – ಇವು ಇವರ ಉಪಯುಕ್ತ ವೈದ್ಯಕೀಯ ಕೃತಿಗಳು.

ವಯಸ್ಕರ ಶಿಕ್ಷಣ ಪಡೆದವರಿಗಾಗಿ ಇವರು ರಚಿಸಿದ ಕೆಂಪಮ್ಮನ ಮಗು (1964) ಎಂಬ ಕೃತಿಯಲ್ಲಿ ಹಳ್ಳಿಗರಲ್ಲಿ ಗರ್ಭಿಣಿಯರ ಆರೈಕೆ ಮತ್ತು ಮಗುವಿನ ಯೋಗಕ್ಷೇಮದ ಬಗ್ಗೆ ಮಾಹಿತಿಗಳಿವೆ. ಈ ಕೃತಿಗೆ ವಯಸ್ಕರ ಶಿಕ್ಷಣದ ರಾಷ್ಟ್ರೀಯ ಪುರಸ್ಕಾರ ದೊರೆತಿದೆ (1965). ತಾಯಿ–ಮಗು ಮಹಿಳೆಯರಿಗಾಗಿಯೇ ಬರೆದ ಮಾತೃವಾತ್ಸಲ್ಯದ ಅರಿವು ಮೂಡಿಸುವ ಕೃತಿ.

ಅನುಪಮಾ ಅವರಿಗೆ ಅನೇಕ ಗೌರವ ಪುರಸ್ಕಾರಗಳು ದೊರಕಿವೆ. ಕಾಸರಗೋಡು ಮಹಿಳಾ ಸಮ್ಮೇಳನದ ಅಧ್ಯಕ್ಷತೆ (1977), ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ (1978),ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (1981), ಕನ್ನಡ ರಾಜ್ಯೋತ್ಸವ ಬೆಳ್ಳಿ ಹಬ್ಬದ ಪ್ರಶಸ್ತಿ (1983), ನಂಜನಗೂಡು ತಿರುಮಲಾಂಬ ಪ್ರಶಸ್ತಿ (1987) –ಇವು ಇವರಿಗೆ ಸಂದ ಕೆಲವು ಗೌರವಗಳು. ಅನುಪಮಾ ಅಭಿನಂದನ (1988) ಇವರಿಗೆ ಸಲ್ಲಿಸಿದ ಅಭಿನಂದನ ಗ್ರಂಥ. ಇವರು 1991 ಫೆಬ್ರವರಿ 14ರಂದು ನಿಧನರಾದರು.

(ಎಂ.ಎಲ್.ಎನ್.)

**ಅನುಪಲಬ್ಧಿ :** ಪ್ರತ್ಯಕ್ಷಾದಿ ಪ್ರಮಾಣಗಳಲ್ಲಿ ಒಂದು; ಮೀಮಾಂಸ ಮತ್ತು ಅದ್ವೈತವೇದಾಂತಗಳಿಗೆ ವಿಶಿಷ್ಟವಾದದ್ದು. ವಸ್ತುವಿನ ಅಭಾವಜ್ಞಾನಕ್ಕೆ ಅಗತ್ಯವಾದ ಜ್ಞಾನಸಾಧನವೆಂದು ಇವುಗಳ ಮತ. ಮೂಲೆಯಲ್ಲಿ ಕೊಡೆ ಇಲ್ಲ, ಜೇಬಿನಲ್ಲಿ ಕನ್ನಡಕವಿಲ್ಲ ಎಂಬ ಅಭಾವದ (ಇಲ್ಲದಿರುವಿಕೆಯ) ತಿಳಿವು ಹುಟ್ಟುವುದು ಅನುಪಲಬ್ಧಿಪ್ರಮಾಣದಿಂದ. ಮೂಲೆ, ಕೊಡೆ, ಜೇಬು, ಕನ್ನಡಕ ಇವುಗಳ ಇರವು ಇಂದ್ರಿಯಕ್ಕೆಗೋಚರವಾದ ವಿಷಯಗಳು. ಇವುಗಳು ಇಲ್ಲದಿರುವುದು ಇಂದ್ರಿಯಗೋಚರವಲ್ಲ. ಆದ್ದರಿಂದ ಆ ಅಭಾವದ ಜ್ಞಾನಕ್ಕೆ ಸಾಧನವಾಗಿ, ಇಂದ್ರಿಯ ಪ್ರಮಾಣದಿಂದ ಬೇರೆಯಾದ, ಅನುಪಲಬ್ಧಿ ಎಂಬ ಪ್ರಮಾಣ ಅಗತ್ಯ ಎಂಬುದು ಮೀಮಾಂಸಕರ ವಾದ. (ಜಿ.ಎಚ್.)

**ಅನುಬಿಂಬ :** ಒಂದು ವಸ್ತುವಿನ ಬಿಂಬ ಆ ವಸ್ತು ಇಲ್ಲದಾಗಲೂ ಕಾಣಬಂದರೆ ಅದನ್ನು ಅನುಬಿಂಬ ಅಥವಾ ಪಶ್ಚಾತ್‌ಪ್ರತಿಕೃತಿ ಎಂದು ಹೇಳುತ್ತಾರೆ. ಮಕ್ಕಳು ದೀಪಾವಳಿ ಹಬ್ಬದಲ್ಲಿ ಸುರುಸುರುಬತ್ತಿಯನ್ನು ಹೊತ್ತಿಸಿ ಅದನ್ನು ಕೈಯಲ್ಲಿ ಹಿಡಿದು ತಿರುಗಿಸಿದಾಗ ಅಗ್ನಿಯ ವೃತ್ತರೇಖೆಯೊಂದು ಕಾಣಿಸುತ್ತದೆ. ನ್ಯಾಯವಾಗಿ ಬತ್ತಿ ಇರುವ ಕಡೆ ಮಾತ್ರ ಜ್ವಾಲೆ ಕಾಣಿಸಬೇಕು. ಆದರೆ ಅದನ್ನು ರಭಸದಿಂದ ತಿರುಗಿಸಿದಾಗ ಜ್ವಾಲಾರೇಖೆ ಅಥವಾ ವೃತ್ತ ಕಾಣಿಸಿಕೊಳ್ಳುತ್ತದೆ. ಇದನ್ನು ಕುರಿತು ನ್ಯೂಟನ್ (1704) ವಿಚಾರ ಮಾಡಿದ್ದಾನೆ. ಅನಂತರ ಅಮೆರಿಕದ ವಿಜ್ಞಾನಿ ಮತ್ತು ರಾಜನೀತಿಜ್ಞ ಬೆಂಜಮಿನ್ ಫ್ರ್ಯಾಂಕ್‌ಲಿನ್ ಅನುಬಿಂಬಗಳು ಉಂಟಾಗುವ ವಿಧಾನವನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟ (1765). ಒಂದು ದಪ್ಪ ಕಪ್ಪುಕಾಗದವನ್ನು ತೆಗೆದುಕೊಂಡು ಅದರ ಮಧ್ಯೆ ಬಿಳುಪಾದ ವೃತ್ತರೇಖೆಯನ್ನೊ ಅಥವಾ ಚಚ್ಚೌಕವನ್ನೊ ಎಳೆದು ಸ್ವಲ್ಪಕಾಲ ನೋಡಿ ಅನಂತರ ಬಿಳಿಯ ಕಾಗದವನ್ನು ನೋಡಿದರೆ ಅದು ಕಪ್ಪುಬಣ್ಣದ ವೃತ್ತಾಕಾರವಾಗಿ ಅಥವಾ ಚಚ್ಚೌಕವಾಗಿ ಕಾಣುತ್ತದೆ. ರಾತ್ರಿವೇಳೆ ಕೊಠಡಿಯಲ್ಲಿರುವ ದೀಪವನ್ನು ಆರಿಸಿದ ಕ್ಷಣದಲ್ಲಿ ಕತ್ತಲಮಧ್ಯೆ ಆ ದೀಪಾಕಾರದ ಬಿಂಬ ನಮ್ಮ ಕಣ್ಣಿಗೆ ಕಾಣಿಸುವುದು. ಒಂದು ವಸ್ತುವನ್ನು ನೋಡಿದಾಗ ಅದು ಕಣ್ಣಿನೊಳಗಿರುವ ನರಗಳನ್ನು ಪ್ರಚೋದಿಸುವುದರಿಂದ ಆ ವಸ್ತುವಿನ

ಆಕಾರ ಬಣ್ಣ ಪ್ರಕಾಶ ಮುಂತಾದವು ನಮಗೆ ಕಾಣುತ್ತವೆ. ಆ ವಸ್ತುವನ್ನು ದಿಟ್ಟಿಸಿನೋಡಿ ಕಣ್ಣು ಮುಚ್ಚಿಕೊಂಡರೆ ಅಥವಾ ಒಂದು ಬಿಳಿಯ ಪ್ರದೇಶವನ್ನೊ ಅಥವಾ ಕಪ್ಪು ಪ್ರದೇಶವನ್ನೊ ನೋಡಿದಾಗ ಆ ಹಿಂದಿನ ವಸ್ತುವಿನ ಅನುಬಿಂಬ ಕಣ್ಣಿಗೆ ಕಾಣಿಸುವುದು. ಇದಕ್ಕೆ ಕಾರಣ ವಸ್ತು ಇಲ್ಲದಿದ್ದರೂ ಪ್ರಚೋದನೆ ಮುಂದುವರಿಯುವುದೇ ಆಗಿದೆ.

ಒಂದು ಕೆಂಪುಬಣ್ಣದ ಆಕೃತಿಯನ್ನು ಸ್ವಲ್ಪ ಹೊತ್ತು ದಿಟ್ಟಿಸಿನೋಡಿ ಅನಂತರ ಒಂದು ಬಿಳಿ ಕಾಗದವನ್ನು ನೋಡಿದಾಗ ಹಸಿರು ಬಣ್ಣದ ಆಕೃತಿ ಕಾಣುವುದು. ಹಳದಿ ಬಣ್ಣದ ಆಕೃತಿಯನ್ನು ನೋಡಿ ಬಿಳಿ ಕಾಗದದ ಮೇಲೆ ಕಣ್ಣನ್ನು ಹಾಯಿಸಿದರೆ ನೀಲಿಬಣ್ಣದ ಆಕೃತಿ ಕಾಣುವುದು. ಇಷ್ಟೇ ಅಲ್ಲದೆ ವರ್ಣಮಿಶ್ರಣವೂ ಅನುಬಿಂಬದ ಮೂಲಕ ಉಂಟಾಗುವುದು. ಒಂದು ಹಸಿರು ಬಣ್ಣದ ಗೋಳಾಕಾರವನ್ನು ದಿಟ್ಟಿಸಿ ನೋಡಿ ಅನಂತರ ಅದೇ ಪ್ರಮಾಣದ ಹಳದಿ ಆಕೃತಿಯನ್ನು ನೋಡಿದರೆ ಅದು ಕಿತ್ತಲೆಹಣ್ಣಿನ ಬಣ್ಣದ್ದಾಗಿ ಕಾಣಿಸುವುದು. ಹೆರಿಂಗ್‌ನ ಆಧಾರಕಲ್ಪನೆಯ (ಹೈಪಾಥಿಸಿಸ್) ಪ್ರಕಾರ ಹಸಿರು ಬಣ್ಣದ ವಸ್ತುವನ್ನು ನೋಡಿದಲ್ಲಿ ಅದರ ಅನುಬಿಂಬದಲ್ಲಿ ಅದಕ್ಕೆ ವಿರೋಧವಾದ ಕೆಂಪುಬಣ್ಣದ ಸಂವೇದನೆ ನಮ್ಮಲ್ಲಿ ಉಂಟಾಗುವುದು. ಈ ಅನುಬಿಂಬಸಂವೇದನೆ ಹಳದಿ ಬಣ್ಣದೊಂದಿಗೆ ಮಿಶ್ರವಾಗಿ ಕಿತ್ತಲೆಹಣ್ಣಿನ ಬಣ್ಣದ ಸಂವೇದನೆಯನ್ನು ಉಂಟುಮಾಡುವುದು. (ಬಿ.ಕೆ.)

**ಅನುಬೋಧೆ :** ಯಾವುದಾದರೂ ಗೋಚರವಾದ ವಿಷಯವನ್ನು ಮನೋಗತ ವಿಷಯಗಳೊಡನೆ ಯೋಚಿಸಿ ಅನುಭವಕ್ಕೆ ತಂದುಕೊಂಡು ತಿಳಿದುಕೊಳ್ಳುವುದು (ಅಪರ್‌ಸೆಪ್ಷನ್). ಇದೊಂದು ಹಳೆಯ ಸಿದ್ಧಾಂತ.

ಈ ಪದವನ್ನು ಸು. 300 ವರ್ಷಗಳ ಹಿಂದೆ ಜರ್ಮನಿಯ ತತ್ತ್ವಶಾಸ್ತ್ರಜ್ಞ ಲೀಬ್‌ನಿಟ್ಸ್ (1646–1716) ಉಪಯೋಗಿಸಿದ. ಈತನ ಪ್ರಕಾರ ಅನುಬೋಧೆ ಪ್ರತ್ಯಕ್ಷಾನುಭವ ಸ್ಪಷ್ಟೀಕರಣ ಮಾಡುವ ವಿಧಾನ. ಅಲ್ಲದೆ ಪ್ರಜ್ಞೆಗೆ ನಿಲುಕದಿರುವ ಅಂಶಗಳು ಒಟ್ಟುಗೂಡಿ ತಿಳಿವಳಿಕೆಗೆ ಬರುವುವು. ಉದಾ: ಸಮುದ್ರತೀರದಲ್ಲಿ ನಿಂತುಕೊಂಡರೆ ಅಲೆಗಳ ಶಬ್ದ ಕೇಳಿಸುವುದು. ಒಂದೊಂದು ಅಲೆಯೂ ನೀರಿನ ಹನಿಗಳಿಂದ ಕೂಡಿರುವುದು; ಆದರೆ ಒಂದು ಹನಿ ಬೀಳುವುದರಿಂದ ಉಂಟಾದ ಶಬ್ದ ನಮಗೆ ಕೇಳಿಸುವುದಿಲ್ಲ. ಅನೇಕ ಹನಿಗಳು ಕೂಡಿದಾಗಲೆ ಶಬ್ದ ಕೇಳಿಸುವುದು. ಆದ್ದರಿಂದ ಆ ಶಬ್ದ ಅನುಬೋಧೆಯ ಮೂಲಕ ಗೊತ್ತಾಗುವುದು. ಈತನ ಪ್ರಕಾರ ಅವಧಾನ (ಅಟೆನ್‌ಷನ್) ಅನುಬೋಧೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಹರ್ಬಾರ್ಟ್ (1776–1841) ಎಂಬ ಜರ್ಮನ್ ತತ್ತ್ವಜ್ಞ ಲೀಬ್‌ನಿಟ್ಸ್‌ನ ಅನುಬೋಧೆ ಸಿದ್ಧಾಂತವನ್ನು ಮುಂದುವರಿಸಿದ. ಪ್ರತ್ಯಕ್ಷಾನುಭವ ಸ್ಪಷ್ಟೀಕರಣ ಮಾಡುವ ಒಂದು ವಿಧಾನವೆಂದು ಈತನೂ ನಂಬಿದ್ದ. ಮನಸ್ಸಿನಲ್ಲಿನ ಅನೇಕಾನೇಕ ಭಾವಗಳೆಲ್ಲ ಪ್ರಜ್ಞೆಗೆ ಸಿಲುಕುವುದಿಲ್ಲ. ಅನುಬೋಧೆಯ ಮೂಲಕ ಮನಸ್ಸಿನ ಅಂತರಾಳದಲ್ಲಿರುವ ಭಾವ ಮೇಲೆ ಬಂದಾಗ ಮಾತ್ರ ಪ್ರಜ್ಞೆಗೆ ಸಿಲುಕುವುದು. ಅಂದರೆ ಅನುಬೋಧೆಯ ಮೂಲಕ ಪ್ರಜ್ಞಾಮಟ್ಟದ ಕೆಳಗಿರುವ ಭಾವಗಳು ಮೇಲಕ್ಕೆ ಏರುವುವು. ಅಲ್ಲದೆ ಹೊಸ ಭಾವಗಳು ಪ್ರಜ್ಞೆಯಲ್ಲಿರುವ ಭಾವಗಳು ಜೊತೆಯಲ್ಲಿ ಕೂಡಿ ತಿಳಿವಳಿಕೆಗೆ ಬರುವುವು.

ಈತನ ಪ್ರಕಾರ ಮನಸ್ಸಿನ ಒಳಗಿರುವ ಅನೇಕ ಭಾವಗಳಲ್ಲಿ ಕೆಲವು ಮಾತ್ರ ಮೇಲೆ ಬಂದು ತಿಳಿವಳಿಕೆಗೆ ಬರುವುವು. ಇನ್ನುಳಿದವು ತಿಳಿವಳಿಕೆಗೆ ಬಾರದೆ ಕೆಳಗೇ ಇರುವುವು. ಈ ವಿಧಾನದಲ್ಲಿ ಮೂರು ಬಗೆಗಳಿವೆ. 1 ಒಂದು ಭಾವಕ್ಕೂ ಮತ್ತೊಂದು ಭಾವಕ್ಕೂ ಒಂದು ಅನುಭವಕ್ಕೂ ಮತ್ತೊಂದು ಅನುಭವಕ್ಕೂ ವಿರುದ್ಧವಿಲ್ಲದಿದ್ದರೆ, ಅವೆರಡೂ ಒಂದೇ ಸರಣಿಗೆ ಸೇರಿದ್ದರೆ ಅವುಗಳ ಐಕ್ಯವಾಗುವುವು. ಉದಾ:ಕೆಂಪುಬಣ್ಣ ಮತ್ತು ನೀಲಿಬಣ್ಣ ಐಕ್ಯವಾಗಿ ನೇರಿಳೆ ಬಣ್ಣ ಉಂಟಾಗುವುದು. 2 ಎರಡು ಭಾವಗಳಲ್ಲಿ ವಿರುದ್ಧ ವಿಲ್ಲದಿದ್ದು ಅವು ಬೇರೆ ಬೇರೆ ಸರಣಿಗಳಿಗೆ ಸೇರಿದ್ದರೆ ಅವು ಒಟ್ಟುಗೂಡಿ ಸಮ್ಮಿಶ್ರವಾಗುವುವು. ಉದಾ: ರೈಲುಗಾಡಿ ಓಡುತ್ತಿರುವಾಗ ದೃಶ್ಯ ಮತ್ತು ಶಬ್ದ ಸಮ್ಮಿಶ್ರವಾಗುವುವು. 3 ಒಂದು ಭಾವಕ್ಕೂ ಮತ್ತೊಂದು ಭಾವಕ್ಕೂ ವಿರೋಧವಿದ್ದರೆ ಒಂದು ಮತ್ತೊಂದನ್ನು ನಿರೋಧಿಸುವುದು ಅಥವಾ ತಡೆಗಟ್ಟುವುದು. ಆದ್ದರಿಂದ ಯಾವ ಭಾವವೂ ಪ್ರಜ್ಞೆಗೆ ಬರುವುದಿಲ್ಲ.

ಹರ್ಬಾರ್ಟ್‌ನ ಅನುಬೋಧತತ್ತ್ವ ವಿದ್ಯಾಭ್ಯಾಸದಲ್ಲಿ ದೊಡ್ಡ ಪರಿಣಾಮ ವನ್ನುಂಟು ಮಾಡಿತು. ಹೊಸ ವಿಷಯವನ್ನು ಮಗುವಿಗಾಗಲಿ. ವಯಸ್ಕರಿಗಾಗಲಿ ತಿಳಿಸಬೇಕಾದರೆ ಅದಕ್ಕೂ ಆ ವ್ಯಕ್ತಿಯ ಅನುಭವಕ್ಕೂ ಒಂದು ಸಂಬಂಧವನ್ನು ಏರ್ಪಡಿಸಿದರೆ ಹೊಸ ವಿಷಯವನ್ನು ಸುಲಭವಾಗಿ ಮತ್ತು ವೇಗವಾಗಿ ಗ್ರಹಿಸುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಮನಸ್ಸು ಹೊಸವಿಷಯವನ್ನು ಸ್ವೀಕರಿಸದೆ ತಳ್ಳಿಹಾಕಬಹುದು.

ಜರ್ಮನಿಯ ಮನಶ್ಶಾಸ್ತ್ರಜ್ಞ ವುಂಟ್ (1832–1920) ಈ ಸಿದ್ಧಾಂತವನ್ನು ಒಪ್ಪಿಕೊಂಡು ಅದನ್ನು ವೈಜ್ಞಾನಿಕವಾಗಿ ಅಳವಡಿಸಲು ಪ್ರಯತ್ನ ಮಾಡಿದ. ಅನುಬೋಧೆ ನಮ್ಮ ಮನಸ್ಸಿಗೆ ಗೋಚರವಾಗುವ ವಿಷಯ ಎಂದು ತೋರಿಸಿದ. ಪ್ರಜ್ಞೆಯಲ್ಲಿ ಎರಡು ಅಂಶಗಳನ್ನು ಕಾಣಬಹುದು. ಒಂದು ವಿಶಾಲಕ್ಷೇತ್ರ, ಮತ್ತೊಂದು ಸ್ಪಷ್ಟವಾಗಿ ಕಾಣುವ ನಾಭಿ. ಪ್ರಜ್ಞೆಯ ನಾಭಿಯಲ್ಲಿರುವ ವಿಷಯವೂ ನಮಗೆ ಗೋಚರವಾಗುವುದು. ಅಂದರೆ ಆ ವಿಷಯದ ಮೇಲೆ ನಮ್ಮ ಗಮನ ಇರುವುದು. ಆದ್ದರಿಂದ ಗಮನದ ಮೂಲಕ ಅನುಬೋಧೆಯನ್ನು ಅಳೆಯಬಹುದು. ಈ ವಿಧವಾಗಿ ಅನುಬೋಧೆ ಪ್ರಾಯೋಗಿಕ ಮಾರ್ಗಕ್ಕೆ ಒಳಪಟ್ಟಿದೆ. ಪ್ರಯೋಗಗಳ ಮೂಲಕ ನಮ್ಮ ಪ್ರಜ್ಞೆಯ ನಾಭಿಯಲ್ಲಿ ಸರಾಸರಿ ಆರು ವಸ್ತುಗಳು ಅಥವಾ ಆರು ಗುಂಪಿಗೆ ಸೇರಿದ ವಸ್ತುಗಳು ಗೋಚರವಾಗುವುವೆಂದು ತಿಳಿದುಬಂದಿದೆ. ಇದಕ್ಕಿಂತ ಹೆಚ್ಚು ಇದ್ದರೆ ಗ್ರಹಿಸಲು ಸಾಧ್ಯವಿಲ್ಲ. ವುಂಟ್ ಪ್ರತಿಕ್ರಿಯಾ ವೇಳೆಯನ್ನು ಅಳೆದು ನಮ್ಮ ವರ್ತನೆಯ ಅನೇಕ ನಿಯಮಗಳನ್ನು ಕಂಡುಹಿಡಿದ. ಇದರಲ್ಲಿ ಒಂದು ಮುಖ್ಯವಾದ ಅಂಶವೆಂದರೆ, ಸ್ನಾಯುಪ್ರತಿಕ್ರಿಯಾವೇಳೆಗೂ (ಮಸ್ಕ್ಯುಲರ್ ರಿಆ್ಯಕ್ಷನ್ ಟೈಂ) ಇಂದ್ರಿಯಾನುಭವಪ್ರತಿಕ್ರಿಯಾವೇಳೆಗೂ (ಸೆನ್ಸರಿ ರಿಆ್ಯಕ್ಷನ್ ಟೈಂ) ವ್ಯತ್ಯಾಸವಿರುವುದೆಂಬುದು ಸಿದ್ಧವಾಯಿತು. ಇಂದ್ರಿಯಾನುಭವ ಪ್ರತಿಕ್ರಿಯೆ ಸಾಧಾರಣವಾಗಿ ಕ್ಷಣದ ಹತ್ತನೆಯ ಒಂದು ಭಾಗದಷ್ಟು ಸ್ನಾಯು ಪ್ರತಿಕ್ರಿಯಾವೇಳೆಗಿಂತ ಹೆಚ್ಚಾಗಿರುವುದು. ಆದ್ದರಿಂದ ಅನುಬೋಧೆಯ ಕಾಲ ಕ್ಷಣದ ಹತ್ತನೆಯ ಭಾಗದಷ್ಟು ಇರುವುದೆಂದು ವುಂಟ್ ಪ್ರತಿಪಾದಿಸಿದ.

ಆದರೆ ಜರ್ಮನಿಯ ಮತ್ತೊಬ್ಬ ಮನಶ್ಶಾಸ್ತ್ರಜ್ಞ ಕುಲ್ಪೆ (1862–1915) ಮತ್ತು ಆತನ ಉರ್ಸ್‌ಬರ್ಗ್ ಸಂಪ್ರದಾಯಕ್ಕೆ ಸೇರಿದ ವೈಜ್ಞಾನಿಕರು ಚಿಂತನೆಯ ಪ್ರಾಯೋಗಿಕ ಮಾರ್ಗವನ್ನು ಅನುಸರಿಸಿ ಅಧ್ಯಯನ ಮಾಡಿದರು. ಇದರ ಫಲವಾಗಿ ವುಂಟನ ಅನುಬೋಧೆಯ ವಾದಕ್ಕೆ ಆಧಾರವಿಲ್ಲವೆಂಬುದನ್ನು ತೋರಿಸಿಕೊಟ್ಟರು. ಆದ್ದರಿಂದ ಈಗ ಅನುಬೋಧಸಿದ್ಧಾಂತವನ್ನು ಆಧುನಿಕ ಮನಶ್ಶಾಸ್ತ್ರಜ್ಞರು ಉಪಯೋಗಿಸುವುದಿಲ್ಲ. (ಬಿ.ಕೆ.)

**ಅನುಭವ**[1] **:** ಕೆಲವು ವಿಷಯಗಳು ಪ್ರತ್ಯಕ್ಷವಾಗಿ ಅಂದರೆ ಅಪರೋಕ್ಷವಾಗಿ ತಿಳಿಯುತ್ತವೆ. ಇನ್ನು ಕೆಲವು ಪರೋಕ್ಷವಾಗಿ ತಿಳಿಯುತ್ತವೆ. ಪ್ರತ್ಯಕ್ಷವಾಗಿ ತಿಳಿದ ವಿಷಯಗಳು ಸಾಕ್ಷಾತ್ತಾಗಿ ಮುಂದೆ ಇರುತ್ತವೆಯಾದ್ದರಿಂದ ಆ ತಿಳಿವಿಗಾಗಿ ಅದರಿಂದ ಹೊರಗಿನ ಯಾವುದನ್ನೂ ಆಶ್ರಯಿಸಬೇಕಾಗಿಲ್ಲ. ಪರೋಕ್ಷವಾಗಿ ತಿಳಿದ ವಿಷಯಗಳಾದರೋ ಸಾಕ್ಷಾತ್ತಾಗಿ ಮುಂದೆ ಇರುವುದಿಲ್ಲವಾದ್ದರಿಂದ ಅವುಗಳನ್ನು ತಿಳಿಯಲು ಬೇರೆಯದರ ಆಶ್ರಯವನ್ನು ಪಡೆಯಬೇಕಾಗುತ್ತದೆ. ಇತರರು ಹೇಳಿದ್ದನ್ನು ಕೇಳಿ ತಿಳಿಯುವುದು ಅಥವಾ ಸ್ಮೃತಿ ಅಥವಾ ನೆನಪಿನಿಂದ ತಿಳಿಯುವುದು ಪರೋಕ್ಷ ಜ್ಞಾನಕ್ಕೆ ಉದಾಹರಣೆಗಳು. ಅಂತಿಮದಲ್ಲಿ ಇತರರ ಹೇಳಿಕೆಗೂ ತನ್ನ ನೆನಪಿಗೂ ಪ್ರತ್ಯಕ್ಷಾನುಭವವೇ ಆಧಾರವಾದ್ದರಿಂದ ಪ್ರತ್ಯಕ್ಷಾನುಭವ ಎಲ್ಲಕ್ಕೂ ಮೂಲಾಧಾರ.

ಅನುಭವವಾದಿಗಳೆಂದು ಕರೆದುಕೊಳ್ಳುವ ಒಂದು ಗುಂಪಿನ ತಾತ್ತ್ವಿಕರು ಅನುಭವಕ್ಕೆ (ಎಕ್ಸ್‌ಪೀರಿಯನ್ಸ್ ; ಕಾನ್ಷಸ್‌ನೆಸ್ ; ಅವೇರ್‌ನೆಸ್) ಸಂಕುಚಿತ ಅರ್ಥ ಕೊಡುತ್ತಾರೆ. ಅನುಭವ ಎಂದರೆ ಕೇವಲ ಇಂದ್ರಿಯಪ್ರತ್ಯಕ್ಷವೆಂದು ಇವರು ಭಾವಿಸಿರುತ್ತಾರೆ. ಇನ್ನೊಂದು ಗುಂಪಿನವರು ಅನುಭವಕ್ಕೆ ಇನ್ನೂ ವಿಶಾಲವಾದ ಅರ್ಥ ಕೊಡುತ್ತಾರೆ. ಪ್ರತ್ಯಕ್ಷಾನುಭವ ಇಂದ್ರಿಯಾನುಭವ ಮಾತ್ರವೇ ಅಲ್ಲ. ಏಕೆಂದರೆ ಇಂದ್ರಿಯ ವಿಷಯಗಳಲ್ಲದೆ ಬುದ್ಧ್ಯಾರೂಢ ವಿಷಯಗಳ ಪ್ರತ್ಯಕ್ಷಾನುಭವವಿದೆ. ಇವರು ಈ ಪ್ರತ್ಯಕ್ಷಾನುಭವಕ್ಕೆ ಕೊಟ್ಟಿರುವ ಹೆಸರು ಮಾನಸಿಕ ಪ್ರತ್ಯಕ್ಷ. ಆತ್ಮ ಮತ್ತು ಆತ್ಮಚೇತನಾಂತರ್ಗತ ಭಾವನೆಗಳು (ಇನ್ನೇಟ್ ಐಡಿಯಾಸ್) ಮಾನಸಿಕ ಪ್ರತ್ಯಕ್ಷಾನುಭವಕ್ಕೆ ಉದಾಹರಣೆಗಳು. ಈ ಬಗೆಯ ತಾತ್ತ್ವಿಕರು ಭಾವನಾವಾದಿಗಳು.

ಬೇರೆ ಕೆಲವರು ಅನುಭವಕ್ಕೆ ಇನ್ನೂ ವಿಶಾಲಾರ್ಥ ಕೊಟ್ಟಿರುತ್ತಾರೆ. ನಮ್ಮ ಅನುಭವ ಕೇವಲ ಇಂದ್ರಿಯಾರೂಢಜ್ಞಾನಕ್ಕಾಗಲಿ, ಬುದ್ಧ್ಯಾರೂಢಜ್ಞಾನಕ್ಕಾಗಲಿ ಸೀಮಿತವಾಗಿಲ್ಲ. ನಮಗೆ ರಮ್ಯ, ಜುಗುಪ್ಸಿತ, ಉದಾರ, ನೀಚ, ಉಗ್ರ, ಪ್ರಸಾದಿ, ಗಹನ, ವಿಕೃತ ಮುಂತಾದ ಭಾವಗಳ ಸಾಕ್ಷಾತ್ ಅನುಭವವಿದೆ. ವೇದನೆ (ಸೆನ್‌ಸೇಷನ್), ಭಾವನೆ (ಐಡಿಯ) ಮತ್ತು ಭಾವ (ಫೀಲಿಂಗ್) ಈ ಎಲ್ಲವೂ ಪ್ರತ್ಯಕ್ಷಾನುಭವ ವಿಷಯಗಳು. ಎ. ಎನ್. ವೈಟ್ಹೆಡ್ ಹೇಳುವಂತೆ ಅನುಭವ ಜಾಗ್ರತ್, ಸುಷುಪ್ತಿ, ಸ್ವಪ್ನ ರೂಪವಾಗಿರಬಹುದು. ಅದು ವಿವೇಕವಾಗಿರಬಹುದು, ಅವಿವೇಕವಾಗಿರಬಹುದು, ಅಪಸ್ಮಾರವಾಗಿರಬಹುದು, ಹೀಗೆ ತುಂಬ ವಿಶಾಲವ್ಯಾಪ್ತಿಯುಳ್ಳ ಅನುಭವವನ್ನು ತತ್ತ್ವಶಾಸ್ತ್ರ ಆಧಾರವಾಗಿ ಮಾಡಿಕೊಳ್ಳಬೇಕು ಎಂದು ಈ ತಾತ್ತ್ವಿಕನ ನಿಲವು. ಈ ವಿಶಾಲಾನುಭವಾರೂಢತತ್ತ್ವದಿಂದ ನಮ್ಮ ತಾತ್ತ್ವಿಕದೃಷ್ಟಿ ಹೆಚ್ಚು ವಿಶಾಲವಾಗುತ್ತದೆ ಎಂದು ಇವನ ಭಾವನೆ. ಇದು ಗಮನಾರ್ಹವಾದ ಅಂಶ. (ಜಿ.ಎಚ್.)

**ಅನುಭವ**[2] **:** ಮನಶ್ಶಾಸ್ತ್ರದ ರೀತ್ಯ ನಿಯತ ಗಳಿಗೆಯಲ್ಲಿ ಅಥವಾ ಕಾಲದಲ್ಲಿ ವ್ಯಕ್ತಿ ಮಾನಸಿಕವಾಗಿ ಗ್ರಹಿಸುವುದೆಲ್ಲಕ್ಕೆ ಅಥವಾ ಅದರ ಒಂದು ಭಾಗಕ್ಕೆ ಈ ಹೆಸರಿದೆ. ಈ ಗ್ರಹಿಕೆ ಬಹು ಸಂಕೀರ್ಣವಾದುದು. ಇದರಲ್ಲಿ ಪ್ರಜ್ಞಾವಸ್ಥೆಯಂತೆ ಸುಪ್ತಮಾನಸ ಕ್ರಿಯೆಯೂ ಸೇರಿದೆಯಲ್ಲದೆ ಮಾತುಗಳ ಮೂಲಕ ವರ್ಣಿತವಾದಂತೆ ಮೂಕ ಅನುಭವಗಳೂ ಸೇರಿವೆ. ಇದು ಅನುಮಾನಾದಿಗಳ ಮುಖೇನ ಬಂದುದಲ್ಲ. ನೇರವಾದದ್ದು ಎಂಬ ವಾದವೂ ಇದೆ. ಇಂದ್ರಿಯಾನುಭವದಿಂದ ಬರುವ ತಿಳಿವಳಿಕೆಗೆ ಈ ಹೆಸರಿದೆಯೆಂದು ಮತ್ತೆ ಕೆಲವರ ವಾದ.

ಜೀವಿ ಲೌಕಿಕಪರಿಸರವನ್ನು ಅನುಸರಿಸಿ ಬದುಕಬೇಕು. ಈ ಪರಿಸರದಲ್ಲಿ ಸ್ಥಿರಾಂಶವೂ ಉಂಟು, ಅಸ್ಥಿರಾಂಶವೂ ಉಂಟು. ಜೀವಿ ತನ್ನ ಅನನ್ಯತೆಯನ್ನೂ ಉಳಿಸಿಕೊಳ್ಳಬೇಕಲ್ಲದೆ ತನ್ನ ಅಂಗಗಳ ಕ್ರಿಯಾಸಾಮರ್ಥ್ಯವನ್ನೂ ಹದದಲ್ಲಿಟ್ಟಿರಬೇಕು. ಆದಕಾರಣ ಒಂದು ಜೀವಿ ತನ್ನ ಅನನ್ಯತೆಯನ್ನೂ ಬೆಳವಣಿಗೆಯನ್ನೂ ಪುಷ್ಟಿಯನ್ನೂ ವಂಶಸಾತತ್ಯವನ್ನೂ ಕಾಪಾಡಿಕೊಳ್ಳಲು ಬಗೆಬಗೆಯ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ದೇಹದಲ್ಲಿನ ಜೀವಾಂಗಾಂಶಗಳು ಪರಿಸರದಲ್ಲಿರುವ ವಸ್ತುಗಳ ಭೌತ ಮತ್ತು ರಾಸಾಯನಿಕ ಗುಣಗಳಿಗೆ ಪ್ರತಿಕ್ರಿಯೆಯನ್ನು ತೋರುತ್ತವೆ. ದೈಹಿಕ ಕ್ರಿಯೆಗಳಲ್ಲಿ ಆಹಾರಸ್ವೀಕರಣ ಮತ್ತು ಅದನ್ನು ವಿಶಿಷ್ಟ ಅಂಗಾಂಶಗಳನ್ನಾಗಿ ಪರಿವರ್ತಿಸುವ ಭೌತ–ರಾಸಾಯನಿಕ ಕ್ರಿಯೆ. ಬಾಹ್ಯಪ್ರಪಂಚದ ಪ್ರಚೋದನೆಗಳನ್ನು ಗ್ರಹಿಸಿ ಅವಕ್ಕೆ ತಕ್ಕಂತೆ ತನ್ನ ಅಂಗಗಳನ್ನು ಕೆಲಸದಲ್ಲಿ ತೊಡಗಿಸುವುದೋ ಅಥವಾ ಸ್ಥಳವನ್ನು ಬದಲಾಯಿಸುವುದೋ ಮುಂತಾದ ಆಯಾ ಪರಿಸ್ಥಿತಿಗೆ ತಕ್ಕ ಅನುಸರಣೆ–ಇವೇ ಮೊದಲಾದುವು ಸೇರುತ್ತವೆ.

ಒಂದು ಸಂಕೀರ್ಣಾವಯವಿ ಸಾಮಾನ್ಯವಾಗಿ ತನ್ನ ಹುಟ್ಟಿನಿಂದಲೇ ಭೌತ–ರಾಸಾಯನಿಕ ಮತ್ತು ಜೀವದ್ರವ್ಯ ಪರಿಣಾಮ ಸಂಧಾನದಿಂದ ತನ್ನನ್ನು ತಾನು ಕಾಪಾಡಿಕೊಳ್ಳಬಲ್ಲ ರೀತಿಯಲ್ಲಿ ದೇಹರಚನೆಯನ್ನು ಪಡೆದಿರುತ್ತದೆ. ಈ ದೇಹರಚನೆ ಬೆಳೆದು ಬಲಿತು ಅಭಿವೃದ್ಧಿಯಾಗಿ ಪರಿಸರಕ್ಕೆ ಯಶಸ್ವಿಯಾಗಿ ಹೊಂದಿಕೊಂಡು ಬಾಳುವ ಅವಕಾಶವನ್ನು ಆಗಾಗ ಹೆಚ್ಚಿಸಿಕೊಳ್ಳುತ್ತದೆ. ಹೀಗೆ ತಮ್ಮ ಪ್ರಾಣ ಸಂಸ್ಥೆಗೂ ಅದು ಬಾಳಬೇಕಾದ ಬಹಿರ್ಲೋಕಕ್ಕೂ ಇರುವ ವ್ಯವಹಾರದಲ್ಲಿ ಮನುಷ್ಯರೂ ತಮ್ಮ ಪರಿಸರದ ಪ್ರಜ್ಞೆಯನ್ನು ಪಡೆಯುತ್ತಾರೆ. ಅವರು ಬಗೆಬಗೆಯ ವಸ್ತುಗಳ ಪರಿಜ್ಞಾನವನ್ನು ಪಡೆದು, ತಮ್ಮ ಪರಿಸರವನ್ನು ತಮ್ಮ ಅವಶ್ಯಕತೆಗೆ ತಕ್ಕಂತೆ ಬದಲಾಯಿಸಿಕೊಂಡು ಸುಖವಾಗಿರಲು ಯತ್ನಿಸುತ್ತಾರೆ. ಇದರಿಂದ ಹೊಂದುವಣೆ ಮಾಡಿಕೊಳ್ಳುವುದರಲ್ಲಿ ಅವರು ಪರಿಷ್ಕರಿಸುತ್ತಾರೆ. ಅವರ ಅರಿವು, ಸಂವೇದನೆ, ಬಯಕೆ, ಮುಂತಾದವೆಲ್ಲ ಬಾಹ್ಯಪ್ರಪಂಚಕ್ಕೆ ತಮ್ಮ ಪ್ರತಿಕ್ರಿಯೆಗಳು ; ಆದರೆ ತಮ್ಮ ತಿಳಿವಳಿಕೆಗೆ ಬಂದಿರುವ ಭೌತವಸ್ತುಗಳ ಸಮಸ್ತಗುಣಗಳಿಗೂ ಹೊರತಾದ ಯಾವುದೋ ಒಂದು ವಿಲಕ್ಷಣಗುಣ ಇವುಗಳಲ್ಲಿದೆ. ಪ್ರಜ್ಞಾವಂತನಾದ ಮನುಷ್ಯ ತನ್ನ ಹಿಂದಿನ ಅನುಭವಗಳ ಆಧಾರದ ಮೇಲೆ ತನ್ನ ಪರಿಸರದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾನೆ. ತನ್ನ ನಡೆವಳಿಕೆಯಲ್ಲಿನ ಈ ವ್ಯತ್ಯಾಸ ತನ್ನ ಹಿಂದಿನ ಅನುಭವಗಳ ಸ್ಮೃತಿ, ಸದ್ಯಃಪರಿಸ್ಥಿತಿಯ ಪರಿಮಿತವಾದ ಗ್ರಹಿಕೆ, ಈ ಅನುಸರಣೆಯಿಂದ ಹೆಚ್ಚುಕಡಿಮೆ ತಾನು ನಿರೀಕ್ಷಿಸುವ ಪರಿಣಾಮ–ಇವುಗಳನ್ನು ಸೂಚಿಸುತ್ತದೆ. ಸೂಕ್ಷ್ಮಾತಿಸೂಕ್ಷ್ಮ ಏಕಕಣ ಜೀವಿಗಳಲ್ಲೂ ಈ ಗುಣಗಳು ಅಸಮಗ್ರರೂಪದಲ್ಲಿ ಕಂಡುಬರುತ್ತವೆ. ವಿಕಾಸಗೊಂಡಿರುವ ಪ್ರಾಣಿಗಳಲ್ಲಿ ಇವು ಸ್ಪಷ್ಟತರವಾಗಿ ಗೋಚರಿಸುತ್ತವೆ. ಗಿಡಗಳ ಚಟುವಟಿಕೆಗಳಲ್ಲಿ ಮಾತ್ರ ಹೀಗೆ ಕಲಿಯುವ ಕ್ರಮ ಕಂಡುಬರುವುದಿಲ್ಲವಾದರೂ ಪರಿಸರಕ್ಕೆ ತಕ್ಕಂತೆ ಅದು ತನ್ನ ಪ್ರಾಣಿಸಂಸ್ಥೆಯನ್ನು ಹೊಂದಿ, ಪ್ರತಿಭಟಿಸಿ, ಬಾಳು ಸಾಗಿಸಲು ನಿರಂತರ ಶ್ರಮಿಸುತ್ತದೆಂಬ ಅಂಶ ಸ್ಪಷ್ಟ.

ಪ್ರೌಢಮಾನವನಲ್ಲಿ ಬೋಧಾವಸ್ಥೆಯ ಅನುಭವ ಬಹುಮುಖವೂ ಸಂಕೀರ್ಣವೂ ಆಗಿದೆ. ಆ ಅನುಭವದ ಜ್ಞಾನಸಂಪಾದನಾಂಶಕ್ಕೆ ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದಾರೆ ಮತ್ತು ಆ ಸಂಕೀರ್ಣಾನುಭವವನ್ನು ಮೂಲಾಂಶಗಳಾಗಿ ವಿಭಜಿಸಲು ಪ್ರಯತ್ನಿಸಿದ್ದಾರೆ. ಜ್ಞಾನ ನಮಗೆ ವಿಶಿಷ್ಟವಾದ ಜ್ಞಾನೇಂದ್ರಿಯಗಳಿಂದ ಪ್ರಾಪ್ತವಾಗುತ್ತದೆ. ಕಣ್ಣುಗಳು ನಮಗೆ ಹೊಳವಿನ ಹಾಗೂ ಬಣ್ಣಗಳ ಅನುಭೂತಿಗಳನ್ನು ಮಾತ್ರ ಕೊಡುತ್ತವೆ. ಕಿವಿಗಳು ಸ್ವರಗಳ ಮತ್ತು ಸದ್ದುಗಳ ಅನುಭವಗಳನ್ನು ಕೊಡುತ್ತವೆ. ನೋಟಕ್ಕೆ ಸಿಲುಕುವ ವಸ್ತುವಿಗೆ ಹೇಗೆ ರೂಪವುಂಟೋ ಹಾಗೆಯೇ ಕೇಳಿಬರುವ ಸ್ವರಕ್ಕಾಗಲಿ ರಾಗಕ್ಕಾಗಲಿ ವಿಶಿಷ್ಟವಾದ ರೂಪವಿದೆ. ವಸ್ತುತಃ ಕರಣಜನಿತ ಜ್ಞಾನಕ್ಕೆಲ್ಲ ಸಾಮಾನ್ಯವಾಗಿ ರೂಪ ಮತ್ತು ಆಕಾರಗಳೆಂಬ ಗುಣಗಳುಂಟು. ಈ ಪ್ರತ್ಯಕ್ಷಾಕಾರಗಳನ್ನು ನಾವು ಸಾಮಾನ್ಯವಾಗಿ ಪರೀಕ್ಷಿಸುವುದಾದರೆ, ಅವುಗಳ ರಚನೆ ಒಂದು ಗೊತ್ತಾದ ಮಾದರಿಯಲ್ಲಿರುವುದನ್ನೂ ಅಲ್ಲದೆ, ಕರಣಕ್ಷೇತ್ರದಲ್ಲಿ ಆಯಾ ಅನುಭವಕ್ಕೆ ತಕ್ಕಂಥ ಆಕೃತಿಯನ್ನು ಅದಕ್ಕೆ ಕೊಡುವ ಗತಿಶೀಲವಾದ ರೂಪಣ ವ್ಯಾಪಾರಗಳನ್ನೂ ಕಾಣುತ್ತೇವೆ. ಈ ಚಲನಾತ್ಮಕ ವ್ಯಾಪಾರಗಳ ಲೀಲೆಯನ್ನು ನಾವು ನೋಡುವ ಅಸ್ಪಷ್ಟ ರೂಪಗಳಲ್ಲಿ ಸುಲಭವಾಗಿ ಕಾಣಬಹುದು. ಅಲ್ಲಿ ಕಠಿಣಾನುಭೂತಿಯ ಅರ್ಥ ಪದೇ ಪದೇ ಬದಲಾಯಿಸುತ್ತಿರುತ್ತದೆ. ಆದ್ದರಿಂದ ಅದ್ಯತನೀಯ ಕಾಲದಲ್ಲಿ ಯಾವ ಬೋಧಾವಸ್ಥಾನುಭೂತಿಯನ್ನಾದರೂ ಒಟ್ಟಿನ ಪ್ರಜ್ಞಾನುಭೂತಿಗೂ ಮತ್ತು ಜ್ಞಾನ–ಕ್ರಿಯಾ–ಭಾವ ಪ್ರವಾಹಗಳ ಪರಸ್ಪರ ಮೇಳನಕ್ಕೂ ಬೆಲೆಕಟ್ಟುವ ಘಟನೆಯೆಂದು ನಿರೂಪಿಸಬಹುದು.

ಪ್ರಜ್ಞಾನುಭವ ಮಿದುಳಿನ ಬೂದುಬಣ್ಣದ ಭಾಗದ ಮೇಲುಹೊದಿಕೆಯಲ್ಲಿರುವ ನರಗಳ ಕೇಂದ್ರಗಳ ವಿಶಿಷ್ಟಕ್ರಿಯೆಗಳನ್ನು ಅವಲಂಬಿಸಿದೆ. ಸಾಮಾನ್ಯವಾದ ಜೀವದ್ರವಪರಿಮಾಣ ಕೆಲವು ವೈಲಕ್ಷಣ್ಯಗಳು ಪ್ರಜ್ಞಾಕ್ರಿಯೆಯ ನಮೂನೆಗಳನ್ನು ಸ್ವಪ್ನಾವಸ್ಥೆ ಮತ್ತು ಸುಷುಪ್ತಿಗಳಲ್ಲಿ ಹೇಗೋ ಹಾಗೇ ಅಸ್ತವ್ಯಸ್ತವಾಗಿ ಮಾಡಬಹುದು ಅಥವಾ ಉಪಶಮಿಸಬಹುದು. ಆದರೆ ಭೌತವಸ್ತುಗಳನ್ನೂ ಸಂಭವಗಳನ್ನೂ ತಮ್ಮ ಹಿಡಿತಕ್ಕೊಳಪಡಿಸಿಕೊಂಡು ಮಿತಗೊಳಿಸುವ ದೇಶ ಮತ್ತು ಕಾಲಗಳ ಉಪಾಧಿಗಳು ಪ್ರಜ್ಞಾನುಭೂತಿಗಿಲ್ಲ. ದೇಶಕಾಲಗಳ ಚೌಕಟ್ಟಿನ ಮಿತಿಗಳಳವಡುವುದೇ ಕರಣಗೋಚರ ವಿಷಯದ ಹುರುಳು. ಇದಕ್ಕೆ ಸಂಬಂಧಪಟ್ಟ ಇಂದ್ರಿಯಾನುಭೂತಿಯೂ ದೇಶಕಾಲೀಯ ಹಾಗೂ ಚಿತ್ತ–ಶರೀರ–ಭೌತ ಸ್ಥಿತಿಗಳಿಂದ ನಿರ್ದಿಷ್ಟವಾಗುತ್ತದೆ. ಆದರೆ ಈ ಅನುಭವದ ಪ್ರಜ್ಞೆಮಾತ್ರ ದೇಶಕಾಲೀಯ ಸಂಕೋಲೆಗಳನ್ನು ಕಿತ್ತೊಗೆಯಬಲ್ಲದು. ಭೌತಿಕಘಟನೆಗಳಾವುದಕ್ಕೂ ಸಲ್ಲದ ಸ್ವಾತಂತ್ರ್ಯಸ್ಮೃತಿ ಮತ್ತು ಕಲ್ಪನೆಗಳಿಗೆ ಸಂದಿದೆ. ಸದ್ಯದ ಅಥವಾ ಹಳೆಗಾಲದ ಯಾವ ಅನುಭೂತಿಯ ಸ್ಮೃತಿಯನ್ನಾಗಲಿ ಕಾಲ ಮಂಕಾಗಿಸದು, ದೇಶ ತಡೆಹಿಡಿಯದು. ಅದರಂತೆಯೇ ನಮ್ಮ ಕಲ್ಪನೆ ದೂರವೂ ವಿಶಾಲವೂ ಆದ ಕ್ಷೇತ್ರಗಳಲ್ಲಿ ಅಲೆದಾಡಬಹುದಲ್ಲದೆ ಹತ್ತಿರದ ಅಥವಾ ದೂರದ ಭವಿಷ್ಯಕ್ಕೂ ಒಳದಾರಿಮಾಡಿಕೊಂಡು ಅಲ್ಲಿ ಕನಸುಗಳನ್ನೂ ಕಾಣಬಲ್ಲದು.

ಪ್ರಜ್ಞಾನುಭೂತಿ ಬಾಹ್ಯವಸ್ತುವೊಂದನ್ನು ಸೂಚಿಸುತ್ತದೆ. ತನ್ನ ತಿಳಿವಿಗೆ ಅಳವಟ್ಟ, ತನಗೆ ಸುಖಕೊಟ್ಟ ಅಥವಾ ತಾನು ಪ್ರತಿಕ್ರಿಯೆ ತೋರಿದ ವಸ್ತುಗಳತ್ತ ಅದು ಯಾವಾಗಲೂ ಬೆರಳಿಟ್ಟು ತೋರುತ್ತದೆ. ಹೊರಲೋಕದಲ್ಲಿ ಇಂದ್ರಿಯಗ್ರಾಹ್ಯವಾದ ವಸ್ತುವಿರಬಹುದು, ಘಟನೆಯಿರಬಹುದು. ಉದಾ : ಒಂದು ಹಕ್ಕಿ, ಒಂದು ಮರ ಅಥವಾ ಒಂದು ಪಶುಯಿದ್ದ ಇಲ್ಲದಿದ್ದರೆ, ಶರೀರದಲ್ಲೇ ಉತ್ಪನ್ನವಾದ ಒಂದು ಪರಿಸ್ಥಿತಿ (ಹಲ್ಲು ನೋವು, ಹೊಟ್ಟೆ ನುಲಿತ, ವ್ಯಾಯಾಮಾನಂತರದ ಉಲ್ಲಾಸ ಇತ್ಯಾದಿ). ಇಂಥ ಸಂದರ್ಭದಲ್ಲೆಲ್ಲ ಜ್ಞಾನಕ್ಕೆ ವಿಷಯವಾಗಿರುವ ಸಂಭವವೊಂದುಂಟು. ಆದ್ದರಿಂದ ಅದು ಜ್ಞಾತೃವಿಗಿಂತ ಭಿನ್ನವಾದುದು : ಮತ್ತೊಂದು ತರದಲ್ಲಿ ಹೇಳಬೇಕಾದರೆ, ಜ್ಞಾನದ ಅಥವಾ ಪ್ರಜ್ಞಾನುಭೂತಿಯ ವಿಷಯದ ಸೂಚನೆ ಇದರಲ್ಲಿದೆ. ಈ ಅನುಭೂತಿಗೆ ಕರ್ತೃಸ್ಥಾನದಲ್ಲಿ ಯಾವನಿದ್ದಾನೋ ಆ ಪ್ರಜ್ಞಾವಂತ ಅಥವಾ ಆತ್ಮ. ಅವನಿಗಿಂತ ಅದು ಭಿನ್ನವಾದದ್ದು. ಅದರೆ ಅದು, ತಾನು ಹೆಚ್ಚುಕಡಿಮೆ ಅಸ್ಪಷ್ಟವಾಗಿರುವಾಗಲೂ ನೇರವಾದ ಪ್ರತ್ಯಕ್ಷಜ್ಞಾನದ ಅಂಶ.

ಪ್ರಜ್ಞಾನುಭೂತಿ ಅತಿ ಸರಳವಾಗಿದ್ದು ಯಾವುದೋ ಒಂದು ಅಸ್ಪಷ್ಟವಿಷಯ ಸೂಚಿಯಾದ ಬರಿಯ ಇಂದ್ರಿಯೈಕಜ್ಞಾನವಾಗಿದ್ದರೆ. ಆಗ ಅದನ್ನು ಬರಿ ಎಚ್ಚರ ಎಂದು ಕರೆಯಬಹುದು. ಎಲ್ಲೋ ಯಾವುದೋ ಇದೆ ಎನ್ನುವಷ್ಟರ ಮಟ್ಟಿನ ತಿಳಿವಳಿಕೆ ಆಗುಂಟು. ಅದೊಂದು ವಾಸ್ತವಾನುಭೂತಿ, ಆದರೆ ನಾವು ಸೊನ್ನೆಯ ಪ್ರಮಾಣವನ್ನು ಕುರಿತು ಹೇಗೆಯೋ ಹಾಗೆಯೋ ಇದನ್ನು ನೇತಿವಾಕ್ಯಗಳಿಂದಲೇ ವರ್ಣಿಸಬೇಕು. ಆದರೆ ಬರಿ ಎಚ್ಚರ ಸ್ವಲ್ಪಕಾಲ ಅನುಭವಿತವಾದ ಬಳಿಕ ತತ್ಸಂಬಧಿಯಾದ ಇತರ ಸೂಚನೆಗಳಿಂದ ಬೇಗ ಪುಷ್ಟಿಗೊಳ್ಳುತ್ತದೆ. ಆ ವಸ್ತುವಿನ ಅನೇಕ ಗುಣಗಳೂ ಮತ್ತು ಅದರ ಪರಿಸರಗಳೂ ಕ್ರಮೇಣ ಅರಿವಿಗೆ ಗೋಚರವಾಗಿ ಅವುಗಳ ಹಿತ ಮನಸ್ಸಿಗೆ ತಟ್ಟುತ್ತದೆ. ಮುಂದೆ ಒಂದೊಂದಾಗಿ ಒದಗಿ ಬರುವ ಬಗೆಬಗೆಯ ಅನುಭವಗಳು ಅದರ ವಿಷಯದಲ್ಲಿ ವಿಶಿಷ್ಟವಾದ ಮನಸ್ಸಿನ ನಿಲವುಗಳನ್ನು ಉದ್ಬೋಧನಗೊಳಿಸುತ್ತವೆ. ಈ ಬರೀ ಅರಿವನ್ನು ಕೂಸು ಹುಟ್ಟಿದ ಒಂದೆರಡು ಗಳಿಗೆಗಳ ಪರಿಯಂತ ಅದು ಪಡುವ ಅನುಭವವೆಂದು ಹೇಳಬಹುದು. ತತ್ಸಮಾನವಾದ ಮತ್ತೊಂದು ಉದಾಹರಣೆಯಾಗಿ, ಒಬ್ಬ ವಯಸ್ಸಾದವನು ಒಂದಾದಮೇಲೊಂದು ಅತಿ ವೇಗದಿಂದ ಬರುತ್ತಿರುವ ರಾಗೋದ್ರಿಕ್ತವಾದ ಬದಲಾವಣೆಗಳನ್ನು ಅವು ತನ್ನ ಹಿಂದಿನ ಎಲ್ಲ ಅನುಭವಗಳಿಗೂ ತೀರ ಭಿನ್ನವಾಗಿರುವ ಕಾರಣದಿಂದ ಹೇಗೆ ಸ್ವಲ್ಪವೂ ಅರಿತುಕೊಳ್ಳಲಾರನೋ ಅರ್ಥಮಾಡಿಕೊಳ್ಳಲಾರನೋ ಹಾಗೆ ಎನ್ನಬಹುದು. ಈ ಬರಿಯೆಚ್ಚರದಲ್ಲಿ ದೇಶಕಾಲೋಪಾದಿಗಳನ್ನು ಕುರಿತು ಅಸ್ಪಷ್ಟಸೂಚನೆಯಿದೆ. ನಿದ್ರಾಜಾಗರಗಳ ನಡುವಣ ನಸುಕಿನಲ್ಲಿ ನಮಗೆ ಕೆಲವೇಳೆ ಇಂಥ ಅನುಭವ ಉಂಟಾಗುತ್ತದೆ. ಮಗು ತನ್ನ ಅನುಭವಗಳನ್ನು ಹೇಳಿಕೊಳ್ಳುವಷ್ಟು ವಯಸ್ಸಿಗೆ ಬಂದ ಮೇಲೆ ಇಂಥ ಬರಿಯೆಚ್ಚರ ಅಪೂರ್ವ. ಆದರೆ ಸಂಕೀರ್ಣವೂ ಅರ್ಥಪೂರ್ಣವೂ ಆದ ಅದರ ಗ್ರಹಿಕೆಗಳು ನಮ್ಮ ಗೋಚರಕ್ಕೆ ಬರುತ್ತವೆ.

ಸಾಮಾನ್ಯವಾಗಿ ಈ ವಿಷಯವನ್ನು ಆಲೋಚಿಸುವ ಎಲ್ಲ ತಜ್ಞರಿಂದಲೂ ಗ್ರಹೀತವಾದ ಅನುಭವಮುಖವೊಂದುಂಟು. ಅದು ಪ್ರಜ್ಞಾನುಭವಕ್ಕೆ ವಿಮುಖವಾದದ್ದು. ಅದರ ಹೆಸರು ಅನುಭವದ ಸುಪ್ತಚೇತನಾವಸ್ಥೆ, ಅಜಾಗೃತಾವಸ್ಥೆ. ಅದು ಮನಸ್ಸಿನ ಅಥವಾ ಗತಿಶೀಲವಾದ ಅದರ ತಿಳಿವಳಿಕೆಗೆ ಬಾರದ ಮನೋರಾಜ್ಯ. ಅನುಭವವೊಂದರ ಅರ್ಥ, ಅದರ ಬಗ್ಗೆ ಮನದ ನಿಲವು ಮತ್ತು ಹುಟ್ಟಿದ ಪ್ರತಿಕ್ರಿಯೆ–ಇವುಗಳನ್ನು ಇದರ ಕಾರ್ಯಗತಿಗಳು ಪ್ರಭಾವಿಸುತ್ತವೆ. ಎಂದು ತಜ್ಞರು ಊಹಿಸುತ್ತಾರೆ. ಸ್ಮರಣಕ್ರಿಯೆಯ ಸ್ವಭಾವವನ್ನು ಕುರಿತು ಪರ್ಯಾಲೋಚಿಸುವಾಗ, ನಾವು ಕೆಲವು ಅನುಭವಗಳನ್ನು ಸುಲಭವಾಗಿ ನೆನಪಿಗೆ ತಂದುಕೊಳ್ಳಬಹುದೆಂಬುದೂ ಅವು ಪ್ರಜ್ಞೆಯನ್ನು ಹೊಕ್ಕು ಅದರ ಬಹುಸ್ಪಷ್ಟ ಕೇಂದ್ರವನ್ನು ತಲುಪಬಲ್ಲವೆಂಬುದೂ ನಮಗೆ ತಿಳಿದು ಬರುತ್ತದೆ. ಇತರ ಅನುಭವಗಳ ಉದ್ಬೋಧನೆಯ ಪರಿಣಾಮವಾಗಿ ಹೆಚ್ಚು ಕಡಿಮೆ ಕಷ್ಟದಿಂದ ನೆನಪಿಗೆ ಬರುವ ಅನುಭವಗಳೂ ಕೆಲವುಂಟು.

(ಎಸ್.ಎಸ್.ಜೆ.)

**ಅನುಭವ ಪ್ರಧಾನವಾದ :** ಅನುಭವವೇ ಎಲ್ಲ ಜ್ಞಾನಕ್ಕೂ ಆಧಾರವೆಂಬ ಈ ವಾದವನ್ನು (ಅನುಭವೈಕವಾದ – ಎಂಪಿರಿಸಿಸಮ್) ಒಂದು ಸಿದ್ಧಾಂತವೆಂದು ಕರೆಯುವುದಕ್ಕಿಂತಲೂ ಒಂದು ಮನೋಭಾವವೆಂದು ಕರೆಯುವುದು ಮೇಲು. ಎಲ್ಲಾ ಕಾಲದ, ಎಲ್ಲಾ ದೇಶಗಳ ದರ್ಶನಗಳಲ್ಲಿಯೂ ಈ ವಾದವನ್ನು ಕಾಣುತ್ತೇವೆ. ಅನುಭವವೆಂದರೆ

ಮಾನವನ ಸಾಮಾನ್ಯಾನುಭವ. ಸಂಕುಚಿತವಾದ ಅರ್ಥದಲ್ಲಿ ನಮ್ಮ ಜ್ಞಾನ ಇಂದ್ರಿಯಜನ್ಯ ಜ್ಞಾನದಿಂದ ಪ್ರಾರಂಭವಾಗುತ್ತದೆ. ಇಂದ್ರಿಯಗಳೇ ಅದರ ಪ್ರಮಾಣ. ಇಂದ್ರಿಯ ಜ್ಞಾನದ ಆಧಾರದಿಂದಲೇ ವಸ್ತುಗಳ ಯಥಾರ್ಥ ಸ್ವರೂಪವನ್ನು ನಿರ್ಣಯಿಸಬೇಕೆಂಬುದು ಈ ವಾದದ ಜೀವಾಳ.

ಅನುಭವವೇ ಎಲ್ಲ ಜ್ಞಾನದ ಆಧಾರ ಎಂದು ಎಲ್ಲ ದರ್ಶನಗಳು ಒಂದಲ್ಲ ಒಂದು ರೀತಿಯಲ್ಲಿ ಒಪ್ಪಿಕೊಂಡಿರುತ್ತವೆ. ಅನುಭವ ಪ್ರಧಾನವಾದದಲ್ಲಿ ಅನುಭವ ಎಂಬ ಮಾತನ್ನು ಸಂಕುಚಿತವಾದ ಅರ್ಥದಲ್ಲಿ ಪ್ರಯೋಗಮಾಡಿದೆ. ಇಂದ್ರಿಯಾತೀತವಾದ ಅನುಭವ ಸಾಧ್ಯವಿಲ್ಲವೆಂದು ಇದು ಒಪ್ಪುವುದಿಲ್ಲ. ನಮ್ಮ ಸಾಮಾನ್ಯವಾದ ಅನುಭವಕ್ಕೆ ನಿಲುಕದ ಅಂದರೆ ಇಂದ್ರಿಯಾತೀತವಾದ ವಸ್ತುವಿನ ತಿಳಿವು ಸಾಧ್ಯವಿಲ್ಲವೆಂದು ಹೇಳುತ್ತಾರೆ.

ಪ್ರಾಚೀನ ದರ್ಶನಗಳಲ್ಲಿ ಪ್ರಸಿದ್ಧವಾದ ಗ್ರೀಕ್ ಮತ್ತು ಭಾರತೀಯ ದರ್ಶನಗಳಲ್ಲಿ ಮೂಲಭೂತವಾದ ಒಂದು ವ್ಯತ್ಯಾಸ ಕಂಡುಬರುತ್ತದೆ. ಭಾರತದ ದಾರ್ಶನಿಕರು ಆಂತರಿಕಾನುಭವದಲ್ಲಿ ಆಸಕ್ತರಾಗಿದ್ದರು. ಗ್ರೀಕ್ ದಾರ್ಶನಿಕರು ಬಾಹ್ಯವಸ್ತುಗಳ ಅನುಭವದಲ್ಲಿ ಆಸಕ್ತರಾಗಿದ್ದರು. ಭಾರತದರ್ಶನ ಆತ್ಮನಿಷ್ಠವಾಗಿತ್ತು. ಗ್ರೀಕರ ದರ್ಶನ ವಸ್ತುನಿಷ್ಠವಾಗಿತ್ತು. ಇದು ಈ ದರ್ಶನಗಳ ಸಾಮಾನ್ಯಧೋರಣೆ ಎಂದು ಮಾತ್ರ ಹೇಳಬಹುದು. ಗ್ರೀಕರು ಬಾಹ್ಯಪ್ರಕೃತಿಯಲ್ಲಿ ತೋರ್ಪಡಿಸಿದ ಈ ಆಸಕ್ತಿ ಆಧುನಿಕ ವಿಜ್ಞಾನಕ್ಕೂ ಸ್ವಭಾವವಾದಕ್ಕೂ (ನ್ಯಾಚುರಲಿಸಂ) ದಾರಿ ಮಾಡಿಕೊಟ್ಟಿತು. ಕೆಪ್ಲರ್, ಗೆಲಿಲಿಯೊ, ನ್ಯೂಟನ್ ಮೊದಲಾದವರು ಬಾಹ್ಯಜಗತ್ತಿನ ಸ್ವರೂಪವನ್ನು ಅರಿಯುವುದರಲ್ಲಿ ಉದ್ಯುಕ್ತರಾದರು. ಇವರ ಸಂಶೋಧನೆಗಳ ಹಿಂದೆ ಮೂಡಿದ್ದ ವೈಜ್ಞಾನಿಕ ಪದ್ಧತಿಯನ್ನು, ಇಂದ್ರಿಯಾನುಭವ ವಿಮರ್ಶೆಯನ್ನು ಕೈಗೊಂಡು ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ನಿವಾರಿಸಲು ಪ್ರಯತ್ನಮಾಡಿದವನು ಫ್ರಾನ್ಸಿಸ್ ಬೇಕನ್. ಈತ ಹೂಡಿದ ತರ್ಕ ಅನುಗಮನ ತರ್ಕ (ಇಂಡಕ್ಟಿವ್ ಲಾಜಿಕ್) ಎನಿಸಿಕೊಂಡಿದೆ. ಇಂದ್ರಿಯಾನುಭವ ತರ್ಕದ ಆಧಾರವೆಂದು ಇವನ ಮತ. ಸಾಮಾನ್ಯದಿಂದ ವಿಶೇಷಕ್ಕೆ ಇಳಿದು ಬರುವ ತರ್ಕಕ್ಕಿಂತಲೂ ವಿಶೇಷದಿಂದ ಸಾಮಾನ್ಯಕ್ಕೆ ಏರುವ ತರ್ಕ ಹೆಚ್ಚು ಫಲಕಾರಿಯಾಗುವುದೆಂದು ಈತ ಪ್ರತಿಪಾದಿಸಿದ್ದಾನೆ. ವಿಶ್ವದಲ್ಲಿ ಕಾರ್ಯಕಾರಣ ಭಾವವನ್ನು ಅನ್ವೇಷಣೆ ಮಾಡುವುದೇ ವಿಜ್ಞಾನದ ಮುಖ್ಯಗುರಿ ಎಂಬುದು ಇವನ ಅಭಿಪ್ರಾಯವಾಯಿತು.

ಕೇವಲ ಪ್ರತ್ಯಕ್ಷಪ್ರಮಾಣ ಒಂದೇ ಸರಿಯಾದದ್ದೆಂದು ಬೋಧಿಸಿದವರಲ್ಲಿ ಹಾಬ್ಸ್ ಎಂಬ ಆಂಗ್ಲ ದಾರ್ಶನಿಕನೂ ಒಬ್ಬ. ಭಾರತದಲ್ಲಿ ಚಾರ್ವಾಕ ದರ್ಶನದ ಮತವೂ ಇದೇ ರೀತಿಯಾಗಿತ್ತು. ಇಂದ್ರಿಯಗಳಿಗೆ ಗೋಚರವಾಗದುದನ್ನು ಸತ್ಯವೆಂದು ಅಂಗೀಕರಿಸಲು ಹಾಬ್ಸ್ ನಿರಾಕರಿಸಿದ.

ಅನುಭವಪ್ರಧಾನವಾದದ ಪ್ರಮುಖ ದಾರ್ಶನಿಕರಲ್ಲಿ ಪ್ರಸಿದ್ಧಿ ಪಡೆದವರು ಲಾಕ್, ಬರ್ಕ್ಲೆ ಮತ್ತು ಹ್ಯೂಮ್, ಇವರ ಕಾಲ ಹದಿನೇಳು ಹದಿನೆಂಟನೆಯ ಶತಮಾನಗಳು. ಲಾಕ್ ತನ್ನ ಗ್ರಂಥದಲ್ಲಿ ಅನುಭವದ ವ್ಯಾಪ್ತಿ ಮತ್ತು ಇತಿಮಿತಿಗಳನ್ನು ವಿವರಿಸಿ ಇಂದ್ರಿಯಜನ್ಯ ಜ್ಞಾನವೊಂದೇ ನಿಶ್ಚಿತ ಜ್ಞಾನವೆಂದು ಬೋಧಿಸಿದ್ದಾನೆ. ಇವನ ಅಭಿಪ್ರಾಯದಲ್ಲಿ ಅನುಭವ ಹುಟ್ಟುವುದಕ್ಕೆ ಮೊದಲು ನಮ್ಮ ಮನಸ್ಸು ಒಂದು ಖಾಲಿ ಸ್ಲೇಟಿನಂತೆ ಇರುತ್ತದೆ; ಮೊದಲೇ ಏನೂ ಬರೆದಿರುವುದಿಲ್ಲ. ಆದ್ದರಿಂದ ನಮ್ಮ ಮನಸ್ಸಿಗೆ ಯಾವ ಅನುಭವ ಬೋಧೆಯಾಗ ಬೇಕಾದರೂ ಅದು ಹೊರಗಿನ ಪದಾರ್ಥಗಳು ನಮ್ಮ ಮನಸ್ಸಿನ ಮೇಲೆ ಒತ್ತಿದ ಮುದ್ರೆಯೆಂದು ಭಾವಿಸಬೇಕು. ಈ ಮುದ್ರೆಗಳು ಬಾಹ್ಯಭಾವಗಳು. ಬಾಹ್ಯಭಾವಗಳನ್ನು ಸೇರಿಸುವ ಭಾವಗಳು ಅಂತರಂಗದವು. ಹೀಗೆ ಲಾಕನು ಬಾಹ್ಯ ಮತ್ತು ಆಂತರಿಕ ಭಾವನೆಗಳೆಂದು ಎರಡು ಭೇದಗಳನ್ನೂ ಕಲ್ಪಿಸಿದ.

ಲಾಕನ ತರುವಾಯ ಬಂದ ಬರ್ಕ್ಲೆ ಈ ತರ್ಕವನ್ನು ಮುಂದುವರಿಸಿ ಒಂದು ಪದಾರ್ಥ ವಾಸ್ತವವಾಗಿ ಇದೆ ಎನ್ನಬೇಕಾದರೆ ಅದು ನಮಗೆ ಕಂಡಿರಬೇಕು ಎಂದು ವಾದಿಸಿದ. ಇರುವುದು ಎಂದರೆ ಪ್ರತ್ಯಕ್ಷ ನೋಡಿದ್ದು ಎಂಬುದು ಅವನು ಮಂಡಿಸಿದ ಸೂತ್ರ. ಆದ್ದರಿಂದ ನಮಗೆ ತಿಳಿದಿರುವುದೆಲ್ಲ ಈ ಇಂದ್ರಿಯಭಾವಗಳು ಮಾತ್ರವೇ. ಇವುಗಳಿಗೆ ಆಧಾರವಾಗಿ ಜಡವಸ್ತು ಇದೆ ಎಂದು ವಾದಿಸುವುದಕ್ಕಾಗುವುದಿಲ್ಲ. ಏಕೆಂದರೆ ಅದು ನಮ್ಮ ಮನಸ್ಸಿಗೆ ಅರಿವಾದ ಇಂದ್ರಿಯಭಾವನೆಯಲ್ಲ. ನಮಗೆ ನೇರವಾಗಿ ಅರಿವಾದುವು ನಮ್ಮ ಆತ್ಮ ಮತ್ತು ಅದು ಕಂಡ ಭಾವನೆಗಳು ಮಾತ್ರವೇ. ಬಾಹ್ಯ ವಿಶ್ವ ಒಂದಿದೆ ಅನ್ನುವ ಅರಿವು ಲಭ್ಯವಾದುದಿಲ್ಲ. ಆದ್ದರಿಂದ ಬಾಹ್ಯಜಗತ್ತು ಇದೆಯೋ ಇಲ್ಲವೋ ನಾವರಿಯೆವು. ನಮ್ಮ ಅಂತಃಕರಣ ಒಂದನ್ನೇ ನಮ್ಮ ಆತ್ಮವಸ್ತು ಒಂದನ್ನೇ ನಾವರಿಯಬಲ್ಲೆವು. ಹೀಗೆಂದು ಇವನ ತರ್ಕ ಮುಂದುವರಿಯಿತು.

ಡೇವಿಡ್ ಹ್ಯೂಮ್ ಇದೇ ತರ್ಕವನ್ನೇ ಅವಲಂಬಿಸಿ ಬರ್ಕ್ಲೆ ಯಾವ ತರ್ಕದಿಂದ ಬಾಹ್ಯವಾದ ಜಡವಸ್ತು ಇಲ್ಲವೆಂದು ವಾದಿಸಿದನೋ ಅದೇ ತರ್ಕವನ್ನೇ ಬೆಳೆಸಿಕೊಂಡು ನಮ್ಮ ಕಣ್ಣಿಗೆ ಗೋಚರವಾದ ಆತ್ಮವಸ್ತು ಇಲ್ಲವೆಂದು ವಾದಿಸಿದ. ವಾಸ್ತವಿಕ ಜಗತ್ತು, ಅಂತರಾತ್ಮ ಇವೆರಡರ ವಿಷಯದಲ್ಲಿ ಸಂಶಯಪಡಬೇಕಾದುದು ಅಗತ್ಯವೆಂದು ವಾದಿಸಿ ಈ ಅನುಭವಪ್ರಧಾನವಾದ ಹೇಗೆ ಸಂದೇಹವಾದದಲ್ಲಿ ನಿರ್ವಾಹವಿಲ್ಲದೆ ಮುಕ್ತಾಯಗೊಳ್ಳುವುದೆಂಬುದನ್ನು ತೋರಿಸಿಕೊಟ್ಟ. ಅಂದರೆ ಈ ವಿಚಾರತರಂಗದಲ್ಲಿ ಅನುಭವೈಕವಾದದ ತಾರ್ಕಿಕ ಪರ್ಯವಸಾನ ಸಂಶಯವಾದುದೆಂದು ಡೇವಿಡ್ ಹ್ಯೂಮ್ ಯುಕ್ತಿಯುಕ್ತವಾಗಿ ತೋರಿಸಿಕೊಟ್ಟ. ಆದರೆ ಸಮಕಾಲೀನ ಯುರೋಪಿನ ಮತ್ತು ಅಮೆರಿಕದ ದಾರ್ಶನಿಕರಲ್ಲಿ ಅನುಭವ ಪ್ರಧಾನವಾದ ರೂಪಾಂತರಗೊಂಡಿರುವುದನ್ನು ಜಿ. ಇ. ಮೂರ್, ವಿಲಿಯಂ ಜೇಮ್ಸ್, ಜಾನ್ ಡ್ಯೂಯಿ ಮತ್ತು ಬರ್ಟ್ರೆಂಡ್ ರಸೆಲ್‌ರವರ ವಾದಗಳಲ್ಲಿ ಕಾಣಬಹುದು.

ಭಾರತದ ದಾರ್ಶನಿಕರಲ್ಲೂ ಈ ವಾದದ ಛಾಯೆಯನ್ನು ಅನೇಕ ಕಡೆ ನೋಡುತ್ತೇವೆ. ಸಾಮಾನ್ಯವಾಗಿ ಅನುಮಾನಪ್ರಮಾಣದ ನಿರಾಕರಣೆ ಈ ವಾದದ ಮುಖ್ಯಸಾರಾಂಶ. ಈ ವಾದದವರಲ್ಲಿ ಎರಡು ಪಕ್ಷಗಳಿವೆ. ಪ್ರತ್ಯಕ್ಷದ ವಿನಾ ಬೇರೆ ಪ್ರಮಾಣವಿಲ್ಲವೆಂಬುದು ಒಂದು. ಅನುಮಾನವನ್ನು ಒಪ್ಪಿದರೂ ಅದರಿಂದ ಅನುಭವಾತೀತವಾದ ಆತ್ಮ ಮತ್ತು ಈಶ್ವರ ಮುಂತಾದ ವಸ್ತುಗಳನ್ನು ಸಾಧಿಸಲಾಗುವುದಿಲ್ಲವೆಂಬುದು ಮತ್ತೊಂದು. (ಎಂ.ವೈ.)

**ಅನುಭವ ಮಂಟಪ :** ಬೀದರ್ ಜಿಲ್ಲೆಯ ಕಲ್ಯಾಣಪಟ್ಟಣದಲ್ಲಿ ಕಳಚುರಿ ಅರಸ ಬಿಜ್ಜಳನ ಆಳ್ವಿಕೆಯಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವೇಶ್ವರರು ಸ್ಥಾಪಿಸಿದ ಒಂದು ತತ್ತ್ವಜಿಜ್ಞಾಸಾ ಸಂಸ್ಥೆ. ಪ್ರಾಯಶಃ ಇದು 1160ರಲ್ಲಿ ಕಲ್ಯಾಣ ಪಟ್ಟಣದ ತ್ರಿಪುರಾಂತಕ ಕೆರೆಯ ಮೇಲಿನ ತ್ರಿಪುರಾಂತಕಗುಡ್ಡದಲ್ಲಿ ಸ್ಥಾಪಿಸಲ್ಪಟ್ಟಿತೆಂದು ಹೇಳುತ್ತಾರೆ. ಇದರ ಅಧ್ಯಕ್ಷ ಪ್ರಭುದೇವ. ಕಾರ್ಯದರ್ಶಿ ಚನ್ನಬಸವಣ್ಣ. ಸದಸ್ಯರು ಅಖಿಲಭಾರತದ ಶಿವಶರಣರು. ಇದು ನಾಲ್ಕು ಮಹಾದ್ವಾರ, 36 ಕಂಬಗಳಿಂದ ಕೂಡಿತ್ತೆಂದು ತಿಳಿದುಬಂದಿದೆ. ಇದರ ಅಧ್ಯಕ್ಷಪೀಠವೇ ಶೂನ್ಯಸಿಂಹಾಸನ. ಅನುಭವ ಮಂಟಪದ ಹೆಸರು ವಿಶೇಷವಾಗಿ ಕಾಲಜ್ಞಾನವಚನಗಳಲ್ಲಿ ಕಂಡುಬಂದಿದೆ. ಇದನ್ನು ವೀರಶೈವರ ಹೃದಯವೆಂದು ಹಲವು ವಿದ್ವಾಂಸರು ಕರೆದಿದ್ದಾರೆ. ಈ ಮಂಟಪ ಕನ್ನಡ ಸಾಹಿತ್ಯಾಭಿವೃದ್ಧಿಗೆ ಬಹಳವಾಗಿ ಸಹಾಯ ಮಾಡಿತೆಂದು ಹೇಳಬಹುದು. *

**ಅನುಭವಮುದ್ರೆ :** ವೀರಶೈವಸಿದ್ಧಾಂತವನ್ನು ಸಾಂಗತ್ಯದಲ್ಲಿ ನಿರೂಪಿಸುವ ಕನ್ನಡಗ್ರಂಥ. ಬರೆದ ಕವಿ ಶಾಂತಮಲ್ಲ (ಸು. 1650). ಈತ ಸಿದ್ಧಲಿಂಗೇಶನ ಪರಂಪರೆಗೆ ಸೇರಿದವನೆಂದು ತೋರುತ್ತದೆ. ಇದರಲ್ಲಿ 29 ಸ್ಥಲಗಳಿವೆ. ಈ ಗ್ರಂಥವನ್ನು ಅನಾದಿ ಪ್ರಭುದೇವರು ಪ್ರಭುಸ್ವಾಮಿ ಎಂಬ ಶಿಷ್ಯನಿಗೆ ಉಪದೇಶಿಸಿದಂತೆ ಕವಿ ಹೇಳಿದ್ದಾನೆ. (ಬಿ.ಎಸ್.)

**ಅನುಭವಸೂತ್ರ :** ವೀರಶೈವ ಷಟ್‌ಸ್ಥಲ ಸಿದ್ಧಾಂತವನ್ನು ನಿರೂಪಿಸುವ ಎಂಟು ಅಧಿಕರಣಗಳಿಂದ ಕೂಡಿದ ಧರ್ಮಗ್ರಂಥ. ಕರ್ತೃ ಬಿಜಾಪುರ ಜಿಲ್ಲೆಯ ಮಗ್ಗೆ ಊರಿನ ಮಾಯಿದೇವ. ಈತ ಕನ್ನಡದಲ್ಲಿ ಶತಕತ್ರಯ, ಷಟ್‌ಸ್ಥಲ ಗದ್ಯ, ಏಕೋತ್ತರ ಷಟ್‌ಸ್ಥಲ ಗದ್ಯ ಎಂಬ ಗ್ರಂಥಗಳನ್ನೂ ಸಂಸ್ಕೃತದಲ್ಲಿ ವಿಶೇಷಾರ್ಥ ಪ್ರಕಾಶಿಕೆ, ಶತಕತ್ರಯಂ, ಮಂತ್ರಭಾಷ್ಯ ಎಂಬ ಗ್ರಂಥಗಳನ್ನೂ ಬರೆದಿದ್ದಾನೆ. ಅನುಭವಸೂತ್ರದಲ್ಲಿ ವಾತುಲಾಗಮದ ಉತ್ತರಭಾಗದಲ್ಲಿ ಹೇಳಿರುವ ಷಟ್‌ಸ್ಥಲ ಸಿದ್ಧಾಂತವನ್ನು ಸಂಗ್ರಹಿಸಲಾಗಿದೆ. (ಬಿ.ಎಸ್.)

**ಅನುಭೂತಿ :** ವೇದಾಂತದಲ್ಲಿ ವಿಶೇಷವಾಗಿ ಅನುಭವಕ್ಕೆ ಪರ್ಯಾಯವಾಗಿ ಬಳಸುವ ಮಾತು. ಈ ಮಾತಿನಲ್ಲಿ ನೇರವಾದ, ಪ್ರತ್ಯಕ್ಷಸಿದ್ಧವಾದ, ಸಾಕ್ಷಾತ್ತಾದ ಅನುಭವಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಬ್ರಹ್ಮಜ್ಞಾನದಿಂದ ಬ್ರಹ್ಮಪ್ರಾಪ್ತಿಯಾಗುತ್ತದೆ ಎನ್ನುವುದು ವೇದಾಂತದ ಕಲ್ಪನೆ (ಬ್ರಹ್ಮವಿದ್ ಬ್ರಹ್ಮ ಏವ ಭವತಿ). ಜ್ಞಾನದ ಆವಿರ್ಭಾವ ಮತ್ತು ಅವಿದ್ಯಾಂಧಕಾರದ ಅಸ್ತಂಗಮ ಎರಡೂ ಏಕಕಾಲಿಕವಾದವು. ಈ ನೆಲೆಯಲ್ಲಿ ಸಚ್ಛಾಸ್ತ್ರದ ಅಧ್ಯಯನದಿಂದಲೂ ನಿದಿಧ್ಯಾಸದಿಂದಲೂ ಮಹಾವಾಕ್ಯಗಳ ಅನುಷ್ಠಾನದಿಂದಲೂ ಔಪಾಸನೆಯಿಂದಲೂ ಧ್ಯಾನದಿಂದಲೂ ಪರತತ್ತ್ವದ ಸಾಕ್ಷಾತ್ಕಾರವಾಗುತ್ತದೆ; ಕೇವಲಜ್ಞಾನದಿಂದಲೇ ಮುಕ್ತಿಬಾರದು ಎನ್ನುವ ದ್ವೈತದರ್ಶನದಲ್ಲಿ ಕೂಡ ಜ್ಞಾನದ ಆಧಿಕ್ಯವನ್ನು ಒಪ್ಪಿಕೊಂಡಿದ್ದಾರೆ. ಬ್ರಹ್ಮನ ಸ್ವರೂಪ ಅನಿರ್ವಚನೀಯವೆಂದೂ ಮುಕ್ತಿಸುಖ ಅನುಭವದಿಂದಲೇ ವೇದ್ಯವಾಗುವುದೆಂದೂ ಹೇಳುತ್ತಾರಷ್ಟೆ. ಹೀಗೆ ಅದ್ವೈತಾನುಭವಕ್ಕೆ ನೆರವಾಗುವ ಸಾಧನವನ್ನು ಅನುಭೂತಿ ಎಂದು ವ್ಯವಹರಿಸಿದ್ದಾರೆ. ವಿದ್ಯಾರಣ್ಯಸ್ವಾಮಿಗಳ ಅನುಭೂತಿಪ್ರಕಾಶದಲ್ಲಿ ಇದೇ ಅರ್ಥವನ್ನು ಕಾಣಬಹುದು. ಯಥಾರ್ಥಾನುಭವವಾದ ಅನುಭವವೇ ಅನುಭೂತಿಯೆಂದು ಒಂದು ಮತ (ಅನುಮಿತಿ, ಉಪಮಿತಿ, ಶಾಬ್ದ ಇವು ಯಥಾರ್ಥಾನುಭವದಲ್ಲಿ ಸೇರುತ್ತವೆಯೇ ಎಂಬ ಒಂದು ಶಂಕೆಯುಂಟು. ನೈಯಾಯಿಕರು ನಾಲ್ಕು ವಿಧವಾದ ಜ್ಞಾನವನ್ನೂ ವೇದಾಂತಿಗಳು, ಮೀಮಾಂಸಕರು ಈ ನಾಲ್ಕಕ್ಕೆ ಅರ್ಥಾಪತ್ತಿ ಮತ್ತು ಅನುಪಲಬ್ಧಿ ಎರಡನ್ನೂ ಗ್ರಹಿಸಿದ್ದಾರೆ. ಇಷ್ಟೂ ಅನುಭೂತಿಯಲ್ಲೇ ಸೇರುತ್ತವೆ). (ಎಸ್.ಕೆ.ಆರ್.)

**ಅನುಭೋಗ :** ಸರಕು, ಸೇವೆಗಳಲ್ಲಿರುವ ತುಷ್ಟಿಗುಣವನ್ನು ಅನುಭವಿಸುವುದು (ಕನ್ಸಮ್ಷನ್). ಈ ಕ್ರಿಯೆ ಆರ್ಥಿಕ ಚಟುವಟಿಕೆಗಳಲ್ಲಿ ಒಂದು ಮುಖ್ಯ ಭಾಗ. ಸರಕು, ಸೇವೆಗಳ ಉತ್ಪಾದನೆಗೆ ಅನುಭೋಗವೇ ಮೂಲ ಪ್ರಚೋದನೆ.

ಎಲ್ಲರೂ ಅನುಭೋಗಿಗಳಾಗಿರುತ್ತಾರಾದ್ದರಿಂದ ಇವರ ಬಯಕೆಗಳೇನು? ಬಯಕೆ, ಬೇಡಿಕೆ ಮತ್ತು ಬೆಲೆ ಇವುಗಳ ಸಂಬಂಧವೇನು? ಜನರ ಅನುಭೋಗ ಪ್ರವೃತ್ತಿಯ ನಿರ್ಣಯಾಂಶಗಳೇನು? ಆರ್ಥಿಕಾಭಿವೃದ್ಧಿಯಲ್ಲಿಯೂ ಅರ್ಥಮಂಡಲದ ಆರ್ಥಿಕತೆಯ ಯೋಜಿತ ಮುನ್ನಡೆಯಲ್ಲಿಯೂ ಅನುಭೋಗದ ಪಾತ್ರವೆಂಥದು? ಅನುಭೋಗಿಗಳಲ್ಲಿ ಬಹುಭಾಗ ಉತ್ಪಾದಕರೂ ಆಗಿರುವುದರಿಂದ ಈ ಎರಡೂ ಆರ್ಥಿಕಗುಂಪಿನ ಪರಸ್ಪರ ಹಿತಾಸಕ್ತಿಗಳು ಹೇಗೆ ಸಮನ್ವಯಗೊಳ್ಳಬೇಕು? ಅನುಭೋಗಿಗೆ ಪೂರ್ಣಸ್ವಾತಂತ್ರ್ಯ ಇರುವ

ಆರ್ಥಿಕಪದ್ಧತಿ ಸರಿಯೇ ಅಥವಾ ಅನುಭೋಗವನ್ನು ಒಂದು ರೀತಿಯ ನಿಯಂತ್ರಣಕ್ಕೆ ಒಳಪಡಿಸುವುದು ಸರಿಯೆ? ಹಾಗಾದರೆ ಅನುಭೋಗಿಗಳಿಗೆ ಅತ್ಯುನ್ನತ ಸಂತುಷ್ಟಿ ದೊರಕಿಸುವ ಆರ್ಥಿಕವ್ಯವಸ್ಥೆಯ ಸ್ವರೂಪವೇನು? ಇವು ಅನುಭೋಗಗಳನ್ನು ಕುರಿತ ಅಧ್ಯಯನದಲ್ಲಿ ಏಳುವ ಮುಖ್ಯ ಪ್ರಶ್ನೆಗಳು.

ಅನುಭೋಗಕ್ಕೆ ಸಂಬಂಧಿಸಿದ ಕೆಲವು ಸಿದ್ಧಾಂತಗಳು ಮತ್ತು ಸಮಸ್ಯೆಗಳನ್ನು ವಿಚಾರಿಸುವಾಗ ಬಯಕೆಗಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಗಮನಿಸಬೇಕು. ಅವೇ ಬಯಕೆಗಳು ಮರಳಿ ಮರಳಿ ಬರುತ್ತಿರುವುವಲ್ಲದೆ ಹೊಸ ಹೊಸ ಬಯಕೆಗಳೂ ಹುಟ್ಟುತ್ತಲೇ ಇರುವುದರಿಂದ ಒಟ್ಟಿನಲ್ಲಿ ಮಾನವನ ಬಯಕೆಗಳು ಅಮಿತ ಹಾಗೂ ವೈವಿಧ್ಯಪೂರ್ಣವಾದುವೆಂದು ಹೇಳಬಹುದು. ಆದರೆ ಬಯಕೆಗಳ ಪೂರೈಕೆಗೆ ಅವಶ್ಯಕವಾದ ಸಾಧನಗಳ ಅಭಾವ ಕಂಡುಬರುತ್ತಿದೆ. ಇದೇ ಆರ್ಥಿಕ ಸಮಸ್ಯೆಯ ಮೂಲಭೂತ ಅಂಶವಾಗಿದೆ. ಯಾವುದಾದರೂ ಬಯಕೆಯೊಂದನ್ನು ತೃಪ್ತಿಗೊಳಿಸಿದಾಗ ತಾತ್ಕಾಲಿಕವಾಗಿಯಾದರೂ ಅದರ ಆವಶ್ಯಕತೆ ಇಲ್ಲವಾಗುವುದರಿಂದ ಒಂದೊಂದು ಬಯಕೆಗೂ ಒಂದೊಂದು ಮಿತಿಯುಂಟೆಂದು ಹೇಳಬಹುದು. ಅನುಭೋಗಿ ಸರಕೊಂದನ್ನು ಅನುಭೋಗಿಸುವಾಗ ಬರಬರುತ್ತಾ ಅದರ ಬಯಕೆಯ ಆಳ ಕಡಿಮೆಯಾಗುತ್ತ ಬಂದು ತೃಪ್ತಿಯ ಮಟ್ಟ ತಲುಪಿದಾಗ ಆ ಸರಕಿನ ಬಯಕೆ ನಿಲ್ಲುವುದು. ಈ ಅನುಭವದ ಆಧಾರದ ಮೇಲೆ ಇಳಿವರಿ ಅಂಚಿನ ತುಷ್ಟಿಗುಣನಿಯಮವನ್ನು ಅರ್ಥಶಾಸ್ತ್ರಜ್ಞರು ರಚಿಸಿರುತ್ತಾರೆ. ಸಾಮಾನ್ಯವಾಗಿ ಅನೇಕ ಬಯಕೆಗಳು ಏಕಕಾಲದಲ್ಲೇ ತಲೆದೋರಿ, ಅವುಗಳನ್ನು ತೃಪ್ತಿಪಡಿಸುವ ಕಾಲ ಮತ್ತು ಸಾಧನಗಳು ಮಿತಿಯುಳ್ಳವಾದ ಕಾರಣ ಅನುಭೋಗಿಯ ಮನಸ್ಸಿನಲ್ಲಿಯೇ ಈ ಬಯಕೆಗಳು ಪರಸ್ಪರ ಸ್ಪರ್ಧಿಸುವುವು. ಈ ಮಾನಸಿಕ ಸ್ಪರ್ಧೆಯಲ್ಲಿ ವಿವಿಧ ಬಯಕೆಗಳ ಒಂದು ಆದ್ಯತೆ, ತಾರತಮ್ಯ ಅನುಕ್ರಮವಾಗಿ ಏರ್ಪಡುತ್ತ ಬರುವುದು. ಓದಬೇಕೆ, ಆಡಬೇಕೆ, ಕೆಲಸ ಮಾಡಬೇಕೆ, ಇನ್ನೆಲ್ಲಾದರೂ ವಿಹಾರಕ್ಕೆ ಹೊರಡಬೇಕೆ ಎಂಬ ವಿವಿಧಬಯಕೆಗಳೊಳಗೆ ಒಂದು ರೀತಿಯ ದ್ವಂದ್ವ ನಡೆದು ಏಕಕಾಲದಲ್ಲಿ ಎಲ್ಲವನ್ನು ಮಾಡಲಾಗುವುದಿಲ್ಲವಾದ ಕಾರಣ ಒಂದನ್ನು ಮಾತ್ರ ಇಟ್ಟುಕೊಂಡು ಉಳಿದವನ್ನು ತ್ಯಜಿಸುವುದು ನಮ್ಮೆಲ್ಲರ ಸಾಮಾನ್ಯ ಅನುಭವ. ವಿವಿಧ ಬಯಕೆಗಳ ಪೂರೈಕೆಗೆ ಮಿತಿಯುಳ್ಳ ಸಾಧನಗಳನ್ನು ಹಂಚುವಾಗ ಅನುಭೋಗಿ ಒಟ್ಟಿನಲ್ಲಿ ಅತ್ಯುನ್ನತ ತುಷ್ಟಿಗುಣ ಪಡೆಯುವ ಪ್ರಯತ್ನ ಮಾಡುತ್ತಾನೆ. ಈ ಪ್ರಯತ್ನ ಯಾವ ಮಾರ್ಗದಲ್ಲಿ ನಡೆಯುತ್ತದೆ ಎಂಬುದನ್ನು ಅಂಚಿನ ಸಮಾನ ತುಷ್ಟಿಗುಣ ನಿಯಮ (ಲಾ ಆಫ್ ಈಕ್ವಿ ಮಾರ್ಜಿನಲ್ ಯುಟಿಲಿಟಿ) ಸೂಚಿಸುವುದು. ಬಯಕೆಗಳಲ್ಲಿ ಕೆಲವು ವಿಕಲ್ಪವಾಗಿರುವುವು. ಇನ್ನು ಕೆಲವು ಅನುಪೂರಕವಾಗಿರುವುವು. ಇವು ಬಯಕೆಗಳ ಎರಡು ಮುಖ್ಯ ಹಾಗೂ ಸಾಮಾನ್ಯ ಲಕ್ಷಣಗಳಾಗಿವೆ. ಬಾಯಾರಿದಾಗ ನೀರು, ಷರಬತ್ತು, ಚಹ, ಇತ್ಯಾದಿ ಪಾನೀಯಗಳಲ್ಲಿ ಒಂದನ್ನು ಕುಡಿಯಬಹುದು. ಈ ವಿವಿಧ ಪಾನೀಯಗಳ ಬಯಕೆ ವಿಕಲ್ಪವಾದಂತಾಯಿತು. ಪೆನ್ನುಕೊಳ್ಳುವ ಬಯಕೆ ಉಂಟಾದರೆ ಶಾಯಿಯ ಬಯಕೆ ಪೆನ್ನಿನ ಬಯಕೆಗೆ ಪೂರಕವಾದಂತಾಯಿತು. ಅನೇಕ ಬಯಕೆಗಳ ಬಗ್ಗೆ ಈ ರೀತಿಯ ಲಕ್ಷಣಗಳಿರುವುದನ್ನು ಗಮನಿಸಿದರೆ ಅನುಭೋಗದಲ್ಲಿ ಅಡಗಿರುವ ಆಯ್ಕೆಯ ಸಮಸ್ಯೆಯ ಸ್ವರೂಪ ತಿಳಿಯುವುದು.

ಅನುಭೋಗವನ್ನು ಕುರಿತು ಆರ್ಥಿಕಾಧ್ಯಯನದಲ್ಲಿ ಬಯಕೆಗಳನ್ನು ಆವಶ್ಯಕತೆಗಳು. ಸೌಕರ್ಯಗಳು, ಭೋಗವಿಲಾಸಗಳು ಎಂಬ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಆವಶ್ಯಕತೆಗಳನ್ನು 1. ಜೀವನಾಧಾರದ ಆವಶ್ಯಕತೆಗಳು, 2. ಕಾರ್ಯದಕ್ಷತೆಯ ಆವಶ್ಯಕತೆಗಳು, 3. ಸಾಂಪ್ರದಾಯಿಕ ಆವಶ್ಯಕತೆಗಳು ಎಂಬ ಮೂರು ಉಪವರ್ಗಗಳಾಗಿ ವಿಂಗಡಿಸಬಹುದು. ಒಂದು ಕನಿಷ್ಠ ಪ್ರಮಾಣದ ಆಹಾರ ಉಡುಪು ವಸತಿ ಇವು ಮನುಷ್ಯ ಜೀವಿಸುವುದಕ್ಕೆ ಆವಶ್ಯಕ ಎಂದು ಹೇಳಬಹುದಾದರೆ ಆತನ ಕಾರ್ಯದಕ್ಷತೆ ಹೆಚ್ಚಿಸಲು ಇದಕ್ಕೂ ಉತ್ತಮ ಮಟ್ಟದ ಆಹಾರ, ಉಡುಪು ವಸತಿಗಳು ಬೇಕೆಂದು ಹೇಳಬಹುದು. ಅನುಭೋಗಿಯ ಸ್ಥಾನಮಾನ, ಕಾರ್ಯಗೌರವ, ಬಿಡಲಾರದ ಹವ್ಯಾಸ-ಇವುಗಳಿಗೆ ಅನುಗುಣವಾಗಿ ಬರುವ ಆವಶ್ಯಬಯಕೆಗಳನ್ನು ಸಾಂಪ್ರದಾಯಿಕ ಆವಶ್ಯಕತೆಗಳೆಂದು ಹೇಳಬಹುದು.

ಸುಖಜೀವನವನ್ನು ಬಯಸುವ ಮಾನವ ಕೇವಲ ಆವಶ್ಯಕತೆಗಳಿಂದಲೇ ತೃಪ್ತನಾಗುವುದಿಲ್ಲ. ವಿವಿಧ ಸೌಕರ್ಯಗಳನ್ನೂ ಭೋಗದ ಸರಕು ಸೇವೆಗಳನ್ನೂ ಅನುಭೋಗಿಸುವುದರ ಮೂಲಕ ತನ್ನ ಜೀವನಮಟ್ಟವನ್ನು ಉತ್ತಮಗೊಳಿಸಿಕೊಳ್ಳಲು ಅಪೇಕ್ಷಿಸುತ್ತಾನೆ. ಒಬ್ಬಾತ ಅನುಭೋಗಿಸುವ ಎಲ್ಲ ವಿಧದ ಬಯಕೆಗಳೂ ಸೇರಿ ಆತನ ಜೀವನ ಮಟ್ಟ ಏರ್ಪಡುತ್ತದೆ. ಉನ್ನತಜೀವನಮಟ್ಟ ಆಧುನಿಕ ನಾಗರಿಕತೆಯ ಒಂದು ಚಿಹ್ನೆಯಾಗಿದೆ ಎಂದು ಹೇಳಬಹುದು. ಸಾಕಷ್ಟು ಹಾಗೂ ಪುಷ್ಟಿಕರವಾದ ಆಹಾರ, ಯೋಗ್ಯವಸತಿ, ಲಕ್ಷಣವಾದ ಉಡುಪು, ಆಧುನಿಕ ಭೋಗಸೌಕರ್ಯ ಗಳು, ಸಾಂಸ್ಕೃತಿಕ ಜೀವನಕ್ಕೆ ಅವಶ್ಯವಾದ ವಿವಿಧ ಉದಾತ್ತಬಯಕೆಗಳು ಇವೆಲ್ಲವನ್ನೂ ಎಲ್ಲರ ಅನುಭೋಗಕ್ಕೆ ಒದಗಿಸುವುದರ ಮೂಲಕ ಮಾನವನ ಹಿತ ಕ್ಷೇಮಾಭ್ಯುದಯಗಳನ್ನು ಸಾಧಿಸುವುದೇ ಆಧುನಿಕ ಆರ್ಥಿಕವ್ಯವಸ್ಥೆಯ ಒಂದು ಹೆಗ್ಗುರಿಯಾಗಿದೆ. ದೇಶದ ರಕ್ಷಣಾ ಬಲದ ವಿಸ್ತರಣೆ ಹಾಗೂ ಬಾಹ್ಯಾಕಾಶವಿಜಯಗಳು ನಮ್ಮ ಇಂದಿನ ಆರ್ಥಿಕ ವ್ಯವಸ್ಥೆಯ ಪ್ರಮುಖ ಅಂಗಗಳಾಗಿರುವುದನ್ನು ನಾವು ನೆನಪು ಮಾಡಿಕೊಳ್ಳಬಹುದು.

ಜನ ಬಯಸುವ ಆಹಾರ, ಬಟ್ಟೆ, ವಸತಿಸೌಕರ್ಯ, ವಿಹಾರ, ವಿದ್ಯಾಭ್ಯಾಸ ಇತ್ಯಾದಿಗಳೆಲ್ಲವೂ ಆಯಾ ಜನಾಂಗದ ವಾಡಿಕೆ, ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳು, ಇತರ ವಾತಾವರಣ, ವೈಯಕ್ತಿಕ ಗುಣವಿಶೇಷಗಳು ಇಂಥ ಅನೇಕ ಅಂಶಗಳನ್ನು ಅವಲಂಬಿಸಿವೆ.

ಅನುಭೋಗಕ್ಕೆ ಬೇಕಾದ ಸರಕು ಸೇವೆಗಳು ಯಾವುವು? ಎಷ್ಟೆಷ್ಟು ಬೇಕು? ದೇಶದ ವಿವಿಧ ಭಾಗಗಳಲ್ಲಿ ಹೇಗೆ ಇವುಗಳ ಹಂಚಿಕೆ ವ್ಯವಸ್ಥೆ ಆಗಬೇಕು? ಇವು ಕೆಲವು ಮುಖ್ಯ ಪ್ರಶ್ನೆಗಳಾಗಿವೆ. ವೈಯಕ್ತಿಕ ಸ್ವಾತಂತ್ರ್ಯವಿರುವ ಆರ್ಥಿಕ ಪದ್ಧತಿಯಲ್ಲಿ ಬೆಲೆಯ ನಿಯಂತ್ರಣವೂ ಬೇಡಿಕೆ ನೀಡಿಕೆಗಳ ಪರಸ್ಪರ ಕ್ರಿಯೆಗಳೂ ಸೇರಿ ಈ ಪ್ರಶ್ನೆಗಳನ್ನೂ ತಾವಾಗಿಯೇ ಬಿಡಿಸುತ್ತ ಹೋಗುವುವು. ಈ ಪದ್ಧತಿಯಲ್ಲಿ ಯಾವ ಸರಕು ಬೇಕಾದರೂ ಕೊಳ್ಳಲು, ಅನುಭೋಗಿಸಲು ಜನರಿಗೆ ಸ್ವಾತಂತ್ರ್ಯ ಉಂಟು. ಅವರು ಬಯಸುವ ಸರಕು ಸೇವೆಗಳಿಗೆ ಅವರು ಬೆಲೆಕೊಡಲು ಸಿದ್ಧರಾಗಿರುವುದರಿಂದ ಈ ಬೆಲೆಗಳು ವಿವಿಧಸರಕುಗಳಿಗಿರುವ ಬೇಡಿಕೆಯನ್ನು ಸೂಚಿಸುವುವು.

ಒಂದು ದೃಷ್ಟಿಯಿಂದ ಅನುಭೋಗಿಗಳ ಬೇಡಿಕೆ ಮತ್ತು ಪದಾರ್ಥದ ಬೆಲೆಗಳು ಇವು ವಿವಿಧ ಸರಕುಗಳ ವಿಷಯಗಳಲ್ಲಿ ಗಿರಾಕಿಗಳಿಗೆ ಇರುವ ಬಯಕೆಯ ತೀವ್ರತೆಯನ್ನು ಪ್ರತಿಬಿಂಬಿಸುತ್ತವೆ. ಈ ಆಧಾರದ ಮೇಲೆ ಉತ್ಪಾದಕರು ಸರಕು ಸೇವೆಗಳ ನೀಡಿಕೆಯ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವರು. ಯಾವ ಯಾವ ಸರಕುಗಳಿಗೆ ಹೆಚ್ಚು ಲಾಭದಾಯಕವೆಂದು ತೋರುವ ಬೇಡಿಕೆ ಬೆಲೆಗಳಿರುವುವೋ ಅಂಥ ಸರಕುಗಳ ತಯಾರಿಕೆಗೆ ಉತ್ಪಾದಕರು ಆದ್ಯತೆ ನೀಡುವರು. ಅಂದರೆ ಬೆಲೆಗಳ ಮೂಲಕ ಸೂಚಕವಾಗುವ ಅನುಭೋಗಿಗಳ ಬೇಡಿಕೆಯ ತೀವ್ರತೆಯೇ ಮುಖ್ಯವಾಗಿ ಉತ್ಪಾದನೆಯನ್ನು ರೂಪುಗೊಳಿಸುವುದೆಂದು ಹೇಳಬಹುದು. ಆದುದರಿಂದಲೇ ಈ ವೈಯಕ್ತಿಕ ಸ್ವಾತಂತ್ರ್ಯಪದ್ಧತಿಯಲ್ಲಿ ಅನುಭೋಗಿಯೇ ರಾಜ ಎಂಬ ನುಡಿ ಪ್ರಚುರವಾಗಿದೆ. ಆಯ್ಕೆ ಮಾಡಲು ಇರುವ ಸ್ವಾತಂತ್ರ್ಯವನ್ನು ಅತ್ಯುತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಅನುಭೋಗಿಗಳಿಗೆ ಕೆಲವು ವೇಳೆ ಸಾಧ್ಯವಾಗದೆ ಇರಬಹುದೆಂಬ ಅಂಶವನ್ನು ಇಲ್ಲಿ ಗಮನಿಸಬೇಕು. ಅವರು ಭ್ರಮೆಗೊಳಿಸುವ ಜಾಹೀರಾತುಗಳಿಗೆ ಮಾರು ಹೋಗಬಹುದು. ಅಥವಾ ಸಾಕಷ್ಟು ತಿಳಿವಳಿಕೆ ಇಲ್ಲದೆ ಅತ್ಯುತ್ತಮ ಸರಕುಗಳನ್ನು ಕೊಳ್ಳದೆ ಇರಬಹುದು. ಆದರೆ ಕಮ್ಯೂನಿಸಂ, ಸಮಾಜವಾದಪದ್ಧತಿ ಮತ್ತು ಇತರ ಆರ್ಥಿಕ ಯೋಜನಾಪದ್ಧತಿಗಳಲ್ಲಿ ಆರ್ಥಿಕ ಸ್ವಾತಂತ್ರ್ಯವೂ ಇದರ ಅಂಗವಾದ ಅನುಭೋಗಸ್ವಾತಂತ್ರ್ಯವೂ ಆವಶ್ಯಕವಾಗಿಯೇ ಮಿತಿಗೊಳ್ಳುವುವು. ಆರ್ಥಿಕಸ್ವಾತಂತ್ರ್ಯ ಚರ್ಚೆಗೆ ಒಳಗಾಗಿರುವ ವಿಷಯ ಎಂಬುದನ್ನು ಇಲ್ಲಿ ಗಮನಿಸಬಹುದು.

ಇಂಥ ಆರ್ಥಿಕಪದ್ಧತಿಗಳಲ್ಲಿ ಯೋಜನಾಧಿಕಾರಿಗಳು ಸಮಾಜಹಿತ, ಸಾರ್ವತ್ರಿಕ ಹಿತ ಇವುಗಳ ದೃಷ್ಟಿಯಿಂದ ರೂಪಿಸಿರುವ ವಿವಿಧ ರೀತಿಯ ನಿಯಂತ್ರಣಗಳಲ್ಲಿ ಅನುಭೋಗ ನಿಯಂತ್ರಣವು ಒಂದು. ಇಂದು ಬಂಡವಾಳಶಾಹಿ ಎಂದು ಕರೆಯಲಾಗುತ್ತಿರುವ ಹಲವು ರಾಷ್ಟ್ರಗಳಲ್ಲಿ ಮತ್ತು ಸಮಾಜವಾದಿ ರಾಷ್ಟ್ರಗಳೆಲ್ಲದರಲ್ಲಿಯೂ ಸಾಮಾನ್ಯವಾಗಿ ಒಂದಲ್ಲ ಒಂದು ರೀತಿಯ ಆರ್ಥಿಕಯೋಜನೆಯನ್ನು ಅನುಸರಿಸಲಾಗುತ್ತಿದೆ. ಸಮಾಜವಾದಿ ರಾಷ್ಟ್ರಗಳಲ್ಲಿರುವ ಉತ್ಕಟರೂಪದ ಕೇಂದ್ರೀಯ ಆರ್ಥಿಕಯೋಜನಾಪದ್ಧತಿಯಲ್ಲಿ ಜನರ ವೈಯಕ್ತಿಕ ಆರ್ಥಿಕ ಸ್ವಾತಂತ್ರ್ಯ ಬಂಡವಾಳಶಾಹಿ ರಾಷ್ಟ್ರಗಳ ಆರ್ಥಿಕಯೋಜನಾ ಪದ್ಧತಿಯಲ್ಲಿರುವುದಕ್ಕಿಂತ ಹೆಚ್ಚು ಮಿತಿಗೊಂಡಿದೆ ಎಂದು ಹೇಳಬಹುದು. ವ್ಯಕ್ತಿ ಸ್ವಾತಂತ್ರ್ಯದ ಸಮಸ್ಯೆಯ ಚರ್ಚೆ ಇಲ್ಲಿ ಅಪ್ರಕೃತ. ಆದರೆ ಆರ್ಥಿಕಾಭಿವೃದ್ಧಿ, ಆರ್ಥಿಕ ಸಮತೂಕ, ಸಾಮಾಜಿಕ ನ್ಯಾಯ ಇಂಥ ಇತರ ಧ್ಯೇಯಗಳನ್ನು ಸಾಧಿಸುವುದರ ಜೊತೆಗೆ ಆದಷ್ಟು ಅನುಭೋಗ ಸ್ವಾತಂತ್ರ್ಯವನ್ನು ದೊರಕಿಸಿ ಕಾಪಾಡಿಕೊಂಡು ಬರುವ ಆರ್ಥಿಕಪದ್ಧತಿಯನ್ನು ಉದಾತ್ತ ಆರ್ಥಿಕಪದ್ಧತಿ ಎಂದು ಹೇಳಬಹುದು.

ಆರ್ಥಿಕತೆಯ ಸ್ತಿಮಿತಯುತ ಮುನ್ನಡೆಯಲ್ಲಿ ಅನುಭೋಗದ ಪಾತ್ರ ಮುಖ್ಯವಾದುದು. ಉತ್ಪಾದನೆ ಹಾಗೂ ಉದ್ಯೋಗಮಟ್ಟಗಳು ಇತರ ಕೆಲವು ನಿರ್ಣಯಾಂಶಗಳ ಜೊತೆಗೆ ಅನುಭೋಗಮಟ್ಟ ಹಾಗೂ ಅನುಭೋಗಮಾದರಿಯನ್ನೂ ಅವಲಂಬಿಸಿರುವುವು. ಅನುಭೋಗ ಮತ್ತು ಪರಿಣಾಮಕಾರಿ ಬೇಡಿಕೆಮಟ್ಟ ಸಾಕಷ್ಟು ಉನ್ನತಸ್ಥಿತಿಯಲ್ಲಿದ್ದರೆ ಉದ್ಯೋಗ ಮತ್ತು ಉತ್ಪನ್ನಮಟ್ಟಗಳೂ ತೃಪ್ತಿಕರವಾಗಿರುವುವು. ಆದುದರಿಂದ ಜನಾಂಗದ ಅನುಭೋಗ ಪ್ರವೃತ್ತಿ ಆರ್ಥಿಕತೆಯ ಗತಿಯಲ್ಲಿ ಮುಖ್ಯಪ್ರಭಾವ ಹೊಂದಿರುವ ಅಂಶವಾಗಿದೆ.

ಒಟ್ಟು ವರಮಾನದಲ್ಲಿ ಒಂದು ಭಾಗ ಅನುಭೋಗಕ್ಕೂ ಉಳಿದ ಭಾಗ ಉಳಿತಾಯದ ಮೂಲಕ ಬಂಡವಾಳಕ್ಕೂ ವ್ಯಯವಾಗುವುದೆಂದು ಊಹಿಸಿದರೆ, ಇವೆರಡರಲ್ಲಿ ವರಮಾನ ಯಾವ ಪ್ರಮಾಣದಲ್ಲಿ ಹಂಚಿಕೆಯಾಗುವುದು ಎಂಬುದು ಆರ್ಥಿಕತೆಯ ಸ್ತಿಮಿತಯುತ ಬೆಳವಣಿಗೆಗೆ ಸಂಬಂಧಿಸಿದ ಒಂದು ಮುಖ್ಯ ವಿಷಯವಾಗಿದೆ. ಅನುಭೋಗವೆಚ್ಚ ಗಿರಾಕಿಗಳನ್ನು ಹೆಚ್ಚಿಸುವುದರಿಂದ ಉತ್ಪನ್ನಕ್ಕೆ ಪ್ರೇರಕವಾಗುವುದು. ವರಮಾನದ ಉಳಿತಾಯಭಾಗ ಬಂಡವಾಳ ಸಂಚಯನಕ್ಕೆ ಸಹಾಯಕವಾಗುವುದಲ್ಲದೆ ಈ ಮೂಲಕ ಒಂದು ನಿರ್ದಿಷ್ಟ ಉತ್ಪನ್ನಮಟ್ಟವನ್ನು ಸಾಧಿಸಲು ಅವಶ್ಯಕ. ಅಂದಮೇಲೆ, ಅನುಭೋಗ ಉಳಿತಾಯ

ಇವೆರಡರಲ್ಲೂ ಒಂದು ಸಮತೂಕವಿರುವಂತೆ ವರಮಾನ ಹಂಚಿಕೆಯಾಗಬೇಕು. ಇದು ಜನರ ಅನುಭೋಗಪ್ರವೃತ್ತಿ ಮತ್ತು ಉಳಿಸುವ ಪ್ರವೃತ್ತಿಗಳನ್ನು ಅವಲಂಬಿಸಿದೆ. ವರಮಾನ ಮಟ್ಟಕ್ಕೂ ಈ ವರಮಾನದಿಂದ ಮಾಡಲಾಗುವ ಅನುಭೋಗವೆಚ್ಚದ ಮಟ್ಟಕ್ಕೂ ಇರುವ ಅನುಚರಿ (ಫಂಕ್ಷನಲ್) ಸಂಬಂಧವೇ ಅನುಭೋಗಪ್ರವೃತ್ತಿ. ಇದು ಕೆಲವು ವಸ್ತುನಿಷ್ಠ ಅಥವಾ ವಾಸ್ತವಿಕಾಂಶಗಳಿಂದಲೂ ಕೆಲವು ವ್ಯಕ್ತಿನಿಷ್ಠ ಅಥವಾ ಮಾನಸಿಕಾಂಶಗಳಿಂದಲೂ ನಿರ್ಣಯವಾಗುವುದು. ಸಹಜ ವರಮಾನ, ನಿವ್ವಳ ವರಮಾನ, ವಟ್ಟಾದರಗಳು, ಸರಕಾರದ ಖಜಾನೆನೀತಿ, ಇವುಗಳಲ್ಲಿ ಸಂಭವಿಸುವ ಬದಲಾವಣೆಗಳೂ ಇಂದಿನ ಹಾಗೂ ಮುಂದಿನ ವರಮಾನಗಳ ಸಂಬಂಧಗಳ ಬಗ್ಗೆ ಇರುವ ನಿರೀಕ್ಷೆಗಳ ಬದಲಾವಣೆಯೂ ಆಸ್ತಿಪಾಸ್ತಿಗಳ ಬೆಲೆಯಲ್ಲಿ ಅನಿರೀಕ್ಷಿತವಾಗಿ ಸಂಭವಿಸುವ ಬದಲಾವಣೆಯೂ ಅನುಭೋಗ ಪ್ರವೃತ್ತಿಯ ಮೇಲೆ ಪ್ರಭಾವಬೀರುವ ವಾಸ್ತವಾಂಶಗಳು, ಮುಂಜಾಗ್ರತೆ, ಭವಿಷ್ಯದೃಷ್ಟಿ, ತುಲನಾಪ್ರವೃತ್ತಿ, ಶ್ರೀಮಂತಿಕೆಯ ಉತ್ತಮಸ್ಥಿತಿಯನ್ನು ಹೊಂದುವ ಅಭಿಲಾಷೆ, ಸ್ವಾತಂತ್ರ್ಯ, ಉದ್ಯಮಶೀಲತೆ, ಹೆಮ್ಮೆ ಮತ್ತು ಜಿಪುಣತೆ ಇವು ವರಮಾನವನ್ನು ಅನುಭೋಗಿಸದೆ ಉಳಿಸಲು ಕಾರಣವಾಗುವ ಮಾನಸಿಕ ಪ್ರೇರಕಾಂಶಗಳು, ಅಂದ ಮೇಲೆ, ಇವುಗಳ ವಿರೋಧಗುಣಗಳಾದ ಇಂದು ಸುಖಪಡಬೇಕೆಂಬ ಆಸೆ, ದೂರದೃಷ್ಟಿ ಇಲ್ಲದಿರುವುದು, ಧಾರಾಳತನ, ತಪ್ಪು ಎಣಿಕೆ, ಆಡಂಬರ ಮತ್ತು ದುಂದುಗಾರಿಕೆ–ಇವು ಅನುಭೋಗ ಹೆಚ್ಚಿಸುವ ಮಾನಸಿಕ ಪ್ರೇರಕಾಂಶಗಳು.

ಸಾಧಾರಣವಾಗಿ ಐಶ್ವರ್ಯವಂತರಲ್ಲಿ ಅನುಭೋಗ ಪ್ರವೃತ್ತಿ ಬಡವರಲ್ಲಿರುವುದಕ್ಕಿಂತ ಕಡಿಮೆಯಾಗಿರುವುದು. ಐಶ್ವರ್ಯವಂತರು ಬಡವರಿಗಿಂತಲೂ ಕಡಿಮೆ ಅನುಭೋಗಿಸುತ್ತಾರೆಂದು ಇದರ ಅರ್ಥವಲ್ಲ; ಅವರ ಒಟ್ಟು ವರಮಾನದಲ್ಲಿ ಅನುಭೋಗಕ್ಕಾಗಿ ಅವರು ಮಾಡುವ ವೆಚ್ಚಭಾಗ ಕಡಿಮೆ ಎಂದು ಮಾತ್ರ ಹೇಳಬಹುದು. ಬಡವರು ಅವರ ವರಮಾನದ ಪೂರ್ಣಭಾಗವನ್ನು ಅನುಭೋಗಕ್ಕಾಗಿ ವೆಚ್ಚ ಮಾಡುವುದಾದರೆ ಸಿರಿವಂತರು ಬಹುಶಃ ಶೇ.40 ಅಥವಾ ಶೇ.50 ಮಾತ್ರ ಹಾಗೆ ಅನುಭೋಗಕ್ಕೆ ವೆಚ್ಚ ಮಾಡುವರೆಂದು ಹೇಳಬಹುದು. ಲಭಿಸಬಹುದಾದ ಸು. ಶೇ.10ರಷ್ಟು ಹೆಚ್ಚುವರಿ ವರಮಾನವನ್ನು ಬಡವರು ಹೆಚ್ಚಾಗಿ ಅನುಭೋಗಕ್ಕೆ ಬಳಸುವುದಾದರೆ ಸಿರಿವಂತರು ಹೆಚ್ಚಾಗಿ ಉಳಿಸುವ ಪ್ರವೃತ್ತಿ ಹೊಂದಿರುತ್ತಾರೆ. ಇದು ಸ್ವಾಭಾವಿಕ. ಏಕೆಂದರೆ ಉಳಿತಾಯ ಮಾಡುವ ಯೋಚನೆಗೆ ಮೊದಲು ಅನುಭೋಗದ ಆವಶ್ಯಕತೆಗಳೆಲ್ಲವೂ ತೃಪ್ತಿಯಾಗಬೇಕು. ಆದ್ದರಿಂದ ಕಡಿಮೆ ವರಮಾನ ಉಳ್ಳವರ ವರಮಾನ ಹೆಚ್ಚುವರಿದಂತೆ ಅವರ ಅನುಭೋಗದ ವೆಚ್ಚ ಹೆಚ್ಚಿಸಿಕೊಳ್ಳುವ ಬಯಕೆ ಉಳಿತಾಯ ಮಾಡುವ ಬಯಕೆಗಿಂತ ಬಲವಾಗುವುದು. ಜೀವನಮಟ್ಟಗಳಲ್ಲಿ ಅಂತರವಿರುವಾಗ ಕೆಳತರಗತಿಯವರು ಮೇಲ್ತರಗತಿಯವರ ಅನುಭೋಗಮಟ್ಟವನ್ನು ಅನುಕರಿಸಬೇಕೆಂಬ ಹಂಬಲ ಹೆಚ್ಚುವುದು. ಅಲ್ಲದೆ ಹಿಂದುಳಿದಿರುವ ರಾಷ್ಟ್ರಗಳಲ್ಲಿ ಐಶ್ವರ್ಯವಂತರು ಅವರ ಐಶ್ವರ್ಯವನ್ನು ಸಮಾಜದೆದುರು ಪ್ರದರ್ಶಿಸಬೇಕೆಂಬ ಒಂದು ಧೋರಣೆ ಹೊಂದಿರುವರು. ಸಾಮಾಜಿಕ ಬಂಧನಗಳಿಗೆ ಒಳಗಾಗಿ ಬಡಬಗ್ಗರು ಸಹ ಮದುವೆ, ಹಬ್ಬ ಇತ್ಯಾದಿ ಸಂದರ್ಭಗಳಲ್ಲಿ ಶಕ್ತಿಮೀರಿ ಅನುಭೋಗವೆಚ್ಚ ಮಾಡುವ ಹವ್ಯಾಸ ಈಚೆಗೆ ಕಂಡುಬರುತ್ತಿದೆ. ಈ ಎಲ್ಲ ಕಾರಣಗಳಿಂದ ಹೆಚ್ಚು ಬಡವರಿಂದ ಕೂಡಿರುವ ಹಾಗೂ ವಿಶೇಷ ಸಾಮಾಜಿಕ ಸಾಂಪ್ರದಾಯಗಳಿಗೆ ಕಟ್ಟುಬಿದ್ದಿರುವ ಹಿಂದುಳಿದ ರಾಷ್ಟ್ರಗಳಲ್ಲಿ ಅನುಭೋಗಪ್ರವೃತ್ತಿ ಬಲವತ್ತರವಾಗಿರುವುದು. ಈ ಪ್ರಬಲ ಪ್ರವೃತ್ತಿ ಆ ರಾಷ್ಟ್ರಗಳಲ್ಲಿ ಬಂಡವಾಳಗಳ ಸಂಚಯನಕ್ಕೆ ಒಂದು ದೊಡ್ಡ ಅಡಚಣೆ. ಆದ್ದರಿಂದ, ಆ ರಾಷ್ಟ್ರಗಳು ಅಭಿವೃದ್ಧಿಯೊಡನೆ ಲಭಿಸುವ ವರಮಾನಹೆಚ್ಚುವರಿಯಲ್ಲಿ, ಒಂದು ಭಾಗವನ್ನು ಬಂಡವಾಳಕ್ಕಾಗಿ ಸಿಗುವ ಹಾಗೆ ಮಾಡಲು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕಾಗುವುದು. ಅನುಭೋಗಹತೋಟಿ, ತೆರಿಗೆ, ಅಲ್ಪ ಉಳಿತಾಯ ಯೋಜನೆ, ಸಾರ್ವಜನಿಕ ಸಾಲ, ಹೆಚ್ಚುವರಿ–ಇವು ಹೆಚ್ಚುವರಿ ವರಮಾನ ಕೇವಲ ಅನುಭೋಗ ವೆಚ್ಚಕ್ಕಾಗಿ ಹೋಗುವುದನ್ನು ತಡೆಯುವ ಸಲುವಾಗಿ ಅಂಥ ರಾಷ್ಟ್ರಗಳು ಕೈಕೊಳ್ಳಬಹುದಾದ ಮುಖ್ಯ ಕ್ರಮಗಳು.

ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಗಳ ಸಮಸ್ಯೆ ಅನುಭೋಗಪ್ರವೃತ್ತಿಯನ್ನು ತಡೆಹಿಡಿಯುವುದಾದರೆ, ಮುಂದುವರಿದಿರುವ ರಾಷ್ಟ್ರಗಳಲ್ಲಿ ಅನುಭೋಗಕ್ಕೆ ಮತ್ತಷ್ಟು ಉತ್ತೇಜನ ನೀಡಬೇಕಾದ ಸಂದರ್ಭವೇ ಹೆಚ್ಚು. ಉತ್ಪನ್ನ ಮತ್ತು ಉದ್ಯೋಗಮಟ್ಟಗಳು ಸಾಕಷ್ಟು ಉನ್ನತಮಟ್ಟದಲ್ಲಿರಬೇಕಾದರೆ ಅನುಭೋಗಿಗಳ ಬೇಡಿಕೆ ಅವುಗಳಿಗೆ ಅನುಗುಣವಾದ ಪ್ರಮಾಣದಲ್ಲಿರಬೇಕಾದುದು ಅವಶ್ಯಕ. ಈ ಪರಿಣಾಮಕಾರಿ ಬೇಡಿಕೆ ಇಳಿವರಿಯಾದಾಗ ಅನುಭೋಗ ಪ್ರವೃತ್ತಿಯನ್ನು ಉತ್ತೇಜಿಸುವ ಸಮಸ್ಯೆ ಏಳುತ್ತದೆ. ಹೀಗೆ ಅನುಭೋಗಪ್ರವೃತ್ತಿ ಆರ್ಥಿಕಾಭಿವೃದ್ಧಿಯಲ್ಲೂ ಆರ್ಥಿಕ ಸ್ಥಿಮಿತೆಯಲ್ಲೂ ಪರಿಗಣಿಸಬೇಕಾದ ಒಂದು ಮುಖ್ಯ ಅಂಶವಾಗಿದೆ.

ಅರ್ಥಶಾಸ್ತ್ರದಲ್ಲಿ ಅನುಭೋಗದ ಪ್ರಾಮುಖ್ಯವನ್ನು ಇನ್ನೊಂದು ದೃಷ್ಟಿಯಿಂದ ವಿವರಿಸಬಹುದು. ಉತ್ಪಾದನಾವಿಧಾನ ಸುಗಮವಾಗಿ ಏರುಪೇರುಗಳಿಲ್ಲದೆ ಮುಂದುವರಿಯಬೇಕಾದರೆ ಉತ್ಪಾದನೆಯಾಗುವ ಸರಕುಗಳು ಅವುಗಳ ಅನುಭೋಗದ ಕಾಲಕ್ರಮಕ್ಕೆ ಸರಿಯಾಗಿ ಹೊಂದಿಕೊಳ್ಳಬೇಕು. ಸರಕುಗಳ ಅನುಭೋಗದ ಕಾಲಕ್ರಮ ಮತ್ತು ಕಾಲಾಂತರಗಳು ಏಕರೀತಿ ಇರುವುದಿಲ್ಲ. ಈ ಬಗ್ಗೆ ತುಂಬ ವ್ಯತ್ಯಾಸಗಳೇ ಎದ್ದು ಕಾಣುವುವು. ಸರಕುಗಳನ್ನು ಅನುಭೋಗಿಯ ಸರಕು ಉತ್ಪಾದಕರ ಸರಕು ಎಂದು ಎರಡು ಭಾಗವಾಗಿ ವಿಂಗಡಿಸಬಹುದು. ಉತ್ಪಾದನಾ ಹಂತಗಳಲ್ಲಿ ಉಪಯೋಗಿಸುವ ಸರಕುಗಳನ್ನು ಉತ್ಪಾದಕರ ಸರಕುಗಳೆಂದೂ ಇತರ ಸರಕುಗಳನ್ನು ಅಂದರೆ ಜನರು ಅವರ ವೈಯಕ್ತಿಕ ಬಯಕೆಗಳ ತೃಪ್ತಿಗಾಗಿ ಉಪಯೋಗಿಸುವ ಸರಕುಗಳೆಲ್ಲವನ್ನೂ ಅನುಭೋಗಿಯ ಸರಕುಗಳೆಂದೂ ಹೇಳಬಹುದು. ಅನುಭೋಗಿಯ ಸರಕುಗಳು ಎರಡು ವಿಧ : 1 ಕೇವಲ ಒಂದು ಸಲ ಉಪಯೋಗಿಸಬಲ್ಲ ಸರಕುಗಳು, ಸಾಮಾನ್ಯವಾಗಿ ತಿನ್ನುವ, ಕುಡಿಯುವ ಪದಾರ್ಥಗಳು ಈ ಗುಂಪಿಗೆ ಸೇರಿವೆ. 2. ಹೆಚ್ಚು ಕಾಲ ಬಳಸಬಹುದಾದ ಅಂದರೆ ಬಾಳಿಕೆ ಬರುವ ಸರಕುಗಳು, ಉಡುಪು, ಮನೆ ವಾಹನಗಳು, ಪುಸ್ತಕಗಳು ಇತ್ಯಾದಿ ಸರಕುಗಳು ಈ ಗುಂಪಿಗೆ ಸೇರಿವೆ. ಮೊದಲನೆಯ ಗುಂಪಿನ ಸರಕುಗಳ ಅನುಭೋಗ ಕಾಲಾಂತರದಲ್ಲಿ ಸಾಮಾನ್ಯವಾಗಿ ಒಂದು ಕ್ರಮವಿರುವುದು. ಆಹಾರಸೇವನೆ ಸಾಮಾನ್ಯವಾಗಿ ಒಂದು ಕಾಲಾವಧಿಯ ಪ್ರಕಾರ ನಡೆಯುವ ಕ್ರಿಯೆಯಾದುದರಿಂದ ಇದಕ್ಕೆ ಸಂಬಂಧಪಟ್ಟ ಸರಕು ಸೇವೆಗಳ ಬೇಡಿಕೆಯ ಪ್ರಮಾಣ ಹಾಗೂ ಕಾಲಕ್ರಮವನ್ನು ಸುಲಭವಾಗಿ ಅಂದಾಜು ಮಾಡಬಹುದು. ಎರಡನೆಯ ಗುಂಪಿಗೆ ಸೇರಿದ ಸರಕುಗಳ ಬಗ್ಗೆ ಇಂಥ ಅಂದಾಜು ಹಾಕುವುದು ಹೆಚ್ಚು ಕಷ್ಟ. ಆದರೆ, ಉತ್ಪಾದನಾ ವಿಧಾನದ ಸ್ಥಿಮಿತಕ್ಕೆ ಸಾಧನೆಯ ದೃಷ್ಟಿಯಿಂದ ಈ ಎಲ್ಲ ವಿಧದ ಅನುಭೋಗ ಸರಕುಗಳ ಬೇಡಿಕೆ ಪ್ರತೀಕ್ಷೆಯ ವಿವರವಾದ ಪರಿಶೀಲನೆ ಅಗತ್ಯ.

ಬಹುಭಾಗ ಅನುಭೋಗಿಗಳು ಉತ್ಪಾದಕರೂ ಆಗಿರುವುದರಿಂದ ಈ ಎರಡು ಗುಂಪಿನವರ ದೃಷ್ಟಿಕೋನಗಳಲ್ಲಿ ಹೇಗೆ ಹೊಂದಿಕೆಯಾದೀತು ಎಂಬುದು ವಿಚಾರಿಸಬೇಕಾದ ಇನ್ನೊಂದು ಪ್ರಶ್ನೆ. ಉತ್ಪಾದಕನಾಗಿ ಹೆಚ್ಚು ಬೆಲೆಗೆ ಮಾರುವ ಆಕಾಂಕ್ಷೆಯನ್ನೂ ಅನುಭೋಗಿಯಾಗಿ ಕಡಿಮೆ ಬೆಲೆಗೆ ಸರಕು ಸೇವೆಗಳನ್ನು ಕೊಳ್ಳುವ ಅಪೇಕ್ಷೆಯನ್ನೂ ಜನ ಹೊಂದಿರುವುದು ಸ್ವಾಭಾವಿಕ. ಬೇಡಿಕೆನೀಡಿಕೆಗಳು ಸಲೀಸಾಗಿ ಪರಸ್ಪರ ಕ್ರಿಯಾತ್ಮಕವಾಗಿ ವರ್ತಿಸುವ ಸ್ವತಂತ್ರೋದ್ಯಮ ಆರ್ಥಿಕಪದ್ಧತಿಯಲ್ಲಿ ಈ ವಿಧದ ವ್ಯತಿರಿಕ್ತ ಹಿತಾಸಕ್ತಿಗಳು ಮಾರುಕಟ್ಟೆಯ ಚಲನವಲನಗಳ ಮೂಲಕ ಒಂದು ರೀತಿಯಲ್ಲಿ ಸಮನ್ವಯಗೊಳ್ಳುವುವು. ಆದರೆ, ಸಾಮಾನ್ಯವಾಗಿ ಉತ್ಪಾದಕದಲ್ಲಿರುವಷ್ಟು ಸಂಘಶಕ್ತಿ ಅನುಭೋಗಿಗಳಲ್ಲಿ ಸಲೀಸಾಗಿ ಸ್ಥಾಪನೆಯಾಗಲು ಸಾಧ್ಯವಿಲ್ಲ. ಆದ್ದರಿಂದ ಅನುಭೋಗಿಗಳ ಹಿತರಕ್ಷಣೆಗೆ ಸರ್ಕಾರವಾಗಲಿ, ಸಾರ್ವಜನಿಕರಾಗಲಿ ವಿಶೇಷಕ್ರಮಗಳನ್ನು ಕೈಗೊಳ್ಳಬೇಕಾಗುವುದು. ಅನುಭೋಗಿಗಳಲ್ಲಿ ಸಹಕಾರಪದ್ಧತಿ ಬೆಳೆಸುವುದು, ಉತ್ಪಾದಕರ ಏಕಸ್ವಾಮ್ಯಗಳ ನಿಯಂತ್ರಣ ಮಾಡುವುದು–ಇತ್ಯಾದಿಗಳು ವಿಶೇಷಕ್ರಮಗಳಲ್ಲಿ ಮುಖ್ಯವಾದುವು. ಆರ್ಥಿಕಯೋಜನಾಪದ್ಧತಿಯಲ್ಲಿ ಹಿಂದೆ ಹೇಳಿರುವಂತೆ ವಿವಿಧ ಆರ್ಥಿಕನಿಯಂತ್ರಣಗಳಲ್ಲಿ ಅನುಭೋಗ ನಿಯಂತ್ರ ಸೇರಿರುವುದರಿಂದ ಅನುಭೋಗಿಗಳ ಹಾಗೂ ಉತ್ಪಾದಕರ ಹಿತಾಸಕ್ತಿಗಳೆರಡನ್ನೂ ಸೂಕ್ತ ರೀತಿಯಲ್ಲಿ ಸಮನ್ವಯಗೊಳಿಸುವ ಪ್ರಶ್ನೆಯೂ ಯೋಜನೆಗೆ ಒಳಪಟ್ಟ ವಿಷಯ ಒಟ್ಟಿನಲ್ಲಿ, ಅನುಭೋಗಿಗಳ ಸ್ಥಾನಮಾನಗಳೂ ಅವರು ಪಡೆಯುವ ಸಂತುಷ್ಟಿ ಮಟ್ಟವೂ ಆರ್ಥಿಕವ್ಯವಸ್ಥೆಯ ಸ್ವರೂಪವನ್ನು ಅವಲಂಬಿಸಿದೆ. ವಿವಿಧ ಆರ್ಥಿಕ ಪದ್ಧತಿಗಳ ಗುಣಾವಗುಣಗಳನ್ನು ಹೋಲಿಸುವಾಗ ಅನುಭೋಗಿಗಳ ದೃಷ್ಟಿಕೋನವೂ ಮುಖ್ಯ ಎಂಬುದು ಇದರಿಂದ ಸುಸ್ಪಷ್ಟ. (ಎ.ಪಿ.ಎಸ್.)

**ಅನುಭೋಗ ಹಕ್ಕು ಮತ್ತು ಅನುಜ್ಞೆ :** ಸ್ಥಿರಾಸ್ತಿಯ (ಭೂಮಿ, ಮನೆ ಮುಂತಾದವು) ಮಾಲೀಕ ಅಥವಾ ಅನುಭವದಾರ ತನ್ನ ಆಸ್ತಿಯ ಲಾಭದಾಯಕ ಉಪಯೋಗಕ್ಕಾಗಿ ಸೌಕರ್ಯಕ್ಕಾಗಿ ಮತ್ತೊಬ್ಬನ ಸ್ಥಿರಾಸ್ತಿಗೆ ಸಂಬಂಧಪಟ್ಟಂತೆ ವ್ಯವಹಾರ ನಡೆಸಲು ಹಾಗೂ ನಡೆಸಿಕೊಂಡು ಬರಲು ಅಥವಾ ವ್ಯವಹಾರ ನಡೆಯದಂತೆ ತಡೆಹಿಡಿದು ಆಸ್ತಿಯನ್ನು ಅನುಭೋಗಿಸುವ ಹಕ್ಕಿಗೆ ಅನುಭೋಗ ಹಕ್ಕು (ದಿ ಲಾ ರಿಲೇಟಿಂಗ್ ಟು ಈಸ್‌ಮೆಂಟ್ಸ್ ಅಂಡ್ ಲೈಸೆನ್ಸಸ್) ಎಂದು ಹೆಸರಿದೆ.

ಅನುಭೋಗಹಕ್ಕು ಮತ್ತು ಅನುಜ್ಞೆಗೆ ಸಂಬಂಧಪಟ್ಟ ಕಾಯಿದೆಯಲ್ಲಿರುವ (ದಿ ಇಂಡಿಯನ್ ಈಸ್‌ಮೆಂಟ್ಸ್ ಆ್ಯಕ್ಟ್) ನಿಯಮಗಳು ಇಲ್ಲವೆ ಅದರಲ್ಲಿ ಅಡಕವಾಗಿರುವ ತತ್ತ್ವಗಳು ಸಾಧಾರಣವಾಗಿ ಭಾರತದ ಎಲ್ಲ ಭಾಗಗಳಿಗೂ ಅನ್ವಯಿಸುತ್ತವೆ.

ಅನುಭೋಗಹಕ್ಕಿಗೆ ಕೆಲವು ವಿಶಿಷ್ಟ ಲಕ್ಷಣಗಳಿವೆ. 1. ಹಕ್ಕುಳ್ಳ ಆಸ್ತಿ ಮತ್ತು ಹಕ್ಕಿಗೆ ಅಧೀನವಾದ ಆಸ್ತಿ ಎಂದು ಎರಡು ಬಗೆ. ಅನುಭೋಗಹಕ್ಕುಳ್ಳ ಆಸ್ತಿದಾರ ಮತ್ತು ಹಕ್ಕಿಗೆ ಒಳಪಟ್ಟ ಆಸ್ತಿದಾರ ಬೇರೆ ಬೇರೆಯವರಾಗಿರುತ್ತಾರೆ. 2. ಹಕ್ಕು ಆಸ್ತಿಯ ಅಂಗ, ಆಸ್ತಿಯ ಒಡೆತನಕ್ಕೆ ಅಂಟಿಕೊಂಡು ಹಸ್ತಾಂತರವಾಗುತ್ತ ಹೋಗುವುದಲ್ಲದೆ ಅದರಿಂದ ಪ್ರತ್ಯೇಕಿಸಲ್ಪಟ್ಟು ವ್ಯಕ್ತಿಗತವಾಗುವುದಿಲ್ಲ. 3. ಹಕ್ಕುಳ್ಳ ಆಸ್ತಿಯನ್ನು ಸತ್ತ್ವಪೂರ್ಣವಾಗಿ ಉಪಯೋಗಿಸಿಕೊಳ್ಳಲು ಹಕ್ಕು ಅನುಕೂಲವಾಗಿರುತ್ತದೆ.

ಇವುಗಳಲ್ಲಿ ಮೂರನೆಯ ಗುಣದ ವಿಶಿಷ್ಟ ಲಕ್ಷಣವೆಂದರೆ, ಹಕ್ಕುಳ್ಳ ಆಸ್ತಿಗೂ ಹಕ್ಕಿಗೆ ಒಳಪಟ್ಟ ಆಸ್ತಿಗೂ ಭೂಮಿಯ ಸಂಬಂಧವಿರಬೇಕು. ಅನುಭೋಗ ಹಕ್ಕು ಹಕ್ಕುಳ್ಳ ಆಸ್ತಿಗೆ ಸಂಬಂಧಿಸಿರಬೇಕಲ್ಲದೆ, ಆ ಆಸ್ತಿಯನ್ನು ಸ್ವಾಭಾವಿಕವಾಗಿ ಉಪಯೋಗಿಸಿ ಕೊಳ್ಳುವಂತಿರಬೇಕು. ಮತ್ತೊಬ್ಬನ ಆಸ್ತಿಯ ಮೇಲೆ ಅನುಭವಿಸುವ ಎಲ್ಲ ಹಕ್ಕುಗಳೂ ಅನುಭೋಗ ಹಕ್ಕುಗಳಾಗುವುದಿಲ್ಲ. ಅನುಭೋಗಹಕ್ಕಾಗಲು ಮೇಲೆ ತಿಳಿಸಿದ ಸಂಬಂಧ ಹಾಗೂ ಉಪಯುಕ್ತತೆ ಇರಬೇಕು. ಇಲ್ಲದಿದ್ದರೆ ಅವು ಕೇವಲ ಕರಾರಿನ ಹಕ್ಕುಗಳಾಗುತ್ತವೆ. ಇಂಥ

ಸಂಬಂಧವಿದೆಯೆ ಇಲ್ಲವೆ ಎಂಬುದನ್ನು ವಾಸ್ತವಿಕವಾಗಿ ಪರಿಶೀಲಿಸಬೇಕು. ಹಕ್ಕುಳ್ಳ ಆಸ್ತಿಯ ಸ್ಥಿತಿ ಮತ್ತು ಹಕ್ಕಿನ ರೀತಿ ವ್ಯಾಪ್ತಿಗಳನ್ನು ಗಮನಿಸಬೇಕು. ಎ ಎಂಬ ಆಸ್ತಿದಾರ ಬಿ ಎಂಬುವನ ಆಸ್ತಿಯ ಮೇಲೆ ಹೋಗಿ, ಅಲ್ಲಿರುವ ಒಂದು ಬಾವಿಯಿಂದ ನೀರನ್ನು ತರುವ ಹಕ್ಕು ಅನುಭೋಗದ ಹಕ್ಕು. ಎಗೆ ತಾನು ಹೋಗಿಬರುವ ಬಿಯ ಆಸ್ತಿಯ ಮೇಲೆ ಮಾಲೀಕತ್ವವಿರುವುದಿಲ್ಲ. ಹೋಗಿ ನೀರು ತರುವ ವಿಶೇಷಾಧಿಕಾರವಿರುತ್ತದೆ.

ಅನುಭೋಗ ಹಕ್ಕುಗಳನ್ನು ಪಡೆಯಲು 5 ವಿಧಾನಗಳಿವೆ. 1. ಅನುಮತಿಸಿ ಹಕ್ಕನ್ನು ಕೊಡುವುದು (ಗ್ರಾಂಟ್); 2. ತಾನು ಯಾವ ಹಕ್ಕನ್ನೂ ಚಲಾಯಿಸುವುದಿಲ್ಲವೆಂದು ಒಪ್ಪಿಕೊಳ್ಳುವುದು (ಕಾವನೆಂಟ್); 3. ಆಸ್ತಿಯ ಪರಭಾರೆಯಿಂದ; 4. ಸ್ವಾಧೀನಾನುಭವದ ಮೂಲಕ; 5. ಪದ್ಧತಿ ಪ್ರಕಾರ.

ಮುಖ್ಯವಾದ ಗಾಳಿ, ಬೆಳಕಿಗೆ ಸಂಬಂಧಪಟ್ಟ ಅನುಭೋಗಹಕ್ಕನ್ನು ಸ್ವಾಧೀನಾನುಭವದ ಮೂಲಕ ಪಡೆಯಬಹುದು. ಗಾಳಿ ಬೆಳಕನ್ನು ಇಪ್ಪತ್ತು ವರ್ಷಗಳ ಕಾಲ, ಅವಿಚ್ಛಿನ್ನವಾಗಿ ಅನುಭೋಗಹಕ್ಕೆಂದು ತಿಳಿದು, ಯಾವ ಅಡ್ಡಿಯೂ ಇಲ್ಲದೆ, ನೆಮ್ಮದಿಯಿಂದ ಅನುಭವಿಸಿದ್ದರೆ, ಆಗ ಗಾಳಿ ಬೆಳಕನ್ನು ಪಡೆಯುವ ಹಕ್ಕು ಅನುಭೋಗ ಹಕ್ಕಾಗುತ್ತದೆ.

ಅನುಭೋಗದ ವ್ಯಾಪ್ತಿಯ ಬಗ್ಗೆ ಹಲವು ನಿಯಮಗಳನ್ನು ವಿಧಿಸಲಾಗಿದೆ. ಅನುಭೋಗದ ಹಕ್ಕನ್ನು ನಿಯಮಿತ ಉದ್ದೇಶಕ್ಕಲ್ಲದೆ ಮಿಕ್ಕಾವ ಉದ್ದೇಶಕ್ಕೂ ಉಪಯೋಗಿಸಬಾರದು. ಹಕ್ಕುಳ್ಳ ಆಸ್ತಿದಾರ ಹಕ್ಕಿಗೆ ಸಂಬಂಧಪಟ್ಟ ಆಸ್ತಿಯ ಮಾಲೀಕನಿಗೆ ಕನಿಷ್ಠಹೊರೆಯಾಗುವಂತೆ ತನ್ನ ಹಕ್ಕನ್ನು ಚಲಾಯಿಸಬೇಕು. ಹಲವು ನಿಯಮಿತ ಸಂದರ್ಭಗಳಲ್ಲಿ ಮಾತ್ರ ಹಕ್ಕುಳ್ಳ ಆಸ್ತಿದಾರ ತಾನು ಉಪಯೋಗಿಸುವ ರೀತಿ ಮತ್ತು ಸ್ಥಳವನ್ನು ವ್ಯತ್ಯಾಸ ಮಾಡಬಹುದು. ತನ್ನ ಹಕ್ಕನ್ನು ಸತ್ತ್ವಪೂರ್ಣವಾಗಿ ಮಾಡಿಕೊಳ್ಳಲು, ಆತ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಬಹುದು. ಆದರೆ, ಅವು ಹಕ್ಕಿಗೊಳಪಟ್ಟ ಆಸ್ತಿದಾರನಿಗೆ ಬಾಧಕವಾಗಿರಬಾರದು. ಹಕ್ಕಿಗೊಳಪಟ್ಟ ಆಸ್ತಿದಾರ ತನ್ನ ಇಚ್ಛಾನುಸಾರ ತನ್ನ ಆಸ್ತಿಯನ್ನು ಉಪಯೋಗಿಸಬಹುದು. ಆದರೆ, ಅನುಭೋಗದ ಹಕ್ಕಿನ ಮೇಲೆ ನಿಬಂಧನೆಗಳನ್ನು ವಿಧಿಸುವಂತಿಲ್ಲ. ಆ ಹಕ್ಕು ಸಂಕುಚಿತಗೊಳ್ಳುವಂತೆ ನಡೆದುಕೊಳ್ಳಬಾರದು.

**ಅನುಜ್ಞೆ:** ಇದು ಒಂದು ವೈಯಕ್ತಿಕ ಹಕ್ಕು. ಒಬ್ಬ ಮತ್ತೊಬ್ಬನಿಗೆ ಸ್ಥಿರಾಸ್ತಿಯ ಮೇಲೆ ಯಾವುದಾದರೊಂದು ಕೆಲಸ ಮಾಡಲು ಅನುಮತಿಸಿ ಕೊಡುವ ಹಕ್ಕಿಗೆ ಈ ಹೆಸರಿದೆ (ಸನ್ನದು, ಅನುಮತಿ, ಲೈಸೆನ್ಸ್). ಅಂದರೆ, ಹಾಗೆ ಅನುಜ್ಞೆ ಪಡೆಯದಿದ್ದರೆ, ಆ ಕೆಲಸ ಸಿವಿಲ್ ಕಾನೂನು ಬದ್ಧವಾಗಿರುವುದಿಲ್ಲ. ಅನುಜ್ಞೆ ಕೊಡುವಾತನ ಮೇಲೆ ಹಕ್ಕು ಬಾಧ್ಯತೆಗಳೇನಿರುವುದಿಲ್ಲ. ಅವನು ಅದನ್ನು ಕಾಯಿದೆಯ ಹಲವು ನಿಯಮಗಳಿಗನುಗುಣವಾಗಿ, ತನ್ನ ಇಚ್ಛಾನುಸಾರ ರದ್ದು ಮಾಡಬಹುದು. ಹಾಗೆ ರದ್ದು ಮಾಡುವಾಗ ಪೂರ್ವಭಾವಿಯಾಗಿ ತಿಳಿವಳಿಕೆ (ನೋಟಿಸ್) ಕೊಡಬೇಕು. **(ಆರ್.ಕೆ.)**

**ಅನುಭೋಗಿಯ ಪ್ರಭುತ್ವ :** ಸರಕು ಸೇವೆಗಳ ಬೆಲೆ, ಪ್ರಮಾಣ, ಬಳಕೆಗಳ ವಿಷಯದಲ್ಲಿ ಉತ್ಪಾದಕನಿಗಿಂತ ಅನುಭೋಗಿಯದೇ ಕೊನೆಯ ಮಾತು ಎಂಬ ವಾದ (ಕನ್‌ಸ್ಯೂಮರ್ಸ್ ಸಾವ್ರಿನ್‌ಟಿ). ಅನೇಕ ವ್ಯಕ್ತಿಗಳು ಉತ್ಪಾದಕರಾಗಿದ್ದು ತಮ್ಮ ಭೌತಿಕ ಮತ್ತು ಮಾನಸಿಕಶಕ್ತಿಯನ್ನು ಉಪಯೋಗಿಸಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವುದರ ಮೂಲಕ ವ್ಯಾಪಾರ ವ್ಯವಹಾರದಲ್ಲಿ ಸಾಕಷ್ಟು ಜವಾಬ್ದಾರಿ ಹೊರುತ್ತಾರಾದರೂ ಯಾವ ರೀತಿಯ ಸರಕು ಮತ್ತು ಸೇವೆಗಳನ್ನು ಎಷ್ಟು ಪ್ರಮಾಣದಲ್ಲಿ ಬಳಸಬೇಕೆಂಬುದನ್ನು ಅನುಭೋಗಿಗಳೇ ನಿರ್ಧರಿಸಬೇಕಾಗುತ್ತದೆ. ಎಲ್ಲರೂ ಅನುಭೋಗಿಗಳೇ ಆಗಿರುವುದರಿಂದ ವಿವಿಧ ಆರ್ಥಿಕವ್ಯವಸ್ಥೆಗಳಲ್ಲಿ ಅನುಭೋಗಿಯ ಸಾರ್ವಭೌಮತ್ವದ ಇತಿಮಿತಿಗಳೇನೆಂಬುದನ್ನು ಪರಿಶೀಲಿಸಬೇಕು.

ಬಂಡವಾಳ ವ್ಯವಸ್ಥೆಯಲ್ಲಿ ಅನುಭೋಗಿಯ ಪ್ರಭುತ್ವ: ಎಲ್ಲ ಆರ್ಥಿಕವ್ಯವಸ್ಥೆಯಲ್ಲೂ ಸರಕುಗಳನ್ನುತ್ಪಾದಿಸಿ ಬೇಡಿಕೆಗಳನ್ನು ತೃಪ್ತಿಗೊಳಿಸುವ ದೃಷ್ಟಿಯಿಂದ ಮಿತವಾದ ಸಂಪತ್ತನ್ನು ಹೆಚ್ಚು ಫಲದಾಯಕವಾಗಿ ವಿತರಣೆ ಮಾಡುವುದು ಅತ್ಯಾವಶ್ಯಕ. ಬಂಡವಾಳಶಾಹಿಯಲ್ಲಿ ಈ ಸಂಪತ್ತಿನ ವಿತರಣೆ ಅನುಭೋಗಿಯ ಬೇಡಿಕೆಯ ಪ್ರಭಾವಕ್ಕೊಳಗಾಗಿದೆ. ಆದ್ದರಿಂದ ಈ ವಿಧದ ಆರ್ಥಿಕವ್ಯವಸ್ಥೆಯಲ್ಲಿ ಅನುಭೋಗಿಯನ್ನು ಸಾರ್ವಭೌಮನಿಗೆ ಹೋಲಿಸಬಹುದು. ಎಲ್ಲ ಉತ್ಪಾದನಾಸಮುದಾಯ ಆತನ ಸಾರ್ವಭೌಮತ್ವದ ಮಾರ್ಗದರ್ಶಿತ್ವದಲ್ಲಿ ಕಾರ್ಯಮಾಡುವುದೆಂದೂ ಹೇಳಬಹುದು.

ಅನಿರ್ಬಂಧಿತ ಮಾರುಕಟ್ಟೆ ಇರುವ ಆರ್ಥಿಕ ವ್ಯವಸ್ಥೆ ಬಂಡವಾಳಶಾಹಿಯ ಸರ್ವಗುಣಗಳನ್ನೂ ಪ್ರದರ್ಶಿಸುತ್ತದೆ. ಈ ಆರ್ಥಿಕವ್ಯವಸ್ಥೆಯಲ್ಲಿ ಮಾರುಕಟ್ಟೆ ಕೇಂದ್ರಯೋಜನಾಸಂಸ್ಥೆಯಿಂದ ನಿಯಂತ್ರಿಸಲ್ಪಡುವುದಿಲ್ಲ. ಈ ವ್ಯವಸ್ಥೆಯಲ್ಲಿ ಜನ ಕೆಲಸದ ವಿಷಯದಲ್ಲಾಗಲಿ ಉತ್ಪಾದನೆ ಅಥವಾ ಬಳಕೆಯ ವಿಷಯದಲ್ಲಾಗಲಿ ಸರ್ಕಾರದ ನಿರ್ದೇಶನಕ್ಕೆ ಒಳಪಟ್ಟಿರದೆ ಕೆಲಸವನ್ನು ಆರಿಸಿಕೊಳ್ಳುವ ತಮ್ಮ ಆದಾಯವನ್ನು ಸರಕುಗಳ ಮೇಲೆ ಸ್ವೇಚ್ಛೆಯಾಗಿ ವೆಚ್ಚ ಮಾಡುವ ಮತ್ತು ಉಳಿಸುವ ಸ್ವಾತಂತ್ರ್ಯವನ್ನು ಪಡೆದಿರುತ್ತಾರೆ.

ಕೇಂದ್ರಸಮಿತಿ ರೂಪಿಸಿದ ಯೋಜನೆ ಇಲ್ಲದಿರುವಾಗ ಉತ್ಪಾದನೆ ಅನುಭೋಗಿಯ ಬೇಡಿಕೆಯ ಪ್ರಭಾವಕ್ಕೊಳಗಾಗಿರುತ್ತದೆ. ಕೇವಲ ಒಬ್ಬ ಅನುಭೋಗಿಯ ಬೇಡಿಕೆ ಆರ್ಥಿಕವ್ಯವಸ್ಥೆಯ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡದಿರಬಹುದು. ಆದರೆ ಎಲ್ಲ ಅನುಭೋಗಿಗಳೂ ಸೇರಿದರೆ ಅವರೆಲ್ಲರ ಒಟ್ಟು ಬೇಡಿಕೆ ಸರಕು ಮತ್ತು ಸೇವೆಗಳ ಉತ್ಪಾದನೆಯನ್ನು ನಿಯಂತ್ರಿಸುವ ದಿಸೆಯಲ್ಲಿ ಬಹು ಪರಿಣಾಮಕಾರಿಯಾಗಿರುತ್ತದೆ. ಅನುಭೋಗಿಯ ಬೇಡಿಕೆ ಈ ಅಂಶಗಳನ್ನು ಅವಲಂಬಿಸಿರುತ್ತದೆ. 1. ಅನುಭೋಗಿ ಕೊಳ್ಳುವ ಸರಕು ಮತ್ತು ಸೇವೆಗಳ ಬೆಲೆಗಳು. 2. ಆತನು ಕೊಳ್ಳಬಹುದಾದ ಇತರ ಸರಕು ಮತ್ತು ಸೇವೆಗಳ ಬೆಲೆಗಳು. 3. ಆತನ ವೈಯಕ್ತಿಕ ವೈಶಿಷ್ಟ್ಯಗಳು. 4. ಆತನ ವೈಯಕ್ತಿಕ ಆದಾಯ. 5. ಬಳಕೆ ವಸ್ತುಗಳ ಮೇಲೆ ವೆಚ್ಚಮಾಡುವ ಆದಾಯ.

ಬಂಡವಾಳಶಾಹಿಯಲ್ಲಿ ಅನುಭೋಗಿ ಹೊಂದಬಹುದಾದ ಸ್ವಾತಂತ್ರ್ಯವನ್ನು ಆತನ ಸಾರ್ವಭೌಮತ್ವವೆಂದು ಉಲ್ಲೇಖಿಸುವಾಗ ಇದರ ಬಗ್ಗೆ ಸ್ಪಷ್ಟ ಅಭಿಪ್ರಾಯವಿರುವುದು ಅವಶ್ಯಕ. ಕೇಂದ್ರಯೋಜಿತವ್ಯವಸ್ಥೆಯಲ್ಲಿಯೂ ವ್ಯಕ್ತಿಗಳು ಆದಾಯವನ್ನು ಪಡೆದು ತಮಗೆ ಬೇಕಾದವುಗಳ ಮೇಲೆ ವೆಚ್ಚ ಮಾಡುವ ಸ್ವಾತಂತ್ರ್ಯವನ್ನು ಹೊಂದಿರಬಹುದು. ಆದರೆ ಅನುಭೋಗಿಯ ಬೇಡಿಕೆಯಲ್ಲಿರುವ ಸ್ವಾತಂತ್ರ್ಯ ಉತ್ಪಾದನೆಯನ್ನು ನಿರ್ದೇಶಿಸುವುದಿಲ್ಲವಾದ ಕಾರಣ ಈ ಸ್ವಾತಂತ್ರ್ಯವನ್ನು ಆತನ ಸಾರ್ವಭೌಮತ್ವಕ್ಕೆ ಹೋಲಿಸಲಾಗುವುದಿಲ್ಲ. ಇದರಿಂದಾಗಿ, ಅನುಭೋಗಿಯ ಸಾರ್ವಭೌಮತ್ವವನ್ನು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಾತ್ರ ಪೂರ್ಣವಾಗಿ ಕಾಣಬಹುದು.

ಸಮಾಜವಾದಿ ವ್ಯವಸ್ಥೆಯಲ್ಲಿ ಅನುಭೋಗಿಯ ಪ್ರಭುತ್ವ; ಇಂಥ ವ್ಯವಸ್ಥೆಯಲ್ಲಿ ಅನುಭೋಗಿ ತನ್ನ ಸಾರ್ವಭೌಮತ್ವವನ್ನು ಕಳೆದುಕೊಳ್ಳುವನು. ಉತ್ಪಾದನಾ ಸಮಿತಿಯೆ ಬಳಕೆಯನ್ನು ಯೋಜಿಸುವುದು. ಕೇಂದ್ರ ಯೋಜನಾಸಂಸ್ಥೆಯಿಂದ ಬೆಲೆಗಳು ನಿರ್ಧರಿಸಲ್ಪಟ್ಟರೂ ಅವು ತಮ್ಮ ವಿಶಿಷ್ಟಪಾತ್ರವನ್ನು ನಿರ್ವಹಿಸಲಾರವು.

ಆದರೆ ಯೋಜಿತ ಆರ್ಥಿಕವ್ಯವಸ್ಥೆಯ ಚಟುವಟಿಕೆಗಳೂ ಬೆಲೆಗಳಿಂದ ಪ್ರಭಾವಿತವಾಗುವುದೆಂದು ಕಂಡುಬರುತ್ತದೆ. ಅನುಭೋಗಿಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದರಿಂದ ಬೆಲೆಗಳ ವಿಶಿಷ್ಟಪಾತ್ರವನ್ನು ಅಲ್ಲಗಳೆದಂತಾಗುವುದಿಲ್ಲ. ಈ ಅಭಿಪ್ರಾಯದ ಪ್ರಾಮುಖ್ಯವನ್ನು ಯೋಜನಾ ಆರ್ಥಿಕವ್ಯವಸ್ಥೆಯ ಉದಾಹರಣೆಯಿಂದ ಸ್ಪಷ್ಟಪಡಿಸಬಹುದು. ಯೋಜನೆಯನ್ನು ಉತ್ತೇಜಿತ ಯೋಜನೆ ಮತ್ತು ನಿರ್ದೇಶಿತ ಯೋಜನೆ ಎಂದು ವಿಂಗಡಿಸಬಹುದು. ಉತ್ತೇಜಿತ ಯೋಜನೆಯಲ್ಲಿ ಮಾರುಕಟ್ಟೆಯ ಪ್ರಭಾವವಿದ್ದು ಅದರ ಚಟುವಟಿಕೆಗಳು ಸಮಾಜದ ಧ್ಯೇಯಗಳಿಗೆ ಸರಿಹೊಂದುವ ಹಾಗೆ ಯೋಜನಾಸಂಸ್ಥೆ ನಿಯಂತ್ರಿಸಬಹುದು. ಕೇಂದ್ರ ಯೋಜನಾ ಸಂಸ್ಥೆ ಅನುಭೋಗಿಗಳಿಗೆ ಮತ್ತು ಉತ್ಪಾದಕರಿಗೆ ಆರ್ಥಿಕ ಹಾಗೂ ಇತರ ಉತ್ತೇಜನಗಳನ್ನಿತ್ತು ಸಮಾಜದ ಧ್ಯೇಯಗಳನ್ನು ಸಾಧಿಸುವುದು. ಇದರಿಂದಾಗಿ ಉತ್ತೇಜಿತ ಯೋಜನೆಯಲ್ಲಿ ಮಾರುಕಟ್ಟೆಯ ಪ್ರಾಮುಖ್ಯ ಸ್ವಲ್ಪವಾಗಿ ಕಂಡುಬಂದು ಅನುಭೋಗಿ ಸ್ವಾತಂತ್ರ್ಯವನ್ನು ಪಡೆಯುತ್ತಾನೆ. ಈ ಸ್ವಾತಂತ್ರ್ಯದ ಪರಿಣಾಮಗಳನ್ನು ಉತ್ಪಾದನಾರಂಗಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಆದರೆ ನಿರ್ದೇಶಿತ ಯೋಜನೆಯನ್ನು ಪರಿಶೀಲಿಸುವಾಗ ಸರ್ಕಾರದ ಪರಮಾಧಿಕಾರವನ್ನು ಕಾಣುತ್ತೇವೆ. ಸರ್ಕಾರದಿಂದ ಮಾತ್ರ ದೇಶದ ಆರ್ಥಿಕಚಟುವಟಿಕೆಗಳು ನಿಯಂತ್ರಿಸಲ್ಪಡುತ್ತವೆ. ಪರಿಣಾಮವಾಗಿ ಅನುಭೋಗಿಯ ಸಾರ್ವಭೌಮತ್ವ ನಶಿಸಿಹೋಗುತ್ತದೆ.

ಅನುಭೋಗಿಯ ಪ್ರಭುತ್ವದ ಮಿತಿಗಳು: ಮೇಲೆ ಹೇಳಿರುವ ರೀತಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅನುಭೋಗಿಯ ಸ್ವಾತಂತ್ರ್ಯವನ್ನು ಸಾರ್ವಭೌಮತ್ವಕ್ಕೆ ಹೋಲಿಸಬಹುದಾಗಿದ್ದರೂ ಅದರ ಬಗ್ಗೆ ಕೆಲವು ಮಿತಿಗಳನ್ನು ಕಾಣಬಹುದು. ಮೊದಲನೆಯದಾಗಿ ಅನುಭೋಗಿಯ ಸಾರ್ವಭೌಮತ್ವ ಸರಕು ಮತ್ತು ಸೇವೆಗಳನ್ನು ಕೊಳ್ಳುವ ಆತನ ಶಕ್ತಿಯನ್ನು ಅವಲಂಬಿಸಿರುತ್ತದೆ. ಎರಡನೆಯದಾಗಿ ಯಾವುದಾದರೂ ಗೊತ್ತಾದ ಕಾಲದಲ್ಲಿರತಕ್ಕ ತಾಂತ್ರಿಕ ಜ್ಞಾನದ ಮಟ್ಟವೂ ಸಾರ್ವಭೌಮತ್ವವನ್ನು ಮಿತಿಗೊಳಿಸಿವುದು. ಸಾಮಾನ್ಯವಾಗಿ ತಾಂತ್ರಿಕಾಭಿವೃದ್ಧಿ ಅನುಭೋಗಿಯ ಆಸೆಗಿಂತ ಹಿಂದುಳಿದಿರುತ್ತದೆ. ಮೂರನೆಯದಾಗಿ, ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವೇ ಮುಂದೆ ಬಂದು ಅನುಭೋಗಿಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸಬಹುದು. ಸಾರ್ವಜನಿಕ ಆರೋಗ್ಯಕ್ಕೆ ಧಕ್ಕೆ ತರುವಂಥ ಸರಕುಗಳ ಮಾರಾಟವನ್ನು ನಿಯಂತ್ರಿಸುವ ಪ್ರಯತ್ನವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನಾಲ್ಕನೆಯದಾಗಿ, ಉಚ್ಚಮಟ್ಟದ ಮಾರಾಟಗಾರಿಕೆ ಮತ್ತು ಆಧುನಿಕ ಕ್ರಮವನ್ನನುಸರಿಸಿ ಹೊರಡಿಸಿದ ಜಾಹೀರಾತುಗಳ ಪ್ರಭಾವದಿಂದ ಅನುಭೋಗಿಯ ಸ್ವಾತಂತ್ರ್ಯವನ್ನು ಮಿತಿಗೊಳಿಸಬಹುದು. ಅಂದರೆ ಈ ಮೂಲಕ ಅನುಭೋಗಿಯ ನೈಜವಾದ ಬಯಕೆಗಳನ್ನು ಬದಲಿಸಿ ಆತನ ನಿರ್ಧಾರವನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಬಹುದು. ಐದನೆಯದಾಗಿ, ಏಕಸ್ವಾಮ್ಯ ಇರುವ ಕ್ಷೇತ್ರಗಳಲ್ಲಿ ಅನುಭೋಗಿಯ ಸಾರ್ವಭೌಮತ್ವಕ್ಕೆ ಧಕ್ಕೆಯುಂಟಾಗುತ್ತದೆ. ಈ ಪರಿಸ್ಥಿತಿಯಲ್ಲಿ ಅನುಭೋಗಿಯ ಪ್ರಭಾವವನ್ನು, ಬೆಲೆಗಳ ವಿಷಯದಲ್ಲಾಗಲಿ ಅಥವಾ ಉತ್ಪಾದನಾರಂಗದಲ್ಲಾಗಲಿ, ಕಾಣಲು ಸಾಧ್ಯವಿಲ್ಲ. ಆರನೆಯದಾಗಿ ಅನುಭೋಗಿಯ ಸಾಂಪ್ರದಾಯಿಕ ನೀತಿ ಮತ್ತು ಪದ್ಧತಿಗಳೂ ಆತನ ಸಾರ್ವಭೌಮತ್ವವನ್ನು ಮಿತಿಗೊಳಿಸುವಲ್ಲಿ ಪರಿಣಾಮಕಾರಿಗಳಾಗಿವೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸುವಾಗ ಬಂಡವಾಳಶಾಹಿ ವ್ಯವಸ್ಥೆಯಲ್ಲೂ ಅನುಭೋಗಿ ಅಮಿತವಾದ ಸಾರ್ವಭೌಮತ್ವವನ್ನು ಹೊಂದಿರದೆ ಮಿತವಾದ ಸಾರ್ವಭೌಮತ್ವವನ್ನು ಹೊಂದಿರುವನೆಂದು ಸ್ಪಷ್ಟವಾಗುತ್ತದೆ.

ಅನುಭೋಗಿಯ ಸ್ವಾತಂತ್ರ್ಯದ ಆವಶ್ಯಕತೆ; ಅನುಭೋಗಿಯ ಸಾರ್ವಭೌಮತ್ವದ ಅಭೀಷ್ಟದ ಬಗ್ಗೆ ಅನೇಕ ಲೇಖಕರಿಂದ ವಿಧವಿಧವಾದ ಅಭಿಪ್ರಾಯಗಳು ವ್ಯಕ್ತಪಟ್ಟಿವೆ. ವಾನ್‌ಮೈಸಸ್‌ನ ಅಭಿಪ್ರಾಯದಲ್ಲಿ ಸರಕುಗಳನ್ನು ಬಳಸುವಾಗ ಅನುಭೋಗಿಗೆ ಸಂಪೂರ್ಣ ಸ್ವಾತಂತ್ರವಿರಬೇಕು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅನುಭೋಗಿಯ ಸ್ವಾತಂತ್ರ್ಯ ಅವಶ್ಯಕವಾದ ಅಂಶ. ಏಕೆಂದರೆ ಈ ಅಂಶದ ಮೂಲಕವೇ ರಾಷ್ಟ್ರೀಯ ಸಂಪತ್ತಿನ ವಿತರಣೆಯಾಗಬೇಕು.

ಮೀಡ್ ಮತ್ತು ಬಾರ್ಬರ ಲೂಟನ್ ಅನುಭೋಗಿಯ ಸ್ವಾತಂತ್ರ್ಯಕ್ಕೆ ವಿರೋಧ ಸೂಚಿಸುವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪರಿಪೂರ್ಣ ಪೈಪೋಟಿಯ ಸ್ಥಿತಿಯಲ್ಲಿ ಅನುಭೋಗಿಯ ಆಯ್ಕೆ ಪರಿಪೂರ್ಣತೆಯಿಂದಿರುವುದಿಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ ಅನುಭೋಗಿಗಳು ಸ್ವತಂತ್ರರಾಗಿದ್ದರೂ ಸರಿಯಾದ ಆಯ್ಕೆಯ ಬಗ್ಗೆ ಅವರಿಗೆ ತಿಳಿವಳಿಕೆ ಇಲ್ಲದಿರುವುದರಿಂದ ಸರ್ಕಾರದ ಅಥವಾ ಇತರ ಸಂಸ್ಥೆಯಿಂದ ಮಾರ್ಗದರ್ಶನ ಅತ್ಯಗತ್ಯ. ಇದು ಮೀಡ್‌ನ ಅಭಿಪ್ರಾಯ.

ಆಧುನಿಕ ಪ್ರಪಂಚದಲ್ಲಿನ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ಪೈಪೋಟಿ ಅಪಾರವಾಗಿದ್ದು, ಅನುಭೋಗಿ ಅನೇಕ ಸರಕುಗಳನ್ನು ಕೊಳ್ಳಲು ಅವಕಾಶವಿರುವುದರಿಂದ. ಅವರುಗಳು ಸರಿಯಾದ ಆಯ್ಕೆ ಮಾಡುವುದರಲ್ಲಿ ವಿಫಲವಾಗುವರೆಂಬುದು ಬಾರ್ಬರ ಲೂಟನ್‌ನ ಅಭಿಪ್ರಾಯವಾಗಿದೆ. ಈ ಕಾರಣದಿಂದಾಗಿ ಆತ ಪೈಪೋಟಿಯ ಮತ್ತು ಅನುಭೋಗಿಯ ಸ್ವಾತಂತ್ರ್ಯದ ವಿರುದ್ಧ ವಾದಿಸಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಅನುಭೋಗಿಗಳೊಬ್ಬರೇ ಅಥವಾ ಉತ್ಪಾದಕರೊಬ್ಬರೇ ಸಾರ್ವಭೌಮತ್ವವನ್ನು ಹೊಂದಲು ಸಾಧ್ಯವಿಲ್ಲವೆಂದು ತಿಳಿದುಬರುತ್ತದೆ. ಏಕೆಂದರೆ, ಆರ್ಥಿಕ ಏಳಿಗೆಯ ದೃಷ್ಟಿಯಿಂದ ಬಳಕೆ ಮತ್ತು ಉತ್ಪಾದನೆಗಳೆರಡರ ನಡುವೆ ಸಮತೋಲನ ವೇರ್ಪಡುವುದು ಅತ್ಯಾವಶ್ಯಕವಾಗಿರುತ್ತದೆ. ಅರ್ಥಶಾಸ್ತ್ರಜ್ಞ ಎಲಿ ಹೇಳಿರುವ ಹಾಗೆ, ರಾಷ್ಟ್ರದ ಪ್ರಗತಿ ಅನುಭೋಗಿಗಳನ್ನು ಮಾತ್ರವೇ ಅಲ್ಲದೆ ಉತ್ಪಾದಕರನ್ನೂ ಅವಲಂಬಿಸಿದೆ. (ಜಿ.ಟಿ.ಎಚ್.)

**ಅನುಭೋಗಿಯ ಹೆಚ್ಚಳ :** ಒಂದು ಸರಕು ಅಥವಾ ಸೇವೆಯನ್ನು ಅನುಭೋಗಿಸುವುದರಿಂದ ಲಭಿಸುವ ಒಟ್ಟು ತುಷ್ಟಿಗೂ (ಟೋಟಲ್ ಯುಟಿಲಿಟಿ) ಅದನ್ನು ಪಡೆಯಲು ಹಣ ಕೊಡುವುದರ ಮೂಲಕ ಮಾಡಬೇಕಾದ ತ್ಯಾಗಕ್ಕೂ ನಡುವೆ ಇರುವ ವ್ಯತ್ಯಾಸವೇ ಅನುಭೋಗಿಯ ಹೆಚ್ಚಳ (ಕನ್‌ಸ್ಯೂಮರ್ಸ್ ಸರ್‌ಪ್ಲಸ್). ಸರಕನ್ನು ಪಡೆಯಲು ಅನುಭೋಗಿ ಕೊಡಲು ಸಿದ್ಧವಾಗಿರುವ ಬೆಲೆ (ಪೊಟೆನ್ಷಿಯಲ್ ಪ್ರೈಸ್) ಒಟ್ಟು ತುಷ್ಟಿಯ ಅಳತೆಯಾಗಿದೆ. ಹೀಗೆ ಕೊಳ್ಳುವ ಸರಕಿನ ಮೊದಲ ಘಟಕಗಳಿಗೆ ಹೆಚ್ಚು ಬೆಲೆಯನ್ನೂ ತರುವಾಯ ಬಯಸುವ ಹೆಚ್ಚು ಹೆಚ್ಚು ಘಟಕಗಳಿಗೆ ಇಳಿವರಿ ಬೆಲೆಯನ್ನೂ ಅನುಭೋಗಿ ಕೊಡಲು ಸಿದ್ಧನಾಗಿರುವುದು. ಇಳುವರಿ ಅಂಚಿನ ತುಷ್ಟಿಗುಣ ನಿಯಮಕ್ಕೆ (ಲಾ ಆಫ್ ಡಿಮಿನಿಶಿಂಗ್ ಮಾರ್ಜಿನಲ್ ಯುಟಿಲಿಟಿ) ಅನುಸಾರವಾಗಿರುತ್ತದೆ. ಆದರೆ ಸರಕಿನ ಎಲ್ಲ ಘಟಕಗಳಿಗೂ ಆತ ಕೊಡುವುದು ಒಂದೇ ಬೆಲೆ. ಅದು ಅಂಚಿನ ಘಟಕದ ತುಷ್ಟಿಗುಣಕ್ಕೆ ಸಮವಾಗಿರುತ್ತದೆ. ಅಂಚಿನ ಘಟಕಕ್ಕೆ ಅನುಭೋಗಿ ಕೊಡುವ ಬೆಲೆಯೂ ಕೊಡಲು ಸಿದ್ಧನಿರುವ ಬೆಲೆಯೂ ಒಂದೇ ಆಗಿರುತ್ತದೆ. ಮೊದಲ ಘಟಕಗಳಿಗೆ ಕೊಡಲು ಸಿದ್ಧವಾಗಿರುವ ಬೆಲೆ ಅಂಚಿನ ಘಟಕಕ್ಕೆ ಕೊಡುವ ಬೆಲೆಗಿಂತ ಹೆಚ್ಚಾಗಿರುವುದು. ಹೀಗೆ ಅನುಭೋಗಿ ಕೊಡಲು ಸಿದ್ಧವಾಗಿರುವ ಬೆಲೆ ವಾಸ್ತವವಾಗಿ ಕೊಡುವ ಬೆಲೆಗಿಂತ ಎಷ್ಟು ಹೆಚ್ಚಾಗಿರುವುದೋ ಅದು ಆತ ಅನುಭವಿಸುವ ತುಷ್ಟಿ ಹೆಚ್ಚಳದ (ಸರ್‌ಪ್ಲಸ್ ಯುಟಿಲಿಟಿ) ಆರ್ಥಿಕ ಅಳತೆಯೊಳಗಿರುತ್ತದೆ ಎಂದು ಆಂಗ್ಲ ಅರ್ಥಶಾಸ್ತ್ರಜ್ಞ ಆಲ್‌ಫ್ರೆಡ್ ಮಾರ್ಷಲ್ ನಿರೂಪಿಸಿ ಅದರ ಪ್ರಾಮುಖ್ಯವನ್ನು ಪ್ರಥಮತಃ ಎತ್ತಿ ತೋರಿಸಿದ.

ಉದಾ: ಕಿತ್ತಲೆಹಣ್ಣಿಗೆ ನಾವು ಕೊಡಲು ಸಿದ್ಧವಿರುವ ಬೆಲೆ ಮತ್ತು ವಾಸ್ತವವಾಗಿ ಕೊಡುವ ಬೆಲೆ ಹೀಗಿರುವುವೆಂದು ಊಹಿಸೋಣ.

| ಸರಕಿನ ಘಟಕ | ಕೊಡಲು ಸಿದ್ಧವಿರುವ ಬೆಲೆ ರೂ. | ವಾಸ್ತವವಾಗಿ ಕೊಡುವ ಬೆಲೆ ರೂ. |
|---|---|---|
| 1 | 1.00 | 0.20 |
| 2 | 0.80 | 0.20 |
| 3 | 0.70 | 0.20 |
| 4 | 0.50 | 0.20 |
| 5 | 0.40 | 0.20 |
| 6 | 0.30 | 0.20 |
| 7 | 0.25 | 0.20 |
| 8 | 0.20 | 0.20 |

8 ಕಿತ್ತಲೆ ಹಣ್ಣಿಗೆ ರೂ. 4.15 ಕೊಡಲು ಸಿದ್ಧವಿರುವಾಗ ಕೇವಲ ರೂ. 1.60 ಕ್ಕೆ ಸಿಗುವುದರಿಂದ ರೂ. 2.55 ಸೂಚಿಸುವ ಹೆಚ್ಚಳ ತುಷ್ಟಿ ಲಭಿಸಿದಂತಾಯಿತೆಂಬುದೇ ಅನುಭೋಗಿಯ ಹೆಚ್ಚಳ ಸಿದ್ಧಾಂತದ ವಾದ. ಅನುಭೋಗಿಯ ಹೆಚ್ಚಳವನ್ನು ಈ ಕೆಳಗಣ ರೇಖಾಚಿತ್ರದ ಮೂಲಕ ತೋರಿಸಬಹುದು.

DD' ಎಂಬ ಬೇಡಿಕೆ ಕಮಾನು ಸರಕಿನ ಘಟಕಗಳಿಗೆ ಅನುಕ್ರಮವಾಗಿ ಅನುಭೋಗಿ ಕೊಡಲು ಸಿದ್ಧವಿರುವ ಬೆಲೆಯನ್ನು ಸೂಚಿಸುತ್ತದೆ. PP' ಆತ ವಾಸ್ತವವಾಗಿ ಕೊಡುವ ಸರಕಿನ ಒಂದು ಘಟಕದ ಬೆಲೆಯನ್ನೂ AP ರೇಖೆ ಮಾರುಕಟ್ಟೆಯಲ್ಲಿ ಎಲ್ಲ ಘಟಕಗಳಿಗೂ ಇರುವ ಸಮ ಬೆಲೆಯನ್ನೂ ಸೂಚಿಸುತ್ತವೆ.

ಒಟ್ಟು ಅನುಭೋಗ OP' ಘಟಕಗಳಾದರೆ ಇವುಗಳಿಗೆ ನೀಡಿರುವ ಬೆಲೆಯನ್ನು AOP'P ಭಾಗ ಸೂಚಿಸುವುದು. ಅನುಭೋಗದ ಒಟ್ಟು ತುಷ್ಟಿಯನ್ನೂ ಆ ತುಷ್ಟಿಗೆ ಅನುಸಾರವಾಗಿ ಅನುಭೋಗಿ ಕೊಡಲು ಸಿದ್ಧವಾಗಿರುವ ಬೆಲೆಯನ್ನೂ DOP'P ಯೂ ಸೂಚಿಸುತ್ತದೆ. ಅನುಭೋಗಿ ಕೊಡಲು ಸಿದ್ಧವಿರುವ ಬೆಲೆಗೂ ವಾಸ್ತವವಾಗಿ ನೀಡುವ ಬೆಲೆಗೂ ಇರುವ ವ್ಯತ್ಯಾಸವನ್ನು ಆಂಕ ಸೂಚಿಸುತ್ತದೆ. ಇದೇ ಅನುಭೋಗಿಯ ಹೆಚ್ಚಳ.



ಅನುಭೋಗಿ ಸರಕುಗಳಿಗೆ ತಾನು ಕೊಡುವ ಬೆಲೆಗಿಂತ ಹೆಚ್ಚಿನ ತುಷ್ಟಿಯನ್ನು ಪಡೆಯುತ್ತಾನೆ. ಮತ್ತು ಈ ಹೆಚ್ಚಳ ತುಷ್ಟಿಯನ್ನು ಆತನು ಕೊಡಲು ಸಿದ್ಧವಾಗಿರುವ ಬೆಲೆ ಮತ್ತು ವಾಸ್ತವವಾಗಿ ಕೊಡುವ ಬೆಲೆ ಇವುಗಳ ವ್ಯತ್ಯಾಸ ಅಳೆದು ತೋರಿಸುತ್ತದೆ ಎಂಬ ಭಾವನೆ ಕೆಲವು ಆಕ್ಷೇಪಗಳಿಗೆ ಒಳಗಾಗಿದೆ.

ಕೊಳ್ಳುವ ಸರಕನ್ನು ಅನುಭೋಗಿ ಅನೇಕ ಸಣ್ಣ ಘಟಕಗಳಾಗಿ ಬಿಡಿಸಿ ಮೊದಲ ಘಟಕಕ್ಕೆ ಎಷ್ಟು ಬೆಲೆ ಕೊಡಬಹುದು. ಮುಂದಿನ ಘಟಕಗಳಿಗೆ ಎಷ್ಟೆಷ್ಟು ಕೊಡಬಹುದು ಎಂದು ಆಲೋಚಿಸುವನೆಂದು ಊಹಿಸುವುದು ಅವಾಸ್ತವಿಕ ಎಂಬುದು ಒಂದು ಆಕ್ಷೇಪಣೆ. ಹೀಗೆ ಬಿಡಿಸಿ ಆಲೋಚಿಸಿವುದು ಅಸ್ವಾಭಾವಿಕವೇ ಸರಿ. ಇರತಕ್ಕ ಬೆಲೆಗಿಂತ ಸ್ವಲ್ಪ ಹೆಚ್ಚು ಕಡಿಮೆ ಆದರೆ ಬೇಡಿಕೆ ಹೀಗೆ ವ್ಯತ್ಯಾಸವಾಗಬಹುದೆಂಬುದನ್ನು ಹೇಳಬಹುದಾದರೂ ಜನರು ಬಯಸುವ ಸರಕುಗಳ ಮೊದಮೊದಲ ಘಟಕಗಳಿಗೆ ಎಷ್ಟು ಬೆಲೆ ನೀಡಲು ಸಿದ್ಧವಿರುವರೆಂಬುದನ್ನು ಊಹಿಸಲು ಸರಿಯಾದ ಆಧಾರ ಸಿಗುವುದಿಲ್ಲ. ಅದರಲ್ಲೂ ಅತ್ಯಾವಶ್ಯಕವಾಗಿರುವ ಸರಕುಗಳ ಬಗ್ಗೆ ಹೀಗೆ ನೀಡಲು ಸಿದ್ಧವಿರುವ ಬೆಲೆಗೆ ಮೇಲ್ಮಿತಿ ಊಹಿಸುವುದಂತೂ ಕಾರ್ಯತಃ ಕಷ್ಟ. ಕನಿಷ್ಠಪ್ರಮಾಣದ ದೈನಂದಿನ ಆಹಾರ ಪದಾರ್ಥಗಳಿಗಾಗಲಿ ಅತಿ ತುರ್ತಾಗಿ ಬೇಕಾಗಿರಬಹುದಾದ ಇತರ ಸರಕುಗಳಿಗಾಗಲಿ ಎಷ್ಟೇ ಹೆಚ್ಚಿನ ಬೆಲೆಯನ್ನಾದರೂ ಕೊಡಲು ಸಿದ್ಧವಿರಬಹುದು. ಈ ಬೆಲೆಗೂ ವಾಸ್ತವವಾಗಿ ಮಾರುಕಟ್ಟೆಯಲ್ಲಿ ಅವುಗಳಿಗೆ ಕೊಡುವ ಬೆಲೆಗೂ ಇರುವ ವ್ಯತ್ಯಾಸ ಆ ಅನುಭೋಗಿಯ ಹೆಚ್ಚಳ ತುಷ್ಟಿಯನ್ನು ಅಳೆಯುವುದೆಂದು ಹೇಳುವುದು ಕೇವಲ ಕಾಲ್ಪನಿಕವಾಗುವುದು. ಹೆಚ್ಚಳ ತುಷ್ಟಿಯನ್ನು ಹೀಗೆ ಅಳೆಯುವುದಕ್ಕೆ ಇದು ಮಿತಿ ಸೂಚಿಸಿದಂತಾಯಿತು. ಆದ್ದರಿಂದಲೇ ಮಾರ್ಷಲ್ ಅವರ ಅನುಭೋಗಿಯ ಹೆಚ್ಚಳದ ಭಾವನೆ ನಿಷ್ಪ್ರಯೋಜಕವೆಂಬ ಟೀಕೆಯನ್ನು ಪ್ರಥಮತಃ ನಿಕಲ್‌ಸನ್ ಪ್ರಶ್ನಿಸಿ ಸು. 100 ಪೌಂಡ್ ವಾರ್ಷಿಕ ವರಮಾನ ಸು. 1000 ಪೌಂಡುಗಳಿಗೆ ಸಮ ಎಂದು ಹೇಳುವುದರಲ್ಲಿ ಯಾವ ಪ್ರಯೋಜನವಾದರೂ ಇದೆಯೇ ಎಂದು ಕೇಳಿದ್ದಕ್ಕೆ ಮಾರ್ಷಲ್ ನೀಡಿದ ಉತ್ತರ ಹೀಗಿದೆ: ಹಾಗೆ ಹೇಳುವುದರಲ್ಲಿ ಪ್ರಯೋಜನವಿಲ್ಲದಿರಬಹುದು, ಆದರೆ ಮಧ್ಯ ಆಫ್ರಿಕದವರ ಜೀವನವನ್ನು ಇಂಗ್ಲೆಂಡಿನವರ ಜೀವನದೊಡನೆ ಹೋಲಿಸಿದರೆ ಅನುಭೋಗ ಹೆಚ್ಚಳ ಭಾವನೆಯ ಪ್ರಯೋಜನ ತಿಳಿದೀತು. ಏಕೆಂದರೆ ಮಧ್ಯ ಆಫ್ರಿಕದಲ್ಲಿ ಸಿಗಬಹುದಾದ ಸರಕು ಸೇವೆಗಳ ಬೆಲೆ ಒಟ್ಟಿನಲ್ಲಿ ಇಂಗ್ಲೆಂಡಿನಲ್ಲಿ ಸಿಗುವ ಬೆಲೆಗಳಷ್ಟೆ ಇರಬಹುದಾದರೂ ಇಂಗ್ಲೆಂಡಿನಲ್ಲಿ ಸಿಗುವ ಅನೇಕ ಸರಕು ಸೇವೆಗಳು ಅಲ್ಲಿ ಇರುವುದಿಲ್ಲವಾದುದರಿಂದ ಅಲ್ಲಿ ಸು.1000 ಪೌಂಡುಗಳಷ್ಟು ವಾರ್ಷಿಕ ವರಮಾನವಿರುವವನು ಇಲ್ಲಿ ಸು. 300–400 ಪೌಂಡುಗಳಷ್ಟು ವಾರ್ಷಿಕ ವರಮಾನ ಹೊಂದಿರುವವನಷ್ಟು ಸುಖವಾಗಿರುವುದಿಲ್ಲ.

ತಾತ್ಪರ್ಯವೇನೆಂದರೆ, ಆಯಾ ಸನ್ನಿವೇಶ ಸೌಕರ್ಯಗಳಿಗೆ ಅನುಗುಣವಾಗಿ ಅನುಭೋಗಿಗೆ ಹೆಚ್ಚಳತುಷ್ಟಿ ಲಭಿಸುತ್ತದೆ. ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳಲ್ಲೂ ದೇಶದೊಳಗಿನ ಅಭಿವೃದ್ಧಿಯಾಗದಿರುವ ಪ್ರದೇಶಗಳಲ್ಲಿ ಇರುವುದಕ್ಕಿಂತ ಹೆಚ್ಚು ಅನುಭೋಗಾವಕಾಶಗಳಿರುವುವು ಅಲ್ಲದೆ ಅನೇಕ ಸರಕು ಸೇವೆಗಳು ಅಂಥ ಮುಂದುವರಿದಿರುವ ರಾಷ್ಟ್ರ ಅಥವಾ ಪ್ರದೇಶಗಳಲ್ಲಿ ಅನುಭೋಗಿಗಳು ಕೊಡಲು ಸಿದ್ಧವಿರುವ ಬೆಲೆಗಿಂತ ಕಡಿಮೆ ಬೆಲೆಗೆ ಲಭಿಸುವುದೂ ಅನುಭವ ಸಿದ್ಧ ವಿಷಯವಾಗಿದೆ. ಆದ್ದರಿಂದ

ಅನುಭೋಗಿಯ ಹೆಚ್ಚಳ ಸನ್ನಿವೇಶ ಮತ್ತು ಅವಕಾಶಗಳಿಂದ ಉದ್ಭವಿಸುವ ಪ್ರಯೋಜನ ವಿಶೇಷವೆಂದು ಹೇಳಬಹುದು. ವಿವಿಧ ರಾಷ್ಟ್ರಗಳ ಅನುಭೋಗಿಗಳ ಅಥವಾ ವಿವಿಧ ಸನ್ನಿವೇಶಗಳಲ್ಲಿ ಒಬ್ಬನೇ ಅನುಭೋಗಿಯ ಐಹಿಕಕ್ಷೇಮವನ್ನು ಸ್ಥೂಲವಾಗಿ ಹೋಲಿಸಲು ಮತ್ತು ಅನುಭೋಗಿಗಳು ಅನುಭವಿಸುವ ತುಷ್ಟಿ ವ್ಯತ್ಯಾಸವನ್ನು ಗ್ರಹಿಸಲು ಅನುಭೋಗಿಯ ಹೆಚ್ಚಳದ ಭಾವನೆ ಉಪಯೋಗವಾದೀತೆಂಬುದು ಇದರ ಪ್ರತಿಪಾದಕರ ಆಕಾಂಕ್ಷೆ.

ಹಣದ ಅಂಚಿನ ತುಷ್ಟಿ ಅನುಭೋಗಿಗಳ ವರಮಾನ ಹಾಗೂ ಇತರ ಸ್ಥಿತಿಗತಿಗಳಿಗನುಸಾರವಾಗಿ ವ್ಯತ್ಯಾಸವಾಗಿರುವುದರಿಂದ ಬೆಲೆಗಳ ಮೂಲಕ ತುಷ್ಟಿಯನ್ನು ಅಳೆಯುವುದೂ ಹೋಲಿಸುವುದೂ ಕಷ್ಟ. ಅಂದಮೇಲೆ, ಅನುಭೋಗಿಗಳು ಅನುಭವಿಸುವ ತುಷ್ಟಿ ಹೆಚ್ಚಳವನ್ನು ಬೆಲೆಗಳ ಮೂಲಕ ಅಳೆಯುವ ಪ್ರಯತ್ನ ನಿಷ್ಪ್ರಯೋಜಕ ಎಂಬುದು ಅನುಭೋಗಿಯ ಹೆಚ್ಚಳದ ಬಗ್ಗೆ ಹೇಳಲಾಗಿರುವ ಇನ್ನೊಂದು ಆಕ್ಷೇಪಣೆ.

ಆಧುನಿಕ ಅರ್ಥಶಾಸ್ತ್ರಜ್ಞರಲ್ಲಿ ಕೆಲವರು ಅನುಭೋಗಿಯ ಹೆಚ್ಚಳ ಭಾವನೆಯನ್ನು ಹೆಚ್ಚು ಭಾವಗರ್ಭಿತವಾಗಿ ಮಾಡುವ ಪ್ರಯತ್ನ ಮಾಡಿರುತ್ತಾರೆ. ಉದಾಹರಣೆಗೆ, ಇತರ ಸಂದರ್ಭಗಳು ಏಕರೀತಿಯಲ್ಲಿದ್ದು, ಒಂದು ಸರಕಿನ ಬೆಲೆ ಮಾತ್ರವೇ ಇಳಿವರಿಯಾದಾಗ ಅನುಭೋಗಿಗಳು ಪಡೆಯುವ ಲಾಭವನ್ನು ಅನುಭೋಗಿಸಲು ಹೆಚ್ಚಳವೆಂದೂ ಹಿಕ್ಸ್ ಪರಿಗಣಿಸಿದ್ದಾನೆ. ಬೆಲೆ ಇಳಿವರಿಯಾಗದ ಸರಕಿನ ಬದಲಿಗೆ ಬೆಲೆ ಇಳಿವರಿಯಾದ ಸರಕನ್ನು ಸ್ವಲ್ಪ ಹೆಚ್ಚಾಗಿ ಕೊಂಡುಕೊಳ್ಳುವುದರಿಂದ ಅನುಭೋಗಿ ಹೆಚ್ಚಳ ತುಷ್ಟಿ ಪಡೆಯುವನು. ಇಂಥ ಪುನರವಲೋಕಿಸಿದ ಉಕ್ತಿಗಳು ಮೂಲ ಭಾವನೆಯನ್ನು ಪುಷ್ಟೀಕರಿಸುವುವೆಂದು ಹೇಳಬಹುದು. ಅನುಭೋಗಿಯ ಹೆಚ್ಚಳವನ್ನು ಕರಾರುವಾಕ್ಕಾಗಿ ಅಳೆಯುವುದು ಕಷ್ಟದ ಕೆಲಸವಾದರೂ ಈ ಭಾವನೆಯಲ್ಲಿ ನಿಜಾಂಶವಿದೆ ಮತ್ತು ಆರ್ಥಿಕ ವಿಶ್ಲೇಷಣೆಯಲ್ಲಿ ಈ ಭಾವನೆಯಿಂದ ಪ್ರಯೋಜನವುಂಟು ಎಂಬುದು ಅನೇಕ ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ಏಕಸ್ವಾಮ್ಯ ಹೊಂದಿರುವ ಉದ್ಯಮಿಗೆ ಅನುಭೋಗಿಯ ಹೆಚ್ಚಳದ ಪರಿಶೀಲನೆ ಪ್ರಯೋಜನಕರವೆಂದು ಹೇಳಲಾಗಿದೆ; ಏಕೆಂದರೆ, ಅಂಥ ಏಕಾಧಿಕಾರಿ ತನ್ನ ಸರಕಿನ ಮಾರಾಟದ ಬೆಲೆ ಗೊತ್ತುಮಾಡಲು ತನಗಿರುವ ಶಕ್ತಿಯನ್ನು ಉಪಯೋಗಿಸುವಾಗ ಅನುಭೋಗಿಗಳ ಹೆಚ್ಚಳದಲ್ಲಿ ಆದಷ್ಟು ಭಾಗವನ್ನು ತಾನೂ ಪಡೆಯಲು ಪ್ರಯತ್ನಿಸುತ್ತಾನೆ. ಅಂದರೆ ಅನುಭೋಗಿಗಳು ಕೊಡಲು ಸಿದ್ಧರಿರುವ ಪರಮಾವಧಿ ಬೆಲೆಯ ಅಂದಾಜು ಏಕಸ್ವಾಮ್ಯ ವ್ಯಾಪಾರಕ್ಕೆ ಆವಶ್ಯಕ.

ತೆರಿಗೆ ಅಥವಾ ಸಹಾಯಧನದ ಪರಿಣಾಮಗಳ ಪರಿಶೀಲನೆಯಲ್ಲಿ ಸರಕಿನ ಮೇಲೆ ತೆರಿಗೆ ವಿಧಿಸುವುದರಿಂದ ಬೆಲೆ ಏರಿ ಅನುಭೋಗಿಯ ಹೆಚ್ಚಳ ಕಡಿಮೆಯಾಗಬಹುದು. ಇಂಥ ಸಂದರ್ಭದಲ್ಲಿ ತೆರಿಗೆಯ ಮೂಲಕ ಸರ್ಕಾರಕ್ಕೆ ಲಭಿಸುವ ಆದಾಯವನ್ನು ಅನುಭೋಗಿಗಳಿಗೆ ಆಗುವ ನಷ್ಟದೊಡನೆ ಹೋಲಿಸಿ ತೆರಿಗೆಯನ್ನು ವಿಧಿಸುವುದರ ಔಚಿತ್ಯವನ್ನು ನಿರ್ಧರಿಸಬೇಕಾಗುವುದು. ಈ ರೀತಿಯಲ್ಲಿ ಕೈಗಾರಿಕೆಯೊಂದಕ್ಕೆ ಸರ್ಕಾರ ನೀಡುವ ಸಹಾಯಧನದ ಪರಿಣಾಮವನ್ನು ಪರಿಶೀಲಿಸುವಾಗಲೂ ಅನುಭೋಗಿಯ ಹೆಚ್ಚಳದ ಭಾವನೆ ಸಹಾಯಕವಾಗುವುದು. ಅನುಭೋಗಿಗಳ ಬೇಡಿಕೆ ಹೆಚ್ಚಿಸುವಂತೆ ಸರಕಿನ ಬೆಲೆ ಇಳಿಸುವ ಉದ್ದೇಶದಿಂದ ಸರ್ಕಾರ ಸರಕು ತಯಾರಿಸುವವರಿಗೆ ಸಹಾಯಧನ ನೀಡಬಹುದು. ಹೀಗೆ ಮಾಡುವಾಗ ಅನುಭೋಗಿಗಳಿಗೆ ಲಭಿಸುವ ಹೆಚ್ಚುವರಿ ಸರ್ಕಾರಕ್ಕೆ ಆಗುವ ವ್ಯಯಕ್ಕಿಂತ ಹೆಚ್ಚಾದರೆ ಮಾತ್ರ ಈ ರೀತಿಯ ಸಹಾಯಧನ ನೀಡಿಕೆ ಒಳ್ಳೆಯದೆಂದು ಹೇಳಬಹುದು.

ಅನುಭೋಗಿಯ ಹೆಚ್ಚಳದ ಭಾವನೆ ತುಷ್ಟಿಗುಣಕ್ಕೂ ಬೆಲೆಗೂ ಇರುವ ಭೇದವನ್ನು ಸ್ಪಷ್ಟಗೊಳಿಸಲು ಸಹಾಯಕವಾಗಿದೆ. ಒಂದು ಸರಕಿಗೆ ಕೊಡುವ ಬೆಲೆ ಈ ಸರಕಿನ ವಾಸ್ತವವಾದ ತೃಪ್ತಿದಾಯಕ ಶಕ್ತಿಯನ್ನು ಸಾಮಾನ್ಯವಾಗಿ ಸೂಚಿಸುವುದಿಲ್ಲ ಎಂಬ ಅಂಶವನ್ನು ಅದು ಎತ್ತಿ ತೋರಿಸುತ್ತದೆ. ಅನುಭೋಗಿಯ ಪಟ್ಟಿಯಲ್ಲಿ ಹೆಚ್ಚು ತುಷ್ಟಿಗುಣ ಹೊಂದಿರುವ ವೃತ್ತಾಂತ ಪತ್ರಿಕೆ, ಪೋಸ್ಟ್‌ಕಾರ್ಡು, ಬೆಂಕಿಪೊಟ್ಟಣ, ಉಪ್ಪು ಇತ್ಯಾದಿ ಅನೇಕ ಕಡಿಮೆ ಬೆಲೆಯ ಸರಕುಗಳಿರುತ್ತವೆ. ಆರ್ಥಿಕಾಭಿವೃದ್ಧಿಯೊಡನೆ ಕೂಡಿ ಬರುವ ಉತ್ತಮ ಸನ್ನಿವೇಶದಿಂದ ಲಭಿಸುವ ತುಷ್ಟಿಗುಣದ ಹೆಚ್ಚುವರಿಯೂ ಸಾಮಾನ್ಯವಾಗಿ ಅನುಭೋಗಿಯ ಹೆಚ್ಚಳ ರೂಪದಲ್ಲೇ ಬರುವುದು. ಅದ್ದರಿಂದ ಅನುಭೋಗಿಯ ಯೋಗಕ್ಷೇಮ ವಿಚಾರದ ಅಧ್ಯಯನದಲ್ಲಿ ಅನುಭೋಗಿಯ ಹೆಚ್ಚಳದ ಭಾವನೆ ಅರ್ಥಪೂರ್ಣವಾಗಿ ಉಳಿದುಬಂದಿದೆ. (ಎ.ಪಿ.ಎಸ್.)

**ಅನುಮಾಪನ** : ನಿರ್ದಿಷ್ಟ ಗಾತ್ರದ ಒಂದು ದ್ರಾವಣದೊಡನೆ ಸಂಪೂರ್ಣವಾಗಿ ವರ್ತಿಸಲು ಅಗತ್ಯವಾದ ಮತ್ತೊಂದು ದ್ರಾವಣದ ಗಾತ್ರವನ್ನು ನಿರ್ಣಯಿಸುವ ಪ್ರಯೋಗವಿಧಾನ (ಟೈಟ್ರೇಷನ್). ಕ್ರಿಯಾಭಾಗಿಗಳಾದ ದ್ರಾವಣಗಳ ಪೈಕಿ ಒಂದರ ನಾರ್ಮ್ಯಾಲಿಟಿ ಅಥವಾ ಅದರ ಪ್ರಬಲತೆ ತಿಳಿದಿದ್ದರೆ ಮತ್ತೊಂದರ ನಾರ್ಮ್ಯಾಲಿಟಿಯನ್ನು $N_1V_1 = N_2v_2$ ಎಂಬ ಸೂತ್ರದ ಸಹಾಯದಿಂದ ಕಂಡುಹಿಡಿಯಬಹುದು. ಅನುಮಾನಕ್ಕೆ ಪೂರ್ವಸಿದ್ಧತೆಯಾಗಿ 1. ನಾರ್ಮ್ಯಾಲಿಟಿ ಗೊತ್ತಿರುವ ದ್ರಾವಣ; ಇಂಥ ಪ್ರಮಾಣಿಕ (ಸ್ಟ್ಯಾಂಡರ್ಡ್) ದ್ರಾವಣವನ್ನು ತಯಾರಿಸಲು ಬೇಕಾದ ಪರಿಶುದ್ಧ ರಾಸಾಯನಿಕ ವಸ್ತುಗಳು, 2 ಕ್ರಿಯಾಂತ್ಯವನ್ನು (ಎಂಡ್ ಪಾಯಿಂಟ್) ನಿಖರವಾಗಿ ಸೂಚಿಸುವ ಸಾಧನ; 3. ಬ್ಯೂರೆಟ್, ಪಿಪೆಟ್, ಆಲಿಕೆ, ಅನುಮಾಪನಕ್ಕಾಗಿಯೇ ನಿರ್ಮಿಸಿರುವ ಫ್ಲಾಸ್ಕುಗಳು (ಜಾಡಿ) ಇತ್ಯಾದಿಗಳನ್ನು ಒದಗಿಸಿಕೊಳ್ಳಬೇಕು. ಉಪಕರಣಗಳನ್ನೆಲ್ಲಾ ಶುಭ್ರವಾಗಿ ತೊಳೆದು ಬಟ್ಟಿ ಇಳಿಸಿದ ನೀರಿನಿಂದ ಗಲಬರಿಸಿರಬೇಕು. ಬ್ಯೂರೆಟ್ ಮತ್ತು ಪಿಪೆಟ್‌ಗಳಲ್ಲಿ ದ್ರಾವಣಗಳನ್ನು ತುಂಬುವ ಮುನ್ನ, ಅವುಗಳನ್ನು ಆಯಾ ದ್ರಾವಣದಿಂದ ಗಲಬರಿಸಬೇಕು. ಫ್ಲಾಸ್ಕಿನಲ್ಲಿರುವ ನಿರ್ದಿಷ್ಟಗಾತ್ರ ದ್ರಾವಣಕ್ಕೆ (ಉದಾ: 25 ಮಿ.ಲೀ.) ಬ್ಯೂರೆಟ್ಟಿನಲ್ಲಿರುವ ದ್ರಾವಣವನ್ನು ಸ್ವಲ್ಪ ಸೇರಿಸಿ, ಎಚ್ಚರಿಕೆಯಿಂದ ಕುಲುಕಬೇಕು. ಕ್ರಿಯಾಂತ್ಯ ಸನಿಹದಲ್ಲಿ ಬ್ಯೂರೆಟ್ಟಿನಿಂದ ದ್ರಾವಣವನ್ನು ತೊಟ್ಟುತೊಟ್ಟಾಗಿ ಹಾಕಿ ಪರೀಕ್ಷಿಸಬೇಕು. ಕ್ಲೋರೈಡ್ ಸಿಲ್ವರ್ ನೈಟ್ರೇಟ್ ಕ್ರಿಯೆಯಂತೆ ಒತ್ತಡ ಉಂಟಾಗುತ್ತಿದ್ದರೆ ಅಥವಾ ಆಕ್ಸಾಲಿಕ್ ಆಮ್ಲ ಪೊಟ್ಯಾಸಿಯಂ ಪರ್ಮ್ಯಾಂಗನೇಟ್ ಕ್ರಿಯೆಯಂತೆ ಬಣ್ಣ ಮಾಯವಾಗುತ್ತಿದ್ದರೆ, ಕ್ರಿಯಾಂತ್ಯದ ನಿರ್ಣಯ ಸುಲಭ. ಇಲ್ಲದಿದ್ದರೆ ಆಯಾ ರಾಸಾಯನಿಕ ಕ್ರಿಯೆಯಲ್ಲಿ ನಿರ್ಲಿಪ್ತವಾಗಿರುವ ಸೂಚಕಗಳನ್ನು (ಇಂಡಿಕೇಟರ್ಸ್) ಬಳಸಬೇಕಾಗುತ್ತದೆ. ಲಿಟ್ಮಸ್, ಮೀಥೈಲ್ ಆರೆಂಜ್, ಮೀಥೈಲ್ ರೆಡ್ ಮತ್ತು ಫೀನಾಲ್ಫ್‌ಥಲೀನುಗಳು ಆಮ್ಲ–ಕ್ಷಾರಗಳ ಅನುಮಾಪನದಲ್ಲಿ ಉಪಯೋಗಿಸುವ ಪರಿಚಿತ ಸೂಚಕಗಳು. ಆಮ್ಲ–ಕ್ಷಾರಗಳ ಬಲ ಮತ್ತು ಕ್ರಿಯಾಂತ್ಯದಲ್ಲಿ ಆಗುವ $pH$ ವ್ಯತ್ಯಾಸಗಳನ್ನು ಅನುಸರಿಸಿ ನಿರ್ದಿಷ್ಟಸೂಚಕವನ್ನು ಚುನಾಯಿಸಬೇಕಾಗುತ್ತದೆ. ಪ್ರಸಕ್ತ ರಾಸಾಯನಿಕ ಕ್ರಿಯೆಯಲ್ಲಿ ವ್ಯಕ್ತವಾಗುವ, ವಿದ್ಯುದ್ವಿಭಜನೆ, ವಿದ್ಯುದ್ವಾಹಕತ್ವ, ರೋಧ, ಶಾಖ, ವಕ್ರೀಭವನಾಂಕ, ಸ್ನಿಗ್ಧತೆ, ಪ್ರಭಾವಪಟುತ್ವ–ಇತ್ಯಾದಿ ಭೌತಬದಲಾವಣೆಗಳನ್ನು ಗಮನಿಸಿಯೂ ಅನುಮಾಪನ ಮಾಡುವುದುಂಟು. ಇದಕ್ಕಾಗಿ ವಿಶಿಷ್ಟ ತಾಂತ್ರಿಕ ವ್ಯವಸ್ಥೆಗಳು ರೂಪಿತವಾಗಿವೆ. ಅನುಮಾಪನದಲ್ಲಿ ಬಳಸುವ ದ್ರಾವಣಗಳನ್ನು ಸಾಮಾನ್ಯವಾಗಿ, ನೀರಿನಿಂದ ತಯಾರಿಸುತ್ತಾರೆ. ಸಾವಯವ ವಸ್ತುಗಳಾದರೆ (ಆರ್ಗ್ಯಾನಿಕ್) ಇತರ ಸೂಕ್ತ ದ್ರಾವಣಗಳಲ್ಲಿ ವಿಲೀನಮಾಡಿ ದ್ರಾವಣರೂಪಕ್ಕೆ ತರಬೇಕಾಗುತ್ತದೆ. ಅನುಮಾಪನ ಕ್ರಿಯಾಸ್ವರೂಪವನ್ನು ರೇಖಾನಕ್ಷೆಯ (ಗ್ರಾಫ್) ರೂಪದಲ್ಲಿ ಗುರುತಿಸಿಕೊಂಡು ಹೋಗುವ ಸ್ವಯಂಚಾಲಿತ ಸಾಧನಗಳಿಗೆ ಪ್ರಾಶಸ್ತ್ಯ ಹೆಚ್ಚುತ್ತಿದೆ. (ಎಚ್.ಜಿ.ಎಸ್.)

**ಅನುಮಿತ** : ಒಂದು ಪ್ರಮೇಯದಿಂದ ಸುಲಭವಾಗಿ ಬರತಕ್ಕ ಮತ್ತೊಂದು ಉಪಪ್ರಮೇಯ (ಕರೊಲ್ಲರಿ), ಉದಾ: ಪ್ರಮೇಯ–ಎರಡು ಸಮಾನ ಕೋನೀಯ (ಈಕ್ವಿ ಆ್ಯಂಗ್ಯುಲರ್) ತ್ರಿಭುಜಗಳು ಸಮರೂಪವಾಗಿವೆ (ಸಿಮಿಲರ್). ಇದರ ಒಂದು ಅನುಮಿತ: ಎರಡು ಸಮಭುಜತ್ರಿಭುಜಗಳು (ಈಕ್ವಿಲ್ಯಾಟರಲ್ ಟ್ರೈ ಆಂಗಲ್ಸ್) ಸಮರೂಪವಾಗಿವೆ. (ಸಿ.ಎನ್.ಎಸ್.)

**ಅನುಯೋಗಿ** : ತರ್ಕಶಾಸ್ತ್ರಪ್ರಕ್ರಿಯೆಯಲ್ಲಿ ಅಧಿಕವಾಗಿ ಬಳಕೆಯಲ್ಲಿರುವ ಸಂಬಂಧ ದ್ಯೋತಕವಾದ ಒಂದು ಸಂಕೇತ. ಉದಾ: ಚಂದ್ರಸದೃಶಮುಖಿ ಎಂಬ ಕಡೆಯಲ್ಲಿ ಚಂದ್ರಪ್ರತಿಯೋಗಿಕಸಾದೃಶ್ಯಾನುಯೋಗಿಮುಖಿ ಎಂದು ತರ್ಕಶಾಸ್ತ್ರ ಪದ್ಧತಿಯಲ್ಲಿ ವಿವರಣೆ ಇದೆ. (ಎಸ್.ಎನ್.ಕೆ.)

**ಅನುರಾಧಪುರ** : ಶ್ರೀಲಂಕದ ಮಧ್ಯಪ್ರಾಂತ್ಯದ ರಾಜಧಾನಿ ಕೊಲಂಬೊವಿನಿಂದ ಸು. 205 ಕಿಮೀ ದೂರದಲ್ಲಿ ಕೊಲಂಬೊ ಮತ್ತು ಉತ್ತರ ತಮಿಳರ ಮುಖ್ಯ ನಗರ ಜಾಫ್ನದ ಮಧ್ಯದಲ್ಲಿದೆ. ವಿಸ್ತೀರ್ಣ 7179 ಚಕಿಮೀ. ಜನಸಂಖ್ಯೆ ಸು. 900,000 (2001) ಪ್ರ.ಶ.ಪೂ. 5ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಹೆಸರಾಗಿದ್ದ ಶ್ರೀಲಂಕದ ಪ್ರಾಚೀನ ನಗರ. ಈಗಲೂ ಇದು ಬೌದ್ಧರ ಯಾತ್ರಾಸ್ಥಳ. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಶ್ರೀಲಂಕ–ಜಾಫ್ನ ರೈಲ್ವೆಯನ್ನು ಹಾಕಿದುದರಿಂದ ಅನುರಾಧಪುರ ಬೇಗನೆ ಅಭಿವೃದ್ಧಿ ಹೊಂದಿತು. ಸುತ್ತಣ ಕಾಡು ಕಡಿದು ಹೊಸ ಹಾಗೂ ದುರಸ್ತಿಮಾಡಿದ ಕೆರೆಗಳ ಸಹಾಯದಿಂದ ಬತ್ತದ ಬೆಳೆಗೆ ಅನುಕೂಲ ಕಲ್ಪಿಸಲಾಗಿದೆ. ಟಾಲಮಿಯ ಭೂಪಟದಲ್ಲಿ ಇದನ್ನು ಅನುರಾಧಗ್ರಾಮನ್ ಎಂದು ಗುರುತಿಸಲಾಗಿದೆ.

15 ಶತಮಾನಗಳವರೆಗೆ ತೊಂಬತ್ತು ಚಕ್ರವರ್ತಿಗಳು ಆಳಿದುದರಿಂದ ಈ ಹೆಸರು ಬಂದಿತೆಂದು ಹೇಳಲಾಗಿದೆ. ಅಶೋಕ ಚಕ್ರವರ್ತಿಯ ಮಗ ಮಹೇಂದ್ರ ಪ್ರ.ಶ.ಪೂ. 2ನೆಯ ಶತಮಾನದಲ್ಲಿ ಇಲ್ಲಿಂದ ಎಂಟು ಮೈಲಿ ಅಂತರದಲ್ಲಿರುವ ಮಹಂತಲೆ ಎಂಬಲ್ಲಿಗೆ ಬೌದ್ಧಧರ್ಮ ತಂದನೆಂದು ನಂಬಲಾಗಿದೆ. ಬುದ್ಧನಿಗೆ ಬೆಳಕು ಕೊಟ್ಟ ಪವಿತ್ರ ಬೋಧಿವೃಕ್ಷದ ಒಂದು ಶಾಖೆಯನ್ನು ತಂದು ಈ ಪಟ್ಟಣದಲ್ಲಿ ಪ್ರ.ಶ.ಪೂ.ದಲ್ಲಿ ನೆಟ್ಟಿದ್ದು ಈಗಲೂ ಇದೆ. ಬುದ್ಧಗಯೆಯಿಂದ ಇದನ್ನು ತರಲಾಯಿತು ಎಂದು ಭಾವಿಸಿದುದರಿಂದ ಈ ನಗರ ಒಂದು ಪುಣ್ಯಸ್ಥಳ ಎನಿಸಿದೆ. (ಕೆ.ಕೆ.ಆರ್.)

ಮೌರ್ಯರು ಭಾರತದಲ್ಲಿ ಆಳುತ್ತಿದ್ದಾಗ ದೇವನಾಂಪ್ರಿಯ ಟಿಸ್ಸಾ ಅನುರಾಧಪುರದ ರಾಜನಾಗಿದ್ದ. ಬೌದ್ಧಧರ್ಮ ಪ್ರಚಾರಕ್ಕೆ ಹೊರಟ ಅಶೋಕನ ಅನೇಕ ಬೌದ್ಧ ಭಿಕ್ಷುಗಳನ್ನು ಬರಮಾಡಿಕೊಂಡು ಇಲ್ಲಿ ವಸತಿ ಕಲ್ಪಿಸಿಕೊಟ್ಟ. ರಾಜಧಾನಿಯಾಗುವುದಕ್ಕೆ ಎಲ್ಲ ಅನುಕೂಲತೆಗಳೂ ಈ ಪಟ್ಟಣದಲ್ಲಿದ್ದವು. ಮೂಲತಃ ಓಯಾ ನದಿಯ ತೀರದಲ್ಲಿರುವುದರಿಂದ ಇದರ ಕಾಂತಿ ಹೆಚ್ಚು. ಇದು ಸಮುದ್ರತೀರದಿಂದ ದೂರವಿರುವುದರಿಂದ ಶತ್ರುಗಳ ಭಯ ಕಡಿಮೆ. ದೇವನಾಂಪ್ರಿಯ ಕಾಲವಾದಮೇಲೆ ದಕ್ಷಿಣ ಭಾರತದಿಂದ ಕೆಲವು ಆಕ್ರಮಣಕಾರರು ಎರಡು ಬಾರಿ ಶ್ರೀಲಂಕದ ಮೇಲೆ ದಾಳಿಮಾಡಿ ಊರನ್ನು ಲೂಟಿಮಾಡಿದರು. ಎರಡನೆಯ

ದಾಳಿಮಾಡಿದವ ಎಲಾರಾ (ಪ್ರ.ಶ.ಪೂ. 145–101) ಎಂಬ ತಮಿಳ. ಸ್ವಲ್ಪಕಾಲ ಪಾಂಡ್ಯರು ತಮ್ಮ ಅಧಿಕಾರವನ್ನು ಇಲ್ಲಿ ಸ್ಥಾಪಿಸಿದ್ದರು. ಅನೇಕ ಕೊಳಗಳನ್ನು ನಿರ್ಮಿಸಲಾಯಿತು. ಕೊಳಗಳನ್ನು ಮತ್ತು ನಾಲೆಗಳನ್ನು ನಿರ್ಮಿಸಿದುದರಿಂದ ವ್ಯವಸಾಯ ಮುಂದುವರಿಯುವುದಕ್ಕೂ ಜನಸಂಖ್ಯೆ ಹೆಚ್ಚಾಗುವುದಕ್ಕೂ ಕಾರಣವಾಯಿತು. 2, 3, ಮತ್ತು 4ನೆಯ ಶತಮಾನಗಳಲ್ಲಿ ಕೊಳಗಳ ನಿರ್ಮಾಣಕಾರ್ಯ ಹೆಚ್ಚಿತು. ಬೌದ್ಧಧರ್ಮಕ್ಕೆ ಮುಖ್ಯ ಕೇಂದ್ರವಾಗಿದ್ದ ಅನುರಾಧಪುರ ಜೈನಧರ್ಮದ ಕ್ಷೇತ್ರವೂ ಆಯಿತು. ಅನೇಕ ಬೌದ್ಧ ವಿಹಾರಗಳು ಮತ್ತು ಜೈನ ಬಸದಿಗಳು ನಿರ್ಮಾಣವಾದುವು. ಇದರಲ್ಲಿ ಅಭಯಗಿರಿ ವಿಹಾರ ಬಹಳ ರಮ್ಯವಾದದ್ದು. ಅಲ್ಲಿ ಅನೇಕ ದೇವಾಲಯಗಳಿರುವುದರಿಂದ ಅದು ಒಂದು ಪವಿತ್ರಕ್ಷೇತ್ರವಾಗಿದೆ. ಬೌದ್ಧಭಿಕ್ಷುಗಳ ನಿವಾಸವಾಗಿದೆ. ಪಲ್ಲವರು ಮತ್ತು ಚೋಳರು ಈ ಪಟ್ಟಣದ ಮೇಲೆ ಅನೇಕ ಬಾರಿ ದಾಳಿ ಮಾಡಿದರು. ಪಲ್ಲವ ರಾಜನಾದ ಒಂದನೆಯ ನರಸಿಂಹವರ್ಮ (630–68) ಮಾನವರ್ಮನ ಸಹಾಯಕ್ಕಾಗಿ ಎರಡು ನೌಕಾದಾಳಿಯನ್ನು ಶ್ರೀಲಂಕದ ಮೇಲೆ ನಡೆಸಿದ. ಅನುರಾಧಪುರ ಆಗ ಮಾನವರ್ಮನ ವಶವಾಯಿತು. ಆದರೆ ಅವನ ಅಧಿಕಾರ ಊರ್ಜಿತವಾಗಲಿಲ್ಲ. ಪಾಂಡ್ಯರ ರಾಜನಾದ ಶ್ರೀಮಾರ (815–60) ಅನುರಾಧಪುರದ ಮೇಲೆ ಆಕ್ರಮಣ ಮಾಡಿ, ಅಲ್ಲಿ ದೊರಕಿದ ಐಶ್ವರ್ಯವೆಲ್ಲವನ್ನೂ ದೋಚಿಕೊಂಡು ಹೋದ. ಅನಂತರ ಚೋಳರ ದಾಳಿಗೆ ಸಿಕ್ಕಿ ನಗರ ಮತ್ತಷ್ಟು ಕ್ಷೀಣಗೊಂಡಿತು. ರಾಜರಾಜ (985–1016) ಮತ್ತು ಅವನ ಮಗ ರಾಜೇಂದ್ರಚೋಳ ಇಬ್ಬರೂ ಮತ್ತೆ ದಾಳಿಮಾಡಲಾಗಿ ಮತ್ತೂ ಕ್ಷೀಣಗೊಂಡಿತು. 1017ರಿಂದ 1335ರವರೆಗೆ ಪೋಲನ್ನಾರುವ ನಗರ ಶ್ರೀಲಂಕದ ರಾಜಧಾನಿಯಾದುದರಿಂದ ಅನುರಾಧಪುರ ತನ್ನ ಕಾಂತಿಯನ್ನು ಕಳೆದುಕೊಂಡಿತು. (ಬಿ.ಎಂ.)

ಈ ಪಟ್ಟಣದಲ್ಲಿ ಅನೇಕ ಸ್ತೂಪಗಳು, ತೋಟಗಳು, ಶುಶ್ರೂಷಾಲಯಗಳು ಇದ್ದವು. ಈಗ ಅಲ್ಲಿ 6–7 ಪ್ರಾಚೀನ ಸ್ತೂಪಗಳು ಉಳಿದುಕೊಂಡಿವೆ. ಮುಖ್ಯವಾದ ಅಭಯಗಿರಿ ಸ್ತೂಪ 100 ಮೀ ಎತ್ತರವಿದ್ದು, ಅದರ ಪರಿಘ 305 ಮೀ ಇದೆ. ಮಹಾವಂಶವೆಂಬ ಗ್ರಂಥ ಈ ಕಟ್ಟಡವನ್ನು ಉಲ್ಲೇಖಿಸುತ್ತದೆ. ಗಾಮಿನಿ ಅಭಯ (ಪ್ರಶಪೂ. 1 ನೆಯ ಶತಮಾನ) ಇದನ್ನು ಮತ್ತು ಇನ್ನೊಂದು ವಿಹಾರವನ್ನು ಕಟ್ಟಿದ. ಪ್ರಶ. 2ನೆಯ ಶತಮಾನದಲ್ಲಿ 1ನೆಯ ಗಜಬಾಹು ಇದನ್ನು ಎತ್ತರಿಸಿ ಅದಕ್ಕೆ ನಾಲ್ಕು ಮಹಾದ್ವಾರಗಳನ್ನು ನಿರ್ಮಿಸಿದನೆಂದು ಮಹಾವಂಶದಿಂದ ತಿಳಿಯುವುದು.

ಎರಡನೆಯ ಸ್ತೂಪವನ್ನು ಮಹಾಸೇನರಾಜ ಕಟ್ಟಲು ಪ್ರಾರಂಭಿಸಿದ್ದನ್ನು ಕಿತ್ತರ–ಸಿರಿ–ಮೇಘವಾಹನನು ಪೂರ್ಣಗೊಳಿಸಿದ. ಥೂಪರಾಮ ಡಾಗೊಬ ಮಹತ್ವದ್ದಾಗಿದೆ. ದೇವನಾಂಪ್ರಿಯ ತಿಸ್ಸಾ ಇದರ ಹತ್ತಿರದ ಒಂದು ವಿಹಾರದಲ್ಲಿ ಭಾರತದಿಂದ ತಂದ ಬುದ್ಧನ ಹಲ್ಲನ್ನು ಇಟ್ಟ. ಇಲ್ಲಿನ ಲೋಹಪಸಾದವೆಂಬ ಕಟ್ಟಡ ಮತ್ತು ಬುದ್ಧನ ಬೃಹದಾಕಾರದ ಪರಿನಿರ್ಮಾಣಶಿಲ್ಪ, ಹಿತ್ತಾಳೆಯ ಅರಮನೆ, ಅನೇಕ ಹಳೆಯ ಡಾಗೊಬಗಳು ಹಾಗೂ ಇನ್ನಿತರ ವಾಸ್ತುಶಿಲ್ಪಗಳಿಗೆ ಪ್ರಸಿದ್ಧಿಪಡೆದ ಪ್ರಾಚೀನ ಅವಶೇಷಗಳು ಇಲ್ಲಿವೆ. (ಎ.ಎಂ.ಎ.)

**ಅನುರಾಧಾ :** ಅಶ್ವಿನ್ಯಾದಿ 27 ನಕ್ಷತ್ರಗಳಲ್ಲಿ ರಾಧಾ (ಅಂದರೆ ವಿಶಾಖಾ) ನಕ್ಷತ್ರವನ್ನು ಅನುಸರಿಸಿ ಬರುವ 17ನೆಯದು. ವೃಶ್ಚಿಕರಾಶಿಯಲ್ಲಿ ಮೊದಲು ಮೂಡಿ ಬರುವ ಮೂರು ನಕ್ಷತ್ರಗಳಲ್ಲಿ ಮಧ್ಯದ್ದು *

ಡೆಲ್ಟ ಸ್ಕಾರ್ಪಿ ಯೈ ಎಂಬುದು ಶಾಸ್ತ್ರೀಯ ನಾಮ. ಈ ನೀಲಿ ನಕ್ಷತ್ರ 1999ರಿಂದೀಚೆಗೆ ಪ್ರಕಾಶದ ಏರಿಳಿತ ಗಳನ್ನು ಪ್ರದರ್ಶಿಸುತ್ತಿದೆ. ಇದರ ಸುತ್ತ ವಿಸ್ತರಿಸು ತ್ತಿರುವ ಅನಿಲ ವನ್ನು ರೋಹಿತಗಳಿಂದ ಪತ್ತೆ ಮಾಡಲಾಗಿದೆ.

**ಅನುರಾಧಾ, ಧಾರೇಶ್ವರ :** 1938–. ಕನ್ನಡ ಸುಗಮ ಸಂಗೀತ ಕಲಾವಿದೆ. ಇವರ ಮೊದಲ ಹೆಸರು ಶಾಂತಮತಿ. 1938 ನವೆಂಬರ್ 24ರಂದು ಜನಿಸಿದರು. ತಂದೆ ನಾಗೇಶರಾವ್, ತಾಯಿ ಉಮಾಬಾಯಿ. ರಾಮಚಂದ್ರಜಂತ್ಲಿ ಅವರಿಂದ ಸಂಗೀತಪಾಠ ಕಲಿತ ಇವರು ಹದಿನಾಲ್ಕನೆಯ ವಯಸ್ಸಿನಲ್ಲಿ ಆಕಾಶವಾಣಿಯ ಕಾರ್ಯ ಕಮದಲ್ಲಿ ಪಾಲ್ಗೊಂಡರು. ಸಂಗೀತ ಶಾಸ್ತ್ರದಲ್ಲಿ ಪದವಿ ಪಡೆದು ಧಾರವಾಡದ ಬಾಸೆಲ್ ಮಿಶನ್ ಹೆಣ್ಣು ಮಕ್ಕಳ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ನೇಮಕಗೊಂಡರು. ಅನಂತರ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಮೂರು ದಶಕಗಳ ಕಾಲ ಉದ್ಘೋ ಷಕಿಯಾಗಿ ಕಾರ್ಯನಿರ್ವ ಹಿಸಿದರು. ಭಾರತ ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ (1965) "ಏ ಮೇರೆ ವತನಕೆ ಲೋಗೋ" ಹಿಂದಿ ಗೀತೆಯನ್ನು ರಾಘವೇಂದ್ರ ಇಟಗಿಯವರು "ಓ ನನ್ನ ದೇಶ ಬಾಂಧವರೆ!ಕಂಬನಿಗಳೆರಡಾ ಚಿಮ್ಮಿ! ಪ್ರಾಣಾಹುತಿ ನೀಡಿದ ಅವರ! ಸಂಸ್ಮರಿಸಿರಿ ಬಲಿದಾನ" ಎಂದು ಕನ್ನಡದಲ್ಲಿ ಅನುವಾದಿಸಿದ್ದನ್ನು ಮಧುರ ಕಂಠದಿಂದ ಹಾಡಿ ಜನಪಿಯರಾದರು. ಕನ್ನಡದ ಪಮುಖ ಭಾವಗೀತಕಾರರಾದ ಕುವೆಂಪು, ಬೇಂದ್ರೆ, ಆನಂದಕಂದ, ಚನ್ನವೀರ ಕಣವಿ, ಡಿ.ಎಸ್.ಕರ್ಕಿ ಮೊದಲಾದವರ ಭಾವಗೀತೆಗಳನ್ನು ಮನದುಂಬಿ ಹಾಡಿದರು. ಸುಗಮಸಂಗೀತ ಕಲಾವಿದೆಯಾಗಿ ಜನಪ್ರಿಯತೆ ಗಳಿಸಿದರು. ರಂಗಭೂಮಿ, ನಾಟಕಗಳಲ್ಲೂ ಅಭಿನಯಿಸಿದ ಅನುಭವ ಇವರಿಗಿದೆ. ಶರಣರ ವಚನಗಳು, ದಾಸರ ಕೀರ್ತನೆಗಳು, ಉತ್ತರ ಕರ್ನಾಟಕದ ರಂಗಗೀತೆಗಳು, ಜನಪದ ಗೀತೆಗಳು

ಇವರ ಮಧುರ ಕಂಠದಿಂದ ಕೇಳುಗರನ್ನು ಆಕರ್ಷಿಸಿವೆ. ಪ್ರಸಾರ ಕಾರ್ಯಕಮ, ಪುಸ್ತಕ ಬಿಡುಗಡೆ, ಸುಗಮ ಸಂಗೀತೋತ್ಸವ, ವಿಶ್ವಕೊಂಕಣಿ ಸಮ್ಮೇಳನ, ಬೇಲೂರು, ಸೋಮನಾಥಪುರಗಳ ಭಾವಗೀತೋತ್ಸವಗಳಲ್ಲಿ ಹಾಡಿದ್ದಾರೆ. ಮರಾಠಿ, ಕೊಂಕಣಿ, ಹಿಂದಿ, ಬಂಗಾಲಿ, ತೆಲುಗು ಗೀತೆಗಳನ್ನೂ ಇವರು ಹಾಡಿದ್ದಾರೆ. ನಾಡಿನಾದ್ಯಂತ ಅಸಂಖ್ಯ ಕಾರ್ಯಕ್ರಮ ನೀಡಿದ್ದಾರೆ. ಆಕಾಶವಾಣಿಯ ಹಿರಿಯ ಕಲಾವಿದೆಯಾಗಿ ಇವರು ಈಗಲೂ ಕಾರ್ಯಕಮ ನೀಡುತ್ತಿದ್ದಾರೆ.

ಇವರಿಗೆ ಅನೇಕ ಗೌರವ ಪಶಸ್ತಿಗಳು ದೊರಕಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪಶಸ್ತಿ (1988), ಗೌಡಸಾರಸ್ವತ ಸಮಾಜದ ಪ್ರಶಸ್ತಿ (1991), ಬೆಂಗಳೂರಿನ ಸುಗಮಸಂಗೀತ ಅಕಾಡೆಮಿ ಹಾಗೂ ಸಾಧನಾ ಸಂಗೀತಶಾಲೆಯ ಸನ್ಮಾನ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1995), ಕೊಂಕಣಿ ಸುಗಮಸಂಗೀತ ಪಶಸ್ತಿ (1997) ಹಾಗೂ ಕರ್ನಾಟಕ ಸರ್ಕಾರ ನೀಡುವ ಸಂತ ಶಿಶುನಾಳ ಷರೀಫ್ ಪ್ರಶಸ್ತಿ (1998) ಲಭಿಸಿವೆ. (ಜಿ.ಎಂ.ಎಚ್.)

**ಅನುರೂಪ ಚಿತ್ರಣ :** ಒಂದು ನಿರ್ದೇಶಕ ವ್ಯವಸ್ಥೆಯಲ್ಲಿರುವ (ಕೊ ಆರ್ಡಿನೇಟ್ ಸಿಸ್ಟಮ್) ಬಿಂದುಗುಣವನ್ನು ಇನ್ನೊಂದು ನಿರ್ದೇಶಕ ವ್ಯವಸ್ಥೆಗೆ ಬಿಂಬಿಸುವ ಅಥವಾ ಚಿತ್ರಿಸುವ ಒಂದು ವಿಶೇಷ ಪರಿಕರ್ಮ (ಕನ್‌ಫಾರ್ಮಲ್ ಮ್ಯಾಪಿಂಗ್). ಭೂಮಿಯ ನಕ್ಷೆಯನ್ನು ತಯಾರಿಸುವ ಪ್ರಯತ್ನದಲ್ಲಿ ಈ ಸಮಸ್ಯೆ ತಲೆದೋರಿತು. ಪ್ರಸಿದ್ಧ ಗಣಿತಶಾಸ್ತ್ರಜ್ಞ ಹಿಪ್ಪಾರ್ಕಸ್ (ಪ್ರ.ಶ.ಪೂ. 140) ಮತ್ತು ಅನಂತರ ಬಂದ ಗಣಿತಜ್ಞರ ಪ್ರಯತ್ನಗಳ ಫಲವಾಗಿ ಘನಚಿತ್ರಣ ನಕ್ಷೆ (ಸ್ಟಿರಿಯೋಗ್ರಾಫಿಕ್ ಪ್ರೊಜೆಕ್ಷನ್), ಮರ್ಕೆಟರ್ ಪ್ರಕ್ಷೇಪಣಗಳಂಥ ವಿಧಾನಗಳು ಬಳಕೆಗೆ ಬಂದು ಜ್ಯಾಮಿತಿ ಬಹುವಾಗಿ ಬೆಳೆಯಿತು. ಇವು ಅನುರೂಪ ಚಿತ್ರಣಕ್ಕೆ ನಿದರ್ಶನಗಳು.

ಒಂದು ಸಮತಲದ ಮೇಲೆ ಭೂಮಿಯ ಮೇಲ್ಮೈಯ ಸಾಮಾನ್ಯ ಅನುರೂಪ ಚಿತ್ರಣವನ್ನು ತಯಾರಿಸಲು ಲ್ಯಾಂಬರ್ಟ್ ಪ್ರಯತ್ನಿಸಿದ (1772). ಮಿಶ್ರಚರ ಉತ್ಪನ್ನಗಳ ಸಿದ್ಧಾಂತಕ್ಕೂ (ಥಿಯೊರಿ ಆಫ್ ಕಾಂಪ್ಲೆಕ್ಸ್ ವೇರಿಯಬಲ್ಸ್) ಅನುರೂಪ ಚಿತ್ರಣಕ್ಕೂ ಇರುವ ಸಂಬಂಧವನ್ನು ಮೊದಲು ಗುರುತಿಸಿದವನು ಇವನೇ. ಒಂದು ಚಿತ್ರಣ ಅದರ ಅತಿಸೂಕ್ಷ್ಮ ಭಾಗಗಳಲ್ಲಿ ದತ್ತವಲಯಕ್ಕೆ ಸಮರೂಪವಾಗಿರುವಂತೆ, ಒಂದು ವಲಯದ ಭಾಗಗಳನ್ನು ಇನ್ನೊಂದು ವಲಯದ ಮೇಲೆ ಚಿತ್ರಿಸಬೇಕು. ಈ ಸಮಸ್ಯೆ ಬಿಡಿಸಿದರೆ ಒಂದು ಪಾರಿತೋಷಕ ಕೊಡುವುದಾಗಿ ಕೋಪನ್‌ಹೇಗನ್ನಿನ ವಿಜ್ಞಾನಸಂಘ ಪ್ರಕಟಿಸಿತು (1822). ಗಾಸ್ ಇದನ್ನು ಯಶಸ್ವಿಯಾಗಿ ಬಿಡಿಸಿದ (1825). ಅನುರೂಪ ಚಿತ್ರಣದ ಸಾಮಾನ್ಯ ಸಿದ್ಧಾಂತದ ಆರಂಭವನ್ನು ಇಲ್ಲಿ ಕಾಣುತ್ತೇವೆ. 1859ರಲ್ಲಿ ರೀಮಾನನೂ ಅನಂತರ ಶ್ವಾರ್ಸ್ ಮತ್ತು ಕ್ಲೈನರೂ ಈ ಭಾವನೆಯನ್ನು ಬೆಳೆಸಿದರು.

ಎರಡು ವಲಯಗಳ ಬಿಂದುಗಣಗಳಲ್ಲಿ ಒಂದು–ಒಂದು ಹೊಂದಾಣಿಕೆ ಇದ್ದು, ಒಂದರ ಒಂದು ಚಿಕ್ಕ ತ್ರಿಕೋನ ಮತ್ತು ಇನ್ನೊಂದರ ಮೇಲಿನ ಅದರ ಬಿಂಬ ತ್ರಿಕೋನ ಸುಮಾರಾಗಿ ಸಮರೂಪವಾಗಿದ್ದು, ಅವು ಅನಂತಸೂಕ್ಷ್ಮವಾಗಿ ಕಿರಿದಾದಂತೆ ಸರ್ವಸಮವಾದರೆ, ಆ ಪರಿಕರ್ಮದ ಹೆಸರು ಒಂದು ವಲಯದ ಮೇಲೆ ಇನ್ನೊಂದು ವಲಯದ ಅವಿಚ್ಛಿನ್ನ ಚಿತ್ರಣ. ಇದರ ಅರ್ಥವಿಷ್ಟು: ಅನುರೂಪ ಚಿತ್ರಣದಿಂದ $ABC$ ತ್ರಿಕೋನ $A'B'C'$ ತ್ರಿಕೋನವಾದರೆ ಅವೆರಡರ ಭುಜಗಳು ಅನುಪಾತವಾಗಿವೆ.

ಈ ತ್ರಿಕೋನಗಳು ಅನಂತಸೂಕ್ಷ್ಮವಾಗಿ ಕಿರಿದಾಗುವಾಗ ಪರಸ್ಪರ ಸರ್ವಸಮವಾಗುತ್ತವೆ. ಆದ್ದರಿಂದ ಅನುರೂಪ ಚಿತ್ರಣದಲ್ಲಿ ಒಂದು ದತ್ತವಲಯದ ಮೇಲಿರುವ ಯಾವುದೇ ಮುಚ್ಚಿದ ಚಿಕ್ಕ ವಕ್ರರೇಖೆ ಇನ್ನೊಂದು ದತ್ತವಲಯದ ಮೇಲೆ ಮೊದಲಿನದಕ್ಕೆ ಸುಮಾರಾಗಿ ಸಮರೂಪವಾಗಿರುವಂತೆ ಒಂದು ಮುಚ್ಚಿದ ಚಿಕ್ಕ ವಕ್ರರೇಖೆಯಾಗಿ ಚಿತ್ರಣಗೊಳ್ಳುವುದು.

**ಸಮತಲದ ಮೇಲೆ ಅನುರೂಪ ಚಿತ್ರಣ :** $(x, y)$ ಎಂಬ ಕಾರ್ಟೀಸಿಯನ್ ನಿರ್ದೇಶಕಗಳ ಸಹಾಯದಿಂದ ಸಮತಲದ ಮೇಲಿನ ಒಂದು ಬಿಂದುವನ್ನು ಸೂಚಿಸಬಹುದು. ಇದೇ ಬಿಂದುವನ್ನು $z = x + iy$, $(i = \sqrt{-1})$ಎಂಬ ಮಿಶ್ರ ಸಂಖ್ಯೆಯಿಂದಲೂ ನಿರ್ದೇಶಿಸಬಹುದು. ಈ ಸಮತಲದ ಒಂದು ಪ್ರದೇಶವನ್ನು $(u, v)$ ನಿರ್ದೇಶಕಗಳಿರುವ ಇನ್ನೊಂದು ಸಮತಲದ ಪ್ರದೇಶಕ್ಕೆ ಪರಿವರ್ತಿಸುವುದು ಎಂದರೆ ಅವೆರಡರ ಬಿಂದುಗಳ ನಡುವೆ $u = u\,(x, y)$, $v = v\,(x, y)$ ಎಂಬ ಒಂದು




ಚಿತ್ರ 1.




ಸಂಬಂಧವಿದೆ ಎಂದು ಅರ್ಥ. ಒಂದು–ಒಂದು ಚಿತ್ರಣದಲ್ಲಿ $(x, y)$ ಎಂಬ ವಿಭಿನ್ನ ಬಿಂದುಗಳು $(u, v)$ ಎಂಬ ವಿಭಿನ್ನ ಬಿಂದುಗಳಾಗಿ ಚಿತ್ರಣಗೊಳ್ಳುತ್ತವೆ; ಇದರ ವಿಲೋಮವೂ ನಿಜ. $x, y$ - ಸಮತಲದ ಒಂದು ಪ್ರದೇಶದ ಒಳಭಾಗವನ್ನು $uv$ - ಸಮತಲದ ಒಂದು ಪ್ರದೇಶದ ಒಳಭಾಗವಾಗಿ $u = u\,(x, y)$, $v = v\,(x, y)$ ಸಂಬಂಧಗಳ ಮೂಲಕ ಚಿತ್ರಿಸುವ ಒಂದು ಅವಿಚ್ಛಿನ್ನ, ಉತ್ಕ್ರಮಣೀಯ (ರಿವರ್ಸಿಬಲ್) ಬಿಂದು–ಬಿಂದು ಪರಿವರ್ತನೆ -$u\,(x, y)$, $v\,(x, y)$ ಉತ್ಪನ್ನಗಳಿಗೆ ಮೊದಲ ದರ್ಜೆಯ (ಫಸ್ಟ್ ಆರ್ಡರ್) ಅವಿಚ್ಛಿನ್ನ ನಿಷ್ಪನ್ನಗಳು (ಡಿರೈವೆಟಿವ್ಸ್) ಇದ್ದರೆ ಮತ್ತು ಈ ನಿಷ್ಪನ್ನಗಳು ಕೋಶಿ–ರೀಮಾನ್

ಸಮೀಕರಣಗಳನ್ನು (ಅಂದರೆ É ), ತಾಳಿಪಡಿಸಿದರೆ, ಮತ್ತು

ಹೀಗಾದರೆ ಮಾತ್ರ –– ಅನುರೂಪ ಚಿತ್ರಣವೆನ್ನಿಸುವುದು. $u + iv = f\,(x = iy)$ ಉತ್ಪನ್ನದ ವಿಶ್ಲೇಷಕವಾಗಿದ್ದು (ಅನಲಿಟಿಕ್) $f(x + iy)$ ಉತ್ಪನ್ನದ ಮಿಶ್ರನಿಷ್ಪನ್ನ ಶೂನ್ಯವಾದಾಗ $x, y \rightarrow (u, v)$ ಒಂದು ಅನುರೂಪ ಚಿತ್ರಣ ಎಂದೂ ಇದನ್ನು ಹೇಳಬಹುದು.




ಚಿತ್ರ 2.




$z^n$ ($n$ ಒಂದು ಧನಪೂರ್ಣಾಂಕ), $sinz$, $expz$, $logz$ ಮುಂತಾದ ಪ್ರಾಥಮಿಕ ಉತ್ಪನ್ನಗಳು ಒಂದು ಸಮತಲದ ಮೇಲಿನ ಅನುರೂಪ ಚಿತ್ರಣಕ್ಕೆ ಸ್ವಾರಸ್ಯಕರ ನಿದರ್ಶನಗಳು. ಉದಾಹರಣೆಗೆ, $w = u + iv = sinz = sin(x + iy)$ ಆಗಿರುವಾಗ $z$- ಸಮತಲದ

$x = c$ ಸರಳರೇಖೆಗಳು $w$- ಸಮತಲದಲ್ಲಿ $\frac{u^2}{sin^2 c} - \frac{v^2}{cos^2 c} = 1$ ಎಂಬ ಸಂನಾಭೀ ಅತಿಪರವಲಯಗಳಾಗಿಯೂ (ಕನ್‌ಫೋಕಲ್ ಹೈಪರ್ಬೋಲ) $z$- ಸಮತಲದ $y = d$ ಸರಳರೇಖೆಗಳು $w$- ಸಮತಲದಲ್ಲಿ $\frac{u^2}{cosh^2 d} + \frac{v^2}{sinh^2 d} = 1$ ಸಂನಾಭೀ ದೀರ್ಘವೃತ್ತಗಳಾಗಿಯೂ ಅನುರೂಪ ಚಿತ್ರಣಗೊಳ್ಳುವುವು.

$w = \frac{az + b}{cz + d}$, $a, b, c, d$ ಗಳು ವಾಸ್ತವ ಅಥವಾ ಮಿಶ್ರ ಸ್ಥಿರಾಂಕಗಳು ಮತ್ತು $ad - bc^1\,0$ ಎಂಬ ಸಂಬಂಧ $z$- ಸಮತಲದ ವೃತ್ತಗಳನ್ನು $w$- ಸಮತಲದಲ್ಲಿ ವೃತ್ತಗಳಾಗಿ (ವಿಕೃತರೂಪವಾದ ಸರಳರೇಖೆಯೂ ಇದರಲ್ಲಿ ಸೇರಿದೆ) ಪರಿವರ್ತಿಸುವ ಅನುರೂಪ ಚಿತ್ರಣವಾಗಿದೆ. ಇದೊಂದೇ ವೃತ್ತಗಳನ್ನು ವೃತ್ತಗಳಾಗಿಯೇ ಉಳಿಸಿಕೊಳ್ಳುವ ಪರಿವರ್ತನೆ. ಸರಳವಾಗಿ ರೂಪುಗೊಂಡಿರುವ ಯಾವುದೇ ಒಂದು ಪ್ರದೇಶವನ್ನು (ಅಂದರೆ ಮುಚ್ಚಿದ ಗಡಿಯಿರುವ ಮತ್ತು ಅದರೊಳಗೆ ರಂಧ್ರವಿಲ್ಲದಿರುವ) ಇನ್ನೊಂದು ಅಂಥ ಪ್ರದೇಶದ ಮೇಲೆ ಅನುರೂಪ ಚಿತ್ರಣ ಮಾಡಬಹುದೇ? ಎಂಬುದು ಅನುರೂಪ ಚಿತ್ರಣದ ಮುಖ್ಯ ಸಮಸ್ಯೆ. ರೀಮಾನ್ ಎಂಬ ಜರ್ಮನಿಯ ಗಣಿತಶಾಸ್ತ್ರಜ್ಞ ಸಮಸ್ಯೆಯ ಪರಿಶೀಲನೆ ನಡೆಸಿ (1851) ಅದರ ಬಿಡಿಸಿಕೆಗೆ ಸರಿಯಾದ ಹಾದಿಹಾಕಿದ. ಆದರೆ ಆಸ್ಗೂಡ್‌ನಿಂದ 1900ರಲ್ಲಿ ಈ ಸಮಸ್ಯೆಗೆ ಸರಳ ಮತ್ತು ನಿಖರ ಸಾಧನೆ ದೊರೆಯಿತು. (ಎಸ್.ಕೆ.ಎಲ್.)

**ಅನುರೂಪತೆ :** ಶಿಲಾಸ್ತರಗಳು ಅನುಕ್ರಮವಾಗಿ ಒಂದಾದ ಮೇಲೊಂದು ಕಂಡುಬರುವುದೇ ಅನುರೂಪತೆ (ಕನ್‌ಫಾರ್ಮಿಟಿ). ಈ ಕಾರಣ ಇವು ಒಂದು ನಿರ್ದಿಷ್ಟ ಭೂಕಾಲಮಾನದ ವಿವಿಧ ಹಂತಗಳ ಪ್ರತೀಕಗಳಾಗಿದ್ದು ಆ ಯುಗಗಳನ್ನು ಪ್ರತಿಬಿಂಬಿಸುತ್ತವೆ. ಅನುರೂಪತೆಯನ್ನು ತೋರುವ ಶಿಲಾಸಮುದಾಯದಲ್ಲಿ ವಯಸ್ಸಿನಲ್ಲಿ ಅತ್ಯಂತ ಹಳೆಯದಾದ ಶಿಲಾಸ್ತರ ತಳಭಾಗದಲ್ಲಿದ್ದು ಕ್ರಮೇಣ ಅದರ ಮೇಲೆ ಕಂಡುಬರುವ ಶಿಲಾಸ್ತರಗಳು ವಯಸ್ಸಿನಲ್ಲಿ ಕಿರಿಯವಾಗುತ್ತ ಕೊನೆಗೆ ಸಮುದಾಯದ ಮೇಲ್ಭಾಗದಲ್ಲಿ ಅತ್ಯಂತ ಕಿರಿಯಸ್ತರವನ್ನು ಕಾಣುತ್ತೇವೆ. ಸ್ತರಗಳ ನಡುವೆ ಯಾವಬಗೆಯ ಶೈಥಿಲ್ಯವೂ ಕಂಡುಬರುವುದಿಲ್ಲ.

ಇದನ್ನು ಸಾಮಾನ್ಯವಾಗಿ ಜಲಜಶಿಲಾಸಮೂಹಗಳಲ್ಲಿ ಸುಲಭವಾಗಿ ಗುರುತಿಸಬಹುದು. ಪ್ರತಿ ಪದರವೂ ಮೇಲಣ ಪದರಕ್ಕಿಂತ ಹಿರಿದಾಗಿಯೂ ಕೆಳಗಣ ಪದರಕ್ಕಿಂತ ಕಿರಿದಾಗಿಯೂ ಇರುತ್ತದೆ. ಇದನ್ನೇ ಅನುಸರಿಸಿ ಭೂ ಇತಿಹಾಸದ ಅತಿ ಮುಖ್ಯ ನಿಯಮವಾದ ಶಿಲಾಪೇರಿಕೆಯ ಅನುಕ್ರಮವನ್ನು (ಆರ್ಡರ್ ಆಫ್ ಸೂಪರ್‌ಪೊಸಿಷನ್) ರೂಪಿಸಲಾಗಿದೆ.




ಚಿತ್ರ–1

ಚಿತ್ರ 1ರಲ್ಲಿ ತೋರಿಸಿದಂತೆ $A$ಯಿಂದ $D$ರವರೆಗಿನ ಸ್ತರಗಳು ಒಂದು ನಿರ್ದಿಷ್ಟ ಭೂಕಾಲಮಾನಕ್ಕೆ ಸೇರಿದ ಅನುರೂಪಶಿಲೆಯವು. ನಡುವೆ ಯಾವ ತಡೆ ಅಥವಾ ಶೈಥಿಲ್ಯ ಕಂಡುಬರದೆ ಇವು ಏಕಪ್ರಕಾರವಾಗಿ ಸಾಗರತಳದಲ್ಲಿ ಉಂಟಾದುವು. ಇವುಗಳ ಸಂಯೋಜನೆ, ಕಣರಚನೆ ಮತ್ತು ಜೀವಾವಶೇಷಗಳನ್ನು ಅಧ್ಯಯನ ಮಾಡಿದಾಗ ಇವುಗಳ ಅನುರೂಪತೆ ಮತ್ತಷ್ಟು ಸ್ಪಷ್ಟವಾಗಿ ಗೋಚರವಾಗುತ್ತದೆ. ಅಂದರೆ ಈ ನಾಲ್ಕೂ ಸ್ತರಗಳು ಒಂದು ನಿರ್ದಿಷ್ಟ ಭೂಕಾಲಮಾನದ ನಾಲ್ಕು ವಿವಿಧಹಂತಗಳಲ್ಲಿ ಸಾಗರವೊಂದರ ತಳದಲ್ಲಿ ಯಾವ ತಡೆಯೂ ಇಲ್ಲದೆ ಏಕಪ್ರಕಾರವಾಗಿ ಒಂದಾದ ಮೇಲೊಂದು ಮೈದೋರಿದುವೆಂದು ಅರ್ಥ. ಅಲ್ಲದೆ ಈ ಕಾಲದುದ್ದಕ್ಕೂ ಆ ಭೂಪ್ರದೇಶದಲ್ಲಿ ಬಹುಮಟ್ಟಿಗೆ ಒಂದೇ ತೆರನಾದ ಅಥವಾ ಅಷ್ಟು ಏರುಪೇರಿಲ್ಲದ ಭೂಪರಿಸ್ಥಿತಿ ಇದ್ದಿತೆಂದೂ ಊಹಿಸಬಹುದು.

ಈ ಅನುರೂಪ ಶಿಲಾಸಮುದಾಯದಲ್ಲಿ ತಳಭಾಗದ $A$ಸ್ತರ ವಯಸ್ಸಿನಲ್ಲಿ ಅತ್ಯಂತ ಹಿರಿಯದು. $D$ ಸ್ತರ, ಶಿಲಾಪೇರಿಕೆಯ ಅನುಕ್ರಮ ಸಿದ್ಧಾಂತಕ್ಕನುಗುಣವಾಗಿ ಅತ್ಯಂತ ಕಿರಿಯದು. ಹೀಗೆಯೇ Bಸ್ತರ $A$ಗಿಂತ ಕಿರಿಯದಾಗಿಯೂ Cಗಿಂತ ಹಿರಿಯದಾಗಿಯೂ ಆಗುತ್ತದೆ. ಈ ಮೂಲಭೂತ ತತ್ತ್ವವನ್ನು ಭೂವಿಜ್ಞಾನಿಗಳು ವಿವಿಧ ಪ್ರದೇಶಗಳಲ್ಲಿರುವ ಶಿಲಾಸಮೂಹಗಳ ಅಧ್ಯಯನದಲ್ಲಿ ಅದರಲ್ಲೂ ಅವುಗಳ ವಯೋನಿರ್ಧಾರದಲ್ಲಿ ಉಪಯೋಗಿಸಿಕೊಂಡಿದ್ದಾರೆ. (ಬಿ.ಎಂ.ಜಿ.)

**ಅನುರೂಪತೆ :** ಒಂದು ನಿಶ್ಚಿತ ಅವಧಿಯಲ್ಲಿ ಶೇಖರವಾದ ಸ್ತರಗಳು ಸಾಮಾನ್ಯವಾಗಿ ಸಮಾನಾಂತರವಾಗಿರುತ್ತವೆ ಮತ್ತು ಮಟ್ಟಸವಾಗಿರುತ್ತವೆ. ಇವು ಆಮೇಲೆ ಬಾಗಿ ಮಡಿಕೆ ಮಡಿಕೆಯಾಗಿದ್ದು ಸ್ತರಭಂಗ ಮೊದಲಾದ ರಚನೆಗಳನ್ನು ತೋರಬಹುದು. ಸಮಾನಾಂತರ ಸ್ತರಗಳು ಅವು ಉತ್ಪನ್ನವಾದ ಜಲಾಶಯದಲ್ಲಿಯೇ ಮುಳುಗಿರುವವರೆಗೆ ವಿರೂಪಗೊಳ್ಳುವುದಿಲ್ಲ. ಅವು ಎತ್ತರಿಸಲ್ಪಟ್ಟು ಭೂಮಿಯ ಭಾಗವಾಗಿ ಸೇರಿದೊಡನೆ ಅವುಗಳ ತೇವಮಾನ, ಸವೆತ, ಕ್ಷಯ ಮೊದಲಾಗುತ್ತವೆ. ಬಹುಕಾಲದ ಮೇಲೆ ಅವುಗಳ ಮೇಲೆ ನೀರು ನುಗ್ಗಿ ಬಂದು ಹೊಸ ಶಿಲೆಗಳು ಶೇಖರವಾಗಬಹುದು. ಹೀಗೆ ಬೆಳೆಯುವ ಎರಡನೆಯ ಸ್ತರಗಳ ಸಮೂಹ, ಸವೆಯದೆ ಉಳಿದಿರುವ ಮೊದಲಿನ ಸ್ತರಗಳ ಸಮೂಹ

ಪರಸ್ಪರ ಅನನುರೂಪವಾಗಿವೆ. ಇವುಗಳನ್ನು ಬೇರ್ಪಡಿಸುವ ವಕ್ರವಲಯಕ್ಕೆ ಅನನುರೂಪತೆ (ಅನ್‌ಕನ್‌ಫಾರ್ಮಿಟಿ) ಎಂಬ ಹೆಸರಿದೆ. ಇದರ ವ್ಯಾಪ್ತಿ ಅತ್ಯಲ್ಪ ಪ್ರದೇಶಕ್ಕೆ ಸೀಮಿತಗೊಂಡಿದ್ದರೆ ಅದನ್ನು ಸ್ಥಳೀಯ ಅನನುರೂಪತೆಯೆಂದೂ ವಿಶಾಲಪ್ರದೇಶಕ್ಕೆ ಹಬ್ಬಿದ್ದರೆ ಅದನ್ನು ಪ್ರಾದೇಶಿಕ ಅನನುರೂಪತೆಯೆಂದೂ ಕರೆಯುತ್ತಾರೆ. ಬೇರ್ಪಡಿಸಿದ ಎರಡು ಸ್ತರಸಮೂಹಗಳ ಕಾಲಾಂತರಸೂಚಿ ಅನನುರೂಪತೆ.




ಚಿತ್ರ–2




ಚಿತ್ರ–3

ಅನನುರೂಪತೆಯಲ್ಲಿ ಎರಡು ವಿಧ: ಓರೆಯಾಗಿರುವ ಪದರಗಳ (ಟಿಲ್ಟೆಡ್ ಬೆಡ್ಸ್) ಮೇಲೆ ಅನನುರೂಪತೆ ವ್ಯಾಪಿಸಿ ಎರಡು ಸ್ತರಸಮೂಹಗಳನ್ನು ಪ್ರತ್ಯೇಕಿಸಿದರೆ ಅದಕ್ಕೆ ಅಸಾರೂಪ್ಯ (ನಾನ್‌ಕನ್‌ಫಾರ್ಮಿಟಿ) ಅಥವಾ ಕೋನೀಯ ಅನನುರೂಪತೆ (ಆ್ಯಂಗ್ಯುಲರ್ ಅನ್‌ಕನ್‌ಫಾರ್ಮಿಟಿ) ಎಂದು ಕರೆಯುತ್ತಾರೆ.

ಚಿತ್ರ 2ರಲ್ಲಿ ಕಾಣಿಸಿರುವ A ಮತ್ತು B ಸ್ತರಸಮೂಹಗಳು ಓರೆಯಾದ ಪದರಗಳ ಮೇಲಿವೆ. ಆದ್ದರಿಂದ ಇಲ್ಲಿರುವ ಅನನುರೂಪತೆ C ಅಸಾರೂಪ್ಯಕ್ಕೆ ನಿದರ್ಶನ. P ಪದರಗಳು ಪರಸ್ಪರ ಸಮಾನಾಂತರವಾಗಿರಬಹುದು. ಚಿತ್ರ 3ರಲ್ಲಿರುವ A ಮತ್ತು B ಸ್ತರಸಮೂಹಗಳನ್ನು ಬೇರ್ಪಡಿಸುವ ಅನನುರೂಪತೆಯ ಹೆಸರು ಅಸಂಗತಿ (ಡಿಸ್‌ಕನ್‌ಫಾರ್ಮಿಟಿ). (ಎ.ಎಸ್.ಎಸ್.ಐ.)

**ಅನುರೂಪಶ್ರೇಣಿಗಳು :** ಒಂದು ಸಂಯುಕ್ತಕ್ಕೂ ಅದರ ಪಕ್ಕದ ಸಂಯುಕ್ತಕ್ಕೂ ಅಣುಸೂತ್ರದಲ್ಲಿ ವ್ಯತ್ಯಾಸವಿರುವಂಥ ಸಾವಯವ ಸಂಯುಕ್ತಗಳ ಶ್ರೇಣಿಗಳು (ಹೊಮೊಲೋಗಸ್ ಸೀರೀಸ್). ಇದಕ್ಕೆ ಅತ್ಯಂತ ಸರಳನಿದರ್ಶನ, ಆಲ್ಕೇನ್ ಶ್ರೇಣಿ. ಈ ಶ್ರೇಣಿಗೆ ಸೇರಿದ ಸಂಯುಕ್ತಗಳನ್ನು ಆಲ್ಕೋನ್‌ಗಳೆಂದು ಕರೆಯುತ್ತಾರೆ. ಇವೆಲ್ಲವೂ ಹೈಡ್ರೋಕಾರ್ಬನ್‌ಗಳು. ಅಂದರೆ ಹೈಡ್ರೊಜನ್, ಕಾರ್ಬನ್‌ಗಳೆರಡೇ ಇರುವ ಸಂಯುಕ್ತಗಳು.

$CH_4$ ... ಮೀಥೇನ್
$CH_3$-$CH_3$ ... ಈಥೇನ್
$CH_3$- $CH_2$-$CH_3$ ... ಪ್ರೊಪೇನ್
$CH_3$-$CH_2$-$CH_2$-$CH_3$ ... ಬ್ಯೂಟೇನ್
$CH_3$-$CH_2$-$CH_2$-$CH_2$-$CH_3$ ... ಪೆಂಟೇನ್, ಇತ್ಯಾದಿ

ಆಲ್ಕೇನ್ ಶ್ರೇಣಿ ಹೊರತು ಎಲ್ಲ ಅನುರೂಪಶ್ರೇಣಿಗಳಿಗೂ ಒಂದು ವಿಶಿಷ್ಟ ಅಣ್ವಂಗವಿರುತ್ತದೆ (ರ‍್ಯಾಡಿಕಲ್). ಅಣ್ವಂಗವೆಂದರೆ ವಿಶಿಷ್ಟ ರಾಸಾಯನಿಕ ಗುಣಗಳುಳ್ಳ ಒಂದು ನಿರ್ದಿಷ್ಟ ಪರಮಾಣುಪುಂಜ. ಒಂದು ಅನುರೂಪಶ್ರೇಣಿಗೆ ಸೇರಿದ ಎಲ್ಲ ಸಂಯುಕ್ತಗಳಲ್ಲೂ ಒಂದೇ ಅಣ್ವಂಗವಿರುತ್ತದೆ. ಉದಾಹರಣೆಗೆ, ಅಣ್ವಂಗ ಆಲಿಫ್ಯಾಟಿಕ್ ಆಲ್ಕೊಹಾಲ್ ಶ್ರೇಣಿಯ ಎಲ್ಲ ಸಂಯುಕ್ತಗಳಲ್ಲೂ ಇರುತ್ತದೆ.

$CH_3OH$ ... ಮೀಥೈಲ್ ಆಲ್ಕೊಹಾಲ್
$CH_3$- $CH_2OH$ ... ಈಥೈಲ್ ಆಲ್ಕೊಹಾಲ್
$CH_3$-$CH_2$-$CH_2OH$ ... ಪ್ರೊಪೈಲ್ ಆಲ್ಕೊಹಾಲ್
$CH_3$-$CH_2$-$CH_2$-$CH_2OH$ ... ಬ್ಯೂಟೈಲ್ ಆಲ್ಕೊಹಾಲ್

ಹೀಗೆಯೇ ಆಲಿಫ್ಯಾಟಿಕ್ ಅಮೀನ್‌ಗಳಲ್ಲಿ $-NH_2$ ಅಣ್ವಂಗವೂ ಆಲ್ಡಿಹೈಡುಗಳಲ್ಲಿ – $CHD$ ಅಣ್ವಂಗವೂ ಕಾರ್ಬಾಕ್ಸಿಲಿಕ್ ಆಮ್ಲಗಳಲ್ಲಿ $COOH$ ಅಣ್ವಂಗವೂ ಇರುತ್ತವೆ.

ಒಂದು ಅನುರೂಪಶ್ರೇಣಿಗೆ ಸೇರಿದ ಸಂಯುಕ್ತಗಳೆಲ್ಲಕ್ಕೂ, ಒಂದು ಸಾಮಾನ್ಯ ಅಣುಸೂತ್ರವನ್ನು ಬರೆಯಬಹುದು. ಉದಾಹರಣೆಗೆ ಆಲ್ಕೇನ್‌ಗಳ ಅಣುಸೂತ್ರ $C_nH_{2n}+2$. ಆಲಿಫ್ಯಾಟಿಕ್ ಆಲ್ಕೊಹಾಲ್‌ಗಳ ಅಣುಸೂತ್ರ $C_nH_{2n+1}OH$. ಅಲ್ಲದೆ ಒಂದು ಅನುರೂಪ ಶ್ರೇಣಿಯ ಎಲ್ಲ ಸಂಯುಕ್ತಗಳಲ್ಲಿಯೂ ಒಂದೇ ಅಣ್ವಂಗವಿರುವುದರಿಂದ ಅವುಗಳ ರಾಸಾಯನಿಕ ವರ್ತನೆ ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ. ಆದರೆ ಬಣ್ಣ, ವಾಸನೆ, ದ್ರವಿಸುವ ಬಿಂದು, ಕುದಿಯುವ ಬಿಂದು ಮುಂತಾದ ಭೌತಿಕ ಗುಣಗಳನ್ನು ತೆಗೆದುಕೊಂಡರೆ ಶ್ರೇಣಿಯಲ್ಲಿ ಅಣುತೂಕ ಹೆಚ್ಚಾಗುತ್ತ ಹೋದಂತೆ, ಈ ಭೌತಿಕಗುಣಗಳು ಒಂದು ಕ್ರಮದಲ್ಲಿ ವ್ಯತ್ಯಾಸವಾಗುತ್ತ ಹೋಗುತ್ತವೆ. ಅನುರೂಪಶ್ರೇಣಿಗೆ ಸೇರಿದ ಸಂಯುಕ್ತಗಳ ಗುಣಗಳಲ್ಲಿ ಈ ರೀತಿಯ ಒಂದು ಕ್ರಮಬದ್ಧ ವ್ಯವಸ್ಥೆ ಇರುವುದರಿಂದ ಅವುಗಳ ಅಧ್ಯಯನ ಸುಗಮಗೊಳ್ಳುತ್ತದೆ.

ಅನುರೂಪಶ್ರೇಣಿಗೆ ಸೇರಿದ ಸಂಯುಕ್ತಗಳಲ್ಲಿ ಒಂದನ್ನು ಇನ್ನೊಂದರ ಅನುರೂಪಿ (ಹೊಮೊಲೋಗ್) ಎನ್ನುತ್ತಾರೆ. ಪ್ರೊಪೇನ್ ಈಥೇನಿನ ಮೇಲಿನ ಅನುರೂಪಿ; ಮೀಥೇನು ಈಥೇನಿನ ಕೆಳಗಿನ ಅನುರೂಪಿ. ಕೆಲವು ವೇಳೆ ಎರಡು ಸಂಯುಕ್ತಗಳು ಒಂದು ಅನುರೂಪ ಶ್ರೇಣಿಗೆ ಸೇರದಿದ್ದರೂ ಅವೆರಡಕ್ಕೂ $CH_2$ ವ್ಯತ್ಯಾಸವಿದ್ದರೆ ಒಂದನ್ನು ಇನ್ನೊಂದರ ಅನುರೂಪಿ ಎನ್ನುವುದುಂಟು. ಉದಾಹರಣೆಗೆ ಟಾಲ್ವೀನನ್ನು ($C_6H_5CH_3$) ಬೆನ್ಸೀನಿನ ($C_6H_6$) ಅನುರೂಪಿ ಎನ್ನುತ್ತಾರೆ. (ಜಿ.ಆರ್.ಎಲ್.)

**ಅನುವಂಶೀಯತೆ :** ಜೀವಿ ತಂದೆತಾಯಿಯರಿಂದ ಪಡೆಯುವ ಲಕ್ಷಣಗಳನ್ನು ನಿರ್ಧರಿಸುವ ಮೂಲಾಂಶಗಳು ಪರಿಸರದಲ್ಲಿ ಪ್ರಕಟಗೊಳ್ಳುವಿಕೆ (ಹೆರೆಡಿಟಿ; ಇನ್‌ಹೆರಿಟನ್ಸ್). ಸಸ್ಯಗಳ ಮತ್ತು ಪ್ರಾಣಿಗಳ ರಚನೆ ಮತ್ತು ಶಾರೀರಕ ಲಕ್ಷಣಗಳು ಒಂದು ಗೊತ್ತಾದ ಪರಿಸರದಲ್ಲಿ ಅನುವಂಶೀಯವರ್ತನೆಯಿಂದುಂಟಾಗುತ್ತವೆ ಎಂಬುದು ಸರ್ವವಿದಿತ. ಸಾವಯವ ಅನುವಂಶೀಯತೆ (ಆರ್ಗ್ಯಾನಿಕ್ ಇನ್‌ಹೆರಿಟನ್ಸ್) ಮತ್ತು ಅದು ಕಾರ್ಯಗತವಾಗಲು ಬೇಕಾದ ಪರಿಸರ ಒಂದಕ್ಕೊಂದು ಪೂರಕವಾದವೂ ಬೇರ್ಪಡಿಸಲಾಗದವೂ ಆಗಿವೆ. ಇವೆರಡರಲ್ಲಿ ಪ್ರತಿಯೊಂದರ ಸ್ವಲ್ಪ ವ್ಯತ್ಯಾಸವೂ ಒಂದೇ ರೀತಿಯಲ್ಲಿ ಜೀವಿಗಳಲ್ಲಿ ಮಾರ್ಪಾಟುಗಳನ್ನುಂಟುಮಾಡುವ ಶಕ್ತಿ ಹೊಂದಿರುತ್ತದೆ. ಆದ್ದರಿಂದ ಅನುವಂಶೀಯತೆ ಮತ್ತು ಪರಿಸರ, ಇವೆರಡರಲ್ಲಿ ಯಾವುದು ಮುಖ್ಯವಾದದ್ದು? ಯಾವುದು ಹೆಚ್ಚು ಪ್ರಭಾವಶಾಲಿಯಾದದ್ದು? ಎಂದು ಆಗಾಗ್ಗೆ ಕೇಳಿಬರುವ ಪ್ರಶ್ನೆಗಳು ಅರ್ಥವಿಲ್ಲದವುಗಳಾಗಿವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇವೆರಡೂ ವ್ಯಕ್ತಿ ವ್ಯಕ್ತಿಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಉಂಟುಮಾಡುವಲ್ಲಿ ಸಮಾನ ಪ್ರಾಧಾನ್ಯ ಪಡೆದಿವೆ. ಇವುಗಳ ಅನ್ಯೋನ್ಯ ಸಂಬಂಧ ಏನೇ ಇರಲಿ ಮೊದಲು ಅನುವಂಶೀಯತೆಯ ಮಹತ್ವ, ಕಾರ್ಯಗಳು ಮುಂತಾದವನ್ನೆಲ್ಲ ತಿಳಿದುಕೊಂಡು ಅನಂತರ ಪರಿಸರದ ವ್ಯತ್ಯಾಸಗಳಿಂದುಂಟಾಗುವ ಪರಿಣಾಮಗಳನ್ನು ಪರಿಶೀಲಿಸುತ್ತೇವೆ.

**ಅನುವಂಶೀಯತೆಯ ವಾದಗಳು :** ಬಹಳ ಕಾಲದಿಂದಲೂ ಅನುವಂಶೀಯತೆಯ ಬಗ್ಗೆ ವಾದಗಳು ಮೂಡುತ್ತಲೇ ಬಂದಿವೆ. ಇವುಗಳೆಲ್ಲದರ ಸತ್ಯಾಸತ್ಯತೆಗಳನ್ನು ಪರಿಶೀಲಿಸಲು ಅವನ್ನು ವರ್ಗೀಕರಿಸಿ, ಅವಲೋಕಿಸುವುದು ಅಗತ್ಯ. ಈ ವಾದಗಳನ್ನು ಏಕಲಿಂಗ ಅನುವಂಶೀಯತೆ ಮತ್ತು ದ್ವಿಲಿಂಗ ಅನುವಂಶೀಯತೆ ಎಂದು ಎರಡು ವಿಭಾಗಗಳಾಗಿ ವರ್ಗೀಕರಿಸಬಹುದು. ದ್ವಿಲಿಂಗ ಅನುವಂಶೀಯತೆಯಲ್ಲಿ ಹೆಣ್ಣು ಗಂಡುಗಳೆರಡೂ ತಮ್ಮ ಮುಂದಿನ ಪೀಳಿಗೆಯ ಅನುವಂಶೀಯತೆಯಲ್ಲಿ ಪಾಲುಗೊಳ್ಳುತ್ತವೆ. ಏಕಲಿಂಗ ಅನುವಂಶೀಯತೆಯಲ್ಲಿ ಹೆಣ್ಣು ಇಲ್ಲವೆ ಗಂಡು ಮಾತ್ರ ಪೂರ್ಣವಾಗಿ ಇಲ್ಲವೆ ಹೆಚ್ಚಾಗಿ ಭಾಗವಹಿಸುತ್ತದೆ. ಈ ಅಭಿಪ್ರಾಯಗಳು ಸಾಧುವಲ್ಲವಾದರೂ ಅವುಗಳ ಆಧಾರದ ಮೇಲೆ ವಂಶಾವಳಿತಳೀಕರಣ (ಪೆಡಿಗ್ರಿ ಬ್ರೀಡಿಂಗ್– ತಂದೆತಾಯಿಯರ ಸಂಬಂಧಿಗಳ ಮತ್ತು ಸಂಬಂಧಿಗಳ ಪೀಳಿಗೆಗಳನ್ನು ಅಭ್ಯಸಿಸಿ ಆ ಆಧಾರದ ಮೇಲೆ ತಳಿಯನ್ನು ಆಯ್ದು ಉತ್ತಮಗೊಳಿಸುವ ವಿಧಾನ) ಮತ್ತು ತತ್ಸಂಬಂಧದ ನಿಯಮಾವಳಿಗಳು ಅನೇಕ ದೇಶಗಳಲ್ಲಿ ರೂಪುಗೊಂಡಿವೆ. ಅನುವಂಶೀಯತೆಯಲ್ಲಿ ಎರಡು ಲಿಂಗಗಳೂ ಹೆಚ್ಚು ಕಡಿಮೆ ಸಮಾನಪ್ರಾಧಾನ್ಯಹೊಂದಿವೆ ಎಂಬುದನ್ನು ನಿರೂಪಿಸಲು ಸರಳಗಣಿತಶಾಸ್ತ್ರದ ಒಂದು ಸಾಮಾನ್ಯಪರೀಕ್ಷೆ ಶಕ್ಯವಾಗಿದೆ. ಆದರೂ ಅನೇಕ ಪ್ರತ್ಯೇಕವಾದಗಳು, ಅಭಿಪ್ರಾಯಗಳು ಇನ್ನೂ ಇದ್ದು ಅವು ಹಳೆಯ ಭಾವನೆಗಳ ಕಡೆಗೇ ಆಗಾಗ್ಗೆ ವಾಲುತ್ತವೆ. ಆದ್ದರಿಂದ ಇವೆರಡನ್ನೂ ಪ್ರತ್ಯೇಕಿಸಿ ವಿಮರ್ಶನಾದೃಷ್ಟಿಯಿಂದ ವಿವೇಚಿಸುವುದು ಅಗತ್ಯ.

ಕೆಲವು ಅನಿಶ್ಚಿತ ಮೂಲಘಟಕಗಳು ಅನುವಂಶೀಯ ಗುಣಗಳನ್ನು ತಂದೆತಾಯಿಗಳಿಂದ ಮುಂದಿನ ಪೀಳಿಗೆಗೆ ಬರುವಂತೆ ಮಾಡುತ್ತವೆ. ಈಗ ಈ ತರಹ ಮೂಲ ಘಟಕಗಳು ಅದೇ ಶರೀರದಲ್ಲಿ ಒಂದೆಡೆ ಸೇರಿದಾಗ ಬೆರಕೆ ಅಥವಾ ಮಿಶ್ರವಾಗುತ್ತವೆ ಇಲ್ಲವೆ, ಮೇಳೈಸುತ್ತವೆ ಅಥವಾ ಶಾಶ್ವತವಾಗಿ ಪ್ರತ್ಯೇಕವಾಗಿಯೇ ಇರುತ್ತವೆ. ಅಲ್ಲದೆ ಹೊಸ ಸಂಯೋಜನೆಯಲ್ಲಿ ಪುನರ್ವಿತರಣಾಶಕ್ತಿ ಪಡೆದಿರುತ್ತವೆ. ಇವೆರಡು ಅಭಿಪ್ರಾಯಗಳನ್ನು ಪ್ರತ್ಯೇಕಿಸಿ ವಿವೇಚಿಸಲೋಸುಗವೇ ಒಂದು ಸಾಮಾನ್ಯಪರೀಕ್ಷೆ ಇದೆ. ಎರಡು ವ್ಯಕ್ತಿಗಳ ಸಂಯೋಗವಾಗಿ, ಅವರ ಸಂತತಿಯಲ್ಲಿ ಮತ್ತೆ ಸಂತತಿಯಾಗಿ ಮತ್ತೆ ಅವರಲ್ಲಿ ಸೇರಿಕೆಯಾದಲ್ಲಿ ನಾವು ಮೂರು ಪೀಳಿಗೆಗಳನ್ನು (ತಂದೆತಾಯಿಗಳು, ಅವರ ಮಕ್ಕಳು ಮತ್ತು ಮೊಮ್ಮಕ್ಕಳು) ಅಭ್ಯಸಿಸಬಹುದು. ಈಗ ಮಕ್ಕಳು (ಎರಡನೆಯ ಪೀಳಿಗೆ) ಮೊಮ್ಮಕ್ಕಳಿಗಿಂತ ಹೆಚ್ಚು ಬದಲಾವಣೆಗಳನ್ನು (ವೇರಿಯಬಿಲಿಟೀಸ್) ಹೊಂದಿದ್ದರೆ ನಾವು ಸಮ್ಮಿಳಿತ ಅನುವಂಶೀಯತೆಯಲ್ಲಿದ್ದೇವೆ (ಬ್ಲೆಂಡಿಂಗ್ ಇನ್‌ಹೆರಿಟನ್ಸ್) ಎಂದು ಹೇಳಬಹುದು. ಏಕೆಂದರೆ, ಸಮ್ಮಿಳನ ಇಲ್ಲವೆ ಮಿಶ್ರಣವಾಗುವಿಕೆ ಯಾವಾಗಲೂ ಸಮರೂಪತೆ (ಯೂನಿಫಾರ್ಮಿಟಿ) ಕೊಡುತ್ತದೆ. ಆದರೆ ಮೊಮ್ಮಕ್ಕಳು ಮಕ್ಕಳಷ್ಟೇ ಅಥವಾ ಇನ್ನೂ ಹೆಚ್ಚು ಬದಲಾಯಿಸಿದ್ದಲ್ಲಿ ಅನುವಂಶೀಯತೆಯ ಮೂಲಘಟಕಗಳು ಪ್ರತ್ಯೇಕವಾಗಿಯೇ ಉಳಿದಿವೆ ಎಂಬುದು ವಿದಿತವಾಗುತ್ತದೆ. ಈ ಎರಡನೆಯ ಅಭಿಪ್ರಾಯ ಸತ್ಯವೆನಿಸಿದೆ. ಇದನ್ನು ಕಣೀಯ ಅನುವಂಶೀಯತೆ ಅಥವಾ ಪಾರ್ಟಿಕ್ಯುಲೇಟ್ ಅನುವಂಶೀಯತೆ ಎಂದು ಕರೆಯುತ್ತಾರೆ. ಈ ಅನುವಂಶೀಯ ಘಟಕಗಳು ಒಂದು ಪೀಳಿಗೆಯಿಂದ

ಮತ್ತೊಂದಕ್ಕೆ ಪ್ರತ್ಯೇಕವಾಗಿಯೇ ಬಂದರೂ ತಂದೆತಾಯಿಯರಿಂದ ಬಂದವುಗಳು ಪುನಃ ಒಂದುಗೂಡುವಾಗ ಹೊಸ ಸಂಯೋಜನೆಗಳು ಆಗಬಹುದು. ಏಕೆಂದರೆ ಅಂತರತಳೀಕರಣ ದಿಂದ (ಇನ್‌ಬ್ರೀಡಿಂಗ್) ಜನಿಸಿದ ಮೊಮ್ಮಕ್ಕಳು ಮಕ್ಕಳಷ್ಟೇ ಬದಲಾಯಿಸುವುದಿರಲಿ ಇನ್ನೂ ಹೆಚ್ಚಾಗಿಯೇ ಬದಲಾಯಿಸಿರುತ್ತಾರೆ.

ಇಷ್ಟೆಲ್ಲ ಸತ್ಯಾಂಶಗಳನ್ನು ಗಮನದಲ್ಲಿರಿಸಿಕೊಂಡು ಮುಂದಿನ ಪರಿಶೀಲನೆ ನಡೆಸಬಹುದು. ತಂದೆ ತಾಯಿಗಳಿಬ್ಬರೂ ಅವರ ಮಕ್ಕಳ ಅನುವಂಶೀಯ ಗುಣಗಳ ವಿಷಯದಲ್ಲಿ ಸಮಾನಪ್ರಾಧಾನ್ಯ ಹೊಂದಿರುವುದರಿಂದ ಒಂದು ಗೊತ್ತಾದ ಗುಣದ ನಿಯಂತ್ರಣಕ್ಕೆ ಇವರಲ್ಲಿ ಪ್ರತಿಯೊಬ್ಬರೂ ಒಂದೊಂದು ಅನುವಂಶೀಯ ಮೂಲಘಟಕವನ್ನು ನೀಡಿರುತ್ತಾರೆ.



**ಚಿತ್ರ 1. ಕರೆಂಟ್‌ಮಾತ್ ಕೀಟದಲ್ಲಿ ಬಣ್ಣದ ಅನುವಂಶೀಯತೆ ಪ್ರತ್ಯೇಕತೆಯ ಪ್ರಮಾಣ 1:2:1**

ಆದ್ದರಿಂದ ಪ್ರತಿ ಲಕ್ಷಣವೂ ಜೀನ್‌ಗಳು ಎಂಬ ಅನುವಂಶೀಯ ಘಟಕಗಳ ವರ್ತನೆಯಿಂದ ನಿರ್ಧರಿಸಲ್ಪಡಬೇಕು. ಈ ಎರಡರಲ್ಲಿ ಒಂದು ತಾಯಿಯಿಂದ ಮತ್ತೊಂದು ತಂದೆಯಿಂದ ಬಂದಿರುತ್ತವೆ. ಆದ್ದರಿಂದ ಈ ಜೀನ್‌ಗಳು ಜೊತೆಯಾಗಿಯೇ ಇರಬೇಕಾಗಿದೆ. ಇವನ್ನು ಅನ್ಯರೂಪಿಗಳು ಅಥವಾ ಪ್ರತಿರೂಪಿಗಳು (ಅಲೆಲೋಮಾರ್ಫ್) ಎಂದು ಕರೆಯುತ್ತಾರೆ. ಒಂದೇ ಪ್ರವೃತ್ತಿಯಿರುವ ಜೀನ್‌ಗಳಿಂದ ರಚನೆಗೊಂಡಿದ್ದರೆ ಸಮಜೋಡಿ (ಹೊಮೊಜೈಗಸ್) ಎಂದೂ ಒಂದೇ ಗುಣವನ್ನು ನಿಯಂತ್ರಿಸುವ ಬೇರೆ ಬೇರೆ ಪ್ರವೃತ್ತಿಯುಳ್ಳವುಗಳಿಂದ ರಚನೆಗೊಂಡಿದ್ದರೆ ಮಿಶ್ರಜೋಡಿ (ಹೆಟ್ರೊಜೈಗಸ್) ಎಂದೂ ಈ ಪ್ರತಿರೂಪಿಗಳನ್ನು ಕರೆಯುತ್ತಾರೆ. ಈ ವಿಚಾರ ನಾವು ಮಕ್ಕಳ ಕಡೆಯಿಂದ ತಂದೆತಾಯಿಗಳ ಕಡೆ ನೋಡಿದಾಗ ಸರಳವಾಗಿ ಕಂಡರೂ ಈ ಮಕ್ಕಳ ಕಡೆಯಿಂದ ಮೊಮ್ಮಕ್ಕಳ ಕಡೆ ನೋಡಿದಾಗಲೂ ಪ್ರತಿರೂಪಿಗಳನ್ನು ಜೀನ್‌ಜೊತೆಗಳಿಂದ ಮಾಡಲಾಗಿದೆ ಮತ್ತು ಅವು ತಂದೆತಾಯಿಗಳಿಂದ ಬೇರೆ ಬೇರೆಯಾಗಿಯೇ ಬಂದಿವೆ ಎಂದು ಹೇಳುವಂತಿರಬೇಕು. ಇದನ್ನು ಸ್ಪಷ್ಟಪಡಿಸುವಂತೆ ಪ್ರತಿರೂಪಿ ಜೊತೆಗಳಲ್ಲಿ ಒಂದೊಂದು ಪ್ರತಿರೂಪಿಯೂ ಅಂಡ ಹಾಗೂ ರೇತ್ರಾಣು ಉತ್ಪತ್ತಿಕಾಲದಲ್ಲಿ ಬೇರ್ಪಟ್ಟು ಪ್ರತಿ ಸಂಯೋಗಿಜೀವಕಣಕ್ಕೂ ಒಂದೊಂದು ಸೇರಿಕೊಂಡಿರುತ್ತದೆ. ಆದ್ದರಿಂದ ಪ್ರತಿ ಲಕ್ಷಣವೂ ಎರಡು ಅನುವಂಶೀಯ ಘಟಕವನ್ನವಲಂಬಿಸಿರುತ್ತದೆ; ಇವುಗಳಲ್ಲಿ ಒಂದೊಂದು ವಿವಿಧ ಗ್ಯಾಮೀಟ್‌ಗಳಲ್ಲಿರುತ್ತದೆ ಗರ್ಭಾಂಕುರವಾದಾಗ ಮತ್ತೆ ಬಂದು ಜೊತೆಗೂಡುತ್ತದೆ ಎಂಬ ತೀರ್ಮಾನಕ್ಕೆ ಬಂದಂತಾಯಿತು. (ಗ್ಯಾಮೀಟ್‌ಗೆ ಉದಾಹರಣೆ: ಅಂಡಾಣು, ರೇತ್ರಾಣು ಅಂದರೆ ಸ್ಪರ್ಮ್, ಓವ) ಅಂತೆಯೇ ಗ್ಯಾಮೀಟ್ ಉತ್ಪತ್ತಿಯ ಕಾಲದಲ್ಲಿ ಪ್ರತಿರೂಪಿ ಜೊತೆಗಳ ಒಂದೊಂದು ಘಟಕವೂ ಬೇರ್ಪಟ್ಟು ಪ್ರತ್ಯೇಕವಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿದಂತಾಗಿದೆ.

**ಮೆಂಡಲ್ ವಾದ :** *ಗ್ರೆಗರ್* ಮೆಂಡಲ್ (ಅರ್ಥಪೂರ್ಣವಾಗಿ) ಆಧುನಿಕ ತಳಿವಿಜ್ಞಾನದ ಪಿತಾಮಹ. ಅವನಿಗೆ ಪ್ರಪ್ರಥಮವಾಗಿ ಪ್ರತ್ಯೇಕತಾ ವಿಧಾನವನ್ನು (ಸೆಗ್ರಗೇಷನ್ ಪ್ರೋಸೆಸ್) ಊಹಿಸಿ ಸಾದರಪಡಿಸಿದ ಹಿರಿಮೆ ಸಲ್ಲುತ್ತದೆ. ಮೆಂಡಲ್ ಬ್ರನ್ ಪಟ್ಟಣದ ಒಂದು ಕ್ರೈಸ್ತ ದೇವಾಲಯದಲ್ಲಿ ಸಂನ್ಯಾಸಿಯಾಗಿದ್ದ. ದೇವಾಲಯದ ತೋಟದಲ್ಲಿ ಬಟಾಣಿಕಾಳುಗಳನ್ನು ಬೆಳೆಸಿ ಅನುವಂಶೀಯತೆಯ ವಿಷಯವಾಗಿ ಅನೇಕ ಪ್ರಯೋಗಗಳನ್ನು ನಡೆಸಿದ. ಅವನ ತಳಿವಿಜ್ಞಾನದ ವಿದ್ವಾಪ್ರೌಢಿಮೆ, ತಿಳಿವಳಿಕೆಗಳು ಅಂದಿನ ಕಾಲಕ್ಕಿಂತ ಬಹಳ ಮುಂದಿದ್ದುವು. ತನ್ನ ಪ್ರಯೋಗಗಳ ಸಾರಾಂಶವನ್ನು ಮೆಂಡಲ್ 1865ರಲ್ಲಿ ಬ್ರನ್‌ನಲ್ಲಿ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಆಶ್ರಯದಲ್ಲಿ ನಡೆದ ವೈಜ್ಞಾನಿಕ ಸಮ್ಮೇಳನದಲ್ಲಿ ಪ್ರಕಟಿಸಿದ. ಅವನ ಪ್ರಯೋಗ ಫಲಿತಾಂಶಗಳು ಒಂದು ಸಾಧಾರಣ ಪತ್ರಿಕೆಯಲ್ಲಿ ಬಂದುವು. ಅದು ಅಷ್ಟೇನೂ ಪ್ರಸಿದ್ಧವಾದದ್ದಲ್ಲದಿದ್ದರೂ ಅದರ ಪ್ರತಿಗಳು ಯುರೋಪಿನ ಅನೇಕ ದೇಶಗಳಿಗೆ ಹೋದವು. ಆದರೂ ಮೆಂಡಲ್‌ನ ಈ ಕಾರ್ಯ ಯಾರ ವಿಶೇಷ ಗಮನವನ್ನೂ ಸೆಳೆಯಲಿಲ್ಲ. ಅವನ ಕಾರ್ಯದ ಪ್ರಾಮುಖ್ಯವನ್ನು ಯಾರೂ ಅರಿಯಲಾಗಲಿಲ್ಲ. 1906ರಲ್ಲಿ ಅಂದರೆ ಮೆಂಡಲ್ ನಿಧನನಾದ 16 ವರ್ಷಗಳ ಅನಂತರ ಡವ್ರೀ, ಕಾರೆನ್ಸ್ ಮತ್ತು ಷರ್ಮಾಕ್ ಇವರು ಪ್ರತ್ಯೇಕವಾಗಿ ಮೆಂಡಲ್ ತತ್ವಗಳ ಫಲಿತಾಂಶಗಳನ್ನು ಕಂಡುಹಿಡಿದರು; ಮೆಂಡಲ್‌ನ ಕಾಣಿಕೆಯ ಮಹತ್ವವನ್ನು ಆಗ ಪ್ರಪಂಚ ಅರಿಯಿತು. ತತ್‌ಕ್ಷಣವೇ ಮೆಂಡಲ್ ಪ್ರಪಂಚಪ್ರಸಿದ್ಧ ವ್ಯಕ್ತಿಯಾದ.

ಪ್ರತ್ಯೇಕತೆಯ ಪರಿಣಾಮವನ್ನು ಸುಲಭವಾಗಿ ಊಹಿಸಿಕೊಳ್ಳಬಹುದು. ಸಾಮಾನ್ಯ ಕರೆಂಟ್‌ಮಾತ್ ಕೀಟದಲ್ಲಿ ಒಂದು ಜೊತೆ ಭಿನ್ನಲಕ್ಷಣಗಳನ್ನು ತೆಗೆದುಕೊಳ್ಳೋಣ. ಈ ಕೀಟದಲ್ಲಿ ಬಿಳಿ ಮತ್ತು ಹಳದಿ ಬಣ್ಣದವುಗಳಿವೆ. ಇವುಗಳಲ್ಲಿ ಬಿಳಿಬಣ್ಣ ಸಾಮಾನ್ಯ ಬಣ್ಣವಾಗಿದ್ದು ಒಂದು ಜೊತೆ ಪ್ರತಿರೂಪಿ ಜೀನ್‌ಗಳ ವರ್ತನೆಯಿಂದುಂಟಾಗುತ್ತದೆ. ಇವೆರಡನ್ನೂ ಸಾಂಕೇತಿಕವಾಗಿ $C^W$ ಎಂದು ಕರೆಯೋಣ. ಆದ್ದರಿಂದ ಸಮಜೋಡಿ ಪ್ರತಿರೂಪಿಗಳ ಜೊತೆ $C^W C^W$ ಆಗುತ್ತದೆ. ಹಳದಿ ಕರೆಂಟ್‌ಮಾತ್ ಒಂದು ಪೂರ್ವ ಮಾದರಿಯಾಗಿದ್ದು ಅದರ ಬಣ್ಣ ಸಮಜೋಡಿ ಪ್ರತಿರೂಪಿಗಳ $C^y C^y$ ಜೊತೆಗಳಿಂದುಂಟಾಗಿರುತ್ತದೆ. ಪ್ರತ್ಯೇಕತೆಯ ಕಾಲದಲ್ಲಿ (ಸೆಗ್ರೇಗೇಷನ್) ಬಿಳಿಬಣ್ಣವಿರುವ ಕೀಟ ತನ್ನ ಪ್ರತಿಸಂಯೋಗಿ ಜೀವಕಣಕ್ಕೂ $C^W$ ವನ್ನೇ ಕೊಟ್ಟಿರುತ್ತದೆ. ಅಂತೆಯೇ ಹಳದಿಬಣ್ಣದ ಕೀಟ $C^y$ಯನ್ನು ನೀಡಿರುತ್ತದೆ. ಈ ಬಿಳಿ ಮತ್ತು ಹಳದಿಬಣ್ಣದ ಕೀಟಗಳೆರಡೂ ಸಂಯೋಗ ಹೊಂದುವಂತೆ ಮಾಡಬಹುದು. ಈ ಸಂಯೋಗದಲ್ಲಿ ಪ್ರಪ್ರಥಮವಾಗಿ ಭಾಗವಹಿಸುವ ಗಂಡು ಮತ್ತು ಹೆಣ್ಣು ಕೀಟಗಳನ್ನು ತಂದೆ ತಾಯಿಗಳ ಪೀಳಿಗೆ ಅಥವಾ $P_1$ ಪೀಳಿಗೆ ಎಂದು ಕರೆಯುತ್ತಾರೆ. ಈ ಅಡ್ಡಹಾಯುವಿಕೆಯಲ್ಲಿ ಗಂಡು ಬೆಳ್ಳಗಿರಲಿ ಇಲ್ಲವೆ ಹಳದಿ ಬಣ್ಣದ್ದಾಗಿರಲಿ ಇಲ್ಲವೆ ಹೆಣ್ಣು ಕೀಟ ಹಳದಿಬಣ್ಣದ್ದೊ ಬಿಳಿಯದೂ ಇರಲಿ ಅದೇನೂ ಬಾಧಕ ವಿಚಾರವಾಗಿರುವುದಿಲ್ಲ. ಇದಾವುದರಲ್ಲೆ ಆಗಲಿ ಒಂದು ತರಹ ಕೀಟದಿಂದ ಬಂದ ಅಂಡಗಳನ್ನು ಇನ್ನೊಂದು ಬಣ್ಣದ ಕೀಟದಿಂದ ಬಂದ ರೇತ್ರಾಣುಗಳು ಗರ್ಭಾಂಕುರಗೊಳಿಸುವುದರಿಂದ ಮಿಶ್ರಜೋಡಿ ಪ್ರತಿರೂಪಿಗಳು (ಹೆಟ್ರೋಜೈಗಸ್ ಅಲೆಲೊವಮಾರ್ಫ್ಸ್, ಉದ್ಭವವಾಗುತ್ತವೆ. $C^W, C^y$. ಈ ಅಡ್ಡಹಾಯುವಿಕೆಯಿಂದ ಉಂಟಾದ ಮರಿಗಳು ಮೊದಲನೆಯ ತಳಿಸಂತಾನ ಅಥವಾ $F_1$ ಪೀಳಿಗೆಯವಾಗಿರುತ್ತವೆ. ಈ ಸಂತಾನ ತನ್ನ ಬಣ್ಣದಲ್ಲಿ ತಂದೆತಾಯಿಯರ ಬಣ್ಣವಾವುದನ್ನೂ ಹೋಲದೆ ಮಧ್ಯಸ್ಥ ತಿಳಿಹಳದಿ ಬಣ್ಣವನ್ನು ಹೊಂದಿರುತ್ತದೆ. ಇದಕ್ಕೆ ಬಿಳಿ ಮತ್ತು ಹಳದಿ ಬಣ್ಣ ನಿರ್ಧರಣಾಘಟಕಗಳು ಜೊತೆಗೂಡಿದ ವರ್ತನೆಯೇ ಕಾರಣ.

ಇಂಥ $F_1$ ಪೀಳಿಗೆಯ ಅಂತರತಳೀಕರಣದಿಂದ $F_2$ ಪೀಳಿಗೆಯ ಸಂತತಿ ಉತ್ಪತ್ತಿಯಾಗುತ್ತದೆ. ಈ $F_2$ ಸಂತತಿಯಲ್ಲಿ ಗಮನಿಸಬೇಕಾದ ಅನೇಕ ಸಂಗತಿಗಳಿವೆ. $F_1$ ಪೀಳಿಗೆಯಲ್ಲಿ ತಳೀಕರಣ ಪ್ರಯೋಗಕ್ಕೆ ಉಪಯೋಗಿಸಿರುವ ಎರಡು ಕೀಟಗಳಲ್ಲೂ ಮಿಶ್ರಜೋಡಿ ಪ್ರತಿರೂಪಿಗಳಾದ $C^W C^y$ ಗಳಿರುತ್ತವೆ. ಇದರಿಂದಲೇ ಇವುಗಳಿಂದ ಉತ್ಪತ್ತಿಯಾಗುವ ಅಂಡಗಳ ಮತ್ತು ರೇತ್ರಾಣುಗಳ ಅರ್ಧಭಾಗದಷ್ಟರಲ್ಲಿ $C^W$ ಮತ್ತು ಇನ್ನು ಅರ್ಧದಲ್ಲಿ $C^y$ ಇರುತ್ತವೆ. ಇದರಿಂದ ಗರ್ಭಾಂಕುರತೆಯ ಕಾಲದಲ್ಲೂ $C^W$ ಅಥವಾ $C^y$ ಇರುವ ಅಂಡಗಳೊಡನೆ $C^y$ ಅಥವಾ $C^W$ ಇರುವ ರೇತ್ರಾಣುಗಳು ಸೇರುವುದಕ್ಕೆ ಸಮಾನ ಅವಕಾಶ ಗಳಿರುತ್ತವೆ. ಅದ್ದರಿಂದಲೇ $F_2$ ಪೀಳಿಗೆಯಲ್ಲಿ $C^W C^W$ ಮತ್ತು $C^W$ $C^y$ ಶುದ್ಧ ಸಂತಾನಗಳ ಜೊತೆಗೆ ಮಿಶ್ರಸಂತಾನಗಳಾದ $C^W C^y, C^y$ $C^W$ಗಳೂ ಇರುತ್ತವೆ.



**ಚಿತ್ರ 2. ಕರೆಂಟ್‌ಮಾತ್ ಕೀಟದಲ್ಲಿ ಬಣ್ಣದ ಅನುವಂಶೀಯತೆ ಪ್ರತ್ಯೇಕತೆಯ ಪ್ರಮಾಣ 1:1**

ಈ ಫಲಿತಾಂಶಗಳು ಕಣೀಯ ಅನುವಂಶೀಯತೆಯ ನಿಯಮಗಳಿಗೆ ಬದ್ಧವಾಗಿದ್ದು ಸಮ್ಮಿಳಿತ ಅನುವಂಶೀಯತೆಗೆ ಪೂರ್ಣವಿರುದ್ಧವಾಗಿವೆ. ಎರಡು ಪ್ರತ್ಯೇಕ ಬಣ್ಣಗಳುಳ್ಳವನ್ನು ಅಡ್ಡಹಾಯಿಸಿದಾಗ ಒಂದೇ ತರಹದ $F_1$ ಪೀಳಿಗೆ ಉತ್ಪತ್ತಿಯಾಯಿತು. ಇವನ್ನು ಅಂತರ ತಳೀಕರಣಗೊಳಿಸಿದಾಗ ಬಂದ $F_2$ ಪೀಳಿಗೆ ಮೂರು ವಿಧದ ಕೀಟಗಳನ್ನು ಹೊಂದಿತ್ತು. ಅಂದರೆ ಅಂತರತಳೀಕರಣದಿಂದ ಬಂದ ಮೊಮ್ಮಕ್ಕಳು ($F_2$ ಪೀಳಿಗೆಯ ಕೀಟಗಳು) ಮಕ್ಕಳಿಗಿಂತ ($F_1$) ಹೆಚ್ಚು ಬದಲಾವಣೆಗಳನ್ನು ಹೊಂದಿವೆ ಎಂದಂತಾಯಿತು. ಈಗ ತಿಳಿಹಳದಿ ಬಣ್ಣವುಳ್ಳ ಹಾಗೂ ಮಿಶ್ರಜೋಡಿ ಪ್ರತಿರೂಪಿ ಜೀನ್‌ಗಳನ್ನು ಹೊಂದಿದ ($C^W C^y$) ಕೀಟವನ್ನು ಸಮಜೋಡಿ ಪ್ರತಿರೂಪ ಜೀನ್‌ಗಳಿರುವ ಕೀಟವೊಂದಕ್ಕೆ ಅಡ್ಡ ಹಾಯಿಸಿದಾಗ ಏನಾಗುತ್ತದೆ ಎಂದು ನೋಡೋಣ. $C^W C^y$ ಇರುವ ಕೆಂಪುಮಿಶ್ರ ಹಳದಿ ಬಣ್ಣದ ಕೀಟ ಸಮಸಂಖ್ಯೆಯಲ್ಲಿರುವ $C^W, C^y$

ಸಂಯೋಗಿ ಜೀವಕಣಗಳನ್ನು ಉತ್ಪತ್ತಿ ಮಾಡುತ್ತವೆ. ಆದರೆ ಸಮಜೋಡಿ (homozygous) ಪ್ರತಿರೂಪಿಗಳಿರುವ ಕೀಟ ಉತ್ಪತ್ತಿ ಮಾಡುವ ಎಲ್ಲ ಸಂಯೋಗಿ ಜೀವಕಣಗಳು ಒಂದೇ ರೀತಿಯವಾಗಿರುತ್ತವೆ. (ಎಲ್ಲವೂ $C^w$ ಇಲ್ಲವೆ $C^y$ ಆಗಿರುತ್ತವೆ).

ಆದ್ದರಿಂದ $F_1$ ಪೀಳಿಗೆ ಸಮಸಂಖ್ಯೆಯಲ್ಲಿ ಎರಡು ತರದ ಕೀಟಗಳನ್ನು ಹೊಂದಿರುತ್ತದೆ (ತಿಳಿಹಳದಿ ಮತ್ತು ಬಿಳಿಯದು ಇಲ್ಲವೇ ತಿಳಿ ಹಳದಿ ಮತ್ತು ಕಡು ಹಳದಿ–ಇದು ಯಾವ ಸಮಜೋಡಿ ಪ್ರತಿರೂಪಿ ಜೀನ್‌ಗಳಿರುವ ಕೀಟವನ್ನು ಅಡ್ಡಹಾಯಿಸಲು ಉಪಯೋಗಿಸಲಾಗಿದೆ ಎಂಬುದನ್ನು ಅವಲಂಬಿ

ಸಿರುತ್ತದೆ). ಇಲ್ಲಿ ಪ್ರತ್ಯೇಕತೆ ಎರಡು ವರ್ಗದ ಮರಿಗಳನ್ನು 1 : 1 ಪ್ರಮಾಣದಲ್ಲಿ ಉತ್ಪತ್ತಿಮಾಡಲು

ಅವಕಾಶಮಾಡಿಕೊಡುತ್ತದೆ. ಇಂಥ ಅಡ್ಡಹಾಯುವಿಕೆಗೆ ಹಿಮ್ಮೊಗ ಅಡ್ಡಹಾಯಿಕೆ (ಬ್ಯಾಕ್ ಕ್ರಾಸ್) ಎಂದು ಹೆಸರು. ಇದರಲ್ಲಿ ಯಾವಾಗಲೂ ಎರಡು ವಿಧದ ಕೀಟಗಳೂ ಸಮಪ್ರಮಾಣದಲ್ಲಿರುತ್ತವೆ.

**ಪ್ರಾಬಲ್ಯ (ಡಾಮಿನೆನ್ಸ್) :** ಇಲ್ಲಿ ಒಂದು ಸಣ್ಣ ತೊಡಕಾದ ಸಮಸ್ಯೆಯನ್ನು ಸೇರಿಸಬೇಕಾಗಿದೆ. ಕೆಂಪು ಮತ್ತು ನೇರಳೆಬಣ್ಣದ ಹೂಗಳನ್ನು ಬಿಡುವ ಬಟಾಣಿಗಳನ್ನು ನಾವು ಅಡ್ಡಹಾಯಿಸಿದರೆ $F_1$ ಪೀಳಿಗೆಯವೆಲ್ಲ ತಮ್ಮ ಹಿಂದಿನ ಪೀಳಿಗೆಯ ಒಂದು ಬಗೆಯ ಗಿಡದಂತೆ ನೇರಳೆಬಣ್ಣದ ಹೂಗಳನ್ನು ಹೊಂದಿರುತ್ತವೆ. ಈ $F_1$ ಪೀಳಿಗೆಯವನ್ನು (ಮಿಶ್ರಜೋಡಿ ಪ್ರತಿರೂಪಿಗಳಿರುವವು) ಅಂತರತಳೀಕರಣಗೊಳಿಸಿದಾಗ ಉತ್ಪತ್ತಿಯಾಗುವ ಪೀಳಿಗೆಯಲ್ಲಿ 3 : 1 ಪ್ರಮಾಣದಲ್ಲಿ ನೇರಳೆ ಮತ್ತು ಕೆಂಪು ಬಣ್ಣವಿರುತ್ತವೆ. ಇದನ್ನು ನೋಡಿದ ತತ್‌ಕ್ಷಣವೇ ಕೆಲವರು ಈ ಪ್ರಮಾಣ ಮಾರ್ಪಾಟು ಹೊಂದಿದ 1 : 2 : 1 ಪ್ರಮಾಣವಿರಬಹುದು ಎಂದು ಅನುಮಾನ ಪಡಬಹುದು. ಇಲ್ಲಿ ಮಿಶ್ರಜೋಡಿ ಪ್ರತಿರೂಪಿಗಳಿರುವ ನೇರಳೆಬಣ್ಣದವುಗಳಿಂದ ಪ್ರತ್ಯೇಕಿಸಲಾಗುವುದಿಲ್ಲ. ಇದನ್ನು ಪರಿಶೀಲಿಸಿ ಪರೀಕ್ಷಿಸಲು ನಾವು $F_2$ ಪೀಳಿಗೆಯ ನೇರಳೆಬಣ್ಣದ ಅನೇಕ ಗಿಡಗಳನ್ನು ಕೆಂಪು ಹೂಬಿಡುವ ಗಿಡಗಳೊಡನೆ ಅಡ್ಡಹಾಯಿಸಬಹುದು. ಆಗಲೂ ಕೂಡ 1/3 ಭಾಗ ಬರಿ ನೇರಳೆಬಣ್ಣವನ್ನೂ ಮತ್ತು ಉಳಿದ 2/3 ಭಾಗದವು 1 ನೇರಳೆ ಮತ್ತು 1 ಕೆಂಪು–ಈ ಸಮಪ್ರಮಾಣದಲ್ಲಿ ಉತ್ಪತ್ತಿಮಾಡುತ್ತವೆ. ಆದ್ದರಿಂದ ಸ್ಪಷ್ಟವಾಗಿಯೇ $F_2$ ಪೀಳಿಗೆಯ ಎಲ್ಲ ನೇರಳೆ ಬಣ್ಣದವುಗಳ ದೇಹಪ್ರಕೃತಿ (ಕಾನ್‌ಸ್ಟಿಟ್ಯೂಷನ್) ಒಂದೇ ತೆರನಾಗಿರುವುದಿಲ್ಲ. ಇವುಗಳಲ್ಲಿ 1/3 ಭಾಗ ಸಮಜೋಡಿಗಳನ್ನು ಹೊಂದಿದ್ದು ಕೆಂಪಿನವುಗಳೊಡನೆ ಅಡ್ಡಹಾಯಿಸಿದಾಗ ಮಿಶ್ರಜೋಡಿಗಳುಳ್ಳ ನೇರಳೆಬಣ್ಣದ ಹೂಗಳುಳ್ಳ ಗಿಡಗಳನ್ನೇ ಉತ್ಪತ್ತಿಮಾಡುತ್ತವೆ. ಆದರೆ ಉಳಿದ 2/3 ಭಾಗದವುಗಳು ಮಿಶ್ರಜೋಡಿಗಳಾಗಿದ್ದು ಕೆಂಪಿನವುಗಳೊಡನೆ ಇವುಗಳ ಅಡ್ಡಹಾಯುವಿಕೆ ಬ್ಯಾಕ್‌ಕ್ರಾಸ್‌ನಂತಿದ್ದು ಇದರಲ್ಲಿ ಮಿಶ್ರಜೋಡಿಗಳುಳ್ಳ ನೇರಳೆಯವು ಮತ್ತು ಕೆಂಪುಹೂಬಿಡುವ ಸಮಜೋಡಿಯುಳ್ಳ ಬಟಾಣಿ ಗಿಡಗಳು 1 : 1 ಪ್ರಮಾಣಗಳಲ್ಲಿ ಉತ್ಪತ್ತಿಯಾಗುತ್ತವೆ.

ಈ ಪ್ರಸಂಗದ ಮುಖ್ಯಗುಣವಾಗಿ ಮಿಶ್ರಜೋಡಿಗಳಲ್ಲಿ ಉತ್ಪತ್ತಿಯಾಗುವ ನೇರಳೆಬಣ್ಣದ ಪುಷ್ಪವರ್ಣವನ್ನು ಪ್ರಬಲಗುಣ (ಡಾಮಿನೆಂಟ್) ಎಂದೂ ಮಿಶ್ರಜೋಡಿಯುಳ್ಳ ಗಿಡದಲ್ಲಿ ಅಡಗಿರುವ, ತಡೆಹಿಡಿಯಲ್ಪಟ್ಟಿರುವ ಕೆಂಪುಬಣ್ಣದ ಗುಣವನ್ನು ಅಬಲಗುಣ (ರಿಸೆಸಿವ್) ಎಂದೂ ಕರೆಯುತ್ತಾರೆ. ಪ್ರಾಬಲ್ಯದ ಈ ಚಮತ್ಕಾರ ಮೆಂಡಲ್‌ನ ಅನುವಂಶೀಯತೆಯಲ್ಲಿ ಚಿಕ್ಕದಾದರೂ ಅತಿ ಪ್ರಾಮುಖ್ಯವಿರುವ ವಿಷಯ.

ಸ್ವತಂತ್ರ ವಿಂಗಡನೆ (ಇಂಡಿಪೆಂಡೆಂಟ್ ಅಸಾರ್ಟ್‌ಮೆಂಟ್): ಒಂದು ಜೊತೆ ಪ್ರತಿರೂಪಿಗಳ ವರ್ತನೆ ಇತರ ಪ್ರತಿರೂಪಿಗಳ ವರ್ತನೆಯಿಂದ ಸ್ವತಂತ್ರವಾಗಿರುತ್ತದೆ ಎಂದು ಮೆಂಡಲ್ ಹೇಳಿದ್ದಾನೆ. ಮೆಂಡಲ್‌ನ ಈ ಸೂತ್ರವನ್ನು ನಿರೂಪಿಸಲು ಮೊಲದಲ್ಲಿ ಎರಡುಜೊತೆ ಪ್ರತಿರೂಪಿಗಳ ವರ್ತನೆಯನ್ನು ಅಭ್ಯಸಿಸಬಹುದು. ಈ ಮೊಲಗಳಲ್ಲಿ ಕಪ್ಪುಬಣ್ಣಕ್ಕಿಂತ ಸಾಮಾನ್ಯವರ್ಣವಾದ ಕಂದುಬಣ್ಣದ್ದು ಪ್ರಾಬಲ್ಯ ಹೊಂದಿರುತ್ತದೆ. ಮೋಟು ತುಪ್ಪಳವಿರುವುದು ಅಂಗೋರ ತುಪ್ಪಳದ ಮೇಲೆ ಪ್ರಾಬಲ್ಯಹೊಂದಿರುತ್ತದೆ. ಒಂದು ಸಾಮಾನ್ಯ ಮೊಲವನ್ನು (ಕಂದು ಮತ್ತು ಮೋಟುತುಪ್ಪಳವುಳ್ಳದ್ದು) ಕಪ್ಪು ಅಂಗೋರ ತುಪ್ಪಳವಿರುವ ಮೊಲದೊಡನೆ ಅಡ್ಡಹಾಯಿಸಿದಾಗ ಎಲ್ಲ ಮರಿಗಳೂ $(F_1)$ ಸಾಮಾನ್ಯ ಮೊಲಗಳಂತೆಯೇ ಇರುತ್ತವೆ. ಆದರೆ ಈ $F_1$ ಸಂತತಿಯ ಮೊಲಗಳನ್ನೇ ಅಂತರತಳೀಕರಣಗೊಳಿಸಿದಾಗ ಕಪ್ಪು ಮತ್ತು ಮೋಟು ಕೂದಲಿನ ಗುಣಗಳು ಮೋಟು ತುಪ್ಪಳ ಮತ್ತು ಅಂಗೋರದಂತೆಯೇ 3 : 1 ಪ್ರಮಾಣದಲ್ಲಿ ಪ್ರತ್ಯೇಕತೆ ಹೊಂದುತ್ತವೆ. ಇವೆರಡು ಪ್ರಮಾಣಗಳೂ ಸ್ವತಂತ್ರವಾಗಿಯೇ ಇರುತ್ತವೆ. ಆದ್ದರಿಂದ $F_2$ ಪೀಳಿಗೆಯಲ್ಲಿ 9 : 3 : 3 : 1 ಪ್ರಮಾಣವಿರುತ್ತದೆ. ಇವುಗಳಲ್ಲಿ 9 ಕಂದುಬಣ್ಣದ ಗಿಡ್ಡ ತುಪ್ಪಳದವುಗಳೂ ಅಂಗೋರಗಳೂ 3 ಕಂದುಬಣ್ಣದ ಅಂಗೋರಗಳೂ 3 ಕಪ್ಪುಬಣ್ಣದ ಮೋಟು ತುಪ್ಪಳ ಹೊಂದಿದವುಗಳೂ 1 ಕಪ್ಪು ಅಂಗೋರವೂ ಇರುತ್ತವೆ. ಆದ್ದರಿಂದ ಎರಡೂ ಪ್ರಬಲ ಗುಣಗಳಿರುವ ಪ್ರಾಣಿಗಳು ಸಾಮಾನ್ಯ. ಆದರೆ ಎರಡೂ ದುರ್ಬಲ ಇಲ್ಲವೆ ಅಪ್ರಬಲಗುಣಗಳುಳ್ಳವುಗಳು ಬಹಳ ಕಡಿಮೆ ಪ್ರಮಾಣದಲ್ಲಿರುತ್ತವೆ. ಇವೆರಡೂ ಇವುಗಳ ಅಜ್ಜಂದಿರುಗಳ ವಿಧದವೇ ಆಗಿರುತ್ತವೆ. ಆದ್ದರಿಂದ ಇವನ್ನು ಪುನಃ ಸಂಯೋಗವಾಗದ ವರ್ಗದವು (ನಾನ್‌ಡಿಕಾಂಬಿನೇಷನ್ ಕ್ಲಾಸ್) ಎಂದು ಕರೆಯುತ್ತಾರೆ. ಆದರೆ ಈ ಸಂಯೋಜನೆಗಳೇ (ಕಾಂಬಿನೇಷನ್ಸ್) ಹೊಸರೀತಿಯಲ್ಲಿ ಪುನಃ ಸಂಯೋಜನೆ ಹೊಂದಿ ಕಪ್ಪು ಮೋಟು ತುಪ್ಪಳ ಮತ್ತು ಕಪ್ಪು ಅಂಗೋರ ವಿಧಗಳು ಉತ್ಪತ್ತಿಯಾಗುವುದಕ್ಕೆ ಅವಕಾಶ ಮಾಡಿಕೊಟ್ಟಿವೆ. ಇವನ್ನು ಪುನರ್‌ಸಂಯೋಜನೆಗಳು (ರಿಕಾಂಬಿನೇಷನ್ಸ್) ಎಂದು ಕರೆಯುತ್ತಾರೆ.

ಎರಡು ಸೂತ್ರಗಳ ಮೂಲಕ ಮೆಂಡಲ್ ತನ್ನ ಪ್ರಯೋಗಗಳ ಸಾರಾಂಶವನ್ನೇ ಕೊಟ್ಟಿದ್ದಾನೆ. ಇದರಲ್ಲಿ ಮೊದಲನೆಯದು ಹಿಂದೆಯೇ ತಿಳಿಸಿದಂತೆ ಪ್ರತ್ಯೇಕತೆಯ ನಿಯಮ (ಲಾ ಆಫ್ ಸೆಗ್ರೇಗೇಷನ್). ಎರಡನೆಯದು ಸ್ವತಂತ್ರವಿಂಗಡನೆಯ ನಿಯಮ (ಲಾ ಆಫ್ ಇಂಡಿಪೆಂಡೆಂಟ್ ಅಸಾರ್ಟ್‌ಮೆಂಟ್). ದುರದೃಷ್ಟವಶಾತ್ ಮೆಂಡಲ್ ಈ ನಿಯಮವನ್ನು ಬರೆದಾಗ ಜೀನ್‌ಗಳು ಹೇಗೆ ವರ್ಗಾವಣೆಯಾಗುವುವೆಂಬ ವಿಚಾರವಾಗಲಿ ಪ್ರತ್ಯೇಕತೆ ಹೇಗೆ ಆಗುತ್ತದೆ ಎಂಬುದರ ಸ್ಪಷ್ಟಕಲ್ಪನೆಯಾಗಲಿ ಇರಲಿಲ್ಲ. ಅವನ ಕಾರ್ಯವನ್ನು ಪುನಃ ಕಂಡುಹಿಡಿದು ಅದರ ಮಹತ್ತ್ವವನ್ನು ಕಂಡುಕೊಳ್ಳುವ ಮೊದಲೇ ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರಕಿದ್ದು ನಿಜಕ್ಕೂ ಒಂದು ಪ್ರಶಂಸನಾರ್ಹ ಸಂಗತಿ. ಈ ಮಾಹಿತಿಗಳ ಸಂಕ್ಷಿಪ್ತವಿವರಣೆಗಳನ್ನು ಇಲ್ಲಿ ಕೊಡಬಹುದು.



ಚಿತ್ರ 3. ಅಡ್ಡಹಾಯಿಕೆಗಳ ವಿನ್ಯಾಸ

ವರ್ಣತಂತುಗಳು (ಕ್ರೋಮೋಸೋಮ್ಸ್) ಮತ್ತು ಜೀನ್‌ಗಳು: ಪ್ರತಿ ನ್ಯೂಕ್ಲಿಯಸಿನಲ್ಲೂ ಸೂಕ್ಷ್ಮದರ್ಶಕದಲ್ಲಿ ನೋಡಬಹುದಾದ ಕೆಲವು ವರ್ಣತಂತುಗಳಿರುತ್ತವೆ. ಈ ವರ್ಣತಂತುಗಳ ಆಕಾರ ಅವಿರುವ ಸ್ಥಿತಿಗಳನ್ನು ಅವಲಂಬಿಸಿದ್ದರೂ ಅವುಗಳ ಸಂಖ್ಯೆ ಒಂದು ಪ್ರಭೇದದ ಪ್ರಾಣಿಗಳಲ್ಲೆಲ್ಲ ನಿಖರವಾಗಿರುತ್ತದೆ. ದೇಹದ ಪ್ರತಿಯೊಂದು ಜೀವಕಣದಲ್ಲೂ ಅವು ಜೋಡಿಗಳಾಗಿ ಇರುತ್ತವೆ. ಸಂಯೋಗಿ ಜೀವಕಣಗಳು (ಗ್ಯಾಮೀಟ್ಸ್) ಉತ್ಪತ್ತಿಯಾಗುವ ಕಾಲದಲ್ಲಿ ಈ ಸಮಜೋಡಿಗಳ ವರ್ಣತಂತುಗಳು ಬೇರ್ಪಟ್ಟು ಪ್ರತ್ಯೇಕತೆ ಹೊಂದಿರುತ್ತವೆ. ಆದ್ದರಿಂದ ಸಂಯೋಗಿ ಜೀವಕಣಗಳಲ್ಲಿ ಯಾವಾಗಲೂ ಜೀವಿಯ ಒಟ್ಟು ವರ್ಣತಂತುಗಳ ಸಂಖ್ಯೆಯ ಅರ್ಧದಷ್ಟು ವರ್ಣತಂತುಗಳು ಮಾತ್ರ ಇರುತ್ತವೆ. ಅಂಡ ಮತ್ತು ವೀರ್ಯಾಣುಗಳು ಗರ್ಭಾಂಕುರವಾಗುವಾಗ ಅಂಡವೀರ್ಯಜಂತುವಿನೊಡನೆ ಸಂಯೋಗಹೊಂದಿದ ಮೇಲೆ ಮೊದಲಿನ ಒಟ್ಟು ವರ್ಣತಂತುಗಳ ಸಂಖ್ಯೆಯೇ ಸ್ಥಾಪಿತವಾಗುತ್ತದೆ.

ಮೆಂಡಲ್‌ನ ನಿಯಮಗಳನ್ನು ಪುನಃ ಪರಿಶೀಲಿಸಿದಾಗ ನ್ಯೂಕ್ಲಿಯಸಿನಲ್ಲಿರುವ ಜೀನ್‌ಗಳ ವರ್ತನೆ ಹಾಗೂ ವರ್ಣರೇಖೆಗಳ ವರ್ತನೆ, ಇವುಗಳಿಗಿರುವ ಸಮಾನಾಂತರತೆ ಕಳೆದು ಕೊಳ್ಳದಷ್ಟು ಸ್ಪಷ್ಟವಾಗಿತ್ತು. ಸಟ್ಟನ್ ಎಂಬ ವಿಜ್ಞಾನಿ ಇದಾದ ಒಂದು ವರ್ಷದಲ್ಲಿ ಈ ವಿಷಯದ ಬಗ್ಗೆ ಎಲ್ಲರ ಗಮನ ಸೆಳೆದು ನಾವು ಈಗ ತಿಳಿದಿರುವಂತೆ ವರ್ಣತಂತುಗಳು ಅನುವಂಶೀಯ ವಸ್ತುವನ್ನು ಒಯ್ಯುವ ವಾಹನಗಳು ಎಂದು ಸ್ಪಷ್ಟವಾಗಿ ಸೂಚಿಸಿದ. ಜೀನ್‌ಗಳು ಮತ್ತು ವರ್ಣತಂತುಗಳು ಬೇರೆ ಬೇರೆಯಾಗುತ್ತವೆ. ಆದ್ದರಿಂದ ಒಟ್ಟು ಸಂಖ್ಯೆಯ ಅರ್ಧ ಅಂದರೆ ಜೋಡಿಗೆ ಒದೊಂದರಂತೆ ಪ್ರತಿ ಸಂಯೋಗಿ ಜೀವಕ್ಕೂ ವರ್ಣತಂತುಗಳು ಬಂದಿರುತ್ತವೆ. ಒಟ್ಟು ಜೀನ್ ಹಾಗೂ ವರ್ಣತಂತುಗಳ ಸಂಖ್ಯೆಯ ಸಹಜಸ್ಥಿತಿ ಗರ್ಭಾಂಕುರತೆಯಿಂದ ಪೂರ್ಣವಾಗುತ್ತದೆ.

ಲಿಂಕೇಜ್ ಮತ್ತು ಅಡ್ಡಹಾಯುವಿಕೆ: ವರ್ಣತಂತುಗಳಲ್ಲಿ ಜೀನ್‌ಗಳಿರುವುದರಿಂದ ಪ್ರತಿ ವರ್ಣತಂತುವಿನಮೇಲೂ ಅನೇಕ ಜೀನ್‌ಗಳಿರಬಹುದು ಎಂಬುದು ಸೂಚ್ಯಸಂಗತಿ. ಒಂದೇ ಈ ವರ್ಣತಂತುವಿನ ಮೇಲಿರುವ ಜೀನುಗಳು ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ. ಮತ್ತು ಈ ಜೀನ್‌ಗಳು ತಂದೆತಾಯಿಯರಿಂದ ಮುಂದಿನ ಸಂತತಿಗೆ ಒಟ್ಟಾಗಿ ಸಾಗಿಸಲ್ಪಡುತ್ತವೆ. ಜೀನ್‌ಗಳ ಈ ಸಾಹಚರ್ಯೆಯ ಹೆಸರು ಲಿಂಕೇಜ್. 1909ರಲ್ಲಿ ಟಿ.ಎಚ್. ಮೋರ್ಗನ್ ಅಡ್ಡಹಾಯುವಿಕೆಯ ಸಿದ್ಧಾಂತವನ್ನು ಮಂಡಿಸಿದ. ಅವನ ಹೇಳಿಕೆಯ ಪ್ರಕಾರ ಒಂದೇ ವರ್ಣರೇಖೆಯ ಬೇರೆ ಬೇರೆ ಜಾಗಗಳಲ್ಲಿ *A* ಮತ್ತು *B* ಗಳೆಂಬ ಎರಡು ಜೀನ್‌ಗಳಿದ್ದರೆ ಅವು ಸಾಮಾನ್ಯವಾಗಿ ಅನುಗತವಾಗಿ ಬರುವ ಕೋಶಗಳ ಒಂದೇ ವರ್ಣತಂತುಗಳಲ್ಲೇ ಒಟ್ಟಾಗಿ ಇರುತ್ತವೆ. ಆದರೆ ಕೆಲವುವೇಳೆಗಳಲ್ಲಿ ವರ್ಣತಂತು ಒಡೆಯುವಿಕೆ ಮತ್ತು ಪುನರ್ ಜೋಡಣೆಗಳ ಪರಿಣಾಮದಿಂದ ಎರಡು ಜೀನ್‌ಗಳು ಬೇರ್ಪಡಬಹುದು. ಹೀಗಾಗುವುದರಿಂದ *A* ಜೀನ್ ಒಂದು ವರ್ಣರೇಖೆಯಲ್ಲೂ *B* ಮತ್ತೊಂದರಲ್ಲೂ ಸೇರಿಕೊಳ್ಳುವ ಅವಕಾಶವಿರುತ್ತದೆ. ಆದ್ದರಿಂದ ಒಂದು ಜೀವಿ ಎರಡು ಮಿಶ್ರಜೋಡಿ ಸಂಬಂಧಕ ಜೀನ್‌ಗಳನ್ನು ಹೊಂದಿದ್ದರೆ (*AB*/*ab*) ಅದರ ಅನೇಕ ಸಂಯೋಗಿಜೀವಕಣಗಳು *AB* ಅಥವಾ *ab* ಗಳನ್ನು ಹೊಂದಿರುತ್ತದೆ. ಆದರೆ ಅದರಲ್ಲಿ ಕೆಲವು ಸಂಯೋಗಿ

ಜೀವಕಣಗಳು ಅಡ್ಡಹಾದ ವಿಧಗಳಾಗಿದ್ದು *Ab* ಅಥವಾ *aB* ಗಳಾಗಿರುತ್ತವೆ. ಇಂಥವು ಹೊಸ ಜೀವಿಗಳ ಉದ್ಭವಕ್ಕೆ ಕಾರಣಕರ್ತೃಗಳಾದರೆ ಅವು ಉತ್ಪತ್ತಿಮಾಡುವ ಹೊಸ ಲಕ್ಷಣಗಳ ಜೊತೆಗಳಿಂದ ಅವನ್ನು ಗುರುತಿಸಬಹುದು.

ಡ್ರಸಾಫಿಲ ಕೀಟದಲ್ಲಿ ಮಾಸಲು ಕೆಂಪುಗಣ್ಣು (ರೂಬಿ ಐ, *rb*) ಹರಿದ ರೆಕ್ಕೆ (ಕಟ್‌ವಿಂಗ್, *ct*) ಮತ್ತು ಸಿಂಧೂರವರ್ಣದ ಕಣ್ಣು (ವರ್ಮಿಲಿಯನ್ ಐ. *v*) ಮುಂತಾದ ಮೂರು ಜೀನ್‌ಗಳ ಏಕಕಾಲಿಕ ಅನುವಂಶೀಯತಾಪರಿಯನ್ನು ಸಿ.ಬಿ. ಬ್ರಿಡ್ಜಸ್ ಅಭ್ಯಸಿಸಿದ. ಇವುಗಳ ಅಡ್ಡಹಾಯಿಕೆಯ ಮೌಲ್ಯ ಈ ರೀತಿ ಇತ್ತು. *rb* ಮತ್ತು *ct* ಗಳ ಮಧ್ಯೆ ಶೇ.16.7, *ct* ಮತ್ತು *v* ಗಳ ನಡುವೆ ಶೇ.14.5, *rb* ಮತ್ತು *v* ಗಳ ನಡುವೆ ಶೇ.31.2. ಆದ್ದರಿಂದ ವರ್ಣರೇಖೆಯ ಮೇಲೆ ಈ ಮೂರು ಜೀನ್‌ಗಳ ನಕ್ಷೆಯನ್ನು ಹೀಗೆ ಮಾಡಬಹುದಾಗಿದೆ.

ಲಿಂಕೇಜ್ ವಿಷಯವಾಗಿ ಡ್ರಸಾಫಿಲ ಕೀಟದಲ್ಲಿ ಬಹಳ ಅಧ್ಯಯನ ನಡೆದಿದೆ. ಈ ಕೀಟದಲ್ಲಿ ಮೂರು ದೊಡ್ಡ ಲಿಂಕೇಜ್ ಗುಂಪುಗಳಿದ್ದು (ಇವುಗಳಲ್ಲಿ ಒಂದು ಲಿಂಗಸಂಬಂಧಕ ವಾದದ್ದು, ಸೆಕ್ಸ್‌ಲಿಂಕ್ಡ್) ನಾಲ್ಕನೆಯದು ಒಂದು ಸಣ್ಣ ಗುಂಪಾಗಿದೆ. ಒಂದು ಗೊತ್ತಾದ ಭಾಗದಲ್ಲಿ ಅಡ್ಡಹಾಯುವಿಕೆ ನಡೆದರೆ ಅದು ಸಾಮಾನ್ಯವಾಗಿ ವರ್ಣತಂತುಗಳ ಜೋಡಿಯ (ಬೈವೇಲೆಂಟ್) ನಾಲ್ಕರಲ್ಲಿ ಎರಡು ಎಳೆಗಳನ್ನು (ಸ್ಟ್ರಾಂಡ್ಸ್) ಮಾತ್ರ ಅವಲಂಬಿಸಿರುತ್ತದೆ ಎಂದು ತಿಳಿದುಬಂದಿದೆ. ಈ ನಾಲ್ಕರಲ್ಲಿ ಎರಡು ಅಡ್ಡಹಾಯಿಕೆಗಳನ್ನು ಹೊಂದಿದ್ದು ಇನ್ನೆರಡರಲ್ಲಿ ಅಡ್ಡಹಾಯಿಕೆಗಳಿರುವುದಿಲ್ಲ.

ಅನೇಕ ಜೀವಿಗಳ ವಿವರಣಾತ್ಮಕ ವರ್ಣರೇಖಾನಕ್ಷೆಗಳನ್ನು ಈಗಾಗಲೆ ರಚಿಸಲಾಗಿದೆ. ಡ್ರಸಾಫಿಲ ಮೆಲನೊಗ್ಯಾಸ್ಟರ್ ಬಗ್ಗೆ ಅತಿವಿವರವಾದ ನಕ್ಷೆಯನ್ನು ಮಾಡಲಾಗಿದೆ. ಈ ಜೀವಿಯ ಲಾಲಾರಸ ಗ್ರಂಥಿಗಳಲ್ಲಿ ದೈತ್ಯ ವರ್ಣರೇಖೆಗಳಿರುವುದೇ (ಜೈಯಂಟ್ ಕ್ರೊಮೊಸೋಮ್ಸ್) ಇದಕ್ಕೆ ಮುಖ್ಯಕಾರಣ. ಆದ್ದರಿಂದ ಕೋಶಾನುವಂಶೀಯತೆಯ ವಿಜ್ಞಾನಿಗಳಿಗೆ ಜೀನ್‌ಗಳ ನಿರ್ದಿಷ್ಟ ಜಾಗಗಳನ್ನು ಸರಿಯಾಗಿ ಗುರುತಿಸಿ ನಕ್ಷೆ ಮಾಡಲು ಅನುಕೂಲವಾಯಿತು. ಮುಸುಕಿನಜೋಳದಲ್ಲಿ ಹೆಚ್ಚು ವರ್ಣತಂತುವಿನ ನಕ್ಷೆಗಳನ್ನು ಮಾಡಲಾಗಿದೆ. ಈ ಸಸ್ಯದಲ್ಲಿ 10 ಲಿಂಕೇಜ್ ಗುಂಪುಗಳಿವೆಯೆಂದು ತಿಳಿದುಬಂದಿದೆ.

ವರ್ಣತಂತುಗಳ ಸಂಖ್ಯೆ ಅಧಿಕವಾಗಿರುವ ಜೀವಿಗಳಲ್ಲಿ ಲಿಂಕೇಜ್ ಬಗ್ಗೆ ಸಂಶೋಧನೆ ನಡೆಸುವುದು ಬಹು ಪ್ರಯಾಸದ ಕೆಲಸ. ಮಾನವಗುಂಪಿನಲ್ಲಂತೂ ಇದು ಅತಿ ಕ್ಲಿಷ್ಟ ಎನಿಸಿದೆ. ಮಾನವನಲ್ಲಿ ಕೆಲವು ಅಪೂರ್ವ ಜೀನ್‌ಗಳು ಸಂಬಂಧಕ ಜೀನ್‌ಗಳಾಗಿವೆ (ಲಿಂಕ್ಡ್‌ಜೀನ್ಸ್) ಎಂಬ ಅನುಮಾನವಿದ್ದರೂ ಇದನ್ನು ಸ್ಥಿರೀಕರಿಸುವ ಕಾರ್ಯ ಯಶಸ್ವಿಯಾಗಿಲ್ಲ. ಮಾನವನನ್ನು ಪ್ರಯೋಗಶಾಲೆಯ ಇಲಿ, ಮೊಲಗಳಂತೆ ಕೋಶಶಾಸ್ತ್ರಜ್ಞರು ಬಳಸಿಕೊಳ್ಳಲಾಗದಿರುವುದೇ ಇದಕ್ಕೆ ಮುಖ್ಯ ಕಾರಣ. ಸೂಕ್ಷ್ಮದರ್ಶಕದ ಸಹಾಯದಿಂದ ವರ್ಣತಂತುಗಳ ವರ್ತನೆಗಳ ಅಭ್ಯಾಸ, ತಳೀಕರಣ ಪ್ರಯೋಗಗಳಿಂದ ಬರುವ ಲಿಂಕೇಜ್ ಗುಂಪುಗಳ ಅನಾಮಿಕ ಅಭಿಪ್ರಾಯ –ಇವು ವರ್ಣತಂತುಗಳ ಅನುವಂಶೀಯತಾ ವಾದಕ್ಕೆ ಒಳ್ಳೆಯ ಆಧಾರಗಳನ್ನೊದಗಿಸುತ್ತದೆ. ಇದಕ್ಕೆ ಇನ್ನೂ ಹೆಚ್ಚಿನ ಆಧಾರಗಳು ವರ್ಣತಂತುಗಳ ಕೆಲವು ರಚನಾ ಪರಿವರ್ತನೆಯಿಂದಲೂ ಅವುಗಳ ಪರಿಣಾಮವಾಗಿ ಆಗುವ ಆವರಣ ತಂತುವಿನ ಮೇಲಿನ ಜೀನ್‌ಗಳ ಬದಲಾದ ವರ್ತನೆಯಿಂದಲೂ ದೊರೆಯುತ್ತವೆ. ವರ್ಣತಂತುವಿನ ರಚನಾ ಪರಿವರ್ತನೆಗಳಲ್ಲಿ ಪ್ರಕೃತಿಯಲ್ಲೆ ನ್ಯೂನತೆ, ವಿಪರ್ಯಯ (ಇನ್ವರ್ಷನ್), ದ್ವಿಪ್ರತಿಯಾಗುವಿಕೆ, ವರ್ಣತಂತು ಭಾಗಗಳ ಸ್ಥಳಾಂತರ ಕಾರ್ಯ ಇವೆಲ್ಲ ಸಂಭವಿಸುವುದು ಕಂಡುಬಂದಿದೆ.

ಲಿಂಗಸಂಬಂಧಿ ಅನುವಂಶೀಯತೆ: ಲೈಂಗಿಕ ವರ್ಣತಂತುಗಳಾದ *X* ಮತ್ತು *Y* ವರ್ಣತಂತುಗಳಲ್ಲಿ ಲಿಂಗನಿಯಂತ್ರಣದ ಜೀನ್‌ಗಳೇ ಅಲ್ಲದೆ ಬೇರೆಯವೂ ಇರುತ್ತವೆ. ಆದ್ದರಿಂದ ಇವು ಲಿಂಗಸ್ಥಿತಿಗೆ ಸಂಬಂಧಿಸಿಕೊಂಡೇ ಯಾಂತ್ರಿಕವಾಗಿ ಒಯ್ಯಲ್ಪಡುತ್ತವೆ. ಇವು ಒಂದೇ ವರ್ಣತಂತುವಿನಲ್ಲಿರುವುದರಿಂದ ಲಿಂಗನಿರ್ಧಾರಕ ಜೀನ್‌ಗಳೊಂದಿಗೆ ಸಂಬಂಧಹೊಂದಿರುತ್ತವೆ. ಲೈಂಗಿಕ ವರ್ಣರೇಖೆಗಳಲ್ಲಿ ಜೀನ್‌ಗಳ ಅನುವಂಶೀಯತೆಯ ಬಗ್ಗೆ ನಾವು ಅಭ್ಯಾಸಮಾಡುವಾಗ ವ್ಯಕ್ತಿಯ ಲಿಂಗವಾವುದು ಎಂಬುದೇ ಪ್ರಮುಖ ವಿಷಯವಾಗುತ್ತದೆ.

ಗಂಡಸಿನ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ಆತನ *X* ವರ್ಣತಂತು–ಅವನ ಎಲ್ಲ ಹೆಣ್ಣುಮಕ್ಕಳಿಗೂ ಬರುವುದಾದರೂ ಗಂಡುಮಕ್ಕಳಿಗೆ ಬರುವುದಿಲ್ಲ. ಹೆಣ್ಣುಮಕ್ಕಳ ಇನ್ನೊಂದು *Y* ವರ್ಣತಂತು ತಾಯಿಯಿಂದ ಬರುತ್ತದೆ. ಆದ್ದರಿಂದ ಒಬ್ಬ ತಂದೆಯಲ್ಲಿ ಏನಾದರೂ ಒಂದು ಲಿಂಗಸಂಬಂಧವಾದ ದುರ್ಬಲಗುಣವೇನಾದರೂ ಇದ್ದು, ತಾಯಿ ಸಾಧಾರಣ ಸಾಮಾನ್ಯಸ್ಥಿತಿಯವಳಾಗಿದ್ದಲ್ಲಿ ತಂದೆಯ ಆ ಗುಣ ಹೆಣ್ಣುಮಕ್ಕಳಲ್ಲಿ ಎದ್ದು ಕಾಣುವುದಿಲ್ಲ. ಆದರೆ ಇವರ ಗಂಡುಮಕ್ಕಳಲ್ಲಿ ಅರ್ಧದಷ್ಟು ಮಂದಿಗೆ ಈ ಗುಣ ಬಂದೇ ಬರುತ್ತದೆ. ಮಾನವಪೀಳಿಗೆಯಲ್ಲಿ ಕಂಡುಬರುವ ಬಣ್ಣ ಕುರುಡುತನ (ಕಲರ್ ಬ್ಲೈಂಡ್‌ನೆಸ್) ಈ ರೀತಿಯ ಒಂದು ಗುಣವಾಗಿದೆ. ಬಣ್ಣಗುರುಡುತನವಿರುವ ಒಬ್ಬ ಗಂಡಸು ಸಹಜದೃಷ್ಟಿಯ ಯುವತಿಯೊಬ್ಬಳನ್ನು ಮದುವೆಯಾದರೆ ಆ ಲಿಂಗಸಂಬಂಧ ಜೀನ್ ವರ್ತನೆ ಈ ಕೆಳಗಿನಂತಿರುತ್ತದೆ. ಈಗ ಬಣ್ಣಗುರುಡುತನಕ್ಕೆ ಕಾರಣವಾದ ಜೀನನ್ನು *c* ಎಂದು ಸಾಂಕೇತಿಕವಾಗಿ ಕರೆಯೋಣ. ಅಂತೆಯೇ ಸಹಜದೃಷ್ಟಿಗೆ ಆಧಾರವಾದ ಜೀನನ್ನು *C* ಎಂದು ಇಟ್ಟುಕೊಳ್ಳೋಣ. ಈ ಜೀನ್‌ಗಳು ನಮಗೆಲ್ಲ ತಿಳಿದಿರುವಂತೆ *X* ವರ್ಣತಂತುವಿನಿಂದ ಒಯ್ಯಲ್ಪಡುತ್ತವೆ.

ಈ ದಂಪತಿಗಳ ಮಕ್ಕಳು, ಮೊಮ್ಮಕ್ಕಳುಗಳಲ್ಲಿ ಈ ಬಣ್ಣಗುರುಡುತನಕ್ಕೆ ಕಾರಣವಾದ ಜೀನ್ ವಿತರಣೆ ಹೇಗಾಗುತ್ತದೆ ಎಂಬುದನ್ನು ಚಿತ್ರ 4ರಲ್ಲಿ ತೋರಿಸಿದೆ. ಇದರಿಂದ ನಮಗೆ ಮೊಮ್ಮಕ್ಕಳಲ್ಲಿ ಸಹಜಸ್ಥಿತಿಯ ಮತ್ತು ಬಣ್ಣ ಕುರುಡುತನವಿರುವ ಮೊಮ್ಮಕ್ಕಳುಗಳ ಪ್ರಮಾಣ 3:1 ಆಗಿದೆ ಎಂಬುದು ತಿಳಿದುಬರುತ್ತದೆ. ಆದರೆ ಈ ಪ್ರಮಾಣ ಲಿಂಗಸಂಬಂಧ ವಾದದ್ದು. ಏಕೆಂದರೆ ಅರ್ಧಭಾಗದಷ್ಟು ಗಂಡುಮಕ್ಕಳು ಮಾತ್ರ ಈ ಪಿಡುಗಿಗೆ ತುತ್ತಾಗಿದ್ದು ಹೆಣ್ಣುಮಕ್ಕಳಲ್ಲಿ ಈ ಜೀನಿನ ಬಾಹ್ಯಪ್ರಭಾವ ಕಂಡುಬರುವುದಿಲ್ಲ.

ಹಿಂದೆ ತಿಳಿದಿದ್ದಂತೆ *Y* ವರ್ಣತಂತುವಿನಲ್ಲಿ ಜೀನ್‌ಗಳು ಇಲ್ಲದೆ ಇಲ್ಲ. ಸ್ತನಿಗಳ *Y* ವರ್ಣತಂತುವಿನ ಕೆಲವು ಜೀನ್‌ಗಳು ಬರಿ ಗಂಡುಸಂತತಿಗೆ ಮೀಸಲಾಗಿದ್ದು ಹೆಣ್ಣು ಸಂತತಿಗೆ ಒಯ್ಯಲ್ಪಡುವುದಿಲ್ಲ. *Y* ವರ್ಣತಂತುವಿನಲ್ಲಿ ಕೇವಲ ಕೆಲವೇ ಲಿಂಗಸಂಬಂಧ ಜೀನ್‌ಗಳ ಇರುವಿಕೆಯನ್ನು ಗಮನಿಸಲಾಗಿದೆ. ಇಲ್ಲಿಯವರೆಗೂ ತಿಳಿದಿರುವಂತೆ, ಮಾನವನಲ್ಲಿ ಕಿವಿಯಮೇಲೆ ಬೆಳೆಯುವ ಕೂದಲುಗಳು, ಜಾಲಾಂಗುಲಿಗಳು (ವೆಬ್ಡ್ ಟೋಸ್) ಇವಕ್ಕೆ ಕೆಲವು ಉದಾಹರಣೆಗಳಾಗಿವೆ.




**ಚಿತ್ರ 4. ಮಾನವನಲ್ಲಿ ಲಿಂಗಸಂಬಂಧದ ಅನುವಂಶೀಯತೆ**

**ಅನುವಂಶೀಯ ಮಾರುಟ್ಟುವೆಗಳು (ಮ್ಯುಟೇಷನ್ಸ್) :** ಜೀನ್‌ಗಳು ಸಾಮಾನ್ಯವಾಗಿ ಸ್ಥಿರ ಅಥವಾ ದೃಢ ಸ್ವಭಾವವುಳ್ಳವಾಗಿರುತ್ತವೆ. ಆದರೆ ಒಮ್ಮೊಮ್ಮೆ ಜೀನ್‌ಗಳಲ್ಲೂ ಬದಲಾವಣೆಗಳಾಗಿರುತ್ತವೆ. ಇಂಥ ಬದಲಾವಣೆಗಳ ಹೆಸರು ಮಾರುಟ್ಟುವೆಗಳು. ಇವುಗಳಿಂದ ಉಂಟಾದ ಹೊಸ ಪ್ರತಿರೂಪಿ ಮೂಲ ಜೀನಿನಂತೆಯೇ ಪುನರುತ್ಪತ್ತಿ ಹೊಂದುತ್ತದೆ. ಪೂರ್ವಸ್ಥಿತಿಗೆ ತರುವ ಮಾರುಟ್ಟುವೆ (ರಿವರ್ಸ್ ಮ್ಯುಟೇಷನ್) ಮಾರುಟ್ಟಿದ ಜೀನನ್ನು ಸಹಜಸ್ಥಿತಿಗೆ ತರುತ್ತದೆ. ದ್ವಿಗುಣಿತ ಜೀವಿಗಳಲ್ಲಿ ಸಾಮಾನ್ಯವಾಗಿ ಮಾರುಟ್ಟುವೆಗಳು ಪ್ರತಿಕೋಶದ ವರ್ಣತಂತುಗಳ ಸಮಸ್ಥಿತಿಯ ಸ್ಥಳಗಳಲ್ಲಿ (ಹೊಮಾಲೊಗಸ್ ಲೋಸ್ಸೈ) ಒಂದು ಅಥವಾ ಎರಡು ಜೀನ್‌ಗಳಲ್ಲಾಗಬಹುದು. ಇದರಿಂದ ಮಾರುಟ್ಟುವೆಗಳಿಗೆ ಅತಿಸೂಕ್ಷ್ಮ ಕಾರಣಗಳಿರುವುದೂ ಆ ಮಾರುಟ್ಟುವೆಗಳು ಜೀನಿಗೆ ಸೀಮಿತವಾಗಿರುವುದೂ ವ್ಯಕ್ತವಾಗುತ್ತವೆ. ಪ್ರಕೃತಿಯಲ್ಲಿ ಒಂದು ಗೊತ್ತಾದ ಪ್ರಮಾಣದಲ್ಲಿ ಆಗುವ ಈ ಮಾರುಟ್ಟುವೆಗಳ ವ್ಯಾಪ್ತಿಯನ್ನು ರಾಸಾಯನಿಕ ದ್ರವ್ಯಗಳು, ವಿದ್ಯುದ್ವಾಹಿ ಕಣಗಳಾಗಿ ಪರಿವರ್ತಿಸುವ ವಿಕಿರಣ ವಸ್ತುಗಳು ಮುಂತಾದ ಮಾರುಟ್ಟುವೆ ಜನಕವಸ್ತುಗಳ ಸಹಾಯದಿಂದ ಹೆಚ್ಚಿಸಬಹುದು. ಒಂದು ಜೀನ್‌ಗೆ ಎಷ್ಟು ಮಾರುಟ್ಟುವ ಜಾಗಗಳುಂಟೆಂಬುದು ಗೊತ್ತಿಲ್ಲದಿದ್ದರೂ ಬ್ಯಾಕ್ಟೀರಿಯೊಫಾಜ್ ಒಂದರಲ್ಲಿ ಇವು 300ಕ್ಕೂ ಹೆಚ್ಚು ಇರುವುದು ಕಂಡುಬಂದಿದೆ. ಹೆಚ್ಚು ಸಂತತಿಯನ್ನು ಪರಿಶೀಲಿಸಿದಂತೆಲ್ಲ ಒಂದು ಅಪೂರ್ವ ಅಡ್ಡಹಾಯುವಿಕೆಯನ್ನು ಕಂಡುಹಿಡಿಯುವ ಸಂಭವವೇ ಹೆಚ್ಚು. ಆದ್ದರಿಂದಲೇ ಒಂದು ಸ್ಥಳದ ಅನೇಕ ಮಾರುಟ್ಟುವ ಜಾಗಗಳು ಸೂಕ್ಷ್ಮಾಣು ಜೀವಿಗಳ ಗುಂಪುಗಳಲ್ಲಿ ಕಂಡುಬಂದಿರುವುದು. ಒಂದು ಜೀನ್‌ನ ಬೇರೆ ಬೇರೆ ಜಾಗಗಳಲ್ಲಾದ ಮಾರುಟ್ಟುವೆಗಳ ಒಂದೇ ಜೀವರಾಸಾಯನಿಕಕ್ರಿಯೆಯ ವಿವಿಧ ಹಂತಗಳ ಮೇಲೆ ತಮ್ಮ ಪ್ರಭಾವಬೀರುವುದು ಕಂಡುಬಂದಿದೆ. ಆಂಗ್ಲಭಾಷೆಯ ಮ್ಯುಟೇಷನ್ (ಮಾರುಟ್ಟುವೆ) ಎಂಬ ಪದವನ್ನು ಬದಲಾವಣೆ ಕ್ರಿಯೆಗೆ ಮಾತ್ರ ಮೀಸಲಾಗಿಡಬೇಕಾಗಿದೆ. ಈ ಕ್ರಿಯೆಯಿಂದ

ಉತ್ಪತ್ತಿಯಾದ ಹೊಸ ಜೀನನ್ನು ಮಾರುಟ್ಟಿದ ಜೀನ್ (ಮ್ಯೂಟೆಂಟ್ ಜೀನ್) ಎಂದು ಕರೆಯುತ್ತಾರೆ. ಈ ಮಾರುಟ್ಟಿದ ಜೀನ್‌ನಿಂದ ಮಾರುಟ್ಟುವ ಲಕ್ಷಣಗಳು (ಮ್ಯೂಟೆಂಟ್ ಕ್ಯಾರೆಕ್ಟರ್ಸ್) ಬೆಳಕಿಗೆ ಬರುತ್ತವೆ. ಮಾರುಟ್ಟುವೆಗಳು ದೈಹಿಕ ಜೀವಕೋಶಗಳಲ್ಲೂ ಆಗಬಹುದು. ಅಂತೆಯೇ ಅವು ಪ್ರಜನನ ಅಂಗಾಂಶಗಳಲ್ಲೂ ಆಗಬಹುದು. ದೈಹಿಕ ಮಾರುಟ್ಟುವೆಗಳು ದೇಹದಲ್ಲಿ ಮಚ್ಚೆಗಳನ್ನು ಉತ್ಪತ್ತಿಮಾಡಬಹುದು. ಕೆಲಮೊಮ್ಮೆ ಸಸ್ಯಗಳ ಕೆಲವು ಅಸಾಧಾರಣ ರೀತಿಯ ಎಲೆಗಳು, ಹೂಗಳು, ಹಣ್ಣುಗಳು ಅಥವಾ ಅವುಗಳ ಕೆಲಭಾಗಗಳು ದೈಹಿಕ ಮಾರುಟ್ಟುವೆಗಳಿಂದ ಉಂಟಾಗಿರುತ್ತವೆ. ಜೀನ್‌ನ ಮಾರುಟ್ಟುವೆಗಳು ಯಾವ ದಿಕ್ಕಿನಲ್ಲಾದರೂ ಆಗಬಹುದು; ಕೆಲವೊಮ್ಮೆ ಅವು ಸಹಜಸ್ಥಿತಿಯಿಂದ ಮಾರುಟ್ಟಿದಸ್ಥಿತಿಯ ಕಡೆಗಿದ್ದರೆ ಮತ್ತೊಮ್ಮೆ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಆಗಬಹುದು. ಅನುವಂಶೀಯತೆಯ ಮೂಲಘಟಕಗಳಲ್ಲಿ ಏನೇ ಬದಲಾವಣೆಗಳಾಗಲಿ ಅವು ಮಾರುಟ್ಟುವೆಗಳ ಉದ್ಭವಕ್ಕೆ ಕಾರಣವಾಗುತ್ತವೆ.

ವರ್ಣತಂತುಗಳಲ್ಲಾದ ಮಾರುಟ್ಟುವೆಗಳನ್ನು ನಾವು 3 ಗುಂಪುಗಳಾಗಿ ವಿಂಗಡಿಸಬಹುದು:

1. ಒಡೆಯುವಿಕೆಗೆ ಅಥವಾ ಒಂದು ಗೊತ್ತಾದ ವರ್ಣತಂತುವಿನಲ್ಲಾಗುವ ಪುನಾರಚನೆ. 2. ಒಂದು ವರ್ಣತಂತುವಿನ ಕೂಡುವಿಕೆ ಅಥವಾ ಕಳೆದುಕೊಳ್ಳುವಿಕೆ; 3. ಇಡೀ ವರ್ಣತಂತುಗಳ ಜೊತೆಗಳೇ ಗುಣಿತವಾಗುವಿಕೆ.

ವರ್ಣತಂತುವಿನ ಮಾರುಟ್ಟುವೆಗಳಿಗೆ ಕೋಶವಿಭಜನೆಯಲ್ಲುಂಟಾಗುವ ಕೆಲವು ವಿಫಲತೆಗಳೇ ಕಾರಣವಾದರೂ ಜೀನ್ ಮಾರುಟ್ಟುವೆಗಳಿಗೆ ದೊಡ್ಡ ಗಾತ್ರದ ಪರಮಾಣುಗಳ ಅವಶ್ಯ ಅಸ್ಥಿರತೆಯೇ ಪ್ರಮುಖ ಕಾರಣ ಎಂದು ತಿಳಿದುಬಂದಿದೆ.

ಅನುವಂಶೀಯ ಮಾರುಟ್ಟುವೆಗಳು ಮತ್ತು ಜೀವವಿಕಾಸ: ಪ್ರಪಂಚದ ಎಲ್ಲ ಜೀವಿಗಳೂ ಪರಿಸರಕ್ಕೆ ಹೊಂದಿಕೊಂಡಿವೆ. ಮಾರುಟ್ಟುವೆಗಳು ಅನುವಂಶೀಯ ವಸ್ತುವಿನಲ್ಲುಂಟಾಗುವ ರಾಸಾಯನಿಕ ಬದಲಾವಣೆಗಳಾದ್ದರಿಂದ ಅವುಗಳ ಪರಿಣಾಮಗಳು ಶರೀರದ ಆವಶ್ಯಕತೆಗಳಿಗೆ ಹೊಂದಿಕೊಡಿರಬೇಕೆಂದೇನೂ ಇಲ್ಲ. ಬಹಳ ಸುವ್ಯವಸ್ಥಿತ ರಚನೆಗಳಲ್ಲಿ ಆಗಿಂದಾಗ್ಗೆ ಆಗುವ ಬದಲಾವಣೆಗಳು ಅವುಗಳ ಕ್ರಿಯಾಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಿಂತ ಅವುಗಳಿಗೆ ಅಪಾಯ ತರುವ ಸಂಭವವೇ ಹೆಚ್ಚು. ಆದ್ದರಿಂದ ಮಿತಿಮೀರಿದ ಸಂಖ್ಯೆಯ ಮಾರುಟ್ಟುವೆಗಳೆಲ್ಲ ಜೀವಿಗೆ ತೊಂದರೆ ತಂದು ಆ ಜೀವಿಯು ವಿಕಾಸದ ಹಾದಿಯಲ್ಲಿ ಮುಂದುವರಿಯ ದಂತೆಯೇ ಮಾಡಿವೆ. ಜೀವಿಗೆ ಒಳ್ಳೆಯದಾಗುವ ಮಾರುಟ್ಟುವೆಗಳ ಪ್ರವಾಹದಿಂದಲೂ ಜೀವವಿಕಾಸ ಮುಂದುವರಿಯಲಾರದು. ಇದಕ್ಕೆ ವಿರುದ್ಧವಾಗಿಯೇ ವಿಕಾಸ ಹೆಚ್ಚಾಗಿ ಅನನುಕೂಲ, ಅನುಪಯುಕ್ತ ಮಾರುಟ್ಟುವೆಗಳ ಹಾದಿಯಲ್ಲಿ ಮುಂದುವರಿಯಬೇಕಾಯಿತು. ಇದು ಎರಡು ಮಾರ್ಗಗಳಿಂದ ಸಾಧಿಸಲ್ಪಟ್ಟಿದೆ. ಪ್ರಥಮವಾಗಿ, ಅನಿರೀಕ್ಷಿತವಾಗಿ ರೂಪಿಸುವ ಮಾರುಟ್ಟುವೆಗಳಿಂದಲೂ ಎರಡನೆಯದಾಗಿ, ಅಂಥ ವಿಭೇದಗಳನ್ನು ಪಡೆದ ಜೀವಿಗಳ ಪ್ರತ್ಯೇಕೀಕರಣ ಮತ್ತು ಅದರ ಮೇಲೆ ಜರುಗುವ ನೈಸರ್ಗಿಕ ಆಯ್ಕೆಯಿಂದಲೂ ಜೀವ ವಿಕಾಸವಾಗುತ್ತ ಬಂದಿದೆ.

ಈ ಆವಶ್ಯಕತೆಗಳನ್ನು ಕೇವಲ ಕಣೀಯ ಅನುವಂಶೀಯತೆ ಮಾತ್ರ ಪೂರೈಸಬಲ್ಲುದು. ಅನುವಂಶೀಯತೆ ಸಮ್ಮಿಳಿತವಾಗುವ ತರಹದ್ದಾಗಿದ್ದರೆ ಅನುವಂಶೀಯ ಬದಲಾವಣೆಗಳೆಲ್ಲ ಜಾಗ್ರತೆಯಾಗಿ ನಶಿಸಿಹೋಗುತ್ತಿದ್ದುವು. ಹಾಗೇನಾದರೂ ಇದ್ದಿದ್ದರೆ ಪ್ರಕೃತಿಯಲ್ಲಿ ಜೀವಿಗಳು ಅನುವಂಶೀಯ ಬದಲಾವಣೆಗಳನ್ನು ಹೊಂದದಂತೆಯೇ ಅಥವಾ ಹೆಚ್ಚು ಅನುವಂಶೀಯ ಬದಲಾವಣೆಗಳಿದ್ದರೆ ಅವುಗಳನ್ನು ಕಾಪಾಡಿಕೊಳ್ಳಲು ಮತ್ತು ಸಮ್ಮಿಳಿತ ಪರಿಣಾಮಗಳನ್ನು ಎದುರಿಸಲು ಹೆಚ್ಚಿನ ಪರಿಮಾಣದ ಮಾರುಟ್ಟುವೆ ವ್ಯಾಪ್ತಿ ಇರಬೇಕಾಗುತ್ತಿತ್ತು. ತಂದೆತಾಯಿಗಳಿಬ್ಬ ರಿಂದಲೂ ಮಕ್ಕಳ ಅನುವಂಶೀಯ ಸಮಭಾಗ ಬರುವುದರಿಂದ ಅರ್ಧಭಾಗದಷ್ಟು ಜೀನ್‌ಗಳು ಪ್ರತಿಪೀಳಿಗೆಯಲ್ಲೂ ಮಾರುಟ್ಟುವೆಗೊಳ್ಳುತ್ತವೆ ಎಂದು ಇದರರ್ಥವಾಗುತ್ತದೆ. ಇದು ಪ್ರಯೋಗಗಳಿಂದ ಕಂಡುಹಿಡಿದಿರುವ ಸಾಮಾನ್ಯಸ್ಥಿತಿಯ ಸರಾಸರಿ ಮಾರುಟ್ಟುವೆಯ ವ್ಯಾಪ್ತಿಗಿಂತ ನೂರು ಅಥವಾ ಸಾವಿರಪಾಲು ಹೆಚ್ಚಾಗಬೇಕಾಗುತ್ತದೆ. ಆರ್. ಎ. ಫಿಷರ್ ಹೇಳಿರುವಂತೆ, ಈ ತರಹದ ಮಾರುಟ್ಟುವೆ ವ್ಯಾಪ್ತಿಗಳು ಇಲ್ಲದಿರುವುದಕ್ಕೆ ಪೂರ್ಣ ಆಧಾರಗಳಿವೆ. ಏಕೆಂದರೆ, ಅವೇನಾದರೂ ಇದ್ದಿದ್ದರೆ, ಜೀವಿಗಳಿಗೆ ಶುದ್ಧಸಂತತಿಯ ಸ್ಥಿತಿಯನ್ನು ತಲುಪುವುದು ಅಸಾಧ್ಯವಾಗುತ್ತಿತ್ತು. ಮಾರುಟ್ಟುವೆಗಳ ಹೆಚ್ಚಿನ ವ್ಯಾಪ್ತಿ ಹೆಚ್ಚಾಗಿ ಮಿಶ್ರಜೋಡಿಗಳೇ ಹೆಚ್ಚಾಗುವಂತೆ ಮಾಡುತ್ತದೆ.

ನಮಗೆ ಗೊತ್ತಿರುವಂತೆ ಈ ಮಾರುಟ್ಟುವೆಗಳು ಅಪೂರ್ವವಾಗಿ ಕಂಡುಬರುವುದು ಕಣೀಯ ಅನುವಂಶೀಯತೆಗೆ ಅವಿರೋಧ ವಿಷಯವಾಗಿದೆ. ಇದಕ್ಕಿಂತ ಹೆಚ್ಚಾಗಿ ಇದು ಮಾರುಟ್ಟುವೆಗಳ ಸ್ಥಿತಿಗತಿಗಳ ನಿಯಂತ್ರಣ ಮಾಡುವ ಬಗ್ಗೆ ಊಹಿಸಲ್ಪಟ್ಟಿರುವ ಅನುವಂಶೀಯ ವಾದಗಳ ಮೇಲೆಲ್ಲ ತೀರ ಅನುಮಾನ ಬೀರುತ್ತದೆ. ಡಾರ್ವಿನ್ನನಿಗೆ ಅತಿಕ್ಲಿಷ್ಟವಾಗಿದ್ದ ಅಂಶಕ್ಕೆ ಉತ್ತರ ಇಂದು ಸಿದ್ಧವಾಗಿದೆ. ತನ್ನ ವಾದದ ಕೆಲವು ಅಂಶಗಳು ಸರಿಯಿರಲಾರವೆಂದು ಅವನು ತಿಳಿದಿದ್ದರೂ ಜೀವವಿಕಾಸ ದೀರ್ಘಕಾಲಾವಧಿಯಲ್ಲಿ ಕೆಲವು ಸೂಕ್ಷ್ಮ ಪ್ರಯೋಜನಕಾರಿ ಬದಲಾವಣೆಗಳ ಆಯ್ಕೆಯಿಂದುಂಟಾಗುತ್ತದೆ ಎಂದು ಭಾವಿಸಿದ್ದ. ಸಮ್ಮಿಳಿತ ಅನುವಂಶೀಯತೆಯ ಮುಖ್ಯತತ್ತ್ವಗಳನ್ನು ಒಪ್ಪಿಕೊಂಡ ಡಾರ್ವಿನ್ ಅಂದು ಒಂದು ದೊಡ್ಡ ಇಕ್ಕಟ್ಟಿನಲ್ಲಿ ಸಿಕ್ಕಿದ್ದ. ಈ ಇಕ್ಕಟ್ಟಿನಿಂದ ಪಾರಾಗಲು ಮೆಂಡಲ್ಲನ ತತ್ತ್ವಗಳ ಪುನಃಪರಿಶೀಲನೆಯಿಂದ ಸಾಧ್ಯವಾಯಿತು.

ಅನುವಂಶೀಯತೆ ನ್ಯೂಕ್ಲಿಯಸ್‌ನ ಒಳಗಿರುವ ಜೀನ್‌ಗಳಿಗೆ ಮೀಸಲಾದ ಕ್ರಿಯೆ ಒಂದೇ ಅಲ್ಲ. ಇದನ್ನು ನ್ಯೂಕ್ಲಿಯಸ್‌ನ ಹೊರಗಿರುವ ಜೀವದ್ರವ್ಯದಲ್ಲಿರುವ ಜೀನ್‌ಗಳು ಕೂಡ ನಿರ್ವಹಿಸುತ್ತವೆ. ಇದನ್ನು ಸೈಟೋಜೀನ್, ಸೈಟೋ ಪ್ಲಾಸ್ಮಿಕ್ ಜೀನ್, ಪ್ಲಾಸ್ಮಜೀನ್ ಮುಂತಾದ ಹೆಸರುಗಳಿಂದ ಕರೆದಿದ್ದಾರೆ. ಡ್ರಸಾಫಿಲ ನೊಣದ ಇಂಗಾಲದ ಡೈ ಆಕ್ಸೈಡಿನ ನಿರೋಧಕ್ಕೆ ಕಾರಣವಾದ ಜೀನ್, ಯೀಸ್ಟಿನಲ್ಲಿ ಪುಟ್ಟ ಸಮುದಾಯವಾಗುವುದಕ್ಕೆ ಕಾರಣವಾದ ಜೀನ್, ಮುಸುಕಿನಜೋಳದಲ್ಲಿ ಗಂಡು ಹೂವಿನ ಬಂಜೆತನಕ್ಕೆ ಮೂಲವಾದ ಜೀನ್ ಹಾಗೂ ನ್ಯೂರೋಸ್ಪೊರ ಬೂಷ್ಟಿನಲ್ಲಿ ಇರುಕು ಲಕ್ಷಣಕ್ಕೆ ಕಾರಣವಾದ ಜೀನ್–ಇವೆಲ್ಲ ಸೈಟೊಪ್ಲಾಸಂ ನಲ್ಲಿದ್ದು ಅನುವಂಶೀಯತೆಯನ್ನು ನಿರ್ದೇಶಿಸುವ ಜೀನ್‌ಗಳಿಗೆ ಉದಾಹರಣೆ ಗಳು. ಈ ಸಂದರ್ಭಗಳಲ್ಲಿ ಜೀವದ್ರವ್ಯದಲ್ಲಿ ಇರುವ, ಅದರಲ್ಲಿಯೂ ಮಾತೃವಿನಿಂದ ಅಂಡದ ಮೂಲಕ ಬರುವ ಜೀನ್‌ಗಳು ಅನುವಂಶೀಯ ಮಾದರಿಗಳನ್ನು ನಿರ್ಧರಿಸುತ್ತವೆ. (**ನೋಡಿ– ಪ್ರತಿರೂಪಿ ಜೀನಿ**). (ಎಂ.ಆರ್.ಆರ್.ಎಸ್.)

**ಮನಶ್ಶಾಸ್ತ್ರ ಮತ್ತು ಅನುವಂಶೀಯತೆ** : ವಂಶಾನುಗತ ಗುಣಲಕ್ಷಣಗಳನ್ನು ಕುರಿತು ಹಲವಾರು ಪ್ರಾಯೋಗಿಕ ಪರೀಕ್ಷೆಗಳನ್ನು ಅನೇಕ ವಿಜ್ಞಾನಿಗಳು ನಡೆಸಿದ್ದಾರೆ. ಜೀವಿಗಳ ವಿಕಸನ ಕ್ರಮದಲ್ಲಿ ಬದಲಾವಣೆಗಳು ಆಗುತ್ತಲೇ ಇರುತ್ತವೆ. ಸಂತತಿಯಿಂದ ಸಂತತಿಗೆ ಹರಿಯುವಾಗ ಅನುವಂಶೀಯ ಗುಣಲಕ್ಷಣಗಳು ಬದಲಾವಣೆ ಹೊಂದಬಹುದು. ಅವುಗಳ ಪ್ರಯೋಗದಲ್ಲಾಗಲಿ, ಪ್ರತ್ಯೇಕವಾಗಿಯೇ ಆಗಲಿ, ಒಂದು ಸಂತತಿಯಲ್ಲಿ ಕಂಡುಬಂದ ಗುಣಲಕ್ಷಣಗಳು ಮುಂದಿನ ಸಂತತಿಯಲ್ಲಿ ವ್ಯತ್ಯಾಸ ಹೊಂದಿರುತ್ತವೆ. ಇದು 1800ರಲ್ಲಿ ಲಮಾರ್ಕ್ ಎಂಬುವನು ಮಂಡಿಸಿದ ವಿಚಾರಸರಣಿ. ಒಂದಾನೊಂದು ಕಾಲದಲ್ಲಿ ಜಿರಾಫೆಯಂಥ ಪ್ರಾಣಿಗೆ ಕತ್ತು ಮೊಟಕಾಗಿತ್ತು ಎಂಬುದು ಲಮಾರ್ಕನ ಭಾವನೆ. ಜಿರಾಫೆಯು ಚಿಕ್ಕ ಗಿಡದ ಎಲೆಗಳನ್ನು ತಿನ್ನುತ್ತಿದ್ದು ಎತ್ತರದ ಕೊಂಬೆಗಳಲ್ಲಿರುವ ಎಲೆಗಳನ್ನು ತಿನ್ನಲು ತನ್ನ ಕತ್ತನ್ನು ಚಾಚುತ್ತಿತ್ತು. ಇದರ ಪರಿಣಾಮವಾಗಿ ಜಿರಾಫೆಯ ಕತ್ತು ಉದ್ದವಾಗುತ್ತ ಹೋಯಿತು. ಉದ್ದದಲ್ಲಾದ ಈ ಹೆಚ್ಚಳ ಅದರ ಮರಿಗಳಿಗೂ ಬಂದಿತು. ಹೀಗೆ ವಂಶಗಳು ಕಳೆದಂತೆ ಕತ್ತು ಉದ್ದವಾಗುತ್ತ ಹೋಗಿ ಎತ್ತರದ ಕೊಂಬೆಗಳೂ ಅದರ ಬಾಯಿಗೆ ನಿಲುಕುವಂತಾಗಿ ಕತ್ತನ್ನು ಚಾಚುವ ಆವಶ್ಯಕತೆಯೇ ಇಲ್ಲದಂತಾಯಿತು. ಇದನ್ನು ಅಭ್ಯಾಸದಿಂದ ಬಂದ ಅನುವಂಶೀಯ ಲಕ್ಷಣ ಎಂದು ಹೇಳುತ್ತಾರೆ. ಲಮಾರ್ಕನ ಅಭಿಪ್ರಾಯದಲ್ಲಿ ಇಲ್ಲಿ ಸುತ್ತಣ ಪರಿಸರಕ್ಕೆ ಹೊಂದಿಕೊಳ್ಳುವುದಕ್ಕಾಗಿ ಸಂತತ ಪ್ರಯತ್ನ ಅವಶ್ಯವಾಗುತ್ತದೆಯೋ ಅಲ್ಲಿ ಶಾಶ್ವತ ದೈಹಿಕ ಬದಲಾವಣೆಗಳು ಆಗುತ್ತವೆ; ಅವೇ ಮುಂದೆ ಅನುವಂಶೀಯವಾಗುತ್ತವೆ. ಆದರೆ ಲಮಾರ್ಕನ ಈ ಭಾವನೆ ಇಂದು ಒಪ್ಪಿಗೆಯಾಗಿಲ್ಲ. ಮೆಂಡಲ್‌ವಾದವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಸಾಮಾನ್ಯವಾಗಿ ಪರಿಸರದಲ್ಲುಂಟಾಗುವ ಬದಲಾವಣೆಯಿಂದ ನ್ಯೂಕ್ಲಿಯಸುಗಳ ಮೇಲೆ ಯಾವ ರೀತಿಯ ಪರಿಣಾಮವೂ ಆಗುವುದಿಲ್ಲ. ಅಪೂರ್ವವಾಗಿ ನ್ಯೂಕ್ಲಿಯಸಿನ ವ್ಯವಸ್ಥೆಯಲ್ಲಿ ಇದ್ದಕ್ಕಿದ್ದಂತೆ ಏರುಪೇರುಗಳು ತಲೆದೋರಿ ಹೊಸ ವೈಲಕ್ಷಣ್ಯಗಳು ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುತ್ತವೆ. ಇಂಥ ಬದಲಾವಣೆಗಳು ಪರಿಸರದಿಂದ ಪ್ರಭಾವಿತರಾದ ಮಾತಾಪಿತೃಗಳ ಮಕ್ಕಳಲ್ಲಿ ವಂಶಾರ್ಜಿತವಾಗುತ್ತವೆ. ಈ ತತ್ತ್ವವನ್ನು ಡವ್ರೀಸ್ ಎಂಬುವವ ಮಂಡಿಸಿ ಇದನ್ನು ಉತ್‌ಪರಿವರ್ತನೆಯ ತತ್ತ್ವವೆಂದು ಕರೆದ. ವಿಜ್ಞಾನಿಗಳು ಇದನ್ನು ವರ್ಣತಂತುಗಳ ಮತ್ತು ಜೀನ್‌ಗಳ ವ್ಯತ್ಯಾಸಗಳಿಂದಾಗಿ ಒದಗುವ ವಂಶಾರ್ಜಿತ ದೈಹಿಕ ಬದಲಾವಣೆಗಳು ಎಂದು ಭಾವಿಸುತ್ತಾರೆ. ಇಂಥ ವ್ಯತ್ಯಾಸ ಅಥವಾ ಉತ್‌ಪರಿವರ್ತನೆಯನ್ನು ಸಾಮಾನ್ಯವಾಗಿ 5000–10000 ಪೀಳಿಗೆಗಳಲ್ಲೊಂದರಲ್ಲಿ ನೋಡಬಹುದೆಂಬುದು ಮಾರ್ಗನ್‌ನ ಅಭಿಪ್ರಾಯ.

ಕೂದಲಿನ ಮತ್ತು ಕಣ್ಣಿನ ಬಣ್ಣ, ದೇಹದಾರ್ಢ್ಯ ಮತ್ತು ರಕ್ತ ಜಾತಿಗಳಂಥ ದೈಹಿಕ ವೈಲಕ್ಷಣ್ಯಗಳು ಮತ್ತು ಬುದ್ಧಿಶಕ್ತಿ, ಭಾವೋದ್ರೇಕತೆ ಅಥವಾ ಆಕ್ರಮಣ ಪ್ರವೃತ್ತಿಯಂಥ ವೈಲಕ್ಷಣ್ಯಗಳು ವಿಕಾಸವಾದದ ತತ್ತ್ವವನ್ನನುಸರಿಸಿ ಸಂಭವಿಸುತ್ತವೆ. ವಿಜ್ಞಾನಿಗಳು ಆಯ್ಕೆ ರೀತಿಯ ಮರಿಮಾಡಿಸುವ ವಿಧಾನದ ಮೂಲಕ ಪ್ರಾಣಿಗಳ ಮೇಲೆ ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ; ಮತ್ತು ಮರಿಹಾಕುವಿಕೆ ಅಥವಾ ಪ್ರಭೇದಗಳಲ್ಲಿ ಇವುಗಳಿಗೆ ಸಂಬಂಧಿಸಿದಂತೆ ಮಾನಸಿಕ ಲಕ್ಷಣಗಳು ಬದಲಾಯಿಸುವುದನ್ನು ಕಂಡುಹಿಡಿದಿದ್ದಾರೆ. ಟ್ರೆಯಾನ್ ಎಂಬುವನು ಆಯ್ಕೆ ವಿಧಾನದಲ್ಲಿ ಮರಿಮಾಡಿಸುವ ವಿಧಾನವನ್ನು ಬಳಸಿ ಇಲಿಗಳು ಕಲಿಯುವ ಕ್ರಿಯೆಯ ಬಗ್ಗೆ ಅನೇಕ ಅಂಶಗಳನ್ನು ಸಂಗ್ರಹಿಸಿದ. ಅವನು $T$ ಆಕಾರದ ವ್ಯೂಹದ ರಚನೆಯನ್ನು ಜಾಗ್ರತೆಯಾಗಿ ಅರ್ಥಮಾಡಿಕೊಳ್ಳುವ ಮತ್ತು ಇಂಥ ಸಾಮರ್ಥ್ಯವಿಲ್ಲದೇ ಇರುವ ಇಲಿಗಳ ಗುಂಪನ್ನು ಪ್ರತ್ಯೇಕಿಸಿದ. ಇಲಿಗಳನ್ನು ಈ ಗುಂಪುಗಳನ್ನಾಗಿ ವಿಭಾಗಿಸ ಬೇಕಾದರೆ ಇವುಗಳು ವ್ಯೂಹದ ರಚನೆಯನ್ನು ಅರ್ಥಮಾಡಿಕೊಳ್ಳದೇ ತಪ್ಪುಗಳನ್ನು ಮಾಡುತ್ತಿದ್ದುದನ್ನು ಆಧಾರವನ್ನಾಗಿ ಇಟ್ಟುಕೊಳ್ಳಬೇಕಾಯಿತು. ವ್ಯೂಹದ ರಚನೆಯನ್ನು ಕಲಿತುಕೊಳ್ಳುವುದರಲ್ಲಿ ಚುರುಕಾಗಿದ್ದ ಇಲಿಯನ್ನು ಇದೇ ರೀತಿಯಲ್ಲಿ ಚುರುಕಾಗಿದ್ದ ಅನ್ಯಲಿಂಗದ ಇಲಿಯೊಡನೆ ಒಟ್ಟುಗೂಡಿಸುವುದರಿಂದ ಮರಿ ಮಾಡಿಸುವ ಕ್ರಮವನ್ನು ಟ್ರೆಯಾನ್ ಅನುಸರಿಸಿದ. ಇದರಂತೆಯೇ ಈತನ ವ್ಯೂಹದ ರಚನೆಯನ್ನು

ಕಲಿತುಕೊಳ್ಳುವುದರಲ್ಲಿ ಹಿಂದುಳಿದ ಇಲಿಗಳನ್ನು ಇದೇ ಗುಂಪಿನ ಅನ್ಯಲಿಂಗದ ಇಲಿಗಳೊಡನೆ ಒಟ್ಟುಗೂಡಿಸುವುದರಿಂದ ಇನ್ನೊಂದು ವಿಧವಾದ ಮರಿಗಳು ಹುಟ್ಟುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ. ಇಲ್ಲಿ ಪರಿಸರನಿಯಂತ್ರಣವನ್ನು ಕಟ್ಟುನಿಟ್ಟಾಗಿ ಸಾಧಿಸಲಾಯಿತು. ಈ ಆಯ್ಕೆ ಕ್ರಮದಿಂದ ಮರಿಮಾಡಿಸುವ ವಿಧಾನ 18 ತಲೆಮಾರುಗಳವರೆಗೆ ಮುಂದುವರಿಯಿತು. ಟ್ರೆಯಾನ್ ವ್ಯೂಹಶಿಕ್ಷಣದ ಸಾಮರ್ಥ್ಯದ ಪ್ರಥಮಪರೀಕ್ಷೆ ಮತ್ತು ಎಂಟು ಅನುಕ್ರಮವಾದ ವಂಶಾವಳಿಯ ಪರೀಕ್ಷೆಗಳನ್ನು ನಡೆಸಿ ಇದರಿಂದ ಬಂದ ಫಲಿತಾಂಶಗಳನ್ನು ಪ್ರಕಟಿಸಿದ. ಇದರಿಂದ ಕಲಿಕೆಯಲ್ಲಿ ಚುರುಕು ಇಲಿಗಳಿಗೆ ಚುರುಕುಮರಿಗಳೂ ಹಿಂದುಳಿದಿದ್ದ ಇಲಿಗಳಿಗೆ ಹಿಂದುಳಿದ ಮರಿಗಳೂ ಹುಟ್ಟಿದುವು. ಇದನ್ನು ಪುನಃ ಇಲಿಗಳಲ್ಲಿ 8–18 ತಲೆಮಾರುಗಳ ವರೆಗೂ ಗಮನಿಸಲಾಯಿತು. ವ್ಯೂಹಶಿಕ್ಷಣದ ಸಾಮರ್ಥ್ಯ ವಂಶಾರ್ಜಿತವೆನ್ನುವುದನ್ನು ಈ ಪ್ರಯೋಗ ತಿಳಿಸುತ್ತದೆ. ಮತ್ತೊಬ್ಬ ಸಂಶೋಧಕ ಭಾವೋದ್ರೇಕತೆ ಅಧಿಕವಾಗಿರುವ ಒಂದು ವಂಶದ ಇಲಿಗಳನ್ನೂ ಮತ್ತು ಅಲ್ಪ ಭಾವೋದ್ರೇಕತೆಯುಳ್ಳ ಮತ್ತೊಂದು ವಂಶದ ಇಲಿಗಳನ್ನೂ ಉತ್ಪಾದಿಸುವುದರಲ್ಲಿ ಯಶಸ್ವಿಯಾದ. ಇನ್ನೂ ಕೆಲವು ಸಂಶೋಧಕರು ಪ್ರಾಣಿಗಳ ಕ್ರೂರತ್ವ ಹಾಗೂ ಸಾಧುಸ್ವಭಾವದಂಥ ಚಿತ್ತಪ್ರಕೃತಿಗಳ ಲಕ್ಷಣಗಳನ್ನು ವಿವಿಧ ವಂಶಗಳ ಅಧ್ಯಯನಗಳ ಮೂಲಕ ಕಂಡುಕೊಂಡಿದ್ದಾರೆ. ಕ್ರೂರ ಅಥವಾ ಸಾಧುಸ್ವಭಾವದ ಪ್ರಾಣಿಗಳು ಆಯಾ ಸ್ವಭಾವದ ಮರಿಗಳನ್ನು ಹಾಕುತ್ತವೆ ಎಂಬುದು ಇಲಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ತಿಳಿದುಬಂದಿದೆ. ಒಂದು ಪ್ರಯೋಗವನ್ನು ನಡೆಸಿದಾಗ ನಾರ್ವೆ ಜಾತಿಯ ಬೂದುಬಣ್ಣದ ಕಾಡಿಲಿಗಳನ್ನು ಮತ್ತು ಪಳಗಿಸಿದ ಆಲ್ಬಿನೋ ಜಾತಿಯ ಇಲಿಗಳನ್ನು ಹಿಡಿದು ಅವುಗಳ ಮರಿಗಳನ್ನು ಒಂದು ಬೋನಿನಲ್ಲಿ ಬೆಳೆಸಲಾಯಿತು. ಇದಾದ ಅನಂತರ ನಾರ್ವೆ ಜಾತಿಯ ಬೂದು ಬಣ್ಣದ ಕಾಡಿಲಿಗಳ ಮರಿಗಳು ಕ್ರೂರವಾಗಿಯೂ ಪಳಗಿಸಿದ ಆಲ್ಬಿನೋ ಇಲಿಗಳ ಮರಿಗಳು ಸಾಧುವಾಗಿಯೂ ಇದ್ದುದು ಕಂಡುಬಂದಿತು. ಈ ವ್ಯತ್ಯಾಸ ತಳಿಶಾಸ್ತ್ರದ ತತ್ತ್ವವನ್ನನುಸರಿಸಿದೆ. ಜಿಸ್‌ಬರ್ಗ್ ಮತ್ತು ಆಲಿ ಎಂಬುವರ ಅಧ್ಯಯನದಿಂದ ಪ್ರಾಣಿಗಳಲ್ಲಿ ಕಂಡುಬರುವ ಆಕ್ರಮಣದ ಪ್ರವೃತ್ತಿಗೆ ತಳಿಶಾಸ್ತ್ರದ ಆಧಾರವಿದೆಯೆಂದು ತಿಳಿದುಬಂದಿದೆ. ಇವರು ಮೂರು ವಂಶಗಳ ಸುಂಡಿಲಿಗಳ ಹೋರಾಡುವ ವರ್ತನೆಯನ್ನು ಪರಿಶೀಲಿಸಿದರು. ಇವರ ಸಂಶೋಧನೆ ಕಪ್ಪು, ಅಗೂಟೀ ಮತ್ತು ಆಲ್ಬಿನೋ ಜಾತಿಯ ಇಲಿಗಳ ಮೂರು ಬಗೆಗಳಲ್ಲಾಗಿತ್ತು. ಕಪ್ಪು ಇಲಿ ಹೋರಾಟದಲ್ಲಿ ಪ್ರಥಮ ಸ್ಥಾನವನ್ನೂ ಅಗೂಟೀ ಇಲಿ ದ್ವಿತೀಯ ಸ್ಥಾನವನ್ನೂ ಆಲ್ಬಿನೋ ಇಲಿ ಅಂತಿಮ ಸ್ಥಾನವನ್ನೂ ಗಳಿಸಿದುವು. ಹೋರಾಡುವ ಸಾಮರ್ಥ್ಯವನ್ನು ಬೆಳವಣಿಗೆ ಪ್ರಭಾವಿಸುವ ಸಾಧ್ಯತೆಯನ್ನು ತೆಗೆದುಹಾಕಲು, ಕಪ್ಪು ಮತ್ತು ಆಲ್ಬಿನೋ ಇಲಿಗಳ ಮರಿಗಳನ್ನು ಪೋಷಣೆಮಾಡುವ ತಾಯಿ ಇಲಿಯ ಜೊತೆ ಬೆಳೆಸಿ ಮತ್ತೆ ಕೆಲವು ಆಲ್ಬಿನೋ ಇಲಿಗಳನ್ನು ಪೋಷಣೆ ಮಾಡುವ ಕಪ್ಪು ಇಲಿಗಳ ಜೊತೆಯಲ್ಲಿ ಬೆಳೆಸಲಾಯಿತು. ಈ ರೀತಿಯಾಗಿ ಪೋಷಿತವಾದ ಮರಿಗಳನ್ನು ಪರೀಕ್ಷಿಸಲಾಗಿ, ಹೋರಾಡುವ ಸಾಮರ್ಥ್ಯದಲ್ಲಿ ಕಪ್ಪು ಇಲಿಗಳು ಆಲ್ಬಿನೋ ಇಲಿಗಳಿಗಿಂತ ಉತ್ತಮವೆಂದು ಕಂಡುಬಂದಿತು. ಇವುಗಳು ಬೆಳೆದ ಪರಿಸರದಿಂದ ಇವುಗಳ ವ್ಯಕ್ತಿತ್ವದ ರಚನೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ.

ಪ್ರಾಣಿಗಳ ಅನುವಂಶೀಯತೆ ಮತ್ತು ಪರಿಸರದ ಪ್ರಭಾವಗಳಿಂದ ಬುದ್ಧಿಶಕ್ತಿಯಲ್ಲಾಗುವ ಬದಲಾವಣೆಗಳನ್ನು ಅಧ್ಯಯನ ಮಾಡಲು ಅನೇಕ ಪ್ರಯೋಗಗಳನ್ನು ನಡೆಸಲಾಗಿದೆ. ಪರಿಸರ ವ್ಯಕ್ತಿತ್ವದ ಮೇಲೆ ಪ್ರಭಾವವನ್ನು ಬೀರುತ್ತದೆ ಎಂಬ ನಂಬಿಕೆಯನ್ನಿಟ್ಟಿರುವ ಮನಶ್ಶಾಸ್ತ್ರಜ್ಞರು ಅನುವಂಶೀಯತೆಯಿಂದ ವ್ಯಕ್ತಿಯ ಜೀವನದಲ್ಲಿ ಹೆಚ್ಚು ಬದಲಾವಣೆಗಳಾಗುವುದಿಲ್ಲವೆಂದು ಹೇಳುತ್ತಾರೆ. ಆರೋಗ್ಯವಾಗಿರುವ ಯಾವುದೇ ಮಗುವಿಗೆ ಸೂಕ್ತ ತರಬೇತಿ ಮತ್ತು ಪರಿಸರವನ್ನು ಒದಗಿಸುವುದರಿಂದ ಬುದ್ಧಿಶಕ್ತಿಯಲ್ಲಿ ಶ್ರೇಷ್ಠವೆನಿಸುವ ಹಾಗೆ ಮಾಡಬಹುದೆಂದು ಇವರು ವಾದಿಸುತ್ತಾರೆ. ಮತ್ತೊಂದು ಕಡೆ ಅನುವಂಶೀಯ ಶಾಸ್ತ್ರಜ್ಞರು ಬುದ್ಧಿಶಕ್ತಿ ಎನ್ನುವುದು ಕೇವಲ ಅನುವಂಶೀಯತೆಯ ಅಂಶದಿಂದಲೇ ನಿರ್ಧರಿತವಾಗುತ್ತದೆ ಎಂದು ವಾದಹೂಡುತ್ತಾರೆ. ಬುದ್ಧಿಶಕ್ತಿ ಅನುವಂಶೀಯತೆಯಿಂದ ಬಂದದ್ದೊ ಅಥವಾ ಪರಿಸರದಿಂದ ಬಂದದ್ದೊ ಅಥವಾ ಎರಡರಿಂದಲೂ ಬಂದದ್ದೊ ಎಂಬುದನ್ನು ನಾವು ಕಂಡುಹಿಡಿಯಬೇಕು. ಅನುವಂಶೀಯತೆಯ ಪರಿಣಾಮವಾಗಿರುವ ವ್ಯತ್ಯಾಸಗಳನ್ನು ತಿಳಿಯಲು, ನಾವು ಇದರಲ್ಲಿ ಭಿನ್ನವಾಗಿರುವ ಮಕ್ಕಳನ್ನು ಒಂದೇ ಪರಿಸರದಲ್ಲಿ ಬೆಳೆಸಬೇಕು. ಹಾಗೆಯೇ ಪರಿಸರದಿಂದಾಗುವ ಪರಿಣಾಮಗಳನ್ನು ತಿಳಿಯಲು ಒಂದೇ ಅನುವಂಶೀಯತೆಗೆ ಸೇರಿರುವ ವ್ಯಕ್ತಿಗಳನ್ನು ವಿವಿಧ ಪರಿಸರಗಳಿಗೆ ಒಳಪಡಿಸಬೇಕು. ಇಂಥ ಪ್ರಯತ್ನದಲ್ಲಿ ಒಂದೇ ಲಿಂಗದ ಅವಳಿ ಮಕ್ಕಳನ್ನು (ಐಡೆಂಟಿಕಲ್ ಟ್ವಿನ್ಸ್) ಅವರ ಜೀವನದ ಮೊದಲಲ್ಲೆ ವಿಂಗಡಿಸಿ, ಅವರನ್ನು ವಿವಿಧ ಸಾಮಾಜಿಕ ಹಾಗೂ ಪ್ರಾಪಂಚಿಕ ಜೀವನದ ಸ್ಥಿತಿಗಳಲ್ಲಿ ಬೆಳೆಸಲಾಗುತ್ತದೆ. ಕೆಲವು ಕಾಲದ ಅನಂತರ ಅವರ ಬುದ್ಧಿಶಕ್ತಿಗಳನ್ನು ಪರೀಕ್ಷಿಸಲಾಗುತ್ತದೆ. ಒಂದು ಪರೀಕ್ಷೆಯಲ್ಲಿ ಒಟ್ಟಿಗೆ ಬೆಳೆಸಿದ ಹಾಗೂ ಒಟ್ಟಿಗೆ ಬೆಳೆಸದ ಏಕಲಿಂಗದ ಅವಳಿ ಮಕ್ಕಳ ಬುದ್ಧಿಶಕ್ತಿಯನ್ನು ಪರೀಕ್ಷಿಸಲಾಯಿತು. ಒಟ್ಟಿಗೆ ಬೆಳೆಸಿದ ಏಕಲಿಂಗದ ಅವಳಿ ಮಕ್ಕಳು 0.85 ಅಂಶದಷ್ಟು ಪರಸ್ಪರ ಸಂಬಂಧವನ್ನು ಹೊಂದಿದ್ದುದೂ ಒಟ್ಟಿಗೆ ಬೆಳೆಸದ ಏಕಲಿಂಗದ ಅವಳಿ ಮಕ್ಕಳು 0.70 ಅಂಶದಷ್ಟು ಪರಸ್ಪರ ಸಂಬಂಧವನ್ನು ಹೊಂದಿದ್ದುದೂ ಕಂಡುಬಂದಿತು. ಒಟ್ಟಿಗೆ ಬೆಳೆಸಿದ ಏಕಲಿಂಗದ ಅವಳಿ ಮಕ್ಕಳಲ್ಲಿ ಹಾಗೂ ಬೇರೆ ಬೇರೆಯಾಗಿ ಬೆಳೆಸಿದ ಅನನ್ಯ ಅವಳಿ ಮಕ್ಕಳಲ್ಲಿ ಕಂಡುಬರುವ ವ್ಯತ್ಯಾಸವೂ ಅನುವಂಶೀಯತೆ ಮತ್ತು ಪರಿಸರದಿಂದ ಬುದ್ಧಿಶಕ್ತಿಯ ಬೆಳವಣಿಗೆಯ ಮೇಲಾಗುವ ಪ್ರಭಾವವನ್ನು ಎತ್ತಿ ತೋರಿಸುತ್ತದೆ. ಅನನ್ಯ ಅವಳಿ ಮಕ್ಕಳಲ್ಲಿ ಕಂಡುಬರುವ ಸಾಮ್ಯ ಮತ್ತು ಬುದ್ಧಿಶಕ್ತಿಯ ಬೆಳವಣಿಗೆ ಜೀವನದುದ್ದಕ್ಕೂ ಇರುತ್ತವೆ. ಭ್ರಾತ್ರೀಯ ಏಕಲಿಂಗದ ಅವಳಿಗಳು ಹಾಗೂ ಏಕೋದರಗಳು ವಿವಿಧ ಅನುವಂಶೀಯತೆಯನ್ನು ಹೊಂದಿರುತ್ತವೆ. ಆದರೆ ಇವು ಒಂದೇ ಪರಿಸರದಲ್ಲಿ ಬೆಳೆಸಲ್ಪಡುತ್ತವೆ. ಇವುಗಳು ಕ್ರಮವಾಗಿ 0.64 ಮತ್ತು 0.50 ಅಂಶಗಳ ಪರಸ್ಪರ ಸಂಬಂಧಗಳನ್ನು ಹೊಂದಿರುತ್ತವೆ. ಒಂದೇ ರೀತಿಯ ಪರಿಸರವನ್ನು ಒದಗಿಸಿದ್ದರೂ ಅವು ತಮ್ಮ ಬುದ್ಧಿಶಕ್ತಿಯಲ್ಲಿ ವ್ಯಕ್ತಿಶಃ ವ್ಯತ್ಯಾಸಗಳನ್ನು ಹೆಚ್ಚಾಗಿ ತೋರಿಸುತ್ತವೆ. ಒಂದು ವಿಧವಾದ ಪರಿಸರವನ್ನು ಭ್ರಾತ್ರೀಯ ಏಕಲಿಂಗದ ಅವಳಿಗಳಿಗೂ ಮತ್ತು ಏಕೋದರಗಳಿಗೂ ಒದಗಿಸಿಕೊಟ್ಟರೂ ಇದರಿಂದ ಒಂದೇ ಸಮನಾದ ಬುದ್ಧಿಶಕ್ತಿಯ ಬೆಳವಣಿಗೆ ಕಂಡುಬರುವುದಿಲ್ಲ. ಪರಿಸರ ಅನುವಂಶೀಯತೆಯ ಕೇವಲ ಒಂದು ಸಹಸಂಬಂಧಿ. ಇದು ಯಾವ ಪ್ರಮಾಣದಲ್ಲಿ ಅನುವಂಶೀಯತೆಯ ಗುಣಲಕ್ಷಣಗಳನ್ನು ಅಭಿವೃದ್ಧಿಗೊಳಿಸಬಹುದು ಎಂಬುದನ್ನು ನಿರ್ಧರಿಸುತ್ತದೆ. ಅನುವಂಶೀಯತೆ ಎಂಬ ಪದದಲ್ಲಿ ಒಂದು ಶಾಶ್ವತವಾಗಿ ಕಂಡುಬರುವ ಅಂಶವೂ ಮತ್ತು ಪರಿಸರ ಎಂಬ ಪದದಲ್ಲಿ ಅಶಾಶ್ವತವಾದ ಅಂಶವೂ ಇವೆ ಎಂದು ಹೇಳಬಹುದು. ಒಬ್ಬ ವ್ಯಕ್ತಿಗಿರುವ ಪರಿಸರವನ್ನು ಉತ್ತಮಪಡಿಸುವುದರಿಂದ ಅನುವಂಶೀಯ ಶಕ್ತಿವೈಶಿಷ್ಟ್ಯಗಳು ಯಾವ ಸಂದೇಹವೂ ಇಲ್ಲದೆ ಅಭಿವೃದ್ಧಿಗೊಳ್ಳುತ್ತವೆ. ಮನುಷ್ಯ ಅನುವಂಶೀಯತೆ ಹಾಗೂ ಪರಿಸರ– ಈ ಎರಡರಿಂದಲೂ ಬಂದ ವ್ಯಕ್ತಿ. (ಎಚ್.ಡಿ.ವಿ.)

**ಶಿಕ್ಷಣ ಮತ್ತು ಅನುವಂಶೀಯತೆ**: ಒಬ್ಬ ವ್ಯಕ್ತಿಯ ಬೆಳವಣಿಗೆಯಲ್ಲಿ ಅನುವಂಶೀಯತೆ ಮತ್ತು ಪರಿಸರ ಇವೆರಡರ ಪ್ರಭಾವ ಎಷ್ಟರ ಮಟ್ಟಿಗಿದೆ ಎಂಬ ವಿಷಯದಲ್ಲಿ ಎರಡು ವಿರುದ್ಧ ಪಂಥಗಳಿವೆ. ಮಗುವಿನ ಭವಿಷ್ಯಜೀವನವನ್ನು ಅನುವಂಶೀಯತೆಯೇ ನಿರ್ಧರಿಸುವುದು ಎಂಬುದನ್ನು ಗಾಲ್ಟನ್ ಮತ್ತು ಅವರ ಅನುಯಾಯಿಗಳು ಹೇಳಿದರೆ ವಾಟ್ಸನ್ ಮತ್ತು ಅವನ ಅನುಯಾಯಿಗಳು ಅನುವಂಶೀಯತೆ ಏನೇ ಇರಲಿ, ವ್ಯಕ್ತಿಯ ಶಿಕ್ಷಣಾಭಿವೃದ್ಧಿ ಅವನ ವ್ಯಕ್ತಿತ್ವ, ಭವಿಷ್ಯಜೀವನದ ಸ್ವರೂಪ–ಇವನ್ನೆಲ್ಲ ರೂಪಿಸುವುದು ಅವನು ವಾಸಿಸುವ ಪರಿಸರವೇ ಎನ್ನುತ್ತಾರೆ.

ಈ ವಾದಗಳನ್ನು ಸಿದ್ಧಪಡಿಸಲು ಅನೇಕ ವೈಜ್ಞಾನಿಕ ಸಂಶೋಧನೆಗಳನ್ನೂ ನಡೆಸಲಾಗಿದೆ.

1 ಮನೆತನಗಳ ಚರಿತ್ರೆಯ ಅಭ್ಯಾಸ : (i) ಗಾಲ್ಟನ್ ಅನೇಕ ಶ್ರೇಷ್ಠ ಮನೆತನಗಳ ಚರಿತ್ರೆಯನ್ನು ಪರಿಶೀಲಿಸಿ ಉತ್ತಮ ಮಾನಸಿಕಶಕ್ತಿಯ ಕಾರಣ ಅನುವಂಶೀಯತೆಯೆಂದು ನಿರ್ಧರಿಸಿದ್ದಾನೆ. (ii) ಗಾಲ್ಟನ್, ವೆಡ್ಜ್‌ವುಡ್, ಡಾರ್ವಿನ್ ಮನೆತನದ 1000 ವರ್ಷಗಳ ಚರಿತ್ರೆಯನ್ನು ಕಾರ್ಲ್‌ಪಿಯರ್ಸನ್ ಶೋಧಿಸಿ ಆ ಮನೆತನದವರೆಲ್ಲರೂ ಪ್ರತಿಭಾಶಾಲಿಗಳಾಗಿ ಸಮಾಜದಲ್ಲಿ ಗಣ್ಯಸ್ಥಾನವನ್ನು ಗಳಿಸಿದ್ದುದೂ ಅಲ್ಲದೆ ಅವರಲ್ಲಿ ಐದು ನೇರವಾದ ತಲೆಮಾರಿನವರು ರಾಯಲ್ ಸೊಸೈಟಿಯ ಸದಸ್ಯತ್ವವನ್ನು ಸಂಪಾದಿಸಿರುವರೆಂದು ಹೇಳಿದ್ದಾನೆ. (iii) ಅಮೆರಿಕದ ಎಡ್ವರ್ಡ್ಸ್ ಮನೆತನದ ಸಂಶೋಧನೆ ನಡೆಸಿ ಡಾಕ್ಟರ್–ವಿನ್‌ಪಿಪ್ ಮೇಲಿನ ನಿರ್ಧಾರಕ್ಕೆ ಬಂದಿದ್ದಾನೆ. (iv) ಡಗ್‌ಡೇಲ್ ಎಂಬುವ ಮೇಕ್ಸ್‌ಜ್ಯೂಕ್ ಎಂಬ ಅಪರಾಧಿ ಮನೆತನದ ಚರಿತ್ರೆಯನ್ನೂ ಡಾಕ್ಟರ್ ಗೋಡಾರ್ಡ್ ಕಾಲಿಕಾಕ್ ಎಂಬ ಕ್ರಾಂತಿಕಾರಕ ಮನೆತನದ ಚರಿತ್ರೆಯನ್ನೂ ಪರಿಶೀಲಿಸಿ, ಆ ಮನೆತನಗಳಲ್ಲಿ ಹುಟ್ಟಿದವರಲ್ಲಿ ಅನೇಕ ಮಂದಿ ಮೂಲ ಪುರುಷನ ಅಧಮ (ಕೀಳು) ಮಾನಸಿಕ ಶಕ್ತಿಯನ್ನೇ ಹೊಂದಿದ್ದರು ಎಂದು ತಿಳಿಸಿದ್ದಾನೆ.

**2. ಸಹಸಂಬಂಧದ ಅಭ್ಯಾಸ (ಕೋರಿಲೇಷನ್ ಸ್ಟಡೀಸ್) :** ಈ ಸಂಶೋಧನೆಗಳಿಂದ ವ್ಯಕ್ತವಾಗುವುದೇನೆಂದರೆ, ಸಹೋದರ ಸಹೋದರಿಯರಲ್ಲಿ ಅಂದರೆ ಏಕೋದರದಲ್ಲಿ (ಸಿಬ್ಲಿಂಗ್) ಕಂಡುಬರುವ ಮಾನಸಿಕಶಕ್ತಿಯ ಸಾದೃಶ್ಯಗಳಿಗಿಂತ ಅವಳಿ ಮಕ್ಕಳಲ್ಲಿ ಹೆಚ್ಚು ಸಾದೃಶ್ಯವಿರುವುದು. ರಕ್ತಸಂಬಂಧದ ಗಾಢತೆ ಹೆಚ್ಚಿದಂತೆಲ್ಲ ಬುದ್ಧಿಶಕ್ತಿಯಲ್ಲಿ ಹೆಚ್ಚಿನ ಸಾದೃಶ್ಯಕಂಡುಬರುವುದು. ಅಂದರೆ ಬುದ್ಧಿಶಕ್ತಿ ಅನುವಂಶೀಯವಾದುದು.

ಇವಲ್ಲದೆ, (ಈ ಹಿಂದಿನ ಲೇಖನದಲ್ಲಿ ಹೇಳಿರುವಂತೆ) ಬೇರೆ ಬೇರೆ ವರ್ಗದ ಮಕ್ಕಳನ್ನು ಹಲವಾರು ಪರಿಸರಗಳಲ್ಲಿ ಬೆಳೆಸಿ ಅವರ ವಿಕಾಸವನ್ನು ಅಭ್ಯಸಿಸಿದ್ದಾರೆ.

ಮೇಲಿನ ಸಂಶೋಧನೆಗಳಿಂದ ಸಂಗ್ರಹಿಸಿರುವ ರುಜುವಾತುಗಳಿಂದ ಅನುವಂಶೀಯತೆ ಮತ್ತು ಪರಿಸರಗಳು ಪರಸ್ಪರ ಪೋಷಕಗಳೆಂದು ವ್ಯಕ್ತವಾಗುವುದು. ಅನುವಂಶೀಯ ಗುಣಗಳು ಮಕ್ಕಳು ಪಡೆಯಬಹುದಾದ ಶಿಕ್ಷಣದ ಪರಮಾವಧಿಯನ್ನು ನಿರ್ಧರಿಸುತ್ತವೆ. ಆದರೆ ಅನುವಂಶೀಯ ಶಕ್ತಿಗಳು ಫಲಕಾರಿಯಾಗಿ ಬೆಳೆಯುವ ಮಟ್ಟವನ್ನು ಪರಿಸರ ನಿರ್ಧರಿಸುತ್ತದೆ. ಈ ದೃಷ್ಟಿಯಿಂದ ನೋಡಿದರೆ, ವ್ಯಕ್ತಿಯಲ್ಲಿ ಅಡಕವಾಗಿರುವ ಅನುವಂಶೀಯತೆಯ ಗುಣಗಳನ್ನು ಸಂಪೂರ್ಣವಾಗಿ ವಿಕಾಸಗೊಳಿಸಲು ಸಾಧಕವಾಗುವ ಪರಿಸರಗಳನ್ನು ಒದಗಿಸುವುದೇ ಶಿಕ್ಷಣದ ಮುಖ್ಯ ಗುರಿ. ಆದ್ದರಿಂದಲೇ ಶಿಕ್ಷಣದಲ್ಲಿ ಮುಂದುವರಿದ ದೇಶಗಳಲ್ಲಿ ಪರಿಸರಕ್ಕೆ ಹೆಚ್ಚು ಪ್ರಾಮುಖ್ಯ ದೊರೆತು ಅದನ್ನು ಸರ್ವವಿಧದಿಂದಲೂ

ಉತ್ತಮಗೊಳಿಸಲು ಅನೇಕ ಪ್ರಯತ್ನಗಳು ನಡೆದಿವೆ. ಉಚಿತ ಒತ್ತಾಯದ ವಿದ್ಯಾಭ್ಯಾಸ, ಶಿಶುವಿಹಾರಗಳು, ಉಚಿತದೇಶೀಯ ಆರೋಗ್ಯ ಸೇವೆ, ಉಚಿತ ಸಾರ್ವಜನಿಕ ಪುಸ್ತಕ ಭಂಡಾರಗಳು, ವಾಚನಾಲಯಗಳು, ಮಧ್ಯಾಹ್ನದ ಊಟದ ವಿತರಣೆ, ಸಾರ್ವಜನಿಕ ಆಟದಮೈದಾನಗಳು, ಸಾಮಾಜಿಕ ಚಟುವಟಿಕೆಗಳು, ಉಚಿತ ಕಲಾಪ್ರದರ್ಶನಗಳು, ಪ್ರವಾಸ ಸೌಲಭ್ಯಗಳು, ರೇಡಿಯೊ, ಚಲನಚಿತ್ರಗಳು, ಟೆಲಿವಿಷನ್ ಇವುಗಳ ಅವಕಾಶವನ್ನು ಕಲ್ಪಿಸಿದರೆ ಮಕ್ಕಳಿಗೆ ಶ್ರೇಷ್ಠವೂ ಸೂಕ್ತವೂ ಆದ ಸನ್ನಿವೇಶದ ಸೌಲಭ್ಯ ದೊರೆತು ಅವರ ಬೆಳವಣಿಗೆ ಪರಿಪೂರ್ಣಗೊಳ್ಳುತ್ತದೆ.

ವ್ಯಕ್ತಿಯ ಬೆಳವಣಿಗೆಯಲ್ಲಿ ಅನುವಂಶೀಯತೆ, ಪರಿಸರಗಳ ಪ್ರಮುಖ್ಯ ಮತ್ತು ಪ್ರಭಾವಗಳ ಚರ್ಚೆಯಲ್ಲಿ ನನ್ ಮತ್ತು ವುಡ್‌ವರ್ತ್‌ರವರು ಒಂದು ಹೊಸಬೆಳಕನ್ನು ಬೀರಿದ್ದಾರೆ. ಅವರ ಪ್ರಕಾರ, ಮಗು ತನ್ನ ಅಭಿವೃದ್ಧಿಯನ್ನು ತಾನೇ ನಿರ್ಧರಿಸಿಕೊಳ್ಳಬಲ್ಲ ಒಂದು ಚೈತನ್ಯಪೂರಿತ ಜೀವಿ. ಅದು ತನ್ನ ಅನುವಂಶೀಯತೆಯನ್ನೂ ಸನ್ನಿವೇಶವನ್ನೂ ಸಾಧನಗಳಾಗಿ ಉಪಯೋಗಿಸಬಲ್ಲ ಶಕ್ತಿಯಿಂದ ಕೂಡಿದ ಒಂದು ಕೇಂದ್ರ. ಆದ್ದರಿಂದ ಕೇವಲ ಅನುವಂಶೀಯತೆಯೇ ಆಗಲಿ, ಪರಿಸರವೇ ಆಗಲಿ ಅದರ ಅಭಿವೃದ್ಧಿಗೆ ಕಾರಣವಾಗಲಾರದು. ಆದರೆ ಇವೆರಡು ಅದರ ಸ್ವತಂತ್ರ ವರ್ತನೆಗೆ ಆಧಾರಗಳು. ಆದ್ದರಿಂದ ವಿವಿಧಶಕ್ತಿ, ಅಭಿರುಚಿ, ಚಟುವಟಿಕೆಗಳನ್ನು ಪ್ರದರ್ಶಿಸುವ ಮಕ್ಕಳಿಗೆ ಸ್ವಪ್ರಯತ್ನದಿಂದ ವಿಕಸಿಸಲು ಅವಕಾಶ ಒದಗಿಸುವುದೂ ಶಿಕ್ಷಣದ ಧ್ಯೇಯವಾಗಿರಬೇಕು. (ಸಿ.ಆರ್.)

**ಅನುವರ್ಷ ಅವಸಾದನ :** ಯಾವ ಅವಸಾದನ (ಸಂಚಯನ) ತಲವಾಗಲಿ ಅಥವಾ ಸ್ತರವಾಗಲಿ ಒಂದು ವರ್ಷದೊಳಗಾಗಿ ನಿಕ್ಷಿಪ್ತವಾದರೆ ಅದಕ್ಕೆ ವಾರ್ವ್ ಅಥವಾ ವಾರ್ಷಿಕವೆಂದು ಹೆಸರು. ಅನುವರ್ಷ ಅವಸಾದನದಲ್ಲಿ (ವಾರ್ವ್ಡ್ ಸೆಡಿಮೆಂಟೇಷನ್) ಎರಡು ರೂಪಗಳನ್ನು ಗುರುತಿಸಬಹುದು. 1. ಹಿಮನದೀಯ ವಾರ್ಷಿಕಗಳು (ಗ್ಲೇಸಿಯಲ್ ವಾರ್ವ್‌ಸ್); 2. ಇತರ ವಾರ್ಷಿಕಗಳು (ನಾನ್‌ಗ್ಲೇಸಿಯಲ್ ವಾರ್ವ್‌ಸ್). ನದೀಜ ವಾರ್ಷಿಕಗಳು ಹಿಮನದಿಪರವಾದ ಸರೋವರಗಳಲ್ಲಿ ಆ ಯುಗದ ಹಿಮಪರಾವರ್ತನ ಘಟ್ಟದಲ್ಲಿ ನಿಕ್ಷಿಪ್ತವಾದ ಜೇಡಿಮಣ್ಣು ಮತ್ತು ಮೆಕ್ಕಲುಗಳ ಲಕ್ಷಣವನ್ನು ತಳೆದಿವೆ. ಪ್ರತಿಯೊಂದು ವಾರ್ಷಿಕವೂ ಬೇಸಗೆಯ ತೆಳುಬಣ್ಣದ ಮೆಕ್ಕಲಿನಿಂದ ಹಿಡಿದು ಚಳಿಗಾಲದ ಕರಿಜೇಡಿಮಣ್ಣಿನ ದರ್ಜೆಯವರೆಗಿನ ನಿಕ್ಷಿಪ್ತಗಳ ಯುಗ್ಮವಾಗಿದೆ. ಸಾಮಾನ್ಯವಾಗಿ ಪದರಗಳ ಬಣ್ಣ ತೆಳುಬೂದಿನಿಂದ ಹಿಡಿದು ಕರಿಬೂದಿನವರೆಗೆ ವಿಸ್ತರಿಸಿದೆ. ಆದರೆ ಅಲ್ಲಲ್ಲಿ ಸ್ಥಳೀಯ ಸನ್ನಿವೇಶಕ್ಕನುಗುಣವಾಗಿ ಇವುಗಳ ಬಣ್ಣ ಮಾಸಲುಹಳದಿ ಅಥವಾ ಕೆಂಪಗಿರುವುದೂ ಉಂಟು. ಪ್ರತಿಯೊಂದು ವಾರ್ಷಿಕದ ಗಾತ್ರ ನಿರ್ದಿಷ್ಟಪದರದಲ್ಲಿ ಅದರ ಕೆಳಭಾಗದಿಂದ ಮೇಲು ಭಾಗಕ್ಕೇರುತ್ತ ಏರುತ್ತ ತೆಳುವಾಗುವ ಪ್ರವೃತ್ತಿಯನ್ನು ತೋರಿಸುತ್ತಿದ್ದರೂ ಸ್ಥೂಲವಾಗಿ ಒಂದೇ ಸಮನಾಗಿರುತ್ತದೆ. ಅತ್ಯಂತ ಕೆಳಪದರಗಳು ಸಾಮಾನ್ಯವಾಗಿ ಮರಳಿನಿಂದ ಕೂಡಿದ್ದು ಕೆಲವು ಸೆಂಮೀಗಳಿಂದ ಹಿಡಿದು ಅನೇಕ ಮೀ.ಗಳಷ್ಟು ದಪ್ಪವಾಗಿರಬಹುದು. ಆದರೆ ಅನೇಕ ವಾರ್ಷಿಕಗಳು 0.75 ಸೆಂಮೀ ಮತ್ತು ಅದಕ್ಕೂ ಕಡಿಮೆ ದಪ್ಪವಾಗಿರುತ್ತವೆ. ಪ್ರತಿಯೊಂದು ಪದರವೂ ತನ್ನ ನೆರೆಹೊರೆಯ ಪದರಕ್ಕಿಂತ ಗಾತ್ರದಲ್ಲಿ ಭಿನ್ನವಾಗಿರುತ್ತದೆ. ಗಾತ್ರದಲ್ಲಿ ಈ ವ್ಯತ್ಯಾಸಗಳು ಸಾಮಾನ್ಯವಾಗಿ ಬೇಸಿಗೆಯ ಮೆಕ್ಕಲಿನ ಗಾತ್ರದಲ್ಲಿನ ವ್ಯತ್ಯಾಸಗಳಿಂದ ಉಂಟಾಗುತ್ತವೆ; ಚಳಿಗಾಲದ ಜೇಡಿಮಣ್ಣು ಗಾತ್ರದಲ್ಲಿ ಹೆಚ್ಚು ಸಮನಾಗಿದೆ.

ಇತರ ವಾರ್ಷಿಕಗಳು ಅನೇಕ ಸಿಹಿನೀರಿನ ಸರೋವರ ನಿಕ್ಷೇಪಗಳಲ್ಲಿ ಕಂಡುಬರುತ್ತವೆ. ಕಾರ್ಬೊನೇಟ್ ಹೆಚ್ಚಾಗಿರುವ ಮತ್ತು ಕಾರ್ಬೊನೇಟ್ ಹೆಚ್ಚಾಗಿರದ ಪರ್ಯಾಯಕ್ರಮದ ಪದರಗಳ ಎಳೆಗಳಲ್ಲಿನ ಕ್ರಮಬದ್ಧವಾದ ವ್ಯತ್ಯಾಸಗಳಿಂದ ಈ ವಾರ್ಷಿಕದಂಥ ತೆಳುಪದರಗಳು ಉಂಟಾಗಬಹುದು. ಈ ಪೊರೆಗಳು ಬಹಳ ತೆಳುವಾಗಿದ್ದರೂ (0.01–0.10 ಮಿ.ಮೀ) ಕೆಲವು ಸಮಯಗಳಲ್ಲಿ ವಾರ್ಷಿಕಪದರಗಳಾಗಿರುವುದು ಕಂಡುಬರುತ್ತದೆ. (ಸಿ.ಜಿ.)

**ಅನುವಾದ ಕಲೆ :** ನೋಡಿ – ಭಾಷಾಂತರ ಕಲೆ.

**ಅನುವೃದ್ಧಿ :** ಆಸ್ತಿವೃದ್ಧಿಯೇ (ಅಕ್ಸೆಷನ್) ಅನುವೃದ್ಧಿ. ವಸ್ತುವಿನ ಸ್ವಾಮಿಯೇ ತನ್ನ ಆಸ್ತಿಯಿಂದ ಉದ್ಭವಿಸಿದ, ಅದರೊಡನೆ ಅಭೇದವಾಗಿರುವ, ಅದರಿಂದಲೇ ಸಿದ್ಧವಾದವುಗಳಿಗೆಲ್ಲ ಸ್ವಾಭಾವಿಕವಾಗಿಯೇ ಒಡೆಯನಾಗುವನು ಎಂಬ ತತ್ತ್ವ ನೈಸರ್ಗಿಕ ಕಾಯಿದೆ ಎನ್ನುವಂತೆ ಎಲ್ಲ ಕಾಯಿದೆಗಳಲ್ಲಿಯೂ ರೂಢವಾಗಿದೆ. ಅಂದರೆ ಆಸ್ತಿಯ ಮಾಲೀಕನೇ ಈ ಎಲ್ಲ ತರಹದ ಅನುವೃದ್ಧಿಗೂ ಮಾಲೀಕನಾಗುವನು. ರೋಮನ್ ಕಾಯಿದೆಯಂತೆ ನಿಸರ್ಗಜನ್ಯ ಅನುವೃದ್ಧಿ (ಗಿಡಮರ, ದವಸಧಾನ್ಯ, ದನಕರುಗಳು) ಮಾಲೀಕನಿಗೆ ಸೇರುತ್ತದೆ. ಮನುಷ್ಯಪ್ರಯತ್ನದಿಂದಾದ ವಸ್ತುವಿನ ಮೌಲ್ಯವೃದ್ಧಿಯನ್ನು ಪ್ರಸ್ತಾಪಿಸಿ (ಮರದಿಂದ ಮಾಡಿದ ಹಲಗೆ, ಕಸೂತಿ ಹೊಂದಿದ ವಸ್ತ್ರ, ಧಾತುವಿನಿಂದ ಸಿದ್ಧಪಡಿಸಿದ ಪಾತ್ರೆಗಳು) – ಇಂಥವು ಆಸ್ತಿಯ ಅನುವೃದ್ಧಿಯೆಂದೇ ಪರಿಗಣಿಸಿ ಆ ಮೂಲವಸ್ತುವಿನ ಮಾಲೀಕನಿಗೆ ಸುಧಾರಿತ ವಸ್ತುವಿನ ಸ್ವಾಮ್ಯವನ್ನು ಕೊಟ್ಟಿರುವರು (ಆದರೆ ಅದರಿಂದ ಹುಟ್ಟಿದ ವಸ್ತು ವ್ಯಾವಹಾರಿಕವಾಗಿ ಅದರಿಂದ ಸಂಪೂರ್ಣ ಭಿನ್ನವೆಂದು ಎಣಿಸಲ್ಪಟ್ಟಾಗ ಉದಾ: ದ್ರಾಕ್ಷಿಯಿಂದಾದ ಮದ್ಯ, ಕಾಳಿನಿಂದ ಬಂದ ಎಣ್ಣೆ, ಗೋದಿಯಿಂದಾದ ಬ್ರೆಡ್ಡು – ಇವುಗಳಿಗೆ ಈ ನಿಯಮ ಅನ್ವಯಿಸುತ್ತಿರಲಿಲ್ಲ). ಆದರೆ ಇಂಗ್ಲಿಷ್ ಕಾಯಿದೆ ಈ ತರಹದ ಮೌಲ್ಯವೃದ್ಧಿಯ ಪ್ರಸಂಗಗಳಲ್ಲಿ ಈ ಎಲ್ಲ ತತ್ತ್ವಗಳನ್ನೂ ಒಪ್ಪಿಕೊಂಡಿಲ್ಲ. ನೈಸರ್ಗಿಕಾನುವೃದ್ಧಿಯ ವಿಚಾರದಲ್ಲಿ ಈ ತತ್ತ್ವವನ್ನು ಅನುಸರಿಸಿದ್ದರೂ ಕೃತ್ರಿಮಾನುವೃದ್ಧಿಯ ವಿಚಾರದಲ್ಲಿ ಅನುಸರಿಸಿಲ್ಲ. ಮೂಲವಸ್ತುವಿನ ಬೆಲೆ, ಕೃತ್ರಿಮವಾಗಿ ಸುಧಾರಿತವಸ್ತುವಿನ ಬೆಲೆ ಇವೆರಡನ್ನೂ ವಿಮರ್ಶಿಸಿ ನೋಡಿ ಅವುಗಳ ಮೌಲ್ಯಮಾಪನದಿಂದ ಯಾವನು ಹೆಚ್ಚು ಅರ್ಹನೆಂದು ತೋರುವನೋ ಅವನಿಗೆ ಆ ಪೂರ್ಣವಸ್ತುವಿನ ಸ್ವಾಮ್ಯವನ್ನು ಕೊಟ್ಟು, ಮತ್ತೊಬ್ಬನಿಗೆ ಅವನು ಕಳೆದುಕೊಂಡ ಅಂಶಗಳಿಗೆ ಪರಿಹಾರವನ್ನು ಒದಗಿಸಲಾಗುತ್ತದೆ. ಭಾರತೀಯ ಕಾಯಿದೆಯೂ ಇದೇ ರೀತಿಯದು. ಸ್ಥಿರಾಸ್ತಿಯ ಅನುವೃದ್ಧಿ ಅನೇಕ ವಿಧವಾಗಿರುತ್ತದೆ. ಹೊಳೆ, ಹಳ್ಳ, ಸಮುದ್ರ ಇವುಗಳ ಪ್ರವಾಹದ ಪರಿಣಾಮವಾಗಿ ಅಲ್ಪಸ್ವಲ್ಪವಾಗಿ ಸಂಚಯಿಸುವ ನೆರೆಮಣ್ಣಿನಿಂದ ದಂಡೆಯ ಭೂಮಿ ಬೆಳೆಯುವುದು. ಹೀಗೆ ನೆರೆಮಣ್ಣಿನ ನೆಲ ದಂಡೆಯ ನೆಲದಿಂದ ಅಭಿನ್ನವಾಗಿ ಬೆಳೆದರೆ ಅದು ಸಾರ್ವಜನಿಕ ಹೊಳೆಯ ಭಾಗವನ್ನು ವ್ಯಾಪಿಸಿದರೂ ಅದರ ಸ್ವಾಮ್ಯ ದಂಡೆಯ ನೆಲದ ಒಡೆಯನಿಗೇ ಸೇರುವುದು. ಆದರೆ ದಂಡೆಯ ನೆಲದಿಂದ ಭಿನ್ನವಾಗಿ ತೋರುವಂತೆ ಬೇರ್ಪಡಿಸಲ್ಪಟ್ಟ ಭಾಗದಲ್ಲಿನ ಮಣ್ಣು, ಮರಳು ಮುಂತಾದವುಗಳ ಮೇಲೆ ನೆರೆಯ ತೀರದ ಭೂಮಿಯ ಒಡೆಯನಿಗೆ ಹಕ್ಕಿಲ್ಲ (ಸೆಕ್ರೆಟರಿ ಆಫ್ ಸ್ಟೇಟ್ ವರ್ಸಸ್ ರಾಜ ಆಫ್ ವಿಜಯನಗರಂ 40, ಇಂಡಿಯನ್ ಕೇಸಸ್ 897). ಅದರಂತೆ ಆಕಸ್ಮಿಕವಾಗಿ ಬಂದ ವಿಪರೀತ ಪ್ರವಾಹದ ಪ್ರಭಾವದಿಂದ ಒಂದು ಕಡೆಯ ಭೂಮಿ ಕತ್ತರಿಸಿ ಬಂದು ಇನ್ನೊಂದು ಕಡೆಯಲ್ಲಿ ಹೊಂದಿಸಲ್ಪಟ್ಟರೆ ಇಂಥವರದೇ, ಇಂಥದೇ ಭೂಮಿ ಎಂದು ಗುರುತಿಸಲ್ಪಡುವಂತಿದ್ದರೆ ಅದು ತನ್ನ ಮಾಲೀಕನ ಒಡೆತನವನ್ನು ಕಳೆದುಕೊಳ್ಳುವುದಿಲ್ಲ. ಈ ರೀತಿ ಹೊಸ ನೆಲವುಂಟಾಗುವ ರೀತಿಗಳು ಎರಡು ಬಗೆ. ಸಾವಕಾಶವಾಗಿ ಅದೃಶ್ಯ ರೀತಿಯಲ್ಲಿ ಯಾವಾಗ ಎಷ್ಟು ಎಂದು ಗೋಚರವಾಗದೆ ಕಾಲಕಳೆದಂತೆ ಸಾಕಷ್ಟು ದೊಡ್ಡದಾಗಿ ತೋರಿಬರುವ, ಮೇಲೆ ವಿವರಿಸಿದ ಮೆಕ್ಕಲು ನೆಲದ್ದು, ಒಂದು ರೀತಿ. ಪ್ರವಾಹ ಆಕಸ್ಮಿಕವಾಗಿ ತಂದುಕೂಡಿಸಿದ್ದು ಎರಡನೆಯ ರೀತಿ. ಎರಡನೆಯ ರೀತಿಯಲ್ಲಿ ಸ್ಥಳಾಂತರ ಹೊಂದಿದ ಭೂಭಾಗದ ವಿಷಯದಲ್ಲಿ ಖಾಸಗಿ ಒಡೆತನ ಸಿದ್ಧವಾದರೆ ಅದು ಊರ್ಜಿತವಾಗುತ್ತದೆ. ಇಲ್ಲವಾದರೆ ಅದು ಸರ್ಕಾರಕ್ಕೆ ಸೇರುತ್ತದೆ (ಪ್ರಿವಿ ಕೌನ್ಸಿಲ್ ನಿರ್ಣಯ ಐ.ಎಲ್.ಆರ್. 47 ಮದ್ರಾಸ್ 207). ಈ ರೀತಿ ಸ್ಥಳಾಂತರವಾಗುವ ಅಥವಾ ಅದೃಶ್ಯ ಬೆಳವಣಿಗೆಯ ಅಳತೆಗೋಲು ಎಲ್ಲ ದೇಶಗಳಲ್ಲೂ ಒಂದೇ ಆಗಿರುವುದಿಲ್ಲ. ಇಂಗ್ಲೆಂಡ್‌ನಲ್ಲಿಯ ಮಂದಪ್ರವಾಹದ ನದಿಗಳಿಗೆ ಸಂಚಯಿಸಲು ತಲೆಮಾರುಗಳು ಬೇಕಾದಲ್ಲಿ ಭಾರತದ ದೃಢಪ್ರವಾಹದ ನದಿಗಳಲ್ಲಿ ಅಷ್ಟೇ ವಿಸ್ತಾರದ ನೆರೆಮಣ್ಣಿನ ನೆಲ ಮೂರು ನಾಲ್ಕು ವರ್ಷಗಳಲ್ಲಿ ಆಗಬಹುದು. ಕಾಲಾವಕಾಶ ತದನುಷಂಗಿಯಾದ ಅದೃಶ್ಯಾನುವೃದ್ಧಿ – ಇವು ಆಕಸ್ಮಿಕವಲ್ಲದ ಕ್ರಮವಾದ ಬೆಳವಣಿಗೆಯ ಛಾಯೆಗಳು ಮತ್ತು ಕಾಲದೇಶಾವಲಂಬಿಗಳು.

ಇದಲ್ಲದೆ ಒಮ್ಮೊಮ್ಮೆ ಪ್ರವಾಹದ ದಿಶೆ ಬದಲಾಗಿ ಖಾಸಗಿ ಭೂಮಿಯನ್ನು ಮುಳುಗಿಸಿ ಭಿನ್ನಪಾತ್ರವನ್ನು ಹೊಂದಿದಾಗ ಮೊದಲು ಅದರ ದಂಡೆಯ ಮೇಲೆ ಕಾಣದ ನೆಲಗಳು ಕಂಡುಬಂದು ಅವೇ ದಂಡೆಯ ಹೊಸ ನೆಲಗಳಾಗುವುವು. ಆಗ ಮುಳುಗಿ ಹೋದ ನೆಲಗಳು ಪುನಃ ಕೆಲವು ಕಾಲದ ಮೇಲೆ ಕಾಣಬಂದರೆ ಅವು ತಮ್ಮ ಮೂಲ ಒಡೆತನವನ್ನು ಕಳೆದುಕೊಳ್ಳುವುದಿಲ್ಲ (ಸೆಕ್ರೆಟರಿ ಆಫ್ ಸ್ಟೇಟ್ ವರ್ಸಸ್ ಮಹಾರಾಜ ಆಫ್ ಪಿಠಾಪುರಂ ಎ.ಜೆ.ಆರ್. ಮದ್ರಾಸ್, 1938, 470 ಮತ್ತು ಖುತ್‌ರಾಜ್ ವರ್ಸಸ್ ಸರ್ಫ್‌ರಾಜ್ 27 ಅಲಹಾಬಾದ್ 655; ಲೋಪೆಸ್ ವರ್ಸಸ್ ಮದನ್ ಮೋಹನ್ ಠಾಕೂರ್ 13 ಮೂರ್ಸ್ ಐ.ಎ. 457). ಹೀಗೆ ಸ್ವಾಭಾವಿಕವಾಗಿ ಉಂಟಾದ ನೆರೆಮಣ್ಣಿನ ನೆಲ ತೀರದ ಭೂಸ್ವಾಮಿಗೆ ಸೇರುವುದಾದರೂ ತೀರದ ಭೂಮಿಯ ಮಾಲೀಕ ಕೃತ್ರಿಮೋಪಾಯಗಳನ್ನು ಕಲ್ಪಿಸಿ ನದಿಯ ಪಾತ್ರವನ್ನು ಆಕ್ರಮಿಸುವ ದುರುದ್ದೇಶವನ್ನು ಸಾಧಿಸಿದರೆ ಅಂಥ ಕೃತ್ರಿಮ ರೀತಿಯಿಂದ ಸಾಧಿಸಿದ ಮೆಕ್ಕಲುಭೂಮಿ ಸರಕಾರದ್ದೇ ಆಗುವುದು. ಆದರೆ ಭೂಮಿಯ ರಕ್ಷಣೆಗೆಂದು ಮಾಡಿದ ಉಪಾಯಗಳಿಂದ ಆದ ಅನುವೃದ್ಧಿ ಸ್ವಾಭಾವಿಕಾನುವೃದ್ಧಿಯಂತೆಯೇ ಪರಿಗಣಿಸಲ್ಪಡುತ್ತದೆ. ಇದರಂತೆ ಗೇಣಿದಾರ ಅಥವಾ ಬಾಡಿಗೆದಾರ ಉಪಭೋಗ ಮಾಡುವ ಕಾಲದಲ್ಲಿ, ಆ ಆಸ್ತಿಗೆ ಏನಾದರೂ ಅನುವೃದ್ಧಿಯಾದರೆ ಅದು ಮೂಲ ಮಾಲೀಕನಿಗೇ ಸೇರುವುದು. ಆದರೆ ಗೇಣಿಯ ಅವಧಿಯಲ್ಲಿ ದಾಮಾಶಾಹಿ ಹೆಚ್ಚು ಗೇಣಿಕೊಟ್ಟು ಗೇಣಿದಾರ ಅನುಭೋಗಿಸಲು ಅಡ್ಡಿಯಿಲ್ಲ. ಗೇಣಿಯ ಅವಧಿಯ ಅನಂತರ ಮಾತ್ರ ಅನುವೃದ್ಧಿಯನ್ನೂ ಮೂಲ ಭೂಮಿಯ ಒಡೆಯನಿಗೆ ಬಿಟ್ಟುಕೊಡತಕ್ಕದ್ದು (ಆಸ್ತಿ ಹಸ್ತಾಂತರ ಕಾಯ್ದೆ 108– ದಿ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್).

ಇದರಂತೆ ಭೋಗ್ಯದಾರನ (ಪೊಸೆಸಿಂಗ್ ಮಾರ್ಟ್‌ಗೇಜ್) ಉಪಭೋಗಕಾಲದಲ್ಲಿ ಅಡವಿಗೊಳಪಟ್ಟ ಭೂಮಿ ಅನುವೃದ್ಧಿ ಹೊಂದಿದರೆ ಅಡವನ್ನು ಸಾಲಗಾರ ಬಿಡಿಸಿಕೊಳ್ಳುವಾಗ ಅನುವೃದ್ಧಿಯನ್ನು ಸಹ ಸಾಲಗಾರನಿಗೇ ಕೊಡಬೇಕಾಗುವುದು. ಇಲ್ಲಿ ಕೇವಲ ಭೌತಿಕ ಅನುವೃದ್ಧಿಯೊಂದಲ್ಲದೆ ಆಸ್ತಿಯ ಸುಧಾರಣೆ ಅಥವಾ ಆಸ್ತಿಯ ಹಕ್ಕುಗಳ ವಿಸ್ತರಣೆಯನ್ನು ಸಹ ಅನುವೃದ್ಧಿ ಎಂದು ಗಣಿಸಿರುವರು. ಉದಾ : ಅಡವುದಾರ ಮಾಲೀಕತನದ ಹಕ್ಕಿನಿಂದ

ಗೇಣಿ ರೈತನನ್ನು ಹೊರತಳ್ಳಿ ಕಬ್ಜಾ ಪಡೆದರೆ ಅಥವಾ ಆ ಮಾಲೀಕತ್ವದ ಹಕ್ಕಿನ ಬಲದಿಂದ ಬೇರೆ ಆಸ್ತಿಯನ್ನು ಪಡೆದರೆ ಇಂಥ ಮಾಲೀಕತ್ವದಿಂದ ಆನುಷಂಗಿಕವಾಗಿ ಬಂದ ಕಬ್ಜಾ ಮತ್ತು ಇತರ ಹಕ್ಕುಗಳೂ ಮಾಲೀಕತ್ವದ ಅನುವೃದ್ಧಿ ಎಂದು ಗಣಿಸಲ್ಪಡುತ್ತವೆ (ಸೊರಬ್ಜಿ ವರ್ಸಸ್ ದ್ವಾರಕದಾಸ್, ಎ.ಜೆ.ಆರ್. 1932 ಪ್ರಿವಿ ಕೌನ್ಸಿಲ್ 199). ಹೀಗೆ ಆಸ್ತಿಯನ್ನು ಸುಧಾರಿಸುವಲ್ಲಿ ಹಕ್ಕುಗಳ ವಿಸ್ತರಣೆಯಲ್ಲಿ ಆದ ಖರ್ಚಿನ ಪ್ರಶ್ನೆಯ ಬಗ್ಗೆ ಆಸ್ತಿ ಹಸ್ತಾಂತರ, ಕಾಯಿದೆಯ 63ನೆಯ ಭಾಗ ವಿವರಗಳನ್ನು ಕೊಟ್ಟಿದೆ. ಇದರಂತೆಯೇ ಅಡವಿಗೆ ಕೊಟ್ಟ ಭೂಮಿಯಲ್ಲಿ ಅನುವೃದ್ಧಿಯಾದರೆ ಆ ಅನುವೃದ್ಧಿ ಅಡವಿಗೆ ಒಳಪಡುವುದು (ಇದೇ ಕಾಯಿದೆಯ ಸೆಕ್ಷನ್ 70).

ಆನಂತರ ಅನುವೃದ್ಧಿಯ ಪ್ರಶ್ನೆಯನ್ನು ದಂಡೆಗೆ ಲಗತ್ತಾದ ಭೂಮಿ ಖಾಸಗಿ ಒಡೆತನಕ್ಕೆ ಸೇರಿದ್ದೆಂಬ ತಳಹದಿಯ ಮೇಲೆ ವಿವರಿಸಲಾಗಿದೆ. ಇದು ಭಾರತದ ಸಾಧಾರಣ ಕಾಯಿದೆ. ಇದು ಮೊದಲಿಗೆ ಬಂಗಾಳದಲ್ಲಿ 1825ರ ರೆಗ್ಯುಲೇಷನ್ XIರಲ್ಲಿ ಶ್ರುತಗೊಳಿಸಲ್ಪಟ್ಟಿದ್ದು ಇಡೀ ಭಾರತಕ್ಕೆ ಅನ್ವಯಿಸುವ ತತ್ತ್ವವನ್ನೊಳಗೊಂಡಿದೆ. (ಎ.ಐ.ಆರ್. 1949 ಪ್ರಿವಿ ಕೌನ್ಸಿಲ್ 3: ಮಹಾರಾಜ ಆಫ್ ಪಿಠಾಪುರಂ ವರ್ಸಸ್ ಮದ್ರಾಸ್ ಪ್ರಾವಿನ್ಸ್). ಇಂಥ ಸಂಸ್ಥಾನಿಕರ ಅಥವಾ ದೊಡ್ಡ ಜಹಗೀರುದಾರರು ಭೂಮಿಗಳು ಅವರ ಒಡೆತನದ್ದಿರುತ್ತವೆ. ಅವುಗಳ ಸಂಬಂಧದಲ್ಲಿ ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್ 1964, 67ನೆಯ ಸೆಕ್ಷನ್, ಬಾಂಬೆ ಲ್ಯಾಂಡ್ ರೆವಿನ್ಯೂ ಕೋಡ್, ಸೆಕ್ಷನ್ 37, ಇವುಗಳಲ್ಲಿ ಹೇಳಿದ ಎಲ್ಲಾ ಆಸ್ತಿಗಳು ಸರ್ಕಾರದ ಒಡೆತನದವು. ಎಂಬ ತತ್ತ್ವ ಅನ್ವಯಿಸುವುದಿಲ್ಲ. (ನಹನ್ಸಿಂಗ್‌ಜಿ ವರ್ಸಸ್ ಸೆಕ್ರೆಟರಿ ಆಫ್ ಸ್ಟೇಟ್ 43, ಬಾಂಬೆ ಲಾ ರಿಪೋರ್ಟರ್ 167). ಆದರೆ ಇಂಥ ಸಂಸ್ಥಾನಿಕರು ಜಹಗೀರುದಾರರನ್ನು ಬಿಟ್ಟರೆ ಸರ್ವಸಾಧಾರಣವಾಗಿ ಎಲ್ಲ ಆಸ್ತಿಗಳು ಸರ್ಕಾರದ ಒಡೆತನಕ್ಕೆ ಸೇರಿದುವು. ಅದನ್ನು ಭೋಗಿಸುವವನು ಕೇವಲ ಅನುಭವದಾರ (ಆಕ್ಯುಪೆಂಟ್) ಅಥವಾ ಸರ್ಕಾರದ ಭೂಮಿಯನ್ನು ಹೊಂದಿದ ಭೂಧಾರಕ ಅವರ ವಿಷಯದಲ್ಲಿ ಮೈಸೂರು ಭೂಮಿ ಕಂದಾಯ ಕಾಯಿದೆ ಸೆಕ್ಷನ್ 81ರಲ್ಲಿ ಪ್ರಸ್ತಾವಿಸಿರುವಂತೆ ನೆರೆಮಣ್ಣಿನ ನೆಲಗಳು, ಹೊಸದಾಗಿ ಉದ್ಭವಿಸಿದ ದ್ವೀಪಗಳು, ಪರಿತ್ಯಕ್ತವಾದ ನದೀಪಾತ್ರಗಳು ಸರ್ಕಾರೀ ಒಡೆತನಕ್ಕೆ ಸೇರಿದುವು; ಮತ್ತು ದಂಡೆಯ ಅನುಭವದಾರ ಇಲ್ಲವೆ ಭೂಧಾರಕ ಆ ಭಾಗದ ಕ್ಷೇತ್ರ ಒಂದು ಎಕರೆ ಮೀರುವವರೆಗೆ ಕಂದಾಯವಿಲ್ಲದೆ ತಾತ್ಕಾಲಿಕವಾಗಿ ಉಪಯೋಗ ಮಾಡಬಹುದು. ಹಾಗೂ ಒಂದು ಎಕರೆ ಮೀರಿದ ಅನಂತರ ಜಿಲ್ಲಾಧಿಕಾರಿ (ಅದೇ ಕಾಯಿದೆಯ 92 ಸೆಕ್ಷನ್) ಆ ಭೂಮಿಯನ್ನು ಸಾರ್ವಜನಿಕ ಕಂದಾಯದ ಹಿತದೃಷ್ಟಿಯನ್ನಿಟ್ಟುಕೊಂಡು ವಿಲೇವಾರಿ ಮಾಡಬಹುದು. ಆದರೆ ಆ ಭೂಮಿಯನ್ನು ಮೊದಲು ದಂಡೆ ಅಥವಾ ತೀರದ ಅನುಭವದಾರ ಅಥವಾ ಭೂಧಾರಕನಿಗೆ ವಾರ್ಷಿಕ ಕಂದಾಯದ ಮೂರು ಪಟ್ಟಿಗೂ ಮೀರದ ಬೆಲೆಗೆ ಕೊಡಬೇಕು. ಅವನು ಪಡೆದುಕೊಳ್ಳಲು ನಿರಾಕರಿಸಿದರೆ ಯುಕ್ತ ಕಂಡ ಕ್ರಯಕ್ಕೆ ಅನ್ಯರಿಗೆ ಆ ನೆರೆ ಭೂಮಿ, ಪರಿತ್ಯಕ್ತ ಪಾತ್ರ ಅಥವಾ ಹೊಸ ದ್ವೀಪವನ್ನು ಕೊಡಬಹುದು. (ವಿ.ಆರ್.ಬಿ.)

**ಅನುಷ್ಟುಭ್ :** ವೈದಿಕ ಛಂದಸ್ಸಿನ ಮುಖ್ಯ ವಿಧಗಳಲ್ಲೊಂದು. ಶ್ಲೋಕದ ಮತ್ತೊಂದು ಹೆಸರು. ಕೆಲವು ಮಾರ್ಪಾಡುಗಳನ್ನು ಹೊಂದಿ ಸಂಸ್ಕೃತದ ಲೌಕಿಕ ಛಂದಸ್ಸಿನಲ್ಲಿ ಬಂದಿರುವ ವರ್ಣವೃತ್ತ. ಸಮವೃತ್ತ, ಅರ್ಧಸಮವೃತ್ತ, ವಿಷಮವೃತ್ತ ಎಂಬ ಬಗೆಗಳುಳ್ಳ ಈ ವರ್ಣವೃತ್ತದಲ್ಲಿ ಮೊದಲನೆಯದರ ಇಪ್ಪತ್ತಾರು ವಿಧಗಳಲ್ಲೊಂದಾಗಿ ಪ್ರತಿಪಾದದಲ್ಲೂ ಎಂಟಕ್ಷರಗಳಿಂದ ಕೂಡಿರುವುದಲ್ಲದೆ ಶ್ಲೋಕ, ಗಜಗತಿ, ಪ್ರಮಾಣಿಕಾ ಮುಂತಾದ ಪ್ರಭೇದಗಳನ್ನೂ ತಾಳಿದೆ. ಲಕ್ಷಣ ಹೀಗಿದೆ:

ಶ್ಲೋಕೇ ಷಷ್ಠ ಗುರುಜ್ಞೇಯಂ
ಸರ್ವತ್ರ ಲಘು ಪಂಚಮಮ್ ।
ದ್ವಿಚತುಃಪಾದಯೋರ್ಹ್ರಸ್ವಂ
ಸಪ್ತಮಂ ದೀರ್ಘಮನ್ಯಯೋಃ ॥

ಪ್ರತಿ ಪಾದದ ಐದನೆಯ ಅಕ್ಷರ ಲಘು, ಆರನೆಯದು ಗುರು, ಏಳನೆಯ ಅಕ್ಷರ ಎರಡನೆಯ ನಾಲ್ಕನೆಯ ಪಾದಗಳಲ್ಲಿ ಹ್ರಸ್ವ, ಉಳಿದೆರಡರಲ್ಲಿ ದೀರ್ಘ.

ವಾಗರ್ಥಾವಿವ ಸಂಪೃಕ್ತೌ
ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ
ಪಾರ್ವತೀ ಪರಮೇಶ್ವರೌ ॥ (ರಘುವಂಶ)

ಮೇಲ್ಕಂಡ ಲಕ್ಷಣದಿಂದ ಸ್ವಲ್ಪ ಭಿನ್ನವಾಗಿರುವ ಮತ್ತೊಂದು ಕೆಳಕಂಡಂತಿದೆ:

ಪಂಚಮಂ ಲಘು ಸರ್ವತ್ರ
ಸಪ್ತಮಂ ದ್ವಿಚತುರ್ಥಯೋಃ ।
ಗುರು ಷಷ್ಠಂ ಚ ಪಾದಾನಾಂ
ಶೇಷೇಷ್ವನಿಯಮೋ ಮತಃ ॥

ನಾಲ್ಕು ಪಾದಗಳಲ್ಲೂ ಐದನೆಯ ಅಕ್ಷರವೂ ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಏಳನೆಯದೂ ಲಘು; ನಾಲ್ಕು ಪಾದಗಳ ಆರನೆಯ ಅಕ್ಷರ ಗುರು; ಉಳಿದವುಗಳಲ್ಲಿ ನಿಯತವಲ್ಲ.

ಇಂಥ ಭಿನ್ನ ಲಕ್ಷಣ ಇದರ ಬೆಳೆವಣಿಗೆಯಲ್ಲಿನ ಮಾರ್ಪಾಡನ್ನೂ ಇದರ ನಿಯಮಗಳು ಅಷ್ಟು ಕಟ್ಟುನಿಟ್ಟಿಲ್ಲವೆಂಬ ವಿಚಾರವನ್ನೂ ಸೂಚಿಸುತ್ತದೆ. ಇದು ಸಂಸ್ಕೃತದಲ್ಲಿ ಹೆಚ್ಚು ಬಳಕೆಯಲ್ಲಿದೆ. ರಾಮಾಯಣ, ಮಹಾಭಾರತಗಳೂ ಪುರಾಣಗಳೂ ವಿಶೇಷವಾಗಿ ಈ ವೃತ್ತದಲ್ಲಿವೆ.

ಕನ್ನಡ ಕವಿಗಳು ಮೊದಲು ಛಂದಸ್ಸನ್ನು ಹೆಚ್ಚಾಗಿ ಬಳಸಿಕೊಂಡರೋ ಇಲ್ಲವೋ ಹೇಳುವುದು ಕಷ್ಟ; ಸಾಕಷ್ಟು ನಿದರ್ಶನಗಳಿಲ್ಲ; ಆದರೆ ಕವಿರಾಜಮಾರ್ಗದಲ್ಲಿ ಇದರ ಸುಳಿವು ಕಾಣುತ್ತದೆ. ಒಟ್ಟಿನಲ್ಲಿ ಇದರ ಬಳಕೆ ಬಹು ಸ್ವಲ್ಪವೆಂದೇ ಹೇಳಬೇಕು. (ಬಿ.ಕೆ.ಎಸ್.)

**ಅನುಸೂಚಿತ ಜಾತಿಗಳು :** ಸಹಸ್ರಾರು ವರ್ಷಗಳಿಂದಲೂ ಹಿಂದೂಧರ್ಮದ ಹೊರವಲಯದಲ್ಲೇ ಉಳಿದುಕೊಂಡು, ಚತುರ್ವರ್ಣಗಳಿಗೆ ಹೊರತಾಗಿದ್ದ ಅಂತ್ಯಜ, ಅತಿಶೂದ್ರ, ಪಂಚಮ, ಚಂಡಾಲ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದ್ದ ಅನೇಕ ಜಾತಿಗಳನ್ನು ಒಟ್ಟಿಗೆ ಸೇರಿಸಿ ಅವನ್ನು 1950ರ ಭಾರತ ರಾಜ್ಯಾಂಗರಚನೆಯಲ್ಲಿ ಅನುಸೂಚಿತ ಜಾತಿಗಳು (ಷೆಡ್ಯೂಲ್ಡ್ ಕಾಸ್ಟ್ಸ್) ಎಂದು ಹೆಸರಿಸಲಾಯಿತು. ಆದರೆ ಆ ಜಾತಿಗಳು ಯಾವುವೆಂಬುದನ್ನು ವಿಶದವಾಗಿ ಅಲ್ಲಿ ಸೂಚಿಸಿಲ್ಲ. ರಾಜ್ಯಾಂಗ ರಚನೆಯ 341ನೆಯ ವಿಭಾಗದಲ್ಲಿ ಒಂದೊಂದು ರಾಜ್ಯದ ಸರ್ಕಾರದೊಡನೆಯೂ ಸಮಾಲೋಚನೆ ನಡೆಸಿ ರಾಜ್ಯಾಂಗರಚನೆಯ ಉದ್ದೇಶಕ್ಕಾಗಿ, ಆಯಾ ರಾಜ್ಯಕ್ಕೆ ಸಂಬಂಧಿಸಿದಂತೆ ಅಲ್ಲಿನ ಕೆಲವು ಜಾತಿ, ಕುಲ, ಪಂಗಡ ಅಥವಾ ಅವುಗಳ ಭಾಗಗಳನ್ನು ಅಥವಾ ಅಂತರ್ವಿಭಾಗಗಳನ್ನು ಅನುಸೂಚಿತ ಜಾತಿಗಳನ್ನಾಗಿ ಪ್ರಕಟಿಸಲು ರಾಷ್ಟ್ರಾಧ್ಯಕ್ಷರಿಗೆ ಅಧಿಕಾರ ನೀಡಿದೆ. ಅದೇ ವಿಭಾಗದ ಎರಡನೆಯ ಅಂಶದಲ್ಲಿ, ಹಾಗೆ ಪ್ರಕಟಿಸಿದ ಪಟ್ಟಿಗೆ ಹೊಸ ಜಾತಿಗಳನ್ನು ಸೇರಿಸುವ ಹಾಗೂ ಸೇರಿರುವ ಜಾತಿಗಳನ್ನು ಪಟ್ಟಿಯಿಂದ ತೆಗೆದುಹಾಕುವ ಅಧಿಕಾರವನ್ನು ಸಂಸತ್ತಿಗೆ (ಪಾರ್ಲಿಮೆಂಟ್) ಕೊಡಲಾಗಿದೆ. ಆದ್ದರಿಂದ ಆಯಾ ಕಾಲದಲ್ಲಿ ಆಯಾ ರಾಜ್ಯಕ್ಕೆ ಸಂಬಂಧಿಸಿದಂತೆ ಪ್ರಕಟಿಸಿರುವ ಅನುಸೂಚಿತ ಜಾತಿಗಳ ಪಟ್ಟಿಯಲ್ಲಿ ಅಧಿಕೃತವಾಗಿ ಸೇರಿಸಿರುವ ವರ್ಗಗಳನ್ನು ಅನುಸೂಚಿತ ಜಾತಿಗಳೆಂದು ಹೇಳಬಹುದು.

ಪ್ರಾಚೀನ ಕಾಲದಿಂದಲೂ ಭಾರತದ ಸಾಮಾಜಿಕಜೀವನ ಜಾತಿಪದ್ಧತಿಗೆ ಹೆಸರಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬವು ಸಹಸ್ರಾರು ವರ್ಷಗಳಿಂದಲೂ ಬಳಕೆಯಲ್ಲಿರುವ ಚತುರ್ವರ್ಣಗಳು. ಈ ಚತುರ್ವರ್ಣಗಳಿಗೆ ಸೇರದ ಅನೇಕ ಜಾತಿಗಳೂ ನಡೆದುಕೊಂಡು ಬರುತ್ತಿವೆ. ಅಂಥ ಪಂಗಡದವರು ಅನುಸರಿಸುತ್ತಿದ್ದ ವೃತ್ತಿ, ಅವರ ಜನ್ಮಮೂಲ ಇತ್ಯಾದಿ ಕಾರಣಗಳಿಂದ ಅವರು ಸಮಾಜದ ಅತ್ಯಂತ ಕೆಳವರ್ಗದವರೆಂದೂ ಅವರ ಸಂಪರ್ಕ ದೂಷ್ಯವೆಂದೂ ಪರಿಗಣಿಸಿದುದರ ಫಲವಾಗಿ ಅವರೆಲ್ಲ ಹಿಂದೂಧರ್ಮದ ಹೊರವಲಯದಲ್ಲೇ ಇದ್ದುಕೊಂಡು ಅಸ್ಪೃಶ್ಯರೆನಿಸಿದರು. ಭಾರತದಲ್ಲಿ ಅಸ್ಪೃಶ್ಯತೆಯ ಸಂಪ್ರದಾಯ 1955ರವರೆಗೂ ನಡೆದುಕೊಂಡೇ ಬಂದಿರುವುದೆಂದು ಹೇಳಿದರೆ ಭಾರತೀಯ ಸಮಾಜಜೀವನದಲ್ಲೂ ಧರ್ಮ ಸಂಸ್ಕೃತಿಗಳಲ್ಲೂ ಆ ಸಂಪ್ರದಾಯದ ಬಗ್ಗೆ ಇರತಕ್ಕ ಅಭಿಪ್ರಾಯಗಳು ಪರಿಶೀಲನಾರ್ಹವೆನಿಸುತ್ತವೆ.

ಅಸ್ಪೃಶ್ಯತೆ ಒಂದು ಪ್ರಬಲ ಸಂಪ್ರದಾಯವಾಗಿ ಬೆಳೆದುದಕ್ಕೆ ಸವರ್ಣೀಯರ ಆಚಾರ ವ್ಯವಹಾರಗಳ ಮತ್ತು ಅನುಸರಿಸುತ್ತಿದ್ದ ವೃತ್ತಿಗಳ ಮಡಿವಂತಿಕೆಯ ಮನೋಭಾವ ಮೂಲ ಕಾರಣವೆನ್ನಬಹುದು. ಆದರೂ ಪ್ರಾಚೀನ ಕಾಲದಲ್ಲಿ ಈ ಸಂಪ್ರದಾಯದ ಉಗಮಕ್ಕೆ ಇತರ ಕಾರಣಗಳೂ ಇದ್ದಿರಬೇಕೆನ್ನಲು ಆಧಾರಗಳಿವೆ. ಬ್ರಾಹ್ಮಣಮಹಿಳೆಗೂ ಶೂದ್ರನಿಗೂ ಜನಿಸಿದ ಸಂತತಿಯನ್ನು ಚಂಡಾಲನೆಂದು ಧರ್ಮಸೂತ್ರಕಾರರು ವಿಭೇದೀಕರಿಸಿ ಚತುರ್ವರ್ಣೀಯರಿಂದ ಧಾರ್ಮಿಕವಾಗಿ, ಸಾಮಾಜಿಕವಾಗಿ ದೂರೀಕೃತರೆಂದು ಸೂಚಿಸಿರುವರು; ಪ್ರ.ಶ.ಪೂ. 800ರ ಸುಮಾರಿನಲ್ಲಿ ಅವರು ಹಂದಿ, ನಾಯಿಗಳಿಗಿಂತ ಕೀಳಾದವರೆಂದು ಹೇಳಿದೆ (ಛಾಂದೋಗ್ಯೋಪನಿಷತ್ತು). ಕೌಟಿಲ್ಯನ ಕಾಲಕ್ಕೆ ಈ ಭಾವನೆಗಳು ಬಲಗೊಂಡು ಅಂಥ ಸಂಕರಜಾತಿಯವರು ತಮ್ಮ ತಮ್ಮೊಳಗೇ ವಿವಾಹವಾಗಬೇಕೆಂಬ ಕಟ್ಟು ಬೆಳೆದುಬರುತ್ತದೆ; ಜೊತೆಗೆ, ಅವರೊಡನೆ ಎಲ್ಲ ಸಮಾಜಸಂಪರ್ಕಗಳೂ ನಿಷಿದ್ಧವೆನಿಸಿದವು. ಮನು ತನ್ನ ಧರ್ಮಶಾಸ್ತ್ರದಲ್ಲಿ, ಅವರು ಕೇವಲ ಕನಿಷ್ಠವೃತ್ತಿಗಳ ಆಚರಣೆಗೆ ಮಾತ್ರ ಅರ್ಹರೆಂದು ಸೂಚಿಸಿ, ಅವರನ್ನು ಒಂದು ವರ್ಗ ಅಥವಾ ಜಾತಿಯನ್ನಾಗಿ ಪರಿಗಣಿಸುತ್ತಾನೆ. ಕೌಟಿಲ್ಯ ಅಂಥವರು ಊರ ಹೊರವಲಯದಲ್ಲಿ ವಾಸಿಸಬೇಕೆಂದು ನಿಷ್ಕರ್ಷಿಸಿರುತ್ತಾನೆ. ಪತಂಜಲಿ ಅವರನ್ನು ಶೂದ್ರರಲ್ಲೇ ಒಂದು ಪಂಗಡವೆಂದು ಪರಿಗಣಿಸುವಂತೆ ತೋರುತ್ತದೆ. ಪ್ರ.ಶ.ಪೂ. 500ರ ಸುಮಾರಿನವರೆಗೂ ಅವರು ಊರಿನಲ್ಲಿ ಶೂದ್ರರ ಅಕ್ಕಪಕ್ಕಗಳಲ್ಲೆ ವಾಸಿಸುತ್ತಿದ್ದರು. ಆದರೆ ಕ್ರಮಕ್ರಮವಾಗಿ ಅಂಥ ಜಾತಿಗಳಲ್ಲಿ ಅಂತರ್ವಿಭೇದ ಕಲ್ಪನೆಯಾಯಿತು. ಬಡಗಿ, ಕಮ್ಮಾರ, ಅಗಸ ಇತ್ಯಾದಿ ವೃತ್ತಿಯವರು ಬಳಸುತ್ತಿದ್ದ ಪಾತ್ರೆಗಳನ್ನು ಶುದ್ಧಿ ಮಾಡಿಕೊಳ್ಳಬಹುದೆಂಬ, ಚಂಡಾಲರು ಬಳಸಿದ ಪಾತ್ರೆಗಳನ್ನು ಯಾವ ರೀತಿಯಲ್ಲೂ ಶುದ್ಧಿಮಾಡಲು ಸಾಧ್ಯವೇ ಇಲ್ಲವೆಂಬ ಭಾವನೆ ರೂಢಿಗೆ ಬಂತು. ಬೋಧಾಯನನಂಥ ಧರ್ಮಸೂತ್ರಕಾರರು,

ಚಂಡಾಲರು ಕೇಳುವಂತೆ ವೇದಪಠಣ ಮಾಡಕೂಡದೆಂದು ನಿಷೇಧವನ್ನು ವ್ಯಕ್ತಪಡಿಸಿರುವರು. ಇವೆಲ್ಲ ಕಾರಣಗಳಿಂದ ಚಂಡಾಲರಾದಿ ಕೆಲವು ವರ್ಗದವರು ಊರ ಹೊರಗೆ ವಾಸಿಸುತ್ತ ತೀರ ಅಧಮವೆಂದು ಪರಿಗಣಿಸಲಾಗಿದ್ದ ವೃತ್ತಿಗಳಲ್ಲಿ ಮಾತ್ರ ತೊಡಗಬಹುದಾಯಿತು. ಪ್ರ.ಶ. 2ನೆಯ ಶತಮಾನದ ಸುಮಾರಿಗೆ ಅವರನ್ನು ಕಾಣುವುದೂ ದೂಷ್ಯವೆನಿಸಿದ್ದು, ಕೇವಲ ಗ್ರಾಮಪಾಕೀಜು ಮಾಡುವುದು ಅವರ ವೃತ್ತಿಯಾಗುತ್ತ ಬಂತು. ಒಟ್ಟಿನಲ್ಲಿ, ಆಚಾರ ವ್ಯವಹಾರಾದಿಗಳ ಮಡಿವಂತಿಕೆಯಂತೆ ಅವರು ಅನುಸರಿಸಬೇಕಾದ ಅಧಮ ವೃತ್ತಿಗಳೂ ಜನ್ಮಮೂಲವೂ ಅಸ್ಪೃಶ್ಯತೆಯ ಸಂಪ್ರದಾಯದ ಉಗಮಕ್ಕೆ ಕಾರಣಗಳಾದುವೆನ್ನಬಹುದು. ಆ ಸಂಪ್ರದಾಯ ಬಲಗೊಂಡು, ಒಂದನೆಯ ಶತಮಾನದ ವೇಳೆಗೆ ಅವರು ತಾವು ಬರುವುದನ್ನು ಸೂಚಿಸಲು ಕೋಲನ್ನು ಹಿಡಿದು ಬರಬೇಕೆಂದು ಸಮಾಜ ನಿರ್ಬಂಧಿಸುವ ಮಟ್ಟಕ್ಕೆ ಹೋಯಿತು. ವರ್ಣಚತುಷ್ಟಯಕ್ಕೆ ಸೇರದ ಅವರಲ್ಲಿ ಕೆಲವರನ್ನು ಅಂತ್ಯಜರೆಂದು ಕರೆಯಲಾಗುತ್ತಿದ್ದು ಅವರವರು ಅನುಸರಿಸುತ್ತಿದ್ದ ವೃತ್ತಿಯ ಆಧಾರದ ಮೇಲೆ ಅವರಲ್ಲೇ ಭಿನ್ನಭಿನ್ನ ಜಾತಿಗಳೇರ್ಪಟ್ಟುವು. ಭಾರತದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಅವುಗಳಲ್ಲಿ ಅನೇಕ ಜಾತಿಗಳು ಇಂದಿಗೂ ಉಳಿದುಬಂದಿವೆ. ಪಂಜಾಬ್, ಪಶ್ಚಿಮ ಬಂಗಾಲ ಮುಂತಾದ ರಾಜ್ಯಗಳಲ್ಲಿ ಬಿದಿರು ಕೆಲಸದ ದೊಂಬರೂ ಚರ್ಮಗೆಲಸದ ಚಮ್ಮಾರರೂ ರಾಜಸ್ತಾನ, ಬೊಂಬಾಯಿಗಳಲ್ಲಿ ಗ್ರಾಮಪಾಕೀಜು ವೃತ್ತಿಯ ಭಂಗಿಗಳೂ ತಮಿಳುನಾಡಿನ ಪರೆಯರೂ, ಆಂಧ್ರದ ಮಾಲರೂ, ಅಸ್ಸಾಮ್ ಬಿಹಾರ್‌ಗಳಲ್ಲಿರುವ ನಾಮಶೂದ್ರರೂ ಇತರರೂ ಇದಕ್ಕೆ ನಿದರ್ಶನವೆನ್ನಬಹುದು. ಇಷ್ಟು ವಿಶಾಲ ಕ್ಷೇತ್ರದಲ್ಲೆಲ್ಲ ಅಸ್ಪೃಶ್ಯತೆಯ ಸಂಪ್ರದಾಯ ಹರಡಿರುವುದು. ಆರ್ಯರು ಇಲ್ಲಿನ ಕೆಲವು ಮೂಲನಿವಾಸಿಗಳನ್ನು ಪರಾಭವಗೊಳಿಸಿದುದರ ಫಲವಾಗಿರಬಹುದೇ ಎಂದು ವಾದಿಸುವ ಕೆಲವರ ಅಭಿಪ್ರಾಯಕ್ಕೆ ಇದರಿಂದ ಪುಷ್ಟಿ ಸಿಕ್ಕಿದೆ.

ಚರ್ಮವೃತ್ತಿಯನ್ನನುಸರಿಸುವ ಚಮ್ಮಾರರೆಂಬ ಅಂತ್ಯಜರು ಆಸೇತು ಹಿಮಾಚಲ ಹರಡಿಕೊಂಡಿದ್ದಾರೆ. ವೇದಗಳ ಕಾಲದಿಂದಲೂ ಈ ವೃತ್ತಿ ನಡೆದುಕೊಂಡೇ ಬಂದಿದೆ; ಆದರೆ ಈ ವೃತ್ತಿ ನೀಚ ಜಾತಿಯವರದೆಂಬ ಭಾವನೆ ಆಗ ಇತ್ತೇ ಎಂಬುದು ಸಂದೇಹಾಸ್ಪದ. ಸತ್ತಪ್ರಾಣಿಯ ದೇಹವನ್ನು ಮುಟ್ಟಿ ಕೆಲಸಮಾಡಬೇಕಾಗಿದ್ದ ಇವರು ಮನುವಿನ ಕಾಲಕ್ಕೆ ನೀಚವೃತ್ತಿಯವರೆಂದು ಪರಿಗಣಿತರಾಗಿ ಅಸ್ಪೃಶ್ಯರೊಡನೆ ಸೇರಬೇಕಾಯಿತು. ಇವರು ಸಂಖ್ಯೆಯಲ್ಲಿ ಹೆಚ್ಚಿದಂತೆ ಹಳ್ಳಿಗಳಲ್ಲಿ ತೋಟಿ, ತಳವಾರ ಮುಂತಾದ ಸಮಾಜದ ಊಳಿಗದ ಕೆಲಸವನ್ನೂ ವಹಿಸಿಕೊಳ್ಳಬೇಕಾಯಿತು. ಇವರು ದೇಶದ ಎಲ್ಲ ಭಾಗಗಳಲ್ಲೂ ಹರಡಿಕೊಂಡಿದ್ದು ಸದ್ಯಕ್ಕೆ ಉತ್ತಮ ಸಾಮಾಜಿಕ ಮಟ್ಟವನ್ನೂ ಮುಟ್ಟಿರುವ ಸಮುದಾಯಗಳನ್ನೊಳಗೊಂಡಿದ್ದಾರೆ. ಇತ್ತೀಚೆಗೆ ಗುಜರಾತು ರಾಜ್ಯದ ಅನುಸೂಚಿತ ಪಟ್ಟಿಯಿಂದ ಅವರನ್ನು ತೆಗೆದುಹಾಕಿದ್ದು ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುವಂತಿದೆ.

ಅನುಸೂಚಿತ ಜಾತಿಗಳು (ಷೆಡ್ಯೂಲ್ಡ್ ಕಾಸ್ಟ್ಸ್) ಎಂಬ ಹೆಸರನ್ನು ಮೊದಲು 1927ರಲ್ಲಿ ಸೈಮನ್ ಕಮಿಷನ್ ಬಳಸಿತು; ಅನಂತರ ಭಾರತಸರ್ಕಾರ 1935ರ ಕಾನೂನಿನ 300ನೆಯ ವಿಭಾಗದಲ್ಲಿ ಆ ಹೆಸರನ್ನು ಬಳಸಿತು. ಅದುವರೆಗೂ ಅಸ್ಪೃಶ್ಯರು ನಿಮ್ನ ವರ್ಗದವರು, ಹಿಂದುಳಿದವರು ಎನ್ನಲಾಗುತ್ತಿದ್ದವರೆಲ್ಲ ಅದರಲ್ಲಿ ಸೇರಿದ್ದರು. ಅಸ್ಪೃಶ್ಯರ ಕಲ್ಯಾಣಕ್ಕಾಗಿ ಪ್ರಚಾರ ಉಪವಾಸಾದಿಗಳನ್ನು ಕೈಕೊಂಡ ಗಾಂಧೀಜಿಯವರು ಅವರನ್ನು ಅಸ್ಪೃಶ್ಯರೆನ್ನುವುದು ಪಾಪಕರವೆಂದು ಘೋಷಿಸಿ, ಹರಿಜನರೆಂದು ಕರೆದರು. ಆದರೂ ರಾಜ್ಯಾಂಗರಚನೆಯಲ್ಲಿ ಅವರಿಗೆ ಸೈಮನ್ ಕಮಿಷನ್ ಬಳಸಿದ ಹೆಸರೇ ಉಳಿದುಕೊಂಡಿತು.

ಅಸ್ಪೃಶ್ಯತೆ ಹಿಂದೂಧರ್ಮಕ್ಕೂ ಭರತಖಂಡಕ್ಕೂ ಕಳಂಕ ತಂದಿದೆಯೆಂದು ಸಮಾಜ ಸುಧಾರಕರು ಹೇಳುತ್ತಲೇ ಬಂದಿದ್ದಾರೆ; ಕಳೆದ ಶತಮಾನದ ಮಧ್ಯಭಾಗದಲ್ಲಿ ಅದನ್ನು ತೊಡೆದು ಹಾಕಲು ನಿರ್ದಿಷ್ಟ ಯತ್ನ ಆರಂಭವಾಯಿತೆನ್ನಬಹುದು. ಪುಣೆಯ **ಜ್ಯೋತಿಬಾ ಫುಲೆ** ಎಂಬುವರು ಆ ಕಾರ್ಯವನ್ನು ಆರಂಭಿಸಿದ ಅಗ್ರಗಣ್ಯರೆನ್ನಬಹುದು. ಅವರಂತೆ 1865ರಲ್ಲಿ ಬಂಗಾಲದ ಶಶಿಪಾದ ಬಂದೋಪಾಧ್ಯಾಯರು ಆ ಯತ್ನಕ್ಕೆ ರಚನಾತ್ಮಕ ಸ್ವರೂಪವನ್ನು ಕೊಟ್ಟರು; ಅಸ್ಪೃಶ್ಯರ ಮಕ್ಕಳ ಲಾಲನೆ ಪಾಲನೆ, ಅವರ ಶಿಕ್ಷಣ, ಸಹಪಂಕ್ತಿ ಭೋಜನ, ಸಮಾಜ ಸಂಪರ್ಕ ಇತ್ಯಾದಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಸವರ್ಣೀಯರ ಪ್ರತಿಭಟನೆಯಿದ್ದರೂ ಧೈರ್ಯದಿಂದ ಸೇವೆ ಸಲ್ಲಿಸಿದರು. 1895ರಲ್ಲಿ ಬೊಂಬಾಯಿಯ ಆರ್.ಜಿ. ಭಂಡಾರ್ಕರ್, ಅಖಿಲ ಭಾರತದ ಸಮಾಜಸಂಘದ ಒಂಬತ್ತನೆಯ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣಮಾಡುತ್ತ ಅವರ ಉದ್ಧರಣಕಾರ್ಯವನ್ನು ರಾಷ್ಟ್ರೀಯಮಟ್ಟದಲ್ಲಿ ನಡೆಸಬೇಕಾದ ಅಗತ್ಯವನ್ನು ಸೂಚಿಸಿದರು. ಈ ಶತಮಾನದ ಆದಿಯಲ್ಲಿ ಬೊಂಬಾಯಿಯಲ್ಲಿ ವಿ. ಆರ್. ಸಿಂಧೆ ಅವರು ಅಸ್ಪೃಶ್ಯರ ಏಳಿಗೆಗಾಗಿ ಒಂದು ಸಂಸ್ಥೆಯನ್ನು ಆರಂಭಿಸಿ ರಚನಾತ್ಮಕ ಕಾರ್ಯಗಳನ್ನು ಕೈಕೊಂಡರು. 1924ರಲ್ಲಿ ಗಾಂಧೀಜಿಯವರು ಅವರ ಬಗ್ಗೆ ಅನುಕಂಪೆಯಿಂದ ಲೇಖನಗಳನ್ನು ಬರೆದು ಅವರ ಉದ್ಧಾರಕ್ಕಾಗಿ ವಿವಿಧ ರೀತಿಯ ಪ್ರಚಾರಕಾರ್ಯವನ್ನೂ ರಚನಾತ್ಮಕ ಕಾರ್ಯಕ್ರಮಗಳನ್ನೂ ಹಾಕಿಕೊಂಡು ನಡೆಸುತ್ತ ಬಂದರು. ಅವರ ಯತ್ನದ ಪೂರ್ಣಫಲ ಭಾರತದಲ್ಲಿ ರಾಷ್ಟ್ರೀಯ ಸರ್ಕಾರ ರೂಪುಗೊಂಡ ಮೇಲೆ ಕಾರ್ಯರೂಪಕ್ಕೆ ಬರಲಾರಂಭಿಸಿತು. ಎಲ್ಲ ರಾಜ್ಯಸರ್ಕಾರಗಳೂ ತಮ್ಮ ತಮ್ಮ ಎಲ್ಲೆಕಟ್ಟಿನೊಳಗಿನ ಅನುಸೂಚಿತ ಜಾತಿಗಳ ಕಲ್ಯಾಣಕ್ಕಾಗಿ ಪ್ರಾರಂಭದಿಂದ ವಿಶಿಷ್ಟ ಕಾರ್ಯಕ್ರಮ ಹಾಕಿಕೊಂಡು ಅವರ ಏಳಿಗೆಗೆ ಕಾರ್ಯತಃ ನೆರವಾಗುತ್ತಿವೆ; ಅವರ ಮಕ್ಕಳಿಗೆ ವಿದ್ಯಾರ್ಥಿವೇತನ, ಬಟ್ಟೆಬರೆಗಳು, ಪುಸ್ತಕ ಸ್ಲೇಟುಗಳು ಇತ್ಯಾದಿಗಳನ್ನು ಉಚಿತವಾಗಿ ಒದಗಿಸಿ ಅವರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿವೆ. ಅವರಿಗಾಗಿ ಊಟವಸತಿ ಸೌಲಭ್ಯಗಳನ್ನೂ ಕಲ್ಪಿಸುತ್ತಿವೆ.

1950ರಲ್ಲಿ ರೂಪುಗೊಂಡ ರಾಜ್ಯಾಂಗರಚನೆಯಲ್ಲಿ ಅನುಸೂಚಿತ ಜಾತಿಯವರ ಏಳಿಗೆಗಾಗಿ ರಾಷ್ಟ್ರೀಯ ಮಟ್ಟದಲ್ಲಿ ನಿರ್ದಿಷ್ಟ ಕಾರ್ಯ ಕೈಕೊಂಡಿರುವುದು ಕಂಡುಬರುತ್ತದೆ. ಅವರಿಗೆ ಶಾಸನಸಭೆಗಳಲ್ಲಿ ವಿಶಿಷ್ಟ ಪ್ರಾತಿನಿಧ್ಯವನ್ನೂ ಶಿಕ್ಷಣ, ನೌಕರಿ ಇತ್ಯಾದಿಗಳಲ್ಲಿ ವಿಶೇಷ ಸೌಲಭ್ಯಗಳನ್ನೂ ನೀಡಲಾಗಿದೆ. ಅದರಲ್ಲಿ ಅಧಿಕಾರ ನೀಡಿರುವಂತೆ, ರಾಷ್ಟ್ರಪತಿಗಳು 1951ರಲ್ಲಿ ಅನುಸೂಚಿತ ಜಾತಿಗಳ ಮತ್ತು ವರ್ಗಗಳ ಕಮೀಷನರ್‌ರವರನ್ನು ನೇಮಿಸಿ ಅವರ ಅಭಿವೃದ್ಧಿಗಾಗಿ ವ್ಯವಸ್ಥೆಯನ್ನೂ ಸಿಬ್ಬಂದಿಯನ್ನೂ ಒದಗಿಸಿದರು. ಈ ಕಮೀಷನರ್ 1952ರಲ್ಲಿ ತಮ್ಮ ವರದಿಯನ್ನು ಪ್ರಕಟಿಸಿ, ತಮ್ಮ ಮತ್ತು ತಮ್ಮ ಸಿಬ್ಬಂದಿಯ ಕರ್ತವ್ಯಗಳನ್ನೂ ಅನುಸೂಚಿತ ಜಾತಿಗಳ ಉನ್ನತಿಗಾಗಿ ಒದಗಿಸಿದ ಹಣದ ಮೊತ್ತವನ್ನೂ, ಅದನ್ನು ವಿನಿಯೋಗಿಸಲು ಗೊತ್ತುಮಾಡಿದ ಕಾರ್ಯಕ್ರಮಗಳನ್ನೂ ಆ ಕಾರ್ಯವನ್ನು ನಿರ್ವಹಿಸಲು ನೆರವಾದ ಸಂಘಸಂಸ್ಥೆಗಳನ್ನೂ ವಿವರವಾಗಿ ತಿಳಿಸಿರುವರು. ಅನಂತರ ಪ್ರತಿವರ್ಷವೂ ಆ ಜನತೆಯ ಅಭಿವೃದ್ಧಿಗಾಗಿ ನಡೆದ ಕಾರ್ಯಕ್ರಮಗಳನ್ನು ಕುರಿತ ವರದಿಗಳು ಬರುತ್ತಿವೆ. ಅನುಸೂಚಿತ ಜಾತಿಗಳ ಮತ್ತು ಮಾರ್ಗಗಳ ಕಮೀಷನರಿಗೆ ಸಹಾಯಕರಾಗಿ ಆರುಮಂದಿ ಕಮೀಷನರೂ ಇರುವರು. ಅವರಲ್ಲಿ ಒಬ್ಬರು ದೆಹಲಿಯಲ್ಲೂ ಮಿಕ್ಕ ಐವರು ಭಾರತದ ವಿವಿಧ ಪ್ರಾದೇಶಿಕ ಕೇಂದ್ರಗಳಲ್ಲೂ ಇರುವರು. ಅನುಸೂಚಿತ ಜಾತಿಗಳ ಕಲ್ಯಾಣಕ್ಕಾಗಿ ಕೇಂದ್ರಸರ್ಕಾರ ಅಪಾರ ಧನವನ್ನು ಮೀಸಲಿಡುತ್ತಿದೆ.

ಭಾರತಸರ್ಕಾರ ಎಷ್ಟೇ ಆಸಕ್ತವಹಿಸಿ ಕೆಲಸಮಾಡುತ್ತಿದ್ದರೂ ಅನುಸೂಚಿತ ಜಾತಿಯ ಬಗ್ಗೆ ಜನತೆ ತನ್ನ ಮನೋಭಾವವನ್ನು ಪರಿವರ್ತಿಸಿಕೊಳ್ಳುವುದು ಅಗತ್ಯ. ಈ ಕಾರ್ಯ ಉದ್ದೇಶಿಸಿದಷ್ಟು ತೀವ್ರಗತಿಯಲ್ಲಿ ಸಾಗಲಿಲ್ಲ. ಸವರ್ಣೀಯರು ಅವರನ್ನು ವಿವಿಧ ರೀತಿಯಲ್ಲಿ ಹಿಂಸಿಸಿದ ವರದಿಗಳು ಬರಹತ್ತಿದುವು. ಆಗ 1955ರಲ್ಲಿ, ಭಾರತಸರ್ಕಾರ ಅಸ್ಪೃಶ್ಯತೆ ಕಾನೂನುಬಾಹಿರವೆಂದು ಶಾಸನಮಾಡಿತು. ಅದರ ಫಲವಾಗಿ ಶತಶತಮಾನಗಳಿಂದ ದೇಶದಲ್ಲಿ ಬೇರೂರಿದ್ದ ಆ ದೀನಜನತೆಯ ಬಗ್ಗೆ ಸಾಮಾಜಿಕ ಹೀನಭಾವನೆ ಕಡಿಮೆಯಾಗುತ್ತ ಬಂತು. ದೇವಸ್ಥಾನಗಳಂಥ ಧಾರ್ಮಿಕ ಕ್ಷೇತ್ರಗಳಿಗೂ ಬಾವಿ, ಕೆರೆ, ಹೋಟೆಲ್, ಸಿನಿಮಾ, ಪಾಠಶಾಲೆ ಇತ್ಯಾದಿ ಸಾಮಾಜಿಕಸ್ಥಳಗಳಿಗೂ ಅವರ ಪ್ರವೇಶಕ್ಕೆ ಹಿಂದಿದ್ದ ಅಡ್ಡಿ ಅಡಚಣೆಗಳು ನಿವಾರಣೆಯಾದುವು. ಅನುಸೂಚಿತಜಾತಿಯ ಜನರಲ್ಲೂ ಈಚೆಗೆ ತಮ್ಮ ಪ್ರಗತಿಯ ಬಗ್ಗೆ ಆಸಕ್ತಿ ಮೂಡಿದೆ; ಅವರು ಕಾನೂನುಬದ್ಧವಾಗಿಯೂ ಚಳವಳಿಯ ಮೂಲಕವೂ ರಾಜ್ಯಾಂಗದತ್ತ ಹಕ್ಕುಬಾಧ್ಯತೆಗಳನ್ನೂ ಸೌಲಭ್ಯಗಳನ್ನೂ ಪಡೆದುಕೊಳ್ಳಲು ಯತ್ನಿಸುತ್ತಿರುವರು.

1958ರಲ್ಲಿ ದೆಹಲಿಯಲ್ಲಿ ಸೇರಿದ್ದ ರಾಜ್ಯಸಚಿವರ ಸಭೆಯಲ್ಲಿ ತಮ್ಮ ತಮ್ಮ ರಾಜ್ಯಗಳ ಅನುಸೂಚಿತ ಜಾತಿಯವರಿಗೆ ವಸತಿಸೌಲಭ್ಯ, ಶಿಕ್ಷಣಸಂಸ್ಥೆ, ಇತ್ಯಾದಿಗಳಲ್ಲಿ ಸ್ಥಾನವನ್ನು ಮೀಸಲಿಡುವ ಅಗತ್ಯವನ್ನು ಒಪ್ಪಿದರು; ಅನುಸೂಚಿತ ಜಾತಿಯವರ ವಸತಿಗೃಹಗಳಲ್ಲಿ ಸವರ್ಣೀಯರಿಗೂ ಸ್ಥಳಕೊಡುವ ಅಗತ್ಯವನ್ನೂ ಸ್ವಾಗತಿಸಿದರು. ಇವು ನಿಧಾನವಾಗಿ ಕಾರ್ಯರೂಪಕ್ಕೆ ಬರುತ್ತಿವೆ. 1956ರಲ್ಲಿ ಸಹಸ್ರಗಟ್ಟಲೆ ಅನುಸೂಚಿತ ಜಾತಿಯ ಜನರು ಬೌದ್ಧಧರ್ಮವನ್ನು ಸ್ವೀಕರಿಸಿದರು; ಆದರೂ ಅವರಿಗೆ ರಾಜ್ಯಾಂಗದತ್ತ ಸೌಲಭ್ಯಗಳೆಲ್ಲ ದೊರಕುತ್ತಿವೆ. ನಮ್ಮ ದೇಶದಲ್ಲಿ ಒಟ್ಟು 13.82 ಕೋಟಿ ಜನ ಅನುಸೂಚಿತ ಜಾತಿಗೆ ಸೇರಿದವರಿದ್ದಾರೆ. ಇದು ದೇಶದ ಜನಸಂಖ್ಯೆಯ ಶೇ. 16.48ರಷ್ಟು (2009).

ಅನುಸೂಚಿತ ಜಾತಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆಯಾಗಿರುವುದರಿಂದ ಅವನ್ನೆಲ್ಲ ಒಟ್ಟಾರೆ ಉಲ್ಲೇಖಿಸುವುದು ಅಗತ್ಯವೆನಿಸಲಾರದು. ಆದರೆ ಕರ್ನಾಟಕ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ನಿಗದಿಯಾಗಿರುವ ಅನುಸೂಚಿತ ಜಾತಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

I ಕೊಡಗು, ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆ, ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕನ್ನುಳಿದು ಮಿಕ್ಕೆಲ್ಲ ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿಗಳು : (1) ಆದಿ ಆಂಧ್ರ, (2) ಆದಿದ್ರಾವಿಡ, (3) ಆದಿ ಕರ್ನಾಟಕ, (4) ಬಂಜಾರ ಅಥವಾ ಲಂಬಾಣಿ; (5) ಭೋವಿ, (6) ಒಕ್ಕಲಿಗ, (7) ಗಂಟೆಕೋರ; (8) ಹಂಡೆಜೋಗಿ; (9) ಕೆಫ್‌ಮಾರಿ; (10) ಕೊರಚ; (11) ಕೊರಮ; (12) ಮಾಚಲ; (13) ಮೋಚಿ; (14) ಸಿಳ್ಳೆಕ್ಯಾತ; (15) ಸುಡುಗಾಡು ಸಿದ್ಧ.

**II ಬೆಳಗಾಂವಿ, ಬಿಜಾಪುರ, ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಅನುಸೂಚಿತ ಜಾತಿಗಳು:** (1) ಅಗೇರ್, (2) ಬಕಡ ಅಥವಾ ಬಂಟ (3) ಬಾಂಬಿ, ಬಾಂಭಿ, ಅಸಾದರು, ಅಸೋಡಿ, ಚಮಡಿಯ, ಚಮ್ಮಾರ, ಚಂಬಾರ, ಚಾಮಗಾರ, ಹರಳಯ್ಯ, ಹರಳಿ, ಖಾಲ್ಪ, ಮಾಚಿಗರು, ಮಾದರು, ಮೋಚಿ, ತೆಲುಗು ಮೋಚಿ, ಕಾಮಾಟಿ ಮೋಚಿ, ರಾಣಿಗರು, ರೋಹಿದಾಸ್, ರೋಹಿತ ಅಥವಾ ಸಂಗರ; (4) ಭಂಗಿ, ಮೆಹ್ತರ್, ಒಲ್ಗಾಣ, ಭುಕ್ಕಿ,

ಮಲ್ಕಣ, ಹಲಾಲಕೊರ, ಲಾಲಿಬಿಗಿಬಲ್ಮಕಿ, ಕೊರರು, ಜಾಡಮಾಲಿ; (5) ಚಲವಾದಿ ಅಥವಾ ಚನ್ನಯ್ಯ; (6) ಜನ್ನದಾಸರು ಅಥವಾ ಹೊಲೆಯದಾಸರು (7) ಥೊರ, ಕಕ್ಕಯ್ಯ ಅಥವಾ ಕಂಕಯ್ಯ; (8) ಗಾರೋಡ ಅಥವಾ ಗಾರೋ; (9) ಹಳ್ಳೀರು; (10) ಹಲ್ಸರು, ಹಸ್ಲರು, ಹುಳಸ್ವರು ಅಥವಾ ಹಳಸ್ವರು; (11) ಹೊಲರ ಅಥವಾ ವಲ್ಲರು; (12) ಹೊಲೆಯ ಅಥವಾ ಹೋಲೇರು; (13) ಲಿಂಗದೇರ; (14) ಮಹರ್ ತರಲ್ ಅಥವಾ ದೇಗುಮೇಗು; (15) ಮಹ್ಯಾವಂಶಿ, ಧೇಡ್‌ವಂಕರು ಅಥವಾ ಮಾರುವಂಕರು; (16) ಮಂಗರು, ಮಾತಂಗರು ಅಥವಾ ಮಿನಿಮಾದಿಗರು; (17) ಮಂಗಗರುಡಿ; (18) ಮೇಘವಾಲ್ ಅಥವಾ ಮೆಂಗವಾರ್; (19) ಮುಕ್ರಿ; (20) ನದಿಯ ಅಥವಾ ಹಾದಿ; (21) ಪಾಸಿ; (22) ಬೆನ್ವ, ಚನ್ವ ಅಥವಾ ಸೇಡ್ಮ ಅಥವಾ ರಾವತ; (23) ತೀರ್‌ಗಾರ ಅಥವಾ ತೀರ್ಬಂದ; (24) ತುರಿ. ಉ. ಕನ್ನಡ ಜಿಲ್ಲೆಯಲ್ಲಿ: ಕೋಟೆಗಾರ ಅಥವಾ ಮೇಟ್ರ.

**III ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅನುಸೂಚಿತಜಾತಿಗಳು** : (1) ಅನಾಮುಕ; (2) ಆರೆ (ಮಾಲ); (3) ಆರ್‍ವಮಾಲ; (4) ಬೇಡ ಜಂಗಂ; (5) ಚಂಡ್ಲ; (6) ಬ್ಯಾಗರ; (7) ಚಲ್ವಾದಿ; (8) ಚಂಬಾರ; (9) ದಕ್ಕಲ್; (10) ಧೋರ್; (11) ಎಲ್ಲಮಲ್ವರ್; (12) ಹೊಲೆಯ; (13) ಹೊಲೆಯದಾಸರಿ; (14) ಕೋಲು ಮಲ್ವಂಡ್ಲು; (15) ಮಾದಿಗ; (16) ಮಹರ್; (17) ಮಲ; (18) ಮಲದಾಸರಿ; (19) ಮಲಹಣ್ಣೈ; (20) ಮಲಜಂಗಮ; (21) ಮಲಮಾಸ್ತಿ; (22) ಮಲಸಾಲೆ; (23) ಮಲಸನ್ಯಾಸಿ; (24) ಮಂಗ್; (25) ಮಂಗ್‌ಗರೂಡಿ; (26) ಮನ್ನೆ; (27) ಮಾಸ್ತಿ; (28) ಮೆಹ್ತರು; (29) ಮಿತ್ತ ಅಯ್ಯಲ್ವರ್; (30) ಮೋಚಿ; (31) ಸಾಮಗಾರ; (32) ಚಿಂಡೊಳ್ಳು.

**IV ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಸೂಚಿತಜಾತಿಗಳು** : (1) ಆದಿಆಂಧ್ರ; (2) ಆದಿದ್ರಾವಿಡ; (3) ಆದಿಕರ್ನಾಟಕ; (4) ಅಜಿಲ; (5) ಆರುಂತತಿಯರು; (6) ಬೈರ; (7) ಬಕುಂಡ; (8) ಬಂಡಿ; (9) ಬೆಲ್ಲಾರ; (10) ಚಕ್ಕಿಲಿಯನ್ (11) ಚಲವಾದಿ; (12) ಚಮ್ಮಾರ ಅಥವಾ ಮೋಚಿ; (13) ಚಂಡಾಲ; (14) ಚೆರುಮನ್; (15) ದೇವೇಂದ್ರ ಕುಲದನ್; (16) ದೊಮ್ಮ, ದೊಂಬರು; (17) ಗೊಡಗಾಲಿ; (18) ಗೊಡ್ಡ; (19) ಗೋಸಂಗಿ; (20) ಹೊಲೆಯ; (21) ಜಗ್ಗಲಿ; (22) ಜಾಂಬುವುಲು; (23) ಕದಯನ್; (24) ಕಲ್ಲಾಡಿ; (25) ಕಂಪಲನ್; (26) ಕೂಸ; (27) ಕುಡುಂಬನ್; (28) ಕುರವನ್; (29) ಮಾದಾರಿ; (30) ಮಾದಿಗ; (31) ಮೈಲ; (32) ಮಾಲ; (33) ಮಾವಿಲನ್; (34) ಮೊಗರ್; (35) ಮುಂಡಲ; (36) ನಲಕೆಯವ; (37) ನಾಯಡಿ; (38) ಪಗಡೆ; (39) ಪಲ್ಲನ್; (40) ಪಂಬದ; (41) ಪಂಚಮ; (42) ಪಣ್ಣಿಯಂಡಿ; (43) ಪರ್‍ಯೆಯನ್; (44) ಪುತ್ತಿರೈವನ್ನನ್; (45) ರಾನೇಯರ್; (46) ಸಾಮಗಾರ; (47) ಸಾಮ್ಬನ್; (48) ಸಾಪರಿ; (49) ಸೆಮ್ಮನ್; (50) ತೋಟಿ; (51) ತಿರುವಲ್ಲುವರ್; (52) ವಲ್ಲುವನ್.

**V ಕೊಳ್ಳೇಗಾಲ ತಾಲ್ಲೂಕಿನ ಅನುಸೂಚಿತಜಾತಿಗಳು** : (1) ಪನ್ನಡಿ; (2) ವಾತಿರಿಯನ್.

**VI ದಕ್ಷಿಣಕನ್ನಡ ಜಿಲ್ಲೆಯ ಅನುಸೂಚಿತ ಜಾತಿಗಳು** : (1) ಭತಡ; (2) ಹಾಸ್ಲ; (3) ನಾಲ್ಕದಯ; (4) ಪರವನ್.

**VII ಕೊಡಗು ಜಿಲ್ಲೆಯ ಅನುಸೂಚಿತ ಜಾತಿಗಳು** : (1) ಆದಿದ್ರಾವಿಡ; (2) ಆದಿಕರ್ನಾಟಕ; (3) ಆದಿಯ; (4) ಬಲಗೈ; (5) ಹೊಲೆಯ: (6) ಮಾದಿಗ; (7) ಮೂಚಿ; (8) ಮುಂಡಲ; (9) ಪಾಲೆ; (10) ಪಂಚಮ; (11) ಪರಯ; (12) ಸಾಮಗಾರ. (ಎನ್.ಎಸ್.ವಿ.)

**ಅನೃತಶೋಧ :** ಪ್ರಯತ್ನಪೂರ್ವಕವಾಗಿ ಸುಳ್ಳು ಹೇಳುತ್ತಿರುವ ಅಪರಾಧಿಯಿಂದ ಸತ್ಯಾಂಶವನ್ನು ಹೊರಗೆಡಹಲು ಮನಶ್ಶಾಸ್ತ್ರದ ರೀತ್ಯ ಏರ್ಪಾಟಾದ ಕ್ರಮ (ಲೈ ಡಿಟೆಕ್ಷನ್). ಅಪರಾಧಿ ತನ್ನ ಅಪರಾಧವನ್ನು ಬಯಲು ಮಾಡಲು ಇಚ್ಛಿಸುವುದಿಲ್ಲ. ಗೋಪ್ಯವಾಗಿಡಲು ಸಕಲಪ್ರಯತ್ನ ನಡೆಸುತ್ತಾನೆ. ತಾನು ನಿರಪರಾಧಿ ಎಂದು ಖಚಿತಪಡಿಸಲು ಸುಳ್ಳು ಮತ್ತು ನಟನೆಯನ್ನು ತನ್ನ ಮಾತು, ಮುಖಚರ್ಯೆ ಮತ್ತು ಚಲನವಲನಗಳಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳುತ್ತಾನೆ. ಆದರೆ ಅಪರಾಧಕ್ಕೆ ಸಂಬಂಧಿಸಿದ ಗುಪ್ತಆಲೋಚನೆಗಳು ಬಂದಾಗ ಉದ್ಭವಿಸುವ ಭಾವನಾತರಂಗ ಹಾಗೂ ದೈಹಿಕ ಮಾರ್ಪಾಡುಗಳು ಅವನ ಹತೋಟಿಗೆ ಮೀರಿದ್ದು. ಅಂದರೆ ಎಂಥ ನಿಸ್ಸೀಮ ಅಪರಾಧಿಯೇ ಆಗಲಿ ಆಂತರಿಕ ಭಾವಪ್ರದರ್ಶನವನ್ನು ಅಡಗಿಸಲಾರ. ಆದ್ದರಿಂದ ಆಂತರಿಕ ಭಾವಪ್ರದರ್ಶನವನ್ನು ಅಳತೆಗೆ ಒಳಪಡಿಸಿದರೆ ಅಪರಾಧದ ಜಾಡು ಸಿಕ್ಕಿ ಅಪರಾಧಿ ಯಾರೆಂಬುದನ್ನು ಪತ್ತೆ ಹಚ್ಚಬಹುದು.

ಭಾವೋದ್ರೇಕದಲ್ಲಿ ಆನುಷಂಗಿಕವಾಗಿ ಆಗುವ ಆಂತರಿಕ ಹಾಗೂ ದೈಹಿಕ ಮಾರ್ಪಾಡುಗಳೆಂದರೆ: ವೇಗವಾದ ಗುಂಡಿಗೆ ಬಡಿತ, ಉದ್ವೇಗದ ಉಸಿರಾಟ, ಹೊಟ್ಟೆಯಲ್ಲಿ ಸಂಕಟ, ಬೆವರುವುದು, ನಡುಕ, ರಕ್ತದ ಹೆಚ್ಚಾದ ಒತ್ತಡ—ಮುಂತಾದುವು; ಅನೇಕ ಬಗೆಯ ಸಲಕರಣೆಗಳಿಂದ ಈ ಆನುಷಂಗಿಕ ಮಾರ್ಪಾಡುಗಳನ್ನು ಅವಲೋಕನೆಗೆ ಮತ್ತು ಅಳತೆಗೆ ಒಳಪಡಿಸುವುದು ಸಾಧ್ಯ. ಈ ಎಲ್ಲ ಸಲಕರಣೆಗಳಿಗೂ ಒಟ್ಟಿನಲ್ಲಿ ಅಪರಾಧ ಪತ್ತೆಯ ಸಲಕರಣೆಗಳೆಂದು ಹೇಳುತ್ತಾರೆ. ಗುಂಡಿಗೆಬಡಿತ, ಉಸಿರಾಟ, ರಕ್ತದ ಒತ್ತಡ ಮತ್ತು ಜಿ.ಎಸ್.ಆರ್ (ಗ್ಯಾಲ್ವನಿಸ್ಕಿನ್ ರೆಸ್ಪಾನ್ಸ್) ಇವುಗಳ ಮಾಪನಕ್ಕೆ ಹಲವು ಉಪಕರಣಗಳಿವೆ. ವ್ಯಕ್ತಿ ಭಾವೋದ್ರೇಕಗೊಂಡಾಗ ಆತನ ದೇಹದಲ್ಲಿ ಉಂಟಾಗುವ ಮಾರ್ಪಾಡುಗಳನ್ನು ಈ ಉಪಕರಣಗಳಿಂದ ಪತ್ತೆಹಚ್ಚುಹುದು. ಈ ಮಾರ್ಪಾಡುಗಳು ಚಲಿಸುತ್ತಿರುವ ಪಾಲಿಗ್ರಾಫ್ ಟೇಪಿನಲ್ಲಿ ಮುದ್ರಿತವಾಗುವುವು. ಪ್ರಯೋಗಕ್ಕೆ ಒಳಗಾದ ವ್ಯಕ್ತಿಯ ತಲೆ, ಎದೆ, ಹೊಟ್ಟೆ ಮತ್ತು ತೋಳಿಗೆ ಪಟ್ಟಿ (ಬೆಲ್ಟ್) ಕಟ್ಟಿ, ಆಯಾ ಅಂಗಗಳಲ್ಲಿ ಉಂಟಾಗುವ ಆನುಷಂಗಿಕ ಮಾರ್ಪಾಡುಗಳನ್ನು ಪಾಲಿಗ್ರಾಫ್‌ನಲ್ಲಿ ಮುದ್ರಿಸುತ್ತಾರೆ. ಅಂಗೈಗೆ ಎಲೆಕ್ಟ್ರೋಡ್ ಕಟ್ಟಿ, ಭಾವೋದ್ರೇಕವಾದಾಗ ವಿದ್ಯುತ್‌ಪ್ರವಾಹ ತಡೆಯಿಲ್ಲದೆ ಹರಿಯುವುದನ್ನು ಸೈಕೋಗ್ಯಾಲ್ವನೋಮೀಟರಿನಲ್ಲಿ ಅಳೆಯಬಹುದು. ಸಹಜ ಸನ್ನಿವೇಶಗಳಲ್ಲಿ ವಿದ್ಯುತ್‌ಪ್ರವಾಹಕ್ಕೆ ಚರ್ಮದಿಂದ ತಡೆಯುಂಟು. ಭಾವೋದ್ರೇಕವಾದಾಗ ಬೆವರುಗ್ರಂಥಿಗಳು ಪ್ರಚೋದಿಸಲ್ಪಟ್ಟು ಪ್ರತಿಕ್ರಿಯಾರೂಪದಲ್ಲಿ ವ್ಯಕ್ತಿ ಬೆವರುತ್ತಾನೆ. ಹಾಗೆ ಬೆವತಾಗ ವಿದ್ಯುತ್‌ಪ್ರವಾಹ ಮೊದಲಿನ ಹಾಗೆ ತಡೆಯಲ್ಪಡದೆ, ಮುಂದುವರಿಯುವುದು.

ಅಪರಾಧಪತ್ತೆಯ ಪ್ರಯೋಗಕ್ಕೊಳಗಾಗುವ ವ್ಯಕ್ತಿ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಅಪರಾಧಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಸುಳ್ಳು ಉತ್ತರ ಕೊಡುವಾಗ ಅಪರಾಧಿ ಭಾವೋದ್ರೇಕ ಗೊಳ್ಳುವುದು ಸಹಜ. ಬಹಿರಂಗಭಾವಪ್ರದರ್ಶನಗಳನ್ನು ಆತ ತೋರಗೊಡದಿದ್ದರೂ ಆನುಷಂಗಿಕ ದೈಹಿಕಮಾರ್ಪಾಡುಗಳನ್ನು ಸಲಕರಣೆಗಳ ಮೂಲಕ ಗೊತ್ತುಪಡಿಸಿಕೊಳ್ಳುವುದು ಸಾಧ್ಯವಾದುದರಿಂದ ಆತ ಅಪರಾಧಿ ಎಂದು ತಿಳಿಯಬಹುದು. ನಿರಪರಾಧಿ ಯಾವ ನಿರ್ದಿಷ್ಟ ಪ್ರಶ್ನೆಗಳಿಗೂ ಭಾವೋದ್ರೇಕಗೊಳ್ಳುವುದಿಲ್ಲ. ಎಲ್ಲ ಬಗೆಯ ಪ್ರಶ್ನೆಗಳಿಗೂ ಆತ ಉದ್ವೇಗರಹಿತನಾಗಿರುತ್ತಾನೆ. ಇದು ಪಾಲಿಗ್ರಾಫ್ ಮುದ್ರಿಕೆಯಲ್ಲಿ ಏರುತಗ್ಗುಗಳಿಲ್ಲದೆ ಮುದ್ರಿತವಾಗುವುದು. ಪಾಲಿಗ್ರಾಫ್ ಮುದ್ರಿಕೆಯಲ್ಲಿನ ಏರುತಗ್ಗು ಮುದ್ರಣಗಳಿಂದ ಅನೃತಶೋಧ ಸುಲಭವಾಗುತ್ತದೆ.

ಒಮ್ಮೊಮ್ಮೆ ನಿರಪರಾಧಿ ಕೂಡ ತಾನು ಅಪರಾಧವೆಸಗದಿದ್ದರೂ ಅಪರಾಧದ ತಿಳಿವಳಿಕೆ ಇದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಉತ್ತರಿಸುವಾಗ ಭಾವೋದ್ರೇಕಗೊಳ್ಳುವುದು ಸಹಜ. ಅದರಿಂದಾಗಿ ನಿರ್ದೋಷಿ ಸಿಕ್ಕಿಬೀಳುವುದುಂಟು. ಈ ಸಾಧನೆ ಇಂಥ ಸಂದರ್ಭಗಳಲ್ಲಿ ಯಶಸ್ವಿಯಾಗಲಾರದು. ಆದರೆ ಅನುಮಾನಿತರನ್ನು ನಿರ್ದಿಷ್ಟಗೊಳಿಸುವಲ್ಲಿ ಎಂದಿಗೂ ಇದು ಬಹು ಉಪಯುಕ್ತ ಸಾಧನವಾಗಿದೆ. (ಎನ್.ಎಸ್.ಎಸ್.)

**ಅನೆಮನಿ :** ರ್‍ಯಾನನ್‌ಕ್ಯುಲೇಸೀ ಕುಟುಂಬಕ್ಕೆ ಸೇರಿದ ಅಲಂಕಾರ ಸಸ್ಯ. ಈ ಸಸ್ಯ ಸ್ವಲ್ಪಮಟ್ಟಿಗೆ ಪೊಪಿ (ಗಸಗಸೆ ಜಾತಿ) ಮತ್ತು ಸೇವಂತಿಗೆಗಳಂತೆ, ಸುಂದರವಾಗಿ ಹೂಬಿಡುತ್ತದೆ. ಕುಳ್ಳಾಗಿ ಬೆಳೆದು ಅವ್ಯವಸ್ಥಿತವಾಗಿ ಬಾಗಿದ ಎಲೆಗಳ ಮಧ್ಯೆ ಬಿಡುವ ಇದರ ಬಿಳುಪು, ನಸುಗೆಂಪು, ಕಂದು, ಕೇಸರಿ ಮತ್ತು ನೀಲಿ ಬಣ್ಣಗಳ ಹೂಗಳು ಜನರಿಗೆ ಅಚ್ಚುಮೆಚ್ಚು. ಒಂದು ಅಥವಾ ಎರಡು ಸುತ್ತು ದಳಗಳಿರುವ ಇದರ ಹೂಗಳ ಬಣ್ಣ, ಆಕಾರ, ಗಾತ್ರ ವಿಧವಿಧವಾಗಿರುವುದರಿಂದ ಆಕರ್ಷಕ ವಾಗಿ ಕಾಣುತ್ತವೆ. ಈ ಸಸ್ಯಗಳನ್ನು ಉದ್ಯಾನವನದ ಅಂಚು ಸಸ್ಯಗಳಾಗಿ, ಕಲ್ಲೇರಿ ಸಸ್ಯಗಳಾಗಿ ಮತ್ತು ಕುಂಡ ಸಸ್ಯಗಳಾಗಿ ಬೆಳೆಸುವುದುಂಟು.



ಅನೆಮನಿ ಜಾತಿಯಲ್ಲಿ ಸು. 100 ಪ್ರಭೇದಗಳಿವೆ. ಹೂವು ಬಿಡುವ ಬಹುವಾರ್ಷಿಕ ಸಸ್ಯಗಳಾದ ಇವುಗಳಲ್ಲಿ ಕೆಲವು ಮಾತ್ರ ತೋಟಗಾರಿಕೆಯಲ್ಲಿ ಪ್ರಾಮುಖ್ಯ ಪಡೆದಿವೆ. ಈ ಸಸ್ಯಗಳ ಎಲೆಗಳು ಹಲವಾರು ಹಾಲೆಗ ಳಾಗಿ ವಿಭಾಗಗೊಂಡಿರುವುವು. ಅಥವಾ ಪ್ರತ್ಯೇಕಿಸಿದ ಸಂಯುಕ್ತ ಎಲೆಯಾಗಿರುತ್ತವೆ. ಹೂಗಳು ಒಂಟೊಂಟಿ ದ್ವಿಲಿಂಗಿಗಳಾದ ಇವುಗಳಲ್ಲಿ ಬಹುಸಂಖ್ಯೆಯ ಕೇಸರ ಸಮೂಹವೂ ಬಹುಭಾಗದ ಅಂಡಾಶಯವೂ ಇವೆ. ಅಂಡಾಶಯ ಉತ್ತಮ ಸ್ಥಿತಿಯದಾಗಿದ್ದು ಒಂದೊಂದು ಅಂಡವನ್ನು ಹೊಂದಿರುತ್ತದೆ. ಫಲ ಒಂದು ಬೀಜದ ಅಕೀನ್ ಮಾದರಿಯದು.

ಅನೆಮನಿ ಕೊರೋನೇರಿಯ ಎಂಬ ಪ್ರಭೇದ 30 ಸೆಂಮೀ ಎತ್ತರಕ್ಕೆ ಬೆಳೆಯುತ್ತದೆ. ಕಾಂಡ ಬಹು ಕುಳ್ಳು; ಇದರ ಮೇಲೆ ತೊಟ್ಟಿರುವ ಅಥವಾ ತೊಟ್ಟಿಲ್ಲದ ನಯವಾದ ಎಲೆಗಳಿರುತ್ತವೆ. ಕಾಂಡದ ಕೆಳತುದಿಯಲ್ಲಿ ಗೆಡ್ಡೆಬೇರುಗಳಿವೆ. ತುದಿಯಲ್ಲಿರುವ ಒಂಟಿ ಹೂ ಬಿಳುಪು, ನೀಲಿ, ಕೆಂಪು ಅಥವಾ ಇವುಗಳ ಮಿಶ್ರಣದ ಬಣ್ಣಗಳಲ್ಲಿರುತ್ತದೆ. ಕೇಸರಗಳು ಅಧಿಕ ಸಂಖ್ಯೆಯಲ್ಲಿರುತ್ತವೆ. ಅನೆಮನಿ ಜಪಾನಿಕ ಎಂಬುದು ಸು. 1 ಮೀ. ಎತ್ತರ ಬೆಳೆಯುವ ಬಹು ವಾರ್ಷಿಕ ಪ್ರಭೇದ. ಇದರ ತವರು ಜಪಾನ್. ಬುಡದ ಎಲೆಗಳು ಉದ್ದವಾಗಿವೆ. ಮೂರರಿಂದ ಐದು ಭಾಗಗಳುಳ್ಳ ಎಲೆಯ ಅಂಚು ಗರಗಸದಂತಿದೆ. ತುದಿ

ಲಂಬಾಗ್ರವಾಗಿರುತ್ತದೆ. ಹೂವಿಗೆ ಉದ್ದವಾದ ತೊಟ್ಟು ಇರುತ್ತದೆ. ಪುಷ್ಪಪತ್ರಗಳು 1–3 ವೃತ್ತಗಳಲ್ಲಿರುತ್ತವೆ. ಉದ್ದವಾದ ಒಂಟಿಹೂ ತೊಟ್ಟಿನ ತುದಿಯಲ್ಲಿರುತ್ತದೆ. ಕೇಸರಗಳು ಹಳದಿ ಬಣ್ಣ, ಫಲ ಅಕೀನ್ ಮಾದರಿಯದು; ರೇಷ್ಮೆದಾರದಂಥ ಶಿಖೆಗಳಿಂದ ಕೂಡಿರುತ್ತದೆ. ಈ ಪ್ರಭೇದವನ್ನು ಅಡ್ಡತಳಿಎಬ್ಬಿಕೆ ಕಾರ್ಯಕ್ಕಾಗಿ ಅಧಿಕವಾಗಿ ಬಳಸುತ್ತಾರೆ. ಮೇಲೆ ಕಾಣಿಸಿರುವ ಜಾತಿಗಳು ಸಸ್ಯಶಾಸ್ತ್ರದ ಶಾಸ್ತ್ರೀಯ ವಿಂಗಡಣೆಯ ಮೂಲ ಪ್ರಭೇದಗಳು. ಬೇಸಾಯದಲ್ಲಿ ಕೆಲವು ವಿವಿಧ ಹೆಸರುಗಳುಳ್ಳ ಸ್ಥಳೀಯವಾದ ಅನೇಕ ತಳಿಗಳಿವೆ. ಅವುಗಳಲ್ಲಿ ಹಾಲೆಂಡಿಯಾ ಎಂಬುದು ಅನೇಕ ಬಣ್ಣದ, ಪೋಕರ್ ಎಂಬುದು ನೀಲಿ ಬಣ್ಣದ, ಸೈಲ್ ಫೈಡ್ ಎಂಬುದು ಕೆಂಪು ಬಣ್ಣದ, ಅಡ್ಮಿರಲ್ ಎಂಬುದು ನಸುಗೆಂಪು ಬಣ್ಣದ, ಗವರ್ನರ್ ಎಂಬುದು ಕೇಸರಿ ಬಣ್ಣದ ಹೂಗಳನ್ನು ಬಿಡುತ್ತವೆ.

ಅನೆಮನಿ ಸಸ್ಯಗಳನ್ನು ಬೀಜ ಮತ್ತು ಗೆಡ್ಡೆಗಳಿಂದ ವೃದ್ಧಿ ಮಾಡಬಹುದು. ಬೀಜಗಳಿಂದ ವೃದ್ಧಿ ಮಾಡುವಾಗ ಬೀಜಗಳನ್ನು 2 ದಿವಸ ನೀರಿನಲ್ಲಿ ನೆನೆಸಿ ಅನಂತರ ಬಿತ್ತನೆ ಮಾಡಿದರೆ ಬೇಗ ಮೊಳೆಯುತ್ತವೆ. ಹೂಬಿಟ್ಟ ಸಸ್ಯಗಳ ಗಡ್ಡೆಗಳನ್ನು ತೆಗೆದು ಪೊಟ್ಯಾಸಿಯಮ್ ಪರ್‌ಮಾಂಗನೇಟ್ ದ್ರಾವಣದಲ್ಲಿ ಸ್ವಲ್ಪಕಾಲ ಹಾಕಿ, ಒಣ ಮರಳಿನಲ್ಲಿ ಮುಂದಿನ ಸಾರಿ ನೆಡುವ ತನಕ, ಶೇಖರಿಸಬೇಕು.

ಈ ಸಸ್ಯಗಳು ಮೈದಾನ ಪ್ರದೇಶಗಳಲ್ಲಿ ಬೆಳೆಯಬಹುದಾದರೂ ಹೆಚ್ಚು ಎತ್ತರದಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತವೆ. ಅಕ್ಟೋಬರ್ ತಿಂಗಳು ಈ ಸಸ್ಯಗಳನ್ನು ನೆಡಲು ಯೋಗ್ಯವಾದ ಕಾಲ. ಗಡ್ಡೆಗಳನ್ನು 50–60 ಸೆಂಮೀ ಆಳದಲ್ಲಿ 10 ಸೆಂಮೀ ಇರುವಂತೆ ಅಂತರ ಕೊಟ್ಟು 15 ಸೆಂಮೀ ಸಾಲುಗಳಲ್ಲಿ ನೆಡಬೇಕು. ಜೌಗಿಲ್ಲದ ಮರಳುಗೋಡು ಮಣ್ಣಿನಲ್ಲಿ ಇವು ಸೊಗಸಾಗಿ ಬೆಳೆಯುತ್ತವೆ. ನೆಟ್ಟಮೇಲೆ ಸಸಿಗಳು ಬೆಳೆಯುವ ಸ್ಥಿತಿಯಲ್ಲಿರುವಾಗ ದ್ರಾವಣದ ಗೊಬ್ಬರ ಕೊಟ್ಟರೆ ಉತ್ತಮ. ಸಸಿ ನೆಟ್ಟ ಆರು ತಿಂಗಳಿಗೆ ಹೂ ಕಾಣುತ್ತದೆ. ಫೆಬ್ರವರಿ ಮಾರ್ಚ್ ತಿಂಗಳಲ್ಲಿ ಇವು ಹೂ ಬಿಡುತ್ತವೆ. (ಡಿ.ಎಂ.)

**ಅನೇಕತ್ವವಾದ :** ಅಂತಿಮಸತ್ಯ ಒಂದಕ್ಕಿಂತ ಹೆಚ್ಚಿನದಲ್ಲ ಎಂದು ಏಕತ್ವವಾದ ಹೇಳಿದರೆ ಅನೇಕತ್ವವಾದ ಸತ್ಯ ಒಂದೇ ಅಲ್ಲ ಎರಡಿರಬಹುದು ಅಥವಾ ಇನ್ನೂ ಅನೇಕ ಇರಬಹುದು ಎಂಬ ವಾದವನ್ನು ಪ್ರತಿಪಾದಿಸುತ್ತದೆ.

ಸತ್ಯ ಅನೇಕವಾಗಿದ್ದಲ್ಲಿ ಎಲ್ಲವೂ ಒಂದೇ ಮೌಲ್ಯ ಅಥವಾ ದರ್ಜೆಯದೇ ಅಥವಾ ಅವುಗಳಲ್ಲಿ ತಾರತಮ್ಯವೇನಾದರೂ ಇದೆಯೇ ಎಂಬ ಪ್ರಶ್ನೆ ಏಳುತ್ತದೆ. ಇನ್ನೊಂದು ವಿಧವಾಗಿಯೂ ಪ್ರಶ್ನೆಮಾಡಬಹುದು. ಇವು ಸಚೇತನವಾದುವೆ ಅಥವಾ ಜಡಜಗತ್ತಿಗೆ ಸೇರಿದ ಸತ್ಯಗಳು ಮಾತ್ರವೆ ಅಥವಾ ಚೇತನಾಚೇತನಗಳೆರಡರಲ್ಲಿಯೂ ಅನೇಕತ್ವವಿದೆಯೆ ಎಂಬ ಪ್ರಶ್ನೆಗಳನ್ನು ಹಾಕಬಹುದು. ಒಂದೇ ಸತ್ಯದಲ್ಲಿ ಗುಣಗಳ ಅನೇಕತ್ವವಿದೆ ಎಂದು ಕೆಲವು ಅನೇಕತ್ವವಾದಿಗಳು ನಿರೂಪಿಸಿರುತ್ತಾರೆ. ಎರಡೇ ಸತ್ಯಗಳನ್ನು ಅನೇಕತ್ವವೆಂದು ಹೇಳುವುದು ದ್ವೈತವಾದ. ಅನೇಕತ್ವವನ್ನು ಹೇಳಿ ಆ ಸತ್ಯಗಳಲ್ಲಿ ಪರಸ್ಪರ ಸಂಬಂಧವೇನಾದರೂ ಇದೆಯೆ ಅಥವಾ ಒಂದೊಂದೂ ಸ್ವತಂತ್ರವಾದುದೆ ಎಂಬ ಪ್ರಶ್ನೆಗಳಿಗೆ ಅನೇಕತ್ವವಾದಿಗಳಾದ ದಾರ್ಶನಿಕರು ಉತ್ತರ ಕೊಡಲು ಪ್ರಯತ್ನಿಸಿದ್ದಾರೆ. ಹಾಗೆಯೆ ಮೇಲಿನ ಪ್ರಶ್ನೆಗಳನ್ನೂ ಪರೀಕ್ಷಿಸಿದ್ದಾರೆ.

ಅನೇಕತ್ವ ತೋರಿಕೆ ಮಾತ್ರವೇ ಇದೆ ಎಂದು ನಿಷ್ಪ್ರಪಂಚವಾದಿಗಳೂ ಅದ್ವೈತ ದರ್ಶನಕಾರರೂ ಹೇಳಿದರು. ಹಿಂದೂದರ್ಶನಗಳಲ್ಲಿ ಅದ್ವೈತವು ಜೀವಾತ್ಮ ಪರಮಾತ್ಮರೆಂಬ ಭೇದವನ್ನು ಖಂಡಿಸಿ ಜಗತ್ತನ್ನು ಮಿಥ್ಯೆ ಎಂದು ಹೇಳಿ ಏಕತ್ವವನ್ನು ಪ್ರತಿಪಾದಿಸಿದೆ. ದ್ವೈತದರ್ಶನವೂ ವಿಶಿಷ್ಟಾದ್ವೈತವೂ ಜೀವಾತ್ಮ ಪರಮಾತ್ಮರ ಭೇದವನ್ನು ಒಪ್ಪಿಕೊಂಡು ಅನೇಕರಾದ ಜೀವಾತ್ಮರು ಮುಕ್ತರಾದಾಗಲೂ ಪರಮಾತ್ಮನಿಂದ ಬೇರೆಯಾಗಿಯೇ ಉಳಿಯುತ್ತಾರೆಂದು ಅನೇಕತ್ವವಾದವನ್ನು ಸಮರ್ಥಿಸುತ್ತವೆ. ದ್ವೈತದರ್ಶನ ಪಂಚಭೇದಗಳಿಂದಲೂ ಚರಾಚರಜಗತ್ತಿನಲ್ಲಿ, ಪ್ರಕೃತಿ ಪುರುಷರಲ್ಲಿ ತಾರತಮ್ಯಗಳಿಂದಲೂ ಅನೇಕತ್ವವಿದೆ ಎಂದು ವಾದಿಸುತ್ತದೆ.

ಪಾಶ್ಚಾತ್ಯ ಅನೇಕತ್ವವಾದಿಗಳು ಚೇತನಶಕ್ತಿಯಲ್ಲಿ ಪ್ರತಿಯೊಂದು ಭಾಗಕ್ಕೂ ತನ್ನದೇ ಆದ ಪ್ರತ್ಯೇಕ ಅನುಭವವಿದೆಯಾದುದರಿಂದಲೇ ಅದು ಬೆಳೆದು ಅಭಿವೃದ್ಧಿಯಾಗುತ್ತದೆ ಎಂದು ನಿರೂಪಿಸಿದ್ದಾರೆ. ಇವರಲ್ಲಿ ಮುಖ್ಯರಾದವರು ಲೀಬ್ನಿಟ್ಸ್, ಮ್ಯಾಕ್ಟ್‌ಗಟ್ಸ್ ಮತ್ತು ವಾರ್ಡ್.

17ನೆಯ ಶತಮಾನದ ಅಂತ್ಯದಲ್ಲಿ ಲೀಬ್ನಿಟ್ಸ್ ಅನೇಕತ್ವವಾದವನ್ನು ತನ್ನದೇ ಆದ ಒಂದು ಶೈಲಿಯಲ್ಲಿ ನಿರೂಪಿಸಿದ. ಈತನ ಪ್ರಕಾರ ಜಡವಾದುದಾವುದೂ ಸತ್ಯವಲ್ಲ. ಅದು ತೋರಿಕೆಯೇ ಹೊರತು ವಾಸ್ತವವಾದುದಲ್ಲ. ವಿಶ್ವ ಚೇತನಮಯವಾದುದು ಮತ್ತು ಅಸಂಖ್ಯಾತ ಚೇತನಾಣುಗಳಿಂದ (ಮೊನ್ಯಾಡ್ಸ್) ತುಂಬಿದುದು. ಪ್ರತಿಯೊಂದು ಚೇತನಾಣುವೂ ತನ್ನದೇ ವೈಶಿಷ್ಟ್ಯವನ್ನೂ ವ್ಯಕ್ತಿತ್ವವನ್ನೂ ಹೊಂದಿದೆ. ಅದರ ವ್ಯಕ್ತಿತ್ವ ಇದರ ಚೇತನಾಣುಗಳಿಂದ ಬದಲಾವಣೆಯಾಗುವಂಥದಲ್ಲ; ಚೇತನ ಶಕ್ತಿಯನ್ನು ಪೂರ್ತಿಯಾಗಿ ಹೊಂದಿರುವುದಿಲ್ಲ. ಸುಪ್ತಸ್ಥಿತಿಯಲ್ಲಿ ಇರಬಹುದು. ಕೆಲವು ಸ್ವಪ್ನಾವಸ್ಥೆಯಲ್ಲಿ ಇದ್ದಂತೆ ಇರಬಹುದು. ಮತ್ತೆ ಕೆಲವು ಇನ್ನೂ ಸ್ಪಷ್ಟವಾದ ಜಾಗೃದಾವಸ್ಥೆಯನ್ನು ಹೊಂದಿರಬಹುದು. ಸಂಪೂರ್ಣ ಚೇತನವಾದ ವ್ಯಕ್ತಿ ದೇವರೊಬ್ಬನೇ. ಪ್ರತಿಯೊಂದು ಚೇತನಾಣುವಿಗೂ ಅಂತರ್ಗತವಾದ ಕ್ರಿಯಾಶಕ್ತಿ ಇದೆ. ಇತರ ಚೇತನಾಣುಗಳ ಸಹಾಯದಿಂದ ಅದು ಕ್ರಿಯೆಯನ್ನು ಮಾಡುವುದಿಲ್ಲ. ಎಲ್ಲವೂ ಸ್ವಸಂಪೂರ್ಣವಾಗಿಯೇ ಭಗವಂತನಿಂದ ಸೃಷ್ಟಿಸಲ್ಪಟ್ಟವು. ಅವನು ಸೃಷ್ಟಿಸುವಾಗಲೇ ಅವುಗಳ ಸ್ವತಂತ್ರ ಇರುವಿಕೆಯನ್ನು ಉಂಟುಮಾಡಿದ್ದಾನೆ. ಅವನಿಂದಲೇ ಚೇತನಾಣುಗಳು ಅಭಿವ್ಯಕ್ತವಾಗಿ ಬಂದಿವೆ. ಪ್ರತಿಯೊಂದು ಚೇತನಾಣುವೂ ವಿಶ್ವವನ್ನು ಪ್ರತಿನಿಧಿಸುತ್ತದೆ. ಯಾವುದೇ ಒಂದು ಚೇತನಾಣುವೂ ಇರದಿದ್ದಲ್ಲಿ ವಿಶ್ವವೇ ಬದಲಾಗಿರುತ್ತಿತ್ತು. ಪ್ರತಿಯೊಂದು ಚೇತನಾಣುವೂ ದೋಷರಹಿತವಾದ ಗಡಿಯಾರದಂತೆ ತನ್ನ ಕ್ರಿಯೆಯನ್ನು ಮಾಡುತ್ತಿರುತ್ತದೆ. ಅದು ಬದಲಾವಣೆ ಹೊಂದಿದರೂ ಇತರ ಚೇತನಾಣುಗಳ ಬದಲಾವಣೆಯನ್ನು ಅನುಸರಿಸುವಂತೆ ಮೊದಲೇ ನಿಯಮಿಸಲ್ಪಟ್ಟಿರುತ್ತದೆ. ಪರಮಾತ್ಮನಿಂದ ವಿಶ್ವದಲ್ಲಿ ಸಾಮರಸ್ಯ ಪೂರ್ವಭಾವಿಯಾಗಿ ಸ್ಥಾಪಿಸಲ್ಪಟ್ಟಿದೆ. ಆ ಸಾಮರಸ್ಯ ಸ್ವಲ್ಪವೂ ವ್ಯತ್ಯಾಸವಾಗದಂತೆ ಚೇತನಾಣುಗಳು ಸ್ವತಂತ್ರವಾಗಿ ಜೀವಿಸುತ್ತವೆ.

ಚೇತನಾಣುಗಳಲ್ಲಿ ಕೆಲವು ಪ್ರಧಾನವಾದುವು, ಕೆಲವು ಅಧೀನವಾದುವು. ಹೆಚ್ಚಾದ ವಿಷಯಗ್ರಹಣಶಕ್ತಿಯನ್ನು ಪಡೆದವು ಪ್ರಧಾನವಾದುವು. ಚೇತನಾಣುಗಳ ಸಂಘಟನೆಯಿಂದ ಮಾನವ, ಪ್ರಾಣಿ, ಸಸ್ಯಗಳು ರೂಪಿಸಲ್ಪಟ್ಟಿವೆ. ಮಾನವನಲ್ಲಿ ವಿಚಾರಶಕ್ತಿ ಪ್ರಧಾನವಾಗಿದ್ದು ಅವನ ವಿಕಾಸಕ್ಕೆ ಅನುಗುಣವಾದ ಅಂಶಗಳೆಲ್ಲವೂ ಅವನು ಜನಿಸುವಾಗಲೇ ಅವ್ಯಕ್ತರೀತಿಯಲ್ಲಿ ಅಡಗಿರುತ್ತವೆ. ಪ್ರಧಾನವಾದ ಚೇತನಾಣುವೇ ಆತ್ಮ. ಕ್ರಿಯಾಶಕ್ತಿ ಇರುವ ಚೇತನಾಣುಗಳಿಗೆ ಕ್ರಿಯಾಶಕ್ತಿಹೀನವಾದ ಚೇತನಾಣುಗಳು ಅಧೀನ. ಹೀಗೆ ಆತ್ಮಕ್ಕೆ ದೇಹ ಅಧೀನ. ದೇಹಕ್ಕೆ ವಿಷಯಗ್ರಹಣಶಕ್ತಿ ಇಲ್ಲ. ಆದರೆ ಅದೂ ಆತ್ಮದಂತೆಯೇ ಅಭೌತಿಕ. ಎಲ್ಲ ಚೇತನಾಣುಗಳಿಗೂ ಯಾವಾಗಲೂ ಒಂದು ಚೇತನಶಕ್ತಿ ಇರುವುದಿಲ್ಲ. ಹೀಗೆ ಆತ್ಮವೂ ಕೆಲವು ವೇಳೆ ತನ್ನ ವಿಷಯಗ್ರಹಣಶಕ್ತಿಯಲ್ಲಿ ಕುಗ್ಗಿ ದೇಹದಂತೆಯೇ ಕ್ರಿಯಾಶಕ್ತಿಯನ್ನು ಕಳೆದುಕೊಳ್ಳಬಹುದು.

ಚೇತನಾಣುಗಳ ಸಂಘಟನೆ ಯಾವಾಗಲೂ ಒಂದೇ ರೀತಿ ಇರುವುದಿಲ್ಲ. ಮಾನವ ಶರೀರದಲ್ಲಿರುವ ಕೆಲವು ಚೇತನಾಣುಗಳು ಹೋಗುತ್ತಿರುತ್ತವೆ. ಕೆಲವು ಹೊಸದಾಗಿ ಬಂದು ಸೇರುತ್ತಿರುತ್ತವೆ. ವಿಷಯಗ್ರಹಣಶಕ್ತಿ ಕಡಿಮೆ ಇರುವ ಚೇತನಾಣುಗಳಿಂದ ಪ್ರಾಣಿ ಮತ್ತು ಸಸ್ಯಗಳು ಆಗಿವೆ.

ಲೀಬ್ನಿಟ್ಸ್ ಮುಂದೆ ಬರುವ ಮುಖ್ಯವಾದ ಪಾಶ್ಚಾತ್ಯ ದಾರ್ಶನಿಕರೆಲ್ಲರ ಮೇಲೂ ತನ್ನ ತತ್ತ್ವದಿಂದ (ಮೊನ್ಯಾಡಾಲಜಿ) ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವವನ್ನು ಬೀರಿದ್ದಾನೆ.

**ಮ್ಯಾಕ್ಟ್‌ಗರ್ಟ್:** ಈತ ಹೆಗೆಲ್‌ನ ಶಿಷ್ಯವೃಂದಕ್ಕೆ ಸೇರಿದವನೆನ್ನಬಹುದು. 19ನೆಯ ಶತಮಾನದಲ್ಲಿ ಅನೇಕತ್ವವಾದವನ್ನು ಪಾಶ್ಚಾತ್ಯರಲ್ಲಿ ಪ್ರತಿಪಾದಿಸಿದ. ಈತ ಮತಸಂಬಂಧವಿಲ್ಲದ ಅನೇಕತ್ವವಾದಿ. ಇವನ ಹಿಂದೆ ಹೆಗೆಲ್, ಬ್ರಾಡ್ಲೆ, ಬೊಸಾಂಕೆ ಮೊದಲಾದವರು ಏಕತ್ವವಾದಿಗ ಳಾಗಿದ್ದರು. ಹೆಗೆಲ್‌ನ ತತ್ತ್ವವನ್ನು ಸ್ಥೂಲವಾಗಿ ಒಪ್ಪಿಕೊಂಡರೂ ಈತ ಏಕತ್ವವನ್ನು ಖಂಡಿಸಿದ. ಲೀಬ್ನಿಟ್ಸ್‌ನಿಂದಲೂ ಪ್ರಭಾವಿತನಾದ. ಆದರೆ ಈತ ಅನೇಕತ್ವ ಸ್ವತಸ್ಸಿದ್ಧವೆಂದು ಹೇಳಿ ಅದನ್ನು ಇಂದ್ರಿಯಜನಿತವಾದ ಅನುಭವದಿಂದ ಸಮರ್ಥಿಸಿದ. ವಸ್ತುವಿನ ಭೇದಗಳು ಸ್ಪಷ್ಟವಾಗಿವೆಯೆಂದೂ ಅವುಗಳಲ್ಲಿ ಗುಣಭೇದವಿರುವುದರಿಂದ ಅವು ಅನೇಕವಾಗಿವೆಯೆಂದೂ ಅವುಗಳಿಗೆ ಪರಸ್ಪರ ಸಂಬಂಧವಿದೆಯೆಂದೂ ವಾದಿಸಿದ. ಗುಣಸಂಬಂಧವಿಲ್ಲದಿದ್ದರೂ ಎಲ್ಲ ವಸ್ತುಗಳಿಗೂ ಪರಸ್ಪರ ಸಂಬಂಧವಿರಲೇಬೇಕು ಎಂದು ಇವನ ಅಭಿಪ್ರಾಯ. ವಸ್ತುಗಳೆಲ್ಲ ವಿಶ್ವದ ಭಾಗಗಳು. ಆದರೆ ವಿಶ್ವದಲ್ಲಿ ಪೂರ್ಣತ್ವವಿದೆ. ಈ ಪೂರ್ಣತ್ವದ ಭಾಗಗಳು ಪೂರ್ಣತ್ವಕ್ಕೆ ಸಂಬಂಧಿಸಿದುವುಗಳಾಗಿ ಹೊಂದಿಕೊಂಡಿರುವುದರಿಂದ ವಿಶ್ವನೈಜವಾದ ಏಕತ್ವವನ್ನು ಹೊಂದಿದೆ.

ವಸ್ತುಗಳು ಭಿನ್ನತೆಯನ್ನು ಹೊಂದಿರುತ್ತವೆ. ಈ ಭಿನ್ನತೆ ಅತಿ ತೊಡಕಾಗಿದ್ದರೂ ಅವುಗಳಲ್ಲಿ ಒಂದು ಹೊಂದಿಕೆಯನ್ನು ಕಾಣಬಹುದು. ಕಾರ್ಯಕಾರಣ ಸಂಬಂಧದಿಂದ ಮಾತ್ರ ಈ ತೊಡಕನ್ನು ಬಿಡಿಸಬಹುದು. ಒಂದೇ ವಸ್ತು ವಿಭಾಗವಾಗುತ್ತ ಬಂದು ಹಂತಹಂತ ವಾದ ಭಿನ್ನತೆ ಏರ್ಪಟ್ಟಿದೆ. ಒಂದು ವಸ್ತುವಿನ ಭಾಗಗಳೆಲ್ಲವನ್ನೂ ಅವುಗಳ ಸಂಬಂಧವನ್ನೂ ಅರಿತರೆ ಮಾತ್ರ ವಸ್ತುವನ್ನು ಅರಿಯಬಹುದು. ಮ್ಯಾಕ್ಟ್‌ಗರ್ಟ್ ಏಕತ್ವವನ್ನು ಸಂಪೂರ್ಣವಾಗಿ ಖಂಡಿಸಿಲ್ಲವೆನ್ನಬಹುದು. ಆದರೆ ಅನೇಕತ್ವದ ಕಡೆಗೆ ಅವನ ಮನಸ್ಸು ವಾಲಿದೆ.

ವಿಶ್ವದ ಸತ್ಯ ಭಾವಪ್ರಧಾನವಾದುದೆಂದೂ ಚೇತನಾಮಯವಾದುದೆಂದೂ ಮುಂದೆ ಆತ ಹೇಳಿದ್ದಾನೆ. ಸತ್ಯದ ಸ್ವರೂಪ ಭಿನ್ನತೆಯಲ್ಲಿ ಹೆಚ್ಚು ಸ್ಪಷ್ಟವಾಗಿದೆ. ವಿದ್ಯಾಸಂಸ್ಥೆಯಲ್ಲಿರುವ ವಿದ್ಯಾರ್ಥಿಗಳು ಸಂಸ್ಥೆಗಿಂತ ಸತ್ಯ ಎನ್ನಬಹುದೆಂದು ಉದಾಹರಣೆ ಕೊಡುತ್ತಾನೆ. ಅಂದರೆ ಅನೇಕತ್ವವೇ ಹೆಚ್ಚು ವಾಸ್ತವವಾದುದು. ಪ್ರತಿಯೊಂದು ಚೇತನವೂ ಸ್ವತಂತ್ರವಾದುದೆಂದು ಮತ್ತು ಅದರ ಅಸ್ತಿತ್ವಕ್ಕೆ ದೇವರಾಗಲಿ ಮತ್ತೊಂದು ಪರವಸ್ತುವಾಗಲಿ ಕಾರಣವಲ್ಲವೆಂದು ಇವನ ವಾದ. ವ್ಯಕ್ತಿತ್ವ–ವೈಶಿಷ್ಟ್ಯವನ್ನು ಸಮರ್ಥಿಸಿದವರಲ್ಲಿ ಈತ ಅಗ್ರಗಣ್ಯ. ಆತ್ಮ ಅನಾದಿ, ಅನಂತನೆಂದೂ ಅದನ್ನು ಸೃಷ್ಟಿಸುವುದಕ್ಕೆ ಬೇರಾವುದೂ ಕಾರಣವಲ್ಲವೆಂದೂ ಇವನ ಅಭಿಪ್ರಾಯ. ಕಾಲವೆನ್ನುವುದು ಬರಿ ತೋರಿಕೆಯೆಂದೂ ವ್ಯಕ್ತಿತ್ವ ಅನಾದಿಯಾದಂತೆ ಕಾಲಾತೀತ ವೆಂದೂ ಮರಣದಿಂದ ಜೀವ ನಾಶವಾಗುವುದಿಲ್ಲವೆಂದೂ ಈತ ಹೇಳಿದ್ದಾನೆ. ಇವನು ಭಗವಂತನನ್ನು ಒಪ್ಪಿಕೊಳ್ಳುವ ಆವಶ್ಯಕತೆಯೇ ಇಲ್ಲವೆನ್ನುತ್ತಾನೆ. ಇವನ ವಾದವನ್ನು ಬುದ್ಧನ ತತ್ತ್ವಕ್ಕೆ ಹೋಲಿಸಬಹುದು.

ಭಿನ್ನ ಭಿನ್ನವಾದ ವ್ಯಕ್ತಿಗಳು ಪರಸ್ಪರ ಪ್ರೇಮದಿಂದ ಒಂದುಗೂಡಿರುವುದು ಸ್ವಾಭಾವಿಕವೆಂದೂ ಮಿತ್ರತ್ವವೇ ವಿಶ್ವದ ನಿಯಮವೆಂದೂ ಈತ ಹೇಳಿ ಸತ್ಯವನ್ನು ಮುಟ್ಟಬೇಕಾದರೆ ಸದ್ಗುಣದಿಂದಲೇ ಸಾಧ್ಯವೆಂದೂ ಪ್ರೇಮದ ಪರಿಪೂರ್ಣತೆಯೇ ಸತ್ಯದ ನೆಲೆಯೆಂದೂ ತಿಳಿಸಿದ್ದಾನೆ.

ಜೇಮ್ಸ್ ವಾರ್ಡ್: ಮ್ಯಾಕ್ಟ್‌ಗರ್ಟನ ಸಮಕಾಲೀನ. ವಿಜ್ಞಾನದಲ್ಲಿ ಪಂಡಿತ, ಮನಶ್ಶಾಸ್ತ್ರಜ್ಞರಲ್ಲಿ ಪ್ರಸಿದ್ಧ. ವ್ಯಕ್ತಿಗೂ ಮನೋಧರ್ಮ ವಿಶಿಷ್ಟವಾದುದು. ಯಾವ ಎರಡು ವ್ಯಕಿಗಳೂ ಒಂದೇ ವಿಧವಲ್ಲವೆಂದು ಈತ ವಾದಿಸಿದ. ಲೀಬ್ನಿಟ್ಸನ ಚೇತನಾಣುಗಳ ತತ್ತ್ವವನ್ನು ಈತ ಸಂಪೂರ್ಣವಾಗಿ ಅಂಗೀಕರಿಸಿದ್ದಾನೆ. ಆದರೆ ಚೇತನಾಣುಗಳಿಗೆ ಪೂರ್ವಭಾವಿಯಾದ ಸಾಮರಸ್ಯ ಇರುವುದೆಂದು ಒಪ್ಪಿಕೊಂಡಿಲ್ಲ. ಪ್ರತಿಯೊಂದು ವ್ಯಕ್ತಿಯೂ ತನ್ನ ಅನುಭವವನ್ನು ಸ್ವತಂತ್ರವಾಗಿ ಇಚ್ಛಾನುಸಾರವಾಗಿ ರೂಪಿಸಿಕೊಳ್ಳುತ್ತಾನೆ. ಬದುಕುವ ಇಚ್ಛೆ ಅವನಲ್ಲಿ ಪ್ರಧಾನವಾಗಿರುತ್ತದೆ. ಅವನ ಕ್ರಿಯೆಗಳೆಲ್ಲವೂ ಉದ್ದೇಶಪೂರ್ವಕವಾಗಿ ನಡೆಯುತ್ತವೆ. ಅವು ಪೂರ್ವ ನಿಯಾಮಕವಲ್ಲ. ವಿಶ್ವ ಪರಸ್ಪರಸಂಬಂಧವುಳ್ಳ ಎರಡು ತತ್ತ್ವಗಳನ್ನು ಪ್ರತಿಪಾದಿಸುತ್ತದೆ. ವಾಸ್ತವಿಕ ಜಗತ್ತು ವೈಜ್ಞಾನಿಕ ನಿಯಮಗಳಿಗನುಸಾರವಾಗಿ ಯಾಂತ್ರಿಕವಾಗಿ ಬದಲಾವಣೆಯಾಗುತ್ತಿರುತ್ತದೆ. ಇದರಲ್ಲಿ ನಾವು ಯಾವ ತತ್ತ್ವವನ್ನಾಗಲಿ ಉದ್ದೇಶವನ್ನಾಗಲಿ ಕಾಣುವುದಿಲ್ಲ. ಚೇತನಜಗತ್ತು ಅರ್ಥಗರ್ಭಿತವಾದುದು. ಪ್ರತಿಯೊಂದು ಕ್ರಿಯೆಯೂ ಚೇತನದಲ್ಲಿ ಉದ್ದೇಶಪೂರ್ವಕವಾದುದು. ಪರಮಸತ್ಯವಾದ ಈಶ್ವರನನ್ನು ಸಾಕ್ಷಾತ್ಕಾರಮಾಡಿಕೊಳ್ಳುವುದೇ ಈ ಉದ್ದೇಶ. ಈ ವಿಧವಾಗಿ ವಾರ್ಡ್ ತನ್ನ ಈಶ್ವರವಾದವನ್ನೂ ನೈಸರ್ಗಿಕತತ್ತ್ವವಾದವನ್ನೂ (ನ್ಯಾಚುರಲಿಸಮ್) ಪರಸ್ಪರ ವಿರೋಧವಿಲ್ಲದಂತೆ ಪ್ರತಿಪಾದಿಸಲು ಪ್ರಯತ್ನಿಸಿದ್ದಾನೆ. ಈಶ್ವರ ಜೀವಾತ್ಮರಿಗೆ ಸ್ವಾತಂತ್ರ್ಯವನ್ನು ಕೊಟ್ಟು ತನ್ನ ಸ್ವಾತಂತ್ರ್ಯವನ್ನು ಪರಿಮಿತಿಗೊಳಿಸಿಕೊಂಡಿದ್ದಾನೆ, ತನ್ನೊಡನೆ ವಿಶ್ವದ ಪ್ರಗತಿಯನ್ನು ಸಾಧಿಸುವ ಸಹವರ್ತಿಗಳಂತೆ ಮಾನವರನ್ನು ಸೃಷ್ಟಿಸಿದ್ದಾನೆ. ಹೀಗೆ ಮಾನಸಿಕವಾಗಿ ಎಲ್ಲ ಚೇತನಾಣುಗಳೂ ಒಂದು ಪರಿಪೂರ್ಣತೆಯ ಕಡೆಗೆ ಸಾಗಿ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳದೆ ಏಕತ್ವವನ್ನು ಅನೇಕತ್ವದ ಮೂಲಕ ಸಾಧಿಸುತ್ತವೆ. ನೈತಿಕ ಆಧಾರದಿಂದ ವಾರ್ಡ್ ಈಶ್ವರನನ್ನೂ ಚೇತನಾಣುಗಳ ಅಮರತ್ವವನ್ನೂ ಸಿದ್ಧಾಂತಮಾಡಲು ಪ್ರಯತ್ನಿಸಿದ್ದಾನೆ. ವಾಸ್ತವಿಕ ಜಗತ್ತಿನಲ್ಲಿ ವಿಜ್ಞಾನಪದ್ಧತಿ ಪೂರ್ಣಸತ್ಯವನ್ನು ಕಾಣಲು ಅಸಮರ್ಥವಾದುದೆಂದೂ ವಿಶ್ವದ ಒಂದು ಮುಖವನ್ನು ಮಾತ್ರ ವಿವರಿಸುವುದೆಂದೂ ಹೇಳಿದ್ದಾನೆ. ವಿಜ್ಞಾನಕ್ಕಿಂತಲೂ ಇತಿಹಾಸ ಸತ್ಯವನ್ನು ಅಂದರೆ ಜೀವನದ ವಾಸ್ತವಾಂಶಗಳನ್ನು ಚೆನ್ನಾಗಿ ಸ್ಪಷ್ಟಪಡಿಸುತ್ತದೆಂದು ಹೇಳಿದ್ದಾನೆ. ಏಕೆಂದರೆ ವೈಜ್ಞಾನಿಕಪದ್ಧತಿ ವಿಶ್ವದಲ್ಲಿ ಯಾಂತ್ರಿಕವಾಗಿ ನಡೆಯುವ ಘಟನೆಗಳನ್ನು ಮಾತ್ರ ಒಂದು ಸಾಮಾನ್ಯದೃಷ್ಟಿಯಿಂದ ಒಂದೇ ಸೂತ್ರಕ್ಕನುಸಾರವಾಗಿ ಒಂದೇ ರೀತಿಯಾಗಿ ನಡೆಯುವಂತೆ ತೋರಿಸುತ್ತದೆ. ಆದರೆ ಜೀವನದ ಮೌಲ್ಯಕ್ಕಾಗಲಿ ಧ್ಯೇಯಕ್ಕಾಗಲಿ ಉದ್ದೇಶಕ್ಕಾಗಲಿ ಇದರಲ್ಲಿ ಸ್ಥಾನವಿಲ್ಲ. ಇತಿಹಾಸದಲ್ಲಿ ಮಾನವಜೀವನದ ನೈತಿಕಸಾಧನೆ, ಸ್ವಾತಂತ್ರ್ಯ, ಮೌಲ್ಯಗಳು–ಇವನ್ನು ಕಾಣುತ್ತೇವೆ. ಆದರೆ ಇವೆರಡೂ ಪರಸ್ಪರ ವಿರೋಧವಾದವೆಂದು ಭಾವಿಸಕೂಡದು. ಜಡಜಗತ್ತಿನಲ್ಲಿ ಮತ್ತು ಚೇತನದಲ್ಲಿ ಪರಸ್ಪರಸಂಬಂಧವನ್ನು ಕಾಣುವುದೇ ದಾರ್ಶನಿಕಮಾರ್ಗದ ಗುರಿ. ಅನೇಕತ್ವಕ್ಕೂ ಈಶ್ವರನಿಗೂ ಸಂಬಂಧವನ್ನು ಕಾಣಬೇಕು. ಚೇತನಾಣುಗಳು ವಿಕಾಸವಾಗುತ್ತ ಮಾನವಮಟ್ಟವನ್ನೂ ಮೀರಬಹುದೆಂದೂ ವಿಕಾಸವಾದ ಉದ್ದೇಶಪೂರ್ವವಾದ ರಚನಾಕೌಶಲವನ್ನು ವಿವರಿಸುವುದಿಲ್ಲವಾದರೂ ಜಗತ್ತಿನ ವಿಕಾಸವನ್ನು ಚೆನ್ನಾಗಿ ಅರ್ಥಮಾಡಿಕೊಡುವುದೆಂದೂ ಹೇಳಿದ್ದಾನೆ.

ವಾರ್ಡ್‌ನ ಅನೇಕತ್ವವಾದ ವಿಶ್ವದ ಏಕತ್ವವನ್ನು ಖಂಡಿಸಿಲ್ಲ. ಅಂತಿಮವಾಗಿ ಅನೇಕ ಏಕದಲ್ಲಿಯೇ ಪರಿಪೂರ್ಣತೆಯನ್ನು ಹೊಂದುವುದೆಂದೂ ವೈಜ್ಞಾನಿಕ ಅಂಶಗಳನ್ನು ಪರಿಪೂರ್ಣತ್ವದ ದೃಷ್ಟಿಯಿಂದ ವಿವರಿಸಲು ದರ್ಶನಮಾರ್ಗವೇ ಯುಕ್ತವಾದುದೆಂದೂ ಹೇಳುತ್ತದೆ.

ಪಾಶ್ಚಾತ್ಯ ಅನೇಕತ್ವವಾದಿಗಳು ಚೇತನಾಣುಗಳ ಅನುಭವದಲ್ಲಿ ಒಂದು ವಿಧವಾದ ಪರಸ್ಪರಸಂಬಂಧವುಂಟೆಂದೂ ಅವುಗಳೆಲ್ಲವೂ ಒಂದೇ ಪೂರ್ಣತ್ವದ ಭಾಗಗಳೆಂದೂ ಆ ಪೂರ್ಣತ್ವ ಭಾಗಗಳ ಬೆಳವಣಿಗೆಯ ರೀತಿಯನ್ನೂ ಕ್ರಮವನ್ನೂ ಹತೋಟಿಯಲ್ಲಿಟ್ಟುಕೊಂಡಿರುವುದೆಂದೂ ಹೇಳಿದ್ದಾರೆ. ಅದಲ್ಲದೆ ಪರಸ್ಪರಸಂಬಂಧದಿಂದ ಅಭಿವೃದ್ಧಿಯಾಗಬೇಕಾದರೆ ಅವಕ್ಕೆ ಒಂದೇ ಪ್ರಕೃತಿ ಅಥವಾ ಆವರಣ, ಸೌಹಾರ್ದಗಳಿರಬೇಕೆಂದು ವಾದಿಸಿದ್ದಾರೆ. ಅಂದರೆ ಏಕತ್ವದಲ್ಲಿ ಅನೇಕತ್ವ ಎಂಬ ಭಾವನೆಯನ್ನು ಪ್ರತಿಪಾದಿಸಿದ್ದಾರೆ. ಹಿಂದೂದರ್ಶನಗಳಲ್ಲಿಯೂ ಅನೇಕತ್ವವಾದವನ್ನು ಪ್ರತಿಪಾದಿಸಲಾಗಿದೆ. ದ್ವೈತದರ್ಶನದಲ್ಲಿ ಹಿಂದೆ ಹೇಳಿದಂತೆ ಒಂದು ವಿಧವಾದ ಅನೇಕತ್ವವಾದವಿದೆ. ಮೂಲಬೌದ್ಧದರ್ಶನದಲ್ಲಿಯೂ ಜೈನ, ಸಾಂಖ್ಯ ಮತ್ತು ಸಾಂಖ್ಯದರ್ಶನಗಳಲ್ಲಿ ಈ ತತ್ತ್ವದ ನಿರೂಪಣೆಯನ್ನು ಕಾಣಬಹುದು. ಜೈನ ಮತ್ತು ಸಾಂಖ್ಯದರ್ಶನಗಳಲ್ಲಿ ನ್ಯಾಯವೈಶೇಷಿಕ ಅನೇಕತ್ವವಾದ ಸ್ಪಷ್ಟವಾಗಿದೆ.

**ಬೌದ್ಧದರ್ಶನ** : ಇದರ ಪ್ರಕಾರ ಸರ್ವವಸ್ತುಗಳು ಸ್ವಲಕ್ಷಣಯುತವಾದುವು, ಕ್ಷಣಿಕವಾದುವು. ನಾನು ಎಂಬ ಜ್ಞಾನಕ್ಕೆ ಇತರ ದರ್ಶನಗಳಲ್ಲಿ ಆತ್ಮ ಎಂಬ ಸಂಕೇತವಿದೆ. ಆದರೆ ವಿಜ್ಞಾನವೆಂಬ ವಸ್ತುವೆ ಬೌದ್ಧದರ್ಶನದಲ್ಲಿ ಜೀವಾತ್ಮಸ್ಥಾನದಲ್ಲಿದೆ. ಇದು ಪ್ರತಿಕ್ಷಣದಲ್ಲಿ ಹುಟ್ಟಿ ನಾಶವಾಗುತ್ತಿದ್ದರೂ ಸಂತತಪ್ರವಾಹರೂಪವಾಗಿ ಸ್ಥಿರವಾದ ವಸ್ತುವಿನಂತೆ ಕೆಲಸವನ್ನು ಮಾಡುತ್ತಿದ್ದು ಅಸಂಖ್ಯಾತಸಂತತಿಗಳಾಗಿ ಬೆಳೆದು ಅಸಂಖ್ಯಾತ ಜೀವಾತ್ಮರುಗಳಂತೆ ಕಾಣಿಸಿಕೊಳ್ಳುತ್ತದೆ. ಈ ಸಂತತಿಯಲ್ಲಿಯೇ ಸಂಸ್ಕಾರವಾಸನೆ ಎಂಬ ಶಕ್ತಿ ಇರುವುದು. ಕರ್ಮವಾಸನೆ, ಜ್ಞಾನವಾಸನೆ ಎಂಬ ಎರಡು ವಿಧವಾದ ವಾಸನೆಗಳಿವೆ. ಕರ್ಮವಾಸನೆ ಎಂದರೆ ಪುಣ್ಯಪಾಪಗಳು, ಜ್ಞಾನವಾಸನೆ ಎಂದರೆ ಸ್ಮರಣೆಗೆ ಹೇತುವಾದ ಸಂಸ್ಕಾರ. ಈ ವಿಜ್ಞಾನ ನಾರಕ, ಭೂತ, ದೇವ, ಮನುಷ್ಯ, ತಿರ್ಯಕ್ ಎಂಬ ಐದು ವಿಧ ಶರೀರಗಳಲ್ಲಿ ಆಕಾಶದಲ್ಲಿರುವ ಪ್ರಭೆಯಂತೆಯೂ ಬತ್ತಿಯಲ್ಲಿರುವ ಜ್ವಾಲೆಯಂತೆಯೂ ನೀರಿನಲ್ಲಿರುವ ಗುಳ್ಳೆಯಂತೆಯೂ ಅಂಟಿಯೂ ಅಂಟದೆ ಅಂತರಾಳದಲ್ಲಿರುವುದು. ಪ್ರಕೃತಿಯು ಕ್ಷಣಿಕವಾದ ಅಣುಗಳಿಂದ ತುಂಬಿಕೊಂಡಿದೆ.

ವಿಜ್ಞಾನಸಂತತಿ ಸೂಕ್ಷ್ಮಚಿತ್ತವೆಂಬ ರೂಪದಲ್ಲಿ ಕರ್ಮವಾಸನೆಯಿಂದ ಜನಿಸುತ್ತದೆ. ಅವಿದ್ಯೆ, ನಾಮರೂಪ, ಷಡಾಯತನ, ಸ್ಪರ್ಶವೇದನ, ತೃಷಾ, ಭವ, ಜಾತಿ, ಮರಣ, ವ್ಯಾಧಿರೂಪವಾಗಿ ಕಾರ್ಯಕಾರಣ ಪ್ರಕ್ರಿಯೆಯನ್ನು ಹೊಂದುತ್ತ ಚಕ್ರರೂಪವಾಗಿ ತಿರುಗುತ್ತಿರುವುದು. ಈ ಕಾರ್ಯಕಾರಣ ಪ್ರಕ್ರಿಯೆಯೇ ಅಧ್ಯಾತ್ಮಪ್ರತ್ಯಯೋಪನಿಬಂಧನ. ದೇಹಕ್ಕೆ ಪೃಥ್ವಿಯಿಂದ ಕಾಠಿಣ್ಯ, ಜಲದಿಂದ ಮಾರ್ದವ, ತೇಜಸ್ಸಿನಿಂದ ಆಹಾರ ಪರಿಪಾಕ, ವಾಯುವಿನಿಂದ ಉಚ್ಛ್ವಾಸ ನಿಃಶ್ವಾಸ, ಆಕಾಶದಿಂದ ಅನಾವರಣ ಬರುವುದು. ವಿಜ್ಞಾನವೆಂಬ ಧಾತು ಚಿತ್ತಚೈತ್ತಾತ್ಮಕವಾಗಿ ಸಹಾಯ ಮಾಡುವುದು. ಸ್ಕಂದಪಂಚಕವೇ ಜೀವಸ್ಥಾನದಲ್ಲಿರುವುದು. ಆತ್ಮನಿಲ್ಲ, ಪ್ರಕೃತಿ, ಪುರುಷ, ಈಶ್ವರ, ಪರಮಾಣು ಮೊದಲಾದ ನಿತ್ಯವಸ್ತುಗಳಿಲ್ಲ ಎಂಬ ಈ ವಾದವನ್ನು ನೈರಾತ್ಮವಾದವೆಂದೂ ಕರೆಯಲಾಗಿದೆ. ಸಕಲವಸ್ತುಗಳೂ ಕಾರಣಗಳಿಂದ ಹುಟ್ಟಿದುವು ಎಂದು ಪ್ರತೀತ್ಯ ಸಮುತ್ಪಾದ (ಅದು ಉಂಟಾಗಲಾಗಿ, ಇದು ಉಂಟಾಗುತ್ತದೆ) ಎಂಬ ಮಾತುಗಳಲ್ಲಿ ನಿರ್ದೇಶಿಸಲಾಗಿದೆ. ಮೂಲಕಾರಣನಾದ ಈಶ್ವರ ಪ್ರಕೃತಿ ಎಂಬುದನ್ನು ಈ ದರ್ಶನ ಅಂಗೀಕರಿಸಿಲ್ಲ. ಸ್ಕಂದಪಂಚಕದ ಕಾರಣ ಸಮಾವೇಶವನ್ನು ಸಮುದಾಯ ಎನ್ನಲಾಗಿದೆ. ಇದರ ಆತ್ಯಂತಿಕ ವಿನಾಶಕ್ಕೆ ಅಂದರೆ ದುಃಖಮಯವಾದ ಸಂಸಾರನಿವಾರಣೆಗೆ ವಿಶುದ್ಧ ಜ್ಞಾನವೇ ಉಪಾಯ. ವಸ್ತುಗಳು ಸ್ಥಿರವೆಂಬ ಭಾವನೆಯೇ ದುಃಖಮಯವಾದ ಸಂಸಾರಕ್ಕೆ ಮೂಲಕಾರಣ. ಕ್ಷಣಿಕವೆಂಬ ಭಾವನೆಯೇ ಪರಮವೈರಾಗ್ಯಕ್ಕೆ ಸಾಧಕ. ಎಣ್ಣೆ ತೀರಿಹೋದರೆ ಬತ್ತಿ ಆರಿಹೋಗುವಂತೆ ವಿಜ್ಞಾನವೆಂಬ ಆತ್ಮನಿಗೆ ರಾಗವೆಂಬ ಆಶೆ ತೀರಿಹೋದರೆ ಮೋಕ್ಷವಾಗುವುದು, ನಿರ್ವಾಣ ಲಭಿಸುವುದು. ಮೂಲ ಬೌದ್ಧದರ್ಶನ ಸರ್ವವಸ್ತುಗಳ ಅಸ್ತಿತ್ವವನ್ನು ಹೇಳಿ ಅನೇಕತ್ವವನ್ನು ಪ್ರತಿಪಾದಿಸಿತು, ಅನಂತರ ವಿಜ್ಞಾನವೊಂದೇ ಸತ್ಯ ಎಂದು ಹೇಳಿ ಅನೇಕತ್ವವನ್ನು ಸಂಕುಚಿತಮಾಡಿತು. ಕೊನೆಗೆ ವಿಜ್ಞಾನವನ್ನೂ ಬಿಟ್ಟು ಶೂನ್ಯ ಮಾತ್ರ ಸತ್ಯವೆಂದು ಹೇಳಿ ಮೂಲ ಬೌದ್ಧದರ್ಶನದ ಅನೇಕತ್ವವಾದವನ್ನು ಬಿಟ್ಟುಬಿಡಲಾಯಿತು.

**ಜೈನದರ್ಶನ** : ಇದರಲ್ಲಿ ಅನೇಕತ್ವವಾದ ಅನೇಕಾಂತವಾದದ ರೂಪದಲ್ಲಿದೆ. ಆತ್ಮ ಸರ್ವಸ್ವಭಾವಧರ್ಮದಲ್ಲಿಯೂ ಇದೆ ಎಂದು ಅನೇಕಾಂತವಾದ ಹೇಳುತ್ತದೆ. ಸತ್ತ್ವ, ದ್ರವ್ಯತ್ವ, ಕಾರ್ಯತ್ವ, ಕಾರಣತ್ವ ಮೊದಲಾದ ಸರ್ವವಿಷಯಗಳಲ್ಲೂ ಅನೇಕತಾವಾದವನ್ನು ಹೇಳಲಾಗಿದೆ.

ಆತ್ಮಾದಿಸಕಲವಸ್ತುಗಳಿಗೂ ಉತ್ಪತ್ತಿ ಉಂಟು, ವಿನಾಶವುಂಟು, ಸ್ಥಿರತ್ವವೂ ಉಂಟು. ಪೂರ್ವಾಕಾರ ಹೋದುದರಿಂದ ವಿನಾಶವಾದಂತಾಯಿತು. ಪಾರ್ಥಿವಶರೀರ ಸ್ಥಿರವಾಗಿರುವುದರಿಂದ ಸ್ಥಿರವೆಂದೂ ಆಯಿತು. ಸ್ವರ್ಗದಲ್ಲಿ ಮನುಷ್ಯಭಾವ ಹೋಗಿ ದೇವಭಾವ ಬರುವುದು. ಆದರೆ ಉಭಯಾವಸ್ಥೆಗಳಲ್ಲೂ ಆತ್ಮಭಾವವಿರುವುದು. ವಸ್ತುವಿಗೆ ದ್ರವ್ಯವೆಂದೂ ಆಕಾರಗಳಿಗೆ ಪರ್ಯಾಯವೆಂದೂ ಈ ಸಿದ್ಧಾಂತ ಹೇಳಿದೆ. ದ್ರವ್ಯಾಂಶದಲ್ಲಿ ನಿತ್ಯತ್ವವೂ ಪರ್ಯಾಯಾಂಶದಲ್ಲಿ ಅನಿತ್ಯತ್ವವೂ ಇರುವುದರಿಂದ ಅನೇಕಾಂತವಾಯಿತು. ಒಂದು ವಸ್ತುವಿನಲ್ಲಿ ವಿರುದ್ಧಾಂಶಗಳು ಒಬ್ಬನೇ ಮನುಷ್ಯ ಪಿತ, ಪುತ್ರ, ಜಾಮಾತ, ಮಾತುಳ ಎಂಬುದಾಗಿ ವ್ಯವಹರಿಸಲ್ಪಡುವಂತೆ ದ್ರವ್ಯಗಳೆಲ್ಲವೂ ಸಾವಯವ ಆಗಿರುವುದು; ಅಸಂಖ್ಯಾಂಶ, ಅಸಂಖ್ಯಾತ ಪ್ರದೇಶಗಳುಳ್ಳವು ಎಂದು ಅರ್ಥ.

ದ್ರವ್ಯಗಳು ಆರು. ಜೀವ ಜ್ಞಾನಸ್ವರೂಪವಾಗಿರುವುದರಿಂದ ಚೇತನ ದ್ರವ್ಯ. ಉಳಿದವು ಅಚೇತನ ದ್ರವ್ಯಗಳು. ಜೀವದ್ರವ್ಯವೊಂದೇ ಕರ್ತೃದ್ರವ್ಯ. ಉಳಿದವು ಕಾರಣದ್ರವ್ಯಗಳು. ಧರ್ಮ, ಅಧರ್ಮ, ಆಕಾಶ, ಕಾಲ ಎಂಬ ನಾಲ್ಕು ದ್ರವ್ಯಗಳು ಸರ್ವವ್ಯಾಪಕಗಳಾಗಿರುವುವು.

ಅಣುರೂಪವಾಗಿಯೂ ಸ್ಕಂದರೂಪವಾಗಿಯೂ ಇರುವ ಭೂತಭೌತಿಕಪ್ರಪಂಚದ ಮೂಲಕಾರಣದ್ರವ್ಯಕ್ಕೆ ಪುದ್ಗಲವೆಂದು ಹೆಸರು. ಅಣುಗಳ ಪುಂಜವೇ ಪುದ್ಗಲ. ಅದರಲ್ಲೂ ಅಸಂಖ್ಯಾತ ಅಂಶಗಳಿರುವುವು ಅವುಗಳಿಗೆ ಪ್ರದೇಶವೆಂದು ಹೆಸರು. ಅವುಗಳಲ್ಲಿರುವ ಪರಮಾಣುಗಳು ಅಸಂಖ್ಯಾತವಾದುವು. ಪುದ್ಗಲ ರೂಪರಸಗಂಧಸ್ಪರ್ಶಗುಣಸ್ವಭಾವವುಳ್ಳದ್ದು. ಅಣುಗಳಿಂದ ಸ್ಕಂದಗಳೂ ಸ್ಕಂದಗಳಿಂದ ಅಣುಗಳೂ ಉದಯಿಸುವುವು.

ಜೀವ ಎಂದರೆ ಜ್ಞಾನದರ್ಶನಸ್ವರೂಪಿಯಾದ ಚೈತನ್ಯ ವಸ್ತು. ಜೀವ ಪ್ರತಿಕ್ಷಣದಲ್ಲೂ ಚಲನೆಯೆಂಬ ವಿಕಾರವನ್ನು ಹೊಂದುತ್ತಿರುವನು. ದುಃಖರಾಗದ್ವೇಷಾದಿ ಪರ್ಯಾಯಗಳು ಆಗಂತುಕಗಳು. ಜ್ಞಾನ, ದರ್ಶನ, ಸುಖ ಮೊದಲಾದ ಪರ್ಯಾಯಗಳು ಸ್ವಾಭಾವಿಕ.

ಜ್ಞಾನಪ್ರಭೆಯ ಆವರಣದ ಕ್ಷಯದಿಂದ ಸರ್ವಜ್ಞರಾದ ಮಹಾಪುರುಷರು ಪ್ರವಾಹರೂಪವಾಗಿ ಬಂದು ಪ್ರಪಂಚಾನುಗ್ರಹಕ್ಕಾಗಿ ತತ್ತ್ವೋಪದೇಶವನ್ನು ಮಾಡುತ್ತಿರುವರು. ಆದ್ದರಿಂದ ಅನಾದಿಸರ್ವಜ್ಞವೆಂಬ ಪರಮೇಶ್ವರ ಬೇಕಾಗಿಲ್ಲ. ಪ್ರಪಂಚಕ್ಕೆ ಸೃಷ್ಟಿ ಪ್ರಳಯಗಳಿಲ್ಲದುದರಿಂದ ನಿತ್ಯಸರ್ವಶಕ್ತನೂ ನಿತ್ಯಪರಮಕಾರುಣಿಕನೂ ಬೇಕಾಗಿಲ್ಲ. ಬೀಜಾಂಕುರ ನ್ಯಾಯದಿಂದ ಸರ್ವಜ್ಞಪರಂಪರೆಯೂ ಪ್ರವಚನಪರಂಪರೆಯೂ ಪ್ರಪಂಚೋದ್ಧಾರ ಪರಂಪರೆಯೂ ನಡೆಯುತ್ತವೆಂದು ಜೈನದರ್ಶನದ ನಿರ್ಣಯ. ಜೀವರುಗಳು ಮುಕ್ತಸ್ಥಿತಿಯಲ್ಲೂ ಪ್ರತ್ಯೇಕ ಪ್ರತ್ಯೇಕವಾಗಿಯೇ ಉಳಿದಿರುತ್ತಾರೆ.

ಜೀವದಲ್ಲಿ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ ಎಂಬ ರತ್ನತ್ರಯಪ್ರಾಪ್ತಿ ವುಳ್ಳವನು ಭವ್ಯ. ಅದಿಲ್ಲದವನು ಅಭವ್ಯ. ಜನ್ಮಪರಂಪರೆಯಲ್ಲಿರುವವನು ಬದ್ಧ. ಮಹಾತ್ಮರ ಅನುಗ್ರಹದಿಂದಲೂ ಜನ್ಮಾಂತರಸುಕೃತದಿಂದಲೂ ಸಮ್ಯಗ್ದರ್ಶನವೂ ಜಿನೋಕ್ತತತ್ತ್ವಗಳಿಂದ ಸಮ್ಯಗ್‌ಜ್ಞಾನವೂ ಉಂಟಾಗುತ್ತವೆ. ಪಾಪಪರಿಹಾರದಿಂದ ಸಮ್ಯಕ್‌ಚಾರಿತ್ರ ಉಂಟಾಗುತ್ತದೆ. ಒಳ್ಳೆಯ ಕೆಲಸ ಮಾಡುವುದಕ್ಕಿಂತಲೂ ಪಂಚವ್ರತಗಳಲ್ಲಿ ಹೇಳಿರುವ ಐದು ಪ್ರಕಾರಗಳಿಂದ ಕೆಟ್ಟದ್ದನ್ನು ಬಿಡುವುದೇ ಉತ್ತಮವೆಂದು ಈ ದರ್ಶನದ ಬೋಧೆ.

**ಸಾಂಖ್ಯದರ್ಶನ :** ಬೌದ್ಧಧರ್ಮಕ್ಕೆ ಪ್ರತಿಯಾಗಿ ಇದು ಸರ್ವವಸ್ತುಗಳಿಗೂ ಸತ್ಯವೆಂಬ ಭಾವವನ್ನು ಕೊಟ್ಟಿದೆ. ಸರ್ವವೂ ಸತ್ಯವಾದುದು. ಒಂದು ವಸ್ತುವನ್ನು ಮತ್ತೊಂದು ವಸ್ತುವಾಗಿ ತಿಳಿಯುವುದೇ ಭ್ರಮೆ. ಸತ್ತ್ವವೆಂದರೆ ಪ್ರಕೃತಿ. ಪುರುಷನೆಂದರೆ ಆತ್ಮ. ಇವುಗಳಿಗಿರುವ ವ್ಯತ್ಯಾಸನಿಶ್ಚಯಕ್ಕೆ ಅನ್ಯತಾಖ್ಯಾತಿ ಎಂದು ಹೇಳಿದೆ. ಮೊದಲ ತತ್ತ್ವವೇ ಮೂಲಪ್ರಕೃತಿ. ಇದೇ ಮಹಾಸಮುದ್ರದಂತೆ ಸರ್ವದೇಶ ಸರ್ವಕಾಲ ಸರ್ವವಸ್ತುಗಳನ್ನು ವ್ಯಾಪಿಸಿಕೊಂಡಿರುವುದರಿಂದ ಇದೇ ಬ್ರಹ್ಮ. ಪುರುಷ ಇಂದ್ರಿಯಗಳ ಮೂಲಕ ವಸ್ತುಗಳನ್ನು ತಿಳಿದುಕೊಳ್ಳುತ್ತಾನೆ.

ಆತ್ಮಪದಕ್ಕೆ ಚೇತನ, ಚೈತನ್ಯ ಪುರುಷ, ಚಿಚ್ಛಕ್ತಿ ಮುಂತಾದ ಅರ್ಥಗಳಿವೆ. ಆದರೆ ಅದಕ್ಕೆ ಯಾವ ಗುಣವೂ ಇಲ್ಲ, ದೋಷವೂ ಇಲ್ಲ, ಶಕ್ತಿಯೂ ಇಲ್ಲ, ವಿಶೇಷವೂ ಇಲ್ಲ. ಅದು ಶುದ್ಧವಾದ ಕನ್ನಡಿಯಂತಿರುವುದು. ಇಂಥ ಚಿತ್‌ಶಕ್ತಿಗಳೆಂಬ ಆತ್ಮರು ಅಸಂಖ್ಯಾತ ರಾಗಿರುವರು. ಇತರ ದಾರ್ಶನಿಕರು ಆತ್ಮನಿಗೆ ಯಾವ ಸ್ವಭಾವವನ್ನು ಹೇಳಿರುವರೋ ಅವೆಲ್ಲವನ್ನೂ ಸಾಂಖ್ಯಕಾರರು ಬುದ್ಧಿಗೇ ಹೇಳಿರುವರು. ಪ್ರಕೃತಿ ಅಚೇತನವಾದುದರಿಂದ ಇಚ್ಛಾಶಕ್ತಿಯಿಲ್ಲದೆ ಪಂಗುಸ್ಥಾನದಲ್ಲಿಯೂ ಇದ್ದು ಅಂಧಪಂಗುನ್ಯಾಯದಿಂದ ಸೃಷ್ಟ್ಯಾದಿಸಕಲ ವ್ಯಾಪಾರಗಳು ನಡೆಯುವುವು. ಪುರುಷನಿಗೆ ಕೈವಲ್ಯ ಬೇಕಾಗಿರುವುದರಿಂದ ಪ್ರಕೃತಿ ಪ್ರಾಕೃತವಸ್ತುಗಳಿರಬೇಕು. ಆ ವಸ್ತುಗಳು ಭೋಗ್ಯಗಳಾದುದರಿಂದ ಭೋಕ್ತ (ಪುರುಷ) ಬೇಕು. ಸರ್ವವಸ್ತುಗಳೂ ಸರ್ವಸ್ವಭಾವವುಳ್ಳವು. ಅಂದರೆ ತ್ರಿಗುಣಯುಕ್ತವಾದವು. ಸುಖ ದುಃಖ ಮೋಹ ಸ್ವಭಾವವುಳ್ಳವು. ಪ್ರಾಚೀನವಾಸನೆಯೆಂಬ ಕರ್ಮಕ್ಕಧೀನವಾಗಿ ಪುರುಷನಲ್ಲಿ ಒಂದೊಂದು ಕಾಲದಲ್ಲಿ ಒಂದೊಂದು ಗುಣ ಉತ್ಕಟವಾಗಿ ಪ್ರಬಲವಾಗುವುದು. ಪುರುಷಾರ್ಥವೆಂಬ ಪದ ಸಾಂಖ್ಯದರ್ಶನದಲ್ಲಿಯೇ ಪ್ರಾರಂಭವಾಯಿತು. ಪ್ರಕೃತಿ ಎಂಬ ಮೂಲತತ್ತ್ವ ಸ್ವಾರ್ಥಕ್ಕಾಗಿ ಯಾವ ವ್ಯಾಪಾರವನ್ನೂ ಮಾಡುವುದಿಲ್ಲ; ಪುರುಷಾರ್ಥಕ್ಕಾಗಿಯೂ ಪರಾರ್ಥಕ್ಕಾಗಿಯೂ ಮಾಡುತ್ತದೆ. ಪುರುಷನೆಂಬ ಜೀವಾತ್ಮನಿಗೆ ಅವುಗಳ ಉಪಯೋಗ. ಅವುಗಳಲ್ಲಿ ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ತಿಳಿಯುವ, ಸುಖದುಃಖಗಳನ್ನು ಅನುಭವಿಸುವ, ಸರ್ವವೂ ದೃಶ್ಯವಾಗಿರುವ ಪ್ರಕೃತಿಗೆ ದ್ರಷ್ಟಾ ಆಗಿರುವ ಜೀವಾತ್ಮ ಭೋಕ್ತೃ. ಅವನ ಭೋಕ್ತೃತ್ವದಲ್ಲಿ ವ್ಯತ್ಯಾಸವಿರುವುದರಿಂದ ಅಸಂಖ್ಯಾತ ಜೀವಾತ್ಮರಲ್ಲಿ ಭೇದಗಳಿವೆ.

ತತ್ತ್ವಜ್ಞಾನವೇ ದುಃಖನಿವೃತ್ತಿಗೆ ಸಾಧನವೆಂದು ಸಾಂಖ್ಯರ ಮತ. ಪ್ರಕೃತಿ ಪುರುಷರ ಸಂಯೋಗವೆಂಬ ಅಜ್ಞಾನದಿಂದ ಬಂಧನ. ಪುರುಷನಿಗೆ ರಾಜನ ಸ್ಥಾನವನ್ನೂ ಬುದ್ಧಿಗೆ ಮಂತ್ರಿಯ ಸ್ಥಾನವನ್ನೂ ಸಾಂಖ್ಯದರ್ಶನದಲ್ಲಿ ಕೊಡಲಾಗಿದೆ. ಪುರುಷ ಉದಾಸೀನ, ನಿರ್ಲಿಪ್ತ, ಸರ್ವಸಾಕ್ಷಿಯಾಗಿ ಬುದ್ಧಿಗೆ ಸರ್ವಾಧಿಕಾರವನ್ನು ಕೊಟ್ಟಿದ್ದಾನೆ. ಕೊನೆಯಲ್ಲಿ ಭೋಗದಿಂದ ವೈರಾಗ್ಯವುಂಟಾಗಿ ಪುರುಷನಿಗೆ ಬುದ್ಧಿಯ ಮೂಲಕ ಬಂಧಮೋಕ್ಷವೆಂದು ಹೇಳಿದ್ದಾರೆ. ಪ್ರಕೃತಿಯೊಡನೆ ಸೇರಿರುವವರೆಗೂ ಬಂಧ. ಕೈವಲ್ಯವೆಂದರೆ ಪ್ರಕೃತಿಯಿಂದ ಅಗಲುವಿಕೆ.

ಸಾಂಖ್ಯದರ್ಶನಕಾರರು ಈಶ್ವರನನ್ನು ಒಪ್ಪಿಕೊಂಡಿಲ್ಲ. ಸೃಷ್ಟಿಪೂರ್ವದಲ್ಲಿ ಜೀವಾತ್ಮರಿಗೆ ದೇಹೇಂದ್ರಿಯಾದಿಗಳಿಲ್ಲದಿರುವುದರಿಂದ ಸುಖದುಃಖಗಳಿಲ್ಲ. ಪ್ರಳಯಕಾಲದಲ್ಲಿ ಮುಕ್ತಪ್ರಾಯರಾಗಿರುತ್ತಾರೆ. ಅಂಥವರಿಗೆ ದೇಹೇಂದ್ರಿಯಾದಿಗಳನ್ನು ಕೊಟ್ಟು ದುಃಖಪಡಿಸುವುದು ಈಶ್ವರನಿಗೆ ಯುಕ್ತವಲ್ಲ. ಅವನು ಸ್ವಾರ್ಥಿಯಲ್ಲ; ಪರಾರ್ಥಕ್ಕಾಗಿ ಸೃಷ್ಟಿ ಮಾಡಬೇಕಾದರೆ ಕರುಣೆಗೆ ಪಾತ್ರರಿರಬೇಕು. ಆದರೆ ಸೃಷ್ಟಿಗೆ ಮುಂಚೆ ಜೀವಾತ್ಮರಿಗೆ ದುಃಖವೇ ಇಲ್ಲದಿರುವುದರಿಂದ ಅವರಿಗೆ ದಯೆಯ ಆವಶ್ಯಕತೆ ಇಲ್ಲ. ಹೀಗೆ ತರ್ಕಮಾಡಿ ಸಾಂಖ್ಯರು ಈಶ್ವರನನ್ನು ನಿರಾಕರಿಸಿದ್ದಾರೆ. (ಇಲ್ಲಿ ಮ್ಯಾಕ್ಟ್‌ಗರ್ಟನ ವಾದದ ಛಾಯೆಯನ್ನು ಕಾಣಬಹುದು).

ನ್ಯಾಯವೈಶೇಷಿಕದರ್ಶನದಲ್ಲೂ ಅನೇಕತ್ವವಾದವಿದೆ. ಪ್ರಪಂಚವನ್ನು ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವವೆಂದು ಏಳು ಪದಾರ್ಥಗಳಾಗಿ ವಿಂಗಡಿಸಲಾಗಿದೆ. ಆತ್ಮನಾತ್ಮವಿವೇಕಕ್ಕಾಗಿ ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ನಾದ, ಜಲ್ಪ, ವಿತಂಡ, ಹೇತ್ವಾಭಾಸ, ಛಲ, ಜಾತಿ, ನಿಗ್ರಹಸ್ಥಾನ ಎಂಬ ಹದಿನಾರು ಪದಾರ್ಥಗಳು ಆವಶ್ಯಕ. ಸಕಲವಸ್ತುಗಳಿಗೂ ಸತ್ತ್ವರೂಪ ಉಂಟು, ಅಸತ್‌ಸ್ವರೂಪವೂ ಉಂಟು. ಘಟಪಟಾದಿ ವಸ್ತುಗಳೂ ಅವುಗಳ ಅಭಾವಗಳೂ ಉಂಟು. ಆಕಾಶಾದಿ ಕೆಲವು ನಿತ್ಯದ ವಸ್ತುಗಳೂ. ಗವಾಶ್ವಾದಿಗಳು ಅನಿತ್ಯಗಳು. ಆತ್ಮನೆಂದರೆ ಸರ್ವವನ್ನೂ ನೋಡತಕ್ಕವನು, ಅನುಭವಿಸತಕ್ಕವನು, ತಿಳಿಯತಕ್ಕವನು, ಮೋಕ್ಷಕ್ಕೆ ಅಧಿಕಾರಿ. ಇವನ ಭೋಗಕ್ಕೆ ಆಶ್ರಯ ಶರೀರ. ಇಂದ್ರಿಯಗಳೇ ಸಾಧನಗಳು. ವಿಷಯಗಳೇ ಅರ್ಥಗಳು. ಬುದ್ಧಿಯೇ ಭೋಗ.

ಪ್ರಳಯಕಾಲದಲ್ಲಿ ಪರಮಾಣುಗಳು ಸ್ವತಂತ್ರಗಳಾಗಿ ಬೇರೆ ಬೇರೆ ಇರುವುವು. ಸೃಷ್ಟಿಗೆ ಪ್ರಾರಂಭವಾದರೆ ಎರಡು ಮೂರು ಪರಮಾಣು ಸೇರಿ ಕ್ರಮವಾಗಿ ವಸ್ತುಗಳಾಗುವುವು. ಆಗ ಯಾವ ಮನುಷ್ಯಾದಿಗಳೂ ಇಲ್ಲದಿರುವುದರಿಂದ ಅವುಗಳನ್ನು ಸೇರಿಸುವಂಥ ಪುರುಷನೇ ಪರಮಾತ್ಮ, ಪ್ರಪಂಚಕ್ಕೆ ಕರ್ತ. ಪರಮಾತ್ಮನನ್ನು ಶಾಸ್ತ್ರಾಧಾರವಿಲ್ಲದೆ, ತರ್ಕದಿಂದಲೂ ಸಾಧಿಸಬಹುದೆಂದು ನ್ಯಾಯವೈಶೇಷಿಕಮತ. ಪರಮಾತ್ಮತತ್ತ್ವ ಪ್ರಪಂಚಕ್ಕಿಂತ, ಜೀವಾತ್ಮರಿಗಿಂತ ಅತ್ಯಂತ ಭಿನ್ನವಾಗಿ ಇರುವುದರಿಂದಲೂ ವೇದಾಂತದಲ್ಲಿ ಹೇಳುವಂತೆ, ಅದು ಸರ್ವಾಂತರ್ಯಾಮಿಯಲ್ಲದಿರುವುದರಿಂದಲೂ ಅದರ ಅಂಗೀಕಾರದಿಂದ ಅನೇಕತ್ವಕ್ಕೆ ವಿಶೇಷಚ್ಯುತಿ ಆಗುವುದಿಲ್ಲ. ಹೀಗಿದ್ದರೂ ಸಾಮಾನ್ಯ ಮತ್ತು ಸಮವಾಯ ಪದಾರ್ಥಗಳ ದೆಸೆಯಿಂದ ಅನೇಕತ್ವವಾದ ಸ್ವಲ್ಪ ಮಾರ್ಪಾಡಾಗುತ್ತದೆ. ಸಾಮಾನ್ಯವೆಂದರೆ ಒಂದೇ ಜಾತಿಯ ಅನೇಕ ದ್ರವ್ಯಗಳಲ್ಲಿ ಅನುಗತವಾಗಿರುವ ಒಂದು ಸಮಾನಧರ್ಮ. ಇದರಿಂದ ಒಂದು ದೃಷ್ಟಿಯಲ್ಲಿ ಒಂದು ಜಾತಿಯ ವ್ಯಕ್ತಿಗಳಲ್ಲಿ ಕಿಂಚಿತ್ ಏಕತ್ವವನ್ನು ಅಂಗೀಕರಿಸಿದಂತಾಯಿತು. ಸಮವಾಯವೆಂದರೆ ನಿಕಟವಾದ ಸಂಬಂಧ. ದ್ರವ್ಯ ಮತ್ತು ಗುಣ, ಕರ್ತ ಮತ್ತು ಕರ್ಮ, ಸಾಮಾನ್ಯ ಮತ್ತು ವಿಶೇಷ, ವ್ಯಕ್ತಿಗಳು ಮತ್ತು ವಿಶೇಷ, ಕಾರ್ಯ ಮತ್ತು ಕಾರಣ–ಇವುಗಳಲ್ಲಿ ಪರಸ್ಪರ ನಿಕಟಸಂಬಂಧವಿದೆ ಎಂದಂತಾಯಿತು. ಪದಾರ್ಥಗಳು ಭಿನ್ನವಾಗಿದ್ದರೂ ಈ ಸಂಬಂಧದ ದೃಷ್ಟಿಯಿಂದ ಏಕತ್ವಕ್ಕೆ ಸಮರ್ಥನೆ ದೊರೆಯುತ್ತದೆ.

ಅನೇಕತ್ವವಾದಿಗಳು ಚೇತನಗಳ ಅನುಭವದಲ್ಲಿ ಒಂದಕ್ಕೂ ಮತ್ತೊಂದಕ್ಕೂ ಪರಸ್ಪರಸಂಬಂಧವುಂಟೆಂದೂ ಅವುಗಳೆಲ್ಲವೂ ಒಂದೇ ಪೂರ್ಣತ್ವದ ಭಾಗಗಳೆಂದೂ ಆ ಪೂರ್ಣತ್ವ ಭಾಗಗಳ ಬೆಳೆವಣಿಗೆಯ ರೀತಿಯನ್ನೂ ಕ್ರಮವನ್ನೂ ಹತೋಟಿಯಲ್ಲಿಟ್ಟು ಕೊಂಡಿರುವುದೆಂದೂ ಹೇಳಿದ್ದಾರೆ. ಹೀಗೆ ಏಕತ್ವದಲ್ಲಿ ಅನೇಕತ್ವ ಎಂಬ ಭಾವನೆ ಪ್ರತಿಪಾದಿತವಾಗಿದೆ. ಪರಸ್ಪರಸಂಬಂಧವಾದ ಅಭಿವೃದ್ಧಿಯಾಗಬೇಕಾದರೆ ಒಂದೇ ಪ್ರಕೃತಿ ಅಥವಾ ಆವರಣ ಅವುಗಳಿಗಿರಬೇಕೆಂದು ವಾದಿಸಿದ್ದಾರೆ. ಅವೆಲ್ಲವೂ ಅಂತಿಮವಾಗಿ ಒಂದೇ ಸತ್ಯದ ಪರಿಪೂರ್ಣತೆಯನ್ನು ಅನೇಕ ಮುಖಗಳಿಂದ ಪ್ರತಿಪಾದಿಸುತ್ತವೆಂದು ಹೇಳುವುದರಿಂದ ಏಕತ್ವಕ್ಕೂ ಅನೇಕತ್ವಕ್ಕೂ ವಿರೋಧವಿಲ್ಲ.

ಜಡಜಗತ್ತನ್ನು ಮಾತ್ರ ಸತ್ಯವೆನ್ನುವ ನಾಸ್ತಿಕರು ಅಣುಗಳ ಅನೇಕತ್ವವನ್ನು ಹೇಳುತ್ತಾರೆ. ಅವರೂ ಅಣುಗಳು ಸತತವಾಗಿ ಚಲಿಸುತ್ತ ಗರ್ಜಿಸುತ್ತ ಪರಸ್ಪರ ಪ್ರಭಾವವನ್ನು ಬೀರುತ್ತಿರುತ್ತವೆಂದು ವಾದಿಸುತ್ತಾರೆ. ಇವರು ಅವುಗಳ ಇರುವಿಕೆಯಲ್ಲಾಗಲಿ ನಾಶದಲ್ಲಾಗಲಿ ಉದ್ದೇಶವನ್ನು ಕಾಣುವುದಿಲ್ಲ. ಆದರೆ ಆಸ್ತಿಕರಾದ ಅನೇಕತ್ವವಾದಿಗಳು ಚರಾಚರ ಜಗತ್ತಿನಲ್ಲಿರುವ ಅನೇಕತ್ವಕ್ಕೆ ಸೃಷ್ಟಿಕರ್ತನ ಉದ್ದೇಶಕಲ್ಪನೆಯ ಸಂಬಂಧವನ್ನು ತರುತ್ತಾರೆ. ಆತ ಅನಂತಕೋಟಿಬ್ರಹ್ಮಾಂಡಗಳನ್ನು ಜೀವರಾಶಿಗಳನ್ನು ಸೃಷ್ಟಿಸಿ ಅವುಗಳ ಸ್ಥಿತಿ ಮತ್ತು ಲಯಗಳಿಗೆ ಕಾರಣನಾಗುತ್ತಾನೆಂದೂ ಹೇಳುತ್ತಾರೆ. ಹೀಗೆ ಪರಮಾತ್ಮ ಏಕತ್ವಕ್ಕೆ ಕಾರಣವೆಂದಂತಾಯಿತು.

ಅಂತಿಮವಾಗಿ ಅನೇಕತ್ವದಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ಏಕತ್ವದ ಸಮರ್ಥನೆಯನ್ನೂ ಕಾಣಬಹುದು. **(ನೋಡಿ– ಅದ್ವೈತ)** (ಎಸ್.ಎಸ್.ಆರ್.)

**ಅನೇಕದೇವತಾವಾದ :** ಮಾನವ ಮೊಟ್ಟಮೊದಲು ಯಾವುದೋ ಒಂದು ಅವ್ಯಕ್ತವಾದ ಶಕ್ತಿಯ ಪ್ರಭಾವ ತನ್ನ ಮೇಲಿರುವುದನ್ನು ಗುರುತಿಸಿ ಆ ಶಕ್ತಿ ತನ್ನನ್ನು ಮೀರಿದುದೆಂದೂ ಅದು ಪ್ರಕೃತಿಯ ಅದ್ಭುತಶಕ್ತಿಗಳ ರೂಪಗಳನ್ನು ತಾಳಿರುವುದೆಂದೂ ಭಾವಿಸಿರಬೇಕೆಂದು ಮತಧರ್ಮಗಳ ವಿಕಾಸವನ್ನು ಅಧ್ಯಯನ ಮಾಡಿದ ಮಾನವಶಾಸ್ತ್ರಜ್ಞರು ನಿರೂಪಿಸುತ್ತಾರೆ. ಈ ರೀತಿಯ ಪ್ರಕೃತಿಪೂಜೆಯೇ ಅನೇಕದೇವತಾವಾದಕ್ಕೆ ಕಾರಣವಾಯಿತೆಂದು ಹೇಳಬಹುದು. ಒಂದೊಂದು ದೇವತೆಯೂ ಒಂದೊಂದು ಶಕ್ತಿಯ ಅಧಿದೇವತೆ ಎಂಬ ಭಾವನೆ ಉದಯವಾಯಿತು. ಹೀಗೆ ಸೂರ್ಯ, ಅಗ್ನಿ, ವರುಣ, ವಾಯು, ಈ ದೇವತೆಗಳನ್ನು ಪ್ರಾಚೀನ ಮಾನವ ಆರಾಧಿಸತೊಡಗಿದ. ದೇವತೆಗಳು ಆಯಾ ಜೀವನಮಟ್ಟದ ಆವಶ್ಯಕತೆಗಳಿಗನುಸಾರವಾಗಿ ಪ್ರಾಧಾನ್ಯವನ್ನು ಪಡೆದರು. ಆರ್ಯರ ಕೃಷಿಕ ಸಮಾಜದಲ್ಲಿ ಮಳೆಬೆಳೆಗಳಿಗೆ ಕಾರಣನಾದ ಇಂದ್ರನಿಗೂ, ಪರ್ಜನ್ಯದೇವತೆಯಾದ ವರುಣನಿಗೂ ಪ್ರಾಶಸ್ತ್ಯವಿತ್ತು. ಹೀಗೆಯೇ ಪ್ರಾಚೀನ ಗ್ರೀಸ್ ದೇಶದಲ್ಲೂ ರೋಮಿನಲ್ಲೂ ಇಂಥ ಅನೇಕ ದೇವತೆಗಳ ಆರಾಧನೆ ಇತ್ತು. ಹೋಮರ್ ತನ್ನ ಮಹಾಕಾವ್ಯದಲ್ಲಿ ಅನೇಕ ದೇವತೆಗಳನ್ನು ಹೆಸರಿಸಿದ್ದಾನಲ್ಲದೆ ಅವರ ಅಭ್ಯಾಸಗಳನ್ನು ಚಿತ್ರಿಸಿದ್ದಾನೆ. ಪ್ರಾಚೀನ ಮಾನವ ಗುಂಪುಗಳನ್ನು ಕಟ್ಟಿಕೊಂಡು ಕಾಡುಮೇಡುಗಳಲ್ಲಿ ವಾಸಿಸುತ್ತಿದ್ದುದರಿಂದ ಪ್ರಕೃತಿಯ ಕೈಗೊಂಬೆಯಾಗಿದ್ದ. ಆಹಾರವನ್ನೊದಗಿಸಿಕೊಳ್ಳುವುದೇ ದುಸ್ತರವಾಗಿದ್ದುದರಿಂದ ಆಹಾರವನ್ನು ನೀಡುವ

ಪ್ರಕೃತಿಯನ್ನು ಬಗೆಬಗೆಯಾಗಿ ಆರಾಧಿಸುತ್ತಿದ್ದ. ಮಂತ್ರತಂತ್ರಗಳಿಂದ ಪ್ರಕೃತಿಯನ್ನು ಒಲಿಸಿಕೊಳ್ಳಬಹುದೆಂದು ತಿಳಿದಿದ್ದ. ಅವನ ಮತಧರ್ಮಕ್ಕೂ ಮಾಟಮಂತ್ರಗಳಿಗೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಅವನ ಸುತ್ತಮುತ್ತ ಅಪಾಯಕರವಾದ ದುಷ್ಟಶಕ್ತಿಗಳು (ಭೂತ ಪ್ರೇತಗಳು) ಇರಬಹುದೆಂಬ ಭಯದಲ್ಲಿ ಸಿಲುಕಿ, ರೋಗರುಜಿನಗಳು ಅವುಗಳಿಂದಲೇ ಸಂಭವಿಸುವುವೆಂದು ನಂಬಿದ್ದ. ಈ ನಂಬಿಕೆಯಿಂದಾಗಿ ಆ ದೇವತೆಗಳನ್ನು ವಿಧವಿಧವಾಗಿ ಆರಾಧಿಸುತ್ತಿದ್ದ. ಆದರೆ ಪ್ರಕೃತಿಯ ಶಕ್ತಿಗಳಿಗೆ ನಿರ್ದಿಷ್ಟವಾದ ನಾಮರೂಪಗಳನ್ನು ಕೊಟ್ಟು ಅರಿತುಕೊಳ್ಳುವಷ್ಟು ಬುದ್ಧಿಶಕ್ತಿ ಅವನಲ್ಲಿ ಬೆಳೆದಿರಲಿಲ್ಲ. ಪ್ರಾಣಿ–ಪಶು, ಜಡ–ಚೇತನ, ಜೀವಂತ – ನಿರ್ಜೀವ ಇವುಗಳಿಗೆ ವ್ಯತ್ಯಾಸವನ್ನು ಅರಿಯದೆ ವಿಚಿತ್ರ ಭಾವನೆಗಳಿಂದ ವಿಚಿತ್ರದೇವತೆಗಳನ್ನು ಪಶು, ಪ್ರಾಣಿ, ವೃಕ್ಷ ಮುಂತಾದ ರೂಪಗಳಲ್ಲಿ ಕಂಡು ಆರಾಧಿಸುತ್ತಿದ್ದ.

ತಮ್ಮ ಗುಂಪಿನವರು ಬದುಕಿದರೆ ಸಾಕು ಎಂಬ ಒಂದು ವಿಧವಾದ ಸ್ವಾರ್ಥ ಅನಾಗರಿಕ ಜನರಲ್ಲಿ ಎದ್ದು ತೋರುತ್ತಿತ್ತು. ಇತರ ಗುಂಪಿನವರನ್ನೂ ಅವರ ಆರಾಧ್ಯದೇವತೆಗಳನ್ನೂ ತಮ್ಮ ಶತ್ರುಗಳೆಂದು ತಿಳಿದಿದ್ದರು. ಪ್ರತಿ ಗುಂಪಿಗೂ ಅವರದೇ ಆದ ಸ್ಥಳೀಯದೇವತೆಗಳಿದ್ದುವು. ಸಮಾನ ದೇವತೆಗಳನ್ನು ಆರಾಧಿಸುವವರು ಸ್ನೇಹಭಾವದಿಂದ ಒಗ್ಗಟ್ಟಾಗಿರುತ್ತಿದ್ದರು. ದೇವತೆಗಳು ದೈನಂದಿನ ಆವಶ್ಯಕತೆಗಳನ್ನು ಪೂರೈಸಿಕೊಡುವರೆಂಬ ನಂಬಿಕೆ ಇತ್ತು. ಸಂಕಷ್ಟಗಳಿಗೆ ಸಿಕ್ಕಿದಾಗ ದೇವತೆಗಳನ್ನು ವಿಶೇಷರೀತಿಯಲ್ಲಿ ಆರಾಧಿಸುತ್ತಿದ್ದರು. ಪ್ರಾಚೀನ ಅನಾಗರಿಕರಲ್ಲಿ ನರಬಲಿ, ಪಶುಬಲಿಗಳು ದೇವತಾರಾಧನೆಯ ಅಂಗವಾಗಿದ್ದುವು. ಮಾನವನ ಪಶುತ್ವ ಕಡಿಮೆಯಾದಂತೆಲ್ಲ ನರಬಲಿ ನಿಂತು, ಪಶುಬಲಿ ಮಾತ್ರ ರೂಢಿಯಲ್ಲಿತ್ತು. ಇದನ್ನು ವೇದಗಳ ಕಾಲದಲ್ಲಿಯೂ ಕಾಣುತ್ತೇವೆ. ವೇದಕಾಲದ ಆರ್ಯರು ಯಜ್ಞಯಾಗಾದಿಗಳಲ್ಲಿ ನಡೆಸುತ್ತಿದ್ದ ಪ್ರಾಣಿಹಿಂಸೆಯನ್ನು ಕಂಡು ಬುದ್ಧ ವೈದಿಕಧರ್ಮವನ್ನು ಕಟುವಾಗಿ ಖಂಡಿಸಿದ.

ರಾಜ್ಯಗಳನ್ನು ಕಟ್ಟಿದ ಮೇಲೆ ಪ್ರಾಚೀನಮಾನವನ ಅನೇಕದೇವತಾವಾದ ಒಂದು ನಿರ್ದಿಷ್ಟರೂಪವನ್ನು ತಾಳಿತು. ಅವನ ಧಾರ್ಮಿಕ ಪ್ರವೃತ್ತಿ ಬೆಳೆಯುತ್ತ ಹೋದಂತೆ ದೇವತೆಗಳಲ್ಲಿ ಧಾರ್ಮಿಕ ಮತ್ತು ನೈತಿಕ ಗುಣಗಳನ್ನು ಕಂಡುಕೊಂಡು ಅವರಿಗೆ ಒಂದು ಗೌರವ ಸ್ಥಾನವನ್ನು ಕಲ್ಪಿಸಿದ. ರಾಜನಿಗಿರುವಂತೆ ದೇವತೆಗಳಿಗೂ ಸಾಮಾನ್ಯರಿಗಿಂತ ಮಿಗಿಲಾದ ಸ್ಥಾನಮಾನಗಳುಂಟೆಂದೂ ಅವರ ಲೋಕ ಭೂಲೋಕಕ್ಕಿಂತ ಉನ್ನತಸ್ಥಾನದಲ್ಲಿದೆಯೆಂದೂ ಭಾವಿಸಿದ. ರಾಜ್ಯಾಡಳಿತದಲ್ಲಿ ಅಧಿಕಾರದರ್ಜೆಯ ವಿಭಾಗಗಳಿರುವಂತೆ ದೇವತೆಗಳಲ್ಲೂ ಉಂಟೆಂಬ ಭಾವನೆ ಬೆಳೆಯಿತು. ಅವರಿಗೆ ನ್ಯಾಯಾಧೀಶರ ಸ್ಥಾನವನ್ನು ಕೊಡಲಾಯಿತು. ಜೀವನ ವಿಸ್ತರಿಸಿದಂತೆ ದೇವತೆಗಳ ಕಾರ್ಯವ್ಯಾಪ್ತಿಯೂ ವಿಸ್ತರಿಸಿತು. ಮಾನವನ ವ್ಯಕ್ತಿತ್ವವೂ ನಿರ್ದಿಷ್ಟವಾಯಿತು. ತನಗೂ ದೇವತೆಗಳಿಗೂ ನಿಕಟವಾದ ವೈಯಕ್ತಿಕ ಸಂಬಂಧವನ್ನು ನಾಗರಿಕಮಾನವ ಕಲ್ಪಿಸಿಕೊಂಡ. ದೇವತೆಗಳ ಬಗ್ಗೆ ಅವನಲ್ಲಿದ್ದ ಅಶ್ಲೀಲಭಾವನೆಗಳು ಹೋಗಿ ಸದ್ಭಾವನೆ ಬೆಳೆಯಿತು. ದೇವತೆಗಳು ಗುಪ್ತಸ್ಥಾನದಲ್ಲಿ ಅಡಗಿಕೊಂಡಿರುವರೆಂಬ ಅಭಿಪ್ರಾಯ ಹೋಗಿ ಅವರು ಮಾನವನ ಧಾರ್ಮಿಕಕಾರ್ಯಗಳನ್ನು ಪ್ರಚೋದಿಸುವ ಶಕ್ತಿಗಳೆಂಬ ಭಾವನೆ ಬೆಳೆಯಿತು. ದೇವತೆಗಳನ್ನು ಪ್ರಕೃತಿ ಸಂಬಂಧದಿಂದ ಬಿಡುಗಡೆ ಮಾಡಿ ಅವರಿಗೆ ಪ್ರತ್ಯೇಕವಾದ ವ್ಯಕ್ತಿತ್ವವನ್ನು ಕಲ್ಪಿಸಲಾಯಿತು. ಆರ್ಯರ ಇಂದ್ರನೂ ಪೃಥ್ವಿಯೂ ಗ್ರೀಕರ ಔರೆನಾಸ್, ಗಾಇಯಾ ಎಂಬ ದೇವತೆಗಳೂ, ಈಜಿಪ್ಷಿಯನ್ನರ ಕೆಬ್ ಮತ್ತು ನಟ್ ಎಂಬ ದೇವತೆಗಳೂ (ಪ್ರಕೃತಿಯ ಪ್ರತಿನಿಧಿಗಳಾಗಿದ್ದವರು) ಮರೆಯಾದರು. ಪರ್ಜನ್ಯದೇವತೆಯಾದ ವರುಣನಿಗೆ ಕ್ರಮೇಣ ನೈತಿಕಗುಣಗಳನ್ನು ಆರೋಪಿಸಿ ಧರ್ಮದೇವತೆಯೆಂದು ಪ್ರಾರ್ಥಿಸತೊಡಗಿದರು. ಗ್ರೀಕರ ಅಪೋಲೋ ದೇವತೆಯನ್ನು ಹೀಗೆ ವಿವಿಧ ರೀತಿಯಲ್ಲಿ ಜೀವನದ ಮೇಲೆ ಪ್ರಭಾವವನ್ನು ಬೀರುವ ಮುಖ್ಯದೇವತೆಯೆಂದು ಪರಿಗಣಿಸಲಾಯಿತು. ಈಜಿಪ್ಷಿಯನ್ನರೂ ಪ್ರಾಚೀನರೂ ರೋಮನ್ನರೂ ತಮ್ಮ ಪ್ರಕೃತಿದೇವತೆಗಳನ್ನು ಉಚ್ಚಸ್ಥಾನಕ್ಕೇರಿಸಿದರು.

ಪ್ರಾಚೀನಮಾನವ ದೇವತೆಗಳನ್ನು ಆರೋಗ್ಯ, ಆಹಾರ ಇಂಥ ಅಲ್ಪ ಲಾಭಗಳಿಗಾಗಿಯೇ ಪ್ರಾರ್ಥಿಸುತ್ತಿದ್ದ. ಅವನ ಮನದಲ್ಲಿ ಉಚ್ಚಭಾವನೆಗಳು ಮೂಡುವುದಕ್ಕೆ ಅವಕಾಶವಿರಲಿಲ್ಲ. ಶತ್ರುನಾಶಕ್ಕಾಗಿ ಮತ್ತು ತನ್ನ ದೈನಂದಿನ ಆವಶ್ಯಕತೆಗಳ ಪೂರೈಕೆಗಾಗಿ ಅವನು ಪ್ರಾರ್ಥಿಸುತ್ತಿದ್ದ. ಆದರೆ ಅನೇಕದೇವತಾವಾದ ಹೆಚ್ಚು ನಿರ್ದಿಷ್ಟವಾಗಿ ಧಾರ್ಮಿಕ ವ್ಯಕ್ತಿತ್ವವನ್ನು ಕಲ್ಪಿಸಿದ ಮೇಲೆ ಪ್ರಾರ್ಥನಾರೀತಿಯಲ್ಲೂ ಬದಲಾವಣೆಯಾಯಿತು. ಸುಸಂಸ್ಕೃತ ಮಾನವ ಪ್ರಾರ್ಥನೆಯಲ್ಲಿ ತನ್ನ ಧಾರ್ಮಿಕ ಪ್ರವೃತ್ತಿ ಬೆಳೆಯಲೆಂದು ದೇವರನ್ನು ಕೇಳಿಕೊಳ್ಳುತ್ತಾನೆ. ಜ್ಞಾನವನ್ನೂ ಮಾಯೆಯಿಂದ ಬಿಡುಗಡೆಯನ್ನೂ ಬೇಡುತ್ತಾನೆ. ವೇದಗಳ ಕಾಲದ ಐಹಿಕ ಸುಖದ ಪ್ರಾಧಾನ್ಯ ಉಪನಿಷತ್ತುಗಳ ಕಾಲಕ್ಕೆ ಕಡಿಮೆಯಾಗಿ ಜ್ಞಾನ ವೈರಾಗ್ಯ ಮುಕ್ತಿಗಳ ಭಾವನೆ ಬೆಳೆದಿರುವುದನ್ನು ಉಪನಿಷತ್ತುಗಳಲ್ಲಿ ಬರುವ ಪ್ರಾರ್ಥನೆಗಳಲ್ಲಿ ಕಾಣಬಹುದು:

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ
ಓಂ ಶಾಂತಿಃ ಶಾಂತಿಃ ಶಾಂತಿಃ

ಮಾನವ ತನ್ನ ಆತ್ಮೋದ್ಧಾರವನ್ನು ಮಾತ್ರವಲ್ಲದೆ ಇಡೀ ಮಾನವಕುಲಕ್ಕೆ ಶಾಂತಿಯನ್ನೂ ಬೇಡುತ್ತಾನೆ. ಅನೇಕದೇವತಾವಾದದಲ್ಲಿ ದೇವಾಲಯಗಳಿಗೂ ಮೂರ್ತಿಪೂಜೆಗೂ ಪುರೋಹಿತವರ್ಗಕ್ಕೂ ಧ್ಯಾನಕ್ಕಿಂತ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗಿದೆ.

ಅನೇಕದೇವತಾವಾದ ಕ್ರಮೇಣ ಏಕದೇವತಾವಾದದ ಕಡೆಗೆ ಮಾನವನನ್ನು ಕೊಂಡೊಯ್ದಿತು. ಗುಂಪುಗಳು ಒಟ್ಟುಗೂಡಿಕೊಂಡು ರಾಜ್ಯಗಳು ಉದಯಿಸಿದುವು. ಆಗ ಅನೇಕ ದೇವತೆಗಳನ್ನು ತಾರತಮ್ಯ ಭಾವನೆಯಿಂದ ವಿಂಗಡಿಸಲಾಯಿತು. ಪ್ರಬಲವಾದ ಗುಂಪುಗಳ ದೇವತೆಗಳು ಪ್ರಾಧಾನ್ಯ ಪಡೆದು ಪರಾಜಿತರಾದವರ ದೇವತೆಗಳು ಅಧೀನ ಸ್ಥಾನಗಳಲ್ಲಿಡಲ್ಪಟ್ಟರು.

ಮಾನವರಲ್ಲಿ ಅಂತಸ್ತುಗಳಾದಂತೆ ದೇವತೆಗಳನ್ನು ಒಂದು ತಾರತಮ್ಯಕ್ರಮದಲ್ಲಿ ಇರಿಸಿದರು. ಕುಟುಂಬದಲ್ಲಿ ತಂದೆಗೂ ರಾಜ್ಯದಲ್ಲಿ ಪ್ರಭುವಿಗೂ ಇರುವ ಸ್ಥಾನವನ್ನೇ ದೇವತೆಗಳಲ್ಲಿ ಅತ್ಯಂತ ಪ್ರಭಾವಶಾಲಿಯಾದ ದೇವತೆಗೆ ಕೊಡಲಾಯಿತು. ರೋಮನ್ನರು ಜೂಪಿಟರ್ ಎಂಬ ದೇವತೆಗೆ ರಾಜ್ಯರಕ್ಷಣೆಯ ಭಾರವನ್ನು ವಹಿಸಿದರು. ಆರ್ಯರು ಇಂದ್ರನನ್ನು ಯಜ್ಞಯಾಗಾದಿಗಳ ಅಧಿದೇವತೆಯನ್ನಾಗಿ ಮಾಡಿದ್ದರು. (ಆದರೆ ಉಪನಿಷತ್ತುಗಳು ಪರಬ್ರಹ್ಮನ ಸ್ವರೂಪವನ್ನು ಕುರಿತು ತತ್ತ್ವಪ್ರತಿಪಾದನೆ ಮಾಡಿದುವು). ಚಿಕ್ಕಪುಟ್ಟ ದೇವತೆಗಳನ್ನು ಕೈಬಿಡಲಾಯಿತು. ಈಜಿಪ್ಟಿನವರು ಅಮನ್‍ರಾ ಎಂಬ ದೇವತೆಯನ್ನು ದೇವತೆಗಳ ಒಡೆಯನೆಂದು ಭಾವಿಸಿದರು. ಹೀಗೆಯೇ ಹೀಬ್ರೂಗಳಲ್ಲಿ ಜಹೋವನಿಗೆ, ಚೀನದಲ್ಲಿ ಟೀಯೋಗೆ ಅತ್ಯುನ್ನತವಾದ ಪದವಿಯನ್ನು ಕೊಡಲಾಯಿತು. ಇವರನ್ನು ಸರ್ವೇಶ್ವರನೆಂದು ಭಾವಿಸಿದರು. ಉಳಿದ ದೇವತೆಗಳನ್ನು ಅವರ ಸೇವಕರೆಂದು ತಿಳಿದರು. ಗ್ರೀಸಿನಲ್ಲಿ ಜ್ಯೂಸ್ ಎಂಬ ದೇವತೆಯೇ ದೇವತೆಗಳಿಗೆ ಪ್ರಭುವಾದ. ಮಾನವನ ಆಧ್ಯಾತ್ಮಿಕ ನೈತಿಕ ಸಾಧನೆ ಮುಂದುವರಿದಂತೆ, ಮಾನವಕುಲಕ್ಕೆಲ್ಲ ಒಬ್ಬನೇ ತಂದೆ ಮತ್ತು ವಿಶ್ವಕ್ಕೆಲ್ಲ ಒಬ್ಬನೇ ಕರ್ತೃ ಮತ್ತು ಪಾಲಕ ಎಂಬ ಭಾವನೆ ಬೆಳೆಯಿತು.

ಹೀಗೆ ಅನೇಕದೇವತಾವಾದ ಮಾನವನ ಆಧ್ಯಾತ್ಮಿಕ ಬೆಳವಣಿಗೆಗೆ ಹೊಂದದೆ ಏಕದೇವತಾವಾದ ಎಲ್ಲ ಮುಖ್ಯವಾದ ಮತಧರ್ಮಗಳಲ್ಲೂ ಸ್ಪಷ್ಟವಾದ ರೂಪತಾಳಿತು. ಅನೇಕದೇವತಾವಾದ ಆಚರಣೆಯಲ್ಲಿದ್ದರೂ ಮಾನವ ಕ್ರಮೇಣ ವಿಶ್ವದ ಏಕತ್ವವನ್ನು ಅರಿಯುತ್ತ ಬಂದ. ಎಲ್ಲರಿಗೂ ಬೆಳಕನ್ನು ನೀಡುವವನು ಒಬ್ಬನೇ ಸೂರ್ಯ, ಪ್ರಕೃತಿಯಲ್ಲಿ ಒಂದೇ ಸ್ವಭಾವವಿದೆ. ಎಲ್ಲ ವಿವಿಧಶಕ್ತಿಗಳೂ ಅದರ ವಿವಿಧ ಅಂಗಗಳು ಎಂಬ ಅರಿವು ಉಂಟಾದುದೂ ಏಕದೇವತಾವಾದ ಅಂದರೆ ವಿಶ್ವಕ್ಕೆಲ್ಲಾ ಒಬ್ಬನೇ ಒಡೆಯ ಎಂಬ ತತ್ತ್ವದ ಪ್ರತಿಪಾದನೆಗೆ ಮುಖ್ಯ ಕಾರಣವಾಯಿತು.**(ನೋಡಿ– ಏಕದೇವತಾವಾದ)** (ಎಸ್.ಎಸ್.ಆರ್.)

**ಅನೇಕಾಂತವಾದ :** ಜ್ಞೇಯವಸ್ತು ಅನೇಕಾಂತಸ್ವರೂಪಿಯಾಗಿದೆ. ಅಂದರೆ ಅದರ ಧರ್ಮಗಳು, ಗುಣಗಳು ಅನೇಕವಾಗಿವೆ. ಆ ಅನೇಕ ಧರ್ಮಗಳು ಒಂದೊಂದು ಸ್ವರೂಪದಲ್ಲಿ ಆ ವಸ್ತುವಿನಲ್ಲಿ ಇದ್ದೂ ಪರಸ್ಪರ ಒಂದರಿಂದ ಇನ್ನೊಂದು ಭಿನ್ನವಾಗಿವೆ. ವಸ್ತುವಿನ ಅನ್ಯಧರ್ಮಗಳ ಅಪೇಕ್ಷೆಯನ್ನು ಗಮನಿಸದೆ ಒಂದೇ ಧರ್ಮವನ್ನು ಗ್ರಹಣ ಮಾಡುವುದು ಏಕಾಂತ. ಅವುಗಳನ್ನು ಗೌಣ ಮತ್ತು ಮುಖ್ಯ ಭಾವಗಳಿಂದ ಪರಸ್ಪರ ಸಾಪೇಕ್ಷತೆಯಿಂದ ತಿಳಿಯುವುದೇ ಅನೇಕಾಂತ. ವಸ್ತುವಿನ ಯಥಾರ್ಥಜ್ಞಾನ ಅನೇಕಾಂತದಿಂದಲೇ ಆಗುತ್ತದೆ. ಅದೇ ಪ್ರಮಾಣ. ಅನೇಕಾಂತವಾದಕ್ಕೆ ಅಪೇಕ್ಷಾವಾದ, ವಿಭಜ್ಯವಾದ ಅಥವಾ ಪೃಥಕ್ಕರಣಮಾಡಿ ವಿಭಜನೆಮಾಡಿ, ಯಾವುದಾದರೊಂದು ತತ್ತ್ವವನ್ನು ವಿವೇಚಿಸುವ ವಾದ ಎಂದು ವಿವರಿಸುವುದು ಸಮರ್ಪಕವಾಗುವುದು. ಅಪೇಕ್ಷಾಭೇದದಿಂದ ವಸ್ತುಸ್ವರೂಪವನ್ನು ವಿವೇಚಿಸುವಾಗ ಸ್ಯಾತ್ ಶಬ್ದಾಂಕಿತ ಪ್ರಯೋಗ ಆಗಮುಗಳಲ್ಲಿ ದೊರೆಯುತ್ತದೆ. ಸ್ಯಾತ್ ಶಬ್ದಕ್ಕೆ ಕಥಂಚಿತ್ – ಕೆಲವು ದೃಷ್ಟಿಯಿಂದ ಎಂದು ಅರ್ಥವಾಗುವುದು. ವಾದಶಬ್ದ ಕಥನವೆಂಬರ್ಥದಲ್ಲಿದೆ. ಇದರ ಭಾವವಿಷ್ಟೆ. ಪದಾರ್ಥ ಕೆಲವು ದೃಷ್ಟಿಯಿಂದ ಹೀಗಿದೆ; ಹಲವು ದೃಷ್ಟಿಯಿಂದ ಹಾಗಿದೆ. ಈ ರೀತಿ ವಸ್ತುವಿನ ಅನೇಕ ಧರ್ಮ, ಗುಣಗಳ ದೃಷ್ಟಿಯಲ್ಲಿ ಗೌಣವಾಗಿಟ್ಟು ಕೆಲವೊಂದು ವಿಶೇಷಗುಣಕ್ಕೆ ಪ್ರಾಮುಖ್ಯಕೊಟ್ಟು ಪ್ರತಿಪಾದನ ಮಾಡುವ ಅನೇಕಾಂತವೇ ಸ್ಯಾದ್ವಾದವೆನಿಸುತ್ತದೆ. ನಿತ್ಯಾನಿತ್ಯತ್ವ, ಸಾಮಾನ್ಯವಿಶೇಷತ್ವ, ವಾಚ್ಯಾವಾಚ್ಯತ್ವ, ಸತ್ ಅಸತ್ ಇತ್ಯಾದಿ ವಸ್ತುವಿನ ಗುಣಗಳು ಈ ಪದ್ಧತಿಯಲ್ಲಿ ಸ್ಪಷ್ಟವಾಗಿ ದೃಗ್ಗೋಚರವಾಗುತ್ತವೆ. ಇದೇ ಅನೇಕಾಂತ ದೃಷ್ಟಿ. ಇದರಲ್ಲಿ ಏಕಾಂತಕ್ಕೆ, ದುರಾಗ್ರಹಕ್ಕೆ ಆಸ್ಪದವಿಲ್ಲ. **(ನೋಡಿ – ಸ್ಯಾದ್ವಾದ)** (ಎ.ಎನ್.ಯು)

**ಅನೌ :** ರಷ್ಯದ ತುರ್ಕಿಸ್ತಾನದಲ್ಲಿ ಮರ್ವ್ ಓಯಸಿಸ್ಸಿನ ಬಳಿ ಇರುವ ಊರು. ಇಲ್ಲಿ ಪುರಾತನ ಸಂಸ್ಕೃತಿಗಳ ಅವಶೇಷಗಳಿವೆ. ಇಲ್ಲಿನ ಮೊಟ್ಟಮೊದಲಿನ ಸಂಸ್ಕೃತಿ ನವ ಶಿಲಾಯುಗಕ್ಕೆ ಸೇರಿದ್ದು. ಕಾಲಕ್ರಮೇಣ, ಇರಾನ್, ಮೆಸಪೊಟೇಮಿಯ ಸಂಸ್ಕೃತಿಗಳ ಪ್ರಭಾವ ಇಲ್ಲಿ ಹರಡಿ ತಾಮ್ರದ ಉಪಯೋಗವೂ ರೂಢಿಗೆ ಬಂದಿತು. ಭೌಗೋಳಿಕವಾಗಿ

ಪ್ರಾಚೀನವಿಶ್ವದ ಮೂರು ಸುಸಂಸ್ಕೃತ ಪ್ರದೇಶಗಳಾಗಿದ್ದು ಪಶ್ಚಿಮ ಏಷ್ಯ, ಭಾರತ ಮತ್ತು ಚೀನಗಳ ಮಧ್ಯೆ ಆಯಕಟ್ಟಿನ ಸ್ಥಾನದಲ್ಲಿದ್ದ ಅನೌನಲ್ಲಿ ಈ ಎಲ್ಲ ಸಂಸ್ಕೃತಿಗಳ ಆಂಶಿಕಸಂಗಮವನ್ನು ಗುರುತಿಸಬಹುದಾಗಿದೆ. ಹರಪ್ಪ ಮತ್ತು ಪ್ರಾಕ್–ಹರಪ್ಪ ಸಂಸ್ಕೃತಿಗಳಿಗೂ ಅನೌನ ಮೂರನೆಯ ಘಟ್ಟದ ಸಂಸ್ಕೃತಿಗೂ ಹಲವು ಸಾಮ್ಯಗಳು ಕಂಡುಬಂದಿವೆ. (ಎಸ್.ಎನ್.)

**ಅನ್ಜಾರ್ :** ಗುಜರಾತ್ ರಾಜ್ಯದ ಒಂದು ತಾಲ್ಲೂಕು ಕೇಂದ್ರ ಹಾಗೂ ಪಟ್ಟಣ ಕಚ್ಛ್ ಕೊಲ್ಲಿಯಂದ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 68343 (2002). ನೀರಿನ ಅಭಾವವಿರುವ ಒಣಪ್ರದೇಶ. ಬಾವಿಯಿಂದ ನೀರನ್ನೆತ್ತಿ ಸುತ್ತಣ ಪ್ರದೇಶದಲ್ಲಿ ಗೋದಿ, ಹತ್ತಿ ಮುಂತಾದವನ್ನು ಬೆಳೆಯುತ್ತಾರೆ.

1952ರಲ್ಲಿ ಕಾಂಡ್ಲಾ–ದೀಸಾ ಮೀಟರ್‌ಗೇಜ್ ರೈಲುಮಾರ್ಗವನ್ನು ರಾಜೇಂದ್ರಪ್ರಸಾದರು ಉದ್ಘಾಟಿಸಿದ ಅನಂತರ ಈ ಪಟ್ಟಣ ದಕ್ಷಿಣ ರಾಜಸ್ತಾನ ಮತ್ತು ರಾಜ್ಯದ ಇತರ ಪ್ರದೇಶಗಳೊಂದಿಗೆ ನೇರ ಸಂಪರ್ಕವನ್ನು ಹೊಂದಿದೆ.

ಇಲ್ಲಿ ಆಗಾಗ ಲಘುಭೂಕಂಪಗಳಾಗುತ್ತವೆ. 1916ರಲ್ಲಾದ ಭೂಕಂಪದಿಂದ ಅಪಾರ ನಷ್ಟವಾಯಿತು. ಭಾರತದ ಭೂಕಂಪ ನಕಾಶೆಯ ಬಿ–ವಲಯದಲ್ಲಿ ಈ ಪಟ್ಟಣವಿದೆ.(ಪಿ.ಡಿ.ಎಂ.)

**ಅನ್‌ದ್ರಿಯೋ ಎಫ್ ಲಿಯೊನಿಡ್ :** 1871–1919. ರಷ್ಯದ ಕಥೆಗಾರ ಮತ್ತು ನಾಟಕಕಾರ. ಬೋಲ್ಷೆವಿಸಮನ್ನು 1917ರಲ್ಲಿ ವಿರೋಧಿಸಿದ ಕ್ರಾಂತಿಕಾರಿ. ಯೌವನದಲ್ಲಿ ಭಯಂಕರ ಪ್ರಸಂಗಗಳನ್ನು ಅರಸುತ್ತಿದ್ದ ಇವನು ಇ.ಎ.ಪೋನ ಪ್ರಭಾವಕ್ಕೆ ಒಳಗಾದ. ಅತೃಪ್ತಿ ಜೀವಮಾನವೆಲ್ಲ ಇವನನ್ನು ಕಾಡಿತು. ಇವನ ಬರೆಹಗಳಲ್ಲಿ ಪೋ, ಗಾರ್ಕಿ ಮತ್ತು ಟಾಲ್ಸ್‌ಟಾಯ್ ಇವರ ಪ್ರಭಾವ ಕಂಡುಬರುತ್ತದೆ. ಇವನ ಕೃತಿಗಳಲ್ಲಿ ಎರಡು ಬಗೆಯ ಶೈಲಿಗಳನ್ನು ಕಾಣಬಹುದು. ಎಲ್ಲ ಕೃತಿಗಳಲ್ಲಿಯೂ ಸರ್ವಶೂನ್ಯವಾದ ನಿರೂಪಿತವಾಗಿದೆ. ಮಾನವನ ಬಾಳು, ಸಮಾಜ, ನೀತಿ ಎಲ್ಲ ಮಿಥ್ಯ, ಸಾವು ಒಂದೇ ಸತ್ಯ ಎನ್ನುವ ದೃಷ್ಟಿ ಇವನ ಸಾಹಿತ್ಯಕ್ಕೆ ಆಧಾರ. 1906ರ ಕ್ರಾಂತಿ ವಿಫಲಗೊಂಡ ಮೇಲೆ ಬುದ್ಧಿಜೀವಿಗಳು ಅನುಭವಿಸಿದ ಶೂನ್ಯಭಾವನೆ ಇವನ ಕೃತಿಗಳಲ್ಲಿ ಪ್ರತಿಬಿಂಬಿತವಾಗಿದೆ. ಇವನ ಎರಡು ಶೈಲಿಗಳಲ್ಲಿ ಒಂದು ಸಂಯಮ, ವಿವೇಚನೆಗಳಿಂದ ಕೂಡಿದ್ದು. ಇದರಲ್ಲಿ ರಚಿತವಾದ ಒಂದಾನೊಂದು ಕಾಲದಲ್ಲಿ, ಮಂಜಿನಲ್ಲಿ ಮತ್ತು ಗವರ್ನರ್ ಎಂಬ ಕಥೆಗಳೇ ಇವನಿಗೆ ಸಾಹಿತ್ಯ ಪ್ರಪಂಚದಲ್ಲಿ ಸ್ಥಾನವನ್ನು ಗಳಿಸಿಕೊಟ್ಟುವು. ಮೂರರಲ್ಲಿಯೂ ಸಾವೇ ಮುಖ್ಯವಸ್ತು. ಆಧುನಿಕತೆಯ ಪ್ರಭಾವಕ್ಕೊಳಗಾಗಿ ಬರೆದ ಕೃತಿಗಳಲ್ಲಿ ಕತ್ತಲೆ ಮತ್ತು ಗಲ್ಲಿಗೇರಿದ ಏಳು ಮಂದಿ ಎಂಬವು ಗಣನೀಯವಾದುವು. ಕೊನೆಯದರಲ್ಲಿ ಸಾವು ತೋರಬಹುದಾದ ಹಿರಿಮೆಯನ್ನು ಗುರುತಿಸಿರುವುದರಿಂದ ಇವನ ಕೃತಿಗಳಲ್ಲಿ ಇದಕ್ಕೊಂದು ವಿಶಿಷ್ಟಸ್ಥಾನವುಂಟು. (ಎಲ್.ಎಸ್.ಎಸ್.)

**ಅನ್ನಂಭಟ್ಟ :** 16ನೆಯ ಶತಮಾನದ ಕೊನೆಯಲ್ಲಿದ್ದ ವಿದ್ವಾಂಸ ಕೃಷ್ಣಾನದಿಯ ತೀರದ ಒಂದು ಗ್ರಾಮ ಇವನ ಜನ್ಮಸ್ಥಳ. ಕೆಲವರು ಮಲ್ಲಿನಾಥನಿಗಿಂತ ಮುಂಚೆ ಭಟ್ಟೋಜಿದೀಕ್ಷಿತನಿಗಿಂತ ಹಿಂದೆ ಇದ್ದನೆಂದು ಅಭಿಪ್ರಾಯ ಪಡುತ್ತಾರೆ. ಈ ವಂಶದವರು ಈಗಲೂ ಕೃಷ್ಣಾನದಿಯ ಸಮೀಪದಲ್ಲಿ ಕೇಶವಪುರವೆಂಬ ಗ್ರಾಮದಲ್ಲಿ ವಾಸವಾಗಿದ್ದಾರೆ. ಈತ ರಚಿಸಿದ ಕೈಯಟವ್ಯಾಖ್ಯಾ ಗ್ರಂಥ ಪ್ರದೀಪೋದ್ಯೋತನದಲ್ಲಿ ಹೇಳಿಕೊಂಡಿರುವಂತೆ ರಾಘವ ಸೋಮಯಾಜಿಯ ಕುಲದಲ್ಲಿ ಹುಟ್ಟಿದ ತಿರುಮಲಾಚಾರ್ಯನ ಪುತ್ರನೆಂದು ವ್ಯಕ್ತವಾಗುತ್ತದೆ. ಇವನ ಅಣ್ಣನಾದ ರಾಮಕೃಷ್ಣಭಟ್ಟನ ಸಿದ್ಧಾಂತಕೌಮುದಿಗೆ ಸಿದ್ಧಾಂತ ರತ್ನಾಕರವೆಂಬ ಪ್ರೌಢ ವ್ಯಾಖ್ಯಾನಗ್ರಂಥವನ್ನು ಬರೆದಿರುತ್ತಾನೆ. ಈತ ಚತುಶಾಸ್ತ್ರಪಂಡಿತ. ತರ್ಕಸಂಗ್ರಹ, ತರ್ಕಸಂಗ್ರಹದೀಪಿಕಾ, ತರ್ಕಭಾಷಾ, ತತ್ತ್ವಚಿಂತಾಮಣ್ಯಾಲೋಕ ಸಿದ್ಧಾಂಜನ, ತತ್ವಬೋಧಿನೀಟೀಕಾ, ಭಾಷ್ಯಪ್ರದೀಪೋದ್ಯೋತನ, ಮಿತಾಕ್ಷರಾ ಎಂಬ ಕಾಶಿಕಾನುಸಾರಿ ಪಾಣಿನೀಯ ಸೂತ್ರವೃತ್ತಿ, ರಾಣಕೋಜ್ಜೀವಿನೀ ಮಿತಾಕ್ಷರಾ ಎಂಬ ಬ್ರಹ್ಮಸೂತ್ರವೃತ್ತಿ ಶಾಸ್ತ್ರಗ್ರಂಥಗಳನ್ನು ರಚಿಸಿರುತ್ತಾನೆ. ಕಣಾದ ಮುನಿಗಳ ಸೂತ್ರರೂಪವಾದ ಪ್ರಮೇಯ ಪ್ರಧಾನ ವೈಶೇಷಿಕ ಶಾಸ್ತ್ರ ಹಾಗೂ ಗೌತಮಮುನಿಗಳ ಪ್ರಮಾಣಪ್ರಧಾನ ನ್ಯಾಯಶಾಸ್ತ್ರ ಎರಡನ್ನೂ ಸೇರಿದ ನ್ಯಾಯವೈಶೇಷಿಕ ಶಾಸ್ತ್ರಗಳ ಸಿದ್ಧಾಂತಗಳನ್ನು ಸಂಗ್ರಹಿಸಿ ತರ್ಕಸಂಗ್ರಹ ಗ್ರಂಥವನ್ನು ಈತ ಬರೆದಿರುತ್ತಾನೆ. ಈ ಗ್ರಂಥ ಬಾಲಕರಿಗೆ ಮಾತ್ರವಲ್ಲದೆ ಪಂಡಿತರಿಗೂ ಉಪಯುಕ್ತವಾದುದು. ಸಂಗ್ರಹವಾದ ಈ ಗ್ರಂಥಕ್ಕೆ ಮಕ್ಕಳಿಗೂ ಅರ್ಥವಾಗುವಂಥ ತರ್ಕಸಂಗ್ರಹದೀಪಿಕಾ ಎಂಬ ವ್ಯಾಖ್ಯಾನವಿದೆ. ಈ ಗ್ರಂಥ ಭಾರತದ ಎಲ್ಲ ಭಾಷೆಗಳಿಗೆ ಅಲ್ಲದೆ ಪ್ರಪಂಚದ ನಾನಾ ಭಾಷೆಗಳಿಗೆ ಅನುವಾದವಾಗಿದೆ. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವಗಳೆಂಬ ಏಳು ಲಕ್ಷಣ ವಿಭಾಗಗಳನ್ನು ತರ್ಕಸಂಗ್ರಹದಲ್ಲಿ ಹೇಳಲಾಗಿದೆ. ಪದಾರ್ಥ ತತ್ತ್ವಜ್ಞಾನಕ್ಕೆ ಪರಮಪ್ರಯೋಜನ ಮೋಕ್ಷ. ಮನನಕ್ಕೆ ಪ್ರಯೋಜಕವಾದ ಪದಾರ್ಥನಿರೂಪಣದ ಮೂಲಕ ತರ್ಕಶಾಸ್ತ್ರ ಮೋಕ್ಷೋಪಯೋಗಿಯಾಗುತ್ತದೆಂದು ದೀಪಿಕಾ ವ್ಯಾಖ್ಯಾನದ ಕೊನೆಯಲ್ಲಿ ಹೇಳಿದೆ. (ಜಿ.ವಿ.ಬಿ.)

**ಅನ್ನನಾಳದ ರೋಗಗಳು :** ಬಾಯಿಂದ ಜಠರಕ್ಕೆ ಆಹಾರ ಸಾಗಣೆ ಮಾಡುವ ನಾಳಕ್ಕೆ ತಗಲುವ ರೋಗಗಳು. ಇವುಗಳ ಪೈಕಿ ಕೆಲವು ಇಂತಿವೆ:

**ಕಷ್ಟನುಂಗಣೆ:** ಗಂಟಲಿನ ಬಳಿ ಅನ್ನನಾಳದಿಂದ ಹೊರಪಕ್ಕಕ್ಕೆ ಚೀಲಗಳಂತೆ ಚಾಚಿಕೊಂಡಿರುವ ತಿರುಚೀಲ ಡೈವರ್ಟಿಕ್ಯುಲಂ (ಕಷ್ಟನುಂಗಣೆಗೆ ಡೈಸ್ಫಾಗಿಯ) ಒಂದು ಕಾರಣ. ಈ ತಿರುಚೀಲ ಕೆಲವೇಳೆ ಅರೆಲೀಟರಿನಷ್ಟು ಆಹಾರ ತುಂಬಿಕೊಳ್ಳುವಷ್ಟು ಹಿಗ್ಗಿ, ಮುಖ್ಯವಾಗಿ ಕೊರಳಿನ ಎಡಪಕ್ಕದಲ್ಲಿ ಉಬ್ಬಿದಂತೆ ಇರುತ್ತದೆ. ಶಸ್ತ್ರಕ್ರಿಯೆಯಿಂದ ಇದನ್ನು ಅಪಾಯವಿಲ್ಲದ ಹಾಗೆ ತೆಗೆದುಹಾಕಬಹುದು. ಹುಟ್ಟುತ್ತ ಬರುವ ಕುಂದುಗಳಿಂದಾಗಿ ಅನ್ನನಾಳ ಪೂರ್ತಿ ಮುಚ್ಚಿಹೋಗಿರಬಹುದು. ದೊಡ್ಡವರು ಹಸಿವು ನೀಗಲು ಕುದಿವ ಇಲ್ಲವೇ ಸುಟ್ಟರಗಿಸುವ ದ್ರವಗಳನ್ನೋ ಬಲವಾದ ಆಮ್ಲಗಳನ್ನೋ ಕುಡಿದಮೇಲೆ ಅನ್ನನಾಳವೆಲ್ಲ ಹುಣ್ಣಾಗಿ ಕಲೆಗಟ್ಟಿ ಅಡಚಣೆಯಾಗಿ ನುಂಗುವುದು ಕಷ್ಟವಾಗಬಹುದು. ಒಳಗಣ ತೂತು ಅಡಕವಾದಂತಿರುವ ಈ ತೊಡಕನ್ನೂ (ಸ್ಟ್ರಿಕ್ಚರ್) ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು.

ಬಲು ಅಪೂರ್ವವಾಗಿ, ಅನ್ನನಾಳಕ್ಕೂ ಉಸಿರ್ನಾಳಕ್ಕೂ ನಡುವೆ ಹುಟ್ಟಿನಿಂದಲೇ ಅಸಹಜ ತೂತಿರಬಹುದು. ಇಂಥ ಸ್ಥಿತಿಯಲ್ಲಿರುವ ಶಿಶು ಕುಡಿದುದೆಲ್ಲವನ್ನೂ ವಾಂತಿಮಾಡಿ, ಕೆಲವೇಳೆ ಕೆಮ್ಮುತ್ತ ಉಸಿರು ಸಿಕ್ಕಿಕೊಂಡಂತಾಗಿ ಅದರ ಮೈಯೆಲ್ಲ ನೀಲಿಗಟ್ಟುತ್ತದೆ. ಇದಕ್ಕೆ ಶಸ್ತ್ರಕ್ರಿಯೆ ಸಾಧ್ಯವಾದರೂ ಶಿಶು ಬದುಕುವುದು ಕಷ್ಟ. ವಿಶೇಷವಾಗಿ ವಪೆಯಲ್ಲಿನ ಅನ್ನನಾಳದ ಕಂಡಿ ಹಿರಿಹಿಗ್ಗಿ ಜಠರವೂ ಎದೆಗೂಡಿನೊಳಕ್ಕೆ ತೂರಿಕೊಂಡಿರುವಾಗ ಆಗುವಂತೆ, ಜಠರದಲ್ಲಿನ ಆಮ್ಲದ ಅನ್ನರಸ ಅನ್ನನಾಳದೊಳಕ್ಕೆ ಹಿಂಗಾರಿದರೆ (ರೆಗರ್ಜಿಟೇಟ್) ಅನ್ನನಾಳದ ಉರಿತವಾಗಿ, ಎದೆ ಉರಿ, ನೋವು, ಕಷ್ಟನುಂಗಣೆ ಆಗುತ್ತವೆ. ಇಂಥ ಸಂದರ್ಭದಲ್ಲಿ ಆಮ್ಲರೋಧಕ ಮದ್ದುಗಳಿಂದ ನಿವಾರಿಸಬಹುದು.

**ಹೆರವಸ್ತುಗಳು:** ಬಾಯಿಯಿಂದ ಒಳಗೆ ಬಿದ್ದ ಹೆರವಸ್ತುಗಳು ಅನ್ನನಾಳದ ಒಳಗೆ ಸೇರಿಕೊಂಡು ಅಲ್ಲೇ ಇದ್ದು ಆತಂಕ ಒಡ್ಡಬಹುದು. ಆದರೂ ಸಾಮಾನ್ಯವಾಗಿ ಅನ್ನನಾಳಕ್ಕೆ ಎಷ್ಟೊಂದು ಹಿಗ್ಗುವ ಸಾಮರ್ಥ್ಯವಿದೆಯೆಂದರೆ ಅಲ್ಲಿ ಏನಾದರೂ ಸಿಕ್ಕಿಹಾಕಿಕೊಳ್ಳಲು ಏನೋ ಹೆಚ್ಚಿನ ಕಾರಣಗಳು ಇರಬೇಕು.

ಹೆರವಸ್ತುಗಳು ವಿಶೇಷವಾಗಿ ಆತಂಕ ಒಡ್ಡುವ ಜಾಗಗಳು ಎರಡಿವೆ; ಅನ್ನನಾಳದ ಮೇಲ್ಭಾಗದಲ್ಲಿ, ಉಸಿರ್ನಾಳದ ಕೆಳಗಿನ ಕೊನೆ ಅನ್ನನಾಳವನ್ನು ತುಸು ಹಿಂದಕ್ಕೆ ಒತ್ತುವುದೊಂದು, ಕೆಳಭಾಗ ವಪೆಯ ಮೂಲಕ ಹೊಟ್ಟೆಗೆ ತೂರುವೆಡೆ ಇನ್ನೊಂದು. ಚೆನ್ನಾಗಿ ಅಗಿಯದಿರುವ, ಮೂಳೆಸಮೇತ ಇರುವ ಮಾಂಸದ ತುಂಡು ಅನ್ನನಾಳದ ಮೇಲ್ತುದಿಯಲ್ಲಿ, ಗಂಟಲಲ್ಲಿ ಸಿಕ್ಕಿಕೊಳ್ಳುವುದುಂಟು. ಅನ್ನನಾಳದಲ್ಲಿ ಸಿಕ್ಕಿಕೊಂಡ ಹೆರವಸ್ತುವನ್ನು ಅದರ ಲೋಳೆಪೊರೆಗೆ ಅಪಾಯವಾಗದಂತೆ ಕೆಳಗಡೆಗೆ ನೂಕಲು ಆಗುವುದಾದರೆ, ತುದಿಯಲ್ಲಿ ಬೆಳಕಿರುವ ಕೊಳವೆಯ ಮೂಲಕ ಕಣ್ಣಿಂದ ನೋಡುತ್ತ ಕಡ್ಡಿಯಿಂದ ನೂಕಿಬಿಡಬಹುದು. ಹೀಗಾಗದಿದ್ದರೆ, ಅದನ್ನು ಹಿಡಿದು ಹೊರಕ್ಕೆ ತೆಗೆಯಬಹುದು. ಕೆಳಕ್ಕೆ ಜಠರದೊಳಕ್ಕೆ ನೂಕಿದ ಮೇಲೆ ಆ ವಸ್ತು ಅರಗದಿದ್ದರೆ ಕೊನೆಗೆ ಮಲದಲ್ಲಿ ಹೊರಬೀಳುತ್ತದೆ. ಹಾಗೆ ಬಿದ್ದುದನ್ನು ಮಲಪರೀಕ್ಷೆಯಿಂದ ಖಚಿತಪಡಿಸಿಕೊಳ್ಳಬೇಕು.

**ಏಡಿಗಂತಿ:** ಅನ್ನನಾಳದಲ್ಲಿ ಏಳುವ ಊತ, ಗಂತಿಗಳಾಗಿ (ಟ್ಯೂಮರ್ಸ್) ಆತಂಕವುಂಟು ಮಾಡಬಹುದು. ಇಂಥ ರೋಗಗಳಲ್ಲಿ ಏಡಿಗಂತಿಯೇ (ಕ್ಯಾನ್ಸರ್) ತೀರ ಸಾಮಾನ್ಯ. ಮಧ್ಯ ವಯಸ್ಸು ದಾಟಿದ ಗಂಡಸರಿಗೆ ಹೀಗಾಗಬಹುದು. ಬರಬರುತ್ತ ಗಟ್ಟಿ ಪದಾರ್ಥಗಳನ್ನು ನುಂಗುವುದು ಕಷ್ಟವಾಗಿ ನೀರಾಗಿರುವಂಥವನ್ನು ನುಂಗಿದಾಗ ಮಾತ್ರ ಸರಾಗವಾಗಿ ಅನ್ನನಾಳದಲ್ಲಿ ಇಳಿಯುತ್ತವೆ. ಕೊನೆಗೆ ನೀರೂ ಇಳಿಯದಂತೆ ಅನ್ನನಾಳದ ತೊಡಕು ಉಂಟಾಗಬಹುದು. ಏಡಿಗಂತಿ ಎದ್ದಿರುವುದರ ತೀರ ಮೊದಲಿನ ಲಕ್ಷಣವಿದು. ಆದ್ದರಿಂದ ನೀರು ಕುಡಿವಂತಿದ್ದು ಗಟ್ಟಿ ಆಹಾರ ನುಂಗುವುದು ಕಷ್ಟವೆನಿಸಿದ ಕೂಡಲೇ ವೈದ್ಯಪರೀಕ್ಷೆ ಮಾಡಿಸಿಕೊಳ್ಳಬೇಕು. ಅನ್ನನಾಳದ ಒಂದು ಭಾಗವನ್ನೋ ಪೂರ್ತಿಯಾಗೋ ಶಸ್ತ್ರಕ್ರಿಯೆಯಿಂದ ಕೊಯ್ತೆಗೆದು ಹಾಕಬಹುದು. ಆಮೇಲೆ ಜಠರವನ್ನು ಎದೆಯೊಳಕ್ಕೆ ಜರುಗಿಸಿ ಉಳಿದಿರುವ ಅನ್ನನಾಳದ ತುಂಡಿಗೆ ಕೂಡಿಸಬಹುದು. ಕೆಳಗಿನ ಮೂರರಲ್ಲೊಂದು ಭಾಗದಲ್ಲಿ ಎದ್ದಿರುವ ಏಡಿಗಂತಿಯನ್ನು ತೆಗೆದು ವಾಸಿಮಾಡಬಹುದು. ಆದರೆ ಏಡಿಗಂತಿ ಬದಿಯ ಅಂಗಗಳಿಗೆ ಪಸರಿಸಿಕೊಂಡಿರಬಾರದು. ಮೇಲ್ಭಾಗದಲ್ಲಿ ಆಗುವಂತೆ, ಏಡಿಗಂತಿ ಬಲು ದೊಡ್ಡದಾಗಿ, ಸುತ್ತಲೂ ಇರುವ ಅಂಗಗಳಿಗೆ ಅಂಟಿಕೊಂಡಿದ್ದರೆ, ಶಸ್ತ್ರಚಿಕಿತ್ಸೆ ಅಪಾಯಕರ. ತೆಗೆಯುವುದು ಆಗದಿದ್ದಲ್ಲಿ ಸಣ್ಣ ತೂತಿನಲ್ಲಿ ಕಿರಿಯ ರಬ್ಬರ್ ಕೊಳವೆಯನ್ನು ತೂರಿಸಿಬಿಟ್ಟು ಆಗಾಗ್ಗೆ ಬದಲಿಸುತ್ತಿದ್ದರೆ ಕಂಡಿ ಹಾಗೇ ಉಳಿಯುತ್ತದೆ. ಅಲ್ಪಸ್ವಲ್ಪ ದ್ರವ ವಸ್ತುಗಳಾದರೂ ಹೊಟ್ಟೆಗೆ ಸೇರುತ್ತವೆ. ಇದೂ ಆಗದಿರಲು ಹೊಟ್ಟೆ ಮುಗುಳಿನಲ್ಲಿ ಶಸ್ತ್ರಕ್ರಿಯೆಯಿಂದ ಜಠರದೊಳಕ್ಕೆ ಶಾಶ್ವತ ಕಂಡಿಮಾಡಿದರೆ ಅನ್ನಾಹಾರಗಳನ್ನು ನೇರವಾಗಿ ಕಾಲಕಾಲಕ್ಕೆ ಹಾಕುತ್ತಿರಬಹುದು.

ಅನ್ನನಾಳದ ಏಡಿಗಂತಿ ಪತ್ತೆಯಾಗುವ ವೇಳೆಗೆ ಬಹುಮಟ್ಟಿಗೆ ಕೈಮೀರಿರುವುದೇ ಸಾಮಾನ್ಯ. ಶಸ್ತ್ರಕ್ರಿಯೆ ಆದವರೂ ಹೆಚ್ಚು ವರ್ಷ ಬದುಕುವುದು ಅಪರೂಪ. ಅನ್ನನಾಳದ ಮೇಲಿನ ಮೂರರಲ್ಲೊಂದು ಭಾಗದ ಏಡಿಗಂತಿಯನ್ನು ಆಳದ ಕ್ಷ–ಕಿರಣಗಳ ಚಿಕಿತ್ಸೆಯಿಂದ ವಾಸಿಮಾಡಬಹುದು.

**ಸೆಡೆತ:** ವಪೆಯಲ್ಲಿ ಅನ್ನನಾಳ ತೂರುವೆಡೆಯಲ್ಲಿ ಮೇಲುಗಡೆ ಇರುವ ಭಾಗ ಹಿರಿಹಿಗ್ಗಿ ಉದ್ದಸಾಗುತ್ತದೆ. ಅನ್ನ ನೀರು ಎರಡೂ ಸೇರದಾಗುತ್ತವೆ. ತೆಗೆದುಕೊಂಡ ಆಹಾರ ಅಲ್ಲೇ ಉಳಿದು, ಆಮೇಲೆ ವಾಂತಿ ಆಗುವುದು. ರೋಗಿ ಸೊರಗುವನು. ಹೀಗೆ ಸೆಡೆತುಕೊಂಡ ಅನ್ನನಾಳವನ್ನು ಬೇರೆ ಬೇರೆ ಗಾತ್ರದ ಸರಳುಗಳಿಂದ ಹಿಗ್ಗಲಿಸಬಹುದು. ಅನ್ನನಾಳದ ಕೆಳಭಾಗದ ಸುತ್ತಿನ ಸ್ನಾಯುಗಳನ್ನು ಕತ್ತರಿಸಿ ಬಿಡಿಸಬಹುದು. ಇಲ್ಲವೇ ಜಠರವನ್ನು ಶಸ್ತ್ರಕ್ರಿಯೆಯಿಂದ ಮುಂದುಗಡೆಯಿಂದ ಕೊಯ್ದು ಕೆಳಗಡೆಯಿಂದ ಸರಿಪಡಿಸಲೂಬಹುದು.

ಎದೆಯಲ್ಲಿ ಏನೋ ಚೆಂಡು ಸಿಕ್ಕಿಕೊಂಡಿರುವಂತೆ ಇರುವುದೆಂದು, ಉನ್ಮಾದದ ರೋಗಿಗಳು ನುಂಗಲಾಗದೆನ್ನುವರು. ಇದು ತತ್ಕಾಲದಲ್ಲಿ ಮಾತ್ರ ಹೀಗಿರುವುದರಿಂದ ಇದನ್ನು ಗುರುತಿಸಬಹುದು. ರೋಗಿಯಲ್ಲಿ ಕಬ್ಬಿಣಾಂಶದ ಕೊರತೆಯಿಂದಲೂ ಹೀಗಾಗಬಹುದು.

ಕೊನೆಯದಾಗಿ, ಅನ್ನನಾಳದ ಸುತ್ತಮುತ್ತಣ ಅಂಗಗಳೂ ಅದನ್ನು ಒತ್ತರಿಸಬಹುದು. ಇಂಥವು ಹಲವಾರಿವೆ. ಅನ್ನನಾಳಕ್ಕೆ ತುಂಬ ಹತ್ತಿರವಿರುವ, ಮಹಾಧಮನಿಯ ಅಗಲುಬ್ಬು ಒಂದು, ಕೊರಳಲ್ಲಿ ಏಳುವ ಗಂತಿಗಳು ಇನ್ನೊಂದು ಕಾರಣ. ಈಲಿ (ಯಕೃತ್ತು) ಊದಿಕೊಂಡು ಅರಿಶಿನಾರಿಗೆ (ಸಿರೋಸಿಸ್) ಆಗಿದ್ದರೆ, ಇಲ್ಲವೆ ಈಲಿಯಿಂದ ಹೊರಬೀಳುವ ತೂರುಗೊಂದಿಯ (ಪೋರ್ಟ್‌ಲ್) ಸಿರಗಳಿಗೆ ಆತಂಕವಾಗಿದ್ದರೆ, ಅನ್ನನಾಳದ ಕೆಳಗಿನ ಮೂರರಲ್ಲೊಂದು ಭಾಗದ ಒಳಗಡೆ ಸಿರಗಳು ಕೊಂಕಿ ಊದಿಕೊಳ್ಳುತ್ತವೆ. ಇವು ಒಡೆದಾಗ ವಾಂತಿಯಲ್ಲಿ ರಕ್ತಕಾರಬಹುದು. ರಕ್ತಕಾರುವುದು ಹೆಚ್ಚಾದರೆ ಪ್ರಾಣಕ್ಕೆ ಅಪಾಯ. (ಎ.ಕೆ.ಜಿ.)

**ಅನ್ನಪೂರ್ಣ :** ನೇಪಾಲದಲ್ಲಿನ ಹಿಮಾಲಯದ ಮಧ್ಯಭಾಗದಲ್ಲಿರುವ ಒಂದು ಉನ್ನತಪರ್ವತಶ್ರೇಣಿ. ಕಾಳಿ, ಗಂಡಕಿ ಮತ್ತು ಮರ್ಸ್ಯಾಂದಿ ನದೀಕಣಿವೆಗಳ ಮಧ್ಯಭಾಗದಲ್ಲಿದ್ದು, ಅನ್ನಪೂರ್ಣವೆಂಬ ನಾಲ್ಕು ಉನ್ನತ ಶಿಖರಗಳಿಂದ ಕೂಡಿದೆ. ಅನ್ನಪೂರ್ಣ–I: 8,044 ಮೀ ಅನ್ನಪೂರ್ಣ–II: 7,937 ಮೀ ಇವೆರಡು ಪಶ್ಚಿಮ ಮತ್ತು ಪೂರ್ವ ತುದಿಯಲ್ಲಿವೆ. ಅನ್ನಪೂರ್ಣ–III: 7,576 ಮೀ ಅನ್ನಪೂರ್ಣ–IV : 7,525 ಮೀ ಇವೆರಡು ಮಧ್ಯಶ್ರೇಣಿಯಲ್ಲಿವೆ.

**ಅನ್ನಪೂರ್ಣ–I :** ಪ್ರಪಂಚದ ಉತ್ತುಂಗ ಶಿಖರಗಳಲ್ಲಿ ಹನ್ನೊಂದನೆಯದು. 1950ರವರೆಗೆ ಅಸ್ತಿತ್ವ ತಿಳಿದಿರಲಿಲ್ಲ. ಯುರೋಪಿಯನ್ ಪರ್ವತಾರೋಹಿಗಳು ಕಾಳಿ, ಗಂಡಕಿ ನದೀಕಣಿವೆಗಳ ವಾಯವ್ಯ ದಿಕ್ಕಿಗಿರುವ ಧವಳಗಿರಿಯನ್ನು ಏರಲು ಹೊರಟು ದಾರಿಕಾಣದೆ ಅನ್ನಪೂರ್ಣ ಶಿಖರದ ಕಡೆ ಹೊರಟರು. ಆಗ ಅದೇ ಜಗತ್ತಿನ ಅತ್ಯುನ್ನತ ಶಿಖರವೆಂದು ಪರಿಗಣಿಸಲಾಯಿತು.

ಫ್ರಾನ್ಸಿನ ಮೊರಿಸ್ ಹರ್‌ಜಾಗ್ ಎಂಬುವನ ನೇತೃತ್ವದಲ್ಲಿ ಫ್ರೆಂಚ್ ಪರ್ವತಾರೋಹಿ ತಂಡ ಈ ಶಿಖರಾರೋಹಣದ ಹಾದಿಯಲ್ಲಿ ಐದು ಶಿಬಿರಗಳನ್ನು ಹೂಡಿ (ಅತ್ಯಂತ ಎತ್ತರದ ಶಿಬಿರಸ್ಥಾನ 7,498 ಮೀ) 1950ರ ಜೂನ್ 3ನೆಯ ತಾರೀಖು ಹರ್‌ಜಾಗ್ ಮತ್ತು ಲೂಯಿಸೆ ಲಾಚೆನೆಲ್ ಶಿಖರದ ಉತ್ತುಂಗಸ್ಥಾನವನ್ನು ತಲುಪಿದರು. ಆದರೆ ಅವರೋಹಣಾವಧಿಯಲ್ಲಿ ತಂಡದ ನಾಯಕರು ದುರದೃಷ್ಟಕರ ಘಟನೆಗಳನ್ನು ಎದುರಿಸಬೇಕಾಯಿತು.

ಆದರೂ ಅನ್ನಪೂರ್ಣ–I ಹಿಮಾಲಯದ ಉನ್ನತ ಶಿಖರಗಳಲ್ಲೆಲ್ಲ ಮೊಟ್ಟಮೊದಲ ಬಾರಿಗೆ ಹತ್ತಲ್ಪಟ್ಟ ಉತ್ತುಂಗಶಿಖರ. ಎಚ್.ಬಿಲ್ಲರ್, ಎಚ್. ಸ್ಟೆಯಿನ್‌ಮೆಟ್ಜ್ ಮತ್ತು ಜೆ. ವೆಲೆನ್‌ಕಾಂಪ್ ಎಂಬುವರು 1955 ಮೇ 30ರಂದು ಅನ್ನಪೂರ್ಣ–IVನ್ನು ಹತ್ತಿದರು. 1960 ಮೇ 17 ರಂದು ಜೆ.ಓ.ಎಮ್. ರಾಬರ್ಟ್ಸ್‌ನ ನೇತೃತ್ವದಲ್ಲಿ ಆರ್. ಗ್ರಾಂಟ್ ಮತ್ತು ಸಿ.ಜೆ. ಗೊನಿಂಗ್‌ಟನ್ ಎಂಬುವರು ಅನ್ನಪೂರ್ಣ–IIನ್ನು ಯಶಸ್ವಿಯಾಗಿ ಹತ್ತಿದರು.(ಕೆ.ಆರ್.)

**ಅನ್ನಪೂರ್ಣಾ :** ಪಾರ್ವತೀದೇವಿಯ ಅನೇಕ ಸ್ವರೂಪಗಳಲ್ಲಿ ಒಂದು. ಈಕೆ ಕಾಶೀವಿಶ್ವನಾಥೇಶ್ವರನ ಹೆಂಡತಿ. ಈ ದೇವಿಯನ್ನು ಸ್ತುತಿಸುವುದರಿಂದ ಅನ್ನಸಮೃದ್ಧಿಯೂ ಸಂಪದಭಿವೃದ್ಧಿಯೂ ಸೌಖ್ಯವೂ ಉಂಟಾಗುತ್ತದೆಯೆಂಬ ಪ್ರತೀತಿಯಿದೆ. ಅನ್ನಪೂರ್ಣಾ ದೇವಿಯ ಸ್ತೋತ್ರವನ್ನು ಶ್ರೀ ಶಂಕರಾಚಾರ್ಯರು ರಚಿಸಿರುತ್ತಾರೆ. (ಎಸ್.ಎನ್.ಕೆ.)

**ಅನ್ಯತ್ರ ಸ್ಥಿತಿ :** ಒಬ್ಬ ವ್ಯಕ್ತಿ ನಿರ್ದಿಷ್ಟವಾದ ಸ್ಥಳ ಮತ್ತು ಕಾಲದಲ್ಲಿ ಶಿಕ್ಷಾರ್ಹವಾದ ಕೃತ್ಯವನ್ನು ಮಾಡಿರುವುದಾಗಿ ಆರೋಪಿಸಿ, ಅವನನ್ನು ವಿಚಾರಣೆಗೆ ಗುರಿಪಡಿಸಿದಾಗ ಆ ವ್ಯಕಿ ಆ ಕೃತ್ಯ ನಡೆಯಿತೆಂದು ಹೇಳಲಾದ ಸ್ಥಳದಲ್ಲಾಗಲಿ, ಆ ಸಮಯದಲ್ಲಾಗಲಿ ಇರದೆ ಬೇರೊಂದು ಸ್ಥಳದಲ್ಲಿ ಇದ್ದುದಾಗಿ ರುಜುವಾತುಪಡಿಸಿ ಆರೋಪಿತ ಕೃತ್ಯ ತನ್ನಿಂದ ನಡೆದಿಲ್ಲವೆಂದು ಸೂಚಿಸುವ ಪ್ರಮಾಣವೇ (ಸಾಕ್ಷ್ಯತ್ವ) ಅನ್ಯತ್ರ ಸ್ಥಿತಿ (ಅಲಿಬಿ). ಫಿರ್ಯಾದಿ ಆರೋಪಣೆಯನ್ನು ರುಜುವಾತು ಪಡಿಸಲು ಸಾಕ್ಷಿಗಳನ್ನು ವಿಚಾರಣೆ ಮಾಡುವಾಗ, ಸಾಕ್ಷಿ ಹೇಳಿಸುವಾಗ, ಆರೋಪಿ ತನ್ನಿಂದ ಕೃತ್ಯ ನಡೆಯಿತೆನ್ನಲಾದ ಸ್ಥಳದಲ್ಲಾಗಲಿ ಸಮಯದಲ್ಲಾಗಲಿ ಇರದೆ ಪರಸ್ಥಳದಲ್ಲಿ ಇದ್ದನೆಂಬ ಅಂಶ ಸಂಗತವಾದುದು (ರೆಲವೆಂಟ್). ಅನ್ಯತ್ರ ಸ್ಥಿತಿ ಆರೋಪಿ ರುಜುವಾತುಪಡಿಸಬೇಕಾದ ಅಂಶವಿಲ್ಲ. ಅದು ಅವನ ಹೊಣೆಯೂ ಅಲ್ಲ. ಇದು ಫಿರ್ಯಾದಿಯ ಆರೋಪಣೆಯಲ್ಲಿರುವ ಅಸಂಭಾವ್ಯತೆಯನ್ನು ನ್ಯಾಯಾಲಯಕ್ಕೆ ತೋರಿಸಿಕೊಡುವುದರ ಮೂಲಕ ಆರೋಪಣೆಯಿಂದ ಬಿಡುಗಡೆ ಪಡೆಯುವ ಪ್ರಮಾಣಬದ್ಧ ಸೌಲಭ್ಯ. (ಎ.ಎ.ಕೆ.)

**ಅನ್ಯಮನಃಸ್ಪರ್ಶನ :** ಒಬ್ಬನ ಮನಸ್ಸಿನ ಮೇಲೆ ಮತ್ತೊಬ್ಬನ ಮನಸ್ಸು ಭಾವಪ್ರಭಾವದ ಮೂಲಕ (ಇಂದ್ರಿಯಗಳ ಮೂಲಕವಲ್ಲ) ಕಾರ್ಯ ಮಾಡುವುದು (ಟೆಲಿಪತಿ). ಅಂದರೆ ಜ್ಞಾನೇಂದ್ರಿಯಗಳನ್ನುಪಯೋಗಿಸದೆ ಅನ್ಯನೊಬ್ಬನ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳನ್ನು, ಯೋಚನೆಗಳನ್ನು ಮತ್ತೊಬ್ಬನು ತಿಳಿದುಕೊಳ್ಳುವುದು ಎಂದರ್ಥ. ಆ ವ್ಯಕ್ತಿ ಹತ್ತಿರದಲ್ಲಿದ್ದರೂ ಇರಬಹುದು. ಇಲ್ಲವೆ ಕಣ್ಣಿಗೆ ಕಾಣದಂತೆ ಅತಿ ದೂರದಲ್ಲಿದ್ದರೂ ಇರಬಹುದು. ಯೋಗಾಭ್ಯಾಸದ ಮೂಲಕ ಇಂಥ ಶಕ್ತಿಯನ್ನು ಪಡೆಯಬಹುದೆಂದು ಪತಂಜಲಿ ತನ್ನ ಯೋಗಸೂತ್ರದಲ್ಲಿ ಬಹುಹಿಂದೆಯೇ ಹೇಳಿದ್ದಾನೆ. ಈ ನಂಬಿಕೆ ಪ್ರಾಚೀನ ಕಾಲದಿಂದಲೂ ಅನೇಕ ಪ್ರದೇಶಗಳಲ್ಲಿದೆ. ಇಂಥ ಶಕ್ತಿ ಇಲ್ಲವೆಂದೂ ಜ್ಞಾನೇಂದ್ರಿಯದ ಮೂಲಕವಲ್ಲದೆ ಜ್ಞಾನವನ್ನು ಪಡೆಯುವುದು ಅಸಾಧ್ಯವೆಂದೂ ಚಾರ್ವಾಕರ ನಂಬಿಕೆ.

ಇಂದಿಗೂ ತಜ್ಞರಲ್ಲಿ ಈ ಬಗ್ಗೆ ವಾದವಿವಾದಗಳಿವೆ. ಕೆಲವರು ಅನ್ಯಮನಃಸ್ಪರ್ಶನ ನಡೆಯುವುದೆಂದೂ ಇದಕ್ಕೆ ಆಧಾರವನ್ನು ವೈಜ್ಞಾನಿಕ ರೀತಿಯಿಂದ ಕಂಡುಹಿಡಿಯಲು ಸಾಧ್ಯವೆಂದೂ ನಂಬಿ ಅನೇಕ ಪರಿಶೋಧನೆಗಳನ್ನು ನಡೆಸಿರುವರು. ಇನ್ನು ಕೆಲವರು ಇದು ಅಸಾಧ್ಯವೆಂದೂ, ಈ ನಂಬಿಕೆ ನಿರಾಧಾರವೆಂದೂ ತಳ್ಳಿ ಹಾಕಿ ಈ ಬಗ್ಗೆ ಯೋಚನೆ ಮಾಡುವುದು, ಪ್ರಯೋಗಗಳನ್ನು ನಡೆಸುವುದು ಕೇವಲ ಕಾಲವ್ಯಯವೆಂದು ತೀರ್ಮಾನಿಸಿರುವರು. ಮತ್ತೆ ಕೆಲವು ಸಂದೇಹವಾದಿಗಳು ಪರಿಶೋಧನೆಗಳನ್ನು ನಡೆಸಿ ಆಮೇಲೆ ಈ ವಿಚಾರವನ್ನು ತಳ್ಳಿ ಹಾಕುವುದು ಉತ್ತಮವೆಂದು ಪ್ರಯೋಗಗಳನ್ನು ನಡೆಸಿರುವರು.

ಇಂಥ ವಿಷಯಗಳನ್ನು ಪರಿಶೋಧಿಸಲು ಭೌತಾತೀತ ವಿಷಯ ಸಂಶೋಧನ ಸಂಸ್ಥೆ (ಸೊಸೈಟಿ ಫಾರ್ ಸೈಕಿಕಲ್ ರಿಸರ್ಚ್) ಎಂಬ ಒಂದು ಸಂಸ್ಥೆಯನ್ನು ಲಂಡನ್ನಿನಲ್ಲಿ ಸ್ಥಾಪಿಸಿದರು (1882). ಅನ್ಯಮನಃಸ್ಪರ್ಶನದ ಘಟನೆಗಳನ್ನು ಶೇಖರಿಸಿ ಕೆಲವನ್ನು ಸಂಶೋಧನೆಗೆ ಗುರಿಮಾಡಿದರು. ಆದರೆ ಈ ವಿಷಯದಲ್ಲಿ ನಂಬಿಕೆ ಇದ್ದವರು ಇದು ಸತ್ಯ ಎಂದು ತಮ್ಮ ನಂಬಿಕೆಯನ್ನು ಈ ಮೂಲಕ ಬಲಪಡಿಸಿಕೊಂಡರು. ಇತರರು ಇವೆಲ್ಲ ಕಟ್ಟುಕಥೆಗಳೆಂದೂ, ಈ ಪರಿಶೋಧನೆಗಳು ನಂಬಲರ್ಹವಾದ ಆಧಾರಗಳನ್ನು ಪಡೆದಿಲ್ಲವೆಂದೂ ತಿರಸ್ಕರಿಸಿದರು.

ಇತ್ತೀಚೆಗೆ ಈ ಬಗ್ಗೆ ಶೋಧನೆಮಾಡಲು ಮನಶ್ಶಾಸ್ತ್ರಜ್ಞರು ಅಂಕಿಅಂಶ ಪರಿಶೀಲನ ವಿಧಾನವನ್ನೊಳಗೊಂಡ ಪ್ರಾಯೋಗಿಕ ಮಾರ್ಗವನ್ನು ಅವಲಂಬಿಸಿರುವರು. ಉದಾಹರಣೆಗೆ ಒಂದು ಇಸ್ಪೀಟ್ ಪ್ಯಾಕನ್ನು ತೆಗೆದುಕೊಂಡು ಎಲೆಗಳನ್ನು ಚೆನ್ನಾಗಿ ಕಲಸಿ ಅವುಗಳಲ್ಲಿ ಒಂದನ್ನು ಕೈಗೆ ತೆಗೆದುಕೊಂಡು ಒಬ್ಬ ವ್ಯಕ್ತಿ ಒಂದು ಕೊಠಡಿಯಲ್ಲಿ ಕುಳಿತು ನೋಡುತ್ತಿದ್ದರೆ ಅದೇ ಸಮಯದಲ್ಲಿ ಮತ್ತೊಬ್ಬ ವ್ಯಕ್ತಿ ಇನ್ನೊಂದು ಕೊಠಡಿಯಲ್ಲಿ ಆ ಎಲೆ ಇಂಥದೆಂದು ತನ್ನ ಪಟ್ಟಿಯಲ್ಲಿ ಬರೆದಿಡುವನು. ಪ್ಯಾಕಿನಲ್ಲಿ ನಾಲ್ಕು ವಿಧವಾದ ಎಲೆಗಳು ಇರುವುದರಿಂದ ನಾಲ್ಕು ಸಲಕ್ಕೆ ಆಕಸ್ಮಿಕವಾಗಿ ಒಂದು ಎಲೆಯನ್ನು ತಪ್ಪಿಲ್ಲದೆ ಕಂಡುಹಿಡಿಯುವುದು ಸಾಧ್ಯ. ಆದರೆ ಶೇ. 30 ಅಥವಾ ಶೇ. 40 ಸಲ ತಪ್ಪಿಲ್ಲದೆ ಕಂಡುಹಿಡಿದರೆ ಅದು ಕೇವಲ ಆಕಸ್ಮಿಕ ಘಟನೆಯಲ್ಲದೆ ಒಂದು ನಿರ್ದಿಷ್ಟ ಘಟನೆಯಾಗಿ ಅನ್ಯಮನಃಸ್ಪರ್ಶನೆಗೆ ಆಧಾರವಾಗಬಹುದು. ಇಂಥ ಪ್ರಯೋಗಗಳು ಅನೇಕ ವರ್ಷಗಳ ಕಾಲ ನಡೆದುವು. ಕೆಲವು ವೇಳೆ ಇದು ಕೇವಲ ಆಕಸ್ಮಿಕವೆಂದೂ ಮತ್ತೆ ಕೆಲವು ಸಾರಿ ನಿರ್ದಿಷ್ಟವಾದದ್ದೆಂದೂ ತೋರಿಬಂತು.

ರೈನ್ ಮತ್ತು ಆತನ ಸಹೋದ್ಯೋಗಿಗಳು ಡ್ಯೂಕ್ ವಿಶ್ವವಿದ್ಯಾನಿಲಯದಲ್ಲಿ ಒಂದು ಹೊಸ ವಿಧಾನವನ್ನು ಕಂಡುಹಿಡಿದರು (ಸು. 1929). ಇಸ್ಪೀಟು ಎಲೆಗಳ ಬದಲು ಜೀನರ್ ಎಲೆಗಳನ್ನು ಉಪಯೋಗಿಸಿದರು. ಈ ಎಲೆಗಳ ಮೇಲೆ ವೃತ್ತರೇಖೆ, ಚಚ್ಚೌಕರೇಖೆ, ಐದು ಮೂಲೆಗಳ ನಕ್ಷತ್ರರೇಖೆ, ಧನಗುರುತು ಮತ್ತು ವಕ್ರರೇಖೆ–ಈ ಐದು ಚಿನ್ಹೆಗಳು ಇರುವುವು. ಒಂದೊಂದು ಪ್ಯಾಕಿನಲ್ಲಿ 25 ಎಲೆಗಳು. ಆಕಸ್ಮಿಕ ಘಟನೆಯಿಂದ 25 ಎಲೆಗಳಲ್ಲಿ ಐದು ಎಲೆಗಳನ್ನು ತಪ್ಪಿಲ್ಲದೆ ಹೇಳುವುದು ಸಾಧ್ಯ. ಆದರೆ ರೈನ್ ನಡೆಸಿದ ಪ್ರಯೋಗಗಳಲ್ಲಿ ಕೆಲವರು 25 ಎಲೆಗಳಿಗೆ ಏಳು, ಎಂಟು ಎಲೆಗಳನ್ನು ಸರಿಯಾಗಿ ಗುರುತಿಸಿದರು. ಅನ್ಯಮನಃಸ್ಪರ್ಶನೆಯಲ್ಲಿ ನಂಬಿಕೆಯನ್ನಿಟ್ಟಿರುವವರು, ಇಡದವರು, ಸು. 30 ವಿಶ್ವವಿದ್ಯಾನಿಲಯಗಳಲ್ಲಿ ಲಕ್ಷಾಂತರ ಸಲ ಪ್ರಯೋಗಗಳನ್ನು ನಡೆಸಿಲ್ಲದೆ ಕೆಲವರು ರೈನ್ ಊಹೆ ಸರಿಯೆಂದು ತೋರಿಸಿಕೊಟ್ಟಿರುವರು. ಅಂಕಿ ಅಂಶ ಪದ್ಧತಿಯಲ್ಲೂ ಪ್ರಾಯೋಗಿಕ ರಚನೆಯಲ್ಲೂ ಇರುವ ಲೋಪದೋಷಗಳನ್ನು ಪರಿಹಾರ ಮಾಡಿದರು. ಆಕಸ್ಮಿಕಘಟನೆಗಿಂತ ಹೆಚ್ಚಾಗಿ ಕೆಲವು ವ್ಯಕ್ತಿಗಳು ಬಹುದೂರದಿಂದ ಈ ಎಲೆಗಳನ್ನು ಸರಿಯಾಗಿ ಗುರುತಿಸಬಲ್ಲರೆಂದು ಈಗ ಖಚಿತವಾಗಿದೆ.

ಆದರೆ ಈ ಶಕ್ತಿ ಎಂಥ ವ್ಯಕ್ತಿಗಳಲ್ಲಿ ಇರುವುದೆಂಬುದನ್ನು ಕಂಡುಹಿಡಿಯುವುದು ಇನ್ನೂ ಸಾಧ್ಯವಾಗಿಲ್ಲ. ಈ ಶಕ್ತಿಗೂ ಬುದ್ಧಿಶಕ್ತಿಗೂ ಯಾವ ಸಂಬಂಧವೂ ಇಲ್ಲವೆಂಬುದು ಸ್ಪಷ್ಟ. ಆದರೆ ಈ ಶಕ್ತಿಗೂ ವ್ಯಕ್ತಿತ್ವಭೇದಗಳಿಗೂ ಇರುವ ಸಂಬಂಧ ಇನ್ನೂ ಸರಿಯಾಗಿ

ತಿಳಿದುಬಂದಿಲ್ಲ. ಇದಲ್ಲದೆ ಯಾವ ಪರಿಸ್ಥಿತಿಯಲ್ಲಿ ಈ ಶಕ್ತಿ ರೂಪುಗೊಳ್ಳುವುದೆಂಬುದನ್ನು ಇನ್ನೂ ನಿರ್ಧರಿಸಿಲ್ಲ. ಕಡೆಯದಾಗಿ ಇಂಥ ಜ್ಞಾನ ಯಾವ ರೀತಿಯಿಂದ ಉತ್ಪನ್ನವಾಗುವುದೆಂಬುದನ್ನೂ ಇನ್ನೂ ಸರಿಯಾಗಿ ತಿಳಿದಿಲ್ಲ.

ಅಂದರೆ ಅನ್ಯಮನಃಸ್ಪರ್ಶನೆ ಕೆಲ ವ್ಯಕ್ತಿಗಳಲ್ಲಿ, ಕೆಲ ಸಂದರ್ಭಗಳಲ್ಲಿ ಉಂಟಾಗುವುದೆಂಬುದು ಮಾತ್ರ ಈಗ ಖಚಿತವಾಗಿ ತಿಳಿದುಬಂದಿದೆ. ಆದರೆ ಈ ಶಕ್ತಿ ಎಂಥ ವ್ಯಕ್ತಿಗಳಲ್ಲಿ, ಎಂಥ ಸನ್ನಿವೇಶಗಳಲ್ಲಿ, ಎಂಥ ಮಾರ್ಗದಿಂದ ಉಂಟಾಗುವುದೆಂದು ಈಗ ನಮಗೆ ದೊರೆತಿರುವ ಜ್ಞಾನದ ಆಧಾರದ ಮೇಲೆ ನಿಖರವಾಗಿ ಹೇಳಲು ಸಾಧ್ಯವಿಲ್ಲ.(ಬಿ.ಕೆ.)

**ಅನ್ಯಶಿಲೆ :** ಅಗ್ನಿಶಿಲೆಯಲ್ಲಿ ಕಂಡುಬರುವ ಅನ್ಯ ಜಾತಿಯ ಶಿಲೆ (ಸ್ಸೆನೊಲಿತ್). ಇವು ಸಾಮಾನ್ಯವಾಗಿ ತಿಳಿಬಣ್ಣದ ಗ್ರಾನೈಟ್‌ಗಳಲ್ಲಿ ಕಪ್ಪನೆಯ ತೇಪೆಗಳಂತೆ ಕಂಡುಬರುತ್ತವೆ. ಇವು ಗಾತ್ರದಲ್ಲಿ ಬಹುಸೂಕ್ಷ್ಮವಾದ ಛಿದ್ರಗಳಿಂದ ಹಿಡಿದು ಹಲವಾರು ಅಡಿಗಳಷ್ಟು ದೊಡ್ಡವಾಗಿರುವುದೂ ಉಂಟು. ಭೂಗರ್ಭದಿಂದ ಮ್ಯಾಗ್ಮ ಮೇಲ್ಪದರಗಳಲ್ಲಿರುವ ಶಿಲೆಗಳ ಮೂಲಕ ತೂರಿ ಬರುವಾಗ, ಅಕ್ಕಪಕ್ಕದಲ್ಲಿರುವ ಶಿಲೆಗಳು ಹೆಚ್ಚಿನ ಒತ್ತಡಕ್ಕೆ ಒಳಗಾಗಿ ಒಡೆದುಚೂರಾಗುತ್ತವೆ. ಹಲ ಕೆಲವು ಚೂರುಗಳು ಹಾದು ಮೇಲಕ್ಕೆ ಹೋಗುತ್ತಿರುವ ಮ್ಯಾಗ್ಮದೊಡನೆ ಸೇರಿ ಅನ್ಯಶಿಲೆಯಾಗಿ ಕಾಣಿಸಿಕೊಳ್ಳುತ್ತವೆ. ಇವು ಅಗ್ನಿ, ಜಲಜ ಅಥವಾ ರೂಪಾಂತರ ಶಿಲಾವರ್ಗಕ್ಕೆ ಸೇರಿರಬಹುದು. ಅನೇಕ ಬಾರಿ ಅನ್ಯಶಿಲೆ ಮತ್ತು ಅದನ್ನು ಒಳಗೊಂಡಿರುವ ಅಗ್ನಿಶಿಲೆ ಇವುಗಳ ನಡುವೆ ಪರಸ್ಪರ ಬದಲಾವಣೆಗಳಾಗಿ ಕ್ರಮೇಣ ಅನ್ಯಶಿಲೆ ಅಗ್ನಿಶಿಲೆಯ ರೂಪರೇಷೆಗಳನ್ನೇ ಹೋಲುವುದೂ ಉಂಟು. (ಎಸ್.ಕೆ.ವಿ.)

**ಅನ್ಯಾಕ್ಸಾಗೊರಾಸ್ :** ಪ್ರಶ.ಪೂ. ಸು. 500–428. ಪ್ರಾಚೀನ ಗ್ರೀಕ್ ದಾರ್ಶನಿಕರಲ್ಲಿ ಹೆಸರಾದವ. ಕ್ಲಸೋಮಿನ ಎಂಬಲ್ಲಿ ಹುಟ್ಟಿದ. ಪ್ರಶ.ಪೂ. 480 ರಲ್ಲಿ ಅಥೆನ್ಸ್‌ಗೆ ತೆರಳಿ ಪೆರಿಕ್ಲಿಸ್‌ನೊಡನೆ ಸ್ನೇಹ ಬೆಳೆಸಿದ. ಸೂರ್ಯ ಪೆಲೋಪೊನೀಸ್‌ಗಿಂತಲೂ ದೊಡ್ಡ ಆಕಾರದ, ಕೆಂಪಗೆ ಕಾದ ವಸ್ತು ಎಂದು ಹೇಳಿದ್ದರಿಂದ ಈತನನ್ನು ನಾಸ್ತಿಕವಾದಿ ಎಂದು ಕರೆದು, ಹಳಿದರು. ನಿಸರ್ಗದ ಮೇಲಿನ ಇವನ ಕೆಲವು ಗ್ರಂಥಗಳು ಉಪಲಬ್ಧವಾಗಿವೆ. ವೈಜ್ಞಾನಿಕ ವಿಚಾರಾತ್ಮಕ ಸಂಪ್ರದಾಯದಲ್ಲಿ ಬೆಳೆದ ಇವನ ಶೈಲಿ ಸರಳತೆ ಹಾಗೂ ಸಂಯಮಗಳಿಂದ ಕೂಡಿದೆ. ವಿಶ್ವನಿರ್ಮಾಣಕ್ಕೆ ಬಳಕೆಯಾಗಿರುವ ಅಸಂಖ್ಯಾತ ಘಟನಾಂಶಗಳನ್ನು ನಿಯಂತ್ರಿಸುವ ಬೌದ್ಧಿಕಶಕ್ತಿ, ಚೇತನಾಂಶ ಒಂದುಂಟು ಎಂದು ಪ್ರತಿಪಾದಿಸಿ ಅಥೆನ್ಸ್ ಜನರನ್ನು ಪೇಚಿಗೆ ಸಿಕ್ಕಿಸಿದ. ವಿಚಾರಣೆಗೆ ಗುರಿಯಾಗುವ ಮುನ್ನ ಈತ ಅಥೆನ್ಸ್ ತ್ಯಜಿಸಿ ಲೇಂಪಾಕಸ್ ಅನ್ನುವ ಸ್ಥಳಕ್ಕೆ ಹೋಗಿ ಏಕಾಂತ ವಾಸಮಾಡಿದ. ಅಲ್ಲಿಗೆ ಹೋದ ಸ್ವಲ್ಪ ದಿನದಲ್ಲೇ ಮಡಿದ. ಇವನ ಹಿಂದಿನ ದಾರ್ಶನಿಕರು ಇಡೀ ಜಗತ್ತು ಅಚೇತನವಾದ ಮೂಲಪ್ರಕೃತಿಯಿಂದ ಉತ್ಪನ್ನವಾಯಿತೆಂದು ವಾದಿಸಿದರು. ಇವನು ಮಾತ್ರ ಜಗತ್ತು ಒಂದು ಚಿತ್ ಶಕ್ತಿಯ ಸೃಷ್ಟಿ ಎಂದೂ ಇದಿಲ್ಲದೆ ಜಗತ್ತು ಶೂನ್ಯವೆಂದೂ ಬೋಧಿಸಿದ. ಅವನ ಇತರ ಸಿದ್ಧಾಂತಗಳಲ್ಲಿ, ಆಕಾಶಕಾಯಗಳು ಭೂಮಿಯಿಂದ ಎಸೆದ ಕಲ್ಲಿನಿಂದ ಆದವು, ಪ್ರಾಣಿಗಳೂ ಮಾನವನೂ ಹಸಿ ಜೇಡಿಮಣ್ಣಿನಿಂದ ಆದುವು ಎಂಬುವೂ ಕೆಲವು. ಇವನ ಪ್ರಾಪಂಚಿಕ ಅಭಿಪ್ರಾಯಗಳು ಯೂರಿಪಿಡೀಸ್‌ನಂಥ ನಾಟಕಕಾರನ ಮೇಲೂ ಪ್ರಭಾವ ಬೀರಿದುವು. ಇವನ ನಿರ್ಭಯ ಹಾಗೂ ಸ್ಪಷ್ಟವಿಚಾರಸರಣಿ ಗೌರವಾನ್ವಿತವಾದದ್ದು. ಅರಿಸ್ಟಾಟಲ್ ಇವನ ಅಭಿಪ್ರಾಯಗಳನ್ನು ಟೀಕಿಸಿದರೂ ಹರಟೆಮಲ್ಲರ ಗುಂಪಿನಲ್ಲಿ ಸ್ತಿಮಿತಚಿತ್ತದವನೆಂದು ಗೌರವಿಸಿದ್ದ. *

**ಅನ್ಯಾಕ್ಸಿಮೆಂಡರ್ :** (ಪ್ರಶ.ಪೂ. 611–547) ಗ್ರೀಸ್‌ದೇಶದ ತತ್ತ್ವಶಾಸ್ತ್ರಜ್ಞ ಹಾಗೂ ಖಗೋಳಶಾಸ್ತ್ರಜ್ಞ. ಖಗೋಳವಿಜ್ಞಾನದ ಬಗ್ಗೆ ಹಲವು ವಿಚಿತ್ರ ಭಾವನೆಗಳನ್ನು ಹೊಂದಿದ್ದ. ಭೂಪಟಗಳನ್ನು ಮೊಟ್ಟಮೊದಲು ರಚಿಸಿದ ಖ್ಯಾತಿ ಇವನದು. ಅಯನಸಂಕ್ರಾಂತಿ ಮತ್ತು ವಿಷುವತ್ಸಂಕ್ರಾಂತಿಯನ್ನು ನಿರ್ಧರಿಸಲು ನೆರಳುಗಡಿಯಾರದ ಸಮತಲಕಂಬಿಯನ್ನು ಬಳಸಿದವರಲ್ಲಿ ಈತ ಮೊದಲಿಗ. ಸೂರ್ಯ, ಚಂದ್ರ ಮತ್ತು ಭೂಮಿ–ಇವು ಉರುಳೆಯಂತಿವೆ ಯೆಂದೂ ಸೂರ್ಯನ ಸುತ್ತಳತೆ ಭೂಮಿಯ 28ರಷ್ಟೂ ಚಂದ್ರನ ಸುತ್ತಳತೆ ಭೂಮಿಯ 19ರಷ್ಟೂ ಇದೆ ಎಂಬುದಾಗಿ ಭಾವಿಸಿದ್ದ. ಅಸೀಮವಾದ ಒಂದು ನಿರ್ಲಿಪ್ತ ವಸ್ತುವಿನಿಂದ ಈ ಎಲ್ಲ ವಿಷಮ ಸೃಷ್ಟಿಕಾರ್ಯ ಆಯಿತೆಂದೂ ವಿಷಮ ವಸ್ತುಗಳ ಸಂಘರ್ಷದಿಂದ ವಿವಿಧರೂಪಭೇದಗಳು ಹುಟ್ಟಿದುವೆಂದೂ ತಿಳಿಸಿದ. ಜಲಚರಕ್ರಿಯೆಯ, ರೂಪದ ಯಾವುದೇ ಒಂದು ವಿಕಾಸಾತ್ಮಕ ಸರಣಿಯೇ ಮಾನವಜೀವದ ಉಗಮಕ್ಕೆ ಕಾರಣವಾಯಿತು ಎಂಬುದು ಇವನ ಭಾವನೆಯಾಗಿತ್ತು. *

**ಅನ್ಯಾತಿಯನ್ :** ಮಯನ್ಮಾರಿನ ಇರವಾಡಿ ನದೀಕಣಿವೆಯಲ್ಲಿನ ಶಿಲಾಯುಗದ ಜನರ ಸಂಸ್ಕೃತಿ, ಮಧ್ಯ ಪ್ಲೀಸ್ಟೊಸೀನ್‌ಯುಗದ ಆರಂಭದಲ್ಲಿ ಹುಟ್ಟಿರಬಹುದಾದ ಈ ಜೀವನಕ್ರಮ ಯುಗದ ಕೊನೆಯವರೆಗೂ ಅಥವಾ ಇನ್ನೂ ಈಚಿನವರೆಗೂ ಮುಂದುವರಿಯಿತು (ಪ್ರಶ.ಪೂ ಸು. 300,000 ದಿಂದ ಪ್ರಶ.ಪೂ. 12,000 ವರ್ಷದವರೆಗೆ). ಹೆರೆಯುವ, ಕೊಚ್ಚುವ ಸಾಧನಗಳು ಮತ್ತು ವಿಶೇಷ ತರಹದ ಕೈಬಾಚಿಗಳು ಈ ಕಾಲದ ಸಾಮಾನ್ಯ ಶಿಲೋಪಕರಣಗಳು. ಇವೆಲ್ಲ ಒಂದು ರೀತಿಯ ವೃಕ್ಷಶಿಲೆಗಳಿಂದ (ಫಾಸಿಲ್‌ವುಡ್) ಮಾಡಿದವು. ಈ ಸಂಸ್ಕೃತಿ ಆಗ್ನೇಯ ಏಷ್ಯ, ಚೀನ ಮತ್ತು ಉತ್ತರ ಪಂಜಾಬ್‌ಗಳನ್ನು ಒಳಗೊಂಡ ವಿಶಾಲಪ್ರದೇಶದಲ್ಲಿದ್ದ ಸಮಕಾಲೀನ ಸಂಸ್ಕೃತಿಯ ಕೂಟಕ್ಕೆ ಸೇರಿದ್ದಾಗಿದೆ. (ಎಸ್.ಎನ್.)

**ಅನ್ಯೋಕ್ತಿ :** ವಾಚ್ಯಾರ್ಥವನ್ನೂ ಅದರಿಂದ ಭಿನ್ನವಾದ ಸೂಚ್ಯಾರ್ಥವನ್ನೂ ಪ್ರತಿಪಾದಿಸುವ ಒಂದು ವಿಧಾನ (ಅಲಿಗರಿ). ಅನ್ಯೋಕ್ತಿ ಕೃತಿಯಲ್ಲಿ ಒಂದು ಘಟನೆ, ಪ್ರಸಂಗ ಅಥವಾ ಕಥೆಯ ವರ್ಣನೆ ಪ್ರತಿಪಾದಿತವಾಗಿರುತ್ತದೆ. ಇದರ ಹಿಂದಿರುವ ಅಭಿಪ್ರಾಯಸರಣಿ ಅನ್ಯೋಕ್ತಿಯ ಇತರ ಹೆಸರುಗಳಾದ ಅನ್ಯಾರ್ಥ, ವ್ಯಾಜೋಕ್ತಿ, ಅರ್ಥಾಂತರೋಕ್ತಿ, ರೂಪಕಕಥೆ, ರಹಸ್ಯಾರ್ಥ, ಗೂಢಾರ್ಥದ್ಯೋತಕ ಎಂಬ ಮಾತುಗಳಿಂದಲೂ ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಅನ್ಯೋಕ್ತಿ ಒಂದು ಅಲಂಕಾರಪ್ರಭೇದವೆಂದು ಪರಿಗಣಿಸಲ್ಪಟ್ಟಿದೆ. ಅನ್ಯೋಕ್ತಿ ರಚನೆ ಬರೀ ಸಾಹಿತ್ಯದಲ್ಲೇ ಇರಬೇಕಾದುದಿಲ್ಲ. ಶಿಲ್ಪ, ಚಿತ್ರ ಮೊದಲಾದ ಅನುಕರಣಕಲೆಗಳಲ್ಲಿಯೂ ಇರಬಹುದು. ಅನ್ಯೋಕ್ತಿಗೂ ರೂಪಕಕ್ಕೂ ಕೆಲವು ವ್ಯತ್ಯಾಸಗಳಿವೆ. ಅನ್ಯೋಕ್ತಿಯಲ್ಲಿ ರೂಪಕಕ್ಕಿಂತ ಹೆಚ್ಚಿನ ವ್ಯಾಪಕತೆ ಇರುತ್ತದೆ. ಅಲ್ಲದೆ ಅದರಲ್ಲಿ ರೂಪಕದ ಎಲ್ಲ ಅಂಶಗಳನ್ನೂ ವಿವರವಾಗಿ ಪ್ರತಿಪಾದಿಸಲಾಗಿರುತ್ತದೆ. ಅನ್ಯೋಕ್ತಿಯಲ್ಲಿನ ಸಾದೃಶ್ಯ ನಮ್ಮ ಕಲ್ಪನಾಶಕ್ತಿಗೆ ಕೆಲಸ ಕೊಡುತ್ತದೆ. ರೂಪಕವಾದರೋ ನಮ್ಮ ವಿಚಾರಶಕ್ತಿಗೆ ಹೆಚ್ಚು ಆಪ್ಯಾಯಮಾನ. ನೀತಿಕಥೆ, ದೃಷ್ಟಾಂತಕಥೆಗಳು (ಸಾಮತಿ) ನಿರ್ದಿಷ್ಟವಾದ ನೀತಿಗಳನ್ನೊಳಗೊಂಡ ಚಿಕ್ಕ ಚಿಕ್ಕ ಅನ್ಯೋಕ್ತಿಗಳೇ ಆಗಿವೆ. ಈಸೋಪನ ನೀತಿಕಥೆಗಳು ಶ್ರೀರಾಮಕೃಷ್ಣಪರಮಹಂಸರ ಸಾಮತಿಗಳು ಈ ಗುಂಪಿಗೆ ಸೇರುತ್ತವೆ.

ಅನ್ಯೋಕ್ತಿ ಹೆಚ್ಚು ಕಡಿಮೆ ಎಲ್ಲ ದೇಶಗಳ ಎಲ್ಲ ಕಾಲದ ಜನಪ್ರಿಯ ಸಾಹಿತ್ಯ ಪ್ರಕಾರ. ಹಳೆಯ ಕಾಲದ ಹೀಬ್ರೂ ಗ್ರಂಥಗಳಲ್ಲಿ ನಮಗೆ ಇದರ ಉದಾಹರಣೆಗಳು ಧಾರಾಳವಾಗಿ ಸಿಕ್ಕುತ್ತವೆ. ಉದಾಹರಣೆಗಾಗಿ, ಹಳೆಯ ಒಡಂಬಡಿಕೆಯ (ಓಲ್ಡ್ ಟೆಸ್ಟಮೆಂಟ್) ಎಂಬತ್ತನೆಯ ಸ್ತೋತ್ರದಲ್ಲಿ (ಸಾಮ್) ಇಸ್ರೇಲಿನ ಚರಿತ್ರೆಯನ್ನು ದ್ರಾಕ್ಷಿ ಬಳ್ಳಿಯ ಬೆಳವಣಿಗೆಯೊಡನೆ ಹಾಸುಹೊಕ್ಕಾಗಿ ಹೋಲಿಸುವ ಒಂದು ಸನ್ನಿವೇಶವಿದೆ. ಪಾಶ್ಚಾತ್ಯ ಪ್ರಾಚೀನ ಸಾಂಪ್ರದಾಯಿಕ ಸಾಹಿತ್ಯದಲ್ಲಿ (ಕ್ಲಾಸಿಕಲ್ ಲಿಟರೇಚರ್) ಕೂಡ ಉತ್ತಮ ಅನ್ಯೋಕ್ತಿ ನಿದರ್ಶನಗಳು ದೊರೆಯುತ್ತವೆ. ಪ್ಲೂಟಾರ್ಕನ ಲೈಫ್ ಆಫ್ ಕೊರಿಯೊಲೇನಸ್‌ದಲ್ಲಿನ ಮೆನಿನಿಯಸ್ ಅಗ್ರಿಪ ತನ್ನ ಭಾಷಣದಲ್ಲಿ ಉದಾಹರಿಸುವ ಉದರ ಮತ್ತು ಅವಯವಗಳ ಕಥೆ ತುಂಬ ಪ್ರಸಿದ್ಧವಾದ ಅನ್ಯೋಕ್ತಿ. ಇದೇ ಕಥೆ ಷೇಕ್ಸ್‌ಪಿಯರ್ ನಾಟಕ ಕೊರಿಯೊಲೇನಸ್‌ದಲ್ಲೂ ಬರುತ್ತದೆ. ಇಂಗ್ಲಿಷ್‌ಸಾಹಿತ್ಯದಲ್ಲಿ ಅನ್ಯೋಕ್ತಿ ಹೇರಳವಾಗಿ ಕಂಡುಬರುತ್ತದೆ. ಮಧ್ಯಯುಗದ ಯುರೋಪಿನ ಸಾಹಿತಿಗಳು ಸ್ತ್ರೀಪುರುಷ ಪ್ರೇಮಕ್ಕೆ ಸಂಬಂಧಪಟ್ಟಂತೆ ಒಂದು ಅನ್ಯೋಕ್ತಿಪದ್ಧತಿಯನ್ನೇ ಬೆಳೆಸಿದ್ದಾರೆ. ಉದಾಹರಣೆ, ಫ್ರೆಂಚ್ ಭಾಷೆಯಿಂದ ಬಂದ ರೊಮಾನ್ಸ್ ಆಫ್ ದಿ ರೋಸ್, 16ನೆಯ ಶತಮಾನದ ಎಡ್‌ಮಂಡ್ ಸ್ಪೆನ್ಸರ್ ಕವಿಯ ಫೇರಿ ಕ್ವೀನ್, 18ನೆಯ ಶತಮಾನದ ಜೊನಾಥನ್ ಸ್ವಿಫ್ಟ್‌ನ ಟೇಲ್ ಆಫ್ ಎ ಟಬ್, ಜೋಸೆಫ್ ಅಡಿಸನ್ನನ ವಿಷನ್ ಆಫ್ ಮಿರ್ಜಾ ಎಂಬ ಪ್ರಬಂಧ – ಇವೆಲ್ಲ ಉತ್ತಮ ನಿದರ್ಶನಗಳು. ಇವೆಲ್ಲಕ್ಕಿಂತಲೂ ಅತ್ಯುತ್ತಮವಾದುದು 17ನೆಯ ಶತಮಾನಕ್ಕೆ ಸೇರಿದ ಜಾನ್ ಬನಿಯನ್ನನ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್. ಈ ಗ್ರಂಥದಲ್ಲಿ ಹೆಚ್ಚುಕಡಿಮೆ ಸದ್ಗುಣ ದುರ್ಗುಣಗಳಿಗೆ ಮನುಷ್ಯತ್ವವನ್ನು ಆರೋಪಿಸಿ ಕಥೆಯನ್ನು ಹೆಣೆಯಲಾಗಿದೆ. ಇವುಗಳೊಂದಿಗೆ ಸ್ವಿಫ್ಟ್‌ನ ಗಲಿವರನ ಪ್ರವಾಸಗಳು, ಸ್ಯಾಮುಯಲ್ ಬಟ್ಲರನ ಎರವಾನ್ ಎಂಬ ಕಥೆಗಳನ್ನು ಅವುಗಳ ವಿಡಂಬನೆಗಾಗಿ ಪರಿಶೀಲಿಸಬಹುದು.

ರವೀಂದ್ರನಾಥ ಠಾಕೂರರ ಒಂದು ಕಥೆ ಹೀಗಿದೆ : ಒಂದು ಮರಕುಟಿಗನ ಹಕ್ಕಿ ಮತ್ತು ಒಂದು ಬಾತುಕೋಳಿ ಪ್ರಪಂಚವೀಕ್ಷಣಕ್ಕಾಗಿ ಹೊರಟವಂತೆ. ಕೆಲಕಾಲಾನಂತರ ಅವು ಪರಸ್ಪರ ಭೇಟಿಯಾಗಿ ಅಭಿಪ್ರಾಯ ವಿನಿಮಯಮಾಡಿಕೊಳ್ಳುವಾಗ ಮರಕುಟಿಗ, 'ಪ್ರಪಂಚವೆಲ್ಲ ಕೀಟಮಯ, ರಂಧ್ರಮಯ' ಎಂದಿತಂತೆ. ಬಾತು, 'ಪ್ರಪಂಚದಲ್ಲಿ ಎಲ್ಲಿ ನೋಡಿದರೂ ಚರಂಡಿ, ಕೊಳಚೆ, ಹುಳು, ಇಷ್ಟೆ' ಎಂದಿತಂತೆ. ದೃಷ್ಟಿಯ ದೋಷವನ್ನು ಈ ಕಥೆ ಚೆನ್ನಾಗಿ ವಿಡಂಬಿಸಿದೆ. ಠಾಕೂರರ ಸ್ಟ್ರೇ ಬರ್ಡ್ಸ್ ಎಂಬ ಕವನ ಸಂಕಲನದಲ್ಲಿ ಅನ್ಯೋಕ್ತಿಗೆ ವಿಪುಲ ಉದಾಹರಣೆಗಳಿವೆ.

ಆಧುನಿಕ ಯುಗದಲ್ಲಿ ಕೆಲವು ಅನ್ಯೋಕ್ತಿಕಾದಂಬರಿಗಳು ನಿರ್ಮಾಣಗೊಂಡಿವೆ. ಉದಾಹರಣೆಗೆ, ಜಾರ್ಜ್ ಆರ್ವೆಲ್ಲರ ಅನಿಮಲ್ ಫಾರಂ, ಆಲ್ಡಸ್ ಹಕ್ಸ್‌ಲಿಯ ಬ್ರೇವ್ ನ್ಯೂ ವರ್ಲ್ಡ್. ಅನಿಮಲ್ ಫಾರಂನಲ್ಲಿ ರಾಜಕೀಯ ಆಶಯವಿದೆ. ಇದು ಸರ್ವಾಧಿಕಾರವನ್ನು ವಿಡಂಬನೆ ಮಾಡುವ ಕೃತಿ. ಎಲ್ಲರೂ ಸಮಾನರು, ಆದರೆ ಕೆಲವರು ಹೆಚ್ಚು ಸಮಾನರು ಎನ್ನುವ ಪ್ರಸಿದ್ಧ ವಿಡಂಬನ ವಾದವನ್ನು ಈ ಕೃತಿಯಲ್ಲಿ ಚಿತ್ರಿಸಲಾಗಿದೆ. (ಎಚ್.ಎಚ್.ಎ.)

ಹಲವು ಸುಭಾಷಿತಗಳಲ್ಲಿ ಅನ್ಯೋಕ್ತಿ ಇದೆ. ಒಂದು ಸುಭಾಷಿತ ಹೀಗಿದೆ : ರಾತ್ರಿ ಕಳೆಯುವುದು, ಸುಪ್ರಭಾತವಾಗುವುದು, ಸೂರ್ಯನು ಹುಟ್ಟುವನು, ತಾವರೆ ಅರಳುವುದು, ಎಂದು ತಾವರೆಯ ಮೊಗ್ಗಿನಲ್ಲಿ ಸಿಕ್ಕಿಕೊಂಡಿದ್ದ ದುಂಬಿ ಆಲೋಚಿಸುತ್ತಿರಲು, ಆನೆ ಬಂದು ತಾವರೆ ಗಿಡವನ್ನು ಕಿತ್ತೆಸೆಯಿತು'. ಇಲ್ಲಿ ಕಷ್ಟದಲ್ಲಿ ಸಿಲುಕಿ ಒಳ್ಳೆಯ ಕಾಲದ

ಆಸೆಯಿಂದ ಬದುಕುವವನಿಗೆ ವಿಧಿಯಿಂದ ಆಗುವ ಅಪಘಾತದ ಚಿತ್ರವಿದೆ. ಕನ್ನಡ ಕಾವ್ಯದಲ್ಲಿ ಒಂದು ಸೊಗಸಾದ ಅನ್ಯೋಕ್ತಿ ಕನಕದಾಸರ ರಾಮಧಾನ್ಯ ಚರಿತ್ರೆ. ಕುಲಕುಲಕುಲವೆಂದು ಹೊಡೆದಾಡದಿರಿ ಎಂಬ ಕೃತಿಯನ್ನು ರಚಿಸಿದ ಚಿಂತನಾರೀತಿಯೇ ಈ ಅನ್ಯೋಕ್ತಿಯನ್ನೂ ರೂಪಿಸಿದೆ. ಇದು ತನ್ನ ಹುಟ್ಟಿನ ಬಗ್ಗೆ ಹೆಮ್ಮೆಪಡುವ ಬತ್ತ ತನ್ನ ಸತ್ವದಿಂದ ಶೋಭಿಸುವ ರಾಗಿ ಇವುಗಳ ಕಥೆ. ಪ್ರೀಹಿಗೆ–ಬತ್ತಕ್ಕೆ ಸೋಲಾಗುತ್ತದೆ, ಕಥೆಯ ಆಶಯ ಸ್ಪಷ್ಟವಾಗಿದೆ. (ಎಲ್. ಎಸ್. ಎಸ್)

**ಅನ್ಯೋಕ್ತಿ ರೂಪಕಗಳು :** ಒಂದು ವಿಷಯವನ್ನು ಸ್ಪಷ್ಟಪಡಿಸಲು ಅದೇ ರೀತಿಯ ಬೇರೊಂದು ವಿಷಯವನ್ನು ಬಳಸಿಕೊಂಡು ರಚಿಸಿರುವ ರೂಪಕ (ಅಲಿಗಾರಿಕಲ್ ಪ್ಲೇಸ್). ಅನ್ಯೋಕ್ತಿಯ ಇತರ ಹೆಸರುಗಳಾದ ಅನ್ಯಾರ್ಥ, ವ್ಯಾಜೋಕ್ತಿ, ಅರ್ಥಾಂತರೋಕ್ತಿ, ರೂಪಕಕಥೆ, ರಹಸ್ಯಾರ್ಥ, ಗೂಢಾರ್ಥದ್ಯೋತಕ ಎಂಬ ಮಾತುಗಳನ್ನು ನೋಡಿದರೆ ಅದರ ಅರ್ಥ ಸ್ಪಷ್ಟವಾಗುತ್ತದೆ. ಸಂಸ್ಕೃತಸಾಹಿತ್ಯದಲ್ಲಿ ಇದು ಹೊಸದೇನೂ ಅಲ್ಲ. ಉಪನಿಷತ್ತುಗಳ ಕಾಲದಿಂದಲೂ ಇದು ನಡೆದುಬಂದಿದೆ. ಕೃಷ್ಣಯಜುರ್ವೇದ, ಬೃಹದಾರಣ್ಯಕೋಪನಿಷತ್ತು ಮೊದಲಾದುವುಗಳಲ್ಲಿ ಇಂಥ ವಿಷಯವನ್ನು ನೋಡಬಹುದು. ಪ್ರಬೋಧ ಚಂದ್ರೋದಯ ನಾಟಕಕಾರನಾದ ಕೃಷ್ಣಮಿಶ್ರನೇ ಈ ತೆರನಾದ ಧಾರ್ಮಿಕ ಅನ್ಯೋಕ್ತಿ ನಾಟಕಕ್ಕೆ ಸಂಸ್ಕೃತಸಾಹಿತ್ಯದಲ್ಲಿ ಮೊದಲಿಗನೆಂಬ ತಿಳುವಳಿಕೆಯಿತ್ತು. ಆದರೆ ಮಧ್ಯ ಏಷ್ಯದ ಟರ್ಫಾನ್ ಎಂಬಲ್ಲಿ ಭಾಗಶಃ ದೊರೆತ ಮೂರು ರೂಪಕಗಳಲ್ಲಿ ಒಂದು ಕೃಷ್ಣಮಿಶ್ರನ ಪ್ರಬೋಧಚಂದ್ರೋದಯವನ್ನು ಹೋಲುತ್ತದೆಂದು ವಿದ್ವಾಂಸರ ಅಭಿಪ್ರಾಯ. ಆದುದರಿಂದ ಕೃಷ್ಣಮಿಶ್ರನಿಗೂ ಇಂಥ ಧಾರ್ಮಿಕ ಅನ್ಯೋಕ್ತಿ ನಾಟಕಗಳನ್ನು ಬರೆಯಲು ಒಂದು ಮಾರ್ಗದರ್ಶನ ದೊರೆತಿರಬಹುದೆಂದು ಊಹಿಸಬಹುದು. ಅಶ್ವಘೋಷನೂ ಇಂಥ ಒಂದು ನಾಟಕವನ್ನು ಬರೆದಿದ್ದನೆಂದು ಈಗ ಗೊತ್ತಾಗಿದೆ. ಅಲ್ಲಿಂದ ಅಲ್ಲೊಂದು ಇಲ್ಲೊಂದು ಕೃತಿ ಕಾಣಿಸಿಕೊಂಡು ಕೃಷ್ಣಮಿಶ್ರನ ಕಾಲಕ್ಕೆ ಈ ಪ್ರಕಾರ ಮತ್ತೆ ಬೆಳೆದಿರಬಹುದು. ಕೃಷ್ಣಮಿಶ್ರ 19ನೆಯ ಶತಮಾನದವನಿರಬಹುದು. ಏಕೆಂದರೆ 1040–1070ರವರೆಗೆ ಆಳಿದ ಗಂಗದೇವನ ಮಗನಾದ ಚೇದಿರಾಜ ಕರ್ಣದೇವ ಕೀರ್ತಿವರ್ಮನನ್ನು ಸೋಲಿಸಲು, ಅವನನ್ನು ಗೋಪಾಲರು ಜಯಿಸಿ ಕೀರ್ತಿವರ್ಮನನ್ನು ಅವನ ರಾಜ್ಯದಲ್ಲಿ ಪ್ರತಿಷ್ಠಾಪಿಸಿದಂತೆಯೂ ಆ ರಣಕೋಲಾಹಲ ಮುಗಿದಮೇಲೆ ಶಾಂತರಸಪ್ರಧಾನವಾದ ಪ್ರಬೋಧಚಂದ್ರೋದಯ ಕೀರ್ತಿವರ್ಮನ ಮುಂದೆ ಅಭಿನಯಿಸಲ್ಪಟ್ಟಂತೆ ಈ ನಾಟಕದ ಪ್ರಸ್ತಾವನೆಯಿಂದ ತಿಳಿದು ಬಂದಿದೆ. ಕೃಷ್ಣಮಿಶ್ರ ಒಬ್ಬ ಯತಿ. ಅದ್ವೈತಮತ ಪ್ರಸಾರಕನೆಂದು ಅವನ ನಾಟಕದಿಂದ ತಿಳಿದುಬರುವುದು. ವೇದಾಂತ ಪ್ರವೃತ್ತಿಯಿಲ್ಲದ ಕಾವ್ಯಪ್ರಿಯನಾದ ಶಿಷ್ಯನಿಗೆ ವೇದಾಂತ ಬೋಧನೆಗೋಸುಗ ಈ ನಾಟಕವನ್ನು ರಚಿಸಿದನೆಂಬ ಹೇಳಿಕೆ ಇದೆ. ಆರು ಅಂಕಗಳನ್ನುಳ್ಳ ಈ ನಾಟಕ ಒಂದು ಬಗೆಯ ಜೀವನ ಹೋರಾಟದ ಚಿತ್ರಣ; ಇಂದ್ರಿಯವ್ಯಾಪಾರಗಳ ತುಮುಲಸಂಗ್ರಾಮಕ್ಕೊಂದು ನಿದರ್ಶನ. ಕಾಮಕ್ರೋಧಾದಿ ಷಡ್ರಿಪುಗಳ ಉದ್ಧಟತನ ಒಂದು ಕಡೆಗಾದರೆ ತದ್ವಿರುದ್ಧವಾಗಿ ಪ್ರಬೋಧ, ವಿವೇಕ, ಪುರುಷ, ಉಪನಿಷದ್ದೇವಿ ಮೊದಲಾದ ಉದಾತ್ತಪಾತ್ರಗಳ ಹೋರಾಟ ಇನ್ನೊಂದು ಕಡೆ. ಈ ಹೋರಾಟದ ಕೊನೆಯಲ್ಲಿ ತತ್ತ್ವದರ್ಶನ ಸ್ಫುರಿಸುವಂತೆ ಕಥೆ ಕಟ್ಟಲಾಗಿದೆ. ಜೀವನದ ಹೋರಾಟದಲ್ಲಿ ಎದೆಗುಂದಿ ಬಗೆಗಾಣದ ಮಾನವನಿಗೆ ಪರಾತ್ಪರಧ್ಯೇಯವನ್ನು ನಿರೂಪಿಸಿ ಜೀವೇಶ್ವರೈಕ್ಯವನ್ನು ಬೋಧಿಸುಲೋಸುಗ ಈ ನಾಟಕವನ್ನು ರಚಿಸಲಾಗಿದೆ. ಪಾತ್ರರಚನಾ ಚಾತುರ್ಯ ಕಾವ್ಯಸ್ವಾರಸ್ಯ ಸಮರ್ಪಕವಾಗಿವೆ. ಕಥಾವಸ್ತು ಸಂವಿಧಾನಕೌಶಲದಿಂದ ಕೂಡಿದೆ. ಕಾಮಕ್ರೋಧಾದಿ ಮಾನವಜನ್ಯಗುಣಗಳು ನಿರಾಕಾರವಾಗಿದ್ದರೂ ರಂಗಭೂಮಿಯ ಮೇಲೆ ಪಾತ್ರಗಳಾಗಿ ಬರುವುದರಿಂದ ನಾಟಕ ಪರಿಣಾಮಕಾರಿಯಾಗುತ್ತದೆ. ಸ್ವಲ್ಪದರಲ್ಲಿ ರಸಮಯವಾಗಿ, ಸುಸ್ಪಷ್ಟವಾಗಿ ಮನನೀಯ ತತ್ತ್ವೋಪದೇಶವನ್ನು ನಿರೂಪಿಸುವಲ್ಲಿ ಕೃಷ್ಣಮಿಶ್ರ ಅಪ್ರತಿಮನಾಗಿದ್ದಾನೆ. ಸ್ಪೇನಿನ ಕಾಲ್ಡೆರಾನ್ ತನ್ನ ಅನ್ಯೋಕ್ತಿರೂಪಕಗಳಿಂದ ಕೆಥೊಲಿಕ್ ಧರ್ಮವನ್ನು ಎತ್ತಿ ಹಿಡಿದಂತೆ ಕೃಷ್ಣಮಿಶ್ರ ತನ್ನ ಕೃತಿಯಲ್ಲಿ ವೈಷ್ಣವತತ್ತ್ವವನ್ನು ಪರಿಣಾಮಕಾರಿಯಾಗಿ ಸಿದ್ಧಾಂತ ಮಾಡಿದ್ದಾನೆ. ಕೃಷ್ಣಮಿಶ್ರನ ಸರಣಿಯನ್ನು ಅನುಸರಿಸಿ ಅನುಮಿತಿ ಪರಿಣಯ, ಅಮೃತೋದಯ, ಆನಂದಚಂದ್ರೋದಯ ಮುಂತಾದ 36 ಧಾರ್ಮಿಕ ನಾಟಕಗಳು ರಚಿಸಲ್ಪಟ್ಟಿವೆಯೆಂದು ಇತಿಹಾಸಕಾರರು ತಿಳಿಸುತ್ತಾರೆ. ಕೃಷ್ಣಮಿಶ್ರನ ಕೃತಿಗೆ ಹೋಲಿಸಿದಾಗ ಇವು ತೀರ ನೀರಸ ವಿಸ್ತೃತಗಳಾಗಿ ಕಾಣುತ್ತವೆ. (ಎ.ಎಲ್.ಎಚ್.)

**ಅನ್ಯೋನ್ಯಾಶ್ರಯ ದೋಷ :** ನಿಗಮನನ್ಯಾಯದ ದೋಷಗಳಲ್ಲಿ ಒಂದು. ಇದನ್ನು ಚಕ್ರಕದೋಷವೆಂದೂ ಕರೆಯುವುದುಂಟು. ಚಕ್ರಕದೋಷಕ್ಕೆ ಸಂವಾದಿಯಾಗಿ ಪಾಶ್ಚಾತ್ಯರಲ್ಲುಪಯೋಗಿಸುವ ಪದ ಸರ್ಕ್ಯುಲರ್ ರೀಸನಿಂಗ್. ಈ ದೋಷವನ್ನು ಲಕ್ಷಣನಿರೂಪಣೆಯಲ್ಲೂ ಅನುಮಾನವಾಕ್ಯದಲ್ಲೂ (ಸಿಲೊಜಿಸಮ್) ಕಾಣಬಹುದು. ಒಂದು ಪದದ ಲಕ್ಷಣ ನಿರೂಪಣೆಯಲ್ಲಿ ಆ ಪದವನ್ನಾಗಲಿ, ಅದಕ್ಕೆ ಪರ್ಯಾಯವಾದ (ಸಿನನಿಮ್) ಪದವನ್ನಾಗಲಿ ಉಪಯೋಗಿಸಿದಾಗ ಅದನ್ನು ಪಾಶ್ಚಾತ್ಯ ತಾರ್ಕಿಕರು ಸರ್ಕ್ಯುಲಸ್ ಡೆಫಿನಿಯನ್ಡೊ ಎಂದು ಕರೆಯುತ್ತಾರೆ. ನ್ಯಾಯ ಎಂದರೆ ನ್ಯಾಯವಾಗಿ ನಡೆದುಕೊಳ್ಳುವುದು; ಜೀರ್ಣಶಕ್ತಿ ಎಂದರೆ ಜೀರಕಶಕ್ತಿ; ಕುರುಡ ಎಂದರೆ ಅಂಧ–ಇವು ಲಕ್ಷಣನಿರೂಪಣೆಯ ಚಕ್ರಕದೋಷಕ್ಕೆ ಉದಾಹರಣೆಗಳು. ಇಲ್ಲಿ ಯಾವ ಶಬ್ದದ ಲಕ್ಷಣವನ್ನು ತಿಳಿಸಬೇಕೊ ಅದೇ ಶಬ್ದದ ಬೇರೆ ರೂಪವನ್ನು ಅಥವಾ ಪರ್ಯಾಯರೂಪವನ್ನು ಬಳಸಿದೆ. ವಾದದಲ್ಲಿ ಯಾವುದಾದರೂ ಒಂದು ಅನುಮಿತಿಗೆ ಕಾರಣ ಕೊಡಲು ಹೊರಟು ಕಾರಣ ಕೊಡದೆ ಅದೇ ಪ್ರತಿಜ್ಞೆಯನ್ನು ಅದೇ ಅರ್ಥವಿರುವ ಬೇರೆ ಮಾತಿನಲ್ಲಿ ತಿಳಿಸಿ ಆ ಪ್ರತಿಜ್ಞೆಯನ್ನು ಕಾರಣಬದ್ಧವಾಗಿ ಸಾಧಿಸಿದಂತಾಯಿತೆಂದು ಬಗೆಯುವುದು ಚಕ್ರಕದೋಷ. ಇದು ಕೆಟ್ಟ ನಡೆವಳಿಕೆ, ಏಕೆಂದರೆ ಇದು ಅಧರ್ಮ; ಭಿಕ್ಷೆ ಕೊಡಬೇಕು. ಏಕೆಂದರೆ ದಾನಮಾಡುವುದು ನಮ್ಮ ಕರ್ತವ್ಯ; ನಾನು ಈ ಕೆಲಸವನ್ನು ಮಾಡಕೂಡದು; ಏಕೆಂದರೆ ಅದು ತಪ್ಪು; ಅದು ತಪ್ಪು ಏಕೆಂದರೆ ಅದನ್ನು ಮಾಡಕೂಡದು ಎಂದು ನನಗೆ ಗೊತ್ತು; ಅವನು ಕಳ್ಳ ಏಕೆಂದರೆ ಕದ್ದದ್ದನ್ನು ಅವನು ಬಚ್ಚಿಟ್ಟಿದ್ದಾನೆ; ಕಳ್ಳನಲ್ಲದವನು ಬಚ್ಚಿಡುತ್ತಾನೆಯೇ? ಇದು ಸ್ಪಷ್ಟ–ಇವು ಚಕ್ರಕದೋಷಕ್ಕೆ ಉದಾಹರಣೆಗಳು. ಯಾವುದನ್ನು ಸ್ಥಾಪಿಸಬೇಕೊ ಅದನ್ನೇ ಬೇರೆ ಮಾತಿನಲ್ಲಿ ಹೇಳಿ ಅದನ್ನು ಸಾಧಿಸಿದಂತೆ ಇವುಗಳಲ್ಲಿ ಭಾವಿಸಲಾಗಿದೆ. ಇಂಥ ವಾದಗಳಲ್ಲಿ ದೋಷವನ್ನು ಮುಚ್ಚಿಡಲು ವಾದದ ಕೊನೆಯಲ್ಲಿ ಇದು ಸ್ಪಷ್ಟ, ಇದು ನಿರ್ವಿವಾದವಾದದ್ದು, ಇದನ್ನು ಪ್ರಾಜ್ಞರೆಲ್ಲರೂ ಒಪ್ಪುತ್ತಾರೆ ಎಂಬ ಮಾತುಗಳನ್ನು ಸೇರಿಸುವುದುಂಟು. (ಜಿ.ಎಚ್.)

**ಅನ್ಸಾರಿ, ಮುಖ್ತಾರ್ ಅಹಮದ್ :** ರಾಷ್ಟ್ರೀಯತಾಭಾವನೆ ಎಲ್ಲರಲ್ಲೂ ಬೆಳೆಯುವುದೊಂದೇ ಸುಭದ್ರಭವ್ಯಭಾರತ ನಿರ್ಮಾಣಕ್ಕೆ ದಾರಿ ಎಂದು ನಂಬಿ, ಹಿಂದೂ ಮುಸ್ಲಿಂ ಐಕ್ಯಕ್ಕಾಗಿ ಭಾರತದಲ್ಲಿ ಆಜೀವಪರ್ಯಂತ ದುಡಿದ ದೇಶಭಕ್ತ. ಸಂಯುಕ್ತಪ್ರಾಂತ್ಯದ ಶ್ರೀಮಂತ ಮನೆತನವೊಂದರಲ್ಲಿ ಜನ್ಮವೆತ್ತಿ (1880), ಮದರಾಸ್ ವಿಶ್ವವಿದ್ಯಾನಿಲಯದ ಬಿ.ಎ. ಪದವಿಗಳಿಸಿದರು. ವೈದ್ಯಕೀಯ ಶಿಕ್ಷಣಕ್ಕೆಂದು 1900ರಲ್ಲಿ ಇಂಗ್ಲೆಂಡಿಗೆ ತೆರಳಿ ಅಲ್ಲಿ ಎಂ.ಡಿ., ಎಂ.ಎಸ್., ಮತ್ತು ಎಲ್.ಆರ್.ಸಿ.ಪಿ. ಪ್ರೌಢಪದವಿಗಳನ್ನು ಸಂಪಾದಿಸಿದರು. 1911ರವರೆಗೂ ಇಂಗ್ಲೆಂಡಿನಲ್ಲೇ ನಿಂತು, ಹೌಸ್ ಸರ್ಜನ್, ರೆಸಿಡೆಂಟ್ ಮೆಡಿಕಲ್ ಆಫೀಸರ್ ಹುದ್ದೆಗಳಲ್ಲಿ ದುಡಿದು, ಅಪಾರ ಅನುಭವ ಹಾಗೂ ಜನಾನುರಾಗವನ್ನು ಗಳಿಸಿ ಸ್ವದೇಶಕ್ಕೆ ಹಿಂತಿರುಗಿದರು.

ದೆಹಲಿಯಲ್ಲಿ ವೈದ್ಯವೃತ್ತಿಯನ್ನು ಪ್ರಾರಂಭಿಸಿ, ಕೆಲವು ದಿನಗಳಲ್ಲೇ ದೇಶದ ಅತ್ಯಂತ ಸಮರ್ಥ ವೈದ್ಯರಲ್ಲೊಬ್ಬರೆಂಬ ಖ್ಯಾತಿಗಳಿಸಿ, ಶ್ರೀಮಂತರು ಬಡವರು ಎಂಬ ಭೇದಭಾವವಿಲ್ಲದೆ, ಎಲ್ಲ ರೋಗಿಗಳನ್ನೂ ಉಪಚರಿಸಿ, ವೈದ್ಯನ ಮನೋಧರ್ಮ ಹೇಗಿರಬೇಕೆಂಬುದನ್ನು ತೋರಿಸಿಕೊಟ್ಟರು.

ಆಗಿನ ರಾಜಕೀಯ ಪರಿಸ್ಥಿತಿಯಿಂದಾಗಿ ಜನತೆಯಲ್ಲಿ ಉಂಟಾಗಿದ್ದ ಅಲ್ಲೋಲ ಕಲ್ಲೋಲ, ಹಿಂದೂಗಳಿಗೂ ಮುಸ್ಲಿಮರಿಗೂ ಮಧ್ಯೆ ವೈರವನ್ನುಂಟುಮಾಡಲು ನಡೆಯುತ್ತಿದ್ದ ಸಂಚು ಸಂಧಾನಗಳು, ಆರ್ಥಿಕ–ಶೋಷಣೆಯಿಂದಾಗಿ ಜನರಲ್ಲಿ ಹರಡಿದ್ದ ದಾರಿದ್ರ್ಯ, ನಿರಾಶೆ, ಇವನ್ನು ಸರಿಪಡಿಸಿ ನಾಡಿನ ಭವ್ಯ ಭವಿಷ್ಯವನ್ನು ರೂಪಿಸಲೆತ್ನಿಸುತ್ತಿದ್ದ ಗಾಧೀಜಿಯವರ ವ್ಯಕ್ತಿತ್ವ ಅನ್ಸಾರಿಯವರ ಹೃದಯವನ್ನು ಸೆಳೆಯಿತು. ರಾಜಕೀಯವೇನೂ ಇವರಿಗೆ ಹೊಸದಾಗಿರಲಿಲ್ಲ. 1899ರಲ್ಲೇ ಮದರಾಸಿನಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. 1912–13ರಲ್ಲಿ ಟರ್ಕಿ–ಬಾಲ್ಕನ್ ರಾಷ್ಟ್ರಗಳ ನಡುವೆ ಯುದ್ಧನಡೆದಾಗ, ಗಾಯಗೊಂಡವರ ಶುಶ್ರೂಷೆಗಾಗಿ ವೈದ್ಯಕೀಯ ತಂಡವೊಂದನ್ನು ಕಳುಹಿಸಿದ್ದರು. 1918ರಲ್ಲಿ ಮುಸ್ಲಿಂ ಲೀಗ್ ಕಾಂಗ್ರೆಸ್‍ನೊಂದಿಗೆ ವಿಲೀನವಾದಾಗ ಲೀಗಿನ ಸ್ವಾಗತಾಧ್ಯಕ್ಷರಾಗಿ ದುಡಿದಿದ್ದರು. ಪ್ರತಿಯೊಂದು ಕಾಂಗ್ರೆಸ್ ಅಧಿವೇಶನದಲ್ಲೂ ಹಾಜರಿದ್ದು ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು. ಹಿಂದೂ ಮುಸ್ಲಿಂ ಏಕತೆ ಅವರ ಜೀವನದ ಉಸಿರಾಗಿತ್ತು. ಮುಸ್ಲಿಮರಲ್ಲಿ ರಾಷ್ಟ್ರೀಯತಾ ಮನೋಭಾವವನ್ನು ಬಲಗೊಳಿಸಲು ರಾಷ್ಟ್ರೀಯ ಮುಸ್ಲಿಮ ದಳವನ್ನು ನಿರ್ಮಿಸಿದ್ದರು. 1927ರಲ್ಲಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದರು. ಗಾಂಧೀಜಿಯವರು ಪ್ರಾರಂಭಿಸಿದ ಅಸಹಕಾರ ಚಳವಳಿಯಲ್ಲಿ ಎಲ್ಲರೂ ಒಟ್ಟಾಗಿ ಯಶಸ್ಸನ್ನು ತಂದರೂ ಕೂಡಿಬಾಳುವ ವಿಷಯದಲ್ಲಿ ವಿಫಲರಾಗಿರುವ ಜನತೆಯ ವಿಷಯದಲ್ಲಿ ತಮಗಿದ್ದ ದುಃಖಾತಂಕಗಳನ್ನು ತೋಡಿಕೊಂಡರು. ಕೌನ್ಸಿಲ್ ಪ್ರವೇಶಕ್ಕೆ ಅವರ ವಿರೋಧವಿದ್ದರೂ 1934ರ ಚುನಾವಣೆಯಲ್ಲಿ ಹೋರಾಡಬೇಕೆಂದು ನಿರ್ಣಯವಾದಾಗ ಅದಕ್ಕೆ ತಮ್ಮ ಬೆಂಬಲ ನೀಡಿದರು; ಆದರೆ ತಾವು ಮಾತ್ರ ಚುನಾವಣೆಗೆ ನಿಲ್ಲಲಿಲ್ಲ. ಗಾಂಧೀಜಿಯವರು ಇವರ ಸರಳತೆ, ನಿರ್ವ್ಯಾಜಮನೋಭಾವ, ರಾಷ್ಟ್ರಪ್ರೇಮ ಇವುಗಳನ್ನು ತುಂಬಾ ಮೆಚ್ಚಿದ್ದರು. ಅನ್ಸಾರಿಯಂಥ ದೇಶಭಕ್ತರು ಸೂತ್ರಧಾರಿಗಳಾಗಿರುವಾಗ ನಾಡಿನ ಅಭ್ಯುದಯಕ್ಕೆ ಯಾವ ಕೊರತೆಯೂ ಇಲ್ಲ ಎಂದು ಅವರು ಹೇಳಿದರು. ವೈದ್ಯನಾಗಿ, ರಾಜಕೀಯ ಮುಂದಾಳಾಗಿ, ನಿರಂತರ ದುಡಿದು ತಮ್ಮ ಐವತ್ತಾರನೆಯ ವಯಸ್ಸಿನಲ್ಲಿ ನಿಧನರಾದರು. *

**ಅನ್ಸಿಡಿಯಮ್ :** ಆರ್ಕಿಡೇಸೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಅಲಂಕಾರ ಸಸ್ಯ. ಇದರಲ್ಲಿ ಸು. 750 ಪ್ರಭೇದಗಳಿವೆ. ಈ ಜಾತಿಯ ಅನೇಕ ಸಸ್ಯಗಳು ಮರಗಳ ಮೇಲೆ ಅಪ್ಪುಸಸ್ಯಗಳಾಗಿಯೂ ಕೆಲವು ಮಾತ್ರ ನೆಲಸಸ್ಯ, ಮತ್ತು ಶಿಲಾಸಸ್ಯಗಳಾಗಿಯೂ

(ಲಿತೋಫೈಟ್) ಬೆಳೆಯುತ್ತವೆ. ಇವುಗಳನ್ನು ಪೂರ್ಣವಾಗಿ ವಿವರಿಸುವುದು ಕಷ್ಟವಾದರೂ ಮೂಲಗುಣಗಳನ್ನು ಸ್ವಲ್ಪಮಟ್ಟಿಗೆ ಪರಿಶೀಲಿಸಬಹುದು. ಅನ್ಸಿಡಿಯಮ್ ಜಾತಿಯಲ್ಲಿ, ಮಿಥ್ಯಾಲಶುನ (ಸ್ಯೂಡೊಬಲ್ಬ್ಸ್) ಇರುವ ಮತ್ತು ಇಲ್ಲದೆ ಇರುವ ಪ್ರಭೇದಗಳಿವೆ. ಮಿಥ್ಯಾಲಶುನಗಳಿರುವ ಪ್ರಭೇದಗಳಲ್ಲಿ ಇವು ಪೊರೆಯಂತಿರುವ ಉಪಎಲೆಗಳಿಂದ (ಬ್ರಾಕ್ಟ್) ಆವರಿಸುತ್ತವೆ. ಮಿಥ್ಯಾಲಶುನಗಳು ಇಲ್ಲದೆ ಇರುವ ಪ್ರಭೇದಗಳಲ್ಲಿ ಎಲೆಗಳಿರುತ್ತವೆ. ಸಾಮಾನ್ಯವಾಗಿ ಪ್ರತಿಸಸ್ಯ ಒಂದು ಹೂಗೊಂಚಲನ್ನು ಮಾತ್ರ ಬಿಡುತ್ತದೆ. ಹೂಗೊಂಚಲು ಉದ್ದವಾಗಿ ನೇರವಾಗಿ ಓಲಾಡುತ್ತಿರುತ್ತದೆ ಅಥವಾ ಕಮಾನಿನಂತೆ ಬಾಗಿರುವುದೂ ಉಂಟು. ಹೂಗಳ ಬಣ್ಣ ಹಳದಿಯಿಂದ ಕಂದಿನವರೆಗೂ ಇರಬಹುದು. ಮಿಶ್ರ ಬಣ್ಣದ ಹೂಗಳೂ ಇರುವುದುಂಟು. ಹೂಗಳ ಆಕಾರ, ಗಾತ್ರಗಳಲ್ಲಿ ಬಹಳ ವೈವಿಧ್ಯವಿದೆ. ಸಾಮಾನ್ಯವಾಗಿ ಹೂಗಳ ತುಟಿ (ಲಿಪ್) ಮೂರು ಭಾಗವಾಗಿರುತ್ತದೆ. ಇದರ ಮಧ್ಯಭಾಗದಲ್ಲಿ ಗುಂಡಾಗಿ ಎತ್ತರಿಸಿದ ಬಿಲ್ಲೆ (ಡಿಸ್ಕ್) ಇರುತ್ತದೆ.

ಚಿತ್ರ 1. ಅನ್ಸಿಡಿಯಮ್ ಆಂಪ್ಲಿಯೆಟಮ್

ಈ ಬಿಲ್ಲೆಗಳು ಮಧ್ಯದಲ್ಲಿದ್ದು ಅವುಗಳ ಆಕಾರ,

ಗಾತ್ರ, ಬಣ್ಣ ಮತ್ತು ಸಂಖ್ಯೆಯ ಆಧಾರದ ಮೇಲೆ ಹಲವು ಜಾತಿಗಳ ವಿಂಗಡಣೆ ಆಗಿದೆ. ಹೂವಿನ ಮಧ್ಯದಲ್ಲಿರುವ ಹೂಕಂಬ (ಕಾಲಮ್) ಕುಳ್ಳಾಗಿ ದಪ್ಪವಾಗಿದೆ. ಇದರ ಪಕ್ಕಗಳು ಶಿಖೆಗಳಂತೆ ಹರಡಿರುವುದುಂಟು. ಅನ್ಸಿಡಿಯಮ್ ಆರ್ಕಿಡ್‌ಗಳು ವರ್ಷದ ಬಹುಭಾಗದಲ್ಲಿ ಬೆಚ್ಚಗಿರುವ ಹಿತಕರವಾದ ಹವಾಗುಣದಲ್ಲಿ ಯಶಸ್ವಿಯಾಗಿ ಬೆಳೆಯುತ್ತವೆ.

ಅನ್ಸಿಡಿಯಮ್ ಕ್ರಿಸ್‌ಪಮ್ ಎಂಬ ಪ್ರಭೇದದ ಸಸ್ಯಗಳಲ್ಲಿ ಗುಂಪಾದ ಆಯತಾಕಾರದ ಚಪ್ಪಟೆಯಾಗಿರುವ ಮಿಥ್ಯಾ ಲಶುನಗಳು ಇವೆ. ಇವುಗಳ ಎಲೆಗಳು ಆಯಾತಾಕಾರವಾಗಿದ್ದು 15–20 ಸೆಂಮೀ ಉದ್ದ 5 ಸೆಂಮೀ ಅಗಲ ಇರುತ್ತವೆ. ಹೂಗೊಂಚಲಿನಲ್ಲಿ 80 ಹೂಗಳಿರುತ್ತವೆ. ಬಣ್ಣ ಕಂದು, ತುದಿ ಹಳದಿ. ಗೊಂಚಲಲ್ಲಿ ಹೂಗಳು ಸಡಿಲವಾಗಿ ಜೋಡಣೆಯಾಗಿರುತ್ತವೆ.

ಅನ್ಸಿಡಿಯಮ್ ಲುರಿಡಮ್ ಎಂಬ ಪ್ರಭೇದದಲ್ಲಿ ಮಿಥ್ಯಾಲಶುನಗಳು ಇರುವುದಿಲ್ಲ. ಗುಪ್ತಕಾಂಡದಿಂದ ಕರನೆಯಾಕಾರದ ಚರ್ಮದಂತೆ ಒರಟಾಗಿರುವ ಎಲೆಗಳು ಹೊರಬಂದಿರುತ್ತವೆ. ಹೂಗೊಂಚಲಿನ ಉದ್ದ ಸು. 20 ಸೆಂಮೀ. ಇದರ ಕಾವಿನ ಬಣ್ಣ ಕೆಂಪು ಮಿಶ್ರಿತ ಕಂದು. ಪ್ರತಿ ಹೂವಿನ ಅಗಲ ಸುಮಾರು 2.5 ಸೆಂಮೀ. ಬಣ್ಣ ಕಂದು, ಹಳದಿ ಅಥವಾ ಕೆಂಪು ಮಿಶ್ರಿತ. ಒಂದು ಗೊಂಚಲಿನಲ್ಲಿ 6ರವರೆಗೆ ಹೂಗಳಿರುತ್ತವೆ.



ಚಿತ್ರ 2. ಅನ್ಸಿಡಿಯಮ್ ಕ್ರಿಸ್‌ಪಮ್

ಅನ್ಸಿಡಿಯಮ್ ಲಾಂಗಿ ಫೋಲಿಯ ಎಂಬ ಮಗುದೊಂದು ಪ್ರಭೇಧದಲ್ಲಿ ದಪ್ಪನೆಯ ಗುಪ್ತಕಾಂಡದ

ಮೇಲೆ ಸಣ್ಣದಾಗಿರುವ ಮಿಥ್ಯಾ ಲಶುನಗಳಿರುತ್ತವೆ. ಪ್ರತಿ ಮಿಥ್ಯಾ ಲಶುನದಲ್ಲೂ ಕಿರಿದಾಗಿ ಉದ್ದವಾಗಿ ಅರ್ಧ ಕೊಳವೆಯಾಕಾರದ ಎಲೆಗಳು ಇರುತ್ತವೆ. ಹೂಗೊಂಚಲು ನೇರವಾಗಿದ್ದು ಹೂಗಳ ಸಂಖ್ಯೆ ನಿರ್ದಿಷ್ಟವಲ್ಲ. ಅವುಗಳ ಬಣ್ಣ ಹಳದಿ, ಗಾತ್ರ ಏಕರೀತಿಯದಲ್ಲ.

(ಡಿ.ಎಂ.)

**ಅಪಕೃತ್ಯ :** ವ್ಯಕ್ತಿಯ ತಪ್ಪು ಸಮಾಜದ ವಿರುದ್ಧವಾಗಿದ್ದರೆ ಅದು ಅಪರಾಧವಾಗುತ್ತದೆ; ಮತ್ತೊಬ್ಬ ವ್ಯಕ್ತಿಗೆ ವಿರುದ್ಧವಾಗಿದ್ದರೆ ಅದು ಅಪಕೃತ್ಯವಾಗುತ್ತದೆ. ಅಪರಾಧಿಯನ್ನು ಅವನ ರಾಜ್ಯ ಶಿಕ್ಷಿಸುತ್ತದೆ. ಅಪಕೃತ್ಯ ವ್ಯಾವಹಾರಿಕ (ಸಿವಿಲ್) ತಪ್ಪು. ಅದರ ನೀತಿಯನ್ನು ನ್ಯಾಯಾಲಯಗಳು ಹೆಚ್ಚುಭಾಗ ತೀರ್ಮಾನಿಸುತ್ತವೆ. ತೊಂದರೆಗೀಡಾದವ ವ್ಯವಹಾರ ಮೊಕದ್ದಮೆ ಹೂಡಿ ಪರಿಹಾರ ಪಡೆಯಬಹುದು. ಅಪಕೃತ್ಯಗಳು ಅನೇಕ. ಅವುಗಳ ರೂಪುರೇಖೆಗಳನ್ನು ಸೂಕ್ಷ್ಮವಾಗಿ ಇಲ್ಲಿ ವಿವರಿಸಲಾಗಿದೆ.

ಪ್ರಾಚೀನ ನ್ಯಾಯಶಾಸ್ತ್ರದಲ್ಲಿ ಎಲ್ಲ ತಪ್ಪುಗಳನ್ನೂ ಅಪಕೃತ್ಯಗಳೆಂದು ಪರಿಗಣಿಸಲಾಗಿತ್ತು. ತೊಂದರೆಗೀಡಾದವ ಪರಿಹಾರ ಪಡೆಯುತ್ತಿದ್ದ. ಕೊಲೆ, ದರೋಡೆ, ಕಳ್ಳತನ ಮುಂತಾದುವು ಅಪಕೃತ್ಯಗಳಾಗಿದ್ದುವು. ಸಮಾಜ ತನ್ನ ಪ್ರಗತಿಪರ ಹೆಜ್ಜೆಯಲ್ಲಿ ಮುನ್ನಡೆದಂತೆ, ಅನೇಕ ವಿಧವಾದ ಅಪಕೃತ್ಯಗಳು ಬೆಳೆದುಬಂದುವು. ರಾಜ್ಯಗಳ ರಚನೆಯಾಗಿ ಅವುಗಳ ಅಧಿಕಾರವ್ಯಾಪ್ತಿ ವಿಸ್ತರಣೆಯಾದ ಮೇಲೆ, ಸಮಾಜಕ್ಕೆ ವಿರೋಧವಾದ ತಪ್ಪುಗಳನ್ನು ರಾಜ್ಯಶಾಸನಗಳ ಮೂಲಕ ಅಪರಾಧಗಳೆಂದು ನಿರ್ಣಯಿಸಲಾರಂಭಿಸಿದವು. ನ್ಯಾಯಾಲಯ ಸ್ಥಾಪಿತವಾಗಿ ನಡೆವಳಿ ಬೆಳೆಯುತ್ತ ಬಂತು. ಆಧುನಿಕ ರಾಜ್ಯಗಳಲ್ಲಿ ಅಪರಾಧಗಳನ್ನು ನಿರ್ಣಯಿಸುವ ಮತ್ತು ನ್ಯಾಯಾಲಯಗಳ ನಡೆವಳಿಯನ್ನು ಗೊತ್ತುಪಡಿಸುವ ಕಾಯಿದೆಗಳಿವೆ. ಭಾರತದಲ್ಲಿ ದಿ ಇಂಡಿಯನ್ ಪೀನಲ್ ಕೋಡ್ (1960) ಮತ್ತು ದಿ ಕ್ರಿಮಿನಲ್ ಪ್ರೊಸೀಜರ್ ಕೋಡ್ (1808) ಜಾರಿಯಲ್ಲಿವೆ. ಮತ್ತೊಬ್ಬ ವ್ಯಕ್ತಿಯ ಹಕ್ಕು ಬಾಧ್ಯತೆಗಳಿಗೆ ಲೋಪತರುವ ತಪ್ಪುಗಳು ಅಪಕೃತ್ಯಗಳಾಗಿಯೇ ಉಳಿದುಬಂದಿವೆ.

ಅಪಕೃತ್ಯಗಳ ತಳಹದಿ ಇಂಗ್ಲಿಷ್ ಕಾಮನ್ ಲಾ ದಲ್ಲಿದೆ ಮತ್ತು ಹೆಚ್ಚು ಭಾಗ ನ್ಯಾಯಾಲಯಗಳ ತೀರ್ಪುಗಳ ಮೇಲೆ ಬೆಳೆದುಬಂದಿದೆ. ಅಪಕೃತ್ಯದ ಬಗ್ಗೆ ಎರಡು ವಾದಗಳಿವೆ; ಕಾನೂನು ಪ್ರಕಾರ ಸಮರ್ಥಿಸಬಲ್ಲ ಎಲ್ಲ ಬಾಧೆಗಳೂ ಅಪಕೃತ್ಯವೆಂಬುದು ಒಂದು; ಅಪಕೃತ್ಯಗಳು ಯಾವುವೆಂಬುದು ನಿರ್ಣಯವಾಗಿದ್ದು ಆ ಪಟ್ಟಿಯಲ್ಲಿಲ್ಲದವು ಅಪಕೃತ್ಯಗಳಲ್ಲವೆಂಬುದು ಎರಡನೆಯದು.

ಅಪಕೃತ್ಯದ ಹೊಣೆ ಮುಖ್ಯವಾಗಿ ಕಾನೂನು ನಿಯಮಿಸಿದ ಒಂದು ಕರ್ತವ್ಯವನ್ನು ಲ್ಲಂಘಿಸುವುದರಿಂದ ಉದ್ಭವಿಸುತ್ತದೆ. ಈ ಕರ್ತವ್ಯ ಒಬ್ಬನು ಸಾಮಾನ್ಯವಾಗಿ ಇತರರಿಗೆ ಮಾಡಬೇಕಾದ್ದಾಗಿದ್ದು ಅದರ ಉಲ್ಲಂಘನೆ ನ್ಯಾಯಾಲಯ ನಿರ್ಣಯಿಸುವ ಪರಿಹಾರ ಪಡೆಯುವುದರ ಮೂಲಕ ಇತ್ಯರ್ಥವಾಗುತ್ತದೆ.

ಅಪಕೃತ್ಯಗಳನ್ನು ಸ್ಥೂಲವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು: 1. ಶರೀರಕ್ಕೆ ಸಂಬಂಧಪಟ್ಟವು ; 2. ಆಸ್ತಿಗೆ ಸಂಬಂಧಪಟ್ಟವು ; 3. ಕೀರ್ತಿಗೆ ಸಂಬಂಧಪಟ್ಟವು ; 4. ಇತರ ತಪ್ಪುಗಳು. (ಸೂಚನೆ: ರಾಜ್ಯವೇ ಅಪಕೃತ್ಯವೆಸಗಿದರೆ, ಸಂವಿಧಾನ ಘಟಕ 299 ಮತ್ತು 300ರ ಪ್ರಕಾರ ಪರಿಹಾರ ಕೊಡಬೇಕಾಗುತ್ತದೆ).

**1. ಶರೀರಕ್ಕೆ ಸಂಬಂಧಪಟ್ಟವು :** ಬಲಪ್ರಯೋಗ ಮಾಡುವುದು (ಬ್ಯಾಟರಿ), ಭಯೋತ್ಪಾದನೆ ಮಾಡುವುದು. ಇನ್ನೊಬ್ಬನ ಮೇಲೆ ಉದ್ದೇಶಪೂರ್ವಕವಾಗಿ ಬಲಪ್ರಯೋಗ ಮಾಡುವುದು ವ್ಯವಹಾರಾರ್ಹವಾದ ತಪ್ಪು. ಬಲಪ್ರಯೋಗ ನಾನಾ ರೀತಿಯಲ್ಲಾಗಬಹುದು. ಹೊಡೆಯುವುದು, ಕೋಲಿನಿಂದ ಹೊಡೆಯುವುದು; ಹರಿತವಾದ ಆಯುಧಗಳಿಂದ ಘಾಸಿಪಡಿಸುವುದು, ಕಾಮನ ಹಬ್ಬದಲ್ಲಿ ಬಣ್ಣ ಎರಚುವುದು ಇತ್ಯಾದಿ. ತೊಂದರೆಗೊಳಗಾದವ ಗುಣಹೊಂದಲು (ಸರಿಪಡಿಸಿಕೊಳ್ಳಲು) ಆದ ಖರ್ಚು, ಮನೋವ್ಯಥೆ, ಅವಮಾನಗಳ ಬಗ್ಗೆ ಪರಿಹಾರವನ್ನು ಸಂದರ್ಭಾನುಸಾರವಾಗಿ ನ್ಯಾಯಾಲಯದಿಂದ ಪಡೆಯುವ ಹಕ್ಕುಳ್ಳವನಾಗುತ್ತಾನೆ.

ಭಯೋತ್ಪಾದನೆ ಮಾಡುವುದೂ ಪರಿಹಾರಕ್ಕೆಡೆಗೊಡುವ ತಪ್ಪು. ಇನ್ನೊಬ್ಬನ ಕಡೆ ಬಂದೂಕು ತೋರಿಸುವುದು, ಹೊಡೆಯುವವನಂತೆ ಹೆದರಿಸುವುದು, ಕತ್ತಿಯನ್ನು ಒರೆಯಿಂದ ಹಿರಿಯುವುದು ಇತ್ಯಾದಿ. ಒಂದು ಪಂಚಾಯಿತಿ ಸಭೆಯಲ್ಲಿ ಸದಸ್ಯನೊಬ್ಬ ತುಂಬ ರೇಗಿ ಕೂಗಾಡಲು ಪ್ರಾರಂಭಿಸಿದ. ಅವನನ್ನು ಹೊರಗೆ ಹಾಕಬೇಕೆಂದು ನಿರ್ಣಯವಾಯಿತು. ಕೂಗಾಡುತ್ತಿದ್ದವನು ಇನ್ನೂ ಕೋಪಗೊಂಡು ಅಧ್ಯಕ್ಷನನ್ನು ಕುರ್ಚಿಯಿಂದ ಎಳೆದು ಹಾಕುವುದಾಗಿ ಹೇಳುತ್ತ ಮುಷ್ಟಿಕಟ್ಟಿ ಅಧ್ಯಕ್ಷನ ಕುರ್ಚಿಯತ್ತ ನುಗ್ಗಿದ. ಮಧ್ಯದಲ್ಲಿದ್ದವರು ತಡೆದರು. ಇದು ಭಯೋತ್ಪಾದನೆಯೆಂದೂ ಇದಕ್ಕಾಗಿ ಸದಸ್ಯ ಅಧ್ಯಕ್ಷನಿಗೆ ಪರಿಹಾರ ಕೊಡಬೇಕೆಂದೂ ನ್ಯಾಯಾಲಯದಲ್ಲಿ ಇತ್ಯರ್ಥವಾಯಿತು (ಸ್ಟೀಫನ್ಸ್ ವರ್ಸಸ್ ಮೇಯರ್ಸ್ 4 ಸಿ. 1830).

ಶಾಸನದ ಅಪ್ಪಣೆಯಿಲ್ಲದೆ ಯಾರೊಬ್ಬನೂ ಮತ್ತೊಬ್ಬನನ್ನು ನಿರ್ಬಂಧದಲ್ಲಿಡುವುದು ತಪ್ಪಾಗುತ್ತದೆ. ಈ ನಿರ್ಬಂಧ ಹೊರಗೆ ಹೋಗಲು ಅವಕಾಶವಿಲ್ಲದ ರೀತಿಯಲ್ಲೇ ಇರಬೇಕೆಂಬ ನಿಯಮವಿಲ್ಲ. ಬಂಧಿತನಾದವ ಸ್ವತಂತ್ರವಾಗಿ ನಡೆಯಲು ಅವಕಾಶವಿಲ್ಲದಂತಾದರಾಯಿತು. ಕೂಡಲೆ ತಪ್ಪಾಗುತ್ತದೆ. ಪೋಲೀಸಿನವನೊಬ್ಬ ಒಬ್ಬನ ಬದಲಿಗೆ ಮತ್ತೊಬ್ಬನನ್ನು ವಾರಂಟ್ ಇಲ್ಲದೆ ದಸ್ತಗಿರಿ ಮಾಡಿದ. ವ್ಯಾಜ್ಯ ನ್ಯಾಯಾಲಯಕ್ಕೆ ಹೋದಾಗ ಪೋಲೀಸಿನವ ನಷ್ಟಕೊಡಬೇಕೆಂದು ತೀರ್ಮಾನವಾಯಿತು (ಕ್ರಿಸ್ಟಿ ವರ್ಸಸ್ ಲಿಜಿನ್ಸ್ 1947 ಎ. ಸಿ. 573).

ಸುಳ್ಳು ಹೇಳಿ ಗಾಬರಿಯುಂಟುಮಾಡುವುದರಿಂದ ಇತರರ ಶರೀರದಲ್ಲಿ ವ್ಯತ್ಯಾಸಗಳಾಗಿ ತೊಂದರೆಯಾದರೆ, ಪರಿಹಾರ ಕೊಡಬೇಕಾಗುವುದು. ಗೃಹಿಣಿಯೊಬ್ಬಳಿಗೆ ಅವಳ ಪತಿ ಆಕಸ್ಮಿಕಕ್ಕೆ ಒಳಗಾಗಿ ಕಾಲುಮುರಿದುಕೊಂಡುದಾಗಿ ತಮಾಷೆಗಾಗಿ ಹೇಳಿದ. ಇದನ್ನು ಕೇಳಿದ ಆ ಮನೆಯಾಕೆಯ ಕರಿಯ ಕೂದಲುಗಳೆಲ್ಲ ಕೂಡಲೆ ಬೆಳ್ಳಗಾದುವು. ರೋಗಬಂತು. ಸುಳ್ಳು ಹೇಳಿದವ ನಷ್ಟ ಕೊಡಬೇಕೆಂದು ನ್ಯಾಯಾಲಯದಲ್ಲಿ ತೀರ್ಮಾನವಾಯಿತು (ವಿಲ್‌ಕಿನ್‌ಸನ್ ವರ್ಸಸ್ ಡಾನ್‌ಟನ್ 1897 ಕ್ಯೂ. ಬಿ. 57).

ಕುಟುಂಬಜೀವನದಲ್ಲಿ ಪ್ರವೇಶಿಸಿ ಗಂಡಹೆಂಡಿರನ್ನು ಅಗಲಿಸುವುದು, ತಂದೆ ಮಕ್ಕಳನ್ನು ಅಗಲಿಸುವುದು ಮೊದಲಾದುವು ನಷ್ಟಕೊಡಬೇಕಾದ ತಪ್ಪುಗಳಾಗುತ್ತವೆ. ಅನಾಥ ವೃದ್ಧನೊಬ್ಬನಿಗೆ ಸೇವೆಮಾಡುತ್ತಿದ್ದ ಮಗಳನ್ನು ಸೇವೆಯಿಂದ ತಪ್ಪಿಸಿದವನು ವೃದ್ಧನಿಗೆ ಆ ಬಗ್ಗೆ ಪರಿಹಾರಧನ ಕೊಡಬೇಕಾಯಿತು (ಟೆರಿ ವರ್ಸಸ್ ಹಚಿನ್ಸನ್ 2868 ಎಲ್. ಬಿ.599).

**2 ಆಸ್ತಿಗೆ ಸಂಬಂಧಪಡುವ ತಪ್ಪುಗಳು: ಸ್ಥಿರಾಸ್ತಿಗಳು:** ಸ್ಥಿರಾಸ್ತಿಗಳ ಅತಿಕ್ರಮ ಪ್ರವೇಶ: ಒಬ್ಬನ ಸ್ವಾಧೀನದಲ್ಲಿರುವ ಭೂಮಿ, ಮನೆ ಇತ್ಯಾದಿಗಳಲ್ಲಿ ಮತ್ತೊಬ್ಬನು ಅಪ್ಪಣೆಯಿಲ್ಲದೆ ಪ್ರವೇಶಿಸುವುದು ಹಸ್ತಕ್ಷೇಪಮಾಡುವುದು. ಅತಿಕ್ರಮವೆನಿಸಿಕೊಳ್ಳುತ್ತವೆ. ಇಲ್ಲಿ ವಿಶೇಷವಾದ ಕೆಲವು ನಿದರ್ಶನಗಳನ್ನು ಮಾತ್ರ ಕಾಣಿಸಿದೆ. ವಿವರಗಳಿಗೆ. **ನೋಡಿ– ಅತಿಕ್ರಮ.**

ನಿಮ್ಮ ಗೊಬ್ಬರದ ಗುಂಡಿ ನೀರಿನಲ್ಲಿ ಕರಗಿ, ಗೊಬ್ಬರ ಹರಿದು ಪಕ್ಕದ ಮನೆಯವರ ಗೋಡೆಗೆ ಸೇರಿಕೊಂಡರೆ ಅತಿಕ್ರಮಪ್ರವೇಶವೆನಿಸುತ್ತದೆ. ಇನ್ನೊಬ್ಬರ ಭೂಮಿಯ ಮೇಲೆ ಗಾಳಿಪಟ ಆಡಿಸಿದರೆ ಅದೂ ಅತಿಕ್ರಮ. ರಾಜಬೀದಿಗಳಿಗೂ ಹೆದ್ದಾರಿಗಳಿಗೂ ಈ ನಿಯಮ ಅನ್ವಯಿಸುತ್ತದೆ. ಹೆದ್ದಾರಿಯಲ್ಲಿ ನಿಂತು ಬಂದೂಕವನ್ನು ಹಾರಿಸುತ್ತ ಗದ್ದಲಮಾಡಿ ಅಕ್ಕಪಕ್ಕದವರು ಸಾಕಿರುವ ಹಕ್ಕಿಗಳಿಗೆ ಗಾಬರಿಮಾಡುವುದು ಅತಿಕ್ರಮ (ಹ್ಯಾರಿಸನ್ ವರ್ಸಸ್ ಡ್ಯೂಕ್ ಆಫ್ ರೆಡ್‍ಲ್ಯಾಂಡ್ 1893 ಕ್ಯೂ. ಬಿ. 142). ಜೂಜುಕುದುರೆಗಳು ಅಭ್ಯಾಸಮಾಡುವಾಗ ಹೆದ್ದಾರಿಯಲ್ಲಿ ಓಡಾಡುತ್ತ ಅವುಗಳ ಚಲನವಲನಗಳನ್ನು ಗುರುತುಮಾಡಿಕೊಳ್ಳುವುದು ಅತಿಕ್ರಮವೆಂದು ಪರಿಗಣಿಸಲ್ಪಟ್ಟಿದೆ (ಹಿಕ್ಮನ್ ವರ್ಸಸ್ ಮೈಸಿ 1900. 1. ಕ್ಯೂ. ಬಿ. 752). ನಿಮ್ಮ ಭೂಮಿಯ ಮೇಲೆ ಇತರರ ವಿಮಾನಗಳು ಹಾರಾಡಿದರೆ ಅದು ಅತಿಕ್ರಮ; ಶಾಸನಗಳಿಂದ ಇದಕ್ಕೆ ವಿನಾಯಿತಿ ದೊರಕಿದೆ. ಮಾಲೀಕರು ಇತರರಿಗೆ ತನ್ನ ಭೂಮಿಗೆ ಅಥವಾ ಕಟ್ಟಡಕ್ಕೆ ಪ್ರವೇಶಮಾಡಿ ಅಲ್ಲಿ ಏನಾದರೂ ಕೆಲಸಮಾಡಲು ಅನುಜ್ಞೆಕೊಟ್ಟಮೇಲೆ ಅದನ್ನು ಯಾವ ಸಂಧರ್ಭಗಳಲ್ಲಿ ಹಿಂದಕ್ಕೆ ತೆಗೆದುಕೊಳ್ಳಬಹುದೆಂಬ ಪ್ರಶ್ನೆ ಸ್ವಲ್ಪ ಜಟಿಲವಾದದ್ದು. ನಾಟಕ ಸಿನಿಮಾ ನೋಡಲು ಟಿಕೆಟ್ ಪಡೆದು ಒಳಗೆ ಹೋದ ಮೇಲೆ, ಮಾಲೀಕರು ಟಿಕೆಟ್ ಪಡೆದವನನ್ನು ಆಟದ ಮಧ್ಯದಲ್ಲಿ ಹೊರಗೆ ಕಳುಹಿಸಿದರೆ ಒಪ್ಪಂದವನ್ನು ಮೀರಿದಂತಾಗಿ ನಷ್ಟಕ್ಕೆ ಗುರಿಯಾಗುತ್ತಾರೆ. ಹೊರಗೆ ಹೋಗಲು ತಿರಸ್ಕರಿಸಿದವನನ್ನು ಬಲಪ್ರಯೋಗದಿಂದ ಹೊರಕ್ಕೆ ಕಳುಹಿಸಿದಲ್ಲಿ ನಷ್ಟ ಕೊಡಬೇಕೆಂದು ತೀರ್ಮಾನವಾಗಿರುತ್ತದೆ (ಹರ್ಸ್ಟ್ ವರ್ಸಸ್ ಪಿಚರ್ ಪ್ಯಾಲೇಸ್. 1915. 1. ಕೆ. ಬಿ. 1) ಕಾನೂನಿನ ಬಲದಿಂದ ಒಳಕ್ಕೆ ಪ್ರವೇಶಮಾಡುವ ಹಕ್ಕಿದ್ದು, ಪ್ರವೇಶಿಸಿದ ಅನಂತರ ತಪ್ಪು ಮಾಡಿದರೆ ಅದೂ ನಷ್ಟ ಕೊಡಬೇಕಾದ ಸಂದರ್ಭ. ಪೋಲೀಸ್ ಅಧಿಕಾರಿಗಳು ಕಾನೂನಿನಂತೆ ಮನೆಗೆ ಪ್ರವೇಶಮಾಡಿ ಆನಂತರ ಅಲ್ಲಿ ಏನಾದರೂ ತಪ್ಪು ಮಾಡಿದರೆ ನಷ್ಟಕ್ಕೆ ಗುರಿಯಾಗುತ್ತಾರೆ (ಟ್ರೆಸ್‍ಪಸ್ ಆಬ್ ಇನಿಷಿಯೊ).

ಬೆಳಕು, ಗಾಳಿ, ದಾರಿ, ಗೋಡೆ, ಎರಡು ಮನೆಗಳ ಮಧ್ಯದ ಓಣಿಯ ಹಕ್ಕುಗಳು ಅನುಭೋಗದ ಹಕ್ಕುಗಳು. ಅವು ಅನುಭೋಗದ ಹಕ್ಕಿನ ಕಾಯಿದೆಯ ನಿಯಮಗಳಿಗೆ ಒಳಪಟ್ಟಿರುತ್ತವೆ.

ಚರ ಮಾಲುಗಳ ದುರುಪಯೋಗ: ಇನ್ನೊಬ್ಬರ ಪದಾರ್ಥವನ್ನು ವಿನಾಕಾರಣ ಇಟ್ಟುಕೊಳ್ಳುವುದು, ಜಪ್ತಿಮಾಡಿಸುವುದು ಈ ವರ್ಗಕ್ಕೆ ಸೇರುತ್ತವೆ. ಒಡೆತನ ಮತ್ತು ಸ್ವಾಧೀನಗಳ ಬಗ್ಗೆ ಸ್ಥಿರಾಸ್ತಿಯ ವಿಚಾರದಲ್ಲಿ ಮೇಲೆ ಹೇಳಿರುವ ನಿಯಮಗಳೇ ಇವಕ್ಕೂ ಅನ್ವಯಿಸುತ್ತವೆ. ಚರಮಾಲುಗಳ ಮಾಲೀಕನಾಗಿರದಿದ್ದರೂ ಸ್ವಾಧೀನದಲ್ಲಿರಲು ಹಕ್ಕುಳ್ಳವನಾಗಿದ್ದರೆ ಅವನು ಕೋರ್ಟಿನಲ್ಲಿ ಕ್ರಮ ಜರುಗಿಸಬಹುದು. ಸ್ವಾಧೀನದಲ್ಲಿರುವವ ಒಬ್ಬನಾಗಿದ್ದು, ಮಾಲೀಕ ಬೇರೆಯವನಾಗಿದ್ದರೆ ಅಥವಾ ಮಾಲೀಕ ಯಾರೆಂಬುದು ಗೊತ್ತಿಲ್ಲದೆ ಹೋದರೆ ಸ್ವಾಧೀನದಲ್ಲಿರುವವನ ಹಕ್ಕಿನ ವ್ಯಾಪ್ತಿಯ ಪರಿಮಿತಿ ಗಮನಾರ್ಹ. ಹೊಗೆಯಗೂಡು ಗುಡಿಸುವ ಬಾಲಕನೊಬ್ಬನಿಗೆ ಒಂದು ವಜ್ರದ ಒಡವೆ ಸಿಕ್ಕಿತ್ತು. ಮಾಲೀಕ ಯಾರೆಂದು ಗೊತ್ತಿರಲಿಲ್ಲ. ಅವನು ಅದನ್ನು ಒಬ್ಬ ಅಕ್ಕಸಾಲಿಗನ ಬಳಿಗೆ ತೆಗೆದುಕೊಂಡು ಹೋದ. ಅಕ್ಕಸಾಲಿಗ ವಜ್ರವನ್ನು ಬೇರ್ಪಡಿಸಿ ಚಿನ್ನವನ್ನು ಹಿಂದಕ್ಕೆ ಕೊಟ್ಟು ವಜ್ರಕ್ಕೆ 1 1/2 ಪೆನ್ನಿ ಕೊಡುವುದಾಗಿ ಹೇಳಿದನು. ಬಾಲಕ ಒಪ್ಪಲಿಲ್ಲ. ಅಕ್ಕಸಾಲಿಗ ವಜ್ರವನ್ನು ಹಿಂದಕ್ಕೆ ಕೊಡಲಿಲ್ಲ. ಬಾಲಕ ಅಕ್ಕಸಾಲಿಗನ ಮೇಲೆ ಖಟ್ಲೆ ಹೂಡಿದ. ಅಕ್ಕಸಾಲಿಗನು ವಜ್ರ ಹುಡುಗನಿಗೆ ಸೇರಿದ್ದಲ್ಲವೆಂದೂ ಅದರ ಮಾಲೀಕ ಗೊತ್ತಿಲ್ಲದೆ ಇರುವುದರಿಂದ ಅದನ್ನು ಹುಡುಗ ಕೇಳಲು ಹಕ್ಕಿಲ್ಲವೆಂದೂ ವಾದಿಸಿದ. ಮಾಲೀಕ ಪತ್ತೆಯಾಗುವವರೆಗೆ ಆ ವಜ್ರ ಹುಡುಗನ ಸ್ವಾಧೀನದಲ್ಲಿರಬಹುದೆಂದು ನ್ಯಾಯಾಲಯ ತೀರ್ಮಾನಿಸಿತು (ಅರ್ ಮೆರಿ ವರ್ಸಸ್ ಡಿಲಾಮರಿ 1721–1–ಎಸ್.ಟಿ.505). ವ್ಯಾಪಾರಕ್ಕಾಗಿ ಹೋದ ಗಿರಾಕಿಯೊಬ್ಬನಿಗೆ ಅಂಗಡಿಯೊಂದರಲ್ಲಿ ಯಾರೋ ಕೆಡವಿಹೋದ ನೋಟುಗಳ ಕಂತೆ ಸಿಕ್ಕಿತು. ಆ ಕಂತೆ ತನ್ನದೆಂದು ಅಂಗಡಿಯವನೂ ತನ್ನದೆಂದು ಗಿರಾಕಿಯೂ ಜಗಳವಾಡುತ್ತ ನ್ಯಾಯಾಲಯಕ್ಕೆ ದೂರಿತ್ತರು. ಅದು ಅಂಗಡಿಯಲ್ಲಿ ಸಿಕ್ಕಿದರೂ ಅದರ ಸ್ವಾಧೀನದ ಹಕ್ಕು ಗಿರಾಕಿಯದೆಂದು ತೀರ್ಮಾನವಾಯಿತು (ಬ್ರಿಡ್ಜಸ್ ವರ್ಸಸ್ ಹಾಕ್ಸ್‌ವರ್ತ್ 1851).

ಹರಾಜು ಮಾಡುವವ ತಿಳಿವಳಿಕೆಯಿಲ್ಲದೆ ತಮ್ಮದಲ್ಲದ ಮಾಲುಗಳನ್ನು ಹರಾಜು ಮಾಡಿದರೆ ವಾರಸುದಾರ ಹರಾಜು ಮಾಡುವವನ ಮೇಲೆ ಕ್ರಮ ನಡೆಸಬಹುದು. ಇದೊಂದು ವಿಚಿತ್ರವಾದ ನಿಯಮ. ಈ ಸಂದರ್ಭಗಳಲ್ಲಿ ಕೊಡಬೇಕಾದ ಪರಿಹಾರ ಆಯಾ ವ್ಯಾಜ್ಯದ ಔಚಿತ್ಯವನ್ನವಲಂಬಿಸಿರುತ್ತದೆಯಲ್ಲದೆ ಕೋರ್ಟಿನವರ ಅಭಿಪ್ರಾಯಕ್ಕೆ ಒಳಪಟ್ಟಿರುತ್ತದೆ. ನಮ್ಮ ಮಾಲುಗಳು ಇತರರ ಜಮೀನಿನಲ್ಲಿ ಅಥವಾ ಮನೆಯಲ್ಲಿದ್ದರೆ ಅಲ್ಲಿಗೆ ಪ್ರವೇಶಿಸಿ, ಅವುಗಳನ್ನು ತೆಗೆದುಕೊಂಡು ಬರುವ ಹಕ್ಕು ಮಾಲೀಕನಿಗಿರುತ್ತದೆ. ಆದರೆ, ಆ ಹಕ್ಕನ್ನು ಸಂದರ್ಭೋಚಿತವಾಗಿ ಉಪಯೋಗಿಸಬೇಕು.

**3. ಕೀರ್ತಿಗೆ ಸಂಬಂಧಪಟ್ಟ (ಮಾನನಷ್ಟದ) ಅಪಕೃತ್ಯಗಳು :** ಒಬ್ಬನ ಸ್ಥಾನ ಮಾನಗಳನ್ನು ಇತರರ ದೃಷ್ಟಿಯಲ್ಲಿ ಕಡಿಮೆಮಾಡುವ ಮಾತು, ಬರೆವಣಿಗೆ, ಚಿತ್ರ ಇತ್ಯಾದಿಗಳು ಮಾನನಷ್ಟವೆನಿಸಿಕೊಳ್ಳುತ್ತವೆ. ಸಾಮಾನ್ಯಜನರ ಮಾತುಗಳನ್ನು ಕೇಳಿ, ಬರೆವಣಿಗೆಯನ್ನು ಓದಿ, ಚಿತ್ರಗಳನ್ನು ನೋಡಿ, ಒಬ್ಬನ ವಿಚಾರದಲ್ಲಿ ಕೀಳುಭಾವನೆ ಬರುವಂತಾದರೆ ಅದು ಮಾನನಷ್ಟ; ಬರಿಯಬಯ್ಗಳು ಮಾನನಷ್ಟವಲ್ಲ. ಕ್ರಿಮಿನಲ್ ತಕ್ಸೀರನ್ನು ಮಾಡಿರುವನೆಂದು ದೂಷಿಸುವುದು, ಸ್ತ್ರೀಯರ ನಡತೆಯ (ಶೀಲದ) ವಿಷಯದಲ್ಲಿ ದೂಷಣೆಮಾಡುವುದು, ಒಬ್ಬನ ವ್ಯಾಪಾರೋದ್ಯೋಗಗಳ ಬಗ್ಗೆ ಅವನಿಗೆ ತಕ್ಕ ಸಾಮರ್ಥ್ಯವಿಲ್ಲವೆಂದು ಹೇಳುವುದು ಮಾನನಷ್ಟವೆನಿಸಿಕೊಳ್ಳುತ್ತದೆ (ಸ್ಲಾಂಡರ್). ಒಬ್ಬ ಸೈನ್ಯಾಧಿಕಾರಿ ಸಂಸತ್ ಸದಸ್ಯನಾಗಿದ್ದ. ಸೈನ್ಯದಲ್ಲಿ ಕೆಲಸಮಾಡಲು ಅನುಕೂಲಿಸುವಂತೆ ಸಂಸತ್ತಿನಿಂದ ರಜೆಪಡೆದಿದ್ದ. ಕೆಲವು ದಿನಗಳ ಅನಂತರ ಯುದ್ಧದಲ್ಲಿ ಗಾಯಗೊಂಡನೆಂದು ಅವನನ್ನು ಸೈನ್ಯದಿಂದ ನಿವೃತ್ತಿಮಾಡಿದರು. ಆತನು ಪಾರ್ಲಿಮೆಂಟ್ ಸಭೆಗೆ ಹಿಂದಕ್ಕೆ ಬಂದಾಗ, ಇನ್ನೊಬ್ಬ ಸದಸ್ಯ, ಅವನ ಬಗ್ಗೆ ಈ ರೀತಿ ಹೇಳಿದ. ಯುದ್ಧದಲ್ಲಿ ಗಾಯಗೊಂಡುದಕ್ಕಾಗಿ ಅಲ್ಲ ಕುಡುಕನಾದ್ದರಿಂದ ನಿವೃತ್ತನಾದ ಎಂದು ಹೇಳುವುದು ಅವನನ್ನು ಅವಹೇಳನಮಾಡಿದಂತೆ ಎಂದು ನ್ಯಾಯಾಲಯ ತೀರ್ಪುಕೊಟ್ಟು ಪರಿಹಾರ ಕೊಡಿಸಿತು (ಬುಲ್ ವರ್ಸಸ್ ವಾಸ್‍ಕ್ವೆಸ್ 1947, 1.ಎ.ಇ.ಆರ್. 334). ಪುರಸಭಾ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯನ್ನು ಕುಡುಕನೆಂದು ಕರೆಯುವುದು ಮಾನನಷ್ಟವಲ್ಲವೆಂದು ತೀರ್ಮಾನವಾಗಿರುತ್ತೆ (ಅಲೆಕ್ಸಾಂಡರ್ ವರ್ಸಸ್ ಜೆಂಕಿನ್ಸ್ 1892. 1.ಕ್ಯೂ.ಬಿ. 797).

ಜಿದ್ದಿನಿಂದ, ಅವಮಾನವಾಡಬೇಕೆಂಬ ಉದ್ದೇಶದಿಂದ ಮಾನನಷ್ಟ ಉಂಟುಮಾಡುವುದು ಹೆಚ್ಚಿನ ಪರಿಹಾರಕ್ಕೆ ಅವಕಾಶ ಕೊಡುತ್ತದೆ. ಯಾವ ಸಂದರ್ಭದಲ್ಲಿ ಯಾವ ಹೇಳಿಕೆಗಳಿಂದ ಮಾನನಷ್ಟವಾಗಿದೆ ಎಂದು ತೀರ್ಮಾನಿಸುವುದು ಕಷ್ಟ. ಅದು ಪ್ರತಿ ವ್ಯಾಜ್ಯದ ಸ್ವರೂಪ, ವಿಷಯ ಇವುಗಳನ್ನವಲಂಬಿಸಿರುತ್ತದೆ. ಒಂದು ಬ್ಯಾಂಕಿನ ಚೆಕ್ಕುಗಳನ್ನು ನಾವು ಅಂಗೀಕರಿಸುವುದಿಲ್ಲ ಎಂದು ಒಬ್ಬ ವ್ಯಾಪಾರಿ ಹೇಳಿದರೆ ಅದು ಮಾನನಷ್ಟವಾಗುವುದಿಲ್ಲ (ಕ್ಯಾಪಿಟಲ್ ಮತ್ತು ಕಾಂಡಿ ಬ್ಯಾಂಕ್ ವರ್ಸಸ್ ಹೆಂಡಿ 1882. 741). ಒಬ್ಬನ ಏಜೆನ್ಸಿಯನ್ನು ಕೊನೆಗಾಣಿಸಿದೆ ಎಂದು ಹೇಳುವುದೂ ಮಾನನಷ್ಟವಲ್ಲ (ನೆವಿಲ್ ವರ್ಸಸ್ ಫೈನ್ ಆರ್ಟ್ ಇನ್‍ಷೂರೆನ್ಸ್ ಕಂ. 1897 ಎ.ಸಿ. 68). ಕೆಲವುವೇಳೆ ಮಾತುಗಳು ಉತ್ಪ್ರೇಕ್ಷೆಯಿಂದ ಕೂಡಿರಬಹುದು; ಅಥವಾ ಗೂಢಾರ್ಥವನ್ನು ಹೊಂದಿರಬಹುದು. ಅವುಗಳ ಅರ್ಥ ಬಿಡಿಸಿದ ಹೊರತು ಮಾನನಷ್ಟ ಗೊತ್ತಾಗದಿರಬಹುದು. ಅಂಥ ಸಂದರ್ಭಗಳಲ್ಲಿ ಅವುಗಳ ಅರ್ಥವನ್ನು ಬಿಡಿಸಿ ಮಾನನಷ್ಟವಾಗಿರುವ ರೀತಿಯನ್ನು ತೋರಿಸಿಕೊಡಬಹುದು. ಇದಕ್ಕೆ ಹೀನಾಯದ ವ್ಯಂಗ್ಯೋಕ್ತಿ (ಇನ್ನ್ಯೂಯಂಡೋ) ಎಂದು ಹೆಸರು. ಒಬ್ಬನನ್ನು ಮೀರ್ ಸಾದಕ್ ಎಂದು ಕರೆದರೆ ಅವನು ದ್ರೋಹಿ ಎಂಬ ಅರ್ಥ ಬರುತ್ತದೆ. ಆಗ ಟಿಪ್ಪುಸುಲ್ತಾನನ ಕಾಲದಲ್ಲಿದ್ದ ಈ ಚರಿತ್ರಾರ್ಹ ವ್ಯಕ್ತಿ ಏನು ಮಾಡಿದ್ದ ಎಂಬುದನ್ನು ವಿಶದಪಡಿಸಬೇಕು.

ಮಾನನಷ್ಟದ ಹೇಳಿಕೆಗಳು ಮೂರನೆಯವನ ಗಮನಕ್ಕೆ ಬರಬೇಕು (ಸಾರ್ವಜನಿಕ ವಾಗಬೇಕು). ನಷ್ಟಹೊಂದಿದವನೊಬ್ಬನಿಗೆ ಅದು ತಿಳಿದರೆ ಅದಕ್ಕೆ ಪರಿಹಾರವಿಲ್ಲ. ನಿಮ್ಮನ್ನು ಒಬ್ಬ ಅವಮಾನವಾಗುವಂತೆ ಬಯ್ದು ಕಾಗದ ಬರೆದು ಲಕೋಟೆಯಲ್ಲಿ ಹಾಕಿ ಕಳುಹಿಸಿ, ಅದನ್ನು ನೀವು ಓದಿದರೆ ಮಾನನಷ್ಟವಾಗುವುದಿಲ್ಲ. ನಿಮ್ಮ ಅಡಿಗೆಯವನೊ, ಮನೆಯಾಕೆಯೊ, ಗಮಾಸ್ತನೊ ಒಡೆದು ಓದಿದರೆ ಅದು ಮಾನನಷ್ಟದ ಪರಿಮಿತಿಗೆ ಬರುತ್ತದೆ. ಹೀಗೆಯೇ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗುವ ಸಮಾಚಾರಗಳು, ಹಸ್ತಪತ್ರಿಕೆಗಳು, ಪ್ರಕಟಣೆಗಳು ಇತ್ಯಾದಿ. ಒಬ್ಬ ಕೊಟ್ಟ ಮಾನನಷ್ಟದ ಹೇಳಿಕೆಗಳನ್ನು ಇನ್ನೊಬ್ಬ ಮತ್ತೆ ಹೇಳಿದರೆ ಆತನೂ ಮಾನನಷ್ಟಕ್ಕೆ ಗುರಿಯಾಗುತ್ತಾನೆ. ಇತರರು ಹೇಳಿದ್ದನ್ನು ಮಾತ್ರ ತಾನು ಪುನಃ ಹೇಳಿದನೆಂದ ಮಾತ್ರಕ್ಕೆ ವಿನಾಯಿತಿಯಿಲ್ಲ. ಸತ್ಯವಾದದ್ದನ್ನು ಹೇಳಿ, ಅನಾವಶ್ಯಕವಾದ ಪ್ರಕಟಣೆ ಮಾಡದೆ ಹಾಳತವಾಗಿ ಪ್ರಚುರಪಡಿಸುವುದೂ ಸಾರ್ವಜನಿಕ ವಿಷಯಗಳಲ್ಲಿ ಟೀಕೆ ಮಾಡುವುದೂ ಸಂಸತ್ ಶಾಸನ ಸಭೆಗಳ ನಡೆವಳಿಕೆಗಳನ್ನು ಪ್ರಕಟಿಸುವುದೂ ನ್ಯಾಯಾಲಯ ವ್ಯವಹಾರಗಳನ್ನು ಪ್ರಕಟಿಸುವುದೂ ನ್ಯಾಯವ್ಯವಹಾರದಲ್ಲಿ ವ್ಯಾಜ್ಯಕ್ಕೆ ಸಂಬಂಧಪಟ್ಟಂತೆ ಮಾತನಾಡುವುದೂ ಮೇಲಿನ ಅಧಿಕಾರಿಗಳಿಗೆ ಕೆಳಗಿನ ಅಧಿಕಾರಿಗಳ ಮೇಲೆ ದೂರು ಕೊಡುವುದೂ, ವರದಿ ಮಾಡುವುದೂ–ಇವೆಲ್ಲ ಮಾನನಷ್ಟ ಮೊಖದ್ದಮೆಯಲ್ಲಿ ವಿನಾಯಿತಿಯ ವರ್ಗಕ್ಕೆ ಸೇರುತ್ತವೆ.

ಕಾನೂನಿನ ಪ್ರಕಾರ ಮಾನನಷ್ಟದ ಮಾತುಗಳಿಗೆ ಈ ಸಂದರ್ಭಗಳಲ್ಲಿ ವಿಶೇಷ ರಕ್ಷಣೆಯಿದೆ. ಗ್ರಂಥಕರ್ತ ಒಬ್ಬ ವ್ಯಕ್ತಿಯ ಹೆಸರು ಬರೆದು ಮಾನನಷ್ಟ ಮಾಡಿದರೆ, ಆ ವ್ಯಕ್ತಿ ಗ್ರಂಥಕರ್ತನ ಗಮನದಲ್ಲಿಲ್ಲದೆ ಇದ್ದರೂ ಬರಿಯ ಕಾಲ್ಪನಿಕ ವ್ಯಕ್ತಿಯಾಗಿದ್ದರೂ ಅಂಥವನಿಗೆ ಅದು ಅನ್ವಯವಾಗುವುದಾದರೆ ಮಾನನಷ್ಟಕ್ಕೆ ಗುರಿಯಾಗುತ್ತಾನೆ. ಲಂಡನ್ ಪತ್ರಿಕೆಯೊಂದು ಜೋನ್ಸ್ (ಎಂಬ ಒಬ್ಬ ಪಾದ್ರಿ) ಫ್ರಾನ್ಸ್ ದೇಶದಲ್ಲಿ ಒಂದು ಹಬ್ಬದಲ್ಲಿ ತನ್ನ ವಿಪರೀತ ನಡೆವಳಿಕೆಯಿಂದ ಅವಮಾನವಾಗುವ ರೀತಿಯಲ್ಲಿ ವರ್ತಿಸಿದನೆಂಬ ಪ್ರಕಟಣೆ ಮಾಡಿತು. ಅದೇ ಸಮಯದಲ್ಲಿ ಲಂಡನ್ನಿನಲ್ಲಿ ಆರ್ಟಿಮಿನ್ ಜೋನ್ಸ್ ಎಂಬ ಬ್ಯಾರಿಸ್ಟರೊಬ್ಬನಿದ್ದ. ಅವನ ಸ್ನೇಹಿತರು ಈ ವರ್ತಮಾನವನ್ನು ಓದಿದೊಡನೆ ಇದು ತಮ್ಮ ಸ್ನೇಹಿತ ಜೋನ್ಸ್‌ಗೆ ಅನ್ವಯಿಸುತ್ತದೆಂದು ತಾವು ಭಾವಿಸುವುದಾಗಿ ಸಾಕ್ಷ್ಯ ಹೇಳಿದರು. ಪತ್ರಿಕೆ ಜೋನ್ಸ್‌ಗೆ ಮಾನನಷ್ಟ ಪರಿಹಾರ ಕೊಡಬೇಕೆಂದು ತೀರ್ಮಾನವಾಯಿತು (ಹಲ್ಟನ್ ವರ್ಸಸ್ ಜೋನ್ಸ್ 1910, ಎ.ಸಿ.20). ಇಡೀ ಒಂದು ಗುಂಪನ್ನೇ ಮಾನನಷ್ಟಕ್ಕೆ ಈಡು ಮಾಡಬಹುದು. ಆಗ ಆ ಗುಂಪಿನವರಿಗೆ ಪರಿಹಾರ ಪಡೆಯುವ ಹಕ್ಕಿದೆ. ಆದರೆ, ಯಾವುದೊಂದು ಗುಂಪಿಗೂ ಅನ್ವಯಿಸಲು ಸಾಧ್ಯವಿಲ್ಲದಿರುವ ಹಾಗೂ ಸರ್ವರಿಗೂ ಅನ್ವಯಿಸುವ ಮಾತುಗಳು ಪರಿಹಾರಕ್ಕೆ ಅವಕಾಶ ಕೊಡುವುದಿಲ್ಲ. ನ್ಯಾಯಾಧೀಶರನ್ನಾಗಲಿ, ನ್ಯಾಯಾಲಯದ ವ್ಯವಹಾರಗಳ ವಿಷಯದಲ್ಲಾಗಲಿ ಅವಮಾನಕರವಾದ, ಅವಹೇಳನ ಮಾಡುವ ಹೇಳಿಕೆಗಳು ಮಾನನಷ್ಟದ ವರ್ಗಕ್ಕೆ ಸೇರುತ್ತವೆ. ಅಲ್ಲದೆ ಕಂಟೆಂಪ್ಟ್ ಆಫ್ ಕೋರ್ಟ್ ನ್ಯಾಯಾಲಯ ನಿಂದನೆ ನಿಯಮದ ವ್ಯಾಪ್ತಿಗೆ ಒಳಪಡುತ್ತವೆ. ನ್ಯಾಯಾಧೀಶರು, ಸಾಕ್ಷಿಗಳು, ವಕೀಲರು ಮತ್ತು ಕಕ್ಷಿಗಾರರಿಗೆ ವಿಶೇಷ ವಿನಾಯಿತಿಗಳಿವೆ, ಪರಿಮಿತಿಗಳೂ ಇವೆ. (ದಿ ಕಂಟೆಂಪ್ಟ್ ಆಫ್ ಕೋರ್ಟ್ ಆ್ಯಕ್ಟ್ 1952).

**4 ಇತರ ತಪ್ಪುಗಳು: ಮೋಸ (ಡಿಸೀಟ್)** : ಅಡ್ವೊಕೇಟ್ ಆಗಿಲ್ಲದಿದ್ದರೂ ಗೌನ್ ಮತ್ತು ಬ್ಯಾಂಡ್‌ಗಳನ್ನು ಧರಿಸಿ ಇತರರಿಗೆ ತಪ್ಪು ತಿಳಿವಳಿಕೆ ಬರುವಂತೆಮಾಡಿ ವಕಾಲತ್ತು ಪಡೆದರೆ, ಮಾತನಾಡದಿದ್ದರೂ ಮೋಸ ಮಾಡಿದಂತಾಗುತ್ತದೆ. ಒಂದು ಕಂಪನಿಯ ಡೈರೆಕ್ಟರುಗಳು ಸಾಲ ತೆಗೆದುಕೊಳ್ಳುವ ಜಾಹಿರಾತಿನಲ್ಲಿ ಸುಳ್ಳು ಉದ್ದೇಶಗಳನ್ನು ನಮೂದಿಸಿದಲ್ಲಿ ಅದು ಮೋಸವೆನ್ನಿಸುತ್ತದೆ (ಡೆರಿ ವರ್ಸಸ್ ಪೀಕ್ 1889, 14, ಎ.ಸಿ. 337, ವಿಶೇಷ ಸಂದರ್ಭದ ವಿವರಣೆ). ಭಿಕಾರಿ (ಪಾಪರ್) ಆಗಿರುವನನ್ನು ಆಸ್ತಿವಂತನೆಂದು ಹೇಳಿ ಸಾಲ ಕೊಡಿಸುವುದು ಮೋಸ. ಏಜೆಂಟರುಗಳ ಮೋಸದ ಹೇಳಿಕೆಗಳಿಗೆ ಯಜಮಾನರ ಜವಾಬ್ದಾರಿಯಿರುತ್ತದೆ. ಇದರಿಂದ ನಷ್ಟವಾದಲ್ಲಿ ಯಜಮಾನ ನಷ್ಟತುಂಬಿಕೊಡಬೇಕು (ಆರ್ಮ್‌ಸ್ಟ್ರಾಂಗ್ ವರ್ಸಸ್ ಸ್ಟ್ರೇಯನ್ 1952, ಕೆ.ಬಿ. 232). ಇದಕ್ಕೆ ಕೆಲವು ನಿಯಮಗಳಿವೆ.

**ಉದಾಸೀನತೆ (ನೆಗ್ಲಿಜೆನ್ಸ್)** : Aಯ ವಿಷಯದಲ್ಲಿ ಕರ್ತವ್ಯ ನಿರ್ವಹಣೆಯ ಭಾರಹೊತ್ತ B ತನ್ನ ಕರ್ತವ್ಯವನ್ನುಲ್ಲಂಘಿಸಿ ಅದರಿಂದ A ಗೆ ಬಾಧೆ ತಂದರೆ, B ಪರಿಹಾರ ಕೊಡಬೇಕಾಗುತ್ತದೆ. ಸ್ನೇಹಿತನೊಬ್ಬ ತಂದ ಸೀಸೆಯಿಂದ ಒಬ್ಬಾಕೆ ಸ್ವಲ್ಪ ಜಿಂಜರ್ ಬೀರ್ ಬಗ್ಗಿಸಿಕೊಂಡು ಸೇವಿಸಿ, ಮತ್ತೆ ಸ್ವಲ್ಪ ಸೇವಿಸಲು ಬಗ್ಗಿಸಿದಾಗ ಅದರಿಂದ ಸತ್ತು ಕೊಳೆತ ಬಸವನ ಹುಳು ಹೊರಕ್ಕೆ ಬಂತು. ಇದರಿಂದ ತಲ್ಲಣಗೊಂಡ ಆಕೆ ರೋಗಪೀಡಿತಳಾದಳು. ತಯಾರಕರು ಕರ್ತವ್ಯವನ್ನುಲ್ಲಂಘಿಸಿದ್ದಾರೆಂದೂ ಪರಿಹಾರ ಕೊಡಬೇಕೆಂದೂ ತೀರ್ಮಾನವಾಯಿತು (ಡೋನೋ ವರ್ಸಸ್ ಸ್ಟೀವನ್‌ಸನ್ 1932, ಎ.ಸಿ. 562). ಹೀಗೆಯೇ ವೈದ್ಯರೂ ವಕೀಲರೂ ಹಾಗೂ ಇನ್ನಿತರ ಬಾಬುಗಳಲ್ಲಿ ನೈಪುಣ್ಯ ಪಡೆದವರೂ ಕರ್ತವ್ಯದಲ್ಲಿ ಉದಾಸೀನರಾದರೆ ಪರಿಹಾರ ಕೊಡಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯಲ್ಲಿ ಪರಿಣತನಾದ ವೈದ್ಯನೊಬ್ಬ ಒಬ್ಬನ ಉದರಶಸ್ತ್ರಕ್ರಿಯೆ ಮಾಡಿದ ಕೆಲವು ದಿನಗಳ ಅನಂತರ ಅವನ ಉದರದಲ್ಲಿ ಹೀರೊತ್ತು (ಸ್ವ್ಯಾಬ್) ಕಾಣಿಸಿತು. ವೈದ್ಯ ಪರಿಹಾರ ಕೊಡಬೇಕೆಂದು ತೀರ್ಮಾನವಾಯಿತು (ಮಾಹೊನ್ ವರ್ಸಸ್ ಅಸಬರ್ನ್ 1939. 2 ಕೆ.ಬಿ. 14).

**ಪೀಡೆ, ಅನಿಷ್ಟ (ನ್ಯೂಸೆನ್ಸ್)** : ಮತ್ತೊಬ್ಬರ ಚರಾಸ್ತಿಯ ಉಪಯೋಗದಲ್ಲಿ ಅಥವಾ ಸಂಬಂಧಪಟ್ಟ ಅವನ ಹಕ್ಕಿನ ವಿಷಯದಲ್ಲಿ ಕಾನೂನುಬದ್ಧವಲ್ಲದ ರೀತಿಯಲ್ಲಿ ಅಡ್ಡಿ ತರುವುದು ಅನಿಷ್ಟ ಅಥವಾ ಪೀಡೆಯಾಗಿರುತ್ತದೆ. ಅನಿಷ್ಟದಲ್ಲಿ ಎರಡು ಬಗೆ. ವ್ಯಕ್ತಿಗೆ ಅನಿಷ್ಟ ಮತ್ತು ಸಾರ್ವಜನಿಕರಿಗೆ ಅನಿಷ್ಟ ಎಂದು. ಅಡ್ಡಿ ಯಾವ ರೀತಿಯದು, ಅದರಿಂದ ಅನಿಷ್ಟ ಉಂಟಾಗಿದೆಯೆ, ಎಂಬುದನ್ನು ನ್ಯಾಯಾಲಯ ನಿರ್ಣಯಿಸುತ್ತದೆ. ವಿದ್ಯುಚ್ಛಕ್ತಿಯ ಟ್ರಾನ್ಸ್‌ಫಾರ್ಮರ್ ಉಂಟು ಮಾಡುವ ಶಬ್ದ ಚರ್ಚಿನ ಧರ್ಮೋಪನ್ಯಾಸಕ್ಕೆ ಪೀಡೆಯಲ್ಲ (ಹೀತಿ ವರ್ಸಸ್ ಬ್ರೈಟನ್ 1908, 98 ಎಲ್. ಟಿ. 718). ಕೆಳಮನೆಯ ಕಾಗದದ ಡಬ್ಬ ಮಾಡುವವ ಉಪಯೋಗಿಸುವ ಶಾಖದಿಂದ ಮೇಲ್ಮನೆಯವ ಇಟ್ಟಿದ್ದ ಸೂಕ್ಷ್ಮರೀತಿಯ ಕಾಗದ ಅನುಪಯುಕ್ತವಾಗುವುದು ಪೀಡೆಯಲ್ಲ (ರಾಬಿನ್‌ಸನ್ ವರ್ಸಸ್ ಕಿಲ್‌ವರ್ಟ್ 1889, 41 ಸಿ.ಎಚ್.ಡಿ. 88). ಸಂಗೀತಗಾರನೊಬ್ಬನ ಪಕ್ಕದ ಮನೆಯಲ್ಲಿದ್ದವನೊಬ್ಬ ಸಂಗೀತದ ನಿತ್ಯಪಾಠಗಳಿಂದ ತೊಂದರೆಗೊಂಡು, ಸಂಗೀತ ಆರಂಭವಾದೊಡನೆ ಕೂಗುವುದು, ಶಿಳ್ಳೆ ಹೊಡೆಯುವುದು, ತಟ್ಟೆ ಬಡಿಯುವುದು ಮುಂತಾದುವನ್ನು ಮಾಡಿ ಪಾಠ ಮುಂದುವರಿಯದಂತೆ ಅಡ್ಡಿ ಮಾಡಿದ. ಸಂಗೀತಗಾರನಿಗೆ ಆತ ಪರಿಹಾರ ಕೊಡಬೇಕೆಂದು ತೀರ್ಮಾನವಾಯಿತು (ಕ್ರಿಸ್ಟಿ ವರ್ಸಸ್ ಡೇವಿ 1893. 1 ಸಿ.ಎಚ್. 316). ಅನಿಷ್ಟದ ವ್ಯಾಪ್ತಿ ಸುವಿಸ್ತಾರವಾಗಿದೆ. ಅದರ ಸ್ವರೂಪವನ್ನು ನ್ಯಾಯಾಲಯಗಳ ತೀರ್ಪುಗಳಿಂದ ತಿಳಿಯಬಹುದು.

**ವಿಶೇಷ ಹೊಣೆ (ಸ್ಟ್ರಿಕ್ಟ್ ಲಯಬಿಲಿಟಿ)** : ಯಾವ ದುರುದ್ದೇಶ ಅಥವಾ ಉದಾಸೀನತೆಯಿಲ್ಲದಿದ್ದರೂ ಕೆಲವು ನಿಯಮಿತ ಸಂದರ್ಭಗಳಲ್ಲಿ ಒಬ್ಬ ವಿಶೇಷ ಹೊಣೆಗೆ ಬದ್ಧನಾಗಬಹುದು. ಇದಕ್ಕೆ ರೈಲ್ಯಾಂಡ್ ವರ್ಸಸ್ ಫ್ಲೆಚರ್ ಹೊಣೆ ಎಂದು ಕರೆಯುತ್ತಾರೆ. ಒಬ್ಬ ಗಿರಣಿ ಮಾಲೀಕ ತನ್ನ ಸ್ವಂತ ಭೂಮಿಯಲ್ಲಿ ಒಂದು ದೊಡ್ಡ ನೀರಿನ ತೊಟ್ಟಿ ಕಟ್ಟಲು ಕಂಟ್ರಾಕ್ಟರುಗಳನ್ನು ನೇಮಿಸಿದ. ತೊಟ್ಟಿ ಕಟ್ಟುವ ಜಾಗಕ್ಕೂ ಪಕ್ಕದ ಮತ್ತೊಬ್ಬನ ಗಣಿಗೂ ಮಧ್ಯೆ ಕಂದಕಗಳಿದ್ದು, ಅವುಗಳನ್ನು ಕೂಡುಗಂಬಗಳಿಂದ ಮುಚ್ಚಿದ್ದರು. ಕಲ್ಲುಮಣ್ಣಿನಿಂದ ಮುಚ್ಚಿದ್ದ ಅವು ಗೋಚರವಾಗುವಂತಿರಲಿಲ್ಲ. ತೊಟ್ಟಿ ನಿರ್ಮಿಸಲ್ಪಟ್ಟ ಅನಂತರ ಅದಕ್ಕೆ ಪೂರ್ತಿ ನೀರು ತುಂಬಲಾಯಿತು. ನೀರು ಕೂಡುಗಂಬಗಳನ್ನೊಡೆದುಕೊಂಡು ಗಣಿಗೆ ಪ್ರವಹಿಸಿತು. ಔದಾಸೀನ್ಯವಿಲ್ಲದಿದ್ದರೂ ದುರುದ್ದೇಶವಿಲ್ಲದಿದ್ದರೂ ಗಿರಣಿ ಮಾಲೀಕ ಪರಿಹಾರ ಕೊಡಬೇಕೆಂದು ತೀರ್ಮಾನಿಸಲಾಯಿತು (ರೈಲ್ಯಾಂಡ್ ವರ್ಸಸ್ ಫ್ಲೆಚರ್ 1868. 3. ಎಚ್.ಎಲ್.330). ವಿಶೇಷ ಹೊಣೆಯ ವ್ಯಾಪ್ತಿ ಅಪಕೃತ್ಯದಲ್ಲಿ ಗಮನಾರ್ಹ ಸ್ಥಾನ ಪಡೆದಿದೆ. (ಎಂ.ಎಸ್.ಆರ್.)

**ಅಪಚಾರ** : ಧರ್ಮನಿಂದೆ, ದೇವನಿಂದೆ, ಗುರುನಿಂದೆ, ಅಪವಿತ್ರ ವಾಕ್ಪ್ರಯೋಗ ಮುಂತಾದವು (ಬ್ಲಾಸ್‌ಫೆಮಿ). ಪ್ರಾಚೀನ ಗ್ರೀಸ್ ಮತ್ತು ರೋಮ್ ದೇಶಗಳಲ್ಲಿ ಅಪಚಾರವನ್ನು ಒಂದು ಅಪರಾಧವಾಗಿ ಪರಿಗಣಿಸಿದ್ದರು; ಜನರ ದುರ್ಮಾರ್ಗ ಪ್ರವೃತ್ತಿಗೆ ಇದು ಪ್ರೇರಕವೆಂಬ ಕಾರಣದಿಂದ, ಸಾಕ್ರಟೀಸನನ್ನು ವಿಚಾರಣೆಗೆ ಗುರಿಪಡಿಸಿದ್ದು ಒಂದು ಉದಾಹರಣೆ. ಆದರೆ ಇದೊಂದು ಮಹಾಪಾಪವೆಂಬ ಕಲ್ಪನೆ ಏಕದೇವತಾವಾದವನ್ನು ಎತ್ತಿಹಿಡಿಯುವ ಯಹೂದಿ (ಜ್ಯೂ) ಮತ್ತು ಕ್ರಿಸ್ತಧರ್ಮಗಳ ವೈಶಿಷ್ಟ್ಯವೆನ್ನಬಹುದು. ದೇವದ್ರೋಹಿಗಳಾದ ಪಾಷಂಡಿಗಳಿಗೆ ಅವರು ಮರಣದಂಡನೆಯನ್ನೂ ವಿಧಿಸುತ್ತಿದ್ದರು. ದೇವನಿಂದೆಯಂತೆ, ಧರ್ಮ ಹಾಗೂ ಧಾರ್ಮಿಕ ಸಂಸ್ಥೆಗಳ ದ್ರೋಹವನ್ನೂ ಅಪಚಾರವೆಂದು ಪರಿಗಣಿಸಲಾಗುತ್ತಿತ್ತು. ಮಧ್ಯಯುಗದ ಅನಂತರ ಯುರೋಪಿನಲ್ಲಿ ಅಪಚಾರವನ್ನು ಪಾತಕವೆನ್ನದಿದ್ದರೂ ಸಮಾಜ ಘಾತುಕ ಪ್ರವೃತ್ತಿಯೆಂದೇ ತಿಳಿಯುತ್ತ ಬಂದಿದ್ದಾರೆ. ಇಸ್ಲಾಂ ಧರ್ಮದಲ್ಲಿ ಕೂಡ ದೇವನಿಂದೆ ಪಾತಕವೆನಿಸುತ್ತವೆ.

ಹಿಂದೂಧರ್ಮದಲ್ಲಿ ಧರ್ಮದ್ರೋಹಿಗೆ ಇಹದಲ್ಲಿ ಧರ್ಮಬಹಿಷ್ಕಾರಾದಿಶಿಕ್ಷೆಗಳೂ ಪರದಲ್ಲಿ ನರಕಪ್ರಾಪ್ತಿಯೇ ಮುಂತಾದ ದುರ್ಗತಿಗಳೂ ಉಕ್ತವಾಗಿದ್ದರೂ ರಾಜಕೀಯವಾಗಿ ದಂಡನೆ ವಿಧಿಸುತ್ತಿದ್ದಂತೆ ಕಾಣುವುದಿಲ್ಲ. ಅನೇಕ ದೇವತೆಗಳನ್ನೊಪ್ಪುವ ಭಾರತೀಯರಲ್ಲಿ ಪ್ರತಿಯೊಬ್ಬನಿಗೂ ಯಾವುದಾದರೂ ಒಬ್ಬ ದೇವನಲ್ಲಿ ಶ್ರದ್ಧೆ ಇರುತ್ತದಾದ ಕಾರಣ ಯಾರ ಮೇಲೂ ದೈವನಿಂದೆಯ ಕಳಂಕ ಹೊರಿಸುವ ಅಗತ್ಯ ಕಾಣಲಿಲ್ಲ. ವೇದಪುರಾಣಗಳ ಕಾಲಾನಂತರ ಶಿವ, ವಿಷ್ಣು ಮುಂತಾಗಿ ಏಕದೇವವಾದಗಳು ಪ್ರಾಬಲ್ಯಕ್ಕೆ ಬಂದಾಗ ಶೈವ, ವೈಷ್ಣವ, ಮುಂತಾದ ಧರ್ಮಗಳಲ್ಲೂ ಅಪಚಾರವೆಸಗಿದವರ ಜೀವ ತೆಗೆಯಬೇಕೆನ್ನುವವರೆಗೆ ಅಪಚಾರಭಾವನೆ ವಿಕಾಸವಾಗುವುದನ್ನು ಕಾಣಬಹುದು. ಧರ್ಮಕ್ಕಾಗಿ ಕಾದುವುದನ್ನು ಒಪ್ಪುವ ವೀರಶೈವ, ವೀರವೈಷ್ಣವ, ಸಿಖ್ ಮುಂತಾದ ಪಂಥಗಳೂ ಭಾರತದಲ್ಲಿ ಕಡೆಕಡೆಗೆ ಉದಿಸಿದುವಾದರೂ ಅಲ್ಲೆಲ್ಲಿಯೂ ಪಾಶ್ಚಾತ್ಯದೇಶಗಳಂತೆ ಧರ್ಮಾಂಧತೆ ನಮ್ಮ ದೇಶದ ರಾಜಕಾರಣವನ್ನು ಕಪಿಮುಷ್ಟಿಯಲ್ಲಿ ಹಿಡಿಯಲಿಲ್ಲ. ರಾಜಕೀಯವೈರಿಗಳನ್ನು ನಾಶಮಾಡಲು ಅಪಚಾರವನ್ನು ಒಂದು ಅಸ್ತ್ರವನ್ನಾಗಿ ಬಳಸಿದ್ದು ಭಾರತದ ಇತಿಹಾಸದಲ್ಲಿ ತುಂಬ ವಿರಳ. (ಕೆ.ಕೆ.)

**ಅಪಟೈಟ್** : ರಾಸಾಯನಿಕ ಸಂಯೋಜನೆಯಲ್ಲಿ ಇದು ಮುಖ್ಯವಾಗಿ ಕ್ಯಾಲ್ಸಿಯಂ, ಫ್ಲೋರೀನ್ ಮುಂತಾದ ಧಾತುಗಳಿಂದ ಕೂಡಿದ ಫಾಸ್ಫೇಟ್ ಖನಿಜ. ಹೊರರೂಪಿನಲ್ಲಿ ಷಟ್‌ಭುಜೀಯ (ಹೆಕ್ಸಾಗನಲ್) ವರ್ಗದ ಹರಳುಗಳಾಗಿಯೂ ಕಣಗಳ ಮುದ್ದೆಯಾಗಿಯೂ ಕಂಡುಬರುತ್ತದೆ. ಹಲವು ವೇಳೆ ಗುಂಡು ಗುಂಡಾಗಿದ್ದು ದ್ರಾಕ್ಷಿಗೊಂಚಲಿನಂತೆಯೂ ತೋರಿಬರುವುದುಂಟು.

ಖನಿಜದ ಬಣ್ಣ ಬಹುಮಟ್ಟಿಗೆ ಹಸುರು ಛಾಯೆಯುಳ್ಳ ನೀಲಿ, ಊದಾ ಮತ್ತು ಬೂದು. ಕೆಲವು ವೇಳೆ ಹಳದಿ ಮತ್ತು ಕೆಂಪು ಛಾಯೆಗಳೂ ತೋರಿಬರುತ್ತವೆ. ಒರೆ ಹಚ್ಚಿದಾಗ, ಯಾವ ಬಣ್ಣವೇ ಇರಲಿ, ಅಚ್ಚನೆಯ ಬಿಳುಪು. ಹೊಳಪು ಗಾಜಿನಂತೆ, ಖನಿಜ ಸೀಳದೆ ಒಡೆದು ಛಿದ್ರವಾಗುತ್ತದೆ. ಒಡೆದ ಭಾಗದಲ್ಲಿ ಕಪ್ಪೆಚಿಪ್ಪನ್ನು ಹೋಲುವ ಗುರುತುಗಳುಂಟಾಗುತ್ತವೆ. ಗುರುತು ಅಸ್ಪಷ್ಟವಾಗಿಯೂ ತೋರುವುದುಂಟು. ಕಾಠಿಣ್ಯ: 5, ಚಾಕುವಿನಿಂದ ಖನಿಜವನ್ನು ಗೀರಿ ಗುರುತಿಸಬಹುದು. ಶುದ್ಧ ಹರಳುಗಳು ಉತ್ತಮ ಪಾರದರ್ಶಕತೆಯನ್ನು ಹೊಂದಿವೆ. ಕೆಲವು ಅಪಾರದರ್ಶಕವೂ ಹೌದು. ಸಾಪೇಕ್ಷಸಾಂದ್ರತೆ: 3.17–3.23. ಇದು ಬಹುಮಟ್ಟಿಗೆ ಅಗ್ನಿಶಿಲೆಗಳಲ್ಲೂ ಅಲ್ಪಸ್ವಲ್ಪ ಪ್ರಮಾಣದಲ್ಲಿ ರೂಪಾಂತರ ಶಿಲೆಗಳಲ್ಲೂ ದೊರೆಯುತ್ತದೆ. ಅಗ್ನಿಶಿಲಾವರ್ಗದ ಪೆಗ್ಮಟೈಟ್ ಎಂಬ ಒಡ್ಡುಶಿಲೆ (ಡೈಕ್

ರಾಕ್) ಈ ಖನಿಜದ ತವರು. ಉತ್ತಮದರ್ಜೆಯ ನಿಕ್ಷೇಪಗಳು ರಷ್ಯದ ಕೋಲಾ ಪ್ರಾಂತ, ಉತ್ತರ ಆಫ್ರಿಕದ ಟ್ಯುನೀಸಿಯ ಮತ್ತು ಮೊರಾಕೋ, ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ಹರಡಿವೆ.

ರಾಸಾಯನಿಕ ಗೊಬ್ಬರದ ತಯಾರಿಕೆಯಲ್ಲಿ ಇದನ್ನು ಮುಖ್ಯವಾಗಿ ಉಪಯೋಗಿಸುತ್ತಾರೆ. ಉತ್ತಮ ಬಣ್ಣದ ಪಾರದರ್ಶಕ ಹರಳುಗಳನ್ನು ಜವಾಹಿರಿಯಲ್ಲಿ ಉಪಯೋಗಿಸುವುದುಂಟು. (ಬಿ.ವಿ.ಜಿ.)

**ಅಪದಾನ :** ಬೌದ್ಧರ ಪಾಳಿ ತ್ರಿಪಿಟಕದಲ್ಲಿ ಸೇರಿರುವ ಬುದ್ಧ ನಿಕಾಯವೆಂಬ ಗ್ರಂಥ ಸಂಗ್ರಹದಲ್ಲೆ ಸೇರಿರುವ ಈ ಪದಕ್ಕೆ ದಿವ್ಯಚರಿತೆ ಎಂದರ್ಥ (ಅವದಾನವೆಂಬುದು ಸಂಸ್ಕೃತ ರೂಪ). ಬುದ್ಧನ ಅರ್ಹಂತರ, ಸ್ಥವಿರ–ಸ್ಥವಿರೆಯರ ಮತ್ತು ಉಪಾಸಕರ ಲೋಕೋತ್ತರ ಚಾರಿತ್ರ್ಯವನ್ನು ಉಲ್ಲೇಖಿಸುವ ಹಲವಾರು ಪ್ರಸಂಗಗಳನ್ನೂ ಕಥೆಗಳನ್ನೂ ಅಪದಾನದಲ್ಲಿ ಹೆಣೆದಿದ್ದಾರೆ. ಇವುಗಳಲ್ಲಿ ಹಲವು ಜಾತಕ ಕಥೆಗಳನ್ನು ಹೋಲುವುವು. ಅಪದಾನದಲ್ಲಿ ಬುದ್ಧಾಪದಾನ, ಪಚ್ಚೇಕ ಬುದ್ಧಾಪದಾನ, ಥೇರಾಪದಾನ, ಥೇರೀ ಅಪದಾನ ಎಂಬ ನಾಲ್ಕು ಪರಿಚ್ಛೇದಗಳುಂಟು; ಒಂದೊಂದು ಪರಿಚ್ಛೇದದಲ್ಲೂ ಹಲವಾರು ವಗ್ಗಗಳುಂಟು; ಒಂದೊಂದು ವಗ್ಗ ಒಂದೊಂದು ಪ್ರಸಂಗವನ್ನು ನಿರೂಪಿಸುತ್ತದೆ. ಒಟ್ಟು 547 ಪ್ರಸಂಗಗಳು ಇಲ್ಲಿ ಸೇರಿವೆ. ಗೌತಮಬುದ್ಧನಲ್ಲದೆ ಸಾರಿಪುತ್ತ, ಮೊಗ್ಗಲ್ಲಾನ, ಕಸ್ಸಪ, ಅನುರುದ್ಧ, ಉಪಾಲಿ, ಅನಂತ, ರಾಹುಲ, ರಟ್ಠಪಾಲ ಮುಂತಾದ ಸ್ಥವಿರರೂ ಪಹಾಪಜಾಪತೀಗೋತಮಿ, ಖೇಮಾ, ಪಟಾಚಾರಾ. ಕಿಸಗೋತಮೀ ಮುಂತಾದ ಸ್ಥವಿರೆಯರೂ ಅಪದಾನದಲ್ಲಿ ಉಲ್ಲೇಖಕ್ಕೆ ಬಂದಿದ್ದಾರೆ. ಹಲವಾರು ಪಾಳಿಅಪದಾನಗಳು ಸಂಸ್ಕೃತ ಅವದಾನಗಳನ್ನು ಅವಲಂಬಿಸಿ ಬರೆದುವೆಂದು ತಿಳಿಯುತ್ತದೆ. (ಎನ್.ಕೆ.ಆರ್.)

**ಅಪಭ್ರಂಶ :** ಶಿಷ್ಟ ಸಂಸ್ಕೃತ ಭಾಷೆಯ ಸ್ವರೂಪಕ್ಕಿಂತ ಭಿನ್ನವಾದ ಶಬ್ದ ಅಥವಾ ಅಭಿವ್ಯಕ್ತಿಯನ್ನು ನಿರ್ದೇಶಿಸಲು ಪತಂಜಲಿ ತನ್ನ ಮಹಾಭಾಷ್ಯದಲ್ಲಿ ಈ ಶಬ್ದವನ್ನು ಮೊಟ್ಟಮೊದಲಬಾರಿಗೆ ಬಳಸಿದ್ದಾನೆ. ಬಹುಶಃ ಈ ಶಬ್ದ ಸಮಕಾಲೀನ ಮಧ್ಯಕಾಲೀನ ಇಂಡೋ ಆರ್ಯನ್ ಭಾಷೆಯ ಕೆಲವು ಪ್ರಾಂತೀಯ ಭೇದಗಳನ್ನು ಸೂಚಿಸುತ್ತಿದ್ದಿರಬೇಕು. ಆದರೆ ಇಂದು ಇದು ಮಧ್ಯಕಾಲೀನ ಇಂಡೋ ಆರ್ಯನ್ ಭಾಷೆಯ ಒಂದು ನಿರ್ದಿಷ್ಟ ಹಂತವನ್ನು ಸೂಚಿಸುತ್ತದೆ. ಪುರುಷೋತ್ತಮ, ಹೇಮಚಂದ್ರ ಮೊದಲಾದ ವೈಯಾಕರಣಿಗಳು ಈ ಭಾಷೆಯ ಸ್ವರೂಪವನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಇತರ ಪ್ರಾಕೃತ ಉಪಭಾಷೆಗಳೊಡನೆ ಸರಿದೊರೆಯಾಗಿ 5ನೆಯ ಶತಮಾನದಿಂದ 15ನೆಯ ಶತಮಾನದವರೆಗೆ ಪೂರ್ವ ಮತ್ತು ಪಶ್ಚಿಮ ಭಾರತಗಳಲ್ಲಿ ಪ್ರಖ್ಯಾತ ಲೇಖಕರು ತಮ್ಮ ಬೃಹತ್ ಗ್ರಂಥಗಳಲ್ಲಿ ಈ ಭಾಷೆಯನ್ನು ಬಳಸಿದ್ದಾರೆ. ಅಪಭ್ರಂಶದ ಪ್ರಾಂತೀಯ ಭೇದಗಳೂ ಇದ್ದಿರಬೇಕು. ಪುರುಷೋತ್ತಮ ಅಪಭ್ರಂಶದ ಮೂರು ಉಪಭಾಷೆಗಳನ್ನು ಉಲ್ಲೇಖಿಸಿದ್ದಾನೆ : ನಾಗರ, ವ್ರಾಚದ ಮತ್ತು ಉಪನಾಗರ. ನಾಗರ ಅಂದು ಪ್ರಖ್ಯಾತ ಉಪಭಾಷೆಯಾಗಿದ್ದು ಸಾಹಿತ್ಯದಲ್ಲೂ ಹೆಚ್ಚಾಗಿ ಬಳಕೆಯಲ್ಲಿದ್ದಂತೆ ಕಂಡುಬರುತ್ತದೆ. ಹೇಮಚಂದ್ರ ಉಪಭಾಷೆಗಳನ್ನು ಹೆಸರಿಸಿಲ್ಲವಾದರೂ ಆತ ಮುಂದಿರಿಸಿರುವ ವಸ್ತುವನ್ನು ವಿಶ್ಲೇಷಿಸಿದರೆ ಅದರಲ್ಲಿ ಹಲವಾರು ಉಪಭಾಷೆಗಳ ಮಿಶ್ರಣ ಕಂಡುಬರುತ್ತದೆ. ಬೇರೊಂದು ದೃಷ್ಟಿಯಿಂದ ಪರಿಶೀಲಿಸಿದರೆ ಆತನ ಅಪಭ್ರಂಶದಲ್ಲಿ ಮಹಾರಾಷ್ಟ್ರ ಮತ್ತು ಶೌರಸೇನಿಯನ್ನು ಆಧಾರವಾಗುಳ್ಳ ಎರಡು ಭೇದಗಳಿದ್ದುದು ಕಂಡುಬರುತ್ತದೆ.

ಅಪಭ್ರಂಶಕ್ಕೆ ಪ್ರಾಕೃತ ಮೂಲಾಧಾರ. ಅದು ಆಧುನಿಕ ಇಂಡೋ ಆರ್ಯನ್ ಭಾಷೆಗಳಿಗಿಂತಲೂ ಪ್ರಾಚೀನ. ಇಂದು ಬಳಕೆಯಲ್ಲಿರುವ ಇಂಡೋ ಆರ್ಯನ್ ಭಾಷೆಗಳಲ್ಲಿ ಕಾಣದೊರೆಯುವ ಹಲವಾರು ಆನುವಂಶಿಕ ಲಕ್ಷಣಗಳು ಇದರಲ್ಲೂ ಕಂಡುಬರುತ್ತವೆ. ಇಂದು ಎಷ್ಟು ಇಂಡೋ ಆರ್ಯನ್ ಭಾಷೆಗಳು ಬಳಕೆಯಲ್ಲಿವೆಯೋ ಅಷ್ಟು ಅಪಭ್ರಂಶಗಳು ಇದ್ದಿರಬೇಕೆಂಬ ಸಿದ್ಧಾಂತವನ್ನು ಸಮರ್ಥಿಸಲು ಸಾಕಷ್ಟು ಪ್ರಮಾಣಗಳು ದೊರೆಯುತ್ತಿಲ್ಲ. ಆದರೆ ಆಧುನಿಕ ಇಂಡೋ ಆರ್ಯನ್ ಭಾಷೆಗಳ ಅಧ್ಯಯನಕ್ಕೆ ಅಪಭ್ರಂಶದಲ್ಲಿ ದೊರೆಯುವ ಮಾಹಿತಿ ಅತ್ಯಾವಶ್ಯಕವಾಗಿದೆ. ಗುಜರಾತಿ, ರಾಜಾಸ್ತಾನಿ ಮತ್ತು ಬ್ರಜ ಭಾಷೆಗಳ ಪ್ರಾಚೀನ ಸ್ವರೂಪಕ್ಕೂ ಪಶ್ಚಿಮ ಭಾರತದ ಅಪಭ್ರಂಶಅನಂತರದ ಸ್ವರೂಪಕ್ಕೂ ಹೆಚ್ಚಿನ ಹೋಲಿಕೆ ಇದೆ. ಅಪಭ್ರಂಶ ಸಾಹಿತ್ಯದ ಉಪಲಬ್ಧ ಉದಾಹರಣೆಗಳನ್ನು ಗಮನಿಸಿದರೆ ಭಕ್ತಿ, ಪ್ರಶಂಸೆ ಮತ್ತು ಶೃಂಗಾರಸ್ವರೂಪದ ಜನಪ್ರಿಯ ಕಾವ್ಯಕ್ಕೆ ಅತ್ಯುಚಿತವಾದ ಭಾಷೆಯಾಗಿ ಸ್ವೀಕರಿಸಲಾಗಿತ್ತೆಂದು ಸ್ಪಷ್ಟವಾಗುತ್ತದೆ.

ಹೇಮಚಂದ್ರ ತಾನು ನಿರೂಪಿಸಿರುವ ಅಪಭ್ರಂಶದಲ್ಲಿ ಪ್ರಾಕೃತದ ಅನೇಕ ಲಕ್ಷಣಗಳನ್ನು ಐಚ್ಛಿಕವಾಗಿ ಒಪ್ಪಿಕೊಂಡಿದ್ದಾನೆ. ಪ್ರಾಕೃತಕ್ಕಿಂತ ಭಿನ್ನವಾಗಿ ತೋರುವ ಈ ಕೆಲವು ಅಂಶಗಳನ್ನು ಅಪಭ್ರಂಶದ ಲಕ್ಷಣಗಳೆಂದು ಪರಿಗಣಿಸಬಹುದು. 1. ಅಪಭ್ರಂಶದಲ್ಲಿ ಸ್ವರಗಳು ಅದಲು ಬದಲಾಗುತ್ತವೆ. ಅವುಗಳ ಮಾತ್ರೆಯಲ್ಲೂ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯವನ್ನು ಕಾಣಬಹುದು. ಒಂದೇ ಕಾರಕದ ಅಂತ್ಯದ ಹ ಅಥವಾ ಹು ಮತ್ತು ಹೆ ಅಥವಾ ಹು ಎಂಬ ರೂಪಗಳಿಗೆ ಇದು ವಿವರಣೆಯನ್ನು ನೀಡುತ್ತದೆ. ಅಂತೆಯೇ ಪ್ರಾಕೃತಕರ್ತೃಕಾರಕ ಏಕವಚನದ ಓ ಎಂಬುದು ಉ ಎಂದು ಹ್ರಸ್ವವಾಗಿ ಅಪಭ್ರಂಶದ ಅನೇಕ ಶಬ್ದಗಳಿಗೆ ಸೇರಿಕೊಳ್ಳುತ್ತದೆ. ಪುಣು, ವಿಣು, ಸಹು ಮೊದಲಾದ ಶಬ್ದಗಳಲ್ಲಿ ಇದನ್ನು ಕಾಣಬಹುದು. ಕರಣಕಾರಕ ಏಕವಚನದಲ್ಲಿ ಎಣ–ಎಮ್ ಮತ್ತು –ಮ್ ಎಂಬ ರೂಪಗಳು ಕಾಣದೊರೆಯುತ್ತವೆ. 2–ಮ್ ಎಂಬುದನ್ನು ಬಹಳವಾಗಿ ಒತ್ತಿ ಹೇಳುವುದಿಲ್ಲ. ಅನೇಕವೇಳೆ ಅನುನಾಸಿಕ ವಕಾರವಾಗಿ ಪರಿಣಮಿಸುತ್ತದೆ. 3. ವಿಭಕ್ತಿರೂಪಗಳ ಅಂತ್ಯದಲ್ಲಿ ಸಕಾರ ಹಕಾರವಾಗುವ ಪ್ರವೃತ್ತಿ ಕಂಡುಬರುತ್ತದೆ. ಇದು ಕೆಲವು ವಿಲಕ್ಷಣರೂಪಗಳಿಗೆ ವಿವರಣೆ ನೀಡುತ್ತದೆ; ಮಾರ್ಕಂಡೇಯ ಮತ್ತು ಇತರರು ಉಲ್ಲೇಖಿಸಿರುವ ಕರ್ತೃಕಾರಕ ಬಹುವಚನ ದೇವಹೊ ಎಂಬುದರ ಮೂಲವನ್ನು ವೈದಿಕ ದೇವಾಸಃ ಎಂಬುದರಲ್ಲಿ ಅಥವಾ ಚಂದ್ರಮಸಃ ಎಂಬಂಥ ರೂಪಗಳ ಆಧಾರದ ಮೇಲೆ ಸಾಧಾರಣೀಕೃತವಾದ ರೂಪಗಳಲ್ಲಿ ಕಾಣಬಹುದು, ಪ್ರಾಕೃತದ ದೇವಸ್ಸದಿಂದ ದೇವಹಃ; ತಸ್ಸದಿಂದ ತಾಹ್ಹ; ಅದನ್ನು ತಾಸ ಎಂದು ಸರಳಗೊಳಿಸಿ ಅದರ ಪ್ರತಿರೂಪವಾದ ತಾಸು ಎಂಬುದನ್ನೂ ಅಪಭ್ರಂಶದಲ್ಲಿ ಬಳಸಲಾಗುತ್ತದೆ; ತಂಸಿಯಿಂದ ತಹ್ಹಿ; ಎಸೊಯಿಂದ ಎಹು. ಸಂಸ್ಕೃತದ ಸಕಾರ ಅವೆಸ್ತ ಮತ್ತು ಇರಾನಿ ಉಪಭಾಷೆಗಳಲ್ಲಿ ಹಕಾರವಾಗಿ ಕಾಣದೊರೆಯುತ್ತದೆ. ಕೆಲವು ಪ್ರಾಕೃತ ಶಬ್ದಗಳಲ್ಲಿ ಹೇಮಚಂದ್ರ ಈ ಬದಲಾವಣೆಯನ್ನು ಗುರುತಿಸಿದ್ದಾನೆ. ಮಾಗಧಿಯಲ್ಲಿ ಮಾತ್ರ ಷಷ್ಠೀವಿಭಕ್ತಿಯ ಕೊನೆಯಲ್ಲಿ ಇದು ಕಾಣಬರುತ್ತದೆ. ಇಂದಿಗೂ ಗುಜರಾತಿ ಉಪಭಾಷೆಯೊಂದರಲ್ಲಿ ಸಕಾರ ಸಾಮಾನ್ಯವಾಗಿ ಹಕಾರವಾಗುವುದನ್ನು ಕಾಣಬಹುದು. ಈ ಬದಲಾವಣೆ ಆನುವಂಶಿಕ ಲಕ್ಷಣವಾಗಿದ್ದು ಮುಂದೆ ಸಾಮಾನ್ಯವಾಗಿ ಎಲ್ಲೆಡೆಗಳಲ್ಲೂ ಕಾಣಿಸಿಕೊಂಡಿದ್ದಿರಬಹುದು. 4. ಉಚ್ಚಾರಣೆಯನ್ನು ಸರಳಗೊಳಿಸುವುದಕ್ಕಾಗಿ ಪ್ರಾಕೃತಸಮುಚ್ಚಯಗಳ ಕರ್ಕಶತೆಯನ್ನು ಅನೇಕ ವೇಳೆ ದೂರ ಮಾಡಲಾಗುತ್ತದೆ. 5. ಕರ್ತೃ, ಕರ್ಮ ಮತ್ತು ಸಂಬಂಧಕಾರಕಗಳಲ್ಲಿ ವಿಭಕ್ತ್ಯಂತಗಳನ್ನು ಕೈಬಿಡಲಾಗುತ್ತದೆ. ಅವ್ಯಯಗಳಾಗಿ ಮಾರ್ಪಡುವ ಪ್ರವೃತ್ತಿ ಇಲ್ಲಿ ಕಂಡುಬರುತ್ತದೆ. 6. ಧ್ವನಿಪರಿವರ್ತನೆಗಳು ವಿಭಕ್ತಿರೂಪಗಳ ಮೇಲೆ ಪ್ರಭಾವವನ್ನು ಬೀರುತ್ತವಾಗಿ ಇವುಗಳ ರೂಪಗಳೂ ಸರಳವಾಗುತ್ತವೆ, ಸಂಖ್ಯೆಯೂ ಕಡಿಮೆಯಾಗುತ್ತಿತ್ತು. 7. ಅವ್ಯಯಗಳೂ ಪ್ರತ್ಯಯಗಳೂ ಅನೇಕ ವೇಳೆ ಗುರುತಿಸಲು ಸಾಧ್ಯವಾಗದಷ್ಟುಮಟ್ಟಿಗೆ ತಮ್ಮ ರೂಪಗಳನ್ನು ಬದಲಾಯಿಸಿಕೊಂಡುಬಿಡುತ್ತವೆ. ಕೆಲವು ಸಂದರ್ಭಗಳಲ್ಲಿ ಪ್ರಾಕೃತದ ಮೂಲಕ ಅವುಗಳ ಸಂಸ್ಕೃತಮೂಲವನ್ನು ತಿಳಿಯುವುದೂ ಸಾಧ್ಯವಾಗುವುದಿಲ್ಲ. ಬಹುಶಃ ಅಂಥ ರೂಪಗಳು ದೇಶಭಾಷೆಗಳಿಂದ ಬಂದಿರಬಹುದು. 8. ಅನೇಕ ಶಬ್ದಗಳಲ್ಲಿ ಕ, ಡ, ಲ, ಉಲ್ಲಗಳಂಥ ಸ್ವಾರ್ಥೆ ಅಥವಾ ಬಹುಪದಯುಕ್ತವಾಗಿರುವಂಥ ಪೂರ್ವಪದ ಅಥವಾ ಉತ್ತರಪದಗಳು ಕಾಣದೊರೆಯುತ್ತವೆ. 9. ಕೊನೆಯದಾಗಿ, ದೇಶೀಶಬ್ದಗಳು ಅಥವಾ ಧಾತ್ವಾದೇಶಗಳು ಹೇರಳವಾಗಿ ಕಾಣದೊರೆಯುತ್ತವೆ. ಸಿಂಹಾವಲೋಕನ ಮಾಡುತ್ತ ಅಪಭ್ರಂಶದ ವಿಚಾರವಾಗಿ ಪಿಶೆಲ್ ಈ ರೀತಿ ಹೇಳಿದ್ದಾನೆ. ಧ್ವನಿಸಂಬಂಧಿಯಾದ ಅವ್ಯವಸ್ಥೆ ಇದ್ದರೂ ಪ್ರಾಸಕ್ಕೋಸ್ಕರವಾಗಿ ಕವಿಗಳು ಮನಬಂದಂತೆ ಸ್ವರಗಳನ್ನು ಬದಲಾಯಿಸಿ ಶಬ್ದಾಂತ್ಯಗಳನ್ನು ಕೈಬಿಟ್ಟು ಸಂಪೂರ್ಣ ಅಕ್ಷರಗಳನ್ನೇ ಅವಷ್ಟಂಬನಗೊಳಿಸಿ, ಲಿಂಗ, ವಿಭಕ್ತಿ, ವಚನ ಮತ್ತು ವಾಚ್ಯಗಳ ವಿಚಾರದಲ್ಲಿ ಗೊಂದಲವನ್ನುಂಟುಮಾಡಿ, ಸ್ವೇಚ್ಛೆಯಿಂದ ವರ್ತಿಸಿದ್ದರೂ ಅಪಭ್ರಂಶ ವಿಶಿಷ್ಟ ಮಹತ್ತ್ವವನ್ನುಳ್ಳ, ಸ್ವಾರಸ್ಯಪೂರ್ಣ ಭಾಷೆಯಾಗಿ ಉಳಿದುಕೊಂಡುಬಂದಿದೆ. ವೈದಿಕ (ಸಂಸ್ಕೃತ) ಭಾಷೆಗೂ ಇದಕ್ಕೂ ಇರುವ ಸಂಬಂಧ ನಿಕೃಷ್ಟವಾದುದೇನೂ ಅಲ್ಲ. ಹೀಗಾಗಿ ವೈದಿಕ ನುಡಿಗಟ್ಟಿನೊಡನೆ ಹೆಗಲೆಣೆಯಾಗಿ ಬೆಳೆಯುತ್ತಿದ್ದ ಆಡುಮಾತಿನ ಉಪಭಾಷೆಗಳಲ್ಲಿ ಅಪಭ್ರಂಶದ ಮೂಲ ಅಡಗಿದೆ. ಈ ವೈದಿಕನುಡಿಗಟ್ಟು ಅವಿರತವಾಗಿ ಅನೇಕ ಪ್ರದೇಶಗಳಲ್ಲಿ ಹರಿದು ಇಂದಿನ ಆಧುನಿಕ ಭಾರತೀಯ ಆರ್ಯಭಾಷೆಗಳ ರೂಪದಲ್ಲಿ ಮುಂದೆ ಸಾಗುತ್ತಿದೆ.

ಅಪಭ್ರಂಶಕ್ಕೆ ತನ್ನದೇ ಆದ ಛಂದೋರೂಪಗಳಿವೆ. ವೈವಿಧ್ಯಮಯವಾದ ಛಂದೋರೂಪಗಳೂ ಪ್ರಾಸಗಳೂ ಕಾಣದೊರೆಯುತ್ತವೆ. 5ನೆಯ ಶತಮಾನದ ಹೊತ್ತಿಗಾಗಲೆ ಸಾಹಿತ್ಯಭಾಷೆಯ ರೂಪದಲ್ಲಿ ಅಪಭ್ರಂಶ ಪ್ರಚಲಿತವಾಗಿತ್ತು. ಆಡು ಭಾಷೆಯಲ್ಲಿ ಬಳಕೆಯಲ್ಲಿದ್ದ ಅಪಭ್ರಂಶದ ವಿಶಿಷ್ಟರೂಪಗಳು ಗ್ರಂಥಸ್ಥ ಪ್ರಾಕೃತ ಭಾಷೆಯ ಮೇಲೆ ಬಹುಮಟ್ಟಿಗೆ ಪ್ರ.ಶಕೆಯ ಆರಂಭಕಾಲದಿಂದಲೇ ಪ್ರಭಾವ ಬೀರತೊಡಗಿದ್ದವು. ಅಪಭ್ರಂಶದ ಕೆಲವು ವೈಶಿಷ್ಟ್ಯಗಳಿಗೆ ಆಭೀರರ ಮಾತಿನ ರೀತಿಯೇ ಕಾರಣವೆಂದು ಹೇಳಲಾಗುತ್ತಿದೆ. ಪ್ರ.ಶ.ಪೂರ್ವ 150ಕ್ಕಿಂತಲೂ ಕೊಂಚ ಮೊದಲೇ ಈ ಜನಾಂಗ ಭಾರತಕ್ಕೆ ಕಾಲಿಟ್ಟಿತು. ಈ ಅವಧಿಯಲ್ಲಿ ರಚಿತವಾದ ಮಹಾಭಾಷ್ಯದಲ್ಲಿ ಪತಂಜಲಿ ಈ ಜನಾಂಗವನ್ನು ಉಲ್ಲೇಖಿಸಿದ್ದಾನೆ. ಪೆಷಾವರ್ ಬಳಿ ನೆರೆಹೊರೆಯವರಂತೆ ಆಭೀರರೂ ಗುರ್ಜರರೂ ವಾಸಿಸುತ್ತಿದ್ದರು. ಇವರ ಕೆಲವು ವೈಶಿಷ್ಟ್ಯಗಳು ಪ್ರಾಕೃತಭಾಷೆಗಳ ಮೇಲೆ ಪ್ರಭಾವ ಬೀರಿದುವು. ಅನಂತರ ಅಪಭ್ರಂಶರೂಪದಲ್ಲಿ ಇವು ಸ್ಥಿರವಾಗಿ ಬೇರೂರಿದವು. ಅಪಭ್ರಂಶದ ಶಬ್ದಕೋಶದ ಬಹುಭಾಗ ವಾಸ್ತವವಾಗಿ ಪ್ರಾಕೃತದಿಂದಲೇ ಬಂದಿದೆ. (ಎ.ಎನ್.ಯು.)

**ಅಪಮಿಶ್ರಣ :** ಒಂದು ಪದಾರ್ಥವನ್ನು ಕಡಿಮೆದರ್ಜೆಯ ಅಥವಾ ಹಾನಿಕರ ಪದಾರ್ಥಗಳೊಡನೆ ಸೇರಿಸಿ ಕೀಳ್ಬೆರಕೆ (ಕಲಬೆರಕೆ) ಮಾಡುವುದು (ಅಡಲ್ಟರೇಷನ್). ಅಂದರೆ ಆ ಪದಾರ್ಥದ ದರ್ಜೆಯನ್ನು ಕಡಿಮೆ ಮಾಡುವುದು. ಅಪಮಿಶ್ರಣ ಮಾಡಿ

ಮಾರುವವನು ತನ್ನ ಅನುಕೂಲಕ್ಕೆ ತಕ್ಕಂತೆ ಪದಾರ್ಥದ ತೂಕ ಪ್ರಮಾಣ ಬಣ್ಣ ವಾಸನೆ ಇತ್ಯಾದಿಗಳಲ್ಲಿ ಉದ್ದೇಶಪೂರ್ವಕವಾಗಿ ಬದಲಾವಣೆಯನ್ನು ಮಾಡಲು ಸಾಧ್ಯ. ಇದರಿಂದ ಬಳಕೆದಾರನಿಗೆ ನಷ್ಟ; ಹಣ ಹೆಚ್ಚು ಖರ್ಚಾಗುತ್ತದೆ; ಉಪಯೋಗ ಕಡಿಮೆ.

ಈಗೀಗ ಅಪಮಿಶ್ರಣ ಹೆಚ್ಚುತ್ತಿದೆ. ವಿಜ್ಞಾನದ ಮತ್ತು ಔದ್ಯಮಿಕ ಕಲೆಯ ಅಭಿವೃದ್ಧಿಯಿಂದ ಈ ಅಭ್ಯಾಸಕ್ಕೆ ಒಂದು ಪ್ರಚೋದನೆ ದೊರಕಿದೆ. ಜಿಡ್ಡುತೆಗೆದ ಹಾಲಿನ ಪುಡಿಯಿಂದಾದ ಹಾಲನ್ನು ಅಪ್ಪಟ ಹಾಲೆಂದು ಮಾರುವುದು, ಅದಕ್ಕೆ ಬಾದಾಮಿ ವಾಸನೆಯನ್ನು ಮಾತ್ರ ಸೇರಿಸಿ ಬಾದಾಮಿ ಹಾಲೆಂದು ಮಾರುವುದು, ಬೆಣ್ಣೆಗೆ ವನಸ್ಪತಿಯನ್ನು ಬೆರೆಸುವುದು. ಅಚ್ಚ ರೇಷ್ಮೆಯೊಂದಿಗೆ ಕೃತಕರೇಷ್ಮೆಯ ಬೆರಕೆ – ಹೀಗೆ ನೂರಾರು ರೀತಿಯ ಅಪಮಿಶ್ರಣ ನಡೆಯುತ್ತಿದೆ. ನಕಲಿ ಮಾಲುಗಳು ಬಿಕರಿಗೆ ಬರುತ್ತಿವೆ. ಆಹಾರದಲ್ಲೂ ಇತರ ಪದಾರ್ಥಗಳಲ್ಲೂ ಮುಖ್ಯವಾಗಿ ಔಷಧಿಗಳಲ್ಲೂ ಅಪಮಿಶ್ರಣವಾಗದಂತೆ ನೋಡಿಕೊಳ್ಳಲು ಕಟ್ಟುನಿಟ್ಟಾದ ನಿಯಂತ್ರಣವಿರಬೇಕು. ಸರ್ಕಾರ ಈ ಬಗ್ಗೆ ಅನೇಕ ಕಟ್ಟಳೆಗಳನ್ನು ಮಾಡಿದರೂ ಜನರಲ್ಲಿ ಪ್ರಾಮಾಣಿಕತೆ ಬರುವವರೆಗೆ ಅಪಮಿಶ್ರಣ ನಿಲ್ಲಲಾರದು. ಸುಸಂಘಟಿತವಾದ ಪರೀಕ್ಷೆಯಿಂದಲೂ ಮೌಲ್ಯ ಪ್ರಮಾಣಗಳನ್ನು ನಿರ್ಧರಿಸುವುದರಿಂದಲೂ ಪದೇಪದೇ ತನಿಖೆ ನಡೆಸುವುದರಿಂದಲೂ ಈ ಉದ್ದೇಶವನ್ನು ಸಾಧಿಸಬಹುದು. ಭಾರತದಲ್ಲಿ ಇಂಡಿಯನ್ ಸ್ಟ್ಯಾಂಡರ್ಡ್ಸ್ ಇನ್‍ಸ್ಟಿಟ್ಯೂಟ್ ಈ ದಿಶೆಯಲ್ಲಿ ಸಾಕಷ್ಟು ಕೆಲಸ ಮಾಡುತ್ತಿದೆ. (ಸಿ.ಸಿ.ಪಿ.)

**ಅಪರಂಪರಸ್ವಾಮಿ :** ಬ್ರಿಟಿಷರ ವಿರುದ್ಧ ಹೋರಾಡಿದ ವೀರ. 1834ರಲ್ಲಿ ಇಂಗ್ಲಿಷರು ಚಿಕ್ಕವೀರರಾಜೇಂದ್ರನನ್ನು ರಾಜ್ಯಭ್ರಷ್ಟನನ್ನಾಗಿಸಿ ಕೊಡಗನ್ನು ತಮ್ಮ ವಶಪಡಿಸಿಕೊಂಡಾಗ, ಕೊಡಗಿನ ದಾಸ್ಯವಿಮೋಚನೆಗಾಗಿ ಒಂದು ಬಂಡಾಯ ಮೊದಲಾಯಿತು. ಅದನ್ನು ಈತ ಆರಂಭಿಸಿದ.

ಇವನು ತುಮಕೂರು ಜಿಲ್ಲೆಯ ಮಾಯಸಂದ ಬಳಿಯ ಕಡಗನೂರು ಗ್ರಾಮದ ಹನುಮಂತರಾಯ ಮತ್ತು ಗೋಪಮ್ಮ ಎಂಬ ದಂಪತಿಗಳ ಮಗ. 1807ರಲ್ಲಿಯೇ ಸನ್ಯಾಸಿಯಾಗಿ ಊರು ಬಿಟ್ಟು ಹೋದವನು ಇಪ್ಪತ್ತು ವರ್ಷಗಳ ಅನಂತರ ದೊಡ್ಡ ಜಂಗಮನಂತೆ ಊರಿಗೆ ಹಿಂದಿರುಗಿದ. ಕೂಡಲೇ ಇವನಿಗೆ ಅನೇಕ ಮಂದಿ ಶಿಷ್ಯರಾದರು. 1833ರಲ್ಲಿ ಅಪರಂಪರಸ್ವಾಮಿ ಮಂಜರಾಬಾದು ತಾಲ್ಲೂಕಿನಲ್ಲಿ ಸಂಚರಿಸುತ್ತಿದ್ದ. ಇವನು ಅನೇಕ ಅದ್ಭುತ ಪವಾಡಗಳನ್ನು ನಡೆಸಬಲ್ಲನೆಂಬುದು ಜನರ ತಿಳಿವಳಿಕೆಯಾಗಿತ್ತು. ಅನೇಕ ರೋಗಗಳನ್ನು ವಾಸಿಮಾಡಲು ಔಷಧವನ್ನು ಸಹ ಕೊಡುತ್ತಿದ್ದ. ಇವನ ಖ್ಯಾತಿಯನ್ನು ಕೇಳಿದ ಚಿಕ್ಕವೀರರಾಜ ಇವನನ್ನು ಮಡಿಕೇರಿಯ ಅರಮನೆಗೆ ಒಮ್ಮೆ ಕರೆಯಿಸಿದ್ದ. 1837ರ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ದಂಗೆಯ ಬಗೆಗೆ ದೀರ್ಘ ವಿಚಾರಣೆ ನಡೆಸಿದ ಕಮಿಷನರ್ ಕಾಟನ್‍ರವರ ಪ್ರಕಾರ ಅಪರಂಪರ ಬ್ರಿಟಿಷರ ವಿರುದ್ಧ ಚಿಕ್ಕವೀರರಾಜೇಂದ್ರ ಮತ್ತು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಸೇರಿ ನಡೆಸುತ್ತಿದ್ದ ರಹಸ್ಯಾಲೋಚನೆಗಳಲ್ಲಿ ಭಾಗಿಯಾಗಿದ್ದ.

1834ರ ಕೊಡಗಿನ ಯುದ್ಧ ನಡೆಯುವ ಮೊದಲೇ ಅಪರಂಪರ ಕೊಡಗನ್ನು ತ್ಯಜಿಸಿ ದಕ್ಷಿಣ ಕನ್ನಡ ಜಿಲ್ಲೆಯ ಕಾಜಗೋಡಿನ ಮಲ್ಲಪ್ಪಗೌಡನಲ್ಲಿ ಆಶ್ರಯ ಪಡೆದ. ಈ ಮಲ್ಲಪ್ಪಗೌಡ ಆ ಪ್ರದೇಶದ ಮುಖಂಡನಾಗಿದ್ದ. 1835 ಮೇ ತಿಂಗಳಲ್ಲಿ ಕೆಲವು ಜನ ಅಪರಂಪರನನ್ನು ಕೊಡಗಿನ ಅಪ್ಪಾಜಿ ಅರಸನ ಮಗ ವೀರಪ್ಪ (ವೀರರಾಜ ಅರಸು) ಎಂದೂ ಕೊಡಗಿನ ಸಿಂಹಾಸನಕ್ಕೆ ನ್ಯಾಯವಾದ ಹಕ್ಕುದಾರನೆಂದೂ ಪ್ರಕಟಣೆ ಹೊರಡಿಸಿದರು. ಇಲ್ಲಿಂದಲೇ ಕೊಡಗಿನ ದಂಗೆ ಆರಂಭವಾಯಿತೆಂದು ಭಾವಿಸಬಹುದು. ಅನಂತರ ಅಪರಂಪರ ಸೂರ್ಲಬ್ಬಿನಾಡು ಏಳುಸಾವಿರ ಸೀಮೆ, ಎಡೆನಾಡು ಮುಂತಾದ ಕಡೆ ಸಂಚರಿಸಿದ. ದಿನೇದಿನೇ ಅವನ ಹಿಂಬಾಲಕರ ಸಂಖ್ಯೆ ಬೆಳೆಯತೊಡಗಿತು. ಚತುರನಾದ ಅಪರಂಪರ ಸಾಮಾನ್ಯಜನರ ಮೂಢನಂಬಿಕೆ, ಧಾರ್ಮಿಕ ಭಾವನೆ ಮತ್ತು ರಾಜನಿಷ್ಠೆಗಳ ಪ್ರಯೋಜನ ಪಡೆದು ಅವರನ್ನು ಇಂಗ್ಲಿಷರ ವಿರುದ್ಧ ಹೋರಾಡಲು ಪ್ರೇರೇಪಿಸಿದ. ಚಿಕ್ಕವೀರರಾಜೇಂದ್ರ ಪಟ್ಟಕ್ಕೆ ಬಂದ ಕೂಡಲೇ ತನ್ನ ಸಂಬಂಧಿಗಳಲ್ಲಿ ಬಹಳ ಜನರನ್ನು ಕೊಲ್ಲಿಸಿದನೆಂದೂ ಅವರಲ್ಲಿ ಅಪ್ಪಾಜಿ ಅರಸನ ಮಕ್ಕಳೂ ಸೇರಿದ್ದರೆಂದೂ ಕೊಡಗಿನ ಜನರು ದೃಢವಾಗಿ ನಂಬಿದ್ದರಿಂದ ಕೊಡಗಿನ ಮುಖ್ಯರು ಅವನನ್ನು ರಾಜನೆಂದು ಒಪ್ಪಿಕೊಳ್ಳುವುದಾಗಲಿ ಬ್ರಿಟಿಷರ ವಿರುದ್ಧ ಹೋರಾಡುವುದಾಗಲಿ ತಮಗೆ ಸಾಧ್ಯವಾಗದೆಂದು ಅವನಿಗೆ ಮನವರಿಕೆ ಮಾಡಿಕೊಟ್ಟರು. ಏನು ಮಾಡಲೂ ತೋರದೆ ಅಪರಂಪರ ದಕ್ಷಿಣ ಕನ್ನಡದ ಕಡಬಕ್ಕೆ ಹೊರಟುಹೋದ. ಇಷ್ಟರಲ್ಲಿ ಕೊಡಗಿನ ಸೂಪರಿಂಟೆಂಡೆಂಟ್ ಆಗಿದ್ದ ಕ್ಯಾಪ್ಟನ್ ಲೀ ಹಾರ್ಡಿ ಅಪರಂಪರನ ಚಟುವಟಿಕೆಗಳನ್ನು ಹತ್ತಿಕ್ಕಲು ಕೆಲವು ಸೈನಿಕರನ್ನು ಕಳುಹಿಸಿದ. ಗಾಬರಿಗೊಂಡ ದಂಗೆಕೋರರಲ್ಲಿ ಅನೇಕರು ವೇಷ ಮರೆಸಿಕೊಂಡು ತಮ್ಮ ತಮ್ಮ ಊರುಗಳಿಗೆ ಓಡಿಹೋದರು. ದುರದೃಷ್ಟವಶಾತ್ ಅಪರಂಪರಸ್ವಾಮಿ ಶಿವಮೊಗ್ಗದ ನಗರಸೀಮೆಗೆ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಸಿಕ್ಕಿಬಿದ್ದ. ಇವನನ್ನು ಇಂಗ್ಲಿಷರು ತಿರುಚಿನಾಪಳ್ಳಿಯಲ್ಲಿ ರಾಜಕೀಯ ಕೈದಿಯೆಂದು ಬಂಧಿಸಿಟ್ಟರು. 1869ರಲ್ಲಿ ಬಿಡುಗಡೆ ಮಾಡಲ್ಪಟ್ಟ ಅಪರಂಪರ ಮರುವರ್ಷ ಶ್ರೀರಂಗಪಟ್ಟಣದಲ್ಲಿ ಕಾಲವಶನಾದ.

ಕೊಡಗಿನ ಸ್ವಾತಂತ್ರ್ಯಕ್ಕಾಗಿ ಅಪರಂಪರಸ್ವಾಮಿ ನಡೆಸಿದ ಪ್ರಯತ್ನ ಈ ರೀತಿಯಾಗಿ ಆರಂಭದಲ್ಲೇ ವಿಫಲವಾಯಿತು. ಆದರೆ ಇವನ ಕೆಲವು ನಿಷ್ಠಾವಂತ ಹಿಂಬಾಲಕರು ಹೋರಾಟವನ್ನು ಮುಂದುವರಿಸಿದರು. ಆ ಪೈಕಿ ಕಲ್ಯಾಣಸ್ವಾಮಿ ಎಂಬಾತ ಖ್ಯಾತನಾದವ. 1835ರ 'ವಿದ್ರೋಹಿ'ಗಳ ಉದ್ದೇಶ ಮತ್ತು ಆಶೋತ್ತರಗಳು ಅಂಥ ಕೃಷ್ಣರಾಜ ಒಡೆಯರಿಗೆ ಮೈಸೂರನ್ನೂ 1834ರಲ್ಲಿ ರಾಜ್ಯಭ್ರಷ್ಟನಾದ ಚಿಕ್ಕವೀರ ರಾಜೇಂದ್ರನಿಗೆ ಕೊಡಗಿನ ಸಿಂಹಾಸನವನ್ನೂ ಮರಳಿ ದೊರಕಿಸಿಕೊಳ್ಳುವುದೇ ಅವನ ಮುಖ್ಯ ಉದ್ದೇಶವಾಗಿತ್ತೆಂದು ಅನೇಕ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. (ಎಚ್.ಪಿ.ಎಸ್.)

**ಅಪರಾಂತ :** ಪಶ್ಚಿಮಘಟ್ಟಗಳಿಗೂ ಸಮುದ್ರಕ್ಕೂ ಇರುವ ನಡುವಣ ಪ್ರದೇಶ. ಈಗಿನ ಕೊಂಕಣ. ಅಪರಾಂತದ ಉಲ್ಲೇಖ ಮಹಾಭಾರತದಲ್ಲಿ ಬರುತ್ತದೆಯಾದರೂ ಚಾರಿತ್ರಿಕ ದೃಷ್ಟಿಯಿಂದ ಅಶೋಕನ ಕಾಲದ ಉಲ್ಲೇಖವೇ ಮುಖ್ಯವಾದುದು. ಅಪರಾಂತ ಮೊದಲು ಗೌತಮೀಪುತ್ರನ ಆಳ್ವಿಕೆಯಲ್ಲಿತ್ತು. ರುದ್ರದಾಮ ಇದನ್ನು ಆಂಧ್ರರಿಂದ ಗೆದ್ದನೆಂದು ಶಾಸನಗಳಿಂದ ತಿಳಿಯುತ್ತದೆ. 6ನೆಯ ಶತಮಾನದಿಂದ ಅಪರಾಂತಕ್ಕೆ ಕೊಂಕಣ ಎಂಬ ಹೆಸರು ಬಂತು. ಬಾದಾಮಿ ಚಳುಕ್ಯ ಕೀರ್ತಿವರ್ಮನ ಶಾಸನಗಳಲ್ಲಿ ಕೊಂಕಣವಿಷಯದ ಪ್ರಸ್ತಾಪವಿದೆ. ಈತ ಇಂದ್ರರಾಜನನ್ನು ಕೊಂಕಣಾಧಿಕಾರಿಯಾಗಿ ನಿಯಮಿಸಿದ್ದ. ಅನಂತರ ಕೊಂಕಣ ಎರಡು ಭಾಗಗಳಾಗಿ ಶಿಲಾಹಾರರು ಉತ್ತರ ಮತ್ತು ದಕ್ಷಿಣ ಭಾಗಗಳನ್ನು ಹಂಚಿಕೊಂಡು ರಾಜ್ಯವಾಳುತ್ತಿದ್ದರು. ಇವರು ಪೂರ್ಣ ಸ್ವತಂತ್ರರಾಗಿಲ್ಲದಿದ್ದರೂ ರಾಷ್ಟ್ರಕೂಟರ ಅನಂತರ ಕಲ್ಯಾಣಚಾಳುಕ್ಯರ ಮಾಂಡಲಿಕರಾಗಿ ಕೊಂಕಣವನ್ನು ಪಾಲಿಸುತ್ತಿದ್ದರು. ಗೋವದ ಕದಂಬರಾಜ ಜಯಕೇಶಿ ಅನೇಕ ಸಾರಿ ಶಿಲಾಹಾರರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಿದ. 12–14ನೆಯ ಶತಮಾನದವರೆಗೆ ಕೊಂಕಣ ಯಾದವರ ಆಳ್ವಿಕೆಗೆ ಸೇರಿತು. ದಕ್ಷಿಣಾಪಥವನ್ನು ಮುಸ್ಲಿಮರು ಆಕ್ರಮಿಸಿಕೊಂಡಮೇಲೆ ಬಿಜಾಪುರ, ಅಹಮದ್‍ನಗರ ಮುಂತಾದ ರಾಜ್ಯಗಳಲ್ಲಿ ಹರಿದು ಹಂಚಿಹೋಯಿತು. 1572ರಲ್ಲಿ ಕೆಲಭಾಗಗಳು ಮೊಗಲರಿಗೂ ಮಿಕ್ಕ ಭಾಗಗಳು ಪೋರ್ಚುಗೀಸರಿಗೂ ಸೇರಿದುವು. 16 ಮತ್ತು 17ನೆಯ ಶತಮಾನಗಳಲ್ಲಿ ಪೋರ್ಚುಗೀಸರಿಗೂ ಮರಾಠರಿಗೂ ಅನೇಕ ಕದನಗಳು ನಡೆದರೂ ಪೋರ್ಚುಗೀಸರೇ ಕೊಂಕಣದಲ್ಲಿ ಬಲಶಾಲಿಗಳಾಗಿದ್ದರು. ಸು. 1818ರ ಹೊತ್ತಿಗೆ ಕೆಲವು ಭಾಗಗಳು ಬ್ರಿಟಿಷರ ಆಳ್ವಿಕೆಗೆ ಸೇರಿದುವು. ಭಾರತದ ಸ್ವಾತಂತ್ರ್ಯಾನಂತರ, ಕೆಲವು ಭಾಗಗಳು ಗೋವ, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಿಗೆ ಸೇರಿವೆ. (ಎ.ವಿ.ಎನ್.)

**ಅಪರಾಜಿತ :** 10–11ನೆಯ ಶತಮಾನದಲ್ಲಿ ಉತ್ತರ ಕೊಂಕಣದಲ್ಲಿ ಆಳಿದ ಶಿಲಾಹಾರ ಮನೆತನಕ್ಕೆ ಸೇರಿದ ಮಾಂಡಲಿಕ. ಮೃಗಾಂಕ ಎಂಬುದು ಈತನ ಬಿರುದು. ತಂದೆಯ ಹೆಸರು ವಜ್ಜಡ. ಇವನ ಪೂರ್ವಜರು ರಾಷ್ಟ್ರಕೂಟರ ಸಾಮಂತರಾಗಿದ್ದರು. ರಾಷ್ಟ್ರಕೂಟರು ರಾಜ್ಯಭ್ರಷ್ಟರಾದಾಗ ಏರ್ಪಟ್ಟ ಅರಾಜಕ ಪರಿಸ್ಥಿತಿಯನ್ನುಪಯೋಗಿಸಿಕೊಂಡು ಈತ ಸ್ವತಂತ್ರವಾಗಿ ಆಳಲು ಹವಣಿಸಿದ. ಅದಕ್ಕಾಗಿ ಪರಮಾರರೊಡನೆ ಸೌಹಾರ್ದಸಂಬಂಧವನ್ನು ಏರ್ಪಡಿಸಿಕೊಂಡು ಕೊಂಕಣವನ್ನೆಲ್ಲಾ ಆಕ್ರಮಿಸಿದ. ಈತನನ್ನು ಕಲ್ಯಾಣದ ಇಮ್ಮಡಿ ತೈಲಪ ಸೋಲಿಸಿದನೆಂದು ಅಭಿಪ್ರಾಯಪಟ್ಟಿದ್ದಾರೆ. ಡಾ. ಫ್ಲೀಟ್ 997ನೆಯ ವರ್ಷದ ಭದಾನ ತಾಮ್ರಶಾಸನದಲ್ಲಿ ಈತನನ್ನು ಮಹಾಮಂಡಲೇಶ್ವರನೆಂದು ಕರೆದಿರುವುದು ಇದಕ್ಕೊಂದು ಕಾರಣ. ರನ್ನನ ಗದಾಯುದ್ಧದಲ್ಲಿನ ಪದ್ಯವೊಂದನ್ನು ಆಧರಿಸಿ ಈತನನ್ನು ತಂದೆಯ ಅಪೇಕ್ಷೆಯಂತೆ ಇಜೆವಬೆಡಂಗ ಸು.980ರಲ್ಲಿ ಸೋಲಿಸಿದನೆನ್ನಲಾಗಿದೆ. ಆದರೆ ಭದಾನ ಶಾಸನದಿಂದಾಗಲಿ 993–94ರ ಬರೋಡದ ಇನ್ನೆರಡು ತಾಮ್ರಶಾಸನಗಳಿಂದಾಗಲಿ ಈ ವಾದಕ್ಕೆ ಪುಷ್ಟಿ ದೊರಕುವುದಿಲ್ಲ. ಭದಾನ ತಾಮ್ರಶಾಸನದಲ್ಲಿ ರಾಷ್ಟ್ರಕೂಟ ಕಕ್ಕಲನನ್ನು ತೈಲಪ ಸೋಲಿಸಿದ ಪ್ರಸ್ತಾಪವಿದೆ. ಪ್ರಚಂಡ ಬಿರುಗಾಳಿಯ ಹೊಡೆತಕ್ಕೆ ನಂದಿಹೋದ ದೀಪದಂತೆ ರಾಷ್ಟ್ರಕೂಟ ಮನೆತನ ನಂದಿತೆಂದೂ ಉಳಿದಿರುವುದೆಲ್ಲ ಕೇವಲ ಅದರ ನೆನಪೆಂದೂ ಹೇಳಿರುವ ಕಳಕಳಿಯ ಮಾತುಗಳು ಈತ ತೈಲನ ಮಾಂಡಲಿಕನಾಗಿದ್ದನೆಂಬುದನ್ನು ಸೂಚಿಸುವುದಿಲ್ಲ.

ರನ್ನನ ಗದಾಯುದ್ಧದಲ್ಲಿ ಒಂದು ಕಡೆ ಸಮುದ್ರ, ಮತ್ತೊಂದು ಕಡೆ ಇಜೆವಬೆಡಂಗನ ಸೇನಾಸಾಗರಗಳ ನಡುವೆ ಸಿಲುಕಿದ ಅಪರಾಜಿತ ಎರಡೂ ಕಡೆ ಬೆಂಕಿ ಹೊತ್ತಿರುವ ಕಡ್ಡಿಯ ಮೇಲಿನ ಹುಳುವಿನಂತೆ ಕಂಪಿಸಿದ ಎಂದಿದ್ದಾನೆ. ಅಪರಾಜಿತನನ್ನು ಸೋಲಿಸಿ ಅಂಶುನಗರವನ್ನು ಸುಟ್ಟು ಆತನಿಂದ 21 ಆನೆಗಳನ್ನು ಕಪ್ಪವಾಗಿ ಸತ್ಯಾಶ್ರಯ ಪಡೆದನೆಂದಿದ್ದಾನೆ. ಲಭ್ಯವಿರುವ ಆಧಾರಗಳಿಂದ ಅಪರಾಜಿತ ತೈಲನ ಮಾಂಡಲಿಕನಾಗಿರದೆ, ಸೇವುಣ ವಂಶದ 2ನೆಯ ಭಿಲ್ಲಮ ಸಹ ತೈಲನ ಅಧೀನತೆಯನ್ನು ನಿರಾಕರಿಸಲು ಅವನಿಗೆ ಸಹಾಯ ಮಾಡಿದ. ಆದರೆ ಭಿಲ್ಲಮ ಸೋತುದಲ್ಲದೆ ಪರಮಾರ ಮುಂಜನನ್ನು ಸೋಲಿಸಲು ತೈಲನಿಗೆ ನೆರವು ನೀಡಿದ. ಚಾಳುಕ್ಯರು ಒಂದು ಕಡೆ ಚೋಳರೊಂದಿಗೆ, ಇನ್ನೊಂದು ಕಡೆ ಪರಮಾರರೊಂದಿಗೆ ನಡೆಸುತ್ತಿದ್ದ ಕದನಗಳಿಂದಾಗಿ ತೀರಪ್ರದೇಶದಲ್ಲಿದ್ದ ಅಪರಾಜಿತ ಸುಮಾರು ಮೂರು ದಶಕಗಳ ಕಾಲ ಸ್ವತಂತ್ರವಾಗಿರಲು ಸಾಧ್ಯವಾಯಿತು. ಆದರೆ ಆ ಬಳಿಕ ಅಪರಾಜಿತನ ವಿರುದ್ಧ ಸತ್ಯಾಶ್ರಯ ದಂಡೆತ್ತಿ ಆತನನ್ನು ಸೋಲಿಸಿದ. ರನ್ನ ಈ ಘಟನೆಯನ್ನು ವಿಸ್ತರಿಸಿದ್ದಾನೆ. ಇದು ಸು.1005ರಲ್ಲಿ ನಡೆದ ಘಟನೆ. (ಬಿ.ಆರ್.ಜಿ.)

**ಅಪರಾಜಿತವರ್ಮ :** ಪಲ್ಲವರಾಜವಂಶದ ಸಮರ್ಥನಾದ ಕೊನೆಯ ದೊರೆ. ಪಲ್ಲವ ನೃಪತುಂಗವರ್ಮನ ಮಗ. 879ರಿಂದಲೆ ಅಂದರೆ ತನ್ನ ತಂದೆಯ ಜೀವಿತಕಾಲದಲ್ಲಿಯೆ, ರಾಜ್ಯಭಾರದಲ್ಲಿ ಪಾಲ್ಗೊಂಡು ಯುವರಾಜನಾಗಿದ್ದ. ಇವನ ಶಾಸನಗಳು ಇವನ ರಾಜ್ಯಭಾರದ ಮೂರನೆಯ ವರ್ಷದಿಂದ 18ನೆಯ ವರ್ಷದವರೆಗೂ ದೊರೆತಿವೆ. ಸಾಮಾನ್ಯವಾಗಿ ಅವು ತಿರುವೊಟ್ರಿಯೂರು ಮತ್ತು ಸತ್ಯವೀಡುಗಳಲ್ಲಿ ವಿಶೇಷವಾಗಿವೆ. ಅಪರಾಜಿತವರ್ಮನ ಕಾಲದ ಮುಖ್ಯ ಘಟನೆಯೆಂದರೆ ಪಾಂಡ್ಯರ ಅಪಜಯ. ಅಪರಾಜಿತವರ್ಮ ತನ್ನ ಸಾಮಂತನಾದ ಗಂಗ ಪೃಥ್ವೀಪತಿ ಮತ್ತು ಚೋಳರಾಜನಾದ ಆದಿತ್ಯ ಇವರ ಸಹಾಯದಿಂದ, ಪಾಂಡ್ಯ ರಾಜನಾದ ಎರಡನೆಯ ವರಗುಣವರ್ಮನ ಮೇಲೆ ಕುಂಭಕೋಣದ ಸಮೀಪದಲ್ಲಿರುವ ಶ್ರೀಪುರಂಬಿಯಂ ಎಂಬಲ್ಲಿ ಯುದ್ಧಮಾಡಿ (880) ಪೂರ್ಣಜಯ ಪಡೆದ. ಇವನ ಸಾಮಂತನಾದ ಗಂಗಪೃಥ್ವೀಪತಿ ಯುದ್ಧದಲ್ಲಿ ಮರಣಹೊಂದಿದ. ಪಾಂಡ್ಯರ ಮೇಲೆ ವಿಜಯವನ್ನು ಸಂಪಾದಿಸಿದ ಅಪರಾಜಿತ ಅತಿಶೀಘ್ರದಲ್ಲಿಯೆ ಆ ಗೌರವವನ್ನು ಕಳೆದುಕೊಳ್ಳಬೇಕಾಯಿತು. ಸಾಮಂತನಾಗಿದ್ದ ಚೋಳರ ರಾಜನಾದ ಮೊದಲನೆಯ ಆದಿತ್ಯ ಹಠಾತ್ತನೆ ಅಪರಾಜಿತನ ಮೇಲೆ ದಂಡೆತ್ತಿಬಂದು ಅವನನ್ನು ಕೊಂದು, ತೊಂಡಮಂಡಲವನ್ನು ವಶಮಾಡಿಕೊಂಡ (897). ಅಂದಿನಿಂದ ಪಲ್ಲವರ ರಾಜ್ಯ ಚೋಳರ ವಶವಾಯಿತು. ತಿರುತ್ತಣಿಯಲ್ಲಿರುವ ವೀರಟ್ಟಾನೇಶ್ವರ ದೇವಾಲಯ ಅಪರಾಜಿತವರ್ಮನ ಕಾಲದಲ್ಲಿ ನಿರ್ಮಿತವಾಯಿತೆಂದು ತಿಳಿದುಬರುತ್ತದೆ. ಅಲ್ಲಿರುವ ತಮಿಳುಶಾಸನ ಅಪರಾಜಿತವರ್ಮನ ರಾಜ್ಯಭಾರದ 18ನೆಯ ವರ್ಷದಲ್ಲಿ ರಚಿತವಾದದ್ದು. ವಾಸ್ತುಶಿಲ್ಪದ ದೃಷ್ಟಿಯಿಂದ ಈ ದೇವಾಲಯ ನಂದಿವರ್ಮನ ದೇವಾಲಯಶೈಲಿಗೆ ಸೇರಿದುದಾಗಿದೆ. (ಎ.ವಿ.ಎನ್.)

**ಅಪರಾಧ :** ಸಮಾಜ ಮತ್ತು ನ್ಯಾಯಶಾಸ್ತ್ರಗಳಲ್ಲಿ ಬಳಕೆಯಲ್ಲಿರುವ ಪದ (ಕ್ರೈಮ್). ಸಮಾಜದ ಕ್ಷೇಮಕ್ಕೆ ಭಂಗತರುವ ಮತ್ತು ಸಾಮಾಜಿಕ ಆದರ್ಶಗಳಿಗೆ ಧಕ್ಕೆ ಉಂಟುಮಾಡುವ ಕಾರ್ಯಚಟುವಟಿಕೆಗಳಿಗೆ ಈ ಹೆಸರಿದೆ. ನ್ಯಾಯಶಾಸ್ತ್ರದ ಪ್ರಕಾರ ಕಾನೂನಿನ ವಿರುದ್ಧವರ್ತನೆ ಅಪರಾಧ.

**ವ್ಯಾಪ್ತಿ :** ಸಮಾಜದ ಕ್ಷೇಮ, ಸಾಮಾಜಿಕ ಮೌಲ್ಯಗಳಿಗೆ ಸಂಬಂಧಿಸಿದ ವಿಷಯಗಳು ಕಾಲ ಕಾಲಕ್ಕೆ ವ್ಯತ್ಯಾಸಗೊಂಡಿವೆ. ಆದ್ದರಿಂದ ಸಮಾಜದ ದೃಷ್ಟಿಯಲ್ಲಿ ಯಾವುದು ಅಪರಾಧ ಯಾವುದು ಅಲ್ಲ ಎಂಬುದು ಆ ಸಮಾಜದ ಆ ಕಾಲದ ಮನೋಭಾವವನ್ನೂ ಸಾಮಾಜಿಕ ಬದಲಾವಣೆಯ ವೇಗವನ್ನೂ ಅವಲಂಬಿಸಿದೆ. ಒಂದು ಕಾಲದಲ್ಲಿ ಕ್ಷಮ್ಯವಾಗಿ ಕಂಡ ಕೃತ್ಯ ಮತ್ತೊಂದು ಕಾಲದಲ್ಲಿ ಮಹಾಪರಾಧವಾಗಬಹುದು. ಸಮಾಜಹಿತಕ್ಕೆ ಧಕ್ಕೆ ತರುವಂಥ ಚಟುವಟಿಕೆಗಳಲ್ಲಿ ತೊಡಗಿದ ವ್ಯಕ್ತಿಯನ್ನು ಸರ್ಕಾರ ದಂಡಿಸುವುದಾದರೂ ಅವೇ ಅಕೃತ್ಯಗಳು ಎಲ್ಲ ಕಾಲದಲ್ಲೂ ಶಿಕ್ಷಾರ್ಹವಾಗಿದ್ದುವು ಎಂದು ಹೇಳಬರುವುದಿಲ್ಲ. ವಿವಾಹ ಮತ್ತು ಕುಟುಂಬ ಜೀವನಕ್ಕೆ ಸಂಬಂಧಿಸಿದ ಕಟ್ಟು ಕಟ್ಟಳೆಗಳು, ಸಂಪ್ರದಾಯಗಳು, ಇತ್ತೀಚಿನ ವರ್ಷಗಳಲ್ಲಿ ಕುಟುಂಬ ನಿಯಂತ್ರಣಸಾಧನ, ದಾಂಪತ್ಯ ವಿಚ್ಛೇದನಗಳಿಂದ ಸಡಿಲಗೊಂಡಿವೆ. ಇಂದು ಎಲ್ಲ ಬಗೆಯ ಆಚಾರವ್ಯವಹಾರಗಳು ಚರ್ಚಾಸ್ಪದವಾಗಿರುವುವು. ಸಮಾಜ ಒಪ್ಪದ ಒಂದು ಅಭಿಪ್ರಾಯವನ್ನು ಸರ್ಕಾರ ಕಾಯಿದೆಯಿಂದ ವಿಧಿಸಲು ಜನರ ಪ್ರಬಲ ವಿರೋಧವಿರುತ್ತದೆ.

ಹೀಗೆ ಅಪರಾಧಕ್ಕೂ ಕಾಲಾನುಸಾರ ಬದಲಾವಣೆಗೊಳ್ಳುವ ಜನಾಭಿಪ್ರಾಯ ಹಾಗೂ ಸನ್ನಿವೇಶಗಳಿಗೂ ನಿಕಟ ಸಂಬಂಧವಿದೆ. ಆದ್ದರಿಂದ ಒಂದು ಖಚಿತವಾದ ಅಪರಾಧಮಾದರಿ ಎಂದಿರುವುದು ಸಾಧ್ಯವಿಲ್ಲ. ಯಾವ ಒಬ್ಬ ವ್ಯಕ್ತಿಯನ್ನೇ ಆಗಲಿ ಅಥವಾ ಯಾವ ಒಂದು ಕೃತ್ಯವನ್ನೇ ಆಗಲಿ ಎಲ್ಲ ಕಾಲಕ್ಕೆ ಅಪರಾಧಿ ಅಥವಾ ಅಪರಾಧವೆಂದು ಕಳಂಕ ಹಚ್ಚುವುದೂ ಸಾಧ್ಯವಿಲ್ಲ. ಮನಶ್ಶಾಸ್ತ್ರದ ದೃಷ್ಟಿಯಿಂದಲೂ ಈ ಮಾತು ಸತ್ಯ. ನಿತ್ಯದೋಷಾತ್ಮಕ ಪ್ರವೃತ್ತಿಗಳಾಗಲಿ ಮನೋಭಾವಗಳಾಗಲಿ ಶಕ್ತಿಸಾಮರ್ಥ್ಯಗಳಾಗಲಿ ಇರುವುದು ಅಸಾಧ್ಯ.

**ವ್ಯಾವಹಾರಿಕ ದೃಷ್ಟಿಯಲ್ಲಿ ಅಪರಾಧ:** ಕಾನೂನಿನ ಚೌಕಟ್ಟಿನಲ್ಲಿ ವ್ಯಾವಹಾರಿಕ (ಅಂದರೆ ಮತ, ಧರ್ಮ, ನೀತಿ, ದೇವರು ಮುಂತಾದ ವಿಷಯಗಳಿಗೆ ಸಂಬಂಧಿಸದ) ಅಪರಾಧವಿದೆ. ಕಾನೂನಿನ ರಚನೆ ಆಯಾ ಕಾಲದ ಪ್ರಾಪಂಚಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಇರುವುದಾದರೂ ಧಾರ್ಮಿಕ ಹಾಗೂ ನೈತಿಕದೃಷ್ಟಿಯಿಂದ ಅಪರಾಧ ಮಾಡಿದರೆ ಪಾಪ ಬರುತ್ತದೆ ಎಂದು ಭಾವಿಸಿ ಅಪರಾಧಿಗೆ ತಕ್ಕ ಶಿಕ್ಷೆ ವಿಧಿಸುವುದು ಇನ್ನೂ ವಾಡಿಕೆಯಲ್ಲಿದೆ. ಇಂದೂ ಕೂಡ ನ್ಯಾಯಾಲಯಗಳು ಅಪರಾಧಿಗಳಿಗೆ ವಿಧಿಸುವ ಏಕಾಂತ ಕಾರಾಗೃಹವಾಸಕ್ಕೆ ಹಿಂದೆ ಧರ್ಮಬೋಧಕರು ಕೊಡುತ್ತಿದ್ದ ಅಂಥ ಶಿಕ್ಷೆಗಳ ಹಿನ್ನೆಲೆ ಇದ್ದೇ ಇದೆ. ಇದು ಹೇಗೇ ಇರಲಿ, ವ್ಯಾವಹಾರಿಕ ಅಪರಾಧಕ್ಕೆ ಧರ್ಮದ ಸೋಗನ್ನು ಕೊಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲ. ದರ್ಶನ, ವಿಜ್ಞಾನ ಹಾಗೂ ಇತಿಹಾಸಗಳು ಇದರ ಬಗ್ಗೆ ವಿರೋಧಾಭಿಪ್ರಾಯಗಳನ್ನು ಸೂಚಿಸುತ್ತವೆ. ಆದ್ದರಿಂದ ಆಡಳಿತಗಾರರು ಅಪರಾಧವನ್ನು ನಿರ್ಧರಿಸುವಾಗ ಮತ ಧರ್ಮಗಳ ಹೆಸರು ಬಳಸಬಾರದು.

**ಅಪರಾಧಿ ಮತ್ತು ಅಪರಾಧ :** ಆಧುನಿಕ ಅಪರಾಧಶಾಸ್ತ್ರ ಅಪರಾಧಕೃತ್ಯಕ್ಕಿಂತ ಹೆಚ್ಚು ಮಹತ್ತ್ವವನ್ನು ಅಪರಾಧಿಯ ಉದ್ದೇಶಗಳಿಗೆ ನೀಡುವುದು. ಆಧುನಿಕ ದಂಡನಶಾಸ್ತ್ರದ ಪಿತನೆನಿಸಿದ ಬೆಕಾರಿಯೊ ಹೇಳುವಂತೆ ಚಿಕ್ಕವರಾಗಲಿ, ದೊಡ್ಡವರಾಗಲಿ, ಅವಿವೇಕದಿಂದಾಗಲಿ, ಆಕಸ್ಮಿಕವಾಗಿಯಾಗಲಿ, ಬಲವಂತದಿಂದಾಗಲಿ, ಮೌಢ್ಯದಿಂದಾಗಲಿ ಅಪರಾಧ ಮಾಡಿದರೆ ಅದಕ್ಕೆ ಶಿಕ್ಷೆ ವಿಧಿಸಬೇಕು. ಆದರೆ ಅಪರಾಧವೆಸಗುವ ವ್ಯಕ್ತಿ ಕೇವಲ ಸಾಮಾನ್ಯ ಮಾನವ. ಆತ ಇತರರಿಗೆ ನೋವನ್ನುಂಟುಮಾಡಿದ್ದರೆ ಅದರ ಕಾರಣ ಅವನ ಮನಃಸ್ಥಿತಿ ಹಾಗೂ ಸನ್ನಿವೇಶಗಳು. ಆದ್ದರಿಂದ ಅವನಿಗೆ ಶಿಕ್ಷೆ ವಿಧಿಸಲೇಬೇಕಾದರೆ ಅವನ ಉದ್ದೇಶಗಳನ್ನು ಹತೋಟಿಯಲ್ಲಿಡುವುದಲ್ಲದೆ ಮನಸ್ಸಿನ ಸ್ಥಿತಿ ಸನ್ನಿವೇಶಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಆ ದೃಷ್ಟಿಯಿಂದ ಅಪರಾಧಿಗೆ ಚಿಕಿತ್ಸೆ ಮಾಡಬೇಕೇ ವಿನಾ ಅಪರಾಧಕ್ಕಲ್ಲ. ಶಿಕ್ಷೆ ಮುಖ್ಯವಲ್ಲ, ಅಪರಾಧಿಯ ಸುಧಾರಣೆ ಮುಖ್ಯ. ಆದ್ದರಿಂದ ಶಿಕ್ಷೆಯ ರೀತಿ ನೀತಿಗಳು ಈ ಗುರಿಯತ್ತ ಬದಲಾಯಿಸಬೇಕು. ಬಾಲಾಪರಾಧಿಗಳ ವಿಷಯದಲ್ಲಂತೂ ಬಹು ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ. ಕುತೂಹಲ, ಅನುಕರಣ, ಅಗತ್ಯ, ಆಶೆ, ಪ್ರತೀಕಾರ, ಕುಚೇಷ್ಟೆ ಇವುಗಳಲ್ಲಿ ಒಂದೋ ಹಲವೋ ಹಿನ್ನೆಲೆಯಾಗಿರುವ ಬಾಲಾಪರಾಧಕ್ಕೆ ಸುಧಾರಣಾರೂಪವಾದ ಶಿಕ್ಷೆ ಹಾಗೂ ಶಿಕ್ಷಣ ಸರಿಯಾದ ಮದ್ದಾಗಬಹುದು.

**ಅಪರಾಧದ ಸಹಜತೆ :** ಅಪರಾಧದ ಬಗ್ಗೆ ಒಂದು ಹೊಸ ಕಲ್ಪನೆಯೂ ಇದೆ. ಅಪರಾಧಿ ಎಲ್ಲರಂತೆ ಒಬ್ಬ ಸಾಮಾನ್ಯ ಮಾನವ. ದೈನಂದಿನ ಬಾಳಹೋರಾಟದಲ್ಲಿ ಉದ್ದೇಶಪೂರ್ವಕವಾಗಿ ಅಥವಾ ರಹಿತವಾಗಿ ಆತ ತನ್ನ ಕಾಮನೆಗಳನ್ನು ಪೂರೈಸಿಕೊಳ್ಳಲು ಕೆಲವು ಕಾನೂನುಬಾಹಿರ ಕ್ರಮಗಳನ್ನು ಅನುಸರಿಸಬಹುದು. ಇಲ್ಲಿ, ಅವನು ಅಪರಾಧವೆಸಗುತ್ತಾನೆ. ಆದರೆ ಇಂಥ ಪ್ರವೃತ್ತಿ ಮನುಷ್ಯ ಸಹಜವಾದದ್ದು; ವ್ಯಕ್ತಿಗೆ ಅಂಥ ಕ್ರಮಾನುಸರಣೆ ಮಾಡಲು ಪ್ರೇರಣೆ ದೊರೆತದ್ದು ಸಮಾಜದ ಅಥವಾ ಅದು ರಚಿಸಿದ ಕಾನೂನಿನ ದೋಷ ಎಂಬ ವಾದವೂ ಇದೆ. ಸುಪ್ರಸಿದ್ಧ ಸಮಾಜಶಾಸ್ತ್ರಜ್ಞ ಡರ್ಕ್‌ಹೀಮ್ ಹೇಳುವಂತೆ ಅಪರಾಧದಲ್ಲಿ ಒಂದು ಬಗೆಯ ಶ್ರೇಷ್ಠತೆ ಇದೆ; ಅದು ಸಮಾಜವನ್ನು ಎಚ್ಚರಿಸಿ ಚಟುವಟಿಕೆಯಿಂದ ಇರುವಂತೆ ಮಾಡುವುದಲ್ಲದೆ ಸುಧಾರಣೆಗಳ ಆವಶ್ಯಕತೆ ಮತ್ತು ಮಾರ್ಗದರ್ಶನಗಳಿಗೆ ಆದೇಶ ನೀಡುತ್ತದೆ.

**ಅಪರಾಧಿಯ ಹೊಣೆಗಾರಿಕೆ:** ಒಬ್ಬ ವ್ಯಕ್ತಿ ತನ್ನ ಅಪರಾಧಕೃತ್ಯಕ್ಕೆ ಜವಾಬ್ದಾರನಾಗಬೇಕಾದರೆ ಅದನ್ನು ಮಾಡಲು ಅಥವಾ ಬಿಡಲು ಅವನಿಗೆ ಸ್ವಾತಂತ್ರ್ಯವಿರಬೇಕೆಂಬುದು ಅಂಗೀಕೃತ ವಿಷಯ. ಸ್ವಾತಂತ್ರ್ಯವೆಂದರೆ ವ್ಯಕ್ತಿಗೆ ತನ್ನ ಉದ್ದೇಶ, ಮಾನಸಿಕಸ್ಥಿತಿ, ಸನ್ನಿವೇಶ, ಮುಂತಾದುವುಗಳ ಮೇಲಿನ ಪೂರ್ಣ ಹತೋಟಿ. ಆದ್ದರಿಂದ ಒಬ್ಬ ವ್ಯಕ್ತಿ ಮೌಢ್ಯದಿಂದ, ತಪ್ಪುತಿಳಿವಳಿಕೆಯಿಂದ, ಬಲಾತ್ಕಾರದಿಂದ, ಮೋಸಕ್ಕೆ ಬಲಿಯಾಗಿ ಅಥವಾ ಮನಸ್ಸಿನ ಇಲ್ಲವೆ ಸನ್ನಿವೇಶದ ನ್ಯೂನತೆಗಳಿಂದ ಒಂದು ಅಪರಾಧಕೃತ್ಯವನ್ನು ಎಸಗಿದರೆ ಆ ಕೃತ್ಯ ಪಕ್ಕಾ ಅಪರಾಧವಾಗಲಾರದು. ಅಂದರೆ ಆ ಕೃತ್ಯಕ್ಕೆ ಆತ ಸಂಪೂರ್ಣವಾಗಿ ಹೊಣೆಗಾರನಲ್ಲ.

ಇದೇ ತತ್ತ್ವದ ಆಧಾರದ ಮೇಲೆ ಅಪರಾಧಿಗೆ ವಿಧಿಸುವ ಶಿಕ್ಷೆಯ ವಿಧಾನದಲ್ಲಿ ಅನೇಕ ಮಾರ್ಪಾಡುಗಳಾಗಿವೆ. ಶಿಕ್ಷೆ ಎಂಬ ಪದವೂ ಬದಲಾವಣೆ ಹೊಂದಿ ಸಾಮಾಜಿಕ ರಕ್ಷಣೆ ಎಂಬ ಅರ್ಥ ಪಡೆದಿದೆ. ಇದನ್ನು ಅನುಸರಿಸಿ ಅಪರಾಧಿಗೆ ಭಯ ಹುಟ್ಟಿಸುವಂಥ ಶಿಕ್ಷೆಗೆ ಬದಲಾಗಿ ಅವನ ನಡತೆಯನ್ನು ಪರಿವರ್ತಿಸುವ ಸುಧಾರಣೆಗಳು ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತಿವೆ. ಅಪರಾಧ ದ್ವೇಷವನ್ನು ಪ್ರಚೋದಿಸುತ್ತದೆ. ಆದರೆ ಶಿಕ್ಷೆ ನೋವನ್ನು ಪ್ರಚೋದಿಸುತ್ತದೆ. ದ್ವೇಷವನ್ನು ನೋವಿನಿಂದ ಶಮನಗೊಳಿಸುವುದು ಸಾಧ್ಯವಿಲ್ಲ; ಅದಕ್ಕೆ ಪ್ರೇಮದಿಂದ ಮನಃಪರಿವರ್ತನೆ ಮಾಡಬೇಕು. ಆದ್ದರಿಂದ ಅಪರಾಧಕ್ಕೆ ಶಿಕ್ಷೆ ಸಮರ್ಪಕ ಚಿಕಿತ್ಸೆ ಅಲ್ಲ.

**ಅಪರಾಧದ ಕಾರಣಗಳು:** ಅಪರಾಧದ ಸ್ವರೂಪವನ್ನು ತಿಳಿದ ಮೇಲೆ ಅದಕ್ಕೆ ಕಾರಣಗಳನ್ನು ಕಂಡುಹಿಡಿಯಬಹುದು. ವ್ಯಕ್ತಿ ಸ್ವಹಿತವನ್ನು ಸಾಧಿಸಿಕೊಳ್ಳುವುದಕ್ಕಾಗಿ ನಾನಾ ಉದ್ದೇಶಗಳಿಂದ ಅಪರಾಧ ಮಾಡುತ್ತಾನೆ. ಅಪರಾಧಕ್ಕೆ ಮಾನಸಿಕ, ದೈಹಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕಾರಣಗಳಿವೆ. ಅಪರಾಧ ಅನುವಂಶೀಯ ಎಂದು ಲೋಂಬ್ರೋಸೊ ಸಮರ್ಥಿಸಿದ್ದಾನೆ. ಫ್ರಾಯ್ಡ್ ಅದನ್ನು ಅನುಮೋದಿಸಿದ್ದಾನೆ. ನ್ಯೂನತೆಗಳಿಂದ ಕೂಡಿದ ಸನ್ನಿವೇಶ ಅಪರಾಧಕ್ಕೆ ಕಾರಣವೆಂದು ಫ್ರಾನ್ಸ್ ದೇಶದ ಸಮಾಜಶಾಸ್ತ್ರಜ್ಞರವಾದ. ಅಪರಾಧ ಸ್ವಹಿತಸಾಧನೆಗಾಗಿ ಬಳಸಿಕೊಳ್ಳುವ ಸಾಧನ ಎಂದು ಸಮಾಜವಾದಿಗಳು ಅಭಿಪ್ರಾಯ ಪಡುತ್ತಾರೆ.

ಪ್ರಾಚೀನ ಸಮಾಜದಲ್ಲಿ ಜನ ತಮ್ಮ ದೈನಂದಿನ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದರಲ್ಲಿಯೇ ಮಗ್ನರಾಗಿದ್ದುದರಿಂದ ಅಪರಾಧಗಳ ಸಂಖ್ಯೆ ತೀರ ಕಡಿಮೆಯಾಗಿತ್ತೆಂದು ಹೇಳಬಹುದು. ಗಳಿಸಿದ್ದನ್ನು ಕೂಡಿಡುವುದು ಮಹಾಪರಾಧವೆಂದು ಅವರು ಭಾವಿಸಿದ್ದರು. ಆದರೆ ಇಂದು ನಾಗರಿಕಸಮಾಜದಲ್ಲಿ ಆ ರೀತಿ ಮಾಡುವುದು ಪಾಪವೂ ಅಲ್ಲ, ಅಪರಾಧವೂ ಅಲ್ಲ. ಕೈಗಾರಿಕೀಕರಣ ಹಾಗೂ ನಗರೀಕರಣದಿಂದಾಗಿ ಅಪರಾಧಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆಧುನಿಕ ಸಂಚಾರ ಸೌಕರ್ಯ, ವಿದ್ಯುಚ್ಛಕ್ತಿ, ರೇಡಿಯೋ, ಚಲನಚಿತ್ರ, ವಿಮಾನ ಮುಂತಾದುವು ಹೊಸ ರೀತಿಯ ಅಪರಾಧಗಳಿಗೆ ಎಡೆಮಾಡಿಕೊಟ್ಟಿವೆ. ಅದರ ಬಗೆಗಳೂ ನಾನಾ ರೀತಿಯಾಗಿವೆ. ಕೈಗಾರಿಕೀಕರಣದಿಂದ ಉದ್ಭವಿಸಿದ ಅನೇಕ ಸಮಸ್ಯೆಗಳಲ್ಲಿ ಕೊಳಚೆ ಪ್ರದೇಶ ಬಹು ಮುಖ್ಯವಾದುದು. ಆ ಪ್ರದೇಶ ಎಲ್ಲ ಬಗೆಯ ಅಪರಾಧಗಳಿಗೂ ತವರುಮನೆಯಾಗಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಅಪರಾಧಕ್ಕೆ ಮೂಢನಂಬಿಕೆ, ಪದ್ಧತಿ, ಸಂಪ್ರದಾಯಗಳೂ ಕಾರಣವಾಗಿವೆ. ಸಾಧುಸಂತರ ಸೋಗಿನಲ್ಲಿ ಮೂಢಜನರಿಗೆ ಮಂಕುಹಿಡಿಸಿ, ಮನೆಯ ಮೂಲೆಯೊಂದರಲ್ಲಿ ಗುಪ್ತನಿಧಿ ಅಡಗಿದೆಯೆಂದು ನಂಬಿಸಿ, ಅದನ್ನು ಪಡೆಯಲು ವಿಶೇಷ ಪೂಜೆ ಪುನಸ್ಕಾರಗಳನ್ನು ಆಚರಿಸಲು ಬೆಲೆಬಾಳುವ ಒಡವೆಗಳನ್ನಿಡಿಸಿ, ಇಡೀ ರಾತ್ರಿ ಉಪವಾಸವಿರಿಸಿ, ಒಡವೆಗಳನ್ನು ಅಪಹರಿಸಿ ಹೇಳದೆ ಕೇಳದೆ ಓಡಿಹೋಗುವಂಥ ಪ್ರಸಂಗಗಳು ಸಾಮಾನ್ಯವಾಗುತ್ತಿವೆ. ಇಂಥ ಮೋಸಗಾರಿಕೆ ಕಾನೂನಿನ ಹಿಡಿತಕ್ಕೆ ಸಿಲುಕದಿದ್ದರೂ ಆತ್ಮಸಾಕ್ಷಿಯಾಗಿ ಪರಿಶೋಧಿಸಿದರೆ ಇವು ಘೋರ ಅಪರಾಧಗಳಾಗುತ್ತವೆ. ನ್ಯಾಯವಿತರಣೆಯ ಕ್ರಮ ಬಹಳ ನಿಧಾನವಾಗಿರುವುದು ಮತ್ತು ಹೆಚ್ಚು ಸಂಕೀರ್ಣವಾಗಿರುವುದು ಅಪರಾಧಕ್ಕೆ ಮತ್ತೊಂದು ಕಾರಣವಾಗಿದೆ.

ಅಪರಾಧದ ವರ್ಗೀಕರಣ: ಇಂಗ್ಲಿಷ್ ಕಾನೂನಿನ ಪ್ರಕಾರ ಅಪರಾಧವನ್ನು ರಾಜದ್ರೋಹ (ಟ್ರೀಸನ್), ಘೋರಾಪರಾಧ (ಫೆಲನಿ), ದುರ್ನಡತೆ (ಮಿಸ್‌ಡಿಮೀನರ್) ಎಂದು ವರ್ಗೀಕರಣ ಮಾಡಲಾಗಿದೆ.

ಒಬ್ಬನ ಸ್ವತ್ತು ಎಂದು ಕಾನೂನು ಒಪ್ಪಿರುವ ವಸ್ತುವನ್ನು ಇನ್ನೊಬ್ಬ ಆತನ ಒಪ್ಪಿಗೆಯಿಲ್ಲದೆ ತೆಗೆದುಕೊಂಡರೆ ಅಥವಾ ತೆಗೆದುಕೊಳ್ಳುವ ಉದ್ದೇಶದಿಂದ ಕದಲಿಸಿದರೆ ಅದು ಕಾನೂನಿನ ಪ್ರಕಾರ ಕಳ್ಳತನವೆಂಬ ಅಪರಾಧ. ಕೊಲೆ, ಸುಲಿಗೆ, ದರೋಡೆಗಳು ಇದೇ ಸಾಲಿನ ಘೋರಾಪರಾಧಗಳು. ವ್ಯಭಿಚಾರಕ್ಕೆ ಆರ್ಥಿಕ ಮುಗ್ಗಟ್ಟು, ಬಡತನ, ನಿರುದ್ಯೋಗ, ಸ್ವಾರ್ಥ, ದುಷ್ಪಸಹವಾಸ, ಸೊಗಸು ಮಾಡಬೇಕೆಂಬ ಲಾಲಸೆ, ತಂದೆ, ತಾಯಿ ಅಥವಾ ಮಲತಾಯಿ ಪೋಷಕರಿಂದ ಕಿರುಕುಳ, ಅವಿವಾಹಿತತೆ, ದೀರ್ಘಕಾಲದ ಏಕಾಂತತೆ ಮುಂತಾದುವು ಕಾರಣ. ಕುಡಿತದಂತೆ ವ್ಯಭಿಚಾರವೂ ಒಂದು ಅಪರಾಧ. ಆದರೆ ಕಾನೂನಿನಿಂದ ಇದನ್ನು ಪೂರ್ಣವಾಗಿ ತೊಡೆದುಹಾಕಲು ಸಾಧ್ಯವಾಗಿಲ್ಲ. ಪದಾರ್ಥಗಳ ಅಪಮಿಶ್ರಣ, ಅಫೀಮು ಸೇವನೆ, ಕುಡಿತ, ಪಲಾಯನವೃತ್ತಿ, ತಿರುಕುಳಿತನ ಈ ಮೊದಲಾದವುಗಳು ಬಿಡಿಸಲಾರದ ಸಾಮಾಜಿಕ ಸಮಸ್ಯೆಗಳಾಗಿವೆ.

ಸಾರ್ವಜನಿಕ ಸೇವೆಯಲ್ಲಿ ನಿರತನಾಗಿರುವ ವ್ಯಕ್ತಿ ತನಗಾಗಲಿ, ಇತರರಿಗಾಗಲಿ ನ್ಯಾಯವಾಗಿ ಸಲ್ಲಬೇಕಾದ ವೇತನದ ಜೊತೆಗೆ ಪ್ರತಿಫಲ ಪಡೆಯುವುದಕ್ಕಾಗಿ ಬೇರೆಯವರಿಗೆ ಒಂದು ಕೆಲಸಮಾಡಿಕೊಟ್ಟು ಪಕ್ಷಪಾತ ತೋರಿಸಿದರೆ ಅಂಥ ಅಪರಾಧದ ಹೆಸರು ಲಂಚಗುಳಿತನ. ಕಳ್ಳತನ, ಲಂಚಗುಳಿತನಗಳಿಗೆ ಬಡತನ ಒಂದು ಮುಖ್ಯ ಕಾರಣ. ಹಲವಾರು ಸಾಮಾಜಿಕ ಕಾರಣಗಳಿಂದ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ ತೊಂದರೆ ಅನುಭವಿಸುವ ಮನುಷ್ಯ ಇಂಥ ಕೃತ್ಯಗಳಿಗೆ ಕೈಹಾಕುತ್ತಾನೆ. ಇಲ್ಲೆಲ್ಲ ಸಮಾಜದ ಸರ್ವಾಂಗೀಣ ಸುಧಾರಣೆ ಬಹುಮಟ್ಟಿಗೆ ಅಪರಾಧವನ್ನು ಕಡಿಮೆ ಮಾಡಬಹುದು.

ಮೊಂಡು ಅಪರಾಧಿತನ: ಒಬ್ಬ ವ್ಯಕ್ತಿ ಸನ್ನಿವೇಶದ ಪ್ರಭಾವದಿಂದ ಅಥವಾ ಪದೇ ಪದೇ ಅಪರಾಧಕೃತ್ಯಗಳನ್ನು ಎಸಗಿ ಅಭ್ಯಾಸಬಲದಿಂದ ನಿತ್ಯಾಪರಾಧಿಯಾಗುತ್ತಾನೆ ಎಂದು ತಿಳಿದಿದೆ. ಇಂಥವರನ್ನು ಮೊಂಡು ಅಪರಾಧಿಗಳ ಗುಂಪಿಗೆ ಸೇರಿಸುತ್ತಾರೆ. ಸತ್ಯಾಂಶ ಏನೇ ಇರಲಿ ಪೋಲಿಸರಿಗೆ ಅಪರಾಧಿಯನ್ನು ಪತ್ತೆಹಚ್ಚಲು ಈ ತಿಳಿವಳಿಕೆ ಮೊದಲಮಾರ್ಗ. ಆದರೆ ಕಾನೂನು ರೀತ್ಯಾ ಇಂಥ ಒಬ್ಬ ಅಪರಾಧಿಯನ್ನು ನಿಷ್ಪಕ್ಷವಾಗಿ ಅಪರಾಧಿಯೆಂದು ಹೇಳಲು ಸಾಧ್ಯವಿಲ್ಲ. ಕೇವಲ ಕಾರ್ಯರೂಪದಿಂದ ಮಾತ್ರ ಆ ರೀತಿ ನಿರ್ಧರಿಸಬಹುದಾಗಿದೆ. ಯಾವ ವ್ಯಕ್ತಿ ಶೀಲಕ್ಕೆ ಬೆಲೆಕೊಡುವುದಿಲ್ಲವೋ ಮಾನಮರ್ಯಾದೆಗಳನ್ನು ಕಳೆದುಕೊಂಡಿರುವನೋ ಹೀನಕೃತ್ಯದಲ್ಲಿ ತೊಡಗಲು ಹೇಸಿಗೆಪಟ್ಟುಕೊಳ್ಳುವುದಿಲ್ಲವೋ ದುರ್ನಡತೆಯುಳ್ಳವನಾಗಿ ಹಿಂಜರಿಯದೆ ಪದೇಪದೇ ಅಪರಾಧಕೃತ್ಯಗಳನ್ನು ಮಾಡುವುದರ ಕಡೆಗೇ ಗಮನಕೊಡುವನೋ ಅಂಥ ವ್ಯಕ್ತಿಯನ್ನು ತಿದ್ದಲಾಗದ ಅಪರಾಧಿ ಎಂದು ಕರೆಯಬಹುದೆಂದು ಕೆಲವರ ಅಭಿಪ್ರಾಯ. ಆದರೆ ಅಂಥ ವ್ಯಕ್ತಿಗೆ ಶಿಕ್ಷೆಯ ಬದಲು ಮಾನಸಿಕ ಮತ್ತು ವೈದ್ಯಕೀಯ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ.

ಸಮಾಜವಿದ್ದಲ್ಲಿ ಕಾಯಿದೆ ಕಾನೂನುಗಳಿವೆ; ಇವಿದ್ದಲ್ಲಿ ಉಲ್ಲಂಘನೆಯೂ ಇದೆ. ಹೀಗೆ ನಮಗೆ ಬೇಕಿರಲಿ, ಇಲ್ಲದಿರಲಿ, ಅಪರಾಧ ಸಾಮಾಜಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಪ್ರಗತಿಪರ ಸಮಾಜದಲ್ಲಿ ಅಪರಾಧದ ಪ್ರಮಾಣ ಮತ್ತು ತೀವ್ರತೆ ಕಡಿಮೆ. ಆದ್ದರಿಂದ ಸಮಾಜಕ್ಕೆ ದೊರೆಯುವ ಯೋಗ್ಯ ಚಿಕಿತ್ಸೆಯ ಪರಿಣಾಮ ಅಪರಾಧದ ಇಳಿವರಿ. (ಎನ್.ಎಂ.)

**ಅಪರಾಧ ಮತ್ತು ಅಪರಾಧಕಾಯಿದೆ :** ಸಮಾಜದ ಹಿತರಕ್ಷಣೆಯ ಹೊಣೆ ಹೊತ್ತಿರುವ ಸರ್ಕಾರದ ದೃಷ್ಟಿಯಲ್ಲಿ ಅಪರಾಧವೆಂದರೇನು, ಅದನ್ನು ತಡೆಗಟ್ಟಲು ಯಾವ ಬಗೆಯ ಕಾಯಿದೆಗಳನ್ನು ಮಾಡಲಾಗಿದೆ ಎಂಬುದನ್ನು ಚಾರಿತ್ರಿಕವಾಗಿ ಇಲ್ಲಿ ಪರಿಶೀಲಿಸಲಾಗಿದೆ.

ಸಮಾಜದ ಹಿತದೃಷ್ಟಿಯಿಂದ ಸಮಾಜ ಸಹಜೀವನದ ಅನೇಕ ತರದ ವ್ಯವಸ್ಥೆಗಳನ್ನು ಏರ್ಪಡಿಸುತ್ತದೆ. ಆ ವ್ಯವಸ್ಥೆಗಳನ್ನು ಊರ್ಜಿತಪಡಿಸುವುದಕ್ಕಾಗಿ ಬೇರೆ ಬೇರೆ ತರದ ನಿಯಮಗಳನ್ನು ರೂಪಿಸುತ್ತದೆ. ಅವುಗಳ ಪಾಲನೆಯ ಬಗ್ಗೆ ಒತ್ತಾಯಿಸುವಂತೆ ಕ್ರಮಗಳನ್ನು ಕಲ್ಪಿಸುತ್ತದೆ. ಸಮಾಜದ ಹಿತ, ಆರ್ಥಿಕ, ಧಾರ್ಮಿಕ, ನೈತಿಕ, ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ನಿಯಮಗಳನ್ನು ಅವಲಂಬಿಸಿದೆ. ಇಂಥ ನಿಯಮಗಳನ್ನು ಪಾಲಿಸುವವನು ಸಮಾಜದ ಹಿತಕ್ಕೆ ಪೋಷಕನಾಗುತ್ತಾನೆ. ಆ ನಿಯಮಗಳನ್ನು ಕಡೆಗಣಿಸುವವನು ಆಯಾ ದೃಷ್ಟಿಯಿಂದ ಸಮಾಜಹಿತಕ್ಕೆ ಭಂಗತರುವ ಪ್ರಸಂಗವನ್ನು ತರುತ್ತಾನೆ. ನಿಯಮಗಳ ತಿರುಳು ವಿಧಿ, ನಿಷೇಧ. ಅಂದರೆ ಹೀಗೆ ಮಾಡಬೇಕು, ಹೀಗೆ ಮಾಡಬಾರದು ಎಂಬ ಆದೇಶ. ಇಂಥ ನಿಯಮಗಳನ್ನು ಉಲ್ಲಂಘಿಸುವವರೆಲ್ಲರೂ ಆಯಾ ದೃಷ್ಟಿಯಿಂದ (ಅಂದರೆ ಧಾರ್ಮಿಕ, ಆರ್ಥಿಕ, ನೈತಿಕ, ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ) ತಪ್ಪುಗಾರರಾಗುತ್ತಾರೆ. ಆದರೆ ಸರ್ಕಾರದ ಮಟ್ಟಿಗೆ ಇಂಥ ತಪ್ಪುಗಳು ಎಷ್ಟೇ ದೊಡ್ಡವಾದರೂ ಅಪರಾಧವೆಂದು ಎಣಿಸಲ್ಪಡುವುದಿಲ್ಲ.

ಇಂಥ ಎಲ್ಲ ತರದ ನಿಯಮಗಳ ಸಂಬಂಧದಲ್ಲಿಯೂ ಅವುಗಳನ್ನು ಉಲ್ಲಂಘಿಸುವುದನ್ನು ತಡೆಯುವುದಕ್ಕಾಗಿ ಸಮಾಜ ಬೇರೆ ಬೇರೆ ಸಾಧನಗಳನ್ನು ಉಪಯೋಗಿಸುತ್ತದೆ. ಅಪಹಾಸ್ಯ, ಸ್ಥಾನಮಾನಚ್ಯುತಿ, ಧಾರ್ಮಿಕ, ಸಾಮಾಜಿಕ ಇಲ್ಲವೆ ಸಾಂಘಿಕ ಬಹಿಷ್ಕಾರ ಇವೇ ಮೊದಲಾದವು ಇಂಥ ಸಾಧನಗಳು. ಆದರೆ ಯಾವುದೇ ನಿಯಮೋಲ್ಲಂಘನೆಗೆ ಇದಕ್ಕೂ ಬಲವಾದ ಒತ್ತಾಯವನ್ನು ಕಲ್ಪಿಸಬೇಕೆಂದು ತೋರಿದಾಗ ಅದರ ಪಾಲನೆಯ ಬಗೆಗೆ ಸಮಾಜದ ಘಟನಾತ್ಮಕ ಪ್ರತಿನಿಧಿಯಾದ ಸರ್ಕಾರ ಅವುಗಳಿಗೆ ವಿಶೇಷವಾದ ಸ್ಥಾನವನ್ನೂ ಕ್ಲುಪ್ತಸ್ವರೂಪವನ್ನೂ ಇತ್ತು ನಿರ್ದಿಷ್ಟ ಕ್ರಮಗಳನ್ನು ಸ್ಥಾಪಿಸುವುದು. ಹೀಗೆ ಕ್ರಮಗಳನ್ನು ರೂಪಿಸಿ ಸರ್ಕಾರ ಎತ್ತಿಹಿಡಿದ ನಿಯಮಗಳೇ ಕಾಯಿದೆಗಳು. ಆದ್ದರಿಂದ ಅಪರಾಧದ ಸ್ವರೂಪ ಮತ್ತು ವ್ಯಾಖ್ಯೆಯನ್ನು ಇಂಥ ಕಾಯಿದೆಗಳ ಚೌಕಟ್ಟಿನಲ್ಲಿ ಬರುವ ಕರ್ತವ್ಯಲೋಪ, ದುಷ್ಕೃತಿಗಳೊಳಗೇ ಶೋಧಿಸಬೇಕಲ್ಲದೆ, ಸಮಾಜದ ಉಳಿದ ನಿಯಮಗಳ ಉಲ್ಲಂಘನೆಯಿಂದಲ್ಲ. ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ ಇತ್ಯಾದಿ ನಿಯಮಗಳ ಪೈಕಿ ಯಾವ ಯಾವ ನಿಯಮಗಳು ಸರ್ಕಾರದ ದೃಷ್ಟಿಯಿಂದ ಮಹತ್ತ್ವದವೋ ಸರ್ಕಾರದ ಕಕ್ಷೆಯಲ್ಲಿರುವ ವಿವಿಧ ಕ್ರಮಗಳನ್ನು ಕೈಗೊಳ್ಳಲು ಯೋಗ್ಯವೋ ಅವುಗಳನ್ನು ಮಾತ್ರ ಸರ್ಕಾರ ಕಾಯಿದೆಯ ಚೌಕಟ್ಟಿನಲ್ಲಿ ಸೇರಿಸುತ್ತದೆ. ಇವುಗಳ ಉಲ್ಲಂಘನೆ ಮಾತ್ರ ಕಾಯಿದೆಯ ದೃಷ್ಟಿಯಿಂದ ತಪ್ಪೆಂದೆಣಿಸಲ್ಪಡುತ್ತದೆ.

ಕಾಯಿದೆ ತನ್ನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡುವುದಕ್ಕಾಗಿ ನಿಯಮಗಳನ್ನು ಮೀರುವವರನ್ನೆಲ್ಲ ಒಂದಿಲ್ಲೊಂದು ತೊಂದರೆಗೆ ಗುರಿಪಡಿಸುತ್ತದೆ. ಆದರೆ ಅದು ಹೇರುವ ತೊಂದರೆಗಳೆಲ್ಲ ಅಷ್ಟೇ ನಿಷ್ಠುರವಾಗಿರುವುದಿಲ್ಲ. ಅವು ಮುಖ್ಯವಾಗಿ ಮೂರು ವಿಧದವು : 1. ವ್ಯರ್ಥೀಕರಣ; 2. ಪರಿಹರಣ (ಪರಿಹಾರಕ್ರಮ); 3. ದಂಡನ– ಇವು ಕಾಯಿದೆಯ ದೃಷ್ಟಿಯಿಂದ ಘಟಿಸಿದ ಬೇರೆ ಬೇರೆ ತಪ್ಪುಗಳಿಗೆ ನಿಯೋಜಿತವಾದ ತೊಂದರೆಗಳು. ಇವುಗಳಲ್ಲಿ ದಂಡನಕ್ಕೆ ಅರ್ಹವೆಂದು ವಿಧಿಸಲ್ಪಟ್ಟ ತಪ್ಪುಗಳು ಮಾತ್ರ ಅಪರಾಧಗಳು.

**1. ವ್ಯರ್ಥೀಕರಣ:** ಯಾವುದೇ ಲೇಖದಿಂದ ಇಲ್ಲವೆ ವ್ಯವಹಾರದಿಂದ ಪಡೆಯಲಪೇಕ್ಷಿಸಿದ ಉದ್ದೇಶ ಆ ಲೇಖ ಇಲ್ಲವೆ ವ್ಯವಹಾರ ಕಾಯಿದೆಯಲ್ಲಿ ಹೇಳಿದ ರೀತಿಯಲ್ಲಿ ಇಲ್ಲದ್ದರಿಂದ ವ್ಯರ್ಥವಾಗುವಿಕೆ. ಕಾಯಿದೆಗೆ ವ್ಯತಿರಿಕ್ತವಾದ ಅರ್ಜಿ, ದಾವೆ, ಮೊದಲಾದವುಗಳನ್ನು, ವಿಚಾರಕ್ಕೆ ಸಹ ತೆಗೆದುಕೊಳ್ಳದೆ ತಿರಸ್ಕರಿಸಬಹುದು. ಸಹಿ, ಸಾಕ್ಷಿ, ಸ್ಟಾಂಪು, ಲೇಖ, ನೋಂದಣಿ–ಹೀಗೆ ಕಾಯಿದೆಯಲ್ಲಿ ಹೇಳಿದ ಈ ಮೊದಲಾದ ಆವಶ್ಯಕತೆಗಳಿಂದ ರಹಿತವಾದ ವಸ್ತು, ವ್ಯವಹಾರಗಳಿಗೆ ತದುದ್ದಿಷ್ಟ ಫಲಗಳು ದೊರೆಯದಂತೆ ವಿಧಿಸುವುದು ವ್ಯರ್ಥೀಕರಣದ ಉದಾಹರಣೆಗಳು. ಹೀಗೆ ಆಯಾ ಲೇಖಗಳ ಬಗೆಗಿನ ವ್ಯವಹಾರ, ದಸ್ತುಗಳ ಬಗೆಗೆ ಕೈಗೊಂಡ ಖರ್ಚು, ಶ್ರಮವನ್ನು ಹಾಳುಮಾಡಿ ಅದರಿಂದ ಪಡೆಯಬೇಕೆನ್ನುವ, ಪಡೆದಿರುವನೆಂದೆಣಿಸಿದ ಹಿತವನ್ನು ಅಲ್ಲಗಳೆದು, ಕಾಯಿದೆಯ ನಿಯಮವನ್ನು ಅನುಸರಿಸದವನನ್ನು ನಿರಾಶೆಗೊಳಿಸುವುದೇ ವ್ಯರ್ಥೀಕರಣದ ಉದ್ದೇಶ. ಇದು ತಪ್ಪಿತಸ್ಥನನ್ನು ಪರಿಹಾರ ತೆರುವ ಪ್ರಸಂಗಕ್ಕಾಗಲೀ ದಂಡನೆಗಾಗಲೀ ಗುರಿಪಡಿಸುವುದಿಲ್ಲ.

**2. ಪರಿಹರಣ:** ಕಾಯಿದೆಯನ್ನು ಉಲ್ಲಂಘಿಸುವುದರಿಂದ ಬಾಧಿತನಾದವನಿಗೆ ಉಲ್ಲಂಘಿತನಿಂದ ಪರಿಹಾರವನ್ನೊದಗಿಸುವುದು. ಇಲ್ಲಿ ಪರಿಹಾರವೆಂದರೆ ಒಬ್ಬನ ಅಕಾರ್ಯ (ಮಿಸ್‌ಫೀಸೆನ್ಸ್), ದುಷ್ಕೃತ್ಯ (ಮಾಲ್‌ಫೀಸೆನ್ಸ್), ಕರ್ತವ್ಯಚ್ಯುತಿ–ಅಜಾಗರೂಕತೆ (ನೆಗ್ಲಿಜೆನ್ಸ್)– ಇವುಗಳಿಂದಾದ ತೊಂದರೆ, ಹಾನಿ, ಕೇಡು, ಇವುಗಳ ನಿವಾರಣೆ. ಯಾವನೊಬ್ಬನ ಅಪಕೃತ್ಯದಿಂದ (ಟಾರ್ಟ್), ವಚನಭಂಗದಿಂದ (ಬ್ರೀಚ್ ಆಫ್ ಕಾಂಟ್ರ್ಯಾಕ್ಟ್), ಕರ್ತವ್ಯಚ್ಯುತಿಯಿಂದ (ಬ್ರೀಚ್ ಆಫ್ ಡ್ಯೂಟಿ) ಇನ್ನೊಬ್ಬನಿಗೆ ಶಾರೀರಿಕ, ಮಾನಸಿಕ, ಅಥವಾ ಸ್ವತ್ತಿನ ವಿಷಯದಲ್ಲಿ ಬಾಧೆ ತಗುಲಿದಾಗ, ಕೊಡಬೇಕಾದ ಸ್ವತ್ತನ್ನು ಕೊಡುವಂತೆ ಒತ್ತಾಯಿಸಿ, ಇಲ್ಲವೆ ಆದ ಹಾನಿಗೆ ಯೋಗ್ಯ ಪರಿಹಾರದ್ರವ್ಯವನ್ನು ಕೊಡುವಂತೆ ಮಾಡಿ, ತಪ್ಪಿತಸ್ಥ ಕೊಡುತ್ತಿರುವ ಕೀಟಲೆಯನ್ನು ಕೊಡದಂತೆ ಪ್ರತಿಷೇಧಿಸಿ, ಚ್ಯುತವಾದ ಕರ್ತವ್ಯವನ್ನು ಎಸಗುವಂತೆ ಒತ್ತಾಯಿಸಿ, ಅವನಿಂದಾದ ಬಾಧೆಯನ್ನು ಪರಿಹರಿಸುವುದೇ ಈ ಕ್ರಮಗಳ ಉದ್ದೇಶ. ಆದರೆ ಕಾಯಿದೆಯಲ್ಲಿ ಈ ತಪ್ಪುಗಳಿಗೆ ಅಪರಾಧ (ಕ್ರೈಮ್) ಎಂದು ಕರೆಯುವುದಿಲ್ಲ. ಆದರೆ ಕಳವು, ಕೊಲೆ, ದರೋಡೆ, ಮೋಸ ಮುಂತಾದ ಕೃತ್ಯಗಳನ್ನು ಎಸಗಿದವನ ವಿರುದ್ಧ ತೆಗೆದುಕೊಳ್ಳುವ ಕ್ರಮಗಳಲ್ಲಿ ಅವನನ್ನು ದಂಡಿಸುವುದೇ ಪ್ರಧಾನೋದ್ದೇಶ.

ಅಂಥ ಸಮಾಜಘಾತಕ ಕೃತ್ಯಗಳಿಂದ ಸಮಾಜವನ್ನು ಸಂರಕ್ಷಿಸುವುದೇ ಕಾಯಿದೆಯ ಉದ್ದೇಶ. ಆದ್ದರಿಂದ ಇಂಥ ಕೃತ್ಯಗಳನ್ನು ವಿಶೇಷ ತರದ ತಪ್ಪುಗಳೆಂದು ಗಣಿಸಿ ಕಳವು, ಸುಲಿಗೆಗಳಿಂದ ಬಾಧಿತನಾದ ವ್ಯಕ್ತಿ ಉಪೇಕ್ಷಿಸಿದರೂ ಕೊಲೆಯಾದವನ ಸಂಬಂಧಿಕರು ಕೊಲೆಗಡುಕನನ್ನು ಕ್ಷಮಿಸಿದರೂ ಕಳವಾದ ವಸ್ತುಗಳನ್ನು ಕಳ್ಳಮಾಲೀಕನಿಗೆ ಕೊಟ್ಟರೂ ಕೊಲೆಗಡುಕ ಕೊಲೆಯಾದವನ ಸಂಬಂಧಿಕರಿಗೆ ಸಾಕಷ್ಟು ಪರಿಹಾರ ಧನವನ್ನು ಕೊಟ್ಟರೂ ಸರ್ಕಾರ ತಾನಾಗಿಯೇ ಆ ಅಪರಾಧಿಯ ವಿರುದ್ಧ ಕ್ರಮವನ್ನು ಕೈಗೊಂಡು ಅವನನ್ನು ದಂಡಿಸುವುದು. ಪರಿಹಾರೋದ್ದೇಶಕ್ರಮ ಬಾಧಿತನಾದ ವಾದಿಯ ಇಚ್ಛಾವಲಂಬಿ. ಆತ ಪ್ರತಿವಾದಿಯೊಡನೆ ಯಾವುದೇ ರೀತಿಯಿಂದ ರಾಜಿ ಮಾಡಿಕೊಂಡು ವ್ಯವಹರಣೆಯನ್ನು ಕೊನೆಗೊಳಿಸಬಹುದು. ಆದರೆ ದಂಡೋದ್ದೇಶಕ ವ್ಯವಹಾರಗಳಲ್ಲಿ ಬಾಧಿತನಾದವ ಕೇವಲ ನಿವೇದಕ (ಇನ್‌ಫಾರ್ಮೆಂಟ್). ಸಮಾಜರಕ್ಷಣೆ ಮುಖ್ಯವಾದ್ದರಿಂದ ಸಮಾಜಪ್ರತಿನಿಧಿಯಾದ ಸರ್ಕಾರವೇ ವ್ಯವಹರಣೆಯ ಪ್ರವರ್ತಕ ಹಾಗೂ ನಿಯಂತ್ರಕ. ವ್ಯವಹರಣೆಯನ್ನು ಹೇಗೆ ಯಾವಾಗ ಕೊನೆಗೊಳಿಸುವುದು, ಅಪರಾಧಿಯನ್ನು ಸಮಾಜದ ಹಿತದ ದೃಷ್ಟಿಯಿಂದ ಎಷ್ಟರಮಟ್ಟಿಗೆ ಯಾವ ರೀತಿಯಲ್ಲಿ ದಂಡಿಸುವುದು-ಇದನ್ನೆಲ್ಲ ಸರ್ಕಾರ ಕಾಯಿದೆಯ ನಿಯಮಗಳ ಮೂಲಕ ಇಲ್ಲವೆ ತನ್ನಿಯುಕ್ತ ಅಧಿಕಾರಿಗಳ ಮೂಲಕ ನಿರ್ಣಯಿಸುವುದು. ಮರಣ, ಕಾರಾಗೃಹವಾಸ, ಅಂಗವಿಚ್ಛೇದ ಹಾಗೂ ಜುಲ್ಮಾನೆ ಇವೇ ಮೊದಲಾದವುಗಳು ದಂಡನದ ವಿವಿಧರೂಪಗಳು. ಈ ರೀತಿಗಳಲ್ಲಿ ಇವುಗಳಿಂದ ದಂಡನೆಗೊಳಗಾದವನು ವಿಶೇಷತರದ ಹಿಂಸೆಗೆ ಬಲಿಯಾಗುತ್ತಾನೆ. ಆದುದರಿಂದ ದಂಡೋದ್ದೇಶಕ ಕ್ರಮಗಳು ಅತ್ಯಂತ ಉಗ್ರವಾಗಿವೆ. ಕಾರಣ, ಆರೋಪಿಯನ್ನು ಹಾಜರುಪಡಿಸುವ ವಿಷಯದಲ್ಲಿ, ಚೌಕಾಶಿಯ ವಿಷಯದಲ್ಲಿ, ಆರೋಪಿ ಪರಾರಿಯಾಗದಂತೆ ನೋಡಿಕೊಳ್ಳುವ ವಿಷಯದಲ್ಲಿ ಆರೋಪಿತನ ಹಿತಸಂರಕ್ಷಣೆಯ ವಿಷಯದಲ್ಲಿ, ಆರೋಪ ಸಿದ್ಧಪಡಿಸುವ ವಿಚಾರಗಳಲ್ಲಿ ನಿರಪರಾಧಿ ಶಿಕ್ಷೆಗೆ ಗುರಿಯಾಗಬಾರದೆಂದು ಎಚ್ಚರಿಕೆ ವಹಿಸುವಲ್ಲಿ ಹಾಗೂ ನ್ಯಾಯವಿತರಣೆಯ ಸೂಕ್ಷ್ಮೀಕರಣದ ದೃಷ್ಟಿಯಿಂದಲೂ ಈ ಅಪರಾಧಸಂಬಂಧದ ಕಾಯಿದೆ ಅಪರಾಧೇತರ ಕಾಯಿದೆಗಿಂತ ತೀರ ವಿಭಿನ್ನವಾಗಿದೆ. ಹೀಗೆ ದಂಡನೆಯಲ್ಲಿ ಪರ್ಯವಸಾನ ಹೊಂದುವುದು ಅಪರಾಧ ಲಕ್ಷಣ; ಪರಿಹಾರಕ್ರಮಗಳಲ್ಲಿ ಪರ್ಯವಸಾನ ಹೊಂದುವುದು ಅಪರಾಧೇತರ ತಪ್ಪಿನ ಲಕ್ಷಣ. ಈ ಭೇದ ಕೈಗೊಳ್ಳುವ ಕ್ರಮವನ್ನು ಸೂಚಿಸುವುದೇ ಹೊರತು ಕ್ರಮಗಳನ್ನು ಕೈಕೊಳ್ಳುವುದಕ್ಕಿಂತ ಮೊದಲು ಯಾವ ತಪ್ಪು ಅಪರಾಧ, ಯಾವ ತಪ್ಪು ಅಪರಾಧೇತರ ಎಂದು ತಿಳಿಯಲು ಸಾಧನವನ್ನು ಸೂಚಿಸುವುದಿಲ್ಲ. ಹಾಗಾದರೆ ಈ ಎರಡು ತರಹದ ತಪ್ಪುಗಳ ನೈಜಸ್ವರೂಪದಲ್ಲಿ ಭೇದವೇನು? ಯಾವ ತಪ್ಪು ಅಪರಾಧವೆಂದು ಮೊದಲು ನಿರ್ಣಯಿಸದೆ ಅದಕ್ಕೆ, ದಂಡನಕ್ರಮ ಅಥವಾ ಪರಿಹಾರ ಕ್ರಮಗಳಲ್ಲಿ ಯಾವುದು ಯೋಗ್ಯವೆಂದು ಹೇಗೆ ನಿರ್ಣಯಿಸುವುದು, ಕಾಯಿದೆಯಂತೆ ಅಪರಾಧವೆನಿಸಿಕೊಳ್ಳುವ ನಡತೆಯ ಸ್ವಭಾವಲಕ್ಷಣಗಳೇನು ಈ ಪ್ರಶ್ನೆಗಳಿಗೆ ನ್ಯಾಯಶಾಸ್ತ್ರದೃಷ್ಟಿಯಿಂದ ವ್ಯಾಪಕವಾದ ಸಮಾಧಾನಕರವಾದ ಉತ್ತರವನ್ನು ಕೊಡುವುದು ಕಠಿಣ. ಆಯಾ ದೇಶದ ಕಾಯಿದೆಯ ವ್ಯಾಖ್ಯಾವಚನದ ಆಧಾರದ ಮೇಲೆ ಉತ್ತರವನ್ನು ಸೂಚಿಸಬಹುದಾದರೂ ಸರ್ವಸಮ್ಮತವಾದ ಲಕ್ಷಣಗಳನ್ನು ಸೂಚಿಸುವುದು ಶಾಸ್ತ್ರದ ಪರಿಪಾಠವೆಂದು ಒಪ್ಪಿಕೊಂಡರೆ ಅಪರಾಧತ್ವದ ನೈಜಸ್ವರೂಪದ ಲಕ್ಷಣಗಳನ್ನು ಹೇಳುವುದು ಕಠಿಣ. ಆ ಕಾರಣದಿಂದ ಕೆಲವು ಸಾರಿ ಮೇಲೆ ಸೂಚಿಸಿದಂತೆ ದಂಡನಕ್ರಮವನ್ನು ನಿರ್ದೇಶಿಸಿದ ಪ್ರತಿನಿಷಿದ್ಧಕೃತ್ಯಗಳೆಲ್ಲ ಅಪರಾಧಗಳು ಎಂದು ಹೇಳಬೇಕಾಗುತ್ತದೆ.

ಯಾವುದೇ ಅಪಕೃತ್ಯದ ಅಪರಾಧತ್ವದ ಗುಣ ಸಹಜಸ್ಫೂರ್ತಿಯಿಂದ ತಿಳಿಯುವಂಥ ದಲ್ಲ. ಆ ಕೃತ್ಯ ದಂಡನ ಕ್ರಮನಿರ್ದೇಶನದಿಂದ ಪ್ರತಿಷೇಧಿಸಲ್ಪಟ್ಟಿದೆಯೋ ಎಂಬ ಅಳತೆ ಗೋಲನ್ನು ಬಿಟ್ಟರೆ ಇನ್ನಾವುದರಿಂದಲೂ ಅರಿಯಲು ಸಾಧ್ಯವಿಲ್ಲ. ಅಪರಾಧ ಕಾಯಿದೆಯ ಉದ್ದೇಶ ಸಾಮಾನ್ಯಮನುಷ್ಯನಿಗೆ ತನ್ನ ನಡತೆಯ ವಿಷಯದಲ್ಲಿ ಜಾಗರೂಕತೆಯನ್ನುಂಟು ಮಾಡುವುದಾದರೆ, ಯಾವ ಯಾವ ಕೃತ್ಯದಿಂದ ದಂಡನೆಕ್ಕೊಳಪಡುವನೆಂದು ಎಚ್ಚರಿಸಿ ಅವನನ್ನು ಅಂಥ ಕೃತ್ಯಗಳಿಂದ ದೂರವಿರುವಂತೆ ಮಾಡುವುದಾದರೆ, ಕಾಯಿದೆಯ ಪಂಡಿತರಿಗೆ ಸಹ ಸಂಶಯವನ್ನುಂಟುಮಾಡುವ ಕಾಯಿದೆಯ ವ್ಯಾಖ್ಯೆ, ವಿವರಣೆ, ಅನುಮಾನಗಳಿಂದ 'ಕಾಯಿದೆಯು ಯಾವ ಕೃತ್ಯಗಳಿಗೆ ದಂಡನವನ್ನು ನಿರೂಪಿಸಿದೆ ಎಂದು ಅರಿತು ನೋಡು' ಎಂಬ ಮಾರ್ಗದರ್ಶನ ತೀರ ಅಸಮಂಜಸವಾದೀತು. ಸಾಧಾರಣ ಬುದ್ಧಿಗೆ ನಿಲುಕುವಂತೆ ಅಪರಾಧದ ಸ್ವರೂಪ, ಲಕ್ಷಣವನ್ನು ತಿಳಿಸಬೇಕೆಂಬ ಜನಸಾಮಾನ್ಯರ ಹಂಬಲ ಸಹಜ ಹಾಗೂ ಸಮಂಜಸ. ಆದರೆ ಐತಿಹಾಸಿಕ ಕಾರಣಗಳ ಮೂಲಕವೂ ತಾರ್ಕಿಕ ದೃಷ್ಟಿಯಿಂದಲೂ ಈ ಪ್ರಶ್ನೆ ಜಟಿಲವೂ ವಿವಾದಾಸ್ಪದವೂ ಆಗಿಯೇ ನಿಂತಿದೆ.

ಒಂದೇ ಕೃತ್ಯ ಎರಡು ರೀತಿಯ ಪರಿಹಾರವುಳ್ಳ ತಪ್ಪು ಕೂಡಾ ಆಗಬಹುದು. ನನ್ನ ಮನೆಯನ್ನು ಒಬ್ಬ ಸುಟ್ಟರೆ, ಆ ಲುಕ್ಸಾನು ತುಂಬಿಕೊಡಲು ನಾನು ಪರಿಹಾರಕ್ರಮವನ್ನು ಕೈಕೊಳ್ಳಬಹುದು. ಇಲ್ಲವೆ ತಪ್ಪಿತಸ್ಥನನ್ನು ದಂಡಿಸಲು ಸರ್ಕಾರ ಅಪರಾಧಕಾಯಿದೆ ಕ್ರಮಗಳನ್ನು ಕೈಕೊಳ್ಳಬಹುದು. ಇದರಂತೆ ಮಾನಹಾನಿ, ಕಳವು, ಮೋಸ, ಘಾಸಿ, ಹಣದ, ಚರಸ್ವತ್ತಿನ ದುರುಪಯೋಗ, ಮನೆ, ಭೂಮಿಗಳ ಅತಿಕ್ರಮಣ-ಇವೆಲ್ಲ ಅಂಥ ಸಮಸ್ಯೆಗಳೇ ಆಗಿವೆ. ಅಲ್ಲದೆ ಭಾರತದ ಸರ್ವಸಾಧಾರಣ ಅಪರಾಧಕಾಯಿದೆಯಲ್ಲಿ (ಪೀನಲ್ ಕೋಡ್) ಕೆಲವು ತರದ ಕರಾರುಭಂಗಕ್ಕೆ ಸಹ ಅಪರಾಧದ ರೂಪವನ್ನು ಕೊಡಲಾಗಿದೆ. ಹೀಗಿದ್ದಾಗ ನೈಜ ಸ್ವರೂಪದಲ್ಲಿಯ ಭೇದಗಳನ್ನು ಕಾಣುವುದು ಹೇಗೆ ? ಇದಕ್ಕೆ ಸಮಾಧಾನ ಕಾಣುವುದು ಸುಲಭ. ಒಂದೇ ಕೃತ್ಯವನ್ನು ಬೇರೆ ಬೇರೆ ದೃಷ್ಟಿಯಿಂದ ನೋಡಿದಾಗ ಬೇರೆ ಬೇರೆ ಲಕ್ಷಣಗಳು ಕಾಣುತ್ತವೆ. ಉದಾಹರಣೆಗಾಗಿ ಯಾವುದೇ ಕಳವು ಅಥವಾ ಮೋಸದ ವಿಷಯವನ್ನು ಪರಿಶೀಲಿಸಿದರೆ ಅದು ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಆ ಸಮಾಜಕ್ಕೂ ಸಂಬಂಧಿಸಿದ್ದಾಗುತ್ತದೆ. ಅದನ್ನು-ವ್ಯಕ್ತಿಗಾದ ಹಾನಿಯನ್ನು ತುಂಬುವ ಅಥವಾ ಸಮಾಜಕ್ಕಿರುವ ಭೀತಿಯನ್ನು ನೀಗಿಸುವ-ಹೀಗೆ ಎರಡು ದೃಷ್ಟಿಯಿಂದ ಪರಿಶೀಲಿಸಬಹುದು.

ಐತಿಹಾಸಿಕವಾಗಿ ವಿಮರ್ಶಿಸಿದಾಗ, ಅಪರಾಧ ಹಾಗೂ ಅಪಕೃತ್ಯಗಳ ನಡುವಣ ಭೇದ ತೀರ ಮಸುಕು ಮಸುಕಾಗಿ ಕಂಡುಬರುತ್ತದೆಯಾದರೂ ವೈಯಕ್ತಿಕ ಹಾನಿಯನ್ನು ಮೀರಿ ಸಮಾಜಕ್ಕೆ ಅನ್ಯಾಯವನ್ನು ಬಗೆದಿರುವ ತಪ್ಪುಗಳ ಕಲ್ಪನೆ ಬುನಾದಿ ಜನಾಂಗಗಳಿಗೂ ಇತ್ತೆಂದು ಹೇಳಬಹುದು. ರಾಷ್ಟ್ರಕ್ಕೆ ಸಮಾಜಕ್ಕೆ ಎಸಗಿದ ತಪ್ಪುಗಳ ವಿಷಯಗಳಲ್ಲಿ ಸಮಾಜವೇ ಆ ವ್ಯಕ್ತಿಯನ್ನು ಆರೋಪಿಸಿ ಸಭೆಯಲ್ಲಿ ಅವನಿಗೆ ಕೊಡಬೇಕಾದ ಶಿಕ್ಷೆಯನ್ನು ರೂಪಿಸುವ ತುರ್ತು ಕಾಯಿದೆಯನ್ನು ಹೊರಡಿಸಿ ಅವನನ್ನು ಮರಣ, ಅಂಗವಿಚ್ಛೇದ ಮೊದಲಾದ ಶಿಕ್ಷೆಗೆ ಗುರಿಪಡಿಸಿದ ಇಲ್ಲವೆ ಸಂಪೂರ್ಣ ಸಮಾಜಬಾಹಿರನೆಂದು ಸಾರಿ ತಪ್ಪಿತಸ್ಥನನ್ನು ಸಮಾಜದಿಂದ ದೂರೀಕರಿಸಿದ ನಿದರ್ಶನಗಳಿವೆ. ಇಂದು ಘೋರ ಅಪರಾಧವೆಂದೆನಿಸಿರುವ ಕೊಲೆ, ಅಂಗವಿಚ್ಛೇದನಾದಿಗಳು ಅಂದು ವ್ಯಕ್ತಿಗೆ ಅಥವಾ ಆ ಕುಟುಂಬಕ್ಕೆ ಸಂಬಂಧಿಸಿದ ಹಾನಿ ಅಥವಾ ಘಾತವೆಂದು ಎಣಿಸಲ್ಪಟ್ಟು ಅವನ ಸಂಬಂಧಿಕರ ಅಥವಾ ಮಿತ್ರರ ಸೇಡು, ರೋಷಕ್ಕೆ ಕಾರಣವಾಗುತ್ತಿತ್ತೇ ಹೊರತು ಇಡೀ ಸಮಾಜವೇ ದಂಡಿಸಬೇಕಾದ ದ್ರೋಹವೆಂದು ಎಣಿಸಲ್ಪಡುತ್ತಿರಲಿಲ್ಲ. ಮುಂದೆ ಈ ತರದ ಹಿಂಸೆ, ಪ್ರತಿಹಿಂಸೆಗಳನ್ನು ನಿಯಂತ್ರಿಸುವುದು ಅವಶ್ಯವೆಂದು ತೋರಿದಾಗ ಸಾಮಾಜಿಕ ನಿಯಂತ್ರಣದ ಮೊದಲ ಹೆಜ್ಜೆಯಾಗಿ ಪ್ರತೀಕಾರದ ಪ್ರಮಾಣವನ್ನು ನಿಶ್ಚಯಿಸುವ ಕಾಯಿದೆಗಳು ರೂಪುಗೊಳ್ಳಹತ್ತಿದುವು. ಅಂದರೆ ಒಂದು ಜೀವಕ್ಕೆ ಮುಖ್ಯವಾಗಿ ಮತ್ತೊಂದು ಜೀವ, ದಂತಭಂಗಕ್ಕೆ ದಂತಭಂಗ, ಅಂಗವಿಚ್ಛೇದನಕ್ಕೆ ವೈರಿಯ ಅಥವಾ ವೈರಿಯ ಕುಟುಂಬದ ಅದೇ ಅಂಗವಿಚ್ಛೇದನ-ಹೀಗೆ ಮುಯ್ಯನ್ನು ಸೀಮಿತಗೊಳಿಸುವ ಕಾಯಿದೆಗಳು ಉದ್ಭವಿಸಿದುವು. ಇದರ ಅರ್ಥ ಒಂದರ ಪ್ರತಿಯಾಗಿ ಮತ್ತೊಂದನ್ನು ಕೊಳ್ಳಲೇಬೇಕೆಂದಲ್ಲ, ರೋಷಾವೇಶದಿಂದ ಒಂದಕ್ಕೂ ಹೆಚ್ಚನ್ನು ಕೊಳ್ಳಬಾರದು ಎಂದು. ರೋಷದ ಉಗ್ರತೆಯನ್ನು ಮೊದಲು ನಿಯಂತ್ರಿಸಿ, ಅನಂತರ ಉಂಟಾದ ಘಾಸಿಗೆ ಅಥವಾ ಜೀವಹಾನಿಗೆ ಪ್ರತಿಯಾಗಿ ಧನಸ್ವೀಕಾರದ ಆಮಿಷವನ್ನು ಬಾಧಿತನಿಗೆ ಅಥವಾ ಅವನ ಕುಟುಂಬಕ್ಕೆ ತೋರಿಸಿ ಸಮಾಜದ ಶಾಂತಿಯನ್ನು ಸ್ಥಾಪಿಸುವ ಪ್ರಯತ್ನ ನಡೆಯಿತು. ಹೀಗೆ ಮಾಡುವಾಗ ಪ್ರತಿರೂಪವಾಗಿ ದೊರೆಯುವ ಧನದ ಅಥವಾ ಇತರ ಪರಿಹಾರಗಳ ಬಗ್ಗೆ ವಿವಾದವುಂಟಾಗಿ ಮತ್ತೆ ಅಶಾಂತಿಯಾಗಬಾರದೆಂದು ಘಾಸಿಗೊಂಡ ಪ್ರತಿಯೊಂದು ಅಂಗಕ್ಕೂ ಜೀವಕ್ಕೂ ಘಾಸಿಹೊಂದಿದವನ ಕುಟುಂಬದ ಸ್ಥಾನಮಾನವನ್ನು ಅನುಲಕ್ಷಿಸಿ ಬೆಲೆಯ ಒಂದು ಕೋಷ್ಟಕ ಏರ್ಪಟ್ಟಿತು. ಹೀಗೆ ಮಹಾಪರಾಧಗಳ ಗುಂಪಿಗೆ ಸೇರಬೇಕಾದ ಅನೇಕ ಕೃತ್ಯಗಳು ಆ ಕಾಲದಲ್ಲಿ ಕೇವಲ ಧನಪ್ರದಾನದಿಂದಲೇ ಪರಿಹರಿಸಿಕೊಳ್ಳಬಹುದಾದ ತಪ್ಪುಗಳ ಶ್ರೇಣಿಯಲ್ಲಿ ಸೇರುತ್ತಿದ್ದುವು. ಆದರೆ ಇಂಥ ಬುನಾದಿಯ ಜನಾಂಗಗಳಲ್ಲಿ ಸಹ ಪ್ರತಿನಿಷಿದ್ಧ ಸ್ತ್ರೀಗಮನ ಚಾಟಕ ಕುಲದೇವತೆಗಳ ಪ್ರೀತ್ಯರ್ಥವಾಗಿ ಎಸಗಿದ ಮಂತ್ರತಂತ್ರಗಳಲ್ಲಿ ಲೋಪ ತರುವುದು, ಆ ಜನಾಂಗದ ಗುಪ್ತರಕ್ಷಾಮಂತ್ರವನ್ನು ವೈರಿಜನಾಂಗಕ್ಕೆ ತಿಳಿಸುವುದು - ಇವೇ ಮೊದಲಾದುವುಗಳು ಸಮಾಜಘಾತುಕ ಕೃತ್ಯಗಳೆಂದು ಎಣಿಸಲ್ಪಟ್ಟು, ಈ ಕೃತ್ಯಕ್ಕೆ ಕಾರಣನಾದವನನ್ನು ಸಮಾಜವೇ ದೂರೀಕರಿಸುತ್ತಿತ್ತು, ಇಲ್ಲವೆ ಕೊಲ್ಲುತ್ತಿತ್ತು. ಹೀಗೆ ಮಾಡುವಲ್ಲಿ ಶಿಕ್ಷೆಯ ಉದ್ದೇಶಕ್ಕಿಂತ ದೇವತೆಯನ್ನು ಸಾಂತ್ವನಗೊಳಿಸುವ ಭಾವವೇ ಪ್ರಧಾನವಾಗಿರುತ್ತಿತ್ತು, ಒಮ್ಮೊಮ್ಮೆ ಯಾವುದೇ ಪ್ರಾಣಿ ಅಥವಾ ಯಾವುದೇ ವಸ್ತು ಒಬ್ಬನ ಮರಣಕ್ಕೆ ಕಾರಣವಾದರೆ, ಅಂದರೆ, ಹೋಗಿ ಒಬ್ಬನನ್ನು ಇರಿದುಕೊಂದರೆ, ಮರ ಒಬ್ಬನ ಮೇಲೆ ಬಿದ್ದರೆ, ಅಕಸ್ಮಾತ್ತಾಗಿ ಗಾಡಿಯ ಚಕ್ರ ಮೇಲೆ ಹಾಯ್ದು ಆತ ಸತ್ತರೆ, ಕುದಿಯುವ ಹಾಲಿನ ಕೊಪ್ಪರಿಗೆಯಲ್ಲಿ ಶಿಶು ಬಿದ್ದು ಸತ್ತರೆ, ಆ ಪ್ರಾಣಿ ಅಥವಾ ಆ ವಸ್ತು ಯಾವುದೋ ವೈರಿಯ ಪಿಶಾಚಗ್ರಸ್ತವಾಗಿದ್ದರಿಂದಲೇ ಅಂಥ ಕೇಡನ್ನೆಸಗಿತೆಂಬ ಭಾವನೆಯಿಂದ ಅದರ ಮೇಲೆ ಮುಯ್ಯಿತೀರಿಸಿಕೊಳ್ಳುವುದಕ್ಕೆ ಆ ವಸ್ತುವನ್ನು ಘಾಸಿಹೊಂದಿದವನ ಕುಟುಂಬದವರಿಗೆ ಇಲ್ಲವೆ ಇಗರ್ಜಿಗೆ, ಅಥವಾ ದೇವಸ್ಥಾನ ಮೊದಲಾದುವುಗಳಿಗೆ ಅದರ ಕಳಂಕವನ್ನೋ ಅದರಲ್ಲಿ ನೆಲೆಸಿದ ದುಷ್ಟ ಪಿಶಾಚಿಯನ್ನೋ ಹೋಗಲಾಡಿಸುವುದಕ್ಕಾಗಿ ಕೊಡುವುದು ಕಂಡುಬರುತ್ತಿತ್ತು. ಮುಂದೆ ಅರಸೊತ್ತಿಗೆ ಪ್ರಬಲವಾದಂತೆ ಅರಸನೇ ಭೂಮಿಯಲ್ಲಿ ದೇವತಾಸ್ವರೂಪಿ ಸರ್ವಧರ್ಮಸ್ವಾಮಿ ಎಂಬ ತತ್ತ್ವದ ಮೇಲೆ ಅವುಗಳನ್ನು ಅರಸನ ವಶಕ್ಕೆ ಕೊಡುವ ಪದ್ಧತಿ ಬಂತು. ಇವೆಲ್ಲ ಅಪರಾಧಿಯ ಸರ್ವಸ್ವವೂ ರಾಜನ ಚಿತ್ತವನ್ನವಲಂಬಿಸಿದೆ-ಎನ್ನುವ ಮಧ್ಯಯುಗದ ತತ್ತ್ವದ ಬೀಜಾಂಕುರಗಳು. ವ್ಯಕ್ತಿಘಾತಕ ತಪ್ಪುಗಳು, ಸಮಾಜಘಾತಕ ತಪ್ಪುಗಳು ಎಂಬ ವರ್ಗೀಕರಣದ ಮೂಲವನ್ನು ಮೇಲೆ ಹೇಳಿದವುಗಳಲ್ಲಿ ಕಾಣಬಹುದು. ಇನ್ನೊಂದು ರೀತಿಯಲ್ಲಿ ತಪ್ಪುಗಾರ ರಾಜದಂಡನೆಗೆ

ಕಾರಣನಾಗುತ್ತಿದ್ದ. ಇಂಗ್ಲೆಂಡಿನಲ್ಲಿ ಹಾಗೂ ಬೇರೆ ಕೆಲವು ದೇಶಗಳಲ್ಲಿ ಯಾವುದೇ ವ್ಯಕ್ತಿ ಇನ್ನೊಬ್ಬನನ್ನು ಗಾಯಗೊಳಿಸಿದಾಗ, ಇಲ್ಲವೆ ಕೊಂದಾಗ ಆ ಸ್ಥಳದ ಸ್ವಾಮಿಯ ಗೌರವಕ್ಕೆ ಭಂಗತಂದನೆಂಬ ಕಾರಣದಿಂದ ಸ್ಥಾನಸ್ವಾಮಿಯಾದ ಸರದಾರನಿಗೆ ಇಲ್ಲವೆ ರಾಜನಿಗೆ ತಪ್ಪುದಂಡ ಕೊಡಬೇಕೆಂಬ ವಾಡಿಕೆಯಾಯಿತು. ಮುಂದೆ ರಾಜನ ಅಧಿಕಾರ ಪ್ರಬಲಿಸಿದಂತೆ ಈ ತಪ್ಪುದಂಡ ಕೇವಲ ಅರಸನಿಗೇ ಸೇರುವಂತಾಯಿತು. ಆದರೆ ಎಷ್ಟೋ ಸಾರಿ ಗಾಯವನ್ನೊ ಸಾವನ್ನೊ ಉಂಟುಮಾಡಿದ ನತದೃಷ್ಟ ವ್ಯಕ್ತಿಗೆ ಹಿಂದೆ ಹೇಳಿದ ಪರಿಹಾರಧನವನ್ನೂ ದಂಡವನ್ನೂ ತೆರಲು ಸಾಧ್ಯವಾಗದೆ ಇದ್ದಾಗ ಅವನ ದೇಹ, ಜೀವಸಹಿತ ಸರ್ವ ಹಕ್ಕುಗಳೂ ಅರಸನಿಗೆ ಸೇರುತ್ತಿದ್ದುವು. ಅವನನ್ನು ಕಾಯುವುದು, ಕೊಲ್ಲುವುದು, ಅಂಗವಿಚ್ಛೇದ ಮಾಡುವುದು ಇಲ್ಲವೆ ಗುಲಾಮನಾಗಿ ಮಾರುವುದು ಇವೆಲ್ಲ ಅರಸನ ಚಿತ್ತದಂತೆ ನಡೆಯುತ್ತಿದ್ದುವು. ಹೀಗೆ ಒಂದೇ ತಪ್ಪಿಗೆ ವಿವಿಧ ದಂಡನೆಗಳು ಸಾಧ್ಯವಾದ್ದರಿಂದ ಅಪರಾಧ, ಅಪಕೃತ್ಯಕಾಯಿದೆಗಳು ಹಾಸುಹೊಕ್ಕಾಗಿ ಹೆಣೆದಿದ್ದುದರಿಂದ ಅವುಗಳ ಪೃಥಕ್ಕರಣ ಅಶಕ್ಯವಾಗಿತ್ತು. ಅಲ್ಲದೆ ಸಂಘಟಿಸಿದ ಕೇಡಿನ ವಿಷಯವೇ ಪ್ರಧಾನವಾಗಿ ಆ ಕೇಡು ದೌರ್ಜನ್ಯಮೂಲವೋ ಅಥವಾ ಅಜ್ಞಾನದಿಂದ ಘಟಿಸಿದ ಆಕಸ್ಮಿಕವೋ ಎಂಬ ವಿಮರ್ಶೆ ವಿವೇಕಗಳು ಕಂಡುಬರುತ್ತಿರಲಿಲ್ಲ. ಅಜ್ಞಾನದಿಂದ ಕೇಡೆಸಗಿದವನೂ ಪರಿಹಾರಕ ಧನ ತೆರಲಿಕ್ಕೂ ತಪ್ಪು ದಂಡಕ್ಕೂ ಹೊಣೆಗಾರನಾಗಿದ್ದರಿಂದ ಅದು ಅಶಕ್ಯವಾದಾಗ ಮರಣ, ಅಂಗವಿಚ್ಛೇದಾದಿ ರಾಜಕೃತದಂಡನೆಗೂ ಪಾತ್ರನಾಗುತ್ತಿದ್ದ. ಇಂಥ ನಿದರ್ಶನಗಳು ಆಂಗ್ಲ, ಐರೋಪ್ಯ ದೇಶಗಳ ಪ್ರಾಚೀನಕಾಯಿದೆಗಳಲ್ಲಿ ವಿಪುಲವಾಗಿ ದೊರೆಯುತ್ತವೆ.

ಹಿಂದೂ ಧರ್ಮಶಾಸ್ತ್ರಗಳಲ್ಲಿ ಇತಿಹಾಸಪೂರ್ವಯುಗದ ಬಗ್ಗೆ ಹೇಳಲು ಸಾಧ್ಯವಾಗದಿದ್ದರೂ ಧರ್ಮಶಾಸ್ತ್ರಗಳ ಕಾಲದಲ್ಲಿ ಇಂದಿನ ವಿಚಾರಕ್ಕೆ ಕೆಲಮಟ್ಟಿಗೆ ಸರಿದೂಗುವಂಥ ಅಪರಾಧಮೀಮಾಂಸೆ ತೋರಿಬರುತ್ತದೆ.

ರಾಜನ ಆಸ್ಥಾನದಲ್ಲಿ ಅಥವಾ ರಾಜನಿಂದ ನಿಯುಕ್ತರಾದ ಅಧಿಕಾರಿಗಳಿಂದ ನಿರ್ಣಯವಾಗಬೇಕಾದ ವಿವಾದಗಳು ವ್ಯವಹಾರವೆನಿಸಿಕೊಂಡಿದ್ದುವು; ಈಗ ಅಪರಾಧವೆನಿಸಿರುವ ತಪ್ಪುಗಳನ್ನು ಶಾಸ್ತ್ರಕಾರರು ಸಾಹಸವೆಂದು ಕರೆಯುತ್ತಿದ್ದರು. ದುಷ್ಟನಿಗ್ರಹ ರಾಜಧರ್ಮದಲ್ಲಿನ ಅತ್ಯಂತ ಮುಖ್ಯ ಕರ್ತವ್ಯ. ಸ್ತೇಯ, ಕೊಲೆ ಘೋರಾಪರಾಧಗಳು, ಪರದಾರಗಮನ ಮೊದಲಾದುವು ಮೊದಲ ದರ್ಜೆಯ ಅಪರಾಧಗಳು. ಇವುಗಳನ್ನು ಎಸಗಿದವನನ್ನು ಜುಲ್ಮಾನೆ, ಶಾರೀರಿಕಕ್ಲೇಶ, ಮರಣ ಮೊದಲಾದ ಶಿಕ್ಷೆಗಳಿಗೆ ಒಳಪಡಿಸುವುದು ಅರಸನ ಕರ್ತವ್ಯ. ವ್ಯವಹಾರಗಳಲ್ಲಿ, ವಾದಿಕೃತ, ಸ್ವಪಾತ್ರಯ ಎಂಬ ಭೇದವನ್ನು ಕಲ್ಪಿಸಿದ್ದರು. ಋಣ, ದಾನ ಮೊದಲಾದ ಹಣದ ಸ್ವತ್ತಿನ ವ್ಯವಹಾರಗಳಲ್ಲಿ ಪಕ್ಷಗಾರರು ಇಷ್ಟಬಂದಂತೆ ತಮ್ಮ ತಮ್ಮೊಳಗೆ ರಾಜಿಮಾಡಿಕೊಳ್ಳಬಹುದು. ಆದರೆ ಅಪರಾಧಿ ಇತರಪಕ್ಷದೊಡನೆ ರಾಜಿಮಾಡಿಕೊಂಡರೂ ಅರಸು ಅವನನ್ನು ಶಿಕ್ಷಿಸಲೇಬೇಕು. ಕೆಲವು ಅಪರಾಧಗಳ ವಿಷಯದಲ್ಲಿ ಯಾವುದೇ ವ್ಯಕ್ತಿ ಅರಸನಿಗೆ ಅಥವಾ ರಾಜಭಟರ ಕಡೆಗೆ ದೂರು ಕೊಡದಿದ್ದರೂ ಅರಸನೇ ತನ್ನ ಭಟರ, ಚಾರರ ಮುಖಾಂತರ ದುಷ್ಟರನ್ನು ಶಿಕ್ಷಿಸಿ ಧರ್ಮವನ್ನು ಎತ್ತಿ ಹಿಡಿಯಬೇಕು. ಈ ಮೊದಲಾದ ವಚನಗಳಿಂದ ಹಿಂದೂಧರ್ಮಶಾಸ್ತ್ರಗಳ ಕಾಲದಲ್ಲಿ ಇಂದಿನಂತೆ ಅಪರಾಧ ಮತ್ತು ಅಪರಾಧೇತರ ಎಂಬ ಭೇದ ಸ್ಫುಟವಾಗಿತ್ತೆಂದು ಕಂಡುಬರುತ್ತದೆ. ದಂಡನ ದುಷ್ಟನಿಗ್ರಹದ ಅಂಗವಾದದ್ದು, ದೌರ್ಜನ್ಯ (ದುರ್ಬುದ್ಧಿ) ಇಲ್ಲದೆ ಘಟಿಸಿದ ಅಕೃತ್ಯ, ಕೇಡುಗಳಿಗೆ ದಂಡವಿಲ್ಲ ಎಂಬ ಉಕ್ತಿಗಳು ಬಹಳೆಡೆಯಲ್ಲಿ ಕಂಡುಬರುತ್ತವೆ. ಮದ್ಯದ ಅಮಲಿನಲ್ಲಿದ್ದಾಗ, ಬುದ್ಧಿವೈಕಲ್ಯವಾದಾಗ, ಅಜ್ಞತೆಯಿಂದ ಬಾಲಾವಸ್ಥೆಯಲ್ಲಿ ಎಸಗಿದ ಕೇಡಿಗೆ ದಂಡನವಿಲ್ಲ. ವಾಹನಗಳನ್ನೋ ಪ್ರಾಣಿಗಳನ್ನೋ ಒಯ್ಯುವಾಗ ಕೈಮೀರಿ ಘಟಿಸಿದ ಆಕಸ್ಮಿಕಗಳಿಗೆ ದಂಡನವಿಲ್ಲ (ಸ್ವತ್ತಿನ ಹಾನಿ ತುಂಬುವ ವಿಷಯದಲ್ಲಿ ಅರಿಯದೆ ಮಾಡಿದ ಹಾನಿಗೂ ಹೊಣೆಗಾರಿಕೆಯನ್ನು ಕೆಲವೆಡೆಯಲ್ಲಿ ಹೇಳಿರುವರು, ಪಾಪಗಳ ಪ್ರಾಯಶ್ಚಿತ್ತಾಧ್ಯಾಯದಲ್ಲಿ ಅಜ್ಞಾನದಿಂದೆಸಗಿದ ಪಾಪಗಳಿಗೂ ಪ್ರಾಯಶ್ಚಿತ್ತವಿದೆ). ಹೀಗೆ ವ್ಯವಹಾರಾಧ್ಯಾಯದಲ್ಲಿ ಬರುವ ಅಪರಾಧಿ, ಅದರ ಲಕ್ಷಣ ಮೊದಲಾದವು ಕೆಲವು ದೃಷ್ಟಿಯಲ್ಲಿ ಆಧುನಿಕವಾಗಿವೆ. ಆದರೆ ದಂಡನದ ವಿಷಯದಲ್ಲಿ, ವಿಧಿನಿಷೇಧಗಳ ವಿಷಯದಲ್ಲಿ, ವರ್ಣಾಶ್ರಮಧರ್ಮಗಳ ವಿವಿಧ ವರ್ಣದವರು ತಮ್ಮ ಎಲ್ಲೆಯನ್ನು ಮೀರಬಾರದೆಂಬ ಕಟ್ಟಳೆ ಮೀರಿದಾಗ ಕಠೋರ ಶಿಕ್ಷೆಗೆ, ತೀಕ್ಷ್ಣ ಪ್ರಾಯಶ್ಚಿತ್ತಗಳಿಗೆ ಗುರಿಯಾಗುವರೆಂಬ ಹಾಗೂ ಅವರನ್ನು ದಂಡಿಸಿ ತಮ್ಮ ತಮ್ಮ ಆಶ್ರಮಧರ್ಮಕ್ಕೆ ಅಂಟಿಕೊಳ್ಳುವಂತೆ ಮಾಡಬೇಕೆಂಬ ವಿಚಾರ ಆಗಿನ ಎಲ್ಲ ಶಾಸ್ತ್ರಗಳಲ್ಲಿ ಪ್ರಮುಖವಾಗಿ ತೋರಿಬರುತ್ತದೆ. ಕೆಳಜಾತಿಯವರು ಮೇಲಿನ ಜಾತಿಯವರಿಗೆ ಅಗೌರವವನ್ನು ತೋರಿಸಿದಾಗ, ರಾಜ ಕಠಿಣಶಿಕ್ಷೆಯನ್ನು ವಿಧಿಸಬೇಕು ಎಂಬುದು ಮತ್ತು ಮೇಲಿನಜಾತಿಯವರಿಗೆ ವಿಶೇಷ ಸವಲತ್ತುಗಳು ಸಲ್ಲಬೇಕು ಎಂಬುದು ಆಗಿನ ಕಾಲದ ವಿಚಾರಲಕ್ಷಣಗಳು. ಪ್ಲೇಟೋನ ರಿಪಬ್ಲಿಕ್‌ನಲ್ಲೂ ಈ ಭಾವನೆ ಇದೆ. ಇಲ್ಲಿ ವರ್ಣಭೇದದ ವಿಷಮತೆಯ ಅತಿರೇಕ ಎಷ್ಟೇ ಅಸಮಂಜಸವಾಗಿ ತೋರಿದರೂ ಅಪರಾಧವೆಸಗುವ ವ್ಯಕ್ತಿ ಮಾತ್ರ ದಂಡನೀಯ. ಅಪರಾಧಿ ಸಮಾಜದ ವ್ಯವಸ್ಥೆಗೆ ಕಂಟಕಪ್ರಾಯ. ಅಧರ್ಮಿಯ ಅಥವಾ ಪಾಪಬುದ್ಧಿಯವನ ಅಪರಾಧ ಕೇವಲ ಪರಿಹಾರಧನದಿಂದ ಪರಿಮಾರ್ಜಿತವಾಗುವುದಿಲ್ಲ. ಅದು ರಾಜದಂಡನೆಗೆ ಯೋಗ್ಯವಾದ ತಪ್ಪು–ಇವೇ ಮೊದಲಾದ ಅಪರಾಧಕಾಯಿದೆಯ ಮೂಲತತ್ತ್ವಗಳು ಅಲ್ಲಿ ಎದ್ದು ಕಾಣುತ್ತವೆ.

ಇಂಗ್ಲೆಂಡ್ ಮತ್ತು ಐರೋಪ್ಯ ದೇಶಗಳಲ್ಲಿ ಸಹ ಕಾಲಾನುಕ್ರಮದಲ್ಲಿ ಕ್ರೈಸ್ತಧರ್ಮದ ಪ್ರಭಾವದಿಂದ, ನಿಜವಾದ ಅಪರಾಧಕಾಯಿದೆಯ ತತ್ತ್ವಗಳು ರೂಪುಗೊಂಡಿವೆ. ಹಿಂದೆ ಹೇಳಿದ ಮುಯ್ಯಿ, ಪರಿಹಾರ ಮೊದಲಾದವುಗಳ ಕಾಲದಲ್ಲಿ ಹೊಣೆಗಾರಿಕೆಗೆ ಸದೋಷಮನಃಸ್ಥಿತಿ ಅವಶ್ಯವಿದ್ದಿಲ್ಲ. ಕೇವಲ ವ್ಯಕ್ತಿಯೊಬ್ಬನೇ ಹೊಣೆಗಾರನಾಗುವ ಬದಲು ಅವನ ಕುಟುಂಬ ಇಲ್ಲವೆ ಗುಂಪು ಸಾಮೂಹಿಕವಾಗಿ ಹೊಣೆಯಾಗುತ್ತಿತ್ತು. ಮುಂದೆ ಧರ್ಮದ ಪ್ರಭಾವದಿಂದ ಕಲುಷಿತ ಅಂತಃಕರಣವಿಲ್ಲದೆ ಪಾಪವಿಲ್ಲ. ಪಾಪರಹಿತನಾದವನಿಗೆ ಶಿಕ್ಷೆ ವಿಧಿಸುವುದು ಅನ್ಯಾಯ ಎಂಬ ಭಾವನೆ ಪ್ರಬಲಿಸಿತು. ಧರ್ಮ ಮತ್ತು ನೀತಿಯ ತತ್ತ್ವಗಳು ಅಂತಃಕರಣದ ಕಲ್ಮಷಕ್ಕೆ ಪ್ರಾಧಾನ್ಯ ಕೊಟ್ಟರೂ ದುಷ್ಟತನದ ನಿಜವಾದ ಆವಿಷ್ಕರಣ ಗೋಚರವಾಗದೆ ವ್ಯಾವಹಾರಿಕಶಾಸ್ತ್ರವಾದ ಕಾಯಿದೆಶಾಸ್ತ್ರ ಹಸ್ತಕ್ಷೇಪ ಮಾಡುವುದು ಯೋಗ್ಯವಲ್ಲ ಎಂಬ ಕಾರಣದಿಂದ ಅಪಾಯಕರ ಕೃತ್ಯ ಮತ್ತು (ಕಲುಷಿತ) ಮನಸ್ಸು ಇವೆರಡೂ ಕೂಡಿದಲ್ಲಿ ಮಾತ್ರ ಕಾಯಿದೆಯ ದೃಷ್ಟಿಯಿಂದ ಅಪರಾಧ ಎಂಬ ತತ್ತ್ವ ನೆಲೆಗೊಂಡಿತು. ಇಲ್ಲಿ ಅಪಾಯವೆಂದರೆ ದೃಷ್ಟಿಗೋಚರವಾಗುವ ಗಾಯ, ಬಂಧನ, ಮರಣ, ಚರಸ್ಥಿರಸ್ವತ್ತಿನ ನಾಶ–ಮುಂತಾದವುಗಳು ಮಾತ್ರವಲ್ಲ, ನಾಗರಿಕ ಜೀವನ ಪೋಷಿಸುತ್ತಿರುವ ಸುರಕ್ಷಿತತೆ, ಧರ್ಮ, ಶಾಂತಿ, ಸೌಂದರ್ಯ, ಕೀರ್ತಿ, ಶೀಲ, ಸಂಸ್ಕೃತಿ, ಆರೋಗ್ಯ, ಸತ್ಸಂಪ್ರದಾಯಗಳ ಮೌಲ್ಯವಿಶೇಷಗಳಿಗೆ ಭಂಗ ತರುವುದು. ಇಂಥ ಘಾತಕಕೃತ್ಯಗಳು ಯಾವುವೆಂಬ ಬಗ್ಗೆ ವಿವಾದಕ್ಕೆಡೆಯಿಲ್ಲದಂತೆ ಕಾಯಿದೆಶಾಸ್ತ್ರ ಸ್ಪಷ್ಟಸೂಚನೆಗಳನ್ನು ನೀಡುತ್ತದೆ. ಸಾಮಾನ್ಯವಾಗಿ ಒಟ್ಟಾರೆ ಸಮಾಜದ ಹಿತದ ದೃಷ್ಟಿಯಿಂದಲೇ ಕಾಯಿದೆ ನಿರ್ಮಾಣವಾಗಿರುತ್ತದೆ. ಶಾಸನ ಅಥವಾ ನ್ಯಾಯಾಲಯದ ನಿರ್ಣಯ ಅದಕ್ಕೆ ಸ್ಫುಟವಾದ ರೂಪ ಕೊಡುತ್ತದೆ. ಸಮಾಜದ ಹಿತಕ್ಕೆ ಕಂಟಕಕಾರಿಯೆನಿಸುವ ಕ್ರಿಯೆಗಳು ಸಹಜವಾಗಿ ಅಪರಾಧ ಮಾಲಿಕೆಗೆ ಸೇರುತ್ತವೆ. ಸರ್ಕಾರ ಅದು ಕೊಡುವ ಸೂಚನೆಗಳನ್ನನುಸರಿಸಿ ಕಾಯಿದೆ ಮಾಡುತ್ತದೆ. ಸಮಾಜ ಬದಲಾದಂತೆ ಕಾಯಿದೆಗಳೂ ಮಾರ್ಪಡುತ್ತವೆ. ರೋಮ್ ದೇಶದಲ್ಲಿ, ಹೆಬ್ಬಾಗಿಲಿನಲ್ಲಿ ಪ್ರವೇಶಿಸದೆ ಪಟ್ಟಣದ ಕೋಟೆಯನ್ನು ಏರಿ ಒಳಗೆ ಬಂದರೆ ಅದು ಮರಣದಂಡನೆ ಕೊಡುವಂಥ ಅಪರಾಧವಾಗಿತ್ತು. ಪೂರ್ವಕಾಲದಲ್ಲಿ ನಾಸ್ತಿಕತೆ ಘನ ಅಪರಾಧ. ನರಬಲಿ, ಸಹಗಮನ ಪ್ರೋತ್ಸಾಹ–ಇವು ಪುಣ್ಯಕಾರ್ಯಗಳಾಗಿದ್ದುವು. ಫ್ರಾನ್ಸ್‌ನಲ್ಲಿ ವ್ಯಭಿಚಾರ ಒಂದು ಕಾಲಕ್ಕೆ ಅಪರಾಧ, ಇಂಗ್ಲೆಂಡಿನಲ್ಲಿ ಅಲ್ಲ. ಬಹುಭಾರ್ಯಾತ್ವ ಒಮ್ಮೆ ದೊಡ್ಡಸ್ತಿಕೆಯ ಲಕ್ಷಣ; ಇಂದು ಅದು ಹಿಂದುಗಳಲ್ಲಿ ಅಪರಾಧ; ಮುಸಲ್ಮಾನರಲ್ಲಿ ಕ್ಷಮ್ಯ. ಗರ್ಭಪಾತ ಅನೇಕ ದೇಶಗಳಲ್ಲಿ ಅಪರಾಧ; ರಷ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡಿಸಿದರೆ ಅಪರಾಧವಲ್ಲ. ಆತ್ಮಹತ್ಯಾಪ್ರಯತ್ನ 1961ರ ಅನಂತರ ಇಂಗ್ಲೆಂಡಿನಲ್ಲಿ ಅಪರಾಧವಲ್ಲ; ನಮ್ಮ ದೇಶದಲ್ಲಿ ಅಪರಾಧ. ಹೀಗೆ ಆಯಾ ದೇಶದ ನೈತಿಕಭಾವನೆ, ಸಮಾಜವ್ಯವಸ್ಥೆ, ಧರ್ಮ, ಇತಿಹಾಸ, ಜನತೆಯಲ್ಲಿಯ ಜ್ಞಾನ, ಅಜ್ಞಾನ, ಭಾವೋತ್ಕರ್ಷ, ಆಳುವ ವರ್ಗದ ಹಿತ, ಆರ್ಥಿಕಸುಭದ್ರತೆಯೇ ಮೊದಲಾದ ಸಾಮಾಜಿಕ ಆವಶ್ಯಕತೆಗನುಗುಣವಾಗಿ ಕಾಲಕಾಲಕ್ಕೆ ಬೇರೆ ಬೇರೆ ಕೃತ್ಯಗಳು ಕಾಯಿದೆಯಲ್ಲಿ ಸೇರುತ್ತವೆ. ಹೀಗೆ ದೇಶ, ಕಾಲ ಸಮಾಜಗಳಲ್ಲಿ ಭಿನ್ನಭಿನ್ನವಾದ ಅಪರಾಧದ ಸರ್ವವ್ಯಾಪಿ ಲಕ್ಷಣವನ್ನು ಹುಡುಕುವುದು ದುಸ್ತರ. ಒಟ್ಟಿನಲ್ಲಿ ಕಾಯಿದೆ ದಂಡನೀಯವಾಗಿ ಮಾಡಿ, ಪ್ರತಿಷೇಧಿಸಿದ ಪರಿಣಾಮವುಳ್ಳ ಕೃತ್ಯವೇ ಅಪರಾಧ, ದುಷ್ಕೃತಿ, ದುಷ್ಪರಿಣಾಮದ ಇಚ್ಛೆ ಅಥವಾ ಹಾಗೆ ಆಗಬಹುದೆಂದು ಅರಿತೂ ದುಡುಕುವ ಮನೋವೃತ್ತಿ ಕಾಯಿದೆಯ ದೃಷ್ಟಿಯಿಂದ ಅಪರಾಧಬುದ್ಧಿ ಇಲ್ಲವೆ ದುರ್ಬುದ್ಧಿ. ಈ ಅರ್ಥದಲ್ಲಿ ದುರ್ಬುದ್ಧಿ ದುಷ್ಕೃತ್ಯಗಳ ಸಂಗಮ ಅಪರಾಧದ ಲಕ್ಷಣ.

ಮೊದಮೊದಲು ಸರ್ವಸಾಮಾನ್ಯನ ನೈತಿಕದೃಷ್ಟಿಯಿಂದ ಹೇಯವಾದ ಕಳವು, ಸುಲಿಗೆ, ಕೊಲೆ, ಸ್ತ್ರೀಯರ ಮೇಲಿನ ಅತ್ಯಾಚಾರ, ಗಾಯಪಡಿಸುವುದು–ಮೊದಲಾದವುಗಳು ದಂಡನೀಯವಾಗಿದ್ದಾಗ ಅಪರಾಧಶಾಸ್ತ್ರವೆಂದರೆ ದುಷ್ಟನಿಗ್ರಹಮೀಮಾಂಸೆ ಎನ್ನಬಹುದಾಗಿತ್ತು. ಮುಂದೆ ಕ್ರಮೇಣ ಅಪಾಯ, ಭೀತಿ, ಬಾಹುಳ್ಯವುಳ್ಳ ಭಾರೀ ಯಂತ್ರಗಳು, ತೀಕ್ಷ್ಣ ರಸಾಯನಗಳು, ಅತಿವೇಗದ ವಾಹನಗಳು, ಬೃಹತ್ ಕಾರ್ಯಾಗಾರಗಳು, ವಿದ್ಯುಚ್ಚಾಲಿತ ಸಲಕರಣೆಗಳು ಬಳಕೆಯಲ್ಲಿ ಬಂದಾಗ ಸ್ವಲ್ಪ ಅಲಕ್ಷ್ಯ, ಮೇಲ್ವಿಚಾರಣೆಯಲ್ಲಿ ನ್ಯೂನತೆ, ಯಂತ್ರದೋಷ, ಕ್ರಿಯಾಲೋಪಗಳು ಸಹ ದೊಡ್ಡ ಪ್ರಮಾಣದಲ್ಲಿ ಹಣ, ಜೀವಿತಗಳಿಗೆ ಹಾನಿಯನ್ನುಂಟುಮಾಡುವ ಗಂಡಾಂತರವನ್ನು ಒಡ್ಡಿದುವು. ಅದರಂತೆ ಆರ್ಥಿಕವ್ಯವಹಾರಗಳು ಜಟಿಲವಾಗುತ್ತ ಹೋದುವು. ಆಗ ಘಟಿಸಬಹುದಾದ ಅಪಾಯ, ಅವ್ಯವಸ್ಥೆ ತಪ್ಪಿಸಲು ಸರಕಾರ ವ್ಯವಸ್ಥಾನಿರ್ದೇಶಕನಿಯಮಗಳನ್ನು ಮಾಡಬೇಕಾಯಿತು. ಅವುಗಳ ಪಾಲನೆಯನ್ನು ಖಚಿತಗೊಳಿಸಲು, ನಿಯಮೋಲ್ಲಂಘನೆಗೆಲ್ಲ ಜುಲ್ಮಾನೆ ವಿಧಿಸಿ ದಂಡಿಸಬೇಕಾಯಿತು. ಈ ದಂಡನೆಯ ಮುಖ್ಯ ಉದ್ದೇಶ ಅವ್ಯವಸ್ಥೆ; ಅಪಾಯಗಳ ದೌರ್ಜನ್ಯಪ್ರತೀಕಾರ, ದುಷ್ಟನಿಗ್ರಹವಲ್ಲ. ಆದರೆ ನ್ಯಾಯಪ್ರಕ್ರಿಯೆಯ (ಪ್ರೊಸೀಜರ್) ದೃಷ್ಟಿಯಿಂದ ಇವುಗಳನ್ನು ಅಪರಾಧವೆಂದೇ ಎಣಿಸಬೇಕಾಗುತ್ತದೆ. ಇಂಥವನ್ನು ದೌರ್ಜನ್ಯಮೂಲವಾದ ನಿಜವಾದ ಅಪರಾಧ ವರ್ಗದಲ್ಲಿ

ಸೇರಿಸುವುದು ಅಪರಾಧಶಾಸ್ತ್ರದಲ್ಲಿ ಗೊಂದಲಕ್ಕೆ ಕಾರಣವೆಂದು ಕೆಲವು ವಿದ್ವಾಂಸರು ವಾದಿಸುವರು. ಈ ವ್ಯವಸ್ಥಾತ್ಮಕ ಅಪರಾಧಗಳನ್ನೆಸಗುವವನ ಮನಸ್ಸು ನಿರ್ದೋಷಪುರಿಬಹುದು. ಎಷ್ಟೋ ಸಲ ಆ ಕರ್ತವ್ಯಚ್ಯುತಿಗೆ ಅವನ ಕೆಳಗಿನ ನೌಕರರು ಕಾರಣರಾಗಿರಬಹುದು. ಇವೆಲ್ಲ ಕಾರಣಗಳಿಂದ ವ್ಯಕ್ತಿಗತದೌರ್ಜನ್ಯಪ್ರಧಾನವಾದ ನಿಜವಾದ ಅಪರಾಧಕ್ಕೂ ಕೃತ್ರಿಮವಾಗಿ ನಿರ್ಮಿಸಲ್ಪಟ್ಟ ವ್ಯವಸ್ಥಾತ್ಮಕ ಅಪರಾಧಗಳಿಗೂ ಮಹದಂತರವಿದೆ ಎಂದು ಸಾಧಿಸುವರು. ಸಮಾಜಘಾತ, ದಂಡನಕ್ರಮ ಇವು ಅಪರಾಧಶಾಸ್ತ್ರದ ಮುಖ್ಯಲಕ್ಷಣವಾದ್ದರಿಂದ ಇದನ್ನು ಅಪರಾಧವೆಂದು ಪರಿಗಣಿಸಿ ಮುಂದೆ ಅಪರಾಧ ಸಿದ್ಧವಾದ ಮೇಲೆ ಅಪರಾಧಿಯನ್ನು ಹೇಗೆ ನಡೆಸಿಕೊಳ್ಳುವುದೆಂಬುದರಲ್ಲಿ ಬೇಕಾದರೆ ತಾರತಮ್ಯ ಮಾಡಬಹುದೆಂದು ಮತ್ತೆ ಕೆಲವು ವಿದ್ವಾಂಸರ ಅಭಿಪ್ರಾಯ.

ತೀರ ಹೇಯವಾದ ಅನೈತಿಕಕೃತ್ಯ, ಬುದ್ಧಿಪೂರ್ವಕವಾಗಿ ಎಸಗಿದ ಹಲ್ಲೆ, ಕೊಲೆ, ಅಪ್ರಾಮಾಣಿಕವಿತ್ತಾಪಹರಣ, ಕೌಟುಂಬಿಕಜೀವನವನ್ನು ಕೆಡಿಸುವ ಕೃತ್ಯ ಮಾನಹಾನಿ, ರಾಷ್ಟ್ರದ್ರೋಹ, ಸಾರ್ವಜನಿಕ ಕೀಟಲೆ, ಸಾರ್ವಜನಿಕ ಅಸ್ವಾಸ್ಥ್ಯಕಾರಿಕೃತ್ಯ, ರಾಷ್ಟ್ರದ ಸುರಕ್ಷಿತತೆಗೆ ಭಂಗ ತರುವಂಥ ಕೃತ್ಯ – ಇಂಥವು ಸಾಧಾರಣ ಎಲ್ಲ ನಾಗರಿಕಜನಾಂಗದ ಕಾಯಿದೆಯಂತೆ ಅಪರಾಧಗಳು. ವ್ಯವಸ್ಥಾತ್ಮಕ ಅಪರಾಧಗಳು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಭಿನ್ನ ಭಿನ್ನವಾಗಿರುವುವು.

ಮೂಲತತ್ತ್ವಗಳು: ಪೂರ್ವಕಾಲದಲ್ಲಿ ನೆರೆಹೊರೆಯವರ ಆಪಾದನೆಯ ಮೇಲೆ, ಬಲವಾದ ಸಂಶಯದ ಮೇಲೆ ಬಂಧಿಸಲ್ಪಟ್ಟು ತನ್ನ ಮುಂದೆ ಬಂದ ಸಂಶಯಿತನನ್ನು ನ್ಯಾಯಸ್ಥಾನ ನಿರಪರಾಧಿಯೆಂದು ಎಣಿಸುತ್ತಿದ್ದಿಲ್ಲ. ಸಂಶಯಿತ ಕಾದ ಕಬ್ಬಿಣವನ್ನು ಹಿಡಿಯವ, ಬೆಂಕಿಯಲ್ಲಿ ಹೊಕ್ಕುಬರುವ – ಮೊದಲಾದ ಅಗ್ನಿದಿವ್ಯ, ಜಲದಿವ್ಯಾದಿಗಳಿಂದ ಅಥವಾ ತನ್ನ ಸಚ್ಚಾರಿತ್ರ್ಯದ ಬಗೆಗೆ ನಿರ್ದಿಷ್ಟ ಸಂಖ್ಯೆಯ ಜನರಿಂದ ಪ್ರಮಾಣಮಾಡಿಸಿ ತನ್ನ ಪರಿಶುದ್ಧತೆಯನ್ನು ಸಿದ್ಧಮಾಡಬೇಕಾಗಿತ್ತು. ಇಲ್ಲವಾದರೆ ಅವನು ದಂಡನಾರ್ಹನಾಗುತ್ತಿದ್ದ. ಸಮಾಜಶತ್ರುವೆಂಬ ಭಾವದಿಂದ ಅವನ ಪಕ್ಷದಿಂದ ವಕೀಲರಿಗೆ ವಾದಿಸಲು ಆಸ್ಪದವಿರಲಿಲ್ಲ. ಅವರ ದೌರ್ಜನ್ಯಕ್ಕನುಗುಣವಾಗಿ, ಅವನ ದುಷ್ಕೃತ್ಯ ಪ್ರಚೋದಿಸಿದ ರೋಷಕ್ಕನುಗುಣವಾಗಿ ಅತ್ಯಂತ ಕ್ರೂರವಾದ ಹಿಂಸೆ, ಮರಣ, ಮೊದಲಾದವನ್ನು ವಿಧಿಸುತ್ತಿದ್ದರು.

ಮುಂದೆ ಬೆಕೇರಿಯ ಮೊದಲಾದ ವಿದ್ವಾಂಸರ ವಾದದ ಪರಿಣಾಮವಾಗಿ ಫ್ರೆಂಚ್ ಮಹಾಕ್ರಾಂತಿಯ ಅನಂತರ, ಆಧುನಿಕ ಯುಗದ ತತ್ತ್ವಗಳು ರೂಪುಗೊಂಡುವು. ಸಂಶಯಾತೀತವಾಗಿ ಅಪರಾಧ ಸಿದ್ಧವಾಗುವವರೆಗೆ ಆಪಾದಿತ ನಿರಪರಾಧಿ ಎಂದು ತಿಳಿಯಬೇಕು. ಆಪಾದಿತನಿಗೆ ತನ್ನ ಪಕ್ಷವನ್ನು ಮಂಡಿಸಲು ವಕೀಲರನ್ನು ನೇಮಿಸುವ ಅಧಿಕಾರವಿದೆ. ಅಪರಾಧಿಯನ್ನು ದಂಡಿಸುವಾಗ ಮಾನವೀಯತೆಯನ್ನು ಕಡೆಗಣಿಸಬಾರದು – ಮೊದಲಾದವು ಬಳಕೆಗೆ ಬಂದುವು. ದಂಡನೆಯ ಉದ್ದೇಶ ದೌರ್ಜನ್ಯಕ್ಕೆ ತಕ್ಕ ಪ್ರತಿಫಲ ನೀಡುವುದು, ಸಮಾಜಕಂಟಕನನ್ನು ನಿಗ್ರಹಿಸುವುದು, ಅವನಂಥವರಲ್ಲಿ ಭಯಭೀತಿಯನ್ನುಂಟು ಮಾಡುವುದು ಎಂಬುದಾಗಿತ್ತು. ಮುಂದೆ ಮನುಷ್ಯಸ್ವಭಾವದ ಸರಿಯಾದ ಅರಿವು ಬಂದಂತೆ, ಸಂಸ್ಕೃತಿ ಬೆಳೆದಂತೆ, ಅಪರಾಧಿ ಸಂಸ್ಕೃತಿ, ಸೌಹಾರ್ದ, ಶಿಕ್ಷಣಸುಸಂಧಿಗಳಿಂದ ವರ್ಜಿತನಾದ ಒಬ್ಬ ದುರ್ದೈವಿ ಸಹೋದರ, ಬುದ್ಧಿವೈಕಲ್ಯಪೀಡಿತ ನಾದವ – ಎಂಬ ವಿಚಾರಗಳು ಪ್ರಬಲಿಸಿ, ಅವನನ್ನು ಮೃದುವಾಗಿ ಸಹೃದಯತೆಯಿಂದ ತಿದ್ದಿ ಸಮಾಜ ಯೋಗ್ಯನನ್ನಾಗಿಮಾಡಿ ಪುನರುತ್ಥಾನಗೊಳಿಸುವುದೇ ಅಪರಾಧಿಯ ವಿಷಯದಲ್ಲಿ ಸರಿಯಾದ ಮಾರ್ಗವೆಂಬ ವಾದ ಪ್ರಬಲಿಸಿ ಆ ಪ್ರಕಾರ ಅಪರಾಧಿಯನ್ನು ನಡೆಸಿಕೊಳ್ಳುವುದರಲ್ಲಿ ಪರಿವರ್ತನೆಯೂ ಆಯಿತು. ಈಗ ಅಪರಾಧಕಾಯಿದೆಯಲ್ಲಿ ಕೆಲವು ಮೂಲಭೂತ ತತ್ತ್ವಗಳು ಸಾಧಾರಣವಾಗಿ ಎಲ್ಲ ನಾಗರಿಕ ರಾಷ್ಟ್ರಗಳಲ್ಲೂ ಅನುಮೋದಿಸಲ್ಪಟ್ಟಿವೆ. ಶಾಸನದ ಮೂಲಕ ಅಪರಾಧವೆಂದು ವ್ಯಾಖ್ಯೆಗೆ ಒಳಪಡದ ಕೃತ್ಯಗಳನ್ನು ಅಪರಾಧವೆಂದು ಗಣಿಸಬಾರದು. ಅಪರಾಧದ ಕಾಲಕ್ಕೆ ಪ್ರಚಲಿತಶಾಸನದಲ್ಲಿ ನಿರ್ದೇಶಿಸಿರುವುದಕ್ಕಿಂತ ಭಿನ್ನವಾದ ಇಲ್ಲವೆ ಹೆಚ್ಚಿನ ಶಿಕ್ಷೆಯನ್ನು ವಿಧಿಸಬಾರದು. ಒಂದು ಅಪರಾಧಕ್ಕೆ ಒಮ್ಮೆ ಮಾತ್ರ ಶಿಕ್ಷೆಯನ್ನು ವಿಧಿಸಬೇಕು. ಅಪರಾಧಿಯನ್ನು ಮನುಷ್ಯಗೌರವಕ್ಕೆ ಅನುಚಿತವಾದ ಅಥವಾ ಅತಿ ಕ್ರೂರವಾದ ಶಿಕ್ಷೆಗೊಳಪಡಿಸಬಾರದು. ಅಪರಾಧವನ್ನು ಒಪ್ಪಲು ಒತ್ತಾಯಿಸಬಾರದು. ಇವೇ ಮುಖ್ಯ ತತ್ತ್ವಗಳು.

ಅಪರಾಧದಿಂದ ಸಮಾಜವನ್ನು ರಕ್ಷಿಸಲು ಮೊದಲು ಕ್ರೌರ್ಯವನ್ನು, ಬೆದರಿಕೆಯನ್ನು ಸಮಾಜ ಉಪಯೋಗಿಸಿ ನೋಡಿತು. ಈಗ ಮಾರ್ದವವನ್ನು, ಸೌಹಾರ್ದವನ್ನು ಮನೋರೋಗ ಶುಶ್ರೂಷೆಯ ಚಿಕಿತ್ಸೆಗಳನ್ನು ಉಪಯೋಗಿಸಹತ್ತಿದೆ.

ಈ ಕೆಲವು ಪ್ರಗತಿಪರ ಪ್ರಯೋಗಗಳಿಂದ ಅಪರಾಧ ಮತ್ತು ಅಪರಾಧಿಗಳ ಸಂಖ್ಯೆ ಕಡಿಮೆಮಾಡುವ ಕೆಲಸ ಶ್ರದ್ಧೆಯಿಂದ ಮುಂದುವರಿಯುತ್ತಿದೆ. (ವಿ.ಆರ್.ಬಿ.)

**ಅಪರಾಧ ಮನಶ್ಶಾಸ್ತ್ರ :** ಕಾನೂನಿನ ಗುರುತರ ಉಲ್ಲಂಘನೆ ಅಪರಾಧವೆನಿಸಿ ಕೊಳ್ಳುವುದು. ಉಲ್ಲಂಘನೆ ಸಾಧಾರಣವಾಗಿದ್ದರೆ ಅಪರಾಧವಾಗುವುದಿಲ್ಲ: ಅದನ್ನು ಆಗ ತಪ್ಪು ಎನ್ನುತ್ತಾರೆ.

ಕಠಿಣಶಿಕ್ಷೆಗೆ ಗುರಿಮಾಡಬಹುದಾದ ಅಪರಾಧಗಳನ್ನು ಮನುಷ್ಯ ಏಕೆ ಮಾಡುತ್ತಾನೆ, ಅದು ಅವನ ಹುಟ್ಟುಗುಣವೆ, ಕಲಿತಬುದ್ಧಿಯೆ, ವಿವೇಚನೆ ಇಲ್ಲದೆ ಅಥವಾ ಸನ್ನಿವೇಶದಿಂದ (ಬಡತನ) ಪ್ರಚೋದಿಸಲ್ಪಡುತ್ತಾನೆಯೆ, ಒಮ್ಮೆ ಶಿಕ್ಷೆ ಅನುಭವಿಸಿದ ಅನಂತರ ಆತ ಸತ್ಪ್ರಜೆಯಾಗುವ ಸಂಭವ ಶೇಕಡ ಎಷ್ಟು, ಈ ಪ್ರಶ್ನೆಗಳಿಗೆ ಆಧಾರಪೂರ್ವಕ ಉತ್ತರ ಪಡೆಯುವ ಪ್ರಯತ್ನ ಅಪರಾಧಮನಶಾಸ್ತ್ರದ ಬೆಳವಣಿಗೆಗೆ ಕಾರಣವಾಯಿತು. ಮೇಲಾಗಿ ಜನತೆಯ ರಕ್ಷಣೆ ಮತ್ತು ಅಪರಾಧಿಯ ಉದ್ಧಾರ ಈ ಎರಡು ಧ್ಯೇಯಗಳನ್ನು ಸಾಧಿಸುವುದು ಸಮಾಜದ ಕರ್ತವ್ಯ. ಇದಕ್ಕೆ ಅಪರಾಧಮನಶ್ಶಾಸ್ತ್ರದ ಅರಿವು ಅವಶ್ಯ.

ಕಳ್ಳತನ, ಮನೆನುಗ್ಗಿ ಅಥವಾ ಮೇಲೆ ಬಿದ್ದು ದರೋಡೆ ಮಾಡುವುದು, ಕೊಲೆ, ಮಾನಭಂಗ–ಇವು ಕಾನೂನಿನ ಗುರುತರ ಉಲ್ಲಂಘನೆಗಳು. ನಾನಾ ಪ್ರಚೋದನೆಗಳಿಂದಾಗಿ ಮನುಷ್ಯ ಈ ಕೃತ್ಯಗಳನ್ನೆಸಗುತ್ತಾನೆ. ಸೇಡು, ಅಸೂಯೆ, ಹಗೆ, ಪೂರ್ವಗ್ರಹ–ಇವು ವ್ಯಕ್ತಿಯನ್ನು ಭಾರಿ ಕೇಡಿಯನ್ನಾಗಿ ಮಾಡಬಲ್ಲುವು. ಆದರೆ ಈ ಪ್ರಚೋದನೆಗಳಿಂದಾಗಿ ಎಲ್ಲರೂ ಭಾರಿ ಕೇಡಿಗಳಾಗುವುದಿಲ್ಲ. ಯಾವ ಬಗೆಯ ವ್ಯಕ್ತಿಗಳು ಈ ಕಾರಣಗಳಿಗೆ ಬಲಿಯಾಗಿ ಅಪರಾಧಿಗಳಾಗುತ್ತಾರೆಂಬ ವಿಷಯ ಪರಿಶೀಲನಾರ್ಹವಾದುದು.

ಅಪರಾಧ ಮಾಡುವುದು ವಂಶಪಾರಂಪರ್ಯವಾಗಿ ಬಂದುದಲ್ಲ. ವಂಶಪಾರಂಪರ್ಯ ವಾದ ಕೆಲವು ವೈಯಕ್ತಿಕ ಲಕ್ಷಣಗಳು ಅಪರಾಧ ಮಾಡಲಿಕ್ಕೆ ಸಹಕಾರಿ. ಉದಾ: ಮಂಕುಬುದ್ಧಿ. ಇದು ಹುಟ್ಟುಗುಣ. ಮಂಕುಬುದ್ಧಿಯೇ ಅಪರಾಧಕ್ಕೆ ಕಾರಣವಲ್ಲದಿದ್ದರೂ ಅದು ಅಪರಾಧಕ್ಕೆ ಸಹಕಾರಿ. ಮಂಕುಬುದ್ಧಿಯವ ಅಪರಾಧದ ಪರಿಣಾಮಗಳನ್ನು ಮುಂದಾಗಿ ಆಲೋಚನೆ ಮಾಡಲಾರ. ಯಾವುದು ಸರಿ, ಯಾವುದು ತಪ್ಪು ಎಂಬ ವಿವೇಕ ಸಹ ಅವನ ಬುದ್ಧಿಯ ಮಟ್ಟಕ್ಕೆ ನಿಲುಕಲಾರದು. ಮಂಕು ಹುಡುಗ ಎಲ್ಲರ ಕುಚೋದ್ಯ ಮತ್ತು ಅನಾದರಣೆಗೆ ಗುರಿಯಾಗುತ್ತಾನೆ. ಅವನಿಗಾಗುವ ಮನೋವೇದನೆ ಮತ್ತು ಭಾವೋದ್ರೇಕ ಗಳಿಂದಾಗಿ, ಪಳಗಿದ ಮತ್ತು ಚತುರರಾದ ಅಪರಾಧಿಗಳಿಗೆ ನೆರವಾಗಿ ಅವರಿಂದ ತನಗೆ ದೊರೆಯುವ ಸ್ಥಾನಮಾನಗಳಿಂದ ಸಂತುಷ್ಟನಾಗಬಹುದು. ಸೆರೆಮನೆಯಲ್ಲಿರುವ ಅಪರಾಧಿಗಳಲ್ಲಿ ಹೆಚ್ಚು ಜನ ಬುದ್ಧಿಹೀನರು.

ಮೂರ್ಛಾರೋಗಪೀಡಿತರಾದ ಮಕ್ಕಳು ಒಂದು ಬಗೆಯ ಅನಾದರಣೆ ಮತ್ತು ಜುಗುಪ್ಸೆಗೆ ಗುರಿಯಾಗುವರು. ಇಲ್ಲವೆ, ಅವರ ಶೋಚನೀಯಸ್ಥಿತಿಯಿಂದಾಗಿ ಹಿರಿಯರು ಯಾವ ಕಟ್ಟುಕಟ್ಟಳೆಗಳನ್ನೂ ಅವರಿಗೆ ವಿಧಿಸುವುದಿಲ್ಲ. ಮುಂದೆ ಅವರು ಸ್ವಾರ್ಥಿಗಳೂ ಮುಂಗೋಪಿಗಳೂ ಹಿಂಸಾತ್ಮಕರೂ ಆಗಬಹುದು. ಅಪರಾಧಿಗಳಲ್ಲಿ ಈ ಗುಂಪಿಗೆ ಸೇರಿದವರನ್ನೂ ಕಾಣಬಹುದು.

ಮದ್ಯಸೇವನೆ ಮತ್ತು ಉನ್ಮಾದಗಳಿಂದಾಗಿ ಅಪರಾಧ ಸಂಭವಿಸುವುದೆಂಬ ಒಂದು ನಂಬಿಕೆಯುಂಟು. ಆದರೆ ಈ ಅಂಶಗಳು ನೇರವಾಗಿ ಅಪರಾಧಕ್ಕೆ ಎಡೆ ಕೊಡುವುದಿಲ್ಲ. ಮಿತಿಮೀರಿದ ಮದ್ಯಸೇವನೆ ಮಾಡುವ ಮನುಷ್ಯ ಮರ್ಯಾದೆಗೆಟ್ಟು ಹತೋಟಿಮೀರಿದ ಕೀಳು ಜೀವನಕ್ಕೆ ಇಳಿಯಬಹುದು. ಹಾಗೆ ಭಾವೋದ್ರೇಕಗೊಂಡು ಸಹನೆ ಮೀರಿದಾಗ ಶಿಸ್ತು ಪರಿಪಾಲಿಸಲಾರ. ಕಾರಾಗೃಹದಲ್ಲಿರುವ ಅಪರಾಧಿಗಳಲ್ಲಿ ಸು. ಶೇ.16 ಮಂದಿ ವಿವಿಧ ರೀತಿಯ ಉನ್ಮಾದಸ್ಥಿತಿಗಳಿಗೆ ತುತ್ತಾಗಿರುವರೆಂದು ಸಂಶೋಧನೆಗಳು ತೋರಿಸಿ ಕೊಟ್ಟಿವೆ. ಆದರೆ ಉನ್ಮತ್ತಸ್ಥಿತಿಯಲ್ಲಿರುವ ವ್ಯಕ್ತಿಗಳು ಹಿಂಸಾಕೃತ್ಯಗಳನ್ನು ಮಾಡಿ ಅಪರಾಧಿ ಗಳಾಗುವರು. ವಿಚ್ಛಿನ್ನವ್ಯಾಧಿಗೆ (ಸ್ಕಿಜೋಫ್ರೇನಿಯ) ಒಳಪಟ್ಟಿರುವವರು ಸಾಮಾನ್ಯಜೀವನದಿಂದ ವಿಮುಕ್ತರಾಗಿ ಮನೆ ಬಿಟ್ಟು ಓಡಿಹೋಗುವುದು, ಸಣ್ಣಪುಟ್ಟ ಕಳ್ಳತನಗಳನ್ನು ಮಾಡುವುದು ಮುಂತಾದ ಕೆಲಸಗಳಲ್ಲಿ ತೊಡಗಿ ಜೀವನದಲ್ಲಿ ಆಸಕ್ತಿ ಕಳೆದುಕೊಂಡು ಅಪರಾಧ ಮಾಡುವವರು ಬುದ್ಧಿವಿಕಲ್ಪವನ್ನು ಹೊಂದಿರುವವರು (ಪ್ಯಾರಾನಾಯಿಲ್ಯಾಕ್) ನೆಂಟರಲ್ಲೂ ಸಹಪಾಠಿಗಳಲ್ಲೂ ಅನುಮಾನವನ್ನಿಟ್ಟುಕೊಂಡು ಅವರೆಲ್ಲರೂ ತಮ್ಮನ್ನು ಪೀಡಿಸುವರೆಂದು ಭಾವಿಸಿ ಹಿಂಸಾಕೃತ್ಯಗಳನ್ನು ಮಾಡುವರು. ಇಂಥ ಪ್ರಬಲ ಮನೋರೋಗಗಳನ್ನುಳ್ಳ ಅಪರಾಧಿಗಳನ್ನು ಸೆರೆಮನೆಯಲ್ಲಿ ಇಟ್ಟರೆ ಅವರನ್ನು ತಿದ್ದುವುದಕ್ಕೆ ಆಗುವುದಿಲ್ಲ.

ಸು.ಶೇ.20ರಷ್ಟು ಅಪರಾಧಿಗಳು ಮಂದಬುದ್ಧಿಯುಳ್ಳವರೋ ಪ್ರಬಲ ಮನೋರೋಗ ಗಳಿಂದ ಪೀಡಿತರೋ ಆಗಿದ್ದರೂ ಇನ್ನುಳಿದ ಶೇ.80 ಅಪರಾಧಿಗಳು ಸಾಮಾನ್ಯ ಮನೋಧರ್ಮವುಳ್ಳವರಾಗಿರುವರು. ಇವರು ಯಾವ ಕಾರಣದಿಂದ ಅಪರಾಧಿಗಳಾಗುವರು ಎಂಬುದನ್ನು ಕಂಡುಹಿಡಿಯಲು ಅನೇಕ ಪರಿಶೋಧನೆಗಳನ್ನು ನಡೆಸಲಾಗಿದೆ. ಆದರೆ ಯಾವ ಒಂದು ಕಾರಣದಿಂದ ಒಬ್ಬ ವ್ಯಕ್ತಿ ಅಪರಾಧಿಯಾಗುವನೆಂದು ಹೇಳಲಸಾಧ್ಯ. ನಾಲ್ಕಾರು ಕಾರಣಗಳ ಪ್ರಭಾವ ಜೊತೆಗೂಡಿ ಅಪರಾಧಕ್ಕೆ ಕಾರಣರಾಗಬಹುದು.

ಅಪರಾಧಿ ಎಂದರೆ ಸಾಧಾರಣವಾಗಿ ಸಾಮಾಜಿಕ ಕಟ್ಟುನಿಟ್ಟುಗಳನ್ನು ಒಪ್ಪಿಕೊಳ್ಳದೆ ದೇಶದ ಕಾನೂನಿಗೆ ವಿರುದ್ಧವಾಗಿ ನಡೆದು ಪೋಲೀಸರ ವಶಕ್ಕೆ ಸಿಕ್ಕಿಕೊಳ್ಳುವವನು ಎಂದರ್ಥ. ಪ್ರತಿಯೊಂದು ಕುಟುಂಬದಲ್ಲೂ ತಂದೆತಾಯಿಯರು ಮಕ್ಕಳಿಗೆ ಕುಟುಂಬದ ಮತ್ತು ಸಮಾಜದ ಕಟ್ಟುಪಾಡುಗಳಿಗೆ ಹೊಂದಿಕೊಂಡು ಬದುಕುವಂತೆ ದಾರಿತೋರುವರು. ಆದರೆ ಕೆಲವು ಸಮಯಗಳಲ್ಲಿ ಒಂದು ಮಗು ಕಟ್ಟುಪಾಡುಗಳನ್ನು ಗಮನಿಸದೆ, ಮನಸ್ಸಿಗೆ ತೆಗೆದುಕೊಳ್ಳದೆ ಹೋಗಬಹುದು. ಅಂಥ ಮಗುವಿಗೆ ತಾನು ಮಾಡುತ್ತಿರುವ ತಪ್ಪಿನ

ಅರಿವೇ ಇರುವುದಿಲ್ಲ. ಅಲ್ಲದೆ ಕುಟುಂಬದ ಅಥವಾ ಒಂದು ಸಣ್ಣ ಗುಂಪಿನ ಕಟ್ಟುಪಾಡುಗಳಿಗೂ ಇಡೀ ಸಮಾಜದ ಕಟ್ಟುಪಾಡುಗಳಿಗೂ ಅಂತರವಿದ್ದು ಒಬ್ಬ ವ್ಯಕ್ತಿ ಸಣ್ಣಗುಂಪಿನ ಕಟ್ಟುಪಾಡಿನ ಅನುಸಾರವಾಗಿ ನಡೆದುಕೊಂಡರೂ ದೊಡ್ಡ ಸಮಾಜದ ಕಟ್ಟುಪಾಡುಗಳಿಗೆ ವಿರುದ್ಧವಾಗಿ ನಡೆಯಬಹುದು. ಭಾವೋದ್ರೇಕಗಳ ಮೇಲೆ ಹತೋಟಿ ಇಲ್ಲದ ವ್ಯಕ್ತಿ ವಿಪರೀತವಾದ ಭಯ, ಕೋಪ, ಅಸೂಯೆಗಳಿಂದ ಅನೇಕ ಅಪರಾಧಗಳನ್ನು ಎಸಗಬಹುದು. ವ್ಯಕ್ತಿಯಲ್ಲಿ ಬೆಳೆವಣಿಗೆ ಸರಿಯಾಗಿ ಮುಂದುವರಿಯದೆ ಹೋದಾಗಲೂ ಆತನ ವ್ಯಕ್ತಿತ್ವ ಕೆಟ್ಟು, ಸಮನ್ವಯ ತಪ್ಪಿ ಆತ ಇಚ್ಛಾನುಸಾರ ವರ್ತಿಸಿ ಕಾನೂನನ್ನು ಉಲ್ಲಂಘಿಸಬಹುದು.

ಒಬ್ಬ ಮನುಷ್ಯನಿಗೆ ಕಾಯಿಲೆ ಬಂದರೆ ವೈದ್ಯರು ಕಾಯಿಲೆ ಯಾವುದೆಂದು ಗುರುತಿಸಿ ಅದಕ್ಕೆ ಅನುಗುಣವಾದ ಔಷಧಿ ಆಹಾರಗಳನ್ನು ನಿಯಮಿಸಿ ರೋಗದಿಂದ ಪಾರಾಗಲು ಸಹಾಯಮಾಡುವರಷ್ಟೆ. ಅದೇ ರೀತಿ ಅಪರಾಧಿಗಳ ಮನೋಧರ್ಮಗಳನ್ನು ತಿಳಿದು ಪ್ರತಿಯೊಬ್ಬ ಅಪರಾಧಿಗೂ ತಕ್ಕ ಪರಿಹಾರವನ್ನು ನಿಯಮಿಸಿದರೆ ಆತ ಸತ್ಪ್ರಜೆಯಾಗಲು ಸಾಧ್ಯ.

ಆದರೆ ಎಲ್ಲ ಸಮಾಜಗಳಲ್ಲೂ ಅಪರಾಧಿಗಳನ್ನು ಕಂಡರೆ ಭಯ, ಕ್ರೋಧ, ಜುಗುಪ್ಸೆ ಮುಂತಾದ ಭಾವೋದ್ರೇಕಗಳೇ ಹೆಚ್ಚು. ನ್ಯಾಯಾಧೀಶರಾದರೋ ಅಪರಾಧಿಗಳನ್ನು ದೇಶದ ಕಾನೂನಿನ ಪ್ರಕಾರ ಶಿಕ್ಷಿಸುವರು. ಕಾರಾಗೃಹಶಿಕ್ಷೆ ಅಪರಾಧಿಯನ್ನು ತಿದ್ದುವುದಕ್ಕೆ ಬದಲು ಅವನ ಮನಸ್ಸಿನಲ್ಲಿನ ಕೋಪ, ಕ್ರೋಧಗಳನ್ನು ಕೆರಳಿಸುವ ಸಂದರ್ಭಗಳೇ ಹೆಚ್ಚು. ಕಾರಾಗೃಹದಿಂದ ಹೊರಗೆ ಬಂದಾಗ ಸಮಾಜದ ಮೇಲೆ ತನಗಿರುವ ಸೇಡನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಮತ್ತೊಮ್ಮೆ ಆತ ಅಪರಾಧವನ್ನೆಸಗಲೂಬಹುದು.

ಆದ್ದರಿಂದ ಕಾರಾಗೃಹದಲ್ಲಿ ಶಿಕ್ಷೆಗೆ ಬದಲು ಶಿಕ್ಷಣಕ್ರಮಗಳನ್ನು ಕೈಗೊಂಡರೆ ಅಪರಾಧಿಗಳಿಗೆ ತಕ್ಕ ತರಪೇತನ್ನು ಕೊಟ್ಟು ಸತ್ಪ್ರಜೆಯನ್ನಾಗಿ ಮಾಡಲು ಸಾಧ್ಯವಾಗುವುದು. ಅದರಲ್ಲೂ ಬಾಲಾಪರಾಧಿಗಳ ವಿಷಯದಲ್ಲಿ ಶಿಕ್ಷೆ ವಿಧಿಸುವಾಗ ಬಹಳ ಎಚ್ಚರಿಕೆಯಿಂದಿರಬೇಕಾಗುತ್ತದೆ. ಬಹುಮಟ್ಟಿನ ಅಪರಾಧಗಳಿಗೆ ವ್ಯಕ್ತಿಗಳ ಮನೋಧರ್ಮ, ಪರಿಸರ, ಬಡತನ ಹಾಗೂ ಪ್ರತೀಕಾರ ಬುದ್ಧಿಗಳೇ ಕಾರಣವಾಗಿರುವುದರಿಂದ ಅಪರಾಧಿಗೆ ಶಿಕ್ಷೆ ಕೊಡುವುದರ ಜೊತೆಗೆ ಸಾಮಾಜಿಕವಾಗಿ ಉತ್ತಮ ಪರಿಸರವನ್ನೇರ್ಪಡಿಸುವುದು ಮತ್ತು ಜೀವನೋಪಾಯವನ್ನು ಕಲ್ಪಿಸುವುದು–ಇಂಥ ಸುಧಾರಣೆಗಳನ್ನು ಮಾಡಬೇಕೆಂಬುದರ ಅಗತ್ಯವನ್ನು ಈಚಿನ ಅಪರಾಧಮನಶ್ಶಾಸ್ತ್ರದ ಅಧ್ಯಯನ ಒತ್ತಿ ಹೇಳುತ್ತದೆ.**(ನೋಡಿ ಬಾಲಾಪರಾಧ)**.(ಎನ್.ಎಸ್.ಎಸ್.)

**ಅಪರಾಧಶಾಸ್ತ್ರ** : ಅಪರಾಧ ಅಥವಾ ದುರ್ವರ್ತನೆಗೆ ಸಂಬಂಧಿಸಿದ ವಿಚಾರಗಳ ಶಾಸ್ತ್ರೀಯ ಸಮೀಕ್ಷಣೆ (ಕ್ರಿಮಿನಾಲಜಿ). ಈ ಶಾಸ್ತ್ರದ ಮೂಲ ಉದ್ದೇಶ ದುರ್ವರ್ತನೆಗೆ ಕಾರಣ ಹಾಗೂ ಅದರ ಸೂಕ್ತ ಪರಿಹಾರೋಪಾಯಗಳನ್ನು ಕಂಡುಹಿಡಿಯುವುದೇ ಆಗಿದೆ. ಸೆರೆಸಿಕ್ಕಿದ ಅಪರಾಧಿಗೆ ಯಾವ ಶಿಕ್ಷೆ ವಿಧಿಸಬೇಕು, ಯಾವ ರೀತಿ ನಡೆಸಿಕೊಳ್ಳಬೇಕು, ಅವನನ್ನು ಮತ್ತೆ ಸಮಾಜದಲ್ಲಿ ಪ್ರತಿಷ್ಠಿತನನ್ನಾಗಿ ಮಾಡಲು ಏನು ಮಾಡಬೇಕು ಎಂಬ ಜಿಜ್ಞಾಸೆಗೆ ಸಂಬಂಧಿಸಿದ್ದರೂ ಇದು ಈ ಶಾಸ್ತ್ರದ ಉಪಶಾಖೆಯಾದ ದಂಡನಶಾಸ್ತ್ರಕ್ಕೆ (ಪೀನಾಲಜಿ) ಸಂಬಂಧಿಸಿದೆ.

ಕಾನೂನಿಗೆ ವಿರುದ್ಧವಾದ ನಡತೆಯೇ ಅಪರಾಧ. ಇದು ಎಲ್ಲ ದೇಶ ಎಲ್ಲ ಕಾಲಗಳಲ್ಲಿ ಕಾಣುವ ವಿಷಯ. ಮಾನವ ವ್ಯವಸ್ಥಿತ ಜೀವನವನ್ನು ಎಂದಿನಿಂದ ನಡೆಸಲು ಆರಂಭಿಸಿದನೋ ಅಂದಿನಿಂದಲೂ ಇಂಥ ವರ್ತನೆಗೆ ಕಾರಣಗಳನ್ನು ಹುಡುಕುತಿದ್ದಾನೆ. ಆದರೂ ಇದರ ಶಾಸ್ತ್ರೀಯ ವಿಶ್ಲೇಷಣೆ ಪ್ರಾರಂಭವಾದದ್ದು 19ನೆಯ ಶತಮಾನದ ಉತ್ತರಾರ್ಧದಲ್ಲಿ.

ಅಪರಾಧಗಳನ್ನು ವೈಜ್ಞಾನಿಕ ವಿಧಾನಗಳಿಂದ ಸಮೀಕ್ಷಿಸಲು ಯತ್ನಿಸಿದ ಮೊಟ್ಟಮೊದಲಿನ ವಿದ್ವಾಂಸರಲ್ಲಿ ಇಟಲಿಯ ವೈದ್ಯ ಹಾಗೂ ಮಾನವಶಾಸ್ತ್ರಜ್ಞನಾದ ಸೆಸಾರ್ ಲೋಂಬ್ರೋಸೊ ಮುಖ್ಯನಾಗಿದ್ದಾನೆ. 1876 ರಲ್ಲಿ ಪ್ರಕಟವಾದ ಆತನ ಯೊಮೊ ಡೆಲಿನ್‌ಕ್ವೆಂಟೆ (ಅಪರಾಧಿ ಮಾನವ) ಗ್ರಂಥ ಅಪರಾಧಶಾಸ್ತ್ರಗ್ರಂಥಗಳಲ್ಲಿ ಮೊಟ್ಟಮೊದಲನೆಯದೆಂದು ಭಾವಿಸಲಾಗಿದೆ. ಈ ಶಾಸ್ತ್ರವ್ಯಾಸಂಗದ ಮೇಲೆ ಆ ಗ್ರಂಥ ಬೀರಿದ ಪರಿಣಾಮ ಕ್ರಾಂತಿಕಾರಕವಾಗಿತ್ತು. ಲೋಂಬ್ರೋಸೊ ಮಾನವಶಾಸ್ತ್ರೀಯಮಾನಗಳನ್ನೂ ಸುವ್ಯವಸ್ಥಿತ ಸಮೀಕ್ಷಣ ವಿಧಾನವನ್ನೂ ಉಪಯೋಗಿಸಿಕೊಂಡು ಒಂದು ಸಿದ್ಧಾಂತಕ್ಕೆ ಬಂದ. ಮನುಷ್ಯನ ಕೇಡಿಗತನ ಹುಟ್ಟಿನಿಂದ ಬಂದದ್ದು. ಆತ ನಾಗರಿಕರ ಮಧ್ಯೆ ಇರುವ ಅನಾಗರಿಕ, ಕಾಡುಮನುಷ್ಯ. ಆತನ ದೇಹದಲ್ಲೂ ಮನಸ್ಸಿನಲ್ಲೂ ಕೆಲವು ಕಳಂಕದ ಕಲೆಗಳು ಇದ್ದುಕೊಂಡು ಆತ ಇಂಥವನೆಂಬುದನ್ನು ತೋರಿಕೊಡುತ್ತವೆ–ಇದನ್ನು ಯಥಾರ್ಥವಾದವೆಂದು ಪರಿಗಣಿಸಲಾಗಿದೆ.

ಕೆಲವು ಕಾಲದವರೆಗೆ ಬಹುಜನಸಮ್ಮತಿಯನ್ನು ಪಡೆದಿದ್ದ ಈ ಸಿದ್ಧಾಂತವನ್ನು ಆತನ ಸಮಕಾಲೀನ ಫ್ರೆಂಚ್ ಸಮಾಜಮನಶ್ಶಾಸ್ತ್ರಜ್ಞ ಹಾಗೂ ನ್ಯಾಯಶಾಸ್ತ್ರಜ್ಞನಾದ ಗೇಬ್ರಿಯಲ್ ಟಾರ್ಡೆ ತನ್ನ ಪೀನಲ್ ಫಿಲಾಸಫಿ (ದಂಡನಾತತ್ತ್ವ) ಎಂಬ ಗ್ರಂಥದಲ್ಲಿ ಅಲ್ಲಗಳೆದ. ಅದಕ್ಕೆ ಪ್ರತಿಯಾಗಿ ಟಾರ್ಡೆ ಅಪರಾಧ ಮಿಕ್ಕೆಲ್ಲ ವೃತ್ತಿಗಳ ಹಾಗೆ ಒಂದು ವೃತ್ತಿ, ಹೀಗಿರುವುದರಿಂದ ಅದು ಮಿಕ್ಕ ಕಸಬುಗಳಂತೆ ಉಮೇದುವಾರರನ್ನು ತನ್ನತ್ತ ಸೆಳೆಯುತ್ತದೆ ಎಂಬ ತನ್ನ ವಾದವನ್ನು ಮುಂದಿಟ್ಟ.. ಟಾರ್ಡೆಯ ಪ್ರಕಾರ ಕೇಡಿಗತನ ಅನುಕರಣೆಯಿಂದ ಹುಟ್ಟಿಕೊಳ್ಳುತ್ತದೆ. ತನ್ನ ಪರಿಸರದಲ್ಲಿ ಕಂಡುಬರುವ ದುರ್ವರ್ತನೆಗಳನ್ನು ಅನುಕರಿಸುತ್ತಾನಾದ ಕಾರಣ ಮನುಷ್ಯ ಕೇಡಿಗನಾಗುತ್ತಾನೆ. ಆದುದರಿಂದ ಕೇಡಿಗತನ ಭೌತಿಕ ಅಥವಾ ಜೈವಿಕಕಾರಣಗಳಿಗಿಂತಲೂ ಹೆಚ್ಚಾಗಿ ಸಾಮಾಜಿಕ ಕಾರಣಗಳಿಂದ ಉದ್ಭವಿಸುತ್ತದೆ.

ಆದರೆ, ಹುಟ್ಟಿನಿಂದಲೇ ಕೇಡಿಗ ಎಂಬ ಲೋಂಬ್ರೋಸೊವಿನ ಸಿದ್ಧಾಂತ ಆಧಾರರಹಿತವಾದುದೆಂದು ಪರಿಣಾಮಕಾರಿಯಾಗಿ ಪ್ರಥಮತಃ ತೋರಿಸಿಕೊಟ್ಟವ ಚಾರಲ್ಸ್ ಗೋರಿಂಗ್ ಎಂಬ ಇಂಗ್ಲಿಷ್ ವೈದ್ಯ. ಈತ 3.000 ಅಪರಾಧಿಗಳನ್ನು ಬಹು ಕಷ್ಟಪಟ್ಟು ಪರೀಕ್ಷಿಸಿ 1913ರಲ್ಲಿ ಒಂದು ಗ್ರಂಥವನ್ನು ಪ್ರಕಟಿಸಿದ. ಆದರೆ ಕೇಡಿಗನ ನಡತೆಗೊಂದು ಕಾರಣವನ್ನು ಹುಡುಕುತ್ತ ಗೋರಿಂಗ್ ದುರ್ವರ್ತನೆಗೆ ಮುಖ್ಯ ಕಾರಣ ಮಂದಬುದ್ಧಿ ಎಂಬ ಸಿದ್ಧಾಂತಕ್ಕೆ ಬಂದ. ಈ ತೆರದಲ್ಲಿ ದುರ್ನಡತೆಯನ್ನು ವಿವರಿಸಲು ಮಂದಬುದ್ಧಿಯ ಜಾಡನ್ನು ಹಿಡಿಯುವ ಪ್ರವೃತ್ತಿ ಈತನಿಂದ ಮೊದಲಿಟ್ಟಿತು. ಮಂದಬುದ್ಧಿ ದುರ್ವರ್ತನೆಗೆ ಮುಖ್ಯಕಾರಣವೆಂಬ ಸಿದ್ಧಾಂತವನ್ನು ಎತ್ತಿ ಹಿಡಿದ ಪ್ರಮುಖರಲ್ಲಿ ಅಮೆರಿಕದ ಮನಶ್ಶಾಸ್ತ್ರಜ್ಞ ಹೆನ್ರಿ ಎಚ್. ಗೊಡಾರ್ಡ್ ಒಬ್ಬ. ಬಾಲಾಪರಾಧಿಗಳನ್ನು ತಿದ್ದುವ ಹಲವಾರು ಸೆರೆಮನೆಗಳಲ್ಲಿನ ಮಕ್ಕಳ ವಿಚಾರದಲ್ಲಿ ಮನೋಮಾನಕ ಪರೀಕ್ಷೆಗಳನ್ನು ನಡೆಸಿ ಅವುಗಳ ಫಲಿತಾಂಶಗಳನ್ನು ಒಟ್ಟುಗೂಡಿಸಿ ಗೊಡಾರ್ಡ್ ತನ್ನ ಫೀಬಲ್ ಮೈಂಡೆಡ್‌ನೆಸ್ : ಇಟ್ಸ್ ಕಾಸಸ್ ಅಂಡ್ ಕಾನ್ಸಿಕ್ವೆನ್ಸಸ್ (ಮಂದಬುದ್ಧಿತ್ವ: ಅದರ ಕಾರಣಗಳು ಮತ್ತು ಪರಿಣಾಮಗಳು) ಗ್ರಂಥದಲ್ಲಿ ಕೆಳಮಟ್ಟದ ಬುದ್ಧಿ ದುರ್ನಡತೆಗೆ ಅತ್ಯಂತ ಪ್ರಧಾನವಾದ ಏಕೈಕ ಕಾರಣವೆಂಬುದನ್ನು ನಿಸ್ಸಂದೇಹವಾಗಿ ಸಮೀಕ್ಷಣೆಗೆ ತೋರಿಸಿಕೊಡುತ್ತವೆ ಎಂದು ಸಾರಿದ. ಆದರೆ ಮುಂದೆ ಇದಕ್ಕೆ ವಿರುದ್ಧವಾದ ಅನೇಕ ಫಲಿತಾಂಶಗಳನ್ನು ಒಟ್ಟುಗೂಡಿಸಲಾಯಿತು. ಇದರಿಂದ ಕೇಡಿಗನಲ್ಲದವನಿಗಿಂತ ಕೇಡಿಗ ಕೆಳಮಟ್ಟದವ, ಮಂದಬುದ್ಧಿಯವ ಎಂಬ ಸಿದ್ಧಾಂತಕ್ಕೆ ನೆಲೆ ತಪ್ಪಿತು.

ಅಪರಾಧಿಗಳ ಬುದ್ಧಿಯ ಮಟ್ಟವನ್ನು ಕುರಿತು ಅತ್ಯಂತ ವಿಸ್ತೃತವಾದ ಸಮೀಕ್ಷಣೆಯನ್ನು ಕಾರಲ್ ಮರ್‌ಚಿಸನ್ ಎಂಬ ಮತ್ತೊಬ್ಬ ಅಮೆರಿಕದ ಮನಶ್ಶಾಸ್ತ್ರಜ್ಞ ನಡೆಸಿ ತನ್ನ ಕ್ರಿಮಿನಲ್ ಇನ್‌ಟೆಲಿಜೆನ್ಸ್ (ಕೇಡಿಗಬುದ್ಧಿ) ಎಂಬ ಗ್ರಂಥವನ್ನು ರಚಿಸಿದ. ರಾಜ್ಯದ ಅನೇಕ ಸೆರೆಮನೆಗಳು ಮತ್ತು ಸುಧಾರಣಾಗೃಹಗಳಲ್ಲಿನ ಜನರನ್ನು ಸಂಯುಕ್ತ ಸಂಸ್ಥಾನ ಸೈನ್ಯದ ಆಲ್ಫ ಪರೀಕ್ಷೆಗೆ ಒಳಪಡಿಸಿದಾಗ ಆ ದೇಶದ ಸಹಾಯಕ ಸೇನಾದಳದ ಜನರಿಗಿಂತಲೂ ಈ ಸೆರೆಯಾಳುಗಳ ಬುದ್ಧಿ ಸರಾಸರಿ ಲೆಕ್ಕದಲ್ಲಿ ಹೆಚ್ಚಿನ ಮಟ್ಟದಲ್ಲಿದ್ದು ಬುದ್ಧಿಯ ದರ್ಜೆವಾರು ವಿಂಗಡಣೆಯಲ್ಲಿ ಅವರ ಸಂಖ್ಯೆ ಏರುಮಟ್ಟದಲ್ಲಿತ್ತೆಂಬುದನ್ನು ಕಂಡುಕೊಂಡ. ಮುಂದೆ ನಡೆಸಿದ ಸಮೀಕ್ಷೆಗಳಿಂದ ಮಂದಬುದ್ಧಿಗೂ ದುರ್ವರ್ತನೆಗೂ ಕಾರ್ಯಕಾರಣಸಂಬಂಧವೇನಾದರೂ ಇದ್ದರೆ ಅದು ಅತ್ಯಲ್ಪಪ್ರಮಾಣದ್ದೆಂಬ ಅಂಶ ಹೊರಪಟ್ಟಿತು. ದಂಡನಗೃಹದಲ್ಲಿರುವ ಅಪರಾಧಿಯೊಬ್ಬ ಮಂದಬುದ್ಧಿಯವನೆಂದು ಕಂಡುಬಂದರೆ ಆ ಮಂದಪ್ರಜ್ಞೆಯ ಮನಸ್ಥಿತಿಯೇ ಅಪರಾಧಕ್ಕೆ ಕಾರಣವಾಯಿತೆಂಬ ಭಾವನೆ ನಿರಾಧಾರವಾದದ್ದು. ಒಂದು ವೇಳೆ ಇಂಥ ಸಂಬಂಧವೊಂದು ಇದ್ದರೆ ಅದು ಆತನ ನಡವಳಿಕೆಯ ದಾಖಲೆಗಳಿಂದ ಸಿದ್ಧವಾಗಬೇಕು. ಇಲ್ಲದಿದ್ದರೆ. ಮಾನಸಿಕವಲ್ಲದ ಇತರ ಕಾರಣಗಳೂ ಈ ಅಪರಾಧಪ್ರಚೋದನೆಯಲ್ಲಿ ಸೇರಿಕೊಂಡಿವೆಯೆಂದು ಭಾವಿಸುವುದು ನ್ಯಾಯವಾಗುತ್ತದೆ.

ಬುದ್ಧಿಮಾಂದ್ಯ ಅಥವಾ ಮನೋದೌರ್ಬಲ್ಯ ಸ್ವಭಾವತಃ ದುರ್ವರ್ತನೆಗೆ ದಾರಿಮಾಡಿಕೊಡಬೇಕೆಂಬ ಯಾವ ರೀತಿಯ ನಿರ್ಬಂಧವೂ ಕಂಡುಬರುವುದಿಲ್ಲ. ವಸ್ತುತಃ ಮಂದಬುದ್ಧಿಯ ಬಹುಜನಗಳು ಪ್ರಾಯಶಃ ನ್ಯಾಯದ ಕೋಟಲೆಗೆ ಸಿಕ್ಕಿಹಾಕಿಕೊಳ್ಳದಿರುವುದನ್ನು ನೋಡಿದರೆ, ಈ ವಾದಕ್ಕೆ ಯಾವ ಪುಷ್ಟಿಯೂ ದೊರೆಯದು.

ಇದೇ ಪ್ರಕಾರವಾಗಿ, ಪ್ರಬಲಮನೋರೋಗ (ಸೈಕೋಸಿಸ್), ನರವ್ಯಾಧಿ (ನ್ಯೂರೋಸಿಸ್) ಮುಂತಾದ ವಿಕಾರಗಳು ದುರ್ನಡತೆಗೆ ಕಾರಣಗಳೆಂಬ ಬಹುಜನರ ನಂಬಿಕೆಗೆ ಯಾವ ಆಧಾರವೂ ಇಲ್ಲ. ನಾಡಿನ ಜನತೆ ಬೆಚ್ಚಿಬೀಳುವಷ್ಟು ಹೆಚ್ಚಿನ ಪ್ರಮಾಣದಲ್ಲಿ ಅಪರಾಧಿಗಳು ಇಂಥ ಪ್ರಬಲ ರೋಗಗಳಿಂದ ಪೀಡಿತರಾಗಿದ್ದಾರೆಂಬುದನ್ನು ತೋರಿಸುವುದಕ್ಕಾಗುವುದಿಲ್ಲ. ಮನೋರೋಗ ಚಿಕಿತ್ಸೆ ಅಥವಾ ಮನೋಮಾನಕ ರೂಪದ ಪರೀಕ್ಷೆಗಳನ್ನು ನ್ಯೂಯಾರ್ಕ್ ನಗರದ ಜನರಲ್ ಸೆಷನ್ಸ್ ಕೋರ್ಟಿನ ಸಾವಿರಾರು ಪಾತಕಿಗಳ ವಿಚಾರದಲ್ಲಿ ಹಲವು ವರ್ಷಗಳ ಕಾಲ ನಡೆಸಿ ನೋಡುವಲ್ಲಿ, ಆ ಪೈಕಿ ಎಲ್ಲೋ ಸ್ವಲ್ಪಜನ ಮಾತ್ರ ಪ್ರಬಲಮನೋರೋಗಾದಿ ವ್ಯಾಧಿಗಳಿಂದ ಪೀಡಿತರು ಅಥವಾ ದುರ್ಬಲವಾದ ಮನಸ್ಸುಳ್ಳವರು ಎಂಬುದು ವ್ಯಕ್ತವಾಯಿತು. ಸರಾಸರಿ ಲೆಕ್ಕದಲ್ಲಿ ಈ ವ್ಯಾಧಿ ಮತ್ತು ದೌರ್ಬಲ್ಯಗಳು ಸಾಮಾನ್ಯಜನರಲ್ಲಿ ಕಂಡುಬರುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಪಾತಕಿಗಳಲ್ಲಿ ಕಂಡುಬರಲಿಲ್ಲ. ಎಚ್.ಡಬ್ಲ್ಯು. ಡನ್‌ಹಾಂ ಎಂಬ ಅಮೆರಿಕದ ಸಮಾಜವಿಜ್ಞಾನಿ ಇಲಿನಾಯ್ ಎಂಬಲ್ಲಿನ ಅಪರಾಧಿಗಳನ್ನು ಪರೀಕ್ಷಿಸಿ ಇದೇ ಸಿದ್ಧಾಂತಕ್ಕೆ ಬಂದ. ಇಲಿನಾಯ್‌ನ ಅಪರಾಧಿಮತಿ ವಿಕಲರಿಗಾಗಿ ಏರ್ಪಟ್ಟಿರುವ ಸೆಕ್ಯೂರಿಟಿ ಆಸ್ಪತ್ರೆಯಲ್ಲಿನ ಹುಚ್ಚರ ಪೈಕಿ ಶೇ.1.7 ಭಾಗದಷ್ಟು ಜನ ಮಾತ್ರ ಮಹಾಪರಾಧಗಳನ್ನು ಮಾಡಿದವರಾಗಿದ್ದರು ಮತ್ತು ಇಲಿನಾಯ್‌ನ ದಂಡನಾಗಾರಕ್ಕೆ ಕಳಿಸಿದ ಅಪರಾಧಿಗಳ ಪೈಕಿ ಶೇ.1.3 ಭಾಗ ಮಾತ್ರ ಹುಚ್ಚರಾಗಿದ್ದರು. ಅಂದರೆ ಹುಚ್ಚರೆಂದು ಪರಿಗಣಿಸಲ್ಪಟ್ಟವರಲ್ಲಿ ಅಪರಾಧಿಗಳು ತೀರ ಕಡಿಮೆ; ಅಪರಾಧಿಗಳ ಪೈಕಿ ಹುಚ್ಚರೂ ಕಡಿಮೆ.

ಕೇಡಿಗತನ ಅಥವಾ ದುಷ್ಪ್ರವೃತ್ತಿ ಆನುವಂಶಿಕವಾದುದೆಂಬುದು ಜನರಲ್ಲಿ ಹರಡಿರುವ ಮತ್ತೊಂದು ನಂಬಿಕೆ. ಅಮೆರಿಕದ ಮನಶ್ಶಾಸ್ತ್ರಜ್ಞ ಆರ್.ಎಲ್. ಡಗ್‌ಡೇಲ್ ಮತ್ತು ಹಿಂದೆ ಪ್ರಸ್ತಾಪಿಸಿರುವ ಹೆನ್ರಿ ಎಚ್. ಗೊಡಾರ್ಡ್ ಎಂಬ ವಿದ್ವಾಂಸರು ಈ ನಂಬಿಕೆಯನ್ನು ನಿಜವೆನಿಸುವುದಕ್ಕೆ ಎರಡು ಪ್ರಖ್ಯಾತ ಸಮೀಕ್ಷಣೆಗಳನ್ನು ನಡೆಸಿದರು. ದಿ ಜೂಕ್ಸ್ ಎಂಬ ತನ್ನ ಸಮೀಕ್ಷಣೆಯಲ್ಲಿ ಡಗ್‌ಡೇಲ್ ಕುಖ್ಯಾತ ದುಷ್ಕುಲಗಳ ಸಂತತಿಯವರನ್ನು ಪರೀಕ್ಷಿಸಿದನಲ್ಲದೆ ಬಹಳ ಹಿಂದಿನ ತಲೆಮಾರಿನ ತನಕ ಹೋಗಿ ಅವರು ಉದ್ದಕ್ಕೂ ತೀವ್ರವಾದ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ತಂದೊಡ್ಡಿರುವುದನ್ನು ಕಂಡುಕೊಂಡ; ಅಪರಾಧ. ದುರ್ನಡತೆ, ವ್ಯಭಿಚಾರ ಮುಂತಾದುವನ್ನು ಒಳಗೊಂಡಿರುವ ಈ ದುಷ್ಪಚಾಳಿಗಳು ವಂಶಪಾರಂಪರ್ಯವಾಗಿ ಇಳಿದುಬಂದಿವೆ ಎಂಬ ಸಿದ್ಧಾಂತಕ್ಕೆ ಬಂದ. ದಿ ಕಲ್ಲಿಕಕ್ ಫ್ಯಾಮಿಲಿ ಎಂಬ ತನ್ನ ನಿಬಂಧದಲ್ಲಿ ಗೊಡಾರ್ಡ್ ಇದೇ ನಮೂನೆಯನ್ನು ಅನುಸರಿಸಿದ. ಅನೇಕ ವಿಧದ ತಕರಾರುಗಳಿಂದ ಕೂಡಿದ ಈ ಕುಟುಂಬವನ್ನು ಬಹಳ ಹಿಂದಿನ ತಲೆಮಾರುಗಳವರೆಗೂ ಶೋಧಿಸಿ ನೋಡಿ ದುರ್ಬಲಮನಸ್ಸಿನ ಮೂಲ ಪುರುಷನೊಬ್ಬನಿಂದ ವಂಶಪಾರಂಪರ್ಯವಾಗಿ ಹರಿದುಬಂದ ಕೆಲವು ನ್ಯೂನತೆಗಳ ಎಳೆಗಳು, ಅದರಲ್ಲೂ ಮುಖ್ಯವಾಗಿ ದುರ್ಬಲಮನಸ್ಸು ಇದಕ್ಕೆ ಕಾರಣವೆಂಬುದನ್ನು ಕಂಡುಹಿಡಿದ.

ಈ ವ್ಯಾಸಂಗಗಳು ಮೊದಮೊದಲು ವಿಶ್ವಾಸಾರ್ಹವೆನಿಸಿ ತುಂಬ ಪ್ರಾಚೀನ ಸಮಸ್ಯೆಗಳಾದ ಕೇಡಿಗತನ ಮತ್ತು ಇತರ ಅನೀತಿವರ್ತನೆಗಳಿಗೆ ಸದುತ್ತರವನ್ನು ಕೊಡುವಂಥವೆಂದು ಪರಿಗಣಿತವಾದರೂ ಈ ವಿಧಾನಗಳ ತಳಹದಿ ಅಪ್ಪಟವಲ್ಲವೆಂದೂ ಇವುಗಳಲ್ಲಿ ನ್ಯೂನತೆಗಳು ಬಹಳ ಇವೆಯೆಂದೂ ಈಚೆಗೆ ಕಂಡುಬಂದಿರುವುದರಿಂದ ಇವುಗಳ ಮೇಲಿನ ತೀರ್ಮಾನಗಳು ಕೂಡ ಅಷ್ಟು ಪ್ರಾಮಾಣಿಕವಲ್ಲವೆಂದು ತೋರುತ್ತಿದೆ. ಕುಟುಂಬಗಳಲ್ಲಿದ್ದುವೆಂದು ಭಾವಿಸಲಾದ ಅನೇಕ ದುರ್ನೀತಿಗಳಿಗೆ ಆ ಕುಟುಂಬದವರು ಬಾಳಬೇಕಾಗಿದ್ದ ಅನಾನುಕೂಲ ಸಾಮಾಜಿಕ ಪರಿಸರವೇ ಕಾರಣವೆಂದು ತೋರಿಸಿಕೊಡ ಬಹುದಾಗಿತ್ತು. ಈಗ ಈ ವ್ಯಾಸಂಗಗಳು ಐತಿಹಾಸಿಕ ದೃಷ್ಟಿಯಿಂದ ಗಮನಾರ್ಹವಾಗಿವೆಯೇ ಹೊರತು ಮತ್ತೇನೂ ಅಲ್ಲ. ಇದೇ ರೀತಿ ಸಮಾನರೂಪ ಗುಣಗಳನ್ನುಳ್ಳ ಅವಳಿಜವಳಿ ಮಕ್ಕಳಲ್ಲಿ ಮತ್ತು ಅಂಥ ಸಾಮ್ಯವಿಲ್ಲದ ಅವಳಿ ಮಕ್ಕಳಲ್ಲಿ ಕಂಡುಬರುವ ದುರ್ವರ್ತನೆಗೆ ವಂಶಪಾರಂಪರ್ಯವಾದ ಕಾರಣಗಳನ್ನು ಹುಡುಕಲು ಅನೇಕ ಪ್ರಯೋಗಗಳನ್ನು ನಡೆಸಲಾಯಿತು. ಆದರೆ ಇವುಗಳಿಂದ ಈ ಸಿದ್ಧಾಂತವನ್ನು ಸಮರ್ಥಿಸುವ ಸರಿಯಾದ ಸಾಕ್ಷ್ಯಗಳು ದೊರೆಯಲಿಲ್ಲ.

ದುರ್ವರ್ತನೆಯನ್ನು ಸಕಾರಣವಾಗಿ ವಿವರಿಸಲೆಳಸುವ ಅನೇಕ ಸಿದ್ಧಾಂತಗಳ ಪೈಕಿ ಆರ್ಥಿಕ ಸಿದ್ಧಾಂತವೂ ಒಂದು. ಮಾರ್ಕ್ಸ್ ತತ್ತ್ವಾನುಯಾಯಿಗಳು ಇದನ್ನು ಸ್ವತಸ್ಸಿದ್ಧವೆಂದು ಭಾವಿಸುತ್ತಾರೆ. ಈ ಸಿದ್ಧಾಂತದ ಮುಖ್ಯ ಪ್ರವರ್ತಕ ಡಚ್ ಅಪರಾಧಶಾಸ್ತ್ರಜ್ಞ ಡಬ್ಲ್ಯು. ಎ. ಬಾಂಗರ್. ಕ್ರಿಮಿನಾಲಜಿ ಅಂಡ್ ಎಕನಾಮಿಕ್ ಕಂಡಿಷನ್ಸ್ (ಅಪರಾಧಿತ್ವ ಮತ್ತು ಆರ್ಥಿಕ ಪರಿಸ್ಥಿತಿಗಳು) ಎಂಬ ತನ್ನ ಗ್ರಂಥದಲ್ಲಿ ಪ್ರಪಂಚದ ಎಲ್ಲ ದೇಶಗಳಿಂದಲೂ ಅಪರಾಧಿತ್ವಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಕಲೆಹಾಕಿ ಅವುಗಳ ಮೂಲಕ ಬಂಡವಾಳಗಾರಿಕೆಯ ಉಪಫಲಗಳೆನಿಸಿದ ಆರ್ಥಿಕಸ್ಪರ್ಧೆ, ದಾರಿದ್ರ್ಯ, ಮಕ್ಕಳ ಕೂಲಿಗಾರತನ, ಕೆಲಸದ ದೀರ್ಘಾವಧಿ, ವಾಸಕ್ಕೆ ಅಯೋಗ್ಯವಾದ ಮನೆ, ಕೆಲಸವಿಲ್ಲದಿರುವಿಕೆ, ಆರ್ಥಿಕ ಅಭದ್ರತೆ, ಅನಕ್ಷರತೆ– ಇವೇ ಅಪರಾಧಿತನವೆಂಬ ಪ್ರಬಲವಾದ ಸಾಮಾಜಿಕ ಸಮಸ್ಯೆಯ ಮೂಲಕಾರಣಗಳೆಂದು ತೋರಿಸಿಕೊಡಲು ಪ್ರಯತ್ನಿಸಿದ. ಸಂಶೋಧನೆಗಳ ಫಲವಾಗಿ ಬಾಂಗರ್ ಆಧುನಿಕ ಜಗತ್ತಿನಲ್ಲಿ ಅಪರಾಧಿತನದ ಮೂಲ ಬಂಡವಾಳಗಾರಿಕೆ ಪದ್ಧತಿಯಲ್ಲಡಗಿದೆ, ಅದನ್ನು ಅನುಸರಿಸಿ ಬರುವ ಕೇಡುಗಳ ಪರಿಣಾಮವಾಗಿ ಅನೀತಿವರ್ತನೆ ಮತ್ತು ಅಪರಾಧಿತನಗಳು ಪ್ರಪಂಚದಲ್ಲೆಲ್ಲ ಹರಡಿಕೊಳ್ಳುವುದು ಅನಿವಾರ್ಯವಾಗಿವೆ ಎಂಬ ಸಿದ್ಧಾಂತಕ್ಕೆ ಬಂದ.

ಬಾಂಗರ್ ಪರಿಶೀಲಿಸಿದ ಸಾಮಾಜಿಕ ದೋಷಗಳು ಅಪರಾಧಿತನವನ್ನೂ ದುರ್ನಡತೆಯನ್ನೂ ಪ್ರಚೋದಿಸುವ ಪರಿಸ್ಥಿತಿಗಳನ್ನು ಕಲ್ಪಿಸುತ್ತವೆ ಎಂಬುದನ್ನು ಒಪ್ಪದಿರುವ ಅಪರಾಧಶಾಸ್ತ್ರಜ್ಞರು ಬಹು ವಿರಳ. ಆದರೆ ಅವರಲ್ಲಿ ಅನೇಕರು, ಮುಖ್ಯವಾಗಿ ಮಾರ್ಕ್ಸ್ ಸಿದ್ಧಾಂತಕ್ಕೆ ಮನಗೊಡದೆ ಇರುವಂಥವರು, ಬಾಂಗರ್ ನಮೂದಿಸಿರುವ ಅನೇಕ ದೋಷಗಳು ಬಂಡವಾಳಗಾರಿಕೆಯ ಅನಿವಾರ್ಯ ಫಲವಲ್ಲ. ಅವು ನಾಗರೀಕರಣ ಮತ್ತು ಔದ್ಯೋಗೀಕರಣದ ಫಲಗಳು, ಇವೆರಡೂ ಮುಂದುವರಿದ ಕಮ್ಯೂನಿಸ್ಟ್ ದೇಶಗಳಲ್ಲೂ ಕಂಡುಬರುವ ಲಕ್ಷಣಗಳು ಎಂದು ಭಾವಿಸುತ್ತಾರೆ. ಎರಡನೆಯದಾಗಿ, ಅವರು ಬಾಂಗರ್ ಮಾಡಿದ ವ್ಯಾಖ್ಯಾನ ದೋಷರಹಿತವಾಗಿಲ್ಲವೆಂದು ಎಣಿಸುತ್ತಾರೆ. ಏಕೆಂದರೆ ದುರ್ವರ್ತನೆಯನ್ನು ಸುಲಭವಾಗಿ ಪ್ರಚೋದಿಸಬಲ್ಲ ಸನ್ನಿವೇಶವನ್ನು ಆತ ದುರ್ವರ್ತನೆಯ ಕಾರಣವೆಂದು ಭ್ರಮಿಸಿದ. ಮೇಲೆ ಹೇಳಿದ ದೋಷಗಳಿಲ್ಲದಿರುವ ಪರಿಸ್ಥಿತಿಗಿಂತಲೂ ಈ ಪರಿಸ್ಥಿತಿಯಲ್ಲಿ ಅಪರಾಧಿತನಕ್ಕೂ ಅನೀತಿವರ್ತನೆಗೂ ಸರಾಗವಾದ ಅವಕಾಶ ಸಿಕ್ಕುತ್ತದೆ ಅಷ್ಟೆ. ಇತರ ಅನೇಕ ಅಪರಾಧಶಾಸ್ತ್ರಜ್ಞರಂತೆ ಬಾಂಗರನೂ ಅಪರಾಧಿತನಕ್ಕೆ ಎಲ್ಲರಿಗೂ ಸಮರ್ಪಕವೆನಿಸುವ ಒಂದು ಸಿದ್ಧಾಂತವನ್ನು ಸ್ಥಾಪಿಸಲು ಅಸಮರ್ಥನಾದ.

ಮೇಲೆ ಹೇಳಿದ ಸಿದ್ಧಾಂತಗಳೆಲ್ಲ ಅಪರಾಧಿತನಕ್ಕೆ ಒಂದೇ ಒಂದು ಪ್ರಧಾನ ಕಾರಣವನ್ನು ಹುಡುಕಲು ಪ್ರಯತ್ನಿಸಿವೆ. ಇವುಗಳಲ್ಲಿ ಯಾವುದೊಂದೂ ಸರಿಯೆನಿಸಿಲ್ಲ. ಮಾನಸಿಕ ಮತ್ತು ಕಾಯಕ ದುಃಸ್ಥಿತಿಗಳಿಗಿಂತಲೂ ಹೆಚ್ಚಾಗಿ ಭಾವೋದ್ರೇಕಗಳು ಅಪರಾಧಿತನದ ಮೂಲದಲ್ಲಿವೆ ಎಂದು ತೋರಿಸುವ ಪ್ರಯತ್ನಗಳೂ ಶಂಕಾಸ್ಪದವಾದ ಸಿದ್ಧಾಂತದಲ್ಲೇ ಮುಗಿದಿವೆ. ಈ ಸಮಸ್ಯೆಯ ವಿಷಯದಲ್ಲಿ ವ್ಯಾಸಂಗ ನಡೆಸುತ್ತಿರುವ ವಿದ್ವಾಂಸರು ಅಪರಾಧಿವರ್ತನೆಗೆ ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳನ್ನು ಒಳಗೊಂಡು ಇನ್ನೂ ಅನೇಕ ಕಾರಣಗಳಿವೆ ಎಂದು ಭಾವಿಸುತ್ತಾರೆ. ಈ ಪರಿಸ್ಥಿತಿಗಳು ಸಹ ದುರ್ನಡತೆಗೆ ಸಹಾಯಕಗಳೇ ಹೊರತು ಮೂಲಕಾರಣಗಳಲ್ಲ.

ಇತ್ತೀಚಿನ ವರ್ಷಗಳಲ್ಲಿ ಶಾರೀರಿಕ ಅಥವಾ ಮಾನಸಿಕ ನ್ಯೂನತೆಗಳಿಗಿಂತ ಹೆಚ್ಚಾಗಿ ಸಾಮಾಜಿಕ ಪರಿಸರ ದುಷ್ಪವರ್ತನೆಯನ್ನು ಪ್ರಚೋದಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆಯೆಂದು ಅಪರಾಧಶಾಸ್ತ್ರಜ್ಞರು, ಅದರಲ್ಲೂ ಅಮೆರಿಕದವರು ಅಭಿಪ್ರಾಯಪಡುತ್ತಾರೆ. ಇವರು ಸಾಮಾಜಿಕ ಸಿದ್ಧಾಂತದ ಪಂಥಕ್ಕೆ ಸೇರಿದವರು; ಈ ಸಿದ್ಧಾಂತದ ಮುಖ್ಯಪ್ರವರ್ತಕರಲ್ಲಿ ಅಮೆರಿಕದ ಎಡ್ವಿನ್ ಎಚ್. ಸದರ್‌ಲ್ಯಾಂಡ್ ಎಂಬಾತನೊಬ್ಬ. ಸದರ್‌ಲ್ಯಾಂಡನ ಸಿದ್ಧಾಂತಕ್ಕೆ ಆಂಶಿಕಸಾಂಗತ್ಯಸಿದ್ಧಾಂತ (ಥಿಯರಿ ಆಫ್ ಡಿಫರೆನ್ಷಿಯಲ್ ಅಸೋಸಿಯೇಷನ್) ಎಂದು ಹೆಸರು. ಈ ಸಿದ್ಧಾಂತವನ್ನು ದುರ್ವರ್ತನೆಗೆ ಅತ್ಯಂತ ಸಮರ್ಪಕವಾದ ವಿವರಣೆಗಳ ಪೈಕಿ ಒಂದೆಂದು ಅನೇಕರು ಒಪ್ಪುತ್ತಾರೆ. ಈ ಸಿದ್ಧಾಂತದ ಪ್ರಕಾರ ದುರ್ವರ್ತನೆಯನ್ನು ಯಾರಾದರೂ ಕಲಿಯಬಹುದು. ಒಬ್ಬಾತ ಅಪರಾಧಿಯಾಗುವುದೂ ಬಿಡುವುದೂ ಆತನ ಹತ್ತಿರದ ಪರಿಸರದಲ್ಲಿ ನೀತಿಯ ಅನುಸರಣೆ ಅಥವಾ ನೀತಿ ವಿರುದ್ಧವರ್ತನೆಗಳಲ್ಲಿ ಯಾವುದು ಹೆಚ್ಚಾಗಿದೆ ಎಂಬುದನ್ನು ಅವಲಂಬಿಸಿದೆ. ಅಪರಾಧೀವರ್ತನೆಯನ್ನು ವೈಜ್ಞಾನಿಕವಾಗಿ ಪರಿಶೋಧಿಸಲು ನಡೆಸಿದ ಪ್ರಯತ್ನದ ಫಲವಾಗಿ, ಅದರಲ್ಲೂ ಕಳೆದ 50 ವರ್ಷಗಳಲ್ಲಿ, ಅಪರಾಧ ಸಮಸ್ಯೆಯ ಸ್ವಭಾವ ಮತ್ತು ವ್ಯಾಪ್ತಿಗಳ ಪ್ರಮಾಣವನ್ನು ಹಿಂದಿಗಿಂತಲೂ ಇಂದು ಹೆಚ್ಚು ನಿಷ್ಕೃಷ್ಟವಾಗಿ ಅಳೆಯಲು ವಿಧಾನಗಳೂ ಸಾಧನೋಪ ಕರಣಗಳೂ ಲಭ್ಯವಾಗಿವೆ. ಅಪರಾಧಿತನ ಮತ್ತು ಮಕ್ಕಳ ದುರ್ನಡತೆಯ ವಿಚಾರವಾಗಿ ವ್ಯಾಸಂಗಗಳನ್ನು ನಡೆಸಲು ವಿಶ್ವಸಂಸ್ಥೆ ಆಸಕ್ತಿ ಹೊಂದಿದೆ; ಅದರ ಸಾಮಾಜಿಕ ವ್ಯವಹಾರಶಾಖೆ ಅಪರಾಧಿತನದ ವಿಷಯದಲ್ಲಿ ರಾಷ್ಟ್ರಗಳ ನೀತಿಯೇನೆಂಬುದನ್ನು ತನ್ನ ಅಂತಾರಾಷ್ಟ್ರೀಯ ಪುನರವಲೋಕನದಲ್ಲಿ ಪ್ರಕಟಿಸುತ್ತ ಅದರಲ್ಲಿ ಪ್ರಪಂಚದ ಎಲ್ಲ ಭಾಗಗಳಲ್ಲೂ ಪ್ರಕಟವಾಗಿರುವ ಅಪರಾಧಿತನಕ್ಕೆ ಸಂಬಂಧಿಸಿದ ಗ್ರಂಥಗಳ ಪಟ್ಟಿಯನ್ನು ಕೊಡುತ್ತದೆ. ಇದರಿಂದ ಅಪರಾಧಗಳ ವಿಷಯದಲ್ಲಿ ಸರ್ಕಾರಗಳೆಲ್ಲ ಎಷ್ಟು ಆಸಕ್ತಿಯನ್ನು ತಾಳಿವೆ ಎಂಬುದು ಗೊತ್ತಾಗುತ್ತದೆ. ಈ ತೆರದ ವಿಚಾರಸಂಗ್ರಹದಿಂದ ಅಪರಾಧಶಾಸ್ತ್ರಜ್ಞರೆಲ್ಲರೂ–ಅವರು ಯಾವುದೇ ರಾಜ್ಯದಲ್ಲಿರಲಿ–ಈ ವ್ಯಾಸಂಗದಲ್ಲಿ ಪರಸ್ಪರ ಸಹಕರಿಸಲು ಅನುಕೂಲವಾಗಿದೆ; ಅದರ ಪರಿಣಾಮವಾಗಿ ಅಪರಾಧಶಾಸ್ತ್ರ ಕ್ಷೇತ್ರದಲ್ಲಿ ಕಂಡುಹಿಡಿಯಲಾದ ಮುಖ್ಯ ವಿಷಯಗಳೆಲ್ಲ ವಿದ್ವಾಂಸರ ತಿಳಿವಳಿಕೆಗೆ ಬರುವಂತಾಗಿದೆ. ಇಂಥದೇ ಸೇವೆಯನ್ನು ಹಾಲೆಂಡಿನಲ್ಲಿ ಪ್ರಕಟವಾಗುವ ಎಕ್ಸರ್ಪ್ಟಿಕಾ ಕ್ರಿಮಿನೋಲಾಜಿಕ (ಅಪರಾಧಶಾಸ್ತ್ರ ವ್ಯಾಸಂಗದಲ್ಲಿನ ಉದ್ಧೃತ ವಿಷಯಗಳು) ಎಂಬುದು ನೆರವೇರಿಸುತ್ತಿದೆ. ಇದು ಗ್ರಂಥಗಳ ಪಟ್ಟಿಯನ್ನು ಕೊಡುವುದಲ್ಲದೆ ಅಪರಾಧಶಾಸ್ತ್ರ ವ್ಯಾಸಂಗದಲ್ಲಿ ಕಂಡುಹಿಡಿಯಲಾದ ಪ್ರಧಾನಾಂಶಗಳ ಸಾರಾಂಶವನ್ನೂ ಎತ್ತಿಕೊಡುತ್ತದೆ.

ಅನೀತಿವರ್ತನೆಯ ಮೂಲಕಾರಣ ಅಥವಾ ಕಾರಣಗಳನ್ನು ನಿಷ್ಕೃಷ್ಟವಾಗಿ ಇನ್ನೂ ಕಂಡುಹಿಡಿದಿಲ್ಲವಾದರೂ ಇತ್ತೀಚಿನ ವರ್ಷಗಳಲ್ಲಿ ಅಪರಾಧಶಾಸ್ತ್ರಜ್ಞರು ಗಮನಾರ್ಹವಾದ ಸಮೀಕ್ಷೆಗಳನ್ನು ನಡೆಸಿದ್ದಾರೆ; ಅಪರಾಧ ಮತ್ತು ಅಪರಾಧಿತನಗಳ ವಿಷಯದಲ್ಲಿ ವಿಪುಲವಾದ ಜ್ಞಾನರಾಶಿಯನ್ನು ಸಂಗ್ರಹಿಸಿದ್ದಾರೆ. ಈ ತಿಳಿವಳಿಕೆಯನ್ನು ಸರಿಯಾಗಿ ಉಪಯೋಗಿಸಿ ಕೊಂಡಿದ್ದೇ ಆದರೆ, ಈಗ ಪ್ರಪಂಚದಲ್ಲೆಲ್ಲ ಹಬ್ಬುತ್ತಿರುವ ಮತ್ತು ಪ್ರತಿಯೊಂದು ಆಧುನಿಕ ಸಮಾಜದ ತೀವ್ರಗಮನವನ್ನು ತನ್ನೆಡೆಗೆ ಸೆಳೆಯುತ್ತಿರುವ ಅಪರಾಧ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಅನುಕೂಲವಾಗುತ್ತದೆ. (ಎಸ್.ಕೆ.)

**ಅಪರಾಳ ತಮ್ಮಣ್ಣ :** ಸು.1800. ಶ್ರೀಕೃಷ್ಣಪಾರಿಜಾತ ಎಂಬ ಯಕ್ಷಗಾನ ಕೃತಿಯ ಕರ್ತೃ. ರಾಯಚೂರಿನಿಂದ ಸು.25ಕಿಮೀ ದೂರದಲ್ಲಿರುವ ಅಪರಾಳವೆಂಬ ಗ್ರಾಮದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಈತ ಕನ್ನಡ ಸಂಸ್ಕೃತಗಳೆರಡರಲ್ಲಿಯೂ ವಿದ್ವಾಂಸನಾಗಿದ್ದ ಎನ್ನಲಾಗಿದೆ. ಭಾಗವತ ಕವಿಗಳ, ದಾಸಸಾಹಿತ್ಯದ ಅಭ್ಯಾಸ ಮಾಡಿದ್ದ ಇವನು ಸಂಗೀತ ನೃತ್ಯ ಕಲೆಗಳಲ್ಲಿಯೂ ಪ್ರಾವೀಣ್ಯ ಪಡೆದವನಾಗಿದ್ದ. ತನ್ನ ನಾಟಕದಲ್ಲಿ ಜನಪದ ಹಾಗೂ ಸಾಹಿತ್ಯಕ ಶೈಲಿಗಳನ್ನು ಅಳವಡಿಸಿಕೊಂಡಿದ್ದಾನೆ. ಅಂದು ನಡೆಯುತ್ತಿದ್ದ ನಾಟಕ ಮತ್ತು ನೃತ್ಯಕಲೆಗಳ ಮಾಸ್ತರನಾಗಿದ್ದಿರಬಹುದೆಂದೂ ಸಂದರ್ಭ ಒದಗಿಬಂದಾಗ ಈತ ಅಭಿನಯಿಸಿರಬಹುದೆಂದೂ ಕೆಲ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. (ಬಿ.ಎಸ್.ಎಸ್.)

**ಅಪರಿಮಿತಸೈನ್ಯದಳ :** ಅನಿರ್ದಿಷ್ಟ ಸಂಖ್ಯೆಯ ಒಂದು ಸಂಘಟನೆ ಅಥವಾ ಜನರ ಸಂಘವನ್ನು ಸೂಚಿಸಲು ಈಗ ಬಳಕೆಯಲ್ಲಿರುವ ಪದ (ಲೀಜನ್). ಹಿಂದೆ ಈ ಶಬ್ದ ಮುಖ್ಯವಾಗಿ ಪೌರಸೈನ್ಯವನ್ನು ಸೂಚಿಸುತ್ತಿತ್ತು. ಪುರಾತನ ರೋಮನ್ ಸೈನ್ಯದಲ್ಲಿ

3000–6000 ಪದಾತಿಗಳೂ ಸು. 300 ಅಶ್ವಸೈನ್ಯವೂ ಇರುತ್ತಿದ್ದ ಸೈನ್ಯದಳಕ್ಕೆ ಲೀಜನ್ ಎನ್ನುತ್ತಿದ್ದರು. ಪ್ರಾಚೀನ ರೋಮನ್ನರಲ್ಲಿ ಪೌರಸೇನಾ ಬಲವೇ ಯುದ್ಧಕ್ಕೆ ಹೊರಡುತ್ತಿತ್ತು. ಇದು ಎರಡನೆಯ ದರ್ಜೆಯದೆನಿಸಿಕೊಂಡ ಮಿಕ್ಕ ಸೇನಾದಳಗಳಿಗಿಂತ ಅಥವಾ ಸಹಾಯಕ (ಆಕ್ಸಿಲರಿ) ದಳಗಳಿಗಿಂತ ಭಿನ್ನವಾಗಿದ್ದು ಅತ್ಯಂತ ಶ್ರೇಷ್ಠ ಹಾಗೂ ವಿಲಕ್ಷಣ ಗುಣದ್ದಾಗಿತ್ತು. ಸಹಾನುಭೂತಿಯುಳ್ಳ ಅನಿಯುಕ್ತ ವಿದೇಶೀಯರನ್ನು ಸಾಮಾನ್ಯವಾಗಿ ಫಾರಿನ್ ಲೀಜನ್ ಎಂದು ಕರೆಯುತ್ತಾರೆ. ಸಣ್ಣ ಸಣ್ಣ ದೇಶಗಳು ತಮ್ಮ ಸ್ವಾತಂತ್ರ್ಯಕ್ಕೂ ಸ್ವಾವಲಂಬನಕ್ಕೂ ಹೋರಾಡುವಾಗ ಸಾಮಾನ್ಯವಾಗಿ ಅವುಗಳ ಜೊತೆಗೆ ಇವೂ ಸೇರಿಕೊಳ್ಳುತ್ತವೆ. ಬಹುಶಃ ಇದರ ಪ್ರಾಚೀನತಮ ಉದಾಹರಣೆಯೆಂದರೆ ಮೊದಲನೆಯ ಫ್ರಾನ್ಸಿಸ್ ರಚಿಸಿದ ಫ್ರೆಂಚ್ ಲೀಜನ್. ಹ್ಯಾನೋವರ್ ಪಟ್ಟಣವನ್ನು ಮುತ್ತಲು ನೆಪೋಲಿಯನ್ ಹವಣಿಸಿದಾಗ (1803) ಬ್ರಿಟನ್ ಸಜ್ಜುಗೊಳಿಸಿದ ಕಿಂಗ್ಸ್ ಜರ್ಮನ್ ಲೀಜನ್ ಎಂಬುದು ಅತ್ಯಂತ ಪ್ರಸಿದ್ಧವಾದ ಮತ್ತೊಂದು ಉದಾಹರಣೆ. (ಎ.ಎನ್.ಎಸ್.ಎಂ.)

**ಅಪರ್ಣಾ :** ಪಾರ್ವತಿಯ ಒಂದು ರೂಪ. ಈಶ್ವರನನ್ನು ಪತಿಯಾಗಿ ಪಡೆಯಲು ಆತನನ್ನು ಕುರಿತು ತಪಸ್ಸು ಮಾಡುವ ಕಾಲದಲ್ಲಿ ಆಹಾರವನ್ನು ತ್ಯಜಿಸಿ ಕೊನೆಗೆ ಆ ಕಾಲದ ಋಷಿಗಳ ಆಹಾರವಾದ ಮರದ ಎಲೆಯನ್ನೂ ಸ್ವೀಕರಿಸಲಿಲ್ಲವಾಗಿ ಆಕೆಗೆ ಈ ಹೆಸರು ಬಂತು. (ಎಸ್.ಎನ್.ಕೆ.)

**ಅಪಲೇಷಿಯನ್ ಪರ್ವತಗಳು :** ಅಮೆರಿಕದ ಸಂಯುಕ್ತ ಸಂಸ್ಥಾನದ ಪೂರ್ವ ಭಾಗದಲ್ಲಿ ಅತಿಜಟಿಲವಾಗಿ ಹೆಣೆದುಕೊಂಡಿರುವ, ತಗ್ಗಾದ, ಗುಂಡು ಆಕೃತಿಯ ಪರ್ವತ ಶ್ರೇಣಿಗಳ ಮತ್ತು ವಿಚ್ಛೇದಿತ ಪ್ರಸ್ಥಭೂಮಿಗಳ ಪ್ರದೇಶ. ಇದು ಅಟ್ಲಾಂಟಿಕ್ ಸಮುದ್ರತೀರಕ್ಕೆ ಸಮಾನಾಂತರವಾಗಿ ಈಶಾನ್ಯದಲ್ಲಿ ಅಲಬಾಮದಿಂದ ನ್ಯೂ ಇಂಗ್ಲೆಂಡಿನವರೆಗೆ 2400 ಕಿಮೀ ಹಬ್ಬಿ ಕ್ವಿಬೆಕ್ಕಿನಲ್ಲಿ 160–400 ಕಿಮೀ ಪ್ರವೇಶಿಸಿದೆ. ಪ್ರಾಚೀನಕಾಲದಲ್ಲಿ ಈ ಪ್ರದೇಶವನ್ನಾವರಿಸಿದ್ದ ಅರಣ್ಯ ಈಗ ವಿರಳವಾಗಿದೆ. ಪಶ್ಚಿಮದ ರಾಕಿ ಪರ್ವತಶ್ರೇಣಿಗಳಷ್ಟೇ ಇವು ಭವ್ಯವಾಗಿವೆ. ಪರ್ವತಗಳ ಎತ್ತರ 900–1500 ಮೀಟರ್. ದಕ್ಷಿಣ ಅಪಲೇಷಿಯನ್ ಶ್ರೇಣಿಗಳಲ್ಲಿ ಮುಖ್ಯವಾದ ಅತ್ಯುನ್ನತ ಶ್ರೇಣಿಗಳೆಂದರೆ ಜಾರ್ಜಿಯ ಮತ್ತು ಉತ್ತರ ಕೆರೊಲಿನಾದ ಬ್ಲೂರಿಡ್ಜ್ ಪರ್ವತಗಳು, ಟೆನ್ನೆಸಿ ಮತ್ತು ಉತ್ತರ ಕೆರೊಲಿನಾದ ದಿ ಗ್ರೇಟ್ ಸ್ಮೋಕಿ ಪರ್ವತಗಳು ಮತ್ತು ಟೆನ್ನೆಸಿ ಮತ್ತು ಕೆಂಟಕಿಯಲ್ಲಿನ ಕಂಬರ್‌ಲೆಂಡ್ ಪರ್ವತಗಳು. ಮಧ್ಯದ ಅಪಲೇಷಿಯನ್ ಪರ್ವತಗಳಲ್ಲಿ ವರ್ಜಿನಿಯ ಬ್ಲೂರಿಡ್ಜ್ ಪರ್ವತಗಳು ಮತ್ತು ವರ್ಜಿನಿಯಗಳು ಮೇರಿಲ್ಯಾಂಡ್ ಮತ್ತು ಪೆನ್ಸಿಲ್ವೇನಿಯಗಳ ಅಲೆಘನಿ ಪರ್ವತಗಳು ಸೇರಿವೆ. ಉತ್ತರದ ಅಪಲೇಷಿಯನ್ ಪರ್ವತಗಳಲ್ಲಿ ನ್ಯೂಯಾರ್ಕಿನಲ್ಲಿರುವ ಕಾಟ್ಸ್ ಕಿಲ್ ಮತ್ತು ಆಡಿರೊಂಡಾಕ್ ಪರ್ವತಗಳು, ವರ್‌ಮಾಂಟ್‌ನಲ್ಲಿರುವ ಗ್ರೀನ್ ಪರ್ವತಗಳು ಮತ್ತು ನ್ಯೂ ಹ್ಯಾಂಪ್‌ಷೈರ್‌ನಲ್ಲಿರುವ ವೈಟ್ ಪರ್ವತಗಳು ಸೇರಿವೆ. ಅಪಲೇಷಿಯನ್ ಪರ್ವತಗಳಲ್ಲಿ ಅತ್ಯುನ್ನತ ಶಿಖರಗಳೆಂದರೆ ದಿ ಗ್ರೇಟ್ ಸ್ಮೋಕಿ ಪರ್ವತದ ಮೌಂಟ್ ಮಿಚ್ಚೆಲ್ 2028 ಮೀ ಮತ್ತು ಬ್ಲೂರಿಡ್ಜ್ ಪರ್ವತದ ಕ್ಲಿಂಗ್ ಮನ್ಸ್ ಡೋಮ್ 2024ಮೀ. ಇವೆರಡೂ ಉತ್ತರ ಕೆರೊಲಿನಾದಲ್ಲಿವೆ. ಉತ್ತರದ ವೈಟ್ ಪರ್ವತದಲ್ಲಿರುವ ಮೌಂಟ್ ವಾಷಿಂಗ್‌ಟನ್ 1916ಮೀ ಎತ್ತರವಿದೆ.

ನೈಋತ್ಯದಿಂದ ಈಶಾನ್ಯಕ್ಕೆ ಹಬ್ಬಿರುವ ಶ್ರೇಣಿಗಳ ಮಧ್ಯೆ ಮಧ್ಯೆ ಇರುವ ಕಣಿವೆಗಳಲ್ಲಿ ವರ್ಜಿನಿಯ ಕೆಂಟುಕೆ ಪ್ರದೇಶದ ಕಂಬರ್‌ಲೆಂಡ್ ಕಣಿವೆ, ಪೆನ್ಸಿಲ್ವೇನಿಯದ ಡಿಲಾವರ್ ಕಣಿವೆ ಮತ್ತು ನ್ಯೂಯಾರ್ಕ್‌ನಲ್ಲಿನ ಮೋಹಕ್–ಹಡ್ಸನ್ ಕಣಿವೆಗಳು ಮುಖ್ಯವಾದುವು. ಮೊದಲು ಅಮೆರಿಕಕ್ಕೆ ವಲಸೆ ಬಂದು ಇಲ್ಲಿ ನೆಲೆಸಿದವರು ಪಶ್ಚಿಮಕ್ಕೆ ಹರಡದಂತೆ ಈ ಪರ್ವತಶ್ರೇಣಿಗಳು ತಡೆದಿದ್ದುವು. ಆದರೆ ಈಗಿನ ತೀವ್ರಗತಿಯ ವಾಹನಗಳಲ್ಲಿ ಯಾವ ಯಾವ ಭಾಗಕ್ಕಾದರೂ ಪ್ರಯಾಣ ಮಾಡಬಹುದಾಗಿರುವುದರಿಂದ ಈ ಪರ್ವತಗಳಿಂದ ಪ್ರಯಾಣ ಹಾಗೂ ಸಾಗಾಣಿಕೆಗೆ ಯಾವ ಅಡಚಣೆಗಳೂ ಇಲ್ಲ. (ಪಿ.ಎಂ.)

**ಅಪವರ್ಗ :** ಮುಕ್ತಿ, ಮೋಕ್ಷ, ಸಮಾಪ್ತಿ, ಕೊನೆ, ಬಿಡುಗಡೆ ಎನ್ನುವ ಅರ್ಥವುಳ್ಳ ಪಾರಿಭಾಷಿಕ ಪದ. ನ್ಯಾಯ ವೈಶೇಷಿಕ ದರ್ಶನಗಳಲ್ಲಿ ಈ ಮಾತನ್ನು ಮುಕ್ತಿಯೆನ್ನುವ ಅರ್ಥದಲ್ಲಿ ಬಳಸಿದ್ದಾರೆ. ಜೀವ ದುಃಖವನ್ನೆಲ್ಲ ಬಿಟ್ಟು ಆತ್ಯಂತಿಕ ನಿಃಶ್ರೇಯಸವನ್ನು ಕಂಡುಕೊಳ್ಳುವುದು ಅಪವರ್ಗ. ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳೆಲ್ಲ ಅನಾತ್ಮಪದಾರ್ಥಗಳು; ಇದನ್ನೇ ಆತ್ಮವಸ್ತುವೆಂದು ಗ್ರಹಿಸುವುದು ದುಃಖಕ್ಕೆ ಕಾರಣ. ಶರೀರ ದುಃಖಕ್ಕೆ ಉಪಾದಾನ. ಜೀವನ ದುಃಖಮಯ, ದುಃಖ ಬೆರೆಯದೆ ಇರುವುದು ಪ್ರಾಪಂಚಿಕ ವ್ಯಾಪಾರದ ಲಕ್ಷಣವಲ್ಲ. ದೇಹಾತ್ಮಭ್ರಾಂತಿಯೆನ್ನುವುದು ಮಿಥ್ಯಾಜ್ಞಾನ. ಅದರಿಂದ ಉಂಟಾಗುವ ತೃಷ್ಣೆ ಪುನರ್ಜನ್ಮಕ್ಕೆ ಕಾರಣ. ವಿದ್ಯೆ, ಪ್ರತಿಭೆ, ಸತ್ಸಂಗ ಮತ್ತು ಯೋಗದಿಂದ ತತ್ತ್ವಜ್ಞಾನವನ್ನು ಪಡೆದುಕೊಂಡರೆ ಮಿಥ್ಯಾಜ್ಞಾನ ನಿವೃತ್ತಿಯಾಗಿ, ಪುನರ್ಜನ್ಮದ ಸಂಭವ ಇಲ್ಲವಾಗುವುದು. ಇದೇ ಅಮೃತತ್ವ. ಸಂಸಾರದಿಂದ ಹೊರಬಂದು ಉಳಿಯುವುದೇ ಮೋಕ್ಷ. ಇದೇ ಬ್ರಹ್ಮ ಎಂದು ವಾತ್ಸ್ಯಾಯನನ ವಾದ. ಆತ್ಮ ವಸ್ತುವಿಗೆ ದುಃಖ ಆತ್ಯಂತಿಕವಾಗಿ ನಾಶವಾಗಿ ಗುಣರಾಹಿತ್ಯ ಒದಗುವುದೇ ಅಪವರ್ಗವೆನಿಸಿಕೊಳ್ಳುವುದೆಂದು ವೈಶೇಷಿಕರ ನಿಲುವು. ಸಾಂಖ್ಯ ಮತ್ತು ಯೋಗದರ್ಶನಗಳಲ್ಲಿ ಅಪವರ್ಗವನ್ನೇ ಕೈವಲ್ಯವೆಂದು ವ್ಯವಹರಿಸಿದ್ದಾರೆ.

ನೈಯಾಯಿಕರ ದ್ವಾದಶಪ್ರಮೇಯಗಳಲ್ಲಿ ಅಪವರ್ಗ ಒಂದು; ದುಃಖವಾದ ಅನಂತರ ಬರುವ ಹನ್ನೆರಡನೆಯದು. ಮೊದಲನೆಯ ಆರನ್ನು ಕಾರಣವೆಂದೂ ಉಳಿದ ಆರನ್ನು ಕಾರ್ಯವೆಂದೂ ಪರಿಗಣಿಸುವ ಪದ್ಧತಿಯಿದೆ. ಪ್ರವೃತ್ತಿ, ದೋಷ, ಪ್ರೇತ್ಯಭಾವ (ಸಂಸಾರ) – ಇವು ಕಾರ್ಯಪ್ರಮೇಯಗಳು. ದುಃಖ ಮತ್ತು ಅಪವರ್ಗಗಳು ಫಲ. ಇಲ್ಲಿ ಆನಂದದಂತೆ ಅಪವರ್ಗ ಆತ್ಮದ ಸಹಜಸ್ಥಿತಿಯಲ್ಲ; ಪ್ರಯತ್ನಪೂರ್ವಕವಾಗಿ ಗಳಿಸಿಕೊಳ್ಳುವ ಸ್ಥಿತಿವಿಶೇಷ. (ಎಸ್.ಕೆ.ಆರ್.)

**ಅಪವಿತ್ರಕಾರ್ಯ :** ಪವಿತ್ರ ಸ್ಥಾನಗಳಲ್ಲಿ ಪವಿತ್ರ ಉದ್ದೇಶಗಳಿಗಾಗಿ ಮೀಸಲಿಟ್ಟ ವಸ್ತುಗಳ ಅಪಹಾರ, ದುರುಪಯೋಗಗಳು ಅಪವಿತ್ರಕಾರ್ಯವೆಂಬ (ಸ್ಯಾಕ್ರಿಲೀಜ್) ಭಾವನೆ ಪ್ರಾಚೀನರಿಂದ ಆಧುನಿಕರವರೆಗಿನ ಕಾನೂನು ಕಟ್ಟಲೆಗಳಲ್ಲಿ ಅಂತರ್ಗತವಾಗಿರುವ ಅಂಶ. ಅಪವಿತ್ರಕಾರ್ಯದ ಅರ್ಥವ್ಯಾಪ್ತಿ ಕಾಲಾಂತರದಲ್ಲಿ ವಿಸ್ತೃತಗೊಂಡಿದೆ. ಗೋರಿಗಳನ್ನು ಒಡೆಯುವುದು, ರಾಜ್ಯರಕ್ಷಕ ದೇವತೆಗಳ ಮತ್ತು ದೇವಾಂಶಸಂಭೂತನಾದ ರಾಜನ ವಿರುದ್ಧ ಎಸಗುವ ಅಪರಾಧಗಳು ರಾಜಾಜ್ಞೆಯ ಉಲ್ಲಂಘನೆ, ಆದಾಯದ ದಶಾಂಶವನ್ನು ದೇವಾಲಯಗಳಿಗೆ ಸಲ್ಲಿಸದಿರುವುದು ಇವೇ ಮುಂತಾದ ಅಪರಾಧಗಳನ್ನು ಪ್ರಾಚೀನ ಗ್ರೀಕರು ಮತ್ತು ರೋಮನ್ನರು ಅಪವಿತ್ರ ಕಾರ್ಯಗಳೆಂದೇ ಭಾವಿಸಿ ಶಿಕ್ಷಿಸುತ್ತಿದ್ದರು. ಶಿಕ್ಷೆ ಸಾಮಾನ್ಯವಾಗಿ ಮರಣದಂಡನೆ. ಕಾಲಾಂತರದಲ್ಲಿ ಇವನ್ನು ಬರಿಯ ಅಪರಾಧಗಳೆಂದು ಗಣಿಸಿ ದಂಡ, ಶಿಕ್ಷೆ ವಿಧಿಸಲಾರಂಭಿಸಿದರು. ದೈವಸನ್ನಿಧಿಯಲ್ಲಿ ಶರಣಾಗತನಾದವನನ್ನು ಮುಟ್ಟುವುದೂ ಅಪವಿತ್ರಕಾರ್ಯವೆಂದು ಪ್ರಾಚೀನ ಗ್ರೀಕರು ನಂಬಿದ್ದರು. ನ್ಯಾಯಿ, ಅನ್ಯಾಯಿ ಗಳಿಬ್ಬರಿಗೂ ದೈವಸನ್ನಿಧಿ ಸಮಾನವಾದ ಆಶ್ರಯವಾಗಿಬಿಟ್ಟಿದೆಯೆಂಬ ಯೂರಿಪಿಡೀಸನ ದೂರು. ಕೊಲೆಗಡುಕರು, ಅಪರಾಧಿಗಳೇ ಮುಂತಾದವರು ಶಿಕ್ಷೆ ತಪ್ಪಿಸಿಕೊಳ್ಳಲು ದೈವಾಶ್ರಯ ಪಡೆಯುತ್ತಿದ್ದುದರ ಬಗ್ಗೆಯೇ ಯುದ್ಧದಲ್ಲೂ ಪವಿತ್ರಸ್ಥಾನಗಳ ಆಕ್ರಮಣ ಗ್ರೀಕರಲ್ಲಿ ನಿಷಿದ್ಧ ವಾಗಿತ್ತು. ಈ ಪದ್ಧತಿಯಲ್ಲಿ ಗ್ರೀಕರನ್ನು ಅನುಸರಿಸಿದ ರೋಮನ್ನರು ತಮ್ಮ ಆಡಳಿತಕ್ಕೇ ಧಕ್ಕೆ ಬಂದಾಗ ಇದನ್ನು ಕೈಬಿಟ್ಟರು. (ಕೆ.ಕೆ.)

**ಅಪಸಣಬು :** ಫ್ಯಾಬೇಸೀ ಕುಟುಂಬದ ಫ್ಯಾಬಾಯ್ಡೀ(ಪ್ಯಾಪಿಲಿಯೋನಾಯ್ಡೀ) ಉಪಕುಟುಂಬಕ್ಕೆ ಸೇರಿದ ನಾರು ಮತ್ತು ಹಸುರೆಲೆ ಗೊಬ್ಬರಕ್ಕಾಗಿ ಬೆಳೆಸುವ ಒಂದು ಸಸ್ಯ (ಸನ್ ಹೆಂಪ್). ಕ್ರೋಟಲೇರಿಯ ಜನ್ಸಿಯ ಇದರ ವೈಜ್ಞಾನಿಕ ಹೆಸರು. ನಾರಿನ ಉತ್ಪನ್ನದಲ್ಲಿ ಮೊದಲನೆ ಸ್ಥಾನ ಸೆಣಬಿಗಾದರೆ ಎರಡನೆಯದು ಅಪಸಣಬು.

ಅಪಸಣಬಿನ ಗಿಡ

1.5–3 ಮೀ ಎತ್ತರ ಬೆಳೆಯುವ ಗಿಡ ಇದು. ಸಣ್ಣ ಇಲ್ಲವೆ ದಪ್ಪ ಬೀಜದ ಎರಡು ಬಗೆಗಳಿವೆ. ಸಣ್ಣ ಬೀಜದವು ಹೆಚ್ಚಾಗಿ ಕವಲೊಡೆಯುವಂತಿದ್ದು ಹೆಚ್ಚು ಸೊಪ್ಪು ಒದಗಿಸಬಲ್ಲವು. ದಪ್ಪ ಬೀಜದವು ದೃಢವಾಗಿ, ನೇರವಾಗಿ, ಕವಲಿಲ್ಲದೆ ಬೆಳೆಯುವುದರಿಂದ ನಾರಿಗೆ ಉತ್ತಮ. ಎಲೆಗಳು ಸಣ್ಣವು, ಹೂ ಅಚ್ಚ ಹಳದಿ, ಕಾಯಿಯ ಸಿಪ್ಪೆ ದಪ್ಪ, ಬೀಜ ಹೆಚ್ಚು.

ಅಪಸಣಬನ್ನು ಉಷ್ಣ ಮತ್ತು ಸಮಶೀತೋಷ್ಣ ವಲಯದಲ್ಲಿ 50–45 ಸೆಂಮೀ ಮಳೆಯಾಗುವ ಪ್ರದೇಶ ದಲ್ಲೆಲ್ಲ ಚೆನ್ನಾಗಿ ಬೆಳೆಸಬಹುದು. ಕಡಿಮೆ ಮಳೆಬೀಳುವ ಪ್ರದೇಶಗಳಲ್ಲೂ ಇದನ್ನು ಬೆಳೆಸಬಹುದಾದ್ದರಿಂದ, ಭಾರತದಲ್ಲಿ ಹೆಚ್ಚಾಗಿ ಬೇಸಾಯ ಮಾಡಲಾಗಿದೆ. ಚೌಳು ಅಥವಾ ಕರಲುಭೂಮಿಯಲ್ಲಿ ಮಾತ್ರ ಬೆಳೆಯುವುದು. ನಾರಿಗಾಗಿ ವ್ಯವಸಾಯಮಾಡು ವವರು ಕೆಂಪು ಅಥವಾ ಮರಳುಮಿಶ್ರಿತ ಕೆಂಪು ಭೂಮಿಯಲ್ಲಿ ಎಕರೆಗೆ 20 ಕೆಜಿ ಯಂತೆ ಬೀಜವನ್ನು ಸಾಲುಗಳಾಗಿ ಕೂರಿಗೆಯಲ್ಲಿ ಬಿತ್ತುತ್ತಾರೆ. ಬೀಜಕ್ಕಾಗಿ ಬಿತ್ತುವವರು ರಾಗಿ, ನವಣೆ ಬೆಳೆಗಳಲ್ಲಿ ಅಕ್ಕಡಿ ಸಾಲುಗಳಾಗಿ ಮತ್ತು ಗದ್ದೆಯಲ್ಲಿ ಬೆಳೆಸುವುದು ಸಾಮಾನ್ಯ.

ಇದರ ಬೆಳಸಿಗೆ ಹೆಚ್ಚಿನ ಬೇಸಾಯ ಬೇಕಿಲ್ಲ. ಗಾಳಿಯಲ್ಲಿನ ನೈಟ್ರೊಜನ್ ಅನ್ನು ಹೀರಿಕೊಳ್ಳುವ ಮತ್ತು ಬೇರುಗಳಲ್ಲಿ ವಾಸಿಸುವ ಸೂಕ್ಷ್ಮಾಣುಗಳ ಗಂಟುಗಳಿರುವುದರಿಂದ (ನಾಡ್ಯೂಲ್ಸ್) ಭೂಸಾರವನ್ನು ವೃದ್ಧಿಗೊಳಿಸಲು ಈ ಗಿಡ ಸಹಾಯಕವಾಗಿದೆ. ಆದ್ದರಿಂದಲೇ ಬತ್ತದ ಬಿತ್ತನೆಗೆ ಮುಂಚೆ ಇವನ್ನು ಬೆಳೆಸಿ ಉತ್ತುಬಿಡುವುದರಿಂದ ಭೂಮಿಯ ಸಾರ

ಹೆಚ್ಚಾಗಿ ಮುಂದಿನ ಬೆಳೆಗೆ ಅನುಕೂಲವಾಗುತ್ತದೆ. ಮುಖ್ಯವಾಗಿ ಇದನ್ನು ಉತ್ತರ ಪ್ರದೇಶ, ಬಿಹಾರ, ಆಂಧ್ರಪ್ರದೇಶ, ತಮಿಳುನಾಡು, ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ ಬೆಳೆಸಲಾಗುತ್ತಿದೆ.

ಎಕರೆಗೆ 250–500 ಕೆಜಿ ಉತ್ತಮ ಸೊಪ್ಪು ದೊರಕುತ್ತದೆ. ಒಂದು ಬಗೆಯ ಪತಂಗ, ಎಲೆ ತಿನ್ನುವ ಕೀಟಗಳು, ಕಾಯಿ ಕೊರೆಯುವ ಹುಳು ಹಾಗೂ ಹಲವು ರೋಗಗಳು ಬಾಧಿಸುವುದರಿಂದ ಇವುಗಳ ವಿರುದ್ಧ ಸಂರಕ್ಷಣಾಕ್ರಮ ಅವಶ್ಯ.

ನಾರಿಗಾಗಿ ಇದನ್ನು ಬೆಳೆಸಿದಾಗ ಗಿಡ ಹೂ ಬಿಟ್ಟಕೂಡಲೇ ನೆಲಮಟ್ಟಕ್ಕೆ ಕೊಯ್ದು ಅಥವಾ ಬೇರು ಸಹಿತ ಕಿತ್ತು, ಕೊಳೆಸಿ, ಜಜ್ಜಿ ತೆಗೆಯುತ್ತಾರೆ. ಎಕರೆಗೆ 1000 – 2000 ಕೆಜಿ ನಾರು ಉತ್ಪನ್ನವಾಗುತ್ತದೆ. ನಾರು ಹಗ್ಗ ಮತ್ತು ಹುರಿಯ ತಯಾರಿಕೆಗೆ ನಾರು ಬಳಕೆಯಾಗುತ್ತದೆ. ಹುರಿ ಅಥವಾ ದಾರದಿಂದ ಅಮೆರಿಕ ಮತ್ತು ಬೆಲ್ಜಿಯಂ ಮುಂತಾದೆಡೆ, ಮೀನುಗಾರಿಕೆಗೆ ಅನುಕೂಲವಾದ ಬಲೆ, ದಪ್ಪ ಹಗ್ಗ ಮುಂತಾದುವನ್ನು ತಯಾರಿಸುತ್ತಾರೆ.

(ಕೆ.ಜಿ.ಎಚ್.)

**ಅಪಸ್ಮಾರ :** ಮೇಲಿಂದ ಮೇಲೆ ಪ್ರಜ್ಞೆತಪ್ಪುವ, ಇಲ್ಲವೆ ಕೈಕಾಲುಗಳಲ್ಲಿ ಸೆಳವುಗಳೇಳುವ ಬೇನೆ. ಮೊಲ್ಲಾಗರ ಎಂದೂ ಹೇಳುವರು. ಹೀಗಾದಾಗ ಅರಿವು ತಪ್ಪಬಹುದು, ಇಲ್ಲವೆ ಬಹುಮಟ್ಟಿಗೆ ಕುಂದಿರಬಹುದು. ಹಾಗೆ ಕೆಲವು ವೇಳೆ ಬಿಗುವಿನ, ಅದುರಿ ಎಳೆಯುವ (ಕ್ಲಾನಿಕ್) ಸ್ನಾಯು ಸೆಡೆತಗಳು ಆಮೇಲೆ ಕಾಣಬಹುದು. ಯಾವ ವಯಸ್ಸಲ್ಲಾದರೂ ಮೊಲ್ಲಾಗರ ಕಾಣಿಸಬಹುದಾದರೂ, ಎಳೆತನದಲ್ಲಿ ಮೊದಲು ತಲೆದೋರುವುದೇ ಸಾಮಾನ್ಯ. ನೂರಕ್ಕೆ 20 ಮಂದಿಯಲ್ಲಿ 20 ದಾಟಿದ ಮೇಲೆ ಬರುವುದು. ಇದಕ್ಕೆ ಹೆಣ್ಣುಗಂಡೆಂಬ ಭೇದವಿಲ್ಲ. ಬಾಳಿನುದ್ದಕ್ಕೂ ಸೆಳವುಗಳು ಮರುಕಳಿಸುವುವಾದರೂ ಕೆಲವರಲ್ಲಿ ಯಾವ ಗುರುತೂ ಉಳಿಯದಂತೆ ತಂತಾನೆ ವಾಸಿಯಾಗುವುದೂ ಉಂಟು. ಒಂದು ಸಾವಿರಕ್ಕೆ ಎಂಟು–ಹತ್ತು ಮಂದಿ ಮೊಲ್ಲಾಗರದಿಂದ ನರಳುವರೆಂದು ಅಂದಾಜಾಗಿದೆ.

ಅದರ ಹಠಾತ್ತನೆಯ ವಿಚಿತ್ರ ಲಕ್ಷಣಗಳಿಂದ ಮೊಲ್ಲಾಗರ ಬಹಳ ಹಿಂದಿನ ಕಾಲದಿಂದಲೂ ಇದೆ. ಪ್ರಪಂಚದ ಹುಟ್ಟಿನಿಂದ ಮಾನವ ಕಾಣಿಸಿಕೊಳ್ಳುವ ತನಕ ಎಲ್ಲೆಡೆಗಳಲ್ಲೂ ಇದೊಂದು ಸಮಸ್ಯೆಯಾಗಿ ಕಾಡಿದೆ. ಇದರ ಹೆಸರಿನ ಗ್ರೀಕ್ ಪದಕ್ಕೆ, ಯಾವುದೋ ಕಾಣದ ಶಕ್ತಿಯ ಸೆಳೆತವೆಂಬಂತೆ, ಸೆಳವು (ಸೀಷರ್) ಎಂಬ ಅರ್ಥ ಕೊಟ್ಟವ ಅರಬ್ಬೀ ವೈದ್ಯ ಅವಿಸೆನ್ನ (14ನೆಯ ಶ.). ದೆವ್ವ ಪಿಶಾಚಿ ಹಿಡಿದು ರೋಗಿ ಕೆಳಗುರುಳಿ ಒದ್ದಾಡುವನೆಂಬ ಜನಸಾಮಾನ್ಯರ ನಂಬಿಕೆಯನ್ನು ಹೋಗಲಾಡಿಸಿ, ಮೈಯಲ್ಲಿನ ವ್ಯತ್ಯಾಸಗಳಿಂದಾಗಿ ವಂಶಾನುಗತ ಬರುವ ರೋಗ ಇದೆಂದು ಹೇಳುವ ಎದೆಗಾರಿಕೆ ಹಿಪಾಕ್ರಟೀಸ್‌ಗಿತ್ತು (ಪ್ರ.ಶ.ಪೂ. 460–370).

ಮುಂದಿನ ಸು. 2,000 ವರ್ಷಗಳಲ್ಲಿ ರೋಗದ ವಿಚಾರ ಮೂಲೆ ಸೇರಿತು. ಅಂದಿನ ರೋಗಶಾಸ್ತ್ರದ ತುಂಬ ಅಂಗಗಳ ರಸಧಾತುಗಳೇ ತುಂಬಿದ್ದು, ರೋಗಗಳಿಗೆ ಗ್ರಹಗಳ ಚಲನೆ ಕಾರಣವೆಂದಿತ್ತು. ಮೊಲ್ಲಾಗರಕ್ಕೂ ಚಂದ್ರನಿಗೂ ನಂಟು ಎಂದರು. ದೆವ್ವ ಬಿಡಿಸುವ ಚಿತ್ರಹಿಂಸೆಗಳಿಗೂ ಚಿಕಿತ್ಸೆಗಳಾಗಿದ್ದುವು. ಮೊಟ್ಟ ಮೊದಲಾಗಿ ಇಂಗ್ಲೆಂಡಿನ ಥಾಮಸ್ ವಿಲ್ಲಿಸ್ (1621–75) ಮಿದುಳಿಂದ ಸೆಳವು ಬರುವುದೇ ಹೊರತು ಗುಂಡಿಗೆ ಮತ್ತಿತರ ಅಂಗಗಳಿಂದಲ್ಲವೆಂದು ತೋರಿಸಿಕೊಟ್ಟ. ಡಚ್ ವೈದ್ಯ ಬೊಯೆರೇವ್ (1668–1738) ಸೆಳವು ವಂಶಾನುಗತವಾಗಿ ಬರುವುದೆಂದು ಖಚಿತಪಡಿಸಿ, ಇದರ ಬೇರೆಬೇರೆ ಬಗೆಗಳನ್ನು ವಿವರಿಸಿದ. ಆದರೂ, ಕೆಲವು ರೋಗಿಗಳಲ್ಲಿ ದೇವರ ಕಾಟವೇ ಕಾರಣವೆಂದು ಇವರಿಬ್ಬರೂ ನಂಬಿದ್ದರು. 18ನೆಯ ಶತಮಾನದ ಕೊನೆಗೆ, ಫ್ರಾನ್ಸಿನ ವೈದ್ಯ ಟಿಸೆಟ್ ಮಿದುಳಿನ ಪೆಟ್ಟು, ಗಡ್ಡೆಗಳಿಗೂ ಮೊಲ್ಲಾಗರಕ್ಕೂ ಇರುವ ನೇರಸಂಬಂಧವನ್ನು ತೋರಿದ. ಮೊಲ್ಲಾಗರದ ಖಚಿತ ವಿಚಾರಗಳನ್ನು ಇಂಗ್ಲೆಂಡಿನ ಹ್ಯೂಲಿಂಗ್ಸ್ ಜಾಕ್ಸನ್ ನಿರೂಪಿಸಲು ಇನ್ನೊಂದು ಶತಮಾನ ಹಿಡಿಯಿತು. ಎದುರು ಪಕ್ಕದ ಮಿದುಳನ್ನು ಚೋದಿಸಿದರೆ ಈ ಪಕ್ಕದ ಮೈಯಲ್ಲಿ ಸೆಳವು ಕಾಣುವುದೆಂದು ತೋರಿಸಿದ. ಇವನ ಶೋಧನೆಗಳು ನಿಜಗೆಲಸದ ತಿಳಿವಳಿಕೆಗೆ ಮೂಲವಾದುವು. 1925ರ ಸುಮಾರಿನಲ್ಲಿ ಜರ್ಮನಿಯ ಮನಶ್ಶಾಸ್ತ್ರಜ್ಞ ಹ್ಯಾನ್ಸ್ ಬರ್ಗರ್ ವಿದ್ಯುನ್ಮಿದುಳ ಚಿತ್ರಕವನ್ನು ಕಂಡುಹಿಡಿದು, 1931ರಲ್ಲಿ ಮಿದುಳಿನ ಕೆಲಸಗಳನ್ನು ಹೊರಗೆ ಗೆರೆಗಳಿಂದ ಚಿತ್ರಿಸಬಹುದೆಂದು ತೋರಿದ್ದು ಮತ್ತೊಂದು ಮೈಲಿಗಲ್ಲು. ಇಂಗ್ಲಿಷ್ ವೈದ್ಯ ಥಾಮಸ್ ಲಿಯಕಾಕ್ (1857) ಬ್ರೋಮೈಡು ಚಿಕಿತ್ಸೆಯನ್ನು ಜಾರಿಗೆ ತಂದದ್ದೇ ಈ ರೋಗದ ಮೊದಮೊದಲ ಪರಿಹಾರ.

**ಸೆಳವುಗಳ ಬಗೆಗಳು:** ಮಿದುಳೊಳಗೆ ನರದ ಕೆರಳಿಕೆ ವಿಪರೀತವಾಗಿ ಮತ್ತೆ ಮತ್ತೆ ಅಸಹಜವಾಗಿ ಹೊರಚೆಲ್ಲಿ ಬರುವುದೇ ಮೊಲ್ಲಾಗರ. ಇದು ನೂರಾರು ತೆರನಾಗಿ ತೋರಬಹುದು. ಹಲವಾರು ಮಿನಿಟುಗಳು ಮೈಯೆಲ್ಲ ಒದರುವಷ್ಟು ಜೋರಾಗಿರಬಹುದು; ಕಂಡೂಕಾಣದಂತೆಯೋ ತುಸು ಎಚ್ಚರಗೆಟ್ಟೋ ಕೇವಲ ಮನಗುಂದಿಯೋ ಇರಬಹುದು. ಬೆನ್ನೆಲುಬೋ ಇನ್ನಾವುದಾದರೂ ಮೂಳೆಯೋ ಮುರಿವಷ್ಟು ಬಲವಾಗಿ ಒದರಾಡಿಸುವುದೂ ಹೆಚ್ಚಲ್ಲ. ಎಲ್ಲಿ, ಏನಾಗಿ, ಮಿದುಳಿನ ನಿಜಗೆಲಸ ಕೆಟ್ಟಿದೆ ಎನ್ನುವಂತೆ ಮೊಲ್ಲಾಗರದ ಚಿಹ್ನೆ ಲಕ್ಷಣಗಳಿರುತ್ತವೆ. ಇವು ಚಾಲಕ, ಅರಿವಿನ ಇಲ್ಲವೇ ಮನಸ್ಸಿನವಾಗಿ ಇರಬಹುದಾದರೂ ಇವುಗಳ ಜೋಡಿಗಳೂ ಆಗಿರಬಹುದು.

ತೀರ ದಿಗಿಲು ಹುಟ್ಟಿಸುವ ಬಲು ಸಾಮಾನ್ಯವಾದ ಚಾಲಕಸೆಳವೆಂದರೆ, ಮೈಯೆಲ್ಲ ಆವರಿಸುವ ಘೋರ ಸೆಳವು ಅಥವಾ ಮೇಜರ್ ಎಪಿಲೆಪ್ಸಿ. ಇದೇ ನಿಜವಾದ ಮೊಲ್ಲಾಗರ. ಅರೆಪಾಲು ರೋಗಿಗಳಲ್ಲಿ ಏನೋ ಮುಂದೆ ಆಗುವುದರ ಸೂಚನೆಯಾಗಿ, ಕಣ್ಣಮುಂದೆ ಮಿಂಚಿದಂತೆ, ಮೂಗಿನಲ್ಲಿ ಬೇಡದ ವಾಸನೆ, ಹೊಟ್ಟೆತೊಳಸು, ವಿಚಿತ್ರ ಕನಸು, ಹಳೆಯ ನೆನಪುಗಳು, ಕೈಕಾಲು ಜೋಮು, ಮೈಕೈಕಾಲುಗಳ ಮೇಲೆ ಏನೋ ಹರಿದಂತೆ, ಏನೋ ದಿಗಿಲಾದಂತೆ ಸೆಳವರಿವು (ಆರ) ಮೊದಲು ಆಗುತ್ತದೆ. ರೋಗಿ ಕೂಡಲೇ ವಿರಮಿಸಲು ಮತ್ತು ರೋಗದ ಮಿದುಳಿನ ಭಾಗವನ್ನು ವೈದ್ಯ ಗುರುತಿಸಲು ಇದು ಅನುಕೂಲಿಸಬಹುದು. ಕೂಡಲೇ ರೋಗಿಗೆ ಅರಿವು ತಪ್ಪಿ ಸಣ್ಣಗಂಟಲಲ್ಲಿ ಕೀರುವನು. ಕೆರಳು ಮಿದುಳಲ್ಲಿ ಒಂದೆಡೆ ಹುಟ್ಟಿ ಮಿಕ್ಕೆಡೆಗಳಿಗೆ ಹರಡಿಕೊಂಡು, ಮೈಯೆಲ್ಲ ಬಿಗಿಯಾಗಿ ಸೆಡೆತುಕೊಳ್ಳುತ್ತದೆ. ನಿಂತಿದ್ದ ರೋಗಿ ತೊಪ್ಪನೆ ಕೆಳಗೆ ಉರುಳುವನು. ಕೈಗೆ ನಾಡಿ ಸಿಗದು. ಕಡಿವ ಹಲ್ಲುಗಳ ನಡುವೆ ಸಿಕ್ಕಿದ ನಾಲಗೆ ನೀಲಿಯಾಗುವುದು. ತೋಳುಗಳು ಎದೆಗೆ ಆನಿಸಿಕೊಂಡು ಕಾಲುಗಳು ನೀಟಿಕೊಳ್ಳುತ್ತವೆ. ತಲೆ ಹಿಂಬಾಗುವುದು. ಕಣ್ಣಿನ ಪಾಪೆಗಳು ಹಿಗ್ಗಿ, ಕಣ್ಣು ಗುಡ್ಡೆಗಳು ಮೇಲಕ್ಕೋ ಪಕ್ಕಕ್ಕೋ ಹೊರಳುತ್ತವೆ. ಮೊಗ ಬಿಳಿಚಿಕೊಂಡು ಉಸಿರು ಕಟ್ಟಿದಾಗ ನೀಲಿಗಟ್ಟಬಹುದು, ಇವೆಲ್ಲ ಅರೆಮಿನಿಟಿನೊಳಗಾಗಿ ಕಳೆದು ಅದುರು ಹಂತಕ್ಕೆ ಬರುವುದು. ಕ್ರಮವಾಗಿ ಎಡೆಬಿಡದೆ ಮೈ ಜಗ್ಗಿಸುವ ಸೆಡೆತಗಳು ಒಂದೆರಡು ಮಿನಿಟುಗಳು ಜಾಡಿಸುತ್ತವೆ. ಮೊಗ ವಿಕಾರವಾಗಿ, ಉಸಿರಾಟ ಆಳವಾಗಿ, ಬಾಯಲ್ಲಿ ಜೊಲ್ಲು ನೊರೆಯಾಗಿ ಉಕ್ಕುತ್ತದೆ. ಕೆನ್ನೆ, ತುಟಿ, ನಾಲಗೆ ಗಾಯವಾದರೆ, ರಕ್ತವೂ ಕಾಣುವುದು. ಮೋರೆ ಸೊಟ್ಟಗಾಗಿ ಬಾಯಿ ತೆರೆದು ಮುಚ್ಚುತ್ತಿರುವುದು. ಸೆಳವು ವಿಪರೀತವಾಗಿದ್ದರೆ, ಮಲ, ಮೂತ್ರಗಳು ತಾವಾಗಿ ಆಗುತ್ತವೆ. ರಕ್ತ ಒತ್ತಡ ಇಳಿವುದು. ಇಷ್ಟೆಲ್ಲ ಆದ ಕೂಡಲೇ ರೋಗಿ ಎಚ್ಚೆತ್ತರೂ ಕೆಲಕಾಲ ಸುಸ್ತಾಗಿ ಅರೆನಿದ್ದೆಯೋ ನಿದ್ದೆಯೋ ಮಾಡಬಹುದು. ಆದುದೇನೆಂದು ರೋಗಿಗೆ ಅರಿವಿರದು. ಮೊಲ್ಲಾಗರ ಎಲ್ಲರಲ್ಲೂ ಯಾವಾಗಲೂ ಇಷ್ಟು ಜೋರಾಗಿರದು. ತುಸು ಇಣುಕುಹಾಕಿ ಹಾಗೇ ಅಣಗಲೂಬಹುದು. ಹಾಗೇ ಸೆಳವಿನ ಮೇಲೆ ಸೆಳವು ಬಿಡುವಿಲ್ಲದೆ ಬರುತ್ತ, ಅರಿವು ತಪ್ಪಿರುವುದಕ್ಕೆ ಸ್ಟೇಟಸ್ ಎಪಿಲೆಪ್ಟಿಕಸ್ ಎನ್ನುವುದುಂಟು. ಕೂಡಲೇ ತಕ್ಕ ಚಿಕಿತ್ಸೆ ದೊರೆಯದಿದ್ದಲ್ಲಿ, ಸುಸ್ತು, ಕಟ್ಟುಸಿರು, ಜ್ವರವೇರಿಕೆ, ಮಿದುಳೊಳಗೆ ರಕ್ತಸುರಿಕೆ, ಇವುಗಳಿಂದ ರೋಗಿ ಅಸು ನೀಗಬಹುದು. ಇದರಿಂದಲೇ ಮೊಲ್ಲಾಗರದ ಎಲ್ಲ ರೋಗಿಗಳನ್ನೂ ಒಂದೇ ತಂಡದಲ್ಲಿ ಸೇರಿಸುವಂತಿಲ್ಲ. ಅಪಸ್ಮಾರ ಸೆಳವು ಹಗಲಾಗಲಿ ಇರುಳಾಗಲಿ ಇದ್ದಕ್ಕಿದ್ದಂತೆ ಯಾವಾಗಲೆಂದರೆ ಆವಾಗ ಬರುವುದು. ಕೆಲವರಲ್ಲಿ ರಾತ್ರಿ ಹೊತ್ತು ಬರುವುದೇ ಸಾಮಾನ್ಯ.

ಬಹುಪಾಲು ಮಕ್ಕಳಲ್ಲಿ ಬರುವ, ಅಷ್ಟು ಜೋರೇ ಇಲ್ಲದ, ಮೊಲ್ಲಾಗರಕ್ಕೆ ಪೆಟಿಟ್ ಮಾಲ್ ಎನ್ನುತ್ತಾರೆ. ಅರಿವು ತಪ್ಪುವುದು ಕ್ಷಣಕಾಲ ಮಾತ್ರ. ಬಿರುನೋಟದೊಂದಿಗೆ, ರೆಪ್ಪೆಗಳು ಅದುರಿ ಕಣ್ಣುಗುಡ್ಡೆಗಳು ಮೇಲೇರುವುದು, ತಲೆ ತೂಗಾಟ, ತುಟಿ ನಡುಕ, ಆಕಳಿಕೆ, ಮುಂಡದಲ್ಲಿ ಜಿಲುಗುಡಿಕೆ ಇವನ್ನು ಬಿಟ್ಟರೆ ಸೆಳವು ಕಾಣುವುದೇ ಇಲ್ಲ. ಮಗು ಕಂಗೆಟ್ಟು ಕಲ್ಲಿನಂತೆ ಅಲುಗಾಡದೆ ನಿಂತಿದ್ದು, ತುಸು ಹೊತ್ತಿನಲ್ಲೇ ಎಂದಿನಂತೆ ತನ್ನ ಕೆಲಸದಲ್ಲಿ ಮುಂದುವರಿವುದು. ಕೈಯಲ್ಲಿ ಹಿಡಿದಿರುವುದು ಕೆಳಗೆ ಬಿದ್ದರೂ ಮಗು ಮಾತ್ರ ಬೀಳುವುದಿಲ್ಲ. ಕೆಲವೇಳೆ, ದಿನವೆಲ್ಲ ಹೀಗಾಗುತ್ತಿರಬಹುದು. ಎಷ್ಟೋ ವೇಳೆ ಹೀಗಾಗುತ್ತಿದ್ದುದು ಮಗುವಿಗೂ ಗೊತ್ತಾಗದೆ, ರೋಗ ಹಲವಾರು ವರ್ಷಗಳು ಯಾರ ಗಮನಕ್ಕೂ ಬಾರದಿರಬಹುದು, ಮಗು ವಯಸ್ಸಿಗೆ ಬಂದಂತೆಲ್ಲ, ಸೆಳವು ನಿಜವಾದ ಮೊಲ್ಲಾಗರ ಆಗಬಹುದು, ಇಲ್ಲವೆ ಪೂರ್ತಿ ನಿಂತೇ ಹೋಗಬಹುದು.

ಅಪೂರ್ವವಾಗಿ, ಯಾವ ಮುನ್ಸೂಚನೆಯೂ ಇಲ್ಲದೆ ಮೈಯಲ್ಲಿನ ಸ್ನಾಯುಗಳು ಇದ್ದಕ್ಕಿದ್ದಂತೆ ಸಡಿಲ ಬಿದ್ದುಹೋಗಿ ಮಗು ಮುದ್ದೆಯಾಗಿ ಕುಸಿದು ಬೀಳಬಹುದು. ಇದು ಅಚರ (ಏಕೈನೆಟಿಕ್) ಸೆಳವು. ಕೂಡಲೇ ಚೇತರಿಸಿಕೊಳ್ಳುವುದಾದರೂ ಮಗುವಿನ ಮೈಮೂಳೆಗಳು ಮುರಿವುದು ಹೆಚ್ಚಲ್ಲ.

ಅರಿವು ತಪ್ಪದೆಯೇ ಮೊಗದ ಒಂದು ಪಕ್ಕದಲ್ಲೋ ಒಂದು ಕೈಯಲ್ಲೋ ಕಾಲಲ್ಲೋ ಸೆಳವಿನ ನಡುಕ ಕಾಣಿಸಿಕೊಂಡು ಹೋಗುವ ಚಾಲಕಸೆಳವನ್ನು ಫೋಕಲರ್ ಮೋಟಾರ್ ಫಿಟ್ಸ್ ಎನ್ನುವುದುಂಟು.

ನೋಟ, ಆಲಿಕೆ, ಮುಟ್ಟುವಿಕೆ, ನೋವು, ಮೂಸುವಿಕೆ, ರುಚಿ ನೋಡುವಿಕೆಗಳ ಭ್ರಮೆಗಳಾಗಿ ಅರಿವಿನ ಸೆಳವು ಆಗಬಹುದು. ಹೊಟ್ಟೆಯಲ್ಲಿ ಸಮಾಧಾನ ಇಲ್ಲವಾಗೋ ಒಂದೆಡೆ ನಡುಕವಾಗೋ ತೋರಲೂಬಹುದು. ಮರೆವು ಆವರಿಸಬಹುದು. ಇವೆಲ್ಲ ಸೆಳವರಿವಿನ ಮುನ್ಸೂಚಕಗಳಾಗಿ ಬರುವುದೇ ಸಾಮಾನ್ಯ.

ಮನೋಚಾಲಕ (ಸೈಕೊಮೋಟಾರ್) ಸೆಳವು, ಇಲ್ಲವೇ ಮೊಲ್ಲಾಗರದ ಬದಲಿ ಎಂಬುದು ಬಲು ಅಪೂರ್ವವಾಗಿ ಮೊಲ್ಲಾಗರವಾಗೋ ಇತರ ಸೆಳವುಗಳ ಒಂದಿಗೋ ಬರುವುದಾದರೂ ರೋಗಿಯ ನಡೆವಳಿಕೆ, ಸಮಾಜದ ದೃಷ್ಟಿಯಿಂದ ಬಲು ಮುಖ್ಯ. ಸೆಳವಿಗೆ ಬದಲಾಗಿ ಮನಸ್ಸು ಕೆಡುತ್ತದೆ. ಆದರೆ, ಪೂರ್ತಿ ಎಚ್ಚರ ತಪ್ಪುವುದು ಅಪೂರ್ವ. ರೋಗಿ ಕಕ್ಕಾಬಿಕ್ಕಿಯಾಗಿ ಎಲ್ಲೆಂದರಲ್ಲಿ ಗೊತ್ತುಗುರಿಯಿಲ್ಲದೆ ಅಲೆದಾಡಬಹುದು; ಕೈಗೆ

ಸಿಕ್ಕಿದ್ದನ್ನು ಹೊಡೆಯಬಹುದು, ಹಾಳುಮಾಡಬಹುದು; ಹುಚ್ಚು ಹುಚ್ಚಾಗಿ ಅರಚಿ, ಕೂಗಾಡಿ, ಗಲಾಟೆ ಮಾಡಬಹುದು, ರೊಚ್ಚಿಗೇಳಬಹುದು, ಇಲ್ಲವೆ ತೆಪ್ಪಗೆ ಬಿದ್ದಿರಬಹುದು; ಸುಮ್ಮನೆ ಅತ್ತಿಂದಿತ್ತ ಅಡ್ಡಾಡುತ್ತ ಇಲ್ಲವೆ ಮೆಟ್ಟಿಲುಗಳನ್ನು ಏರುತ್ತ ಇಳಿಯುತ್ತಿದ್ದು, ಸರಕ್ಕನೆ



ಚಿತ್ರ 1. ಆರೋಗ್ಯವಂತನ ವಿದ್ಯುನ್ಮಿದುಳ ಚಿತ್ರ, ಕಣ್ಣು ಮುಚ್ಚಿದಾಗ ಆದ ಬದಲಾವಣೆಗಳನ್ನು ತೋರಿಸಿದೆ. ತೀರ ಕೆಳಗಿನ ಗೆರೆಗಳಲ್ಲಿ ಸೆಕೆಂಡುಗಳ ಕಾಲ ಗುರುತಿಸಿದೆ.

ಸುಮ್ಮನಾಗಬಹುದು. ಹೀಗೆ ಕೆಲವು ಮಿನಿಟು ಏನು ಮಾಡಿದ್ದರೂ ಆಮೇಲೆ ರೋಗಿಗೆ ಏನೊಂದೂ ನೆನಪಿರದು. ಇದ್ದಕ್ಕಿದ್ದಂತೆ ಹುಚ್ಚುಚ್ಚಾಗಿ ಆಡುವ ಮಂದಿಗೆ ಈ ಬೇನೆ ಇರುವುದೇ ಎಂದು ತೋರಿಸಿ ನೋಡಬೇಕು.

ಹಸುಗೂಸುಗಳಲ್ಲಿ ಜ್ವರ ಬಂದು ಸೆಳವು ಕಂಡರೆ ಹೆತ್ತವರಿಗಂತೂ ವಿಪರೀತ ಗಾಬರಿ ಆಗುವುದು ಹೆಚ್ಚಿಲ್ಲ. ಎಳೆತನದ ಸೆಳವು ಮುಂದೆ ಮೊಲ್ಲಾಗರ ಆಗುವ ಸೂಚನೆಯೇ, ಇದಕ್ಕೆ ನೇರವಾದ ಉತ್ತರವಿಲ್ಲ. ಬಹುಪಾಲು ಈ ಸೆಳವುಗಳು ಮೊಲ್ಲಾಗರದವಲ್ಲ. ಆದರೆ



ಚಿತ್ರ 2. ತರುಣಿ ರೋಗಿಯಲ್ಲಿ ಪುಟ್ಟಾಮಾಲೆ ಸೆಳವು ಬಂದಾಗ ತೆಗೆದ ವಿದ್ಯುನ್ಮಿದುಳ ಚಿತ್ರ

ನೂರಕ್ಕೆ 2–5 ಮೊಲ್ಲಾಗರದ ರೋಗಿಗಳಿಗೆ ಎಳೆತನದಲ್ಲಿ ಸೆಳವಾಗಿರುವುದು. ಹಸುಗೂಸುಗಳಲ್ಲಿ ಯಾವ ಕಾರಣದಿಂದಲೇ ಆಗಲಿ ಜ್ವರ ಏರಿದರೆ, ಸೆಳವುಗಳು ತೋರುವುದು ತೀರ ಸಾಮಾನ್ಯಲಕ್ಷಣ. ನಾಲ್ಕೆಂಟು ವರ್ಷ ದಾಟಿದ ಮೇಲೆ ಹೀಗಾಗದು. ಜ್ವರವಿಲ್ಲದೆ ಚೆನ್ನಾಗಿರುವಾಗ ಇದ್ದಕ್ಕಿದ್ದಂತೆ ಕಾರಣವಿಲ್ಲದೆ ಸೆಳವು ಕಂಡರೆ ಮೊಲ್ಲಾಗರ ಅಲ್ಲವೆಂದು



ಚಿತ್ರ 3. ಘೋರಾಮಾಲೆ ಸೆಳವಾಗಿ ಮೊದಲಾದುದು ಆಮೇಲೆ ಎಡೆಬಿಡದಂತೆ ಸೆಳವು ನೆಲೆಸಿರುವುದನ್ನು ತೋರುವ ವಿದ್ಯುನ್ಮಿದುಳ ಚಿತ್ರ

ವೈದ್ಯನೇ ಹೇಳಬೇಕು. ಹುಟ್ಟುವಾಗಲೇ ತಲೆಗೆ ಪೆಟ್ಟಾಗೋ ಮಿದುಳು ಪೊರೆಯುರಿತ (ಮೆನಿಂಜೈಟಿಸ್) ಆದ ಮೇಲೋ ತಲೆಯಲ್ಲಿ ನೀರು ಸೇರಿ ದೊಡ್ಡದಾಗೋ ಇದ್ದರೆ ಸೆಳವು ಬರುತ್ತಿರಬಹುದು.

**ನಿದಾನ:** ಎಲ್ಲೋ ಒಂದೊಂದು ಬಾರಿ ಕಂಡು, ರೋಗದ ಲಕ್ಷಣಗಳು ಯಾವುವೂ ಉಳಿಯದ್ದರಿಂದ ಒಬ್ಬ ರೋಗಿಗೆ ಮೊಲ್ಲಾಗರ ಇದೆಯೆಂದು ಹೇಳುವುದು ಯಾವಾಗಲೂ ಸುಲಭವಲ್ಲ. ಇದರಿಂದ ತಮಗೆ ಏನಾಗುವುದೆಂದು ಹೇಳುವ ರೋಗಿಯ, ಅವನ ಒಂದಿಗರ ಹೇಳಿಕೆಗಳೇ ಆಧಾರವಾಗುತ್ತವೆ. ರೋಗಿ ಆರೋಗ್ಯವಾಗಿದ್ದರೂ ಒಂದು ಬಗೆಯ ಅಲಸಿಕೆ, ಸೋಮಾರಿತನ, ತೂಕಡಿಕೆ, ಜೊಂಪು ಇವೊಂದಿಗೆ ಚುರುಕಿಲ್ಲದೆ ಮೊದ್ದಾಗಿರುವನು.

ಮಿದುಳಿಗೆ ತಾಕಿದ ಪೆಟ್ಟು, ಗಾಯ, ವಿಷಕಾರಕಕ್ಕೆ ಒಡ್ಡಿರುವಿಕೆ, ತಲೆಬುರುಡೆಯೊಳಗೆ ಸೋಂಕು, ರಕ್ತಸುರಿಕೆ, ಬಹುಕಾಲ ಆಮ್ಲಜನಕವಿರದೆ ಇರುವಿಕೆ ಇವುಗಳಿಂದ ಆಮೇಲೆ ಸೆಳವುಗಳು ಆಗಿಬಂದಿವೆ. ಇವನ್ನು ಲಕ್ಷಣದ, ಜೈವಿಕ, ಮರುಚಲದ ಬಗೆಗಳ ಮೊಲ್ಲಾಗರ ಎನ್ನುವುದುಂಟು. ಮೇಲಿಂದ ಮೇಲೆ ಸೆಳವುಗಳು ಬರುತ್ತಿದ್ದರೂ ಮೇಲಿನ ಯಾವ ಕಾರಣಗಳೂ ಇಲ್ಲದೇ ತನುರೋಗದ (ಈಡಿಯೊಪತಿಕ್) ಮೂಲದ, ದಿಟವಾದ ಮೊಲ್ಲಾಗರ.

ಮಿದುಳಲ್ಲಿನ ನಮೆತ (ಅಟ್ರೊಫಿ), ಹಳೆಯ ಗಾಯದ ಕಲೆಗಳು, ಹೆರವಸ್ತುಗಳು, ರಕ್ತನಾಳಗಳ ವಿಚಿತ್ರಗಳು ಇದ್ದು ಮೊಲ್ಲಾಗರ ಆಗಿರುವುದನ್ನು ರೋಗಿಯ ಹೇಳಿಕೆಯಿಂದಲೋ ಪರೀಕ್ಷೆಯಿಂದಲೋ ತಿಳಿಯುವುದು ಅನುಮಾನವಾದಾಗ ನಿರ್ಧರಿಸಲು ಹಲವಾರು ಉಪಾಯಗಳಿವೆ. ಅಂಥ ಕಾರಣ ಇರುವುದನ್ನೂ ಇರುವ ತಾವನ್ನೂ ಖಚಿತಪಡಿಸಲು ಪರೀಕ್ಷೆಗಳಿವೆ; ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ.

ಮಿದುಳಲ್ಲಿರುವ ಪೊಳ್ಳುಗಳಲ್ಲಿನ ದ್ರವವನ್ನು ಹೊರದೆಗೆದು ಸದ್ಯಕ್ಕೆ ಗಾಳಿ, ಆಮ್ಲಜನಕ, ಮತ್ತಿತರ ಯಾವುದಾದರೂ ತಕ್ಕ ಅನಿಲವನ್ನು ಒಳಗೆ ಬಿಟ್ಟು ಎಕ್ಸ್–ಕಿರಣ ಚಿತ್ರಗಳನ್ನು ತೆಗೆದರೆ (ಗಾಳಿಮಿದುಳಚಿತ್ರಣ) ಮಿದುಳಿನ ಒಳಗಿನ ಆಕಾರಗಳ ವ್ಯತ್ಯಾಸಗಳನ್ನು ತೋರುವುದರಿಂದ, ರೋಗಿಗೆ ಅನುಕೂಲಿಸಲು ಶಸ್ತ್ರವೈದ್ಯನಿಗೆ ನೆರವಾಗುತ್ತದೆ.

ಮಿದುಳಿನ ಬೇರೆಬೇರೆ ಭಾಗಗಳಲ್ಲಿ ಯಾವಾಗಲೂ ಆಗುತ್ತಿರುವ ವಿದ್ಯುತ್ತಿನ ಹರಿವಿನ ಕಿರಿಕಿರಿಯ ವ್ಯತ್ಯಾಸಗಳನ್ನು ವಿದ್ಯುನ್ಮಿದುಳಚಿತ್ರಕದಲ್ಲಿ ಗುರುತಿಸಬಹುದು. ಇದರಲ್ಲಿ ಕಂಡ ವಿದ್ಯುತ್ತಿನ ಹರಿವಿನ ಅಸಹಜತೆಗಳಿಗೂ ಸೆಳವಿನ ಬಗೆಗೂ ಬಹುಮಟ್ಟಿಗೆ ನೇರ ಸಂಬಂಧ ಇರುವುದು ಗೊತ್ತಿದೆ. ಆರೋಗ್ಯವಂತರ ವಿದ್ಯುತ್ತಿನ ಆಲ್ಫ ಅಲೆಗಳ ವೇಗ ಸೆಕೆಂಡಿಗೆ 8 ರಿಂದ 13 (ಸರಾಸರಿ 10) ಇದ್ದು, ಎತ್ತರ 20–60 ಮೈಕ್ರೊವೋಲ್ಟ್‌ಗಳಿರುವುದು. ಪೆಟಿಟ್‌ಮಾಲ್ ಈ ಗೆರೆಚಿತ್ರಗಳಲ್ಲಿ ಚೂಪಾಗಿ ಮೊನೆ ಎದ್ದ ಮೇಲೆ ಗುಬಟಿನಂತಿರುವ ಎತ್ತರದ ವಿಧಾನದ ಅಲೆ ಬರುವುದು.

ಇವು ಸೆಕೆಂಡಿಗೆ ಮೂರರಂತೆ ಇರುತ್ತವೆ. ಗ್ರಾಂಡ್‌ಮಾಲ್‌ನ ಗೆರೆಚಿತ್ರದಲ್ಲಿ ಎತ್ತರದ ಚೂಪುಮೊನೆಗಳು ಸೆಕೆಂಡಿಗೆ 15–40 ಇರುತ್ತವೆ. ಈ ಸೆಳವಿಗೆ ಮುಂಚೆ ಅಲೆಗಳಿಲ್ಲದೆ ನೀಟಾಗಿರುವುದು ಮನೋಚಾಲಕ ಮೊಲ್ಲಾಗರದ ಈ ಗೆರೆಚಿತ್ರಗಳು ಬಗೆಬಗೆಯಾಗಿ ಇರುವುದರಿಂದ ಗುರುತಿಸುವುದು ಕಷ್ಟ.

ಎಡೆಗೂರಿದ ಮೊಲ್ಲಾಗರದಲ್ಲಿನ ವಿದ್ಯುನ್ಮಿದುಳ ಚಿತ್ರದ ರೂಪ ಕಾರಣಕ್ಕೆ ತಕ್ಕಂತೆ ಬೇರೆಬೇರೆ ಆಗಿರುವುದು. ಮಿದುಳಲ್ಲಿ ಗಂತಿಯೋ ಗಾಯವೋ ಆಗಿದ್ದಲ್ಲಿ, ಕೆಟ್ಟಿರುವ ನರಕಣಗಳಿಂದ ಸೆಕೆಂಡಿಗೆ 0.5–3.5 ಸುತ್ತುಗಳ (ಡೆಲ್ಟ) ಅಲೆಗಳು ಏಳುತ್ತವೆ. ವಿದ್ಯುದ್ದಣೆಗಳನ್ನು (ಇಲೆಕ್ಟ್ರೋಡ್ಸ್) ಮಿದುಳಿನ ಬೇರೆಬೇರೆ ತಾವಿನಲ್ಲಿ ಸರಿಯಾಗಿ ಗುರುತಿಸಿ ಇಡುತ್ತ ಬಂದರೆ ಕೆಟ್ಟಿರುವ ಭಾಗವನ್ನು ಖಚಿತಪಡಿಸಬಹುದು.

ಇಷ್ಟೆಲ್ಲ ನೆರವು ವಿದ್ಯುನ್ಮಿದುಳ ಚಿತ್ರಣದಿಂದ ದೊರೆತರೂ ರೋಗನಿದಾನದಲ್ಲಿ ಇದರದೇ ಕೊನೆಯ ಮಾತಲ್ಲ. ರೋಗಿಯನ್ನು ಚೆನ್ನಾಗಿ ಪರೀಕ್ಷಿಸುವುದಕ್ಕೆ ತುಸು ನೆರವು ಈವುದಷ್ಟೆ. ಅಲ್ಲದೆ ಈ ಚಿತ್ರಗಳು ಇದರ ಪರಿಣತರಿಗೆ ಮಾತ್ರ ನಿಜವಾದ ಅರ್ಥ ತೋರುವುವು. ಮೊಲ್ಲಾಗರದ ಸೆಳವಿರದೆ ಬಿಡುವಿನ ಹೊತ್ತಿನಲ್ಲೂ ನೂರಕ್ಕೆ ಶೇ. 85 ರೋಗಿಗಳಲ್ಲಿ ಈ ಗೆರೆಚಿತ್ರಗಳಲ್ಲಿ ಏನಾದರೂ ಅಸಹಜತೆ ತೋರುತ್ತದೆ. ವಿದ್ಯುನ್ಮಿದುಳ ಚಿತ್ರಣದಿಂದ ಕಾರಣ ತಿಳಿವುದಲ್ಲದೆ, ರೋಗನಿದಾನದಲ್ಲೂ ನೆರವಾಗುವುದು. ಮೊಲ್ಲಾಗರ ರೋಗಿಗಳಲ್ಲಿ ಶೇ.6 ಮಂದಿಯಲ್ಲಿ ಯಾವ ವ್ಯತ್ಯಾಸಗಳೂ ಇರವು. ಹಾಗೇ ಎಂದಿಗೂ ರೋಗಿಯಾಗಿ ಕಂಡಿರದ ಶೇ. 6–10 ಮಂದಿಯಲ್ಲಿ ರೋಗದ ಗೆರೆಚಿತ್ರಗಳು ಕಂಡಿವೆ. ಪುಟ್ಟಾಮಾಲೆ ಮೊಲ್ಲಾಗರ ಇದಕ್ಕೆ ಹೊರತು.

**ಕಾರಣಗಳು:** ಮೊಲ್ಲಾಗರದ ಮೂಲ ಕಾರಣಗಳು ಇನ್ನೂ ಗೊತ್ತಿಲ್ಲ. ಆದರೂ ಈಡಾಗುವವರಲ್ಲಿ ಮೊಲ್ಲಾಗರವನ್ನು ಕೆರಳಿಸುವ ಹಲವಾರು ಕಾರಣಗಳು ತಿಳಿದಿವೆ. ಹೊರಗಿನ ಕಾರಣಗಳಿಂದ ಬಂದವು ಒಂದು ಗುಂಪಾದರೆ, ಮೈಯಲ್ಲಿ ಹುಟ್ಟಿದವು ಇನ್ನೊಂದು ಗುಂಪಿನಲ್ಲಿವೆ. ಮೊಲ್ಲಾಗರಗಳಲ್ಲಿ ಮೊದಲಿನದು ಶೇ.20 ಮಂದಿಗಿರುವುದು.

ಹೊರ ಕಾರಣಗಳಿಂದ ಬಂದ, ಗಾಯದಿಂದಾದ, ರೋಗ ಲಕ್ಷಣ ತೋರುವ ಮೊಲ್ಲಾಗರದಲ್ಲಿ ಕಂಡಂತೆಯೇ ಮಿದುಳಲ್ಲಿ ಏನಾದರೂ ಕೊರೆಯೋ ಅಸಹಜತೆಯೋ ಇರುವುದು. ಹೆರಿಗೆ ಕಷ್ಟವಾಗಿ ಕೂಸು ಹೊರಬೀಳುವಾಗ ಆದ ಗಾಯ, ಪೆಟ್ಟುಗಳು, ತಲೆಯ ಗಾಯಗಳು, ಮಿದುಳಿನ ಕುರು ಇಲ್ಲವೇ ಗಂತಿ ಗೆಡ್ಡೆಗಳು, ಮಿದುಳಲ್ಲಿ ರಕ್ತ ಸುರಿದೋ ಗರಣೆಯಾಗೋ ಉಳಿದ ಕಲೆಗಳು–ಇವೆಲ್ಲ ಕಾರಣಗಳು. ಮೈಯಲ್ಲಿ ಹುಟ್ಟಿದ ಮೊಲ್ಲಾಗರದಲ್ಲಿ ರೋಗದ ಕಾರಣಗಳೇ ಖಚಿತವಿಲ್ಲ. ಮೊಲ್ಲಾಗರ ವಂಶಾನುಗತವೆಂಬ ನಂಬುಗೆ ಬಲವಾಗಿದೆ. ಆದರೆ ಹಾಗಲ್ಲವೆಂದು ಇನ್ನು ಕೆಲವರು ಹೇಳುವರು. ಕೆಲವು

ಪರಿಣತರ ತಂಡ ಹೇಳುವಂತೆ, ಮಿದುಳಿನ ಕೆಡುಕಿನ ಈಡು ವಂಶಾನುಗತವೇ ಹೊರತು ರೋಗವಲ್ಲ; ಅಂದರೆ ಜೇನುಗಳ ಮೂಲಕ ಬರುವುದೆನ್ನುವರು ಮಿದುಳಿಗೆ ಪೆಟ್ಟಾದವರೆಲ್ಲರಿಗೂ ಮೊಲ್ಲಾಗರ ಬರುವ ಸಂಭವ 40 ರಲ್ಲಿ ಒಂದು ಆದ್ದರಿಂದ ಈ ರೋಗದ ಬಗ್ಗೆ ಭಯ/ಚಿಂತೆ ಬೇಡ. ಮಿದುಳಿಗೆ ಪೆಟ್ಟಾದವರೆಲ್ಲರಿಗೂ ಮೊಲ್ಲಾಗರ ಬರುವುದಿಲ್ಲ.

ನರರೋಗಶಾಸ್ತ್ರ ಆಗಾಧವಾಗಿ ಮುನ್ನಡೆ ಸಾಧಿಸುತ್ತಿದೆ. ಬೇಗನೆ ಸೆಳವುಗಳನ್ನು ಗುರುತಿಸಿ, ಚಿಕಿತ್ಸೆಯಿಂದ ಹತೋಟಿಗೆ ತಂದಷ್ಟೂ ಮತ್ತೆ ಮರುಕಳಿಸದೆ ಇರುವುದು. ಮೊಲ್ಲಾಗರದ ಗತಿಯನ್ನು ಹೀಗೆನ್ನುವಂತಿಲ್ಲ. ಸೆಳವಿಂದ ಬಿಡುವಾದ ದಿನಗಳನ್ನೂ ಸೂಚಿಸುವ ಹಾಗಿಲ್ಲ. ಮಿದುಳಿನ ಕೆಡುಕನ್ನು ಎಳೆಯದರಲ್ಲೇ ಅಡಗಿಸುವುದು ಸುಲಭ.

**ಚಿಕಿತ್ಸೆ :** ಮೊಲ್ಲಾಗರದಲ್ಲಿ ಸೆಳವುಗಳು ಬರದಂತೆ ಮಾಡುವುದೇ ವಾಸಿ ಮಾಡಿದ ಹಾಗೆ. ಆಹಾರ ಪುಷ್ಟಿಕರವಾಗಿ ಇರಬೇಕೇ ಹೊರತು, ಯಾವ ಪಥ್ಯವೂ ಇಲ್ಲ. ಮದ್ಯಸೇವನೆ ಬೇಡ. ಉಪವಾಸದಿಂದ, ನಿದ್ರೆಗೆಡುವುದರಿಂದ ರೋಗಿಯ ರೋಗ ಮರುಕಳಿಸುತ್ತದೆ.

ಸೆಳವುಗಳನ್ನು ಸರಳವಾಗಿ ಚೆನ್ನಾಗಿ ಅಡಗಿಸಲು ಮದ್ದುಗಳ ಸಮನಿಲ್ಲ. ಫೀನೊಬಾರ್ಬಿಟೋನ್, ಫೆನಿಟಾಯಿನ್, ಕಾರ್ಬಮಜೆವಿನ್ ಸೋಡಿಯಂವಾಲ್ ಪ್ರೊಯೆಂಟ್‍ಗಳಿಂದ ಸೆಳವುಗಳು ನಿಲ್ಲುತ್ತವೆ. ಕೆಡುಕಿಲ್ಲದೆ ವರ್ಷಗಟ್ಟಳೆ ಸೇವಿಸುತ್ತಿರಬಹುದು. ಯಾವ ರೋಗಿಗೆ ಯಾವ ಮದ್ದು ಒಗ್ಗುವುದೆಂದು ವೈದ್ಯನ ನೆರವಿನಿಂದ ಕಂಡುಕೊಂಡು ಸೇವಿಸಬೇಕು. ಒಂದೊಂದು ಮದ್ದನ್ನೂ ತಿಂಗಳುಗಟ್ಟಳೆ ಕೊಟ್ಟು ನೋಡಬೇಕಾಗುವುದು. ಮೂರರಿಂದ ಐದು ವರ್ಷಗಳ ಕಾಲ ರೋಗ ಕಾಣಿಸಿಕೊಳ್ಳದಿದ್ದರೆ, ಔಷಧಿಯನ್ನು ಸ್ವಲ್ಪ ಸ್ವಲ್ಪವಾಗಿ ನಿಲ್ಲಿಸಬಹುದು.

ಚಿಕಿತ್ಸೆ ಕೊಡುತ್ತಿದ್ದು ರೋಗಿಯನ್ನು ಆದಷ್ಟು ಮಟ್ಟಿಗೆ ಎಂದಿನ ಜೀವನದಲ್ಲಿ ಆರಾಮವಾಗಿ ಬಾಳುವಂತೆ ಎಲ್ಲ ಅನುಕೂಲತೆಗಳನ್ನೂ ಒದಗಿಸಬೇಕು. ಹಾಗೇ ಎಳೆಯ ರೋಗಿಗಳಿಗೂ ಕಲಿಕೆಯ ವಿಶೇಷ ಅವಕಾಶಗಳನ್ನು ಕೊಡಬೇಕು. ಮೊಲ್ಲಾಗರದ ರೋಗಿಗಳಿಂದಾಗುವ ಕೆಲಸಗಳಲ್ಲಿ ಮಾತ್ರ ಅವರನ್ನು ತೊಡಗಿಸಬೇಕು. ಚಲಿಸುವ ಗಾಡಿ, ಯಂತ್ರಗಳಿಂದ ದೂರ ಇರಿಸಬೇಕು. ರೋಗಿಗಾಗಲಿ, ರೋಗಿಯಿಂದ ಇತರರಿಗಾಗಲಿ ಅಪಾಯ ತಟ್ಟದಂತೆ ನೋಡಿಕೊಳ್ಳಬೇಕು.

ಮೊಲ್ಲಾಗರದ ಸೆಳವು ಬಂದಾಗ, ಪ್ರಥಮ ಚಿಕಿತ್ಸೆಯಾಗಿ, ರೋಗಿಯನ್ನು ನೆಟ್ಟಗೆ ಮಲಗಿಸಬೇಕು. ಬಿಗುವಾಗಿರುವ ಕೊರಳಪಟ್ಟಿ ಮತ್ತಿತರ ತೊಡುಗೆಗಳನ್ನು ಸಡಿಲಿಸಬೇಕು. ಕೃತಕ ಹಲ್ಲುಗಳಿದ್ದರೆ ತೆಗೆದಿಡಬೇಕು. ರೋಗಿಯ ಕೈಕಾಲು ತಾಗದಂತೆ ಉಳಿದವರು ದೂರ ಸರಿಯಬೇಕು. ಕೈಕಾಲುಗಳನ್ನು ಹಿಡಿದಿಡಬಾರದು. ಜೊಲ್ಲೋ ವಾಂತಿಯೋ ಬರುವುದಾದರೆ, ಮೊಗವನ್ನು ಪಕ್ಕಕ್ಕೆ ತಿರುಗಿಸಬೇಕು. ಮೊದಲೇ ಕಂಡರೆ ಗಂಟುಹಾಕಿರುವ ಕೈವಸ್ತ್ರವನ್ನು ಹಲ್ಲುಗಳ ನಡುವೆ ಇಡಬಹುದು. ಬಲವಂತದಿಂದ ತೂರಿಸಬಾರದು. ರೋಗಿ ಚೆನ್ನಾಗಿ ಎಚ್ಚೆತ್ತುಕೊಳ್ಳುವ ತನಕ ಬಾಯಿಗೆ ಏನೂ ಆಹಾರಕೊಡಬಾರದು. (ಎಸ್.ಟಿ.ಪಿ.)

**ಅಪಹರಣ :** ಬಲಾತ್ಕಾರದಿಂದ ಅಥವಾ ವಂಚನೆಯಿಂದ ವ್ಯಕ್ತಿಗಳನ್ನು ಸ್ವಾಧೀನ ಮಾಡಿಕೊಳ್ಳುವುದು (ಅಬ್ಡಕ್ಷನ್). ಇಲ್ಲಿ ಸ್ತ್ರೀಅಪಹರಣವನ್ನು ಕುರಿತು ಹೇಳಲಾಗಿದೆ. ಪ್ರಾಕ್ತನ ವಿವಾಹ ಸಂಪ್ರದಾಯಗಳಲ್ಲೂ ಇತರೆಡೆಗಳಲ್ಲೂ ಅಪಹರಣ ರೂಢವಾಗಿದೆ. ಇದನ್ನೆ ಮನು ರಾಕ್ಷಸ ವಿವಾಹ ಎಂದಿರುವುದು. ಅವನು ಉಲ್ಲೇಖಿಸಿರುವ ವಿವಾಹದ ಎಂಟು ಬಗೆಗಳಲ್ಲಿ ರಾಕ್ಷಸ ವಿವಾಹವೂ ಒಂದು. ಬಭ್ರುವಿನ ಪತ್ನಿಯನ್ನು ಶಿಶುಪಾಲನೂ ವಿಚಿತ್ರವೀರ್ಯನ ಸಲುವಾಗಿ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರನ್ನು ಭೀಷ್ಮನೂ ಅಪಹರಿಸಿದರು. ಕನ್ಯೆಯರನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುವುದಕ್ಕೂ ಅವರನ್ನು ಮಾರುವುದಕ್ಕೂ ಅಪಹರಣ ಮಾಡುವುದುಂಟು.

ನಾಗರಿಕ ಪ್ರಪಂಚದಲ್ಲಿ ವಿವಾಹಕ್ಕಾಗಿ ಕನ್ಯಾಪಹರಣ ಮಾಡುವ ಪದ್ಧತಿ ಕಾನೂನು ಬಾಹಿರವಾದರೂ ಒಂದು ಕಾಲದಲ್ಲಿ ಕಾನೂನುಬದ್ಧವಾಗಿತ್ತು. ಈ ಪದ್ಧತಿ ಈಗಲೂ ಕೆಲವು ಅನಾಗರಿಕ ಜನಾಂಗಗಳ ಬುಡಕಟ್ಟಿನಲ್ಲಿ ಸಂಪ್ರದಾಯಬದ್ಧವಾಗಿರುವುದನ್ನು ನೋಡಬಹುದು. ಉದಾಹರಣೆಗೆ ಉತ್ತರ ಏಷ್ಯದ ಕಾಲ್ಮಕ್, ಸಾಮೊಯೊಡ್ ಪೈಕಗಳಲ್ಲೂ ಆಫ್ರಿಕ, ಏಷ್ಯ ಮುಂತಾದ ಕಡೆಗಳಲ್ಲಿನ ಆದಿವಾಸಿಗಳಲ್ಲಿ (ಭಾರತದಲ್ಲಿ–ಮುಳ್ಳುಕುರುಬರು, ತಿರುವಾಂಕೂರಿನ ಮುಡುವರು, ಉತ್ತರ ಆರ್ಕಾಟಿನ ಮಲಯಾಳಿಗಳು, ಛೋಟಾನಾಗಪುರ ಹಾಗೂ ವೈನಾಡಿನ ಆದಿವಾಸಿಗಳು) ವಧುವಿನ ಕಡೆಯ ಗಂಡಸರು ಅಥವಾ ಹೆಂಗಸರೊಡನೆ ಹೊಡೆದಾಡಿ ವಧುವನ್ನು ಅಪಹರಿಸಿ ವಶಮಾಡಿಕೊಳ್ಳುವ ವಿವಾಹಸಂಪ್ರದಾಯವಿದೆ.

ಸಯಾಮಿನ ಕರೇನರಲ್ಲಿ ವರ ತನ್ನ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಲು ವಧುವಿನ ಕಡೆಯವರೊಡನೆ ಹೊಡೆದಾಡಬೇಕು. ಲಿಂಗನಿಷೇಧದ (ಸೆಕ್ಸ್ ಟ್ಯಾಬೂ) ಗಂಡಾಂತರವನ್ನು ದೂರಮಾಡಲು ಹೆಣ್ಣು ನಾಚಬೇಕು; ಗಂಡು ಬಲಾತ್ಕರಿಸಬೇಕು ಎಂಬ ಕಲ್ಪನೆ ಆದಿವಾಸಿಗಳಲ್ಲಿ ಇರುವಂತಿದೆ. ಲಗ್ನ ನಿಶ್ಚಯವಾದ ಮೇಲೆ ವಧು ಅಡಗಿರಬೇಕು. ವರನಾಗಲೀ ಹೆಂಗಸರಾಗಲೀ ಅವಳನ್ನು ಒತ್ತಾಯದಿಂದ ಒಪ್ಪಿಸಬೇಕು ಎಂಬ ಪದ್ಧತಿಗಳು ಸಿನಾಯ್ ಮರುಭೂಮಿಯ ಬಿಡುಯಿನರಲ್ಲೂ ಐಸ್‍ಲೆಂಡ್ ಜನರಲ್ಲೂ ಉಂಟು. ಕನ್ಯೆ ನೀರಿಗೆ ಹೋಗುವಾಗ, ಕಟ್ಟಿಗೆಯನ್ನು ತರುವಾಗ ಇಲ್ಲವೆ ನೃತ್ಯ ಕೂಟದಲ್ಲಿ ಭಾಗವಹಿಸುವಾಗ, ಅಪಹರಿಸಿ ವಿವಾಹವಾಗುವ ಪದ್ಧತಿ ಅನೇಕ ಆದಿವಾಸಿಗಳಲ್ಲಿದೆ. ಹೆಣ್ಣು ಪ್ರಾಣಿ ಬೆದೆಗೆ ಬರುವ ಮೊದಲೂ ಗಂಡು ಬಲಾತ್ಕಾರಮಾಡುವುದು ಪ್ರಾಣಿಗಳಲ್ಲಿ ಸಹಜ. ಈ ಭೂಮಿಕೆಯೇ ಅಪಹರಣವಿಧಿಯ ಮೂಲವಾಗಿರಬೇಕು.

ಪ್ರಪಂಚದ ಜನಪದಕಥೆಗಳಲ್ಲಿ ಅಸಂಖ್ಯ ಅಪಹರಣ ಕಥೆಗಳುಂಟು. ದೇವತೆಗಳು, ರಾಕ್ಷಸರು, ಭೂತಗಳು, ಕುಳ್ಳರು, ಜಲದೇವತೆಗಳು, ಪ್ರಾಣಿಗಳು, ದುಷ್ಟರಾಜಕುಮಾರರು ಹಾಗೂ ಇತರರು ಸುಂದರಿಯರನ್ನು ಅಪಹರಿಸಿಕೊಂಡು ಹೋಗುವ ಕಥೆಗಳುಂಟು. ಮಾಟದ ಶಕ್ತಿಯಿಂದ ಮಾಟದ ಮನೆಗಳಿಗೆ ಅಪಹರಿಸಿಕೊಂಡು ಹೋಗುವ ಕಥೆಗಳೂ ಉಂಟು. ಜ್ಯೂಸ್ ದೇವತೆ ಎತ್ತಿನ ರೂಪದಿಂದ ಯುರೋಪಾಳನ್ನು ಅಪಹರಿಸಿದ ಪ್ರಸಿದ್ಧ ಗ್ರೀಕ್ ಪುರಾಣಕಥೆಯಿದೆ. ಬಯ್ಯುವ ಗಯ್ಯಾಳಿಯ ಜೊತೆಗೆ ಬಡ್ಡಿ ವ್ಯಾಪಾರಿಯನ್ನೂ ಇತರ ದುಷ್ಟರನ್ನೂ ಅಪಹರಿಸಿಕೊಂಡು ಹೋಗುವ ಜನಪದ ಕಥೆಗಳೂ ಉಂಟು.

(ಎಲ್.ಆರ್.ಎಚ್.)

**ಅಪಾಕ್ಷಿಕಶಕ್ತಿ :** ಯುವಕವಿಯಾದ ಜಾನ್ ಕೀಟ್ಸನಿಗೆ ಷೇಕ್ಸ್‌ಪಿಯರನಂತೆ ತಾನೂ ಒಬ್ಬ ನಾಟಕಕಾರನಾಗಬೇಕೆಂಬ ಹೆಬ್ಬಯಕೆ. ಆ ಮಹಾಕವಿಯ ಅತ್ಯಂತ ನಿಷ್ಪಕ್ಷಪಾತವಾದ ದೃಷ್ಟಿ ಕೀಟ್ಸನ ಮನಸ್ಸನ್ನು ಸೂರೆಗೊಂಡಿತು. ನೂರಾರು ಅನುಕಾರ್ಯರನ್ನು ಅವರವರ ಸ್ವಭಾವಕ್ಕೂ ವ್ಯಕ್ತಿವರ್ಚಸ್ಸಿಗೂ ಅನುಗುಣವಾಗಿ ಷೇಕ್ಸ್‌ಪಿಯರ್ ಚಿತ್ರಿಸುತ್ತಾನೆ. ಒಳ್ಳೆಯವರನ್ನು ಹೊಗಳುವುದಿಲ್ಲ, ಕೆಟ್ಟವರನ್ನು ತೆಗಳುವುದಿಲ್ಲ. ತಾದಾತ್ಮ್ಯದಿಂದ ಅವರೇ ತಾನಾಗಿ ಅವರು ನುಡಿಯುವಂತೆ, ನಡೆಯುವಂತೆ ಎಸಗುತ್ತಾನೆ. ಇದೊಂದು ಅಗಾಧ ಕೌಶಲ, ನಾಟಕಕ್ಕೆ ಬಲು ಪ್ರಯೋಜಕವಾದ ಕೌಶಲ. ಅದನ್ನು ಪಡೆದ ಕವಿ ದೊಡ್ಡ ಕವಿ, ಏತಕ್ಕೆಂದರೆ ಕೀಟ್ಸನ ಅಭಿಮತದಂತೆ ಅಪಾಕ್ಷಿಕತೆ (ನೆಗೆಟಿವ್ ಕೇಪಬಲಿಟಿ) ನಿಜವಾದ ಶಕ್ತಿ.

ಕವಿಯೂ ವಿಮರ್ಶಕನೂ ಆದ ಟಿ. ಎಸ್. ಎಲಿಯಟ್ ಕೀಟ್ಸನ ಪದಗುಚ್ಛವನ್ನು ತೆಗೆದುಕೊಂಡು, ಹಿಗ್ಗಲಿಸಿ, ಹೆಚ್ಚು ಅರ್ಥವನ್ನು ತುಂಬಿ, ತನ್ನ ತೀರ್ಪಿನಂತೆ ಯಾವುದು ಉತ್ಕೃಷ್ಟ ಕಾವ್ಯಮಾರ್ಗವೋ ಅದಕ್ಕೆ ಅದನ್ನು ಅನ್ವಯಿಸಿದ. ಎಲಿಯಟ್ ಹೇಳುವಂತೆ ಕವಿಯ ವೈಯಕ್ತಿಕ ಆಗುಹೋಗುಗಳಿಗೂ ಅವನ ಕೃತಿವಸ್ತುವಿಗೂ ಏನೇನೂ ಸಂಬಂಧವಿಲ್ಲ, ಸಂಬಂಧವಿರಬಾರದು. ತನ್ನ ವೈಯಕ್ತಿಕ ವ್ಯಕ್ತಿತ್ವದಿಂದ ಬಿಡುಗಡೆ ಹೊಂದುವುದಕ್ಕೋಸ್ಕರವೇ ಕವಿ ಕಾವ್ಯವಸ್ತುವನ್ನು ಕಲ್ಪಿಸಿಕೊಳ್ಳುತ್ತಾನೆ. ವಿಜ್ಞಾನಿ ತನ್ನ ಪ್ರಯೋಗಗಳನ್ನು ನಿಷ್ಠುರಮನದಿಂದ ಕೈಗೊಳ್ಳುವ ಹಾಗೆ ಖಚಿತವಾಗಿಯೂ ರಾಗರಹಿತವಾಗಿಯೂ ಇರಬೇಕು, ಕಾವ್ಯಕಟ್ಟುವ ಕೆಲಸ. ಕವಿಗೆ ಅತ್ಯಾವಶ್ಯಕವಾದದ್ದು ಅಪಾಕ್ಷಿಕಶಕ್ತಿ.

ಸುಮ್ಮನೆ ಸ್ಥೂಲವಾದ ಹೇಳಿಕೆ ಇದು ಎಂಬ ಟೀಕೆಯನ್ನು ಕೆಲವರು ಮಾಡಿದ್ದಾರೆ; ಕಾವ್ಯನಿರ್ಮಾಣದ ಸೂಕ್ಷ್ಮಾಂಶಗಳು ಎಷ್ಟೋ ಇವೆ. ಅವುಗಳಲ್ಲಿ ಒಂದನ್ನೂ ಎಲಿಯಟ್ ಲಕ್ಷ್ಯಕ್ಕೆ ತಂದುಕೊಂಡಿಲ್ಲವೆಂದು ಅವರ ವಾದ.

ಕೀಟ್ಸನೇ ಷೇಕ್ಸ್‌ಪಿಯರನ ನೆಗೆಟಿವ್ ಕೇಪಬಲಿಟಿಯನ್ನು ಯಾವ ಮಾತುಗಳಲ್ಲಿ ವರ್ಣಿಸುತ್ತಾನೆ ಎನ್ನುವುದು ಸೂಕ್ತ. ವಾಸ್ತವಾಂಶ ತರ್ಕಬದ್ಧತೆಗಳಿಗಾಗಿ ಚಡಪಡಿಸದೆ ಅನಿಶ್ಚಯತೆ, ಗೂಢತೆ ಸಂದೇಹಗಳಲ್ಲಿ ಉಳಿಯಬಲ್ಲ ಶಕ್ತಿ ಇದು. ಕೀಟ್ಸನ ಪ್ರಕಾರ ಕೋಲ್‌ರಿಜನಿಗೆ ಈ ಶಕ್ತಿ ಇರಲಿಲ್ಲ. ಕವಿಗೆ ಅಪಾಕ್ಷಿಕ ಶಕ್ತಿ ಇದ್ದರೆ ಕಾರಣಗಳನ್ನು ಕಂಡುಕೊಂಡು ತರ್ಕಬದ್ಧ ಉತ್ತರಗಳನ್ನು ಕಂಡುಕೊಳ್ಳುವ ಅಗತ್ಯವೇ ಇರುವುದಿಲ್ಲ. ಇದನ್ನು ನಿರೂಪಿಸುವ ಸೂತ್ರ ಕೀಟ್ಸ್ ಹೇಳಿದ ಸೌಂದರ್ಯಪ್ರಜ್ಞೆಯು ಇನ್ನೆಲ್ಲ ಯೋಜನೆಯ ವಿಷಯಗಳನ್ನು ಬದಿಗೊತ್ತುತ್ತದೆ.

*

**ಅಪಾನ :** ದೇಹದಲ್ಲಿ ಸಂಚರಿಸುವ ಐದು ವಾಯುಗಳಲ್ಲಿ ಒಂದು, ಗುದಸ್ಥಾನದಲ್ಲಿದೆ. ಮನುಷ್ಯ ತಿಂದ ಆಹಾರವನ್ನು ಕೆಳಭಾಗಕ್ಕೆ ಹೋಗುವಂತೆ ಮಾಡುತ್ತದಲ್ಲದೆ ಮೂತ್ರ ಮತ್ತು ರೇತಸ್ಸುಗಳನ್ನು ಹರಿಸುತ್ತದೆ. (ಎಸ್.ಎನ್.ಕೆ.)

**ಅಪಾಯಕರ ವೃತ್ತಿಗಳು :** ಕೆಲಸಗಾರರ ಆರೋಗ್ಯವನ್ನು ಕುಂದಿಸುವ ವೃತ್ತಿಗಳನ್ನು ಈ ಗುಂಪಿಗೆ ಸೇರಿಸಲಾಗಿದೆ. ಆ ಕೂಡಲೆ ಅಥವಾ ಕ್ರಮೇಣ ಹಾಳುಮಾಡಬಲ್ಲ ಯಂತ್ರ ನಡೆಸುವಾಗಲೋ ಬೇರೆಯಾಗೋ ಅಪಾಯ ಒದಗುವುದು. ಎಲ್ಲ ವೃತ್ತಿಗಳಿಗೂ ಸಾಧಾರಣವಾಗಿರುವ ಅಂಶವಾದ್ದರಿಂದ ಅದನ್ನಿಲ್ಲಿ ಸೇರಿಸಿಲ್ಲ (ನೋಡಿ– ಕೈಗಾರಿಕಾ–ವೈದ್ಯ) ಮುಖ್ಯವಾಗಿ ಕೆಲಸಗಾರನ ಉದ್ಯೋಗದಲ್ಲಿ ರಾಸಾಯನಿಕಗಳು, ಧೂಳುಗಳು, ಕೆಲವು ಭೌತಿಕ ಕಾರಕಗಳು, ರೋಗಾಣುಗಳು – ಮೊದಲಾದವುಗಳಿಂದ ಬರುವ ರೋಗಗಳನ್ನು ಮಾತ್ರ ಇಲ್ಲಿ ಹೇಳಿದೆ.

ಮಾನವ ಕೈಗೊಳ್ಳುವ ಬಹುಪಾಲು ಎಲ್ಲ ಕೆಲಸಗಳಲ್ಲೂ ಅಪಾಯ ಇದ್ದೇ ಇರುತ್ತದೆ. ಮನೆಯಲ್ಲಿನ ಹೆಂಗಸು ದಿನವೂ ನೋವು, ನರಳಿಕೆಗಳನ್ನು ಅನುಭವಿಸಬೇಕಾಗಬಹುದು. ಸೌದೆ ಒಲೆಯ ಕೆಂಡ, ಉರಿಗೊಳ್ಳಿಗಳನ್ನು ತಳ್ಳುವಾಗ, ಬಿಸಿ ಪಾತ್ರೆಗಳನ್ನು ಮುಟ್ಟುವಾಗ ಕೈ ಸುಡಬಹುದು. ಖಾರದ ಹಸಿಮೆಣಸಿನ ಕಾಯನ್ನು ಹೆಚ್ಚಿದ ಮೇಲೋ ಆಗಾಗ್ಗೆ

ಸಾಬೂನು, ಕೃತಕಚೊಕ್ಕಕಾರಕಗಳು (ಮಾರ್ಜಕಗಳು) (ಡಿಟರ್ಜೆಂಟ್ಸ್) ಪುಡಿಗಳಿಂದ ತೊಳೆವಾಗಲೋ ಏಳುವ ಚರ್ಮದ ಉರಿ, ಬೇನೆ ಇತ್ಯಾದಿ ಉದಾಹರಣೆಗಳು. ಸಾಮಾನ್ಯವಾಗಿ ಸಂಪಾದನೆಗಾಗಿ ದುಡಿದ ಕೆಲಸಕ್ಕೆ ಉದ್ಯೋಗ, ವೃತ್ತಿ ಎಂದಿದೆ.

ಕೆಲವು ಗಣಿಗಳ ವಿಷಗಾಳಿ ಪ್ರಾಣಾಪಾಯವೆಂದು ತಿಳಿದಿದ್ದರೂ ರೋಮ್‌ನ ಉನ್ನತಿಯ ಕಾಲದಲ್ಲಿ ಗುಲಾಮರೂ ರಾಜಕೀಯ ಖೈದಿಗಳೂ ಆಳದ ಗಣಿಗಳಲ್ಲಿ ದುಡಿಯಬೇಕಿತ್ತು. ಕೈಗಾರಿಕಾ ಕ್ಷೇತ್ರದ ಹಿರಿಯ ವೈದ್ಯ ಎನಿಸಿಕೊಂಡ ಇಟಲಿಯ ಬರ್ನಾರ್ಡಿನೊ ರಾಮಜ್ಜಿನಿ (1663–1714) ಕೆಲಸಗಾರರ ಆರೋಗ್ಯಪಾಲನೆಯಲ್ಲಿ ವೈದ್ಯವಿಜ್ಞಾನದ ಪಾತ್ರವನ್ನು ಮೊದಮೊದಲು ವಿವರಿಸಿದ. 18, 19ನೆಯ ಶತಮಾನದ ಇಂಗ್ಲೆಂಡಿನಲ್ಲಿ ಹೊಗೆಕೊಳವೆಗಳನ್ನು ಮಕ್ಕಳಿಂದ ಚೊಕ್ಕ ಮಾಡಿಸುವ ಕ್ರೂರವರ್ತನೆಯನ್ನು ಬ್ಲೇಕ್, ಲ್ಯಾಂಬ್, ಡಿಕನ್ಸ್ ಮೊದಲಾದವರು ಬಲು ಖಂಡಿಸಿದರು. ಹೊಗೆಕೊಳವೆಗಳ ಒಳಗೆ ಅಂಟಿರುವ ರಾಸಾಯನಿಕಗಳು ಮಕ್ಕಳಿಗೆ ತಾಕಿ ಚರ್ಮದ ಏಡಿಗಂತಿಗೆ ತುತ್ತಾಗುತ್ತಿದ್ದರು. 20ನೆಯ ಶತಮಾನದ ಮೊದಲಲ್ಲಿ ಅಮೆರಿಕದ ಆಲೀಸ್ ಹ್ಯಾಮಿಲ್ಟನ್, ಕೆಲಸಗಾರರ ರೋಗಕ್ಕೂ ಅವರ ದುಡಿಮೆಯಲ್ಲಿ ಏಳುತ್ತಿದ್ದ ವಿಷವಸ್ತುಗಳಿಗೂ ಇರುವ ಸಂಬಂಧವನ್ನು ತೋರಿ, ವೃತ್ತಿಗಳಿಂದೇಳುವ ರೋಗಗಳ ಕಡೆ ಎಲ್ಲರ ಗಮನವನ್ನೂ ಸೆಳೆದಳು. ಆದರೆ ಅಂದಿನ ಅಮೆರಿಕದ ವೈದ್ಯರಿಗೆ ಈ ವಿಚಾರದಲ್ಲಿ ಏನೇನೂ ಆಸಕ್ತಿ ಹುಟ್ಟಲಿಲ್ಲ. 1901ರ ಬ್ರಿಟಿಷ್ ಕಾರ್ಖಾನೆಗಳ ಹಾಗೂ ಕಾರ್ಯಾಗಾರಗಳ ಶಾಸನ ಈ ಉದ್ಯಮಗಳನ್ನು ಅಪಾಯಕರ ಉದ್ಯಮಗಳೆಂದು ಘೋಷಿಸಿತು. ಸೀಸ, ರಂಜಕ, ಹರಿದಳ (ಆರ್ಸೆನಿಕ್), ಪಾದರಸ ಮುಂತಾದ ಅಪಾಯಕಾರಿ ವಸ್ತುಗಳನ್ನು ಬಳಸುವ ಸಂಸ್ಥೆಗಳು ತತ್ಸಂಬಂಧವಾಗಿ ಬರುವ ವ್ರಣ, ಪೀಡೆಗಳನ್ನು ಸರಕಾರದ ಗೃಹಕಚೇರಿಯಲ್ಲಿ ಕಾರ್ಖಾನೆಗಳ ಪ್ರಧಾನ ತನಿಖೆ ಅಧಿಕಾರಗಳಿಗೆ ವರದಿ ಮಾಡಬೇಕೆಂದು ನಿಗದಿಮಾಡಿತು. ಈ ಶಾಸನ ಜಾರಿಗೆ ಬಂದಮೇಲೆ ಕೈಗಾರಿಕಾ ಕಾಯಿಲೆಗಳ ತಪಶೀಲೊಂದನ್ನು ತಯಾರಿಸಲಾಯಿತು. ಕೈಗಾರಿಕಾ ಶಾಸನದಲ್ಲಿ ಇದೊಂದು ಮುಖ್ಯ ಹಾಗೂ ದಯಾಪರ ಪ್ರಗತಿಯಾಯಿತು.

ಭಾರತದಲ್ಲಿ ಈ ಅಪಾಯಕರ ವೃತ್ತಿಗಳಲ್ಲಿನ ಕೆಲಸಗಾರರು ಸು. ಹತ್ತು ದಶಲಕ್ಷ ಮಂದಿ. ದಾಖಲೆಗಳಿಲ್ಲದ ಸಣ್ಣಪುಟ್ಟ ಕೈಗಾರಿಕೆಗಳು ಇದರಲ್ಲಿ ಸೇರಿಲ್ಲವಾದ್ದರಿಂದ ಈ ಅಂದಾಜು ಕಡಿಮೆಯೇ. ಇವೂ ಸೇರಿದರೆ ಮತ್ತೊಂದು ದಶಲಕ್ಷ ಮಂದಿ ಆಗಬಹುದು. ಭಾರತದಲ್ಲಿ ಕೈಗಾರಿಕೆಗಳು ಹುಟ್ಟಿಕೊಂಡ ಹಾಗೆಲ್ಲ ಇನ್ನಷ್ಟು ಮತ್ತಷ್ಟು ಮಂದಿ ಕೆಲಸಗಾರರಾಗಿ ಸೇರಿಕೊಳ್ಳುತ್ತಿರುವರು. ನೂರಕ್ಕೆ ಎಂಬತ್ತು ಮಂದಿಯಂತಿರುವ ಹಳ್ಳಿವಾಸಿಗಳೇ ಪಟ್ಟಣಗಳ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಬಂದಾಗ ಜಾಗ, ವಸತಿಗಳಲ್ಲಿ ಮಾತ್ರವಲ್ಲದೆ, ಅವರ ಜೀವನ ಕ್ರಮಗಳೂ ಬದಲಾಗಿ ಮನಸ್ಸಿನ ನಿಟ್ಟೂ ಬೇರೆಯಾಗುತ್ತದೆ. 1948ರ ಕಾರ್ಖಾನೆಗಳ ಶಾಸನದಲ್ಲಿ ಈ ಬಗ್ಗೆ ನಿಬಂಧನೆಗಳನ್ನು 87ರಿಂದ 91ರ ವರೆಗಿನ ವಿಧಿಗಳಲ್ಲಿ ನಮೂದಿಸಿದೆ. 87ನೆಯ ವಿಧಿ ಅಪಾಯಕರ ಕಾರ್ಯವಿಧಾನಗಳನ್ನು ಕುರಿತದ್ದು. ಯಾವ ಕಾರ್ಯವಿಧಾನವನ್ನೇ ಆಗಲಿ ಅಪಾಯಕಾರಿಯೆಂದು ಘೋಷಿಸಿ, ಈ ಬಗ್ಗೆ ಸೂಕ್ತ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಕಾರ್ಖಾನೆಗಳಿಗೆ ತಿಳಿಸಲು ರಾಜ್ಯಸರ್ಕಾರಕ್ಕೆ ಅಧಿಕಾರ ಕೊಟ್ಟಿದೆ. ಅಪಘಾತಗಳು ಹಾಗೂ ಕಾಯಿಲೆಗಳನ್ನು ಕುರಿತ ತಿಳಿವಳಿಕೆ ಹಾಗೂ ಈ ಪ್ರಕರಣಗಳನ್ನು ಕುರಿತ ನೇರ ವಿಚಾರಣೆಯನ್ನು ನಿರ್ದೇಶಿಸುವ ಅಧಿಕಾರ – ಇವನ್ನು ಕುರಿತ ವಿವರಗಳು ಉಳಿದ ವಿಧಿಗಳಲ್ಲಿವೆ. ಪ್ರಕಟಿಸಬೇಕಾದ ರೋಗಗಳ ಒಂದು ಪಟ್ಟಿಯೂ ಇದೆ. ಹೀಗೆ ಅಪಾಯಕರ ಉದ್ಯಮ ಹಾಗೂ ಅಪಾಯಕರ ಕಾರ್ಯವಿಧಾನಗಳ ವಿರುದ್ಧವಾಗಿ ಮುನ್ನೆಚ್ಚರಿಕೆಗೆ ಸಂಬಂಧಿಸಿದಂತೆ 1948ರ ಕಾರ್ಖಾನೆಗಳ ಶಾಸನಗಳಲ್ಲಿ ಭಾರತ ಸರ್ಕಾರ ಸಾಕಷ್ಟು ಕಟ್ಟುಪಾಡುಗಳನ್ನು ವಿಧಿಸಿದೆ. ಆದರೂ ಹೊಸ ಕೈಗಾರಿಕೆಗಳಲ್ಲಿ ನಮ್ಮವರಿಗೆ ಆಗುವ ಕೆಡುಕುಗಳ ವಿಚಾರದ ತಿಳಿವಳಿಕೆ ಇನ್ನೂ ಏನೇನೂ ಸಾಲದು. ಖಚಿತ ಅಂಕಿಅಂಶಗಳೂ ಇಲ್ಲ.

ಪ್ರಪಂಚದಲ್ಲಿ ವೃತ್ತಿಗಳಿಂದಾಗುವ ಅಪಾಯಗಳಿಗೆ ಈಡಾಗುವುದರಲ್ಲಿ ಕೆಲಸಗಾರರಲ್ಲೇ ಎಷ್ಟೋ ವ್ಯತ್ಯಾಸಗಳಿವೆ. ಕೈಗಾರಿಕೆ ಉದ್ಯಮಗಳಲ್ಲಿ ಮುಂದುವರಿದ ರಾಷ್ಟ್ರಗಳ ಜನನಿಬಿಡ ಪಟ್ಟಣಗಳು ಒಂದು ಗುಂಪಾದರೆ ಕೇವಲ ಬೇಸಾಯವೇ ಆಧಾರವಾದ ಸಣ್ಣ ಹಳ್ಳಿಗಳದು ಮತ್ತೊಂದು ಗುಂಪು. ಪ್ರಪಂಚದ ಎಲ್ಲೆಡೆಗಳಲ್ಲೂ ಮಾನವನಿಂದಾದ ರೋಗಗಳ ವಿಚಾರದಲ್ಲಿ ತಿಳಿವಳಿಕೆ ಸಾಲದು. ವರದಿಗಳೂ ಸಾಕಷ್ಟಿಲ್ಲ. ಅಮೆರಿಕದ ಒಂದೊಂದೂ ಸಂಸ್ಥಾನವೂ ಕೈಗಾರಿಕೆಗಳಲ್ಲಿನ ಅಪಾಯಗಳ ತಪಶೀಲನ್ನು ಹಲತೆರನಾಗಿ ಪಟ್ಟಿ ಹಾಕುವುದು, ಸರ್ಕಾರಗಳು ಕಾರ್ಖಾನೆಗಳನ್ನು ಆಗಾಗ್ಗೆ ಪರಿಶೀಲಿಸುತ್ತಿದ್ದುದರಿಂದ ಸ್ವೀಡನ್, ಬ್ರಿಟನ್, ಎರಡನೆಯ ಮಹಾಯುದ್ಧದ ಮೊದಲಿನ ಜರ್ಮನಿಗಳ ಅಂಕಿಅಂಶಗಳು ನಂಬುವಂತಿವೆ.

ಬ್ರಿಟನ್ನಿನಲ್ಲಿ ಕೇವಲ ನೂರಕ್ಕೆ ಹತ್ತು ರೋಗಗಳಿಗೆ ಅಪಾಯಕರ ವೃತ್ತಿಗಳು ಕಾರಣವೆಂದು ಅಂದಾಜಾಗಿದೆ. 1951ರಲ್ಲಿ ಬ್ರಿಟನ್ನಿನ ರಾಷ್ಟ್ರೀಯ ವಿಮಾಶಾಸನ 7,000,000 ಬಾರಿ ರೋಗ ತಾಕಿದ್ದನ್ನು ವರದಿ ಮಾಡಿದೆ. ಅದೇ ವರ್ಷದಲ್ಲಿ ಆಕಸ್ಮಿಕ ಪೆಟ್ಟು, ಗಾಯ ಇತ್ಯಾದಿಗಳಿಗೆ 720,000 ಹೊಸ ಪರಿಹಾರಗಳನ್ನೂ ಅಪಾಯಕರ ವೃತ್ತಿಯಿಂದ ಆದವಕ್ಕೆ ಕೇವಲ 50,000 ಪರಿಹಾರಗಳನ್ನೂ ಕೊಟ್ಟಿತು. ಆಳದ ಗಣಿಗಳಲ್ಲಿ ಸಿಡಿದು ಅನೇಕರು ಬಲಿಯಾದರೆ ಎಲ್ಲರೂ ಗಮನಿಸುವರು. ಆದರೆ, ಅಪಾಯಕರ ವೃತ್ತಿಯಿಂದ ನಿಧಾನವಾಗಿ ತೋರಿಬರುವ ಕೆಲವೇ ರೋಗಗಳನ್ನು ಯಾರೂ ಅಷ್ಟಾಗಿ ಗಮನಿಸರು.

ರಾಸಾಯನಿಕಗಳು, ದೂಳು, ವಿಷಗಾಳಿಗಳಿಂದಲೇ ಗೊತ್ತಾದ ಒಂದು ರೋಗ ಏಳುವುದೆಂದು ನಿಖರವಾಗಿ ಹೇಳಲು ಅನೇಕ ಪ್ರಯೋಗಗಳು ಆಗಬೇಕು. ನಿರ್ಧರಿಸಲೂ ವರ್ಷಗಳೇ ಹಿಡಿಯಬಹುದು. ಈ ವಿಚಾರಗಳ ತಿಳಿವಿಗೂ ಮಿತಿಯಿದೆ. ಕೆಲಸಗಾರನ ರೋಗಕ್ಕೆ ಅವನ ವೃತ್ತಿಯೇ ಕಾರಣವೆಂದು ಖಚಿತಪಡಿಸುವುದು ವೈದ್ಯರಿಗೂ ಕಷ್ಟ. ಎಷ್ಟೋ ವೇಳೆ ಇತರ ಅನೇಕ ರೋಗಗಳ ಚಿಹ್ನೆ, ಲಕ್ಷಣಗಳು ವೃತ್ತಿಯಿಂದ ಆದ ಹಾಗೇ ಇರುತ್ತವೆ. ಒಬ್ಬ ಕೆಲಸಗಾರ ತುಸು ವಿಷಕರ ರಾಸಾಯನಿಕವನ್ನು ಎಡಬಿಡದೆ ತಾಕಿಸಿಕೊಂಡೇ ದುಡಿಯುತ್ತಿದ್ದರೆ ಆಗುವ ಕೆಡುಕುಗಳ ವಿಚಾರ ಹೆಚ್ಚಾಗಿ ತಿಳಿದಿಲ್ಲ. ಹಲವೇಳೆ, ವೃತ್ತಿಯಿಂದಲೇ ಒಂದು ರೋಗ ಬಂದಿರುವುದು ತಿಳಿದಿದ್ದರೂ ಅದು ರುಜುವಾತಾಗುವ ವೈಜ್ಞಾನಿಕ ಪರೀಕ್ಷೆಗಳಿಲ್ಲ. ವೃತ್ತಿಯಿಂದ ಏಳುವ ಬೇನೆ ಚೆನ್ನಾಗಿ ಬಲಿತ ಹೊರತು ಗೊತ್ತಾಗದೆ ಇರಬಹುದು. ಕಬ್ಬಿಣ, ಬಿಳಿ ಜೇಡಿ, ತವರ, ಅಚ್ಚ ಇಂಗಾಲಗಳಂಥ ಕೆಡುಕಾಗಿಸದ ಹಲವು ದೂಳುಗಳೂ ಪುಪ್ಪುಸಗಳಲ್ಲಿ ಸಾಕಷ್ಟು ಕೂಡಿದ್ದರೆ, ಕ್ಷ–ಕಿರಣಗಳಿಂದ ಕಂಡುಕೊಳ್ಳಬಹುದು.

ಅನುಭವ, ತಿಳಿವಳಿಕೆಗಳಿಂದ ಅಪಾಯಕರ ವೃತ್ತಿಗಳನ್ನೂ ಕೆಡುಕಿಲ್ಲದಂತೆ ಮಾಡಬಹುದು. ವಿಷಕರ ರಾಸಾಯನಿಕಗಳ ಬದಲು ವಿಷವಿರದವನ್ನು ಬಳಸಬೇಕು. ಈ ತತ್ತ್ವದ ಆಚರಣೆ ಬೆಂಕಿಕಡ್ಡಿ ತಯಾರಿಕೆಯಲ್ಲಿದೆ. ಹಿಂದೆ ಬೆಂಕಿಕಡ್ಡಿ ಕಾರ್ಖಾನೆ ಕೆಲಸಗಾರರು ಬಿಳಿಯ ಇಲ್ಲವೇ ಹಳದಿಯ ರಂಜಕವನ್ನು ಬಳಸುತ್ತಿದ್ದಾಗ, ಅದರ ಆವಿ ಉಸಿರಲ್ಲಿ ಸೇರುತ್ತಿದ್ದುದರಿಂದ ದವಡೆಯ ಹಲ್ಲುಗೂಡುಗಳಲ್ಲಿ ಕೀವುಗೂಡಿ ಕೊಳೆತು ಸಾಯುತ್ತಿದ್ದರು. ಇದರ ಬದಲಾಗಿ ಕೆಂಪು ರಂಜಕದ ಬಳಕೆ ಕಡ್ಡಾಯದ ಕಾಯಿದೆ (1908) ಆಗಿ, ಈಗ ಇನ್ನೂ ನಿರಪಾಯಕರ ಸೆಸ್ ಕ್ವಿ ಸಲ್ಫೈಡ್ ಲವಣವನ್ನು ಬಳಸಿದಾಗಿಂದ ಈ ದವಡೆಕೊಳೆತ ನಿಂತಿತು. ಹೀಗೆ ಬದಲು ಮಾಡಲಾಗದಿದ್ದರೆ, ವಿಷವಸ್ತು ಗಾಳಿಯಲ್ಲಿ ಬರದಂತೆ ಆವರಣದ ಅಡ್ಡಿ ಹಾಕಬಹುದು. ಕೆಲಸ ಮಾಡುವೆಡೆಯಲ್ಲಿ ಗಾಳಿಯಾಟ ಹೆಚ್ಚಿಸಿ, ಒಳ್ಳೆಯ ಗಾಳಿ ಬರುವಂತೆ ಮಾಡಬಹುದು. ಇವಾವೂ ಆಗದಿದ್ದಲ್ಲಿ ಕಟ್ಟಕಡೆಯ ಉಪಾಯವಾಗಿ, ಕೆಲಸದ ಹೊತ್ತಿನಲ್ಲಿ ಕೆಲಸಗಾರರಿಗೆಲ್ಲ ಉಸಿರಾಟಕ (ರೆಸ್ಪಿರೇಟರ್), ಕನ್ನಡಕ, ಕೈಗವುಸು, ಮುಂಗವಚ–ಇತ್ಯಾದಿಗಳನ್ನು ಒದಗಿಸ ಬಹುದು. ಅಪಾಯಗಳನ್ನು ತಡೆಯಲು ಆಗೇ ಆಗದು ಎನ್ನುವೆಡೆಯಲ್ಲಿ ಆದಷ್ಟೂ ಯಂತ್ರಸಾಧನಗಳ ನೆರವನ್ನೇ ಪಡೆಯಬೇಕಾಗಬಹುದು.

**ವಿಷಕರ ರಾಸಾಯನಿಕಗಳು :** ಉಸಿರಿನ ಮೂಲಕ ಪುಪ್ಪುಸಗಳನ್ನೂ ಆಹಾರದೊಂದಿಗೆ ಜಠರ, ಕರುಳುಗಳನ್ನೂ ಚರ್ಮದ ಮೂಲಕ ಮೈ ಒಳಗೂ ವಿಷಕರ ರಾಸಾಯನಿಕಗಳು ಹೋಗಬಹುದು. ಇವುಗಳ ಪರಿಣಾಮಗಳೂ ಹಲತೆರ. ಚರ್ಮ, ಗಂಟಲು, ಉಸಿರ್ನಾಳ, ಪುಪ್ಪುಸ, ಜಠರ ಕರುಳುಗಳಲ್ಲಿ ನೇರ ಬದಲಾವಣೆಗಳು ಆಗಬಹುದು. ಈ ವಿಷಕಾರಕಗಳು ರಕ್ತವನ್ನು ಸೇರಿದರೆ ಅಂಗಾಂಗಗಳಲ್ಲಿ ರೋಗತೋರಬಹುದು. ಕೆಲವು ವೇಳೆ, ಚರ್ಮ, ಪುಪ್ಪುಸಗಳಲ್ಲಿ ಒಗ್ಗದಿಕೆಯ (ಅಲರ್ಜಿ) ತುರುಚಿ ದದ್ದುಗಳು, ಗೂರಲು ಇತ್ಯಾದಿ ಆಗಬಹುದು. ಅಲ್ಲದೆ, ಅಂಗಗಳ ಬಲ ಕುಗ್ಗಿಸಿ ಕ್ಷಯ, ಏಡಿಗಂತಿ, ಚರ್ಮದ ಉರಿತ (ಡರ್ಮಟೈಟಿಸ್) ಇತ್ಯಾದಿ ಬೇರೆ ರೋಗಗಳಿಗೆ ಈಡಾಗಿಸಲೂಬಹುದು. ಕೆಟ್ಟ ನಾತದಿಂದ ಮನಸ್ಸು ಕೆಡುವುದೂ ಉಂಟು. ಪರಿಣಾಮಗಳ ಏರುಪೇರು ರಾಸಾಯನಿಕದ ಕೆಲವು ಲಕ್ಷಣಗಳನ್ನು ಅವಲಂಬಿಸಿದೆ. ಗಾಳಿಯಲ್ಲಿ ಅವುಗಳ ಸಾಂದ್ರತೆ, ಗಾತ್ರ ಇತ್ಯಾದಿ, ಕೆಲಸಗಾರನ ಪುಷ್ಟಿ, ವಿಷ ತಾಕಿರುವ ಅವಧಿ, ಇವು ಮುಖ್ಯ. ರೋಗವನ್ನು ಎಬ್ಬಿಸಲು ಒಂದೊಂದು ವಿಷಕರ ರಾಸಾಯನಿಕದ ಸಾಂದ್ರತೆಯನ್ನು ನಿರ್ಧರಿಸುವ ಯತ್ನಗಳಾಗಿವೆ. ಆಗಲೇ ಕೆಲವದರ ಸಾಂದ್ರತೆ ಗೊತ್ತಾಗಿದೆ.

ಸಿಡಿಮದ್ದುಗಳು, ಬಾಣ ಬಿರುಸುಗಳ ತಯಾರಿಕೆಯಲ್ಲಿ, ಮಾಡುವ ರೀತಿಯಲ್ಲಿ ಎಚ್ಚರ ತಪ್ಪಿದರೆ ಅನಾಹುತ ಆಗುವುದು ಎಲ್ಲರಿಗೂ ಗೊತ್ತು. ಇದಕ್ಕಾಗಿ ಸಿಡಿತ, ಉರಿಗಳೇಳ ದಂತೆ ಸಾಕಷ್ಟು ಮುನ್ನೆಚ್ಚರದ ಕ್ರಮಗಳನ್ನು ಅನುಸರಿಸಬೇಕು. ದಿನವೂ ಕಾಲೇಜಿನಲ್ಲಿ ಸಂಶೋಧನೆಗಾಗಿ ವಿಷದ ರಾಸಾಯನಿಕಗಳನ್ನು ಬಳಸುವ ಪ್ರಾಧ್ಯಾಪಕನಿಗೆ ಮಾರಕ ರಕ್ತಕೊರೆ ಆಗಬಹುದು. ತೆಗೆದ ಚಿತ್ರಗಳನ್ನು ಕತ್ತಲೆ ಕೋಣೆಯಲ್ಲಿ ರಾಸಾಯನಿಕಗಳಲ್ಲಿ ಅದ್ದಿ ತೊಳೆವ ಭಾವಚಿತ್ರಗಾರನ ಬೆರಳುಗಳು ಸುಟ್ಟಂತಾಗಬಹುದು.

ಕೃತಕ ಬಣ್ಣಗಳ ಕೈಗಾರಿಕೆ ನಮ್ಮಲ್ಲಿ ಅಗಾಧವಾಗಿ ಬೆಳೆಯುತ್ತಿದೆ. ಇವುಗಳ ತಯಾರಿಕೆಯಲ್ಲಿ ಬಲು ಮುಖ್ಯವಾಗಿ ಬಳಸುವ ರಾಸಾಯನಿಕ ಬೆಂಜಾಂತ್ರೋನ್ ಕೆಡುಕಿನ ದೆಂದು ತಿಳಿದಿದೆ. ನಿರೋಧಕ ಉಪಾಯಗಳನ್ನು ಹುಡುಕಲಾಗುತ್ತಿದೆ. ಸೀಸದ ಆಕ್ಸೈಡುಗಳು, ಕಾರ್ಬೊನೇಟುಗಳು, ಪೆಟ್ರೋಲಿನಲ್ಲಿ ಸೇರಿಸುವ ಟೆಟ್ರಯೆತಿಲ್ ಲೆಡ್ ಇವೆಲ್ಲ ಮೈ ಒಳಸೇರಿದರೆ ರಕ್ತಕೊರೆಯಾಗಿ ಸ್ನಾಯುಗಳ ನರಗಳಿಗೆ ಕೆಡುಕು. ಬಿಳಿಬಣ್ಣ ತಯಾರಕರು, ವಿದ್ಯುತ್ಕೋಶ ಜಾಲ (ಬ್ಯಾಟರಿ) ತಯಾರಕರು, ಸೀಸ ಕರಗಿಸುವವರು, ಬಣ್ಣ ಸಿಂಪಡಿಸುವವರು, ಬಣ್ಣ ತೆಗೆವವರು–ಇವರಲ್ಲೆಲ್ಲ ಬಹುಮಟ್ಟಿಗೆ ಸೀಸದ ಆವಿಯನ್ನು ಉಸಿರಲ್ಲಿ ಸೇದಿಕೊಳ್ಳುವುದ ರಿಂದ ಸೀಸದ ವಿಷವೇರಬಹುದು. ಆವರಣದಲ್ಲಿ ಚೆನ್ನಾಗಿ ಗಾಳಿ ಆಡುವಂತಿದ್ದರೆ ಕೆಡುಕಿಲ್ಲ. ರೋಗಿಗೇ ಗೊತ್ತಾಗದಷ್ಟು ನಿಧಾನವಾಗಿ ವಿಷವೇರುವುದರಿಂದ, ಕೆಲಸಗಾರರ ಮೈಯಲ್ಲಿನ

ಸೀಸದ ಪ್ರಮಾಣ, ರಕ್ತಕೊರೆ ಪರೀಕ್ಷೆಗಳಿಂದ ಈ ವಿಷತೆಯನ್ನು ಗುರುತಿಸಬಹುದು. ಕ್ಯಾಡ್ಮಿಯಂ ವಿಷವೇರಿಕೆ ಕೂಡ ಸೀಸದ್ದರಂತೆಯೇ ಇರುವುದು. ಸೀಸದ ವಿಷವೇರಿಕೆಗೆ ಚಿಕಿತ್ಸೆ, ಮದ್ದುಗಳಿವೆ (ನೋಡಿ– ಸೀಸದ–ವಿಷವೇರಿಕೆ). ಇದೇ ತೆರನಾಗಿ ಪಾದರಸ, ರಂಜಕ ಮುಂತಾದುವುಗಳ ವಿಷವೇರಿಕೆಯ ನಿರೋಧಗಳೂ ಇವೆ. ಹಿತ್ತಾಳೆಯಲ್ಲಿನ ಸತುವಿನ ದೂಳನ್ನು ಉಸಿರಲ್ಲಿ ಸೇದಿಕೊಳ್ಳುವುದರಿಂದ, ಹಿತ್ತಾಳೆ, ಕಂಚುಗಾರರ ಬೇನೆ ಆಗುತ್ತದೆ. ಎದೆಯೆಲ್ಲ ಬಿಗುವಾಗಿ ಅಮುಕಿ ಒತ್ತಿದಂತಾಗಿ ನಡುಕ, ಬೆವರಿಕೆ ಆಗುತ್ತವೆ.

ವಿಷಕರ ರಾಸಾಯನಿಕಗಳು ತಾಕುವ ವೃತ್ತಿಗಳು ಮುಖ್ಯವಾಗಿ ಸೀಸ, ಬೆರಿಲಿಯಂ, ಕ್ರೋಮಿಯಂ, ಮ್ಯಾಂಗನೀಸ್, ಪಾದರಸ ಹಾಗೂ ಯುರೇನಿಯಂ ಕೈಗಾರಿಕೆಗಳವು. ಭಾರತದಲ್ಲಿ ಅಗಾಧವಾಗಿರುವ ಮ್ಯಾಂಗನೀಸ್ ಅದಿರಿನ ಗಣಿಯ ಕೆಲಸಗಾರರಲ್ಲಿ ಮಿದುಳು, ನರಗಳ ಬೇನೆ ಆಗುವುದು. ಈಚೆಗೆ ಕಂಡು ಹಿಡಿದ ಬೆರಿಲಿಯಂ ಸಂಯುಕ್ತಗಳಿಂದ ತಯಾರಿಸಿದ ಸೂಸುಮಿರುಗುವ (ಫ್ಲೂರೆಸೆಂಟ್) ಅಂಡೆದೀಪಗಳ, ಅವುಗಳ ಬೆರಕೆಲೋಹ ದಿಂದ ನೂರಾರು ಹಗುರ ವಸ್ತುಗಳ ತಯಾರಿಕೆಯ ಕೆಲಸಗಾರರಲ್ಲಿ ಒಂದು ತೆರನ ಪುಪ್ಪುಸ ಉರಿತವಾಗಿ ಕೊನೆಗೆ ಕ್ಷಯದಂತೆ ಕೂಡ ಕಂಡ ಮೇಲೆ ಬೆರಿಲಿಯಂ ಬದಲು ಬೇರೆ ವಸ್ತು ಬಳಸಬೇಕಾಯಿತು. ಗಿಡಮರಗಳ ಬೆಳೆಗಳಿಗಾಗಿ ಸಿಂಪಡಿಸುವ ಕೀಟನಾಶಕಗಳ ತಯಾರಕರಲ್ಲೂ ಅವನ್ನು ಹೊಲ ತೋಟಗಳಲ್ಲಿ ಸಿಂಪಡಿಸುವವರಲ್ಲೂ ಕೆಡುಕಾಗಿದೆ. ಬಹುಮಟ್ಟಿಗೆ ಇವೆಲ್ಲ ಟಿಕ್–20, ಫಾಲಿಡಾಲುಗಳಂತೆ ಸಮ್ಮಿಶ್ರ ರಂಜಕದ ಸಂಯುಕ್ತಗಳೇ. ಉಸಿರಲ್ಲಿ ಒಳಹೋಗುವುದರೊಂದಿಗೆ ಇವು ಲೋಳೆಪೊರೆ, ಚರ್ಮಗಳ ಮೂಲಕವೂ ಸುಲಭವಾಗಿ ಒಳಸೇರುವುದೇ ಬಲೂ ಬಲು ಅಪಾಯಕರ. ಕಲ್ಲು, ಕಲ್ಲಿದ್ದಲಿನ ಗಣಿಗಳಲ್ಲಿನ ಸಾವುಗಳ ಸುಮಾರು ಹತ್ತರಷ್ಟು ಇರುವ, ತವರದ ಗಣಿ ಕೆಲಸ ತೀರ ಕೆಡುಕಿನದು. ಬಲು ಮೊನಚುಮೂತಿಯ, ಚುಚ್ಚುವ, ಕಲ್ಲಿನ ದೂಳು ಚೂರುಗಳಿಂದ ಅಪಾಯವಿದೆ.

ಇವುಗಳ ಅಪಾಯವನ್ನು ತಡೆಯಲು ಮೊದಲಿಗೆ, ಕೆಲಸಗಾರರಿಗೆ ಈ ರಾಸಾಯನಿಕಗಳು ಆದಷ್ಟು ತಾಕದಂತೆ ನೋಡಿಕೊಳ್ಳಬೇಕು. ಸಾಕಷ್ಟು ಗಾಳಿಯಾಡುವ ಕಿಟಕಿಗಳು, ಕಂಡಿಗಳು, ಗಾಳಿ ಹೊರಹಾಕುವ ಪಂಖಗಳಿಂದ ಆವರಣದಲ್ಲಿ ವಿಷಕರ ರಾಸಾಯನಿಕವಿಲ್ಲದಂತೆ ಇರಿಸುವ ಏರ್ಪಾಟುಗಳಿರಬೇಕು. ಕೆಡುಕಿನ ವಸ್ತುಗಳನ್ನು ಕೂಡುಹಾಕಿ ಪರಿಣತರ ಸಲಹೆಯಂತೆ ಅವುಗಳ ವಿಲೇವಾರಿ ಮಾಡಬೇಕು. ಕೆಲಸಗಾರರಿಗೆ ತೊಡುಗೆ, ತೊಳೆತ, ಸ್ನಾನ, ಊಟದ ಮಂದಿರಗಳು, ಪುಷ್ಟಿಕರ ಆಹಾರ–ಇವುಗಳ ಅನುಕೂಲತೆಗಳಿರ ಬೇಕು. ವಿಷಕರ ದೂಳು, ಆವಿ ಇರುವೆಡೆ ಯಾರೂ ಊಟ, ತಿಂಡಿ ತಿನ್ನಬಾರದು. ಪೂರ್ಣ ವೈದ್ಯಪರೀಕ್ಷೆ ಆದ ಮೇಲೆ ಕೆಲಸಗಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದೇ ಅಲ್ಲದೆ ಆಗಾಗ್ಗೆ ಪರೀಕ್ಷಿಸಿ ರೋಗದ ಲಕ್ಷಣಗಳನ್ನು ಎಳೆಯದರಲ್ಲಿ ಕಂಡುಕೊಂಡು ತಕ್ಕ ಚಿಕಿತ್ಸೆ ಮಾಡಿಸಬೇಕು. ಹಾಗೂ ಅವರನ್ನು ಕೆಡುಕಿನ ರಾಸಾಯನಿಕಗಳು ತಾಕದ ಕೆಲಸಗಳಿಗೆ ಬದಲಿಸಬೇಕು. ದಣಿವು, ಮದ್ಯಪಾನಗಳಿಂದ ಅಪಘಾತಗಳು ಹೆಚ್ಚುತ್ತವಲ್ಲದೆ ಕೆಲವು ಕೈಗಾರಿಕೆಗಳ ವಿಷಗಳಿಗೆ ಸುಲಭವಾಗಿ ಈಡಾಗುವುದೂ ಹೆಚ್ಚುವುದು.

**ಕೆಡುಕಿನ ದೂಳುಗಳು :** ದೂಳಿನಿಂದ ಕೆಡುಕಾಗುವುದು ಗೊತ್ತಿದ್ದರೂ ಎಂಥ ದೂಳು ಬಲು ಕೆಡುಕಿನದೆಂದು ಎಲ್ಲರಿಗೂ ಗೊತ್ತಿಲ್ಲ. ಏಕೆಂದರೆ, ತೀರ ಕೆಡುಕಿನದರ ಬಗ್ಗೆ ಹೆಚ್ಚು ಎಚ್ಚರದಿಂದ ಇರಬೇಕಾಗುತ್ತದೆ. ಭಾರತದಲ್ಲಿ ಕಲ್ಲಿದ್ದಲು ಸಾಗಣೆ, ಕಲ್ನಾರು, ಸಿಮೆಂಟು ಮುಂತಾದ ಕಾರ್ಖಾನೆಗಳಲ್ಲಿ ಕೆಲಸಗಾರರು ದೂಳಿಗೆ ಈಡಾಗುವರು. ದೂಳಿನಿಂದ ಕೆಡುಕಾಗಲು ಅದು ಬಲು ನವುರೂ ನುಣುಪೂ ಆಗಿರಬೇಕು. ದಪ್ಪ ಕಣಗಳನ್ನು ಮೂಗಿನ ಕೂದಲುಗಳೇ ತಡೆಯುತ್ತವೆ. ಕಲ್ಲು, ಕಲ್ನಾರು, ಹತ್ತಿಕಾಳು ಇವುಗಳಿಂದೇಳುವ ದೂಳುಗಳು ಮುಖ್ಯವಾದುವು. ಎಷ್ಟೋ ಕಾಲದಿಂದಲೂ ಎದೆಯಲ್ಲಿ ದೂಳು ನೆಲೆಸಿದಾಗ ತೋರಿಬರುವ ರೋಗಕ್ಕೆ ಪುಪ್ಪುಸದೂಳುಬೇನೆ ಎಂದಿದೆ. ಗಣಿ ಕೆಲಸಗಾರರು, ಮರಳು ಸಿಡಿಸುವವರು, ಕಲ್ಲುಬಂಡೆ ಎಬ್ಬಿಸುವವರು, ಕಲ್ಲುಕೊರೆಗರು, ಕಲ್ಲುಕುಟಿಗರು ಕಲ್ಲುದೂಳನ್ನು ಅಂದರೆ ಸಿಲಿಕವನ್ನು ಉಸಿರಲ್ಲಿ ಸೇದಿಕೊಳ್ಳುತ್ತಾರೆ. ಬಹುಮಟ್ಟಿಗೆ ಇದರಿಂದ ಸಿಲಿಕಬೇನೆ (ಸಿಲಿಕೋಸಿಸ್) ಆಗುವುದು (ನೋಡಿ– ಸಿಲಿಕಾಬೇನೆ). ನುಣುಪಾದ ಸಿಲಿಕ ದೂಳು ಪುಪ್ಪುಸಗಳಲ್ಲಿ ಸೇರಿ, ಉರಿತ ಎಬ್ಬಿಸುವುದರಿಂದ ಕಿಗ್ಗಂಟುಗಳು ಆಗುತ್ತವೆ. ಮುಂದೆ ಕ್ಷಯಕ್ಕೆ ಈಡಾಗುವುದೂ ಉಂಟು. ದೂಳೇ ಇಲ್ಲದಂತಾದರೆ ಈ ಬೇನೆಯಿಲ್ಲ. ಆದರೆ ಆಳದ ಗಣಿಯಲ್ಲಿ ಹೀಗೆ ಮಾಡುವುದಾಗದು. ಕಲ್ನಾರಿನ (ಮೆಗ್ನೀಷಿಯಂ, ಕಬ್ಬಿಣಗಳ ಸಿಲಿಕೇಟುಗಳ ಸಂಯುಕ್ತ) ಕೆಲಸಗಾರರಿಗೆ ಪುಪ್ಪುಸದ ಕಲ್ನಾರುಬೇನೆ (ಆಸ್ಬೆಸ್ಟೋಸಿಸ್) ಬರುವುದು. ಕಲ್ನಾರು ಬೇನೆಯವರು ಪುಪ್ಪುಸದ ಏಡಿಗಂತಿಗೆ ಈಡಾಗಬಲ್ಲರು.

ಇಂಗ್ಲೆಂಡಿನಲ್ಲಿ ತೀರ ಸಾಮಾನ್ಯವಾಗಿದ್ದ ಕಲ್ಲಿದ್ದಲ ಗಣಿಕಾರರ ಕ್ಷಯವೆಂಬ ಪುಪ್ಪುಸದ ಇದ್ದಲಬೇನೆ (ಅಂತ್ರಕೋಸಿಸ್) ಈಗ ಗಣಿಯಲ್ಲಿ ಗಾಳಿಯಾಟ ಚೆನ್ನಾದ ಮೇಲೆ ತಗ್ಗಿದೆ. ಈ ಬೇನೆಯವರಿಗೆ ಕ್ಷಯ ಹತ್ತುವುದು ಬಲು ಅಪೂರ್ವ. ಆದರೆ ಪುಪ್ಪುಸದ ಬೇರೆ ಕಾಯಿಲೆಗಳಿಗೆ ಗುರಿಯಾಗುವರು. ಗಿರಣಿಗಳಲ್ಲಿ ಹತ್ತಿ ಹಿಂಜುವಾಗ ಏಳುವ ದೂಳಿನಿಂದ ಗಿರಣಿ ಜ್ವರ, ಅರಳೆಬೇನೆ (ಬಿಸ್ಸಿನೋಸಿಸ್), ನೇಕಾರನ ಕೆಮ್ಮು ಬರಬಹುದು. ಇವಿಷ್ಟೇ ಅಲ್ಲದೆ, ಕೆಲವು ಒಗ್ಗದಿಕೆಯ (ಅಲರ್ಜಿಕ್) ರೋಗಗಳೂ ಇರಬಹುದು.

ಗಾಳಿಯಲ್ಲಿ ದೂಳು ತೇಲಾಡಬಿಡದಂತೆ ನೀರಿಂದ ನೆನೆಸಿ, ಕೆಲಸದೆಡೆಗಳಲ್ಲಿ ಅಡೆ ತಡೆಗಳಿರದೆ ಸರಾಗವಾಗಿ ಆಡುತ್ತಿರುವಂತೆ ಅಲ್ಲಿಯ ಗಾಳಿಯನ್ನು ಸೆಳೆದು ಹೊರ ತಳ್ಳುವ ಸಾಧನಗಳನ್ನೂ ಅಪಾಯಕರ ಆವರಣದ ಕೆಲಸಗಾರರಿಗೆ ಒಳ್ಳೆಯ ಗಾಳಿ ದೊರೆವಂತೆ ಕೃತಕ ಉಸಿರಾಟಿಕಗಳನ್ನೂ ಒದಗಿಸುವುದು, ಆಗಾಗ್ಗೆ ವೈದ್ಯ ಪರೀಕ್ಷೆ ಮಾಡುವುದು– ಇವೇ ಈ ರೋಗಗಳ ಪರಿಹಾರೋಪಾಯ. ರೋಗಿ ಕೆಲಸಗಾರನನ್ನು ಕೆಲಸದಿಂದ ಬಿಡಿಸಬೇಕಾಗಬಹುದು.

**ಏಕಾಣುಜೀವಿಕ ಕಾರಕಗಳು :** ಕೆಲವು ಉದ್ಯೋಗಗಳಲ್ಲಿ ಕೆಲಸಗಾರರಿಗೆ ಏಕಾಣುಜೀವಿ ಗಳು ತಾಕುವ ಸಂಭವವಿದೆ. ದನ, ಕುರಿ, ಮೇಕೆ, ಕುದುರೆಗಳಿಗೆ ಬರುವ ರೋಗ ನೆರಡಿ. ಈ ರೋಗದ ಪ್ರಾಣಿಯ ಜೊಲ್ಲು, ಸಗಣಿಗಳಲ್ಲಿ ರೋಗಾಣುಗಳು ಇರುವುವು. ಕಟುಕರು, ಚರ್ಮ ಹದಕಾರರು, ತೊಗಲು ತುಪ್ಪಟಗಳನ್ನು ಕೂಡಹಾಕಿ ಕೆಲಸ ಮಾಡುವವರಿಗೂ ನೆರಡಿ ಅಂಟಬಹುದು. ಇದೇ ರೀತಿ ಬ್ರೂಸೆಲ್ಲಬೇನೆ (ಬ್ರೂಸೆಲ್ಲೋಸಿಸ್), ಮಾಲ್ಟಾ ಜ್ವರ, ಕೆಲವು ಗಿಡಮರ ಸಂಬಂಧದ ಅಣಬೆ (ಬೂಷ್ಟು) ರೋಗಗಳೂ ಬರುತ್ತವೆ. ಮೊದಲಿನ ಎರಡೂ ಬ್ರೂಸೆಲ್ಲ ಏಕಾಣುಜೀವಿಯಿಂದಾಗಿ ಮೇಕೆ, ದನ, ಹಂದಿಗಳಲ್ಲಿ ತಲೆದೋರಿ, ಅವುಗಳ ಮಾಂಸ, ಮೂತ್ರ, ರಕ್ತ, ಹಾಲು, ಬೆಣ್ಣೆಗಿಣ್ಣುಗಳ ಮೂಲಕ ಮಾನವನಿಗೆ ಸಾಗುತ್ತವೆ. ಆದ್ದರಿಂದ ಭಾರತದ ಮಧ್ಯಪ್ರದೇಶದಲ್ಲಿದ್ದಂತೆ ಮೇಕೆ, ಕುರಿ, ದನ, ಹಂದಿ ಸಾಕುವವರಲ್ಲಿ ಕಾಣಿಸಿಕೊಳ್ಳಬಹುದು. ಚೆನ್ನಾಗಿ ಕುದಿಸಿಯೋ ಉಕ್ಕಾರಿಸಿಯೋ (ಪ್ಯಾಶ್ಚುರೀಕರಣ) ಹಾಲನ್ನು ಕುಡಿಯುವುದು, ರೋಗದ ಅನುಮಾನವಿರುವ ಪ್ರಾಣಿಗಳನ್ನು ಬೇರ್ಪಡಿಸಿ ಕೊಂದು ಸರಿಯಾದ ವಿಲೇವಾರಿ ಮಾಡುವುದು (ಸುಡುವುದು ಇತ್ಯಾದಿ), ಕೆಲಸಗಾರರಿಗೆ ಸರಿಯಾದ ತಿಳಿವಳಿಕೆ ಕೊಡುವುದು, ಪ್ರಾಣಿಗಳಿಗೆ ರೋಗ ಹತ್ತದಂತೆ ಚುಚ್ಚುಮದ್ದು ಕೊಡುವುದೇ ಮೊದಲಾದ ಮುನ್ನೆಚ್ಚರಗಳನ್ನು ಕೈಗೊಳ್ಳಬೇಕು.

**ಭೌತಿಕ ಕಾರಕಗಳು :** ಈ ವಿಜ್ಞಾನ ಯುಗದಲ್ಲಿ ವಿದ್ಯುತ್ ವಿಕಿರಣತೆಯಿಂದ ತಯಾರಿಸಿದ ಸಮಸ್ಥಾನಿಗಳಿಂದ (ಐಸೊಟೋಪ್ಸ್) ವೈದ್ಯ, ಕೈಗಾರಿಕೆ, ಬೇಸಾಯದ ಕ್ಷೇತ್ರಗಳಲ್ಲಿ ಬೆರಗು ಗೊಳಿಸುವಷ್ಟು ಮುನ್ನಡೆಯಾಗಿದೆ. ಅಲ್ಲಿನ ಕೆಲಸಗಾರರು ವಿದ್ಯುತ್ ವಿಕಿರಣತೆಗೆ ಪಕ್ಕಾಗುತ್ತಿದ್ದಾರೆ. 1930ಕ್ಕೂ ಹಿಂದೆ, ಸಾಕಷ್ಟು ತಿಳಿವಿರದೆ, ನೂರಾರು ಕೆಲಸಗಾರರು ರೇಡಿಯಂ ತಾಕಿ ಅಸು ನೀಗಿದರು. ಅಮೆರಿಕದ ಗಡಿಯಾರದ ಕಾರ್ಖಾನೆಗಳಲ್ಲಿ, ಮೀಸೊ ತೋರಿಯಂ, ರೇಡಿಯಂ ಲವಣಗಳಿದ್ದ, ಕತ್ತಲಲ್ಲಿ ಮಿನುಗುವ ರೇಡಿಯಂ ಬಣ್ಣವನ್ನು ಹಚ್ಚುತ್ತಿದ್ದ ಹೆಣ್ಣಾಳುಗಳ ಮೂಳೆಗಳು ಕೊಳೆತು ಮಾರಕ ರಕ್ತ ಕೊರೆ, ಎಲುಬಿನ ಏಡಿಗಂತಿಗಳಿಗೆ ತುತ್ತಾದರು. ಬಣ್ಣ ಹಚ್ಚುವ ಕುಂಚಗಳನ್ನು ಎಂಜಲಿಂದ ಒದ್ದೆ ಮಾಡುತ್ತಿದ್ದುದರಿಂದ ಹೀಗಾಯಿತು. ಯುರೋಪಿನ ಕೆಲಸಗಾರರಿಗೆ ಎಂಜಲು ಮಾಡಬಾರದೆಂದು ಮೊದಲೇ ಎಚ್ಚರಿಸಿದ್ದರಿಂದ ಅವರಾರೂ ಹೀಗೆ ಸಾಯಲಿಲ್ಲ. ಇತ್ತೀಚೆಗೆ ರೇಡಿಯಂ ಬಳಸುವ ಉದ್ಯೋಗಗಳು ಹೆಚ್ಚಿವೆ. ಬಟ್ಟೆ ನೇಯ್ಗೆಯಲ್ಲೂ, ಕಾಗದ ಕಾರ್ಖಾನೆಗಳಲ್ಲೂ ಒಂದಲ್ಲ ಒಂದು ಬಗೆಯ ರೇಡಿಯಂ ಬಳಕೆಯಲ್ಲಿದೆ.

ವಿಕಿರಣಿಕ ಅದಿರನ್ನು ತೆಗೆವ ಗಣಿಕೆಲಸಗಾರರು ವಿಕಿರಣತೆಗೆ ಹೆಚ್ಚಾಗಿ ಮೈಯೊಡ್ಡುವುದು ಇನ್ನೂ ಅಪಾಯಕರ. ವಿಕಿರಣಶಕ್ತ ಕೋಬಾಲ್ಟ್ ಆರ್ಸಿನೈಡ್ ಅದಿರನ್ನು ತೆಗೆವ ಷ್ನಿಬರ್ಗ್ (ಜರ್ಮನಿ) ಗಣಿಕೆಲಸಗಾರರಲ್ಲಿ ಅನೇಕರಿಗೆ ಪುಪ್ಪುಸದ ಏಡಿಗಂತಿಗಳು ಎದ್ದಿವೆ. ಈ ಏಡಿಗಂತಿ ಏಳುವುದು 1878ರಲ್ಲಿ ಮೊದಲು ಗೊತ್ತಾದರೂ ಹಾಗೆಂದು ರುಜುವಾತಾದುದು 1913ರಲ್ಲಿ; ಮತ್ತೆ ಖಚಿತವಾದುದು 1926ರ ಹೊತ್ತಿಗೆ. ಈ ಅಪಾಯವನ್ನು ತಡೆವುದು ತೀರ ಕಷ್ಟ. ಕೆಲಸಗಾರರಿಗೆ ತಾಕುವ ವಿಕಿರಣತೆಯ ಪ್ರಮಾಣವನ್ನು ಗುರುತಿಸಲು, ಬಗೆಬಗೆಯ ವಿಕಿರಣ ಚಟುವಟಿಕೆಯನ್ನು ಅಳೆವ ಸಲಕರಣೆಗಳು ಬಳಕೆಯಲ್ಲಿವೆ: ಗೀಗರ್–ಮುಲ್ಲರ್ ಎಣಿಕ (ಕೌಂಟರ್), ಕೊಡುಗೆಮಾಪಕ (ಡೋಸಿಮೀಟರ್), ಪಟಲ ಪದಕ (ಫಿಲ್ಮ್ ಬ್ಯಾಡ್ಜ್) ಇತ್ಯಾದಿ. ಕೆಲಸಗಾರ ಬಿಟ್ಟ ಉಸಿರಲ್ಲಿನ ರೇಡಾನ್ ಅನಿಲದ ಮಟ್ಟದಿಂದ ಮೈಯಲ್ಲಿನ ಒಟ್ಟು ರೇಡಿಯಂ ಪ್ರಮಾಣ ತಿಳಿಯುತ್ತದೆ. ಕೆಲಸಗಾರ ಬದುಕಿರುವ ತನಕ ದುಡಿದರೂ ಕೆಡಕು ಮಾಡದ ವಿಕಿರಣತೆಯ ಒಪ್ಪಬಹುದಾದ ಪ್ರಮಾಣದ ಮಟ್ಟ ನಿರ್ಧಾರವಾಗಿದೆ.

ಕ್ಷ–ಕಿರಣಗಳು ವೈದ್ಯದಲ್ಲೂ ಕೈಗಾರಿಕೆಗಳಲ್ಲೂ ಹೆಚ್ಚು ಬಳಕೆಯಲ್ಲಿವೆ. ಎಷ್ಟು ದಪ್ಪನೆಯ ಪದಾರ್ಥದ ಮೂಲಕ ತೂರಬಿಡಬೇಕು ಎನ್ನುವಂತೆ, ಈ ಕಿರಣಗಳ ಶಕ್ತಿ ಇರುತ್ತದೆ. ರಬ್ಬರ್ ಅಟ್ಟೆಗಳಲ್ಲಿ ಲೋಹದ ತಗಡು ಇರುವ ತಾವನ್ನು ಕಾಣಲು ಮೆತು ಕಿರಣಗಳು ಸಾಕಾಗುವುದಾದರೂ ಲೋಹಗಳ ಎರಕಗಳಲ್ಲಿನ ಒಡಕು, ಬಿರುಕುಗಳನ್ನು ಕಾಣಿಸಲು ಗಡುಸಾದ ಕಿರಣಗಳೇ ಬೇಕು. ಇಷ್ಟಾದರೂ ಆಸ್ಪತ್ರೆ ವೈದ್ಯವೃತ್ತಿಯಲ್ಲಿ ಇವುಗಳ ಅಪಾಯ ಅಗಾಧವಾಗಿತ್ತು. ಮರೆಮಾಡುವ ತಕ್ಕ ಸಾಧನ, ಏರ್ಪಾಟುಗಳಿಂದ ಇದೀಗ ತಗ್ಗಿದೆ. ಮುರಿದಿರುವ ಮೂಳೆಗಳನ್ನು ಕ್ಷ–ಕಿರಣಗಳ ಅಡಿಯಲ್ಲಿ ಬಹಳ ಹೊತ್ತು ಕೈಯಾಡಿಸಿ ಸರಿಪಡಿಸುವ ಶಸ್ತ್ರವೈದ್ಯ, ರೋಗಿ ಮತ್ತಿತರರಿಗೂ ಈ ಕಿರಣಗಳಿಂದ ಅಪಾಯಕರ ಎಂಬುದನ್ನು ಮರೆವುದು ಸಾಮಾನ್ಯ. ಹೀಗೇ ವಿಕಿರಣ ಪಟುಗಳು ಕೂಡ ತಕ್ಕ ಕಾಪುಕವಚ ಬಳಸದಿದ್ದಲ್ಲಿ ಬಿಳಿಕಣರಕ್ತತೆಯಿಂದ (ಲುಕೀಮಿಯ) ನರಳುವರು. ಈ ಕೆಲಸಗಾರರ ಆಗಾಗಿನ ವೈದ್ಯಪರೀಕ್ಷೆ ಬಲು ಮುಖ್ಯ. ರಕ್ತ, ಕಣ್ಣು ಇತ್ಯಾದಿಗಳ ಪರೀಕ್ಷೆಗಳನ್ನು ಕಡ್ಡಾಯಪಡಿಸಬೇಕು.

ಸಂಶೋಧಕರೂ ಕಾರ್ಖಾನೆಗಳಲ್ಲಿನವರೂ ವಿಕಿರಣತೆಗೆ ಈಡಾಗುವರು. ಸೀಸಗೂಡಿರುವ ಗಾಜಿನ ಕನ್ನಡಕ, ಮುಂಗವಚ, ಕೈಗವುಸು ಇತ್ಯಾದಿಗಳಿಂದ ಇವರನ್ನು ಕಾಪಾಡಬೇಕು. ಸೇನೆಯ ಚಟುವಟಿಕೆಗಳಲ್ಲಿ ದೂರದ ಘನವಸ್ತುಗಳ ನೆಲೆ ಹಿಡಿಯಲು ಕ್ಲಿಸ್ ಟ್ರಾನ್ ಎಂಬ ಕ್ಷ-ಕಿರಣ ಸೂಸುವ ಹೆಚ್ಚು ವೋಲ್ಟಿನ ರಾಡಾರ್ ಉಪಕರಣ ಬಳಕೆಯಲ್ಲಿದೆ. ಈ ಕಿರಣಗಳಿಂದ ಕಾವು ಹುಟ್ಟುವುದು ಮಾತ್ರ ಗೊತ್ತಿದೆ.

ಭೂಮಿಯ ಸುತ್ತಣ ಆಕಾಶಯಾನದಲ್ಲಿ ಗುರುತ್ವದ ಸೆಳೆತವಿರದೆ ಮೈ ಉಜ್ಜಾಟದ ತೊಡಕುಗಳಾಗಿ, ಮೈ ಕಾವು ಏರುಪೇರಾಗುತ್ತದೆ. ಗೊತ್ತಿದ್ದುದಕ್ಕಿಂತ ಹೆಚ್ಚು ವಿದ್ಯುತ್ ವಿಕಿರಣತೆ ಭೂಮಿಯ ಸುತ್ತಣ ಆವರಣಗಳಲ್ಲಿ ಇರುವುದು ಈಗ ಖಚಿತವಾಗಿದೆ. ಇದರ ತಿಳಿವೂ ನಮಗೆ ಸಾಲದು.

ಹಿಮಾಲಯದಂಥ ಪರ್ವತಗಳಲ್ಲಿ ಬೇಗಬೇಗನೆ ಎತ್ತರಕ್ಕೆ ಏರಿ ಹೋಗುವವರಲ್ಲಿ ಸಾಮಾನು ಹೊರುವವರಲ್ಲಿ ಪರ್ವತದ ನರಳಿಕೆ (ಮೌಂಟನ್ ಸಿಕ್‌ನೆಸ್) ಆಗುತ್ತದೆ. ತಲೆನೋವು, ವಾಂತಿ, ಸುಸ್ತು, ತಲೆತಿರುಗು, ಕೆಲವೇಳೆ ಅದಿರುಗಣ್ಣಾಗಿ ಬವಳಿ ಬರುವುದೂ ಉಂಟು. ನಿಧಾನವಾಗಿ ಮೇಲೇರುವುದೇ ಇದರ ಉಪಾಯ. ಬಲು ಹೆಚ್ಚಿನ ಗಾಳಿ ಆವರಣದ ಒತ್ತಡಗಳಿಗೆ ಈಡಾಗುವವರು, ಮುಳುಗುವವರು ಮತ್ತಿತರ ಕೆಲಸಗಾರರಲ್ಲಿ ಕಾಣಬರುವ, ಒತ್ತುಕಳೆವ ಬೇನೆಯಾದ ಹದಿಗೂಡಿನ ರೋಗವನ್ನು ಬೇರೆಯಾಗಿ ಕೊಟ್ಟಿದೆ.

(ಆರ್.ಎಸ್.ವಿ.; ಸಿ.ಸಿ.ಪಿ.)

**ಅಪಾಯಕಾರಿ ಪ್ರಾಣಿಗಳು, ವಸ್ತುಗಳು, ಕಟ್ಟಡಗಳು :** ಪ್ರತಿಯೊಬ್ಬ ನಾಗರಿಕನಿಗೂ ಆಸ್ತಿಸಂಗ್ರಹದ ಸಂಪೂರ್ಣ ಹಕ್ಕುಗಳಿದ್ದರೂ ಅವು ನಿರ್ಬಂಧಿತವಾಗಿಲ್ಲ. ತಾನು ಸಂಗ್ರಹಿಸಿದ ಪ್ರಾಣಿಗಳು ವಸ್ತುಗಳು (ಚಾಟಲ್ಸ್) ಮತ್ತು ಕಟ್ಟಡಗಳು (ಸ್ಟ್ರಕ್ಚರ್ಸ್)-ಇವುಗಳಿಂದ ಅನ್ಯರಿಗೆ ಅಪಾಯವಾಗದಂತೆ ನೋಡಿಕೊಳ್ಳುವುದು ಆತನ ಮುಖ್ಯ ಕರ್ತವ್ಯ.

**ಅಪಾಯಕಾರಿ ಪ್ರಾಣಿಗಳು :** ಪ್ರಾಣಿಗಳಲ್ಲಿ ಕ್ರೂರ ಮತ್ತು ಸಾಧು ಎಂಬ ಎರಡು ಬಗೆಗಳಿವೆ. ಸಾಮಾನ್ಯವಾಗಿ ಕಾಯಿದೆಯ ದೃಷ್ಟಿಯಿಂದ ಸಿಂಹ, ಹುಲಿ, ಆನೆ, ಹಾವು ಇತ್ಯಾದಿಗಳು ಮೊದಲನೆಯ ವರ್ಗಕ್ಕೆ ಸೇರಿದರೆ, ಬೆಕ್ಕು, ನಾಯಿ, ಆಕಳು, ಕೋಳಿ, ಕುದುರೆ ಮತ್ತು ಒಂಟೆ ಇತ್ಯಾದಿಗಳು ಎರಡನೆಯ ವರ್ಗಕ್ಕೆ ಸೇರುತ್ತವೆ. ವಸ್ತುಸ್ಥಿತಿ ಹೀಗಿದ್ದರೂ ಪ್ರಾಣಿಯ ಕ್ರೌರ್ಯ ಸಾಧುತ್ವಗಳ ನಿರ್ಣಯ ಕಾಯಿದೆಯ ಪ್ರಶ್ನೆಯಾಗಿದೆ. ತನ್ನ ಸ್ವಾಧೀನದಲ್ಲಿರತಕ್ಕ ಪ್ರಾಣಿಗಳು ಅನ್ಯರ ಭೂಮಿಯನ್ನು ಅತಿಕ್ರಮಿಸಿದರೆ ಅನ್ಯರಿಗೆ ತೊಂದರೆ ನೀಡಿದರೆ ತನ್ನ ಅಲಕ್ಷ್ಯದ ಮೂಲಕ ಅನ್ಯರಿಗೆ ಹಾನಿಯನ್ನುಂಟುಮಾಡಿದರೆ ಆತ ಆ ಹಾನಿಗೆ ಹೊಣೆಯಾಗುತ್ತಾನೆ.

ಸಾಧುಪ್ರಾಣಿಗಳಿಂದ ಅಪಾಯಗೊಂಡ ವಾದಿ ದಾವೆಯನ್ನು ತಂದಾಗ ಅದರ ಒಡೆಯನಿಗೆ ತನ್ನ ಪ್ರಾಣಿಯ ಸಾಧುತ್ವ ಕ್ರೂರತ್ವಗಳ ಬಗ್ಗೆ ತಿಳಿವಳಿಕೆ ಇದೆಯೇ ಎಂಬುದು ಗಮನಿಸಬೇಕಾದ ವಿಷಯ. ಕ್ರೂರಪ್ರಾಣಿಯಿಂದ ಅಪಾಯ ನೇರವಾಗಿ ಸಂಭವಿಸಿದ್ದರೆ, ಅಪಾಯಗೊಂಡ ವಾದಿ ದಾವೆಯನ್ನು ತಂದಾಗ ಅದರ ಒಡೆಯನಿಗೆ ತನ್ನ ಪ್ರಾಣಿಯ ಕ್ರೌರ್ಯ ಸಾಧುತ್ವಗಳ ಬಗ್ಗೆ ತಿಳಿವಳಿಕೆ ಇದೆಯೋ ಇಲ್ಲವೋ ಎಂಬ ಪ್ರಮೇಯವನ್ನು ಎತ್ತಬೇಕಿಲ್ಲ; ಅಪಾಯ ಯಾವ ಸ್ಥಳದಲ್ಲಿ ಜರುಗಿದೆ ಎಂಬುದನ್ನು ವಿಚಾರಿಸಬೇಕಿಲ್ಲ. ಈ ಬಗೆಯ ವ್ಯಾಜ್ಯಪ್ರಸಂಗದಲ್ಲಿ ಅದರ ಒಡೆಯ (ಉದಾ: ಸರ್ಕಸ್ ಒಡೆಯ) ಮತ್ತು ಆ ಪ್ರಾಣಿಯನ್ನು ಸ್ವಾಧೀನದಲ್ಲಿಟ್ಟುಕೊಂಡವ (ಸರ್ಕಸ್ಸಿನ ಹಿಂಸ್ರಪ್ರಾಣಿಗಳಿಗೆ ತರಬೇತಿ ನೀಡುವವ) ಅಪರಾಧಕ್ಕೆ ಹೊಣೆಯಾಗುತ್ತಾರೆ. ಒಂದು ವೇಳೆ ಹಿಂಸ್ರಪ್ರಾಣಿಯೊಂದು ಕೈಮೀರಿ ಹೋಗಿ ಅಪಾಯವೆಸಗುತ್ತ ನಡೆದರೆ ಅದು ತನ್ನ ಮೂಲ ನೆಲೆಯನ್ನು ಸೇರುವವರೆಗೆ ಇಲ್ಲವೆ ಇನ್ನೊಬ್ಬರ ಶಾಶ್ವತ ಸ್ವಾಧೀನಕ್ಕೆ ಒಳಗಾಗುವವರೆಗೆ ಜರುಗಿದ ಎಲ್ಲ ಅಪಾಯಗಳಿಗೂ ಮಾಲೀಕರೇ ಹೊಣೆಯಾಗುತ್ತಾರೆ.

ಈ ಅಪಾಯಕ್ಕೆ 1. ಕೇವಲ ವಿಧಿಯ ಕೈವಾಡ; 2. ವಾದಿ ಪ್ರತಿವಾದಿಯರನ್ನುಳಿದು ಮೂರನೆಯವನ ಕೈವಾಡ; 3. ವಾದಿ ಮಾಡಿದ ಪೂರ್ಣ ತಪ್ಪು; 4. ವಾದಿ ಪ್ರತಿವಾದಿ ಇಬ್ಬರ ತಪ್ಪು; 5. ಸಂಭವಿಸಲಿರುವ ಪರಿಣಾಮಗಳಿಗೆಲ್ಲ ತಾನೇ ಹೊಣೆ ಎಂದು ಸಮ್ಮತಿ ನೀಡಿ ಅದರ ಹತ್ತಿರ ಹೋದುದು-ಇವುಗಳಲ್ಲಿ ಯಾವುದಾದರೂ ಕಾರಣವೆಂದು ತೋರಿಸಿಕೊಟ್ಟಲ್ಲಿ ಆ ಪ್ರಾಣಿಯ ಒಡೆಯನಾಗಲಿ ಸ್ವಾಧೀನಗಾರನಾಗಲಿ ಬಾಧ್ಯನಾಗುವುದಿಲ್ಲ.

**ಅಪಾಯಕಾರಿ ವಸ್ತುಗಳು :** ಇವುಗಳ ಬಗ್ಗೆ ಉತ್ಪಾದಕ ಮತ್ತು ಒಡೆಯ ಇವರು ವಿಶೇಷ ಎಚ್ಚರಿಕೆ ವಹಿಸಬೇಕೆಂದು ಕಾಯಿದೆ ಆಶಿಸುತ್ತದೆ. ತಪ್ಪಿದಲ್ಲಿ ಸಂಭವಿಸಿದ ಅಪಾಯಗಳಿಗೆ ಅವರು ಹೊಣೆಯಾಗುತ್ತಾರೆ. ಅಪಾಯಕಾರಿ ವಸ್ತುಗಳಲ್ಲಿ ಎರಡು ವಿಧ: 1. ನೈಸರ್ಗಿಕ ನೇರ. ಉದಾ: ವಿಷ, ಮದ್ದುಗುಂಡುಗಳಿಂದ ತುಂಬಿದ ತೋಟ, ಸ್ಫೋಟಕವಸ್ತು ಇತ್ಯಾದಿ. 2. ಉತ್ಪಾದನೆಯ ದೋಷದಲ್ಲಿ ಅಡಗಿರುವುದು. ಉದಾ: ವಿಷಘಟಕಗಳನ್ನೊಳಗೊಂಡ ಪೇಯ, ಬಟ್ಟೆ ಇತ್ಯಾದಿ ಮತ್ತು ಅನಿರೀಕ್ಷಿತ ವಿಷಘಟಕಗಳನ್ನೊಳಗೊಂಡ ಪೇಯ, ಆಹಾರ, ಇತ್ಯಾದಿ. ಇವುಗಳಲ್ಲಿ ಎರಡನೆಯದು ನಿರಪಾಯಕಾರಿ ಯೆಂಬ ಭ್ರಮೆಯನ್ನುಂಟುಮಾಡಿ ಬಹಳ ಸಲ ಮೊದಲಿನದಕ್ಕಿಂತ ಹೆಚ್ಚು ಹಾನಿಯನ್ನುಂಟು ಮಾಡುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ಸಾಮಾನ್ಯವಸ್ತುಗಳಿಂದ ಸಹ ಅಪಾಯ ಜರುಗುವ ಸಂಭವವಿದೆ. ಉದಾ: ಮೂರುಕಾಲಿನ ಕುರ್ಚಿ ಇತ್ಯಾದಿ. ಇಂಥ ವಸ್ತುಗಳ ಅಪಾಯದ ಹೊಣೆ ಮಾರಾಟಗಾರ ಮತ್ತು ಗ್ರಾಹಕ ಇವರ ನಡುವಿನ ವ್ಯಾಪಾರನಿಬಂಧನೆ ಗಳಿಗನುಸರಿಸಿ ವಿವಿಧವಾಗಿರುತ್ತದೆ. ಗ್ರಾಹಕ ತಾನು ಸ್ವೀಕರಿಸಿದ ವಸ್ತುವಿನಿಂದುಂಟಾದ ಅಪಾಯಕ್ಕೆಲ್ಲ ತಾನೇ ಹೊಣೆ ಎಂದು ಒಪ್ಪಿಗೆ ನೀಡಿದರೆ ಮಾರಾಟಗಾರ ತನಗೆ ಗೊತ್ತಿದ್ದ ಅದರ ಗುಪ್ತದೋಷಗಳನ್ನು ಸಹ ವ್ಯಕ್ತಗೊಳಿಸುವ ಆವಶ್ಯಕತೆ ಇಲ್ಲ. ಆದರೆ ವಸ್ತುವೊಂದನ್ನು ಪುಕ್ಕಟೆಯಾಗಿ ಶಾಶ್ವತವಾಗಿ ಇಲ್ಲವೆ ಕೆಲಕಾಲದವರೆಗೆ ಕೊಡುವವನು ತನಗೆ ಗೊತ್ತಿದ್ದ ಅದರ ದೋಷಗಳನ್ನು ವ್ಯಕ್ತಗೊಳಿಸಬೇಕಾದ್ದು ಆತನ ಕರ್ತವ್ಯ.

ಒಂದು ವಸ್ತುವಿನಿಂದುಂಟಾದ ಅಪಾಯಕ್ಕೆ ದುರುದ್ದೇಶವಾಗಲಿ ದುರ್ಲಕ್ಷ್ಯವಾಗಲಿ ಕಾರಣವಿರಬಹುದು. ಉತ್ಪಾದಕನ ದುರುದ್ದೇಶದ ಹೊಣೆಯ ಬಗ್ಗೆ ಎಂದೂ ಸಂಶಯವಿದ್ದಿಲ್ಲ. ಉತ್ಪಾದಕನ ದುರ್ಲಕ್ಷ್ಯದ ವಿಷಯದಲ್ಲಿ ಕಾಯಿದೆ ಸಂದಿಗ್ಧವಾಗಿತ್ತು. 1932ರಲ್ಲಿ ಡೊನೋಗ್ ಪ್ರತಿ ಸ್ಟಿವನ್‌ಸನ್ ದಾವೆಯ ನಿರ್ಣಯದ ಅನಂತರ ಉತ್ಪಾದಕ ಕೊನೆಯ ಗ್ರಾಹಕನವರೆಗೂ ತನ್ನ ಅಲಕ್ಷ್ಯದಿಂದಾಗುವ ಹಾನಿಗೆ ಜವಾಬ್ದಾರ ಎಂಬ ನಿರ್ಣಯವಾಯಿತು.

ಉತ್ಪಾದನೆಯಲ್ಲಿ ಯೋಗ್ಯ ಎಚ್ಚರಿಕೆ ವಹಿಸುವುದು ಉತ್ಪಾದಕನ ಕರ್ತವ್ಯ. ಒಂದುವೇಳೆ ಆ ಉತ್ಪಾದನೆಯಲ್ಲಿ ದೋಷವಿದ್ದರೆ ವಾದಿ ಅದನ್ನು ಸಿದ್ಧಮಾಡಿಕೊಡಬೇಕು. ಆದರೂ ಪ್ರತಿವಾದಿ ಉತ್ಪಾದನೆಯ ಮಟ್ಟಿಗೆ ಅನ್ಯರಿಗೆ ಅಪಾಯವಾಗದಂತೆ ಯೋಗ್ಯ ಎಚ್ಚರಿಕೆ ವಹಿಸಿರುವನೆಂದು ಸಿದ್ಧಮಾಡಿ ಕೊಟ್ಟಲ್ಲಿ ದೋಷಮುಕ್ತನಾಗುತ್ತಾನೆ.

**ಅಪಾಯಕಾರಿ ಕಟ್ಟಡಗಳು:** ಕಟ್ಟಡ ಎಂಬ ಶಬ್ದದಲ್ಲಿ ಬಯಲುಭೂಮಿ, ಮನೆ, ರೈಲು ನಿಲ್ದಾಣ, ಸೇತುವೆ ಮೊದಲಾದ ಸ್ಥಾವರವಸ್ತುಗಳು ಅಲ್ಲದೆ ಕಾಯಿದೆ ಪ್ರಕಾರ ಮೋಟಾರು, ಬಸ್ಸು, ರೈಲು ಡಬ್ಬಿ, ವಿದ್ಯುತ್ ತೊಟ್ಟಿಲು ಮುಂತಾದ ಜಂಗಮವಸ್ತುಗಳೂ ಸೇರಿವೆ. ಇವುಗಳ ಸುಸ್ಥಿತಿಯ ಬಗ್ಗೆ ಯೋಗ್ಯ ಎಚ್ಚರ ವಹಿಸುವುದು ಸ್ವಾಧೀನಸ್ಥನ ಕರ್ತವ್ಯ. ಈ ಕರ್ತವ್ಯವಿಮುಖತೆಯಿಂದ ನೆರೆಹೊರೆಯವರಿಗೆ, ಸಾರ್ವಜನಿಕರಿಗೆ ಸಂಭವಿಸುವ ಅಪಾಯಕ್ಕೆ ಆತ ಹೊಣೆಯಾಗುತ್ತಾನೆ. ಈ ಹೊಣೆ ಸಾರ್ವಜನಿಕ ಮನ್ನಣೆ, ಆಮಂತ್ರಿತ ರೂಪದ ಮನ್ನಣೆಗಳ ಪ್ರಸಂಗದಲ್ಲಿ ಉದ್ಭವಿಸುತ್ತದೆ.

ಇಂಥ ಕಟ್ಟಡವನ್ನು ಪ್ರವೇಶಮಾಡುವ ವ್ಯಕ್ತಿಗಳು ನಾನಾ ಬಗೆಯವರಾಗಿರುತ್ತಾರೆ. ಕರಾರು ರೂಪದಲ್ಲಿ ವ್ಯವಹರಿಸುವ ವ್ಯಕ್ತಿ, ಸ್ವಹಿತಸಾಧಿಸಿಕೊಳ್ಳಲು ಮನ್ನಣೆ ಪಡೆದುಬಂದ ವ್ಯಕ್ತಿ, ಮನ್ನಣೆ ಪಡೆಯದೆ ಅತಿಕ್ರಮಣರೂಪದಲ್ಲಿ ಬಂದವ್ಯಕ್ತಿ, ಹೀಗೆ. ಇಂಥವರ ವಿಷಯದಲ್ಲಿ ಕಟ್ಟಡದಿಂದಾಗಬಹುದಾದ ಅಪಾಯದ ಬಗ್ಗೆ ಕಟ್ಟಡದ ಮಾಲೀಕನ ಜವಾಬ್ದಾರಿ ಕ್ರಮೇಣ ಕಡಿಮೆಯಾಗುತ್ತ ಬರುತ್ತದೆ. ನಾಲ್ಕನೆಯವನ ವಿಷಯದಲ್ಲಿ ಮಾಲೀಕನ ಜವಾಬ್ದಾರಿ ಏನೂ ಇಲ್ಲವೆನ್ನಬಹುದು.

ಕರಾರು ರೂಪದಲ್ಲಿ ವ್ಯವಹರಿಸಿ ಕಾರ್ಯನಿರ್ವಹಿಸಿಕೊಡುವ ವ್ಯಕ್ತಿ ಕಂಟ್ರ್ಯಾಕ್ಟರ್ ಎನಿಸಿಕೊಳ್ಳುತ್ತಾನೆ. ಉದಾ: ಮನೆಯಲ್ಲಿನ ವಿದ್ಯುದ್ದೀಪವನ್ನು ಸರಿಗೊಳಿಸಲು ಬಂದವ. ಈತನಿಗೆ ಅಪಾಯವಾಗದಂತೆ ತನ್ನ ಕಟ್ಟಡವನ್ನು ಸುಸ್ಥಿತಿಯಲ್ಲಿಡುವುದು ಮಾಲೀಕನ ಪೂರ್ಣಕರ್ತವ್ಯವಾಗಿದೆ. ಒಂದು ವೇಳೆ ಅಪಾಯ ಜರುಗಿದ್ದಲ್ಲಿ ಅದಕ್ಕೆ ಸೇವಕ ಗುತ್ತಿಗೆದಾರ ಇವರು ಕಾರಣರಾಗಿದ್ದರೂ ಮಾಲೀಕನೇ ಹೊಣೆಯಾಗುತ್ತಾನೆ.

ತನ್ನ ಮತ್ತು ಮಾಲೀಕನ ಹಿತಸಾಧನೆಗಾಗಿ ಬರುವವ ಆಮಂತ್ರಿತ (ಇನ್‌ವೈಟೀ) ಎನ್ನಿಸಿಕೊಳ್ಳುತ್ತಾನೆ. ಉದಾ: ವ್ಯಾಪಾರದ ಉದ್ದೇಶದಿಂದ ಆಗಮಿಸಿದ ಗ್ರಾಹಕ. ಕಟ್ಟಡದಿಂದ ಒದಗಬಹುದಾದ ಅಪಾಯಗಳನ್ನು ಆಮಂತ್ರಿತನಿಗೆ ಮೊದಲೇ ತಿಳಿಸಬೇಕಾದ್ದು ಮಾಲೀಕನ ಕರ್ತವ್ಯ. ಇಲ್ಲೂ ಕೂಡ ಸೇವಕ ಇಲ್ಲವೆ ಗುತ್ತಿಗೆದಾರನಿಗಿಂತ ಮಾಲೀಕನ ಹೊಣೆಯೇ ಹೆಚ್ಚು. ಒಂದು ವೇಳೆ ಆಮಂತ್ರಿತನಿಗೆ ಅಪಾಯದ ಪೂರ್ಣಜ್ಞಾನ ಮತ್ತು ಪರಿಣಾಮಗಳ ಅರಿವು ಇದ್ದಲ್ಲಿ ಮಾಲೀಕ ಆತನ ಬಗ್ಗೆ ಎಚ್ಚರವಹಿಸುವ ಕಾರಣವಿಲ್ಲ.

ಮಾಲೀಕನ ಗುಪ್ತ ಇಲ್ಲವೆ ವ್ಯಕ್ತ ಅಪ್ಪಣೆ ಪಡೆದು ಕೇವಲ ತನ್ನ ಹಿತಸಾಧನೆಗಾಗಿ ಬರುವವ ಲೈಸೆನ್ಸ್‌ದಾರ. ಉದಾ: ನಮ್ಮ ಸೀಮೆಯಲ್ಲಿಯ ಗೊಬ್ಬರಸಾಗಿಸಲು ಬರುವವ. ತನಗೆ ಗೊತ್ತಿರುವ ಎಲ್ಲ ರೂಪದ ಗುಪ್ತಗಂಡಾಂತರಗಳ ಬಗ್ಗೆ ಲೈಸೆನ್ಸ್‌ದಾರನಿಗೆ ಸೂಚನೆ ಕೊಡುವುದು ಮಾಲೀಕನ ಕರ್ತವ್ಯ. ಆದರೆ ಉದ್ದೇಶ ಪೂರ್ವಕವಾಗಿ ಹೊಸ ಗಂಡಾಂತರಗಳನ್ನು ಒಡ್ಡಬಾರದು. ಲೈಸೆನ್ಸ್‌ದಾರ ಮಾಲೀಕನಿಗೆ ಗೊತ್ತಿದ್ದು ತನಗೆ ಗೊತ್ತಿರದ ಯಾವುದೇ ಅಪಾಯಕ್ಕೆ ಒಳಗಾದರೂ ಮಾಲೀಕನಿಂದ ಪರಿಹಾರ ಪಡೆಯಬಹುದು.

ಉಪಭೋಕ್ತೃವಿನ ಅಪ್ಪಣೆ ಇಲ್ಲದೆ ಆತನ ಕಟ್ಟಡವನ್ನು ಉಪಭೋಗಿಸುವವ ಅಕ್ರಮ ಪ್ರವೇಶಕ ಎನಿಸಿಕೊಳ್ಳುತ್ತಾನೆ. ಈತನಿಗೆ ಉಪಭೋಕ್ತೃವಿನ ಒಪ್ಪಿಗೆಯಾಗಲೀ ಮನ್ನಣೆಯಾಗಲೀ ಇರುವುದಿಲ್ಲ. ಅಲ್ಲಿಯ ಅಪಾಯಗಳಿಗೆ ಆತನೇ ಹೊಣೆ. ಆತನಿಗೆ ಗಂಡಾಂತರಗಳ ಬಗ್ಗೆ ಉಪಭೋಕ್ತೃ ಎಚ್ಚರಿಕೆ ಕೊಡಬೇಕಾಗಿಲ್ಲವಾದರೂ ಉದ್ದೇಶಪೂರ್ವಕ ಅಪಾಯಗಳನ್ನು ಒಡ್ಡಕೂಡದು. ಆದರೆ ತನ್ನ ಆಸ್ತಿರಕ್ಷಣೆಯ ಮಟ್ಟಿಗೆ ಯೋಗ್ಯಕ್ರಮ ತೆಗೆದುಕೊಳ್ಳಬಹುದು. ಬಂದವ ಅಕ್ರಮ ಪ್ರವೇಶಕ ಎಂದು ಗೊತ್ತಾದಮೇಲೂ ಆತನಿಗೆ ಉದ್ದೇಶಪೂರ್ವಕ ಯಾವ ಅಪಾಯವಾಗದಂತೆ ಕ್ರಮ ತೆಗೆದುಕೊಳ್ಳುವುದು ಉಪಭೋಕ್ತೃವಿನ ಕರ್ತವ್ಯ.

(ಎಸ್.ಎಸ್.ಎ.)

**ಅಪೀಲು :** ಮೇಲ್ಮನವಿ, ಮೊರೆ. ಬೇಡಿಕೆಯೆಂಬ ಅರ್ಥದಲ್ಲಿ ಕನ್ನಡ ವ್ಯವಹಾರದಲ್ಲಿ ಬಳಕೆಗೆ ಬಂದಿರುವ ಇಂಗ್ಲಿಷ್ ಪದ. ನ್ಯಾಯವ್ಯವಹಾರದಲ್ಲಿ ಒಂದು ನ್ಯಾಯಾಲಯ ಕೊಟ್ಟ ತೀರ್ಪು ಸರಿಯಾಗಿಲ್ಲವೆಂದು ತೋರಿದಾಗ ಅದನ್ನು ಪರಿಶೀಲಿಸಲು ಮೇಲ್ಮನವಿ ನ್ಯಾಯಾಲಯಗಳಿವೆ (ಅಪೀಲ್ ಕೋರ್ಟ್ಸ್). ತನಗೆ ಅನ್ಯಾಯವಾಗಿದೆಯೆಂದು ತಿಳಿದಿರುವ ಯಾರೇ ಆಗಲಿ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅವಕಾಶವಿದೆ. ಯಾರು ಯಾವ ಸಂದರ್ಭದಲ್ಲಿ ಯಾವ ಮೇಲ್ಮನವಿ ನ್ಯಾಯಲಯಕ್ಕೆ ಬೇಡಿಕೆ ಸಲ್ಲಿಸಬೇಕೆಂಬುದನ್ನು ಕಾನೂನು ವಿಶದವಾಗಿ ವಿವರಿಸಿದೆ. ವ್ಯವಹಾರ (ಸಿವಿಲ್) ವ್ಯಾಜ್ಯಗಳ ವಿಷಯ ವ್ಯವಹಾರ ಪ್ರಕ್ರಿಯಾಸಂಹಿತೆಯಲ್ಲಿದೆ (ಸಿವಿಲ್ ಪ್ರೊಸೀಜರ್ ಕೋಡ್). ಅಪರಾಧಿಕ (ಕ್ರಿಮಿನಲ್) ವ್ಯಾಜ್ಯಗಳ ವಿಷಯವನ್ನು ದಂಡಪ್ರಕ್ರಿಯಾಸಂಹಿತೆ (ಕ್ರಿಮಿನಲ್ ಪ್ರೊಸೀಜರ್ ಕೋಡ್) ವಿವರಿಸುತ್ತದೆ. ಅಲ್ಲದೆ ವಿಶೇಷ ಶಾಸನಗಳಲ್ಲಿ ಮೇಲ್ಮನವಿಯ ಬಗ್ಗೆ ವಿವರಗಳಿವೆ. ಸರ್ವೋಚ್ಚ ನ್ಯಾಯಾಲಯಕ್ಕೆ (ಸುಪ್ರೀಮ್ ಕೋರ್ಟ್) ಮೇಲ್ಮನವಿ ಸಲ್ಲಿಸುವ ವಿಧಿನಿಯಮಗಳು ಸಂವಿಧಾನದಲ್ಲಿ ಬಂದಿವೆ.

ಯಾವ ನ್ಯಾಯಾಲಯವೇ ಆಗಲಿ ಕೊಡುವ ತೀರ್ಪು ತಪ್ಪಾಗಲು ಸಾಧ್ಯವೇ? ಅಂತಿಮವಾಗಿ ಮೇಲ್ಮನವಿಯ ಆಧಾರದ ಮೇಲೆ ನ್ಯಾಯಾಲಯ ಕೊಡುವ ತೀರ್ಪು ತೀರ ಸತ್ಯವಾದುದೆ? ನ್ಯಾಯ ತೀರ್ಮಾನಕ್ಕೂ ಒಂದು ಮಿತಿ ಇದೆ. ಯಾವ ಪರಿಶೀಲನೆಗೂ ಒಂದು ಮಿತಿ ಇರಬೇಕಾದುದು ಅಗತ್ಯ. ಇರಬಹುದಾದ ಲೋಪ ದೋಷಗಳ ನಿವಾರಣೆಯೇ ಮೇಲ್ಮನವಿ ನ್ಯಾಯಾಲಯಗಳ ಗುರಿ. ಅಂತಿಮ ತೀರ್ಪು ಸರಿಯಾಗಿರಲೀ ತಪ್ಪಾಗಿರಲೀ ಅದಕ್ಕೆ ಎಲ್ಲರೂ ಬದ್ಧರು. ಅದರ ಮೇಲೆ ಮತ್ತೆ ಮನವಿ ಇಲ್ಲ. ಅಲ್ಲಿಯವರೆಗೆ ನ್ಯಾಯಕ್ಕಾಗಿ ಮನವಿ ಸಲ್ಲಿಸುವ ಅವಕಾಶ ಮಾತ್ರ ಎಲ್ಲರಿಗೂ ಉಂಟು. (ಎಲ್.ಎಸ್.)

**ಅಪೂರ್ವ :** ಯಜ್ಞಯಾಗಾದಿಕರ್ಮಗಳಿಂದ ನಿಯತಕಾಲಾವಧಿಯಲ್ಲಿ ನಷ್ಟವಾದರೂ ಕಾಲಾಂತರದಲ್ಲಿ ಸ್ವರ್ಗಾದಿಫಲಗಳು ತಪ್ಪದೆ ಹೇಗೆ ಉಂಟಾಗುತ್ತವೆಂಬುದರ ಬಗ್ಗೆ ಪೂರ್ವ ಮೀಮಾಂಸಕರು ಕಲ್ಪಿಸಿರುವ ಪರಿಹಾರ ಕರ್ಮ ನಷ್ಟವಾದರೂ ಕಣ್ಣಿಗೆ ಕಾಣದ ಒಂದು ಅಪೂರ್ವ ಚಿರಸ್ಥಾಯಿಯಾಗಿ ಉತ್ಪನ್ನವಾಗಿ ಯಜ್ಞಕರ್ತೃವಿಗೆ ಫಲ ದೊರೆಯುವವರೆಗೆ ಜಾಗ್ರತವಾಗಿರುವುದೆಂದು ಅವರು ಹೇಳುತ್ತಾರೆ. ಒಂದು ಯಜ್ಞದಲ್ಲಿ ಪ್ರಧಾನ ಹಾಗೂ ಅಂಗಕರ್ಮಗಳಿರುವುದರಿಂದ ಅವಕ್ಕೆಲ್ಲ ಪ್ರತ್ಯೇಕ ಅಪೂರ್ವಗಳುಂಟೆಂದೂ ಎಲ್ಲವೂ ಕೂಡಿ ಪರಮಾ ಪೂರ್ವದಲ್ಲಿ ಪರ್ಯವಸಾನವಾಗುವವೆಂದೂ ಹೇಳಿದೆ. ಕುಮಾರಿಲಭಟ್ಟ ಯಜ್ಞ ಕರ್ತೃವಿನಲ್ಲಿ ಹುಟ್ಟುವ ಗುಣವನ್ನೇ ಅಪೂರ್ವ ಎಂದರೆ, ಪ್ರಭಾಕರ ವೇದವಾಕ್ಯದ ನಿಯೋಗಸಾಮರ್ಥ್ಯವೇ ಅಪೂರ್ವ ಎನ್ನುತ್ತಾನೆ. ಅಪೂರ್ವವೊಂದರಿಂದಲೇ ಫಲಪ್ರಾಪ್ತಿ ಶಕ್ಯವಿಲ್ಲವೆಂದೂ ಈಶ್ವರನ ಅಂಗೀಕಾರ ಅಗತ್ಯವೆಂದೂ ವೇದಾಂತಿಗಳು ಭಾವಿಸುತ್ತಾರೆ.

ಮೀಮಾಂಸಕರ ಅಪೂರ್ವವನ್ನೇ ವೇದಾಂತಿಗಳು ಪ್ರಾರಬ್ಧಕರ್ಮವೆಂದೂ ನೈಯಾಯಿಕರು ಧರ್ಮಾಧರ್ಮವೆಂದೂ ವೈಶೇಷಿಕರು ಅದೃಷ್ಟವೆಂದೂ ಪೌರಾಣಿಕರು ಪುಣ್ಯಪಾಪಗಳೆಂದೂ ವ್ಯವಹರಿಸುತ್ತಾರೆ. (ಕೆ.ಕೆ.)

**ಅಪೆಗಾಂವ್ :** ಮಹಾರಾಷ್ಟ್ರ ರಾಜ್ಯದ ಔರಂಗಬಾದ್ ಜಿಲ್ಲೆಯ ಪೈಠನ್ ತಾಲೂಕಿನ ಸಣ್ಣಹಳ್ಳಿ. ಗೋದಾವರಿ ನದಿಯ ಎಡದಂಡೆಯ ಮೇಲಿದೆ. ಇದು 13ನೆಯ ಶತಮಾನದ ಶ್ರೇಷ್ಠ ಸಂತ ಜ್ಞಾನೇಶ್ವರ ಹುಟ್ಟಿದ ಸ್ಥಳವೆಂದು ಪ್ರತೀತಿ. ಇಲ್ಲಿಯ ಪ್ರಾಚೀನ ನೆಲೆಯು ಹಳ್ಳಿಯಿಂದ 2 ಕಿಮೀ ಪೂರ್ವಕ್ಕೆ ಇದ್ದು ಗೋದಾವರಿ ಮತ್ತು ವಿದರ್ಭ ಪ್ರದೇಶಗಳಿಗೆ ಹೊಂದಿಕೊಂಡಂತಿದೆ. ಈ ಸ್ಥಳ ರಾಮತೀರ್ಥ ಎಂದೂ ಪ್ರಸಿದ್ಧಿಯಾಗಿದೆ. ರಾಮ ವನವಾಸಕ್ಕೆ ಬಂದಾಗ ಇಲ್ಲಿ ತಂಗಿದ್ದಾಗಿ ಐತಿಹ್ಯವಿದೆ. ಈ ನೆಲೆ ಇತ್ತೀಚೆಗೆ ಕೃಷಿ ಚಟುವಟಿಕೆಯಿಂದಾಗಿ ಸ್ವಲ್ಪಮಟ್ಟಿಗೆ ಹಾನಿಗೊಂಡಿದ್ದು, ಈಗ 2 ಎಕರೆ ಜಾಗ ಮಾತ್ರ ಉಳಿದುಕೊಂಡಿದೆ.

ಈ ನೆಲೆ 1975ರಲ್ಲಿ ಡೆಕ್ಕನ್ ಕಾಲೇಜಿನ ಆರ್.ವಿ.ಜೋಶಿಯವರಿಂದಲೂ 1976ರಲ್ಲಿ ಎಸ್.ಬಿ.ದೇವ್ ಅವರಿಂದಲೂ ಉತ್ಖನನಕ್ಕೊಳಪಟ್ಟಿತು. ಇಲ್ಲಿ ನಡೆದ ಸಣ್ಣ ಪ್ರಮಾಣದ ಉತ್ಖನನದಲ್ಲಿ ಎರಡು ಸಾಂಸ್ಕೃತಿಕ ಹಂತಗಳು ಕಂಡುಬಂದುವು. ಅವು ಶಿಲಾ ತಾಮ್ರಯುಗ ಮತ್ತು ಆದಿ ಚಾರಿತ್ರಿಕ ಕಾಲ. ಮೊದಲನೆಯ ಹಂತದಲ್ಲಿ ಸಿಕ್ಕ ವಿಶಿಷ್ಟ ಮಣ್ಣಿನ ಪಾತ್ರೆಗಳನ್ನು ರಾಮತೀರ್ಥ ಪಾತ್ರೆ ಎಂದು ಉತ್ಖನನಕಾರರು ಕರೆದಿದ್ದಾರೆ. ತಿಳಿಗುಲಾಬಿ ಛಾಯೆಯ ಒಡಲಿನ ಈ ಪಾತ್ರೆಗಳಿಗೆ ಕಡುಗಂದು ಬಣ್ಣದ ದಪ್ಪ ಲೇಪನವನ್ನು ಹಚ್ಚಲಾಗಿದೆ. ಲೇಪನ ಅಲ್ಲಲ್ಲಿ ಬಿರುಕುಬಿಟ್ಟಿದೆ. ಇವನ್ನು ದೊರಕು ಮಣ್ಣಿನಿಂದ ತಿಗರಿಯ ಮೇಲೆ ಮಾಡಲಾಗಿದೆ. ಆಳವಾದ ಬಟ್ಟಲು ಮತ್ತು ಗೋಲ ಜಾಡಿಗಳಷ್ಟೇ ಈ ಪ್ರಕಾರದಲ್ಲಿವೆ. ಒಂದೆರಡು ಜಾಡಿಗಳಿಗೆ ನಳಿಕೆಯನ್ನು ಜೋಡಿಸಲಾಗಿದೆ. ಇವಲ್ಲದೆ ದಂಡ ತಟ್ಟೆಯನ್ನು ಹೋಲುವ ಒಂದೆರಡು ತಟ್ಟೆಯ ಚೂರುಗಳೂ ಸಿಕ್ಕಿವೆ. ಕೆಲವೊಂದು ಪಾತ್ರೆಗಳ ಮೇಲೆ ಕೆಂಪು ಬಣ್ಣದಲ್ಲಿ ಗೆರೆಗಳನ್ನು ಚಿತ್ರಿಸಲಾಗಿದೆ. ಈ ಹಂತದಲ್ಲಿ ಕಂಡುಬಂದ ಇನ್ನಿತರ ಪ್ರಕಾರಗಳೆಂದರೆ ಕೈಯಿಂದ ಮಾಡಿದ ಕೆಂಪು ಮತ್ತು ಬೂದು ಬಣ್ಣದ ಪಾತ್ರೆಗಳು ಹಾಗೂ ಜೋರ್ವೆ ಮತ್ತು ಮಾಳ್ವ ಮಾದರಿಯ ಪಾತ್ರೆಗಳು. ಬೂದು ಮತ್ತು ಕೆಂಪುಬಣ್ಣದ ಪಾತ್ರೆಗಳಲ್ಲಿ ಜಾಡಿಗಳೇ ಹೆಚ್ಚು ದೊರೆತಿವೆ. ಕ್ಯಾಲ್ಸೆಡನಿ ಶಿಲೆಯಿಂದ ಮಾಡಿದ ಅಲಗುಗಳು ಈ ಹಂತದ ಇತರ ಅವಶೇಷಗಳಾಗಿವೆ. ಇಂಗಾಲ–14 ಕಾಲನಿರ್ಣಯ ತಂತ್ರದ ಪ್ರಕಾರ ಈ ಹಂತ ಪ್ರ.ಶ.ಪೂ. 1600–1300ರ ನಡುವೆ ಅಸ್ತಿತ್ವದಲ್ಲಿತ್ತು. ಈ ಹಂತದ ಅನಂತರ ಕೆಲ ಶತಮಾನಗಳ ಕಾಲ ಇಲ್ಲಿ ವಸತಿ ಇರಲಿಲ್ಲ. ಪ್ರ.ಶ.ಪೂ. 2ರ ಹೊತ್ತಿಗೆ ಇಲ್ಲಿ ಮತ್ತೆ ವಸತಿ ಸ್ಥಾಪಿತವಾಗಿ ಪ್ರ.ಶ 2ನೆಯ ಶತಮಾನದವರೆಗೆ ಮುಂದುವರೆಯಿತು. ಈ ಹಂತದ ಪ್ರಾಚ್ಯಾವಶೇಷಗಳು ಸಂಪೂರ್ಣವಾಗಿ ನಾಶವಾಗಿವೆ. (ಎನ್.ಆರ್.)

**ಅಪೆನೈನ್‌ಶ್ರೇಣಿ :** ಇಟಲಿ ದೇಶದ ಆಲ್ಪ್ಸ್ ಪರ್ವತಾವಳಿಯಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಭಾಗ. ಉತ್ತರದಲ್ಲಿ ಸವೋನಾದಿಂದ ದಕ್ಷಿಣದಲ್ಲಿ ರೆಗ್ಗಿಯೊ ಡಿ ಕಾಲಾಬ್ರಿಯದವರೆಗೆ 1350 ಕಿಮೀ ಮತ್ತು 40–130 ಕಿಮೀ ಅಗಲವಾಗಿದೆ. ಇದನ್ನು ಇಟಲಿದೇಶದ ಬೆನ್ನೆಲುಬು ಎನ್ನುವರು. ಆಲ್ಪ್ಸ್ ಪರ್ವತದಲ್ಲಿ ಸಮುದ್ರಕ್ಕೆ ಸಮೀಪವಾಗಿರುವ ಭಾಗದಿಂದ ಪ್ರಾರಂಭವಾಗಿ ಇಟಲಿ, ಸಿಸಿಲಿ ದೇಶಗಳ ಮಧ್ಯದಲ್ಲಿ ಹರಡಿದೆ. ಒಂದೇ ಪರ್ವತಾವಳಿಯಾಗಿದ್ದರೂ ಇದರಲ್ಲಿ ಉತ್ತರಭಾಗ, ಮಧ್ಯಭಾಗ ಮತ್ತು ದಕ್ಷಿಣಭಾಗವೆಂಬ ಭೌಗೋಳಿಕ ವಿಭಾಗಗಳನ್ನು ಕಾಣಬಹುದು. 1. ಉತ್ತರದ ಭಾಗದಲ್ಲಿ ಲೆಗೂರಿಯನ್, ಟಸ್ಕನ್, ಅಂಬ್ರಿಯನ್ ಎಂಬ ಮೂರು ಪರ್ವತಗಳಿವೆ. ಲೆಗೂರಿಯನ್ ಪರ್ವತ ಜನೀವ ಖಾರಿಯನ್ನು ಸುತ್ತುವರಿದಿದೆ. ಮೌಂಟ್ ಬ್ಯೂ ಎಂಬುದೇ ಎತ್ತರದ ಶಿಖರ (1803 ಮೀ). ಟಸ್ಕನ್ ಬೆಟ್ಟಗಳಲ್ಲಿ ಅತ್ಯುನ್ನತ ಶಿಖರ ಮೌಂಟ್ ಸೀಮೋನ್ (2,165 ಮೀ). ಇದರ ಹತ್ತಿರ ಸಂಗಮವರಿ ಕಲ್ಲುಗಳು ದೊರಕುತ್ತವೆ. ಇಲ್ಲಿ ಅರ್ನೋಪನಾರೊ, ಸೆತಾವೊ ಮತ್ತು ರೇನೋ ನದಿಗಳ ಉಗಮಸ್ಥಾನಗಳಿವೆ. ಅಂಬ್ರಿಯನ್ ಬೆಟ್ಟಗಳಿಂದ ಟೈಬರ್ ಮತ್ತು ಮೆಟಾನಸ್ ನದಿಗಳು ಹರಿದು ಬರುತ್ತವೆ. 2. ಮಧ್ಯಭಾಗ ಅತಿ ಎತ್ತರವಾದ ಶಿಖರಗಳಿಂದ ತುಂಬಿದೆ. ಅವುಗಳಲ್ಲಿ ಅತಿ ಎತ್ತರವಾದುದು ಮೌಂಟ್ ಕಾರ್ನೋ (2,914 ಮೀ). 3 ದಕ್ಷಿಣ ಪರ್ವತಾವಳಿಗಳು ನಿಯಮಿತವಾಗಿ ಹಬ್ಬಿಲ್ಲ. ಮೌಂಟ್ ಪಾಲಿನೊ (2,248 ಮೀ) ಎತ್ತರದ ಶಿಖರ. ಇಲ್ಲಿ ಮೌಂಟ್ ಎಟ್ನ ಮತ್ತು ಸ್ಟ್ರಾಂಬೋಲಿ ಎಂಬ ಜಾಗೃತ ಜ್ವಾಲಾಮುಖಿಗಳಿವೆ. ಈ ಶ್ರೇಣಿಯಲ್ಲಿ ಪ್ರಸಿದ್ಧ ಗಿರಿಧಾಮಗಳಿವೆ. ಉದಾ: ಫ್ಲೋರೆನ್ಸ್, ಅರೆಜ್ಜೊ, ಲಾಕ್ವಿಲಾ ಮತ್ತು ಬೆನೆವೆಂಟೊ.(ಡಿ.ಕೆ.)

**ಅಪೊಮಾರ್ಫೀನ್ :** ಗಾಳಿ ಹೋಗದಂತೆ ಮುಚ್ಚಿರುವ ಸೀಸೆಯಲ್ಲಿ ರಾಸಾಯನಿಕ ಮಾರ್ಫೀನೊಂದಿಗೆ ಹೈಡ್ರೊಕ್ಲೋರಿಕಾಮ್ಲವನ್ನು ಸೇರಿಸಿ ಕಾಯಿಸಿದರೆ, ಮಾರ್ಫೀನಿನಿಂದ ನೀರಿನ ಅಣುವೊಂದು ಕಳೆದು ಬರುವ ರಾಸಾಯನಿಕವಿದು. ಹೀಗಾದುದರಿಂದ ಮಾರ್ಫೀನಿನ ಮಂದಗೊಳಿಸುವ ಗುಣಗಳು ಕಳೆದು, ಚೋದಕ ಗುಣಗಳು ಮಾತ್ರ ಅಪೊಮಾರ್ಫೀನಿನಲ್ಲಿ ಉಳಿಯುತ್ತವೆ. ಮಿದುಳೆಲ್ಲವನ್ನೂ ಇದು ಚೋದಿಸುವುದಾದರೂ ವಾಂತಿಕಾರಕ ಕೇಂದ್ರದ ಮೇಲೆ ಇದರ ಪ್ರಭಾವ ಬಹಳ. ವಿಷವೇರಿದ ರೋಗಿಯ ಹೊಟ್ಟೆ ತೊಳೆಯಲು ರಬ್ಬರ್ ಕೊಳವೆ ತೂರಿಸಲು ಆಗದಾಗ, ಬಲವಾದ ಈ ಮದ್ದನ್ನು ಚುಚ್ಚಿ ವಾಂತಿ ಕಾರಿಸುವ ರೂಢಿ ಹಿಂದಿತ್ತು. ವಾಂತಿಕಾರಕ ಪ್ರಮಾಣ ಕೂಡ ಮಿದುಳನ್ನು ಕುಂದಿಸುವುದರಿಂದ ಇದರ ಬಳಕೆ ಬಲು ಅಪಾಯಕರ. (ಎಂ.ಎಸ್.ಎನ್.)

**ಅಪೊಲೊ[1] :** ಗ್ರೀಕರ ಪುರಾಣೇತಿಹಾಸದಲ್ಲಿ ಕಂಡುಬರುವ ದೇವತಾವ್ಯಕ್ತಿ. ತಂದೆ ಜೂಪಿಟರ್ (ಜ್ಯೂಸ್), ತಾಯಿ ಲೆಟೊ. ಜೂಪಿಟರ್ ನ ಧರ್ಮಪತ್ನಿ ಹೀರಾ ಲೆಟೊಳನ್ನು ಅನೇಕ ರೀತಿಯ ಕಷ್ಟಗಳಿಗೀಡುಮಾಡಿದಳು. ಲೆಟೊ ಸಮುದ್ರದಲ್ಲಿ ತೇಲಿಬಂದು ಡೆಲಾಸ್ ದ್ವೀಪದಲ್ಲಿ ಅಪೊಲೊವಿಗೆ ಜನ್ಮವಿತ್ತಳು. ಓಲಿಂಪಸ್‌ನಿಂದ ಗಡಿಪಾರಾಗಿ, ದೊರೆ ಅಡ್‌ಮಿಟಸ್‌ನ ಕುರಿಗಳನ್ನು ಕಾಯುತ್ತಿದ್ದ ಅಪೊಲೊವಿಗೆ ಪ್ರಪಂಚದಾದ್ಯಂತ ಬೆಳಕನ್ನು ಬೀರುವ ಕೆಲಸವನ್ನು ಅವನ ತಂದೆ ವಹಿಸುವವರೆಗೂ ಆತ ಭೂಮಿಯಲ್ಲೆಲ್ಲ ಅಡ್ಡಾಡಿದ. ಇದರಿಂದಾಗಿ ಸೂರ್ಯನ ರಥವನ್ನು ಈತ ನಡೆಸಿ ಶಾಶ್ವತ ಯೌವನವನ್ನು ಗಳಿಸಿದ. ಅಪೊಲೊ ಗ್ರೀಕರ ಪುರಾಣಗಳಲ್ಲಿ ಯುದ್ಧ, ಭವಿಷ್ಯ, ಸಂಗೀತ, ಕಲೆ, ಔಷಧ ಮತ್ತು ಕಾವ್ಯದ ಅಧಿದೇವತೆಯಾಗಿ ಮೆರೆದಿದ್ದಾನೆ. ಇದಲ್ಲದೆ ನ್ಯಾಯ, ಪವಿತ್ರತೆ ಮುಂತಾದ ನೈತಿಕಗುಣಗಳ ಪ್ರತೀಕವಾಗಿ ವ್ಯಾಪಿಸಿದ್ದಾನೆ.

ಗ್ರೀಸ್ ಮತ್ತು ಅಯೋನಿಯ ಸಮೀಪದ ದ್ವೀಪಗಳಲ್ಲಿನ ಗ್ರಿಕ್ ಜನಾಂಗ ಬಂದು ನೆಲೆಸಿದ ತಾಣಗಳಲ್ಲೆಲ್ಲ ಅಪೊಲೊಮಂದಿರಗಳು ಸ್ಥಾಪಿತವಾದುವು. ಅನಂತರದಲ್ಲಿ ರೋಮನ್ನರೂ ಅಪೊಲೊಮಂದಿರಗಳನ್ನು ಕಟ್ಟಿದರು. ಅತ್ಯಂತ ದೊಡ್ಡದಾದ ಅಂಥದೊಂದು ಮಂದಿರ ಡೆಲ್ಫಿನಗರದಲ್ಲಿ ಸ್ಥಾಪನೆಯಾಯಿತು. ಇದು ಬಹಳ ಪ್ರಸಿದ್ಧವಾಗಿತ್ತು. ತಮ್ಮ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳ ಬಗ್ಗೆ ಭವಿಷ್ಯವಾಣಿಯನ್ನು ನುಡಿದು, ಪರಿಹಾರಗಳನ್ನು ಅಪೊಲೊ ಸೂಚಿಸುತ್ತಾನೆಂದು ಗ್ರೀಕರು ನಂಬಿದ್ದರು. ಡೆಲ್ಫಿನಗರದಲ್ಲಿ ಅಪೋಲೊವಿನ ಗೌರವಾರ್ಥ ನಡೆಸಲಾಗುತ್ತಿದ್ದ ಪಂದ್ಯಗಳು ಅಂದಿನ ಒಲಿಂಪಿಕ್ ಪಂದ್ಯಗಳಷ್ಟೇ ಪ್ರಸಿದ್ಧವಾಗಿದ್ದುವು.

ಗ್ರೀಕರು ತಾವು ಹೋದೆಡೆಯಲ್ಲೆಲ್ಲ ತಮ್ಮ ಆರಾಧ್ಯದೇವ ಅಪೊಲೊವಿನ ಸುಂದರಮೂರ್ತಿಗಳನ್ನು ನಿರ್ಮಿಸಿ ಸ್ಥಾಪಿಸಿದರು. ಭಾರತದ ಗಾಂಧಾರಪ್ರದೇಶವನ್ನು ಪ್ರವೇಶಿಸಿದಾಗ ಅಲ್ಲಿಯೂ ಅವರು ಅಪೊಲೊವಿನ ಮೂರ್ತಿಗಳನ್ನು ನಿಲ್ಲಿಸಿದರು. ಅವೆಲ್ಲ ಇಂದು ನಾಶಗೊಂಡಿವೆ. ಸೂರ್ಯನ ಕಿರಣದಂತಿರುವ ಬಾಣವೊಂದನ್ನು ಕೈಯಲ್ಲಿ

ಹಿಡಿದಿರುವ ಒಬ್ಬ ಸುಂದರ ಯುವಕನಂತೆ ಈತನ ಶಿಲಾಮೂರ್ತಿಯನ್ನು ಭವ್ಯಭವನಗಳ ಮೇಲೆ ಚಿತ್ರಿಸಲಾಗಿದೆ. ಇಂದು ಪ್ರಪಂಚದಲ್ಲೇ ಅತ್ಯಂತ ಸುಂದರವಾದ ಅಪೊಲೊ ಮೂರ್ತಿಗಳು ರೋಮ್ ಮತ್ತು ವ್ಯಾಟಿಕನ್ ನಗರಗಳಲ್ಲಿ ಉಳಿದಿವೆ. ಹೋಮರನ ಈಲಿಯಡ್‍ನಲ್ಲೂ ಇವನ ಬಗ್ಗೆ ಉಲ್ಲೇಖವಿದೆ. *

**ಅಪೊಲೊ[2] :** ಮಾನವನನ್ನು ಚಂದ್ರನ ಮೇಲೆ ಇಳಿಸಲು ಅಮೆರಿಕ ಸಿದ್ಧಪಡಿಸಿದ ಮಾನವ ಚಂದ್ರನ ಮೇಲೆ (ಮ್ಯಾನ್ ಆನ್ ದಿ ಮೂನ್) ಯೋಜನೆಯಲ್ಲಿ ಪ್ರಥಮವಾಗಿ ಯಶಸ್ವಿಯಾದ ವ್ಯೋಮನೌಕೆ. ಈ ಯೋಜನೆಯಲ್ಲಿ 1961–68ರ ತನಕ ಅಮೆರಿಕ 21 ಮಾನವರಹಿತ ನೌಕೆಗಳನ್ನು ಚಂದ್ರನೆಡೆಗೆ ಹಾರಿಸಿತು. ಇವುಗಳ ಪೈಕಿ 13 ನೌಕೆಗಳು ಚಂದ್ರನ ಸುತ್ತ ತಗ್ಗುಮಟ್ಟದಲ್ಲಿ ಹಾರಾಟ ನಡೆಸಿ, ಅದರ ಮೇಲ್ಮೈಯ ಒಂದು ಲಕ್ಷಕ್ಕೂ ಹೆಚ್ಚಿನ ಛಾಯಾಚಿತ್ರಗಳನ್ನು ಭೂಮಿಗೆ ರವಾನಿಸಿವೆ. 1968ರ ಉತ್ತರಭಾಗದಿಂದ 1969ರ ಮೇ ತಿಂಗಳ ತನಕ ಮಾನವಸಹಿತವಾದ ಈ 4 ನೌಕೆಗಳನ್ನು ಅಮೆರಿಕ ಹಾರಿಸಿದೆ. ಇವೆಲ್ಲ ಸಫಲಪ್ರಯೋಗಗಳ ಫಲಿತಾಂಶವೇ ಅಪೊಲೊ 11. (ನೋಡಿ– ಅಂತರಿಕ್ಷ ಸಂಶೋಧನೆ)

ಈ ನೌಕೆಯ ಪೂರ್ಣ ಹೆಸರು ಅಪೊಲೊ 11/ಸ್ಯಾಟರ್ನ್ 5. ತಳಭಾಗ ಸ್ಯಾಟರ್ನ್ 5 ಎಂಬ ಹೆಸರಿನ ಚಾಲಕವಿಭಾಗ. ಇದು ಮೂರು ಘಟ್ಟಗಳಲ್ಲಿ ಜೋಡಣೆಗೊಂಡಿರುವ ರಾಕೆಟ್ ವ್ಯವಸ್ಥೆ. ಇದರ ಎತ್ತರ 75ಮೀ. ಭಾರ 2954.64 (ಮೆಟ್ರಿಕ್) ಟನ್ನುಗಳು. ಮೇಲುಭಾಗ ಅಪೊಲೊ 11. ಎತ್ತರ 25 ಮೀ, ಭಾರ 45.36 ಟನ್. ಪೂರ್ಣವ್ಯವಸ್ಥೆಯ ಎತ್ತರ 100ಮೀ. ಭಾರ 3000 ಟನ್.

**ಯಾಂತ್ರಿಕ ವ್ಯವಸ್ಥೆ :** ಅಪೊಲೊದಲ್ಲಿ ಎಂಟು ಭಾಗಗಳಿವೆ. ತಳದ ನಾಲ್ಕು ಭಾಗಗಳು ಅಂತರಿಕ್ಷಚಲನೆಯನ್ನು ನಿಯಂತ್ರಿಸುವ ವಾಹನ ವ್ಯವಸ್ಥೆ. ಇದರಲ್ಲಿ ಒಂದು ಗಣಕವೂ ಇದೆ. ಮೇಲಿನ ಕವಚದೊಳಗೆ ಚಂದ್ರಕೋಶವಿದೆ (ಲೂನಾರ್ ಎಕ್ಸ್‍ಕರ್ಷನ್ ಮಾಡ್ಯೂಲ್ ಅಥವಾ ಎಲ್‍ಇಎಂ ಅಥವಾ ಲೆಮ್). ಜೇಡನಂತೆ ಇದರ ಆಕಾರ. ಆದ್ದರಿಂದ ಜೇಡ (ಸ್ಪೈಡರ್) ಎಂದು ಕರೆಯುವುದಿದೆ. ಲೆಮ್‍ನಲ್ಲಿ ಎರಡು ಘಟ್ಟಗಳು– ಇಳಿಘಟ್ಟ (ಡಿಸೆಂಟ್ ಸ್ಟೇಜ್) ಮತ್ತು ಏರುಘಟ್ಟ (ಅಸೆಂಟ್ ಸ್ಟೇಜ್). ಇಳಿಘಟ್ಟದಲ್ಲಿ ಚಂದ್ರಸ್ಪರ್ಶಮಾಡಲು, ಆ ಆಘಾತ ಸಹಿಸಲು ಸಮರ್ಥವಾದ ನಾಲ್ಕು ಕಾಲುಗಳಿವೆ. ಒಂದು ಕಾಲಿಗೆ ಜೋಡಿಸಿರುವ ಏಣಿಯ ಮೂಲಕ ಯಾತ್ರಿಗಳು ಇಳಿಯಬಹುದು. ಚಂದ್ರನ ಮಣ್ಣನ್ನು ವಿಶ್ಲೇಷಿಸುವ, ಚಂದ್ರಕಂಪನವನ್ನು ಲೇಖಿಸುವ, ಪರಿಸರದ ದೂರದರ್ಶನ ಚಿತ್ರ ಬಿಂಬಿಸುವ ಉಪಕರಣಗಳೆಲ್ಲ ಇಳಿಘಟ್ಟಕ್ಕೇ ಜೋಡಿಸಲಾಗಿದೆ. ಅಂತರಿಕ್ಷ ಉಡುಪುಧಾರಿಗಳಾಗಿ ಚಂದ್ರನ ಮೇಲೆ ಇಳಿಯಲು ಸಿದ್ಧರಾಗಿರುವ ಇಬ್ಬರು ಯಾತ್ರಿಕರ ನೆಲೆ ಏರುಘಟ್ಟ. 1600 ಕೆಜಿ ನೂಕುಬಲವಿರುವ ರಾಕೆಟ್ ಇದಕ್ಕೆ ಜೋಡಣೆಯಾಗಿದೆ. ಲೆಮ್ ಅಪೊಲೊದ ಐದನೆಯ ಭಾಗ. ಆರನೆಯದು ಇದರ ಮೇಲಿರುವ ಸರ್ವಿಸ್ ಕೋಶ (ಸರ್ವಿಸ್ ಮಾಡ್ಯೂಲ್; ಎಸ್‍ಎಂ). ಇದು ಮುಖ್ಯವಾಗಿ ಯಂತ್ರೋಪಕರಣಗಳ ಆಗರ. ಅಪೊಲೊ ಉಪಕರಣಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಮತ್ತು ನೀರಿನ ಏರ್ಪಾಡು ಎಸ್‍ಎಂ ಮೂಲಕ ಆಗುವುದು. ಭೂಕಕ್ಷೆಯಿಂದ ಪಾರಾದ ಮೇಲೆ ಮರಳುವ ತನಕದ ಚಲನೆಯನ್ನು ನಿಯಂತ್ರಿಸಲು ಬೇಕಾದ ರಾಕೆಟ್‍ಗಳು ಇಲ್ಲಿವೆ. ಎಸ್‍ಎಂ ನ ಮೇಲೆ ಇರುವ ಕಮಾಂಡ್ ಕೋಶ (ಕಮಾಂಡ್ ಮಾಡ್ಯೂಲ್, ಸಿಎಂ) ಏಳನೆಯಭಾಗ. ಆಕಾರ ಶಂಕುಮುಂಡ. 3,400 ಟನ್‍ಗಳಷ್ಟು ಉಡಾವಣೆಯ ಬಲಗಳನ್ನು, ಗಂಟೆಗೆ 40,000 ಕಿಮೀವರೆಗಿನ ಮಹಾವೇಗವನ್ನು ಮತ್ತು $-101^{o}$ ಸೆಂನಿಂದ $2760^{o}$ ಸೆಂವರೆಗಿನ ಉಷ್ಣತೆಯ ತೀವ್ರ ಏರಿಳಿತಗಳನ್ನು ಸಹಿಸಿಕೊಂಡು ಒಳಗಿರುವ ಯಾತ್ರಿಗಳಿಗೆ ರಕ್ಷಣೆ ನೀಡಬೇಕು; ಹಗುರಾಗಿರಬೇಕು, ದೃಢವೂ ಆಗಿರಬೇಕು. ಸಿಎಂನಲ್ಲಿ ಮೂರು ಮುಖ್ಯ ವಿಭಾಗಗಳಿವೆ. ಚೂಪಾದ ಮೇಲಿನ ವಿಭಾಗದಲ್ಲಿ ಚಂದ್ರಕೋಶವನ್ನು ಪೋಣಿಸುವ ಸಾಧನವಿದೆ. ಭೂಮಿಗೆ ಮರಳುವಾಗ ಇದೇ ಭಾಗ ಮೇಲುಗಡೆ (ಅಂದರೆ ಚಲನೆಯ ವಿರುದ್ಧದಿಕ್ಕು) ಇರುವುದು. ಆಗ ಅದರಿಂದ ಪ್ಯಾರಾಚೂಟ್‍ಗಳು ಕಳಚಿ, ತೆರೆದುಕೊಂಡು ಕೋಶದ ವೇಗವನ್ನು ತಗ್ಗಿಸುವಂತೆ ಮೊದಲೇ ಅಳವಡಿಕೆಯಾಗಿರುತ್ತದೆ. ಕೋಶದ ಮಧ್ಯಭಾಗ ಮೂವರು ಯಾತ್ರಿಗಳ ನೆಲೆ. 5.9 ಘಮೀ ಪ್ರದೇಶ. ಹವೆ, ಗಾಳಿ, ಒತ್ತಡ ನಿಯಂತ್ರಿತ. ಯಾತ್ರಿಗಳ ಚಲನವಲನ, ಉಸಿರಾಟ, ಮಾತು, ಎದೆಬಡಿತ ಎಲ್ಲವನ್ನು ಪ್ರತಿಕ್ಷಣ ಚಿತ್ರಿಸುವ, ಭೂಮಿಗೆ ಪ್ರಸರಿಸುವ ಸ್ವಯಂಚಾಲಿತ ಸೂಕ್ಷ್ಮೋಪಕರಣಗಳು ಇಲ್ಲಿವೆ. ತಳದಲ್ಲಿರುವ ಮೂರನೆಯ ವಿಭಾಗದಲ್ಲಿ ಹಲವಾರು ಯಂತ್ರೋಪಕರಣಗಳೂ ಮರುಯಾತ್ರೆಯಲ್ಲಿ ಜಲರಾಶಿಗೆ ಬಂದು ಅಪ್ಪಳಿಸಿದಾಗ ಆಘಾತ ಸಹಿಸಲು ತಕ್ಕ ಮೆತ್ತೆಗಳೂ ಇವೆ. ಸಮಗ್ರವ್ಯವಸ್ಥೆಯ ಶಿಖರದಲ್ಲಿರುವ ಗೋಪುರಾಕಾರ ಅಪೊಲೊದ ಎಂಟನೆಯ ಭಾಗ. ಹೆಸರು ಉಡಾವಣೆ ವಿಮೋಚನಾವ್ಯವಸ್ಥೆ (ಲಾಂಚ್ ಎಸ್ಕೇಪ್ ಸಿಸ್ಟಮ್); ಭೂಮಿಯಿಂದ ಉಡಾಯಿಸಿದೊಡನೆ ಏನಾದರೂ ದೋಷ ಕಂಡಲ್ಲಿ ಯಾತ್ರಿಗಳಿರುವ ಸಿಎಂ ವಿಭಾಗವನ್ನು ಉಳಿದ ಭಾಗದಿಂದ ಬೇರ್ಪಡಿಸಿ ಸುರಕ್ಷಿತವಾಗಿ ಭೂಮಿಗೆ ಇಳಿಸಬಲ್ಲ ಸಾಧನ. ದೋಷವಿಲ್ಲದಿದ್ದರೆ ಭಾರ ಕಡಿಮೆಮಾಡಿಕೊಳ್ಳಲು ವಿಮೋಚನಾ ವ್ಯವಸ್ಥೆಯನ್ನು ಅಪೊಲೊದಿಂದ ತ್ಯಜಿಸಲಾಗುತ್ತದೆ.

ಚಿತ್ರ 1. i) ಸ್ಯಾಟರ್ನ್ 5 ii)ಅಪೊಲೊ
ಅಪೊಲೊ ಅಂತರಿಕ್ಷನೌಕೆಯ ವಿವಿಧ ಭಾಗಗಳು

**ಯಾತ್ರಿಗಳು :** ನೀಲ್ ಎ. ಆರ್ಮ್‍ಸ್ಟ್ರಾಂಗ್, ಮೈಕೆಲ್ ಕಾಲಿನ್ಸ್, ಎಡ್ವಿನ್ ಇ. ಆಲ್ಡ್ರಿನ್ ಇವರು ಅಪೊಲೊ ಯಾತ್ರಿಕರು. ಆರ್ಮ್‍ಸ್ಟ್ರಾಂಗ್ ನಾಯಕ, ಚಂದ್ರನ ಮೇಲೆ ಪ್ರಥಮವಾಗಿ ಕಾಲೂರಿದ ಮಾನವ. (ನೋಡಿ– ಆರ್ಮ್‍ಸ್ಟ್ರಾಂಗ್–ಮತ್ತು–ಅನುಯಾಯಿಗಳು)

**ಉಡಾವಣೆ:** 1969 ಜುಲೈ 16ರಂದು ಸಂಜೆ 7–02 ಗಂಟೆಗೆ (ಈ ಲೇಖನದಲ್ಲಿ ಭಾರತೀಯ ಕಾಲಮಾನವನ್ನು ಬಳಸಿದೆ) ಅಮೆರಿಕದ ಫ್ಲಾರಿಡದ ಕೇಪ್ ಕೆನೆಡಿ ಉಡಾವಣಾಪೀಠದಿಂದ ಅಪೊಲೊವನ್ನು ಹಾರಿಸಲಾಯಿತು. 3400 ಟನ್ ನೂಕು ಬಲದಿಂದ ಸ್ಯಾಟರ್ನ್ 5ರ ತಳದ ರಾಕೆಟ್ 3000 ಟನ್ ಭಾರದ ಸಮಗ್ರ ವ್ಯವಸ್ಥೆಯನ್ನು ಮೇಲೆತ್ತಿತ್ತು. ಆ ರಾಕೆಟ್ ಉರಿದು ನಾಶವಾದೊಡನೆ ಎರಡನೆಯದು ಉರಿಯಲಾರಂಭಿಸಿತು. ರಾಕೆಟ್‍ಗಳು ಉರಿದಂತೆ ಒಟ್ಟು ವ್ಯವಸ್ಥೆಯ ಭಾರ ತಗ್ಗುವುದು, ವೇಗ ಏರುವುದು, ಮೇಲೆ ಹೋದದ್ದರಿಂದ ಭೂಮಿಯ ವಿರೋಧ ಬಲಗಳು ಕಡಿಮೆ ಆಗುವುವು. ಇಂಥ ಮುಪ್ಪುರಿ ಲಾಭದ ಫಲಿತಾಂಶವಾಗಿ ಅಪೊಲೊ ಮೇಲೆ ಮೇಲೆ ನೆಗೆದು 12 ಮಿನಿಟುಗಳ ಅನಂತರ ಪೂರ್ವದಿಶೆಗೆ ತಿರುಗಿತು. ಉರಿದು ನಾಶವಾದ ಇಂಧನದ ಭಾರ ಸೆಕೆಂಡಿಗೆ ಸು. 16 ಟನ್. ಸ್ಯಾಟರ್ನ್‍ನ ಎರಡು ಘಟ್ಟಗಳು ಉರಿದು ಹೋದುವು. ಮೂರನೆಯದು ಭಾಗಶಃ ಉರಿದು ಅಪೊಲೊವನ್ನು ಭೂಕಕ್ಷೆಯಲ್ಲಿ ಪರಿಭ್ರಮಿಸುವಂತೆ ವಿಧಿಸಿತು. ಭೂಮಿಯಿಂದ ಕಕ್ಷೆಯ ದೂರ 185 ಕಿಮೀ. ಪಥವೇಗ ಗಂಟೆಗೆ 24,000 ಕಿಮೀ. ಅಪೊಲೊಗೆ ಈ ಕಕ್ಷೆ ಆಕಾಶದಲ್ಲಿ ಪಾರ್ಕಿಂಗ್ (ನಿಲ್ದಾಣ) ಏರ್ಪಾಡು; ಆದ್ದರಿಂದ ಇದರ ಹೆಸರು ಕಕ್ಷಾನಿಲ್ದಾಣ (ಪಾರ್ಕಿಂಗ್ ಆರ್ಬಿಟ್). ಇಲ್ಲಿ ನಿರಾತಂಕವಾಗಿ ಭೂಪರಿಭ್ರಮಣೆ ಮಾಡುವ ಯಾತ್ರಿಗಳು ತಮ್ಮ ಸಕಲಸಾಧನೋಪಕರಣಗಳನ್ನು ಕೂಲಂಕಷವಾಗಿ ಪುನಃ ಪರಿಶೀಲಿಸಿದರು. ಅವೆಲ್ಲ ಯುಕ್ತರೀತಿಯಲ್ಲಿ ವರ್ತಿಸುತ್ತಿವೆ ಎಂದು ದೃಢವಾದ ಬಳಿಕ ಚಂದ್ರನೆಡೆಗೆ ಪಯಣಿಸಲು ಭೂಮಿಯ ನಿಯಂತ್ರಣಾಕೇಂದ್ರದಿಂದ ಅನುಮತಿ ದೊರೆಯಿತು.

**ಚಂದ್ರನೆಡೆಗೆ ಪ್ರಯಾಣ:** ಸ್ಯಾಟರ್ನ್ 5ರ ಮೂರನೆಯ ಘಟ್ಟದ ರಾಕೆಟ್‍ನ ಉಳಿದ ಭಾಗವನ್ನು ಉರಿಸಿದೊಡನೆ ಅಪೊಲೊ ವೇಗ, ದಿಕ್ಕು, ಪಥ ಚಂದ್ರನೆಡೆಗೆ ತಿರುಗಿದುವು. ನಿಶ್ಚಿತ ಕ್ಷಣದಲ್ಲಿ ನಿಷ್ಕ್ರಮಣವೇಗವನ್ನು ನಿರ್ಧಾರಿತ ಪಥಕ್ಕೆ ನೀಡಿದರೆ ಮಾತ್ರ ಈ ಪ್ರಯತ್ನ ಸಫಲ. ಇಲ್ಲವಾದರೆ ಆಕಾಶದ ಮಹಾವೈಶಾಲ್ಯದಲ್ಲಿ ನೌಕೆ ನಾಶವಾಗಿ ಹೋಗುವುದು. ಕಕ್ಷಾನಿಲ್ದಾಣವನ್ನು ತ್ಯಜಿಸುವಾಗ ಅಪೊಲೊ ವೇಗ ಗಂಟೆಗೆ 39,260 ಕಿಮೀ; ಉಡಾವಣೆಯ ಕ್ಷಣದಿಂದ ಗತಿಸಿದ ಕಾಲ 2 ಗಂ 44 ಮಿ.

**ಅಂತರಿಕ್ಷ ವಿನ್ಯಾಸ :** ಮೂರನೆಯ ಘಟ್ಟ ಪೂರ್ಣ ಉರಿದು ಮುಗಿಯುವ ಮೊದಲೇ ಅಪೊಲೊ ಚಂದ್ರನೆಡೆಗೆ ಧಾವಿಸುತ್ತಿದ್ದಂತೆಯೇ ಯಾತ್ರಿಗಳು ಒಂದು ಕಠಿನ ಅಂತರಿಕ್ಷ ಕಾರ್ಯಾಚರಣೆ ಮನೂವರ್ ನಿರ್ವಹಿಸಿದರು. ಯಾತ್ರಿಕರ ನೆಲೆಯಾದ ಸಿಎಂ ಮುಂದಕ್ಕೆ (ಅಂದರೆ ಚಲನೆಯ ದಿಕ್ಕಿನಲ್ಲಿ) ಇತ್ತು. ಅದರ ಚೂಪಾದ ಮೂತಿ ಮೊದಲು, ಸಿಎಂಗೆ ಅಂಟಿಕೊಂಡು ಎಸ್‍ಎಂ ಮತ್ತು ಕವಚರಕ್ಷಿತ ಲೆಮ್ ಇದೇ ಕ್ರಮದಲ್ಲಿದ್ದುವು. ಯಾತ್ರಿಕರ ರಕ್ಷಣೆಯನ್ನು ಲಕ್ಷ್ಯದಲ್ಲಿಟ್ಟು, ಉಡಾವಣೆಯ ಕಾಲದಲ್ಲಿ ಈ ಏರ್ಪಾಡು ಅಗತ್ಯ. ಆದರೆ ಮುಂದಿನ ಉದ್ದೇಶಕ್ಕೆ ಇದು ಅನುಪಯುಕ್ತ. ಅಪೊಲೊ ನಾಯಕ ಕೆಲವು ಆಸ್ಫೋಟಕಗಳನ್ನು ಹೊತ್ತಿಸಿದ. ಕೂಡಲೇ ಲೆಮ್ ಕವಚದ ನಾಲ್ಕು ಫಲಕಗಳು ತೆರೆದುವು (ಗಿರಿಗಿಟಿಯಂಥ ಆಕಾರ); ಮತ್ತು ಸಿಎಂ–ಎಸ್‍ಎಂ ಜೋಡಣೆ ಈ ಕವಚದಿಂದ ಬೇರ್ಪಟ್ಟಿತು. ಆದರೂ ಅವೆರಡೂ ಒಂದೇ ವೇಗದಿಂದ ಒಂದೇ ಪಥದಲ್ಲಿ ಒಂದರ ಹಿಂದೆ ಇನ್ನೊಂದು ಚಲಿಸುತ್ತಲೇ ಇದ್ದುವು. ಆಗ ನಾಯಕ 16 ಚಿಕ್ಕ ರಾಕೆಟ್‍ಗಳನ್ನು ಉರಿಸಿದ. ಪರಿಣಾಮವಾಗಿ ಸಿಎಂ–ಎಸ್‍ಎಂ ಜೋಡಣೆ ಆಕಾಶದಲ್ಲಿ ಒಂದು ಸುತ್ತು

U–ಆಕಾರದಲ್ಲಿ ತಿರುಗಿ ಸಿಎಂನ ಚೂಪುಮೂತಿ ಹಿಂದೆ ಬರುತ್ತಿರುವ ಲೇಮ್ ಕವಚದೆಡೆಗೆ (ತೆರೆದ ಫಲಕಗಳ ಕಡೆಗೆ) ಮುಖಮಾಡಿತು. ಸಿಎಂನ ಮೂತಿ ಮತ್ತು ಲೇಮ್‌ನ ಏರುಘಟ್ಟದ ತುದಿ ಎರಡೂ ಜಂಟಿಯಾಗುವಂತೆ ನಾಯಕ ಚಲನೆಯನ್ನು ಜಗ್ಗಿಸಿದ. ಈಗ ಎಸ್‌ಎಂನ ಆಲಿಕೆಯ (ಫನ್ನಲ್) ಭಾಗ ಚಲನೆಯ ದಿಕ್ಕಿನಲ್ಲಿ ಮೊದಲಿಗಿದೆ; ಅದರ ಬೆನ್ನಿಗೆ ಸಿಎಂ ಇದರ ಮೂತಿಗೆ ಜೋಡಣೆಗೊಂಡು ಲೇಮ್ ಇನ್ನು ಅವಶ್ಯವಿಲ್ಲದ ಕವಚ, ಮೂರನೆಯ ಘಟ್ಟದ ರಾಕೆಟ್‌ನ ಉಳಿದಂಶ ಎಲ್ಲವನ್ನು ಕಳಚಿ ಬಿಟ್ಟರು. ಸಿಎಂನ ಮತ್ತು ಲೇಮ್ ಜೋಡಣೆಗೊಂಡಿರುವ ಭಾಗದ ಹೆಸರು ಸುರಂಗ (ಟನ್ನಲ್). ಇಲ್ಲಿ ಒಂದು ಸಲ ಒಬ್ಬ ನುಸುಳಿ ಇನ್ನೊಂದು ಕೋಶವನ್ನು ಸೇರಬಹುದು.

ಮುಂದಿನ ಯಾತ್ರೆಯ ಸುಮಾರು ಮೂರು ದಿವಸಗಳ ಅವಧಿಯಲ್ಲಿ ಯಾತ್ರಿಕರ ಚಟುವಟಿಕೆಗಳನ್ನು ದೂರದರ್ಶನದ ಮೂಲಕ ಭೂಮಿಯ ಮೇಲಿನ ಲಕ್ಷಾಂತರ ಜನ ನೋಡಿದರು. ಸೂರ್ಯನ ಬಿಸಿಲು ಅಪೊಲೊ ಒಂದೇ ಪಾರ್ಶ್ವಕ್ಕೆ ಬಡಿದರೆ ಉಷ್ಣದಿಂದ ಅಪಾಯವಿದೆ. ಇದರಿಂದ ರಕ್ಷಿಸಲು ನೌಕೆ ಗಂಟೆಗೆ ಎರಡು ಸಲ ಅದರ ಪ್ರಧಾನಾಕ್ಷದ ಸುತ್ತಲೂ ಆವರ್ತಿಸುವಂತೆ ವಿಧಿಸಲಾಗಿತ್ತು. ಭೂಮಿ–ನೌಕೆ ಇವುಗಳ ನಡುವೆ ನಿರಂತರ ಸಂಪರ್ಕ, ಸ್ವಯಂಚಾಲಿತ ವ್ಯವಸ್ಥೆಗಳ ನಿಷ್ಕೃಷ್ಟ ಕ್ರಿಯೆ ಇವೆಲ್ಲವೂ ಪೂರ್ವ ನಿರ್ಧಾರಿತ ಕ್ರಮದಲ್ಲಿ ನೆರವೇರಿದುವು. ಇದರಿಂದ ಮಧ್ಯವಾರ್ಗ ಸಂಸ್ಕರಣದ ಅವಶ್ಯವಾಗಲಿಲ್ಲ.



**ಚಿತ್ರ 2. ಅಪೊಲೊ 11ರ ಲಾಂಛನ**

**ಚಂದ್ರಕಕ್ಷೆಯ ಪ್ರವೇಶ:** ಭೂಮಿಯ ಗುರುತ್ವಾಕರ್ಷಣವಲಯದಲ್ಲಿಯೇ ಚಂದ್ರ ಇದೆ. ಆದ್ದರಿಂದ ಅಪೊಲೊ ಈ ವಲಯದಿಂದ ಪಾರಾಗಿ ಹೋಗುವಂತಿಲ್ಲ ಭೂಕಕ್ಷೆಯಿಂದ ಗಂಟೆಗೆ 39,260 ಕಿಮೀ ವೇಗದಲ್ಲಿ ಬಿಡುಗಡೆ ಹೊಂದಿದ ಅಪೊಲೊದ ವೇಗ ಕ್ರಮೇಣ ತಗ್ಗಿತು. ಭೂಮಿಯಿಂದ 1,28,000 ಕಿಮೀ ದೂರದಲ್ಲಿ ಅದು ಗಂಟೆಗೆ 7,600 ಕಿಮೀ; 3,20,000 ಕಿಮೀ ದೂರದಲ್ಲಿ ಅದು ಗಂಟೆಗೆ 3,400 ಕಿಮೀ ಈ ಗಡಿ ದಾಟಿದ ನೌಕೆ ಚಂದ್ರಗುರುತ್ವಾಕರ್ಷಣಕ್ಷೇತ್ರದ ಪ್ರಭಾವ ಅಧಿಕವಿರುವ ಪ್ರದೇಶ ಪ್ರವೇಶಿಸಿತು. ಪರಿಣಾಮವಾಗಿ ವೇಗ ಏರತೊಡಗಿತು. ಹೀಗೆಯೇ ಮುಂದುವರಿದರೆ ಅದು ಚಂದ್ರತಲಕ್ಕೆ ಬಡಿದು ನಾಶವಾಗುತ್ತದೆ. ವೇಗ ಗಂಟೆಗೆ 9,000 ಕಿಮೀ ಮಿತಿ ಮುಟ್ಟುವಾಗ ನೌಕೆಯನ್ನು



**ಚಿತ್ರ 3. ಖಗೋಳಯಾತ್ರಿಗಳು ಚಂದ್ರನ ಮೇಲೆ ಬಿಟ್ಟುಬಂದ ಲೋಹದ ಫಲಕ**

ಚಂದ್ರಕಕ್ಷೆಗೆ ತಳ್ಳಬೇಕು. ತಡೆರಾಕೆಟ್ (ರಿಟ್ರೊ ರಾಕೆಟ್–ಅಂದರೆ ಚಲನೆಯ ದಿಶೆಯಲ್ಲಿ ಉರಿಸಿದ ರಾಕೆಟ್. ಇದು ನೌಕೆಯನ್ನು ವಿರುದ್ಧದಿಶೆಯಲ್ಲಿ ನೂಕುವುದರಿಂದ ಚಲನೆಯನ್ನು ವಿರೋಧಿಸುತ್ತದೆ) ಉರಿಸಿ, ದಿಶೆ ಬದಲಾಯಿಸಿ ನೌಕೆಯನ್ನು ಚಂದ್ರಕಕ್ಷೆಯಲ್ಲಿ ದೀರ್ಘವೃತ್ತಾಕಾರ ಪಥದಲ್ಲಿ ಪ್ರವೇಶಿಸುವಂತೆ ವಿಧಿಸಿದರು. ಇಲ್ಲಿಯೂ ಕ್ಷಣ, ವೇಗ, ಪಥ ಇವೆಲ್ಲದರ ಸಮರ್ಪಕ ಹೊಂದಾಣಿಕೆ ಅತ್ಯಗತ್ಯ. ನೌಕೆ ಚಂದ್ರನಿಂದ 112 ಕಿಮೀ ಎತ್ತರದಕ್ಕೆ ಬಂದಾಗ ವೇಗವನ್ನು ಗಂಟೆಗೆ 5,800 ಕಿಮೀ ಗೆ ತಗ್ಗಿಸಿಕೊಂಡರು. ಈಗ ನೌಕೆ ಚಂದ್ರನಿಂದ 112 ಕಿಮೀ ದೂರದಲ್ಲಿ ವೃತ್ತಕಕ್ಷೆಯಲ್ಲಿ ಸುತ್ತುತ್ತದೆ.

**ಕೊಲಂಬಿಯ ಮತ್ತು ಈಗಲ್ :** ಸಿಎಂ–ಎಸ್‌ಎಂ ಜೋಡಣೆಯ ಹೆಸರು ಕೊಲಂಬಿಯ; ಇದಕ್ಕೆ ಅಂಟಿ ಹಿಂದೆ ಇರುವ ಲೇಮ್‌ನ ಹೆಸರು ಈಗಲ್. ಕೊಲಂಬಿಯ ಈಗಲ್‌ಗಳ ಜೋಡಣೆ ಅಪೊಲೊ. ಅಪೊಲೊ ಚಂದ್ರಕಕ್ಷೆಯಲ್ಲಿದ್ದಾಗ ಇಬ್ಬರು ಯಾತ್ರಿಕರು ಸುರಂಗದ ಮೂಲಕ ಈಗಲ್ಲನ್ನು ಪ್ರವೇಶಿಸಿ ಅಲ್ಲಿರುವ ಸಕಲ ಉಪಕರಣಗಳೂ ಕಾರ್ಯಸಮರ್ಥವಾಗಿವೆ ಎಂದು ದೃಢಪಡಿಸಿಕೊಂಡರು. ಬಳಿಕ ಕೊಲಂಬಿಯಕ್ಕೆ ನುಸುಳಿ ವಿಶ್ರಾಂತಿ ಪಡೆದರು.

**ಚಂದ್ರತಲಸ್ಪರ್ಶ :** ಜುಲೈ 20. ಮುಂದಿನ ಸಾಹಸ ನೆರವೇರಿಸಲು ಭೂಮಿಯ ಮೇಲಿನ ನಿಯಂತ್ರಕರು ಅನುಮತಿ ನೀಡಿದರು. ಸ್ವಯಂಚಾಲಿತ ವ್ಯವಸ್ಥೆ ಈಗಲ್ಲನ್ನು ಚಂದ್ರತಲದ ಮೇಲಿನ ನಿರ್ದಿಷ್ಟಸ್ಥಳದಲ್ಲಿ ಇಳಿಸಲು ಸಿದ್ಧವಾಗಿತ್ತು. ಮೊದಲು ಆಲ್ಡ್ರಿನ್ ಮತ್ತೆ ಆರ್ಮ್‌ಸ್ಟ್ರಾಂಗ್ ಈಗಲ್ಲನ್ನು ಪ್ರವೇಶಿಸಿದರು. ಪುನಃ ಅದರ ಉಪಕರಣಗಳ ಪರಿಶೀಲನೆ. ಮತ್ತೆ ಅಂತರಿಕ್ಷ ಉಡುಪುಗಳ ಧಾರಣೆ. ಅಂತರಿಕ್ಷ ಉಡುಪು ಒಂದು ಪುಟ್ಟ ಭೂಮಿ–ಉಸಿರಾಟ, ಸಂಪರ್ಕ ವ್ಯವಸ್ಥೆ ಅದರೊಳಗೆ; ಉಲ್ಕೆಗಳ, ಅತಿ ನೇರಿಳೆ

ರಶ್ಮಿಪುಂಜಗಳ ಹೊಡೆತ ದಿಂದ ಅವು ಯಾತ್ರಿಕರನ್ನು ರಕ್ಷಿಸಬೇಕು; ಚಂದ್ರನಲ್ಲಿ ಥಕ್ಕನೆ ತಲೆದೋರಬಹುದಾದ ಯಾವುದೇ ಅಪಾಯದಿಂದಲೂ ಯಾತ್ರಿಕರನ್ನು ಪಾರುಮಾಡಬೇಕು; ಹೀಗಿದ್ದರೂ ಅದು ಹಗುರಾಗಿದ್ದು, ಯಾತ್ರಿಕರ ಚಲನವಲನಗಳಿಗೆ ಸಹಾಯಕವಾಗಿರಬೇಕು. ಒಬ್ಬೊಬ್ಬ ಹೊತ್ತ ಉಡುಪಿನ ಭಾರ ಭೂಮಿಯ ಮೇಲೆ ಸು. 84 ಕೆಜಿ. ಆದರೆ ಚಂದ್ರನ ಮೇಲೆ ಇದು 14 ಕೆಜಿ ತೂಗುವುದರಿಂದ ಯಾತ್ರಿಕರಿಗೆ ಅಷ್ಟು ಸೌಕರ್ಯವಿದೆ.

11–17 ಗಂಟೆ ರಾತ್ರಿ, ಮಾತೃನೌಕೆಯಾದ ಕೊಲಂಬಿಯದಿಂದ ಈಗಲ್ ಬೇರ್ಪಟ್ಟಿತು. ಕೊಲಂಬಿಯ ಅದರ ಏಕಮಾತ್ರ ಸವಾರನಾದ ಕಾಲಿನ್ಸ್ ಸಮೇತ ಕಕ್ಷೆಯಲ್ಲಿ ಸುತ್ತುತ್ತಲೇ ಇತ್ತು. 1524 ಕಿಮೀ (50,000') ಎತ್ತರದಲ್ಲಿ ಈಗಲ್ಲಿನ ಇಳಿಘಟ್ಟದ ಯಂತ್ರವನ್ನು ಆಸ್ಫೋಟಿಸಿದರು. ಬೀಳುವ ವೇಗ, ದಿಕ್ಕು ಈಗಲ್ಲಿನ ಸ್ವಯಂಚಾಲಿತ ವ್ಯವಸ್ಥೆಯ ಆದೇಶದ ಪ್ರಕಾರವೇ ಇದ್ದುವು.

ಜುಲೈ 21. ನೆಲ ಹತ್ತಿರವಾದಂತೆಯೇ ಕಲ್ಲು ಬಂಡೆಗಳಿಂದ ಕೂಡಿದ ಕೂಪದೆಡೆಗೆ ಈಗಲ್ ಇಳಿಯುತ್ತಿದ್ದುದು ಆರ್ಮ್‌ಸ್ಟ್ರಾಂಗ್‌ಗೆ ಕಂಡಿತು. ಉಳಿದಿದ್ದುದು ಕೇವಲ ಕೆಲವೇ ಸೆಕೆಂಡುಗಳು. ಚಲನೆಯ ನಿಯಂತ್ರಣವನ್ನು ಸ್ವಯಂಚಾಲಿತ ವ್ಯವಸ್ಥೆಯಿಂದ ಸ್ವತಃ ತಾನೇ ತೆಗೆದುಕೊಂಡು ಆರ್ಮ್‌ಸ್ಟ್ರಾಂಗ್ ಈಗಲ್ಲನ್ನು ಸುರಕ್ಷಿತ ಸ್ಥಳದೆಡೆಗೆ ಸಾಗಿಸಿದ. 1–47 ಗಂಟೆ. ಪೂರ್ವಾಹ್ಣ ಈಗಲ್ ಚಾಂದ್ರತಲದಮೇಲೆ ಮೆತ್ತಗೆ ಇಳಿಯಿತು.

**ಮಾನವ, ಚಂದ್ರನ ಮೇಲೆ :** ಬೆಳಗಿನವರೆಗೂ ಯಾತ್ರಿಕರು ಈಗಲ್ ಒಳಗೆ ಇದ್ದರು. ವಿಶ್ರಾಂತಿ ಬೇಕು ಮತ್ತು ಹೊಸ ಪರಿಸರದ ಪೂರ್ಣ ಪರಿಚಯವಾಗಬೇಕು. ಅಪಾಯವಿಲ್ಲ ಎಂದು ದೃಢವಾದ ಮೇಲೆ ಆರ್ಮ್‌ಸ್ಟ್ರಾಂಗ್ ಈಗಲ್ ಬಾಗಿಲು ತೆರೆದು ಏಣಿಯ ಮೂಲಕ ಒಂದೊಂದೇ ಮೆಟ್ಟಲನ್ನು ಲಯಬದ್ಧವಾಗಿ ಇಳಿದ, ಎಡಗಾಲನ್ನು ಚಂದ್ರತಲದ ಮೇಲೆ ಊರಿದ (8–27 ಗಂಟೆ. ಪೂ; ಜುಲೈ 21, 1969). ಇದು ಒಬ್ಬ ಮನುಷ್ಯನಿಗೆ ಬಲು ಪುಟ್ಟ ಹೆಜ್ಜೆ; ಆದರೆ ಮನುಕುಲಕ್ಕೆ ಹನುಮಂತಲಂಘನ ಎಂಬ ಅರ್ಥದ ಉದ್ಗಾರವೆತ್ತಿದ. ಚಂದ್ರಲೋಕದ 15 ದಿವಸಗಳ ಹಗಲಿನ ಆರಂಭ ಆಗತಾನೇ ಆಗುತ್ತಿತ್ತು. ಆರ್ಮ್‌ಸ್ಟ್ರಾಂಗ್ ಕಾಲೂರಿದ 19 ಮಿನಿಟುಗಳ ಅನಂತರ ಆಲ್ಡ್ರಿನ್ ಬಂದು ಅವನನ್ನು ಕೂಡಿಕೊಂಡ.

ಇಬ್ಬರೂ ಕೂಡಿ ನಿಯೋಜಿತ ಕರ್ತವ್ಯಗಳನ್ನೂ ಪ್ರಯೋಗಗಳನ್ನೂ ನಿರ್ವಹಿಸಿದರು. ಅಮೆರಿಕ ಸಂಯುಕ್ತಸಂಸ್ಥಾನಗಳ ಅಧ್ಯಕ್ಷ ರಿಚರ್ಡ್ ನಿಕ್ಸನ್ ಮತ್ತು ಮೂವರು ಯಾತ್ರಿಕರ ಸಹಿಯಿದ್ದ ಒಂದು ಫಲಕವನ್ನು ಏಣಿಗೆ ಕಟ್ಟಿದರು. ಅದರ ಮೇಲೆ–ಭೂಗ್ರಹದಿಂದ ಬಂದ ಮನುಷ್ಯರು ಚಂದ್ರನ ಮೇಲೆ ಇಲ್ಲಿ ಮೊದಲ ಕಾಲಿಟ್ಟರು. ಪ್ರ.ಶ. ಜುಲೈ 1969. ನಾವು ಮಾನವ ಜನಾಂಗದ ಕಲ್ಯಾಣಕ್ಕಾಗಿ ಬಂದೆವು ಎಂಬರ್ಥದ ಇಂಗ್ಲಿಷ್ ಒಕ್ಕಣೆ ಇದೆ.

ಅಮೆರಿಕ ದೇಶದ ಧ್ವಜವನ್ನು ಅಲ್ಲಿ ನೆಟ್ಟರು. ಬೇರೆ ಬೇರೆ ಸ್ಥಳಗಳಲ್ಲಿ ಒಂದು ಕಂಪನಲೇಖಕ, ಲೇಸರ್ ಪ್ರತಿಫಲಕ ಮತ್ತು ಕಣಸಂಗ್ರಾಹಕಗಳನ್ನು ಕೂಡ ಇಟ್ಟರು. ಅವರು ಚಂದ್ರನ ಮೇಲಿಟ್ಟ ಇತರ ವಸ್ತುಗಳ ವಿವರ: ರಷ್ಯ ದೇಶದ ಮೃತ ಖಗೋಳಯಾತ್ರಿಗಳಾದ ಯೂರಿ ಗಗಾರಿನ್ ಮತ್ತು ಕೋಮರೋವ್ ಅವರ ಪದಕಗಳು; ಅಪೊಲೊ ಯೋಜನೆಯಲ್ಲಿ ಈ ಹಿಂದೆ ಆಸ್ಫೋಟನೆಯಿಂದ ದುರ್ಮರಣಕ್ಕೆ ಈಡಾದ ಅಮೆರಿಕದ ಮೂವರು ಅಂತರಿಕ್ಷ ಯಾತ್ರಿಕರಾದ ರಿಸ್ಸೊ, ಚಾಫಿ ಮತ್ತು ವೈಟ್ ಅವರ ಲಾಂಛನಗಳು; ಸಂಯುಕ್ತ ರಾಷ್ಟ್ರಗಳ ವರಿಷ್ಠಾಧಿಕಾರಿಗಳ ಸಂದೇಶಗಳು ಇತ್ಯಾದಿ.

ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ನಡೆಯುತ್ತಿದ್ದಾಗ ಅದರ ಮೇಲಿನ ಮಣ್ಣು ಕೈಗೆ ಅಂಟಿಕೊಳ್ಳುವಂತೆ ಪುಡಿ ಪುಡಿಯಾಗಿದೆ ಎಂದು ಅವನಿಗನಿಸಿತು. ಚಂದ್ರಲೋಕದ ಆ ಪ್ರದೇಶ ಒಂದು ಮರುಭೂಮಿಯಂತೆ ಇತ್ತು. ಸುತ್ತಲೂ ಕೆಲವು ಕಡೆಗಳಲ್ಲಿ ದೊಡ್ಡ ದೊಡ್ಡ ಬಂಡೆಗಳೂ ಲೆಕ್ಕ ಮಾಡಲು ಸಾಧ್ಯವಿಲ್ಲದಷ್ಟು ಚಿಕ್ಕ ದೊಡ್ಡ ಕೂಪಗಳೂ ಇದ್ದುವು.

ಯಾತ್ರಿಗಳ ಹೃದಯಮಿಡಿತ ಮಿನಿಟಿಗೆ 90–125. ಆರ್ಮ್‌ಸ್ಟ್ರಾಂಗ್ (ಚಂದ್ರನಲ್ಲಿ) ಒಂದು 10 ಕೆಜಿ ಭಾರತದ ಕಲ್ಲನ್ನೆತ್ತಿದಾಗ ಮಿಡಿತ ಬಹುವಾಗಿ ಏರಿತು. ಪರೀಕ್ಷಾರ್ಥವಾಗಿ ಅಲ್ಲಿಯ ಅಮೌಲ್ಯ ಮೃತ್ತಿಕಾದಿ ವಸ್ತುಗಳನ್ನು ಸಂಗ್ರಹಿಸಿದರು.

ಮುಂದೆ ಈಗಲ್ಲನ್ನು ಪುನಃ ಪ್ರವೇಶಿಸಿದ ಇಬ್ಬರೂ ರಾತ್ರಿ 11–24 ಗಂಟೆಗೆ ಇಳಿಘಟ್ಟವನ್ನೇ ಉಡಾವಣಾಪೀಠವಾಗಿ ಉಪಯೋಗಿಸಿಕೊಂಡು ರಾಕೆಟ್‌ಗಳನ್ನು ಉರಿಸಿ ಚಂದ್ರನ ಅಂತರಿಕ್ಷಕ್ಕೆ ನೆಗೆದರು. ರಾಕೆಟ್ ಉರಿದ ಅವಧಿ 7 ಮಿನಿಟು 19 ಸೆ. ಚಂದ್ರಕಕ್ಷೆಯಲ್ಲಿ ಪರಿಭ್ರಮಿಸುತ್ತಿದ್ದ ಕೊಲಂಬಿಯವನ್ನು ಸುಮಾರು $3^1/_2$ ಗಂಟೆಗಳ ಕಾರ್ಯಚರಣೆ ಅನಂತರ ಈಗಲ್ ಕೂಡಿಕೊಂಡಿತು. ಜುಲೈ 22ರಂದು ಪೂರ್ವಾಹ್ನ 3–02 ಗಂಟೆಗೆ ಆರ್ಮ್‌ಸ್ಟ್ರಾಂಗ್ ಮತ್ತು ಆಲ್ಡ್ರಿನ್ನರು ತಮ್ಮ ಅಮೂಲ್ಯಸಂಗ್ರಹಸಮೇತ ಕೊಲಂಬಿಯಕ್ಕೆ (ಅಂದರೆ ಸಿಎಂ–ಎಸ್‌ಎಂ ಜೋಡಣೆ) ನುಸುಳಿದರು. ಇನ್ನು ಅವಶ್ಯವಿಲ್ಲದ ಈಗಲ್‌ನ ಏರುಘಟ್ಟವನ್ನು ತ್ಯಜಿಸಲಾಯಿತು. ಅಪೊಲೊ ಈಗ ಚಂದ್ರಕಕ್ಷೆಯಲ್ಲಿದೆ. ಪೂರ್ವಾಹ್ನ 10–27 ಗಂಟೆಗೆ ಅದರ ರಾಕೆಟ್‌ಗಳನ್ನು ಉರಿಸಿದರು. ಇದರಿಂದ ಉತ್ಪತ್ತಿಯಾದ ಸುಮಾರು 11 ಟನ್ ನೂಕುಬಲ ಅಪೊಲೊವನ್ನು ಚಂದ್ರಕಕ್ಷೆಯಿಂದ ಬಿಡುಗಡೆ ಮಾಡಿ ಭೂಮಿಯೆಡೆಗೆ ನೂಕಿತು.

**ಭೂಮಿಗೆ ಮರುಪಯಣ :** ಈ ಪ್ರಯಾಣದಲ್ಲಿ ಎಸ್‌ಎಂ ಮುಂದೆಯೂ ಅದಕ್ಕೆ ಅಂಟಿ ಸಿಎಂನ ಚಪ್ಪಟೆ ತಲವೂ ಕೊನೆಗೆ ಮೂತಿಯೂ ಇವೆ. ಎಸ್‌ಎಂನ ಮೈಗೆ ಅಳವಡಿಸಿರುವ ರಾಕೆಟ್‌ಗಳು ಸ್ಫೋಟಿಸಿ ಗಂಟೆಗೆ 8,850 ಕಿಮೀ ವೇಗದಲ್ಲಿ ಅಪೊಲೊ ಭೂಪ್ರಭಾವಕ್ಷೇತ್ರ ಪ್ರವೇಶಮಾಡಿತು. ಮುಂದೆ ಅಪೊಲೊ ವೇಗ ಕ್ಷಣ ಕ್ಷಣ ಏರುತ್ತಿತ್ತು. ಜುಲೈ 24 ರಾತ್ರಿ 9–50 ಗಂಟೆ. ಭೂಮಿಯಿಂದ 122 ಕಿಮೀ ಎತ್ತರದಲ್ಲಿ ವಾಯುಮಂಡಲದ ತೆಳು ಪದರವನ್ನು ಪ್ರವೇಶಿಸುವ ವೇಳೆ. ಸುಮಾರು 64 ಕಿಮೀ ಅಗಲವಿರುವ ಒಂದು ನಿರ್ದಿಷ್ಟ ಕಿಂಡಿಯಲ್ಲಿ, ಒಂದು ನಿರ್ದಿಷ್ಟ ಪ್ರವೇಶಕೋನದಲ್ಲಿ (ಸು. $5^o$–$7^o$) ನುಗ್ಗಿದರೆ ಮಾತ್ರ, ವಾಯು ಮಂಡಲದೊಡನೆ ಉಂಟಾಗುವ ತಿಕ್ಕಾಟದಿಂದ ಅಪೊಲೊ ಅನಿಲವಾಗಿ ನಾಶವಾಗದೆ ನಿರ್ದಿಷ್ಟಸ್ಥಾನದಲ್ಲಿ ಬಂದಿಳಿಯುವುದು. ಸೆಕೆಂಡಿಗೆ 11 ಕಿಮೀ ವೇಗದಲ್ಲಿ ಧಾವಿಸುತ್ತಿದ್ದ ಅಪೊಲೊದ ಸ್ವಯಂಚಾಲಿತ ದಿಗ್ದರ್ಶಕವ್ಯವಸ್ಥೆ ಸಮರ್ಪಕವಾಗಿ ಕೆಲಸಮಾಡಿ ಈ ಗುರಿ ಸಾಧಿಸಿತು. ಇನ್ನು ಅವಶ್ಯವಿಲ್ಲದ ಇದುವರೆಗೆ ಬಹೂಪಯುಕ್ತವಾಗಿದ್ದ ಎಸ್‌ಎಂನ್ನು ಈಗ ತ್ಯಜಿಸಿದರು. ಚಪ್ಪಟೆ ಭಾಗ ಮುಂದಾಗಿ ಪ್ರವೇಶಿಸಿದ ಸಿಎಂಗೆ ಗಾಳಿಯ ಕಣಗಳಿಂದ ಸ್ವಲ್ಪಮಟ್ಟಿಗೆ ವೇಗ ನಿರೋಧವಾಯಿತು. ಪರಮಾವಧಿ ಮೈ ಗಾಳಿಗೊಡ್ಡಿದ್ದುದರಿಂದ ತಿಕ್ಕಾಟದಿಂದ ಉಂಟಾದ ಉಷ್ಣ ವಿಸರಣೆಯಿಂದ ನಷ್ಟಗೊಂಡಿತು. ಆದರೂ ಅಪೊಲೊ ಸಾಗಿದ ಪ್ರದೇಶದಲ್ಲಿದ್ದವರಿಗೆ ಕೆಂಡದ ಉಂಡೆ ಕಂಡಹಾಗಾಯಿತು. ಆಗ ಸಿಎಂನ ಹೊರಮೈ ಉಷ್ಣತೆ $2760^o$ ಸೆಂ.ಗ್ರೇ. ಆದರೆ ಒಳಗಿದ್ದವರಿಗೆ ಅಪಾಯವಾಗದಂತೆ ಅದರ ರಚನೆ ಮಾಡಿದ್ದರು. ನೆಲದಿಂದ ಸು. 7,300 ಮೀ ಎತ್ತರಕ್ಕೆ ಬಂದಾಗ ಮೂತಿಯ (ಅಂದರೆ ಮೇಲು) ಭಾಗದಿಂದ ಪ್ಯಾರಾಚೂಟ್‌ಗಳು ಬಿಡಿಸಿಕೊಂಡವು. ಇದರಿಂದ ಸಿಎಂ ವೇಗ ಕುಂಠಿತವಾಯಿತು; ನಿಯೋಜಿಸಿದ ಪ್ರಕಾರ ಪೆಸಿಫಿಕ್ ಸಾಗರದ ಮೇಲೆ ಬಡಿದಪ್ಪಳಿಸಿತು (ಜುಲೈ 24, ರಾತ್ರಿ 10–20 ಗಂಟೆ). ಅವರ ಬರವನ್ನು ಕಾಯುತ್ತಿದ್ದ ನೌಕಾಪಡೆಯ ಸಿಬ್ಬಂದಿ ಹೆಲಿಕಾಪ್ಟರ್ ಸಹಾಯದಿಂದ ಸಿಎಂನ್ನು ಮೇಲೆತ್ತಿಕೊಂಡರು.

ಈ ಮಹಾಯಾತ್ರೆಯ ಒಟ್ಟು ಅವಧಿ 195 ಗಂಟೆ 18 ಮಿನಿಟು, ಭೂಮಿಯಿಂದ ಹಾರಿದಾಗ ಇದ್ದ ಭಾರ 3,000 ಟನ್; ಬಂದಾಗ ಸು. 6 ಟನ್.

ಅಂತರಿಕ್ಷ ಸಂಶೋಧನೆಯಲ್ಲಿ ಅಪೊಲೊ 11ರ ಯಶಸ್ಸು ಒಂದು ಪ್ರಮುಖ ಮೈಲ್ಲಿಗಲ್ಲು. **(ನೋಡಿ– ಚಂದ್ರ–1)**

**ಅಪೊಲೋನಿಯಸ್ :** ಪೈಥಾಗೊರಾಸ್ ಪಂಥಕ್ಕೆ ಸೇರಿದ ಗ್ರೀಕ್ ತತ್ತ್ವಜ್ಞಾನಿ ಅನೇಕ ದೇಶಗಳನ್ನು ಸುತ್ತಿ ಭಾರತಕ್ಕೂ ಬಂದು ಇಲ್ಲಿನ ದಾರ್ಶನಿಕರೊಡನೆ ಸಂಭಾಷಣೆ ನಡೆಸಿದನೆಂದು ಪ್ರತೀತಿ. ದೇಶಾಟನೆಯ ಅನಂತರ ಗ್ರೀಸ್‌ಗೆ ಹಿಂತಿರುಗಿದ. ಅಲ್ಲಿಂದ ರೋಮಿಗೆ ನಡೆದ. ಅಲೆಕ್ಸಾಂಡ್ರಿಯ, ಇಥಿಯೋಪಿಯಗಳಿಗೆ ಹೋಗಿ, ಕೆಲವು ಸಿದ್ಧಿಗಳನ್ನು ಗಳಿಸಿದುದಾಗಿ ಹೇಳಿಕೊಂಡಿದ್ದಾನೆ. ಅನೇಕ ಪವಾಡಗಳನ್ನು ಮಾಡಿ ತೋರಿಸಿದನೆಂದು ಪ್ರತೀತಿ ಇದೆ. ತುಂಬ ಪ್ರಭಾವಶಾಲಿಯಾದ ದಾರ್ಶನಿಕನಾಗಿದ್ದಿರಬಹುದೆಂದು ಊಹಿಸಲಾಗಿದೆ. ಇವನೇ ಬರೆದ ಗ್ರಂಥಗಳಾವುವೂ ದೊರೆತಿಲ್ಲ. ಇವನ ಜೀವನಚರಿತ್ರೆಯನ್ನು ಫಿಲೋಸ್ಟ್ರಾಟಸ್ ಬರೆದಿದ್ದಾನೆ (ಪ್ರ.ಶ. 2ನೆಯ ಶತಮಾನ). ಇದರಲ್ಲಿ ಅಪೊಲೋನಿಯಸ್ ಅಹಿಂಸಾ ವ್ರತವನ್ನು ತಾಳಿದ್ದನೆಂದೂ ಶಾಕಾಹಾರಿಯಾಗಿದ್ದನೆಂದೂ ಅಪರಿಗ್ರಹವನ್ನು ಬೋಧಿಸಿದನೆಂದೂ ಉಲ್ಲೇಖವಿದೆ. ಭಾರತದ ದರ್ಶನ ಧರ್ಮಗಳು ಇವನ ಮೇಲೆ ಪ್ರಭಾವ ಬೀರಿದುವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. (ಎಂ.ವೈ.)

**ಅಪೊಲೋನಿಯಸ್, ಪರ್ಗಾದ:** ಪ್ರಾಚೀನ ಗ್ರೀಕ್ ದೇಶದ ಸುಪ್ರಸಿದ್ಧ ಗಣಿತಜ್ಞ (ಪ್ರ.ಶ.ಪೂ.ಸು. 3ನೆಯ ಶತಮಾನದ ಉತ್ತರಾರ್ಧ–2ನೆಯ ಶತಮಾನದ ಪೂರ್ವಾರ್ಧ). ಸ್ಥಳ ಏಷ್ಯ ಮೈನರಿನ ಪರ್ಗಾ; ಆದ್ದರಿಂದ ಪರ್ಗಾದ ಅಪೊಲ್ಲೋನಿಯಸ್ ಎಂದೇ ಖ್ಯಾತನಾದ. ಶಂಕುಜಗಳನ್ನು ಕುರಿತು ನಡೆಸಿದ ಸಂಶೋಧನೆಗಳಿಂದ ಪ್ರಸಿದ್ಧನಾಗಿದ್ದಾನೆ. ಈತನ ಎಂಟು ಗ್ರಂಥಗಳಲ್ಲಿ ಏಳು ನಮಗೆ ದೊರೆತಿವೆ–ಮೂಲ ಗ್ರೀಕ್ ಭಾಷೆಯಲ್ಲಿ ನಾಲ್ಕು, ಅರಬ್ಬೀ ಭಾಷಾಂತರದಲ್ಲಿ ಮೂರು. ಅಪೊಲೋನಿಯಸನ ಬರೆಹ ಒಬ್ಬ ಆಧುನಿಕ ವಿದ್ಯಾರ್ಥಿ ಅಭ್ಯಸಿಸಲು ಕೂಡ ಬಹಳ ಕಠಿನವಾಗಿದೆ. ಬಹುಶಃ ಈ ಕಾರಣದಿಂದ ಅವನ ಶಂಕುಜದ ಮೇಲಿನ ಗ್ರಂಥಗಳನ್ನು ಪಠ್ಯಪುಸ್ತಕ ಬರೆಯಲು ಮಾದರಿ ಎಂದು ಯಾರೂ ಬಳಸಿಕೊಳ್ಳಲಿಲ್ಲ. ಈ ವಿಚಾರದಲ್ಲಿ ಈ ಗ್ರಂಥಗಳಿಗೂ ಯೂಕ್ಲಿಡನ ಮೂಲ ಭಾವನೆಗಳು (ಯೂಕ್ಲಿಡ್ಸ್ ಎಲಿಮೆಂಟ್ಸ್) ಎಂಬ ಗ್ರಂಥಕ್ಕೂ ಬಹಳ ವ್ಯತ್ಯಾಸವಿದೆ.

ಅಪೊಲೋನಿಯಸ್ ನಿರ್ದೇಶಕಗಳನ್ನೂ ಅವುಗಳ ಪರಿವರ್ತನೆಯನ್ನೂ ಉಪಯೋಗಿಸಿದ್ದ. ಆದರೆ ಇಲ್ಲಿ ಇವನು ಮೊದಲಿಗನಲ್ಲ. ಶಂಕುಜಗಳನ್ನು ಕುರಿತು ಬೆಳಕಿಗೆ ಬಂದಿದ್ದ ಹಿಂದಿನ ಬರೆಹಗಳಲ್ಲಿಯೂ ನಿರ್ದೇಶಕಗಳ ಉಲ್ಲೇಖವಿದೆ. ಪ್ಲೇಟೋನ ಸಮಕಾಲೀನ ಮೆನೆಕ್ಮಸ್ ಎಂಬ ಗಣಿತಜ್ಞ ಪ್ಯರಾಬೊಲದ ಒಂದು ವಿಶಿಷ್ಟ ಗುಣವನ್ನು ಬಳಸಿಕೊಂಡಿದ್ದ. ಗ್ರೀಕರು ಬಳಸಿದ ನಿರ್ದೇಶಕ ವ್ಯವಸ್ಥೆಗಳು ಆಯಾ ಆಕೃತಿಗಳಲ್ಲಿ ವಿಶಿಷ್ಟವಾಗಿದ್ದ ರೇಖೆಗಳನ್ನು ಅವಲಂಬಿಸಿದ್ದುವು.

ಅಪೊಲೋನಿಯಸನ ಜೀವನ ವಿಚಾರ ಬಲು ಸ್ವಲ್ಪ ಮಾತ್ರ ತಿಳಿದಿದೆ. ಅವನು ಉತ್ತರ ಈಜಿಪ್ಟಿನ ಅಲೆಕ್ಸಾಂಡ್ರಿಯ ಎನ್ನುವ ಅಂದಿನ ಸುಪ್ರಸಿದ್ಧ ಜ್ಞಾನಕೇಂದ್ರದಲ್ಲಿ ವಿದ್ಯಾರ್ಜನೆ ಮಾಡಿದ. ಆಗ ಅಲೆಕ್ಸಾಂಡ್ರಿಯದ ಪ್ರಥಮ ಪ್ರಸಿದ್ಧ ಗಣಿತಜ್ಞ ಯೂಕ್ಲಿಡ್ ಅಲ್ಲಿ ಅಧ್ಯಾಪಕನಾಗಿದ್ದ **(ನೋಡಿ– ಯೂಕ್ಲಿಡ್)**. ಅಲೆಕ್ಸಾಂಡ್ರಿಯದಿಂದ ಮರಳಿದ ಅಪೊಲೋನಿಯಸ್ ಪೆರ್ಗಾನಮ್‌ನಲ್ಲಿ ನೆಲೆಸಿ ಶಂಕುಜಗಳ ಮೇಲಿನ ಕೃತಿಗಳನ್ನು ಬರೆದ. ಇಂದು ನಾವು ಶಂಕುಜಗಳೆಂದು ಕರೆಯುವ ಪ್ಯರಾಬೊಲ, ದೀರ್ಘವೃತ್ತ ಮತ್ತು ಹೈಪರ್ಬೊಲ ಎನ್ನುವ ಹೆಸರುಗಳನ್ನು ಅಪೊಲೋನಿಯಸ್ ಬಳಸಿದನೆಂದು ಇಲ್ಲಿ ಸೂಚಿಸಬಹುದು. ಅಪೊಲೋನಿಯಸನ ವೃತ್ತ, ಅಪೊಲೋನಿಯಸನ ಪ್ರಮೇಯ, ಜ್ಯಾಮಿತಿಯ ಮೂಲಪಾಠಗಳಲ್ಲಿ ಸುಪ್ರಸಿದ್ಧವಾಗಿವೆ. (ಬಿ.ಬಿ.ಬಿ.)

**ಅಪೋಸಲರ ಉಪದೇಶಗಳು :** ಬೈಬಲಿನ (ಸತ್ಯವೇದ) ಎರಡನೆಯ ಭಾಗವೆನಿಸಿರುವ ಹೊಸ ಒಡಂಬಡಿಕೆಯಲ್ಲಿನ ಐದನೆಯ ಮತ್ತು ಮಹತ್ತ್ವದ ಪುಸ್ತಕ. ಅನಾದಿಕಾಲದ ಕ್ರೈಸ್ತಸಭೆಯ ಚಾರಿತ್ರಿಕಾಂಶಗಳು ಇದರಿಂದ ತಿಳಿದು ಬರುವಷ್ಟು ಹೊಸ ಒಡಂಬಡಿಕೆಯ ಇನ್ನಾವ ಪುಸ್ತಕಗಳಿಂದಲೂ ತಿಳಿದುಬರುವುದಿಲ್ಲ. ಪೌಲನು ಬರೆದಿರುವ ಪತ್ರಿಕೆಗಳಲ್ಲಿ ಹಲಕೆಲವು ಸಂಗತಿಗಳು ತಿಳಿದು ಬರುತ್ತವಾದರೂ ಇಲ್ಲಿ ಕಾಣುವಷ್ಟು ಅಲ್ಲಿಲ್ಲ. ಇದೊಂದು ವೃತ್ತಾಂತಮಂಜರಿ. ಆ ಕಾಲದ ಮುಖ್ಯ ಘಟನೆಗಳನ್ನೂ ಕೆಲವು ಗಣನೀಯ ವ್ಯಕ್ತಿಗಳ, ಕೆಲವು ಅಪೋಸಲರ ಕಾರ್ಯಕರ್ಮಗಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಇದರಲ್ಲಿ ಎಲ್ಲೂ ಅಪೋಸಲರ ಸೇವಾಚರಿತ್ರೆ ಇರುವುದಿಲ್ಲ. ಇದು ಹೆಚ್ಚಾಗಿ ಪೌಲನ ಕಾರ್ಯಕಲಾಪಗಳಿಗೇ ಮೀಸಲಾದಂತಿದೆ. ಆದರೂ ಆರಂಭದಲ್ಲಿ ಯೋಹಾನನ ಸುದ್ದಿ ಕೊಂಚ ಇದೆ. ಪೇತ್ರನ ನಾಯಕತ್ವದ ಸಂಬಂಧದಲ್ಲಿ ಹಲಕೆಲವು ವಿಷಯಗಳನ್ನು ನಿವೇದಿಸಲಾಗಿದೆ.

ಹೊಸ ಒಡಂಬಡಿಕೆಯ ಮೂರನೆಯ ಪುಸ್ತಕವಾಗಿರುವ ಲೂಕನು ಬರೆದ ಸುವಾರ್ತೆ ಮತ್ತು ಅಪೋಸಲರ ಉಪದೇಶಗಳು–ಈ ಎರಡು ಪುಸ್ತಕಗಳೂ ಒಬ್ಬನ ಕೈಯಿಂದಲೇ ಬರೆಯಲ್ಪಟ್ಟಿರಬೇಕೆಂಬ ವಿಷಯದಲ್ಲಿ ವಾದವಿಲ್ಲ. ವಸ್ತುವಿನ ಆಯ್ಕೆ ಶೈಲಿಗಳು ಇದನ್ನು ಸಮರ್ಥಿಸುತ್ತವೆ. ಆದರೆ ಇವುಗಳನ್ನು ಲೂಕನೇ ಬರೆದನೆಂಬುದಕ್ಕೆ ಮೊದಲನೆಯ ಶತಮಾನದ ಬರೆಹಗಳಿಂದ ಯಾವ ಸಬಲವಾದ ಆಧಾರವೂ ಈವರೆಗೆ ದೊರೆತಿಲ್ಲ. ಎರಡನೆಯ ಶತಮಾನದ ಬರೆಹಗಳಿಂದ ದೊರೆತ ಆಧಾರಗಳಿಂದ ಲೂಕನೇ ಅವುಗಳ ಕರ್ತನೆಂದು ಪಂಡಿತರ ಅಭಿಪ್ರಾಯ. ಇದಕ್ಕೆ ಕೆಲವು ಸಭಾಪಿತೃಗಳ ಆಧಾರವೂ ಇದೆ.

ಲೂಕನೆಂಬುವನು ಆ ಹೆಸರುಳ್ಳ ಸುವಾರ್ತೆಯ ಮತ್ತು ಪ್ರಸ್ತುತ ಗ್ರಂಥದ ಒಕ್ಕಣಿಕೆಯಲ್ಲಿ ಥೆಯೊಫಿಲ ಎಂಬ ಹೆಸರನ್ನು ಎತ್ತಿಕೊಂಡು ಅವನನ್ನು ಸಂಬೋಧಿಸಿ, ಈ ಎರಡೂ ಗ್ರಂಥಗಳನ್ನು ರಚಿಸಿದಂತಿದೆ. ಆದರೆ ಥೆಯೊಫಿಲನೆಂಬ ಈ ಪುರುಷ ಯಾರಿರಬಹುದೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಒಟ್ಟಿನಲ್ಲಿ ವಿಪತ್ತಿಗೊಳಗಾದ ಕ್ರೈಸ್ತಧರ್ಮೀಯರಿಗೂ ಅಂದಿನ ಜನಸಾಮಾನ್ಯರಿಗೂ ಅಧಿಕಾರವರ್ಗದವರಿಗೂ ಉಪದೇಶರೂಪವಾಗಿ ಈ ಕೃತಿ ರಚಿತವಾಗಿರಬೇಕೆಂದು ತೋರುತ್ತದೆ.

ಗ್ರಂಥಕರ್ತ ಪ್ರಾಮಾಣಿಕಚರಿತ್ರಕಾರ. ತನ್ನೀ ಗ್ರಂಥಗಳಲ್ಲಿ ಚಾರಿತ್ರಿಕಾಂಶಗಳನ್ನು ಬಹು ಜಾಗರೂಕತೆಯಿಂದಲೂ ಪ್ರಾಮಾಣಿಕತನದಿಂದಲೂ ಆತ ಮಂಡಿಸಿರುವನೆಂಬುದಕ್ಕೆ 19ನೆಯ ಶತಮಾನದಲ್ಲಿ ಶೋಧವಾದ ಕೆಲವು ಪುರಾತನ ಶಾಸನಗಳಿಂದ ಆಧಾರ ಸಿಕ್ಕಿದೆ. ಆತ ಒಳ್ಳೆಯ ರಚನಾಸಾಮರ್ಥ್ಯವುಳ್ಳವನಾಗಿದ್ದನೆಂಬ ಮಾತಿಗೆ ಕ್ರಮಬದ್ಧವಾದ ಅವನ ಗ್ರಂಥವೇ ಸಾಕ್ಷಿಯಾಗಿದೆ. ಆತ ತನ್ನೀ ಗ್ರಂಥಗಳನ್ನು ಅಂದಿನ ವ್ಯವಹಾರದಲ್ಲಿನ ಗ್ರೀಕ್ ಭಾಷೆಯಲ್ಲಿ ಸುಲಭ ಹಾಗೂ ಸರಳಶೈಲಿಯಲ್ಲಿ ಬರೆದಿದ್ದಾನೆ. ಕರ್ತೃ ಜಾತ್ಯತೀತ ದೃಷ್ಟಿಯುಳ್ಳವನೂ ವಿಶಾಲಭಾವನೆಯುಳ್ಳವನೂ ವಿಶಾಲಹೃದಯನೂ ಆಗಿರಬೇಕೆಂದು ಅವನ ಪುಸ್ತಕದಿಂದಲೇ ತಿಳಿಯುತ್ತದೆ. ಇತರರನ್ನು ಅರಿತುಕೊಳ್ಳುವ ಅವನ ಮನೋಧರ್ಮ ಎಷ್ಟು ಉದಾತ್ತವಾಗಿತ್ತೆಂಬುದು ಈ ಕೆಲವು ವಿಷಯಗಳಿಂದ ವ್ಯಕ್ತವಾಗುವುದು.

ಆತ ಸ್ವತಃ ಯೆಹೂದ್ಯನಲ್ಲದಿದ್ದರೂ ಅವರ ವಿಷಯದಲ್ಲಿ ತುಂಬ ಅನುಕಂಪವುಳ್ಳವನಾಗಿದ್ದ. ಯೆಹೂದ್ಯರು ಕೀಳ್ಗಳೆಯುತ್ತಿದ್ದ ಸಾಮಾನ್ಯರ ವಿಷಯದಲ್ಲಿ ಯೇಸು ತೋರಿಸಿದ ಸ್ನೇಹಭಾವವನ್ನು ಈತ ಎತ್ತಿ ತೋರಿಸಲು ಎಷ್ಟೂ ಹಿಂಜರಿದಿಲ್ಲ. ಅನ್ಯಮತೀಯರಿಗೆ

ಸುವಾರ್ತಾಪ್ರಸಾರಣೆಯಾಗುತ್ತಿದ್ದ ಸಂಗತಿಯನ್ನು ತಿಳಿಸುವಾಗೆಲ್ಲ ಒಳ್ಳೆಯ ಹುಮ್ಮಸ್ಸಿನಿಂದ ತಿಳಿಸಿದ್ದಾನೆ. ರಕ್ಷಣೆಯ ಶುಭವರ್ತಮಾನ ಪ್ಯಾಲೆಸ್ತೀನಿನಲ್ಲಿ ಹಬ್ಬಿದ ವಿಷಯವನ್ನು ತನ್ನ ಸುವಾರ್ತೆಯಲ್ಲಿ ತಿಳಿಸಿದ ಅನಂತರ ಅದು ಮಾನವಕೋಟಿಗೆ ಮುಟ್ಟಿದ ವಿಧಾನವನ್ನು, ಮಾನವಕುಲವನ್ನು ರಕ್ಷಿಸಲು ದೇವರು ಕೈಕೊಂಡ ಯೋಜನೆ ಹೇಗೆ ಕೈಗೂಡಿತೆಂಬುದನ್ನು ವಿಸ್ತಾರವಾಗಿ ಹೇಳಿದ್ದಾನೆ. ದೀನದರಿದ್ರರು, ಪತಿತರು, ಪಾಪಿಷ್ಠರು, ದಲಿತರು, ಹೀನಾಯಿಸಲ್ಪಟ್ಟವರು ಮುಂತಾದವರ ವಿಷಯದಲ್ಲಿ ಲೂಕನು ತುಂಬ ಸಹತಾಪವುಳ್ಳವನಾಗಿದ್ದ. ಕ್ರಿಸ್ತನ ದೀನಭಾವದ ಚಿತ್ರಕಾರನೆಂದು ಡಾಂಟೆ ಇವನನ್ನು ಹೊಗಳಿದ್ದಾನೆ. ಲೂಕನು ಕೋಮಲ ಹೃದಯಿ. ಅವನ ಈ ಮೃದುಸ್ವಭಾವ ಆಗಿನ ಪ್ರಪಂಚದಲ್ಲಿ ಯಾವ ಸ್ಥಾನಮಾನವೂ ಇಲ್ಲದ ಸ್ತ್ರೀಯರ ಕಡೆಗೂ ಧಾರಾಳವಾಗಿ ಹರಿದುದು ಕಾಣುತ್ತದೆ. ಸ್ತ್ರೀಯರ ಸ್ಥಾನಮಾನದ ವಿಷಯದಲ್ಲಿ ಕ್ರಿಸ್ತನಲ್ಲಿ ಇದ್ದ ಉದಾತ್ತಭಾವನೆಯನ್ನೇ ಇವನೂ ಎತ್ತಿ ಹಿಡಿದಿದ್ದಾನೆಂಬುದು ಅವನ ಸುವಾರ್ತೆಯಲ್ಲಿ ಗೊತ್ತಾಗುತ್ತದೆ. ಇದೇ ಭಾವನೆ ಅಪೋಸಲರ ಉಪದೇಶಗಳಲ್ಲೂ ಒಡಮೂಡಿದೆ. ಈಗ ಇದರಲ್ಲಿ ಯಾವ ವಿಶೇಷತೆ ಕಾಣದಿದ್ದರೂ ಅಂದಿನ ಪ್ರಪಂಚದಲ್ಲಿ ಇದು ಒಂದು ವಿಶೇಷ ಸಂಗತಿಯೇ ಆಗಿತ್ತು. ಲೂಕನ ಹೃದಯ ಕೋಮಲವಿದ್ದಷ್ಟೂ ಕಠಿಣವಾಗಿತ್ತು. ಅದರಲ್ಲಿ ಖಂಡಿತತ್ವವೂ ಇತ್ತು. ಕ್ರಿಸ್ತನ ಅನುಯಾಯಿಗಳು ಕ್ರಿಸ್ತನ ಶಿಲುಬೆಯನ್ನು ಪ್ರತಿದಿನವೂ ಹೊರತರಬೇಕೆಂದು ಬೇರಾವ ಸೌವಾರ್ತಿಕನೂ ತಿಳಿಸಿಲ್ಲ. ಕ್ರಿಸ್ತನ ಶಿಷ್ಯರು ಅನುಸರಿಸಬೇಕಾದ ಮಾರ್ಗ ಬಹು ಕಷ್ಟಕರವಾದುದೆಂದೂ ಈತ ಬರೆದಿದ್ದಾನೆ. ಈ ಮಾತುಗಳನ್ನು ಕ್ರಿಸ್ತನ ಅಪೋಸಲರಾಗಿದ್ದ ಪೇತ್ರ, ಯೋಹಾನ, ಪೌಲ ಮೊದಲಾದವರು ಅಕ್ಷರಶಃ ಹೇಗೆ ಪಾಲಿಸಿದರೆಂಬ ವಿಷಯವನ್ನೂ ತಿಳಿಸಿದ್ದಾನೆ.

ಅದರಂತೆ ಲೂಕನು ಒಂದು ಉನ್ನತ ಧ್ಯೇಯವನ್ನಿಟ್ಟುಕೊಂಡೇ ತನ್ನ ಕೃತಿಯನ್ನು ನಿರ್ಮಿಸಿದ್ದಾನೆ. ಕ್ರೈಸ್ತಧರ್ಮವನ್ನು ರೋಮನ್ ಸರಕಾರಕ್ಕೆ ಪರಿಚಯಮಾಡಿಕೊಡುವುದು ಒಂದು ಉದ್ದೇಶವಾಗಿತ್ತೆನ್ನಬಹುದು. ರೋಮನ್ ಅಧಿಕಾರಿಗಳನೇಕರು, ಕ್ರೈಸ್ತಧರ್ಮದ ವಿಷಯದಲ್ಲಿ ಸೈರಣೆಯುಳ್ಳವರೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ನಿಷ್ಪಕ್ಷಪಾತ ತೀರ್ಪು ಕೊಡುವವರೂ ಆಗಿದ್ದರೆಂದು ಗ್ರಂಥಕರ್ತ ತೋರಿಸಲು ಯತ್ನಮಾಡಿದ್ದಾನೆ. ಇತ್ತ ಕ್ರೈಸ್ತರು ಕೂಡ ಸರಕಾರದೊಂದಿಗೆ ಯಥಾರ್ಥಭಾವದಿಂದಲೂ ವಿಧೇಯತೆಯಿಂದಲೂ ನಡೆದುಕೊಳ್ಳುತ್ತಿದ್ದರೆಂಬುದನ್ನು ಸರಕಾರದ ಗಮನಕ್ಕೆ ತರುವುದೂ ಅವನ ಒಂದು ಉದ್ದೇಶ. ಕ್ರೈಸ್ತಧರ್ಮ ವಿಶ್ವಧರ್ಮವೆಂದು ತೋರಿಸಿಕೊಡುವುದು ಬರೆಹಗಾರನ ಇನ್ನೊಂದು ಉದ್ದೇಶವಾಗಿದ್ದಂತೆ ಕಾಣುತ್ತದೆ. ಕ್ರೈಸ್ತನಾಗಬಯಸುವವನಿಗೆ ಕುಲ, ಜಾತಿ, ಮತ, ಪಂಥ, ದೇಶ ಇವಾವುದರ ತೊಡಕಿಲ್ಲ. ಎಲ್ಲರೂ ಅದನ್ನು ಅಂಗೀಕರಿಸಬಹುದು ಎಂಬುದನ್ನು ಲೂಕ ತೋರಿಸಿದ್ದಾನೆ. ಏಕೆಂದರೆ ತಾವು ದೇವರೇ ಆಯ್ದುಕೊಂಡ ಜನಾಂಗ, ಆತನ ಸ್ವಕೀಯ ಪ್ರಜೆಗಳು, ಉಳಿದವರೆಲ್ಲರೂ ದೇವರಿಗೆ ಬೇಡಾದವರು ಎಂಬ ಭಾವನೆಯಿಂದ ಮಂಕುಗೊಂಡ ಯೆಹೂದಿಗಳಿಗೆ ಇದು ನೇರ ಉಪದೇಶವಾಗಿದೆ. ಇವು ಈ ಗ್ರಂಥರಚನೆಯ ಉದ್ದೇಶಗಳಾಗಿದ್ದರೂ ಮೂಲ ಉದ್ದೇಶ ಬೇರೆಯೇ ಇದ್ದಂತೆ ತೋರುತ್ತದೆ. ಅದು ಕ್ರಿಸ್ತನ ಅಪ್ಪಣೆಯ ಪರಿಪಾಲನೆ. ಯೇಸು ತನ್ನ ಶಿಷ್ಯರಿಗೆ–ನೀವು ಜರೂಸಲೇಮಿನಲ್ಲೂ ಎಲ್ಲ ಯೂದಾಯ ಸಮಾರ್ಯ ಸೀಮೆಗಳಲ್ಲೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಎಂದು ಹೇಳಿದನು. ಈ ಅಪ್ಪಣೆಯನ್ನು ಆತನ ಅಪೋಸಲರು ತಪ್ಪದೆ ಪಾಲಿಸಿದರೆಂಬುದನ್ನು ಗ್ರಂಥಕರ್ತ ತೋರಿಸಲು ಹವಣಿಸಿದ್ದಾನೆ. ಕ್ರೈಸ್ತ ಧರ್ಮ ಪ್ಯಾಲೆಸ್ತೀನಿನಲ್ಲಿ ಹುಟ್ಟಿ ನಾನಾ ಕಡೆಗೆ ಕುಡಿ ಚಾಚಿ ಹಬ್ಬುತ್ತ ಕಡೆಗೆ ರೋಮ್ ಸಾಮ್ರಾಜ್ಯದ ಮುಖ್ಯಪಟ್ಟಣವಾಗಿದ್ದ ರೋಮ್ ನಗರವನ್ನೂ ಮುಟ್ಟಿದ ರೀತಿಯನ್ನು ತನ್ನ ಪುಸ್ತಕದಲ್ಲಿ ಬಣ್ಣಿಸಿದ್ದಾನೆ. ಕ್ರಿಸ್ತನ ಅಪ್ಪಣೆಯ ಮೇರೆಗೆ ಅಪೋಸಲರು ಕೈಗೊಂಡ ಸ್ವಾಮಿಸೇವೆಯಲ್ಲಿ ದೇವಾತ್ಮನ ಪ್ರೇರಣೆ ಮತ್ತು ಶಕ್ತಿಗಳಿಂದ ತುಂಬಿದವರಾಗಿ ತಮ್ಮ ಕಾರ್ಯವನ್ನು ಸಾಧಿಸಿದರು. ಈ ದೇವಾತ್ಮ ಜನಮನವನ್ನು ಆವರಿಸಿ ದಾಗಲೇ ಅವರ ಸೇವೆ ಸಿದ್ಧಿಗೊಳ್ಳುತ್ತ ಬಂತು ಎಂಬುದನ್ನು ತೋರಿಸುವುದೇ ಲೂಕನ ಮುಖ್ಯ ಗುರಿಯಾಗಿತ್ತು.

ಸಿ.ಎಚ್.ಟರ್ನರ್ ಎಂಬ ಪಂಡಿತ ಈ ಗ್ರಂಥವನ್ನು ವಿಷಯದೃಷ್ಟಿಯಿಂದ ಸೂಕ್ತರೀತಿಯಲ್ಲಿ ವಿಭಾಗಿಸಿದ್ದಾನೆ.

ಜರೂಸಲೇಮಿನಲ್ಲಿ ಜನ್ಮವೆತ್ತಿದ ಈ ಧರ್ಮ ಕೊನೆಯಲ್ಲಿ ರೋಮ್ ಸಾಮ್ರಾಜ್ಯದ ಪ್ರಧಾನ ಪಟ್ಟಣವಾಗಿದ್ದ ರೋಮ್ ನಗರವನ್ನು ಮುಟ್ಟಿದ ಬಗೆಯನ್ನು ತೋರಿಸುವುದೇ ಗ್ರಂಥಕರ್ತನ ಹಿರಿಯಾಸೆಯಾಗಿದ್ದಿತಷ್ಟೆ. ಈ ವಿಷಯ ಗ್ರಂಥದ ಕೊನೆಗೆ ಬರುತ್ತದೆ. ಪೌಲನು ಸೆರೆಮನೆಯಲ್ಲಿದ್ದುಕೊಂಡು ಕೊನೆಯ ತೀರ್ಪಿಗಾಗಿ ಕಾದುಕೊಂಡಿದ್ದಾನೆಂಬಲ್ಲಿಗೆ ಕೃತಿ ಮುಗಿಯುತ್ತದೆ. ಆದರೆ ಓದುಗನಿಗೆ ಮುಂದೇನಾಯಿತು ಎಂಬುದನ್ನು ತಿಳಿಯುವ ಚಪಲ. ಅದಕ್ಕೆ ಪರಿಹಾರವಿಲ್ಲ. ಅದೊಂದು ರಹಸ್ಯ ವಿಷಯ. ಆದುದರಿಂದ ರಹಸ್ಯವಾಗಿಯೇ ಉಳಿದಿದೆ. ಈ ಗ್ರಂಥವನ್ನು ಆಳವಾಗಿ ಅಭ್ಯಸಿಸಿದ ಪಂಡಿತನೊಬ್ಬ ಈ ಗ್ರಂಥಕ್ಕೆ ಈಗಿನ ಹೆಸರಿಗಿಂತ ಜರೂಸಲೇಮಿನಿಂದ ರೋಮ್ ನಗರಕ್ಕೆ ಸುವಾರ್ತೆಯನ್ನು ಸಾಗಿಸಿದ ಕಥೆ ಎಂದಿದ್ದರೆ ಚೆನ್ನಾಗಿ ಒಪ್ಪುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾನೆ.

ಲೂಕನು ತನ್ನೀ ಗ್ರಂಥಕ್ಕೆ ಬೇಕಾಗಿದ್ದ ಸಾಹಿತ್ಯವನ್ನು ಬೇರೆ ಬೇರೆ ಕಡೆಗಳಿಂದ ಸಂಗ್ರಹಿಸಿಕೊಂಡಂತಿದೆ. ಅದರ ಕೆಲಭಾಗ ಬಾಯಿಂದ ಬಾಯಿಗೆ ಬಂದ ಕಥೆಗಳಿಂದ. ಮುಖ್ಯವಾಗಿ ಜರುಸಲಮ್, ಅದರ ಕೆಲಭಾಗ ಬಾಯಿಂದ ಬಾಯಿಗೆ ಬಂದ ಕಥೆಗಳಿಂದ, ಮುಖ್ಯವಾಗಿ ಜರುಸಲಮ್, ಕೈಸೇರೈಯ ಮತ್ತು ಅಂತಿಯೋಕ್ ನಗರಗಳಲ್ಲಿದ್ದ ಕ್ರೈಸ್ತರಲ್ಲಿ ಪ್ರಚಲಿತವಾಗಿದ್ದ ಕಥೆಗಳಿಂದ ಆಯ್ದುಕೊಂಡದ್ದಾಗಿದೆ. ಇನ್ನು ಕೆಲವು ಭಾಗ ಅಪೋಸಲರ ವಿಷಯದಲ್ಲಿ ಬರೆದಿಟ್ಟ ಕೆಲವು ದಾಖಲೆಗಳಿಂದ ತೆಗೆದುಕೊಂಡುದಾಗಿದೆ ಮತ್ತೆ ಕೆಲಭಾಗ ಸಭಾನಾಯಕರಿಂದ ಕೇಳಿ ತಿಳಿದುಕೊಂಡುದಾಗಿದೆ. ಇದರಲ್ಲಿಯ ಬಹುಭಾಗವನ್ನು ಆತ ತಾನು ಕಂಡು ಕೇಳಿದ ಸಂಗತಿಗಳಿಂದ ತುಂಬಿಸಿದ್ದಾನೆ. ಮುಖ್ಯವಾಗಿ ತಾನಿಟ್ಟುಕೊಂಡಿದ್ದ ದಿನಚರಿಯಿಂದ ಅನೇಕವನ್ನು ಆಯ್ದುಕೊಂಡಂತಿದೆ. ಕೆಲವೆಡೆ ಬರುವ ನಾವು ಎಂಬ ಪದ ಈ ಮಾತನ್ನು ಸ್ಪಷ್ಟಪಡಿಸುತ್ತದೆ. ಪೌಲನ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದ ಕಾಲದಲ್ಲಿ ತನ್ನ ಗ್ರಂಥಕ್ಕೆ ಬೇಕಾದ ಸಾಮಗ್ರಿಯನ್ನು ಸಂಗ್ರಹಿಸಲು ದೊರೆತ ಸದವಕಾಶವನ್ನು ಲೂಕನು ಪೂರ್ತಿ ಉಪಯೋಗ ಮಾಡಿಕೊಂಡಿರಬೇಕೆಂಬುದು ಈ ಗ್ರಂಥದಿಂದ ವ್ಯಕ್ತವಾಗುತ್ತದೆ. ಈ ರೀತಿ ಸಂಗ್ರಹಿಸಿದ ಸಾಮಗ್ರಿಯನ್ನು ಒಟ್ಟುಗೂಡಿಸಿ ತನ್ನೀ ಗ್ರಂಥವನ್ನು ಪ್ರ.ಶ 64ರ ಸುಮಾರಿಗೆ ಬರೆದು ಮುಗಿಸಿರಬೇಕೆಂದು ಪಂಡಿತರ ಸರ್ವಸಾಮಾನ್ಯ ಅಭಿಪ್ರಾಯ.

ಕ್ರೈಸ್ತಸಭೆ ಜನ್ಮತಾಳಿದ ತರುವಾಯ ಅದರ ಆರಂಭದ 35 ವರ್ಷದ ಬೆಳೆವಣಿಗೆಯ ಕಥೆಯನ್ನು ತಿಳಿದುಕೊಳ್ಳುವ ಕುತೂಹಲವುಳ್ಳವರಿಗೆ ಈ ಗ್ರಂಥವನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಆದುದರಿಂದಲೇ ಇದೊಂದು ಅಮೂಲ್ಯ ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ.

(ಎಸ್.ಆರ್.ಎಫ್.)

**ಅಪೋಹವಾದ** : ಶಬ್ದ ಅಥವಾ ಪದದ ಅರ್ಥನಿರ್ಣಯಕ್ಕೆ ಸಂಬಂಧಿಸಿದ ವಿಚಾರಪರಂಪರೆಯಲ್ಲಿ ಬೌದ್ಧತಾರ್ಕಿಕರು ಹಿಡಿದಿರುವ ವಿಶಿಷ್ಟಮಾರ್ಗವನ್ನು ಈ ಹೆಸರಿನಿಂದ ಕರೆಯಲಾಗಿದೆ. ಭಾರತದ ದರ್ಶನಗಳಲ್ಲಿ ಈ ವಿಷಯವನ್ನು ಕುರಿತು ಅನೇಕ ಮೀಮಾಂಸೆಗಳು ಹುಟ್ಟಿವೆ. ಪ್ರಾಚೀನ ನಿರುಕ್ತ ಮತ್ತು ವ್ಯಾಕರಣದಲ್ಲಿ ಮೂಲತಃ ಶಬ್ದಗಳು ಕ್ರಿಯಾಬೋಧಕಗಳು ಎಂಬ ಅಭಿಪ್ರಾಯವಿದೆ. ಅನಂತರ ಮೀಮಾಂಸಕರು ಶಬ್ದ ಸಿದ್ಧವಸ್ತುವನ್ನು ಬೋಧಿಸುವುದಿಲ್ಲ; ಸಾಧಿಸಬೇಕಾದ ಕಾರ್ಯವನ್ನು ಬೋಧಿಸುತ್ತದೆ ಎಂದು ವಾದಮಾಡಿದ್ದಾರೆ. ನ್ಯಾಯವೈಶೇಷಿಕ ಮತ್ತು ವೇದಾಂತ ದರ್ಶನಗಳಲ್ಲಿ ಶಬ್ದಕ್ಕೆ ಪರಿನಿಷ್ಪನ್ನ ಅಥವಾ ಸಿದ್ಧವಾದ ಪದಾರ್ಥವೇ ಅರ್ಥವೆಂದು ತೀರ್ಮಾನಿಸಲಾಗಿದೆ.

ಬೌದ್ಧತಾರ್ಕಿಕರ ರೀತ್ಯಾ ಅಪೋಹವೆಂದರೆ ನಿಷೇಧ ಅಥವಾ ನಿರಾಕರಣೆ ಅಥವಾ ವ್ಯಾವೃತ್ತಿ ಎಂದು ಅರ್ಥ. ತಾನು ಬೋಧಿಸುವ ಪದಾರ್ಥ ಇತರ ಪದಾರ್ಥಗಳಿಂದ ಭಿನ್ನವೆಂದು ಹೇಳುವುದೇ ಪ್ರತಿಯೊಂದು ಶಬ್ದದ ಉದ್ದೇಶ. ಒಂದು ವಸ್ತು ಹೇಗಿದೆ ಎನ್ನುವುದಕ್ಕಿಂತ ಹೇಗಿಲ್ಲ ಎಂದು ಹೇಳುವುದೇ ವಾಗ್ ವ್ಯವಹಾರದ ಪ್ರಯೋಜನವೆಂದು ಈ ವಾದದ ಸಾರ. ಇದರ ಪ್ರಕಾರ ಶಬ್ದಾರ್ಥ ಭಾವಾತ್ಮಕವಲ್ಲ, ಅಭಾವಾತ್ಮಕ.

(ಎಸ್.ಎಸ್.ಆರ್.)

**ಅಪೌರುಷೇಯ** : ಪ್ರಾಚೀನ ಪವಿತ್ರಗ್ರಂಥಗಳ ಕರ್ತೃತ್ವವಿಚಾರದಲ್ಲಿನ ಒಂದು ವಾದ. ಇತಿಹಾಸದ ಯುಗಕ್ಕಿಂತಲೂ ಪ್ರಾಚೀನವೆನಿಸಿದ ಧಾರ್ಮಿಕ ಗ್ರಂಥಗಳ ಉಗಮವನ್ನು ನಿರ್ಣಯಿಸುವುದು ಸುಲಭದ ಮಾತಲ್ಲ. ಅದರಲ್ಲೂ ಆ ಧರ್ಮಗ್ರಂಥಗಳಲ್ಲಿ ಕಂಡುಬರುವ ತತ್ತ್ವಗಳು ಬಹು ಗಂಭೀರವೂ ಮೂಲಭೂತವೂ ಎನಿಸಿ, ನಿತ್ಯತತ್ತ್ವಗಳ ಸ್ವರೂಪವನ್ನು ಪಡೆದಿರುವಾಗ ಅವುಗಳ ಕರ್ತೃತ್ವವನ್ನು ನಿರ್ಣಯಿಸಲು ರಹಸ್ಯತಮ ವಿವರಣೆಗಳು ಹುಟ್ಟಿಕೊಂಡಿವೆ. ಅಂಥ ಧಾರ್ಮಿಕ ಗ್ರಂಥಗಳನ್ನು ಶ್ರುತಿ ಅಂದರೆ ಕೇಳಿದ್ದು ಅಥವಾ ಪ್ರಕಾಶಗೊಂಡದ್ದು ಎಂದೂ ಸ್ಮೃತಿ ಎಂದರೆ ನೆನಪುಮಾಡಿಕೊಂಡದ್ದು ಎಂದೂ ಆಗಮ ಎಂದರೆ ನಡೆದು ಬಂದದ್ದು ಎಂದೂ ಕರೆಯುವುದುಂಟು. ಅಂಥ ತತ್ತ್ವಗಳು ಮಾನವನ ಬುದ್ಧಿಪೂರ್ವಕವಾದ ಪ್ರಯತ್ನದಿಂದ ಮೂಡಿಬಂದವುಗಳಲ್ಲವಾದ್ದರಿಂದ ಅವುಗಳನ್ನು ಅಪೌರುಷೇಯವೆಂದೂ ತಿಳಿಯಲಾಗಿದೆ. ಅಪೌರುಷೇಯ ತತ್ತ್ವಗಳು ಅವಶ್ಯಕವಾಗಿ ನಿರ್ದೋಷವಿರಬೇಕು. ಏಕೆಂದರೆ ದೋಷ ಮಾನವಸಹಜವಾದದ್ದೇ ಹೊರತು ದೈವಕ್ಕಂಟಿದ್ದಲ್ಲ. ಅಪೌರುಷೇಯವೆಂದು ಪರಿಗಣಿತವಾದ ವೇದಾದಿ ಧರ್ಮಗ್ರಂಥಗಳು ಅನಾದಿ ಎಂದೂ ಪರಿಗಣಿತವಾಗಿವೆ. ಋಷಿವರ್ಯರು ಕೇವಲ ದ್ರಷ್ಟಾರರೇ ಹೊರತು ಈ ತತ್ತ್ವಗಳ ಕರ್ತೃಗಳೇನಲ್ಲ. ಅಂದಮೇಲೆ ಅವರಿಗಿಂತ ಮೊದಲೂ ಅನಾದಿಕಾಲದಿಂದಲೂ ಇದ್ದಂಥ ಈ ಧಾರ್ಮಿಕತತ್ತ್ವಗಳನ್ನು ಪುರಾತನಕಾಲದ ಋಷಿಗಳು ಮೊಟ್ಟಮೊದಲಿಗೆ ಕಂಡರು, ಅಷ್ಟೆ. ಇದು ಅಪೌರುಷೇಯವಾದಿಗಳ ಮತ.

ವೇದಗಳು ಅಪೌರುಷೇಯವೆಂದು ನಂಬಿದ ಭಾರತೀಯ ದಾರ್ಶನಿಕರಲ್ಲಿ ಎರಡು ರೀತಿಯ ವಿವರಣೆಗಳು ಬಹುಪ್ರಮುಖವಾಗಿ ಕಾಣುತ್ತವೆ. ನೈಯಾಯಿಕರು ವೇದ ಅಪೌರುಷೇಯವೆಂದು ಒಪ್ಪಿದರೂ ಮಾನವನಲ್ಲದಿದ್ದರೆ ಮಹಾಪುರುಷನಾದ ದೇವರು ಅದರ ಕರ್ತೃವಾಗಿರಬೇಕೆನ್ನುತ್ತಾರೆ. ಅಪೌರುಷೇಯವಾದವನ್ನು ಪೂರ್ಣವಾಗಿ ನಂಬಿದ

ಪೂರ್ವಮೀಮಾಂಸಕರು ವೇದ ಅನಾದಿಯಾದ್ದರಿಂದ ದೇವರ ನೆರವಿಲ್ಲದೆ ಅದರ ಅಸ್ತಿತ್ವವನ್ನು ವಿವರಿಸುತ್ತಾರೆ. ಅವರ ಪ್ರಕಾರ ವೇದೋಕ್ತಧರ್ಮ ಮತ್ತು ತತ್ತ್ವಗಳು ಮಾತ್ರವೇ ಅಪೌರುಷೇಯವಲ್ಲ, ವೇದದಲ್ಲಿ ಕಂಡುಬರುವ ಪದಪಂಕ್ತಿಯೂ ಅಪೌರುಷೇಯ ಮತ್ತು ಅನಾದಿ.

ಈ ಅಂಶವನ್ನು ಐತಿಹಾಸಿಕ ದೃಷ್ಟಿಯಿಂದ ನೋಡಿದ ಪಾಶ್ಚಾತ್ಯ ದಾರ್ಶನಿಕರಾದ ಮ್ಯಾಕ್ಸ್ ಮುಲ್ಲರ್ ಮತ್ತು ವಿಂಟರ್‌ನಿಟ್ಸ್ ಮುಂತಾದವರು ವೇದಗಳ ಅಪೌರುಷೇಯವಾದವನ್ನು ಅಷ್ಟಾಗಿ ಮನ್ನಿಸದೆ ಅವುಗಳಿಗೆ ಕಾಲ ಮತ್ತು ಕರ್ತೃಗಳನ್ನು ಹುಡುಕಲು ಪ್ರಯತ್ನಿಸಿದ್ದಾರೆ. ವೇದಗಳ ಕಾಲನಿರ್ಣಯದಲ್ಲಿ ಪಂಡಿತರುಗಳಲ್ಲಿ ಭಿನ್ನಾಭಿಪ್ರಾಯವಿರುವುದಾದರೂ ಅವುಗಳ ಕರ್ತೃಗಳಾಗಿರಬಹುದೆಂಬುದು ಇನ್ನೂ ಬಿಡಿಸಲಾರದ ಒಗಟಾಗಿಯೇ ಉಳಿದಿದೆ. ಅಂದಮಾತ್ರಕ್ಕೆ ಈ ದಾರ್ಶನಿಕರು ವೇದಗಳು ಅಪೌರುಷೇಯವೆಂಬುದನ್ನು ಮನ್ನಿಸುತ್ತಾರೆಂದಲ್ಲ. ಆದರೆ ಅದರ ಕರ್ತೃಗಳಾರೆಂಬುದನ್ನು ಸಾಧಾರಯುತವಾಗಿ ನಿರ್ಣಯಿಸಲಾರದವರಾಗಿದ್ದಾರೆ.

ಧರ್ಮಗ್ರಂಥಗಳು ಅಪೌರುಷೇಯವಾಗಿರಬಲ್ಲವೆಂಬುದು ಹಿಂದೂಧರ್ಮದಲ್ಲಿ ಮಾತ್ರ ಕಾಣಬರುವ ಗುಣವಲ್ಲ. ಇಸ್ಲಾಂ ಧರ್ಮಗ್ರಂಥ ಪ್ರವಾದಿ ಮಹಮ್ಮದನಿಂದಲೂ ಕ್ರೈಸ್ತಧರ್ಮದ ಗ್ರಂಥ ದೇವಪುತ್ರನಾದ ಯೇಸುವಿನಿಂದಲೂ ಮೂಡಿಬಂದಿದೆ. ದೈವಾಂಶಸಂಭೂತರಾದ ಈ ಮತಾಚಾರ್ಯರ ದಿವ್ಯದೃಷ್ಟಿಗೆ ಗೋಚರವಾದ ಈ ಧಾರ್ಮಿಕತತ್ತ್ವಗಳು ಅಪೌರುಷೇಯವೂ ನಿರ್ದೋಷವೂ ಪವಿತ್ರವೂ ಆಗಿವೆ ಎಂದು ಆ ಮತಾನುಯಾಯಿಗಳು ಪರಿಗಣಿಸುತ್ತಾರೆ. **(ನೋಡಿ– ವೇದಗಳು)** (ಎ.ಎಲ್.ಎಸ್.)

**ಅಪ್ಪಣ್ಣ, ಹಡಪದ :** ಭಕ್ತಿ ಭಂಡಾರಿ ಬಸವಣ್ಣನವರ ಕಾಯದ ನೆಳಲಾಗಿ ಅವರಲ್ಲಿ ಹಡಪದ ವೃತ್ತಿಯನ್ನು ಕೈಕೊಂಡು ಅವರ ಸತ್ಸಂಗದ ಫಲವಾಗಿ ಕಾಯದ ಶುದ್ಧಿಯನ್ನರಿತು ತನ್ನ ಸರ್ವಾಚಾರ ಸಂಪತ್ತುಗಳನ್ನು ಬಸವಣ್ಣನವರಲ್ಲಿ ಸಮರ್ಪಿಸಿ ನಿಜವಾಸಿಯಾಗಿದ್ದ ನಿಜಸುಖಿಶರಣ. ಈತನಿಗೆ ಅನುರೂಪಳಾದ ಸಹಧರ್ಮಿಣಿ ಲಿಂಗಮ್ಮ. ಬಸವಣ್ಣನವರ ಆಪ್ತನಂತಿದ್ದು, ಉಚಿತ ಸಂದರ್ಭಗಳಲ್ಲಿ ಒಡೆಯರನ್ನು ಎಚ್ಚರಿಸುತ್ತಿದ್ದ ಸ್ವಾಮಿನಿಷ್ಠೆಯ ಭೃತ್ಯ ಈತ. ಬಸವಪ್ರಿಯ ಕೂಡಲಸಂಗಯ್ಯ ಎಂದೇ ಈತನ ಅಂಕಿತ. ಸಿದ್ಧವೀರಣ್ಣೊಡೆಯರು ಸಂಗ್ರಹಿಸಿರುವ ಪ್ರಭುದೇವರ ಶೂನ್ಯಸಂಪಾದನೆಯ ಐದನೆಯ ಸಂಪಾದನೆಯಲ್ಲಿ ಇವನ ವ್ಯಕ್ತಿತ್ವ ಮಹೋನ್ನತವಾಗಿ ಮೂಡಿಬಂದಿದೆ. ಅನುಭವಮಂಟಪದ ಜ್ಞಾನಭಾಸ್ಕರನೆನಿಸಿದ 'ನಿಂದರೆ ನೆಳಲಿಲ್ಲದ ಸುಳಿದಿರೆ ಹೆಜ್ಜೆಯಿಲ್ಲದ' ಪ್ರಭುದೇವ ಸಿದ್ಧರಾಮನೊಡಗೂಡಿ ಮೊದಲಬಾರಿಗೆ ಕಲ್ಯಾಣಕ್ಕೆ ಬಂದಾಗ ಭಕ್ತಿಯಲ್ಲಿ ಮೈಮರೆತಿದ್ದ ಬಸವಣ್ಣನವರನ್ನು ಎಚ್ಚರಿಸಿ, ಒಡೆಯನ ನೈಷ್ಠಿಕಭಕ್ತಿಗೆ ಭಂಗ ಬಾರದಂತೆ, ಬಂದ ಅಸಾಮಾನ್ಯ ಅತಿಥಿಗೆ ಅಪಚಾರವಾಗದಂತೆ ಬಸವಣ್ಣ–ಅಲ್ಲಮ ಪ್ರಭುಗಳ ಮಧ್ಯೆ ನಡೆಸಿದ ಶರಣ ಅಪ್ಪಣ್ಣನ ದೌತ್ಯ ಅವನ ಆಳವಾದ ಅರಿವು ಮತ್ತು ವಿಶಾಲವಾದ ಅನುಭವಕ್ಕೆ ಹಿಡಿದ ಕನ್ನಡಿಯಾಗಿದೆ. ಬಸವಣ್ಣನವರ ಸಂಗಾತಿಯಾದ ಅಪ್ಪಣ್ಣನ ಶಿವಾನುಭವದ ಮಹತ್ವ ಅವನ ಅಂತ್ಯಕಾಲದಲ್ಲಿ ಗೋಚರವಾಗುತ್ತದೆ. ತಮ್ಮ ಅಂತ್ಯಕಾಲದಲ್ಲಿ ಕೂಡಲಸಂಗಮಕ್ಕೆ ಬಂದ ಬಸವಣ್ಣನವರು ತಾವು ಕೈಹಿಡಿದ ಧರ್ಮಪತ್ನಿ ನೀಲಾಂಬಿಕೆಯನ್ನು ಕರೆದು ತರುವಂತೆ ಒಡನಾಡಿಯಾದ ಅಪ್ಪಣ್ಣನನ್ನೇ ಕಳುಹಿಸಿದಾಗ, ಬರಿಕೈಲಿ ಹಿಂತಿರುಗಿ ಬಂದು ನಿಜೇಷ್ಟಲಿಂಗದಲ್ಲಿಯೇ ಗುರು ಹಾಗೂ ಪತಿ ಬಸವಣ್ಣನವರನ್ನು ಕಂಡು ಅದರಲ್ಲಿಯೇ ಸಮರಸಳಾದ ನೀಲಾಂಬಿಕೆಯ ರೀತಿಯನ್ನು ವರ್ಣಿಸುತ್ತಲೇ ತಾನೂ ನಿಜಲಿಂಗದಲ್ಲಿ ಐಕ್ಯನಾದ ನಿಜಸುಖಿ ಅಪ್ಪಣ್ಣನ ಜೀವನ ಶರಣರನ್ನು ಮರಣದಲ್ಲಿ ನೋಡು ಎಂಬ ಉಕ್ತಿಗೆ ಆದರ್ಶವಾಗಿದೆ. ನೀಲಾಂಬಿಕೆಯ ಸಮಾಧಿಯ ಬಳಿಯಲ್ಲೇ ಈತನ ಸಮಾಧಿಯೂ ಇದೆ.

ಇವನ ಸಂಸ್ಕೃತಜ್ಞಾನ ಅಪಾರವೆಂಬುದಕ್ಕೆ ಇವನ ವಚನಗಳೇ ಸಾಕ್ಷಿ. ನುಡಿಯಂತೆ ನಡೆ, ವಿಚಾರದಂತೆ ಆಚಾರ ಇವುಗಳಿಂದ ಕೂಡಿ ನಿಷ್ಠೆಯ ಕೆಚ್ಚಿನಿಂದ ಮೂಡಿ ಬಂದಿರುವ ಇವನ ವಚನಗಳು, ಇವನ ಬಾಳಿನ ಬೆಳಕಿಂಡಿಗಳಂತಿವೆ. ಅವು ಅತ್ಯಂತ ಸರಳ, ನೇರ ಮತ್ತು ಹೃದಯತಲಸ್ಪರ್ಶಿ. (ಬಿ.ಎನ್.ಸಿ.)

**ಅಪ್ಪಯ್ಯ ದೀಕ್ಷಿತ :** ಸು. 1554–1626. ಸರ್ವತೋಮುಖವಾದ ಪ್ರತಿಭೆ ಪಾಂಡಿತ್ಯಗಳಿಗೂ ದೈವಭಕ್ತಿಗೂ ಹೆಸರುವಾಸಿಯಾದ ಈತ ತಮಿಳುನಾಡಿನ ಕಂಚಿಯ ಸಮೀಪದ ಅಡಯಪ್ಪಲಮ್ ಎಂಬ ಗ್ರಾಮದಲ್ಲಿ ವಿದ್ವಾಂಸರ ವಂಶದಲ್ಲಿ ಜನಿಸಿದ. ಅವನ ತಾತ ಆಚಾರ್ಯ ದೀಕ್ಷಿತ ವಿಜಯನಗರದ ಕೃಷ್ಣದೇವರಾಯನಿಂದ ಪೋಷಿತನಾಗಿದ್ದು ಅಚ್ಚಾನ್ ದೀಕ್ಷಿತ ಎಂದು ಹೆಸರಾಗಿದ್ದ. ಅಚ್ಚಾನ್ ಎಂಬುದು ಆಚಾರ್ಯ ಪದದ ತಮಿಳು ರೂಪ.

ಆಚಾರ್ಯ ದೀಕ್ಷಿತನಿಗೆ ಶೈವ ಹಾಗೂ ಶ್ರೀವೈಷ್ಣವ ಪಂಗಡದ ಇಬ್ಬರು ಪತ್ನಿಯರಿದ್ದರು. ಹೀಗಾಗಿ ದೀಕ್ಷಿತನಲ್ಲಿ ಶೈವ ವೈಷ್ಣವ ಮತಗಳು ಸಮನ್ವಯಗೊಂಡಿದ್ದುವು. ಶ್ರೀವೈಷ್ಣವ ಪತ್ನಿಯಲ್ಲಿ ಹುಟ್ಟಿದ ನಾಲ್ವರು ಪುತ್ರರಲ್ಲಿ ಮೊದಲನೆಯವ ಶ್ರೀರಂಗರಾಜಾಧ್ವರಿ. ಈತ ಪ್ರಸಿದ್ಧ ವೇದಾಂತಿ. ಇವನಿಗೆ ಅಪ್ಪದೀಕ್ಷಿತ, ಅಚ್ಚಾನ್ ದೀಕ್ಷಿತರೆಂಬ ಇಬ್ಬರು ಮಕ್ಕಳು. ನೀಲಕಂಠವಿಜಯ ಎಂಬ ಚಂಪೂಕಾವ್ಯದ ಕರ್ತೃ ನೀಲಕಂಠ ದೀಕ್ಷಿತ ಅಚ್ಚಾನ್ ದೀಕ್ಷಿತನ ಮೊಮ್ಮಗ.

ಶ್ರೀರಂಗರಾಜಾಧ್ವರಿಯ ಜ್ಯೇಷ್ಠಪುತ್ರನ ಹುಟ್ಟುಹೆಸರು ಅಪ್ಪ ದೀಕ್ಷಿತ ಎಂದಾದರೂ ಕಾಲಕ್ರಮದಲ್ಲಿ ಗೌರವ ಕೂಡಿಬಂದಂತೆಲ್ಲ ಅಪ್ಪಯ್ಯ ದೀಕ್ಷಿತ ಎಂಬ ಹೆಸರೇ ರೂಢಿಗೆ ಬಂತು. ಬಾಲ್ಯದಿಂದಲೂ ತಂದೆಯಿಂದ ಅದ್ವೈತ ಮುಂತಾದ ಶಾಸ್ತ್ರಗಳಲ್ಲಿ ಶಿಕ್ಷಣ ಲಭಿಸಿ ವಂಶಕ್ಕನುಗುಣವಾಗಿ ಅವನಲ್ಲಿ ಅದ್ವೈತ ವಿಷಯಿಕವಾದ ಆಸಕ್ತಿ ಬೆಳೆಯಿತು. ಅಲ್ಲದೆ ಅದ್ವೈತದ ಪ್ರಕಾರ ನಿರ್ಗುಣ ಬ್ರಹ್ಮತತ್ತ್ವವನ್ನು ತಂದೆ ಮನದಟ್ಟು ಮಾಡಿಸಿದ್ದರೂ ಅಪ್ಪಯ್ಯನಿಗೆ ಚಿದಚಿತ್ಪ್ರಪಂಚವಿಶಿಷ್ಟನಾದ ಶಿವನ ವಿಚಾರದಲ್ಲಿ ಭಕ್ತಿ ಅಪಾರವಾಗಿ ಬೆಳೆದು ಅವನ ಕೆಲವು ಗ್ರಂಥಗಳಲ್ಲಿ ಹೊರಹೊಮ್ಮಿತು. ಕೆಲಕಾಲಾನಂತರ ಅದ್ವೈತಾಚಾರ್ಯನೊಬ್ಬನ ಪ್ರಭಾವದಿಂದ ಅವನ ಮನಸ್ಸು ಅದ್ವೈತದ ಮೂಲತತ್ತ್ವಗಳ ಕಡೆ ಪುನಃ ಹರಿಯಿತು. ತತ್ಪರಿಣಾಮವಾಗಿ ಆತ ಬರೆದ ಗ್ರಂಥಗಳೆಂದರೆ, ಅದ್ವೈತ ವೇದಾಂತವನ್ನು ಕುರಿತು ವ್ಯಾಖ್ಯಾನ ರೂಪದ ಪರಿಮಳ, ನ್ಯಾಯ ರಕ್ಷಾಮಣಿ, ಸಿದ್ಧಾಂತಲೇಶಸಂಗ್ರಹ–ಮುಂತಾದುವು.

ಅಪ್ಪಯ್ಯ ದೀಕ್ಷಿತನ ಕಾಲದ ವಿಚಾರದಲ್ಲಿ ವಿವಾದವಿದೆ. ಆತ ಪ್ರ.ಶ. 1554–1626 ರವರೆಗೆ ಜೀವಿಸಿದ್ದನೆಂಬುದು ಸಾಮಾನ್ಯವಾಗಿ ವಿದ್ವಾಂಸರ ಒಪ್ಪಿಗೆ ಪಡೆದಿರುವ ಅಭಿಪ್ರಾಯ. ಇದಕ್ಕೆ ವಿಜಯನಗರದ ಎರಡನೆಯ ಶ್ರೀರಂಗರಾಯನ ಒಂದು ಶಾಸನದ ಆಧಾರವಿದೆ. ಆದರೆ ಅಪ್ಪಯ್ಯ ದೀಕ್ಷಿತನ ವಂಶಜರೇ ಆದ ವೈ. ಮಹಲಿಂಗಶಾಸ್ತ್ರಿಗಳು ಇವನ ಕಾಲದ ವಿಚಾರದಲ್ಲಿ ಮೇಲ್ಕಂಡ ತೀರ್ಮಾನ ಸರಿಯಲ್ಲವೆಂದು ವಾದಿಸಿದ್ದಾರೆ. ಅಪ್ಪಯ್ಯ ದೀಕ್ಷಿತ ತನ್ನ ಕೆಲವು ಗ್ರಂಥಗಳಲ್ಲಿ ಕಾಣಿಸಿರುವ ಚಿನ್ನತಿಮ್ಮ, ಚಿನ್ನಬೊಮ್ಮ, ವೆಂಕಟ ಎಂಬ ರಾಜರ ಹೆಸರುಗಳನ್ನೂ ದೀಕ್ಷಿತನ ಜನ್ಮಸ್ಥಳವಾದ ಅಡಯಪ್ಪಲಂನ ಕಾಲಕಂಠೇಶ್ವರ ದೇವಾಲಯದಲ್ಲಿನ ಶಿಲಾಶಾಸನವನ್ನೂ ಗಮನದಲ್ಲಿಟ್ಟುಕೊಂಡು ಶಾಸ್ತ್ರಿಗಳು ದೀಕ್ಷಿತನ ಕಾಲವನ್ನು ನಿರ್ಣಯಿಸಿದ್ದಾರೆ. ರಂಗರಾಜ ಪುತ್ರನಾದ ಅಪ್ಪಯ್ಯನಿಂದ ಒಂದು ನೂರು ಗ್ರಂಥಗಳು ರಚಿತವಾದ ಅಂಶವೂ ಚಿನ್ನಬೊಮ್ಮ ಅಪ್ಪಯ್ಯನಿಗೆ ಪೋಷಕ ದೊರೆಯಾಗಿದ್ದ ವಿಚಾರವೂ ಮೇಲ್ಕಂಡ ಶಿಲಾಶಾಸನದಿಂದ (1582) ತಿಳಿದುಬಂದಿವೆ. ಆದರೆ, ಅಪ್ಪಯ್ಯ ದೀಕ್ಷಿತನ ಕಾಲದಿಂದ ಬಹು ಈಚೆಗೆ ಅವನ ಪ್ರಸಿದ್ಧಿಯನ್ನನುಸರಿಸಿ ಶಾಸನ ಹುಟ್ಟಿರಬಹುದೆಂದು ಹೇಳಿ ಕೆಲವು ವಿದ್ವಾಂಸರು ಅದರ ಆಧಾರದ ಮೇಲೆ ಶಾಸ್ತ್ರಿಗಳವರು ಮಾಡಿರುವ ಕಾಲನಿರ್ಣಯವನ್ನು ವಿರೋಧಿಸಿದ್ದಾರೆ. ಅಲ್ಲದೆ, ಅದೇ ವಂಶದಲ್ಲಿ ಅಪ್ಪಯ್ಯ ಎಂಬ ಹೆಸರುಳ್ಳವರು ಮೂರು ಮಂದಿ ಇರುವರೆಂಬ ವಿಷಯವನ್ನೂ ವಿದ್ವಾಂಸರು ಬೆಳಕಿಗೆ ತಂದಿರುವುದರಿಂದ ದೀಕ್ಷಿತರ ಕಾಲವನ್ನು ನಿರ್ಧರಿಸುವುದು ಕಷ್ಟತರವಾಗಿದೆ.

ಅಪ್ಪಯ್ಯ ದೀಕ್ಷಿತ ಸು. 104 ಗ್ರಂಥಗಳ ಕರ್ತೃವೆಂದು ಪ್ರಸಿದ್ಧಿ ಪಡೆದಿದ್ದಾನೆ. ಶ್ರೀಕಂಠಶಿವಾಚಾರ್ಯನ ಬ್ರಹ್ಮಸೂತ್ರ ಭಾಷ್ಯಕ್ಕೆ ವಿವರಣೆಯನ್ನು ಕೊಟ್ಟು ವಿಶಿಷ್ಟಶಿವಾದ್ವೈತವನ್ನು ಸುಂದರವಾಗಿ ವಿವರಿಸಿರುವ ಕೀರ್ತಿ ಈತನದು. ಮೇಲ್ಕಂಡ ಸೂತ್ರಭಾಷ್ಯಕ್ಕೆ ವ್ಯಾಖ್ಯಾನರೂಪದಲ್ಲಿರುವ ಶಿವಾರ್ಕಮಣಿದೀಪಿಕಾ, ಶಿವಾದ್ವೈತನಿರ್ಣಯ ಮುಂತಾದ ಗ್ರಂಥಗಳೂ ಶಿವತತ್ತ್ವ ಪ್ರತಿಪಾದನೆಗೆ ಮೀಸಲಾಗಿವೆ. ದೀಕ್ಷಿತ ಶುದ್ಧಾದ್ವೈತದಲ್ಲಿ ದೃಢವಾದ ಚಿತ್ತವೃತ್ತಿಯುಳ್ಳವನು. ಆದರೆ ಅವನ ಹೃದಯ ಶಿವಭಕ್ತಿಯಿಂದ ತುಂಬಿತ್ತು. ಸಗುಣಬ್ರಹ್ಮ ನಿರೂಪಣೆಯಲ್ಲಿ ಅಭಿರುಚಿಯನ್ನು ಹೊಂದಿದ್ದ ಆತನಿಗೆ ಶಿವಭಕ್ತಿ ವಿಷ್ಣುಭಕ್ತಿಗಳೆರಡರಲ್ಲೂ ಏಕರೂಪವಾದ ಸಹಾನುಭೂತಿ ಶ್ರದ್ಧೆಗಳಿದ್ದುವು. ವೈಷ್ಣವಾಚಾರ್ಯ ಶ್ರೀಮದ್ವೇದಾಂತದೇಶಿಕ ವಿರಚಿತ ಯಾದವಾಭ್ಯುದಯ ಕಾವ್ಯಕ್ಕೆ ಉತ್ತಮವ್ಯಾಖ್ಯಾನವನ್ನು ಬರೆದು ದೀಕ್ಷಿತ ತನ್ನ ವಿಶಾಲ ಮನೋಭಾವವನ್ನು ವ್ಯಕ್ತಪಡಿಸಿದ್ದಾನೆ. ಆದರೂ ಅವನ ಹೃದಯದ ಒಲವು ಶಿವನ ಕಡೆಗೇ. ಅವನೇ ಹೇಳುವಂತೆ ಅವನಿಗೆ ತರುಣೇಂದುಶೇಖರನಲ್ಲಿ ಅತಿಭಕ್ತಿ (ತಥಾಪಿ ಭಕ್ತಿಸ್ತರುಣೇಂದುಶೇಖರ).

ಅದ್ವೈತವೇದಾಂತಕ್ಕೂ ಶೈವಮತಕ್ಕೂ ಸಂಬಂಧಪಟ್ಟ ಗ್ರಂಥಗಳನ್ನೇ ಅಲ್ಲದೆ ದೀಕ್ಷಿತ ಕುವಲಯಾನಂದ, ಚಿತ್ರಮೀಮಾಂಸಾ, ವೃತ್ತಿವಾರ್ತಿಕಾ, ಲಕ್ಷಣರತ್ನಾವಳೀ ಎಂಬ ಅಲಂಕಾರ ಗ್ರಂಥಗಳನ್ನೂ ಯಾದವಾಭ್ಯುದಯಕ್ಕೆ ವ್ಯಾಖ್ಯಾನವನ್ನೂ ರಚಿಸಿದ್ದಾನೆ. ಶಿವಮಹಿಮ ಕಲಿಕಾಸ್ತುತಿ, ವರದರಾಜಸ್ತವ, ಹರಿಹರಸ್ತುತಿ ಮುಂತಾದ ಸ್ತೋತ್ರಗ್ರಂಥಗಳೂ ಅವನಿಂದ ರಚಿತವಾಗಿವೆ. ಈ ಗ್ರಂಥಗಳಲ್ಲಿ ಕಾಣಬರುವ ವಸ್ತು ಪ್ರತಿಪಾದನೆಯನ್ನು ಗಮನಿಸಿದರೆ ಮೀಮಾಂಸೆ, ವ್ಯಾಕರಣ, ನ್ಯಾಯ–ಮುಂತಾದ ಶಾಸ್ತ್ರಗಳಲ್ಲಿ ದೀಕ್ಷಿತನಿಗಿದ್ದ ಪ್ರಬುದ್ಧ ಪಾಂಡಿತ್ಯ ಎದ್ದುಕಾಣುತ್ತದೆ. ಹೀಗೆ ದೀಕ್ಷಿತನ ಗ್ರಂಥರಚನೆ ಬಹುಮುಖವಾದದ್ದು.

ದೀಕ್ಷಿತನ ಒಂದೆರಡು ಕೃತಿಗಳು ಕಟುವಾದ ಟೀಕೆಗೆ ಗುರಿಯಾಗಿರುವುದೂ ಉಂಟು. ಸುಪ್ರಸಿದ್ಧ ಆಲಂಕಾರಿಕನಾದ ಜಗನ್ನಾಥ (ಸು. 1620–65) ಇವನನ್ನು ದ್ರವಿಡಪುಂಗವ ಮುಂತಾದ ಲಘುವಾದ ಮಾತುಗಳಿಂದ ನಿರ್ದೇಶಿಸಿ, ಅವನ ಅಲಂಕಾರ ಗ್ರಂಥಗಳಲ್ಲೊಂದನ್ನು ಟೀಕಿಸಲು ಚಿತ್ರಮೀಮಾಂಸಾಖಂಡನ ಎಂಬ ಗ್ರಂಥವನ್ನೇ ಬರೆದಿದ್ದಾನೆ. ಆದರೆ ಜಗನ್ನಾಥನ ತಂದೆಗೆ ಮೀಮಾಂಸಾ ಶಾಸ್ತ್ರದಲ್ಲಿ ಗುರುವಾಗಿದ್ದ ಖಂಡದೇವ ದೀಕ್ಷಿತನನ್ನು ಮೀಮಾಂಸಕ

ಮೂರ್ಧನ್ಯ ಎಂದು ಪ್ರಶಂಸಿಸಿ ಅವನ ಪಾಂಡಿತ್ಯದ ಹಿರಿಮೆಯನ್ನು ಎತ್ತಿಹಿಡಿದಿರುವುದರಿಂದ ಕರ್ತೃವಿನ ಮೇಲಣ ಟೀಕೆಗಳು ಮಹತ್ವಕ್ಕೆ ಪೂರಕಗಳೇ ಹೊರತು ಬಾಧಕಗಳಲ್ಲವೆಂದು ಹೇಳಬಹುದು.

ದೀಕ್ಷಿತನ ವ್ಯಕ್ತಿತ್ವದಲ್ಲಿ ಕಾಣಬರುವ ಹೃದಯವೈಶಾಲ್ಯ, ಔದಾರ್ಯ, ಪಾಂಡಿತ್ಯ, ಪ್ರತಿಭೆ, ಜ್ಞಾನಭಕ್ತಿಗಳ ಸಮನ್ವಯ ಅನನುಕರಣೀಯವಾದುವು. ಅವನಲ್ಲಿ ತತ್ತ್ವಜ್ಞಾನಿಯ ಬುದ್ಧಿಸೂಕ್ಷ್ಮತೆಯೂ ಭಕ್ತಾಗ್ರಣಿಯ ಭಾವಸಂಪತ್ತೂ ಸಮ್ಮಿಳಿತವಾಗಿವೆ. ಅವನ ತತ್ತ್ವದೃಷ್ಟಿ ನಿಷ್ಪಕ್ಷವಾದುದು.

ಉಪನಿಷತ್ತುಗಳ, ಬ್ರಹ್ಮಸೂತ್ರಗಳ ಮತ್ತು ಶಂಕರಾದಿ ಆಚಾರ್ಯರತ್ನರ ಅದ್ವೈತನಿಷ್ಠೆಯನ್ನು ಪ್ರಸ್ತಾಪಿಸುತ್ತ, ತಾನೇ ಅದ್ವೈತಾಚಾರ್ಯನೆಂಬ ಕೀರ್ತಿಗೆ ಭಾಗಿಯಾಗಿರುವ ಅಪ್ಪಯ್ಯ ದೀಕ್ಷಿತ 'ತರುಣೇಂದುಶೇಖರನ ಅನುಗ್ರಹದಿಂದಲೇ ಮನುಷ್ಯರಿಗೆ ಅದ್ವೈತಸಂಸ್ಕಾರವುಂಟಾಗಬಲ್ಲದು, ಬೇರೆ ಮಾರ್ಗದಿಂದಲ್ಲ' ಎಂದು ಮನೋಜ್ಞವಾಗಿ ಹೇಳಿದ್ದಾನೆ.

(ಬಿ.ಕೆ.ಎಸ್.; ಕೆ.ಸಿ.)

**ಅಪ್ಪರ್ :** 63ಪುರಾತನರಲ್ಲಿ ಒಬ್ಬ. ತಮಿಳುನಾಡಿನಲ್ಲಿ ಪ್ರಸಿದ್ಧರಾದ ಸುಂದರ್, ಮಾಣಿಕ್ಯ ವಾಚಕರ್, ತಿರುಜ್ಞಾನ ಸಂಬಂಧರ್ ಸಮಯಾಚಾರ್ಯರ್ ಎಂದು ಪರಿಗಣಿಸಲ್ಪಟ್ಟಿದ್ದಾನೆ. ಪೆರಿಯಪುರಾಣದಲ್ಲಿ ಈತನಿಗೆ ತಿರುನಾವುಕ್ಕರಸು ಎಂದೂ ಪುರಾತನಭಕ್ತವಿಲಾಸ ಎಂಬ ಸಂಸ್ಕೃತ ಗ್ರಂಥದಲ್ಲಿ ವಾಗೇಶಃ ಎಂದೂ ಕನ್ನಡ 63ರ ಪುರಾಣಗಳಲ್ಲಿ ವಾಗೇಶ ಎಂದೂ ಹೆಸರು. ತಮಿಳು ವೇದವೆನಿಸಿದ ತೇವಾರವನ್ನು ರಚಿಸಿದ ಪ್ರಖ್ಯಾತ ನಾಲ್ವರು ಸಮಯಾಚಾರ್ಯರಲ್ಲಿ ಈತನೂ ಒಬ್ಬ. (ಬಿ.ಎಸ್.)

**ಅಪ್ಪಾನಹಳ್ಳಿ :** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿರುವ ಗ್ರಾಮ. ಗ್ರಾಮದ 1 ಕಿಮೀ ವಾಯವ್ಯಕ್ಕೆ ಬೆಟ್ಟದ ಕಣಿವೆ ಪ್ರದೇಶದಲ್ಲಿ ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗದ ನೆಲೆಗಳನ್ನು ಗುರುತಿಸಲಾಗಿದೆ. ಈ ನೆಲೆಯು ಶಿಲಾಯುಗದ ಮಾನವನ ವಾಸ್ತವ್ಯಕ್ಕೆ ಯೋಗ್ಯ ಸ್ಥಳವಾಗಿದ್ದುದಾಗಿ ತಿಳಿದುಬರುತ್ತದೆ. ಇಲ್ಲಿನ ಪ್ರಾಕೃತಿಕ ಸ್ಥಿತಿಗತಿ, ವಿವಿಧ ಶಿಲಾವೈವಿಧ್ಯ, ನೀರಿನಾಸರೆಗಳು ಹಾಗೂ ಪರಿಸರ ಪ್ರಾಗಿತಿಹಾಸ ಕಾಲದ ಮಾನವನ ಆವಶ್ಯಕತೆಯನ್ನು ಪೂರೈಸಿದ್ದವು. ಆದಿ ಹಳೆಶಿಲಾಯುಗದ ತಿರುಳುಕಲ್ಲು ಮತ್ತು ಚಕ್ಕೆಕಲ್ಲು ಮಾದರಿಯ ಕೈಗೊಡಲಿ, ಸೀಳುಗತ್ತಿ, ಮಚ್ಚುಗತ್ತಿ, ಹೆರೆಗತ್ತಿ, ಕೊಕ್ಕಿನಮೊನೆ, ಬೈರಿಗೆ, ದುಂಡಾದ, ಚಪ್ಪಟೆ ಉಪಕರಣಗಳು ದೊರೆತಿದ್ದು ಇವುಗಳನ್ನು ಕ್ವಾರ್ಟ್ಸ್ ಶಿಲೆಯಿಂದ ತಯಾರಿಸಲಾಗಿದೆ.

ಮಧ್ಯ ಹಳೆಶಿಲಾಯುಗದ ಉಪಕರಣಗಳನ್ನು ಚಕ್ಕೆ ಹಾಗೂ ಉರುಟು ಕಲ್ಲಿನಿಂದ ರಚಿಸಲಾಗಿದೆ. ಕೈಗೊಡಲಿ, ಚಕ್ರಾಕಾರದ ಉಪಕರಣ, ದುಂಡು ಹೆರೆಚಕ್ಕೆ, ಇಬ್ಬದಿ ಹೆರೆಚಕ್ಕೆ, ಒಬ್ಬದಿ ಹೆರೆಚಕ್ಕೆ, ತುದಿ ಹೆರೆಚಕ್ಕೆ, ಒಳಬಾಗಿದ ಅಂಚಿನ ಹೆರೆಚಕ್ಕೆ, ನೀಳಚಕ್ಕೆ ಮಾದರಿಯ ಒಬ್ಬದಿ ನೀಳಚಕ್ಕೆ, ಸಾಮಾನ್ಯ ನೀಳಚಕ್ಕೆ ಮತ್ತು ಕೊರೆಗ ಉಪಕರಣಗಳು ದೊರೆತಿವೆ.

ಅಂತ್ಯ ಹಳೆ ಶಿಲಾಯುಗದ ಜಾಸ್ಪರ್ ಮತ್ತು ಕ್ವಾರ್ಟ್ಸ್ ಶಿಲೆಯ ನೀಳಚಕ್ಕೆ, ಹೆರೆಚಕ್ಕೆ ಮಾದರಿ ಹಾಗೂ ಕೊರೆಗ ಉಪಕರಣಗಳು ದೊರೆತಿವೆ.

ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಕ್ವಾರ್ಟ್ಸ್ ಶಿಲೆಯ ವೈವಿಧ್ಯವಾದ ನೀಳಚಕ್ಕೆ, ಹೆರೆಚಕ್ಕೆ, ಮೊನೆ ಹಾಗೂ ಕೊರೆಗ ಉಪಕರಣಗಳೂ ಕಂಡುಬಂದಿವೆ. ಈ ಎಲ್ಲ ಹಂತಗಳ ಉಪಕರಣಗಳು ಅಲ್ಪ ಪ್ರಮಾಣದಲ್ಲಿ ದೊರೆತಿವೆ.

ಒಟ್ಟಾರೆ ಈ ನೆಲೆಯು ಕಿಬ್ಬನಹಳ್ಳಿಯ ಪರಿಸರದಲ್ಲಿ ದೊರೆತಿರುವ ಹಲವು ನೆಲೆಗಳಲ್ಲಿ ಒಂದು ಪ್ರಮುಖ ನೆಲೆಯಾಗಿದ್ದಿರಬೇಕು. *

**ಅಪ್ಪುಗಿಡ :** ಮತ್ತೊಂದು ಆಶ್ರಯ ಗಿಡದ ಮೇಲೆ ಬೆಳೆಯುವ ಆದರೆ ಆಶ್ರಯ ಸಸ್ಯದಿಂದ ಯಾವ ಬಗೆಯ ಪೋಷಣೆಯನ್ನೂ ಪಡೆಯದೆ, ಕೇವಲ ಆಶ್ರಯವನ್ನಷ್ಟೇ ಪಡೆಯುವ ಸಸ್ಯ(ಎಪಿಫೈಟ್). ಸಾಮಾನ್ಯವಾಗಿ ಇಂಥ ಸಸ್ಯಗಳಿಂದ ಆಶ್ರಯಸಸ್ಯಕ್ಕೆ ಯಾವುದೇ ರೀತಿಯ ಅಪಾಯವಿಲ್ಲ ಎನ್ನಬಹುದು. ಇಂಥ ಸಸ್ಯಗಳು ಕಂಟಿ, ಪೊದೆ, ಮರಗಳೆಂಬ ಭೇದವಿಲ್ಲದೆ ಸಾಮಾನ್ಯವಾಗಿ ಎಲ್ಲ ಬಗೆಯ ಗಿಡಗಳ ಮೇಲೂ ಬೆಳೆಯುತ್ತವೆ. ಹೆಚ್ಚಾಗಿ ಈ ಸಸ್ಯಗಳು ಹಸಿರು ಬಣ್ಣದವಾಗಿದ್ದು ಸ್ವತಂತ್ರವಾಗಿ ಆಹಾರ ತಯಾರಿಸಿಕೊಳ್ಳುವ ಸಾಮರ್ಥ್ಯ ಪಡೆದಿರುತ್ತವೆ. ಸಸ್ಯಗಳ ಜೀವನಕ್ಕೆ ಮೊಟ್ಟಮೊದಲು ಬೇಕಾದುದು ನೀರು ಮತ್ತು ಲವಣಗಳು. ಆದರೆ ಈ ಸಸ್ಯಗಳಿಗೆ ಇವೆರಡೂ ದೊರೆಯುವುದು ಅತಿ ದುರ್ಲಭವಾದುದರಿಂದ ಇವು ಅತ್ಯಂತ ಕಷ್ಟಕರ ಪರಿಸ್ಥಿತಿಯನ್ನೇ ಎದುರಿಸಬೇಕಾಗುತ್ತದೆ. ಇಂಥ ಸಸ್ಯಗಳು ಬೆಳೆಯುವ ಪರಿಸ್ಥಿತಿಯನ್ನು ಗಮನಿಸಿದರೆ ಇದು ವೇದ್ಯವಾಗುತ್ತದೆ. ಉಷ್ಣವಲಯದ ಪ್ರದೇಶಗಳಲ್ಲಿ ಇವು ಕೇವಲ ಮಳೆಯ ನೀರನ್ನೂ ಸಮಶೀತೋಷ್ಣವಲಯಗಳ ಪರ್ವತ ಪ್ರದೇಶಗಳಲ್ಲಿ ಇಬ್ಬನಿಯ (ಮಂಜು) ನೀರನ್ನೂ ಅವಲಂಬಿಸಬೇಕಾಗುತ್ತದೆ.

ಸಾಮಾನ್ಯವಾಗಿ ಈ ಸಸ್ಯಗಳು ಆಶ್ರಯನೀಡುವ ಸಸ್ಯಗಳ ತೊಗಟೆಗಳಿಂದ ಆಹಾರ ಹೀರಿಕೊಳ್ಳುತ್ತವೆ. ಕೆಲವು ಸಸ್ಯಗಳು ತಮ್ಮ ಬೇರುಗಳ ಬಲೆಯಲ್ಲಿ ಗಾಳಿಯಿಂದ ತೂರಿಬಂದು ಸಂಗ್ರಹವಾಗುವ ಧೂಳುಕಣ, ಕೊಳೆತ ಎಲೆ, ಕಸಕಡ್ಡಿ, ಅಲ್ಪ ಸ್ವಲ್ಪ ಮಳೆನೀರು ಇವಿಷ್ಟನ್ನೇ ಅವಲಂಬಿಸುತ್ತವೆ. ಇನ್ನು ಕೆಲವು ಸಸ್ಯಗಳು ಜೋತುಬಿದ್ದ ಬೇರು, ಎಲೆ ಮುಂತಾದುವುಗಳಿಂದ ಮೇಲಿನಿಂದ ಹನಿ ಹನಿಯಾಗಿ ಕೆಳಕ್ಕೆ ಬೀಳುವ ನೀರನ್ನು ಹೀರಿಕೊಳ್ಳುತ್ತವೆ. ಸಾಧಾರಣವಾಗಿ ಅಪ್ಪುಗಿಡಗಳು ಅಲ್ಲೊಂದು ಇಲ್ಲೊಂದು ಮರಗಿಡಗಳ ಮೇಲೆ ಬೆಳೆಯುವಂತೆ ಕಂಡುಬಂದರೂ ಉಷ್ಣವಲಯದ ಅರಣ್ಯಪ್ರದೇಶಗಳಲ್ಲಿ ಹೆಚ್ಚಾಗಿರುತ್ತವೆ. ಕಾಂಡ ಮತ್ತು ಕೊಂಬೆಗಳ ಮೇಲಿನ ತೊಗಟೆಯನ್ನೆಲ್ಲ ಆವರಿಸಿರುತ್ತವೆ. ಮಳೆ ಮತ್ತು ಇಬ್ಬನಿಯನ್ನೇ ಅವಲಂಬಿಸಬೇಕಾಗುವುದರಿಂದ ಬೇಸಿಗೆಯ ದಿನಗಳು ಇವಕ್ಕೆ ಕಷ್ಟದ ದಿನಗಳು. ಅಂಥ ಕಠಿಣ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಗಿಡ ಎಲೆಗಳೆಲ್ಲವನ್ನೂ ಕಳೆದುಕೊಂಡು ಕನಿಷ್ಠ ಕ್ರಿಯಾವಸ್ಥೆಯಲ್ಲಿರಬೇಕಾಗುತ್ತದೆ. ಮುಂದೆ ಮಳೆಯಾದಾಗ ಎಲೆಗಳು ಮತ್ತೆ ಚಿಗುರುತ್ತವೆ. ಸಾಮಾನ್ಯವಾಗಿ ಅಪ್ಪುಗಿಡಗಳು ತಾವು ವಾಸಿಸಬೇಕಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ಕೆಲವು ರಕ್ಷಣೋಪಾಯಗಳನ್ನು ಪಡೆದಿರುವುದುಂಟು. ಬೀಜ ಮೊಳೆತ ಅನಂತರ ಕೆಲವು ಅಪ್ಪುಬೇರುಗಳು ಶೀಘ್ರವಾಗಿ ಬೆಳೆದು, ಆಶ್ರಯವೀಯುವ ಗಿಡಕ್ಕೆ ಬಲವಾಗಿ ಅಂಟಿಕೊಳ್ಳುತ್ತವೆ. ಅನೇಕ ಅಪ್ಪು ಗಿಡಗಳು ಬರಗಾಡು ಅಥವಾ ಮರುಭೂಮಿ ಸಸ್ಯಗಳಂತೆ (ಸೇರೊಫೈಟ್ಸ್) ಉಷ್ಣತೆಯನ್ನು ಸಹಿಸಲು, ನೀರು ದೇಹದಿಂದ ಆವಿಯಾಗುವುದನ್ನು ನಿಯಂತ್ರಿಸಲು, ಸಹಾಯಕವಾಗುವ ವಿವಿಧ ರೀತಿಯ ಬಾಹ್ಯ ಹಾಗೂ ಆಂತರಿಕ ಮಾರ್ಪಾಟುಗಳನ್ನು ಪಡೆದಿವೆ. ಆರ್ಕಿಡ್ ಬಗೆಯ ಅಪ್ಪುಗಿಡದಲ್ಲಿನ ಶುಷ್ಕಫಲಗಳಲ್ಲಿ ಹಗುರವಾದ ಸಣ್ಣ ಸಣ್ಣ ಅಸಂಖ್ಯಾತ ಬೀಜಗಳು ಉತ್ಪತ್ತಿಯಾಗುತ್ತವೆಯಾದ್ದರಿಂದ ಬೀಜ ಗಾಳಿಯಿಂದ ಪ್ರಸಾರವಾಗುತ್ತದೆ. ಅನೇಕ ಗಿಡಗಳಲ್ಲಿ ರಸಭರಿತವಾದ ಮಿಥ್ಯಾಲಶುನಗಳುಂಟು. ಕೆಲವು ಬೆಂಗಾಡು ಸಸ್ಯಗಳು ಬೇಸಗೆಯ ಕಠಿಣ ಪರಿಸ್ಥಿತಿಯಲ್ಲೂ ಒಣಗದೆ ತಮ್ಮ ಬೆಳೆವಣಿಗೆಯನ್ನು ಮುಂದುವರಿಸಿಕೊಂಡು ಹೋಗಬಲ್ಲವು. ಅನೇಕ ಬಗೆಯ ಅಪ್ಪುಗಿಡಗಳಲ್ಲಿ ಎಲೆಗಳು ಅಥವಾ ಕಾಂಡಗಳು ರಸಭರಿತವಾಗಿರುತ್ತವೆ (ಸಕ್ಯುಲೆಂಟ್). ಹೊರಚರ್ಮ ದಪ್ಪವಾಗಿ ಪತ್ರರಂಧ್ರಗಳು ಗುಣಿಗಳಲ್ಲಿರುತ್ತವೆ. ಎಲೆಗಳು ಗಾತ್ರ ಮತ್ತು ಸಂಖ್ಯೆಯಲ್ಲಿ ಕಡಿಮೆಯಾಗಿರುವುದುಂಟು. ಆರ್ಕಿಡ್‌ನಂಥ ಅನೇಕ ಅಪ್ಪುಗಿಡಗಳು ಆಸರೆಮರಗಳ ಮೇಲೆಯೇ ತಮ್ಮ ಇಡೀ ಜೀವಮಾನವನ್ನು ಕಳೆಯುತ್ತವೆ. ಅವು ಪಕ್ಕಾ ಅಪ್ಪುಗಿಡಗಳು. ಇನ್ನು ಕೆಲವು ಬಗೆಯವು ಅದರಲ್ಲೂ ಬೇರುಗಳಿಂದ ಮೇಲೆ ಏರುವ ಬಳ್ಳಿಗಳು ಮೊದಲು ಭೂಮಿಯ ಮೇಲೆ ಬೆಳೆಯುತ್ತಿದ್ದು, ಅನಂತರ ಆಸರೆ ಗಿಡವೊಂದು ದೊರೆತಕೂಡಲೇ ಅದನ್ನು ಅಪ್ಪಿಕೊಂಡು ಕ್ರಮೇಣ ಭೂಮಿಯ ಸಂಪರ್ಕವನ್ನು ಕಳೆದುಕೊಳ್ಳುತ್ತವೆ. ಇಂಥವಕ್ಕೆ ಅರೆಅಪ್ಪುಗಿಡಗಳು ಎಂದು ಹೆಸರು. ಉದಾ: ಸೀರಿಯಸ್, ಸಿಂಡಾಪ್ಸಸ್ ಇತ್ಯಾದಿ. ಇದಕ್ಕೆ ವಿರುದ್ಧವಾಗಿ ಕೆಲವು, ಮೊದಲು ಅಪ್ಪುಗಿಡಗಳಂತೆ ಬೆಳೆದು ಅನಂತರ ಭೂಮಿಯಲ್ಲಿ ಬೇರು ಬಿಟ್ಟು ಸ್ವತಂತ್ರವಾಗುತ್ತವೆ. ಉದಾ: ಆಲ, ಅರಳಿ ಇತ್ಯಾದಿ.

ಅಪ್ಪುಗಿಡಗಳ ಕೆಲವು ಮುಖ್ಯ ಉದಾಹರಣೆಗಳು: ಆವೃತಬೀಜ ಸಸ್ಯಗಳ ಪೈಕಿ ಆರ್ಕಿಡ್‌ಗಳು ಬಹು ಮುಖ್ಯವಾದುವು; ಇವುಗಳ ಸಂಖ್ಯೆ ಅಪಾರ. ಉದಾ: ವ್ಯಾಂಡ, ಡೆಂಡ್ರೋಬಿಯಮ್ ಇತ್ಯಾದಿ. ಏರೇಸಿ ಕುಟುಂಬಕ್ಕೆ ಸೇರಿದ ಕೆಲವು ಸಸ್ಯಗಳು–ಸಿಂಡಾಪ್ಸಸ್, ಪೋತಾಸ್ ಇತ್ಯಾದಿ. ಬ್ರೊಮಿಲಿಯೇಸೀ ಕುಟುಂಬಕ್ಕೆ ಸೇರಿದ ಟಿಲ್ಯಾಂಡ್ಸಿಯ ಎಂಬುದು ಅಮೆರಿಕದಲ್ಲಿ ಬೆಳೆಯುವ ಗಿಡವಾಗಿದ್ದು ಅದರ ಬೇರು ಮತ್ತು ನೀಳವಾದ ಎಲೆಗಳು ಉದ್ದನೆಯ ಎಲೆಗಳಂತೆ ಗಾಳಿಯಲ್ಲಿ ಜೋಲಾಡುತ್ತಿರುತ್ತವೆ. ಆಸ್ಕ್ಲಿಪಿಯಡೇಸೀ ಕುಟುಂಬಕ್ಕೆ ಸೇರಿದ ಡಿಸ್ಕಿಡಿಯ, ಕ್ಯಾಕ್ಟೇಸೀ ಕುಟುಂಬಕ್ಕೆ ಸೇರಿದ ಸಿರಿಯಸ್ ಎಂಬುವು ಗಮನಾರ್ಹವಾದುವು. ಸಿರಿಯಸ್ ಒಂದು ಬೃಹದಾಕಾರದ ಅಪ್ಪುಗಿಡ. ಅದರ ಕಾಂಡ ತ್ರಿಕೋಣಾಕಾರವಾಗಿದ್ದು, ದೊಡ್ಡ ಮರಗಳ ಮೇಲೆ ಏರಿರುತ್ತದೆ. ಟೆರಿಡೋಫೈಟ್ ಎಂಬ ವರ್ಗಕ್ಕೆ ಸೇರಿದ ಕೆಲವು ಜರಿ ಗಿಡಗಳೂ ಅಪ್ಪುಗಿಡಗಳೇ. ಉದಾ: ಪಕ್ಷಿಗೂಡಿನಂಥ ಜರಿಗಿಡ (ಡ್ರೈನೇರಿಯ) ಪಾಲಿಪೋಡಿಯಮ್ ಮುಂತಾದವು ಮರದ ಕಾಂಡ ಮತ್ತು ಕೊಂಬೆಗಳ ಮೇಲೆಲ್ಲ ಗೊಂಚಲು ಗೊಂಚಲಾಗಿ ವ್ಯಾಪಿಸಿರುತ್ತವೆ. ಲೈಕೋಪೋಡಿಯಮ್ ಎಂಬುದು ಇನ್ನೊಂದು ಬಗೆಯ ಸಾಮಾನ್ಯವಾದ ಅಪ್ಪುಗಿಡ. ಬ್ರಯೋಫೈಟ್ ಕುಟುಂಬಕ್ಕೆ ಸೇರಿದ ಮಾಸಸ್, ಪೊರೆಲ್ಲ ಎಂಬ ಗಿಡಗಳೂ ಮರಗಳ ಕಾಂಡ, ಕೊಂಬೆಗಳ ಮೇಲೆಲ್ಲ ಹಸಿರು ಮೆತ್ತೆಯಂತೆ ವ್ಯಾಪಿಸಿರುತ್ತವೆ. ಪಾಚಿ ಅಥವಾ ಶೈವಲ ಕುಟುಂಬಕ್ಕೆ ಸೇರಿದ ಪ್ರೋಟೋಕಾಕಸ್ ಎಂಬುದು ಮರದ ತೊಗಟೆಯ ಮೇಲೂ ಟ್ರೆಂಟೊಪೋಲಿಯ ಎಂಬುದು ಎಲೆಗಳ ಮೇಲೂ ಕಂಡುಬರುವ ಅಪ್ಪುಗಿಡಗಳ ಕೆಲವು ನಿದರ್ಶನಗಳು. (ಎಂ.ಎಸ್.ಎಸ್.ಆರ್.)

**ಅಪ್ರಚಲಿತತೆ :** ಯಾವುದಾದರೂ ಆಸ್ತಿಪಾಸ್ತಿ ಅಥವಾ ಸಿದ್ಧವಸ್ತು ಅನೇಕ ಕಾರಣಗಳಿಂದ ಬಳಕೆ ತಪ್ಪಿ ಹಳತಾಗುತ್ತಿರುವ ಸ್ಥಿತಿ (ಅಬ್ಸೊಲೆಸೆನ್ಸ್). ಉತ್ಪತ್ತಿ ವಿಧಾನದಲ್ಲಿ, ರೀತಿನೀತಿಗಳಲ್ಲಿ ಸಮಯೋಚಿತವಾದ ಸುಧಾರಣೆಯಾಗದಿದ್ದಲ್ಲಿ, ಅದಕ್ಕಿಂತ ಆಕರ್ಷಕವಾದ ಮತ್ತೊಂದು ಪದಾರ್ಥ ಬಳಕೆಗೆ ಬಂದಲ್ಲಿ ಯಾವ ಉದ್ಯಮವಾದರೂ ಹಳತಾಗಿ ಬಳಕೆ ತಪ್ಪುತ್ತದೆ, ಗಿರಾಕಿ ಇಲ್ಲದೇ ಹೋಗುತ್ತದೆ. ಹೀಗೆ ಪ್ರಭಾವ ತಪ್ಪಲು ಆಸ್ತಿ ಕೇವಲ ಹಳೆಯದಾಗಲೇಬೇಕೆಂಬ ನಿಯಮವಿಲ್ಲ. ಕೈಗಾರಿಕೆಗಳ ವಿಷಯದಲ್ಲಂತೂ ಈ ಮಾತು ಸತ್ಯ. ಪದಾರ್ಥದ ಆಕರ್ಷಕತೆ, ಉಪಯೋಗ, ದಾಸ್ತಾನು ಹಾಗೂ ವಿತರಣೆ, ಬೆಲೆ ಪ್ರಚಾರ ಇವುಗಳಿಂದ ಅದು ಬಳಕೆಗೆ ಬಂದು, ಜನಪ್ರಿಯವಾಗಿ, ಪ್ರಚಲಿತವಾಗುತ್ತದೆ.

ಪೈಪೋಟಿಯ ಈ ಯುಗದಲ್ಲಿ ಹೊಸದೊಂದು ಸಂಸ್ಥೆ ಅಂಥದೇ ಹೊಸದೊಂದು ಪದಾರ್ಥವನ್ನು ಮಾರಾಟಕ್ಕಿಟ್ಟು ಇನ್ನೂ ಹೆಚ್ಚಿನ ಪ್ರಲೋಭನವನ್ನೊಡ್ಡಿದಾಗ ಹಳೆಯ ವಸ್ತು ಅಪ್ರಚಲಿತವಾಗಬಹುದು. ಒಂದು ವಸ್ತುವಿನ ಅಪ್ರಚಲಿತತೆಗೆ ಗಿರಾಕಿಯ ಅಭಿರುಚಿ, ಮನೋಧರ್ಮಗಳು ಬಹು ಮುಖ್ಯ ಕಾರಣಗಳಾಗಿವೆ. ಸೌಲಭ್ಯ, ಬೆಲೆ, ರಂಜನೆಗಳೇ ಈ ವಿಷಯವನ್ನು ನಿರ್ಧರಿಸುವ ಅಂಶಗಳು. ಆದ್ದರಿಂದ ಉತ್ಪಾದಕರು ನಿರಂತರ ಸಂಶೋಧನೆಯಲ್ಲಿ ತೊಡಗಿ ಗಿರಾಕಿಗಳಿಗೆ ಹೆಚ್ಚು ಹೆಚ್ಚಿನ ಸೌಲಭ್ಯಗಳನ್ನು ಸುಲಭ ಬೆಲೆಗೆ ಒದಗಿಸುವುದರೊಡನೆ ಅವರ ರಸಿಕತೆಗೂ ತುಷ್ಟಿಯನ್ನೊದಗಿಸಬೇಕಾಗುತ್ತದೆ. *

**ಅಪ್ಸರೆಕೀಟ :** ಮೊಟ್ಟೆಯಿಂದ ಹೊರಕ್ಕೆ ಬಂದು ಅಪೂರ್ಣ ರೂಪಾಂತರ ಹೊಂದಿ, ಕೊನೆಯ ಸಲ ಪೊರೆ ಬಿಟ್ಟು, ಪ್ರಾಯಕ್ಕೆ ಬರುವ ಕೀಟದ ಮರಿಯ ಹೆಸರು (ನಿಂಫ್). ಮಿಡತೆ, ತಿಗಣೆ, ಕೊಡತಿ ಹುಳು (ಡ್ರೇಗನ್ ಫ್ಲೈ) ಮುಂತಾದ ಕೀಟಗಳ ಮರಿಗಳನ್ನು ಈ ಹೆಸರಿನಿಂದ ಕರೆಯುತ್ತಾರೆ. ಈ ಮರಿಗಳು ಮೊಟ್ಟೆಗಳಿಂದ ಹೊರಕ್ಕೆ ಬಂದಾಗ ಅವುಗಳ ಶರೀರ ರಚನೆ ಸ್ವಲ್ಪಮಟ್ಟಿಗೆ ಪ್ರಾಯದ ಅವಸ್ಥೆಯಲ್ಲಿದ್ದಂತೆಯೆ ಇರುತ್ತದೆ; ಆದರೆ ರೆಕ್ಕೆಗಳು ಮತ್ತು ಬಾಹ್ಯಜನನೇಂದ್ರಿಯ ಪೂರ್ತಿ ಬೆಳೆದಿರುವುದಿಲ್ಲ; ಬಾಯಿ ಭಾಗಗಳು, ಸಂಯುಕ್ತ ನೇತ್ರಗಳು ಪ್ರಾಯದ ಕೀಟಗಳಲ್ಲಿದ್ದಂತೆಯೇ ಇರುತ್ತವೆ. ಮರಿ ಪ್ರಾಯಕ್ಕೆ ಬರುವವರೆಗಿನ ಬೆಳೆವಣಿಗೆ ಸರಳವಾಗಿದ್ದು ಕೋಶಾವಸ್ಥೆ ಇರುವುದಿಲ್ಲ. ಮರಿ ಮತ್ತು ಪ್ರಾಯದ ಕೀಟಗಳ ನಡತೆ ಒಂದೇ; ಅವು ಒಟ್ಟಿಗೆ ಸೇರಿ ತಿನ್ನುತ್ತವೆ. ಮರಿಗಳು ಬೆಳೆದಂತೆಲ್ಲ ಪ್ರಾಯದ ಕೀಟಗಳನ್ನು ಹೆಚ್ಚುಹೆಚ್ಚಾಗಿ ಹೋಲುತ್ತವೆ.

ಮಿಡತೆ : ಮಿಡತೆಯ ಅಪ್ಸರೆ ಹುಟ್ಟಿದಾಗ ಸಾಮಾನ್ಯರೂಪಿನಲ್ಲಿ ತಾಯಿ ಮಿಡತೆಯನ್ನು ಹೋಲುತ್ತದೆ. ಆದರೆ ದವಡೆ, ಕಣ್ಣು, ಕಾಲು, ರೆಕ್ಕೆ ಇವು ತಾಯಿಗಿರುವಂತೆ ಇರುವುದಿಲ್ಲ. ಮೈಮೇಲಿನ ಗುರುತುಗಳೂ ಬೇರೆಯಾಗಿರಬಹುದು. ಕುಡಿಮೀಸೆ ಸರಳ ರೀತಿಯದು; 4–7 ಸಾರಿ ಪೊರೆಬಿಟ್ಟು ಹಂತಗಳಲ್ಲಿ ಬೆಳೆದು ಕೊನೆಯ ಸಲ ಪ್ರಾಯಕ್ಕೆ ಬರುತ್ತದೆ. 2–3ನೆಯ ಹಂತಗಳಲ್ಲಿ ಎದೆಯ 2 ಮತ್ತು 3ನೆಯ ಖಂಡಗಳಮೇಲೆ ರೆಕ್ಕೆಗಳು ಕಾಣಿಸಿಕೊಂಡು ಅಪ್ಸರೆ ಬೆಳೆದಂತೆಲ್ಲ ರೆಕ್ಕೆಗಳು ದೊಡ್ಡವಾಗುತ್ತವೆ. ಹೆಣ್ಣು ಗಂಡಿನ ವ್ಯತ್ಯಾಸಗಳು ಸಹ ಮೊದಲೇ ಕಂಡುಬಂದು ಅಪ್ಸರೆ ಬೆಳೆದಂತೆಲ್ಲ ವ್ಯಕ್ತವಾಗುತ್ತವೆ.

ತಿಗಣೆ : ಮಿಡತೆಯ ಅಪ್ಸರೆಯಂತೆಯೇ ಬಣ್ಣದಲ್ಲಿ ಬದಲಾವಣೆ ತೋರುತ್ತದೆ. ಬೆಳೆದ ಹಾಗೆ ಕುಡಿಮೇಸೆ ಮತ್ತು ಕಾಲಿನ ಕೊನೆಯ ತುಂಡುಗಳಲ್ಲೂ ವ್ಯತ್ಯಾಸ ಕಂಡುಬರುತ್ತದೆ. ಆ ತುಂಡುಗಳೆಲ್ಲ ಮೂಡಬೇಕಾದರೆ ಅಪ್ಸರೆ ಪ್ರಾಯಕ್ಕೆ ಬರಬೇಕು. ತಲೆ ಮತ್ತು ಎದೆಯ ಆಕಾರ ಪ್ರತಿ ಹಂತದಲ್ಲೂ ಬದಲಾಯಿಸುತ್ತದೆ. 3ನೆಯ ಹಂತದಲ್ಲಿ ರೆಕ್ಕೆಗಳ ಮೊಗ್ಗುಗಳು ಸ್ವಲ್ಪ ಕಂಡು 4ನೆಯ ಹಂತದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತವೆ. ಅದರ ಬೆಳೆವಣಿಗೆಯ ಹಂತಗಳ ಸಂಖ್ಯೆಯಲ್ಲಿ ವ್ಯತ್ಯಾಸವುಂಟು; ಹೆಚ್ಚೆಂದರೆ ಏಳು ಹಂತಗಳಿವೆ. ತಾಯಿ ಮತ್ತು ಅಪ್ಸರೆಗಳು ಜೊತೆಯಲ್ಲೆ ಇದ್ದು ಆಹಾರ ಸೇವಿಸುತ್ತವೆ.

ಕೊಡತಿ ಹುಳು : ಮರಿ ಮೊಟ್ಟೆಯಿಂದ ಹೊರಕ್ಕೆ ಬಂದಾಗ ಪೂರ್ವಅಪ್ಸರೆ ಸ್ಥಿತಿಯಲ್ಲಿದ್ದು (ಪೋನಿಂಫ್.), ಪೊರೆ ಬಿಟ್ಟು 2ನೆಯ ಹಂತದಲ್ಲಿ ಅಪ್ಸರೆಯಾಗುತ್ತದೆ. ಇದು ಜಲವಾಸಿ; ಕೀಟಾಹಾರಿ. ಉಸಿರಾಡುವ ವಿಧಾನದ ಮೇಲೆ ಅವುಗಳಲ್ಲಿ ಎರಡು ಬಗೆಯವನ್ನು ಕಾಣಬಹುದು: ಒಂದರ ಶರೀರದ ಕೊನೆಯಲ್ಲಿ 3 ಭಾಗಗಳಿದ್ದು ಅವು ಮುಚ್ಚಿಕೊಂಡಾಗ ಗೋಪುರಾಕೃತಿಯಾಗುತ್ತದೆ; ಆಸನದ್ವಾರ ಗೋಪ್ಯವಾಗುತ್ತದೆ. ಗುದನಾಳದಲ್ಲಿರುವ ಕಿವಿರುಗಳಿಂದ ಉಸಿರಾಟ ನಡೆಯುತ್ತದೆ. ಇನ್ನೊಂದರಲ್ಲಿ ಶರೀರದ ಕೊನೆಯ 3 ಭಾಗಗಳು ದೊಡ್ಡವಾಗಿದ್ದು, ವಿಶೇಷ ರೀತಿಯ ಆಸನಕಿವಿರುಗಳಾಗಿ (ಆ್ಯನಲ್ ಗಿಲ್ಸ್) ಉಸಿರಾಟದ ಅಂಗಗಳಾಗುತ್ತವೆ. ಗುದನಾಳದ ಕಿವಿರುಗಳಿರುವುದಿಲ್ಲ. 11–15 ಸಾರಿ ಪೊರೆ ಬಿಡುತ್ತದೆ. ಪೂರ್ತಿ ಬೆಳೆಯಲು 1–2 ವರ್ಷಗಳು ಬೇಕು. ಪ್ರಾಯದ ರೆಕ್ಕೆ ಕೊಡತಿ ಹುಳುವಾಗುವುದಕ್ಕೆ ಮುಂಚೆಯೆ ಪೂರ್ತಿ ಬೆಳೆದ ಅಪ್ಸರೆ ನೀರಿನಿಂದ ಹೊರಕ್ಕೆ ಬರುತ್ತದೆ. ಇದರ ಬಾಯ ಭಾಗಗಳಲ್ಲಿ ಒಂದು ಮುಸುಕಿದೆ. ಇದೇ ಮಾರ್ಪಾಟಾದ ಕೆಳದುಟಿ. ಕೀಟಗಳನ್ನು ಹಿಡಿದುಕೊಳ್ಳುವ ಈ ಅಂಗವನ್ನು ಮಿಂಚಿನಂತೆ ಚಾಚಿ ಕೀಟವನ್ನು ಹಿಡಿದು, ಹಿಂದಕ್ಕೆ ಎಳೆದುಕೊಳ್ಳುತ್ತದೆ.

ಅಪ್ಸರೆಯ ಮುನ್ನೆದೆ ಉದ್ದ. ಎದೆಯ ಉಳಿದೆರಡು ಭಾಗಗಳು ಒಂದುಗೂಡಿವೆ. ಕಾಲುಗಳು ಬಹಳ ಉದ್ದ. ಫೀಮರ್–ಟ್ರೊಕಾಂಟರ್ ಸಂಧಿ ಸುಲಭವಾಗಿ ಬಗ್ಗುತ್ತದೆ. ಈ ಉಪಾಯದಿಂದ ಅದು ಶತ್ರುವಿನ ಹಿಡಿತದಿಂದ ತಪ್ಪಿಸಿಕೊಳ್ಳುತ್ತದೆ. ದೇಹದಲ್ಲಿ 10 ಖಂಡಗಳಿವೆ, ಕೊನೆಯಲ್ಲಿ 3 ದೊಡ್ಡ ಬಿರುಗೂದಲುಗಳಿವೆ. ಕೆಲವು ಜಾತಿಗಳಲ್ಲಿ ಇವು ಕಿವಿರುಗಳಾಗುತ್ತವೆ. 4–5ನೆಯ ಹಂತದಲ್ಲಿ ಜನನಾಂಗಗಳು ಕಾಣಿಸಿಕೊಳ್ಳುತ್ತವೆ. (ಎಂ.ಪಿ.)

**ಅಪ್ಸರೆಯರು :** ಸ್ವರ್ಗದ ಹೆಂಗಳೆಯರು; ಗಂಧರ್ವರ ಹೆಂಡತಿಯರೆಂದು ಕಲ್ಪನೆ. ನೀರಿನಲ್ಲಿ ವಿಹರಿಸುವುದು ಇವರಿಗೆ ತುಂಬ ಪ್ರಿಯವಾದ ಹವ್ಯಾಸವಾದುದರಿಂದ ಇವರಿಗೆ ಈ ಹೆಸರು (ಅಪ್ಸು ನಿರ್ಮಥನಾದೇವ ರಸಾತ್). ಹಾಲುಗಡಲನ್ನು ದೇವಾಸುರರು ಕಡೆಯುವಾಗ ಜನಿಸಿದರು. ಸಾಮಾನ್ಯವಾಗಿ ದೇವರಾಜ ಇಂದ್ರನ ಬಳಿ ಊಳಿಗದಲ್ಲಿರುವವರು. ಇಂದ್ರನಿಗೆ ಅಪ್ಸರೆಯರ ಒಡೆಯನೆಂದೇ ಹೆಸರು. ಇಂದ್ರಸಭೆಯಲ್ಲಿ ಗೀತ, ನೃತ್ಯ, ನಾಟಕಗಳನ್ನು ನಡೆಸಿ ರಂಜನೆಗೆ ಕಾರಣವಾಗುವುದೇ ಇವರ ಮುಖ್ಯ ಕೆಲಸ. ಋಷಿಗಳು ತಪಶ್ಚರ್ಯೆ ಮಾಡುವಾಗ ಇಂದ್ರಪದವಿಗೆ ಆತಂಕವಾದರೆ ಇಂಥವರ ತಪೋಭಂಗಮಾಡುವುದೂ ಇವರ ಕೆಲಸವೇ. ಇವರು ಬೇಕೆಂದ ಹಾಗೆ ರೂಪವನ್ನು ಮರೆಸಿಕೊಳ್ಳಬಲ್ಲರೆಂದೂ ಪ್ರಭಾವಶಾಲಿಗಳೆಂದೂ ಪುರಾಣದ ಕಥೆಗಳಿವೆ. ಇವರಿಗೆ ಸ್ವರ್ವೇಶ್ಯೆಯರು ಎಂದರೆ ಸ್ವರ್ಗಲೋಕದ ವೇಶ್ಯೆಯರು ಎಂದೂ ವ್ಯವಹಾರವಿದೆ. ಇವರಲ್ಲಿ 14 ಬಗೆಯುಂಟೆಂದು ಬಾಣಭಟ್ಟ ತಿಳಿಸುತ್ತಾನೆ. ಊರ್ವಶೀ, ಮೇನಕಾ, ರಂಭಾ, ತಿಲೋತ್ತಮಾ ಇವರ ರೂಪದ ವೈಶಿಷ್ಟ್ಯವೂ ತಪೋವಿಘ್ನಸಾಮರ್ಥ್ಯವೂ ಹಲವಾರು ಕಥೆಗಳಲ್ಲಿ ಬಂದಿವೆ. ನರನಾರಾಯಣ ಋಷಿಗಳು ಬದರಿಯಲ್ಲಿ ತಪಶ್ಚರ್ಯೆ ಮಾಡುತ್ತಿದ್ದಾಗ, ಅವರ ತಪಸ್ಸನ್ನು ಭಂಗಪಡಿಸಲು ಅಪ್ಸರೆಯರು ಬಂದು ನಾರಾಯಣ ಋಷಿಯ ತೊಡೆಯನ್ನು ಕೆರೆದರೆಂದೂ ಅದರಿಂದ ಸುರಸುಂದರಿಯಾದ ಊರ್ವಶಿ ಹೊರಬಂದಳೆಂದೂ ಅವಳ ಲಾವಣ್ಯರಾಶಿಯನ್ನು ಕಂಡು ಉಳಿದ ಅಪ್ಸರೆಯರು ನಾಚಿ ಹಿಂದಿರುಗಿದರೆಂದೂ ಕಥೆಯಿದೆ. ಈ ಊರ್ವಶಿ ಶಾಪದಿಂದ ಭೂಮಿಗೆ ಬಂದು ಪುರೂರವನೆಂಬ ರಾಜನೊಂದಿಗೆ ಬಾಳಿದಳು. ಅರ್ಜುನನಿಗೆ ನಪುಂಸಕನಾಗುವಂತೆ ಶಾಪ ಕೊಟ್ಟವಳೂ ಇವಳೇ. ವಿಶ್ವಾಮಿತ್ರನ ತಪೋಭಂಗ ಮಾಡಿ ಮೇನಕೆ ಆತನಿಂದ ಶಕುಂತಲೆಯನ್ನು ಪಡೆದಳು. ರಂಭೆ ಕಶ್ಯಪ ಋಷಿಯ ಮಗಳು; ಪ್ರಾಧೆ ಅವಳ ತಾಯಿ. ಈಕೆ ತುಂಬುರು ಎನ್ನುವ ಗಂಧರ್ವಗಾಯಕನ ಹೆಂಡತಿ. ವಿಶ್ವಾಮಿತ್ರ ಇವಳನ್ನು ಶಿಲೆಯಾಗುವಂತೆ ಶಪಿಸಿದ ಕಥೆ ರಾಮಾಯಣದಲ್ಲಿ ಬರುತ್ತದೆ. ರಂಭೆ ಕುಬೇರನ ಪ್ರೇಯಸಿಯೆಂದೂ ಕಥೆಯಿದೆ. ತಿಲೋತ್ತಮೆ ವಿಶ್ವಕರ್ಮನ ಮಗಳು; ಅರಿಷ್ಟೆ ಅವಳ ತಾಯಿ. ಉಳಿದ ಅಪ್ಸರೆಯರಿಗಿಂತ ಇವಳು ಒಂದು ಎಳ್ಳು ಕಾಳಿನಷ್ಟಾದರೂ ಹೆಚ್ಚು ರೂಪವತಿ (ತಿಲೋತ್ತಮಾ). ದುರ್ವಾಸ ಋಷಿಯಿಂದ ಈಕೆಗೆ ಶಾಪ ಒದಗಿದ ಕಥೆ ಹರಿವಂಶದಲ್ಲಿ ಬರುತ್ತದೆ. (ಎಸ್.ಕೆ.ಆರ್.)

**ಅಫಜಲಪುರ :** ಗುಲ್ಬರ್ಗ ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ಒಂದು ತಾಲ್ಲೂಕು ಹಾಗೂ ಆಡಳಿತ ಕೇಂದ್ರ. ಉತ್ತರ ದಿಕ್ಕಿಗೆ ಆಳಂದ್ ತಾಲ್ಲೂಕು ಮತ್ತು ಸೊಲ್ಲಾಪುರ ಜಿಲ್ಲೆ. ಪೂರ್ವದಲ್ಲಿ ಗುಲ್ಬರ್ಗ ತಾಲ್ಲೂಕು ಮತ್ತು ದಕ್ಷಿಣದಲ್ಲಿ ಜೇವರಗಿ ತಾಲ್ಲೂಕು ಮತ್ತು ಬಿಜಾಪುರ ಜಿಲ್ಲೆ. ಇವು ಈ ತಾಲ್ಲೂಕನ್ನು ಸುತ್ತುವರಿದಿವೆ. ನಿಜಾಮರ ಆಳ್ವಿಕೆಯ ಕಾಲದಲ್ಲಿ ಅಫಜಲಪುರ ಪೈಗಾ ತಾಲ್ಲೂಕು ಆಗಿತ್ತು. ಈಗ ಇದು ಗುಲ್ಬರ್ಗ ಉಪವಿಭಾಗದಲ್ಲಿದೆ. ತಾಲ್ಲೂಕಿನಲ್ಲಿರುವ ಗ್ರಾಮಗಳು 90. ಸರ್ಕಲ್ (ಹೋಬಳಿ)ಗಳು ಮೂರು–ಅಫಜಲಪುರ, ಅತ್ನೂರು ಮತ್ತು ಕರಜಗಿ. ತಾಲ್ಲೂಕಿನ ವಿಸ್ತೀರ್ಣ 1305ಚ.ಕಿಮೀ. ಜನಸಂಖ್ಯೆ 1,79,816.

ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಗಡಿಗುಂಟ ಭೀಮಾನದಿ ಹರಿಯುತ್ತದೆ. ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಅಮರಜ ನದಿ ತಾಲ್ಲೂಕಿನ ಮಧ್ಯದಲ್ಲಿ ಹಾದು ಗಾಣಗಾಪುರದ ಬಳಿ ಭೀಮಾ ನದಿಯನ್ನು ಕೂಡುತ್ತದೆ. ಬೋರಿ ಎಂಬ ಚಿಕ್ಕ ನದಿ ಸಹ ಉತ್ತರ–ದಕ್ಷಿಣವಾಗಿ ಹರಿದು ಅಫಜಲಪುರಕ್ಕೆ ಸ್ವಲ್ಪ ಪಶ್ಚಿಮದಲ್ಲಿ ಭೀಮಾನದಿಯನ್ನು ಸೇರುತ್ತದೆ. ಭೀಮಾನದಿಗೆ ಅಫಜಲಪುರದ ಬಳಿ ಒಂದು ಅಣೆಕಟ್ಟನ್ನು ಕಟ್ಟಲಾಗಿದೆ. ದಖನ್ ಟ್ರಾಪ್ ಹರಡಿರುವ ಈ ತಾಲ್ಲೂಕಿನ ಕರಿಎರೆ ಮತ್ತು ಮರಳುಮಿಶ್ರಿತ ಕೆಂಪುಮಣ್ಣಿನ ಭೂಮಿ ಇದೆ. ಬಾವಿಗಳ ನೀರಾವರಿ ಸೌಕರ್ಯದಲ್ಲಿ ಅಫಜಲಪುರ ತಾಲ್ಲೂಕು ಗುಲ್ಬರ್ಗ ಜಿಲ್ಲೆಯಲ್ಲಿ 3ನೆಯ ಸ್ಥಾನ ಪಡೆದಿದೆ. ಬತ್ತ, ಜೋಳ, ಹತ್ತಿ, ಕಡಲೆ, ತೊಗರಿ, ಕಡಲೆಕಾಯಿ ಇಲ್ಲಿನ ಮುಖ್ಯ ಬೆಳೆಗಳು. ಗೋಧಿ, ಜವೆ (ಬಾರ್ಲಿ) ಬಾಳೆಹಣ್ಣು, ಕಾಯಿಪಲ್ಯೆ ಮತ್ತು ಮೆಣಸಿನಕಾಯಿ ಸಹ ಬೆಳೆಯಲಾಗುತ್ತದೆ.

ಖಿಲ್ಲರ್ ಜಾತಿಯ ದನದ ಸಾಕಣೆ ಇಲ್ಲಿ ವಿಶೇಷ. ಭೀಮಾನದಿಯ ದಂಡೆಯುದ್ದಕ್ಕೂ ಮೀನುಗಾರಿಕೆ ಒಂದು ಮುಖ್ಯ ಉದ್ಯೋಗ. ಗಾಣಗಾಪುರದಲ್ಲಿ ಭೀಮಾನದಿಯ ದಂಡೆಯ ಮೇಲೆ ಮೀನುಗಳ ಬೆಳೆವಣಿಗೆ ಮತ್ತು ಸಂಗ್ರಹಕ್ಕಾಗಿ ಕಾರ್ಯಕ್ರಮವೊಂದಿದೆ.

ಈ ತಾಲ್ಲೂಕಿನಲ್ಲಿರುವ ಗಾಣಗಾಪುರ ಪವಿತ್ರ ಯಾತ್ರಾಸ್ಥಳವೆಂದು ಪರಿಗಣಿತವಾಗಿದೆ. ಭಗವತಿ ದೇವಾಲಯವಿರುವ ಘಟ್ಟೆರ್ಗ, ಸಿದ್ಧರಾಮೇಶ್ವರ ದೇವಾಲಯವಿರುವ ಹವಲ್ಗ, ಬಸವೇಶ್ವರ ದೇವಾಲಯವಿರುವ ಅತ್ನೂರು, ಮಹಂತೇಶ್ವರ ಗುಡ್ಡ ಮಠ ಇರುವ ಚಿನಮಗೇರ, ಶಹಾಬುದ್ದೀನ್ ಎಂಬ ಸಂತರ ದರ್ಗಾ ಇರುವ ಕರಜಗಿ ಈ ಗ್ರಾಮಗಳು ಈ ಸುತ್ತಿನ ಜನರಿಗೆ ಪವಿತವೆನಿಸಿವೆ.

ತಾಲ್ಲೂಕಿನ ಮುಖ್ಯಸ್ಥಳ ಅಫಜಲಪುರ. ಜನಸಂಖ್ಯೆ 19,114. ಈ ಊರಿನಿಂದ ಚೌಡಾಪುರಕ್ಕೆ ಮತ್ತು ಮಣ್ಣೂರಿನ ಮೂಲಕ ಗುಲ್ಬರ್ಗಕ್ಕೆ ಒಳ್ಳೆಯ ರಸ್ತೆ ಸಂಪರ್ಕ ಇದೆ. ಬಿಜಾಪುರದ 2ನೆಯ ಆದಿಲ್‌ಷಾನ ಸರದಾರನಾಗಿದ್ದು ಶಿವಾಜಿಯಿಂದ ಪ್ರತಾಪಗಡದಲ್ಲಿ ಹತನಾದ ಅಫ್ಜಲಖಾನನಿಂದ ಊರಿಗೆ ಈ ಹೆಸರು ಬಂದಿದೆ. (ಬಿ.)

**ಅಫೀಮು :** ಗಸಗಸೆ ಗಿಡದ ಅಪಕ್ವ ಹಣ್ಣಿಗೆ ಕಚ್ಚುಮಾಡಿದಾಗ ಸ್ರವಿಸುವ ಹಾಲನ್ನು ಶೇಖರಿಸಿ ಒಣಗಿಸಿ ಪಡೆಯಲಾಗುವ ವಸ್ತು (ಓಪಿಯಮ್). ಗಸಗಸೆ ಪೆಪಾವರೇಸೀ ಕುಟುಂಬದ ಪೆಪಾವರ್ ಸೋಮ್ನಿಫರಮ್ ಜಾತಿಯ ಒಂದು ಪ್ರಭೇದ. ಈ ಗಿಡದ

ತವರು ಏಷ್ಯ ಮೈನರ್. ಈಗ ಗಸಗಸೆಗಿಡವನ್ನು ಭಾರತ, ಚೀನ, ಪರ್ಷಿಯ, ಟರ್ಕಿ ದೇಶಗಳಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಇದು ಏಕವಾರ್ಷಿಕ ಗಿಡ. ಇದರಲ್ಲಿ ಮೂರು ಮುಖ್ಯ ಜಾತಿಗಳಿವೆ– ಸೆಟಿಜರ್ಮ್, ಗ್ಲೇಬ್ರಮ್ ಮತ್ತು ಆಲ್ಬಮ್.

ಸೆಟಿಜರ್ಮ್ ವನ್ಯ ಸಸ್ಯ. ಭೂಮಧ್ಯಸಮುದ್ರದ ಉತ್ತರ ತೀರದಲ್ಲೂ ಬೆಳೆಸಲಾಗುತ್ತದೆ. ಎಲೆಗಳಿಗೆ ಗರಗಸದಂಥ ಹಲ್ಲಿನ ಏಣಿರುತ್ತದೆ. ಅದರ ಅಲಗು ಮೊನಚಾಗಿದ್ದು ತುದಿ ಸಣ್ಣ ಮುಳ್ಳುಗಳಿಂದ ಆವೃತವಾಗಿದೆ. ಎಲೆ ಸಂಪೂರ್ಣವಾಗಿ ಕೂದಲಿನಂಥ ಸಣ್ಣ ಮುಳ್ಳುಗಳ ಹೊದಿಕೆ ಹೊಂದಿದೆ. ಹೂಕಾಂಡ, ಪುಷ್ಪ ಪತ್ರ, ಹೂದಳಗಳಲ್ಲೂ ಅಂಥ ಕೂದಲಿರುತ್ತವೆ. ಅವುಗಳಿಗೆ 7 ಅಥವಾ 8 ಪುಷ್ಪ ಪತ್ರಗಳಿರುತ್ತವೆ. ದಳಗಳು ಅಗಲವಾಗಿ ಆಕರ್ಷಕವಾಗಿದ್ದು ಕಾಯಿ ಬಲಿತಂತೆ ಉದುರಿಹೋಗುತ್ತವೆ.

ಗ್ಲೇಬ್ರಮ್ ಏಷ್ಯ ಮೈನರ್ ಮತ್ತು ಈಜಿಪ್ಟ್ ದೇಶದ ಬೆಳೆ. ಇದರ ಹಣ್ಣುಗಳು ಗೋಳಾಕಾರವಾಗಿರುತ್ತವೆ. ಪುಷ್ಪಪತ್ರಗಳ ಸಂಖ್ಯೆ 10–12. ಹಣ್ಣು ಮತ್ತು ಎಲೆಗಳು ರೋಮರಹಿತವಾಗಿ ನುಣುಪಾಗಿರುವುದರಿಂದ ಈ ಹೆಸರು ಪಡೆದಿದೆ.

ಆಲ್ಬಮ್ ಪರ್ಷಿಯದ ಬೆಳೆ. ಹಣ್ಣು ಅಂಡಾಕಾರದ್ದು ಕಾಯಿ ಪಕ್ವವಾದಾಗ ಅದರ ತಳಭಾಗದ ರಂಧ್ರಗಳು ತೆರೆಯುವು ದಿಲ್ಲ. ಇದು ಸಾಮಾನ್ಯವಾಗಿ ಬಿಳಿಯ ಹೂವಿನ ಬೀಜದ ಜಾತಿ. ಕೆಲವು ವೇಳೆ ಕೆಂಪು ಅಥವಾ ನೀಲಿ ಬಣ್ಣದ ಹೂಗ ಳಿದ್ದು ಪಾಚಿ ಬಣ್ಣದ ಬೀಜಗಳಿರುತ್ತವೆ.



ಅಫೀಮು : 1. ಹೂವು 2. ಕಾಯಿ

ಗಸಗಸೆಗಿಡದ ಬೆಳಸಿಗೆ ಹೆಚ್ಚಿನ ನೀರಿನ ಆವಶ್ಯಕತೆಯಿಲ್ಲ. ಉಷ್ಣತೆ ಹೆಚ್ಚಿರ ಬೇಕು. ಇದನ್ನು ಸಮಶೀತೋಷ್ಣವಾಯು ಗುಣವಿದ್ದೆಡೆಯಲ್ಲೂ ಬೆಳೆಯಬಹುದು. ಆದರೆ ಉತ್ಪನ್ನ ಕಡಿಮೆ; ಲಾಭದಾಯ ಕವೂ ಅಲ್ಲ. ವಿವಿಧ ದೇಶಗಳಲ್ಲಿ ಅಲ್ಲಿನ ಸನ್ನಿವೇಶ ಗಳಿಗನುಗುಣವಾಗಿ ಇದರ ವ್ಯವಸಾಯ ಕ್ರಮವೂ ಬೇರೆ ಬೇರೆ ಯಾಗಿರುತ್ತದೆ.

ಔಷಧಿಯಾಗಿ ಬಳಕೆಯಲ್ಲಿರುವ ಅಫೀಮು ತುರ್ಕಿ ದೇಶದಲ್ಲಿ ಮಾತ್ರ ಉತ್ಪನ್ನವಾಗು ವುದು. ರೈತರೇ ಅದನ್ನು ಬೆಳೆಸುತ್ತಾರೆ. ಒಳ್ಳೆಯ ಫಲವತ್ತಾದ ನೀರು ಹೀರಬಲ್ಲ ಆದರೆ ಸುಲಭವಾಗಿ ಬಸಿಯುವಂಥ ಭೂಮಿಗಳಲ್ಲಿ ಬೆಳಸು ಹಸನಾಗಿ ಬರುತ್ತದೆ. ಜೊತೆಗೆ ಸಾಕಷ್ಟು ನೀರು, ಗೊಬ್ಬರ ಒದಗಿಸುತ್ತಾರೆ. ಭೂಮಿಯನ್ನು ಚೆನ್ನಾಗಿ ಹದಗೊಳಿಸಿ ಬಿತ್ತಬೇಕು. ಬೀಜ ಅತಿ ಸೂಕ್ಷ್ಮವಾದ್ದರಿಂದ 1 ಭಾಗಕ್ಕೆ 4 ಭಾಗದಷ್ಟು ಮರಳು ಮಿಶ್ರಮಾಡಿ ಬಿತ್ತುವುದು ವಾಡಿಕೆ. ಇದರಿಂದ ಬೀಜ ದಟ್ಟವಾಗದೆ ಸರಿಸಮವಾಗಿ ಹಂಚಿಕೆಯಾಗುತ್ತದೆ. ತಲೂಮಿಗೆ ಅಂದರೆ 16,000 ಚ. ಗ. ಪ್ರದೇಶಕ್ಕೆ 150 ಗ್ರಾಂ.ನಿಂದ ಪೌಂಡಿ ನಿಂದ 1 ಕೆಜಿ ಬೀಜ ಸಾಕು. ಬೆಳೆ ಎಳಸಾಗಿದ್ದಾಗ ಹಿಮ, ಮಿಡತೆ ಮತ್ತು ಮಳೆಯ ಅಭಾವಾದಿಗಳಿಂದಾಗಿ ನಷ್ಟವಾಗಬಹುದಾದ್ದರಿಂದ ಪ್ರತಿ ಪಾತಿಯಲ್ಲೂ ಅಕ್ಟೋಬರ್‌ನಿಂದ ಮಾರ್ಚ್ ತಿಂಗಳವರೆಗೆ ಮೂರು ಸಲ ಬಿತ್ತನೆ ಮಾಡುತ್ತಾರೆ. ಇದರಿಂದ ವಿವಿಧ ಹಂತದ ಬೆಳಸು ಬೆಳೆದು ಏರ್ಪಡಬಹುದಾದ ನಷ್ಟ ಬಹುಮಟ್ಟಿಗೆ ಕಡಿಮೆಯಾಗುತ್ತದೆ.

ತಗ್ಗು ಪ್ರದೇಶದಲ್ಲಿ ಮೇ ತಿಂಗಳಲ್ಲೂ ಎತ್ತರ ಪ್ರದೇಶದಲ್ಲಿ ಜುಲೈ ತಿಂಗಳ ವೇಳೆಗೂ ಹೂಬಿಡಲು ಪ್ರಾರಂಭವಾಗುತ್ತದೆ. ಹೂ ಅರಳಿದ 9–15 ದಿನಗಳಲ್ಲೇ ಕಾಯಿ ಬಲಿಯಲಾರಂ ಭಿಸಿ, ತಿಳಿಹಸಿರು ಬಣ್ಣದವಾಗಿ, ಕೈಯಿಂದ ಹಿಸುಕಲು ಸಾಧ್ಯವಾಗುವಷ್ಟು ಮೃದುವಾಗಿರುತ್ತವೆ. ಅದೇ ಅಫೀಮು ತೆಗೆಯಲು ಸರಿಯಾದ ಸಮಯ. ಅದನ್ನು ಎತ್ತಿ ತೋರುವಂತೆ ಕೌಗತ ಎಂಬ ಹೊದಿಕೆ ಕಾಯ ಮೇಲ್ಭಾಗದಲ್ಲಿ ಸು. 3.2 ಸೆಂಮೀ ಕಾಣಿಸಿಕೊಳ್ಳುತ್ತದೆ.

ಆಗ ಎಚ್ಚರಿಕೆಯಿಂದ ಕಾಯಿ ಸುತ್ತಲೂ ಸು. 2/3ರಷ್ಟು ಭಾಗದಲ್ಲಿ ಚುಚ್ಚಿ ತೂತು ಮಾಡುತ್ತಾರೆ. ಇವು ಆಳವಾಗಿರುವುದಿಲ್ಲ. ಚುಚ್ಚುವ ಈ ಕೆಲಸ ಮಧ್ಯಾಹ್ನಾನಂತರ ಪ್ರಾರಂಭವಾಗಿ ಸಂಜೆಯೊಳಗೆ ಮುಗಿಯಬೇಕು. ಎಲೆಗಳನ್ನೇ ಬಟ್ಟಲುಗಳನ್ನಾಗಿ ಬಳಸಿ ಮರುದಿನ ಮುಂಜಾನೆಯವರೆಗೆ ಸ್ರವಿಸುವ ಗಟ್ಟಿಯಾದ ರಸವನ್ನು ಶೇಖರಿಸುತ್ತಾರೆ. ಕೆರೆಯುವಾಗ ಚಾಕುವಿಗೆ ರಸವೆಲ್ಲ ಅಂಟಿಕೊಳ್ಳದಂತೆ ಆಗಿಂದಾಗ್ಗೆ ಅಲಗಿಗೆ ಎಂಜಲು ಸವರುವುದು ವಾಡಿಕೆ. ಎಲೆಮಡಿಕೆಯಲ್ಲಿ ಸಾಕಷ್ಟು ರಸ ಶೇಖರವಾದೊಡನೆ ಅದನ್ನು ಬಹುದಿನಗಳ ಕಾಲ ನೆರಳಲ್ಲಿಟ್ಟು ಒಣಗಿಸುತ್ತಾರೆ. ಕಚ್ಚಾ ಅಫೀಮು ಮುದ್ದೆ, ಇಟ್ಟಿಗೆ, ರೊಟ್ಟಿ, ಬೆರಣಿಗಳ ಆಕಾರದಲ್ಲಿರಬಹುದು. ತೀರ ಒಣಗಿದಾಗ ಪುಡಿಯಾಗುತ್ತದೆ. ಕೆಲವು ಬಗೆಯವು ತೀರ ಕಪ್ಪಾಗಿರುವುದರಿಂದ ಅವನ್ನು ಕರೆಮದ್ದು ಎಂದೇ ಕರೆಯುತ್ತಾರೆ. ಅಫೀಮು ಓಕರಿಕೆ ಹುಟ್ಟಿಸುವಷ್ಟು ಕಹಿ. ವಾಸನೆ ಕಟು. ಕಾಯಿಗಳನ್ನೆಲ್ಲ ಒಂದೇ ಸಾರಿ ಕಚ್ಚು ಮಾಡಿ ರಸ ತೆಗೆಯಬಹುದಾದರೂ ವಿವಿಧ ಹಂತದಲ್ಲಿ ಕಾಯಿ ಹದಕ್ಕೆ ಬರುವುದರಿಂದ ಎರಡು ಮೂರು ಸಲ ಈ ಕಾರ್ಯ ಕೈಗೊಳ್ಳಬೇಕಾಗುತ್ತದೆ. ಪ್ರತಿ ಸಲ ಅಫೀಮಿನ ಸರಾಸರಿ ಉತ್ಪನ್ನ 1.62 ಪೌಂಡು, ಬೀಜದ ಉತ್ಪನ್ನ 4 ಬುಷೆಲ್. ಬೀಜದಿಂದ ಶೇ.35– ಶೇ.42 ಎಣ್ಣೆ ಸಿಗುತ್ತದೆ. ಈ ಎಣ್ಣೆಯ ಬೆಲೆ ಅಧಿಕ. ಅಂದರೆ ಅಫೀಮಿನ 2/3ರಷ್ಟಿರುತ್ತದೆ.

ಮ್ಯಾಸಿಡೋನಿಯ ಅಫೀಮು: ಇದರಲ್ಲಿ ನಾಲ್ಕು ವಿಧಗಳಿವೆ. ಎರಡಕ್ಕೆ ಬಿಳಿ ಹೂ ಮತ್ತು ಅಂಡಾಕಾರದ ಕೋಶಗಳಿವೆ. ಬೀಜ ಬಿಳುಪು ಅಥವಾ ಹಳದಿ. ಇನ್ನೆರಡು ವಿಧಗಳು ಕೆಂಪು ಅಥವಾ ನೀಲಿ ವರ್ಣದ ಹೂ ಮತ್ತು ಕಂದು ವರ್ಣದ ಬೀಜಗಳನ್ನು ಹೊಂದಿವೆ. ಇದರಲ್ಲಿ ಒಂದಕ್ಕೆ ಕೋಶ ಬಲು ಸಣ್ಣ. ಬಿಳಿ ಜಾತಿಯವು ಹಳದಿ ವರ್ಣದವಕ್ಕಿಂತ ಹೆಚ್ಚು ಅಫೀಮು ಉತ್ಪನ್ನ ಮಾಡುತ್ತವೆ. ಹಳದಿ ಬೀಜಗಳಲ್ಲಿ ಎಣ್ಣೆ ಹೆಚ್ಚು. ಭಾರತದ ಅಫೀಮು: ಇದು ಬಿಳಿ ಹೂವಿನ ಜಾತಿಯದು. ಹಿಮಾಲಯ ಪ್ರದೇಶದಲ್ಲಿ ಮಾತ್ರ ಕೆಂಪು ಹೂ ಮತ್ತು ಕರಿ ಬೀಜದ ತಳಿಯನ್ನು ಬೆಳೆಸಲಾಗಿದೆ. ಎರಡನೆಯ ಬೆಳೆಯಾಗಿಯೇ ಇದನ್ನು ಬೆಳೆಸುತ್ತಾರೆ. ಹೆಚ್ಚಿನ ಗಮನವೀಯಬೇಕಾದ್ದರಿಂದ ಹಳ್ಳಿಯ ಪಕ್ಕದಲ್ಲಿನ ಸಾವಯವ ಪದಾರ್ಥ ಹೆಚ್ಚಾಗಿರುವ ಫಲವತ್ತಾದ ಭೂಮಿಗಳನ್ನೇ ಆರಿಸಲಾಗುತ್ತದೆ. ನವೆಂಬರ್ ತಿಂಗಳ ಮೊದಲರ್ಧ ಭಾಗದಲ್ಲೇ ಬಿತ್ತನೆ ನಡೆಯುತ್ತದೆ. ನೀರು ಒದಗಿಸಬೇಕಾದ್ದರಿಂದ ಸಾಮಾನ್ಯವಾಗಿ 3 ಚ.ಮೀ ಮಡಿಗಳನ್ನು ಮಾಡಿ ಬಿತ್ತನೆ ಮಾಡುವರು. ಸಸಿ 5–8 ಸೆಂಮೀ ಬೆಳೆದಾಗ ಮಧ್ಯ ಬೇಸಾಯ ಮಾಡಿ ಹೆಚ್ಚಿನ ಗೊಬ್ಬರ ಒದಗಿಸಿ ಸಸಿಗಳು ಒತ್ತಾಗಿದ್ದಲ್ಲಿ ತೆಗೆದುಹಾಕುವರು. ಸಸಿ ಬೆಳೆದಂತೆ ಹಿಮದಿಂದ ಬೂಷ್ಟು ರೋಗ ಮತ್ತು ಬೇರಿಗೆ ತಗಲುವ ಓರೋಬಾಂಕೆ ಇಂಡಿಕ ಎಂಬ ಪರೋಪಜೀವಿಯಿಂದ ತೊಂದರೆ ಹೆಚ್ಚಾಗುತ್ತದೆಯಾಗಿ ಅವುಗಳ ನಿರೋಧಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಫೆಬ್ರವರಿ ತಿಂಗಳಲ್ಲಿ ಹೂ ಕಾಣುತ್ತದೆ. ಉದುರಿದ ದಳಗಳನ್ನು ಶೇಖರಿಸಿಟ್ಟು ಹಾಸಿ ಅದರ ಮೇಲೆ ಅಫೀಮು ಕಾಯಿಗಳನ್ನು ಹರಡಿ ಒಣಗಿಸುತ್ತಾರೆ. ಈ ಅಫೀಮನ್ನು ಉಂಡೆಯಾಗಿ ಶೇಖರಿಸಿಡುವುದರಿಂದ ಅದನ್ನು ಫಿರಂಗಿ ಗುಂಡಿನ ಅಫೀಮು ಎಂದು ಕರೆಯುತ್ತಾರೆ.

ಯುರೋಪಿನ ಅಫೀಮು: ಮಾರ್ಫೀನ್ ಹೆಚ್ಚಾಗಿರುವುದರಿಂದ 2–15 ಭಾಗ ಅಮಲು ಹೆಚ್ಚು. ಸಸಿಗಳನ್ನು ಹೆಚ್ಚಿನ ಆರೈಕೆಯಿಂದ ಸೊಂಪಾಗಿ ಬೆಳೆಸಿ ಸಸಿಯ ತುದಿಯಲ್ಲಿ ಮುಂಜಾನೆಯ ವೇಳೆ ಕಚ್ಚುಮಾಡಿ ರಸವನ್ನು ಬೆರಳಿನಿಂದಲೇ ತೆಗೆದು ಶೇಖರಿಸಿ ಹೊಗೆಯಾಡಿಸಿ ಕೂಡಿಡುವರು.

ರಾಸಾಯನಿಕವಾಗಿ ಅಫೀಮು ಒಂದು ಅಂಟುರಾಳ (ಗಮ್ ರೆಸಿನ್). ಅದರಲ್ಲಿ ಮಾರ್ಫೀನ್ ಮತ್ತು ಕೋಡೀನ್ ಅಂಶಗಳಿವೆ. ಅತಿಸೂಕ್ಷ್ಮ ಪ್ರಮಾಣದಲ್ಲಿ ಅವನ್ನು ಔಷಧವಾಗಿ ಬಳಸುತ್ತಾರೆ. ಅದರಲ್ಲಿರುವ ಇತರ ಸಸ್ಯಕ್ಷಾರಗಳಲ್ಲಿ ಥೆಬಾಯಿನ್ ಮತ್ತು ನಾರ್ಶಿಯನ್ ಮುಖ್ಯವಾದುವು. ಅವುಗಳ ಉಪಯೋಗ ಅಪಾಯಕರ. ಅಫೀಮಿನಲ್ಲಿರುವ ಥೆಬಾಯಿನ್ ಬೆನ್ನುಹುರಿಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಚಿಕ್ಕಮಕ್ಕಳಿಗೆ ಕೊಟ್ಟಲ್ಲಿ ಬೆನ್ನುಹುರಿ ಸಂಕುಚಿತವಾಗಿ ಬಹಳ ಕೆಡಕಾಗುತ್ತದೆ.

ಮಧ್ಯಪ್ರಾಚ್ಯದಿಂದ ಏಷ್ಯದ ಎಲ್ಲ ಮೂಲೆಗೂ ಅರಬ್ಬಿ ವರ್ತಕರೇ ಅಫೀಮಿನ ಸೇವನೆಯನ್ನು ಹರಡಿದರು. ಮುಂದೆ ಅದು ಗ್ರೀಸ್ ಮೊದಲಾದ ಕಡೆ ಹರಡಿತು.

ಭಾರತದಲ್ಲಿ ಅಫೀಮು ಬೆಳೆ ಮತ್ತು ಮಾರಾಟಗಳನ್ನು ನಿಯಂತ್ರಿಸುವುದಕ್ಕೆ ಕಟ್ಟುನಿಟ್ಟಾದ ನಿಬಂಧನೆಗಳಿವೆ. ಅದನ್ನು ಬೆಳೆಯುವುದಕ್ಕೆ ಸರ್ಕಾರದ ಅನುಮತಿ ಬೇಕು; ಬೆಳೆಯೂ ಕೆಲವೇ ರಾಜ್ಯಗಳಿಗೆ ಸೀಮಿತವಾಗಿದೆ. ಬೆಳೆಯನ್ನು ಸರ್ಕಾರವೇ ನಿಗದಿಯಾದ ಬೆಲೆಗೆ ಕೊಳ್ಳುತ್ತದೆ. ಘಾಸಿಪುರ ನೀಮಜ್‌ಗಳಲ್ಲಿರುವ ಕಾರ್ಖಾನೆಗಳು ಅದನ್ನು ಪರಿಷ್ಕರಿಸುತ್ತವೆ; ವೈದ್ಯಕೀಯ ಉಪಯೋಗಕ್ಕಾಗಿ ಮಾತ್ರ ಒಂದು ಭಾಗವನ್ನು ದೇಶದಲ್ಲಿಟ್ಟುಕೊಂಡು ಉಳಿದುದನ್ನು ರಫ್ತು ಮಾಡಲಾಗುತ್ತದೆ. 1857 ಮತ್ತು 1878ರ ಅಫೀಮು ಕಾನೂನುಗಳು, 1930ರ ಅಪಾಯಕರ ಔಷಧಪದಾರ್ಥದ ಕಾನೂನು, ಇಂಥ ಕಾನೂನುಗಳಿಂದ ನಿಯಂತ್ರಣ ಕಾರ್ಯ ನಡೆದಿದೆ. ರಫ್ತಾಗುವುದು ಹೆಚ್ಚಾಗಿ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಗ್ರೇಟ್ ಬ್ರಿಟನ್ ಗಳಿಗೆ. ರಫ್ತಾದ ಅಫೀಮಿನ ಬಹುಭಾಗ ಹಿಂದೆ ಚೀನಕ್ಕೆ ಹೋಗುತ್ತಿತ್ತು. 1928ರಿಂದೀಚೆಗೆ ಭಾರತ ಸರ್ಕಾರ ಔಷಧಿ ತಯಾರಿಕೆಗೆ ಹೊರತು ಬೇರೆ ಉಪಯೋಗಗಳಿಗೆ ಅಫೀಮು ರಫ್ತು ಮಾಡುವುದನ್ನು ನಿಲ್ಲಿಸಿದೆ.

ಅಫೀಮಿನ ಸೇವನೆಯಿಂದ ಮನಸ್ಸಿಗೆ ನೆಮ್ಮದಿ ದೊರೆತಂತೆ ತೋರುವುದು. ಅದರಿಂದಲೇ ಅದನ್ನು ಜನ ಹೆಚ್ಚಾಗಿ ಸೇವಿಸುವುದು. ಆದರೆ ಆ ಪರಿಣಾಮ ಸ್ವಲ್ಪ ಕಾಲ ಮಾತ್ರವಿರುವುದರಿಂದ, ಅದೇ ರೀತಿಯ ತೃಪ್ತಿ ಹೊಂದಲು, ಪುನಃ ಪುನಃ ಸೇವಿಸಬೇಕಾಗುತ್ತದೆ. ಬರಬರುತ್ತ ಇದರ ಸೇವನೆ ಒಂದು ಚಟವಾಗಿ, ಶರೀರದ ಸಾಮಾನ್ಯ ಚಟುವಟಿಕೆಗಳು ಅಸ್ತವ್ಯಸ್ತಹೊಂದುತ್ತವೆ. ಬರೇ ಆರು ತಿಂಗಳ ಸೇವನೆಯಿಂದ ಅದು ಬಿಡಲಾರದ ಚಟವಾಗಿ ಜೀವನವಿಡೀ ಬೆಳೆಯುತ್ತ ಹೋಗಿ ಮುಂದೆ ಮಾರಕವಾಗಬಹುದು. ಆದ್ದರಿಂದ ಅಫೀಮನ್ನು ಔಷಧಕ್ಕಾಗಿ ಮಾತ್ರ ಉಪಯೋಗಿಸಬೇಕೆಂದು ಅಫೀಮು ಬೆಳೆಯುವ ಮುಖ್ಯ ರಾಷ್ಟ್ರಗಳು

ಔಷಧ ತಯಾರಿಕೆಯ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಂಡಿವೆ. ವಿಶ್ವಸಂಸ್ಥೆಗೆ ಅಫೀಮಿನ ಉತ್ಪತ್ತಿ ಮತ್ತು ಬೇಡಿಕೆಯನ್ನು ಎಲ್ಲ ರಾಷ್ಟ್ರಗಳೂ ಸಲ್ಲಿಸಬೇಕು, ಅವರು ನಿರ್ದಿಷ್ಟ ಮಾಡಿದಷ್ಟು ಮಾತ್ರ ಬೆಳೆಸಬೇಕು ಎಂಬುದು ಈಗಿನ ಸಾರ್ವತ್ರಿಕ ಒಪ್ಪಂದವಾಗಿದೆ.

ಅಫೀಮಿನ ಉತ್ಪನ್ನ ಮತ್ತು ವ್ಯಾಪಾರ ನಿಯಂತ್ರಿತವಾದದ್ದು 1700ರ ಅನಂತರವೇ. ಅದನ್ನು ಔಷಧಕ್ಕಾಗಿ ಅಥವಾ ವೈಜ್ಞಾನಿಕ ಉದ್ದೇಶಗಳಿಗಾಗಿ ಮಾತ್ರ ಬೆಳೆಸಬೇಕೆಂದು ಅಜ್ಞೆಯಾಗಿತ್ತು. ಅದರೂ 20ನೆಯ ಶತಮಾನದವರೆಗೂ ಚೀನದಲ್ಲಿ ಅದು ಅತಿ ಹೆಚ್ಚಾಗಿ ಬೆಳೆಯುತ್ತಿತ್ತಲ್ಲದೆ ಅದರ ಅತಿಯಾದ ಸೇವನೆಯಿಂದ ದುಷ್ಪರಿಣಾಮಗಳು ಹೆಚ್ಚಿ 1906ರಲ್ಲಿ ಅಲ್ಲಿನ ಸರ್ಕಾರ ಅದನ್ನು ನಿರ್ಬಂಧಿಸಲು ನಿರ್ಧರಿಸಿತು. 13 ಪ್ರಬಲರಾಷ್ಟ್ರಗಳ ಸಮಿತಿಯೊಂದು ಅದಕ್ಕೆ ನೆರವಾಗಿ ನಿಂತು ಅಫೀಮಿನ ವ್ಯಾಪಾರ ಹಾಗೂ ಇತರ ಕರಾರುಗಳ ಕಾರ್ಯನಿರ್ವಹಣೆಯನ್ನು ರಾಷ್ಟ್ರಗಳ ಒಕ್ಕೂಟಕ್ಕೆ (ಲೀಗ್ ಆಫ್ ನೇಷನ್ಸ್) ವಹಿಸಿಕೊಟ್ಟಿತು. ಅದರ ನಿಯಮಾವಳಿ 1931ರಲ್ಲಿ ಪ್ರಚುರವಾಗಿ ಅಫೀಮಿನ ಉತ್ಪನ್ನ ಮತ್ತು ಮಾರಾಟ ಮುಂತಾದುವುಗಳ ಮೇಲ್ವಿಚಾರಣೆಯನ್ನು ಈಗ ವಿಶ್ವಸಂಸ್ಥೆ ನಿರ್ವಹಿಸುತ್ತದೆ. ಇದರಂತೆ ಮೊದಲು ಔಷಧ ತಯಾರಿಸುವ ರಾಷ್ಟ್ರಗಳ ಕೋರಿಕೆಯನ್ನು ಪರಿಶೀಲಿಸಿ, ಬೆಳೆಯುವ ರಾಷ್ಟ್ರಗಳಿಗೆ ಪರಿಮಾಣವನ್ನು ನಿರ್ಧರಿಸಿ ತಿಳಿಸಲಾಗುತ್ತದೆ. ಇದರಿಂದ ಅನಗತ್ಯವಾಗಿ ಅದರ ಅಧಿಕ ಬೆಳಸು ಆಗುತ್ತಿಲ್ಲ. (ಎಂ.; ಡಿ.ಪಿ.)

**ಅಫ್ಜಲ್‌ಖಾನ್ :** ಬಿಜಾಪುರದ ಸುಲ್ತಾನನ ಸಾಮಂತ ಹಾಗೂ ದಳಪತಿಗಳಲ್ಲೊಬ್ಬ. ಶಿವಾಜಿ ಬಿಜಾಪುರದ ಕೆಲವು ದುರ್ಗಗಳನ್ನು ಆಕ್ರಮಿಸಿದಾಗ ಅವನೊಡನೆ ಹೋರಾಡಲು ಸೇನಾಸಮೇತನಾಗಿ ಬಂದ. ಇಬ್ಬರ ನಡುವೆ ಸಂಧಾನಕ್ಕೆ ಏರ್ಪಾಡಾಯಿತು. ಇಬ್ಬರೂ ಸೇರಿದಾಗ ಶಿವಾಜಿ ಗುಪ್ತವಾಗಿಟ್ಟುಕೊಂಡಿದ್ದ ವ್ಯಾಘ್ರನಖವೆಂಬ ಆಯುಧದಿಂದ ಖಾನನನ್ನು ತಿವಿದು ಮೋಸದಿಂದ ಕೊಂದನೆಂದು ಮುಸಲ್ಮಾನ ಚರಿತ್ರಕಾರರು ಬರೆಯುತ್ತಾರೆ. ಮರಾಠ ಇತಿಹಾಸಕಾರರು ಖಾನನೇ ಕೊಲೆಯ ತಂತ್ರ ಹೂಡಿದ್ದನೆಂದೂ ಅದನ್ನು ತಿಳಿದು ಶಿವಾಜಿ ಆತ್ಮರಕ್ಷಣೆಗಾಗಿ ಅವನನ್ನು ಕೊಂದನೆಂದೂ ಬರೆಯುತ್ತಾರೆ. ಖಾನನ ಸೈನ್ಯ ಬೆದರಿ ಓಡಿತು. ಶಿವಾಜಿಯನ್ನಡಗಿಸಲು ಮಾಡಿದ ಬಿಜಾಪುರ ಸರ್ಕಾರದ ಪ್ರಯತ್ನಗಳು ವಿಫಲವಾಗಿ ದಖನ್ನಿನಲ್ಲಿ ಶಿವಾಜಿಯ ಅಧಿಕಾರ ನೆಲೆನಿಂತಿತು. (ಎಸ್.ಕೆ.ಕೆ.)

**ಅಫ್ರೀದಿಗಳು :** ಭಾರತದ ವಾಯವ್ಯ ಪ್ರದೇಶದ (ಪಶ್ಚಿಮ ಪಾಕಿಸ್ತಾನದ) ಬೆಟ್ಟಗುಡ್ಡಗಳಲ್ಲಿ ವಾಸಿಸುವ ಅತ್ಯಂತ ಬಲಿಷ್ಠ ಪಠಾಣರು. ಖೈಬರ್ ಕಣಿವೆಯ ದಕ್ಷಿಣದಲ್ಲಿರುವ ಸಫೇದ್ ಕೋಹ್ ಬೆಟ್ಟಗಳೇ ಇವರ ವಾಸಸ್ಥಳ. ಮುಖಭಾವಗಳಲ್ಲಿ ಯೆಹೂದ್ಯರ ಹೋಲಿಕೆಯಿದ್ದರೂ ಇವರ ಎರಡು ಸಾವಿರ ವರ್ಷಗಳ ಇತಿಹಾಸ ಗೊತ್ತಿಲ್ಲ. ಅಕ್ಬರನ ಕಾಲದಿಂದ ಈ ಜನ ಮೊಗಲ್ ಸೈನ್ಯದಲ್ಲಿ ಸೇರಿದ್ದರು. ಖೈಬರ್ ಕಣಿವೆಯನ್ನು ರಕ್ಷಿಸುವುದಕ್ಕಾಗಿ ಮೊಗಲ್ ಚಕ್ರವರ್ತಿಗಳು ಇವರಿಗೆ ಹಣ ಕೊಡುತ್ತಿದ್ದರು. ದಾಳಿಮಾಡಿದ ನಾದಿರ್‌ಶಾನನ್ನು ಇವರು ತಡೆಯದೇ ಹೋದರು. ಅಹಮದ್ ಷಾ ಅಬ್ದಾಲಿ ಮತ್ತು ಸಿಕ್ಕರ ಆಳ್ವಿಕೆಯ ಕಾಲದಲ್ಲಿ ಕಣಿವೆಯ ವ್ಯಾಪಾರದ ಮೇಲೆ ಸುಂಕವನ್ನು ವಸೂಲು ಮಾಡುವ ಕೆಲಸ ಇವರದ್ದಾಗಿತ್ತು. ಬ್ರಿಟಿಷರ ಕಾಲದಲ್ಲಿ ಇವರು ಬ್ರಿಟಿಷ್ ಸೈನ್ಯಕ್ಕೆ ಸೇರಿ ಸೇವೆ ಸಲ್ಲಿಸಿದರು. ಈ ಜನರಲ್ಲಿ ಪ್ರಜಾಪ್ರಭುತ್ವ ಜಾರಿಯಲ್ಲಿದ್ದರೂ ಗುಂಪಿನ ಮುಖಂಡರಿಗೆ ಹೆಚ್ಚಿನ ಅಧಿಕಾರ ಇರುವುದಿಲ್ಲ. ಇವರು ಸ್ವಭಾವತಃ ಧೈರ್ಯಶಾಲಿಗಳು, ದೃಢಕಾಯರು, ಕ್ರೂರಿಗಳು. ನಂಬಿಕೆಗೆ ಅರ್ಹರಲ್ಲವಾದುದರಿಂದ ಇವರ ಒಪ್ಪಂದಗಳಿಗೆ ಮಾನ್ಯತೆ ಇಲ್ಲ. (ಎಚ್.ಜಿ.ಆರ್.)

**ಅಬನಾಸಿ :** ಎಬಿನೇಸೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಕಾಡುಮರ. ಡೈಯೊಸ್ಪೆರಾಸ್ ಎಬಿನಮ್ ಇದರ ಸಸ್ಯವೈಜ್ಞಾನಿಕ ಹೆಸರು. ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಇದಕ್ಕೆ ಎಬೊನಿ ಎಂಬ ಹೆಸರಿದೆ. ಕನ್ನಡದಲ್ಲಿ ಕರೇಮರ, ಮಲ್ಲೈ, ಕುಮಾರಿ, ಬಲೆಮರ ಎಂಬ ಹೆಸರುಗಳೂ ಇವೆ. ಮರದ ವ್ಯಾಪಾರಿಗಳು ಇದನ್ನು ಎಬನಿ ಮರವೆಂದೇ ಕರೆಯುತ್ತಾರೆ. ಮೈಸೂರಿನ ಅರಣ್ಯಗಳಲ್ಲಿ ಹೇರಳವಾಗಿ ಬೆಳೆಯುವ ಈ ವೃಕ್ಷ ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ್ ಸಂಸ್ಥಾನಗಳಲ್ಲಿ ಬೇಸಿಗೆಯಲ್ಲಿ ಎಲೆಗಳು ಉದುರುವ ಕಾಡುಗಳಲ್ಲೂ ಕಂಡುಬರುತ್ತದೆ. ಒಳ್ಳೆಯ ವಾತಾವರಣದಲ್ಲಿ 20–30 ಮೀ ಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. 5 – 6 ಮೀ ಗಳಷ್ಟು ಎತ್ತರದವರೆಗೆ ಸಾಮಾನ್ಯವಾಗಿ ಕವಲೊಡೆಯದೆ ಬೆಳೆಯುವ ಈ ಮರದ ಬುಡ ಒಮ್ಮೊಮ್ಮೆ 3 ಮೀ ದಪ್ಪ ಬೆಳೆದಿರುವುದುಂಟು. ಕಪ್ಪು ಮಿಶ್ರಿತ ಬೂದುಬಣ್ಣದ ಇದರ ತೊಗಟೆ ಆಗಾಗ ಸುಲಿದು ಉದುರುತ್ತಿರುತ್ತದೆ.

ಅಂಡಾಕಾರದ ಎಲೆಗಳು ಸಾಮಾನ್ಯವಾಗಿ 15 ಸೆಂಮೀ ಉದ್ದ, 6 ಸೆಂಮೀ ಅಗಲ ಇರುತ್ತವೆ. ಮರದ ಹೂಗೊಂಚಲುಗಳ ಮೇಲೆಲ್ಲ ತುಪ್ಪಳವಿರುತ್ತದೆ. ಹೂಗಳು ಏಕಲಿಂಗಪುಷ್ಪಗಳಾಗಿವೆ. ಎಲ್ಲ ಹೂಗಳಿಗೂ ಪುಷ್ಪಪಾತ್ರೆ ಮತ್ತು ಪುಷ್ಪದಳಗಳು ಇರುತ್ತವೆ. ಗಂಡುಹೂವಿನಲ್ಲಿ ಅನೇಕ ಕೇಸರಗಳಿರುತ್ತವೆ.

ಎಳೆಯದಾಗಿದ್ದಾಗ ಹಣ್ಣಿನ ಮೇಲೆಲ್ಲ ಮೃದು ತುಪ್ಪಳವಿದ್ದು, ಮಾಗಿದಂತೆ ಈ ತುಪ್ಪಳ ಉದುರಿಹೋಗುತ್ತದೆ. ಬೀಜಗಳು ಸ್ವಲ್ಪ ಚಪ್ಪಟೆಯಾಗಿವೆ. ಈ ಮರದ ಕಪ್ಪನೆಯ ಚೇಗುಭಾಗದಲ್ಲಿ ಅಲ್ಲಲ್ಲಿ ಕೆಂಪು ಇಲ್ಲವೆ ಕಂದು ಎಳೆಗಳಿದ್ದು ಬಹು ಸುಂದರವಾಗಿರುತ್ತದೆ. ಚೌಬೀನೆ ತೂಕವುಳ್ಳದ್ದು. ತೇಗದಮರಕ್ಕಿಂತ ಗಟ್ಟಿಯಾಗಿದ್ದರೂ ಕೀಟಗಳು ಕೊರೆಯುತ್ತವಾಗಿ ಇದರ ಬಾಳಿಕೆ ಕಡಿಮೆ. ಮರದ ಎಲೆಗಳನ್ನು ಬೀಡಿ ತಯಾರಿಕೆಯಲ್ಲಿ ಹೊಗೆಸೊಪ್ಪು ಸುತ್ತಲು ಬಳಸುತ್ತಾರೆ. ಹಣ್ಣುಗಳು ಖಾದ್ಯಯೋಗ್ಯ. ಮರವನ್ನು ಊರುಗೋಲು, ಆಟದ ಸಾಮಾನುಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ಅರೆ ಮಾಗಿದ ಹಣ್ಣುಗಳನ್ನೂ ತೊಗಟೆಯನ್ನೂ ಚರ್ಮ ಹದಮಾಡುವವರು ಉಪಯೋಗಿಸುತ್ತಾರೆ. ಒಣಗಿದ ಹೂಗಳನ್ನು ಮೂತ್ರಪಿಂಡದ, ಚರ್ಮದ ಹಾಗೂ ರಕ್ತದ ಕಾಯಿಲೆಗಳಲ್ಲಿ ಉಪಯೋಗಿಸುತ್ತಾರೆ. ತೊಗಟೆಯ ಕಷಾಯವನ್ನು ಅಗ್ನಿಮಾಂದ್ಯಕ್ಕೂ ಭೇದಿ ನಿಲ್ಲಿಸಲೂ ಬಳಸಲಾಗುತ್ತದೆ. ಕಣ್ಣುನೋವಾದಾಗ ತೊಗಟೆಯ ರಸವನ್ನು ಕಣ್ಣುಗಳಿಗೆ ಬಿಡುವುದುಂಟು. (ಎಸ್.ಎನ್.ಆರ್.)

**ಅಬನೀಂದ್ರನಾಥ ಠಾಕೂರ್ :** 1871–1951. ಪ್ರಸಿದ್ಧ ಚಿತ್ರಕಲಾವಿದರು. ಶ್ರೀಮಂತ ಜಮೀನುದಾರ ಮನೆತನದಲ್ಲಿ ಹುಟ್ಟಿದ್ದರಿಂದ ಕಲೆಯಲ್ಲಿ ಆಸಕ್ತಿ ಮೂಡಿ ಅದನ್ನು ಜನತವಾಗಿ ಕಾಪಾಡಲು ಯಾವ ಅಡ್ಡಿ ಆತಂಕಗಳೂ ಇರಲಿಲ್ಲ. ಅಲ್ಲದೆ ತಂದೆ ಗಗನೇಂದ್ರನಾಥ ಠಾಕೂರರು

ಕಲ್ಕತ್ತೆಯ ಕಲಾಶಾಲೆಯ ಪ್ರಥಮ ವಿದ್ಯಾರ್ಥಿಯಾಗಿದ್ದ ಕಾರಣ ಮಗ ತನ್ನ ಚಿಕ್ಕವಯಸ್ಸಿನಲ್ಲೇ ತಂದೆಯಿಂದ ರೇಖಾ ಕಲೆಯನ್ನು ಕಲಿತುಕೊಂಡ. ಅನಂತರ ಕಲಾಶಾಲೆಯನ್ನು ಸೇರಿ ಇಟಲಿಯ ಬಿ. ಗಿಲ್ ಹಾರ್ಡಿ ಹಾಗೂ ಚಾರ್ಲ್ಸ್ ಪಾಮರ್ ರವರಿಂದ ಪಾಶ್ಚಾತ್ಯ ಚಿತ್ರಕಲೆಯ ಶೈಲಿಯನ್ನು ಕಲಿತರು. ಆಮೇಲೆ 6 ವರ್ಷಗಳ ಕಾಲ ಬಂಗಾಲದ ಹಳ್ಳಿಪ್ರದೇಶಗಳ ಚಿತ್ರ ಬಿಡಿಸಿದ್ದಲ್ಲದೆ ತಮ್ಮ ಚಿಕ್ಕಪ್ಪ ರವೀಂದ್ರನಾಥ ಠಾಕೂರರ ಕವಿತೆಗಳಿಗೆ ಚಿತ್ರ ಬರೆದರು. ಬರುಬರುತ್ತ ತಾವು ಬಳಸುತ್ತಿದ್ದ ಪಾಶ್ಚಾತ್ಯ ಹಾಗೂ ಕೃತ್ರಿಮಶೈಲಿಯ ಬಗ್ಗೆ ತಾವೇ ಜುಗುಪ್ಸೆಗೊಂಡರು. ಕಲ್ಕತ್ತೆಯ ಚಿತ್ರಶಾಲೆಯ ಧೋರಣೆಗಳನ್ನು ಒಪ್ಪದ ಅಬನೀಂದ್ರನಾಥರನ್ನು ಕಲಾಭಿಮಾನಿ ಇ.ಬಿ. ಹೆವೆಲ್ ತನ್ನ ಆಶ್ರಯಕ್ಕೆ ಕರೆತಂದು ಮೊಗಲರೀತಿಯ ಚಿತ್ರಗಳನ್ನು ತೋರಿಸಿದ. ಭಾರತದಲ್ಲಿ ಆ ರೀತಿ ಗುಪ್ತವಾಗಿದ್ದ ಮೊಗಲರ ಕಲಾಸಂಪತ್ತನ್ನು ಕಂಡು ಅಬನೀಂದ್ರರು ಬೆರಗಾದರು. ಹೆವೆಲ್ ಅಂದಿನಿಂದ ಅವರ ಕಲೆಗೆ ಪ್ರೋತ್ಸಾಹಕೊಟ್ಟು ಕಾಪಾಡಿಕೊಂಡು ಬಂದುದರ ಫಲವಾಗಿ ಅಬನೀಂದ್ರರು ಚಿತ್ರಕಲೆಯಲ್ಲಿ ತಮ್ಮದೇ ಆದ ಒಂದು ವೈಶಿಷ್ಟ್ಯವನ್ನು ಪಡೆದರು. ಆದರೂ ಮೊಗಲ ಚಿತ್ರಕಲೆಯನ್ನು ಸಾಕಷ್ಟು ಭಾವಪೂರ್ಣವಾಗಿ ಚಿತ್ರಿಸಲು ಅಶಕ್ಯರಾದರು. ಅಲ್ಲದೆ ಅಚ್ಚ ಬಂಗಾಳಿ ಸಂಸ್ಕಾರದಲ್ಲಿ ಬೆಳೆದು ಬಂದಿದ್ದ ಕಾರಣ ಅವರ ವಿದ್ಯೆಯಲ್ಲಿ ಸಂಕುಚಿತಭಾವನೆ ಇತ್ತೇ ಹೊರತು ರಾಷ್ಟ್ರೀಯಭಾವನೆ ಕಾಣಲಿಲ್ಲ. ಆದ್ದರಿಂದ ಅವರು ಭೂಗೋಳಕ್ಕೆ ಸಂಬಂಧಪಡದ ವಸ್ತುಗಳನ್ನು ಚಿತ್ರಿಸತೊಡಗಿದರು (ಉದಾ: ದಿ ಡ್ರೀಮ್ ಆಫ್ ತಾಜ್). ಹೆವೆಲ್ ಆಗ ಅವರಿಗೆ ಕಲೆಯಲ್ಲಿ ಅಗತ್ಯವಾಗಿ ಕಾಣಬೇಕಾಗಿರುವ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಪ್ರಭಾವವನ್ನು ತಿಳಿಸಿ ದಾರಿತೋರಿದ. ಆದರೆ ಅಬನೀಂದ್ರರು.

ಹಿಂದೂದೇವತೆಗಳನ್ನು ನಂಬದೆ ನಾಸ್ತಿಕರಾಗಿ ಬೆಳೆದುದರ ಫಲವಾಗಿ ಚಿತ್ರಕಲೆಯಲ್ಲಿ ದೈವೀಕ ಸೌಂದರ್ಯವನ್ನು ತರಲು ಬಹಳ ಹೆಣಗಬೇಕಾಯಿತು. ಅಲ್ಲದೆ ಅದೇ ಸಮಯದಲ್ಲಿ ಭಾರತದಲ್ಲಿ ಆರಂಭವಾದ ಸ್ವಾತಂತ್ರ್ಯ ಚಳವಳಿಯಲ್ಲಿ ಬಂಗಾಳಿಗಳು ಅತಿ ಮುಖ್ಯ ಪಾತ್ರವಹಿಸಿದರು. ಈ ಕಾರಣದಿಂದ ಅಬನೀಂದ್ರರು ಪ್ರಾಚೀನಕಾಲದ ಚಾರಿತ್ರಿಕ ಘಟನೆಗಳನ್ನು ಚಿತ್ರಿಸಲು ತೊಡಗಿದರು. ಭಾರತದೇಶ ಬ್ರಿಟಿಷರ ಆಡಳಿತದಲ್ಲಿ ಬಂಧನದಲ್ಲಿರುವಂತೆ ಭಾರತದ ಕಲೆಯೂ ಕಾರಾಗೃಹವಾಸಿಯಾಗಿರುವುದನ್ನು ಕಂಡ ಅಬನೀಂದ್ರರು ಸು. 30 ವರ್ಷಗಳ ಕಾಲ ತಮ್ಮ ಚಿತ್ರಕಲಾಶೈಲಿಯಲ್ಲಿ ಪೂರ್ಣಸ್ವಾತಂತ್ರ್ಯ ವಹಿಸಿ ಹೊಸ ಹೊಸ ಲಕ್ಷಣಗಳನ್ನು ಉಪಯೋಗಿಸಿದರು. ಅಂತೆಯೇ ಅಬನೀಂದ್ರರು ಭಾರತೀಯ ಆಧುನಿಕ ಚಿತ್ರಕಲೆಯ ಮೂಲಪುರುಷರಾದರು.

1905ರಲ್ಲಿ ಅವರು ಕಲ್ಕತ್ತೆಯ ಚಿತ್ರಕಲಾಶಾಖೆಯ ಮುಖ್ಯೋಪಾಧ್ಯಾಯರಾದರು. ಅವರ ಕಲೆಯನ್ನು ಒಪ್ಪಿ, ಮೆಚ್ಚಿದ ಕೆಲವು ಪ್ರತಿಭಾಶಾಲಿ ಯುವಚಿತ್ರಕಲಾವಿದರನ್ನು ಒಂದೆಡೆ ಕಲೆಹಾಕಿದರು. ಅಜಂತ, ಸಿತ್ತನ್‌ವಾಸಲ್, ಬಾಗ್ ಗುಹೆಗಳಲ್ಲಿನ ಚಿತ್ರ ಕಲೆಯ ಅನಂತಸೌಂದರ್ಯವನ್ನು ಕಂಡು, ಮೊಗಲ್, ಪಹಾಡಿ, ರಾಜಪುತ್ರ ಚಿತ್ರಕಲೆಯ ಲಲಿತಮಾಧುರ್ಯವನ್ನು ಅರಿತು, ಭಾರತೀಯ ಕಲೆಯ ಅವಲೋಕನದಿಂದ ಸ್ಫೂರ್ತಿ ಪಡೆದು ತಮ್ಮೊಡನಿದ್ದ ಹೊಸ ಯುವಕಲಾವಿದರನ್ನು ಆಧುನಿಕಕಲಾಜಗತ್ತಿಗೆ ಕೊಂಡೊಯ್ದರು. ಅವರ ಶಿಷ್ಯವೃಂದದಲ್ಲಿ

ಅಶೀತ್ ಕುಮಾರ್ ಹಾಲದಾರ (ಲಕ್ನೊ), ಸಮರೇಂದ್ರನಾಥಗುಪ್ತ (ಲಾಹೋರ್), ದೇವೀಪ್ರಸಾದರಾಯ್ ಚೌಧರಿ (ಮದರಾಸು), ಶಾರದಾ ಮತ್ತು ಬರದಾ ಉಕ್ಕೀಲ್ (ದೆಹಲಿ), ನಂದಲಾಲ್ ಬಸು (ಶಾಂತಿನಿಕೇತನ), ಕೆ. ವೆಂಕಟಪ್ಪ (ಮೈಸೂರು), ಮುಕುಲಚಂದ್ರ ಡೇ, ಮನೀಷಿ ಡೇ ಈ ಕೆಲವರು ಪ್ರಖ್ಯಾತ ಚಿತ್ರಕಲಾವಿದರು.

ಅಬನೀಂದ್ರರು ರಚಿಸಿದ ಅಶೋಕನ ರಾಣಿ ಮತ್ತು ಬೋಧಿವೃಕ್ಷ, ಉಮಾ, ಅಭಿಸಾತಿ, ಅರಣ್ಯದ ರಾಣಿ ಮುಂತಾದ ಚಿತ್ರಗಳು ಹೆಸರುವಾಸಿಯಾಗಿವೆ. (ಯು.ಎಸ್.ಕೆ.)

**ಅಬರ್‌ಡೀನ್ :** ಪ್ರಪಂಚದಲ್ಲಿ ಈ ಹೆಸರಿನ ನಾಲ್ಕು ಪಟ್ಟಣಗಳಿವೆ. 1 ಸ್ಕಾಟ್ಲೆಂಡಿನ ಅಬರ್‌ಡೀನ್ ಷೈರಿನ ಮುಖ್ಯಪಟ್ಟಣ. ಡೀ ಮತ್ತು ಡಾನ್ ನದಿಗಳ ಮಧ್ಯೆ ಸ್ಕಾಟ್ಲೆಂಡಿನ ಪೂರ್ವ ತೀರದಲ್ಲಿ ಉತ್ತರಸಮುದ್ರಾಭಿಮುಖವಾಗಿ ಬೆಳೆದಿದೆ. ಅಬರ್ ಎಂದರೆ 'ಮುಖ' ಮತ್ತು ಡೀನ್ ಎಂದರೆ ಡೀನದಿ ಎಂದರ್ಥ ಅಂದರೆ ಡೀನದಿ ಮುಖಭಾಗದಲ್ಲಿರುವ ನಗರ. ಉತ್ತರ ಮತ್ತು ದಕ್ಷಿಣಪ್ರದೇಶಗಳ ಮಧ್ಯೆ ರೈಲು ಹಾಗೂ ರಸ್ತೆ ಸಾರಿಗೆಗಳಿಗೆ ನಿಲ್ದಾಣವಾಗಿರುವುದಲ್ಲದೆ, ಸ್ಕಾಟ್ಲೆಂಡಿನ ಮುಖ್ಯರೇವುಪಟ್ಟಣವೂ ಆಗಿದೆಯಲ್ಲದೆ ವಿಹಾರಸ್ಥಳವೆಂದು ಹೆಸರುಪಡೆದಿದೆ. ವಿಸ್ತೀರ್ಣ 42.5 ಚ.ಕಿಮೀ. ಜನಸಂಖ್ಯೆ 212,125 (2001).

(ಮಾರಿಷಲ್ ಕಾಲೇಜು) ಬೃಹತ್ ಗ್ರಾನೈಟ್ ಶಿಲೆಯ ಬೃಹತ್ ಕಟ್ಟಡ, ಅಬರ್‌ಡೀನ್

ಸಮೀಪದಲ್ಲೇ ಕಟ್ಟಡಗಳಿಗೆ ಬಳಸಲಾಗುವ ಗ್ರ್ಯಾನೈಟ್ ಶಿಲೆ ಅಧಿಕವಾಗಿರುವುದರಿಂದ, ಗ್ರ್ಯಾನೆಟ್ ನಗರವೆಂದು ಹೆಸರು ಪಡೆದಿದೆ. ಇಲ್ಲಿನ ಪ್ರಸಿದ್ಧ ಸೇಂಟ್ ಮಚಾರ್ ಆರಾಧನ ಮಂದಿರವನ್ನು ಪೂರ್ಣವಾಗಿ ಈ ಶಿಲೆಯಲ್ಲೇ ಕಟ್ಟಿದ್ದಾರೆ. ಆಗ್ನೇಯ ಸ್ಕಾಟ್ಲೆಂಡಿನ ವಾಣಿಜ್ಯಕೇಂದ್ರವಾಗಿರುವುದಲ್ಲದೆ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಹೊಂದಿದೆ. ದನಕರುಗಳ ವ್ಯಾಪಾರವೂ ಅಧಿಕಪ್ರಮಾಣದಲ್ಲಿ ನಡೆಯುತ್ತದೆ. ತೀರಪ್ರದೇಶದಲ್ಲಿ ಮೀನುಗಾರಿಕೆ ಜನರ ಪ್ರಧಾನ ಕಸುಬು. ಬಟ್ಟೆ ಗಿರಣಿಗಳು, ಕಾಗದದ ಮರಗೆಲಸದ, ಎಂಜಿನಿಯರಿಂಗ್ ಮತ್ತು ವ್ಯವಸಾಯ ಉಪಕರಣಗಳ ಕಾರ್ಖಾನೆಗಳಿವೆ. ಒಂದು ವಿಶ್ವವಿದ್ಯಾನಿಲಯವಿದೆ. ಡೀ ನದಿಯ ಅಳಿವೆಯ ಅನುಕೂಲತೆಯಿಂದಾಗಿ ಇದು ಸ್ವಾಭಾವಿಕ ಬಂದರಾಗಿದೆ. ಗ್ರೇಟ್ ಬ್ರಿಟನ್, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯಗಳ ರೇವುಪಟ್ಟಣಗಳೊಂದಿಗೆ ವಾಣಿಜ್ಯಸಂಪರ್ಕವನ್ನು ಪಡೆದಿದೆ.

2. ಅಮೆರಿಕ ಸಂಯುಕ್ತಸಂಸ್ಥಾನದ ಮಿಸಿಸಿಪಿಯ ಈಶಾನ್ಯಭಾಗದಲ್ಲಿರುವ ಟಾಂಬಿಗ್ಬೀ ನದಿಯ ದಡದ ಮೇಲಿರುವ ಊರು. ಜನಸಂಖ್ಯೆ 6415 (2000). ಅನೇಕ ಸಣ್ಣ ಕೈಗಾರಿಕೆಗಳಿವೆ.

3. ಅಮೆರಿಕ ಸಂಯುಕ್ತಸಂಸ್ಥಾನದ ದಕ್ಷಿಣದಕೋಟಾದ ಈಶಾನ್ಯಭಾಗದಲ್ಲಿರುವ ಪಟ್ಟಣ. ಜನಸಂಖ್ಯೆ 16500 (2003). ಪ್ರಾಂತದ ಆರ್ಥಿಕ ಮತ್ತು ವಾಣಿಜ್ಯಕೇಂದ್ರ, ಆಹಾರಧಾನ್ಯ, ಆಲೂಗೆಡ್ಡೆ, ಹುಲ್ಲು ಮತ್ತು ಅಗಸೆನಾರು–ಇವು ಇಲ್ಲಿನ ವ್ಯವಸಾಯೋತ್ಪನ್ನಗಳು.

4. ಅಮೆರಿಕ ಸಂಯುಕ್ತಸಂಸ್ಥಾನದ ವಾಷಿಂಗ್ ಟನ್ ಭಾಗದ ಗ್ರೇಸ್ ಹಾರ್ಬರ್ ಕೌಂಟಿಯ ದೊಡ್ಡ ಪಟ್ಟಣ ಮತ್ತು ರೇವು. ವಿಸ್ತೀರ್ಣ 24.0 ಚ.ಕಿಮೀ. ಜನಸಂಖ್ಯೆ 160650 (2003). ಪಲೈವುಡ್, ಸೆಲ್ಪ್, ಕಾಗದ, ಮರಗಳು, ಮರದ ಸಾಮಾನುಗಳು, ಮೀನು ಹಾಗೂ ಇತರ ಸಾಮಗ್ರಿಗಳು ಇಲ್ಲಿಯ ಮುಖ್ಯ ಉತ್ಪನ್ನಗಳು. (ಎಂ.ಎಸ್.ಎಂ.)

**ಅಬಲೋನಿ :** ಹ್ಯಾಲಿಯೋಟಿಸ್ ಕ್ರಚಿರೊಡೀ ಎಂಬ ಮೃದ್ವಂಗಿ. ಅಮೆರಿಕದ ಪಶ್ಚಿಮತೀರದ ನಿವಾಸಿಗಳು ಈ ಹೆಸರಿಂದ ಕರೆಯುತ್ತಾರೆ. ಇದನ್ನು ಅವರು ಹಿಡಿದು ತಿನ್ನುತ್ತಾರೆ. ಹ್ಯಾಲಿಯೋಟಿಸ್ ಜಾತಿಯಲ್ಲಿ ನಾನಾ ಪ್ರಭೇದಗಳುಂಟು. ಹ್ಯಾಲಿಯೋಟಿಸ್ ಕ್ರಚಿರೊಡೀ ಪ್ರಭೇದಕ್ಕೆ ಸೇರಿದ ಜೀವಿಗಳು ಅತ್ಯಂತ ದೊಡ್ಡವು. ಇವು ಆಹಾರದೃಷ್ಟಿಯಿಂದಲೂ ವಾಣಿಜ್ಯ ದೃಷ್ಟಿಯಿಂದಲೂ ಮುಖ್ಯವೆನಿಸಿವೆ. ಇವುಗಳ ಚಿಪ್ಪು ಬಹಳ ಬೆಲೆ ಬಾಳುತ್ತದೆ. ಹ್ಯಾಲಿಯೋಟಿಸ್ ಟ್ಯೂಬರ್‌ಕ್ಯೂಲೇಟ ಎಂಬ ಪ್ರಭೇದ ಛಾನೆಲ್ ದ್ವೀಪಗಳು, ಭಾರತದ ಪೂರ್ವತೀರ ಮತ್ತು ಅಂಡಮಾನ ನಿಕೋಬಾರ್ ದ್ವೀಪಗಳ ತೀರಗಳಲ್ಲಿ ದೊರಕುತ್ತದೆ.

ಹ್ಯಾಲಿಯೋಟಿಸ್ ಮೃದ್ವಂಗಿಗಳಲ್ಲಿ ಗ್ಯಾಸ್ಟ್ರೊಪೋಡ ವರ್ಗದ ಪ್ರೋಸೋಬ್ರಾಂಕಿಯೇಟ ಗಣಕ್ಕೆ ಸೇರಿದೆ. ಪ್ರೋಸೋಬ್ರಾಂಕಿಯೇಟದಲ್ಲಿ ಡೈಯಾಟೋಕಾರ್ಡಿಯಾ ಮತ್ತು ಮಾನೆಟೋಕಾರ್ಡಿಯಾ ಎಂಬ ಎರಡು ವಿಭಾಗಗಳುಂಟು. ಹ್ಯಾಲಿಯೋಟಿಸ್ ಎಂಬುದು ಡೈಯಟೋಕಾರ್ಡಿಯಾ ವಿಭಾಗಕ್ಕೆ ಸೇರಿದೆ.

ಈ ಪ್ರಾಣಿಯ ಮೇಲಿರುವ ಚಿಪ್ಪು ಚಪ್ಪಟೆಯಾಗಿದ್ದು ಮೇಲಿನ ರಂಧ್ರಗಳು ಒಂದರ ಹಿಂದೊಂದರಂತೆ ಸಾಲಾಗಿದೆ. ಇದು ಅತ್ಯಂತ ವೇಗವಾಗಿ ಚಲಿಸಬಲ್ಲ ಪ್ರಾಣಿ. ಮಿನಿಟಿಗೆ 1–2ಮೀವರೆಗೆ ಚಲಿಸುವುದೂ ಉಂಟು. ಯಾರಾದರೂ ಇದನ್ನು ಮುಟ್ಟಿದರೆ ನೆಲವನ್ನಾಗಲೀ ಇತರ ವಸ್ತುವನ್ನಾಗಲೀ ಪಾದದಿಂದ ಬಲವಾಗಿ ಹಿಡಿದುಕೊಳ್ಳುತ್ತದೆ. ಸಮುದ್ರದ ಸಸ್ಯಗಳೇ ಇದಕ್ಕೆ ಆಹಾರ. ಉಸಿರಾಡಲು ಎರಡು ಕಿವಿರುಗಳಿವೆ. ಎಡಗಡೆಯದು ದೊಡ್ಡದು, ಬಲಗಡೆಯದು ಚಿಕ್ಕದು. ಮಲಮೂತ್ರ ಚಿಪ್ಪಿನ ಮೇಲಿರುವ ರಂಧ್ರಗಳ ಮೂಲಕ ಹೊರಬರುತ್ತವೆ. ಪ್ರಾಣಿ ಸತ್ತ ಅನಂತರ ಈ ಚಿಪ್ಪು ಉಳಿಯುತ್ತದೆ. ಈ ಚಿಪ್ಪು ಕಾಮನಬಿಲ್ಲಿನ ಬಣ್ಣಗಳಿಂದೊಡಗೂಡಿ ಮಿಂಚುತ್ತಿರುತ್ತದೆ. ಇದನ್ನು ಮುತ್ತಿನ ತಾಯಿ ಎನ್ನುತ್ತಾರೆ. (ಎಲ್.ಎಚ್.ಜಿ.)

**ಅಬಿಡಾಸ್ :** ಪುರಾತನ ಈಜಿಪ್ಟ್ ನಾಗರಿಕತೆಯ ಅವಶೇಷಗಳನ್ನುಳ್ಳ ಪಟ್ಟಣ. ಶಿಲಾಯುಗದ ಕಾಲದಿಂದಲೂ ಈಜಿಪ್ಟಿನ 30ನೆಯ ರಾಜಮನೆತನದವರ ಕಾಲದವರೆಗೂ ಪ್ರಸಿದ್ಧಿಪಡೆದಿದ್ದಿತು.

ಇಲ್ಲಿನ ಅವಶೇಷಗಳಲ್ಲಿ ಅತಿ ಮುಖ್ಯವಾದುವೆಂದರೆ ಗೋರಿಗಳು. ಮೊದಲ ಮನೆತನದ ರಾಜರ ಗೋರಿಗಳು ಬಹಳ ಚಿಕ್ಕವಾಗಿದ್ದು ಕಾಲಕ್ರಮೇಣ ವಿಸ್ತಾರವಾಗುತ್ತ ಬಂದುವು. ಗೋರಿಯ ಮಧ್ಯಭಾಗದಲ್ಲಿ ಮರದ ಪೆಟ್ಟಿಗೆಯಲ್ಲಿ ರಾಜನ ಶರೀರವನ್ನಿಟ್ಟು, ಅಕ್ಕಪಕ್ಕಗಳಲ್ಲಿ ಅಂತಃಪುರದ ಸ್ತ್ರೀಯರು, ಅಧಿಕಾರಿಗಳು, ಸೇವಕರು ಇವರ ಗೋರಿಗಳನ್ನು ಕಟ್ಟುತ್ತಿದ್ದರು. ರಾಜನ ಪರಲೋಕಯಾತ್ರೆಗೆ ಬೇಕಾದ ಆಹಾರ, ಪಾನೀಯಗಳು ಮತ್ತು ಪ್ರಾಣಿಗಳನ್ನು ಗೋರಿಯಲ್ಲಿ ಇಡುತ್ತಿದ್ದರು. ಒಬ್ಬ ರಾಜನಿಗೋಸ್ಕರ ಸು. 500–600 ಜನಗಳನ್ನು ಬಲಿ ಕೊಡುತ್ತಿದ್ದ ನಿದರ್ಶನಗಳೂ ಇಲ್ಲಿ ದೊರಕಿವೆ.

ಅನೇಕ ರಾಜಮನೆತನದ ದೇವಾಲಯಗಳೂ ಹೀರೋಗ್ರಾಫಿಕ್ ಬರವಣಿಗೆಯುಳ್ಳ ಅನೇಕ ಮಣ್ಣಿನ ಪಾತ್ರೆಗಳೂ ಇಲ್ಲಿ ದೊರಕಿವೆ. ರಾಜಮನೆತನದ ಚಿಹ್ನೆಗಳಾದ ನರಿ, ಸಿಂಹ, ಮೀನು ಮುಂತಾದವನ್ನು ಪೂಜೆಮಾಡುತ್ತಿದ್ದರೆಂದು ತಿಳಿದುಬಂದಿದೆ. (ಎ.ವಿ.ಎನ್.)

**ಅಬಿಸೀನಿಯ :** ಆಫ್ರಿಕದ ಸ್ವತಂತ್ರ ಪ್ರಾಚೀನ ಸಾಮ್ರಾಜ್ಯ. ಸಹಜ ಕೋಟೆಯಂತಿದ್ದು ದಕ್ಷಿಣದಲ್ಲಿ ಪ್ರವೇಶಾನುಕೂಲವಿದೆ. ಇಥಿಯೋಪಿಯ ಎಂಬುದು ಇದರ ಈಗಿನ ಹೆಸರು. ವಿಸ್ತೀರ್ಣ 1221,900ಚ.ಕಿಮೀ. ಜನಸಂಖ್ಯೆ 70,254.090. 1952ರವರೆಗೂ ಇದೊಂದು ಒಳನಾಡು ರಾಜ್ಯವಾಗಿತ್ತು. ಆ ವರ್ಷ ಸಮುದ್ರತೀರವನ್ನು ಹೊಂದಿರುವ ಎರಿಟ್ರಿಯದೊಡನೆ ಸಂಯುಕ್ತ ರಾಜ್ಯವ್ಯವಸ್ಥೆಯಾದ ಮೇಲೆ, 960 ಕಿಮೀ ಉದ್ದದ ಕೆಂಪುಸಮುದ್ರತೀರ ಸೇರ್ಪಡೆಗೊಂಡಿತು.

ಆಫ್ರಿಕದ ಮಧ್ಯಪೂರ್ವ ಭಾಗದಲ್ಲಿ ಆಫ್ರಿಕದ ಕೋಡು (ಹಾರ್ನ್ ಆಫ್ ಆಫ್ರಿಕ) ಎಂದು ಕರೆಯಲ್ಪಡುತ್ತಿರುವ ಪ್ರದೇಶದ ಒಂದು ಭಾಗ. ಇದು ಪ್ರಾಚೀನಜೀವಿಯುಗದ ಕಾಲದಿಂದಲೂ ನಾನಾ ರೀತಿಯಲ್ಲಿ ಬದಲಾವಣೆ ಹೊಂದುತ್ತ ಬಂದು, ಜ್ವಾಲಾಮುಖಿಗಳಿಂದ ಹೊರಚಿಮ್ಮಿದ ಶಿಲೆಗಳೊಡನೆ ಬೆರೆತು ಪದರಪದರವಾಗಿರುವ ಶಿಲೆಗಳನ್ನು ಹೊಂದಿರುವ ಪ್ರಸ್ಥಭೂಮಿಯ ಪ್ರದೇಶವೇ ಅಬಿಸೀನಿಯದ ಬಹುಭಾಗ. ಅಲ್ಲೂ 3636–4545ಮೀ ಎತ್ತರವಾಗಿರುವ ಪರ್ವತ ಶ್ರೇಣಿಗಳಿವೆ. ಇಳಿಜಾರು ಪಶ್ಚಿಮದ ಕಡೆಗೆ. ಇಲ್ಲಿ ಹರಿಯುವ ನದಿಗಳೆಲ್ಲ ಪರ್ವತಪ್ರಾಂತದಲ್ಲಿರುವುದರಿಂದ ಜಲಪಾತಗಳು ಹೆಚ್ಚು. ಅವು ವಿದ್ಯುಚ್ಛಕ್ತಿ ಉತ್ಪಾದನೆಗೆ ಮಾತ್ರ ಯೋಗ್ಯವಾಗಿವೆ. ಅತ್ಯಂತ ಮುಖ್ಯವಾದ ನದಿ ತಾಣ ಸರೋವರದಿಂದ ಹರಿದುಬರುವ ನೀಲಿ ನೈಲ್ ಎರಿಟ್ರಿಯದ ಬಹುಭಾಗ ಪ್ರಸ್ಥಭೂಮಿ ಪ್ರದೇಶ. ಅಬಿಸೀನಿಯದ ವಾಯುಗುಣ ಮೇಲಿನ ಎತ್ತರಕ್ಕೆ ಅನುಸಾರವಾಗಿದೆ. ಪ್ರಸ್ಥಭೂಮಿ ಪ್ರದೇಶವೆಲ್ಲ ಒಟ್ಟಿನಲ್ಲಿ ಸಮಶೀತೋಷ್ಣ ವಾಯುಗುಣವನ್ನು ಹೊಂದಿದೆಯೆನ್ನಬಹುದು. ಪರ್ವತಪ್ರದೇಶವಾದ್ದರಿಂದ ಮಳೆ ಅಧಿಕ; ಜುಲೈ, ಆಗಸ್ಟ್, ಸೆಪ್ಟಂಬರುಗಳಲ್ಲಿ ಮಳೆ ಹೆಚ್ಚು. ಎತ್ತರದಲ್ಲಿ 490' ಕಡಿಮೆ ಇರುವ ಪ್ರಾಂತ್ಯಗಳು ಬಂಜರುಭೂಮಿ; ಡಂಕಿಲ್ ಪ್ರಾಂತ್ಯ ಹೆಚ್ಚಾಗಿ ಮರುಭೂಮಿ. ಸ್ವಾಭಾವಿಕ ಸಸ್ಯವರ್ಗವನ್ನೂ ವಾಯುಗುಣ ಮಳೆಗಳಿಗೆ ಅನುಸಾರವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು.

ಮೊದಲನೆಯದು, ಹವೆ ತಂಪಾಗಿದ್ದು ಹೆಚ್ಚು ಮಳೆ ಬೀಳುವ ಪರ್ವತ ಮತ್ತು ಪ್ರಸ್ಥಭೂಮಿ ಪ್ರದೇಶ; ಇಲ್ಲಿ ಎತ್ತರ ಮತ್ತು ಮಳೆಯ ಪ್ರಮಾಣಕ್ಕನುಸಾರವಾಗಿ ಕಾಡುಗಳಿವೆ. ಕಾಫಾಪ್ರಾಂತ್ಯ ಕಾಫಿಗಿಡದ ಮೂಲನೆಲೆ; ಆದ್ದರಿಂದಲೇ ಕಾಫಿ ಎಂಬ ಹೆಸರು ಬಂದಿರುವುದು. ಎರಡನೆಯದಾಗಿ ನಿಶ್ಚಿತವಾದ ಮಳೆಯಿಲ್ಲದೆ ಉಷ್ಣತೆ ಹೆಚ್ಚಿರುವ ತಗ್ಗುಭೂಮಿ ಪ್ರದೇಶ; ಇಲ್ಲಿ ಅಕೇಷಿಯ ಎಂಬ ಜಾಲಿಜಾತಿಯ ಮರಗಳು ಹೆಚ್ಚು. ಕೆಲವು ಕಡೆ ಹುಲ್ಲುಗಾವಲುಗಳಿವೆ. ಉತ್ಕೃಷ್ಟ ದಿಮ್ಮಿಗಳನ್ನು ಕೊಡುವ ಮರಗಳಲ್ಲದೆ ಇತರ ಅನೇಕ ಉಪಯುಕ್ತ ಮರಗಳೂ ಇವೆ. ತಾಳೆ, ಸೈಕಮೋರ್ ಎಂಬ ಅಂಜೂರದ ಮರ, ಗೋಂದು ಕೊಡುವ ಮರ, ಕಿತ್ತಲೆ, ನಿಂಬೆ, ದಾಳಿಂಬೆ, ಪೀಚ್, ಬಾಳೆ, ದ್ರಾಕ್ಷಿ, ಹತ್ತಿ, ನೀಲಿ, ಕಬ್ಬು ಇವು ಇತರ ಮುಖ್ಯ ಬೆಳೆಗಳು. ನೀಲಗಿರಿ ಮರಗಳನ್ನು ಇತ್ತೀಚೆಗೆ ಹೆಚ್ಚಾಗಿ ಬೆಳೆಸುತ್ತಿದ್ದಾರೆ.

ರಾಜಧಾನಿ ಆಡಿಸ್ ಅಬಾಬ. ಮಸಾವ ಮತ್ತು ಅಸಾಬುಗಳು ಮುಖ್ಯ ಬಂದರುಗಳು. ಖನಿಜೋತ್ಪನ್ನಗಳಾದ ಬಂಗಾರ, ಕಬ್ಬಿಣ, ಪ್ಲಾಟಿನಂ ಮುಂತಾದವು ಈ ಬಂದರುಗಳಿಂದ ರಫ್ತಾಗುತ್ತವೆ. ಪರ್ವತ ಪ್ರದೇಶವಾದ್ದರಿಂದ ಸಂಚಾರ ಸೌಲಭ್ಯ ಕಡಿಮೆ, ಒಂದೇ ಒಂದು ಪ್ರಮುಖ ರೈಲುಮಾರ್ಗವಿದೆ.

ಪಶ್ಚಿಮ ನೈಲ್ ಪ್ರದೇಶ ಪ್ರಾಚೀನ ಸಂಸ್ಕೃತಿಗಳ ಸಂಪರ್ಕವನ್ನು ಹೊಂದಿದೆ. ಪೂರ್ವಭಾಗದ ಸಮುದ್ರತೀರಗಳು ವ್ಯಾಪಾರಕ್ಕೆ ಬಹಳ ಅನುಕೂಲವಾಗಿದ್ದು ದೇಶದ ಅಭ್ಯುದಯಕ್ಕೆ ಕಾರಣವಾಗಿವೆ. ಅದರಲ್ಲೂ ಸೂಯೆಜ್ ಕಾಲುವೆಯನ್ನು ಕಟ್ಟಿದ ಮೇಲೆ ವ್ಯಾಪಾರ ಬಹುಮಟ್ಟಿಗೆ ಹೆಚ್ಚಿದೆ. ಈ ದೇಶದ ಜನರು ನ್ಯೂಬಿಯನ್ನರು ಮತ್ತು ಈಜಿಪ್ಷನವರಂತೆ ಹೆಮಿಟಿಕ್ ಕುಲಕ್ಕೆ ಸೇರಿದವರು. ಸಾಂಬ್ರಾಣಿಯ ಮೂಲ ಪ್ರದೇಶವಾದ ಪಂಠ್‌ನ ಜನರೂ ಈ ಕುಲದವರೇ. ಇವರು ಏಡನ್ ಕೊಲ್ಲಿಯ ತೀರದಲ್ಲಿ ನೆಲಸಿ ಮುಂದೆ ಫಿನೀಷಿಯನ್ನರ ಸಂಪರ್ಕ ಪಡೆದರು. ಅರೇಬಿಯದಿಂದ ಸೆಮಿಟಿಕ್ ಕುಲದವರೂ ಬಂದು ನೆಲಸಿರಬಹುದು. ನೀಗ್ರೋಗಳಿಗೆ ಈ ದೇಶದ ಹವಾಮಾನ ಒಗ್ಗದೆ ನೈಲ್‌ನದಿಯ ಮಧ್ಯಭಾಗದ ಪ್ರದೇಶಗಳಲ್ಲಿ ಮಾತ್ರ ನೆಲೆಸಿದರು. ಇಲ್ಲಿನ ಜನ ಗ್ರೀಜ್ ಎಂಬ ಸೆಮಿಟಿಕ್ ಭಾಷೆಯನ್ನು ಆಡುತ್ತಿದ್ದರು. ಈಗ ಇದು ಬಳಕೆ ತಪ್ಪಿ ಕೇವಲ ಕ್ರೈಸ್ತ ದೇವಾಲಯದ ಪೂಜೋಪಚಾರಗಳಲ್ಲಿ ಮಾತ್ರ ಉಪಯೋಗದಲ್ಲಿದೆ. ಇದರಿಂದ ಹುಟ್ಟಿದ ಅಂಹರಿಷ್ ಮತ್ತು ಟೈಗ್ರಿಸ್ ಎಂಬ ಭಾಷೆಗಳು ಈಗ ಬಳಕೆಯಲ್ಲಿವೆ.

ಈಜಿಪ್ಟ್ ನಾಗರಿಕತೆ ನಪತ ರಾಜ್ಯದ ಮೂಲಕ ಇಲ್ಲಿಗೆ ವಿಸ್ತರಿಸಿ ಅರಬ್ಬೀ ಮತ್ತು ಇತರ ನಾವಿಕರ ಪ್ರಭಾವದಿಂದ ಮತ್ತಷ್ಟು ಪ್ರಬಲವಾಯಿತು. ಈ ದೇಶದ ಇತಿಹಾಸ ಪುರಾತನವಾದುದು. ಆಧುನಿಕ ಟಿಗ್ರಾಪ್ರದೇಶ ಅಂದರೆ ಸಮುದ್ರಕ್ಕೆ ಹತ್ತಿರವಿರುವ ಉತ್ತರ ಪ್ರಾಂತ್ಯಗಳು ಅಬಿಸೀನಿಯ ನಾಗರಿಕತೆಯ ತಾಯ್ನೆಲ. ಅದಕ್ಕೆ ನೈಋತ್ಯ ದಿಕ್ಕಿನಲ್ಲಿ ಇಥಿಯೋಪಿಯದ ಹಿಂದಿನ ರಾಜಧಾನಿಯಾಗಿದ್ದ ಆಕ್ಸಂ ನಗರದ ಅವಶೇಷಗಳನ್ನು ಕಾಣಬಹುದು. ಇವು ಈಜಿಪ್ಟ್ ನಾಗರಿಕತೆಯನ್ನು ಹೋಲುತ್ತವೆ. ಆಕ್ಸಂ ರಾಜ್ಯ ಯಾವಾಗ ಸ್ವತಂತ್ರವಾಯಿತೆಂಬುದು ಗೊತ್ತಿಲ್ಲ. ಒಂದನೆಯ ಶತಮಾನದಲ್ಲಿ ಅರಬ್ಬೀರಾಜ್ಯದ ತೀರದಲ್ಲಿನ ಹಬಷತ್ ರಾಜ್ಯದ ಉಪಶಾಖೆಯಾಗಿ ಉದ್ಭವಿಸಿತೆಂದು ಮಾತ್ರ ಹೇಳಬಹುದು. ಅಬಿಸೀನಿಯದ ದಂತಕಥೆಗಳಿಂದ ದೇಶದ ಹಿಂದಿನ ಚರಿತ್ರೆಯನ್ನು ಊಹಿಸಬಹುದಾಗಿದೆ. ಮಹಾಪ್ರಳಯಾನಂತರ ಹ್ಯಾಮ್‌ನ ಮಗನಾದ ಕುಷ್ ಎಂಬುವನು ಆಕ್ಸಂ ನಗರದ ಸ್ಥಾಪಕನೆಂದೂ ಕುಷ್‌ನ ಮಗನಾದ ಇಥಿಯೋಪ್ಸ್ ಎಂಬುವನಿಂದ ಇಥಿಯೋಪಿಯ ಎಂಬ ಹೆಸರು ಬಂದಿತೆಂದೂ ಐತಿಹ್ಯವಿದೆ. ಈ ಮಾತಿಗೆ ಗ್ರೀಕಿನಲ್ಲಿ ಸುಟ್ಟು ಕಪ್ಪಾದ ಮುಖಗಳು ಎಂಬ ಅರ್ಥವಿದೆ. ಬೈಬಲ್ಲಿನ ಇನ್ನೊಂದು ದಂತಕಥೆ ಈ ರೀತಿ ಇದೆ. ಪ್ರ.ಶ.ಪೂ.11ನೆಯ ಶತಮಾನದಲ್ಲಿ ಆಕ್ಸಂ ರಾಜ್ಯದಲ್ಲಿ ಆಳುತ್ತಿದ್ದ ಷೀಬದ ರಾಣಿಯಾದ ಮಕೆಟ ಎಂಬುವಳು ಸಾಲಮನ್ ರಾಜನನ್ನು ಭೇಟಿ ಮಾಡಿದಳೆಂದೂ ಅವರ ಮಗನಾದ ಮೆನಿಲೆಕ್ ಇಬ್ನ್ ಹಕಿಂ ಎಂಬುವನು ಮೊದಲನೆಯ ಡೇವಿಡ್ ಎಂಬ ಹೆಸರಿನಿಂದ ಇಥಿಯೋಪಿಯ ರಾಜಮನೆತನವನ್ನು ಸ್ಥಾಪಿಸಿದನೆಂದೂ ತಿಳಿದುಬಂದಿದೆ. ಇಥಿಯೋಪಿಯ ರಾಜರು ತಾವು ಅವನ ಸಂತತಿಯವರೆಂದು ಈಗಲೂ ಹೇಳುತ್ತಾರೆ. ವಾಸ್ತವವಾಗಿ ಪ್ರಾಚೀನ ಪ್ರಪಂಚದಲ್ಲಿ ಗ್ರೀಕರು ತಮ್ಮ ಪ್ರಭಾವವನ್ನು ಹರಡುವವರೆಗೂ ಆಕ್ಸಂ ರಾಜ್ಯದಲ್ಲಿ ನಾಗರಿಕತೆ ಬೆಳೆಯಲು ಸಾಧ್ಯವಾಗಲಿಲ್ಲ. ಈಜಿಪ್ಟಿನಲ್ಲಿ ಟಾಲಮಿಗಳು ಆಳುತ್ತಿದ್ದಾಗ ದಂತವ್ಯಾಪಾರಿಗಳು ಮತ್ತು ಇತರರು ಆಗಾಗ್ಗೆ ಕೆಂಪುಸಮುದ್ರದ ತೀರಕ್ಕೆ ಭೇಟಿಕೊಡುತ್ತಿದ್ದರು. ಈಗಿನ ಮಸ್ಸೋವ ನಗರದ ಹತ್ತಿರ ಅದುಲೆಸ್ ಎಂಬ ವ್ಯಾಪಾರಠಾಣ್ಯವನ್ನು ಸ್ಥಾಪಿಸಿ, ದೇಶದ ಒಳಭಾಗಕ್ಕೆ ಸೈನ್ಯಪಡೆಗಳನ್ನು ಕಳುಹಿಸುತ್ತಿದ್ದರು. ಗ್ರೀಕ್ ಭಾಷೆ ಕ್ರಮೇಣ ಆಡಳಿತ ಭಾಷೆಯಾಯಿತು. ಗ್ರೀಕರ ಪುರಾಣಕಥೆಗಳು ದೇಶೀಯ ದಂತಕಥೆಗಳಲ್ಲಿ ಲೀನವಾದುವು. ಶ್ರೀಮಂತರು ಗ್ರೀಕ್ ಕಲೆ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ ಕೊಟ್ಟರು. ಕ್ರೈಸ್ತಧರ್ಮ ಬಹುಕಾಲದ ಮೇಲೆ ತನ್ನ ಪ್ರಭಾವ ಬೀರಿತು. ಪ್ರ.ಶ.333ರಲ್ಲಿ ಉಯಿಜನಸ್ ಎಂಬ ರಾಜ ಉತ್ತರ ಅಬಿಸೀನಿಯ ಮತ್ತು ದಕ್ಷಿಣ ಅರೇಬಿಯಗಳಿಗೆ ಒಡೆಯನಾಗಿದ್ದನೆಂದೂ ಕ್ರೈಸ್ತ ಪ್ರವರ್ತಕನಾದ ಫ್ರೂಮೆಂಟಿಯಸ್‌ನಿಂದ ಕ್ರೈಸ್ತಧರ್ಮಕ್ಕೆ ಸೇರಿದನೆಂದೂ ಅವನ ಶಾಸನದಿಂದ ತಿಳಿದುಬಂದಿದೆ. ರಾಜಕೀಯದಲ್ಲಿ ಎಷ್ಟೇ ಅಲ್ಲೋಲ ಕಲ್ಲೋಲಗಳಾದರೂ ಕ್ರೈಸ್ತಧರ್ಮ ಅಬಿಸೀನಿಯದಲ್ಲಿ ಶಾಶ್ವತವಾಗಿ ನೆಲಸಿ ಇಂದಿಗೂ ಅಲ್ಲಿನ ಜನರ ಆಧ್ಯಾತ್ಮಿಕ ಜೀವನವನ್ನು ರೂಪಿಸುತ್ತಿದೆ.

ಇದಾದಮೇಲೆ ಅನೇಕ ಶತಮಾನಗಳ ಕಾಲ ಈ ದೇಶದ ಚರಿತ್ರೆ ಕತ್ತಲೆಯಿಂದ ಕೂಡಿತ್ತು. ಆ ಕಾಲದ ರಾಜರ ಹೆಸರುಗಳ ವಿನಾ ಇನ್ನೇನೂ ತಿಳಿದುಬಂದಿಲ್ಲ. ಅನಂತರ ಅಬಿಸೀನಿಯ ಸೆಮಿಟಿಕ್ ನಾಗರಿಕತೆಯಲ್ಲಿ ಲೀನವಾಗಿ ದಕ್ಷಿಣ ಅರೇಬಿಯದಲ್ಲಿ ತನ್ನ ಪ್ರಭಾವವನ್ನು ಬೀರಿತು. ಗ್ರೀಕ್ ದೇಶಗಳೊಡನೆ ಸಂಚಾರಸಂಪರ್ಕವನ್ನು ಬೆಳೆಸಿತು. ದಕ್ಷಿಣ ಅರೇಬಿಯದಲ್ಲಿ ಯೆಹೂದ್ಯರು ಕ್ರಿಶ್ಚಿಯನ್ನರಿಗೆ ಕೊಡುತ್ತಿದ್ದ ಹಿಂಸಾತ್ಮಕ ಕಿರುಕುಳಗಳನ್ನು ತಡೆಗಟ್ಟಲು ಪ್ರ.ಶ. 532ರಲ್ಲಿ ಜಸ್ಟಿನಿಯನ್ ಚಕ್ರವರ್ತಿ ಆಕ್ಸಂ ರಾಜನಾದ ಕ್ಯಾಲೆಬ್ ಎಂಬುವನಿಗೆ ಮನವಿ ಮಾಡಿಕೊಂಡ. ಕ್ಯಾಲೆಬ್ ಹಾಗೆ ಮಾಡಿ ಮತ್ತೊಮ್ಮೆ ದಕ್ಷಿಣ ಅರೇಬಿಯದಲ್ಲಿ ತನ್ನ ಅಧಿಕಾರವನ್ನು ವಿಸ್ತರಿಸಿದ. ಪ್ರಶ. 571ರಲ್ಲಿ ಪೈಗಂಬರ್ ಮಹಮ್ಮದನು ಹುಟ್ಟಿದ ವರ್ಷದಂದು ಒಬ್ಬ ಅಬಿಸೀನಿಯ ಸೈನ್ಯಾಧಿಕಾರಿ ಮೆಕ್ಕದ ಮೇಲೆ ದಂಡಯಾತ್ರೆ ಮಾಡಿದ. ಆದರೆ ಅದು ಫಲಿಸಲಿಲ್ಲ. ಇಥಿಯೋಪಿಯ ಸೈನ್ಯಭಾಗದಲ್ಲಿ ಸಿಡುಬು ರೋಗ ತಲೆದೋರಿದ್ದರಿಂದ ದಕ್ಷಿಣ ಸೈನ್ಯ ಅರೇಬಿಯವನ್ನು ತ್ಯಜಿಸಬೇಕಾಯಿತು. ಇಸ್ಲಾಂ ಮತ ಇದೇ ಸಂದರ್ಭದಲ್ಲಿ ಆಫ್ರಿಕದ ಎಲ್ಲೆಡೆ ಹರಡಿದ್ದರೂ ನ್ಯೂಬಿಯ ಮತ್ತು ಇಥಿಯೋಪಿ ದೇಶಗಳ ಮೇಲೆ ಯುದ್ಧ ಮಾಡಲೇಬೇಕಾಯಿತು. ಅಬಿಸೀನಿಯ ದೇಶದ ರಾಜರು ಪೋರ್ಚುಗಲ್ ಮತ್ತು ಇತರ ಪಾಶ್ಚಾತ್ಯ ದೇಶಗಳ ಸಹಾಯವನ್ನು ಪಡೆಯಬೇಕಾಯಿತು. ಆದರೆ ಇಥಿಯೋಪಿಯನ್ನರು ಜೆಸೂಟರ ಪ್ರಭಾವಕ್ಕೆ ಒಳಗಾಗದೆ ಕೆಥೊಲಿಕ್ ಪಂಥವನ್ನು ನಿರಾಕರಿಸಿ, ಪೌರಸ್ತ್ಯ ಪಂಥದ ಅನುಯಾಯಿಗಳಾದರು.

18 ಮತ್ತು 19ನೆಯ ಶತಮಾನದಲ್ಲೇ ದೇಶದಲ್ಲಿ ವಿಚ್ಛೇದಕಶಕ್ತಿಗಳು ಪ್ರಬಲವಾಗಿ ಅಂತರ್ಯುದ್ಧಗಳಿಂದ ಏಕತೆಗೆ ಭಂಗವುಂಟಾಯಿತು. ಅನೇಕ ಪ್ರಾಂತ್ಯಗಳು ಸ್ವತಂತ್ರವಾದುವು. ಗಲ್ಲ ಎಂಬುವರು ಹಣದಾಸೆಯಿಂದ ಶ್ರೀಮಂತರ ಕೈಗೊಂಬೆಗಳಾಗಿ ಪ್ರಾಬಲ್ಯಕ್ಕೆ ಬಂದರು. ಉತ್ತರ ಮತ್ತು ದಕ್ಷಿಣ ಅಬಿಸೀನಿಯ ಬೇರೆಯಾದುವು. ಎಲ್ಲೆಲ್ಲೂ ಅವ್ಯವಸ್ಥೆ ಹಬ್ಬಿತು. ರಾಸ್ ಮೈಕೆಲ್ ಎಂಬ ಸಾಮಂತ ಯಾದುವು. ಎಲ್ಲೆಲ್ಲೂ ಅವ್ಯವಸ್ಥೆ ಹಬ್ಬಿತು. ರಾಸ್ ಮೈಕೆಲ್ ಎಂಬ ಸಾಮಂತ ತನ್ನ ದೌರ್ಜನ್ಯಗಳಿಂದ ಅಪಕೀರ್ತಿ ಪಡೆದ. ಟಿಗ್ರಾದ ರಾಜರು ಪ್ರಾಬಲ್ಯಕ್ಕೆ ಬರಲು ಪ್ರಯತ್ನಿಸಿದರು. ಕೊನೆಗೆ ಅಮ್ಹರದಲ್ಲಿ ಆಳುತ್ತಿದ್ದ ರಾಸ್ ಅಲಿ ದೇಶದಲ್ಲಿ ಐಕ್ಯ ಮತ್ತು ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಪಟ್ಟ. ಇವನ ಅಳಿಯನಾದ ಕಸ್ಸೆ ಎಂಬುವನು ಥಿಯೋಡರ್ ಎಂಬ ಹೆಸರಿನಿಂದ 1855ರಲ್ಲಿ ಸಿಂಹಾಸನಕ್ಕೆ ಬಂದ. ಸಮರ್ಥನಾದ ಈತ ದಕ್ಷಿಣಪ್ರಾಂತ್ಯಗಳನ್ನು ಜಯಿಸಿ, ಗಲ್ಲರನ್ನು ಅಡಗಿಸಿ ಸ್ಥಿರವಾದ ಆಡಳಿತವನ್ನು ಸ್ಥಾಪಿಸಲು ಪ್ರಯತ್ನಪಟ್ಟ. ಆದರೂ ದೇಶದಲ್ಲಿ ಎಲ್ಲೆಲ್ಲೂ ದಂಗೆಗಳಾದುವು. ಸೈನಿಕರ ಹಾವಳಿ ಹೆಚ್ಚಾಯಿತು. 1864ರಲ್ಲಿ ಥಿಯೋಡರ್ ಕ್ರೈಸ್ತ ಪಾದ್ರಿಗಳನ್ನೂ ಫ್ರೆಂಚ್ ಮತ್ತು ಇಂಗ್ಲಿಷ್ ರಾಜನಿಯೋಗಿಗಳನ್ನೂ (ಕಾನ್ಸಲ್ಸ್) ಸೆರೆಯಲ್ಲಿಟ್ಟ. ಕೊನೆಗೆ 1868ರಲ್ಲಿ ರಾಬರ್ಟ್ ನೇಪಿಯರ್ ಎಂಬ ಬ್ರಿಟಿಷ್ ಸೈನ್ಯಾಧಿಕಾರಿ ಮಸ್ಸೋವಕ್ಕೆ ದಕ್ಷಿಣದಲ್ಲಿ ಸೂಲ ಎಂಬಲ್ಲಿ ನೆಲೆಸಿದ. ಬ್ರಿಟಿಷರ ಸೈನ್ಯ ಸುಲಭವಾಗಿ ದೇಶದೊಳಕ್ಕೆ ನುಗ್ಗಿ ಆಕ್ರಮಣಮಾಡಿತು. ಥಿಯೋಡರ್ ಆತ್ಮಹತ್ಯೆ ಮಾಡಿಕೊಂಡ. ಅವನ ಮಗ ಇಂಗ್ಲೆಂಡಿಗೆ ಓಡಿಹೋಗಿ ಅಲ್ಲಿಯೇ ಸತ್ತುಹೋದ. ಅಬಿಸೀನಿಯದಲ್ಲಿ ಪಾಳೆಯಗಾರರ ಪ್ರಭಾವದಿಂದ ನಿರಂಕುಶಪ್ರಭುತ್ವ ಏರ್ಪಟ್ಟಿತು. ಥಿಯೋಡರ್ ತಾತ್ಕಾಲಿಕವಾಗಿ ಏಕತೆಯನ್ನು ಸ್ಥಾಪಿಸಿ ತನ್ನ ರಾಜಾಧಿಕಾರದ ಕೀರ್ತಿಯನ್ನು ಹೆಚ್ಚಿಸಿದ. ಕೊನೆಗೆ 1871ರಲ್ಲಿ ಬ್ರಿಟಿಷರ ಸಹಾಯದಿಂದ ಟಿಗ್ರಾರ ರಾಜಕುಮಾರ ಕಸೇ ಎಂಬುವನು ಜಾನ್ ಎಂಬ ಹೆಸರಿನಿಂದ ಸಿಂಹಾಸನಕ್ಕೆ ಬಂದ. ಈಜಿಪ್ಟಿನ ಸೈನ್ಯಗಳು ಅಬಿಸೀನಿಯದ ಮೇಲೆ ಆಕ್ರಮಣ ಮಾಡಿ ವಿಫಲವಾದುವು.

ಈ ಸಂದರ್ಭದಲ್ಲಿ ಇಟಲಿ ಅಬಿಸೀನಿಯದ ಮೇಲೆ ತನ್ನ ವಕ್ರದೃಷ್ಟಿಯನ್ನು ಬೀರಿ ಆಫ್ರಿಕದ ವಿಭಜನೆಯಿಂದ ತನ್ನ ಸಾಮ್ರಾಜ್ಯಷಾಹಿಯನ್ನು ವಿಸ್ತರಿಸಲು ಸಂಕಲ್ಪಿಸಿತು. ಅಬಿಸೀನಿಯದ ಭೌಗೋಳಿಕಸ್ಥಿತಿ ಮತ್ತು ಹವ ಇಟಲಿಯವರಿಗೆ ಅನುಕೂಲವಾಗಿದ್ದುವು. ಬ್ರಿಟಿಷರು ಈಜಿಪ್ಟ್‌ನಲ್ಲಿ ಆಕ್ರಮಣ ನಡೆಸಿದ್ದರಿಂದ ಅಬಿಸೀನಿಯದಲ್ಲಿ ಇಟಲಿಯವರ ಆಕ್ರಮಣಕ್ಕೆ ಯಾವ ವಿರೋಧವನ್ನೂ ವ್ಯಕ್ತಪಡಿಸಲಿಲ್ಲ. 1885ರಲ್ಲಿ ಇಟಲಿ ಮಸ್ಸೋವ ಎಂಬ ಸಮುದ್ರತೀರವನ್ನು ಆಕ್ರಮಿಸಿ ತನ್ನ ರಕ್ಷಣಾಠಾಣ್ಯವನ್ನು ಸ್ಥಾಪಿಸಿತು. ಸಮುದ್ರತೀರದ 600 ಚ.ಮೈ. ಇಟಲಿಯ ರಕ್ಷಣೆಗೆ ಒಳಗಾಯಿತು. ಈ ಸಂದರ್ಭದಲ್ಲಿ ಅಬಿಸೀನಿಯ ಸೈನ್ಯ ಪ್ರಬಲವಾಗಿ ಶಿಸ್ತಿನಿಂದ ಕಾಪಾಡಲು ಸಿದ್ಧವಾಯಿತು. ರಷ್ಯ ಮತ್ತು ಫ್ರಾನ್ಸ್ ದೇಶಗಳು ಇಟಲಿಗೆ ವಿರೋಧವಾಗಿ ಅಬಿಸೀನಿಯಕ್ಕೆ ಸಹಾಯ ಮಾಡಿದುವು. ಕೊನೆಗೆ 1896ರಲ್ಲಿ ಅಡೋವ ಕದನದಲ್ಲಿ ಇಟಲಿ ಸೋತು ಅಬಿಸೀನಿಯ ಸ್ವತಂತ್ರವಾಯಿತು.

ಆದರೆ 1935ರಲ್ಲಿ ಇಟಲಿ ಮತ್ತೊಮ್ಮೆ ಆಕ್ರಮಣ ನಡೆಸಿತು. ಇಟಲಿಯ ನಿರಂಕುಶಾಧಿಕಾರಿ ಮುಸೋಲಿನಿ ಆಫ್ರಿಕದಲ್ಲಿ ಮತ್ತೆ ಇಟಲಿಯ ಸಾಮ್ರಾಜ್ಯವನ್ನು ಸ್ಥಾಪಿಸಲು ಸಂಕಲ್ಪಿಸಿದ. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಸಂಧಾನದಿಂದ ಸಮಸ್ಯೆಯನ್ನು ತೀರ್ಮಾನಿಸಲು ಪ್ರಯತ್ನಮಾಡಿದ್ದು ವಿಫಲವಾಯಿತು. 1936ರಲ್ಲಿ ಅಬಿಸೀನಿಯ ಇಟಲಿಗೆ

ಆಹುತಿಯಾಯಿತು. ಚಕ್ರವರ್ತಿ ಹೈಲಿ ಸೆಲಾಸಿ ಇಂಗ್ಲೆಂಡಿನಲ್ಲಿ ಆಶ್ರಯ ಪಡೆದು ಅಲ್ಲೇ ನೆಲೆಸಿದ. ಎರಡನೆಯ ಮಹಾಯುದ್ಧದಲ್ಲಿ 1941ರಲ್ಲಿ ಬ್ರಿಟಿಷರು ಇಥಿಯೋಪಿಯದ ರಾಜಧಾನಿಯಾದ ಆಡಿಸ್ ಅಬಾಬವನ್ನು ಹಿಡಿದು ಚಕ್ರವರ್ತಿ ಹೈಲಿ ಸೆಲಾಸಿಗೆ ಪುನಃ ರಾಜ್ಯಭಾರವನ್ನು ವಹಿಸಿದರು. ಅಬಿಸೀನಿಯ ಎಷ್ಟೇ ಕಷ್ಟಗಳನ್ನು ಅನುಭವಿಸಿದರೂ ಹೈಲಿ ಸೆಲಾಸಿಯ ಸಮರ್ಥ ನಾಯಕತ್ವದಲ್ಲಿ ಸ್ವತಂತ್ರ ರಾಷ್ಟ್ರವಾಗಿ ಆಧುನಿಕ ರೀತಿಯಲ್ಲಿ ಪ್ರಗತಿ ಹೊಂದಿದೆ. (ಬಿ.ಎಸ್.ಕೆ.)

**ಅಬೀಜೋತ್ಪಾದನೆ :** ಬೀಜಗಳನ್ನು ಉಪಯೋಗಿಸದೆ ಹೊಸ ಸಸ್ಯಗಳನ್ನು ಪಡೆಯುವ ವಿಧಾನ (ಏಸೆಕ್ಷುಯಲ್ ರಿಪ್ರೊಡಕ್ಷನ್). ಇದನ್ನು ನಿರ್ಲಿಂಗ ರೀತಿಯ ವಂಶಾಭಿವೃದ್ಧಿಯೆನ್ನಬಹುದು. ರೆಂಬೆ ನೆಟ್ಟು ಸಸಿ ಮಾಡುವ ವಿಧಾನ ಇದಕ್ಕೆ ಸರಳವಾದ ಉದಾಹರಣೆ. ಹೀಗೆ ಮಾಡಿದಾಗ ತಾಯಿಗಿಡಕ್ಕೂ ಹೊಸಗಿಡಕ್ಕೂ ಮೂಲ ಗುಣಲಕ್ಷಣಗಳಲ್ಲಿ ಯಾವ ವ್ಯತ್ಯಾಸವೂ ಇರದು. ಆದರೆ ಬೀಜದಿಂದ ಪಡೆದ ಹೊಸಗಿಡ ತಾಯಿಗಿಡಕ್ಕಿಂತ ಭಿನ್ನವಾದ ಗುಣಲಕ್ಷಣಗಳನ್ನು ಪ್ರದರ್ಶಿಸಬಲ್ಲದು. ಆದ್ದರಿಂದ ತಾಯಿಸಸ್ಯಗಳ ಗುಣಲಕ್ಷಣವನ್ನೇ ಸಂತತಿಯಲ್ಲೂ ಬಯಸುವಾಗ ಅಬೀಜೋತ್ಪಾದನೆ ಸರಿಯಾಗಬಹುದು. ಬಾಳೆ ಮುಂತಾದ ಅಬೀಜ ಸಸ್ಯಗಳನ್ನು ಹೆಚ್ಚಿಸಿಕೊಳ್ಳಲಂತೂ ಈ ಕ್ರಮವೊಂದೇ ಮಾರ್ಗ. ಬೀಜದಿಂದ ಬೆಳೆಸುವುದು ಕೆಲವು ಸಸ್ಯಗಳಲ್ಲಿ ತೀರ ನಿಧಾನವಾಗುತ್ತದೆ. ವಿಳಂಬವನ್ನು ತಪ್ಪಿಸುವಾಗಲೂ ಅಬೀಜಸಂತಾನ ಕ್ರಮವನ್ನು ಅನುಸರಿಸಲಾಗುತ್ತದೆ.

ರೈಸೋಮು

ಈ ವಿಧಾನದಲ್ಲಿ ಅನೇಕ ಕ್ರಮಗಳುಂಟು. ಕೆಲವನ್ನು ಬೇರು, ಕಂದ, ಗೆಡ್ಡೆಗಳಿಂದಲೂ ಮತ್ತೆ ಕೆಲವನ್ನು ಕಣ್ಣು, ಎಲೆ, ಕಾಂಡದ ಭಾಗಗಳಿಂದಲೂ ಉತ್ಪತ್ತಿ ಮಾಡಿಕೊಳ್ಳಬಹುದು. ಪ್ರತಿಯೊಂದು ಸಸ್ಯಜಾತಿಯನ್ನೂ ಪ್ರತಿಯೊಂದು ವಿಧಾನದಿಂದಲೂ ಬೆಳೆಸುವುದಕ್ಕಾಗುವುದಿಲ್ಲ. ಆಯಾ ಜಾತಿಯ ಬೆಳೆಯ ಸ್ವಭಾವ, ಬೆಳವಣಿಗೆ ಇತ್ಯಾದಿಗಳಿಗೆ ಅನುಗುಣವಾಗಿ ಸೂಕ್ತ ಕಂಡ ವಿಧಾನವನ್ನು ಅನುಸರಿಸಬೇಕಾಗುತ್ತದೆ.

ಅಬೀಜ ರೀತಿಯ ಸಂತಾನೋತ್ಪಾದನೆಯ ಕ್ರಮಗಳನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು: 1. ಸಸ್ಯ ಭಾಗಗಳಿಂದ ಬೇರು ಬಿಡಿಸುವಿಕೆ; 2. ಸಸ್ಯ ಭಾಗಗಳನ್ನು ಬೇರು ಬಿಟ್ಟಿರುವ ಸಸ್ಯಗಳ ಮೇಲೆ ಜೋಡಿಸುವಿಕೆ.

ಬೇರು ಬಿಡಿಸುವಿಕೆಯಲ್ಲಿ ಮೂರು ಬಗೆ: ತಾಯಿಸಸ್ಯಕ್ಕೆ ಅಂಟಿಕೊಂಡಿರುವಾಗಲೇ ಸಸ್ಯಭಾಗದಿಂದ ಬೇರು ಬಿಡಿಸುವಿಕೆ; ತಾಯಿಸಸ್ಯದಿಂದ ಬೇರ್ಪಡಿಸಿ ಬೇರು ಬಿಡಿಸುವಿಕೆ; ತಾಯಿಸಸ್ಯದ ಭಾಗಗಳನ್ನು ತುಂಡು ಹಾಕಿ ಬೇರು ಬಿಡಿಸುವಿಕೆ.

ಬಾಳೆ, ಜೀಗುಜ್ಜೆ ಇತ್ಯಾದಿಗಳಲ್ಲಿ ಕಾಂಡದ ಬುಡದಿಂದ ಕಂದುಗಳು ಹೊರಡುತ್ತವೆ. ಕೆಲವು ಗಿಡಗಳನ್ನು ತರಿದಾಗ ಕಾಂಡದಿಂದ ಕಂದುಗಳು ಹೇರಳವಾಗಿ ಬರುವುದುಂಟು. ಬಳ್ಳಿ ಜಾತಿಯ ಕೆಲವು ಸಸ್ಯಗಳಲ್ಲಿ, ಕಾಂಡದ ಬುಡದಿಂದ, ನವುರಾದ ಉಪಕಾಂಡಗಳು ಒಡೆದು ನೆಲದ ಮೇಲೆ ಹಾದು ಅಲ್ಲಲ್ಲೆ ಗಿಣ್ಣಿರುವೆಡೆ ಬೇರುಬಿಡುತ್ತವೆ. ಉದಾ: ಹರಿಯಾಳಿ, ಸ್ಟ್ರಾಬೆರಿ, ರಾಸ್ಪ್‌ಬೆರಿ. ಸಕಾಲದಲ್ಲಿ ಇವನ್ನು ಕತ್ತರಿಸಿ ಬುಡಸಮೇತ ಹೂಳಿ ಸಸ್ಯಗಳನ್ನು ಹೆಚ್ಚಿಸಿಕೊಳ್ಳಬಹುದು. ತಾಯಿಸಸ್ಯಕ್ಕೆ ಅಂಟಿಕೊಂಡಿರುವಾಗಲೇ ಕಾಂಡದ ಭಾಗಗಳಿಂದ ಬೇರು ಬಿಡಿಸುವ ಕ್ರಮವೊಂದಿದೆ. ಪ್ರಕೃತಿಯಲ್ಲಿ, ಗಿಡದ ರೆಂಬೆ ನೆಲಕ್ಕೆ ಉಜ್ಜಿದಾಗ ಅದರ ತೊಗಟೆಗೆ ಗಾಯವಾಗುತ್ತದೆ. ಈ ಗಾಯದಿಂದಲೇ ಬೇರು ಹೊರಟು ಉಪಸಸ್ಯ ಹುಟ್ಟುತ್ತವೆ. ಇದನ್ನು ಅರಿತು ತೋಟಗಾರರು ತೊಗಟೆಯನ್ನು ಸುಲಿದೋ ಸೀಳಿಯೋ ರೆಂಬೆಗೆ ಗಾಯ ಗೊಳಿಸಿ ನೆಲಕ್ಕೆ ಬಗ್ಗಿಸಿ, ಮಣ್ಣು ಪೇರಿಸಿ ಬೇರು ಬಿಡಿಸುತ್ತಾರೆ. ಈ ಕ್ರಮ ನಿಧಾನವಾದರೂ ಯಶಸ್ಸು ಖಂಡಿತ. ಈ ಕ್ರಮದಲ್ಲೂ ಕೆಲವು ವಿಧಗಳಿವೆ. 1. ಬಲಿತ ರೆಂಬೆಯಲ್ಲಿ ಹರಿತವಾದ ಚಾಕುವಿನಿಂದ ಸ್ವಲ್ಪ ಸೀಳಿ ಆ ಭಾಗ ನೆಲಕ್ಕೆ ತಗಲುವಂತೆ ಮಾಡಿ ನೀರು ಗೊಬ್ಬರವನ್ನು ಹಾಕಿ ತೇವ ಆರದಂತೆ ನೋಡಿಕೊಂಡರೆ ಸೀಳಿನಲ್ಲಿ ಬೇರುಗಳು ಕಾಣಿಸಿಕೊಳ್ಳುತ್ತವೆ. 2. ಮಲ್ಲಿಗೆ, ಕಣಗಿಲೆ ಮುಂತಾದ ಗಿಡಗಳಲ್ಲಿ ರೆಂಬೆಯನ್ನು ಅರ್ಧವೃತ್ತಾಕಾರದಲ್ಲಿ ಬಾಗಿಸಿ ಮಣ್ಣಿನಲ್ಲಿ ಹೂತು ಅದರ ಮೇಲೆ ಕಲ್ಲು ಹೇರುತ್ತಾರೆ ಅಥವಾ ಊರುತ್ತಾರೆ. ಕೆಲವು ಬಾರಿ ಹೂಳುವ ಭಾಗವನ್ನು ತಿರುಚುತ್ತಾರೆ ಅಥವಾ ಕಂಬಿಯಿಂದ ಬಿಗಿಯಾಗಿ ಹಿಸುಕುತ್ತಾರೆ. ಈ ಕ್ರಿಯೆಗಳಿಂದ ಸಸ್ಯರಸದ ಚಲನೆಗೆ ತಡೆಯಾಗಿ ಆ ಭಾಗದಿಂದ ಬೇರು ಬರುತ್ತದೆ. 3. ತೊಗಟೆ ಎಬ್ಬಿ ಅಥವಾ ತೊಗಟೆ ಉಂಗುರ ಸುಲಿದು ಬೇರು ಬಿಡಿಸುವಿಕೆ; ಕ್ರೋಟನ್, ಡ್ರೆಸೀನ ಮುಂತಾದ ಗಿಡಗಳಲ್ಲಿ ಬೇರು ಬಿಡಿಸುವ ಕಡೆ ಗಿಣ್ಣಿನ ಕೆಳಗೆ ಹರಿತವಾದ ಚಾಕುವನ್ನು ರೆಂಬೆಯ ಸುತ್ತಲೂ ಊರುವುದು. 1 ಸೆಂಮೀ ಅಥವಾ 2 ಸೆಂಮೀ ಕೆಳಗೆ ಮತ್ತೊಂದು ಸುತ್ತು ಚಾಕು ಊರಿ ಎರಡು ಕಚ್ಚಿನ ಮಧ್ಯೆ ಇರುವ ತೊಗಟೆ ಉಂಗುರವನ್ನು ಎಬ್ಬಿ ಒಳಮೈಯನ್ನು ಬಯಲುಮಾಡಿ ಆ ಭಾಗದ ಸುತ್ತಲೂ ಮಣ್ಣು ಮೆತ್ತುವುದು. ಆಗ ಈ ಉಂಗುರದ ಗಾಯದಿಂದ ಬೇರು ಹೊಮ್ಮುತ್ತದೆ. 4. ಚೆನ್ನಾಗಿ ಬಲಿತು ಆರೋಗ್ಯವಾಗಿರುವ ರೆಂಬೆಯನ್ನು ಕೆಳಗಿಂದ ಮೇಲಕ್ಕೆ ಚಾಕುವಿನಿಂದ ಸೀಳಿ, ಮಧ್ಯೆ ಸಣ್ಣ ಬೆಣೆ ಕೊಟ್ಟು ಸುತ್ತಲೂ ಹಾವಸೆಯನ್ನೊ (ದೊಡ್ಡಪಾಚಿ) ತೆಂಗಿನ ನಾರನ್ನೊ ಅಥವಾ ತೇವ ಉಳಿಸಿಕೊಳ್ಳಬಲ್ಲ ಯಾವುದಾದರೂ ಪದಾರ್ಥವನ್ನೊ (ಪಾಲಿಥೀನ್ ಕಾಗದ) ಕಟ್ಟಿ, (ಇದು ಜಾರದಂತೆ ನಾರಿನಿಂದ ಬಿಗಿಯುವುದು) ಸೀಳಿನಿಂದ ಬೇರು ಹೊರಟು ಈ ಮಧ್ಯಸ್ಥ ಪದಾರ್ಥದಲ್ಲಿ ಇಳಿಯುತ್ತವೆ. ಹಾಗೆ ಇಳಿದ ಮೇಲೆ ಈ ಗೂಟಿಯನ್ನು ತಾಯಿ ಸಸ್ಯದಿಂದ ಬೇರ್ಪಡಿಸಿ ಕುಂಡದಲ್ಲಿ ಹಾಕಿ ಬೆಳೆಸುವುದು.

ತಾಯಿಸಸ್ಯದಿಂದ ಬೇರ್ಪಟ್ಟ ಭಾಗಗಳಿಂದ ಹೊಸ ಗಿಡಗಳನ್ನು ಪಡೆಯುವ ವಿಧಾನಗಳು ಬಗೆಬಗೆಯಾಗಿವೆ. ಕೆಲವು ಸಸ್ಯಗಳಲ್ಲಿ ಎಲೆಗಳು ಪೊರೆಗಳಾಗಿ ಮಾರ್ಪಟ್ಟು ಇಲ್ಲವೆ ಒಗ್ಗೂಡಿ ಕಂದುಗಳಾಗುತ್ತವೆ. ಅವನ್ನು ಹೂಳಿ ಗಿಡ ಪಡೆಯಬಹುದು. ಉದಾ: ಈರುಳ್ಳಿ, ಲಿಲ್ಲಿ, ಭೂತಾಳೆ, ಜರೀಗಿಡ ಇತ್ಯಾದಿ. ಮತ್ತೆ ಕೆಲವು ಸಸ್ಯಗಳಲ್ಲಿ ನೆಲದಲ್ಲಿನ ಕಾಂಡ ಭಾಗ ಊದಿ ಗೆಡ್ಡೆಕಟ್ಟಿರುತ್ತದೆ. ಅದನ್ನು ನೆಟ್ಟು ಗಿಡ ಪಡೆಯಬಹುದು. ಉದಾ: ಕೇಲೆಡಿಯಂ, ಶುಂಠಿಯಂಥ ಗಿಡಗಳ ಕಾಂಡಗಳು ನೆಲದಲ್ಲಿದ್ದು

ಅವುಗಳಿಂದ ಬೇರು ಹೊಮ್ಮಿರುತ್ತದೆ. ಅದರಿಂದ ಹೊಸಗಿಡ ಪಡೆಯಬಹುದು. ಅನಾನಾಸ್‌ನಂಥ ಗಿಡದಲ್ಲಿ ಮೇಲಿನ ಎಲೆಗುಚ್ಚಿನ ಕೊಳೆಯನ್ನು ಕತ್ತರಿಸಿ ನೆಟ್ಟಲ್ಲಿ ಹೊಸಗಿಡ ಬರುತ್ತದೆ. ಗ್ಲಾಡಿಯೋಲಸ್, ಡ್ಯಾಫೊಡಿಲ್, ಟ್ಯೂಲಿಪ್ ಮೊದಲಾದುವುಗಳಲ್ಲಿ ಗೆಡ್ಡೆಗಳಿಗೆ ಅಂಟಿದಂತಿರುವ ಮರಿಗೆಡ್ಡೆಗಳನ್ನು ಕಿತ್ತು ನೆಟ್ಟರೆ ಹೊಸಗಿಡ ಬರುತ್ತದೆ. ಆಲೂಗಡ್ಡೆ ಸುವರ್ಣಗೆಡ್ಡೆಗಳಲ್ಲಾದರೋ ಗೆಡ್ಡೆಯೊಳಗಣ ಒಂದೊಂದು ಕಣ್ಣೂ ಒಂದೊಂದು ಹೊಸಗಿಡವನ್ನು ಕೊಡುತ್ತದೆ.

ಕೆಲಸಸ್ಯಗಳ ಕಾಂಡ ಎಲೆ ಅಥವಾ ಬೇರುಗಳನ್ನು ತುಂಡರಿಸಿ ನೆಟ್ಟು ಹೊಸಗಿಡ ಪಡೆಯಬಹುದು. ನೆಡುವಾಗ ಮರಳುಮಿಶ್ರಿತ ನೆಲ, ಆರದ ತೇವ, ರಾಸಾಯನಿಕ ಗೊಬ್ಬರ ಅಗತ್ಯ. ಜೀಗುಜ್ಜೆ, ಫ್ಲಾಕ್ಸ್ (ಅಗಸೆನಾರು) ಮೊದಲಾದುವುಗಳ ಬೇರುಗಳ ತುಂಡು, ಬಲಿತ ಗುಲಾಬಿಗಿಡಗಳ ಎಲೆಮೊಗ್ಗಿರುವ ಕಾಂಡದ ತುಂಡು, ಬೆಗೊನಿಯ, ಗ್ಲಾಕ್ಸೀನಿಯ, ಪೆಪೆರೋಮಿಯ ಮೊದಲಾದುವುಗಳಲ್ಲಿ ಬಲಿತ ಪೂರ್ತಿ ಎಲೆ ಅಥವಾ ಎಲೆಯ ತುಂಡು – ಇವುಗಳಿಂದ ಹೊಸಗಿಡ ಬರುತ್ತದೆ.

ಈ ವಿಧಾನಗಳಲ್ಲದೆ ಕಸಿಮಾಡುವಿಕೆಯಿಂದ ವಿವಿಧ ಸಸ್ಯಗಳ ಅಡ್ಡತಳಿ ಎಬ್ಬಿಕೆಯ ತಂತ್ರ ಈಚೆಗೆ ಅನೇಕ ಕಾರಣಗಳಿಂದಾಗಿ ಬಳಕೆಗೆ ಬಂದಿದೆ. ಇದರಿಂದ ಹೊಸ, ಉತ್ತಮ ತಳಿಗಳು ದೊರೆತಿವೆ. ಇದೂ ಅಬೀಜ ಸಸ್ಯೋತ್ಪಾದನೆಯ ಪ್ರಮುಖ ಭಾಗವೇ. ಮೂಲಗಿಡದ ಕಾಂಡವನ್ನು ಕೊರೆದು ಅಲ್ಲಿಗೆ ಬೇರೊಂದು ಗಿಡದ ರೆಂಬೆಯನ್ನು ಲಗತ್ತಿಸಿ ನೀರು ಗೊಬ್ಬರ ಕೊಟ್ಟು ತುಂಡುಕಾಂಡ ಚಿಗುರಿ ಬೇರುಬಿಡುವಂತೆ ಮಾಡುತ್ತಾರೆ. ವಿಧವಿಧವಾದ ಸೇಬು, ಶಕ್ತಿಮಾನ್ ಜೋಳ, ಚಿತ್ರವಿಚಿತ್ರವರ್ಣದ ಹೂಗಿಡಗಳು – ಇವೆಲ್ಲ ಕಸಿಮಾಡುವಿಕೆಯ ಫಲಗಳೇ ಆಗಿವೆ. **(ನೋಡಿ– ಕಸಿಮಾಡುವಿಕೆ (ಸಸ್ಯಗಳಲ್ಲಿ)**

(ಎಂ.ಆರ್.ಎ.)

**ಅಬು ಪರ್ವತ :** ದಕ್ಷಿಣ ರಾಜಸ್ತಾನದ ಅಂಚಿನಲ್ಲಿ ಅಡ್ಡಲಾಗಿ ಹಬ್ಬಿರುವ ಅರಾವಳೀ ಪರ್ವತಗಳಲ್ಲಿ ಅಬು ನಗರದ ಹತ್ತಿರ ಕಾಣಬರುವ ದೊಡ್ಡ ಪರ್ವತ. ಉತ್ತರ ಅಕ್ಷಾಂಶ $24^{0}–41^{0}$; ಪೂರ್ವ ರೇಖಾಂಶ $72^{o}$ – $50^{o}$. ಪ್ರದೇಶದ ಜನಸಂಖ್ಯೆ ಸು. 47,640 (2001). ಉತ್ತರ ಅಹಮದಾಬಾದಿಗೆ 176 ಕಿಮೀ ದೂರದಲ್ಲಿದೆ. ಏಳು ಮೈಲಿ ಅಗಲವಾಗಿರುವ ಒಂದು ನದೀಕಣಿವೆ ಉಳಿದ ಬೆಟ್ಟಗಳ ಸಾಲಿನಿಂದ ಪರ್ವತವನ್ನು ಪ್ರತ್ಯೇಕಿಸಿದೆ. ಈ ಕಣಿವೆಯಲ್ಲಿ ಪಶ್ಚಿಮ ಬಾನಸ್ ಎಂಬ ನದಿ ಹರಿಯುವುದು. ಈ ಪರ್ವತ ಮೈದಾನದ ನಡುವೆ ಇರುವ ಕಡಿದಾದ ಗ್ರಾನೈಟ್ ಶಿಲಾದ್ವೀಪದಂತೆ ತೋರುವುದು. ಎತ್ತರ 1220 ಮೀ. – 1722 ಮೀ.

ಪರ್ವತದ ನೆತ್ತಿಯಲ್ಲಿ ಮತ್ತು ಪೀಠಭೂಮಿಗಳಲ್ಲಿ ವಿಶೇಷ ರೀತಿಯಲ್ಲಿ ಕೊರೆದಿರುವ ಜೈನ ಬಸದಿಗಳೂ ದೇವಾಲಯಗಳೂ ಗೋಪುರಗಳೂ ಇವೆ. ಕನಿಷ್ಠಪಕ್ಷ 2000 ವರ್ಷಗಳಿಂದಲೂ ಯಾತ್ರಾಸ್ಥಳವಾಗಿದೆ. ಮಹಾಭಾರತದಲ್ಲಿ ಇದನ್ನು ಅರ್ಬುದ ಎಂದು

ಉಲ್ಲೇಖಿಸಲಾಗಿದೆ. ಶಿಖರದ ಮೇಲುಭಾಗದಲ್ಲಿ ಒಂದು ವೃತ್ತಾಕಾರದ ಪೀಠಭೂಮಿಯಲ್ಲಿ ಗ್ರಾನೈಟ್ ಶಿಲೆಯ ಗುಹೆ ಇದೆ. ಇದರಲ್ಲಿ ಪುರಾಣಗಳಲ್ಲಿ ಹೇಳಿರುವಂತೆ ವಿಷ್ಣುವಿನ ಅವತಾರವೆನಿಸಿದ ದಾತ – ಭೃಗುವಿನ ಪಾದಗಳ ಹೆಜ್ಜೆ ಮೂಡಿದೆಯೆಂದು ನಂಬಲಾಗಿದೆ. ಈ ಶಿಖರದ ಮಧ್ಯದಲ್ಲಿ ದಿಲ್‌ವಾರಾ ಎಂಬ ಸ್ಥಳದಲ್ಲಿ ಅಮೃತಶಿಲೆಯಿಂದ ನಿರ್ಮಿಸಲಾದ ಎರಡು ಪ್ರಸಿದ್ಧ ದೇವಾಲಯಗಳಿವೆ. ಇವು ಗುಜರಾತಿನ ವಾಸ್ತುಶಿಲ್ಪವನ್ನು ತೋರಿಸುವ ಮಾದರಿಯಾಗಿವೆ. ಜೈನರ ಪ್ರಖ್ಯಾತವಾದ ಐದು ಪವಿತ್ರ ಕ್ಷೇತ್ರಗಳಲ್ಲಿ ಇದೂ ಒಂದು. ಇಲ್ಲಿ ಜೈನ ದೇವಾಲಯಗಳಲ್ಲದೆ ಜೈನ ಶಾಸನಗಳೂ ಇವೆ.

ಇತ್ತೀಚಿನವು ಎನಿಸಿದ ಎರಡು ದೇವಸ್ಥಾನಗಳಲ್ಲಿ ಒಂದಾದ ತೇಜಪಾಲ್ ದೇವಸ್ಥಾನವನ್ನು ಇಬ್ಬರು ಶ್ರೀಮಂತ ವ್ಯಾಪಾರೀ ಸಹೋದರರು (ತೇಜಪಾಲ್ ಮತ್ತು ವಸ್ತುಪಾಲ್) 1197 ಮತ್ತು 1247ರ ಮಧ್ಯಂತರದಲ್ಲಿ ಕಟ್ಟಿಸಿದರೆಂದೂ ಮತ್ತೊಂದು ಸೋಳಾಂಕ ಚಕ್ರವರ್ತಿಗಳ ಮಾಂಡಲಿಕ ವಿಮಲಷಾಹ ಎಂಬುವನಿಂದ 1032ರಲ್ಲಿ ಕಟ್ಟಿಸಲಾಯಿತೆಂದೂ ಭಾವಿಸಲಾಗಿದೆ. ಈ ದೇವಸ್ಥಾನಗಳು ಅವುಗಳ ಒಳಭಾಗದ ಗೋಪುರಗಳಲ್ಲಿ ಕೊರೆದಿರುವ ಶಿಲ್ಪಕಲೆಗೆ ಪ್ರಸಿದ್ಧವಾಗಿರುವುದಲ್ಲದೆ ಅವಕ್ಕೆ ಸರಿಸಮವಾದುವು ಇನ್ನೊಂದಿಲ್ಲ ಎನಿಸಿವೆ. ಇವು ಜೈನರ ವಾಸ್ತುಶಿಲ್ಪ ಸೌಂದರ್ಯಾಭಿರುಚಿಗೂ ಪ್ರಸಿದ್ಧವಾಗಿವೆ. ವಿಮಲಷಾಹ ದೇವಸ್ಥಾನದ ಪ್ರಾಮುಖ್ಯವೆಂದರೆ ಗರ್ಭಗುಡಿಯಲ್ಲಿ ಪ್ರತಿಷ್ಠಿಸಿರುವ ಜೈನರ 23ನೆಯ ತೀರ್ಥಂಕರ ಪಾರ್ಶ್ವನಾಥ ವಿಗ್ರಹದ ಮೇಲೆ ಗವಾಕ್ಷದಿಂದ ಬೀಳುವ ಬೆಳಕು. ಈ ದೇವಸ್ಥಾನದ ಮೇಲಿರುವ ಮುಖಮಂಟಪ 48 ಸಾಲಂಕೃತ ಸಾಲುಗಂಬಗಳ ಮೇಲಿದೆ. ದೇವಸ್ಥಾನ ದೀರ್ಘಚತುರಸ್ರಾಕೃತಿಯಲ್ಲಿದ್ದು (42.7ಮೀ ಉದ್ದ ಮತ್ತು 24.4 ಮೀ ಅಗಲ) ಅದರ ಸುತ್ತಳತೆಯಲ್ಲಿ 52 ಗರ್ಭಗುಡಿಗಳಿವೆ. ಪ್ರತಿ ಗುಡಿಯಲ್ಲೂ ಪಾರ್ಶ್ವನಾಥನ ವಿಗ್ರಹವಿದೆ. ಹೊರನೋಟಕ್ಕೆ ಈ ದೇವಾಲಯಗಳು ಸಾಧಾರಣವಾಗಿ ಕಾಣುತ್ತವೆ. ಆದರೆ ಒಳಭಾಗದಲ್ಲಿನ ಕಂಬಗಳು, ಕಮಾನುಗಳು, ದುಂಡು ಗುಮ್ಮಟ, ಮೂರ್ತಿಗಳು, ಕುಸುರಿ ಕೆತ್ತನೆಯ ಮೋಹಕ ಕೃತಿಗಳು – ಇವುಗಳಿಗೆ ಜಗತ್ಪ್ರಸಿದ್ಧವಾಗಿವೆ. ಆ ಮಂದಿರಗಳಲ್ಲಿ ಅಮೃತಶಿಲೆಯಲ್ಲಿ ಮಾಡಿರುವ ಕೆತ್ತನೆಯ ಕೆಲಸವನ್ನು ಕಾಗದದ ಮೇಲೆ ಚಿತ್ರಿಸಲು ಕೂಡ ತಾನು ಅಸಮರ್ಥನಾಗಿರುವುದಾಗಿಯೂ ಅಲ್ಲಿಯ ಕಲೆ ಅಷ್ಟು ಸೂಕ್ಷ್ಮವಾಗಿಯೂ ಚೆಲುವಾಗಿಯೂ ಇದೆ ಎಂದೂ ಫರ್ಗ್ಯೂಸನ್ ಬೆರಗಾಗಿ ಹೇಳಿದ್ದಾನೆ. ಐತಿಹ್ಯದ ಪ್ರಕಾರ ಈ ಶಿಖರದ ಸುತ್ತಲೂ ಇದ್ದ ಅಗ್ನಿಕುಂಡದಿಂದ ಅಗನಿಕುಲ ಸಂಭೂತರಾದ ರಜಪೂತರು ಉದ್ಭವಿಸಿದರೆಂಬ ಪ್ರತೀತಿಯಿದೆ. ಇದು ಪ್ರಾಯಶಃ ರಜಪೂತವಂಶದ ಪಾವಿತ್ರ್ಯ, ಶುದ್ಧಚಾರಿತ್ರ್ಯ ಹಾಗೂ ವರ್ಣಸಂಕರ ನಿಷೇಧವನ್ನು ಹೇಳಲು ಉಲ್ಲೇಖಿಸಿರಬಹುದು. ಮಹಾಭಾರತ, ಪುರಾಣಗಳಲ್ಲಿ ವಸಿಷ್ಠ ಮುನಿಯ ಆಶ್ರಮ ಇಲ್ಲಿ ಇದ್ದಂತೆ ಹೇಳಿದೆ. ವಿಶ್ವಾಮಿತ್ರ ಕಾಮಧೇನುವನ್ನು ಅಪಹರಿಸಲು ಹೂಡಿದ ಕುತಂತ್ರವನ್ನು ನಿವಾರಿಸಲು ವಸಿಷ್ಠ ತನ್ನ ಯಜ್ಞಕುಂಡದಿಂದ ಪರಮಾರನೆಂಬ ವೀರನನ್ನು ಸೃಜಿಸಿದನೆಂದೂ ಈತನೇ ರಜಪೂತವಂಶದ ಪೂರ್ವಜನೆಂದೂ ಐತಿಹ್ಯವಿದೆ.

ಅಬು ಬಹುಮಟ್ಟಿಗೆ ಪರ್ವತಧಾಮವೆನಿಸಿದ್ದರೂ ಜೈನರ ಮುಖ್ಯ ಯಾತ್ರಾಸ್ಥಳ ಹಾಗೂ ರಾಜಸ್ಥಾನದ ಬೇಸಗೆಯ ರಾಜಧಾನಿಯಾಗಿದೆ. ಸರಾಸರಿ ಉಷ್ಣಾಂಶ $21^0$ ಸೆಂ.ನಷ್ಟಿರುತ್ತದೆ. ಏಪ್ರಿಲ್ ತಿಂಗಳಿನಲ್ಲಿ $32^0$ ಸೆಂ. ವರೆಗೂ ಹೆಚ್ಚುತ್ತದೆ. ಇಲ್ಲಿನ ವಾರ್ಷಿಕ ಮಳೆ ಪ್ರಮಾಣ 175 ಸೆಂಮೀ. ಪ್ರಸ್ತುತ ಬ್ರಹ್ಮಕುಮಾರಿ ಸಮಾಜದ ಕೇಂದ್ರಸ್ಥಾನವಾಗಿದೆ.

(ಎಸ್.ಎಂ.ಎ.; ಎಸ್.ಎನ್.; ಪಿ.ಬಿ.ಡಿ.; ಬಿ.ಜಿ.)

**ಅಬುಬಕರ್ :** ಮಹಮ್ಮದ್ ಪೈಗಂಬರನ ಮೊದಲನೆಯ ಅನುಯಾಯಿ, ಉತ್ತರಾಧಿಕಾರಿ. ಧರ್ಮದನಿಷ್ಠೆ, ಪ್ರಜ್ಞೆ, ಆತ್ಮತ್ಯಾಗಗಳು ಈತನ ಅದ್ವಿತೀಯ ಗುಣಗಳು. ಪೈಗಂಬರನಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟಿದ್ದು ಆತನ ಆಜೀವ ಮಿತ್ರನಾಗಿದ್ದ. ಇವನ ಸಹಾಯವಿಲ್ಲದಿದ್ದ ಪಕ್ಷದಲ್ಲಿ ಮಹಮ್ಮದ್ ಮೆಕ್ಕದಿಂದ ಮದೀನಕ್ಕೆ ತಪ್ಪಿಸಿಕೊಂಡು ಹೋಗಲು ಸಾಧ್ಯವಿರಲಿಲ್ಲ. ಶ್ರೀಮಂತವರ್ತಕನಾದ ಈತ ತನ್ನ ಸರ್ವಸ್ವವನ್ನೂ ಜನಸಾಮಾನ್ಯರ ಹಿತಕ್ಕಾಗಿ ತ್ಯಾಗಮಾಡಲು ಹಿಂಜರಿಯಲಿಲ್ಲ. ಪೈಗಂಬರನ ಅನುಯಾಯಿಯಾಗುವ ಮೊದಲು ಖೊರೈಷ್ ಬುಡಕಟ್ಟಿನ ಜನರ ಮುಖ್ಯ ನ್ಯಾಯಾಧೀಶರಲ್ಲಿ ಒಬ್ಬನಾಗಿದ್ದ. ಮೆಕ್ಕದ ಜನ ಈತನ ಸದ್ಗುಣಗಳಿಗೆ ಮಾರುಹೋಗಿ ಸತ್ಯವಾದಿ ಎಂದು ಕರೆಯುತ್ತಿದ್ದರು. ತನ್ನ ಮಗಳಾದ ಅಮೀಷಳನ್ನು ಪೈಗಂಬರನಿಗೆ ಮದುವೆ ಮಾಡಿಕೊಟ್ಟಿದ್ದ. ಪ್ರವಾದಿಯ ಮರಣಾನಂತರ ಅರಬ್ಬಿಗಳು ಅತ್ಯಂತ ಉತ್ಸಾಹದಿಂದ ಈತನನ್ನೇ ಕಲೀಫನನ್ನಾಗಿ ಆರಿಸಿಕೊಂಡರು. ಈತನ ಕಾಲದಲ್ಲಿ ಇರಾಕ್ ಮತ್ತು ಇರಾನ್ ದೇಶಗಳಲ್ಲಿ ಇಸ್ಲಾಂ ಧರ್ಮ ವ್ಯಾಪಿಸಿತು. ತನ್ನ ಅಧಿಕಾರಾವಧಿಯ ಮೊದಲ ಆರು ತಿಂಗಳಕಾಲ ತನ್ನ ಹೆಂಡತಿ ಹಬೀಬಳೊಡನೆ ವಾಸವಾಗಿದ್ದು ಅಲ್–ಸುನಾಹ್ ಗ್ರಾಮದಿಂದ ರಾಜಧಾನಿಯಾದ ಮದೀನಕ್ಕೆ ನಡೆದೇ ಬರುತ್ತಿದ್ದ. ರಾಜ್ಯದ ಆಡಳಿತವನ್ನು ಪೈಗಂಬರನ ಮಸೀದಿಯಿಂದಲೇ ನಿರ್ವಹಿಸುತ್ತಿದ್ದ. ಅಲ್ಲದೆ ಕಲೀಫನಾಗಿ ಆಡಳಿತ ನಡೆಸುತ್ತಿದ್ದಾಗ ತನ್ನ ಸ್ವಂತಕ್ಕೆಂದು ಯಾವ ವಿಧವಾದ ಅನುಕೂಲಗಳನ್ನೂ ಪಡೆಯಲಿಲ್ಲ. ಪ್ರಜೆಗಳ ಹಿತಕ್ಕಾಗಿ ರಾಜ್ಯದ ಏಳಿಗೆಗಾಗಿ ಸರ್ವಶಕ್ತಿಯನ್ನೂ ವಿನಿಯೋಗಿಸಿದ. ಸರಳ ಸ್ವಭಾವದಿಂದಲೂ ದಕ್ಷತೆಯಿಂದಲೂ ಜನರ ಅಪಾರ ಮೆಚ್ಚುಗೆಯನ್ನು ಗಳಿಸಿದ್ದ. ಗಾದಿಗೆ ಬರುವಾಗಲೇ ವಯೋವೃದ್ಧನಾಗಿದ್ದ ಈತ ಎರಡು ವರ್ಷಗಳ ಕಾಲ (732–34) ಆಡಳಿತ ನಡೆಸಿ ಮರಣ ಹೊಂದಿದ.

(ಬಿ.ಎಸ್.ಎ.)

**ಅಬುಲ್ ಅಲಾ ಅಲ್–ಮ ಅರ್‍ರಿ :** 973–1057. ಶ್ರೇಷ್ಠ ಅರಬ್ಬೀ ಕವಿ, ಚಿಂತಕ, ಸಾಹಿತಿ. ಪೂರ್ತಿ ಹೆಸರು ಅಬುಲ್ ಅಲಾ ಅಹಮದ್ ಬಿನ್ ಅಬ್ದುಲ್ಲಾ ಬಿನ್ ಸುಲೈಮಾನ್ ಅಲ್ ಮ ಅರ್‍ರಿ. ಉತ್ತರ ಸಿರಿಯದ ಮ ಅರ್‍ರತುನ್ ನು ಮಾನ್‌ನಲ್ಲಿ ಜನಿಸಿದ. ಸಿಡುಬಿನ ಪ್ರಕೋಪಕ್ಕೆ ಒಳಗಾಗಿ ತನ್ನ ನಾಲ್ಕನೆಯ ವಯಸ್ಸಿನಲ್ಲೇ ಕುರುಡನಾದ. ತಂದೆಯಿಂದ ಪರಂಪರಾಗತ ವಿಜ್ಞಾನ ಮತ್ತು ಕಲೆಗಳ ಶಿಕ್ಷಣವನ್ನು ಪಡೆದು ದೊಡ್ಡ ವಿದ್ವಾಂಸನಾದ. ಚಿಕ್ಕ ವಯಸ್ಸಿನಲ್ಲೇ ಅರಬ್ಬೀ ಕವನಗಳನ್ನು ರಚಿಸಿದ. ಬಾಗ್ದಾದಿನಲ್ಲಿ ಇದ್ದ ಎರಡು ವರ್ಷಗಳಲ್ಲಿ ಅನೇಕ ಸಾಹಿತಿಗಳ, ವಿದ್ವಾಂಸರ ಪರಿಚಯ ಮಾಡಿಕೊಂಡ. ಆದರೆ ಅಲ್ಲಿ ಅವನ ಹೊಸ ಸಂಪ್ರದಾಯದ ಕಾವ್ಯ ಕಟುಟೀಕೆಗೆ ಗುರಿಯಾದ್ದರಿಂದ ಹುಟ್ಟೂರಿಗೆ ಹಿಂದಿರುಗಿದ. ಕುರುಡು, ಅಸಂಪನ್ನತೆ, ತಾನು ಹತ್ತಿರ ಇಲ್ಲದಿರುವಾಗ ತನ್ನ ಪ್ರೀತಿಯ ತಾಯಿಯನ್ನು ಕಳೆದುಕೊಂಡುದು, ವಿರೋಧಿಗಳ ಕಿರುಕುಳ–ಇವು ಈತನ ಬಾಳಿನ ರೀತಿಯನ್ನು ಬದಲಾಯಿಸಿದುವು. ಉಳಿದ 46 ವರ್ಷಗಳನ್ನು ಬರವಣಿಗೆಯಲ್ಲೂ ತನ್ನ ಹತ್ತಿರ ಶಿಕ್ಷಣವನ್ನು ಪಡೆಯಲು ಬರುತ್ತಿದ್ದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವುದರಲ್ಲೂ ಕಳೆದ. ಸಮಕಾಲೀನ ಲೇಖಕರು ಈತನ ವಿದ್ವತ್ತಿನ ಪ್ರಯೋಜನವನ್ನು ಪಡೆಯಲು ಈತನೊಡನೆ ಪತ್ರವ್ಯವಹಾರ ನಡೆಸುತ್ತಿದ್ದರು. ಈತ ಕಟುವಾದ ಶಾಕಾಹಾರಿಯಾಗಿ ಮೊಟ್ಟೆ ಹಾಲು ಎರಡನ್ನೂ ತ್ಯಜಿಸಿದ. ಉತ್ಕೃಷ್ಟ ನೀತಿಪರನಾದ ಈತ ಉಪವಾಸ, ಪ್ರಾರ್ಥನೆಗಳೊಡನೆ ಇನ್ನೂ ಹೆಚ್ಚಿನ ಧರ್ಮನಿಷ್ಠೆ, ವಿಧಿನಿಯಮಗಳು ಇರಬೇಕೆಂದು ಉಪದೇಶಿಸಿದ್ದಾನೆ.

ಅಬುಲ್ ಅಲಾ ಸಂಪೂರ್ಣ ಮಾನವ ಜೀವನವನ್ನೇ ತನ್ನ ಕಾವ್ಯವಸ್ತುವಾಗಿ ತೆಗೆದುಕೊಳ್ಳುತ್ತಾನೆ. ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಕುರಿತು ಚಿಂತನೆ ಮಾಡುತ್ತಾನೆ. ತನ್ನ ಕೃತಿಗಳಲ್ಲಿ ಈತ ಬಹಳ ನಿರ್ಭೀತನಾಗೂ ಸ್ವತಂತ್ರ ಚಿಂತಕನಾಗೂ ಕಂಡುಬರುತ್ತಾನೆ. ಸಾಂಪ್ರದಾಯಿಕ ವಿಚಾರದ ಮೂಲವನ್ನೇ ಅಲ್ಲಾಡಿಸಿ ಬಿಡುತ್ತಾನೆ. ಅಷ್ಟೇ ಅಲ್ಲ ಅವುಗಳನ್ನು ಪರಿಹಾಸ್ಯ ಮಾಡುತ್ತಾನೆ.

ಇವನವೆಂದು ಹೇಳಲಾದ 60 ಕೃತಿಗಳಲ್ಲಿ ಸಕ್ತುಲ್‌ಜನದ, ಲುಜೂಮಿಯಾತ್ ಬಹಳ ಪ್ರಸಿದ್ಧವಾಗಿವೆ. ಇವನ ಇನ್ನೊಂದು ಕೃತಿ ರಿಸಾಲತುಲ್ ಗುಫರಾನ್ ದಾಂತೆಯ ಡಿವೈನ್ ಕಾಮೆಡಿಯ ಮೇಲೆ ಪ್ರಭಾವ ಬೀರಿದೆಯೆಂದು ಪಾಶ್ಚಾತ್ಯ ವಿಮರ್ಶಕರ ಮತ. ಈತ ಪವಿತ್ರ ಕುರಾನನ್ನು ಅನುಕರಿಸಿ ಅಲ್ ಫುಸೂಲು ವಲ್ ಗಾಯಾತ್ ಎನ್ನುವ ಕೃತಿಯನ್ನು ರಮಣೀಯವಾದ ಗದ್ಯದಲ್ಲಿ ಬರೆದಿದ್ದಾನೆ. (ಎಂ.ಎಂ.ಎಚ್.)

**ಅಬುಲ್ ಫಜ಼ಲ್ :** 1551–1602. ಮೊಗಲ್ ಚಕ್ರವರ್ತಿ ಅಕ್ಬರನ ಆಸ್ಥಾನದಲ್ಲಿದ್ದ ವಿದ್ವಾಂಸರಲ್ಲಿ ಪ್ರಸಿದ್ಧ. ಪಾರಸಿ ಭಾಷಾಪಾರಂಗತ. ಶೇಖ್ ಮುಬಾರಕನೆಂಬ ಸೂಫಿ ತತ್ತ್ವಜ್ಞನ ಮಗ. ಇವನ ಅಣ್ಣ ಅಬುಲ್ ಫೈಜಿ. ಇವರು ಅಕ್ಬರನ ಆಪ್ತ ಗೆಳೆಯರಾಗಿದ್ದು ಆತನಿಗೆ ಸಾಹಿತ್ಯ ಸಂಸ್ಕೃತಿಗಳ ವಿಕಾಸಕಾರ್ಯದಲ್ಲಿ ಸಂಪೂರ್ಣ ಸಹಾಯಕರಾಗಿದ್ದರು. ಇವರಲ್ಲಿ ಅಬುಲ್ ಫಜ಼ಲ್ ಅಕ್ಬರನ ಬಲಗೈಯಾಗಿದ್ದ. ಈತ ಪಾರಸಿ ಭಾಷೆಯಲ್ಲಿ ಐನ್ ಎ ಅಕ್ಬರಿ, ಅಕ್ಬರನಾಮ ಮೊದಲಾದ ಶ್ರೇಷ್ಠ ಗ್ರಂಥಗಳನ್ನು ರಚಿಸಿ ಪಂಡಿತರ ಮೆಚ್ಚುಗೆಗೆ ಪಾತ್ರನಾಗಿದ್ದ. ಈತ ಕವಿಯೂ ನಿಬಂಧಕಾರನೂ ವಿಮರ್ಶಕನೂ ಇತಿಹಾಸತಜ್ಞನೂ ಆಗಿದ್ದ. ಸೂಫಿ ತತ್ತ್ವದಲ್ಲಿ ಆಸಕ್ತನಾಗಿದ್ದರಿಂದ ಸತ್ಯಾನ್ವೇಷಿಯೂ ಸತ್ಯಸಂಧನೂ ಆಗಿದ್ದ. ಈತನ ಬರೆಹಗಳು ಸಹಜ, ಸುಂದರ, ನೈಜ. ಅಕ್ಬರನ ಖಡ್ಗಕ್ಕೆ ನಾನು ಅಂಜುವುದಿಲ್ಲ. ಆದರೆ ಅಬುಲ್ ಫಜ಼ಲ್‌ನ ಲೇಖನಿಗೆ ಮಾತ್ರ ಅಂಜುತ್ತೇನೆ ಎಂಬುದಾಗಿ ವಿದ್ವಾಂಸ ಅಬ್ದುಲ್ಲಾ ಉಜ್‌ಬೇಗ್‌ನ ಉದ್ಗಾರ ಒಪ್ಪತಕ್ಕದ್ದಾಗಿದೆ.

ದೀನ್ ಇಲಾಹಿ ಎಂಬ ನವಮತ ಸ್ಥಾಪನಾಕಾರ್ಯದಲ್ಲಿ ಅಬುಲ್ ಫಜ಼ಲ್ ಅಕ್ಬರನಿಗೆ ನೆರವಾದ. ಆ ನೂತನ ಧರ್ಮದ ಪ್ರಸಾರಕಾರ್ಯವನ್ನು ಕೈಗೊಂಡ. ಅಕ್ಬರನ ಆಪ್ತಗೆಳೆಯನಾಗಿದ್ದ. ಈತನನ್ನು ರಾಜಪುತ್ರ ಸಲೀಮ ಕೊಲ್ಲಿಸಿದ್ದು (1602) ಅಕ್ಬರನಿಗೆ ವಜ್ರಾಘಾತವಾಯಿತು. "ಸಲೀಮ ಚಕ್ರವರ್ತಿಯಾಗಲು ಇಚ್ಛಿಸಿದ್ದರೆ, ಆತ ನನ್ನನ್ನೇ ಕೊಂದು ಅಬುಲ್ ಫಜ಼ಲನನ್ನು ಉಳಿಸಬಹುದಾಗಿತ್ತು!" ಎಂದು ಅಕ್ಬರ್ ನೊಂದುಕೊಳ್ಳುವಂತಾಯಿತು. **ನೋಡಿ– ಅಕ್ಬರ್‌ನಾಮ.** (ಎಸ್.ಎಂ.ಎಚ್.)

**ಅಬುಲ್ ಫೈಜಿ :** ಅಕ್ಬರನ ಆಸ್ಥಾನದಲ್ಲಿದ್ದ ಪ್ರಸಿದ್ಧ ಪರ್ಷಿಯನ್ ಕವಿ. ಇವನಿಗೆ ಕವಿಚಕ್ರವರ್ತಿ ಎಂಬ ಬಿರುದು ಇತ್ತು. ಅರಬ್ಬೀ ಸಾಹಿತ್ಯದಲ್ಲೂ ಈತನಿಗೆ ಆಳವಾದ ಅಭ್ಯಾಸವಿತ್ತು. ಆಜನ್ಮ ಕವಿಯಾಗಿದ್ದ ಇವನಿಗೆ ಪದ್ಯಕಲೆ, ಕವಿತಾಶಕ್ತಿಗಳು ಕರಗತವಾಗಿದ್ದುವು. ವೈದ್ಯಶಾಸ್ತ್ರ ಪರಿಚಯವೂ ಇದ್ದುದರಿಂದ ಬಡಬಗ್ಗರಿಗೆ ಔಷಧೋಪಚಾರವನ್ನು ಉಚಿತವಾಗಿ ನೀಡುತ್ತಿದ್ದ. ಇವನ ತಮ್ಮ ಪ್ರಸಿದ್ಧ ವಿದ್ವಾಂಸನಾದ ಅಬುಲ್ ಫಜ಼ಲ್.

ಪದ್ಯದಲ್ಲಿ ಈತ ಪವಿತ್ರ ಭಾವನೆಗಳನ್ನೂ ಉದಾತ್ತ ವಿಚಾರಗಳನ್ನೂ ತನ್ನ ಸ್ವತಂತ್ರ ಸುಂದರಶೈಲಿಯಲ್ಲಿ ಹೇಳಿದ್ದಾನೆ. ದೀನ್ ಇಲಾಹಿ ಎಂಬ ನೂತನ ಧರ್ಮದ ರಚನೆಯಲ್ಲಿ ಅಕ್ಬರನಿಗೆ ಸಹಾಯಕನಾದ. ಖುತ್ಬಾ ಎಂಬ ಪ್ರಾರ್ಥನೆಯನ್ನು ಫೈಜಿಯೇ ರಚಿಸಿದ. ಭಾಸ್ಕರಾಚಾರ್ಯ ಬರೆದ ಲೀಲಾವತಿ ಎಂಬ ಸಂಸ್ಕೃತ ಗಣಿತಗ್ರಂಥವನ್ನೂ ಭಗವದ್ಗೀತೆಯನ್ನೂ ಪಾರಸಿಭಾಷೆಗೆ ಈತ ಪರಿವರ್ತಿಸಿದುದು ಗಮನಾರ್ಹವಾದ ಅಂಶ. **(ಎಸ್.ಎಂ.ಎಚ್.)**

**ಅಬು ಸಿಂಬೆಲ್ :** ಎರಡನೆಯ ರ್‍ಯಾಮ್ಸೆಸ್ ದೊರೆಯ (ಪ್ರ.ಶ.ಪೂ.ಸು.13ನೆಯ ಶತಮಾನ) ದೇವಾಲಯ ಸಮೂಹ ಇರುವ ಸ್ಥಳ. ಈಜಿಪ್ಟಿನ ಆಸ್ವಾನ್ ಪ್ರಾಂತದಲ್ಲಿ (ಪ್ರಾಚೀನ ನುಬಿಯ) ನೈಲ್ ನದೀತೀರದಲ್ಲಿದೆ. ಮರಳುಗಲ್ಲಿನ ಹೆಬ್ಬಂಡೆಗಳನ್ನು ಕೊರೆದು ಈ ದೇವಾಲಯಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಎರಡು ಸುಪ್ರಸಿದ್ಧವಾದುವು. ದೊಡ್ಡ ದೇವಾಲಯದ ಮುಂಭಾಗದಲ್ಲಿ ದೊರೆಯ ನಾಲ್ಕು ಬೃಹತ್ ವಿಗ್ರಹಗಳನ್ನು ಬಾಗಿಲ ಇಕ್ಕೆಡೆಗಳಲ್ಲೂ ಎರಡೆರಡರಂತೆ ಕಡೆದಿದ್ದಾರೆ. ಕುಳಿತಿರುವ ಈ ಒಂದೊಂದು ವಿಗ್ರಹದ ಎತ್ತರ 20ಮೀ. ತೂಕ 1,200ಟನ್. ಮುಂದೆ ಈ ವಲಯಕ್ಕೆ ದಾಳಿಯಿಟ್ಟ ಗ್ರೀಕ್, ಕಾರಿಯನ್ ಮತ್ತು ಫೊನೀಶಿಯನ್ ಯೋಧರು ಇವುಗಳ ಕಾಲುಗಳ ಮೇಲೆ ಮತ್ತು ಸಮೀಪದಲ್ಲಿ ತಮ್ಮ ಹೆಸರುಗಳನ್ನು ಸ್ವಂತ ಲಿಪಿಗಳಲ್ಲಿ ಕೆತ್ತಿದ್ದಾರೆ. ಇವು (ವಿಶೇಷವಾಗಿ ಫೊನೀಶಿಯನ್) ಆಯಾ ಲಿಪಿಗಳ ಬಳಕೆಯ ಬಗ್ಗೆ ಅತ್ಯಂತ ಪ್ರಾಚೀನ ಕುರುಹುಗಳು.

ಈ ದೇವಾಲಯಗಳ ನಿರ್ಮಾಣಕಾಲ 3200 ವರ್ಷಗಳಿಗಿಂತಲೂ ಹಿಂದೆ. ಈಜಿಪ್ಟಿನ ದೇವಾಂಶ ಸಂಭೂತರಾದ ಎರಡನೆಯ ರ್‍ಯಾಮ್ಸೆಸ್, ಅವನ ಪ್ರಿಯಪತ್ನಿ ಮಹಾರಾಣಿ ನೆಫೆರ್ತಾರಿ ಇವರ ಯಶಸ್ಸು, ವೈಭವಗಳ ಸಂಕೇತಸ್ಮಾರಕಗಳಿವು. ದೊಡ್ಡ ದೇವಾಲಯದ ಪ್ರವೇಶದ್ವಾರದಲ್ಲಿ ಕುಳಿತಿರುವ ರ್‍ಯಾಮ್ಸೆಸ್‌ನ ನಾಲ್ಕು ವಿಗ್ರಹಗಳಲ್ಲಿ ಒಂದರ ಮೇಲು ಭಾಗ ತುಂಡಾಗಿ ಕೆಳಗೆ ಬಿದ್ದಿದೆ. ಇದರ ಗರ್ಭಗುಡಿಯಲ್ಲಿರುವ ಶಿಲಾವಿಗ್ರಹಗಳ ಮೇಲೆ ವರ್ಷದಲ್ಲಿ ಎರಡು ಸಲ ಉದಯರವಿ ಕಿರಣಗಳು ನೇರವಾಗಿ ಬೀಳುವಂತೆ ರಚನೆಯ ಏರ್ಪಾಡು. ದೇವಾಲಯ ಸೂರ್ಯನಿವೇದಿತವಾದರೂ ರಾಜನನ್ನೇ ದೇವತ್ವದ ಪಟ್ಟಕ್ಕೇರಿಸಿರುವುದು ಇಲ್ಲಿ ಕಾಣುತ್ತದೆ. ಸಮೀಪದ ಸಣ್ಣ ದೇವಾಲಯ ರಾಣಿಯ ಗೌರವಾರ್ಥ ಸ್ಮಾರಕ. ಇದರ ನುಗ್ಗು ಬಾಗಿಲಿನಲ್ಲಿ ರಾಜರಾಣಿಯರ ಆರು ಪ್ರತಿಮೆಗಳು ಒತ್ತಟ್ಟಿಗೆ ನಿಂತಿವೆ. ರ್‍ಯಾಮ್ಸೆಸ್ ಇನ್ನೂ ಆರು ದೇವಾಲಯಗಳನ್ನು ನುಬಿಯದಲ್ಲಿ ಹೆಬ್ಬಂಡೆಗಳಲ್ಲಿ ಕಂಡರಿಸಿದ್ದಾನೆ. ಅಬು ಸಿಂಬೆಲ್ ಕಲೆ ಮತ್ತು ತಾಂತ್ರಿಕ ವಿಜ್ಞಾನಗಳ ಅಪೂರ್ವ ಮೇಳ.

ರ್‍ಯಾಮ್ಸೆಸ್‌ನ ಮರಣಾನಂತರ ದೇವಾಲಯಗಳು ಕ್ರಮೇಣ ಮಾಸಲಾರಂಭಿಸಿದುವು. ಪಶ್ಚಿಮ ಮರುಭೂಮಿಯ ಮರಳ ಕಣಗಳ ನಿರಂತರ ಹೊಯ್ಲು, ಮುಂದಿನ ಪೀಳಿಗೆಯವರ ಅನಾಸ್ಥೆ ಈ ಕಾರಣಗಳಿಂದ ಅಬು ಸಿಂಬೆಲ್ ಭೌತಿಕವಾಗಿಯೂ ಮುಚ್ಚಿಹೋಗತೊಡಗಿತು. ಅಬು ಸಿಂಬೆಲ್ ವಿಚಾರ ಪ್ರ.ಶ.ಪೂ. 6ನೆಯ ಶತಮಾನದವರೆಗೆ ಸಾಕ್ಷಿ ದೊರೆಯುತ್ತದೆ. ಮುಂದೆ ಚಿರನಿದ್ರೆಗೀಡಾದ ಈ ವೈಭವದ ಪುನರ್ದರ್ಶನವಾದದ್ದು ಪ್ರ.ಶ. 1813ರಲ್ಲಿ ಸುಮಾರು 2300 ವರ್ಷಗಳ ಅನಂತರ. ಜಾನ್ ಲೆವಿಸ್ ಬುರ್ಖಾಡೆ ಎಂಬ ವಿದೇಶಿಯಾತ್ರಿಕ ಅಬು ಸಿಂಬೆಲ್ ಐತಿಹ್ಯಗಳಿಂದ ಆಕರ್ಷಿತನಾಗಿ ನುಬಿಯದಲ್ಲಿ ಅಲೆಯುತ್ತಿದ್ದಾಗ ಕಂಡದ್ದು ಮರಳ ಗುಡ್ಡದ ಮೇಲೆ ಚಾಚಿದ್ದ ಎರಡು ತಲೆಗಳನ್ನು. ಆ ವಿಗ್ರಹಗಳು ಕುಳಿತಿವೆಯೇ ಅಥವಾ ನಿಂತಿವೆಯೇ ಎಂದು ಅವನಿಗೆ ತೀರ್ಮಾನಿಸಲಾಗಲಿಲ್ಲ. ಮುಂದಿನ ದಿಟ್ಟ ಹೆಜ್ಜೆ ಇಟ್ಟ ಕೀರ್ತಿ ಇಟಲಿಯ ಪ್ರವಾಸಿ ಜಿ.ಬಿ. ಬೆಲ್ಜೋನಿಯದು (1817). ಶತಮಾನಗಳು ಹರಡಿದ್ದ ಮರಳರಾಶಿಯನ್ನು ಆತ ತೆಗೆದು ದೇವಾಲಯಪ್ರವೇಶ ಮಾಡಿದ. ಅದರೊಳಗಿನ ಅದ್ಭುತ ಕಲಾಪ್ರೌಢಿಮೆ, ಭವ್ಯ ವಾಸ್ತುಶಿಲ್ಪ ಇವುಗಳಿಗೆ ಮಾರುಹೋದ. ಈ ರೀತಿ ಆಧುನಿಕ ಜಗತ್ತು ಅಬು ಸಿಂಬೆಲ್‌ನ ಪುನರ್ದರ್ಶನ ಮಾಡಿತು.

**ಸ್ಥಳಾಂತರ :** ಈಜಿಪ್ಟ್ ದೇಶದ ಮಹಾಭಿಧಮನಿ ಎಂದು ಪ್ರಸಿದ್ಧವಾಗಿರುವ ನೈಲ್‌ನದಿಗೆ ಆಸ್ವಾನ್ ಪ್ರಾಂತದಲ್ಲಿ ಅದೇ ಹೆಸರಿನಿಂದ ಒಂದು ದೊಡ್ಡ ಅಣೆಕಟ್ಟು ಕಟ್ಟಲು ಸರ್ಕಾರ ನಿರ್ಧರಿಸಿತು. ಬೆಂಗಾಡಿನ ದುಃಖಕ್ಕೆ ನೀರು ಸರಬರಾಜು ಮಾಡಿ ಅದರಲ್ಲಿ ಹಸುರುನಗು ತರಿಸುವ ಉಪಾಯ ಇದೊಂದೇ. ಆದರೆ ಇದರಿಂದ ಶೇಖರಣೆಯಾಗುವ ನೀರಿನ ರಾಶಿ ಅಬು ಸಿಂಬೆಲನ್ನು ಮುಳುಗಿಸುವುದು ಎಂದು ತಿಳಿಯಿತು. 1960ರಲ್ಲಿ ಈಜಿಪ್ಟ್ ಮತ್ತು ಸೂಡಾನ್ ಸರ್ಕಾರಗಳು ಯುನೆಸ್ಕೋಗೆ (ಯುನೈಟೆಡ್ ನೇಷನ್ಸ್ ಎಜ್ಯುಕೇಷನಲ್, ಸೈಂಟಿಫಿಕ್ ಆಂಡ್ ಕಲ್ಚರಲ್ ಆರ್ಗನೈಸೇಷನ್) ಅಬು ಸಿಂಬೆಲನ್ನು ಹೇಗಾದರೂ ರಕ್ಷಿಸಬೇಕು ಎಂದು ಮನವಿ ಸಲ್ಲಿಸಿದುವು. ಸಮಸ್ಯೆಯ ಗಭೀರತೆಯನ್ನು ಗಮನಿಸಿದ ಯುನೆಸ್ಕೊ ಅದರ ಪರಿಹಾರಕ್ಕಾಗಿ ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ಕರೆನೀಡಿತು. ಇದರ ಫಲ ಅಬು ಸಿಂಬೆಲ್ ಸ್ಥಳಾಂತರ, ಬೃಹದ್ವಾಸ್ತು ಶಿಲ್ಪರಕ್ಷಣೆಯಲ್ಲಿ ನೆರವೇರಿದ ಅದ್ವಿತೀಯ ಸಾಹಸ. ರಕ್ಷಣೆಗೆ ಬಂದ ಸೂಚನೆಗಳು ಹಲವಾರು – ಸುತ್ತಲೂ ದೊಡ್ಡ ಒಡ್ಡುಗಳನ್ನು ಕಟ್ಟಿ ದೇವಾಲಯಗಳಿಗೆ ನೀರು ಬರದಂತೆ ಮಾಡಬೇಕು; ಭಾರೀ ಪಾರದರ್ಶಕ ಕವಚದಿಂದ ದೇವಾಲಯಗಳನ್ನು ಮುಚ್ಚಿ ಒಳಗೆ ವಿದ್ಯುದ್ದೀಪಗಳನ್ನು ಉರಿಸಿ ಜಲಾಂತರ್ಗತ ಅಬು ಸಿಂಬೆಲನ್ನು ಜನರಿಗೆ ತೋರಿಸಬೇಕು; ತಳಹದಿ ಸಮೇತ ದೇವಾಲಯಗಳನ್ನು ಕಿತ್ತು ಸ್ಥಳಾಂತರಿಸಬೇಕು, ಇತ್ಯಾದಿ. ಪ್ರಾಯೋಗಿಕತೆ, ವೆಚ್ಚ, ಕಾಲಾವಕಾಶ ಈ ದೃಷ್ಟಿಯಿಂದ ಪರಿಶೀಲಿಸಿದಾಗ ಈ ಪರಿಹಾರಗಳು ಸ್ವೀಕೃತವಾಗಲಿಲ್ಲ. ಸ್ವೀಕೃತಯೋಜನೆಯ ವಿವರವಿಷ್ಟು: ಎತ್ತಿ ಸ್ಥಳಾಂತರಿಸಲು ಅನುಕೂಲಿಸುವಂತೆ ಸಮಗ್ರಶಿಲಾರಚನೆಯನ್ನೂ ಹೋಳು ಹೋಳಾಗಿ ವಿಭಾಗಿಸಲು ಬಲುದೊಡ್ಡ ನಕಾಶೆ ಸಿದ್ಧವಾಯಿತು; ಇಲ್ಲಿ ಕೃತಿಗಳಿಗೆ ಇನಿತೂ ಊನ ಬರಬಾರದು; ಇದರ ಪ್ರಕಾರ ಬೆಟ್ಟದ ಮೇಲುಭಾಗದಿಂದ ಗರಗಸ ಕೊಯ್ತದ ಆರಂಭ;



**2ನೆಯ ರ್‍ಯಾಮ್ಸೆಸನ ಪ್ರತಿಮಾಗೃಹ**

ನಕಾಶೆ ವಿಧಿಸಿರುವ ಗೆರೆಗಳ ಮೇಲೆ ನಿಖರವಾಗಿ ಗರಗಸ ಹರಿಯಬೇಕು; ಯಾವ ಕೊಯ್ತದ ಗಾಯವೂ 6 ಮಿಮೀಗಿಂತ ಹೆಚ್ಚು ಅಗಲವಾಗಕೂಡದು; ಗರಗಸ ಹರಿಯದಲ್ಲಿ ಬಲುನಿಯಂತ್ರಿತವಾಗಿ ಅಕ್ಕಪಕ್ಕದಲ್ಲಿ ಏನೂ ಅಪಘಾತ ಸಂಭವಿಸದಂತೆ ಡೈನಮೈಟ್ ಪ್ರಯೋಗ; ಕೊಯ್ದ ಶಿಲಾಖಂಡಗಳನ್ನು ಕ್ರೇನ್ ಮುಂತಾದವುಗಳ ಸಹಾಯದಿಂದ ಮಗುವನ್ನು ಎತ್ತಿದಷ್ಟು ಹಗುರವಾಗಿ ಎಚ್ಚರಿಕೆಯಿಂದ ಸಾಗಿಸಬೇಕು; ಹೀಗೆ ಮಾಡುವಾಗ ಒಂದು ವಿಭಾಗದ ಸ್ಥಾನ ನಿರ್ದೇಶಕಗಳನ್ನು ಸೂಚಿಸುವ ಸ್ಪಷ್ಟ ಸಂಕೇತಗಳು ಅದರ ಮೇಲೆ ನಿರೂಪಿತವಾಗಿರಬೇಕು; ಈ ಕೊಯ್ತ, ಸ್ಥಳಾಂತರ ಮುಗಿದ ಮೇಲೆ ಕೆಳಗಿನಿಂದ ಮೇಲಕ್ಕೆ ಶಿಲಾಖಂಡಗಳನ್ನು ಕ್ರಮಬದ್ಧವಾಗಿ ಜೋಡಿಸಿ ಅಬು ಸಿಂಬೆಲ್ ಪುನಾರಚನೆಯನ್ನು ಪೂರ್ಣಗೊಳಿಸಬೇಕು. ಈ ಯೋಜನೆಯ ಪ್ರಕಾರ ಎರಡು ದೇವಾಲಯಗಳನ್ನು ಕೊಯ್ದು ಒಟ್ಟಿದ್ದಾಗ ಅವು 950 ವಿಭಿನ್ನ ಶಿಲಾಖಂಡಗಳ ಅಪೂರ್ವ ಮೇಳವಾಗಿದ್ದವು.

ದೇವಾಲಯಗಳ ಹೊಸ ನಿವೇಶನ ಹಳೆಯ ಸ್ಥಾನದಿಂದ ಸುಮಾರು 19ಮೀ ಎತ್ತರದಲ್ಲಿಯೂ ನದಿದಂಡೆಯಿಂದ 60ಮೀ ದೂರದಲ್ಲಿಯೂ ಇದೆ.

ರ್‍ಯಾಮ್ಸೆಸ್ ವಿಗ್ರಹದ ಮುಖದ ಖಂಡದ ಭಾರ 19 ಟನ್. 1964ರಲ್ಲಿ ಪ್ರಾರಂಭವಾದ ಈ ಪರಮ ತಾಂತ್ರಿಕ ಸಾಹಸ ಆಸ್ವಾನ್ ಜಲಾಶಯದ ಮಟ್ಟ ಏರುತ್ತಿದ್ದಂತೆ ಅನುರೂಪ ವೇಗದಿಂದ ಮುಂದುವರಿದು 1969ರ ಹೊತ್ತಿಗೆ ಪೂರ್ಣವಾಯಿತು. ಖರ್ಚು 50 ಮಿಲಿಯನ್ ಡಾಲರ್‌ಗಿಂತಲೂ ಹೆಚ್ಚು.

ಈ ಸ್ಥಳಾಂತರದಿಂದ ರ್‍ಯಾಮ್ಸೆಸ್‌ಗೆ ಆಗಿರುವ ಗಾಯಗಳನ್ನು ಗುಣಪಡಿಸಬಹುದೇ ಎಂಬ ಪ್ರಶ್ನೆಗೆ ವಾಸ್ತುಶಿಲ್ಪಜ್ಞರ ಉತ್ತರವಿದು: "ರಾಜನ ಗಾಯಗಳನ್ನು ಗುಣಪಡಿಸುತ್ತೇವೆ. ಜೋಡಣೆಗಾಯಗಳನ್ನು ಮಾಯಿಸುವುದು ಮಾತ್ರವಲ್ಲ ಮಾಯಗೊಳಿಸುವುದೂ ಸಾಧ್ಯವಿದೆ. ಆದರೆ ಇದು ಪ್ರಾಮಾಣಿಕ ಕ್ರಮವೇ?" ಉದಯರವಿ ಕಿರಣಗಳಿಂದ ಪುನಃ ನಗು ಬಿಂಬಿಸುತ್ತಿರುವ ರ್‍ಯಾಮ್ಸೆಸ್ ವಿಗ್ರಹ ನೈಲ್ ಜಲಾಶಯದ ಮಹಾವಿಸ್ತಾರದ ಚಿರಸಂಕೇತವಾಗಿದೆ.
*

**ಅಬೆ, ಎರ್ನ್‌ಸ್ಟ್ :** 1840–1905. ಜರ್ಮನಿಯ ಭೌತವಿಜ್ಞಾನಿ. ವಿದ್ಯಾಭ್ಯಾಸ ಗಟಿಂಗೆನ್ ಮತ್ತು ಯೆನ ವಿಶ್ವವಿದ್ಯಾನಿಲಯಗಳಲ್ಲಿ; ಯೆನ ಉಚ್ಚಶಾಲೆಯ ಉಪಾಧ್ಯಾಯ (1863); ಯೆನ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕ ಮತ್ತು ಅಲ್ಲಿನ ಖಗೋಳ ಮತ್ತು ಪವನಶಾಸ್ತ್ರೀಯವೇಧಶಾಲೆಗಳ ಮುಖಂಡ (1870); ಟ್ಸೈಸ್ ಕಾರ್ಖಾನೆಯ ಸಂಬಂಧ (1866); ಅದರ ಪಾಲುದಾರ (1870); ಅದರ ಮುಖ್ಯಸ್ಥ (1888) ಮತ್ತು ಸಹಕಾರಪದ್ಧತಿ ಅನುಸಾರ ಅದರ ಸುಧಾರಕ (1896); 1889ರಲ್ಲಿ ಸ್ವಂತ ಹಣದಿಂದ ಕಾರ್ಲ್‌ಟ್ಸೈಸ್ ನಿಲಯವೆಂಬ ವೈಜ್ಞಾನಿಕ ಸಂಶೋಧನಸಂಸ್ಥೆಯ ಸ್ಥಾಪಕ. ಅಬೆ ತನ್ನ ಸಂಶೋಧನೆಗಳಿಂದ ಸೂಕ್ಷ್ಮದರ್ಶಕ (ಮೈಕ್ರೊಸ್ಕೋಪ್) ಮತ್ತು ಬಿಂಬ ಗ್ರಾಹಕಗಳಲ್ಲಿ (ಕ್ಯಾಮರಾ) ಮುಖ್ಯ ಸುಧಾರಣೆಗಳನ್ನು ಮಾಡಿದುದಲ್ಲದೆ ಅವುಗಳ ತತ್ತ್ವಗಳನ್ನು ಕುರಿತು ಕೂಲಂಕಷ ಶೋಧನೆ ನಡೆಸಿದ. ಈತ ರಶ್ಮಿಭಂಗಮಾಪಕ (ರಿಫ್ರ್ಯಾಕ್ಟೋಮೀಟರ್) ಮೊದಲಾದ ಉಪಕರಣಗಳ ರಚನಕಾರ ಮತ್ತು ಹೊಸ ಬಗೆಯ ಗಾಜುಗಳ ತಯಾರಿಕೆಗಾಗಿ ಒಂದು ಕಾರ್ಖಾನೆಯ ಸ್ಥಾಪಕ. ಇವನ ಲೇಖನಸಂಕಲನ 1903–06ರ ಮಧ್ಯೆ ಪ್ರಕಟವಾಯಿತು. ಕೈಗಾರಿಕೆಯಲ್ಲಿ ವೈಜ್ಞಾನಿಕ ಸಂಶೋಧನೆಯ ಮುಖ್ಯಪಾತ್ರವನ್ನು ಜಗತ್ತಿಗೆ ತೋರಿಸಿಕೊಟ್ಟ ಕೀರ್ತಿ ಈತನಿಗೆ ಸಲ್ಲುತ್ತದೆ. (ಟಿ.ಎಸ್.ಎಸ್.)

**ಅಬೆಲ್, ಜಾನ್ ಜೇಕಬ್ :** 1857–1938. ಅಮೆರಿಕದ ಔಷಧಶಾಸ್ತ್ರಜ್ಞ, ಅಂಗಕ್ರಿಯೆಯ ರಸಾಯನ ವಿಜ್ಞಾನಿ. ನಿರ್ನಾಳದ ಗ್ರಂಥಿಗಳ ವಿಷಯಗಳ ಪರಿಣತ ಅಮೆರಿಕದ ಕ್ಲೀವ್‌ಲೆಂಡಿನ ಓಹಿಯೋದಲ್ಲಿ 1857 ಮೇ 19ರಂದು ಹುಟ್ಟಿದ. 1883ರಲ್ಲಿ ಮಿಚಿಗನ್ ವಿಶ್ವವಿದ್ಯಾಲಯದ ಪದವಿ ಶಿಕ್ಷಣ ಪಡೆದು, ಮುಂದೆ ಶರೀರಕ್ರಿಯಾಶಾಸ್ತ್ರ, ಔಷಧಶಾಸ್ತ್ರ, ರಸಾಯನಶಾಸ್ತ್ರಗಳನ್ನು ಲೀಪ್‌ಜಿಗ್‌ನಲ್ಲಿ ಅಧ್ಯಯನ ಮಾಡಿದ. ವೈದ್ಯ, ರಸಾಯನ ವಿಜ್ಞಾನ ಪದವಿಗಳನ್ನು ಯುರೋಪಿನ ವಿಶ್ವವಿದ್ಯಾನಿಲಯಗಳಲ್ಲಿ ಪಡೆದು (1888), ಮುಂದೆ 1893ರಲ್ಲಿ ಜಾನ್‌ಹಾಪ್‌ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಔಷಧಶಾಸ್ತ್ರದ ಪ್ರಾಧ್ಯಾಪಕನಾದ. ತಾನೇ ಮೊಟ್ಟ ಮೊದಲು ಸ್ಥಾಪಿಸಿ ಈಗಲೂ ಹೆಸರಾಗಿರುವ ಔಷಧಶಾಸ್ತ್ರ ಮತ್ತು ಪ್ರಾಯೋಗಿಕ ರೋಗ ಚಿಕಿತ್ಸೆ ಪತ್ರಿಕೆಯ ಸಂಪಾದಕನಾಗಿದ್ದ (1901–32). ಅಮೆರಿಕದಲ್ಲಿ ಔಷಧಶಾಸ್ತ್ರ ಅಧ್ಯಯನವನ್ನು ಆಧುನೀಕರಣಗೊಳಿಸುವಲ್ಲಿ ಅಬೆಲ್ ಪ್ರಮುಖ ಪಾತ್ರವನ್ನು ವಹಿಸಿದ. ಅಡ್ರಿನಲ್ ಗ್ರಂಥಿಗಳಲ್ಲಿ ತಯಾರಾಗುವ, ರಕ್ತ ಒತ್ತಡವೇರಿಸುವ ವಸ್ತುವಾಗಿ ಅಡ್ರಿನಲನ್ನು ಬೇರ್ಪಡಿಸಿ ತೆಗೆದು, ಹೀಗೆ ಇನ್ಸುಲಿನ್ ಅನ್ನೂ ಹರಳರೂಪದಲ್ಲಿ ತಯಾರಿಸಿದ. ಪ್ರಾಣಿಗಳ ಹಲವಾರು ಕಣಜಾಲಗಳ, ರಸಗಳ, ರಾಸಾಯನಿಕಗಳ ಗುಣಲಕ್ಷಣಗಳನ್ನೂ ವಿವರಿಸಿ ಹೆಸರಾಗಿದ್ದ. (ಡಿ.ಎಸ್.ಎಸ್.)

**ಅಬೆಲ್, ನೀಲ್ಸ್ ಹೆನ್ರಿ :** 1802–1829. ನಾರ್ವೇ ದೇಶದ ಸುಪ್ರಸಿದ್ಧ ಗಣಿತಜ್ಞ; ಬದುಕಿದ್ದು 27 ವರ್ಷಗಳಿಗಿಂತಲೂ ಕಡಿಮೆ; ಕಾಯಿಲೆ, ಬಡತನ, ಹತಾಶೆ ಇವನ ನಿರಂತರ ಒಡನಾಡಿಗಳು; ಆದರೆ ಗಣಿತಶಾಸ್ತ್ರಕ್ಕೆ ಕೊಟ್ಟದ್ದು 500 ವರ್ಷಗಳ ಕಾಲ ಚಿಂತನೆ ಮಾಡುವಷ್ಟು ವಿಷಯವನ್ನು. ಶಾಲಾದಿವಸಗಳಲ್ಲಿಯೇ ಇವನ ಗಣಿತಪ್ರತಿಭೆ ವಿಕಾಸಗೊಂಡಿತ್ತು. 1823ರಲ್ಲಿ ಅವನಿಗೆ ಕೇವಲ 21 ವರ್ಷ ಪ್ರಾಯವಾಗಿದ್ದಾಗ ಫಂಕ್ಷನಲ್ ಈಕ್ವೇಷನ್ಸ್, ಇಂಟೆಗ್ರಲ್ಸ್ ಮತ್ತು ಫಸ್ಟ್ ಇನ್‌ಸ್ಟೆನ್ಸ್ ಆಫ್ ದಿ ಸೊಲ್ಯೂಷನ್ ಆಫ್ ಎನ್ ಇಂಟೆಗ್ರಲ್ ಈಕ್ವೇಷನ್ ಈ ವಿಷಯಗಳನ್ನು ಕುರಿತು ಒಂದು ಪ್ರಬಂಧ ಪ್ರಕಟಿಸಿದ. ಆಯ್ಲರ್ ಕ್ರಮದಲ್ಲಿ ಬೆಳೆದು ಬಂದಿದ್ದ ಅಬೆಲ್ ಮುಂದೆ ಜರ್ಮನಿಯ ಗಾಸ್ ಮತ್ತು ಕಾಶಿ ಎಂಬ ಸುಪ್ರಸಿದ್ಧ ಗಣಿತಜ್ಞರ ಹೊಸ ವಿಚಾರಸರಣಿಯಿಂದ ಪ್ರಭಾವಿತನಾದ. ಇವನ ಕೊಡುಗೆಗಳಲ್ಲಿ ಗಮನಾರ್ಹವಾದ ಪ್ರಬಂಧಗಳು ಎಲಿಪ್ಟಿಕ್ ಫಂಕ್ಷನ್ಸ್ ಮತ್ತು ತೀಯೊರಿ ಆಫ್ ಅಬೆಲಿಯನ್ ಈಕ್ವೇಷನ್ಸ್ ವಿತ್ ಅಬೆಲಿಯನ್ ಗ್ರೂಪ್ಸ್. ಕೀರ್ತಿ, ಆರ್ಥಿಕಸಹಾಯ ಒದಗಿಬಂದಾಗ ಕ್ಷಯರೋಗದಿಂದ ಜರ್ಜರಿತನಾದ ಅಬೆಲ್ ಅವನ್ನು ಸ್ವೀಕರಿಸಿ ಅನುಭವಿಸುವ ಸ್ಥಿತಿಯಲ್ಲಿರಲಿಲ್ಲ. 1829 ಏಪ್ರಿಲ್ 6ರಂದು ನಿಧನನಾದ *

**ಅಬೆಲಾರ್ಡ್, ಪೀಟರ್ :** 1079–1142. ಯುರೋಪಿನ ಮಧ್ಯಯುಗದ ತಾತ್ತ್ವಿಕರಲ್ಲಿ ಹೆಸರುವಾಸಿಯಾದವ. ಜನ್ಮಸ್ಥಾನ ಬ್ರಿಟನ್. ಇವನ ತತ್ತ್ವಸಿದ್ಧಾಂತಗಳಿಗಿಂತಲೂ ಇವನ ತಾತ್ತ್ವಿಕ ವ್ಯಕ್ತಿತ್ವ ಜನರನ್ನು ಹೆಚ್ಚಾಗಿ ಆಕರ್ಷಿಸಿತು. ಈತ ಕ್ರೈಸ್ತ ಸಂನ್ಯಾಸಿ. ತಾನು ಪ್ರೀತಿಸಿದ ಹೆಲಾಯ್‌ಳನ್ನು ಸಂನ್ಯಾಸಿಯಾದ ತಾನು ಮದುವೆಯಾಗಲು ನಿಷಿದ್ಧವಾದುದರಿಂದ ಅವಳನ್ನೂ ಸಂನ್ಯಾಸಿನಿಯಾಗುವಂತೆ ಪ್ರೇರೇಪಿಸಿ ತನ್ನ ವಿಚಾರದೃಷ್ಟಿಗೆ ಸರಿಹೋದ ರೂಪದಲ್ಲಿ ಕ್ರೈಸ್ತಧರ್ಮವನ್ನು ಬೋಧಿಸಿದ. ಈತ ರಚಿಸಿದ ಸಿಕ್ ಎಟ್ ನಾನ್ ಎಂಬ ಗ್ರಂಥದ ಉದ್ದೇಶ ಪ್ರಶ್ನೆಯನ್ನು ಕೆರಳಿಸುವುದಾಗಿತ್ತು. ಕ್ರೈಸ್ತವೇದದಿಂದಲೂ ಚರ್ಚಿನ ಹಿರಿಯರಿಂದಲೂ ಹೇಳಿಕೆಗಳನ್ನು ಸಂಗ್ರಹಿಸಿ ಅವಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಗ್ರಂಥದಲ್ಲಿ ರೂಪಗೊಳಿಸಲಾಗಿದೆ. ಇಲ್ಲಿ ಕ್ರೈಸ್ತಧರ್ಮದ ವಿಚಾರವಾಗಿ ಲೇಖಕ ತನ್ನ ಹೃದಯವನ್ನು ತೆರೆದಿಟ್ಟಿದ್ದಾನೆ. 'ಸೇಂಟ್ ಪೌಲನಿಗೆ ವ್ಯತಿರಿಕ್ತವಾಗಿ ಸಿದ್ಧಾಂತ ಮಾಡಬೇಕಾಗಿ ಬಂದ ಪಕ್ಷದಲ್ಲಿ ನಾನು ತತ್ತ್ವ ವಿವೇಚನೆಯನ್ನಾದರೂ ಬಿಟ್ಟೇನು, ಪೌಲನನ್ನು ಬಿಡಲೊಲ್ಲೆ, ಕ್ರಿಸ್ತನ ಸುವಾರ್ತೆಯನ್ನು ಸಮರ್ಥಿಸಲಾಗದ ನಾನೊಬ್ಬ ಅರಿಸ್ಟಾಟಲ್ ಆಗಲೊಪ್ಪೆನು. ಕ್ರಿಸ್ತನನ್ನು ಬಿಟ್ಟರೆ ನನಗೆ ವಿಮೋಚನೆಯೇ ಇಲ್ಲ'. ಇವನ ವಿಚಾರಪರತೆಯನ್ನು ಕಂಡು ಇವನನ್ನು ಚರ್ಚಿನ ನ್ಯಾಯಕ್ಕೆ ಒಳಪಡಿಸಿ ಕಾರಾಗೃಹಕ್ಕೆ ದೂಡಿದ್ದಕ್ಕೆ ಮುಖ್ಯ ಕಾರಣ. ಇವನು ಪ್ಲೇಟೋವಿನಲ್ಲಿ ತೋರಿಸಿದ ವಿಶ್ವಾಸ ಕ್ರೈಸ್ತ ತ್ರಿಮೂರ್ತಿ ತತ್ತ್ವದ ವಿಚಾರದಲ್ಲಿ ಮೋಸೆಸ್‌ಗಿಂತಲೂ ಪ್ಲೇಟೋವಿನ ತತ್ತ್ವ ಸಮಂಜಸವೆಂದೂ ಪ್ಲೇಟೊ ಕ್ರೈಸ್ತಧರ್ಮ ತತ್ತ್ವಗಳನ್ನು ಮೋಸೆಸ್‌ಗಿಂತಲೂ ಚೆನ್ನಾಗಿ ಮೊದಲೇ ಅರಿತಿದ್ದ ಎಂದೂ ಈತ ಸಾರಿದ. ಇದನ್ನು ಕೇಳಿದ ಅವನ ಶಿಷ್ಯರು ಆಹ್ಲಾದದಿಂದ ಕುಣಿದರು. ಕ್ರೈಸ್ತ ಸಂಪ್ರದಾಯ ಶರಣರು ಇದರಿಂದ ಕೆರಳಿದರು. ಹೂಣವಾದಿ ಪ್ಲೇಟೋವನ್ನು ಕ್ರಿಸ್ತನಿಗಿಂತ ಉತ್ತಮನೆಂದೂ ಕರೆದ ಈ ಪಾಷಂಡಿಯನ್ನು ಕಾರಾಗೃಹಕ್ಕೆ ನೂಕಿದ್ದು ಅವನಿಗೆ ಅವನ ಶತ್ರುಗಳು ತೋರಿಸಿದ ಕೃಪೆ. ಅವನು ಇನ್ನೂ ಹೆಚ್ಚು ಶಿಕ್ಷೆಗೆ ಅರ್ಹನೆಂದು ಅವರಲ್ಲಿ ಕೆಲವರು ಹೇಳಿದುದೂ ಉಂಟು. ಅಸಂಖ್ಯಾತ ಶಿಷ್ಯರನ್ನು ಆಕರ್ಷಿಸಿದ ಗುರು ಈತ. ಇವ ತನ್ನದೇ ಆದ ಸಂನ್ಯಾಸಿಗಳ ಆಶ್ರಮವನ್ನು ಏರ್ಪಡಿಸಿ ಉತ್ಸಾಹದಿಂದ ಅದಕ್ಕೆ ಬಂದು ಸೇರಿದ ಅನೇಕರಿಗೆ ತನ್ನ ತತ್ತ್ವವನ್ನು ಬೋಧಿಸಿದ. ಹಾಗೆಯೇ ಅವನ ಪ್ರಿಯಶಿಷ್ಯೆ ಹೆಲಾಯ್ ಹೆಂಗಸರಿಗಾಗಿ ಸಂನ್ಯಾಸಿನಿಯರ ಆಶ್ರಮವನ್ನು ಏರ್ಪಡಿಸಿದಳು. ಅವಳು ತೀರಿಕೊಂಡ ಸ್ವಲ್ಪ ಕಾಲದಲ್ಲೇ ಇವನೂ ತೀರಿಕೊಂಡ. ಪ್ಯಾರಿಸ್ಸಿನ ಸಮಾಧಿಭೂಮಿಯೊಂದರಲ್ಲಿ ಒಂದರ ಪಕ್ಕದಲ್ಲೊಂದು ಇವರ ಸಮಾಧಿಗಳಿವೆ. ಅಬೆಲಾರ್ಡನ ಗ್ರಂಥಗಳು ಥಿಯೋಲಾಜಿಕಾ, ಕ್ರಿಶ್ಚಿಯಾನ ಮೊದಲಾದ ಮತಕ್ಕೆ ಸಂಬಂಧಪಟ್ಟ ಗ್ರಂಥಗಳು, ಪೋರ್ಫರಿ ಮೇಲಿನ ವ್ಯಾಖ್ಯಾನ, ನೀತಿಗೆ ಸಂಬಂಧಪಟ್ಟವು. (ಎಂ.ವೈ.)

**ಅಬೆವಿಲಿಯನ್ :** ಆದಿ ಹಳೆಯ ಶಿಲಾಯುಗದ ಪ್ರಾರಂಭಕಾಲದಲ್ಲಿದ್ದ ಶಿಲೋಪಕರಣ ಉದ್ಯಮ. ಫ್ರಾನ್ಸಿನ ಅಬೆವಿಲ್ ಊರಿನ ಬಳಿ ಮೊದಲು ಗುರುತಿಸಲ್ಪಟ್ಟಿದ್ದರಿಂದ ಈ ಹೆಸರು ರೂಢಿಗೆ ಬಂದಿದೆ. ಒಂದು ಕಡೆ ಚೂಪಾಗಿ ಇನ್ನೊಂದು ಕಡೆ ದಪ್ಪಗೆ ಮೊಂಡಾಗಿ ಇರುವ ಒರಟು ಕೈಕೊಡಲಿಗಳು ಈ ಕಾಲದ ವೈಶಿಷ್ಟ್ಯ. ಇವನ್ನು ಮಾಡಲು ಎರಡೂ ಮಗ್ಗಲುಗಳಿಂದಲೂ ಕಲ್ಲಿನಿಂದ ಹೊಡೆದು ಆಳವಾಗಿ ಚಕ್ಕೆಗಳನ್ನು ಎಬ್ಬಿಸುವುದರಿಂದ ಇದರ ಪಕ್ಕಗಳಲ್ಲಿ ಏರು ತಗ್ಗುಗಳುಂಟಾಗುತ್ತವೆ. ಈ ಉಪಕರಣವನ್ನು ಮಾಡಲು ಯುರೋಪಿನಲ್ಲಿ ಚಕಮಕಿ, ಆಫ್ರಿಕ ಹಾಗೂ ಏಷ್ಯಗಳಲ್ಲಿ ಕ್ವಾರ್ಟ್‌ಜೈಟ್ ಕಲ್ಲುಗಳು ಉಪಯೋಗಿಸಲ್ಪಡುತ್ತಿದ್ದುವು. ಕೈಕೊಡಲಿಗಳನ್ನು ಅಗೆಯುವುದಕ್ಕೆ, ಗುರಿಯಿಟ್ಟು ಪ್ರಾಣಿಗಳಿಗೆ ಹೊಡೆಯುವುದು, ಕೋಲಿನ ತುದಿಗೆ ಕಟ್ಟಿ ಈಟಿಯಂತೆ ಚುಚ್ಚುವುದು ಮೊದಲಾದ ಕೆಲಸಗಳಿಗೆ ಉಪಯೋಗಿಸಲಾಗುತ್ತಿತ್ತು. ಇದು ತಿರುಳುಗಲ್ಲಿನ ಉಪಕರಣ. ಕಲ್ಲುಗಟ್ಟಿಯಿಂದ ಅನೇಕ ಚಕ್ಕೆಗಳನ್ನು ಎಬ್ಬಿ ಎರಡು ಪಕ್ಕಗಳಲ್ಲಿಯೂ ಓರೆಕೋರೆಯಾಗಿ ಕತ್ತರಿಸಿ ಬಾಯಿಗಳು ಉಂಟಾಗುವಂತೆ ಮಾಡುತ್ತಿದ್ದರು. ಇದೇ ಅಬೆವಿಲಿಯನ್ ಉದ್ಯಮದ ಹೆಗ್ಗುರುತು.

ಈ ಬಗೆಯ ಉಪಕರಣಗಳು ಯುರೋಪ್, ಪಶ್ಚಿಮ ಏಷ್ಯ, ಭಾರತ ಮತ್ತು ಆಫ್ರಿಕಗಳಲ್ಲಿ ದೊರೆತಿವೆ. ಈ ಉದ್ಯಮ ಮಧ್ಯಆಫ್ರಿಕದಲ್ಲಿ ಸು.15,00,000 ವರ್ಷಗಳ ಹಿಂದೆ ರೂಪುಗೊಂಡು ತರುವಾಯ ಇತರ ಪ್ರದೇಶಗಳಿಗೂ ಹರಡಿರಬಹುದೆಂದು ಕಾಣುತ್ತದೆ. ಆಫ್ರಿಕದ ಕೆನ್ಯ ರಾಜ್ಯದ ಓಲ್ದುವಾಯ್ ಎಂಬಲ್ಲಿ 1950ರ ದಶಕದಲ್ಲಿ ನಡೆಸಿರುವ ಶೋಧಗಳಿಂದ ಈ ಉದ್ಯಮ ಇದಕ್ಕೂ ಹಳೆಯದಾದ ಬಹಳ ಸಾಮಾನ್ಯ ತರದ ಓಲ್ದುವನ್ ಶಿಲಾಉದ್ಯಮದಿಂದ ಉಗಮವಾದಂತೆ ತಿಳಿದುಬಂದಿದೆ. ಮುಂದೆ ಬಹುಕಾಲದ ವರೆಗೆ ರೂಢಿಯಲ್ಲಿದ್ದ ಅಷೂಲಿಯನ್ ಉದ್ಯಮಕ್ಕೆ ಅಬೆವಿಲಿಯನ್ನೇ ಮೂಲ. (ಎಸ್.ಎಂ.)

**ಅಬ್ಡರ್‌ಹಲ್ಡನ್ :** 1877–1950. ಸ್ವಿಟ್ಸರ್‌ಲೆಂಡಿನ ರಸಾಯನವಿಜ್ಞಾನಿ ಮನಶ್ಶಾಸ್ತ್ರಜ್ಞ. ಹಾಲೆ ಎಂಬಲ್ಲಿ ಶರೀರಶಾಸ್ತ್ರದ ಪ್ರಾಧ್ಯಾಪಕನಾಗಿ ಕೆಲಸಮಾಡಿದ. ಪ್ರೋಟೀನ್‌ಗಳ ರಚನೆ, ಪಾಲಿಪೆಪ್ಟೈಡ್‌ಗಳ ವಿಶ್ಲೇಷಣೆ, ಮದ್ಯಸಾರೀಯ ವಸ್ತುಗಳ ಹುಳಿಗಟ್ಟುವಿಕೆಯ ಕ್ರಮ– ಇವುಗಳ ಬಗ್ಗೆ ಗಮನಾರ್ಹ ವಿಚಾರಗಳನ್ನು ತಿಳಿಸಿದ್ದಾನೆ. *

**ಅಬ್ದುಲ್‌ರಜಾಕ್ :** ಇಮ್ಮಡಿ ದೇವರಾಯನ ಆಳ್ವಿಕೆಯಲ್ಲಿ ಈತ ಪರ್ಷಿಯ ದೇಶದಿಂದ ರಾಯಭಾರಿಯಾಗಿ ವಿಜಯನಗರಕ್ಕೆ ಬಂದು (1443) ಅಲ್ಲಿ ಏಳು ತಿಂಗಳು ಇದ್ದು ವೈಭವಪೂರ್ಣವಾಗಿದ್ದ ವಿಜಯನಗರ ಸಾಮ್ರಾಜ್ಯದ ಬಗ್ಗೆ ಕಣ್ಣಾರೆ ಕಂಡು ಕಿವಿಯಾರೆ ಕೇಳಿದ ಸಂಗತಿಗಳನ್ನು ಬರೆದಿಟ್ಟಿದ್ದಾನೆ. ಚಾರಿತ್ರಿಕ ದೃಷ್ಟಿಯಿಂದ ಇವನ ಬರೆವಣಿಗೆ ಬಹು ಉಪಯುಕ್ತವಾಗಿದೆ. ವಿಜಯನಗರ ಪಟ್ಟಣ ಅತಿ ವಿಸ್ತಾರವೂ ಸುಭದ್ರವೂ ಸೇನಾಬಲದಿಂದ ಸುಸಜ್ಜಿತವೂ ಸುಖಸೌಲಭ್ಯಗಳಿಂದ ಕೂಡಿದುದೂ ಆಗಿದ್ದು, ಅಲ್ಲಿಯ ವಿಶಾಲವಾದ ಅಂಗಡಿಬೀದಿಗಳಲ್ಲಿ ಮುತ್ತು ರತ್ನಗಳ ಮುಕ್ತವ್ಯಾಪಾರ ನಡೆಯುತ್ತಿತ್ತೆಂದು ಈತ ವರ್ಣಿಸಿದ್ದಾನೆ.

**ಅಬ್ದುರ್ ರಹಮಾನ್ ಖಾನ್ :** 1844–1901. ಆಫ್ಘಾನಿಸ್ತಾನದ ಬರಕ್‌ಸೈ (ಮಹಮ್ಮದ್‌ಸೈ) ರಾಜವಂಶವನ್ನು ಸ್ಥಾಪಿಸಿದ ದೋಸ್ತ್ ಮಹಮ್ಮದನ ಮೊಮ್ಮಗ. ತಂದೆ ಅಫ್ಜಲ್‌ಖಾನ್. ತಂದೆ ಮಜಾರ್ ಪ್ರಾಂತಾಧಿಪತಿಯಾಗಿದ್ದಾಗ ಬಾಲ್ಯವನ್ನೆಲ್ಲ ಅವನೊಂದಿಗೆ ಕಳೆದು ಸೈನಿಕಶಿಕ್ಷಣ ಪಡೆದ. ಅಜ್ಜನ ಮರಣಾನಂತರ, ಪಟ್ಟವೇರಿದ ಷೇರ್ ಅಲಿಗೂ ಅವನ ಸಹೋದರರಿಗೂ ವೈಮನಸ್ಯ ಬೆಳೆದು ಉಂಟಾದ ಯಾದವೀಕಲಹದಲ್ಲಿ ಸೋತು ಅಬ್ದುರ್ ರಹಮಾನ್ ರಷ್ಯದ ತುರ್ಕಿಸ್ತಾನಕ್ಕೆ ಹೋಗಿ ಅಲ್ಲಿ ಆಶ್ರಯಪಡೆದ. 1870ರಿಂದ ಹತ್ತು ವರ್ಷಕಾಲ ಸಾಮರ್‌ಕಂದ್‌ನಲ್ಲಿದ್ದು ರಷ್ಯನರ ರಾಜ್ಯನೀತಿ ಆಡಳಿತಕ್ರಮಗಳನ್ನು ಕಲಿತ. 1878ರಲ್ಲಿ ಆಫ್ಘನರಿಗೂ ಬ್ರಿಟಿಷರಿಗೂ ಯುದ್ಧ ಪ್ರಾರಂಭವಾಯಿತು. ಷೇರ್ ಅಲಿ ಮರಣ ಹೊಂದಿದ; ಅವನ ಮಗನನ್ನು ಭಾರತಕ್ಕೆ ಗಡೀಪಾರು ಮಾಡಿದರು. ಈ ಸಂದರ್ಭದಲ್ಲಿ ಅಬ್ದುರ್ ರಹಮಾನ್ ಆಫ್ಘಾನಿಸ್ಥಾನಕ್ಕೆ ಹಿಂತಿರುಗಿದ. ಜನರಿಂದ ಅವನಿಗೆ ಅದ್ಭುತಸ್ವಾಗತ ದೊರಕಿತು. ಬ್ರಿಟಿಷರು ಅವನನ್ನು ಪಟ್ಟಕ್ಕೇರಿಸಿ ಸೈನ್ಯವನ್ನು ಹಿಂತೆಗೆದುಕೊಂಡರು. ರಷ್ಯನರು ಮತ್ತು ಬ್ರಿಟಿಷರೊಂದಿಗೆ ಒಪ್ಪಂದ ಮಾಡಿಕೊಂಡು ಗಡಿ–ಸಮಸ್ಯೆಗಳನ್ನು ಬಗೆಹರಿಸಿದ್ದಲ್ಲದೆ ಹೊರದೇಶಗಳಿಂದ ಪ್ರವೀಣರನ್ನು ಬರಮಾಡಿಕೊಂಡು ಕೈಗಾರಿಕೋದ್ಯಮಗಳನ್ನು ಸ್ಥಾಪಿಸಿ ಹಿಂದುಳಿದಿದ್ದ ಆಫ್ಘನರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಶ್ರಮಿಸಿದ. *

**ಅಬ್ದುಲ್ ಅಜೀಜ್ :** 1830–76. ತುರ್ಕಿಯ ಆಟೊಮನ್ ಸುಲ್ತಾನ. ಎರಡನೆಯ ಮಹಮೂದನ ದ್ವಿತೀಯ ಪುತ್ರ ಅಣ್ಣ ಅಬ್ದುಲ್ ಮಜೀದನ ತರುವಾಯ 1861ರಲ್ಲಿ ಸುಲ್ತಾನನಾದ. ಸಿರಿಯ, ಬಾಲ್ಕನ್ ಪರ್ಯಾಯದ್ವೀಪ, ಕ್ರೀಟ್ ಮುಂತಾದ ಪ್ರಾಂತಗಳಲ್ಲಿ ಉಂಟಾಗಿದ್ದ ಗಲಭೆಗಳನ್ನು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಸಹಾಯದಿಂದ ಅಡಗಿಸಿದ. ಪಾಶ್ಚಾತ್ಯ ರಾಷ್ಟ್ರಗಳ ಆಚಾರ, ಪದ್ಧತಿ, ಸಂಪ್ರದಾಯಗಳನ್ನು ತುರ್ಕಿಯಲ್ಲೂ ಹರಡಲು ಬಹುವಾಗಿ ಶ್ರಮಿಸಿದ. ತುರ್ಕಿಯಲ್ಲಿ ಒಂದು ರಾಜ್ಯಮಂತ್ರಾಲೋಚನಸಭೆ ನಿರ್ಮಿತವಾಯಿತು; ರಾಷ್ಟ್ರೀಯ ಪ್ರೌಢ ವಿದ್ಯಾಶಾಲೆಯೊಂದು ಸ್ಥಾಪಿತವಾಯಿತು. ವ್ಯವಹಾರ ಧರ್ಮಶಾಸ್ತ್ರವೊಂದು ರಚಿತವಾಯಿತು. ಆದರೆ ಇವನು ಅಳತೆಗೆಟ್ಟ ದುಂದುಗಾರ. ತುರ್ಕಿಯ ಅಧೀನದಲ್ಲಿದ್ದ ಬಲ್ಗೇರಿಯ ಬೋಸ್ನಿಯ ಮುಂತಾದ ಕೆಲವು ಐರೋಪ್ಯ ಪ್ರಾಂತಗಳಲ್ಲಿ ಜನ ತುರ್ಕಿಗೆ ವಿರೋಧವಾಗಿ ದಂಗೆಯೆದ್ದಾಗ, ಬೇಸರಗೊಂಡ ತುರ್ಕಿಯ ಪ್ರಜೆಗಳು ಇವನನ್ನು 1876ರಲ್ಲಿ ಪದಚ್ಯುತನನ್ನಾಗಿ ಮಾಡಿದರು. ಇದಾದ ನಾಲ್ಕು ದಿನಗಳಲ್ಲೇ ಈತ ನಿಧನನಾದ. *

**ಅಬ್ದುಲ್ ಕಲಾಂ : ನೋಡಿ ಕಲಾಂ ಅಬ್ದುಲ್**

**ಅಬ್ದುಲ್ ಖಾದರ್ :** 1808–83. ಆಲ್ಜೀರಿಯದ ಪ್ರಜಾಮುಖಂಡ ವಿದ್ವಾಂಸ, ದೇಶಪ್ರೇಮಿ. ಅರಬ್ಬೀ ಮನೆತನವೊಂದರಲ್ಲಿ ಹುಟ್ಟಿ, ತಂದೆಯ ಮರಣಾನಂತರ ನಾಡಿನ ತುರ್ಕಿ ಪಂಗಡದ ವಿರೋಧಪಕ್ಷದ ಮುಖಂಡನಾಗಿ ಮಸ್ಕರದ ಅಮೀರನಾದ. 1832ರಿಂದ ಏಳು ವರ್ಷ ಕಾಲ ಉತ್ತರ ಆಲ್ಜೀರಿಯದ ಅನೇಕ ಪ್ರಾಂತ್ಯಗಳನ್ನು ತನ್ನ ಹತೋಟಿಗೆ ತಂದುಕೊಂಡ. ಸಮರ್ಥಯೋಧನೂ ಆಗಿದ್ದು 1839ರಲ್ಲಿ ನಾಡಿನ ಸ್ವಾತಂತ್ರ್ಯಕ್ಕಾಗಿ ಫ್ರೆಂಚರ ಮೇಲೆ ಯುದ್ಧ ಘೋಷಿಸಿ ಎಂಟು ವರ್ಷ ಕಾಲ ಹೋರಾಡಿದ. ದುರದೃಷ್ಟದಿಂದ ಸೋತು, ಸೆರೆಸಿಕ್ಕಿ 1847 – 1852ರವರೆಗೆ ಫ್ರಾನ್ಸಿನಲ್ಲಿ ಕಾರಾಗೃಹ ವಾಸವನ್ನನುಭವಿಸಿದ. ಡಮಾಸ್ಕಸ್‌ನಲ್ಲಿ ಚಿತ್ರಹಿಂಸೆಗೊಳಗಾಗಿದ್ದ ಕ್ರೈಸ್ತರಿಗೆ ನೆರವು ನೀಡಿದ್ದಕ್ಕಾಗಿ ಇವನಿಗೆ 1860ರಲ್ಲಿ ಫ್ರೆಂಚ್ ಸರಕಾರ ಲೀಜನ್ ಆಫ್ ಆನರ್ ಪ್ರಶಸ್ತಿಯನ್ನು ನೀಡಿತು. *

**ಅಬ್ದುಲ್ ಗಫಾರ್ ಖಾನ್ :** 1890–1988. ಗಡಿನಾಡ ಗಾಂಧಿ ಎಂದು ಪ್ರಸಿದ್ಧರಾಗಿರುವ ದೇಶಭಕ್ತರು. ಪೆಷಾವರ್ ಜಿಲ್ಲೆಯ ಉತ್ಮಾನ್ ಜೈ ಎಂಬ ಹಳ್ಳಿಯಲ್ಲಿ 1890ರ ಜನವರಿಯಲ್ಲಿ ಹುಟ್ಟಿದರು. ಮಹಮ್ಮದ್ ಜೈ ಎಂಬ ಗುಂಪಿಗೆ ಸೇರಿದ ಬಹ್ರಾಮ್‌ಖಾನ್ ಎಂಬ ಶ್ರೀಮಂತ ವರ್ತಕ ಇವರ ತಂದೆ. ಅಣ್ಣ ಪ್ರಸಿದ್ಧನಾದ ಡಾಕ್ಟರ್ ಖಾನ್ ಸಾಹೇಬ್. ಇವರ ವಿದ್ಯಾಭ್ಯಾಸ ಪೆಷಾವರ್ ಮಿಷನ್ ಹೈಸ್ಕೂಲಿನಲ್ಲಿ ನಡೆಯಿತು. ಉನ್ನತ ವಿದ್ಯಾಭ್ಯಾಸ ಅಲಿಘರದ ಎಂ.ಎ.ಒ. ಕಾಲೇಜಿನಲ್ಲಿ ನಡೆಯಿತು. ಬ್ರಿಟಿಷರು ಮಾಡುತ್ತಿದ್ದ ಅತ್ಯಾಚಾರಗಳನ್ನು ನೋಡಿ, ಬ್ರಿಟಿಷ್ ಸೈನ್ಯಕ್ಕೆ ಸೇರುವ ಆಲೋಚನೆಯನ್ನು ಬಿಟ್ಟರು. 1912ರಿಂದ ಜನತಾ ಸೇವೆಗೆ ಪಣತೊಟ್ಟರು. ಗದ್ದಾರ್ ಎಂಬಲ್ಲಿ ಶಾಲೆಯನ್ನು ತೆಗೆದು ವಿದ್ಯಾಪ್ರಚಾರ ಮಾಡಲು ಪ್ರಾರಂಭಿಸಿದರು. ಇವರ ಚಟುವಟಿಕೆಗಳ ಮೇಲೆ ಸಂಶಯಪಟ್ಟಿದ್ದ ಬ್ರಿಟಿಷರು ಇವರನ್ನು ಬಂಧಿಸಿದರು (1919). ಹಿಜ್ರತ್ ಚಳವಳಿ ಕಾಲದಲ್ಲಿ ಆಫ್ಘಾನಿಸ್ತಾನಕ್ಕೆ ಹೋಗಿ ಮರಳಿಬಂದರು. ಅಂಜುಮಾನ್ ಇಸ್ಲಾಂ–ಇ–ಅಫಾಫ್ಘನಾ ಸಂಸ್ಥೆಯನ್ನು ಸ್ಥಾಪಿಸಿ



ಪಠಾಣರ ಸಮಾಜಸುಧಾರಣಾ ಕಾರ್ಯವನ್ನು ಪ್ರಾರಂಭಿಸಿದರು. 1927ರಲ್ಲಿ ಖುದಾ–ಇ–ಖಿದ್‌ಮತ್‌ಗಾರ್ ಸಂಸ್ಥೆಯನ್ನು ಸ್ಥಾಪಿಸಿ, ಪಖ್ತೂನ್ ಪತ್ರಿಕೆಯ ಮೂಲಕ ಜನರಿಗೆ ರಾಜಕೀಯ ತಿಳಿವಳಿಕೆ ಕೊಟ್ಟರು. ಮಹಾತ್ಮ ಗಾಂಧಿಯವರ ಪಟ್ಟಶಿಷ್ಯರಲ್ಲಿ ಒಬ್ಬರಾದ ಇವರನ್ನು ಗಡಿನಾಡಿನ ಜನರು ಬಾದ್‌ಷಾಖಾನ್ ಎಂದು ಕರೆಯುತ್ತಾರೆ. ಪಾಕಿಸ್ತಾನ ಅಸ್ತಿತ್ವಕ್ಕೆ ಬಂದ ಅನಂತರ ಇವರನ್ನು ಜೈಲಿನಲ್ಲಿಟ್ಟಿದ್ದರು. ಬಿಡುಗಡೆಯ ಅನಂತರ ಪಖ್ತೂನಿಸ್ತಾನದ ನಿರ್ಮಾಣಕ್ಕಾಗಿ ಹೋರಾಡುತ್ತಿದ್ದರು. ಇವರ ಸೇವೆಯನ್ನು ತ್ಯಾಗವನ್ನು ಗಮನಿಸಿ ಭಾರತಸರ್ಕಾರ ಜವಾಹರ್‌ಲಾಲ್‌ನೆಹರು ಅಂತಾರಾಷ್ಟ್ರೀಯ ಸೌಹಾರ್ದ ಪಾರಿತೋಷಕವನ್ನು ನೀಡಿದೆ (1968). (ಎಚ್.ಜಿ.ಆರ್.)

**ಅಬ್ದುಲ್ ಮಜೀದ್ :** 1823–61. ತುರ್ಕಿಯ ಆಟೊಮನ್ ಸುಲ್ತಾನ ತಂದೆ ಎರಡನೆಯ ಮಹಮ್ಮದನು ಕಾಲವಾದ (1839) ಮೇಲೆ ತನ್ನ ಹದಿನಾರನೆಯ ವಯಸ್ಸಿನಲ್ಲೇ ಸಿಂಹಾಸನವನ್ನೇರಿದ. ದಂಗೆಯೆದ್ದಿದ್ದ ಈಜಿಪ್ಟ್ ಮಂಡಲಾಧಿಪತಿ ಮಹಮ್ಮದಾಲಿಯನ್ನಡಗಿಸಿ ಅವನೊಂದಿಗೆ ಒಪ್ಪಂದ ಮಾಡಿಕೊಂಡ. ತಂದೆ ಪ್ರಾರಂಭಿಸಿದ್ದ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳನ್ನು ಮುಂದುವರಿಸಿದ. ಹತ್ತಿಷರೀಫ್ ಎಂಬ ರಾಜಶಾಸನವನ್ನು ಹೊರಡಿಸಿ, ಯಾವ ಜನಾಂಗದವರೇ ಆಗಿರಲಿ, ಯಾವ ಮತದವರೇ ಆಗಿರಲಿ ಆಟೊಮನ್ ಪ್ರಜೆಗಳೆಲ್ಲರಿಗೂ ಸಮಾನ ಹಕ್ಕು ಭಾಧ್ಯತೆಗಳಿವೆಯೆಂದು ಸಾರಿದ. ತೆರಿಗೆಭಾರ ಎಷ್ಟಿರಬೇಕೆಂಬುದನ್ನು ಖಚಿತಪಡಿಸಿ 1856ರಲ್ಲಿ ಜಾರಿಗೆ ತಂದ ಹೊಸ ಶಾಸನವೊಂದರ ಪ್ರಕಾರ ತನ್ನ ರಾಜ್ಯದಲ್ಲಿ ನೆಲಸಿದ್ದ ಕ್ರೈಸ್ತಪ್ರಜೆಗಳಿಗೆ ಸಂಪೂರ್ಣ ಪೌರ ಮತ್ತು ರಾಜಕೀಯ ಹಕ್ಕುಗಳನ್ನು ನೀಡಿದ್ದರಿಂದ ಪಾಶ್ಚಾತ್ಯ ದೇಶಗಳಿಂದ ಕೈಗಾರಿಕಾಭಿವೃದ್ಧಿಗೆ ಬಂಡವಾಳಧನ ಬರಲು ಅನುಕೂಲವಾಯಿತು. ವಿದ್ಯಾವಂತ, ಫ್ರೆಂಚ್ ಭಾಷೆಯನ್ನೂ ಕಲಿತಿದ್ದ; ಇದರಿಂದ ಮತ್ತು ಉದಾರನೀತಿಯ ಪರಿಣಾಮವಾಗಿ, ಇಂಗ್ಲೆಂಡ್ ಫ್ರಾನ್ಸ್‌ಗಳೊಡನೆ ಮೈತ್ರಿ ಬೆಳೆಯಿತು; ರಷ್ಯದೊಂದಿಗೆ ನಡೆದ ಕ್ರೀಮಿಯ ಯುದ್ಧದಲ್ಲಿ ಆ ರಾಷ್ಟ್ರಗಳ ನೆರವೂ ದೊರಕಿತು. ಆದರೆ ಮುಂದೆ ಹಣಕಾಸಿನ ಮುಗ್ಗಟ್ಟು, ವಿರೋಧಿಗಳ ಒಳಸಂಚು, ಇವುಗಳಿಂದ ಅವನಿಗೆ ಕೊನೆಗಾಲದವರೆಗೂ ಶಾಂತಿಯಿಲ್ಲದಾಯಿತು. *

**ಅಬ್ದುಲ್ ಹಮೀದ್:** 1876–1909. ತುರ್ಕಿ ರಾಜ್ಯದ ಸುಲ್ತಾನ. ಈತ ಸುಲ್ತಾನನಾದದ್ದು ಆಗ ತಾನೇ ಪ್ರಬಲವಾಗುತ್ತ ಬಂದಿದ್ದ ಉದಾರಪಕ್ಷದ ಮುಖಂಡನಾದ ಮಿಥತ್ ಪಾಷಾನ ಬೆಂಬಲದಿಂದ. ಆದ್ದರಿಂದ ಆ ಪಕ್ಷದ ನೀತಿಗನುಸಾರವಾಗಿ ಹೊಸ ರಾಜ್ಯಾಂಗ ವ್ಯವಸ್ಥೆಗೆ ಆಗಿನ ಪರಿಸ್ಥಿತಿ ಅನುಕೂಲವಾಗಿರಲಿಲ್ಲ. ಯೂರೋಪಿನಲ್ಲಿದ್ದ ತುರ್ಕಿಯ ಪ್ರಾಂತಗಳಲ್ಲಿ ಅಶಾಂತಿ ಬೆಳೆಯುತ್ತಿತ್ತು. ರಷ್ಯದೊಡನೆ ನಡೆದ ಯುದ್ಧದ ಪರಿಣಾಮವಾಗಿ ಕೆಲವು ಪ್ರದೇಶಗಳನ್ನು ಕಳೆದುಕೊಳ್ಳಬೇಕಾಯಿತು. ರಾಜ್ಯದಲ್ಲುಳಿದ ಭಾಗಗಳನ್ನಾದರೂ ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ ಆತ ಜರ್ಮನಿಯೊಂದಿಗೆ ಮೈತ್ರಿ ಬೆಳೆಸಿದ; ಜರ್ಮನ್ ಸೈನ್ಯಾಧಿಕಾರಿಗಳು ತುರ್ಕಿ ಸೈನ್ಯವನ್ನು ಬಲಪಡಿಸಿದರು. ಅನಂತರ ಆತ ರಾಜ್ಯಾಂಗವ್ಯವಸ್ಥೆಯನ್ನು ರದ್ದುಗೊಳಿಸಿ ಕೆಲಕಾಲ ನಿರಂಕುಶಾಡಳಿತ ನಡೆಸಿದ. ಆದರೆ ಬಲಗೊಳ್ಳುತ್ತ ಬಂದಿದ್ದ ಉದಾರಪಕ್ಷದ ಯುವಕ ತುರುಕರು 1908ರಲ್ಲಿ ಅವನನ್ನು ಪಟ್ಟದಿಂದ ಉರುಳಿಸಿ ತಮ್ಮನಾದ ಐದನೆಯ ಮಹಮ್ಮದನನ್ನು ಸುಲ್ತಾನ ಪದವಿಗೇರಿಸಿದರು. *

**ಅಬ್ದುಲ್ ಹಸನ್ :** ಗೋಲ್ಕೊಂಡದ ಕುತುಬ್‌ಷಾಹಿ ಸುಲ್ತಾನರಲ್ಲಿ ಕೊನೆಯವ. ಔರಂಗಜೇಬ ಬಿಜಾಪುರವನ್ನು ಸ್ವಾಧೀನಪಡಿಸಿಕೊಂಡು (1686) ಷಿಯ ರಾಜ್ಯವಾಗಿದ್ದ ಗೋಲ್ಕೊಂಡದ ಕಡೆ ಸೈನ್ಯ ಕಳುಹಿಸಿದ. ಮರುವರ್ಷ ತಾನೇ ಹೋಗಿ ಮುತ್ತಿಗೆ ಪ್ರಾರಂಭಿಸಿದ್ದ ಸೈನ್ಯದೊಡನೆ ನಿಂತ. ಕೋಟೆಯೊಳಗೆ ಸಾಕಾದಷ್ಟು ಆಹಾರಪದಾರ್ಥಗಳಿದ್ದುದರಿಂದ ಅಲ್ಲಿನ ಸೈನಿಕರು ಮೊಗಲ್ ಸೈನ್ಯದ ಮುತ್ತಿಗೆಯನ್ನು ಧೈರ್ಯದಿಂದ ಎದುರಿಸಿದರು. ಎಂಟು ತಿಂಗಳು ಕಳೆದರೂ ಗೋಲ್ಕೊಂಡ ಔರಂಗಜೇಬನ ಕೈವಶವಾಗಲಿಲ್ಲ. ಅಜೇಯವೆಂದೆನಿಸಿಕೊಂಡಿದ್ದ ಆ ಕೋಟೆ ಕೊನೆಗೆ ಗೋಲ್ಕೊಂಡದ ಸೈನ್ಯದಲ್ಲಿದ್ದ ಅಬ್ದುಲ್ಲಾ ಪಾನಿ ಎಂಬ ಆಫ್ಘನ್ ಸೈನಿಕನ ದ್ರೋಹದ ಫಲವಾಗಿ ಮೊಗಲರ ಕೈವಶವಾಯಿತು. ಅಬ್ದುಲ್ ಹಸನ್ ಪದಚ್ಯುತನಾಗಿ ದೌಲತಾಬಾದ್ ಕೋಟೆಯಲ್ಲಿ ಇರಬೇಕಾಯಿತು. *

**ಅಬ್ಬಕ್ಕ :** 16ನೆಯ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳುತ್ತಿದ್ದ ವೀರರಾಣಿ. ಪುತ್ತಿಗೆಯ ಚೌಟ ಮನೆತನದವಳಾದ, ಉಲ್ಲಾಳದಿಂದ ಆಳುತ್ತಿದ್ದ ಈಕೆಗೆ ಬುಕಾದೇವಿ (ಬುಕ್ಕಾದೇವಿ) ಎಂದೂ ಹೆಸರಿದ್ದಂತೆ ಪೋರ್ಚುಗೀಸರ ದಾಖಲೆಗಳಿಂದ ತಿಳಿಯುತ್ತದೆ. ಚಿಕ್ಕರಾಜ್ಯವೊಂದರ ಅಧಿಪತಿಯಾಗಿದ್ದರೂ ಪೋರ್ಚುಗೀಸರ ಬೃಹದ್ಬಲದೆದುರು ನಿಂತು ಹೋರಾಡಿದ ಸಾಹಸಿ ಎಂದು ಈಕೆ ಪ್ರಸಿದ್ಧಳಾಗಿದ್ದಾಳೆ.

ಅಬ್ಬಕ್ಕ ಬಂಗರಾಜನೊಬ್ಬನನ್ನು ಮದುವೆಯಾಗಿದ್ದಳು. ಆತ ಪೋರ್ಚುಗೀಸರ ಪಕ್ಷ ವಹಿಸಿದ್ದ ಕಾರಣ ಈಕೆ ಮಲಬಾರಿನ ಹಲವು ಅರಸುಗಳೊಡನೆ ಸ್ನೇಹ ಬೆಳೆಸಿ ಪೋರ್ಚುಗೀಸರ ವಿರುದ್ಧ ನಿಂತಳು. ಪೋರ್ಚುಗೀಸರು ಇವಳ ಸಹಾಯಕನಾಗಿದ್ದ ಕಣ್ಣಾನೂರಿನ ಅರಸನ ವಿರುದ್ಧ ಸೆಣಸಿದಾಗ ಈಕೆ ಪೋರ್ಚುಗೀಸರಿಗೆ ಕೊಡಬೇಕಾಗಿದ್ದ ಕಪ್ಪವನ್ನು ತಡೆಹಿಡಿದಳು.

1555ರಲ್ಲಿ ಪೋರ್ಚುಗೀಸ ನೌಕಾಧಿಕಾರಿ ದೋಮ್ ಆಳ್ವಾರೆಸ್ ದ ಸಿಲ್ವೀರಾ ಮಂಗಳೂರನ್ನು ಆಕ್ರಮಿಸಿಕೊಳ್ಳಲು 21 ಹಡಗುಗಳ ಭಾರಿ ಪಡೆಯೊಡನೆ ಬಂದಾಗ ರಾಣಿ ವೀರಾವೇಶದಿಂದ ಹೋರಾಡಿದಳು. ಕೊನೆಗೆ ಕಲ್ಲಿಕೋಟೆಯ ಜಾಮೋರಿನ್ ಪ್ರವೇಶಿಸಿ, ಅವರ ನಡುವೆ ರಾಜಿ ಮಾಡಿಸಿದ. 3 ವರ್ಷಗಳ ಅನಂತರ ಇವಳು ಮತ್ತೊಮ್ಮೆ ಕಣ್ಣಾನೂರಿನ ರಾಜನ ಪಕ್ಷ ವಹಿಸಿ ಪೋರ್ಚುಗೀಸರೊಡನೆ ನೌಕಾಯುದ್ಧ ಹೂಡಿದಳು. ಆಗ ರಾಣಿ ನಷ್ಟವನ್ನು ಭರಿಸಿದರೂ (1555) ಮತ್ತೊಮ್ಮೆ 1566ರಲ್ಲಿ ನಡೆದ ಯುದ್ಧದಲ್ಲಿ ರಾಣಿಯದೇ ಮೇಲ್ಗೈಯಾಯಿತು. ಪೋರ್ಚುಗೀಸ್ ಗವರ್ನರನಾಗಿದ್ದ ಪೀಕ್ಸೋಟ್ ಈ ಯುದ್ಧದಲ್ಲಿ ಜೀವತೆತ್ತ. ಪುನಃ 1567ರಲ್ಲಿ ಪೋರ್ಚುಗೀಸರು ಅಗಾಧ ಸೈನ್ಯದೊಡನೆ ಬಂದರು. ಮೊದಲು ಅರಬ್ಬರ ಅನಿರೀಕ್ಷಿತ ದಾಳಿಗಳಿಂದ ಪೋರ್ಚುಗೀಸರು ಅಲುಗಿದರೂ ಕೊನೆಗೆ ಮಂಗಳೂರು, ಉಲ್ಲಾಳ ಅವರ ಕೈವಶವಾದುವು. ಅತಿಭಯಂಕರಳಾಗಿದ್ದ ರಾಣಿ ತಲೆಮರೆಸಿಕೊಂಡಳು ಎಂಬುದು ಪೋರ್ಚುಗೀಸನೊಬ್ಬನ ಹೇಳಿಕೆ.

ಪ್ರಾಯಶಃ ಈಕೆಯ ಮಗಳಾದ, ಇನ್ನೊಬ್ಬ ಅಬ್ಬಕ್ಕದೇವಿ ಸಹ ಸಾಹಸಿಯಾಗಿದ್ದಳು. ಈಕೆ ಬಂಗದೊರೆ ವೀರನರಸಿಂಹಲಕ್ಷ್ಮಪ್ಪರಸನ ಹೆಂಡತಿಯಾಗಿದ್ದಳು. ಇವಳೂ ಬಂಗರ ವಿರುದ್ಧ ನಿಂತುದಲ್ಲದೆ, ಬಿದನೂರಿನ ವೆಂಕಟಪ್ಪನಾಯಕನ ಸಹಾಯ ಪಡೆದು ಪೋರ್ಚುಗೀಸರನ್ನು ಸೋಲಿಸಿದ್ದಂತೆ ತಿಳಿಯುತ್ತದೆ. ಈ ಘಟನೆ ನಡೆದದ್ದು 1618ರಲ್ಲಿ. 1623ರಲ್ಲಿ ಮಂಗಳೂರಿಗೆ ಬಂದಿದ್ದ ಇಟಲಿಯ ಪ್ರವಾಸಿ ಪಿಯತ್ರೊಡೆಲ್ಲಾವೆಲ್ಲ ಈಕೆಯ ಅಸಾಧಾರಣ ಧೈರ್ಯವನ್ನು ಮನಃಪೂರ್ವಕವಾಗಿ ಹೊಗಳಿದ್ದಾನೆ. (ವಿ.ಜಿ.ಕೆ.)

**ಅಬ್ಬಲೂರು :** ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಹಿರೇಕೆರೂರಿಗೆ 10ಕಿಮೀ ಉತ್ತರದಲ್ಲಿರುವ ಒಂದು ಹಳ್ಳಿ.

ಇದು ಒಂದು ಕಾಲಕ್ಕೆ ದೊಡ್ಡ ನಗರವಾಗಿತ್ತೆಂಬ ಪ್ರತೀತಿ ಇದೆ. ಆಗ ಸುತ್ತ ಮುತ್ತಲ ಬೋಗಾವಿ, ಸುತ್ಕೋಟಿ, ನೂಲ್ಗೇರಿ, ದೂಪದಹಳ್ಳಿ ಮತ್ತು ಯತ್ತಿನ ಹಳ್ಳಿಗಳನ್ನೂ ಒಳಗೊಂಡಿದ್ದಿರಬಹುದು. ಇಲ್ಲಿರುವ ಅನೇಕ ಅವಶೇಷಗಳಲ್ಲಿ ಈಗ ದೊರೆತಿರುವ 20 ಶಾಸನಗಳು ಚಾರಿತ್ರಿಕವಾಗಿ ಮುಖ್ಯವಾದುವು. ಇವುಗಳಿಂದ 12ನೆಯ ಶತಮಾನದಲ್ಲಿ ಈ ಊರಿನಲ್ಲಿ ಜೈನರ ವಸತಿ ಹೆಚ್ಚಾಗಿತ್ತೆಂದೂ ಜೈನರ ಬಸದಿಯೊಂದಿತ್ತೆಂದೂ ತಿಳಿಯುತ್ತದೆ. ಶಾಸನಗಳಲ್ಲಿ ಏಕಾಂತದ ರಾಮಯ್ಯನ (ನೋಡಿ) ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದವು ಮುಖ್ಯವಾದವು.

ಇಲ್ಲಿರುವ ಬ್ರಹ್ಮೇಶ್ವರ ಮತ್ತು ಸೋಮೇಶ್ವರ ದೇವಾಲಯಗಳು ವಾಸ್ತು ಮತ್ತು ಶಿಲ್ಪದೃಷ್ಟಿಯಿಂದ ಅಷ್ಟೇನೂ ಮಹತ್ವದವಲ್ಲವಾದರೂ ಏಕಾಂತದ ರಾಮಯ್ಯ ಇಲ್ಲಿ ನಡೆಸಿದನೆನ್ನಲಾದ ಪವಾಡಗಳಿಂದ ಅವು ಪ್ರಸಿದ್ಧವಾಗಿವೆ.

ಬ್ರಹ್ಮೇಶ್ವರ ದೇವಾಲಯ ಚಾಳುಕ್ಯ ರೀತಿಯಲ್ಲಿ ಕಟ್ಟಿದ ಒಂದು ಸರಳವಾದ ಕಟ್ಟಡ. ಚೌಕನಾದ ಇದರ ಗರ್ಭಗೃಹದ ಗೋಡೆಗಳು ಸರಳವಾಗಿದ್ದು ಮೇಲೆ ಮೂರಂತಸ್ತಿನ ವಿಮಾನವಿದೆ. ಸೋಮೇಶ್ವರ ದೇವಾಲಯ ತ್ರಿಕೂಟಾಚಲವಾಗಿದ್ದು ಇದರ ಮುಂದೆ ದೊಡ್ಡದಾದ ತೆರೆದ ಮುಖಮಂಟಪವಿದೆ. ಇದನ್ನು ಏಕಾಂತದ ರಾಮಯ್ಯ ಕಟ್ಟಿಸಿದನೆಂದು ಶಾಸನದಲ್ಲಿ ಹೇಳಿದ್ದರೂ ಬಹುಶಃ ಮೂಲ ದೇವಾಲಯ ಮಾತ್ರ ಆತನ ಕಾಲದಲ್ಲಿ ನಿರ್ಮಿತವಾಗಿದ್ದು, ಉಳಿದೆರಡು ಗರ್ಭಗುಡಿಗಳನ್ನೂ ಮುಂದಿನ ವಿಸ್ತರಣೆಯನ್ನೂ ಅನಂತರ ಕಟ್ಟಿರಬೇಕು. ಏಕೆಂದರೆ ಆ ಗರ್ಭಗುಡಿಗಳಲ್ಲಿ ಏಕಾಂತದ ರಾಮಯ್ಯ ಮತ್ತು ಅಗ್ಗಹೊನ್ನಯ್ಯರ ಹೆಸರಿನಲ್ಲಿ ಲಿಂಗಗಳನ್ನು ಸ್ಥಾಪಿಸಿದೆ.

ಸೋಮೇಶ್ವರ ದೇವಾಲಯದ ಗೋಡೆಗಳ ಮೇಲೆ ರಾಮಯ್ಯನ ಹಲವು ಪವಾಡಗಳನ್ನು ಶಿಲ್ಪಿಸಿರುವುದಲ್ಲದೆ ಅವುಗಳ ಕೆಳಗೆ ವಿವರಗಳನ್ನೂ ಕೊಡುವ ಶಾಸನಗಳಿವೆ. ಏಕಾಂತದ ರಾಮಯ್ಯ ಜೈನರನ್ನು ಸೋಲಿಸಿದ ವಿವರಗಳನ್ನು ದೊಡ್ಡದೊಂದು ಶಾಸನ ತಿಳಿಸುತ್ತದೆ. ಏಕಾಂತದ ರಾಮಯ್ಯ ಬ್ರಹ್ಮೇಶ್ವರ ದೇವಸ್ಥಾನದ ಬಳಿ ಜಿನಬಿಂಬಕ್ಕೆ ಪ್ರತಿಯಾಗಿ ತನ್ನ ತಲೆಯನ್ನು ಪಣವಾಗಿಟ್ಟು ತಲೆಯನ್ನು ಕತ್ತರಿಸಿಕೊಂಡು ಮತ್ತೆ ಪಡೆದಾಗ ಸಂಕಗಾವುಂಡ ಬಸದಿಯನ್ನು ಒಡೆಯಲು ಬಿಡದೆ ಸೈನ್ಯವನ್ನೊಡ್ಡಿದಾಗ ಕಾದಿ ಗೆದ್ದು ಲಿಂಗ ಪ್ರತಿಷ್ಠೆ ಮಾಡಿದುದನ್ನು ವಿವರವಾಗಿ ತೋರಿಸುವ ಶಿಲ್ಪ ಪ್ರಮುಖವಾದುದು. ಇದಲ್ಲದೆ ಸಂಕಗಾವುಂಡ ಏಕಾಂತದ ರಾಮಯ್ಯನಿಗೆ ಓಲೆಯನ್ನು ಕೊಡುತ್ತಿರುವ ಶಿಲ್ಪ ಸೋಮೇಶ್ವರ ದೇವಾಲಯದ ಬಾಗಿಲಿನ ಎಡಕ್ಕೂ ಏಕಾಂತದ ರಾಮಯ್ಯ ಜಿನಬಿಂಬವನ್ನೊಡೆದು ಲಿಂಗಪ್ರತಿಷ್ಠೆ ಮಾಡುತ್ತಿರುವ ಶಿಲ್ಪ ಬಲಕ್ಕೂ ಇವೆ. ಇವುಗಳೊಂದಿಗೆ ಶಿವನಿಗೆ ಜೇಡರ ದಾಸಿಮಯ್ಯ ವಸ್ತ್ರವನ್ನು ಕೊಡುತ್ತಿರುವ ಶಿಲ್ಪವು, ಶಿವ ಕುಂಬಾರ ಗುಂಡಯ್ಯನ ಮುಂದೆ ನಾಟ್ಯವಾಡಿದ ಶಿಲ್ಪವೂ ಇವೆ. ಇವು ಶಿವಶರಣರ ವಿಷಯವಾಗಿ ದೊರೆತ ಅತ್ಯಂತ ಪ್ರಾಚೀನ ಶಿಲ್ಪ ಮತ್ತು ಶಾಸನಾಧಾರಗಳಾಗಿವೆ. (ಎಂ.ಎಚ್.)

**ಅಬ್ಬಾಸ್, ಖ್ವಾಜಾ ಅಹಮದ್ :** 1914–1987. ಹೆಸರಾಂತ ಭಾರತೀಯ ಪತ್ರಿಕೋದ್ಯಮಿ, ಕಾದಂಬರಿಕಾರ, ಕಥೆಗಾರ. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ತಮ್ಮ ತೀಕ್ಷ್ಣವೂ ಸ್ಫುಟವೂ ಆದ ಬರೆಹದಿಂದ ಪ್ರಸಿದ್ಧಿಗೆ ಬಂದವರು.

1914ರಲ್ಲಿ ಪಾಣಿಪತ್‌ನಲ್ಲಿ ಜನನ. ಬಿ.ಎ. ಮತ್ತು ಎಲ್‌ಎಲ್.ಬಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಬಾಂಬೆ ಕ್ರಾನಿಕಲ್ ಪತ್ರಿಕೆಯಲ್ಲಿ ಸಿನಿಮಾ ವಿಮರ್ಶಕರಾಗಿ ಸೇರಿದರು. ಇವರ ವಿಮರ್ಶೆ ಎಷ್ಟು ಪರಿಣಾಮಕಾರಿಯಾಗಿತ್ತು ಎಂದರೆ ಇವರನ್ನು ವಜಾ ಮಾಡದಿದ್ದರೆ ಪತ್ರಿಕೆಯನ್ನು ಬಹಿಷ್ಕರಿಸುವುದಾಗಿ ಸಿನಿಮಾ ನಿರ್ಮಾಪಕರು ಬೆದರಿಕೆ ಹಾಕಿದರು. ಪತ್ರಿಕೆಯ ಆಡಳಿತವು ಇವರನ್ನು ಸಂಪಾದಕೀಯ ವಿಭಾಗಕ್ಕೆ ವರ್ಗ ಮಾಡಿತು. ಇಲ್ಲಿ ಲಾಸ್ಟ್ ಪೇಜ್ ಎನ್ನುವ ವಿಭಾಗವನ್ನು ಪ್ರಾರಂಭಿಸಿ ಅಸಾಧಾರಣ ಖ್ಯಾತಿಯನ್ನು ಪಡೆದರು. ಆಜಾದ್ ಕಾಮ್ ಎನ್ನುವ ಕಾವ್ಯನಾಮದಲ್ಲಿ ಇವರು ಅನೇಕ ಕವನಗಳನ್ನು ಬರೆದಿದ್ದಾರೆ. ಇವರದು ಪ್ರೇಮವಿವಾಹ. ಪತ್ನಿ ಮುಜ್ತಾಬಾಯ್ ಬೇಗಮ್. ದೇಶದ ವಿಭಜನೆಯಾದಾಗ ಅಬ್ಬಾಸ್ ಕುಟುಂಬದವರು ಬಹು ಕಷ್ಟದಿಂದ, ಯಾತನೆಯನ್ನು ಅನುಭವಿಸಿ ಭಾರತಕ್ಕೆ ಬಂದರು.

ಇವರು ನಾಳೆ ನಮ್ಮದು ( 1943) ಹಲವಾರು ಆದರ್ಶಗಳನ್ನು ಮುಂದಿಡುತ್ತದೆ. ರಾಷ್ಟ್ರೀಯತೆ, ವಾಮಪಂಥೀಯ ಚಿಂತನೆ, ವಿಚಾರಧಾರೆ ಸರ್ವ ಸಮಾನತೆ ಎಲ್ಲ ಆದರ್ಶಗಳ ಉತ್ಸಾಹದ ನಿರೂಪಣೆ ಮತ್ತು ಅಸ್ಪೃಶ್ಯತೆಗಳ ಖಂಡನೆ ಇಲ್ಲಿ ಕಾಣುತ್ತದೆ. ಮುಖ್ಯ ಪಾತ್ರ ಪಾರ್ವತಿ ತನ್ನ ನೃತ್ಯ ಪ್ರತಿಭೆಯನ್ನು ಜನತಾ ರಂಗಮಂದಿರದ ಸೇವೆಗೆ ಅರ್ಪಿಸುತ್ತಾಳೆ. ಅವಳ ಗಂಡ ವೈದ್ಯ, ಯುದ್ಧದಲ್ಲಿ ಗಾಯಗೊಂಡವರ ಸೇವೆಗಾಗಿ ಚೀನಕ್ಕೆ ಹೋಗುತ್ತಾನೆ.

ಸಾವಿಗೆ ಸೋಲು (1944), ರಕ್ತ ಮತ್ತು ಕಲ್ಲುಗಳು, ಇನ್‌ಕಿಲಾಬ್ (1949) ಮೊದಲಾದ ಕೃತಿಗಳು ಇಂಡೊ-ಆಂಗ್ಲಿಯನ್ ಸಾಹಿತ್ಯದಲ್ಲಿ ಅಬ್ಬಾಸರಿಗೆ ಗಮನಾರ್ಹ ಸ್ಥಳವನ್ನು ಗಳಿಸಿಕೊಟ್ಟವೆ. ಇನ್‌ಕಿಲಾಬ್ (ಕ್ರಾಂತಿ) ಐತಿಹಾಸಿಕ ಕಾದಂಬರಿ; ಸ್ವಾತಂತ್ರ್ಯ ಪೂರ್ವದ ಮೂವತ್ತು ವರ್ಷಗಳ ಇತಿಹಾಸ ಇದರ ವಸ್ತು. ದೇಶದ ವೈಚಾರಿಕತೆಯನ್ನೂ ಕ್ರಿಯಾಶೀಲತೆಯನ್ನೂ ರೂಪಿಸಿದ ಗಾಂಧಿ, ನೆಹರು, ರಾಜಾಜಿ, ವಲ್ಲಭಭಾಯಿ ಪಟೇಲ್, ಆಜಾದ್, ಅಬ್ದುಲ್ ಗಫಾರ್ ಖಾನ್ ಮೊದಲಾದ ನಾಯಕರು ಇಲ್ಲಿ ಕಾಣಿಸಿಕೊಳ್ಳುತ್ತಾರೆ. ರೌಲತ್ ಶಾಸನ ಮತ್ತು ಜಲಿಯನ್‌ವಾಲಾಬಾಗಿನ ಕಷ್ಟದ ಯುಗವನ್ನು ಕಾದಂಬರಿ ಚಿತ್ರಿಸಿ 1931ರ ಗಾಂಧಿ–ಇರ್ವಿನ್ ಒಪ್ಪಂದದೊಡನೆ ಮುಕ್ತಾಯವಾಗುತ್ತದೆ. ಕೃತಿಯ ನಾಯಕ ಅನ್ವರ್ ಈ ಮಹಾವ್ಯಕ್ತಿಗಳ ಪ್ರಭಾವದಲ್ಲಿ ಬೆಳೆಯುತ್ತಾನೆ. ರಾಷ್ಟ್ರೀಯ ಆಂದೋಳನದಲ್ಲಿ ಭಾಗವಹಿಸುತ್ತಾನೆ. ಈತ ಹಿಂದೂ ವರ್ತಕನೊಬ್ಬನ ಪ್ರೇಯಸಿಯ ಮಗ. ಮುಸ್ಲಿಂ ಸಾಕುತಂದೆಯ ಆಶ್ರಯದಲ್ಲಿ ಬೆಳೆದ ಎನ್ನುವುದು ಕಡೆಯಲ್ಲಿ ಬೆಳಕಿಗೆ ಬರುತ್ತದೆ. ನಾಯಕನ ವೈಯಕ್ತಿಕ ಜೀವನವನ್ನೂ ನಾಡಿನ ಜೀವನದ ಒಂದು ಎಳೆಯನ್ನಾಗಿ ಕಾಣಬೇಕು.

ಇನ್‌ಕಿಲಾಬ್ ಕಾದಂಬರಿ ರಷ್ಯನ್ ಭಾಷೆಗೆ ಅನುವಾದಾಗ ಬಹು ಜನಪ್ರಿಯವಾಯಿತು. 90,000 ಪ್ರತಿಗಳು ಮಾರಾಟವಾದವು. ಕಲ್ಲಿನ ಹಾಸಿಗೆಯ ಮೇಲೆ ಒಂದು ಸಾವಿರ ರಾತ್ರಿಗಳು ಎಂಬ ಕಾದಂಬರಿ ಮುಂಬಾಯಿಯಲ್ಲಿ ರಸ್ತೆಗಳ ಅಂಚಿನ ಕಲ್ಲುಗಳ ಮೇಲೆ ವಾಸಿಸುವವರ ಬಾಳಿನ ಕಥೆ. ಅಬ್ಬಾಸ್ ಅವರ 'ಅಂಡ್ ಒನ್ ಡಿಕ್ ನಾಟ್ ಕಮ್ ಬ್ಯಾಕ್' ಕಾದಂಬರಿಯನ್ನು ಆಧರಿಸಿ ಖ್ಯಾತ ನಿರ್ದೇಶಕ ವಿ. ಶಾಂತಾರಾಂ ಅವರು 'ಡಾ ಕೊಟ್ನೀಸ್ ಕಿ ಅಮರ್ ಕಹಾನಿ' ಚಿತ್ರವನ್ನು ನಿರ್ಮಿಸಿದರು.

ಅಬ್ಬಾಸ್ ತಮ್ಮ ಕಥೆ ಮತ್ತು ಕಾದಂಬರಿಗಳಲ್ಲಿ ಭಾರತದ ಇತ್ತೀಚಿನ ಇತಿಹಾಸದ ಒಂದು ಮಹತ್ತ್ವಪೂರ್ಣ ಅವಧಿಯನ್ನು ವಿವರಿಸುವ ಮತ್ತು ಕಾಲ್ಪನಿಕ ಅಂಶವನ್ನೂ ಚಾರಿತ್ರಿಕ ವಾಸ್ತವಾಂಶವನ್ನೂ ಸಮರಸಗೊಳಿಸುವ ಪ್ರಯತ್ನ ಮಾಡಿದ್ದಾರೆ. ಈ ಕೃತಿಗಳಲ್ಲೂ ಲೇಖನಗಳಲ್ಲೂ ಅಬ್ಬಾಸರದು ತೀಕ್ಷ್ಣ ಶೈಲಿ. ರಾಷ್ಟ್ರೀಯತೆ ಮತ್ತು ದೀನದಲಿತರಲ್ಲಿ ಅನುಕಂಪ ಇವರ ಬರೆಹಗಳಲ್ಲಿ ಎದ್ದು ಕಾಣುತ್ತವೆ. ಬಾಂಬೆ ಕ್ರಾನಿಕಲ್, ಬ್ಲಿಟ್ಸ್ ಪತ್ರಿಕೆಗಳಿಗೆ ಇವರು ವಾರವಾರವೂ ಬರೆದ ಲೇಖನಗಳು ಬಹು ಜನಪ್ರಿಯವೆನಿಸಿವೆ. ಐ ರೈಟ್ ಆ್ಯಸ್ ಐ ಫೀಲ್ ಎಂಬ ಇವರ ಪ್ರಬಂಧಸಂಕಲನ ಪ್ರಚಲಿತ ವಿಷಯಗಳನ್ನು ಸಮರ್ಥವಾಗಿ ರೂಪಿಸಿದೆ.

ಅಬ್ಬಾಸ್ ಅವರಿಗೆ ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ. ಭೂಪಾಲ್ ಉರ್ದು ಅಕಾಡೆಮಿ ಪ್ರಶಸ್ತಿ, ಹರಿಯಾಣ ಸರ್ಕಾರದ ಪ್ರಶಸ್ತಿ, ಷೇರ್ ಔರ್ ಸಪ್ನ ಚಲನಚಿತ್ರಕ್ಕೆ ರಾಷ್ಟ್ರಪತಿಗಳ ಪದಕ, ಪದ್ಮಶ್ರೀ ಪ್ರಶಸ್ತಿ, ಕಾರ್ಲೊವಿವೇರಿ ಫಿಲ್ಮ್ ಫೆಸ್ಟಿವಲ್ ನ ಆರ್ಟ್ ಅಕಾಡೆಮಿ ಪ್ರಶಸ್ತಿ ಸ್ಪೇನಿನ ಘೂಮನ್ ಪ್ರಶಸ್ತಿ, ಅಮೆರಿಕದ ಸಾಂತ ಬಾರ್ಬರ ಪ್ರಶಸ್ತಿ, ಅವು ಇವರಿಗೆ ಸಂದ ಗೌರವಗಳಲ್ಲಿ ಕೆಲವು. (ಎಲ್.ಎಸ್.ಎಸ್.)

**ಅಬ್ಬಾಸಿದ್ ಕಲೀಫರು :** ಇಸ್ಲಾಂ ಚರಿತ್ರೆಯಲ್ಲಿ ಇವರ ಸಂತತಿ ಪ್ರಸಿದ್ಧವಾದುದು. ಇವರು ಮಹಮ್ಮದ್ ಪೈಗಂಬರನ ಚಿಕ್ಕಪ್ಪ ಅಲ್ ಅಬ್ಬಾಸ್ ಎಂಬುವವನ ಮನೆತನಕ್ಕೆ ಸೇರಿದವರು. ಅಬ್ದುಲ್ ಅಬ್ಬಾಸ್ ಪ್ರ.ಶ. 749ರಲ್ಲಿ ಅಲ್–ಸಫಾ ಎಂಬ ಬಿರುದಿನಿಂದ ತಾನೇ ಕಲೀಫನೆಂದು ಘೋಷಿಸಿಕೊಂಡ. ಈತ ತನ್ನ ಹಿಂದಿನ ಉಮ್ಮಾಯಿದ್ ಸಂತತಿಯನ್ನು ನಿರ್ದಯೆಯಿಂದ ಅಂತ್ಯಗೊಳಿಸಿದ. ಅಬ್ದುಲ್ ಅಬ್ಬಾಸನ ಸಹೋದರನೂ ಉತ್ತರಾಧಿಕಾರಿಯೂ ಆದ ಅಬ್ದುಲ್ ಜಾಫರ್ ಅಲ್–ಮನ್ಸೂರನು ಬಾಗ್ದಾದ್ ನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಈ ಸಂತತಿಯ ಮೊದಲಿನ ಒಂಬತ್ತು ಜನ ರಾಜರು ಅತ್ಯಂತ ಸಮರ್ಥರು. ಈ ಒಂಬತ್ತು ಜನ ರಾಜರಲ್ಲಿ ಹಾರೂನ್ ಮತ್ತು ಅವನ ಮಗ ಮಾಮೂನ್‌ರ ಆಳ್ವಿಕೆ

ಅತ್ಯಂತ ಶ್ಲಾಘನೀಯವಾದದ್ದು. ಇವರ ಕಾಲದಲ್ಲಿ ಸಾಮ್ರಾಜ್ಯ ದಾಹವಡಗಿ ಸಂಸ್ಕೃತಿ ವಿಕಾಸಹೊಂದಿತು. ಈ ಸಾಮ್ರಾಟರಲ್ಲಿ 780–809ರ ವರೆಗೆ ಆಳಿದ ಹರೂನ್–ಇಲ್–ರಷೀದ್ ಅತ್ಯಂತ ಪ್ರಸಿದ್ಧ. ಈತನ ಕಾಲದಲ್ಲಿ ಸಾರ್ವಜನಿಕ ಆಡಳಿತ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಇವನಿಗೆ ಸಂಬಂಧಿಸಿದಂತೆ ಅರೇಬಿಯನ್ ನೈಟ್ಸ್‌ನಲ್ಲಿ ಆಹ್ಲಾದಕರವಾದ ಕಥೆಗಳಿವೆ. ಸನ್ಮಾರ್ಗಿಯೂ ದಯಾಪರನೂ ಆದ ಇವನು ನಿರ್ಗತಿಕರಿಗೆ ಪರಿಹಾರವ ನ್ನೊದಗಿಸಲು ರಾತ್ರಿ ವೇಳೆ ಬಾಗ್ದಾದ್ ನಗರದ ರಸ್ತೆಗಳಲ್ಲಿ ಸಂಚರಿಸುತ್ತಿದ್ದ. ಪ್ರಜಾಹಿತೈಷಿಯಾದ ಈತ ಮಸೀದಿ, ವಿದ್ಯಾಶಾಲೆ, ವೈದ್ಯಶಾಲೆ, ಅನ್ನಸತ್ರ, ರಸ್ತೆಗಳನ್ನು, ಸೇತುವೆಗಳನ್ನು ಕಾಲುವೆಗಳನ್ನು ನಿರ್ಮಿಸಿದ. ವಿಜ್ಞಾನ ಮತ್ತು ಸಾಹಿತ್ಯದಂತೆ ಸಂಗೀತಕ್ಕೂ ಗೌರವಸ್ಥಾನವನ್ನು ದೊರಕಿಸಿಕೊಟ್ಟ ಮಹಮದೀಯರಲ್ಲಿ ಈತನೇ ಮೊದಲಿಗ. ವಿದ್ಯೆ ಮತ್ತು ಕಲೆಯ ಪ್ರೋತ್ಸಾಹದಿಂದಾಗಿ ಅವನ ರಾಜಾಸ್ಥಾನ ಪ್ರಸಿದ್ಧಿ ಪಡೆಯಿತು. ಈತ ಅನೇಕ ವೈಜ್ಞಾನಿಕ ಗ್ರಂಥಗಳನ್ನು ಅರಬ್ಬಿಗೆ ತರ್ಜುಮೆ ಮಾಡಿಸಿದ. ಸುಪ್ರಸಿದ್ಧ ವೈಯಾಕರಣಿ ಅಸ್ಮ್–ಯಿ, ಸಂಗೀತಗಾರನಾದ ಮೊಸುಲಿ ಹಾಗೂ ವೈದ್ಯನಾದ ಗೇಬ್ರಿಯಲ್ ಇವರು ಈತನ ಸಮಕಾಲೀನರು. ಈತ ತಾನೇ ಕವಿಯಾಗಿದ್ದುದಲ್ಲದೆ ಕವಿಗಳ ಉದಾರ ಪೋಷಕನೂ ಆಗಿದ್ದ. ಪಶ್ಚಿಮ ದೇಶಗಳಲ್ಲಿ ಪ್ರಸಿದ್ಧನಾದ ಶಾರ್ಲ್‌ಮನ್‌ನೊಡನೆಯೂ ಮತ್ತು ಪೂರ್ವದಲ್ಲಿ ಚೀನ ದೇಶದೊಡನೆಯೂ ಸಂಪರ್ಕ ಹೊಂದಿದ್ದ. ಹರೂನ್–ಅಲ್–ರಷೀದ್ ಶಾರ್ಲ್‌ಮನ್ನನಿಗೆ ಕಳುಹಿಸಿಕೊಟ್ಟಿದ್ದ ಗಡಿಯಾರವನ್ನು ಅದ್ವಿತೀಯ ಕಲಾಪೂರ್ಣ ವಸ್ತುವೆನ್ನಲಾಗಿದೆ.

ಹರೂನ್–ಅಲ್–ರಷೀದ್‌ನ ಮಗನೂ ಉತ್ತರಾಧಿಕಾರಿಯೂ ಆದ ಮಾಮೂನ್ ಈ ಸಂತತಿಯ ಎರಡನೆಯ ಅತಿ ಮುಖ್ಯ ಚಕ್ರವರ್ತಿ. ಈತ 813–833ರ ವರೆಗೆ ಆಳಿದ. ಸಿಸಿಲಿಯನ್ನು ಜಯಿಸಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಈತನ ಆಳ್ವಿಕೆಯನ್ನು ಇಸ್ಲಾಂ ಚರಿತ್ರೆಯ ಅಗಸ್ಟನ್ ಕಾಲ ಎಂದು ಕರೆಯಲಾಗಿದೆ. ಈತನ 20 ವರ್ಷಗಳ ಆಳ್ವಿಕೆಯಲ್ಲಿ ಸಾಮ್ರಾಜ್ಯ ಸರ್ವತೋಮುಖವಾದ ಅಭಿವೃದ್ಧಿಯನ್ನು ಪಡೆಯಿತು. ಗಣಿತಶಾಸ್ತ್ರ, ತತ್ತ್ವಶಾಸ್ತ್ರ, ಖಗೋಳ ಶಾಸ್ತ್ರ, ವೈದ್ಯಶಾಸ್ತ್ರ, ವ್ಯಾಕರಣ, ಚರಿತ್ರೆ ಮತ್ತು ಭಾಷಾಶಾಸ್ತ್ರ ಇವುಗಳಲ್ಲಿ ವಿಶೇಷ ಪ್ರಗತಿ ಉಂಟಾಯಿತು. ಮಾಮೂನ್ ಚಕ್ರವರ್ತಿ ತನ್ನ ಪ್ರಜೆಗಳ ನಿಜವಾದ ಪುರೋಭಿವೃದ್ಧಿ ಶಿಕ್ಷಣ ಮತ್ತು ಸಂಸ್ಕೃತಿಯನ್ನವಲಂಬಿಸಿದೆ ಎಂದು ನಂಬಿದ್ದನಲ್ಲದೆ ಮತೀಯ ಅಥವಾ ಜಾತೀಯ ವಿಭೇದಗಳಿಂದ ಹೊರತಾಗಿದ್ದ. ಈತ ಸ್ಥಾಪಿಸಿದ ರಾಜ್ಯಸಲಹಾಸಮಿತಿಯಲ್ಲಿ ಮಹಮದೀಯರೂ, ಕ್ರೈಸ್ತರೂ ಯಹೂದಿಗಳೂ ಜೊರಾಸ್ಟ್ರಿಯನ್ನರೂ ಸೇಬಿಯನ್ನರೂ ಇದ್ದರು. ಮಹಮದೀಯರಲ್ಲದವರಿಗೂ ವಿಚಾರ ಹಾಗೂ ಮತೀಯ ಸ್ವಾತಂತ್ರ್ಯವಿತ್ತು. ಈತನ ಕಾಲದಲ್ಲಿ ಅರಬ್ ಸಾಮ್ರಾಜ್ಯದಲ್ಲಿ ಹನ್ನೊಂದು ಸಹಸ್ರ ಕ್ರೈಸ್ತಪ್ರಾರ್ಥನಾಮಂದಿರಗಳು ನೂರಾರು ಜೊರಾಸ್ಟ್ರಿಯನ್ನರ ಪೂಜಾಮಂದಿರಗಳು ಇದ್ದುವು. ಈತನ ಕಾಲದಲ್ಲಿ ಮುಸ್ಲಿಮರ ಮತೀಯ ಅಂಧಾಭಿಮಾನ ಕಡಿಮೆಯಾಗಿ ಆದರ್ಶ ಸಮಾಜದ ನಿರ್ಮಾಣವಾಯಿತು. ಮಹಮದೀಯ ಸಾಂಪ್ರದಾಯಿಕ ಭಾವನೆಗಳು ಸಾಮಾಜಿಕ ಮತ್ತು ರಾಜಕೀಯ ಪ್ರಗತಿಯನ್ನು ಸ್ಥಗಿತಗೊಳಿಸುತ್ತವೆಂಬುದಾಗಿ ಮಾಮೂನ್ ಅರಿತಿದ್ದನಾದ್ದರಿಂದ ಸಂಕುಚಿತ ಮತೀಯ ಭಾವನೆಗಳಿಂದ ಸಾಮ್ರಾಜ್ಯವನ್ನು ಪಾರುಗೊಳಿಸಿದ. ಈತ ಪ್ರಸಿದ್ಧ ಸಂತನಾದ ಅರ್–ರಿಜ಼ಾ ಎಂಬುವನ ಶಿಷ್ಯ. ಪವಿತ್ರ ಕುರಾನು ಗ್ರಂಥವನ್ನು ಆಳವಾಗೂ ಎಚ್ಚರಿಕೆಯಿಂದಲೂ ಅಭ್ಯಸಿಸಿದ. ತನ್ನ ಬಿಡುವಿನ ವೇಳೆಯನ್ನು ತತ್ತ್ವಶಾಸ್ತ್ರ, ವಿಜ್ಞಾನ ಮತ್ತು ಸಾಹಿತ್ಯಕ್ಕಾಗಿ ವಿನಿಯೋಗಿಸುತ್ತಿದ್ದ. ಮಾನವ ವಿಚಾರಪರತೆಗೆ ಪ್ರಾಮುಖ್ಯ ಕೊಟ್ಟಿದ್ದ. ಈತನದೇ ಆದ ವಿಚಾರಪರ ಪಂಥವನ್ನು ಮುತಾಜಾ಼ ಲೈಟ್ಸ್ ಎಂದು ಕರೆಯಲಾಗಿದೆ. ಈತ ಅಲೆಗ್ಸಾಂಡ್ರಿಯ, ಅಥೆನ್ಸ್ ಮತ್ತು ಭಾರತ ದೇಶಗಳಿಂದ ಅನೇಕ ಗ್ರಂಥಗಳನ್ನು ತರಿಸಿ ತರ್ಜುಮೆ ಮಾಡಿಸಿದ. ಡುಬಾನ್ (ದುವಾನ್, ದೇವನ್) ಎಂಬ ಬ್ರಾಹ್ಮಣ ವಿದ್ವಾಂಸ ತನ್ನ ಸಂಸ್ಕೃತ ಗ್ರಂಥಗಳೆಲ್ಲವನ್ನೂ ಭಾಷಾಂತರಿಸಿದ. ಮಾಮೂನ್ ಖಗೋಳಶಾಸ್ತ್ರಾಭ್ಯಾಸಕ್ಕಾಗಿ ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಿದ. ಈತನ ಕಾಲದಲ್ಲಿ ಸೂರ್ಯಚಲನೆ, ಗ್ರಹಣಗಳು, ಧೂಮಕೇತು ಮುಂತಾದ ಖಗೋಳಶಾಸ್ತ್ರದ ಅಧ್ಯಯನಗಳಲ್ಲಿ ವಿಶೇಷವಾದ ಪ್ರಗತಿಯುಂಟಾಯಿತು. ಭೂಮಿಯ ವ್ಯಾಸವನ್ನು ಲೆಕ್ಕಾಚಾರ ಮಾಡಲಾಯಿತು. ಅಬುಲ್ ಹಸನ್ ದೂರದರ್ಶಕ ಯಂತ್ರವನ್ನು ಕಂಡುಹಿಡಿದ. ರೇಖಾಗಣಿತ, ಹವಾಮಾನಶಾಸ್ತ್ರ ಕಣ್ಣಿನ ರಚನೆ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳು, ಯಂತ್ರಶಾಸ್ತ್ರ ಮತ್ತು ವೈದ್ಯಕೀಯಶಾಸ್ತ್ರ ಇವುಗಳಿಗೆ ಸಂಬಂಧಿಸಿದಂತೆ ಅನೇಕ ಗ್ರೀಕ್ ಗ್ರಂಥಗಳು ಭಾಷಾಂತರವಾದುವು. ಮಾಮೂನನ ತರುವಾಯ ಅಬ್ಬಾಸಿದ್ ಸಂತತಿ ಕ್ಷೀಣಿಸಿತು. ಕೊನೆಗೆ 1258ರಲ್ಲಿ ಮಂಗೋಲರ ಹಲಾಕುಖಾನನಿಂದ ಕೊನೆಗೊಂಡಿತು. (ಬಿ.ಎಸ್.ಎ.)

**ಅಬ್ಬೊಟ್ಟಾಬಾದ್ :** ಪಶ್ಚಿಮ ಪಾಕಿಸ್ತಾನದ ಪೆಷಾವರ್ ವಲಯದ ಹಜಾರ ಜಿಲ್ಲೆಯ ಒಂದು ನಗರ. ವಿಸ್ತೀರ್ಣ 18.1 ಚ.ಕಿಮೀ. ಜನಸಂಖ್ಯೆ 881000 (2001). ಹಜಾರದ ಪ್ರಥಮ ಡೆಪ್ಯುಟಿ ಕಮೀಷನರ್ ಸರ್ ಜೇಮ್ಸ್ ಆ್ಯಬಟ್‌ನ ಹೆಸರಿನಲ್ಲಿ ಈ ನಗರವನ್ನು (1853) ಸ್ಥಾಪಿಸಲಾಯಿತು. ವಾಯವ್ಯ ಸರಹದ್ದು ಪ್ರಾಂತಗಳ ಮುಖ್ಯ ಪ್ರದೇಶ. ಇದು ಕಂಟೋನ್‌ಮೆಂಟ್, ತಹಸೀಲು ಮತ್ತು ಜಿಲ್ಲಾ ಆಡಳಿತ ಕೇಂದ್ರ. ಸಮುದ್ರಮಟ್ಟದಿಂದ 1255 ಮೀ ಎತ್ತರದಲ್ಲಿದೆ ಬೇಸಗೆ ಗಿರಿಧಾಮ ಮತ್ತು ಆರೋಗ್ಯ ಕೇಂದ್ರ. ಇಲ್ಲಿನ ಪರ್ವತಗಳು ಮಯೋಸಿನ್ ಶಿಲಾಸ್ತರಗಳ ಮರಳು ಶಿಲೆಗಳಿಂದಾಗಿವೆ. ಶುದ್ಧ ಲವಣಶಿಲೆ ಹಾಗೂ ಕಾಗೆಬಂಗಾರ (ಮೈಕ) ನಿಕ್ಷೇಪಗಳು ಇಲ್ಲಿ ದೊರಕಿವೆ. ಇಲ್ಲಿನ ಗಿರಿಜನ ಹೆಚ್ಚಾಗಿ ಬೇಸಾಯದಲ್ಲಿ ತೊಡಗಿದ್ದಾರೆ. ಗೋದಿ, ಬಾರ್ಲಿ, ರೇಪ್ ಎಣ್ಣೆ ಬೀಜಗಳನ್ನು ಚಳಿಗಾಲದ ಬೆಳೆಗಳನ್ನಾಗಿ ಮತ್ತು ಜೋಳ, ಸಜ್ಜೆಗಳನ್ನು ಬೇಸಗೆ ಬೆಳೆಗಳನ್ನಾಗಿ ಬೆಳೆಯುತ್ತಾರೆ. ಸಿಂಧೂ ಮತ್ತು ಕಿಷನ್‌ಗಂಗಾನದಿಗಳ ನಡುವಿನ ಮುಖ್ಯ ನಗರವಾಗಿರುವುದರಿಂದಲೂ ಆಕ್ರಮಿತ ಕಾಶ್ಮೀರ ವಿಭಾಗದ ಗಡಿಯಲ್ಲಿದ್ದು, ಮುಜಫರಾಬಾದ್ ಮುಖಾಂತರ ಶ್ರೀನಗರಕ್ಕಿರುವ ಏಕಮಾತ್ರ ರಸ್ತೆ ಮಾರ್ಗದ ಮಧ್ಯದಲ್ಲಿರುವುದರಿಂದಲೂ ಈ ನಗರದ ಪ್ರಾಮುಖ್ಯ ಹೆಚ್ಚಿದೆ. (ಕೆ.ಆರ್.ಆರ್.)

**ಅಬ್ರಕಡಬ್ರ :** ಅನಿಷ್ಟ ಸಂಭವಿಸದಂತೆ ರಕ್ಷಾಯಂತ್ರವಾಗಿ ಅಥವಾ ತಾಯಿತಿಯಾಗಿ ಧರಿಸಿಕೊಳ್ಳುತ್ತಿದ್ದ ಶಿಲೆಗಳ ಮೇಲೆ ಕೆತ್ತಲಾದ ಒಂದು ಶಬ್ದ. ಅಲೆಗ್ಸಾಂಡ್ರಿಯದ ಬ್ಯಾಸಿಲೈಡಿಸ್ ಪಂಥದ ಅಧ್ಯಾತ್ಮರಹಸ್ಯಜ್ಞಾನವಾದಿಗಳು (ಉಚ್ಛ್ರಾಯಕಾಲ ಪ್ರ.ಶ.120–140) ಇದನ್ನು ದುರದೃಷ್ಟ ಹಾಗೂ ರೋಗಗಳ ವಿರುದ್ಧವಾಗಿ ಉಪಯುಕ್ತ ಶಕ್ತಿಯನ್ನು ಆಹ್ವಾನಿಸಲು ಮಾಂತ್ರಿಕಸೂತ್ರವಾಗಿ ಬಳಸುತ್ತಿದ್ದರು. ಈ ಶಬ್ದವನ್ನು ಮೊದಲು ಸಂಪೂರ್ಣವಾಗಿಯೂ ಬಳಿಕ ಒಂದೊಂದು ಅಕ್ಷರವನ್ನು ಪ್ರತಿಸಾರಿ ಕಡಿಮೆ ಮಾಡುತ್ತಲೂ ಹನ್ನೊಂದು ಬಾರಿ ತ್ರಿಕೋಣಾಕಾರದಲ್ಲಿ ಬರೆದು ಈ ಸೂತ್ರವನ್ನು ಸಿದ್ಧಪಡಿಸಲಾಗುತ್ತಿತ್ತು. ಕ್ಲಿಷ್ಟಸಮಸ್ಯೆಗಳನ್ನು ಹೋಗಲಾಡಿಸಲು ಪ್ರಯತ್ನಿಸುವ ಬಾಹ್ಯವಿಚ್ಛೇದಗಳಿಗೆ ತಿರಸ್ಕಾರಪೂರ್ವಕವಾಗಿ ಈ ಶಬ್ದ ಬಳಕೆಯಲ್ಲಿದೆ. (ಜಿ.ಸಿ.ಐ.)

**ಅಬ್ರಾಕ್ಸಸ್ :** ಗ್ರೀಕಿನಲ್ಲಿ ಬರೆದು ಅದರ ಅಕ್ಷರಗಳನ್ನು ಅಂಕೆಗಳನ್ನಾಗಿ ಓದಿದರೆ 365 ಸ್ವರ್ಗಗಳ ಉದ್ಗಮಕ್ಕೆ ಕಾರಣನಾದ ದೇವರ ಹೆಸರಾಗಿ ಈ ಪದವನ್ನು ಅಲೆಗ್ಸಾಂಡ್ರಿಯದ ಬ್ಯಾಸಿಲೈಡಿಸ್ ಪಂಥದ ಅಧ್ಯಾತ್ಮ ರಹಸ್ಯ ಜ್ಞಾನವಾದಿಗಳು ಬಳಸಿದ್ದಾರೆ. (ಜಿ.ಸಿ.ಐ.)

**ಅಬ್ರೆಡೊವಿಚ್, ದ ಸಿತ್ಯ :** 1742–1811. ಸರ್ಬಿಯದ ಸಾಹಿತಿ ಮತ್ತು ಶಿಕ್ಷಣತಜ್ಞ, ಬಡಸಂಸಾರದಲ್ಲಿ ಹುಟ್ಟಿ, ತಬ್ಬಲಿಯಾಗಿ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಅನಂತರ ಅದನ್ನು ತ್ಯಜಿಸಿದ. ಯುರೋಪಿನ ಹಲವು ದೇಶಗಳಲ್ಲಿ ಪ್ರವಾಸ ಮಾಡಿದ. ಸರ್ಬಿಯದಲ್ಲಿ ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದವರಲ್ಲಿ ಮೊಟ್ಟ ಮೊದಲನೆಯವ. ಸರ್ಬಿಯದ ಶಿಕ್ಷಣಮಂತ್ರಿಯಾಗಿ ಮೊಟ್ಟಮೊದಲು ಪ್ರೌಢಶಾಲೆಯನ್ನು ಸ್ಥಾಪಿಸಿದ.

ಈತ ಹಲವು ಭಾಷಾಂತರಗಳನ್ನು ಮಾಡಿದ್ದಾನೆ. ಇವುಗಳಲ್ಲಿ ಈಸೋಪನ ನೀತಿಕಥೆಗಳು (1788) ಮುಖ್ಯವಾದುವು. ಇವನ ಭಾಷಾಂತರಗಳ ಮುಖ್ಯ ಉದ್ದೇಶ ಸರ್ಬಿಯನ್ನರಿಗೆ ವಿದ್ಯಾಭ್ಯಾಸದ ಮಹತ್ತ್ವವನ್ನೂ ಐರೋಪ್ಯ ಸಂಸ್ಕೃತಿಯ ಮೂಲಕ ತಮ್ಮ ಪ್ರಾಚೀನ ಸಂಸ್ಕೃತಿಯನ್ನು ಅರಿಯುವ ಮಹತ್ತ್ವವನ್ನೂ ತಿಳಿಸುವುದು. ಸ್ವತಂತ್ರ ಕೃತಿಗಳಲ್ಲಿ ಮುಖ್ಯವಾದುವು: ಜೀವನ ಮತ್ತು ಸಾಹಸಗಳು (1783). ಇದು ಇವನ ಆತ್ಮವೃತ್ತ. ಸದುಪದೇಶ ಎಂಬುದು ಇನ್ನೊಂದು ಕೃತಿ. ಈತ ನೀತಿಶಾಸ್ತ್ರವನ್ನು ಕುರಿತೂ ಬರೆದಿದ್ದಾನೆ. ನೇರವೂ ಸ್ಫುಟವೂ ಜನಸಾಮಾನ್ಯಭಾಷೆಗೆ ಸಮೀಪವೂ ಆದ ಇವನ ಶೈಲಿಯಲ್ಲಿ ಹಳೆ ಸ್ಲವೋನಿಕ್ ಶಬ್ದಗಳ ಬಳಕೆ ಇಲ್ಲ. ವಿವೇಚನಾಯುಕ್ತವಾದ ವ್ಯವಹಾರಜ್ಞಾನ, ವಿವೇಕಯುತವಾದ ರಾಷ್ಟ್ರಾಭಿಮಾನ, ಶ್ರದ್ಧೆ, ಪ್ರಾಮಾಣಿಕತೆ, ಬೌದ್ಧಿಕಕುತೂಹಲ ಮತ್ತು ವಿದ್ವತ್ತುಗಳನ್ನು ಇವನ ಬರೆಹಗಳಲ್ಲಿ ಕಾಣಬಹುದು. ಇವನ ಕೃತಿಗಳನ್ನು ಓದುವವರ ಸಂಖ್ಯೆ ಕಡಿಮೆಯಾದರೂ ಸರ್ಬಿಯದ ಸಾಹಿತ್ಯ ಮನೋಧರ್ಮದ ಮೇಲೆ ಈತ ಅಪಾರ ಪ್ರಭಾವವನ್ನು ಬೀರಿದ್ದಾನೆ. ಸರ್ಬಿಯದ ಆಧುನಿಕಸಾಹಿತ್ಯದ ಜನಕನಾದ ಸೊಲಾರಿಕೆ ಮತ್ತು ಇತರರು ಇವನ ಕಾರ್ಯವನ್ನು ಮುಂದುವರಿಸಿದ್ದಾರೆ. (ಎಲ್.ಎಸ್.ಎಸ್.)

**ಅಬ್ಸರ್ವರ್ :** ಬ್ರಿಟನ್ನಿನಿಂದ ಪ್ರಕಟವಾದ ಮೊಟ್ಟ ಮೊದಲ ರವಿವಾರದ ವಾರಪತ್ರಿಕೆ. ರವಿವಾರ ಪತ್ರಿಕೆಗಳಲ್ಲಿ ಅತ್ಯಂತ ಪ್ರಬಲ ರಾಜಕೀಯ ಪ್ರಕಟಣೆ ಎನಿಸಿದ ಇದು 4ನೆಯ ಡಿಸೆಂಬರ್ 1791ರಲ್ಲಿ ಆರಂಭವಾಯಿತು. ಮೊದಲಲ್ಲಿ ಶ್ರೀಮದ್ಗಾಂಭೀರ್ಯಕ್ಕೂ ಹಿತಮಿತದ ಹೆಸರಿನಲ್ಲಿ ಸಪ್ಪೆಯ ಬರವಣಿಗೆಗೂ ಆಶ್ರಯವಾಗಿತ್ತು. ಲಾರ್ಡ್ ಆಸ್ಟರ್ ಅವರು ವಹಿಸಿಕೊಂಡಮೇಲೆ (1942ರಿಂದ) ಈ ಪತ್ರಿಕೆಗೆ ವಿಶಿಷ್ಟ ಮಹತ್ತ್ವ ಲಭಿಸಿತು. ಅನಂತರ ರಾಜಕೀಯಕ್ಕೆ ಸಂಬಂಧಿಸಿದಂತೆ ನಿರ್ಭಯವಾದ ಸ್ವತಂತ್ರಮನೋವೃತ್ತಿಯ ಗಂಡುಶೈಲಿಯ ಬರವಣಿಗೆಗೆ ಹೆಸರು ಪಡೆದಿದೆ. ವಿದೇಶ ವ್ಯವಹಾರಗಳ ವರದಿ, ವಿಶ್ಲೇಷಣೆ, ಕಲೆ, ಶಿಕ್ಷಣ ಈ ಪತ್ರಿಕೆಯ ವೈಶಿಷ್ಟ್ಯ. 1976ರಲ್ಲಿ ಅಟ್ಲಾಂಟಿಕ್ ರಿಚ್‌ಫೀಲ್ಡ್ ಕಂಪನಿ ಎಂಬ ಅಮೆರಿಕನ್ ಸಂಸ್ಥೆ ಇದರ ಸ್ವಾಮ್ಯ ಪಡೆಯಿತು ಆದರೆ ರೊಲಾಂಡ್ ರೌಲ್ಯಾಂಡ್ ಎಂಬ ಬ್ರಿಟಿಷ್ ಕೈಗಾರಿಕೋದ್ಯಮಿ 1981ರಲ್ಲಿ ಇದನ್ನು ಅಮೆರಿಕನರಿಂದ ಕೊಂಡುಕೊಂಡ. 1993ರಲ್ಲಿ 'ದಿ ಗಾರ್ಡಿಯನ್' ಪತ್ರಿಕೆ ಇದನ್ನು ಕೊಂಡುಕೊಂಡಿತು. 2008ರಲ್ಲಿ ಇದರ ಪ್ರಸಾರ ಸಂಖ್ಯೆ 453,071. (ಕೆ.ಎಸ್.ಆರ್.)

**ಅಬೈಕ್ :** ಇರಾನಿನ ಖಜಿಸ್ತಾನ್ ಪ್ರಾಂತದಲ್ಲಿಯ ಒಂದು ನಗರ. ಇದರ ಹತ್ತಿರದ ಒಂದು ಬೆಟ್ಟದ ಮೇಲೆ ನಡೆಸಿದ ಆದಿ ಕಬ್ಬಿಣಯುಗದ ಒಂದು ಕಲ್ಗೋರಿ ಉತ್ಖನನದಲ್ಲಿ ಸಾಮಾನ್ಯವಾಗಿ ದೊರೆಯುವ ಮಣ್ಣಿನ ಪಾತ್ರೆಗಳು ಮನುಷ್ಯನ ಅಸ್ಥಿ ಅವಶೇಷಗಳೊಡನೆ ಒಂದು ಮೂರ್ತಿಯೂ ದೊರಕಿರುವುದು ತೀರಾ ಅಪರೂಪದ ಶೋಧನೆ. ಉತ್ಖನನತಜ್ಞರ ಪ್ರಕಾರ ಈ ಶೋಧನೆ ಆದಿ ಕಬ್ಬಿಣಯುಗದ ಜನಸಮುದಾಯದ ಶವಸಂಸ್ಕಾರ ವಿಧಾನದ ಹಲವಾರು ಪ್ರಶ್ನೆಗಳಿಗೆ ಎಡೆಮಾಡಿಕೊಟ್ಟಿದೆ. ಈ ಸಾಂಸ್ಕೃತಿಕ ಹಂತದ ಜನರ ಶವಸಂಸ್ಕಾರ ಕ್ರಿಯೆಯಲ್ಲಿ ಅವರ ಶವಸಂಸ್ಕಾರ ವಿಧಾನವು ವಿಶಿಷ್ಟವಾಗಿತ್ತು. ಈ ಹಂತದ ಕಾಲಮಾನ ಪ್ರ.ಶ.ಪೂ. 1400–500. (ಎ.ಎಸ್.)

**ಅಭಂಗ :** ಮಹಾರಾಷ್ಟ್ರದ ಸಂತರು ತಮ್ಮ ಕಾವ್ಯಸೃಷ್ಟಿಗೆ ವಿಶೇಷವಾಗಿ ಬಳಸಿಕೊಂಡಿರುವ ಛಂದಸ್ಸು. ಕನ್ನಡ ಶರಣರ ವಚನಗಳಿದ್ದಂತೆ, ಹರಿದಾಸರ ಪದಗಳಿದ್ದಂತೆ, ಹಿಂದೀಸಂತರ ದೋಹಾಗಳಿದ್ದಂತೆ, ಮರಾಠೀಸಂತರ ಅಭಂಗ. ಪರಾಭಕ್ತಿಯ ಸಹಜ ಸಮಾಧಿಯ ಅವೇಶದಲ್ಲಿ ಮುಳುಗಿ ತನ್ಮಯರಾಗಿದ್ದಾಗ, ಅಪ್ರಯತ್ನವಾಗಿ ಹೊರಹೊಮ್ಮಿದ ಕಾವ್ಯಧಾರೆ ಇದು. ಆವಿಷ್ಟಸಾಹಿತ್ಯ ಮಹಾರಾಷ್ಟ್ರದಲ್ಲಿ ಚಕ್ರಧರನಿಂದ ಪ್ರವರ್ತಿತವಾದ ಮಹಾನುಭಾವ ಪಂಥದಿಂದ ಸ್ಫೂರ್ತಿ ಪಡೆದು, ಮುಂದೆ ಭಾಗವತಪ್ರಮುಖವಾದ ವರ್ಕರೀಪಂಥದ ಬೆಳಕಿನಲ್ಲಿ ಜ್ಞಾನೇಶ್ವರ (1275–96) ಮೊದಲಾದವರಿಂದ ಬಲಗೊಂಡು ತುಕಾರಾಮನಲ್ಲಿ (1608–50) ಪ್ರೌಢಾವಸ್ಥೆಯನ್ನು ಮುಟ್ಟಿತು. ಅಭಂಗಗಳನ್ನು ಇತರ ಸಂತಕವಿಗಳು ರಚಿಸಿದ್ದರೂ ತುಕಾರಾಮನ ಹೆಸರಿನೊಂದಿಗೇ ಅಭಂಗವು ವಿಜೃಂಭಿಸಿದೆ. ತುಕಾರಾಮನು ತನ್ನ ಸಾಧನೆಯ ಪಥದಲ್ಲಿ ನಡೆಯುತ್ತ ತನಗೊದಗಿದ ಕ್ಲೇಶಪರಿತಾಪಗಳನ್ನು ಮನ ಮುಟ್ಟುವಂತೆ ತನ್ನ ಅಭಂಗಗಳಲ್ಲಿ ಹೆಣೆದಿದ್ದಾನೆ. ಅವನ ಅಂತಃಕರಣ ಶಬ್ದರೂಪವನ್ನು ಪಡೆದು ಅಭಿವ್ಯಕ್ತವಾದಾಗ ಅಭಂಗ ಮೈದಳೆಯಿತೆಂದು ವಿದ್ವಾಂಸರೊಬ್ಬರು ಬಣ್ಣಿಸಿದ್ದಾರೆ. ಅಭಂಗಗಳು ತಾವಾಗಿ ಶ್ರಮವಹಿಸಿ ಮಾಡಿದ ಕೃತಿಗಳಲ್ಲ, ದೇವರೇ ನುಡಿಸಿದ ಹಾಡುಗಳು ಎಂಬರ್ಥವನ್ನು ಕೊಡುವ ತುಕಾರಾಮನ ಅಭಂಗವೊಂದು ಪ್ರಸಿದ್ಧವಾಗಿದೆ (ತುಕಾಮ್ಹಣೆ ಜ್ರೇಂ ಜ್ರೇಂ ಬೋಲಾ। ತ್ರೇಂ ತ್ರೇಂ ಸಾಜೇಯಾ ವಿಟ್ಠಲಾ). ತುಕಾರಾಮನ ಅಭಂಗಗಳು ಎಷ್ಟು ಪ್ರಭಾವಯುತವಾಗಿವೆಯೆಂದರೆ ಮಹಾರಾಷ್ಟ್ರದಲ್ಲಿ ಅವನ ಅಭಂಗವನ್ನು ಹಾಡದ ವ್ಯಕ್ತಿಯೇ ಇಲ್ಲವೆನ್ನುತ್ತಾರೆ. ಅಲ್ಲಿ ಭಾಗವತಪಂಥ ವಿಶೇಷವಾಗಿ ಕುದುರಲು ಈ ಅಭಂಗಗಳು ನೆರವಾದುವು. ಭಕ್ತಸಂತರು ಅತ್ಯುತ್ತಮ ಅನುಭಾವಿಕವಿಗಳಾಗಿದ್ದರೆಂಬುದು ಅಭಂಗಗಳಿಂದ ತಿಳಿದುಬರುತ್ತದೆ. ಈ ಛಂದಸ್ಸು ಅವರಿಂದಲೇ ನಿರ್ಮಿತವಾಯಿತು. ಇದಕ್ಕೆ ಮೂಲವಾಗಿ ಓವೀ (ವೋವೀ) ಎಂಬ ಬಂಧ ಇದ್ದಿತೆಂದು ಹೇಳುತ್ತಾರೆ. ಓವಿಯಲ್ಲಿ ಗಣ, ಮಾತ್ರೆ, ಅಕ್ಷರಗಳು ನಿಯಮಿತವಾಗಿ ಬರುವುದಿಲ್ಲ. ಪ್ರತಿ ಓವಿಯಲ್ಲೂ ಒಂದೇ ಅಂತ್ಯಾಕ್ಷರವುಳ್ಳ ನಾಲ್ಕು ಚರಣಗಳಿದ್ದು ನಾಲ್ಕನೆಯ ಚರಣ ಪದಭಾಗವಾಗಿರುತ್ತದೆ.

ವೇದಶಾಸ್ತ್ರಾ ಚಾ ಮಥಿತಾರ್ಥೂ
ಮರಾಠೀ ಹೋ ಯಾ ಫಲಿತಾರ್ಥೂ
ತರೀ ಚತುರ್ರೀಂ ಪರಮಾರ್ಥೂ
ಕ್ರಾಂ ನಫೌವಾ।

ಎನ್ನುವ ಮುಕುಂದರಾಜನ ಓವಿಯನ್ನು ಈ ದೃಷ್ಟಿಯಿಂದ ಗಮನಿಸುವುದು. ಓವೀಬಂಧ ಪರಿಣಿತವಾದದ್ದು, ಜ್ಞಾನೇಶ್ವರಿಯನ್ನು ಬರೆದ ಜ್ಞಾನದೇವ ಅಭಂಗಮಾಲೆಯೆಂಬ ಒಂದು ಕೃತಿಯನ್ನೂ ರಚಿಸಿದ್ದಾನೆ. ಅದರಲ್ಲಿ ಕನ್ನಡ ಅಭಂಗವೊಂದು ಸೇರಿದೆ.

ಆಕ್ಕಾ ನೀ ಕೇಳೆ ಚಿಕನ ಮಾತು ಕೇಳುಲೆ? ಘನಿಗೆ ಮರುಳಾದೆನೆ
ಚೆಲುವಾನೆ ಚೆಲುವಾನೆ
ಪಂಢರಿರಾಯ ಚೆಲುವಾನೆ
ಯಲ್ಲೆ ದೊರೆ ಕನ್ನೇ
ಯಲ್ಲೆ ಬಾರನ್ನೆ ॥2॥
ಪುಂಡಲೀಕನೆ ಭಕ್ತಿಗೆ ಬಂದಾ,
ರಖುಮಾದೇವೀವರ ವಿಟ್ಠಲುನೇ ॥3॥

ವಿಟ್ಠಲಭಕ್ತಿ ಮಹಾರಾಷ್ಟ್ರದಲ್ಲಿ ಊರ್ಜಿತವಾಗುವುದಕ್ಕೂ ಜ್ಞಾನದೇವನೇ ಕಾರಣ. ವಿಟ್ಠಲೋಪಾಸನೆ ಮರಾಠೀಸಂತರ ವೈಶಿಷ್ಟ್ಯ. ಕರ್ನಾಟಕದ ಹರಿದಾಸರು ಗೀತರಾಯಿಸುಳಾದ್ಯುಗಾಭೋಗಗಳಿಂದ ವಿಟ್ಠಲನನ್ನು ಪ್ರೀತಿಪಡಿಸಿದರೆ, ಮಹಾರಾಷ್ಟ್ರ ಸಂತರು ಅಭಂಗಗಳಿಂದ ಪಂಢರಪುರ ದೇವರನ್ನು ತೃಪ್ತಿಪಡಿಸಿದರು. ಹೀಗೆಂದೇ ವಿಟ್ಠಲನನ್ನು ಅಭಂಗ ವಿಟ್ಠಲನೆಂದು ವ್ಯವಹರಿಸುತ್ತಾರೆ. ಪಂಡರೀ ಕ್ಷೇತ್ರ ಒಂದು ಸಂತೆಯೆಂದೂ (ಪಂಡರೀನಾಮಾಚಾ ಬಾಜಾರ) ಅಲ್ಲಿ ಭಕ್ತಿಪ್ರೇಮಗಳ ಮಾರಾಟವಾಗುವುದೆಂದೂ ನಾಮದೇವ ಸಿಂಪೀ, ಗೋರಾಕುಂಬಾರ, ವಿಸೋಬಾಖೇಚರ, ನರಹರಿ ಸೋನಾರ ಮೊದಲಾದ ಭಕ್ತ ಕುಟುಂಬದವರು ಇಲ್ಲಿ ನೆರೆಯುತ್ತಿದ್ದರೆಂದೂ ಉಲ್ಲೇಖ ಬರುತ್ತದೆ. ಈ ಕುಟುಂಬದಲ್ಲಿ ಹಿರಿಯನೆನಿಸಿದ ನಾಮದೇವನು ಒಂದು ಕೋಟಿ ಅಭಂಗಗಳನ್ನು ರಚಿಸಬೇಕೆಂದು ನಿಶ್ಚಯಿಸಿದ್ದನಂತೆ. ಈ ಮನೋರಥ ಪೂರ್ಣವಾಗದಿರಲು ನಾಮದೇವನೇ ತುಕಾರಾಮನಾಗಿ ಜನ್ಮತಾಳಿ ನಿರ್ದಿಷ್ಟವಾದ ಸಂಖ್ಯೆಯನ್ನು ಸಿದ್ಧಿಸಿಕೊಂಡನೆಂದು ಪ್ರತೀತಿ ಇದೆ.

ನಾಮದೇವನ ಅಭಂಗದಲ್ಲಿ ನುಡಿಯ ಮೊದಲನೆಯ ಚರಣದಲ್ಲಿ 12 ಅಕ್ಷರಗಳೂ ಎರಡನೆಯ ಚರಣದಲ್ಲಿ 10 ಅಕ್ಷರಗಳೂ ಇರುತ್ತವೆ. ಗಣನಿಯಮವಾಗಲೀ ಮಾತ್ರಾನಿಯಮವಾಗಲೀ ಇರದೆಂದೂ ಮೊದಲನೆಯ ಚರಣದ ಅಂತ್ಯಾಕ್ಷರ ಎರಡನೆಯ ಚರಣದ ಆರನೆಯ ಅಕ್ಷರವಾಗಿರುವುದೆಂದೂ ವಿದ್ವಾಂಸರ ಮತ. 1273–97ರ ವರೆಗೆ ಬಾಳಿದ ಸೋಪಾನದೇವನೂ ಅದೇ ಸಮಯದಲ್ಲಿದ್ದ ಮುಕ್ತಾಬಾಯಿಯೂ ಅಭಂಗಗಳನ್ನು ಬರೆದಿದ್ದಾರೆ. ಆದರೆ ನಾಮದೇವನ ಕಾಲಕ್ಕೆ (1270–1350) ಅಭಂಗ ಪದ್ಧತಿ ವಿಶೇಷವಾಗಿ ಪ್ರಚಲಿತವಾಯಿತೆಂದು ಹೇಳುತ್ತಾರೆ. ಈತ ಬರೆದ 65 ಅಭಂಗಗಳು ಸಿಖ್ ಜನರ ಪ್ರಸ್ಥಾನವಾದ ಗ್ರಂಥಸಾಹಿಬ್‌ದಲ್ಲಿ ಸೇರಿವೆ. ಈತನ ಅಭಂಗಗಳಲ್ಲಿ ಭಕ್ತಿಯ ನಿರಂತರ ಪ್ರವಾಹವನ್ನು ಕಾಣಬಹುದು. ತುಕಾರಾಮನು ಹದಿನೇಳನೆಯ ಶತಮಾನದವ. ಆವೇಶದ ಭರದಲ್ಲಿ ಈತ ರಚಿಸಿದ ಅಭಂಗಗಳು ಕಾವ್ಯಪ್ರಪಂಚದಲ್ಲಿ ಧ್ರುವತಾರೆಗಳು.

ನಾಮಸ್ಮರಣೆಯಿಂದ ಈಶಪ್ರಾಪ್ತಿಯಾಗುವ ವಿಧಾನವನ್ನು ತುಕಾರಾಮ ಹೃದ್ಯವಾಗಿ ತನ್ನ ಅಭಂಗಗಳಲ್ಲಿ ವಿವರಿಸಿದ್ದಾನೆ. ಭಗವಂತನ ವಿಚಾರದಲ್ಲಿ ಅವನ ಅನನ್ಯನಿಷ್ಠೆಯನ್ನು ಕೆಳಗಿನ ಎರಡು ಅಭಂಗಗಳು ಪ್ರಸ್ತಾವಿಸುತ್ತವೆ:

ಕೃಷ್ಣ ಮಾಝೀ ಮಾತಾ ಕೃಷ್ಣ ಮಾಝಾ ಪಿತಾ
ತುಕಾಮ್ಹಣೇ ಮಾಝಾ ಶ್ರೀಕೃಷ್ಣ ವಿಸಾವಾ॥

ಕೃಷ್ಣನೇ ನನ್ನ ತಾಯಿ, ಕೃಷ್ಣನೇ ನನ್ನ ತಂದೆ; ಕೃಷ್ಣನೇ ನನ್ನ ವಿಶ್ರಾಂತಿ – ಹೀಗೆಂದು ತುಕಾ ಹೇಳುತ್ತಾನೆ.

ದೇಹಭಾವ ಆಮ್ಹೀ ರೋಹಿಲೋ ಠೇವೂನೀ
ನಿವಾಂತ ಚರಣೀ ವಿಠೋಬಾಚ್ಯಾ

ದೇಹದ ಅರಿವನ್ನು ವಿಟ್ಠಲನ ಪಾದಗಳಲ್ಲಿ ಸಮಾಧಾನದಿಂದ ಇರಿಸಿದ್ದೇನೆ.

ಅಭಂಗಗಳ ಆವೇಶಪರತೆಯನ್ನು ತೋರಿಸಲು ತುಕಾರಾಮನ ಈ ಅಭಂಗ ನೆರವಾಗುತ್ತದೆ:

ಕೋಣ ಪುಣ್ಯ ಫಳಾ ಅಲ್ರೇಂ ಅಜೀ ದೇಖಿಲ್ರೀಂ ಪಾವೂಲ್ರೇಂ
ಏಸ್ರೇಂ ನೇಣ್ಹೋಂ ನಾರಾಯಣ ಸಂತೀ ಸಾಂಭಾಳಿಲ್ರೇಂ ದೀನಾ
ಕೋಣ ಲಾಭ ಕಾಳ ದಿನ ಅಜೀಜಾ ಮಂಗಳ
ತುಕಾಮ್ಹಣೇ ಝಾಲಾ, ಏವಢಾ ಲಾಭ ಕಾಂ, ವಿಟ್ಠಲಾ॥

ಇಂದು ವಿಟ್ಠಲನ ಚರಣಗಳನ್ನು ಕಂಡೆ, ಎಷ್ಟು ಪುಣ್ಯದ ಫಲವೋ: ಸಂತರು ನನ್ನನ್ನು ಸಲಹಿದರು. ಯಾವುದೋ ಲಾಭದ ವೇಳೆ ಇದು, ಮಂಗಳದಿನ ಎಷ್ಟು ಲಾಭವೋ; ಹೀಗೆಂದ ತುಕಾ ಹೇಳುತ್ತಾನೆ. (ಎಸ್.ಕೆ.ಆರ್.ಎಸ್.ಎಚ್)

**ಅಭಯಗಿರಿ :** ಲಂಕೆಯ ಅನುರಾಧಪುರದಲ್ಲಿ ಬುದ್ಧಸ್ತೂಪದ ಬಳಿ ಇರುವ ಒಂದು ಬೌದ್ಧಮಠ. ಇದನ್ನು ವಟ್ಟಗ್ಗಾಮಿನಿ ಎಂಬ ಅರಸ ಕಟ್ಟಿಸಿದ. ಇದಕ್ಕಿಂತ ಮೊದಲೇ ಇಲ್ಲಿದ್ದ ಮಹಾವೀರಮಠದ ಭಿಕ್ಷುಗಳಿಗೂ ಅಭಯಗಿರಿ ಭಿಕ್ಷುಗಳಿಗೂ ಬಂದ ವೈಮನಸ್ಯದ ಫಲವಾಗಿ ಮಹಾಸೇನ ರಾಜ ಮಹಾವೀರಮಠವನ್ನು ಕೆಡವಿಸಿದನಾದರೂ (300) ಕಾಲಾಂತರದಲ್ಲಿ ಅದು ಮತ್ತೆ ತಲೆಯೆತ್ತಿ ಅಭಯಗಿರಿಯೊಡನೆ ಪ್ರಸಿದ್ಧಿ ಹೊಂದಿದೆ. (ಬಿ.ಜ.)

**ಅಭಯಾರಣ್ಯಗಳು :** ಸ್ವಾಭಾವಿಕ ಸಸ್ಯ ಮತ್ತು ಪ್ರಾಣಿಸಂಪತ್ತನ್ನು ಉಳಿಸಿಕೊಂಡು ದೇಶದ ಸೌಂದರ್ಯವನ್ನು ಕಾಪಾಡಿಕೊಳ್ಳುವುದೇ ಅಲ್ಲದೆ, ನಿಸರ್ಗದ ಸಮತೋಲ ಕದಡದಂತೆ ಇರಿಸುವ ಸಲುವಾಗಿ ಕರ್ನಾಟಕದಲ್ಲಿ ಅಭಯಾರಣ್ಯಗಳನ್ನು, ರಾಷ್ಟ್ರೀಯ ಉದ್ಯಾನಗಳನ್ನು ಸ್ಥಾಪಿಸಲಾಗಿದೆ. ಇವು ಬಹುವಾಗಿ ಅಂತಾರಾಷ್ಟ್ರೀಯ ನಿಯಮಗಳನ್ನೇ ಅನುಸರಿಸುತ್ತವೆ. ಆದರೆ ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಅಲ್ಪಸ್ವಲ್ಪ ಮಾರ್ಪಾಟುಗಳನ್ನು ಇವುಗಳಲ್ಲಿ ಕಾಣಬಹುದು. ಇವೆಲ್ಲವೂ ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಟ್ಟಿವೆ. ಕೆಲವು ಅಭಯಾರಣ್ಯಗಳಲ್ಲಿ ಸಸ್ಯ ಹಾಗೂ ಪ್ರಾಣಿಗಳೆರಡಕ್ಕೂ ಸಂರಕ್ಷಣೆ ಒದಗಿದೆಯಾದರೆ ಇನ್ನು ಕೆಲವಲ್ಲಿ ಬರಿಯ ಪ್ರಾಣಿಗಳನ್ನು ಮಾತ್ರ ರಕ್ಷಿತಜೀವಿಗಳಾಗಿ ನೋಡಿಕೊಳ್ಳಲಾಗುತ್ತಿದೆ. ಅಭಯಾರಣ್ಯಗಳ ಕಲ್ಪನೆ ಇತ್ತೀಚಿನದಲ್ಲ. ಪ್ರಾಚೀನ ಕಾಲದ ಋಷ್ಯಾಶ್ರಮಗಳು ವನ್ಯಜೀವಿಗಳಿಗೆ ಅಭಯಾರಣ್ಯಗಳಾಗಿದ್ದುವು. ಇಂಥ ಅರಣ್ಯಗಳಲ್ಲಿ ಮೃಗಪಕ್ಷಿಗಳನ್ನು ಕೊಲ್ಲುವುದು ಅಪರಾಧವೆಂದು ಪರಿಗಣಿಸಲ್ಪಡುತ್ತಿತ್ತು. ಅಭಯಾರಣ್ಯದಲ್ಲಿ ವನ್ಯಮೃಗಗಳು ಭಯವಿಲ್ಲದೆ ತಿರುಗಾಡುವುದನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಲಾಗಿದೆ. ನಮ್ಮ ಹಿರಿಯರು ಪ್ರಾಣಿಗಳ ಜೀವನವನ್ನು ಅಧ್ಯಯನ ಮಾಡಿ ಅದನ್ನು ಮಾನವನ ಬುದ್ಧಿವಿಕಾಸಕ್ಕಾಗಿ ಅಳವಡಿಸಿ ಕತೆಯ ರೂಪದಲ್ಲಿ ನಿರೂಪಿಸಿದ್ದಾರೆ ಎನ್ನುವುದಕ್ಕೆ ಪಂಚತಂತ್ರ ಮತ್ತು ಹಿತೋಪದೇಶದ ಕತೆಗಳು ಸಾಕ್ಷಿಯಾಗಿವೆ. ವೇದಕಾಲದ ಅನಂತರ ವನ್ಯಪ್ರಾಣಿಗಳ ಬಾಳು ಹದಗೆಡುತ್ತ ಬಂತು. ಅರಣ್ಯ ಪ್ರದೇಶವನ್ನು ವ್ಯವಸಾಯಕ್ಕೆ ತೆರವು ಮಾಡತೊಡಗಿದುದರ

ಪರಿಣಾಮವಾಗಿ ವನ್ಯಮೃಗಗಳ ಸಂಖ್ಯೆ ಕಡಿಮೆಯಾಯಿತು. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಈ ನಾಶವನ್ನು ತಡೆಯಲು ಅಶೋಕ ಚಕ್ರವರ್ತಿ ಹೊರಡಿಸಿದ ಒಂದು ಕಾಯಿದೆ ನಶಿಸುತ್ತಿದ್ದ ಅನೇಕ ಮೃಗಪಕ್ಷಿಗಳಿಗೆ ರಕ್ಷಣೆಯನ್ನು ಕೊಟ್ಟಿರಬೇಕು. ಅಶೋಕ ಚಕ್ರವರ್ತಿಯ ಈ ಕಾಯಿದೆ ಪ್ರಪಂಚದಲ್ಲೇ ವನ್ಯಜೀವಿಗಳ ಸಂರಕ್ಷಣೆಗಾಗಿ ಮಾಡಿದ ಪ್ರಪ್ರಥಮ ಕಾಯಿದೆಯಾಗಿದೆ. ಜನಸಂಖ್ಯೆ ಬೆಳೆದಂತೆ ಉಳುವುದಕ್ಕಾಗಿ ಭೂಮಿ, ನೆಲೆಸುವುದಕ್ಕಾಗಿ ಹಳ್ಳಿಪಟ್ಟಣಗಳು, ವಾಹನಗಳ ಸಂಚಾರಕ್ಕಾಗಿ ಹೆದ್ದಾರಿ, ನೀರಾವರಿ-ವಿದ್ಯುಚ್ಛಕ್ತಿಗಾಗಿ ವಿಶಾಲವಾದ ಜಲಾಶಯಗಳು, ಅರಣ್ಯ ಕೈಗಾರಿಕೆಗಳಿಗೆ ನೆಲ ಇತ್ಯಾದಿಗಳ ಪೂರೈಕೆಗಾಗಿ ಮಿತಿಮೀರಿದ ಪ್ರಮಾಣದಲ್ಲಿ ಅರಣ್ಯ ನಾಶವಾಗಿ ಅವುಗಳಲ್ಲಿ ನೆಲೆಸಿದ್ದ ವನ್ಯಜೀವಿಗಳು ದಿನೇ ದಿನೇ ನಶಿಸುತ್ತಿವೆ. ಅಳಿಯುತ್ತಿರುವ ಈ ನಿಸರ್ಗ ಸಂಪತ್ತನ್ನು ಉಳಿಸಲು ಅನೇಕ

ಬಂಡಿಪುರದಲ್ಲಿ ಹುಲಿ

ಪ್ರಯತ್ನಗಳು ನಡೆಯುತ್ತಿವೆ. 1948ರಲ್ಲಿ ಯುನೆಸ್ಕೊ ಆಶಯದಲ್ಲಿ ಫ್ರಾಂಟನ್ ಬ್ಲೂ ಎಂಬಲ್ಲಿ ಪ್ರಕೃತಿಸಂಪತ್ತನ್ನು ರಕ್ಷಿಸುವ ಅಂತಾರಾಷ್ಟ್ರೀಯ ಸಂಘ ಸ್ಥಾಪನೆಯಾಯಿತು. ಈ ಸಂಘದ ಪ್ರೇರಣೆಯಂತೆ ಭಾರತ ಸರ್ಕಾರ ಒಂದು ಪೂರ್ವಾಧಿಕಾರಿಯುಕ್ತ (ಅಡ್‍ಹಾಕ್) ಸಮಿತಿಯನ್ನು ನೇಮಿಸಿ, ಭಾರತದಲ್ಲಿ ವನ್ಯಜೀವಿಗಳ ರಕ್ಷಣೆಯ ಬಗ್ಗೆ ಯೋಜನೆಗಳನ್ನು ರೂಪಿಸಲು ಆದೇಶ ನೀಡಿತು. ಈ ಸಮಿತಿಯ ಶಿಫಾರಸುಗಳ ಮೇಲೆ 1952ರಲ್ಲಿ ಭಾರತೀಯ ವನ್ಯಪ್ರಾಣಿ ಸಂರಕ್ಷಣಾ ಸಂಸ್ಥೆ ರಚಿಸಲ್ಪಟ್ಟಿತು. ವನ್ಯಪ್ರಾಣಿ ರಕ್ಷಣೆಗೆ ತಕ್ಕ ವ್ಯವಸ್ಥೆ, ಕಾನೂನು ತಿದ್ದುಪಡಿ, ಮೃಗಬೇಟೆಗೆ ಹಲವಾರು ಆವಶ್ಯಕ ನಿಬಂಧನೆಗಳು, ಮೃಗಪಕ್ಷಿಗಳ ಚರ್ಮಕೊಂಬು ತುಪ್ಪಟ ಗರಿ ಇವುಗಳ ರಫ್ತಿಗೆ ನಿಬಂಧನೆಗಳು, ಅಭಯಾರಣ್ಯ ಹಾಗೂ ರಾಷ್ಟ್ರೀಯ ವನ್ಯಪ್ರಾಣಿ ಕ್ಷೇತ್ರ ನಿರ್ಮಾಣ ಇತ್ಯಾದಿ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ ರಾಜ್ಯ ಸರ್ಕಾರಗಳಿಗೆ ರಾಜ್ಯ ವನ್ಯಪ್ರಾಣಿ ಸಂಸ್ಥೆಗಳ ಮೂಲಕ ಸಲಹೆಗಳನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಅಭಯಾರಣ್ಯಗಳ ಮತ್ತು ರಾಷ್ಟ್ರೀಯ ವನ್ಯಪ್ರಾಣಿ ಕ್ಷೇತ್ರಗಳ ಉಪಯುಕ್ತತೆ ಪಂಚಮುಖದ್ದಾಗಿರುತ್ತದೆ.

1. ವನ್ಯಪ್ರಾಣಿಗಳಿಗೆ ಮುಡಿಪಾಗಿಟ್ಟ ಪ್ರದೇಶಗಳ ನೈಸರ್ಗಿಕ ಸಂಪತ್ತನ್ನು ಕಾಪಾಡುವುದು.

2. ಅಲ್ಲಿನ ಸಸ್ಯ ಹಾಗೂ ಪ್ರಾಣಿವರ್ಗದ ರಕ್ಷಣೆ ಹಾಗೂ ಅಭಿವೃದ್ಧಿ.

3. ಅತ್ಯಮೂಲ್ಯವಾದ ಮೃಗಪಕ್ಷಿಗಳು ನಿರ್ನಾಮವಾಗುವುದನ್ನು ತಡೆಗಟ್ಟುವುದು.

4. ಪ್ರಕೃತಿ ವಿಜ್ಞಾನ ಹಾಗೂ ಮೃಗಪಕ್ಷಿಗಳ ಜೀವನ ಇತ್ಯಾದಿಗಳ ಸಂಶೋಧನೆಗೆ ಈ ಕ್ಷೇತ್ರಗಳು ಕಾರ್ಯರಂಗವಾಗುವುದು.

5. ವನ್ಯಪ್ರಾಣಿ ಕ್ಷೇತ್ರಗಳು ವಿದೇಶಿ ಹಾಗೂ ಒಳನಾಡಿನ ಪ್ರವಾಸಿಗರನ್ನು ಆಕರ್ಷಿಸಿ ನಾಡಿನ ಆರ್ಥಿಕ ಸ್ಥಿತಿ ಸುಧಾರಿಸಲು ವಿಶೇಷ ರೀತಿಯಲ್ಲಿ ಸಹಾಯವಾಗುವುದು.

ಕರ್ನಾಟಕದಲ್ಲಿ ಅನೇಕ ಅಭಯಾರಣ್ಯಗಳನ್ನೂ ರಾಷ್ಟ್ರೀಯ ವನ್ಯಪ್ರಾಣಿ ಕ್ಷೇತ್ರ ಮತ್ತು ಪಕ್ಷಿಧಾಮಗಳನ್ನೂ ಸ್ಥಾಪಿಸಲಾಗಿದೆ. ಇತ್ತೀಚಿನ ಮಾಹಿತಿಯ ಪ್ರಕಾರ (2000) ಕರ್ನಾಟಕದಲ್ಲಿ ಒಟ್ಟು 5 ರಾಷ್ಟ್ರೀಯ ಉದ್ಯಾನಗಳೂ 21 ವನ್ಯಧಾಮಗಳೂ ಇವೆ. ಇವುಗಳಲ್ಲಿ 5 ಪಕ್ಷಿಧಾಮಗಳೂ ಸೇರಿವೆ. ಅಣಶಿ, ಬಂಡೀಪುರ, ಬನ್ನೇರುಘಟ್ಟ ಕುದುರೆಮುಖ ಮತ್ತು ನಾಗರಹೊಳೆ (ರಾಜೀವ್‍ಗಾಂಧಿ)-ಇವು ರಾಷ್ಟ್ರೀಯ ಉದ್ಯಾನಗಳು. ಅಭಯಾರಣ್ಯಗಳು (ವನ್ಯಧಾಮಗಳು) ಇಂತಿವೆ. ಆದಿಚುಂಚನಗಿರಿ, ಅತ್ತಿವೇರಿ, ಅರಬಿತಿಟ್ಟು, ಭದ್ರಾ, ಬಿಳಿಗಿರಿರಂಗನ ಬೆಟ್ಟ, ಬ್ರಹ್ಮಗಿರಿ, ಕಾವೇರಿ, ದಾಂಡೇಲಿ, ದರೋಜಿ, ಘಟಪ್ರಭಾ, ಗುಡವಿ, ಮೂಕಾಂಬಿಕ, ಮೇಲುಕೋಟೆ, ಪುಷ್ಪಗಿರಿ, ರಾಣೆಬೆನ್ನೂರು, ಶರಾವತಿ, ಶೆಟ್ಟಿಹಳ್ಳಿ, ಸೋಮೇಶ್ವರ ಮತ್ತು ತಲಕಾವೇರಿ.

**ರಾಷ್ಟ್ರೀಯ ಉದ್ಯಾನಗಳು**

**1.ಅಣಶಿ:** ಉತ್ತರಕನ್ನಡ ಜಿಲ್ಲೆ ದಾಂಡೇಲಿಯಿಂದ 38ಕಿಮೀ ಮತ್ತು ಕಾರವಾರದಿಂದ 55ಕಿಮೀ ದೂರದಲ್ಲಿದೆ. ವಿಸ್ತೀರ್ಣ 250ಚ.ಕಿಮೀ. ದಾಂಡೇಲಿ ಅಭಯಾರಣ್ಯದ ಭಾಗವಾಗಿದ್ದ ಇದನ್ನು ರಾಷ್ಟ್ರೀಯ ಉದ್ಯಾನವನ್ನಾಗಿ ಮಾಡಬೇಕೆಂಬ ಪ್ರಸ್ತಾಪ 1987ರಲ್ಲಿ ಆಗಿದೆ. ಪ್ರವಾಸಿಗರ ಸೌಲಭ್ಯ ಇನ್ನೂ ಇಲ್ಲ. ಉಳವಿ ತೀರ್ಥಕ್ಷೇತ್ರ ಇದಕ್ಕೆ ಅಂಟಿಕೊಂಡಂತಿದೆ. ಅರೆನಿತ್ಯ ಹಸುರಿನ ಮತ್ತು ನಿತ್ಯಹಸುರಿನ ಅರಣ್ಯದಿಂದ ಕೂಡಿರುವ ಈ ಉದ್ಯಾನದಲ್ಲಿ ಆನೆ, ಕಾಟಿ, ಕೆಮ್ಮ, ಜಿಂಕೆ, ಕಡವೆ, ಮುಸುವ, ಕಾಡುಪಾಪ, ಹುಲಿ, ಕಪ್ಪುಚಿರತೆ, ಪುನುಗುಬೆಕ್ಕು, ಕಾಡುನಾಯಿ, ಕೇಶಳಿಲು-ಇವು ವಿಶಿಷ್ಟ ವನ್ಯಪ್ರಾಣಿಗಳು. ಮಂತುಳಿ, ವಾಟೆಹುಳಿ, ಗುಳುಮಾವು, ಹೆಬ್ಬಲಸು, ಚಕ್ಕೆ ಮುಂತಾದವು ಇಲ್ಲಿನ ಕೆಲವು ವೃಕ್ಷಗಳು.

**2. ಬಂಡೀಪುರ:** (ಚಾಮರಾಜನಗರ ಜಿಲ್ಲೆ) ಗುಂಡ್ಲುಪೇಟೆಯಿಂದ 15 ಕಿಮೀ ಮೈಸೂರಿನಿಂದ 80 ಕಿಮೀ ದೂರದಲ್ಲಿದೆ. ಕೇರಳದ ವೈನಾಡು, ತಮಿಳುನಾಡಿನ ಮುದುಮಲೈ ಅಭಯಾರಣ್ಯಗಳೂ ರಾಜೀವಗಾಂಧಿ (ನಾಗರಹೊಳೆ) ರಾಷ್ಟ್ರೀಯ ಉದ್ಯಾನವನಗಳೊಂದಿಗೆ ಹೊಂದಿಕೊಂಡಂತಿದೆ. ಭಾರತದ ಪ್ರಸಿದ್ಧ ಉದ್ಯಾನಗಳ ಪೈಕಿ ಇದೂ ಒಂದು. ಹುಲಿ ಯೋಜನೆಯ ಪ್ರಮುಖ ತಾಣವೂ ಹೌದು. ವಿಸ್ತೀರ್ಣ 874 ಚಕಿಮೀ.

1898ರಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮೀಸಲು ಅರಣ್ಯವಾಗಿದ್ದ ಇದು 1941ರಲ್ಲಿ ವನ್ಯಪ್ರಾಣಿ ಮೀಸಲು ಕ್ಷೇತ್ರವಾಯಿತು. 1974ರಲ್ಲಿ ರಾಷ್ಟ್ರೀಯ ಉದ್ಯಾನವಾಗಿ ಪರಿವರ್ತಿತವಾಯಿತು. ಇಲ್ಲಿನ ಅರಣ್ಯ ಮುಖ್ಯವಾಗಿ ಶುಷ್ಕಪರ್ಣಪಾತಿ ಬಗೆಯದು. ತೇಗ, ಮತ್ತಿ, ಹೊನ್ನೆ, ದಿಂಡಿಲು, ತಾರೆ, ಅಳಲೆ, ಬೆಟ್ಟದನೆಲ್ಲಿ, ಮುತ್ತಗ, ಕಾಡುಬೆಂಡೆ ಮುಂತಾದವು ಶುಷ್ಕ ಪ್ರದೇಶದಲ್ಲಿ ಬೆಳೆದರೆ, ತೇವಾಂಶ ಹೆಚ್ಚಿರುವ ಕಡೆ ಬೀಟೆ, ಅರಿಶಿಣತೇಗ, ಮಗ್ಗಾರೆ, ಕೋಣನಕೊಂಬು, ನವಿಲಾದಿ, ಗಂಟೆ ಮುಂತಾದವು ಕಾಣಸಿಗುತ್ತವೆ. ಬಿದಿರು, ನೇರಳೆ, ಬೂರುಗ ಇನ್ನಿತರೆ ಸಸ್ಯಗಳು. ಹುಲಿ, ಚಿರತೆ, ಕಾಡುನಾಯಿ, ಕಾಡುಬೆಕ್ಕು, ಚಿರತೆಬೆಕ್ಕು, ಮೂರು ಬಗೆಯ ಮುಂಗುಸಿ, ಕಿರುಬ ಇಲ್ಲಿನ ಮುಖ್ಯ ಮಾಂಸಾಹಾರಿ ಪ್ರಾಣಿಗಳು. ಆನೆ, ಜಿಂಕೆ, ಕಡವೆ, ಕೊಂಡಕುರಿ, ಕೆಮ್ಮ ಸಸ್ಯಾಹಾರಿ ಮೃಗಗಳು ಕರಡಿ, ಮುಸುವ, ಮಂಗ ಮೊಲ, ಕಾಡುಹಂದಿ, ಮುಳ್ಳು ಹಂದಿ, ಕೇಶಳಿಲು, ನೀರುನಾಯಿಗಳು ಹೇರಳವಾಗಿವೆ. 230ಕ್ಕೂ ಹೆಚ್ಚು ಬಗೆಯ ಪಕ್ಷಿಗಳು ಇಲ್ಲಿವೆ. ನವಿಲು, ಕಾಡುಕೋಳಿ, ಹಸುರುಪಾರಿವಾಳ, ಮರಕುಟಿಗ ಬಲುಸಾಮಾನ್ಯ. ಪ್ರವಾಸಿಗರಿಗೆ ವಸತಿಸೌಕರ್ಯ, ಪ್ರಾಣಿವೀಕ್ಷಣೆಗೆ ವಾಹನ ಸೌಲಭ್ಯ ಚೆನ್ನಾಗಿದೆ (ನೋಡಿ: ಬಂಡೀಪುರ).

**3. ಬನ್ನೇರುಘಟ್ಟ:** (ಬೆಂಗಳೂರು ಜಿಲ್ಲೆ) ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ 22ಕಿಮೀ ದೂರದಲ್ಲಿದೆ. 1974ರಲ್ಲೇ ರಾಷ್ಟ್ರೀಯ ಉದ್ಯಾನವನವಾಗಿ ಮಾರ್ಪಡಿಸಲಾಗಿದೆ. ವಿಸ್ತೀರ್ಣ 104ಚಕಿಮೀ. ಇಲ್ಲಿನ ಅರಣ್ಯ ಕುರುಚಲು ಮತ್ತು ಶುಷ್ಕಪರ್ಣಪಾತಿ ಬಗೆಯದು. ಇಲ್ಲಿನ ಪ್ರಾಣಿಗಳ ಪೈಕಿ ಮುಖ್ಯವಾದವು ಆನೆ, ಕಾಟಿ, ಚಿರತೆ, ಕಾಡುಹಂದಿ, ಕರಡಿ, ಕಡವೆ, ಜಿಂಕೆ, ಮುಸುವ, ಮೊಲ, ಮಂಗ ಮತ್ತು ಕಣೆಹಂದಿ.

ಇಲ್ಲಿ ಉತ್ತಮವಾದ ಸಿಂಹ ಮತ್ತು ಹುಲಿ ಸಫಾರಿ ಸೌಲಭ್ಯ, ಸಣ್ಣದೊಂದು ಮೃಗಾಲಯ, ಉರಗೋದ್ಯಾನ, ಪ್ರಾಣಿ ಸಂಗ್ರಹಾಲಯಗಳೂ ಇವೆ (ನೋಡಿ: ಬನ್ನೇರಘಟ್ಟ).

**4. ಕುದುರೆಮುಖ:** (ದಕ್ಷಿಣಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳು) ಕರ್ನಾಟಕದ ಇತ್ತೀಚಿನ ರಾಷ್ಟ್ರೀಯ ಉದ್ಯಾನ. ಇದನ್ನು ಉದ್ಯಾನವನ್ನಾಗಿ ರೂಪಿಸಬೇಕೆಂಬ ನಿರ್ಧಾರವನ್ನು 1987ರಲ್ಲಿ ಕೈಗೊಳ್ಳಲಾಯಿತು. ಇದರ ವಿಸ್ತೀರ್ಣ 600ಚಕಿಮೀ. ಪಶ್ಚಿಮ ಘಟ್ಟಗಳಲ್ಲಿ ಸ್ಥಿತವಾಗಿರುವ ಈ ಪ್ರದೇಶದಲ್ಲಿ ನಿತ್ಯಹಸುರಿನ, ಅರೆನಿತ್ಯಹಸುರಿನ ಹಾಗೂ ಶೋಲಾ ಅರಣ್ಯವಿದೆ. ಸುತ್ತ ಕಾಫಿ, ಟೀ ತೋಟಗಳಿವೆಯಾದರೂ ನಿಸರ್ಗ ಸೌಂದರ್ಯಕ್ಕೆ ಹೆಸರಾಗಿದೆ. ಹತ್ತಿರದ ಗಂಗಾಮೂಲದಲ್ಲಿ ನೇತ್ರಾವತಿ, ತುಂಗಾ, ಭದ್ರಾ ನದಿಗಳು ಉಗಮಿಸುತ್ತವೆ.

ಹಲಸು, ಸುರಹೊನ್ನೆ, ಸಪ್ತಪರ್ಣಿ, ನೇರಳೆ, ನಾಗಸಂಪಿಗೆ, ಹೊಲಿಗೇರು, ಬಲಗಿ, ಕಿರಿಬೋಗಿ, ಹಾಲುಮಡ್ಡಿ ಮುಂತಾದವು ಇಲ್ಲಿನ ಮುಖ್ಯ ವೃಕ್ಷಜಾತಿಗಳು. ಇಲ್ಲಿನ ಪ್ರಾಣಿ ಸಂಪತ್ತು ಹುಲಿ, ಚಿರತೆ, ಕಾಡುನಾಯಿ, ನರಿ, ಸಿಂಗಳೀಕ, ಮುಸುವ, ಕರಡಿ, ಕಾಟಿ, ಕಡವೆ, ಜಿಂಕೆ, ಕೆಮ್ಮ, ಕೊಂಡಕುರಿ, ಕೇಶಳಿಲು, ಹಾರುವ ಓತಿ, ಹಾರುವ ಅಳಿಲು, ಕಣೆಹಂದಿ ಮುಂತಾದವನ್ನೂ ಹಲವಾರು ಬಗೆಯ ಹಾವುಗಳನ್ನೂ ಒಳಗೊಂಡಿದೆ. ಹಕ್ಕಿಗಳ ಪೈಕಿ ಮಲಬಾರ್ ಟ್ರೋಗನ್, ಓಂಗಿಲೆ, ಕಗ್ಗಿಲು, ಮಲಬಾರ್ ಸಿಳ್ಳೆತ್ರಷ್ ಮುಖ್ಯವೆನಿಸಿವೆ.

ಈ ಉದ್ಯಾನವನ ಹಾಸನದಿಂದ 108ಕಿಮೀ ದೂರದಲ್ಲೂ ಮಂಗಳೂರಿನಿಂದ 78ಕಿಮೀ ದೂರದಲ್ಲೂ ಇದೆ. ಶೃಂಗೇರಿ, ಆಗುಂಬೆ ಗಳಿಂದಲೂ ಇಲ್ಲಿಗೆ ರಸ್ತೆ ಸೌಕರ್ಯ ಇದೆ.

**5. ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನವನ:** (ನಾಗರಹೊಳೆ) ಕೊಡಗು ಜಿಲ್ಲೆಯ ಕೆಲವು ಅರಣ್ಯಗಳು, ಮೈಸೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಒಳಗೊಂಡ ಈ ಉದ್ಯಾನ 1955ರಲ್ಲಿ ವನ್ಯಪ್ರಾಣಿ ಮೀಸಲು ಅರಣ್ಯವಾಗಿ ಪ್ರಾರಂಭವಾಯಿತು. 1975, 1983 ಮತ್ತು 1988ರಲ್ಲಿ ಹೆಚ್ಚುವರಿ ಪ್ರದೇಶ ಸೇರ್ಪಡೆಯಾಗಿ 1992ರಲ್ಲಿ ಈಗಿನ ಹೆಸರು ಪಡೆಯಿತು. ಇದರ ಈಗಿನ ವಿಸ್ತೀರ್ಣ 644ಚಕಿಮೀ.

ಇಲ್ಲಿನ ಕಾಡು ಆರ್ದ್ರ ಹಾಗೂ ಶುಷ್ಕಪರ್ಣಪಾತಿ ಬಗೆಯದು. ಕೆಲವೆಡೆ ನಿತ್ಯ ಹಸುರಿನ ಅರಣ್ಯವೂ ಇದೆ. ಆನೆ, ಕಾಟಿ, ಜಿಂಕೆ, ಕೊಂಡಕುರಿ, ಕಡವೆ, ಕೆಮ್ಮ ಇಲ್ಲಿನ ಮುಖ್ಯ ಸಸ್ಯಾಹಾರಿ ಪ್ರಾಣಿಗಳು. ಹುಲಿ, ಚಿರತೆ, ಕರಡಿ, ಕಾಡುನಾಯಿ, ಕಿರುಬ, ಚಿರತೆಬೆಕ್ಕು, ಕಾಡುಬೆಕ್ಕು, ಮುಂಗುಸಿ, ಮಾಂಸಾಹಾರಿಗಳು. ನೀರುನಾಯಿ, ಕಾಡುಪಾಪ, ಕಣೆಹಂದಿ, ಚಿಪ್ಪ್ ಹಂದಿ, ಪುನುಗುಬೆಕ್ಕು ಸಾಕಷ್ಟಿವೆ. 250ಕ್ಕೂ ಹೆಚ್ಚು ಬಗೆಯ ಪಕ್ಷಿ ಜಾತಿಗಳಿವೆ. ಈ ಉದ್ಯಾನವನ ಮೈಸೂರಿನಿಂದ 90ಕಿಮೀ ದೂರದಲ್ಲಿದೆ. ಪ್ರಾಣಿವೀಕ್ಷಣೆಗೆ ವಾಹನ ಸೌಲಭ್ಯ ಇದೆ. ವಸತಿ ಸೌಕರ್ಯ ಸು.10ಕಿಮೀ ದೂರದ ಮೂರ್ಕಲ್ಲಿನಲ್ಲಿದೆ (ನೋಡಿ: ನಾಗರಹೊಳೆ).

**ಅಭಯಾರಣ್ಯಗಳು (ವನ್ಯಧಾಮಗಳು ಹಾಗೂ ಪಕ್ಷಿಧಾಮಗಳು)**

**1. ಆದಿಚುಂಚನಗಿರಿ ಮಯೂರ ಅಭಯಾರಣ್ಯ:** (ಮಂಡ್ಯ ಜಿಲ್ಲೆ) ನವಿಲು ಸಂರಕ್ಷಣೆಗೆಂದು ಮೀಸಲಾಗಿರುವ ಪಕ್ಷಿಧಾಮ. 1981 ಅಕ್ಟೋಬರಿನಲ್ಲಿ ಅಸ್ತಿತ್ವಕ್ಕೆ ಬಂತು. ವಿಸ್ತೀರ್ಣ 0.88ಚಕಿಮೀ. ಇಲ್ಲಿನದು ಪ್ರಧಾನವಾಗಿ ಕುರುಚಲು ಕಾಡು. ಗೊಬ್ಬಳಿ, ಕಳ್ಳಿ, ಎಕ್ಕ, ಬೇವು ಇಲ್ಲಿನ ಮುಖ್ಯ ಸಸ್ಯಜಾತಿಗಳು.

ನವಿಲು ಮಾತ್ರವಲ್ಲದೆ ಹಳದಿಕೊರಳಿನ ಪಿಕಳಾರವೂ ಇಲ್ಲಿ ಕಾಣದೊರೆಯುತ್ತದೆ. ಮಂಗ, ಬಾವಲಿ, ಕಾಡುಬೆಕ್ಕು, ಮುಂಗುಸಿ ಮತ್ತು ಮೊಲ ಇಲ್ಲಿ ಸಿಗುವ ಸಸ್ತನಿಗಳು (ನೋಡಿ: ಆದಿಚುಂಚನಗಿರಿ).

**2. ಅತ್ತಿವೇರಿ ಪಕ್ಷಿಧಾಮ:** (ಉತ್ತರಕನ್ನಡ ಜಿಲ್ಲೆ) ಮುಂಡಗೋಡಿನಿಂದ 17ಕಿಮೀ ದೂರದಲ್ಲೂ ಹುಬ್ಬಳ್ಳಿಯಿಂದ 43ಕಿಮೀ ದೂರದಲ್ಲೂ ಇದೆ. ವಿಸ್ತೀರ್ಣ 2.23ಚಕಿಮೀ. 1994ರ ಅಕ್ಟೋಬರಿನಲ್ಲಿ ಅಸ್ತಿತ್ವಕ್ಕೆ ಬಂತು. ಅತ್ತಿವೇರಿ ಗ್ರಾಮದ ಬಳಿ ಹರಿಯುವ ತಾಯವ್ವನ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಲಾದ ಅಣೆಕಟ್ಟಿನಿಂದಾಗಿ ಅತ್ತಿವೇರಿ ಜಲಾಶಯ ರೂಪುಗೊಂಡು ಪಕ್ಷಿಗಳ ಮೆಚ್ಚಿನ ತಾಣವಾಯಿತು. ಸುತ್ತ ಪರ್ಣಪಾತಿ ಕಾಡಿದೆ. ಬಾಗೆ, ಬೂರುಗ, ತಾಟಿನುಂಗು, ಹಲಸು, ಬಿಳಿಜಾಲಿ, ನೇರಳೆ, ತೇಗ, ಬೀಟೆ, ಜಾಲಿ, ಬಿದಿರು ಇಲ್ಲಿನ ಮುಖ್ಯ ಸಸ್ಯಜಾತಿಗಳು.

ಇಲ್ಲಿನ ಪಕ್ಷಿಗಳಲ್ಲಿ ಮುಖ್ಯವಾಗಿ ಬಿಳಿಬೂಸ, ನೀರುಕಾಗೆ, ಚಮಚಕೊಕ್ಕು, ಬೆಳ್ಳಕ್ಕಿ, ಮೀಂಚುಳ್ಳಿ, ಓಂಗಿಲೆ ಮತ್ತು ಕವಲುತೋಕೆಗಳನ್ನು ಹೆಸರಿಸಬಹುದು.

**3. ಅರಬಿತಿಟ್ಟು ವನ್ಯಧಾಮ:** (ಮೈಸೂರು ಜಿಲ್ಲೆ) ಮೈಸೂರಿನಿಂದ ಪಶ್ಚಿಮಕ್ಕೆ 30ಕಿಮೀ ದೂರದಲ್ಲಿ ಮೈಸೂರು ಮಂಗಳೂರು ಹೆದ್ದಾರಿಯಲ್ಲಿದೆ. ವಿಸ್ತೀರ್ಣ 13.5ಚಕಿಮೀ. 1985 ಏಪ್ರಿಲ್‌ನಲ್ಲಿ ಅಸ್ತಿತ್ವಕ್ಕೆ ಬಂತು. ಇಲ್ಲಿನ ಪ್ರಧಾನ ಸಸ್ಯವರ್ಗ ಕುರುಚಲು ಬಗೆಯದಾಗಿದ್ದು ದಿಂಡಲು, ಬೆಟ್ಟದನೆಲ್ಲಿ, ಮುಗುಳಿ, ಶ್ರೀಗಂಧವನ್ನು ಒಳಗೊಂಡಿದೆ. ಚಿರತೆ, ನರಿ, ಜಿಂಕೆ, ಕಾಡುಹಂದಿ, ಕಣೆಹಂದಿ, ಮೊಲ ಮತ್ತು ಮುಂಗುಸಿ ಇಲ್ಲಿನ ಮುಖ್ಯ ಪ್ರಾಣಿಜಾತಿಗಳು. ಪ್ರವಾಸಿಗರಿಗೆ ಇನ್ನೂ ಪ್ರವೇಶ ಕಲ್ಪಿಸಲಾಗಿಲ್ಲ.

**4. ಭದ್ರಾವನ್ಯಧಾಮ:** (ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆ) ಚಿಕ್ಕಮಗಳೂರಿನಿಂದ 30ಕಿಮೀ ದೂರದಲ್ಲಿ ಇದರ ದಕ್ಷಿಣ ಭಾಗವಾದ ಮುತ್ತೋಡಿಯೂ ತರೀಕೆರೆಯಿಂದ 22ಕಿಮೀ ದೂರದಲ್ಲಿ ಇದರ ಉತ್ತರ ಭಾಗವಾದ ಲಕ್ಕವಳ್ಳಿಯೂ ಇವೆ. 1974ರ ಸೆಪ್ಟೆಂಬರಿನಲ್ಲಿ ಅಭಯಾರಣ್ಯವಾಗಿ ಅಸ್ತಿತ್ವಕ್ಕೆ ಬಂತು. 1998ರ ನವೆಂಬರ್‌ನಲ್ಲಿ ಹುಲಿ ಮೀಸಲು ಅರಣ್ಯವಾಗಿ ಮೇಲ್ದರ್ಜೆಗೆ ಏರಿತು. ಇದರ ವಿಸ್ತೀರ್ಣ 493ಚಕಿಮೀ. ಇದರಲ್ಲಿ ಲಕ್ಕವಳ್ಳಿ, ಮುತ್ತೋಡಿ ಮತ್ತಿತರ ರಾಜ್ಯ ಅರಣ್ಯಗಳನ್ನು ಒಳಗೊಂಡ ಒಂದು ಕ್ಷೇತ್ರವೂ ಬಾಬಾಬುಡನ್‌ಗಿರಿ ಅರಣ್ಯವನ್ನು ಒಳಗೊಂಡ ಎರಡನೆಯ ಕ್ಷೇತ್ರವೂ ಇದೆ. ಉತ್ತರದಲ್ಲಿ ಭದ್ರಾ ಜಲಾಶಯ ಇದೆ. ಈ ಅಭಯಾರಣ್ಯದ ದಕ್ಷಿಣಭಾಗದಲ್ಲಿ ಆರ್ದ್ರಪರ್ಣಪಾತಿ ಬಗೆಯ ಅರಣ್ಯವೂ ಉತ್ತರಭಾಗದಲ್ಲಿ ಶುಷ್ಕಪರ್ಣಪಾತಿ ಬಗೆಯ ಅರಣ್ಯವೂ ಬಾಬಾಬುಡನ್‌ಗಿರಿ ವಲಯದಲ್ಲಿ ಶೋಲಾ ಬಗೆಯ ಅರಣ್ಯವೂ ಇವೆ.

ಇಲ್ಲಿನ ಮುಖ್ಯ ಸಸ್ಯಜಾತಿಗಳೆಂದರೆ ಹೊಳೆದಾಸವಾಳ, ಅರಿಶಿಣತೇಗ, ತಡಸಲು, ಕಲ್ತೇಗ, ತೇಗ, ಹುನಗಲು, ತಾರೆ, ಮತ್ತಿ, ಬೀಟೆ, ಹೊನ್ನೆ, ಕೂಲಿ, ಅತ್ತಿ, ನಾಯಿಬೆಂಡೆ, ಚಿಪ್ಪಾಲೆ, ಜಾಲಾರಿ, ಸಗಡೆ, ದಿಂಡಲು, ದೊಳ್ಳಿ, ಜಂಬೆ, ಬಗನಿ ಮತ್ತು ಗಂಡುಬಿದಿರು ಹಾಗೂ ಹೆಬ್ಬಿದಿರು.

ಹುಲಿ, ಚಿರತೆ, ಕಾಡುಬೆಕ್ಕು, ಕಾಡುನಾಯಿ, ನರಿ, ಬೆಕ್ಕು, ಕರಡಿ, ಆನೆ, ಕಾಟಿ, ಕಡವೆ, ಜಿಂಕೆ, ಕೆಮ್ಮ, ಕೊಂಡಕುರಿ, ಕಾಡುಹಂದಿ, ಮುಸುವ, ಮಂಗ, ಕಾಡುಪಾಪ, ಪುನುಗುಬೆಕ್ಕು, ತಾಳೆಬೆಕ್ಕು, ಮುಂಗುಸಿ, ಚಿಪ್ಪುಹಂದಿ, ಕೇಶಳಿಲು, ಕಣೆಹಂದಿ, ನೀರುನಾಯಿ, ಹಾರುವ ಓತಿ – ಇವು ಪ್ರಧಾನ ಪ್ರಾಣಿಜಾತಿಗಳು.

250ಕ್ಕೂ ಹೆಚ್ಚು ಬಗೆಯ ಹಕ್ಕಿಗಳಿವೆ. ಬ್ಲ್ಯಾಕ್‌ಬರ್ಡ್, ಶಾಮ, ಕೆಂಪೆದೆ ಪಿಕಳಾರ, ಕಾಜಾಣ, ಕಗ್ಗಿಲು, ಓಂಗಿಲೆಗಳು ಇಲ್ಲಿ ಕಾಣಸಿಗುವ ಪಕ್ಷಿ ಪ್ರಭೇದಗಳು. ಪ್ರವಾಸಿಗರಿಗೆ ವಸತಿ ಹಾಗೂ ವೀಕ್ಷಣೆಗೆ ವಾಹನ ಸೌಕರ್ಯ ಇವೆ.

**5. ಬಿಳಿಗಿರಿ ರಂಗಸ್ವಾಮಿ ದೇವಸ್ಥಾನದ ಅಭಯಾರಣ್ಯ:** (ಚಾಮರಾಜನಗರ ಜಿಲ್ಲೆ) ಚಾಮರಾಜನಗರದಿಂದ 48ಕಿಮೀ ದೂರದಲ್ಲಿ ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಸಂಧಿಸುವ ಪ್ರದೇಶದಲ್ಲಿ ಇದೆ. 1974 ಜೂನ್‌ನಲ್ಲಿ ಸ್ಥಾಪನೆಯಾದ ಇದು 1987 ಜನವರಿಯಲ್ಲಿ ವಿಸ್ತಾರಗೊಂಡಿತು. ಇದರ ವಿಸ್ತೀರ್ಣ 540ಚಕಿಮೀ ದಕ್ಷಿಣದಲ್ಲಿ ತಮಿಳುನಾಡಿಗೆ ಸೇರಿಕೊಂಡಿದೆ. ಬಿಳಿಗಿರಿರಂಗನ ಬೆಟ್ಟವನ್ನೆಲ್ಲ ಹೆಚ್ಚುಕಡಿಮೆ ಆಕ್ರಮಿಸಿರುವ ಈ ಅಭಯಾರಣ್ಯ

ಆನೆಗಳ ಹಿಂಡು

ತಪ್ಪಲಿನಲ್ಲಿ ಕುರುಚಲು ಕಾಡನ್ನೂ ಎತ್ತರದ ಪದೇಶಗಳಲ್ಲಿ ಆರ್ದ್ರಪರ್ಣಪಾತಿ, ನಿತ್ಯಹಸುರಿನ ಅರಣ್ಯಗಳನ್ನೂ ಇನ್ನೂ ಉನ್ನತ ಪ್ರದೇಶಗಳಲ್ಲಿ ಶೋಲಾ ಅರಣ್ಯವನ್ನೂ ಪಡೆದಿದೆ.

ಪರ್ಣಪಾತಿ ಅರಣ್ಯ ಪ್ರದೇಶದಲ್ಲಿ ಬೀಟೆ, ತಡಸಲು, ತಾರೆ, ಹುನಗಲು, ಪಾದರಿ, ಆನೆಬ್ಯಾಲ, ಕೊಂಡಮಾವು, ಹೊನ್ನೆ, ದಿಂಡಲು, ಕೆಂಪುದಾಳೆ, ಕೊಲಮಾವು, ನಾಯಿಬೆಂಡೆ, ಕಕ್ಕೆ, ಬೆಟ್ಟದನೆಲ್ಲಿ, ದೊಳ್ಳಿ, ಎಣ್ಣೆಮರ, ಸಗಡೆ, ಕೈತಾಳೆ, ಉಡಿ ಮುಂತಾದ ವೃಕ್ಷಗಳೂ ನಿತ್ಯಹಸುರಿನ ಪ್ರದೇಶಗಳಲ್ಲಿ ಸಟಗ, ನೀರಂಜಿ, ನೇರಳೆ ಜಾತಿಯವು, ಎಲೆಸಾಂಡೆ ಮುಂತಾದವೂ ಇವೆ. ಶೋಲಾ ಪ್ರದೇಶಗಳಲ್ಲಿ ಮಸ್ಸಿವಾರ, ಮರುಳಿ, ಲೊಡ್ಡಿ, ಕಂಪಾಲೆ ಮರಗಳೂ ಹುಲ್ಲುಪಸಲೆಗಳಲ್ಲಿ ನಿಂಬೆಹುಲ್ಲು, ಕಾಮಾಜಿಹುಲ್ಲು, ಶುಂಠಿಹುಲ್ಲು, ಗುಂಡುನಾಲೆಹುಲ್ಲು, ಕಾಚಿಹುಲ್ಲು ಮುಂತಾದವು ಹೇರಳ.

ಪ್ರಾಣಿಗಳಲ್ಲಿ ಆನೆ, ಕಾಟಿ, ಕಡವೆ, ಜಿಂಕೆ, ಕೆಮ್ಮ, ನಾಲ್ಕುಕೊಂಬಿನ ಜಿಂಕೆಗಳೂ ಹುಲಿ, ಚಿರತೆ, ಕರಡಿ, ಕಾಡುನಾಯಿ, ಪುನುಗು ಬೆಕ್ಕುಗಳೂ ಮುಂಗುಸಿ, ಕಾಡುಬೆಕ್ಕು, ಕೇಶಳಿಲು, ಮುಸುವ, ಮಂಗ, ಕಾಡುಹಂದಿ, ಕಣೆಹಂದಿ, ನೀರುನಾಯಿ ಮುಂತಾದವೂ ಸಾಕಷ್ಟಿವೆ. 215ಕ್ಕೂ ಹೆಚ್ಚು ಬಗೆಯ ಪಕ್ಷಿಗಳೂ ಇಲ್ಲಿ ಕಾಣದೊರೆಯುತ್ತವೆ. ಇತ್ತಲೆ ಮಂಡಲ ಇಲ್ಲಿನ ಉಭಯಚರಿ ಪ್ರಾಣಿಗಳ ಪೈಕಿ ವಿಶೇಷವಾದ್ದು.

ಇಲ್ಲಿನ ಸುಪಸಿದ್ಧ ದೊಡ್ಡಸಂಪಿಗೆ ಮರ ಸೋಲಿಗರಿಗೆ ಪೂಜ್ಯವೆನಿಸಿದ್ದು, ಪ್ರೇಕ್ಷಣೀಯ ತಾಣವೂ ಆಗಿದೆ. ಪ್ರವಾಸಿಗರಿಗೆ ವಸತಿ ಸೌಕರ್ಯ ಇದೆ (ನೋಡಿ : ಬಿಳಿಗಿರಿರಂಗನ ಬೆಟ್ಟ).

**6. ಬ್ರಹ್ಮಗಿರಿ ಅಭಯಾರಣ್ಯ:** (ಕೊಡಗು ಜಿಲ್ಲೆ) ಹುಣಸೂರಿನಿಂದ 58ಕಿಮೀ ದೂರದಲ್ಲೂ ಮಡಿಕೇರಿಯಿಂದ ವಿರಾಜಪೇಟೆ ಮಾರ್ಗವಾಗಿ 37ಕಿಮೀ ದೂರದಲ್ಲೂ ಇದೆ. ವಿಸ್ತೀರ್ಣ 181ಚ.ಕಿಮೀ. ಪಶ್ಚಿಮಘಟ್ಟಗಳಲ್ಲಿ ಸ್ಥಿತವಾಗಿರುವ ಈ ವನ್ಯಧಾಮ ನಿತ್ಯಹಸುರಿನ ಹಾಗೂ ಅರೆನಿತ್ಯ ಹಸುರಿನ ಕಾಡಿನಿಂದ ಕೂಡಿದೆ. ಶೋಲ್ ಹುಲ್ಲುಗಾವಲು ಪ್ರದೇಶವೂ ಇದೆ.

ಹಲಸು, ಹೆಬ್ಬಲಸು, ಚಕ್ಕೆ, ಗಂಧಗರಿಗೆ, ಕಲ್ಲುಹೊನ್ನೆ, ಸಪ್ತಪರ್ಣಿ, ಲಿಡಗ, ತೊರತಿ, ಮೈಲಾಡಿ, ಜಿಮ್ಮಿ ಮುಂತಾದವು ನಿತ್ಯ ಹಸುರಿನ ಪ್ರದೇಶದಲ್ಲಿ ಕಾಣದೊರೆತರೆ ಕೊರೆಮತ್ತಿ, ಮತ್ತಿ, ನಂದಿ, ತಾರೆ, ತೂಪ, ಆಲ, ಅತ್ತಿ, ಕಡವಳ, ಕುಂಕುಮ, ಮಗ್ಗಾರೆ, ಹೊಲೆಗಾರ, ದೂಳ್ಳಿ, ಹನಿಚೆ ಮುಂತಾದವು ಅರೆನಿತ್ಯ ಹಸುರಿನ ಪ್ರದೇಶದಲ್ಲೂ ಬೆಳೆಯುತ್ತವೆ. ಹೆಬ್ಬಿದಿರು, ಬೆತ್ತ, ಗಣಪೆಬಳ್ಳಿ, ಮರಸುತ್ತುಬಳ್ಳಿ, ಸೀಗೆ, ಕುರಿಯಾಡಿಬಳ್ಳಿ ಇತ್ಯಾದಿ ಸಸ್ಯ ಜಾತಿಗಳೂ ಇಲ್ಲಿವೆ.

ಇಲ್ಲಿನ ವನ್ಯಪ್ರಾಣಿಗಳಲ್ಲಿ ಆನೆ, ಕಾಟಿ, ಕಡವೆ, ಜಿಂಕೆ, ಕೆಮ್ಮ, ಕೊಂಡಕುರಿ, ಹುಲಿ, ಚಿರತೆ, ಕಾಡುಬೆಕ್ಕು, ಪುನುಗುಬೆಕ್ಕು, ತಾಳೆಬೆಕ್ಕು, ಕರಡಿ, ಕಾಡುಹಂದಿ, ಸಿಂಗಳೀಕ, ಮುಸುವ, ಕಾಡುಪಾಪ, ಕೇಶಳಿಲು, ನೀರುನಾಯಿ, ಮಾರ್ಟಿನ್ ಮುಂಗುಸಿ, ಚಿಪ್ಪುಹಂದಿ ಮತ್ತು ಕಣೆಹಂದಿ ಮುಖ್ಯವಾದವು.

ಹಾವುಗಳ ಪೈಕಿ ಕಾಳಿಂಗಸರ್ಪವೂ ಹೆಬ್ಬಾವು ಮತ್ತು ನಾಗರ ಹಾವುಗಳೂ ಇಲ್ಲಿ ವಾಸಿಸುತ್ತವೆ. ಪ್ರಕೃತಿ ಅಧ್ಯಯನಕ್ಕೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ (ನೋಡಿ: ಬ್ರಹ್ಮಗಿರಿ).

**7. ಕಾವೇರಿ ಅಭಯಾರಣ್ಯ:** (ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆ) ಬೆಂಗಳೂರಿನಿಂದ ಕನಕಪುರ– ಹಲಗೂರು ಮಾರ್ಗವಾಗಿ 100ಕಿಮೀ ದೂರದಲ್ಲಿದೆ. ವಿಸ್ತೀರ್ಣ 527ಚಕಿಮೀ. 1987 ಜನವರಿಯಲ್ಲಿ ಸ್ಥಾಪಿತವಾಯಿತು. ಇದರ ಬಹುಭಾಗ ಕಾವೇರಿ ನದಿಯಿಂದ ಆವೃತವಾಗಿದೆ. ಈಶಾನ್ಯಕ್ಕೆ ತಮಿಳುನಾಡು ಗಡಿಯಿದೆ.

ಇಲ್ಲಿನ ಅರಣ್ಯ ಶುಷ್ಕಪರ್ಣಪಾತಿ ಮತ್ತು ಕುರುಚಲು ಬಗೆಯದು. ನದಿಯ ದಂಡೆಗುಂಟ ಹೊಳೆಮತ್ತಿ ಮತ್ತು ನೇರಳೆ ಮರಗಳಿದ್ದರೆ, ಉಳಿದೆಡೆ ಹುಣಿಸೆ, ಆಸಿನಮರ, ಚುಜ್ಜಲು, ಬೇಲ, ಗೊಬ್ಬಳಿ, ಬಾಗೆ ಮುಂತಾದವು ಬೆಳೆಯುತ್ತವೆ.

ಆನೆ, ಚಿರತೆ, ಕಾಡುಹಂದಿ, ಕಡವೆ, ಜಿಂಕೆ, ಕೆಮ್ಮ, ನಾಲ್ಕುಕೊಂಬಿನ ಜಿಂಕೆ, ಕೇಶಳಿಲು, ನೀರುನಾಯಿ, ಮೊಲ ಮುಂತಾದವು ಇಲ್ಲಿನ ವನ್ಯಪ್ರಾಣಿಗಳ ಪೈಕಿ ಕೆಲವು. ಪಕ್ಷಿಗಳಲ್ಲಿ ಸಿರ್‌ಕೀರ್ ಕುಕೂ, ಮಾಲ್‌ಕೋಹ, ಬಿಳಿಹುಬ್ಬಿನ ಪಿಕಳಾರ, ಕುಬ್ಜ, ಮರಕುಟಿಗ ಮುಖ್ಯವೆನಿಸಿವೆ. ಕಾವೇರಿ ನದಿಯಲ್ಲಿ ಸಿಕ್ಕುವ ಬಿಳಿಮೀನು (ಮಹಸೀರ್) ಈ ಅಭಯಾರಣ್ಯದ ಪಮುಖ ಆಕರ್ಷಣೆ. ಅಭಯಾರಣ್ಯಕ್ಕೆ ಬಲುಸಮೀಪದಲ್ಲಿ ಪ್ರೇಕ್ಷಣೀಯ ಸ್ಥಳಗಳಾದ ಹೊಗೇನಕಲ್ ಜಲಪಾತ, ಮೇಕೆದಾಟು ಮತ್ತು ಸಂಗಮಗಳಿವೆ. ಜಂಗಲ್ ಲಾಡ್ಜುಗಳು ಮತ್ತು ರಿಸಾರ್ಟ್ಸ್‌ನವರ ವಸತಿ ಸೌಕರ್ಯ ಉಂಟು.

**8. ದಾಂಡೇಲಿ ಅಭಯಾರಣ್ಯ:** (ಉತ್ತರ ಕನ್ನಡ ಜಿಲ್ಲೆ). 1956 ಮೇ ತಿಂಗಳಿನಲ್ಲಿ ಸ್ಥಾಪನೆಗೊಂಡಿತು. ಧಾರವಾಡದಿಂದ ದಾಂಡೇಲಿ ಪಟ್ಟಣ ಮಾರ್ಗವಾಗಿ 68ಕಿಮೀ ದೂರದಲ್ಲಿದೆ. ವಿಸ್ತೀರ್ಣ 204ಚ.ಕಿಮೀ. ಈ ವನ್ಯಧಾಮ 1994ರ ಏಪ್ರಿಲ್‌ನಲ್ಲಿ ವಿಸ್ತಾರಗೊಂಡು ಪ್ರಸಕ್ತ 475ಚ.ಕಿಮೀ ಅರಣ್ಯವನ್ನು ಒಳಗೊಂಡಿದೆ.

ಆರ್ದ್ರಪರ್ಣಪಾತಿ ಮತ್ತು ಅರೆನಿತ್ಯಹಸುರಿನ ಅರಣ್ಯದಿಂದ ಕೂಡಿದೆ. ಬೀಟೆ, ಮತ್ತಿ, ತಾರೆ, ನಂದಿ, ಹೊನ್ನೆ, ಅರಿಶಿಣತೇಗ, ತಡಸಲು, ನಾಯಿಬೆಂಡೆ, ನವಿಲಾದಿ ಇಲ್ಲಿನ ಮುಖ್ಯ ವೃಕ್ಷಜಾತಿಗಳು. ಬಿದಿರು ಕೂಡ ಹೇರಳವಾಗಿದೆ. ಉಳಿದ ಪಮುಖ ವನ್ಯಧಾಮಗಳಲ್ಲಿ ಕಾಣಸಿಕ್ಕುವ ಪಾಣಿಗಳೇ ಇಲ್ಲೂ ಉಂಟು. 200 ಬಗೆಯ ಹಕ್ಕಿಗಳಿವೆ. ಪವಾಸಿಗರಿಗೆ ವಾಹನ, ವಸತಿ ಸೌಕರ್ಯಗಳಿವೆ. 10ಕಿಮೀ ದೂರದಲ್ಲಿ ಹರಿಯುವ ಕಾಳಿನದಿಯಲ್ಲಿ ದೋಣಿವಿಹಾರ ಮತ್ತು ಕೆಲವು ಸಾಹಸಮಯ ಕ್ರೀಡೆಗಳಿಗೆ ಅವಕಾಶವಿದೆ. ಸನಿಹದಲ್ಲೇ ಉಳವಿ ಕ್ಷೇತ್ರ, ಕವಲ ಗುಹೆಗಳು, ಸೈಕ್ಸ್ ಪಾಯಿಂಟ್, ನಾಗಝರಿ ಕಣಿವೆ ವೀಕ್ಷಣ ತಾಣ ಇವೆ (ನೋಡಿ: ದಾಂಡೇಲಿ).

**9. ದರೋಜಿ ವನ್ಯಧಾಮ:** (ಬಳ್ಳಾರಿ ಜಿಲ್ಲೆ) ಪಧಾನವಾಗಿ ಕರಡಿಗಳನ್ನು ಸಂರಕ್ಷಿಸಲೆಂದು ಸ್ಥಾಪಿಸಲಾದ ಅಭಯಾರಣ್ಯ. 1994 ಅಕ್ಟೋಬರ್ ತಿಂಗಳಿನಲ್ಲಿ ಅಸ್ತಿತ್ವಕ್ಕೆ ಬಂತು. ಇದೊಂದು ಚಿಕ್ಕ ಅಭಯಾರಣ್ಯ. ವಿಸ್ತೀರ್ಣ 56ಚ.ಕಿಮೀ. ಹೊಸಪೇಟೆಯಿಂದ ಕಮಲಾಪುರ ಮಾರ್ಗವಾಗಿ 30ಕಿಮೀ ದೂರದಲ್ಲಿದೆ. ಹರಿಹರದಿಂದ 132ಕಿಮೀ ದೂರದಲ್ಲಿದೆ.

ಇಲ್ಲಿನ ಅರಣ್ಯ ಕುರುಚಲು ಬಗೆಯದು, ಜೊತೆಗೆ ಕಲ್ಲುಬಂಡೆಗಳಿಂದ ಕೂಡಿದ ಗುಡ್ಡಬೆಟ್ಟ, ಗುಹೆಗಳು ಇರುವುದರಿಂದ ಕರಡಿಗಳಿಗೆ ಅನುಕೂಲವಾಗಿದೆ. ಮುಳ್ಳು ಕಂಟಿಗಳಾದ ಕಬಳಿ, ಎಲಚಿ, ಪರಗಿ, ಚುಜ್ಜಲು, ಕರೀಜಾಲ್ ಮುಂತಾದವೂ ಅಲ್ಲಲ್ಲಿ ತಡಸಲು, ಆಲ, ಕುಳ್ಳುಗಾತ್ರದ ನೇರಳೆ ಇತ್ಯಾದಿ ಮರಗಳು ಬೆಳೆಯುತ್ತವೆ. ಕರಡಿ ಮಾತ್ರವಲ್ಲದೆ, ಚಿರತೆ, ತೋಳ, ನರಿ, ಕತ್ತೆಕಿರುಬ, ಮುಂಗುಸಿ, ಮಂಗ, ನವಿಲು, ಮುಂತಾದವೂ ಕಾಣದೊರೆಯುತ್ತವೆ. ಕಮಲಾಪುರದಲ್ಲಿ ಅರಣ್ಯ ವಸತಿ ಸೌಕರ್ಯ ಉಂಟು.

**10. ಘಟಪ್ರಭಾ ಪಕ್ಷಿಧಾಮ:** (ಬೆಳಗಾಂವಿ ಜಿಲ್ಲೆ) ಘಟಪಭಾ ನದಿಗೆ ಧೂಪಧಾಳದ ಬಳಿ ಕಟ್ಟಲಾಗಿರುವ ಜಲಾಶಯವನ್ನೂ ಒಳಗೊಂಡಂತೆ ಸು.20 ದ್ವೀಪಗಳಿಂದ ಕೂಡಿದ ಪಕ್ಷಿಧಾಮ. 1974 ಜೂನಿನಲ್ಲಿ ಅಸ್ತಿತ್ವಕ್ಕೆ ಬಂತು. ಧಾರವಾಡದಿಂದ 95ಕಿಮೀ ದೂರದಲ್ಲಿದೆ. ವಿಸ್ತೀರ್ಣ 30ಚಕಿಮೀ. ಬೆಳಗಾಂವಿ ಜಿಲ್ಲೆಯ ಗೋಕಾಕದಿಂದ ನಾಲ್ಕು ಫರ್ಲಾಂಗ್ ದೂರದಲ್ಲಿದೆ.

ದೊಡ್ಡಗಾತ್ರದ ದ್ವೀಪಗಳಲ್ಲಿ ಮಾತ್ರ ಕೊಂಚ ವನರಾಶಿ ಇದೆ. ಗೊಬ್ಬಳಿ, ಬಾಗೆ, ಹಲಸು, ಕಾರಾಚ, ಎಲಚಿ, ಬಿದಿರು, ಆನೆಹುಲ್ಲು ಇಂಪರೇಟ ಮುಂತಾದವು ಇಲ್ಲಿನ ಮುಖ್ಯ ಸಸ್ಯಗಳು. ಹಕ್ಕಿಗಳಿಗೆ ಆಶಯ ಒದಗಿಸುತ್ತವೆ. ಡೆಮಾಯ್‌ಸೆಲ್ ಕೊಕ್ಕರೆ, ಬಿಳಿಬಕ, ನೀರುಕಾಗೆ, ಗೋವಕ್ಕಿ, ಬೆಳ್ಳಕ್ಕಿ ಪಭೇದಗಳು, ಚಮಚಕೊಕ್ಕು, ಬಿಳಿಬೂಸ, ನೀರುನವಿಲು, ನಾರಾಯಣೆ, ಮೀಂಚುಳ್ಳಿ ಮತ್ತು ಟಿಟ್ಟಿಭಗಳು ಇಲ್ಲಿ ಕಾಣಸಿಗುತ್ತವೆ.

ಗೋಕಾಕ ಧಬಧಬೆ (ನೋಡಿ) ಇಲ್ಲಿನ ಇನ್ನೊಂದು ಆಕರ್ಷಣೆ.

**11. ಗುಡವಿ ಪಕ್ಷಿಧಾಮ:** (ಶಿವಮೊಗ್ಗ ಜಿಲ್ಲೆ) ಶಿವಮೊಗ್ಗದಿಂದ ಸಾಗರ ಸೊರಬ ಮಾರ್ಗವಾಗಿ 112ಕಿಮೀ ದೂರದಲ್ಲಿದೆ. 1989 ಜುಲೈನಲ್ಲಿ ಸ್ಥಾಪಿತವಾಯಿತು. 30 ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯ ಮತ್ತು ಅದಕ್ಕೆ ಸೇರಿಕೊಂಡಂತಿರುವ ದಟ್ಟ ಆರ್ದ್ರಪರ್ಣಪಾತಿ ಅರಣ್ಯವನ್ನು ಒಳಗೊಂಡ ತಾಣ. ವಿಸ್ತೀರ್ಣ 0.74ಚ.ಕಿಮೀ. ತೊರೆಮತ್ತಿ, ತಾರೆ, ಅಳಲೆ, ನಂದಿ, ಬೀಟೆ, ಅರಿಶಿಣತೇಗ, ಜಂಬೆ, ಬಗನಿ, ಆಲ, ಅರಳಿ, ಮುತ್ತುಗ, ಶ್ರೀಗಂಧ, ಇಪ್ಪೆ ಮರಗಳು ಇಲ್ಲಿನ ಮುಖ್ಯ ಸಸ್ಯ ಜಾತಿಗಳು. 191 ಬಗೆಯ ಹಕ್ಕಿಗಳು ಇಲ್ಲಿ ಕಾಣದೊರೆಯುತ್ತವೆ. ಇವುಗಳ ಪೈಕಿ 63 ನೀರಹಕ್ಕಿಗಳು. ಹಲವು ಬಗೆಯ ಬೆಳ್ಳಕ್ಕಿ, ನೀರುಕಾಗೆ ಜಾತಿಗಳು, ಬಕಗಳು, ಕೊಕ್ಕರೆಗಳು, ಬಿಳಿಬೂಸಾ, ಕಪ್ಪುಬೂಸಾ, ನಾಮದಕೋಳಿ, ಮೀಂಚುಳ್ಳಿ ಬಗೆಗಳು, ಮದಗದ ಕೋಳಿ, ಬಾತುಗಳು ಹೇರಳವಾಗಿವೆ.

ಕಾಡೆಮ್ಮೆ

**12. ಮೂಕಾಂಬಿಕಾ ವನ್ಯಧಾಮ:** (ಉಡುಪಿ ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿ ಸ್ಥಾಪಿತವಾಗಿರುವ ಇನ್ನೊಂದು ಉತ್ತಮ ಅಭಯಾರಣ್ಯ; ಶರಾವತಿ ಕಣಿವೆ ವನ್ಯಧಾಮಕ್ಕೆ ಸೇರಿಕೊಂಡಂತಿದೆ. ಈಶಾನ್ಯದಲ್ಲಿ ಕೊಡಚಾದ್ರಿ, ಮಧ್ಯದಲ್ಲಿ ಕೊಲ್ಲೂರು ಇವೆ. ಸಾಗರದಿಂದ 75ಕಿಮೀ ದೂರದಲ್ಲೂ ಮಂಗಳೂರಿ ನಿಂದ 132ಕಿಮೀ ದೂರದಲ್ಲೂ ಇದೆ. 1974ರ ಜೂನ್ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಒಟ್ಟು ವಿಸ್ತೀರ್ಣ 247ಚ.ಕಿಮೀ. ಕೊಲ್ಲೂರಿನ ಮೂಕಾಂಬಿಕೆಯ ಹೆಸರನ್ನೇ ಈ ವನ್ಯಧಾಮಕ್ಕೆ ಕೊಡಲಾಗಿದೆ. ನಿತ್ಯಹಸುರು, ಅರೆ ನಿತ್ಯಹಸುರು ಹಾಗೂ ಆರ್ದ್ರಪರ್ಣಪಾತಿ ಅರಣ್ಯದಿಂದ ಕೂಡಿರುವ ಈ ವನ್ಯಧಾಮದಲ್ಲಿ ಪಧಾನವಾಗಿ ಎಣ್ಣೆಮರ, ಗುಳುಮಾವು, ಕಿರಿಭೋಗಿ, ಬಲಗಿ, ಸುರಹೊನ್ನೆ, ರುದ್ರಾಕ್ಷಿ, ಸತಗ, ಗುಡ್ಡರೆಂಜೆ ಮರಗಳೂ ಹಂಡಿಬೆತ್ತ, ಹಾಲುಬೆತ್ತದ ಮೆಳೆಗಳೂ ಹಲಸು, ಬರಣಿಗೆ, ನೇರಳೆ, ದಾಲ್ಚಿನ್ನಿ ಜಾಕಾಯಿ, ಮರಗಳೂ ಕೆಳಸ್ತರದಲ್ಲಿ ಬೂರುಗ, ಮಾವು, ಬೀಟೆ, ಬೆಟ್ಟಗಣಗಿಲೆ, ಅರಿಶಿಣ, ತೇಗ ಮುಂತಾದ ಮರಗಳೂ ಇವೆ.

ಅರಿಶಿಣ ಬಳ್ಳಿ ಅಥವಾ ಮರದ ಅರಿಶಿಣ ಎಂಬ ತುಂಬ ಅಪರೂಪದ ಬಳ್ಳಿ ಇಲ್ಲಿ ಕಾಣದೊರೆಯುತ್ತದೆ. ಔಷಧೀಯ ಮಹತ್ವವುಳ್ಳ ಈ ಸಸ್ಯ ಅಳಿವಿನ ಅಪಾಯದ ಅಂಚಿನಲ್ಲಿದೆ.

ಬೇರೆ ದೊಡ್ಡ ವನ್ಯಧಾಮಗಳಲ್ಲಿ ಕಂಡುಬರುವ ಎಲ್ಲ ಮಾಂಸಾಹಾರಿ, ಸಸ್ಯಾಹಾರಿ ಪ್ರಾಣಿಗಳು ಇಲ್ಲಿಯೂ ಇವೆ. ಅಪರೂಪದ ಸಿಂಗಳೀಕ ಇಲ್ಲಿ ವಾಸಿಸುತ್ತದೆ.

**13. ಮೇಲುಕೋಟೆ ವನ್ಯಧಾಮ:** (ಮಂಡ್ಯ ಜಿಲ್ಲೆ) ಮುಖ್ಯವಾಗಿ ತೋಳದ ಸಂರಕ್ಷಣೆಗೆಂದು ಸ್ಥಾಪಿತವಾದ ವನ್ಯಧಾಮ. ಮೈಸೂರಿನಿಂದ ಶ್ರೀರಂಗಪಟ್ಟಣ – ಪಾಂಡವಪುರ ಮಾರ್ಗವಾಗಿ 50ಕಿ.ಮೀ ದೂರದಲ್ಲಿದೆ. 1974 ಜೂನಿನಲ್ಲಿ ಅಸ್ತಿತ್ವಕ್ಕೆ ಬಂತು. ವಿಸ್ತೀರ್ಣ

50ಚ.ಕಿಮೀ. ಇಲ್ಲಿ ಅರಣ್ಯ ಪ್ರಧಾನವಾಗಿ ಒಣಪರ್ಣಪಾತಿ ಮತ್ತು ಕುರುಚಲು ಬಗೆಯದು. ಜಾಲಾರಿ ಮತ್ತು ಮುಂಡೀಚಲು (ಒಂದು ಬಗೆಯ ಅನಾವೃತ ಬೀಜ ಸಸ್ಯ, ವಿನಾಶದ ಅಂಚಿನಲ್ಲಿದೆ) ಇಲ್ಲಿನ ಮುಖ್ಯ ಬಗೆಯ ಮರಗಳು. ಕಾಡುಬೆಕ್ಕು, ತೋಳ, ಚಿರತೆ, ನರಿ ಇಲ್ಲಿನ ಮಾಂಸಾಹಾರಿಗಳಾದರೆ; ಜಿಂಕೆ, ಕೃಷ್ಣಮೃಗ, ಹಂದಿ, ಕೋತಿ ಇಲ್ಲಿನ ಸಸ್ಯಾಹಾರಿಗಳು.



ಅಂಗೈಗಾತ್ರದ ಅಪರೂಪದ ಜೇಡ

**14. ನುಗು ವನ್ಯಧಾಮ:** (ಮೈಸೂರು ಜಿಲ್ಲೆ) ನುಗು ಹೊಳೆಗೆ ಅಡ್ಡಲಾಗಿ ಕಟ್ಟಿದ ಜಲಾಶಯವನ್ನು ಒಳಗೊಂಡ ಒಂದು ಚಿಕ್ಕ ಅಭಯಾರಣ್ಯ. ಮೈಸೂರಿನಿಂದ ಸರಗೂರು ಮಾರ್ಗವಾಗಿ 76ಕಿಮೀ ದೂರದಲ್ಲಿದೆ. 1974 ಜೂನಿನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 30ಚ.ಕಿಮೀ.

ಇಲ್ಲಿನ ಬಹುಪಾಲು ಅರಣ್ಯ ಕುರುಚಲು ಕಂಟಿಗಳಿಂದ ಕೂಡಿದೆ. ದಿಂಡಿಲು, ಬೆಟ್ಟದನೆಲ್ಲಿ, ಶ್ರೀಗಂಧ, ಬಾಗೆ, ಚುಜ್ಜಲು, ಗಂಡುಬಿದಿರು ಇಲ್ಲಿನ ಮುಖ್ಯ ಸಸ್ಯವರ್ಗ. ಆನೆ, ಚಿರತೆ, ಕಾಡುಬೆಕ್ಕು, ಜಿಂಕೆ, ಕೆಮ್ಮ, ಕಾಡುಹಂದಿ, ಮುಂಗುಸಿ, ಕಡವೆ, ಪುನುಗುಬೆಕ್ಕು, ಮರಬೆಕ್ಕು ಮತ್ತಿತರ ಪ್ರಾಣಿಗಳಿವೆ.

**15. ಪುಷ್ಪಗಿರಿ ವನ್ಯಧಾಮ:** (ಕೊಡಗು ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿರುವ ಇನ್ನೊಂದು ಅಭಯಾರಣ್ಯ. 1987 ಸೆಪ್ಟೆಂಬರಿನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 103ಚ.ಕಿಮೀ. ಅನೇಕ ಝರಿಗಳಿಂದ ಕಿರುಅಬ್ಬಿಗಳಿಂದ ಕೂಡಿರುವ ಈ ವನ್ಯಧಾಮದಲ್ಲಿ ನಿತ್ಯ ಹಸುರಿನ, ಅರೆನಿತ್ಯಹಸುರಿನ ಮತ್ತು ಶೋಲಾ ಬಗೆಯ ಅರಣ್ಯವನ್ನು ಕಾಣಬಹುದು.

ಎಣ್ಣೆಮರ, ಅಗಿಲು, ಕಿರಿಲಭೋಗಿ, ನಾಗಸಂಪಿಗೆ, ಧೂಪ, ತತ್ತಲೆಮರ, ಹೆಬ್ಬಲಸು, ಹಲಸು, ತೊರಟ್ಟಿ, ಹಾಲುಸಳ್ಳಿ ಮತ್ತಿತರ ನಿತ್ಯಹಸುರಿನ ಮರಗಳಲ್ಲದೆ, ವಂಟೇಮರ, ಸತಗ, ದಾಲ್ಚಿನ್ನಿ, ಗೌರಿ, ಬಾಗೆ, ಹುನಗಲು, ಮತ್ತಿ, ಅಂಡಿಪುನಾರ ಇತ್ಯಾದಿ ಅರೆನಿತ್ಯಹಸುರಿನ ಮರಗಳೂ ಬೆತ್ತ, ಬಿದಿರು, ವಾಟೆಬಿದಿರು, ಕುರಿಂಜಿ ಗಿಡಗಳೂ ಇಲ್ಲಿ ಕಾಣದೊರೆಯುತ್ತವೆ. ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಎಲ್ಲ ಬಗೆಯ ಪ್ರಾಣಿಗಳೂ ಇಲ್ಲುಂಟು.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ ಮತ್ತು ಹಾರಂಗಿ ಅಣೆಕಟ್ಟು ಇಲ್ಲಿಗೆ ಸಮೀಪ.

**16. ರಾಣೆಬೆನ್ನೂರು ಕೃಷ್ಣಮೃಗ ಅಭಯಾರಣ್ಯ:** (ಧಾರವಾಡ ಜಿಲ್ಲೆ) ರಾಣೆಬೆನ್ನೂರಿಗೆ 8ಕಿಮೀ ದೂರದಲ್ಲಿದೆ. ಈ ವನ್ಯಧಾಮ ಮುಖ್ಯವಾಗಿ ಕೃಷ್ಣಮೃಗ ಮತ್ತು ಬಸ್ಟರ್ಡ್ ಹಕ್ಕಿಗಳ ಸಂರಕ್ಷಣೆಗೆಂದು 1974 ಜೂನ್‌ನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 119ಚ.ಕಿಮೀ. ಕುರುಚಲು ಕಾಡು–ಇಲ್ಲಿನ ಮುಖ್ಯ ಸಸ್ಯವರ್ಗ, ಬಳ್ಳಾರಿಜಾಲಿ, ಕಗ್ಗಲ್ಲಿ, ಹಂಗರಿಕೆ, ಕವಳಿ ಮುಂತಾದವು ಸಹಜವಾಗಿ ಬೆಳೆದರೆ, ಈಚೆಗೆ ನೀಲಗಿರಿ ಮರಗಳನ್ನೂ ವಿಪುಲವಾಗಿ ಬೆಳೆಸಲಾಗಿದೆ. ಜೊತೆಗೆ ಎಲಚಿ, ತಂಗಡಿ, ಕಕ್ಕೆ, ಬೇವು, ತಪಸಿ, ಇಪ್ಪೆ ಮರಗಳನ್ನೂ ಕಾಣಬಹುದು.

ಕೃಷ್ಣಮೃಗ, ತೋಳಗಳಲ್ಲದೆ, ಕಾಡುಹಂದಿ, ನರಿ, ಮುಳ್ಳುಹಂದಿ, ಮುಂಗುಸಿ, ಮೊಲ, ಚಿಪ್ಪುಹಂದಿ ಹಾಗೂ ಕತ್ತೆಕಿರುಬಗಳೂ ಇಲ್ಲಿ ಕಾಣದೊರೆಯುತ್ತವೆ.

**17. ರಂಗನತಿಟ್ಟು ಪಕ್ಷಿಧಾಮ:** (ಮಂಡ್ಯ ಜಿಲ್ಲೆ) ಕರ್ನಾಟಕದ ಸುಪ್ರಸಿದ್ಧ ಪಕ್ಷಿಧಾಮ. 1940 ಜುಲೈ ತಿಂಗಳಿನಲ್ಲಿ ಅಸ್ತಿತ್ವಕ್ಕೆ ಬಂತು. ಮೈಸೂರಿನಿಂದ 20ಕಿಮೀ ದೂರದಲ್ಲಿ, ಶ್ರೀರಂಗಪಟ್ಟಣಕ್ಕೆ 3ಕಿಮೀ ದೂರದಲ್ಲಿ ಕಾವೇರಿ ನದಿಯ ದಂಡೆಯಲ್ಲಿದೆ. ಈ ಪಕ್ಷಿಧಾಮ 6 ದೊಡ್ಡ ದ್ವೀಪಗಳನ್ನೂ 2–3 ಸಣ್ಣ ದ್ವೀಪಗಳನ್ನೂ ಹೊಂದಿದೆ. ವಿಸ್ತೀರ್ಣ 0.67ಚ.ಮೀ. ಈ ದ್ವೀಪಗಳಲ್ಲಿ ಸ್ವಾಭಾವಿಕ ಕುರುಚಲು ಸಸ್ಯವರ್ಗ ಹಾಗೂ ಮರಗಳಿವೆ. ನದೀತೀರದ ಆಚೀಚೆ ಕೃಷಿ ಭೂಮಿಯಿದ್ದು ಸಾಕಷ್ಟು ಆಹಾರ, ಹುಳು ಹುಪ್ಪಟೆಗಳು ಸಿಗುವುದರಿಂದ ಹಕ್ಕಿಗಳಿಗೆ ಮೆಚ್ಚಿನ ತಾಣವಾಗಿದೆ. ಇಲ್ಲಿ ಸುಮಾರು 16 ಬಗೆಯ ನೀರಹಕ್ಕಿಗಳೂ ನೂರಾರು ಬಗೆಯ ವೃಕ್ಷವಾಸಿ ಹಾಗೂ ಭೂವಾಸಿ ಹಕ್ಕಿಗಳೂ ಇವೆ. ವೀಕ್ಷಕರಿಗೆ ದೋಣಿ ಸೌಲಭ್ಯವನ್ನು ಕಲ್ಪಿಸಲಾಗಿದೆ **(ನೋಡಿ : ರಂಗನತಿಟ್ಟು)**.

**18. ಶರಾವತಿ ಕಣಿವೆ ವನ್ಯಧಾಮ:** (ಶಿವಮೊಗ್ಗ ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿ ಸ್ಥಿತವಾಗಿರುವ ಇನ್ನೊಂದು ಅಭಯಾರಣ್ಯ. 1972 ಏಪ್ರಿಲ್ ತಿಂಗಳಿನಲ್ಲಿ ಸ್ಥಾಪನೆಗೊಂಡಿತು. ಸಾಗರದಿಂದ 7ಕಿಮೀ ದೂರದಲ್ಲಿದೆ. ಪೂರ್ವಭಾಗದಲ್ಲಿ ಲಿಂಗನಮಕ್ಕಿ ಜಲಾಶಯವೂ ನೈರುತ್ಯದಲ್ಲಿ ಮೂಕಾಂಬಿಕಾ ವನ್ಯಧಾಮವೂ ಇವೆ. ಜಲಾಶಯವೂ ಸಣ್ಣಪುಟ್ಟ ದ್ವೀಪಗಳೂ ಸೇರಿ ಒಟ್ಟು ವಿಸ್ತೀರ್ಣ 431ಚ.ಕಿಮೀ. ಇಲ್ಲಿನ ಅರಣ್ಯ ನಿತ್ಯಹಸುರಿನ ಹಾಗೂ ಅರೆನಿತ್ಯಹಸುರಿನ ಸಸ್ಯ ಸಂಕುಲದಿಂದ ಕೂಡಿದೆ.

ಸುರಹೊನ್ನೆ, ಗುಳಮಾವು, ಬಗನಿ, ಸಳ್ಳೆ, ಎಣ್ಣೆಮರ, ಮಗ್ಗಾರೆ ಮುಂತಾದ ಮರಗಳೂ ಸೀಗೆ, ನೀಟಮ, ಗಣಪೆಬಳ್ಳಿ ಮುಂತಾದ ಬಳ್ಳಿಗಳೂ ನಂದಿ, ಬೀಟೆ, ದೊಳ್ಳಿ, ಬೆಟ್ಟದನೆಲ್ಲಿ, ಮತ್ತಿ, ನವಿಲಾದಿ ಇತ್ಯಾದಿ ಆರ್ಥಿಕ ಮಹತ್ತ್ವವುಳ್ಳ ಮರಗಳೂ ಇವೆ. ಹುಲಿ, ಚಿರತೆಗಳಲ್ಲದೆ, ಹಾರುವ ಅಳಿಲು, ಸಿಂಗಳೀಕ, ಕಾಳಿಂಗಸರ್ಪ ಮುಂತಾದ ಅಪರೂಪದ ಪ್ರಾಣಿಗಳೂ ಇಲ್ಲಿ ಕಾಣದೊರೆಯುತ್ತವೆ.

ರಂಗನತಿಟ್ಟು ಪಕ್ಷಿಧಾಮ

ಜೋಗ ಜಲಪಾತ ಇಲ್ಲಿಗೆ ತುಂಬ ಸಮೀಪದಲ್ಲಿದೆ. ಜೋಗದಲ್ಲಿ ಹಾಗೂ ನಾಗವಳ್ಳಿಯಲ್ಲಿ ವಸತಿ ಸೌಲಭ್ಯ ಇದೆ.

**19. ಶೆಟ್ಟಿಹಳ್ಳಿ ಅಭಯಾರಣ್ಯ:** (ಶಿವಮೊಗ್ಗ ಜಿಲ್ಲೆ) ಶಿವಮೊಗ್ಗ ನಗರಕ್ಕೆ ಹೊಂದಿ ಕೊಂಡಂತಿರುವ ಈ ವನ್ಯಧಾಮ 1974 ನವೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂತು. ವಿಸ್ತೀರ್ಣ 396ಚ.ಕಿಮೀ.

ಅರೆನಿತ್ಯಹಸುರು ಬಗೆಯ ಮತ್ತು ಶುಷ್ಕಪರ್ಣಪಾತಿ ಅರಣ್ಯದಿಂದ ಕೂಡಿದೆ. ಮತ್ತಿ, ತಾರೆ, ತೇಗ, ದಿಂಡಿಲು, ನಂದಿ, ಬೆಪ್ಪಾಲೆ, ಕಕ್ಕೆ ಮತ್ತು ಬೆಟ್ಟದನೆಲ್ಲಿ ಮರಗಳೂ ಹೆಬ್ಬಿದಿರು, ಗಂಡು ಬಿದಿರು, ತಡಸಲು, ಅರಿಶಿನತೇಗ, ಕಾಡುಬೆಂಡೆ, ಸಂಪಿಗೆ, ಗಂಟೆ ಮುಂತಾದ ವೃಕ್ಷಗಳೂ ಇಲ್ಲಿ ಹೇರಳ. ಇತರ ಅಭಯಾರಣ್ಯಗಳಲ್ಲಿ ಕಾಣಸಿಕ್ಕುವ ಎಲ್ಲ ರೀತಿಯ ಮಾಂಸಾಹಾರಿ ಸಸ್ಯಾಹಾರಿ ಪ್ರಾಣಿಗಳೂ ಉರಗಗಳೂ ಹಕ್ಕಿಗಳೂ ಇಲ್ಲಿವೆ. ಶಿವಮೊಗ್ಗ ನಗರಕ್ಕೆ 10ಕಿಮೀ ದೂರದಲ್ಲಿ ತ್ಯಾವರೆಕೊಪ್ಪ ಎಂಬಲ್ಲಿ ಸಿಂಹಧಾಮವೂ ಸಕ್ರೆಬೈಲು ಬಳಿ ಸಾಕಿದ ಆನೆಗಳ ಶಿಬಿರವೂ ಮಂಡಗದ್ದೆಯ ಪಕ್ಷಿಧಾಮವೂ ಇಲ್ಲಿನ ಪ್ರಮುಖ ಆಕರ್ಷಣೆಗಳು.

**20. ಸೋಮೇಶ್ವರ ಅಭಯಾರಣ್ಯ:** (ಉಡುಪಿ ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿ ನಿತ್ಯಹಸುರಿನ ಮತ್ತು ಅರೆನಿತ್ಯಹಸುರಿನ ಅರಣ್ಯದಿಂದ ಕೂಡಿದ ಮತ್ತೊಂದು ಪಕ್ಷಿಧಾಮ. 1974 ಜೂನ್ ತಿಂಗಳಿನಲ್ಲಿ ಸ್ಥಾಪನೆಗೊಂಡ ಈ ವನ್ಯಧಾಮದ ವಿಸ್ತೀರ್ಣ 88ಚ.ಕಿಮೀ. ಇದರ

ಪಕ್ಕದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ಇದೆ. ಹುನಗಲು, ಗುಳುಮಾವು, ಮಾವು, ಹೆಬ್ಬಲಸು, ದಾಲ್ಚಿನ್ನಿ, ಸಟಗ, ಬೀಟೆ, ಮತ್ತಿ, ನಂದಿ, ಬೆಟ್ಟಗಣಗಿಲೆ, ದೂಳ್ಳಿ ಇತ್ಯಾದಿ ವೃಕ್ಷಗಳಿವೆ. ಪ್ರಾಣಿಗಳಲ್ಲಿ ಹುಲಿ, ಚಿರತೆ, ಕಾಡುನಾಯಿ, ಜಿಂಕೆ, ಕಡವೆ, ಸಿಂಗಳೀಕ, ಮುಸುವ, ಕೋತಿ, ಕಾಟಿ ಮುಖ್ಯವೆನಿಸಿವೆ.

ಶಿಮೊಗ್ಗದಿಂದ ತೀರ್ಥಹಳ್ಳಿ–ಆಗುಂಬೆ ಮಾರ್ಗವಾಗಿ ಇಲ್ಲಿಗೆ 95ಕಿಮೀ. ಮಂಗಳೂರಿನಿಂದ ಮೂಡಬಿದ್ರಿ – ಕಾರ್ಕಳ – ಹೆಬ್ರಿ ಮಾರ್ಗವಾಗಿ ಇಲ್ಲಿಗೆ 86ಕಿಮೀ. ಆಗುಂಬೆಯ ಸೂರ್ಯಾಸ್ತ ವೀಕ್ಷಣೆ, ಒನಕೆಅಬ್ಬಿ, ಜಂಬುತೀರ್ಥ ಇಲ್ಲಿನ ಇನ್ನಿತರ ಮುಖ್ಯ ಆಕರ್ಷಣೆಗಳು.

**21. ತಲಕಾವೇರಿ ಅಭಯಾರಣ್ಯ: (ಕೊಡಗು ಜಿಲ್ಲೆ)** ಇದು ಕೂಡ ಪಶ್ಚಿಮಘಟ್ಟಗಳಲ್ಲಿರುವ ವನ್ಯಧಾಮ. ಕಾವೇರಿ ನದಿಯ ಉಗಮಸ್ಥಾನವಾದ ತಲಕಾವೇರಿಯನ್ನು ಇದು ಒಳಗೊಂಡಿರುವುದರಿಂದ ಇದಕ್ಕೆ ಈ ಹೆಸರು. 1987 ಸೆಪ್ಟೆಂಬರಿನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 105ಚ.ಕಿಮೀ. ಮಡಿಕೇರಿಯಿಂದ 45ಕಿಮೀ ದೂರದಲ್ಲಿದೆ. ಇಲ್ಲಿನ ಅರಣ್ಯ ನಿತ್ಯಹಸುರಿನ ಬಗೆಯದು. **(ಬಿ.ಬಿ.)**

**ಅಭಾವ :** ಎಂದರೆ ಇಲ್ಲದ್ದು. ಇದೂ ಒಂದು ಆಲೋಚ್ಯ ವಿಷಯ. ಆಲೋಚ್ಯ ವಿಷಯವನ್ನು ವೈಶೇಷಿಕರು ಪದಾರ್ಥವೆಂದು ಕರೆದಿರುತ್ತಾರೆ. ವೈಶೇಷಿಕರ ಪ್ರಕಾರ ಆಲೋಚ್ಯ ವಿಷಯಗಳು ಏಳು: ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವ.

**ಅಭಾವ ಎರಡು ಬಗೆಯಾಗಿವೆ**. ಅನ್ಯೋನ್ಯಾಭಾವ ಮತ್ತು ಸಂಸರ್ಗಾಭಾವ. ಅನ್ಯೋನ್ಯಾಭಾವವೆಂದರೆ ಪರಸ್ಪರ ನಿಷೇಧ. ಒಂದು ಇದ್ದರೆ ಇನ್ನೊಂದಿಲ್ಲ. ಮನುಷ್ಯ ಮರವಲ್ಲ ಎಂಬ ಪ್ರತಿಜ್ಞೆಯಲ್ಲಿ ಮನುಷ್ಯನಿಗೂ ಮರಕ್ಕೂ ಏಕತ್ವವನ್ನು ಪ್ರತಿಷೇಧಿಸಿರುತ್ತದೆ. ಸಂಸರ್ಗಭಾವ ಮೂರು ವಿಧವಾಗಿದೆ: ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ. ಒಂದು ವಸ್ತು ಹುಟ್ಟುವುದಕ್ಕೆ ಮುಂಚೆ ಅದು ಇರುವುದಿಲ್ಲ. ವಸ್ತು ಹುಟ್ಟುವುದಕ್ಕೆ ಮುಂಚಿನ ಅದರ ಅಭಾವ ಪ್ರಾಗಭಾವ. ಇದು ಅನಾದಿ. ಒಂದು ವಸ್ತು ಪ್ರಧ್ವಂಸವಾಗಲು ಅಂದರೆ ನಾಶವಾದಾಗ ಅದರ ಅಭಾವ ಹುಟ್ಟುತ್ತದೆ. ಒಂದು ಗಾಜಿನ ಬುರುಡೆ ನೆಲಕ್ಕೆ ಬಿದ್ದು ಒಡೆದು ಹಾಳಾಗುವುದು. ಹಾಗಾದ ಮೇಲೆ ಅದು ಗಾಜಿನ ಬುರುಡೆಯಾಗಿರುವುದಿಲ್ಲ. ಹೀಗೆ ಒಂದು ವಸ್ತು ನಾಶ ಹೊಂದಿದಾಗ ಪ್ರಧ್ವಂಸಾಭಾವ ಹುಟ್ಟುತ್ತದೆ. ಈ ಅಭಾವಗಳು ಆತ್ಯಂತಿಕವಲ್ಲ. ಅವುಗಳ ಹುಟ್ಟು ವಿನಾಶಕ್ಕೆ ಸಾಪೇಕ್ಷವಾಗಿ ಇರತಕ್ಕವು. ಆದರೆ ಅತ್ಯಂತಾಭಾವವಾದರೂ ಯಾವಾಗಲೂ ಇಲ್ಲದ್ದು. ಎಂದೆಂದಿಗೂ ಇರಲಾಗದ್ದು. ಬಂಜೆಯ ಮಗ ಎಲ್ಲಿಯೂ ಇಲ್ಲ. ಯಾವಾಗಲೂ ಇಲ್ಲ. ಬಂಜೆಯಾದರೆ ಮಕ್ಕಳಾಗುವುದಿಲ್ಲ. ಮಕ್ಕಳಾದರೆ ಬಂಜೆಯಾಗಿರುವುದಿಲ್ಲ. ಇವು ಒಂದನ್ನೊಂದು ನಿರಾಕರಿಸುತ್ತವೆ. ತಾರ್ಕಿಕರು ಅನ್ಯೋನ್ಯಾಭಾವವನ್ನು ವಸ್ತುವಿನಿಂದ ಭಿನ್ನವಾಗಿ (ವಸ್ತುವನ್ನು ಬಿಟ್ಟು) ತಿಳಿಯುತ್ತಾರೆ. ಇದು ಸರಿಯಲ್ಲವೆಂದು ದ್ವೈತ ವೇದಾಂತಿಗಳು ಖಂಡಿಸುತ್ತಾರೆ. ಅನ್ಯೋನ್ಯಾಭಾವವೆಂದರೆ ವಸ್ತುಗಳು ಒಂದಾಗಿ ಇಲ್ಲದಿರುವುದು. ಇದಕ್ಕೆ ಭೇದವೆಂದು ಹೆಸರು. ಮನುಷ್ಯ ಮರವಲ್ಲ. ಮನುಷ್ಯ ಮರದಿಂದ ಭಿನ್ನ. ಇವೆರಡರ ಅರ್ಥ ಒಂದೇ. ಇದಲ್ಲ ಅಂದರೆ ಇದು ಬೇರೆ ಎಂದು ಅರ್ಥ. ನಿಷೇಧರೂಪ ವಿಧಿರೂಪವನ್ನು ಬೋಧಿಸುತ್ತದೆ. ಪಾಶ್ಚಾತ್ಯ ತಾತ್ವಿಕರು ಶುದ್ಧ ಅಭಾವವನ್ನು ಅಂದರೆ ಪರಮ ಅಭಾವವನ್ನು ನಿರಾಕರಿಸುತ್ತಾರೆ. ಏಕೆಂದರೆ ಹೆಗೆಲ್ ಹೇಳುವಂತೆ ಅಭಾವ ಇದೆ ಎಂದು ಹೇಳುವುದು ಒಂದು ಆಭಾಸ. ಇರುವುದಾದರೆ ಅದು ಅಭಾವವಾಗಲಾರದು. ಅಭಾವವಾದರೆ ಅದು ಇರಲಾರದು. ಆದ್ದರಿಂದ ಅಭಾವ ಇರವಿಗೆ ಸಾಪೇಕ್ಷವಾದದ್ದು. ಯಾವುದಾದರೂ ಇದೆ ಎಂದು ಹೇಳಿದಾಗ ನಾವು ಅದರ ಅಭಾವವನ್ನು ನಿರಾಕರಿಸುತ್ತೇವೆಯಲ್ಲದೆ ಅದು ಬೇರೆಯ ಪದಾರ್ಥವಲ್ಲವೆಂದೂ ಸೂಚಿಸುತ್ತೇವೆ. ಇದೆ ಎಂದು ಹೇಳುವ ವಿಧಿರೂಪವಾದ ಪ್ರತಿಜ್ಞೆ, ಅದು ಬೇರೆಯಲ್ಲ ಎಂಬ ಅಭಾವವನ್ನು ಸೂಚಿಸುತ್ತದೆ. ಇಲ್ಲ ಎಂಬ ನಿಷೇಧ ಪ್ರತಿಜ್ಞೆ ಅದು ಹಾಗಿಲ್ಲದೆ ಬೇರೆಯಾಗಿದೆ ಎಂಬ ಅನ್ಯಾರ್ಥ ಸೂಚಕವಾಗಿರುತ್ತದೆ. ಎರಡು ಬಗೆಯಾದ ನಿಷೇಧವಿರಬಹುದು. ಅನ್ಯೋನ್ಯಾಭಾವ ಪ್ರಮಾಣ ಸಿದ್ಧವಾದದ್ದು. ಆದರೆ ಅತ್ಯಂತಾಭಾವ ಎರಡು ವಿರುದ್ಧ ವಸ್ತುಗಳನ್ನು ಸೇರಿದಂತೆ ತಿಳಿಸುತ್ತದೆ. ಒಂದು ವಸ್ತು ಒಂದೇ ಕಾಲದಲ್ಲಿ ಇದ್ದು ಇಲ್ಲದೆಯೂ ಇರಲಾರದು. ಈಶ್ವರಸಿದ್ಧವಾದ ಸತ್ಯವಾದ ಸತ್ಯವನ್ನು ಪಾಶ್ಚಾತ್ಯ ತಾರ್ಕಿಕರು ಆಲೋಚನೆಯ ಮೂಲನಿಯಮವಾಗಿ ತಿಳಿದಿರುತ್ತಾರೆ. ಇದಕ್ಕೆ ಲಾ ಆಫ್ ಕಾಂಟ್ರಡಿಕ್ಷನ್ ಎಂದು ಹೆಸರು.

**(ನೋಡಿ– ಆಲೋಚನೆಯ ನಿಮಯಗಳು; ತರ್ಕಶಾಸ್ತ್ರ)** *

**ಅಭಿಜಾತಸಾಹಿತ್ಯಮಾರ್ಗ :** ಇದಕ್ಕೆ ಸಮಾನಾರ್ಥಕವಾದ ಕ್ಲಾಸಿಸಿಸಮ್ ಎನ್ನುವ ಪದ ಕ್ಲಾಸಿಕ್ಸ್ ಎಂಬ ಪದದಿಂದಲೇ ಉತ್ಪನ್ನವಾಯಿತೆನ್ನಬಹುದು. ಈ ಪದವನ್ನು ಸಾಹಿತ್ಯಕ್ಕೆ ಮೊಟ್ಟ ಮೊದಲು ಅನ್ವಯಿಸಿದವ ಪ್ರ.ಶ. 2ನೆಯ ಶತಮಾನದಲ್ಲಿದ್ದ ರೋಮನ್ ವ್ಯಾಕರಣ ವಿದ್ವಾಂಸ ಔಲಸ್ ಗೆಲಿಯಸ್. ಸುಶಿಕ್ಷಿತರಿಗಾಗಿ ಬರೆದ ಸಾಹಿತ್ಯ (ಸ್ಕ್ರಿಪ್ಟರ್ ಕ್ಲಾಸಿಕಸ್) ಹಾಗೂ ಜನಸಾಮಾನ್ಯರಿಗೋಸ್ಕರ ಬರೆದ ಸಾಹಿತ್ಯ (ಸ್ಕ್ರಿಪ್ಟರ್ ಪೊಲೆಟೇರಿಯಸ್) ಎಂಬ ಎರಡು ಪ್ರಭೇದಗಳನ್ನು ಆತ ಕಲ್ಪಿಸಿದಾಗ ಕ್ಲಾಸಿಕ್ಸ್ ಅಥವಾ ಅಭಿಜಾತಸಾಹಿತ್ಯ ಎನ್ನುವ ಮಾತು ಬಳಕೆಗೆ ಬಂತು. ಪಂಡಿತಪಾಮರರೆಂಬ ವರ್ಗಭೇದ ಸೂಚಿಸುವ ಈ ಪದ ಕಾಲಕ್ರಮೇಣ ಅತ್ಯುತ್ಕೃಷ್ಟವಾದ ಸಾಹಿತ್ಯಕೃತಿ ಎನ್ನುವ ಅರ್ಥವ್ಯಾಪ್ತಿ ಪಡೆಯಿತು. ಹೊಸಹುಟ್ಟಿನ (ರೆನೇಸಾನ್ಸ್) ಕಾಲದಲ್ಲಿ ಗ್ರೀಕ್ ಹಾಗೂ ರೋಮನ್ ಮಹಾಗ್ರಂಥಗಳನ್ನು (ಕ್ಲಾಸಿಕ್ಸ್) ಅಭಿಜಾತಸಾಹಿತ್ಯವೆಂದು ಕರೆದರು. ಅಂದಿನಿಂದ ಅಭಿಜಾತಸಾಹಿತ್ಯ ಮಾರ್ಗ (ಕ್ಲಾಸಿಸಿಸಮ್) ಎಂಬ ಪದವನ್ನು ಪುರಾತನ ಉತ್ತಮೋತ್ತಮ ಗ್ರಂಥಗಳ ಶೈಲಿ, ರಚನೆ, ಅಥವಾ ಒಟ್ಟಾರೆ ಪುರಾತನ ಪರಂಪರೆಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನವೆನ್ನುವ ಅರ್ಥದಲ್ಲಿ ಬಳಸುವ ರೂಢಿ ಬೆಳೆದುಬಂದಿದೆ. ಪುರಾತನ ಗ್ರೀಕ್ ಸಾಹಿತ್ಯದಲ್ಲಿ ಕಾಣುವ ಅಭಿವ್ಯಕ್ತಿಯ ಪರಿಪೂರ್ಣತೆ, ಹಾಗೂ ಕಾಲ–ದೇಶಗಳನ್ನು ಮೀರಿ ನಿಲ್ಲುವ ಮಾನವೀಯ ಮೌಲ್ಯಗಳನ್ನು ಗಮನಿಸಿ ಕೇವಲ ಗ್ರೀಕ್ ಸಾಹಿತ್ಯವನ್ನು ಮಾತ್ರ ಅಭಿಜಾತಸಾಹಿತ್ಯವೆಂದು ಕರೆಯಲಾಯಿತು. ಪ್ರ.ಶ.ಪೂ.4ನೆಯ ಶತಮಾನದಿಂದ ಹಿಡಿದು ಪ್ರ.ಶ. 20ರವರೆಗಿನ ಕಾಲದ ಗ್ರೀಕ್ ಸಾಹಿತಿಗಳು ಸಹ, ತಮಗಿಂತ ಪೂರ್ವದಲ್ಲಿ ಆಗಿಹೋದ, ಅಂದರೆ ಹೋಮರ್‌ನಿಂದ ಪ್ಲೇಟೋವರೆಗಿನ ಪುರಾತನ ಸಾಹಿತಿಗಳ ಪರಂಪರೆಯನ್ನು ಅನುಸರಿಸಿ ಅದನ್ನು ಪುನರುದ್ದೀಪನಗೊಳಿಸುವ ಪ್ರಯತ್ನ ಮಾಡಿದರು. ಆದರೆ ಹೊಸಹುಟ್ಟಿನ ಕಾಲದ ಮಾನವತಾವಾದಿಗಳು ಪೆರಿಕ್ಲೀಸ್ ಯುಗದ ಗ್ರೀಕ್ ಸಾಹಿತ್ಯ ಹಾಗೂ ಅಗಸ್ಟಸ್ ಸೀಸರ್ ದೊರೆಯ ಹೊನ್ನಿನ ಯುಗದ ರೋಮನ್ ಸಾಹಿತ್ಯಗಳಲ್ಲಿನ ಕಲೆ ಹಾಗೂ ದರ್ಶನದ ಅಂಶಗಳನ್ನು ಗುರುತಿಸಿ, ಅವುಗಳನ್ನು ಅನುಕರಣೀಯ, ಪರಿಪೂರ್ಣ ಮೌಲ್ಯಗಳೆಂದು ಪರಿಗಣಿಸುವ ಸಂಪ್ರದಾಯವನ್ನು ಸ್ಥಾಪಿಸಿದರು.

ಪುರಾತನ ಗ್ರೀಕರಿಗೆ, ಪ್ರಕೃತಿಯ ಶಕ್ತಿಸ್ವರೂಪಿಗಳಾದ ತಮ್ಮ ದೇವತೆಗಳೆಲ್ಲರೂ ಮನುಷ್ಯರೂಪಿಗಳಾಗಿ ಕಾಣಿಸುತ್ತಿದ್ದರು. ದೇವರುಗಳನ್ನು ಪೂಜಿಸಿ, ಪ್ರಾರ್ಥಿಸುವಾಗ ಮತ್ತು ಕಲೆಯ ವಸ್ತು ಪ್ರತಿರೂಪಗಳೆಂದು ಎಣಿಸುವಾಗ, ಅವರನ್ನು ಮನುಷ್ಯರೆಂದೇ ಊಹಿಸಿಕೊಳ್ಳುತ್ತಿದ್ದರು. ಬಾಹ್ಯರಚನೆ ಅಥವಾ ಸ್ವರೂಪದ ಸರ್ವಾಂಗೀಣ ಸೌಂದರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಕಲಾರಚನೆಯಲ್ಲಿ ಪರಿಮಾಣ ಔಚಿತ್ಯ, ಸಮರೂಪತೆ, ಸಮತೂಕ, ವ್ಯವಸ್ಥೆ, ಅಭಿವ್ಯಕ್ತಿಯ ಸಂಯಮ ಮುಂತಾದ ಅಂಶಗಳಿಗೆ ಗಮನವಿತ್ತರು. ಗ್ರೀಕ್ ಸಾಹಿತ್ಯ, ಲಲಿತಕಲೆ, ಹಾಗೂ ವಾಸ್ತುಶಿಲ್ಪಗಳಲ್ಲಿನ ಗುಣವಿಶೇಷಗಳನ್ನು ಗುರುತಿಸಿ ಅಂಥ ಮೂಲಸೂತ್ರಗಳನ್ನು ಅನುಸರಿಸಬೇಕೆನ್ನುವ ಸಂಪ್ರದಾಯವನ್ನು ಕ್ಲಾಸಿಸಿಸಮ್ ಅಥವಾ ಅಭಿಜಾತಸಾಹಿತ್ಯ ಮಾರ್ಗವೆಂದು ಕರೆಯುವ ವಾಡಿಕೆ. **(ಎಚ್.ಕೆ.ಆರ್.)**

ಕ್ಲಾಸಿಕಲ್, ರೊಮ್ಯಾಂಟಿಕ್–ಈ ಶಬ್ದಗಳನ್ನು ಪರಸ್ಪರ ವೈದೃಶ್ಯದಿಂದ ವಿವರಿಸುವುದು ವಾಡಿಕೆ. ಆದರೆ ಇದಾದರೂ ಸಂಪೂರ್ಣವಾಗಿ ಯಶಸ್ವಿಯಲ್ಲ. ಇಂಗ್ಲೆಂಡಿನ ರೊಮ್ಯಾಂಟಿಕ್ ಡಿಸ್ಸೈನರ್ ಅಥವಾ ರೊಮ್ಯಾಂಟಿಕ್‌ನ ಪುನಶ್ಚೇತನದ ಶಿಲ್ಪಿಗಳಲ್ಲಿ ಒಬ್ಬನಾದ ವಿಲಿಯಂ ವರ್ಡ್ಸ್‌ವರ್ತ್‌ನ ಓಡ್ ಟು ಡ್ಯೂಟಿ ಎಂಬ ಕವನ ಕ್ಲಾಸಿಕಲ್ ಎನ್ನಬೇಕಾಗುತ್ತದೆ; ಪ್ರಾಚೀನ ಗ್ರೀಸಿನ ಯೂರಿಪಿಡೀಸನ ನಾಟಕಗಳಲ್ಲಿ ರೊಮ್ಯಾಂಟಿಕ್ ಅಂಶಗಳಿವೆ.

ಪಾಶ್ಚಾತ್ಯ ವಿಮರ್ಶಕರು (ಮುಖ್ಯವಾಗಿ ಇಂಗ್ಲಿಷ್ ವಿಮರ್ಶಕರು) ಕ್ಲಾಸಿಕಲ್ ಎನ್ನುವುದಕ್ಕೆ ಹಲವು ಲಕ್ಷಣಗಳನ್ನು ಸೂಚಿಸಿದ್ದಾರೆ. ಚ್ಯಾಡೆನ್ಸ್ (ಸಮತೋಲನ), ಯೂನಿಟಿ (ಐಕ್ಯ), ಪ್ರಪೋರ್ಷನ್ (ಪ್ರಮಾಣಬದ್ಧತೆ), ರಿಸ್‌ಟ್ರೇಂಟ್ (ಸಂಯಮ), ನೋಬಲ್ ಸಿಂಪ್ಲಿಸಿಟಿ, (ಉದಾತ್ತ ಸರಳತೆ), ಕ್ವಯಟ್ ಗ್ರ್ಯಾಂಜರ್ (ಸೌಮ್ಯ ಭವ್ಯತೆ), ಫಾರ್ಮಲ್ ಡಿಸಿಪ್ಲಿನ್ (ರೂಪದ ಶಿಸ್ತು), ಆಬ್‌ಜೆಕ್ಟಿವಿಟಿ (ವಸ್ತುನಿಷ್ಠತೆ) ಈ ಎಲ್ಲ ಲಕ್ಷಣಗಳನ್ನು ಕ್ಲಾಸಿಕಲ್ ಸಾಹಿತ್ಯಮಾರ್ಗದೊಂದಿಗೆ ಜೋಡಿಸಲಾಗಿದೆ.

ಹಲವು ದಶಕಗಳಿಂದ ಅಭಿಜಾತ ಸಾಹಿತ್ಯ, ರೊಮ್ಯಾಂಟಿಕ್ ಸಾಹಿತ್ಯ ಎಂಬ ಪರಿಕಲ್ಪನೆಗಳನ್ನು ಬಳಸುತ್ತಿದ್ದರೂ ಇದಕ್ಕೆ ಅತಿಯಾದ ಪ್ರಾಮುಖ್ಯವನ್ನು ನೀಡುತ್ತಿಲ್ಲ. ಉಪಯುಕ್ತವಾದ ಪರಿಕಲ್ಪನೆಗಳೆಂದಷ್ಟೇ ಇವಕ್ಕೆ ಮನ್ನಣೆ. ತನ್ನ ಆಫ್ಟರ್ ಸ್ಟ್ರೇಂಜ್ ಗಾಡ್ಸ್ (1934) ಪುಸ್ತಕದಲ್ಲಿ ಈ ಪರಿಕಲ್ಪನೆಗಳನ್ನು ಕುರಿತು ಬರೆಯುತ್ತ, ಕೃತಿರಚನೆ ಮಾಡುತ್ತಿರುವಾಗ ಯಾವ ಕವಿಯೂ ತಾನು ಕ್ಲಾಸಿಕಲ್ ರೀತಿಯಲ್ಲಿ ಬರೆಯುತ್ತೇನೆ, ರೊಮ್ಯಾಂಟಿಕ್ ರೀತಿಯಲ್ಲಿ ಬರೆಯುತ್ತೇನೆ ಎಂದು ಯೋಚಿಸುವುದಿಲ್ಲ. ಈ ಪದಗಳನ್ನು ಬಳಸುವಾಗ ಬಳಸುವವರ ಮನಸ್ಸಿನಲ್ಲಿ ಅವರ ಗ್ರಹಿಕೆಯಂತೆ ಮಾನವೀಯ ಮೌಲ್ಯಗಳೆಲ್ಲ ಇರುತ್ತವೆ. **(ಎಲ್.ಎಸ್.ಎಸ್.)**

**ಅಭಿಜಾತ ಸಾಹಿತ್ಯವಾದದ ಯುಗ :** ಪುರಾತನ ಗ್ರೀಕ್, ರೋಮನ್ ಸಾಹಿತ್ಯಗಳನ್ನು ಹೊಸಹುಟ್ಟಿನ (ರೆನೇಸ್ಸಾನ್ಸ್) ಕಾಲದ ವಿಮರ್ಶಕರು ಅಭಿಜಾತ ಸಾಹಿತ್ಯವೆಂದು (ಕ್ಲಾಸಿಕ್ಸ್) ಕರೆದು, ಅವುಗಳಲ್ಲಿ ರೂಪಿತವಾದ ವಿಶೇಷ ಕಲಾಲಕ್ಷಣಗಳನ್ನು ಮಾದರಿಸೂತ್ರಗಳೆಂದು ಅನುಸರಿಸುವ ಸಂಪ್ರದಾಯವನ್ನು ಸ್ಥಾಪಿಸಿದರಷ್ಟೆ ಆದರೆ ಪುರಾತನಸಾಹಿತ್ಯ ಪರಂಪರೆಯ ವಿಚಾರವನ್ನು ಎಲ್ಲರೂ ಎಲ್ಲ ಕಾಲದಲ್ಲೂ ಸುಲಭವಾಗಿ ಅಂಗೀಕರಿಸಲಿಲ್ಲ. ಅಲ್ಲಲ್ಲಿ ಆಗಾಗ ಈ ಸಂಪ್ರದಾಯವನ್ನು ವಿರೋಧಿಸುವ ಪ್ರವೃತ್ತಿಗಳೂ ಕಂಡುಬಂದವು (ಇತಿಹಾಸದಲ್ಲಿ). ಹೀಗೆ ವಿರೋಧ ಪ್ರವೃತ್ತಿಗಳು ತಲೆ ಎತ್ತಿದಾಗ ಜಿಜ್ಞಾಸೆ, ವಾದ–ವಿವಾದಗಳುಂಟಾಗಿ ಖಂಡನೆ–ಸಮರ್ಥನೆಗಳೂ ಹುಟ್ಟಿಕೊಂಡು ಆ ಮೂಲಕ ಯುರೋಪಿನ

ವಿಮರ್ಶನಾ ಪದ್ಧತಿಗೆ ಅವು ತಳಹದಿ ಹಾಕಿಕೊಟ್ಟವು. ಹೀಗೆ ಇತಿಹಾಸದುದ್ದಕ್ಕೂ ಅಭಿಜಾತಸಾಹಿತ್ಯ ಪರಂಪರೆಯನ್ನು ಸಮರ್ಥಿಸಿ ಅನುಸರಿಸುವ ಪ್ರವೃತ್ತಿಯೂ ಅದನ್ನು ವಿರೋಧಿಸಿ ಅದರ ಲೋಪದೋಷಗಳನ್ನು ವಿಮರ್ಶಿಸುವ ಪ್ರವೃತ್ತಿಯೂ ಹಾಸುಹೊಕ್ಕಾಗಿ ಪರಸ್ಪರ ಪೂರಕವಾಗಿ ಒಟ್ಟಾರೆ, ಸಾಹಿತ್ಯವಿಮರ್ಶೆಯ ಪರಂಪರೆಯನ್ನು ಬೆಳೆಸಿಕೊಂಡು ಬಂದಿವೆ.

ಯುರೋಪಿನ ಆಧುನಿಕ ಸಾಹಿತ್ಯದಲ್ಲಿ ಅಭಿಜಾತಪಂಥ ಪ್ರಾರಂಭವಾದುದು 17ನೆಯ ಶತಮಾನದ ಫ್ರಾನ್ಸಿನಲ್ಲಿ. ಪುರಾತನ ಸಾಹಿತಿಗಳು ಹೆಚ್ಚೋ, ಆಧುನಿಕರು ಹೆಚ್ಚೋ (ಏನ್ಷಂಟ್ಸ್, ಮಾಡರ್ನ್ಸ್) ಎಂದು ಫ್ರಾನ್ಸಿನಲ್ಲಿ ಪ್ರಾರಂಭವಾದ ಜಿಜ್ಞಾಸೆ, ಇಂಗ್ಲೆಂಡಿನಲ್ಲೂ ಹರಡಿ 17ನೆಯ ಶತಮಾನದ ಕೊನೆಯಲ್ಲಿ ಹಾಗೂ 18ನೆಯ ಶತಮಾನದ ಮೊದಲಭಾಗದಲ್ಲಿ ಪುಸ್ತಕಗಳ ಕದನ (ದಿ ಬ್ಯಾಟಲ್ ಆಫ್ ದಿ ಬುಕ್ಸ್) ಎಂಬ ಚರ್ಚೆಯಲ್ಲಿ ಮುಕ್ತಾಯವಾಯಿತು.

ಎರಡನೆಯ ಬಾರಿ ಈ ಚರ್ಚೆ ಪ್ರಾರಂಭವಾದುದು 18ನೆಯ ಶತಮಾನದ ಕೊನೆ ಹಾಗೂ ಹತ್ತೊಂಬತ್ತನೆಯ ಶತಮಾನದ ಪೂರ್ವಭಾಗದಲ್ಲಿ ಬಂದ ರೊಮ್ಯಾಂಟಿಕ್ ಕವಿಗಳ ಕಾಲದಲ್ಲಿ. ಆಧುನಿಕರೆಂದು ಹೇಳಿಕೊಂಡ ಹೊಸಕಾಲದ ಕವಿಗಳು ಅಭಿಜಾತ ಸಾಹಿತ್ಯದ ಆದರ್ಶಗಳು ಕ್ರಿಶ್ಚಿಯನ್ ತತ್ತ್ವಕ್ಕೆ ವಿರೋಧವೆಂದೂ ಧರ್ಮಬಾಹಿರವೆಂದೂ ವಾದಿಸಿದರು. ಈ ಪುರಾತನ ಕೃತಿಗಳು ಕೀಳಾದ ಅಭಿರುಚಿಯನ್ನು ಬೆಳೆಸುವುವೆಂದೂ ಅನೈತಿಕಮಾರ್ಗಕ್ಕೆ ಕೊಂಡೊಯ್ಯುವುವೆಂದೂ ಸಮರ್ಥಿಸಿದರು. ಹೊಸಕಾಲದ ಸಾಹಿತ್ಯಕೃತಿಗಳು ಅಭಿಜಾತ–ಕೃತಿಗಳಿಗಿಂತ ಉತ್ತಮವಾಗಲು ಸಾಧ್ಯವಿಲ್ಲವೆನ್ನುವುದು ಪ್ರಗತಿಯ ತತ್ತ್ವಕ್ಕೆ ವಿರೋಧವೆಂದು ಸಾರಿದರು. ತಮ್ಮ ದೇಶದ ಕಾಲದ ಕೃತಿಗಳನ್ನು ಪ್ರಶಂಸಿಸುವುದರ ಬದಲು ಪರದೇಶದ ವಿಭಿನ್ನ ಸಂಸ್ಕೃತಿಯ ಪ್ರತೀಕವಾದ ಅಭಿಜಾತಸಾಹಿತ್ಯವನ್ನು ಶ್ಲಾಘಿಸುವುದು ತಪ್ಪೆಂದು ಹೇಳಿ ಅಭಿಜಾತಸಾಹಿತ್ಯದ ಸೂತ್ರಗಳು ಪ್ರತಿಗಾಮಿಗಳೆಂದೂ ಸಲ್ಲದ ನಿರ್ಬಂಧಗಳನ್ನು ತಂದೊಡ್ಡುವುವೆಂದೂ ರೊಮ್ಯಾಂಟಿಕ್ ಸಾಹಿತಿಗಳು ಅವನ್ನು ವಿರೋಧಿಸುವ ಘೋಷಣೆಗಳನ್ನು ಪ್ರತಿಪಾದಿಸಿದರು.

ಯುರೋಪಿನ ಬೇರೆ ಬೇರೆ ದೇಶಗಳಲ್ಲಿ ನಡೆದ ಅಭಿಜಾತಸಾಹಿತ್ಯ ಪಂಥದ ಚಳವಳಿಗಳೆಲ್ಲವೂ ಆಯಾ ರಾಷ್ಟ್ರಗಳ ಮೂಲ ಪರಂಪರೆಯನ್ನು ಕಡೆಗಣಿಸಿ, ರಾಷ್ಟ್ರದ ಗಮನವನ್ನು ಪುರಾತನಗ್ರೀಕರ ಕಾಲಕ್ಕೆ ಕೊಂಡೊಯ್ದುವೆಂದು ಹೇಳುವುದು ತಪ್ಪು. ಇಟಲಿಯಲ್ಲಿ ಪ್ರಾರಂಭವಾದ ಹೊಸಹುಟ್ಟಿನ ಚಟುವಟಿಕೆಗಳು ಮೂಲತಃ ರಾಷ್ಟ್ರೀಯ ಚಳವಳಿಯ ರೂಪವನ್ನೇ ಪಡೆದುವು. ಅಲ್ಲಿನ ಮಾನವತಾವಾದಿಗಳು ಪುರಾತನ ರೋಮಿನ ಭವ್ಯಪರಂಪರೆಯನ್ನು ಗುರುತಿಸಿ ಅದನ್ನು ಪುನರುಜ್ಜೀವನಗೊಳಿಸಲು ಉದ್ಯುಕ್ತರಾದರು. ಕಾವ್ಯದಲ್ಲಿ ಇಟಲಿಯ ದೇಶಿಯನ್ನೇ ಬಳಸಬೇಕೆಂದು ಡಾಂಟೆ ನೀಡಿದ ಆದೇಶವನ್ನು ಪೆಟ್ರಾರ್ಕ್ ಮತ್ತು ಬೊಕ್ಯಾಚಿಯೊ ಮುಂತಾದವರು ಪರಿಣಾಮಕಾರಿಯಾಗಿ ಅನುಸರಿಸಿದರು. ಅಭಿಜಾತ ಸಾಹಿತ್ಯದ ಶೈಲಿಯನ್ನು ದೇಶಿಯೊಳಕ್ಕೆ ಅಳವಡಿಸಿಕೊಂಡರು.

ಫ್ರಾನ್ಸಿನಲ್ಲಿ ರೂಪುಗೊಂಡ ಅಭಿಜಾತಪಂಥ, ಉಜ್ವಲ ರಾಷ್ಟ್ರೀಯ ಸ್ವರೂಪವನ್ನುಳ್ಳ, ಆದರೆ ಗ್ರೀಕ್ ಆದರ್ಶಗಳನ್ನು ಹೊಂದಿದ–ಸಾಹಿತ್ಯಸೃಷ್ಟಿಗೆ ಕಾರಣವಾಯಿತು.

ಅಗಸ್ಟಸ್ ಯುಗವೆಂದು ಕರೆಯಲಾದ 18ನೆಯ ಶತಮಾನದ ಇಂಗ್ಲೆಂಡಿನ ಸಾಹಿತಿಗಳು, ಫ್ರೆಂಚ್ ಸಂಸ್ಕೃತಿ ಈ ಮೊದಲೇ ಅನುಸರಿಸಿದ್ದ ಅಭಿಜಾತ ಸಾಹಿತ್ಯ ಸೂತ್ರಗಳನ್ನು ಅಳವಡಿಸಿಕೊಳ್ಳಲೆತ್ನಿಸಿದರು. ನಯವಾದ, ನವಿರಾದ, ಅಭಿರುಚಿಯುಳ್ಳ ಕಲಾಪ್ರಪೂರ್ಣವಾದ, ಹೊಸಸಾಹಿತ್ಯ ನಿರ್ಮಾಣಕ್ಕೆ ತೊಡಗಿದರು.

18ನೆಯ ಶತಮಾನದ ಜರ್ಮನಿಯ ಸಾಹಿತ್ಯದಲ್ಲಿ ನೂತನ ಸೃಷ್ಟಿಗೆ ಕಾರಣನಾದನೆಂದು ಹೇಳಲಾದ ಗಾಟ್‌ಶೆಡ್ ಆಡಂಬರದಿಂದ ತುಂಬಿದ ಜರ್ಮನಿಯ ಪಂಡಿತರಮ್ಯ ಸಾಹಿತ್ಯಕ್ಕೂ, ಪಾಮರರಿಗೆ ಉಣಬಡಿಸುತ್ತಿದ್ದ ಒರಟುಸಾಹಿತ್ಯಕ್ಕೂ ನಡುವಣ ಭಿನ್ನತೆಯನ್ನು ಹೋಗಲಾಡಿಸಿ ತನ್ನ ದೇಶದಲ್ಲಿ ಎಲ್ಲ ವರ್ಗದ ಜನರನ್ನೂ ರಂಜಿಸುವಂಥ ರಾಷ್ಟ್ರೀಯಸಾಹಿತ್ಯವನ್ನು ನಿರ್ಮಿಸಬೇಕೆಂದು ಆಶಿಸಿದ. ಈಗಾಗಲೇ ಫ್ರೆಂಚ್ ಸಾಹಿತಿಗಳು ಗ್ರೀಕರಿಂದ ಸ್ಫೂರ್ತಿಪಡೆದು ಸ್ವಂತಕ್ಕೆ ಗೌರವ ತರುವಂಥ ರಾಷ್ಟ್ರೀಯಸಾಹಿತ್ಯ ನಿರ್ಮಿಸಿದ್ದರು. ಆದ್ದರಿಂದ ಗಾಟ್‌ಶೆಡ್ ಫ್ರೆಂಚ್ ಸಾಹಿತ್ಯವನ್ನೇ ಮಾದರಿಯಾಗಿ ಅನುಸರಿಸಿದ.

ಮುಂದಿನ ಕೆಲವು ಶತಮಾನಗಳಲ್ಲಿ ಅಭಿಜಾತಪಂಥದ ಚಳವಳಿ ದೇಶದಿಂದ ದೇಶಕ್ಕೆ ಹರಡಿದಂತೆ ಕಾಣುತ್ತದೆ. ಗ್ರೀಕ್ ವಿದ್ವಾಂಸರು ಇಟಲಿಗೆ ವಲಸೆ ಹೊರಟಾಗ ಅಭಿಜಾತ ಪರಂಪರೆಯ ಮೌಲ್ಯಗಳು ಮುಖ್ಯವಾಗಿ ಸಾಹಿತ್ಯ ಹಾಗೂ ದರ್ಶನ ಶಾಸ್ತ್ರದಲ್ಲಿ ಅಭಿವ್ಯಕ್ತಗೊಳಿಸಲು ಸಾಧ್ಯವಾಯಿತು; ಉತ್ಕೃಷ್ಟ ಶಿಲ್ಪ ಹಾಗೂ ಕಲಾಕೃತಿಗಳು ನಿರ್ಮಿತವಾದಂತೆ, ಅಷ್ಟೇ ಅಮೂಲ್ಯವಾದ ಸಾಹಿತ್ಯಕೃತಿಗಳು ಸೃಷ್ಟಿಯಾಗದಿದ್ದರೂ ಆ ಯುಗದಲ್ಲಿ ಅಭಿಜಾತ ಮನೋಧರ್ಮ ರೂಪುಗೊಂಡಿತೆನ್ನಬಹುದು. ಹೊಸಯುಗದ ಸಾರ್ವತ್ರಿಕದೃಷ್ಟಿಯನ್ನು ಎರಾಸ್ಮಸ್‌ನಂಥ ಉಜ್ವಲ ವಿದ್ವಾಂಸರಲ್ಲಿ ಕಾಣಬಹುದು. ಅರಿಸ್ಟಾಟಲನ ಕಾವ್ಯಮೀಮಾಂಸೆಯನ್ನು ಕುರಿತ ವಿಪುಲವಾದ ಚರ್ಚೆ ವಾಖ್ಯಾನಗಳು ಸಾಹಿತ್ಯವಿಮರ್ಶೆಯ ಬೆಳೆವಣಿಗೆಗೆ ದಾರಿತೋರಿದುವು. ಸ್ಕ್ಯಾಲಿಜರ್ (1561), ಕ್ಯಾಸಲ್‌ವೆಟ್ರೋ (1571) ಭವ್ಯಕಾವ್ಯ ಹಾಗೂ ರುದ್ರನಾಟಕಕ್ಕೆ ಕ್ರಮವಾದ ಶೈಲಿಯನ್ನು ಸೃಜಿಸಬೇಕೆಂದು ಸೂಚಿಸಿದ ಟ್ರಿಸಿನೋ ಮುಂತಾದವರು ಪ್ರತಿಪಾದಿಸಿದ ಸೂತ್ರಗಳು ಕಲಾನಿರ್ಮಾಣದಲ್ಲಿ ಇರಬೇಕೆಂದು ಹೇಳುವ ಸತ್ಯನಿಷ್ಠೆ ಹಾಗೂ ಕಲಾಕೃತಿಯ ಸಾಮರಸ್ಯವನ್ನು ಕುರಿತ ವಿಚಾರಪರಂಪರೆಯನ್ನು ನಿರ್ಮಿಸಿದುವು.

ಅಭಿಜಾತ ಸಂಪ್ರದಾಯವನ್ನು ಫ್ರಾನ್ಸಿನಲ್ಲಿ ಸ್ಥಾಪಿಸಲೆಳಸಿದವರಲ್ಲಿ ಹದಿನಾರನೆಯ ಶತಮಾನದಲ್ಲಿ ಪ್ಲಿಯೇಡ್ ಮುಖ್ಯನು. ಆತನ ತತ್ತ್ವಗಳನ್ನು ವಿರೋಧಿಸಿದ ಮಾಲ್‌ಹರ್ಬ್ ಫ್ರೆಂಚ್ ಭಾಷೆಯನ್ನು ಸಂಸ್ಕರಿಸಲು ಯತ್ನಿಸಿ, ಅಭಿಜಾತಪರಂಪರೆಯ ಮೂಲ ಶಾಸಕನಾದ. ಬಾಲೋ ತನ್ನ ಕಾವ್ಯಕಲೆ (ಆರ್ಟ್ ಪೊಯಟೀಕ್) ಎಂಬ ಗ್ರಂಥದಲ್ಲಿ ಅಭಿಜಾತಸಾಹಿತ್ಯದ ಲಕ್ಷಣವಿವರಣೆಗಳನ್ನು ಕ್ರೋಡೀಕರಿಸಿದ. ಕಾರ್ನಿಲ್ ಮತ್ತು ರಾಸಿನ್‌ರ ದುರಂತನಾಟಕಗಳು, ಮೋಲಿಯರ್‌ನ ಪ್ರಹಸನಗಳು, ಪ್ಯಾಸ್ಕೆಲ್ ರಚಿಸಿದ ಧಾರ್ಮಿಕ ಟಿಪ್ಪಣಿಗಳು (ದಿ ಪೆನ್ಸೀಸ್), ಲಾ ಫ್ಯಾಂಟೇನಿನ ಕಟ್ಟುಕಥೆಗಳು (ಫೇಬಲ್ಸ್)– ಇವು ಸೃಷ್ಟಿಯಾದ ಆ ಕಾಲದಲ್ಲಿ ಅಭಿಜಾತಸಾಹಿತ್ಯದ ಸತ್ತ್ವವನ್ನು ಎಷ್ಟರಮಟ್ಟಿಗೆ ಪಾಲಿಸಿದರೆನ್ನುವುದು ಸ್ವಲ್ಪ ಸಂದೇಹಾಸ್ಪದ. ವ್ಯಗ್ರವಾದ ಭಾವೋದ್ರೇಕವನ್ನು ಹೊರಸೂಸುವ ಆ ಕಾಲದ ರಾಗೋಜ್ವಲ ಕೃತಿಗಳನ್ನು ಬರೆದ ಸಾಹಿತಿಗಳು ಅಭಿಜಾತಸಾಹಿತ್ಯದ ವಿಶಿಷ್ಟ ಲಕ್ಷಣಗಳನ್ನು ಪಾಲಿಸಬೇಕೆಂಬ ನೇಮವನ್ನು ಕಲಾನಿರೂಪಣೆಗೆ ಬೇಕಾದ ಶೈಲಿ ಹಾಗೂ ಸಂಯಮದ ಮನೋಧರ್ಮವನ್ನು ರೂಪಿಸಲು ಅಭಿಜಾತಸಾಹಿತ್ಯ ನೆರವಾಯಿತು.

ಫ್ರಾನ್ಸಿನಲ್ಲಿ ಅಭಿಜಾತಸಾಹಿತ್ಯಪಂಥ ಕೇವಲ ಶ್ರೀಮಂತವರ್ಗದ ಪ್ರತಿಕ್ರಿಯೆಯಾಗಿ ಪರಿಣಮಿಸಿ ಕಲೆ ಕೇವಲ ಕೆಲವರ ಸ್ವತ್ತಾಯಿತು. ಆದರೆ ಅಲೆಕ್ಸಾಂಡರ್ ಪೋಪ್‌ನ ಕಾಲದ ಇಂಗ್ಲೆಂಡಿನಲ್ಲಿ ಈ ಪಂಥ ಮಧ್ಯಮವರ್ಗದ ಸಮಾಜದಿಂದಲೇ ರೂಪ ಪಡೆಯಿತು. ಡ್ರೈಡನ್ ಹಾಗೂ ಲಾಕ್ ಹಾಕಿಕೊಟ್ಟ ವಿಮರ್ಶೆ ಹಾಗೂ ವಿಚಾರ ಪರಂಪರೆಯ ತಳಹದಿಯ ಮೇಲೆ ಈ ಪಂಥವನ್ನು ರೂಪಿಸಲಾಯಿತು. ಅಭಿಜಾತಪಂಥ ಸೂಚಿಸುವ ಭವ್ಯತೆ ಹಾಗೂ ಸಂಯಮಗಳಿಗಿಂತಲೂ ಮಿಗಿಲಾಗಿ ವಿವೇಚನೆ–ಔಚಿತ್ಯಗಳಿಗೇ ಹೆಚ್ಚು ಗಮನವನ್ನು ಕೊಡುವ ಪ್ರವೃತ್ತಿಯನ್ನು ಅಡಿಸನ್, ಸ್ಟೀಲ್ ಮತ್ತು ಸ್ವಿಫ್ಟ್ ಮುಂತಾದವರ ಕೃತಿಗಳಲ್ಲಿ ಹಾಗೂ ಚಟುವಟಿಕೆಗಳಲ್ಲಿ ಕಾಣಬಹುದು. ಅಭಿಜಾತಸಾಹಿತ್ಯ ಸೂತ್ರಗಳ ಸಾರವೆಲ್ಲವೂ ಜಾನ್‌ಸನ್‌ನ ವ್ಯಕ್ತಿತ್ವದಲ್ಲೇ ಒಡಮೂಡಿರುವುದನ್ನು ಗಮನಿಸಬಹುದು. ಹೋಮರ್‌ನ ಕಾವ್ಯವನ್ನು ಭಾಷಾಂತರ ಮಾಡಿದ ಪೋಪ್ ಕವಿ, ಅಭಿಜಾತಸಾಹಿತ್ಯದ ಸಾರವನ್ನೆಲ್ಲ ತನ್ನ ಎಸ್ಸೇ ಆನ್ ಕ್ರಿಟಿಸಿಸಂ ಪುಸ್ತಕದಲ್ಲಿ ಎರಕಹೊಯ್ದ. ಅಭಿಜಾತಪಂಥದಿಂದ, ಸ್ಫೂರ್ತಿ ಪಡೆದ ಷಾಫ್ಟ್ಸ್‌ಬರಿ ಮುಂತಾದವರೆಲ್ಲರೂ ಸಾಹಿತಿಯ ಸಾಮಾಜಿಕ ಪ್ರಜ್ಞೆ, ಕರ್ತವ್ಯನಿಷ್ಠೆ, ಶಿಸ್ತು, ನೈತಿಕ ಹಾಗೂ ಸೌಂದರ್ಯತತ್ತ್ವದ ಅರಿವು – ಮುಂತಾದ ಲಕ್ಷಣಗಳ ಆವಶ್ಯಕತೆಯನ್ನು ಕುರಿತು ಚರ್ಚಿಸಿದರು.

ಆ ಶತಮಾನದ ಜರ್ಮನಿಯ ವಿಂಕಲ್‌ಮನ್ ಗ್ರೀಕ್ ವಾಸ್ತುಶಿಲ್ಪವನ್ನು ಆಳವಾಗಿ ಅಭ್ಯಸಿಸಿ, ಅಭಿಜಾತಪಂಥದ ಮೂಲತತ್ತ್ವಗಳನ್ನು ಕ್ರೋಡೀಕರಿಸಿದ. ರೊಮ್ಯಾಂಟಿಕ್ ಪಂಥದ ಅನ್ವೇಷಣಾದೃಷ್ಟಿಯ ಮೂಲಕ ಗ್ರೀಕ್ ಸಂಸ್ಕೃತಿಯ ಸತ್ತ್ವವನ್ನು ಗುರುತಿಸಿ, ಹೊಸ ಹೆಲೆನಿಕ್ ಸಮನ್ವಯ ದೃಷ್ಟಿಯನ್ನು ಮೂಡಿಸಿದ ಕೀರ್ತಿ ಈತನದು. ಕೇವಲ ಪುರಾತನ ಸಾಹಿತ್ಯ ಸೂತ್ರಗಳನ್ನು ಪಠಿಸಿ, ಶುಷ್ಕ ಚರ್ಚೆಯಿಂದ ತೃಪ್ತರಾಗುತ್ತಿದ್ದ ಹಳೆಯ ಪಂಡಿತರ ಪ್ರವೃತ್ತಿಯನ್ನು ಬಿಟ್ಟು ಈತ ನಿಚ್ಚಳವಾದ ಮಾರ್ಗವನ್ನನುಸರಿಸಿದ. ಅಭಿಜಾತಪರಂಪರೆಗೆ ಸೇರಿದ ಶಿಲ್ಪಕೃತಿಗಳನ್ನು ಕೂಲಂಕಷವಾಗಿ ಪರಿಶೀಲಿಸುವುದರ ಮೂಲಕ ಅಭಿಜಾತಪಂಥದ ಅಂತರಾರ್ಥವನ್ನು ತಿಳಿಯುವುದು ಮೇಲು ಎಂದು ಈತ ತೋರಿಸಿದ.

ಅಭಿಜಾತ ಸಾಹಿತ್ಯದ ವಸ್ತು ಪ್ರತಿರೂಪಗಳನ್ನು ಬಳಸಿಕೊಳ್ಳುವಾಗ ಕಾಲದೇಶಗಳ ಅರಿವು, ಸಮಕಾಲೀನಪ್ರಜ್ಞೆ ಅತ್ಯಾವಶ್ಯಕ. ಮಿತಿಮೀರಿದ ಪೂರ್ವಕಥಾಸೂಚನೆಗಳು ವಿಕೃತ ಲಕ್ಷಣಗಳಾಗಿ ಪರಿಣಮಿಸಿ, ಅಭಿಜಾತಕಲ್ಪನೆಯ ಮೌಲ್ಯಗಳನ್ನು ಹೀನಯಿಸುವ ಅಪಾಯಕ್ಕೊಳಗಾಗಬಹುದೆನ್ನುವುದಕ್ಕೆ ಆಧುನಿಕ ಅಸ್ತಿತ್ವವಾದಿ ಸಾಹಿತಿಗಳೇ (ಎಕ್ಸಿಸ್ಟೆನ್ಷಿಯಲಿಸ್ಟ್ ರೈಟರ್ಸ್) ಸಾಕ್ಷಿ. **(ಎಚ್.ಕೆ.ಆರ್.)**

**ಅಭಿಜಿತ್[1] :** ಲೈರಾಪುಂಜದ ಪ್ರಥಮನಕ್ಷತ್ರ $\alpha$–ಲೈರಾ ಅಥವಾ ವೇಗ. ಬರಿಗಣ್ಣಿಗೆ ಕಾಣುವ ಉಜ್ವಲನಕ್ಷತ್ರಗಳ ಪೈಕಿ ಐದನೆಯದು (ಸೂರ್ಯ ಒಂದನೆಯದು); ನೈಜಕಾಂತಿಪ್ರಕಾರ ಏಳನೆಯದು. ದೂರ 26 ಜ್ಯೋತಿರ್ವರ್ಷಗಳು. ನೀಲಪ್ರಕಾಶ ಉತ್ತರಗೋಳಾರ್ಧದಲ್ಲಿದೆ. ಧ್ರುವನಕ್ಷತ್ರ, ಅಭಿಜಿನ್ನಕ್ಷತ್ರ ಮತ್ತು ಇದಕ್ಕಿಂತ ಪಶ್ಚಿಮಕ್ಕಿರುವ ಸ್ವಾತಿ ನಕ್ಷತ್ರ ಒಂದು ಸಮಭುಜ ತ್ರಿಭುಜದ ಮೂರು ಶೃಂಗಗಳ ಸ್ಥಾನಗಳಲ್ಲಿವೆ. 'ಸೂರ್ಯ ಸೆಕೆಂಡಿಗೆ ಸುಮಾರು 30ಕಿಮೀ. ವೇಗದಿಂದ ಅಭಿಜಿನ್ನಕ್ಷತ್ರದ ದಿಸೆಯಲ್ಲಿ ಧಾವಿಸುತ್ತಿದೆ ಎಂದು ತಿಳಿದುಬಂದಿದೆ. ಸೂರ್ಯನ ವಿಜಯಯಾತ್ರಾಭಿಮುಖವಾದ ದಿಕ್ಕಿನಲ್ಲಿರುವ ನಕ್ಷತ್ರಕ್ಕೆ ಕಡೆಯ ಪಕ್ಷ 3000 ವರ್ಷಗಳ ಹಿಂದೆಯೇ ಋಗ್ವೇದದ ಋಷಿಗಳು ಅಭಿಜಿತ್ ಎಂದು ನಾಮಕರಣ ಮಾಡಿದ್ದರು' ಎಂದಿದ್ದಾರೆ ಖಭೌತ ವಿಜ್ಞಾನಿ ಆರ್. ಎಲ್. ನರಸಿಂಹಯ್ಯನವರು. **(ನೋಡಿ– ಅಯನಾಂಶ)** *

**ಅಭಿಜಿತ್[2] :** 1979–. ಅರ್ಜುನ ಪ್ರಶಸ್ತಿ ವಿಜೇತ ಈಜುಗಾರ. 1979 ಏಪ್ರಿಲ್ 14ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಜಯತೀರ್ಥರಾವ್. ಚಿಕ್ಕಂದಿನಿಂದಲೂ ತಂದೆಯವರ ಪ್ರೋತ್ಸಾಹದೊಂದಿಗೆ ಈಜಿಗೆ ಆಕರ್ಷಿತರಾಗಿ ಏಳನೆಯ ವರ್ಷದಲ್ಲೇ ಈಜಿಗೆ ಇಳಿದರು. ಬೆಂಗಳೂರಿನ ಜೈನ್ ವಿದ್ಯಾಲಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು, ಅನಂತರ ಬೆಂಗಳೂರು ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದ ಅಡಿಯಲ್ಲಿ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಪ್ರಾರಂಭದ ದಿನಗಳಲ್ಲಿ ವಾಟರ್ ಪೋಲೋ ತಂಡದ ಸದಸ್ಯರಾಗಿ ನೀರಿಗಿಳಿದ ಇವರು ಅನಂತರ ಈಜನ್ನೇ ಕ್ರೀಡೆಯನ್ನಾಗಿಸಿಕೊಂಡರು. 1993–94ರ ಅಂತರಶಾಲಾ ಪಂದ್ಯಾವಳಿಯಲ್ಲಿ 5 ಪದಕಗಳನ್ನು ಪಡೆದರು. ತರಬೇತುದಾರರ ಸಹಾಯದೊಂದಿಗೆ ಅದೇವರ್ಷ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದರು. ಇವರು ಒಟ್ಟು 12 ಬಾರಿ ಅಂತಾರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ 12 ನೂತನ ದಾಖಲೆಗಳೊಂದಿಗೆ 27 ಚಿನ್ನ, 10 ಬೆಳ್ಳಿ, 7 ಕಂಚಿನ ಪದಕಗಳನ್ನು ಪಡೆದಿದ್ದಾರೆ. ಶಾಲಾ ರಾಷ್ಟ್ರೀಯ ಪಂದ್ಯಾವಳಿ, ಕಿರಿಯ ರಾಷ್ಟ್ರೀಯ ಪಂದ್ಯಾವಳಿ, ರಾಷ್ಟ್ರೀಯ ಪಂದ್ಯಾವಳಿಗಳು ಮುಂತಾದ 50ಕ್ಕೂ ಹೆಚ್ಚು ಪಂದ್ಯಾವಳಿಗಳಲ್ಲಿ ಭಾಗವಹಿಸಿ 260 ಚಿನ್ನದ ಪದಕಗಳನ್ನೂ 80ಕ್ಕೂ ಹೆಚ್ಚು ಬೆಳ್ಳಿಯ ಪದಕಗಳನ್ನೂ 70ಕ್ಕೂ ಹೆಚ್ಚು ಕಂಚಿನ ಪದಕಗಳನ್ನೂ ಗಳಿಸಿದ್ದಾರೆ.

ಇವರು ಭಾಗವಹಿಸಿ ವಿಜೇತರಾಗಿ ಪದಕ ಪಡೆದ ಅಂತಾರಾಷ್ಟ್ರೀಯ ಕ್ರೀಡಾಕೂಟಗಳೆಂದರೆ ನವದೆಹಲಿಯಲ್ಲಿ 1994ರಲ್ಲಿ ನಡೆದ ಏಷ್ಯ ಪೆಸಿಫಿಕ್ ಏಜ್ ಗ್ರೂಪ್ ಈಜುಗಾರರ ಚಾಂಪಿಯನ್‌ಷಿಪ್ (3 ಬೆಳ್ಳಿ ಪದಕಗಳು), 1995ರಲ್ಲಿ ಢಾಕಾದಲ್ಲಿ ನಡೆದ 11ನೆಯ ದಕ್ಷಿಣ ಏಷ್ಯನ್ ಫೆಡರೇಷನ್ ಈಜುಗಾರಿಕೆ ಚಾಂಪಿಯನ್‌ಷಿಪ್ (4 ಚಿನ್ನ, 2 ಬೆಳ್ಳಿ ಪದಕಗಳು), 1995ರಲ್ಲಿ ಶ್ರೀಲಂಕದಲ್ಲಿ ನಡೆದ ಏಷ್ಯಾ ಪೆಸಿಫಿಕ್ ಈಜುಗಾರಿಕೆ ಚಾಂಪಿಯನ್‌ಷಿಪ್ (1 ಚಿನ್ನ ಹಾಗೂ 1 ಬೆಳ್ಳಿ ಪದಕ), 1995ರಲ್ಲಿ ಚೆನ್ನೈನಲ್ಲಿ ನಡೆದ 7ನೆಯ ಸೌತ್ ಏಷ್ಯನ್ ಫೆಡರೇಷನ್ ಕ್ರೀಡೆಗಳಲ್ಲಿ 7 ಚಿನ್ನದ ಪದಕಗಳೊಂದಿಗೆ 6 ನೂತನ ದಾಖಲೆಗಳನ್ನು ಮಾಡಿದ್ದು ಇವರ ಅತ್ಯುತ್ತಮ ಸಾಧನೆ. 1990ರಲ್ಲಿ ಟೆಹರಾನ್‌ನಲ್ಲಿ ನಡೆದ 13ನೆಯ ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ 10 ಚಿನ್ನ ಹಾಗೂ 7 ಬೆಳ್ಳಿ ಪದಕಗಳನ್ನೂ 1999ರಲ್ಲಿ ಸ್ವೀಡನ್‌ನಲ್ಲಿ ನಡೆದ ವಿಶ್ವಪೊಲೀಸ್ ಪಂದ್ಯವೊಂದರಲ್ಲಿ 2 ಚಿನ್ನ ಹಾಗೂ 3 ಕಂಚಿನ ಪದಕಗಳನ್ನೂ ಸಂಪಾದಿಸಿದರು.

1994ರಲ್ಲಿ ಗಡಿಭದ್ರತಾ ಪಡೆಯ ನಿರೀಕ್ಷಕರಾಗಿ (ಇನ್‌ಸ್ಪೆಕ್ಟರ್) ನೇಮಕಗೊಂಡ ಇವರು 2002ರಿಂದ ಬೆಂಗಳೂರಿನ ಇನ್‌ಫೋಸಿಸ್ ಸಂಸ್ಥೆಯಲ್ಲಿ ಈಜು ತರಬೇತುದಾರರಾಗಿ ಅನೇಕ ಯುವ ಪ್ರತಿಭೆಗಳನ್ನು ರಾಷ್ಟ್ರಕ್ಕೆ ಪರಿಚಯಿಸಿದ್ದಾರೆ.

ಇವರಿಗೆ ಕರ್ನಾಟಕ ರಾಜ್ಯದ ಏಕಲವ್ಯ ಪ್ರಶಸ್ತಿ (1994), ಕರ್ನಾಟಕ ರಾಜ್ಯ ಪ್ರಶಸ್ತಿ (2000), ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೆಂಪೇಗೌಡ ಪ್ರಶಸ್ತಿ ದೊರೆತಿವೆ. ಭಾರತ ಸರ್ಕಾರ ಇವರಿಗೆ ಅರ್ಜುನ ಪ್ರಶಸ್ತಿ (2000) ನೀಡಿ ಗೌರವಿಸಿದೆ.

(ಎಸ್.ಆರ್.ಯು.)

**ಅಭಿಧಮ್ಮ :** ಬೌದ್ಧಧರ್ಮದ ಪ್ರಕ್ರಿಯೆಯಲ್ಲಿ ಜಿಜ್ಞಾಸೆಯ ಆಳವಾದ ಪ್ರಕಾರಕ್ಕೆ ಈ ಹೆಸರಿದೆ (ಅಭಿಧರ್ಮ). ತ್ರಿಪಿಟಕಗಳಲ್ಲಿ ಇದೂ ಒಂದು (ವಿನಯ, ಸುತ್ತ, ಅಭಿಧಮ್ಮ). ಪಿಟಕಗಳಲ್ಲಿ ಮೊದಲನೆಯದು ಭಿಕ್ಷುಗಳ ನಡೆವಳಿಕೆಗೆ ಸಂಬಂಧಿಸಿದುದೆಂದೂ ಎರಡನೆಯದು ಎಲ್ಲರಿಗೂ ಅಗತ್ಯವಾದ ಸಾಮಾನ್ಯ ಧರ್ಮವೆಂದೂ ಮೂರನೆಯದು ಕುತೂಹಲಿಗಳಿಗೆ ಮಾತ್ರ ಉಪಯುಕ್ತವಾದ ಹೆಚ್ಚಿನ ತತ್ತ್ವಗಳೆಂದೂ ಸ್ಥೂಲವಾಗಿ ನಿರ್ದೇಶಿಸಬಹುದು. ಬೌದ್ಧರಲ್ಲಿ ಧರ್ಮವೆಂಬ ಪದಕ್ಕೆ ಹಲವಾರು ಅರ್ಥಗಳು ಪ್ರಚಲಿತವಾಗಿವೆ. ಸಾಮಾನ್ಯವಾದ ಆಗುಹೋಗುಗಳಿಗೆ ಧರ್ಮವೆಂದು ಹೆಸರು (ಯೇ ಧರ್ಮಾ ಹೇತು ಪ್ರಭವಾ..... ಇತ್ಯಾದಿ). ಯೋಗ್ಯವಾದ ನಡೆವಳಿಕೆಯೂ ಧರ್ಮವೇ (ಏನ ಧಮ್ಮೋ ಸನಂತನೋ). ಜಗತ್ತಿನ ವ್ಯಾಪಾರಕ್ಕೆ ಮೂಲಭೂತವಾದ ಸೂಕ್ಷ್ಮಪ್ರವೃತ್ತಿಗಳು ಧರ್ಮ (ಧರ್ಮಸಮುದಯ). ಬುದ್ಧ ಮಾಡಿದ ಉಪದೇಶವೂ ಧರ್ಮವೆನಿಸಿಕೊಳ್ಳುತ್ತದೆ (ಬುದ್ಧ ಧರ್ಮ). ಈ ಉಪದೇಶಗಳ ಸಮಷ್ಟಿಯೂ ಧರ್ಮ (ಧರ್ಮಸ್ಕಂಧ). ಸಾಮಾನ್ಯವಾಗಿ ಬುದ್ಧನ ದೇಶನವನ್ನು ಧರ್ಮವೆಂದು ಹೇಳುತ್ತಾರೆ. ಅಭಿ ಎಂಬ ಪದಕ್ಕೆ ಹೆಚ್ಚಿನದು, ಮೀರಿದುದು, ವಿಶಿಷ್ಟವಾದುದು ಎಂಬ ಅರ್ಥವಿದೆ. ಧರ್ಮಕ್ಕೆ ಸಂಬಂಧಿಸಿದುದು ಅಭಿಧರ್ಮ ಎಂಬುದೂ ಸಮಂಜಸವೇ. ಸುತ್ತಪಿಟಕಕ್ಕೆ ವಸ್ತುವಾದ ಧರ್ಮಗಳಲ್ಲಿ ಮೂಲಭೂತವಾಗಿ ಅಂತರ್ಗತವಾದ ತತ್ತ್ವವಿವೇಚನೆಯೇ ಅಭಿಧರ್ಮವೆಂದು ಸಾಂಪ್ರದಾಯಿಕವಾದ ನಿರೂಪಣೆ.

ಶಾಕ್ಯಮುನಿ ಬುದ್ಧನಾದ ಮೇಲೆ ಸಂಬೋಧಿ ಒದಗಿದ ನಾಲ್ಕನೆಯ ವಾರದಲ್ಲಿ ಅಭಿಧಮ್ಮವನ್ನು ಸ್ವೋಪಜ್ಞೆಯಿಂದ ಗ್ರಹಿಸಿದನೆಂದು ಸಂಪ್ರದಾಯ ಹೇಳುತ್ತದೆ. ತಾವತಿಂಸವೆಂಬ ಸ್ವರ್ಗದಲ್ಲಿ ಇದ್ದ ತನ್ನ ತಾಯಿಗೆ ಮೂರು ತಿಂಗಳ ಕಾಲ ಅಭಿಧಮ್ಮವನ್ನು ಬೋಧಿಸಿದನೆಂದೂ ಸಂಪ್ರದಾಯದ ನಂಬಿಕೆ. ಆದರೆ ಅಭಿಧಮ್ಮ ಬುದ್ಧ ವಚನದಲ್ಲಿಲ್ಲ. ಬುದ್ಧನ ಅನಂತರ ಬಂದ ದಾರ್ಶನಿಕರು ಬುದ್ಧವಚನಗಳಲ್ಲಿ ಅಡಗಿದ್ದ ತತ್ತ್ವಗಳನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ವಿನಯಪಿಟಕ ಮತ್ತು ಸುತ್ತಪಿಟಕದಷ್ಟು ಅಭಿಧಮ್ಮಪಿಟಕ ಪ್ರಾಚೀನವಲ್ಲವೆಂದು ಶೈಲಿಯಿಂದಲೂ ವಾಙ್ಮಯದಿಂದಲೂ ಸಂದರ್ಭಕಥನದಿಂದಲೂ ಸ್ಪಷ್ಟವಾಗುತ್ತದೆ. ಸಂಪ್ರದಾಯದಲ್ಲೇ ಒಂದು ವಿವರಣೆಯಿದೆ. ಅಭಿಧಮ್ಮವನ್ನು ಬುದ್ಧ ತನ್ನ ಪ್ರೌಢಶಿಷ್ಯನಾದ ಶಾರಿಪುತ್ರನಿಗೆ ಮಾತೃಕೆಗಳಲ್ಲಿ ಸೂಕ್ಷ್ಮವಾಗಿ ಬೋಧಿಸಿದನೆಂದೂ ಸಮುದ್ರದ ಅಂಚಿನಲ್ಲಿ ನಿಂತು ಸಮುದ್ರದೆಡೆ ಕೈತೋರಿಸಿದಂತೆ ಶಾರಿಪುತ್ರ ತನ್ನ ಐನೂರು ಶಿಷ್ಯರಿಗೆ ಬೋಧಿಸಿದನೆಂದೂ ಅಟ್ಠಸಾಲಿನಿಯಲ್ಲಿ ಬರುವ ನಿರೂಪಣೆ. ಈ ಕಾರ್ಯದಲ್ಲಿ ಅವನ ಸತೀರ್ಥನಾಗಿದ್ದ ಮಹಾಕೊಟ್ಠಿತ ನೆರವಾದನಂತೆ. ಅಭಿಧಮ್ಮದ ಸಂಗ್ರಹಕಾರ್ಯ ಶಾರಿಪುತ್ರನಿಂದ ಆಯಿತೆಂದು ವ್ಯಾಖ್ಯಾನಕಾರನಾದ ಬುದ್ಧಘೋಷಾಚಾರ್ಯ ಒಪ್ಪುತ್ತಾನೆ; ಅಭಿಧರ್ಮಪಿಟಕದ ವಾಙ್ಮಯದಲ್ಲಿ ಏಳು ಪ್ರಕರಣ ಗ್ರಂಥಗಳಿವೆ. ಧರ್ಮಸಂಗಣಿ, ವಿಭಂಗ, ಧಾತುಕಥಾ, ಪುಗ್ಗಲಪಞ್ಞತ್ತಿ, ಕಥಾಮತ್ಥು, ಯಮಕ ಮತ್ತು ಪಟ್ಠಾನ–ಇವೇ ಆ ಏಳು.

ಈ ಗ್ರಂಥಗಳಲ್ಲದೆ ಪಿಟಕೇತರ ವಾಙ್ಮಯದಲ್ಲಿ ಮಿಳಿಂದ ಪ್ರಶ್ನೆ ಎಂಬ ಉದ್ಗ್ರಂಥ ಅಭಿಧಮ್ಮವನ್ನು ಕುರಿತದ್ದು. ಗಂಧಾರ ದೇಶದಲ್ಲಿ ಕ್ರಿಸ್ತಾಬ್ದ ಮೊದಲನೆಯ ಶತಮಾನದ ಸುಮಾರಿಗೆ ರಾಜನಾಗಿದ್ದ ಮಿನಾನ್ಡ್ರೊಸ್ (ಪಾಳಿಯಲ್ಲಿ ಮಿಳಿಂದ) ಎಂದು ಗ್ರೀಕ್ ಜನಾಂಗದ ಜಿಜ್ಞಾಸುವೊಬ್ಬ ಬೌದ್ಧಭಿಕ್ಷುವಾಗಿದ್ದ ನಾಗಸೇನನೆಂಬ ಪ್ರತಿಭಾಸಂಪನ್ನನೊಂದಿಗೆ ನಡೆಸಿದ ಸಂವಾದಗಳ ಸಂಗ್ರಹವೇ ಈ ಗ್ರಂಥ. ಬುದ್ಧಘೋಷನ ವಿಶುದ್ಧಿ ಮಗ್ಗ ಮತ್ತೊಂದು ಮೈಲಿಗಲ್ಲು. ಕ್ರಿಸ್ತಾಬ್ದ ನಾಲ್ಕನೆಯ ಶತಮಾನದಲ್ಲಿದ್ದ ಈತ ಬೋಧಿಮಂಡದ ಸಮೀಪದಲ್ಲಿ ಹುಟ್ಟಿಬೆಳೆದು ಸಿಂಹಳದಲ್ಲಿ ಅನುರಾಧಪುರದ ಮಹಾವಿಹಾರಕ್ಕೆ ಹೋಗಿ ಅಲ್ಲಿ ವಿಶುದ್ಧಿ ಮಗ್ಗವನ್ನೂ ಅಟ್ಠ ಕಥೆಗಳನ್ನೂ ಬರೆದ. ಇಡೀ ಅಭಿಧರ್ಮಪಿಟಕಕ್ಕೆ ಸಮಷ್ಟಿಯಾಗಿ ಪರಮತ್ಥ ಕಥಾ ಎಂಬ ಹೆಸರಿನಿಂದ ವ್ಯಾಖ್ಯಾನವೊಂದನ್ನೂ ಧರ್ಮಸಂಗಣಿಗೆ ಪ್ರತ್ಯೇಕವಾಗಿ ಅಟ್ಠಸಾಲಿನಿ ಎಂಬ ವ್ಯಾಖ್ಯಾನವನ್ನೂ ವಿಭಂಗಕ್ಕೆ ಸಮ್ಮೋಹವಿನೋದಿನೀ ಎಂಬ ವ್ಯಾಖ್ಯಾನ ವನ್ನೂ ಈತ ಬರೆದಿದ್ದಾನೆ. ಇವನ ಸಮಸಾಮಯಿಕನಾದ ಕಾಂಚೀಪುರದ ಬುದ್ಧದತ್ತ ಅಭಿಧಮ್ಮವತಾರ, ರೂಪಾರೂಪವಿಭಾಗ ಎಂಬ ಎರಡು ಶ್ರೇಷ್ಠಗ್ರಂಥಗಳಿಗೆ ಕರ್ತೃ. ಹನ್ನೆರಡನೆಯ ಶತಮಾನದಲ್ಲಿ ತಂಜಾವೂರಿನವನಾದ ಅನುರುದ್ಧನೆಂಬ ಭಿಕ್ಷು ಅಭಿಧಮ್ಮತ್ಥ ಸಂಗ್ರಹವೆಂಬ ಗ್ರಂಥವನ್ನು ರಚಿಸಿದ್ದಾನೆ. ಇದು ಥೇರವಾದದ ಬೌದ್ಧರಲ್ಲಿ ತುಂಬ ಪ್ರಚಲಿತವಾದ ಪ್ರಕರಣಗ್ರಂಥ. ಸಿಂಹಳದಲ್ಲೂ ಮಾಯನ್ಮಾರ್‌ನಲ್ಲೂ ಇದಕ್ಕೆ ಹಲವಾರು ಟೀಕೆಗಳು ಕಾಣಿಸಿಕೊಂಡಿವೆ. ಇವುಗಳಲ್ಲಿ ಸುಮಂಗಲ ಥೇರನೆಂಬ ಸಿಂಹಳದ ಭಿಕ್ಷು ಬರೆದ ವಿಭಾವಿನೀ ಟೀಕೆ ಪ್ರಸಿದ್ಧವಾದುದು. ಅನುರುದ್ಧನೇ ಬರೆದ ಇನ್ನೊಂದು ಅಭಿಧಮ್ಮದ ಗ್ರಂಥವೆಂದರೆ ನಾಮರೂಪ ಪರಿಚ್ಛೇದ.

ಧರ್ಮವೆಂದರೆ ದೇಶನವೆಂದೂ ಉಪದೇಶವೆಂದೂ ಅರ್ಥ ಹೇಳಿ ಅಭಿಧಮ್ಮವನ್ನು ವೈಯಾಕರಣ (ವ್ಯಾಕರಣ–ತಾತ್ಪರ್ಯ ನಿರೂಪಣೆ, ವಿವರಣೆ) ಎನ್ನುತ್ತಾರೆ. ಎಂದರೆ ಬುದ್ಧನ ಮಾತುಗಳನ್ನು ಎತ್ತಿಕೊಂಡು ಅವುಗಳಿಗೆ ಸಮಾನ ಪದಗಳನ್ನು ಹೇಳಿ ಅರ್ಥವನ್ನು ವ್ಯುತ್ಪತ್ತಿಯಿಂದ ನಿರೂಪಿಸಿ, ಸಂದರ್ಭಕ್ಕೆ ಸರಿಯಾದ ಅರ್ಥವನ್ನು ಅಳವಡಿಸುವುದೇ ಅಭಿಧಮ್ಮದ ಪದ್ಧತಿ. ನಿದರ್ಶನಕ್ಕೆ ಧರ್ಮಸಂಗಣಿಯಲ್ಲಿ ಪ್ರಸ್ತಾಪಿಸಿರುವ ಎಲ್ಲ ವಸ್ತುವನ್ನು ಹದಿನೈದು ಪರಿಚ್ಛೇದಗಳಲ್ಲಿ 220 ಪ್ರಸಂಗಗಳಾಗಿ ಅವಕ್ಕೆ ಮಾತೃಕೆಯ ರೂಪಕೊಟ್ಟಿದ್ದಾರೆ. ಅನಂತರ ಒಂದೊಂದು ಅಧಿಕರಣವನ್ನೂ ಕೂಲಂಕಷವಾಗಿ ವ್ಯುತ್ಪತ್ತಿ, ವಿವರಣೆ, ವಿಭಜನೆಗಳ ಮೂಲಕ ನಿರೂಪಿಸಿದ್ದಾರೆ. ಹೀಗೆ ಮಾಡುವಾಗ ಪ್ರಶ್ನೆ (ಪುಚ್ಛಾ), ಸಂದರ್ಭ ನಿರೂಪಣೆ (ಸಮಯನಿದ್ದೇಸ), ತತ್ತ್ವಸಂಖ್ಯಾನ, (ಧಮ್ಮುದ್ದೇಸ) ಮತ್ತು ಸಮಾಸಕಥನ (ಅಪ್ಪನಾ)– ಈ ರೀತಿಯನ್ನು ಅನುಸರಿಸಿದ್ದಾರೆ. ಹೀಗೆ ಮಾನಸಿಕ ವ್ಯಾಪಾರಗಳು, ಪುದ್ಗಲ, ಸ್ಕಂಧಗಳು, ಭವಂಗ, ಆತ್ಮಭಾವ, ಆಯತನ, ವಿಜ್ಞಾನ, ಧಾತುಕಥೆ, ಆಲಂಬನ, ತದಾಲಂಬನ (ಪ್ರತ್ಯಕ್ಷ), ಚರಿತ, ನಿರ್ವಾಣ ಮುಂತಾದ ಗಹನವಿಚಾರಗಳನ್ನು ಖಚಿತವಾಗಿ, ತರ್ಕಬದ್ಧವಾಗಿ, ಪಿಟಕಪುಷ್ಟವಾಗಿ ವಿವರಿಸಿದ್ದಾರೆ. ಈ ಸಂಪ್ರದಾಯದಿಂದ ಬೌದ್ಧ ದರ್ಶನಕ್ಕೆ ಗಾಢವಾದ ಬೌದ್ಧಿಕ ಕಳೆ ಒದಗಿದೆ.

ಥೇರವಾದದವರಂತೆ ಮಹಾಯಾನದವರೂ ಅಭಿಧಮ್ಮವನ್ನು ಎತ್ತಿಹಿಡಿದಿದ್ದಾರೆ. ಮಹಾಯಾನದ ಉಗಮವಾಗುವಲ್ಲೇ ಪ್ರಸಕ್ತ 1ನೆಯ ಮತ್ತು 2ನೆಯ ಶತಮಾನದಲ್ಲಿ ಪುರುಷಪುರದ ಅಸಂಗನೆಂಬ ಬ್ರಾಹ್ಮಣ ಭಿಕ್ಷು ಯೋಗಾಚಾರ (ಅಥವಾ ಯೋಗಚರ್ಯಾ) ಎಂಬ ವಿಜ್ಞಾನವಾದದ ಪ್ರಕಾರವೊಂದನ್ನು ನಿರೂಪಿಸಿದ. ಪಂಚಭೂಮಿ, ಅಭಿಧರ್ಮ ಸಮುಚ್ಚಯ, ಮಹಾಯಾನಸಂಗ್ರಹ ಎಂಬ ಮೂರು ಗ್ರಂಥಗಳನ್ನು ಆತ ಬರೆದಿದ್ದಾನೆಂದು ಟಿಬೆಟನ್ ಭಾಷೆಯ ಬು–ಸ್ಟೋನ್ ಹೇಳುತ್ತದೆ. ಇವುಗಳಲ್ಲಿ ಮೊದಲನೆಯದನ್ನು ರಾಹುಲಸಾಂ ಕೃತ್ಯಾಯನವರು ಟಿಬೆಟ್ಟಿನ ಸ–ಸ್ಕ್ಯ ಮಠದ ತಾಳಪತ್ರ ಸಂಗ್ರಹದಿಂದ ಸಂಶೋಧಿಸಿದ್ದಾರೆ. ಇದರಲ್ಲಿ ಪುದ್ಗಲ ಮತ್ತು ಆಲಂಬನಗಳ ವಿಚಾರವಾಗಿ ಸುದೀರ್ಘ ವಿವರಣೆಯಿದೆ. ಎರಡನೆಯದನ್ನು ಯುವಾನ್ ಚಾಂಗ್ ಚೀನಿ ಭಾಷೆಗೆ ಪರಿವರ್ತಿಸಿದ್ದಾನೆ. ಇದರಲ್ಲಿ ಪ್ರತೀತ್ಯಸಮುತ್ಪಾದ, ಸಂಜ್ಞಾ–ಸಂಸ್ಕಾರ ಸ್ಕಂಧಗಳು, ವಿಜ್ಞಾನ ಇವುಗಳನ್ನು ಕುರಿತು ಪ್ರೌಢವಿವೇಚನೆಯಿದೆ. ಅಸಂಗನ ತಮ್ಮನೆಂದು ಪ್ರಸಿದ್ಧನಾದ ವಸುಬಂಧುವಿನ ಅಭಿಧರ್ಮಕೋಶ ಹೀನಯಾನ–ಸರ್ವಾಸ್ತಿವಾದಿಗಳ ಪಕ್ಷವನ್ನು ಹಿಡಿದು ಬರೆದುದಾದರೂ

ಮಹಾಯಾನದ ಅಭಿಧರ್ಮ ಸಂಪ್ರದಾಯದಲ್ಲಿ ಇದೊಂದು ಮೈಲಿಗಲ್ಲು. ವಸುಬಂಧುವಿನ ಶಿಷ್ಯನಾದ ದಿಙ್ನಾಗತರ್ಕ, ನ್ಯಾಯಶಾಸ್ತ್ರಗಳ ವಿಶೇಷ ಪರಿಶ್ರಮದಿಂದ ಮಹಾಯಾನದ ಅಭಿಧರ್ಮ ಸಂಪ್ರದಾಯವನ್ನು ಸುದೃಢವನ್ನಾಗಿ ಮಾಡಿದ. ಪ್ರ.ಶ. 600ರ ಸುಮಾರಿಗೆ ನಾಲಂದ ವಿದ್ಯಾಲಯದ ಅಧಿಪತಿಯಾಗಿದ್ದ ಧರ್ಮಪಾಲ ವಸುಬಂಧುವಿನ ಪಾದಗಳನ್ನು ಪುಷ್ಟಿಗೊಳಿಸಿ ವಿಜ್ಞಪ್ತಿ ಮಾತ್ರತಾಸಿದ್ಧಿ ವ್ಯಾಖ್ಯೆಯನ್ನು ರಚಿಸಿದ. ಈ ಧರ್ಮಪಾಲನನ್ನು ಯುವಾನ್ ಚಾಂಗ್ ಬೋಧಿಸತ್ವನೆಂದು ಕರೆದಿದ್ದಾನೆ. ಧರ್ಮಪಾಲನ ಶಿಷ್ಯನಾಗಿದ್ದ ಧರ್ಮಕೀರ್ತಿ (625) ಪ್ರಮಾಣವಾರ್ತಿಕವನ್ನು ರಚಿಸಿ ಮಹಾಯಾನಶಾಸ್ತ್ರವನ್ನು ಊರ್ಜಿತಗೊಳಿಸಿದ. ಅಭಿಧರ್ಮಪದ್ಧತಿಯ ವಸ್ತುವಿನ್ಯಾಸ ಈ ಕಾಲದಲ್ಲಿ ವೇದಾಂತದ ಪ್ರಕ್ರಿಯೆಯನ್ನು ಸ್ಪಷ್ಟಗೊಳಿಸಿತು. **(ನೋಡಿ – ತ್ರಿಪಿಟಕ).** (ಎಸ್.ಕೆ.ಆರ್.)

**ಅಭಿನಂದ :** ಸು. 850–900. ಕಾದಂಬರೀ ಕಥಾಸಾರ ಕಾವ್ಯವನ್ನು ಬರೆದ ಕವಿ. ಪ್ರ.ಶ.750ರ ಸುಮಾರಿನಲ್ಲಿ ಕಾಶ್ಮೀರ ದೇಶದಲ್ಲಿ ರಾಜನಾಗಿದ್ದ ಲಲಿತಾದಿತ್ಯನ ಮಂತ್ರಿಯಾಗಿದ್ದ ಶಕ್ತಿಸ್ವಾಮಿಯ ವಂಶದಲ್ಲಿ ಐದನೆಯ ಪೀಳಿಗೆಯವ. ಈ ಲಲಿತಾದಿತ್ಯನಿಗೆ ಮುಕ್ತಾಪೀಡನೆಂಬ ಇನ್ನೊಂದು ಹೆಸರೂ ಇತ್ತು ಎಂದು ಕಲ್ಹಣನ ರಾಜತರಂಗಿಣಿಯಲ್ಲಿ ಉಲ್ಲೇಖವಿದೆ. ಆದ್ದರಿಂದ ಬಾಣಭಟ್ಟನ ಅನಂತರ ಸುಮಾರು 150 ವರ್ಷಗಳಲ್ಲಿ ಅಭಿನಂದ ಇದ್ದಿರಬಹುದು. 10ನೆಯ ಶತಕದ ಅಂತ್ಯದಲ್ಲಿ ಅಭಿನವಗುಪ್ತ ತನ್ನ ಧ್ವನ್ಯಾಲೋಕಲೋಚನದಲ್ಲಿ ಕಾದಂಬರೀಕಥಾಸಾರವನ್ನು ನೆನಪಿಗೆ ತರುತ್ತಾನೆ (ಉದ್ಯೋತ 3). 11ನೆಯ ಶತಕದ ಕ್ಷೇಮೇಂದ್ರ ತನ್ನ ಸುವೃತ್ತತಿಲಕದ ಮೂರನೆಯ ವಿನ್ಯಾಸದಲ್ಲೂ ಈ ಕಾವ್ಯದ ವಾಕ್ಯಗಳನ್ನು ಉಪಯೋಗಿಸಿರುತ್ತಾನೆ. ಅಭಿನಂದ ಅನುಷ್ಟುಭ್ ವೃತ್ತಪ್ರಿಯನೆಂದು ಕ್ಷೇಮೇಂದ್ರ ಹೊಗಳಿದ್ದಾನೆ. ಈ ಒಂದು ಗ್ರಂಥವನ್ನು ಬಿಟ್ಟು ಈತ ಬೇರೆ ರಚಿಸಿರಲಾರ. ರಚಿಸಿದ್ದರೂ ಅದು ಈಗ ಉಪಲಬ್ಧವಿಲ್ಲ. ರಾಮಚರಿತವನ್ನು ಬರೆದ ಅಭಿನಂದಶತಾನಂದನ ಮಗ ಇವನಲ್ಲ. ಈ ಗ್ರಂಥ ಕಾಶಿಯ ಪಂಡಿತ್ ಎಂಬ ಮಾಸಿಕದಲ್ಲಿ 1867ರಲ್ಲಿ ಪ್ರಕುರವಾಯಿತು. ಆದರೆ ಕಾವ್ಯಮಾಲಾ ಪಂಕ್ತಿಯಲ್ಲಿ ಅಚ್ಚಾಗಿರುವ ಗ್ರಂಥ ಪಂಡಿತ್‌ನಲ್ಲಿ ಪ್ರಚಾರವಾಗಿರುವುದಕ್ಕಿಂತ ಉತ್ತಮವಾಗಿದೆ. ತನ್ನ ವಂಶದವರು ಭಾರದ್ವಾಜ ಕುಲದವರು, ಗೌಡದೇಶದವರು ಎಂದು ಈತನೇ ಹೇಳಿಕೊಂಡಿದ್ದಾನೆ. ಈತನ ತಂದೆ ತಾತಂದಿರೆಲ್ಲ ಉತ್ತಮ ಕವಿಗಳೆಂದು ತಿಳಿಸಿದ್ದಾನೆ. ಇವನ ತಂದೆ ಜಯಂತ. ಆ ಜಯಂತನ ಪೂರ್ವಜರಾದ ಕಾಂತ, ಕಲ್ಯಾಣಸ್ವಾಮಿ, ಶಕ್ತಿಸ್ವಾಮಿ, ವಿಚಿತ್ರ, ಶಕ್ತಿ ಎಲ್ಲರೂ ವೇದವೇದಾಂಗ ವಿದುಷರು, ಸರ್ವಶಾಸ್ತ್ರಾರ್ಥವಾದಿಗಳು. ಈತ ಕಾದಂಬರೀಕಥಾಸಿಂಧೋಃಕಥಾ ಮಾತ್ರಂ ಸಮುದ್ಧೃತಂ ಎಂದು ಉಪಕ್ರಮಿಸಿ ಸೂಕ್ತ ರೀತಿಯಲ್ಲಿ ಕಾವ್ಯವನ್ನು ರಚಿಸಿದ್ದಾನೆ.

ಇದು ಬಾಣನ ಗದ್ಯ–ಕಾದಂಬರಿಯ ಸಾರಸಂಗ್ರಹ; ಪದ್ಯರೂಪದಲ್ಲಿದೆ. ಬಾಣನ ಗದ್ಯಬಂಧ ಕಷ್ಟವೆನ್ನುವವರಿಗೆ ಸುಲಭಪದ್ಯಶೈಲಿ ಆಪ್ಯಾಯಮಾನವಾಗುವುದರಲ್ಲಿ ಸಂಶಯವಿಲ್ಲ. ಬಾಣನ ಇಡೀ ಕಾದಂಬರೀ ಕಥೆಯನ್ನು ಎಂಟು ಸರ್ಗಗಳಲ್ಲಿ ಹೆಣೆದಿದ್ದಾನೆ. ಒಟ್ಟು 874 ಶ್ಲೋಕಗಳಿವೆ. ಒಂದೆರಡು ಕಡೆ ಬರುವ ವೃತ್ತಗಳನ್ನುಳಿದರೆ ಇಡೀ ಗ್ರಂಥ ಅನುಷ್ಟುಭ್ ಛಂದಸ್ಸಿನಲ್ಲಿದೆ. ಮೂಲಕಥೆಗೆ ಲೋಪ ಬಾರದಂತೆ ನೋಡಿಕೊಂಡು ಅಪ್ರಕೃತ ವರ್ಣನೆಯನ್ನು ಬಿಟ್ಟು ಕಾವ್ಯ ಮಾಧುರ್ಯಕ್ಕೆ ಚ್ಯುತಿ ಬಾರದಂತೆ ಕವಿ ವಸ್ತುಸಂಗ್ರಹ ಮಾಡಿದ್ದಾನೆ. ವರ್ಣನೆಗಳ ಗಾಂಭೀರ್ಯದಲ್ಲಿ ಕಥೆಯೇ ಮರೆತುಹೋಗುವಂಥ ಬಾಣನ ಕಾದಂಬರಿಯನ್ನು ನೋಡುವ ಮೊದಲು ಈ ಸುಲಭೀಕೃತ ಕಾದಂಬರಿ ಕಾವ್ಯ ಸಂಗ್ರಹವನ್ನು ಓದುವುದು ಒಳಿತು. ಇಲ್ಲಿ ಬಾಣನ ಪೂರ್ವಾರ್ಧ ಕಥೆಯೊಂದಿಗೆ ಭೂಷಣಭಟ್ಟನ ಉತ್ತರಾರ್ಧಕಥೆಯೂ ಇದೆ. ಸಮಗ್ರಕಾದಂಬರೀಕಥೆಯ ಸಾರವನ್ನು ಸಾರವತ್ತಾಗಿ ಸಂಗ್ರಹಿಸಿ ಕಾವ್ಯರೂಪದಲ್ಲಿ ಬರೆದ ಕೀರ್ತಿ ಕವಿ ಅಭಿನಂದನಿಗೆ ಸಲ್ಲುವುದು ಯಥೋಚಿತವಾಗಿದೆ. ಇವನ ಶೈಲಿ ಸುಲಭ ಮತ್ತು ಸುಭಗ. ಅಭಿನಂದ ಕಾವ್ಯದ ಆದಿಯಲ್ಲಿ ತನ್ನ ಗುರು ಪರಂಪರೆಯನ್ನು ಸ್ಮರಿಸುತ್ತಾ ಅವರ ಶೈಲಿ ಸರಸಾ ಸದಲಂಕಾರಾಃ ಪ್ರಸಾದಮಧುರಾಗಿರಃ ಎಂಬ ಮಾತನ್ನು ಹೇಳುತ್ತಾನೆ. ಇದು ಆತನ ಕಾವ್ಯಕ್ಕೂ ಸಲ್ಲುವುದು.

ಕಾವ್ಯದಲ್ಲಿನ ಐತಿಹಾಸಿಕ ಧ್ವನಿ ಮೂಲದ ಗಾಂಭೀರ್ಯಕ್ಕೆ ಚ್ಯುತಿ ತಂದಿಲ್ಲ. ಅತಿ ವಿಸ್ತೃತ ಕಥೆಯನ್ನು ಸಂಗ್ರಹಿಸುವಾಗ ಮೂಲದ ಸ್ವಾರಸ್ಯಕ್ಕೆ ಕುಂದು ಬಂದಿಲ್ಲ. ಕವಿತಾಶಕ್ತಿ, ಪಾಂಡಿತ್ಯ ಮತ್ತು ಪ್ರತಿಭೆಗಳ ವಿಚಿತ್ರ ಸಂಗಮವನ್ನಿಲ್ಲಿ ಕಾಣಬಹುದು. (ಜಿ.ಎಂ.)

**ಅಭಿನಯ :** ವಿಶಾಲಾರ್ಥದಲ್ಲಿ ಎಲ್ಲ ಸ್ಥಿತಿವಿಶೇಷಗಳ ಅನುಕರಣೆಗೂ ಈ ಮಾತು ಅನ್ವಯವಾಗುತ್ತದೆ. ಹುಟ್ಟಿನಿಂದ ಹಿಡಿದು ಸಾವಿನವರೆಗಿನ ಜೀವಿಯ ಪ್ರತಿಯೊಂದು ಕ್ರಿಯೆಯೂ ಹಾವಭಾವಗಳೂ ಅನುಕರಣ ಯೋಗ್ಯವಾಗಿದ್ದು ಅಭಿನಯ ವೆನಿಸಿಕೊಳ್ಳಬಲ್ಲವಾದ್ದರಿಂದ ಅಭಿನಯದ ಪ್ರಕಾರಗಳು ಅನಂತವಾಗಿವೆ. ಲಲಿತಕಲೆಗೆ ಸಂಬಂಧಿಸಿದಂತೆ ಅಭಿನಯದ ವ್ಯಾಖ್ಯೆ ವಿವರಗಳನ್ನು ರೂಪಿಸುವ ಪ್ರಯತ್ನವಾದರೋ ಬಹಳ ಹಿಂದಿನಿಂದ ನಡೆದಿದೆ. ಋಗ್ವೇದದಿಂದ ಪಾಠವನ್ನೂ ಯಜುರ್ವೇದದಿಂದ ಅಭಿನಯವನ್ನೂ ಸಾಮವೇದದಿಂದ ಗೀತೆಯನ್ನೂ ಅಥರ್ವಣವೇದದಿಂದ ರಸವನ್ನೂ ತೆಗೆದುಕೊಂಡು ಬ್ರಹ್ಮ ಧರ್ಮಾರ್ಥಕಾಮ ಮೋಕ್ಷವನ್ನು ಕೊಡತಕ್ಕ ನಾಟ್ಯಶಾಸ್ತ್ರವನ್ನು ನಿರ್ಮಿಸಿದನೆಂದು ಹೇಳುವ ಭರತಮುನಿಯ ಮಾತನ್ನು ಗಮನಿಸಿದಲ್ಲಿ ಅಭಿನಯಕ್ಕೆ ಮೂಲ ಯಜುರ್ವೇದವಾಗುತ್ತದೆ.

ನೃತ್ಯಕಲೆಯಲ್ಲಿ ನಾಟ್ಯ, ನೃತ್ತ, ನೃತ್ಯ ಎಂದು ಮೂರು ವಿಭಾಗಗಳಿದ್ದು ಅದರಲ್ಲಿನ ನೃತ್ಯವಿಭಾಗದಲ್ಲಿ ಅಭಿನಯಕ್ಕೆ ಹೆಚ್ಚಿನ ಅವಕಾಶ ದೊರೆಯುತ್ತದೆ. ಸುಖದುಃಖಗಳಿಂದ ಉಂಟಾಗುವ ಮನೋವಿಕಾರವನ್ನು ವ್ಯಕ್ತಗೊಳಿಸುವ ಕಲೆಗೆ ಅಭಿನಯವೆಂದು ಹೇಳಬಹುದು. ಮೂಲತಃ ಭರತನ ದೃಷ್ಟಿಯಲ್ಲಿ ಇದು ನಾಟ್ಯಕ್ಕೆ ಮಾತ್ರ ಸಂಬಂಧಿಸಿದ್ದರೂ ಕಾಲಕ್ರಮೇಣ ಎಲ್ಲ ರೂಪಕಕಲೆಗೂ ಅನ್ವಯವಾಯಿತು. ಅಭಿನಯ ಎಂಬ ಪದದ ಉತ್ಪತ್ತಿ ನಾಟ್ಯಶಾಸ್ತ್ರದ ಪ್ರಕಾರ ಹೀಗಿದೆ: ಅಭಿನಯ ಎಂಬ ಶಬ್ದದಲ್ಲಿನ ಅಭಿ ಎಂಬ ಉಪಸರ್ಗಕ್ಕೆ ಅಭಿಮುಖ ಎಂದು ಅರ್ಥಮಾಡಿದ್ದಾರೆ. ನೀಞ್ ಧಾತುವಿಗೆ ಹೊಂದುವುದು ಎಂಬ ಅರ್ಥವಿದೆ. ಉದ್ದಿಷ್ಟ ಅರ್ಥ ಅಥವಾ ಭಾವಗಳನ್ನು ಅಭಿನಯ ಸಾಮಾಜಿಕರ ಹೃದಯಕ್ಕೆ ಕೊಂಡೊಯ್ಯುತ್ತದೆ. ಅಂಗೋಪಾಂಗಗಳಿಂದೊಡಗೂಡಿ ಪ್ರಯೋಗಿಸಲ್ಪಡುವುದರಿಂದ ವಿವಿಧಾರ್ಥಗಳನ್ನು ಸಾಮಾಜಿಕರು ಭಾವಿಸಿಕೊಳ್ಳಲು ಇದು ವಿಶೇಷ ನೆರವು ನೀಡುತ್ತದೆ. ಆದ್ದರಿಂದ ಇದನ್ನು ಅಭಿವ್ಯಕ್ತಿಯ ಒಂದು ವಿಶಿಷ್ಟ ರೀತಿ ಎಂದು ಹೇಳಬಹುದು.

ಅಭಿನಯವನ್ನು ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ವಿಕವೆಂಬುದಾಗಿ ನಾಲ್ಕು ವಿಭಾಗವಾಗಿ ವಿಂಗಡಿಸಿದ್ದಾರೆ. ಅಂದಮಾತ್ರಕ್ಕೆ ಇವು ಪ್ರಯೋಗಕ್ಕೆ ಅರ್ಹವಾದ ಪ್ರತ್ಯೇಕ ಘಟಕಗಳು ಎಂದು ಭಾವಿಸಲಾಗದು. ಪರಸ್ಪರ ಇವುಗಳಿಗೆ ಸಾಪೇಕ್ಷೆ ಉಂಟು.

ಕಲಾತ್ಮಕವಾದ ಅಂಗವಿನ್ಯಾಸಗಳನ್ನು ಆಂಗಿಕಾಭಿನಯವೆಂದು ಹೇಳುತ್ತಾರೆ. ಅಂಗ, ಉಪಾಂಗ, ಪ್ರತ್ಯಂಗ ಸಹಿತವಾದ ಆಂಗಿಕಾಭಿನಯ ಮೂರು ವಿಧವಾಗಿ ವಿಭಾಗಿಸಲ್ಪಟ್ಟಿದೆ: 1. ಶಾರೀರ, 2. ಮುಖಜ, 3. ಚೇಷ್ಟಾಕೃತಿ. ಶಾರೀರಾಭಿನಯ ವಾಕ್ಯ, ಸೂಚ, ಅಂಕುರ, ಶಾಖ, ನಾಟ್ಯಾಯಿತ, ನಿವೃತ್ಯಂಕುರ ಎಂಬುದಾಗಿ ಆರು ವಿಧ ಎಂದು ಭರತನ ನಾಟ್ಯಶಾಸ್ತ್ರದಲ್ಲಿ ಹೇಳಿದೆ. ನಾಟ್ಯ ಅಂಗ, ಉಪಾಂಗ, ಪ್ರತ್ಯಂಗ ಸಹಿತವಾಗಿಯೇ ಇದೆ. ಶಿರ, ಹಸ್ತಗಳು, ಕಟಿ, ವಕ್ಷಸ್ಥಳ, ಅಧರ, ಚಿಬುಕ, ಕಣ್ಣುಗುಡ್ಡೆಗಳು, ಕಪೋಲ–ಈ ಆರು ಉಪಾಂಗಗಳು. ಭುಜಗಳು, ತೋಳುಗಳು, ಬೆನ್ನು, ತೊಡೆಗಳು, ಪೃಷ್ಠ, ಉದರ–ಇವೇ ಆರು ಪ್ರತ್ಯಂಗಗಳು. ಅಂಗ, ಉಪಾಂಗ, ಪ್ರತ್ಯಂಗಗಳನ್ನು ಈ ರೀತಿ ವಿಂಗಡಿಸಲಾಗಿದೆಯಾದರೂ ಕೆಲವು ಗ್ರಂಥಗಳ ಪ್ರಕಾರ ಇವುಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗುವುದುಂಟು. ಸಿಂಹ ಭೂಪಾಲ ತನ್ನ ಲಾಸ್ಯರಂಜನದಲ್ಲಿ ಉಪಾಂಗಗಳು ಹದಿನೈದು ಎಂದು ಹೇಳಿದ್ದಾನೆ.

ಅಂಗಗಳಿಂದ ಮಾಡುವ ಅಭಿನಯದಲ್ಲಿ ಶಿರೋಭೇದ, ಗ್ರೀವಾಭೇದ, ದೃಷ್ಟಿಭೇದ, ಭ್ರುಕುಟಿಭೇದ, ಕಟಿಭೇದ, ಹಸ್ತಭೇದ, ಪಾದಭೇದ–ಮುಂತಾದ ನಾನಾ ಭೇದಗಳನ್ನು ಶಾಸ್ತ್ರಕಾರರು ವಿವರವಾಗಿ ವಿಶ್ಲೇಷಿಸಿದ್ದಾರೆ. ನಾಟ್ಯದಲ್ಲಿ ಇವನ್ನು ವಿವಿಧ ಮುದ್ರೆಗಳೆಂದಿದ್ದಾರೆ. ನಟನಾದವನಿಗೆ ಈ ಒಂದೊಂದು ಅಂಗಗಳ ವಿನ್ಯಾಸ ಲಕ್ಷಣಬದ್ಧವಾಗಿಯೇ ಇರಬೇಕೆಂಬ ನಿಯಮವಿದೆ ಮತ್ತು ಆತನಿಗೆ ಈ ಭೇದಗಳ ಸೂಕ್ಷ್ಮಪರಿಚಯವೂ ಇರಬೇಕು. ಆತ ತಾನು ಅನುಕರಿಸುವ ವ್ಯಕ್ತಿಯ ಅಥವಾ ವಸ್ತುವಿನ ಗುಣ, ಪ್ರಕೃತಿ, ಸ್ವಭಾವ, ಭಾವಗಳನ್ನು ಯಥಾವತ್ತಾಗಿ ಚಿತ್ರಿಸಬೇಕು. ಹೀಗಿದ್ದರೆ ಮಾತ್ರ ನಟ ಪ್ರೇಕ್ಷಕರಲ್ಲಿ ರಸಾನುಭವವನ್ನು ಉಂಟುಮಾಡಲು ಶಕ್ತನಾಗುತ್ತಾನೆ.

ಪಾಶ್ಚಾತ್ಯ ನಾಟ್ಯಪದ್ಧತಿಯಲ್ಲೂ ಇದಕ್ಕೆ ಈ ಬಗೆಯ ಪ್ರಾಧಾನ್ಯ ದೊರೆತಿದೆ. ಡಂಕನ್ ಪದ್ಧತಿಯಲ್ಲಿ ಆರು ಪ್ರಾಥಮಿಕ ಸ್ಥಾನಗಳ ಅಭ್ಯಾಸಕ್ಕೆ ಮಹತ್ತ್ವಪೂರ್ಣ ಸ್ಥಾನವಿದೆ. ಅವುಗಳಲ್ಲಿ ಹಿಮ್ಮಡಿ ಕೂಟ, ಬಲಪಾದವನ್ನು ಪಕ್ಕಕ್ಕೆ ತಿರುಗಿಸುವುದು, ಬಲಹಿಮ್ಮಡಿಯನ್ನು ಎಡಪಾದದ ಅಂಗುಲ ಬಳಿಗೆ ತರುವುದು, ಬಲಗಾಲನ್ನು ಮುಂದೆ ತರುವುದು ಮತ್ತು ಬಲಹಿಮ್ಮಡಿಯನ್ನು ಎಡಹೆಬ್ಬೆರಳಿನ ಬಳಿಗೆ ತರುವುದು–ಇವೇ ಮೊದಲ ಐದು ಸ್ಥಾನಗಳು. ಆರನೆಯದು ನಾಟ್ಯದಿಂದ ನಾಟ್ಯಕ್ಕೆ ಬೇರೆಯಾಗುವ ವೈಶಿಷ್ಟ್ಯಪೂರ್ಣ ಗತಿ. ಗ್ರೀಕರ ಕಾಲದಲ್ಲಿ ಯೋಧರೆಲ್ಲರೂ ನಾಟ್ಯವನ್ನು ವಿಧಿಪೂರ್ವಕವಾಗಿ ಕಲಿತುಕೊಳ್ಳಬೇಕೆಂಬ ನಿಯಮವೇ ಇದ್ದಿತಂತೆ. ಸುಪ್ರಸಿದ್ಧ ಗ್ರೀಕ್ ನಾಟಕಕಾರ ಸಫೋಕ್ಲಿಸ್ ಕೂಡ ನಾಟ್ಯಪ್ರವೀಣ ನಾಗಿದ್ದ. ಆಧುನಿಕ ಗೇಯರೂಪಕ (ಬ್ಯಾಲೆ)ಗಳಲ್ಲಿಯೂ ಪ್ರಾಚೀನ ಅಭಿನಯದ ಚಿಹ್ನೆಗಳನ್ನು ಗುರುತಿಸಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಸಂಗತಿಗಳು ಆಂಗಿಕಾಭಿನಯದ ಮಹತ್ತ್ವಕ್ಕೆ ಸಾಕ್ಷಿಯಾಗಿವೆ. ಶಾರ್ಙದೇವನು ಸಂಗೀತರತ್ನಾಕರದಲ್ಲಿ ಆಹಾರ್ಯಾಭಿನಯವನ್ನು ಕುರಿತು ಈ ರೀತಿ ತಿಳಿಸಿದ್ದಾನೆ–ನೀಳವಾದ ತಲೆಗೂದಲುಗಳು, ಅರೆಬಿರಿದ ಹೂಮೊಗ್ಗುಗಳಿಂದ ಅಲಂಕರಿಸಲ್ಪಟ್ಟು ದೇಹದ ಹಿಂಭಾಗದಲ್ಲಿ, ಸಂದರ್ಭೋಚಿತವಾದ ವೈಖರಿಯಲ್ಲಿ ಇಳಿದಿರಬೇಕು. ಮಕರಾಕೃತಿಯ ಕುಂಡಲಗಳಿರಬೇಕು. ಹಣೆ ಕೇಸರ ಮತ್ತು ಗಂಧದಿಂದ ಲೇಪಿತಗೊಂಡಿರಬೇಕು. ಕಣ್ಣುಗಳು ಕಾಡಿಗೆಯಿಂದ ಅಲಂಕರಿಸಲ್ಪಟ್ಟಿರಬೇಕು. ದಂತಪಂಕ್ತಿಗಳು ಸ್ವಚ್ಛವಾಗಿರಬೇಕು. ಕಸ್ತೂರಿ ಮತ್ತು ಚಂದನದಿಂದ ಕೂಡಿದ ತಿಲಕವನ್ನು ಹಣೆಯಲ್ಲಿಟ್ಟುಕೊಳ್ಳಬೇಕು. ಕುತ್ತಿಗೆಯ ಹಾರಗಳು ನಕ್ಷತ್ರದ ಆಕಾರದಲ್ಲಿ ಇರುತ್ತ ವಕ್ಷಸ್ಸಿನ ಮೇಲೆ ಮುತ್ತಿನಹಾರ ಕಂಗೊಳಿಸಬೇಕು. ಬಿಳಿ ಅಥವಾ ತಿಳಿಯಾದ ಬಣ್ಣವನ್ನುಳ್ಳ ತೆಳುವಾದ (ಪಾರದರ್ಶಕ) ವಸ್ತ್ರವನ್ನು ಮೇಲುಹೊದಿಕೆಯನ್ನಾಗಿ

ಉಪಯೋಗಿಸಬೇಕು. ಇದು ನರ್ತಕಿಯ ಮೈಬಣ್ಣಕ್ಕೆ ಹೊಂದಿಕೊಳ್ಳುವಂತೆ ಇರುವುದು ಬಹುಮುಖ್ಯ. ಸೀರೆಯನ್ನು ಉಟ್ಟುಕೊಳ್ಳುವಲ್ಲಿ ಆಯಾದೇಶದ ವಾಡಿಕೆಯನ್ನು ಅನುಸರಿಸತಕ್ಕದ್ದು. ಅಭಿನಯದರ್ಪಣದಲ್ಲಿ ಹೇಳಿರುವಂತೆ ಕಾಲಿಗೆ ತೊಡುವ ಕಿಂಕಿಣಿ (ಕಿರುಗೆಜ್ಜೆ) ಕಂಚಿನದಾಗಿದ್ದು ಶ್ರುತಿಶುದ್ಧವಾದ ಧ್ವನಿಗೊಡುವಂತಿರಬೇಕು.

ಸತ್ತ್ವ ಎಂದರೆ ಮನಸ್ಸಿನಿಂದ ಹುಟ್ಟುವ ಒಂದು ವಿಶೇಷಸ್ಥಿತಿ. ಇದು ಸಮಾಹಿತವಾದ ಅಂದರೆ ಸಮಾಧಿಸ್ಥಿತಿಯನ್ನು ಹೊಂದಿದ ಮನೋಭೂಮಿಕೆಯಲ್ಲಿ ಉತ್ಪನ್ನವಾಗುವುದು. ಪರರ ಸುಖ ದುಃಖಭಾವನೆಗಳನ್ನು ತಾನು ಭಾವಿಸಿಕೊಳ್ಳುವ ಅಂತಃಕರಣವಿಶೇಷವೇ ಸತ್ತ್ವ ಎಂದು ಧನಿಕ ಮತ್ತು ವಿದ್ಯಾನಾಥರ ಅಭಿಪ್ರಾಯ. ಈ ಚಿತ್ತವೃತ್ತಿರೂಪವಾದ ಸತ್ತ್ವ ಬಾಹ್ಯ ಮತ್ತು ಅಭ್ಯಂತರ ಎಂದು ಎರಡು ವಿಧ. ಮೊದಲನೆಯದು ಮನೋಭೂಮಿಕೆಯಲ್ಲಿದ್ದು ಸ್ವೇದ, ರೋಮಾಂಚನಗಳ ಮೂಲಕ ಶರೀರದಲ್ಲಿ ಅಭಿವ್ಯಕ್ತವಾಗುವುದು. ಎರಡನೆಯದು ಪ್ರಾಣಭೂಮಿಕೆಯಲ್ಲಿರುವುದು. ನಾಟ್ಯದಲ್ಲಿ ರತ್ಯಾದಿ ಸ್ಥಾಯೀಭಾವಾನುಗುಣವಾಗಿ ಹುಟ್ಟುವ ರೋಮಾಂಚ, ಅಶ್ರುಪಾತ, ವೈವರ್ಣ್ಯ ಮುಂತಾದವುಗಳೇ ಸತ್ತ್ವಸ್ವಭಾವಗಳು. ಇವುಗಳನ್ನು ಅನ್ಯಮನಸ್ಕ ಎಂದರೆ ಏಕಾಗ್ರತೆ ಇಲ್ಲದವ ಅಭಿನಯಿಸಲಾರ. ಸ್ವಭಾವಾನುಕೃತಿರ್ನಾಟ್ಯಂ ಎಂದು ಧನಂಜಯ ಹೇಳಿರುವಂತೆ ನಾಟ್ಯದಲ್ಲಿ ಸತ್ತ್ವ ಅತ್ಯಾವಶ್ಯಕ. ಸರ್ವನಾಟ್ಯವೂ ಸಾತ್ವಿಕಾಭಿನಯದ ಮೂಲಕವಾಗಿಯೇ ಪ್ರತಿಷ್ಠಿತವಾಗುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

ಸಾತ್ವಿಕಾಭಿನಯ ಎಂಟು ವಿಧ: 1 ಸ್ತಂಭ, 2 ಸ್ವೇದ, 3 ರೋಮಾಂಚ, 4 ಸ್ವರಭೇದ, 5 ವೇಪಥು, 6 ವೈವರ್ಣ್ಯ, 7 ಅಶ್ರು, 8 ಪ್ರಳಯ.

ಹರ್ಷ, ಭಯ, ರೋಗ, ಶೋಕ, ವಿಸ್ಮಯ, ವಿಷಾದ ಮೊದಲಾದವುಗಳಿಂದ ಸ್ತಂಭ ಎಂದರೆ ಸ್ತಬ್ಧತೆ ಉಂಟಾಗುವುದು. ಸ್ಮರಣೆ ಇಲ್ಲದಿರುವಿಕೆ, ಚಲಿಸದಿರುವಿಕೆ, ಜಡತ್ವ, ಶೂನ್ಯಸ್ಥಿತಿಯಲ್ಲಿರುವುದು, ಅಂಗಶೈಥಿಲ್ಯ ಇವುಗಳಿಂದ ಸ್ತಂಭವನ್ನು ಅಭಿನಯಿಸಬೇಕು. ಕ್ರೋಧ, ಭಯ, ಹರ್ಷ, ಲಜ್ಜಾ, ದುಃಖ, ಶ್ರಮ, ರೋಗ, ತಾಪ, ಆಘಾತ, ವ್ಯಾಯಾಮ ಇವುಗಳಿಂದ ಸ್ವೇದ ಹುಟ್ಟುವುದು. ಬೀಸಣಿಕೆಯಿಂದ ಬೀಸಿಕೊಳ್ಳುವುದು, ಬೆವರು ಒರೆಸಿಕೊಳ್ಳುವುದು, ಗಾಳಿಯನ್ನು ಅಪೇಕ್ಷಿಸುವುದು ಮೊದಲಾದವುಗಳಿಂದ ಸ್ವೇದವನ್ನು ವ್ಯಕ್ತಪಡಿಸಬೇಕು. ಸ್ಪರ್ಶ, ಭಯ, ಶೀತ, ಹರ್ಷ, ಕ್ರೋಧ, ರೋಗ ಇವುಗಳಿಂದ ರೋಮಾಂಚ ಹುಟ್ಟುವುದು. ಮೈಮೇಲಿನ ಕೂದಲುಗಳು ನಿಮಿರಿ ನಿಲ್ಲುವುದರ ಮೂಲಕ ರೋಮಾಂಚವನ್ನು ತೋರ್ಪಡಿಸಬೇಕು. ಭಯ, ಹರ್ಷ, ಕ್ರೋಧ, ರೋಗ, ಮುಪ್ಪು, ಮದ ಇವುಗಳಿಂದ ಸ್ವರಭೇದ ಅಂದರೆ ಧ್ವನಿಯಲ್ಲಿ ಕಂಪನ ಉಂಟಾಗುತ್ತದೆ. ಗದ್ಗದ ಸ್ವರದಿಂದ ಅಂದರೆ ಧ್ವನಿಯ ಏರಿಳಿತದಿಂದ ಸ್ವರಭೇದ ಅಭಿನಯಿಸಲ್ಪಡುತ್ತದೆ. ಶೀತ, ಭಯ, ಹರ್ಷ, ರೋಷ, ಸ್ಪರ್ಶ, ಮುಪ್ಪು ಇವುಗಳಿಂದ ವೇಪಥು (ನಡುಕ) ಉಂಟಾಗುವುದು. ಕಂಪನದಿಂದ ಇದರ ಅಭಿನಯವನ್ನು ಪ್ರಕಟಿಸಲಾಗುತ್ತದೆ. ಮುಖದ ವರ್ಣ ಭಾವಗಳಿಗನುಗುಣವಾಗಿ ಬದಲಾಯಿಸುವುದೇ ವೈವರ್ಣ್ಯ. ಕೋಪ ಬಂದಾಗ, ಲಜ್ಜೆಯುಂಟಾದಾಗ ಮುಖ ಕೆಂಪೇರುವುದು, ಕೆಟ್ಟಸುದ್ದಿಯನ್ನು ಕೇಳಿದಾಗ ಮುಖ ಕಪ್ಪಿಡುವುದು ಅನುಭವಕ್ಕೆ ಬಂದ ವಿಷಯವೇ. ಕ್ರೋಧ, ಭಯ, ಶ್ರಮ, ರೋಗ, ತಾಪ, ಆಯಾಸ, ಅಲಸಿಕೆ ಇವುಗಳಿಂದ ವೈವರ್ಣ್ಯ ಸಂಭವಿಸುವುದು. ಮುಖರಾಗ ಭೇದದಿಂದ, ನರಗಳ ಬಿಗಿಯುವಿಕೆಯಿಂದ ವೈವರ್ಣ್ಯವನ್ನು ಅಭಿನಯಿಸಬೇಕು. ಆನಂದ, ಶೋಕ, ಅಮರ್ಷ, ಅಂಜನ, ಭಯ, ರೋಗ, ಧೂಮ, ಆಕಳಿಕೆ, ನಿಶ್ಚಲ ನೋಟ, ಮುಂತಾದವುಗಳಿಂದ ಅಶ್ರು ಉದ್ಭವಿಸುವುದು. ನೀರಿನಿಂದ ಕೂಡಿದ ಕಣ್ಣುಗಳು, ಕಣ್ಣನ್ನು ಒರೆಸಿಕೊಳ್ಳುವುದು, ಮಾತು ಮಾತಿಗೆ ಕಣ್ಣೀರಿನ ಬಿಂದುಗಳು ಬೀಳುವುದು. ಇವುಗಳಿಂದ ಅಶ್ರು ಅಭಿನಯವನ್ನು ಪ್ರದರ್ಶಿಸಬೇಕು. ಶ್ರಮ, ಮೂರ್ಛೆ, ಮದ, ನಿದ್ರೆ, ಅಪಘಾತ, ಮೋಹ ಮೊದಲಾದವುಗಳಿಂದ ಪ್ರಳಯ ಹುಟ್ಟುವುದು. ಚಲನೆ ಇಲ್ಲದಿರುವುದು, ಉಸಿರಾಟ ಕಡಿಮೆಯಾಗುವುದು, ನೆಲದಮೇಲೆ ಬೀಳುವುದು ಇವುಗಳಿಂದ ಅದನ್ನು ಅಭಿನಯಿಸಬೇಕು.

ರಸಸಮುದಾಯರೂಪವೇ ನಾಟ್ಯ. ಆದುದರಿಂದ ಕೇವಲ ಈ ನಾಲ್ಕು ವಿಧವಾದ ಅಭಿನಯಗಳನ್ನು ಚೆನ್ನಾಗಿ ವ್ಯಕ್ತಪಡಿಸಿದ ಮಾತ್ರದಿಂದಲೇ ಅದು ಪರಿಪೂರ್ಣವಾಗುವುದಿಲ್ಲ. ರತ್ಯಾದಿ ಸ್ಥಾಯೀಭಾವಗಳ ಮುಖಾಂತರ ಶೃಂಗಾರಾದಿ ರಸಗಳನ್ನು ವಸ್ತುವಿಗನುಗುಣವಾಗಿ ವ್ಯಕ್ತಗೊಳಿಸಬೇಕು. ರಸ, ಭಾವ, ಅಭಿನಯ ಇವುಗಳಿಗಿರುವ ಪರಸ್ಪರ ಸಂಬಂಧವನ್ನು ನಟನಾದವ ಅರಿತುಕೊಳ್ಳಬೇಕು. ರಸವಿಲ್ಲದ ಅಭಿನಯ ಕೇವಲ ಶುಷ್ಕವಾದ ಚಲನವಲನಗಳಾಗುತ್ತವೆ. ಪರಿಮಳವಿಲ್ಲದ ಹೂವಿನಂತೆ, ಪ್ರಾಣವಿಲ್ಲದ ದೇಹದಂತೆ ರಸವಿಲ್ಲದ ನಾಟ್ಯ. ಹೀಗೆ ನಾಟ್ಯ ಮತ್ತು ರಸ ಪರಸ್ಪರ ಒಂದನ್ನೊಂದು ಆಶ್ರಯಿಸಿಕೊಂಡಿದ್ದರೂ ರಸವೇ ನಾಟ್ಯದಲ್ಲಿ ಜೀವಾಳ. ವ್ಯಂಜನಗಳಿಂದ ಕೂಡಿದ ಭೋಜನ ಹೇಗೆ ರುಚಿಯನ್ನು ಹೆಚ್ಚಿಸುವುದೋ ಹಾಗೆ ಭಾವಾಭಿನಯಗಳಿಂದ ಕೂಡಿದ ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸಾ, ವಿಸ್ಮಯಾದಿ ಸ್ಥಾಯೀಭಾವಗಳಿಂದ ಕೂಡಿದ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ ಮುಂತಾದ ರಸಗಳನ್ನು ಸಹೃದಯರು ತಮ್ಮ ಮನೋವ್ಯಾಪಾರದ ಮೂಲಕ ಆಸ್ವಾದಿಸುತ್ತಾರೆ. ಹಾಗೆಯೇ ಭಾವಕ್ಕೂ ರಸಕ್ಕೂ ಇರುವ ಸಂಬಂಧವು ನಿಕಟವಾದುದು. ನಾಟ್ಯದಲ್ಲಿ ಭಾವದ ಮೂಲಕವಾಗಿಯೇ ರಸ ಉದ್ಭವಿಸುವುದು. ಭಾವವಿಲ್ಲದ ರಸವಿಲ್ಲ. ರಸ ವಿರಹಿತವಾದ ಭಾವವಿಲ್ಲ. ಭರತನು ಈ ರೀತಿ ಹೇಳಿದ್ದಾನೆ:

ನ ಭಾವಹೀನೋಸ್ತಿ ರಸೋ ನಭಾವೋ ರಸವರ್ಜಿತಃ
ಪರಸ್ಪರಕೃತಾ ಸಿದ್ಧಿಃ ತಯೋರಭಿನಯೋ ಭವೇತ್

ವಸ್ತುವಿಗೆ ತಕ್ಕ ಅಭಿನಯ, ಅಭಿನಯಕ್ಕೆ ತಕ್ಕ ಭಾವ, ಭಾವಕ್ಕೆ ಉಚಿತವಾದ ರಸ, ಹೀಗೆ ಒಂದಕ್ಕೊಂದು ಪೋಷಕವಾದುದರಿಂದ ಅಭಿನಯ ನಾಟ್ಯರಸಾನುಭವದ ಏಕೈಕ ಅಂಗವಲ್ಲದಿದ್ದರೂ ಪ್ರಮುಖ ಅಂಗವಾಗುತ್ತದೆ. (ಕೆ.ಎ.)

**ಅಭಿನಯಗೀತೆ :** 18–19ನೆಯ ಶತಮಾನಗಳಲ್ಲಿ ರಷ್ಯದ ರೈತಜನರಲ್ಲಿ ಅಭಿನಯ ಹಾಗೂ ಹಾಡು ಎರಡನ್ನೂ ಸೇರಿಸಿ ಕಥೆ ಹೇಳುವುದು ವಾಡಿಕೆಯಾಗಿತ್ತು. ಹೊರತೋರುವ ಭಾವಕ್ಕೆ ಹೆಚ್ಚು ಉತ್ಸಾಹವನ್ನೂ ಕಾಂತಿಯನ್ನೂ ತುಂಬುವುದೇ ಗಾಯನದ ಉದ್ದೇಶ; ಕಥೆಯನ್ನು ನಾಟಕೀಯತೆಯ ಮೂಲಕ ಹೆಚ್ಚು ಸ್ಪಷ್ಟಗೊಳಿಸುವುದೇ ಅಭಿನಯದ ಉದ್ದೇಶ. ಸಂಗೀತ ಅಭಿನಯವೆರಡೂ ಒಂದಕ್ಕೊಂದು ಸಹಾಯಕ; ಕಥಾನಿರೂಪಣೆಯೇ ಮುಖ್ಯ ಇಲ್ಲಿ.

ಎಂದಿನಿಂದಲೂ ಅಭಿನಯಗೀತೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಒಂದು ಉಪಯುಕ್ತ ಮಾರ್ಗವಾಗಿದೆ. ಅದಕ್ಕೆ ಹಲವು ಬಗೆಗಳುಂಟು. 1. ನೇರವೂ ಸುಲಭವೂ ಆದ ರೀತಿ, ಇದರಲ್ಲಿ ಅತಿಯಾದ ವಿವರಗಳಿಗೂ ಸಂಕೀರ್ಣತೆಗೂ ಆಸ್ಪದವಿಲ್ಲ. 2. ಸರಳವಾಗಿ ಬೇಗ ನಡೆದು ಮುಗಿಯುವ ಚಿಕ್ಕ ಪ್ರಸಂಗ. 3. ಕೇವಲ ಇಂಪಿಗೋಸ್ಕರ ಗಾಯನ. 4. ಹಿತಮಿತವಾದ ಅಭಿನಯ; ಅಬ್ಬರಕ್ಕಾಗಲಿ ವಿಳಂಬಕ್ಕಾಗಲಿ ಜಾಗವಿಲ್ಲ. 5. ಏಕನಾದ ಕೂಡದು; ತಕ್ಕ ಮಟ್ಟಿಗೆ ವೈವಿಧ್ಯ ಇರಬೇಕು. 6. ಮಕ್ಕಳ ಎಟುಕಿಗೆ ಯಾವುದೂ ಮೀರಿರಬಾರದು. (ಎಸ್.ವಿ.ಆರ್.)

**ಅಭಿನವಗುಪ್ತ :** ಭಾರತದ ಮಧ್ಯಯುಗೀನ ತತ್ತ್ವಜ್ಞಾನಿಗಳ ಸಾಲಿನಲ್ಲಿ ಈತನ ಹೆಸರು ಶಾಶ್ವತ ಕೀರ್ತಿಗೆ ಪಾತ್ರವಾಗಿದೆ. ಇವನ ಅಪಾರವೈದುಷ್ಯ, ಬಹುಮುಖ ಪ್ರತಿಭೆ, ವಿಸ್ತೃತಗ್ರಂಥರಚನೆ, ಅಧ್ಯಾತ್ಮ ಸಾಕ್ಷಾತ್ಕಾರ, ಎಲ್ಲವೂ ಅಪೂರ್ವವಾಗಿದೆ. ಇವನಿಗೆ ಶಾಸ್ತ್ರಗಳಲ್ಲಿ ಪ್ರಭುತ್ವವಿದ್ದಂತೆಯೇ ಕಾವ್ಯದಲ್ಲಿ ಕೌಶಲವೂ ಇತ್ತು. ದರ್ಶನಗಳಲ್ಲಿ ಪ್ರಬೋಧವಿದ್ದಂತೆಯೇ ಗೀತನಾಟ್ಯಾದಿ ಲಲಿತಕಲೆಗಳಲ್ಲೂ ಪಾಂಡಿತ್ಯವಿತ್ತು. ಹೆಚ್ಚಾಗಿ ವ್ಯಾಖ್ಯಾನಗಳನ್ನೇ ಬರೆದರೂ ಇವನ ಕೃತಿಗಳಲ್ಲಿ ನೂತನಾವಿಷ್ಕರಣದ ಪ್ರತಿಭೆ ಕೋರೈಸುತ್ತದೆ; ಸ್ವತಂತ್ರ ವಿಚಾರಸರಣಿ ಎದ್ದು ಕಾಣುತ್ತದೆ. ಇತ್ತ ತತ್ತ್ವಜ್ಞಾನದಲ್ಲಿ ಕಾಶ್ಮೀರ ಶೈವಪಂಥದ ಪ್ರತ್ಯಭಿಜ್ಞಾದರ್ಶನವನ್ನು ಮೂಲ ಶೈವಾಗಮಗಳ ಪುನರನುಸಂಧಾನದಿಂದ ಶಾಸ್ತ್ರವ್ಯಾಖ್ಯಾನ ಕೌಶಲದಿಂದ ಗಟ್ಟಿಯಾದ ತಳಹದಿಯ ಮೇಲೆ ನಿಲ್ಲಿಸಿದಂತೆಯೇ ಅತ್ತ ಭರತನ ನಾಟ್ಯಶಾಸ್ತ್ರವನ್ನು ಆಮೂಲಾಗ್ರವಾಗಿ ವಿವರಿಸಿ ರಸಸಿದ್ಧಾಂತವನ್ನು ಪ್ರಮಾಣಪುರಸ್ಸರವಾಗಿ ಪ್ರತಿಷ್ಠಾಪಿಸಿದ ಯಶಸ್ಸು ಇವನದು. ಅದೂ ಅಲ್ಲದೆ, ಸಂಸ್ಕೃತ ಕಾವ್ಯಲಕ್ಷಣಕಾರರಲ್ಲಿ ರಸ, ರೀತಿ, ಗುಣಾಲಂಕಾರ ವಾದಗಳು ಪರಸ್ಪರ ಸ್ಪರ್ಧೆಯಿಂದ ಅನನ್ವಿತವಾಗುವುದನ್ನು ತಪ್ಪಿಸಲು ಧ್ವನಿತತ್ತ್ವವನ್ನು ಸಾರಿದ ಆನಂದವರ್ಧನನ ಧ್ವನ್ಯಾಲೋಕ ಗ್ರಂಥಕ್ಕೆ ಲೋಚನವೆಂಬ ಸಾರ್ಥಕ ವಿವರಣೆಯನ್ನು ಬರೆದು ಎಲ್ಲರ ಕಣ್ಣನ್ನೂ ತೆರೆಯಿಸಿ ಧ್ವನಿಪ್ರತಿಷ್ಠಾಪನ ಪರಮಾಚಾರ್ಯನೆಂಬ ಪ್ರಶಸ್ತಿಯನ್ನು ಗಳಿಸಿದ್ದನಲ್ಲದೆ ಇವನ ವ್ಯಾಖ್ಯಾಗ್ರಂಥಗಳು ಆಯಾ ಶಾಸ್ತ್ರಗಳಲ್ಲಿ ಸೂತ್ರಭಾಷ್ಯಗಳಷ್ಟೇ ಪ್ರಾಮಾಣ್ಯ ಹೊಂದಿವೆ; ಇವನ ಸ್ವತಂತ್ರ ಸ್ತೋತ್ರಕಾವ್ಯಗಳು ಇಂದಿಗೂ ಪ್ರತಿಭಾಸ್ಫೂರ್ತಿಯನ್ನು ಒದಗಿಸುವಂತಿವೆ. ಕಾಶ್ಮೀರಿಗಳಂತೂ ಇವನನ್ನು ಪರಶಿವನ ಅವತಾರವೆಂದು ಗೌರವಿಸುತ್ತಾರೆ.

ಇತರ ಭಾರತೀಯ ಗ್ರಂಥಕಾರರಂತೆ ಈತ ತನ್ನ ಜನನ, ಕಾಲ, ದೇಶ, ಜೀವನ ಮತ್ತು ಕೃತಿಗಳ ಬಗೆಗೆ ಮೌನತಾಳದೆ ತಾನೇ ಉಪಯುಕ್ತ ಮಾಹಿತಿಯನ್ನೆಲ್ಲ ಒದಗಿಸಿದ್ದಾನೆ. ಅದನ್ನು ಹೀಗೆ ಸಂಗ್ರಹಿಸಬಹುದು.

ಚುಖಲ ಅಥವಾ ನರಸಿಂಹಗುಪ್ತ ಎಂಬುದು ಅಭಿನವಗುಪ್ತನ ತಂದೆಯ ಹೆಸರು; ತಾಯಿ ವಿಮಲಾ. ನರಸಿಂಹಗುಪ್ತ ವರಾಹಗುಪ್ತನ ಮಗ; ಅತ್ರಿಗುಪ್ತನ ಮೊಮ್ಮಗ. ಗಂಗಾಯಮುನಾ ನದಿಗಳ ನಡುವಣ ಪ್ರದೇಶವಾಸಿಯಾಗಿದ್ದ ಅತ್ರಿಗುಪ್ತನನ್ನು ಕಾಶ್ಮೀರದ ರಾಜ ಲಲಿತಾದಿತ್ಯ (725–761) ಗೌರವಿಸಿ ಕರೆಸಿಕೊಂಡನಂತೆ. ಈ ವಂಶದವರೆಲ್ಲರೂ ವೈದುಷ್ಯಕ್ಕೆ ಹೆಸರಾದವರು. ಕಾಶ್ಮೀರದಲ್ಲಿ ವಿತಸ್ತಾ (ಜೀಲಮ್) ನದಿಯ ದಂಡೆಯ ಮೇಲೆ ಶಿವಾಲಯದ ಎದುರಿಗೆ ಇವರ ಮನೆಯಿತ್ತು. ಅಭಿನವಗುಪ್ತನ ಜನನ 950 ಇರಬೇಕು. ವಿದ್ಯಾಭ್ಯಾಸಕ್ಕಾಗಿ ಈತ ಆಶ್ರಯಿಸಿದ ಗುರುಗಳ ಸಂಖ್ಯೆ ಇಪ್ಪತ್ತನ್ನು ಮೀರಿದೆ. ಒಂದೊಂದು ಶಾಸ್ತ್ರದಲ್ಲೂ ಪರಿಣತರನ್ನು ಹುಡುಕಿಕೊಂಡು ಕಾಶ್ಮೀರದ ಹೊರಗೆ ಜಾಲಂಧರ ಮುಂತಾದ ಕಡೆಗಳಿಗೂ ಹೋಗಿದ್ದ. ನಾಟ್ಯಶಾಸ್ತ್ರದ ಗುರು ಭಟ್ಟತೌತ; ಧ್ವನಿತತ್ತ್ವದ ಗುರುಭಟ್ಟ ಇಂದುರಾಜ; ಬ್ರಹ್ಮವಿದ್ಯೆಗೆ ಭೂತಿರಾಜ, ವ್ಯಾಕರಣ, ತಂತ್ರ, ಶೈವಾಗಮ, ತರ್ಕ, ಮೀಮಾಂಸ, ಜೈನ–ಬೌದ್ಧದರ್ಶನ ಮುಂತಾದವು ಆತ ಕಲಿತ ಇತರ ವಿಷಯಗಳು. ಯೌವನದಲ್ಲೇ ಗ್ರಂಥರಚನೆ ಆರಂಭಮಾಡಿದ. 70 ವರ್ಷಗಳವರೆಗಾದರೂ ಬದುಕಿದ್ದನೆಂದು

ತೋರುತ್ತದೆ. 980–1020ರವರೆಗೆ ಇವನ ಸಾಹಿತ್ಯ ನಿರ್ಮಾಣದ ಅವಧಿಯೆನ್ನಬಹುದು. ಅಭಿನವಗುಪ್ತ ತನ್ನ 1200 ಶಿಷ್ಯರ ಸಂಗಡ ಭೈರವಸ್ತೋತ್ರವನ್ನು ಪಠಿಸುತ್ತ ಶ್ರೀನಗರದ ಬಳಿ ಬಿರೂ ಎಂಬಲ್ಲಿರುವ ಪರ್ವತಗುಹೆಯನ್ನು ಪ್ರವೇಶಿಸಿ ಕೈಲಾಸಕ್ಕೆ ನಡೆದನೆಂಬ ಐತಿಹ್ಯವಿದೆ. ಈತ ಸಂನ್ಯಾಸಿಯಾಗಿಯೇ ತನ್ನ ಜೀವನವನ್ನು ಕಳೆದ ಸಂಗತಿ ಸಂಶೋಧಕರಿಂದ ಸ್ಥಿರೀಕರಿಸಲ್ಪಟ್ಟಿದೆ.

**ಅಭಿನವಗುಪ್ತನ ಪ್ರಮುಖ ಕೃತಿಗಳು:** 1 ತಂತ್ರಶಾಸ್ತ್ರ: ಮಾಲಿನೀ ವಿಜಯವಾರ್ತಿಕ, ಪರಾತ್ರಿಂಶಿಕಾವಿವೃತಿ, ತಂತ್ರಾಲೋಕ (ಬೃಹದ್ಗ್ರಂಥ), ಅನುತ್ತರ ತತ್ತ್ವವಿಮರ್ಶಿನೀವೃತ್ತಿ. 2 ಪ್ರತ್ಯಭಿಜ್ಞಾದರ್ಶನ: ಈಶ್ವರಪ್ರತ್ಯಭಿಜ್ಞಾವಿಮರ್ಶಿನೀ, ಶಿವದೃಷ್ಟ್ಯಾಲೋಚನ, ಪರಮಾರ್ಥಸಾರ, ಭಗದ್ಗೀತಾರ್ಥಸಂಗ್ರಹ, ಇತ್ಯಾದಿ. 3 ನಾಟ್ಯ ಮತ್ತು ಕಾವ್ಯಶಾಸ್ತ್ರ: ಅಭಿನವಭಾರತೀ, ಧ್ವನ್ಯಾಲೋಕಲೋಚನ. 4 ಸ್ತೋತ್ರಗಳು: ಕ್ರಮಸ್ತೋತ್ರ, ದೇಹಸ್ಥದೇವತಾಚಕ್ರಸ್ತೋತ್ರ, ಭೈರವ ಸ್ತೋತ್ರ, ಶಿವಶಕ್ತ್ಯ ವಿನಾಭಾವಸ್ತೋತ್ರ, ಅನುಭವನಿವೇದನಮ್ ಇತ್ಯಾದಿ.

ಅಭಿನವಗುಪ್ತನ ಕಾಲಕ್ಕೆ ಆಗಲೇ ಸೋಮನಂದನ ಶಿವದೃಷ್ಟಿ ಹಾಗೂ ಉತ್ಪಲ ದೇವನ ಪ್ರತ್ಯಭಿಜ್ಞಾನಸೂತ್ರ ಮತ್ತು ವೃತ್ತಿ, ವಿವೃತಿಗಳು, ವಸುಗುಪ್ತನ ಶಿವಸೂತ್ರ, ಸ್ಪಂದಕಾರಿಕಾ ಮುಂತಾದ ಕೃತಿಗಳು ರಚಿತವಾಗಿದ್ದು ಪ್ರತ್ಯಭಿಜ್ಞಾ ಎಂಬ ಅಧ್ಯಾತ್ಮದರ್ಶನ ಅಸ್ತಿತ್ವಕ್ಕೆ ಬಂದಿತ್ತು. ಶೈವಾಗಮಮೂಲವಾದ ಲಕುಲೀಶ, ಪಾಶುಪತ, ಕಾಳಾಮುಖ, ಶೈವಸಿದ್ಧಾಂತ ಮುಂತಾದ ಶೈವದರ್ಶನಗಳೂ ಪ್ರಚಾರದಲ್ಲಿದ್ದುವು. ಇವುಗಳೆಲ್ಲ ವಿವಿಧಾಚಾರಗಳಿಗೆ ಪ್ರಾಶಸ್ತ್ಯವಿತ್ತು ಅಧ್ಯಾತ್ಮಾನುಭವದ ಮೂಲಸ್ರೋತವನ್ನು ಶಾಸ್ತ್ರಸರಣಿಯಿಂದ ಪೂರ್ವಪಕ್ಷ ಸಿದ್ಧಾಂತ ರೀತಿಯಿಂದ ನಿರ್ಣಯಿಸಲಾರದೆ ಹಲವಾಗಿ ಹರಡಿಹೋಗಿದ್ದುವು. ಅದ್ವೈತಕ್ಕೆ ಶಂಕರಾಚಾರ್ಯರು ಭಾಷ್ಯ ಬರೆದಂತೆ ಪ್ರತ್ಯಭಿಜ್ಞಾದರ್ಶನಕ್ಕೆ ಭಾಷ್ಯರಚನೆ ಮಾಡಿದ ಯಶಸ್ಸು ಅಭಿನವಗುಪ್ತನದು.

ಈ ದರ್ಶನದಲ್ಲಿ ಪರಬ್ರಹ್ಮಾ ಅಥವಾ ಪರಮಾತ್ಮನನ್ನು ಶಿವನೆನ್ನಲಾಗುತ್ತದೆ. ಅವನ ಸ್ವರೂಪವೇ ಪ್ರಕಾಶ, ಶಕ್ತಿಯೇ ವಿಮರ್ಶ. ಅವೆರಡೂ ಯಾವಾಗಲೂ ಕೂಡಿಯೇ ಇರುತ್ತವೆ. ವಿಶ್ವಸೃಷ್ಟಿ ಶಕ್ತಿವಿಕಾಸದ ಅವಸ್ಥೆ; ಅದರ ಸಂಕೋಚವೇ ಪ್ರಳಯ; ಎಂದರೆ ಶಿವರೂಪದಲ್ಲಿ ಅಡಗುವಿಕೆ. ಹೀಗೆ ವಿಶ್ವದ ಉನ್ಮೇಷ ನಿಮೇಷಗಳಲ್ಲೆಲ್ಲ ಶಿವಾದಿಕ್ಷಿತ್ಯಂತವಾದ ಮೂವತ್ತಾರು ತತ್ತ್ವಗಳಿವೆ. ಇವುಗಳಿಂದ ಯಾವ ಲೋಪವೂ ಲೇಪವೂ ಇಲ್ಲದ ವಿಶ್ವೋತ್ತೀರ್ಣಪರಮಾರ್ಥವೇ ಪರಶಿವ. ದ್ವೈತ, ದ್ವೈತಾದ್ವೈತಗಳನ್ನೆಲ್ಲ ತನ್ನ ಹೊಟ್ಟೆಯಲ್ಲಿ ಅಡಗಿಸಿಕೊಳ್ಳುವ ಅದ್ವೈತವೇ ಪರಮತತ್ತ್ವ.

ಶುದ್ಧಪ್ರಕಾಶರೂಪನಾದ ಶಿವನೇ ಸಕಲ ಅನುಭವಗಳಿಗೂ ಮೂಲ. ಆದರೆ ಸರ್ವಸ್ವತಂತ್ರನಾದ ಅವನ ಮಾಯಾಶಕ್ತಿಯ ಮೂಲಕ ಜೀವನು ತಾನೇ ಪ್ರಕಾಶ ಸ್ವರೂಪನೆಂಬುದನ್ನು ಮರೆಯುತ್ತಾನೆ; ದೇಹಾಭಿಮಾನದ ಭೂಮಿಕೆಯಲ್ಲಿದ್ದಾಗ ಚಾರ್ವಾಕನಂತೆ ದೇಹವೇ ಆತ್ಮವೆನ್ನುತ್ತಾನೆ; ಅದಕ್ಕಿಂತ ಮೇಲಿನ ಪ್ರಾಣಾಭಿಮಾನದ ಭೂಮಿಕೆಯಲ್ಲಿ ಬಂದಾಗ ಕೆಲವು ಉಪನಿಷತ್ತುಗಳಲ್ಲಿ ಉಕ್ತವಾಗಿರುವಂತೆ ಪ್ರಾಣವೇ ಆತ್ಮವೆನ್ನುತ್ತಾನೆ; ಇನ್ನೂ ಮುಂದಿನ ಭೂಮಿಕೆಗೆ ಬಂದಾಗ ವೈಶೇಷಿಕರಂತೆ ಬುದ್ಧಿಯನ್ನೇ ಆತ್ಮವೆನ್ನುತ್ತಾನೆ; ಅದೂ ವೇದ್ಯವೇ ಎಂಬ ಅನುಭವ ಯೋಗದೆಶೆಯಲ್ಲಿ ಬಂದ ಸಾಂಖ್ಯ ಬುದ್ಧಿಗೂ ಮೂಲವಾದ ಪ್ರಮಾತೃತತ್ತ್ವವನ್ನು ಶೂನ್ಯದೋಪಾದಿಯಲ್ಲಿ ಗ್ರಹಿಸುತ್ತಾನೆ. ಅಂತೂ ಶುದ್ಧಾತ್ಮ ಮಾತ್ರ ಶಿವೋऽಹಂ ಎಂದು ಸಾಕ್ಷಾತ್ಕಾರದ ಅನುಭವವನ್ನು ಪಡೆಯುತ್ತಾನೆ. ಇದೇ ಪ್ರತ್ಯಭಿಜ್ಞೆ, ಎಂದರೆ ಮೊದಲಿನಿಂದಲೂ ಇರುವ, ನಿಜಸ್ವರೂಪದ ಅನುಸಂಧಾನ ಅಥವಾ ಬುದ್ಧಿಗೋಚರ ಅನುಭವ. ವಸ್ತುಸ್ವರೂಪವಿದ್ದರೆ ಆಗಲಿಲ್ಲ; ಅದರ ಗುರುತು ಹಿಡಿಯುವ ಅನುಭವವೂ ಅಗತ್ಯವೆನ್ನಲು ಅಭಿನವಗುಪ್ತ ಒಂದು ಸುಂದರ ಲೌಕಿಕ ಉದಾಹರಣೆಯನ್ನಿತ್ತಿದ್ದಾನೆ.

ಕಾಮಿನಿಯೊಬ್ಬಳು ಎಷ್ಟೋ ಕಷ್ಟದಿಂದ ದೂತಿಯರೊಂದಿಗೆ ಹೇಳಿ ಕಳುಹಿಸಿ ತನ್ನ ಪ್ರಿಯತಮನನ್ನು ಕರೆಸಿರಬಹುದು. ಅವನು ಅವಳ ಕರೆಯನ್ನು ಮನ್ನಿಸಿ ಬಂದೂ ಇರಬಹುದು. ಅವಳು ಅವನ ಸಮಾಗಮಕ್ಕಾಗಿ ಕಾತರಳಾಗಿಯೂ ಇರಬಹುದು. ಏಕಾಂತ ಸ್ಥಳ, ರಮ್ಯಸನ್ನಿವೇಶ ಎಲ್ಲವೂ ಅನುಕೂಲವಾಗಿರಬಹುದು. ಆದರೂ ಬಂದಿರುವಾತ ತನ್ನ ಪ್ರಿಯತಮನೇ ಎಂಬ ಗುರುತು ಸಿಕ್ಕುವವರೆಗೆ ಅವನಾರೋ ಆಗಂತುಕನೆಂಬ ಭಾವವಿರುವವರೆಗೆ ರತಿಕ್ರೀಡೆಗೆ ಅವಕಾಶವೇ ಇಲ್ಲ. ಅದೇ ರೀತಿ ಆತ್ಮಾನಂದ ಸಿಕ್ಕಬೇಕಾದರೂ ಸ್ವಾತ್ಮನ ಗುರುತಾಗಬೇಕಾಗುತ್ತದೆ. ಇದೇ ಸಾಕ್ಷಾತ್ಕಾರ. ಸಾಕ್ಷಾತ್ಕಾರ ಕಾಲದಲ್ಲಿ ಅಹಂ ಎನ್ನುವುದೆಲ್ಲ ಪ್ರಕಾಶರೂಪವೇ ಎನ್ನುವ ಅರಿವಾಗುವಂತೆಯೇ ಇದಂ ಎನ್ನುವುದೆಲ್ಲವೂ ಅದೇ ಪ್ರಕಾಶದ ರೂಪಾಂತರವೆಂಬರಿವೂ ಮೂಡುತ್ತದೆ. ದ್ವೈತಭಾವವಳಿಯುತ್ತದೆ.

ತತ್ತ್ವಶಾಸ್ತ್ರದಲ್ಲಿ ಎರಡು ವಸ್ತು ಅಥವಾ ವ್ಯಕ್ತಿಗಳ ಸಂಬಂಧವನ್ನು ನಿರ್ಣಯಿಸುವಾಗ ಬೇರೆ ಬೇರೆ ವಾದಗಳು ಮೂಡುತ್ತವೆ – ಪರಿಣಾಮ, ಸಂಯೋಗ, ಸಮವಾಯ, ಇತ್ಯಾದಿ. ಆದರೆ ಎಲ್ಲ ವಸ್ತುಗಳೂ ಜ್ಞಾನಾಕಾರವನ್ನು ತಳೆದಾಗ ಏಕೀಭಾವವನ್ನು ಕೂಡ ತೋರಿಸುವುದು ಅನುಭವಸಿದ್ಧ. ಅಭಿನವಗುಪ್ತ ಸಾಂಖ್ಯ, ವೈಶೇಷಿಕ, ಬೌದ್ಧ ಮುಂತಾದ ವಾದಗಳನ್ನೆಲ್ಲ ಈ ಅನುಭವಪ್ರಾಮಾಣ್ಯದಿಂದ ನಿರಾಕರಿಸಿ ಅಧ್ಯಾತ್ಮಾನುಭವವನ್ನು ಎತ್ತಿ ಹಿಡಿದಿರುವುದು ಆತನ ತಾತ್ತ್ವಿಕ ವಿವೇಚನಾ ಸಾಮರ್ಥ್ಯಕ್ಕೆ ಕೈಗಂಬವಾಗಿದೆ. ಜಾತಿ, ಗುಣ, ಕ್ರಿಯಾ, ದ್ರವ್ಯ, ಕಾಲ ಮುಂತಾದ ಪದಾರ್ಥಗಳೆಲ್ಲವೂ ಪರಮಾರ್ಥತಃ ಪ್ರಕಾಶವೇ ಹೊರತು ಬೇರೆಯಲ್ಲವೆಂದು ಆತ ಸಾಧಿಸಿದ್ದಾನೆ. ಅಜ್ಞಾನದಶೆಯಲ್ಲಿ ಈ ವಿಭೇದಗಳುಂಟೇ ಹೊರತು ಮುಕ್ತದಶೆಯಲ್ಲಿಲ್ಲ.

ಅಭಿನವಗುಪ್ತನ ದರ್ಶನದಲ್ಲಿ ಆಚಾರಕ್ಕೆ ಪ್ರಾಶಸ್ತ್ಯವಿದ್ದರೂ ಮುಕ್ತಿಗೆ ಅನಧಿಕಾರಿಗಳಾರೂ ಇಲ್ಲ. ಜಾತಿಭೇದಗಳ ಜಂಜಾಟ ಮೋಕ್ಷಮಾರ್ಗಕ್ಕೆ ಅನ್ವಯಿಸುವುದಿಲ್ಲ. ಪರಮುಕ್ತಿಯಂತೆಯೇ ಜೀವನ್ಮುಕ್ತಿಗೂ ಆಸ್ಪದವಿದೆ. ಬೌದ್ಧರ ವಿಜ್ಞಾನವಾದಕ್ಕೂ ಶೈವಾಗಮದರ್ಶನಕ್ಕೂ ಶಾಂಕರ ಅದ್ವೈತಕ್ಕೂ ಒಂದು ಸೇತುವೆಯಂತೆ ಅಭಿನವ ಗುಪ್ತನ ತತ್ತ್ವಸರಣಿ ಸಾಗಿದೆ.

ಕಾವ್ಯನಾಟಕಾದಿಗಳು ತತ್ತ್ವನಿರ್ವಚನೆಯಲ್ಲೂ ಇದೇ ರೀತಿಯ ಸಮನ್ವಯದೃಷ್ಟಿ, ಸಾರಗ್ರಹಣತುಷ್ಟಿ, ನೂತನೋನ್ಮೇಷ ಸೃಷ್ಟಿಗಳನ್ನು ಅಭಿನವಭಾರತಿಯಂತೆ ಧ್ವನ್ಯಾಲೋಕ ಲೋಚನದಲ್ಲೂ ನೋಡುತ್ತೇವೆ. ನಾಟ್ಯದ ಗುರಿಯೆಲ್ಲ ರಸ; ರಸಕ್ಕಾಗಿಯೇ ನಾಟ್ಯದ ವಿಭಾವ, ಅನುಭಾವ, ವ್ಯಭಿಚಾರಿಗಳೆಲ್ಲ ಮೀಸಲು–ಎಂಬ ಭರತನ ಮೂಲಸಿದ್ಧಾಂತವನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೀಗೆ ಗ್ರಹಿಸುತ್ತಿದ್ದರೆಂಬುದನ್ನು ಅಭಿನವಭಾರತಿ ಯಿಂದಲೇ ಅರಿಯಬೇಕು. ರತಿ, ಶೋಕ, ಕ್ರೋಧ, ಮುಂತಾದ ಸ್ಥಾಯಿಭಾವಗಳಿಗೆ ಉಚಿತ ವಿಭಾವ (ಎಂದರೆ ಉದ್ದೀಪಕ ಪ್ರಕೃತಿ ಹಾಗೂ ಆಲಂಬನ ವ್ಯಕ್ತಿಗಳ ಚಿತ್ರಣ); ಅನುಭಾವ (ಕಟಾಕ್ಷಾದಿ ಅಭಿನಯಗಳು); ವ್ಯಭಿಚಾರೀಭಾವಗಳ (ನಿರ್ವೇದ; ಗ್ಲಾನಿ, ಶಂಕಾ ಮುಂತಾದ ಮನೋಭಾವಗಳು) ಅಭಿನಯದಿಂದ ಅಥವಾ ಕಾವ್ಯವರ್ಣನೆಯಿಂದ ಪರಿಪುಷ್ಟಿಯುಂಟಾಗುತ್ತದೆ. ಅದೇ ರಸಿಕರಿಗೆ ಆಸ್ವಾದ್ಯವೆನಿಸಿ ಶೃಂಗಾರ, ಕರುಣ, ರೌದ್ರ ಇತ್ಯಾದಿ ರಸವೆನಿಸುತ್ತದೆಂದು ಲೊಲ್ಲಟನ ಮತ; ರತ್ಯಾದಿ ಸ್ಥಾಯಿಭಾವಗಳು ಮೂಲತಃ ನಾಯಕಾದಿಗಳಲ್ಲಿರುವ ಕಾರಣ, ಅವರಲ್ಲಿಯೇ ನಿಜವಾದ ರಸೋತ್ಪತ್ತಿ; ಅವರ ಅನುಕರಣೆ ಮಾಡುವ ನಟರಲ್ಲಿ ರಸಭ್ರಾಂತಿ; ನೋಡುವ ಪ್ರೇಕ್ಷಕರಿಗೆ ಅದರ ಆಸ್ವಾದ, ಎಂದಿದರ ತಾತ್ಪರ್ಯ. ಅಭಿನವಗುಪ್ತ ಇಲ್ಲಿಂದಾರಂಭಿಸಿ ಶಂಕುಕ, ಭಟ್ಟನಾಯಕರೆಂಬ ಇತರ ಭರತವ್ಯಾಖ್ಯಾಕಾರರ ವಾದಗಳನ್ನು ವಿಸ್ತಾರವಾಗಿ ಮಂಡಿಸಿ ವಿವೇಚಿಸಿ, ಕಡೆಗೆ ತನ್ನ ಹೊಸನಿರ್ಣಯವನ್ನು ಘೋಷಿಸಿದ್ದಾನೆ. ನಟವ್ಯಾಪಾರವೊಂದು ವಿಶಿಷ್ಟ ಅನುಭವ. ಹೀಗೆಲ್ಲ ನಟರಾಡಲು ಅಭಿನಿತಸ್ಥಾಯಿಭಾವಗಳೇ ಮೂಲವೆಂದು ಪ್ರೇಕ್ಷಕನಿಗೆ ಮನವರಿಕೆಯಾದಾಗ ಕಣ್ಣಮುಂದಿರುವ ನಟರನ್ನೇ ಸ್ಥಾಯಿಭಾವಗಳಿಗೆ ಆಶ್ರಯವೆಂದು ಬುದ್ಧಿಪೂರ್ವಕವಾಗಿ ಕಲ್ಪಿಸಿಕೊಂಡು, ಸಾಮಾಜಿಕರು ಆ ಅನುಮಾನದಿಂದ ರಸಾಸ್ವಾದ ಪಡೆಯುತ್ತಾರೆಂದು ಶಂಕುಕನ ವಿವರಣೆ. (ಇದನ್ನು ಕೋಲೆರಿಜ್ ಹೇಳುವ ವಿಲ್ಲಿಂಗ್ ಸಸ್‌ಪೆನ್ಷನ್ ಆಫ್ ಡಿಸ್‌ಬಿಲೀಫ್ ಎನ್ನುವ ಪ್ರಕ್ರಿಯೆಯೊಡನೆ ಹೋಲಿಸಬಹುದು). ಭಟ್ಟನಾಯಕನಿಗೆ ಇವೆರಡು ವಾದಗಳು ಒಪ್ಪಿಗೆಯಿಲ್ಲ. ರಸದ ರಹಸ್ಯವನ್ನರಿಯಲು ಶಬ್ದಾರ್ಥಗಳಿಗೆ ಸರ್ವಸಮ್ಮತವಾದ ಅಭಿಧಾವ್ಯಾಪಾರವಲ್ಲದೆ ಭಾವಕತ್ವ, ಭೋಜಕತ್ವ ವ್ಯಾಪಾರಗಳನ್ನು ಒಪ್ಪಬೇಕೆಂದು ಅವನ ವಾದ. ಭೋಗವೆಂದರೆ ಆನಂದ, ರಜಸ್ಸು ಕರಗಿ, ತಮಸ್ಸು ನಿಷ್ಕ್ರಿಯವಾಗಿ, ಸತ್ತ್ವ ಉಕ್ಕುವುದೇ ಆನಂದಮೀಮಾಂಸೆ. ಇದು ತಾತ್ಕಾಲಿಕ, ಬ್ರಹ್ಮಾನಂದ ಶಾಶ್ವತ–ಇಷ್ಟೇ ಎರಡಕ್ಕೂ ಇರುವ ವ್ಯತ್ಯಾಸ.

ಈ ಮೂರೂ ಮೆಟ್ಟಲುಗಳನ್ನು ದಾಟಿ ಅಭಿನವಗುಪ್ತ ತನ್ನ ರಸಮೀಮಾಂಸೆ ಯನ್ನು ಮಂಡಿಸುತ್ತಾನೆ. ಭಟ್ಟನಾಯಕನ ತತ್ತ್ವವನ್ನೆಲ್ಲ ಪೂರ್ಣವಾಗಿ ಅಂಗೀಕರಿಸಿ ದರೂ ಭಾವಕತ್ವ ಭೋಜಕತ್ವಗಳೆರಡರ ಕಾರ್ಯವೂ ಒಂದೇ ಧ್ವನಿ ಅಥವಾ ವ್ಯಂಜನಾವ್ಯಾಪಾರದಿಂದ ಸಿದ್ಧವಾಗುವುದನ್ನು ಬಿಡಿಸಿ ತೋರಿಸುತ್ತಾನೆ. ರಸ ಪ್ರತೀತಿ ಕೇವಲ ಕಾವ್ಯನಾಟಕಗಳ ವೈಲಕ್ಷಣ್ಯವೆಂದಮೇಲೆ ಒಂದು ಶಬ್ದಾರ್ಥಗಳ ಲೋಕೋತ್ತರ ವ್ಯಾಪಾರದಿಂದಲೇ ಎಲ್ಲವೂ ಸಿದ್ಧಿಸುವಾಗ ಎರಡರ ಅಗತ್ಯವೇನೆಂದು ಕೇಳುತ್ತಾನೆ. ಅಭಿನವಗುಪ್ತ ವಿವರಿಸುವಂತೆ ಪ್ರತಿಭಾ ಅಥವಾ ಭಾವನಾ ಶಕ್ತಿಯುಳ್ಳ ಕೆಲವು ಸಹೃದಯರಿಗೆ ಮಾತ್ರ ರಸಧ್ವನಿಯ ಅರಿವು ಶಕ್ಯ. ಇಷ್ಟೇ ಅಲ್ಲದೆ, ರಸ ಕಾರ್ಯವೂ ಅಲ್ಲ; ಅನುಮಿತವಾದ ಅಂಶವೂ ಅಲ್ಲ; ಕೇವಲ ಸ್ವಾನುಭವಸಿದ್ಧವಾದ ಚಿತ್ತವಿಶ್ರಾಂತಿಯ ಅವಸ್ಥೆಯೆನ್ನುವುದನ್ನು ಅಭಿನವಗುಪ್ತ ಮೊತ್ತಮೊದಲಿಗೆ ಸಾರಿ, ಪ್ರತ್ಯಭಿಜ್ಞಾದರ್ಶನದಂತೆ ಕಾವ್ಯದರ್ಶನದಲ್ಲಿಯೂ ತನ್ನ ಅಧಿಕಾರವಾಣಿಯನ್ನು ಸ್ಥಾಪಿಸಿದ್ದಾನೆ. ದರ್ಶನಶಾಸ್ತ್ರದಲ್ಲಿಯೂ ಅಷ್ಟೆ; ಕಾವ್ಯಶಾಸ್ತ್ರದಲ್ಲಿಯೂ ಅಷ್ಟೆ. ಅಭಿನವಗುಪ್ತನ ಅನಂತರ ಹತ್ತಾರು ಮಹಾಮೇಧಾವಿಗಳು ಗ್ರಂಥರಚನೆ ಮಾಡಿದರೂ ಇವನ ಮಾತನ್ನು ಕಡೆಯ ಮಾತೆಂದು ಮರುಮಾತಿಲ್ಲದೆ ಅಂಗೀಕರಿಸಿದರೇ ವಿನಾ, ಇದನ್ನು ಮತ್ತೆ ಪರಿಷ್ಕರಿಸುವ ಸಾಹಸಕ್ಕೆ ಕೈಹಾಕಲಿಲ್ಲ. ಭಾರತೀಯ ಚಿಂತನಶೀಲರಲ್ಲಿ ಅಭಿನವಗುಪ್ತನ ಸ್ಥಾನ ಎಷ್ಟು ಹೆಚ್ಚಿನದೆಂಬುದಕ್ಕೆ ಉತ್ತರಕಾಲೀನ ಲೇಖಕರ ಮೇಲೆ ಈತನ ಅನ್ಯಾದೃಶ ಪ್ರಭಾವವೇ ಸಾಕ್ಷಿ.

ಧ್ವನಿತತ್ತ್ವ ಭಟ್ಟನಾಯಕಾದಿಗಳಿಂದ ದೂಷಣೆಗೊಳಗಾದರೂ ಸಂಸ್ಕೃತ ಅಲಂಕಾರ ಶಾಸ್ತ್ರದಲ್ಲಿ ಕಡೆಯ ತನಕ ತನ್ನ ಗೌರವವನ್ನುಳಿಸಿಕೊಂಡುದನ್ನು ಪರಿಭಾವಿಸಿದಲ್ಲಿ ಧ್ವನ್ಯಾಲೋಕಲೋಚನದ ಮಹತ್ತ್ವ ಸ್ಪಷ್ಟವಾಗುತ್ತದೆ. ವಸ್ತು, ಅಲಂಕಾರ, ರಸಗಳೆಂಬ ತ್ರಿವಿಧ ವ್ಯಂಗ್ಯಗಳನ್ನು ಆನಂದವರ್ಧನ ವಿಭಾಗಿಸಿ ತೋರಿಸಿದ್ದರೂ ಅವನ ಅಭಿಸಂಧಿಯೆಲ್ಲ

ಮುಖ್ಯವಾಗಿ ರಸಧ್ವನಿಯ ಕಡೆಗೇ ಎಂದು ಸ್ಪಷ್ಟವಾಗಿ ಪ್ರತಿಪಾದಿಸಿದ ಯಶಸ್ಸು ಅಭಿನವಗುಪ್ತನದು. ಅಭಿಧಾ, ಲಕ್ಷಣಾ, ಇವು ಕಾವ್ಯ ಕಾವ್ಯೇತರ ಸಾಧಾರಣವಾದ ವ್ಯಾಪಾರಗಳೇ ಹೊರತು ವ್ಯಂಜನೆಯಂತೆ ಕಾವ್ಯಮಾತ್ರವಿಲಕ್ಷಣ ವ್ಯಾಪಾರಗಳಲ್ಲವೆಂದು ನಿರ್ಣಯಿಸಿದ್ದುದನ್ನು ಕಾವ್ಯಪ್ರಕ್ರಿಯೆಗಳಿಗೆಲ್ಲ ಅನ್ವಯಿಸಿ ಅಲಂಕಾರ, ಗುಣ, ರೀತಿ, ವೃತ್ತಿ, ದೋಷ, ಔಚಿತ್ಯ, ಮುಂತಾದ ಮಿಕ್ಕ ಪ್ರಕ್ರಿಯೆಗಳೊಡನೆ ಸರ್ವಸಮ್ಮತವಾಗುವಂಥ ಸಮನ್ವಯವನ್ನು ಕಲ್ಪಿಸಲು ನೆರವಾದುದು ಸಣ್ಣ ಕೆಲಸವಲ್ಲ. ಕಾವ್ಯದ ಆತ್ಮ ರಸಧ್ವನಿಯೇ ಎಂದು ಘೋಷಿಸಿದ ಅಭಿನವಗುಪ್ತ ಆನಂದವರ್ಧನನಿಗಿಂತ ಎಷ್ಟೋವೇಳೆ ಮುಂದೆಹೋಗಿ ಕಾವ್ಯಶರೀರವೇ ಸಿದ್ಧಿಸಲು ಉಚಿತಗುಣಾಲಂಕಾರಗಳ ಅಗತ್ಯವೆಷ್ಟೆಂಬುದನ್ನು ಸೋದಾಹರಣವಾಗಿ ತೋರಿಸಿದ್ದಾನೆ. ಎಲ್ಲಕ್ಕಿಂತ ಹೆಚ್ಚಾಗಿ, ನಾಟ್ಯಶಾಸ್ತ್ರವಿವೃತಿಯಂತೆ ಲೋಚನದಲ್ಲೂ ಭಟ್ಟನಾಯಕಾದಿಗಳು ಧ್ವನಿವಾದದ ಮೇಲೆತ್ತಿದ ಆಕ್ಷೇಪಗಳಿಗೆ ಅಭಿನವಗುಪ್ತ ಸಮರ್ಪಕವಾದ ಉತ್ತರಗಳನ್ನಿತ್ತಿದ್ದಾನೆ. ತನ್ನ ರಸಿಕದೃಷ್ಟಿಗೆ ದ್ಯೋತಕವಾಗಿ ಮೂಲದ ಅರ್ಥವಿಕಾಸಕ್ಕೆ ಅನುಗುಣವಾದ ಹತ್ತಾರು ಸ್ವತಂತ್ರ ಉದಾಹರಣೆಗಳನ್ನಿತ್ತಿದ್ದಾನೆ. ಪ್ರಾಚೀನ ಲಾಕ್ಷಣಿಕರ ಅಭಿಪ್ರಾಯಗಳನ್ನೆಲ್ಲ ಸಮರ್ಥವಾಗಿ ಸಂಗ್ರಹಿಸಿದ್ದಾನೆ. ಹೀಗೆ ಧ್ವನ್ಯಾಲೋಕಲೋಚನ ಸಂಸ್ಕೃತ ಅಲಂಕಾರಶಾಸ್ತ್ರದಲ್ಲಿ ಬರಿಯ ವ್ಯಾಖ್ಯಾ ಗ್ರಂಥವಾಗಿರದೆ ಪ್ರಮಾಣಗ್ರಂಥವೂ ಆಗಿದೆ.

ಶಂಕರಾಚಾರ್ಯ, ಪುಷ್ಪದಂತ ಮುಂತಾದವರ ಸ್ತೋತ್ರಗಳಂತೆ ಅಭಿನವಗುಪ್ತ ರಚಿಸಿದ ಸ್ತೋತ್ರಗಳು ಕೂಡ ಭಾಷೆಯ ಸೌಭಾಗ್ಯ, ಭಾವದ ಲಾಲಿತ್ಯ, ಆಧ್ಯಾತ್ಮಿಕ ರಹಸ್ಯಗಳ ಪ್ರಕಟನೆಗಳ ಮೂಲಕ ಸಂಸ್ಕೃತಸ್ತೋತ್ರಸಾಹಿತ್ಯದ ಸಂಪತ್ತನ್ನು ಹೆಚ್ಚಿಸಿವೆ.

ಇಂದು ಅನುಪಲಭ್ಯವಾದ ನೂರಾರು ಶಾಸ್ತ್ರ, ತಂತ್ರ, ಕಾವ್ಯ, ನಾಟಕಗಳನ್ನು ಅಭಿನವಗುಪ್ತ ಯಥೋಚಿತವಾಗಿ ಉದಾಹರಿಸುವುದನ್ನು ನೋಡಿದಾಗ ಅವನೇ ಒಂದು ವಿಶ್ವಕೋಶವಾಗಿದ್ದನೆಂಬ ಭಾವನೆ ಬಾರದಿರಲಾರದು. ಮಿಕ್ಕ ಕೆಲವು ವ್ಯಾಖ್ಯಾಕಾರರಂತೆ ಒಮ್ಮೆಯೂ ಆತ ಕಣ್ಣಾರೆ ನೋಡದ ಗ್ರಂಥದಿಂದ ಅವತರಣಿಕೆಯನ್ನು ಎತ್ತುವುದಿಲ್ಲ. ಸಂಸ್ಕೃತ ಕವಿಕಾವ್ಯಪರಿಚಯಕ್ಕೂ ಅಭಿನವಗುಪ್ತನ ಗ್ರಂಥಾಧ್ಯಯನದಿಂದ ಎಷ್ಟೋ ನೆರವಾಗುತ್ತದೆ. (ಕೆ.ಕೆ.)

**ಅಭಿನವಮಂಗರಾಜ :** ಮಂಗರಸ ಎಂಬ ಹೆಸರಿನ ನಾಲ್ವರು ಕವಿಗಳಲ್ಲಿ ಒಬ್ಬ. ವಿಜಯನಗರದ ಒಂದನೆಯ ಹರಿಹರರಾಯನ ಸಮಕಾಲೀನನಾದ ಮಂಗರಸನೇ ಮೊದಲನೆಯವ. ಇವನ ಅನಂತರ ಇದ್ದವನಾದ ಎರಡನೆಯ ಮಂಗರಸ ತನ್ನನ್ನು ಅಭಿನವಮಂಗರಸ (ಮಂಗರಾಜ) ಎಂದು ಕರೆದುಕೊಂಡಿದ್ದಾನೆ. ಮೊದಲನೆಯವನು ಜೈನಕವಿ, ಎರಡನೆಯವನು ಬ್ರಾಹ್ಮಣಕವಿ. ಇಬ್ಬರೂ ಶಾಸ್ತ್ರಕವಿಗಳು. ಅಭಿನವ ಮಂಗರಾಜ ಕಮ್ಮೆಕುಲಕ್ಕೆ ಸೇರಿದವ. ವಿಶ್ವಾಮಿತ್ರಗೋತ್ರೋದ್ಭವ, ತಂದೆ ರೆಮ್ಮಾರ್ಯ ರಾಮರಸ. ಈತ ತನ್ನನ್ನು ಸೋಮೇಶನೊಲಿದಿತ್ತನಾಹತಮತಿಯ ಕುರುಪಿನಭಿನವಮಂಗ ಎಂದು ವಿಶ್ಲೇಷಿಸಿ ಹೇಳಿಕೊಂಡಿದ್ದಾನೆ. ಈತನಿಗೆ ಅಭಿನವಬಾಲಸರಸ್ವತಿ, ಬಾಲಶಾರದೆ ಎಂಬ ಬಿರುದುಗಳಿದ್ದಂತೆ ತಿಳಿದುಬರುತ್ತದೆ.

ಈ ಕವಿ ಅಭಿನವನಿಘಂಟನ್ನು ಬರೆದಿದ್ದಾನೆ. ಇದಕ್ಕೆ ಮಂಗಾಭಿಧಾನವೆಂಬ ಹೆಸರೂ ಇದೆ. ಇದನ್ನಲ್ಲದೆ ಚಿಂತಾಮಣಿ ಪ್ರತಿಪದ ಎಂಬ ಇನ್ನೊಂದು ಹೊತ್ತಿಗೆಯನ್ನೂ ಬರೆದಂತೆ ತಿಳಿದುಬರುತ್ತದೆಯಾದರೂ ಗ್ರಂಥ ದೊರೆತಿಲ್ಲ. ಮಂಗರಾಜ ತನ್ನ ಅಭಿನವನಿಘಂಟನ್ನು ಸ್ತ್ರೀಬಾಲರಂತುಟು ಸುಲಭವಾಗಿ ಸಿದ್ಧಪಡಿಸಿರುವದಾಗಿ ಹೇಳಿಕೊಂಡಿದ್ದಾನೆ. ತನಗಿಂತಲೂ ಹಿಂದೆ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಇದ್ದ ನಿಘಂಟುಕಾರರನ್ನು ಸ್ಮರಿಸಿ, ಅವರ ಹಿರಿಯ ಉದಾತ್ತಗುಣಗಳನ್ನು ಮುಂದಿಟ್ಟುಕೊಂಡು ಮಂಗಾಭಿಧಾನವನ್ನು ರೂಪಿಸಿರುವುದಾಗಿ ಗ್ರಂಥಾರಂಭದಲ್ಲಿ ನಿರೂಪಿಸಿದ್ದಾನೆ. ಈ ಶಬ್ದಕೋಶವನ್ನು ಶಕ 1320ರಲ್ಲಿ, ಅಂದರೆ 1398ರಲ್ಲಿ ಬರೆದಿರುವುದಾಗಿ ಈತನೆ ತಿಳಿಸಿದ್ದಾನೆ.

ಅಭಿನವನಿಘಂಟಿನ ರಚನೆಗೆ ವಿಶೇಷವಾಗಿ ನಾಗವರ್ಮನ ಪದಕೋಶವನ್ನು ಮಾದರಿಯಾಗಿಟ್ಟುಕೊಂಡಿರುವಂತೆ ತೋರುತ್ತದೆ. ಇದು ಉದ್ದಂಡಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ ಸ್ವರ್ಗ, ಭೂ, ಪಾತಾಳ, ಸಾಮನ್ಯಾರ್ಥ ಮತ್ತು ನಾನಾರ್ಥ ಎಂಬ ಐದು ಕಾಂಡಗಳಿವೆಯಲ್ಲದೆ ಅದರಲ್ಲಿ ಒಂದೊಂದು ಕಾಂಡವೂ ಬೇರೆಬೇರೆ ವರ್ಗಗಳಾಗಿ ವಿಭಾಗವಾಗಿವೆ. ಇಲ್ಲಿ ಸಂಸ್ಕೃತಭಾಷೆಯ ಶಬ್ದಗಳಿಗೆ ಕನ್ನಡದ ಅರ್ಥವಿದೆ.

ನಿಘಂಟು ಎಂಬುದು ಹಡೆದ ತಾಯಂತೆ ಅಲಂಕಾರದ ಅಂದವನ್ನೂ ತಂದೆಯಂತೆ ಲಕ್ಷಣಸುಶಬ್ದವನ್ನೂ ಒಡೆಯನಂತೆ ಪದಗಳ ಅರ್ಥವನ್ನೂ ಅಂಗನೆಯಂತೆ ಭಾವರಸಗಳನ್ನೂ ಗುರುವಿನಂತೆ ವ್ಯಾಕರಣ ವೈಶಿಷ್ಟ್ಯವನ್ನೂ ಒಡನಾಡಿಯಂತೆ ಸಾರಾಂಶವನ್ನೂ ಕೊಡುತ್ತದೆ ಎಂದು ಮಂಗರಾಜ ಒಂದು ಕಡೆ ಹೇಳಿರುವ ಮಾತು ಗಮನಾರ್ಹವಾಗಿದೆ. ಅದರಿಂದಾಗಿ ಅಭಿನವಮಂಗನುಸಿರ್ದ ಸತ್ಕವಿತೆಯಂ ಜಜಿವಿರಾರ್, ಮಜಿವರಾರ್ ಮಿಕ್ಕರೋಲ್ ಮನುಜ ಶಿಕ್ಷಾಪೇಕ್ಷೆಯಿಂದಾದನೇ ಎಂಬುದು ಕವಿಯ ಪ್ರಶಸ್ತಿರೂಪದ ಅಗ್ಗಳಿಕೆಯ ಆಶಯ. ನಿಘಂಟುಕಾರನ ಸದಾಶಯ ಸಾಕಷ್ಟುಮಟ್ಟಿಗೆ ಸಾರ್ಥಕವಾಗಿದೆ. (ಎಚ್.ಪಿ.ಎಸ್.)

**ಅಭಿನವವಾದಿ ವಿದ್ಯಾನಂದ :** ಕಾವ್ಯಸಾರವೆಂಬ ಸಂಕಲನದ ಸಂಪಾದಕ. ಸಂಕಲನವೆಂದರೆ ಇಲ್ಲಿ ಯಾವುದೇ ಒಂದು ಕಾವ್ಯದ ಸಾರಸಂಗ್ರಹವಲ್ಲ. ಅಂಥ ಅನೇಕಾನೇಕ ಕಾವ್ಯಗಳಲ್ಲಿನ ರಸವತ್ತಾದ ಬಿಡಿ ಪದಗೇಯಗಳ ಸಂಗ್ರಹವಷ್ಟೆ. ಯಾವುದೇ ಸಾಹಿತ್ಯದಲ್ಲಿ ಸಂಕಲನ ಗ್ರಂಥಗಳು ಕಾಣಿಸಿಕೊಂಡರೆ, ಆ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆಯೆಂದರ್ಥ. ಕನ್ನಡದಲ್ಲಿ ಬಹಳ ಹಿಂದೆಯೇ ಇಂಥ ಕೃತಿಗಳು ತಲೆದೋರಿದುವು. ಅವುಗಳಲ್ಲಿ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ ಮತ್ತು ಅದರ ಮಾದರಿಯನ್ನೇ ಅನುಸರಿಸಿ ಬಂದ ಕಾವ್ಯಸಾರ ಬಹಳ ಗಣ್ಯವಾಗಿವೆ. ಇವು ಚಂಪೂ ಗ್ರಂಥಗಳಿಂದ ಆಯ್ದ ಮುಕ್ತಕಗಳ ಸಂಕಲನಗಳು.

ಅಭಿನವವಾದಿ ವಿದ್ಯಾನಂದನ ಕಾಲದೇಶಗಳು ಸರಿಯಾಗಿ ಗೊತ್ತಿಲ್ಲ. ಈತ ಜೈನಕವಿಯೆಂಬುದು ಮಾತ್ರ ನಿಶ್ಚಯ. ಕಾವ್ಯಸಾರದ ಅಂತ್ಯದಲ್ಲಿ ವಿಜಯ ಸಂವತ್ಸರದ ಭಾದ್ರಪದ ಬಹುಳ 3ರಲ್ಲೂ ಶ್ರೀಮದಭಿನವವಾದಿ ವಿದ್ಯಾನಂದಸ್ವಾಮಿಗಳು ಭಲ್ಲಾತಕೀಪುರವರಾಧೀಶ್ವರ ಬೈರಾಗಿಗೆ ಬರೆಸಿಕೊಟ್ಟ ಕಾವ್ಯಸಾರಕ್ಕೆ ಮಂಗಳ ಮಹಾಶ್ರೀ ಎಂದಿದೆ. ಇದರಿಂದ ಈ ಸಂಕಲನಕಾರ ಭಲ್ಲಾತಕೀಪುರದವನೆಂದು ತಿಳಿಯುತ್ತದೆ. ಗೇರುಸೊಪ್ಪೆಗೆ ಭಲ್ಲಾತಕೀಪುರವೆಂಬ ಬೇರೊಂದು ಹೆಸರುಂಟಾದ್ದರಿಂದ ಇವನು ಗೇರುಸೊಪ್ಪೆಯವನೆಂದು ಊಹಿಸಬಹುದು. ಕಾವ್ಯಸಾರದಲ್ಲಿ ಚಂದ್ರಶೇಖರನ (ಸು. 1430) ಗುರುಮೂರ್ತಿಶಂಕರಶತಕದಿಂದ ಪದ್ಯಗಳನ್ನು ಉದ್ಧರಿಸಿರುವುದರಿಂದ ವಿದ್ಯಾನಂದ 1430ಕ್ಕಿಂತ ಈಚಿನವನಿರಬೇಕು. ನಗರ ತಾಲ್ಲೂಕಿನ 46ನೆಯ ಶಾಸನದಲ್ಲಿ (1580) ಒಬ್ಬ ವಾದಿವಿದ್ಯಾನಂದನ ಸ್ತುತಿ ಬರುತ್ತದೆ; ಅವನು ಉಪನ್ಯಾಸ, ವಾದಗಳಲ್ಲಿ ಗಟ್ಟಿಗನೆಂದೂ ಅನೇಕ ದೊರೆಗಳ ಆಸ್ಥಾನಗಳಲ್ಲೂ ಗೇರುಸೊಪ್ಪೆಯಲ್ಲೂ ವಾದಿಗಳನ್ನು ಗೆದ್ದು ಸ್ವಮತಸ್ಥಾಪನೆ ಮಾಡಿದನೆಂದೂ ಆ ಶಾಸನದಲ್ಲಿ ಉಕ್ತವಾಗಿದೆ. ಅವನನ್ನು ಪ್ರೋತ್ಸಾಹಿಸಿದ ರಾಜರಲ್ಲಿ ವಿಜಯನಗರದ ಕೃಷ್ಣದೇವರಾಯನ (1509–1529) ಹೆಸರು ಬರುವುದರಿಂದ, ವಿದ್ಯಾನಂದ ಆ ರಾಜನ ಸಮಕಾಲೀನನೆಂದೂ ಹಾಗಿದ್ದಲ್ಲಿ ಗ್ರಂಥಾಂತ್ಯದಲ್ಲಿ ಹೇಳಿರುವ ವಿಜಯ ಸಂವತ್ಸರ 1523 ಆಗಬೇಕೆಂದೂ ಕವಿಚರಿತಕಾರರು ಅಭಿಪ್ರಾಯ ಪಡುತ್ತಾರೆ.

ಕಾವ್ಯಸಾರದಲ್ಲಿ 45 ಅಧ್ಯಾಯಗಳೂ 1143 ಪದ್ಯಗಳೂ ಇವೆ. ಆರಿಸಿಕೊಟ್ಟ ಪದ್ಯಗಳ ಆಕರವನ್ನು ಅಥವಾ ಕರ್ತೃವನ್ನು ಸಂಕಲನಕಾರ ಹೆಸರಿಸಿರುವುದು ಮುಖ್ಯವಾದ ಸಂಗತಿ. ಈಗ ಉಪಲಬ್ಧವಿಲ್ಲದ ಒಂದನೆಯ ಗುಣವರ್ಮನ ಶೂದ್ರಕ, ಹರಿವಂಶಗಳಿಂದ ಅನೇಕ ಪದ್ಯಗಳನ್ನು ಎತ್ತಿಕೊಟ್ಟು ವಿದ್ಯಾನಂದ ಬಹಳ ಉಪಕಾರ ಮಾಡಿದ್ದಾನೆ. ಕೇವಲ ಪದ್ಯಗಳನ್ನಲ್ಲದೆ ಗದ್ಯ ಭಾಗಗಳನ್ನೂ ಉದ್ಧರಿಸಿರುವುದು ಇವನ ಸಂಕಲನಗ್ರಂಥದ ವೈಶಿಷ್ಟ್ಯ. ಕೆಲವು ಚಾಟುಪದ್ಯ, ಮುಕ್ತಕಗಳೂ ಇಲ್ಲಿ ಸೇರಿವೆ.

ಚಂಪೂಕಾವ್ಯಗಳಲ್ಲಿ ಬರುವ ಸಮುದ್ರ, ದೇಶ, ನಗರ, ಋತು, ವಿರಹ, ಯುದ್ಧ ಮುಂತಾದ ನಲವತ್ತೈದು ವಿಷಯಗಳ ವರ್ಣನೆಗಳಿಗೆ ಸಂಬಂಧಿಸಿದ ಪದ್ಯಗಳನ್ನು ಕಾವ್ಯಸಾರದಲ್ಲಿ ನೋಡುತ್ತೇವೆ. ಇವುಗಳನ್ನು ಆಯುವಲ್ಲಿ ವಿದ್ಯಾನಂದನ ಪಾಂಡಿತ್ಯ, ಉತ್ತಮ ಅಭಿರುಚಿ, ರಸಿಕತೆ, ಗೋಚರವಾಗುತ್ತವೆ. ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಈ ಸಂಕಲನಗ್ರಂಥ ನಿರ್ದೇಶಿಸುತ್ತದೆ. (ಸಿ.ಪಿ.ಕೆ.)

**ಅಭಿನವಶಂಕರ :** ಆದಿಶಂಕರಾಚಾರ್ಯರ ಅನಂತರ ಕಾಮಕೋಟಿ ಪೀಠದ ಚರಿತ್ರೆಗನುಸಾರವಾಗಿ ನಾಲ್ವರು ಶಂಕರನಾಮಧೇಯವುಳ್ಳ ಪೀಠಾಧಿಪತಿಗಳು ಇದ್ದರೆಂದು ತಿಳಿಯಬರುತ್ತದೆ. ಇವರಲ್ಲಿ ಕೃಪಾಶಂಕರರು ಒಂಬತ್ತನೆಯವರು. ಉಜ್ವಲಶಂಕರರು ಹದಿನೈದನೆಯವರು, ಮೂಕಶಂಕರರು ಇಪ್ಪತ್ತೈದನೆಯವರು. ಅಭಿನವಶಂಕರರು ಮೂವತ್ತೆಂಟನೆಯವರು. ಇವರು ಚಿದಂಬರದ ವಿಶ್ವಜಿತ್ ಎಂಬುವರ ಪುತ್ರರು. ಆದಿಶಂಕರರಂತೆ ಭಾರತದಾದ್ಯಂತ ಸುತ್ತಿ ಅದ್ವೈತವನ್ನು ಪುನರುಜ್ಜೀವನಗೊಳಿಸಿದ್ದರಿಂದ ಇವರಿಗೆ ಅಭಿನವಶಂಕರರೆಂಬ ಹೆಸರು ಬಂತು. ಪ್ರತಿವಾದಿಭಯಂಕರರಾಗಿದ್ದರಿಂದ ಅಭಿನವ ಎಂಬ ಉಪನಾಮಧೇಯದೊಂದಿಗೆ ಧೀರಶಂಕರ ಎಂಬ ಉಪನಾಮಧೇಯವೂ ಪ್ರಚಾರದಲ್ಲಿತ್ತು. ಇವರ ಕೀರ್ತಿ ಚೀನ, ತುರ್ಕಿ, ಮತ್ತು ಪಾರಸಿ ದೇಶಗಳವರೆಗೆ ಹಬ್ಬಿತ್ತು ಎಂದು ವಾಕ್ಪತಿಭಟ್ಟ ಬರೆದ ಶಂಕರೇಂದು ವಿಲಾಸವೆಂಬ ಇವರ ಜೀವನಚರಿತ್ರೆ ತಿಳಿಸುತ್ತದೆ. 52 ವರ್ಷಗಳ ಕಾಲ ಕಾಮಕೋಟಿ ಪೀಠಾಧಿಪತಿಗಳಾಗಿದ್ದು ಸಿದ್ಧಾರ್ಥಿಸಂವತ್ಸರದ (ಕಲಿವರ್ಷ 3941) ಆಷಾಢ ಶುಕ್ಲಪ್ರತಿಪತ್ ನಿರ್ವಾಣಹೊಂದಿದರು. (ಜಿ.ಎಚ್.)

**ಅಭಿಮನ್ಯು[1] :** ಅರ್ಜುನ ಸುಭದ್ರೆಯರ ಮಗ. ಶ್ರೀಕೃಷ್ಣನ ಸೋದರಳಿಯ. ವಿರಾಟರಾಜನ ಮಗಳಾದ ಉತ್ತರೆಯನ್ನು ಮದುವೆಯಾದ. ಗರ್ಭದಲ್ಲಿರುವಾಗಲೇ, ಶ್ರೀಕೃಷ್ಣ ತನ್ನ ತಂಗಿ ಸುಭದ್ರೆಗೆ ಯುದ್ಧದಲ್ಲಿನ ಅಭೇದ್ಯವ್ಯೂಹಗಳ ಭೇದನೆಯನ್ನು ಕಥೆಯಾಗಿ ಹೇಳುವಾಗ ಕೇಳಿ ತಿಳಿದಿದ್ದ.

ಧನುರ್ವಿದ್ಯಾಪಾರಂಗತನಾದ ಅಭಿಮನ್ಯುವಿನ ವೀರನೈಪುಣ್ಯ ಸ್ಪಷ್ಟವಾಗಿ ತೋರುವುದು ಪದ್ಮವ್ಯೂಹವೆಂಬ ಸೈನ್ಯರಚನೆಯನ್ನು ಭೇದಿಸುವಲ್ಲಿ. ಭಾರತ ಯುದ್ಧದಲ್ಲಿ ದ್ರೋಣಾಚಾರ್ಯರು ರಚಿಸಿದ ಪದ್ಮವ್ಯೂಹವನ್ನು ಭೇದಿಸುವ ರಹಸ್ಯ ತಂತ್ರ ಕೃಷ್ಣ, ಅರ್ಜುನ, ಪ್ರದ್ಯುಮ್ನ ಮತ್ತು

ಅಭಿಮನ್ಯುವಿಗಲ್ಲದೆ ಮತ್ಯಾರಿಗೂ ಗೊತ್ತಿರಲಿಲ್ಲ. ಶ್ರೀಕೃಷ್ಣ ಅರ್ಜುನರು ಸಂಶಪ್ತಕರೊಡನೆ ಯುದ್ಧದಲ್ಲಿ ತೊಡಗಿದಾಗ ಧರ್ಮರಾಜನ ಅಪ್ಪಣೆಯಂತೆ ಅಭಿಮನ್ಯುವೇ ರಥವನ್ನೇರಿ ಎದುರಾದ ವೀರಯೋಧರನ್ನು ರಾಶಿರಾಶಿಯಾಗಿ ಸಂಹರಿಸಿ ಪದ್ಮವ್ಯೂಹವನ್ನು ತಾಂತ್ರಿಕಯುಕ್ತಿಸಾಹಸದಿಂದ ಭೇದಿಸಿ ಒಳನುಗ್ಗಿದ. ತನಗೆ ಬೆಂಬಲವಾಗಿದ್ದ ಪಾಂಡವ ಸೈನ್ಯವನ್ನು ಸೈಂಧವ ತಡೆಹಿಡಿದರೂ ಅಭಿಮನ್ಯು ಏಕೈಕವೀರನಾಗಿ ದುರ್ಯೋಧನನ ಮಗ ಲಕ್ಷ್ಮಣ ಮತ್ತು ಬೃಹದ್ಬಲ ಮುಂತಾದ ನೂರಾರು ರಾಜ, ರಾಜಕುಮಾರರನ್ನು ಸಂಹರಿಸಿದ. ದುರ್ಯೋಧನನ ರಕ್ಷಣೆಗೆ ಬಂದ ದ್ರೋಣ, ಅಶ್ವತ್ಥಾಮ, ಕರ್ಣ, ಶಲ್ಯ, ಕೃಪ, ಶಕುನಿ ಮುಂತಾದ ವೀರಾಧಿವೀರರನ್ನು ತನ್ನ ಚಾಪವಿದ್ಯಾಬಲದಿಂದ ಮೂರ್ಛೆಗೊಳಿಸಿದ. ಈತನ ಕವಚ ಅಭೇದ್ಯವೆಂದರಿತ ದ್ರೋಣಾಚಾರ್ಯರ ಸೂಚನೆಯಂತೆ ಕರ್ಣ ಹಿಂದಿನಿಂದ ಬಂದು ಅಭಿಮನ್ಯುವಿನ ಸಾರಥಿ ಸುಮಿತ್ರನನ್ನು ಕೊಂದು ಬಿಲ್ಲನ್ನು ಕತ್ತರಿಸಿದ. ಮುಂದಿನಿಂದ ದ್ರೋಣ ಈತನ ರಥ ಮತ್ತು ಕುದುರೆಗಳನ್ನು ತುಂಡರಿಸಿದ. ವೈರಿಗಳು ಬಾಣದ ಮಳೆಗರೆದರು. ಆಗಲೂ ಅಭಿಮನ್ಯು ಅಪ್ರತಿಭನಾಗಲಿಲ್ಲ. ರಥದಿಂದಿಳಿದು ಗದೆಯಿಂದ ಯುದ್ಧಮಾಡಿ ಕೊನೆಗೆ ವೀರಸ್ವರ್ಗವನ್ನು ಪಡೆದ. (ಎ.ಎನ್.ಎಸ್.ಎಂ.)

**ಅಭಿಮನ್ಯು$^2$** : ಕಾಶ್ಮೀರದ ರಾಜ, ಕ್ಷೇಮಗುಪ್ತನ ಮಗ. 10ನೆಯ ಶತಮಾನದ ಉತ್ತರಾರ್ಧದಲ್ಲಿ 14 ವರ್ಷ ರಾಜ್ಯವಾಳಿದ. ಈತ ಅಭಿಮನ್ಯುಪುರ ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ. ಈತ ಹೆಸರಿಗೆ ಮಾತ್ರ ರಾಜನಾಗಿದ್ದು ಇವನ ತಾಯಿ ಮಹಾರಾಣಿ ದಿದ್ದ ಸರ್ವಾಧಿಕಾರ ನಡೆಸಿದಳು. (ಪಿ.ಎಲ್.ಜಿ.)

**ಅಭಿರುಚಿಗಳು** : ವ್ಯಕ್ತಿತ್ವದಲ್ಲಿ ಅಂತರ್ಗತವಾಗಿರುವ ಕೆಲವು ಕಾರಕಾಂಶಗಳು (ಫ್ಯಾಕ್ಟರ್ಸ್) ವಿವಿಧವಸ್ತು ಚಟುವಟಿಕೆ ಅಥವಾ ಜನ–ಇವುಗಳ ಕಡೆ ವ್ಯಕ್ತಿಯನ್ನು ಆಕರ್ಷಿಸುತ್ತವೆ ಅಥವಾ ಅಪಕರ್ಷಿಸುತ್ತವೆ. ಒಬ್ಬ ಯಾವುದಾದರೂ ಒಂದು ಕಾರ್ಯಕ್ಕೆ ತನ್ನ ಇಷ್ಟವನ್ನು ವ್ಯಕ್ತ ಪಡಿಸಿದಾಗ ಅಥವಾ ಆ ಕಾರ್ಯವನ್ನು ಆರಿಸಿಕೊಂಡು ನಿರ್ವಹಿಸುವಾಗ, ಆತನಿಗೆ ಅದರಲ್ಲಿ ಅಭಿರುಚಿಯಿದೆ (ಇಂಟರೆಸ್ಟ್) ಎಂದು ಹೇಳುತ್ತೇವೆ. ಸಾಮಾನ್ಯವಾಗಿ ಒಬ್ಬ ತನ್ನ ಜೀವನದ, ವೈಯಕ್ತಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ರಂಗಗಳಲ್ಲಿ ತೋರಿಸುವ ವರ್ತನೆ, ಬುದ್ಧಿಶಕ್ತಿ, ಅಭಿಕ್ಷಮತೆ (ಆ್ಯಪ್ಟಿಟ್ಯೂಡ್) ಮೊದಲಾದವುಗಳನ್ನಲ್ಲದೆ, ಅಭಿರುಚಿಗಳನ್ನೂ ಅವಲಂಬಿಸಿರುತ್ತದೆ.

ಅಭಿರುಚಿಗಳ ಸ್ವಭಾವ ಮತ್ತು ಮಾಪನಗಳ ವಿಷಯವಾಗಿ ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಅವು ತಾತ್ಕಾಲಿಕ ಮತ್ತು ಅವಿಶ್ವಸನೀಯವಾಗಿರುವುದರಿಂದ ಅವುಗಳ ಅಧ್ಯಯನ ನಿರರ್ಥಕವೆಂದು ಕೆಲವರ ಮತ. ಆದರೆ ಅವು ಸಾಪೇಕ್ಷವಾಗಿ ಚಿರಸ್ಥಾಯಿಗ ಳೆಂಬುದು, ಅವುಗಳ ಅಧ್ಯಯನದಿಂದ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನಕ್ಕೆ ಅನುಕೂಲವಾಗುತ್ತದೆ ಎಂಬುದು ಇನ್ನು ಕೆಲವರ ಅಭಿಮತ. ಅವರ ಸಂಶೋಧನೆಗಳಿಂದ, ಇದಕ್ಕೆ ಪರಿಪೋಷಕವಾದ ತಥ್ಯಾಂಶಗಳು ಬೆಳಕಿಗೆ ಬಂದಿವೆ. ವ್ಯಕ್ತಿಯ ಕಾರ್ಯಸಾಫಲ್ಯದ ನಿರ್ಧಾರದಲ್ಲಿ ಬುದ್ಧಿಶಕ್ತಿಯೊಂದನ್ನು ಬಿಟ್ಟರೆ, ಅಭಿರುಚಿಗಳದೇ ಮೇಲುಗೈ ಎಂಬುದು ಅವರ ನಂಬಿಕೆ. ಒಟ್ಟಿನಲ್ಲಿ, ಅವು ಒಬ್ಬ ವ್ಯಕ್ತಿಯ ವರ್ತನೆಗಳನ್ನು, ಅವುಗಳಿಂದ ದೊರಕಬಹುದಾದ ಮನಃತೃಪ್ತಿಯನ್ನು ನಿರ್ಧರಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಬಹುದು.

ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನಕ್ಷೇತ್ರದಲ್ಲಿ ನಡೆದಿರುವ ಆಂದೋಲನ ದಿಂದಾಗಿ ಶಿಕ್ಷಣ ತಜ್ಞರ, ಮನೋವಿಜ್ಞಾನಿಗಳ ಗಮನ ಅಭಿರುಚಿಯ ಅಧ್ಯಯನದತ್ತ ಹರಿದಿದೆ. ಇದರಿಂದಾಗಿ ರೂಪುಗೊಂಡ ಅಭಿರುಚಿ ಪರೀಕ್ಷೆಗಳು, ಶೈಕ್ಷಣಿಕ ಔದ್ಯೋಗಿಕ ಮಾರ್ಗದರ್ಶನಗಳಿಗೆ ಮಾತ್ರವಲ್ಲದೆ, ಔದ್ಯೋಗಿಕ ಆಯ್ಕೆ ವರ್ಗೀಕರಣಗಳಿಗೂ ವಿಶೇಷ ರೀತಿಯಲ್ಲಿ ಸಹಕಾರಿಗಳಾಗಿವೆ.

ಸ್ಥಿರತೆ ಮತ್ತು ಬದಲಾವಣೆ: ಪ್ರೌಢಶಾಲಾ ವಿದ್ಯಾಭ್ಯಾಸದ ಅವಧಿಯಲ್ಲಿ ಅಭಿವ್ಯಕ್ತಾಭಿರುಚಿಗಳು ಗಣನೀಯ ರೀತಿಯಲ್ಲಿ ಬದಲಾವಣೆ ಹೊಂದುತ್ತವೆ. ಆದರೆ ಅಂಶಮಾಲಾ ಅಭಿರುಚಿಗಳಲ್ಲಿ (ಇನ್ವೆಂಟರೀಡ್ ಇಂಟರೆಸ್ಟ್) ಕಿಶೋರಾವಸ್ಥೆಯಲ್ಲಿಯೇ (ಅಡೊಲೋ ಸೆನ್ಸ್) ಸ್ಥಿರತೆ ಕಂಡುಬರುವುದಲ್ಲದೆ, ವಯಸ್ಕ ಮಟ್ಟದಲ್ಲಿ ಅತ್ಯಲ್ಪ ಬದಲಾವಣೆ ಇರುತ್ತದೆ ಎಂಬುದು ತಿಳಿದುಬಂದಿದೆ. ಅನೇಕ ಸಂಶೋಧಕರು, ಸ್ಟ್ರಾಂಗನ ಅಭಿರುಚಿ ಅಂಶಮಾಲೆಯನ್ನು ಉಪಯೋಗಿಸಿ, ಅಭಿರುಚಿಗಳಲ್ಲಿ ಗಣನೀಯ ಸ್ಥಿರತೆಯಿರುವುದನ್ನು ಕಂಡುಹಿಡಿದಿದ್ದಾರೆ. ಸಾಮಾಜಿಕ ಶ್ರೇಯಾಭಿರುಚಿಯಲ್ಲಿ 14–18 ವರ್ಷಗಳವರೆಗೆ ಗಣನೀಯ ಬದಲಾವಣೆ ಕಂಡುಬರುತ್ತದೆ. ಆದರೆ 18–25 ವರ್ಷಗಳ ಅವಧಿಯಲ್ಲಿ ಆಗುವ ಬದಲಾವಣೆ ಅತ್ಯಲ್ಪ. ವೈಜ್ಞಾನಿಕ ಮತ್ತು ತಾಂತ್ರಿಕ ಅಭಿರುಚಿಗಳಲ್ಲಿ ಮಾತ್ರ ಕಿಶೋರಾವಸ್ಥೆಯಿಂದಲೇ ಬದಲಾವಣೆಗಳು ಅತ್ಯಲ್ಪವಾಗಿರುತ್ತವೆ. ಒಟ್ಟಿನಲ್ಲಿ 14 ಅಥವಾ 15 ವರ್ಷ ವಯಸ್ಸಿನಲ್ಲಿ ಅಳತೆ ಮಾಡಿದ ಅಭಿರುಚಿಗಳು ಹೆಚ್ಚು ಕಡಿಮೆ ಸ್ಥಿರವಾಗಿರುತ್ತವೆಂದು ಹೇಳಬಹುದು. ಕ್ಯೂಡರನ ಅಂಶಮಾಲೆಯನ್ನು ಉಪಯೋಗಿಸಿ ಟರ್ಟ್ ಪರೀಕ್ಷಾರ್ಥಿಗಳಲ್ಲಿ 8ನೆಯ ವರ್ಗದಲ್ಲಿದ್ದಾಗ ಕಂಡುಬಂದ ಅಭಿರುಚಿಗಳು. ಅವರ 12ನೆಯ ವಯಸ್ಸಿನಲ್ಲೂ ಹೆಚ್ಚು ಕಡಿಮೆ ಸ್ಥಿರವಾಗಿದ್ದುದನ್ನು ತೋರಿಸಿದ್ದಾನೆ. ಇದೇ ರೀತಿಯ ಫಲಿತಾಂಶಗಳು ರೋಸೆನ್‌ಬಿ ನಡೆಸಿದ ಸಂಶೋಧನೆಗಳಿಂದಲೂ ಹೊರಬಿದ್ದಿವೆ.

ಔದ್ಯೋಗಿಕ ಜಯ: ವ್ಯಕ್ತಿಗೆ ತನ್ನ ವೃತ್ತಿಯಲ್ಲಿರುವ ಅಭಿರುಚಿ ಮತ್ತು ಅದರಿಂದ ಆತ ಪಡೆಯುವ ಸಾಫಲ್ಯಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಸೂಪರ್ ಹೀಗೆ ಹೇಳುತ್ತಾನೆ: ಅಭಿಕ್ಷಮತೆ, ಬಾಹ್ಯಪ್ರೇರಕಶಕ್ತಿ ಮೊದಲಾದ ಕಾರಕಗಳು ನಿಯಂತ್ರಿತವಾಗಿಲ್ಲದಾಗ, ಔದ್ಯೋಗಿಕ ಜಯಕ್ಕೂ ಅಭಿರುಚಿಗೂ ಯಾವ ಸಂಬಂಧವೂ ಕಾಣುವುದಿಲ್ಲ. ಆದರೆ ನಿಯಂತ್ರಿತವಾದಾಗ ಸಂಬಂಧ ಕಾಣುತ್ತದೆ. ಟರ್ಮನ್ ಪ್ರತಿಭಾವಂತರ ಮೇಲೆ ನಡೆಸಿದ ಅಧ್ಯಯನದಿಂದಲೂ ಅಭಿರುಚಿ ಮತ್ತು ಔದ್ಯೋಗಿಕ ಜಯಗಳಿಗೆ ಗಣನೀಯ ಸಂಬಂಧವಿದೆ ಎಂಬುದು ವ್ಯಕ್ತವಾಗಿದೆ. ಕ್ಯೂಡರನ ಅಂಶಮಾಲೆಯನ್ನು ಉಪಯೋಗಿಸಿ, ಜಯಶಾಲೀ ಇಂಜಿನಿಯರುಗಳು, ಮಾರಾಟಗಾರರು ಮತ್ತು ಕಾರಕೂನರು ತಮ್ಮ ವೃತ್ತಿಗೆ ಸರಿಹೊಂದುವ ಕ್ಷೇತ್ರಗಳಲ್ಲಿ ಹೆಚ್ಚು ಅಂಕಗಳಿಸಿರುವುದನ್ನು ಬಾರ್ನೆಟ್ ಕಂಡುಹಿಡಿದಿದ್ದಾನೆ. ಇವುಗಳೊಂದಿಗೆ ಇತರ ಅಧ್ಯಯನಗಳ ಆಧಾರದ ಮೇಲೆ ಸೂಪರ್ ಹೀಗೆ ನಿರ್ಣಯಿಸಿದ್ದಾನೆ: ಇತರ ಕಾರಕಾಂಶಗಳ್ಳು ನಿಯಂತ್ರಿಸಿದಾಗ, ಕಾರ್ಯದ ಸ್ವಭಾವ ಕ್ರಿಯಾಶೀಲತೆಯ ಮೇಲೆ ಪ್ರಭಾವ ಬೀರಿದಾಗ, ಸೂಕ್ತ ಒರೆಗಲ್ಲುಗಳನ್ನು ಉಪಯೋಗಿಸಿದಾಗ, ಅಭಿರುಚಿಗಳು ಔದ್ಯೋಗಿಕ ಜಯದೊಂದಿಗೆ ಸಾಕಷ್ಟು ಸಂಬಂಧ ಹೊಂದಿರುತ್ತವೆ.

ಕಾರಕಗಳು (ಡಿಟರ್ಮಿನೆಂಟ್ಸ್): ಸಾಮಾಜಿಕ ಹಾಗೂ ಆರ್ಥಿಕ ಅಂತಸ್ತು, ಬುದ್ಧಿ ಶಕ್ತಿ, ಅಭಿಕ್ಷಮತೆ, ಸಾಮಾಜಿಕ ಪಾತ್ರ ನಿರೀಕ್ಷಣೆ (ಸೋಷಿಯಲ್ ರೋಲ್ ಎಕ್ಸ್‌ಪೆಕ್ಟೇಷನ್), ವ್ಯಕ್ತಿತ್ವ ಅನುಭವ ಮೊದಲಾದ ಕಾರಕಗಳು ಅಭಿರುಚಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆಯೆಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ. ವಿವಿಧ ಪಠ್ಯವಿಷಯ, ಕಸಬು ಮತ್ತು ಹವ್ಯಾಸಗಳ ಮೇಲಿನ ಇಷ್ಟಾನಿಷ್ಟಗಳು ಸಾಮಾಜಿಕ ಅಂತಸ್ತಿಗೆ ಅನುಗುಣವಾಗಿ ವ್ಯತ್ಯಾಸ ಹೊಂದುತ್ತವೆಂಬುದನ್ನು ಸ್ಟ್ರಾಂಗ್ ಮತ್ತು ಇತರರು ತಮ್ಮ ಅಧ್ಯಯನಗಳಿಂದ ತೋರಿಸಿದ್ದಾರೆ. ಅಲ್ಲದೆ, ಸಾಮಾಜಿಕ ಆರ್ಥಿಕ ಅಂತಸ್ತು, ಅಭಿರುಚಿಯ ಬೆಳವಣಿಗೆ ಮತ್ತು ಪ್ರಕಾಶನದ ಮೇಲೂ ಪ್ರಭಾವ ಬೀರುತ್ತದೆ. ಉದಾಹರಣೆಗೆ, ಮಧ್ಯಮವರ್ಗ ಮತ್ತು ಉನ್ನತ ಮಧ್ಯಮವರ್ಗದ ಪುರುಷರು ಆಯ್ಕೆ ಮಾಡಬಹುದಾದ ವೃತ್ತಿಗಳ ಮುನ್ಸೂಚನೆ (ಪ್ರೆಡಿಕ್ಷನ್) ಕೊಡುವುದರಲ್ಲಿ ಅಂಶಮಾಲಾಭಿರುಚಿಗಳು ಸಮರ್ಥವಾಗಿವೆ ಎಂಬುದನ್ನು ಮೆಕಾರ್ಥರ್ ಮತ್ತು ಸ್ಟೀವನ್ಸ್ ಕಂಡುಹಿಡಿದ್ದಾರೆ.

ಅಭಿರುಚಿಗಳ ಬೆಳವಣಿಗೆಯಲ್ಲಿ, ಅಭಿಕ್ಷಮತೆಗಳು ಪ್ರಮುಖ ಪಾತ್ರವಹಿಸುತ್ತವೆ ಎಂಬುದು ಅಭಿರುಚಿಪರಿಣತರ ಅಭಿಮತ. ಗೆಲುವು, ಪುರಸ್ಕಾರ ಮತ್ತು ತೃಪ್ತಿಗಳನ್ನು ಪಡೆಯುವುದರಲ್ಲಿ ಸಾಮರ್ಥ್ಯದ (ಎಬಿಲಿಟಿ) ಪಾತ್ರವೂ ಮಹತ್ತ್ವದ್ದೆಂದು ಅವರು ಕೂಡ ಹೇಳಿದ್ದಾರೆ. ವ್ಯಕ್ತಿತ್ವ ಮತ್ತು ಅಭಿರುಚಿಗಳಿಗೆ ಸಂಬಂಧಪಟ್ಟ ಸಾಹಿತ್ಯದ ಸಮೀಕ್ಷೆಯಲ್ಲಿ ಅಭಿರುಚಿಯ ಬೆಳವಣಿಗೆ ಅಭಿಕ್ಷಮತೆಗಳಿಂದ ಪ್ರಭಾವಿತವಾಗುವುದಕ್ಕೆ ಬದಲು, ವ್ಯಕ್ತಿತ್ವದ ಬೆಳವಣಿಗೆಯ ಒಂದು ಭಾಗವಾಗಿದೆ ಎಂದು ಡಾರ್ಲೆ ಮತ್ತು ಹೆಗನ್ ಹೇಳಿದ್ದಾರೆ. ಅವರ ಅಭಿಪ್ರಾಯದಲ್ಲಿ, ಪರಹಿತಭಾವ (ಆಲ್ಟ್ರುಯಿಸಮ್) ಮತ್ತು ಘನತೆಗಳು ಅಭಿರುಚಿಗಳ ಪ್ರಮುಖ ಕಾರಕಗಳು. ಆದರೆ ಯಾವುದಾದರೊಂದು ಅಭಿರುಚಿಕಾರಕವನ್ನೇ ಏಕೈಕ ಕಾರಕವೆಂದು ಪರಿಗಣಿಸುವುದು, ಸಮಸ್ಯೆಯನ್ನು ಹೆಚ್ಚು ಸರಳೀಕರಿಸಿದಂತೆ ಆಗುತ್ತದೆಂಬ ಸೂಪರನ ಅಭಿಪ್ರಾಯ ಸಮಂಜಸವಾಗಿದೆ. ವಾಸ್ತವವಾಗಿ, ಅಭಿರುಚಿಗಳ ರೂಪಣದಲ್ಲಿ ಮೇಲೆ ಹೇಳಿದ ಎಲ್ಲ ಕಾರಕಗಳ ಪಾತ್ರವೂ ಇದೆ.

**ಮಾಪನ** : ಅಭಿರುಚಿಗಳನ್ನು, ಅವುಗಳ ಅಭಿವ್ಯಕ್ತಿ, ಪ್ರಕಾಶನ, ಪರೀಕ್ಷೆಗಳು ಮತ್ತು ಅಂಶಮಾಲೆಗಳ ಮೂಲಕ ಅಧ್ಯಯನ ಮಾಡಬಹುದು. ಒಬ್ಬ ವ್ಯಕ್ತಿ, ಯಾವುದಾದರೂ ಚಟುವಟಿಕೆ ವಿಷಯ ಅಥವಾ ವಸ್ತುಗಳ ವಿಷಯವಾಗಿ ಭಾಷೆಯ ಮೂಲಕ ವ್ಯಕ್ತಪಡಿಸುವ ಇಷ್ಟಾನಿಷ್ಟಗಳೆಲ್ಲ ಅಭಿವ್ಯಕ್ತಾಭಿರುಚಿಗಳು. ಆದರೆ ಅವುಗಳಲ್ಲಿ ಕಾರ್ಯತಃ ನಿರತವಾಗಿರುವಾಗ, ಅವುಗಳಿಂದ ಆಕರ್ಷಿತ ಅಥವಾ ಅಪಕರ್ಷಿತವಾಗುವುದು ಪ್ರಕಾಶಿತಾಭಿರುಚಿಗಳು. ಅಭಿರುಚಿಪರೀಕ್ಷೆಗಳು, ಅವಧಾನ (ಅಟೆನ್ಷನ್) ಸ್ಮೃತಿ ಶಬ್ದಸಂಪತ್ತು ಮೊದಲಾದವುಗಳ ಆಧಾರದ ಮೇಲೆ ಅಭಿರುಚಿಗಳು, ನಿರ್ಧರಿತವಾಗುತ್ತವೆ. ಅಭಿರುಚಿ ಅಂಶಮಾಲೆಗಳು ವ್ಯಾಪಕವಾಗಿ ಉಪಯೋಗದಲ್ಲಿವೆಯಲ್ಲದೆ, ಅವುಗಳಿಂದ ಗಣನೀಯ ಪ್ರಯೋಜನವಾಗಿದೆ ಯೆಂದೂ ಹೇಳಬಹುದು.

ಅಭಿರುಚಿ ಅಂಶಮಾಲೆಯಲ್ಲಿ, ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪ್ರತಿಬಿಂಬಿಸುವ ಅನೇಕ ಅಂಶಗಳು ಇರುತ್ತವೆ. ಪರೀಕ್ಷಾರ್ಥಿ ಅವುಗಳಿಗೆ ತನ್ನ ಒಲವುಗಳನ್ನು ವ್ಯಕ್ತಪಡಿಸುತ್ತಾನೆ. ಆತನ ಅನುಕ್ರಿಯೆಗಳನ್ನು (ರೆಸ್ಪಾನ್ಸಸ್) ಪಾರಿಮಾಣಿಕ ವಿಶ್ಲೇಷಣೆಯ ಮೂಲಕ, ವಿವಿಧವೃತ್ತಿ ಅಥವಾ ಕಾರ್ಯಕ್ಷೇತ್ರಗಳಲ್ಲಿ ಆತನಿಗೆ ಇರಬಹುದಾದ ಅಭಿರುಚಿಗಳನ್ನು ಸಾಪೇಕ್ಷವಾಗಿ ತಿಳಿಸುವ ಒಂದು ಪ್ರಾಪ್ತಾಂಕಗಳ ಸರಣಿಯನ್ನು (ಸೀರೀಸ್ ಆಫ್ ಸ್ಕೋರ್ಸ್) ಪಡೆಯಬಹುದು.

ಅಭಿರುಚಿಗಳ ಸ್ವಭಾವ ಮತ್ತು ಮಹತ್ತ್ವವನ್ನು ತಿಳಿಯುವುದರಲ್ಲಿ ಅಭಿರುಚಿ ಅಂಶಮಾಲೆಗಳು ಬಹುಮಟ್ಟಿಗೆ ಉಪಯುಕ್ತವಾಗಿವೆ. ಅವುಗಳ ಮೂಲಕ ಅಧಿಕಸಂಖ್ಯೆಯಲ್ಲಿ ಅಧ್ಯಯನಗಳು ನಡೆದಿವೆಯಲ್ಲದೆ, ಅಪೂರ್ವಜಯವೂ ಲಭಿಸಿದೆಯೆಂದು ಹೇಳಬಹುದು.

ಔದ್ಯೋಗಿಕಾಭಿರುಚಿಗಳಲ್ಲಿ ಅಂತರ್ಗತವಾಗಿರುವ ವೈವಿಧ್ಯವನ್ನು ಅರ್ಥಮಾಡಿಕೊಳ್ಳಲು, ಕಾರಕಾಂಶ ವಿಶ್ಲೇಷಣೆಯೂ ಬಹುಮಟ್ಟಿಗೆ ಸಹಕಾರಿಯಾಗಿದೆ. ಈ ವಿಧಾನದ ಉಪಯುಕ್ತತೆಯ ವಿಷಯದಲ್ಲಿ ಮನಶ್ಶಾಸ್ತ್ರಜ್ಞ ಸ್ಟ್ರಾಂಗ್ ತನ್ನ ಅನುಮಾನವನ್ನು ವ್ಯಕ್ತಪಡಿಸಿದ್ದಾಗ್ಯೂ, ಔದ್ಯೋಗಿಕ ಅಭಿರುಚಿಗಳಲ್ಲಿ ಕಾರ್ಯಾತ್ಮಕ ಏಕತೆ ಇರುವುದಾದರೆ, ಅದನ್ನು ಗುರುತಿಸಿ ನೇರವಾಗಿ ಅಳತೆ ಮಾಡಲು ಸಾಧ್ಯವಾದ ಪರೀಕ್ಷೆಗಳನ್ನು ರಚಿಸಬೇಕು ಎಂದು ಆತ ಹೇಳಿದ್ದಾನೆ. ಅದರಂತೆ, ಔದ್ಯೋಗಿಕಾಭಿರುಚಿಯ ಕಾರಕಾಂಶಗಳು ನೈಜಮಾನಸಿಕ ಏಕತೆಗಳಾಗಿವೆ ಎಂಬ ನಂಬುಗೆಯನ್ನು ಗಿಲ್‌ಫರ್ಡ್ ಮತ್ತು ಸಂಗಡಿಗರ ಸಂಶೋಧನೆಗಳು ಸ್ಥಿರಪಡಿಸುತ್ತವೆ. ಇಲ್ಲಿಯವರೆಗೆ ನಡೆದಿರುವ ಕಾರಕಾಂಶ ವಿಶ್ಲೇಷಣಾಧ್ಯಯನಗಳ ಆಧಾರದ ಮೇಲೆ, ಬಹುಮುಖ್ಯವಾಗಿ, ಹೊರಾಂಗಣ, ತಾಂತ್ರಿಕ, ವೈಜ್ಞಾನಿಕ, ಸಾಮಾಜಿಕ ಶ್ರೇಯಸ್ಸು, ಸೌಂದರ್ಯಾತ್ಮಕ, ಗುಮಾಸ್ತೆ, ವಾಣಿಜ್ಯ ವ್ಯವಹಾರ ಮೊದಲಾದ ಅಭಿರುಚಿಕಾರಕಾಂಶಗಳನ್ನು ಗುರುತಿಸಲಾಗಿದೆ.

ಅಂಶಮಾಲೆಗಳು; ಅಭಿರುಚಿಗಳ ವಿಷಯವಾಗಿ, 1919–20ರಲ್ಲಿ ಅಮೆರಿಕದ ಕಾರ್ನಿ ತಾಂತ್ರಿಕಸಂಸ್ಥೆಯಲ್ಲಿ ನಡೆದ ವಿಚಾರಗೋಷ್ಠಿಯ ಫಲವಾಗಿ, ಅನೇಕ ಅಭಿರುಚಿ ಅಂಶಮಾಲೆಗಳ ರಚನೆಯಾಯಿತು. ಅವುಗಳ ರಚನೆಯಲ್ಲಿ ಬಹು ಮುಖ್ಯವಾಗಿ ಎರಡು ಅಂಶಗಳಿಗೆ ಗಮನಕೊಡಲಾಯಿತು. ಮೊದಲನೆಯದಾಗಿ, ಅಂಶಮಾಲೆಯಲ್ಲಿರಬೇಕಾದ ಅಂಶಗಳಿಗೆ, ಪರೀಕ್ಷಾರ್ಥಿಯ ಜೀವನದ ವಿವಿಧರಂಗಗಳ ಚಟುವಟಿಕೆಗಳನ್ನು ಪ್ರತಿಬಿಂಬಿಸುವ ಸಾಮರ್ಥ್ಯವಿರಬೇಕು. ಅಂದರೆ, ಆತ ತನ್ನ ದೈನಂದಿನ ಜೀವನದಲ್ಲಿ ಸಾಮಾನ್ಯವಾಗಿ ಪಡೆಯಬಹುದಾದ ಅನುಭವಗಳಿಗೆ ಅನುಗುಣವಾಗಿರಬೇಕು. ಎರಡನೆಯದಾಗಿ, ಪರೀಕ್ಷಾರ್ಥಿ ವ್ಯಕ್ತಪಡಿಸಿದ ಅನುಕ್ರಿಯೆಗಳಿಗೆ ಅನುಭವ ಜನ್ಯ (ಎಂಪಿರಿಕಲ್) ಕೀಲಿಕೈಗಳನ್ನು ರೂಪಿಸುವಂತಿರಬೇಕೆಂಬುದು. ಇದು ಸಾಧ್ಯವಾಗಬೇಕಾದರೆ, ಒಂದು ವೃತ್ತಿಯಲ್ಲಿರುವ ಜನರ ಅಭಿರುಚಿಗಳಲ್ಲಿ ಸಾಮ್ಯವೂ ಮತ್ತು ಇತರ ವೃತ್ತಿಗಳಲ್ಲಿರುವ ಜನರ ಅಭಿರುಚಿಗಳಿಂದ ಭಿನ್ನತೆಯೂ ಇರಬೇಕಾದುದು ಅವಶ್ಯ. ಅಲ್ಲದೆ, ವಿವಿಧ ವೃತ್ತಿಸಮೂಹಗಳ ಅಭಿರುಚಿಗಳಲ್ಲಿರುವ ಪರಸ್ಪರ ವ್ಯತ್ಯಾಸ ಕೇವಲ ವೃತ್ತಿಚಟುವಟಿಕೆಗಳಿಗೆ ಸೀಮಿತವಾಗಿರದೆ, ವೃತ್ತಿಜೀವನದ ಇತರ ರಂಗಗಳಾದ ಹವ್ಯಾಸಗಳು, ಕ್ರೀಡೆಗಳು, ಸಾಮಾಜಿಕ ಸಂಬಂಧಗಳು–ಇವೇ ಮೊದಲಾದವುಗಳಲ್ಲೂ ಕಂಡುಬರಬೇಕು.

**ಸ್ಟ್ರಾಂಗನ ಔದ್ಯೋಗಿಕಾಭಿರುಚಿಸೂಚಿ :** ಮೇಲ್ಕಂಡ ತತ್ತ್ವಗಳನ್ನನುಸರಿಸಿ ರಚಿತವಾದ ಅಭಿರುಚಿ ಅಂಶಮಾಲೆಗಳಲ್ಲಿ ಸ್ಟ್ರಾಂಗನ ಈ ಸೂಚಿ ಅತ್ಯಂತ ಮಹತ್ವಪೂರ್ಣವಾದುದೂ ಉಪಯುಕ್ತವಾದುದೂ ಆಗಿದೆ. ಅದರ ಮೇಲೆ ನಡೆದಿರುವ, ನಡೆಯುತ್ತಿರುವ ಸತತಸಂಶೋಧನೆ, ಪರಿಷ್ಕರಣ ಮತ್ತು ವ್ಯಾಪ್ತಿಯ ದೃಷ್ಟಿಯಿಂದಲೂ ಈ ಅಂಶಮಾಲೆ ವಿಶಿಷ್ಟವಾದುದು.

ಸ್ಟ್ರಾಂಗನ ಅಂಶಮಾಲೆಯಲ್ಲಿ, ಪುರುಷರು ಮತ್ತು ಸ್ತ್ರೀಯರಿಗೆ ಪ್ರತ್ಯೇಕ ರಚನಾ ಬಂಧಗಳಿವೆ (ಫಾರಮ್ಸ್). ಪುರುಷರಿಗಾಗಿರುವ ರಚನಾಬಂಧದಲ್ಲಿ 400 ಅಂಶಗಳಿವೆ. ವೃತ್ತಿಗಳು; ಪಾಠ್ಯವಿಷಯಗಳು; ಮನೋರಂಜನೆಗಳು; ಗಡಿಯಾರ ರಿಪೇರಿ ಮಾಡುವುದು, ಭಾಷಣ ಮಾಡುವುದು – ಇವೇ ಮೊದಲಾದ ಹಲವು ಬಗೆಯ ಚಟುವಟಿಕೆಗಳು, ಈ ವಿಭಾಗಗಳಲ್ಲಿರುವ ಪ್ರತಿಯೊಂದು ಅಂಶಕ್ಕೂ ಪರಿಕ್ಷಾರ್ಥಿ ಅದು ತನಗೆ ಪ್ರಿಯವಾದುದೊ ಅಪ್ರಿಯವಾದುದೊ ಅಥವಾ ಅದರ ವಿಷಯವಾಗಿ ತನಗಿರುವುದು ಉದಾಸೀನಭಾವವೊ ಎಂಬುದನ್ನು ವ್ಯಕ್ತಪಡಿಸಬೇಕು. ಉಳಿದ ಮೂರು ವಿಭಾಗಗಳು, ಚಟುವಟಿಕೆಗಳು, ಜೊತೆಗೂಡಿರುವ ಅಂಶಗಳು ಮತ್ತು ಸಾಮರ್ಥ್ಯ ಹಾಗೂ ಇತರ ಲಕ್ಷಣಗಳು. ಇವುಗಳಲ್ಲಿ ಮೊದಲನೆಯ ವಿಭಾಗದ ಅಂಶಗಳಿಗೆ, ಪರೀಕ್ಷಾರ್ಥಿ ಇಷ್ಟಾನುಸಾರವಾಗಿ ಶ್ರೇಣ್ಯಾಂಕಗಳನ್ನು (ರ‍್ಯಾಂಕ್ಸ್) ಬರೆಯಬೇಕು; ಎರಡನೆಯದಾಗಿ ವಿಭಾಗದ ಅಂಶಗಳನ್ನು ಪರಸ್ಪರ ಹೋಲಿಸಿ ಆಯ್ಕೆಯನ್ನು ಸೂಚಿಸಬೇಕು ಮತ್ತು ಮೂರನೆಯ ವಿಭಾಗದಲ್ಲಿ ಕೊಟ್ಟಿರುವ ಸಾಮರ್ಥ್ಯ ಮತ್ತು ಇತರ ಲಕ್ಷಣಗಳಿಗೆ ತನಗನುಗುಣವಾದ ರೀತಿಯಲ್ಲಿ ಬೆಲೆ ಕಟ್ಟಬೇಕು.

ಸ್ಟ್ರಾಂಗನ ಅಂಶಮಾಲೆಗೆ 50ಕ್ಕಿಂತಲೂ ಹೆಚ್ಚು ವೃತ್ತಿಗಳಿಗೆ ಅಂಗೀಕರಣ ಕೀಲಿಕೈಗಳನ್ನು ರೂಪಿಸಲಾಗಿದೆ. ಅವುಗಳ ರೂಪಣೆ, ಒಂದು ವೃತ್ತಿಯಲ್ಲಿರುವ ಉದ್ಯೋಗಸ್ಥರ ಅಭಿರುಚಿಗಳು, ಸಾಮಾನ್ಯ ಜನರ ಅಭಿರುಚಿಗಳಿಂದ ಎಷ್ಟು ಭಿನ್ನವಾಗಿದೆ ಎಂಬ ತತ್ತ್ವವನ್ನವಲಂಬಿಸಿದೆ. ಅಂದರೆ, ಯಾವುದಾದರೂ ವೃತ್ತಿಯ ಜನರನ್ನು ಸಾಮಾನ್ಯ ಜನರಿಂದ ಗಮನೀಯವಾಗಿ ಪ್ರತ್ಯೇಕಿಸುವ ಸಾಮರ್ಥ್ಯವುಳ್ಳ ಅಭಿರುಚಿ ಅಂಶಗಳು, ಆ ವೃತ್ತಿ ಅಂಗೀಕರಣ ಕೀಲಿಕೈಯಲ್ಲಿ ಇರುತ್ತವೆ.

ಈ ಅಂಶಮಾಲೆಗೆ ದೊರೆಯುವ ಅನುಕ್ರಿಯೆಗಳಿಗೆ ನಿರ್ಧರಿಸಲ್ಪಟ್ಟ ಪ್ರಾಪ್ತಾಂಶಗಳನ್ನು ಸೇಕಡಾತ್ಮಕ ಪ್ರಮಾಣ (ಸ್ಟ್ಯಾಂಡರ್ಡ್) ಅಂಕಗಳನ್ನಾಗಿ ಪರಿವರ್ತಿಸಲಾಗುತ್ತದೆ. ಈ ಅಂಶಮಾಲೆಗೆ ಪ್ರಮಾಣಕಗಳನ್ನೂ (ನಾರಮ್ಸ್) ಕೊಡಲಾಗಿದೆ. ಇದಲ್ಲದೆ, ಪ್ರಾಪ್ತಾಂಕಗಳನ್ನು ಅಕ್ಷರವರ್ಗಗಳ (ಲೆಟರ್ ಗ್ರೇಡ್) ಮೂಲಕವೂ ವ್ಯಕ್ತಪಡಿಸಬಹುದು. ವೃತ್ತಿಕೀಲಿಕೈಗಳು ಮಾತ್ರವಲ್ಲದೆ ಸ್ಟ್ರಾಂಗನ ಅಂಶಮಾಲೆಗೆ ನಾಲ್ಕು ವಿಶಿಷ್ಟಕೀಲಿ ಕೈಗಳ ರಚನೆಯೂ ಆಗಿದೆ. ಅಭಿರುಚಿ ಪಕ್ವತೆ, ಪುರುಷತ್ವ, ಸ್ತ್ರೀತ್ವ, ವೃತ್ತಿ ಅಂತಸ್ತು ಮತ್ತು ವಿಶೇಷಜ್ಞತೆಯ ಮಟ್ಟ ಸ್ಪೆಷಲೈಸೇಷನ್ ಲೆವಲ್.

ಈ ಅಂಶಮಾಲೆಗೆ ವಿಷಮ–ಸಮ ವಿಶ್ವಸನೀಯತೆಗಳು ರಿಲೈಯಬಿಲಿಟೀಸ್ ಸಮ ಸಂಬಂಧ 0.8ರ ಸುತ್ತ ಕೇಂದ್ರೀಕೃತವಾಗಿದೆ. ಮೂಲತಃ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಪರೀಕ್ಷಿಸಲಾದ ವ್ಯಕ್ತಿಗಳ ಪ್ರಾಪ್ತಾಂಕಗಳಲ್ಲಿ, ದೀರ್ಘ ಕಾಲಾಂತರ ಪುನರ್ಪರೀಕ್ಷೆಗಳು ಗಮನಾರ್ಹ ಸ್ಥಿರತೆಯನ್ನು ತೋರಿಸಿವೆ. 22 ವರ್ಷಗಳಷ್ಟು ಅಂತರವಿದ್ದ ಪರೀಕ್ಷೆ ಮತ್ತು ಮರುಪರೀಕ್ಷೆಗಳಲ್ಲಿ ಪಡೆದ ಪ್ರಾಪ್ತಾಂಕಗಳಲ್ಲಿ ಸಮ ಸಂಬಂಧಗಳು ಸರಾಸರಿಯಾಗಿ 70–80ರ ವರೆಗೆ ವ್ಯತ್ಯಾಸ ಹೊಂದುವುದು ಕಂಡುಬಂದಿದೆ. ಈ ರೀತಿಯ ಅನುಗತಾಧ್ಯಯನಗಳು ಸಿಂಧುತ್ವದ ವ್ಯಾಲಿಡಿಟಿ ದೃಷ್ಟಿಯಿಂದಲೂ ಪ್ರಾರಂಭಿಕ ಅಭಿರುಚಿ ಪ್ರಾಪ್ತಾಂಕಗಳಿಗೂ ಮತ್ತು ಪ್ರಾಸಂಗಿಕ ವೃತ್ತಿ ಆಯ್ಕೆಗಳಿಗೂ ನಡುವೆ ಗಮನೀಯ ಹೋಲಿಕೆಯನ್ನು ಸೂಚಿಸುತ್ತದೆ.

ಕ್ಯೂಡರನ ಆಯ್ಕೆ ಬಂಧ: ವ್ಯಾಪ್ತ ಉಪಯುಕ್ತತೆಯುಳ್ಳ ಮತ್ತೊಂದು ಅಂಶಮಾಲೆ ಇದು. ಸ್ಟ್ರಾಂಗನ ಅಂಶಮಾಲೆಗೆ ಹೋಲಿಸಿದರೆ ಇದು ಇತ್ತೀಚಿನದಲ್ಲದೆ ಹಲವು ರೀತಿಯಲ್ಲಿ ಅದರಿಂದ ವಿಭಿನ್ನವಾದುದೂ ಆಗಿದೆ. ವಿಶಿಷ್ಟ ವೃತ್ತಿಗಳಿಗೆ ಬದಲಾಗಿ ಕಡಿಮೆ ಸಂಖ್ಯೆಯ ವಿಶಾಲ ಕಾರ್ಯಕ್ಷೇತ್ರಗಳಲ್ಲಿ ವ್ಯಕ್ತಿಗೆ ಇರಬಹುದಾದ ಅಭಿರುಚಿಗಳನ್ನು ಸಾಪೇಕ್ಷವಾಗಿ ಸೂಚಿಸುವುದೇ ಇದರ ಪ್ರಮುಖೋದ್ದೇಶ. ಮೂಲತಃ ಇದರ ಅಂಶಗಳು ತರ್ಕ ಸಿಂಧುತ್ವದ ಆಧಾರದ ಮೇಲೆ ರೂಪಿತವಾಗಿವೆ. ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಯಸ್ಕರ ಗುಂಪುಗಳ ಅನುಕ್ರಿಯೆಗಳ ಆಧಾರದ ಮೇಲೆ ವ್ಯಾಪಕವಾದ ಅಂಶ ವಿಶ್ಲೇಷಣೆ ನಡೆದಿದೆ. ಹಿರಿಯ ಮಟ್ಟದ ಅಂತರಸ್ಥಾಯಿತ್ವ ಮತ್ತು ವಿವಿಧ ಗುಂಪುಗಳ ನಡುವೆ ಪರಸ್ಪರ ಕನಿಷ್ಠ ಸಂಬಂಧವನ್ನು ತೋರಿಸುವ ಅಂಶಗಳನ್ನು ರೂಪಿಸುವುದೇ ಈ ವಿಶ್ಲೇಷಣೆಯ ಉದ್ದೇಶ.

ಈ ಅಂಶಮಾಲೆಯಲ್ಲಿ, 160 ನಿರ್ಬಂಧಿತ ಆಯ್ಕೆಯ ಅಂಶಗಳಿವೆ. ಒಂದೊಂದು ಅಂಶದಲ್ಲೂ ಮೂರು ಮೂರು ಚಟುವಟಿಕೆಗಳನ್ನು ಕೊಡಲಾಗಿದೆ. ಉದಾಹರಣೆಗೆ, ಪಕ್ಷಿಗಳ ಗೂಡು, ಮನೆ, ಪಂಜರ ಕಟ್ಟುವುದು, ಪಕ್ಷಿಗಳ ರೇಖಾಕೃತಿಗಳನ್ನು ಬರೆಯುವುದು, ಇತ್ಯಾದಿ.

ಈ ಅಂಶದಲ್ಲಿರುವ ಚಟುವಟಿಕೆಗಳು ಒಂದೊಂದೂ ಒಂದೊಂದು ಅಭಿರುಚಿಯನ್ನು ವ್ಯಕ್ತಪಡಿಸುತ್ತವೆ. ಪರೀಕ್ಷಾರ್ಥಿ ಸಾಪೇಕ್ಷವಾಗಿ ತನ್ನ ಇಷ್ಟಾನಿಷ್ಟಗಳನ್ನು ವ್ಯಕ್ತಪಡಿಸಬೇಕು. ಮೂರರಲ್ಲಿ ಹೆಚ್ಚು ಪ್ರಿಯವಾದ ಚಟುವಟಿಕೆಗೆ 2 ಅಂಕವನ್ನು, ಹೆಚ್ಚು ಅಪ್ರಿಯವಾದುದಕ್ಕೆ 0 ಅಂಕವನ್ನೂ ಉಳಿದುದಕ್ಕೆ 1 ಅಂಕವನ್ನು ಕೊಡಲಾಗುತ್ತದೆ. ಪ್ರತಿಯೊಂದು ಚಟುವಟಿಕೆಗೂ ಇತರ ಚಟುವಟಿಕೆಗಳೊಂದಿಗಿರುವ ಅದರ ಎಲ್ಲ ಹೋಲಿಕೆಗಳಿಂದ ದೊರೆತ ಅಂಕಗಳ ಮೊತ್ತವೇ ಅದರ ಪ್ರಾಪ್ತಾಂಕ. ಈ ರೀತಿಯ ಪ್ರಾಪ್ತಾಂಕಗಳನ್ನು ಪ್ರಮಾಣಾಂಕಗಳಾಗಿ ಮಾರ್ಪಡಿಸಲಾಗುತ್ತದೆ. ಇದಲ್ಲದೆ, ಪ್ರೌಢಶಾಲೆ, ಕಾಲೇಜು ಮತ್ತು ವಯಸ್ಕರ ಗುಂಪುಗಳೇ ಅಲ್ಲದೆ ಸ್ತ್ರೀ ಪುರುಷರಿಗೆ ಪ್ರತ್ಯೇಕವಾದ ಪ್ರಮಾಣಕಗಳು ಸಿದ್ಧವಾಗಿವೆ. ಜೊತೆಗೆ ಅಭಿರುಚಿಗಳ ಸಮಗ್ರ ಚಿತ್ರವನ್ನು ಕೊಡುವ ರೇಖಾಕೃತಿಗಳನ್ನೂ (ಪ್ರೊಫೈಲ್) ರೂಪಿಸಲಾಗಿದೆ.

ಆಂಶಮಾಲೆಯಲ್ಲಿನ ಅಂಶಗಳ ಆಧಾರದ ಮೇಲೆ ಕೆಳಗಿನ ವೃತ್ತಿಕ್ಷೇತ್ರಗಳಿಗೆ ಕೀಲಿಕೈಗಳನ್ನು ರೂಪಿಸಲಾಗಿದೆ.

| | | | |
|---|---|---|---|
| ತಾಂತ್ರಿಕ | ವೈಜ್ಞಾನಿಕ | ಸಾಹಿತ್ಯಾತ್ಮಕ | ಗುಮಾಸ್ತೆ |
| ಗಣನಾತ್ಮಕ | ಪ್ರೇರಕಾತ್ಮಕ | ಸಂಗೀತಾತ್ಮಕ | ಹೊರಾಂಗಣ |
| ಕಾಂಪ್ಯುಟೇಷನಲ್ ಪರ್‌ಸುಏಸಿವ್ | | ಕಲಾತ್ಮಕ | ಸಮಾಜ ಸೇವಾತ್ಮಕ |

ಕ್ಯೂಡರನ ಅಂಶಮಾಲೆಗೆ ವಿಶ್ವಸನೀಯತೆಗಳ ಪ್ರಾಪ್ತ ಸಮಸಂಬಂಧಗಳು 0.9 ಸುತ್ತಾ ಕೇಂದ್ರಿತವಾಗಿವೆ. ಈ ಅಂಶಮಾಲೆಯ ಸಿಂಧುತ್ವಕ್ಕೆ ಸಂಬಂಧಪಟ್ಟಂತೆ ಅನೇಕ ಅಧ್ಯಯನಗಳು ನಡೆದಿವೆ. ಪ್ರಾಪ್ತಾಂಕ ಮತ್ತು ಸ್ವವರ್ಗೀಕರಣಗಳ ಸಮಸಂಬಂಧ 0.39ರಿಂದ 0.66 ವರೆಗೆ ವ್ಯತ್ಯಾಸ ಹೊಂದುತ್ತದೆ.

**ಇತರ ಅಂಶಮಾಲೆಗಳು :** ಸ್ಟ್ರಾಂಗ್ ಮತ್ತು ಕ್ಯೂಡರ್ ಇವರುಗಳ ಅಂಶಮಾಲೆಗಳಲ್ಲದೆ ಇನ್ನೂ ಅನೇಕ ಉಪಯುಕ್ತ ಅಂಶಮಾಲೆಗಳು ಸಿದ್ಧವಾಗಿವೆ. ಇವುಗಳಲ್ಲಿ ಥರ್‌ಸ್ಟನ್ನನ ಅಭಿರುಚಿಪಟ್ಟಿ, ಲೀ–ಥಾರ್ಪ್ ಅಭಿರುಚಿ ಅಂಶಮಾಲೆ, ಗಿಲ್‌ಫರ್ಡ್–ಸ್ನೀಡೌಮನ್–ಜಿಮ್ಮರ್ಮನ್ ಅಭಿರುಚಿಸಮೀಕ್ಷೆ ಮುಂತಾದುವುಗಳನ್ನು ಹೆಸರಿಸಬಹುದು. ಈಗ ಬಳಕೆಯಲ್ಲಿರುವ ಅಂಶಮಾಲೆಗಳಲ್ಲಿ ಅವುಗಳ ಉದ್ದ ಮೌಲೀಕರಣ ವಿಧಾನ ಮೊದಲಾದುವುಗಳಲ್ಲಿ ಪರಸ್ಪರ ವ್ಯತ್ಯಾಸ ಕಂಡು ಬಂದರೂ ಕೆಲವು ಸಾಮಾನ್ಯ ಲಕ್ಷಣಗಳು ಅಂತರ್ಗತವಾಗಿರುವುದನ್ನು ಕಾಣಬಹುದು.

ಔದ್ಯೋಗಿಕ ಅಭಿರುಚಿಗಳಿಗೆ ಸಂಬಂಧಪಟ್ಟಂತೆ ನಮ್ಮ ದೇಶದಲ್ಲೂ ಅಲ್ಪಸ್ವಲ್ಪ ಸಂಶೋಧನೆ ನಡೆದಿದೆ. ಇದರಲ್ಲಿ ಬಹುಮುಖ್ಯವಾಗಿ ಬಿ.ಕೃಷ್ಣನ್, ಚಟರ್ಜಿ, ಜಿಂಗ್ರನ್ ರಾಷ್ಟ್ರೀಯ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆ, ರಾಷ್ಟ್ರಮಟ್ಟದಲ್ಲಿ ಒಂದು ಔದ್ಯೋಗಿಕಾಭಿರುಚಿ ಅಂಶಮಾಲೆಯನ್ನು ರಚಿಸುವ ಯೋಜನೆಯನ್ನು ಕಾರ್ಯಗತ ಮಾಡುತ್ತಿದೆ. ನಾಲ್ಕು ಭಾಷೆಗಳಲ್ಲಿ (ಕನ್ನಡ, ಹಿಂದಿ, ಮರಾಠಿ, ಇಂಗ್ಲಿಷ್) ಇದು ಸಿದ್ಧವಾಗುತ್ತಿದೆ. ಇದಕ್ಕಾಗಿ

ದೇಶದ ವಿವಿಧ ಭಾಗಗಳಲ್ಲಿ ಐದು ಕಾರ್ಯಕ್ಷೇತ್ರಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮನೋವಿಜ್ಞಾನ ವಿಭಾಗವೂ ಒಂದು. ಪ್ರೌಢಶಾಲೆ ಮತ್ತು ಕಾಲೇಜು ಮಟ್ಟಗಳಿಗೆ ಪ್ರತ್ಯೇಕ ರಚನಾಬಂಧಿಗಳು ರೂಪಗೊಳ್ಳುತ್ತಿವೆ. ಈ ಯೋಜನೆ ಯಶಸ್ವಿಯಾಗಿ ಪೂರ್ಣಗೊಂಡಾಗ, ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನಗಳಿಗೆ ಅತ್ಯಂತ ಉಪಯುಕ್ತವಾದ ಒಂದು ಸಾಧನ ಲಭ್ಯವಾಗುವುದರಲ್ಲಿ ಸಂದೇಹವಿಲ್ಲ. (ಡಿ.)

**ಅಭಿವ್ಯಕ್ತಿರೀತಿಯ ನಾಟಕ :** ಅಭಿವ್ಯಕ್ತಿವಾದದ ಉತ್ಪನ್ನ, ಇದು ಆರಂಭವಾದುದು ಜರ್ಮನಿ, ಸ್ವೀಡನ್ ದೇಶಗಳಲ್ಲಿ; ಹಾಪ್ಟ್‌ಮನ್, ಸ್ಟ್ರಿಂಡ್‌ಬರ್ಗ್ ಮೊದಲಾದವರ ಕೃತಿಗಳಲ್ಲಿ. ಮನುಷ್ಯನ ಮನಸ್ಸಿನಲ್ಲಿ ಉದ್ಭವಿಸುವ ಭಾವಗಳನ್ನೂ ಆಲೋಚನೆಗಳನ್ನೂ ನಾಟಕಕಾರ ಆದಷ್ಟು ಪ್ರಾಮಾಣಿಕತೆಯಿಂದ ವ್ಯಕ್ತಪಡಿಸಬೇಕಾದುದು ಅಗತ್ಯವೆಂದು ಈ ವರ್ಗದ ನಾಟಕಕಾರರ ಮತ್ತು ನಾಟಕಪದ್ಧತಿಯ ಅಭಿಪ್ರಾಯ. ಇದರ ಫಲವಾಗಿ ಇಂಥ ಬರೆಹಗಳಲ್ಲಿ ಬರುವ ಸಂಭಾಷಣೆ ಥಟ್ಟನೆ ಹೊರಬೀಳುವ, ಪರಸ್ಪರ ಸಂಬಂಧವಿರಬೇಕಾಗಿಲ್ಲದ, ಆಲೋಚನೆಗಳ ಸ್ಫೋಟನೆಗನುಸಾರವಾಗಿ ಮಾತುಗಳಿಂದ ತುಂಬಿರುತ್ತದೆ. ಮಾತು ಮನಸ್ಸಿನ ಕನ್ನಡಿಯಾಗಿರುತ್ತದೆ. ಸಣ್ಣ ಸಣ್ಣ ದೃಶ್ಯಗಳು, ತುಂಡು ತುಂಡು ವಾಕ್ಯಗಳು, ಸಾಂಕೇತಿಕ ಪಾತ್ರಗಳು ಇಂಥ ನಾಟಕಗಳ ವೈಶಿಷ್ಟ್ಯ. ಮನಸ್ಸಿನ ಸ್ಥಿತಿಗೆ ಪ್ರಾಧಾನ್ಯವಿರುವುದರಿಂದ ವಾಸ್ತವಿಕ ದೃಶ್ಯಪರಿಕರಗಳಿಗೆ ಪ್ರಾಮುಖ್ಯ ಕಡಿಮೆ. ಪಾತ್ರಗಳು ವಿವಿಧ ಶಕ್ತಿಗಳ, ಪ್ರವೃತ್ತಿಗಳ ಪ್ರತಿನಿಧಿಗಳಾಗುತ್ತವೆ; ನಾಟಕ ಭಾವನಾಮಯವಾಗುತ್ತದೆ. ಈ ನಾಟಕಗಳು ಸಮಕಾಲೀನ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುತ್ತಿದ್ದವು. ಆದರೆ ಇವು ತೀರ ವ್ಯಕ್ತಿಕೇಂದ್ರಿತವಾದವು, ನಾಟಕಕಾರನೇ ತನ್ನ ನಾಟಕದ ನಾಯಕನೂ ಆಗುವ ಪ್ರವೃತ್ತಿ ಇವುಗಳಲ್ಲಿ ಕಾಣುತ್ತದೆ. (ಎಂ.ಆರ್.)

**ಅಭಿವ್ಯಕ್ತಿವಾದ :** ವಿಮರ್ಶೆಯ ಒಂದು ತತ್ತ್ವ (ಎಕ್ಸ್‌ಪ್ರೆಷನಿಸಂ) ಆಧುನಿಕ ಸೌಂದರ್ಯ ಮೀಮಾಂಸೆಯಲ್ಲಿ ಗಣ್ಯಸ್ಥಾನವನ್ನು ಗಳಿಸಿರುವ ವಾದಗಳಲ್ಲೊಂದು. ಕಲೆ ಕೇವಲ ಬಾಹ್ಯ ಪ್ರಕೃತಿಯ ಅನುಕರಣೆಯಲ್ಲ, ಕಲೆಗಾರನ ಆಂತರಿಕ ಅನುಭವಗಳನ್ನು ವ್ಯಕ್ತಪಡಿಸುವುದೇ ಅದರ ಗುರಿ ಎಂಬ ಅಭಿಪ್ರಾಯವೇ ಈ ವಾದದ ಆಧಾರ. ಅಗೋಚರವಾದ ಭಾವಗಳಿಗೂ ಮನೋವೃತ್ತಿಗಳಿಗೂ ಇದು ಪ್ರಾಧಾನ್ಯ ನೀಡುತ್ತದೆ. ನಮಗಿರುವ ಪ್ರಪಂಚ ಪರಿಚಯ ಕೇವಲ ಕಣ್ಣು, ಕಿವಿಗಳಿಂದ ಬಂದುದಲ್ಲ; ಅದನ್ನು ಅರಿತುಕೊಳ್ಳುವುದರಲ್ಲಿ ನಮ್ಮ ಅಂತರ್ದೃಷ್ಟಿ ಮುಖ್ಯ ಪಾತ್ರವಹಿಸುತ್ತದೆ; ಅಂತರ್ದೃಷ್ಟಿಯ ಪ್ರಾಮಾಣಿಕವಾದ ಅಭಿವ್ಯಕ್ತಿಯೇ ಕಲೆಯ ಕರ್ತವ್ಯ ಎಂಬುದು ಅಭಿವ್ಯಕ್ತಿವಾದಿಗಳ ಮತ. ಕಲೆಗಾರನ ಗಮನಕ್ಕೆ ಬರುವ ವಸ್ತುಗಳು ಅವನ ಮನಸ್ಸಿನ ಮೇಲೆ ತೀಕ್ಷ್ಣವೂ, ಸ್ಪಷ್ಟವೂ ಆದ ಪರಿಣಾಮವನ್ನು ಉಂಟುಮಾಡುತ್ತವೆ. ಕಲೆಗಾರ ಹೀಗೆ ಪಡೆಯುವ ಮಾನಸಿಕ ಅನುಭವವೇ ಕಲೆಯ ಮೊದಲ ಹಂತ; ಅದನ್ನು ಬಣ್ಣಗಳ, ಶಿಲಾಕೃತಿಗಳ, ಪದಗಳ ಮೂಲಕ ಇತರರಿಗೆ ಅರಿವಾಗುವಂತೆ ಪ್ರಚುರಪಡಿಸುವುದು (ಅಭಿವ್ಯಕ್ತಿಪಡಿಸುವುದು) ಎರಡನೆಯ ಮಜಲು. ಯಾರ ಅಂತರ್ದೃಷ್ಟಿ ತೀಕ್ಷ್ಣವೂ, ಸ್ಪಷ್ಟವೂ ಆಗಿರುತ್ತದೋ ಅವನ ಅಭಿವ್ಯಕ್ತಿಯೂ ಪರಿಣಾಮಕಾರಿಯಾಗಿರುತ್ತದೆ. ಕಲೆಗಾರ ತನ್ನ ಮನಸ್ಸಿನಲ್ಲಿರುವುದನ್ನು ಮುಚ್ಚುಮರೆಯಿಲ್ಲದೆ ವ್ಯಕ್ತಪಡಿಸಬೇಕು. ಅದಕ್ಕಾಗಿ ಅವನು ಅಗತ್ಯವಿದ್ದರೆ ಇಂದ್ರಿಯಗೋಚರವಾಗುವ ವಸ್ತುಗಳ ರೂಪರೇಷೆಗಳನ್ನು ಬದಲಾಯಿಸಬಹುದು.

ಅಭಿವ್ಯಕ್ತಿವಾದ ಮೊದಲು ಪ್ರಚಾರಕ್ಕೆ ಬಂದುದು ಚಿತ್ರಕಲೆಯಲ್ಲಿ; ಅನಂತರ ಶಿಲ್ಪಕಲೆ, ಸಾಹಿತ್ಯ ಮೊದಲಾದ ಇತರ ಕ್ಷೇತ್ರಗಳಿಗೂ ಹಬ್ಬಿತು. ಇದನ್ನು ಮೊದಲು ಅಧಿಕಾರಪೂರ್ವಕವಾಗಿ ಎತ್ತಿಹಿಡಿದ ಸೌಂದರ್ಯಮೀಮಾಂಸಕ ಇಟಲಿಯ ಬೆನೆಡಿಟೊ ಕ್ರೋಚೆ **(ನೋಡಿ– ಕ್ರೋಚೆ,ಬೆನೆಡಿಟೋ)** (ಎಂ.ಆರ್.)

ಅಭಿವ್ಯಕ್ತಿವಾದ ಎನ್ನುವುದು ಮೊದಲು ಬಳಕೆಯಾದದ್ದು 1911 ಏಪ್ರಿಲ್‌ನಲ್ಲಿ. ಜರ್ಮನ್ ಚಿತ್ರಕಲಾವಿದ ಅಗಸ್ಟ್ ಹರ್ವೆಯ ಚಿತ್ರಗಳ ವಿಮರ್ಶೆಯಲ್ಲಿ ಬಳಕೆಯಾಯಿತು; ಸಾಹಿತ್ಯಕ್ಕೆ ಇದು ಅನ್ವಯವಾದದ್ದು 1911 ರ ಜುಲೈನಲ್ಲಿ. ಈ ಪದ ಬಹುಬೇಗ ವಿಸ್ತಾರವಾಗಿ ಬಳಕೆಯಾದರೂ ರಿಚರ್ಡ್ ಷೆಪರ್ಡ್ ಎಂಬ ವಿಮರ್ಶಕ ಈ ಪಂಥವನ್ನು ಕುರಿತು ಹೀಗೆನ್ನುತ್ತಾನೆ: ಪ್ರಾರಂಭದಲ್ಲಿ ಅಭಿವ್ಯಕ್ತಿ ಪಂಥದ ಹಲವರು ಈ ಪದವನ್ನು ಬಳಸದೆಯೇ ಸತ್ತರು. ಇತರ ಪ್ರಮುಖ ಬರೆಹಗಾರರು ಅದನ್ನು ಒಪ್ಪಲಿಲ್ಲ. ಈ ಪಂಥಕ್ಕೆ ಸೇರಿದ್ದವರಲ್ಲಿ ಇತರರು ಅದನ್ನು ನಿರಾಕರಿಸುತ್ತಾರೆ. ಇಲ್ಲವೇ ಅದರೊಡನೆ ಸಂಬಂಧ ಇಟ್ಟುಕೊಳ್ಳುವುದಕ್ಕೆ ಬಯಸುವುದಿಲ್ಲ.

ಕಲಾಕೃತಿಯ ಉದ್ದೇಶ ಕಲಾವಿದನ ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲದೆ ವಸ್ತುವಿನ ಯಥಾವತ್ತಾದ ನಿರೂಪಣೆಯಲ್ಲ ಎನ್ನುವುದು ಈ ಪಂಥದ ನಿಲುವು. ಇದು ರೋಮ್ಯಾಂಟಿಸಿಸಂ ಅನ್ನು, ವಾಸ್ತವತಾವಾದವನ್ನು ನಿರಾಕರಿಸಿತು. ಅಭಿವ್ಯಕ್ತಿವಾದ ಕೃತಿಗಳ ಆಶಯ ಮತ್ತು ತಂತ್ರ ಬದಲಾಗುತ್ತ ಹೋದವು. ಒಂದನೆಯ ಮಹಾಯುದ್ಧ ಮುಕ್ತಾಯವಾಗಿ ಈ ಕಲಾವಿದರು ನಿರೀಕ್ಷಿಸಿದ್ದ ಕ್ರಾಂತಿ ಆಗದೆ ಹೋದಾಗ ಈ ಸಂಘದ ಕಲಾವಿದರಲ್ಲಿ ತೀವ್ರ ನಿರಾಸೆ ಮೂಡಿ ಕೆಲವರು ಆತ್ಮಹತ್ಯೆಯನ್ನೂ ಮಾಡಿಕೊಂಡರು. ಇದರ ಸ್ಥಾನಕ್ಕೆ ದಾದಾವಾದ ಬಂದಿತು. (ಎಲ್.ಎಸ್.ಎಸ್)

**ಅಭಿಷೇಕ :** ಇದಕ್ಕೆ ಪಟ್ಟಾಭಿಷೇಕ, ಮಕುಟಾಭಿಷೇಕ ಎಂದು ಸಾಮಾನ್ಯವಾದ ಅರ್ಥವಾದರೂ ಮಂಗಳಸ್ನಾನ, ಮಂತ್ರ, ಪ್ರೋಕ್ಷಣೆ ಎನ್ನುವ ಅರ್ಥವೂ ಉಂಟು. ಮೂಲ ಅರ್ಥ ಸುರಿಯುವುದು (ಅಭಿ+ಷಿಚ್). ರಾಜಸೂಯಯಾಗಕ್ಕೆ ಸಂಬಂಧಪಟ್ಟಂತೆ ಅಭಿಷೇಕದ ವಿಧಿಯನ್ನು ಕೃಷ್ಣಯಜುರ್ವೇದದಲ್ಲೂ ಕೆಲವು ಬ್ರಾಹ್ಮಣಗಳಲ್ಲೂ ಕಾಣಬಹುದು. ನಮ್ಮ ದೇಶದಲ್ಲಿ ಮಾತ್ರವಲ್ಲದೆ, ಪ್ರಪಂಚದ ಎಲ್ಲ ದೇಶಗಳಲ್ಲೂ ರಾಜರಿಗೂ ಅಧಿಕಾರಿಗಳಿಗೂ ಇಂಥ ಅಭಿಷೇಚನ ದೀಕ್ಷೆ ಒದಗುತ್ತಿದ್ದುದು ತಿಳಿದುಬರುತ್ತದೆ. ಅಸಂಸ್ಕೃತಜನಾಂಗಗಳಲ್ಲಿ ವೀರರಿಗೂ ಗಣನಾಯಕರಿಗೂ ರಕ್ತಸ್ನಾನ ನಡೆಯುತ್ತಿದ್ದುದರಿಂದ ಅವರ ಶೌರ್ಯವೃದ್ಧಿ ಯಾಗುವುದೆಂಬ ನಂಬಿಕೆಯಿದ್ದಿತು. ಆದರೆ ಭಾರತದೇಶದಲ್ಲಿ ಅಭಿಷೇಕದ ವಿಚಾರವಾಗಿ ಶಾಸ್ತ್ರವೊಂದನ್ನೇ ಸಿದ್ಧಮಾಡಿದರು. ಮೊದಲಿಗೆ ರಾಜಾಧಿರಾಜರಾದ ಚಕ್ರವರ್ತಿಗಳಿಗೆ ಮಾತ್ರ ಅಭಿಷೇಕದೀಕ್ಷೆ ನಡೆಯುತ್ತಿತ್ತು. ಐತರೇಯ ಬ್ರಾಹ್ಮಣದಲ್ಲಿ ಸರ್ವತೋಧಿಕನಾದ ರಾಜ ಅಭಿಷೇಕಕ್ಕೆ ಯೋಗ್ಯನೆಂಬ ಮಾತು ಬರುತ್ತದೆ. ಮಹಾಭಾರತದಲ್ಲಿ ಎಲ್ಲ ದೇಶಗಳಲ್ಲೂ ತನ್ನ ಔನ್ನತ್ಯವನ್ನು ಸಾಧಿಸಿಕೊಂಡ ಯುಧಿಷ್ಠಿರ ರಾಜಸೂಯಯಾಗಮಾಡಿ ಅದರ ಅಂಗವಾಗಿ ಅಭಿಷಿಕ್ತನಾದ ವಿವರಬರುತ್ತದೆ. ಇದು ಸಭಾಪರ್ವದಲ್ಲೂ ಯುದ್ಧ ಮುಗಿದು ಕೌರವರೆಲ್ಲ ಹತರಾದ ಮೇಲೆ ಶಾಂತಿ ಪರ್ವದಲ್ಲೂ ಬರುತ್ತದೆ. ಅಶೋಕನೂ ಹರ್ಷನೂ ಅಭಿಷಿಕ್ತರಾದರು. ಸಾಮಾನ್ಯರಾದ ರಾಜರೂ ಸಾಮಂತರೂ ಚಕ್ರವರ್ತಿಗಳಂತೆಯೇ ಅಭಿಷಿಕ್ತರಾಗುವ ಪದ್ಧತಿ ಕಾಲಕ್ರಮೇಣ ಮೊದಲಾಯಿತು. ಎಲ್ಲ ರಾಜರಿಗೂ ಅಭಿಷೇಕ ವಿಧಿಯನ್ನು ಹೇಳುವ ಸ್ಮೃತಿಗ್ರಂಥಗಳೂ ಹುಟ್ಟಿಕೊಂಡುವು. ಯಾವ ರಾಜನೂ ರಾಜ್ಯಭಾರ ಮಾಡಲು ಆರಂಭಿಸುವ ಮೊದಲು ಅಭಿಷಿಕ್ತನಾಗಲೇಬೇಕೆಂದೂ ಹಾಗಿಲ್ಲದಿದ್ದರೆ ಅವನಿಗೆ ವಿಷ್ಣುವಿನ ಅಂಶ ಒದಗುವುದಿಲ್ಲವೆಂದೂ ಕಲ್ಪನೆ ಬಂದಿತು. ರಾಜ್ಯಾಭಿಷೇಕ ಪದ್ಧತಿಗಳೂ ಅಭಿಷೇಕಪ್ರಯೋಗಗಳೂ ಕಾಣಿಸಿಕೊಂಡುವು. ರಾಜಮಾತ್ರವಲ್ಲದೆ ಯುವರಾಜನೂ ಪಟ್ಟಾಭಿಷಿಕ್ತನಾಗುವ ಪದ್ಧತಿ ರಾಮಾಯಣದಲ್ಲೇ ಕಾಣುತ್ತದೆ. ಅಯೋಧ್ಯಾ ಕಾಂಡದಲ್ಲಿ ಯೌವರಾಜ್ಯಾಭಿಷೇಕದ ವಿಸ್ತಾರವಾದ ವಿವರಣೆ ಇದೆ. ರಾಮನು ರಾವಣವಧಾನಂತರ ಅಯೋಧ್ಯೆಗೆ ಹಿಂದಿರುಗಿ ಅಭಿಷಿಕ್ತನಾಗುವುದು ಪುಷ್ಯಾಭಿಷೇಕ ಎನಿಸಿಕೊಳ್ಳುತ್ತದೆ. ಇದರ ವಿವರಗಳು ಅಥರ್ವವೇದದ ಪರಿಶಿಷ್ಟ ವರಾಹಮಿಹಿರನ ಬೃಹತ್ಸಂಹಿತೆ, ಕಾಲಿಕಾಪುರಾಣ ಮೊದಲಾದ ಗ್ರಂಥಗಳಲ್ಲಿವೆ. ಪುಷ್ಯನಕ್ಷತ್ರ ಇರುವ ದಿನವೇ (ಅಹ್ನಾಯ ಪುಷ್ಯೇ ದಿವಸೇ ಯತಿಷ್ಯೇ ಭೋಜನ, ಚಂಪೂ ರಾಮಾಯಣ) ಇದು ನಡೆಯಬೇಕೆಂಬ ವಿವರವಿದೆ. ಈ ಕಾಲದಲ್ಲಿ ರಾಜರು ಮಾತ್ರವಲ್ಲದೆ ಇತರರೂ ಪುಷ್ಯಸ್ನಾನ ಮಾಡುವ ಪದ್ಧತಿಯಿತ್ತು. ರಾಜನ ಆಪ್ತವರ್ಗಕ್ಕೆ ಸೇರಿದ ಮಂತ್ರಿಗಳಿಗೂ ಮೂರ್ಧಾಭಿಷೇಚನ ವಿಧಿ ನಡೆಯುತ್ತಿದ್ದುದು ಹರ್ಷಚರಿತೆಯಿಂದ ತಿಳಿದುಬರುತ್ತದೆ. ರಾಜನ ಪುರೋಹಿತನೂ ಅಭಿಷಿಕ್ತನಾಗುತ್ತಿದ್ದ; ಇವನ ಅಭಿಷೇಕಕ್ಕೆ ಬೃಹಸ್ಪತಿಸ್ತವ ಎನ್ನುವ ಹೆಸರಿತ್ತು.

ಮಹಾಭಾರತ, ರಾಮಾಯಣ, ಅಗ್ನಿಪುರಾಣಗಳಲ್ಲಿ ಪರಿಷ್ಕೃತ ಅಭಿಷೇಕದ ವಿವರಗಳು ದೊರೆಯುತ್ತವೆ. ಬರುಬರುತ್ತ ಕ್ಷತ್ರಿಯರಿಗೆ ಮಾತ್ರ ಈ ವಿಧಿ ಸೀಮಿತವಾಯಿತು. ಈ ವಿಧಿಗೆ ಮುನ್ನ ರಾಜನು ಸ್ನಾನಮಾಡಿ ಶುಚಿರ್ಭೂತನಾಗಿ ದೀಕ್ಷೆಯನ್ನು ತಳೆಯುತ್ತಿದ್ದ. ಈ ಸಂದರ್ಭದಲ್ಲಿ ತನ್ನ ರಾಜ್ಯಭಾರಕ್ಕೆ ಪ್ರವೇಶ ಮಾಡುವ ಮುನ್ನ ಅಧಿಕಾರವರ್ಗದವರನ್ನು ನೇಮಿಸಿಕೊಳ್ಳುವುದು; ರಾಜ್ಯಭಾರದ ಪ್ರತೀಕಗಳಾದ ನವರತ್ನಗಳು, ಪಟ್ಟಮಹಿಷಿ, ಪಟ್ಟದಾನೆ, ಪಟ್ಟದಕುದುರೆ, ಶ್ವೇತಚ್ಛತ್ರ ಮುಂತಾದವನ್ನು ಆರಿಸಿಕೊಳ್ಳುವುದು; ವ್ಯಾಘ್ರಾಜಿನವನ್ನು ಹಾಸಿದ ಭದ್ರಾಸನವನ್ನು ಏರ್ಪಡಿಸಿಕೊಳ್ಳುವುದು ಮುಂತಾದ ವಿಧಿಗಳು ನಡೆಯುತ್ತವೆ. ರಾಜ ತನ್ನ ಪಟ್ಟದರಾಣಿಯೊಡನೆ ಭದ್ರಾಸನದಲ್ಲಿ ಮಂಡಿಸಿರಲು ಪುರೋಹಿತರು ಸಪ್ತಸಮುದ್ರಗಳ, ಸಕಲತೀರ್ಥಗಳ ನೀರನ್ನು ಪ್ರೋಕ್ಷಣೆ ಮಾಡುತ್ತಾರೆ. ಅನಂತರ ಸಚಿವರೂ ಪುರಪ್ರಮುಖರೂ ಇತರ ಬ್ರಾಹ್ಮಣವರ್ಗದವರೂ ಪ್ರೋಕ್ಷಣೆ ಮಾಡುತ್ತಾರೆ. ಅಭಿಷೇಕ ವಿಧಿಗಳು ನಡೆದ ಅನಂತರ ರಾಜ ಕುದುರೆಯೇರಿ ನಗರ ಪ್ರದಕ್ಷಿಣೆ ಮಾಡಿಬರುವ ವಾಡಿಕೆಯಿತ್ತು.

ಅಭಿಷೇಕಗಳಲ್ಲಿ ಯಜ್ಞಯಾಗಾದಿಗಳ ಸಂದರ್ಭದಲ್ಲಿ ಬರುವ ಪುನರಭಿಷೇಕ ಮತ್ತು ಐಂದ್ರಮಹಾಭಿಷೇಕ ಎನ್ನುವ ಎರಡು ವಿಧಿಗಳಿದ್ದುವು. ಪುನರಭಿಷೇಕವೆಂದರೆ ಯಜ್ಞದೀಕ್ಷೆ ಯಿಂದ ಹೊರಬಂದ ರಾಜನಿಗೆ ನಡೆಯುವ ವಿಧಿ. ಅದಕ್ಕೂ ರಾಜ್ಯಭಾರ ಪ್ರಾರಂಭಕ್ಕೂ ಸಂಬಂಧವಿಲ್ಲ. ಇಂದ್ರ ದೇವತೆಗಳ ಒಡೆತನವನ್ನು ಗಳಿಸಿದುದನ್ನು ಸೂಚಿಸುವ ಐಂದ್ರಮಹಾಭಿಷೇಕವನ್ನು ಪುರೋಹಿತ ತನ್ನ ರಾಜ ಪೃಥ್ವೀವಲ್ಲಭನಾಗಬೇಕೆಂದು ನಡೆಸುತ್ತಾನೆ. ಇದು ರಾಜ್ಯಭಾರದ ಆರಂಭದಲ್ಲೇ ನಡೆಯುವ ವಿಧಿ. ನ್ಯಗ್ರೋಧ, ಉದುಂಬರ, ಅಶ್ವತ್ಥ, ಪ್ಲಕ್ಷ ಮರಗಳಿಂದ ಮಾಡಿದ ಕಲಶವನ್ನು ಬಳಸಿ, ಮಂತ್ರೋದಕವನ್ನು ಸಿದ್ಧಮಾಡಿ, ಉದುಂಬರ ಮರದಿಂದ ಮಾಡಿದ ಭದ್ರಾಸನದ ಮೇಲೆ ಕುಳಿತ ರಾಜನಿಗೆ ಅದರಿಂದಲೂ ಪಂಚಾಮೃತದಿಂದಲೂ ಅಭಿಷೇಕ ಮಾಡುವ ವಿವರವಿದೆ. ವಿಧ್ಯುಕ್ತಮಂತ್ರವನ್ನು ಉಚ್ಚರಿಸಿ ರಾಜ ಸಿಂಹಾಸನವನ್ನು ಏರಿದೊಡನೆ ರಾಜಕರ್ತಾರರು ಇವನೇ ರಾಜನೆಂದು ಘೋಷಿಸುತ್ತಾರೆ. ಪುರೋಹಿತನನ್ನು ರಾಜ ಸನ್ಮಾನಿಸಿದ ಮೇಲೆ ಪುರೋಹಿತ ಅವನಿಗೆ ಒಂದು ಸುರಾಪಾತ್ರೆಯನ್ನು ಕೊಡುತ್ತಾನೆ. ಅಭಿಷೇಕದ ವಿಧಿಯಲ್ಲಿ ಪುರೋಹಿತನದೇ ಪ್ರಮುಖಪಾತ್ರ.

ರಾಜಸೂಯಯಾಗದಲ್ಲಿ ಅಭ್ಯಾರೋಹಣೀಯ, ಅಭಿಷೇಚನೀಯ, ದಶಪೇಯ, ಕೇಶವಪನೀಯ, ವ್ಯುಷ್ಟಿ, ದ್ವಿರಾತ್ರ, ಕ್ಷತ್ರಧೃತಿ ಎನ್ನುವ ವಿಧಿಗಳು ಕಾಣಬರುತ್ತವೆ. ಮೊದಲನೆಯದು ಪವಿತ್ರ ಎನ್ನುವ ಅಂಕುರಾರ್ಪಣವಿಧಿ. ಅಭಿಷೇಚನೀಯ ಎನ್ನುವ ವಿಧಿ ಐದು ದಿನಗಳ ಉತ್ಸವ; ಇದು ಚೈತ್ರಮಾಸದಲ್ಲೇ ನಡೆಯಬೇಕೆಂಬ ಕಟ್ಟಳೆಯಿದೆ. ರಾಜನ ಹೆಸರನ್ನು ಹೇಳಿ, ಸವಿತೃ, ಅಗ್ನಿ, ಬೃಹಸ್ಪತಿ, ಸೋಮ, ಇಂದ್ರ ಮೊದಲಾದ ದೇವತೆಗಳನ್ನು ಆಹ್ವಾನಿಸಿ, ಹದಿನೇಳು ದ್ರವಗಳನ್ನೂ ಮೇಲೆ ಹೇಳಿದ ಉದುಂಬರಾದಿ ಕಲಶಗಳನ್ನೂ ಸಿದ್ಧಪಡಿಸುತ್ತಾರೆ. ಸರ್ವಾಭರಣಭೂಷಿತನಾದ ರಾಜ ಧನುರ್ಧಾರಿಯಾಗಿ ಅಮಂಗಳ ನಿವಾರಕ ವಿಧಿಗಳನ್ನು ನಡೆಸಿ ಸಿಂಹಾಸನದ ಸಮ್ಮುಖದಲ್ಲಿ ಪೂರ್ವಾಭಿಮುಖವಾಗಿ ನಿಂತು ಕಲಶಗಳ ನೀರಿನಿಂದ ಪುರೋಹಿತ ತನ್ನನ್ನು ಅಭಿಷಿಂಚಿಸಿದ ಮೇಲೆ ಸಿಂಹಾಸನ ಏರುತ್ತಾನೆ. ಇದರ ವಿವರಗಳು ಶತಪಥ ಬ್ರಾಹ್ಮಣದಲ್ಲಿ ಬರುತ್ತವೆ. ವಾಜಪೇಯದಲ್ಲೂ ಹೀಗೆಯೇ ವಿವರಗಳು ಹಲವಾರು ಇವೆ. ಇಲ್ಲಿ ಸೋಮದೀಕ್ಷೆಯ ವಿವರ ಮಹತ್ತ್ವದ್ದು.

ಅಭಿಷೇಕಕ್ಕೆ ಸಂಬಂಧಿಸಿದಂತೆ ಸುಗಂಧದ್ರವ್ಯಗಳ ಲೇಪನ ಮುಖ್ಯ. ಇದು ಗ್ರೀಸ್, ರೋಮ್, ಈಜಿಪ್ಟ್ ಜನರಲ್ಲಿ ಕೂಡ ವಿಶೇಷವಾಗಿ ಬಳಕೆಯಲ್ಲಿದ್ದಿತು. ಇದರ ಮುಖ್ಯ ಉದ್ದೇಶ ಸಂಸ್ಕಾರ ರೂಪವಾದುದು. ಈ ದ್ರವ್ಯಗಳ, ಅಂಗರಾಗಗಳ ವಿಲೇಪನದಿಂದ ವೀರ್ಯವೃದ್ಧಿಯೂ ತೇಜೋವೃದ್ಧಿಯೂ ಅಲೌಕಿಕಫಲಗಳೂ ಒದಗುವುವೆಂಬ ಕಲ್ಪನೆಯಿತ್ತು. ಇಂದ್ರಜಾಲ ಕ್ರಿಯೆಗಳಿಗೂ ಅಂಗರಾಗ ಲೇಪನಕ್ಕೂ ಸಂಬಂಧವಿದ್ದುದು ಕಂಡುಬರುತ್ತದೆ. ಅಭಿಷೇಕಕ್ಕೆ ನಾಂದಿಯಾಗಿ ಅಂಗರಾಗ ವಿಲೇಪನ ಅವಶ್ಯವಾದ ಕ್ರಿಯೆಯಾಗಿತ್ತು; ಆಫ್ರಿಕ, ಆಸ್ಟ್ರೇಲಿಯ, ದಕ್ಷಿಣ ಅಮೆರಿಕೆಯ ಕಾಡು ಜನರಲ್ಲೂ ಇದು ಪ್ರಚಲಿತವಾಗಿತ್ತು. ಉಪನಯನ, ದೀಕ್ಷಾದಿ ಸಂಸ್ಕಾರಗಳಲ್ಲೂ ಮೃತನ ಉತ್ತರಕ್ರಿಯೆಗಳಲ್ಲೂ ಅಭಿಷೇಕ ಅಂಗರಾಗ ಲೇಪನಗಳು ಎಲ್ಲ ದೇಶಗಳಲ್ಲೂ ಉಂಟು. ಬೌದ್ಧಜನರಲ್ಲೂ ಹಿಂದೂ ಜನರಲ್ಲೂ ಅಭಿಷೇಕ ಅಂಗರಾಗಲೇಪನಗಳು ನಿತ್ಯಸಹಚಾರಿಗಳು. ಅರಬ್ಬಿಯರಲ್ಲೂ ಇದು ಬಳಕೆಯಲ್ಲಿತ್ತು.

(ಎಸ್.ಕೆ.ಆರ್.)

**ಅಭೇದವಾದ :** ವೇದಾಂತ ದರ್ಶನಕ್ಕೆ ಸಂಬಂಧಪಟ್ಟಂತೆ ಜೀವಾತ್ಮನಿಗೂ ಪರಮಾತ್ಮ ಸ್ವರೂಪಿಯಾದ ಈಶ್ವರನಿಗೂ ಅಭೇದವನ್ನು ಸ್ಥಾಪಿಸುವ ಅದ್ವೈತದರ್ಶನದ ವಾದ.

(ಎಸ್.ಎನ್.ಕೆ.)

**ಅಭ್ಯಂತರ ಕಾಲ :** ರಾಜ್ಯದಲ್ಲಿ ಕ್ರಮಪ್ರಾಪ್ತ ರಾಜನಿಲ್ಲದ ಕಾಲ (ಇಂಟರೆಗ್ನಂ). ಅಂದರೆ ಒಬ್ಬ ರಾಜನ ಆಳಿಕೆ ಮುಗಿದು ಇನ್ನೊಬ್ಬ ರಾಜ ಅಧಿಕಾರಕ್ಕೆ ಬರುವವರೆಗಿನ ಮಧ್ಯಂತರ ಕಾಲ. ರಾಜಕೀಯವಿಚ್ಛಿತ್ತಿ, ಈ ಅವಧಿಯಲ್ಲಿ ಅರಾಜಕತೆಯ ಎಲ್ಲ ಲಕ್ಷಣಗಳೂ ಕಂಡುಬರಬಹುದು. ಸಾಮಂತರು, ಇತರ ಪ್ರಬಲ ವ್ಯಕ್ತಿಗಳು ಸ್ವೇಚ್ಛಾಪ್ರವರ್ತಕರಾಗಿ ಸಾಮಾನ್ಯ ಜನರೊಡನೆ ದರ್ಪದಿಂದ ವರ್ತಿಸಿ ಅವರನ್ನು ದುರ್ಗತಿಗೀಡುಮಾಡಬಹುದು.

ಎಲ್ಲ ದೇಶಗಳ ಚರಿತ್ರೆಯಲ್ಲೂ ಇಂಥ ಕಾಲ ಕಂಡುಬರುವುದಾದರೂ ಜರ್ಮನಿಯ ಇತಿಹಾಸದಲ್ಲಿ 1254ರಿಂದ 1273ರ ವರೆಗಿನ ಅವಧಿಯನ್ನು ಬೃಹದಭ್ಯಂತರ ಕಾಲವೆಂದು (ದಿ ಗ್ರೇಟ್ ಇಂಟರೆಗ್ನಂ) ಕರೆಯುತ್ತಾರೆ. ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲದೆ ಕ್ರೈಸ್ತ ದೊರೆಗಳ ಆಡಳಿತದ ಮೇಲೂ ತಮ್ಮ ಹತೋಟಿ ಇಟ್ಟುಕೊಳ್ಳಲೆತ್ನಿಸುತ್ತಿದ್ದ ಪೋಷಕರ ಕಾಲ ಅದು; ಆಗಿನ ಊಳಿಗಮಾನ್ಯ ಪದ್ಧತಿಗನುಸಾರವಾಗಿ ಸಾಮಂತರು, ಪ್ರಬಲರಾದ ಪ್ರಜಾಮುಖಂಡರು, ಸ್ವೇಚ್ಛೆಯಿಂದ ವರ್ತಿಸಬಹುದಾಗಿತ್ತು. 1254ರಲ್ಲಿ ನಾಲ್ಕನೆಯ ಕಾನ್ರಾಡ್ ಎಂಬ ಜರ್ಮನಿಯ ದೊರೆ ಕಾಲವಾದ ಮೇಲೆ ಇಂಥ ಅರಾಜಕ ಪರಿಸ್ಥಿತಿ ಅಲ್ಲಿ ಏರ್ಪಟ್ಟಿತು. ಸಮಯಸಾಧಕರೆಲ್ಲ ಮುಂದೆ ಬಂದು ತಮ್ಮ ಸ್ವಂತ ಐಶ್ವರ್ಯಗಳನ್ನು ಹೆಚ್ಚಿಸಲೆತ್ನಿಸಿದರು: ಸ್ಥಳೀಯ ಕ್ರೈಸ್ತಧರ್ಮಾಧಿಪತಿಗಳು ಲೌಕಿಕಲಾಭ ಸಂಪಾದನೆಯ ಆಮಿಷಕ್ಕೆ ಮನಸೋತರು. ಈ ಪರಿಸ್ಥಿತಿ ಕೊನೆಗೊಂಡದ್ದು ಪೋಪ್ ಹತ್ತನೆಯ ಗ್ರೆಗರಿಯ ಪ್ರಯತ್ನದ ಫಲವಾಗಿ 1273ರಲ್ಲಿ ಹ್ಯಾಪ್ಸ್‌ಬರ್ಗ್ ಶ್ರೀಮಂತಮನೆತನದ ರಡೋಲ್ಫ್ ದೊರೆಯಾದ ಮೇಲೆ.

*

**ಅಭ್ಯಾಸ :** ಕಲಿಕೆಯಿಂದ ಬರುವ ಒಂದು ಬಗೆಯ ವರ್ತನೆ; ಹುಟ್ಟಿನಿಂದ ಬಂದುದಲ್ಲ. ಮಾನವನ ಬಹುಮುಖ ವರ್ತನೆಯ ಬಹು ದೊಡ್ಡ ಭಾಗ. ಅಭ್ಯಾಸ ಸಂಯೋಜನೆಯ ಒಂದು ರೂಪ. ಅನುಭವದ ಫಲವಾಗಿ ಸಂಬಂಧಗಳನ್ನು ಕಲ್ಪಿಸಿದಾಗ ಉಂಟಾಗುತ್ತದೆ. ವಾಸ್ತವಿಕ ದೃಷ್ಟಿಯಲ್ಲಿ ಅದು ಎರಡು ಬಗೆಯದಾಗಿದೆ: 1. ಸಾಪೇಕ್ಷಕ ಪ್ರತಿವರ್ತನೆ; 2. ಪ್ರತಿಕ್ರಿಯೆಗಳ ಹೊಂದಾಣಿಕೆ. ಬೇರೆ ಬೇರೆ ಚಲನೆಗಳು ಒಂದುಗೂಡಿ ಹೊಸ ಸಂಯೋಜನೆಗಳಾಗುವುವು. ಅವು ಒಂದಾದ ಮೇಲೆ ಮತ್ತೊಂದು ಕ್ರಮಬದ್ಧವಾಗಿ ಬರುವುವು. ಮೊದಲನೆಯ ರೂಪದ ಅಭ್ಯಾಸಗಳು ಗೊತ್ತುಗುರಿಯಿಲ್ಲದ ಚಲನಗಳ ಮತ್ತು ಪ್ರತಿಕ್ರಿಯೆಗಳ ಸಾಮರಸ್ಯದಿಂದ ಉಂಟಾದುವು. ಎರಡನೆಯ ರೂಪದ ಅಭ್ಯಾಸಗಳು ಹಿಂದೆ ಕಲಿತ ಚಲನವಲನಗಳ ಆಧಾರದಿಂದ ಉಂಟಾದವು. ವೈಯಕ್ತಿಕ ದೃಷ್ಟಿಯಲ್ಲಿ ಅಭ್ಯಾಸಗಳು ಮಾಂಸಖಂಡದ ಚಲನವಲನಗಳಿಂದ ಉಂಟಾದ ಮನಸ್ಸಿನ ಆವೇಗಗಳು ಮತ್ತು ಚಲನಾತ್ಮಕ ಗೋಚರಗಳು; ಆದರೆ ಅನೇಕವೇಳೆ ನಮಗೆ ಗೊತ್ತಿಲ್ಲದೆಯೇ ಚಲನವಲನಗಳು ಅಭ್ಯಾಸಬಲದಿಂದ ಮುಂದುವರಿಯುವುವು.

ಕಲಿಯುವಿಕೆ ಸ್ಥಿರವಾದಾಗ ಅದು ಅಭ್ಯಾಸದ ರೂಪವನ್ನು ಹೊಂದುವುದು. ಇದರಿಂದ ಎರಡು ವಿಧವಾದ ವ್ಯಾವಹಾರಿಕ ಲಾಭಗಳುಂಟು. ಮೊದಲನೆಯದಾಗಿ ಒಂದು ನಿರ್ದಿಷ್ಟವಾದ ಫಲವನ್ನು ಸಾಧಿಸಲು ಬೇಕಾಗುವ ಚಲನಗಳನ್ನು ಸುಲಭವಾಗಿಸಿ ನಿರಾಯಾಸವಾಗಿಸುತ್ತದೆ; ಸಮಯ ಮತ್ತು ಶಕ್ತಿಯನ್ನು ಉಳಿಸುತ್ತದೆ. ಎರಡನೆಯದಾಗಿ ಚಲನೆಗಳ ಪರಿವೆಯಿಲ್ಲದೆಯೇ ಕೆಲಸ ನಡೆಸಲು ಸಹಾಯಕಾರಿಯಾಗುವುದಲ್ಲದೆ ಕೆಲಸವೂ ತನ್ನಷ್ಟಕ್ಕೆ ತಾನೇ ಮುಂದುವರಿಯುವಂತಾಗುತ್ತದೆ.

ಉದ್ದೇಶಪೂರ್ವಕವಾಗಿ ಬೆಳೆಯುವ ಹೊಸ ಅಭ್ಯಾಸವನ್ನು ಕುರಿತು ಜೇಮ್ಸ್ ಎಂಬ ಮನಶಾಸ್ತ್ರಜ್ಞ ನಾಲ್ಕು ಮುಖ್ಯವಾದ ನಿಯಮಗಳನ್ನು ಹೇಳುತ್ತಾನೆ. 1. ಹೊಸದಾಗಿ ಒಂದು ಅಭ್ಯಾಸವನ್ನು ಮಾಡಿದರೆ ಅದನ್ನು ಎಷ್ಟು ಸಾಧ್ಯವೋ ಅಷ್ಟೂ ದೃಢನಿರ್ಧಾರದಿಂದ ಪ್ರಾರಂಭಿಸುವುದು. ಅಲ್ಲದೆ ಉದ್ದೇಶಸಾಧನೆಗೆ ಒದಗಬಲ್ಲ ಎಲ್ಲ ಸಂದರ್ಭಗಳನ್ನೂ ಬಳಸಿಕೊಳ್ಳುವುದು. 2. ಹೊಸ ಅಭ್ಯಾಸ ಭದ್ರವಾಗಿ ಬೇರೂರಿ ನಿಲ್ಲುವವರೆಗೂ ಒಂದು ಬಾರಿಯೂ ಅದಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುವುದು; 3. ಅಭ್ಯಾಸದ ಆಚರಣೆಗಾಗಿ ಸಂದರ್ಭಗಳು ಒದಗಿದಾಗೆಲ್ಲ ಸದುಪಯೋಗಪಡಿಸಿಕೊಳ್ಳುವುದು; 4. ಅಭ್ಯಾಸವನ್ನು ತಪ್ಪದೆ ಪ್ರತಿದಿನವೂ ಆಚರಣೆಗೆ ತರುವುದು.

ಅಭ್ಯಾಸಗಳು ರೂಢಿಗೆ ಬರುವ ರೀತಿ ಒಂದೇ ಆದರೂ ವ್ಯಾವಹಾರಿಕ ಸೌಕರ್ಯಕ್ಕಾಗಿ ಅವುಗಳನ್ನು ಹಲವಾರು ಗುಂಪುಗಳಾಗಿ ವಿಂಗಡಿಸಬಹುದು.

1. ಕುಶಲತೆಯ ಅಭ್ಯಾಸಗಳು: ಇವುಗಳ ಪರಿಶೀಲನೆಯಿಂದ ನಮಗೆ ಅಭ್ಯಾಸದ ತತ್ತ್ವ ತಿಳಿದುಬಂದಿದೆ. ಅವು ಟೆನ್ನಿಸ್ ಅಥವಾ ಹಾಕಿಯಂಥ ಆಟಗಳು. ಯಾವುದೇ ವೃತ್ತಿ ಅಥವಾ ಕೆಲಸಗಳಲ್ಲಿನ ಕಾರ್ಯನೈಪುಣ್ಯಗಳನ್ನೇ ಅಲ್ಲದೆ ಹೊಲಿಯುವ, ಹೆಣಿಗೆಯ, ಟೈಪ್ ಮಾಡುವ ಮತ್ತು ಸಂಗೀತ ವಾದ್ಯಗಳನ್ನು ನುಡಿಸುವ ಅಭ್ಯಾಸಗಳನ್ನೂ ಒಳಗೊಂಡಿವೆ.

2. ವೈಯಕ್ತಿಕ ಅಭ್ಯಾಸಗಳು: ಎಲ್ಲ ಅಭ್ಯಾಸಗಳೂ ವೈಯಕ್ತಿಕವೇ. ಇವು ವೈಯಕ್ತಿಕ ಸಾಮರ್ಥ್ಯದ ಮುಖ್ಯ ಭಾಗ. ಆದರೂ ಕೆಲವು ಅಭ್ಯಾಸಗಳಿಗೆ ಸಾಮಾಜಿಕ ಪ್ರಾಮುಖ್ಯಕ್ಕಿಂತ ವೈಯಕ್ತಿಕ ಪ್ರಾಮುಖ್ಯವೇ ಹೆಚ್ಚು. ಉದಾಹರಣೆಗಾಗಿ ಊಟಮಾಡುವುದು, ದೇಹಬಾಧೆ ತೀರಿಸಿಕೊಳ್ಳುವುದು, ನಿದ್ದೆಮಾಡುವುದು, ಮತ್ತೆ ಎದ್ದೇಳುವುದು ಇತ್ಯಾದಿ. ಇದರಲ್ಲಿ ಲೈಂಗಿಕ ಮತ್ತು ಶುಭ್ರತೆಯ ಅಭ್ಯಾಸಗಳು ಸೇರಿವೆ.

3. ಸಾಮಾಜಿಕ ಅಭ್ಯಾಸಗಳು: ಸಮಾಜದಲ್ಲಿ ಇತರರೊಂದಿಗೆ ವ್ಯಕ್ತಿ ನಡೆದುಕೊಳ್ಳುವ ರೀತಿನೀತಿಗಳಿಗೆ ಸಂಬಂಧಿಸಿವೆ. ಅವುಗಳಲ್ಲಿ ಸಾಮಾಜಿಕ ಶಿಷ್ಟತೆ, ನಡೆನುಡಿಗಳಲ್ಲದೆ ವ್ಯಾಪಾರ ವ್ಯವಹಾರಗಳಲ್ಲಿ ವ್ಯಕ್ತಿಯ ನಡತೆಯೂ ಸೇರುತ್ತದಲ್ಲದೆ ಒಟ್ಟಾರೆ ಅವನ ನೈತಿಕ ನಡೆವಳಿಕೆಗಳೆಲ್ಲ ಸೇರಿವೆ. ನೈತಿಕಾಭ್ಯಾಸಗಳಲ್ಲಿ ವಿಧೇಯತೆ ಅಥವಾ ಅವಿಧೇಯತೆ, ಸಮಯನಿಷ್ಠೆ ಅಥವಾ ಆಲಸ್ಯ, ಉದಾರತೆ ಅಥವಾ ಜಿಪುಣತನ, ಜಾಗರೂಕತೆ ಅಥವಾ ಉದಾಸೀನತೆ ಮುಂತಾದ ಅಭ್ಯಾಸಗಳೂ ಸೇರಿವೆ.

4. ರಾಗೋದ್ವೇಗಗಳಿಗೆ ಸಂಬಂಧಿಸಿದ ಅಭ್ಯಾಸಗಳು: ಇವು ನಮ್ಮ ಭಾವೋದ್ರೇಕಗಳನ್ನು ಹತೋಟಿಯಲ್ಲಿಡುವ ಕಲಿಕೆಯ ಮೇಲೆ ನಿಂತಿವೆ. ಆದ್ದರಿಂದ ವ್ಯಕ್ತಿಯ ಪರಿಸರ ಇಲ್ಲಿ ಬಹುಮುಖ್ಯವಾಗುತ್ತದೆ. ತಂದೆತಾಯಿಗಳು, ಗುರುಹಿರಿಯರು ನಮ್ಮ ಭಾವಾವೇಶಗಳನ್ನು ಹತೋಟಿಯಲ್ಲಿಡಲು ಕಲಿಸಿಕೊಡುವರು. ಮನಸ್ಸಿನ ದೃಢತೆ ಸಹ ಆಜೀವಪರ್ಯಂತ ಶ್ರದ್ಧೆಯಿಂದ ಬೆಳೆಸಿಕೊಳ್ಳಬೇಕಾದ ಒಂದು ಅಭ್ಯಾಸ. ಈ ಅಭ್ಯಾಸಗಳು ರಾಗೋದ್ವೇಗಗಳನ್ನು ಅರ್ಥಮಾಡಿಕೊಳ್ಳುವ ಅರ್ಹತೆ, ಪರಿಸರದ ಪ್ರಭಾವತೀವ್ರತೆ, ಪರಾಮರ್ಶನ ಮತ್ತು ಶಿಕ್ಷಣದಿಂದ ಉಂಟಾಗುತ್ತವೆ.

ಚೆನ್ನಾದ ಕಲಿಕೆಯಿಂದ ಬರುವ ನಡೆವಳಿಕೆಯೇ ಅಭ್ಯಾಸವಲ್ಲದೆ ಮತ್ತೇನೂ ಅಲ್ಲ. ಬಳಕೆತಪ್ಪಿದಲ್ಲಿ ಅದನ್ನೂ ಇತರ ಅನೇಕ ವಿಷಯಗಳಂತೆ ಮರೆಯಬಹುದು. ಆದರೆ ಕಲಿತ ಅಭ್ಯಾಸವನ್ನು ಬಿಡುವುದು ಕಷ್ಟ. ರೂಪುಗೊಂಡ ಮೇಲೆ ಅದು ಶಾಶ್ವತವಾಗಿ ನಿಲ್ಲುತ್ತದೆ. ಅದನ್ನು ಮರೆಯುವುದೋ ಅಥವಾ ಬಿಟ್ಟುಬಿಡುವುದೋ ಬಹಳ ಕಷ್ಟ. ಒಳ್ಳೆಯ ಅಭ್ಯಾಸಗಳಿಗಿಂತ ಕೆಟ್ಟವಕ್ಕೆ ಈ ಸೂತ್ರ ಪೂರ್ಣ ಅನ್ವಯಿಸುತ್ತದೆ. ಒಳ್ಳೆಯ ಅಭ್ಯಾಸವನ್ನು ರೂಢಿಗೆ ತರುವುದು ಕಷ್ಟ. ತಂದಮೇಲೂ ಅದು ಶಾಶ್ವತವಾಗಿ ನಿಲ್ಲುತ್ತದೆಂದು ಹೇಳಲಾಗದು. ಸುಖ ಮತ್ತು ಸೋಮಾರಿತನದ ಆಶೆಯಿಂದಾಗಿ ಕಲಿತ ಒಳ್ಳೆಯ ಅಭ್ಯಾಸ ಕೈನುಣುಚಿ ಹೋಗಬಹುದು. ಆದರೆ ದುಷ್ಟ ಅಭ್ಯಾಸಗಳು ಬೇಗ ಸುಲಭವಾಗಿ ಬಂದು ಕೊನೆಯನಕ ಅನಾಯಾಸವಾಗಿ ನಿಲ್ಲುತ್ತವೆ. ಧೂಮಪಾನ ಮತ್ತು ಮದ್ಯಸೇವನೆ ಮುಂತಾದ ಕೆಟ್ಟ ಅಭ್ಯಾಸಗಳನ್ನು ಮುರಿಯಬಲ್ಲ ಯಾವುದೇ ಒಂದು ಸಫಲವಿಧಾನ ಹುಡುಕುವುದು ಬಹು ಕಷ್ಟದ ಕೆಲಸ. ಹಾಗೆಮಾಡಲು ಹಿಂದಿನ ಅಭ್ಯಾಸದ ಪ್ರತಿಕ್ರಿಯೆಗಳನ್ನು ತಡೆಯುವ ಹೊಸ ಪ್ರತಿಕ್ರಿಯೆಗಳ ಬೆಳೆವಣಿಗೆ ಆವಶ್ಯಕ. ಹಳೆಯ ಅಭ್ಯಾಸಗಳನ್ನು ವಿರೋಧಿಸುವ ಬಗ್ಗೆ, ಗತ್ರಿ ಎಂಬಾತ ಬಿಡಿಯಾಗಿಯೋ ಅಥವಾ ಬೇರೆಯಾಗಿಯೋ ಬಳಸುವಂಥ ನಾಲ್ಕು ವಿಧಾನಗಳನ್ನು ಸೂಚಿಸಿದ್ದಾನೆ: ಅವಕ್ಕೆ ಹೊಂದದ ನಡೆವಳಿಕೆಗಳನ್ನು ಆಚರಣೆಗೆ ತರುವುದು, ಅವುಗಳ ಅತಿಬಳಕೆಯಿಂದ ಅಸಹ್ಯ ಹುಟ್ಟುವಂತೆ ನಡೆಯುವುದು, ಬಳಕೆಯನ್ನು

ಸಾಧ್ಯವಾದಷ್ಟು ಮಿತಿಗೊಳಿಸುವುದು ಮತ್ತು ಪರಿಸರವನ್ನು ಪೂರ್ತ ಬದಲಿಸುವುದು. ಇವುಗಳಲ್ಲಿ ಯಾವುದು ಅತ್ಯುತ್ತಮ ವಿಧಾನವೆಂಬುದು ತೊಡೆದುಹಾಕಬೇಕಾಗಿರುವ ಅಭ್ಯಾಸದ ಸ್ವಭಾವ, ಪ್ರಾಬಲ್ಯ, ಕಾಲಾವಧಿಗಳನ್ನು ಅವಲಂಬಿಸಿದೆ. (ಟಿ.ಎಚ್.)

**ಅಭ್ಯಾಸ ಪಾಠಗಳು :** ಮಕ್ಕಳು ತಾವು ಹೊಸದಾಗಿ ಕಲಿತ ವಿಷಯಗಳನ್ನೂ ಕೌಶಲಗಳನ್ನೂ ಪುನರಾವರ್ತಿಸಿಕೊಂಡು ದೃಢಪಡಿಸಿಕೊಳ್ಳಲು ಶಿಕ್ಷಕರು ಕಲ್ಪಿಸುವ ಅವಕಾಶಗಳು (ಎಕ್ಸರ್‌ಸೈಸಸ್). ಹೇಳಿಕೊಟ್ಟ ಮಾದರಿ ಪಾಠಗಳಂತಿದ್ದು, ಅದಕ್ಕೆ ಹತ್ತಿರದ ಸಂಬಂಧಗಳನ್ನುಳ್ಳ ಇತರ ವಿಷಯಗಳನ್ನೂ ಒಳಗೊಂಡ ಪ್ರಶ್ನಾವಳಿಯನ್ನು ಮಕ್ಕಳೆದುರು ಇಟ್ಟು ಅವನ್ನು ಬಿಡಿಸಲು ಹೇಳುವುದರಿಂದ ಕಲಿತ ಪಾಠ ನೆನಪಿನಲ್ಲಿ ನಿಲ್ಲುತ್ತದಲ್ಲದೆ ಮಕ್ಕಳ ಬುದ್ಧಿಕೌಶಲ ಹೆಚ್ಚುತ್ತದೆ. ಅಭ್ಯಾಸ ಪ್ರಶ್ನಾವಳಿ ಹೊಸದಾಗಿ ಕಲಿತ ವಿಷಯಗಳಿಗೆ ಸಂಬಂಧಿಸಿರಬೇಕು ಮತ್ತು ಮಕ್ಕಳ ಶಕ್ತಿಗೆ ಮೀರಿರಬಾರದು. (ಎಂ.ವಿ.ಆರ್.)

**ಅಭ್ಯುದಯ ಮತ್ತು ನಿಶ್ರೇಯಸ :** ಅಭಿವೃದ್ಧಿಗೆ ಕಾರಣವಾದ ಒಂದು ಶ್ರಾದ್ಧ. ನಾಂದೀಶ್ರಾದ್ಧವೆಂದೂ ಹೆಸರು. ಮಂಗಳಕಾರ್ಯಾರಂಭಕ್ಕೆ ಮೊದಲು ಇದನ್ನು ಮಾಡುವುದು ಇಂದೂ ಆಚರಣೆಯಲ್ಲಿದೆ. ಮಂಗಳಕರವೇ ಅಭ್ಯುದಯ. ಮೋಕ್ಷವೇ ನಿಶ್ರೇಯಸ. ವಿಧ್ಯುಕ್ತ ಕರ್ಮಾನುಷ್ಠಾನದಿಂದ ಇಹದಲ್ಲಿ ಅಭ್ಯುದಯವೂ ಪರದಲ್ಲಿ ನಿಶ್ರೇಯಸವೂ ಉಂಟಾಗುತ್ತವೆ ಎಂದು ಶಾಸ್ತ್ರಗಳಲ್ಲಿ ಹೇಳಿದೆ. (ಎಸ್.ಎನ್.ಕೆ.)

**ಅಭ್ರಕ :** ಒಂದು ಬಗೆಯ ಖನಿಜ. ರೂಢಿಯ ಹೆಸರು ಕಾಗೆಬಂಗಾರ (ಮೈಕ). ಜ್ವಾಲಾಮುಖಿಯ ಶಿಲಾಪ್ರವಾಹದ ಮೂಲಕ ಉತ್ಪನ್ನವಾಗಿ ಅದೇ ಮೂಲದ ಶಿಲೆಗಳಲ್ಲಿ ಅಥವಾ ಸ್ವತಂತ್ರವಾಗಿ ಪದರಗಳ ರೂಪದಲ್ಲಿ ದೊರೆಯುತ್ತದೆ. ರಾಸಾಯನಿಕವಾಗಿ ಇದರಲ್ಲಿ ಎರಡುವಿಧ: ಪೊಟಾಷ್ ಅಭ್ರಕ ಅಥವಾ ಶ್ವೇತ ಅಭ್ರಕ; ಮಸ್ಕೊವೈಟ್–$[H_2KAl_2(SiO_4)_3]$; ಫೆರ್ರೊಮ್ಯಾಗ್ನೀಷಿಯಂ ಅಭ್ರಕ ಅಥವಾ ಶ್ಯಾಮ ಅಭ್ರಕ–$[K_2HMg_6Al_3(SiO_4A)_6]$. ಅಭ್ರಕದ ವಿವಿಧ ಬಗೆಗಳ ಒಟ್ಟು ಹೆಸರು ಅಭ್ರಕವರ್ಗ. ಮಸ್ಕೊವೈಟ್, ಪರಾಗೊನೈಟ್, ಲೆಪಿಡೊಲೈಟ್, ಜಿನ್ ವಾಲ್ಡೈಡ್, ಬಯೊಟೈಟ್ ಮತ್ತು ಫ್ಲಾಗೊಪೈಟ್ ಅಭ್ರಕವರ್ಗದ ಮುಖ್ಯ ವಿಭಾಗಗಳು. ಮಸ್ಕೊವೈಟ್ (ಬಿಳಿ ಅಥವಾ ತಿಳಿಹಸಿರು ಅಥವಾ ತಿಳಿಗೆಂಪು), ಲೆಪಿಡೊಲೈಟ್ (ಲಿಥಿಯಂ ಅಭ್ರಕ, ಊದಾ) ಫ್ಲಾಗೊಸೈಟ್ (ಮ್ಯಾಗ್ನಿಷಿಯಂ ಅಭ್ರಕ, ಎಣ್ಣೆಗೆಂಪು, ಮತ್ತು ಬಯೊಟೈಟ್, ಕಪ್ಪು)–ಇವೆಲ್ಲವೂ ಮಾನೊಕ್ಲಿನಿಕ್ ಹರಳುವರ್ಗಕ್ಕೆ ಸೇರಿವೆ. ಹೊರ ಆಕಾರದಲ್ಲಿ ಫಲಕಾಕೃತಿ, ಮಸ್ತಕಾಕೃತಿ ಮತ್ತು ತೆಳುವಾದ ರೇಕುಗಳ ಮುದ್ದೆಯಾಕೃತಿಗಳಲ್ಲಿ ಇವನ್ನು ಕಾಣಬಹುದು. ಇವುಗಳ ತೆಳುವರ್ಣರಹಿತ ಪೊರೆಗಳನ್ನು ಕಷ್ಟವಿಲ್ಲದೆ ಒರೆಗಲ್ಲಿನ ಮೇಲೆ ಉಜ್ಜಬಹುದು. ಒರೆ ವರ್ಣರಹಿತ. ಇಲ್ಲವೆ ಬಿಳಿಗಾಜು, ಮತ್ತು ಅಥವಾ ರೇಷ್ಮೆಯಂತೆ ಹೊಳಪು; ಮಿತ ಪಾರದರ್ಶಕ. ಉತ್ತಮ ಬಗೆಯ ಸೀಳುಗಳಿರುವ ಕಾರಣ ಇವನ್ನು ಪುಸ್ತಕದಲ್ಲಿನ ಹಾಳೆಗಳಂತೆ ಸುಲಭವಾಗಿ ಬಿಡಿಸಬಹುದು. ಮಸ್ಕೊವೈಟ್ ಅಥವಾ ಫ್ಲಾಗೊಸೈಟ್ ಅಭ್ರಕದ ರೇಕುಗಳು 1"/1000 ಅಥವಾ ಒಂದು ಮಿಲಿಮೀಟರಿನಷ್ಟು ತೆಳು. ಹೀಗೆ ಬಿಡಿಸಿದ ತೆಳುರೇಕುಗಳು ಮುರಿಯದೆ ಯಾವ ಆಕಾರಕ್ಕೆ ಬೇಕಾದರೂ ಬಾಗುತ್ತವೆ. ಉತ್ತಮ ಸ್ಥಿತಿಸ್ಥಾಪಕಶಕ್ತಿಯನ್ನು ಹೊಂದಿದ್ದು ತಮ್ಮ ಮೊದಲಿನ ಆಕಾರವನ್ನು ಸ್ವಲ್ಪವೂ ಕೆಡಿಸಿಕೊಳ್ಳುವುದಿಲ್ಲ. ಬಿಗುಪು ಉತ್ತಮ ದರ್ಜೆಯದು. ಇವುಗಳ ಕಾಠಿಣ್ಯ 2–2.5 ಅಂದರೆ ಉಗುರಿನಿಂದ ಖನಿಜವನ್ನು ಗೀರಬಹುದು. ಸಾಪೇಕ್ಷಸಾಂದ್ರತೆ 2–76–3.

ರಾಸಾಯನಿಕ ಸಂಯೋಜನೆಯಲ್ಲಿ ಅಭ್ರಕಗಳನ್ನು ಆರ್ಥೊಸಿಲಿಕೇಟ್‌ಗಳೆಂದೂ ಪರಮಾಣುರಚನೆಗನುಗುಣವಾಗಿ ಹಾಳೆ (ಶೀಟ್) ಸಿಲಿಕೇಟ್‌ಗಳೆಂದೂ ನಿರ್ಣಯಿಸಲಾಗಿದೆ. ಇವುಗಳಲ್ಲಿ ಮುಖ್ಯವಾಗಿ ಅಲ್ಯೂಮಿನಿಯಂ, ಪೊಟ್ಯಾಸಿಯಂ ಮತ್ತು ಜಲಜನಕ ಧಾತುಗಳ ಅನೇಕ ವೇಳೆ ಮೆಗ್ನೀಸಿಯಂ ಮತ್ತು ಫೆರಸ್ ಕಬ್ಬಿಣ, ಕೆಲವು ವೇಳೆ ಫೆರಿಕ್ ಕಬ್ಬಿಣ, ಸೋಡಿಯಂ, ಲಿಥಿಯಂ, ರುಬಿಡಿಯಂ ಮತ್ತು ಸೀಸಿಯಂ ಧಾತುಗಳೂ ಅಪೂರ್ವವಾಗಿ ಬೇರಿಯಂ, ಮ್ಯಾಂಗನಿಸ್, ಕ್ರೋಮಿಯಂ, ಕ್ಲೋರಿನ್ ಮತ್ತು ಟೈಟೇನಿಯಂ ಸಹ ಅಲ್ಪ ಪ್ರಮಾಣದಲ್ಲಿ ಕಂಡುಬರುತ್ತವೆ.

ಉತ್ತಮ ವಿದ್ಯುನ್ನಿರೋಧಕ ಮತ್ತು ಶಾಖನಿರೋಧಕಶಕ್ತಿ ಇವುಗಳ ವಿಶೇಷಗುಣ, ರಾಸಾಯನಿಕದ್ರಾವಕಗಳು ಅಭ್ರಕಗಳನ್ನು ಸುಲಭವಾಗಿ ಕರಗಿಸಲಾರವು. ಅಲ್ಲದೆ ಹೆಚ್ಚಿನ ಉಷ್ಣಕ್ಕೆ ಒಡ್ಡಿದಾಗ ಇವು ಸುಲಭವಾಗಿ ಕರಗುವುದೂ ಇಲ್ಲ.

ಅಭ್ರಕಗಳನ್ನು ಬಹುಮಟ್ಟಿಗೆ ಗ್ರ್ಯಾನೈಟ್, ಸಯನೈಟ್ ಮತ್ತು ಪೆಗ್ಮಟೈಟ್ ಮುಂತಾದ ಅಗ್ನಿಶಿಲೆಗಳಲ್ಲೂ ರೂಪಾಂತರಿತಶಿಲೆಗಳಾದ ನೈಸ್ (ಪಟ್ಟೆಶಿಲೆ) ಮತ್ತು ಷಿಸ್ಟ್‌ಗಳಲ್ಲೂ (ಪದರಶಿಲೆ) ಕಾಣಬಹುದು. ಅಲ್ಲದೆ ಜಲಜಶಿಲೆಗಳಾದ ಮರಳು ಶಿಲೆಗಳಲ್ಲಿ ಸಾಮಾನ್ಯವಾಗಿ ಶ್ವೇತಾಭ್ರಕದ ಸಣ್ಣ ಸಣ್ಣ ರೇಕುಗಳನ್ನು ಕಾಣಬಹುದು. ಈ ಬಗೆಯ ಆನುಷಂಗಿಕ ಶಿಲೆಗಳಲ್ಲಿ ಕೃಷ್ಣಾಭ್ರಕ ಕಾಣುವುದೇ ಅಪೂರ್ವ.

ಅಭ್ರಕದ ಗಣಿಗಳು ಅಗ್ನಿಶಿಲೆಗಳಾದ ಪೆಗ್ಮಟೈಟ್ ಒಡ್ಡುಗಳಲ್ಲಿ ಕಂಡುಬರುತ್ತವೆ. ಈ ಶಿಲೆ ಕ್ವಾರ್ಟ್ಸ್ ಮತ್ತು ಫೆಲ್ಡ್‌ಸ್ಪಾರ್ ಬಹು ದಪ್ಪ ದಪ್ಪ ಕಣಗಳಿಂದಾದುದು. ಈ ಖನಿಜಗಳ ನಡುವೆ ಅಲ್ಲಲ್ಲಿ ಅಭ್ರಕದ ಗುಚ್ಛಗಳನ್ನು ನೋಡಬಹುದು. ಹಲವು ಬಾರಿ ಅಭ್ರಕ ದೊಡ್ಡ ಪುಸ್ತಕಗಳಂತೆ ಹುದುಗಿರುವುದೂ ಉಂಟು. ಪೆಗ್ಮಟೈಟ್‌ಗಳಲ್ಲಿ ಸಾಮಾನ್ಯವಾಗಿ ಮಸ್ಕೊವೈಟ್ ಮತ್ತು ಲೆಪಿಡೊಲೈಟ್ ಅಭ್ರಕಗಳಿರುತ್ತವೆ. ಹಲವು ವೇಳೆ ಮಾನಜೈಟ್, ಪಿಚ್ ಬ್ಲೆಂಡ್, ಟೂರ್ಮಲೀನ್, ಗಾರ್ನೆಟ್ ಮಾನಜೈಟ್, ಗಾರ್ನೆಟ್ ಅಪಟೈಟ್, ಬೆರಿಲ್, ಕೊಲಂಬೈಟ್–ಟ್ಯಾಂಟಲೈಟ್, ಈ ಮೊದಲಾದ ಖನಿಜಗಳನ್ನೂ ನೋಡಬಹುದು. ಬಯೊಟೈಟ್ ರೂಪಾಂತರವರ್ಗದ ಪದರ ಶಿಲೆಗಳಲ್ಲಿ ಕಂಡುಬರುತ್ತದೆ.

ಅಭ್ರಕ ದೊರೆಯುವ ಅನೇಕ ಪೆಗ್ಮಟೈಟ್ ಒಡ್ಡುಗಳಲ್ಲಿ ಒಂದು ಬಗೆಯ ವಲಯಾಕಾರದ ವಿನ್ಯಾಸವನ್ನು ಗುರುತಿಸುವುದು ಸಾಧ್ಯ. ಕೇಂದ್ರಭಾಗದಲ್ಲಿ ಕ್ವಾರ್ಟ್ಸ್ ಇದ್ದು ಅದರ ಅಕ್ಕಪಕ್ಕ ಫೆಲ್ಡ್‌ಸ್ಪಾರ್ ಇರುತ್ತದೆ. ಇವೆರಡರ ಅಥವಾ ಫೆಲ್ಡ್‌ಸ್ಪಾರ್ ಮತ್ತು ನಾಡಶಿಲೆಯ ಮಧ್ಯೆ ಅಭ್ರಕ ಶೇಖರವಾಗುತ್ತದೆ. ಫ್ಲಾಗೋಸೈಟ್ ಪೈರಾಕ್ಸೀನ್ ಪೆಗ್ಮಟೈಟ್ ಮೊದಲಾದ ಪ್ರತ್ಯಾಮ್ಲೀಯ ಒಡ್ಡುಶಿಲೆಗಳಲ್ಲೂ ಮೆಗ್ನೀಷಿಯಂ ಸುಣ್ಣಶಿಲೆ ಅಥವಾ ಡಾಲೊಮೈಟ್‌ಗಳಲ್ಲೂ ದೊರೆಯುತ್ತದೆ. ಪೆಗ್ಮಟೈಟ್ ಒಡ್ಡುಶಿಲೆಗಳಲ್ಲಿ ಕಾವುನೀರಿನ (ಹೈಡ್ರೊಥರ್ಮಲ್) ಕಾರ್ಯಾಚರಣೆಯಿಂದ ಅಭ್ರಕ ಉಂಟಾಗಿರುವ ಸ್ಪಷ್ಟ ಕುರುಹುಗಳನ್ನು ಕಾಣಬಹುದು.

ಭಾರತ ಮತ್ತು ಬ್ರೆಜಿಲ್ ಅಭ್ರಕ ಹೆಚ್ಚಾಗಿ ದೊರೆಯುವ ಸ್ಥಳಗಳು. ಪ್ರಪಂಚದ ಅಭ್ರಕದ ಮಾರುಕಟ್ಟೆಯಲ್ಲಿ ಭಾರತದ ಸ್ಥಾನ ಬಹು ಪ್ರಮುಖ. ಒಟ್ಟು ಬೇಡಿಕೆಯ ಸುಮಾರು 80ರಷ್ಟು ಭಾಗವನ್ನು ಭಾರತವೇ ಒದಗಿಸುತ್ತದೆ. ಮಸ್ಕೊವೈಟ್ ಅಭ್ರಕ ಆಂಧ್ರಪ್ರದೇಶ, ಬಿಹಾರ್, ಬಂಗಾಲ, ಮೈಸೂರು, ಮಧ್ಯಪ್ರದೇಶ, ಒರಿಸ್ಸ ಮತ್ತು ರಾಜಸ್ತಾನಗಳಲ್ಲಿ ದೊರೆಯುತ್ತದೆ. ಫ್ಲಾಗೊಸೈಟ್ ಕೇರಳದ ಕ್ವಿಲಾನ್ ಜಿಲ್ಲೆ, ಆಂಧ್ರದ ವಿಶಾಖಪಟ್ಟಣ ಮತ್ತು ತಮಿಳುನಾಡಿನ ಕೊಯಮತ್ತೂರು ಜಿಲ್ಲೆಗಳಿಗೂ ಲೆಪಿಡೊಲೈಟ್ ರಾಜಸ್ತಾನ ಮತ್ತು ಬಿಹಾರ ಪ್ರಾಂತಗಳಿಗೂ ಸೀಮಿತವಾಗಿವೆ.

ನಮ್ಮ ದೇಶದ ಉತ್ಪನ್ನದ ಬಹುಭಾಗ ಬಿಹಾರ್, ರಾಜಸ್ತಾನ ಮತ್ತು ಆಂಧ್ರಪ್ರದೇಶಗಳಿಂದ ಬರುತ್ತಿದೆ. ಇವುಗಳಲ್ಲಿ ಬಹು ಹೆಸರುವಾಸಿಯೆನಿಸಿದ ಬಿಹಾರಿನ ಅಭ್ರಕದ ಜಾಡು ಸು. 32 ಕಿಮೀ ಅಗಲವಿದ್ದು ಸು. 145 ಕಿಮೀ ಉದ್ದಕ್ಕೂ ಹರಡಿದೆ. ಇದು ಗಯಾ ಜಿಲ್ಲೆಯಲ್ಲಿ ಪ್ರಾರಂಭವಾಗಿ ಹಜಾರಿಬಾಗ್ ಮತ್ತು ಮಾಂಘೀರ್ ಜಿಲ್ಲೆಗಳಲ್ಲಿ ಹಾದು ಭಾಗಲ್ಪುರ ಜಿಲ್ಲೆಯಲ್ಲಿ ಕೊನೆಮುಟ್ಟುತ್ತದೆ. ದೇಶದ ಅತ್ಯುತ್ತಮ ಮಸ್ಕೊವೈಟ್ ಗಣಿಗಳನ್ನು ಕೋಡರ್ಮ, ಗವಾನ್ ಮತ್ತು ಪರ್ಸಬಾದ್ ಸುತ್ತಮುತ್ತ ನೋಡಬಹುದು. ಒಟ್ಟು ಉತ್ಪನ್ನದ ಸುಮಾರು ಅರ್ಧದಷ್ಟನ್ನು ಇವು ಪೂರೈಸುತ್ತವೆ. ಈ ಅಭ್ರಕ ತಿಳಿಗೆಂಪು ಛಾಯೆಯಿಂದ ಕೂಡಿದ್ದು ಯಾವ ಲೋಪದೋಷಗಳಿಲ್ಲದೆ ಉತ್ತಮ ಪಾರದರ್ಶಕವಾದ ಹಾಳೆಗಳ ರೀತಿಯಲ್ಲಿದೆ. ಇದರ ಹೆಸರು ರೂಬಿಮೈಕ. ರಾಜಸ್ತಾನದಲ್ಲಿ ಅಭ್ರಕವನ್ನು ಹೊಂದಿರುವ ಪೆಗ್ಮಟೈಟ್‌ಗಳ ಜಾಡು 96 ಕಿಮೀ ಅಗಲ 320 ಕಿಮೀ ಉದ್ದವಾಗಿದ್ದು ಜೈಪುರದಿಂದ ಉದಯಪುರದವರೆಗೂ ವಿಸ್ತರಿಸಿದೆ. ಭಿಲ್ವಾರ, ಟೋಂಕ್, ಅಜ್ಮೀರ್, ಜೈಪುರ ಮತ್ತು ಉದಯಪುರ ಜಿಲ್ಲೆಗಳಲ್ಲಿ ಅಭ್ರಕದ ಗಣಿಗಳಿವೆ. ಇವುಗಳಲ್ಲಿ ದೊರೆಯುವ ಕೆಂಪು ಮತ್ತು ಹಸುರು ಛಾಯೆಯಿಂದ ಕೂಡಿದ ಅಭ್ರಕ ಬಿಹಾರಿನದರಷ್ಟು ಉತ್ತಮವಲ್ಲ.

ಆಂಧ್ರಪ್ರದೇಶದ ಅಭ್ರಕದ ಜಾಡು ಗೂಡೂರು ಮತ್ತು ಸಂಗಂ ನಡುವೆ 96 ಕಿಮೀ ಹರಡಿದ್ದು 12–16 ಕಿಮೀ ಅಗಲವಾಗಿದೆ. ಅದರಲ್ಲೂ ಗೂಡೂರು ಮತ್ತು ನೆಲ್ಲೂರು ಅಭ್ರಕದ ಗಣಿಗಳಿಗೆ ಬಹು ಪ್ರಸಿದ್ಧ. ಇಲ್ಲಿ ದೊರೆಯುವ ಅಭ್ರಕ ಬಹುಮಟ್ಟಿಗೆ ಹಸುರು ಛಾಯೆಯದು.

ಅಭ್ರಕದ ಬೆಲೆ ಅದರ ಗುಣಗಳನ್ನು ಅವಲಂಬಿಸಿದೆ. ಯಾವ ಬಗೆಯ ಲೋಪ ದೋಷಗಳಿಲ್ಲದೆಯೂ ಬಿರುಕುಗಳಿಲ್ಲದೆಯೂ ಸಾಧ್ಯವಾದಷ್ಟು ಅಗಲವಾಗಿಯೂ ಇದ್ದಲ್ಲಿ ಬೆಲೆ ಹೆಚ್ಚು. ಹೀಗಾಗಿ ಶಿಲೆಯಲ್ಲಿ ಹುದುಗಿರುವ ಅಭ್ರಕವನ್ನು ಬಹು ಜಾಗರೂಕತೆಯಿಂದ ಬಿಡಿಸಬೇಕು. ಪುಸ್ತಕಗಳೋಪಾದಿಯಲ್ಲಿರುವ ಅಭ್ರಕ 15–30 ಸೆಂಮೀ ಅಗಲವಿದ್ದು 8–10 ಸೆಂಮೀ ಮಂದವಾಗಿದ್ದು ಅಸಂಖ್ಯಾತ ತೆಳುಪೊರೆಗಳಿಂದ ಕೂಡಿರುತ್ತದೆ. ಮೊದಲು ಈ ಪುಸ್ತಕಗಳಿಂದ ಹಾಳೆಗಳನ್ನು ಬಿಡಿಸಿ ಒಪ್ಪಮಾಡುತ್ತಾರೆ. ಬಿಹಾರಿನಲ್ಲಿ ಇದಕ್ಕೆ ಕುಡುಗೋಲನ್ನು ಉಪಯೋಗಿಸುವ ಕಾರಣ ಅಲ್ಲಿನ ಅಭ್ರಕವನ್ನು ಕುಡುಗೋಲಿನಿಂದ ಒಪ್ಪಮಾಡಿದ ಅಭ್ರಕವೆಂದೂ (ಸಿಕಲ್ ಟ್ರಿಮ್ಡ್ ಮೈಕ), ಆಂಧ್ರ ಪ್ರದೇಶದಲ್ಲಿ ಚಾಕು ಅಥವಾ ಕತ್ತರಿಯನ್ನು ಉಪಯೋಗಿಸುವುದರಿಂದ ಅಲಗಿನಿಂದ ಒಪ್ಪಮಾಡಿದ ಅಭ್ರಕವೆಂದೂ (ಷಿಯರ್ ಟ್ರಿಮ್ಡ್ ಮೈಕ) ಕರೆದಿದ್ದಾರೆ. ಹೀಗೆ ಒಪ್ಪಮಾಡಿದ ಅಭ್ರಕವನ್ನು ಹಾಳೆ ಅಭ್ರಕ (ಷೀಟ್ ಮೈಕ) ಅಥವಾ ಚದರ ಅಭ್ರಕ (ಬ್ಲಾಕ್ ಮೈಕ) ಎನ್ನುತ್ತಾರೆ. ಅನಂತರ ಖನಿಜದ ಬಣ್ಣ ಮತ್ತು ಉದ್ದಗಲವನ್ನು ಅನುಸರಿಸಿ ಪೊರೆಗಳು (ಫಿಲ್ಮ್ಸ್) ಚೂರುಗಳು (ಸ್ಪ್ಲಿಟಿಂಗ್ಸ್), ಪಂಚ್, ವೃತ್ತ ಮತ್ತು ವಾಷರ್ ಎಂದು ವಿವಿಧದರ್ಜೆಗಳನ್ನಾಗಿ ವಿಂಗಡಿಸುತ್ತಾರೆ.

ಒಪ್ಪಮಾಡಿ ವಿಂಗಡಿಸುವ ಕೆಲಸದಲ್ಲಿ ಬಿಹಾರಿನ ಗಣಿಯ ಕೆಲಸಗಾರರು ಬಹು ನಿಷ್ಣಾತರು. ಅವರಿಗೆ ಈ ಕೆಲಸ ಬಹುಕಾಲದಿಂದ ಒಂದು ಕಲೆಯಾಗಿ ಪರಿಣಮಿಸಿದೆ. ಇಂದಿಗೂ ಅನೇಕ ದೇಶಗಳು ಈ ಕಾರ್ಯಕ್ಕಾಗಿ ತಮ್ಮಲ್ಲಿ ದೊರೆಯುವ ಅಭ್ರಕವನ್ನು ನಮ್ಮ ದೇಶಕ್ಕೆ ರಫ್ತು ಮಾಡುವುದುಂಟು.

**ಉಪಯೋಗಗಳು :** ಬಿಳಿಯ ಅಭ್ರಕವನ್ನು ಮುಖ್ಯವಾಗಿ ವಿದ್ಯುಚ್ಛಕ್ತಿಯ ಸಲಕರಣೆಗಳ ತಯಾರಿಕೆಯಲ್ಲಿ ವಿದ್ಯುತ್ ನಿರೋಧಕವಸ್ತುವಾಗಿ ಬಳಸುತ್ತಾರೆ. ಡೈನಮೊ, ಮೋಟಾರ್, ಕೃತಕ ಅಯಸ್ಕಾಂತಗಳು, ವೈರ್‌ಲೆಸ್ ಉಪಕರಣಗಳು ಫ್ಯೂಸ್ ಪೆಟ್ಟಿಗೆಗಳು, ಸ್ಪಾರ್ಕ್‌ಪ್ಲಗ್, ರೇಡಿಯೋ, ರೇಡಾರ್, ಟೆಲಿವಿಷನ್ ಮತ್ತು ಟೆಲಿಫೋನ್‌ಗಳ ತಯಾರಿಕೆಗೆ ಅಭ್ರಕ ಅತ್ಯವಶ್ಯ. ಸ್ವಚ್ಛವಾದ ಗಾಜಿನಂತಿರುವ ಮಸ್ಕೊವೈಟ್ ಅಭ್ರಕದ ಅಗಲವಾದ ಹಾಳೆಗಳನ್ನು ವಿದ್ಯುದೊಲೆಗಳು, ಚಿಮಣಿಗಳು, ಕುಲುಮೆಗಳು ವಿಶೇಷರೀತಿಯ ಕನ್ನಡಕಗಳು, ಟೋಸ್ಟರ್ ಮತ್ತು ವಿದ್ಯುತ್ ಕಾವಲಿಗಳಲ್ಲಿ ಉಪಯೋಗಿಸುತ್ತಾರೆ.

ಅಭ್ರಕದ ಸಣ್ಣ ಸಣ್ಣ ಚೂರುಗಳಿಂದ ಮೈಕನೈಟ್, ಮೈಕಾಬಟ್ಟೆ ಮತ್ತು ಮೈಕಾಟೇಪುಗಳನ್ನು ತಯಾರಿಸುತ್ತಾರೆ. ಪುಡಿ ಅಭ್ರಕದಿಂದ ಹಗುರವಾದ ಶಾಖನಿರೋಧಕ ಇಟ್ಟಿಗೆಗಳು, ದ್ರವಬಣ್ಣಗಳು, ವಿಶೇಷ ರೀತಿಯ ಕಾಗದ, ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳು ಮತ್ತು ಎರೆಗಳನ್ನು (ಲ್ಯೂಬ್ರಿಕೆಂಟ್ಸ್) ತಯಾರಿಸುತ್ತಾರೆ. ಅಭ್ರಕಭಸ್ಮ, ಅಭ್ರಕಚೂರ್ಣ–ಇವನ್ನು ಹಲವು ಬಗೆಯ ಆಯುರ್ವೇದ ಮತ್ತು ಯುನಾನಿ ಔಷಧಗಳಲ್ಲಿ ಉಪಯೋಗಿಸುವುದುಂಟು. ಲೆಪಿಡೊಲೈಟ್ ಅಭ್ರಕ ಲಿಥಿಯಂ ಖನಿಜದ ಮುಖ್ಯವಾದ ಅದುರುಗಳಲ್ಲೊಂದು. ಲಿಥಿಯಂ ಲೋಹ ಪಡೆಯಲು ಮತ್ತು ಗಾಜು, ಪಿಂಗಾಣಿ ಮತ್ತು ಎನ್ಯಾಮಲ್ ವಸ್ತುಗಳ ತಯಾರಿಕೆಯಲ್ಲಿ ಇದರ ಮುಖ್ಯ ಉಪಯೋಗ ವುಂಟು. ಈಚೆಗೆ ಇದನ್ನು ಅಣುಶಕ್ತಿಯ ಖನಿಜವಾಗಿ ಬಳಸುತ್ತಿದ್ದಾರೆ. (ಬಿ.ವಿ.ಜಿ.; ಕೆ.ಎಸ್.ಕೆ.)

**ಅಭ್ರಕಚೂರ್ಣ :** ಸಂಯುಕ್ತಜಲದಿಂದ ಕೂಡಿದ ಮೆಗ್ನೀಷಿಯಮ್ ಸಿಲಿಕೇಟ್ (ತಾಲಕ; ಟ್ಯಾಲ್ಕ್). $Mg_3Si_4O_{10}(oH)_{12}$ ಇದರ ರಾಸಾಯನಿಕ ಸೂತ್ರ. ಇದರಲ್ಲಿ ಸ್ವಲ್ಪಮಟ್ಟಿಗೆ ಕ್ಯಾಲ್ಸಿಯಂ ಆಕ್ಸೈಡ್ ($CaO$) ಅಲ್ಯೂಮಿನಿಯಂ ಆಕ್ಸೈಡ್ ($Al_2O_3$) ಮತ್ತು ಇತರ ಆಕ್ಸೈಡುಗಳೂ ಇರುತ್ತವೆ. ಬಹುಶಃ ಇವು ಕಶ್ಮಲಗಳು. ರಚನೆಯಲ್ಲಿ ಅಭ್ರಕ (ಮೈಕ) ಜಾತಿಗೆ ಸಂಬಂಧಿಸಿದೆ. ಮೆಗ್ನೀಷಿಯಂ ಸಿಲಿಕೇಟ್ ಪದರಗಳಿಂದ ಕೂಡಿರುವ ಖನಿಜ; ಬಹಳ ಮೃದು. ಮುಖಕ್ಕೆ ಸೌಂದರ್ಯವರ್ಧಕವಾಗಿ ಉಪಯೋಗಿಸುವ ಅಂಗರಾಗಗಳಿಗೆ ಆಧಾರ. ಪಿಂಗಾಣಿ ವಸ್ತುಗಳು, ಬಣ್ಣಗಳು, ಕ್ರಿಮಿನಾಶಕಗಳು, ಸಾಮಾನು ತಯಾರಿಕೆಗಳಲ್ಲೂ ಪ್ರಯೋಗಶಾಲೆಯಲ್ಲೂ ಇದರ ಬಳಕೆ ಇದೆ. (ಎನ್.ಎಸ್.ಕೆ.)

**ಅಮಟೆಗಿಡ :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಫಲವೃಕ್ಷ. ಸ್ಪಾಂಡಿಯಾಸ್ ಪಿನೇಟ ಇದರ ಸಸ್ಯವೈಜ್ಞಾನಿಕ ಹೆಸರು. ಕಾಡಮಟೆ, ಅಂಬಟೆ ಇದರ ಕನ್ನಡದ ಇತರ ಹೆಸರುಗಳು. ಅಮಟೆ ಗಿಡವು ಮಾವು, ಗೇರು ಮುಂತಾದವುಗಳ ಸಂಬಂಧಿ. ಇದು ಸಾಧಾರಣ ಎತ್ತರದ (8–10 ಮೀ) ಮರ. ಉಷ್ಣವಲಯದ ಕಾಡುಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಭಾರತದಲ್ಲಿ ಕನ್ಯಾಕುಮಾರಿಯಿಂದ ಹಿಮಾಲಯದ ತಪ್ಪಲಿನವರೆಗೂ ಅಲ್ಲಲ್ಲೇ ಬೆಳೆಯುವುದುಂಟು. ಕಾಯಿಗಾಗಿ ಇದನ್ನು ಮನೆಯ ಹಿತ್ತಲಲ್ಲೂ ತೋಟಗಳಲ್ಲೂ ಬೆಳೆಸುವುದುಂಟು.

ಮರ ಅಷ್ಟು ಗಟ್ಟಿಯಲ್ಲ; ಸೌದೆಗೆ ಮಾತ್ರ ಬಳಸಲು ಯೋಗ್ಯ. ಕೊಂಬೆಗಳು ಸುಲಭವಾಗಿ ಮುರಿದುಹೋಗುತ್ತವೆ. ಚಕ್ಕೆ ಮಂದ; ಒಳಭಾಗ ಕೆಂಪು. ಎಲೆಗಳು ಚಳಿಗಾಲದಲ್ಲಿ ಬಹು ಬೇಗ ಉದುರಿ ಬಹು ದಿನಗಳವರೆಗೆ ಮರ ಬೆತ್ತಲೆಯಾಗಿರುತ್ತದೆ. ಅನಂತರ ಹೂಗಳು ಕಾಣಿಸಿಕೊಳ್ಳುತ್ತವೆ. ಎಲೆಗಳನ್ನು ಹಿಸುಕಿದರೆ ಟರ್‌ಪೆಂಟೈನ್ ವಾಸನೆ ಬರುತ್ತದೆ. ರಸವನ್ನು ಕಿವಿನೋವಿಗೆ ಉಪಯೋಗಿಸುತ್ತಾರೆ.

ಬಲಿತ ಬೀಜಗಳು ಮೊಳೆತು ಸಸಿಯಾಗುತ್ತವೆ. ಕೊಂಬೆಗಳನ್ನು ನೆಟ್ಟರೂ ಮರವಾಗಿ ಬೆಳೆಯುತ್ತದೆ. ಕಾಯಿ ಗಾತ್ರದಲ್ಲಿ ಅಳಲೆಕಾಯಿಯಷ್ಟಿದ್ದು ಬಣ್ಣದಲ್ಲಿ ಹಸುರಾಗಿರುತ್ತದೆ. ಹೆಚ್ಚು ತಿಂದರೆ ಅಜೀರ್ಣಕಾರಿಯಾದರೂ ಗಂಟಲು ಮತ್ತು ಕಿವಿನೋವಿಗೆ ಔಷಧಿ. ಆಯುರ್ವೇದದ ಪ್ರಕಾರ ಇದು ಶಕ್ತಿವರ್ಧಕ ಮತ್ತು ಕಾಮೋತ್ತೇಜಕ, ವಿರೇಚಕ. ಪಿತ್ತಕೆರಳಿಕೆ, ಹುಣ್ಣು, ಕ್ಷಯರೋಗ ಮತ್ತು ರಕ್ತ ದೋಷದಲ್ಲಿ ಉಪಯುಕ್ತ. ಮುಂಡಾ ಜನಾಂಗದಲ್ಲಿ ತೊಗಟೆಯ ಗಂಧವನ್ನು ಕೀಲುನೋವಿಗೆ ಬಳಸುತ್ತಾರೆ. ತೊಗಟೆಯಿಂದ ಅಂಟು ಬರುತ್ತದೆ. ಕಾಯಿಗಳನ್ನು ಪೂರ್ತಿ ಬಲಿಯುವುದಕ್ಕೆ ಮುಂಚೆ ಕಿತ್ತು ಉಪ್ಪಿನಕಾಯಿ ಹಾಕುತ್ತಾರೆ. ದಕ್ಷಿಣ ಭಾರತದಲ್ಲಿ ಇದು ತುಂಬ ಜನಪ್ರಿಯವಾಗಿದೆ. ಹಣ್ಣಿನಲ್ಲಿ ನಾರು ಹೆಚ್ಚು. ಗೊಜ್ಜಿಗೆ ಚೆನ್ನಾಗಿರುತ್ತದೆ. (ಎಚ್.ಎನ್.ಸಿ.; ಬಿ.ಬಿ.)

**ಅಮರ್ತ್ಯಸೇನ್:** 1933–. ಹೆಸರಾಂತ ಭಾರತೀಯ ಅರ್ಥಶಾಸ್ತ್ರಜ್ಞ. ಪ್ರಜಾಕಲ್ಯಾಣ ಅರ್ಥಶಾಸ್ತ್ರ (ವೆಲ್‌ಫೇರ್ ಎಕನಾಮಿಕ್ಸ್) ಕುರಿತ ಸಾಧನೆಗೆ ನೊಬೆಲ್ ಪ್ರಶಸ್ತಿ ದೊರಕಿದೆ. ಇವರನ್ನು ಅರ್ಥಶಾಸ್ತ್ರದ ಮದರ್ ಥೆರೇಸಾ ಎಂದೂ ಕರೆಯಲಾಗುತ್ತದೆ. ಇವರ ಕೃತಿಗಳನ್ನು 30 ಭಾಷೆಗಳಿಗೆ ಅನುವಾದಿಸಲಾಗಿದೆ. ಸು.80 ಗೌರವ ಡಾಕ್ಟೊರೇಟ್ ಪದವಿಗಳನ್ನು ಪಡೆದಿರುವ ಇವರನ್ನು 2010ರಲ್ಲಿ ಟೈಮ್ಸ್ ಪತ್ರಿಕೆ ವಿಶ್ವದ 100 ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಸೇರಿಸಿದೆ.

ಸೇನ್ ಅವರು ಪಶ್ಚಿಮಬಂಗಾಲದಲ್ಲಿ ರವೀಂದ್ರನಾಥ ಠಾಕೂರರು ಸ್ಥಾಪಿಸಿದ ಶಾಂತಿನಿಕೇತನದಲ್ಲಿ (3 ನವೆಂಬರ್ 1933) ಜನಿಸಿದರು. ತಂದೆ ಆಶುತೋಷ ಸೇನ್‌ರು ಢಾಕಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ತಾಯಿ ಅಮಿತ ಸೇನ್.

ಢಾಕಾದ ಸಂತಗ್ರೆಗರಿ ಶಾಲೆಯಲ್ಲಿ 1941ರಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಪಡೆದರು. 1947ರಲ್ಲಿ ಕೋಲ್ಕೊತದ ವಿಶ್ವಭಾರತಿ ವಿಶ್ವವಿದ್ಯಾಲಯ ಶಾಲೆ ಹಾಗೂ ಪ್ರೆಸಿಡೆನ್ಸ ಕಾಲೇಜುಗಳಲ್ಲಿ ಶಿಕ್ಷಣ ಮುಂದುವರಿಸಿದರು. ಪ್ರೆಸಿಡೆನ್ಸ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಬಿ.ಎ. (ಆನರ್ಸ್) ಪದವಿಯನ್ನು ಪ್ರಥಮದರ್ಜೆಯಲ್ಲಿ ಪಡೆದರು. ಅನಂತರ ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಪದವಿ ಗಳಿಸಿದರು (1956). ಅನಂತರ



ಡಾಕ್ಟೊರೇಟ್ ಪದವಿ ಪಡೆದು 1960–61ರಲ್ಲಿ ಮ್ಯಾಸಿಚುಸಿಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾದರು; ಸ್ಟ್ಯಾನ್‌ಫೊರ್ಡ್, ಬರ್ಕಲಿ ಮತ್ತು ಕಾರ್ನೆಲ್‌ಗಳಲ್ಲೂ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು.

ಸೇನರು ಕೋಲ್ಕೊತ ವಿಶ್ವವಿದ್ಯಾನಿಲಯ, ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ಗಳಲ್ಲಿ (1961–72) ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. 1972–77ರ ವರೆಗೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1977–86ರ ವರೆಗೆ ಯೂನಿವರ್ಸಿಟಿ ಆಫ್ ಆಕ್ಸ್‌ಫರ್ಡ್‌ನಲ್ಲಿ ಪ್ರಾಧ್ಯಾಪಕರಾಗಿದ್ದರು. 1986ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಥಾಮಸ್ ಡಬ್ಲ್ಯು ಲಾಮಂಟ್ ಯೂನಿವರ್ಸಿಟಿಯಲ್ಲಿ ಪ್ರಾಧ್ಯಾಪಕರಾ ದರು. 1998ರಲ್ಲಿ ಇವರು ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನ 'ಮಾಸ್ಟರ್' ಆಗಿ ನೇಮಕವಾದರು. ಜನವರಿ 2004ರಲ್ಲಿ ಹಾರ್ವರ್ಡ್‌ಗೆ ಮರಳಿದರು.

ವೈಯಕ್ತಿಕ ಅನುಭವದಿಂದ ಹಾಗೂ 1943ರ ಬಂಗಾಳದ ಘೋರ ಕ್ಷಾಮವನ್ನೂ ಅದರಿಂದ ಮೂರು ಮಿಲಿಯನ್ ಜನ ಮೃತರಾದುದನ್ನು ಕಣ್ಣಾರೆ ಕಂಡ ಸೇನ್ ಮನಕರಗಿ ಅದಕ್ಕೆ ಕಾರಣಗಳನ್ನೂ ಪರಿಹಾರಗಳನ್ನೂ ಅನ್ವೇಷಿಸಿದರು.

ಇವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ. ಪ್ರಜಾಕಲ್ಯಾಣ ಅರ್ಥಶಾಸ್ತ್ರದಲ್ಲಿನ ಸಾಧನೆಗಾಗಿ ನೊಬೆಲ್ ಪಾರಿತೋಷಕ, 1999ರಲ್ಲಿ ಭಾರತರತ್ನ ಪ್ರಶಸ್ತಿ, ಬಾಂಗ್ಲಾದೇಶದ ಗೌರವ ಪ್ರಜಾತ್ವ, ಗ್ಲೋಬಲ್ ಡೆವಲಪ್‌ಮೆಂಟ್ ಆ್ಯಂಡ್ ಎನ್‌ವೈರನ್‌ಮೆಂಟ್ ಇನ್‌ಸ್ಟಿಟ್ಯೂಟ್‌ನಿಂದ ಲಿಯಾಂಟೈಫ್ ಬಹುಮಾನ – ಕೆಲವು ಮುಖ್ಯ ಪುರಸ್ಕಾರಗಳು.

ಚಾಯ್ಸ್ ಆಫ್ ಟೆಕ್ನಿಕ್ಸ್, ಕಲೆಕ್ಟಿವ್ ಚಾಯ್ಸ್ ಅಂಡ್ ಸೋಷಿಯಲ್ ವೆಲ್‌ಫೇರ್, ಗ್ರೋತ್ ಎಕನಾಮಿಕ್ಸ್, ಆನ್ ಎಕನಾಮಿಕ್ ಇನೀಕ್ವಾಲಿಟಿ, ಪಾವರ್ಟಿ ಅಂಡ್ ಫ್ಯಾಮಿನ್, ಯುಟಿಲಿಟೇರಿಯನಿಸಮ್ ಅಂಡ್ ಬಿಯಾಂಡ್ ಮುಂತಾದ ಹತ್ತಾರು ಮಹತ್ತ್ವಪೂರ್ಣ ಕೃತಿಗಳನ್ನು ಸೇನರು ರಚಿಸಿದ್ದಾರೆ; ನೂರಾರು ವಿದ್ವತ್ಪೂರ್ಣ ಲೇಖನಗಳನ್ನು ಬರೆದಿದ್ದಾರೆ.

ಸೇನರ ಮೊದಲ ಪತ್ನಿ ನವನೀತಾ ದೇವ್ ಸೇನ್ ಲೇಖಕಿ. ಆಕೆಯಿಂದ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು; 1971ರಲ್ಲಿ ಇವರು ಲಂಡನ್ನಿಗೆ ಹೋದ ಹೊಸದರಲ್ಲಿ ವಿವಾಹ ವಿಚ್ಛೇದನ ಪಡೆದು 1973ರಲ್ಲಿ ಈವ ಕಲೋರ್ನಿ ಎಂಬಾಕೆಯನ್ನು ವಿವಾಹವಾದರು. ಆಕೆಯಿಂದ ಇಬ್ಬರು ಮಕ್ಕಳನ್ನು ಪಡೆದರು. ಮೂರನೆಯ ಹೆಂಡತಿ ಎಮ ಜಾರ್ಜಿನ ರಾಸ್‌ಚೈಲ್ಡ್ ಅರ್ಥಶಾಸ್ತ್ರ ಇತಿಹಾಸಜ್ಞೆ. (ಬಿ.ವಿ.ಎಸ್.)

**ಅಮಪುರಿ :** ಗಟಿಫೆರೀ(ಕ್ಲೂಸಿಯೇಸೀ) ಕುಟುಂಬಕ್ಕೆ ಸೇರಿದ ವನ್ಯವೃಕ್ಷ. ಗಾರ್ಸೀನಿಯ ಇಂಡಿಕ ಇದರ ಸಸ್ಯವೈಜ್ಞಾನಿಕ ಹೆಸರು. ಇದಕ್ಕೆ ಕನ್ನಡದಲ್ಲಿ ಪುನರ್ಪುಳಿ, ಮುರ್ಗಲ, ಮುರ್ಗಿನ ಹುಳಿ ಮರ ಎಂಬ ಇತರ ಹೆಸರುಗಳೂ ಉಂಟು. ಇಂಗ್ಲಿಷಿನಲ್ಲಿ ಇದನ್ನು ವೈಲ್ಡ್ ಮ್ಯಾಂಗೋಸ್ಟೀನ್ ಎನ್ನುತ್ತಾರೆ. ಕೊಂಕಣ ಕರಾವಳಿ ಪ್ರದೇಶದಲ್ಲಿ ಹೆಚ್ಚು ವ್ಯಾಪಕವಾಗಿ ಬೆಳೆಯುತ್ತದೆ. ಎಲೆ ಅಗಲ. ಗಂಡು ಮತ್ತು ಹೆಣ್ಣು ಹೂಗಳು ಗೊಂಚಲಾಗಿ ಕಕ್ಷಸ್ಥವಾಗಿರುವುವು. ದಪ್ಪವಾದ ಪುಷ್ಪಪತ್ರಗಳು 4–5. ನಾಲ್ಕು ಪುಷ್ಪದಳಗಳೂ ಅಧಿಕಸಂಖ್ಯೆಯ ಕೇಸರಗಳೂ ಇವೆ. 4–8 ರವರೆಗೆ ಅಂಡಕೋಶದ ವಿಭಾಗಗಳಿರುತ್ತವೆ. ಹಣ್ಣುಗಳು ಗುಂಡು. ಬಣ್ಣ ಉದಾ. ತಿರುಳಿನಲ್ಲಿ 4–8 ಬೀಜಗಳಿವೆ.

ಕಾಯಿ ಹುಳಿಮಿಶ್ರಿತಕಾರ ರುಚಿಯುಳ್ಳದ್ದು. ಔಷಧಿಗೆ ಉಪಯೋಗಿಸುವರು. ಬೀಜದಲ್ಲಿ ಅದರ ತೂಕದ ಶೇ.25 ಭಾಗ ಎಣ್ಣೆ ಇದೆ. ಇದರಿಂದ ಮುಲಾಮು ತಯಾರಿಸಿ ಚರ್ಮವ್ಯಾಧಿಗಳಿಗೆ ಅದನ್ನು ಬಳಸುತ್ತಾರೆ. ಈ ಜಿಡ್ಡನ್ನು ಕೋಕಮ್ ಬೆಣ್ಣೆಯೆಂದು ಮಾರುತ್ತಾರೆ. ಕೋಕಮ್ ಬೆಣ್ಣೆ ಖಾದ್ಯಯೋಗ್ಯ. ತುಪ್ಪದೊಂದಿಗೆ ಕಲಬೆರಕೆ ಮಾಡುವುದುಂಟು. ಅಲ್ಲದೆ ಇದನ್ನು ಸಾಬೂನು, ಮೋಂಬತ್ತಿ ತಯಾರಿಕೆಗೂ ಬಳಸಲಾಗುತ್ತದೆ. ಒಣಗಿದ ಹಣ್ಣಿನ

ಸಿಪ್ಪೆಯನ್ನು ಹುಣಿಸೆಹುಳಿಯ ಬದಲಿಗೆ ಬಳಸುತ್ತಾರೆ. ತಂಪಾದ ಪಾನೀಯಕ್ಕೂ ಬಳಸಬಹುದು. ಹಣ್ಣಿನ ರಸ ಪಿತ್ತಶಮನಕಾರಿ, ಹೊಟ್ಟೆ ಹುಳುವನ್ನು ನಾಶಮಾಡುವುದಲ್ಲದೆ ಹೃದಯಕ್ಕೆ ಬಲಕೊಡುತ್ತದೆ ಎನ್ನಲಾಗಿದೆ. ಆಮಶಂಕೆ, ಗಂಟಲು ನೋವು, ಮೂಲವ್ಯಾಧಿಗಳಿಗೆ ಇದು ಔಷಧ. ಇದರ ಮರ ಕಾಗದ ಪಲ್ಪ್ ತಯಾರಿಕೆಗೂ ಒದಗುತ್ತದೆ. ಬೀಜದ ಎಣ್ಣೆ ರಕ್ತಸ್ರಾವ ಬಂಧಕ, ತಂಪುಕಾರಕ, ಉಪಶಮನಕಾರಿ. (ಎಂ.)

**ಅಮರಕಂಟಕ :** ಮಧ್ಯಪ್ರದೇಶದ ವಿಲಾಸಪುರ ಜಿಲ್ಲೆಯಲ್ಲಿನ ಒಂದು ಪ್ರಸ್ಥಭೂಮಿ. ಮೈಕಲಾ ಎಂಬ ಪರ್ವತಸರಣಿಯಲ್ಲಿ ಇರುವುದರಿಂದ ಇಲ್ಲಿ ಹುಟ್ಟುವ ನರ್ಮದಾ ನದಿಯನ್ನು ಮೈಕಲಕನ್ಯೆಯೆಂದು ಕರೆಯುವರು. ಕಾಳಿದಾಸ ಈ ಪರ್ವತವನ್ನು ಅಮರಕೂಟವೆಂದು ಕರೆದಿದ್ದಾನೆ (ಮೇಘದೂತ). ಇಲ್ಲಿ ಅಮರನಾಥ, ನರ್ಮದಾ ಮುಂತಾದ ಮಂದಿರಗಳಿವೆ. ಶಿವ ಸುಟ್ಟಂಥ ತ್ರಿಪುರಗಳ ಪೈಕಿ ಒಂದು ಅಮರಕೂಟದಲ್ಲಿ ಇದ್ದಿತೆಂದು ಮತ್ಸ್ಯಪುರಾಣದಲ್ಲಿ ಹೇಳಿದೆ. ಗ್ರಹಣಕಾಲದಲ್ಲಿ ಈ ಪರ್ವತಯಾತ್ರೆ ಮಾಡಿದರೆ ಹತ್ತು ಅಶ್ವಮೇಧಯಾಗ ಮಾಡಿದ ಪುಣ್ಯ ಬರುವುದೆಂದು ಪದ್ಮಪುರಾಣದಲ್ಲಿ ಹೇಳಿದೆ. ಇಲ್ಲಿರುವ ಭಗ್ನವಾದ ಕರ್ಣಮಂದಿರ ವಾಸ್ತುಶಿಲ್ಪದ ದೃಷ್ಟಿಯಿಂದ ಪರಿಶೀಲನಾರ್ಹವಾಗಿದೆ.

ಅಮರ ಕಂಟಕ ಇರುವುದು $22^{0}.43^{\prime}$ ಉ.ಅ. ಮತ್ತು $82^{0}$–$4^{\prime}$ ಪೂ ರೇ.ಗಳಲ್ಲಿ. ಇಲ್ಲಿಂದ ಸೋನೆ ಅಥವಾ ಸೋನೆಭದ್ರ ನದಿಯೂ (ಗಂಗಾ ನದಿಯ ಉಪನದಿ) ಉಗಮ ಹೊಂದಿ ಉತ್ತರಕ್ಕೆ ಹರಿಯುತ್ತದೆ. (ಬಿ.ಜಿ.)

ಸು.11ನೆಯ ಶತಮಾನದಲ್ಲಿ ಕಟ್ಟಿದ ಹಲವು ದೇವಾಲಯಗಳಲ್ಲಿ ಕೇಶವ ನಾರಾಯಣ ಮತ್ತು ಮಚ್ಛೇಂದ್ರನಾಥ ದೇವಾಲಯಗಳು ಮಧ್ಯಭಾರತದ ನಾಗರಶೈಲಿಯ ವಾಸ್ತುಕಲೆಗೆ ಉತ್ತಮ ಉದಾಹರಣೆಗಳು. ಇವುಗಳಲ್ಲಿ ಒಂದು ಗರ್ಭಗೃಹವೂ ಮುಂದೆ ಅಂತರಾಳವೂ ಅದರ ಮುಂದೆ ಮಂಟಪವೂ ಇವೆ. ಮಂಟಪಗಳು ಅರ್ಧಮಟ್ಟಿಗೆ ಮಾತ್ರ ತೆರೆದಿದ್ದು, ಒಳಗೆ ಕುಳಿತುಕೊಳ್ಳಲು ಕಲ್ಲಿನಿಂದ ಮಾಡಿದ ಒರಗುಜಗಲಿಗಳಿವೆ. ಮೇಲಿನ ಛಾವಣಿ ಮಟ್ಟಪಟ್ಟಿಕೆಗಳಿಂದ ರಚನೆಗೊಂಡು ಪಿರಮಿಡ್ಡಿನ ಆಕೃತಿಯಲ್ಲಿದ್ದು ಕಂಬಗಳ ಮೇಲೆ ಎತ್ತಲ್ಪಟ್ಟಿವೆ. ಗರ್ಭಗೃಹಗಳ ಮೇಲೆ ಚೈತ್ಯಕವಾಟಾಕೃತಿಯ ಗೂಡುಗಳಿಂದ ಸುಂದರವಾಗಿ ಅಲಂಕರಿಸಲ್ಪಟ್ಟು, ಎತ್ತರವಾದ ಒಳಬಾಗುಳ್ಳ ನಾಗರಸಂಪ್ರದಾಯದ ಶಿಖರಗಳಿವೆ. ಡಾಹಲದ ರಾಜಾಕರ್ಣನಿಂದ (1040–70) ಕಟ್ಟಲಾದುದೆಂದು ಹೇಳಲಾಗುವ ದೇವಾಲಯ ಒಂದು ತ್ರಿಕೂಟಾಚಲ. ಇದರಲ್ಲಿ ಮಧ್ಯಭಾರತ ನಾಗರಶೈಲಿಗೆ ಹೊಸದಾದ ಕೆಲವು ನಮೂನೆಗಳನ್ನು ಅಳವಡಿಸಿರುವುದು ಕಾಣಬರುತ್ತದೆ. (ಎಸ್.ಎನ್.)

**ಅಮರಗಣಂಗಳು :** ವೀರಶೈವ ಧರ್ಮ ಮತ್ತು ಸಾಹಿತ್ಯದಲ್ಲಿ ಪ್ರಖ್ಯಾತರಾದ ಶಿವಪರಿವಾರದವರು. ಸಂಖ್ಯೆಯಲ್ಲಿ 770. ಪಂಡಿತಾರಾಧ್ಯರ ಗಣಸಹಸ್ರ ನಾಮಾವಳಿ ಮತ್ತು ಪಾಲ್ಕುರಿಕೆ ಸೋಮನಾಥನ ಸಹಸ್ರಗಣನಾಮಗಳಲ್ಲಿ ಬರುವ ಅಮರಗಣಗಳ ಸಂಖ್ಯೆ 347. (ಬಿ.ಎಸ್.)

**ಅಮರನಾಥ ಗುಹೆ :** ಕೇದಾರನಾಥ, ಬದರೀನಾಥ, ಕೈಲಾಸಗಳಂತೆ ಪ್ರಸಿದ್ಧವಾಗಿರುವ ಅಮರನಾಥ ಕ್ಷೇತ್ರದಲ್ಲಿ ಬಹು ಪವಿತ್ರವೆನಿಸಿರುವ ಪ್ರಾಕೃತಿಕ ಗುಹೆ, ಶಿವದೇವಾಲಯ. ಅಮರನಾಥ ಜಮ್ಮು ಮತ್ತು ಕಾಶ್ಮೀರದ ಪರ್ವತ ಪ್ರದೇಶದಲ್ಲಿದೆ. ಶ್ರೀನಗರದಿಂದ ಚಂದನವಾಡಿ, ಶೇಷನಾಗ ಮತ್ತು ಪಂಚತರಣಿಗಳನ್ನು ದಾಟಿ 8 ಕಿಮೀ ನಡೆದರೆ ಅಮರನಾಥ ಸಿಗುತ್ತದೆ. ಈ ಮಾರ್ಗದಲ್ಲಿ 2.4 ಕಿಮೀ ಎತ್ತರದ ಬೆಟ್ಟವನ್ನು ಹತ್ತಿ ಇಳಿಯಬೇಕಾಗುವುದು. ಅನಂತರ ಹಿಮದಿಂದ ಆವರಿಸಿರುವ ಕಣಿವೆಯ ಒಳಗೆ ಸುಮಾರು 3 ಕಿಮೀ ದೂರ ನಡೆದರೆ ಕ್ಷೇತ್ರ ಸನ್ನಿಹಿತವಾಗುತ್ತದೆ. ಹಿಮದ ಕಣಿವೆಯಲ್ಲಿ ಹಾದುಹೋಗುವಾಗ ಒಂದು ಪಕ್ಕದಲ್ಲಿ ಬೆಟ್ಟದ ಮಧ್ಯೆ ಸು. 400ಮೀ ಎತ್ತರದಲ್ಲಿ ಕಾಣುವುದೇ ಅಮರನಾಥ ಗುಹೆ. ಗುಹೆ 17 ಮೀ ಅಗಲ, 15ಮೀ ಎತ್ತರದ್ದಾಗಿದೆ; ಈ ಆಯಕಟ್ಟಿನೊಳಗೆ ಸುಮಾರು 15 ಮೀ ಉದ್ದವಿದೆ. ಗುಹೆಯ ಹೊರಭಾಗದ ಒಂದು ಪಕ್ಕದಲ್ಲಿ ಹರಿಯುತ್ತಿರುವ ಅಮರಗಂಗೆ ಎಂಬ ಸಣ್ಣ ಹಿಮಝರಿ ಯಾತ್ರಾರ್ಥಿಗಳ ಸ್ನಾನಪಾನಾದಿಗಳಿಗೆ ಪವಿತ್ರವೆನಿಸಿದೆ. ಗುಹೆಯ ಒಂದು ಮೂಲೆಯಲ್ಲಿ ದೊಡ್ಡ ಹಿಮರಾಶಿ ಶಿವಲಿಂಗಾಕಾರದಲ್ಲಿ ಕಾಣಿಸುವುದು. ಇದನ್ನು ಅಮರನಾಥಶಿವ ಎಂದು ಕರೆಯುತ್ತಾರೆ. ಈ ದೇವಾಲಯ ಅಲ್ಲಿನ ದೇವನಂತೆ ಕೇವಲ ಪ್ರಾಕೃತಿಕ. ಮಾನವನಿರ್ಮಿತವಲ್ಲ. ಪ್ರಕೃತಿಯನ್ನು ವರ್ಗೀಕರಿಸುವ ಮಳೆಗಾಳಿ ಬಿಸಿಲುಗಳು ಈ ಪವಾಡವನ್ನೆಸಗಿವೆ. ಇಲ್ಲಿ ಪ್ರಕೃತಿಯೇ ದೇವ, ದೇಗುಲ. ಯಾತ್ರಾರ್ಥಿಗಳೇ ಪೂಜಾರಿಗಳು. ಈ ವಿಶೇಷಗುಣದಿಂದಾಗಿ ಅಮರನಾಥ ಗುಹೆ ಬಹುಮುಖ್ಯ ಯಾತ್ರಾಸ್ಥಳಗಳಲ್ಲೊಂದಾಗಿದೆ. (ಎಂ.ಎಸ್.)


ಹಿಮಲಿಂಗ

**ಅಮರಸಿಂಗ್ :** ರಜಪೂತರಾಜರಲ್ಲಿ ಪ್ರಸಿದ್ಧನಾದ ಈತ (ಹಮೀರ್ ಸಿಂಗ್ ಅಮರಸಿಂಹ) 1303ರಲ್ಲಿ ಅಲಾವುದ್ದೀನ್ ಖಿಲ್ಜಿಯ ವಶವಾಗಿದ್ದ ಮೇವಾಡದ ಚಿತ್ತೂರು ದುರ್ಗವನ್ನು 1316ರಲ್ಲಿ ಗೆದ್ದು, ನೆರೆಹೊರೆಯ ರಜಪೂತ ರಾಜರ ನೆರವಿನಿಂದ ಮುಸ್ಲಿಮರನ್ನು ಹೊರದೂಡಿ ದಕ್ಷಿಣ ಭಾರತದಲ್ಲಿ ಖಿಲ್ಜಿ ಆಡಳಿತದ ಪತನಕ್ಕೆ ಕಾರಣನಾದ. (ಪಿ.ಎಸ್)

**ಅಮರಸಿಂಹ :** ಸು 400 ಉಪಲಬ್ಧವಿರುವ ಸಂಸ್ಕೃತ ಶಬ್ದಕೋಶಗಳಲ್ಲೆಲ್ಲ ಅತಿಪ್ರಸಿದ್ಧವೂ ಜನಪ್ರಿಯವೂ ಆದ ನಾಮಲಿಂಗಾನುಶಾಸನ ಅಥವಾ ಅಮರಕೋಶ ಎಂಬ ಕೃತಿಯ ಕರ್ತೃ.

ಗ್ರಂಥಾರಂಭದಲ್ಲಿ ಜ್ಞಾನಸಿಂಧುವೂ ದಯಾಸಿಂಧುವೂ ಆದ ಭಗವಾನ್ ಬುದ್ಧನನ್ನು ಸ್ತುತಿಸಿರುವುದರಿಂದ ಕರ್ತೃ ಬೌದ್ಧನಾಗಿದ್ದಿರಬಹುದು. ಬೌದ್ಧನಾದರೂ ತನ್ನ ಕೋಶದಲ್ಲಿ ವೈದಿಕಯಜ್ಞಗಳ, ಚಾತುರ್ವರ್ಣ್ಯವ್ಯವಸ್ಥೆಯ, ಆಚಾರವ್ಯವಹಾರಗಳ, ದೇವತಾಸ್ವರೂಪದ, ಪುರಾಣೇತಿಹಾಸಾದಿಗಳ ಗಾಢ ಪರಿಚಯವನ್ನು ತೋರಿಸುತ್ತಾನೆ. ಇವನ ಗ್ರಂಥ ಮೂರು ಕಾಂಡಗಳಲ್ಲಿ ವಿಂಗಡಿಸಲ್ಪಟ್ಟಿದ್ದು ಒಂದೊಂದರಲ್ಲೂ ಸ್ವರ್ಗ, ಭೂಮಿ, ಪಾತಾಳ, ಬ್ರಹ್ಮ, ಕ್ಷತ್ರಿಯ, ವೈಶ್ಯ, ಇತ್ಯಾದಿ ಉಚಿತ ಶೀರ್ಷಿಕೆಗಳ ಕೆಳಗೆ ಉಪಯುಕ್ತ ಶಬ್ದಗಳು ಸಮಾನಾರ್ಥಕ ಶಬ್ದಾಂತರಗಳೊಂದಿಗೆ ಪ್ರಸ್ತಾಪಿಸಲ್ಪಟ್ಟಿವೆ. ಭಾರತದ ಮೃಗಜಾತಿಗಳ ವೈವಿಧ್ಯವನ್ನೂ ಪಕ್ಷಿಗಳ ನಾಮಾಂತರಗಳನ್ನೂ ಅನಂತವನಸ್ಪತಿಗಳ ಸೂಕ್ಷ್ಮ ಉಲ್ಲೇಖಗಳನ್ನೂ ಒದಗಿಸುವುದರೊಂದಿಗೆ ನಾಟ್ಯ, ಸಂಗೀತ, ಚಿತ್ರ, ಇತ್ಯಾದಿ ಲಲಿತಕಲೆಗಳ ಹಾಗೂ ವೈದ್ಯ, ಜ್ಯೋತಿಷ್ಯ, ಧರ್ಮಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿ ಲೌಕಿಕಶಾಸ್ತ್ರಗಳ ಪಾರಿಭಾಷಿಕ ಶಬ್ದಗಳನ್ನೂ ಖಚಿತವಾದ ಅರ್ಥ ವಿವರಣೆಯ ಸಮೇತ ಕೊಡುವುದರಿಂದ ಅಮರಕೋಶವನ್ನು ಭಾರತೀಯ ಸಂಸ್ಕೃತಿಯ ಸಾರಸಂಗ್ರಹವೆಂದರೂ ಸಲ್ಲುತ್ತದೆ. ಗ್ರಂಥಾಂತ್ಯದಲ್ಲಿ ನಾನಾರ್ಥಕ ಶಬ್ದಗಳು, ವಿಶೇಷಣಗಳು, ಅವ್ಯಯ ಮತ್ತು ಲಿಂಗಾದಿಸಂಗ್ರಹ ಮುಂತಾದವು ಪರಿಶಿಷ್ಟರೂಪವಾಗಿ ಬಂದಿರುವುದರಿಂದ ವ್ಯಾಕರಣಾಂಶಗಳೂ ಸೇರಿದಂತಾಗಿದೆ. ಇದು ಕೋಶವಾದರೂ ಶ್ಲೋಕರೂಪದಲ್ಲಿರುವ ಕಾರಣ ಕಂಠಸ್ಥಮಾಡಿಕೊಳ್ಳಲು ಅನುಕೂಲವಾಗಿದೆ. ಸಾಂಪ್ರದಾಯಿಕ ಸಂಸ್ಕೃತ ಶಿಕ್ಷಣಕ್ರಮದಲ್ಲಿ ಅಮರಕೋಶದ ಅಭ್ಯಾಸಕ್ಕೆ ಪ್ರಥಮ ಸ್ಥಾನವಿದೆ.

6ನೆಯ ಶತಮಾನದಲ್ಲಿ ಅಮರಕೋಶ ಚೀನಿಭಾಷೆಗೆ ಅನುವಾದವಾಗಿರುವುದರಿಂದ ಅದಕ್ಕೂ ಪೂರ್ವದಲ್ಲಿ ರಚಿತವಾಗಿರಬೇಕು. ಪ್ರಾಯಶಃ ಅಮರಸಿಂಹನ ಕಾಲ 400 ಇದ್ದಿರಬಹುದು; ಏಕೆಂದರೆ ಇವನು ವಿಕ್ರಮಾದಿತ್ಯನ ಆಸ್ಥಾನದ ನವರತ್ನಗಳಲ್ಲೊಬ್ಬನೆಂಬ ಪ್ರತೀತಿಯುಂಟು.

ಅಮರಕೋಶದ ಮೇಲೆ ಸುಮಾರು ಐವತ್ತು ಟೀಕೆಗಳು ರಚಿತವಾಗಿವೆ. ಟೀಕಾಕಾರರಲ್ಲಿ ಕ್ಷೀರಸ್ವಾಮಿ (11ನೆಯ ಶತಮಾನ), ಸರ್ವಾನಂದ (12ನೆಯ ಶತಮಾನ), ರಾಯಮುಕುಟ (15ನೆಯ ಶತಮಾನ)–ಇವರು ನಿರ್ದೇಶಯೋಗ್ಯರು.

ಭಾರತದಲ್ಲಿ ಶಬ್ದಕೋಶಗಳ ರಚನೆಯ ಬಗೆಗೆ ಒಂದು ಇತಿಹಾಸವೇ ಇದೆ. ವೇದ ಶಬ್ದಗಳನ್ನು ಸಮಾನಾರ್ಥಗಳಾಗಿರುವ ಪಟ್ಟಿಗಳಲ್ಲಿ ಅಡಕಮಾಡಿದ ರಚನೆಗಳಿಗೆ ನಿಘಂಟುಗಳೆಂದು ಹೆಸರು; ಅದರಂತೆ ವೇದಮಂತ್ರಗಳಿಗೆ 'ಅನುಕ್ರಮಣಿ'ಗಳೂ ಉಂಟು. ಆದರೆ ಲೌಕಿಕ ಸಂಸ್ಕೃತಸಾಹಿತ್ಯ ಹಾಗೂ ಶಾಸ್ತ್ರಗಳಲ್ಲಿ ಬರುವ ಮುಖ್ಯ ಶಬ್ದಗಳನ್ನೆಲ್ಲ ಸಮಾನಾರ್ಥಕ ಹಾಗೂ ನಾನಾರ್ಥಕ ಎಂಬೆರಡು ಶೀರ್ಷಿಕೆಗಳಲ್ಲಿ ಅಳವಡಿಸಿ ನಾಮಪದಗಳಿಗೆ ಲಿಂಗ ಯಾವುದೆಂಬುದನ್ನು ಕೂಡ ನಿರ್ದೇಶಿಸಲು ಹೊರಟ ರಚನೆಗಳೇ ಕೋಶಗಳು. ಸಂಸ್ಕೃತ ಕೋಶಕಾರರಲ್ಲಿ ಕಾತ್ಯಾಯನ, ವಾಚಸ್ಪತಿ, ವಿಕ್ರಮಾದಿತ್ಯ, ವ್ಯಾಡಿ (ಇವರ ಗ್ರಂಥಗಳು: ನಾಮಮಾಲಾ, ಶಬ್ದಾರ್ಣವ, ಸಂಸಾರಾವರ್ತ, ಉತ್ಪಲಿನೀ) ಮುಂತಾದ ಪ್ರಾಚೀನ ವಿದ್ವಾಂಸರ ಉಲ್ಲೇಖಗಳಿದ್ದರೂ ಅವರ ಗ್ರಂಥಗಳು ಉಪಲಬ್ಧವಾಗಿಲ್ಲವೆಂಬ ಅಂಶವನ್ನು ಗಮನಿಸಿದಾಗ ಅಮರಕೋಶದ ಪ್ರಾಶಸ್ತ್ಯ ಇನ್ನೂ ಹೆಚ್ಚುತ್ತದೆ. (ಕೆ.ಕೆ.)

**ಅಮರಾಂತಸ್ :** ಅಮರಾಂತೇಸೀ ಕುಟುಂಬಕ್ಕೆ ಸೇರಿದ ಅಲಂಕಾರ ಸಸ್ಯ. ವಿವಿಧ ಆಕಾರ, ಗಾತ್ರ ಮತ್ತು ಬಣ್ಣಗಳ ಆಕರ್ಷಕ ಹೂ ಮತ್ತು ಎಲೆಗಳನ್ನು ಬಿಡುವುದರಿಂದ ತೋಟಗಾರಿಕೆಯಲ್ಲಿ ಪ್ರಾಧಾನ್ಯಪಡೆದಿದೆ. ಇದು ದಂಟು, ಕೀರೆ ಮುಂತಾದ ತರಕಾರಿ ಸಸ್ಯಗಳ ಹತ್ತಿರ ಸಂಬಂಧಿಯೂ ಹೌದು. ಇದನ್ನು ಮಡಿ, ಅಂಚು ಮತ್ತು ಕುಂಡಗಳಲ್ಲಿ ಬೆಳೆಸುವುದು ವಾಡಿಕೆ.

ಈ ಆಲಂಕಾರಿಕ ಜಾತಿಯಲ್ಲಿ 50 ಪ್ರಭೇದಗಳಿವೆ. ಇವುಗಳಲ್ಲಿ ಕೆಲವು ಮಾತ್ರ ಆಕರ್ಷಣೀಯ ಸಸ್ಯಗಳಾಗಿದ್ದು ಜನಪ್ರಿಯವಾಗಿವೆ. ಇವೆಲ್ಲ ಏಕವಾರ್ಷಿಕ ಪರ್ಣಸಸಿಗಳು. ಎಲೆಗಳು ಪರ್ಯಾಯಕ್ರಮದಲ್ಲಿ ಜೋಡಣೆಗೊಂಡಿವೆ. ಅವುಗಳ ಅಂಚು ನಯವಾಗಿದ್ದು

ತುದಿ ಮೊನಚಾಗಿರುತ್ತದೆ. ಹೂಗೊಂಚಲು ಸ್ಪೈಕ್ ಅಥವಾ ಮಿಶ್ರಮಾದರಿಯಲ್ಲಿದ್ದು ಹೂಗಳು ಒತ್ತಾಗಿರುತ್ತವೆ. ಮೂರು ಉಪಪುಷ್ಪಪತ್ರಗಳಿಂದ ಆವೃತವಾಗಿರುವ ಏಕಲಿಂಗ ಪುಷ್ಪದ 2–5 ಕೂಡುದಳಗಳ ಮೇಲುಭಾಗ ನಯವಾಗಿರುತ್ತದೆ. ಸಾಮಾನ್ಯವಾಗಿ 5, ಕೆಲವು ಸಾರಿ 2–3 ಇರುತ್ತವೆ. ಪರಾಗಕೋಶ, ಶಲಾಕಾಗ್ರ 2 ಅಥವಾ 3 ಭಾಗವಾಗಿರುತ್ತದೆ. ಫಲ ಒಂದು ಬೀಜವುಳ್ಳ ಯುಟ್ರಿಕಲ್ ಮಾದರಿಯದು.

ಅಮರಾಂತಸ್ ಟ್ರೈಕಲರ್: ಬಹು ಕವಲೊಡೆದು ಸುಮಾರು 1.5 ಮೀ ಎತ್ತರ ಬೆಳೆಯುವ ಏಕವಾರ್ಷಿಕ ಸಸ್ಯ; ಮೇಲುಭಾಗ ನಯವಾಗಿದೆ. ಎಲೆ ಕರನೆಯಾಕಾರವಾಗಿದ್ದು ಅಂಚು ನಯವಾಗಿ ತುದಿ ಮೊನಚಾಯಾಗಿರುತ್ತದೆ. ಹೂಗೊಂಚಲು ಸ್ಪೈಕ್ ಮಾದರಿಯದು.

ಅಮರಾಂತಸ್ ಕಾಡೇಟಸ್ : ಇದು ಬಹು ಸುಂದರವಾದ ಸಸ್ಯವೆಂದು ಖ್ಯಾತಿ ಪಡೆದಿದೆ. ಇದರ ಕಾಂಡ ದಪ್ಪ. ಬಹು ಕವಲೊಡೆದು ಸುಮಾರು 3 ಮೀ. ಎತ್ತರ ಬೆಳೆಯುತ್ತದೆ. ಕೆಂಪು ತೊಟ್ಟಿನಿಂದ ಕೂಡಿದ ಎಲೆ ಕರನೆಯಾಕಾರ, ಆಯತಾಕಾರ ಅಥವಾ ಭರ್ಜಿಯಾಕಾರವಾಗಿರುತ್ತದೆ. ಹೂಗೊಂಚಲು ಜೋಲುಬೀಳುವ ಸ್ಪೈಕ್ ಮಾದರಿಯದಾಗಿದೆ. ಈ ಜಾತಿಯಲ್ಲಿ ಹಳದಿ ಅಥವಾ ಬಿಳಿ ಹೂಬಿಡುವ ತಳಿಗಳಿವೆ.

ಅಮರಾಂತಸ್ ಹೈಪೊಕೋಂಡ್ರಿಯಾಕಸ್: 1.5 ಮೀ ಬೆಳೆಯುವ ಸಸ್ಯ. ಎಲೆ ಆಯತಾಕಾರ ಇಲ್ಲವೆ ಭರ್ಜಿಯಾಕಾರದಲ್ಲಿದ್ದು ಅಂಚು ನಯವಾಗಿರುತ್ತದೆ. ಅದರ ತುದಿ, ಕಡುಗೆಂಪು ಅಥವಾ ಹಸಿರು ಮಿಶ್ರಿತ ಕಡುಗೆಂಪಾಗಿರುವುದು. ಹೂಗೊಂಚಲು ಮಿಶ್ರ ಜಾತಿಯ ಸ್ಪೈಕ್ ಮಾದರಿಯದು. ಅದರ ಮೇಲೆ ಹೂಗಳು ಒತ್ತಾಗಿ ಸೇರಿಕೊಂಡು ಮುದ್ದೆಯಂತೆ ಕಾಣುತ್ತವೆ. ಕಡುಗೆಂಪು ಹೂವಿನ ಪುಷ್ಪಪತ್ರಗಳು ಉದ್ದವಾಗಿ ಮುಳ್ಳಿನಂತೆ ಇರುತ್ತವೆ. ಈ ಜಾತಿಯಲ್ಲಿ ಹಲವು ಬಣ್ಣದ ಹೂಬಿಡುವ ಅನೇಕ ತಳಿಗಳಿವೆ.

ಅಮರಾಂತಸ್ ಸ್ಯಾಲಿಸಿಫೋಲಿಯಸ್: ಇದು ಕೂಡ ಬಹು ಸುಂದರವಾದ ಪ್ರಭೇದವೆಂದು ಹೆಸರಾಗಿದೆ. ಸುಮಾರು 1 ಮೀ ಎತ್ತರ ಬೆಳೆಯುತ್ತದೆ. ನೀಳಾಕಾರವಾದ ಇದರ ಎಲೆಯ ಅಂಚು ಅಲೆಯಲೆಯಾಗಿದ್ದು ತುದಿ ಮೊನಚಾಗಿದೆ. ಮೊದಲು ಕಂಚಿನ ಹಸಿರು ಬಣ್ಣವಾಗಿದ್ದು ಅನಂತರ ಕಿತ್ತಲೆ ಕಂದುಬಣ್ಣಕ್ಕೆ ತಿರುಗುತ್ತದೆ. ಎಲೆಯ ಬಣ್ಣ ಮತ್ತು ಆಕಾರದಿಂದಾಗಿ ಈ ಜಾತಿ ಬಹು ಜನಪ್ರಿಯವಾಗಿದೆ.

ಅಮರಾಂತಸ್ ಸಸ್ಯಗಳು ಬೀಜವನ್ನು ಅಧಿಕ ಪ್ರಮಾಣದಲ್ಲಿ ಕೊಡುತ್ತವೆ. ಆದ್ದರಿಂದ ವೃದ್ಧಿಕಾರ್ಯ ಸುಲಭ. ಮಡಿಗಳಲ್ಲಿ ತೆಳುವಾಗಿ ಬೀಜಗಳನ್ನು ಚೆಲ್ಲಿ ಮೊಳಕೆ ಬಂದ ಮೇಲೆ ಬೇಕಾದಷ್ಟು ಪ್ರಮಾಣದಲ್ಲಿ ಸಸಿಗಳನ್ನು ಉಳಿಸಿ ಮಿಕ್ಕವನ್ನು ತೆಗೆದು ಹಾಕುತ್ತಾರೆ. ಕೆಲವು ಬಾರಿ ಕುಂಡಗಳಲ್ಲಿ ಬೀಜ ಹಾಕಿ ಬಂದ ಸಸಿಗಳನ್ನು ಮಡಿ ಅಥವಾ ಕುಂಡಗಳಲ್ಲಿ ನೆಡುತ್ತಾರೆ. ಇವು ಬೇಸಿಗೆಯಲ್ಲಿ ಚೆನ್ನಾಗಿ ಬೆಳೆಯುತ್ತವೆ. ಈ ಕುಟುಂಬದ ಮಿಕ್ಕ ವಿವರಗಳಿಗೆ.

(ಡಿ.ಎಂ.)

**ಅಮರಾಂತೇಸೀ** : ದಂಟು, ಅರಿವೆ, ಉತ್ತರಾಣಿ ಮುಂತಾದ ಸಸ್ಯಗಳನ್ನು ಒಳಗೊಂಡಿರುವ ಸಸ್ಯಕುಟುಂಬ. ಇದರಲ್ಲಿ 64 ಜಾತಿಗಳೂ ಸು. 800 ಪ್ರಭೇದಗಳೂ ಇವೆ. ಹೆಚ್ಚಾಗಿ ಅಮೆರಿಕದ ಉಷ್ಣವಲಯದ ಪ್ರದೇಶ, ಆಫ್ರಿಕ, ಭಾರತಗಳಲ್ಲಿ ಬೆಳೆಯುತ್ತವೆ. ಉಪಯುಕ್ತತೆಯ ದೃಷ್ಟಿಯಿಂದ ಅಷ್ಟು ಮುಖ್ಯವಲ್ಲವಾದರೂ ಕೆಲವು ಜಾತಿಯ ಗಿಡಗಳನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ; ಮತ್ತೆ ಕೆಲವು ಅಲಂಕಾರಸಸ್ಯಗಳು (ಗ್ರಾಂಫ್ರಿನ, ಅಮರಾಂತಸ್ ಪ್ರಭೇದಗಳು).

ಅಮರಾಂತಸ್ ಪ್ರಭೇದದಲ್ಲಿ ಹಲವಾರು ಜಾತಿಗಳಿದ್ದು ಸು 25 ಭಾರತದಲ್ಲಿ ದೊರೆಯುತ್ತವೆ. ಅಮರಾಂತಸ್ ಕಾಡೇಟಸ್ ಮತ್ತು ಅಮರಾಂತಸ್ ಪ್ಯಾನಿಕ್ಯುಲೇಟಸ್. (ಕೀರೆಸೊಪ್ಪು), ಅಮರಾಂತಸ್ ಓಲರೇಸಿಯ (ಕಬ್ಬಿಣಾಂಶ ಹೆಚ್ಚಾಗಿರುವುದರಿಂದ)– ಇವನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಈ ಪ್ರಭೇದದ ಎಲ್ಲ ಜಾತಿಯ ಗಿಡಗಳನ್ನೂ ದನಕರುಗಳು ತಿನ್ನುತ್ತವೆ.

ಈ ಕುಟುಂಬದ ಇನ್ನೊಂದು ಸಸ್ಯ ಅಕೈರಾಂತಸ್ ಆಸ್ಪರ (ಉತ್ತರಾಣಿಗಿಡ). ಇದರ ಹೂಗೊಂಚಲಿನಿಂದ ಮುಲಾಮನ್ನು ತಯಾರಿಸಿ ವಿಷಕ್ರಿಮಿ ಕಚ್ಚಿದ ಜಾಗದಲ್ಲಿ ಹಚ್ಚುತ್ತಾರೆ. ಗಿಡದ ಕಷಾಯವನ್ನು ಮೂತ್ರವಿಸರ್ಜನೆಯ ತೊಂದರೆಯುಳ್ಳವರಿಗೆ ಕೊಡುತ್ತಾರೆ, ಕುಟುಂಬದ ಮತ್ತೊಂದು ಬಗೆಯಾದ ಸಿಲೋಷಿಯ ಅರ್ಜೆಂಟ್ಯೆನದ (ಅಣ್ಣೆಸೊಪ್ಪಿನ ಗಿಡ) ಬೀಜಗಳನ್ನು ಭೇದಿ ಹಾಗೂ ಕೆಲವು ರಕ್ತಸಂಬಂಧ ರೋಗಗಳಿಗೆ ಉಪಯೋಗಿಸುತ್ತಾರೆ.

(ಎಸ್.ಎ.)

**ಅಮರಾವತಿ[1]** : ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ಸತ್ತೇನಪಲ್ಲಿ ತಾಲೂಕಿಗೆ ಸೇರಿದಂತೆ ಕೃಷ್ಣಾ ನದಿಯ ದಂಡೆಯ ಮೇಲಿದೆ. ಧಾನ್ಯಕಟಕವೆಂಬುದು ಇದರ ಹಳೆಯ ಹೆಸರು. ಹಿಂದೆ ಇದು ಸಾತವಾಹನರ ರಾಜಧಾನಿಯಾಗಿತ್ತು. ಹತ್ತನೆಯ ಶತಮಾನದ ಸುಮಾರಿಗೇ ಇಲ್ಲಿನ ಅಮರೇಶ್ವರ ದೇವಾಲಯ ಪ್ರಸಿದ್ಧವಾಗಿತ್ತು. ಇಲ್ಲಿ ನಡೆಯುವ ಶಿವರಾತ್ರಿ ಉತ್ಸವ ತುಂಬ ವೈಭವೋಪೇತವಾಗಿರುತ್ತದೆ. ಬೌದ್ಧಸ್ತೂಪದ ಕಲಾಕುಶಲತೆ ಈ ಸ್ಥಳ ಪ್ರಶಸ್ತಿಗೆ ಕಾರಣವಾಗಿದೆ. ಪ್ರಸಕ್ತಶಕಪೂರ್ವ ಕೆಲವು ದಶಕಗಳಲ್ಲೇ ಆರಂಭವಾಗಿ ಪ್ರಸಕ್ತಶಕವರ್ಷ ನಾಲ್ಕನೆಯ ಶತಮಾನದವರೆಗೂ ಇಲ್ಲಿನ ವಿಹಾರಗಳ ಸ್ತೂಪದ ನಿರ್ಮಾಣ ನಡೆಯಿತು. ಆಂಧ್ರ ಸಾತವಾಹನರಾಜರು ಮಹಾಯಾನ ಬೌದ್ಧಧರ್ಮವನ್ನು ಪ್ರೋತ್ಸಾಹಿಸಿ ಇಲ್ಲಿ ಚೈತ್ಯಗಳನ್ನೂ, ವಿಹಾರಗಳನ್ನೂ, ಸ್ತೂಪಗಳನ್ನೂ ಕಟ್ಟಿಸಿದರು. ಇಲ್ಲಿನ ಸ್ತೂಪಶಿಲ್ಪಗಳು ಜಗದ್ವಿಖ್ಯಾತವಾಗಿವೆ; ಬುದ್ಧನ ಜಾತಕಕಥೆಗಳಿಂದಲೂ ಜೀವಿತ ವೃತ್ತಾಂತಗಳಿಂದಲೂ ವಿವರಗಳನ್ನು ಆಯ್ದುಕೊಂಡು ಶಿಲ್ಪಿಗಳು ಇಲ್ಲಿ ರಮಣೀಯವಾದ ಶಿಲ್ಪಗಳನ್ನು ಕಡೆದಿದ್ದಾರೆ.

(ಎಸ್.ಕೆ.ಆರ್.)

ಸ್ತೂಪ ಚಿತ್ರಫಲಕ

ಕರ್ನಲ್ ಮೆಕೆನ್ಜಿ ಅಮರಾವತಿ ವಾಸ್ತುಶಿಲ್ಪವನ್ನು ಬೆಳಕಿಗೆ ತಂದ (1798). ಇದು ಭಾರತೀಯ ವಾಸ್ತುಶಿಲ್ಪ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿತು. ಶಿಲ್ಪ ಕಲಾಕೃತಿ ಬಹುಭಾಗ ಈಗ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿದೆ.

ಅಮರಾವತಿಯಲ್ಲಿ ವಾಸ್ತು ಮತ್ತು ಶಿಲ್ಪಕ್ಕೆ ಭೇದವನ್ನು ಕಲ್ಪಿಸುವುದು ಬಹು ಕಷ್ಟ. ಇಲ್ಲಿಯ ಮುಖ್ಯಕೃತಿಯೆಂದರೆ ಮಹಾಸ್ತೂಪ. ಇಲ್ಲಿನ ಸ್ತೂಪಗಳು ಸಾಂಚಿ ಮತ್ತು ಬಾರ್ಹುತ್‍ನಲ್ಲಿರುವ ಸ್ತೂಪಗಳಿಗಿಂತ ಕೆಲವು ವಿಷಯಗಳಲ್ಲಿ ಭಿನ್ನವಾಗಿದ್ದು, ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಅಮರಾವತಿಸ್ತೂಪ ಪ್ರಶ.ಪೂ. ಒಂದನೆಯ ಶತಮಾನದಿಂದ ಪ್ರ.ಶ. ಮೂರನೆಯ ಶತಮಾನದವರೆಗೆ ನಾಲ್ಕು ಹಂತಗಳಲ್ಲಿ ಬೆಳೆಯಿತೆಂದು ಹೇಳಬಹುದು. ಈ ಸ್ತೂಪ ಈ ಶತಮಾನಕ್ಕೆ ಸಾಮಾನ್ಯವಾದ ಅಲಂಕಾರದಿಂದ ಭೂಷಿತವಾಗಿ ಭಾರತದ ಅತ್ಯುತ್ತಮ ಸ್ತೂಪಗಳಲ್ಲಿ ಒಂದೆನಿಸಿಕೊಂಡಿತ್ತು. ನಶಿಸಿಹೋಗಿದ್ದರೂ ಅದರ ಭವ್ಯತೆಯನ್ನು ಈಗಲೂ ಊಹಿಸಬಹುದು. ಅದರ ವ್ಯಾಸ 50 ಮೀ, ಎತ್ತರ ಸುಮಾರು 37 ಮೀ. ಈ

ಬೃಹತ್ ಸ್ತೂಪ ಬಿಳಿಯ ಶಿಲೆಯ ಶಿಲ್ಪಫಲಕಗಳಿಂದ ಆಚ್ಛಾದಿತವಾಗಿತ್ತು. ನಾಲ್ಕು ದಿಕ್ಕುಗಳಲ್ಲೂ ಐದು ಆಯಕ ಸ್ತಂಭಗಳಿದ್ದುವು. ಅಂಡದ ಮೇಲೆ ಚೌಕವಾದ ಹರ್ಮಿಕೆಯೂ ಅದರ ಮೇಲೆ ಛತ್ರಿಯೂ ಇದ್ದುವು.

ಈ ಸ್ತೂಪವನ್ನು ಅಲಂಕರಿಸಲು ನಿರ್ಮಾಣವಾದ ಬಿಳಿಯ ಕಲ್ಲಿನ ಶಿಲ್ಪಫಲಕಗಳೇ ಪ್ರಾಚೀನ ಆಂಧ್ರಕಲಾಕಾರರ ಮಹಾಕೃತಿಗಳು. ಈ ಶಿಲ್ಪಫಲಕಗಳಲ್ಲಿ ಜಾತಕ ಮತ್ತು ಅವದಾನದ ಕಥೆಗಳು ಮತ್ತು ಬುದ್ಧನ ಜೀವನಕ್ಕೆ ಸಂಬಂಧಿಸಿದ ಘಟನೆಗಳು ಕೆತ್ತಲ್ಪಟ್ಟಿವೆ. ಇಲ್ಲಿ ದೊರಕಿರುವಷ್ಟು ಜಾತಕ ಕಥಾಶಿಲ್ಪಗಳು ಮತ್ತೆಲ್ಲೂ ದೊರಕಿಲ್ಲವೆಂದೇ ಹೇಳಬಹುದು. ಇವುಗಳಲ್ಲಿ ಷಡ್ದಂತ, ಹಂಸ, ವಿಧುರಪಂಡಿತ, ಮಾಂಧಾತ ಮುಂತಾದ ಜಾತಕಗಳು ಗಮನಾರ್ಹವಾದುವು. ಇಲ್ಲಿನ ಶಿಲ್ಪಿಗಳು ಸ್ತ್ರೀಸೌಂದರ್ಯವನ್ನು ನಯನಮನೋಹರವಾಗಿ ತೋರಿಸಿದ್ದಾರೆ, ನಾಲ್ಕು ಸ್ತ್ರೀಯರು ಬುದ್ಧಪಾದವನ್ನು ಪೂಜಿಸುತ್ತಿರುವ ಶಿಲ್ಪಫಲಕದಲ್ಲಿ ಸುಂದರ ಸ್ತ್ರೀಯರ ನಯವಾದ ಮತ್ತು ಸಹಜವಾದ ಅಂಗವಿನ್ಯಾಸಗಳು ಬಹು ಚೆನ್ನಾಗಿ ರೂಪುಗೊಂಡಿವೆ. ಇಲ್ಲಿ ಸ್ತ್ರೀಯರ ಅಂಗಸೌಷ್ಠವ ಗಮನಾರ್ಹವಾದರೂ ಶೃಂಗಾರಕ್ಕೆಡೆಗೊಡುವಂತಿಲ್ಲ. ಅವರೆಲ್ಲರೂ ಬೌದ್ಧಧರ್ಮದಿಂದ ಚೇತನಗೊಂಡ ವ್ಯಕ್ತಿಗಳಾಗಿ ಕಂಗೊಳಿಸುತ್ತಿದ್ದಾರೆ. ಪ್ರಾಣಿಶಿಲ್ಪಗಳು ಸಹಜವಾಗಿ ಬಂದಿರುವುದು ಈ ಶಿಲ್ಪದ ಮತ್ತೊಂದು ವೈಶಿಷ್ಟ್ಯ. ನಳಗಿರಿ ಎಂಬ ಆನೆ ಕೋಪಾವಿಷ್ಟವಾಗಿ ಜನರಲ್ಲಿ ಭೀತಿಯನ್ನುಂಟುಮಾಡಿ, ಬುದ್ಧನ ದರ್ಶನವಾದ ಕೂಡಲೇ ಸೌಮ್ಯವಾಗಿ, ಬುದ್ಧನ ಪಾದದಡಿಯಲ್ಲಿ ಮುದುರಿಕೊಂಡು ನಿಂತಿರುವುದು ಒಂದು ಮಹಾಕೃತಿ.

ಅಮರಾವತಿಯಲ್ಲಿ ಮೊದಲು ಹೀನಯಾನಧರ್ಮದ ಪ್ರಕಾರ ಬುದ್ಧನ ಪಾದ, ಬೋಧಿವೃಕ್ಷ, ಸಿಂಹಾಸನ ಮುಂತಾದ ಸಂಕೇತಗಳೇ ಬುದ್ಧನನ್ನು ಸೂಚಿಸುತ್ತಿದ್ದುವು. ಪ್ರ.ಶ. ಎರಡನೆಯ ಶತಮಾನದ ಅನಂತರ ಗಾಂಧಾರ ಮತ್ತು ಮಥುರಾಶಿಲ್ಪಗಳಿಂದ ಪ್ರಭಾವಿತಗೊಂಡು ಅಮರಾವತಿಯಲ್ಲೂ, ಬುದ್ಧ ವಿಗ್ರಹಗಳು ನಿರ್ಮಾಣವಾದುವು. ಸಾಂಪ್ರದಾಯಿಕವಾದ ಮತ್ತು ಮಹಾಪುರುಷಲಕ್ಷಣಗಳನ್ನೊಳಗೊಂಡ ಬುದ್ಧ ವಿಗ್ರಹಗಳು ಅಮರಾವತಿಯ ಶಿಲ್ಪಗಳಿಂದಲೇ ಸ್ಪಷ್ಟಗೊಳಿಸಲ್ಪಟ್ಟವೆಂದು ಕೆಲವು ವಿದ್ವಾಂಸರ ಅಭಿಪ್ರಾಯ.

ಅಮರಾವತಿಯ ಸಮೀಪದಲ್ಲಿರುವ ಘಂಟಸಾಲ, ಗೋಲಿ, ಭಟ್ಟಿಪ್ರೋಲು, ಜಗ್ಗಯ್ಯಪೇಟ, ಗುಡಿವಾಡ, ನಾಗಾರ್ಜುನಕೊಂಡ ಮುಂತಾದ ಕಡೆಗಳಲ್ಲಿರುವ ಶಿಲ್ಪಗಳು ಅಮರಾವತಿಯ ಮಾದರಿಯಲ್ಲೇ ಇರುವುದರಿಂದ ಇವೆಲ್ಲವೂ ಆ ಶಿಲ್ಪಶೈಲಿಗೆ ಸೇರಿದುವೆಂದು ಹೇಳಬಹುದು. ಇಷ್ಟೇ ಅಲ್ಲದೆ, ಅಮರಾವತಿ ಶಿಲ್ಪಗಳು, ಭಾರತದ ಗಡಿಯನ್ನು ದಾಟಿ, ಆಗ್ನೇಯ ಏಷ್ಯದ ರಾಜ್ಯಗಳಲ್ಲೂ ದೊರಕಿವೆ. ಚಂಪಾರಾಜ್ಯದ ಡಾಂಗ್ ಡುವಾಂಗ್ ಸುಮಾತ್ರದ್ವೀಪದ ಪ್ಯಾಲೆಂಬಾಂಗ್ ಮತ್ತು ಸೆಲಿಬೆಸ್‍ನ ಸೆಂಪಗ ಎಂಬ ಸ್ಥಳಗಳಲ್ಲಿ ಅಮರಾವತಿ ಶಿಲ್ಪಶೈಲಿಗೆ ಸೇರಿದ ಬುದ್ಧವಿಗ್ರಹಗಳು ದೊರಕಿವೆ. ಇವು ಅಮರಾವತಿಯ ಶಿಲ್ಪದ ಪ್ರಾಮುಖ್ಯ ಮತ್ತು ಜನಾನುರಾಗದ ಕುರುಹುಗಳು. (ಎ.ವಿ.ಎನ್.)

**ಅಮರಾವತಿ²** : ತಮಿಳುನಾಡಿನ ಪ್ರಮುಖ ನದಿಗಳಲ್ಲಿ ಒಂದಾಗಿರುವುದಲ್ಲದೆ, ಕಾವೇರಿನದಿಯ ಉಪನದಿಗಳಲ್ಲಿ ಮುಖ್ಯವಾದುದು. ಕೊಂಗುನಾಡು ಎಂದು ಕರೆಯಲ್ಪಡುವ ಕೊಯಮತ್ತೂರಿನ ಪ್ರಸ್ಥಭೂಮಿಯಲ್ಲಿ ಹರಿಯುತ್ತದೆ. ಅಣ್ಣಾಮಲೈ ಮತ್ತು ಪಳನಿ ಬೆಟ್ಟಗಳ ಸಂಧಿಸ್ಥಾನದ ಬಳಿ ದಖನ್ನಿನ ಅತ್ಯುನ್ನತ ಶಿಖರವಾದ ಕೇರಳದ ಆನೈಮುಡಿಗೆ (2695 ಮೀ) ಪೂರ್ವದಲ್ಲಿ ಈ ನದಿ ಹುಟ್ಟುತ್ತದೆ. ಹೆಚ್ಚುಕಡಿಮೆ ಇದೇ ಸ್ಥಳದಲ್ಲಿ ಪಶ್ಚಿಮ ಅಮರಾವತಿ ಎಂಬ ನದಿ ಹುಟ್ಟಿ ವಿರುದ್ಧ ದಿಕ್ಕಿನಲ್ಲಿ ಹರಿದು ಕೇರಳದ ಪೆರಿಯಾರ್ ನದಿಯನ್ನು ಸೇರುತ್ತದೆ.

ಅಮರಾವತಿ ಪ್ರಾರಂಭದಲ್ಲಿ ಧಾರಾಪುರವನ್ನು ಹಾಯ್ದು ಅನಂತರ ಪೂರ್ವದಿಕ್ಕಿನಲ್ಲಿ ಮುಂದುವರಿದು ಕರೂರಿನಿಂದ ಸುಮಾರು 15 ಕಿಮೀ ದೂರದಲ್ಲಿ ಕಾವೇರಿಯನ್ನು ಸೇರುತ್ತದೆ. ಪ್ರಾರಂಭದಲ್ಲಿ ಸುಮಾರು 610 ಮೀಗಳಿಗಿಂತಲೂ ಎತ್ತರವಾದ ಬೆಣಚುಕಲ್ಲಿನ ಬೆಟ್ಟಗಳ ಮುಖಾಂತರ ಹರಿದು ಅನಂತರ ಸುಮಾರು ಸಮಮಟ್ಟವಾದ ಬಯಲಿನಲ್ಲಿ ಪ್ರವಹಿಸುತ್ತದೆ.

ಅಮರಾವತಿ–ಕಾವೇರಿ ಸಂಗಮಪ್ರದೇಶ ಇತಿಹಾಸ ಪ್ರಸಿದ್ಧವಾದುದು. ದಕ್ಷಿಣ ಭಾರತದ ಚೋಳ, ಚೇರ, ಪಾಂಡ್ಯ ಎಂಬ ಮೂರು ಮುಖ್ಯ ರಾಜವಂಶಗಳು ತಮ್ಮ ಭವಿಷ್ಯವನ್ನು ಇಲ್ಲಿ ನಿರ್ಧರಿಸಿದುವು. ಒಮ್ಮೆ ಇದು ಮೈಸೂರು–ಇಂಗ್ಲಿಷರ ಕದನಗಳ ಕೇಂದ್ರವಾಗಿತ್ತು.

ಈ ನದಿ ಇತರ ದಕ್ಷಿಣ ಭಾರತದ ನದಿಗಳಂತೆ ಋತುಕಾಲಿಕವಾದುದು ನಾಲ್ಕು ಉಪನದಿಗಳು ಇದನ್ನು ಸೇರುತ್ತವೆ. ಮೇಲ್ಕಣಿವೆ ಜನನಿವಾಸಕ್ಕೆ ಹೆಚ್ಚು ಅನುಕೂಲವಾಗಿಲ್ಲ. ಕೆಳಕಣಿವೆಯಲ್ಲಿ ನೀರಾವರಿ ವ್ಯವಸಾಯಕ್ಕೆ ಹೆಚ್ಚಿನ ಅನುಕೂಲವಿದೆ. ನದಿಗೆ ಹೊಂದಿಕೊಂಡಿರುವ ಪ್ರವಾಹ ಮೈದಾನದ ಅಂಚುಗಳಲ್ಲಿ ಜನಸಂಖ್ಯೆ ಒತ್ತಾಗಿದೆ. ನದಿಯ ಉದ್ದಕ್ಕೂ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಿ ಆಯಕಟ್ಟಿನ ಪ್ರದೇಶಗಳಲ್ಲಿ ಬತ್ತ, ಹತ್ತಿ ಮತ್ತು ಕಬ್ಬನ್ನು ಬೆಳೆಯುತ್ತಾರೆ. ನದಿ ಹರಿಯುವ ಭೂಭಾಗ ಕೊಯಮತ್ತೂರು ಕೈಗಾರಿಕಾ ಕೇಂದ್ರದ ಉತ್ತಮ ಹಿನ್ನಾಡು ಪ್ರದೇಶವಾಗಿದೆ. (ಎ.ವಿ.ಎನ್.)

**ಅಮರಿಲಿಸ್** : ಹೂಬಿಡುವ ಸುಪ್ರಸಿದ್ಧ ಲಶುನಸಸ್ಯ. ಅಮರಿಲ್ಲಿಡೇಸೀ ಕುಟುಂಬಕ್ಕೆ ಸೇರಿದೆ. ಇದರ ಹೂ ತುತ್ತೂರಿಯಾಕಾರದಲ್ಲಿದ್ದು, ನೋಡಲು ಚೆನ್ನ. ಗಾತ್ರ ಬಣ್ಣಗಳಲ್ಲಿ ವೈವಿಧ್ಯವಿದೆ. ಮನೆಯಲ್ಲಿ, ಕಳಸದಲ್ಲಿಟ್ಟ ಇದರ ಹೂ ವಾರವಾದರೂ ಬಾಡದು. ಈ ಸಸ್ಯಗಳನ್ನು ಉದ್ಯಾನವನದ ಅಂಚು ಮತ್ತು ಕುಂಡಸಸ್ಯಗಳಾಗಿ ಬೆಳೆಸುತ್ತಾರೆ.

ಇದರಲ್ಲಿ ಸುಮಾರು 70ಕ್ಕೂ ಹೆಚ್ಚು ಪ್ರಭೇದಗಳಿವೆ. ಇವೆಲ್ಲ ಏಕವಾರ್ಷಿಕಗಳು. ನೀಳಾಕಾರದ ಕೊಳವೆ ಎಲೆಗಳ ನಡುವೆ ತುದಿಯಲ್ಲಿ ಅಂಬೆಲ್ ಮಾದರಿಯ ಹೂಗೊಂಚಲಿದೆ. ಸಾಮಾನ್ಯವಾಗಿ ಒಂದೊಂದು ಹೂಗೊಂಚಲಲ್ಲೂ 3–4 ಹೂಗಳು ಅರಳುತ್ತವೆ. ಸಂಖ್ಯೆ 2–4. ಕೆಲವು ಪ್ರಭೇದಗಳಲ್ಲಿ ಒಂದು ಅಥವಾ ಎರಡು ಹೂಗಳಿರುವುದುಂಟು. ಸಂಯುಕ್ತ ರೀತಿಯ ಪುಷ್ಪಪಾತ್ರೆಯೂ ದಳಗಳೂ ಇವೆ. ದಳಗಳು 6–3ರ ಎರಡು ವೃತ್ತಗಳಲ್ಲಿ ಜೋಡಣೆಯಾ ಗಿವೆ. ಒಳವೃತ್ತದ ದಳಗಳ ಗಾತ್ರ ಚಿಕ್ಕದು; ಹೊರವೃತ್ತದವು ದೊಡ್ಡವು. ಹೂಗಳು ಪ್ರಭೇದಗಳಿಗೆ ಅನುಸಾರ ವಾಗಿ ಬಿಳುಪು, ಕೆಂಪು, ನಸುಗೆಂಪು, ಕಡುಗೆಂಪು, ಕೇಸರಿ, ಕಿತ್ತಲೆ ಮತ್ತು ಮಿಶ್ರ ಬಣ್ಣಗಳಿಂದ ಕೂಡಿದ್ದು ಕೂಡಿಕೆ ಭಾಗಗಳ ಮೇಲೆ ಕೆಂಪು ಅಥವಾ ಬಿಳಿಯ ಗೆರೆಗಳು ಇರುವುದರಿಂದ ಸೊಗಸಾಗಿ ಕಾಣುತ್ತವೆ. ಹೂಗಂಟಲಿನ ಮೇಲೆ ಕೆಲವು ಜಾತಿಗಳಲ್ಲಿ ಸಣ್ಣ ಬಿಲ್ಲೆಗಳಿರುತ್ತವೆ. ಕೇಸರಗಳು ಕೂಡು ಭಾಗಗಳ ಮೇಲಿವೆ. ಮೂರು ಭಾಗವಾಗಿರುವ ಶಲಾಕಾಗ್ರವೂ ಅನೇಕ ಅಂಡಗಳನ್ನೊಳಗೊಂಡ ಅಧಮಸ್ಥಿತಿಯ ಅಂಡಾಶಯವೂ ಇವೆ. ಫಲ ಕ್ಯಾಪ್‍ಸೂಲ್ ಮಾದರಿಯದು. ಬೀಜಗಳು ಚಪ್ಪಟೆಯಾಗಿರುತ್ತವೆ.



ಕೆಲವು ಮುಖ್ಯ ಜಾತಿಗಳಾದ ವಿಟೇಟ, ರಿಜಿನೆ, ರೆಟಿಕ್ಯೂಲೇಟ, ಮತ್ತು ಬೆಲಡೋನ ಎಂಬವು ಈಗ ಬೆಳೆಸಲಾಗುತ್ತಿರುವ ಮುಖ್ಯ ಪ್ರಭೇದಗಳು ಮತ್ತು ತಳಿಗಳು. ಇವುಗಳಲ್ಲಿ ಕೆಲವು ಬಹುಪಾಲು ಉತ್ತಮ ಗುಣದ ಸಂಕರತಳಿಗಳು. ಬೆಳೆಸಲಾಗುತ್ತಿರುವ ಇನ್ನೂ ಕೆಲವು ಜಾತಿಗಳು ಮತ್ತು ತಳಿಗಳು ಶಾಸ್ತ್ರೀಯವಾಗಿ ವರ್ಗೀಕರಣವಾಗಿಲ್ಲ.

ಬೀಜ ಮತ್ತು ಚಿಕ್ಕ ಲಶುನಗಳಿಂದ ಇದರ ವೃದ್ಧಿ ಮಾಡಬಹುದು. ಮಳೆಗಾಲದ ಪ್ರಾರಂಭದಲ್ಲಿ ಭೂಮಿಯಲ್ಲಿರುವ ಲಶುನಗಳು ವೃದ್ಧಿಯಾಗುತ್ತವೆ. ಒಂದು ಸಾರಿ ಭೂಮಿಗೆ ಹಾಕಿದ ಲಶುನವನ್ನು ಮೂರು ವರ್ಷಗಳ ಕಾಲ ತೆಗೆಯುವ ಆವಶ್ಯಕತೆ ಇರುವುದಿಲ್ಲ.

ಕುಂಡಗಳಲ್ಲಿ ಲಶುನಗಳನ್ನು ನೆಡುವಾಗ ಅದರ 1/2 ಅಥವಾ 1/3 ಭಾಗ ಮೇಲೆ ಕಾಣುವಂತೆ ನೆಡಬೇಕು. ನೆಟ್ಟ ಅನಂತರ ಕಾಲಕ್ಕೆ ಸರಿಯಾಗಿ ನೀರು ಕೊಡುತ್ತಿರಬೇಕು. ಅಮರಿಲಿಸ್ ಸಸ್ಯ ಮೈದಾನಪ್ರದೇಶಗಳಲ್ಲಿ ಡಿಸೆಂಬರ್ ತಿಂಗಳಿಂದ ಹಿಡಿದು ಏಪ್ರಿಲ್ ತಿಂಗಳವರೆಗೆ ಹೂಬಿಡುತ್ತದೆ. ಹೂಬಿಡುವುದಕ್ಕೆ ಮೊದಲು ವಾರಕ್ಕೆ ಒಂದಾವರ್ತಿ ದ್ರಾವಣ ಗೊಬ್ಬರವನ್ನು ಕೊಡುತ್ತಿರಬೇಕು. ಬಿಟ್ಟ ಹೂ ಒಂದು ವಾರವಿರುತ್ತದೆ. ಹೂ ಮುಗಿದ ಒಡನೆ ನೀರು ಕೊಡುವುದನ್ನು ನಿಲ್ಲಿಸಬಹುದು. ಪ್ರತಿ ವರ್ಷ ಕುಂಡದ ಬದಲಾವಣೆಯ ಅಗತ್ಯವಿಲ್ಲ. ಆದರೆ ಕುಂಡದ ಮೇಲುಭಾಗದಲ್ಲಿರುವ ಮಣ್ಣನ್ನು ಬದಲಿಸುವುದೂ ಮೇಲುಗೊಬ್ಬರ ಕೊಡುವುದೂ ಅಗತ್ಯ. (ಎಂ.ಎಚ್.ಎಂ.)

**ಅಮರುಕ** : ಸು. 650. ಅಮರುಶತಕ ಎಂಬ ಪ್ರಣಯನಿಬಂಧದ ಪ್ರಸಿದ್ಧಕರ್ತೃ ಕಾಲ ಜೀವಿತಗಳ ವಿಚಾರ ತಿಳಿದಿರುವುದು ಅತ್ಯಲ್ಪ. ಗ್ರಂಥದ ವ್ಯಾಖ್ಯಾನಕಾರರೇ ಮುಂತಾದವರು ನಿರ್ದೇಶಿಸಿರುವಂತೆ ಕವಿಯ ಹೆಸರಿನಲ್ಲಿ ಕೂಡ ಅಮರು, ಅಮರಕ, ಅಮರುಕ, ಅಮರೂಕ, ಅಮ್ರಕ, ಅಮರ ಎಂಬುದಾಗಿ ವ್ಯತ್ಯಾಸ ತೋರಿದೆ. ತಿಳಿದುಬಂದಿರುವ ಜೀವಿತ ವಿಷಯವೆಂದರೆ ಕೆಳಕಂಡಂತಿರುವ ಕಥಾರೂಪದ ಪ್ರತೀತಿ ಒಂದೇ.

ವಾರಾಣಸಿಯಲ್ಲಿ ಶಂಕರಾಚಾರ್ಯರೊಡನೆ ವಾದದಲ್ಲಿ ತೊಡಗಿ ಸೋಲುವ ಗತಿಯಲ್ಲಿದ್ದ ಮಂಡನಮಿಶ್ರರನ್ನು ಕಂಡು, ಇವರ ಪತ್ನಿ ತಾನೂ ವಾದಕ್ಕೆ ನಿಂತು ಕಾಮಶಾಸ್ತ್ರವನ್ನು ಕುರಿತು ಪ್ರಶ್ನಿಸುತ್ತಾಳೆ. ಸಂನ್ಯಾಸಿಯಾಗಿದ್ದ ಶಂಕರಾಚಾರ್ಯರು ಉತ್ತರ ಕೊಡಲು ಒಂದು ತಿಂಗಳ ಅವಧಿಯನ್ನು ಪಡೆದು ಯಾವುದೋ ಒಂದು ನಗರಕ್ಕೆ ಬರುತ್ತಾರೆ. ಅಲ್ಲಿನ ದೊರೆ ಅಮರು ಎಂಬುವನು ಮೃತನಾಗಿರುವ ವಿಚಾರವನ್ನು ತಿಳಿದು, ಅವರು ತಮ್ಮ ದೇಹವನ್ನು ತ್ಯಜಿಸಿ, ಅದರ ರಕ್ಷಣೆಯನ್ನು ಶಿಷ್ಯರಿಗೆ ವಹಿಸಿ, ದೊರೆಯ ಮೃತದೇಹವನ್ನು ಪ್ರವೇಶಿಸುತ್ತಾರೆ. ಹೀಗೆ ಪುನಃ ಜೀವಂತನಾದ ಅಮರು ಅರಮನೆಗೆ ಹಿಂತಿರುಗಿ ಪ್ರಣಯದಲ್ಲಿ ನೈಪುಣ್ಯ ಪಡೆದುಕೊಳ್ಳುತ್ತಾನೆ. ವಾಸ್ತವವಾಗಿ ಈ ಅನುಭವವನ್ನು ಪಡೆದವರು ಶಂಕರಾಚಾರ್ಯರು. ಸ್ವಲ್ಪಕಾಲವಾದ ಮೇಲೆ ಅವರು ಅಮರುವಿನ ದೇಹವನ್ನು

ಬಿಟ್ಟು ಪುನಃ ತಮ್ಮ ದೇಹವನ್ನು ಪ್ರವೇಶಿಸಿ, ಅಲ್ಲಿಂದ ಹೊರಟು ಕಾಮಶಾಸ್ತ್ರಕ್ಕೆ ಸಂಬಂಧಪಟ್ಟ ವಾದದಲ್ಲಿ ಮಂಡನಮಿಶ್ರರ ಪತ್ನಿಯನ್ನು ಸೋಲಿಸುತ್ತಾರೆ. ಇಂಥ ಸಂದರ್ಭದಲ್ಲಿ ನೃಪವೇಷಧಾರಿಯಾದ ಶಂಕರಾಚಾರ್ಯರು ಆ ಶಾಸ್ತ್ರದಲ್ಲೂ ಪಾರಂಗತರಾಗಿ ಅಮರುಶತಕವೆಂಬ ಪ್ರಣಯನಿಬಂಧವನ್ನು ರಚಿಸಿದರೆಂದು ಕಥೆಯಲ್ಲಿ ನಿರೂಪಿತವಾಗಿದೆ. ಅಂದರೆ ಗ್ರಂಥ ಶಂಕರಾಚಾರ್ಯಕೃತವೆಂದು ತಾತ್ಪರ್ಯ.

ಈ ಅಮರು ಎಂಬ ದೊರೆ ಕಾಶ್ಮೀರದವನೆಂದೂ ಅಲ್ಲಿ ನಡೆದ ಒಂದು ವಿದ್ವತ್ಸಭೆಯಲ್ಲಿ ಶಂಕರಾಚಾರ್ಯರು ಭಾಗವಹಿಸಿದ್ದರೆಂದೂ ಕಾಮಶಾಸ್ತ್ರವನ್ನು ಚರ್ಚಿಸುವ ಸಂದರ್ಭ ಒದಗಿ ಅವರು ಮೃತನಾಗಿದ್ದ ಆ ದೊರೆಯ ದೇಹವನ್ನು ಪ್ರವೇಶಿಸಿ ಅವನ ನೂರುಜನ ಪತ್ನಿಯರೊಡನೆ ವಿಹರಿಸುವಾಗ ಶತಕದ ಒಂದು ನೂರು ಶ್ಲೋಕಗಳನ್ನು ರಚಿಸಿದರೆಂದೂ ಕಥೆಗೆ ಪಾಠಾಂತರವಿದೆ. ಅವರ ಈ ಸಾಧನೆಯನ್ನು ಗಮನಿಸಿದ ಕೆಲವರು ಅವರನ್ನು ಕಪಟಸಂನ್ಯಾಸಿಯೆಂದು ಜರಿದಾಗ ಆ ಶ್ಲೋಕಗಳಿಗೇ ಸಂನ್ಯಾಸಕ್ಕನುಗುಣವಾಗಿ ಅರ್ಥವಿವರಣೆ ಕೊಟ್ಟರೆಂದೂ ಅಲ್ಲಿ ಹೇಳಿದೆ.

ಅಮರುಕನ ಜೀವಿತದ ವಿವರಣೆಗಳಂತೆ, ಕಾಲದ ವಿಚಾರವೂ ಕೇವಲ ಸಮಸ್ಯಾತ್ಮಕವಾಗಿದೆ. ಸುಪ್ರಸಿದ್ಧ ಸಂಸ್ಕೃತ ವಿಮರ್ಶಕ ಆನಂದವರ್ಧನ (ಸು. 850) ತನ್ನ ಧ್ವನ್ಯಾಲೋಕದಲ್ಲಿ ಅಮರುಶತಕದಿಂದ ಶ್ಲೋಕಗಳನ್ನುದ್ಧರಿಸಿರುವುದಲ್ಲದೆ ಅವುಗಳ ಪ್ರಶಂಸೆಯನ್ನೂ ಮಾಡಿದ್ದಾನೆ. ವಾಮನ ಎಂಬ ಮತ್ತೊಬ್ಬ ಆಲಂಕಾರಿಕ (ಸು. 800) ತಾನು ರಚಿಸಿರುವ ಕಾವ್ಯಾಲಂಕಾರಸೂತ್ರದಲ್ಲಿ ಅಮರುಶತಕದ ಕೆಲವು ಶ್ಲೋಕಗಳನ್ನು ಉದಾಹರಣೆಗಳಾಗಿ ಸೇರಿಸಿಕೊಂಡಿದ್ದಾನೆ. ಮೇಲ್ಕಂಡ ಆಧಾರಗಳ ಮೇಲೆ ಶತಕ 750ಕ್ಕಿಂತಲೂ ಹಿಂದಿನದೆಂದು ಹೇಳಬಹುದು. ಈ ದೃಷ್ಟಿಯಿಂದ ಅಮರುಕನ ಕಾಲ ಸುಮಾರು 650 ಆಗಿರಬಹುದೆಂದು ವಿದ್ವಾಂಸರ ಮತ.

ಅಮರುಶತಕ ಸಾರತಃ ಪ್ರಣಯವನ್ನು ಚಿತ್ರಿಸುವ ಬಿಡಿ ಪದ್ಯಗಳ ಒಂದು ಸಂಕಲನ. ಸಿಕ್ಕಿರುವ ಹಸ್ತಪ್ರತಿಗಳಲ್ಲಿರುವ ಪದ್ಯಗಳ ಸಂಖ್ಯೆ ತೊಂಬತ್ತರಿಂದ ಒಂದು ನೂರ ಹದಿನೈದರವರೆಗಿದೆ. ಗ್ರಂಥದ ನಾಲ್ಕು ಪಾಠಗಳು ಉಪಲಬ್ಧವಾಗಿವೆ; ಪ್ರತಿ ಪಾಠದಲ್ಲೂ ಸುಮಾರು ಒಂದು ನೂರು ಶ್ಲೋಕಗಳಿವೆ. ಅವುಗಳಲ್ಲಿ ಐವತ್ತೊಂದು ಮಾತ್ರ ಎಲ್ಲ ಪಾಠಗಳಲ್ಲೂ ಬರುತ್ತವೆ. ಅಲ್ಲದೆ, ಶ್ಲೋಕಗಳ ಕ್ರಮದಲ್ಲೂ ವ್ಯತ್ಯಾಸವಿದೆ. ಶತಕದ ಕೆಲವು ಶ್ಲೋಕಗಳು ಬೇರೆ ಕರ್ತೃಗಳ ಹೆಸರಿನಿಂದ ಸುಭಾಷಿತ ಸಂಗ್ರಹಗಳಲ್ಲಿ ಉದ್ಧೃತವಾಗಿವೆ; ಅಂಥ ಸುಭಾಷಿತ ಸಂಗ್ರಹಗಳಲ್ಲಿ ಅಮರುವಿನ ಹೆಸರಿನಲ್ಲಿರುವ ಕೆಲವು ಪದ್ಯಗಳು ಉಪಲಬ್ಧವಾಗಿರುವ ಅಮರುಶತಕದಲ್ಲಿ ಇಲ್ಲವಾಗಿವೆ. ಹೀಗಾಗಿ ಗ್ರಂಥದ ಮೂಲಪಾಠವನ್ನು ನಿರ್ಣಯಿಸಲು ವಿಶೇಷ ಪ್ರಯತ್ನ ನಡೆದಿದೆ. ಶತಕದಲ್ಲಿರುವ ಶಾರ್ದೂಲವಿಕ್ರೀಡಿತ ಪದ್ಯಗಳು ಮಾತ್ರ ಮೂಲಪಾಠಕ್ಕೆ ಸೇರಿದವೆಂದು ಕೆಲವರ ಅಭಿಪ್ರಾಯ. ಇದನ್ನೊಪ್ಪಿದರೆ, ಹಾಗೆ ಲೆಕ್ಕಕ್ಕೆ ಬರತಕ್ಕವು ಶತಕದ ಕೇವಲ ಅರವತ್ತೊಂದು ಪದ್ಯಗಳು. ಆ ಗ್ರಂಥದ ವ್ಯಾಖ್ಯಾನಕಾರರಲ್ಲೊಬ್ಬನಾದ ಅರ್ಜುನವರ್ಮದೇವ (ಸು. 1215) ಅನುಸರಿಸಿರುವ ಪಾಠಕ್ಕೇ ಮೂಲದ ದೃಷ್ಟಿಯಿಂದ ಹೆಚ್ಚು ಬೆಲೆಯುಂಟೆಂಬ ಮತ್ತೊಂದು ವಾದ ಗಮನಾರ್ಹವಾಗಿದೆ.

ಗ್ರಂಥ ಭಿನ್ನಕರ್ತೃಕ ಪದ್ಯಗಳ ಸಂಗ್ರಹವಿರಬಹುದೆಂದು ಕೆಲವು ವಿದ್ವಾಂಸರ ಮತ. ಆದರೆ ಅಂಥ ತೀರ್ಮಾನಕ್ಕೆ ಸರಿಯಾದ ಆಧಾರಗಳಿಲ್ಲ. ಸಾಮಾನ್ಯವಾಗಿ ಸಂಸ್ಕೃತಸಾಹಿತ್ಯದಲ್ಲಿ ಶತಕವೆಂಬುದು ಒಬ್ಬ ಕರ್ತೃವಿನದೇ ಆಗಿರುತ್ತದೆ. ಬಿಡಿ ಪದ್ಯಗಳಿರುವುದರಿಂದ ಪ್ರಕ್ಷಿಪ್ತಗಳಿಗೆ ಅವಕಾಶವುಂಟೆಂದು ಮಾತ್ರ ಒಪ್ಪಿಕೊಳ್ಳಬಹುದು.

ಅಮರುಶತಕದ ಪ್ರತಿಪದ್ಯವೂ ಒಂದು ಪ್ರೇಮಗೀತೆ. ಅದು ಅನುರಾಗದ ಒಂದು ದಶೆಯ ಅಥವಾ ಅದಕ್ಕೆ ಸಂಬಂಧಪಟ್ಟ ಒಂದು ಯುಕ್ತ್ಯಾತ್ಮಕ ಪ್ರಸಂಗದ ಮನೋಹರ ಚಿತ್ರಣವಾಗಿದ್ದು ಸ್ವಯಂಪೂರ್ಣವಾದ ರಚನೆಯಾಗಿದೆ. ಆ ಪ್ರೇಮಗೀತೆಗಳಲ್ಲಿ ಉತ್ಕಟವಾದ ಇಚ್ಛೆಯಿಂದ ಸಂಭೋಗದ ಪಾರವಶ್ಯದ ಮೈಮರೆವಿನವರೆಗೆ ಪ್ರಣಯದ ನಾನಾಸ್ಥಿತಿಗಳು ಮನೋಜ್ಞವಾಗಿ ವರ್ಣಿತವಾಗಿರುವುದಲ್ಲದೆ, ಕೆಲವು ಸಂಭೋಗಶೃಂಗಾರವನ್ನೂ ಮತ್ತೆ ಕೆಲವು ವಿಪ್ರಲಂಭವನ್ನೂ ಅವಲಂಬಿಸಿಕೊಂಡಿವೆ. ಭಾವಸಂಪತ್ತುಳ್ಳ ಕೆಲವು ನಾಟಕೀಯ ಸ್ವಾರಸ್ಯದಿಂದ ಕೂಡಿವೆ.

ಅಮರುಶತಕಕ್ಕೆ ಕನ್ನಡದಲ್ಲಿ ಅನೇಕ ಅನುವಾದಗಳಿವೆ. ದೇವರಾಜ (ಸು. 1410) ಪರಿವರ್ಧಿನಿಯಲ್ಲಿ ಅನುವಾದಿಸಿದ್ದಾನೆ. ಚಿಕುಪಾಧ್ಯಾಯ (1672) ಕನ್ನಡಿಸಿದಂತೆ ಕಾಣುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ವೆಂಕಟರಾಮಶಾಸ್ತ್ರಿ (1842) ನವ್ಯ ಕರ್ಣಾಟಭಾಷಾ ಪ್ರಕಟಿತ ಶೃಂಗಾರದೀಪಿಕಾ ಸರ್ವಸಂಗ್ರಹ ಎಂಬ ಹೆಸರಿನಿಂದ ಟೀಕೆ ಬರೆದಿದ್ದಾನೆ. ಈಚೆಗೆ ತೀ.ನಂ.ಶ್ರೀ. ಅವರು ಹಲವು ಮುಕ್ತಕಗಳನ್ನು ಅನುವಾದಿಸಿದ್ದಾರಲ್ಲದೆ ಎಸ್.ವಿ. ಪರಮೇಶ್ವರಭಟ್ಟರು ಪೂರ್ಣಶತಕವನ್ನು ಅನುವಾದ ಮಾಡಿದ್ದಾರೆ.

ಅಮರುಶತಕದ ಪದ್ಯಗಳಲ್ಲಿ ಒಂದೊಂದೂ ನೂರು ಪ್ರಬಂಧಗಳಿಗೆ ಸಮನೆಂಬ ಪ್ರಶಂಸೆ ಇದೆ. ಅನ್ವರ್ಥವಾಗಿ ಅವನ್ನು ಮುಕ್ತಕಗಳೆಂದು ಕರೆದಿದ್ದಾರೆ. ಆನಂದವರ್ಧನ ಅವುಗಳ ವಿಚಾರವಾಗಿ ಕೆಳಕಂಡ ಮಾತುಗಳಲ್ಲಿ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾನೆ.

ಮುಕ್ತಕೇಷು ಪ್ರಬಂಧೇಷ್ವಿವ ರಸಬಂಧಾಭಿನಿವೇಶಿನಃ ಕವಯೋ ದೃಶ್ಯಂತೇ । ಯಥಾ ಹಿ ಅಮರುಕಸ್ಯ ಕವೇಃ ಮುಕ್ತಕಾಃ ಶೃಂಗಾರರಸಸ್ಯಂದಿನಃ ಪ್ರಬಂಧಾಯ ಮನಾಃ ಪ್ರಸಿದ್ಧಾ ಏವ. (ಧ್ವನ್ಯಾಲೋಕ; ಉದ್ಯೋತ–3.)

ಅಂದರೆ ಪ್ರಬಂಧಗಳಲ್ಲಿ ಹೇಗೋ ಮುಕ್ತಕಗಳಲ್ಲೂ ಕವಿಗಳು ರಸಪ್ರತಿಪಾದನೆಯ ಧಾಟಿಯೊಂದನ್ನೇ ಇಟ್ಟುಕೊಂಡಿರುವುದನ್ನು ನೋಡಬಹುದು. ಉದಾಹರಣೆಗೆ, ಅಮರುಕ ಕವಿಯ ಮುಕ್ತಕಗಳು ಶೃಂಗಾರರಸವನ್ನು ಸ್ರವಿಸುತ್ತ ಪ್ರಬಂಧಗಳಂತಿರುವುದು ಪ್ರಸಿದ್ಧವಾಗಿಯೇ ಇದೆ.

ಇಷ್ಟು ಹಿರಿದಾದ ಪ್ರಶಂಸೆಗೆ ಪಾತ್ರನಾಗಿರುವ ಆ ಕವಿಯ ಶೃಂಗಾರದೃಷ್ಟಿಯ ಸಂಕೇತವಾಗಿ ಕೆಳಗಿನ ಶ್ಲೋಕವನ್ನು ಅವನ ಶತಕದಿಂದ ಉದ್ಧರಿಸಿದೆ:

ದಂಪತ್ಯೋರ್ನಿಶಿ ಜಲ್ಪತೋರ್ಗೃಹ ಶುಕೇನಾಕರ್ಣಿತಂ ಯದ್ವಚ–
ಸ್ತತ್ಪ್ರಾತರ್ಗುರುಸಂನಿಧೌ ನಿಗದತಸ್ತಸ್ಯಾತಿಮಾತ್ರಂ ವಧೂಃ ।
ಕರ್ಣಾಲಂಬಿತಪದ್ಮರಾಗಶಕಲಂ ವಿನ್ಯಸ್ಯ ಚಂಚೂಪುಟೇ
ವ್ರೀಡಾರ್ತಾ ವಿದಧಾತಿ ದಾಡಿಮಫಲವ್ಯಾಜೇನ ವಾಗ್ಬಂಧನಮ್ ॥
(ಗಂಡ ಹೆಂಡಿರು ರಾತ್ರಿ ಆಡಿದ ಮಾತನಾಲಿಸಿ ಮನೆಯ ಗಿಣಿ
ಬೆಳಗಿನೊಳು ಹಿರಿಯರ ಮುಂದೆ ಹೇಳಲು ದೊಡ್ಡದನಿಗೈದು
ನಾಚಿ ದಾಳಿಂಬೆಯನು ತಿನಿಸುವ ನೆವದೊಳಾ ವಧು ಕಿವಿಯ ಓಲೆಯ
ಕೆಂಪು ಹರಳನು ಕೊಕ್ಕಿನೊಳಗಿಟ್ಟದರ ಬಾಯನು ಮುಚ್ಚಿಸಿದಳಂದು)
–ಎಸ್.ವಿ. ಪರಮೇಶ್ವರಭಟ್ಟರ ಅನುವಾದ.

(ಬಿ.ಕೆ.ಎಸ್.)

**ಅಮರೇಶ್ವರ :** ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಲ್ಲಿರುವ ಒಂದು ಕ್ಷೇತ್ರ. ವರ್ಷಕೊಮ್ಮೆ ಜಾತ್ರೆಯಾಗುತ್ತದೆ. ಇಲ್ಲಿ ಸಮಾಧಿಸ್ಥರಾಗಿರುವ ಶರಣ ಅಮರೇಶ್ವರ 17ನೆಯ ಶತಮಾನದವರೆನ್ನಲಾಗಿದೆ. ಇವರ ವಿಷಯವಾಗಿ ಅನೇಕ ಪವಾಡಗಳನ್ನು ತಿಳಿಸುವ ಕಥೆಗಳನ್ನು ಈ ಭಾಗದಲ್ಲಿ ಹೇಳುತ್ತಾರೆ. ಇವರನ್ನು ಕುರಿತು ಅಮರೇಶ್ವರ ಪುರಾಣ ಮೊದಲಾದ ಗ್ರಂಥಗಳು ಹುಟ್ಟಿವೆ. ಶ್ರೀಮಾದೇಶ್ವರದಲ್ಲಿದ್ದಂತೆ ಈ ಕ್ಷೇತ್ರದಲ್ಲಿ ಮದ್ಯ, ಮಾಂಸ, ಸ್ತ್ರೀಯರನ್ನು ವರ್ಜಿಸಲಾಗಿದೆ. (ಬಿ.ಎಸ್.)

**ಅಮಾನುಲ್ಲಾ ಖಾನ್ :** ಆಫ್ಘಾನಿಸ್ತಾನದ ಅಮೀರ್ ಹಬೀಬುಲ್ಲಾ ಖಾನನ ಮಗ (1892–1960). ತಂದೆಯ ಕಾಲದಲ್ಲಿ ಕಾಬುಲಿನಲ್ಲಿ ರಾಜಪ್ರತಿನಿಧಿಯಾಗಿ ಆಳುತ್ತಿದ್ದ. 1919ರಲ್ಲಿ ಹಬೀಬುಲ್ಲಾ ಖಾನನ ಕೊಲೆಯಾದ ಕೂಡಲೆ ತನ್ನ ಚಿಕ್ಕಪ್ಪ, ಅಣ್ಣ ಇಬ್ಬರ ಹಕ್ಕನ್ನೂ ಕಡೆಗಣಿಸಿ ತಾನೇ ಅಮೀರನೆಂದು ಘೋಷಿಸಿದ. ಆಫ್ಘನ್ನರಿಗೆ ಆಗ ಬೇಕಾಗಿದ್ದದ್ದು ಬ್ರಿಟಿಷರ, ಮತ್ತಿತರ ಪರಕೀಯರ ಕೋಟಲೆಯಿಂದ ತಪ್ಪಿಸಿಕೊಂಡು ಸ್ವತಂತ್ರರಾಗಿರಬೇಕೆಂಬುದು. ಅದಕ್ಕನುಗುಣವಾಗಿ ಅಮೀರ ಇನ್ನು ಮುಂದೆ ಆಫ್ಘಾನಿಸ್ಥಾನ ಸರ್ವಸ್ವತಂತ್ರರಾಷ್ಟ್ರವೆಂದು ಘೋಷಿಸಿ ಇದಕ್ಕೊಪ್ಪಬೇಕೆಂದು ಬ್ರಿಟಿಷರಿಗೆ ತಿಳಿಸಿದ. ಬ್ರಿಟಿಷರು ಒಪ್ಪಲಿಲ್ಲ. ಯುದ್ಧ ಪ್ರಾರಂಭವಾಯಿತು. ಅಲ್ಲಲ್ಲಿ ಸಣ್ಣಪುಟ್ಟ ಕದನಗಳಾಗಿ, ಆಫ್ಘಾನಿಸ್ಥಾನ ಸ್ವತಂತ್ರರಾಷ್ಟ್ರವೆಂದು ಬ್ರಿಟಿಷರು ಘೋಷಿಸಿದರು. ಅಮಾನುಲ್ಲಾ, ತಾನು ವಂಶಾನುಗತವಾಗಿ ರಾಜ್ಯವಾಳುವ ದೊರೆ ಎಂದು ಘೋಷಿಸಿದ. ಆಫ್ಘನ್ನರಲ್ಲಿ ಸಮಾಜಸುಧಾರಣೆಯಾಗಬೇಕು ಎಂಬ ಆಸೆ ಅವನಿಗೆ. ಪಾಶ್ಚಾತ್ಯ ರೀತಿಯ ಸ್ತ್ರೀ ವಿದ್ಯಾಭ್ಯಾಸ ಮತ್ತು ಸ್ತ್ರೀಸ್ವಾತಂತ್ರ್ಯ ಚಳವಳಿಗೆ ಕೈಹಾಕಿದ. ಆದರೆ ಪ್ರಗತಿವಿರೋಧಿಗಳಾದ ಆಫ್ಘನ್ನರು ಇದನ್ನು ವಿರೋಧಿಸಿದರು. ಈ ವಿರೋಧ ಬಲಗೊಂಡು 1929ರಲ್ಲಿ ಅಮೀರ ಪದಚ್ಯುತನಾದ. (ಎಚ್.ಜಿ.ಬಿ.)

**ಅಮಾಲ್ಗಂ :** ಕಬ್ಬಿಣ ಮತ್ತು ಪ್ಲ್ಯಾಟಿನಂ ಲೋಹಗಳನ್ನುಳಿದು ಸಾಮಾನ್ಯವಾಗಿ ಇತರ ಲೋಹಗಳೆಲ್ಲ ಪಾದರಸದಲ್ಲಿ ವಿಲೀನವಾಗುತ್ತವೆ. ಇಂಥ ಲೋಹ ಸಂಯೋಜನೆಗೆ ಈ ಹೆಸರಿದೆ. ಲೋಹ ಮತ್ತು ಪಾದರಸದ ಸಂಪರ್ಕಮಾತ್ರದಿಂದ, ಅವೆರಡನ್ನೂ ದುರ್ಬಲ ಆಮ್ಲದಲ್ಲಿಟ್ಟಾಗ, ಲೋಹಲವಣದ ದ್ರಾವಣಕ್ಕೆ ಪಾದರಸವನ್ನು ಸೇರಿಸಿದಾಗ ಅಥವಾ ಅದನ್ನು ಪಾದರಸದ ಕ್ಯಾಥೋಡಿನ ನೆರವಿನಿಂದ ವಿದ್ಯುದ್ವಿಭಜನೆಗೆ ಒಳಪಡಿಸಿದಾಗ ಅಮಾಲ್ಗಂಗಳು ಫಲಿಸುತ್ತವೆ. ಪಾದರಸದ ಅಂಶ ಅಧಿಕವಾಗಿದ್ದಾಗ ಅಮಾಲ್ಗಂಗಳು ದ್ರವರೂಪದಲ್ಲಿರುವುವು. ಉಳಿದವು ಘನವಸ್ತುಗಳು. ಸಾಮಾನ್ಯವಾಗಿ ಕಾಯಿಸಿದರೆ ವಿಭಜಿಸುವುವು. ಆದರೆ ಚಿನ್ನ, ಬೆಳ್ಳಿ ಮತ್ತು ತಾಮ್ರದ ಅಮಾಲ್ಗಂಗಳು ಪಾದರಸದ ಕುದಿಯುವ ಬಿಂದುವಿನಾಚೆಯೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತವೆ.

ಕನ್ನಡಿಗಳ ಹಿಂಬದಿಗೆ ತವರದ ಅಮಾಲ್ಗಂ ಲೇಪಿಸುವುದು ವಾಡಿಕೆಯಾಗಿತ್ತು. ರಾಸಾಯನಿಕಲೇಪನವಿಧಾನ ಬಳಕೆಗೆ ಬಂದಮೇಲೆ ಇದರ ಉಪಯೋಗ ತಪ್ಪಿಹೋಗಿದೆ. ಬೆಳ್ಳಿ ಮತ್ತು ತವರದ ಅಮಾಲ್ಗಂಗಳು ಹಲ್ಲುಗಳಲ್ಲಿರುವ ರಂಧ್ರಗಳನ್ನು ಮುಚ್ಚಲು ಸಹಾಯಕವಾಗಿವೆ. ವಿದ್ಯುತ್ಕೋಶಗಳ ಸತುವಿನ ಪ್ಲೇಟುಗಳನ್ನು ಅಮಾಲ್ಗಮೇಟ್ ಮಾಡುವುದರಿಂದ ಧ್ರುವೀಕರಣಕ್ರಿಯೆಯನ್ನು ಮಿತಿಗೊಳಿಸಬಹುದು. ಚಿನ್ನ ಮತ್ತು ಬೆಳ್ಳಿಯನ್ನು ತಯಾರಿಸುವಾಗ ಪಾದರಸದ ಉಪಯೋಗ ಒಂದು ಕಾಲಕ್ಕೆ ಅನಿವಾರ್ಯವಾಗಿತ್ತು. ಆಧುನಿಕ ವಿಧಾನಗಳು

ಆಚರಣೆಗೆ ಬಂದ ಮೇಲೆ ಅಮಾಲ್ಗಮೇಷನ್ ವಿಧಾನದ ಬಳಕೆ ಕಡಿಮೆಯಾಗಿದೆ. ಶೇ.8.5 ಥ್ಯಾಲಿಯಂ ಅಮಾಲ್ಗಂ ಇರುವ ಉಷ್ಣಮಾಪಕ–$60^0$ ಸೆ. ಉಷ್ಣತೆಯನ್ನು ಸಹ ಅಳೆಯಬಲ್ಲುದು. ನೀರು ಅಥವಾ ದುರ್ಬಲ ಆಮ್ಲದ ಸಂಪರ್ಕದಲ್ಲಿ ಸೋಡಿಯಂ ಅಮಾಲ್ಗಂ ಪ್ರಬಲ ಅಪಕರ್ಷಣಕಾರಿಯಾಗಿ ವರ್ತಿಸುವುದು. ಸಾವಯವರಾಸಾಯನಿಕ ಕ್ರಿಯೆಗಳಲ್ಲಿ ಇದರ ಬಳಕೆ ಸರ್ವಸಾಮಾನ್ಯ.

ಅಮಾಲ್ಗಂಗಳೆಲ್ಲ ಮಾನವನಿರ್ಮಿತ. ಆದರೆ ಅಮಾಲ್ಗಂ ಎಂಬ ಅಪೂರ್ವ ಖನಿಜವೊಂದುಂಟು. ಬೆಳ್ಳಿ ಮತ್ತು ಪಾದರಸದ ಸಂಯೋಜನೆಯಿಂದಾದ ಈ ಶ್ವೇತ ವರ್ಣದ ಖನಿಜ ಬವೇರಿಯ, ಚೆಕೊಸ್ಲೊವೇಕಿಯ, ಫ್ರಾನ್ಸ್ ಇತ್ಯಾದಿ ದೇಶಗಳಲ್ಲಿ ದೊರೆಯುತ್ತದೆ. (ಎಚ್.ಜಿ.ಎಸ್.)

**ಅಮಾವಾಸ್ಯೆ :** ಚಂದ್ರ ಸೂರ್ಯರ ರೇಖಾಂಶಗಳು ಸಮವಾದಾಗ ಅಮಾವಾಸ್ಯೆಯೂ ಅವುಗಳ ವ್ಯತ್ಯಾಸ $180^0$ ಆದಾಗ ಪೌರ್ಣಮಿಯೂ ಸಂಭವಿಸುತ್ತವೆ. *

**ಅಮಿತಾಭ :** ಮಹಾಯಾನಪಂಥದವರು ನಿರೂಪಿಸುವ ಐವರು ಧ್ಯಾನಿಬುದ್ಧರಲ್ಲಿ ಒಬ್ಬ. ಅಮಿತಾಭ ಎಂದರೆ ಮಿತಿಯಿಲ್ಲದ ಬೆಳಕು ಎಂದರ್ಥ. ಧ್ಯಾನಮಗ್ನನಾದ ಬುದ್ಧ ತನ್ನ ಪ್ರಭೆಯಿಂದ ವಿಶ್ವವನ್ನೆಲ್ಲ ಬೆಳಗಿ ಜನರಲ್ಲೆಲ್ಲ ಬೋಧೆಯನ್ನು ಮೂಡಿಸುವನೆಂಬ ಶ್ರದ್ಧೆಯಿಂದ ರೂಪುಗೊಂಡ ಕಲ್ಪನೆಯಿದು. ಇವನ ವರ್ಣ ರಕ್ತವೆಂದೂ ಆಧಿಪತ್ಯ ಸೂರ್ಯ ಮುಳುಗುವ ಪಶ್ಚಿಮದಿಕ್ಕೆಂದೂ ನಂಬಿಕೆ. ಸುಖಾವತೀವ್ಯೂಹವೆಂಬ ಸಂಸ್ಕೃತ ಗ್ರಂಥದಲ್ಲಿ ಅಮಿತಾಭ ಮತ್ತು ಅವನ ಸ್ವರ್ಗವಾದ ಸುಖಾವತಿಯ ವರ್ಣನೆಗಳಿವೆ. (ಎಸ್.ಕೆ.ಆರ್.)

**ಅಮಿತಾಭ್ ಬಚ್ಚನ್ :** 1942–. ಭಾರತೀಯ ಚಿತ್ರರಂಗದ ಮೇರು ನಟ; ಸೂಪರ್ ಸ್ಟಾರ್. ಹಿಂದಿ ಚಲನಚಿತ್ರ ಕ್ಷೇತ್ರದ ಧ್ರುವತಾರೆ. 1942 ಅಕ್ಟೋಬರ್ 11 ರಂದು ಅಲಹಾಬಾದ್‍ನಲ್ಲಿ ಜನಿಸಿದರು. ಇವರ ತಂದೆ ಹೆಸರಾಂತ ಹಿಂದಿ ಕವಿ ಹರಿವಂಶರಾಯ್ ಬಚ್ಚನ್. ತಾಯಿ ತೇಜಿ ಬಚ್ಚನ್. ಅಮಿತಾಭ್ ಅವರು ಅಲಹಾಬಾದ್ ಜ್ಞಾನ ಪ್ರಬೋಧಿನಿ ಶಾಲೆಯಲ್ಲಿ ಓದಿ, ಅನಂತರ ನೈನಿತಾಲ್‍ನ ಷೆರ್‍ವುಡ್ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಿದರು. ದೆಹಲಿ ವಿಶ್ವವಿದ್ಯಾನಿಲಯದ ಕಿರೋರಿ ಕಾಲೇಜಿನಲ್ಲಿ ವಿಜ್ಞಾನ ಪದವಿ ಪಡೆದರು. ಕೆಲಕಾಲ ಕಲ್ಕತ್ತದ ಬರ್ಡ್ ಆ್ಯಂಡ್ ಕೋ ಎಂಬ ಒಂದು ಹಡಗು ಕಂಪನಿಯಲ್ಲಿ ಕೆಲಸ ಮಾಡಿದರು. 1970ರ ದಶಕದಲ್ಲಿ ರೋಷ ವೇಷದ ತರುಣನೆಂದು (ಆಂಗ್ರಿ ಯಂಗ್‍ಮ್ಯಾನ್) ಖ್ಯಾತರಾದ ಇವರು 13 ಬಾರಿ ಫಿಲ್ಮ್‍ಫೇರ್ ಪ್ರಶಸ್ತಿಯನ್ನು ಪಡೆದು ದಾಖಲೆ ಸೃಷ್ಟಿಸಿದ್ದಾರೆ. ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದ್ದಾರೆ.



1969ರಲ್ಲಿ ಸಾತ್ ಹಿಂದೂಸ್ತಾನಿ ಎಂಬ ಚಲನಚಿತ್ರದಲ್ಲಿ ನಟನಾಗಿ ಪದಾರ್ಪಣೆ ಮಾಡಿ 70ರ ದಶಕದಲ್ಲಿ ಅತ್ಯುತ್ತಮ ಹೊಸನಟ ರಾಷ್ಟ್ರೀಯ ಪ್ರಶಸ್ತಿಗಳಿಸಿದರು. ಆನಂದ್ (1971) ರೇಷ್ಮಾ ಔರ್ ಷೇರ್ (1971) ಮುಂತಾದ ಚಿತ್ರಗಳಿಂದ ಹೆಸರುಗಳಿಸಿ ಶ್ರೇಷ್ಠ ತಾರಾಪಟ್ಟ ಪಡೆದರು. ಇವರು ಅಭಿನಯಿಸಿದ ಜಂಜೀರ್ (1973), ಅಭಿಮಾನ್ (1973), ನಮಕ್ ಹರಾಮ್ (1973), ಮಜ್‍ಬೂರ್ (1974), ದೀವಾರ್ (1975), ಶೋಲೇ (1975), ಕಭೀ ಕಭೀ (1976), ಅಮರ್ ಅಕ್ಬರ್ ಆ್ಯಂಟನಿ (1977), ಡಾನ್ (1978), ಮುಕದ್ದರ್ ಕಾ ಸಿಕಂದರ್ (1978), ನಟವರ್ ಲಾಲ್ (1979) ಮೊದಲಾದ ಚಿತ್ರಗಳು ಇವರಿಗೆ ಅಪಾರ ಯಶಸ್ಸು ತಂದುಕೊಟ್ಟವು. 'ಶೋಲೇ' ಚಲನಚಿತ್ರ ಬಾಕ್ಸ್ ಆಫಿಸ್‍ನಲ್ಲಿ ಸಾರ್ವಕಾಲಿಕ ದಾಖಲೆ ಸೃಷ್ಟಿಸಿತು.

1982ರಲ್ಲಿ ಬೆಂಗಳೂರಿನಲ್ಲಿ ಕೂಲಿ ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾಗ ಇವರಿಗೆ ಅಕಸ್ಮಾತ್ ಭಾರಿ ಪೆಟ್ಟು ತಗುಲಿ ಅನೇಕ ತಿಂಗಳುಗಳ ಕಾಲ ಸಾವುಬದುಕಿನೊಡನೆ ಸೆಣಸಾಡಿದರು. ಅನಂತರ ಆ ಚಿತ್ರ 1983ರಲ್ಲಿ ಬಿಡುಗಡೆಯಾದಾಗ ಭಾರಿ ಯಶಸ್ಸು ಕಂಡಿತು. 2000ದಲ್ಲಿ ಬ್ರಿಟಿಷ್ ಟೆಲಿವಿಷನ್ ಗೇಮ್ ಷೋ ಹೂ ವಾಂಟ್ಸ್ ಟು ಬಿ ಎ ಮಿಲಿಯನೇರ್ ಮಾದರಿಯಲ್ಲಿ ನಿರ್ಮಿತವಾದ 'ಕೌನ್ ಬನೇಗಾ ಕರೋಡ್ ಪತಿ' ಎಂಬ ಟೆಲಿವಿಷನ್ ಕಾರ್ಯಕ್ರಮವನ್ನು 2005ರ ನವೆಂಬರ್‍ವರೆಗೆ ನಿರ್ವಹಣೆ ಮಾಡಿ (ಆ್ಯಂಕರ್) ಅಪಾರ ಯಶಸ್ಸು ಗಳಿಸಿದರು. ಇದೇ ಅವಧಿಯಲ್ಲಿ ಕಭಿಖುಷಿ ಕಭಿ ಗಮ್ (2001), ಬಾಗಬನ್(2003), ಬಂಟಿ ಔರ್ ಬಬ್ಲಿ(2005), ಸರ್ಕಾರ್(2005) ಎಂಬ ಚಿತ್ರಗಳಿಂದ ಹೆಸರು ಗಳಿಸಿದರು. ಇವರ ಅಭಿನಯದ ವಿಭಿನ್ನ ಪ್ರತಿಭೆಯನ್ನು ಅನೇಕ ಚಿತ್ರಗಳು ಪ್ರಕಟಿಸಿವೆ. ಇವುಗಳಲ್ಲಿ ಚೀನಿಕಮ್(2007), ಪಾ(2009) ಚಿತ್ರಗಳನ್ನು ಹೆಸರಿಸಬಹುದು.

'ಬಿಗ್ ಬಿ' ಎಂದೇ ಖ್ಯಾತನಾಮರಾಗಿರುವ ಬಚ್ಚನ್ ಬಿ.ಬಿ.ಸಿ ಯಿಂದ 1999ರಲ್ಲಿ ಗ್ರೇಟೆಸ್ಟ್ ಸ್ಟಾರ್ ಆಫ್ ದಿ ಮಿಲೆನಿಯಮ್ ಎಂಬ ಪ್ರಶಸ್ತಿಗೆ ಭಾಜನರಾದರು. 1991ರಲ್ಲಿ ಅಗ್ನಿಪಥ್, 2006ರಲ್ಲಿ ಬ್ಲ್ಯಾಕ್ ಎಂಬ ಚಿತ್ರದಲ್ಲಿನ ಅಭಿನಯಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿದರು. 2009ರಲ್ಲಿ ನ್ಯೂಯಾರ್ಕ್‍ನ ಟೈಮ್ಸ್ ಸ್ಕ್ವೇರ್‍ನಲ್ಲಿ ಅಮಿತಾಭರ ಆಳೆತ್ತರದ ಮೇಣದ ಪ್ರತಿಕೃತಿಯನ್ನು ಅನಾವರಣಗೊಳಿಸಲಾಯಿತು.

ರಾಜೀವ್ ಗಾಂಧಿಯವರ ಆಪ್ತಮಿತ್ರರಾದ ಬಚ್ಚನ್ ಅವರು ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಎಚ್.ಎನ್. ಬಹುಗುಣ ಅವರ ವಿರುದ್ಧ ಅಲಹಾಬಾದ್ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಶೇಕಡ 68.2 ಮತಗಳಿಸಿ ಪ್ರಚಂಡ ಜಯಗಳಿಸಿ ಚುನಾವಣಾ ಇತಿಹಾಸದಲ್ಲೂ ದಾಖಲೆ ಸೃಷ್ಟಿಸಿದರು. 1984 ರಿಂದ 87ರ ವರೆಗೆ ಲೋಕಸಭಾ ಸದಸ್ಯರಾಗಿದ್ದರು.

1973ರಲ್ಲಿ ಇವರು ನಟಿ ಜಯಾಭಾದುರಿಯವರನ್ನು ವಿವಾಹವಾದರು. ಇವರಿಗೆ ಇಬ್ಬರು ಮಕ್ಕಳು. ಮಗ ಅಭಿಷೇಕ್ ಬಚ್ಚನ್ ಕೂಡ ಖ್ಯಾತ ನಟ. ಮಗಳು ಶ್ವೇತಾ. ಸೊಸೆ ಐಶ್ವರ್ಯಾ ರೈ ಸಹ ಹೆಸರಾಂತ ನಟಿ.

**ಅಮೀನ್‍ಗಳು :** ಅಮೋನಿಯದಿಂದ ಹುಟ್ಟಿದ ರಾಸಾಯನಿಕಗಳು. ಅಮೋನಿಯದಲ್ಲಿನ ಜಲಜನಕ (ಹೈಡ್ರೋಜನ್) ಅಣುಗಳನ್ನು ಒಂದೊಂದಾಗಿ ತೆಗೆದು ಜೈವಿಕ ಅಣುತಂಡಗಳನ್ನು (ಆರ್ಗ್ಯಾನಿಕ್ ಗ್ರೂಪ್ಸ್) ಸೇರಿಸಿದರೆ, ಕ್ರಮವಾಗಿ ಪ್ರಥಮ (ಪ್ರೈಮರಿ), ದ್ವಿತೀಯ (ಸೆಕೆಂಡರಿ) ಮತ್ತು ತೃತೀಯ (ಟರ್ಷಿಯರಿ) ಅಮೀನುಗಳು ಆಗುತ್ತವೆ. ಇವು ಕ್ಷಾರಗುಣವುಳ್ಳವು. ಕೆಳಮಟ್ಟದ ಶ್ರೇಣಿಯವು (ಲೋವರ್ ಮೆಂಬರ್ಸ್). ಅನಿಲಗಳು; ಉಳಿದವು ದ್ರವ ಮತ್ತು ಘನಪದಾರ್ಥಗಳು. ಆಮ್ಲಗಳ ಜೊತೆಗೂಡಿ ಲವಣಗಳನ್ನು (ಸಾಲ್ಟ್ಸ್) ಕೊಡಬಲ್ಲವು.

$NH_3 \rightarrow NH_2.CH_3 \rightarrow NH.CH_3.C_6H_5$

ಅಮೋನಿಯ → ಮಿಥೈಲ್ ಅಮೀನ್ → ಫಿನೈಲ್ ಮಿಥೈಲ್ ಅಮೀನ್

↓

$N(CH_3)_2.C_6H_5$

ಫಿನೈಲ್ ಡೈಮಿಥೈಲ್ ಅಮೀನ್

$NH_2.CH_3 + HCl \rightarrow NH_2.CH_3.HCl$

ಮಿಥೈಲ್ ಅಮೀನ್ + ಹೈಡ್ರೋಕ್ಲೋರಿಕ್ ಆಮ್ಲ → ಮಿಥೈಲ್ ಅಮೀನ್ ಹೈಡ್ರೋಕ್ಲೋರೈಡ್. (ವೈ.ಎಸ್.ಎಲ್.)

**ಅಮೀಬ :** ಹೊಂಡ, ಮಡುಗಳಲ್ಲೂ ಕೆಸರು ಎಲೆ ಮುಂತಾದ ಪದಾರ್ಥಗಳ ಮೇಲೂ ಹರಿದಾಡುವ ಬಹುಸೂಕ್ಷ್ಮ ಜೀವಿ. ಪ್ರೋಟೊಜೋ಼ವ ವರ್ಗಕ್ಕೆ ಸೇರಿದೆ. ವ್ಯಾಸ ಸುಮಾರು 0.025 ಸೆಂಮೀ ದೇಹರಚನೆ ಅತ್ಯಂತ ಸರಳ. ಜೀವರಸದ ಹೊರ ಆವರಣ (ಎಕ್ಟೊಪ್ಲಾಸಂ) ತಿಳಿಯಾಗಿ ಪಾರದರ್ಶಕವಾಗಿದ್ದು ಒಳಾವರಣ (ಎಂಡೊಪ್ಲಾಸಂ) ಕಣಕಣವಾಗಿ ಹೆಚ್ಚು ದ್ರವರೂಪಿಯಾಗಿದೆ. ಒಳರಸದಲ್ಲಿ ಒಂದು ನಡುಬೀಜ (ನ್ಯೂಕ್ಲಿಯಸ್), ವರ್ತುಲಾಕಾರದ ಒಂದು ಸಂಕೋಚನಾವಕಾಶ (ಕಂಟ್ರ್ಯಾಕ್ಟೈಲ್ ವ್ಯಾಕ್ಯುಓಲ್) ಹಾಗೂ ಆಹಾರದಿಂದ ತುಂಬಿದ ಹಲವು ಆಹಾರ ಕುಹರಗಳೂ ಇವೆ. ಸೂಕ್ಷ್ಮದರ್ಶಕ ತೋರುವಂತೆ ಜೀವಂತ ಅಮೀಬಕ್ಕೆ ಯಾವುದೇ ನಿರ್ದಿಷ್ಟ ಆಕಾರವಿಲ್ಲ; ಕ್ಷಣಕ್ಷಣಕ್ಕೂ ಅದರ ಆಕಾರ ಬದಲಾಗುತ್ತಿರುತ್ತದೆ. ಅದರ ದೇಹದಿಂದ ಆಗಾಗ ನೂಕಲ್ಪಡುತ್ತಿರುವ ಕೋಡುಗಳಂತಿರುವ ಮಿಥ್ಯಾಪಾದಗಳೆಂಬ (ಸೂಡೊಪೋಡಿಯ) ಅಂಗಗಳೆ ಇದಕ್ಕೆ ಕಾರಣ. ಇವು ಅದರ ಚಲನಾಂಗಗಳು. ಅಮೀಬ ತನ್ನ ಇಚ್ಛೆಯಂತೆ ಮಿಥ್ಯಾಪಾದಗಳನ್ನು ನೀಡಬಲ್ಲುದು. ಅವನ್ನು ಬೇಡವಾದಾಗ ಹಿಂತೆಗೆದುಕೊಳ್ಳಲೂ ಬಲ್ಲದು. ಆದ್ದರಿಂದ ಅವು ಸದಾಕಾಲ ಕಂಡರೂ ಶಾಶ್ವತಾಂಗಗಳಲ್ಲ. ಮಿಥ್ಯಾಪಾದಗಳು ಎಲ್ಲ ದಿಕ್ಕುಗಳಲ್ಲೂ ಹುಟ್ಟುವುದರಿಂದ ಅಮೀಬ ಬೇಕಾದ ದಿಕ್ಕಿನಲ್ಲಿ ಚಲಿಸುತ್ತದೆ. ಆದರೂ ಅದೊಂದು ಮಂದಗಾಮಿ ಪ್ರಾಣಿ. ವೇಗ ಮಿನಿಟಿಗೆ 0.03 ಸೆಂಮೀ ಮಾತ್ರ. ಎಲ್ಲ ಪ್ರಾಣಿಗಳಂತೆ ಅದರ ಚಲನೆಯೂ ಉದ್ದೇಶಪೂರ್ವಕವಾದುದು. ಹೆಚ್ಚು ಪ್ರಕಾಶವಿರುವ ಸ್ಥಳವನ್ನು ತ್ಯಜಿಸಿ, ಆಹಾರವಿರುವ ದಿಕ್ಕಿಗೆ ಚಲಿಸುವುದು ಇದರ ಸ್ವಭಾವ. ಆಹಾರ ಸಿಕ್ಕಾಗ ಅದರ ಸುತ್ತಲೂ ಮಿಥ್ಯಾಪಾದಗಳನ್ನು ಪಸರಿಸಿ ಅದನ್ನು ಪೂರ್ತಿಯಾಗಿ ಆವರಿಸುವುದು. ಹೀಗೆ ಆವರಿಸಲ್ಪಟ್ಟ ಆಹಾರ ಒಳಜೀವರಸವನ್ನು ಸೇರಿ, ತನ್ನೊಡನೆ ಸೇರಿದ ನೀರು, ಸ್ರಾವಗಳನ್ನೊಳಗೊಂಡು ಆಹಾರಕುಹರವಾಗಿ ರೂಪು ಗೊಳ್ಳುವುದು. ಹೀಗೆ ಬಂಧಿತವಾದ ಆಹಾರ ಜೀರಕರಸದಿಂದ ಪಚನವಾಗಿ ಒಳಜೀವರಸದಲ್ಲಿ ಲೀನವಾಗಿ ಅಮೀಬದ ಬೆಳವಣಿಗೆಗೆ ಕಾರಣವಾಗುವುದು.

ಅಮೀಬ ಶ್ವಾಸೋಚ್ಛ್ವಾಸ ಕ್ರಿಯೆಗಾಗಿ ತನ್ನ ಸುತ್ತಮುತ್ತಲಿರುವ ನೀರಿನಲ್ಲಿ ಬೆರೆತ ಆಕ್ಸಿಜನ್ನನ್ನೆ ಉಪಯೋಗಿಸುವುದು. ಆಕ್ಸಿಜನ್ ದೇಹವನ್ನು ಪ್ರವೇಶಿಸಿ ಆಹಾರದ್ರವ್ಯಗಳ ಮೇಲೆ ಪ್ರತಿಕ್ರಿಯೆ ಮಾಡಿ, ನೀರು ಮತ್ತು ಶಕ್ತಿಯನ್ನು ಹೊರಹೊಮ್ಮಿಸುವುದು. ಈ ಶಕ್ತಿಯಿಂದಲೇ ಅಮೀಬ ತನ್ನ ಚಟುವಟಿಕೆಗಳನ್ನೆಲ್ಲ ನಡೆಸುವುದು. ಈ ಕ್ರಿಯೆಯಲ್ಲಿ




ಚಿತ್ರ 1. ಅಮೀಬ ದೇಹರಚನೆ
1. ಹೊರ ಆವರಣ (ಎಕ್ಟೊಪ್ಲಾಸಂ) 2. ಒಳ ಆವರಣ (ಎಂಡೋಪ್ಲಾಸಂ) 3. ಆಹಾರ ಕುಹರ
4. ನಡುಬೀಜ (ನ್ಯೂಕ್ಲಿಯಸ್) 5. ಸಂಕೋಚನಾವಕಾಶ (ಕಂಟ್ರ್ಯಾಕ್ಟೈಲ್ ವ್ಯಾಕ್ಯುಯೋಲ್

ಹುಟ್ಟಿದ ಕಾರ್ಬನ್ ಡೈಆಕ್ಸೈಡ್ ದೇಹದಿಂದ ನೇರವಾಗಿ ಹೊರಗೆ ಹೋಗುವುದು, ಇಲ್ಲವೆ ಸಂಕೋಚನಕುಹರದಲ್ಲಿ ಸಂಗ್ರಹವಾಗುವುದು. ಇವುಗಳ ಜೊತೆಗೆ ದೇಹದಲ್ಲಿ ಸದಾಕಾಲ ಪ್ರವೇಶಿಸುತ್ತಿರುವ ಹೊರಗಿನ ನೀರೂ ಸಂಕೋಚನಕುಹರವನ್ನು ಸೇರುವುದು. ಸಂಕೋಚನಕುಹರ ಹೀಗೆ ತುಂಬಿಕೊಳ್ಳುತ್ತ ಬಹಳ ದೊಡ್ಡದಾಗಿ ಒಮ್ಮೆಲೇ ಸಂಕೋಚ ಹೊಂದಿ ಒಳಗಿನ ಪದಾರ್ಥಗಳನ್ನೆಲ್ಲ ಹೊರಗೆ ಎಸೆಯುವುದು. ಜಲನಿಯಂತ್ರಣ ಹೀಗೆ ಸಂಕೋಚನಕುಹರದ ಮುಖ್ಯ ಕಾರ್ಯ. ಈ ಜಲ ಪರಿಕ್ರಮಣ ಶ್ವಾಸೋಚ್ಛ್ವಾಸ ಹಾಗೂ ವಿಸರ್ಜನಕ್ರಿಯೆಗಳಲ್ಲಿ ಅಪ್ರತ್ಯಕ್ಷವಾಗಿ ಭಾಗವಹಿಸುವುದು.

ಚಿತ್ರ 2. ಅಮೀಬ ವಿಭಜನೆಯ ವಿವಿಧ ಹಂತಗಳು

ಅಮೀಬ ಪೂರ್ಣ ಬೆಳವಣಿಗೆ ಹೊಂದಿದಮೇಲೆ ನಿರ್ಲಿಂಗರೀತಿಯ ವಂಶಾಭಿ ವೃದ್ಧಿಗೆ ಸಿದ್ಧವಾಗುವುದು. ಈ ಕ್ರಿಯೆಯಲ್ಲಿ ನಡುಬೀಜ ಸರಿಯಾಗಿ ಎರಡು ಸೀಳಾಗು ವುದು. ಜೀವರಸ ಎರಡು ಭಾಗವಾಗುವುದು. ಪರಿಣಾಮವಾಗಿ ಎರಡು ಚಿಕ್ಕ ಅಮೀಬ ಪ್ರಾಣಿಗಳು ನಿರ್ಮಾಣ ವಾಗುವುವು. ಇವು ಕೂಡ ತಮ್ಮ ತಾಯಿಯಂತೆ ಚಲಿಸುತ್ತ, ಆಹಾರ ವನ್ನು ಸೇವಿಸುತ್ತ ಬೆಳೆದು ದೊಡ್ಡವಾಗಿ ಸಂತಾನ ಪಡೆಯುವುವು. ಇಂಥ ಸಂತಾನೋತ್ಪತ್ತಿ ಮಾದರಿಗೆ ದ್ವಿದಳನ (ಬೈನರಿ ಫಿಷನ್) ಎಂದು ಹೆಸರು. ಇಲ್ಲಿ ತಾಯಿಯೇ ಒಡೆದು ಎರಡಾಗುವುದರಿಂದ ಅದು ಇಲ್ಲವಾಗುವುದಾದರೂ ತನ್ನ ಸಂತಾನರೂಪದಲ್ಲಿ ಮುಂದುವರಿಯುವುದರಿಂದ ಅದು ಅಮರವೆಂದೇ ಹೇಳಬೇಕು. ಅಮೀಬ ಸೂಕ್ಷ್ಮ ಪ್ರಾಣಿಯಾದರೂ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಬಲ್ಲುದು. ನೀರು ಬತ್ತಿದಾಗ ಇಲ್ಲವೆ ಅತಿ ಚಳಿಯಾದಾಗ, ತನ್ನ ಮಿಥ್ಯಾಪಾದಗಳನ್ನು ಒಳಸೇರಿಕೊಂಡು, ದುಂಡಗಾಗಿ, ತನ್ನ ಸುತ್ತಲೂ ಸಂರಕ್ಷಕ ಕವಚವನ್ನು ನಿರ್ಮಿಸಿಕೊಳ್ಳುವುದು. ಅನುಕೂಲ ಪರಿಸ್ಥಿತಿ ಒದಗಿದೊಡನೆ ರಕ್ಷಾಕವಚವನ್ನು ಒಡೆದು ಅಮೀಬ ಹೊರಬಂದು, ಮೊದಲಿನಂತೆ ಜೀವಿಸಲು ತೊಡಗುವುದು. ಕೆಲವು ವೇಳೆ ಈ ಅವಸ್ಥೆಯಲ್ಲಿಯೇ ಅದರ ನಡುಬೀಜ ಎಷ್ಟೋಸಲ ವಿಭಾಗವಾಗುವುದು; ಪ್ರತಿಯೊಂದು ಚಿಕ್ಕ ಭಾಗದ ಸುತ್ತಲೂ ಜೀವರಸ ಸಂಗ್ರಹವಾಗಿ ಎಷ್ಟೋ ಬೀಜಕಣಗಳು (ಸ್ಪೋರ್ಸ್) ಉತ್ಪನ್ನವಾಗುವುವು. ಪರಿಸ್ಥಿತಿ ಅನುಕೂಲಕರವಾಗಿದ್ದು ರಕ್ಷಾಕವಚ ಒಡೆದಾಗ ಹೊರಬರುವ ಪ್ರತಿಯೊಂದು ಬೀಜಕಣವೂ ಚಿಕ್ಕ ಚಿಕ್ಕ ಅಮೀಬದ ರೂಪತಾಳುವುದು. ಇಂಥ ಸಂತಾನೋತ್ಪತ್ತಿ ಕ್ರಮಕ್ಕೆ ಬಹುದಳನ (ಮಲ್ಟಿಪಲ್ ಫಿಷನ್) ಎಂದು ಹೆಸರು. ಈ ವಿಧಾನದಿಂದ ಒಂದುಸಾರಿಗೆ ಸುಮಾರು 500ರ ವರೆಗೆ ಚಿಕ್ಕ ಮರಿಗಳು ಹುಟ್ಟಿಕೊಳ್ಳುತ್ತವೆ. (ಎಸ್.ಬಿ.ಎಂ.)

**ಅಮೀರ್ ಅಲಿ, ಸೈಯದ್ :** ಇಂಗ್ಲೆಂಡಿನ ಪ್ರಿವಿ ಕೌನ್ಸಿಲ್ಲಿನ ನ್ಯಾಯಾಧೀಶರಾಗಿ ನೇಮಕಗೊಂಡ ಮೊದಲನೆಯ ಭಾರತೀಯರು. ಇವರು ಬಂಗಾಲದ ಚಿನ್ಸುರಾ ಎಂಬ ಹಳ್ಳಿಯಲ್ಲಿ 1849ರಲ್ಲಿ ಜನಿಸಿದರು. ಕಲ್ಕತ್ತ ವಿಶ್ವವಿದ್ಯಾನಿಲಯದಿಂದ ಎಂ.ಎ., ಬಿ.ಎಲ್. ಪದವಿಗಳನ್ನು ಪಡೆದು, ಅನಂತರ ಕೆಲವು ವರ್ಷ ಕಲ್ಕತ್ತ ಹೈಕೋರ್ಟಿನಲ್ಲಿ ವಕೀಲಿ ನಡೆಸಿ, ಸರ್ಕಾರದ ಶಿಷ್ಯವೃತ್ತಿ ಪಡೆದು, ಕಾಯಿದೆ ಅಭ್ಯಾಸಕ್ಕಾಗಿ ಇಂಗ್ಲೆಂಡಿಗೆ ತೆರಳಿದರು. 1873ರಲ್ಲಿ ಬ್ಯಾರಿಸ್ಟರ್ ಆದರು. ಭಾರತಕ್ಕೆ ಬಂದು ವಕೀಲಿಯನ್ನು ಪ್ರಾರಂಭಿಸಿ ಅಪಾರ ಕೀರ್ತಿಗಳಿಸಿದ್ದಲ್ಲದೆ 1874ರಿಂದ 1878ರ ವರೆಗೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಮಹಮ್ಮದೀಯ ಕಾಯಿದೆಯ ಪ್ರಾಧ್ಯಾಪಕರಾಗಿದ್ದರು. 1878ರಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾಗಿಯೂ 1881ರಲ್ಲಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾಗಿಯೂ ನೇಮಕ ಹೊಂದಿದರು. ಸ್ವಲ್ಪ ಕಾಲದಲ್ಲಿ ಆ ಹುದ್ದೆಗೆ ರಾಜಿನಾಮೆಯಿತ್ತು ಪುನಃ ವಕೀಲಿ ಪ್ರಾರಂಭಿಸಿದರು. 1883ರಲ್ಲಿ ಇಂಪೀರಿಯಲ್ ಲೆಜಿಸ್ಲೆಟಿವ್ ಕೌನ್ಸಿಲ್‌ನ ಸದಸ್ಯರಾಗಿ ನೇಮಕ ಹೊಂದಿದರು. ಆ ಕಾಲಕ್ಕೆ ಮೆಮನ್ ಮೊದಲಾದ ಪಂಗಡದ ಮುಸ್ಲಿಮರಿಗೆ ಕುರಾನ್ ವಿರುದ್ಧವಾದ, ಆದರೆ ಅವರ ಪೂರ್ವಜರಿಂದ ಬಂದ, ವಾರ್ಸಾ ಮೊದಲಾದ ಕಾಯಿದೆಗಳು ಜಾರಿಯಲ್ಲಿದ್ದುವು. ದೋಷಯುಕ್ತವಾದ ಆ ಕಾಯಿದೆಯನ್ನು ಬಿಟ್ಟು ಸಮಗ್ರವಾದ ಮುಸ್ಲಿಮ್ ಕಾಯಿದೆಯನ್ನು ಅಂಗೀಕರಿಸಲು ಅನುಕೂಲ ಮಾಡಿಕೊಡುವ ಒಂದು ಬಿಲ್ಲನ್ನು ಅಮೀರ್ ಅಲಿ ತಂದರು. ಆಗ ಅದು ಕಾಯಿದೆ ಆಗಲಿಲ್ಲ. ಆದರೆ 1937ರಲ್ಲಿ ಕಲ್ಕತ್ತೆಯ ವಿಶ್ವವಿದ್ಯಾನಿಲಯ ಇವರನ್ನು ಟ್ಯಾಗೋರ್ ಲಾ ಪ್ರೊಫೆಸರ್ ಎಂದು ಗೌರವಿಸಿತು. ಅಲ್ಲಿ ಅವರು ಕೊಟ್ಟ ವ್ಯಾಖ್ಯೆಗಳು ಮುಸ್ಲಿಮರ ಕಾಯಿದೆಯ ಮೇಲಿನ ದೊಡ್ಡ ಆಧಾರಗ್ರಂಥಗಳಾಗಿವೆ. 1890ರಲ್ಲಿ ಅವರು ಕಲ್ಕತ್ತ ಹೈಕೋರ್ಟಿನ ನ್ಯಾಯಾಧೀಶರಾಗಿ ನೇಮಕಹೊಂದಿದರು. ಮುಸ್ಲಿಮರ ವಕಫಾ (ಧಾರ್ಮಿಕ ಮಹಾದಾನ) ವಿಷಯದ ಮೇಲೆ ಅಬ್ದುಲ್ ಫತಾ ಮಹಮ್ಮದ್ ವಿರುದ್ಧ ರಾಸಮಯಾ (1894) ಮೊಕದ್ದಮೆಯಲ್ಲಿ 'ದಾನಕರ್ತೃವಿನ ಸಂತತಿ ಪಾರಂಪರ್ಯದ ಹಿತಕ್ಕಾಗಿ ಮಾಡುವ ದಾನವೂ ಧಾರ್ಮಿಕಮಹಾದಾನ' ವಾಗುವುದೆಂದು ಆಲಿಯವರು ನ್ಯಾಯಾಧೀಶರಾಗಿ ಕೊಟ್ಟ ನಿರ್ಣಯ ಪ್ರಿವಿ ಕೌನ್ಸಿಲ್ಲಿಗೆ ಸಮ್ಮತವಾಗದಿದ್ದರೂ ಮುಸ್ಲಿಮ್ ಕಾಯಿದೆತಜ್ಞರ ಅನುಮೋದನೆ ಪಡೆಯಿತು. ಅನಂತರ 1913ರಲ್ಲಿ ಆದ ವಕ್ ಫಾ ಕಾಯಿದೆಯಲ್ಲಿ ಆ ಅಭಿಪ್ರಾಯ ಅಂಗೀಕೃತವಾಯಿತು. 1904ರಲ್ಲಿ ಹೈಕೋರ್ಟ್ ನ್ಯಾಯಾಧೀಶ ಪದವಿಯಿಂದ ನಿವೃತ್ತಿ ಹೊಂದಿದ ಅನಂತರ ಆಲಿ ಅವರು ಇಂಗ್ಲೆಂಡಿನಲ್ಲಿ ನೆಲೆಸಿದರು. 1909ರಲ್ಲಿ ಪ್ರಿವಿ ಕೌನ್ಸಿಲ್ಲಿನ ನ್ಯಾಯಾಧೀಶರಾದರು. ಇವರೇ ಈ ಗೌರವವನ್ನು ಹೊಂದಿದ ಮೊದಲ ಭಾರತೀಯರು. ಇವರ ವಿದ್ವತ್ಪೂರ್ಣ ನಿರ್ಣಯಗಳು, ಅನೇಕ ಜಟಿಲ ಕಾಯಿದೆಯ ವಿಷಯಗಳನ್ನು ವಿವರಿಸಿವೆ. ಇವರು ಹಿಂದೂಸ್ಥಾನದ ಕಾಯಿದೆಗಳಲ್ಲಿ ವಿಶೇಷತಃ ಹಿಂದೂ ಮುಸ್ಲಿಮ್ ಕಾಯಿದೆಗಳಲ್ಲಿ ಇಂಗ್ಲಿಷ್ ಕಾಯಿದೆಯ ಛಾಯೆಯನ್ನು ಕಾಣುವ ಹಾಗೂ ಅನುಸರಿಸುವ ಹಿಂದೂಸ್ಥಾನದ ನ್ಯಾಯಾಧೀಶರ ಮನೋಧರ್ಮವನ್ನು ತೀವ್ರವಾಗಿ ಖಂಡಿಸಿದರು. ಸುನ್ನಿ ಮುಸ್ಲಿಮರ ಕಾಯಿದೆಯಂತೆ ಬಂದ ರಕ್ಷಕತ್ವದ ಹಕ್ಕು ಹೊಣೆಗಾರಿಕೆ, ಮಕ್ಕಳ ಔರಸತ್ವ ಅಂಗೀಕಾರ–ಇವುಗಳ ಮೇಲಿನ ಆಲಿಯವರ ನಿರ್ಣಯ ಪ್ರಸಿದ್ಧವೂ ಎಲ್ಲೆಡೆಯಲ್ಲಿ ಉದ್ಧೃತವೂ ಆಗಿವೆ. ವಿಬುಧಪ್ರಿಯ ತೀರ್ಥ ಸ್ವಾಮಿಯರ್ ಮತ್ತು ವೇದಾಚಲ ಮೊದಲಿಯಾರ್ ವಿದ್ಯಾವರೂಢಿ–ಇವರ ಮೊಕದ್ದಮೆಗಳಲ್ಲಿ ಹಿಂದೂಮಠಗಳ ಸ್ವರೂಪ, ಮಠಾಧಿಪತಿಗಳ ಅಧಿಕಾರ, ಬಂಧುಗಳಲ್ಲಿ ವಾರಸಾನಿರ್ಣಯ ಮೊದಲಾದ ಮಹತ್ತ್ವದ ಹಿಂದೂ ಕಾಯಿದೆಗಳ ಬಗ್ಗೆ ಇವರು ನೀಡಿದ ತೀರ್ಪುಗಳು ಇಂದಿಗೂ ಮೈಲಿಗಲ್ಲುಗಳಾಗಿವೆ. ಅಲ್ಲದೆ ಬಂಗಾಳದ ಜಮೀನುದಾರಿ ವಿಷಯದಲ್ಲೂ ಪುರಾವೆಗಳ ಕಾಯಿದೆಗಳಲ್ಲೂ ಅನೇಕ ಮಹತ್ತ್ವದ ನಿರ್ಣಯಗಳನ್ನಿತ್ತಿದ್ದಾರೆ. 1928ನೆಯ ಆಗಸ್ಟ್ ತಿಂಗಳಿನಲ್ಲಿ ಇವರು ಮಹಮಡನ್ ಜ್ಯೂರಿಸ್‌ಪ್ರೂಡೆನ್ಸ್ (ಮಹಮ್ಮದೀಯ ಕಾಯಿದೆ ತತ್ತ್ವಗಳು), ದಿ ಪರ್ಸನಲ್ ಲಾ ಆಫ್ ಮಹಮಡನ್ಸ್ (ಮುಸಲ್ಮಾನರ ವೈಯಕ್ತಿಕ ಕಾಯಿದೆ), ದಿ ಕ್ರಿಟಿಕಲ್ ಎಕ್ಸಾಮಿನೇಷನ್ ಆಫ್ ದಿ ಲೈಫ್ ಅಂಡ್ ಟೀಚಿಂಗ್ಸ್ ಆಫ್ ಮಹಮ್ಮದ್ (ಪೈಗಂಬರರ ಬೋಧನೆ ಮತ್ತು ಜೀವನದ ವಿಮರ್ಶಾತ್ಮಕ ಸಮೀಕ್ಷೆ) ಹಾಗೂ ಸ್ಪಿರಿಟ್ ಆಫ್ ಇಸ್ಲಾಂ (ಮಹಮ್ಮದೀಯ ತತ್ತ್ವದ ತಿರುಳು), ಪುರಾವೆ ಕಾಯಿದೆ ಮೊದಲಾದ ಅನೇಕ ಉದ್ಗ್ರಂಥಗಳನ್ನು ಬರೆದಿದ್ದಾರೆ.

ಮುಸ್ಲಿಮರಿಗೆ ಪಾಶ್ಚಾತ್ಯ ರಾಜಕೀಯ ತಂತ್ರಗಳನ್ನು ತಿಳಿಸಲು ಹಾಗೂ ಅವರ ಆಸಕ್ತಿಗಳನ್ನು ಕಾಪಾಡಲು ಅಲಿಯವರು ನ್ಯಾಷನಲ್ ಮಹಮಡನ್ ಅಸೋಸಿಯೇಷನ್ ಅನ್ನು ಸ್ಥಾಪಿಸಿದರು (1877). ಭಾರತೀಯ ರಾಷ್ಟ್ರೀಯತೆಯ ಸೋಗಿನಲ್ಲಿ ಹಿಂದೂಗಳು ಪ್ರಬಲರಾಗುವುದನ್ನು ತಡೆಗಟ್ಟಲು ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ಎತ್ತಿಹಿಡಿದವರಲ್ಲಿ ಇವರೂ ಒಬ್ಬರು. ಮಾರ್ಲೆ ಮಿಂಟೊ ಸಲಹೆಗಳಂತೆ ಮುಸ್ಲಿಮರಿಗೆ ಪ್ರತ್ಯೇಕ ಚುನಾವಣೆಗಳು ಜಾರಿಗೆ ಬರಲು ಇವರೂ ಪ್ರಯತ್ನಿಸಿದರು. (ವಿ.ಆರ್.ಬಿ.)

**ಅಮೀರ್ ಖುಸ್ರು :** ಹಿಂದೂಸ್ಥಾನದ ಗಿಣಿ, ಕವಿರಾಜ ಮುಂತಾದ ಬಿರುದುಗಳಿಂದ ಪ್ರಸಿದ್ಧನಾದ ಈತ (1253–1325) ಬಲ್ಬನ್ನನ ಮಗನಾದ ಮಹಮ್ಮದನಿಗೆ ಗುರುವಾಗಿಯೂ ಅನಂತರ ದೆಹಲಿಯಲ್ಲಿ ಗ್ರಂಥಪಾಲಕನಾಗಿಯೂ ಪ್ರಸಿದ್ಧನಾಗಿದ್ದ. ಸಂಗೀತ, ತತ್ತ್ವಶಾಸ್ತ್ರ ಮುಂತಾದುವುಗಳಲ್ಲಿ ಪರಿಣತ. ಪ್ರಸಿದ್ಧ ಪಾರಸಿ ಕವಿ ಮತ್ತು ಚರಿತ್ರಕಾರ. ಅಲಾವುದ್ದೀನನ ದಕ್ಷಿಣಾಪಥದ ಯುದ್ಧಗಳಲ್ಲಿ ಅವನ ಸಂಗಡಿಗನಾಗಿದ್ದು ಖಿಜೈನ್–ಉಲ್–ಫುತುಹ್ ಎಂಬ ಅಧಿಕೃತಚರಿತ್ರೆಯನ್ನು ರಚಿಸಿದ. ಇವನ ಇನ್ನೊಂದು ಕೃತಿ ದೇವಲ್ ರಾಣಿ–ವ–ಖಿಸ್ರ್‌ಖಾನ್. ಇದೊಂದು ಸುಂದರ ಶೈಲಿಯ ಕಾವ್ಯ. ಈ ಎರಡು ಕೃತಿಗಳೂ ಮಧ್ಯಕಾಲೀನ ಭಾರತಚರಿತ್ರೆಗೆ ಮುಖ್ಯ ಮಾಹಿತಿಗಳಾಗಿವೆ. (ಎಂ.ಎಸ್.ಬಿ.)

**ಅಮುಗಿದೇವ :** 12ನೆಯ ಶತಮಾನದಲ್ಲಿದ್ದ ಶರಣ. ಸ್ವಲ್ಪ ಹೆಚ್ಚು ಕಡಿಮೆ ಅದೇ ಕಾಲದಲ್ಲಿ ಇಬ್ಬರು ಅಥವಾ ಮೂವರು ಅಮುಗಿದೇವ ಎಂಬ ಹೆಸರಿನವರು ಇದ್ದಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಒಬ್ಬ ನೇಯ್ಗೆ ಕಾಯಕದವ, ಇನ್ನೊಬ್ಬ ಕನ್ನಡಿ (ಕ್ಷೌರದ) ಕಾಯಕದವ. ಇವರಿಬ್ಬರಲ್ಲದೆ ಅಮುಗೇಶ್ವರಲಿಂಗ ಎಂಬ ಅಂಕಿತದ ಒಬ್ಬ ವಚನಕಾರನನ್ನು ಕವಿಚರಿತೆಕಾರರು ಹೇಳಿ ಒಂದು ವಚನವನ್ನು ಉದಾಹರಿಸಿ ಆತ ಇನ್ನೊಬ್ಬ ಅಮುಗಿದೇವಯ್ಯನೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಅಮುಗೇಶ್ವರಲಿಂಗ ಎಂಬುದು ಮೊದಲ ಅಮುಗಿದೇವನ ಪತ್ನಿ ರಾಯಮ್ಮನ ವಚನಗಳ ಅಂಕಿತವೆಂದು ಈಚೆಗೆ ನಿರ್ಧಾರವಾಗಿರುವುದರಿಂದ ಅಮುಗಿದೇವರು ಮೂವರಲ್ಲ ಇಬ್ಬರೇ ಎಂದು ಹೇಳಬಹುದಾಗಿದೆ. ಕನ್ನಡಿ ಕಾಯಕದ ಅಮುಗಿದೇವ ಕಮಳೇಶ್ವರಲಿಂಗ ಎಂಬ ಅಂಕಿತದಿಂದ ವಚನಗಳನ್ನು ಬರೆದಿದ್ದಾನೆ. ಆದರೆ ಸಿದ್ಧರಾಮನೊಡನೆ ಸಂಬಂಧವನ್ನು ಪಡೆದು ಪ್ರಸಿದ್ಧನಾದ ಅಮುಗಿದೇವ ನೇಯ್ಗೆಕಾಯಕದ ಅಮುಗಿದೇವನೆಂಬುದನ್ನು ಕನ್ನಡ ಕೃತಿಗಳು ಮತ್ತು ಪ್ರಚಲಿತವಾಗಿರುವ ಕಥೆಗಳು ಏಕಕಂಠದಿಂದ ಹೇಳುತ್ತವೆ.

ನೇಯ್ಗೆಕಾಯಕದ ಅಮುಗಿದೇವನ ವಚನಗಳ ಅಂಕಿತ ಸಿದ್ಧಸೋಮನಾಥ ಎಂಬುದು. ಪಂಡರಾಪುರಕ್ಕೆ ಸಮೀಪದಲ್ಲಿರುವ ಪುಳುಜ ಅಥವಾ ಪುಳುಂಜ (ಈಗ ಪುಳೂಜ, ಹೂಳಜ) ಎಂಬ ಗ್ರಾಮದ ಸೋಮನಾಥನೇ ಈತನ ಇಷ್ಟದೈವವಾಗಿದ್ದು ಅವನ ಹೆಸರನ್ನೇ ತನ್ನ ವಚನಗಳ ಅಂಕಿತವನ್ನಾಗಿಟ್ಟುಕೊಂಡಂತೆ ಕಾಣುತ್ತದೆ. ಆ ದೇವಾಲಯದಲ್ಲಿ ದೊರೆತಿರುವ ಒಂದು ಶಾಸನ (1200) ಯಾದವಸಿಂಘಣ ಅಮುಗಿದೇವನಿಗೆ ದಾನ ಕೊಟ್ಟುದನ್ನು ಉಲ್ಲೇಖಿಸುತ್ತದೆ. ಈತನನ್ನು ಕುರಿತ ಒಂದು ಕಥೆಯನ್ನು ರಾಘವಾಂಕ ಚಾರಿತ್ರದ ಸಿದ್ಧನಂಜೇಶ ಸಂಗ್ರಹಿಸಿಕೊಟ್ಟಿದ್ದಾನೆ. ಶಂಕರಲಿಂಗಕವಿ ಅಮುಗಿದೇವನ ಮೇಲೆ ಒಂದು ರಗಳೆಯನ್ನು ಬರೆದಿದ್ದಾನೆ. ಶಿವಲಿಂಗಕವಿ ಅಮುಗಿದೇವಯ್ಯಗಳ ಸಾಂಗತ್ಯ ಎಂಬ ಒಂದು ಸ್ವತಂತ್ರ ಕೃತಿಯನ್ನೇ ರಚಿಸಿದ್ದಾನೆ. ಸಿದ್ಧರಾಮ ಸೊನ್ನಲಿಗೆಯಲ್ಲಿ (ಸೊಲ್ಲಾಪುರ) ಕ್ಷೇತ್ರಪೂಜೆಯನ್ನು ಮಾಡಲು ಉದ್ದೇಶಿಸಿ ಅದಕ್ಕಾಗಿ ಆ ಊರಿನ ಎಲ್ಲರ ಮನೆಯ ಮುಂದೂ ಕೊಟ್ಟಣವನ್ನು ಕುಟ್ಟಲು ಹಾಕಿಸಿದನೆಂದೂ ಅಮುಗಿದೇವ ನಾವು ಭವಿ ಸೇವೆಯಂ ಮಾಡುವವರಲ್ಲ ಎಂದು ಬತ್ತವನ್ನು ಚೆಲ್ಲಿ ಊರನ್ನೇ ಬಿಟ್ಟು ಹೊರಟನೆಂದೂ ಅದನ್ನರಿತ ಸಿದ್ಧರಾಮ ಆತನ ಲಿಂಗನಿಷ್ಠೆಯನ್ನು ಕಂಡು ಮೆಚ್ಚಿದನೆಂದೂ ಈ ಎಲ್ಲ ಕೃತಿಗಳಲ್ಲಿ ಉಕ್ತವಾದ ಕಥೆಯಿಂದ ತಿಳಿದುಬರುತ್ತದೆ. ಸೊಲ್ಲಾಪುರ ಪುಳುಜಗಳು ಅಕ್ಕಪಕ್ಕದಲ್ಲಿರುವ ಊರುಗಳಾದುದರಿಂದ ಅಮುಗಿದೇವ ಸೊನ್ನಲಾಪುರದಲ್ಲಿದ್ದಿರಬೇಕು. ಅನಂತರ ಈ ಯಾವುದೋ ಒಂದು ಘಟನೆ ಕಾರಣವಾಗಿ ಅಲ್ಲಿಂದ ಹೊರಟು ಬಸವಣ್ಣನವರ ಕಾರ್ಯಕ್ಷೇತ್ರವಾದ ಕಲ್ಯಾಣಕ್ಕೆ ಬಂದು ನೆಲಸಿರಬೇಕು.

ಕಲ್ಯಾಣ ಕೆಲವುಕಾಲ ಈತನ ಕಾರ್ಯಕ್ಷೇತ್ರವಾಗಿತ್ತು. ಶರಣರ ಧಾರ್ಮಿಕ ಮತ್ತು ಸಾಮಾಜಿಕ ಸಮತೆಯ ಮಹಾಸಾಧನೆಯಲ್ಲಿ ಈತ ಮತ್ತು ಈತನ ಪತ್ನಿ ರಾಯಮ್ಮ ಭಾಗವಹಿಸಿದರೂ ಇಬ್ಬರೂ ಒಳ್ಳೆಯ ವಚನಕಾರರೂ ಆಗಿದ್ದರೆಂಬುದಕ್ಕೆ ಈಗ ಸಿಕ್ಕಿರುವ ಅವರ ಕೇವಲ ಕೆಲವು ವಚನಗಳೇ ಸಾಕ್ಷಿಯಾಗಿವೆ. ಕಲ್ಯಾಣದ ಕ್ರಾಂತಿಯ ಅನಂತರ ಈತ ಅಲ್ಲಿಂದ ಹೊರಟು ತನ್ನ ಇಷ್ಟದೇವತೆ ಇದ್ದ ಪುಳುಜೆಗೆ ಬಂದಿರಬೇಕು. ಅಲ್ಲಿ ಜನಜಾಗೃತಿಯನ್ನುಂಟುಮಾಡುತ್ತ ಆತ ದೀರ್ಘಕಾಲ ಬದುಕಿದಂತೆ ತೋರುತ್ತದೆ. ಯಾದವಸಿಂಘಣನಂಥ ರಾಜನನ್ನೂ ಆಕರ್ಷಿಸಿ ಆತನಿಂದ ಗೌರವಪೂರ್ವಕವಾಗಿ ದಾನವನ್ನು ಪಡೆಯುವಷ್ಟು ಪ್ರಭಾವಶಾಲಿಯಾಗಿ ಈತನ ವ್ಯಕ್ತಿತ್ವ ಅಲ್ಲಿ ಬೆಳೆಯಿತು. ಪುಳುಜೆಯಲ್ಲಿ ಮಾತ್ರವಲ್ಲದೆ ವಿಜಾಪುರದ ಸುತ್ತ ಮುತ್ತಲಿನ ಭಾಗಗಳಲ್ಲಿ ಮತ್ತು ಜತ್ತ ಮುಧೋಳ ಸಂಸ್ಥಾನಗಳಲ್ಲಿ ಕೂಡ ಅಮುಗಿದೇವನ ಉಲ್ಲೇಖವಿರುವ ಅನೇಕ ದೇವಾಲಯಗಳಿರುವುದು ತಿಳಿದುಬರುತ್ತದೆ. ಈತನಿಗೆ ಅಮಾಕಸಿದ್ಧ ಎಂಬ ಹೆಸರು ಪ್ರಚಲಿತವಾಗಿರುವುದೂ ಮೇಲೆ ಹೇಳಿದ ಶಾಸನದಲ್ಲಿ ಈತನಿಗೆ ಕೊಟ್ಟಿರುವ ಸಿದ್ಧಕುಲಾರ್ಣವಪ್ರವರ್ಧನಸುಧಾಕರ ಎಂಬ ವಿಶೇಷಣವೂ ಕುತುಹಲಕರವಾದ ಅಂಶಗಳು. ಕುರುಬ ಅಥವಾ ಹಾಲು ಮತದವರ ಮೇಲೆ ವಿಶೇಷ ಪ್ರಭಾವವನ್ನು ಬೀರಿ ಅವರನ್ನು ಲಿಂಗವಂತರನ್ನಾಗಿ ಮಾಡಿದ ಸಿದ್ಧ ಅಮುಗಿದೇವಯ್ಯ. (ಎಚ್.ಟಿ.)

**ಅಮುದ್ರಿತ ಗ್ರಂಥಚಿಂತಾಮಣಿ :** ಸಾಹಿತ್ಯಸೇವೆಯನ್ನೇ ಪ್ರಧಾನವಾಗಿಟ್ಟುಕೊಂಡು ಪ್ರಕಟವಾದ ತೆಲುಗು ಮಾಸಪತ್ರಿಕೆಗಳಲ್ಲಿ ಪ್ರಮುಖ ಸ್ಥಾನ ಪಡೆದ ಮಾಸಿಕ. 19ನೆಯ ಶತಮಾನದ ಕೊನೆಯಲ್ಲಿ ಸ್ಥಾಪಿತವಾದ ಈ ಪತ್ರಿಕೆಗೆ ಪಿ. ರಾಮಕೃಷ್ಣಯ್ಯನವರು ಸಂಪಾದಕರು. ತಾಳೆಗರಿಯಲ್ಲಿದ್ದ ಹಸ್ತಪ್ರತಿಗಳನ್ನು ಸಂಪಾದಿಸಿ ಸರಳವಾದ ತೆಲುಗು ಭಾಷೆಯಲ್ಲಿ ಪ್ರಕಟಿಸಿದ ಕೀರ್ತಿ ಅವರ ಮತ್ತು ಅವರ ಸಹೋದ್ಯೋಗಿಗಳದ್ದು. (ಎನ್.ಕೆ.)

**ಅಮೂರ್ತರೂಪ :** ಹೆಚ್ಚು ಕಡಿಮೆ ಪೂರ್ತಿಯಾಗಿ ಚಿತ್ರಕಲೆ, ಶಿಲ್ಪಕಲೆಗಳಿಗೆ ಸಂಬಂಧಪಟ್ಟ ವಿಚಾರ. ಮಾನವಪ್ರಪಂಚವನ್ನಾಗಲಿ ಪ್ರಕೃತಿಪ್ರಪಂಚವನ್ನಾಗಲಿ ಲಲಿತಕಲೆ ಅನುಕರಿಸಲೇಬೇಕೆಂಬ ನಿಯಮ ಬಲು ಹಿಂದಿನಿಂದ ಉಪದೇಶಿತವಾಗಿ 19ನೆಯ ಶತಮಾನದ ಎರಡನೆಯ ಭಾಗದವರೆಗೂ ನಡೆದುಬಂತು. ಆಗ ಅದಕ್ಕೆ ವಿರೋಧವಾದ ಅಭಿಪ್ರಾಯಗಳು ತಲೆಯೆತ್ತಿದವು. ನಕಲು ತೆಗೆಯುವುದಲ್ಲ ಕಲೆಯ ಕಾರ್ಯ, ಪ್ರತಿಚಿತ್ರವನ್ನು ನಿರ್ಮಿಸುವುದೂ ಅಲ್ಲ ಎಂಬುದು ಒಂದು ವಾದ. ಹಾಗಾದರೆ ಯಾವುದು ಕಲೆಗಾರನ ಉದ್ಯೋಗ? ಪ್ರಕೃತಿಯ ಅವಲೋಕನದಿಂದ ಅವನ ಉದ್ಯಮ ಪ್ರಾರಂಭವಾಗುತ್ತದೆ. ನೋಟಕನ ಮನಸ್ತೃಪ್ತಿಯಿಂದ ಅದಕ್ಕೆ ಮಂಗಳಾಂತ ದೊರಕುತ್ತದೆ. ಅದಕ್ಕಾಗಿ ಕಣ್ಣು ಕೋರೈಸುವ ಬಣ್ಣಗಳ ಮೂಲಕ ವಿವಿಧ ನಕಾಶೆಗಳನ್ನು ಅವನು ತಯಾರಿಸಬೇಕು. ಒಂದು ಪಂಗಡದವರು (ಲೆ ಫಾವ್ಸ್) ಹೀಗೆ ಘೋಷಿಸಿದರು. ಇನ್ನೊಂದು ಗುಂಪಿನವರು (ದಿ ಕ್ಯೂಬಿಸ್ಟ್ಸ್) ವಸ್ತುಗಳ ಬಾಹ್ಯಾಕೃತಿಯ ಹಿಂದೆ ರೇಖಾಗಣಿತದ ಆಕೃತಿಗಳು ಇವೆ ಎಂದರು. ಇನ್ನೂ ಮುಂದು ಹೋದರು ಅಮೂರ್ತರೂಪದ (ಆ್ಯಬ್‌ಸ್ಟ್ರಾಕ್ಟ್ ಫಾರಮ್) ಗುಂಪಿನವರು. ಇವರಿಗೆ ಪ್ರಕೃತಿಯ ಪದಾರ್ಥಗಳೇ ಅನಾವಶ್ಯಕ; ಬರಿ ನಕಾಶೆಗಳೂ ಆಕಾರಗಳೂ ಸಾಕು. ಅವನ್ನು ಕಲೆಯ ಸಾಧನಸಾಮಗ್ರಿಗಳಿಗೆ ಅನುಗುಣವಾಗಿ ಹೊಂದಿಸಿಟ್ಟರೆ ಯಾವುದೋ ಅವ್ಯಕ್ತಾಕೃತಿ ಪ್ರೇಕ್ಷಕನ ಮನಸ್ಸಿಗೆ ಮಿಂಚಿಹೋಳೆಯುತ್ತದೆ.

ಈ ಅಭಿಪ್ರಾಯ ಸಾಹಿತ್ಯಕ್ಕೆ ಸಾಧನವಾದ ಭಾಷೆಗೆ ಅಷ್ಟೊಂದು ಅನ್ವಯವಾದಂತೆ ತೋರುವುದಿಲ್ಲ. ವಿಲಕ್ಷಣ ವಿಮರ್ಶಕರಲ್ಲಿ ಅಲ್ಲಿ ಇಲ್ಲಿ ಅದರ ಪ್ರತಿಧ್ವನಿ ಕೇಳಿಬಂದರೂ ಬರಬಹುದು. (ಎಸ್.ವಿ.ಆರ್.)

**ಅಮೃತ :** ದೇವದಾನವರು ಕ್ಷೀರಸಮುದ್ರವನ್ನು ಮಥಿಸಿದಾಗ ಲಕ್ಷ್ಮಿ, ಚಂದ್ರ, ಐರಾವತ, ಉಚ್ಚೈಶ್ರವಸ್, ಹಾಲಾಹಲ ಮುಂತಾದುವುಗಳ ಜೊತೆಗೆ ಉದ್ಭವಿಸಿದುದು. ಚಂದ್ರ ಅಮೃತಭರಿತ ಎಂದು ಹಿಂದೂಗಳ ನಂಬಿಕೆ. ಕದ್ರುವಿನಿಂದ ತನ್ನ ತಾಯಿಯನ್ನು ಮುಕ್ತಗೊಳಿಸುವುದಕ್ಕಾಗಿ ಗರುಡ ಇದನ್ನು ದೇವಲೋಕದಿಂದ ಅಪಹರಿಸಿದ. ಶ್ರೀ ಕೃಷ್ಣನೂ ಇದನ್ನು ಉದಂಕ ಮಹರ್ಷಿಯ ತೃಪ್ತ್ಯರ್ಥವಾಗಿ ತರಿಸಿಕೊಟ್ಟ. ಇದನ್ನು ಕುಡಿದವರು ಮರಣವನ್ನು ಗೆಲ್ಲಬಲ್ಲರೆಂದೂ ಇದು ಸ್ವರ್ಗದಲ್ಲಿನ ದೇವತೆಗಳ ಪಾನೀಯವೆಂದೂ ನಂಬಿಕೆ. (ಆರ್.)

**ಅಮೃತಬಝಾರ್ ಪತ್ರಿಕ :** ಭಾರತದ ದಿಟ್ಟ ರಾಷ್ಟ್ರೀಯ ಪತ್ರಿಕೆಗಳಲ್ಲೊಂದು. ಬಂಗಾಲದ ಜೆಸ್ಸೂರು ಜಿಲ್ಲೆಯ ಅಮೃತಬಝಾರ್ ಹೇಮಂತ ಕುಮಾರ ಘೋಷ್, ಶಿಶಿರಕುಮಾರ ಘೋಷ್ ಮತ್ತು ಮೋತಿಲಾಲ್ ಘೋಷ್ ಎಂಬ ಮೂವರು ಸಾಹಸಿ ಸಹೋದರರು ಬಂಗಾಳಿಭಾಷೆಯಲ್ಲಿ ಈ ವಾರಪತ್ರಿಕೆಯನ್ನು ಪ್ರಾರಂಭಿಸಿದರು (1868). ಒಟ್ಟು 32 ರೂಪಾಯಿಯ ಮರದಚ್ಚಿನ ವ್ಯವಸ್ಥೆಯಲ್ಲಿ ಆ ಮುಂಚೆ ಅಮೃತಪ್ರಭಾಮಣಿ ಎಂದು ಪ್ರಕಟವಾಗುತ್ತಿದ್ದ ಪತ್ರಿಕೆ ನಿಂತ ಮೇಲೆ ಇದನ್ನು ಪ್ರಾರಂಭಿಸಿ, 1869ರಲ್ಲಿ ಇದರಲ್ಲಿ ಇಂಗ್ಲಿಷ್ ಕಾಲಂಗಳನ್ನು ತೆರೆಯಲಾಯಿತು. ರಾಜಕೃಷ್ಣಮಿತ್ರನೆಂಬ ನ್ಯಾಯಾಲಯದ ಕಾರಕೂನನೊಬ್ಬ ನ್ಯಾಯಾಧೀಶರ ಸಂಬಂಧದಲ್ಲಿ ರಹಸ್ಯಸ್ಫೋಟ ಮಾಡಿ ಬರೆದ ಲೇಖನದಿಂದ ಪತ್ರಿಕೆ ಮೊಕದ್ದಮೆಗೊಳಗಾದಾಗ ಮುದ್ರಕ, ಪ್ರಕಾಶಕರಿಬ್ಬರಿಗೂ ಶಿಕ್ಷೆಯಾಯಿತು. ಸಂಪಾದಕ ಆಪಾದನೆಯಿಂದ ಮುಕ್ತನಾದ. ಮತ್ತೊಂದು ಮೊಕದ್ದಮೆಯಲ್ಲೂ ಸಂಪಾದಕನ ಮೇಲಿನ ಆಪಾದನೆ ಸಿದ್ಧವಾಗಲಿಲ್ಲ. ಪತ್ರಿಕೆ 1922ರಲ್ಲಿ ವಾರಕ್ಕೆರಡು ಸಲ ಪ್ರಕಟವಾಗತೊಡಗಿತು. ಸರ್ ಆಷ್ ಲೀ ಈಡನ್ ಗವರ್ನರ್ ಆಗಿದ್ದಾಗ ಪತ್ರಿಕೆಯ ಟೀಕೆ ಟಿಪ್ಪಣಿಗಳು ಮತ್ತು ವಾರ್ತಾವಿಚಾರಗಳು ಅವನನ್ನು ಕೆರಳಿಸಿದುವು. ಆತ ಸಂಪಾದಕನನ್ನು ಒಲಿಸಿಕೊಳ್ಳಲು ಮಾಡಿದ ಪ್ರಯತ್ನ ವಿಫಲವಾಗಿ, ದೇಶಭಾಷಾ ಪತ್ರಿಕೆಗಳ ಕಾನೂನು ಜಾರಿಗೆ ಬರುವಷ್ಟರಲ್ಲಿ, ಅದನ್ನರಿತ ಪತ್ರಿಕೆ 1878ರ ಮಾರ್ಚ್ 21ರಿಂದ ಇಂಗ್ಲಿಷ್‌ನಲ್ಲಿ ಪ್ರಕಟವಾಗತೊಡಗಿತು. ಭೋಪಾಲ್‌ನಲ್ಲಿ ಬ್ರಿಟಿಷ್ ರಾಜಕೀಯ ಪ್ರತಿನಿಧಿಯಾಗಿದ್ದ ಸರ್ ಲೀಪೆಲ್ ಗ್ರಿಫಿನ್ನನ ನಿರಂಕುಶ ನಡತೆಯ ಬಗ್ಗೆ ಪತ್ರಿಕೆ ಟೀಕಿಸಿತು. ಆತ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಲು ವೈಸ್‌ರಾಯ್ ಲಾರ್ಡ್ ಡಫರಿನ್ ಅವರಿಗೆ ಮಾಡಿದ ಸಲಹೆ ಮನ್ನಣೆ ಪಡೆಯದೆ ಗ್ರಿಫಿನ್ ರಾಜೀನಾಮೆಯಿತ್ತು ಲಂಡನ್ನಿಗೆ ತೆರಳಿದ. ಲಾರ್ಡ್ ಲ್ಯಾನ್ಸ್‌ಡೌನನ ಕಾಲದಲ್ಲಿ ಕಾಶ್ಮೀರಕ್ಕೆ ಸಂಬಂಧಿಸಿದ ವಿದೇಶ ವ್ಯವಹಾರ ರಹಸ್ಯವನ್ನು ಪ್ರಕಟಿಸಿದ್ದರಿಂದ ಅಧಿಕೃತಪತ್ರ ಮತ್ತು ಸಾಮಗ್ರಿಗಳನ್ನು ಪೂರ್ವಸಮ್ಮತಿಯಿಲ್ಲದೆ ಪ್ರಕಟಿಸಬಾರದೆಂಬ ಕಾನೂನಿಗೆ ಪತ್ರಿಕೆ ಕಾರಣವಾಯಿತು. ಪತ್ರಿಕೆಗಳಿಗೆ ಸರ್ಕಾರಿ ಕಚೇರಿಗಳ ಕಾಗದಗಳನ್ನು ನೋಡುವ ಸೌಲಭ್ಯ ಇದರಿಂದ ತಪ್ಪಿಹೋಯಿತು. ಮುಂದೆ 1891ರ ಫೆಬ್ರವರಿ 19ರಿಂದ ಇದು

ದಿನಪತ್ರಿಕೆಯಾಯಿತು. ಲಾರ್ಡ್ ಕರ್ಜನ್ ಗವರ್ನರ್ ಆಗಿದ್ದ ಕಾಲದಲ್ಲಿ ಸಂಪಾದಕ ಮೋತೀಲಾಲರಿಗೆ ಸೀಮಾಂತರ ಶಿಕ್ಷೆಯಾದರೂ ಅವರಿಗೂ ಉನ್ನತಾಧಿಕಾರಿಗಳಿಗೂ ಇದ್ದ ಸ್ನೇಹದಿಂದ ಶಿಕ್ಷೆ ಜಾರಿಯಾಗಲಿಲ್ಲ. ಬ್ರಿಟಿಷ್ ಯುವರಾಜರು ಭಾರತಕ್ಕೆ ಬಂದಾಗ ಅವರಿಗೆ ಸಂಪಾದಕರಿತ್ತ ಈ ಪತ್ರಿಕೆಯ ಪ್ರತಿಯಿಂದ ಅವರು ನಿಜವಾದ ಭಾರತವನ್ನು ಓದಿ ತಿಳಿದುದಾಗಿ ಹೇಳಿದರು. ಮುಂದೆ 1913ರಲ್ಲಿ ಜಗತ್ ಶ್ರೀ ಆಶ್ರಮದ ವ್ಯವಹಾರದ ಬಗ್ಗೆ ಬರೆದಾಗ, 1910ರ ಪತ್ರಿಕಾ ಕಾನೂನಿನ ಮೇರೆಗೆ ಇಟ್ಟಿದ್ದ ರೂ. 5,000 ಠೇವಣಿ ಜಪ್ತಾಗದಂತೆ ನೋಡಿಕೊಂಡಿತು. ರಾಷ್ಟ್ರೀಯ ಸ್ವಾತಂತ್ರ್ಯದ ಪರವಾಗಿದ್ದಂತೆಯೇ ಪತ್ರಿಕೆ ಹಿಂದೂ ಸಂಪ್ರದಾಯವಾದಿಯೂ ಆಗಿದ್ದಿತು. ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಿಂದ ವಿದ್ಯಾರ್ಥಿಯಾಗಿದ್ದ ಸುಭಾಸ್ ಚಂದ್ರಬೋಸ್ ಮತ್ತು ಅವರ ಸಹಪಾಠಿಯನ್ನು 1916ರಲ್ಲಿ ಹೊರಗೆ ಹಾಕಿದಾಗ ಅದನ್ನು ಬಲವಾಗಿ ವಿರೋಧಿಸಿದ ಪತ್ರಿಕೆ 1931ರ ಬ್ರಿಟಿಷ್ ಪತ್ರಿಕಾ ತುರ್ತು ಕಾನೂನಿನಂತೆ 1932ರಲ್ಲಿ 6,000 ರೂಪಾಯಿ ದಂಡವನ್ನು ತೆರಬೇಕಾಯಿತು. ಬಾರಿಸಾಲ್ ಪಿತೂರಿ ಮೊಕದ್ದಮೆಯಲ್ಲೂ ಪತ್ರಿಕೆ ಭಾಗಿಯಾಗಿತ್ತು. ಹೀಗೆ ಪತ್ರಿಕಾ ವ್ಯವಸಾಯದ ಹಿನ್ನೆಲೆಯಲ್ಲಿ ನೋಡುವುದಾದರೆ ಈ ಪತ್ರಿಕೆ ಇಟ್ಟ ದಿಟ್ಟ ಹೆಜ್ಜೆಗಳು ಗಮನಾರ್ಹವಾಗಿವೆ.

ರಾಷ್ಟ್ರೀಯ ಸ್ವತಂತ್ರನೀತಿಯ ಈ ಪತ್ರಿಕೆಯನ್ನು ತುಷಾರಕಾಂತಿ ಘೋಷರ ಸಂಪಾದಕತ್ವದಲ್ಲಿ ಅಮೃತಬಜಾ಼ರ್ ಪತ್ರಿಕಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಕಲ್ಕತ್ತದಿಂದ ಪ್ರಕಟಿಸುತ್ತಿದೆ. ಇದರ ಸಹಚರಿ ಪತ್ರಿಕೆಗಳು; ನಾರ್ದರ್ನ್ ಇಂಡಿಯ ದೈನಿಕ, ಜುಗಾಂತರ ಸಾಪ್ತಾಹಿಕ ಅಮೃತ ವಾರಪತ್ರಿಕೆ. ಅಲ್ಲದೆ ಪತ್ರಿಕೆಯ ಅರೆವಾರದ ಮತ್ತು ವಾರದ ಪುರವಣಿಗೆಗಳೂ ಇವೆ. ಈ ಪತ್ರಿಕೆಯ ಪ್ರಕಟಣೆ 1986ರಲ್ಲಿ ನಿಂತುಹೋಯಿತು. (ಕೆ.ಎಸ್.)

**ಅಮೃತ ಬಳ್ಳಿ :** ದ್ವಿದಳ ಸಸ್ಯಗಳಲ್ಲಿ ಬಿಡಿ ಪುಷ್ಪದಳವರ್ಗಕ್ಕೆ (ಪಾಲಿಪೆಟಲೀ) ಸೇರಿದ್ದು ಥಲಾಮಿಫ್ಲೋರೀ ಉಪವರ್ಗದ ಮೆನಿಸ್ಪರ್ಮೇಸೀ ಕುಟುಂಬದ ಒಂದು ಪ್ರಭೇದ. ಸಾಮಾನ್ಯವಾಗಿ ಎಲ್ಲೆಲ್ಲೂ ಬೆಳೆಯುತ್ತದೆ. ತೋಗಟೆಯ ಮೇಲೆ ಉದ್ದನೆಯ ಹಳ್ಳತಿಟ್ಟುಗಳಂಥ ಗೆರೆಗಳಿವೆ. ಕಾಂಡದ ಕೆಳಭಾಗದಿಂದ ಹುಟ್ಟಿ ದಾರದಂತೆ ನೆಲದ ಕಡೆಗೆ ಇಳಿಬಿದ್ದು ಬೆಳೆಯುವ ಬೇರುಗಳಿವೆ. ಇವು ಹಸುರಾಗಿದ್ದು ಎಲೆಗಳಂತೆ ಆಹಾರ ತಯಾರಿಸಬಲ್ಲವು.

ಎಲೆಗಳು ತೆಳುವಾಗಿ ಹೃದಯದ ಆಕಾರದವಾಗಿವೆ. ಒಂದೊಂದರಲ್ಲೂ ಸು. 7 ನಾಳಗಳು ಬಲೆಯಂತೆ ಹರಡಿಕೊಂಡಿರುತ್ತವೆ. ತೊಟ್ಟು ನೀಳ. ಎಲೆಯ ಕಕ್ಷದಲ್ಲಿ ಅಥವಾ ಗಿಡದ ತುದಿಯಲ್ಲಿ ಇಲ್ಲವೇ ಹಳೆಯ ದಪ್ಪ ಕಾಂಡದ ಮೇಲೆ ಪುಷ್ಪಮಂಜರಿ ಬೆಳೆಯಬಹುದು.

ಹೂಗಳು ಏಕಲಿಂಗಿಗಳು. ಇವು ಏಪ್ರಿಲ್, ಮೇ ತಿಂಗಳುಗಳಲ್ಲಿ ಕಾಣಿಸಿಕೊಳ್ಳುವುವು. ಬಣ್ಣ ಹಳದಿ. ಗಂಡುಹೂಗಳು ಗೊಂಚಲಾಗಿದ್ದು ಹೆಣ್ಣುಹೂಗಳು ಬಿಡಿಬಿಡಿಯಾಗಿರುತ್ತವೆ. ಎಲೆಯುದುರಿದ ಮೇಲೆ ಹೂ ಬಿಡುತ್ತದೆ. ಪುಷ್ಪಪತ್ರ ಮೊನಚು. ತೀರ ಕೆಳಗಿನ ಪುಷ್ಪ ಪತ್ರಗಳು ಸ್ವಲ್ಪಮಟ್ಟಿಗೆ ಎಲೆಯಾಕಾರ ತಾಳಿರಬಹುದು.

ಗಂಡುಹೂಗಳ ಪುಷ್ಪಪತ್ರಗಳಲ್ಲಿ ಆರು ದಳಗಳಿರುತ್ತವೆ. ಹೊರಗಿನ ಮೂರು ದಳಗಳು ಚಿಕ್ಕಗಾತ್ರದವು ಅಂಡಾಕಾರವಾಗೂ ಇರುತ್ತವೆ. ತುದಿ ಮೊನಚು. ಒಳಗಿನ ಮೂರು ದಳಗಳು ಸ್ವಲ್ಪ ಉದ್ದವೂ ಅರ್ಧವೃತ್ತಾಕಾರದವೂ ಆಗಿರುತ್ತವೆ. ಮಕುಟ ದಳಗಳು ಆರು. ದಳದ ಕೆಳಭಾಗ ಉಳಿಯಂತೆ ಚಪ್ಪಟೆಯಾಗಿದ್ದು, ಉಳಿದರ್ಧಭಾಗ ಬಲಕ್ಕೆ ಹೊರಳಿ, ಮೂರು ಭಾಗವಾಗಿ ತುದಿಯಲ್ಲಿ ಕೆಳಮುಖವಾಗಿ ಬಾಗಿರುತ್ತದೆ. ಆರು ಕೇಸರಗಳಿದ್ದು ಅವೆಲ್ಲ ಬಿಡಿ ಬಿಡಿಯಾಗಿರುತ್ತವೆ.

ಹೆಣ್ಣು ಹೂಗಳಲ್ಲಿ ದಳಗಳು ಆಯತಾಕಾರವಾಗಿ ಉಳಿಯಂತೆ ಚಪ್ಪಟೆಯಾಗಿರುತ್ತವೆ. ಅಂಚು ಸಮನಾಗಿರುತ್ತದೆ. ಅಂಡಾಶಯದಲ್ಲಿ ಮೂರು ಭಾಗಗಳಿದ್ದು ಶಲಾಕಾಗ್ರ ಕವಲೊಡೆದಿರುತ್ತದೆ. ಹಣ್ಣು ಅಷ್ಟಿ ಫಲವಾಗಿದ್ದು (ಡ್ರೂಪ್) ಒಂದರಿಂದ ಮೂರು ವಿಭಾಗಗಳನ್ನೊಳಗೊಂಡಿರುತ್ತದೆ. ಬೀಜಗಳು ತೆಳುವಾಗಿದ್ದು, ಒಂದು ಮೈ ತಗ್ಗಾಗಿಯೂ ಇನ್ನೊಂದು ಉಬ್ಬಾಗಿಯೂ ಇರುತ್ತವೆ.

ಅಮೃತಬಳ್ಳಿಗೆ ಔಷಧಿಯ ಮಹತ್ತ್ವವುಂಟು. ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳಿಗೆ ಇದು ಒಳ್ಳೆಯ ಮದ್ದು ಎನಿಸಿದೆ. (ಎಂ.ಎಸ್.ಎಸ್.ಆರ್.)

**ಅಮೃತ ಮಂಗಲಂ :** ಮದರಾಸು ರಾಜ್ಯದ ಚೆಂಗಲ್‌ಪೇಟೆ ಜಿಲ್ಲೆಯಲ್ಲಿರುವ ಒಂದು ಗ್ರಾಮ. ಇಲ್ಲಿ ಕಬ್ಬಿಣಯುಗಕ್ಕೆ ಸಂಬಂಧಿಸಿದ ಸಮಾಧಿಗಳಿವೆ. ಮೊದಲು ಮೃತನ ದೇಹವನ್ನು ಕೆಲವು ದಿನಗಳು ಎಲ್ಲೋ ಬಿಟ್ಟಿದ್ದು, ಚರ್ಮ ಮಾಂಸಾದಿ ಭಾಗಗಳು ನಶಿಸಿದಮೇಲೆ, ಮುಖ್ಯ ಅಸ್ಥಿಗಳನ್ನು ಸಂಗ್ರಹಿಸಿ, ಚೂಪು ತಳದ ಗುಡಾಣಗಳಲ್ಲಿಟ್ಟು, ಹಳ್ಳದಲ್ಲಿ ಹೂಳಿ, ಮೇಲೆ ಬೆಣಚುಕಲ್ಲು ಮತ್ತು ಮಣ್ಣಿನ ಗುಡ್ಡೆಗಳನ್ನು ನಿರ್ಮಿಸುತ್ತಿದ್ದ, ಪ್ರಸಕ್ತಪೂರ್ವದ ದಕ್ಷಿಣಭಾರತದ ಶವಸಂಸ್ಕಾರ ಪದ್ಧತಿಯ ಬಗ್ಗೆ ಈ ಸಮಾಧಿಗಳು ಮಾಹಿತಿಯನ್ನು ಒದಗಿಸುತ್ತವೆ. (ಎಸ್.ಎನ್.)

**ಅಮೃತಶಿಲೆ :** ರೂಪಾಂತರ ಶಿಲೆಗಳು ಪೈಕಿ ಒಂದು (ಮಾರ್ಬಲ್). ಕ್ಯಾಲ್ಸಿಯಂ ಕಾರ್ಬೊನೇಟ್ ಅಥವಾ ಮ್ಯಾಗ್ನೀಸಿಯಂ ಕಾರ್ಬೊನೇಟ್ ಇದರ ಮೂಲವಸ್ತು. ಹೆಚ್ಚು ಗಡುಸಲ್ಲದ ಈ ಶಿಲೆಯನ್ನು ಭೂಮಿಯಿಂದ ಹಲಗೆಗಳಾಗೂ ದಿಮ್ಮಿಗಳಾಗೂ ಸೀಳಿ ತೆಗೆಯಬಹುದು. ಗರಗಸದಿಂದ ಕೊಯ್ದು ಬೇಕಾದ ಅಳತೆಗಳನ್ನು ಪಡೆಯಬಹುದು. ಸಾಣೆ ಹಿಡಿದು ತುಂಬ ನಯವಾಗಿ ಹೊಳೆಯುವಂತೆ ಮಾಡಬಹುದು. ಅಲಂಕಾರದ ಕೆತ್ತನೆ ಕೆಲಸಕ್ಕೆ ಇದು ತುಂಬ ಉಪಯುಕ್ತವಾದುದು.

ಶುದ್ಧ ಸುಣ್ಣಕಲ್ಲು ರೂಪಾಂತರಗೊಂಡು ಬಿಳಿಯ ಅಮೃತಶಿಲೆಯಾಗಿ ಮಾರ್ಪಡುತ್ತದೆ. ಅಶುದ್ಧ ಸುಣ್ಣಕಲ್ಲು ಮತ್ತು ಡಾಲೊಮೈಟುಗಳಿಂದ ಬಗೆಬಗೆಯ ಬಣ್ಣದ ಅಮೃತಶಿಲೆಗಳಾಗುತ್ತವೆ. ಬಣ್ಣದ ಹರವು ಮತ್ತು ಸ್ವಭಾವ ಮೂಲ ಕಶ್ಮಲಗಳನ್ನು ಅನುಸರಿಸಿವೆ. ಬೂದು, ನೀಲಿಬೂದು, ಹಳದಿ, ಕಂದು ಬಣ್ಣ, ಕೆಂಪುಹಸಿರು, ಹಸುರುಕಪ್ಪು ಈ ರೀತಿ ಬಣ್ಣಗಳು ಬಗೆಬಗೆಯಾಗಿವೆ. ಗಣನೀಯವಾದ ಅಮೃತಶಿಲಾಭೇದಗಳಾವುವೆಂದರೆ ವಿಗ್ರಹಗಳನ್ನು ಕಡೆಯಲು ಯೋಗ್ಯವಾದ ಅಮೃತಶಿಲೆ ಮತ್ತು ಸೂಕ್ಷ್ಮವಾದ ಹೆಣಿಗೆಯುಳ್ಳ ಶುದ್ಧಬಿಳಿಯ ಶಿಲೆ. ಕಟ್ಟಡಗಳಿಗೆ ಯೋಗ್ಯವಾದ ಬಣ್ಣ ಮತ್ತು ಬಲವನ್ನುಳ್ಳ ಅಮೃತಶಿಲೆಗಳು ಶಿಲ್ಪಾರ್ಹಶಿಲೆಗಳೆನಿಸಿಕೊಂಡಿವೆ. ಸರ್ಪೆಂಟೀನ್ ಯುಕ್ತ ಅಮೃತಶಿಲೆಗಳು ಹಳದಿ ಮತ್ತು ಕಪ್ಪು ಕಲೆಗಳಿಂದ ಕೂಡಿವೆ; ರೂಯಿನ್ ಎಂಬುದು ಅಸಮವಾಗಿರುವ ಮೂಲೆ ಮೂಲೆಯ ರೇಖಾವಿನ್ಯಾಸದಿಂದ ಕೂಡಿದೆ.

ಭಾರತದಲ್ಲಿ ಅಮೃತಶಿಲೆಯ ನಿಕ್ಷೇಪಗಳು ರಾಜಸ್ತಾನ ಮತ್ತು ಮಧ್ಯಪ್ರದೇಶಗಳಲ್ಲಿವೆ. ಹಿಂದಿನ ಕಾಲದ ಅನೇಕ ಅರಮನೆಗಳು, ದೇವಾಲಯಗಳು, ವಿಗ್ರಹಗಳು ಮತ್ತು ಸಮಾಧಿಭವನಗಳು ಪೂರ್ಣವಾಗೋ ಸ್ವಲ್ಪವೋ ಅಮೃತಶಿಲೆಯಿಂದ ಕಟ್ಟಲ್ಪಟ್ಟಿವೆ. ತಾಜಮಹಲ್ ಇಂಥ ಶಿಲ್ಪಕ್ಕೆ ಪ್ರಸಿದ್ಧ ನಿದರ್ಶನ. ಯುರೋಪು ಮತ್ತು ಅಮೆರಿಕಗಳಲ್ಲೂ ಉತ್ತಮ ನಿದರ್ಶನಗಳಿವೆ. ಈ ಶಿಲ್ಪಕಲೆ ಈಗಲೂ ಪ್ರಸಿದ್ಧವಾಗಿದೆ.

(ಎಸ್.ಬಿ.ಎಲ್.; ಕೆ.ಎಸ್.ಕೆ.)

**ಅಮೃತ ಶೇರ್‌ಗಿಲ್ :** ಪ್ರಸಿದ್ಧ ಭಾರತೀಯ ಚಿತ್ರಕಲಾವಿದೆ (1913–1941). ತಂದೆ ಸಿಖ್ ಪಂಗಡದವ. ತಾಯಿ ಹಂಗರಿಯವಳು. ಬಾಲ್ಯ ಯುರೋಪಿನಲ್ಲಿ ಕಳೆಯಿತು; 1921ರ ವರೆಗೆ ತಾಯ್ನಾಡಿಗೆ ಬರಲಾಗಲಿಲ್ಲ. ಜೀವನದ ಮೇಲೆ ತಂದೆಯ ಪ್ರಭಾವ ಬಹಳ. ಆದರೂ ತಾನು ಭಾರತೀಯಳೆಂಬ ಪ್ರಜ್ಞೆ ಅವಳಿಂದ ದೂರವಾಗಲಿಲ್ಲ. ಅವಳ ಚಿತ್ರಕಲಾ ಪ್ರತಿಭೆಗೆ ಮನೆಯಲ್ಲಿ ತಾಯಿಯ ಪ್ರೋತ್ಸಾಹ ಸಿಕ್ಕಿತು. ಅನಂತರ 1924ರಲ್ಲಿ

ಫ್ಲಾರೆನ್ಸಿನಲ್ಲಿ ಇಟಲಿಯ ಕಲಾವಿದೆಯಿಂದ ಚಿತ್ರಕಲಾಭ್ಯಾಸವಾಯಿತು. ಆಮೇಲೆ 5 ವರ್ಷ ಪ್ಯಾರಿಸ್ಸಿನಲ್ಲಿ ತರಬೇತಿ ಮುಂದುವರಿಯಿತು. 1929ರಲ್ಲಿ ಅಲ್ಲಿಯೇ ತೈಲಚಿತ್ರ ಬರೆವ ಶಿಕ್ಷಣ ದೊರೆಯಿತು. 1929–31ರ ವರೆಗೆ ಭಾವಚಿತ್ರ ಮತ್ತು ನಿರ್ಜೀವ ವಸ್ತು ಚಿತ್ರಣಕ್ಕಾಗಿ ಅನೇಕ ಪ್ರಥಮ ಬಹುಮಾನಗಳನ್ನು ಗಳಿಸಿದಳು.

ಯುರೋಪಿನ ಸೆಜಾ಼ನ್ ಮತ್ತು ಗೋಗಾಂರ ಚಿತ್ರಕಲಾ ಪ್ರೌಢಿಮೆಯ ಪ್ರಭಾವ ಈಕೆಯ ಕಲಾಭಾವನೆಯನ್ನು ವೃದ್ಧಿಗೊಳಿಸಿತು. ಪರಿಣಾಮವಾಗಿ ಚಿತ್ರಕಲೆಯಲ್ಲಿ ತನ್ನದೇ ಆದ ವೈಶಿಷ್ಟ್ಯ ತೋರಿದಳು. 1934ರಲ್ಲಿ ತಾಯ್ನಾಡಿನ ಹಂಬಲದಿಂದ ಭಾರತಕ್ಕೆ ಬಂದು ಪಂಜಾಬ್ ದೇಶವನ್ನು ಸುತ್ತಿದಳು. ಮೊದಲಬಾರಿಯೆಂಬಂತೆ ಆಕೆ ಹಿಂದೂದೇಶದ ಹಳ್ಳಿಗಳನ್ನು ಕಂಡಳು. ಅನಂತವಾಗಿ ಹರಡಿದ ಭೂವಿಸ್ತಾರ, ಅದರ ಮೇಲೆ ಸಂಚರಿಸುವ ಕಂದುಮೈಗಳ ದೀನ ಮುಖಗಳ ಸ್ತ್ರೀ ಪುರುಷರು, ದಿಗಂತಕ್ಕೆ ಎದುರಾಗಿ ಕಪ್ಪು ಆಕೃತಿಗಳನ್ನು ಪಡೆವುದನ್ನು ಕಂಡಳು. ಭಾರತೀಯರನ್ನು, ಅದರಲ್ಲೂ ಬಡ ಭಾರತೀಯರನ್ನು ಚಿತ್ರಿಸುವ ಹಂಬಲವಾಯಿತು. ಅವರ ಮೌನ ಆಕೃತಿಗಳು, ಅವರ ಅಸಾಮಾನ್ಯ ಪರವಶತೆ ಮತ್ತು ತಾಳ್ಮೆ, ಅವರ ಎಲುಬಿನ ಮೊನೆ ಕಾಣುವ ಕಂದುಬಣ್ಣದ ದೇಹಗಳು, ಆ ಕುರೂಪತೆಯಲ್ಲೂ ಎದ್ದು ಕಾಣುವ ಸೌಂದರ್ಯ, ಅವರ ದುಃಖಭರಿತ ಕಣ್ಣುಗಳು–ಇವೆಲ್ಲವನ್ನೂ ಚಿತ್ರಿಸುವ ಸ್ಫೂರ್ತಿ ಬಂತು. 1934–1937ರ ವರೆಗೆ ಆಕೆ ಗುಡ್ಡಪ್ರದೇಶದ ಪುರುಷರು, ಗುಡ್ಡ ಪ್ರದೇಶದ ಸ್ತ್ರೀಯರು, ಬಾಲಿಕಾ ಪತ್ನಿ, ಮೂರು ಹುಡುಗಿಯರು, ಮದುಮಗಳ ಶೃಂಗಾರ, ಬ್ರಹ್ಮಚಾರಿಗಳು ಮತ್ತು ದಕ್ಷಿಣ ಹಿಂದೂದೇಶದ ಹಳ್ಳಿಜನರು ಸಂತೆಗೆ ಹೋಗುವುದು ಮುಂತಾದ ಚಿತ್ರಗಳನ್ನು ಪ್ರಾದೇಶಿಕ ವಿವರ ಮತ್ತು ವಾತಾವರ ಣಗಳೊಂದಿಗೆ ಚಿತ್ರಿಸಿದಳು. ಆ ಸಮಯದಲ್ಲಿ ಇಂಥ ದೃಶ್ಯಗಳನ್ನು ಆಧುನಿಕ ಚಿತ್ರಕಲೆಯಲ್ಲಿ ಕಾಣುವುದು ಹೊಸತಾಗಿತ್ತು. 1936ರಲ್ಲಿ ಅಜಂತ ಗುಹೆಗಳಲ್ಲಿ ಸಂಚರಿಸಿ

ಆ ಚಿತ್ರಪದ್ಧತಿಯನ್ನು ಕಂಡು ಭಾರತೀಯರ ಅಂತರ್ಯ ವನ್ನು ಇನ್ನೂ ಆಳವಾಗಿ ತಿಳಿದಳು. 1938–1941ರಲ್ಲಿ ಅವಳು ಚಿತ್ರಿಸಿದ ಕಲೆಯಲ್ಲಿ ಆಕೆಯ ಮನೋಭಾವದ ಬದಲಾವಣೆ ಕಂಡುಬರುತ್ತದೆ. ಆಕೆಯ ಚಿತ್ರಕಲೆಯನ್ನು ಭಾರತದೇಶದ ನವ್ಯ ಪಂಥದವರು ಒಪ್ಪಲಿಲ್ಲ. ಈ ಮನೋವೃತ್ತಿಯ ಫಲವಾಗಿ ಚಿತ್ರಕಲೆಯಲ್ಲಿ ಆಕೆಗಿದ್ದ ಆಸಕ್ತಿ ಕ್ಷೀಣಿಸಿತು. ಅಷ್ಟರಲ್ಲಿ ತನ್ನ 28ನೆಯ ವಯಸ್ಸಿನಲ್ಲಿ ಆಕೆ ನ್ಯೂಮೋನಿಯದಿಂದ ನಿಧನಳಾದಳು. (ಯು.ಎಸ್.ಕೆ.)

**ಅಮೃತಸರ :** 5,024 ಚ.ಕಿಮೀ ವಿಸ್ತಾರವಾಗಿದ್ದು ಸಮತಟ್ಟಾದ ಮೈದಾನವಾಗಿದೆ. ಸ್ವಲ್ಪವೇ ಈಶಾನ್ಯದಿಂದ ನೈಋತ್ಯಕ್ಕೆ ಇಳಿಜಾರಿನಿಂದಕೂಡಿದೆ. ಇಲ್ಲಿ ಸಿಂಧೂನದಿಯ ಉಪನದಿಗಳಾದ ರಾವಿ ಮತ್ತು ಬಿಯಾಸ್ ನದಿಗಳು ಅನುಕ್ರಮವಾಗಿ ಪಶ್ಚಿಮ ಮತ್ತು ಪೂರ್ವಗಡಿ ಭಾಗಗಳಲ್ಲಿ ಹರಿಯುತ್ತವೆ. ಒಟ್ಟು ಜನಸಂಖ್ಯೆ 30,96,077. ಜನಸಾಂದ್ರತೆ ಚ.ಕಿಮೀಗೆ 603 ಜನರು ಸಾಕ್ಷರತೆ ಶೇ. 68. ಇತರ ಪ್ರಮುಖ ನಗರಗಳೆಂದರೆ ತರನ್‌ತರನ್,

ಸ್ವರ್ಣ ಮಂದಿರ

ಪಟ್ಟಿ, ಜಂದಿಯಾಲ, ಛೆಹಾರ್ತ, ಮಜಿತ, ಖೆಂಖರನ್, ಸೂರ್‌ಸಿಂಗ್ ಮತ್ತು ಸುಲ್ತಾನ್‌ವಿಂಡ್ ಕೃಷಿ ಜಿಲ್ಲೆಯ ಪ್ರಮುಖವೃತ್ತಿ. ನೀರಾವರಿ ಸೌಲಭ್ಯ ಉತ್ತಮವಾಗಿದೆ. ಗೋದಿ, ದ್ವಿದಳಧಾನ್ಯ, ಮೆಕ್ಕೆಜೋಳ, ಹತ್ತಿ, ಕಬ್ಬು ಮತ್ತು ಎಣ್ಣೆಕಾಳು ಬೆಳೆಗಳು ಮುಖ್ಯವಾದವು. ಹತ್ತಿ ಗಿರಣಿ ಮತ್ತು ಸಕ್ಕರೆ ಕಾರ್ಖಾನೆಗಳಿವೆ. ರಸ್ತೆ ಮತ್ತು ರೈಲು ಸಾರಿಗೆ ಸೌಲಭ್ಯವಿದೆ.

**ಅಮೃತಸರ ಜಿಲ್ಲೆ :** ಭಾರತದ ಉತ್ತರದಲ್ಲಿರುವ ಪಂಜಾಬ್ ರಾಜ್ಯದ ಒಂದು ಜಿಲ್ಲೆ ಹಾಗೂ ಜಿಲ್ಲಾಡಳಿತ ಕೇಂದ್ರನಗರ ಪೂರ್ವ ಪಂಜಾಬು ಪ್ರಾಂತ್ಯದಲ್ಲಿನ ಒಂದು ಮುಖ್ಯ ಪಟ್ಟಣ. ಸಿಖ್ಖರ ಯಾತ್ರಾಸ್ಥಳ ಮತ್ತು ಧರ್ಮ ಕೇಂದ್ರ. ನಾಲ್ಕನೆಯ ಗುರು ರಾಮದಾಸನಿಂದ ಸ್ಥಾಪನೆಯಾಯಿತು (1577). ಪ್ರಸಿದ್ಧ ವ್ಯಾಪಾರ ಕೇಂದ್ರ. ಜನಸಂಖ್ಯೆ ಸು. 1011327 (2001). ಇಲ್ಲಿ ವಿಶ್ವವಿಖ್ಯಾತ ಸ್ವರ್ಣಮಂದಿರವಿದೆ. ಸಿಖ್ಖರ ವಿಶ್ವವಿದ್ಯಾನಿಲಯ ಇಲ್ಲಿ ಸ್ಥಾಪನೆಯಾಗಿದೆ. ಇಲ್ಲಿ ತಯಾರಾಗುವ ಕಾಶ್ಮೀರಿ ಶಾಲುಗಳು ಮತ್ತು ಜಮಖಾನಗಳು ಪ್ರಖ್ಯಾತಿ ಪಡೆದಿವೆ. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ನಡೆದುದು (1919) ಈ ನಗರದಲ್ಲಿಯೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಚಿನ್ನದ ದೇವಾಲಯವಿರುವ 'ಅಮೃತಸರ'ವೆಂಬ ಪವಿತ್ರ ಕೊಳದ ನಿರ್ಮಾಣವು 4ನೆಯ ರಾಮದಾಸರ ಕಾಲದಲ್ಲಿ ಪ್ರಾರಂಭವಾಯಿತು. ಈ ಕೊಳದ ಹೆಸರಿನಿಂದಲೇ ಈ ನಗರ ಮತ್ತು ಜಿಲ್ಲೆಗೆ ಹೆಸರು ಬಂದಿತು. (ಎಂ.ಎಸ್.)

**ಅಮೃತಸರದ ಕೌಲು :** 1809ರ ಏಪ್ರಿಲ್ 25ರಂದು ರಣಜಿತ್ ಸಿಂಗನಿಗೂ ಬ್ರಿಟಿಷರಿಗೂ ಆದ ಈ ಕೌಲು ಬ್ರಿಟಿಷರ ವ್ಯಾಪ್ತಿಯನ್ನು ಹೆಚ್ಚಿಸಿತಾಗಿ ಭಾರತದ ಚರಿತ್ರೆಯಲ್ಲಿ ಮುಖ್ಯವಾಗಿದೆ.

ರಣಜಿತ್ ಸಿಂಗ್ ತನ್ನ ಸ್ಥಾನವನ್ನು ಬಲಪಡಿಸಿಕೊಂಡ ಮೇಲೆ ಸಟ್ಲೆಜ್ ನದಿಯ ಸುತ್ತಮುತ್ತಲ ಸಣ್ಣಪುಟ್ಟ ಸಿಖ್ ರಾಜ್ಯಗಳೆಲ್ಲವನ್ನೂ ತನ್ನ ಅಧೀನಕ್ಕೆ ಒಳಪಡಿಸಿಕೊಂಡು, ಸಿಖ್ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ಆಸೆಯಿಂದ 1806–07ರಲ್ಲಿ ಮುನ್ನುಗ್ಗಿದ. ಇದನ್ನು ಗಮನಿಸಿದ ಬ್ರಿಟಿಷರು ಬಲವಂತನಾದ ಅವನು ಫ್ರೆಂಚರ ಮೇಲೆ ಯುದ್ಧಮಾಡಲು ತಮಗೆ ಸಹಾಯಕನಾಗುತ್ತಾನೆಂದು ಭಾವಿಸಿ ಅವನೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಯೋಚಿಸಿದರು. ಅಷ್ಟರಲ್ಲಿ ನೆಪೋಲಿಯನ್ ಭಾರತದ ಮೇಲೆ ದಂಡೆತ್ತಿಬರುವ ಸಂಭವ ಕಡಿಮೆಯಾಗಲು ಬ್ರಿಟಿಷರು ರಣಜಿತ್ ಸಿಂಗನೊಡನೆ ಒಪ್ಪಂದ ಮಾಡಿಕೊಳ್ಳುವ ಬದಲು ಅವನ ಮೇಲೆ ಒಂದು ಸೈನ್ಯವನ್ನು ಕಳುಹಿಸಿದರು. ಸಟ್ಲೆಜ್ ನದಿಯ ಪೂರ್ವಕ್ಕಿರುವ ಸಣ್ಣಪುಟ್ಟ ಸಿಖ್ ರಾಜ್ಯಗಳು ಈ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯಕರಾಗಿ ತನ್ನ ಮೇಲೆ ಯುದ್ಧಮಾಡಬಹುದೆಂಬ ಶಂಕೆಯಿಂದ, ರಣಜಿತ್ ಸಿಂಗ್ ಬ್ರಿಟಿಷರೊಡನೆ ಯುದ್ಧಕ್ಕೆ ಬದಲು ಕೌಲು ಮಾಡಿಕೊಂಡ. ಇದರ ಪ್ರಕಾರ ರಣಜಿತ್‌ಸಿಂಗ್ ಸಟ್ಲೆಜ್ ನದಿಯ ಬಲಭಾಗದ ಪ್ರದೇಶಗಳಲ್ಲಿ ಮಾತ್ರ ರಾಜ್ಯವಾಳಬೇಕೆಂದೂ ಮಿಕ್ಕ ಇತರ ಸಿಖ್ ರಾಜ್ಯಗಳು ಬ್ರಿಟಿಷರ ಆಧಿಪತ್ಯಕ್ಕೆ ಒಳಪಡಬೇಕೆಂದೂ ತೀರ್ಮಾನವಾಯಿತು. ಇದರಿಂದ ಬ್ರಿಟಿಷರ ರಾಜ್ಯ ಸಟ್ಲೆಜ್ ನದಿಯವರೆಗೂ ವಿಸ್ತರಿಸಿತು ಮತ್ತು ಲೂಧಿಯಾನ ನಗರದಲ್ಲಿ ಬ್ರಿಟಿಷರ ಸೈನ್ಯ ತಂಗುವ ಏರ್ಪಾಡೂ ಆಯಿತು. (ಎಂ.ಎಸ್.ಐ.)

**ಅಮೃತಾಪುರ:** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಸು.10ಕಿಮೀ ದೂರದಲ್ಲಿರುವ ಒಂದು ಹಳ್ಳಿ.

ಇಮ್ಮಡಿ ವೀರಬಲ್ಲಾಳನ ದಂಡನಾಯಕ ಅಮಿತಯ್ಯನ (ಅಮೃತಯ್ಯ) ಹೆಸರಿನ ಮೇಲೆ ಊರಿಗೆ ಈ ಹೆಸರು ಬಂತೆಂದು 1210ರ ಒಂದು ಶಾಸನದಿಂದ ಗೊತ್ತಾಗುತ್ತದೆ. ಅಮಿತಯ್ಯ ದಂಡನಾಯಕ ಇಲ್ಲಿನ ಅಮೃತೇಶ್ವರ ದೇವಾಲಯವನ್ನು ಕಟ್ಟಿಸಿದನೆಂದೂ ಸು.1547ರ ವರೆಗೆ ಅನೇಕ ಧರ್ಮದತ್ತಿಗಳು ಈ ದೇವಾಲಯಕ್ಕೆ ಒದಗಿಬಂದುವೆಂದು ಇತರ ಶಾಸನಗಳಿಂದ ತಿಳಿಯುತ್ತದೆ. ಇಲ್ಲಿಯ ಸುಮಾರು 20 ಶಾಸನಗಳಲ್ಲಿ 1196ರ ಒಂದು ಶಾಸನ ಕನ್ನಡದ ಪ್ರಸಿದ್ಧ ಕವಿ ಜನ್ನನಿಂದ ರಚಿತವಾದುದು. (ಎಚ್.ವಿ.ಎಸ್.)

ಅಮೃತೇಶ್ವರ ದೇವಾಲಯ ಉತ್ತಮ ಹೊಯ್ಸಳ ವಾಸ್ತು ಕೃತಿಗಳಲ್ಲೊಂದು. ಇದರಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಹಾಮಂಟಪ ಇವೆ. ನವರಂಗದಿಂದ ದಕ್ಷಿಣದ ಕಡೆಗೆ ತೆರೆದಂತಿರುವ ಮುಖಮಂಟಪವೂ ಇದೆ. ಸುತ್ತಲೂ ಎತ್ತರದ ಪ್ರಾಕಾರವಿದೆ. ಮಹಾಮಂಟಪದ ತಳವಿನ್ಯಾಸ ಚೌಕ ಶಿಲುಬೆ. ಉಳಿದ ಭಾಗಗಳೂ ಚೌಕಗಳೇ ಆದರೂ ಪರಿಘದ ಹಿನ್‌ಸರಿತ ಮತ್ತು ಮುನ್‌ಸರಿತಗಳಿಂದ ಗರ್ಭಗುಡಿಯ ಭಾಗ ಸ್ವಲ್ಪಮಟ್ಟಿಗೆ ನಕ್ಷತ್ರಾಕಾರ ಅಥವಾ ಕುಂಡಾಕಾರವಾಗಿದೆ. ಈ ಭಾಗ 1196ರ ರಚನೆಯಾದರೆ, ಮುಂದಿನ ಮಹಾಮಂಟಪವನ್ನು ಸು.1206ರಲ್ಲಿ ಕಟ್ಟಿದಂತೆ ತೋರುತ್ತದೆ. ಗರ್ಭಗೃಹದಲ್ಲಿ ಅಮೃತೇಶ್ವರ ಲಿಂಗವಿದೆ. ಗರ್ಭಗುಡಿಯ ದ್ವಾರಬಂಧ ಉತ್ತಮ ಕೆತ್ತನೆಯಿಂದ ಕೂಡಿದೆ. ಸುಕನಾಸಿಯ ದ್ವಾರವೂ ಅಷ್ಟೇ ಚೆನ್ನಾಗಿದೆ. ಇದರಲ್ಲಿ ರತಿಮನ್ಮಥರ ವಿಗ್ರಹಗಳಿರುವುದು ವಿಶೇಷ. ಈ ದ್ವಾರದ ಪಕ್ಕಗಳಲ್ಲಿ ಕುಸುರಿ ಕೆಲಸದ ಜಾಲಂಧ್ರಗಳಿವೆ. ನಾಲ್ಕು ಕಂಬಗಳಿರುವ ನವರಂಗದ ಭುವನೇಶ್ವರಿಗಳು ಸುಮಾರು 2 ಅಡಿಗಳಿಗಿಂತ ಹೆಚ್ಚು ಆಳವಾಗಿದ್ದು ಇಳಿಬಿದ್ದ ಪದ್ಮ, ಮೋಕೆ ಇತ್ಯಾದಿಗಳಿಂದ ಸೂಕ್ಷ್ಮ ಕೆತ್ತನೆಗಳೊಡನೆ ಭವ್ಯವಾಗಿ ಅಲಂಕೃತವಾಗಿವೆ. ನವರಂಗದ ಒಳಗೆ ಗಣಪತಿ, ಸಪ್ತಮಾತೃಕೆಯರು, ಸರಸ್ವತಿ, ನಾಗದಂಪತಿಗಳು ಇತ್ಯಾದಿ ವಿಗ್ರಹಗಳಿವೆ. ಮಹಾಮಂಟಪ ಹೊಯ್ಸಳ ಮಾದರಿಯ ಹೊಳಪುಳ್ಳ 36 ಕಂಬಗಳಿಂದ ಕೂಡಿದೆ. ನಾಲ್ಕು ಕಡೆಯ ಚಾಚುಗಳಲ್ಲೂ ಇನ್ನೂ ಎರಡೆರಡು ಕಂಬಗಳಿವೆ. ಇಲ್ಲಿಯ ಎಲ್ಲಾ ಭುವನೇಶ್ವರಿಗಳೂ ಸುಂದರ ನಿರೂಪಣೆಗಳು. ಹಲವುಗಳ ಮೇಲೆ ಅವನ್ನು ರೂಪಿಸಿದ ಮಲ್ಲಿತಮ್ಮ, ಪದುಮಣ್ಣ, ಬಲುಗ, ಮಲಯ ಮೊದಲಾದ ಶಿಲ್ಪಿಗಳ ಹೆಸರುಗಳಿವೆ. ಮಹಾಮಂಟಪದ ಸುತ್ತಲಿನ ತಳಗೋಡೆಯ ಹೊರಮೈ ಅನೇಕ ಪುರಾಣಕಥೆಗಳು ಮತ್ತು ಇತರ ಶಿಲ್ಪಗಳಿಂದ ಅಲಂಕೃತವಾಗಿದೆ. ಅವುಗಳ ಮೇಲೆ ಜಾಲಂಧ್ರಗಳಿವೆ. ಗರ್ಭಗೃಹ ಹಾಗೂ ನವರಂಗದ ಹೊರಮೈಯಲ್ಲಿ ಅರೆಕಂಬಗಳು ಹಾಗೂ ದ್ರಾವಿಡ ಮತ್ತು ನಾಗರ ರೀತಿಯ ಶಿಖರಾಲಂಕಾರಗಳಿವೆ. ದೇವಾಲಯದ ಸುತ್ತಲೂ ಹಬ್ಬಿರುವ ಇಳಿ ಕಪೋತಗಳ ಮೇಲೆ ಅನೇಕ ಸೂಕ್ಷ್ಮ ಕೆತ್ತನೆಗಳಿರುವ ಹಾರಪಂಕ್ತಿ ಇದೆ. ಗರ್ಭ ಗೃಹದ ಮೇಲಿನ ಶಿಖರ ಸಹ ವೈಶಿಷ್ಟ್ಯಪೂರ್ಣವಾಗಿದೆ. ಸುಮಾರು ನಕ್ಷತ್ರಾಕಾರದ ವಿನ್ಯಾಸವಿದ್ದು ಅನೇಕ ಶಿಲ್ಪಗಳಿಂದ ಅಲಂಕೃತವಾಗಿದೆ. ಮುಂಭಾಗ ಬಿಟ್ಟು ಇತರ ಮೂರೆಡೆಗಳಲ್ಲಿ ಮೇಲೆದ್ದು ನಿಂತಂತಿರುವ ಶಿಲ್ಪಗಳು ಒಂದರ ಮೇಲೊಂದರಂತೆ ಹಲವು ಸಾಲುಗಳಲ್ಲಿವೆ. ಸುಕನಾಸಿಯ ಮೇಲೆ ಶಿಖರದ ಚಾಚಣಿಕೆ ಇದ್ದು ಅದರ ಮೇಲೆ ಹೊಯ್ಸಳ ಲಾಂಛನದ ಶಿಲ್ಪವಿದೆ.

ಮಹಾಮಂಟಪದ ಉತ್ತರದ ದ್ವಾರಮಂಟಪದ ಎದುರು ಸುಮಾರು ಇದೇ ಕಾಲದ ಒಂದು ಮಂಟಪ (ಸೂಳೆಮಂಟಪ) ಇದೆ. ದೇವಾಲಯದ ಆಗ್ನೇಯಕ್ಕೆ ಇನ್ನೊಂದು ಗುಡಿ ಇದ್ದು ಅದೀಗ ಶಿಥಿಲವಾಗಿದೆ. ಗರ್ಭಗೃಹ, ನವರಂಗ ಮತ್ತು ಮುಖಮಂಟಪವಿದ್ದ ಈ ಗುಡಿ ಸರಸ್ವತಿಯದೆಂದು ಊಹೆ.

ಇವೆಲ್ಲವನ್ನೂ ಒಳಗೊಂಡಿರುವ ಸುತ್ತಲ ಪ್ರಾಕಾರ ಈಗ ಶಿಥಿಲವಾಗಿದ್ದರೂ ಒಮ್ಮೆ ಅದರ ತಲೆಯಂಚಿನಲ್ಲಿ ಸುತ್ತಲೂ ಅನೇಕ ವೃತ್ತಾಕಾರದ ಶಿಲ್ಪಾಲಂಕೃತ ಹೆನ್ನಾಲಗೆಗಳು ಸಾಲಾಗಿದ್ದು ದೇವಾಲಯದ ಭವ್ಯತೆಯನ್ನು ಹೆಚ್ಚಿಸಿದ್ದುವು. ವಿನ್ಯಾಸದಲ್ಲಿ ಹಾಗೂ ಶಿಲ್ಪಕೆತ್ತನೆಯಲ್ಲಿ ಅಮೃತೇಶ್ವರ ದೇವಾಲಯ ಹೊಯ್ಸಳ ಕಾಲದ ಒಂದು ವಿಶಿಷ್ಟ ಸಾಧನೆ. *

**ಅಮೇಜ಼ಾನ್[1] :** ಗ್ರೀಸ್ ದೇಶದ ಪುರಾಣಸಾಹಿತ್ಯದಲ್ಲಿ ಉಲ್ಲೇಖಿತರಾಗಿರುವ ಸ್ತ್ರೀಯೋಧರು. ತಮ್ಮ ರಾಜ್ಯದಲ್ಲಿ (ಏಷ್ಯ ಮೈನರ್) ಪುರುಷರನ್ನು ಇರಗೊಡುತ್ತಿರಲಿಲ್ಲ. ಸಂತಾನಕ್ಕಾಗಿ ನೆರೆದೇಶಗಳ ಪುರುಷರೊಂದಿಗೆ ಸಂಬಂಧ ಬೆಳೆಸಿ, ಹುಟ್ಟಿದ ಹೆಣ್ಣುಮಕ್ಕಳನ್ನು ಇಟ್ಟುಕೊಂಡು ಗಂಡುಮಕ್ಕಳನ್ನು ಕೊಂದುಹಾಕುತ್ತಿದ್ದರು; ಇಲ್ಲವೆ ದೇಶದ ಹೊರಕ್ಕೆ ಅಟ್ಟಿಬಿಡುತ್ತಿದ್ದರು. ಬೇಟೆಯಾಡುವುದು ಯುದ್ಧ ಮಾಡುವುದು ಪ್ರಧಾನ ಹವ್ಯಾಸಗಳು. ಇಂಥ ದೇಶಗಳಿದ್ದವೆಂಬುದನ್ನು ನಂಬುವುದೇ ಸಾಧ್ಯವಿಲ್ಲ. ಆದರೂ ಹೋಮರನ

ಕಾಲದಿಂದಲೂ ಪುರಾಣ ಸಾಹಿತ್ಯದಲ್ಲಿ ಅವರ ಪ್ರಸ್ತಾಪವಿದೆ. ಗ್ರೀಸಿನ ಆಗ್ನೇಯ ಭಾಗವಾದ ಅಟಿಕಕ್ಕೆ ಅವರು ಪ್ರಶ.ಪೂ. 1256ರಲ್ಲಿ ನುಗ್ಗಿದ್ದರೆಂದೂ ಅವರನ್ನು ಹೊಡೆದಟ್ಟಲಾಯಿತೆಂದೂ ಪೇರಾಸ್‍ನ ಶಿಲಾಲೇಖವೊಂದರಿಂದ ತಿಳಿದುಬರುತ್ತದೆ. ಗ್ರೀಸಿನ ಪ್ರಸಿದ್ಧ ವೀರ ಹರ್ಕ್ಯುಲೀಸ್ ಮಾಡಬೇಕಾಗಿದ್ದ ಹನ್ನೆರಡು ಸಾಹಸಕಾರ್ಯಗಳಲ್ಲಿ, ಅಮೆಜ಼ಾನ್ ರಾಣಿಯ ಕಟಿಬಂಧವನ್ನು ತರುವುದೊಂದು. ಥೀಸಿಯಸ್ ಎಂಬ ವೀರ ಅವಳನ್ನೊ ಅವಳ ತಂಗಿಯನ್ನೊ ಮದುವೆಯಾದನೆಂದು ಕಥೆ. ಗ್ರೀಕರಿಗೂ ಟ್ರಾಯ್ ದೇಶದವರಿಗೂ ನಡೆದ ಯುದ್ಧದಲ್ಲಿ ಟ್ರೋಜನರ ಸೈನ್ಯದಲ್ಲಿ ಒಂದು ದೊಡ್ಡ ಅಮೆಜ಼ಾನ್ ಪಡೆಯೇ ಇತ್ತೆಂದೂ ಅದರ ದಂಡನಾಯಕಿಯಾದ ಪೇಂತಸೀಲಿಯ ಎಂಬುವಳನ್ನು ಅಕಿಲೀಸ್ ಕೊಂದನೆಂದೂ ಆಗಿನ ಬರೆಹಗಳಿಂದ ತಿಳಿದುಬರುತ್ತದೆ. ಭಾರತೀಯರಲ್ಲೂ ಇಂಥ ಸ್ತ್ರೀರಾಜ್ಯದ ಕಲ್ಪನೆಯಿತ್ತೆಂಬುದು ಪ್ರಮೀಳಾರ್ಜುನೀಯ ಕಥೆಯಿಂದ ತಿಳಿದುಬರುತ್ತದೆ. *

**ಅಮೆಜ಼ಾನ್² :** ಪ್ರಪಂಚದ 2ನೆಯ ಅತಿ ದೊಡ್ಡ ನದಿಗಳಲ್ಲೊಂದು. ಹೆಚ್ಚು ಪ್ರಮಾಣದಲ್ಲಿ ಹರಿವ ನೀರನ್ನು ತಂದು ಸಮುದ್ರಕ್ಕೆ ಸೇರುವ ಬೇರೊಂದು ನದಿ ಪ್ರಪಂಚದಲ್ಲಿಲ್ಲ. ದಕ್ಷಿಣ ಅಮೆರಿಕದಲ್ಲಿ ಪೆರುವಿನ ಆಂಡೀಸ್ ಪರ್ವತದಲ್ಲಿ ಹುಟ್ಟಿ ಬ್ರೆಜ಼ಿಲ್ ಪ್ರಾಂತ್ಯದಲ್ಲಿ ಹರಿದು ಅಟ್ಲಾಂಟಿಕ್ ಸಮುದ್ರವನ್ನು ಸೇರುತ್ತದೆ. ಉತ್ತರ ಬ್ರೆಜ಼ಿಲಿನ ಎಲ್ಲ ಭಾಗ, ಬೊಲಿವಿಯ, ಪೆರು, ಈಕ್ವಡಾರ್, ಕೊಲಂಬಿಯ ಮತ್ತು ವೆನಿಜ್ವೇಲಗಳ ಬಹುಮಟ್ಟಿನ ಪ್ರದೇಶಗಳಿಂದ ನೀರನ್ನು ಎಳೆಯುತ್ತದೆ. ಅಂದರೆ ದಕ್ಷಿಣ ಅಮೆರಿಕದ 2/3 ಭಾಗ ನೀರನ್ನು ಬಸಿಯುತ್ತದೆ.

ಅಮೆಜ಼ಾನ್ ನದಿಬಳಸು, ಬ್ರೆಜ಼ಿಲ್

ನದಿಯ ಉದ್ದ ಸು. 6,437 ಕಿಮೀ. ಜಲಾನಯನ ಭೂಮಿಯ ವಿಸ್ತಾರ ಸು. 65,31,980 ಚ.ಕಿಮೀ. ಉದ್ದಕ್ಕೂ ನೂರಾರು ಉಪನದಿಗಳು ಬಂದು ಸೇರುತ್ತವೆ. ಮಳೆಗಾಲದಲ್ಲಿ ಇದರ ಆಳ ಸುಮಾರು ಭಾಗಗಳಲ್ಲಿ ಅದು 90 ಮೀಗೂ ಮೀರುತ್ತದೆ. ಮಳೆಗಾಲದಲ್ಲಿ ಪ್ರವಾಹವಿದ್ದಾಗ ನೀರಿನ ವೇಗ ಗಂಟೆಗೆ 8 ಕಿಮೀ ಉಳಿದ ಕಾಲದಲ್ಲಿ 5 ಕಿಮೀ ಈ ಬೃಹನ್ನದಿಯಲ್ಲಿ ಹರಿಯುವ ನೀರಿನ ಪರಿಮಾಣದಿಂದ ಇದಕ್ಕೆ ಒಳನಾಡು ಕಡಲು (ಇನ್‍ಲೆಂಡ್ ಸೀ) ಎಂಬ ಹೆಸರು ಬಂದಿದೆ. ಈ ನದಿಯ ಪಾತ್ರದ ಅಗಲ ಸುಮಾರು 2.5 ರಿಂದ 10 ಕಿಮೀ. ಮುಖಭಾಗವು 150 ಕಿಮೀಗಿಂತಲೂ ಹೆಚ್ಚು ಅಗಲವಾಗಿದೆ. ಹೀಗಾಗಿ ನೌಕಾಯಾನಕ್ಕೆ ಅನುಕೂಲವಾಗಿದ್ದು, ಹಡಗುಗಳು ನದಿಯಲ್ಲಿ 3600 ಕಿಮೀವರೆಗೂ ಸಂಚರಿಸುತ್ತವೆ. ತನ್ಮೂಲಕ ಸರಕುಗಳ ರಫ್ತು ಮತ್ತು ಆಮದುಗಳಿಗೆ ನೆರವಾಗುವುದರೊಂದಿಗೆ ವ್ಯಾಪಾರೋದ್ಯಮಕ್ಕೆ ಸಹಕಾರಿಯಾಗಿದೆ.

ಇದರ ನೀರು ಇಡೀ ಪ್ರದೇಶವನ್ನಾಕ್ರಮಿಸಿರುವುದರಿಂದ ಇದರ ಸುತ್ತ ದಟ್ಟವಾದ ಉಷ್ಣವಲಯದ ಕಾಡು ಬೆಳೆದಿದೆ. ಯಥೇಚ್ಛವಾಗಿ ನೀರು, ಮೇಲೆ ಬಿಸಿಲು–ಇವುಗಳನ್ನು ಪಡೆದು ಬೆಳೆದು ನಿಂತಿರುವ ದೈತ್ಯಾಕಾರದ ಮರಗಳೂ ಅವುಗಳ ಮೇಲೆ ಬೆಳೆದು ಬಿಸಿಲಿಗಾಗಿ ಅವುಗಳ ತುದಿಗೂ ಹೋಗಿ ಎಲೆಗಳನ್ನು ಹರಡಿಕೊಂಡಿರುವ ಅಷ್ಟೇ ಬೃಹದಾಕಾರದ ಬಳ್ಳಿಗಳೂ ಅಲ್ಲಿವೆ. ದಟ್ಟವಾಗಿ ಹರಡಿರುವ ಈ ಎಲೆಗುಂಪಿನಿಂದಾಗಿ ಎಷ್ಟೋ ಕಡೆ ಸೂರ್ಯರಶ್ಮಿ ಭೂಮಿಯನ್ನು ತಲುಪಲಾರದು. ಕೆಲವು ಕಡೆಗಳಲ್ಲಂತೂ ಕಪಿ ಮುಂತಾದ ವೃಕ್ಷವಾಸಿ ಪ್ರಾಣಿಗಳು ಮರಗಳ ಮೇಲೆಯೇ ಹುಟ್ಟಿ ಅಲ್ಲೇ ಬೆಳೆದು ನೆಲವನ್ನು ಕಾಣದೆಯೇ ಸಾಯುತ್ತವೆ. ಈ ನದಿ ಸಾಗರಕ್ಕೆ ಹೊತ್ತು ತರುವ ನೆರೆಮಣ್ಣು ದಿನಕ್ಕೆ ಮೂವತ್ತು ಲಕ್ಷ ಟನ್ನುಗಳಷ್ಟು ಎಂದು ಲೆಕ್ಕ ಹಾಕಿದ್ದಾರೆ. ಮಳೆ ಕಡಿಮೆ ಬೀಳುವ ಕೆಲವು ಕಡೆಗಳಲ್ಲಿ ಹುಲ್ಲುಗಾವಲುಗಳು ಹರಡಿವೆ. ಪ್ರಪಂಚದ ಎಲ್ಲ ಬಗೆಯ ಸಸ್ಯವರ್ಗಗಳೂ ಇಲ್ಲಿವೆ ಎನ್ನಬಹುದು. ಕಣಿವೆಗಳ ಕೆಳಭಾಗದಲ್ಲಿ ಬಾಳೆಹಣ್ಣು, ಕಾಫಿ, ಕಿತ್ತಳೆ ಮತ್ತು ಎತ್ತರ ಪ್ರದೇಶದಲ್ಲಿ ಆಲೂಗೆಡ್ಡೆ, ಬಾರ್ಲಿ, ರಬ್ಬರ್, ಮರಗೆಣಸು, ಕ್ವಿನೈನ್ ಮರಗಳಿವೆ. ಇಲ್ಲಿ ಅನೇಕ ಬಗೆಯ ಮರ ಹತ್ತುವ ಮತ್ತು ಮರಗಳ ಮೇಲೆಯೇ ವಾಸಿಸುವ ಪ್ರಾಣಿಗಳೂ ಚಿರತೆ ಮುಂತಾದ ಪ್ರಾಣಿಗಳೂ ಗಿಳಿ, ಹದ್ದು, ನೀರುಕೋಳಿ ಮೊದಲಾದ ಅನೇಕ ಬಗೆಯ ಪಕ್ಷಿಗಳೂ ಅಸಂಖ್ಯಾತವಾಗಿವೆ. ಕಪ್ಪೆ, ಹಾವುಗಳು ಹೆಚ್ಚು. ನದಿಯ ದಂಡೆಯ ಮೇಲೆ ಕೆಲವು ಪ್ರಸಿದ್ಧ ಪಟ್ಟಣಗಳಿವೆ. ರಬ್ಬರ್ ಉತ್ಪಾದನೆ ಈಚೆಗೆ ಕಡಿಮೆಯಾಗಿದೆ. ಅಣೆಕಟ್ಟುಗಳನ್ನು ಕಟ್ಟಿ ಪ್ರವಾಹವನ್ನು ತಡೆದು ಜನರಿಗೆ ಇರಲು ಅನುಕೂಲ ಮಾಡಿಕೊಟ್ಟರೆ ಈ ಪ್ರದೇಶ ಇಡೀ ಪ್ರಪಂಚದ ಆಹಾರ ಕಣಜವಾಗಬಲ್ಲದು. (ಬಿ.ಜಿ.)

**ಅಮೆರಿಕಗಳು :** ಪಶ್ಚಿಮಗೋಳಾರ್ಧದಲ್ಲಿರುವ ಉತ್ತರ ಅಮೆರಿಕ, ಮಧ್ಯ ಅಮೆರಿಕ, ದಕ್ಷಿಣ ಅಮೆರಿಕ ಪ್ರದೇಶಗಳನ್ನು ಒಟ್ಟಾಗಿ ಈ ಹೆಸರಿನಿಂದ ಕರೆಯಲಾಗಿದೆ. ಉತ್ತರದಲ್ಲಿ ಕೆನಡದ ಬೂಥಿಯ ಪರ್ಯಾಯಪ್ರಸ್ಥಭೂಮಿಯಿಂದ ದಕ್ಷಿಣದಲ್ಲಿ ಚಿಲಿಯ ಫ್ರೋವಾರ್ಡ್ ಭೂಶಿರದವರೆಗೆ ಉತ್ತರ–ದಕ್ಷಿಣವಾಗಿ 14,000 ಕಿಮೀ ಉದ್ದವಾಗಿದೆ. ಈ ಭೂರಾಶಿಯ ವಿಶೇಷವಾದ ಆಕಾರವೆಂದರೆ ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣಕ್ಕೆ ಹೋದಂತೆಲ್ಲಾ ಕಿರಿದಾಗುವುದು. ಅಮೆರಿಗೊ ವೆಸ್ಪೂಚಿಯಿಂದ ಅಮೆರಿಕ ಎಂಬ ಹೆಸರು ಬಂದಿದೆ. ಅಮೆರಿಕ ಮತ್ತು ಅಮೆರಿಕನ್ ಎಂಬ ಶಬ್ದಗಳನ್ನು ಕೇವಲ ಅಮೆರಿಕದ ಸಂಯುಕ್ತ ಸಂಸ್ಥಾನಗಳನ್ನು ಉದ್ದೇಶಿಸಿ ಪ್ರಯೋಗಿಸುವುದೂ ಉಂಟು. ಮಾರ್ಟಿನ್ ವಾಲ್ಡ್ ಸೀ ಮುಲ್ಲರ್ ಈ ಶಬ್ದವನ್ನು ಮೊದಲ ಬಾರಿಗೆ ಉಪಯೋಗಿಸಿದ. ಕ್ರಿಸ್ಟೋಫರ್ ಕೊಲಂಬಸ್ 1492ರಲ್ಲಿ ಸಮುದ್ರಯಾನ ಮಾಡಿ ಭಾರತ ದೇಶಕ್ಕೆ ಹೊಸ ಹಾದಿ ಕಂಡುಹಿಡಿದನೆಂದು ತಪ್ಪಾಗಿ ತಿಳಿದ ದೇಶವೇ ಈಗಿನ ಅಮೆರಿಕ ಖಂಡಗಳು. ದಕ್ಷಿಣ ಅಮೆರಿಕದ ಉತ್ತರ ಭಾಗದ ಮೇಲೆ ಸಮಭಾಜಕವೃತ್ತ ಹಾದು ಹೋಗುತ್ತದೆ. ಅದರ ದಕ್ಷಿಣದ ಚೂಪಾದ ತುದಿ ಕೇಪ್ ಹಾರನ್ನನ್ನು ಮುಟ್ಟುತ್ತದೆ. ಆ ಪ್ರದೇಶ ಹೆಚ್ಚು ಶೈತ್ಯಭರಿತವಾಗಿ ಹಿಮಗಡ್ಡೆಯಿಂದ ಕೂಡಿದೆ. ಸಂಸ್ಕೃತಿ, ಭಾಷೆ, ಆಚಾರವಿಚಾರಗಳಲ್ಲಿ ದಕ್ಷಿಣ ಅಮೆರಿಕ ಮತ್ತು ಉತ್ತರ ಅಮೆರಿಕಗಳಿಗೆ ಹೆಚ್ಚಿನ ವ್ಯತ್ಯಾಸವಿದೆ. ಅಮೆರಿಕ ಖಂಡಗಳನ್ನು ಎರಡು ವಿಭಾಗಗಳಾಗಿ ಮಾಡಿ ಒಂದನ್ನು ಲ್ಯಾಟಿನ್ ಅಮೆರಿಕ ಎನ್ನುತ್ತಾರೆ. ಇದಕ್ಕೆ ಮೆಕ್ಸಿಕೊ, ಮಧ್ಯ ಅಮೆರಿಕ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಅಮೆರಿಕಗಳು ಸೇರುತ್ತವೆ. ಇನ್ನೊಂದನ್ನು ಆ್ಯಂಗ್ಲೋ ಅಮೆರಿಕ ಎನ್ನುತ್ತಾರೆ. ಅದಕ್ಕೆ ಕೆನಡ, ಸಂಯುಕ್ತ ಸಂಸ್ಥಾನಗಳು ಸೇರುತ್ತವೆ.

ಅಮೆರಿಕಕ್ಕೆ ಸಂಬಂಧಪಟ್ಟ ಲೇಖನಗಳ ಹಂಚಿಕೆ ಈ ರೀತಿಯಿದೆ: ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕ ಎಂಬ ಲೇಖನಗಳಲ್ಲಿ ಒಟ್ಟಾರೆ ಸಮೀಕ್ಷೆ ಇದೆ. ಪ್ರತ್ಯೇಕವಾಗಿಯೆ ಮೇಲ್ಮೈಲಕ್ಷಣ, ಖನಿಜ ಸಂಪತ್ತು, ಭೌಗೋಳಿಕ ವೈಶಿಷ್ಟ್ಯಗಳು ಅದೇ ಲೇಖನದಲ್ಲಿವೆ. ಪ್ರಾಂತೀಯವಾದ ಇನ್ನೂ ಹೆಚ್ಚಿನ ವಿವರಗಳು ಅಲಾಸ್ಕ, ಕೆನಡ, ಸಂಯುಕ್ತ ಸಂಸ್ಥಾನಗಳು ಇತ್ಯಾದಿ ಶೀರ್ಷಿಕೆಗಳಲ್ಲಿವೆ. ಅಮೆರಿಕದ ಎಂಬ ಶಿರೋನಾಮೆಗೆ ಅಂಟಿದಂತೆ ಅಲ್ಲಿನ ಇತಿಹಾಸ, ಸ್ವಾತಂತ್ರ್ಯ ಸಾಹಿತ್ಯ ಮೊದಲಾದ ವಿಷಯಗಳು ಬಂದಿವೆ. ಮಾಯ, ಆಜ್ಟೆಕ್, ಇಂಕ ಇತ್ಯಾದಿ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಲೇಖನಗಳು ಆಯಾ ಶೀರ್ಷಿಕೆಗಳಲ್ಲಿವೆ.

*

**ಅಮೆರಿಕದ ಆದಿವಾಸಿಗಳು :** ಅತ್ಯುನ್ನತ ಶ್ರೇಣಿಯ ಸಸ್ತನಿ ಪ್ರಾಣಿಗಳಿಲ್ಲದಿರುವುದರಿಂದಲೂ ಆದಿಮಾನವನ ಅವಶೇಷಗಳಿಲ್ಲದಿರುವುದರಿಂದಲೂ ಅಮೆರಿಕ ಖಂಡದಲ್ಲಿ ಮಾನವ ಜಾತಿ ಉದ್ಭವಿಸಲಿಲ್ಲವೆಂಬ ಅಭಿಪ್ರಾಯವನ್ನು ಎಲ್ಲರೂ ಸಮರ್ಥಿಸಿರುವರು. ಈಗ ದೊರೆತಿರುವ ಆಧಾರದಮೇಲೆ ಪುರಾತನ ಶಿಲಾಯುಗದ ನಾಗರಿಕತೆಯ ಚಿಹ್ನೆಗಳು ಅಲ್ಲೆಲ್ಲೂ ಕಂಡುಬರುವುದಿಲ್ಲ. ಆದುದರಿಂದ ಸೈಬೀರಿಯದಿಂದ ಬೇರಿಂಗ್ ಜಲಸಂಧಿಯ ಮಾರ್ಗದಲ್ಲಿ ಸು. 25,000–35,000 ಸಾವಿರ ವರ್ಷಗಳ ಹಿಂದೆ ಮಾನವ ಅಮೆರಿಕ ಖಂಡಕ್ಕೆ ಬರಲುಪಕ್ರಮಿಸಿದನೆನ್ನಬಹುದು. ಕಾಲಕ್ರಮೇಣ ಆತ ಅಮೆರಿಕದ ಎಲ್ಲ ಪ್ರದೇಶಗಳಲ್ಲೂ ನೆಲೆಸಿದ. ದಕ್ಷಿಣ ಅಮೆರಿಕ ಖಂಡದಲ್ಲಿ ಆತ ನೆಲೆಸಲುಪಕ್ರಮಿಸಿದ್ದು 10,000 ವರ್ಷಗಳ ಹಿಂದೆ. ಎ.ಎಲ್. ಕ್ರೋಬರ್ ಮತ್ತು ಜೆ. ಎಚ್. ಸ್ಟಿವರ್ಡ್‍ರ ಪ್ರಕಾರ ಅಮೆರಿಕದ ಆದಿವಾಸಿಗಳ ಸಂಖ್ಯೆ 1,60,000. ಇವರಲ್ಲಿ ಬಹುಜನ ಆದಿವಾಸಿಗಳು ಮಧ್ಯ ಮತ್ತು ದಕ್ಷಿಣ ಅಮೆರಿಕಗಳಲ್ಲಿ ವಾಸವಾಗಿರುವವರು. ಇವರು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕೆನಡದಲ್ಲಿ ಇದ್ದರೆಂದೂ ತಿಳಿದುಬಂದಿದೆ. ಇವರಲ್ಲದೆ ಎಸ್ಕಿಮೋಗಳು ಉತ್ತರ ಅಮೆರಿಕದ ಅತ್ಯಂತ ಉತ್ತರ ಭಾಗಗಳಲ್ಲಿ ವಾಸಮಾಡುತ್ತಿರುವರು.

ಅಮೆರಿಕದ ಆದಿವಾಸಿಗಳಾದ ಎಸ್ಕಿಮೋ ಮತ್ತು ರೆಡ್ ಇಂಡಿಯನ್ನರು ಮಂಗೋಲಾಯಿಡ್ ಜನಾಂಗಕ್ಕೆ ಸೇರಿದವರೆಂದು ಪರಿಗಣಿಸಲಾಗಿದೆ. ರೆಡ್ ಇಂಡಿಯನ್ನರಲ್ಲಿ ಸು. 400 ಬುಡಕಟ್ಟುಗಳಿವೆಯಲ್ಲದೆ 160 ಭಾಷಾವರ್ಗಗಳಿವೆ. ಇವರು ಉತ್ತರ ಅಮೆರಿಕದಲ್ಲೆಲ್ಲ ಹರಡಿಕೊಂಡಿದ್ದಾರೆ. ಇವರ ಬುಡಕಟ್ಟುಗಳಲ್ಲಿ ಉತ್ತರ ಅಮೆರಿಕದ ಟ್ಲಿನ್‍ಗಿಟ್, ಹೈಡ, ಬೆಲ್ಲಕೂಲ, ಕ್ರೊ, ಬ್ಲಾಕ್‍ಫುಟ್, ಅರಪಾಹೊ, ಕಿಯೋವಿ, ಡಕೋಟ, ಹಿಡಟ್ಸ, ಜ಼ಪೋಟ ಆಜ್ಟೆಕ್, ದಕ್ಷಿಣ ಅಮೆರಿಕದ ಇಂಕ, ವಿಟೋಟೊ–ಈ ಕೆಲವರು ಮುಖ್ಯರು.

ಇವರಲ್ಲಿ ಕೆಲವು ಬುಡಕಟ್ಟುಗಳನ್ನು ತೆಗದುಕೊಂಡು ಅವರ ಜೀವನದ ಸಾಮಾನ್ಯ ರೀತಿಯನ್ನು ಅರಿಯಲು ಅನುಕೂಲವಾಗುತ್ತದೆ. ಮುಖ್ಯವಾಗಿ ಭೌಗೋಳಿಕ ಪರಿಸರ ಆದಿವಾಸಿಗಳ ಜೀವನದ ಬಹುಭಾಗವನ್ನು ನಿರ್ಧರಿಸುತ್ತದೆ. ವಿವಿಧ ಪ್ರದೇಶಗಳಲ್ಲಿರುವ ಆದಿವಾಸಿಗಳ ಜೀವನದಿಂದ ಈ ವಿಷಯ ಸ್ಪಷ್ಟಪಡುತ್ತದೆ. ರೆಡ್ ಇಂಡಿಯನ್ನರಲ್ಲಿ ಕೆಲವು

ಬುಡಕಟ್ಟುಗಳನ್ನು ತೆಗೆದುಕೊಂಡು ಅವರ ಜೀವನದ ರೀತಿಯನ್ನು ನೋಡಬಹುದು. ಹೈಡಗಳು ರೆಡ್ ಇಂಡಿಯನ್ನರಲ್ಲಿ ಬೆಸ್ತರ ಕೆಲಸ ಮಾಡುವವರು. ಒಳ್ಳೆಯ ದೋಣಿಗಳನ್ನು ಕಟ್ಟಬಲ್ಲವರಾಗಿದ್ದು 21 ಮೀ ಉದ್ದ 2.5 ಮೀ ಅಗಲವಿರುವ ದೋಣಿಯನ್ನು ಒಂದೇ ತುಂಡಿನಿಂದ ಕೆತ್ತಿ ತಯಾರಿಸುತ್ತಿದ್ದರು. ಅವರಿಗೆ ಅಲಂಕಾರ ಕಲೆಯಲ್ಲಿ ಬಹಳ ಆಸಕ್ತಿ. ತಾವು ಉಪಯೋಗಿಸುವ ಪ್ರತಿಯೊಂದು ವಸ್ತುವಿನ ಮೇಲೂ ಸಾಧಾರಣವಾಗಿ ಒಂದು ಪ್ರಾಣಿಯ ಚಿತ್ರವನ್ನು ಕೊರೆಯುತ್ತಿದ್ದರು.

ಹೈಡ್ ಜನರ ವಿಶಿಷ್ಟ ಪೋಟ್ಲಾಚ್‌ನಲ್ಲಿ ಸಾಮಾಜಿಕ ಸಮಾರಂಭದಲ್ಲಿ ಒಬ್ಬ ವ್ಯಕ್ತಿ ತಾನು ಗಳಿಸಿದ ಐಶ್ವರ್ಯವನ್ನು ಸಮಾರಂಭಕ್ಕೆ ಬಂದ ಗಣ್ಯ ವ್ಯಕ್ತಿಗಳಿಗೆ ಅವರ ಸ್ಥಾನಮಾನಗಳಿಗೆ ಅನುಗುಣವಾಗಿ ಹಂಚುತ್ತಿದ್ದ. ಇದರಿಂದ ಆತನಿಗೆ ಸಮಾಜದಲ್ಲಿ ಗೌರವ ದೊರಕುತ್ತಿತ್ತು. ಇಷ್ಟೇ ಅಲ್ಲದೆ ಹಾಗೆ ಮಾಡಿದವನ ಮಕ್ಕಳಿಗೆ ಕುಲೀನ ಅಥವಾ ಶ್ರೇಷ್ಠವರ್ಗಕ್ಕೆ ಪ್ರವೇಶಿಸಲು ಅನುಕೂಲವಾಗುತ್ತಿತ್ತು. ಆದುದರಿಂದ ತನ್ನ ಮಕ್ಕಳಿಗೆ ಅಗತ್ಯವಾಗಿ ಮಾಡಬೇಕಾದ ಕರ್ತವ್ಯವೆಂಬ ದೃಷ್ಟಿಯಿಂದ ಈ ಸಮಾರಂಭವನ್ನು ಆತ ಆಚರಿಸುತ್ತಿದ್ದ. ಐಶ್ವರ್ಯಶೇಖರಣೆಗಿಂತ, ಅದರ ಹಂಚಿಕೆ ಉತ್ತಮವೆಂಬ ಭಾವನೆ ಈ ಆಚರಣೆಯಲ್ಲಿ ಎದ್ದುಕಾಣುತ್ತದೆ.

ಹೈಡಗಳ ಸಮಾಜ ಮಾತೃಪ್ರಧಾನವಾದ ಬಣಗಳಿಂದ ಕೂಡಿದೆ. ಆದುದರಿಂದ ಅವರಲ್ಲಿ ಸ್ತ್ರೀಯರಿಗೆ ಗಣ್ಯವಾದ ಸ್ಥಾನವಿತ್ತು. ಅವರಿಗೆ ಹೆಣ್ಣುಮಕ್ಕಳನ್ನು ಕಂಡರೆ ಆಸಕ್ತಿ. ಹೆಚ್ಚಾಗಿ ಹೆಣ್ಣು ಮಕ್ಕಳಾಗಲೆಂದು ಆಸೆಪಡುತ್ತಿದ್ದರು.

ಮೈದಾನಗಳಲ್ಲಿ ವಾಸಿಸುವ ರೆಡ್ ಇಂಡಿಯನ್ನರಲ್ಲಿ ಕ್ರೊ ಗುಂಪಿನವರು ಪ್ರಮುಖರು. ಅವರು ವಿಶಾಲವಾದ ಮೈದಾನಗಳಲ್ಲಿನ ಪರ್ವತದ ಮೇಕೆ, ಜಿಂಕೆ, ಸಾರಂಗ, ಕಡವೆ, ಕಾಡುಕೋಣಗಳನ್ನು ಬೇಟೆಯಾಡಿ ಜೀವಿಸುತ್ತಿದ್ದರು. ಕಾಡುಕೋಣಗಳ ಬೇಟೆ ಸ್ವಾರಸ್ಯವಾಗಿದೆ. ಮೂರು ಕಡೆಗಳಿಂದ ಕಾಡುಕೋಣಗಳ ಹಿಂಡನ್ನು ಅಟ್ಟಿಸಿಕೊಂಡು ಹೋಗಿ ನಾಲ್ಕನೆಯ ಕಡೆಯಿರುವ ಕಮರಿಗೆ ಇಳಿಸಿ ಅನಂತರ ನಿಧಾನವಾಗಿ, ಅಗತ್ಯವಾದಾಗ ತಮಗೆ ಬೇಕಾಗುವಷ್ಟನ್ನು ಮಾತ್ರ ಕೊಲ್ಲುತ್ತಿದ್ದರು. ಅವರು ನಾಯಿಯನ್ನು ಪಳಗಿಸಿ ಬೇಟೆಗೆ ಉಪಯೋಗಿಸುತ್ತಿದ್ದರು. 1650ರಿಂದ ಈಚೆಗೆ ಅವರು ಕುದುರೆಗಳನ್ನು ಉಪಯೋಗಿಸಲು ಪ್ರಾರಂಭಿಸಿದರು.

ಕ್ರೊಗಳು ಒಂದು ಸ್ಥಳದಲ್ಲಿ ನೆಲೆಯಾಗಿ ನಿಲ್ಲುವವರಲ್ಲ. ಅವರು ಸ್ಥಳದಿಂದ ಸ್ಥಳಕ್ಕೆ ಹೋಗುವ ವಲಸೆ ಒಂದು ಭವ್ಯವಾದ ಮೆರವಣಿಗೆಯಂತಿದ್ದು ಕೆಲವು ಮೈಲಿಗಳಷ್ಟು ಉದ್ದವಿರುತ್ತಿತ್ತು. ಎಲ್ಲರಿಗಿಂತಲೂ ಮುಂದಾಗಿ ಕುದುರೆಯ ಸವಾರರು ರಸ್ತೆಯಲ್ಲಿ ಅಪಾಯವಿಲ್ಲವೆಂಬುದನ್ನು ನೋಡಿ ತಿಳಿಸುತ್ತಿದ್ದರು. ಮೆರವಣಿಗೆಯ ಎರಡು ಕಡೆಗಳಲ್ಲಿ ಕುದುರೆಯ ಸವಾರರು ರಕ್ಷಣೆಗೆ ಬರುತ್ತಿದ್ದರು. ಮುಂದುಗಡೆ ಸರ್ವಾಲಂಕಾರಭೂಷಿತರಾದ ಯುದ್ಧದ ಮುಂದಾಳುಗಳು, ಜನಾಂಗದ ಮುಖಂಡರು ಕುದುರೆಗಳ ಮೇಲೆ ಇರುತ್ತಿದ್ದರು. ಹೆಂಗಸರು ಅತ್ಯುತ್ತಮವಾದ ಉಡುಪು ಮತ್ತು ಒಡವೆಗಳನ್ನು ಧರಿಸಿಕೊಂಡು ಸಂತೋಷದಿಂದ ಹಾಡುತ್ತ ನಡೆದು ಮೆರವಣಿಗೆಗೆ ಮೆರಗು ಕೊಡುತ್ತಿದ್ದರು.

ಕ್ರೊಗಳು ಯುದ್ಧಪ್ರಿಯರು. ಅವರ ಶತ್ರುಗಳಲ್ಲಿ ಮುಖ್ಯರೆಂದರೆ ಡಕೋಟಗಳು ಮತ್ತು ಬ್ಲಾಕ್ ಫುಟ್‌ಗಳು. ಯುದ್ಧದಲ್ಲಿ ಕೀರ್ತಿಗಳಿಸಿದವರಿಗೆ ಮಾತ್ರ ಸಮಾಜದಲ್ಲಿ ಗಣ್ಯವಾದ ಸ್ಥಾನ ದೊರಕುತ್ತಿತ್ತು. ಇವರದೂ ಮಾತೃಪ್ರಧಾನವಾದ ಸಮಾಜ ವ್ಯವಸ್ಥೆಯೇ. ಆದರೂ ಹೆಂಗಸರು ಗಂಡಸರಿಗೆ ಸಂಪೂರ್ಣವಾಗಿ ಅಧೀನರು. ಈ ಜನ ನೈಸರ್ಗಿಕ ಶಕ್ತಿಗಳನ್ನೂ ಪ್ರಾಣಿಗಳನ್ನೂ ಆರಾಧಿಸುತ್ತಿದ್ದರು. ಅವರ ಪೂಜೆಗೆ ಹೊಗೆಸೊಪ್ಪು ಅತ್ಯಗತ್ಯವಾದ ವಸ್ತು. ಆದ್ದರಿಂದ ಹೊಗೆಸೊಪ್ಪನ್ನು ಬೆಳೆಯುವುದು ಅವರು ಮಾಡುತ್ತಿದ್ದ ಏಕೈಕ ಬೇಸಾಯ.

ಆಧುನಿಕ ನಾಗರಿಕತೆಯ ಪ್ರಭಾವಕ್ಕೆ ಸ್ವಲ್ಪವೂ ಒಳಪಡದೆ, ದಟ್ಟವಾದ ಕಾಡುಗಳಲ್ಲಿ ಅವ್ಯಾಹತವಾಗಿ ನೈಸರ್ಗಿಕ ಶಕ್ತಿಗಳ ಕಾಠಿಣ್ಯವನ್ನು ಎದುರಿಸುತ್ತ ಜೀವಿಸುವುದರಲ್ಲಿ ಅಮೆಜ಼ಾನ್ ನದಿಯ ಕಾಡುಗಳಲ್ಲಿರುವ ವಿಟೋಟೋಗಳು ಅತಿ ಮುಖ್ಯರು. ಕಾಡುಗಳಲ್ಲಿ ವಿವಿಧ ಆಹಾರಗಳು ಯಥೇಚ್ಛವಾಗಿದ್ದರೂ ಅವರಿಗೆ ಆಹಾರ ದೊರಕುವುದು ಕಷ್ಟ. ಮರಗಳ ಮೇಲೆ, ಬಳ್ಳಿಗಳಲ್ಲಿ ಇರುವ ಹಣ್ಣುಗಳು ಇಲಿಗಳು, ಕಪ್ಪೆಗಳು, ಹಲ್ಲಿಗಳು, ಹಾವುಗಳು ಮೊದಲಾದ ಪ್ರಾಣಿಗಳೇ ಇವರ ಆಧಾರ. ಹಲ್ಲಿಗಳ ಮತ್ತು ಹಾವುಗಳ ಮೊಟ್ಟೆಗಳನ್ನೂ ತಿನ್ನುವರು. ಆದರೆ ಹಕ್ಕಿಗಳ ಮೊಟ್ಟೆಗಳನ್ನು ತಿನ್ನುವುದಿಲ್ಲ. ಜೇನುಗೂಡಿಗೆ ಹೊಗೆ ಹಾಕಿ ಜೇನನ್ನು ಇಳಿಸುತ್ತಾರೆ. ಕೆಲವು ಸಾರಿ ಜಿಂಕೆಗಳನ್ನು ಈಟಿಯಿಂದ ಬೇಟೆಯಾಡುವುದುಂಟು.

ವಿಟೋಟೊಗಳ ವ್ಯವಸಾಯಕ್ರಮ ಪುರಾತನವಾದದ್ದು. ಮೊದಲು ಒಂದು ಜಾಗದಲ್ಲಿರುವ ಗಿಡಮರಗಳನ್ನು ಕಡಿದು ಅವುಗಳಿಗೆ ಬೆಂಕಿಹಾಕಿ ಸುಡುವುದು; ಮಳೆ ಬಿದ್ದು ಭೂಮಿ ಪಕ್ವವಾದ ಮೇಲೆ ಅಲ್ಲಿ ಕಾಳುಗಳನ್ನು ಚೆಲ್ಲುವುದು; ಈ ರೀತಿಯ ವ್ಯವಸಾಯದಿಂದ ಸ್ವಲ್ಪಮಟ್ಟಿಗೆ ಮುಸುಕಿನಜೋಳ, ಗೆಣಸು, ಬಾಳೆ, ಮೆಣಸು, ಅನಾನಸ್, ಹೊಗೆಸೊಪ್ಪು ಮತ್ತು ಕೋಕೊ ಮೊದಲಾದುವುಗಳನ್ನು ಬೆಳೆಯುವುದು.

ಇವರಲ್ಲಿ ಒಂದು ಬಣದವರೆಲ್ಲರೂ ಒಂದೇ ದೊಡ್ಡ ಗುಡಿಸಿಲಿನಲ್ಲಿ ವಾಸಮಾಡುತ್ತಾರೆ. ಆ ಗುಡಿಸಲು 21 ಮೀ ಉದ್ದ 18 ಮೀ ಅಗಲ ಮತ್ತು ಸರಾಸರಿ 9 ಮೀ ಎತ್ತರವಿರುತ್ತದೆ. ಅದಕ್ಕೆ ಕಿಟಕಿಗಳಿಲ್ಲ. ಪ್ರತಿಯೊಂದು ಕುಟುಂಬಕ್ಕೆ ಪ್ರತ್ಯೇಕವಾದ ಒಲೆಯಿರುತ್ತದೆ. ಮಲಗಲು ಹಗ್ಗದಿಂದ ಮಾಡಿದ ಒರಟಾದ ಮಂಚ. ಗಂಡಸರು ಮರದ ತೊಗಟೆಯಿಂದ ಮಾಡಿದ ಉಡುಪನ್ನು ಧರಿಸುತ್ತಾರೆ. ತಮ್ಮ ಉಡುಪನ್ನು ಬೇರೆಯವರೆದುರಿಗೆ ಕಳಚುವುದಿಲ್ಲ. ಆದರೆ ಹೆಂಗಸರು ಮಾತ್ರ ಯಾವ ಉಡುಪುಗಳನ್ನೂ ಧರಿಸದೆ ನಗ್ನರಾಗಿರುತ್ತಾರೆ. ಬಟ್ಟೆಗಳನ್ನು ತೊಡದಿದ್ದರೂ ಹೆಂಗಸರಿಗೆ ಒಡವೆಗಳ ಮೇಲೆ ಬಹಳ ಆಸೆ. ಗಂಡಸರೂ ಒಡವೆಗಳನ್ನು ಧರಿಸುತ್ತಾರೆ. ಸಾಮಾನ್ಯವಾಗಿ ತಮ್ಮ ಕೀರ್ತಿಗೆ ಗುರುತಾದ ಹಲ್ಲುಗಳ ಹಾರವನ್ನು ಧರಿಸುವುದು ವಾಡಿಕೆ. ಈ ಬುಡಕಟ್ಟು ಹಲವಾರು ಪಿತೃಪ್ರಧಾನವಾದ ಬಣಗಳಿಂದ ಕೂಡಿದೆ. ಒಂದೇ ಬುಡಕಟ್ಟಿಗೆ ಸೇರಿದ ಬಣಗಳಲ್ಲೂ ವೈರ ಕಾಣಬಹುದು. ಆದ್ದರಿಂದ ಇವರು ಸದಾ ಯುದ್ಧದ ಯೋಚನೆಯಲ್ಲಿಯೇ ಇರುವರು. ಇವರಿಗೆ ಬೇರೆಯ ಬುಡಕಟ್ಟುಗಳನ್ನು ಕಂಡರೆ ಹೆದರಿಕೆಯಾದುದರಿಂದ ಯಾವಾಗಲೂ ಯುದ್ಧಭಯದಿಂದ ಜೀವಿಸುವರು. ಯುದ್ಧದಲ್ಲಿ ಸೋತವರನ್ನು ಸೆರೆಹಿಡಿದು ಅವರನ್ನು ಬೇಯಿಸಿ ತಿನ್ನುವರು. ವಿಟೋಟೋಗಳು ಏಕಪತ್ನೀವ್ರತಸ್ಥರು. ಇವರಲ್ಲಿ ವಿವಾಹ ವಿಚ್ಛೇದನವಿದೆ. ಗಂಡಸಿನಿಂದ ಹೆಂಗಸು ವಿವಾಹವಿಚ್ಛೇದನ ಪಡೆಯುವುದು ಸುಲಭ. ಹೆಂಗಸು ಓಡಿಹೋದರೆ ದಾಂಪತ್ಯಜೀವನ ಅಂತ್ಯವಾಗುತ್ತದೆ. ಆದರೆ ಗಂಡಸು ಹೆಂಡತಿಯ ದೋಷವನ್ನು ಸ್ಥಿರಪಡಿಸದೆ ಇದ್ದರೆ ವಿವಾಹವಿಚ್ಛೇದನ ದೊರಕದು. ಆಹಾರದ ಕೊರತೆಯಿಂದ ಮುದುಕರನ್ನೂ ಖಾಯಿಲೆಯವರನ್ನೂ ಇವರು ಕೊಂದು ಹಾಕುತ್ತಾರೆ. ಇವರು ಪ್ರಾಣಿಗಳನ್ನೂ ನೈಸರ್ಗಿಕ ಶಕ್ತಿಗಳನ್ನೂ ಆರಾಧಿಸುವರು.

ಪಾಶ್ಚಾತ್ಯ ನಾಗರಿಕತೆಯ ಸಂಪರ್ಕದಿಂದ ಆದಿವಾಸಿಗಳ ಜೀವನದಲ್ಲಿ ಅನೇಕ ಬದಲಾವಣೆಗಳಾಗಿವೆ. ಒಟ್ಟಿನಲ್ಲಿ ನರಹತ್ಯೆ, ನರಮಾಂಸಸೇವನೆ, ಮುದುಕರನ್ನು ನಾಶಪಡಿಸುವುದು ಮೊದಲಾದ ಕ್ರೂರಪದ್ಧತಿಗಳು ನಶಿಸಿವೆ. ಅನೇಕ ಸರ್ಕಾರಗಳು ಆದಿವಾಸಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನೂ ಒದಗಿಸಿಕೊಟ್ಟಿವೆ. ಈಗಿನ ವಿಶ್ವವಿದ್ಯಾನಿಲಯಗಳಲ್ಲಿ ಆದಿವಾಸಿಗಳ ಭಾಷಾಧ್ಯಯನ, ಅವರ ಜನಪದ ಸಾಹಿತ್ಯ ಮತ್ತು ವಸ್ತುಸಂಗ್ರಹಣ ಕಾರ್ಯ ನಡೆಯುತ್ತಿದೆ. ಯುರೋಪಿನವರು ಅಮೆರಿಕದ ನೆಲದಲ್ಲಿ ಕಾಲಿಟ್ಟಂದಿನಿಂದ ಅವರಿಗೂ ಆದಿವಾಸಿಗಳಿಗೂ ಘರ್ಷಣೆ, ರಾಜಿಗಳು ನಡೆಯುತ್ತಿದ್ದು ಈ ಮುನ್ನೂರು ನಾನೂರು ವರ್ಷಗಳಲ್ಲಿ ಆದಿವಾಸಿಗಳನೇಕರು ಸತ್ತಿದ್ದಾರೆ. ಉಳಿದವರು ವಿದೇಶೀಯರೊಂದಿಗೆ ಬೆರೆತಿದ್ದಾರೆ.

ಒಟ್ಟಿನಲ್ಲಿ ಅಮೆರಿಕದ ಆದಿವಾಸಿಗಳ ಜೀವನ ಇಂದಿಗೂ ಸಹ ವೈವಿಧ್ಯಪೂರ್ಣವಾಗಿ, ಅನೇಕ ಹಳೆಯ ಸಂಪ್ರದಾಯಗಳನ್ನೊಳಗೊಂಡು, ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದೆ. **(ನೋಡಿ– ಆಜ಼್ಟೆಕ್ ಸಂಸ್ಕೃತಿ; ಆದಿವಾಸಿಗಳು; ಎಸ್ಕಿಮೋ; ರೆಡ್–ಇಂಡಿಯನ್ನರು; ಇಂಕ).** (ಎಚ್.ಎಂ.ಎಸ್.)

**ಅಮೆರಿಕದ ಇಂಡಿಯನರ ಭಾಷೆಗಳು :** ಇವು ಅಮೆರಿಕ ಖಂಡದ ಮೂಲ ನಿವಾಸಿಗಳ ಭಾಷೆಗಳು. ಅಲ್ಲಿಗೆ ಯುರೋಪಿನವರು ವಲಸೆ ಹೋಗಿ, ನೆಲಸಿ, ತಮ್ಮ ಭಾಷೆಗಳಾದ ಇಂಗ್ಲಿಷ್, ಸ್ಪ್ಯಾನಿಷ್, ಪೋರ್ಚುಗೀಸ್, ಫ್ರೆಂಚ್ ಭಾಷೆಗಳ ಪ್ರಭಾವವನ್ನು ಬೆಳೆಸಿದ ಮೇಲೂ ಮೂಲಭಾಷೆಗಳಲ್ಲಿ ಇನ್ನೂ ಕೆಲವು ಭಾಷೆಗಳು ತಮ್ಮ ಸತ್ತ್ವದಿಂದ ಉಳಿದು ಬೆಳೆಯುತ್ತಲಿವೆ.

ಕೊಲಂಬಸ್ ಅಮೆರಿಕವನ್ನು ಇಂಡಿಯ ಎಂದು ಕರೆದಂತೆ, ಅಲ್ಲಿಯ ಜನರನ್ನು ಇಂಡಿಯನ್ನರೆಂದು ಕರೆದ. ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಮೆಕ್ಸಿಕೊ, ಗ್ರೀನ್‌ಲೆಂಡ್, ವೆಸ್ಟ್ ಇಂಡೀಸ್ ಗಳವರೆಗೆ ಹಬ್ಬಿರುವ ಈ ಜನಾಂಗದ ವೈವಿಧ್ಯಮಯ ಜೀವನಕ್ರಮದ ಅಭ್ಯಾಸ ಮಾಡಿದಂತೆಲ್ಲ ಅವರ ಭಾಷೆಯಲ್ಲಿಯ ಅಪರಿಮಿತ ವೈವಿಧ್ಯ ದಂಗುಬಡಿಸುತ್ತದೆ. ಕೊಲಂಬಸನ ಕಾಲಕ್ಕಾಗಲೆ ಅಲ್ಲಿಯ ಭಾಷೆಗಳು ಅಪರಿಮಿತವಾಗಿದ್ದುವು. ಉತ್ತರ ಮತ್ತು ಮಧ್ಯ ಅಮೆರಿಕಗಳಲ್ಲಿ 40 ಭಾಷಾ ವರ್ಗಗಳು ಮತ್ತು ದಕ್ಷಿಣ ಅಮೆರಿಕದಲ್ಲಿ ಇನ್ನೂ 40 ಭಾಷಾವರ್ಗಗಳು ಇದ್ದುವು. ಈ ಸುಮಾರು 80 ಭಾಷಾವರ್ಗಗಳಲ್ಲಿ 2,000ಕ್ಕಿಂತ ಹೆಚ್ಚು ಭಾಷೆಗಳು ಅಡಕವಾಗಿವೆಯೆಂದು ಅಂದಾಜು ಮಾಡಲಾಗಿದೆ. ಈ ಸಂಖ್ಯೆ ಜಗತ್ತಿನ ಒಟ್ಟು ಭಾಷೆಗಳ ಸಂಖ್ಯೆಯ 1/3ಕ್ಕಿಂತ ಹೆಚ್ಚಾಗುತ್ತದೆ. ಇವುಗಳಲ್ಲಿ ಕೆಲವೊಂದು ಭಾಷೆಗಳು ಕೇವಲ ಸಣ್ಣ ಗುಂಪುಗಳಲ್ಲಿ ಮಾತ್ರ ಪ್ರಚಲಿತವಾಗಿದ್ದರೆ ಮತ್ತೆ ಕೆಲವು ಬಹು ವ್ಯಾಪಕವಾಗಿ ಹರಡಿದ್ದುವು.

ಆಧುನಿಕ ಸುಸಂಸ್ಕೃತ ಜನಾಂಗಗಳ ಸಂಸ್ಕೃತಿ, ಭಾಷೆಗಳ ಸಂಪರ್ಕವಾದಮೇಲೆ ಈ ಭಾಷೆಗಳು ಬಹಳಷ್ಟು ತೀವ್ರ ಗತಿಯಿಂದ ಕಣ್ಮರೆಯಾಗುತ್ತಲಿವೆ, ಕಣ್ಮರೆಯಾಗಿವೆ. ವಿದ್ವಾಂಸರ ಅಂದಾಜಿನ ಪ್ರಕಾರ ಆ ಖಂಡದ ಶೋಧವಾದ ಅನಂತರ, ಈ 300 ವರ್ಷಗಳ ಅವಧಿಯಲ್ಲಿ ಸುಮಾರು ಸಾವಿರದಷ್ಟು ಭಾಷೆಗಳು ಕಣ್ಮರೆಯಾಗಿವೆ. ಬಿಡಿ ಭಾಷೆಗಳಲ್ಲದೆ ಅನೇಕ ಭಾಷಾವರ್ಗಗಳೇ ಸಂಪೂರ್ಣ ಕಣ್ಮರೆಯಾಗಿವೆ. ಈಗ ಸುಮಾರು 40–50 ಭಾಷಾವರ್ಗಗಳು ಮಾತ್ರ ಉಳಿದಿವೆ. ಈ ಭಾಷೆಗಳ ಸಂಘಟಿತ ಹಾಗೂ ವ್ಯವಸ್ಥಿತ

ಅಭ್ಯಾಸವಾಗದ ಕಾರಣ ಅನೇಕ ಭಾಷೆಗಳನ್ನು ಸ್ಥೂಲವಾಗಿಯೇ ಆಯಾ ವರ್ಗಗಳಲ್ಲಿ ಸೇರಿಸಲಾಗಿದೆ. ಕಣ್ಮರೆಯಾದ ಕೆಲವು ಭಾಷೆಗಳನ್ನು ಹೀಗೆ ಹೆಸರಿಸಬಹುದು: 1. ಮೊಹೆಗನ್; 2. ಗನ್ ಸೆಟ್; 3. ನತಿಕ್; 4. ಪೆಕೊಟ್; 5. ಪೊವ್ಹತಮ್; 6. ಪೆಲ್ಚೆ; 7. ಕೊಮೆಕ್ರುಡೊ; 8. ಯನ; 9. ಚಿಬ್ಚಾ 10. ಚೊರೊಟಿಗಾ; 11. ಉಂಪಹಾ; 12. ಆಜ್ಟೆಕ್ ಇತ್ಯಾದಿ.

ಮೇಲೆ ಹೇಳಿದ 40–50 ಭಾಷಾವರ್ಗಗಳನ್ನೂ ಅಥವಾ ಈಗ ಉಳಿದಿರುವ 1,000ದಷ್ಟು ಭಾಷೆಗಳನ್ನೂ ಹೆಸರಿಸುವುದು ಇಲ್ಲಿ ಅಪ್ರಕೃತ. ಅದಕ್ಕಾಗಿ ಕೆಲ ಪ್ರಮುಖ ಭಾಷಾವರ್ಗಗಳನ್ನೂ ಅವುಗಳಲ್ಲಿಯ ಕೆಲವು ಪ್ರಮುಖ ಭಾಷೆಗಳನ್ನೂ ಇಲ್ಲಿ ಗಮನಿಸಲಾಗಿದೆ.

ಕೆಲವು ಪ್ರಮುಖ ಭಾಷಾವರ್ಗಗಳು ಹೀಗಿವೆ: 1. ಅಲ್ಗೊಂಕ್ವಿಯನ್; 2. ಇರೋಕ್ವಿಯನ್, 3. ಅಥಬಾಸ್ಕನ್; 4. ಅರವಕ್; 5. ಕ್ಯಾರಿಬ್; 6. ಜಪೊಟಿಕ್; 7. ನಹುತ್ಲನ್; 8. ಮಾಯ; 9. ಮಸ್ಕೊಗಿನ್; 10. ಸಿಯೋವನ್; 11. ಅರೋಚನಿಯನ್; 12. ಉತೊ–ಅಜ್ಟೆಕನ್; 13. ಎಸ್ಕಿಮೊ–ಅಲ್ಯೂಟ್; ಇತ್ಯಾದಿ.

ಆಯಾ ಭಾಷಾವರ್ಗಗಳನ್ನೂ ಅವುಗಳಲ್ಲಿಯ ಭಾಷೆಗಳನ್ನೂ ಪ್ರಾದೇಶಿಕತೆಯ ಆಧಾರದ ಮೇಲೆ ಹೀಗೆ ವಿವರಿಸಬಹುದು: ದಕ್ಷಿಣ ಅಮೆರಿಕೆಯಲ್ಲಿ– 1. ಅರೇಚನಿಯನ್; 2. ಅಯ್ಮರ್; 3. ಕ್ವೆಚುವಾ; 4. ಚಿಬ್ಚಾ–ಇವು ದಕ್ಷಿಣದಿಂದ ಉತ್ತರಕ್ಕೆ ಹರಡಿವೆ. 1. ಅರವಕ್; 2. ಕ್ಯಾರಿಬ್; 3. ತುಪಿ; 4 ಪನೊ; 5. ತುಕಾನೊವರ್ಗಗಳೂ ಉಷ್ಣವಲಯದಿಂದ ವೆಸ್ಟ್ ಇಂಡೀಸ್ ವರೆಗೆ ಹರಡಿವೆ. 1. ಗೆ; 2. ಗಾಮಚುರು; 3. ಪೆಲ್ಚೆ; 4. ಚಿಹ್ವಲ್ಚೆ ವರ್ಗಗಳು ಬ್ರೆಜಿಲ್ ನಿಂದ ಟಿಮೇರಾ ಬೆಲ್ ಫೆಗ್ಯೋಡದವರೆಗೆ ಹರಡಿವೆ.

ಉತ್ತರ ಅಮೆರಿಕೆಯಲ್ಲಿ – 1. ಎಸ್ಕಿಮೊ (ಅಲಾಸ್ಕದಿಂದ ಗ್ರೀನ್‌ಲೆಂಡ್ ವರೆಗೆ); 2. ಅಥಬಾಸ್ಕನ್ (ಕೆನಡ ಅಲಾಸ್ಕಗಳ ಒಳಭಾಗದಲ್ಲಿ); 3. ಅಲ್ಗೊಂ; ಕ್ವಿಯನ್ (ಪೂರ್ವ ಕೆನಡ, ಗ್ರೇಟ್ ಲೇಕ್ ಭಾಗದಲ್ಲಿ); 4. ಇರೊಕ್ವಿಯನ್; (ನ್ಯೂಯಾರ್ಕ್, ಪೆನ್ಸಿಲ್ವೇನಿಯ, ಒಹಿಯೊ ಭಾಗದಲ್ಲಿ); 5. ನೆಯೋವನ್; (ಮೈದಾನಗಳಲ್ಲಿ); 6. ಮುಸ್ಕೊಗಿನ್; 7. ಉತೋ ಆಜ್ವೇಕಿಯನ್ (ಮೆಕ್ಸಿಕೊ, ಕ್ಯಾಲಿಫೋರ್ನಿಯ); 8 ಮಾಯ (ಗ್ವಾಟೆಮಾಲ). ಮಧ್ಯ ಅಮೆರಿಕೆಯಲ್ಲಿ – 1. ನಹುಅತ್ಲ; 2. ಕ್ವಿಚೆ; 3. ಚಕ್ಚಿಕ್ವೆಲ್; 4. ಮಮ್; 5. ಯುಚ್ ಟೆಕ್; 6. ಕೆಕ್ಚಿ; 7. ಒಟೋಮಿ; 8. ಜಪೊಟೆಕ್; 9. ಮಿಕ್ಸ್ ಟೆಕ್; 10. ತೊತೊನಕ್ (ಉತ್ತರ ಮೆಕ್ಸಿಕೊ ಮತ್ತು ಗ್ವಾಟೆಮಾಲಗಳಲ್ಲಿ).

ಕೆಲವು ಸಣ್ಣ ಭಾಷೆಗಳು ಮಾಯವಾಗುತ್ತಿದ್ದರೂ ನವಹೊ ಭಾಷಾಜನಾಂಗದ ಸಂಖ್ಯೆ ಹೆಚ್ಚುತ್ತಲಿದೆ.

ಮೇಲಿನ ಎಲ್ಲ ಭಾಷಾವರ್ಗಗಳಲ್ಲಿ ಅಲ್ಗೊಂಕ್ವಿಯನ್ ಪ್ರಮುಖ ಭಾಷಾವರ್ಗ.ಈ ವರ್ಗದ ಭಾಷೆಗಳು ಕೆರೊಲಿನ ಪೂರ್ವ ಕರಾವಳಿಯಿಂದ ಉತ್ತರದ ಕಡೆಗೆ ಲ್ಯಾಬ್ರಡಾರ್ ವರೆಗಿನ ಪ್ರದೇಶಗಳಲ್ಲಿ ಬಳಕೆಯಲ್ಲಿವೆ. ಇಂಗ್ಲಿಷ್, ಫ್ರೆಂಚ್ ಭಾಷೆಗಳೊಡನೆ ಸಂಪರ್ಕ ಹೊಂದಿದ ಮೊದಲ ಭಾಷೆಗಳಿವು. ಅಮೆರಿಕದಲ್ಲಿ ಬಹಳಷ್ಟು ಸ್ಥಳವಾಚಕಗಳು ಈ ಭಾಷೆಗಳಿಂದ ಬಂದಿವೆ. ಉದಾಹರಣೆಗೆ: ಮಿಸಿಸಿಪಿ, ಮೆಸಾಚುಸೆಟ್ಸ್, ವಿಸ್ಕನ್ಸಿನ್, ಮಿಚಿಗನ್, ಇಲಿನಾಯ್, ಶಿಕಾಗೊ–ಇತ್ಯಾದಿ.

ಮೆಸಾಚುಸೆಟ್ಸ್ ಮಹತ್ತ್ವದ್ದಲ್ಲದ ಭಾಷೆಯಾದರೂ ಅಮೆರಿಕದಲ್ಲಿ ಬೈಬಲ್ಲಿನ ಪ್ರಥಮ ಭಾಷಾಂತರಕ್ಕೆ ಬಳಕೆಯಾದ್ದರಿಂದ ಪ್ರಸಿದ್ಧವಾಗಿದೆ. ಪೊವ್‌ಹತನ್, ದೆಲ್ವರೆ, ಮೊಹೆಗನ್, ಪೆನೊಬ್ ಸ್ಕಾಟ್, ಪಾನಮಕ್ಕೊಡಿ ಮತ್ತು ಮಿಚಮಕ್–ಇವು ಕರಾವಳಿಯ ಭಾಷೆಗಳು. ಇವುಗಳ ಉತ್ತರಕ್ಕೆ ಹಾಗೂ ಪಶ್ಚಿಮಕ್ಕೆ ಈ ನಾಲ್ಕು ಮುಖ್ಯ ಭಾಷೆಗಳಿವೆ: ಫಾಕ್ಸ್ (ವಿಸ್ಕನ್ಸಿನ್‌ನಲ್ಲಿ), ಕ್ರೀ (ಹಾತಸನ್ ಬೇನಲ್ಲಿ), ಮೆನೊಮಿನಿ (ಮಿಚಿಗನ್ ಮೇಲ್ಭಾಗದಲ್ಲಿ), ಒಜಿಬ್ವಾ (ಗ್ರೇಟ್ ಲೇಕ್ಸ್ ಉತ್ತರ ಭಾಗದಲ್ಲಿ). ಸಾಹಿತ್ಯೇತಿಹಾಸವಿಲ್ಲದ ಭಾಷೆಗಳ ತೌಲನಿಕ ಅಭ್ಯಾಸ ನಡೆಸಿರುವ ಲಿಯೊನಾರ್ಡ್ ಬ್ಲೂಮ್‌ಫೀಲ್ಡ್ ಈ ಭಾಷೆಗಳನ್ನು ಗಮನಿಸಿದ್ದಾನೆ. ಪೊಟಾವಟೋಮಿ (ಮಿಚಿಗನ್ನಿನ ಕೆಳಭಾಗ) ಇಲಿನಾಯ್ ಮತ್ತು ಶವ್ನಿ (ಟೆನೆಸ್ಸಿ) ಪರಸ್ಪರ ಸಂಬಂಧವುಳ್ಳ ಭಾಷೆಗಳು. ಬ್ಲ್ಯಾಕ್ ಫುಟ್, ಅಂಪಹೊ, ಚೆಯನ್ನಿ ಅದೇ ವರ್ಗದ ದೂರಸಂಬಂಧಿ ಭಾಷೆಗಳು.

ಈ ಭಾಷೆಗಳ ರಚನೆಯಲ್ಲೂ ಹೆಚ್ಚಿನ ವೈವಿಧ್ಯವಿದೆ. ಎಲ್ಲಕ್ಕೂ ಸಾಮಾನ್ಯವಾದ ಅಂಶಗಳು ಕೆಲವಿದ್ದರೂ ಪರಸ್ಪರ ಭಿನ್ನಾಂಶಗಳು ಸಾಕಷ್ಟಿವೆ. ಇವುಗಳ ರಚನೆ ಇಂಡೊ–ಯುರೋಪಿಯನ್ ಅಥವಾ ಇನ್ನಿತರ ಭಾಷಾವರ್ಗಗಳ ರಚನೆಗಿಂತ ಬಹು ಭಿನ್ನ. ಹೀಗಾಗಿ ಯುರೋಪಿಯನ್ನರು ಇವನ್ನು ಅಮೂರ್ತ ವಿಚಾರಗಳನ್ನು ವ್ಯಕ್ತಮಾಡಲಾರದ ಕಾಡುಭಾಷೆಗಳೆಂದು ತಪ್ಪಾಗಿ ತಿಳಿಯಲು ಅವಕಾಶವಾದಂತಾಗಿದೆ.

ಸಾಮಾನ್ಯವಾಗಿ ಈ ಎಲ್ಲ ಭಾಷೆಗಳಿಗೂ ಅನ್ವಯಿಸಿ ಒಂದು ಧ್ವನಿಮಾಸಮಾಮ್ನಾಯವನ್ನು ಕೊಡಬಹುದು. 1957ರಲ್ಲಿ ಪೀಯರ್ಸ್ ಎಂಬ ವಿದ್ವಾಂಸ 176 ಪ್ರಾತಿನಿಧಿಕ ಭಾಷೆಗಳನ್ನು ಆಯ್ದುಕೊಂಡು ಅಲ್ಲಿ 61 ವ್ಯಂಜನಧ್ವನಿಮಾಗಳಿವೆಯೆಂದು ಲೆಕ್ಕ ಹಾಕಿದ. ಅಂದರೆ ಇವುಗಳಿಗೆ ಸ್ವರಧ್ವನಿಮಾಗಳ ಮೊತ್ತವನ್ನು ಗರಿಷ್ಠ ಮಿತಿಯಲ್ಲಿ ಹಿಡಿದರೂ ಒಟ್ಟು ಧ್ವನಿಮಾಗಳ ಸಂಖ್ಯೆ 80ನ್ನು ಮೀರಲಾರದು. ಈ ಧ್ವನಿಮಾಗಳಲ್ಲಿ ಸಾಕಷ್ಟು ಇಂಡೊ–ಯೊರೋಪಿಯನ್ ಭಾಷೆಯ ಧ್ವನಿಮಾಗಳಿಗೆ ಸಂವಾದಿಯಾಗಿದ್ದರೂ ಕೆಲವು ತೀರ ಭಿನ್ನವಾಗಿ ಹೊರಗಿನವರಿಗೆ ಉಚ್ಚಾರಣೆಯಲ್ಲಿ ತೊಂದರೆ ಕೊಡುತ್ತವೆ. ಅಲ್ಲಿಯ ಬಹಳಷ್ಟು ಭಾಷೆಗಳಲ್ಲಿ ಪ್,ತ್,ಕ್ ಸ್ಪರ್ಶಗಳು ಕೆಲವೊಮ್ಮೆ ಕಂಠ್ಯ ಸ್ಥಾನದಲ್ಲಿ ಶ್ವಾಸನಿರೋಧದಿಂದ ಉಂಟಾಗುತ್ತವೆ. ಇದು ಉಳಿದವರಿಗೆ ನಿಜವಾಗಿಯೂ ಕಷ್ಟಸಾಧ್ಯಕೆಲಸ. ಅಲ್ಲದೆ ಈ ಭಾಷೆಗಳು ತಾನ (ಟೋನ್) ಭಾಷೆಗಳು. ಕೇವಲ ವಿವಿಧತಾನಸ್ತರಗಳ ವ್ಯತ್ಯಾಸದ ಮೂಲಕ ಅರ್ಥವ್ಯತ್ಯಾಸವಾಗುತ್ತದೆ. ಅದೇ ರೀತಿ ಇನ್ನೊಂದು ವೈಶಿಷ್ಟ್ಯವೆಂದರೆ, ಭಾಷೆಗಳು ಘೋಷ–ಅಘೋಷ ಸ್ವರಗಳಲ್ಲಿ, ಅಥವಾ ಪಿಸು (ವಿಸ್ಪರ್ಡ್) ಸ್ವರಗಳಲ್ಲಿ ಮಹತ್ತ್ವಪೂರ್ಣ ವ್ಯತ್ಯಾಸಗಳನ್ನು ಕಲ್ಪಿಸಿಕೊಂಡಿವೆ.

ಇನ್ನು ಈ ಭಾಷೆಗಳ ವ್ಯಾಕರಣ. ಮೊದಲನೆಯದಾಗಿ ಇವು ಬಹುಸಂಯೋಗಿ (ಪಾಲಿ ಸಿಂತೆಟಿಕ್) ಭಾಷೆಗಳು. ಅಂದರೆ ಒಂದೇ ಶಬ್ದದ ರಚನೆಯಲ್ಲಿ ಅನೇಕ ಅಂಶಗಳನ್ನು ಕೂಡಿಸಿರುವುದು. ಇಂಥ ಒಂದು ಶಬ್ದವನ್ನು ನಾವು ಇನ್ನಿತರ ಭಾಷೆಗಳಲ್ಲಿ ಭಾಷಾಂತರಿಸ ಬೇಕಾದಾಗ ಒಂದು ವಾಕ್ಯವನ್ನೇ ಬಳಸಿಕೊಳ್ಳಬೇಕಾಗುತ್ತದೆ.

ಉದಾಹರಣೆಗೆ, ಎಸ್ಕಿಮೊದಲ್ಲಿನ ಒಂದು ಶಬ್ದ–ಅನೆರ್ಕುವಾತಿತ್. ನೀವು ಹೊರಹೋಗು ವಂತೆ ಅವನು ಬಿನ್ನವಿಸುತ್ತಾನೆ – ಎಂದು ಇದಕ್ಕೆ ಅರ್ಥ. ಇಲ್ಲಿ ಆ – ಎಂದರೆ ಅವನು (ಕರ್ತೃ); ಅನೆರ್ – ಹೊರಹೋಗಲು (ಪ್ರಾರಂಭದ ಈ ಅ ಮುಂದಿನ ಆ ದೊಡನೆ ಸೇರಿಹೋಗಿದೆ); ಕುವಾ – ಬಿನ್ನವಿಸುತ್ತಾನೆ; ತಿತ್ ನೀನು.

ಅಲ್ಗೊಂಕ್ವಿಯನ್ ಭಾಷಾವರ್ಗದ ಕ್ರೀ ಭಾಷೆಯ ರೂಪಗಳನ್ನು ಉದಾಹರಿಸಬಹುದು.

| ಕ್ರಿಯಾರೂಪ | ಅರ್ಥ | ಪ್ರತ್ಯಯ | ಕರ್ತೃ ಕರ್ಮ |
|---|---|---|---|
| ನಿಸಾಕಿಹಾದ್ | ನಾನು ಅವನನ್ನು | – ಆವ್ | ಉ.ಪು. ಏಕ |
| ಪ್ರ.ಪು. ಏಕ | ಪ್ರೀತಿಸುತ್ತೇನೆ | | |
| ನಿಸಾಕಿಹಾವಕ್ | ನಾನು ಅವರನ್ನು | – ಅವಕ್ | “ |
| ಪ್ರ.ಪು. ಬಹು | ಪ್ರೀತಿಸುತ್ತೇನೆ | | |
| ಕಿಸಾಕಿಹಾವ್ | ನೀನು ಅವನನ್ನು | – ಆವ್ | ಮ.ಪು. ಏಕ |
| ಪ್ರ.ಪು. ಏಕ | ಪ್ರೀತಿಸುತ್ತೀ | | |
| ನಿಸಾಕಿಹಿಕ್ | ಅವನು ನನ್ನನ್ನು | – ಇಕ್ | ಪ್ರ.ಪು. ಏಕ |
| ಉ.ಪು. ಏಕ | ಪ್ರೀತಿಸುತ್ತಾನೆ | | |

ಮೇಲಿನ ಪ್ರಯೋಗಗಳಲ್ಲಿ ಒಂದೊಂದು ಪ್ರತ್ಯಯವೂ ಅನೇಕ ಅರ್ಥಗಳನ್ನು ಸೂಚಿಸುವುದನ್ನು ನೋಡಬಹುದು. ಈ ಪ್ರತ್ಯಯಗಳನ್ನು ಇದಕ್ಕಿಂತ ಮುಂದೆ ಒಡೆಯಲು ಸಾಧ್ಯವಿಲ್ಲ.

ಈ ಭಾಷೆಗಳ ವ್ಯಾಕರಣ ರಚನೆ ವೈವಿಧ್ಯಮಯವೂ ಸಂಕೀರ್ಣವೂ ಆಗಿದ್ದು, ಸ್ವಲ್ಪ ಪರಿಮಿತಿಯಲ್ಲಿ ಅದನ್ನು ವರ್ಣಿಸಲು ಸಾಧ್ಯವೇ ಇಲ್ಲ. ದೃಷ್ಟಾಂತಕ್ಕಾಗಿ ಕೆಲ ಉದಾಹರಣೆಗಳನ್ನು ಮಾತ್ರ ಕೊಡಬಹುದು. ಚಿಚಿ ಮೆಚೌ – ಜೊನಚ್ ಭಾಷೆ.

| | ಏಕವಚನ | ದ್ವಿವಚನ | ಬಹುವಚನ |
|---|---|---|---|
| ಉ.ಪು. | ನಾತ಼ು–ನನ್ನ ಚಿಕ್ಕಮ್ಮ | ನಾತ಼ುಸ್–ನಮ್ಮಿಬ್ಬರ ಚಿಕ್ಕಮ್ಮ | ನಾತ಼ುನ್–ನಮ್ಮ ಚಿಕ್ಕಮ್ಮ |
| ಮ.ಪು. | ಉತ಼ು–ನಿನ್ನ ಚಿಕ್ಕಮ್ಮ | ಉತ಼ುಸ್–ನಿಮ್ಮಿಬ್ಬರ ಚಿಕ್ಕಮ್ಮ | ಉತ಼ುನ್–ನಿಮ್ಮ ಚಿಕ್ಕಮ್ಮ |
| ಪ್ರ ಪು. | ಎರು–ಅವನ ಚಿಕ್ಕಮ್ಮ | ಎಝುಸ್–ಅವರಿಬ್ಬರ ಚಿಕ್ಕಮ್ಮ | ಎಝುನ್–ಅವರ ಚಿಕ್ಕಮ್ಮ |

ಮೇಲಿನ ಉದಾಹರಣೆಗಳಿಂದ ನಾಮಪದಗಳೊಡನೆ ಸರ್ವನಾಮಗಳು ಕೂಡಿದ್ದು ಮತ್ತು ಕಾಂಡ (ಸ್ಟೆಮ್) ಚಿಕ್ಕಮ್ಮ ಪ್ರತಿಪುರುಷದಲ್ಲೂ ಭಿನ್ನವಾಗುವುದೂ ಕಂಡುಬರುತ್ತದೆ.

ಶಬ್ದಮಿತಿಯಲ್ಲೂ ಅತ್ಯಂತ ವ್ಯತ್ಯಾಸವಿದೆ. ಶಬ್ದ ಶಬ್ದದಲ್ಲಿ ಕೆಲವೇ ಧ್ವನಿಮಾಗಳಿಂದ ಅನೇಕ ಧ್ವನಿಮಾಗಳಿರಬಹುದು. ಅತಿ ಉದ್ದ ಶಬ್ದವೊಂದನ್ನು ಉದಾಹರಿಸಬಹುದು. ದಕ್ಷಿಣ ಪೈಯುತೆ ಭಾಷೆಯಲ್ಲಿ ವೀ–ತೊ–ಕುಚುಮ್–ಪುನ್ ಕು–ರುಗನಿ–ಯುನ್ನಿ–ವ–ನ್ತು–ಮ್ ಎಂದರೆ ಕುಳಿತು ಚೂರಿಯಿಂದ ಕುರಿ, ಆಕಳು ಅಥವಾ ಹೋರಿಯನ್ನು ಕೊಯ್ಯುವರು ಎಂದರ್ಥ.

ಈ ಮೇಲಿನ ವಿವರಣೆಯಿಂದ ಬೇರೆ ಯಾವುದೋ ಒಂದು ವ್ಯಾಕರಣವನ್ನು ಅದರ ಮೇಲೆ ಹೇರಲು ಸಾಧ್ಯವಿಲ್ಲ, ಅದಕ್ಕೆ ತನ್ನದೆ ಆದ ರಚನೆಯಿದೆಯೆಂಬುದು ಸ್ಪಷ್ಟವಾಗುತ್ತದೆ. (ಜಿ.ಎಸ್.ಕೆ.)

**ಅಮೆರಿಕದ ಇತಿಹಾಸ :** ಪ್ರಪಂಚದಲ್ಲೇ ಅತ್ಯಂತ ಸಂಪದ್ಭರಿತ, ಪ್ರಭಾವಯುತ ರಾಷ್ಟ್ರವಾದ ಅಮೆರಿಕದ ಇತಿಹಾಸ ಗಮನಾರ್ಹವಾದುದು. ಅದು ಹದಿನೆಂಟನೆಯ ಶತಮಾನ ದಿಂದೀಚೆಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಗಳಿಗೆ ಸ್ಫೂರ್ತಿ ಉತ್ತೇಜನಗಳನ್ನಿತ್ತಿದೆ. ಅದೊಂದು ಭವ್ಯ ರೋಮಾಂಚಕಾರಿ ಇತಿಹಾಸ.

ಕೊಲಂಬಸ್ಸನ ಸಮುದ್ರಯಾನ ಸಾಹಸದಿಂದ ಪಶ್ಚಿಮ ಮತ್ತು ಪೂರ್ವದೇಶಗಳ ಸಮಾಗಮಕ್ಕೆ ಅನುಕೂಲವಾಯಿತು. ಆತ ಫ್ಲಾರಿಡ ತೀರ ಪ್ರದೇಶದ ಬಹಾಮಾಸ್ ಗುಂಪಿನ ಸಾನ್ ಸಾಲ್ವಡಾರ್ ದ್ವೀಪವನ್ನು ಕಂಡುಹಿಡಿದು (1492) ತಾನು ಪೌರಸ್ತ್ಯ ದೇಶಗಳಿಗೆ ಜಲಮಾರ್ಗವನ್ನು ಕಂಡುಹಿಡಿದನೆಂದು ತಿಳಿದು ಅಲ್ಲಿನ ನಿವಾಸಿಗಳನ್ನು ಇಂಡಿಯನ್ಸ್ ಎಂದು ಕರೆದ. ಅನಂತರ ಅಮೆರಿಗೊ ವೆಸ್ಪೂಚಿಯ ಸಾಹಸದಿಂದಾಗಿ ಆ ಭೂಭಾಗಕ್ಕೆ ಅವನ ಹೆಸರನ್ನೇ ಇಟ್ಟು ಅಮೆರಿಕವೆಂದು ಕರೆಯಲಾಯಿತು. ಅಮೆರಿಕ ಹೊಸ ಪ್ರಪಂಚವೆಂದು ಕರೆಯಲ್ಪಟ್ಟರೂ ಅದು ಹಳೆಯ ಪ್ರಪಂಚವೇ ಆಗಿತ್ತು. ಸಮುದ್ರಯಾನ ಸಾಹಸಿಗಳು ಕಂಡುಹಿಡಿದ ಭೂಭಾಗ ಪೌರಸ್ತ್ಯ ಸಂಸ್ಕೃತಿಗಳ ಮೂಲಾಂಶಗಳನ್ನು ಹೊಂದಿದ್ದ ಜನಾಂಗಗಳದ್ದಾಗಿದ್ದಿತು. ಈ ಸಂಸ್ಕೃತಿಗಳ ಕೇಂದ್ರಸ್ಥಾನಗಳು ಉತ್ತರ ಅಮೆರಿಕ, ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳ ಎಲ್ಲೆಗಳಲ್ಲಿ ಕಂಡುಬರುತ್ತವೆ. ಯುಕಾಟನ್ನಿನ ಮಾಯ ಜನ, ಮೆಕ್ಸಿಕೊದ ಆಜ್ಟೆಕ್ ಜನ ಮತ್ತು ಪೆರುವಿನ ಇಂಕ ಜನ, ಸಂಯುಕ್ತಸಂಸ್ಥಾನಗಳ ಆಗ್ನೇಯ ಭಾಗದ ಪ್ಯೂಬ್ಲೋ ನಿವಾಸಿಗಳು, ಸ್ಥಿರವಾಗಿ ನೆಲಸಿ ಉತ್ತಮ ನಾಗರಿಕತೆಯನ್ನು ಬೆಳೆಸಿದ್ದರು. ಅಟ್ಲಾಂಟಿಕ್ ತೀರ ಪ್ರದೇಶದಲ್ಲಿದ್ದ ಇಂಡಿಯನ್ನರು ಅಲೆಮಾರಿ ಜನ. ಈ ನಾಗರಿಕತೆಗಳ ಜನರಿಗೆ ದೊಡ್ಡ ಪಟ್ಟಣಗಳನ್ನು, ದೇವಾಲಯಗಳನ್ನು, ಅರಮನೆಗಳನ್ನು ಕಟ್ಟುವುದು ಗೊತ್ತಿತ್ತು; ಬರೆವಣಿಗೆ, ಮಣ್ಣಿನ ಪಾತ್ರೆಗಳನ್ನು ಮಾಡುವುದು, ಸಾಮಾಜಿಕ ವ್ಯವಸ್ಥೆ, ಕಲೆ ಮೊದಲಾದ ವಿಷಯಗಳು ತಿಳಿದಿದ್ದುವು. ಮೂಢನಂಬಿಕೆಗಳನ್ನು ಅತಿಯಾಗಿ ಬೆಳೆಸಿಕೊಂಡಿದ್ದರು; ನರಬಲಿ ಕೊಡುವ ಪದ್ಧತಿ ಇವರಲ್ಲಿ ರೂಢಿಯಲ್ಲಿತ್ತು. ಇವುಗಳಲ್ಲದೆ ಪೆರುವಿನ ಇಂಕ ಜನ ಹೇರಳವಾಗಿ ದೊರೆಯುತ್ತಿದ್ದ ಚಿನ್ನ ಮತ್ತು ಬೆಳ್ಳಿಯನ್ನು ಮನೆಕಟ್ಟುವ ಇಟ್ಟಿಗೆಗಳನ್ನಾಗಿ ಬಳಸುತ್ತಿದ್ದರು. 16ನೆಯ ಶತಮಾನದಲ್ಲಿ ಸ್ಪೇನಿನವರು ಮತ್ತು ಪೋರ್ಚುಗೀಸರು, ವಸಾಹತು ಸ್ಥಾಪನೆ ಮತ್ತು ವ್ಯಾಪಾರದ ದೃಷ್ಟಿಯಿಂದ ಆ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡ ಮೇಲೆ, ಆ ನಾಗರಿಕತೆಗಳ ನೆಲೆವೀಡುಗಳು ನಿರ್ನಾಮಗೊಂಡು, ಇಂದು ಅವುಗಳ ವಿಷಯ ಒಂದು ಕಟ್ಟು ಕಥೆಯಂತಾಗಿದೆ. ಅಮೆರಿಕದ ಇನ್ನಿತರ ಭಾಗಗಳಲ್ಲಿ ವಾಸಮಾಡಿಕೊಂಡಿದ್ದ ರೆಡ್ ಇಂಡಿಯನ್ನರ ಸಾಹಸ ಶೌರ್ಯಗಳು ಯುರೋಪಿನವರ ಆಧುನಿಕ ಯುದ್ಧಸಲಕರಣೆಗಳ ಮುಂದೆ ವಿಫಲಗೊಂಡು ಅವರ ಪ್ರಭಾವ ಕುಗ್ಗಿತು.

**ವಸಾಹತುಗಳ ಸ್ಥಾಪನೆ:** 15ನೆಯ ಶತಮಾನದ ಅಂತ್ಯಭಾಗದಲ್ಲಿ ಕೊಲಂಬಸ್, ಅಮೆರಿಗೊ ವೆಸ್ಪೂಚಿಗಳ ಅನಂತರ ಇಂಗ್ಲಿಷ್ ನಾವಿಕ ಜಾನ್ ಕ್ಯಾಬಟ್ ಮತ್ತು ಫ್ರೆಂಚರ ಜಾಕ್ವಿಯಸ್ ಕಾರ್ಡಿಯರ್ ಎಂಬ ನಾವಿಕರು ಅಮೆರಿಕವನ್ನು ಸಂದರ್ಶಿಸಿದರು. ಪರಿಣಾಮವಾಗಿ ಸ್ಪೇನಿನವರು, ಇಂಗ್ಲಿಷರು, ಫ್ರೆಂಚರು ಕೆಲವು ಕಾಲದಮೇಲೆ ಡಚ್ಚರು ಮತ್ತು ಸ್ವೀಡನ್ನಿನವರು ಅಮೆರಿಕದ ವಿವಿಧ ಭಾಗಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಇವರಲ್ಲಿ ಸ್ಪೇನಿನವರು, ಇಂಗ್ಲಿಷರು ಮತ್ತು ಫ್ರೆಂಚರು ಮುಖ್ಯರು. ಸ್ಪೇನಿನವರು ಫ್ಲಾರಿಡದಲ್ಲಿ ಸ್ಥಾಪಿಸಿದ್ದೇ ಅಮೆರಿಕದಲ್ಲಿ ಯುರೋಪಿಯನ್ನರ ಪ್ರಥಮ ವಸಾಹತು. ಸ್ವಲ್ಪ ಕಾಲದಲ್ಲಿಯೇ ಸ್ಪೇನಿನವರು ತಮ್ಮ ಅಧಿಕಾರವನ್ನು ಪಶ್ಚಿಮದಲ್ಲಿ ಕ್ಯಾಲಿಫೋರ್ನಿಯದವರೆಗೆ ವಿಸ್ತರಿಸಿದರು. ಫ್ರೆಂಚರು ತಮ್ಮ ವಸಾಹತುಗಳನ್ನು ಮೊದಲು ಕೆನಡದಲ್ಲಿ ಸ್ಥಾಪಿಸಿ ಅನಂತರ ಲೂಸಿಯಾನದವರೆಗೆ ತಮ್ಮ ಪ್ರಭಾವವನ್ನು ವಿಸ್ತರಿಸಲೆತ್ನಿಸಿದರು. ಬ್ರಿಟಿಷರ ವಸಾಹತುಗಳು ಹೆಚ್ಚಾಗಿ ಅಟ್ಲಾಂಟಿಕ್ ತೀರ ಪ್ರದೇಶದಲ್ಲಿ ಸ್ಥಾಪಿತವಾಗಿದ್ದವು. ಅವರು 1607ರಲ್ಲಿ ವರ್ಜಿನಿಯದಲ್ಲಿನ ಜೇಮ್ಸ್ ಟೌನಿನಲ್ಲಿ ಸ್ಥಾಪಿಸಿದ ಪಾಳಯವೇ ಅವರ ಪ್ರಥಮ ವಸಾಹತು. ಈ ವಸಾಹತುಗಳು ಬ್ರಿಟಿಷ್ ಚಕ್ರವರ್ತಿಯಿಂದ ಅಪ್ಪಣೆ ಪಡೆದ ಕಂಪನಿಗಳಿಂದ ಸ್ಥಾಪಿಸಲ್ಪಟ್ಟಿದ್ದವು. 1620ರಲ್ಲಿ ಅಮೆರಿಕವನ್ನು ತಲುಪಿದ ಕ್ರೈಸ್ತ ಪಾದ್ರಿಗಳು ಮತಪ್ರಸಾರಕ್ಕಾಗಿ ಮತ್ತೊಂದು ರೀತಿಯ ವಸಾಹತುಗಳನ್ನು ಸ್ಥಾಪಿಸಿದರು. ಇಂಗ್ಲೆಂಡಿನ ಧನಿಕ ವರ್ತಕರು ಮೇರಿಲ್ಯಾಂಡ್ ಮತ್ತು ಪೆನ್ಸಿಲ್ವೇನಿಯಗಳಲ್ಲಿ ಸ್ಥಾಪಿಸಿದ್ದ ವಸಾಹತುಗಳು ಮತ್ತೊಂದು ರೀತಿಯವು. ಇವು ಬ್ರಿಟಿಷ್ ಚಕ್ರವರ್ತಿಯಿಂದ ಆಸ್ತಿಪಾಸ್ತಿಗಳನ್ನು ಹೊಂದುವ ಅನುಕೂಲತೆಯನ್ನು ಪಡೆದಿದ್ದವು. ಅವುಗಳಿಗೆ ಪಶ್ಚಿಮದಲ್ಲಿದ್ದ ಫ್ರೆಂಚರ ವಸಾಹತುಗಳಿಂದ ತೊಂದರೆ ಇತ್ತಾದಕಾರಣ ಈ ವಸಾಹತುಗಳಿಗೆ ಬ್ರಿಟಿಷ್ ನೌಕಾಪಡೆಯ ರಕ್ಷಣೆ ಇತ್ತು. ಏಕೆಂದರೆ ಫ್ರೆಂಚರು ಕೆನಡದಿಂದ ಲೂಸಿಯಾನದವರೆಗೂ ಕೋಟೆಗಳನ್ನು ನಿರ್ಮಿಸಬೇಕೆಂಬ ಪ್ರಯತ್ನದಲ್ಲಿದ್ದರು. ಸಪ್ತವಾರ್ಷಿಕ ಯುದ್ಧದಲ್ಲಿ (1750–65) ಫ್ರೆಂಚರು ಮತ್ತು ಇಂಗ್ಲಿಷರು ಯುರೋಪು ಮತ್ತು ಭಾರತದಲ್ಲೇ ಅಲ್ಲದೆ ಅಮೆರಿಕದಲ್ಲೂ ಹೋರಾಡಿದರು. ಯುದ್ಧದಲ್ಲಿ ಫ್ರೆಂಚರು ಸೋತು ಅಮೆರಿಕದಲ್ಲಿದ್ದ ತಮ್ಮ ವಸಾಹತುಗಳನ್ನು ಇಂಗ್ಲಿಷರಿಗೆ ಬಿಟ್ಟುಕೊಟ್ಟರು. ಉತ್ತರ ಅಮೆರಿಕದಲ್ಲಿ ಸ್ಥಾಪಿತವಾಗಿದ್ದ ಬ್ರಿಟಿಷರ ಹದಿಮೂರು ಕಾಲೊನಿಗಳು: ಮೆಸಾಚುಸೆಟ್ಸ್, ನ್ಯೂ ಹ್ಯಾಂಪ್, ರೋಡ್ ಐಲೆಂಡ್, ಕನೆಕ್ಟಿಕಟ್, ಪೆನ್ಸಿಲ್ವೇನಿಯ, ನ್ಯೂಯಾರ್ಕ್, ನ್ಯೂಜೆರ್ಸಿ, ಕಿಲಾವೇರ್, ಮೇರಿಲ್ಯಾಂಡ್, ವರ್ಜಿನಿಯ, ನಾರ್ತ್‌ಕೆರೊಲಿನ, ಸೌತ್ ಕೆರೊಲಿನ ಮತ್ತು ಜಾರ್ಜಿಯ. ಇವುಗಳೆಲ್ಲ ಇಂಗ್ಲೆಂಡಿನ ರಕ್ಷಣೆಯಲ್ಲಿದ್ದು ಪ್ರತಿಯೊಂದೂ ಒಬ್ಬೊಬ್ಬ ಇಂಗ್ಲಿಷ್ ಗವರ್ನರ್ ಮೇಲ್ವಿಚಾರಣೆಯಲ್ಲಿತ್ತು. ಈ ರೀತಿಯ ರಾಜಕೀಯ ವ್ಯವಸ್ಥೆಯಲ್ಲಿದ್ದ ವಸಾಹತುಗಳಲ್ಲಿ 18ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಪಂಚದ ಇತಿಹಾಸದಲ್ಲೇ ಮೊದಲ ಬಾರಿಗೆ ಕ್ರಾಂತಿ ನಡೆಯಿತು. ಈ ಕ್ರಾಂತಿಯನ್ನು ಅಮೆರಿಕದ ಸ್ವಾತಂತ್ರ್ಯ ಹೋರಾಟವೆಂದು ಕರೆಯಲಾಗುತ್ತದೆ.

**ಸ್ವಾತಂತ್ರ್ಯ ಹೋರಾಟ:** 1775ರಲ್ಲಿ ಪ್ರಾರಂಭವಾಯಿತು. ಇದಕ್ಕೆ ಕಾರಣಗಳು ಅನೇಕ. ಅವುಗಳಲ್ಲಿ ರಾಜಕೀಯ, ಆರ್ಥಿಕ ಮತ್ತು ರಕ್ಷಣಾ ವಿಷಯಕ್ಕೆ ಸಂಬಂಧಪಟ್ಟ ಕಾರಣಗಳು ಮುಖ್ಯ. ರಾಜಕೀಯವಾಗಿ ವಸಾಹತುಗಳ ಆಡಳಿತ ವ್ಯವಸ್ಥೆಯಲ್ಲಿ ಅನೇಕ ಲೋಪದೋಷಗಳಿದ್ದವು. ಪ್ರತಿಯೊಂದು ವಸಾಹತೂ ಪ್ರತ್ಯೇಕ ಆಡಳಿತವ್ಯವಸ್ಥೆಯನ್ನು ಹೊಂದಿ ಬ್ರಿಟಿಷ್ ಚಕ್ರವರ್ತಿಯ ಪರವಾಗಿ ಆಡಳಿತ ನಡೆಸುವ ರಾಜ್ಯಪಾಲನ ಅಧೀನದಲ್ಲಿತ್ತು. ರಾಜ್ಯಪಾಲರು ಪ್ರತಿನಿಧಿಸಭೆಗಳನ್ನು ಕಡೆಗಣಿಸಿ, ನಿರಂಕುಶಪ್ರಭುಗಳಂತೆ ವರ್ತಿಸುತ್ತಿದ್ದು ಜನನಿಂದೆಗೆ ಗುರಿಯಾಗಿದ್ದರು. ಇದಲ್ಲದೆ ಆ ಜನರ ಪ್ರತಿನಿಧಿಗಳನ್ನು ಹೊಂದದೆ ಇದ್ದ ಬ್ರಿಟನ್ನಿನ ಪಾರ್ಲಿಮೆಂಟ್ ಸಭೆ ವಸಾಹತುಗಳಿಗೆ ಕಾನೂನುಗಳನ್ನು ಮಾಡುವುದೂ ಅವರಲ್ಲಿ ಅತೃಪ್ತಿ ಅಸಮಾಧಾನಗಳು ಬೆಳೆಯುವಂತೆ ಮಾಡಿತ್ತು. ಆರ್ಥಿಕ ವ್ಯವಸ್ಥೆಯಲ್ಲೂ ಅನೇಕ ಕುಂದುಕೊರತೆಗಳಿದ್ದು ಕ್ರಾಂತಿಗೆ ಪ್ರೋತ್ಸಾಹ ದೊರಕಿತು. ವಸಾಹತುಗಳು ತಮ್ಮ ಹಿತಕ್ಕಾಗಿಯೇ ಇರುವುವೆಂದು ತಿಳಿದು ಬ್ರಿಟಿಷರು ಅವುಗಳ ವ್ಯಾಪಾರ ವಾಣಿಜ್ಯಗಳ ಮೇಲೆ ಅನೇಕ ರೀತಿಯ ನಿರ್ಬಂಧಗಳನ್ನು ಹಾಕಿದ್ದರು. ವಸಾಹತುಗಳು ತಮ್ಮಲ್ಲಿನ ಕಚ್ಚಾಪದಾರ್ಥಗಳನ್ನು ಬ್ರಿಟನ್ನಿಗಲ್ಲದೆ ಮತ್ತಾವ ದೇಶಗಳಿಗೂ ಕಳುಹಿಸಕೂಡದೆಂದೂ ನೇರವಾಗಿ ಯಾವ ದೇಶದೊಂದಿಗೂ ವ್ಯಾಪಾರಸಂಪರ್ಕವನ್ನಿಟ್ಟುಕೊಳ್ಳಕೂಡದೆಂದೂ ವಿಧಿಸಿದ್ದು ಒಂದು ನಿದರ್ಶನ. ಇಂಥ ಕ್ರಮ ಕಳ್ಳ ವ್ಯಾಪಾರಕ್ಕೆ ಪ್ರೋತ್ಸಾಹಕೊಟ್ಟಿತು. ಇದನ್ನರಿತ ಬ್ರಿಟಿಷ್ ಸರ್ಕಾರ ಅವುಗಳ ಮೇಲೆ ಉಗ್ರಕ್ರಮಗಳನ್ನು ಕೈಗೊಂಡಿತು. ಇದರಿಂದ ಕೋಪಗೊಂಡ ವಸಾಹತುಗಳು ದಂಗೆಯೆದ್ದುವು. ಇವುಗಳಲ್ಲದೆ ರಕ್ಷಣಾ ವೆಚ್ಚದ ಸಮಸ್ಯೆಯೂ ಕ್ರಾಂತಿಗೆ ಕಾರಣವಾಯಿತು. ಸಪ್ತವಾರ್ಷಿಕ ಯುದ್ಧದಲ್ಲಿ ಬ್ರಿಟಿಷರು ಗೆದ್ದರೂ ಅಪಾರ ಹಾನಿಯನ್ನನುಭವಿಸಿದ್ದರು. ಯುದ್ಧದಿಂದಾಗಿ ಅವರ ಬೊಕ್ಕಸ ಬರಿದಾಯಿತು. ಅಲ್ಲದೆ ಈ ಯುದ್ಧವಾದಮೇಲೆ ಅಮೆರಿಕನ್ನರು ಮತ್ತೆ ದಂಗೆ ಎದ್ದುದರಿಂದ ಅವರ ವಿರುದ್ಧ ಹೋರಾಡಲು ಅಗತ್ಯವಾದ ಭೂ ಮತ್ತು ನೌಕಾಬಲವನ್ನು ನಿರ್ಮಿಸಲು ಆಲೋಚಿಸಿದ ಬ್ರಿಟಿಷ್ ಸರ್ಕಾರ, ವಸಾಹತುಗಳ ದಿನಬಳಕೆಯ ವಸ್ತುಗಳಾದ ಸಕ್ಕರೆ, ಚಹ ಹಾಗೂ ಕಾಗದಪತ್ರಗಳ ಮೇಲೆ ಹೊಸ ತೆರಿಗೆಗಳನ್ನು ಹಾಕಿ ಹಣ ಕೊಡಿಸಲು ಯತ್ನಿಸಿತು. ಕ್ರೋಧಗೊಂಡ ಅಮೆರಿಕನ್ನರು ಅವುಗಳನ್ನು ತೀವ್ರವಾಗಿ ವಿರೋಧಿಸಿದ್ದಲ್ಲದೆ ತಮ್ಮ ಪ್ರತಿನಿಧಿಗಳಿಲ್ಲದ ಶಾಸನಸಭೆ ತಮ್ಮ ಮೇಲೆ ವಿಧಿಸುವ ಯಾವ ಕಾಯಿದೆಗೂ ತಾವು ಬದ್ಧರಲ್ಲವೆಂದು ಹೇಳಿಬಿಟ್ಟರು.

1773ರಲ್ಲಿ ನಡೆದ ಬಾಸ್ಟನ್ ಘಟನೆಯಿಂದ ಅಮೆರಿಕದ ಸ್ವಾತಂತ್ರ್ಯ ಹೋರಾಟ ಆರಂಭವಾಯಿತೆಂದು ಹೇಳಬಹುದು. ಬಾಸ್ಟನ್ ರೇವಿನ ಕೆಲವು ಜನ ಹೊಸ ತೆರಿಗೆಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಸಲುವಾಗಿ ಈಸ್ಟ್ ಇಂಡಿಯ ಕಂಪನಿಗೆ ಸೇರಿದ ಚಹ ತುಂಬಿದ ಕೆಲವು ಹಡಗುಗಳನ್ನು ಲೂಟಿ ಮಾಡಿ ಅವುಗಳಲ್ಲಿದ್ದ ಚಹವನ್ನು ಸಮುದ್ರಕ್ಕೆಸೆದರು. ಉದ್ರೇಕಗೊಂಡ ಬ್ರಿಟಿಷ್ ಸರ್ಕಾರ ಗಲಭೆಕೋರರ ವಿರುದ್ಧ ಉಗ್ರಕ್ರಮಗಳನ್ನು ಕೈಗೊಂಡು ಬಾಸ್ಟನ್ ರೇವುಪಟ್ಟಣವನ್ನು ಮುಚ್ಚಿ ಮೆಸಾಚುಸೆಟ್ಸ್ ವಸಾಹತಿಗೆ ಸ್ವಯಮಾಡಳಿತವನ್ನು ರದ್ದು ಮಾಡಿತು. ಈ ಕ್ರಮ ವಸಾಹತುಗಳವರನ್ನು ರೊಚ್ಚಿಗೆಬ್ಬಿಸಿತು. ಅವರು ಶಸ್ತ್ರಕದನಕ್ಕೆ ಸಿದ್ಧರಾದರು; 1774ರಲ್ಲಿ ವಸಾಹತಿನವರು ತಮ್ಮತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಮರೆತು ಫಿಲಡೆಲ್ಫಿಯದಲ್ಲಿ ಸಮಾವೇಶಗೊಂಡು ಹಕ್ಕುಗಳ ಘೋಷಣೆಯೊಂದನ್ನು ಹೊರಡಿಸಿ ಬ್ರಿಟನ್ನಿನ ವಿರುದ್ಧ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಲು ತೀರ್ಮಾನ ಕೈಗೊಂಡು ಜಾರ್ಜ್ ವಾಷಿಂಗ್‌ಟನ್ ಎಂಬುವನನ್ನು ಮುಖ್ಯ ನಾಯಕನನ್ನಾಗಿ ಮಾಡಿಕೊಂಡರು.

1775ರಲ್ಲಿ ಮೊದಲ ಕಾಳಗ ಜರುಗಿತು. ಹೋರಾಟದ ಮೊದಲ ದಿನಗಳಲ್ಲಿ ಅಮೆರಿಕನ್ನರು ಸುಸಜ್ಜಿತರಾದ ಬ್ರಿಟಿಷ್ ಸೈನಿಕರಿಂದ ಬ್ರೂಕ್ಲಿನ್ (1777) ಮತ್ತು ಬ್ರಾಂಡಿವೈನ್ (1777) ಮೊದಲಾದ ಸ್ಥಳಗಳಲ್ಲಿ ಸೋತರು. ಆದರೂ ಧೃತಿಗೆಡದೆ ಹೋರಾಟವನ್ನು ಮುಂದುವರಿಸಿದರು. 1776ರ ಜುಲೈ 4 ರಂದು ಥಾಮಸ್ ಜೆಫರ್‌ಸನ್ನನಿಂದ ನಿರೂಪಿತವಾದ ವಸಾಹತುಗಳ ಸ್ವಾತಂತ್ರ್ಯ ಘೋಷಣೆಯೊಂದನ್ನು ಹೊರಡಿಸಿದರು. 1777ರ ಅಕ್ಟೋಬರ್ 17ರಲ್ಲಿ ಜಾರ್ಜ್ ವಾಷಿಂಗ್‌ಟನ್ನನ ನೇತೃತ್ವದಲ್ಲಿ ಅಮೆರಿಕದ ಸೈನಿಕರು ಸಾರಟೋಗ ಯುದ್ಧದಲ್ಲಿ ಮೊದಲಬಾರಿ ವಿಜಯ ಸಂಪಾದಿಸಿದರು. ಇದು ಅವರ ಬಿಡುಗಡೆಯ ಹೋರಾಟದಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿತು. ಇದಾದಮೇಲೆ ಫ್ರಾನ್ಸ್ ಮತ್ತು ಸ್ಪೇನ್ ದೇಶಗಳು ಸಪ್ತವಾರ್ಷಿಕ ಯುದ್ಧದಲ್ಲಿ ತಮಗುಂಟಾದ ಅಪಜಯದ, ಅವಮಾನದ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ಅಮೆರಿಕನ್ನರಿಗೆ ಸಹಾಯ ಮಾಡಲು ಮುಂದೆ ಬಂದುವು. ಇದರಿಂದ ಅಮೆರಿಕನ್ನರ ಪ್ರಾಬಲ್ಯ ಹೆಚ್ಚಿ ಅವರು ವಿಜಯಗಳ ಮೇಲೆ ವಿಜಯಗಳನ್ನು ಗಳಿಸಿದರು. ಕೊನೆಗೆ 1781ರ ಅಕ್ಟೋಬರ್ 19ರಲ್ಲಿ ಬ್ರಿಟಿಷರ ದಂಡನಾಯಕನಾದ ಕಾರ್ನ್‌ವಾಲೀಸ್, ಯಾರ್ಕ್‌ಟೌನ್ ಎಂಬಲ್ಲಿ ಅಮೆರಿಕನ್ನರಿಗೆ ಸೋತು ಶರಣಾಗತನಾದ. ಅಲ್ಲಿಗೆ ಅಮೆರಿಕದ ಸ್ವಾತಂತ್ರ್ಯ ಯುದ್ಧ ಮುಕ್ತಾಯಗೊಂಡು, 1783ರಲ್ಲಿ ಆದ ಪ್ಯಾರಿಸ್ ಒಪ್ಪಂದದ ಪ್ರಕಾರ ಅಮೆರಿಕದ ವಸಾಹತುಗಳು ಸ್ವತಂತ್ರವೆಂದು ಬ್ರಿಟಿಷ್

ಸರ್ಕಾರ ಒಪ್ಪಿಕೊಂಡಿತು. ಅಮೆರಿಕ ಸಂಯುಕ್ತಸಂಸ್ಥಾನ ಹೀಗೆ ಜನ್ಮತಾಳಿತು. ಪೂರ್ವತೀರದ ಹದಿಮೂರು ಪ್ರಾಂತ್ಯಗಳ ಈ ಸಾಹಸದಿಂದ ರೂಪುಗೊಂಡ ಸಂಯುಕ್ತಸಂಸ್ಥಾನ ಪೆಸಿಫಿಕ್ ಸಾಗರದವರೆಗೂ ವ್ಯಾಪಿಸಿ ಉತ್ತರ ಅಮೆರಿಕದ ಮಧ್ಯಭಾಗವನ್ನೆಲ್ಲ ಒಳಗೊಂಡಿದೆ.

**ಬೆಳೆವಣಿಗೆ :** ಬ್ರಿಟಿಷರ ವಿರುದ್ಧ ಹೋರಾಡಿದ 13 ವಸಾಹತುಗಳು ಶಾಶ್ವತವಾದ ಒಕ್ಕೂಟವೊಂದನ್ನೇರ್ಪಡಿಸಿಕೊಂಡುವು. ಫಿಲಡೆಲ್ಫಿಯದಲ್ಲಿ 1787ರಲ್ಲಿ ಕೆಲವು ದೇಶಾಭಿಮಾನಿಗಳೂ ರಾಜಕೀಯ ತಜ್ಞರೂ ಸಭೆಸೇರಿ ತಮ್ಮ ರಾಷ್ಟ್ರಕ್ಕೆ ಪ್ರಪಂಚದಲ್ಲಿ ಮತ್ತೆಲ್ಲಿಯೂ ಕಾಣಸಿಗದಂಥ ಒಂದು ಹೊಸ ರಾಜ್ಯಾಂಗವನ್ನು ರಚಿಸಿಕೊಂಡರು. ಇದರ ರಚನೆಯಲ್ಲಿ ಅಲೆಗ್ಸಾಂಡರ್ ಹ್ಯಾಮಿಲ್ಟನ್, ಜೇಮ್ಸ್ ಮ್ಯಾಡಿಸನ್, ಥಾಮಸ್ ಜೆಫರ್‌ಸನ್ ಮೊದಲಾದವರು ಬಹು ಮುಖ್ಯ ಪಾತ್ರವಹಿಸಿದ್ದರು. ಲೇಖರೂಪ ರಾಜ್ಯಾಂಗಗಳಲ್ಲಿ ಅಮೆರಿಕದ ರಾಜ್ಯಾಂಗವೇ ಮೊಟ್ಟಮೊದಲನೆಯದು. ಇದರ ನಿರ್ಮಾಪಕರು ಬಹುಮಟ್ಟಿಗೆ ರೂಸೋ ಮತ್ತು ಮಾಂಟೆಸ್ಕೊ ವಿಚಾರಧಾರೆಗಳಿಂದ ಪ್ರೇರಿತರು. ಇವರ ರಾಜ್ಯಾಂಗದ ಪ್ರಕಾರ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ಪ್ರತ್ಯೇಕವಾಗಿದ್ದು, ಆಡಳಿತ ನಿರ್ವಹಣೆಯ ಜವಾಬ್ದಾರಿ ಕೇಂದ್ರದಲ್ಲಿ ಹೆಚ್ಚಿನ ಅಧಿಕಾರವನ್ನು ಹೊಂದಿರುವ ಅಧ್ಯಕ್ಷನ ಕೈಲಿದೆ. ರಾಷ್ಟ್ರಕ್ಕೆ ಶಾಸನ ಮಾಡುವ ಹೊಣೆಗಾರಿಕೆ ಪ್ರತಿನಿಧಿಸಭೆ ಮತ್ತು ಸೆನೆಟ್ಟುಗಳಿಗೆ ಸೇರಿದೆ. ಇವರ ರಾಜಕೀಯ ರಂಗದಲ್ಲಿ ಮುಖ್ಯವಾಗಿ ರಿಪಬ್ಲಿಕ್ ಮತ್ತು ಡೆಮೊಕ್ರೆಟಿಕ್ ಎಂಬ ಎರಡು ಪಕ್ಷಗಳಿವೆ. ರಿಪಬ್ಲಿಕ್ ಪಕ್ಷಕ್ಕೆ ಆನೆಯೂ ಡೆಮೊಕ್ರೆಟಿಕ್ ಪಕ್ಷಕ್ಕೆ ಕತ್ತೆಯೂ ಮುಖ್ಯ ಚಿಹ್ನೆಗಳು. ಶ್ರೇಷ್ಠನ್ಯಾಯಾಲಯ ರಾಷ್ಟ್ರದ ಉಚ್ಚತಮ ನ್ಯಾಯಾಲಯ. ಅಲ್ಲದೆ ಸಂಯುಕ್ತರಾಷ್ಟ್ರಕೂಟಕ್ಕೆ ಸೇರಿದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಪ್ರತ್ಯೇಕ ರಾಜ್ಯಾಂಗ ಮತ್ತು ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಆದರೂ ಅವು ಎಲ್ಲ ವಿಷಯಗಳಲ್ಲೂ ಸ್ವತಂತ್ರವಲ್ಲ. ಈ ರೀತಿ ರಚಿಸಿಕೊಂಡ ಸರ್ಕಾರ ವ್ಯವಸ್ಥೆಗೆ 1789ರಲ್ಲಿ ಜಾರ್ಜ್ ವಾಷಿಂಗ್‌ಟನ್ ಅವಿರೋಧವಾಗಿ ಸಂಯುಕ್ತಸಂಸ್ಥಾನಗಳ ಪ್ರಥಮಾಧ್ಯಕ್ಷನಾಗಿ (ಅವಧಿ 4 ವರ್ಷ) ಚುನಾಯಿತನಾದ. ಮತ್ತೊಂದು ಚುನಾವಣೆಯಲ್ಲಿ ಎರಡನೆಯ ಬಾರಿ ಚುನಾಯಿತನಾಗಿ ಅಧ್ಯಕ್ಷನಾಗಿದ್ದು 1797ರಲ್ಲಿ ಅಧಿಕಾರದಿಂದ ನಿವೃತ್ತಿ ಹೊಂದಿದ. ಅವನ ಜ್ಞಾಪಕಾರ್ಥವಾಗಿಯೇ ರಾಷ್ಟ್ರದ ರಾಜಧಾನಿಗೆ ವಾಷಿಂಗ್‌ಟನ್ ಎಂದು ಹೆಸರಿಡಲಾಗಿದೆ.

**ಮನ್ರೋನೀತಿ :** 1817–1825 ಅವಧಿಯಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷನಾಗಿದ್ದ ಜೇಮ್ಸ್ ಮನ್ರೋ ಘೋಷಣೆಯೊಂದನ್ನು ಹೊರಡಿಸಿದ. ಅದು ಅಮೆರಿಕದ ಇತಿಹಾಸದಲ್ಲಿ ಮನ್ರೋತತ್ತ್ವವೆಂದು ಪ್ರಸಿದ್ಧವಾಗಿದೆ. ಒಂದನೆಯ ನೆಪೋಲಿಯನ್ನನ ಪತನಾನಂತರ ಯುರೋಪಿನ ರಾಜಕೀಯದಲ್ಲಿ ಮುಖ್ಯ ಪಾತ್ರ ವಹಿಸಿದ್ದ ಆಸ್ಟ್ರಿಯದ ಛಾನ್ಸಲರ್ ಮೆಟರ್ನಿಕ್ ಪ್ರಜಾಪ್ರಭುತ್ವದ ತತ್ತ್ವಗಳನ್ನು ಹತ್ತಿಕ್ಕಲೋಸುಗ, ಅದರ ವಿರುದ್ಧ ಹೋರಾಡುವ ತೀರ್ಮಾನವೊಂದನ್ನು ಕೈಗೊಂಡ. ಇದರ ಪ್ರಕಾರ ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳಲ್ಲಿದ್ದ ಸ್ಪೇನಿನ ವಸಾಹತುಗಳಲ್ಲಿ ಪುನಃ ನಿರಂಕುಶಾಧಿಕಾರವನ್ನು ಸ್ಥಾಪಿಸುವ ಪ್ರಯತ್ನ ನಡೆಯಲು ಅಲ್ಲಿ ದಂಗೆಗಳಾದುವು. ಈ ಸಂದರ್ಭದಲ್ಲಿ ಅಧ್ಯಕ್ಷ ಜೇಮ್ಸ್ ಮನ್ರೋ ಅಮೆರಿಕ ಅಮೆರಿಕನ್ನರಿಗೆ ಮಾತ್ರ ಸೇರಿದುದೆಂದು ಘೋಷಿಸಿದ. ಯುರೋಪಿನ ಯಾವ ರಾಜ್ಯವೇ ಆಗಲಿ ಅಮೆರಿಕದ ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕುವುದನ್ನು ಸಂಯುಕ್ತಸಂಸ್ಥಾನಗಳು ಸ್ನೇಹವಿರುದ್ಧ ಕ್ರಮವೆಂದು ಭಾವಿಸುತ್ತವೆಂದು ತಿಳಿಸಿದ. ಈ ಘೋಷಣೆ ಲ್ಯಾಟಿನ್ ಅಮೆರಿಕ ರಾಜ್ಯಗಳು ಸ್ವಾತಂತ್ರ್ಯಗಳಿಸಿಕೊಳ್ಳುವುದಕ್ಕೆ ಸಹಾಯಕವಾದುದಲ್ಲದೆ, ಅಮೆರಿಕ ಪ್ರಪಂಚದ ರಾಜಕೀಯ ವ್ಯವಹಾರದಿಂದ ದೂರವಿರುವುದಕ್ಕೂ ಕಾರಣವಾಯಿತು. ಆದರೆ ಇಂಥ ಪ್ರತ್ಯೇಕತೆಯ ತತ್ತ್ವ ವಿಕಾಸಗೊಳ್ಳುತ್ತಿರುವ ಈಚಿನ ವಿಶ್ವದಲ್ಲಿ ಸಾಧ್ಯವಾಗಲಿಲ್ಲ. ಅಧ್ಯಕ್ಷ ಥಿಯೊಡರ್ ರೂಸ್‌ವೆಲ್ಟ್ (1901–1909) ಈ ತತ್ತ್ವವನ್ನು ನಿರಾಕರಿಸಿ ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳ ಆಂತರಿಕ ವ್ಯವಹಾರಗಳಲ್ಲಿ ಪ್ರವೇಶಿಸಿದ. ಆದರೂ ಮನ್ರೋತತ್ತ್ವ ಎರಡನೆಯ ಮಹಾಯುದ್ಧಾನಂತರವೂ ಅಮೆರಿಕನ್ನರ ರಾಜಕೀಯ ಜೀವನದಮೇಲೆ ತನ್ನ ಪ್ರಭಾವ ಬೀರಿತು. ಅದರಿಂದಲೇ ಅಮೆರಿಕ ಪ್ರಪಂಚ ರಾಜಕೀಯದ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಹಿಂಜರಿಯುತ್ತಿತ್ತು.

**ಅಂತರ್ಯುದ್ಧ :** (1861–65). ನಾನಾ ದೇಶೀಯರು, ನಾನಾ ಜನಾಂಗದವರು, ವಿವಿಧ ವರ್ಣೀಯರನ್ನೊಳಗೊಂಡು ಪ್ರಗತಿ ಸಾಧಿಸತೊಡಗಿದ್ದ ಸಂಯುಕ್ತಸಂಸ್ಥಾನಕ್ಕೆ 1861–1865ರ ಅವಧಿಯಲ್ಲಿ ವಿಷಮಪರಿಸ್ಥಿತಿಯೊಂದೊದಗಿ, ದೇಶವೇ ಇಬ್ಭಾಗವಾಗುವ ಭಯ ತಲೆದೋರಿತು. ರಾಜಧಾನಿಗೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿದ್ದ ರಾಜ್ಯಗಳಲ್ಲಿ ಕೆಲವು ಭಿನ್ನಾಭಿಪ್ರಾಯಗಳಿದ್ದುವು. ಅವುಗಳಲ್ಲಿ ಗುಲಾಮಗಿರಿಯ ರದ್ದಿನ ಪ್ರಶ್ನೆ ಮುಖ್ಯವಾದುದು. ರಾಜಧಾನಿಗೆ ಉತ್ತರ ಭಾಗದಲ್ಲಿದ್ದ ರಾಜ್ಯಗಳು ಕೈಗಾರಿಕೆಯಲ್ಲಿ ಮುಂದುವರಿದು ಗುಲಾಮಗಿರಿಯ ರದ್ದತಿ ಬಯಸಿದುವು. ಆದರೆ ದಕ್ಷಿಣದ ರಾಜ್ಯಗಳು ವ್ಯವಸಾಯವನ್ನೇ ಮುಖ್ಯ ಕಸಬನ್ನಾಗಿ ಮಾಡಿಕೊಂಡಿದ್ದರಿಂದ ರದ್ದತಿಯನ್ನು ನಿಷೇಧಿಸಿದುವು. 1829ರಲ್ಲಿ ಮೆಕ್ಸಿಕೊರಾಜ್ಯ ಗುಲಾಮಗಿರಿಯನ್ನು ನಿಷೇಧಿಸಿತು. ಇದನ್ನು ಟೆಕ್ಸಾಸ್ ವಿರೋಧಿಸಿ 1836ರಲ್ಲಿ ಸ್ವತಂತ್ರವಾಗಿ ಸಂಯುಕ್ತಸಂಸ್ಥಾನಗಳ ಕೂಟಕ್ಕೆ ಸೇರಲು ಅಪ್ಪಣೆ ಕೇಳಿತು. ಗುಲಾಮಗಿರಿಯನ್ನು ಹೊಂದಿದ್ದ ರಾಜ್ಯಗಳ ಪ್ರಭಾವ ಸಂಯುಕ್ತಸಂಸ್ಥಾನಗಳ ಕಾಂಗ್ರೆಸ್ಸಿನಲ್ಲಿ ಹೆಚ್ಚಾಗುವುದೆಂದು ತಿಳಿದು ಉತ್ತರದ ರಾಜ್ಯಗಳು ಅದನ್ನು ವಿರೋಧಿಸಿದುವು. ಗುಲಾಮಗಿರಿಯ ರದ್ದಿನ ಪ್ರಶ್ನೆ ಚುನಾವಣೆವರ್ಷವಾದ 1860ರಲ್ಲಿ ಉತ್ಕಟಪರಿಸ್ಥಿತಿಯನ್ನು ಮುಟ್ಟಿತು. ಅಧ್ಯಕ್ಷಪದವಿಗೆ ಅಭ್ಯರ್ಥಿಗಳಲ್ಲೊಬ್ಬನಾಗಿದ್ದ ಏಬ್ರಹಾಂ ಲಿಂಕನ್ ಗುಲಾಮಗಿರಿ ಅಮಾನುಷವೆಂದು ನಂಬಿ ಅದಕ್ಕೆ ವಿರೋಧಿಯಾಗಿದ್ದ. ಚುನಾವಣೆ ಏಬ್ರಹಾಂ ಲಿಂಕನ್ನನ ವಿಜಯದಲ್ಲಿ ಕೊನೆಗೊಂಡು 1861ರ ಮಾರ್ಚ್‌ನಲ್ಲಿ ಆತ ಅಧಿಕಾರ ವಹಿಸಿಕೊಂಡ. ದಕ್ಷಿಣದ ರಾಜ್ಯಗಳಾದ ವರ್ಜೀನಿಯ, ನಾರ್ತ್ ಕೆರೊಲಿನ, ಸೌತ್ ಕೆರೊಲಿನ, ಜಾರ್ಜಿಯ, ಫ್ಲಾರಿಡ, ಟೆನೆಸ್ಸಿ, ಅಲಬಾಮ, ಮಿಸಿಸಿಪಿ, ಅರಕಾನ್‌ಸಾಸ್, ಲೂಸಿಯಾನ ಮತ್ತು ಟೆಕ್ಸಾಸ್ ರಾಜ್ಯಗಳು ಸಂಯುಕ್ತ ರಾಜ್ಯಕೂಟದಿಂದ ಹೊರಬಂದು, ತಮ್ಮದೇ ಆದ ರಾಜ್ಯಾಂಗವನ್ನು ನಿರ್ಮಿಸಿಕೊಂಡು ಜೆಫರ್‌ಸನ್ ಡೇವಿಸ್‌ನನ್ನು ಅಧ್ಯಕ್ಷನನ್ನಾಗೂ ಜನರಲ್ ಲೀಯನ್ನು ಮುಖ್ಯ ಸೇನಾಪತಿಯನ್ನಾಗೂ ನೇಮಿಸಿಕೊಂಡುವು. ಅಲ್ಲದೆ ತಮ್ಮ ರಾಷ್ಟ್ರಕ್ಕೆ ಕಾನ್ಫೆಡರಸಿ ಎಂದು ಹೆಸರನ್ನಿಟ್ಟುಕೊಂಡರು. ಚಾರಲ್‌ಟನ್ ಬಂದರಿನಲ್ಲಿನ ಫೋರ್ಟ್‌ಸಮ್ಟರ್‌ನ ಒಂದು ಸಣ್ಣ ಘಟನೆಯಿಂದಾಗಿ ಉತ್ತರ ಮತ್ತು ದಕ್ಷಿಣ ರಾಜ್ಯಗಳಿಗೆ ಯುದ್ಧ ಪ್ರಾರಂಭವಾಯಿತು. ಅಧ್ಯಕ್ಷ ಲಿಂಕನ್ ಈ ಗಲಭೆಯನ್ನು ಹತ್ತಿಕ್ಕಲು 75,000 ಬಲದ ಸೈನ್ಯವನ್ನು ಸಜ್ಜುಗೊಳಿಸಿದ. ಅಂತೆಯೆ ದಕ್ಷಿಣದವರೂ ಸಿದ್ಧರಾದರು. ಕೈಗಾರಿಕೆಯಲ್ಲಿ ಮುಂದುವರಿದಿದ್ದ ಉತ್ತರದ ರಾಜ್ಯಗಳು ಅತ್ಯುತ್ತಮ ನೌಕಾಪಡೆಯನ್ನೂ ಹೊಂದಿದ್ದುವು. ದಕ್ಷಿಣದ ರಾಜ್ಯಗಳು ಹೆಚ್ಚಿನ ಸೇನಾಪಡೆಯನ್ನು ಹೊಂದಿದ್ದುವು. ಯುದ್ಧ ಪ್ರಾರಂಭವಾದ ಮೊದಲ ವರ್ಷಗಳಲ್ಲಿ ಯಾವುದೂ ಇತ್ಯರ್ಥವಾಗದೆ, 1864ರಲ್ಲಿ ಜನರಲ್ ಗ್ರಾಂಟ್ ಉತ್ತರದ ರಾಜ್ಯಗಳ ಮುಖ್ಯಸೇನಾಧಿಪತಿಯಾಗಿ ನೇಮಕಗೊಂಡ ಮೇಲೆ, ಅದೃಷ್ಟದೇವತೆ ಅವರನ್ನು ಒಲಿದಳು. ಕೊನೆಗೆ ದಕ್ಷಿಣದ ರಾಜ್ಯಗಳ ಸೈನ್ಯ ಅಪ್ಪೊ ಮಾಟಕ್ಸ್ ಎಂಬಲ್ಲಿ ಸೋತು ಶರಣಾಯಿತು. 1865ರಲ್ಲಿ ಅಂತರ್ಯುದ್ಧ ಉತ್ತರ ರಾಜ್ಯಗಳ ವಿಜಯದಲ್ಲಿ ಪರಿಸಮಾಪ್ತಿಗೊಂಡಿತು. ಈ ಯುದ್ಧದಲ್ಲಿ ಆದ ಸಾವುನೋವುಗಳು, ಕಷ್ಟನಷ್ಟಗಳು ಅಪರಿಮಿತ.

ಅಧ್ಯಕ್ಷ ಏಬ್ರಹಾಂ ಲಿಂಕನ್ ಸಂಯುಕ್ತಸಂಸ್ಥಾನಗಳ ಏಕತೆಯನ್ನು ಕಾಪಾಡಿದ್ದಲ್ಲದೆ, ಗುಲಾಮಗಿರಿಯನ್ನು ರದ್ದುಮಾಡಿ ಪ್ರಪಂಚದ ಇತಿಹಾಸದಲ್ಲೇ ಅಮರನಾಗಿದ್ದಾನೆ. ದಕ್ಷಿಣದವರ ಮೇಲೆ ಯುದ್ಧಮಾಡಿದರೂ ಆತ ಅವರ ಹಿತಾಕಾಂಕ್ಷಿಯೂ ಆಗಿದ್ದ.

**ಸಂಯುಕ್ತ ಸಂಸ್ಥಾನಗಳ ಬೆಳೆವಣಿಗೆ :** ಹದಿಮೂರು ರಾಜ್ಯಗಳಿಂದ ಆರಂಭವಾದ ಸಂಯುಕ್ತಸಂಸ್ಥಾನ ಕಾಲಾನುಕ್ರದಲ್ಲಿ 51 ರಾಜ್ಯಗಳಿಂದ ಕೂಡಿ, ಉತ್ತರದಲ್ಲಿ ಗ್ರೇಲೇಕ್ಸ್‌ನಿಂದ ಹಿಡಿದು ದಕ್ಷಿಣದಲ್ಲಿ ಮೆಕ್ಸಿಕೊ ಕೊಲ್ಲಿಯವರೆಗೂ ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರದಿಂದ ಹಿಡಿದು ಪಶ್ಚಿಮದಲ್ಲಿ ಪೆಸಿಫಿಕ್ ಸಾಗರದವರೆಗೂ ವಿಸ್ತರಿಸಿ ಬೃಹತ್ ರಾಷ್ಟ್ರವಾಯಿತು. ಇಂಥ ವಿಸ್ತರಣೆ ಬಹಳಮಟ್ಟಿಗೆ ಯುದ್ಧರಹಿತವಾಗಿತ್ತು. ಬೇರೆ ಬೇರೆ ರಾಷ್ಟ್ರಗಳ ಅಧೀನದಲ್ಲಿದ್ದ ಕೆಲವು ಪ್ರದೇಶಗಳನ್ನು ಕೊಂಡುಕೊಳ್ಳಲಾಯಿತು. ಮಿಸಿಸಿಪ್ಪಿ ಅಥವಾ ಲೂಸಿಯಾನಕ್ಕೆ ಪಶ್ಚಿಮದಲ್ಲಿದ್ದ ವಿಶಾಲವಾದ ಭೂಭಾಗವನ್ನು ಫ್ರಾನ್ಸಿನ ಒಂದನೆಯ ನೆಪೋಲಿಯನ್ನನಿಂದ (1803), ಫ್ಲಾರಿಡವನ್ನು ಸ್ಪೇನಿನವರಿಂದ (1819) ಕೊಂಡರು. ಮೆಕ್ಸಿಕೊ ರಾಜ್ಯದಿಂದ ಹೊರಹೊರಟ (1836) ಟೆಕ್ಸಾಸ್ ರಾಜ್ಯವನ್ನು 1846ರಲ್ಲಿ ಅಧ್ಯಕ್ಷನಾಗಿದ್ದ ಜೇಮ್ಸ್ ನಾಕ್ಸ್ ಪೋಲ್ಕ್ ಮೆಕ್ಸಿಕೊದ ಮೇಲೆ ಯುದ್ಧವನ್ನು ಸಾರಿ ಅದರಿಂದ ನ್ಯೂ ಮೆಕ್ಸಿಕೊ ಮತ್ತು ಕ್ಯಾಲಿಫೋರ್ನಿಯಗಳನ್ನು ಸಂಯುಕ್ತಸಂಸ್ಥಾನಕ್ಕೆ ಸೇರಿಸಿದ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಸಂಯುಕ್ತಸಂಸ್ಥಾನಗಳು ಇನ್ನೂ ವಿಸ್ತಾರಗೊಂಡವು. ಬೇರಿಂಗ್ ಕೊಲ್ಲಿಯಲ್ಲಿ ಮೀನು ಹಿಡಿಯುವ ಸಲುವಾಗಿ ಅಲಾಸ್ಕ ಪ್ರದೇಶವನ್ನು 1867ರಲ್ಲಿ ರಷ್ಯದವರಿಂದ ಕೊಂಡುಕೊಂಡರು. 1898ರ ಫೆಬ್ರವರಿಯಲ್ಲಿ ಸಂಯುಕ್ತಸಂಸ್ಥಾನದ ಮೈನೆ ಎಂಬ ನೌಕೆಯೊಂದು ಹವಾನ ಬಂದರಿನಲ್ಲಿ ಸುಟ್ಟು ಬೂದಿಯಾಗಲು ಅಧ್ಯಕ್ಷ ಮೆಕಿನ್ಲೆ ಸ್ಪೇನಿನ ಮೇಲೆ ಯುದ್ಧ ಘೋಷಿಸಿದ. ಈ ಯುದ್ಧ ಮೂರು ತಿಂಗಳು ನಡೆದು ಸ್ಪೇನಿನವರು ಸೋತರು. 1898ರ ಪ್ಯಾರಿಸ್ಸಿನ ಕರಾರಿನಂತೆ ಸ್ಪೇನಿನವರು ಕ್ಯೂಬದಿಂದ ಹಿಂದೆಗೆದುದಲ್ಲದೆ ಪೋರ್ಟೊರಿಕೊ ಗುಅಮ್ ಮತ್ತು ಫಿಲಿಫೈನ್ಸ್ ದ್ವೀಪಗಳನ್ನು ಸಂಯುಕ್ತಸಂಸ್ಥಾನಕ್ಕೆ ಬಿಟ್ಟುಕೊಟ್ಟರು. ಈ ಅವಧಿಯಲ್ಲೆ ಸಂಯುಕ್ತಸಂಸ್ಥಾನ ಹವಾಯ್ ದ್ವೀಪಗಳನ್ನು ವಶಪಡಿಸಿ ಕೊಂಡಿತು. ಈ ರೀತಿ ಸಂಯುಕ್ತಸಂಸ್ಥಾನ ವಿಶಾಲಗೊಂಡು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಸಮುದ್ರಗಳಲ್ಲಿನ ರಾಜ್ಯಗಳ ಮೇಲೂ ತನ್ನ ಅಧಿಕಾರವನ್ನು ಹೊಂದಿತ್ತು. ಈ ರಾಜ್ಯಗಳನ್ನು ರಕ್ಷಿಸುವ ಸಲುವಾಗಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಅದರ ವ್ಯಾಪಾರ ವಾಣಿಜ್ಯಗಳ ಹಿತರಕ್ಷಣೆಗೂ ಸುಸಜ್ಜಿತವಾದ ಸೇನಾಪಡೆ ಮತ್ತು ನೌಕಾಪಡೆಯನ್ನು ನಿರ್ಮಿಸಿಕೊಂಡಿತು.

ಸಂಯುಕ್ತಸಂಸ್ಥಾನಗಳ ವಿಸ್ತರಣೆ ಕೇವಲ ಹೊಸ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದೇ ಆಗಿರದೆ, ಆ ಪ್ರದೇಶಗಳಲ್ಲಿ ಪ್ರಾಚೀನ ವ್ಯವಸಾಯ ಪದ್ಧತಿಯನ್ನು ಅನುಸರಿಸಿಕೊಂಡಿದ್ದ ಜನಗಳನ್ನು ಆಧುನಿಕ ವ್ಯವಸಾಯಪದ್ಧತಿ, ಕೈಗಾರಿಕೆ ಮತ್ತು ಬಂಡವಾಳಶಾಹಿ ಸಮಾಜದತ್ತ ಮಾರ್ಪಡಿಸುವುದೂ ಆಗಿತ್ತು. ಹೊಸಪ್ರಪಂಚದ ಹೇರಳವಾದ ನೈಸರ್ಗಿಕ ಸಂಪತ್ತು, ಜನರ ಶಾರೀರಿಕಸಾಮರ್ಥ್ಯ, ಕಷ್ಟಸಹಿಷ್ಣುತೆ, ದೃಢನಿರ್ಧಾರ ಹಾಗೂ ಅವರ ರಾಜಕೀಯ ಪ್ರತ್ಯೇಕತಾತತ್ತ್ವ ಇವು ಆ ದೇಶ ಐಶ್ವರ್ಯಭರಿತರಾಷ್ಟ್ರವಾಗಿ ಬೆಳೆಯಲು ಸಹಕಾರಿಯಾದುವು. ಆದ್ದರಿಂದ ಇಂದು ಸಂಯುಕ್ತ ಸಂಸ್ಥಾನ ವಿಶ್ವದಲ್ಲೇ ಅತ್ಯಂತ ಪ್ರಬಲ, ಸಮೃದ್ಧರಾಷ್ಟ್ರವಾಗಿ ನಿಂತಿದೆ.

ಸಂಯುಕ್ತಸಂಸ್ಥಾನಗಳ ರಾಜಕೀಯ ಪ್ರತ್ಯೇಕತಾನೀತಿ ಇಪ್ಪತ್ತನೆಯ ಶತಮಾನದಲ್ಲಿ ಬದಲಾವಣೆಹೊಂದಿತು. 1914ರಲ್ಲಿ ಪ್ರಾರಂಭವಾದ ಒಂದನೆಯ ಮಹಾಯುದ್ಧದಲ್ಲಿ ಜರ್ಮನರನ್ನು ಸೋಲಿಸುವ ಸಲುವಾಗಿ ಸಂಯುಕ್ತಸಂಸ್ಥಾನಗಳು ಮಿತ್ರರಾಷ್ಟ್ರಗಳ ಕಡೆ ಸೇರಬೇಕಾಯಿತು. ಇದರಿಂದ ಜರ್ಮನರ ಸೋಲು ನಿಶ್ಚಿತವಾಗಿ 1918ರ ನವೆಂಬರಿನಲ್ಲಿ ಜರ್ಮನ್ನರು ಶರಣಾಗತರಾದರು.

ಒಂದನೆಯ ಮಹಾಯುದ್ಧದಿಂದ ಇಡೀ ಪ್ರಪಂಚದ ಮಾನವಜನಾಂಗವೇ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು. ಅಂದಿನ ವಿಶ್ವನಾಯಕರುಗಳಲ್ಲಿ ಒಬ್ಬನಾಗಿದ್ದ ಅಮೆರಿಕದ ಅಧ್ಯಕ್ಷ ವುಡ್ರೊ ವಿಲ್ಸನ್ (1913–1921) ವಿಶ್ವದಲ್ಲಿ ಯುದ್ಧವನ್ನು ತಪ್ಪಿಸಿ, ಮಾನವಕೋಟಿಗೆ ಶಾಂತಿಯನ್ನು ದೊರಕಿಸಿಕೊಡುವ ಸಲುವಾಗಿ ಇತರ ಪ್ರಮುಖ ರಾಷ್ಟ್ರಗಳ ಸೌಜನ್ಯದಿಂದ ಲೀಗ್ ಆಫ್ ನೇಷನ್ಸ್ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿದ. ಅದು ಪ್ರಜಾಪ್ರಭುತ್ವದ ರಕ್ಷಣೆ ಮತ್ತು ವಿಶ್ವಶಾಂತಿಸ್ಥಾಪನೆಯ ಜವಾಬ್ದಾರಿಯನ್ನು ಹೊತ್ತು ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿತು. ಆದರೆ 1939ರಲ್ಲಿ ಪ್ರಾರಂಭವಾದ ಎರಡನೆಯ ಮಹಾಯುದ್ಧ (1939–1945) ಮಾನವಕೋಟಿಯನ್ನು ಘೋರದುರಂತಗಳಿಗೀಡುಮಾಡಿತು. ಈ ಯುದ್ಧದಲ್ಲಿ ಜಪಾನ್ ಜರ್ಮನಿಯ ಪಕ್ಷವನ್ನು ವಹಿಸಿ ಅಮೆರಿಕನ್ನರ ನೆಲೆಗಳ ಮೇಲೆ ಬಾಂಬುದಾಳಿ ನಡೆಸಿತು. ಉದ್ರಿಕ್ತಗೊಂಡ ಅಮೆರಿಕನ್ನರು ಮಿತ್ರರಾಷ್ಟ್ರಗಳ ಪಕ್ಷವನ್ನು ವಹಿಸಿ ಶತ್ರುಗಳ ಸೋಲಿಗೆ ಅಪಾರವಾಗಿ ಸಹಾಯಮಾಡಿದ್ದಲ್ಲದೆ, ಜಪಾನಿಯರ ಮೇಲೆ ಯುದ್ಧವನ್ನು ಘೋಷಿಸಿ ಆ ರಾಜ್ಯದ ಮುಖ್ಯನಗರಗಳಾದ ನಾಗಸಾಕಿ ಮತ್ತು ಹಿರೋಷಿಮಗಳ ಮೇಲೆ 1945ರಲ್ಲಿ ಪರಮಾಣುಬಾಂಬುಗಳನ್ನು ಹಾಕಿ ನಿಮಿಷಾರ್ಧದಲ್ಲಿ ಲಕ್ಷಾಂತರ ಜನರನ್ನು ಬೂದಿಮಾಡಿ ಜಪಾನಿಯರ ಪ್ರಾಬಲ್ಯವನ್ನು ಮುರಿದರು. ಅನಂತರ ಜಪಾನ್, ಜರ್ಮನಿ ಮತ್ತು ಇಟಲಿಗಳು ಶರಣಾಗತವಾಗಿ ದ್ವಿತೀಯ ಮಹಾಯುದ್ಧ ಕೊನೆಗೊಂಡಿತು.

ಯುದ್ಧದಿಂದ ಬಳಲಿದ ಜನತೆಗೆ ಸುಖಶಾಂತಿಗಳನ್ನು ದೊರಕಿಸಿ ಕೊಡಬೇಕೆಂದು ಅಧ್ಯಕ್ಷನಾಗಿದ್ದ ಫ್ರಾಂಕ್ಲಿನ್ ರೂಸ್ವೆಲ್ಟ್ (1933–1945) ಮತ್ತು ಇತರ ಮಹಾವ್ಯಕ್ತಿಗಳ ಸಾಹಸದ ಫಲವಾಗಿ ವಿಶ್ವಸಂಸ್ಥೆ ಜನ್ಮತಾಳಿತು. ಇದು ಮಾನವಜನಾಂಗದ ಕಲ್ಯಾಣಕ್ಕಾಗಿ ಜನ್ಮವೆತ್ತಿದ ಸಂಸ್ಥೆ. ಪ್ರಪಂಚದಲ್ಲಿ ಯುದ್ಧಗಳನ್ನು ತಪ್ಪಿಸಿ ಶಾಂತಿಯನ್ನು ಸ್ಥಾಪಿಸುವುದೇ ಇದರ ಪರಮೋದ್ದೇಶ. ಇದರ ಪ್ರಧಾನ ಕಛೇರಿ ಅಮೆರಿಕದ ನ್ಯೂಯಾರ್ಕ್ ನಗರದಲ್ಲಿದೆ.

ಕಳೆದ ಒಂದು ಶತಮಾನ ಕಾಲದಲ್ಲಿ ಕೈಗಾರಿಕೆ, ವ್ಯಾಪಾರ, ವಿಜ್ಞಾನ, ಸಾಹಿತ್ಯ ಮುಂತಾದ ಎಲ್ಲ ರಂಗಗಳಲ್ಲೂ ಸಂಯುಕ್ತ ಸಂಸ್ಥಾನ ಗಣನೀಯ ಪ್ರಗತಿಯನ್ನು ಸಾಧಿಸಿದೆ; ಈ ಸಾಧನಗಳಿಗೆ ಅವರ ದೃಢನಿರ್ಧಾರ, ಕಷ್ಟಸಹಿಷ್ಣುತೆಗಳೇ ಕಾರಣ. ಇಂಥ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವ ಅಮೆರಿಕನ್ನರು ವಿಶ್ವದಲ್ಲೇ ಅತ್ಯಂತ ಮುಂದುವರಿದ ಜನಾಂಗದವರಾಗಿದ್ದಾರೆ. ಇಂದು ಬಂಡವಾಳಶಾಹಿ ಮತ್ತು ಸಮಾಜವಾದವೆಂದು ವಿಭಜನೆಗೊಂಡಿರುವ ವಿಶ್ವದಲ್ಲಿ ಅಮೆರಿಕನ್ನರು ಬಂಡವಾಳಶಾಹಿವಾದದ ಪ್ರತಿಪಾದಕರಾಗೂ ರಷ್ಯನ್ನರು ಸಮಾಜವಾದದ ಪ್ರತಿಪಾದಕರಾಗೂ ಪ್ರತಿಸ್ಪರ್ಧಿಗಳಾಗಿ ನಿಂತಿದ್ದಾರೆ. ಇಬ್ಬರೂ ತಮ್ಮ ಉಗ್ರವಾದಗಳನ್ನು ಕಾಲಕ್ರಮೇಣ ಬದಲಿಸಿಕೊಳ್ಳುತ್ತ ವಿಶ್ವಕಲ್ಯಾಣದತ್ತ ಸಾಗುತ್ತಿರುವುದು ಶುಭದ ವಿಚಾರ. ಈಚೆಗೆ ಅಮೆರಿಕ ತನ್ನಲ್ಲಿರುವ ಹೆಚ್ಚಿನ ಸಂಪತ್ತನ್ನು ಅಭಿವೃದ್ಧಿಗೊಳ್ಳುತ್ತಿರುವ ವಿಶ್ವದ ಇತರ ರಾಷ್ಟ್ರಗಳೊಂದಿಗೆ ಪಾಲುಗೊಳ್ಳುತ್ತಿರುವುದಂತೂ ಪ್ರಶಂಸಾರ್ಹವಾದ ಸಂಗತಿ.

(ಆರ್.ಜಿ.ಎಸ್.)

**ಅಮೆರಿಕದ ಕಲೆ :** ಅಮೆರಿಕ ಖಂಡ ಸು. 25,000 ವರ್ಷಗಳಿಂದ ಜನವಸತಿಯನ್ನು ಹೊಂದಿದ್ದು ಅನೇಕ ನಾಗರಿಕತೆಗಳ ನೆಲೆವೀಡಾಗಿದೆ. 15ನೆಯ ಶತಮಾನದವರೆಗೂ ಇತರ ಪ್ರದೇಶಗಳ ಸಂಪರ್ಕವಿಲ್ಲದೆ ತಮ್ಮದೇ ಆದ ಶೈಲಿಯಲ್ಲಿ ಬೆಳೆದಿದ್ದ ಅನೇಕ ನಾಗರಿಕತೆಗಳು ಅನೇಕ ನಗರ, ಭವ್ಯಕಟ್ಟಡ, ಶಿಲ್ಪ, ವರ್ಣಚಿತ್ರಗಳು ಮತ್ತಿತರ ಕುಶಲಕಲೆಗಳನ್ನು ರೂಪಿಸಿವೆ. ಇಂಥ ಹಲವು ಕಲಾಕೃತಿಗಳಲ್ಲಿ ನೈಜತೆ ಮತ್ತು ಭಾವಪ್ರಾಧಾನ್ಯ ಕಂಡುಬಂದರೂ ಸಾಧಾರಣವಾಗಿ ಸಂಕುಚಿತ ಮತ್ತು ಬಿಗಿಯಾದ ಶೈಲಿ ಎದ್ದು ಕಾಣಬರುತ್ತವೆ. ಚಾ ಮತ್ತು ಷಾಂಗ್ ಕಾಲದ ಚೀನೀ ಪ್ರಭಾವ ಈ ಕಲೆಗಳಲ್ಲಿ ಸ್ವಲ್ಪಮಟ್ಟಿಗೆ ಕಂಡುಬಂದರೂ ಖಚಿತವಾಗಿ ಅವುಗಳ ವಿಷಯ ಪ್ರಸ್ತಾಪಿಸಲು ಈಗಿನ ಸ್ಥಿತಿಯಲ್ಲಿ ಸಾಧ್ಯವಾಗಿಲ್ಲ.

ಪ್ರಾಚೀನ ಕಾಲದಲ್ಲಿ ಮಧ್ಯ ಅಮೆರಿಕದಲ್ಲಿ ಉನ್ನತಮಟ್ಟ ತಲುಪಿದ ಕಲೆಗಳಲ್ಲಿ ಮಾಯ ಜನರ ಕಲೆಯೇ ಮೊದಲನೆಯದು. ಮತಪ್ರಾಧಾನ್ಯವುಳ್ಳ ಈ ನಾಗರಿಕತೆಯಲ್ಲಿ ಖಚಿತವಾದ ಪಂಚಾಂಗ ಪದ್ಧತಿ ಬಳಕೆಗೆ ಬಂತು. ಕೆಲವು ಸಾಮಾಜಿಕ ಕಟ್ಟಡಗಳನ್ನು, ಎತ್ತರವಾದ ದಿಬ್ಬಗಳ (ಪಿರಮಿಡ್ಡು) ಮೇಲೆ ಉಬ್ಬುಶಿಲ್ಪ ಮತ್ತು ವರ್ಣಚಿತ್ರಗಳಿಂದ ಅಲಂಕೃತವಾಗಿದ್ದ ನೂರಾರು ದೇವಾಲಯಗಳನ್ನು ಈ ಜನ ನಿರ್ಮಿಸಿದರು. ಶಿಲ್ಪಗಳು ಅಪೂರ್ವವಾದರೂ ಜೀವಂತವಾಗಿರುತ್ತಿದ್ದುವು. ಕೊನೆಗಾಲದಲ್ಲಿ ಸಾಮಾಜಿಕ ಕಟ್ಟಡಗಳನ್ನೂ ದೇವಾಲಯಗಳಷ್ಟೇ ಪ್ರಮುಖವಾಗಿ ಅಲಂಕರಿಸುತ್ತಿದ್ದರು. ಇವರ ಮಡಕೆ ಕುಡಿಕೆಗಳ ಮೇಲೆ ಉನ್ನತ ಮಟ್ಟದ ಕಲಾಕೌಶಲ ಕಂಡುಬರುತ್ತದೆ.

ಇದೇ ಕಾಲದಲ್ಲಿ ಉನ್ನತಮಟ್ಟ ತಲುಪಿದ ಮತ್ತೊಂದು ಕಲಾಸಂಪ್ರದಾಯ ಟಾಲ್ ಟೆಕ್ ಸಂಸ್ಕೃತಿಯಲ್ಲಿತ್ತು. ವ್ಯವಸಾಯವೇ ಮುಖ್ಯ ಕಸುಬು. ಮತ ಪ್ರಾಧಾನ್ಯವುಳ್ಳ ಈ ಸಂಸ್ಕೃತಿಯಲ್ಲೂ ದಿಬ್ಬ ದೇವಾಲಯಗಳು ಬಹಳ ಅಲಂಕೃತವಾಗಿರುತ್ತಿದ್ದವು. ತಮ್ಮ ಸರ್ಪದೈವ ಕ್ವೆಟ್ಜಲ್ ಕೋಟ್ಲ್ ನ ಕರುಣೆಯೇ ಈ ಜನರ ಕಲೆಯ ಹಿಂದಿನ ಸ್ಫೂರ್ತಿ.

ದಕ್ಷಿಣ ಅಮೆರಿಕದಲ್ಲಿ ಬೆಳೆದುಬಂದವುಗಳಲ್ಲಿ ಮುಖ್ಯವಾದ ಚಿಮು, ನಾಜ್ಕ ಮತ್ತು ತಿಯಾಹುವನಾಕೊ ಸಂಸ್ಕೃತಿಗಳ ಅಂಗವಾಗಿಯೂ ಕಲೆ ಬೆಳೆದುಬಂದಿತ್ತು. ಚಿಮು ಸಂಸ್ಕೃತಿಯಲ್ಲಿ ಪ್ರಾಣಿ, ಪಕ್ಷಿ ಮತ್ತು ಮಾನವ ಚಿತ್ರಗಳಿಂದ ಅಲಂಕೃತವಾದ ಜಾಡಿಗಳೂ ಯೋಧರ ತಲೆಯ ಶಿಲ್ಪಗಳೂ ನಾಜ್ಕ ಸಂಸ್ಕೃತಿಯಲ್ಲಿ ಸ್ವಲ್ಪ ಅನೈಜವಾದರೂ ಪ್ರಾಣಿ, ಪಕ್ಷಿ, ಮಾನವರ ರಮಣೀಯ ಚಿತ್ರಗಳಿಂದ ಅಲಂಕೃತವಾದ ಮಡಕೆ ಕುಡಿಕೆಗಳೂ ಅದ್ವಿತೀಯವಾದ ಬಣ್ಣದ ಚಿತ್ರಗಳಿಂದ ಕೂಡಿದ ಉಡುಗೆಗಳೂ ಪ್ರಸ್ಥಭೂಮಿಯ ತಿಯಾಹುವನಾಕೊ ಸಂಸ್ಕೃತಿಯಲ್ಲಿ ಅಮೋಘವಾದ ವಾಸ್ತುಶಿಲ್ಪ ಮತ್ತು ಪ್ರತಿಮಾಶಿಲ್ಪಗಳೂ ಈ ಕಾಲದ ಉನ್ನತ ಕೃತಿಗಳಾಗಿದ್ದು ಗಮನಾರ್ಹವಾಗಿವೆ.

ಮಧ್ಯಯುಗದಲ್ಲಿ ವಿಶ್ವದ ಇತರ ಪ್ರದೇಶಗಳು ಪರಸ್ಪರ ಸಂಪರ್ಕಗಳಿಂದ ಬಹು ಮುಖ್ಯವಾಗಿ ಅಭಿವೃದ್ಧಿ ಹೊಂದುತ್ತಿದ್ದಾಗ ಅಮೆರಿಕ ಬಾಹ್ಯಸಂಪರ್ಕರಹಿತವಾಗಿದ್ದು ನಿಧಾನವಾಗಿ ಬೆಳೆಯುತ್ತಿತ್ತು. ಮಧ್ಯ ಅಮೆರಿಕದಲ್ಲಿ ಜಾಪೊಟೆಕ್ ಮತ್ತು ಮಿಕ್ಸ್ ಟೆಕ್ ಜನರು ಕಲ್ಲಿನಲ್ಲಿ ಅಲಂಕೃತವಾದ ಸುಂದರ ಅರಮನೆಗಳನ್ನೂ ಸಮಾಧಿಗಳನ್ನೂ ನಿರ್ಮಿಸಿದರು. ಜೇಡಿಮಣ್ಣಿನ ಶಿಲ್ಪನಿರ್ಮಾಣದಲ್ಲಿ ಅವರು ಪ್ರವೀಣರು. ಚಿನ್ನ ಮತ್ತು ಬೆಲೆಬಾಳುವ ಶಿಲೆಗಳಲ್ಲಿ ಆಭರಣಗಳನ್ನೂ ಅಮೋಘವಾಗಿ ಮಾಡುತ್ತಿದ್ದರು. ಟಾಲ್ಟೆಕ್ ಮತ್ತು ಅವರ ಅನಂತರ ಬಂದ ಆಜ್ಟೆಕ್ ಜನರು ಮಹೋನ್ನತವಾದ ದಿಬ್ಬ ದೇವಾಲಯಗಳ ನಿರ್ಮಾಣ ಕಾರ್ಯದಲ್ಲೂ ಕಲ್ಲಿನ ಕೆತ್ತನೆ ಕೆಲಸದಲ್ಲೂ ಪ್ರೌಢಿಮೆ ಪಡೆದಿದ್ದರು. ಅವರು ಕ್ರೌರ್ಯವನ್ನು ಪ್ರತಿಧ್ವನಿಸುವ ಬೃಹತ್ ಶಿಲಾಪ್ರತಿಮೆಗಳನ್ನೂ ನಿರ್ಮಿಸಿದ್ದಾರೆ. (ನೋಡಿ–ಆಜ್ಟೆಕ್–ಸಂಸ್ಕೃತಿ) ದಕ್ಷಿಣ ಅಮೆರಿಕದಲ್ಲಿ ಇಂಕ (ನೋಡಿ) ಸಂಸ್ಕೃತಿ ಅತ್ಯಂತ ಮಹತ್ತ್ವ ಪೂರ್ಣವಾಗಿದ್ದು, ಕೋಟೆ ಕೊತ್ತಲ, ದೇವಾಲಯ ಮತ್ತು ಅರಮನೆಗಳನ್ನು ತಮ್ಮ ಕಲ್ಲಿನ ಕೆಲಸದ ಮತ್ತು ಚಿನ್ನ ಮತ್ತಿತರ ಆಭರಣಗಳ ನಿರ್ಮಾಣದ ಕುಶಲತೆಯಿಂದ ಅಮೋಘವಾಗಿ ಅಲಂಕರಿಸಿದ್ದಾರೆ. ಇವರ ನೇಯ್ಗೆಯ ಕೆಲಸ ಉನ್ನತಮಟ್ಟದ್ದಾಗಿತ್ತು. ಪ್ಯೂಬ್ಲೊ ಸಂಸ್ಕೃತಿ ದೊಡ್ಡ ಸಾಮಾಜಿಕ ಕಟ್ಟಡಗಳ ನಿರ್ಮಾಣ, ಸುಂದರ ಮಡಕೆಗಳನ್ನು ಮಾಡುವುದು ಮತ್ತು ಅಮೋಘ ನೇಯ್ಗೆಕಲೆಗಳಿಗೆ ಪ್ರಸಿದ್ಧವಾಗಿದೆ. ಹೋಪ್ ವೆಲ್ ಸಂಸ್ಕೃತಿಯ ಜನ ಮತೀಯ, ಸಾಮಾಜಿಕ ಮತ್ತು ರಕ್ಷಣಾವ್ಯವಸ್ಥೆಗಳಿಗೆ ಸಂಬಂಧಿಸಿದ ಬೃಹತ್ ಪ್ರಮಾಣದ ದಿಬ್ಬಗಳನ್ನು ನಿರ್ಮಿಸಿದರು. ಸುಂದರ ಪ್ರಾಣಿ, ಪಕ್ಷಿ ಮತ್ತು ಮಾನವಾಕಾರದ ಕಲ್ಲಿನ ಕೊಳವಿಗಳನ್ನು ನಿರ್ಮಿಸುವುದರಲ್ಲಿ ಇವರು ನಿಷ್ಣಾತರಾಗಿದ್ದರು. ಈ ಪ್ರಾಣಿಕೊಳವಿಗಳಲ್ಲಿ ಸಹಜತೆ ಕಂಡುಬಂದರೂ ಔಪಯೋಗಿಕ ದೃಷ್ಟಿ ಎದ್ದು ಕಾಣುತ್ತದೆ.

ಅಮೆರಿಕ ಖಂಡಗಳಿಗೆ ಯುರೋಪಿಯನ್ನರು ಪ್ರವೇಶಿಸಿದ ಅನಂತರ ಅಲ್ಲಿನ ಕಲೆಯ ರೂಪ ಮೂಲಭೂತವಾಗಿ ಬದಲಾಯಿಸಿತು. ಆ ಕಾಲಕ್ಕೆ ಸೇರಿದ ನಾಗರಿಕತೆ, ಕಲೆಗಳ ಇತಿಹಾಸವನ್ನು ಯುರೋಪಿನ ವಿವಿಧ ಜನಾಂಗಗಳ ಬುನಾದಿಯ ಮೇಲೆ ಪರಿಶೀಲಿಸಬೇಕಾಗುತ್ತದೆ.

ಲ್ಯಾಟಿನ್ ಅಮೆರಿಕ ಪ್ರದೇಶಗಳಲ್ಲಿ ಸ್ಪೇನ್ ಮತ್ತು ಪೋರ್ಚುಗೀಸ್ ಜನಾಂಗ ಅಧಿಕಾರ ಪಡೆದಿದ್ದುದರಿಂದ ಆ ದೇಶಗಳ ಕಲಾಪದ್ಧತಿಯೇ ಪ್ರಾಮುಖ್ಯಪಡೆದರೂ ಸ್ಥಳೀಯ ಅಂಶಗಳ ಪ್ರಭಾವ ಅಳಿಸಿಹೋಗಿಲ್ಲ. ಅಲ್ಲಿನ ರೇವು ಪಟ್ಟಣ, ಮುಖ್ಯನಗರಗಳಲ್ಲಿ ಸ್ಥಳೀಯ ಮತ್ತು ವಸಾಹತುಗಾರರ ಪದ್ಧತಿಗಳೆರಡರ ಸಮ್ಮಿಶ್ರಣದ ಶೈಲಿ ಕಂಡುಬರುತ್ತದೆ. ಆಡಳಿತ ವರ್ಗದವರ ಮತ್ತು ಅವರ ಚರ್ಚಿನ ಸೇವೆಗೆ ಮುಡಿಪಾಗಿದ್ದ ಈ ಕಲೆಯಲ್ಲಿ ಅನೇಕ ಮತೀಯ ಮತ್ತು ಸಾಮಾಜಿಕ ಕಟ್ಟಡಗಳು ಸಮಕಾಲೀನ ಯುರೋಪಿನ ಶೈಲಿಗಳಲ್ಲಿ ನಿರ್ಮಿತವಾಗಿದ್ದರೂ 18ನೆಯ ಶತಮಾನದ ಬರೋಕ್ ಮತ್ತು ಅಲ್ಟ್ರಾಬರೋಕ್ ಶೈಲಿಗಳನ್ನೂ ಅಲ್ಲಿ ಕಾಣಬಹುದು. ಪ್ರತಿಮಾಶಿಲ್ಪ ವಾಸ್ತುಶಿಲ್ಪಕ್ಕೆ ಹೊಂದಿಕೊಂಡಿದ್ದು ಸ್ಪೇನಿನ ನೈಜತೆ ಸ್ಥಳೀಯ ಪ್ರಭಾವಕ್ಕೊಳಗಾಗಿ ಸರಳವಾಯಿತೆನ್ನಬಹುದು. ವರ್ಣಚಿತ್ರಗಳಲ್ಲೂ ಈ ಅಂಶ ಕಂಡುಬರುತ್ತದೆ. ಆದರೆ ಈ ಪ್ರದೇಶದ ಒಳಭಾಗಗಳಲ್ಲಿ ಸ್ಥಳೀಯ ಪುರಾತನ ಶೈಲಿ ವಿದೇಶೀಯ ಪ್ರಭಾವಗಳನ್ನು ತನ್ನಲ್ಲಿ ಮಿಲನಗೊಳಿಸಿಕೊಂಡರೂ ತನ್ನದೇ ಆದ ವ್ಯಕ್ತಿತ್ವವನ್ನು ಉಳಿಸಿಕೊಂಡಿತು.

ಫ್ರೆಂಚರ ಅಧಿಕಾರಕ್ಕೊಳಗಾದ ಪ್ರದೇಶಗಳಲ್ಲಿ ಆ ದೇಶದ ಪ್ರಭಾವ ಕಂಡುಬರುತ್ತದೆ. ಕಲ್ಲಿನ ದಪ್ಪಗೋಡೆಗಳ ಸಣ್ಣ ಗೃಹಗಳ, ಚರ್ಚುಗಳ ಆ ವಾಸ್ತುಶಿಲ್ಪದಲ್ಲಿ ಈ ಸರಳ, ಕಾರ್ಯನಿರತ ಜನರ ಕೈವಾಡ ಎದ್ದುಕಾಣುತ್ತದೆ. ಮರದ ಕೆತ್ತನೆ ಉತ್ತಮ ಮಟ್ಟದ್ದಾಗಿದೆ. ಉಷ್ಣಪ್ರದೇಶಗಳಲ್ಲಿ ಬಣ್ಣದ ಸುಣ್ಣ ಗಾರೆಗಳಿಂದ ಕಟ್ಟಲಾದ ಗೃಹತೋಟಗಳಿಂದಲೂ ಕಬ್ಬಿಣದ ಬಿಸಿಲುಮುಚ್ಚುಗಳಿಂದಲೂ ಕೂಡಿದ ಗೃಹಗಳು ಆಗ ಬೆಳೆದುವು. ಅವುಗಳಲ್ಲಿನ ಅಲಂಕಾರ ಪದ್ಧತಿಯಲ್ಲಿ ಉತ್ತಮ ಅಭಿರುಚಿ ಕಾಣುತ್ತದೆ. ಸಾಮಾಜಿಕ ಕಲೆಯೇ ಪ್ರಧಾನವಾಗಿದ್ದರೂ ಮತೀಯ ಕಲೆಯೂ ಬೆಳೆದುಬಂದಿತೆನ್ನಬಹುದು.

ಇಂಗ್ಲಿಷರ ಪ್ರಭಾವವಿರುವ ಪ್ರದೇಶಗಳಲ್ಲಿ ಸಮಕಾಲೀನ ಇಂಗ್ಲಿಷ್ ಕಲೆ ಸ್ಥಳೀಯ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಹೊಂದಿ ಕಲ್ಲು ಇಟ್ಟಿಗೆಗಳ ಬದಲು ಮರದ ವಾಸ್ತುಶಿಲ್ಪ ಬಳಕೆಗೆ ಬಂತು. ಗೃಹ, ಚರ್ಚು ಮತ್ತು ನಗರಭವನಗಳು ಮುಖ್ಯ ಕಟ್ಟಡಗಳಾಗಿದ್ದು ಬಹಳ ಅಂದವಾದ ಮನೆಗಳು ನಿರ್ಮಿತವಾದುವು. ಉತ್ತರ ಭಾಗಗಳಲ್ಲಿ ಸರಳತೆ ಮತ್ತು ದಕ್ಷಿಣ ಪ್ರದೇಶಗಳಲ್ಲಿ ವೈಶಾಲ್ಯ, ಹಾರ್ದಿಕತೆಗಳು ಪ್ರಮುಖ ಅಂಶಗಳಾಗಿದ್ದುವು. ಗೃಹೋಪಕರಣಗಳು, ಮರಗೆಲಸ, ಬೆಳ್ಳಿ ಮತ್ತು ಗಾಜಿನ ಕೆಲಸಗಾರಿಕೆಯಲ್ಲೂ ಇಂಗ್ಲಿಷ್ ಪ್ರಭಾವ ಎದ್ದುಕಾಣುತ್ತದೆ. ವರ್ಣಚಿತ್ರಕಲೆಯಲ್ಲಿ ವ್ಯಕ್ತಿಚಿತ್ರಣವೇ ಪ್ರಧಾನವಾಗಿದ್ದು ಇಲ್ಲೂ ಇಂಗ್ಲಿಷರ ಪ್ರಭಾವ ಕಂಡುಬರುತ್ತದೆ. ಪ್ರತಿಮಾಶಿಲ್ಪ ಮತೀಯಕಾರಣಗಳಿಂದ ಹೆಚ್ಚು ಪ್ರಾಶಸ್ತ್ಯ ಪಡೆಯಲಿಲ್ಲ.

ಸಮಕಾಲೀನ ರೆಡ್ ಇಂಡಿಯನ್ನರ ಕಲೆಯಲ್ಲೂ ಯುರೋಪಿಯನ್ನರ ಪ್ರಭಾವ ಕಂಡುಬರುತ್ತದೆ. ಕಲ್ಲಿನ ಆಯುಧಗಳಿಂದ ಮರಗೆಲಸದಲ್ಲಿ ನಿಷ್ಣಾತರಾಗಿದ್ದ ವಾಯವ್ಯ ತೀರದ ಜನ ಲೋಹದ ಉಪಕರಣಗಳನ್ನು ಪಡೆದು ದೋಣಿ, ಮತಸಂಬಂಧವಾದ ಸ್ತಂಭಗಳು ಮುಂತಾದ ಮರದ ಪದಾರ್ಥಗಳನ್ನು ಅತಿ ಕುಶಲತೆಯಿಂದ ನಿರ್ಮಿಸಿದರು. ಮೈದಾನ ಪ್ರದೇಶಗಳ ಜನ ಕುದುರೆ ಸವಾರರಾಗಿದ್ದು ಉತ್ತಮ ಬೇಟೆಗಾರರಾಗಿ ವೈವಿಧ್ಯಪೂರ್ಣ ಅಲಂಕಾರ ಹೊಂದಿದ್ದ ಉಡುಗೆಗಳನ್ನು, ಮಣಿಗಳ ಅಲಂಕಾರವನ್ನು ಬಳಸುತ್ತಿದ್ದರು. ಗುರಾಣಿ ಮತ್ತು ಚರ್ಮಗಳ ಮೇಲೆ ಬೇಟೆ ಮತ್ತು ಕಾದಾಟಗಳ ಉನ್ನತಮಟ್ಟದ ಸತ್ತ್ವಶಾಲಿ ಚಿತ್ರಣಗಳನ್ನು ನಿರ್ಮಿಸಿದರು. ನೇಯ್ಗೆ ಕಲಾಮಟ್ಟವನ್ನು ಮುಟ್ಟಿತು. ಮೆಕ್ಸಿಕೊ ಪ್ರದೇಶದಿಂದ ಬೆಳ್ಳಿಯ ಉಪಯೋಗ ಕಲಿತುಕೊಂಡು ಆ ಲೋಹದ ಕೆಲಸಗಾರಿಕೆಯಲ್ಲೂ ನಿಷ್ಣಾತರಾದರು. ವಿದೇಶೀಪದ್ಧತಿಗಳನ್ನು ತಮ್ಮ ಕಲಾಪದ್ಧತಿಗೆ ಅಳವಡಿಸಿಕೊಂಡು ಬೆಳೆಸಿ ಪ್ರಸಿದ್ಧವಾದ ಮರಳುಚಿತ್ರಣ (ಸ್ಯಾಂಡ್ ಪೇಂಟಿಂಗ್) ಕಲೆಯಲ್ಲಿ ಉನ್ನತ ಶಿಖರ ಮುಟ್ಟಿದರು.

19ನೆಯ ಶತಮಾನದಲ್ಲಿ ಸಂಭವಿಸಿದ ಕ್ರಾಂತಿಕಾರೀ ಬದಲಾವಣೆಗಳ ಪ್ರತಿಧ್ವನಿ ಕಲಾರಂಗದಲ್ಲೂ ಕಂಡುಬರುತ್ತದೆ. ವಾಸ್ತುಶಿಲ್ಪರಂಗದಲ್ಲಿ ಮತೀಯ ಪ್ರಭಾವ ಹೆಚ್ಚಾಯಿತು. ಅದೇ ಸಮಯದಲ್ಲಿ ಪ್ರಗತಿಶೀಲ ವಾಸ್ತುಶಿಲ್ಪಿಗಳೂ ಪುರಾತನ ಪದ್ಧತಿಗಳ ವಿರುದ್ಧ ಬಂಡೆದ್ದು ಹೊಸ ಕಟ್ಟಡ, ಕಲೆ, ಪದಾರ್ಥಗಳನ್ನು ಬಳಸಿಕೊಂಡು ಕೈಗಾರಿಕಾಯುಗಕ್ಕೆ ತಕ್ಕುದಾದ ಹೊಸರೀತಿಯ ವಾಸ್ತುಶಿಲ್ಪವನ್ನೂ ನಿರ್ಮಿಸಿ ಆಧುನಿಕ ವಾಸ್ತುಶಿಲ್ಪದ ತಳಹದಿಯನ್ನು ಹಾಕಿದರು. ವರ್ಣ ಚಿತ್ರಕಲೆ ಹಳೆಯ ರೀತಿಗಳನ್ನು ಬಿಟ್ಟು, ಪ್ಯಾರಿಸ್ಸಿನ ಪ್ರಭಾವದಿಂದ ಹೊಸ ರೀತಿಗಳನ್ನು ಬೆಳೆಸಿಕೊಂಡಿತು. ಈ ರಂಗದಲ್ಲಿ ಫ್ರೆಂಚರ ಪ್ರಭಾವ ಹೆಚ್ಚಾಗಿದ್ದು ಭಾವನಾಪ್ರಧಾನವಾದ (ಇಂಪ್ರೆಷನಿಸಂ) ಪ್ರಬಲವಾಯಿತು. ಸಂಯುಕ್ತ ಸಂಸ್ಥಾನಗಳಲ್ಲಿ ಇದರ ವಿರುದ್ಧ ಬಂಡಾಯವೆದ್ದು ದೇಶೀಯ ಪದ್ಧತಿಯನ್ನು ಬೆಳೆಸಿದ್ದರಿಂದ ಅಮೇರಿಕದ ಚಿತ್ರಕಲಾ ಪದ್ಧತಿ ರೂಪುಗೊಳ್ಳಲು ಸಾಧ್ಯವಾಯಿತು. ಇತರ ಪ್ರದೇಶಗಳಲ್ಲಿ ಯುರೋಪಿಯನ್ನರ ಪ್ರಭಾವ ಹೆಚ್ಚಾಗಿದ್ದರೂ ಸ್ಥಳೀಯ ಪದ್ಧತಿಗಳೂ ಬಳಕೆಯಲ್ಲಿದ್ದು ಮಡಕೆಗಳ ನಿರ್ಮಾಣ, ನೇಯ್ಗೆಯಲ್ಲಿ ಈ ಶತಮಾನ ಕ್ರಾಂತಿಕಾರೀ ಬದಲಾವಣೆಗಳ ಕಾಲವಾಗಿದ್ದು 20ನೆಯ ಶತಮಾನದ ಶುದ್ಧ ಅಮೇರಿಕಶೈಲಿ ಬೆಳೆಯಲು ತಳಹದಿಯನ್ನೊದಗಿಸಿತು.

20ನೆಯ ಶತಮಾನದಲ್ಲಿ ಬೌದ್ಧಿಕ ವಿಕಾಸ (ರಿನೇಸಾನ್ಸ್) ಕ್ರಾಂತಿಯ ದೆಸೆಯಿಂದ ಪ್ಯಾರಿಸ್ಸಿನ ಚಿತ್ರಕಾರರ ಪ್ರಭಾವ ಹೆಚ್ಚಾಗಿ ಅಮೇರಿಕದಲ್ಲೂ ಅದರ ಪ್ರತಿಧ್ವನಿ ಕಾಣಬರುತ್ತದೆ. ಈ ಕಾಲದ ಅನೇಕ ಚಿತ್ರಕಾರರು ಹೊಸ ದಾರಿಯಲ್ಲಿ ಮುನ್ನಡೆದು ವಸ್ತುಸ್ವರೂಪಶೈಲಿಗೆ ಬದಲಾಗಿ ಅವಾಸ್ತವಿಕ ರೂಪಣೆಯನ್ನು ಬೆಳೆಸಿಕೊಂಡರು. ಈ ಕಾಲದ ಚಿತ್ರಗಾರರು ಉತ್ತಮಶಿಲ್ಪಿಗಳೂ ಆಗಿದ್ದರು. ಜರ್ಮನಿಯ ಪ್ರಭಾವದಿಂದ ನೈಜತೆ ಬೆಳೆಯಿತು. ಕಾಲದೇಶಗಳ ರೂಪಣೆಯ ಪ್ರಯತ್ನ ಚಿತ್ರಕಲೆಯಲ್ಲಿ ಕಂಡುಬರುತ್ತದೆ. ಕೆನಡ ಮತ್ತು ದಕ್ಷಿಣ ಅಮೇರಿಕಗಳಲ್ಲಿ ಭಾವುಕತೆ, ಬೌದ್ಧಿಕತೆಗಳು ಪ್ರಭಾವಶಾಲಿಗಳಾಗಿ ಪುರಾತನ ರೀತಿಯನ್ನು ಬೆಳೆಸಿದುವು. ಮೆಕ್ಸಿಕೊದ ಚಿತ್ರಕಲೆ ಅತ್ಯಂತ ಉನ್ನತವಾಗಿ ಬೆಳೆಯಿತು. ಹೊಸ ದಾರಿಗಳಲ್ಲಿ ಹೊಸ ಪ್ರಯತ್ನಗಳು ನಡೆದುವು. ನಿಗೂಢ (ಆ್ಯಬ್‌ಸ್ಟ್ರ್ಯಾಕ್ಟ್) ಕಲೆಯ ಬೆಳವಣಿಗೆ ಈ ಕಾಲದ ಮುಖ್ಯ ಅಂಶಗಳಲ್ಲೊಂದು. ಈ ಹೊಸ ಹಾದಿಯಲ್ಲಿ ಮಹತ್ತರ ಕೃತಿಗಳು ನಿರ್ಮಿತವಾಗಿವೆ. ಅಂತರರಾಷ್ಟ್ರೀಯ ಶೈಲಿಯೂ ಬೆಳೆದು ಬರುತ್ತಿದೆ. ಇಷ್ಟಾದರೂ ಚಿತ್ರಕಲೆಯ ಪ್ರಭಾವ ತನ್ನದೇ ಆದ ಪ್ರಪಂಚಕ್ಕೆ ಸೀಮಿತವಾಗಿದ್ದು ಸಮಕಾಲೀನ ನಾಗರಿಕತೆಯ ಮೇಲೆ ಹೆಚ್ಚು ಪ್ರಭಾವಬೀರಿಲ್ಲ. ಈ ದಿಕ್ಕಿನಲ್ಲಿ ಪ್ರಯತ್ನಗಳು ನಡೆಯುತ್ತಿದ್ದರೂ ಜಯಪ್ರದವಾಗಿಲ್ಲ. ಪ್ರತಿಮಾ ಶಿಲ್ಪಕಲೆ ಈ ಕಾಲದಲ್ಲಿ ಹೊಸ ಹುರುಪಿನಿಂದ ವಾಸ್ತುಶಿಲ್ಪದ ಜೊತೆಜೊತೆಗೆ ಬೆಳೆದುಬರುತ್ತಿದೆ. ಕಲ್ಲಿನಲ್ಲಿ ನೈಜತೆ ಮತ್ತು ಭಾವುಕತೆಗಳ ರೂಪಣೆ ನಡೆದು ಬಹಳ ಕಾಲದಿಂದ ಕಳೆದುಹೋಗಿದ್ದ ಆದ್ಯ ತತ್ತ್ವಗಳ ಪುನರುಜ್ಜೀವನ ಕಾರ್ಯ ನಡೆಯುತ್ತಿದೆ. (ಬಿ.ಕೆ.ಜಿ.)

**ಅಮೇರಿಕದ ಕಾಯಿದೆ :** ಇತರ ದೇಶಗಳ ಕಾಯಿದೆಗಳಂತೆ ತನ್ನದೇ ಆದ ಅಸ್ತಿತ್ವವನ್ನೂ ಇತಿಹಾಸವನ್ನೂ ಇಲ್ಲಿನ ಕಾಯಿದೆ ಹೊಂದಿದೆ. ಪ್ರಾರಂಭದಲ್ಲಿ ಅಧ್ಯಾತ್ಮಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳು ಉತ್ತರ ಅಮೇರಿಕದ ಬ್ರಿಟಿಷ್ ವಸಾಹತುಗಳಲ್ಲಿ ಸಾಮಾಜಿಕಕ್ಷೇತ್ರದ ಕ್ರಿಯಾಶಕ್ತಿಗಳಾಗಿದ್ದುವು. ಅಧ್ಯಾತ್ಮವಿದ್ಯೆ ದೈವಿಕಶಕ್ತಿಗೂ ಮಾನವನಿಗೂ ಸಾಹಚರ್ಯವನ್ನು ಉಂಟುಮಾಡಲು ಮಾನವರ ನಡುವೆ ಬಾಂಧವ್ಯ ನಿರ್ಮಾಣಕ್ಕಾಗಿ ಮಾರ್ಗದರ್ಶನ ಮಾಡುವ ಗುರಿಯನ್ನು ಹೊಂದಿತ್ತು. ಯುರೋಪಿನಲ್ಲಿ ಲೌಕಿಕಾಧಿಕಾರಕ್ಕೆ ಪ್ರಾಶಸ್ತ್ಯ ದೊರೆತ ಅನಂತರ ಮಾನವರ ನಡುವಣ ಬಾಂಧವ್ಯದ ನಿರ್ಮಾಣದ ಹೊಣೆ ಕಾನೂನಿಗೆ ಮೀಸಲಾಯಿತು. ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಮೆಸಾಚುಸೆಟ್ಸ್ ವಸಾಹತುಕಾರರಲ್ಲಿ ಆಂಶಿಕವಾಗಿ ಅಧ್ಯಾತ್ಮವಿದ್ಯೆ ಪ್ರಾಶಸ್ತ್ಯ ಹೊಂದಿದ್ದರೂ ತಾಂತ್ರಿಕವಾಗಿ ನ್ಯಾಯಶಾಸ್ತ್ರ ರಾಜಕೀಯ ಕ್ಷೇತ್ರದಲ್ಲಿ ಪ್ರಧಾನಸ್ಥಾನವನ್ನು ಅಲಂಕರಿಸಿತ್ತು.

ಚರ್ಚ್ ಅಧಿಕಾರಿಗಳ ಆಡಳಿತದಲ್ಲೂ ಧಾರ್ಮಿಕಶಾಸನಗಳಿಗಿಂತ ಸಾರ್ವತ್ರಿಕಶಾಸನ ವಿಧಿಗಳಿಗೇ ವಿಶೇಷಸ್ಥಾನ ದೊರಕುತ್ತಿತ್ತು. ವಸಾಹತುಶಾಹಿಯ ಅವಧಿಯಲ್ಲಿ ನ್ಯಾಯಶಾಸ್ತ್ರದ ಬಗ್ಗೆ ಚರ್ಚ್ ಅಧಿಕಾರಿಗಳು ತಮ್ಮ ಕಾಲದ ನ್ಯಾಯವಾದಿಗಳಿಗಿಂತ ಹೆಚ್ಚಿನ ಪರಿಣತಿಯನ್ನು ಪಡೆದ ಪ್ರಕಾಂಡ ಪಂಡಿತರಾಗಿದ್ದರು. ಇಂಗ್ಲೆಂಡಿನಲ್ಲಿ ಕೋಕ್ ಮಹಾಶಯ ಸಾರ್ವಜನಿಕ ಕಾನೂನನ್ನು ಬೆಳಕಿಗೆ ತಂದಾಗ ಇಂಗ್ಲಿಷರು ಅಮೇರಿಕದಲ್ಲಿ ತಳವೂರಲು ಆಗಮಿಸಿದರು. 1750–1775ರ ಅವಧಿಯಲ್ಲಿ ರಾಷ್ಟ್ರೀಯಪ್ರಜ್ಞೆ ವಸಾಹತುಕಾರರಲ್ಲಿ ಮೂಟಿದೆದ್ದಾಗ ಅದೇ ಸಮಯದಲ್ಲಿ ಬ್ಲಾಕ್‌ಸ್ಟೋನಿನ ಪಾಂಡಿತ್ಯಪೂರ್ಣ ನ್ಯಾಯಶಾಸ್ತ್ರದ ಗ್ರಂಥ ಕಾಮೆಂಟರೀಸ್ ಹೊರಬಂತು. ಇದು ಫಿಲಡೆಲ್ಫಿಯದಲ್ಲಿ ಮರು ಪ್ರಕಟಣೆಯಾಗಿ ಪ್ರಕಾಶಗೊಂಡಾಗ ಜನರಲ್ಲಿ ನವಚೈತನ್ಯ ಮೂಡಿತು. ಈ ಗ್ರಂಥಕ್ಕೆ ಫಿಲಡೆಲ್ಫಿಯದ ವಿಲಿಯಂ ಮತ್ತು ಮೇರಿ, ಕಾಲೇಜಿನ ನ್ಯಾಯಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಸೇಂಟ್ ಜಾರ್ಜ್ ಟಕ್ಕರ್ ಅನುಪಮ ವ್ಯಾಖ್ಯಾನಗಳನ್ನೂ, ವಿಶೇಷ ಟಿಪ್ಪಣಿಗಳನ್ನೂ ಸೇರಿಸಿ ಪ್ರಕಟಿಸಿದರು (1803).

ಹದಿನೆಂಟನೆಯ ಶತಮಾನದ ಆಚೀಚಿನಲ್ಲಿ ವಸಾಹತುಗಳ ಕಾನೂನುಸಮಸ್ಯೆಗಳು ಮತ್ತು ಸಮನ್ವಯಸಂಗತಿಗಳು ಇಂಗ್ಲಿಷ್ ಶಾಸನಗಳ ವಸ್ತುವಿಚಾರನಿರೂಪಣೆಗೆ ವಿರೋಧವಾಗಿ ರೂಪುಗೊಂಡ ಫಲವಾಗಿ ಅಮೇರಿಕದಲ್ಲಿ ಕಾನೂನಿನ ಗ್ರಂಥಗಳು, ವ್ಯಾಖ್ಯಾನ, ಟಿಪ್ಪಣಿಗಳು ಅಪಾರಸಂಖ್ಯೆಯಲ್ಲಿ ಪ್ರಕಟಗೊಂಡುವು. ಮಧ್ಯವಸಾಹತು ಮತ್ತು ನ್ಯೂ ಇಂಗ್ಲೆಂಡ್ ಪ್ರದೇಶಗಳಲ್ಲಿ ಈ ಪ್ರಕಟನಕಾರ್ಯ ಭರದಿಂದ ಸಾಗಿತು.

1790ರಲ್ಲಿ ಅಮೇರಿಕದ ಸುಪ್ರೀಂಕೋರ್ಟಿನ ನ್ಯಾಯಾಧೀಶ ಜೇಮ್ಸ್ ವಿಲ್ಸನ್ ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರದ ಬಗ್ಗೆ ನೀಡಿದ ಭಾಷಣಮಾಲೆಯ ಫಲವಾಗಿ ಇಂಗ್ಲಿಷ್ ಕಾನೂನನ್ನು ಕುರಿತು ಅಪಾರಸಂಖ್ಯೆಯಲ್ಲಿ ಪ್ರತಿಕ್ರಿಯೆಗಳು ಪ್ರಕಟಗೊಂಡುವು.

1794ರಲ್ಲಿ ನ್ಯೂಯಾರ್ಕಿನ ಚಾನ್ಸಲರ್ ಕೆಂಟ್ ಕಾನೂನಿನ ಬಗ್ಗೆ ವಿಶೇಷ ಉಪನ್ಯಾಸಗಳ ನ್ನಿತ್ತ. ಇವು 1826ರಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟವಾದುವು. ಮೊದಲ ಸಂಪುಟ ಸ್ಥಳೀಯ ಕಾನೂನುಗಳನ್ನು ಕುರಿತ ವಿವೇಚನೆಯನ್ನೊಳಗೊಂಡಿದ್ದು ಕಾಲಕ್ರಮೇಣ ಪಠ್ಯಗ್ರಂಥವಾಯಿತು. ಅನಂತರ ಬಂದ ನ್ಯಾಯಶಾಸ್ತ್ರವನ್ನು ಕುರಿತ ಪಠ್ಯಗ್ರಂಥಗಳಲ್ಲಿ ಕೆಂಟ್‌ನ ಗ್ರಂಥದ ಪ್ರಭಾವವನ್ನು ಕಾಣಬಹುದು. ಹೀಗೆ ಪ್ರಭಾವಕ್ಕೆ ಒಳಗಾದ ಗ್ರಂಥಗಳಲ್ಲಿ ಸ್ಟೋರಿ, ಕಾಯಟ್, ಗ್ರೀಕ್ ಲೀಫ್, ವೀಟ್ ಮೊದಲಾದವರ ಗ್ರಂಥಗಳು ಉಲ್ಲೇಖನಾರ್ಹ.

ಕಾನೂನು ಸಂಕೀರ್ಣಗೊಂಡಂತೆ ನ್ಯಾಯವಿಷಯಗಳು ಅಧಿಕಗೊಂಡು ಬ್ಲಾಕ್‌ಸ್ಟೋನ್ ಮತ್ತು ಕೆಂಟರ ಕೃತಿವ್ಯಾಖ್ಯೆಗಳು ಕಾನೂನಿನ ಅಧ್ಯಯನಾವಶ್ಯಕತೆಯನ್ನು ಪೂರೈಸಲು ಶಕ್ತವಾಗಲಿಲ್ಲ. ಈ ಕಾರಣದಿಂದ ಅನೇಕ ನೂತನ ವ್ಯಾಖ್ಯಾನಗ್ರಂಥಗಳೂ ಪಠ್ಯಸಾಹಿತ್ಯವೂ ಪ್ರಕಟವಾದುವು.

1800ಕ್ಕೆ ಮುಂಚೆ ಎಲ್ಲ ಪಠ್ಯಗ್ರಂಥಗಳೂ ಬ್ರಿಟಿಷ್ ಲೇಖಕರ ಕೃತಿಗಳಾಗಿದ್ದುವು. ಮೊದಲ ಅಮೇರಿಕನ್ ಪಠ್ಯಗ್ರಂಥವೆಂದರೆ 1802ರಲ್ಲಿ ಪ್ರಕಟಗೊಂಡ ಕೆಯ್ ಕೃತ ಲೆಕ್ಸ್ ಮರ್ಕಟೇರಿಯಾ ಅಮೇರಿಕಾನ ಎಂಬ ಗ್ರಂಥ. 1805ರಲ್ಲಿ ಜೋಸೆಫ್ ಸ್ಟೋರಿಯ ಆನ್ ಪ್ಲೀಡಿಂಗ್ಸ್ ಎಂಬ ಗ್ರಂಥ ಹೊರಬಂತು. ಏಂಜೆಲ್ ನ ಕಾರ್ಪೊರೇಷನ್ಸ್, ವಾಕರ್ ನ ಇಂಟ್ರೊಡಕ್ಷನ್ ಟು ಅಮೇರಿಕನ್ ಲಾ, ಬೊವಿಯರ್ಸ್ ನ ಲಾ ಡಿಕ್ಷನರಿ, ಗ್ರೀನ್ ಲೀವ್ಸ್ ನ ಎವಿಡೆನ್ಸ್ ಸಡ್ಜ್‌ವಿಕ್ ನ ಡ್ಯಾಮೇಜಸ್, ಪಾರ್ಸ್ ನ ಕಾಂಟ್ರಾಕ್ಟ್ಸ್, ಬ್ರೌನ್ ನ ಸ್ಟಾಚ್ಯೂಟ್ಸ್ ಆಫ್ ಫ್ರಾಡ್ಸ್ ಮತ್ತು ಸ್ಟೋರಿ ಅವರ ಅನೇಕ ಪ್ರಸಿದ್ಧ ಗ್ರಂಥಗಳು 1830 ರಿಂದ 1867ರ ಅವಧಿಯಲ್ಲಿ ಪ್ರಕಾಶನಗೊಂಡುವು. ಇದನ್ನು ನ್ಯಾಯಶಾಸ್ತ್ರದ ಬೆಳವಣಿಗೆಯ ಸುಗ್ಗಿಕಾಲವೆಂದು ಹೇಳಬಹುದು. ಈ ಎಲ್ಲ ಗ್ರಂಥಗಳು ಪರಿಷ್ಕೃತರೂಪದಲ್ಲಿ ಇಂದೂ ಬಳಕೆಯಲ್ಲಿವೆ.

1830ರ ಅನಂತರ ಕಾನೂನಿನ ಬಗ್ಗೆ ನಿಯತಕಾಲಿಕಗಳು ಪ್ರಕಟವಾಗತೊಡಗಿದುವು. ಆದರೆ ಇಂದು 1860ರ ಮುಂಚೆ ಪ್ರಕಟಗೊಂಡ ಪತ್ರಿಕೆಗಳಾವುವೂ ಉಳಿದುಬಂದಿಲ್ಲ. 1790ಕ್ಕೆ ಮುಂಚಿನ ಅವಧಿಯಲ್ಲಿ ಕೇವಲ ನಾಲ್ಕು ನ್ಯಾಯವರದಿಗಳು ಅಪೂರ್ಣವಾಗಿ ಸಿದ್ಧವಾದವು. ಅವುಗಳಲ್ಲಿ 1800ರ ವೇಳೆಗೆ ಒಂದು ವರದಿ ಮಾತ್ರ ಬೆಳಕಿಗೆ ಬಂತು. ಮುಖ್ಯವಾಗಿ 1840ರ ಅನಂತರ ವೃತ್ತಿವಕೀಲರಿಗೆ ಮತ್ತು ನ್ಯಾಯಾಭ್ಯಾಸಿಗಳಿಗೆ ಅಗತ್ಯವೆನಿಸಿದ ವರದಿಗಳು, ಸಾರಸಂಗ್ರಹಾವಳಿ ಮತ್ತು ಇತರ ಸಹಾಯಕ ಸಾಹಿತ್ಯ ಅಪಾರಪ್ರಮಾಣದಲ್ಲಿ ಹೊರಬಿದ್ದುವು. 1860ರ ಹೊತ್ತಿಗೆ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಸಾಹಿತ್ಯರಾಶಿ ಅಗಾಧ ಪ್ರಮಾಣದಲ್ಲಿ ಸಿದ್ಧವಾಗಿ ಎಲ್ಲೆಲ್ಲೂ ಪ್ರಚಾರವಾಗಿತ್ತು. ರಾಷ್ಟ್ರದ ಆರ್ಥಿಕಪ್ರಗತಿ ನ್ಯಾಯವೃತ್ತಿಗೆ

ಉತ್ತೇಜಕ ಶಕ್ತಿಯಾಯಿತು. ತೀವ್ರಗತಿಯಲ್ಲಿ ಬದಲಾವಣೆ ಹೊಂದುತ್ತಿದ್ದ ಸಾಮಾಜಿಕ ಮತ್ತು ಆರ್ಥಿಕಪರಿಸ್ಥಿತಿಯ ಕಾಲದಲ್ಲಿ ಅನಿಶ್ಚಿತರೂಪದಲ್ಲಿದ್ದ ಸಾರ್ವತ್ರಿಕನಿಯಮಗಳು ತಾತ್ತ್ವಿಕ ನಿರ್ಧಾರಗಳಿಗಿಂತ ಹೆಚ್ಚಾಗಿ ಪರಂಪರಾಗತ ಸಾಂಪ್ರದಾಯಿಕ ತೀರ್ಮಾನಗಳನ್ನು ಅವಲಂಬಿಸುತ್ತಿದ್ದುದರಿಂದ ನ್ಯಾಯವಿಚಾರಣಾ ಪ್ರಸಂಗಗಳು ಅತ್ಯಧಿಕವಾದುವು.

1750ರ ಅನಂತರ ವಕೀಲವೃತ್ತಿಯವರು ಸಾರ್ವಜನಿಕಕ್ಷೇತ್ರದಲ್ಲಿ ಗಣ್ಯಸ್ಥಾನವನ್ನು ಗಳಿಸುವಂತಾಯಿತು. ವಸಾಹತುಗಳಲ್ಲಿದ್ದ ಸಮಸ್ಯೆಗಳು ಸ್ಥಳೀಯ ಲಕ್ಷಣಗಳನ್ನು ತೊರೆದು ವ್ಯಕ್ತಿಗತಮಹತ್ತ್ವವನ್ನು ಪಡೆದುವು. ಈ ಪರಿವರ್ತನೆ ರಾಷ್ಟ್ರೀಯತೆ ಮತ್ತು ಸಾಮಾಜಿಕ ದೃಷ್ಟಿಗಳಿಂದ ಮಹತ್ತ್ವಪೂರಿತ ಘಟನೆಯಾಯಿತು. ಇಂಥ ಸನ್ನಿವೇಶದಲ್ಲಿ ತತ್ತ್ವಜ್ಞಾನಿಗಳು ಮತ್ತು ಧರ್ಮೋಪದೇಶಕರು ನಾಯಕಸ್ಥಾನದಲ್ಲಿ ನಿಂತು ಸಮಾಜವನ್ನು ಮುನ್ನಡೆಸಲು ಶಕ್ತರಾಗಲಿಲ್ಲ; ಮತ್ತು ರಾಜ್ಯಶಾಸ್ತ್ರ ಹಾಗೂ ರಾಜ್ಯಾಡಳಿತ ವಿಚಾರಗಳಲ್ಲಿ ಅರಿತ ನುರಿತ ಜನರೂ ಮಾರ್ಗದರ್ಶನಕ್ಕೆ ಇರಲಿಲ್ಲ. ಪರಿಣಾಮವಾಗಿ ಜನತೆಯನ್ನು ಮುನ್ನಡೆಸುವ ಗುರುತರ ಭಾರ ವೃತ್ತಿವಕೀಲರ ಪಾಲಿಗೆ ಬಂತು. ಒಂದು ಕಾಲದಲ್ಲಿ ಅಸತ್ಯಕ್ಕೆ ಅಪ್ರಿಯತೆಗೆ ಹೆಸರಾಗಿದ್ದ ವಕೀಲವೃತ್ತಿಯವರು ಇಂದು ಸಮಾಜಕ್ಕೆ ಮಾರ್ಗದರ್ಶಕರಾಗಿ ನಿಂತರು.

1775ರಲ್ಲಿ ವಸಾಹತುಗಳು ತಮ್ಮದೇ ಆದ ಸರ್ಕಾರವನ್ನು ಸ್ಥಾಪಿಸಿಕೊಂಡಾಗ ನ್ಯಾಯವಾದಿಗಳೇ ಜನತೆಯನ್ನು ಮುನ್ನಡೆಸುವ ದಕ್ಷ ಜನರಾಗಿದ್ದರು. 1750ರ ಅನಂತರ ಹೊಸ ಶಿಕ್ಷಣಪದ್ಧತಿಯ ಬಗ್ಗೆ ಅದರಲ್ಲೂ ವಿಶೇಷವಾಗಿ ಸಾರ್ವತ್ರಿಕಶಿಕ್ಷಣಕ್ಕೆ ವಿಶೇಷಮಹತ್ತ್ವ ದೊರೆತುದರ ಫಲವಾಗಿ ನ್ಯಾಯಶಿಕ್ಷಣ ತುಂಬ ಜನಮನ್ನಣೆಯನ್ನು ಗಳಿಸಿತು. 1775ರ ವೇಳೆಗೆ ಬಹುಶಃ ಜಗತ್ತಿನ ಬೇರಾವ ದೇಶದಲ್ಲೂ ನ್ಯಾಯಶಿಕ್ಷಣ ಇಷ್ಟೊಂದು ವ್ಯಾಪಕತೆಯನ್ನು ಪಡೆದಿಲ್ಲ ಎಂದು ಬರ್ಕ್ ಹೇಳಿದ ಮಾತು ಸಮಂಜಸವೆನ್ನಿಸುವಂತಿತ್ತು. ಆ ಕಾಲದಲ್ಲಿ ನ್ಯಾಯಶಿಕ್ಷಣ ವಿಶೇಷವಾಗಿ ನ್ಯಾಯಾಲಯದಲ್ಲಿದ್ದ ಅಭ್ಯಾಸಿವಕೀಲರಲ್ಲಿ ಮತ್ತು ದಕ್ಷ ವೃತ್ತಿವಕೀಲರ ಬಳಿಯಲ್ಲಿದ್ದ ಗುಮಾಸ್ತರಲ್ಲಿ ಮಾತ್ರ ಕಂಡುಬರುತ್ತಿತ್ತು.

1755ರಲ್ಲಿ ನ್ಯೂಯಾರ್ಕಿನ ಕಿಂಗ್ಸ್ ಕಾಲೇಜಿನಲ್ಲಿ ಕಾನೂನಿನ ಬಗ್ಗೆ ಅಧಿಕೃತಶಿಕ್ಷಣ ಪ್ರಾರಂಭವಾಯಿತು. ಶಿಕ್ಷಣದ ಪಠ್ಯಕ್ರಮದಲ್ಲಿ ನಾಲ್ಕನೆಯ ವರ್ಷದ ಅಭ್ಯಾಸದ ಪಟ್ಟಿಯಲ್ಲಿ ಇತರ ವಿಷಯಗಳೊಂದಿಗೆ ಸರ್ಕಾರ ಮತ್ತು ನ್ಯಾಯಶಾಸ್ತ್ರಗಳ ಮೂಲ ತತ್ತ್ವಗಳು ಎಂಬ ವಿಷಯವೂ ಪಠ್ಯವಾಯಿತು. ಇದೇ ರೀತಿಯಲ್ಲಿ ಫಿಲಡೆಲ್ಫಿಯದಲ್ಲಿ 1756ರಲ್ಲಿ ಅಧಿಕೃತ ಕಾನೂನುಶಿಕ್ಷಣಾಭ್ಯಾಸ ಪ್ರಾರಂಭವಾಯಿತು. 1773ರಲ್ಲಿ ಕಿಂಗ್ಸ್ ಕಾಲೇಜಿನಲ್ಲಿ ಪ್ರಾಕೃತಿಕನ್ಯಾಯಸಿದ್ಧಾಂತವಿಭಾಗಕ್ಕೆ ಪ್ರಾಧ್ಯಾಪಕ ಹುದ್ದೆಯನ್ನು ವ್ಯವಸ್ಥೆಮಾಡಲಾಯಿತು. 1779ರಲ್ಲಿ ವಿಲಿಯಂ ಮತ್ತು ಮೇರಿ ಕಾಲೇಜಿನಲ್ಲಿ ಲಾ ಮತ್ತು ಪೋಲೀಸ್ ಅಧ್ಯಯನವಿಭಾಗವನ್ನು ತೆರೆಯಲಾಯಿತು.

1790ರಲ್ಲಿ ಪೆನ್ಸಿಲ್ವೇನಿಯ, 1794ರಲ್ಲಿ ಕೊಲಂಬಿಯ, 1799ರಲ್ಲಿ ಟ್ರಾನ್ಸಿಲ್ವೇನಿಯ, 1806ರಲ್ಲಿ ಮಿಡ್ಲ್‌ಬರಿ, 1824ರಲ್ಲಿ ಯೇಲ್, 1826ರಲ್ಲಿ ವರ್ಜಿನಿಯ–ಹೀಗೆ ಅನೇಕ ವಿಶ್ವವಿದ್ಯಾನಿಲಯಗಳು ಸ್ಥಳೀಯ ಕಾನೂನುಶಾಸ್ತ್ರದ ಅಧ್ಯಯನಕ್ಕೆ ಪ್ರತ್ಯೇಕ ವಿಭಾಗಗಳನ್ನೂ ಪ್ರಾರಂಭಿಸಿದುವು. 1860ರ ವೇಳೆಗೆ ಮೇಲ್ಕಂಡ ಸಂಸ್ಥೆಗಳಲ್ಲದೆ ಇತರ ಇಪ್ಪತ್ತೆರಡು ವಿಶ್ವವಿದ್ಯಾನಿಲಯಗಳ ಸಂಸ್ಥೆಗಳು ಕಾನೂನಿನ ಬಗ್ಗೆ ವಿಶೇಷ ಶಿಕ್ಷಣವನ್ನು ನೀಡುತ್ತಿದ್ದುವು. 1782ರಲ್ಲಿ ಲಿಚ್ ಫೀಲ್ಡ್ ಮತ್ತು 1784ರಲ್ಲಿ ಕನೆಕ್ಟಿಕಟ್ ಗಳಲ್ಲಿ ಅಲ್ಲದೆ ಇತರ ಕಡೆಗಳ ಖಾಸಗಿ ನ್ಯಾಯಶಾಲೆಗಳು ಅಸಂಖ್ಯಾತವಾಗಿ ಹುಟ್ಟಿಕೊಂಡುವು. 1860ರ ವೇಳೆಗೆ ಇಂಥ ಶಾಲೆಗಳು ಸಾಕಷ್ಟು ಪ್ರಮಾಣದಲ್ಲಿ ಎಂಟಕ್ಕೂ ಹೆಚ್ಚಿನ ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬಂದಿದ್ದುವು.

1865ರ ಅನಂತರ ವಕೀಲಿವೃತ್ತಿಗೆ ಹೋಗುವವರಿಗೆ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳು ವಿಶೇಷ ಪ್ರಾಶಸ್ತ್ಯವನ್ನು ನೀಡಿದ್ದರಿಂದ ಖಾಸಗಿ ನ್ಯಾಯಶಾಲೆಗೆ ಮೊದಲಿದ್ದ ಪ್ರಾಧಾನ್ಯ ಕುಗ್ಗತೊಡಗಿತು. ಆದರೂ ಪ್ರಮುಖ ವಾಣಿಜ್ಯನಗರಗಳಲ್ಲಿ ಹಗಲು ಉದ್ಯೋಗನಿರತರಾದವರ ಅನುಕೂಲಕ್ಕಾಗಿ ರಾತ್ರಿಕಾಲದಲ್ಲಿ ಸಂಕ್ಷಿಪ್ತನ್ಯಾಯಶಿಕ್ಷಣವೀಯುವ ಸಂಸ್ಥೆಗಳಾಗಿ ಖಾಸಗಿನ್ಯಾಯಶಾಲೆಗಳು ಉಳಿದುಕೊಂಡು ಬಂದುವು. ಆದರೆ ಇಂದು ರಾಜಕೀಯಕ್ಷೇತ್ರದಲ್ಲಿ ಮುಂದಾಳುತನಕ್ಕೆ ವ್ಯಕ್ತಿಗಳನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಸಹಾಯಕವಾಗಿ ರೂಪುಗೊಂಡಿರುವ ವಕೀಲಿವೃತ್ತಿ ಶಿಕ್ಷಣಪದ್ಧತಿಯನ್ನು ಉಳಿದ ಕಡೆಗಳಿಗಿಂತ ವಿಶೇಷವಾಗಿ ಅಮೆರಿಕದಲ್ಲಿ ಕಾಣಬಹುದು.

1750ರ ಅನಂತರದ ಕಾಲಕ್ಕೆ ತಕ್ಕ ಆವಶ್ಯಕತೆಗಳನ್ನು ಪೂರೈಸುವುದಲ್ಲಿ ತತ್ತ್ವಶಾಸ್ತ್ರ ಮತ್ತು ಧರ್ಮಶಾಸ್ತ್ರಗಳಿಗಿಂತ ಹೆಚ್ಚಾಗಿ ನ್ಯಾಯಶಾಸ್ತ್ರಶಿಕ್ಷಣ ಸಮರ್ಥವಾಗಿ ಪೂರೈಸಿದರೆ, 1860ರ ಅನಂತರ ಅಮೆರಿಕದ ಸಾಮಾಜಿಕಾಭಿವೃದ್ಧಿಯಲ್ಲಿ ಸೂಕ್ತ ಮಾರ್ಗದರ್ಶನ ನೀಡಲು ನವೀನರೀತಿಯ ಸಾಮಾಜಿಕಶಾಸ್ತ್ರಗಳ ಶಿಕ್ಷಣ, ಅಧ್ಯಯನಗಳು ಸಮರ್ಥರೀತಿಯಲ್ಲಿ ಆಗಿನ ಆವಶ್ಯಕತೆಗಳನ್ನು ಪೂರೈಸಿದುವು.

ಈ ರೀತಿ ಪ್ರಗತಿ ಹೊಂದಿ ಮುನ್ನಡೆಯುತ್ತಿರುವ ಅಮೆರಿಕದ ಕಾನೂನುಪದ್ಧತಿ ಇಂದು ವ್ಯಕ್ತಿ–ವ್ಯಕ್ತಿಗಳ ನಡುವಣ ಮತ್ತು ಆಳುವವರ ಹಾಗೂ ಪ್ರಜೆಗಳ ನಡುವಣ ಸುಸಂಘಟಿತ ಸುಮಧುರಬಾಂಧವ್ಯವನ್ನು ನಿರ್ಮಿಸುವ ಅಪೂರ್ವಶ್ರೇಷ್ಠ ಸಾಧನವಾಗಿ ಜಗತ್ತಿನಲ್ಲೆ ಪ್ರಬುದ್ಧಪರಿಣತ ನ್ಯಾಯ ಪದ್ಧತಿಯಾಗಿ ಬೆಳಗಿದೆ.

ಇಂದಿನ ಅಮೆರಿಕದ ನ್ಯಾಯಶಾಸ್ತ್ರವನ್ನು ತಜ್ಞರು ಪ್ರಧಾನವಾಗಿ ಸಂವಿಧಾನವಿಧಿ, ನಾಗರಿಕವಿಧಿ, ದಂಡವಿಧಿ, ನ್ಯಾಯತೀರ್ಮಾನದತ್ತವಿಧಿ ಎಂಬುದಾಗಿ ನಾಲ್ಕು ವಿಧಗಳಲ್ಲಿ ವರ್ಗೀಕರಿಸುತ್ತಾರೆ. ಅಮೆರಿಕದಲ್ಲಿ ಕಾಯಿದೆ ನಿರ್ಮಾಣವಿಧಾನ ಗಮನಾರ್ಹವಾದ ರೀತಿನೀತಿಗಳನ್ನು ಹೊಂದಿದೆ. ಯಾವುದೇ ಹೊಸಕಾಯಿದೆಯಾದರೂ ಕಾಂಗ್ರೆಸ್ಸಿನ ಉಭಯಸದನಗಳಲ್ಲೂ ಮಂಡಿತವಾಗಿ ಅಂಗೀಕೃತವಾಗಬೇಕು. ಆಗ ಅದನ್ನು ಅಧ್ಯಕ್ಷರ ಸಹಿಗೆ ಮಂಡಿಸಲಾಗುವುದು. ಉಭಯಸದನಗಳ ಅಂಗೀಕಾರ ದೊರೆಯದಿದ್ದಲ್ಲಿ ಆ ಕಾಯಿದೆ ತಿರಸ್ಕೃತವಾಗುತ್ತದೆ. ರಾಷ್ಟ್ರಾಧ್ಯಕ್ಷರಿಗೆ ಕಾಯಿದೆಯ ಶಾಸನವನ್ನು ತಡೆಹಿಡಿಯುವ ಅಧಿಕಾರವಿದೆ. ಅಂಥ ಸಂದರ್ಭಗಳಲ್ಲಿ ಮತ್ತೆ ಕಾಂಗ್ರೆಸ್ಸಿನ ಮರು ಪರಿಶೀಲನೆಗೆ ಕಾಯಿದೆ ಒಳಗಾಗುತ್ತದೆ. ಆಗ ಮೂರನೆಯ ಎರಡು ಭಾಗದಷ್ಟು ಬಹುಮತದಿಂದ ಅಂಗೀಕಾರವಾದರೆ ಅದು ಶಾಸನವಾಗುತ್ತದೆ.

1923ರಲ್ಲಿ ರೂಪುಗೊಂಡ ಅಮೆರಿಕದ ಕಾಯಿದೆಸಂಸ್ಥೆ ಕಾನೂನುಗಳ ಅರ್ಥವಿವರಣೆ, ಸೂತ್ರೀಕರಣ, ಅವುಗಳ ಸಾಮಾಜಿಕ ಅನ್ವಯ, ಪ್ರಬುದ್ಧ ಅಧ್ಯಯನ ಮೊದಲಾದ ವಿಚಾರಗಳ ಬಗ್ಗೆ ಬಹು ಉಪಯುಕ್ತವಾದ ಕೆಲಸಮಾಡಿದೆ.

ಇಂದು ಅಮೆರಿಕದ ನ್ಯಾಯಪದ್ಧತಿ ರಾಷ್ಟ್ರೀಯ ಹಾಗೂ ಸಾಮಾಜಿಕ ಜೀವನದ ಸಕಲ ಕಾರ್ಯಕ್ಷೇತ್ರಗಳಲ್ಲೂ ಪ್ರಚೋದಕಶಕ್ತಿಯಾಗಿ ಜನತೆಯನ್ನು ಮುನ್ನಡೆಸುವಷ್ಟು ವಿಶಾಲವ್ಯಾಪ್ತಿಯನ್ನು ಹೊಂದಿ, ನ್ಯಾಯಶಾಸ್ತ್ರದ ವಿಷಯ, ವಿಚಾರಗಳಲ್ಲಿ ನಾನಾ ಶಾಖೆಗಳ ವಿಕಾಸವನ್ನು ಹೊಂದಿ, ಅಧ್ಯಯನದ ವಿವಿಧ ಅಂಗೋಪಾಂಗಗಳನ್ನು ವಿಸ್ತೃತ ರೂಪದಲ್ಲಿ ಪಡೆದಿದ್ದು, ಬೃಹತ್ ವ್ಯಾಪ್ತಿಯ ಶಾಸ್ತ್ರಪದ್ಧತಿಯಾಗಿದೆ. (ಎಚ್.ಆರ್.ಡಿ.)

**ಅಮೆರಿಕದ ಕಾಯಿದೆ ಸಂಸ್ಥೆ :** ಪ್ರಪಂಚದ ಪ್ರಸಿದ್ಧ ಕಾಯಿದೆಸಂಸ್ಥೆಗಳಲ್ಲಿ ಒಂದು. ನ್ಯಾಯಾಧೀಶರು, ವೃತ್ತಿವಕೀಲರು, ಕಾನೂನು ತಜ್ಞರುಗಳಿಂದ ಕೂಡಿದ ವಿಧಿಬದ್ಧಸಂಸ್ಥೆ ಇದು. ಕಾನೂನನ್ನು ಕುರಿತು ಅರ್ಥವಿವರಣೆ ಮಾಡಿ ಸರಳನಿಯಮಗಳನ್ನಾಗಿ ನಿರೂಪಿಸುವುದು, ಸಾಮಾಜಿಕ ಆವಶ್ಯಕತೆಗಳಿಗೆ ತಕ್ಕಂತೆ ಕಾನೂನುಗಳನ್ನು ಅನ್ವಯಿಸುವುದು, ನ್ಯಾಯಪರಿಪಾಲನೆಗಾಗಿ ಸುವ್ಯವಸ್ಥಿತ ಆಡಳಿತನಿರ್ಮಾಣಕ್ಕೆ ನೆರವಾಗುವುದು, ಕಾನೂನು ಶಾಸ್ತ್ರದ ಬಗ್ಗೆ ಪ್ರಬುದ್ಧ ಅಧ್ಯಯನ ಮತ್ತು ವೈಜ್ಞಾನಿಕ ವಿಶ್ಲೇಷಣೆಗಳಿಗೆ ನೆರವು ನೀಡುವುದು ಈ ಸಂಸ್ಥೆಯ ಪ್ರಮುಖ ಧ್ಯೇಯೋದ್ದೇಶಗಳು.

ಅಮೆರಿಕದ ಕಾಯಿದೆಸಂಸ್ಥೆಯ ಪ್ರಾರಂಭ ಇತಿಹಾಸ ತುಂಬಾ ಸ್ವಾರಸ್ಯಕರವಾಗಿದೆ. ಮೊಟ್ಟಮೊದಲಿಗೆ ಅಮೆರಿಕದಲ್ಲಿ ಕಾನೂನಿನ ಪದ್ಧತಿಯ ಉತ್ತಮೀಕರಣಕ್ಕಾಗಿ ಎಲ್ಲ ನ್ಯಾಯಶಾಖೆಗಳು ಶ್ರಮಿಸಲು ಕೇಂದ್ರ ನ್ಯಾಯಮಂಡಲಿಯೊಂದು ಇರಬೇಕೆಂದು ಅಮೆರಿಕದ ವಿವಿಧ ನ್ಯಾಯಪಂಥಗಳ ಮಂಡಲಿಗೆ ಕಂಡುಬಂದಿತು. ಆ ಸಂಬಂಧದಲ್ಲಿ ಹಲವಾರು ಪ್ರಯತ್ನಗಳು ನಡೆದು ಆ ಬಗ್ಗೆ ಯೋಜನೆಯೊಂದು ಸಿದ್ಧವಾಯಿತು.

ಆ ಯೋಜನೆಯನ್ನು ಕಾರ್ಯಗತಗೊಳಿಸಲು ವಿಶೇಷಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ತನ್ನ ಕಾರ್ಯದ ಯಶಸ್ಸಿಗಾಗಿ ನ್ಯಾಯಾಲಯ, ವಕೀಲಿಸಂಘ, ನ್ಯಾಯವಿದ್ಯಾಲಯ, ಪ್ರತಿಷ್ಠಿತಜನಮಂಡಲಿಗಳ ಸಹಾಯ–ಸಹಕಾರಗಳನ್ನು ಪಡೆಯಲು ನಿರ್ಧರಿಸಿತು. 1921ರ ಡಿಸೆಂಬರ್‌ನಲ್ಲಿ ಜರುಗಿದ ಈ ವಿಶೇಷಸಮಿತಿಯ ವಾರ್ಷಿಕಾಧಿವೇಶನದಲ್ಲಿ ಸಮಗ್ರಪರಿಸ್ಥಿತಿಯ ಪರಿಶೀಲನೆಗಾಗಿ ಪ್ರತ್ಯೇಕಮಂಡಲಿಯೊಂದನ್ನು ರಚಿಸಲಾಯಿತು. ಈ ಮಂಡಲಿ ಮುಂದಿಟ್ಟ ವರದಿಯಲ್ಲಿ ಅಮೆರಿಕದ ಕಾನೂನುಪದ್ಧತಿಯಲ್ಲಿ ಕಂಡುಬಂದ ಸಮಗ್ರದೋಷಗಳ ನಿರೂಪಣೆ, ಈ ದೋಷಗಳ ಪರಿಹಾರೋಪಾಯ ಕ್ರಮಗಳ ನಿರೂಪಣೆ, ಇದಕ್ಕಾಗಿ ತಗಲುವ ವೆಚ್ಚ, ಬೇಕಾಗುವ ಅವಧಿಯ ಗೊತ್ತುಪಡಿ ಇವೇ ಮೊದಲಾದ ವಿಷಯಗಳು ಅಡಕವಾಗಿದ್ದುವು. ಈ ವರದಿಯನ್ನು ಆಧರಿಸಿ ರೂಪುಗೊಂಡ ಸ್ಥಿರಮಂಡಲಿಯೇ ಅಮೆರಿಕದ ಕಾಯಿದೆಸಂಸ್ಥೆ. ಇದು 1923ರಲ್ಲಿ ಮನ್ನಣೆ ಹೊಂದಿ ಕಾರ್ಯಪ್ರವೃತ್ತವಾಯಿತು. ಪ್ರಾರಂಭದ ಹತ್ತು ವರ್ಷಗಳ ವೆಚ್ಚವನ್ನು ಕಾರ್ನೆಗಿ ಕಾರ್ಪೊರೇಷನ್ ವಹಿಸಿಕೊಂಡಿತು. ಸಂಸ್ಥೆಯ ಮುಖ್ಯಾಧ್ಯಕ್ಷರಾಗಿ ಜಾರ್ಜ್ ಡಬ್ಲ್ಯು. ವಿಕ್ಕರ್ ಷ್ಯಾಮ್ ಅವರು ಅಧ್ಯಕ್ಷರುಗಳಲ್ಲೊಬ್ಬರಾಗಿ ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದ ಕಾನೂನುವಿಭಾಗದ ಹಿರಿಯ ಮೇಲ್ವಿಚಾರಣಾಧಿಕಾರಿಯಾದ ವಿಲಿಯಂ ಡ್ರೆಪರ್ ಲೆವಿಸ್ ಅವರೂ ನೇಮಕಗೊಂಡರು. ಸಂಸ್ಥೆಯ ಕಾರ್ಯಾಚರಣೆಗೆ ಸಾರ್ವಜನಿಕ ಮಹತ್ತ್ವವುಂಟಾಗಿ ಕಾನೂನಿನ ನಿರ್ಮಾಣಕಾರ್ಯದಲ್ಲಿ ಈ ಸಂಸ್ಥೆ ಮಹತ್ತರ ಪಾತ್ರ ವಹಿಸುವಂತಾಯಿತು.

ರೂಢಿ ತಪ್ಪಿದ ಕಾನೂನುಗಳನ್ನು ಸುಧಾರಿತಗೊಳಿಸುವುದು, ದಂಡಪ್ರಕ್ರಿಯೆಗಳ ಬಗ್ಗೆ ಆದರ್ಶಸಂಹಿತೆಯನ್ನು ರೂಪಿಸುವುದು–ಈ ಎರಡು ಯೋಜನೆಗಳನ್ನು ಪ್ರಥಮತಃ ಸಂಸ್ಥೆ ಕೈಗೊಂಡಿತು.

ಮೊದಲ ಯೋಜನೆಯಲ್ಲಿ ಒಡಂಬಡಿಕೆಗಳು, ಖಾಸಗಿ ಅಪರಾಧಗಳು, ಸಂದಿಗ್ಧ ಕಾನೂನುಗಳು, ಅಧಿಕರಣಗಳು, ಆಸ್ತಿಪಾಸ್ತಿ ನಿಯಮಗಳು, ವಾಣಿಜ್ಯಸಂಘಗಳ ನಿಯಮಾವಳಿ ಇವು ಸೇರಿದ್ದವು. ಪ್ರತಿಯೊಂದು ವಿಷಯವನ್ನೂ ಪ್ರತ್ಯೇಕವಾಗಿ ಪರಿಶೀಲಿಸಿ ವರದಿ ಮಾಡಲು ಬೇರೆಬೇರೆಯವರನ್ನು ನಿಯಮಿಸಲಾಗಿತ್ತು. ಇವರ ನೆರವಿಗೆ ಕಾನೂನುತಜ್ಞರು ಮತ್ತು ಸಹಾಯಕನ್ಯಾಯಜ್ಞರು ಇದ್ದರು.

ಉಪಸಮಿತಿಗಳು ಸಿದ್ಧಪಡಿಸಿದ ವರದಿಯನ್ನು ಚರ್ಚೆ, ಪರಿಶೀಲನೆ, ತೀರ್ಮಾನಗಳಿಗಾಗಿ ಅಂತಿಮವಾಗಿ ಅಮೆರಿಕದ ಕಾಯಿದೆಸಂಸ್ಥೆಯ ವಾರ್ಷಿಕಾಧಿವೇಶನದಲ್ಲಿ ಮಂಡಿಸಲಾಯಿತು. ಅಧಿವೇಶನದಲ್ಲಿ ದೇಶದ ನಾನಾಭಾಗಗಳ ನ್ಯಾಯಾಧೀಶರು, ನ್ಯಾಯವಾದಿಗಳು ಭಾಗವಹಿಸಿ ಅಲ್ಲದೆ ರಾಜ್ಯದ ವಕೀಲಿಸಂಸ್ಥೆಗಳು ಪ್ರತಿ ಉಪಸಮಿತಿಯ ಕರಡುವರದಿಯನ್ನು ಸ್ಥಳೀಯಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಚರ್ಚಿಸಿ ಲೋಪದೋಷಗಳನ್ನು ಗಮನಿಸಿ, ಸೂಕ್ತಸಲಹೆಗಳೊಂದಿಗೆ ವಾರ್ಷಿಕಾಧಿವೇಶನಕ್ಕೆ ಕಳಿಸಿದರು. ಈ ಬಗೆಯ ಕಾರ್ಯವಿಧಾನ ಅಮೆರಿಕದ ಸಾರ್ವತ್ರಿಕ ಕಾನೂನಿನ ಮೂಲಲಕ್ಷಣಗಳಿಗೆ ಅನುರೂಪವಾಗಿದೆ. ಈ ಮರುನಿರೂಪಣೆಯ ಕಾರ್ಯದಲ್ಲಿ ಶಾಸನೀಕರಣದ ಭಾವ ಅಲ್ಲಲ್ಲಿ ಕಂಡುಬಂದರೂ ನಿಜಕ್ಕೂ ವಸ್ತುಸ್ಥಿತಿಯ ನಿರೂಪಣೆಗೇ ಪ್ರಾಮುಖ್ಯವಿತ್ತು. ಈ ಕಾರ್ಯದಲ್ಲಿ ನ್ಯಾಯನಿಯಮಾವಳಿಗಳ ಏಕೀಕರಣದ ಗುರಿ ಕಾಣದಿದ್ದರೂ ಸ್ವಲ್ಪಮಟ್ಟಿಗೆ ಆ ಬಗ್ಗೆ ಪ್ರಗತಿಯಾಗಿರುವುದು ಗಮನಾರ್ಹ.

ಕಾನೂನುಗಳನ್ನು ವಾಸ್ತವರೂಪದಲ್ಲಿ ನಿರೂಪಿಸುವ ಉದ್ದೇಶದಿಂದ, ಜಾರಿಯಲ್ಲಿದ್ದ ಸಾಮಾನ್ಯನಿಯಮಗಳನ್ನು ಸಾಧ್ಯವಿದ್ದಷ್ಟು ಪ್ರಾಮಾಣಿಕವಾಗಿ ಪ್ರತಿನಿಧಿಸುವ ಗುರಿಯಿಂದ, ಅಸ್ತಿತ್ವದಲ್ಲಿರುವ ಸಕಲ ಭಿನ್ನವಿಚಾರದೃಷ್ಟಿಗಳನ್ನು ಮುಂದಿಟ್ಟು ವಿಶೇಷ ವ್ಯಾಖ್ಯಾನಗಳೊಂದಿಗೆ, ಸಂಬಂಧಪಟ್ಟ ಸಾಕ್ಷ್ಯದಾಖಲೆಗಳ ಪೂರ್ಣವಿವರಗಳನ್ನು ನೀಡುವ ಕ್ರಮವನ್ನು ಅನುಸರಿಸಿತು.

ದಂಡಶಾಸನಸಂಹಿತೆಯ ನಿರೂಪಣಕಾರ್ಯದಲ್ಲಿ ಕೇವಲ ನಿಯಮಾವಳಿಗಳನ್ನು ಸರಳವಾಗಿ ನಿರೂಪಿಸುವುದರ ಜೊತೆಗೆ ಬಳಕೆಯಲ್ಲಿದ್ದ ಶಾಸನಪದ್ಧತಿಗಳ ಸುಧಾರಣೆಗಾಗಿ ಆದರ್ಶಮಾದರಿಗಳನ್ನು ಮುಂದಿಡುವ ಪ್ರಯತ್ನವನ್ನೂ ಮಾಡಲಾಯಿತು. ಕಾನೂನುಗಳ ಸರಳ ನಿರೂಪಣಕಾರ್ಯದಲ್ಲಿ ಶಾಸನವಿಧಿಗಳ ಪ್ರಬಲ ಆಧಾರವಿದ್ದಾಗ ಮಾತ್ರ ನವೀಕರಣಕ್ಕೆ ಪ್ರಯತ್ನಿಸಲಾಯಿತು.

ಅಮೆರಿಕದ ಕಾಯಿದೆಸಂಸ್ಥೆ ಶಾಸನಗಳ ಸರಳನಿರೂಪಣೆ, ಏಕೀಕರಣ, ಮೌಲಿಕ ಕಾನೂನುಗಳ ಕ್ರೋಡೀಕರಣ–ಮೊದಲಾದ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ದೇಶದ ಪ್ರಗತಿಗೆ ಅಡ್ಡಿಯೆನಿಸುವಂಥ ಪ್ರಾದೇಶಿಕ ನಿಯಮಾವಳಿಗಳನ್ನು ಬದಿಗೊತ್ತಿ ಪರಿಸ್ಥಿತಿಯನ್ನು ಸುಗಮಗೊಳಿಸುವ ಕಾರ್ಯದಲ್ಲೂ ಅಪೂರ್ವ ಸೇವೆಯನ್ನು ಸಲ್ಲಿಸುತ್ತಿದೆ. (ಎಚ್.ಆರ್.ಡಿ.)

**ಅಮೆರಿಕದ ಚರಿತ್ರೆಯಲ್ಲಿ ನೀಗ್ರೊ :** ಅಮೆರಿಕದಲ್ಲಿ ನೀಗ್ರೊ (ನೋಡಿ) ಜನಾಂಗದ ನಿರ್ವಾಚನ (ಅಥವಾ ಚುನಾವಣಾಧಿಕಾರ) ವಸಾಹತುಕಾಲದಲ್ಲೇ ತಲೆಯೆತ್ತಿತು. ಆ ವಿಚಾರದಲ್ಲಿ ಸರ್ವಸಮ್ಮತ ನಿರ್ಣಯಕ್ಕೆ ಬರಲು ಇನ್ನೂ ಸಾಧ್ಯವಾಗಿಲ್ಲ. ನೀಗ್ರೊ ವಂಶಜನಾದ ವ್ಯಕ್ತಿ ನೀಗ್ರೊ ಜನಾಂಗಕ್ಕೆ ಸೇರಿದವನೆಂಬ ಕಲ್ಪನೆ ಅಮೆರಿಕದಲ್ಲಿ ಸರ್ವಸಾಮಾನ್ಯವಾಗಿದೆ. ವರ್ಣಸಮಸ್ಯೆ ಉಲ್ಬಣವಾಗಿರುವ ಕಡೆ, ಈ ನಿರ್ವಾಚನ ಇನ್ನಷ್ಟು ನಿಷ್ಕೃಷ್ಟವಾಗಿದೆ. ಅಲ್ಲಿ, ನೀಗ್ರೊ ರಕ್ತಾಂಶಕ್ಕೆ ತಕ್ಕಂತೆ ನೀಗ್ರೊ ನಿರ್ವಾಚನ ವ್ಯತ್ಯಸ್ತವಾಗುತ್ತ ಬಂದಿದೆ. ವರ್ಜಿನಿಯದಲ್ಲಿ 1910ರ ಹೊತ್ತಿಗೆ, ಕಾಲು ಅಂಶ ನೀಗ್ರೊ ರಕ್ತವಿದ್ದವನೇ ನೀಗ್ರೊ ಎಂಬ ಕಲ್ಪನೆಯಿತ್ತು. 1930ರ ಕಾಲಕ್ಕೆ, ಹದಿನಾರರಲ್ಲಿ ಒಂದಂಶ ನೀಗ್ರೊ ರಕ್ತವಿದ್ದವನೂ ನೀಗ್ರೊ ಎಂಬ ನಿಯಮ ಬಳಕೆಗೆ ಬಂತು. ಇಷ್ಟಾದರೂ ಈ ನಿರ್ವಾಚನ ಕಾಲಕಾಲಕ್ಕೆ ವ್ಯತ್ಯಾಸವಾಗುತ್ತಲೇ ಬಂದಿದೆ.

ಅಮೆರಿಕದಲ್ಲಿ 1790ರ ಹೊತ್ತಿಗೆ 7,57,208 ನೀಗ್ರೊ ಜನರಿದ್ದರು. ಇವರಲ್ಲಿ ಹೆಚ್ಚಿನವರು ದೇಶದ ದಕ್ಷಿಣ ಪ್ರಾಂತ್ಯಗಳಲ್ಲಿದ್ದರು. ಈ ಸಂಖ್ಯೆ ಕ್ರಮೇಣ ಏರುತ್ತ 1950ರಲ್ಲಿ 1,50,42,286ಕ್ಕೆ ಮುಟ್ಟಿತು. 20ನೆಯ ಶತಮಾನದಲ್ಲಿ ನೀಗ್ರೊ ಜನ ದಕ್ಷಿಣ ಪ್ರಾಂತ್ಯಗಳಿಂದ ಅಪಾರಸಂಖ್ಯೆಯಲ್ಲಿ ಬಂದು ನಗರಪ್ರದೇಶಗಳಲ್ಲಿ ನೆಲಸತೊಡಗಿದರು. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಅವರ ನಗರಯಾತ್ರೆ ಮತ್ತಷ್ಟು ಹೆಚ್ಚಿತು. ಅದರಿಂದ ಹಲವಾರು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳು ತಲೆದೋರಿದುವು. ಅವರ ಆರ್ಥಿಕಾವಕಾಶಗಳು ಹೆಚ್ಚಿದರೂ, ವರ್ಣಸಮಸ್ಯೆ ಉಲ್ಬಣವಾಗಿ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಅಶಾಂತಿಗೆಡೆಯಾಯಿತು. ಆದರೆ ಉತ್ತರ ಪ್ರಾಂತ್ಯಗಳಲ್ಲಿ ಅವರ ಮತದಾನಾಧಿಕಾರ ಹೆಚ್ಚಿದುದರಿಂದ, ಅಲ್ಲಿ ಅವರ ರಾಜಕೀಯ ಪ್ರಭಾವವೂ ಹೆಚ್ಚಿತು.

ನೀಗ್ರೊ ಜನಾಂಗ ಕ್ರಮೇಣ ಮಾಯವಾಗಿ, ಕಾಲಕ್ರಮದಲ್ಲಿ ನೀಗ್ರೊ ಸಮಸ್ಯೆಯೇ ಇಲ್ಲದಂತಾಗುವುದೆಂಬ ಭ್ರಾಂತಿ 20ನೆಯ ಶತಮಾನ ಪ್ರಾರಂಭದಲ್ಲಿ ರೂಢಮೂಲವಾಗಿದ್ದಿತು. ಆದರೆ ನೀಗ್ರೊ ಜನ ಹೆಚ್ಚುತ್ತ ಬಂದು, ಅಮೆರಿಕದ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುದರಿಂದ ಆ ಜನಾಂಗವನ್ನು ಅಮೆರಿಕದ ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯಾಂಗವಾಗಿ ಪರಿಗಣಿಸಬೇಕಾಯಿತು.

ಪೋರ್ಚುಗೀಸ್ ಹಾಗೂ ಸ್ಪೇನಿನ ದೇಶಾನ್ವೇಷಕರ ಚಾರಕರಾಗಿ 16ನೆಯ ಶತಮಾನದಲ್ಲಿ ಮೊದಲಬಾರಿ ನೀಗ್ರೊಗಳು ಅಮೆರಿಕದಲ್ಲಿ ಪದಾರ್ಪಣ ಮಾಡಿದರು. ಅಂದಿಗೆ, ನೂತನ ಜಗತ್ತಾಗಿದ್ದ ಅಮೆರಿಕದ ಅಭಿವೃದ್ಧಿಕಾರ್ಯಕ್ಕೆ ಈ ಚಾರಕವರ್ಗದ ಸರಬರಾಯಿ ನಿರಾತಂಕವಾಗಿ ದೊರೆಯುವುದೆಂದೂ ಆಗ ಅವರನ್ನು ಗುಲಾಮರನ್ನಾಗಿ ಮಾಡಿಕೊಳ್ಳಬಹುದೆಂದೂ ಬಿಳಿಯ ನೆಲಸಿಗರು ಕನಸಿನ ಗೋಪುರ ಕಟ್ಟಿಕೊಂಡಿದ್ದರು. ಆದರೆ, ಈ ಆಂಗ್ಲ ವಸಾಹತುಗಳಲ್ಲಿ ಗುಲಾಮವೃತ್ತಿಗೆ ಶಾಸನಮುದ್ರೆ ಬಿದ್ದಾಗಲೂ ನೀಗ್ರೊಗಳ ಸಂಖ್ಯೆ ತೀವ್ರಗತಿಯಿಂದ ಬೆಳೆಯುವ ಸೂಚನೆ ಕಾಣಿಸದಾಯಿತು. ಉದ್ಯಮಕ್ರಾಂತಿಯ ಪರಿಣಾಮವಾಗಿ ಕಚ್ಚಾ ಸಾಮಗ್ರಿಗಳಿಗೆ–ಮುಖ್ಯವಾಗಿ ಹತ್ತಿಗೆ ಬೇಡಿಕೆ ಹೆಚ್ಚಿ ದಕ್ಷಿಣ ಅಮೆರಿಕದ ಸಂಯುಕ್ತ ರಾಜ್ಯಗಳಲ್ಲಿ ಹತ್ತಿಯ ಕೃಷಿ ವಿಸ್ತಾರಗೊಂಡಾಗ, ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಜನವಸತಿಯೂ ಬೆಳೆಯಿತು, ನೀಗ್ರೊ ಜನ ಅಲ್ಲಿ ಹಿಂಡುಹಿಂಡಾಗಿ ಬಂದು ನೆಲಸತೊಡಗಿದರು. ಅಲ್ಲಲ್ಲಿ ಗುಲಾಮಗಿರಿಯೂ ಬಳಕೆಗೆ ಬರತೊಡಗಿತು.

ಅಮೆರಿಕದಲ್ಲಿ ಗುಲಾಮರನ್ನು ಕೊಳ್ಳುವ ಪದ್ಧತಿ ಸರ್ವತ್ರ ವ್ಯಾಪಿಸಿರಲಿಲ್ಲ. ಕೊಳ್ಳುವ ಶಕ್ತಿಯಿದ್ದುದೂ ಲಕ್ಷಾಧೀಶರಾದ ಕೆಲವೇ ಜನರಿಗೆ. 1860ರ ಹೊತ್ತಿಗೆ ಗುಲಾಮರ ಬೆಲೆ ಮಿತಿಮೀರಿತು. ನ್ಯೂ ಆರ್ಲಿಯನ್ಸ್ ಎಂಬಲ್ಲಿ ದೃಢಕಾಯನಾದ ಗುಲಾಮನೊಬ್ಬನ ಬೆಲೆ 1800 ಡಾಲರ್ ವರೆಗೂ ಏರಿತು, ಆದರೆ, ಭೂಮಿಯ ಒಡೆಯನಾದವನಿಗೆ ವಿಸ್ತಾರವಾದ ಜಮೀನಿನಲ್ಲಿ ರಕ್ಷಣೆ ಅವಶ್ಯವಾಗಿತ್ತು; ಬಿಳಿ ಸಮಾಜಕ್ಕೆ ಗುಲಾಮರ ಹಿಂಸಾಚರಣೆಯಿಂದ ಅಪಾಯ ತಟ್ಟದಂತೆಯೂ ರಕ್ಷಣೆ ನೀಡಬೇಕಾಗಿತ್ತು. ಇದಕ್ಕಾಗಿ ಗುಲಾಮರಾಜ್ಯಗಳು ಗುಲಾಮಶಾಸನಗಳನ್ನು ರಚಿಸಿದುವು. ಈ ಶಾಸನಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದ್ದರೂ ಸಕಲ ಶಾಸನಗಳಲ್ಲೂ ಕೆಲವಾರು ಸಮಾನಾಂಶಗಳಿದ್ದುವು. ಗುಲಾಮರು ಒಡೆಯನ ಮನೆಯಿಂದ ಅನುಮತಿ ಪಡೆಯದೆ ಹೊರಗಡೆ ಹೋಗುವಂತಿರಲಿಲ್ಲ. ಕರಾರು ಮಾಡಿಕೊಳ್ಳಲು ಅವರಿಗೆ ಅಧಿಕಾರವಿರಲಿಲ್ಲ. ಬಿಳಿಯರ ವಿರುದ್ಧವಾಗಿ ಅವರು ಸಾಕ್ಷ್ಯ ಕೊಡುವಂತಿರಲಿಲ್ಲ. ಅವರಿಗೆ ಭೂಮಿಯ ಒಡೆತನವಿರಲಿಲ್ಲ. ಓದುಬರೆಹ ಕಲಿಯಲು ಅವಕಾಶವಿರಲಿಲ್ಲ. ಬಿಳಿಯರಿಲ್ಲದೆ, ಅವರೇ ಸಭೆ ಕೂಡಲು ಶಾಸನ ಸಮ್ಮತಿಯಿರಲಿಲ್ಲ. ಈ ಶಾಸನನಿಯಮಗಳು ಸದಾ ಕಟ್ಟುನಿಟ್ಟಾಗಿರಲಿಲ್ಲವಾದರೂ ಗುಲಾಮರು ಅಂಕೆಮೀರುವ ಸೂಚನೆ ಕಂಡುಬಂದಾಗ, ದಯಾದಾಕ್ಷಿಣ್ಯಗಳಿಲ್ಲದೆ ಆಚರಣೆಗೆ ಬರುತ್ತಿದ್ದುವು.

ಒಡೆಯನಿಗೆ ಆದಾಯ ತಂದುಕೊಟ್ಟು, ಸುಖಸೌಕರ್ಯಗಳನ್ನು ಒದಗಿಸುವುದೇ ಗುಲಾಮರ ಕರ್ತವ್ಯವಾಗಿತ್ತು. ಹೊಲಕೆಲಸದವರು ಇಡೀ ದಿನ ದುಡಿಯಬೇಕಾಗಿತ್ತು. ಮೈಮುರಿಯುವಂತೆ ದುಡಿದರೂ ಜೀವನಾವಶ್ಯಕ ವಸ್ತುಗಳನ್ನು ಅವರು ಕಂಡವರಲ್ಲ; ಮೈಮುಚ್ಚುವಷ್ಟು ಬಟ್ಟೆಬರೆ ಪಡೆಯುವ ಭಾಗ್ಯವೂ ಮಳೆ ಗಾಳಿ ತೂರದ ಮನೆಮಾರೂ ಅವರಿಗೆ ಕನಸಿನ ಗಂಟಾಗಿದ್ದುವು. ಗುಲಾಮರಲ್ಲಿ ಹೆಚ್ಚಿನವರು ತಮ್ಮ ಕಷ್ಟಕಾರ್ಪಣ್ಯಗಳನ್ನು ಹೊರಗೆಲ್ಲೂ ಪ್ರಕಟಿಸದೆ ಒಳಗೊಳಗೇ ಕೊರಗಿ ಕರಗುತ್ತಿದ್ದರು. ಇವರಲ್ಲಿ ಸಾಹಸಿಗರಾದ ಗೇಬ್ರಿಯಲ್ ಪ್ರಾಸ್ಸರ್ (1800), ಡೆನ್ಮಾರ್ಕ್ ವೆಸ್ಸೆ (1822), ನಾಟ ಟರ್ನರ್ (1831) ಮುಂತಾದ ಕೆಲವರು ಮಾತ್ರ ಭೀಕರಬಂಡಾಯಗಳನ್ನೆಬ್ಬಿಸಿ ಹಿಂಸಾಕೃತ್ಯಗಳಿಗೆ ತೊಡಗಿ ಬಿಳಿಜನಾಂಗಕ್ಕೆ ಭಯಜ್ವರ ಬರಿಸಿದರು. ಕೆಲವರು ಹೊಲದ ಉಪಕರಣಗಳನ್ನು ಪ್ರಾಣಿಗಳನ್ನೂ ವಶಪಡಿಸಿಕೊಂಡರು; ಇನ್ನು ಕೆಲವರು ಧಣಿಗಳನ್ನು ಕೊಲೆಮಾಡಿದರು; ಮತ್ತೆ ಕೆಲವರು ಹೇಳದೆ ಕೇಳದೆ ಓಡಿಹೋದರು; ಅದೊಂದೂ ಮಾಡದೆ, ನಿಷ್ಠಾವಂತರಾಗಿ ಉಳಿದ ಮತ್ತೆ ಕೆಲವರು, ಇದ್ದುದರಲ್ಲೇ ತೃಪ್ತಿಪಟ್ಟುಕೊಂಡು ಕಾಲಯಾಪನೆ ಮಾಡತೊಡಗಿದರು.

ಸು. 1860ರ ಹೊತ್ತಿಗೆ ಸ್ವತಂತ್ರ ನೀಗ್ರೊ ಜನರಲ್ಲಿ ಅರ್ಧಾಂಶದಷ್ಟು ಜನ ಗುಲಾಮರಾಜ್ಯಗಳಲ್ಲೇ ವಾಸವಾಗಿದ್ದರು. ಭಯಾವಹ ಶಾಸನಗಳ ವಜ್ರ ಮುಷ್ಟಿಗೆ ಅವರೂ ಸಿಕ್ಕಿ ತೊಳಲಾಡುತ್ತಿದ್ದರು. ಆದರೆ, ನೀಗ್ರೊಗಳ ಸ್ವಾತಂತ್ರ್ಯಾಭಿಲಾಷೆ ಗುಲಾಮರಿಗೂ ಹರಡೀತೆಂಬ ಭೀತಿಯಿಂದ ಅವರ ಪರಸ್ಪರ ಸಂಪರ್ಕಕ್ಕೆ ಬಿಳಿಯರು ಅವಕಾಶಕೊಟ್ಟಿರಲಿಲ್ಲ. ಆರ್ಥಿಕ ವಿಚಾರಗಳಲ್ಲೂ ಅವರಿಗೆ ಬಹಿಷ್ಕಾರವಿತ್ತು. ಇವೆಲ್ಲ ಕಟ್ಟುಪಾಡುಗಳಿಂದ ಬಸವಳಿದ ಜನ ಆಗಾಗ ದೊಂಬಿಯೆಬ್ಬಿಸುತ್ತಿದ್ದರು. ಆದರೂ ವಸಾಹತುಷಾಹಿಯ ಆಡಳಿತದ ಪ್ರಾರಂಭಕಾಲದಿಂದ ಉತ್ತರಪ್ರಾಂತ್ಯಗಳಲ್ಲಿ ಅವರಿಗೆ ಶಿಕ್ಷಣಸೌಕರ್ಯಗಳೂ ಸ್ವಂತಸಾಮಾಜಿಕ ಧಾರ್ಮಿಕ ಸಂಸ್ಥೆಗಳ ಸ್ಥಾಪನೆಗೂ ಅಷ್ಟಿಷ್ಟು ಅವಕಾಶ ದೊರೆಯತೊಡಗಿತ್ತು.

ಅಮೆರಿಕದಲ್ಲಿ ಅಂತರ್ಯುದ್ಧ ಪ್ರಾರಂಭವಾಗುವ ಮೊದಲು ನೀಗ್ರೊ ಜನರನೇಕರು ತಮ್ಮ ಗುಣವಿಶೇಷಗಳಿಂದಲೂ ವಿದ್ಯಾಬುದ್ಧಿ ಸಂಸ್ಕಾರಗಳಿಂದಲೂ ಗೌರವಗಳಿಸಿಕೊಂಡಿದ್ದರು. ಫಿಲಿಸ್ ವೀಟ್ಲೀ ಮತ್ತು ಜಾರ್ಜ್ ಮೋಸೆಸ್ ಹಾರ್ಟನ್ ಉದ್ದಾಮ ಕವಿಗಳಾಗಿ ಜನಪ್ರಿಯರಾಗಿದ್ದರು. ಬೆಂಜಮಿನ್ ಬ್ಯಾನೇಕರ್ ಗಣಿತಶಾಸ್ತ್ರ ನಿಪುಣನಾಗಿ ಹಲವಾರು ಪಂಚಾಂಗಗಳನ್ನು ರಚಿಸಿದ್ದ. ಜಾನ್ ಬಿ. ರಸ್‌ವರ್ಮ್ ಪದವೀಧರನಾಗಿ, 1827ರಲ್ಲಿ ಸ್ಯಾಮುಯಲ್ ಕಾರ್ನಿಷ್ ಎಂಬಾತನೊಂದಿಗೆ ಫ್ರೀಡಮ್ಸ್ ಜರ್ನಲ್ (ಸ್ವಾತಂತ್ರ್ಯ ಪತ್ರಿಕೆ) ಎಂಬ ಪ್ರಥಮ ನೀಗ್ರೊ ಪತ್ರಿಕೆ ಸ್ಥಾಪಿಸಿದ್ದ. ಡೇವಿಡ್ ವಾಕರ್ ಗುಲಾಮವೃತ್ತಿಯ ಪ್ರತಿಭಟನಾ ನಾಯಕನಾಗಿ 1829ರಲ್ಲಿ ಅಪೀಲ್ (ಮನವಿ) ಎಂಬ ಗ್ರಂಥವನ್ನು ರಚಿಸಿದ್ದ. ಇವನ ತರುವಾಯ ಗುಲಾಮವೃತ್ತಿಯ ನಿರ್ಮೂಲನಕ್ಕಾಗಿ ಹೋರಾಡಿದವರು ಅನೇಕರಿದ್ದರು. ಹ್ಯಾರಿಯೆಟ್ ಟಬಮನ್ 300 ಮಂದಿ ಗುಲಾಮರ ಬಂಧಮೋಕ್ಷಕ್ಕೆ ಕಾರಣನಾಗಿದ್ದ. ಇವೆಲ್ಲದರ ಪರಿಣಾಮವಾಗಿ ಅನೇಕಾನೇಕ ನೀಗ್ರೊ ಸಂಘ ಸಂಸ್ಥೆಗಳು ಹುಟ್ಟಿಕೊಂಡುವು. ನೀಗ್ರೊಗಳು ವಾರ್ಷಿಕಸಭೆ ನಡೆಸಿ ತಮ್ಮ ಕಷ್ಟಕಾರ್ಪಣ್ಯಗಳ ನಿವಾರಣೆಗೆ ಅಹೋರಾತ್ರಿ ಶ್ರಮಿಸತೊಡಗಿದರು. ನೀಗ್ರೊ ಜನರ ಬುದ್ಧಿಗುಣ, ಹೃದಯಗುಣಗಳ ಪ್ರಕಟಣೆಗೆ ಅವರ ವಾರ್ಷಿಕ ಸಮ್ಮೇಳನ ಸಮರ್ಥ ಸಾಧನವಾಗಿತ್ತು.

**ರಾಜಕೀಯ ಚರಿತ್ರೆ :** ಕೇಂದ್ರಸರ್ಕಾರಕ್ಕೂ ಪ್ರಾಂತ್ಯಸರ್ಕಾರಗಳಿಗೂ ನಡುವೆ ನಡೆದ ಅವೆಷ್ಟೋ ತಿಕ್ಕಾಟಗಳಿಂದ ನೀಗ್ರೊ ಜನರ ರಾಜಕೀಯ ಹಾಗೂ ಪೌರಾಧಿಕಾರಗಳು ನಿಷ್ಪ್ರಭರೂಪ ತಳೆದುವು. ಅಂತರ್ಯುದ್ಧ ಮುಗಿದೊಡನೆ ಈ ತಿಕ್ಕಾಟ ಉಲ್ಬಣಗೊಂಡಿತು. 1865ರಲ್ಲಿ ಸಂವಿಧಾನದ 13ನೆಯ ತಿದ್ದುಪಡಿ ಗುಲಾಮ ವೃತ್ತಿಯನ್ನೂ ಬಲಾತ್ಕಾರದ ಜೀತಪದ್ಧತಿಯನ್ನೂ ಶಾಸನವಿರುದ್ಧವೆಂದು ಸಾರಿತು. 1866 ಮತ್ತು 1875ರಲ್ಲಿ ಪೌರಾಧಿಕಾರ ಶಾಸನಗಳೂ 1867ರಲ್ಲಿ ಪುನರ್ನಿರ್ಮಾಣ ಶಾಸನಗಳೂ 1870–71ರಲ್ಲಿ ಸಮಾಚರಣ ಶಾಸನಗಳೂ ಸಂವಿಧಾನದ 14 ಮತ್ತು 15ನೆಯ ತಿದ್ದುಪಡಿಗಳೂ ರೂಢಿಗೆ ಬಂದುವು. ಇವೆಲ್ಲ ಶಾಸನಗಳ ಮೂಲಕ ನೀಗ್ರೊ ಜನರಿಗೆ ಪೌರತ್ವ ಪ್ರಾಪ್ತಿಯಾಯಿತು; ಮತದಾನಾಧಿಕಾರ ದೊರೆಯಿತು. ದಾವೆ ಹೂಡುವ ಹಾಗೂ ಸಾಕ್ಷ್ಯನೀಡುವ ಅಧಿಕಾರ ಲಭಿಸಿತು. ಆಸ್ತಿಸಂಪಾದನಾಸೌಲಭ್ಯವೂ ಬಂದಿತು. ಆದರೆ ಈ ಬಗೆಯ ಉದಾರ ಸುಧಾರಣೆಗಳಿಗೆ ವಿರೋಧಿಗಳೂ ಇಲ್ಲದಿರಲಿಲ್ಲ.

1866–67ರ ವರೆಗಿನ ಕಾಲಾವಧಿ, ನೀಗ್ರೊಗಳ ಪುನರುತ್ಥಾನದ ಕಾಲ; ದಕ್ಷಿಣ ಪ್ರಾಂತ್ಯಗಳ ನೀಗ್ರೊ ಜನರು ಕೇಂದ್ರ ಹಾಗೂ ರಾಜ್ಯ ನ್ಯಾಯವಿಧಾಯಕ ಸಭೆಗಳಿಗೆ ಚುನಾಯಿತರಾದ ಕಾಲ. ಆದರೆ, 1866ರಲ್ಲಿ ಕೂ–ಕ್ಲಕ್ಸ್–ಕ್ಲಾನ್ ಸಂಸ್ಥೆ ಸ್ಥಾಪಿತವಾದ ಮೇಲೆ ದಕ್ಷಿಣ ಪ್ರಾಂತ್ಯಗಳ ಬಿಳಿಯರು ಬಲಪ್ರಯೋಗಕ್ಕೆ ತೊಡಗಿ, ನೀಗ್ರೊಗಳಿಗೆ ದೊರೆತ ಅಧಿಕಾರಗಳು ಕಾರ್ಯಾಚರಣೆಗೆ ಬರದಂತೆ ತಡೆಗಟ್ಟಿದರು. ಅಮೆರಿಕದ ಕಾಂಗ್ರೆಸ್ ಸಭೆ ಈ ವಿಚಾರದಲ್ಲಿ ಉದಾಸೀನ ಭಾವವನ್ನೇ ತಳೆಯಿತು. 1890ರಲ್ಲಿ ನೀಗ್ರೊಗಳು ಮತದಾನಾಧಿಕಾರದಿಂದ ವಂಚಿತರಾದರು. ಸುಮಾರು 1873ರಿಂದ 1910ರ ವರೆಗೆ ಅಮೆರಿಕದ ವರಿಷ್ಠನ್ಯಾಯಾಲಯದ ಅನೇಕ ತೀರ್ಪುಗಳು ನೀಗ್ರೊ ಜನರ ಸ್ಥಾನಮಾನಗಳನ್ನು ನಿರ್ಣಯಿಸಲು ದಕ್ಷಿಣಪ್ರಾಂತ್ಯದ ಆಡಳಿತನಾಯಕರಿಗೆ ಸ್ವಾತಂತ್ರ್ಯ ನೀಡಿದುವು. ನೀಗ್ರೊ ಜನರಿಗೆ ಕೇಂದ್ರಸರ್ಕಾರ ಶಾಸನದ್ವಾರಾ ಕೊಟ್ಟಿದ್ದ ರಾಜಕೀಯ ಹಾಗೂ ಪೌರಾಧಿಕಾರಗಳು ಈ ತೀರ್ಪುಗಳ ಪರಿಣಾಮವಾಗಿ ನಿರುಪಯುಕ್ತವಾದುವು. 1896ರಲ್ಲಿ ಪ್ರಸಿದ್ಧವಾದೊಂದು ದಾವೆಯಲ್ಲಿ ವರಿಷ್ಠನ್ಯಾಯಾಲಯ ಪ್ರತ್ಯೇಕೀಕರಣ ಶಾಸನಕ್ಕೆ ಅನುಮತಿ ಕೊಟ್ಟಿತು. ಕಾಂಗ್ರೆಸ್ ಸಭೆಯ ಅನಾಸಕ್ತಿಯಿಂದ ದಕ್ಷಿಣರಾಜ್ಯಗಳು ನೀಗ್ರೊಗಳನ್ನು ಮತ್ತಷ್ಟು ಹ್ರಾಸಗೊಳಿಸಲಾರಂಭಿಸಿದುವು. ಸಾರ್ವಜನಿಕ ಸ್ಥಳಗಳಲ್ಲಿ ನೀಗ್ರೊಗಳು ಪ್ರತ್ಯೇಕವಾಗಿರಬೇಕೆಂಬ ಶಾಸನ ಹೊರಟಿತು. ಬಿಳಿಯರೂ ನೀಗ್ರೊಗಳೂ ಉಪಯೋಗಿಸಿದ ಪುಸ್ತಕಗಳನ್ನು ಒಂದೇಕಡೆ ಕೂಡಿಡತಕ್ಕದ್ದಲ್ಲವೆಂಬ ಇನ್ನೊಂದು ಆಸುರೀಶಾಸನ ರೂಢಿಗೆ ಬಂತು. ಈ ಬಗೆಯ ಕರಾಳಶಾಸನಗಳ ಪೂರ್ವದಲ್ಲೂ ಬಲಾತ್ಕಾರ ಪ್ರಯೋಗದಿಂದ ನೀಗ್ರೊ ಮತದಾರರ ಸಂಖ್ಯೆ ಇಳಿಯತೊಡಗಿತ್ತು. ಪರಿಣಾಮವಾಗಿ, ಕಾಂಗ್ರೆಸ್ ಸಭೆಯಲ್ಲೂ ರಾಜ್ಯನ್ಯಾಯವಿಧಾಯಕ ಸಭೆಗಳಲ್ಲೂ ನೀಗ್ರೊ ಸದಸ್ಯರ ಸಂಖ್ಯೆ ಇಳಿಮುಖವಾಗತೊಡಗಿ, 20ನೆಯ ಶತಮಾನದ ಆದಿಭಾಗದಲ್ಲಿ ದಕ್ಷಿಣಪ್ರಾಂತ್ಯದ ನ್ಯಾಯವಿಧಾಯಕ ಸಭೆಯಲ್ಲಿ ನೀಗ್ರೊ ಸದಸ್ಯರೊಬ್ಬರೂ ಇಲ್ಲದಂತಾಯಿತು.

ಉತ್ತರಪ್ರಾಂತ್ಯಗಳಲ್ಲಿ ನೀಗ್ರೊಗಳ ಸಂಖ್ಯೆ ಕಡಿಮೆಯಾಗಿದ್ದ ಕಾರಣ, ಅಲ್ಲಿ ವರ್ಣದ್ವೇಷ ಅಷ್ಟೊಂದು ತೀವ್ರವಾಗಿ ವಿಷಮಿಸಿರಲಿಲ್ಲ. ಅವರ ಮತದಾನಾಧಿಕಾರಕ್ಕೆ ಹೆಚ್ಚಿನ ಆತಂಕವಿರಲಿಲ್ಲ. ಪ್ರತ್ಯೇಕೀಕರಣ, ಭೇದಭಾವ ಮೊದಲಾದ ಅಸಹ್ಯ ಪದ್ಧತಿಗಳು ಪೂರ್ಣ ಮಾಯವಾಗಿರದಿದ್ದರೂ ಕಡಿಮೆಯಾಗಿದ್ದುವು. ನ್ಯೂನಸಂಖ್ಯಾಕರಾದ ಕಾರಣ ಉತ್ತರ ಪ್ರಾಂತ್ಯಗಳಲ್ಲಿ ನೀಗ್ರೊಗಳು ಕಾಂಗ್ರೆಸ್ ಸಭೆಗಾಗಲಿ ಪ್ರಾಂತ್ಯ ನ್ಯಾಯವಿಧಾಯಕ ಸಭೆಗಳಿಗಾಗಲಿ, ಪೌರಸಭೆಗಳಿಗಾಗಲಿ ತಮ್ಮ ಪ್ರತಿನಿಧಿಗಳನ್ನು ಆರಿಸಲು ಶಕ್ತರಾಗಿರಲಿಲ್ಲ.

ಪ್ರಥಮ ಮಹಾಯುದ್ಧ ನೀಗ್ರೊಗಳ ಸ್ಥಾನಮಾನಗಳನ್ನು ಗಮನಾರ್ಹವಾಗಿ ಪಲ್ಲಟಗೊಳಿಸಿತು. ಎರಡನೆಯ ಮಹಾಯುದ್ಧ ಕಾಲದಲ್ಲೂ ರಷ್ಯದೊಡನೆ ನಡೆದ ಶೀತಯುದ್ಧ ಕಾಲದಲ್ಲೂ ಈ ಮಾರ್ಪಾಡು ತೀವ್ರವೇಗದಿಂದ ಮುಂದುವರಿಯಿತು. ದಕ್ಷಿಣ ಪ್ರಾಂತ್ಯಗಳಿಂದ ಸುಮಾರು 20,00,000 ನೀಗ್ರೊಗಳು ಉತ್ತರ ಪ್ರಾಂತ್ಯಗಳಿಗೆ ಹೊರಟುಹೋದರು. ದಕ್ಷಿಣದಲ್ಲಿ ಅವರ ಸಂಖ್ಯೆ ಕುಗ್ಗಿತು. ತತ್ಫಲವಾಗಿ ಅವರ ಆರ್ಥಿಕ ಸ್ಥಿತಿಗತಿಗಳಲ್ಲಾದ ಸುಧಾರಣೆಗಳಿಂದಲೂ ವರಿಷ್ಠನ್ಯಾಯಾಲಯದ ತೀರ್ಪುಗಳಿಂದಲೂ ತಲೆದೋರಿದ ಮಾರ್ಪಾಡುಗಳನ್ನು ದಕ್ಷಿಣದ ಬಿಳಿಯರು ಒಪ್ಪಿಕೊಳ್ಳಲು ಅನುಕೂಲವಾಯಿತು. ನೀಗ್ರೊಗಳ ಆಗಮನದಿಂದ ಉತ್ತರದಲ್ಲಿ ಕೆಲಕೆಲವು ಕಡೆ ವರ್ಣಸಂಘರ್ಷ ನಡೆದರೂ ಅವರ ಶಕ್ತಿ ಹೆಚ್ಚಿತು. ಕೆಲವಾರು ಚುನಾವಣೆಗಳಲ್ಲೂ ಅವರು ಗೆದ್ದರು. ಬಿಳಿಯರೂ ನೀಗ್ರೊಗಳೂ ಕೂಡಿಯೇ ಮನ್ಹ್ಯಾಟನ್ ಪುರಾಧ್ಯಕ್ಷ ಸ್ಥಾನಕ್ಕೆ ನೀಗ್ರೊವನ್ನು ಆರಿಸಿದ್ದರು. ಇನ್ನೊಬ್ಬ ನೀಗ್ರೊ ನ್ಯೂಯಾರ್ಕಿನ ನ್ಯಾಯಾಧೀಶನಾಗಿ ಆರಿಸಲ್ಪಟ್ಟ. ಪ್ರಾಂತ್ಯ ನ್ಯಾಯವಿಧಾಯಕ ಸಭೆಗಳಲ್ಲೂ ಪೌರಸಭೆಗಳಲ್ಲೂ ಐವತ್ತು ನೀಗ್ರೊ ಜನ ಸದಸ್ಯರಾಗಿ ಬಂದರು. ನೀಗ್ರೊ ಜನರಿಗೆ ಹೆಚ್ಚಿನ ಅಧಿಕಾರ ಲಭಿಸಿದುದರಿಂದ ವರ್ಣಬೇಧನೀತಿಯ ವಿರುದ್ಧವಾಗಿ ಅನೇಕ ಶಾಸನಗಳು ಹುಟ್ಟಿದುವು; ಒಬ್ಬ ನೀಗ್ರೊ ಗವರ್ನರರಾಗೂ ಇನ್ನೊಬ್ಬ ನ್ಯಾಯಾಧೀಶನಾಗೂ ಮತ್ತೊಬ್ಬ ಕಾರ್ಮಿಕ ಮಂತ್ರಾಲಯದಲ್ಲಿ ಸಹಾಯಕ ಕಾರ್ಯದರ್ಶಿಯಾಗೂ ನಿಯಮಿತರಾದರು. ರಕ್ಷಣೋದ್ಯಮ ಸಂಸ್ಥೆಗಳಲ್ಲಿ ವರ್ಣಭೇದ ನೀತಿಯಿರಕೂಡದೆಂದು 1941ರಲ್ಲಿ ಅಧ್ಯಕ್ಷ ರೂಸ್‌ವೆಲ್ಟ್ ಆದೇಶಕೊಟ್ಟರು. 1948ರಲ್ಲಿ ಅಧ್ಯಕ್ಷ ಟ್ರೂಮನ್ ನ್ಯಾಯಮಂತ್ರಾಲಯದಲ್ಲಿ ಪೌರಾಧಿಕಾರ ವಿಭಾಗವೊಂದನ್ನು ತೆರೆದರು. ಸಶಸ್ತ್ರಸೈನ್ಯಸೇವೆಗಳಲ್ಲಿ ಸಮಾನ ಅವಕಾಶ ಕಲ್ಪಿಸಲು ಒಂದು ಸಮಿತಿಯನ್ನು ರಚಿಸಿದರು. 1940ರಲ್ಲಿ ಕಾಂಗ್ರೆಸ್ ಸಭೆ ಜನಾಂಗ ವರ್ಣಭೇದ ನಿಷೇಧಕ ಶಾಸನವೊಂದನ್ನು ಹೊರಡಿಸಿತ್ತು. ವರಿಷ್ಠನ್ಯಾಯಾಲಯ ನೀಗ್ರೊಗಳ ರಾಜಕೀಯ ಹಾಗೂ ಪೌರಾಧಿಕಾರಗಳನ್ನು ರಕ್ಷಿಸುವ ತೀರ್ಮಾನಗಳನ್ನು ಮೊದಲ ಪ್ರಪಂಚಯುದ್ಧದ ಪೂರ್ವದಲ್ಲೇ ಕೊಡಲಾರಂಭಿಸಿತ್ತು.

ಅನಂತರದ ವರ್ಷಗಳಲ್ಲಿ ನೀಗ್ರೊಗಳ ಸ್ಥಿತಿ ಮತ್ತಷ್ಟು ಸುಧಾರಿಸಿತು. ನೀಗ್ರೊ ಹಾಗೂ ಬಿಳಿಯ ನ್ಯಾಯವಾದಿಗಳು ನ್ಯಾಯಾಲಯಗಳಲ್ಲಿ ಸಹಕರಿಸತೊಡಗಿದರು. ಡೆಮೊಕ್ರೆಟಿಕ್ ಪಕ್ಷದ ಮೂಲ ಚುನಾವಣೆಗಳಲ್ಲಿ ಭಾಗವಹಿಸಲು ನೀಗ್ರೊಗಳಿಗೂ ಅವಕಾಶ ದೊರೆಯಿತು. ಮೂಲ ಚುನಾವಣೆಯ ಮತಗಣನೆಯಲ್ಲಿ ಮೋಸವುಂಟಾದರೆ ಅದು ಸಂವಿಧಾನಕ್ಕೆ ದ್ರೋಹವೆಂದು ಸಿದ್ಧವಾಯಿತು. ಉಪಾಹಾರ ಮಂದಿರಗಳಲ್ಲಿ ಪ್ರವೇಶ ಲಭಿಸಿತು; ಸಾರ್ವಜನಿಕ ವಾಹನಗಳನ್ನು ಬಿಳಿಯರೊಡನೆ ಅವರೂ ಬಳಸಬಹುದೆಂಬ ಆಜ್ಞೆ ಹೊರಟಿತು. ರಾಜ್ಯಗಳ ವಿಶ್ವವಿದ್ಯಾನಿಲಯಗಳಲ್ಲಿ ಬಿಳಿಯರಿಗೆ ಹೇಗೋ ಹಾಗೆ ಅವರಿಗೂ ಪ್ರವೇಶಸೌಕರ್ಯ ವಿರಬೇಕೆಂದು ತೀರ್ಮಾನವಾಯಿತು. ದಕ್ಷಿಣದ ವಿಶ್ವವಿದ್ಯಾನಿಲಯಗಳಲ್ಲಿ ಅವರನ್ನು ಪ್ರತ್ಯೇಕಿಸಕೂಡದೆಂಬ ನಿರೂಪ ಪ್ರಕಟವಾಯಿತು,

1950ರಿಂದ ಈಚೆಗೆ ನ್ಯಾಯಾಲಯದ ತೀರ್ಪುಗಳಿಂದ ದಕ್ಷಿಣದ ರಾಜ್ಯಗಳ ಸಾಮಾಜಿಕ ಜೀವನದಲ್ಲಿ ಇನ್ನಷ್ಟು ಮಾರ್ಪಾಡಾಯಿತು. ಸರ್ಕಾರಿ ಪಾಠಶಾಲೆಗಳಲ್ಲಿ ನೀಗ್ರೊಗಳ ಪ್ರತ್ಯೇಕೀಕರಣ ಶಾಸನಬಾಹಿರವೆಂದು 1954ರಲ್ಲಿ ನ್ಯಾಯಾಲಯ ಘೋಷಿಸಿತು. 1955ರಲ್ಲಿ ಶಾಲೆಗಳಲ್ಲಿ ಪ್ರತ್ಯೇಕೀಕರಣದ ನಿವಾರಣೆಗೆ ತೀವ್ರಗತಿಯಿಂದಲೂ ಸದ್ಭಾವದಿಂದಲೂ ಕ್ರಮ ಕೈಗೊಳ್ಳತಕ್ಕದೆಂದು ಆದೇಶಿಸಿತು; ಗಾಲ್ಫ್ ಕ್ರೀಡಾಂಗಣಕ್ಕೆ ಅವರಿಗೂ ಪ್ರವೇಶವಿರತಕ್ಕದೆಂದು ಆಜ್ಞಾಪಿಸಿತು. 1956ನೆಯ ಜನವರಿ 10ನೆಯ ದಿನಾಂಕದಿಂದ ರೈಲುಗಳಲ್ಲೂ ರೈಲುನಿಲ್ದಾಣಗಳ ವಿಶ್ರಾಂತಿಮಂದಿರಗಳಲ್ಲೂ ಪ್ರತ್ಯೇಕೀಕರಣವನ್ನು ಅಂತರರಾಜ್ಯ ವಾಣಿಜ್ಯಾಯೋಗ ನಿಷಿದ್ಧವೆಂದು ಸಾರಿತು. ಈ ಸುಧಾರಣೆಗಳಿಂದ ದಕ್ಷಿಣ ಪ್ರಾಂತ್ಯಗಳ ಅಧಿಕಾರಿವರ್ಗಗಳು ಕ್ರುದ್ಧವಾದುವು. 1955ರಲ್ಲಿ ಮಿಸಿಸಿಪ್ಪಿಯಲ್ಲಿ ನೀಗ್ರೊಗಳು ಮತದಾನ ಮಾಡದಂತೆ ಅವರ ಮೇಲೆ ಬಲಪ್ರಯೋಗ ನಡೆಯಿತು. ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕೀಕರಣವನ್ನು ನಿಷೇಧಿಸಿ ವರಿಷ್ಠನ್ಯಾಯಾಲಯ ನೀಡಿದ ತೀರ್ಪಿನ ವಿರುದ್ಧವಾಗಿ ಸತ್ಯಾಗ್ರಹ ಹೂಡುವಂತೆ 1956ರಲ್ಲಿ 101 ಮಂದಿ ಕಾಂಗ್ರೆಸ್ ಸಭಾ ಸದಸ್ಯರು ಮನವಿ ಹೊರಡಿಸಿದರು. ವರ್ಜೀನಿಯದಲ್ಲಿ ಮಿಶ್ರಪಾಠಶಾಲೆಗಳನ್ನು ತ್ಯಜಿಸಿ ಖಾಸಗಿ ಪಾಠಶಾಲೆಗಳಿಗೆ ಹೋಗುವ ಬಿಳಿಯ ವಿದ್ಯಾರ್ಥಿಗಳ ಶುಲ್ಕಸಂದಾಯಕ್ಕಾಗಿ ಸಾರ್ವಜನಿಕ ಹಣದ ಬಳಕೆ ಪ್ರಾರಂಭವಾಯಿತು. ಈ ಬಿಕ್ಕಟ್ಟಿನಿಂದ ಅಸಮಾಧಾನ ಹೊಂದಿದ ಉದಾರ ಹೃದಯರಾದ ಕಾಂಗ್ರೆಸ್ ಸಭಾ ಸದಸ್ಯರು ನೀಗ್ರೊಗಳ ರಾಜಕೀಯ ಹಾಗೂ ಪೌರಾಧಿಕಾರ ರಕ್ಷಣೆಗೆ ವಿಧೇಯಕಗಳನ್ನು ಮಂಡಿಸಿದರು. ಅಧ್ಯಕ್ಷ ಐಸೆನ್ ಹೋವರ್ ಪೌರಾಧಿಕಾರನಿರಾಕರಣದ ಆಪಾದನೆಗಳ ವಿಚಾರಣೆಗೆ ದ್ವಿಪಕ್ಷೀಯ ಆಯೋಗವೊಂದನ್ನು ರಚಿಸಲಾಗುವುದೆಂದು ಘೋಷಿಸಿದರು.

**ಯುದ್ಧ ಜೀವನ :** ಅಮೆರಿಕದಲ್ಲಿ ಸಂಭವಿಸಿದ ಎಲ್ಲ ಯುದ್ಧಗಳಲ್ಲೂ ನೀಗ್ರೊಗಳು ಅಸಮಾನ ಶೌರ್ಯದಿಂದ ಕಾದಾಡಿದರು. 1,78,000ಕ್ಕೂ ಹೆಚ್ಚು ನೀಗ್ರೊ ಸೈನಿಕರು ಅಂತರ್ಯುದ್ಧದಲ್ಲಿ ಅಮೆರಿಕದ ಪರವಾಗಿ ಯುದ್ಧಕ್ಕೆ ಬಂದಿದ್ದರು. ಅವರಿಲ್ಲದೆ, ಯುದ್ಧದಲ್ಲಿ ತಮ್ಮ ವಿಜಯ ಸಂದೇಹಾಸ್ಪದವಾಗುತ್ತಿದ್ದಿತೆಂದು ಏಬ್ರಹಾಮ್ ಲಿಂಕನ್ ಹೇಳಿದ್ದಾನೆ. ಈ ಯುದ್ಧವಾದ ಮೇಲೆ ಆರು ನೀಗ್ರೊ ಸೈನ್ಯ ವಿಭಾಗಗಳು ರಚಿತವಾದುವು.

ಒಂದನೆಯ ಮಹಾಯುದ್ಧದಲ್ಲಿ 3,42,00 ನೀಗ್ರೊ ಸೈನಿಕರಿದ್ದರು. ಯುದ್ಧ ಮುಗಿದ ಮೇಲೆ ಅವರನ್ನು ಸೈನ್ಯಾಧಿಕಾರಿಗಳು ಕೇವಲ ಊಳಿಗದವರನ್ನಾಗಿ ನಿಯಮಿಸಿಕೊಂಡರು. ಆದರೆ, ನೀಗ್ರೊ ನಾಯಕರ ಹಾಗೂ ನೀಗ್ರೊ ವೃತ್ತಪತ್ರಿಕೆಗಳ ಪ್ರತಿಭಟನೆಯ ಫಲವಾಗಿ, ಅನ್ನಾಪಾಲಿಸ್ ಎಂಬಲ್ಲಿರುವ ನೌಕಾ ವಿದ್ಯಾಲಯದಲ್ಲಿ ನೀಗ್ರೊಗಳಿಗೂ ಪ್ರವೇಶ ದೊರೆಯಿತು. 1940ರಲ್ಲಿ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್ ಅಮೆರಿಕದ ಸೈನ್ಯದಲ್ಲಿ ಬ್ರಿಗೇಡಿಯರ್ ಜನರಲ್ ಪದವಿಗೆ ಮೊದಲ ಬಾರಿಗೆ ನೀಗ್ರೊ ಅಧಿಕಾರಿಯನ್ನು ನಿಯಮಿಸಿದರು.

ಎರಡನೆಯ ಮಹಾಯುದ್ಧದಲ್ಲಿ ನಾನಾ ಸೈನ್ಯ ವಿಭಾಗಗಳಿಗೆ ಒಟ್ಟು 11,74,000 ನೀಗ್ರೊಗಳು ಸೇರಿದ್ದರು. ಸುಮಾರು 7,00,000 ನೀಗ್ರೊ ಸೈನಿಕರು ನಾನಾ ರಣರಂಗಗಳಲ್ಲಿ ಹೋರಾಡಿದ್ದರು. ಸೈನ್ಯಶಿಕ್ಷಣದಲ್ಲಿ, ವಿಮಾನದಳಗಳಲ್ಲಿ ಹೊರತು ಬೇರೆಲ್ಲ ನೀಗ್ರೊ ಸೈನ್ಯಾಧಿಕಾರಿಗಳಿಗೆ ಬಿಳಿಯ ಸೈನ್ಯಾಧಿಕಾರಿಗಳೊಡನೆ ಸಹಪಂಕ್ತಿ ದೊರೆಯಿತು. ನೀಗ್ರೊ ಅಧಿಕಾರಿಗಳ ಸಂಖ್ಯೆ ಈ ಯುದ್ಧಕಾಲದಲ್ಲಿ 7,768 ಕ್ಕೇರಿತು. ಯುದ್ಧದ ಕೊನೆಗಾಲದಲ್ಲಿ ನೀಗ್ರೊ ಹಾಗೂ ಬಿಳಿಯ ಸೈನ್ಯಗಳ ಸಂಘಟನಾಕಾರ್ಯ ಪ್ರಾರಂಭವಾಗಿದ್ದು, ಯುದ್ಧಮುಗಿದ ಮೇಲೆ ಮುಂದುವರಿದು, ಕೊರಿಯ ಯುದ್ಧಕಾಲದಲ್ಲಿ ಮತ್ತಷ್ಟು ಬಲಗೊಂಡು ತರುವಾಯ ತೀವ್ರಗತಿಯಿಂದ ಮುನ್ನಡೆಯಿತು.

**ಆರ್ಥಿಕ ಜೀವನ :** ನೀಗ್ರೊಗಳು ಹೆಚ್ಚಾಗಿ ಬೇಸಾಯದ ಕೂಲಿಯಾಳುಗಳಾಗಿಯೇ ಇದ್ದರು. ಅವರಿಗೆ ಸ್ವಂತ ಭೂಮಿಯಿರಲಿಲ್ಲ. ಕೊಂಡುಕೊಳ್ಳುವ ಹಕ್ಕೂ ಇರಲಿಲ್ಲ. ಮುಕ್ಕಾಲುಪಾಲು ಜನ ಗೇಣಿಕೊಡುವ ಒಕ್ಕಲುಗಳಾಗಿದ್ದರು; ಇಲ್ಲವೆ ಬೆಳೆಯ ಮಾರಾಟದಿಂದ

ಸ್ವಲ್ಪಭಾಗವನ್ನು ಇಟ್ಟುಕೊಳ್ಳಬಲ್ಲವರಾಗಿದ್ದರು. ಬಟ್ಟೆ ಬರೆ, ಆಹಾರ, ಹೊಲಗೆಲಸದ ಉಪಕರಣ ಇತ್ಯಾದಿ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಅವರು ಸಾಲಪಡೆಯಬೇಕಾಗಿತ್ತು. ಅವರ ಬೆಳೆಯ ಬೆಲೆ, ಅವರ ಸಾಲಕ್ಕಿಂತ ಕಡಿಮೆ. ಲೆಕ್ಕ ಪುಸ್ತಕಗಳನ್ನು ಇಟ್ಟುಕೊಳ್ಳುವವರೂ ವರ್ತಕರೇ. ಇದರಿಂದ ಈ ನೀಗ್ರೊ ಗೇಣಿದಾರರು ಸದಾ ಸಾಲದಲ್ಲೇ ಕೊಳೆಯುತ್ತಿದ್ದರು. 20ನೆಯ ಶತಮಾನದ ಪ್ರಾರಂಭದಲ್ಲಿ ಹೊಲಗೆಲಸದ ನೀಗ್ರೊಗಳಲ್ಲಿ ಹೆಚ್ಚಿನವರು ಸಾಲದಲ್ಲಿ ಮುಳುಗಿದ್ದರು. ಬೇಸಾಯಗಾರರಿಗೆ ಸಹಾಯ ನೀಡುವ ವ್ಯವಸ್ಥೆಗಳಿಂದ ಪ್ರಯೋಜನ ಪಡೆದವರಲ್ಲಿ ಹೆಚ್ಚಿನವರು ಬಿಳಿಯರೇ ಆಗಿದ್ದರು.

1940ರಿಂದ 1950ರವರೆಗಿನ ಕಾಲಾವಧಿಯಲ್ಲಿ ದಕ್ಷಿಣ ಪ್ರಾಂತ್ಯಗಳಲ್ಲಿ ವ್ಯವಸಾಯ ಕ್ಷೇತ್ರ ಅಪಾರವಾಗಿ ಬೆಳೆದು, ಕೃಷಿಯಲ್ಲಿ ವೈವಿಧ್ಯ ಉಂಟಾಗಿತ್ತು. ಉದ್ಯಮಗಳು ವಿಪುಲವಾಗಿದ್ದುದರಿಂದ ಹೊಲಗೆಲಸದವರನೇಕರು ನಗರಗಳಿಗೆ ತೆರಳಿದರು. ವ್ಯವಸಾಯಾಭಿವೃದ್ಧಿಗೆ ಬಂಡವಾಳವೂ ಕುಶಲಕಾರ್ಮಿಕರೂ ಅಪಾರವಾಗಿ ಬೇಕಾಗಿದ್ದ ಕಾರಣ, ಕೃಷಿನಿರತರಾದ ನೀಗ್ರೊಗಳ ಸಂಖ್ಯೆ ಕಡಿಮೆಯಾಯಿತು. ಈ ಕಾಲಾವಧಿಯಲ್ಲಿ ಸ್ವಂತ ಸಾಗುವಳಿಮಾಡುವ ಭೂಮಾಲಿಕರ ಸಂಖ್ಯೆ ಹೆಚ್ಚಿತು. ಇಂಥ ಭೂಮಾಲಿಕರ ಬಿಳಿಯರೇ ಹೆಚ್ಚು. ಆದರೆ ಈ ಕಾಲಾವಧಿಯಲ್ಲಿ ಗೇಣಿದಾರಿ ಪದ್ಧತಿಯೂ ಬೆಳೆಯ ಪಾಲು ಕೊಡುವ ದುಷ್ಟಪದ್ಧತಿಯೂ ಮಾಯವಾಗುತ್ತ ಬಂದಿದ್ದುವು. 1954ರಲ್ಲೂ 1955ರಲ್ಲೂ ನೀಗ್ರೊ ಜನರ ಮೇಲಣ ಆರ್ಥಿಕ ಪ್ರತಿ ಪೀಡನೆಯನ್ನೂ ಬಲಪ್ರಯೋಗವನ್ನೂ ನಿಷೇಧಿಸಿ ವರಿಷ್ಠನ್ಯಾಯಾಲಯ ನೀಡಿದ ತೀರ್ಪುಗಳ ಪರಿಣಾಮವಾಗಿ, ನೀಗ್ರೊಗಳು ಗ್ರಾಮಾಂತರಗಳಿಂದ ನಗರಗಳಿಗೆ ಹೆಚ್ಚು ಹೆಚ್ಚಾಗಿ ಬರಲು ಅನುಕೂಲವಾಯಿತು. ಅವರು ಹೊಲದಾಳುಗಳಾಗಿ ಮಾತ್ರವಲ್ಲದೆ, ಮನೆಯಾಳುಗಳಾಗಿಯೂ ಹೊಟ್ಟೆ ಹೊರೆದು ಕೊಳ್ಳುತ್ತಿದ್ದರು. ಅಂಥವರ ಸಂಖ್ಯೆ 1910ರಲ್ಲಿ ಶೇ. 21.6ಕ್ಕೆ, 1930ರಲ್ಲಿ ಶೇ. 28.6ಕ್ಕೆ., 1940ರಲ್ಲಿ ಶೇ. 30ಕ್ಕೆ ಏರಿತು. ಆದರೆ ಇದೇ ಅವಧಿಯಲ್ಲಿ ಬಿಳಿಯ ಮನೆಯಾಳುಗಳ ಮತ್ತು ಮನೆಯಾಳುಗಳಾಗಿ ದುಡಿಯುವ ನೀಗ್ರೊ ಹೆಂಗಸರ ಸಂಖ್ಯೆಯೂ ಕಡಿಮೆಯಾಗಿತ್ತು; ಆದರೆ ಅವರು ಅಡಿಗೆಯವರಾಗಿ ಪರಿಚಾರಿಕೆಯರಾಗಿ, ಸೌಂದರ್ಯತಜ್ಞರಾಗಿ ಹಣ ಗಳಿಸತೊಡಗಿದ್ದರು. ಸುಮಾರು 1950ರ ಹೊತ್ತಿಗೆ ನೀಗ್ರೊ ಸ್ತ್ರೀಯರಿಗೆ ಬೇರೆ ಉದ್ಯೋಗಾವಕಾಶಗಳು ಲಭಿಸತೊಡಗಿದುವು.

ಗುಲಾಮವೃತ್ತಿ ಕೊನೆಗೊಂಡ ಮೇಲೆ, ಕುಶಲವೃತ್ತಿಗಳ ನೀಗ್ರೊ ಜನರನೇಕರು ಕೆಲಸ ಕಳೆದುಕೊಂಡರು. ಅವರ ಕೆಲಸಕ್ಕೆ ಬಿಳಿಯರೇ ಬಂದಿದ್ದರು. ನೀಗ್ರೊ ವೃತ್ತಿಯೆಂದು ಹೆಸರಾಗಿದ್ದ ಕ್ಷೌರಕರ್ಮ, ಪರಿಚಾರಕ ವೃತ್ತಿಯೇ ಮೊದಲಾದ ಕ್ಷೇತ್ರಗಳಿಗೂ ಬಿಳಿಯರು ಬರತೊಡಗಿದರು. ಜೊತೆಗೆ, ದಕ್ಷಿಣಪ್ರಾಂತ್ಯಗಳಲ್ಲಿ ತಲೆಯೆತ್ತಿದ ಯಾಂತ್ರಿಕೋದ್ಯಮಗಳಲ್ಲಿ ನೀಗ್ರೊಗಳಿಗೆ ಪ್ರವೇಶವಿರಲಿಲ್ಲ. ಹೀಗಾಗಿ, ದಕ್ಷಿಣದ ನೀಗ್ರೊಗಳು ಉತ್ತರ, ಪಶ್ಚಿಮ ಪ್ರಾಂತ್ಯಗಳಿಗೆ ವಲಸೆಹೋಗುವಂತಾಯಿತು. ಆದರೆ ನೀಗ್ರೊ ವೃತ್ತಿಗಳಿಗೆ ಬಿಳಿಯರು ಅಲ್ಲೂ ಬರತೊಡಗಿದರು. ತೀವ್ರವಾಗಿ ಉದ್ಯಮಗಳು ಹೆಚ್ಚುತ್ತಿದ್ದ ಉತ್ತರ ಪ್ರಾಂತ್ಯಗಳಲ್ಲಾದರೊ ಕುಶಲ ವೃತ್ತಿಗಳಿಗೂ ಬೇರೆ ವೃತ್ತಿಗಳಿಗೂ ನೀಗ್ರೊಗಳ ಬದಲಾಗಿ ಬಿಳಿಯ ಕಾರ್ಮಿಕರಿಗೇ ಪ್ರಾಶಸ್ತ್ಯ ಲಭಿಸುತ್ತಿತ್ತು. ಅಮೆರಿಕದ ಕಾರ್ಮಿಕ ಸಂಘಗಳಲ್ಲಿ ನೀಗ್ರೊಗಳಿಗೆ ಪ್ರವೇಶ ದೊರೆಯದಾಯಿತು. ಅವರಿಗೆ ಪ್ರತ್ಯೇಕ ಸಂಘಗಳು ಸ್ಥಾಪಿತವಾಗಲಾರಂಭಿಸಿದುವು. ಇದರಿಂದ ನೀಗ್ರೊ ಹಾಗೂ ಬಿಳಿಯ ಕಾರ್ಮಿಕರೊಳಗೆ ಪರಸ್ಪರ ವೃತ್ತಿಮಾತ್ಸರ್ಯ ಮತ್ತಷ್ಟು ಹೆಚ್ಚಿತು.

ಉತ್ತರ ಪ್ರಾಂತ್ಯಗಳ ಉದ್ಯಮಸಂಸ್ಥೆಗಳಲ್ಲಿ ನೀಗ್ರೊಗಳಿಗೆ ಪ್ರವೇಶ ದೊರೆತುದು ಒಂದನೆಯ ಮಹಾಯುದ್ಧ ಕಾಲದಲ್ಲಿ. ಬಿಳಿಯ ಕಾರ್ಮಿಕರು ಅಪಾರಸಂಖ್ಯೆಯಲ್ಲಿ ಯುರೋಪಿನ ಯುದ್ಧ ಸೇನೆಗಳಿಗೆ ಸೇರಿದ್ದರು. ಅಲ್ಲದೆ ಆ ಕಡೆಯಿಂದ ಈ ಕಡೆಗೆ ಬಿಳಿಯ ಕೆಲಸಗಾರರು ವಲಸೆ ಬರುವುದೂ ನಿಂತೇಹೋಗಿತ್ತು. ಆದ್ದರಿಂದ ಉದ್ಯಮಗಳಲ್ಲಿ ನೀಗ್ರೊಗಳನ್ನು ಸೇರಿಸಿಕೊಳ್ಳುವುದು ಅನಿವಾರ್ಯವಾಯಿತು. ಇವರಲ್ಲಿ ದಕ್ಷಿಣ ಪ್ರಾಂತ್ಯಗಳಿಂದ ಬಂದವರೇ ಹೆಚ್ಚು. ಕಬ್ಬಿಣ, ಉಕ್ಕು, ಯಂತ್ರಸಾಮಗ್ರಿ, ವಾಹನಗಳ ಕಾರ್ಖಾನೆಗಳಿಗೂ ಪ್ರವೇಶಿಸಿದ ಇವರು ದಕ್ಷಕಾರ್ಮಿಕರಾಗಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡರು. ಆದರೂ 1930ರಲ್ಲಿ ಪ್ರಾರಂಭವಾದ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಇವರೂ ಉಚ್ಚಾಟನೆ ಹೊಂದಿದರು.

1935 ರಲ್ಲಿ ಇವರ ದುಃಸ್ಥಿತಿ ಕೊಂಚ ಸುಧಾರಿಸಿತು. ಆಗ ಸ್ಥಾಪಿತವಾದ ಉದ್ಯಮ ಸಂಸ್ಥೆಗಳ ಸಮ್ಮೇಳನ, ಕುಶಲ ಅರ್ಧಕುಶಲ, ಅಕುಶಲ ಕಾರ್ಮಿಕರನ್ನೆಲ್ಲ ಸಂಘಟಿಸಿತು. ಈ ಸಮ್ಮೇಳನದ ಸದಸ್ಯಸಂಖ್ಯೆ ಹೆಚ್ಚಿದಂತೆಲ್ಲ ಸದಸ್ಯತ್ವದ ನಿಯಮಾವಳಿಗಳೂ ಇನ್ನಷ್ಟು ಉದಾರಗೊಂಡವು. ಪರಿಣಾಮವಾಗಿ ನೀಗ್ರೊ ಸ್ತ್ರೀ-ಪುರುಷ ಕಾರ್ಮಿಕರೂ ಹೆಚ್ಚು ಹೆಚ್ಚಾಗಿ ಸದಸ್ಯರಾಗಿ ಸೇರಿ, ತಮ್ಮ ಸಂಘಟನೆಯನ್ನು ಬಲಪಡಿಸುತ್ತಲೇ ಬಂದರು. ಕೆಲವರು ನೀಗ್ರೊ ನಾಯಕರು ಜೂನ್ 1941 ರಲ್ಲಿ ವಾಷಿಂಗ್‌ಟನ್ನಿಗೆ ತೆರಳಿ, ಯುದ್ಧಸಾಮಗ್ರಿ ತಯಾರಕ ಸಂಸ್ಥೆಗಳಲ್ಲಿ ವರ್ಣಭೇದ ನೀತಿಯನ್ನು ತಡೆಗಟ್ಟಲು ಯುಕ್ತಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯ ಪಡಿಸಿದರು. ಈ ವಿನಂತಿಯನ್ನು ಮನ್ನಿಸಿದ ಅಧ್ಯಕ್ಷ ರೂಸ್‌ವೆಲ್ಟ್ ಜುಲೈ 1941 ರಲ್ಲಿ ಆದೇಶ ಹೊರಡಿಸಿ, ರಕ್ಷಣೋದ್ಯಮ ಸಂಸ್ಥೆಗಳಲ್ಲಾಗಲಿ ಸರ್ಕಾರದಲ್ಲಾಗಲಿ ವರ್ಣಭೇದ ನೀತಿ ತಕ್ಕುದಲ್ಲವೆಂದೂ ಆ ಸಂಬಂಧವಾಗಿ ಆಯಾ ಸಂಸ್ಥೆಗಳು ಸೂಕ್ತ ನಿಯಮಗಳನ್ನು ರಚಿಸತಕ್ಕುದೆಂದೂ ಆಜ್ಞಾಪಿಸಿದರು. ಈ ಸಂಬಂಧವಾಗಿ ಬರುವ ದೂರುಗಳನ್ನು ವಿಚಾರಿಸಿ ತೀರ್ಮಾನಿಸಲು ಒಂದು ವಿಚಾರಣಾ ಸಮಿತಿಯನ್ನೂ ರಚಿಸಿದರು. ದಕ್ಷಿಣ ಪ್ರಾಂತ್ಯಗಳಲ್ಲಿ ಈ ಸುಧಾರಣೆಗೆ ತೀವ್ರ ವಿರೋಧವಿದ್ದರೂ ಉತ್ತರ ಪ್ರಾಂತ್ಯಗಳಲ್ಲಿ ಅದರಿಂದ ಹಲವಾರು ಸತ್ಫಲಗಳು ದೊರೆತವು. ಜೂನ್ 1946ರಲ್ಲಿ ಈ ಸಮಿತಿಯ ಸಲುವಾಗಿ ಬೇಕಾಗುವ ಧನವಿನಿಯೋಗಕ್ಕೆ ಒಪ್ಪಿಗೆ ಕೊಡಲು ಕಾಂಗ್ರೆಸ್ ಸಭೆ ನಿರಾಕರಿಸಿದ ಕಾರಣ, ಸಮಿತಿಯ ಕೆಲಸ ಸ್ಥಗಿತವಾಯಿತು. ಆಗಸ್ಟ್ (1953) ರಲ್ಲಿ ಅಧ್ಯಕ್ಷ ಐಸೆನ್‌ಹೋವರ್ ವರ್ಣಭೇದನಿವಾರಕ ನಿಯಮಗಳು ಕಟ್ಟುನಿಟ್ಟಾಗಿ ಪಾಲಿತವಾಗು ವಂತೆ ನೋಡಿಕೊಳ್ಳಲು ಇನ್ನೊಂದು ಸಮಿತಿಯನ್ನು ನೇಮಿಸಿದರು. ಈ ಸಮಿತಿಯಲ್ಲಿ ಒಬ್ಬ ನೀಗ್ರೊ ಸದಸ್ಯನೂ ಇದ್ದ.

ನೀಗ್ರೊಗಳು ಉದ್ಯಮ ಇಲ್ಲವೆ ಕೃಷಿಕಾರ್ಮಿಕ ವೃತ್ತಿಯಲ್ಲದೆ ಶಿಕ್ಷಣ, ವೈದ್ಯ, ಸಮಾಜಸೇವೆ ಮೊದಲಾದ ತಜ್ಞವೃತ್ತಿಗಳಿಗೂ ಸೇರಿಕೊಂಡಿದ್ದರು. 1950 ರಲ್ಲಿ ಸುಮಾರು 1,25,000 ನೀಗ್ರೊಗಳು ಅಂಥ ವೃತ್ತಿಗಳಲ್ಲಿದ್ದರು. ಆದರೆ ಇವರ ಸೇವೆಯ ಪ್ರಯೋಜನ ಪಡೆದುಕೊಂಡವರು ಹೆಚ್ಚಾಗಿ ನೀಗ್ರೊಗಳೇ. ಬಿಳಿಯರು ಇವರ ಬಳಿ ಸೇರುತ್ತಿರಲಿಲ್ಲ. ದ್ವಿತೀಯ ಮಹಾಯುದ್ಧ ಕಾಲದಲ್ಲೂ ಆ ತರುವಾಯವೂ ಅನೇಕ ಬಿಳಿಯ ಸಂಸ್ಥೆಗಳು ನೀಗ್ರೊಗಳನ್ನು ಸ್ಥಪತಿಗಳಾಗಿ, ಶಿಲ್ಪಿಗಳಾಗಿ, ವಿಜ್ಞಾನಿಗಳಾಗಿ, ವ್ಯಾಪಾರತಜ್ಞರಾಗಿ ನೇಮಿಸಿ ಕೊಂಡಿದ್ದುವು. 20ನೆಯ ಶತಮಾನದ ಪೂರ್ವಾರ್ಧದಲ್ಲಿ ನೀಗ್ರೊಜನರ ಬ್ಯಾಂಕುಗಳೂ ವಿಮಾಸಂಸ್ಥೆಗಳೂ ವೃತ್ತಪತ್ರಿಕೆಗಳೂ ವೃದ್ಧಿಸಿದುವು.

**ವಿದ್ಯಾಭಿವೃದ್ಧಿ, ಸಾಂಸ್ಕೃತಿಕ ವಿಕಾಸ :** 1865 ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನದ 13ನೆಯ ತಿದ್ದುಪಡಿಯ ಫಲವಾಗಿ ಎಲ್ಲ ಗುಲಾಮರೂ ಬಂಧಮುಕ್ತರಾದರು. ಆಗ ನೀಗ್ರೊಗಳಲ್ಲಿ ಹೆಚ್ಚಿನವರೆಲ್ಲರೂ ನಿರಕ್ಷರಕುಕ್ಷಿಗಳಾಗಿದ್ದರು. ಬಂಧಮುಕ್ತರಾದ ಕೆಲವರೇನೊ ಓದುಬರೆಹ ಕಲಿತಿದ್ದರು. ಇನ್ನು ಕೆಲವರು ಯಾರಿಗೂ ತಿಳಿಯದಂತೆ ಶಾಸನವಿರುದ್ಧವಾಗಿ ಎಲ್ಲೊ ಅಲ್ಪಸ್ವಲ್ಪ ಶಿಕ್ಷಣ ಪಡೆದಿದ್ದರು. ಆದ್ದರಿಂದ ಬಿಡುಗಡೆ ಹೊಂದಿದ ನೀಗ್ರೊಗಳ ಶಿಕ್ಷಣಸಮಸ್ಯೆಗೆ ಅಂತರ್ಯುದ್ಧ ಮುಗಿಯುವ ಮುಂಚೆಯೇ ಅತ್ಯವಸರದಿಂದ ಗಮನ ಕೊಡಬೇಕಾಗಿತ್ತು. 1862 ರಲ್ಲಿ ಮತೀಯಸಂಸ್ಥೆಗಳೂ ಸಮಾಜಕಲ್ಯಾಣಸಂಸ್ಥೆಗಳೂ ನೀಗ್ರೊ ಪಾಠಶಾಲೆಗಳನ್ನು ಸ್ಥಾಪಿಸಲಾರಂಭಿಸಿದುವು. ಕ್ವೇಕರುಗಳೇ ಮೊದಲಾದ ಧಾರ್ಮಿಕ ಸಂಸ್ಥೆಗಳು ದಕ್ಷಿಣ ಪ್ರಾಂತ್ಯಗಳಲ್ಲೂ ಬಂಧಮುಕ್ತರ ಸಹಾಯಸಂಸ್ಥೆಗಳು ಉತ್ತರ ಪ್ರಾಂತ್ಯಗಳಲ್ಲೂ ಪಾಠಶಾಲೆಗಳನ್ನು ತೆರೆಯತೊಡಗಿದುವು. ಯುದ್ಧದ ಕೊನೆಯ ವರ್ಷದಲ್ಲಿ ಸು. 1,000 ಸ್ತ್ರೀಪುರುಷರು ಅಧ್ಯಾಪಕರಾಗಿ ನೀಗ್ರೊಶಿಕ್ಷಣದಲ್ಲಿ ನಿರತರಾಗಿದ್ದರು. 1865 ರ ಹೊತ್ತಿಗೆ ನೀಗ್ರೊಗಳ ಶಿಕ್ಷಣದ ಹೊಣೆಯನ್ನೆಲ್ಲ ಬಂಧಮುಕ್ತ ನೀಗ್ರೊ ಸಂಸ್ಥೆಯೇ ಬಹುಮಟ್ಟಿಗೆ ವಹಿಸಿಕೊಳ್ಳಬೇಕಾಯಿತು. 1870 ರಲ್ಲಿ ಈ ಸಂಸ್ಥೆ ನಿಂತುಹೋದಾಗ, ನೀಗ್ರೊಗಳ ಉಚ್ಚಶಿಕ್ಷಣಕ್ಕೆ ಅಟ್ಲಾಂಟ, ಹೊವರ್ಡ್ ಮತ್ತು ಫಿಸ್ಕ್ ವಿಶ್ವವಿದ್ಯಾನಿಲಯಗಳೂ ಹ್ಯಾಂಪ್ಟನ್ ವಿದ್ಯಾಭವನ ಮೊದಲಾದ ಪ್ರೌಢವಿದ್ಯಾಸಂಸ್ಥೆಗಳೂ ಸ್ಥಾಪಿತವಾದುವು.

ಈ ನಡುವೆ ದಕ್ಷಿಣಪ್ರಾಂತ್ಯಗಳಲ್ಲಿ ಉಚಿತಶಿಕ್ಷಣಕ್ಕೆ ಏರ್ಪಾಡು ನಡೆಯಿತು. ಕೆಲವಾರು ಕಡೆ ಮಿಶ್ರಪಾಠಶಾಲೆಗಳೂ ಸ್ಥಾಪಿತವಾದುವು. ಆದರೆ ಸಾಮಾನ್ಯವಾಗಿ ಇಂಥ ಮಿಶ್ರವ್ಯವಸ್ಥೆ ಬಿಳಿಯರ ಆಗ್ರಹಕ್ಕೆ ಗುರಿಯಾಯಿತು. 1877 ರಲ್ಲಿ ಪುನರ್ನಿರ್ಮಾಣಕಾರ್ಯ ಕೊನೆಗೊಂಡು, ಸ್ವದೇಶೀರಾಜ್ಯಭಾರ ಪುನಃ ಸ್ಥಾಪಿತವಾದಾಗ, ದಕ್ಷಿಣಪ್ರಾಂತ್ಯಗಳ ಬಿಳಿಯ ಅಧಿಕಾರಿಗಳು ಸಾರ್ವಜನಿಕಕ್ಷೇತ್ರದಲ್ಲಿ ನೀಗ್ರೊಶಾಲೆಗಳು, ಕಟ್ಟಡ, ಸಜ್ಜುಸಲಕರಣೆ, ವೇತನ ಇತ್ಯಾದಿ ವಿಚಾರದಲ್ಲಿ ವರ್ಣಭೇದನೀತಿಯನ್ನು ಬಿರುಸಿನಿಂದ ಅನುಸರಿಸತೊಡಗಿದರು. ಇದರಿಂದ ನೀಗ್ರೊಗಳು ತಮ್ಮ ವಿದ್ಯಾಸಂಸ್ಥೆಗಳಿಗೆ ಖಾಸಗಿ ಸಂಸ್ಥೆಗಳ ನೆರವನ್ನು ಯಾಚಿಸ ಬೇಕಾಯಿತು. ಈ ಕಾಲಾವಧಿಯಲ್ಲಿ ಹೊಸ ಹೊಸ ಪಾಠಶಾಲೆಗಳೂ ಕಾಲೇಜುಗಳೂ ಸ್ಥಾಪಿತವಾದುವು. ಅಂಥವುಗಳಲ್ಲಿ ಬೂಕರ್ ಟಿ. ವಾಷಿಂಗ್‌ಟನ್ ಸ್ಥಾಪಿಸಿದ ಟಸ್ಕೆಗೀ ವಿದ್ಯಾಸಂಸ್ಥೆ ಉಲ್ಲೇಖನೀಯ. ಸು. 1906 ರಲ್ಲಿ 15,00,000 ನೀಗ್ರೊ ವಿದ್ಯಾರ್ಥಿಗಳಿದ್ದರು; 28,560 ನೀಗ್ರೊ ಶಿಕ್ಷಕರಿದ್ದರು; 2,000 ನೀಗ್ರೊಗಳು ಪದವೀಧರರಾಗಿದ್ದರು; 700 ನೀಗ್ರೊಗಳು ಪ್ರೌಢಶಿಕ್ಷಣಸಂಸ್ಥೆಗಳಲ್ಲಿ ವ್ಯಾಸಂಗನಿರತರಾಗಿದ್ದರು. ಇಷ್ಟಾದರೂ ನೀಗ್ರೊಪಾಠಶಾಲೆಗಳು ಬಿಳಿಯ ಪಾಠಶಾಲೆಗಳೊಡನೆ ಸಮಾನಸ್ಕಂಧವಾಗಿರಲಿಲ್ಲ.

ಪುನರ್ನಿರ್ಮಾಣೋತ್ತರ ಕಾಲದಲ್ಲಿ ನೀಗ್ರೊಗಳು ದಕ್ಷಿಣಪ್ರಾಂತ್ಯಗಳಿಂದ ಉತ್ತರಕ್ಕೂ ಪಶ್ಚಿಮಕ್ಕೂ ಅಪಾರಸಂಖ್ಯೆಯಲ್ಲಿ ತೆರಳಿದ್ದರು. ವರ್ಣಭೇದ ಇದ್ದರೂ ಅಲ್ಲಿ ಅವರಿಗೆ ಹೆಚ್ಚಿನ ಉದ್ಯೋಗಾವಕಾಶಗಳಿದ್ದವು. ಆದ್ದರಿಂದ, ಅವರ ಸಾಮಾಜಿಕಸಂಸ್ಥೆಗಳ ಸಂಖ್ಯೆಯೂ ಪ್ರಭಾವವೂ ಹೆಚ್ಚುವಂತಾಯಿತು.

ನೀಗ್ರೊಗಳು ತಮ್ಮ ಸಾಮಾಜಿಕ, ಸಾಂಸ್ಕೃತಿಕ ಸುಧಾರಣೆಗೆ ಸೂಕ್ತವಿಧಾನವನ್ನು ತಾವೇ ರೂಪಿಸಿಕೊಳ್ಳಬೇಕಾಯಿತು. ಈ ಕಾರ್ಯಕ್ಷೇತ್ರದಲ್ಲಿ ಅವರಿಗೆ ನೆರವಾದ ಮುಖ್ಯಸಂಸ್ಥೆಯೆಂದರೆ ಕ್ರೈಸ್ತಮತದ್ದು. ಅನೇಕ ಮಠಗಳು ಶಿಶುವಿಹಾರಕೇಂದ್ರಗಳನ್ನೂ ಉದ್ಯೋಗಸಂಪಾದನಾ ಸಂಸ್ಥೆಗಳನ್ನೂ ಸಂಜೆಯ ಪಾಠಶಾಲೆಗಳನ್ನೂ ಏರ್ಪಡಿಸಿದ್ದುವು.

ಅನೇಕಾನೇಕ ನೀಗ್ರೊ ಸೌಭ್ರಾತ್ರ ಸಂಸ್ಥೆಗಳು ನೀಗ್ರೊಗಳ ಸಾಮಾಜಿಕ ಸುಧಾರಣೆಗೆ ನೆರವಾದುವು. ಅನೇಕಾನೇಕ ಸೇವಾಸಂಸ್ಥೆಗಳು ಗುಪ್ತವಾಗಿ ಸಾವಿರಾರು ನೀಗ್ರೊಗಳಿಗೆ ಬಗೆಬಗೆಯಾಗಿ ಉಪಕಾರ ಸಲ್ಲಿಸಿದುವು. ಹಿಂದೆ ಕೇವಲ ಬಿಳಿಯ ಸಂಸ್ಥೆಗಳಾಗಿದ್ದ ಕ್ರೈಸ್ತಯುವಜನ ಸಂಸ್ಥೆಗಳಲ್ಲಿ ನೀಗ್ರೊಗಳಿಗೂ ಪ್ರವೇಶ ದೊರೆಯತೊಡಗಿತು.

ಪುನರ್ನಿರ್ಮಾಣೋತ್ತರ ಕಾಲದಲ್ಲಿ ನೀಗ್ರೊಜನರ ಬುದ್ಧಿಜೀವನ ವೈವಿಧ್ಯಪೂರ್ಣವಾಗಿ ವಿಸ್ತರಿಸಿತು. ನೀಗ್ರೊಜನರ ಲೇಖನಿಯಿಂದ ಉದ್ದಾಮ ಗ್ರಂಥ, ಲೇಖನಗಳು ಹೊರಟುವು. 1901 ರಲ್ಲಿ ಬೂಕರ್ ಟಿ. ವಾಷಿಂಗ್‌ಟನ್ ಅಪ್ ಫ್ರಮ್‌ಸ್ಲೇವರಿ (ಬಂಧಮೋಕ್ಷ) ಎಂಬ ಹೆಸರಿನಿಂದ ತನ್ನ ಜೀವನಚರಿತ್ರೆಯನ್ನು ಬರೆದ. ಅಮೆರಿಕದಲ್ಲಿ ಅಗ್ರಮಾನ್ಯತೆ ಪಡೆದ ಜೀವನಚರಿತ್ರ ಗ್ರಂಥಗಳಲ್ಲಿ ಇದೂ ಒಂದು. ಜಾರ್ಜ್ ವಾಷಿಂಗ್‌ಟನ್ ವಿಲಿಯಮ್ಸ್ ಇತಿಹಾಸದಲ್ಲಿ ಘನಪಂಡಿತ. ಅವನ ಅಮೆರಿಕದ ನೀಗ್ರೊ ಜನಾಂಗದ ಚರಿತ್ರೆ 1883 ರಲ್ಲಿ ಪ್ರಕಟವಾಯಿತು. ಲಲಿತಸಾಹಿತ್ಯ ನಿರ್ಮಾತೃಗಳಲ್ಲಿ ಚಾರ್ಲ್ಸ್ ಡಬ್ಲ್ಯು ಚೆಸ್ಟ್‌ನಟ್ ಎಂಬಾತನಿಗೆ ಅಗ್ರಪಂಕ್ತಿ ಸಲ್ಲುವುದು. ಅವನ ಸಣ್ಣ ಕತೆಗಳೂ ಕಾದಂಬರಿಗಳೂ ಬಲುಬೇಗನೆ ಜನಪ್ರಿಯವಾದುವು. ಪಾತ್ರ ನಿರೂಪಣೆಯಲ್ಲೂ ಕಥನಕಲೆಯಲ್ಲೂ ಇವನು ಸಿದ್ಧಹಸ್ತ. ಪಾಲ್‌ಲಾರೆನ್ಸ್ ಡನ್‌ಬಾರ್ ಭಾವಗೀತ–ಕವಿಯೆಂದೇ ಪ್ರಸಿದ್ಧನಾಗಿ ನೀಗ್ರೊ ಜನತೆಯ ರಾಷ್ಟ್ರಕವಿ ಎಂಬ ಕೀರ್ತಿಗೆ ಭಾಗಿಯಾದ.

ಈ ನಡುವೆ ನೀಗ್ರೊ ಪತ್ರಿಕಾಪ್ರಪಂಚ ತನ್ನ ಜನರ ಹಕ್ಕುಬಾಧ್ಯತೆಗಳಿಗಾಗಿ ಬಿರುಸಿನ ಹೋರಾಟ ನಡೆಸತೊಡಗಿತು. ಸದರ್ನ್ ರಿವ್ಯೂ 1872, ಎ.ಎಂ.ಇ. ಚರ್ಚ್ ರಿವ್ಯೂ ಎಂಬ ನಿಯತಕಾಲಿಕ ಪತ್ರಿಕೆಗಳು ಸಾಹಿತ್ಯ, ಶಿಕ್ಷಣ, ಧಾರ್ಮಿಕ ವಿಷಯಗಳಿಗೆ ಮೀಸಲಾಗಿದ್ದುವು. ವೃತ್ತಿಪತ್ರಿಕೆಗಳು ರಾಜಕೀಯ ಮತ್ತು ಆರ್ಥಿಕ ವಿಚಾರಗಳಿಗೆ ಹೆಚ್ಚಿನ ಗಮನ ನೀಡಿದುವು. 1901 ರಲ್ಲಿ ಗಾರ್ಡಿಯನ್ ಎಂಬ ಪತ್ರಿಕೆ ನೀಗ್ರೊ ಜನರಿಗೆ ಸಮಾನಾಧಿಕಾರ ಕೊಡಿಸುವುದಕ್ಕೆ ಹೋರಾಡತೊಡಗಿತು. 1900 ರಲ್ಲಿ ಸು. 150 ನೀಗ್ರೊ ಪತ್ರಿಕೆಗಳಿದ್ದುವು.

20ನೆಯ ಶತಮಾನದಲ್ಲಿ ಉತ್ತರಪ್ರಾಂತ್ಯಗಳಲ್ಲಿ ನೀಗ್ರೊಗಳ ಶೈಕ್ಷಣಿಕಸೌಕರ್ಯಗಳು ಹೆಚ್ಚಿದುವು; ಅವರ ಬೌದ್ಧಿಕಪ್ರಗತಿಯೂ ಸಾಂಸ್ಕೃತಿಕ ವಿಕಾಸವೂ ಗಮನಾರ್ಹವಾಗಿ ಬೆಳೆದುವು. ಅಲ್ಲಲ್ಲಿ ವರ್ಣದ್ವೇಷವಿದ್ದರೂ ಅವರ ವಸತಿಸೌಕರ್ಯ ತೃಪ್ತಿಕರವಾಗಿಲ್ಲದಿದ್ದರೂ ಒಟ್ಟಿನ ಮೇಲೆ, ಅವರ ಸಾಮಾಜಿಕಸ್ಥಿತಿ ಎಷ್ಟೋ ಸುಧಾರಣೆ ಹೊಂದಿತು. ಒಂದನೆಯ ಮಹಾಯುದ್ಧದನಂತರ ನೀಗ್ರೊಗಳ ಹೋರಾಟ ದಕ್ಷಿಣಪ್ರಾಂತ್ಯಗಳಲ್ಲೂ ಹೆಚ್ಚಿತು. ಬಿಳಿಯರಿಗಿರುವಷ್ಟು ವಿದ್ಯಾವಕಾಶ ನೀಗ್ರೊಗಳಿಗೂ ದೊರೆಯಬೇಕೆಂಬ ಕೂಗೆದ್ದಿತು. ಒಂದನೆಯ ಮಹಾಯುದ್ಧಕಾಲದಲ್ಲಿ ಸ್ವಾತಂತ್ರ್ಯ, ಸಮಾನತೆ ಮುಂತಾದ ಉದಾತ್ತಕಲ್ಪನೆಗಳ ಹಿಂದುಮುಂದುಗಳನ್ನು ಅರಿತವರಾದ ನೀಗ್ರೊನಾಯಕರು ತಮ್ಮ ಹಕ್ಕುಸಾಧನೆಗಾಗಿ ಅವಿಶ್ರಾಂತವಾಗಿ ಶ್ರಮಿಸಿ ಪೂರ್ಣ ಸಮಾನತೆಗಾಗಿ ಬಲವಾದ ಹೋರಾಟವೆಬ್ಬಿಸಿದರು. ಈ ಹೋರಾಟದ ಪರಿಣಾಮವಾಗಿ 1950 ರಲ್ಲಿ ಅಮೆರಿಕದ ಸರ್ಕ್ಯೂಟ್ ನ್ಯಾಯಾಲಯ, ನೀಗ್ರೊಶಿಕ್ಷಕರ ಹಾಗೂ ಬಿಳಿಯ ಶಿಕ್ಷಕರ ವೇತನಗಳಲ್ಲಿರುವ ತಾರತಮ್ಯ ಶಾಸನಬಾಹಿರವೆಂದು ಘೋಷಿಸಿತು.

1935 ರಿಂದ ಹೊಸ ಹೊಸ ವಿದ್ಯಾಸೌಕರ್ಯಗಳು ನೀಗ್ರೊಗಳಿಗೆ ಲಭಿಸಲಾರಂಭಿಸಿದುವು. ವಿದ್ಯಾವಿಚಾರದಲ್ಲಿ ಯಾವ ಬಗೆಯ ವರ್ಣನೀತಿಯೂ ಶಾಸನಸಮ್ಮತವಲ್ಲವೆಂದು ನ್ಯಾಯಾಲಯಗಳು ಪದೇ ಪದೇ ಘೋಷಿಸಿ, ನೀಗ್ರೊಗಳ ಬೇಡಿಕೆಗೆ ಬೆಂಬಲ ನೀಡಿದುವು. ಈ ನ್ಯಾಯಾಲಯ ನಿರ್ಣಯಗಳಿಂದ ಕಂಗೆಟ್ಟ ದಕ್ಷಿಣಪ್ರಾಂತ್ಯಗಳು ನೀಗ್ರೊಗಳಿಗಾಗಿ ಪ್ರತ್ಯೇಕ ಪ್ರೌಢಶಿಕ್ಷಣಸಂಸ್ಥೆಗಳನ್ನೂ ವೃತ್ತಿಶಿಕ್ಷಣಾಲಯಗಳನ್ನೂ ಸ್ಥಾಪಿಸತೊಡಗಿದುವು. ಪ್ರತ್ಯೇಕವಾದರೂ ಸಮಾನವಾದ ಸಂಸ್ಥೆಗಳ ಸ್ಥಾಪನೆಯಿಂದ ನ್ಯಾಯಾಲಯಗಳು ತೃಪ್ತವಾಗಬಹುದೆಂಬ ನಿರೀಕ್ಷೆಯಿಂದ ನಡೆದ ಈ ಸುಧಾರಣೆ, 1950 ರಲ್ಲಿ ನಿಷ್ಫಲವೆಂದು ಸಿದ್ಧವಾಯಿತು. ಬಿಳಿಯರ ವೃತ್ತಿಶಿಕ್ಷಣಸಂಸ್ಥೆಗಳನ್ನು ಪ್ರವೇಶಿಸಲು ಬಿಳಿಯರಿಗಿರುವಷ್ಟು ಅಧಿಕಾರ ನೀಗ್ರೊಗಳಿಗೂ ಇದೆಯೆಂದು ವರಿಷ್ಠ ನ್ಯಾಯಾಲಯ ಘೋಷಿಸಿತು.

ಎರಡನೆಯ ಮಹಾಯುದ್ಧಾನಂತರ, ನಾನಾ ಕ್ಷೇತ್ರಗಳಲ್ಲಿ ಬಿಳಿಯರ ಪ್ರತ್ಯೇಕೀಕರಣನೀತಿಗೆ ಆಘಾತವುಂಟಾಯಿತು; ಇದರಿಂದ ನೀಗ್ರೊಗಳ ಸಾಂಸ್ಕೃತಿಕ ಹಾಗೂ ಸಾಮಾಜಿಕ ರಂಗಗಳಲ್ಲೂ ಮಹತ್ವದ ಪ್ರಗತಿಯುಂಟಾಯಿತು. ಪ್ರತ್ಯೇಕೀಕರಣನೀತಿ ಕುಸಿಯುವುದಕ್ಕೆ ಎಷ್ಟೋ ಹಿಂದಿನಿಂದಲೇ ನೀಗ್ರೊಗಳ ಬೌದ್ಧಿಕಜೀವನವೂ ಸಾಂಸ್ಕೃತಿಕ ಜೀವನವೂ ಗಮನಾರ್ಹವಾಗಿ ಮುಂದುವರಿದಿದ್ದುವು. ಆರ್ಥಿಕಪ್ರಗತಿಯೊಡನೆ ವಿದ್ಯಾರ್ಜನೆಗೂ ಸಾಂಸ್ಕೃತಿಕ ಕಾರ್ಯಕಲಾಪಗಳಿಗೂ ಬಿಡುವು ಪಡೆದ ನೀಗ್ರೊಗಳು ನಾನಾ ಜ್ಞಾನಶಾಖೆಗಳಲ್ಲಿ ಮಹತ್ವದ ಕೊಡುಗೆ ಸಲ್ಲಿಸಿದ್ದರು. ಜಾರ್ಜ್ ಡಬ್ಲ್ಯು. ಕಾರ್ವರ್, ಪರ್ಲ್ ಜೂಲಿಯನ್ ಮೊದಲಾದವರು ವಿಜ್ಞಾನಿಗಳಾಗಿ ವಿಖ್ಯಾತರಾದರು. ಚಾರ್ಲ್ಸ್ ಎಸ್. ಜಾನ್ಸನ್, ಇ. ಫ್ರಾಂಕ್ಲಿನ್ ಫ್ರೆಸೀಯರ್ ಮುಂತಾದವರು ಸಮಾಜಶಾಸ್ತ್ರವೇತ್ತರಾಗಿ ಪ್ರಸಿದ್ಧರಾದರು; ಇನ್ನು ಕೆಲವರು ಇತಿಹಾಸ ಪಂಡಿತರಾಗಿಯೂ ಅರ್ಥಶಾಸ್ತ್ರಜ್ಞರಾಗಿಯೂ ಹೆಸರು ಪಡೆದರು. ಸಂಯುಕ್ತರಾಷ್ಟ್ರ ಸಂಸ್ಥೆಯ ಮಧ್ಯಸ್ಥ ಪುರುಷರಾಗಿ ಸಲ್ಲಿಸಿದ ಸುತ್ಯಸೇವೆಗೆ 1950 ರಲ್ಲಿ ನೊಬೆಲ್ ಬಹುಮಾನ ಪಡೆದ ಸುಪ್ರಸಿದ್ಧ ರಾಜ್ಯಶಾಸ್ತ್ರ ವಿಶಾರದರಾದ ರಾಲ್ಫ್ ಜೆ. ಬುಂಚ್ ನೀಗ್ರೊ ನಾಯಕಶಿರೋಮಣಿಗಳಲ್ಲಿ ಚಿರಸ್ಮರಣೀಯರಾಗಿದ್ದಾರೆ.

ನೀಗ್ರೊಗಳ ಬೌದ್ಧಿಕ ಪರಿಣತಿ ವಿಶೇಷವಾಗಿ ಅಭಿವ್ಯಕ್ತವಾಗಿರುವುದು ಸಾಹಿತ್ಯ ಲಲಿತಕಲೆಗಳಲ್ಲಿ. ಒಂದನೆಯ ಮಹಾಯುದ್ಧಾನಂತರ ಲೋಕೋತ್ತರ ಪ್ರತಿಭಾಶಾಲಿಗಳಾದ ಕವಿಗಳೂ ಪ್ರಬಂಧಕಾರರೂ ಕಾದಂಬರಿಕಾರರೂ ಅಪಾರ ಸಂಖ್ಯೆಯಲ್ಲಿ ಬೆಳಕಿಗೆ ಬಂದು ಹಾರ್ಲೆಮ್ ಪುನರುತ್ಥಾನಕರ್ತರು ಎಂಬ ಶ್ಲಾಘನೆಗೆ ಪಾತ್ರರಾದರು. ಅನ್ಯಾಯಕ್ಕೂ ಅಪಮಾನಕ್ಕೂ ನಾನಾ ರೀತಿಯಲ್ಲಿ ಗುರಿಯಾದ ದೀನದಲಿತ ನೀಗ್ರೊ ಜನಾಂಗದ ಗೋಳಾಟವನ್ನು ಈ ಲೇಖಕರು ಮನಕರಗುವಂತೆ ಚಿತ್ರಿಸಿದ್ದಾರೆ. ಎಳೆಯ ಕವಿಗಳಲ್ಲಿ ಕ್ಯಾಡಿ ಮೆಕೆ ಎಂಬ ಕವಿಯನ್ನು ಹೆಸರಿಸಲೇಬೇಕು. ಗ್ವೆಂಡೊಲಿನ್ ಬ್ರೂಕ್ಸ್ ಎಂಬ ಕವಯತ್ರಿಯ ಕಾವ್ಯರಚನೆಗೆ 1950 ರಲ್ಲಿ ಪುಲಿಟ್ಸರ್ ಬಹುಮಾನ ಲಭಿಸಿತು. ಗದ್ಯಲೇಖಕರಲ್ಲಿ ವಾಲ್ಟರ್ ವೈಟ್ ಪ್ರಸಿದ್ಧನಾಗಿದ್ದಾನೆ. ಫ್ರಾಂಕ್ ಈಯರ್ಬಿ ಎಂಬ ಕಾದಂಬರಿಕಾರ 1946 ರಲ್ಲಿ ಫಾಕ್ಸಸ್ ಆಫ್ ಹ್ಯಾರೋ ಎಂಬ ಕಾದಂಬರಿಯನ್ನು ಪ್ರಕಟಿಸಿ. ಆ ತರುವಾಯ ಹತ್ತು ವರ್ಷಗಳ ಕಾಲ ಎಡೆಬಿಡದೆ ಪ್ರಕಟವಾಗುತ್ತಲೆ ಇದ್ದ ಅವನ ಐತಿಹಾಸಿಕ ಕಾದಂಬರಿಗಳು ದೇಶವಿದೇಶಗಳ ಲಕ್ಷೋಪಲಕ್ಷ ವಾಚಕರ ಮನಸೆಳೆದಿವೆ.

ಪತ್ರಿಕಾಕ್ಷೇತ್ರದಲ್ಲೂ ನೀಗ್ರೊಗಳ ಪ್ರಗತಿ ಗಮನಾರ್ಹವಾಗಿ ಮುಂದುವರಿಯಿತು. ಬಿಳಿಯರ ಪತ್ರಿಕೆಗಳಲ್ಲಿ ನೀಗ್ರೊಗಳಿಗೆ ಸಂಬಂಧಿಸಿದ ಸುದ್ದಿ ಸಮಾಚಾರಗಳು ಪ್ರಕಟವಾಗುತ್ತಿದ್ದುದೇ ವಿರಳ. ಅದರಿಂದ ನೀಗ್ರೊ ಪತ್ರಿಕೆಗಳನ್ನೇ ಅವರು ಆಶ್ರಯಿಸುವಂತಾಯಿತು.

ನಾಟಕ ಮತ್ತು ಸಿನಿಮ ಕಲೆಯಲ್ಲೂ ನೀಗ್ರೊಜನರ ಸಾಧನೆ ಕಡಿಮೆಯೇನೂ ಅಲ್ಲ. ನೀಗ್ರೊ ಜೀವನವೇ ವಸ್ತುವಾದ ಅಂಕಲ್ ಟಾಮ್ಸ್ ಕ್ಯಾಬಿನ್ ಮುಂತಾದ ನಾಟಕಗಳು ಜನಪ್ರಿಯವಾಗತೊಡಗಿದುವು. ಗಾರ್ಲಂಡ್ ಆ್ಯಂಡರ್ಸನ್ ಮುಂತಾದ ನೀಗ್ರೊನಾಟಕಕಾರರು ಪ್ರಸಿದ್ಧಿಗೆ ಬಂದರು. ಈ ಶತಮಾನದ ನಾಲ್ಕನೆಯ ಮತ್ತು ಐದನೆಯ ದಶಕಗಳ ನೀಗ್ರೊ ನಾಟಕಕಾರರಲ್ಲಿ ಹೆಚ್ಚಿನವರು ನೀಗ್ರೊ ಕಾಲೇಜುಗಳಲ್ಲಿ ನಾಟ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಒಂದನೆಯ ಮಹಾಯುದ್ಧಾನಂತರ ಬೆಳಕಿಗೆ ಬಂದ ನೀಗ್ರೊ ನಟರಲ್ಲಿ ಚಾರ್ಲ್ಸ್ ಗಿಲ್ಪನ್ ಅಗ್ರಗಣ್ಯ. ಪಾಲ್ ರಾಬ್ಸನ್ ನಾಟಕನಟನಾಗಿಯೂ ಚಲನಚಿತ್ರನಟನಾಗಿಯೂ ಖ್ಯಾತಿಗೆ ಬಂದ. ಈತಲ್ ವಾಟರ್ಸ್ ಮುಂತಾದ ಹಲವರು ನಟರಾಗಿಯೂ ರೇಡಿಯೋ–ಟೆಲಿವಿಷನ್‌ಗಳಲ್ಲೂ ಪ್ರಸಿದ್ಧರಾದರು.

20 ನೆಯ ಶತಮಾನದಲ್ಲಿ ನೀಗ್ರೊಗಳ ಸಂಗೀತ ನವೀನರೀತಿ ತಳೆಯಿತು. ನೀಗ್ರೊ ಸಂಗೀತ ಮುಖ್ಯವಾಗಿ ಜನಪದ ಗೀತ ಹಾಗೂ ಧಾರ್ಮಿಕ ಗೀತೆಗಳ ಬೆರಕೆ. ಈ ಧಾರ್ಮಿಕ ಸಂಗೀತದಲ್ಲಿ ಆಫ್ರಿಕ ಸಂಗೀತವೂ ಕ್ರೈಸ್ತಕಲ್ಪನೆಗಳೂ ಅಡಕವಾಗಿವೆಯೆಂದು ಹೇಳುತ್ತಾರೆ. ಡೊರೊತಿ ಮೇಯ್ನರ್, ಕ್ಯಾಮಿಲ್ಲ ವಿಲಿಯಮ್ಸ್ ಮುಂತಾದವರು ನೀಗ್ರೊ ಸಂಗೀತದಲ್ಲಿ ಮೊದಲಿಗರು.

ವರ್ಣಚಿತ್ರಕಲೆಯಲ್ಲೂ ಪ್ರಸಿದ್ಧರಾದವರು ಹಲವರಿದ್ದಾರೆ. ಹೆನ್ರಿಕ್ ಟ್ಯಾನರ್ ಎಂಬ ಚಿತ್ರಕಾರ 1900 ರಲ್ಲೇ ಪದಕಗಳನ್ನು ಗಳಿಸಿದ. 20ನೆಯ ಶತಮಾನದ ಮಧ್ಯಭಾಗದಲ್ಲಿ ಅವನ ಅನೇಕ ಕೃತಿಗಳು ಯುರೋಪ್ ಹಾಗೂ ಅಮೆರಿಕ ದೇಶಗಳ ಅನೇಕ ಚಿತ್ರಶಾಲೆಗಳನ್ನು ಅಲಂಕರಿಸಿದ್ದವು. ಒಂದನೆಯ ಮಹಾಯುದ್ಧಾನಂತರ, ಅರನ್ ಡಾಗ್ಲಸ್ ಎಂಬ ಚಿತ್ರಕಾರನ ರೇಖಾಚಿತ್ರಗಳು ಪ್ರಸಿದ್ಧಿಗೆ ಬರತೊಡಗಿದುವು. ಇ. ಸಿಮ್ಸ್ ಕ್ಯಾಂಬೆಲ್ ಮತ್ತು ರೋಮೆಲ್ ಬೀಯಿಡನ್ ಎಂಬಿಬ್ಬರು ವ್ಯಂಗ್ಯಚಿತ್ರಕಾರರಾಗಿ ಖ್ಯಾತಿಗೆ ಬಂದರು. ಮೇರಾ ವಾರ್ರಿಕ್ ಫುಲ್ಲರ್ ಗಣ್ಯಶಿಲ್ಪಿ. ಸಾರ್ಜೆಂಟ್ ಜಾನ್ಸನ್ ಅಲಂಕಾರಶಿಲ್ಪಿ. ನ್ಯೂಯಾರ್ಕ್ ವಿಶ್ವವಿದ್ಯಾನಿಲಯದ ಭವನವನ್ನು ಅಲಂಕರಿಸಿರುವ ಬೂಕರ್ ಟಿ. ವಾಷಿಂಗ್‌ಟನ್ನನ ವಿಗ್ರಹವನ್ನು ಕಡೆದ ರಿಚ್‌ಮಂಡ್ ಬಾರ್ತೆ ಅತ್ಯಂತ ಪ್ರತಿಭಾಶಾಲಿಯಾದ ಶಿಲ್ಪಿ.

ಹೀಗೆ ಅಮೆರಿಕದಲ್ಲಿನ ನೀಗ್ರೊಗಳ ಹೋರಾಟ ಹೃದಯವಿದ್ರಾವಕವಾಗಿದೆ. ಇಲ್ಲಿ ನಾವು ಕಾಣುವುದು ವರ್ಣಭೇದನೀತಿಯ ರಾಕ್ಷಸೀಯ ದೌರ್ಜನ್ಯವನ್ನು. ಬಿಳಿಯನಾಗಲಿ ಕರಿಯನಾಗಲಿ ಮನುಷ್ಯ ಮನುಷ್ಯನೇ ಎಂದು ತಿಳಿಯುವ ಕಾಲ ನಿಧಾನವಾಗಿ ಬರತೊಡಗಿದೆ. ಅದಕ್ಕಾಗಿ ವರ್ಣೀಯರು ನಿರಂತರವಾಗಿ ಹೋರಾಡಿದ್ದಾರೆ; ಜೀವ ತೆತ್ತಿದ್ದಾರೆ. ನೀಗ್ರೊಗಳ ಗಾಂಧಿ ಎನಿಸಿದ ಮಾರ್ಟಿನ್ ಲೂಥರ್ ಕಿಂಗ್‌ನಂಥ (ನೋಡಿ – ಕಿಂಗ್,–ಮಾರ್ಟಿನ್ ಲೂಥರ್–(ಜೂನಿಯರ್) ಮೇಧಾವಿಗಳು ಆತ್ಮಾರ್ಪಣೆ ಮಾಡಿದ್ದಾರೆ.

ವರ್ಣಭೇದಭಾವ, ಗುಲಾಮಗಿರಿ, ಜನಸಾಮಾನ್ಯರ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯ– ಈ ಮುಂತಾದ ಘನಸಮಸ್ಯೆಗಳ ಹಿನ್ನೆಲೆಯಲ್ಲಿ ಈ ಜನರ ಚರಿತ್ರೆ ವ್ಯಾಸಂಗಯೋಗ್ಯವಾಗುತ್ತದೆ. (ಎಂ.ಕೆ.ಬಿ.)

**ಅಮೆರಿಕದ ಜಾನಪದ ಪರಿಷತ್ತು** : ಜಾನಪದ ಅಧ್ಯಯನವನ್ನು ಪ್ರಥಮಕರ್ತವ್ಯವನ್ನಾಗಿ ಇಟ್ಟುಕೊಂಡು ಮೆಸಾಚುಸೆಟ್ಸ್‌ನ ಕೇಂಬ್ರಿಜ್‌ನಲ್ಲಿ ಇದು ಜನ್ಮತಾಳಿತು (1888). ಇದಕ್ಕಾಗಿ ಒಂದು ವೈಜ್ಞಾನಿಕದೃಷ್ಟಿಯ ಪತ್ರಿಕೆಯನ್ನು ಪ್ರಕಟಿಸಬೇಕೆಂಬುದೂ

ಆ ಮೂಲಕ ತೀವ್ರಗತಿಯಲ್ಲಿ ಕ್ಷಯಿಸುತ್ತಿರುವ ಅಮೆರಿಕದ ಜಾನಪದವನ್ನು ಸಂಗ್ರಹಿಸುವ, ಸಂರಕ್ಷಿಸುವ, ಅಧ್ಯಯನಿಸುವ ಹಾಗೂ ಪ್ರಕಟಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದೂ ಪರಿಷತ್ತಿನ ಉದ್ದೇಶಗಳಲ್ಲಿ ಸೇರಿದ್ದುವು. ಜಾನಪದ ಅಧ್ಯಯನವನ್ನು ಶಾಸ್ತ್ರೀಯವನ್ನಾಗಿ ಸುವುದರಲ್ಲಿ ಪರಿಷತ್ತಿನ ಪಾತ್ರ ಅಪಾರವಾದುದು. ಸಂಯುಕ್ತಸಂಸ್ಥಾನಗಳು ಮತ್ತು ಕೆನಡದ ಆದ್ಯಂತ ಅನೇಕ ಅಂಗಸಂಸ್ಥೆಗಳಿವೆ. ಪ್ರಪಂಚದ ನಾನಾಕಡೆಗಳಲ್ಲಿ ಇದರ ಸದಸ್ಯರಿದ್ದಾರೆ. ಜರ್ನಲ್ ಆಫ್ ಅಮೆರಿಕನ್ ಫೋಕ್‌ಲೋರ್ ಎನ್ನುವುದು ಪರಿಷತ್ತಿನ ಪತ್ರಿಕೆ. ಈಗ ಪತ್ರಿಕೆಯ 120 ನೆಯ ಸಂಪುಟ ನಡೆಯುತ್ತಿದೆ (2007). ಇದರೊಂದಿಗೆ ಸಾರಾಂಶಗಳ ಪುರವಣಿ ಮಾಲೆಯೊಂದನ್ನು ಪರಿಷತ್ತು ಪ್ರಕಟಿಸುತ್ತಿದೆ. ಪರಿಷತ್ತು ತನ್ನ ವಾರ್ಷಿಕ ಅಧಿವೇಶನವನ್ನು ಎರಡು ಮೂರು ದಿನ ನಡೆಸುತ್ತದೆ. ಪಂಡಿತ ಪ್ರಬಂಧಗಳ ಮಂಡನೆ, ಚರ್ಚೆ, ವಿನಿಮಯಗಳಿಗೆ ಅಧಿವೇಶನದಲ್ಲಿ ಅವಕಾಶವಿದೆ. (ಎಚ್.ಎಂ.ಎನ್.)

**ಅಮೆರಿಕದ ಡೆಮೊಕ್ರ್ಯಾಟಿಕ್ ಪಕ್ಷ :** ಅಮೆರಿಕ ಸಂಯುಕ್ತಸಂಸ್ಥಾನದ ರಾಜಕೀಯದಲ್ಲಿ ರೂಪುಗೊಂಡ ಮೊದಲ ಪಕ್ಷ. ಹದಿನೆಂಟನೆಯ ಶತಮಾನದ ಕೊನೆಯ ದಶಕದಲ್ಲಿ ಹ್ಯಾಮಿಲ್ಟನ್ ಕಟ್ಟಿದ ಫೆಡರಲಿಸ್ಟ್ ಗುಂಪಿಗೆ ಪ್ರತಿಯಾಗಿ ಥಾಮಸ್ ಜೆಫರ್‌ಸನ್ ಈ ಪಕ್ಷವನ್ನು ಸಂಘಟಿಸಿದ. ಸ್ವಲ್ಪಕಾಲದಲ್ಲೇ ಇದು ಪ್ರಜಾಪ್ರಭುತ್ವವಾದಿ ರಿಪಬ್ಲಿಕನ್ ಪಕ್ಷವೆಂಬ ಹೆಸರು ಪಡೆಯಿತು. ಪ್ರಜಾಪ್ರಭುತ್ವವಾದಿ ಎಂಬ ಪೂರ್ವಪ್ರತ್ಯಯವನ್ನು ಜೆಫರ್‌ಸನ್ ಉಪಯೋಗಿಸಲಿಲ್ಲ. ಈ ಪಕ್ಷದ ಮೂಲತತ್ತ್ವಗಳು–ಧನಿಕರು ಮತ್ತು ವರ್ತಕರು ಲಾಭದ ಕೊಳ್ಳೆ ಹೊಡೆಯುವುದನ್ನು ವಿರೋಧಿಸಿ ಕೃಷಿಕವರ್ಗಕ್ಕೆ ಹೆಚ್ಚು ಅಧಿಕಾರ ಕೊಡುವುದು ಮತ್ತು ಕೇಂದ್ರೀಕೃತ ಆಡಳಿತದ ಬಲವನ್ನು ಕುಗ್ಗಿಸಿ ಸ್ಥಳೀಯ ಸರ್ಕಾರದ ಅಧಿಕಾರವನ್ನು ಹೆಚ್ಚಿಸುವುದು. ಕೇಂದ್ರಸರ್ಕಾರ ಹೆಚ್ಚು ಬಲಯುತವಾಗಿರಬೇಕೋ ಪ್ರಾಂತೀಯ ಸರ್ಕಾರಗಳೋ ಎಂಬ ವಿಷಯದಲ್ಲಿ ಹದಿನೆಂಟನೆಯ ಶತಮಾನ ಕಳೆಯುವವರೆಗೂ ವಾದವಿವಾದಗಳು ನಡೆಯುತ್ತಲೇ ಇದ್ದುವು. 1801ರಲ್ಲಿ ಜೆಫರ್‌ಸನ್ ಅಧ್ಯಕ್ಷನಾದ ಅನಂತರ ಫೆಡರಲಿಸ್ಟ್ ಪಕ್ಷ ಕರಗಿಹೋಯಿತು. 1809ರವರೆಗೂ ಅವನು ಅಧ್ಯಕ್ಷನಾಗಿದ್ದ. ಆದರೆ ಆ ಕಾಲದಲ್ಲೇ ಸಂಯುಕ್ತ ರಾಜ್ಯಾಂಗವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚು ಅಧಿಕಾರವಿರಬೇಕೆಂದು ನಂಬಿದ್ದವರ ರಿಪಬ್ಲಿಕನ್ ಪಕ್ಷ ತಲೆಯೆತ್ತಿತು. 1828ರಲ್ಲಿ ಜಾಕ್‌ಸನ್ ಡೆಮೊಕ್ರ್ಯಾಟಿಕ್ ಪಕ್ಷದ ಅಧ್ಯಕ್ಷನಾದ ಮೇಲೆ ಈ ಪಕ್ಷ ಮತ್ತೆ ಬಲಗೊಂಡಿತು. ಆಗತಾನೆ ಹೊಸ ಪ್ರಾಂತ್ಯಗಳು ನಿರ್ಮಾಣವಾಗುತ್ತಿದ್ದುವು. ಅಮೆರಿಕಕ್ಕೆ ಬಂದು ನೆಲೆಸಿದ್ದ ನಾನಾ ಜನಾಂಗಗಳ ಐಕ್ಯತೆ ಸಾಧಿಸುವುದು, ನೀಗ್ರೊ ಗುಲಾಮರ ಪ್ರಶ್ನೆ, ಇಂಥ ಬೃಹತ್ ಸಮಸ್ಯೆಗಳನ್ನು ಎದುರಿಸಬೇಕಾಗಿದ್ದ ಕಾಲ ಅದು. ಪ್ರತಿಯೊಂದು ಸಮಸ್ಯೆಯ ವಿಷಯದಲ್ಲೂ ತೀವ್ರ ಭಿನ್ನಾಭಿಪ್ರಾಯಗಳಿದ್ದುವು. ಗುಲಾಮರ ಪ್ರಶ್ನೆ ಡೆಮೊಕ್ರ್ಯಾಟಿಕ್ ಪಕ್ಷದಲ್ಲೇ ಒಡಕನ್ನು ತಂದಿತು. 1854ರಲ್ಲಿ ಆ ಪ್ರಶ್ನೆಗೆ ಸಂಬಂಧಿಸಿದ ಅಂತರ್ಯುದ್ಧ ಕಳೆದಮೇಲೆ ಈ ಪಕ್ಷ ದುರ್ಬಲಗೊಂಡಿತು. ಆದರೂ ಉತ್ತರದ ರಾಜ್ಯಗಳ ಬೆಂಬಲ ಸಂಪಾದಿಸಿ 1885–89ರವರೆಗೂ 1893–97ರವರೆಗೂ ಅಧಿಕಾರದಲ್ಲಿತ್ತು. ಏಕಸ್ವಾಮ್ಯತಾ ಕೂಡುವ್ಯಾಪಾರ ಸಂಸ್ಥೆಗಳಿಗೆ (ಮನಾಪಲಿಸ್ಟಿಕ್ ಟ್ರಸ್ಟ್) ವಿರೋಧವಾಗಿ ಹೋರಾಡಿ ಪ್ರಜಾಬೆಂಬಲಗಳಿಸಿ ಚುನಾವಣೆಯಲ್ಲಿ ಗೆದ್ದು 1913ರಲ್ಲಿ ವುಡ್ರೊ ವಿಲ್ಸನ್‌ನನ್ನು ಅಧ್ಯಕ್ಷನನ್ನಾಗಿ ಆರಿಸಿತು. ಅವನು 1921ರವರೆಗೂ ಅಧ್ಯಕ್ಷನಾಗಿದ್ದ. ನಿರುದ್ಯೋಗವನ್ನು ಹೋಗಲಾಡಿಸಿ ಕೈಗಾರಿಕಾ ಪ್ರಗತಿ ಸಾಧಿಸುತ್ತೇವೆಂಬ ಭರವಸೆ ಕೊಟ್ಟು 1933ರಲ್ಲಿ ಅಧಿಕಾರಕ್ಕೆ ಬಂದು 1953ರವರೆಗೂ ಮುಂದುವರಿಯಿತು. 1960ರಲ್ಲಿ ಪುನಃ ಅಧಿಕಾರಗಳಿಸಿತು. ಈ ಕಾಲದಲ್ಲಿ, ವಿದೇಶಾಂಗ ನೀತಿಯಲ್ಲಿ ಪ್ರತ್ಯೇಕತಾ ಧೋರಣೆ ತಳೆದಿದ್ದ ರಿಪಬ್ಲಿಕನ್ ಪಕ್ಷಕ್ಕೆ ವಿರೋಧವಾಗಿ ವಿಲ್ಸನ್, ರೂಸ್‌ವೆಲ್ಟ್, ಟ್ರೂಮನ್ ಮುಂತಾದ ಸಮರ್ಥ ಅಧ್ಯಕ್ಷರ ನೇತೃತ್ವದಲ್ಲಿ ಪ್ರಪಂಚದ ಆಗುಹೋಗುಗಳು ಸಂಯುಕ್ತ ಸಂಸ್ಥಾನಕ್ಕೆ ಸಂಬಂಧಿಸಿದುವು ಎಂಬ ಉದಾತ್ತನೀತಿಗನುಸಾರವಾದ ವಿದೇಶಾಂಗನೀತಿಯನ್ನನುಸರಿಸಿತು. *

**ಅಮೆರಿಕದ ಪ್ರಾಗೈತಿಹಾಸಿಕ ಚರಿತ್ರೆ :** ಪುರಾತನ ಮಾನವ ಅಮೆರಿಕಕ್ಕೆ ವಲಸೆ ಹೋದನೆಂದು ಪ್ರಾಕ್ತನಾಧಾರದ ಮೇಲೆ ಸಂಶೋಧಕರು ನಿರ್ಣಯಿಸಿದ್ದಾರೆ. ಪ್ರ.ಶ.ಪೂ.ಸು. 30,000–10,000 ವರೆಗೆ ಸೈಬೀರಿಯದಿಂದ ಅಲಾಸ್ಕದವರೆಗೆ ನೆಲಸೇತುವೆ ಇತ್ತೆಂದು ಊಹಿಸಲು ಆಧಾರವಿದೆ. ಪುರಾತನ ಮಾನವ ಯೂರೇಷಿಯದಿಂದ ಈ ಮಾರ್ಗವಾಗಿ ಅಮೆರಿಕವನ್ನು ಪ್ರವೇಶಿಸಿದ. 10,000 ದಿಂದ ಈಚೆಗೆ ಈ ನೆಲಸೇತುವೆ ಕೊಚ್ಚಿಹೋಯಿತೆಂದು ಪ್ರಾಕ್ತನಶಾಸ್ತ್ರಜ್ಞರ ಅಭಿಪ್ರಾಯ. ಅಲಾಸ್ಕದಿಂದ ಹೊರಟ ಇವರು ದಕ್ಷಿಣ ಅಮೆರಿಕದ ತುದಿಯನ್ನು ಪ್ರ.ಶ.ಪೂ.ಸು 6,000 ವೇಳೆಗೆ ತಲುಪಿರಬಹುದು.

ಉತ್ತರ ಅಮೆರಿಕದ ನೆವಾಡ ಭಾಗದ ತುಲೆಸ್ಪ್ರಿಂಗ್ಸ್ ಎಂಬಲ್ಲಿ ಒರಟಾದ ಚಾಪರ್ ಎಂಬ ಕಡಿಗತ್ತಿಗಳು ಆಗ ಜೀವಿಸಿದ್ದ ಮ್ಯಾಮತ್ (ಹಿಮಯುಗದ ಆನೆ), ಕುದುರೆ ಮತ್ತು ಕಾಡುಕೋಣಗಳ ಮೂಳೆಗಳೊಡನೆ ಸಿಕ್ಕಿವೆ. ಇಂಗಾಲ 14ರ ಸಹಾಯದಿಂದ ಇದರ ಕಾಲವನ್ನು 28,000–32,000 ವರ್ಷವೆಂದು ನಿರ್ಣಯಿಸಲಾಗಿದೆ. ಆದರೆ ಅನೇಕ ವಿದ್ವಾಂಸರು ಇಷ್ಟು ಪುರಾತನಕಾಲವನ್ನು ಅಮೆರಿಕದ ಶಿಲಾಯುಗದ ಮಾನವನಿಗೆ ಕೊಡಲು ಒಪ್ಪಿಲ್ಲ.

ಅಮೆರಿಕದ ಶಿಲಾಯುಗದ ಮಾನವನನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯ ಗುಂಪಿನವರು ದೊಡ್ಡ ದೊಡ್ಡ ಪ್ರಾಣಿಗಳಾದ ಮ್ಯಾಮತ್, ಕುದುರೆ, ಕಾಡುಕೋಣ, ಸ್ಲಾತ್ ಎಂಬ ಕಾಡುಪ್ರಾಣಿ–ಇವುಗಳನ್ನು ಕಲ್ಲಿನ ಚೂಪು ತುದಿಗಳನ್ನುಳ್ಳ ಭರ್ಜಿಗಳಿಂದ ಬೇಟೆಯಾಡಿ ಜೀವಿಸುತ್ತಿದ್ದರು. ಅಮೆರಿಕದ ಅನೇಕ ಕಡೆ ಇಂಥ ಭರ್ಜಿಗಳು ಸಿಕ್ಕಿವೆ. ಇವುಗಳಲ್ಲಿ ನ್ಯೂ ಮೆಕ್ಸಿಕೋನ ಫುಲ್‌ಸಂ ಎಂಬ ಊರಿನ ಬಳಿ ಸಿಕ್ಕಿದ ಭರ್ಜಿಗಳು ಅತ್ಯಂತ ಮುಖ್ಯವಾದುವು. ಇವು ಬಹು ನಾಜೂಕಾಗಿವೆ. ಚೂಪುತುದಿಯ ಸುತ್ತಮುತ್ತ ಬಹು ಎಚ್ಚರಿಕೆಯಿಂದ ನಯಮಾಡಲಾಗಿದೆ. ಸುತ್ತ ಕಾಡುಕೋಣದ ಪಕ್ಕೆಲುಬುಗಳಲ್ಲಿ ಈ ಕಲ್ಲಿನ ಮೊನೆ ಸಿಕ್ಕಿಕೊಂಡಿದ್ದು ಹಾಗೇ ಉಳಿದುಬಂದಿದೆ. ಉತ್ತರ ಅಮೆರಿಕದಲ್ಲಿ ಪುರಾತನ ಮಾನವ ಜೀವಿಸಿದ್ದನೆನ್ನಲು ಇದು ಉತ್ತಮ ಆಧಾರ. ಇದೇ ತರಹ ಕಲ್ಲಿನ ಉಪಕರಣಗಳು ಕ್ಲೋವಿಸ್ ಮತ್ತು ಲಿಂಡನ್‌ಮಯರ್ ಎಂಬಲ್ಲಿ ಸಿಕ್ಕಿವೆ. ಇಂಗಾಲ 14ರ ಲೆಕ್ಕಾಚಾರದ ಪ್ರಕಾರ ಇವುಗಳ ಕಾಲ ಪ್ರ.ಶ.ಪೂ. 9,000–8,000.

ಊಟಾ ಪ್ರಾಂತ್ಯದ ಡೆಂಜರ್ ಗುಹೆಯಲ್ಲಿ ಮತ್ತೆ ಕೆಲವು ಅಪೂರ್ವ ಆಧಾರಗಳು ಸಿಕ್ಕಿವೆ. ಪ್ರ.ಶ.ಪೂ. 9,000ಕ್ಕೆ ಸೇರಿದ ಈ ಗುಹೆಯ ಜನರಿಗೆ ಬುಟ್ಟಿಯನ್ನು ಹೆಣೆಯುವ ಕುಶಲತೆ ಗೊತ್ತಿತ್ತು. ಇಷ್ಟು ಪುರಾತನಕಾಲದಲ್ಲಿ ಪ್ರಪಂಚದಲ್ಲಿ ಬೇರಾರಿಗೂ ಈ ಕಲೆ ಗೊತ್ತಿರಲಿಲ್ಲ.

ಸಾಂಡಿಯ ಸಂಸ್ಕೃತಿಗೆ ಸೇರಿದ ಶಿಲಾಯುಗದ ಮಾನವ ಕಲ್ಲಿನಿಂದ ಮಾಡಿದ ಭರ್ಜಿಯ ಮೊನೆಗಳನ್ನು ಉಪಯೋಗಿಸುತ್ತಿದ್ದ. ಆದರೆ ಇವು ಫುಲ್‌ಸಂ ಮೊನೆಗಳಂತಿರದೆ ಬೇರೆ ತರಹದಲ್ಲಿವೆ. 1939ರಲ್ಲಿ ಸಾಂಡಿಯ ಪರ್ವತದ ಗುಹೆಯೊಂದರಲ್ಲಿ ನಡೆದ ಭೂಶೋಧನೆಯಿಂದ ಈ ಕೆಲವು ಅಂಶಗಳು ಗೊತ್ತಾಗಿವೆ : ಅಲ್ಲಿ ಮೂರು ಪದರಗಳಿವೆ. ಮೂರನೆಯ ಪದರ ಪುಬ್ಲೊ ಇಂಡಿಯನ್ ಸಂಸ್ಕೃತಿಯದು. ಎರಡನೆಯದು ಫುಲ್ ಸಂಸ್ಕೃತಿಗೆ ಸೇರಿದುದು. ಇದಾದ ಅನಂತರ ಸಿಕ್ಕಿದ ಹಳದಿ ಕಾವೀ ಮಣ್ಣಿನ ಪದರದಲ್ಲಿ ಯಾವ ವಸ್ತುವೂ ಸಿಕ್ಕಲಿಲ್ಲ. ಇದರ ಕೆಳಗಿನ ಮೂರನೆಯ ಪದರದಲ್ಲಿ ಸಾಂಡಿಯ ಕಲ್ಲುಮೊನೆಯ ಉಪಕರಣಗಳು ಸಿಕ್ಕಿದುವು. ಇದರಿಂದ ಸಾಂಡಿಯ ಸಂಸ್ಕೃತಿ ಫುಲ್ ಸಂಸ್ಕೃತಿಗಿಂತ ಹಿಂದಿನದೆಂದು ಖಚಿತವಾಗುತ್ತದೆ. ಸಾಂಡಿಯ ಭರ್ಜಿಮೊನೆಯಲ್ಲಿ ಕೊಟ್ಟು (ಟ್ಯಾಂಗ್) ಇರುವುದರಿಂದ ಅದನ್ನು ಭರ್ಜಿಗೆ ಸಿಕ್ಕಿಸಿ ಭರ್ಜಿ ಎಸೆಯುವ ಯಂತ್ರದಿಂದ ಗುರಿಯ ಕಡೆ ಎಸೆಯುತ್ತಿದ್ದರು.

$\therefore x = c + mt$ ಯೂಮ ಸಂಸ್ಕೃತಿಗೆ ಇಡನ್, ಪ್ಲೇನ್‌ವ್ಯೂ ಮತ್ತು ಸ್ಕಾಟ್ಸ್ ಬ್ಲಫ್ ಮೊದಲಾದ ಭರ್ಜಿಯ ಅನೇಕ ಕಲ್ಲಿನ ಮೊನೆಗಳು ಸೇರಿವೆ. ಮಧ್ಯಟೆಕ್ಸಾಸ್‌ಗೆ ಸೇರಿದ ಆಬಲೀಸ್ ಎಂಬಲ್ಲಿ ಮತ್ತೊಂದು ಕಲ್ಲಿನ ಮೊನೆಯ ಸಂಸ್ಕೃತಿ ಸಿಕ್ಕಿತು. ಹೀಗೆ ಮೇಲೆ ಹೇಳಿದ ಸಂಸ್ಕೃತಿಗಳನ್ನೆಲ್ಲ ಶಿಲಾಯುಗದ ಬೇಟೆಗೆ ಸೇರಿದ ಸಂಸ್ಕೃತಿಗಳೆಂದು ಪರಿಗಣಿಸಬಹುದು.

ಎರಡನೆಯ ಗುಂಪಿಗೆ ಸೇರಿದ ಕೊಚಿಸ್ ಸಂಸ್ಕೃತಿ ಸು. 10,000 ವರ್ಷ ಹಿಂದಿನದು. ಇದರಲ್ಲಿ ಬೇಟೆಗಿಂತ ಹುಲ್ಲಿನ ಬೀಜಗಳ ಶೇಖರಣೆಯೇ ಮುಖ್ಯವಾಗಿತ್ತು. ಬೀಜಗಳನ್ನು ಅರೆಯಲು ಅವರು ಉಪಯೋಗಿಸುತ್ತಿದ್ದ ಕಲ್ಲುಗಳು ಸಿಕ್ಕಿವೆ. ಯುರೋಪ್ ಮತ್ತು ಏಷ್ಯದಲ್ಲಿ ಈ ತರಹ ಕೃಷಿಸಂಸ್ಕೃತಿ ಜರ್ಮೊ ಮುಂತಾದ ಕಡೆ 7,000 ವರ್ಷಗಳಿಗಿಂತ ಹಿಂದೆ ಇತ್ತೆಂಬ ಅಂಶ ಗೊತ್ತಾಗಿದೆ. ಆದರೆ ಅಮೆರಿಕದಲ್ಲಿ ಇದು ಹಳೆಯ ಶಿಲಾಯುಗದಲ್ಲಾಗಲೆ ಬಳಕೆಗೆ ಬಂದಿತ್ತು.

ಮೂರನೆಯ ಗುಂಪಿಗೆ ಸೇರಿದ ಅಲಾಸ್ಕ ಪ್ರಾಂತ್ಯದ ಡನ್‌ಬಿಗ್ ಮತ್ತು ಡಾರ್‌ಸೆಟ್ ಸಂಸ್ಕೃತಿಗಳ ಜನ ಸೈಬೀರಿಯದಿಂದ ಬಂದ ವಲಸೆಗಳ ಕಡೆಯ ಹಂತಕ್ಕೆ ಸೇರಿದವರು. ಡೆನ್‌ಬಿಗ್ ಕಣಿವೆಯಲ್ಲಿ ದೊರಕಿದ ಈ ಸಂಸ್ಕೃತಿಯ ಅವಶೇಷಗಳು ಇಂಗಾಲ 14ರ ಪ್ರಕಾರ ಪ್ರ.ಶ.ಪೂ. 4,000 ವರ್ಷ ಹಳೆಯವೆಂದು ಪರಿಗಣಿಸಲಾಗಿದೆ. ಈ ಜನ ಚಕಮಕಿ ಕಲ್ಲಿನ ಸೂಕ್ಷ್ಮವಾದ ಮೊನೆಗಳನ್ನು ಮತ್ತು ಉಳಿಯಂಥ ಉಪಕರಣಗಳನ್ನು ಕೈಪಿಡಿಗಳಲ್ಲಿ ಸೇರಿಸಿ ಉಪಯೋಗಿಸುತ್ತಿದ್ದರು. ಈ ಸಂಸ್ಕೃತಿಯನ್ನು ಅಂತ್ಯಶಿಲಾಯುಗ ಮತ್ತು ಸೈಬೀರಿಯದ ಲೇನಾ ಕಣಿವೆಯ ನವ ಶಿಲಾಯುಗದ ಆಯುಧಗಳಿಗೆ ಹೋಲಿಸಬಹುದು. (ಎಸ್.ಎಂ.)

**ಅಮೆರಿಕದ ರಿಪಬ್ಲಿಕನ್ ಪಕ್ಷ :** ಅಮೆರಿಕದ ಸಂಯುಕ್ತ ಸಂಸ್ಥಾನದ ಮುಖ್ಯ ರಾಜಕೀಯ ಪಕ್ಷಗಳಲ್ಲಿ ಒಂದು. ಥಾಮಸ್ ಜೆಫರ್‌ಸನ್ ಸ್ಥಾಪಿಸಿದ ಡೆಮೊಕ್ರ್ಯಾಟಿಕ್ ಪಕ್ಷಕ್ಕೆ ರಿಪಬ್ಲಿಕನ್ ಪಕ್ಷವೆಂದು ಎರಡನೆಯ ಹೆಸರಿತ್ತು. ಜಾನ್ ಕ್ವಿನ್ಸಿ ಆ್ಯಡಮ್ಸ್ ಮತ್ತು ಹೆನ್ರಿ ಕ್ಲೇ ಮುಂತಾದವರು 1828 ರಲ್ಲಿ ಈ ಪಕ್ಷದಿಂದ ಬೇರೆಯಾಗಿ ತಮ್ಮದೇ ಆದ ನ್ಯಾಷನಲ್ ರಿಪಬ್ಲಿಕನ್ ಪಕ್ಷವನ್ನು ಸ್ಥಾಪಿಸಿದರು. ಗುಲಾಮಗಿರಿ ಪದ್ಧತಿಯನ್ನು ವಿರೋಧಿಸುತ್ತಿದ್ದ ನ್ಯಾಷನಲ್ ರಿಪಬ್ಲಿಕನ್ನರೂ ಡೆಮೊಕ್ರ್ಯಾಟಿಕ್ ಪಕ್ಷದವರೂ ಮತ್ತು ಸ್ವತಂತ್ರರೂ ಸೇರಿ 1854ರಲ್ಲಿ ಈಗಿನ ರಿಪಬ್ಲಿಕನ್ ಪಕ್ಷವನ್ನು ಸ್ಥಾಪಿಸಿದರು. ಫಿಲಿಡೆಲ್ಫಿಯದಲ್ಲಿ ಈ ಸಭೆಯ ಅಧಿವೇಶನ 1856ರಲ್ಲಿ ನಡೆಯಿತು. ಈ ಪಕ್ಷದ ಪರವಾಗಿ ಸ್ಪರ್ಧಿಸಿದ ಏಬ್ರಹಾಂ ಲಿಂಕನ್ನರು 1860 ರಲ್ಲಿ ಅಮೆರಿಕದ ಅಧ್ಯಕ್ಷನಾಗಿ ಚುನಾಯಿತನಾದ. ಅಮೆರಿಕದ ಅಂತರ್ಯುದ್ಧದ ತರುವಾಯ ಈ ಪಕ್ಷ ಪ್ರಬಲಪಕ್ಷವಾಗಿ ಅಧ್ಯಕ್ಷಸ್ಥಾನ ಮತ್ತು ಕಾಂಗ್ರೆಸ್ ಸಭೆಯನ್ನು 1874 ರವರೆಗೆ ತನ್ನ

ಹತೋಟಿಯಲ್ಲಿಟ್ಟುಕೊಂಡಿತ್ತು. ಪ್ರತಿನಿಧಿಗಳ ಸಭೆಯಲ್ಲಿ ಡೆಮೊಕ್ರ್ಯಾಟಿಕ್ ಪಕ್ಷ ಪ್ರಬಲವಾಗಿತ್ತು. 1884 ರಲ್ಲಿ ಕ್ಲೀವ್‌ಲ್ಯಾಂಡ್ ಅಧ್ಯಕ್ಷನಾಗಿ ಚುನಾಯಿತನಾಗುವವರೆಗೂ ಅಧ್ಯಕ್ಷಸ್ಥಾನ ರಿಪಬ್ಲಿಕನ್ ಪಕ್ಷದ ಅಧೀನದಲ್ಲೇ ಇತ್ತು.

1888–1892 ರವರೆಗೂ ಪುನಃ 1896 ರಲ್ಲೂ ಕಾಂಗ್ರೆಸ್ ಸಭೆ ಮತ್ತು ಅಧ್ಯಕ್ಷಸ್ಥಾನ–ಇವೆರಡೂ ಈ ಪಕ್ಷದ ಅಧೀನದಲ್ಲಿದ್ದುವು. 1912 ರಲ್ಲಿ ರಿಪಬ್ಲಿಕನ್ ಪಕ್ಷದಲ್ಲೇ ಒಡಕು ಹುಟ್ಟಿ ಅಧ್ಯಕ್ಷ ಪದವಿ ಅವರ ಕೈ ಬಿಟ್ಟಿತು. ವುಡ್ರೊ ವಿಲ್ಸನ್ ಅಧ್ಯಕ್ಷನಾಗಿ ಡೆಮೊಕ್ರ್ಯಾಟಿಕ್ ಪಕ್ಷ ಪುನಃ ಅಧಿಕಾರಕ್ಕೆ ಬಂತು. ಆದರೆ ಅಧ್ಯಕ್ಷನ ಅನೇಕ ಯೋಜನೆಗಳಿಗೆ ಕಾಂಗ್ರೆಸ್ಸಿನಲ್ಲಿ ಬಹುಮತ ಹೊಂದಿದ್ದ ರಿಪಬ್ಲಿಕನ್ ಪಕ್ಷ ತಡೆ ಉಂಟುಮಾಡಿತು. 1920 ರಲ್ಲಿ ಅಧ್ಯಕ್ಷಸ್ಥಾನವೂ ಈ ಪಕ್ಷದ ಅಧೀನವಾಗಿ, ಇದರ ಆಡಳಿತ 1932 ರವರೆಗೆ ಮುಂದುವರಿಯಿತು. 1932, 1936, 1940, 1944 ರಲ್ಲಿ ಡೆಮೊಕ್ರ್ಯಾಟಿಕ್ ಪಕ್ಷದವರು ಅಧ್ಯಕ್ಷರಾಗಿ ಚುನಾಯಿತರಾದರು.

1948 ರಲ್ಲಿ ಈ ಪಕ್ಷದ ಹ್ಯಾರಿ ಟ್ರೂಮನ್ ಅಧ್ಯಕ್ಷನಾದ. 1952 ರಲ್ಲಿ ಡ್ವೈಟ್ ಡಬ್ಲ್ಯು. ಐಸೆನ್ ಹೋವರ್ ಅಧ್ಯಕ್ಷನಾದಾಗ ರಿಪಬ್ಲಿಕನ್ ಪಕ್ಷ ಪುನಃ ಅಧಿಕಾರಕ್ಕೆ ಬಂತು. 1956 ರಲ್ಲಿ ಐಸೆನ್‌ಹೋವರ್ ಎರಡನೆಯ ಬಾರಿ ಅಧ್ಯಕ್ಷನಾದ.

ಅಂತರ್ಯುದ್ಧಾನಂತರ ಒಕ್ಕೂಟವನ್ನು ಉಳಿಸಿದ ಪಕ್ಷವೆಂಬ ಹೆಸರನ್ನು ಗಳಿಸಿ ಈ ಪಕ್ಷ ಅಪಾರ ಜನಮನ್ನಣೆ ಪಡೆಯಿತು. ಕೇಂದ್ರಸರ್ಕಾರದ ಅಧಿಕಾರ ಹೆಚ್ಚಬೇಕೆಂಬ ಅಭಿಪ್ರಾಯವನ್ನು ಹೊಂದಿತ್ತು. ಫ್ರಾಂಕ್ಲಿನ್ ರೂಸ್‌ವೆಲ್ಟ್‌ನ ನ್ಯೂಡೀಲ್ ನೀತಿ ಕಾರ್ಯಗತವಾದ ತರುವಾಯ, ಕೇಂದ್ರಸರ್ಕಾರದ ಅಧಿಕಾರ ಹೆಚ್ಚಾಗುವುದನ್ನು ವಿರೋಧಿಸುವ ಪಕ್ಷವಾಯಿತು. ಪ್ರಥಮಮಹಾಯುದ್ಧದ ಅನಂತರ, ಅಮೆರಿಕ ಲೀಗ್ ಸಂಸ್ಥೆಯನ್ನು ಸೇರುವುದನ್ನು ವಿರೋಧಿಸಿತು.

ದೇಶದ ಇವೆರಡು ಪ್ರಮುಖ ಪಕ್ಷಗಳಲ್ಲಿ ಖಚಿತವಾದ ವ್ಯತ್ಯಾಸಗಳಿಲ್ಲ. ವಿಶ್ವದಲ್ಲಿ ಕಮ್ಯುನಿಸ್ಟರ ಪ್ರಭಾವವನ್ನು ತಡೆಗಟ್ಟುವುದು, ಅಂತರರಾಷ್ಟ್ರೀಯ ವಿಷಯಗಳಲ್ಲಿ ಅಮೆರಿಕ ಪ್ರಮುಖಪಾತ್ರ ವಹಿಸುವುದು, ಮುಂತಾದ ವಿಷಯಗಳನ್ನು ಕುರಿತು ಎರಡು ಪಕ್ಷಗಳ ಧೋರಣೆಗಳಲ್ಲಿ ವ್ಯತ್ಯಾಸವಿಲ್ಲ. ಹಣಕಾಸಿನ ಮತ್ತು ತೆರಿಗೆ ನೀತಿಗಳಲ್ಲಿ ಮಾತ್ರ ಕೆಲವು ವ್ಯತ್ಯಾಸಗಳನ್ನು ಕಾಣಬಹುದು. ಕೈಗಾರಿಕೋದ್ಯಮಿಗಳ ಬೆಂಬಲ ರಿಪಬ್ಲಿಕನ್ನರಿಗೂ ಕಾರ್ಮಿಕರ ಬೆಂಬಲ ಡೆಮೊಕ್ರ್ಯಾಟರಿಗೂ ಹೆಚ್ಚಾಗಿದೆ.

*

**ಅಮೆರಿಕದ ಸಾಹಿತ್ಯ ರೂಪರೇಷೆ :** 1607ರಲ್ಲಿ ವರ್ಜಿನಿಯದ ಜೇಮ್ಸ್ ಟೌನಿನಲ್ಲಿ ಮೊದಲ ಇಂಗ್ಲಿಷ್ ನೆಲಸುನಾಡು ಸ್ಥಾಪನೆಯಾದ ಅನಂತರ ಸ್ವಲ್ಪಕಾಲದಲ್ಲಿಯೇ ಅಮೆರಿಕದ ಸಾಹಿತ್ಯ ಪ್ರಾರಂಭವಾಯಿತು. 19ನೆಯ ಶತಮಾನದ ಉತ್ತರಾರ್ಧದವರೆಗೆ ದೇಶದ ಮೂಲನಿವಾಸಿಗಳಾಗಿದ್ದ ರೆಡ್ ಇಂಡಿಯನರ ಸಂಸ್ಕೃತಿಯನ್ನು ಉಳಿಸುವ ವ್ಯವಸ್ಥಿತ ಪ್ರಯತ್ನ ನಡೆಯಲಿಲ್ಲ. ಆದುದರಿಂದ ಅವರ ಸಾಹಿತ್ಯದ ದಾಖಲೆ ಯಾವುದೂ ಬರೆಹದಲ್ಲಿ ಉಳಿದಿಲ್ಲ. ಜೆ.ಎಫ್.ಕೂಪರ್, ಲಾಂಗ್‌ಫೆಲೊ ಮತ್ತು ಮೇರಿ ಆಸ್ಟಿನರ ಕೃತಿಗಳಲ್ಲಿ ಮಾತ್ರ ಆ ಜನರ ರೂಢಿ, ಸಂಪ್ರದಾಯಗಳ ಗುರುತು ಕಾಣುತ್ತದೆ. ಪ್ರಾರಂಭದ ವಸಾಹತುಗಳ ದಿನಗಳಲ್ಲಿ ಪರಿಸ್ಥಿತಿ ಸಾಹಿತ್ಯದ ಬೆಳೆವಣಿಗೆಗೆ ನೆರವಾಗುವಂತಿರಲಿಲ್ಲ. ದೇಶದ ವಿವಿಧ ಭಾಗಗಳಲ್ಲಿ ಚೆದರಿಹೋಗಿ ಸ್ವತಂತ್ರವಾಗಿ ವಸಾಹತುಗಳು ಬೆಳೆಯುತ್ತಿದ್ದಾಗ ರಾಷ್ಟ್ರೀಯ ವ್ಯಕ್ತಿತ್ವದ ಅರಿವು ಸ್ಪಷ್ಟವಾಗಿ ಮೂಡಲು ಕಾಲಾವಕಾಶ ಅಗತ್ಯವಾಯಿತು. ರೆಡ್ ಇಂಡಿಯನರ ರೂಢಿ, ಸಂಪ್ರದಾಯಗಳನ್ನು ಅಲಕ್ಷ್ಯ ಮಾಡಿದುದರಿಂದ ಜಾನಪದ ಸಾಹಿತ್ಯವಾಗಲಿ ವಿಶ್ವಾಸಾರ್ಹವಾದ ಮಹಾಕಾವ್ಯವಾಗಲಿ ಇರಲಿಲ್ಲ. ಗಣನೀಯ ಪ್ರಮಾಣದ ವಾಚಕವೃಂದ, ಅಗತ್ಯವಾದ ಅಚ್ಚಿನ ಮತ್ತು ಪ್ರಕಟಣೆಯ ಸೌಲಭ್ಯಗಳು–ಇವುಗಳ ಅಭಾವ ಹೊಸ ಅಡ್ಡಿಯಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಅದು ಬಿಳಿಯರು ಹೊಸದಾಗಿ ತಮ್ಮದೇ ಆದೊಂದು ರಾಜ್ಯವನ್ನು ಕಟ್ಟತೊಡಗಿದ ಕಾಲ, ಎಲ್ಲೆಲ್ಲೂ ಅನಿಶ್ಚಿತ ಪರಿಸ್ಥಿತಿ, ಉಳಿವಿಗಾಗಿ ಹೋರಾಡಬೇಕಾಗಿದ್ದ ವಿಷಮಸನ್ನಿವೇಶ–ಇವುಗಳಿಂದಾಗಿ ಸಾಹಿತ್ಯದ ಬೆಳವಣಿಗೆಗೆ ಅಡ್ಡಿಯುಂಟಾಯಿತು. ಈ ಎಲ್ಲ ಅಂಶಗಳ ಪರಿಣಾಮವಾಗಿ ಅಮೆರಿಕದ ಸಾಹಿತ್ಯ ತನ್ನದೇ ಆದ ರಾಷ್ಟ್ರೀಯ ಅಸ್ತಿತ್ವವನ್ನು ಹೊಂದಿ ಬೆಳೆಯಲು ಎರಡು ಶತಮಾನಗಳಿಗಿಂತ ಹೆಚ್ಚು ಕಾಲಾವಧಿ ಅಗತ್ಯವಾಯಿತು. ಈ ದೀರ್ಘ ಅವಧಿಯಲ್ಲಿ ಅದು ಬಹುಮಟ್ಟಿಗೆ ಬ್ರಿಟಿಷ್ ಮಾದರಿಗಳ ಅನುಕರಣೆಯಾಗಿಯೆ ಉಳಿಯಿತು.

ವಸಾಹತು ಯುಗದ (1607–1765) ಸಾಹಿತ್ಯ, ಬ್ರಿಟಿಷ್ ಜಾಕೊಬಿಯನ್, ಪ್ಯೂರಿಟನ್ ರಾಜತ್ವದ ಪುನರುದಯ ಮತ್ತು ನಿಯೊಕ್ಲಾಸಿಕಲ್ ಪ್ರಭಾವಗಳಿಂದ ಬಹುಮಟ್ಟಿಗೆ ರೂಪತಾಳಿತು. ಸಮೀಕ್ಷೆಗಳು, ಪ್ರವಾಸಸಾಹಿತ್ಯ, ವೃತ್ತಾಂತಗಳು, ಧಾರ್ಮಿಕ ಮತ್ತು ಮತಶಾಸ್ತ್ರ (ಥಿಯೊಲಾಜಿಕಲ್) ಬರಹಗಳು, ದಿನಚರಿಗಳು ಮತ್ತು ಪ್ಯೂರಿಟನ್ ಪದ್ಯಗಳು ಬಹುಪಾಲು ಇವನ್ನೇ ಅದು ಒಳಗೊಂಡಿತ್ತು. ಸಮೀಕ್ಷೆಗಳು (ಸರ್ವೇಸ್) ಮತ್ತು ಪ್ರವಾಸ ವೃತ್ತಾಂತಗಳ ಬರೆಹಗಾರರಲ್ಲಿ ಮುಖ್ಯರಾದವರು ಕ್ಯಾಪ್ಟನ್ ಜಾನ್‌ಸ್ಮಿತ್ ಮತ್ತು ವಿಲಿಯಂ ಬರ್‌ಟ್ರಂ. ಕಾಟನ್ ಮ್ಯಾಥರ್ ಮತ್ತು ವಿಲಿಯಂ ಬ್ರಾಡ್‌ಫರ್ಡ್‌ರು ಪ್ಯೂರಿಟನ್ ದೃಷ್ಟಿಕೋನದಿಂದ ವೃತ್ತಾಂತಗಳನ್ನು ರಚಿಸಿದರು. ಅತಿ ಪರಿಣಾಮಕಾರಿಯಾದ ಉಪದೇಶ ಭಾಷಣಗಳನ್ನು ಮಾಡುತ್ತಿದ್ದ ಜೋನಥ್ನ್ ಎಡ್‌ವರ್ಡ್ಸ್ ಈ ಕಾಲದ ಅತಿ ಪ್ರಮುಖನಾದ ಧರ್ಮಶಾಸ್ತ್ರ ಕರ್ತೃ. ಆ್ಯನ್ ಬ್ರಾಡ್‌ಸ್ಟ್ರೀಟ್ ಮತ್ತು ಎಡ್‌ವರ್ಡ್ ಮತ್ತು ಎಡ್‌ವರ್ಡ್ ಟೈಲರ್ ಮುಖ್ಯ ಪ್ಯೂರಿಟನ್ ಕವಿಗಳು.

ಕ್ರಾಂತಿಯ 1765–1783 ಮತ್ತು ಅದರ ಮುಂದಿನ ಕಾಲದಲ್ಲಿ ಪತ್ರಿಕೋದ್ಯಮ ಮತ್ತು ಸಾಹಿತ್ಯಗಳು ಒಂದೇ ಸಮನೆ ಬೆಳೆದುವು; ಪತ್ರಿಕಾಪ್ರಬಂಧ, ಕಾಲ್ಪನಿಕ ಸಾಹಿತ್ಯ ಮತ್ತು ನಾಟಕಗಳಂಥ ಸಾಹಿತ್ಯ ರೂಪಗಳು ಅವತರಿಸಿದುವು. ಪತ್ರಿಕೋದ್ಯಮ ಮತ್ತು ಪ್ರಬಂಧಸೃಷ್ಟಿಯಲ್ಲಿ ಬೆಂಜಮಿನ್ ಫ್ರಾಂಕ್ಲಿನ್ ಹೊಸ ಹಾದಿ ತುಳಿದ. ಅವನ ಆತ್ಮವೃತ್ತ ಅಮೆರಿಕ ಸಾಹಿತ್ಯದ ಶ್ರೇಷ್ಠಕೃತಿಗಳಲ್ಲೊಂದು. ಕ್ರಾಂತಿಯುಗದ ವಿವಾದಾತ್ಮಕ ಬರೆವಣಿಗೆಯ ಮಹಾರಾಶಿಯಲ್ಲಿ ಥಾಮಸ್ ಪೇನ್, ಜೆಫರ್‌ಸನ್ ಮತ್ತು ಹ್ಯಾಮಿಲ್ಟನ್‌ರ ಕೃತಿಗಳು ಉಳಿದುಬಂದಿವೆ. ಕ್ರೆವ್‌ಕರ್ ಮತ್ತು ಜಾನ್ ವುಲಮನ್ ಈ ಕಾಲದ ಗಣನೀಯ ಗದ್ಯ ರಚನಾಕಾರರು. ಕಾವ್ಯರಂಗದಲ್ಲಿ, ಫಿಲಿಫ್‌ಫ್ರೆನು ಮತ್ತು ಕನೆಕ್‌ಟಿಕಟ್ ಅಥವಾ ಹರ್ಟ್‌ಫಡ್ ವಾಕ್‌ಚತುರರ ಸಾಹಿತ್ಯಸೃಷ್ಟಿ ನಿಯೊ ಕ್ಲಾಸಿಸಿಸಮ್ ವಿಧಾನದ ಮತ್ತು ಬಲಗೊಳ್ಳುತ್ತಿದ್ದ ರೊಮ್ಯಾಂಟಿಕ್ ವಿಧಾನದ ಪ್ರಭಾವವನ್ನು ತೋರಿಸುತ್ತವೆ. ಸಾಹಿತ್ಯವನ್ನೇ ವೃತ್ತಿಯಾಗಿ ಸ್ವೀಕರಿಸಿದ ಅಮೆರಿಕದ ಮೊದಲ ಬರೆಹಗಾರ ಚಾರಲ್ಸ್ ಬ್ರಾಕಡನ್ ಬ್ರೌನ್, ಅಮೆರಿಕದ ಮೊದಲನೆಯ ಪ್ರಮುಖ ಕಾದಂಬರಿಕಾರ. ಷೆಲ್ಲಿ ಮತ್ತು ಗಾಡ್‌ವಿನ್ನರು ಇವನ ಗಾಥಿಕ್ ಕಾದಂಬರಿಗಳನ್ನು ಮೆಚ್ಚಿದ್ದರು. ಇವನು ಪೋ ಮತ್ತು ಹಾತಾರ್ನ್‌ರ ಮೇಲೆ ಪ್ರಭಾವ ಬೀರಿದ. ಮುಖ್ಯ ಸಾಹಿತ್ಯರೂಪಗಳಲ್ಲಿ ಕಡೆಯಲ್ಲಿ ಅವತರಿಸಿದುದು ಮತ್ತು ನಿಧಾನವಾಗಿ ಬೆಳೆದುದು ನಾಟಕವೇ. ಅಮೆರಿಕದ ನಾಟಕ ಚರಿತ್ರೆಯ ಪ್ರಾರಂಭದ ಅತಿ ಮುಖ್ಯ ಹೆಸರೆಂದರೆ ವಿಲಿಯಂ ಡನ್‌ಲಾಪ್‌ನದು. ಇವನು ನಾಟಕಕಾರನೂ ನಾಟಕವನ್ನು ಸಜ್ಜುಗೊಳಿಸುವವನೂ (ಪ್ರೊಡ್ಯೂಸರ್) ನಾಟಕಮಂದಿರದ ವ್ಯವಸ್ಥಾಪಕನೂ ಆಗಿದ್ದ. ಆದರೆ 20 ನೆಯ ಶತಮಾನದ ಆದಿಭಾಗದವರೆಗೆ ದೇಶದಲ್ಲಿ ಮೊದಲವರ್ಗದ ನಾಟಕ ಕಾಣಿಸಿಕೊಳ್ಳಲಿಲ್ಲ.

19 ನೆಯ ಶತಮಾನದ ಆದಿಭಾಗದಲ್ಲಿ ಅಮೆರಿಕದ ಸಾಹಿತ್ಯ ಇನ್ನೂ ಇಂಗ್ಲಿಷ್ ಸಾಹಿತ್ಯವನ್ನೆ ಮಾದರಿಯನ್ನಾಗಿಟ್ಟುಕೊಂಡು ಮುಂದುವರಿದರೂ ಕ್ರಮೇಣ ಅದು ಇಂಗ್ಲೆಂಡಿನಲ್ಲಿ ಮನ್ನಣೆ ಪಡೆಯುವಂತಾಯಿತು. ಪ್ರಾಯಶಃ ಇಂಗ್ಲೆಂಡಿನಲ್ಲೂ ಜನರ ಮನ್ನಣೆ ಗಳಿಸಿದ ಅಮೆರಿಕದ ಮೊದಲ ಬರೆಹಗಾರ ವಾಷಿಂಗ್‌ಟನ್ ಅರ್‌ವಿಂಗ್. ಬಹುಮುಖ್ಯ ಶಕ್ತಿ ಪಡೆದ ಆತ ಸಣ್ಣ ಕಥೆಗಳನ್ನೂ ಚರಿತ್ರೆಯನ್ನೂ ಮತ್ತು ಜೀವನಚರಿತ್ರೆಗಳನ್ನೂ ರಚಿಸಿದ. ಜೇಮ್ಸ್ ಫೆನಿಮೋರ್ ಕೂಪರ್ ಸ್ಥಳೀಯ ಹಿನ್ನಲೆ ಹೊಂದಿದ ಚಾರಿತ್ರಿಕ ಕಾದಂಬರಿಯನ್ನು ರಚಿಸಿದ.

19 ನೆಯ ಶತಮಾನದ ಮಧ್ಯಭಾಗದಲ್ಲಿ ಹೊಸ ಇಂಗ್ಲೆಂಡು ಸಂಯುಕ್ತ ಸಂಸ್ಥಾನದ ಚಟುವಟಿಕೆಗಳ ಕೇಂದ್ರವಾಯಿತು. ಅಂದಿನ ಬರೆಹಗಾರರಲ್ಲಿ ಇನ್ನೂ ಬ್ರಿಟಿಷ್ ಮಾದರಿಯನ್ನೇ ಅನುಸರಿಸುತ್ತಿದ್ದ ಸಂಪ್ರದಾಯವಂತರದು ಮತ್ತು ಅಮೆರಿಕದ ನವೋದಯದವರದು ಎಂದು ಎರಡು ಮುಖ್ಯ ಪಂಥಗಳನ್ನು ಕಾಣಬಹುದು. ಸಂಪ್ರದಾಯವಂತರ ಗುಂಪಿನಲ್ಲಿ ಎಚ್. ಡಬ್ಲ್ಯು. ಲಾಂಗ್‌ಫೆಲೊ, ಡಬ್ಲ್ಯು. ಸಿ. ಬ್ರಯಂಟ, ಜೆ. ಜಿ. ವಿಟ್ಟಿಯರ್ ಮೊದಲಾದ ಕವಿಗಳೂ ಒ. ಡಬ್ಲ್ಯು. ಹೋಮ್ಸ್ ಮತ್ತು ಜೆ. ಆರ್. ಲೊವೆಲ್ ಮೊದಲಾದ ಪ್ರಬಂಧಕಾರರೂ ಸೇರಿದರು. ಒಟ್ಟಿನಲ್ಲಿ ಇವರ ಸೃಷ್ಟಿಯಲ್ಲಿ ಕಾಣುವುದು ಕಳೆಗೂಡಿದ ಭಾವನಾಪ್ರಧಾನರೀತಿ (ರೊಮ್ಯಾಂಟಿಸಿಸಮ್). ಆದುದರಿಂದ ಇದರಲ್ಲಿ ಸತ್ತ್ವ, ತನ್ನತನ ಕಾಣಬಹುದು. ಅಮೆರಿಕದ ವಿಶ್ವಾಸಾರ್ಹ ಸಾಹಿತ್ಯವಾಣಿ ಮೊದಲು ಕೇಳಿಬಂದುದು ನವೋದಯ ಗುಂಪಿನಿಂದ. ಈ ಗುಂಪಿನಲ್ಲಿ ನ್ಯೂ ಇಂಗ್ಲೆಂಡಿನವರೆನಿಸಿದ ಎಮರ್‌ಸನ್, ಥೋರೋ, ಹಾತಾರ್ನ್ ಮತ್ತು ಅಂಥದೇ ಮನೋವೃತ್ತಿಯುಳ್ಳ ಕೃತಿಗಳನ್ನು ರಚಿಸಿದ ಮೆಲ್‌ವಿಲ್, ವಿಟ್‌ಮನ್ ಮತ್ತು ಪೋ–ಇವರು ಸೇರಿದ್ದರು.

ಅಮೆರಿಕದ ನವೋದಯ ಬರೆಹಗಾರರೂ ರೊಮ್ಯಾಂಟಿಕ್ ಬರೆಹಗಾರರೇ; ಆದರೆ ಇವರದ್ದು ಕಳೆಗುಂದಿದ, ಬೇರೆಡೆಯಿಂದ ತಂದ ರೊಮ್ಯಾಂಟಿಸಿಸಂ ಆಗಿರಲಿಲ್ಲ. ಇಂಗ್ಲಿಷ್ ರೊಮ್ಯಾಂಟಿಕ್ ಬರಹಗಾರರನ್ನು ಅನುಕರಿಸದೆ ಆ ಬರಹಗಾರರಿಗೆ ಚೇತನವಿತ್ತ ಪ್ಲೇಟಾನಿಸಮ್, ಜರ್ಮನ್ ಅನುಭವದರ್ಶನ, ಪಾಶ್ಚಾತ್ಯ ಅನುಭವ ಮತ್ತು ಹಿಂದೂ ವೇದಾಂತ ಮೊದಲಾದ ಮೂಲವಾಹಿನಿಗಳತ್ತ ನಡೆದರು. ಮುಖ್ಯವಾಗಿ ಎಮರ್‌ಸನ್, ಥೋರೋ ಮತ್ತು ವಿಟ್‌ಮನ್–ಇವರು ಉಪನಿಷತ್ತುಗಳು ಮತ್ತು ಗೀತೆಯ ವಿಚಾರಗಳಿಂದ ವಿಶೇಷವಾಗಿ ಪ್ರಭಾವಿತರಾದರು.

ಯುರೋಪಿನವರನ್ನು ಗೊತ್ತುಗುರಿಯಿಲ್ಲದೆ ಅನುಕರಿಸುವುದನ್ನು ಬಿಟ್ಟು ಆತ್ಮಶೋಧನೆಯಿಂದ ತಮ್ಮ ವೈಯಕ್ತಿಕ ಸಾಮರ್ಥ್ಯ, ಗುರಿಗಳನ್ನು ಅರಿತುಕೊಳ್ಳುವಂತೆ ಎಮರ್‌ಸನ್ ತನ್ನ ದೇಶದವರನ್ನು ತನ್ನ ಪ್ರಬಂಧಗಳಲ್ಲಿ ಪ್ರೇರೇಪಿಸಿದ. ಅಮೆರಿಕನ್ನರಲ್ಲಿ ಬೆಳೆಯುತ್ತಿದ್ದ ಐಹಿಕಭೋಗಪ್ರವೃತ್ತಿಯ ವಿರುದ್ಧ ಪ್ರಬಲವಾದ ಪ್ರತಿಭಟನೆಯನ್ನು ಥೋರೋ ತೋರಿದ. ಅವನ ಜೀವನವೇ ಅದಕ್ಕೆ ಮೇಲ್ಪಂಕ್ತಿಯಾಯಿತು. ತನ್ನ ಕಾದಂಬರಿಗಳು ಮತ್ತು ಸಣ್ಣಕಥೆಗಳ ಮಾಲೆಯಲ್ಲಿ ಹಾತಾರ್ನ್ ಪ್ಯೂರಿಟನ್ನರ ಮನಸ್ಸಿನಲ್ಲೆದ್ದಿದ್ದ ಅಶಾಂತಿ, ಹೋರಾಟಗಳಿಗೆ ಜೀವಂತರೂಪಕೊಟ್ಟ. ಮೆಲ್‌ವಿಲ್ ಸಮುದ್ರದ ಮೇಲಿನ ಜೀವನವನ್ನು ನಿಷ್ಠುರ ವಾಸ್ತವಿಕತೆಯೊಡನೆಯೂ ರಂಜಕವಾದ ಮತ್ತು ಸಾಂಕೇತಿಕ ಅನುಸ್ವರದೊಡನೆಯೂ (ಓವರ್‌ಟೋನ್)

ನಿರೂಪಿಸಿದ. ಎಮರ್‌ಸನ್ನನ ಸಾಹಿತ್ಯದೃಷ್ಟಿಕೋನಕ್ಕೆ ಸ್ವಲ್ಪಮಟ್ಟಿಗೆ ವಿರೋಧವಾಗಿತ್ತು. ಪೋನ ದೃಷ್ಟಿಕೋನ; ಆದರೂ ತನ್ನ, ಅವನ ಮತ್ತು ಅವನ ಪಂಥದೊಡನೆ ನಿಕಟಸಂಬಂಧ ಹೊಂದಿದ್ದಾನೆ. ಅವನ ಕಥೆಗಳಲ್ಲಿ ಕಂಡುಬರುವುದು ಭೀಕರತೆ ಮತ್ತು ವಿಚಿತ್ರಕಲ್ಪನೆಗಳ ಚಿತ್ರಣ. ಅವನ ಕಾವ್ಯ ವಿಚಾರಸರಣಿ ಮತ್ತು ಪದ್ಧತಿಗಳು ಫ್ರೆಂಚ್ ಪ್ರತೀಕಪಂಥದವರ ಮೇಲೆ ಪ್ರಬಲವಾದ ಪರಿಣಾಮವನ್ನುಂಟುಮಾಡಿದುವು. ಅಮೆರಿಕದ ಪ್ರಜಾಪ್ರಭುತ್ವವನ್ನು ಎತ್ತಿಹಿಡಿದ ಕವಿ ವಿಟ್‌ಮನ್ ವಿಷಯದ ಆಯ್ಕೆಯಲ್ಲೂ ಶೈಲಿಯಲ್ಲೂ ಹೊಸ ಮಾರ್ಗವನ್ನೇ ತುಳಿದು, ನಾಡಿನ ಅತ್ಯಂತ ಶ್ರೇಷ್ಠ ಕವಿ ಎಂಬ ಖ್ಯಾತಿಗಳಿಸಿದ.

ಸಂಯುಕ್ತ ಸಂಸ್ಥಾನಗಳ ರಾಜಕೀಯ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಒಳಯುದ್ಧ 1861–65 ಎಂಥ ಪರಿಣಾಮಕಾರಿ ಘಟನೆಯೋ ಆಗಿನ ಸಾಹಿತ್ಯದಲ್ಲಾದ ಬದಲಾವಣೆಯೂ ಅಷ್ಟೇ ಪರಿಣಾಮಕಾರಿಯಾಗಿತ್ತು. ಒಳಯುದ್ಧದ ಮುಂದಿನ ವರ್ಷಗಳಲ್ಲಿ–ಮಾರ್ಕ್ ಟ್ವೇನನ ಪ್ರಸಿದ್ಧ ವರ್ಣನೆಯಂತೆ ಹೊರಹೊಳಪಿನ ಯುಗದಲ್ಲಿ (ದಿ ಗಿಲ್ಡೆಡ್ ಏಜ್) ರಾಜಕೀಯದಲ್ಲಿ ನೀತಿಭ್ರಷ್ಟ ಜೀವನ, ನಗರ ಜೀವನಕ್ಕೆ ಮತ್ತು ಯಾಂತ್ರಿಕ ಸಾಧನಗಳ ವೃದ್ಧಿಗೆ ದಾರಿಮಾಡಿಕೊಟ್ಟ ವೈಜ್ಞಾನಿಕ ಮತ್ತು ಕೈಗಾರಿಕಾ ಮುನ್ನಡೆ, ವಲಸೆ ಬಂದವರ ಸಂಖ್ಯೆ ಹೆಚ್ಚಿದಂತೆ ಜನರು ಪಶ್ಚಿಮದ ಪ್ರಾಂತ್ಯಗಳನ್ನು ಆಕ್ರಮಿಸಿದುದು, ಅದರ ಪರಿಣಾಮವಾಗಿ ಎಲ್ಲೆಗಳು ಮಾಯವಾದದ್ದು ಮತ್ತು ಇಂಥ ಇತರ ಘಟನೆಗಳು, ಆ ಕಾಲದ ಮುಖ್ಯ ಮನೋವೃತ್ತಿಯಲ್ಲಿ ಪರಿಣಾಮಕಾರಿ ಪರಿವರ್ತನೆಯನ್ನುಂಟು ಮಾಡಿದವು ಮತ್ತು ಆ ಪರಿವರ್ತನೆ ಸಾಹಿತ್ಯಕ್ಷೇತ್ರಕ್ಕೂ ಹರಡಿತು. ಭಾವನಾಪ್ರಧಾನ್ಯ ಕುಗ್ಗುತ್ತ ಬಂದಂತೆ ವ್ಯಾವಹಾರಿಕ ರೀತಿನೀತಿಗಳು ಬೆಳೆಯುತ್ತ ಹೋದವು. ಕಾದಂಬರಿಕ್ಷೇತ್ರ ವಿಸ್ತಾರಗೊಂಡಿತು. ಡಬ್ಲ್ಯು. ಡಿ. ಹವೆಲ್ಲನ ಕಾದಂಬರಿಗಳಿಗೆ ಸಮಾಜಸ್ಥಿತಿ ವಸ್ತುವಾಯಿತು. ಹೆನ್ರಿ ಜೇಮ್ಸ್ ವಾಸ್ತವಿಕ ಮನೋವಿಶ್ಲೇಷಣ ಕಾದಂಬರಿಗಳನ್ನು ಬರೆದು ಆಧುನಿಕ ಬ್ರಿಟಿಷ್ ಮತ್ತು ಅಮೆರಿಕನ್ ಕಾದಂಬರಿಕಾರರ ಮೇಲೆ ತುಂಬಾ ಪ್ರಭಾವ ಬೀರಿದ. ಸ್ಟೀಫನ್ ಕ್ರೇನ್, ಜಾಕ್ ಲಂಡನ್ ಮತ್ತು ಫ್ರ್ಯಾಂಕ್ ನಾರಿಸ್‌ರ ಕೈಯಲ್ಲಿ ವಾಸ್ತವಿಕತೆ ಸ್ವಾಭಾವಿಕತಾವಾದವಾಗಿ ಬೆಳೆಯಿತು. ಮಾರ್ಕ್‌ಟ್ವೇನ್, ಹ್ಯಾಮಲಿನ್ ಗಾರ್‌ಲಂಡ್, ಜೆ. ಡಬ್ಲ್ಯು. ಕೇಬಲ್, ಸಾರ ಓರ್ನ ಜೆವೆಟ್, ಎಡ್‌ವರ್ಡ್ ಎಗ್ಲಸ್ಟನ್, ಡಬ್ಲ್ಯು. ಜಿ. ಸಿಮ್ಸ್, ಜೆ.ಸಿ. ಹ್ಯಾರಿಸ್, ಆರ್‌ಟೆಮಸ್ ವಾರ್ಡ್ ಮತ್ತು ಬ್ರೆಟ್‌ಹಾರ್ಟ್ ಇವರು ವಾಸ್ತವಿಕತೆಯ ಇನ್ನೊಂದು ಫಲವಾಗಿ, ಅನೇಕ ಕಡೆ ಹಾಸ್ಯಭರಿತವಾಗಿದ್ದ ಪ್ರಾದೇಶಿಕ ಕಥೆ ಕಾದಂಬರಿಗಳನ್ನು ಬೆಳೆಸಿದರು. ಈ ಕಾಲದ ಅತಿ ಗಣ್ಯಚರಿತ್ರಕಾರ ಮತ್ತು ಆತ್ಮವೃತ್ತರಚನಾಕಾರ ಹೆನ್ರಿ ಆ್ಯಡಮ್ಸ್, ಅತಿ ಮುಖ್ಯ ಕವಿ ಎಮಿಲಿ ಡಿಕಿನ್‌ಸನ್.

ಅಮೆರಿಕದ ಸಾಹಿತ್ಯ ಚರಿತ್ರೆಯಲ್ಲಿ 20 ನೆಯ ಶತಮಾನ ಅಸಾಧಾರಣ ಬೆಳವಣಿಗೆ ಮತ್ತು ವೈವಿಧ್ಯದ ಕಾಲ. ಅಮೆರಿಕನ್ ಸಾಹಿತ್ಯ ಜಾಗತಿಕ ಮನ್ನಣೆಯನ್ನು ಪಡೆದುದೂ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನ ಗಳಿಸಿದ ಆರು ಮಂದಿಯನ್ನು ನೀಡಿದುದೂ ಈ ಅವಧಿಯಲ್ಲಿಯೇ. ಈ ಶತಮಾನದ ಪ್ರಥಮ ದಶಕ ಕಾವ್ಯದ ಗಮನಾರ್ಹ ವಿಕಸನವನ್ನು ಕಂಡಿತು; ಹಾರ್ನೆಟ್ ಮನ್ರೊ ಸಂಪಾದಿಸುತ್ತಿದ್ದ ಎ ಮ್ಯಾಗಜೀನ್ ಆಫ್ ವರ್ಸ್‌ನಂತೆ ಕೆಲವೊಮ್ಮೆ ಕಾವ್ಯಕ್ಕೇ ಮುಡಿಪಾದ ಹೊಸ ಪತ್ರಿಕೆಗಳ ಬೆಳವಣಿಗೆಯೂ ಇದಕ್ಕೆ ಇತ್ತ ನೆರವೂ ಅಲ್ಪವಲ್ಲ. ಷಿಕಾಗೊ ಕವಿಗಳಾದ ಕಾರ್ಲ್ ಸ್ಯಾಂಡ್‌ಬರ್ಗ್, ವೇಚಲ್‌ಲಿನ್‌ಡ್ಸೆ ಮತ್ತು ಎಡ್ಗರ್ ಲೀ ಮಾಸ್ಟರ್ಸ್–ಇವರ ಯಶಸ್ಸು ಅಮೆರಿಕದ ಸಾಹಿತ್ಯ ರಾಷ್ಟ್ರೀಯ ತಳಹದಿಯೊಂದನ್ನು ಬೆಳೆಸಿಕೊಳ್ಳುತ್ತಲಿತ್ತೆಂಬುದನ್ನು ತೋರಿಸಿಕೊಟ್ಟಿತು. ಆದರೆ ಹಳೆಯ ನ್ಯೂ ಇಂಗ್ಲೆಂಡ್ ಸಂಪ್ರದಾಯ ಇನ್ನೂ ಪ್ರಬಲವೂ ಸತ್ತ್ವಯುತವೂ ಆಗಿದ್ದಿತೆಂಬುದನ್ನು ರಾಬರ್ಟ್ ಫ್ರಾಸ್ಟ್ ಮತ್ತು ಇ.ಎ. ರಾಬಿನ್‌ಸನ್‌ರ ಕೃತಿಗಳು ಸೂಚಿಸಿದುವು.

ಕೋಲಾಹಲದ 20 ನೆಯ ದಶಕದಲ್ಲಿ ಸುಲಭದ ಹಣ, ಕಳ್ಳಬಟ್ಟಿ ಮತ್ತು ಜಾಸ್ ಸಂಗೀತದ ಯುಗದಲ್ಲಿ–ಜನತೆಯ ಅಂತಸ್ಸಾಕ್ಷಿಯಾದ ಸಾಹಿತಿ ಅಮೆರಿಕದಲ್ಲಿನ ಆ ಯುಗದ ಐಹಿಕ ಭೋಗಪ್ರವೃತ್ತಿಯನ್ನು ಹೆಚ್ಚುಹೆಚ್ಚಾಗಿ ಟೀಕಿಸಲಾರಂಭಿಸಿದ. ಸಿಂಕ್ಲೇರ್ ಲೆವಿಸ್‌ನ ಕಾದಂಬರಿಗಳು ಇದಕ್ಕೆ ಒಳ್ಳೆಯ ನಿದರ್ಶನ. ಗರ್‌ಟ್ರೂಡ್ ಸ್ಟೀನ್, ಟಿ.ಎಸ್. ಎಲಿಯೆಟ್, ಎಜ್ರಾ ಪೌಂಡ್ ಮತ್ತು ಹೆಮಿಂಗ್‌ವೆಯಂಥ ಅಮೆರಿಕನ್ ಬರೆಹಗಾರರು ತಮ್ಮ ಯುಗದ ಈ ಅನೈತಿಕ ಮನೋಧರ್ಮವನ್ನು ವಿರೋಧಿಸಿ ಸ್ವಇಚ್ಛೆಯಿಂದ ತಮ್ಮ ಅಮೆರಿಕದ ಪೌರತ್ವವನ್ನು ತ್ಯಜಿಸಿದರು. ಈ ಪರಿತ್ಯಾಗ ಎಲಿಯಟ್, ಎಜ್ರ, ಪೌಂಡ್, ಕಮಿಂಗ್ಸ್, ಮೇರಿಅನ್‌ಮೂರ್ ಮತ್ತು ವಾಲೆಸ್ ಸ್ಟೀವನ್ಸ್‌ರ ಕೃತಿಗಳಲ್ಲಿನ ಕಾವ್ಯ ಜಟಿಲತೆಗೆ ಅಸ್ಪಷ್ಟತೆಗೆ ಕಾರಣವಾಯಿತು. ನಾಟಕದಲ್ಲಿ ನವೋದಯವಾಯಿತು; ಪರಿಣಾಮಕಾರಿಯಾಗಿ ಪ್ಯೂರಿಟ್‌ನ ಧರ್ಮಜ್ಞಾನದ ಆಳವನ್ನು ಯಶಸ್ವಿಯಾಗಿ ಶೋಧಿಸಿ ನೋಡಿದ ಮತ್ತು ನಾಟಕತಂತ್ರದಲ್ಲಿ ಕ್ರಾಂತಿಯನ್ನು ಉಂಟುಮಾಡಿದ ಪ್ರಥಮ ಅಮೆರಿಕನ್ ನಾಟಕಕಾರ ಯೂಜೀನ್ ಒನೀಲ್.

ವಾಲ್‌ಸ್ಟ್ರೀಟ್ ಕುಸಿತದ ತರುವಾಯ ಬಂದ ಮುಗ್ಗಟ್ಟಿನ ಅವಧಿಯಲ್ಲಿ 1929–1941 ಬೆಳೆಯುತ್ತಿದ್ದ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯ ವಿಶಿಷ್ಟಧ್ವನಿ ಆರ್ಚಿಬಾಲ್ಡ್ ಮೆಕ್‌ಲೀಷನ ಕಾವ್ಯದಲ್ಲಿ ಮತ್ತು ಸ್ಟೈನ್‌ಬೆಕ್‌ನ ಕೆಲವು ಕಾದಂಬರಿಗಳಲ್ಲಿ ಕೇಳಿಬಂತು; ಸ್ಟೈನ್‌ಬೆಕ್ ಸಹಾನುಭೂತಿಯುತವೂ ಹಾಸ್ಯಮಿಶ್ರಣವೂ ಆದ ತನ್ನ ನಿರೂಪಣೆಯಲ್ಲಿ ಕ್ಯಾಲಿಫೋರ್ನಿಯದ ಗ್ರಾಮೀಣ ಜೀವನದ ಪ್ರಾದೇಶಿಕ ಕಥೆಯ ಸಂಪ್ರದಾಯವನ್ನು ಮುಂದುವರಿಸಿದ. ಅಜ್ಞಾತ ದಕ್ಷಿಣದ ಮನೋಧರ್ಮವನ್ನೂ ಶೋಧಿಸಲೆಳೆಸಿದ ವಿಲಿಯಮ್ ಫಾಕ್‌ನರ್; ಪ್ರಾದೇಶಿಕ ಸಂಪ್ರದಾಯದ ಇನ್ನೊಬ್ಬ ಖ್ಯಾತ ಲೇಖಕ. ವಿಲ್ಲ ಕ್ಯಾಥರ್, ಎಲೆನ್ ಗ್ಲ್ಯಾಸ್‌ಗೊ, ಓಲ್ ರೋಲ್‌ವಾಗ್, ವಿಲಿಯಮ್ ಸರಾಯನ್, ಎರ್‌ಸ್ಕೀನ್ ಕಾಲ್ಡ್‌ವೆಲ್, ಯುಡೋರ ವೆಲ್‌ಟಿ ಮತ್ತು ಆರ್. ಪಿ. ವಾರೆನ್‌ರಂಥ ಬರೆಹಗಾರರು ಈ ಸಂಪ್ರದಾಯಕ್ಕೆ ವೈವಿಧ್ಯವನ್ನು ತಂದರು. ವಾಸ್ತವಿಕ ಮತ್ತು ಸ್ವಾಭಾವಿಕ ಪಂಥಗಳನ್ನು ಎಡಿತ್ ವಾರ್‌ಟನ್ ಹೆಮಿಂಗ್‌ವೇ ಬೆಳೆಸಿದರು. ಹೆಮಿಂಗ್‌ವೇ ತನ್ನ ನಿರಲಂಕೃತ ಅಡಕವಾದ, ಬಲಿಷ್ಠ ಗದ್ಯಶೈಲಿಯಿಂದ ಕಥನತಂತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದ. ಥಾಮಸ್ ವುಲ್ಫ್ ಮನಃಪ್ರವೃತ್ತಿಗಳನ್ನು ಸಮರ್ಥತೆಯಿಂದ ತನ್ನ ಕಾದಂಬರಿಗಳಲ್ಲಿ ನಿರೂಪಿಸಿದ.

20 ನೆಯ ಶತಮಾನದ ಪೂರ್ವಾರ್ಧದಲ್ಲಿ ನಡೆಸಿದ ಪ್ರಯೋಗಗಳನ್ನು ರಕ್ತಗತ ಮಾಡಿಕೊಂಡು ಸಮನ್ವಯಗೊಳಿಸುವ ಮತ್ತು ಬಲಗೊಳಿಸುವ ಕೆಲಸ ಎರಡನೆಯ ಮಹಾಯುದ್ಧದ ಅನಂತರ ನಡೆಯಿತು. ಜಾಕ್ ಕೆರೂಅಕ್, ನಾರ್‌ಮನ್ ಮೇಲರ್ ಮತ್ತು ಅಲನ್ ಗಿನ್ಸ್‌ಬರ್ಗ್‌ರು ಮುಂದಾಳುಗಳಾಗಿದ್ದ ಬೀಟ್ ಪೀಳಿಗೆಯ ಲೇಖಕರು ಯುದ್ಧಾನಂತರದ ಭ್ರಾಂತಿರಹಿತಮನೋಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿರೂಪಿಸಿದರು

ರಾಲ್ಫ್ ಎಲಿಸ್‌ಸನ್ ಮತ್ತು ಜೇಮ್ಸ್‌ಬಾಲ್ಡ್‌ವಿನ್‌ರಂಥ ನೀಗ್ರೊ ಬರೆಹಗಾರರ ಉದಯ ಅಮೆರಿಕನ್ ನೀಗ್ರೊಗಳಲ್ಲಿ ಬೆಳೆಯುತ್ತಿರುವ ಸಾಂಸ್ಕೃತಿಕ ಪರಿಪಕ್ವತೆಯ ಚಿಹ್ನೆಯಾಗಿದೆ.

ಜಾನ್ ಒಹಾರ, ಹರ್‌ಮನ್ ವೌಕ್, ಅರ್‌ವಿನ್ ಷಾ, ಜೇಮ್ಸ್ ಜೋನ್ಸ್, ಸಾಲ್‌ಬೆಲೊ ಮತ್ತು ಜೆ. ಡಿ. ಸ್ಯಾಲಿಂಗರ್ ಇವರು ಈಚಿನ ಪ್ರಮುಖ ಕಾದಂಬರಿಕಾರರಲ್ಲಿ ಕೆಲವರು. ಟೆನೆಸಿ ವಿಲಿಯಮ್ಸ್ ಮತ್ತು ಆರ್ಥರ್ ಮಿಲರ್ ಪ್ರಮುಖ ನಾಟಕಕಾರರು. ಕೆನೆತ್ ಪ್ಯಾಜಿನ್, ಡೆಲಮೋರ್ ಷ್ವಾರ್ಟ್ಜ್, ಕಾರ್ಲ್ ಷ್ಯಾಪ್ರಿಯೊ, ರ್‍ಯಾನ್‌ಡಾಲ್ ಜಾರೆಲ್, ಪೀಟರ್ ವೀರೆಕ್ ಮತ್ತು ರಾಬರ್ಟ್ ಲವೆಲ್ ತರುಣಕವಿಗಳಲ್ಲಿ ಕೆಲವರು. ಕಳೆದ ಹತ್ತು ವರ್ಷಗಳಲ್ಲಿ ಗಮನ ಸೆಳೆಯುವಂಥ ಕೃತಿರಚನೆ ಮಾಡಿರುವವರಲ್ಲಿ ಫಿಲಿಪ್ ಬೂತ್, ಡಬ್ಲ್ಯು. ಡಿ. ಸ್ನಾಡ್‌ಗ್ರ್ಯಾಸ್ ಮತ್ತು ಗಾಲ್‌ವೆ ಕಿನಲ್ ಸೇರಿದ್ದಾರೆ.

ಅಮೆರಿಕದ ಮುಖ್ಯ ವಿಮರ್ಶಾತ್ಮಕ ಪಂಥಗಳೆಂದರೆ–ಜೆ. ಜಿ. ಹುನೆಕರ್, ಜೆ. ಇ. ಸ್ಪಿನ್‌ಗಾರ್ನ್ ಮತ್ತು ಎಚ್. ಎಲ್. ಮೆನ್‌ಕಿನ್ (ಪ್ರತಿಯೊಬ್ಬರೂ ತಮ್ಮ ವಿಶಿಷ್ಟರೀತಿಯಲ್ಲಿ) ಪ್ರತಿನಿಧಿಸುವ ಸಮಷ್ಟಿ ಪರಿಣಾಮ ಇಂಪ್ರೆಷನಿಸ್ಟ್ ಸ್ಕೂಲ್ ಪಂಥ ; ಪಿ.ಇ.ಮೋರ್, ಇರ್ವಿಂಗ್ ಬ್ಯಾಬಿಟ್, ಎಸ್.ಪಿ.ಷರ್‌ಮನ್ ಮುಂತಾದವರನ್ನೊಳಗೊಂಡ ನವೀನ ಮಾನವಹಿತ ದಾರ್ಶನಿಕರು ಸಾಮಾಜಿಕ, ದಾರ್ಶನಿಕ ಮತ್ತು ಮನೋವಿಶ್ಲೇಷಣಾತ್ಮಕ ವಿಮರ್ಶಕಾರರು (ಉದಾಹರಣೆಗೆ, ಅನುಕ್ರಮವಾಗಿ ವಿ.ಎಲ್.ಪ್ಯಾರಿಂಗ್‌ಟನ್, ಕೆನೆತ್ ಬರ್ಕ್, ವ್ಯಾನ್‌ವಿಕ್ ಬ್ರೂಕ್ಸ್, ಮೂಲಪಾಠದ ಸಮಗ್ರ ಸೂಕ್ಷ್ಮಪರೀಕ್ಷೆಗೆ ಪ್ರಾಧಾನ್ಯ ಕೊಡಬೇಕೆನ್ನುವ ಜೆ.ಸಿ.ರ್‍ಯಾನ್‌ಸಂ, ಆ್ಯಲನ್‌ಟೇಟ್, ಆರ್. ಪಿ. ಬ್ಲ್ಯಾಕ್‌ಮರ್, ವೈವರ್ ವಿಂಟರ್ಸ್, ಆರ್. ಪಿ. ವಾರ್ನ್ ಮತ್ತು ಕ್ಲಿಯಾನ್ತ್ ಬ್ರೂಕ್ಸ್. ಈ ಪಂಥವು ಈಚಿನ ಬ್ರಿಟಿಷ್ ಸಾಹಿತ್ಯ ವಿಮರ್ಶೆಯ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದೆ. ಹೀಗೆ ಇಂಗ್ಲಿಷ್ ಸಾಹಿತ್ಯದ ಶಾಖೆಯಾಗಿ ಪ್ರಾರಂಭವಾದ ಅಮೆರಿಕನ್ ಸಾಹಿತ್ಯ ಈಗ, ಆಧುನಿಕ ಜಗತ್ತಿನ ಪ್ರಮುಖ ಸಾಹಿತ್ಯಗಳ ಪಂಕ್ತಿಯಲ್ಲಿ ತನ್ನ ಯೋಗ್ಯಸ್ಥಾನವನ್ನು ಗಳಿಸಿದ, ಪೂರ್ಣವಾಗಿ ವಿಕಸಿತವಾದ ಸ್ವತಂತ್ರ ರಾಷ್ಟ್ರೀಯ ಸಾಹಿತ್ಯವಾಗಿ ಬೆಳೆದಿದೆ. (ಎಂ.ಕೆ.ಎನ್.)

**ಅಮೆರಿಕದ ಸ್ವಾತಂತ್ರ್ಯ :** ಉತ್ತರ ಅಮೆರಿಕದ ಸಂಯುಕ್ತಸಂಸ್ಥಾನ ಸ್ವತಂತ್ರ ರಾಷ್ಟ್ರವಾದದ್ದು ಪ್ರಪಂಚದ ಇತಿಹಾಸದಲ್ಲಿ ಒಂದು ಮುಖ್ಯ ಘಟನೆ. ಅಮೆರಿಕನ್ನರು ಬ್ರಿಟಿಷರ ದಬ್ಬಾಳಿಕೆಯನ್ನು ಸಹಿಸದೆ ತಮ್ಮ ಸ್ವಾತಂತ್ರ್ಯವನ್ನು ಪಡೆಯಲು ಒಗ್ಗಟ್ಟಾಗಿ ಹೋರಾಡಿದುದು ಆದರ್ಶಪ್ರಾಯವಾಗಿದೆ. ಫ್ರಾನ್ಸ್ ದೇಶದ ಮಹಾಕ್ರಾಂತಿಗೆ ಇದು ಸ್ಫೂರ್ತಿ ನೀಡಿತು. 20 ನೆಯ ಶತಮಾನದಲ್ಲಿ ಅಮೆರಿಕ ಪ್ರಪಂಚದ ಆಗುಹೋಗುಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿ, ಪ್ರಜಾಪ್ರಭುತ್ವದ ಸಂರಕ್ಷಣೆ ಮತ್ತು ಭದ್ರತೆಗೆ ಸ್ಥಿರವಾದ ಬೆಂಬಲ ಕೊಡುತ್ತಿದೆ. ಅದೇ ಅದರ ಸ್ವಾತಂತ್ರ್ಯದ ಮುಖ್ಯ ಸಂದೇಶ.

**ವಸಾಹತುಗಳಲ್ಲಿ ಸಿದ್ಧತೆ:** ರಾಜಕೀಯ ಮತ್ತು ಮತಸಂಬಂಧವಾದ ಕಾರಣಗಳಿಗಾಗಿ ಯುರೋಪಿನ ಅನೇಕ ಸಾಹಸೀರಾಷ್ಟ್ರಗಳು ಅಮೆರಿಕಾಕ್ಕೆ ವಲಸೆ ಬಂದು ನೆಲೆಸಲುದ್ಯುಕ್ತವಾದುವು. 15 ನೆಯ ಶತಮಾನದಲ್ಲಿ ಸ್ಪ್ಯಾನಿಷ್, ಇಂಗ್ಲಿಷ್ ಮತ್ತು ಫ್ರೆಂಚ್ ಜನರು ಅಮೆರಿಕದಲ್ಲಿ ವಸಾಹತುಗಳನ್ನು (ಕಾಲೋನಿ) ಸ್ಥಾಪಿಸುತ್ತ ಬಂದರು. ಡಚ್ಚರು ಮತ್ತು ಸ್ವೀಡಿಷ್ ಜನರೂ ಅಲ್ಲಿನ ಕೆಲವು ಭಾಗಗಳಲ್ಲಿ ನೆಲೆಸಿದರು. ಸ್ಪೇನಿನ ಅಧಿಕಾರ ಪಶ್ಚಿಮದಲ್ಲಿ ಕ್ಯಾಲಿಫೋರ್ನಿಯದವರೆಗೂ ವ್ಯಾಪಿಸಿತು. ಫ್ರೆಂಚರು ಕೆನಡದಲ್ಲಿ ನೆಲೆಸಿದರು. ಬ್ರಿಟಿಷರು ಅಟ್ಲಾಂಟಿಕ್ ಸಮುದ್ರತೀರದ ವರ್ಜೀನಿಯದಲ್ಲಿ ಜೇಮ್ಸ್‌ಟೌನ್ ಎಂಬ ಮೊದಲ ಪಟ್ಟಣವನ್ನು 1607ರಲ್ಲಿ ಸ್ಥಾಪಿಸಿದರು. ಇಂಗ್ಲೆಂಡಿನಿಂದ ಧಾರ್ಮಿಕ ಕಾರಣಕ್ಕಾಗಿ ಅಮೆರಿಕಕ್ಕೆ ಹೊರಟ ಯಾತ್ರಾರ್ಥಿಗಳಾದ ಪಾದ್ರಿಗಳು (ಪಿಲ್‌ಗ್ರಿಮ್ ಫಾದರ್ಸ್) 1620ರಲ್ಲಿ ತಮ್ಮ ವಸಾಹತುಗಳನ್ನು

ಸ್ಥಾಪಿಸಿಕೊಂಡು ಮತಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದರು. ಇಂಗ್ಲಿಷರ ವಸಾಹತುಗಳಿಗೆ ಕೆನಡದ ಫ್ರೆಂಚರಿಂದ ಅಪಾಯವಿತ್ತು. ಸಪ್ತವಾರ್ಷಿಕ ಯುದ್ಧದ (1756–1763) ಅನಂತರ ಕೆನಡ ಇಂಗ್ಲಿಷರ ವಶವಾಯಿತು.

ಬ್ರಿಟಿಷರಿಗೆ ಸೇರಿದ 13 ವಸಾಹತುಗಳು 1763ರ ವರೆಗೆ ತಾಯ್ನಾಡು ವಿಧಿಸಿದ್ದ ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಬಂದುವಾದರೂ ಯಾನಕ್ಕೆ ಸಂಬಂಧಿಸಿದ ನ್ಯಾವಿಗೇಷನ್ ಆ್ಯಕ್ಟ್, ಕಚ್ಚಾಪದಾರ್ಥಗಳ ರಫ್ತು ಮತ್ತು ಕೈಗಾರಿಕೆಗಳ ಪೈಪೋಟಿಗಳ ಬಗ್ಗೆ ಇದ್ದ ಕಾನೂನುಗಳು–ಈ ಮುಂತಾದ ವಿಷಯಗಳನ್ನು ಪ್ರತಿಭಟಿಸುವ ಪ್ರಯತ್ನಗಳು ಕಾಣತೊಡಗಿದವು. 1770ರಲ್ಲಿ ಫ್ರೆಂಚರ ಭಯ ತಪ್ಪಿದ ಮೇಲಂತೂ ಈ ಚಳವಳಿಗಳು ಉಗ್ರರೂಪ ತಾಳಿದವು. ಈ ಮಧ್ಯೆ ತನ್ನ ರಕ್ಷಣಾವೆಚ್ಚವನ್ನು ಸರಿದೂಗಿಸಲು ಬ್ರಿಟನ್ ಜಾರಿಗೆ ತಂದ ಸಕ್ಕರೆ ಕಾನೂನು (1764) ಹೆಚ್ಚಿನ ತೆರಿಗೆ ವಿಧಿಸಿದ್ದರಿಂದ ಇದ್ದ ಅಸಮಾಧಾನ ಇನ್ನೂ ಬೆಳೆಯಿತು.

ಇದೇ ರೀತಿಯಲ್ಲಿ ಸ್ಟ್ಯಾಂಪ್ ಆ್ಯಕ್ಟ್ (1765) ಜಾರಿಗೆ ಬಂದು ಕಾನೂನು ಪತ್ರಗಳ ಮೇಲೆ ಹೆಚ್ಚಿನ ತೆರಿಗೆ ಬಿತ್ತು. ಈ ತೆರಿಗೆಗೆ ಎಲ್ಲೆಲ್ಲಿಯೂ ಪ್ರತಿಭಟನೆಗಳು ನಡೆದು, ಎಲ್ಲ ವರ್ಗದವರೂ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ತೆರಿಗೆ ಹೆಚ್ಚು ಹೊರೆ ಆಗದಿದ್ದರೂ ಅದರ ಮೂಲತತ್ತ್ವವನ್ನು ಅಮೆರಿಕನ್ನರು ಬಹಿರಂಗವಾಗಿ ವಿರೋಧಿಸಿದರು. ನ್ಯೂಯಾರ್ಕಿನಲ್ಲಿ ಎಲ್ಲ ವಸಾಹತುಗಳ ಪ್ರತಿನಿಧಿಗಳು ಸಭೆಸೇರಿ, ಕಾಂಗ್ರೆಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸ್ಟ್ಯಾಂಪ್ ಆ್ಯಕ್ಟಿಗೆ ವಿರೋಧವನ್ನು ಕ್ರೋಡೀಕರಿಸಿ ಅಮೆರಿಕದ ವಿಚಾರಗಳಲ್ಲಿ ಇಂಗ್ಲಿಷ್ ಪಾರ್ಲಿಮೆಂಟ್ ಕೈಹಾಕುವುದನ್ನು ಖಂಡಿಸಿದರು.

ಸ್ಟ್ಯಾಂಪ್ ಆ್ಯಕ್ಟ್ ಪ್ರಾತಿನಿಧ್ಯದ ಮೂಲಪ್ರಶ್ನೆ ತಲೆ ಎತ್ತಲು ಅವಕಾಶ ಮಾಡಿಕೊಟ್ಟಿತು. ಅಮೆರಿಕನ್ನರು ತಾವು ನೇರವಾಗಿ ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್ ಸಭೆಗೆ ಸದಸ್ಯರನ್ನು ಚುನಾಯಿಸದೆ ಇರುವುದರಿಂದ ತಮಗೆ ಪ್ರಾತಿನಿಧ್ಯವಿಲ್ಲವೆಂದು ವಾದಿಸಿದರು. ತಮ್ಮ ಚುನಾಯಿತ ಪ್ರತಿನಿಧಿಗಳಿಲ್ಲದ ಯಾವ ಸಭೆಗೂ ತಮ್ಮ ಮೇಲೆ ತೆರಿಗೆ ಹೊರಿಸುವ ಅಧಿಕಾರವಿಲ್ಲವೆಂದು ವಾದಿಸಿದರು. ಬ್ರಿಟಿಷ್ ವರ್ತಕರು, ಅಮೆರಿಕ ತಮ್ಮ ವ್ಯಾಪಾರವನ್ನು ಬಹಿಷ್ಕರಿಸಬಹುದೆಂದು ಯೋಚಿಸಿ ಸ್ಟ್ಯಾಂಪ್ ಆ್ಯಕ್ಟನ್ನು ರದ್ದು ಪಡಿಸಲು ಒತ್ತಾಯ ಪಡಿಸಿದರಾಗಿ ಸ್ಟ್ಯಾಂಪ್ ಆ್ಯಕ್ಟನ್ನು ರದ್ದು ಪಡಿಸಲಾಯಿತು. ಅಮೆರಿಕದಲ್ಲಿ ಎಲ್ಲೆಲ್ಲಿಯೂ ಸಂತೋಷ ಸಂಭ್ರಮ ಕಾಣಿಸಿತು. ಆದರೆ 1767ರಲ್ಲಿ ಲಾರ್ಡ್ ಟೌನ್‌ಶೆಂಡ್‌ನ ಸಲಹೆಯಂತೆ ಬ್ರಿಟಿಷ್ ಪಾರ್ಲಿಮೆಂಟ್ ಅಮೆರಿಕಕ್ಕೆ ರಫ್ತಾಗುವ ಟೀಸೊಪ್ಪು, ಗಾಜು ಮತ್ತು ಕಾಗದದ ಮೇಲೆ ತೆರಿಗೆ ವಿಧಿಸಿತು. ಮತ್ತೊಮ್ಮೆ ಎಲ್ಲೆಲ್ಲಿಯೂ ಪ್ರತಿಭಟನೆಗಳು ತಲೆದೋರಿದವು. ಕೊನೆಗೆ ಬ್ರಿಟಿಷ್ ಸರ್ಕಾರ ಗಾಜು, ಕಾಗದ ಮುಂತಾದ ವಸ್ತುಗಳ ಮೇಲಿನ ತೆರಿಗೆಯನ್ನು ರದ್ದು ಮಾಡಿ, ಟೀ ಮೇಲಿನ ಸುಂಕವನ್ನು ಮಾತ್ರ ಉಳಿಸಿಕೊಂಡಿತು. ಇದಕ್ಕೆ ಕಾರಣ, ವಸಾಹುತಗಳ ಮೇಲೆ ತೆರಿಗೆ ವಿಧಿಸುವ ಹಕ್ಕು ಇಂಗ್ಲೆಂಡ್ ಸರ್ಕಾರಕ್ಕೆ ಇದೆ ಎಂಬ ತತ್ತ್ವವನ್ನು ಸಮರ್ಥಿಸುವುದಕ್ಕಾಗಿ. ಈ ಹಕ್ಕು ಇಲ್ಲವೇ ಇಲ್ಲ ಎಂದು ವಾದಿಸುತ್ತಿದ್ದ ಅಮೆರಿಕನ್ನರಿಗೆ ಇದರಿಂದ ಕೊಂಚವೂ ಸಮಾಧಾನವಾಗದೆ ಅವರ ಪ್ರತಿಭಟನೆ ಹೆಚ್ಚಿತು.

ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಯನ್ನು ಕಂಡು ಅಮೆರಿಕನ್ನರು ರೋಸಿಹೋದರು. ಇಂಗ್ಲೆಂಡಿನಲ್ಲಿ ಪ್ರಜಾಪ್ರತಿನಿಧಿಗಳ ಪ್ರಭುತ್ವವನ್ನು ಆಚರಣೆಯಲ್ಲಿಟ್ಟುಕೊಂಡು ಮೇಲೆ ಮಾತ್ರ ನಿರಂಕುಶಾಡಳಿತ ನಡೆಸುತ್ತಿದ್ದ ಬ್ರಿಟಿಷ್ ಸರ್ಕಾರ ತಮ್ಮವರೇ ಆದ ಅಮೆರಿಕನ್ನರ ಮನೋಧರ್ಮವನ್ನರಿಯದೆ, ಅವರಿಗೆ ಬುದ್ಧಿ ಕಲಿಸಬೇಕೆಂದು ಬಾಸ್ಟನ್ ರೇವಿಗೆ ಹಡಗುಗಳು ಬರುವುದನ್ನು ನಿಲ್ಲಿಸಿದರು. ಅಮೆರಿಕನ್ನರ ಪ್ರತಿಭಟನೆ ಉಗ್ರರೂಪವನ್ನು ತಾಳಿತು. ಇಂಗ್ಲಿಷ್ ವರ್ತಕರು ಮಾರಾಟಕ್ಕಾಗಿ 10,000 ಪೌಂಡು ಬೆಲೆಬಾಳುವ ಟೀ ಸೊಪ್ಪನ್ನು ಬಾಸ್ಟನ್ ರೇವಿಗೆ ತಂದಿದ್ದರು. ರೆಡ್ ಇಂಡಿಯನ್ನರ ವೇಷಧರಿಸಿದ್ದ ಕೆಲವು ಅಮೆರಿಕನ್ನರು ಆ ಹಡಗಿಗೆ ನುಗ್ಗಿ ಆ ಟೀಸೊಪ್ಪನ್ನೆಲ್ಲ ಸಮುದ್ರಕ್ಕೆ ಸುರಿದರು. ಅಮೆರಿಕನ್ನರಲ್ಲಿ ಕೆಲವರು ಈ ದೊಂಬಿಯಲ್ಲಿ ಮಡಿದರು. ವಸಾಹತುಗಳ ಕೋಪ ಮತ್ತಷ್ಟು ಹೆಚ್ಚಿತು. ಬ್ರಿಟಿಷರ ದಬ್ಬಾಳಿಕೆಯನ್ನು ಮೂಲೋತ್ಪಾಟನ ಮಾಡದ ಹೊರತು ತಮ್ಮ ಸ್ವಾತಂತ್ರ್ಯ ಎಂದಿಗೂ ಉಳಿಯುವುದಿಲ್ಲ ಎಂಬ ಕೂಗು ಅಮೆರಿಕೆಯಲ್ಲೆಲ್ಲ ಹರಡಿತು. ಶಾಂತಿಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಲು ಸಾಧ್ಯವಾಗಲಿಲ್ಲ.

1774ರಲ್ಲಿ ಫಿಲಿಡೆಲ್ಫಿಯದಲ್ಲಿ ಅಮೆರಿಕನ್ನರ ಒಂದು ದೊಡ್ಡ ಸಭೆ ಸೇರಿತು. ಎಲ್ಲ ಭಾಗಗಳಿಂದ 51 ಜನ ಪ್ರತಿನಿಧಿಗಳು ಬಂದು ನೆರೆದರು. ಜಾರ್ಜ್ ವಾಷಿಂಗ್‌ಟನ್ ತನ್ನ ಪ್ರಾಂತ್ಯದ ಇತರ ಪ್ರತಿನಿಧಿಗಳ ಜೊತೆಯಲ್ಲಿ ಈ ಸಭೆಗೆ ಬಂದ. ಇಲ್ಲಿಗೆ ಹೊರಟಾಗ ವರ್ಜಿನಿಯದ ಜನರು ಅವರಿಗೆ ಈ ಸಲಹೆಯನ್ನು ಕೊಟ್ಟರು: ಇಂಗ್ಲೆಂಡಿನ ದೊರೆ ನಮ್ಮ ದೇಶದಲ್ಲಿ ಸೈನ್ಯಾಧಿಕಾರಿಗಳಿಗೆ ಸರ್ವಾಧಿಕಾರವನ್ನು ಕೊಟ್ಟಿದ್ದಾನೆ. ದಬ್ಬಾಳಿಕೆಯಿಂದ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂದು ಆ ದೊರೆ ಪ್ರಯತ್ನಿಸುತ್ತಿರುವಂತೆ ಕಾಣುವುದು. ಆ ಸರ್ಕಾರವನ್ನು ಹೊಗಳುವುದಕ್ಕಾಗಿ ನಾವು ಇಲ್ಲಿಗೆ ಬಂದವರಲ್ಲ. ರಾಜರು ಸಮಾಜದ ಸೇವೆಗಾಗಿ ಇರತಕ್ಕವರು. ಇಂಗ್ಲೆಂಡಿನ ಅಧಿಕಾರಿಗಳು ನಮ್ಮ ಅಧಿನಿವೇಶನಗಳಲ್ಲಿರುವುದು ನಿಶ್ಚಯ; ಆದರೆ ನಮ್ಮ ಸುಖದುಃಖಗಳನ್ನು ವಿಚಾರಿಸುವವರು ಯಾರೂ ಇಲ್ಲ. ಆದ್ದರಿಂದ ನೀವು ದುಡುಕದೆ ಬುದ್ಧಿವಂತಿಕೆಯಿಂದ ನಿಮ್ಮ ಸಲಹೆಗಳನ್ನು ಕೊಡಿ. ರಾಜಕಾರ್ಯಗಳಿಗೆ ಸತ್ಯವೇ ಮೂಲ ಮಂತ್ರವೆಂಬುದನ್ನು ಮರೆಯಬೇಡಿ. ನಿಮ್ಮ ಕರ್ತವ್ಯವನ್ನು ನೀವು ಮಾಡಿದರೆ ಮಾನವ ಗುಣ ನಿಮ್ಮನ್ನು ಕೊಂಡಾಡುವುದು. ಈ ಕೆಲಸದಲ್ಲಿ ನೀವು ಸೋತರೂ ಚಿಂತೆಯಿಲ್ಲ; ಸ್ವಾರ್ಥತೆಯಿಂದ ಒಬ್ಬ ಮತ್ತೊಬ್ಬನ ಹಕ್ಕನ್ನು ಅಪಹರಿಸುವುದಕ್ಕೆ ಅವಕಾಶವನ್ನು ಕೊಡದಿರಿ. ಇಂಗ್ಲೆಂಡನ್ನು ದೂರ ಮಾಡುವುದು ನಮ್ಮ ಉದ್ದೇಶವಲ್ಲ. ನಮಗೆ ಬೇಕಾದುದು ಶಾಂತಿ. ಇದು ನ್ಯಾಯರೀತಿಯಲ್ಲಿ ಸಿಕ್ಕುವುದು ಮುಖ್ಯ. ಮಹಾಸಭೆಯಲ್ಲಿ ಇಂಗ್ಲಿಷರ ದಬ್ಬಾಳಿಕೆಯ ವಿಷಯ ಆಮೂಲಾಗ್ರವಾಗಿ ಚರ್ಚಿಸಲ್ಪಟ್ಟು ಅಮೆರಿಕನ್ನರು ತಮ್ಮ ಪರಾಧೀನತೆಯನ್ನು ಕೊನೆಗಾಣಿಸಬೇಕೆಂಬ ತೀರ್ಮಾನ ಸರ್ವಾನುಮತದಿಂದ ಅಂಗೀಕೃತವಾಯಿತು. ಜಾರ್ಜ್ ವಾಷಿಂಗ್‌ಟನ್ ರಕ್ಷಣಾ ಸೈನ್ಯದ ಸರ್ವಾಧಿಕಾರ ವಹಿಸಿಕೊಂಡ. ಆತ ಯುದ್ಧದಲ್ಲಿ, ಶಾಂತಿಯಲ್ಲಿ ಮತ್ತು ಜನರ ಹೃದಯದಲ್ಲಿಯೂ ಮೊಟ್ಟಮೊದಲನೆಯವನಾದ.

**ಸ್ವಾತಂತ್ರ್ಯ ಘೋಷಣೆ:** ಬ್ರಿಟಿಷ್ ಸರ್ಕಾರ ಅಮೆರಿಕನ್ನರ ಮೇಲೆ ಬಲಪ್ರಯೋಗ ಮಾಡುವ ಶಾಸನಗಳನ್ನು ವಿಧಿಸಲು ಪ್ರಯತ್ನ ಮಾಡಿದ್ದರಿಂದ ಅದು ಯಾವ ರೀತಿಯ ರಾಜಿಮನೋಭಾವವನ್ನೂ ಹೊಂದಿಲ್ಲವೆಂಬುದು ವ್ಯಕ್ತವಾಯಿತು. ಅಮೆರಿಕನ್ನರಲ್ಲಿ ಬಹುಜನ ಅತಿವಿರೋಧವನ್ನು ತೋರಿಸದೆ ಯಾವುದಾದರೂ ನ್ಯಾಯವಾದ ರೀತಿಯಲ್ಲಿ ಒಪ್ಪಂದಕ್ಕೆ ಬರಬೇಕೆಂದು ಆಶಿಸಿದರು. ಆದರೆ ಮೂರನೆಯ ಜಾರ್ಜ್ ಯಾವ ರಿಯಾಯಿತಿಯನ್ನೂ ತೋರಿಸುವುದಕ್ಕೆ ಸಿದ್ಧನಾಗಿರಲಿಲ್ಲ. ಅದರ ಬದಲು ಜನರಲ್ ಥಾಮಸ್ ಗೇಜ್ ಎಂಬುವವನನ್ನು ಮುಖ್ಯ ಸೇನಾಧಿಪತಿಯಾಗಿ ನೇಮಿಸಿದ್ದು ಈ ಸಮಸ್ಯೆ ಯುದ್ಧದಿಂದಲೇ ಇತ್ಯರ್ಥವಾಗಬೇಕೆಂಬುದನ್ನು ಬಹಿರಂಗಪಡಿಸಿದಂತಾಯಿತು. ಲೆಕ್ಸಿಂಗ್‌ಟನ್ ಎಂಬ ಸ್ಥಳದಲ್ಲಿ ಬ್ರಿಟಿಷ್ ಸೈನಿಕರು ಹಾರಿಸಿದ ಮೊದಲ ಗುಂಡು ಅಮೆರಿಕದ ಸ್ವಾತಂತ್ರ್ಯಯುದ್ಧಕ್ಕೆ ನಾಂದಿಯಾಯಿತು. ಈ ಘಟನೆ ವಿದ್ಯುದಾಘಾತದಂತೆ ಎಲ್ಲೆಲ್ಲಿಯೂ ಹರಡಿತು. 1776ರಲ್ಲಿ ಥಾಮಸ್ ಜೆಫರ್ಸನ್ ತಯಾರಿಸಿದ ಸ್ವಾತಂತ್ರ್ಯಘೋಷಣೆಯನ್ನು ಅಮೆರಿಕದ ಕಾಂಗ್ರೆಸ್ ಅಂಗೀಕರಿಸಿತು. ಬೆಂಜಮಿನ್ ಫ್ರ್ಯಾಂಕ್ಲಿನ್, ಡಿಕನ್ಸನ್ ಎಂಬ ಇತರ ನಾಯಕರೂ ಒಟ್ಟುಗೂಡಿ ಮುಂದಿನ ಕ್ರಮವನ್ನು ನಿಷ್ಕರ್ಷೆಮಾಡಿದರು. 1776 ಜುಲೈ 4 ಪ್ರಪಂಚದ ಇತಿಹಾಸದಲ್ಲಿ ಒಂದು ಮುಖ್ಯ ದಿನ. ಅಂದು ಒಂದು ಹೊಸ ಜನಾಂಗ ಉದ್ಭವಿಸಿ, ಮಾನವನ ಸ್ವಾತಂತ್ರ್ಯದ ತತ್ತ್ವಕ್ಕೆ ಪ್ರೇರಕಶಕ್ತಿಯನ್ನು ಕೊಟ್ಟಿತು. ಈ ಸ್ವಾತಂತ್ರ್ಯಘೋಷಣೆ ವ್ಯಕ್ತಿಸ್ವಾತಂತ್ರ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದು ಇದರ ಶ್ರೇಷ್ಠತೆಯನ್ನು ಸೂಚಿಸುತ್ತದೆ. ನಾವು ಈ ಕೆಲವು ಸತ್ಯಗಳನ್ನು ಸ್ವತಸ್ಸಿದ್ಧವೆಂದು ತಿಳಿದಿದ್ದೇವೆ. ಎಲ್ಲ ಮನುಷ್ಯರೂ ಜನ್ಮತಃ ಸಮಾನರು. ಇತರರಿಗೆ ಅಧೀನವಾಗಿರದಂತೆ ಪ್ರತಿಯೊಬ್ಬನಿಗೂ ಕೆಲವು ಹಕ್ಕುಗಳನ್ನು ಪರಮಾತ್ಮ ಮಾನ್ಯವಾಗಿ ಕೊಟ್ಟಿರುವನು. ಇವುಗಳಲ್ಲಿ ಬದುಕು, ಸ್ವಾತಂತ್ರ್ಯ ಮತ್ತು ನೆಮ್ಮದಿಯ ಗುರಿ, ಮುಖ್ಯವಾದುವು. ಈ ಹಕ್ಕುಗಳನ್ನು ಸಾಧಿಸಲು ಸರ್ಕಾರಗಳನ್ನು ನಿರ್ಮಿಸಲಾಗಿದೆ. ಈ ಸರ್ಕಾರಗಳು ಪ್ರಜೆಗಳ ಬೆಂಬಲದಿಂದ ಆಡಳಿತವನ್ನು ನಡೆಸುತ್ತವೆ. ಆಡಳಿತ ಈ ಆಜನ್ಮಸಿದ್ಧಹಕ್ಕುಗಳನ್ನು ನಾಶಮಾಡಲು ಯತ್ನಿಸಿದರೆ, ಪ್ರಜೆಗಳು ಹೊಸ ಆಡಳಿತವನ್ನು ನಿರ್ಮಾಣಮಾಡಿ ತಮ್ಮ ಭದ್ರತೆಯನ್ನೂ ಸುಖವನ್ನೂ ಕಾಪಾಡಿಕೊಳ್ಳಬಹುದು–ಇದೇ ಆ ಘೋಷಣೆಯ ಸಾರಾಂಶ. ಇದರಿಂದ **"ಆಡಳಿತ ಇರುವುದು ಜನರಿಗೋಸ್ಕರ, ಜನರು ಇರುವುದು ಆಡಳಿತಕ್ಕೋಸ್ಕರ ಅಲ್ಲ"** ಎಂಬ ಸಿದ್ಧಾಂತ ಜನಾದರಣೀಯವಾಯಿತು. ಈ ಘೋಷಣೆ ಜನರಲ್ಲಿ ಒಂದು ಹೊಸ ಉತ್ಸಾಹವನ್ನುಂಟುಮಾಡಿ, ತಮ್ಮ ವ್ಯಕ್ತಿಸ್ವಾತಂತ್ರ್ಯಕ್ಕೂ ಸ್ವರಾಜ್ಯಕ್ಕೂ ಸಮಾಜದಲ್ಲಿ ಗೌರವಸ್ಥಾನಕ್ಕೂ ಹೋರಾಟ ನಡೆಸಲು ಸ್ಫೂರ್ತಿಯನ್ನು ಕೊಟ್ಟಿತು. ಮೂರನೆಯ ಜಾರ್ಜ್ ಮಾಡಿದ ಅನ್ಯಾಯಗಳನ್ನು ವಿರೋಧಿಸಿ, ಜನಸಾಮಾನ್ಯರಿಗೆ ಈ ಹೋರಾಟ ವೈಯಕ್ತಿಕವೆಂಬುದನ್ನು ಶ್ರುತಪಡಿಸಿ, ಅವರ ಮನಸ್ಸನ್ನು ಸೆಳೆಯಿತು.

**ಸ್ವಾತಂತ್ರ್ಯ ಯುದ್ಧ (1777–83):** ಮತ್ತೊಬ್ಬರ ಅಧಿಕಾರದ ಸುಳಿಗೆ ಸಿಕ್ಕಿ ನರಳುತ್ತಿರುವ ಜನರು ಅಂಥ ಪರಾಧೀನತೆಯಿಂದ ತಪ್ಪಿಸಿಕೊಂಡು, ಸ್ವತಂತ್ರ ರಾಜ್ಯವನ್ನು ಹೂಡುವುದು ಸುಲಭವಲ್ಲ. ಇವುಗಳಿಗಾಗಿ ಅನೇಕ ಕಷ್ಟಗಳನ್ನು ಸಹಿಸಬೇಕಾಗುವುದು. ಸಾವಿರಾರು ಜನರು ಸಾಯಲು ಸಿದ್ಧರಾಗಿರಬೇಕು. ಯಾವ ಜನರಲ್ಲಿ ದೇಶಕ್ಕೋಸ್ಕರ ಕಷ್ಟಪಡುವ ಸಹನೆಯೂ ಸಾಮರ್ಥ್ಯವೂ ಇರುವವೋ ಅಂಥವರೇ ಸ್ವತಂತ್ರರಾಜ್ಯವನ್ನು ಅನುಭವಿಸುವ ಯೋಗ್ಯತೆ ಪಡೆಯುವರು. ಇದಕ್ಕೆ ಅಮೆರಿಕದ ಜನರೇ ನಿದರ್ಶನ. ಎಂಟು ವರ್ಷಗಳವರೆಗೆ ಯುದ್ಧಮಾಡಿ ನ್ಯೂಯಾರ್ಕ್, ಬ್ರಾಂಡಿವೈನ್, ಜರ್ಮನ್‌ಟೌನ್ ಮೊದಲಾದ ಸ್ಥಳಗಳಲ್ಲಿ ಎಷ್ಟುಸಲ ಪರಾಜಿತರಾದರೂ ಧೈರ್ಯಗೆಡದೆ, ಶತ್ರುಗಳನ್ನು ಟ್ರೆಂಟನ್, ಪ್ರಿನ್ಸ್‌ಟೌನ್, ಸಾರಟೋಗ, ಯಾರ್ಕ್‌ಟೌನ್ ಮುಂತಾದ ಸ್ಥಳಗಳಲ್ಲಿ ಸೋಲಿಸಿ ಜಯಸ್ತಂಭವನ್ನು ನೆಟ್ಟರು. ದೇಶಾಭಿಮಾನದಿಂದಲೂ ಸ್ವಾತಂತ್ರ್ಯಾಭಿಮಾನದಿಂದಲೂ ಯುದ್ಧಮಾಡಿದ ವಸಾಹತುವಾಸಿಗಳ ಮುಂದೆ 30,000 ಇಂಗ್ಲಿಷ್ ಸೈನಿಕರು ನಿಲ್ಲಲಾರದೆ ಹೋದರು. ಅಮೆರಿಕ ಅಧಿನಿವೇಶಿಗಳನ್ನು ಸೋಲಿಸುವುದು ಅಸಾಧ್ಯ ಎಂಬುದಾಗಿ ಬ್ರಿಟಿಷರ ಪ್ರಧಾನಮಂತ್ರಿ ಪಿಟ್ ಪಾರ್ಲಿಮೆಂಟಿನಲ್ಲಿ ಹೇಳಿದ ಮಾತು ನಿಜವಾಯಿತು. ಅವರ ಸೇನಾನಾಯಕನಾದ ಜಾರ್ಜ್ ವಾಷಿಂಗ್‌ಟನ್‌ನ ಪ್ರತಿಜ್ಞೆ ನೆರವೇರಿತು. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಅಧಿನಿವೇಶಿಗಳಿಗೆ ಇತರ ಪಾಶ್ಚಾತ್ಯ ಜನರು–ಪೋಲೆಂಡಿನ ಥಾಡ್ಯೂಸ್ ಕಾಸಿಸ್ಕಿ ಮತ್ತು

ಪಲಾಸ್ಕಿಯವರೂ ಫ್ರಾನ್ಸಿನ ಲಾಫೇಟರವರೂ ಪ್ರಷ್ಯದೇಶದ ವಾನ್ ಸ್ಟುಬೆನ್‌ರವರೂ–ಸಹಾಯಮಾಡಿ ಕೀರ್ತಿಯನ್ನು ಸಂಪಾದಿಸಿಕೊಂಡರು. ಇವರಲ್ಲಿ ಫ್ರೆಂಚರು ಮಾಡಿದ ಸಹಾಯ ಸ್ತುತ್ಯರ್ಹ. ಇಂಗ್ಲಿಷ್ ಸೇನಾಪತಿಯಾದ ಕಾರನ್‌ವಾಲಿಸ್ 1781ರಲ್ಲಿ ಯಾರ್ಕ್‌ಟೌನಿನಲ್ಲಿ ಶರಣಾಗತನಾದ. ಕೊನೆಗೆ 1883 ರಲ್ಲಿ ಪ್ಯಾರಿಸ್ ಕರಾರಿನ ಪ್ರಕಾರ ಅಮೆರಿಕ ಸಂಯುಕ್ತಸಂಸ್ಥಾನಗಳು ಸ್ವತಂತ್ರ್ಯರಾಜ್ಯಗಳೆಂದು ಅಂಗೀಕೃತವಾದುವು. ಈ ಯುದ್ಧದಲ್ಲಿ ಭಾಗವಹಿಸಿದ್ದ ಫ್ರೆಂಚರು ತಮ್ಮ ದೇಶಕ್ಕೆ ಹಿಂತಿರುಗಿ, ಅಮೆರಿಕನ್ನರ ದೇಶಾಭಿಮಾನವನ್ನೂ ಸ್ವಾತಂತ್ರ್ಯಕ್ಕಾಗಿ ಪಟ್ಟ ಕಷ್ಟಗಳನ್ನೂ ತ್ಯಾಗಗಳನ್ನೂ ವಿವರಿಸಿ, ಹೊಗಳಿ, ಸ್ವಾತಂತ್ರ್ಯದ ಕಹಳೆಯನ್ನು ಊದಿ, ಸ್ವಾತಂತ್ರ್ಯದ ಗಾನವನ್ನು ಎಲ್ಲೆಲ್ಲಿಯೂ ಹಾಡಿ, ತಮ್ಮ ಮಹಾಕ್ರಾಂತಿಗೆ ನೆಲಗಟ್ಟನ್ನು ಸಿದ್ಧಪಡಿಸಿದರು.

**ಹೊಸ ರಾಜ್ಯಾಂಗ :** ಸ್ವಾತಂತ್ರ್ಯವನ್ನು ಪಡೆದಮೇಲೆ ಅಮೆರಿಕನ್ನರು ನಿರೂಪಿಸಿದ ರಾಜ್ಯಾಂಗ ಅವರ ರಾಜಕೀಯ, ಸಾಮಾಜಿಕ ಸ್ಥಿತಿಗಳಿಗೆ ಅನುಗುಣವಾಗಿ 'ಜನಗಳಿಂದಲೇ ಸ್ವರಾಜ್ಯ' ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿತು. ಮುಖ್ಯವಾಗಿ ಒಬ್ಬ ವ್ಯಕ್ತಿಗೂ ಇನ್ನೊಬ್ಬ ವ್ಯಕ್ತಿಗೂ ಇರಬಹುದಾದ ಕಾನೂನಿನ ಭಿನ್ನತೆಗಳನ್ನು ರದ್ದು ಮಾಡುವುದೇ ಅದರ ಮುಖ್ಯಾಂಶ. ಮಾನವನ ಹಕ್ಕುಗಳು ಎಂಬ ಭಾವಾತ್ಮಕದಾಖಲೆಯನ್ನು ಬಹಿರಂಗಪಡಿಸಲಾಯಿತು. ಇದರಿಂದ ಸ್ಪೇನ್ ಮತ್ತು ಯುರೋಪಿನ ಇತರ ರಾಷ್ಟ್ರಗಳು ಅಮೆರಿಕದ ತಮ್ಮ ವಸಾಹತುಗಳಿಗೆ ಅಪ್ರೇರಿತವಾಗಿ ಸ್ವಾತಂತ್ರ್ಯವನ್ನು ಕೊಟ್ಟವು. ಹೊಸರಾಷ್ಟ್ರಕ್ಕೆ ರಾಜ್ಯಾಂಗವನ್ನು ತಯಾರಿಸುವುದಕ್ಕೆ ವಾಷಿಂಗ್‌ಟನ್, ಜೇಮ್ಸ್ ಮ್ಯಾಡಿಸನ್, ಜೆಫರ್ಸನ್ ಮುಂತಾದ ದೇಶಾಭಿಮಾನಿಗಳು 1787 ರಲ್ಲಿ ಫಿಲಿಡೆಲ್ಫಿಯದಲ್ಲಿ ಸಮಾವೇಶವಾಗಿ ಅದುವರೆಗೆ ಮತ್ತೆಲ್ಲೂ ಕಾಣದ ಆಡಳಿತ ಪದ್ಧತಿಯನ್ನು ರಚಿಸಿದರು. ಸಂಯುಕ್ತಸಂಸ್ಥಾನಕ್ಕೆಲ್ಲ ಕಟ್ಟುನಿಟ್ಟಾದ ಲಿಖಿತರಾಜ್ಯಾಂಗ, ಕಾನೂನು ಇರಬೇಕೆಂದೂ ಅದನ್ನು ಬದಲಾಯಿಸಬೇಕಾದರೆ ತಿದ್ದುಪಡಿ (ಅಮೆಂಡ್‌ಮೆಂಟ್) ಅತ್ಯಗತ್ಯವೆಂದೂ ಫೆಡೆರಲ್ (ಸಂಯುಕ್ತ) ಸರ್ಕಾರಕ್ಕೂ ಸಂಸ್ಥಾನಕ್ಕೂ ಇರುವ ವ್ಯಾಪ್ತಿಯನ್ನು ನಿರ್ಧರಿಸಬೇಕೆಂದೂ ತೀರ್ಮಾನಿಸಿದರು. ಅಲ್ಲದೆ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು ಪ್ರತ್ಯೇಕವಾಗಿರಬೇಕೆಂದೂ ಎಲ್ಲ ಅಧಿಕಾರಿಗಳನ್ನೂ ಚುನಾಯಿಸಬೇಕೆಂದೂ ಸಂಯುಕ್ತ ರಾಷ್ಟ್ರಕ್ಕೆಲ್ಲ ಅಧ್ಯಕ್ಷ (ಪ್ರೆಸಿಡೆಂಟ್) ಪ್ರಜಾಪ್ರತಿನಿಧಿ ಸಭೆ (ಕಾಂಗ್ರೆಸ್) ಮತ್ತು ಪ್ರಮುಖ ನ್ಯಾಯಾಲಯ ಇರಬೇಕೆಂದೂ ನಿರ್ಧರಿಸಲಾಯಿತು. ಅಲ್ಲದೆ ಜಾರ್ಜ್ ವಾಷಿಂಗ್‌ಟನ್ ಮೊದಲ ಅಧ್ಯಕ್ಷನಾಗಿ ಚುನಾಯಿತನಾದ. ಸಂಯುಕ್ತಸಂಸ್ಥಾನದ ರಾಜಧಾನಿಗೆ ವಾಷಿಂಗ್‌ಟನ್‌ನ ಹೆಸರನ್ನೇ ಕೊಟ್ಟರು. ಅಧ್ಯಕ್ಷ ವಾಷಿಂಗ್‌ಟನ್ ಯಾವ ರಾಜಕೀಯ ಪಂಗಡಕ್ಕೂ ಸೇರದೆ ದೇಶದ ಹಿತವನ್ನೇ ದೃಷ್ಟಿಯಲ್ಲಿಟ್ಟುಕೊಂಡು ತಾನು ಸಮಾಜ ಸೇವಕ ಮಾತ್ರ, ಎಂದು ತಿಳಿದು ಕೆಲಸಮಾಡಿದ. ಹೊಸದಾಗಿ ಸ್ಥಾಪಿತವಾದ ಸಂಯುಕ್ತಸಂಸ್ಥಾನಕ್ಕೆ ಇವ ಮೊದಲನೆಯ ಅಧ್ಯಕ್ಷನಾದುದರಿಂದ ರಾಜ್ಯರಚನೆಗೆ ಹೊಸ ಇಲಾಖೆಗಳನ್ನು ಏರ್ಪಡಿಸುವುದು, ಅಧಿಕಾರಿಗಳನ್ನು ನೇಮಿಸುವುದು, ಕೆಲಸ ಹಂಚುವುದು, ರಾಜ್ಯಕಾರ್ಯಸೌಕರ್ಯಕ್ಕಾಗಿ ಕಾನೂನುಗಳನ್ನು ಆಚರಣೆಗೆ ತರುವುದು, ಹಣಕಾಸಿನ ಏರ್ಪಾಡು ಮಾಡುವುದು–ಇವುಗಳಿಗೆ ಹೆಚ್ಚು ಗಮನ ಕೊಟ್ಟ. ಇದುವರೆಗೂ ಪ್ರತ್ಯೇಕವಾಗಿದ್ದ ಅಮೆರಿಕದ ನೆಲಸುನಾಡಿಗರು ಈಗ ಒಂದೇ ಕುಟುಂಬಕ್ಕೆ ಸೇರಿದಂತಾಯಿತು. ಈ ರಾಜ್ಯದ ಪ್ರಜೆಗಳಿಗೆ ವ್ಯಕ್ತಿಸ್ವಾತಂತ್ರ್ಯ, ದುಷ್ಟ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಅರ್ಜಿಯನ್ನು ಹಾಕುವ ಸ್ವಾತಂತ್ರ್ಯ–ಇವು ದೊರಕಿದುವು. ಹೊಸ ಬ್ಯಾಂಕುಗಳ, ಭಾರಿ ಕಟ್ಟಡಗಳ, ನಿರ್ಮಾಣಕಾರ್ಯಗಳು ಪ್ರಾರಂಭವಾದುವು. ಅಧಿನಿವೇಶಿಗಳು ಯುದ್ಧಕಾಲದಲ್ಲಿ ಮಾಡಿದ ಸಾಲಗಳನ್ನು ಹೊಸ ಸರ್ಕಾರ ವಹಿಸಿಕೊಂಡಿತು. ಆಮದು ರಫ್ತುಗಳ ಮೇಲೆ ಸುಂಕಗಳನ್ನು ಹಾಕುವ ಪದ್ಧತಿ ರೂಢಿಗೆ ಬಂತು. ಕ್ರಮೇಣ ಹಣಕಾಸಿನ ಮುಗ್ಗಟ್ಟು ಕಡಿಮೆಯಾಗಿ ಆರ್ಥಿಕಸ್ಥಿತಿಯಲ್ಲಿ ದೇಶವು ಅಭಿವೃದ್ಧಿಗೆ ಬಂದಿತು.

1817–25 ರವರೆಗೆ ಅಧ್ಯಕ್ಷನಾಗಿದ್ದ ಜೇಮ್ಸ್ ಮನ್ರೊ ಎಂಬಾತ ಮನ್ರೋ ತತ್ತ್ವ ಎಂಬ ನೀತಿಯನ್ನು ಜಾರಿಗೆ ತಂದ. ಯುರೋಪಿನಲ್ಲಿ ನೆಪೋಲಿಯನ್ನನ ಪತನಾನಂತರ ಮೆಟರ್ನಿಕ್ ಪ್ರಜಾಪ್ರಭುತ್ವ ತತ್ತ್ವಗಳನ್ನು ವಿರೋಧಿಸಿ ನಿರಂಕುಶಾಧಿಕಾರವನ್ನು ಸ್ಥಾಪಿಸಿದ. ದಕ್ಷಿಣ ಅಮೆರಿಕದ ಸ್ಪ್ಯಾನಿಷ್ ವಲಸೆಗಳು ಯುರೋಪಿಯನ್ನರ ನಿರಂಕುಶಾಧಿಕಾರವನ್ನು ಒಪ್ಪಿಕೊಳ್ಳದೆ ದಂಗೆ ಎದ್ದುವು. ಅವುಗಳನ್ನಡಗಿಸಲು ಯುರೋಪಿನ ರಾಷ್ಟ್ರಗಳು ಪ್ರಯತ್ನಿಸಿದಾಗ ಮನ್ರೊ ಅಮೆರಿಕವು ಅಮೆರಿಕನ್ನರಿಗೆ ಮಾತ್ರ ಎಂದೂ ಯುರೋಪಿನವರು ದಕ್ಷಿಣ ಅಮೆರಿಕದ ವ್ಯವಹಾರಗಳಲ್ಲಿ ಪ್ರವೇಶಿಸಕೂಡದೆಂದೂ ಘೋಷಿಸಿದ. ಇದರಿಂದ ಅಮೆರಿಕಖಂಡಕ್ಕೆ ಸಂಯುಕ್ತಸಂಸ್ಥಾನವೇ ರಕ್ಷೆಯಾಯಿತು. ಅಮೆರಿಕ ಹಳೆಯ ಪ್ರಪಂಚ ಯುದ್ಧಗಳಲ್ಲಿ ಭಾಗವಹಿಸದೆ ಪ್ರತ್ಯೇಕವಾಗಿತ್ತು. ಎರಡನೆಯ ಮಹಾಯುದ್ಧದವರೆಗೂ ಈ ತಾಟಸ್ಥ್ಯನೀತಿಯನ್ನು ಅನುಸರಿಸಿ ಪ್ರಪಂಚದ ಮುಖಂಡತ್ವವನ್ನು ವಹಿಸಲು ಹಿಂತೆಗೆಯಿತು. ಆದರೆ ಎರಡನೆಯ ಪ್ರಪಂಚದ ಮಹಾಯುದ್ಧದಲ್ಲಿ ಅಮೆರಿಕ ಪ್ರಜಾಪ್ರಭುತ್ವದ ರಕ್ಷಣೆಗಾಗಿ ತಾಟಸ್ಥ್ಯನೀತಿಯನ್ನು ನಿರಾಕರಿಸಿ, ಮಹಾಯುದ್ಧದಲ್ಲಿ ಭಾಗವಹಿಸಿ ಪ್ರಪಂಚದಲ್ಲಿ ಪ್ರಜಾಪ್ರಭುತ್ವ ಸ್ಥಿರವಾಗಿ ಉಳಿಯುವಂತೆ ಮಾಡಿತು.

ಸುಮಾರು ಎರಡು ಶತಮಾನಗಳ ಹಿಂದೆ ವಸಾಹತುಶಾಹಿಯ ವಿರುದ್ಧ ಆರಂಭವಾದ ಅಮೆರಿಕ ಕ್ರಾಂತಿ, ಜೀವನದ ಉತ್ಕರ್ಷವನ್ನು ಸಾಧಿಸುವ ಹಾದಿಯಲ್ಲಿ ಮುಂದುವರಿಯುತ್ತಲೇ ಇದೆ. ಉತ್ತಮ ಪರಿವರ್ತನೆಯ ಕ್ರಾಂತಿ ಇದು. ಪ್ರಗತಿಪರವಾದ ಆರ್ಥಿಕ ವ್ಯವಸ್ಥೆಯ ಫಲವಾಗಿ ಅನುದಿನವೂ ಪರಿವರ್ತನಶೀಲವಾದ ಬಂಡವಾಳಶಾಹಿ ಅಧಿಕಾಧಿಕ ಪ್ರಯೋಜನಗಳನ್ನು ಪ್ರತಿಯೊಬ್ಬರೂ ಇದರಿಂದ ಅನುಭವಿಸಬಹುದಾಗಿದೆ. ಭಾರಿ ಶ್ರೀಮಂತನ ಜೊತೆಯಲ್ಲೂ ಸಮಾನಸ್ಕಂಧನಾಗಿ ನಿಲ್ಲುವ ಅವಕಾಶ ದಟ್ಟದರಿದ್ರ ಕಾರ್ಮಿಕನಿಗೂ ಸಲ್ಲಬೇಕು ಎಂಬ ಆಕಾಂಕ್ಷೆ 18ನೆಯ ಶತಮಾನದ ಜೆಫರ್ಸನ್ನನದು. ಅಮೆರಿಕದಲ್ಲಿ ಗುಲಾಮಗಿರಿಯನ್ನು ರದ್ದುಪಡಿಸಿದ ಏಬ್ರಹಾಂ ಲಿಂಕನ್ ಶ್ರಮೋತ್ಪನ್ನವಾದ ಒಳ್ಳೆಯ ವಸ್ತುಗಳು ಯಾರ ಶ್ರಮದಿಂದ ಸಿದ್ಧವಾದವೋ ಅವರಿಗೆ ಸಲ್ಲಬೇಕು ಎಂಬುದಾಗಿ 19ನೆಯ ಶತಮಾನದಲ್ಲಿ ಸಾರಿದ. ಪ್ರವರ್ಧಮಾನರಾಷ್ಟ್ರೀಯ ಆದಾಯ; ಅದರಲ್ಲಿ ಎಲ್ಲರಿಗೂ ಯಥಾಯೋಗ್ಯವಾದ ಪಾಲು; ವೈಯಕ್ತಿಕ ಸಾಹಸೋದ್ಯಮಗಳಿಗೆ ಹಿತಕರವಾದ ವಾತಾವರಣ ಸೃಷ್ಟಿಸುವುದಕ್ಕೆ ಬದ್ಧವಾದ ಹಾಗೂ ಉಳಿತಾಯಕ್ಕೆ ಸಹಾಯಕವಾದ ಉತ್ತೇಜನ ವ್ಯಕ್ತಿ ಹಾಳಾಗುವುದನ್ನು ತಪ್ಪಿಸಿ ಅವನ ಜೀವನವನ್ನು ಸುಗಮಗೊಳಿಸುವುದು, ಕೆಲಸಗಾರರ ಭದ್ರತೆ, ಅವರ ಯೋಗಕ್ಷೇಮಗಳಿಗೆ ಪ್ರೋತ್ಸಾಹ, ಸರ್ವಸಾಮಾನ್ಯವಾದ ಅಪಾಯಗಳ ನಿವಾರಣೆಗಳನ್ನು ಭದ್ರಪಡಿಸಬಲ್ಲ ಒಂದು ಸರ್ಕಾರ–ಇವು 20ನೆಯ ಶತಮಾನದ ಮಧ್ಯಕಾಲದ ಆರ್ಥಿಕ ಗುರಿಗಳು ಎಂಬುದಾಗಿ ಐಸೆನ್‌ಹೋವರ್ ನುಡಿದಿದ್ದಾರೆ. ಅಮೆರಿಕದ ಮೂಲಭೂತ ಪ್ರಣಾಳಿಕೆಗಳನ್ನು ಸಾರುವ ತತ್ತ್ವಗಳನ್ನು ಅನುಷ್ಠಾನಕ್ಕೆ ತರಲು ಅಮೆರಿಕನ್ನರು ನಾನಾ ವಿಧಾನಗಳಲ್ಲಿ ಪ್ರಯತ್ನಿಸಿದ್ದಾರೆ. ಹೀಗೆ ಇಂದಿನ ಅಮೆರಿಕದ ಜನಜೀವನದ 190 ವರ್ಷಗಳ ಕೆಳಗೆ ಮುಂದಿಡಲಾದ ಕ್ರಾಂತಿತತ್ತ್ವಗಳನ್ನು ಅನುಸರಿಸುತ್ತದೆ. ವರ್ಗರಹಿತ ಸಮಾಜವನ್ನು ಕುರಿತು ಮಾತನಾಡುವ ಅನೇಕ ರಾಷ್ಟ್ರಗಳಿಗಿಂತ ಆಚರಣೆಯಲ್ಲಿ ಅಮೆರಿಕ ಮುಂದಿದೆ. ಬಂಡವಾಳಶಾಹಿಯೊಂದಿಗೆ ಜೊತೆಗೂಡಿದ ಪ್ರಜಾಸತ್ತೆ, ಬಂಡವಾಳಶಾಹಿಯ ಅನೇಕ ಕೆಡುಕುಗಳನ್ನು ದುರ್ಬಲಗೊಳಿಸಿದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ; ವಾಸ್ತವವಾಗಿ ಬಂಡವಾಳಶಾಹಿಯ ಹಿಂದಿನ ಸ್ವರೂಪವೇ ಈಗ ಬದಲಾಗಿದೆ ಎಂಬ ನೆಹರೂರವರ ನುಡಿಯನ್ನು ಇಂದಿನ ಅಮೆರಿಕ ಸಮರ್ಥಿಸಿದೆ. **(ಬಿ.ಎಸ್.ಕೆ.)**

**ಅಮೆರಿಕದೊಡನೆ ರಾಜಿ :** 1775ನೆಯ ಮಾರ್ಚ್ 22ರಂದು ಕಾಮನ್ಸ್ ಸಭೆಯಲ್ಲಿ ಇಂಗ್ಲಿಷ್ ವಾಗ್ಮಿ ಬರ್ಕ್ ಮಾಡಿದ ಭಾಷಣದ ಶಿರೋನಾಮೆ (ಕನ್ಸಿಲಿಯೇಷನ್ ವಿತ್ ಅಮೆರಿಕ). ಅಮೆರಿಕದ ವಸಾಹತುಗಳಿಗೂ ಬ್ರಿಟನ್ನಿಗೂ ಮನಸ್ತಾಪ ಒದಗಿದಾಗ ಇದಕ್ಕೆ ಶಾಂತಿಯುತವಾದ ಪರಿಹಾರವನ್ನು ಕಂಡುಹಿಡಿಯಲು ಬರ್ಕ್ ಮಾಡಿದ ಕಟ್ಟಕಡೆಯ ಪ್ರಯತ್ನವಿದು. ವಸಾಹತುಗಾರರ ನಿಲುವಿನಲ್ಲಿದ್ದ ನ್ಯಾಯವನ್ನು ಬರ್ಕ್ ಗುರುತಿಸಿದ. ಇದು ಅವನ ಉಜ್ವಲ ಭಾಷಣಗಳಲ್ಲೊಂದು. 'ರಾಜಕೀಯದಲ್ಲಿ ಹಲವು ವೇಳೆ ಉದಾತ್ತತೆಯೇ ನಿಜವಾದ ವಿವೇಕ; ಮಹಾಸಾಮ್ರಾಜ್ಯ, ಅಲ್ಪ ಮನಸ್ಸುಗಳು ಪರಸ್ಪರ ಹೊಂದಿಕೊಳ್ಳಲಾರವು' ಎಂದು ಈ ಭಾಷಣದಲ್ಲಿ ಆತ ಸಾರಿದ. ಆದರೆ ಅವನ ಎಚ್ಚರಿಕೆ ಮತ್ತು ಮಾರ್ಗದರ್ಶನ ವ್ಯರ್ಥವಾದುವು. **(ಎಲ್.ಎಸ್.ಎಸ್.)**

**ಅಮೆರಿಕ ಸಂಯುಕ್ತ ಸಂಸ್ಥಾನ :** ಪ್ರಪಂಚದಲ್ಲೇ ಅತ್ಯಂತ ಸಂಪದ್ಭರಿತವಾದ ಈ ರಾಷ್ಟ್ರ ಉತ್ತರ ಅಮೆರಿಕದಲ್ಲಿ 25 ಮತ್ತು 49 ಡಿಗ್ರಿ ಉತ್ತರ ಅಕ್ಷಾಂಶ, 69 ಮತ್ತು 125 ಡಿಗ್ರಿ ಪಶ್ಚಿಮ ರೇಖಾಂಶಗಳ ನಡುವೆ ಇದೆ. ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ, ದಕ್ಷಿಣಕ್ಕೆ ಮೆಕ್ಸಿಕೊ ಕೊಲ್ಲಿ ಮತ್ತು ಮೆಕ್ಸಿಕೊ ದೇಶ, ಪಶ್ಚಿಮಕ್ಕೆ ಪೆಸಿಫಿಕ್ ಸಾಗರ, ಉತ್ತರಕ್ಕೆ ಕೆನಡ ದೇಶಗಳಿವೆ. ಖಂಡಾಂತರಪ್ರದೇಶದ ವಿಸ್ತೀರ್ಣ (98,26,630) ಚ.ಕಿಮೀ. ಎಲ್ಲೆಯಾಚೆ ಈ ರಾಷ್ಟ್ರಕ್ಕೆ ಸೇರಿರುವ ಪ್ರದೇಶಗಳಲ್ಲಿ ಅಲಾಸ್ಕ, ಹವಾಯ್, ಪನಾಮಾ ಕಾಲುವೆಪ್ರಾಂತ್ಯ–ಇವು ಮುಖ್ಯವಾದುವು. ಅಲಾಸ್ಕ ಮತ್ತು ಹವಾಯ್ ದೇಶಗಳೂ ಸೇರಿ ಜನಸಂಖ್ಯೆ 303,824,646 (2009)ರಲ್ಲಿ ಈ ರಾಷ್ಟ್ರದಲ್ಲಿ 52 ಪ್ರಾಂತ್ಯಗಳಿವೆ. ಪ್ರಪಂಚದ 4ನೆಯ ದೊಡ್ಡ ರಾಷ್ಟ್ರ.

ಮೇಲ್ಮೈಲಕ್ಷಣಗಳು: ವಿಶಾಲವಾದ ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಏಳು ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಬಹುದು.

**1) ಪೂರ್ವ ಕರಾವಳಿ ಮೈದಾನ:** ಮೆಕ್ಸಿಕೊಖಾರಿ ಮತ್ತು ಅಟ್ಲಾಂಟಿಕ್ ಸಾಗರಗಳ ತೀರ ಹಾಗೂ ಪೂರ್ವಾರ್ಧ ದ್ವೀಪಸ್ತೋಮಗಳನ್ನೊಳಗೊಂಡಿದೆ. ದಕ್ಷಿಣೋತ್ತರವಾಗಿ ವಿಸ್ತರಿಸಿರುವ ಈ ವಿಭಾಗದ ಅಗಲ 150–300 ಕಿಮೀ. ಸಮುದ್ರಮಟ್ಟದಿಂದ ಎತ್ತರ 100ಮೀ. ಮಿಸಿಸಿಪಿ ನದೀಮುಖಜ ಭೂಮಿ ಹೊರತುಪಡಿಸಿ ಉಳಿದ ಈ ಕರಾವಳಿಯಲ್ಲಿ ಮರಳು ಮಿಶ್ರಿತ ಜವುಗು ಭೂಮಿ ಪ್ರಧಾನ.

**2) ಅಪಲೇಷಿಯನ್ ಪರ್ವತಗಳು:** ಪ್ರಪಂಚದ ಅತ್ಯಂತ ಪುರಾತನವಾದ ಪರ್ವತಸ್ತೋಮಗಳು. ಅಟ್ಲಾಂಟಿಕ್ ಕರಾವಳಿಗೆ ಸಮಾನಾಂತರವಾಗಿದ್ದು, ಅಲಬಾಮ ಮತ್ತು ಜಾರ್ಜಿಯದಿಂದ ಉತ್ತರಕ್ಕೆ ಕೆನಡದಂಚಿನ ನ್ಯೂ ಇಂಗ್ಲೆಂಡಿನವರೆಗೆ ವಿಸ್ತರಿಸಿವೆ. ಇದನ್ನು ಪರ್ವತಪಾದ ಪ್ರಸ್ಥಭೂಮಿ ಮತ್ತು ಬ್ಲ್ಯೂರಿಡ್ಜ್ ಸಮೃದ್ಧ ಕಲ್ಲಿದ್ದಲು ಪರ್ವತಸರಣಿಗ

ಳೆಂದು ಪೂರ್ವದಿಂದ ಪಶ್ಚಿಮಕ್ಕೆ ಮೂರು ಸಮಾನಾಂತರ ವಿಭಾಗಗಳಾಗಿ ವಿಂಗಡಿಸಬಹುದು. ಕರಾವಳಿಗೆ ಹೊಂದಿಕೊಂಡ ಮೊದಲನೆಯ ಭಾಗ 100–300 ಮೀ ಎತ್ತರವಾಗಿದ್ದು ಕಡಿದಾದ ಮುಖಭಾಗಹೊಂದಿದೆ. ಈ ಭಾಗದಲ್ಲಿ ಅಲ್ಲಲ್ಲಿ ನದಿಗಳು ಸಣ್ಣ ಜಲಪಾತ ಮತ್ತು ರಭಸ ಇಳಿತಗಳನ್ನು ನಿರ್ಮಿಸಿವೆ. ಕಠಿಣ ಶಿಲೆಗಳಿಂದ ರಚಿತಭಾಗ. ಇದರಿಂದ ಪಶ್ಚಿಮದ ಬ್ಲ್ಯೂರಿಡ್ಜ್‌ನ ಅತಿ ಎತ್ತರದ ಶಿಖರ ಮೌಂಟ್ ಎಂ (2037 ಮೀ) ಇಲ್ಲಿಯೂ ಕಠಿಣ ಶಿಲೆಗಳ ರಚನೆಯಿದ್ದು ಇಲ್ಲಿಂದ ನದಿಗಳು ಹುಟ್ಟಿ ಹರಿಯುತ್ತವೆ.




ಇದರಿಂದ ಪಶ್ಚಿಮದ ಆ್ಯಲಗೇನೀ ಪರ್ವತಗಳು ಉತ್ತಮ ಕಲ್ಲಿದ್ದಲು ನಿಕ್ಷೇಪವುಳ್ಳವು. 300–1000 ಮೀ ಎತ್ತರವಾಗಿವೆ.

**3. ಮಿಡ್ ವೆಸ್ಟ್:** ಮಧ್ಯತಗ್ಗಾದ ಮಹಾಮೈದಾನವಾಗಿದ್ದು ರಾಕಿ ಪರ್ವತಗಳವರೆಗೆ ಸು. 1,600 ಕಿಮೀವರೆಗೆ ವಿಸ್ತರಿಸಿವೆ. ಓಜಾರ್ಕ್, ಮೆಸಾಬಿ ಮತ್ತು ಬ್ಲಾಕ್‌ಹಿಲ್ಸ್ ಮುಖ್ಯ ಉನ್ನತ ಭಾಗಗಳು.

**4. ರಾಕಿ ಮತ್ತು ಮಹಾಮೈದಾನ:** ಕೆನಡದ ಕಡೆಗಿನ ಅತಿ ಎತ್ತರದ ಪ್ರಾಕೃತಿಕ ವಿಭಾಗ ಸು. 4000 ಮೀ ಗೂ ಎತ್ತರವಾದ ಶಿಖರಗಳಿವೆ. ಇಲ್ಲಿ ಕೊಲೊರಾಡೊ ಪ್ರಾಂತ್ಯದ ಎಲ್ಬರ್ಟ್‌ಶಿಖರ (4,399ಮೀ.) ಅಮೇರಿಕ ಸಂಯುಕ್ತ ಸಂಸ್ಥಾನದಲ್ಲೇ ಅತ್ಯಂತ ಎತ್ತರವಾದುದು.

**5. ಉನ್ನತ ಪ್ರಸ್ಥಭೂಮಿ:** ರಾಕಿ ಪರ್ವತದಿಂದಾಚೆಗಿರುವ ಪ್ರಸ್ಥಭೂಮಿ ಗ್ರಾಂಡ್ ಕ್ಯಾನನ್ ನಂತಹ ವಿಶಿಷ್ಟ ಭೂಸ್ವರೂಪವನ್ನೊಳಗೊಂಡಿದೆ. ಕೊಲೊರಾಡೊ ಪ್ರಸ್ಥಭೂಮಿಯಿಂದ ಮಹಾಮೈದಾನವಿದ್ದು, ಅಲ್ಲಿ ಡೆತ್ ವ್ಯಾಲಿಯಿದೆ. ಕೊಲೊರಾಡೊ ನದಿಯ ಪೂರ್ವಕ್ಕೆ ಮರುಭೂಮಿ ಸ್ವರೂಪಗಳಿವೆ.

**6. ಪಶ್ಚಿಮಕರಾವಳಿ:** ವಿಶಾಲ ಬಯಲುಗಳಾಗಿದ್ದರೂ, ಕ್ಯಾಲಿಫೋರ್ನಿಯದ ಸಿಯರ‍್ರನಿವೇಡ ಪರ್ವತಗಳು ಎತ್ತರವಾದವು. ಮೌಂಟ್ ವಿಟ್ನೆ ಎತ್ತರವಾದ ಶಿಖರ. ಮೌಂಟ್ ರೈನಿಯರ್ (4392 ಮೀ) ಈ ಭಾಗದಲ್ಲಿದೆ. ಇವುಗಳಿಂದ ಪಶ್ಚಿಮಕ್ಕೆ ಮೈದಾನ ಪ್ರದೇಶ ಕ್ಯಾಲಿಫೋರ್ನಿಯದಿಂದ ಅಲಾಸ್ಕದವರೆಗೆ ವಿಸ್ತರಿಸಿದೆ.

**7. ಅಲಾಸ್ಕ ಮತ್ತು ಹವಾಯಿ:** ಪರ್ವತಮಯ ಸ್ವರೂಪವು ಅಲಾಸ್ಕದಲ್ಲಿದ್ದು ಮೌಂಟ್ ಮೆಕಿನ್ಲೆ (6194 ಮೀ) ಅತಿ ಎತ್ತರವಾದ ಶಿಖರ. ಯುಕಾನ ಇಲ್ಲಿನ ಮುಖ್ಯನದಿ. ಹವಾಯಿ ಜ್ವಾಲಾಮುಖಿ ಜನಿತ ಸ್ವರೂಪವನ್ನು ಹೊಂದಿದೆ. ಈಗಲೂ ಜೀವಂತ ಜ್ವಾಲಾಮುಖಿಗಳನ್ನ ಕಾಣಬಹುದು. ಉದಾ: ಮೌನಲೋವ.

**ನದಿಗಳು :** ದೇಶದ ಪೂವಾರ್ಧದಲ್ಲಿ ಮಿಸಿಸಿಪಿ ಮತ್ತು ಮಿಸ್ಸೌರಿ ದಕ್ಷಿಣದ ಕಡೆಗೆ ಹರಿಯುವ ಪ್ರಮುಖ ನದಿಗಳು. ಸರ್ವಕಾಲಿಕ ನದಿಗಳು. ಕೊಲೊರಾಡೊ, ಓಹಿಯೊ, ಸ್ನೇಕ್, ಯೂಕಾನ್ ಕನೆಕ್ಟಿಕಟ್, ಡೆಲ್ವಾರೆ, ಹಡ್ಸನ್ ಮತ್ತು ಸಸ್‌ಕ್ವೆಹೆನ್ನಾ ಇತರ ಪ್ರಮುಖ ನದಿಗಳು. ಮಿನ್ನೆಸೋಟವನ್ನು ಒಳಗೊಂಡ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಅಸಂಖ್ಯಾತ ಸಣ್ಣಪುಟ್ಟ ಸರೋವರಗಳಿದ್ದು ಅವು ಮನರಂಜನ ಉದ್ದೇಶಕ್ಕೆ ಹೆಚ್ಚು ಬಳಕೆಯಾಗುತ್ತಿವೆ. ಆದರೆ ಪಂಚಮಹಾಸರೋವರಗಳು ಸಾರಿಗೆಯ ಜೀವನಾಡಿಯಿದ್ದಂತೆ ಫ್ಲೋರಿಡದ ಓಕೀಚೋಬವು ಸುಣ್ಣಕಲ್ಲು ಸರೋವರ ಸಾಲ್ಮೋನ್ ಸಮುದ್ರ ಮತ್ತು ಗ್ರೇಟ್ ಸಾಲ್ಟ್‌ಲೇಕ ಉಪ್ಪುಸರೋವರಗಳು, ಹಲವು ಕೃತಕ ಸರೋವರಗಳೂ ಇವೆ.

**ಮಣ್ಣು :** ದೇಶದ ದಕ್ಷಿಣ ಭಾಗದಲ್ಲಿ ಮೆಕ್ಕಲುಮಣ್ಣು ಉತ್ತರದಲ್ಲಿ ಪ್ಲಿಸ್ಟೋಸಿನ್ ಯುಗದಲ್ಲಿ ಸಂಚಯವಾದ ಮಣ್ಣು, ಮಧ್ಯ ಭಾಗದಲ್ಲಿ ಹಿಮನದಿ ಸಂಚಯಮಣ್ಣು, ಅದರಿಂದ ದಕ್ಷಿಣಕ್ಕೆ ಲೋಯೆಸ್ ಮಣ್ಣು ಹಂಚಿಕೆಯಾಗಿದೆ. ಇವು ಕೃಷಿಗೆ ಯೋಗ್ಯ ಸಮಸ್ಯೆ ಕಂಡುಬರುತ್ತಿದೆ.

**ಸಸ್ಯವರ್ಗ :** ವೈವಿಧ್ಯಮಯ ಸ್ವಾಭಾವಿಕ ಸಸ್ಯವರ್ಗ. ಫ್ಲೋರಿಡದಲ್ಲಿ ಮ್ಯಾಂಗ್ರೋ ಕಾಡುಗಳನ್ನು ಒಳಗೊಂಡಂತೆ ಉಪ–ಉಷ್ಣವಲಯದ ಸಸ್ಯವರ್ಗವಿದೆ. ಅಲ್ಲಿಂದ ಉತ್ತರಭಾಗದಲ್ಲಿ ಪೈನ್ ಮತ್ತು ಎಲೆ ಉದುರುವ ಮರಗಳಿವೆ. ಟೆನೆಸ್ಸಿ ಕಣಿವೆಯಲ್ಲಿ ಗಟ್ಟಿಮರದ ಕಾಡುಗಳಿವೆ. ಮಹಾಸರೋವರಗಳ ಭಾಗದಲ್ಲಿ ಬಿಳಿಪೈನ್, ಅಲಾಸ್ಕದಲ್ಲಿ ಸ್ಪ್ರೂಸ್, ರಾಕೀ ಪರ್ವತಗಳ ಪಶ್ಚಿಮದಲ್ಲಿ ಕುರುಚಲು ಗಿಡಗಳು, ಸಿಯೆರ‍್ರ ನಿವೇಡದ ಪಶ್ಚಿಮ ಇಳಿಜಾರುಗಳಲ್ಲಿ ಸದಾ ಹಸುರು ಓಕ್. ಮಧ್ಯಕರಾವಳಿಗಳಲ್ಲಿ ರೆಡ್‌ವುಡ್ ಇತ್ಯಾದಿ ಸಸ್ಯವರ್ಗ ವಿದೆ. ಮರದದಿಮ್ಮಿ ಉತ್ಪಾದನೆ ದೇಶದ ಮುಖ್ಯ ಸರಕು.

**ಆರ್ಥಿಕತೆ :** ಸಂಯುಕ್ತಸಂಸ್ಥಾನದಲ್ಲಿ ಎಲ್ಲ ವಿಧದ ಖನಿಜಗಳೂ ಹೇರಳವಾಗಿ ಸಿಕ್ಕುತ್ತವೆ. ಏಳು ಭಾರಿ ಕಲ್ಲಿದ್ದಲು ಗಣಿಗಳಿವೆ. ಸುಪೀರಿಯರ್ ಸರೋವರದ ಹತ್ತಿರ ಭಾರಿ ಕಬ್ಬಿಣದ ಅದಿರಿನ ಗಣಿಗಳಿವೆ. ಉತ್ತಮ ದರ್ಜೆಯ ತಾಮ್ರವೂ ಅನಿಲಗಳೂ ಟೆಕ್ಸಾಸ್, ಓಕ್ಲಹೋಮ, ಕ್ಯಾಲಿಫೋರ್ನಿಯ ಪ್ರಾಂತ್ಯಗಳಲ್ಲಿ ಹೇರಳವಾಗಿವೆ. ಪ್ರಶಸ್ತಲೋಹಗಳು ಕ್ಯಾಲಿಫೋರ್ನಿಯ, ಇಡಾಹೊ, ಮಾಂಟಾನ, ಯೂಟ, ಅರಿಜೋನ, ಅಲಾಸ್ಕಗಳಲ್ಲಿ ವಿಪುಲವಾಗಿವೆ. ದೇಶದ ಕೈಗಾರಿಕಾ ಪ್ರಗತಿಗೆ ಆವಶ್ಯಕವಾದ ಎಲ್ಲ ಸಾಧನಗಳನ್ನೂ ಇಲ್ಲಿಯ ನಿಸರ್ಗ ಪೂರೈಸುತ್ತದೆ. ವ್ಯವಸಾಯೋತ್ಪನ್ನದಲ್ಲೂ ದೇಶ ಬೃಹತ್‌ಪ್ರಮಾಣದಲ್ಲಿ ಅನುಕೂಲತೆ ಯನ್ನು ಪಡೆದಿದೆ. ಭೂಮಿಯ ಶೇ. 60 ಭಾಗದಲ್ಲಿ ವ್ಯವಸಾಯ ನಡೆದಿದೆ. ಸುಮಾರು 43 ಲಕ್ಷ ಜನರ ಉದ್ಯೋಗ ಕೃಷಿ. ಗೋದಿ, ಓಟ್ಸ್, ಜವೆ ಮತ್ತು ಇತರ ಧಾನ್ಯಗಳು ಮುಖ್ಯ ಬೆಳೆಗಳು. ಬತ್ತವನ್ನೂ ಕೆಲವು ಕಡೆ ಬೆಳೆಯುತ್ತಾರೆ. ಕೆಂಟುಕಿ, ದಕ್ಷಿಣ ಕೆರೊಲಿನ, ವರ್ಜಿನಿಯ,



ಅಮೆರಿಕದ ರಾಷ್ಟ್ರಧ್ವಜ

ಉತ್ತರ ಕೆರೊಲಿನ, ಟೆನೆಸ್ಸಿ, ಜಾರ್ಜಿಯ ಪ್ರಾಂತಗಳಲ್ಲಿ ಹೊಗೆಸೊಪ್ಪು ಮುಖ್ಯ ಬೆಳೆಯಾಗಿದೆ. ಹತ್ತಿಯನ್ನು ಅನೇಕ ಪ್ರಾಂತಗಳಲ್ಲಿ ಬೆಳೆಯುತ್ತಾರೆ ; ಹೆಚ್ಚಾಗಿ ಬೆಳೆಯುವುದು ಟೆಕ್ಸಾಸ್‌ನಲ್ಲಿ. ಲೂಸಿಯಾನದಲ್ಲಿ ಸಕ್ಕರೆಯ ಉತ್ಪನ್ನ ಹೆಚ್ಚು; ಅನೇಕ ಕಡೆಗಳಲ್ಲಿ ಬೀಟ್ ಗೆಡ್ಡೆಯಿಂದ ಸಕ್ಕರೆ ಉತ್ಪಾದಿಸುತ್ತಾರೆ. ಪಶುಸಂಗೋಪನವೂ ಅಗಾಧಪ್ರಮಾಣದಲ್ಲಿ ಬೆಳೆದಿದೆ. ಹೈನುಗಾರಿಕೆ,

ಗೋಮಾಂಸದ ಉತ್ಪಾದನೆ, ಉಣ್ಣೆಯ ಉತ್ಪಾದನೆಯಲ್ಲೂ ಮುಂದಿದೆ. ಇಂಥ ಅಗಾಧ ಮೂಲಸಂಪತ್ತನ್ನು ಪಡೆದಿರುವ ಸಂಯುಕ್ತ ಸಂಸ್ಥಾನ ಬೃಹತ್ ಕೈಗಾರಿಕೆಗಳನ್ನು ಬೆಳೆಸಿಕೊಂಡಿರುವುದೇನೂ ಆಶ್ಚರ್ಯವಲ್ಲ. ರಾಷ್ಟ್ರದ ಅತ್ಯಂತ ದೊಡ್ಡ ಕೈಗಾರಿಕಾಪ್ರದೇಶ ಬೃಹತ್ ಸರೋವರಗಳಿಂದ ಇಲಿನಾಯ್ಸ್ ಇಂಡಿಯಾನಗಳವರೆಗೂ ಹರಡಿದೆ. ಇತ್ತೀಚಿನ

ವೇನ್ ವ್ರಿತ್ ಕಟ್ಟಡ, ಸೇಂಟ್ ಲೂಯಿ

30 ವರ್ಷಗಳಲ್ಲಿ ದೇಶದ ಆಗ್ನೇಯ, ನೈಋತ್ಯಭಾಗಗಳಿಗೂ ಕೈಗಾರಿಕೆ ವ್ಯಾಪಿಸಿದೆ. ಯಾಂತ್ರೀಕರಣ ಎಲ್ಲ ರಂಗಗಳಲ್ಲೂ ಬೆಳೆದಿರುವುದರ ಪರಿಣಾಮವಾಗಿ ಕೈಗಾರಿಕೆಯಲ್ಲಿ ಯಂತ್ರಕಲಾಪರಿಣಿತರ ಸಂಖ್ಯೆ ಕೊಂಚ ಹೆಚ್ಚಿದೆಯೇ ಹೊರತು ಕಾರ್ಮಿಕರ ಸಂಖ್ಯೆ ಗಮನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. 1880ರಿಂದಲೂ ರಾಷ್ಟ್ರದ ರಫ್ತು ಆಮದಿಗಿಂತಲೂ ಹೆಚ್ಚಾಗಿಯೇ ಇದೆ. ರಫ್ತಾಗುವ ವಸ್ತುಗಳು–ಕಲ್ಲಿದ್ದಲು ಮೊದಲಾದ ಅದಿರುಗಳು, ಹತ್ತಿ, ಹೊಗೆಸೊಪ್ಪು ಮುಂತಾದ ಕಚ್ಚಾ ಪದಾರ್ಥಗಳು, ಆಹಾರಪದಾರ್ಥಗಳು, ತಯಾರಾದ ಯಾಂತ್ರಿಕ ಸಲಕರಣೆಗಳು ಮತ್ತು ಇತರ ಸಿದ್ಧ ವಸ್ತುಗಳು.

ವಿಶಾಲವಾದ ನದಿಬಯಲುಗಳು, ವಾಯುಗುಣದ ವೈವಿಧ್ಯ, ವಾಣಿಜ್ಯ ಮಾರುತಗಳು ತರುವ ಸಮೃದ್ಧ ಮಳೆ–ಇವುಗಳಿಂದ ಸಂಯುಕ್ತಸಂಸ್ಥಾನ ಅತ್ಯಂತ ಸಂಪದ್ಭರಿತ ರಾಷ್ಟ್ರವಾಗಿದೆ. ಕೃಷಿ ಉತ್ಪನ್ನಗಳಲ್ಲಿ, ಕೈಗಾರಿಕೆಗೆ ಬೇಕಾದ ಸಂಪನ್ಮೂಲಗಳಲ್ಲಿ, ಮರಮುಟ್ಟುಗಳಿಗೆ ಕಾಗದ ತಯಾರಿಕೆಗೆ ಬೇಕಾದ ಅರಣ್ಯಸಂಪತ್ತಿನಲ್ಲಿ, ವ್ಯಾಪಾರಕ್ಕೆ ಆವಶ್ಯಕವಾದ ಸ್ವಾಭಾವಿಕ ಬಂದರುಗಳಲ್ಲಿ, ಯಾವುದರಲ್ಲೂ ಈ ರಾಷ್ಟ್ರಕ್ಕೆ ಕೊರತೆಯಿಲ್ಲ. ಅದರ ಐಹಿಕ ಪ್ರಗತಿಗೆ ಇದೇ ಮೂಲ. ಚಂದ್ರಲೋಕಕ್ಕೆ ಮಾನವನನ್ನು ಕಳುಹಿಸುವಂಥ ಸಾಹಸ ಅವರಿಗೆ ಸಾಧ್ಯವಾಗಿರುವುದು ಅಪಾರ ಸಂಪತ್ತಿನ ಸಹಾಯದಿಂದ, ಅವರು ಹೊಂದಿರುವ ವೈಜ್ಞಾನಿಕ ಪ್ರಗತಿಯಿಂದ. ಅಂತಾರಾಷ್ಟ್ರೀಯ ದೃಷ್ಟಿಯಿಂದ ನೋಡುವುದಾದರೆ ವಿಶ್ವಸಂಸ್ಥೆ ಹುಟ್ಟಿ ಬೆಳೆದಿರುವುದು ಇಲ್ಲಿಯೇ.

ಉತ್ತರ ಅಮೆರಿಕ, (ನೋಡಿ) ಅಮೆರಿಕದ ಇತಿಹಾಸ, ಅಮೆರಿಕದ ಕಾಯಿದೆ, ಅಮೆರಿಕದ ಚರಿತ್ರೆಯಲ್ಲಿ ನೀಗ್ರೊ, ಅಮೆರಿಕದ ರಿಪಬ್ಲಿಕನ್ ಪಕ್ಷ, ಅಮೆರಿಕದ ಡೆಮಾಕ್ರಟಿಕ್ ಪಕ್ಷ, ಅಮೆರಿಕದ ಸ್ವಾತಂತ್ರ್ಯ.

*

**ಅಮೆರಿಕ ಸಂಯುಕ್ತ ಸಂಸ್ಥಾನದ ಸಾಹಿತ್ಯವಿಮರ್ಶೆ :** ಅಮೆರಿಕ ಸಂಯುಕ್ತ ಸಂಸ್ಥಾನದ ಸಾಹಿತ್ಯಚರಿತ್ರೆಯ ಹಲವಾರು ಘಟ್ಟಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಅನುಕರಣ ಒಂದು ಮುಖ್ಯ ಅಂಶ. ಇದರಲ್ಲಿ ಒಂದು ನಾಟಕವನ್ನು ನೋಡುವವರ ಮತ್ತು ಒಂದು ಸಾಹಿತ್ಯಕೃತಿಯನ್ನು ಓದುವವರ ಪ್ರತಿಕ್ರಿಯೆಗೆ ಹೆಚ್ಚು ಮಹತ್ತ್ವವಿದೆ. ಇದು ಕವಿಯ ಭಾವನಾಶಕ್ತಿ ಮತ್ತು ನೈತಿಕಸ್ವಭಾವಕ್ಕೆ ಹೆಚ್ಚು ಗಮನ ಕೊಡುತ್ತದೆ. ಈ ದಿಸೆಯಲ್ಲಿ ಅಮೆರಿಕದಲ್ಲಿ ಎಮರ್‌ಸನ್ನನದು ದೊಡ್ಡ ಹೆಸರು.

ಆ ರಾಷ್ಟ್ರದ ಸಾಹಿತ್ಯವಿಮರ್ಶೆಯಲ್ಲಿ ಅನುಕರಣತತ್ತ್ವದ ಪಾತ್ರ ತೀರ ಚಿಕ್ಕದು. ಅರಿಸ್ಟಾಟಲನ ಪೊಯೆಟಿಕ್ಸ್ ಎಂಬ ಗ್ರಂಥ ಬಹಳ ಕಾಲದಿಂದಲೂ ಅಮೆರಿಕದ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಪುಸ್ತಕವಾಗಿದೆ. ಅರಿಸ್ಟಾಟಲ್ ಕಥಾವಸ್ತುವಿಗೆ ಕೊಟ್ಟಿರುವ ಮಹತ್ತ್ವವನ್ನು ಆಧುನಿಕ ಕಾಲದ ಅಲ್ಲಿನ ಕಾದಂಬರಿಕಾರರು ಮತ್ತು ವಿಮರ್ಶಕರು ಅರ್ಥಮಾಡಿಕೊಂಡಿದ್ದಾರೆ. ಶಿಕಾಗೊ ವಿಶ್ವವಿದ್ಯಾನಿಲಯದ ನವೀನ ಅರಿಸ್ಟೋಟಿಲಿಯನ್ನರು ಅರಿಸ್ಟಾಟಲನ ಪೊಯೆಟಿಕ್ಸನ್ನು ಆಧರಿಸಿ ವಿಮರ್ಶೆಯ ಒಂದು ಹೊಸ ತತ್ತ್ವವನ್ನು ರೂಪಿಸಿದ್ದಾರೆ. ಅದರಲ್ಲಿ ಅನುಕರಣೆಗೆ ಮಹತ್ತ್ವ ಕೊಟ್ಟಿದ್ದಾರೆ. ರೊನಾಲ್ಡ್ ಕ್ರೇನ್ ಸಂಪಾದಿಸಿರುವ ಕ್ರಿಟಿಕ್ಸ್ ಅಂಡ್ ಕ್ರಿಟಿಸಿಸಮ್ (1952) ಎಂಬ ಗ್ರಂಥದಲ್ಲಿ ಈ ತತ್ತ್ವದ ಬೆಂಬಲಿಗರ ವಿಚಾರಧಾರೆಯನ್ನು ಕಾಣಬಹುದು. ಸಾಹಿತ್ಯದ ಚಾರಿತ್ರಿಕ ಮತ್ತು ಪೌರಾಣಿಕ ಅಭ್ಯಾಸದ ಮೂಲಕವೂ ಅನುಕರಣತತ್ತ್ವ ಅಮೆರಿಕದ ಸಾಹಿತ್ಯವನ್ನು ಪ್ರವೇಶಿಸಿದೆ. ವಿಮರ್ಶಕ ವರ್‌ನನ್ ಪ್ಯಾರಿಂಗ್‌ಟನ್ನನದು ಚಾರಿತ್ರಿಕ ವಿಧಾನ; ತನ್ನ ಮೇನ್ ಕರೆಂಟ್ಸ್ ಇನ್ ಅಮೆರಿಕನ್ ಥಾಟ್ (3 ಸಂಪುಟಗಳು) ಎಂಬ ಕೃತಿಯಲ್ಲಿ ಸಾಹಿತ್ಯಕೃತಿಯನ್ನು ಅದರ ಹಿನ್ನೆಲೆಗೆ ಸಂಬಂಧಿಸುತ್ತಾನೆ.

ವಿಲಿಯಮ್ ಕುಲೆನ್ ಬ್ರಯಾಂಟ್ ತನ್ನ ಆನ್ ದಿ ನೇಚರ್ ಆಫ್ ಪೊಯಟ್ರಿಯಲ್ಲಿ (1826) ಕವಿಯ ಭಾವನಾಶಕ್ತಿ ಮತ್ತು ಸಂಕೇತಗಳಿಂದ ಶಕ್ತಿಯುತ ಭಾವಗಳನ್ನು ಸೃಷ್ಟಿಸುವ ಮತ್ತು ಉದ್ದೀಪಿಸುವ ಸಾಮರ್ಥ್ಯವನ್ನು ಒತ್ತಿ ಹೇಳುತ್ತಾನೆ. ಅಂತೆಯೇ ಓದುಗರ ನೀತಿಯನ್ನು ಉತ್ತಮಗೊಳಿಸುವ ಪಾತ್ರವನ್ನು ಕಾವ್ಯಕ್ಕೆ ಆರೋಪಿಸುತ್ತಾನೆ. ಎಮರ್‌ಸನ್ನನ ಬರೆವಣಿಗೆಗಳಲ್ಲಿನ ದಿ ಪೊಯಟ್ (1844) ವಾದಗಳು ಬಹುಮಟ್ಟಿಗೆ ಬ್ರಯಾಂಟನ ವಾದವನ್ನು ಹೋಲುತ್ತವೆ.

ಜೇಮ್ಸ್ ರಸಲ್ ಲೊವೆಲ್ ತನ್ನ ದಿ ಫಂಕ್ಷನ್ ಆಫ್ ದಿ ಪೊಯಟ್‌ನಲ್ಲಿ (1855) ಮತ್ತು ವಾಲ್ಟ್ ವಿಟ್ಮನ್ ತನ್ನ ಲೀವ್ಸ್ ಆಫ್ ಗ್ರಾಸ್‌ನ (1855) ಪೀಠಿಕೆಯಲ್ಲಿ ಕವಿ ಒಬ್ಬ ವೀಕ್ಷಕ, ಆತ ಅಮೂಲ್ಯವಾದ ನೈತಿಕ ಸತ್ಯಗಳನ್ನು ಎತ್ತಿ ತೋರಿಸುತ್ತಾನೆ ಎಂದು ಹೇಳುತ್ತಾರೆ.



ವಿಲಿಯಂ ಫಾಕ್ನರ್

ಒಟ್ಟಿನಲ್ಲಿ 19ನೆಯ ಶತಮಾನದ ಅಮೆರಿಕ ಸಂಯುಕ್ತ ಸಂಸ್ಥಾನದ ಸಾಹಿತ್ಯ ವಿಮರ್ಶೆ ಬಹುಮಟ್ಟಿಗೆ ಕೋಲ್‌ರಿಜ್‌ನ ಅಭಿವ್ಯಕ್ತಿವಾದವನ್ನು ಅನುಸರಿಸುತ್ತದೆ.

ವಾಸ್ತವಿಕ ಮತ್ತು ವ್ಯಕ್ತಿಪರ ತತ್ತ್ವಗಳಲ್ಲಿ ಕೆಲವು ಸಾದೃಶ್ಯಗಳಿವೆ. ಎಡ್ಗರ್ ಅಲೆನ್ ಪೊ ಒಬ್ಬ ವಾಸ್ತವಿಕ ಮತ್ತು ಪ್ರತಿಭಾವಂತ ವಿಮರ್ಶಕ. ಕಾವ್ಯದ ಸೌಂದರ್ಯಕ್ಕೆ, ಅದು ಎಷ್ಟರಮಟ್ಟಿಗೆ ಕಲಾಕೃತಿ ಎಂಬುದಕ್ಕೆ, ಪೊ ಮಹತ್ವ ಕೊಡುತ್ತಾನೆ. ಕಾವ್ಯದ ನೀತಿಬೋಧೆಯಲ್ಲಿ ಅವನಿಗೆ ನಂಬಿಕೆಯಿಲ್ಲ ದಿ ಪೊಯಟಿಕ್ ಪ್ರಿನ್ಸಿಪಲ್ (1850) ಎಂಬುದರಲ್ಲಿ ನೀಳ್ಗವಿತೆ ಎಂಬುದು ಒಂದು ಅರ್ಥಸಾಮಂಜಸ್ಯವಿಲ್ಲದ ಪದ ಎಂದು ಹೇಳುತ್ತಾನೆ. ಅವನು ಕೋಲ್‌ರಿಜ್‌ನ ಬಯಾಗ್ರಾಫಿಯ ಲಿಟರೇರಿಯ ಎಂಬ ಗ್ರಂಥದಿಂದ ಪ್ರಭಾವಿತನಾಗಿದ್ದ. ಅವನ ಪ್ರಕಾರ ಕಾವ್ಯಸೌಂದರ್ಯದ ಛಂದೊಬದ್ಧ ಸೃಷ್ಟಿ ಸುಂದರವೂ ಬೋಧಕವೂ ಆಗಿದ್ದರೆ ಅದು ಬರಿಯ ಆಕಸ್ಮಿಕ. ವಿಮರ್ಶಕನ ಮುಖ್ಯ ಗುಣಗಳು ಯಥಾರ್ಥತೆ, ನಿಷ್ಪಕ್ಷಪಾತತೆ ಮತ್ತು ಸ್ವತಂತ್ರಮನೋಭಾವ. ಪೊ ತಾನು ಹೇಳಿದ್ದನ್ನು ಆಚರಣೆಯಲ್ಲಿ ತಂದ. ಅವನು ತೋರಿಸಿಕೊಟ್ಟ ವಿಮರ್ಶನಮಾರ್ಗ ಒಂದು ದೊಡ್ಡ ಪರಂಪರೆಯಾಗ ಬಹುದಾಗಿತ್ತು. ಆದರೆ ಅವನ ವಿಮರ್ಶನಮಟ್ಟಗಳು ಮತ್ತು ಅವನ ಚುಚ್ಚುವ ದನಿ ಪ್ರಾಯಶಃ ಅದಕ್ಕೆ ಅಡ್ಡಿ ತಂದುವು. ಹೆನ್ರಿ ಜೇಮ್ಸ್‌ನೂ ವಾಸ್ತವಿಕತತ್ತ್ವವನ್ನು ಒತ್ತಿ ಹೇಳುತ್ತಾನೆ. ತನ್ನ ದಿ ಆರ್ಟ್ ಆಫ್ ಫಿಕ್ಷನ್‌ನಲ್ಲಿ (1888) ಕಾದಂಬರಿ ಒಂದು ಅನುಕರಣೀಯ ಕಲೆ, ಬರೆಹಗಾರನ ಬುದ್ಧಿಮಟ್ಟ ಮತ್ತು ಅವನ

ನೀತಿ, ಸ್ವಭಾವ ಅವನ ಕೃತಿಯಮೇಲೆ ಹೆಚ್ಚು ಪ್ರಭಾವ ಬೀರುತ್ತದೆ ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಆದರೆ ಅವನು ಒಂದು ಕೃತಿಯ ರಚನಾವಿನ್ಯಾಸಕ್ಕೆ, ತಂತ್ರಕ್ಕೆ ಹೆಚ್ಚು ಮಹತ್ವ ಕೊಡುತ್ತಾನೆ.

ಸಂಯುಕ್ತಸಂಸ್ಥಾನದ ಸಾಹಿತ್ಯವಿಮರ್ಶೆಯ ಆರಂಭದ 19 ನೆಯ ಶತಮಾನದ ಆದಿಭಾಗದಲ್ಲಿ, ಬ್ರಯಾಂಟ್ ತನ್ನ ಲೆಕ್ಚರ್ಸ್ ಆನ್ ಪೊಯಟ್ರಿಯಲ್ಲಿ ನಿಯೊ ಕ್ಲಾಸಿಸಿಸಮ್ ಬರೆಹಗಾರರನ್ನು ಅನುಕರಣೆ ಮಾಡುವುದನ್ನು ಅಲ್ಲಗೆಳೆದ. ಕಲ್ಪನೆ, ಭಾವ, ಸ್ವೋಪಜ್ಞತೆ ಮತ್ತು ಛಂದೋವಿಲಾಸವನ್ನು ಶ್ಲಾಘಿಸಿದ.


ಎಡ್ಗರ್ ಅಲೆನ್‌ಪೊ

ಅತೀಂದ್ರಿಯತ್ವದ ವಿಮರ್ಶೆಯ ಗುಂಪಿಗೆ ಸೇರಿದವರು, ಮುಖ್ಯವಾಗಿ ಎಮರ್‌ಸನ್, ಕೋಲ್‌ರಿಜ್‌ನ ಅನೇಕ ವಿಚಾರಗಳನ್ನು ಅಳವಡಿಸಿಕೊಂಡರು.

ಎಮರ್‌ಸನ್ನನ ಗುಂಪಿಗೆ ಸೇರಿದವರಲ್ಲಿ ಅತ್ಯಂತ ಕ್ರಿಯಾಶಕ್ತಿಯುಳ್ಳ ವಿಮರ್ಶಕಿ ಮಾರ್ಗರೆಟ್ ಫುಲ್ಲರ್ 1810–1850. 1846 ರಲ್ಲಿ ಪ್ರಕಟವಾದ ತನ್ನ ಪೇಪರ್ಸ್ ಆನ್ ಲಿಟರೇಚರ್ ಅಂಡ್ ಆರ್ಟ್ ಎಂಬ ಕೃತಿಯಲ್ಲಿ ವಿಮರ್ಶಕರನ್ನು ಮೂರು ಬಗೆಯಾಗಿ ವಿಂಗಡಿಸುತ್ತಾಳೆ : (1) ವೈಯಕ್ತಿಕ ದೃಷ್ಟಿಯ ವಿಮರ್ಶಕ ಒಂದು ಕೃತಿಗೆ ಕೇವಲ ತನ್ನ ಪ್ರತಿಕ್ರಿಯೆಯನ್ನು ತೋರಿಸುತ್ತಾನೆ. (2) ಗ್ರಾಹಕವಿಮರ್ಶಕ ಕಲ್ಪನಾಶಕ್ತಿಯಿಂದ ಕೃತಿಯನ್ನು ನೋಡಿ ಬರೆಹಗಾರನ ಉದ್ದೇಶಗಳೊಡನೆ ತಾದಾತ್ಮ್ಯವನ್ನು ಹೊಂದುತ್ತಾನೆ. (3) ವ್ಯಾಪಕ ವಿಮರ್ಶಕ ಬಹುಮಟ್ಟಿಗೆ ಎರಡನೆಯ ಬಗೆಯ ವಿಮರ್ಶಕನನ್ನು ಹೋಲುತ್ತಾನೆ ಮತ್ತು ಕೃತಿಯ ಗುಣದೋಷಗಳ ವಿಚಾರದಲ್ಲಿ ತನ್ನ ತೀರ್ಪನ್ನು ಹೇಳುತ್ತಾನೆ.

ನ್ಯೂ ಇಂಗ್ಲೆಂಡಿನ ಮಡಿವಂತರು, ಅದರಲ್ಲೂ ಮುಖ್ಯವಾಗಿ ಆಲಿವರ್ ವೆಂಡಲ್ ಹೋಮ್ಸ್ (1809–94) ಮತ್ತು ಜೇಮ್ಸ್ ರಸಲ್ ಲೊವೆಲ್ (1819–91) ಸಾಹಿತ್ಯದ ಮೇಲೆ ಹೆಚ್ಚು ಪ್ರಭಾವ ಬೀರಿದರು. ಪಾತ್ರಗಳು ಮತ್ತು ಸಮರ್ಪಕ ಪರಿಣಾಮಗಳನ್ನು ಪಡೆಯಲು ಕವಿ ಮಾಡುವ ಉತ್ಸಾಹಶೂನ್ಯ, ಕಂಗೆಟ್ಟ, ಕಳವಳದ, ಪೇಚಾಟದ ಶಿಕಾರಿಯೇ ಕಾವ್ಯರಚನೋದ್ಯೋಗ–ಎಂದು ಹೋಮ್ಸ್ ಹೇಳುತ್ತಾನೆ. ಲೊವೆಲ್ ಅಮೆರಿಕದ ಅತ್ಯಂತ ಪ್ರಖ್ಯಾತವಿಮರ್ಶಕ ಎಂಬುದು ಕೆಲವರ ಮತ. ಆದರೆ ಅದು ಅತಿ ಹೆಚ್ಚಿನ ಹೊಗಳಿಕೆ. ಅವನು ಪೋಗಿಂತ ಹೆಚ್ಚು ಯುಕ್ತಾಯುಕ್ತ ಪರಿಜ್ಞಾನವುಳ್ಳವನಾಗಿರಬಹುದು. ಆದರೆ ಪೋನ ತೀಕ್ಷ್ಣಬುದ್ಧಿಯಾಗಲಿ ಕಲ್ಪನಾಶಕ್ತಿಯಾಗಲಿ ಅವನಲ್ಲಿ ಕಂಡುಬರುವುದಿಲ್ಲ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತು 20ರ ಮೊದಲಿನ ಕೆಲವು ವರ್ಷಗಳಲ್ಲಿ ಆಗಿಹೋದ ವಿಮರ್ಶಕರ ಪೈಕಿ ಕೆಲವರನ್ನು ಇಲ್ಲಿ ಹೆಸರಿಸಬಹುದು. ಅರ್ನೆಸ್ಟ್ ಸ್ಟೆಡ್‌ಮನ್ (1833–1908) ಅವನ ನೇಚರ್ ಅಂಡ್ ಎಲಿಮೆಂಟ್ಸ್ ಆಫ್ ಪೊಯಟ್ರಿಯಲ್ಲಿ ಸೌಂದರ್ಯಕ್ಕೂ ನೀತಿಗೂ ಸಂಬಂಧವಿಲ್ಲ ಎಂಬ ತತ್ತ್ವವನ್ನು ಪ್ರತಿಪಾದಿಸುತ್ತಾನೆ. ವಿಲಿಯಮ್ ಡೀನ್ ಹೊವೆಲ್ಸ್‌ನ ಪ್ರಕಾರ (1837–1920) ಕಲೆ ನಿಜವನ್ನು ಹೇಳಬೇಕು. ಆದರೆ ಹಾಗೆ ಮಾಡುವಾಗ ನೀತಿಯನ್ನು ಎತ್ತಿ ಹಿಡಿಯಬೇಕು; ಮತ್ತು ಅಮೆರಿಕನ್ನರ ಜೀವನ ಮಂದಸ್ಮಿತ ದರ್ಶನವನ್ನು ಮತ್ತು ಪ್ರಜಾಪ್ರಭುತ್ವದ ಒಳ್ಳೆಯ ಗುಣಗಳನ್ನು ತೋರಿಸಬೇಕು–ಎನ್ನುತ್ತಾನೆ. ಜೂನಿಯರ್ ಹೆನ್ರಿ ಜೇಮ್ಸ್ (1843–1916) 19 ನೆಯ ಶತಮಾನದ ಅಮೆರಿಕದ ಅತ್ಯಂತ ದೊಡ್ಡ ವಿಮರ್ಶಕ. ಅವನ ಕೃತಿ ಆರ್ಟ್ ಆಫ್ ಫಿಕ್ಷನ್ ಅತ್ಯಂತ ಸೂಕ್ಷ್ಮ ವಿಚಾರಗಳನ್ನು ಪರಿಶೀಲಿಸುತ್ತದೆ. ತನ್ನ ಕಾದಂಬರಿಗಳ ನ್ಯೂಯಾರ್ಕ್ ಮುದ್ರಣಕ್ಕೆ ಅವನು ಬರೆದ ಪೀಠಿಕೆಗಳು ಆಧುನಿಕ ಕಾದಂಬರಿಕಾರರಿಗೆ ಒಂದು ಬಗೆಯ ಕಾವ್ಯಮೀಮಾಂಸೆಯಾಗಿದೆ.

20ನೆಯ ಶತಮಾನದ ಆದಿಭಾಗದಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ನಲ್ಲಿ ಆಧುನಿಕ ವಿಮರ್ಶೆ ಅಥವಾ ಹೊಸ ವಿಮರ್ಶೆ ಅಂಕುರಗೊಳ್ಳುತ್ತಿತ್ತು. ಅದರಲ್ಲಿ ಮುಖ್ಯವಾದ ಅಂಗಗಳು : ಪ್ರತಿಮೆ, ಸಂಕೇತಪದ್ಧತಿ, ಕಲೆಗಾಗಿ ಕಲೆ ಎಂಬ ವಾದಗಳು. ಎಲಿಯಟ್ ಮತ್ತು ಪೌಂಡ್ ಅದರಿಂದ ಪ್ರಭಾವಿತರಾಗಿ ಅದನ್ನು ಅಮೆರಿಕದಲ್ಲಿ ಹರಡಲು ಆರಂಭಿಸಿದ್ದರು. ಈ ವಿಮರ್ಶೆ ಕಾವ್ಯದ ಮತ್ತು ರಚನಾವಿನ್ಯಾಸದ ಭಾಷೆ ಮತ್ತು ಪ್ರಾಂತೀಯತೆ, ರಾಷ್ಟ್ರೀಯತೆ, ಸಂಪ್ರದಾಯಶರಣತೆ ಮೊದಲಾದವುಗಳಿಗೆ ಸಂಬಂಧಿಸಿದೆ. ಕಾರ್ಲ್ ವಾನ್ ಡೋರೆನ್, ಜೋಸೆಫ್ ಉಡ್‌ಕ್ರಚ್ ಮೊದಲಾದವರು ಈ ಶತಮಾನದ ದೇಶಭಾಷಾಪ್ರೇಮಿಗಳು. ಇವರು ತಮ್ಮ ಪಂಥದ ಓನೀಲ್, ಲೂಯಿಸ್ ಕ್ರೀಸರ್, ಫಿಟ್ಜರಾಲ್ಡ್, ಫಾಕ್ನರ್ ಮತ್ತಿತರ ಹೊಸಲೇಖಕರನ್ನು ಎತ್ತಿಹಿಡಿದರು. ನವಮಾನವ ದಾರ್ಶನಿಕರು ಎಂಬ ಹೆಸರಿನ ಕೆಲವು ವಿಮರ್ಶಕರು ಸಾಹಿತ್ಯದ ಮುಖ್ಯ ಆಸಕ್ತಿ ನೀತಿತತ್ತ್ವಗಳು ಎಂದು ಪ್ರತಿಪಾದಿಸಿದರು. ಇವರಿಗೂ ನ್ಯೂ ಇಂಗ್ಲೆಂಡಿನ ಮಡಿವಂತ ವಿಮರ್ಶಕರಿಗೂ ತುಂಬ ಸಾದೃಶ್ಯವಿದೆ. ಇರ್‌ವಿಂಗ್ ಬ್ಯಾಬಿಟ್ (1865–1933) ಮತ್ತು ಪಿ. ಇ. ಮೂರ್ (1874–1937)ರನ್ನು ಈ ದಿಸೆಯಲ್ಲಿ ಹೆಸರಿಸಬಹುದು.

ಇದೇ ಕಾಲದಲ್ಲಿ ಕೆಲವರು ವೃತ್ತಿವಿಮರ್ಶಕರಾಗಿ ಕೆಲಸಮಾಡಿದರು. ಮೆಕಾಲಮ್ ಕೌಲಿ ಮತ್ತು ಎಡ್‌ಮಂಡ್ ವಿಲ್ಸನ್ ಇವರಲ್ಲಿ ಮುಖ್ಯರಾದವರು.

ಲಯನಲ್ ಟ್ರೆಲಿಂಗ್ (1905) ಪಾಂಡಿತ್ಯಪೂರ್ಣ ವಿಮರ್ಶಕ. ಅವನಲ್ಲಿ ಹಲವಾರು ವಿಮರ್ಶನಸಂಪ್ರದಾಯಗಳ ಮಿಲನವನ್ನು ಕಾಣಬಹುದು. ಅವನ ವಿಮರ್ಶೆಯಲ್ಲಿ ಅತೀವಶ್ರದ್ಧೆಯಿದೆ. ಸಾಹಿತ್ಯದ ಅಧ್ಯಯನ ಸಂಸ್ಕೃತಿಯ ಅರಿವನ್ನುಂಟುಮಾಡಿಕೊಳ್ಳುವುದಕ್ಕಾಗಿ ಎಂಬುದು ಅವನ ಮತ.

ಈಚಿನ (15–20) ವರ್ಷಗಳಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಸಾಹಿತ್ಯವಿಮರ್ಶೆ ವಿಪುಲವಾಗಿ ಬೆಳೆದಿದೆ. ಅಲ್ಲದೆ ಅದರಲ್ಲಿ ಹೆಚ್ಚಿನ ವೈವಿಧ್ಯವಿದೆ. ಅದು ಸಾಹಿತ್ಯರಚನೆಯ ಮೇಲೆ ಮತ್ತು ಸಾಹಿತ್ಯಾಭ್ಯಾಸಿಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ.

(ಎಸ್.ಎನ್.ಎಸ್.ವಿ.)

ಅಮೆರಿಕದ ಇಂಗ್ಲಿಷ್ ಭಾಷೆಯ ಸಾಹಿತ್ಯವು ಪ್ರಾರಂಭವಾಗುವುದೇ 17ನೆಯ ಶತಮಾನದ ಅಂತ್ಯಭಾಗದಲ್ಲಿ. ಮೊದಲನೆಯ ಸಾಹಿತ್ಯ ವಿಮರ್ಶಕ ಎಡ್ಗರ್ ಅಲನ್ ಪೋ (1809–1849). ಸಾಹಿತ್ಯದಲ್ಲಿ ಬೋಧನೆಯನ್ನು ವಿರೋಧಿಸಿ, ಕಲೆಯ ಗುರಿ ಮತ್ತು ಕೇಂದ್ರ ಸೌಂದರ್ಯ ಎಂದ. ಕಾವ್ಯಕ್ಕೆ ಬಹುವಾಗಿ ಹೊಂದುವ ಭಾವ ವಿಷಾದ ಎಂದ. 'ಇಮ್ಯಾಜಿನೇಷನ್' ಅನ್ನು ಇವನು ಸೃಜನಶಕ್ತಿಯನ್ನಾಗಿ ಕಾಣುವುದಿಲ್ಲ. ಒಂದುಗೂಡಿಸಿ ಸಮರಸ ಸಾಧಿಸುವ ಶಕ್ತಿಯನ್ನಾಗಿ ಕಾಣುತ್ತಾನೆ.

ರಾಲ್ಫ್ ವ್ಯಾಲ್ಡೊ ಎಮರ್‌ಸನ್ 1803–82. ಟ್ರ್ಯಾನ್ಸೆನ್‌ಡೆಂಟಲ್ ಪಂಥದವನು. ಇವನದು ಪ್ರಾತೀಕವಾದ. ಇವನಿಗೆ ನಿಸರ್ಗವು ಪರಮ ಚೇತನದ ಸಂಕೇತ. ಪದಗಳು ನಿಸರ್ಗದ ವಾಸ್ತವಾಂಶಗಳ ಸಂಕೇತ. ನಿಜವಾದ ಕವಿ, ಪ್ರವಾದಿ ಬೇರೆ ಬೇರೆಯಲ್ಲ ಎಂದು ಪ್ರತಿಪಾದಿಸಿದ. ಪ್ರತೀಕವಾದಕ್ಕೆ ಅಮೆರಿಕದ ಸಾಹಿತ್ಯದಲ್ಲಿ ಮೊದಲು ಸ್ಥಾನ ಮಾಡಿಕೊಟ್ಟವನು ಇವನು. ಇದನ್ನು ಮುಂದುವರೆಸಿದವನು ಕವಿ ವಾಲ್ಟ್ ವ್ಹಿಟ್‌ಮನ್ (1819–92). ಕಾದಂಬರಿಯನ್ನು ಅದರ ತಂತ್ರವನ್ನು ಕುರಿತು ಮೌಲಿಕವಾದ ವಿಮರ್ಶೆಯನ್ನು ಕೊಟ್ಟವನು ಕಾದಂಬರಿಕಾರ ಹೆನ್ರಿ ಜೇಮ್ಸ್ (1843–1910). 'ಕಾದಂಬರಿಯ ಅಸ್ತಿತ್ವಕ್ಕೆ ಒಂದೇ ಸಮರ್ಥನೆ ಅದು ಬದುಕನ್ನು ನಿರೂಪಿಸುತ್ತದೆ ಎನ್ನುವುದು' ಎಂದು ಹೇಳಿ, ಕಾದಂಬರಿ ಜಗತ್ತಿನ ಒಟ್ಟು ನೋಟದ ಅಭಿವ್ಯಕ್ತಿ ಎಂದು ವಿವರಿಸಿದ. ಇವನು ವ್ಯಕ್ತಿತ್ವ ನಿರಸನ ಸಿದ್ಧಾಂತವನ್ನು ಒಪ್ಪುವುದಿಲ್ಲ.


ನಾಥೆನಲ್ ಹಾರ್ಥಿನ್

19ನೆಯ ಶತಮಾನದ ಪೂರ್ವಾರ್ಧದಲ್ಲಿ ಸಾಹಿತ್ಯ ವಿಮರ್ಶೆ ಅಗಾಧ ಬೆಳೆಯಿತು. ಮಾನವ ಪ್ರಧಾನ ದೃಷ್ಟಿ ಇದ್ದವರಿಗೂ (ಹೂಮನಿಸ್ಟರು) ಅವರ ವಾದವನ್ನು ಒಪ್ಪದವರಿಗೂ ಯುದ್ಧವೇ ನಡೆಯಿತು. ಮಾನವ ಪ್ರಧಾನ ದೃಷ್ಟಿಯವರು ಸಾಹಿತ್ಯವು ಮನುಷ್ಯನಿಗೆ ಸಹಜವಾದ ಒಳ್ಳೆಯತನ, ಸತ್ಯ–ಶಿವ–ಸುಂದರಗಳೇ ಇವುಗಳಲ್ಲಿ ಒಲವು ಇವನ್ನೆ ಮುಖ್ಯವಾಗಿ ಚಿತ್ರಿಸಬೇಕು ಎಂದು ವಾದಿಸಿದರು. ಇದನ್ನು ವಿರೋಧಿಸಿದವರು, ಎಚ್.ಎಚ್.ಮೆನ್‌ಕೆನ್ (1880–1956), ಜಾರ್ಜ್ ಸಂತಾಯನ '1863–1952' ಮೊದಲಾದವರು ಈ ಅಭಿಪ್ರಾಯ ವನ್ನು ಒಪ್ಪಲಿಲ್ಲ. ಧರ್ಮ ಮತ್ತು ಕಾವ್ಯಗಳ ತಿರುಳು ಒಂದೇ, ವ್ಯವಹಾರ ಜಗತ್ತಿನಲ್ಲಿ ಅವುಗಳ ಸಂಬಂಧ ಬೇರೆ ಎಂದು ಸಂತಯಾನ ವಾದಿಸಿದ. 1930ರಲ್ಲಿ ಐ ಎಲ್ ಟೇಕ್ ಮೈ ಸ್ಟ್ಯಾಂಡ್ ಎನ್ನುವ ಲೇಖನ ಸಂಕಲನ ಪ್ರಕಟವಾಯಿತು. ಮುಂದೆ ನವ್ಯ ವಿಮರ್ಶೆಯ ಪಂಥದಲ್ಲಿ ಪ್ರಸಿದ್ಧವಾದ ಹಲವರು–ಆಲನ್ ಟೇಟ್, ಜಾನ್ ಕ್ರೋ ರ್ಯಾನ್‌ಸಮ್, ರಾಬರ್ಟ್ ಪೆನ್ ವಾರೆನ್ ಇವರೆಲ್ಲರ ಲೇಖನಗಳನ್ನು ಇದು ಒಳಗೊಂಡಿತ್ತು. ಇದು ಮಾನವಪ್ರಧಾನ ಪಂಥವನ್ನು ವಿರೋಧಿಸಿತು. ಈ ಕಾಲದಲ್ಲಿ ಎಜ್ರಾ ಪೌಂಡ್ (1885–1972) ಇಂಗ್ಲೆಂಡಿನಲ್ಲಿ ನವ್ಯ ವಿಮರ್ಶೆಯ ಪ್ರತಿಪಾದಕರಾದ ಇಬ್ಬರು ಉದ್ಘಾಟಕರಲ್ಲಿ ಒಬ್ಬ ಗುರು ಟಿ.ಎಸ್.ಎಲಿಯಟ್ (1885–1965) ಹಾಗೂ

ಐ.ಎ.ರಿಚರ್ಡ್ಸ್ (1893–1979) ಇವರ ಮೇಲೆ ಪ್ರಭಾವ ಬೀರಿದ. ನವ್ಯ ವಿಮರ್ಶೆ ಅಮೆರಿಕದಲ್ಲಿ ಇವನೊಂದಿಗೆ ಪ್ರಾರಂಭವಾಯಿತು ಎನ್ನಬಹುದು. ರೊಮ್ಯಾಂಟಿಕ್ ಮನೋಧರ್ಮವನ್ನೇ ಇವನು ವಿರೋಧಿಸಿದ. ಕಾವ್ಯವು ಸ್ಫೂರ್ತಿಯ ಸೃಷ್ಟಿ ಎನ್ನುವುದನ್ನು ಇವನು ಒಪ್ಪಲಿಲ್ಲ. ರೊಮ್ಯಾಂಟಿಕ್ ಕಾವ್ಯ, ಅಸ್ಪಷ್ಟ, ಅದರಲ್ಲಿ ನಿಷ್ಕೃಷ್ಟತೆ ಇಲ್ಲ ಎಂದು ಪ್ರತಿಪಾದಿಸಿದ. ಇಮೇಜ್‌ಗೆ ಇವನು ಎಷ್ಟು ಪ್ರಾಮುಖ್ಯತೆ ನೀಡಿದ ಎಂದರೆ, ಬೃಹದ್ಗ್ರಂಥಗಳನ್ನು ಬರೆಯುವುದಕ್ಕಿಂತ ಒಂದು ಜೀವಮಾನದಲ್ಲಿ ಒಂದು ಇಮೇಜ್ ಅನ್ನು ಸೃಷ್ಟಿಸುವುದು ಉತ್ತಮ ಎಂದು ಹೇಳಿ ಒಂದು ಕ್ಷಣದಲ್ಲಿ ಬೌದ್ಧಿಕ ಮತ್ತು ಭಾವನಾತ್ಮಕ ಕಾಂಪ್ಲೆಕ್ಸ್ ಅನ್ನು ಕೊಡುತ್ತದೆ ಎಂದು ವಿವರಿಸಿದ. (ಕಾಂಪ್ಲೆಕ್ಸ್ ಪದವನ್ನು ಮನಶ್ಶಾಸ್ತ್ರದಲ್ಲಿ ಬಳಸುವ ಅರ್ಥದಲ್ಲಿ ಬಳಸಿದ್ದೇನೆ ಎಂದು ಹೇಳಿದ) ರೂಪ ಅಥವಾ ಫಾರಂಗೆ ಪ್ರಾಧಾನ್ಯ ನೀಡಿದ.


ಹರ್ಮನ್ ಮೆಲ್‌ವಿಲಿ

ನನ್ನ ವಿಮರ್ಶೆ ಎನ್ನುವ ಪದ ಬಂಧ ಹೆಚ್ಚಾಗಿ ಬಳಕೆಗೆ ಬಂದದ್ದೇ ಜಾನ್ ಕ್ರೊ ರ್‍ಯಾನ್‌ಸಮ್ ಈ ಹೆಸರಿನ ಪುಸ್ತಕವನ್ನು ಪ್ರಕಟಿಸಿದ ಅನಂತರ (1940). ಸಾಹಿತ್ಯಕೃತಿಯ 'ರೂಪ'ಕ್ಕೆ ಪ್ರಾಧಾನ್ಯ ನೀಡಿ ಸಾಹಿತ್ಯಕೃತಿಯ ಸ್ವಾಯತ್ತತೆಯನ್ನು ಈ ಪಂಥ ಒತ್ತಿ ಹೇಳಿತು. ಕೃತಿಯನ್ನು ಎಚ್ಚರದಿಂದ ಓದಿ ಕೃತಿಯ ವಿಮರ್ಶೆಗೆ ಕೃತಿಯ ಪಠ್ಯವನ್ನೇ ಆಧಾರ ಮಾಡಿಕೊಂಡಿತು. ಕ್ಲಿಯಾಂತ್ ಬ್ರುಕ್ಸ್ ಮತ್ತು ರಾಬರ್ಟ್ ಪೆನ್ ವಾರೆನರು ಬರೆದ ಪುಸ್ತಕಗಳು ವಿಶ್ವವಿದ್ಯಾನಿಲಯಗಳಲ್ಲಿ ಕಾವ್ಯವನ್ನು ಕಾದಂಬರಿ–ಸಣ್ಣಕಥೆಗಳನ್ನೂ, ಅಧ್ಯಯನ ಮಾಡುವ ವಿಧಾನವನ್ನೇ ಬದಲಾಯಿಸಿದವು. ನವ್ಯ ವಿಮರ್ಶೆಯು ಐರನಿ, ಪ್ಯಾರಡಾಕ್ಸ್, ಟೆನ್‌ಷನ್, ವೆಹಿಕಲ್, ಆ್ಯಂಬ್ಯುಗಿಯಟಿ ಮೊದಲಾದ ಶಬ್ದಗಳನ್ನು ಪಾರಿಭಾಷಿಕ ಶಬ್ದಗಳನ್ನಾಗಿ ಬಳಸಿ ಹೊಸ ಪರಿಕಲ್ಪನೆಗಳನ್ನು ಕೊಟ್ಟರು.

ಅಮೆರಿಕದಲ್ಲಿ ಪ್ರಾರಂಭವಾದ ಮೊದಲನೆಯ ವಿಮರ್ಶಾ ಪಂಥ ಶಿಕಾಗೊ ಪಂಥ. ಇದು ನವ್ಯ ವಿಮರ್ಶೆಗೆ ಪ್ರತಿಭಟನೆಯಾಗಿ ಮೂಡಿತು. ಆರ್.ಎಸ್.ಕ್ರೇನ್. ಹಾಗೂ ಕಿಲ್ಲರ್ ಆರ್ಸೆನ್ ಈ ಪಂಥವನ್ನು ಪ್ರಾರಂಭಿಸಿದರು. ಈ ಪಂಥದವರು ನವ್ಯ ವಿಮರ್ಶೆಯನ್ನು ಮೂರು ಕಾರಣಗಳಿಗಾಗಿ ಟೀಕಿಸಿದರು: (1) ನವ್ಯ ವಿಮರ್ಶೆಯ ಭಾಷೆಗೆ ಅತಿ ಪ್ರಾಧಾನ್ಯವನ್ನು ನೀಡುತ್ತದೆ. (2) ಪ್ರತಿಯೊಬ್ಬ ನವ್ಯ ವಿಮರ್ಶಕನೂ ಒಂದು ಸೂತ್ರಕ್ಕೆ ಕಟ್ಟುಬೀಳುತ್ತಾನೆ. (ಬ್ರುಕ್ಸ್ : ಪ್ಯಾರಡಾಕ್ಸ್, ಎಮರ್‌ಸನ್: ಆ್ಯಂಬುಗಿಯಿಟಿ, ಟೇಟ್ : ಟೆನ್‌ಷನ್, ರ್‍ಯಾನ್‌ಸಮ್; ಟೆಕ್ಸ್‌ಚ್ಚರ್, ಬ್ಲ್ಯಾಕ್‌ಮರ್; ಜೆಷ್ಪರ್ ಹೀಗೆ) ಮೂರನೆಯದು: ಪ್ರತಿಯೊಬ್ಬ ವಿಮರ್ಶಕನೂ ತನಗೇ ವಿಶಿಷ್ಟವಾದ ಭಾಷೆಯನ್ನು ಬಳಸಲಿಲ್ಲ. ಶಿಕಾಗೊ ವಿಮರ್ಶಕರ (ಇವರನ್ನು ಅರಿಸ್ಟೊಟೀಲಿನಿಯರು ಎಂದೂ ನಿಯೊ ಅರಿಸ್ಟೊಟೀಲಿನಿಯರು ಎಂದೂ ಕರೆಯುವು ದುಂಟು) ನಿಲುವು ಇದು; ಕಾವ್ಯ ಪದಗಳಿಂದಾದದ್ದು, ಆದರೆ ಪದಗಳೇ ಕಾವ್ಯದಲ್ಲಿ ಪದಗಳ ಶಬ್ದ ಮತ್ತು ಲಯಗಳೂ ಪರಿಣಾಮವನ್ನುಂಟು ಮಾಡುತ್ತವೆ. ಕೃತಿಯ ಉದ್ದೇಶಿತ ಪರಿಣಾಮ, ಕೃತಿಯ ಅನುಕರಣೆಯ ವಸ್ತು, ವಿಧಾನ ಮತ್ತು ಪರಿಣಾಮಗಳನ್ನೂ ಗಮನಿಸಬೇಕು. ಇದು ಅರಿಸ್ಟಾಟಲನ ವಿಮರ್ಶೆಯ ಆಧಾರದ ಮೇಲೆ ಬೆಳೆದದ್ದು. ಇತ್ತೀಚೆಗಿನ ವರ್ಷಗಳಲ್ಲಿ ಯುರೋಪಿನ ಮತ್ತು ಅಮೆರಿಕದ ಸಾಹಿತ್ಯ ವಿಮರ್ಶೆಗಳು ಪರಸ್ಪರ ಪ್ರಭಾವವನ್ನು ಬೀರಿವೆ. ಭಾಷಾಶಾಸ್ತ್ರ ಮತ್ತು ಶೈಲಿ ಶಾಸ್ತ್ರಗಳ ಅಧ್ಯಯನ ಬೆಳೆದಂತೆ ಕೃತಿಯ ಒಳಸ್ವರೂಪವನ್ನು ಗುರುತಿಸುವ ಪ್ರಯತ್ನವನ್ನು ಮಾಡುತ್ತಿವೆ. 'ಸ್ಟ್ರಕ್ಚರಲಿಸಮ್' 'ಡಿಕನ್‌ಸ್ಟ್ರಕ್‌ಷನ್' ಎರಡು ಪಂಥಗಳೂ ಭಾಷಾವಿಜ್ಞಾನದಂತೆ ಮೂಡಿಬಂದವು. ಈಚಿಗಿನ ಎರಡು ಪಂಥಗಳು ಓದುಗ ಕೇಂದ್ರಿತ ಪಂಥ ಮತ್ತು ಕೃತಿಕೇಂದ್ರಿತ ಪಂಥ ಅಥವಾ ಪಠ್ಯ ಕೇಂದ್ರಿತ ಪಂಥ. ಮೊದಲನೆಯದು ಓದಿನ ಪ್ರಕ್ರಿಯೆಯಲ್ಲಿ ಓದುಗನೇ ಮುಖ್ಯ ಎಂದು ಭಾವಿಸಿ ಸಾಹಿತ್ಯಕೃತಿಯನ್ನು ವಿಶ್ಲೇಷಿಸುತ್ತದೆ. ಎರಡನೆಯದು 'ದ ಸ್ಟೈಬಿಲಿಟಿ ಆಫ್ ದ ಟೆಕ್ಸ್ಟ್' ಕೃತಿಯ ಪಠ್ಯ, 'ಟೆಕ್ಸ್ಟ್', ಯಾವುದು ಎನ್ನುವುದನ್ನೂ ವಿಶ್ಲೇಷಿಸುತ್ತದೆ. ಗ್ರಂಥಕರ್ತ ತೀರಿಹೋದ ಎನ್ನುವ ಘೋಷಣೆಯನ್ನು ಕೇಳಿದ್ದೇವೆ. ಸ್ಟಾನ್ಲಿ ಫಿಷ್‌ನ ಈಸ್ ದೇರ್ ಎ ಟೆಕ್ಸ್ಟ್ ಇನ್ ದಿಸ್ ಕ್ಲಾಸ್ ಕುತೂಹಲಕರವಾದ ಪುಸ್ತಕ. ಈ ಎಲ್ಲ ಸಿದ್ಧಾಂತಗಳಿಗೂ ಪಂಥಗಳಿಗೂ ಅಮೆರಿಕದಲ್ಲಿ ಬೆಂಬಲಿಗರಿದ್ದಾರೆ. (ಎಲ್.ಎಸ್.ಎಸ್.)


ರಾಲ್ಫ್ ವ್ಯಾಲ್ಡೊಎಮರ್‌ಸನ್

**ಅಮೆರಿಷಿಯಂ :** ಯುರೇನಿಯಂ ಅನಂತರದ, ಒಂದು ಮಾನವಸೃಷ್ಟಿತ ವಿಕಿರಣ ಶೀಲ ಮೂಲವಸ್ತು. ಸಂಕೇತ Am. ಪರಮಾಣು ಸಂಖ್ಯೆ 95. ಪ್ರಕೃತಿಯಲ್ಲಿ ಇದು ದೊರೆಯುವುದಿಲ್ಲ. ಈ ಮೂಲವಸ್ತುವಿಗೆ ಅನೇಕ ಸಮಸ್ಥಾನಿಗಳಿದ್ದರೂ (ಐಸೊಟೋಪ್ಸ್) ಪ್ರಮುಖವಾದುವು 241, 242 ಮತ್ತು 243. ಹೆಚ್ಚಾಗಿ ಅರ್ಧಾಯುಷ್ಯವುಳ್ಳ ಸಮಸ್ಥಾನಿ (243)ನ್ನು ಅದರ ಪರಮಾಣು ತೂಕವೆನ್ನಬಹುದು. ಸಮಸ್ಥಾನಿ 241ರ ಅರ್ಧಾಯುಷ್ಯ 470 ವರ್ಷಗಳು; 242ರ ಅರ್ಧಾಯುಷ್ಯ 100 ವರ್ಷಗಳು ಮತ್ತು 243ರ ಅರ್ಧಾಯುಷ್ಯ ಸುಮಾರು 7800 ವರ್ಷಗಳು. ಆವರ್ತನಪಟ್ಟಿಯ ಆ್ಯಕ್ಟಿನೈಡ್ಸ್ ಮಾಲೆಯಲ್ಲಿ 6ನೆಯ ಸ್ಥಾನವನ್ನು ಪಡೆದಿದೆ. ವಿರಳಲೋಹಗಳೆನ್ನುವ ಲ್ಯಾಂಥನೈಡ್ಸ್ ಮಾಲೆಯಲ್ಲಿ ಆರನೆಯ ಮೂಲವಸ್ತು. ಯುರೋಪಿಯಂಗೆ ಹೇಗೆ ಯುರೋಪ್ ದೇಶದ ಹೆಸರನ್ನಿಟ್ಟರೋ ಅದೇ ರೀತಿ ಯುರೇನಿಯಂ ಅನಂತರದ ಹೆಚ್ಚು ಮೂಲವಸ್ತುಗಳನ್ನು ಸೃಷ್ಟಿಸಿದ ಅಮೆರಿಕ ದೇಶದ ನೆನಪಿಗಾಗಿ, ಆ್ಯಕ್ಟಿನೈಡ್ಸ್ ಮಾಲೆಯ ಆರನೆಯ ಮೂಲವಸ್ತುವಿಗೆ ಅಮೆರಿಷಿಯಂ ಎಂದು ಹೆಸರಿಸಿದರು. 1845ರಲ್ಲಿ ಆರ್.ಎ.ಜೇಮ್ಸ್, ಎಲ್.ಓ. ಮಾರ್ಗನ್ ಮತ್ತು ಜಿ.ಟಿ.ಸಿ. ಬೋರ್‌ರವರು ಈ ಮೂಲವಸ್ತುವನ್ನು ಕಂಡುಹಿಡಿದರು. (ಎನ್.ಎಸ್.ಎಸ್.ಪಿ.)

**ಅಮೆಷಾ ಸ್ಪೆಂಟಾ :** ಜರತುಷ್ಟ್ರನ ಮತಧರ್ಮದಲ್ಲಿನ ಆರುಮಂದಿ ಪ್ರಧಾನ ದೇವದೂತರಿಗೆ ಈ ಹೆಸರಿದೆ. ಅಮೆಷಾ ಎಂದರೆ ನಿತ್ಯರು, ಅಮರರು ಎಂದೂ ಸ್ಪೆಂಟಾ ಎಂದರೆ ಉಪಕಾರಮನೋವೃತ್ತಿಯುಳ್ಳವರು, ಹಿತರಕ್ಷಕರು ಎಂದೂ ಅರ್ಥ. ಯೆಹೂದಿ, ಕ್ರೈಸ್ತ ಇತ್ಯಾದಿ ಧರ್ಮಗಳಲ್ಲಿನ ದೇವದೂತರು, ಹಿಂದೂಧರ್ಮದಲ್ಲಿನ ಆದಿತ್ಯರು, ನಿತ್ಯಸೂರಿಗಳು ಇವರುಗಳಿಗೆ ಅಮೆಷಾ ಸ್ಪೆಂಟಾರನ್ನು ಹೋಲಿಸಬಹುದು.

ಇವರು ಸದಾ ಪರಬ್ರಹ್ಮಸ್ವರೂಪನಾದ ಅಹುರಮಜ್ದನ ಸೇವೆಯಲ್ಲಿ ನಿರತರು. ಇವರ ವಿವರ ಹೀಗಿದೆ : (1) ವೊಹುಮನೊ–ಸಮ್ಯಗ್ಚಾರಿತ್ರ್ಯದ ರೂಪ; (2) ಅಷೆಮ್ ವಹಿಷ್ಟೆಮ್–ಸತ್ಯಂ ಶಿವಂ ಶುಭಂಗಳ ಮೂರ್ತಸ್ವರೂಪ; (3) ಕ್ಷಹತ್ರೆಮ್ ವೈರೀಮ್–ದುಷ್ಟನಿಗ್ರಹ, ಶಿಷ್ಟಪರಿಪಾಲನಸ್ವರೂಪ; (4) ಸ್ಪೆಂಟಾ ಆರ್ಮೈತಿ–ಸ್ತ್ರೀದೇವತೆ, ಅಹುರಮಸ್ದನ ಪುತ್ರಿ, ಭುವಿಯ ಮೇಲೆ ನೆಲೆಸಿದ ದೈವೀಶಕ್ತಿಯ ಪ್ರತೀಕ; (5) ಹೌರ್ವತಾತ್–ಪರಿಪೂರ್ಣತೆಯ ಸ್ವರೂಪ ; (6) ಅಮೆರೆತಾತ್–ಅಮೃತತ್ವಸ್ವರೂಪ. ಈತ ಆರೋಗ್ಯ ಮತ್ತು ಸಸ್ಯಸಮೃದ್ಧಿಯ ರಕ್ಷಕ.

ಇವರೊಂದಿಗೆ ಸ್ರೌಷಾ ಎಂಬ ದೇವತೆಯೂ ಸೇರಿ ಅಹುರಮಸ್ದನ ಸಪ್ತಪರಿಚಾರಕ ಮಂಡಲಿಯಾಗುತ್ತದೆ.

ಇವರ ಮುಖ್ಯ ಕರ್ತವ್ಯವೆಂದರೆ ಭಗವಂತನ ಸೃಷ್ಟಿಯ ಮೇಲ್ವಿಚಾರಣೆ ನೋಡಿಕೊಳ್ಳುವುದು, ಸಂರಕ್ಷಣೆ ಮಾಡುವುದು ಮತ್ತು ಭಕ್ತರಿಗೆ ಅಭಯಪ್ರದಾನ ಮಾಡುವುದು. ಇವರು ಸದಾಕಾಲದಲ್ಲೂ ಪಾಪದೇವತೆಯನ್ನು ಪ್ರತಿಭಟಿಸುತ್ತಿರುತ್ತಾರೆ. (ಆರ್.ಎಸ್.)

**ಅಮೈಡುಗಳು :** ರಾಸಾಯನಿಕ ಸಂಶ್ಲೇಷಣೆಗಳಲ್ಲಿ ಪ್ರಮುಖ ಮಧ್ಯವರ್ತಿಗಳಾಗಿರುವ ರಾಸಾಯನಿಕ ಸಂಯುಕ್ತಗಳ ಒಂದು ಗುಂಪಿನ ಹೆಸರು. ಅಮೋನಿಯದಲ್ಲಿರುವ ಒಂದು ಹೈಡ್ರೊಜನ್ ಪರಮಾಣುವಿಗೆ ಬದಲಾಗಿ ಯಾವುದೇ ಸಾವಯವ ಆಮ್ಲದಿಂದ ಜನ್ಯವಾದ ಏಸೈಲ್ ಅಣ್ವಂಗವನ್ನಾಗಲೀ (ರ್‍ಯಾಡಿಕಲ್) ನಿರವಯವ ಲೋಹದ ಮೂಲವಸ್ತು ಒಂದರ ಪರಮಾಣುವನ್ನಾಗಲೀ ಇಟ್ಟಾಗ ಒದಗುವ ಸಂಯುಕ್ತವೇ ಅಮೈಡು. ನಿರವಯವ ಲೋಹದ ಅಮೈಡಿಗೆ ಪೊಟಾಸಿಯಂ ಅಮೈಡನ್ನೂ ($K\text{-}NH_2$) ಸಾವಯವ ಆಮ್ಲದ ಅಮೈಡಿಗೆ ಅಸಿಟಮೈಡನ್ನೂ ($CH_3\text{-}CO\text{-}NH_2$) ಉದಾಹರಿಸಬಹುದು. ಸಲ್ಫನಿಲಮೈಡು $H_2N\text{-}C_6H_4\text{-}SO_2NH_2$ ಸಲ್ಫೋನಿಕ್ ಆಮ್ಲದಿಂದ ಆದ ಅಮೈಡು. ಸಾವಯವ ಅಮೈಡುಗಳಲ್ಲಿ ಬಹುತೇಕ ಸ್ಫಟಿಕರೂಪದ ಘನವಸ್ತುಗಳು. ಇವನ್ನು ಆಮ್ಲ ಅಥವಾ ಕ್ಷಾರಗಳ ಜೊತೆಯಲ್ಲಿ ಕೂಡಿಸಿ ಕುದಿಸಿದರೆ ಸುಲಭವಾಗಿ ವಿಭಜನೆ ಹೊಂದಿ ಆಯಾ ಆಮ್ಲವನ್ನೂ ಅಮೋನಿಯವನ್ನೂ ಕೊಡುತ್ತವೆ. ಇವು ಕಡಿಮೆ ಉಷ್ಣತೆಯಲ್ಲಿ ಕರಗುವ ಕಾರಣ, ಸಾವಯವ ಆಮ್ಲಗಳನ್ನು ಗುರುತಿಸುವಲ್ಲಿ ಇವನ್ನು ಉಪಯೋಗಿಸಲಾಗುತ್ತದೆ. ಸರಳರೂಪದ ಅಮೈಡುಗಳು (ಉದಾ: ಅಸಿಟಮೈಡ್) ಅಷ್ಟಾಗಿ ಕೈಗಾರಿಕಾ ಪ್ರಾಮುಖ್ಯವನ್ನು ಹೊಂದಿಲ್ಲವಾದರೂ ಅವುಗಳ ಕೆಲವು ಜನ್ಯವಸ್ತುಗಳು (ಡಿರವೆಟಿವ್ಸ್) ಉತ್ತಮೋತ್ತಮ

ವಿಲಯಕಗಳಾಗಿವೆ. ಎಂಬ ಹಿಂದೆ ಹೆಸರಿಸಿದ ಸಲ್ಫೋನಿಕ್ ಆಮ್ಲದ ಅಮೈಡಿನಿಂದ ಜನ್ಯವಾದ ಹಲವಾರು ಸಂಯುಕ್ತಗಳು ಸಲ್ಫಮದ್ದುಗಳೆಂದು ಹೆಸರಾಗಿವೆ. ಉದಾಹರಣೆಗೆ ಸಲ್ಫಪಿರಿಡಿನ್, ಸಲ್ಫಗ್ವಾನಡೀನ್ ಇತ್ಯಾದಿ. (ವೈ.ಎಸ್.ಎಲ್.)

**ಅಮೈನೋ ಆಮ್ಲಗಳು :** ಅಮೈನೋ ಮತ್ತು ಆಮ್ಲೀಯ ಗುಂಪುಗಳಿರುವ ರಾಸಾಯನಿಕ ಸಂಯುಕ್ತಗಳು. ನಿಸರ್ಗದಲ್ಲಿ ದೊರೆಯುವ ಅಮೈನೋ ಆಮ್ಲಗಳಲ್ಲಿ ಹೆಚ್ಚು ಪಾಲು –ಅಮೈನೋ ಆಮ್ಲಗಳು. ಇವುಗಳಲ್ಲಿ ಅಮೈನೋ $NH_2$ ಗುಂಪು ಕಾರ್ಬಾಕ್ಸಿಲ್ –COOH ಗುಂಪಿನ ಪಕ್ಕದಲ್ಲಿರುತ್ತವೆ. ಅಮೈನೋ ಆಮ್ಲದ ಸಾಮಾನ್ಯ ಸಂಕೇತಸೂತ್ರ $R.CH(NH_2).COOH$. ಒಂದೊಂದು ಅಮೈನೋ ಆಮ್ಲದಲ್ಲೂ ಖಗುಂಪು ಬೇರೆ ಬೇರೆಯಾಗಿರುತ್ತದೆ. ಇವುಗಳ ಜೊತೆಗೆ, –ಸ್ಥಾನವಲ್ಲದೆ ಬೇರೆಡೆಗಳಲ್ಲಿ ಅಮೈನೋ ಗುಂಪಿರುವ ಇತರ ಅಮೈನೋ ಆಮ್ಲಗಳೂ ಇವೆ.ಇನ್ನು ಕೆಲವುಗಳಲ್ಲಿ ಒಂದಕ್ಕಿಂತ ಹೆಚ್ಚು ಅಮೈನೋ ಗುಂಪು ಅಥವಾ ಕಾರ್ಬಾಕ್ಸಿಲ್ ಗುಂಪುಗಳಿರಬಹುದು. ಮೇಲಿನ ಸೂತ್ರದ – ಇಂಗಾಲದ ಪರಮಾಣು ಅಸಮಾಂಗತ್ವದ್ದು (ಏಸಿಮೆಟ್ರಿಕ್) ಎಂದಿದೆ. ಏಕೆಂದರೆ ಇದು ನಾಲ್ಕು ಬೇರೆ ಬೇರೆ ಗುಂಪುಗಳೊಡನೆ ಕೂಡಿದೆ. ಈ ಸಂಯುಕ್ತ ದ್ಯುತಿಚಟುವಟಿಕೆಯನ್ನು (ಆಪ್ಟಿಕಲ್ ಆ್ಯಕ್ಟಿವಿಟಿ) ತೋರುವುದು–ಧ್ರುವೀಕೃತ ಬೆಳಕನ್ನು ಇದು ತಿರುಗಿಸುವುದು. ಹೀಗೆ ಒಂದು ಅಮೈನೋ ಆಮ್ಲ ಎಡಮುರಿಯ (ಎಲ್–) ಇಲ್ಲವೇ ಬಲಮುರಿಯ (ಡಿ–) (ಎಲ್–ಆರ್‌ಡಿ–ಕನ್‌ಫಿಗುರೇಷನ್) ರಚನೆಯಲ್ಲಿರಬಹುದು. ಈ ಎರಡು ರೂಪಗಳನ್ನು ಒಂದರ ಮೇಲೊಂದು ಬೆರಳನ್ನು ಇಡಲಾಗದ ಒಂದು ಜೊತೆ ಒಂದೇ ತೆರನ ಕೈಗಳಿಗಾಗಲೀ, ಒಂದಕ್ಕೊಂದು ಅದಲುಬದಲು ಮಾಡಲಾಗದ ಒಂದು ಜೊತೆ ಕೈಚೀಲಗಳಿಗಾಗಲೀ ಹೋಲಿಸಬಹುದು. ಇವೆರಡು ರೂಪಗಳು ರಾಸಾಯನಿಕ ಗುಣಗಳಲ್ಲಿ ಗಮನಾರ್ಹ ವ್ಯತ್ಯಾಸವೇನೂ ಹೊಂದಿಲ್ಲ. ಆದರೂ ಅಮೈನೋ ಆಮ್ಲದ ಎಡಮುರಿ ರೂಪವೇ ಪ್ರಕೃತಿಯಲ್ಲಿ ದೊರೆವ ಮುಖ್ಯ ಬಗೆಯದು.

**ನಿಸರ್ಗದಲ್ಲಿ ಅಮೈನೋ ಆಮ್ಲಗಳು :** ಅನೇಕ ಪ್ರೋಟೀನುಗಳಲ್ಲಿ ಹೆಚ್ಚಾಗಿ ಸಿಗುವ ಎಡಮುರಿ ಅಮೈನೋ ಆಮ್ಲಗಳು ಸುಮಾರು 20 ಇವೆ. ಬದುಕಿರುವ ಎಲ್ಲ ಜೀವಕಣಗಳಲ್ಲೂ ಬೇರೆ ಬೇರೆ ರೂಪಗಳಲ್ಲಿ ಪ್ರೋಟೀನುಗಳು ಹೆಚ್ಚಿನ ಅಣುತೂಕದ ಸಂಯುಕ್ತಗಳು. ಇತ್ತೀಚಿಗೆ ಮುಖ್ಯವಾಗಿ ಒಂದು ಸೋಸುವ ಕಾಗದದ (ಫಿಲ್ಟರ್ ಪೇಪರ್) ಮೇಲೆ ಬೇರೆ ಬೇರೆ ಅಮೈನೋ ಆಮ್ಲಗಳನ್ನು ಬೇರ್ಪಡಿಸುವ ಕಾಗದದ ವರ್ಣಮಾಪನ ವಿಧಾನವೆಂಬ (ಪೇಪರ್ ಕೊಮ್ಯಾಟೋಗ್ರಫಿ) ಪ್ರಬಲ ಸಾಧನ ಬಳಕೆಗೆ ಬಂದ ಮೇಲೆ ಅಮೈನೋ ಆಮ್ಲಗಳ ಒಂದು ಪಡೆಯೇ ಗೊತ್ತಾಗಿದೆ. ಇಲ್ಲಿಯ ತನಕ 180ಕ್ಕೂ ಮೀರಿದಷ್ಟು ಅಮೈನೋ ಆಮ್ಲಗಳು ತಿಳಿದಿವೆ. ಇವುಗಳಲ್ಲಿ ಈ ಹೊಸ ಅಮೈನೋ ಆಮ್ಲಗಳು ಬಹುಪಾಲು ಗಿಡಮರಗಳಲ್ಲೂ ಸೂಕ್ಷ್ಮ ಜೀವಾಣುಗಳಂಥ ಕೆಳದರ್ಜೆಯ ಜೀವಿಗಳಲ್ಲೂ ಕಂಡುಬಂದಿವೆ. ಇವುಗಳಲ್ಲಿ ಎಲ್ಲವೂ ಎಡಮುರಿಯವಲ್ಲ. ಜೀವಿರೋಧಕಗಳು (ಆ್ಯಂಟಿಬಯೋಟಿಕ್ಸ್) ವಿಷಗಳಂಥ ಮದ್ದಾಗಿ ವರ್ತಿಸುವ ಅನೇಕ ಸಂಯುಕ್ತಗಳಲ್ಲಿ ಬಲಮುರಿಯ ಅಮೈನೋ ಆಮ್ಲಗಳೂ ನಿಸರ್ಗದಲ್ಲಿ ಎಷ್ಟೋ ಇವೆ. ಕೆಲವು ದಂಡಾಣುಜೀವಿಗಳ (ಬ್ಯಾಸಿಲಸ್ ಸಬ್‌ಟೆಲಿಸ್) ಕೋಶಭಿತ್ತಿಯಲ್ಲಿ ಇವೆ. ನಿಸರ್ಗದಲ್ಲಿ ಬಿಡಿಯಾಗಿ ಸಿಗುವ ಅಮೈನೋ ಆಮ್ಲಗಳು ಹೇರಳವಾಗಿದ್ದರೂ 1935ರಲ್ಲಿ ತ್ರಿಯೊನೀನನ್ನು ಕಂಡುಹಿಡಿದಾಗಿಂದ ಪ್ರೋಟೀನುಗಳಲ್ಲಿನ ಅಮೈನೋ ಆಮ್ಲಗಳು ಮಾತ್ರ ಸುಮಾರು 20ಕ್ಕೆ ಮೀರಿಲ್ಲ. ಚಯಾಪಚಯ ಕ್ರಿಯೆಗಳಲ್ಲಿ (ಮೆಟಬಾಲಿಕ್ ಫಂಕ್ಷನ್ಸ್) ಹೊಸದಾಗಿ ಕಂಡುಬಂದ ಈ ಅಮೈನೋ ಆಮ್ಲಗಳ ಪಾತ್ರ ಏನೇನೂ ತಿಳಿದಿಲ್ಲ.

**ಅಮೈನೋ ಆಮ್ಲಗಳು, ಪ್ರೋಟೀನುಗಳು :** ಪ್ರೋಟೀನುಗಳ ತಯಾರಿಕೆಯೇ ಎಡಮುರಿ ಅಮೈನೋ ಆಮ್ಲಗಳ ಮುಖ್ಯ ಕೆಲಸ. ಅಮೈನೋ ಆಮ್ಲಗಳು ಪ್ರೋಟೀನುಗಳನ್ನು ಕಟ್ಟುವ ಇಟ್ಟಿಗೆಗಳು. ಒಂದು ಅಮೈನೋ ಆಮ್ಲದ ಅಮೈನೋ ($-NH_2$) ಗುಂಪು ಇನ್ನೊಂದು ಅಮೈನೋ ಆಮ್ಲದ ಕಾರ್ಬಾಕ್ಸಿಲ್ (–COOH) ಗುಂಪಿನೊಡನೆ ಕೂಡಿ ಆಗುವ ಪೆಪ್ಟೈಡು ($-CO-NH_2$) ಬಂಧಗಳು (ಬಾಂಡ್ಸ್) ಈ ಅಮೈನೋ ಆಮ್ಲಗಳನ್ನು ಪ್ರೋಟೀನಿನ ಅಣುಗಳಲ್ಲಿ ಬಂಧಿಸಿವೆ. ಹೀಗೆ ಬೇರೆ ಬೇರೆ ಅಮೈನೋ ಆಮ್ಲಗಳನ್ನು ಬೇರೆ ಬೇರೆ ಪರಿಮಾಣಗಳಲ್ಲಿ ಒಂದುಗೂಡಿಸಿ ಬಲು ಉದ್ದದ ಪಾಲಿಪೆಪ್ಟೈಡ್ ಶ್ರೇಣಿಗಳನ್ನು ತಯಾರಿಸಬಹುದು. ಸುಮಾರು 20 ಅಮೈನೋ ಆಮ್ಲಗಳಿಂದ ಎಲ್ಲ ಪ್ರೋಟೀನುಗಳಲ್ಲೂ ತಯಾರಾಗಿವೆ. ಆದರೆ ಪ್ರೋಟೀನ್ ಅಣುರಚನೆಯಲ್ಲಿನ ವಿವಿಧ ಅಮೈನೋ ಆಮ್ಲಗಳು ಮತ್ತು ಅವು ಜೋಡಣೆಗೊಂಡಿರುವ ರೀತಿಗಳು ಬೇರೆ ಬೇರೆ ಪ್ರೋಟೀನುಗಳಲ್ಲಿ ಬೇರೆ ಬೇರೆಯಾಗಿವೆ. ಕೆಲವು ಅಮೈನೋ ಆಮ್ಲಗಳಂತೂ ಬಲು ಅಪೂರ್ವ: ಹೈಡ್ರಾಕ್ಸಿಪ್ರೋಲಿನ್ ಅಮೈನೋ ಆಮ್ಲ ಅಂಟುಜನಕದಲ್ಲೂ (ಕೊಲಾಜೆನ್) ತೈರಾಕ್ಸಿನ್ ಅಮೈನೋ ಆಮ್ಲ ತೈರೋಗ್ಲಾಬ್ಯುಲಿನ್‌ನಲ್ಲೂ ಇವೆ. ಪ್ರೋಟೀನುಗಳು ವೈವಿಧ್ಯ ದೊರೆಯುವ ತರಾವಳಿ ರೂಪಗಳು, ಅವು ತೋರುವ ಅಪಾರ ಜೀವವಸ್ತುಕರಣದ ನಿಜಗೆಲಸಗಳೂ, ಪ್ರೋಟೀನಿನಲ್ಲಿ ಬೇರೆ ಬೇರೆ ಅಮೈನೋ ಆಮ್ಲಗಳು ಜೋಡಣೆಯಾಗಿರುವ ಕ್ರಮಗತಿಗಳಿಗೆ ಅನುಗುಣವಾಗಿ ಇರಬಹುದು. ಈ ಮೂಲ ಕ್ರಮಗತಿ ತಳಿಯ ಅಂಶಗಳಿಂದ ನಿರ್ಧಾರವಾಗುತ್ತದೆ. ಸಾಮಾನ್ಯವಾಗಿ ಅಣು ತೂಕ 10,000 ಮೀರಿದ ಪಾಲಿಪೆಪ್ಟೈಡು ಪ್ರೋಟೀನ್ ಎನ್ನಿಸಿಕೊಳ್ಳುವುದು. ಆದರೆ ಇನ್ಸುಲಿನ್‌ನಂಥ ಹಲವಾರು ಪ್ರೋಟೀನ್ ಚೋದನಿಕಗಳ (ಹಾರ್ಮೋನ್ಸ್) ಅಣುತೂಕದ 10,000ಕ್ಕಿಂತ ಕಡಿಮೆಯಾಗಿರುವುದರಿಂದ ಇದೇನೂ ಕಟ್ಟಾ ನಿಯಮವಲ್ಲ.

**ಅಮೈನೋ ಆಮ್ಲಗಳ ಸಾಮಾನ್ಯ ಚಯಾಪಚಯ ಚಟುವಟಿಕೆ :** ಎಲ್ಲ ಅಮೈನೋ ಆಮ್ಲಗಳ ರಾಸಾಯನಿಕ ರಚನೆಯೂ ಒಂದೇ ಬಗೆಯಲ್ಲಿ ಇರುವುದರಿಂದ, ಇವುಗಳ ಜೀವರಾಸಾಯನಿಕ ವರ್ತನೆಗಳೂ ಬಹುಮಟ್ಟಿಗೆ ಒಂದೇ ತೆರ. ಈ ವರ್ತನೆಗಳನ್ನು ಪ್ರೋಟೀನ್ ಗುಣದ ಜೀವರಾಸಾಯನಿಕ ವೇಗವರ್ಧಕಗಳಾದ (ಕೆಟಲಿಸ್ಟ್), ಕಿಣ್ವಗಳು (ಎನ್‌ಜೈಮ್ಸ್) ವೇಗವರ್ಧಿಸುತ್ತವೆ. ಅಮೈನೋ ಆಮ್ಲಗಳ ಚಯಾಪಚಯದಲ್ಲಿ ಹಲವಾರು ಕಿಣ್ವಗಳ ಚಟುವಟಿಕೆಗೆ ಫ್ಯಾಕ್ಟರ್ ಇಲ್ಲವೆ ಸಹಕಿಣ್ವವಾದ ಪಿರಿಡಾಕ್ಸಾಲ್ ಫಾಸ್ಫೇಟು ಬೇಕು. ಈ ಕೂಡಂಶ $B_6$ ಜೀವಾತುವಿಂದ ಹುಟ್ಟುತ್ತದೆ. $B_6$ ಜೀವಾತುವಿನ ಕೊರತೆ ದೇಹದಲ್ಲಿ ಉಂಟಾದರೆ ಅಮೈನೋ ಆಮ್ಲಗಳ ಚಟುವಟಿಕೆ ಕೆಡುವುದು. ಕರುಳಿನಿಂದ ಆಹಾರದ ರಕ್ತಗತವಾಗುವ ಮುಖ್ಯ ಕೆಲಸವೂ ಕೆಡಬಹುದು. ಅಮೈನೋ ಆಮ್ಲಗಳನ್ನು ಒಡೆಕೆಡುವುವ ಕ್ರಿಯೆಗೆ (ಡಿಗ್ರೆಡೇಟಿವ್ ಮೆಟಬಾಲಿಸಂ) ಮುಖ್ಯವಾಗಿ ಎರಡು ದಾರಿಗಳಿವೆ. ಮೊದಲನೆಯ ದಾರಿಯಲ್ಲಿ ಅಮೈನೋ ಗುಂಪಿನ ಬೇರ್ಪಡೆಯಾಗಿ (C-N ಸೀಳಿಕೆ), ಇದು ಒಂದು ಕಾರ್ಬನ್ ಶ್ರೇಣಿಯಾಗಿ ಪರಿವರ್ತನೆ ಹೊಂದಿ ಈ ಶ್ರೇಣಿ ಕೊಬ್ಬು, ಕಾರ್ಬೋಹೈಡ್ರೇಟುಗಳ ಎರಡರ ಚಯಾಪಚಯಕ್ಕೂ ಸಾಮಾನ್ಯವಾಗಿರುವ ಉತ್ಪನ್ನಗಳಾಗಿ ಬದಲಾಗುವ ಇಂಗಾಲ ಶ್ರೇಣಿಯಾಗುತ್ತದೆ. ಅಮೈನೋ ಗುಂಪಿನ ಸಾರಜನಕ ಕೊನೆಗೆ ಯೂರಿಯ, ಯೂರಿಕ್ ಆಮ್ಲ, ಅಮೋನಿಯಗಳಲ್ಲಿ ಕಾಣಿಸಿಕೊಳ್ಳುವುದು. ಪ್ರಮಾಣದಲ್ಲಿ ಎರಡನೆಯ ದಾರಿ ಅಷ್ಟು ಮುಖ್ಯವಲ್ಲ. ಇದರಲ್ಲಿ ಕಾರ್ಬಾಕ್ಸಿಲ್ ಗುಂಪಿನ ಬೇರ್ಪಡೆಯಾಗಿ (ಸಿ–ಸಿ ಸೀಳಿಕೆ) ಬರುವ ಅಮೀನುಗಳು ಬಲವಾದ ಶಾರೀರಿಕ (ಫಿಸಿಯಲಾಜಿಕಲ್) ಪರಿಣಾಮಗಳನ್ನು ತೋರುತ್ತವೆ. ಆಕ್ಸಿಜನ್‌ನೊಂದಿಗೆ ಸೇರಿಕೊಂಡು ಈ ಅಮೀನುಗಳು ಆಯಾ ಆಮ್ಲಗಳಾಗಿ ಮೈಯಿಂದ ಹೊರಬೀಳುತ್ತವೆ.

ಒಂದು ಅಮೈನೋ ಆಮ್ಲದ ಅಮೈನೋ ಗುಂಪು ಇನ್ನೊಂದರ ಕೀಟೋ ಆಮ್ಲಕ್ಕೆ ಆಗುವ ವರ್ಗಾವಣೆಯನ್ನು ವೇಗವರ್ಧಿಸುವ ಕಿಣ್ವವೆಂದರೆ ಟ್ರಾನ್ಸ್‌ಅಮಿನೇಸ್. ಅವಕ್ಕೆ ತಕ್ಕ ಕೀಟೋ ಆಮ್ಲಗಳಿಂದ ಅವಶ್ಯವಾದ ಮತ್ತು ಅನವಶ್ಯವಾದ ಅಮೈನೋ ಆಮ್ಲಗಳ $\alpha$ ಉತ್ಪಾದನೆಗೆ ಒಂದು ತಂತ್ರ ಈ ಟ್ರಾನ್ಸ ಮಿನೇಷನ್ ಕ್ರಿಯೆ ಒದಗಿಸುವುದು. ಅಂದರೆ ಟ್ರಾನ್ಸ್‌ಮಿನೇಷನ್ನಿಂದ $-NH_2$ ಗುಂಪನ್ನು ಜೋಡಿಸಬಹುದಾದರೂ ಅವಶ್ಯವಾದ ಅಮೈನೋ ಆಮ್ಲಗಳ ವಿಚಾರದಲ್ಲಿ ಅವಶ್ಯ ಅಮೈನೋ ಆಮ್ಲದ ತಯಾರಿಕೆಗೆ ಬೇಕಿರುವ ಇಂಗಾಲದ ಚೌಕಟ್ಟನ್ನು ಪ್ರಾಣಿ ತಾನೇ ಕಟ್ಟಲಾರದೆಂದು ಅರ್ಥ. ಶರೀರದ ಅನೇಕ ಅಮೈನೋ ಆಮ್ಲಗಳನ್ನು ಒಡೆಕೆಡವುದರಲ್ಲಿ ಕೂಡ ಟ್ರಾನ್ಸಮಿನೇಷನ್ ಮೊದಲ ಹೆಜ್ಜೆ.

ಮಾನವನಲ್ಲಿ ನೈಟ್ರೊಜನ್ ಚಯಾಪಚಯದಿಂದ ಬರುವ ಮುಖ್ಯ ಕೊನೆಯ ಉತ್ಪನ್ನ ಯೂರಿಯ. ಇದು ಮೂತ್ರದ ಮೂಲಕ ಹೊರಬೀಳುವುದು. ಸಿಟ್ರುಲೀನ್, ಅರ್ನಿತೀನ್ ಮತ್ತು ಅರ್ಜಿನೀನ್‌ಗಳು ಸೇರಿರುವ ಸುತ್ತಿನ ಶ್ರೇಣಿಯಲ್ಲಿ. ಈ ಮಾರ್ಪಾಟು ಈಲಿಯಲ್ಲಿ (ಲಿವರ್) ಆಗುವುದು. ಅಮೈನೋ ಆಮ್ಲಗಳಿಂದ ಅಮೋನಿಯ ಹೊರಬೀಳುವ ಯೂರಿಯ ಆಗಿ ವಿಷ ಕಳೆಯುತ್ತದೆ.

ಅಮೈನೋ ಆಮ್ಲದಲ್ಲಿ ಕಾರ್ಬಾಕ್ಸಿಲ್ ಕಳೆದಾಗ (ಡಿಕಾರ್ಬಾಕ್ಸಿಲೇಟ್), ಅಂದರೆ ಅದರಿಂದ ಕಾರ್ಬನ್ ಡೈಆಕ್ಸೈಡನ್ನು ತೆಗೆದಾಗ ಬರುವ ಸಂಯುಕ್ತ $R.CH_2NH_2$ ಎಂಬ ಸಾಮಾನ್ಯಸಂಕೇತ ಸೂತ್ರದ ಆಮೀನ್ ಆಗಿರುವುದು. ಅಮೈನೋ ಆಮ್ಲಕ್ಕೆ ತಕ್ಕಂತೆ R ಗುಂಪಿನ ರಚನೆ. ಈ ಅಮೈನೋ ಆಮ್ಲದ ಕಾರ್ಬಾಕ್ಸಿಲ್ ಕಳೆದ ಕಿಣ್ವಗಳ (ಡಿಕಾರ್ಬಾಕ್ಸಿಲೇಸ್) ವರ್ತನೆಗೂ ಪಿರಡಾಕ್ಸಾಲ್ ಫಾಸ್ಫೇಟು ಬೇಕು. ಈ ವರ್ತನೆಯಿಂದ ತಯಾರಾದ ಕೆಲವು ಅಮೀನುಗಳಲ್ಲಿ ಕೆಲವು ಜೀವ ವಸ್ತುಕರಣದಲ್ಲಿ ಬಲು ಪಟುವಾಗಿವೆ. ಹಿಸ್ಟಡೀನಿಂದ ಬಂದ ಹಿಸ್ಟಮೀನ್ ಅನೇಕ ಒಗ್ಗದಿಕೆಯ (ಅಲರ್ಜಿಕ್) ಬೇನೆಗಳಿಗೆ ಕಾರಣ. 5–ಹೈಡ್ರಾಕ್ಸಿಟ್ರಿಪ್ಟೊಫೇನಿಂದ ಬಂದ 5–ಹೈಡ್ರಾಕ್ಸಿಟಿಪ್ಟಮೀನಿಗೆ (ಸೆರೋಟೋನಿನ್) ಮಿದುಳಿನ ನಿಜಗೆಲಸಗಳಲ್ಲಿ ಮುಖ್ಯ ಪಾತ್ರವಿದೆ. ಟೈರೊಸೀನಿಂದ ಅಡ್ರಿನಲೀನ್ ನಾರಡ್ರಿನಿಲೀನುಗಳ ತಯಾರಿಕೆಯಲ್ಲಿ ಡಿಕಾರ್ಬಾಕ್ಸಿಲೇಷನ್ನಿನ ಪಾತ್ರ ಪ್ರಮುಖವಾದುದು.

ಅಮೈನೋ ಆಮ್ಲಗಳ ಕಾರ್ಬನ ಚೌಕಟ್ಟು ಕಾರ್ಬೋಹೈಡ್ರೇಟ್, ಕೊಬ್ಬುಗಳ ಚಯಾಪಚಯಕ್ರಿಯೆಯಿಂದ ಬರುವ ಉತ್ಪನ್ನಗಳಿಗೆ ಕಾರಣವಾಗುವುದು. ಶರೀರಕ್ಕೆ ಶಕ್ತಿ ಒದಗಿಸಲೂ, ಗ್ಲೈಕೊಜನ್ ಇಲ್ಲವೇ ಕೊಬ್ಬಾಗಿ ಕೂಡಿಡಲೂ ಈ ಉತ್ಪನ್ನಗಳನ್ನು ಆಮೇಲೆ ಆಕ್ಸಿಜನೀಕರಣಗೊಳಿಸಬಹುದು. ಕೊಬ್ಬನ್ನು ಕೂಡಿಟ್ಟಂತೆ ಮೈಯಲ್ಲಿ ಪ್ರೋಟೀನುಗಳನ್ನು ಕೂಡಿಡುವಂತಿಲ್ಲ. ಆದರೂ ಹೊಟ್ಟೆಗಿಲ್ಲದ ತುರ್ತಿನ ಹೊತ್ತುಗಳಲ್ಲಿ ಮಿದುಳ, ಗುಂಡಿಗೆಗಳಂಥ ಜೀವಾಳದ ಅಂಗಗಳ ಆವಶ್ಯಕತೆಗಳನ್ನು ಶರೀರದ ಪ್ರೋಟೀನುಗಳು ಒದಗಿಸುವುವು.

**ಹುಟ್ಟಿನಿಂದ ಬಂದ ಅಮೈನೋ ಆಮ್ಲದ ಕೋಶಗತನದ ತಪ್ಪುಗಳು :** ಮಾನವನಲ್ಲಿ, ಒಂದು ಅಮೈನೋ ಆಮ್ಲದ ಕೋಶಗತನದ ಒಂದೇ ಒಂದು ವರ್ತನೆ ಕೆಟ್ಟಿರುವ ಹಲವಾರು ಸಂದರ್ಭಗಳು ಗೊತ್ತಿವೆ. ಹುಟ್ಟಿನಿಂದ ಬಂದ ಈ ತಪ್ಪುಗಳು ಜೀನ್‌ಗಳಿಂದ ಆರಂಭಗೊಳ್ಳುತ್ತವೆ. ಹುಟ್ಟುತ್ತ ಬರುವುದಲ್ಲದೆ, ಒಂದು ಗೊತ್ತಾದ ಮಾದರಿಯಲ್ಲಿ ಕುಟುಂಬದಲ್ಲಿ ಕಾಣಿಸಿಕೊಳ್ಳುತ್ತವೆ. ಅಲ್ ಕ್ಯಾಪ್ಟೋನ್ ಮೂತ್ರಬೇನೆ ಮೊಟ್ಟಮೊದಲು ಗುರುತಿಸಲಾದವಲ್ಲಿ ಒಂದು. ಈ ನ್ಯೂನತೆಯಲ್ಲಿ ಟಿರೊಸೀನ್ ಒಡೆಕೆಡವಿದ್ದರಿಂದ ಬಂದ ಹೋಮೋಜೆಂಟಿಸಿಕ್ ಆಮ್ಲ ಮುಂದೆ ಕೋಶಗತನವಾಗದೆ ಹಾಗೇ ಮೂತ್ರದಲ್ಲಿ ಹೊರಬೀಳುವುದು. ಇದನ್ನು ಗಾಳಿಗೆ ಒಡ್ಡಿದಾಗ ಕಪ್ಪು ಬಣ್ಣಕ್ಕೆ ತಿರುಗುವುದು. ಸಾಮಾನ್ಯವಾಗಿ ಬುದ್ಧಿ ಮಂಕಾಗುವ ಫಿನೈಲ್ ಕೀಟೋನ್ ಮೂತ್ರಬೇನೆಯಲ್ಲಿ, ಫೀನೈಲ್‌ಅಲನೀನ್ ಎಂದಿನಂತೆ ಟೈರೊಸೀನಾಗಿ ಮಾರ್ಪಡುವುದು ಕೊರೆಯಾಗಿರುತ್ತದೆ. ಆಗ ಫೀನೈಲ್‌ಅಲನೀನ್ ಹೇರಳವಾಗಿ ಕೂಡಿರುತ್ತದೆ. ಅವಶ್ಯವಾದ ಅಮೈನೋ ಆಮ್ಲವಾದ ಫೀನೈಲ್‌ಅಲನೀನ್‌ನಿಂದ ಎಂದಿನಂತೆ ಹುಟ್ಟುವ ಅನವಶ್ಯ ಅಮೈನೋ ಆಮ್ಲವಾದ ಟೈರೊಸೀನ್ ಕೂಡ ಇಂಥ ಹೊತ್ತಿನಲ್ಲಿ ಅವಶ್ಯವೆನಿಸಿಕೊಳ್ಳುವುದು. ಮುಂಚೆಯೇ ಈ ಕೆಡುಕನ್ನು ಕಂಡುಕೊಂಡರೆ, ಮಿದುಳಿಗೆ ಕೆಡುಕಾಗುವುದನ್ನು ತಪ್ಪಿಸಬಹುದು. ಇಂಥ ಮಕ್ಕಳ ಆಹಾರದಲ್ಲಿ ಸಾಕಷ್ಟು ಟೈರೊಸೀನ್ ಇರಬೇಕು. ಫೀನೈಲ್‌ಅಲನೀನ್ ಕಡಿಮೆಯಾಗಿರಬೇಕು. ಮಾತು ಬರದಿರುವ ಕೆಲವು ರೋಗಿಗಳಲ್ಲಿ, ಹಿಸ್ಟಿಡೀನ್ ಯೂರೋಕೇನಿಕ್ ಆಮ್ಲಕ್ಕೆ ಮಾರ್ಪಾಡಾಗದಿರಲು, ಈ ವರ್ತನೆಯನ್ನು ವೇಗವರ್ಧಿಸುವ ಕಿಣ್ವ ಈ ರೋಗಿಯಲ್ಲಿ ಇರುವುದಿಲ್ಲ. ಹೀಗೆ ಬಹುಮಟ್ಟಿಗೆ ಎಲ್ಲ ಅಮೈನೋ ಆಮ್ಲಗಳಿಗೂ ಹೇಳುವಂತೆ, ಅದೇ ತೆರನ ತಳಿಯ ಅಂಶಗಳಿಂದೇಳುವ ಕಿಣ್ವದ ಕೊರೆಗಳೂ ಗೊತ್ತಾಗಿವೆ. ಚೆನ್ನಾಗಿ ಗೊತ್ತಿರುವ ಇಂಥ ಕೆಲವು; ಆಲ್‌ಬಿನಿಸಂ ಇದು ವರ್ಣ ಕೋಶಗಳಿಗೆ ಸೀಮಿತವಾದ ನ್ಯೂನತೆ; ಮೆಲನಿನ್ ಎಂಬ ದ್ರವ್ಯಉಂಟಾಗದಿರುವುದರಿಂದ ಇದು ಸಂಭವಿಸುವುದು. ವ್ಯಾಲೀನ್ ಲ್ಯೂಸಿನ್ ಐಸೊಲ್ಯೂಸೀನ್‌ಗಳ ಕೋಶಗತನದ ಕೊರೆಯಿಂದಾದ ಮೇಪಲ್ ಸಕ್ಕರೆ ಪಾಕದ ಮೂತ್ರರೋಗ; ಹೀಗೇ ಸಿಸ್ಟತಯೋನೀನ್, ಸಿಟ್ರುಲ್ಲೀನ್ನೂ ಮೂತ್ರದಲ್ಲಿ ಹೊರಬೀಳುತ್ತಿರಬಹುದು. ರಕ್ತಸಂಬಂಧಿಗಳ ಮದುವೆಗಳಿಂದ ಹುಟ್ಟಿದ ಮಕ್ಕಳಲ್ಲಂತೂ ಈ ಕೋಶಗತನದ ಕೊರೆಗಳು ಹೆಚ್ಚಿರುತ್ತವೆ. ಅಮೈನೋ ಆಮ್ಲದ ಕೋಶಗತನದಲ್ಲಿನ ಈ ತೆರನ ತಳಿಯ ಬಹುಮಟ್ಟಿಗೆ ಎಲ್ಲ ಕೆಡುಕುಗಳಲ್ಲೂ ಮಿದುಳಿನ ಬೇನೆ ಇದ್ದೇ ಇರುತ್ತದೆ.

**ರೋಗಿಗಳಲ್ಲಿ ಅಮೈನೋ ಆಮ್ಲಗಳ ಹೆಚ್ಚಳಿಕೆ :** ಗುಂಡಿಗೆ ಸ್ನಾಯುವಿನ ಗಿಡುಕೆಯ (ಇನ್‌ಫಾರ್ಕ್‌ಷನ್) ರೋಗಿಗಳ ರಕ್ತದಲ್ಲಿ ಟ್ರಾನ್ಸಮಿನೇಸ್ ಕಿಣ್ವ ಏರಿರುವುದು. ಹಲವಾರು ರೋಗಗಳಲ್ಲಿ ಮೂತ್ರದಲ್ಲಿ ಹೊರಬೀಳುವ ಅಮೈನೋ ಆಮ್ಲಗಳಿಂದ ರೋಗವನ್ನು ಕಂಡುಹಿಡಿಯಲೂ ಚಿಕಿತ್ಸಿಸಲೂ ಅನುಕೂಲ. ಫ್ಯಾಂಕೊನಿ ಲಕ್ಷಣಕೂಟ (ಸಿಂಡ್ರೋಮ್), ವಿಲ್ಸನ್ನನರೋಗ, ಮೂತ್ರಪಿಂಡದ ಎಲುಮುರುಟುಗಳಲ್ಲಿ (ರೀನಲ್ ರಿಕೆಟ್ಸ್) ಸಾಮಾನ್ಯವಾಗಿ ಮೂತ್ರದಲ್ಲಿ ಅಮೈನೋ ಆಮ್ಲಗಳು ಹೆಚ್ಚಾಗಿ ಹೋಗುತ್ತವೆ. ಸಿಸ್ಟಿನ್, ಅರ್ನಿತೀನ್, ಅರ್ಜಿನೀನ್ ಲೈಸೀನ್ ಅಮೈನೋ ಆಮ್ಲಗಳ ಕೆಡುಕುಗಳಲ್ಲಿ ಸಿಸ್ಟೀನ್ ಮೂತ್ರ ಆಗುವುದು. ಟ್ರಿಪ್ಟೋಫೇನ್ ಸರೋಟೋನಿನ್ ಆಗುವಾಗ ನಡುವಣ ಜೀವವಸ್ತುವಾದ (ಮೆಟಬೋಲೈಟ್) 5–ಹೈಡ್ರಾಕ್ಸಿ ಇಂಡೋಲ್ ಅಸಿಟಿಕ್ ಆಮ್ಲವನ್ನು ವಿಷಮ ಏಡಿಗಂತಿತೆರ ಬೇನೆಯ ರೋಗಿಗಳು (ಪೇಷಂಟ್ಸ್ ವಿತ್ ಮೆಲಿಗ್ನೆಂಟ್ ಕಾರ್ಸಿನಾಯ್‌ಡ್) ಮೂತ್ರದಲ್ಲಿ ಹೇರಳವಾಗಿ ಹೊರದೂಡುವರು. ಸೆರೋಟೋನಿನ್ ತಯಾರಿಕೆಗಾಗಿ ಟ್ರಿಪ್ಟೋಫೇನಿನ ಜೀವವಸ್ತುವಾದ ಈ ಆಮ್ಲವನ್ನು ಆರೋಗ್ಯವಂತರು ಕೇವಲ ಶೇ.1 ರಷ್ಟನ್ನು ಮಾತ್ರ ಬಳಸಿದರೆ ಇಂಥ ರೋಗಿಗಳಲ್ಲಿ ಈ ಬಳಕೆ ಶೇ.60 ಕ್ಕೆ ಏರಿರಬಹುದು.

**ಪುಷ್ಟಿಗಾಗಿ ಅಮೈನೋ ಆಮ್ಲಗಳು :** ಸೇವಿಸಿದ ಪ್ರೋಟೀನುಗಳು ಜಠರ, ಕರುಳುಗಳಲ್ಲಿರುವ ವಿವಿಧ ಪ್ರೋಟೀನ್ ವಿಶ್ಲೇಷಕ ಕಿಣ್ವಗಳ ನೆರವಿನಿಂದ ಮೊದಲು ಅಮೈನೋ ಆಮ್ಲಗಳಾಗುತ್ತವೆ. ಆ ಮೇಲೆ ಈ ಅಮೈನೋ ಆಮ್ಲಗಳು ಸಣ್ಣ ಕರುಳಿನಲ್ಲಿ ಹೀರಲ್ಪಟ್ಟು ಜೀವವಸ್ತುಕರಣದ ಕೆಲಸಗಳಿಗೂ ಶರೀರದಲ್ಲಿ ಬೇರೆ ಬೇರೆ ಎಡೆಗಳಲ್ಲಿನ ಪ್ರೋಟೀನು ತಯಾರಿಕೆಗೂ ಸುತ್ತಾಡುವ ರಕ್ತದಲ್ಲಿ ದೊರೆಯುತ್ತವೆ. ಕೆಲವು ಆಹಾರಗಳು ಪುಷ್ಟಿಕೊಡುವಂಥವೆಂದೂ ಇನ್ನು ಕೆಲವು ಹಾಗಿಲ್ಲವೆಂದೂ ಬಹಳ ಹಿಂದಿನ ಕಾಲದಿಂದಲೂ ತಿಳಿದಿದೆ. ಪ್ರೋಟೀನುಗಳಲ್ಲಿರುವ ಅಮೈನೋ ಆಮ್ಲಗಳಂತೆ ಆಹಾರದ ಪುಷ್ಟಿ ಇರುತ್ತದೆ. ರಾಸಾಯನಿಕವಾಗಿ ಚೊಕ್ಕವಾದ ಅಮೈನೋ ಆಮ್ಲಗಳ ಮಿಶ್ರಣಗಳನ್ನು ಜನರಿಗೆ ಕೊಟ್ಟು ನೋಡಿದ್ದರಿಂದ, ಪ್ರೋಟೀನುಗಳ ಸಮತೋಲ ಇರಬೇಕೆಂದು ತೋರಿದೆ. ಕೆಲವು ಆಹಾರ ಪದಾರ್ಥಗಳಲಿ–ಗೋದಿ, ಅಕ್ಕಿ ಇತ್ಯಾದಿ ಧಾನ್ಯಗಳಲ್ಲಿ–ಲೈಸೀನ್ ಕೊರತೆ ಇರುವುದು ಗೊತ್ತಿದೆ. ತೊಗರಿ, ಕಡಲೆ ಮತ್ತಿತರ ಬೇಳೆಗಳಲ್ಲಿ ಗಂಧಕ ಇರುವ ಮೆತಿಯೊನೀನ್ ಅಮೈನೋ ಆಮ್ಲದ ಕೊರತೆಯಿದೆ. ಸರಿಯಾದ ಪುಷ್ಟಿಗೆ ಆವಶ್ಯಕ ಅಮೈನೋ ಆಮ್ಲಗಳೆಲ್ಲ ಆಹಾರದಲ್ಲಿ ಇದ್ದೇ ಇರಬೇಕಲ್ಲದೆ ಉಳಿದ ಅಮೈನೋ ಆಮ್ಲಗಳೂ ಗೊತ್ತಾದ ಪ್ರಮಾಣದಲ್ಲಿ ಇರಲೇಬೇಕು. ಏಕೆಂದರೆ ಅಮೈನೋ ಆಮ್ಲಗಳು ಒಂದಕ್ಕೊಂದು ಎದುರುಬಿದ್ದು ಕೆಲಸಕ್ಕೆ ಬಾರದಂತಾಗುತ್ತವೆ. ಅಲ್ಲದೆ ಸಮತೋಲವೂ ಕೆಡಬಹುದು. ಹಾಲಿನಲ್ಲಿನ ಪ್ರೋಟೀನ್, ಕೇಸೀನ್, ಮೊಟ್ಟೆಯ ಆಲ್ಬುಮಿನ್ ಸಮತೋಲಿತ ಪ್ರೋಟೀನುಗಳೆಂದು ಇಂಥ ಸಂಶೋಧನೆಗಳು ತೋರಿವೆ. ಹಾಲು ಇಲ್ಲದ ಅಚ್ಚ ಸಸ್ಯಾಹಾರದಲ್ಲಿ ಕೆಲವು ಅಮೈನೋ ಆಮ್ಲಗಳ ಕೊರತೆ ಆಗುವುದರಿಂದ, ಕೊರತೆಯಾದವನ್ನು ಒದಗಿಸಬೇಕಾಗುತ್ತದೆ. ಭಾರತದಲ್ಲಿ ವಿಷಮ ಬೇನೆಯಾದ ಕ್ವಾಷಿಯೋರ್ಕರ್ ವಿಶೇಷವಾಗಿದೆ. ಮೂಲ ಪ್ರೋಟೀನುಗಳಿಲ್ಲದೆ ಪುಷ್ಟಿಗೆಟ್ಟಿರುವುದೇ ಇದರ ಮುಖ್ಯ ಕಾರಣ. ಬೆಣ್ಣೆ ತೆಗೆದ ಹಾಲಿನಂಥ ಪ್ರೋಟೀನಿನ ಆಹಾರ ಕೊಡುವ ಸಕಾಲದ ಚಿಕಿತ್ಸೆಯಿಂದ ಈ ರೋಗಿಗಳು ಗುಣವಾಗುವರು.

**ಅವಶ್ಯವಾದ, ಅವಶ್ಯವಲ್ಲದ ಅಮೈನೋ ಆಮ್ಲಗಳು :** ಬದುಕಿರುವ ಜೀವಿಗಳು ಬೆಳೆವಣಿಗೆ, ಪಾಲನೆಗಳ ಅಳವಿನಲ್ಲಿ ಒಂದೊಂದೂ ಬೇರೆ ಬೇರೆ. ಕೆಳದರ್ಜೆಯ ಜೀವಿಗಳೂ ಉನ್ನತ ಸಸ್ಯಗಳ ಕಾರ್ಬನ್ ಡೈಆಕ್ಸೈಡ್, ಅಮೋನಿಯ ಸಕ್ಕರೆಗಳು, ಗಂಧಕದ ಸಂಯುಕ್ತಗಳಂಥ ಸರಳ ವಸ್ತುಗಳಿಂದ ಅಮೈನೋ ಆಮ್ಲಗಳನ್ನು ತಯಾರಿಸಿಕೊಳ್ಳಬಲ್ಲವು. ಉನ್ನತ ಜೀವಿಗಳಾದ ಮನುಷ್ಯನಲ್ಲೂ ಇತರ ಪ್ರಾಣಿಗಳಲ್ಲೂ ಈ ಅಳವು ಒಂದಿಷ್ಟು ಕಳೆದಿದೆ. ಕೆಲವು ಅಮೈನೋ ಆಮ್ಲಗಳಂತೂ ಶರೀರದಲ್ಲಿ ತಯಾರಾಗುವುದೇ ಇಲ್ಲ. ಹೀಗೆ ಅವಶ್ಯವಾದ ಬೇಕೇಬೇಕಿರುವ ಅಮೈನೋ ಆಮ್ಲಗಳಲ್ಲಿ ಯಾವ ಒಂದು ಇಲ್ಲದಿದ್ದರೂ ಪುಷ್ಟಿಗೆಡುತ್ತದೆ. ಆದ್ದರಿಂದ ಅಂಥವನ್ನು ಆಹಾರದಲ್ಲಿ ಒದಗಿಸಲೇಬೇಕು. ಒಬ್ಬ ಹರೆಯದವನಿಗೆ 8 ಎಡಮುರಿ ಅಮೈನೋ ಆಮ್ಲಗಳು (ಟ್ರಿಪ್ಟೋಫೇನ್, ಫೀನೈಲ್‌ಅಲನೀನ್, ಲೈಸೀನ್, ತ್ರಿಯೊನೀನ್, ವ್ಯಾಲೀನ್, ಮೆತಿಯೊನೀನ್, ಲ್ಯೂಸೀನ್, ಐಸೊಲ್ಯೂಸೀನ್) ಬೇಕೇಬೇಕು. ಮಗುವಿಗೆ ಹಿಸ್ಟಿಡೀನ್, ಅರ್ಜಿನೀನ್‌ಗಳು ಅತ್ಯಗತ್ಯ. ಉಳಿದ ಅಮೈನೋ ಆಮ್ಲಗಳು (ಅಲನೀನ್, ಅಸ್ಪಾರ್ಟಿಕ್ ಆಮ್ಲ, ಸಿಸ್ಟೀನ್, ಗ್ಲುಟಾಮಿಕ್ ಆಮ್ಲ, ಗ್ಲೈಸೀನ್, ಹೈಡ್ರಾಕ್ಸಿ ಪ್ರೋಲೀನ್, ಪ್ರೋಲೀನ್, ಸೇರೀನ್, ಟೈರೊಸೀನ್ ಇತ್ಯಾದಿ) ಅಷ್ಟು ಬೇಕಾದವಲ್ಲ. ಕೊಡದಿದ್ದರೂ ಆಗುತ್ತದೆ. ಅವು ಶರೀರದಲ್ಲೇ ತಯಾರಾಗಬಹುದು. ಅಂದ ಮಾತ್ರಕ್ಕೆ ಬಹಳ ಕಾಲ ಇವನ್ನು ಕೊಡದೆಯೇ ಇರಬಹುದೆಂದು ಅರ್ಥವಲ್ಲ. ತೃಪ್ತಿಕರ ಬೆಳೆವಣಿಗೆ, ಪೋಷಣೆಗೆ ಎಲ್ಲ ಅಮೈನೋ ಆಮ್ಲಗಳನ್ನು ಒಟ್ಟಿಗೆ ಕೊಡುತ್ತಿರಲೇಬೇಕು.

**ಪ್ರೋಟೀನ್ ತಯಾರಿಕೆ :** ಈ ಹಿಂದೆ ಹೇಳಿದಂತೆ ಅಮೈನೋ ಆಮ್ಲಗಳ ಮೊದಲ ಕೆಲಸ ದೇಹದ ಪ್ರೋಟೀನುಗಳ ತಯಾರಿಕೆ. ಪ್ರೋಟೀನಿಗಾಗಿ ಬೇಕಿರುವ ಎಲ್ಲ ಅಮೈನೋ ಆಮ್ಲಗಳೂ ಒಟ್ಟಾಗಿ ದೊರೆತರೆ ಮಾತ್ರ ಶರೀರದಲ್ಲಿ ಅವುಗಳ ತಯಾರಿಕೆ ಬಲುಬೇಗನೆ ಆಗುವುದು. ಅರೆಬರೆ ಪ್ರೋಟೀನನ್ನು ತಯಾರಿಸಿ ಇಟ್ಟುಕೊಂಡು, ಕೊರೆಯಾಗಿರುವ ಅಮೈನೋ ಆಮ್ಲಗಳಿಗಾಗಿ ಶರೀರ ಕಾದಿರದು. ಪ್ರೋಟೀನಿನಲ್ಲಿ ಅಮೈನೋ ಆಮ್ಲಗಳು ಒಂದು ಗೊತ್ತಾದ ಕ್ರಮದ ಜೋಡಣೆ ವಂಶಗುಣಗಳ ತಿಳುವಳಿಕೆಯಂತೆ ಇರುವುದು. ಇಲ್ಲಿಯ ತನಕ ಗೊತ್ತಿರುವಂತೆ, ತಿಳುವಳಿಕೆ ಪ್ರೋಟೀನಿನ ಮೊದಲ ರಚನಾಕ್ರಮವನ್ನು ನಿರ್ಧರಿಸುವುದು. ಪ್ರೋಟೀನಿನ ಆಮೇಲಿನ ರಚನೆ ಈ ಮೊದಲ ಕ್ರಮವನ್ನೆ ಅವಲಂಬಿಸಿರುವುದು. ಜಲವಿಶ್ಲೇಷಣೆ ಆದಾಗ ಎಲ್ಲ ಪ್ರೋಟೀನುಗಳೂ ಅಮೈನೋ ಆಮ್ಲಗಳನ್ನು ಕೊಡುವುವು. ಅನೇಕ ಪ್ರೋಟೀನುಗಳಿಂದ ಬರುವ ಅಮೈನೋ ಆಮ್ಲಗಳು ಬಹುಮಟ್ಟಿಗೆ ಒಂದೇ ಬಗೆಯವು. ಇಷ್ಟಾದರೂ ಪ್ರೋಟೀನುಗಳ ನಿಜಕೆಲಸಗಳೂ ಗುಣಗಳೂ ಒಂದೊಂದೂ ಬೇರೆ ಬೇರೆ. ಕೆಲವು ನಾರಿನಂತಿದ್ದು ಕರಗದಿರುವುವು (ಕೂದಲು, ರೇಷ್ಮೆ, ಅಂಟುಜನಕ). ನೀರಲ್ಲೂ ಉಪ್ಪಿನ ದ್ರಾವಣಗಳಲ್ಲೂ ಕೆಲವು (ಆಲ್ಬುಮಿನ್, ಗ್ಲಾಬ್ಯುಲಿನ್‌ಗಳು, ಕಿಣ್ವಗಳು) ಕರಗುತ್ತವೆ. ಪ್ರೋಟೀನುಗಳ ಹುಟ್ಟುಗುಣದಲ್ಲಿ ಕಂಡುಬರುವ ವಿವಿಧತೆಗೆ ಅವುಗಳಲ್ಲಿರುವ ಕೊನೆಯ ಪಕ್ಷ 20 ಬೇರೆ ಬೇರೆ ಅಮೈನೋ ಆಮ್ಲಗಳು ಕಾರಣ. ಹೀಗಾಗಿ ಪ್ರೋಟೀನುಗಳ ತಯಾರಿಕೆಯ ಕ್ರಮದಲ್ಲಿ ಈ ಇಪ್ಪತ್ತು ಅಮೈನೋ ಆಮ್ಲಗಳನ್ನು ಅಸಂಖ್ಯ ಬಗೆಗಳಲ್ಲಿ ಜೋಡಿಸಬಹುದು.

ಅಮೈನೋ ಆಮ್ಲಗಳು ಪೆಪ್ಟೈಡ್ ಕಟ್ಟುಗಳಾಗುವ ಮುಂಚೆ ಪಟುಗೊಳ್ಳಬೇಕು (ಆಕ್ಟಿವೇಟೆಡ್). ಇದಕ್ಕೆ ಬೇಕಾದ ಶಕ್ತಿ ಶರೀರದ ರಾಸಾಯನಿಕ ಭಂಡಾರವಾದ ಅಡಿನೊಸೀನ್ ಟ್ರೈ ಫಾಸ್ಫೇಟ್‌ನಿಂದ (ATP) ಬರುವುದು. ಹೀಗೆ ಪಟುಗೊಂಡು ಒಂದೊಂದು ಅಮೈನೋ ಆಮ್ಲವೂ ಆಮೇಲೆ (ಕರಗುವ) ಒಂದು ರಿಬೋನ್ಯೂಕ್ಲಿಯಿಕಾಮ್ಲದೊಡನೆ (S.RNA) ಕೂಡಿಕೊಳ್ಳುವುದು. ಈ ಬೇರೆ ಬೇರೆ RNA ಅಮೈನೋ ಆಮ್ಲಗಳ ಸಂಕೀರ್ಣಗಳು ಒಂದು ಮೊದಲೇ ಗೊತ್ತಾದ ರೀತಿಯಲ್ಲಿ ಒಂದು ಮೂಲ ಅಚ್ಚಿನ ಮೇಲೆ ಜೋಡಣೆಯಾಗುವುವು. ಮೆಸೆಂಜರ್–RNA ಎಂಬ ಈ ಮೂಲ ಅಚ್ಚು ಯಜಮಾನ ಅಣುವಾದ ಡಿಆಕ್ಸಿರೈಬೊನ್ಯೂಕ್ಲಿಯಿಕಾಮ್ಲದ (DNA) ಮರುಪ್ರತಿ. DNA ಜೀವಕೋಶದ ನ್ಯೂಕ್ಲಿಯಸ್‌ನಲ್ಲಿ ಮಾತ್ರ ಇರುವುದು. ಆದರೆ ಸಾಧಾರಣವಾಗಿ ಪ್ರೋಟೀನ್ ತಯಾರಾಗುವುದು ಸೈಟೊಪ್ಲಾಸಮಿನಲ್ಲಿ. ನ್ಯೂಕ್ಲಿಯಸಿನ ಹೊರಗಡೆ ಇರುವ ರೈಬೊಸೋಮ್‌ಗಳಲ್ಲಿ. ತಳಿಯ ತಿಳುವಳಿಕೆಗೆ ಭಂಡಾರವಾಗಿದ್ದು, ಪ್ರೋಟೀನು ತಯಾರಾಗುವ ಎಡೆಗೆ ತಳಿಯ ತಿಳುವಳಿಕೆಯನ್ನು ಈಗ ಟ್ರಾನ್ಸ್‌ಕ್ರಿಪ್ಷನ್ DNA ತನ್ನ ಮರುಪ್ರತಿಯನ್ನು ತಾನೇ ತಯಾರಿಸುತ್ತದೆ. ಈ ತಿಳುವಳಿಕೆಗೆ ಅನುಸಾರವಾಗಿ ಮೂಲ ಅಚ್ಚಿಗೆ ಅಮೈನೋ ಆಮ್ಲಗಳಲ್ಲಿ ಅಂಟಿಕೊಳ್ಳುತ್ತವೆ. ಪೆಪ್ಟೈಡು ಆಗುವಂತೆ ಪಟುಗೊಂಡ ಅಮೈನೋ ಆಮ್ಲಗಳ ಒಂದರೊಡನೊಂದರ

ವರ್ತನೆಯಿಂದ ಪ್ರೋಟೀನ್ ರೂಪಗೊಂಡು ಮೂಲ ಅಚ್ಚಿನಿಂದ ಸುಲಿದುಬೀಳುತ್ತದೆ. ತಳಿಸಂಕೇತದ ಅರ್ಥವನ್ನು ಬಿಡಿಸಿದುದು ಇತ್ತೀಚಿನ ವರ್ಷಗಳಲ್ಲಿನ ಗಮನಾರ್ಹ ವಿಜ್ಞಾನದ ಮುನ್ನಡೆಗಳಲ್ಲಿ ಒಂದು. ಬೇರೆ ಬೇರೆ ಬಗೆಗಳಲ್ಲಿ ಅಣಿಯಾಗಿರುವ ಅಡಿನೀನ್, ಗ್ವಾನೀನ್, ಸೈಟೊಸೀನ್ ಮತ್ತು ತೈಮೀನ್‌ಗಳೆಂಬ ಪ್ರತ್ಯಾಮ್ಲಗಳಿರುವ ನಾಲ್ಕು ನ್ಯೂಕ್ಲಿಯೊಟೈಡು ಗಳಿಂದ DNA ಆಗಿದೆ. ಈ ನ್ಯೂಕ್ಲಿಯೊಟೈಡುಗಳ ಜೋಡಣೆ ಕ್ರಮದಲ್ಲಿ ತಳಿಸಂಬಂಧದ ತಿಳುವಳಿಕೆ ನೆಲೆಸಿರುವುದು. ಒಂದು ಅಮೈನೋ ಆಮ್ಲವಾದ ಮೇಲೆ ಮೂರು ನ್ಯೂಕ್ಲಿಯೊ ಟೈಡುಗಳು ಕ್ರಮವಾಗಿ ಇರುತ್ತವೆ. ವಿಶೇಷ ವಿಧಾನಗಳಿಂದ ಪ್ರೋಟೀನಿನ ಒಂದೊಂದು ಅಮೈನೋ ಆಮ್ಲಕ್ಕೂ ಈ ತ್ರಿವಳಿ (ಟ್ರಿಪ್‌ಲೆಟ್) ಸಂಕೇತವನ್ನು ಲೆಕ್ಕಹಾಕಲಾಗಿದೆ.

ಹೀಗೆ ಜಟಿಲವಾದ ಆಹಾರದ ಪ್ರೋಟೀನನ್ನು ಸಾಮಾನ್ಯ ವಸ್ತುಗಳಾದ ಮೂಲ ಅಮೈನೋ ಆಮ್ಲಗಳನ್ನಾಗಿ ಮೊದಲು ಒಡೆದಿಳಿಸಿ ತಳಿವಸ್ತುವಾದ DNA ನಿರ್ದೇಶನದಂತೆ ಶರೀರ ಬೇರೆ ಬೇರೆ ನಿಜಗೆಲಸಗಳನ್ನು ನಡೆಸಲು ಬೇಕಾದ ಪ್ರೋಟೀನುಗಳನ್ನು ಮತ್ತೆ ಕಟ್ಟುವ ವಿಶೇಷ ಅಳವನ್ನು ಈ ನಮ್ಮ ಶರೀರ ತೋರುತ್ತದೆ. ಸಳಿಯಿಂದಾಗುವ ಜೀವವಸ್ತು ಕರಣದ ತಾರುಮಾರುಗಳು DNAಯ ಉತ್ಪರಿವರ್ತನೆ (ಮ್ಯುಟೇಷನ್) ಆಗುತ್ತವೆ. ಅಂದರೆ ನ್ಯೂಕ್ಲಿಯೊಟೈಡುಗಳ ಜೋಡಣೆ ಕ್ರಮಗೆಟ್ಟಾಗ ತಪ್ಪು ಪ್ರೋಟೀನ್ ರೂಪುಗೊಳ್ಳುವುದು. ಯಾವ ಪ್ರೋಟೀನಿಗೂ ಸಂಕೇತ ಕೊಡದಿರಲೂಬಹುದು. ಹೇಗಾದರೂ ಸರಿಯೆ ಗೊತ್ತಾದ ಕಿಣ್ವದ ಪ್ರೋಟೀನು ತಯಾರಾಗದೆ ಶಾಶ್ವತವಾದ ತಳಿನ್ಯೂನತೆ ಉಂಟಾಗುವುದು.

(ಎ.ಎನ್.ಆರ್.)

**ಅಮೈಲ್ ನೈಟ್ರೈಟ್ :** ರಕ್ತನಾಳಗಳು ಹಿಗ್ಗಿ ಉಂಟು ಮಾಡುವ ಗುಂಡಿಗೆಯ ರೋಗದಿಂದೇಳುವ ಎದೆಸೆರೆಬಿಗಿತವನ್ನು (ಅಂಜೈನ ಪೆಕ್ಟೊರಿಸ್) ಕಳೆಯಲು ಬಳಸುವ ದ್ರವಮದ್ದು. ಹಿಟ್ಟು, ನೈಟ್ರಿಕಾಮ್ಲಗಳಿಂದ ಬರುವ ನೈಟ್ರಸ್ ಆವಿಯನ್ನು ಬೆಚ್ಚನೆಯ ಐಸೊಅಮೈಲ್ ಮದ್ಯಸಾರದೊಳಗೆ ಹಾಯಿಸುವುದರಿಂದಲೋ 15 ಪಾಲು ನೀರಲ್ಲಿರುವ 26 ಪಾಲು ಐಸೊಅಮೈಲ್ ಮದ್ಯಸಾರವನ್ನು ಕೂಡಿಸಿ ಬಟ್ಟಿಯಿಳಿಸುವುದರಿಂದಲೋ ತಯಾರಾಗುತ್ತದೆ. ತುಸು ಚೊಕ್ಕ ಹಳದಿ ಬಣ್ಣದ, ಬಲು ಸುಲಭವಾಗಿ ಆರಿಹೋಗುವ, ಹತ್ತಿಕೊಂಡು ಉರಿಯುವ, (ಕುದಿವ ಮಟ್ಟ $95^0 - 96^0$ ಸೆಂ.ಗ್ರೇ). ವಿಶಿಷ್ಟಚೊಗರಿನ ಹಣ್ಣಿನ ವಾಸನೆಯ ದ್ರವ. ಹತ್ತಿರ ಬೆಂಕಿ, ಉರಿ ಇದ್ದಲ್ಲಿ ಸಿಡಿಯಬಹುದು. ಇದರ ರಾಸಾಯನಿಕ ಸೂತ್ರ $C_5H_{11}ONO$ ನೀರಲ್ಲಿ ವಿಲೀನವಾಗದಿದ್ದರೂ ಸಲೀಸಾಗಿ ಮದ್ಯಸಾರ, ಈಥರ್, ಹಿಮದಂದ, ಅಸೆಟಿಕಾಮ್ಲ, ಕ್ಲೋರೋಫಾರ್ಮ್, ಬೆಂಜೀನ್‌ಗಳಲ್ಲಿ ವಿಲೀನವಾಗುತ್ತದೆ. ಬಹುಮಟ್ಟಿಗೆ ಗುಂಡಿಗೆ ರೋಗಿಗಳು ಅನುಭವಿಸುವ ಮಾರಕ ಎದೆಶೂಲೆಯನ್ನು ಈ ದ್ರವ ಸರಕ್ಕನೆ ಕಳೆವುದು. ಶೂಲೆ ಬರುವ ಮುನ್ಸೂಚನೆ ಕಂಡಕೂಡಲೇ ತೆಗೆದುಕೊಳ್ಳಲು, ತೆಳುವಾದ ಗಾಜಿನ ಕಿರುಸೀಸೆಗಳಲ್ಲಿರುವ ಈ ದ್ರವವನ್ನು ರೋಗಿಗಳು ಯಾವಾಗಲೂ ಕಿಸೆಯಲ್ಲಿ ಇಟ್ಟುಕೊಂಡಿರುವರು. ಬೇಕೆಂದಾಗ ಕೈವಸ್ತ್ರದ ಪದರಗಳಲ್ಲಿರಿಸಿ ಅಮುಕಿದಾಗ ಟಪಾರೆಂದು ಸದ್ದಾಗಿ ಒಡೆದು (0.3 ಮಿಲೀ) ದ್ರವ ಕೂಡಲೇ ಆವಿಯಾಗಿ ಬರುವುದನ್ನು ಮೂಗಿನ ಬಳಿ ಹಿಡಿದು ಉಸಿರಲ್ಲಿ ಸೇದಿಕೊಳ್ಳುವರು. ಇದರ ಪ್ರಭಾವ ಸರಕ್ಕನೆ ಕಾಣಿಸಿಕೊಂಡು 3 ಮಿನಿಟು ಹೊತ್ತು ಇರಬಹುದು. ಹಲವು ವೇಳೆ ಮೊಗ ಕೆಂಪೇರಿ, ತಲೆನೋವಿನ ಸಿಡಿತ, ತಲೆತಿರುಗೂ ಆಗುವುದು. ಇದ್ದಕ್ಕಿದ್ದಂತೆ ರಕ್ತದ ಒತ್ತಡ ಕುಸಿಯುತ್ತದೆ. ಕೋಣೆಯೆಲ್ಲ ಇದರ ಕಂಪು ಹರಡಿಕೊಳ್ಳುತ್ತದೆ. ಸಯನೈಡುಗಳ ವಿಷವೇರಿಕೆಯಲ್ಲೂ ಇದರ ಬಳಕೆಯಾಗುವುದು. ಡೈಯಜೋನಿಯಂ, ಐಸೊನೈಟ್ರೊಸೊ ಸಂಯುಕ್ತಗಳನ್ನು ತಯಾರಿಸಲೂ ತುಸುಮಟ್ಟಿಗೆ ಬಳಸುವುದುಂಟು. **(ನೋಡಿ– ಎದೆಸೆರೆಬಿಗಿತ)** (ಡಿ.ಎಸ್.ಎಸ್.)

**ಅಮೋಘವಜ್ರ :** ಭಾರತದಿಂದ ಚೀನದೇಶಕ್ಕೆ ಹೋಗಿ ಬೌದ್ಧಧರ್ಮವನ್ನು ಪ್ರಚಾರ ಮಾಡಿದವರಲ್ಲಿ ಪ್ರಮುಖ. ಉತ್ತರ ಭಾರತದ ಬ್ರಾಹ್ಮಣವಂಶಕ್ಕೆ ಸೇರಿದವ. ತನ್ನ 15ನೆಯ ವಯಸ್ಸಿನಲ್ಲೇ ವಜ್ರಬೋಧಿಯಿಂದ ಪ್ರಭಾವಿತನಾಗಿ ಬೌದ್ಧನಾದ. ಚೀನದೇಶಕ್ಕೆ ಪ್ರ.ಶ. 724ರಲ್ಲಿ ಹೋಗಿ ಎಂಟು ವರ್ಷಗಳ ಕಾಲ ಅಲ್ಲಿಯೇ ನೆಲೆಸಿದ್ದ. ಅನಂತರ ಬೌದ್ಧಗ್ರಂಥಗಳ ಶೋಧನೆಗಾಗಿ ಸಿಂಹಳದ್ವೀಪಕ್ಕೆ ತೆರಳಿದ. ಸಿಂಹಳದ ದಂತವಿಹಾರದಲ್ಲಿದ್ದು ಅನೇಕ ಅಮೂಲ್ಯ ಬೌದ್ಧಗ್ರಂಥಗಳ ಪ್ರತಿಗಳನ್ನು ತಯಾರಿಸಿಕೊಂಡು ಪ್ರ.ಶ. 746ರಲ್ಲಿ ಚೀನದೇಶಕ್ಕೆ ಹಿಂದಿರುಗಿದ. ಅನಂತರ ಚೀನದಲ್ಲಿ ಮರಣಹೊಂದುವವರೆಗೂ (ಪ್ರ.ಶ. 774) ತಾನು ತಂದಿದ್ದ ಬೌದ್ಧಗ್ರಂಥಗಳನ್ನು ಚೀನಿ ಭಾಷೆಗೆ ಭಾಷಾಂತರಿಸುವುದರಲ್ಲಿ ನಿರತನಾಗಿದ್ದ. ವಜ್ರಯಾನಪಂಥದ ಅತ್ಯಂತ ಮುಖ್ಯ ಪಂಡಿತನೆಂದು ಹೆಸರುವಾಸಿಯಾದ ಈತ 100ಕ್ಕೂ ಹೆಚ್ಚು ಗ್ರಂಥಗಳನ್ನು ಭಾಷಾಂತರಿಸಿದ್ದಾನೆ. (ಎ.ವಿ.ಎನ್.)

**ಅಮೋಘವರ್ಷ I :** ರಾಷ್ಟ್ರಕೂಟ ವಂಶದ ರಾಜ (ಸು.814–78). 3ನೆಯ ಗೋವಿಂದನ ಮಗ. ಇವನ ಮೊದಲ ಹೆಸರು ಶರ್ವ. ಅಮೋಘವರ್ಷ ಎಂಬುದು ಪಟ್ಟಾಭಿಷಿಕ್ತನಾದ ಮೇಲೆ ಇಟ್ಟುಕೊಂಡ ಹೆಸರು. ಈತನಿಗೆ ನೃಪತುಂಗ, ರಟ್ಟಮಾರ್ತಾಂಡ, ವೀರನಾರಾಯಣ, ಅತಿಶಯ ಧವಳ ಎಂಬ ಬಿರುದುಗಳೂ ಇದ್ದವು.

ಗೋವಿಂದ ವಿಂಧ್ಯ ಪರ್ವತದ ತಪ್ಪಲಲ್ಲಿ ಶ್ರೀಭವನದಲ್ಲಿ ಬೀಡುಬಿಟ್ಟಿದ್ದಾಗ ಅಮೋಘ ವರ್ಷ ಹುಟ್ಟಿದನೆಂದು ಸಂಜಾನ ಶಾಸನದಲ್ಲಿ ಹೇಳಿದೆ. 803ರ ಮಣ್ಣೆಯ ಶಾಸನದಲ್ಲಿ ಗೋವಿಂದ ಶ್ರೀಭವನದಲ್ಲಿದ್ದ ಸಂಗತಿ ಉಕ್ತವಾಗಿದೆಯಾದ ಕಾರಣ ಅಮೋಘವರ್ಷ ಸು.800ರಲ್ಲಿ ಹುಟ್ಟಿರಬಹುದು. 814ರಲ್ಲಿ ಗೋವಿಂದ ಮೃತನಾದ. ಆಗ ಪಟ್ಟಕ್ಕೆ ಬಂದ ಅಮೋಘವರ್ಷ 14 ವರ್ಷದ ಬಾಲಕ. ಆದರೆ ಗೋವಿಂದ ತೀರಿಕೊಳ್ಳುವ ಮೊದಲು ಗುಜರಾತಿನಲ್ಲಿದ್ದ ತನ್ನ ತಮ್ಮನ ಮಗ ಕರ್ಕನನ್ನು ರಾಜಧಾನಿಗೆ ಕರೆಸಿ, ಅಮೋಘವರ್ಷ ವಯಸ್ಸಿಗೆ ಬರುವವರೆಗೂ ರಾಜ್ಯಸೂತ್ರಗಳನ್ನು ನಿರ್ವಹಿಸುವಂತೆ ವ್ಯವಸ್ಥೆ ಮಾಡಿದ್ದ.

ಅಮೋಘವರ್ಷನ ಆಳಿಕೆಯ ಮೊದಲ ಮೂರು ವರ್ಷಗಳಲ್ಲಿ ಯಾವ ಘಟನೆಗಳು ಆಗಲಿಲ್ಲ. ಅನಂತರ ಈತ ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ಸಾಮ್ರಾಟ ಇನ್ನೂ ಹದಿವಯಸ್ಸಿನವನಾದ್ದರಿಂದ, ರಾಷ್ಟ್ರಕೂಟ ಮತ್ತು ಚಾಳುಕ್ಯ ಮನೆತನದ ಹಲವರು ಬಂಡೆದ್ದು ರಾಜ್ಯಾಕ್ರಮಣ ಮಾಡುವ ಸನ್ನಾಹದಲ್ಲಿದ್ದರು (ಸು.817). ಇವರಲ್ಲಿ ಪ್ರಾಯಶಃ ಸ್ತಂಭನ ಮಗ ಶಂಕರಗಣ ಮತ್ತು ಹಿಂದೆ ಗೋವಿಂದನಿಂದ ಪರಾಜಿತನಾಗಿದ್ದ ಪೂರ್ವ ಚಾಳುಕ್ಯ ರಾಜ ಇಮ್ಮಡಿ ವಿಜಯಾದಿತ್ಯ ಮುಖ್ಯ ಪಾತ್ರ ವಹಿಸಿರಬೇಕು. ಇವರ ಕಾರ್ಯಾಚರಣೆಗಳಿಂದ ಅಮೋಘವರ್ಷ ಕೆಲಕಾಲ ರಾಜ್ಯವನ್ನು ತ್ಯಜಿಸಿಹೋಗಬೇಕಾದ ಪರಿಸ್ಥಿತಿಯೂ ಒದಗಿದಂತೆ ತೋರುತ್ತದೆ. ಆದರೆ, ವಡೋದರ ತಾಮ್ರಶಾಸನದಲ್ಲಿ ಹೇಳಿರುವಂತೆ, ಗುಜರಾತಿನ ರಾಜ ಕರ್ಕ ಬಂಡುಕೋರರನ್ನು ಗೆದ್ದು ಅಮೋಘವರ್ಷನನ್ನು ಸಿಂಹಾಸನಕ್ಕೇರಿಸಿದ (ಸು.821). ಈ ಕಾಲದಲ್ಲಿ ಪಾತಾಮಲ್ಲ (ಈತನೇ ಕರ್ಕನಿರಬಹುದು) ಶತ್ರುಗಳನ್ನು ನಿಗ್ರಹಿಸಿ, ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ ಅಮೋಘವರ್ಷನನ್ನು ಅವನ ವಂಶಾನುಗತ ಸಿಂಹಾಸನದ ಮೇಲೆ ಉಪಸ್ಥಿತಗೊಳಿಸಿದನೆಂದು ಸಂಜಾನ ತಾಮ್ರಶಾಸನ ತಿಳಿಸುತ್ತದೆ.

ಅಮೋಘವರ್ಷನ ಆಳಿಕೆಯ ಮೊದಲ ವರ್ಷಗಳಲ್ಲಿ ರಾಜ್ಯದೊಳಗಲ್ಲದೆ ಹೊರಗೂ ಶತ್ರುವರ್ಧನೆಯಾಗುತ್ತಿತ್ತು. ಗಂಗ ಎರಡನೆಯ ಶಿವಮಾರ ಸಾಮ್ರಾಟನ ಮೇಲೆ ದಂಗೆಯೆದ್ದ (ಸು.816). ಪೂರ್ವಚಾಳುಕ್ಯವಂಶದ ಇಮ್ಮಡಿ ವಿಜಯಾದಿತ್ಯ ಸಹ ಸ್ವತಂತ್ರನಾಗಿದ್ದ. ಆದರೆ ಅಮೋಘವರ್ಷ ಕರ್ಕ ಮತ್ತು ದಂಡನಾಯಕರ ಸಹಾಯದಿಂದ ಶಿವಮಾರನನ್ನು ಸೋಲಿಸಿದ. ಆತ ಕಾಗಿಮೊಗೆಯೂರು ಎಂಬಲ್ಲಿ ನಡೆದ ಯುದ್ಧದಲ್ಲಿ ಮಡಿದನೆಂದು ತೋರುತ್ತದೆ. ಇವನ ಮಗ ರಾಚಮಲ್ಲ ಪುನಃ ತನ್ನ ರಾಜ್ಯದ ದಕ್ಷಿಣ ಭಾಗಗಳನ್ನು ರಾಷ್ಟ್ರಕೂಟರಿಂದ ಗಳಿಸಿಕೊಂಡ. ಅತ್ತ ವಿಜಯಾದಿತ್ಯ ಸು.15 ವರ್ಷಗಳ ಕಾಲ ನಿರ್ಬಾಧಿತನಾಗಿ ಉಳಿದ. ಸು.830ರಲ್ಲಿ ಅಮೋಘವರ್ಷ ವೆಂಗಿಯ ಮೇಲೆ ನಡೆದು ವಿಂಗವಲ್ಲೀ ಕದನದಲ್ಲಿ ಚಾಳುಕ್ಯರನ್ನು ಸದೆಬಡಿದು ರಾಜ್ಯಾಕ್ರಮಣ ಮಾಡಿದ. ದಿನೇದಿನೇ ಪ್ರವರ್ಧಮಾನಕ್ಕೆ ಬರುತ್ತಿದ್ದ ಗಂಗ ರಾಚಮಲ್ಲನನ್ನು ಅಮೋಘವರ್ಷನ ದಂಡನಾಯಕ ಬಂಕೆಯ ಕಾವೇರಿಯಿಂದ ದಕ್ಷಿಣಕ್ಕೆ ಓಡಿಸಿದ (ಸು.830). ಇತ್ತ ಗಂಗ ಚಾಳುಕ್ಯರ ತೊಂದರೆಗಳನ್ನು ನಿವಾರಿಸಿಕೊಳ್ಳುತ್ತಿದ್ದಂತೆಯೇ ಗುಜರಾತಿನ ರಾಷ್ಟ್ರಕೂಟ ಮನೆತನದ ಅರಸ 1ನೆಯ ಧ್ರುವ ಇವನ ಮೇಲೆ ಯುದ್ಧ ಸಾರಿದ. ಹಿಂದೆ ಈ ಮನೆತನದವರು ನಿಷ್ಠಾವಂತ ಸಾಮಂತರಾಗಿದ್ದರೂ ಈ ಕಲಹವೇಕೆ ಉಂಟಾಯಿತೆಂದು ತಿಳಿಯುವುದಿಲ್ಲ. ಅಮೋಘವರ್ಷ ಧ್ರುವನನ್ನು ಸೋಲಿಸಿದರೂ ಅವನ ಮಗ ಅಕಾಲವರ್ಷ ಪುನಃ ಪ್ರಬಲನಾದ. ಆಗ ಅಮೋಘವರ್ಷ ದಕ್ಷಿಣದಲ್ಲಿ ಕಾರ್ಯನಿರತನಾಗಿದ್ದ ತನ್ನ ನೆಚ್ಚಿನ ದಂಡನಾಯಕ ಬಂಕೆಯ ನನ್ನು ಗುಜರಾತಿಗೆ ಕಳುಹಿಸಿದ. ಈ ಹೊತ್ತಿಗೆ ಗುಜರಾತದ ರಾಷ್ಟ್ರಕೂಟ ಸಿಂಹಾಸನವನ್ನೇರಿದ್ದ 2ನೆಯ ಧ್ರುವನನ್ನು ಬಂಕೆಯ ಸೋಲಿಸಿದ. ಆದರೆ ದಕ್ಷಿಣದಲ್ಲಿ ಬಂಕೇಶನಂಥ ನಾಯಕರಿಲ್ಲದ ಸಂದರ್ಭದಲ್ಲಿ ಗಂಗ ರಾಚಮಲ್ಲ ಮತ್ತೆ ಗಂಗವಾಡಿಯ ಬಹುಭಾಗವನ್ನು ಆಕ್ರಮಿಸಿದ. ಪೂರ್ವದಲ್ಲಿ ವೆಂಗಿಯ 3ನೆಯ ವಿಜಯಾದಿತ್ಯನ ಸೇನಾನಿ ಪಾಂಡಿರಂಗ ರಾಷ್ಟ್ರಕೂಟರನ್ನು ಹಿಮ್ಮೆಟ್ಟಿಸಿ, ವಿಜಯಾದಿತ್ಯನಿಗೆ ವೆಂಗಿ ರಾಜ್ಯವನ್ನು ಸಾಧಿಸಿಕೊಟ್ಟ. ಪೂರ್ವ ಚಾಳುಕ್ಯರು ರಾಷ್ಟ್ರಕೂಟ ರಾಜ್ಯಕ್ಕೆ ಮತ್ತೆ ಮುನ್ನುಗ್ಗಲಿಲ್ಲವಾಗಿ, ಅಮೋಘವರ್ಷನೂ ತೆಪ್ಪಗಾದ.

ಹಲವು ಕಡೆಗಳಿಂದ ತೊಂದರೆಗಳನ್ನು ಸತತವಾಗಿ ಎದುರಿಸಬೇಕಾಗಿ ಬಂದ ಅಮೋಘ ವರ್ಷ ಯುದ್ಧಕ್ಕಿಂತಲೂ ಸಂಧಾನ ಹೆಚ್ಚು ಅಪೇಕ್ಷಿತವೆಂದು ಅರಿತಿರಬೇಕು. ಸು.860ರಲ್ಲಿ ತನ್ನ ಮಗಳು ಚಂದೊಬ್ಬಲಬ್ಬೆಯನ್ನು ಗಂಗ ರಾಜಕುಮಾರ ಬೂತುಗನಿಗೆ ಮದುವೆ ಮಾಡಿಕೊಟ್ಟು ಅವರೊಡನೆ ಶಾಂತಿ ಸಾಧಿಸಿಕೊಂಡ ಹಾಗೆಯೇ ಚೇದಿ ರಾಜಕುಮಾರಿಯನ್ನು ತನ್ನ ಮಗನಿಗೆ ತಂದುಕೊಂಡು ಅತ್ತಲೂ ಸುಸಂಬಂಧವನ್ನು ಬೆಳೆಸಿದ. ಮಾನ್ಯಖೇಟದ ಹಾಗೂ ಗುಜರಾತಿನ ರಾಷ್ಟ್ರಕೂಟ ವಂಶದವರಿಗೆ, ಉತ್ತರದಲ್ಲಿ ಸಾಮಾನ್ಯ ವೈರಿಗಳಾಗಿದ್ದ ಗೂರ್ಜರ ಪ್ರತಿಹಾರರು ಇವರ ಮೇಲೆ ಬೀಳುವ ಸನ್ನಾಹವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಅಮೋಘವರ್ಷ ಮತ್ತು ಗುಜರಾತಿನ ರಾಷ್ಟ್ರಕೂಟ 2ನೆಯ ಧ್ರುವ ಒಂದುಗೂಡಿದರು. ಜ್ಞಾತಿಕಲಹ ಕೊನೆಗೊಂಡಿತು (ಸು.860). ಕ್ಷಾತ್ರಸಾಧನೆಗಳ ದೃಷ್ಟಿಯಿಂದ ಅಮೋಘವರ್ಷನ ಆಳಿಕೆ ಇವನ ಪಿತೃ, ಪಿತಾಮಹರ ಹಿರಿಮೆಯನ್ನು ಮುಟ್ಟಲಾರದಾದರೂ ಇತರ ರಂಗಗಳಲ್ಲಿ

ಈತನು ನೀಡಿರುವ ಕಾಣಿಕೆ ಗಮನಾರ್ಹವಾದವು. ತನ್ನ 64 ವರ್ಷದ ದೀರ್ಘ ಆಳಿಕೆಯ ಕಾಲದಲ್ಲಿ ಸತತವಾಗಿ ಶತ್ರುಬಾಧೆಯನ್ನು ಈತ ಅನುಭವಿಸಿದರೂ ಪ್ರಜಾಕ್ಷೇಮಕ್ಕಾಗಿ, ಧರ್ಮೋದ್ಧಾರಕ್ಕಾಗಿ ಬಹು ಆಸಕ್ತಿಯನ್ನು ವಹಿಸಿದ್ದಂತೆ ತೋರುತ್ತದೆ. ಲೋಕೋಪದ್ರವ ಶಾಂತಿಗೆಂದು ತನ್ನ ಎಡಗೈ ಬೆರಳನ್ನೇ ಮಹಾಲಕ್ಷ್ಮಿಗೆ ಬಲಿಯಾಗಿ ಕೊಟ್ಟನೆಂದು ಇವನ ಸಂಜಾನ ತಾಮ್ರಶಾಸನದಲ್ಲಿ ಹೇಳಿದೆ. ಇವನ ತ್ಯಾಗದ ವಿಷಯ ಹಲವು ಕಾಲದವರೆಗೆ ಜನರ ನೆನಪಿನಲ್ಲಿದ್ದು, 17ನೆಯ ಶತಮಾನದ ಭಟ್ಟಾಕಳಂಕ ಈತನನ್ನು ಶಿಬಿ, ದಧೀಚಿಯರಿಗೆ ಹೋಲಿಸಿದ್ದಾನೆ. ಈತನ ಧರ್ಮನಿಷ್ಠೆ ಬಹು ಘನತರವಾಗಿದ್ದು, ಹಲವು ಬಾರಿ ಲೋಕವ್ಯವಹಾರದಲ್ಲಿ ಆಸಕ್ತಿಯನ್ನು ಕಳೆದುಕೊಂಡು ರಾಜ್ಯತ್ಯಾಗ ಮಾಡಿದಂತೆ ಕಾಣುತ್ತದೆ. ಅಮೋಘವರ್ಷ ಜೈನಮತಾವಲಂಬಿ. ಜಿನಸೇನಾಚಾರ್ಯ ಈತನ ಗುರು ಎಂಬ ವಿಷಯ ಗುಣಭದ್ರಾಚಾರ್ಯರ ಉತ್ತರ ಪುರಾಣದಿಂದ ತಿಳಿಯುತ್ತದೆ. ಇವನ ಮಗನಿಗೆ ಗುರುವಾಗಿದ್ದ ಗುಣಭದ್ರಾಚಾರ್ಯರೂ ಇವನ ಭಕ್ತಿ ಗೌರವಗಳಿಗೆ ಪಾತ್ರರಾಗಿದ್ದರು.

ಅಮೋಘವರ್ಷ ಸಾಹಿತ್ಯಪೋಷಕನೂ ಆಗಿದ್ದ. ಪ್ರಶ್ನೋತ್ತರಮಾಲಿಕಾ ಎಂಬ ಸಂಸ್ಕೃತ ಗ್ರಂಥವನ್ನೂ ಪ್ರಸಿದ್ಧ ಕವಿರಾಜಮಾರ್ಗವನ್ನೂ ಈತನೇ ಬರೆದನೆಂಬ ಹೇಳಿಕೆಗಳಿದ್ದರೂ ಇವು ವಿವಾದಾಸ್ಪದ. ಈತನ ಆಶ್ರಯದಲ್ಲಿದ್ದ ಶ್ರೀವಿಜಯ ಮೊದಲಾದ ಕವಿಗಳು ಕೃತಿರಚನೆ ಮಾಡಿದರು. ಶಾಕಟಾಯನನೆಂಬ ಜೈನ ವೈಯಾಕರಣಿ ಅಮೋಘವೃತ್ತಿಯನ್ನೂ ಮಹಾವೀರಾಚಾರ್ಯ ಗಣಿತಸಾರಸಂಗ್ರಹವನ್ನೂ ಇವನ ಕಾಲದಲ್ಲಿ ರಚಿಸಿದರು. ಇವನ ಗುರುಗಳಾದ ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಪೂರ್ವಪುರಾಣ ಮತ್ತು ಪಾರ್ಶ್ವಾಭ್ಯುದಯ ಗ್ರಂಥಗಳನ್ನೂ ಜಯಧವಲಾ ಟೀಕೆಯನ್ನೂ ರಚಿಸಿದ್ದಾರೆ. ಇವರ ಶಿಷ್ಯ ಗುಣಭದ್ರಾಚಾರ್ಯರು ಪೂರ್ವಪುರಾಣವನ್ನು ಪೂರ್ಣಗೊಳಿಸಿದರಲ್ಲದೆ ಉತ್ತರಪುರಾಣವನ್ನೂ ರಚಿಸಿದ್ದಾರೆ.

ಅಮೋಘವರ್ಷನ ಮಗ ಕೃಷ್ಣ. ಚಂದೊಬ್ಬಲಬ್ಬೆ ಮತ್ತು ರೇವಕನಿಮ್ಮಡಿ ಹೆಣ್ಣು ಮಕ್ಕಳು. ಇವರಲ್ಲಿ ಪ್ರಾಯಶಃ ಹಿರಿಯವಳಾದ ರೇವಕನಿಮ್ಮಡಿ ಗಂಗರಾಜಕುಮಾರನೊಬ್ಬನನ್ನು ಮದುವೆಯಾಗಿ ರಾಯಚೂರು ಪ್ರದೇಶದಲ್ಲಿ ಆಳುತ್ತಿದ್ದಳು (ಸು.837). *

**ಅಮೋನಿಯ :** ಬಣ್ಣವಿಲ್ಲದ, ಘಾಟುವಾಸನೆಯ, ಗಾಳಿಗಿಂತಲೂ ಹಗುರವಾದ ಕ್ಷಾರೀಯ ಅನಿಲ. ಇದರ ಅಣುಸೂತ್ರ $NH_3$. ಸಾರಜನಕದಿಂದ (ನೈಟ್ರೊಜನ್) ಕೂಡಿದ ಸಾವಯವ ಪದಾರ್ಥಗಳು ಕೊಳೆತಾಗ ಅಮೋನಿಯ ಉತ್ಪನ್ನವಾಗುತ್ತದೆ. ಕಲ್ಲಿದ್ದಲನ್ನು ಗಾಳಿಯ ಸಂಪರ್ಕವಿಲ್ಲದೆ ಕಾಯಿಸಿ (ನಾಶಕಬಟ್ಟಿ : ಡಿಸ್ಟ್ರಕ್ಟಿವ್ ಡಿಸ್ಟಿಲೇಷನ್) ಉಂಟಾಗುವ ಆವಿಯನ್ನು ಶೈತ್ಯಗೊಳಿಸಿದಾಗ ಸಾಂದ್ರಿಸುವ ದ್ರಾವಣದಲ್ಲಿ ಅಮೋನಿಯ ಹೆಚ್ಚಾಗಿರುತ್ತದೆ. ಅಮೋನಿಯವನ್ನು ದೊಡ್ಡ ಪ್ರಮಾಣದಲ್ಲಿ ಈ ರೀತಿ ತಯಾರಿಸುತ್ತಾರೆ. ಈ ದ್ರಾವಣದಲ್ಲಿ ಅಮೋನಿಯ ಮತ್ತು ಅದರ ಕೆಲವು ಲವಣಗಳು ಕರಗಿರುತ್ತವೆ. ಹಬೆಯ ಸಹಾಯದಿಂದ ಈ ದ್ರಾವಣವನ್ನು ಕಾಯಿಸಿದಾಗ, ಅಮೋನಿಯ ಹೊರಬರುತ್ತದೆ ಮತ್ತು ಅಮೋನಿಯಮ್ ಕಾರ್ಬೊನೇಟ್ ವಿಭಜಿತವಾಗುತ್ತದೆ. ಅಮೋನಿಯದ ಬಿಡುಗಡೆ ನಿಂತಾಗ, ಸುಣ್ಣವನ್ನು ಸೇರಿಸಿ ಮತ್ತೆ ಕಾಯಿಸುವರು. ಇದರಿಂದ ಉಳಿದ ಅಮೋನಿಯ ಲವಣಗಳೆಲ್ಲವೂ ವಿಭಜಿತವಾಗಿ, ಅಮೋನಿಯ ಬಿಡುಗಡೆಯಾಗುವುದು. ಹೀಗೆ ಎರಡು ಘಟ್ಟಗಳಲ್ಲಿ ಬರುವ ಅಮೋನಿಯವನ್ನು ಸಾಮಾನ್ಯವಾಗಿ ಸಲ್ಫ್ಯೂರಿಕ್ ಆಮ್ಲದಿಂದ ಹೀರಿಸಲಾಗುತ್ತದೆ. ಇದರಿಂದ ಅಮೋನಿಯಮ್ ಸಲ್ಫೇಟ್‌ನ ದ್ರಾವಣ ಬರುವುದು. ದ್ರಾವಣದಿಂದ ಲವಣದ ಹರಳುಗಳನ್ನು ಪಡೆಯಬಹುದು.

ಈಗ ಅಮೋನಿಯವನ್ನು ಸಂಶ್ಲೇಷಣ ವಿಧಾನದಿಂದ (ಸಿಂಥೆಸಿಸ್) ಅತ್ಯಧಿಕ ಪ್ರಮಾಣದಲ್ಲಿ ತಯಾರು ಮಾಡುತ್ತಾರೆ. ಇದರ ಹೆಸರು ಹಾಬರ್ ವಿಧಾನ. ಸಾಧಾರಣ ಉಷ್ಣತೆ ಮತ್ತು ಒತ್ತಡಗಳಲ್ಲಿ ನೈಟ್ರೊಜನ್, ಹೈಡ್ರೊಜನ್‌ಗಳು ಸಂಯೋಜಿಸುವುದಿಲ್ಲವಾದರೂ ನಿಯತಪ್ರಮಾಣದಲ್ಲಿ ಈ ಎರಡು ಅನಿಲಗಳ ಮಿಶ್ರಣವನ್ನು ವಾತಾವರಣದ $200^{o}$ರಷ್ಟು ಒತ್ತಡ ಮತ್ತು $400^{o}$–$500^{o}$ಸೆ. ಉಷ್ಣತೆಯಲ್ಲಿ ಕಬ್ಬಿಣ ಮತ್ತು ಮಾಲಿಬ್ಡಿನಂ ಲೋಹಗಳ ಪುಡಿಯನ್ನು ವೇಗವರ್ಧಕವಾಗಿ ಉಪಯೋಗಿಸಿ ಅವು ಸಂಯೋಗವಾಗುವಂತೆ ಮಾಡಬಹುದು. ಈ ವಿಧಾನವನ್ನು ಕಂಡುಹಿಡಿದವನು ಹಾಬರ್ ಎಂಬ ವಿಜ್ಞಾನಿ. ಕಬ್ಬಿಣ ಮತ್ತು ಸ್ವಲ್ಪ ಪ್ರಮಾಣದಲ್ಲಿ ಪೊಟ್ಯಾಸಿಯಂ ಆಕ್ಸೈಡ್, ಸಿಲಿಕ ಅಥವಾ ಅಲ್ಯೂಮಿನ ಇವುಗಳ ಮಿಶ್ರಣವನ್ನೂ ವೇಗವರ್ಧಕವಾಗಿ ಬಳಸುವರು. ಹೈಡ್ರೊಜನ್ ನೈಟ್ರೊಜನ್ ಮಿಶ್ರಣದ ತಯಾರಿಕೆ, ವೇಗವರ್ಧಕ, ಒತ್ತಡ ಇವುಗಳಲ್ಲಿ ವ್ಯತ್ಯಾಸವಿದ್ದು ಈ ವಿಧಾನದಲ್ಲಿ ಹಲವಾರು ಮಾರ್ಪಾಡುಗಳಾಗಿವೆ.

**ಹೈಡ್ರೊಜನ್, ನೈಟ್ರೊಜನ್ 1** : 3 ಗಾತ್ರ ಪ್ರಮಾಣದಲ್ಲಿ (ಘನಗಾತ್ರದಲ್ಲಿ) ಬೆರೆಸಿ ವೇಗವರ್ಧಕದ ಮೇಲೆ ಹಾಯಿಸುವರು. ಈ ಅನಿಲಗಳ ಮಿಶ್ರಣವನ್ನು, ಜಲಾನಿಲ (ವಾಟರ್ ಗ್ಯಾಸ್) ಮತ್ತು ಪ್ರೊಡ್ಯೂಸರ್ ಗ್ಯಾಸ್ ಎಂಬ ಅನಿಲ ಮಿಶ್ರಣದೊಡನೆ ಸೂಕ್ತಪ್ರಮಾಣದಲ್ಲಿ ಬೆರೆಸಿ ಈ ಮಿಶ್ರಣದಿಂದ ಅವಶ್ಯವಾದ ಹೈಡ್ರೊಜನ್ ನೈಟ್ರೊಜನ್ ಮಿಶ್ರಣವನ್ನು ಕೆಳಗೆ ವಿವರಿಸಿದ ರೀತಿಯಲ್ಲಿ ಪಡೆಯುವರು. ಜಲಾನಿಲ ಎಂಬುದು ಜಲಜನಕ ಮತ್ತು ಇಂಗಾಲದ ಮಾನಾಕ್ಸೈಡ್‌ಗಳ ಮಿಶ್ರಣ. ಪ್ರೊಡ್ಯೂಸರ್ ಗ್ಯಾಸ್ ಎಂಬುದು ಸಾರಜನಕ ಮತ್ತು ಇಂಗಾಲದ ಮಾನಾಕ್ಸೈಡ್‌ಗಳ ಮಿಶ್ರಣ. ಇವೆರಡರ ಮಿಶ್ರಣಕ್ಕೆ ಹಬೆಯನ್ನು (ಸ್ಟೀಮ್) ಸೇರಿಸಿ, ಕಾಯಿಸಿದ ಫೆರಿಕ್ ಆಕ್ಸೈಡ್ ವೇಗವರ್ಧಕದ ಮೇಲೆ ಹಾಯಿಸಿದರೆ, ಕಾರ್ಬನ್ ಮಾನಾಕ್ಸೈಡ್, ಕಾರ್ಬನ್ ಡಯಾಕ್ಸೈಡ್‌ಗೆ ಪರಿವರ್ತನೆಯಾಗುತ್ತದೆ ಮತ್ತು ಹೈಡ್ರೊಜನ್ ಬಿಡುಗಡೆಯಾಗುತ್ತದೆ. $CO + H_2O \rightarrow CO_2 + H_2$ ಈ ಮಿಶ್ರಣವನ್ನು ನೀರಿನ ಮೂಲಕ ಒತ್ತಡದಲ್ಲಿ ಹಾಯಿಸುವುದರಿಂದ, ಕಾರ್ಬನ್ ಡಯಾಕ್ಸೈಡನ್ನು ತೆಗೆದು, ಉಳಿದ ಕಾರ್ಬನ್ ಮಾನಾಕ್ಸೈಡನ್ನು ಅಮೋನಿಯ ಮಿಶ್ರಿತ ಕ್ಯುಪ್ರಸ್ ಫಾರ್ಮೇಟ್ ಸಹಾಯದಿಂದ ತೆಗೆಯುವರು. ಉಳಿಯುವುದು ಹೈಡ್ರೊಜನ್ ನೈಟ್ರೊಜನ್‌ಗಳ ಮಿಶ್ರಣ. ಇದನ್ನು ಕಾಯಿಸಿದ ವೇಗವರ್ಧಕವಿರುವ ಪರಿವರ್ತಕದ (ಕ್ಯಾಟಲಿಸ್ಟ್ ಚೇಂಬರ್) ಮೂಲಕ ಹೆಚ್ಚು ಒತ್ತಡದಲ್ಲಿ ಹಾಯಿಸಿದಾಗ, ಅಮೋನಿಯ ಉತ್ಪನ್ನವಾಗುತ್ತದೆ. ಉತ್ಪನ್ನವಾಗುವ ಅಮೋನಿಯದ ಪ್ರಮಾಣ ಶೇ.10 ಮಾತ್ರ. ಆದ್ದರಿಂದ ಒತ್ತಡವನ್ನು ಕಡಿಮೆಮಾಡದೆ (ಉಳಿದ ಹೈಡ್ರೊಜನ್ ನೈಟ್ರೊಜನ್‌ಗಳನ್ನು ಮತ್ತೆ ವೇಗವರ್ಧಕದ ಮೇಲೆ ಹಾಯಿಸುವ ಸಲುವಾಗಿ), ಅಮೋನಿಯವನ್ನು ಬೇರ್ಪಡಿಸುವುದು ಆವಶ್ಯಕ. ಇದಕ್ಕಾಗಿ ಅನಿಲಮಿಶ್ರಣವನ್ನು ತಣ್ಣೀರಿನಲ್ಲಿ ಮುಳುಗಿಸಿರುವ ಕೊಳವೆ ಸುರಳಿಯ (ಸ್ಪೈರಲ್ ಟ್ಯೂಬ್) ಮೂಲಕ ಹಾಯಿಸಿದರೆ, ಅಮೋನಿಯ ದ್ರವರೂಪಕ್ಕೆ ಬರುತ್ತದೆ. ಸಂಯೋಗವಾಗದೆ ಉಳಿದಿರುವ ಹೈಡ್ರೊಜನ್ ನೈಟ್ರೊಜನ್‌ಗಳನ್ನು ಮತ್ತೆ ವೇಗವರ್ಧಕದ ಮೇಲೆ ಹಾಯಿಸುವರು.

ಈ ವಿಧಾನದ ರೂಪಾಂತರವಾದ ಕ್ಲಾಡ್ ವಿಧಾನದಲ್ಲಿ ಗಾಳಿಯ 1000ರಷ್ಟು ಒತ್ತಡದಲ್ಲಿ ಕ್ರಿಯೆ ನಡೆಯುವುದರಿಂದ ಅಧಿಕ ಪ್ರಮಾಣದಲ್ಲಿ ಅಮೋನಿಯ ಬಿಡುಗಡೆಯಾಗುತ್ತದೆ.

ಸಾರಜನಕವನ್ನು ದ್ರವಿತಗಾಳಿಯಿಂದಲೂ ಮತ್ತು ಹೈಡ್ರೊಜನ್ ಅನ್ನು ನೀರಿನ ವಿದ್ಯುತ್ ವಿಶ್ಲೇಷಣದಿಂದಲೂ ಪಡೆಯಬಹುದು.

ಸಯನಮೈಡ್ ವಿಧಾನ : ವಿದ್ಯುಚ್ಛಕ್ತಿಯ ಸಹಾಯದಿಂದ $1100^{0}$ ಸೆಂ.ಗ್ರೇ.ಗೆ ಕಾಯಿಸಿದ ಕ್ಯಾಲ್ಸಿಯಂ ಕಾರ್ಬೈಡ್ ಪುಡಿಯ ಮೇಲೆ ನೈಟ್ರೊಜನ್ ಅನ್ನು ಹಾಯಿಸಿದರೆ, ಕ್ಯಾಲ್ಸಿಯಂ ಸಯನಮೈಡ್ ಎಂಬ ಪದಾರ್ಥ ಉತ್ಪನ್ನವಾಗುತ್ತದೆ.

$Ca + C_2 + N_2 = CaCN_2 + C$

ಕ್ಯಾಲ್ಸಿಯಂ ಸಯನಮೈಡ್ $CaCN_2$ ಮತ್ತು ಕಾರ್ಬನ್ನಿನ (C) ಈ ಮಿಶ್ರಣಕ್ಕೆ ನೈಟ್ರೋಲಿಮ್ ಎಂದು ಹೆಸರು. ಇದನ್ನು ಸಸ್ಯಪೋಷಕವಾಗಿ ಉಪಯೋಗಿಸುವರು.

ಕ್ಯಾಲ್ಸಿಯಂ ಸಯನಮೈಡನ್ನು ಕಾಯಿಸಿ ಹೆಚ್ಚಿನ ಒತ್ತಡದಲ್ಲಿ ನೀರಿನ ಹಬೆಯನ್ನು ಅದರ ಮೇಲೆ ಹಾಯಿಸಿದರೆ ಅಮೋನಿಯ ಉತ್ಪನ್ನವಾಗುವುದು.

$CaCN_2 + 3H_2O = CaCN_3 + 2NH_3$

ಪ್ರಯೋಗಶಾಲೆಯ ಮಟ್ಟದ ವಿಧಾನಗಳಲ್ಲಿ, ಅಮೋನಿಯಂ ಲವಣಗಳನ್ನು ಕ್ಷಾರಗಳೊಡನೆ ಕಾಯಿಸುವುದು ಮತ್ತು ಲೋಹ ನೈಟ್ರೈಡ್‌ಗಳ ಜಲವಿಶ್ಲೇಷಣ (ಹೈಡ್ರಾಲಿಸಿಸ್) ಮುಖ್ಯವಾದುವು.

$2NH_4CI + CaO \rightarrow 2NH_3 + Ca\ CI_2 + H_2O$

$Mg_3N_2 + 6H_2O \rightarrow 2NH_3 + 3Mg(OH)_2$

ನೈಟ್ರೇಟ್‌ಗಳೆಂಬ ಲವಣಗಳ ಅಪಕರ್ಷಣದಿಂದಲೂ (ರಿಡಕ್ಷನ್) ಅಮೋನಿಯವನ್ನು ಪಡೆಯಬಹುದು.

**ಗುಣಗಳು :** ಈ ಅನಿಲವನ್ನು ಒತ್ತಿ ಶೈತ್ಯಗೊಳಿಸಿ ಸುಲಭವಾಗಿ ದ್ರವರೂಪಕ್ಕೆ ತರಬಹುದು. ಅಮೋನಿಯ ದ್ರವ $-33^{o}$ ಸೆ. ಉಷ್ಣತೆಯಲ್ಲಿ ಕುದಿಯುತ್ತದೆ. ಇದು ಆವಿಯಾಗುವಾಗ ವಿಶೇಷವಾಗಿ ಉಷ್ಣವನ್ನು ಹೀರಿಕೊಳ್ಳುತ್ತದೆ. ಆದ್ದರಿಂದ ಇದನ್ನು ಶೀತಕಯಂತ್ರಗಳಲ್ಲಿ (ರೆಫ್ರಿಜಿರೇಟರ್ಸ್) ಉಪಯೋಗಿಸುತ್ತಾರೆ.

ಸಾಮಾನ್ಯವಾಗಿ ಅಮೋನಿಯ ದಹನಾನುಕೂಲಿಯಲ್ಲ. ಆದರೆ ಗಾಳಿಯಲ್ಲಿ ಅಥವಾ ಆಕ್ಸಿಜನ್ನಿನಲ್ಲಿ ಹಳದಿಬಣ್ಣದ ಜ್ವಾಲೆಯೊಡನೆ ಉರಿಯುತ್ತದೆ.

$4NH_3 + 3O_2 \rightarrow 2H_2 + 6H_2O$

ಅನೇಕ ಆಕ್ಸೈಡುಗಳು ಅಮೋನಿಯವನ್ನು ಉತ್ಕರ್ಷಿಸುತ್ತವೆ.

$3CuO + 2NH_3 \rightarrow 3Cu + Na + 3H_2O$

ಪ್ಲಾಟಿನಂ ತಂತಿಬಲೆಯನ್ನು (ಗಾಝ್) ವೇಗವರ್ಧಕವಾಗಿ ಬಳಸಿದಾಗ, ಅಮೋನಿಯವನ್ನು ನೈಟ್ರಿಕ್ ಆಮ್ಲಕ್ಕೆ ಉತ್ಕರ್ಷಿಸಬಹುದು.

$4NH_3 + 5O_2 \rightarrow 4NO + 6H_2O$

$2NO + O_2 \rightarrow 2NO_2$

$3NO_2 + H_2O \rightarrow 2HNO_3 + NO$

ಈ ಕ್ರಿಯೆ ನೈಟ್ರಿಕ್ ಆಮ್ಲದ ತಯಾರಿಕೆಯ ವಿಧಾನವೊಂದಕ್ಕೆ ಆಧಾರವಾಗಿದೆ.

ಸಾಮಾನ್ಯ ಉಷ್ಣತೆಯಲ್ಲಿ ಅಮೋನಿಯ ವಿಭಜನೆ ಹೊಂದುವುದಿಲ್ಲ. ಆದರೆ $450^{0}$–$500^{0}$ ಸೆಂ. ಗ್ರೇ. ಉಷ್ಣತೆಯಲ್ಲಿ ವಿಭಜಿತವಾಗಿ ನೈಟ್ರೊಜನ್ ಹೈಡ್ರೊಜನ್ ಮತ್ತು ಜಲಜನಕಗಳನ್ನು ಕೊಡುವುದು.

ದ್ರವಿತ ಅಮೋನಿಯವನ್ನು ವಿದ್ಯುದಣುಕಾರಕವಾದ ದ್ರಾವಕವಾಗಿ (ಅಯೊನೈಸಿಂಗ್ ಸಾಲ್ವೆಂಟ್) ಅನೇಕ ಪ್ರಯೋಗಗಳಲ್ಲಿ ಬಳಸಲಾಗುತ್ತದೆ. ಸೋಡಿಯಂ ಮತ್ತು ಪೊಟ್ಯಾಸಿಯಂ ಲೋಹಗಳು ಅಮೋನಿಯ ದ್ರವದಲ್ಲಿ ವಿಲೀನವಾಗುತ್ತವೆ. ಪೊಟ್ಯಾಸಿಯಂ ನಿಧಾನವಾಗಿ ಪೊಟ್ಯಾಸಿಯಂ ಅಮೈಡನ್ನು ಕೊಡುತ್ತದೆ.

$2K + 2NH_3 \rightarrow 2KNH_2 + H_2$

ಕ್ಲೋರಿನ್, ಬ್ರೋಮಿನ್, ಅಯೊಡೀನ್‌ಗಳು ಅಮೋನಿಯದೊಡನೆ ರಾಸಾಯನಿಕವಾಗಿ ವರ್ತಿಸುತ್ತವೆ.

$3CI_2 + 8NH_3 \leftarrow 6NH_4CI + N_2$

$2NH_2 + 3I_2 \rightarrow NI_3NH_3 + 3HI$

ಅಮೋನಿಯ ಅನೇಕ ಸಂಕಲಿತವಸ್ತುಗಳನ್ನು (ಅಡಿಷನ್ ಕಾಂಪೌಂಡ್ಸ್) ಕೊಡುತ್ತದೆ. ಇವನ್ನು ಅಮೋನಿಯ ಸಂಯುಕ್ತಗಳೆಂದು (ಅಮೋನಿಯೇಟ್) ಕರೆಯುವುದೂ ಉಂಟು.

ನೀರಿನಲ್ಲಿ ಅಮೋನಿಯ ದ್ರಾವಣ ಕ್ಷಾರೀಯವಾಗಿರುತ್ತದೆ. ನೀರು ಮತ್ತು ಅಮೋನಿಯಗಳ ನಡುವಿನ ಕ್ರಿಯೆಯನ್ನು ಈ ರೀತಿ ಸೂಚಿಸಬಹುದು:

$NH_3 + H_2O \rightleftarrows NH_4OH \leftarrow NH_2 + {}_{+}OH^-$

ಅಮೋನಿಯ ದ್ರಾವಣ ಹೈಡ್ರೊಕ್ಲೋರಿಕ್ ಆಮ್ಲ (HCI) ನೈಟ್ರಿಕ್ ಆಮ್ಲ ($HNO_3$) ಸಲ್ಫ್ಯೂರಿಕ್ ಆಮ್ಲ ($H_2SO_4$)

ಇವುಗಳೊಡನೆ ವರ್ತಿಸಿ, ಈ ಆಮ್ಲಗಳ ಲವಣಗಳನ್ನು ಕೊಡುತ್ತದೆ–$NH_4CI$, $NH_4NO_3$, $(NH_4)_2NH_4$ ಎಂಬ ಸಮೂಹವನ್ನು ಅಮೋನಿಯಂ ರ್‍ಯಾಡಿಕಲ್ ಎಂದು ಕರೆಯುವರು.

ಅಮೋನಿಯ ಅನೇಕ ಸಂಕೀರ್ಣ (ಕಾಂಪ್ಲೆಕ್ಸ್) ಲವಣಗಳನ್ನು ಕೊಡುತ್ತದೆ. ಉದಾ : $Cu(NH_3)_4SO_4$. ಇಂಥ ಸಂಕೀರ್ಣಗಳನ್ನು ಅಮೀನ್‌ಗಳು (ನೋಡಿ– ಅಮೀನ್‌ಗಳು) ಎಂದೂ ಕರೆಯುವರು.

ಈ ಸಂಕಲನ ಕ್ರಿಯೆಗಳಲ್ಲಿ ಅಮೋನಿಯ ಅಣು ಇತರ ಅಣು ಅಥವಾ ವಿದ್ಯುದಂಶಯುಕ್ತವಾದ ಕಣಕ್ಕೆ (ಅಯಾನ್) ಸಂಯೋಜಿತವಾಗುವುದು. ಈ ಕ್ರಿಯೆಗಳನ್ನು ಅಮೋನೇಷನ್ ಎಂದು ಕರೆಯುವರು.

ಪಲ್ಲಟನ ಕ್ರಿಯೆಗಳು (ಸಬ್‌ಸ್ಟಿಟ್ಯೂಷನ್ ರಿಯಾಕ್ಷನ್ಸ್) ಅಮೋನಿಯ ಭಾಗವಹಿಸುವ ಬೇರೆ ಬಗೆಯ ಕ್ರಿಯೆಗಳು. ಇವಕ್ಕೆ ಅಮೋನೋಲಿಸಿಸ್ ಎಂದೂ ಹೆಸರುಂಟು. ಈ ಕ್ರಿಯೆಗಳಲ್ಲಿ ಇನ್ನೊಂದು ಅಣುವಿನಲ್ಲಿನ ಒಂದು ಅಥವಾ ಹೆಚ್ಚಿಗೆ ಪರಮಾಣುಗಳ ಪಲ್ಲಟನ ಅಮೈಡ್ ($-NH_2$) ಇಮೈಡ್ (=NH)ಅಥವಾ ನೈಟ್ರೈಡ್‌ಗಳಿಂದ ( N) ನಡೆಯುವುದು. ಉದಾಹರಣೆಗಾಗಿ,

$HgCI_2 + 2NH_3 \rightarrow Hg(NH_2)CI + NH_4CI$

ಅಮೋನಿಯ ಭಾಗವಹಿಸುವ ಮೂರನೆಯ ಬಗೆಯ ಕ್ರಿಯೆ ಉತ್ಕರ್ಷಣ–ಅಪಕರ್ಷಣ (ಆಕ್ಸಿಡೇಷನ್–ರಿಡಕ್ಷನ್). ಉದಾಹರಣೆ–ಅಮೋನಿಯದ ಉರಿಯುವಿಕೆ.

ಉಪಯೋಗಗಳು: ಬಹುವಿಧವಾದ ಉಪಯೋಗಗಳ ದೆಸೆಯಿಂದ ಅಮೋನಿಯವನ್ನು ಅಧಿಕಪ್ರಮಾಣದಲ್ಲಿ ತಯಾರಿಸುತ್ತಿದ್ದಾರೆ. ಅಮೋನಿಯದ ಉತ್ಕರ್ಷಣದಿಂದ ನೈಟ್ರಿಕ್ ಆಮ್ಲವನ್ನು ಈಗ ಹೆಚ್ಚಾಗಿ ತಯಾರಿಸುತ್ತಿದ್ದಾರೆ. ಈ ನೈಟ್ರಿಕ್ ಆಮ್ಲ ಟಿ.ಎನ್.ಟಿ., ನೈಟ್ರೊಗ್ಲಿಸರೀನ್, ನೈಟ್ರೊ ಸೆಲ್ಯುಲೋಸ್, ಅಮೋನಿಯಂ ನೈಟ್ರೇಟ್ ಮುಂತಾದ ಆಸ್ಫೋಟಕ ಪದಾರ್ಥಗಳ ತಯಾರಿಕೆಯಲ್ಲಿ ಉಪಯುಕ್ತವಾಗಿದೆ. ಅಮೋನಿಯಂ ನೈಟ್ರೇಟನ್ನು ರಾಸಾಯನಿಕ ಗೊಬ್ಬರವಾಗಿಯೂ ಬಳಸುವರು.

ಅಮೋನಿಯ ಮತ್ತು ಕಾರ್ಬನ್ ಡೈ ಆಕ್ಸೈಡ್ ($CO_2$) ಇವುಗಳಿಂದ ಯೂರಿಯ $[CO(NH_2)_2]$ ಎಂಬ ಪದಾರ್ಥವನ್ನು ತಯಾರಿಸಬಹುದು. ಯೂರಿಯ ಉತ್ತಮವಾದ ಫಲವತ್ಕಾರಿ. ಇದು ಪ್ಲಾಸ್ಟಿಕ್‌ಗಳ ತಯಾರಿಕೆಗೆ ಮೂಲ.

ಅಮೋನಿಯಂ ಸಲ್ಫೇಟ್ ಬಹು ಮುಖ್ಯವಾದ ರಾಸಾಯನಿಕ ಗೊಬ್ಬರ. ಅಮೋನಿಯ ಅನಿಲವನ್ನೇ ಸಲ್ಫ್ಯೂರಿಕ್ ಆಮ್ಲದ ಮೂಲಕ ಹಾಯಿಸುವುದು ಇದನ್ನು ತಯಾರಿಸುವ ಒಂದು ವಿಧಾನ. ಕಾರ್ಬನ್ ಡೈ ಆಕ್ಸೈಡ್ ಮತ್ತು ಅಮೋನಿಯಗಳನ್ನು ನೀರಿನಲ್ಲಿ ನಿಲಂಬಿಸಿರುವ (ಸಸ್ಪೆನ್ಷನ್) ಕ್ಯಾಲ್ಸಿಯಂ ಸಲ್ಫೇಟ್ ಮೂಲಕ ಹಾಯಿಸುವುದು ಇನ್ನೊಂದು ವಿಧಾನ.

$CaSO_4 + 2NH_3 + H_2O + CO_2 \rightarrow (NH_2)_2SO_4 + CaCO_3$

ಅಮೋನಿಯಂ ಕ್ಲೋರೈಡ್, ಅಮೋನಿಯಂ ಕಾರ್ಬೊನೇಟ್ ಉಪಯುಕ್ತವಾದ ಇತರ ಅಮೋನಿಯಂ ಲವಣಗಳು.

ಸೋಡಿಯಂ ಕಾರ್ಬೊನೇಟ್ ಎಂಬ ಉಪಯುಕ್ತ ಪದಾರ್ಥದ ತಯಾರಿಕೆಯ ಲ್ಲಿಯೂ (ಸಾಲ್ವೆ ವಿಧಾನ) ಔಷಧಿಗಳು, ಬಣ್ಣಗಳೇ ಮೊದಲಾದ ಅನೇಕ ಸಾವಯವ ಸಂಯುಕ್ತಗಳ ತಯಾರಿಕೆಯಲ್ಲಿಯೂ ನೈಲಾನ್, ರೇಯಾನ್ ಮೊದಲಾದ ಕೃತಕ ಎಳೆಗಳ ತಯಾರಿಕೆಯಲ್ಲಿಯೂ ಅಮೋನಿಯದ ಉಪಯೋಗವಿದೆ. ಕ್ಲೋರಿನ್ ಮತ್ತು ಅಮೋನಿಯ ಮಿಶ್ರಣವನ್ನು ನೀರಿನ ಶುದ್ಧೀಕರಣದಲ್ಲಿ ಕ್ರಿಮಿನಾಶಕ್ಕಾಗಿ ಉಪಯೋಗಿಸುವರು. (ಎನ್.ಎಸ್.ಕೆ.)

**ಅಮ್ಮಸಂದ್ರ :** ತುಮಕೂರು ಜಿಲ್ಲೆಯ ಒಂದು ಸ್ಥಳ ಸೇರಿದ್ದು ತುಮಕೂರಿಗೆ ಸು. 40 ಕಿಮೀ ದೂರದಲ್ಲಿದೆ. ಹತ್ತಿರದಲ್ಲಿರುವ ನರಸಿಂಹಸ್ವಾಮಿ ಬೆಟ್ಟದ ಉದ್ದಕ್ಕೂ ಮ್ಯಾಂಗನೀಸ್, ಸುಣ್ಣಕಲ್ಲು ಹೇರಳವಾಗಿ ದೊರೆಯುತ್ತವೆ.

ಕಚ್ಚಾ ವಸ್ತುಗಳು ಸುಲಭವಾಗಿ ದೊರೆಯುವುದರಿಂದಲೂ ಮತ್ತು ಸಂಚಾರ ಸೌಲಭ್ಯ ಚೆನ್ನಾಗಿರುವುದಿಂದಲೂ ಬಿರ್ಲಾ ಸಂಸ್ಥೆ ಇಲ್ಲೊಂದು ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸಿದೆ (1960). ಈ ಕಾರ್ಖಾನೆ ಕರ್ನಾಟಕ ರಾಜ್ಯದ ಬಹುಪಾಲು ಸಿಮೆಂಟ್ ಅಗತ್ಯವನ್ನು ಪೂರೈಸುತ್ತದೆ. ಜನಸಂಖ್ಯೆ 1168 (2001). (ಪಿ.ಜಿ.)

**ಅಮ್ಮಾನ್ :** ಅರಬ್ಬೀ ಗಣರಾಜ್ಯದ ಚಿಕ್ಕ ಭಾಗವಾದ ಜೋರ್ಡಾನಿನ ರಾಜಧಾನಿ ಮತ್ತು ಪ್ರಾಚೀನ ದೊಡ್ಡ ನಗರ. ಮೃತ ಸಮುದ್ರದಿಂದ ಈಶಾನ್ಯಕ್ಕೆ 40ಕಿಮೀ ದೂರದಲ್ಲಿದೆ. ಜನಸಂಖ್ಯೆ 900,000 (2001). ಹಿಂದೆ ಇದಕ್ಕೆ ರಬ್ಬತ್ ಎಂಬ ಹೆಸರಿತ್ತು. ಚಾರಿತ್ರಿಕ ಕಟ್ಟಡಗಳಿವೆ. ಮುಖ್ಯ ಪ್ರವಾಸೀ ಕೇಂದ್ರ, ವಿಮಾನ ಮತ್ತು ರೈಲು ಕೇಂದ್ರವೂ ಹೌದು. ಕೈಗಾರಿಕೆಗಳು ಹೆಚ್ಚು. ಹೊಗೆಸೊಪ್ಪು, ಚರ್ಮ, ಬಟ್ಟೆ, ಹೆಂಚು, ಸಿಮೆಂಟ್ ಮೊದಲಾದವು ತಯಾರಾಗುತ್ತವೆ. ನಗರದ ಹಲವು ಕಟ್ಟಡಗಳು ಬೆಟ್ಟಗಳ ಮೇಲೆ ನಿರ್ಮಾಣಗೊಂಡಿವೆ. (ಆರ್.ಡಿ.ಆರ್.)

**ಅಮ್ಮಾನೈಟ್ :** ಈಗ ನಿರ್ವಂಶವಾಗಿರುವ ಪ್ರಾಣಿ. ಸಾಲಿಗ್ರಾಮ ಕ್ರಿಮಿ ಎಂಬ ಹೆಸರೂ ಇದೆ. ಮನೆಯಲ್ಲಿ ಪೂಜೆಗೆ ಉಪಯೋಗಿಸುವ ಸಾಲಿಗ್ರಾಮಗಳು ಈ ಕ್ರಿಮಿಯ ಚಿಪ್ಪುಗಳ ಅವಶೇಷಗಳು. ಪಳೆಯುಳಿಕೆಗಳು ತಿರುಚಿನಾಪಳ್ಳಿಯಿಂದ ಅನತಿದೂರದಲ್ಲಿರುವ ಅರಿಯಲೂರು ಬಳಿ ದೊರೆತಿವೆ. ಇವು ಮಧ್ಯಜೀವಕಲ್ಪದಲ್ಲಿ ಮಾತ್ರ ಜೀವಿಸಿದ್ದು ಹೇರಳವಾಗಿ ಸರ್ವತ್ರ ಕಾಣಬರುತ್ತಿದ್ದುದರಿಂದ ಮಧ್ಯಜೀವಕಲ್ಪವನ್ನು ಅಮ್ಮೊನೈಟ್‌ಗಳ ಕಲ್ಪವೆಂದು ಕರೆಯಲಾಗಿದೆ. ಮಧ್ಯಜೀವಕಲ್ಪದಲ್ಲಿ ಸರೀಸೃಪಗಳನ್ನು ಬಿಟ್ಟರೆ, ಇವೇ ಅತ್ಯಂತ ಪ್ರಭಾವಶಾಲಿ ಪ್ರಾಣಿಗಳು. ಅಲ್ಲದೆ ಮಧ್ಯಜೀವಕಲ್ಪದ ಶಿಲಾಸ್ತೋಮಗಳ ವಿವರವಾದ ವರ್ಗೀಕರಣಕ್ಕೆ ಇವೇ ಆಧಾರವಾಗಿವೆಯಲ್ಲದೆ ಜೀವವಿಕಾಸದ ಅನೇಕ ನಿಯಮಗಳನ್ನು ಉಲ್ಲೇಖಿಸಲು ಸಹಕಾರಿಯಾಗಿವೆ.

ಅಮ್ಮಾನೈಟ್ ಪ್ರಾಣಿಯ ಚಿಪ್ಪಿನಲ್ಲಿ ಮಧ್ಯೆ ಮೂಲಕುಳಿಯೊಂದಿದ್ದು ಅದರ ಸುತ್ತ ಕೊಳವೆಗಳು ಸುತ್ತಿಕೊಂಡಿವೆ. ಕೊಳವೆ ವಿಭಾಜಕಬತ್ತಿ ಅಥವಾ ನಡುತಡಿಕೆಗಳಿಂದ ಅನೇಕ ಗೂಡುಗಳಾಗಿ ವಿಭಾಗವಾಗಿದೆ. ವಿಭಾಜಕ ಭಿತ್ತಿಗಳು ಹೊರಗಡೆ ಚಿಪ್ಪಿಗೆ ಬಲವಾಗಿ ಹೊಲಿದಂತೆ ಇವೆ. ಕೊನೆಯ ಗೂಡಿನಲ್ಲಿ ಪ್ರಾಣಿ ವಾಸಿಸುವುದರಿಂದ ಅದನ್ನು ವಾಸದ ಗೂಡು ಎನ್ನುವರು. ಅದನ್ನುಳಿದು ಬೇರೆ ಗೂಡುಗಳನ್ನು ಒಂದು ಕೊಳವೆ (ಸೈಫಂಕಲ್) ಭೇದಿಸಿ ಹಾಯ್ದು ಹೋಗುತ್ತದೆ. ಇದು ಬಹುಪಾಲು ಚಿಪ್ಪಿನ ಹೊರವಲಯದಲ್ಲಿರುತ್ತದೆ. ಸಾಮಾನ್ಯವಾಗಿ ಚಿಪ್ಪಿನ ಸುರುಳಿಗಳೆಲ್ಲ ಒಂದೇ ಮಟ್ಟದಲ್ಲಿರುತ್ತವೆ; ಕೆಲವು ವೇಳೆ ಗೋಪುರಾ ಕೃತಿಯಲ್ಲಿ ಸುತ್ತಿರುವುದೂ ಉಂಟು. ಸುರುಳಿಗಳು ಒಳಮುಖವಾಗಿ ಸುತ್ತಿಕೊಂಡಿದ್ದರೆ, ಚಿಪ್ಪನ್ನು ಅಂತರ್ವಲಿತ ಚಿಪ್ಪೆಂದೂ ಹೊರಮುಖವಾಗಿ ಸುತ್ತಿಕೊಂಡಿದ್ದರೆ ಬಹಿರ್ವಲಿತ ಚಿಪ್ಪೆಂದೂ ಕರೆಯಲಾಗಿದೆ. ಸಾಮಾನ್ಯವಾಗಿ ಚಿಪ್ಪಿನ ಹೊರಮೈ ನಾನಾ ರೀತಿಯಲ್ಲಿ ಅಲಂಕರಿಸಲ್ಪಟ್ಟಿರುತ್ತದೆ; ಕೆಲವು ವೇಳೆ ಅಲಂಕಾರವಿಲ್ಲದೆ ಇರುವುದೂ ಉಂಟು.

ಅಮ್ಮಾನೈಟ್‌ಗಳನ್ನು ಪ್ರಾಚೀನ ಜೀವಕಲ್ಪದವು (ಗೋನಿಯೊಟೈಟ್‌ಗಳು), ಮಧ್ಯಜೀವ ಕಲ್ಪದವು (ನೈಜ ಅಮ್ಮೊನೈಟ್‌ಗಳು) ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು.

ಅಮ್ಮಾನೈಟ್‌ಗಳ ವಿಕಾಸದ ಮಟ್ಟದ ನಿರ್ಣಯದಲ್ಲಿ ಸುರುಳಿ ಸುತ್ತಿರುವ ರೀತಿ ಹೊಲಿಗೆ ಸೇರುವೆಗಳ ವಿನ್ಯಾಸ ಮತ್ತು ಅಲಂಕಾರ ವೈಖರಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

**ಸುರುಳಿ ಸುತ್ತುವಿಕೆ :** ಆರ್ತೊಸೆರಾಸ್ ಪ್ರಾಣಿಯ ಚಿಪ್ಪು ನೇರವಾಗಿದೆ. ಸಿರ್ಟೊಸೆರಾಸ್ ಪ್ರಾಣಿಯ ಚಿಪ್ಪು ಬಾಗಿದೆ. ವೆಸ್ಟಿನಾಟಿಲಸ್, ನಾಟಿಲಸ್, ಗೋನಿಯೊಟೈಟಿಸ್, ಸೆರಟೈಟಿಸ್ ಮತ್ತು ಅನೇಕ ಅಮ್ಮಾನೈಟ್‌ಗಳಲ್ಲಿ ಚಿಪ್ಪು ಸುರುಳಿ ಸುತ್ತಿಕೊಂಡಿರುತ್ತದೆಯಲ್ಲದೆ ಸುರುಳಿಗಳೆಲ್ಲ ಒಂದೇ ಮಟ್ಟದಲ್ಲಿರುತ್ತವೆ. ಆದರೆ ವೆಸ್ಟಿನಾಟಿಲಸ್ ಬಹಿರ್ವಲಿತಚಿಪ್ಪನ್ನೂ ನಾಟಿಲಸ್ ಮತ್ತು ಗೋನಿಯೊಟೈಟ್‌ಗಳು ಅಂತರ್ವಲಿತಚಿಪ್ಪನ್ನೂ ಸೆರಟೈಟಿಸ್ ಅಪೂರ್ಣ ಬಹಿರ್ವಲಿತಚಿಪ್ಪನ್ನೂ ಅನೇಕ ಅಮ್ಮಾನೈಟುಗಳು ಬಹಿರ್ವಲಿತಚಿಪ್ಪನ್ನೂ ಹೊಂದಿವೆ. ಕ್ರಿಟೇಷಿಯಸ್ ಯುಗದ ಪ್ರಾರಂಭದ ವೇಳೆಗೆ ಅಮ್ಮಾನೈಟ್‌ಗಳು ಸುರುಳಿ ಸುತ್ತುವಿಕೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲುಪಿದ್ದುವು. ಅನಂತರ ಆ ದಿಶೆಯಲ್ಲಿ ಮುನ್ನಡೆಯುವುದು ಸಾಧ್ಯವಾಗಲಿಲ್ಲ. ಆದ್ದರಿಂದ

ಸುರುಳಿಬಿಚ್ಚುವಿಕೆ ಪ್ರಾರಂಭವಾಯಿತು. ಇದು ಅಮ್ಮೊನೈಟ್ ವಂಶದ ಅವನತಿಯ ಸೂಚನೆ. ಕ್ರಿಟೇಷಿಯಸ್ ಯುಗದಲ್ಲೆಲ್ಲ ವಿಕಾಸ ಹಿಮ್ಮುಖವಾಗಿ ಸಾಗಿತು (ಅವರೋಹಣ ವಿಕಾಸ). ಇದರ ಪ್ರಥಮ ಹಂತವನ್ನು ಸ್ಕ್ಯಾಫೈಟಿಸ್‍ನಲ್ಲಿ ಕಾಣಬಹುದು. ಸ್ಕ್ಯಾಫೈಟಿಸ್ ಚಿಪ್ಪಿನ ಕೊನೆಯ ಸುರುಳಿ ಮಾತ್ರ ಬಿಚ್ಚಿಕೊಂಡು ಗಾಳಾಕಾರದಲ್ಲಿ ಬಾಗಿದೆ. ಹ್ಯಾಮೈಟಿಸ್ ಚಿಪ್ಪಿನ ಮೂರು ಸುರುಳಿಗಳು ಬಿಚ್ಚಿಕೊಂಡು ಪರಸ್ಪರ ಸಂಪರ್ಕ ಕಡಿದುಕೊಂಡಿವೆ. ಇದು ಈ ದಿಶೆಯಲ್ಲಿ ಎರಡನೆಯ ಹಂತ. ಬ್ಯಾಕ್ಯುಲೈಟಿಸ್ ಚಿಪ್ಪಿನಲ್ಲಿ, ಮೂಲದ ಒಂದೆರಡು ಸುರುಳಿಗಳನ್ನು ಬಿಟ್ಟು ಉಳಿದವುಗಳೆಲ್ಲ ಬಿಚ್ಚಿಕೊಂಡು ನೇರವಾಗಿವೆ. ಇದು ಬಹುಶಃ ಕೊನೆಯ ಹಂತವನ್ನು ಪ್ರತಿನಿಧಿಸಬಹುದು.

**ಅಲಂಕಾರ ವೈಖರಿ :** ಚಿಪ್ಪಿನ ಹೊರಮೈ ಗೀರುದಿಂಡು, ಸಣ್ಣಗಂಟು ಅಥವಾ ಮುಳ್ಳುಗಳಿಂದ ಅಲಂಕೃತವಾಗಿದೆ. ಮಧ್ಯಜೀವಕಲ್ಪದ ಅಮ್ಮೊನೈಟ್‍ಗಳಲ್ಲಿ ಪ್ರಾಚೀನ ಜೀವಕಲ್ಪದವಕ್ಕಿಂತ ಅಲಂಕಾರ ಹೆಚ್ಚು. ಕೆಲವು ಅಮ್ಮೊನೈಟ್‍ಗಳಲ್ಲಿ ಚಿಪ್ಪಿನ ಹೊರಂಚಿನ ಮಧ್ಯದಲ್ಲಿ ಸಾದಾ ರೀತಿಯ ಅಥವಾ ಗರಗಸದ ಮಾದರಿಯ ದಿಂಡು (ಅಮಾಲ್ತಿಯಾಸ್) ಹಲ್ಲುಗಳಾಗಿ ಕತ್ತರಿಸಬಹುದು. ಹಾಪ್ಲೈಟಿಸ್‍ಚಿಪ್ಪಿನ ಮೇಲೆ ಇಬ್ಭಾಗವಾದ ದಿಂಡುಗಳಿದ್ದು ಅವುಗಳ ಮೇಲೆ ಎರಡು ಸಾಲುಗಂಟುಗಳಿವೆ.

ಸುರುಳಿ ಸುತ್ತುವಿಕೆ, ಸೇರುವೆಗಳ ಕ್ಲಿಷ್ಟತೆ ಮತ್ತು ಅಲಂಕಾರ ವೈಖರಿಗಳು ಪ್ರಾಣಿಯ ಜೀವಿತಕಾಲದಲ್ಲಿ ಒಂದು ನಿರ್ದಿಷ್ಟಕ್ರಮದಲ್ಲಿ ಬದಲಾಗುವುದು ವ್ಯಕ್ತವಾಗಿದೆ. ಭ್ರೂಣಶಾಸ್ತ್ರದ ಅಭ್ಯಾಸದಿಂದ ಅಮ್ಮೊನೈಟ್‍ಗಳ ವಂಶವೃಕ್ಷ ತಯಾರಿಸಲು ಸಾಧ್ಯವಾಗಿದೆ. ಒಂದೇ ರೂಪವನ್ನು ಹೊಂದಿರುವ ಕೆಲವು ಅಮ್ಮೊನೈಟ್ ಜಾತಿಗಳ ಭ್ರೂಣಗಳು ಬೇರೆ ಬೇರೆ ವಂಶಮೂಲವನ್ನು ಸೂಚಿಸುತ್ತವೆ. ಈ ಘಟನೆಗೆ ರೂಪಸಾಮ್ಯ ಎಂದು ಹೆಸರು.

**ಅಮ್ಮೊನೈಟ್**‍ಗಳು ಭೂಇತಿಹಾಸದ ಅಲ್ಪಾವಧಿಯಲ್ಲಿ ಮಾತ್ರ ಜೀವಿಸಿದ್ದ ಪ್ರಾಣಿಗಳು. ಆದರೆ ಆ ಕಾಲದಲ್ಲಿ ಅವು ವಿಶಾಲವಾದ ಭೌಗೋಳಿಕ ವ್ಯಾಪ್ತಿ ಹೊಂದಿದ್ದುವು. **ಅಮ್ಮೊನೈಟ್**‍ಗಳು ಮೂಲಜಾತಿಯಾದ ಎಗೋನಿಯಾಟೈಟ್‍ಗಳ ಅವಶೇಷಗಳು ಸೈಲ್ಯೂರಿಯನ್ ಕಾಲದ ಶಿಲೆಗಳಲ್ಲಿ ದೊರೆತಿವೆ. ಪ್ರಾಚೀನ ಜೀವಕಲ್ಪದ ಉತ್ತರಾರ್ಧದಲ್ಲಿ ಗೋನಿಯೊಟೈಟ್‍ಗಳು ಹೆಚ್ಚಾಗಿದ್ದುವು. ಟ್ರಯಾಸಿಕ್ ಕಾಲದಲ್ಲಿದ್ದ **ಅಮ್ಮೊನೈಟ್**‍ಗಳು ಸೆರಟೈಟ್ ಜಾತಿಯವು. ನಿಜವಾದ **ಅಮ್ಮೊನೈಟ್**‍ಗಳು ಟ್ರಯಾಸಿಕ್‍ಯುಗದ ಅಂತ್ಯದಲ್ಲಿ ಕಾಣಿಸಿಕೊಂಡು ಜುರಾಸಿಕ್ ಕಾಲದಲ್ಲಿ ಉನ್ನತಮಟ್ಟವನ್ನು ಮುಟ್ಟಿದ್ದುವು. ಅವುಗಳ ಅವನತಿ ಕ್ರಿಟೇಷಿಯಸ್ ಯುಗದಲ್ಲಿ ಪ್ರಾರಂಭವಾಯಿತು. ಸುರುಳಿ ಬಿಚ್ಚಿದ **ಅಮ್ಮೊನೈಟ್**‍ಗಳು ಕ್ರಿಟೇಷಿಯಸ್ ಯುಗದ ವೈಶಿಷ್ಟ್ಯಗಳಲ್ಲಿ ಒಂದು. ಕ್ರಿಟೇಷಿಯಸ್ ಯುಗದ ಅಂತ್ಯದಲ್ಲಿ **ಅಮ್ಮೊನೈಟ್**‍ಗಳು ಸಂಪೂರ್ಣವಾಗಿ ಅಳಿದುಹೋದುವು.

*

**ಅಮ್ರಿ :** ಪಶ್ಚಿಮ ಪಾಕಿಸ್ತಾನದ ಸಿಂಧ್ ಬಳಿ, ಮೊಹೆಂಜೋದಾರೊವಿನಿಂದ ದಕ್ಷಿಣಕ್ಕಿರುವ ಈ ಗ್ರಾಮದ ಬಳಿ ಪುರಾತನ ದಿಬ್ಬಗಳಿವೆ. ಇವುಗಳನ್ನು ಅಗೆದಾಗ ದಿಬ್ಬದ ಮೇಲ್ಭಾಗದ ಪದರಗಳಲ್ಲಿ ಹರಪ್ಪ ಸಂಸ್ಕೃತಿಯ ಅವಶೇಷಗಳೂ ಕೆಳಗಿನ ಪದರಗಳಲ್ಲಿ ಅದಕ್ಕೂ ಹಿಂದಿನ ಬೇರೊಂದು ಸಂಸ್ಕೃತಿಯ ಕುರುಹುಗಳೂ ಕಂಡುಬಂದಿವೆ. ಇದನ್ನು ಅಮ್ರಿ ಸಂಸ್ಕೃತಿ ಎಂದು ಪುರಾತತ್ತ್ವಜ್ಞರು ಹೆಸರಿಸಿದ್ದಾರೆ. ಕಾಲ ಪ್ರ.ಶ.ಪೂ. ಸು. 2,500ಕ್ಕೂ ಹಿಂದೆ. ಈ ಸಂಸ್ಕೃತಿಗೆ ಸಂಬಂಧಪಟ್ಟಂತೆ ಕೇವಲ ಮಡಕೆಗಳ ವಿಷಯ ಮಾತ್ರ ಇದುವರೆಗೆ ದೊರಕಿದೆ. ಇವುಗಳಲ್ಲಿ ಹೆಚ್ಚಿನವು ಕಂದು ಬಣ್ಣದ ಪೀಠವುಳ್ಳ ಲೋಟಗಳು. ಇವುಗಳ ಮೇಲೆ ಕಪ್ಪು ಮತ್ತು ಕೆಂಪುಬಣ್ಣದಿಂದ ಸಾಲು ಸಾಲಾಗಿ ತಿದ್ದಿದ ಆಯಾಕೃತಿ, ವಜ್ರಾಕೃತಿ, ಚೌಕಳಿ ಮುಂತಾದ ಜ್ಯಾಮಿತೀಯ ನಮೂನೆಗಳ ಚಿತ್ರಣವಿದೆ. ಅಮ್ರಿ ಸಂಸ್ಕೃತಿ ವಿಶೇಷವಾಗಿ ಸಿಂಧೂನದಿಯ ಪಶ್ಚಿಮಕ್ಕೆ ಸಿಂಧ್‍ನ ಬಯಲುಪ್ರದೇಶದಲ್ಲಿ ಹರಡಿತ್ತು. (ಎಸ್.ಎನ್.)

**ಅಮ್ರೇಲಿ :** ಗುಜರಾತಿನ ಒಂದು ಜಿಲ್ಲೆ. ಇದು ಆರುಕಡೆ ಛಿದ್ರಛಿದ್ರವಾಗಿ ಹರಡಿದೆ. ಹಿಂದಿನ ಬರೋಡ ಸಂಸ್ಥಾನದ ಒಂದು ಪ್ರಾಂತ್ಯವಾಗಿತ್ತು. 17 ಭಾಗಗಳಿಂದ ಕೂಡಿದ್ದ ಇದರ ವಿಸ್ತೀರ್ಣ 3224 ಚ.ಕಿಮೀ ಆಗಿತ್ತು. ಈಗಿನ ವಿಸ್ತೀರ್ಣ 4002 ಚ.ಕಿಮೀ. ಜನಸಂಖ್ಯೆ 1393,295 (2001). ಜನಸಾಂದ್ರತೆ ಚ.ಕಿಮೀಗೆ 195 ಜನರು. ಮಣ್ಣು ಕಪ್ಪು, ಫಲವತ್ತಾಗಿದೆ. ಷಿಯಾನಗರ್ ಅರ್ಧ ಜೌಗು ಅರ್ಧ ಮರುಭೂಮಿಯಾಗಿದ್ದು ಗೋದಿ ಬೆಳೆಗೆ ಅನುಕೂಲವಾಗಿದೆ. ಧಾರಿ ತಾಲ್ಲೂಕಿನಲ್ಲಿ ಮಣ್ಣು ತೆಳು ಬಣ್ಣಕ್ಕಿದ್ದು, ಗಿರ್ ಬೆಟ್ಟಗುಡ್ಡಗಳ ಕಡೆ ಕೆಂಪಾಗಿದೆ. 100 ಸೆಂ.ಮೀ.ಗಳಿಗಿಂತಲೂ ಹೆಚ್ಚು ಮಳೆ. ಉಳಿದ ತಾಲ್ಲೂಕುಗಳಲ್ಲಿ ಇಷ್ಟು ಮಳೆ ಇಲ್ಲ. ಇಲ್ಲಿ ಜೋಳ, ಬಾಜ್ರ, ಗೋದಿ, ಬೇಳೆ, ಹತ್ತಿ, ಕಬ್ಬು, ಕೆಂಪುಮೆಣಸು ಇತ್ಯಾದಿಗಳನ್ನು ಬೆಳೆಯುತ್ತಾರೆ. ಓಖಾಮಂಡಲ್‍ನಲ್ಲಿ ಮಳೆ ಕಡಿಮೆಯಿದ್ದರೂ ಜೋಳ ಮತ್ತು ಬಾಜ್ರಗಳನ್ನು ಬೆಳೆಯುತ್ತಾರೆ. ಧಾರಿ, ಅಮ್ರೇಲಿ ತಾಲ್ಲೂಕುಗಳು ಪರ್ವತ ಪ್ರದೇಶವಾಗಿದ್ದು ಅನೇಕ ನದಿಗಳ ಜನ್ಮ ಸ್ಥಾನವಾಗಿವೆ. ಮುಖ್ಯವಾದುದು ಶತ್ರುಂಜಿ. ಗಿರ್‍ನಲ್ಲಿ ಮಾತ್ರ ಸು. 20,235 ಹೆಕ್ಟೇರ್ ಕಾಡುಗಳಿವೆ. ಇಲ್ಲಿನ ಮೃಗಧಾಮದಲ್ಲಿ ಸಿಂಹಗಳ ಸಂತತಿಯನ್ನು ಸಂರಕ್ಷಿಸಲಾಗಿದೆ. ಹತ್ತಿ, ರೇಷ್ಮೆಬಟ್ಟೆಗಳು ಅಮ್ರೇಲಿ, ಕೋಡಿನಾರ್ ಮತ್ತು ದ್ವಾರಕೆಗಳಲ್ಲಿವೆ. ದ್ವಾರಕೆಯಲ್ಲಿ ಸಿಮೆಂಟ್ ಮತ್ತು ರಾಸಾಯನಿಕ ವಸ್ತುಗಳು ತಯಾರಾಗುತ್ತವೆ. ಓಖಾ ಬಂದರನ್ನು ಬರೋಡ ಸಂಸ್ಥಾನ ಅಭಿವೃದ್ಧಿಪಡಿಸಿತ್ತು. ಬೈಟ್‍ದ್ವೀಪದ ಬಂದರನ್ನು ಇತ್ತೀಚೆಗೆ ಅಭಿವೃದ್ಧಿಪಡಿಸಲಾಗುತ್ತಿದೆ.

ಅಮ್ರೇಲಿ (ಅಮರವಲ್ಲಿ) ಜಿಲ್ಲಾ ಕೇಂದ್ರ ಹಾಗೂ ಜಿಲ್ಲೆಯ ಅತ್ಯಂತ ದೊಡ್ಡ ಪಟ್ಟಣ. ಜನಸಂಖ್ಯೆ 95,307 (2001). ಥೇಬಿ ನದಿಯ ದಡದ ಮೇಲಿದೆ. ಇಲ್ಲಿ 1905ರಲ್ಲಿ ಪುರಸಭೆ ರೂಪುಗೊಂಡಿತ್ತು. ಅನೇಕ ಪ್ರಾಚೀನ ಕಟ್ಟಡಗಳು ಇವೆ. ಕೈಮಗ್ಗ, ಬಣ್ಣಗಾರಿಕೆ, ಬೆಳ್ಳಿಕೆಲಸ–ಇಲ್ಲಿನ ಮುಖ್ಯ ಕೈಗಾರಿಕೆಗಳು. ಓಖಾ ಮತ್ತು ದ್ವಾರಕೆ ಮುಖ್ಯ ರೈಲ್ವೆ ಕೇಂದ್ರಗಳು. ದ್ವಾರಕೆ ಒಂದು ಪುಣ್ಯಕ್ಷೇತ್ರ. (ಕೆ.ಆರ್.ಆರ್.)

**ಅಯಟೋಲಿಯ ಒಕ್ಕೂಟ :** ಅಯಟೋಲಿಯದಲ್ಲಿನ ಪಂಗಡಗಳೆಲ್ಲ 4ನೆಯ ಶತಮಾನದ ಪ್ರಾರಂಭದಲ್ಲಿ ಸ್ಥಾಪಿಸಿದ ಕೂಟಸಂಸ್ಥೆ. ಈ ಹಿಂದೆ ಇಲ್ಲಿದ್ದ ಗುಂಪುಗಳ ಮಧ್ಯೆ ಒಗ್ಗಟ್ಟಾಗಲಿ ರಾಜಕೀಯ ವ್ಯವಸ್ಥೆಯಾಗಲಿ ಇಲ್ಲದ್ದರಿಂದ ದೇಶದ ಅಭಿವೃದ್ಧಿ ಕುಂಠಿತವಾಗಿತ್ತಲ್ಲದೆ ಶತ್ರುಭಯ ಅಪಾರವಾಗಿತ್ತು. ಒಕ್ಕೂಟದ ಸಂವಿಧಾನದ ಪ್ರಕಾರ ಅಸ್ತಿತ್ವಕ್ಕೆ ಬಂದ ಮುಖ್ಯ ವಿಧಾಯಕ ಸಭೆಗೆ ಕಾನೂನುಗಳನ್ನು ರಚಿಸುವ ಆಡಳಿತಾಧಿಕಾರಿಗಳನ್ನು ಆರಿಸುವ ಹಾಗೂ ವಿದೇಶಾಂಗ ನೀತಿಯನ್ನು ರೂಪಿಸುವ ಅಧಿಕಾರವಿತ್ತು. ಎಲ್ಲ ಗುಂಪುಗಳ ಮುಖಂಡರನ್ನೊಳಗೊಂಡ ಮತ್ತೊಂದು ವಿಧಾಯಕ ಸಭೆಯೂ ಇತ್ತು. ಅಲ್ಲದೆ 30 ಮಂದಿ ಸದಸ್ಯರನ್ನೊಳಗೊಂಡ ಸಮಿತಿಯೊಂದು ಪ್ರಮುಖ ಸಮಸ್ಯೆಗಳನ್ನು ಮೇಲ್ಕಂಡ ಸಭೆಗಳ ಗಮನಕ್ಕೆ ತರುವ ಕಾರ್ಯದಲ್ಲಿ ನಿರತವಾಗಿತ್ತು.

ಈ ಒಕ್ಕೂಟದ ಪರಿಣಾಮವಾಗಿ ಅಯಟೋಲಿಯದ ಬಲ ಸಂವರ್ಧನೆಯಾಯಿತು. ಅದು ಪ್ರ.ಶ.ಪೂ. ಸು. 279ರಲ್ಲಿ ಕೆಲ್ಟರ ದಾಳಿಯನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಿತಲ್ಲದೆ ಬಯೋಷಿಯ, ದಕ್ಷಿಣ ಥೆಸಲಿ, ಎಪಿರಸ್ ಪ್ರದೇಶಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿತು. ಪ್ರ.ಶ.ಪೂ.220ರಲ್ಲಿ ಅಥೀನಿಯ ಒಕ್ಕೂಟ ಹಾಗೂ ಮ್ಯಾಸಿಡೋನಿಯಗಳಿಂದ ಪರಾಜಯಗೊಂಡರೂ ರೋಮನ್ನರೊಡಗೂಡಿ ಮ್ಯಾಸಿಡೋನಿಯವನ್ನು ಯುದ್ಧದಲ್ಲಿ ಪರಾಜಯಗೊಳಿಸಿತು. ಆದರೆ ಪ್ರ.ಶ.ಪೂ.192ರಲ್ಲಿ ಸಿರಿಯದೊಡನೆ ಸೇರಿ ರೋಮನ್ನರನ್ನು ವಿರೋಧಿಸಿತು. ಅಯಟೋಲಿಯ, ಸಿರಿಯ ಸೋತವು. ಒಕ್ಕೂಟ ನಿರ್ನಾಮವಾಗಿ ಅಯಟೋಲಿಯ ರೋಮನ್ ಸಾಮ್ರಾಜ್ಯದಲ್ಲಿ ಸೇರಿಹೋಯಿತು. ಈಗ ಅಯಟೋಲಿಯ ಪ್ರದೇಶಕ್ಕೆ ಅಕರ್ನಾನಿಯ ಸೇರಿದೆ. (ಜಿ.ಆರ್.ಆರ್.)

**ಅಯಡೊಫಾರಮ್ :** ಅಯೋಡೀನನ್ನು ಆಲ್ಕೊಹಾಲಿನಲ್ಲಿ ಕರಗಿಸಿ ಆ ದ್ರಾವಣವನ್ನು ಸೋಡಿಯಮ್ ಕಾರ್ಬೊನೇಟ್ ಕ್ಷಾರದ ಜೊತೆಯಲ್ಲಿ ಕುದಿಸಿದಾಗ ಒಂದು ಹಳದಿ ಬಣ್ಣದ ದ್ರಾವಣ ಉತ್ಪನ್ನವಾಗುತ್ತದೆ. ಇದನ್ನು ತಣಿಸಿದರೆ ಹಳದಿ ಬಣ್ಣದ ಅಯಡೊಫಾರಮ್ ಹರಳುಗಳು ($CHI_3$) ಘನೀಕರಿಸುತ್ತವೆ. ಇದನ್ನು ಪಡೆಯುವ ಇನ್ನೊಂದು ವಿಧಾನ : ಆಲ್ಕೊಹಾಲ್ ($C_3H_3.OH$) ಅಥವಾ ಅಸಿಟೋನ್ ($CH_3.CO.CH_3$) ಜೊತೆಗೆ ಸೋಡಿಯಮ್ ಕಾರ್ಬೊನೇಟ್ ಮತ್ತು ಪೊಟಾಸಿಯಮ್ ಅಯೊಡೈಡ್‍ಗಳನ್ನು ಸೇರಿಸಿ ಆ ಮಿಶ್ರಣದ ಮೂಲಕ ವಿದ್ಯುಚ್ಛಕ್ತಿ ಹಾಯಿಸಿದರೆ ಅಯಡೊಫಾರಮ್ ಸಿಕ್ಕುತ್ತದೆ. ಮೀಥೈಲ್ ಆಲ್ಕೊಹಾಲ್ ($CH_3.OH$) ಮೇಲೆ ತಿಳಿಸಿದ ಯಾವ ರೀತಿಯಲ್ಲೂ ಅಯಡೋಫಾರಮನ್ನು ಕೊಡಲಾರದು. ಆದರೆ ಈಥೈಲ್ ಆಲ್ಕೋಹಾಲ್ ಇದನ್ನು ಕೊಡಬಲ್ಲದು. ಇವೆರಡು ಆಲ್ಕೊಹಾಲ್‍ಗಳನ್ನು ಹೋಲಿಸಲು ಇದು ಒಳ್ಳೆಯ ಪರೀಕ್ಷೆ (ಅಯಡೊಫಾರಮ್ ಟೆಸ್ಟ್). ಅಯಡೊಫಾರಮ್ ತೀವ್ರ ವಾಸನೆಯಿರುವ ಹಳದಿ ಬಣ್ಣದ ಹರಳು; (120) ಸೆಂ.ಗ್ರೇ.ನಲ್ಲಿ ದ್ರವೀಕರಿಸುತ್ತದೆ. ಅಯಡೊಫಾರಮ್ ಕ್ಲೋರೋಫಾರಮ್ಮನ್ನು **(ನೋಡಿ– ಕ್ಲೋರೊಫಾರಂ)** ಅನೇಕ ಲಕ್ಷಣಗಳಲ್ಲಿ ಹೋಲುತ್ತದೆ. ಔಷಧಿಯಲ್ಲಿ ಇದನ್ನು ಕ್ರಿಮಿನಾಶಕ ವಸ್ತುವಾಗಿ ಬಳಸುತ್ತಾರೆ. (ಕೆ.ಎಸ್.ಎಲ್.)

**ಅಯನ ಸಂಕ್ರಾಂತಿಗಳು :** ಖಗೋಳದಲ್ಲಿ ವಿಷುವದ್ವೃತ್ತದಿಂದ ಅತ್ಯಧಿಕ ಕೋನಾಂತರದಲ್ಲಿರುವ ಸೂರ್ಯನ ಎರಡು ಸ್ಥಾನಗಳು (ಸಾಲ್‍ಸ್ಟಿಸಸ್). ಅತಿ ಉತ್ತರದ ಬಿಂದುವನ್ನು ಜೂನ್ 21ರಂದೂ ಅತಿ ದಕ್ಷಿಣದ ಬಿಂದುವನ್ನು ಡಿಸೆಂಬರ್ 22 ರಂದೂ ಸೂರ್ಯ ತಲಪುತ್ತದೆ. ಅಲ್ಲಿಂದ ಮುಂದೆ ಕ್ರಮವಾಗಿ ದಕ್ಷಿಣ ಮತ್ತು ಉತ್ತರ ದಿಕ್ಕಿನ ಸೂರ್ಯಚಲನೆ ಪ್ರಾರಂಭವಾಗುತ್ತದೆ. ಆದ್ದರಿಂದ ಈ ಬಿಂದು ಅಥವಾ ತಾರೀಕುಗಳನ್ನು ದಕ್ಷಿಣಾಯನಾರಂಭ ಮತ್ತು ಉತ್ತರಾಯಣಾರಂಭ ದಿನಗಳೆಂದು ಕರೆಯುತ್ತಾರೆ. ಕರ್ಕಾಟಕ ಸಂಕ್ರಾಂತಿ (ಸಮ್ಮರ್ ಸಾಲ್‍ಸ್ಟಿಸ್) ಮತ್ತು ಮಕರ ಸಂಕ್ರಾಂತಿ (ವಿಂಟರ್ ಸಾಲ್‍ಸ್ಟಿಸ್) ಎಂದು ಇವುಗಳ ಹೆಸರು. ಸೂರ್ಯನನ್ನು ಪರಿಭ್ರಮಿಸುತ್ತಿರುವ ಭೂಮಿಯ ಅಕ್ಷ ಕಕ್ಷಾತಲಕ್ಕೆ $23^0 21^1$ ಯಷ್ಟು ಬಾಗಿಕೊಂಡಿರುವುದೇ ಈ ಗೋಚರಸೂರ್ಯಚಲನೆಗೆ ಕಾರಣ. ವಾಸ್ತವಿಕವಾಗಿ ಜೂನ್ 21 ರಂದು (ಕರ್ಕಾಟಕ ಸಂಕ್ರಾಂತಿ) ಭೂಮಿಯ ಉತ್ತರ ಮೇರುವೂ ಡಿಸೆಂಬರ್ 22ರಂದು (ಮಕರ ಸಂಕ್ರಾಂತಿ) ದಕ್ಷಿಣ ಮೇರುವೂ ಅತ್ಯಧಿಕವಾಗಿ

ಸೂರ್ಯನೆಡೆಗೆ ವಾಲುವುವು. ಆದ್ದರಿಂದ ಮೊದಲಿನ ದಿನದಂದು ಉತ್ತರಗೋಳಾರ್ಧದವರಿಗೂ ಎರಡನೆಯ ದಿನದಂದು ದಕ್ಷಿಣಗೋಳಾರ್ಧದವರಿಗೂ ನಡುಬೇಸಿಗೆ. ಅಯನ ಸಂಕ್ರಾಂತಿಗಳು ಋತುಭೇದಗಳನ್ನು ಅರಿಯಲು ಉಪಯುಕ್ತವಾಗಿವೆ. **(ನೋಡಿ– ಋತುಗಳು)**

*

**ಅಯನಾಂಶ :** ಭೂಮ್ಯಕ್ಷದ ದಿಗ್ವಿನ್ಯಾಸ ಕ್ರಮೇಣ ವ್ಯತ್ಯಯಿಸುವುದರ ಕಾರಣವಾಗಿ ವಿಷುವದ್ಬಿಂದುಗಳು ಕ್ರಾಂತಿವೃತ್ತದ ನೇರ ಅತಿ ಮಂದಗತಿಯಲ್ಲಿ ಹಿನ್ಸರಿವ ವಿದ್ಯಮಾನ (ಪ್ರಿಸೆಶನ್ ಆಫ್ ದಿ ಈಕ್ವಿನಾಕ್ಸಸ) ಖಗೋಳೀಯ ವಿಷುವದ್ವೃತ್ತವನ್ನ ಕ್ರಾಂತಿವೃತ್ತ ಸಂಧಿಸುವ ಎರಡು ಬಿಂದುಗಳಿಗೆ ವಿಷವದ್ಬಿಂದುಗಳೆಂದು ಹೆಸರು. ಕ್ರಾಂತಿವೃತ್ತದ ಮೇಲೆ ಸೂರ್ಯ ವಾರ್ಷಿಕವಾಗಿ ಭೂಮಿಯ ಸುತ್ತ ಚಲಿಸುತ್ತಿರುವಂತೆ ನಮಗೆ ಭಾಸವಾಗುತ್ತದೆ. ವಿಷುವದ್ವೃತ್ತವನ್ನು ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಅಡ್ಡ ಹಾಯುವ ಬಿಂದುವಿಗೆ ವಸಂತ ವಿಷುವವೆಂದೂ ಎದುರಿನದಕ್ಕೆ ಶರದ್ವಿಷುವವೆಂದೇ ಹೆಸರು.




ಅಯನಾಂಶದಿಂದ ಭೂಮ್ಯಕ್ಷ ರೇಖಿಸುವ ದೊಡ್ಡ ಲಂಬ ವೃತ್ತೀಯ ಶಂಕು ಮತ್ತು ಅಕ್ಷಕಂಪದಿಂದ ರೇಖಿಸುವ ಚಿಕ್ಕ ಶಂಕು

ಆಕಾಶಕಾಯಗಳ ಅಕ್ಷಾಂಶ ರೇಖಾಂಶಗಳನ್ನು ಅಳೆಯಲು ಮೂಲ ಬಿಂದು ವಸಂತವಿರುವ ಈ ಬಿಂದುವೇ ಚಲನಶೀಲವಾಗಿರುವುದಿಂದ ರೇಖಾಂಶಗಳಲ್ಲಿ ಕ್ರಮೇಣ ವ್ಯತ್ಯಯ ಹಣುಕುತ್ತದೆ.

ಗ್ರೀಕ್ ಖಗೋಳಶಾಸ್ತ್ರ ಹಿಪಾರ್ಕಸ್ (ಪ್ರ.ಶ.ಪೂ. 190–120) ಈ ವ್ಯತ್ಯಯಗಳನ್ನು ಗುರುತಿಸಿದ ಮೊದಲಿಗ. ಸುಮಾರು 1,000ಕ್ಕೂ ಹೆಚ್ಚು ನಕ್ಷತ್ರಗಳ ಸ್ಥಾನಗಳನ್ನು ಕೆಲವು ವರ್ಷ ಪರಿಶೀಲಿಸಿ ಎಲ್ಲ ನಕ್ಷತ್ರಗಳಿಗೂ ಖಗೋಳೀಯ ರೇಖಾಂಶದಲ್ಲಿ (ಸೆಲೆಸ್ಟಿಯಲ್ ಲಾಂಜಿಟ್ಯೂಡ್) ಒಂದೇ ಸಮವಾದ ವಿಸ್ತರಣೆಯಿದೆಯೆಂದೂ ಖಗೋಳೀಯ ಅಕ್ಷಾಂಶದಲ್ಲಿ (ಸೆಲೆಸ್ಟಿಯಲ್ ಲ್ಯಾಟಿಟ್ಯೂಡ್) ಸ್ವಲ್ಪವೂ ಬದಲಾವಣೆ ಇಲ್ಲವೆಂದೂ ಆತ ಸಾರಿದ. ಈ ಬದಲಾವಣೆಗಳನ್ನು ಎರಡು ರೀತಿಯಾಗಿ ವಿವರಿಸಬಹುದು : (1) ನಕ್ಷತ್ರಗಳು ತಾವಾಗಿಯೇ ಹೊಸ ಸ್ಥಾನಗಳಿಗೆ ಚಲಿಸಿರಬಹುದು; ಅಥವಾ (2) ಆಧಾರಬಿಂದು ಇಲ್ಲವೆ ಸಮತಲವೇ ಚಲಿಸುತ್ತಿರಬಹುದು. ಅಸಂಖ್ಯಾತ ನಕ್ಷತ್ರಗಳಿಗೆಲ್ಲ ಏಕಪ್ರಕಾರಚಲನೆ ಇದೆಯೆಂಬುದು ಅಸಾಧುವೆಂದು ಹಿಪಾರ್ಕಸ್ ತರ್ಕಿಸಿದ. ಆದ್ದರಿಂದ ವಿಷುವದ್ವೃತ್ತ ಕ್ರಾಂತಿವೃತ್ತದ ಮೇಲೆ ಅಪ್ರದಕ್ಷಿಣೆ ದಿಶೆಯಲ್ಲಿ ಚಲಿಸುತ್ತಿದೆ – ಅಂದರೆ ವಿಷುವದ್ಬಿಂದುಗಳು ಕ್ರಾಂತಿವೃತ್ತದ ಮೇಲೆ ಈ ಪ್ರಕಾರ ಜಾರುತ್ತಿವೆ–ಎಂದು ವಾದಿಸಿದ. ಈ ಅದ್ಭುತವಿಚಾರಕ್ಕೆ ಮುಂದೆ ನ್ಯೂಟನ್ (1643–1727) ಗತಿ ಸಮರ್ಥನೆ ಕೊಟ್ಟಿದ್ದಾನೆ. ಅವನು ಭೂಮಿಯನ್ನು ಬಹುವೇಗವಾಗಿ ಸುತ್ತುತ್ತಿರುವ ಬುಗುರಿಗೆ ಹೋಲಿಸಿ ಇಲ್ಲಿ ಅಕ್ಷ ಹೇಗೆ ಒಂದು ಲಂಬವೃತ್ತೀಯ ಶಂಕುವನ್ನು ರೇಖಿಸುವುದು ಎಂದು ತೋರಿಸಿದ್ದಾನೆ. ಸೂರ್ಯ ಮತ್ತು ಚಂದ್ರ (ಮೊದಲನೆಯದು ಗಾತ್ರಬಲದಿಂದ, ಎರಡನೆಯದು ಭೂಮಿಗೆ ಸಮೀಪದ ಉಪಗ್ರಹವಾಗಿರುವುದರಿಂದ) ಭೂಮಿಯ ಅಕ್ಷಚಲನೆಯ ಮೇಲೆ ವಿಶೇಷ ಪ್ರಭಾವ ಬೀರುತ್ತವೆ.

ಇದೇ ರೀತಿ ಗ್ರಹಗಳ ದುರ್ಬಲ ಆದರೂ ಸ್ಪಷ್ಟಪ್ರಭಾವ ಇದ್ದೇ ಇದೆ. ಕಾರಣ ಯಾವುದೇ ಇರಲಿ, ಪರಿಣಾಮದಲ್ಲಿ ವಿಷುವದ್ಬಿಂದುಗಳು ಕ್ರಾಂತಿವೃತ್ತದ ಮೇಲೆ ಚಲಿಸುತ್ತವೆ. ಇದೇ ಅಯನಾಂಶ. ಇದರಿಂದ ನಕ್ಷತ್ರಗಳ ಖಗೋಳೀಯ ರೇಖಾಂಶಗಳಲ್ಲಿ ಏಕಪ್ರಕಾರ ವ್ಯತ್ಯಾಸ ಉಂಟಾಗುತ್ತದೆ. ಸೂರ್ಯನಿಂದ ಮಾತ್ರ ಉಂಟಾದ ವಿಷುವದ್ಬಿಂದು ಚಲನೆಯನ್ನು ಸೌರ ಅಯನಾಂಶವೆಂದೂ ಸೂರ್ಯ ಚಂದ್ರರಿಂದ ಉಂಟಾದ ಚಲನೆಯನ್ನು ಚಾಂದ್ರಸೌರ ಅಯನಾಂಶವೆಂದೂ ಕರೆಯುತ್ತೇವೆ. ಇದೇ ರೀತಿ ಗ್ರಹ ಅಯನಾಂಶ. ಬ್ರಹ್ಮಗುಪ್ತ (628) ಮತ್ತು ವರಾಹಮಿಹಿರ (ಮರಣ 587) ಅಯನಾಂಶವನ್ನು ಸ್ಪಷ್ಟವಾಗಿ ಅಥವಾ ನೇರವಾಗಿ ಹೇಳದಿದ್ದರೂ ಭಾರತೀಯ ಖಗೋಳವಿಭಾಗದಲ್ಲಿ ಅಯನಾಂಶ ಅಥವಾ ವಿಷುವತ್ಸ್ಥಾನಪಲ್ಲಟದ ಖಚಿತ ಉಲ್ಲೇಖ ಪ್ರಶ. 932ರಲ್ಲಿ ಮಂಜುಳನ ಬರೆವಣಿಗೆಯಲ್ಲಿ ಮೊದಲಸಲ ಕಂಡುಬರುತ್ತದೆ. ಅಯನಾಂಶವನ್ನು ಗಳಿಸಲು ಅಲ್ಲಿ ಎರಡು ನಿಯಮಗಳನ್ನು ವಿವರಿಸಿದೆ. ಆರ್ಯಸಿದ್ಧಾಂತರೀತಿಯಲ್ಲಿ ಕಲಿಯುಗ 3624ನ್ನು (ಪ್ರ.ಶ.522) ಆಧಾರವರ್ಷವಾಗಿ ತೆಗೆದುಕೊಂಡಿದೆ. ಆಗ ಸಾಯನಸೌರಮಾನ (ಟ್ರಾಪಿಕಲ್) ಮತ್ತು ನಕ್ಷತ್ರಮಾನ (ಸೈಡೀರಿಯಲ್) ಮೇಷ ಸಂಕ್ರಮಣಗಳು ಒಟ್ಟಾಗಿ ಸೇರಿದ್ದವೆಂದು ಅಂದಾಜು ಮಾಡಲಾಗಿತ್ತು; ಆದರೆ ಸೂರ್ಯ ಸಿದ್ಧಾಂತ ಕಲಿಯುಗ 3601ನ್ನು (ಪ್ರ.ಶ.499) ಆಧಾರವರ್ಷವಾಗಿ ತೆಗೆದುಕೊಂಡಿದೆ. ಆಧಾರವರ್ಷ ಮತ್ತು ಯಾವುದೇ ಕೊಟ್ಟ ವರ್ಷಗಳ ಮಧ್ಯೆ ಇರುವ ವರ್ಷಗಳನ್ನು ಆರ್ಯಸಿದ್ಧಾಂತದ ರೀತಿ 1/60 ರಿಂದ ಮತ್ತು ಸೂರ್ಯಸಿದ್ಧಾಂತದ ರೀತಿ 3/200 ರಿಂದ ಗುಣಿಸಬೇಕಾಗುತ್ತದೆ. ಮೊದಲನೆಯದು ವಾರ್ಷಿಕ ಅಯನಾಂಶದ ಬೆಲೆಯನ್ನು 60", ಎರಡನೆಯದು 54" ಎಂದು ಕೊಡುತ್ತದೆ. ಈ ಎರಡು ಬೆಲೆಗಳನ್ನು ಇಂದಿನ ಖಚಿತವಾದ ಉಪಕರಣಗಳ ಸಹಾಯದಿಂದ ಕಂಡುಹಿಡಿದ ಆಧುನಿಕ ಬೆಲೆಗೆ ಹೋಲಿಸಿದರೆ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಇದರ ಬೆಲೆ 240 ವರ್ಷಗಳಿಗೆ 1 ಗಂಟೆಯೆಂದು ಎಸ್.ಬಿ. ದೀಕ್ಷಿತರು ಅಂದಾಜುಮಾಡಿ ತಿಳಿಸಿದ್ದಾರೆ. *

**ಅಯಸ್ಕಾಂತ:** ಅಯಸ್ಕಾಂತೀಯತೆ, ಮೊದಲಾದ ವಿಷಯಗಳಿಗೆ ನೋಡಿ– ಕಾಂತತ್ವ.

**ಅಯಾನ್‌ಗೋಳ :** ವಾಯುಮಂಡಲದ ಅತ್ಯುನ್ನತ ಪದರದೊಂದಿಗೆ ಸೌರ ಅತಿ ನೇರಿಳೆ ವಿಕಿರಣ ವರ್ತಿಸುವುದರ ಪರಿಣಾಮವಾಗಿ ಅಯಾನೀಕರಣಗೊಂಡ ವಾಯುಮಂಡಲಭಾಗ (ಅಯೊನೋಸ್ಫಿಯರ್). ಭೂಮಿಯಿಂದ 70–80 ಕಿಮೀ ಎತ್ತರದಲ್ಲಿ ಪ್ರಾರಂಭ ಅನಿರ್ದಿಷ್ಟ ವ್ಯಾಪ್ತಿ ಪಡೆದಿದೆ. ಸೂರ್ಯನ ಅತಿನೇರಿಳೆ ಅಥವಾ ಅಯಾನೀಕರಿಸುವ ಇತರ ಕಿರಣಗಳಿಂದ ಭೂವಾತಾವರಣದಲ್ಲಿ ಅಯಾನೀಕರಣ ಉಂಟಾಗುತ್ತದೆ. ಭೂಮಿಯಿಂದ (90) ಕಿಮೀ ಕಡಿಮೆ ಎತ್ತರದಲ್ಲಿ ಈ ರೀತಿ ಉಂಟಾದ ಎಲೆಕ್ಟ್ರಾನುಗಳು ಮತ್ತು ಅಯಾನ್‌ಗಳು ಪುನರ್ಮಿಲನ ಹೊಂದುತ್ತವೆ. ಆದರೆ ಸುಮಾರು (90–300) ಕಿಮೀ ಎತ್ತರದಲ್ಲಿರುವ ವಿರಳವಾದ ಗಾಳಿಯಲ್ಲಿ ಈ ಬಿಡಿಯಾದ ಎಲೆಕ್ಟ್ರಾನುಗಳು ಮತ್ತು ಅಯಾನುಗಳು ರೇಡಿಯೊ ತರಂಗಗಳ ಮೇಲೆ ಪ್ರಭಾವ ಬೀರುವಷ್ಟು ಸಂಖ್ಯೆಯಲ್ಲಿ ಯಾವಾಗಲೂ ಬಿಡಿಯಾಗಿಯೇ ಇರುತ್ತವೆ. ಸೌರ ವಿಕಿರಣದಲ್ಲಿ ಅತಿನೇರಿಳೆ ಕಿರಣಗಳ ಬಹುಭಾಗವನ್ನು ಅಯಾನ್‌ಗೋಳ ಹೀರಿಕೊಳ್ಳದೆ ಇದ್ದಿದ್ದರೆ ಭೂಮಿಯಲ್ಲಿಯ ಜೀವನಕ್ರಮವೇ ಬದಲಾಗಿರುತ್ತಿತ್ತು.

ಭೂಕಾಂತಕ್ಷೇತ್ರದ ಕ್ರಮಶಃ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಇಂಥ ಗೋಳವೊಂದು ಇರಬೇಕು ಎಂದುಕೊಳ್ಳಲಾಗಿತ್ತು. ರೇಡಿಯೊ ಅಲೆಗಳನ್ನು ಅಟ್ಲಾಂಟಿಕ್ ಸಾಗರದಾಚೆಗೆ ಮಾರ್ಕೊನಿ (1874–1937) ಪ್ರಸರಿಸಿದಾಗ ಕಳುಹಿಸಿದಾಗ ಅಯಾನ್‌ಗೋಳದ ಅಸ್ತಿತ್ವ ಖಚಿತವಾಯಿತು. ಎ.ಇ.ಕೆನೆಲಿ (1861–1939) ಮತ್ತು ಓ. ಹೆವಿಸೈಡ್ (1850–1925) ರವರು ಇದಕ್ಕೆ ಅಯಾನ್‌ಗೋಳ ಕಾರಣವೆಂದು ಸೂಚಿಸಿದ್ದರಿಂದ ಇದನ್ನು ಕೆನೆಲಿ ಹೆವಿಸೈಡ್ ಪದರ ಎಂದೂ ಕರೆಯುತ್ತಾರೆ.

ರೇಡಿಯೊತರಂಗಗಳ ಮೇಲೆ ಅಯಾನ್‌ಗೋಳದ ಪ್ರಭಾವವನ್ನು ಅರ್ಥಮಾಡಿಕೊಳ್ಳಲು ಶೂನ್ಯಪ್ರದೇಶ ದಲ್ಲಿರುವ ಒಂದು ಎಲೆಕ್ಟ್ರಾನನ್ನು ಪರಿಗಣಿಸಬೇಕು; ಅದು ರೇಡಿಯೊ ತರಂಗದ ಸ್ಥಿರ–ವಿದ್ಯುತ್‌ಕ್ಷೇತ್ರದಿಂದ (ಎಲೆಕ್ಟ್ರೊಸ್ಟ್ಯಾಟಿಕ್ ಫೀಲ್ಡ್) ಅದಕ್ಕ ನುಗುಣವಾಗಿ ಕಂಪಿಸುತ್ತದೆ. ಹೀಗೆ ಕಂಪಿಸುವ ಎಲೆಕ್ಟ್ರಾನುಗಳು ರೇಡಿಯೊ ತರಂಗದ ಶಕ್ತಿಯನ್ನು ಹೀರಿ ಮರುಪ್ರಸಾರ ಮಾಡುತ್ತವೆ. ಅಯಾನ್ ಗೋಳದ ಒಟ್ಟು ಪರಿಣಾಮ ರೇಡಿಯೊ ತರಂಗಗಳ ದಿಕ್ಕನ್ನು ಹೆಚ್ಚು ಎಲೆಕ್ಟ್ರಾನ್ ಸಾಂದ್ರತೆಯಿರುವ ಕಡೆಯಿಂದ ಕಡಿಮೆ ಯದರತ್ತ ಬದಲಾಯಿಸುವುದು. ಈ ಪರಿಣಾಮ ಎಲೆಕ್ಟ್ರಾನ್‌ನ ಪಾರ (ಆ್ಯಂಪ್ಲಿಟ್ಯೂಡ್) ಮತ್ತು ಸರಾಸರಿ ವೇಗ ಇದನ್ನು ಅವಲಂಬಿಸಿರುವುದರಿಂದ, ಆವೃತ್ತಿಇದೇ ರೀತಿ (ಫ್ರೀಕ್ವೆನ್ಸಿ) ಕಡಿಮೆಯಾದಂತೆ ಹೆಚ್ಚುತ್ತದೆ. ಅಯಾನ್‌ಗಳೂ ವರ್ತಿಸಿದರೂ ಇವುಗಳ ಜಡತ್ವ ಹೆಚ್ಚಾದ್ದರಿಂದ ಇವುಗಳಿಂದಾಗುವ ಪರಿಣಾಮ ಬಲು ಕಡಿಮೆ.




ಪ್ರೇಷಕಕೇಂದ್ರದಿಂದ ಗ್ರಾಹಕಕೇಂದ್ರಕ್ಕೆ ಹೋಗುವಾಗ ರೇಡಿಯೊ ಅಲೆಯೊಂದು ಭೂಮಿ ಮತ್ತು ಅಯಾನ್ ಗೋಳದ ನಡುವೆ ಹಿಂದಕ್ಕೂ ಮುಂದಕ್ಕೂ ಪ್ರತಿಫಲನಗೊಳ್ಳುತ್ತದೆ.

ಪ್ರಸಾರಯಂತ್ರದಿಂದ ಹೊರಟ ಭೂ ತರಂಗಕ್ಕಿಂತ (ಗ್ರೌಂಡ್‌ವೇವ್) ಅಯಾನ್‌ಗೋಳದ ಪ್ರತಿಫಲನದಿಂದ ಬರುವ ಭೂತರಂಗ (ಸ್ಕೈವೇವ್) ಹೆಚ್ಚು ಪ್ರಯಾಣ ಮಾಡಬೇಕು. ಆದ್ದರಿಂದ ರೇಡಿಯೊತರಂಗಗಳ ಕ್ಷಣಿಕ ಮಿಡಿತವೊಂದನ್ನು (ಷಾರ್ಟ್ ಪಲ್ಸ್) ಕಳಿಸಿ ಪ್ರಸಾರಯಂತ್ರದಿಂದ ಸ್ವಲ್ಪದೂರದಲ್ಲಿರುವ ಆಸಿಲೊಗ್ರಾಮ್‌ಗೆ ಇವೆರಡು ಬರಲು ಆಗುವ ಕಾಲವ್ಯತ್ಯಾಸದಿಂದ ಅಯಾನ್‌ಗೋಳದ ಎತ್ತರವನ್ನು ಗಣಿಸಬಹುದು. ಇಂಥ ಅಧ್ಯಯನದಿಂದ ಅಯಾನ್‌ಗೋಳದಲ್ಲಿ ಹಲವಾರು ಪದರಗಳಿರುವುದು ತಿಳಿಯಿತು. ಇವುಗಳಲ್ಲಿ ಎರಡು

ಪ್ರಧಾನ. 90–120 ಕಿಮೀ ಎತ್ತರದವರೆಗೆ ಕೆಳಗಿನ E ಪದರವಿದೆ. ಮೇಲಿನ F ಪದರ 150–300 ಕಿಮೀ ಎತ್ತರದಲ್ಲಿದೆ. ಇವಲ್ಲದೆ ಸುಮಾರು 70 ಕಿಮೀ ಎತ್ತರದಲ್ಲಿ D ಪದರವೂ ಉಂಟು. ಹಗಲು ಹೊತ್ತಿನಲ್ಲಿ E ಪದರದ ಗರಿಷ್ಠ ಬೆಲೆ ಒಂದು ಘನ ಸೆಂ.ಮೀ.ಗೆ $10^5$ ಸ್ವತಂತ್ರ ಎಲೆಕ್ಟ್ರಾನ್‌ಗಳು. ಆದರೆ ಅದೇ ವೇಳೆ F ಪದರಕ್ಕೆ ಎರಡು ಪರಮಾವಧಿ ಬೆಲೆಗಳಿವೆ. $F_1$ ಮತ್ತು $F_2$ ಪದರಗಳೆಂದು ಇವುಗಳ ಹೆಸರು. $F_2$ ಪದರ $F_1$ ಪದರದ ಮೇಲೆ ಇದೆ. ರಾತ್ರಿಯಲ್ಲಿ $F_1$ ಮತ್ತು $F_2$ ಪದರಗಳ ಬದಲು 250 ಕಿಮೀ ಎತ್ತರದಲ್ಲಿ F ಪದರವೊಂದೇ ಇರುವುದು.

ಊರ್ಧ್ವದಿಶೆಯಲ್ಲಿ ರೇಡಿಯೊತರಂಗವನ್ನು ಪ್ರೇಷಿಸಿದಾಗ ಅದು ಪ್ರತಿಫಲಗೊಳ್ಳುವಲ್ಲಿರುವ ಎಲೆಕ್ಟ್ರಾನ್ ಸಾಂದ್ರತೆಗೂ ($N_e$) ಆ ತರಂಗದ ಆವೃತಿಗೆ (ಮೆಗಸೈಕಲ್ಲಿನಲ್ಲಿ) ಇರುವ ಸಂಬಂಧ $N_e=1.24x10^4f^2$. ಅಲ್ಲದೆ ಅದು ಭೂಮಿಗೆ ಹಿಂತಿರುಗಿ ಬರಲು ತೆಗೆದುಕೊಳ್ಳುವ ಕಾಲದಿಂದ ಪ್ರತಿಫಲನಗೊಳ್ಳುವ ಸ್ಥಳದ ಎತ್ತರವೂ ತಿಳಿಯುತ್ತದೆ. ಇಂಥ ಅಧ್ಯಯನದಿಂದ ಭೂಮಿಯಿಂದ ಸುಮಾರು 100–350 ಕಿಮೀ ಎತ್ತರದವರೆಗೆ ಉನ್ನತಿಯ ಹೆಚ್ಚಾದಂತೆ ಎಲೆಕ್ಟ್ರಾನ್ ಸಾಂದ್ರತೆಯೂ ಹೆಚ್ಚುತ್ತದೆ ಎಂದು ತಿಳಿಯಿತು. ಆದ್ದರಿಂದ D, E, $F_1$, $F_2$ ಪದರಗಳು ಮೊದಲು ತಿಳಿದುಕೊಂಡಿದ್ದ ಹಾಗೆ ಸ್ಪಷ್ಟವಾದ ಪ್ರತ್ಯೇಕ ಪದರಗಳಲ್ಲ. ಆದರೆ ಎಲೆಕ್ಟ್ರಾನ್ ಸಾಂದ್ರತೆ ಗರಿಷ್ಠವಾಗಿದ್ದು ಸ್ವಲ್ಪ ಎತ್ತರದವರೆಗೂ ಒಂದೇ ಸಾಂದ್ರತೆಯಿರುವ ಸ್ಥಳಗಳು; ಅಂದರೆ ಈ ಪದರಗಳ ನಡುವೆಯೂ ಬಿಡಿ ಎಲೆಕ್ಟ್ರಾನ್‌ಗಳು ಇವೆಯೆಂದಾಯಿತು.

ಸುಮಾರು 60–90 ಕಿಮೀ ಎತ್ತರದವರೆಗೆ ಹರಡಿರುವ ಪದರದಲ್ಲಿ ಹೈಡ್ರೋಜನ್ನಿನ ಲೈಮಾನ್ ಆಲ್ಫ ಕಿರಣದಿಂದ ಅಯಾನೀಕರಣವಾಗುವುದು. ಅಯಾನ್‌ಗೋಳಕ್ಕೆ ಈ ಕಿರಣದ ಆವೃತ್ತಿಯ ಕಿಟಕಿ ಅಥವಾ ಕಿಂಡಿ ಇರುವುದರಿಂದ ಇದು 60 ಕಿಮೀ ಎತ್ತರದವರೆಗೂ ಬರಲು ಸಾಧ್ಯ. ಸೌರಜ್ವಾಲೆಯಿಂದ (ಸೋಲಾರ್ ಫ್ಲೇರ್) ಬರುವ ಶಕ್ತಿಯುತವಾದ ಕ್ಷ–ಕಿರಣಗಳಿಂದ ಮತ್ತು ಹಲವಾರು ದಶಲಕ್ಷದಿಂದ ನೂರಾರು ದಶಲಕ್ಷ ಮಿಲಿಯನ್ ಎಲೆಕ್ಟ್ರಾನ್ ವೋಲ್ಟ್‌ಶಕ್ತಿಯ ಪ್ರೋಟಾನ್‌ಗಳಿಂದ ಈ ಪದರದ ಎಲೆಕ್ಟ್ರಾನ್ ಸಾಂದ್ರತೆ ಬಹಳ ಹೆಚ್ಚುತ್ತದೆ ಮತ್ತು ಎತ್ತರ ಕಡಿಮೆಯಾಗುತ್ತದೆ. ಹೀಗೆ ಎಲೆಕ್ಟ್ರಾನ್ ಸಾಂದ್ರತೆ ಬಲು ಹೆಚ್ಚಿದಾಗ ರೇಡಿಯೊ ಪ್ರಸಾರವೇ ಸಾಧ್ಯವಾಗದಿರಬಹುದು.

ಸುಮಾರು 90–140 ಕಿಮೀ ಎತ್ತರದವರೆಗೆ ಹರಡಿರುವ E ಪದರದಲ್ಲಿ ಸೂರ್ಯಜನಿತ ಮೃದು ಕ್ಷ–ಕಿರಣಗಳಿಂದ ಅಯಾನೀಕರಣ ಉಂಟಾಗುತ್ತದೆ. ಸೌರ ಕಲೆಗಳು ಬಲು ಕಡಿಮೆ ಆದಾಗ ಅಯಾನ್‌ಗೋಳ ಎಲೆಕ್ಟ್ರಾನ್ ಸಾಂದ್ರತೆ ಸುಮಾರು $10^5$ (ಮಧ್ಯಾಹ್ನ) ಮತ್ತು ಬಲು ಹೆಚ್ಚು ಸೂರ್ಯಕಲೆಯಿರುವಾಗ 1.5 $10^5$ (ಮಧ್ಯಾಹ್ನ) ಈ ಪದರದ ಎಲೆಕ್ಟ್ರಾನ್ ಸಾಂದ್ರತೆ ಸಾಧಾರಣವಾಗಿ ಮಧ್ಯಾಹ್ನ 12 ಗಂಟೆಗೆ ಅತಿ ಹೆಚ್ಚಾಗಿ, ಅಲ್ಲಿಂದ ಎರಡು ಕಡೆಯೂ ಕಾಲಕ್ಕೆ ಸರಿಯಾಗಿ ಕಡಿಮೆಯಾಗುತ್ತ ಇರುತ್ತದೆ.

ಸುಮಾರು 140–200 ಕಿಮೀ ಎತ್ತರದವರೆಗೂ ಹರಡಿರುವ $F_1$ ಪದರದಲ್ಲಿ ಅಯಾನೀಕರಣವುಂಟಾಗುವುದು ಸೂರ್ಯಜನಿತ ಹೀಲಿಯಮ್ 304 ಕಿರಣದಿಂದ. ಬಲು ಕಡಿಮೆ ಸೌರಕಲೆಯಿರುವಾಗ ಇದರ ಎಲೆಕ್ಟ್ರಾನ್ ಸಾಂದ್ರತೆ ಸುಮಾರು $5x10^5$ (ಮಧ್ಯಾಹ್ನ), ಮತ್ತು ಬಲುಹೆಚ್ಚು ಸೌರಕಲೆಯಿರುವಾಗ ಸುಮಾರು $2x10^6$ (ಮಧ್ಯಾಹ್ನ). ಈ ಪದರ E ಮತ್ತು $F_2$ ಪದರಗಳಿಂದ ಸ್ಪಷ್ಟವಾಗಿ ಬೇರೆಯಾಗಿಲ್ಲ ಮತ್ತು ರಾತ್ರಿಕಾಲದಲ್ಲಿ ಸಾಂದ್ರತೆ $10^4$ ಗಿಂತ ಕಡಿಮೆಯಿದ್ದು ಇದು ಇರುವುದೇ ತಿಳಿಯುವುದಿಲ್ಲ.

ಸುಮಾರು 200–300 ಕಿಮೀ ಎತ್ತರದವರೆಗೂ ಹರಡಿರುವ $F_2$ ಪದರದಲ್ಲಿ ಅಯಾನೀಕರಣವುಂಟಾಗಿರುವುದು ಸಹ ಹೀಲಿಯಮ್ 304 ಕಿರಣಗಳಿಂದಲೇ ಇರಬೇಕು. ಈ ಪದರದ ವಿಷಯ ಅಷ್ಟು ನಿಖರವಾಗಿ ತಿಳಿದಿಲ್ಲ. ಇದರ ಎಲೆಕ್ಟ್ರಾನ್ ಸಾಂದ್ರತೆ ಸುಮಾರು $10^6$ ಎತ್ತರ ಹೆಚ್ಚಾದ ಹಾಗೆ ಅಯಾನೀಕರಣ ವ್ಯತ್ಯಾಸವಾಗುವುದಕ್ಕಿಂತ ಪುನರ್ಮಿಲನ ಕಡಿಮೆಯಾಗುವ ದರ ಹೆಚ್ಚು. ಆದ್ದರಿಂದ ಅದೇ ಅಯಾನೀಕರಿಸುವ ಕಿರಣಗಳಿಂದ ಹೆಚ್ಚು ಎಲೆಕ್ಟ್ರಾನ್ ಸಾಂದ್ರತೆಯ ಎರಡನೆಯ ಪದರವುಂಟಾಗಿದೆ. 300 ಕಿಮೀಗಿಂತ ಮೇಲೆ ಎತ್ತರ ಹೆಚ್ಚಾದ ಹಾಗೆ ಎಲೆಕ್ಟ್ರಾನ್ ಸಾಂದ್ರತೆ ಕಡಿಮೆಯಾಗುತ್ತದೆ.

ಈ ಪದರಗಳ ಗುಣಾತಿಶಯಗಳು ಮೇಲೆ ಹೇಳಿರುವಂತೆ ದಿನದ ಕಾಲಕ್ಕೆ ಸೂರ್ಯ ನಲ್ಲಾಗುವ ಬದಲಾವಣೆಗಳಿಗೆ ಮತ್ತು ಸೌರಕಲೆಗಳ ಆವರ್ತಕ್ಕೆ (ಸನ್‌ಸ್ಪಾಟ್ ಸೈಕಲ್) ಅನುಸಾರವಾಗಿ ಬದಲಾಗುವುವಲ್ಲದೆ ವರ್ಷದ ಋತುವಿಗೆ ಅಧ್ಯಯನ ಕೇಂದ್ರದ ಭೌಗೋಳಿಕ ಸ್ಥಾನಕ್ಕೆ ತಕ್ಕಂತೆ ಬದಲಾಗುತ್ತಿರುತ್ತವೆ. ಕಾಂತೀಯ ಬಿರುಗಾಳಿ (ಮ್ಯಾಗ್ನೆಟಿಕ್ ಸ್ಟಾರ್ಮ್) ಬಂದಾಗಲಂತೂ ಈ ಗುಣಾತಿಶಯಗಳು ಬಲು ಏರುಪೇರಾಗಿರುತ್ತವೆ.

ಗ್ರಾಹಕ (ರಿಸೀವರ್) ಗ್ರಹಿಸುವ ರೇಡಿಯೊಸಂಜ್ಞೆಯ ಶಕ್ತಿ ಇದ್ದಕ್ಕಿದ್ದಂತೆ ಬದಲಾಗುವುದಕ್ಕೆ ಕುಗ್ಗುವಿಕೆ (ಫೇಡಿಂಗ್) ಎನ್ನುತ್ತೇವೆ. ಇದಕ್ಕೆ ಅಯಾನ್‌ಗೋಳದ ಸ್ಥಳೀಯ ವ್ಯತ್ಯಾಸಗಳಿಂದ ಚದರಿದ ತರಂಗಗಳ ವ್ಯತಿಕರಣ (ಇಂಟರ್‌ಫಿಯರೆನ್ಸ್), ಅಯಾನ್‌ಗೋಳದ ಹಲವಾರು ಮಾರ್ಗಗಳಲ್ಲಿ ಬಂದ ತರಂಗಗಳ ವ್ಯತಿಕರಣ, ಭೂತರಂಗ, ವಾದ್ಯತರಂಗಗಳ ವ್ಯತಿಕರಣ ಹೀಗೆ ಹಲವಾರು ಕಾರಣಗಳುಂಟು. ಅಲ್ಲದೆ ಈ ವ್ಯತಿಕರಣದ ಸ್ಥಿತಿ ಆವರ್ತಸಂಖ್ಯೆಯನ್ನು ಅವಲಂಬಿಸಿರುವುದರಿಂದ ವಿವಿಧ ಆವರ್ತಸಂಖ್ಯೆಯ ತರಂಗಗಳು ವಿವಿಧ ಮಟ್ಟಕ್ಕೆ ಕುಗ್ಗಿಸಲ್ಪಟ್ಟು ಗ್ರಹಿಸಿದ ಸಂಜ್ಞೆಯ ಗುಣ (ಕ್ವಾಲಿಟಿ) ಮೂಲಸಂಜ್ಞೆಯಂತಿರುವುದಿಲ್ಲ. ಇದನ್ನು ಆಯ್ದ ಕುಗ್ಗುವಿಕೆ (ಸೆಲೆಕ್ಟಿವ್ ಫೇಡಿಂಗ್) ಎನ್ನುತ್ತೇವೆ. ಅಯಾನ್‌ಗೋಳದ ಸ್ಥಳೀಯ ವ್ಯತ್ಯಾಸಗಳ ಅಲೆತದ (ಡ್ರಿಫ್ಟ್) ಮೇಲಾಗುತ್ತಿರುವ ಅಧ್ಯಯನಗಳಿಂದಲೂ ಗರಿಷ್ಠ ಕೃತಕ ಉಪಗ್ರಹಗಳಿಂದ ನಡೆಸುತ್ತಿರುವ ಅಧ್ಯಯನಗಳಿಂದಲೂ ಅಯಾನ್‌ಗೋಳದ ವಿವರಗಳು ಮತ್ತಷ್ಟು ತಿಳಿಯುತ್ತವೆ.

ಆವೃತ್ತಿ f (ಮೆಗಸೈಕಲಿನಲ್ಲಿ), ಎಲೆಕ್ಟ್ರಾನ್ ಸಾಂದ್ರತೆ N ಮತ್ತು ಅಯಾನ್‌ಗೋಳದಿಂದ ಭೂಮಿಗೆ ಹಿಂತಿರುಗಲು ಸಾಧ್ಯವಾಗುವ ಅತಿ ಹೆಚ್ಚು ಪತನಕೋನ $\beta_0$ – ಇವುಗಳಿಗೆ ಇರುವ ಸಂಬಂಧ

$$\cos\beta_0 =$$

ಹೆಚ್ಚು ಆವೃತ್ತಿಯ ತರಂಗ ಒಂದೆರಡು ಕಿಮೀನಲ್ಲೇ ಕ್ಷಯಿಸಿ ಹೋಗುತ್ತದೆ ಮತ್ತು ಈ ಗರಿಷ್ಠ ಪತನಕೋನವಿದ್ದಾಗ ಭೂಮಿಗೆ ಹಿಂತಿರುಗುವ ಸ್ಥಳಕ್ಕೂ ಪ್ರಸಾರ ಯಂತ್ರಕ್ಕೂ ನಡುವೆ ನಭೋತರಂಗ ಬರಲು ಸಾಧ್ಯವಿಲ್ಲ. ಯಾವ ಮಾರ್ಗದಿಂದಲೂ ಆ ಪ್ರಸಾರಯಂತ್ರದ ಸಂಜ್ಞೆಗಳು ಬರಲು ಸಾಧ್ಯವಿಲ್ಲದ ಈ ದೂರಕ್ಕೆ ಹಾರುದೂರ (ಸ್ಕಿಪ್ ಡಿಸ್ಟೆನ್ಸ್) ಎಂದು ಹೆಸರು.

ಪ್ರೇಕ್ಷಕಕೇಂದ್ರದಿಂದ ಗ್ರಾಹಕಕೇಂದ್ರಕ್ಕೆ ಹೋಗುವಾಗ ರೇಡಿಯೊ ಅಲೆಯೊಂದು ಭೂಮಿ ಮತ್ತು ಅಯಾನ್‌ಗೋಳದ ನಡುವೆ ಹಿಂದಕ್ಕೂ ಮುಂದಕ್ಕೂ ಪ್ರತಿಫಲನಗೊಳ್ಳುತ್ತದೆ.

ಹೆಚ್ಚು ದೂರದ ರೇಡಿಯೊ ಪ್ರಸಾರಕ್ಕೆ 550 ಕಿಲೊಸೈಕಲ್‌ಗಳಿಂದ 30 ಮೆಗಸೈಕಲ್‌ಗಳ ವರೆಗಿನ ಆವೃತ್ತಿ ತರಂಗಗಳನ್ನೇ ಉಪಯೋಗಿಸುತ್ತಾರೆ. ಆವೃತ್ತಿ ಇದಕ್ಕಿಂತ ಹೆಚ್ಚಾದರೆ ಅಯಾನ್‌ಗೋಳದಿಂದ ಪ್ರತಿಫಲನವಾಗದೇ ಅದನ್ನು ತೂರಿಕೊಂಡು ಹೊರಟುಹೋಗುತ್ತದೆ. ಆವೃತ್ತಿ ಇದಕ್ಕಿಂತ ಕಡಿಮೆಯಾದರೆ ತರಂಗದ ಶಕ್ತಿಯನ್ನು ಆ ಪದರದ ಎಲೆಕ್ಟ್ರಾನ್‌ಗಳೇ ಹೀರಿ ಅಲ್ಲಿರುವ ಗಾಳಿಯ ಅಣುಗಳೊಡನೆ ಡಿಕ್ಕಿ ಹೊಡೆದು ಕಳೆದುಹೋಗುತ್ತದೆ. ಬಾಹ್ಯಾಕಾಶ ನೌಕೆಯೊಡನೆ (ಸ್ಪೇಸ್ ಸ್ಯಾಟ್‌ಲೈಟ್) ಅಥವಾ ಬೇರೆ ಗ್ರಹಗಳೊಡನೆ ರೇಡಿಯೊ ಸಂಪರ್ಕಕ್ಕೆ 30 ಮೆಗಸೈಕಲ್‌ಗಿಂತ ಹೆಚ್ಚಿನ ಆವೃತ್ತಿಯ ತರಂಗಗಳನ್ನೇ ಉಪಯೋಗಿಸಬೇಕು.

$\sqrt{1-\frac{81N}{10^4}}$ ಪ್ರಕೃತಿದತ್ತವಾದ ಅಯಾನ್‌ಗೋಳದ ಬದಲು ವೆಸ್ಟ್ ಫೋರ್ಡ್ ಯೋಜನೆಯಲ್ಲಿ ಲಕ್ಷಗಟ್ಟಲೆ ಅತಿಸೂಕ್ಷ್ಮ ತಾಮ್ರದ ತಂತಿಗಳನ್ನು ಭೂಮಿಯ ಸುತ್ತಲೂ ಯುಕ್ತ ಎತ್ತರದಲ್ಲಿ ಹರಡಿ ಆ ಕೃತಕಾವರಣದ ಸಹಾಯದಿಂದ ಹೆಚ್ಚು ದೂರ ರೇಡಿಯೊ ಪ್ರಸಾರಕ್ಕೆ ಪ್ರಯತ್ನ ನಡೆಯುತ್ತಿದೆ. ಎಕೊ, ಟೆಲ್‌ಸ್ಟಾರ್, ಸಿಂಕಾಮ್ ಮತ್ತು ರಿಲೇ ಕೃತಕ ಉಪಗ್ರಹಗಳ ಸಹಾಯದಿಂದ ಅಯಾನ್‌ಗೋಳದ ಸಹಾಯವಿಲ್ಲದೆಯೇ ಭೂಮಿಯ ಆದ್ಯಂತ ಸದಾಕಾಲ ರೇಡಿಯೊ ಸಂಪರ್ಕವಿಟ್ಟುಕೊಳ್ಳಬಹುದು ಮತ್ತು ಅಯಾನ್ ಗೋಳದಿಂದಾಗದ, 30 ಮೆಗಸೈಕಲ್‌ಗಿಂತ ಹೆಚ್ಚಿನ ಆವೃತ್ತಿಯ ತರಂಗಗಳನ್ನೇ ಉಪಯೋಗಿಸುವ, ದೂರದರ್ಶನದ ಅಧಿಕ ದೂರ ಪ್ರಸಾರವನ್ನೂ ಮಾಡಬಹುದು ಎಂದು ತಿಳಿದುಬಂದಿದೆ. (ಟಿ.ಎನ್.ಎಸ್.)

**ಅಯಾನ್ ವಿನಿಮಯಿಗಳು :** ತಮ್ಮ ಅಯಾನುಗಳನ್ನು ಒಂದು ದ್ರಾವಣದಲ್ಲಿರುವ (ಸಲ್ಯೂಷನ್) ಇತರ ಅಯಾನುಗಳಿಗೆ ವಿನಿಮಯಿಸುವ ಘನರಾಸಾಯನಿಕ ವಸ್ತುಗಳು (ಅಯಾನ್ ಎಕ್ಸ್‌ಚೇಂಜರ್ಸ್). ಈ ಕ್ರಿಯೆಯ ಹೆಸರು ಅಯಾನ್ ವಿನಿಮಯ (ಅಯಾನ್ ಎಕ್ಸ್‌ಚೇಂಜ್). ಅಯಾನ್ ವಿನಿಮಯ ಗುಣಗಳಿರುವ ಹಲವಾರು ನಿಸರ್ಗಜನ್ಯ ಮತ್ತು ಸಂಶ್ಲೇಷಿತ (ಸಿಂಥೆಟಿಕ್) ವಸ್ತುಗಳಿವೆ–ಪ್ರೋಟೀನ್‌ಗಳು, ಸಂಶ್ಲೇಷಿತ ರಾಳಗಳು (ಸಿಂಥೆಟಿಕ್ ರೆಸಿನ್ಸ್), ಸೆಲ್ಯುಲೋಸ್, ಮೂಳೆ, ಜೈವಿಕ ಕೋಶಗಳು, ಸಿಲಿಕೇಟ್ ಖನಿಜಗಳು ಮತ್ತು ಮಣ್ಣುಗಳು. ನೀರನ್ನು ಮೃದುಗೊಳಿಸುವುದರಲ್ಲಿ ಅಯಾನ್ ವಿನಿಮಯಿಗಳ ಅತ್ಯಂತ ವಿಸ್ತೃತ ಉಪಯೋಗವಿದೆ. ಸಾಬೂನನ್ನು ಒತ್ತರಿಸುವ (ಪ್ರೆಸಿಪಿಟೇಟಿಂಗ್) ಗಡಸುನೀರಿನ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಅಯಾನುಗಳನ್ನು ಸೋಡಿಯಂ ಅಯಾನುಗಳಿಗೆ ವಿನಿಮಯಿಗಳ ಮೂಲಕ ವಿನಿಮಯಿಸಬಹುದು. ಅಯಾನ್ ವಿನಿಮಯಿಗಳು ಸಾಮಾನ್ಯವಾಗಿ ಸಂಶ್ಲೇಷಿತ ಆರ್ಗ್ಯಾನಿಕ್ ವಸ್ತುಗಳ ಬೃಹದಣುಗಳು. ಇವುಗಳಲ್ಲಿ ಅನೇಕವೇಳೆ ಅಡ್ಡಡ್ಡಲಾಗಿ ಹಾದುಹೋಗಿರುವ, ಕೆಲವುಸಲ ಹೆಚ್ಚು ಕೆಲವುಸಲ ಕಡಿಮೆ ಇರುವ ಬಂಧಗಳಿವೆ.

ವಿನಿಮಯಿಗಳನ್ನು ಸ್ಥೂಲವಾಗಿ ಆಮ್ಲಗಳು (ಆ್ಯಸಿಡ್ಸ್) ಮತ್ತು ಪ್ರತ್ಯಾಮ್ಲಗಳು (ಬೇಸಸ್) ಎಂದು ಎರಡು ವಿಧವಾಗಿ ವರ್ಗೀಕರಿಸಬಹುದು. ವಿನಿಮಯಿಗಳು ಅಯಾನೀಕೃತಗೊಂಡು ಎರಡು ವಿಧವಾದ ಅಯಾನುಗಳನ್ನು ಕೊಡುತ್ತವೆ. ಒಂದನೆಯವು ಬಂಧಿತ (ಫಿಕ್ಸೆಡ್) ಅಯಾನುಗಳು. ಇವು ವಿನಿಮಯಿಯ ಅಣುಜಾಲದಲ್ಲಿಯೇ ಇರುತ್ತವೆ. ಎರಡನೆಯವು ಸ್ವತಂತ್ರವಾಗಿ ಚಲಿಸಬಲ್ಲ ಪ್ರತ್ಯಯಾನುಗಳು (ಕೌಂಟರ್ ಅಯಾನ್ಸ್). ಪ್ರತ್ಯಯಾನುಗಳು

ವಿನಿಮಯಿಯ ಸಂಪರ್ಕದಲ್ಲಿರುವ ದ್ರಾವಣದಲ್ಲಿನ ಅಯಾನುಗಳೊಡನೆ ವಿನಿಮಯಗೊಳ್ಳಬಲ್ಲವು. ಆಮ್ಲೀಯ (ಕ್ಯಾಟಯಾನ್) ಮತ್ತು ಪ್ರತ್ಯಾಮ್ಲೀಯ (ಆ್ಯನಯಾನ್) ವಿನಿಮಯಿಗಳನ್ನು ಪ್ರಬಲ ಮತ್ತು ದುರ್ಬಲ ವಿನಿಮಯಿಗಳೆಂಬ ಉಪವರ್ಗಗಳಾಗಿ ಪುನರ್ವಿಂಗಡಿಸಬಹುದು. ಒಂದು ವಿನಿಮಯಿ ಏಕಕ್ರಿಯಾತ್ಮಕ (ಒಂದು ತರಹದ ವಿನಿಮಯವನ್ನು ಮಾತ್ರ ಮಾಡುವ ಗುಂಪುಳ್ಳವು) ಆಗಿರಬಹುದು ಅಥವಾ ಬಹುಕ್ರಿಯಾತ್ಮಕ (ಅನೇಕ ತರಹದ ವಿನಿಮಯಗಳನ್ನು ಮಾಡುವ ಗುಂಪುಳ್ಳವು) ಆಗಿರಬಹುದು. ವ್ಯಾವಹಾರಿಕ ಉಪಯೋಗಗಳಲ್ಲಿ ಬಹುವಾಗಿ ಈ ಏಕಕ್ರಿಯಾತ್ಮಕ ವಿನಿಮಯಿಗಳನ್ನು ಮಾತ್ರ ಬಳಸುತ್ತಾರೆ.

ಅಯಾನ್ ವಿನಿಮಯ ರಾಳಗಳು: ಫೀನಾಲ್ ಫಾರ್ಮಾಲ್ಡಿಹೈಡ್ ಮತ್ತು ಯೂರಿಯ (ಅಥವಾ ಅಮೈನ್)–ಫಾರ್ಮಾಲ್ಡಿಹೈಡ್ ಪಾಲಿಕಂಡೆನ್ಸೇಷನ್ ಪಾಲಿಮರ್‌ಗಳು; ಪಾಲಿಸ್ಟೈರೀನಿನ ಮತ್ತು ಡೈವಿನೈಲ್ ಬೆನ್ಜೀನಿನ (DVB) ಸಹಪಾಲಿಮರ್‌ಗಳು ಇತ್ಯಾದಿ ಅಯಾನ್ ವಿನಿಮಯ ರಾಳಗಳಿಗೆ ಸಾಮಾನ್ಯ ಉದಾಹರಣೆಗಳು. ಎಲ್ಲ ರಾಳಗಳಲ್ಲಿಯೂ ಅಡ್ಡಲಾಗಿ ಹಾಯುವ ಬಂಧಗಳು ಬೇರೆ ಬೇರೆ ಪ್ರಮಾಣಗಳಲ್ಲಿದ್ದು, ರಾಳವನ್ನು ತಯಾರಿಸುವಾಗ ಈ ಪ್ರಮಾಣಗಳನ್ನು ನಿಯಂತ್ರಿಸಬಹುದು. ಪಾಲಿ (ಸ್ಟೈರೀನ್) –ಸಹ ಪಾಲಿಮರನ್ನು ಸಲ್ಫೋನೀಕರಿಸಿ ಆ್ಯನಯಾನ್ ವಿನಿಮಯ ರಾಳವನ್ನು ಉತ್ಪತ್ತಿ ಮಾಡಬಹುದು ಅಥವಾ ಇದನ್ನು ಕ್ಲೋರೊಮಿಥಿಲೀಕರಿಸಿ ಅನಂತರ ಅದನ್ನು ಒಂದು ಅಮೀನಿನೊಡನೆ (ಪ್ರಬಲ ಅಥವಾ ದುರ್ಬಲ) ವರ್ತಿಸುವಂತೆ ಮಾಡಿ ಆಮ್ಲೀಯ ವಿನಿಮಯ ರಾಳವನ್ನು (ಪ್ರಬಲ ಅಥವಾ ದುರ್ಬಲ) ಉತ್ಪತ್ತಿಮಾಡಬಹುದು. ಕ್ಲೋರೊಮಿಥಿಲೀಕರಿಸಿರುವ ಪಾಲಿ (ಸ್ಟೈರೀನ್) DVB ಯನ್ನು ನೈಟ್ರೈಲ್ ಆಗಿ ಪರಿವರ್ತಿಸಿದ ಬಳಿಕ ಒಂದು ಆ್ಯನಯನ್ ವಿನಿಮಯಿಯನ್ನು ನೀಡುವಂತೆ ಅದನ್ನು ಜಲವಿಶ್ಲೇಷಣೆ (ಹೈಡ್ರೊಲೈಸ್) ಮಾಡಬಹುದು. ಅಯಾನ್ ವಿನಿಮಯ ರಾಳಗಳ ಸಂಯೋಜನೆ (ಇವುಗಳಲ್ಲಿರುವ ಗುಂಪುಗಳ ಸ್ವಭಾವ), ಮತ್ತು ಅಯಾನ್ ವಿನಿಮಯ ಸಾಮರ್ಥ್ಯಕ್ಕೆ (ಪ್ರತಿ ಒಂದು ಗ್ರಾಂ ಒಣರಾಳದಲ್ಲಿ ಪ್ರತ್ಯಯಾನುಗಳ ಎಷ್ಟು ಮಿಲಿಗ್ರಾಂಗಳು ವಿನಿಮಯ ಹೊಂದುವುವು ಎಂದು ಸೂಚಿಸುವ ಸಂಖ್ಯೆ) ನೆರವಾಗಿರುವ ರಚನೆ (ಸ್ಟ್ರಕ್ಚರ್)–ಇವು ಈ ರಾಳಗಳ ವೈಶಿಷ್ಟ್ಯಗಳು.

**ಅಯಾನ್ ವಿನಿಮಯ ರಾಳಗಳ ಕ್ರಿಯೆಯ ಮೇಲೆ ಪ್ರಭಾವ ಬೀರುವ ಅಂಶಗಳು :** ಅಯಾನ್ ವಿನಿಮಯ ರಾಳಗಳ ಕ್ರಿಯೆಗಳ ನಿರ್ಧಾರಕಗಳಾಗಿ ಮೂರು ಮೂಲಭೂತ ಅಂಶಗಳಿವೆ: 1 ಉಬ್ಬುವಿಕೆ (ಸ್ವೆಲ್ಲಿಂಗ್); 2 ವಿನಿಮಯ ವೇಗ (ರೇಟ್ ಆಫ್ ಎಕ್ಸ್‌ಚೇಂಜ್); 3 ವಿನಿಮಯದ ಆಯ್ಕೆ (ಎಕ್ಸ್‌ಚೇಂಜ್ ಸೆಲೆಕ್ಟಿವಿಟಿ). ರಾಳಗಳಲ್ಲಿನ ಅಡ್ಡಬಂಧಗಳ ಪ್ರಮಾಣ ಎಲ್ಲ ಅಂಶಗಳ ಮೇಲೂ ಗಮನಾರ್ಹ ಪ್ರಭಾವವನ್ನು ಬೀರುವುದು. ಅಯಾನೀಕರಿಸುವ ಗುಂಪುಗಳು ಸಧ್ರುವ (ಪೋಲಾರ್) ಆಗಿದ್ದು, ಅಯಾನ್ ವಿನಿಮಯ ರಾಳಗಳು ನೀರಿನಲ್ಲಿ ಮತ್ತು ಇತರ ಸಧ್ರುವ ದ್ರವಗಳಲ್ಲಿ ಉಬ್ಬುತ್ತವೆ. ಅಡ್ಡಬಂಧಗಳ ಪ್ರಮಾಣ ಮತ್ತು ಉಬ್ಬುವಿಕೆಗಳು ಒಂದಕ್ಕೊಂದು ವಿಲೋಮ ಪ್ರಮಾಣದಲ್ಲಿವೆ. ಆದ್ದರಿಂದ ಅಲ್ಪ ಅಡ್ಡಬಂಧಗಳುಳ್ಳ ರಾಳ ಅತ್ಯಂತ ಹೆಚ್ಚಾಗಿ ಉಬ್ಬುವುದು. ಸ್ಥಳಾವಕಾಶದ ದೃಷ್ಟಿಯಿಂದ ಇಂಥ ರಾಳ ಅತ್ಯಂತ ದುಬಾರಿ. ಬದಲು ಸಾಧಾರಣ ಮತ್ತು ಹೆಚ್ಚಿನ ಪ್ರಮಾಣಗಳಲ್ಲಿ ಅಡ್ಡಬಂಧಗಳಿರುವ ರಾಳಗಳು ಹೆಚ್ಚು ಉಪಯುಕ್ತ. ದುರದೃಷ್ಟವಶಾತ್, ಅಯಾನ್ ವಿನಿಮಯ ವೇಗ ಅಡ್ಡಬಂಧಗಳ ಪ್ರಮಾಣ ಹೆಚ್ಚಿದಂತೆಲ್ಲ ಕಡಿಮೆಯಾಗುತ್ತದೆ. ಆದರೆ ಉಬ್ಬುವಿಕೆಯ ಪ್ರಮಾಣ ಕಡಿಮೆಯಾಗಬೇಕಾದರೆ ಅಡ್ಡಬಂಧಗಳ ಪ್ರಮಾಣ ಹೆಚ್ಚಾಗಿರಬೇಕು. ಇಂಥ ಪರಸ್ಪರ ವಿರುದ್ಧ ಕ್ರಿಯೆಗಳ ನಡುವೆ ಒಂದು ಸಮತೋಲ ಏರ್ಪಡಿಸುವುದು ಅವಶ್ಯ. ನೀರು ಮೃದುಗೊಳಿಸುವಿಕೆ ಮುಂತಾದ ಉದ್ದೇಶಗಳಿಗೆ 8–12% ಅನುಕೂಲತಮ (ಆಪ್ಟಿಮಮ್) ಅಡ್ಡಬಂಧ ಕೊಡುವುದೆಂದು ತಿಳಿದಿದೆ. ಆರ್ಗ್ಯಾನಿಕ್ ಅಯಾನುಗಳ ವಿನಿಮಯ ಇನಾರ್ಗ್ಯಾನಿಕ್ ಅಯಾನುಗಳದ್ದಕ್ಕಿಂತ ನಿಧಾನ. ಆದ್ದರಿಂದ ಕ್ರೋಮಟೋಗ್ರಫಿಯಲ್ಲಿ ಉಪಯೋಗಿಸುವ ಆರ್ಗ್ಯಾನಿಕ್ ಅಯಾನುಗಳಲ್ಲಿ ಅಲ್ಪ ಪ್ರಮಾಣದ ಅಡ್ಡಬಂಧಗಳು ಅಪೇಕ್ಷಣೀಯ. ರಾಳಕಣಗಳ ಗಾತ್ರ ಮತ್ತು ಆಕಾರ ವಿನಿಮಯವೇಗವನ್ನು ಪ್ರಭಾವಿಸುತ್ತವೆ. ಸ್ತಂಭಗಳಲ್ಲಿ ವಿನಿಮಯಿಗಳನ್ನು ಉಪಯೋಗಿಸುವ ವಿಧಾನಗಳಲ್ಲಿ (ಕಾಮ್ ಟೆಕ್‌ನೀಕ್ಸ್) ದುಂಡನೆಯ ಮಣಿಗಳ ಆಕಾರ ಹೆಚ್ಚು ಉಪಯುಕ್ತ. ಕಣಗಳ ಗಾತ್ರ ಹೆಚ್ಚಿದಂತೆ ವಿನಿಮಯ ವೇಗ ಸಾಮಾನ್ಯವಾಗಿ ಕಡಿಮೆಯಾಗುವುದು. 0.3–1.5 ಮಿಮೀ ವ್ಯಾಸವಿರುವ ಮಣಿಗಳು ಪಲ್ಲಟನ ವಿಧಾನಗಳಿಗೂ 0.05–.02 ಮಿಮೀ ವ್ಯಾಸವಿರುವ ಮಣಿಗಳು ಕ್ರೋಮಟೋಗ್ರಫಿ ವಿಧಾನಗಳಿಗೂ ತಕ್ಕುದಾಗಿವೆ. ಚಿಕ್ಕಗಾತ್ರದ ಕಣಗಳನ್ನು ಹೊಂದಿದ ರಾಳ ದೊರೆಯದಿದ್ದರೆ ಉಷ್ಣತೆಯನ್ನು ಹೆಚ್ಚಿಸಿ ವಿನಿಮಯ ವೇಗವನ್ನು ಹೆಚ್ಚಿಸಬಹುದು. ಕ್ಯಾಟಯಾನಿನ ವಿನಿಮಯ ರಾಳಗಳನ್ನು $120^0$ ಸೆ. ಉಷ್ಣತೆಯವರೆಗೆ ಕಾಯಿಸಬಹುದು. ಆದರೆ ಆ್ಯನಯಾನ್ ವಿನಿಮಯಗಳು 60 ಸೆ.ಗೂ ಮೇಲ್ಪಟ್ಟ ಉಷ್ಣತೆಯಲ್ಲಿ ದೃಢವಾಗಿರುವುದಿಲ್ಲ. ದೊಡ್ಡದೊಡ್ಡ ಆರ್ಗ್ಯಾನಿಕ್ ಕ್ಯಾಟಯಾನುಗಳು ಮಧ್ಯಮ ಅಥವಾ ಅಧಿಕ ಅಡ್ಡಬಂಧಗಳಿರುವ ರಾಳಗಳ ಜೊತೆ ನಿಧಾನವಾಗಿ ವಿನಿಮಯಗೊಳ್ಳುತ್ತವೆ. ಈ ಗುಣವನ್ನು ಜರಡಿಯಾಡಿಸುವುದಕ್ಕೆ ಅಂದರೆ ದೊಡ್ಡ ಅಯಾನುಗಳನ್ನು ಸಣ್ಣ ಅಯಾನುಗಳಿಂದ ಬೇರ್ಪಡಿಸಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳಬಹುದು; ಮತ್ತು ಇವುಗಳ ಮೂಲಕ ದೊಡ್ಡ ದೊಡ್ಡ ಅಣುಗಳು ತೂರಿಹೋಗುವಂಥ ವಿಶಾಲವಾದ ರಂಧ್ರಗಳಿರುವ (400 ಆ.–1000 ಆ.) ಮ್ಯಾಕ್ರೋರೆಟಿಕ್ಯುಲರ್ (ಬೃಹಜ್ಜಾಲ ಬಂಧವಿರುವ) ರಾಳಗಳನ್ನು ರಚಿಸಿರುವರು. ಪಲ್ಲಟ ವಿಧಾನಗಳು, ಅಯಾನ್ ವಿನಿಮಯ ಕ್ರೋಮಟೋಗ್ರಫಿ ಇತ್ಯಾದಿಗಳಲ್ಲಿ ಇಂಥ ರಾಳಗಳು ಉಪಯುಕ್ತವಾಗಿವೆ. ಸಾಪೇಕ್ಷ ಆಕರ್ಷಕತ್ವ (ರಿಲೆಟಿವ್ ಅಫಿನಿಟಿ) ಅಥವಾ ಅಯಾನುಗಳ ಆಯ್ಕೆಯ ಸಾಮರ್ಥ್ಯ (ಅಯಾನ್ ಸೆಲೆಕ್ಟಿವಿಟಿ). ಅಂದರೆ ಅನೇಕ ಬೇರೆ ಬೇರೆ ತರದ ಪ್ರತ್ಯಯಾನುಗಳ ಪೈಕಿ ಕೆಲವು ತರದ ಅಯಾನುಗಳನ್ನು ಮಾತ್ರ ಆಯ್ದುಕೊಳ್ಳುವ ಸಾಮರ್ಥ್ಯ–ಇದು ಅಯಾನ್ ವಿನಿಮಯಿಗಳ ಪ್ರಧಾನ ಲಕ್ಷಣ. ಈ ಆಯ್ಕೆಯ ಸಾಮರ್ಥ್ಯ ಅಡ್ಡಬಂಧಗಳ ಪ್ರಮಾಣದಿಂದ ವಿಶೇಷವಾಗಿ ಪ್ರಭಾವಿತವಾಗುವುದು. ಅಲ್ಪ ಪ್ರಮಾಣದ ಅಡ್ಡಬಂಧಗಳಿರುವ ವಿನಿಮಯಿಗಳ ಆಯ್ಕೆಯ ಸಾಮರ್ಥ್ಯ ಅತ್ಯಲ್ಪ. ರಾಳಗಳ ಈ ಆಯ್ಕೆಯ ಸಾಮರ್ಥ್ಯ ಕ್ರೋಮಟೋಗ್ರಫಿಯಲ್ಲಿ ಬಹಳ ಮುಖ್ಯ.

ಆಯ್ಕೆಯ ಅಂಕ (ಅಥವಾ ಸಾಪೇಕ್ಷ ಆಕರ್ಷಕತ್ವಾಂಕ)

$$K_A^B = \frac{X_B}{X_A} \quad \frac{a_A}{a_B}$$

[ $+ B \rightleftarrows \bar{B} + A$ ಎನ್ನುವ ವಿನಿಮಯಕ್ರಿಯೆ ಸಮತೋಲದಲ್ಲಿರುವಾಗ B ಮತ್ತು $\overline{X}A$ ಗಳು ರಾಳದ ಸ್ವರೂಪದಲ್ಲಿ (ಫೇಸ್) $\bar{A}$ ಮತ್ತು $\bar{B}$ ಗಳ ಅಣುಭಿನ್ನಾಂಶಗಳು (ಮೋಲ್ ಫ್ರ್ಯಾಕ್ಷನ್), $a_A$ ಮತ್ತು $a_B$ಗಳು ದ್ರಾವಣದಲ್ಲಿ A ಮತ್ತು Bಗಳ ಆ್ಯಕ್ಟಿವಿಟಿಗಳು].

ಸಾಮಾನ್ಯವಾಗಿ ದ್ರಾವಣದಲ್ಲಿನ ಅಯಾನು ಸಂಯೋಜನೆಯನ್ನು ಅವಲಂಬಿಸುವುದು. ಇದಕ್ಕೆ ಪ್ರತಿಯಾಗಿ ವಿನಿಮಯಗೊಳ್ಳುವ ಪ್ರತ್ಯಯಾನುಗಳು ಏಕವೇಲೆನ್ಸಿಯವಾಗಿದ್ದರೆ, ದ್ರಾವಣದ ಒಟ್ಟು ಸಾರದಲ್ಲಿ (ಕಾನ್‌ಸೆಂಟ್ರೇಷನ್) ವ್ಯತ್ಯಾಸವುಂಟುಮಾಡಿದರೆ ಬೆಲೆಯಲ್ಲಿ ಯಾವ ಹೆಚ್ಚಿನ ವ್ಯತ್ಯಾಸವೂ ಆಗುವುದಿಲ್ಲ. ಅಂದರೆ ವಿನಿಮಯಗೊಳ್ಳುವ ಅಯಾನುಗಳು $Mg^{++}$ ಮತ್ತು $Na^+$ ಆಗಿದ್ದರೆ, ವಿನಿಮಯಿಯ ಮೇಲೆ ಈ ಎರಡು ಅಯಾನುಗಳ ಸಾಪೇಕ್ಷ ಪ್ರಮಾಣಗಳು ದ್ರಾವಣದಲ್ಲಿ ಈ ಎರಡು ಅಯಾನುಗಳ ಒಟ್ಟು ಸಾಂದ್ರಣವನ್ನು ಅವಲಂಬಿಸಿರುತ್ತವೆ. ಬೇರೆ ಬೇರೆ ವೇಲೆನ್ಸಿಯಿರುವ ಇಂಥ ಅಯಾನುಗಳ ವಿನಿಮಯದಲ್ಲಿ, ವಿನಿಮಯಗೊಳ್ಳುವ ಈ ಪ್ರತ್ಯಯಾನುಗಳ ಸಾರಗಳು ಒಂದು ನಿರ್ದಿಷ್ಟ ಅನುಪಾತದಲ್ಲಿರುವ $K_A^B$ ದ್ರಾವಣವನ್ನು ತೆಗೆದುಕೊಂಡರೆ, ಈ ದ್ರಾವಣವನ್ನು ಸಾರಗುಂದಿಸುವುದು (ಡೈಲ್ಯೂಟ್) ಹೆಚ್ಚಿನ ವೇಲೆನ್ಸಿಯ ಅಯಾನುಗಳ ಗ್ರಹಣಕ್ಕೆ (ಅಪ್‌ಟೇಕ್) ಅನುಕೂಲವಾಗಿ ಪರಿಣಮಿಸುವುದು. ಸಾರ–ವೇಲೆನ್ಸಿ ಪರಿಣಾಮ ವಿನಿಮಯಗೊಳ್ಳುವ ಎರಡು ಅಯಾನುಗಳ ಸಂಯೋಗ ಶಕ್ತಿ ವ್ಯತ್ಯಾಸ ಹೆಚ್ಚಿದಂತೆ ಹೆಚ್ಚುತ್ತ ಹೋಗುವುದು. ಇಂಥ ಪರಿಣಾಮ ವ್ಯಾವಹಾರಿಕವಾಗಿ ಹೆಚ್ಚಿನ ಮಹತ್ವ ಪಡೆದಿದೆ.

**ಉಪಯೋಗಗಳು:** 1 ಆಯ್ಕೆಗೆ ಸಂಬಂಧಿಸಿದ ಉಪಯೋಗಗಳು ನೀರನ್ನು ಮೃದು ಮಾಡುವ ಕಾರ್ಯದಲ್ಲಿ–ಉದಾಹರಣೆಗೆ ನಲ್ಲಿ ನೀರಿನಲ್ಲಿ ವಿರಳವಾಗಿರುವ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಅಯಾನುಗಳನ್ನು ಸೋಡಿಯಂ ಅಯಾನುಗಳಿಂದ ವಿನಿಮಯಗೊಳಿಸಿ ಸುಲಭವಾಗಿ ತೆಗೆದುಹಾಕಬಹುದು. ವಿನಿಮಯವನ್ನು ಪುನಃ ಕ್ರಿಯಾತ್ಮಕವನ್ನಾಗಿ ಮಾಡಲು ಪ್ರಬಲ ಸೋಡಿಯಂ ಕ್ಲೋರೈಡನ್ನು ಉಪಯೋಗಿಸಿ ವಿನಿಮಯಿಯಿಂದ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಅಯಾನುಗಳನ್ನು ಸುಲಭವಾಗಿ ತೆಗೆದುಬಿಡಬಹುದು. ವಿನಿಮಯಿಯಲ್ಲಿರುವ A ಎಂಬ ಅಯಾನನ್ನು ದ್ರಾವಣದಲ್ಲಿರುವ ಮತ್ತೊಂದು B ಅಯಾನಿನಿಂದ ಪಲ್ಲಟಗೊಳಿಸಲು ಮುಖ್ಯವಾದ ಅಂಶವೆಂದರೆ $a_B/a_A$ ಯು $1/K_A^B$ ಗಿಂತ ಹೆಚ್ಚಿರಬೇಕು. ವಿಸ್ತೃತವಾದ ಪಲ್ಲಟನಕ್ಕೆ ಅನನುಕೂಲಕಾರಿಯಾದ Bಯ ಸಾರದಲ್ಲಿನ ಸಮಸ್ಯೆಯನ್ನು ವಿನಿಮಯದ ಮೂಲಕ ಉಂಟಾಗತಕ್ಕ ವಸ್ತುಗಳನ್ನು ಉತ್ಪನ್ನವಾದ ಕೂಡಲೇ ತೆಗೆದುಹಾಕುವ ಪ್ರವಹನ ವಿಧಾನದಿಂದ (ಫ್ಲೋ ಟೆಕ್‌ನೀಕ್) ಬಗೆಹರಿಸಲಾಗಿದೆ. ಅಯಾನ್ ವಿನಿಮಯ ಕ್ರೋಮಟೋಗ್ರಫಿಯಲ್ಲಿ ಅಯಾನ್ ವಿನಿಮಯಸ್ತಂಭಗಳ ಬಳಕೆ ಇಂಥ ತತ್ತ್ವದ ಮೇಲೆ ನಿರೂಪಿತವಾಗಿದೆ.

ಜಿಯೋಲೈಟ್‌ನಂಥ ನೈಸರ್ಗಿಕ ಇನಾರ್ಗ್ಯಾನಿಕ್ ಅಯಾನ್ ವಿನಿಮಯಿಗಳು ಬಹಳ ಕಾಲದಿಂದ ಪರಿಚಿತವಿದ್ದರೂ ಸಂಶ್ಲೇಷಿತ ವಿನಿಮಯಿಗಳು (ಆರ್ಗ್ಯಾನಿಕ್ ಮತ್ತು ಇನಾರ್ಗ್ಯಾನಿಕ್) ಇವುಗಳನ್ನು ಮೂಲೆಗೊತ್ತಿವೆ. ಇನಾರ್ಗ್ಯಾನಿಕ್ ವಿನಿಮಯಿಗಳು ಆರ್ಗ್ಯಾನಿಕ್ ವಿನಿಮಯಿಗಳಿಗಿಂತ ಅನೇಕ ರೀತಿಯ ಅನುಕೂಲತೆಗಳನ್ನು ಹೊಂದಿವೆ. ಇವು ಅಯಾನೀಕಾರಕ ರೇಡಿಯೇಷನ್‌ಗಳನ್ನು ತಡೆದುಕೊಳ್ಳುವ ಶಕ್ತಿಹೊಂದಿವೆ. ಹೆಚ್ಚಿನ ಉಷ್ಣತೆಗಳಲ್ಲಿಯೂ ಕೆಲಸ ಮಾಡಬಲ್ಲವು. ಅತ್ಯಧಿಕ ಆಯ್ಕೆಯ ಸಾಮರ್ಥ್ಯವನ್ನು ಹೊಂದಿವೆ. ಉದಾಹರಣೆಗೆ, ಸೀಸಿಯಂ ರುಬಿಡಿಯಂ ವ್ಯವಸ್ಥೆಯಲ್ಲಿನ (ಸಿಸ್ಟಮ್) ಅಮೋನಿಯಂ ಫಾಸ್ಫೋ ಮಾಲಿಬ್ಡೇಟಿನ ಆಯ್ಕೆಯ ಅಂಕ (28). ಆದರೆ ಪ್ರಬಲ ಆಮ್ಲದ ಆಮ್ಲೀಯ ವಿನಿಮಯಿಯ

ಆಯ್ಕೆಯ ಅಂಕ (1.2–1.5)ವರೆಗೆ ಇರುತ್ತದೆ. ಸಂಕೀರ್ಣಕಾರಕ ಸಾಮರ್ಥ್ಯ (ಕಾಂಪ್ಲೆಕ್ಸಿಂಗ್ ಕೆಪ್ಯಾಸಿಟಿ): ಸಂಕೀರ್ಣಗೊಳ್ಳುವುದರ ತತ್ತ್ವ, ವಿನಿಮಯದೊಡನೆ ಸಂಕೀರ್ಣ ಸಂಯುಕ್ತವನ್ನು ಕೊಡುವ ಪರಿವರ್ತಕವನ್ನು (ರಿಯೇಜೆಂಟ್) ಒಂದು ವಿನಿಮಯದಿಂದ ಅಯಾನುಗಳನ್ನು ಹೊರತೆಗೆಯಲು (ಎಲ್ಯೂಟ್) ಬಳಸುತ್ತಾರೆ. ದುರ್ಬಲ ಆಮ್ಲದ ಆಮ್ಲೀಯ ವಿನಿಮಯದಿಂದ ಜಲಜನಕದ ಅಯಾನುಗಳನ್ನು ಹೊರತೆಗೆಯಲು ಹೈಡ್ರಾಕ್ಸಿಲ್ ಅಯಾನುಗಳನ್ನು ಬಳಸುವುದು ಇದಕ್ಕೆ ಉದಾಹರಣೆ. ಹೊರತೆಗೆಯಬೇಕಾದ ಅಯಾನು ಒಂದು ದುರ್ಬಲ ಆಮ್ಲದ ಅಥವಾ ಪ್ರತ್ಯಾಮ್ಲದ ಆ್ಯನಯಾನ್ ಅಥವಾ ಕ್ಯಾಟಯಾನ್‌ಗಳಾಗಿದ್ದರೆ, ಇವುಗಳನ್ನು ಹೊರತೆಗೆಯಬೇಕಾದ PHನ ನಿಯಂತ್ರಣ ಅಥವಾ ಮಾರ್ಪಾಟಿನಿಂದ ವಿನಿಮಯ ಸ್ವಭಾವವನ್ನು ನಿಯಂತ್ರಿಸ ಬಹುದು.

ಪ್ರತ್ಯಯಾನುಗಳ ಆಕರ್ಷಕ ವ್ಯತ್ಯಾಸಗಳು ಈ ಅಯಾನುಗಳನ್ನು ಪರಿಣಾಮಕಾರಿಯಾಗಿ ಬೇರ್ಪಡಿಸಲು ಸಾಲದಿದ್ದ ಪಕ್ಷದಲ್ಲಿ ಅವುಗಳ ದ್ರಾವಣತೆಗಳಲ್ಲಿನ ವ್ಯತ್ಯಾಸವನ್ನು ಸಾಧಿಸಲು ಉಪಯೋಗಿಸಬಹುದು. ವಿರಳ ಮೃಲ್ಲೋಹಗಳ ಅಯಾನುಗಳನ್ನು (ರೇರ್ ಅರ್ತ್ ಮೆಟಲ್ ಅಯಾನ್ಸ್) ಬೇರ್ಪಡಿಸಲು ಸಿಟ್ರಿಕ್ ಆಮ್ಲದ ಉಪಯೋಗ ಇದಕ್ಕೊಂದು ಉದಾಹರಣೆ. ಅನೇಕ ಸಂಕೀರ್ಣ ಅಯಾನುಗಳನ್ನು ಗುರುತಿಸಲು, ಈ ಅಯಾನುಗಳ ಸ್ವರೂಪವನ್ನು ನಿರ್ದಿಷ್ಟವಾಗಿ ತಿಳಿಯಲು ಮತ್ತು ಬೇರ್ಪಡಿಸಲು ಸಂಕೀರ್ಣಕಾರಕ ತತ್ತ್ವವನ್ನು (ಕಾಂಪ್ಲೆಕ್ಸಿಂಗ್ ಪ್ರಿನ್ಸಿಪಲ್) ಬಹಳ ವ್ಯಾಪಕವಾಗಿ ಉಪಯೋಗಿಸುವರು. ಹೆಚ್ಚು ಸಾರವತ್ತಾಗಿರುವ ಹೈಡ್ರೊಕ್ಲೋರಿಕ್ ಆಮ್ಲ ಅಥವಾ ಹೈಡ್ರೊಫ್ಲೋರಿಕ್ ಆಮ್ಲಗಳಲ್ಲಿ ಅನೇಕ ಲೋಹಗಳು ಸಂಕೀರ್ಣ ಅಯಾನುಗಳನ್ನು ಕೊಡುತ್ತವೆ. ಅಯಾನ್ ವಿನಿಮಯಾಮ್ಲವನ್ನು ಸಾರಗುಂದಿಸಿ ದರೆ (ಡೈಲ್ಯೂಟ್) ಸಂಯುಕ್ತಗಳು ವಿಭಜನೆಗೊಂಡು ವಿನಿಮಯದಿಂದ ಸಮಭಾಗವಾಗಿ ಬೇರ್ಪಡುತ್ತವೆ. ಆಮ್ಲದ ಸಾಂದ್ರಣಗಳನ್ನು ನಿಯಂತ್ರಿಸುವುದರಿಂದ ಸಂಕೀರ್ಣಗಳನ್ನು ಪರಿಣಾಮಕಾರಿಯಾಗಿ ಬೇರ್ಪಡಿಸಬಹುದು. ಏಕೆಂದರೆ ಪ್ರತಿಯೊಂದು ಸಂಕೀರ್ಣವೂ ತನ್ನದೇ ಆದ ಒಂದು ನಿರ್ದಿಷ್ಟ ಆಮ್ಲದ ಸಾರದಲ್ಲಿ ವಿಭಜಿಸಿ ಬೇರೆಯಾಗುತ್ತದೆ. ಈ ಸಂಕೀರ್ಣಕಾರಕ ಗುಣವನ್ನು ಅಯಾನುಗಳಲ್ಲದ ಇತರ ವಸ್ತುಗಳನ್ನು ಸಹ ಅಯಾನ್ ವಿನಿಮಯ ಕ್ರೋಮಟೋಗ್ರಫಿಯಿಂದ ಬೇರ್ಪಡಿಸಲು ಉಪಯೋಗಿಸಲಾಗಿದೆ. ಬೋರೇಟ್ ಅಯಾನುಗಳ ಜೊತೆ ಸಂಕೀರ್ಣಗೊಳ್ಳುವ ಪಾಲಿಹೈಡ್ರಾಕ್ಸಿ ಸಂಯುಕ್ತಗಳನ್ನು ಮತ್ತು ಸೋಡಿಯಂ ಬೈಸಲ್ಫೇಟಿನೊಡನೆ ಸಂಕೀರ್ಣಿಸುವ ಆಲ್ಡಿಹೈಡ್ ಮತ್ತು ಕೀಟೋನುಗಳನ್ನು ಈ ರೀತಿ ಪ್ರತ್ಯೇಕಿಸಲು ಈ ವಿಧಾನ ಬಹಳ ಉಪಯುಕ್ತವಾಗಿದೆ.

**(3) ಅವಶೋಷಣ (ಅಬ್‌ಸಾರ್ಪ್‌ಷನ್) ಸಾಮರ್ಥ್ಯ :** ಹೆಲ್‌ಫ್ರಿಚ್ ರೂಪಿಸಿದ ಲಿಗೆಂಡ್ ವಿಧಾನ ಒಂದು ಸೂಕ್ತ ಅಯಾನ್ ವಿನಿಮಯದ ಮೇಲೆ ಒಂದು ಲೋಹದ ಕ್ಯಾಟಯಾನಿನ ಅವಶೋಷಣೆಯನ್ನು ಅವಲಂಬಿಸಿದೆ; ಅನಂತರ ಅವಶೋಷಿತ ಲೋಹದ ಅಯಾನಿನ ಅಸಂತೃಪ್ತ (ಅನ್‌ಸ್ಯಾಟಿಸ್‌ಫೈಡ್) ವೇಲೆನ್ಸಿಯ ಸಲುವಾಗಿ ಈ ಅಯಾನುಗಳ ಮೇಲೆ ಕೋ ಆರ್ಡಿನೇಷನ್ ವೇಲೆನ್ಸಿ ಶಕ್ತಿಯ ಸಾಮರ್ಥ್ಯದಿಂದ ಲಿಗೆಂಡ್ ಅಣುಗಳು ಅವಶೋಷಣೆಗೊಳ್ಳುತ್ತವೆ. ವಿನಿಮಯಿಯ ಸ್ಥಿರವಾದ ಗುಂಪುಗಳೊಂದಿಗೆ ಸಂಯೋಜಿಸಿರುವ ಲೋಹದ ಅಯಾನುಗಳ ಬಂಧಗಳು ಪ್ರಬಲವಾಗಿದ್ದರೆ ಲಿಗೆಂಡುಗಳ ವಿನಿಮಯ ಸಾಧ್ಯ. ಈ ರೀತಿಯಾದ ಲಿಗೆಂಡುಗಳ ವಿನಿಮಯದಿಂದ ಲಿಗೆಂಡುಗಳಲ್ಲದಿರುವ ಸಂಯುಕ್ತಗಳಿಂದ ಲಿಗೆಂಡುಗಳನ್ನೂ ಮತ್ತು ಒಂದು ಲಿಗೆಂಡನ್ನು ಇತರ ಲಿಗೆಂಡ್‌ಗಳಿಂದಲೂ ಪ್ರತ್ಯೇಕಿಸುವ ಒಂದು ವಿಧಾನವನ್ನು ಇದು ನೀಡುತ್ತದೆ. ಎಲೆಕ್ಟ್ರೊಲೈಟುಗಳಲ್ಲದ ಸಂಯುಕ್ತಗಳು ಎಲೆಕ್ಟ್ರೊಲೈಟುಗಳಿಗಿಂತ ಹೆಚ್ಚಾಗಿ ರಾಳಗಳ ರಂಧ್ರಗಳಲ್ಲಿ ಅವಶೋಷಣೆಗೊಳ್ಳುವುದರಿಂದ ಈ ಎರಡು ಗುಂಪಿನ ವಸ್ತುಗಳನ್ನು ಪ್ರತ್ಯೇಕಿಸಲು ಸಹ ಅಯಾನ್ ವಿನಿಮಯಿಗಳನ್ನು ಉಪಯೋಗಿಸಬಹುದು. ಇದರ ಹೆಸರು ಅಯಾನು ಹೊರದೂಡಿಕೆ (ಅಯಾನ್ ಎಕ್ಸ್‌ಕ್ಲೂಷನ್). ಬೇರೆ ಬೇರೆ ಎಲೆಕ್ಟ್ರೊಲೈಟುಗಳನ್ನು ವಿನಿಮಯಿಗಳು ಬೇರೆ ಬೇರೆ ಪ್ರಮಾಣ ಗಳಲ್ಲಿ ಅವಶೋಷಣೆ ಮಾಡುವುದರಿಂದ ಕ್ರೋಮಟೋಗ್ರಫಿಕ್ ವಿಶ್ಲೇಷಣ ವಿಧಾನವನ್ನೇ ಉಪಯೋಗಿಸಿಕೊಂಡು ಎಲೆಕ್ಟ್ರೊಲೈಟುಗಳನ್ನು ನೀರಿನಿಂದ ನಿಕ್ಷಾಲಿಸಿ (ಎಲ್ಯೂಟ್) ಬೇರೆ ಬೇರೆ ಮಾಡಬಹುದು. ಅವಶೋಷಣೆ ದುರ್ಬಲವಾಗಿದ್ದರೆ ನಿಕ್ಷಾಲಕ ಆಗಿ ಉಪಯೋಗಿಸುವ ಎಲೆಕ್ಟ್ರೊಲೈಟು, ಎಲೆಕ್ಟ್ರೊಲೈಟ್ ಅಲ್ಲದ ವಸ್ತುಗಳನ್ನು ಲವಣೀಕರಿಸಿ ದ್ರಾವಣದಿಂದ ಹೊರಬರುವಂತೆ ಮಾಡಿ ರಾಳದ ಮೇಲೆ ಇದರ ಅವಶೋಷಣೆಯನ್ನು ಹೆಚ್ಚಿಸುತ್ತದೆ. ಇದನ್ನು ಲವಣೀಕರಣ ಕ್ರೋಮಟೋಗ್ರಫಿ (ಸಾಲ್ಟಿಂಗ್ ಔಟ್ ಕ್ರೋಮಟೋಗ್ರಫಿ) ಎನ್ನುತ್ತಾರೆ. ಎಲೆಕ್ಟ್ರೊಲೈಟ್ ಅಲ್ಲದ ವಸ್ತುಗಳ ಪ್ರಬಲ ಅವಶೋಷಣೆ ಒಳಗೊಂಡಿರುವ ಸಂದರ್ಭದಲ್ಲಿ, ಸೂಕ್ತವಾದ ಆರ್ಗ್ಯಾನಿಕ್ ವಸ್ತುಗಳ ಜಲದ್ರಾವಣವನ್ನು ನಿಕ್ಷಾಲಕ ಆಗಿ ಉಪಯೋಗಿಸುವರು. ಇದರ ಹೆಸರು ದ್ರಾವಣೀಕರಣ ಕ್ರೋಮಟೋಗ್ರಫಿ (ಸಾಲ್ಯುಬಿಲೈಸೇಷನ್ ಕ್ರೋಮಟೋಗ್ರಫಿ). ರೀಮಾನ್ ಎಂಬುವನು ಈ ಎರಡೂ ವಿಧಾನಗಳನ್ನು ರೂಪಿಸಿದ. ಜಲಜನಕದ ಸಂಯುಕ್ತ ರೂಪದಲ್ಲಿರುವ ಪ್ರಬಲ ಆಮ್ಲ ಅಯಾನ್ ವಿನಿಮಯಿಗಳನ್ನು ಮತ್ತು ಹೈಡ್ರಾಕ್ಸೈಡ್ ರೂಪದಲ್ಲಿರುವ ಪ್ರಬಲ ಪ್ರತ್ಯಾಮ್ಲ ವಿನಿಮಯಿಗಳನ್ನು ಆಮ್ಲ–ಪ್ರತ್ಯಾಮ್ಲ ವೇಗವರ್ಧಕಗಳಾಗಿ (ಆ್ಯಸಿಡ್–ಬೇಸ್ ಕೆಟಲಿಸ್ಟ್ಸ್) ಉಪಯೋಗಿಸಬಹುದು. ಇವು ಉಪಯೋಗಿಸಲು ಹೆಚ್ಚು ಸುಲಭ ಮತ್ತು ಖನಿಜ ಆಮ್ಲ–ಪ್ರತ್ಯಾಮ್ಲಗಳಿಗಿಂತ ಹೆಚ್ಚು ಪರಿಣಾಮಕಾರಿ.

**ಪೊರೆಗುಣಗಳು (ಮೆಂಬ್ರೇನ್ ಪ್ರಾಪರ್ಟೀಸ್):** ಹಾಳೆಗಳ ರೂಪದಲ್ಲಿರುವ (ಅಯಾನ್ ವಿನಿಮಯ ಪೊರೆಗಳು) ಅಯಾನ್ ವಿನಿಮಯಿಗಳು ವಿಶೇಷ ಮಹತ್ವ ಪಡೆದಿವೆ. ಈ ವಿನಿಮಯಿಗಳ ಉಪಯೋಗ ಇವುಗಳ ವಿದ್ಯುದ್ವಾಹಕತ್ವವನ್ನು ಅವಲಂಬಿಸಿರುವುದು. ಪೊರೆಯನ್ನು ಒಂದು ವಿದ್ಯುದ್ವಿಶ್ಲೇಷಣ ಕೋಶದಲ್ಲಿ ಇಟ್ಟಾಗ ಅಯಾನ್ ವಿನಿಮಯಿ ಎಲ್ಲ ಎಲೆಕ್ಟ್ರೊಲೈಟುಗಳನ್ನೂ ವಿದ್ಯುದ್ವಹನಕ್ಕೆ ಸಿಗದಂತೆ ಮಾಡುವುದು. ಆದ್ದರಿಂದ ಹೆಚ್ಚು ಕಡಿಮೆ ಎಲ್ಲ ವಿದ್ಯುತ್ ಪ್ರವಾಹವೂ ಪ್ರತ್ಯಯಾನುಗಳ ಮೂಲಕ ಸಾಗಿಸಲ್ಪಟ್ಟು ವಿದ್ಯುತ್ಪ್ರವಾಹದ ದಕ್ಷತೆ (ಕರೆಂಟ್ ಎಫಿಷಿಯನ್ಸಿ) ಅಧಿಕಗೊಳ್ಳುತ್ತದೆ. ಈ ಅಯಾನ್ ಪೊರೆಗಳನ್ನು ಚೌಳುನೀರನ್ನು ಮತ್ತು ಉಪ್ಪುನೀರನ್ನು ಲವಣ ವಿಮುಕ್ತವನ್ನಾಗಿ ಮಾಡಲೂ ಇಂಧನಕೋಶಗಳಲ್ಲಿಯೂ ಸಂಗ್ರಾಹಕ ವಿದ್ಯುತ್ಕೋಶಗಳಲ್ಲಿಯೂ ಉಪಯೋಗಿಸುತ್ತಾರೆ.

ಅಯಾನು ಆಯ್ಕೆಗೆ ಕಾರಣವಾದ ಮೂಲಭೂತ ಕ್ರಿಯೆಗಳು ಯಾವುವು ಎನ್ನುವ ಪ್ರಧಾನ ಸಮಸ್ಯೆಗೆ ವಿವರಣೆ ನೀಡುವ ಪ್ರಯತ್ನಗಳು ಬಹಳ ಮಂದಗತಿಯಲ್ಲಿ ಸಾಗುತ್ತಿವೆ. ಪ್ರತ್ಯಾಮ್ಲಲೋಹಗಳ (ಅಲ್ಕಲಿ ಮೆಟಲ್ಸ್) ಕ್ಯಾಟಯಾನುಗಳ ವಿನಿಮಯ ಸಮತೋಲಕ್ಕೆ ಈ ಕೆಳಗಿನ ಕಾರಣಗಳು ಪ್ರಮುಖವಾದುವೆಂದು ಐಸನ್‌ಮನ್ ಭಾವಿಸಿರುವನು. (1) ಪ್ರತ್ಯಯಾನು ಮತ್ತು ನೀರಿನ ಅಣುಗಳ ನಡುವಣ ಕುಲೊಂಬ್ ಆಕರ್ಷಣೆಯ ಪರಿಣಾಮ. (2) ಪ್ರತ್ಯಯಾನುಗಳು ಮತ್ತು ನೀರಿನ ಅಣುಗಳ ನಡುವಣ ಅಯಾನ್–ಡೈಪೋಲ್ ಮತ್ತು ಅಯಾನ್–ಪ್ರೇರಿತ ಡೈಪೋಲ್‌ಗಳ ಆಕರ್ಷಣೆಯ ಪರಿಣಾಮ. ಒಂದನೆಯದು ಎರಡನೆಯದಕ್ಕಿಂತ ದುರ್ಬಲವಾಗಿದ್ದ ಪಕ್ಷದಲ್ಲಿ ಆಕರ್ಷಕತ್ವದ ಅನುಕ್ರಮ (ಅಫಿನಿಟಿ ಸೀಕ್ವೆನ್ಸ್) Cs>K>Na>Li ಎಂಬ ಸಹಜ ಅನುಕ್ರಮವನ್ನನುಸರಿಸುವುದು. ಮೊದಲನೆಯ ವಿಧದ ಆಕರ್ಷಣ ಕ್ರಿಯೆ ಹೆಚ್ಚಿದಂತೆಲ್ಲ ಸಹಜ ಅನುಕ್ರಮಸರಣಿ ವಿಪರ್ಯಯ ಗೊಂಡು (ರಿವರ್ಸಲ್) ಆಯ್ಕೆಯ ಪ್ರಾದುರ್ಭಾವ ಉಂಟಾಗುವುದು. ಪ್ರತ್ಯಯಾನುಗಳ ವಿದ್ಯುತ್ ಕ್ಷೇತ್ರಗಳಿಂದ ಸ್ಥಿರ ಗುಂಪುಗಳ ಧ್ರುವೀಕರಣದಂಥ (ಪೋಲರೈಸೇಷನ್ ಆನ್ ಫಿಕ್ಸ್‌ಡ್ ಗ್ರೂಪ್ಸ್ ಬೈ ಎಲೆಕ್ಟ್ರಿಕ್ ಫೀಲ್ಡ್ಸ್ ಆಫ್ ಕೌಂಟರ್ ಅಯಾನ್ಸ್) ಆಕರ್ಷಣಕ್ರಿಯೆಗಳು ಉಂಟುಮಾಡುವ ಆಕರ್ಷಣ ಅನುಕ್ರಮದಲ್ಲಿ ಉಂಟಾಗುವ ವಿಪರ್ಯ ಒಂದನೆಯದರಿಂದ ಉಂಟಾಗುವ ಅನುಕ್ರಮ ವಿಪರ್ಯಯಕ್ಕಿಂತ ಸ್ವಲ್ಪ ಭಿನ್ನವಾಗಿರುವುದು. ಆಕರ್ಷಕತ್ವದ ವಿಪರ್ಯಯದ ಅಧ್ಯಯನ ಬರೀ ಪಾಂಡಿತ್ಯ ಕ್ಷೇತ್ರಕ್ಕೆ ಸೀಮಿತವಾದುದಲ್ಲ. ಜೈವಿಕ ವ್ಯವಸ್ಥೆಗಳಲ್ಲಿ (ಬಯಾಲಾಜಿಕಲ್ ಸಿಸ್ಟಮ್) ಅಯಾನುಗಳ ವಹನ, ಕೇಂದ್ರೀಕರಣ ಮತ್ತು ಆಯ್ಕೆಗಳು ಶರೀರಶಾಸ್ತ್ರಜ್ಞರ ಕುತೂಹಲವನ್ನು ಬಹಳ ಕಾಲದಿಂದಲೂ ಕೆರಳಿಸಿತ್ತು. ದಂಶಕಪ್ರಾಣಿಗಳ (ರೋಡೆಂಟ್ಸ್) ರಸನಾಂಕುರದ ಹೊರಮೈಗಳು ಆಯ್ಕೆ ವಿಧಾನದಲ್ಲಿ Li>Na>K ಎಂಬ ಸೂಕ್ಷ್ಮತೆಯ ಅನುಕ್ರಮವನ್ನು ತೋರಿಸುವುವು. ಮಾಂಸಾಹಾರಿ ಪ್ರಾಣಿಗಳಲ್ಲಿ K>Na>Li ಅನುಕ್ರಮ ಕಂಡುಬರುವುದು. ಜೈವಿಕ ವ್ಯವಸ್ಥೆಗಳಲ್ಲಿ ಅಯಾನುಗಳ ವಹನ, ಕೇಂದ್ರೀಕರಣ ಮತ್ತು ಆಯ್ಕೆಗಳು ವಿದ್ಯುದಂಶಗಳನ್ನು ಹೊಂದಿದ್ದು ಕೋವೇಲೆಂಟ್ ಬಂಧಗಳಿಂದ ಬಂಧಿತವಾದ ಗುಂಪುಗಳು ಮತ್ತು ಸ್ವತಂತ್ರಚಲನಶಕ್ತಿಯುಳ್ಳ ಪ್ರತ್ಯಯಾನುಗಳು–ಇವುಗಳ ವ್ಯವಸ್ಥೆ ಮೂಲಕ ಅಯಾನುಗಳ ವ್ಯಾಪನೆಯಿಂದಲೂ ಮತ್ತು ಅವುಗಳೊಡನೆ ವರ್ತಿಸುವುದರಿಂದಲೂ ನಡೆಯುವುದು ಎಂದು ಭಾವಿಸಲಾಗಿದೆ. ಇಂಥ ವ್ಯವಸ್ಥೆಗಳು ಅಯಾನ್ ವಿನಿಮಯಗಳು. ಜೈವಿಕವ್ಯವಸ್ಥೆಗಳಲ್ಲಿ ಕಂಡುಬರುವಂಥ ರಚನೆಗಳಿಗೆ ಸದೃಶವಾದ ರಚನೆಗಳುಳ್ಳ ಅಯಾನ್ ವಿನಿಮಯಗಳ ಗುಣಗಳ ಸಂಬಂಧವಾದ ಸಂಶೋಧನೆ ಜೀವಿಗಳ ಕ್ರಮದ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಬಹುದು. (ಎಂ.ಎಸ್.ಎ.)

**ಅಯಾನು :** ಪರಮಾಣುವಿನ (ಆ್ಯಟಮ್) ಕೇಂದ್ರದಲ್ಲಿ ಪ್ರೋಟಾನ್‌ಗಳೂ ನ್ಯೂಟ್ರಾನ್ ಗಳೂ (ಪ್ರೊಟಾನ್–ಎಲೆಕ್ಟ್ರಾನನ್ನು ಕಳಚಿದಮೇಲೆ ಉಳಿಯುವ ಹೈಡ್ರೊಜನ್ ಪರಮಾಣು, ಅಂದರೆ ಹೈಡ್ರೊಜನ್ ಪರಮಾಣುವಿನ ನ್ಯೂಕ್ಲಿಯಸ್, ಇದು ಧನವಿದ್ಯುತ್ಕಣ ; ನ್ಯೂಟ್ರಾನ್–ವಿದ್ಯುದ್ರಹಿತ ಕಣ;ಎಲೆಕ್ಟ್ರಾನ್–ಋಣ ವಿದ್ಯುತ್ಕಣ; ನ್ಯೂಕ್ಲಿಯಸ್–ಬೀಜ) ಇರುವ ಬೀಜವಿದೆ. ಇದರ ಸುತ್ತ ಎಲೆಕ್ಟ್ರಾನ್‌ಗಳು ವಿವಿಧ ಕಕ್ಷೆಗಳಲ್ಲಿ ಪರಿಭ್ರಮಿಸುತ್ತಿವೆ. ಸಾಮಾನ್ಯವಾಗಿ ಬೀಜದಲ್ಲಿರುವ ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳ ಸಂಖ್ಯೆ ಸಮಾನವಾಗಿರುತ್ತದೆ. ಆದ್ದರಿಂದ ಪರಮಾಣುವಿನ ನಿವ್ವಳ ವಿದ್ಯುದಂಶ ಸೊನ್ನೆ. ಇದರ ಹೆಸರು ತಟಸ್ಥ ಪರಮಾಣು. ಪರಮಾಣುಗಳು ತಮ್ಮ ಹೊರವಲಯದಲ್ಲಿ ಪರಿಭ್ರಮಿಸುತ್ತಿರುವ ಎಲೆಕ್ಟ್ರಾನ್‌ಗಳ ಪರಸ್ಪರಕ್ರಿಯೆಯಿಂದಾಗಿ ಒಂದ ಕ್ಕೊಂದು ಬಂಧಿತವಾಗಿ ಅಣುಗಳಾಗುತ್ತವೆ. ಅಣುಗಳ ವಿದ್ಯುದಂಶವೂ ಸೊನ್ನೆಯೇ. ಇಂಥ ತಟಸ್ಥ ಪರಮಾಣುಗಳು ಅಥವಾ ಅಣುಗಳು ಯಾವುದೇ ವಿಧದಿಂದ ವಿದ್ಯುದಂಶ ಪಡೆಯುವಂತೆ ಮಾಡಿದರೆ ಅಯಾನುಗಳು ಎನಿಸಿಕೊಳ್ಳುತ್ತವೆ.

**ಅಯಾನೀಕರಣ :** ಅಯಾನೀಕರಣವನ್ನು (ಅಯೊನೈಸೇಷನ್) ಹಲವು ವಿಧಗಳಲ್ಲಿ ಮಾಡಬಹುದು. ಕೆಲವು ದ್ರವಗಳಲ್ಲಿ ಕೆಲವು ರೀತಿಯ ಉಪ್ಪುಗಳನ್ನು ಕರಗಿಸಿದರೆ ಆ ಉಪ್ಪುಗಳ ಅಣುಗಳು ಧನ ಮತ್ತು ಋಣ ವಿದ್ಯುತ್ತಿನಿಂದ ಕೂಡಿದ ಅಯಾನುಗಳಾಗಿ ವಿಭಜನೆ ಹೊಂದುತ್ತವೆ. ಉದಾಹರಣೆಗೆ, ಅಡಿಗೆ ಉಪ್ಪನ್ನು ($NaCl$) ನೀರಿನಲ್ಲಿ ಕರಗಿಸಿದರೆ ಅದು $Na^+$ (ಧನವಿದ್ಯುತ್ತುಳ್ಳ ಸೋಡಿಯಂ) ಮತ್ತು $Cl^-$ (ಋಣವಿದ್ಯುತ್ತುಳ್ಳ ಕ್ಲೋರಿನ್) ಅಯಾನುಗಳಾಗಿ ವಿಭಜನೆ ಹೊಂದುತ್ತದೆ. ಈ ತರಹದ ಅಯಾನುತ್ಪತ್ತಿಗೆ ವಿದ್ಯುದ್ರಸ ವಿಭಜನೆ (ಎಲೆಕ್ಟ್ರಾಲಿಸಿಸ್) ಎಂದು ಹೆಸರು. ಇಲ್ಲಿ ಉಂಟಾಗುವ ಅಯಾನುಗಳು ಒಂದು ಅಥವಾ ಹಲವು ಎಲೆಕ್ಟ್ರಾನುಗಳಷ್ಟು ವಿದ್ಯದಂಶವನ್ನು ಹೊಂದಿರಬಹುದು.

ಗಾಳಿ ಅಥವಾ ಅನಿಲದ ಮೂಲಕ ಅತಿನೇರಳೆ ಕಿರಣಗಳು ಮತ್ತು ಕ್ಷ–ಕಿರಣಗಳು ಹಾಯ್ದುಹೋದಾಗ ಅಯಾನು ಉತ್ಪತ್ತಿಯಾಗುತ್ತದೆ. ಈ ಕಿರಣಗಳಲ್ಲಿ ಶಕ್ತಿಯುತವಾದ ಫೋಟಾನ್‌ಗಳಿವೆ (ಫೋಟಾನ್–ಬೆಳಕಿನ ತರಂಗದ ಅಥವಾ ಇತರ ವಿದ್ಯುತ್ಕಾಂತತರಂಗದ ಶಕ್ತಿಯ ಒಂದು ಮಾನ ಅಥವಾ ಶಕಲ). ಅನಿಲದ ಪರಮಾಣುವಿನ ಹೊರವಲಯದಲ್ಲಿ ಸುತ್ತುತ್ತಿರುವ ಎಲೆಕ್ಟ್ರಾನ್‌ಗಳಲ್ಲಿ ಒಂದನ್ನು ಈ ಫೋಟಾನ್ ಹೊರದೂಡುತ್ತದೆ. ಆಗ ಋಣವಿದ್ಯುತ್ತಿನ ಎಲೆಕ್ಟ್ರಾನನ್ನು ಕಳೆದುಕೊಂಡ ಅನಿಲದ ಪರಮಾಣು ಧನವಿದ್ಯುತ್ತನ್ನು ಹೊಂದುತ್ತದೆ. ಅಂದರೆ ಅದು ಅಯಾನ್ ಆಗುತ್ತದೆ. ಈ ಬಗೆಯಿಂದ ಅಯಾನೀಕರಣವಾಗ ಬೇಕಾದರೆ ತೂರಿಬಂದ ಫೋಟಾನಿನ ಶಕ್ತಿ ಪರಮಾಣುವಿನ ಅಯಾನೀಕರಣಶಕ್ತಿಯಷ್ಟು (ಅಯೊನೈಸೇಷನ್ ಪೊಟೆನ್ಷಿಯಲ್) ಇರಬೇಕು. ಇಲ್ಲವೆ ಅದಕ್ಕಿಂತ ಹೆಚ್ಚಾಗಿರಬೇಕು. ಅಯಾನೀಕರಣ ಶಕ್ತಿ ಎಂದರೆ, ಪರಮಾಣುವಿನ ಎಲೆಕ್ಟ್ರಾನನ್ನು ಪೂರ್ತಿಯಾಗಿ ಅದರಿಂದ ಬೇರ್ಪಡಿಸಲು ಬೇಕಾಗುವ ಶಕ್ತಿ. ಈ ರೀತಿ ಹೊರದೂಡಲ್ಪಟ್ಟ ಎಲೆಕ್ಟ್ರಾನ್ ಕೆಲವು ಸಾರಿ ತಟಸ್ಥ ಪರಮಾಣುವಿಗೆ ಅಂಟಿಕೊಳ್ಳಲೂಬಹುದು. ಆಗ ಅದು ಋಣವಿದ್ಯುತ್ತಿನ ಅಯಾನ್ ಆಗುತ್ತದೆ.

ಎರಡು ಪರಮಾಣುಗಳು ಸಾಕಷ್ಟು ಶಕ್ತಿಯಿಂದ ಘರ್ಷಿಸಿದರೆ ಅವೆರಡರ ಅಥವಾ ಅವುಗಳಲ್ಲಿ ಒಂದರ ಎಲೆಕ್ಟ್ರಾನ್ ಹೊರದೂಡಲ್ಪಟ್ಟು ಅಯಾನೀಕರಣವಾಗುತ್ತದೆ. ಘರ್ಷಿಸುವ ಪರಮಾಣುಗಳಲ್ಲಿ ಒಂದು ಅಯಾನ್ ಆಗಿಯೂ ಇರಬಹುದು. ಉದಾಹರಣೆಗೆ, ಹೀಲಿಯಂ ಅಯಾನ್‌ಗಳನ್ನು ವೇಗವರ್ಧಕಗಳಲ್ಲಿ ಹೆಚ್ಚು ಶಕ್ತಿಯುತವನ್ನಾಗಿ ಮಾಡಿ, ಒಂದು ಅನಿಲದ ಮೂಲಕ ಹಾಯಿಸಿ ಅನಿಲದಲ್ಲಿ ಅಯಾನೀಕರಣವನ್ನು ಮಾಡಬಹುದು.

ಶಕ್ತಿಯುತವಾದ ಎಲೆಕ್ಟ್ರಾನ್‌ಗಳು ಯಾವುದೇ ಅನಿಲದ ಮೂಲಕ ಹಾಯ್ದಾಗ ಅಯಾನೀಕರಣವಾಗುತ್ತದೆ. ಹಾಯ್ದು ಬಂದ ಎಲೆಕ್ಟ್ರಾನ್ ತಟಸ್ಥ ಪರಮಾಣುವಿನ ಹೊರವಲಯದಲ್ಲಿ ಪರಿಭ್ರಮಿಸುತ್ತಿರುವ ಎಲೆಕ್ಟ್ರಾನನ್ನು ಹೊರದೂಡುತ್ತದೆ. ಉದಾಹರಣೆಗೆ ವಿಶ್ವಕಿರಣಗಳಿಂದ (ಕಾಸ್ಮಿಕ್ ರೇಸ್) ಉಂಟಾದ ಎಲೆಕ್ಟ್ರಾನ್‌ಗಳು ನಮ್ಮ ಸುತ್ತಮುತ್ತಲಿನ ಗಾಳಿಯಲ್ಲಿ ಯಾವಾಗಲೂ ಅಯಾನೀಕರಣವಾಗುತ್ತಲೇ ಇವೆ.

ಅನಿಲದಲ್ಲಿ ಉಂಟಾಗುವ ಅಯಾನೀಕರಣದಲ್ಲಿ ಎಲೆಕ್ಟ್ರಾನ್‌ಗಳೂ ಉತ್ಪತ್ತಿಯಾಗುತ್ತಿವೆಯೆಂಬುದನ್ನು ಗಮನಿಸಬೇಕು. ಆದ್ದರಿಂದ ಸಾಮಾನ್ಯವಾಗಿ ಅನಿಲದಲ್ಲಿ ಎಲೆಕ್ಟ್ರಾನ್–ಅಯಾನ್ ಜೋಡಿಗಳು ಉತ್ಪತ್ತಿಯಾಗುತ್ತವೆ. ಹೀಗೆ ಉತ್ಪತ್ತಿಯಾದ ಎಲೆಕ್ಟ್ರಾನ್–ಅಯಾನ್ ಜೋಡಿಗಳು ಪುನಃ, ಕಾಲಕ್ರಮೇಣ, ಒಂದನ್ನೊಂದು ಕೂಡಿ ತಟಸ್ಥ ಪರಮಾಣುಗಳಾಗುತ್ತಿರುತ್ತವೆ.

ರೇಡಿಯೊ ವಿಕಿರಣದಲ್ಲಿ ಹೊರಡುವ ಆಲ್ಫ ಮತ್ತು ಬೀಟ ಕಣಗಳು ಧನ ಮತ್ತು ಋಣ ವಿದ್ಯುದಂಶಗಳನ್ನು ಹೊಂದಿವೆಯಾದ್ದರಿಂದ ಅವು ಹೊರಬಂದಾಗ ವಿಕಿರಣ ವಸ್ತುವಿನಲ್ಲಿ ಕೆಲವು ಪರಮಾಣುಗಳು ಅಯಾನುಗಳಾಗಿ ಮಾರ್ಪಟ್ಟುವೆಂದೇ ಅರ್ಥ.

**ಅಯಾನೀಕರಣ ಮಂದಿರ :** ಅಯಾನೀಕರಣವನ್ನು ಅಳೆಯುವ ಸಾಧನದ ಹೆಸರು (ಅಯೊನೈಸೇಷನ್ ಚೇಂಬರ್). ಕ್ಷ–ಕಿರಣಗಳು, ಗಾಮಾಕಿರಣಗಳು ಮತ್ತು ವಿಶ್ವಕಿರಣಗಳು ಮುಂತಾದುವುಗಳ ತೀವ್ರತೆ (ಇಂಟೆನ್ಸಿಟಿ) ಅಳೆಯಲು ಇದನ್ನು ಉಪಯೋಗಿಸುತ್ತಾರೆ. **(ಕೆ.ಜಿ.)**

**ಅಯೂಥಯ :** ಥೈಲೆಂಡಿನ ಕೇಂದ್ರಭಾಗದಲ್ಲಿರುವ ಒಂದು ಪ್ರಾಂತ್ಯ. ವಿಸ್ತೀರ್ಣ 958 ಚ.ಕಿಮೀ. ಜನಸಂಖ್ಯೆ 51,628 (2001). ಥೈಲೆಂಡಿನ 71 ಪ್ರಾಂತ್ಯಗಳಲ್ಲಿ 58ನೆಯದು. ಬತ್ತದ ಇಳುವರಿಗೆ ಪ್ರಸಿದ್ಧಿ. ಬ್ಯಾಂಕಾಕ್ ಮುಖಜಭೂಮಿ ಬತ್ತದ ಕಣಜವೆಂದು ಖ್ಯಾತಿಪಡೆದಿದೆ. ಏಕೆಂದರೆ ಬ್ಯಾಂಕಾಕ್‌ನ ಕಪ್ಪು ಜೇಡಿಮಣ್ಣು ಈ ಬೆಳೆಗೆ ಉತ್ಕೃಷ್ಟವಾದುದು. ವಾರ್ಷಿಕ ಸರಾಸರಿ ಮಳೆ 140 ಸೆಂಮೀ. ಏಪ್ರಿಲ್ ನಿಂದ ನವೆಂಬರ್‌ವರೆಗೆ ಮಳೆಗಾಲ. ಬತ್ತದ ಸಾಗುವಳಿಗೆ ಅಗತ್ಯವಾದ ನೀರಾವರಿ ಸೌಲಭ್ಯವು ಛಾವೊಫ್ರಾಯ, ಪಾಸಾಕ್ ಮತ್ತು ಲೋಪ್‌ಬುರಿ ನದಿಗಳಿಂದ ದೊರೆಯುತ್ತದೆ. ಛಾಮೊಫ್ರಾಯ ನದಿಯೂ ನೌಕಾಯಾನಕ್ಕೂ ಉಪಯುಕ್ತ. ಬತ್ತದ ಜೊತೆಗೆ ಮೆಕ್ಕೆ ಜೋಳ, ಎಣ್ಣೆಕಾಳು, ತೆಂಗು, ಹಣ್ಣು–ತರಕಾರಿಗಳ ಉತ್ಪಾದನೆಯೂ ಉಂಟು. ತೀರಗಳಲ್ಲಿ ಮೀನುಗಾರಿಕೆ ಸಾಮಾನ್ಯ ವೃತ್ತಿ.

ಮಧ್ಯ ಥೈಲೆಂಡ್ ದಕ್ಷಿಣದಲ್ಲಿ ಬ್ಯಾಂಕಾಕಿಗೆ 64 ಕಿಮೀ ದೂರದಲ್ಲಿರುವ (ಐಥಿಯ) ಪಟ್ಟಣ. ವ್ಯಾಪಾರಕೇಂದ್ರ. ಛಾವೋಫ್ರಾಯ (ಮೀನಾಂ) ಮತ್ತು ಪಾಸಾಕ್ ಎಂಬ ನದಿಗಳ ಸಂಗಮದಲ್ಲಿರುವ ಒಂದು ದ್ವೀಪದಲ್ಲಿದೆ. ಸುತ್ತಲೂ ಬತ್ತ, ಇತರ ಧಾನ್ಯಗಳು, ಹಣ್ಣುಗಳು ಚೆನ್ನಾಗಿ ಬೆಳೆಯುತ್ತವೆ. ಮೀನುಗಾರಿಕೆಯೂ ಹಂದಿ ಸಾಕಣೆಯೂ ಈ ಪ್ರದೇಶದ ಮುಖ್ಯ ಉದ್ಯಮಗಳು. ಆದರೆ ವಾಣಿಜ್ಯ ಸಾಮಗ್ರಿಸಾಗಣೆ ಮತ್ತು ಜನರ ಪ್ರಯಾಣ ಹೆಚ್ಚಾಗಿ ಮೋಟಾರು ದೋಣಿಗಳ ಮೂಲಕ ನಡೆಯುತ್ತವೆ. ಇದು 14 ನೆಯ ಶತಮಾನದಿಂದ 1767 ರವರೆಗೆ ಸಯಾಂ ರಾಜ್ಯದ ರಾಜಧಾನಿಯಾಗಿತ್ತು; ಅನಂತರ ಬರ್ಮೀಯರ ದಾಳಿಯಿಂದ ವಿಶೇಷವಾಗಿ ನಾಶವಾಯಿತು. ಇಲ್ಲಿ ಬೌದ್ಧರ ಹಳೆಯ ಪಗೋಡಗಳ ಮತ್ತು ಅರಮನೆಗಳ ಅವಶೇಷಗಳಿವೆ. **(ಎ.ಕೆ.)**

**ಅಯೊಡೀನ್ :** ಮೂಲವಸ್ತುಗಳ ಆವರ್ತಕ ಕೋಷ್ಟಕದಲ್ಲಿ ಏಳನೆಯ ಗುಂಪಿಗೆ ಸೇರಿರುವ ಮೂಲವಸ್ತು. ಇದರ ಸಂಕೇತ I ಪರಮಾಣು ಸಂಖ್ಯೆ 53. ಪರಮಾಣು ತೂಕ 126.904. ಎಲೆಕ್ಟ್ರಾನ್ ಜೋಡಣೆ 2, 8, 8, 18, 10, 7 ಅಥವಾ [Kr] $4d^{10}5s^2 5p^5$. ಈ ಗುಂಪಿನಲ್ಲಿರುವ ಎಲ್ಲ ಮೂಲವಸ್ತುಗಳನ್ನೂ ಹ್ಯಾಲೊಜನ್‌ಗಳು ಎಂದು ಕರೆಯುವುದು ವಾಡಿಕೆ. ಹ್ಯಾಲೋಸ್ ಎಂದರೆ ಗ್ರೀಕ್ ಭಾಷೆಯಲ್ಲಿ ಲವಣಗಳು ಎಂದರ್ಥ. ಹಾಗೆಯೇ ಜೀನ್ಸ್ ಎಂದರೆ ಉತ್ಪತ್ತಿ ಅಥವಾ ಜನನ ಎಂದರ್ಥ. ಈ ಗುಂಪಿನ ಮೂಲವಸ್ತುಗಳೆಲ್ಲವೂ ಲೋಹಗಳೊಂದಿಗೆ ಸಂಯೋಗ ಹೊಂದಿ ಲವಣಗಳನ್ನು ಉತ್ಪತ್ತಿಮಾಡುವುದರಿಂದಲೇ ಅವುಗಳನ್ನು ಹ್ಯಾಲೊಜನ್‌ಗಳೆಂದು ಕರೆಯುವುದು ವಾಡಿಕೆಯಾಯಿತು.

ಫ್ರೆಂಚ್ ದೇಶೀಯನಾದ ಬೆರ್ನಾರ್ ಕೂರ್ತ್ವಾ ಎಂಬಾತ 1811ರಲ್ಲಿ ಅಯೊಡೀನ್ ಕಂಡುಹಿಡಿದ. ನೆಪೋಲಿಯನ್ ಚಕ್ರವರ್ತಿಯ ಸೈನ್ಯಗಳಿಗೆ ಮದ್ದುಗುಂಡುಗಳನ್ನು ತಯಾರಿಸುವ ಕಾರ್ಯದಲ್ಲಿ ಅವಶ್ಯವಾದ ಪೊಟಾಸಿಯಂ ನೈಟ್ರೇಟ್ ಲವಣವನ್ನು ಉತ್ಪಾದಿಸುವ ಕೆಲಸದಲ್ಲಿ ನಿರತನಾಗಿದ್ದಾಗ ತಾನು ಉಪಯೋಗಿಸುತ್ತಿದ್ದ ತಾಮ್ರದ ಪಾತ್ರೆಗಳು ತುಕ್ಕು ಹಿಡಿಯುವುದನ್ನು ಗಮನಿಸಿದ. ಅದಕ್ಕೆ ಕಾರಣ ಕೆಲವು ಸಮುದ್ರಸಸ್ಯಗಳ ಮೂಲದಿಂದ ತಾನು ತಯಾರಿಸುತ್ತಿದ್ದ ಸೋಡಿಯಂ ಕಾರ್ಬೊನೇಟ್‌ನಲ್ಲಿನ ಕಶ್ಮಲಗಳೆಂದು ತಿಳಿದುಬಂದಿತು. ಸಲ್ಫ್ಯೂರಿಕ್ ಆಮ್ಲವನ್ನು ಹಾಕಿದಾಗ ಕಶ್ಮಲ ಕಪ್ಪುಪುಡಿಯ ರೂಪದಲ್ಲಿ ಹೊರಬಿದ್ದಿತು. ಕಾಯಿಸಿದರೆ ವಿಶಿಷ್ಟ ನೇರಳೆಬಣ್ಣದ ಆವಿಯಾಗಿ ಹೊರಬೀಳುವುದನ್ನು ಗಮನಿಸಿ ತನ್ನ ಈ ನೂತನ ವಸ್ತುವಿಶೇಷವನ್ನು ಗೇ ಲ್ಯೂಸಾಕ್ ಎಂಬ ವಿಜ್ಞಾನಿಗೆ ಕಳುಹಿಸಿಕೊಟ್ಟ. ಆತ ಅದು ಒಂದು ಹೊಸ ಮೂಲವಸ್ತು ಎಂದು ಖಚಿತವಾಗಿ ನಿರ್ಧಾರ ಮಾಡಿ ಅಯೊಡೀನ್ ಎಂದು ಹೆಸರಿಟ್ಟ. ಗ್ರೀಕ್ ಭಾಷೆಯಲ್ಲಿ ನೇರಳೆಬಣ್ಣಕ್ಕೆ ಅಯೊಡೆಸ್ ಎಂಬ ಪದವಿರುವುದರಿಂದ ಅಯೊಡೀನ್ ಎಂದು ಹೆಸರಿಡಲು ಪ್ರೇರಕವಾಯಿತು. ಹೊಸ ಮೂಲವಸ್ತುವಿನ ಅನೇಕ ಸಂಯುಕ್ತಗಳನ್ನು ತಯಾರಿಸಿ, ತನ್ನ ಸಂಶೋಧನ ವರದಿಯನ್ನು 1914ರಲ್ಲಿ ಒಂದು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟಿಸಿದ. ನಿಸರ್ಗದಲ್ಲಿ ಆಧಿಕ್ಯ ಪ್ರಮಾಣದ ದೃಷ್ಟಿಯಿಂದ ಅಯೊಡೀನ್ ಒಂದು ವಿರಳ ಮೂಲವಸ್ತು. ಇದು 19ನೆಯ ಶತಮಾನದ ಎರಡನೆಯ ದಶಕದಿಂದಲೂ ಸುಪರಿಚಿತ ಮೂಲವಸ್ತು. ಟಿಂಕ್ಚರ್ ಅಯೊಡೀನನ್ನು 1828ರಿಂದಲೇ ಔಷಧಿಯಾಗಿ ಬಳಸಲಾಗುತ್ತಿದೆ. ಥೈರಾಯ್ಡ್ ಗ್ರಂಥಿಯ ಊತದಿಂದಾಗುವ ಗಳಗಂಡರೋಗಕ್ಕೆ ಅಯೊಡೀನ್ ಒಂದು ಪರಿಣಾಮಕಾರಿ ಔಷಧಿ ಎಂದು 1819ರಲ್ಲಿಯೇ ತಿಳಿದಿತ್ತು. ರಾಸಾಯನಿಕ ಪ್ರಯೋಗ ಮಂದಿರಗಳಲ್ಲಿ ಅಯೊಡೀನಿನ ಮೌಲ್ಯ ಉತ್ಕೃಷ್ಟವಾದುದೆಂದು ಬಲು ಬೇಗ ಖಚಿತವಾಯಿತು. ಅನೇಕ ರಾಸಾಯನಿಕ ವಸ್ತು ವಿಶ್ಲೇಷಣ ಕ್ರಿಯೆಗಳಲ್ಲಿಯೂ ಇಂಗಾಲ ಸಂಯುಕ್ತಗಳ ಸಂಶ್ಲೇಷಣೆಯಲ್ಲಿಯೂ ಅಯೊಡೀನಿನ ಪಾತ್ರ ಬಲು ಹಿರಿದು. ಉದಾಹರಣೆಗೆ, ಡೈಕ್ರೋಮೈಟ್, ತಾಮ್ರ, ಕಬ್ಬಿಣ, ಸೋಡಿಯಂ ಥಯೋಸಲ್ಫೇಟ್‌ಗಳ ಪ್ರಮಾಣಮಾಪನದಲ್ಲಿಯೂ ಹಾಫ್‌ಮನ್ (1850), ವಿಲಿಯಂ ಸನ್ (1851), ವುರ್ಟ್ಸ್, (1855), ಗ್ರಿನಾರ್ಡ್ (1950) ರವರ ಸಂಶ್ಲೇಷಣೆಗಳಲ್ಲಿಯೂ ಅಯೊಡೀನ್ ಮತ್ತು ಅಯೊಡೀನ್ ಸಂಯುಕ್ತಗಳ ಉಪಯುಕ್ತತೆ ರಸಾಯನಶಾಸ್ತ್ರಜ್ಞರಿಗೆ ಮನದಟ್ಟಾಗಿರುವ ವಿಷಯ. ಛಾಯಾಚಿತ್ರಗ್ರಹಣದಲ್ಲಿ ಬೆಳ್ಳಿಯ ಅಯೊಡೈಡ್‌ನ ಉಪಯೋಗ 1839ರಿಂದಲೇ ವಾಣಿಜ್ಯ ಪ್ರಮಾಣದಲ್ಲಿ ಆರಂಭವಾಯಿತು. ಹೀಗೆ ಔಷಧಿಗಳ ತಯಾರಿಕೆ, ರಾಸಾಯನಿಕ ಸಂಶೋಧನೆ, ಛಾಯಾಚಿತ್ರಗ್ರಹಣ ಮುಂತಾದ ನಾನಾ ರೀತಿಯ ಉಪಯೋಗಗಳಿಂದ ಅಯೊಡೀನ್ ಒಂದು ಸುಪರಿಚಿತ ಮೂಲವಸ್ತುವಾಯಿತು.

ಅಯೊಡೀನ್ ಮತ್ತು ಅಯೊಡೈಡ್‌ಗಳ ಕೆಲವು ಇತರ ಉಪಯೋಗಗಳು– ಝರ್ಕೋನಿಯಂ, ಟೈಟೇನಿಯಂ, ಹ್ಯಾಫ್‌ನಿಯಂ ಮುಂತಾದ ಕೆಲ ಅತ್ಯುಷ್ಣ ಸಹಿಷ್ಣು ಲೋಹಗಳ ಶುದ್ಧೀಕರಣಕಾರ್ಯ (ವ್ಯಾನ್ ಆರ್ಕೆಲ್ ಮತ್ತು ಡಿಬೋಯರ್ ವಿಧಾನ), ಟೈಟೇನಿಯಂ ಮತ್ತು ಸ್ಟೇನ್‌ಲೆಸ್‌ಸ್ಟೀಲ್‌ಗಳಿಗೆ ಕೀಲುಎಣ್ಣೆ ತಯಾರಿಕೆ, ಸಂಧಿವಾತ, ಪರಂಗಿಹುಣ್ಣಿನರೋಗ (ಸಿಫಿಲಿಸ್) ಮತ್ತು ಚರ್ಮಸಂಬಂಧರೋಗಗಳಿಗೆ ಮದ್ದು ತಯಾರಿಕೆ,

ವಿದ್ಯುತ್‌ದೀಪಗಳ ಗಾಜಿನ ಬುರುಡೆಯೊಳಗೆ ಮಿಶ್ರ ಮಾಡುವುದರಿಂದ ಟಂಗ್‌ಸ್ಟನ್ ತಂತಿಯ ಬಾಳಿಕೆಯ ಏರಿಕೆ ಇತ್ಯಾದಿ. ಪ್ರಬಲ ದ್ರಾವಣದಲ್ಲಿ ಅಥವಾ ಹೆಚ್ಚಿನ ಪ್ರಮಾಣದಲ್ಲಿ ಅಯೊಡೀನ್ ಸಂಕ್ಷಾರಕ ಮತ್ತು ವಿಷವಸ್ತು. ಆದರೆ ಮಾನವಶರೀರಕ್ಕೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಅಯೊಡೀನಿನ ಪೂರೈಕೆ ಅತ್ಯಾವಶ್ಯಕ. ಇಲ್ಲವಾದರೆ ಅನಾರೋಗ್ಯ. ಈ ಕಾರಣದಿಂದಲೇ ಊಟದ ಉಪ್ಪಿಗೆ ಸ್ವಲ್ಪ ಅಯೊಡೈಡ್ ಮಿಶ್ರಮಾಡುವುದು ಸರ್ವಸಾಮಾನ್ಯ. ಎಮ್ಮೆ, ಹಸುಗಳು ಗರ್ಭವಾದಾಗ ಅವುಗಳ ಆಹಾರದಲ್ಲಿ ಅಯೊಡೈಡ್ ಕಡ್ಡಾಯವಾಗಿ ಇರಲೇಬೇಕು. ಇಲ್ಲವಾದರೆ ಜನಿಸಿದ ಕರುಗಳು ಪೂರ್ಣ ಆರೋಗ್ಯದಿಂದ ಇರುವುದಿಲ್ಲ. ಹಾಲು ಸಮೃದ್ಧಿಯಾಗಿ ಕೊಡಲು ಅಯೊಡೈಡ್ ಪ್ರೇರಕ. ಕೋಳಿಮೊಟ್ಟೆಗಳ ಉತ್ಪಾದನೆಯ ಏರಿಕೆಗೂ ಅಯೊಡೈಡ್ ಸಹಾಯಕಾರಿ. ಕೃತಕಮಳೆ ಬರಿಸುವ ಪ್ರಯೋಗಗಳಲ್ಲಿ ಮೋಡಗಳು ನೀರಾಗುವಂತೆ ಮಾಡಲು ಬೆಳ್ಳಿಯ ಅಯೊಡೈಡ್‌ನ ದೂಳನ್ನು ಎರಚುವರು. ಕುಡಿಯುವ ನೀರು, ಈಜುಕೊಳದ ನೀರು ಇವೆಲ್ಲವನ್ನು ಶುದ್ಧೀಕರಿಸಲು ಅಯೊಡೀನ್ ಉಪಯೋಗಿಸುವರು.

ಪ್ರಕೃತಿಯಲ್ಲಿ ಇದು ಮೂಲವಸ್ತು ಸ್ವರೂಪದಲ್ಲಿ ಎಲ್ಲಿಯೂ ದೊರೆಯುವುದಿಲ್ಲ. ಇತರ ಹ್ಯಾಲೊಜನ್‌ಗಳಂತೆ ತನ್ನ ರಾಸಾಯನಿಕ ಚಟುವಟಿಕೆಯ ಪರಿಣಾಮವಾಗಿ ಸಂಯುಕ್ತಗಳ ರೂಪದಲ್ಲೇ ದೊರಕುವುದು. ಇವುಗಳಲ್ಲಿ ಮುಖ್ಯವಾದುವು ಅಯೊಡೈಡ್ ಮತ್ತು ಅಯೊಡೇಟ್‌ಗಳು. ಅಯೊಡೀನಿನ ಪ್ರಕೃತಿಮೂಲಗಳಲ್ಲಿ ಅಗ್ರಸ್ಥಾನ ದೊರಕಬೇಕಾದುದು ಸಮುದ್ರದ ಕೆಲ ವಿಶಿಷ್ಟಜಾತಿಯ ಸಸ್ಯವರ್ಗಕ್ಕೆ. ಅವು ಸಮುದ್ರದ ನೀರಿನಲ್ಲಿ ಲೀನವಾಗಿರುವ ಅಯೊಡೀನನ್ನು ತಮ್ಮಲ್ಲಿ ಶೇಖರಿಸಿಕೊಳ್ಳುವ ಒಂದು ವಿಶಿಷ್ಟ ಲಕ್ಷಣ ಹೊಂದಿವೆ. ಇವುಗಳಿಂದಲೇ ಮೊದಲು ಕೈಗಾರಿಕಾಪ್ರಮಾಣದಲ್ಲಿ ಅಯೊಡೀನನ್ನು ಪ್ರತ್ಯೇಕಿಸಿದುದು. ಈಗ ಇತರ ಉತ್ಕೃಷ್ಟ ಮೂಲಗಳು ತಿಳಿದುಬಂದಿವೆಯಾದರೂ, ಜಪಾನ್ ದೇಶ ಈಗಲೂ ಗಣನೀಯ ಪ್ರಮಾಣದಲ್ಲಿ ಈ ಕೈಗಾರಿಕೆಯನ್ನು ಪೋಷಿಸುತ್ತಿದೆ. ಅತ್ಯಂತ ಪ್ರಮುಖ ಪ್ರಕೃತಿ ಮೂಲ ಈಗ ಚಿಲಿದೇಶದಲ್ಲಿ ದೊರಕುವ ನೈಟ್ರೇಟ್ ಲವಣಗಳ ನಿಕ್ಷೇಪ. ಈ ನಿಕ್ಷೇಪಗಳು ಚಿಲಿ ಸಾಲ್ಟ್ ಪೀಟರ್ ಅಥವಾ ಕ್ಯಾಲಿಚೆ ಎಂದು ಜಗತ್ಪ್ರಸಿದ್ಧವಾಗಿವೆ. ಮುಖ್ಯವಾಗಿ ಸೋಡಿಯಂ ನೈಟ್ರೇಟ್ ಲವಣವಾದ ಈ ನಿಕ್ಷೇಪದಲ್ಲಿ ಅಯೊಡೀನ್ ಅಯೊಡೇಟ್‌ಗಳ ಸಂಯುಕ್ತರೂಪದಲ್ಲಿದೆ. 1840ರಲ್ಲೇ ತಿಳಿದುಬಂದ ಈ ವಿಷಯವನ್ನು, 1868ರಲ್ಲಿ ಮೊದಲು ಉಪಯೋಗಿಸಿದರು. ಚಿಲಿದೇಶದಿಂದ ಅಯೊಡೀನಿನ ರಫ್ತುವ್ಯಾಪಾರ ಆರಂಭವಾಯಿತು. ಈಗಲೂ ಪ್ರಪಂಚದಲ್ಲೆಲ್ಲ ಅತಿಮುಖ್ಯ ಅಯೊಡೀನಿನ ಉತ್ಪಾದಕರಾಷ್ಟ್ರ ಚಿಲಿದೇಶ. ಅಯೊಡೀನಿನ ಮತ್ತೊಂದು ಮೂಲ ಪೆಟ್ರೋಲಿಯಂ ಎಣ್ಣೆ ಬಾವಿಗಳಿಂದ ಹೊರಬೀಳುವ ಉಪ್ಪು ನೀರು ಎಂದು 1926ರಲ್ಲಿ ತಿಳಿಯಿತು.

ಈ ಮೂರು ಪ್ರಮುಖ ಪ್ರಕೃತಿಮೂಲಗಳಿಂದಲೂ ಅಯೊಡೀನನ್ನು ವಿವಿಧ ರಾಸಾಯನಿಕ ಕ್ರಮಗಳಿಂದ ಪಡೆಯುತ್ತಾರೆ. ಮೂಲತಃ ಅಯೊಡೈಡನ್ನು ಉತ್ಕರ್ಷಿಸುವುದು ಅಥವಾ ಅಯೊಡೇಟನ್ನು ಅಪಕರ್ಷಿಸುವುದು ಇವೇ ಆ ಕ್ರಮಗಳು. ಸಾಗರಗಳ ನೀರಿನಲ್ಲಿ ಅಯೊಡೀನಿನ ಪ್ರಮಾಣ ಅತ್ಯಲ್ಪವಾದರೂ (ಸುಮಾರು ದಶಲಕ್ಷಕ್ಕೆ 0.05 ಭಾಗ) ಲ್ಯಾಮಿನೇರಿಯ ಮತ್ತು ಫ್ಯೂಕಸ್ ಕುಟುಂಬಕ್ಕೆ ಸೇರಿದ ಕೆಲವು ಕಂದು ಬಣ್ಣದ ವಿಶಿಷ್ಟ ಸಸ್ಯವರ್ಗಗಳು ಅಯೊಡೀನನ್ನು ಗಣನೀಯ ಪ್ರಮಾಣದಲ್ಲಿ ಶೇಖರಿಸಬಲ್ಲವು. ಈ ಸಸ್ಯಗಳನ್ನು ಕಿತ್ತು ಒಣಗಿಸಿ ಅಯೊಡೀನ್ ನಾಶವಾಗದಂತೆ ಎಚ್ಚರದಿಂದ ಸುಟ್ಟು ಬೂದಿಮಾಡುವುದು ಮೊದಲ ಹಂತ. ಅನಂತರ ಬೂದಿಯನ್ನು ನೀರಿನಲ್ಲಿ ಕದಡಿ ಕಬ್ಬಿಣದ ಪಾತ್ರೆಗಳಲ್ಲಿ ನೀರಿನ ಹಬೆಯಿಂದ ಕಾಯಿಸಿದರೆ, ದ್ರಾವಣ ಕ್ರಮೇಣ ಜಲಾಂಶವನ್ನು ಕಳೆದುಕೊಂಡು ಪ್ರಬಲವಾಗುತ್ತದೆ. ಆಗ ಸಲ್ಫೇಟ್ ಕ್ಲೋರೈಡ್‌ಗಳು ಮೊದಲು ಘನೀಭೂತವಾಗಿ, ಉಳಿಕೆಯ ದ್ರಾವಣದಲ್ಲಿ ಅಯೊಡೈಡ್ ಲೀನವಾಗಿಯೇ ಇರುತ್ತದೆ. ಈ ಉಳಿಕೆಯ ದ್ರಾವಣಕ್ಕೆ ಸಲ್ಫ್ಯೂರಿಕ್ ಆಮ್ಲವನ್ನು ಹಾಕುವುದರಿಂದ ದ್ರಾವಣದಲ್ಲಿನ ಸಲ್ಫೈಡ್ ಸಂಯುಕ್ತಗಳಿಂದ ಗಂಧಕ ಹೊರಬೀಳುವುದು. ಅನಂತರ ಮೇಲಿನ ತಿಳಿದ್ರಾವಣವನ್ನು ಮಾತ್ರ ಸಲ್ಫ್ಯೂರಿಕ್ ಆಮ್ಲ ಮತ್ತು ಮ್ಯಾಂಗನೀಸ್ ಡೈ ಆಕ್ಸೈಡ್‌ಗಳೊಡನೆ ಬೆರೆಸಿ, ಕಾಯಿಸಿ, ಬಟ್ಟಿ ಇಳಿಸಿದರೆ, ಅಯೊಡೀನ್ ಆವಿಯಾಗಿ ಹೊರಬಿದ್ದು ತಂಪಾದೊಡನೆ ಘನೀಭೂತವಾಗುವುದು. ಇಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯನ್ನು ಈ ಕೆಳಗಿನ ಸಮೀಕರಣದ ರೂಪದಲ್ಲಿ ಬರೆಯಬಹುದು:

$$2Nal + 3H_2SO_4 + MnO_2 \rightleftarrows I_2 + 2NaHSO_4 + MnSO_4 + 2H_2O$$

ಚಿಲಿ ನೈಟ್ರೇಟ್ ಲವಣನಿಕ್ಷೇಪಗಳಲ್ಲಿ ಸೋಡಿಯಂ ಅಯೊಡೇಟ್ ರೂಪದಲ್ಲಿ ಅಯೊಡೀನ್ ಇದೆ. ನೀರಿನಲ್ಲಿ ಸೋಡಿಯಂ ಅಯೊಡೇಟ್ ಹೆಚ್ಚಾಗಿ ಲೀನವಾಗುವ ಸ್ವಭಾವವುಳ್ಳದ್ದು. ಆದ್ದರಿಂದ ನೈಟ್ರೇಟ್ ಲವಣಗಳನ್ನು ಪುಡಿಮಾಡಿ ನೀರಿನಲ್ಲಿ ಕರಗಿಸಿ ಅನಂತರ ದ್ರಾಣವನ್ನು ಸ್ಫಟಿಕೀಕರಣಕ್ಕೊಳಪಡಿಸಿದರೆ ಸೋಡಿಯಂ ನೈಟ್ರೇಟ್ ಲವಣ ಮೊದಲು ಹೊರಬೀಳುತ್ತದೆ. ಉಳಿಕೆಯ ದ್ರಾವಣದಲ್ಲಿ ಈಗ ಸೋಡಿಯಂ ಅಯೊಡೇಟ್ ಅಂಶ ಹೆಚ್ಚಾಗಿರುತ್ತದೆ. ಆ ದ್ರಾವಣವನ್ನು ಸೂಕ್ತ ಪ್ರಮಾಣದ ಸೋಡಿಯಂ ಹೈಡ್ರೋಜನ್ ಸಲ್ಫೈಟ್‌ನೊಡನೆ  ಬೆರೆಸಿ ಅಪಕರ್ಷಿಸಿದರೆ ಅಯೊಡೀನ್ ಘನರೂಪದಲ್ಲಿ ಬೇರೆಯಾಗುತ್ತದೆ.

$$2NaIo_3 + 5NaHSO_3 \rightarrow 3NaHSO_4 + 2Na_2SO_4 + I_2\downarrow + H_2O$$

ಅದನ್ನು ನೀರಿನಲ್ಲಿ ತೊಳೆದು ಒತ್ತಡಕ್ಕೆ ಒಳಪಡಿಸುವುದರಿಂದ ದಟ್ಟ ಹರಳುಗಳು ದೊರೆಯುತ್ತವೆ. ಈ ಘನ ಅಯೊಡೀನನ್ನು ಕಾಯಿಸಿ ಬಟ್ಟಿ ಇಳಿಸುವುದರ ಮೂಲಕ ಬಹು ಶುದ್ಧ ಅಯೊಡೀನನ್ನು ಪಡೆಯುವರು.

ಪೆಟ್ರೋಲಿಯಂ ಎಣ್ಣೆ ಬಾವಿಗಳಲ್ಲಿ ದೊರಕುವ ಉಪ್ಪುನೀರಿನಿಂದ ಅಯೊಡೀನನ್ನು ವಿವಿಧರೀತಿಯಲ್ಲಿ ಪಡೆಯಲು ಸಾಧ್ಯ. ಸಮುದ್ರದ ನೀರಿನಿಂದ ಬ್ರೋಮಿನ್ ಮೂಸವಸ್ತುವನ್ನು ಪಡೆಯುವ ವಿಧಾನವನ್ನು ಇಲ್ಲಿಯೂ ಅನುಸರಿಸಬಹುದು. ಉಪ್ಪುನೀರನ್ನು ಕಾಯಿಸಿ ಜಲಾಂಶವನ್ನು ಕಡಿಮೆಮಾಡಿ ಫಲಿತದ್ರಾವಣದೊಳಕ್ಕೆ ಕ್ಲೋರಿನ್ (ನೋಡಿ– ಕ್ಲೋರಿನ್) ಅನಿಲವನ್ನು ಹಾಯಿಸಿದರೆ ಅಯೊಡೀನ್ ಹೊರಬೀಳುವುದು.

$$2NaI + CI_2 \rightarrow 2NaCI + I_2$$

ಫಲಿತದ್ರಾವಣವನ್ನು ತಾಮ್ರದ ತಂತಿಗಳ ಕಟ್ಟುಗಳ ಮೇಲೆ ಹಾಯಿಸಿದರೆ, ಅದರಲ್ಲಿನ ತಾಮ್ರ (I) ತಾಮ್ರದ ಅಯೊಡೈಡ್ (ಕ್ಯೂಪ್ರಸ್ ಅಯೊಡೈಡ್) ಆಗುತ್ತದೆ. ಇದು ನೀರಿನಲ್ಲಿ ಲೀನವಾಗುವುದಿಲ್ಲ. ತಂತಿಯ ಕಟ್ಟುಗಳನ್ನು ಆಗಾಗ್ಗೆ ಒದರುವುದರ ಮೂಲಕ ಅದರ ಮೇಲೆ ಶೇಖರವಾಗಿರುವ ತಾಮ್ರ (I) ಅಯೊಡೈಡನ್ನು ಪ್ರತ್ಯೇಕಿಸಿ, ಸೋಸಿ, ತೊಳೆದು, ಒಣಗಿಸಿ ಹಾಗೆಯೇ ಉಪಯೋಗಿಸಬಹುದು ಅಥವಾ ಎಣ್ಣೆ ಬಾವಿಗಳಿಂದ ದೊರೆತ ಉಪ್ಪುನೀರಿಗೆ ಬೆಳ್ಳಿಯ ನೈಟ್ರೇಟ್ (ಸಿಲ್ವರ್ ನೈಟ್ರೇಟ್) ದ್ರಾವಣವನ್ನು ಮಿಶ್ರಮಾಡುವುದರಿಂದ ಹಳದಿಬಣ್ಣದ ಘನ ಬೆಳ್ಳಿಯ ಅಯೊಡೈಡ್ ಹೊರಬೀಳುತ್ತದೆ. ಬೆಳ್ಳಿಯ ಅಯೊಡೈಡನ್ನು ಶೋಧಿಸಿ ಕಬ್ಬಿಣ (I) ಅಯೊಡೈಡ್ ದ್ರಾವಣಗಳು ಉತ್ಪಾದಿತವಾಗುತ್ತವೆ.

$$AgI + Fe \rightarrow FeI + Ag$$

ಪುನರುತ್ಪಾದಿತ ಬೆಳ್ಳಿಯನ್ನು ಮತ್ತೆ ಉಪಯೋಗಿಸಬಹುದು. ಕಬ್ಬಿಣ (1) ಅಯೊಡೈಡ್ ದ್ರಾವಣದೊಳಕ್ಕೆ ಕ್ಲೋರಿನ್ ಅನಿಲವನ್ನು ಹಾಯಿಸುವುದರಿಂದ ಅಯೊಡೀನನ್ನು ಬೇರ್ಪಡಿಸಬಹುದು.

ಅಯೊಡೀನ್ ಒಂದು ಅಲೋಹ. ಅದರ ಗುಂಪಿನ ಮೂಲವಸ್ತುಗಳ ಪೈಕಿ ಇದೊಂದೇ ಘನ ಮೂಲವಸ್ತು. ಘನವಸ್ತುವಿನ ಸಾಪೇಕ್ಷಸಾಂದ್ರತೆ 4.94. ಘನ ರೂಪದಲ್ಲಿ ಹೆಚ್ಚು ಕಡಿಮೆ ಊದಾ ಕಪ್ಪು ಬಣ್ಣವಾಗಿದ್ದು, ಹೊಳಪಿನಿಂದ ಕೂಡಿ, ಲೋಹಗಳಂತೆ ಕಾಂತಿಯುತ ವಾಗಿದೆ. ಹ್ಯಾಲೊಜನ್‌ಗಳಲ್ಲಿ ಇದು ಉತ್ತಮ ವಿದ್ಯುದ್ವಾಹಕವೂ ಹೌದು. ಕಾಯಿಸಿದರೆ $113.7^0$ ಸೆಂ.ಗ್ರೇ.ನಲ್ಲಿ ದ್ರವವಾಗಿ, $183^0$ ಸೆಂ.ಗ್ರೇ.ನಲ್ಲಿ ಕುದಿಯುತ್ತದೆ. ಆದರೆ ಕಾಯಿಸಿದಾಗ ಘನವಸ್ತುವಾಗಿ ನೇರಳೆಬಣ್ಣದ ಭಾರವಾದ (ಗಾಳಿಗಿಂತ 10 ಪಟ್ಟು ಭಾರ) ಆವಿಯಾಗುತ್ತದೆ. ನೀರಿನಲ್ಲಿ ಬಲು ಸ್ವಲ್ಪ ಪ್ರಮಾಣದಲ್ಲಿ ಲೀನವಾಗುತ್ತದೆ (ಸುಮಾರು 0.33 ಗ್ರಾಂ 1ಲೀಲರ್‌ಗೆ, ($25^0$ ಸೆಂ.ದ್ರೇ.). ಆದರೆ ಪೊಟಾಸಿಯಂ ಅಯೊಡೈಡ್‌ನ ಸಾಂದ್ರ ಅಥವಾ ಪ್ರಬಲ ದ್ರಾವಣದಲ್ಲಿ ಸುಲಭವಾಗಿ ಕರಗಿ ನೇರಳೆಬಣ್ಣದ ದ್ರಾವಣ ಉಂಟಾಗುತ್ತದೆ. ಅದಕ್ಕೆ ಕಾರಣ ಈ ಕೆಳಗೆ ನಿರೂಪಿಸಿರುವ ರಾಸಾಯನಿಕ ಕ್ರಿಯೆ ಎಂದು ಭಾವಿಸಲಾಗಿದೆ.

$$I_2 + I \rightarrow I_3$$

ಇಂಗಾಲ ಸಂಯುಕ್ತ ವಿಲೀನಕಾರಿಗಳಾದ ಈಥರ್, ಕ್ಲೋರೋಫಾರಂ, ಆಲ್ಕೊಹಾಲ್ ಮುಂತಾದವುಗಳಲ್ಲಿ ಅಯೊಡೀನ್ ಸುಲಭವಾಗಿ ಲೀನವಾಗಿ ಕೆಲವದರಲ್ಲಿ ನೇರಳೆ ಮತ್ತು ಕೆಲವದರಲ್ಲಿ ಕಂದು ಕೆಂಪುಬಣ್ಣದ ದ್ರಾವಣಗಳುಂಟಾಗುತ್ತವೆ.

ಅಯೊಡೀನ್ ಆವಿ ಸಾಧಾರಣವಾಗಿ ದ್ವಿಪರಮಾಣುಗಳ ಕೂಟದಿಂದಾಗುವ ($I_2$) ಅಣುಗಳ ರೂಪದಲ್ಲಿದೆ. ಆದರೆ ಉಷ್ಣತೆ ಹೆಚ್ಚಿದಂತೆಲ್ಲ ಏಕಪರಮಾಣು ರೂಪಾಂತರ ಹೆಚ್ಚಾಗುವುದು. ($I_2 \rightleftarrows 2I$), ಪ್ರಕೃತಿಮೂಲ ಅಯೊಡೀನ್ ಪರಮಾಣುಗಳು ಸ್ಥಿರ. ಪರಮಾಣು ತೂಕ 127 ರ ಸಮಸ್ಥಾನಿ ರಚಿತ. ಆದರೆ ಕೃತಕವಾಗಿ ಬಹುಸಂಖ್ಯಾತ. ಪರಮಾಣು ತೂಕ 119 ರಿಂದ ಹಿಡಿದು 139 ರ ವರೆಗಿನ ಎಲ್ಲ ಸಮಸ್ಥಾನಿಗಳನ್ನೂ ನಿರ್ಮಿಸಲಾಗಿದೆ. ಅವೆಲ್ಲ ಅಸ್ಥಿರ, ವಿಕಿರಣಶೀಲ ಸಮಸ್ಥಾನಿಗಳು. ಅವುಗಳ ಪೈಕಿ ಪರಮಾಣು ತೂಕ 131 ರ, ಅರ್ಧಾಯುಷ್ಯ 8 ದಿವಸಗಳಿರುವ ಸಮಸ್ಥಾನಿಯೇ ಬಹು ಮುಖ್ಯವಾದುದು. ಥೈರಾಯಿಡ್ ಗ್ರಂಥಿಗೆ ಸಂಬಂಧಿಸಿದ ರೋಗರುಜಿನಗಳ ಗುರುತಿಸುವಿಕೆ, ನಿವಾರಣೆ ಮುಂತಾದ ಸಂಶೋಧನೆಗಳಲ್ಲಿ ಅದರ ಪಾತ್ರ ಅಮೂಲ್ಯವಾದುದು. ಅದನ್ನು ಛಾಯಾಚಿತ್ರ ಗ್ರಹಣ ಪಟಲಗಳ ದಪ್ಪವನ್ನು ಅಳೆದು ನಿಯಂತ್ರಿಸುವುದರಲ್ಲೂ ಉಪಯೋಗಿಸುವರು. ಪರಮಾಣು ವಿದಳನಕ್ರಿಯೆಯಿಂದ 131 ಸಮಸ್ಥಾನಿಗಳನ್ನು ಹೊಂದಬಹುದು.

ರಾಸಾಯನಿಕವಾಗಿ ಅಯೊಡೀನ್ ಒಂದು ತೀವ್ರ ಚಟುವಟಿಕೆಕಾರಿ ಅಲೋಹ. ಸೆಲೇನಿಯಂ, ಗಂಧಕ, ಕೋಬಾಲ್ಟ್ (111), ಹೀಲಿಯಂ ಗುಂಪಿನ ವಿರಳ ಜಡಾನಿಲಗಳ ಹೊರತು ಮಿಕ್ಕೆಲ್ಲ ಮೂಲವಸ್ತುಗಳೊಡನೆಯೂ ಸುಲಭವಾಗಿ ಸಂಯೋಗಹೊಂದುವ

ಸಾಮರ್ಥ್ಯಹೊಂದಿದೆ. ಪ್ಲಾಟಿನಂ ಹೊರತು ಮಿಕ್ಕೆಲ್ಲ ಲೋಹಗಳೊಡನೆಯೂ ಸಂಯೋಗ ಹೊಂದಬಲ್ಲದು. ಗಾಜು, ಪಿಂಗಾಣಿ, ಎನಾಮಲ್, ಆವೃತತುಕ್ಕು, ಮರ, ಇಂಗಾಲ, ಪಾಲಿಥೀನ್ ಶ್ರೇಣಿಯ ಕೆಲ ಕೃತಕ ವಸ್ತುಗಳು–ಇವು ಅಯೊಡೀನಿನೊಡನೆ ರಾಸಾಯನಿಕ ಕ್ರಿಯೆಗೊಳಗಾಗುವುದಿಲ್ಲ. ಆದುದರಿಂದ ಅಯೊಡೀನ್ ಶೇಖರಣೆ ಮತ್ತು ಸಾಗಾಣಿಕೆಗೆ ಮೇಲಿನ ವಸ್ತುಗಳಿಂದ ಮಾಡಿದ ಡಬ್ಬ, ಸೀಸೆ ಅಥವಾ ಡ್ರಮ್‌ಗಳನ್ನು ಉಪಯೋಗಿಸಬಹುದು. –1, +1, +3, +4, +5, +7, ಹೀಗೆ ವಿವಿಧ ಸಂಯೋಗಶಕ್ತಿಯನ್ನು ಪ್ರದರ್ಶಿಸಬಲ್ಲದು. ಉದಾಹರಣೆಗೆ, KI, ICI, $ICI_3$, $IO_2$, $IF_5$, $I_2O_5$, $IF_7$, $Na_5IO_6$ ಇತ್ಯಾದಿ. ಹ್ಯಾಲೊಜನ್‌ಗಳ ಪೈಕಿ ರಾಸಾಯನಿಕವಾಗಿ ಇದೇ ಅತ್ಯಂತ ಕಡಿಮೆ ಚಟುವಟಿಕೆಯ ಅಲೋಹ. ಆಮ್ಲಗಳ ಮಾಧ್ಯಮದಲ್ಲಿ ಅಯೊಡೀನ್ ಒಂದು ಸೌಮ್ಯ ಉತ್ಕರ್ಷಣಕಾರಿ. ಅಮೋನಿಯದೊಂದಿಗೆ ಸಾರಜನಕದ ಟ್ರೈ ಅಯೊಡೈಡ್ ಎಂಬ ಬಹು ಅಪಾಯಕಾರಿ ಆಸ್ಫೋಟನ ಸಂಯುಕ್ತ ಉಂಟಾಗುತ್ತದೆ. ಪರಮಾಣು ತೂಕ, ಗಾತ್ರ ಎಲ್ಲದರಲ್ಲೂ ಹಿರಿದಾದ ಹ್ಯಾಲೊಜನ್ ಮೂಲವಸ್ತು ಅಯೊಡೀನ್, ಸ್ವಲ್ಪಮಟ್ಟಿಗೆ ಲೋಹಪ್ರವೃತ್ತಿಯನ್ನೂ ಪ್ರದರ್ಶಿಸುವುದು. ಪಾದರಸ, ರಂಜಕ, ಆಂಟಿಮೊನಿಗಳೊಂದಿಗೆ ನೇರವಾಗಿ ಸಂಯೋಗ ಹೊಂದುವುದು, ಪಾದರಸದ ಅಯೊಡೈಡ್ ಪೊಟಾಸಿಯಂ ಅಯೊಡೈಡ್ ದ್ರಾವಣದಲ್ಲಿ ಲೀನವಾಗಿ ನೆಸಲರ್‌ನ ಕಾರಕ ಎಂಬ ಅಮೋನಿಯವನ್ನು ಗುರುತಿಸಲು ಸಹಾಯಕಾರಿಯಾದ ದ್ರಾವಣವನ್ನು ಕೊಡುತ್ತದೆ. ಇತರ ಹ್ಯಾಲೊಜನ್‌ಗಳಾದ ಫ್ಲೂರಿನ್, ಕ್ಲೋರಿನ್ ಮತ್ತು ಬ್ರೋಮಿನ್‌ಗಳೊಡನೆ ನೇರವಾಗಿ ಸಂಯೋಗ ಹೊಂದಬಲ್ಲದು. ಪರಿಣಾಮ ಅಂತರ್ ಹ್ಯಾಲೊಜನ್ ಸಂಯುಕ್ತಗಳ ಉದ್ಭವ. ಆಮ್ಲಜನಕದೊಡನೆ ನೇರವಾಗಿ ಸಂಯೋಗ ಹೊಂದಲಾರದ್ದಾದರೂ ಬಳಸುಕ್ರಮದಿಂದ $IO_2$, $I_4O_9$, $I_2O_5$, $I_2O_3$ ಮತ್ತು $I_2O_7$ ಹೀಗೆ ವಿವಿಧ ಆಕ್ಸೈಡ್‌ಗಳನ್ನು ತಯಾರಿಸಲಾಗಿದೆ.

ಅಯೊಡೀನಿನ ಸಂಯುಕ್ತಗಳಲ್ಲೆಲ್ಲ ಅತಿ ಮುಖ್ಯವಾದುದು ಪೊಟಾಸಿಯಂ ಅಯೊಡೈಡ್. ಕಬ್ಬಿಣ (II) ಅಯೊಡೈಡ್ ಅಥವಾ ತಾಮ್ರ (I) ಅಯೊಡೈಡ್ ಮತ್ತು ಪೊಟಾಸಿಯಂ ಕಾರ್ಬೋನೇಟ್‌ಗಳನ್ನು ರಾಸಾಯನಿಕ ಕ್ರಿಯೆಗೊಳಪಡಿಸಿ ಪೊಟಾಸಿಯಂ ಅಯೊಡೈಡ್ ತಯಾರಿಸುವರು.

$$2FeI_2 + 2K_2CO_3 + {}^1/_2O_2 \rightarrow 4KI + Fe_2O_3 + 2CO_2$$

$$2CuI + K_2CO_3 \rightarrow 2KI + CO_2 + Cu_2$$

ಪಿಷ್ಟ ಪದಾರ್ಥದೊಂದಿಗೆ ಅಯೊಡೀನ್ ಅತ್ಯಲ್ಪ ಪ್ರಮಾಣದಲ್ಲಿದ್ದರೂ ಒಂದು ವಿಶಿಷ್ಟರೀತಿಯಲ್ಲಿ ಕ್ರಿಯೆಹೊಂದಿ ದಟ್ಟ ನೀಲಿಬಣ್ಣವನ್ನು ಉಂಟುಮಾಡುತ್ತದೆ. ಈ ಪ್ರಯೋಗವನ್ನು ಅಯೊಡೀನ್ ಗುರುತಿಸಲು ಉಪಯೋಗಿಸುತ್ತಾರೆ. ಕಾಯಿಸಿದಾಗ ತನ್ನದೇ ಆದ ವಿಶಿಷ್ಟ ನೇರಳೆಬಣ್ಣದ ಅನಿಲಸ್ವರೂಪಕ್ಕೆ ಸುಲಭವಾಗಿ ಪರಿವರ್ತನೆ ಹೊಂದುವುದು, ಅನೇಕ ಇಂಗಾಲ ಸಂಯುಕ್ತಗಳಲ್ಲಿ ಲೀನವಾಗಿ ನೇರಳೆಬಣ್ಣದ ದ್ರಾವಣ ಉತ್ಪಾದನೆ, ಆಲ್ಕೊಹಾಲ್ ಮತ್ತು ಸೋಡಾಕ್ಷಾರದೊಡನೆ ಮಿಶ್ರಿತವಾದಾಗ ತನ್ನದೇ ಆದ ವಿಶಿಷ್ಟ ವಾಸನೆಯುಳ್ಳ ಅಯೊಡೋಫಾರಂ ಉತ್ಪಾದನೆ–ಇವೂ ಕೂಡ ಅಯೊಡೀನನ್ನು ಗುರುತಿಸಲು ಉಪಯೋಗಿಸುವ ಸಾಮಾನ್ಯ ಪರೀಕ್ಷಾಕ್ರಮಗಳು. ಬೆಳ್ಳಿಯ ನೈಟ್ರೇಟ್‌ನೊಡನೆ ಹಳದಿಬಣ್ಣದ ಬೆಳ್ಳಿಯ ಅಯೊಡೈಡ್ ಬೇರ್ಪಡುವಿಕೆಯೂ ಅಯೊಡೈಡ್‌ಗಳ ಗುರುತಿಸುವಿಕೆಯಲ್ಲಿ ಬಳಕೆಯಲ್ಲಿರುವ ಒಂದು ಸುಪರಿಚಿತ ಪರೀಕ್ಷಾ ವಿಧಾನ. ಈ ಕ್ರಿಯೆ ಬೆಳ್ಳಿ ಅಥವಾ ಅಯೊಡೈಡ್‌ನ ಪ್ರಮಾಣಮಾಪನೆಗೂ ಆಧಾರ. (ಎನ್.ಎಚ್.ಎಸ್.)

**ವೈದ್ಯಶಾಸ್ತ್ರ:** ಜೈವಿಕ ರಾಸಾಯನಿಕ ತಯಾರಿಕೆಯಲ್ಲಿ ಅಯೊಡೀನ್ ಬಳಕೆಯಲ್ಲಿದೆ. ತಿಂದ ಆಹಾರ ಅರಗಿ ರಕ್ತಗತವಾಗಿ ಮೈಬಳಸಿಕೊಂಡು ಬಿಡುವುದರಲ್ಲಿ ನೆರವಾಗುವ ಗುರಾಣಿಕ (ಥೈರಾಯಿಡ್) ಗ್ರಂಥಿಯ ರಸದ ತಯಾರಿಕೆಗೆ ಬೇಕಿರುವುದರಿಂದ ಆರೋಗ್ಯವಂತನಲ್ಲೂ ಅಯೊಡೀನ್ ಮುಖ್ಯ. ಹಿಮಾಲಯದ ತಪ್ಪಲುವಾಸಿಗಳಲ್ಲಿ ಸಾಮಾನ್ಯವಾಗಿರುವಂತೆ, ಆಹಾರದಲ್ಲಿ ಅಯೊಡೀನ್ ಸಾಲದಿದ್ದರೆ, ಒಳ್ನಾಡಿಕ ಗಳಗಂಡ (ಎಂಡೆಮಿಕ್ ಗಾಯ್ಟರ್), ಲೋಳುಬ್ಬರ (ಮಿಕ್ಸೆಡೀಮ) ರೋಗಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯ ಅಡಿಗೆ ಉಪ್ಪಿನಲ್ಲಿ ದಿನವೂ ಬೇಕಿರುವಷ್ಟು ಅಯೊಡೀನ್ ಇರುವುದು. ಅಯೊಡೀನ್ ದ್ರಾವಣ ಏಕಾಣುಜೀವಿಮಾರಕ, ಅಣಬೆಮಾರಕ. ಆದ್ದರಿಂದ, ಚರ್ಮವನ್ನು ಜೀವಮಡಿ ಮಾಡಲು (ಸ್ಟರಿಲೈಸ್) ಶಸ್ತ್ರವೈದ್ಯರಲ್ಲಿ ಹೆಚ್ಚಿನ ಬಳಕೆಯಲ್ಲಿದೆ. ಇದರ ಪ್ರಮಾಣ ಮಿತಿಮೀರಿದರೆ, ತಗುಲಿದ ಭಾಗಗಳನ್ನು ಸುಟ್ಟುಹಾಕುವುದು. ಪುಪ್ಪಸ ರೋಗಗಳಲ್ಲಿ ತೇಮಡೆಯನ್ನು ಸಡಿಲಿಸಿ ಹೊರಗೆಡವಲೂ, ಕೀಲು ನೋವುಗಳಲ್ಲೂ ಅಯೊಡೈಡುಗಳು ನೆರವಿನ ಮದ್ದುಗಳು.

ಎಂಟು ದಿನಗಳ ಅರೆಬಾಳು ಇರುವ $I^{131}$ (ಸೋಡಿಯಂ ರೇಡಿಯೋ ಅಯೊಡೈಡು) ದ್ರಾವಣ ಕೃತಕ ಸಮಸ್ಥಾನಿಗಳಲ್ಲೆಲ್ಲ (ಐಸೊಟೋಪ್ಸ್) ಹೆಚ್ಚು ಬಳಕೆಯಲ್ಲಿದೆ. ಇದನ್ನು ರೋಗಿಗೆ ಕುಡಿಸಿದರೆ ಇಲ್ಲವೆ ರಕ್ತನಾಳಾಂತರ ಕೊಟ್ಟರೆ ಗುರಾಣಿಕ ಗ್ರಂಥಿಯಲ್ಲಿ ನೆಲೆಸುವುದರಿಂದ ಇದರಲ್ಲಿ ಸಾಂದ್ರವಾಗುವ ವೇಗದಿಂದ ಗ್ರಂಥಿಯ ನಿಜಗೆಲಸದ ಮಟ್ಟವನ್ನು ತಿಳಿಯಬಹುದು; ಗ್ರಂಥಿಯ ಏಡಗಂತಿ ಮತ್ತಿತರ ಗಂತಿಗಳನ್ನು ಅಣಗಿಸುವ ಚಿಕಿತ್ಸೆಮಾಡಬಹುದು ; ಅಲ್ಲದೆ, ತಲೆಬುರುಡೆಯಲ್ಲಿ ಮಿದುಳಿನ ಗಂತಿಗಳ ನೆಲೆಯನ್ನೂ ಗುರುತಿಸಬಹುದು. ಹಲವಾರು ಸಂಯುಕ್ತಗಳೊಂದಿಗೆ ಪ್ರಾಣಿಗಳು, ಗಿಡಮರಗಳಿಗೆ ಕೊಟ್ಟು ಅವುಗಳ ಗತಿ ಯಾವೆಡೆಯಲ್ಲಿ ಏನಾಗುವುದೆಂದು, ರಾಸಾಯನಿಕ, ಜೀವ ರಾಸಾಯನಿಕ, ನಿಜಗೆಲಸಿಕ, ಮತ್ತಿತರ ರೀತಿಗಳಲ್ಲಿ ತಿಳಿಯಲು ಹೆಚ್ಚು ಬಳಸುವ ಕೃತಕ ಸಮಸ್ಥಾನಿಗಳಲ್ಲಿ $I^{131}$ ಕೂಡ ಒಂದು. ಹೀಗೆ ಅಣುಗಳ ರಚನೆಯನ್ನು ಬಿಡಿಸಿ ತಿಳಿಯಲೂ ನೆರವಾಗುವುದು. (ಡಿ.ಎಸ್.ಎಸ್.)

ಅಯೊಡೀನ್ ಅಂಶ :ನೂರು ಗ್ರಾಂ ಎಣ್ಣೆಯೊಡನೆ ಸಂಕಲನ ರಸಾಯನ ಕ್ರಿಯೆ (ಅಡಿಷನ್ ರಿಆಕ್ಷನ್) ಹೊಂದುವ ಅಯೊಡೀನಿನ ಗ್ರಾಂ ತೂಕ ಆ ಎಣ್ಣೆಯ ಅಯೊಡೀನ್ ಅಂಶ. ಮೇದಸ್ಸಿನಲ್ಲಿರುವ ಆಮ್ಲಗಳಲ್ಲಿ ಸಂಯೋಜನಾಶಕ್ತಿ ಪೂರ್ಣವಾಗಿ ಅಪರ್ಯಾಪ್ತ ಇಂಗಾಲದ ಪರಮಾಣುಗಳು ಇರುತ್ತವೆ. ಈ ರೀತಿಯ ಇಂಗಾಲದ ಪರಮಾಣುಗಳನ್ನು ಸೇರಿಸುವ ಅಪರ್ಯಾಪ್ತ ಬಂಧನ (ಅನ್‌ಸ್ಯಾಚುರೇಟೆಡ್ ಬಾಂಡ್) ಇರುವ ಆಮ್ಲಗಳು ಅಯೊಡೀನನ್ನು ಹೀರಿಕೊಳ್ಳುವುದರಿಂದ ಅಯೊಡೀನ್ ಅಂಶ ಎಣ್ಣೆಯಲ್ಲಿ ಅಪರ್ಯಾಪ್ತ ಬಂಧಗಳಿವೆ ಎಂಬುದನ್ನು ತೋರಿಸುತ್ತದೆ. ಹೆಚ್ಚು ಅಪರ್ಯಾಪ್ತ ಬಂಧಗಳನ್ನು ಹೊಂದಿರುವ ಎಣ್ಣೆಗಳು ಸುಲಭವಾಗಿ ಒಣಗಿ, ಪಾರದರ್ಶಕ ಘನ ಪದಾರ್ಥಗಳಾಗುತ್ತವೆ. ಆದುದರಿಂದ ಅಯೊಡೀನ್ ಅಂಶ 150 ಕ್ಕಿಂತ ಹೆಚ್ಚಿದ್ದರೆ ಒಣಗುವ ಎಣ್ಣೆಗಳೆಂದೂ 100 ಕ್ಕಿಂತ ಕಡಿಮೆಯಿದ್ದರೆ ಒಣಗದ ಎಣ್ಣೆಗಳೆಂದೂ 100–150 ಇದ್ದರೆ ಅತಿ ಒಣಗುವ ಎಣ್ಣೆಗಳೆಂದು ಕರೆಯುತ್ತಾರೆ. ಒಣಗುವ ಎಣ್ಣೆಗಳಲ್ಲಿ ಅಗಸೆ ಎಣ್ಣೆ ಮುಖ್ಯವಾದುದು. ಇದನ್ನು ಬಣ್ಣದ ದ್ರಾವಣ, ಮೆರುಗೆಣ್ಣೆ ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಈ ಎಣ್ಣೆಗಳು ವಿಲೀನಕಾರಿಯಾಗಿ ಕೆಲಸ ಮಾಡುವುದಲ್ಲದೆ ಆರಿದ ಮೇಲೆ ಮರ ಮುಂತಾದವುಗಳಿಗೆ ರಕ್ಷಣೆಯನ್ನೂ ಕೊಡುತ್ತವೆ.

ಬಳಕೆಯಲ್ಲಿರುವ ಮುಖ್ಯ ಎಣ್ಣೆಗಳ ಅಯೊಡೀನ್ ಅಂಶಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಎಣ್ಣೆ | ಅಯೊಡೀನ್ ಅಂಶ | ಎಣ್ಣೆ | ಅಯೊಡೀನ್ ಅಂಶ |
|---|---|---|---|
| ಅಗಸೆ | 175–205 | | |
| ಹರಳು | 80–90 | | |
| ಎಳ್ಳು | 103–118 | ಆಲಿವ್ | 75–95 |
| ಸೋಯ ಬೀನ್ | 115–130 | ಬೆಣ್ಣೆ | 25–40 |
| ಹತ್ತಿ ಬೀಜ | 110–116 | ಪ್ರಾಣಿಗಳ ಕೊಬ್ಬು | 30–70 |
| ಕಡಲೆಕಾಯಿ | 85–100 | | |

(ಎ.ಎಸ್.ಆರ್.)

**ಅಯೋಧ್ಯೆ :** ಭಾರತದ ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯಲ್ಲಿರುವ ಅವಧ್ ಪಟ್ಟಣವೇ ಪ್ರಾಚೀನ ಅಯೋಧ್ಯೆ. ಘಾಗ್ರಾನದಿಯ (ಸರಯೂ) ದಂಡೆಯಮೇಲೆ ಫೈಜಾಬಾದ್ ಪಟ್ಟಣಕ್ಕೆ ಅನತಿ ದೂರದಲ್ಲಿದೆ. ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ಬಹು ಪ್ರಸಿದ್ಧವಾಗಿದೆ. ಮನು ಇದನ್ನು ಸ್ಥಾಪಿಸಿದನೆಂದು ಪ್ರತೀತಿ. ಹಿಂದೂಗಳ ಮೋಕ್ಷಪ್ರದವಾದ ಏಳು ನಗರಗಳಲ್ಲಿ ಒಂದು. ಇಕ್ಷ್ವಾಕು ವಂಶದ ಅರಸರ ರಾಜಧಾನಿ. ರಾಮಾಯಣ ಕಾಲದಲ್ಲಿ ದಶರಥನ ರಾಜಧಾನಿಯಾಗಿತ್ತು. ರಾಮನ ಅವತಾರವಾದುದು ಇಲ್ಲಿಯೇ. ರಾಮಾಯಣದಲ್ಲಿ ಈ ನಗರದ ಬಹುಮುಖ ವರ್ಣನೆಯಿದ್ದು ಅಯೋಧ್ಯೆ ಮಹಾತ್ಮೆ ಎಂಬ ಕಾವ್ಯವೂ ಇದೆ. ಮಹಾಭಾರತದ ಕಾಲದಲ್ಲಿ ಬೃಹದ್ರಥ ಅಯೋಧ್ಯೆಯಿಂದ ಕೋಸಲ ಸೇನೆಯನ್ನು ಕುರುಕ್ಷೇತ್ರಕ್ಕೆ ಕೊಂಡೊಯ್ದನೆಂದು ತಿಳಿದುಬರುತ್ತದೆ. ವೃಷಭ, ಅಜಿತ ಮೊದಲಾದ ತೀರ್ಥಂಕರರ ಜನ್ಮಸ್ಥಳವಾದ್ದರಿಂದ ಇದು ಜೈನರಿಗೂ ಪವಿತ್ರ ಕ್ಷೇತ್ರ. 640 ರಲ್ಲಿ ಯೂವಾನ್ ಚಾಂಗ್ ಅಯೋಧ್ಯೆಗೆ ಬಂದಾಗ ಅಲ್ಲಿ 20 ಬೌದ್ಧಸ್ತೂಪಗಳೂ 3000 ಭಿಕ್ಷುಗಳೂ ಇದ್ದುದಾಗಿ ವರದಿಮಾಡಿದ್ದಾನೆ. ಶ್ರೀರಾಮನಿಗೆ ಸಂಬಂಧಿಸಿದಂತೆ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಇಂದ್ರನೀಲಮಣಿಯಿಂದ ಮಾಡಲ್ಪಟ್ಟ ಹನುಮಂತನ ವಿಗ್ರಹವಿರುವ ದೇವಾಲಯ ಬಹು ಸುಂದರವಾಗಿದೆ. (ಎಸ್.ಆರ್.; ಎನ್.ಎನ್.ಕೆ.)

**ಅಯೋಧ್ಯೆಯ ಬೇಗಂ :** ಅಯೋಧ್ಯೆಯ ನವಾಬ ಅಸಾ ಉದ್ದೌಲನ ತಾಯಿ. ಬ್ರಿಟಿಷರ ಸಹಾಯದಿಂದ ನವಾಬ ಪದವಿಗೇರಿದ್ದ ಅಸಾ ಉದ್ದೌಲ ತಾನು ಬ್ರಿಟಿಷರಿಗೆ ಕೊಡಬೇಕಾಗಿದ್ದ ಹಣವನ್ನು ಕೊಡಲಾಗದೆ ತನ್ನ ತಾಯಿಯಿಂದ ಅದನ್ನು ವಸೂಲು ಮಾಡುವಂತೆ ಗೌರ್ನರಿಗೆ ಸೂಚನೆ ಇತ್ತ. ಮನಸ್ಸಿಲ್ಲದಿದ್ದರೂ ಗೌರ್ನರ್ ವಾರನ್ ಹೇಸ್ಟಿಂಗ್ಸ್ ಅದಕ್ಕೆ ಒಪ್ಪಿದ (1781). ಹಣ ಬೇಗಂಳಿಂದ ವಸೂಲಾಯಿತು. ಹೇಸ್ಟಿಂಗ್ಸನ ಮೇಲೆ ಹೊರಿಸಿದ ಆಪಾದನೆಗಳಲ್ಲಿ ಬೇಗಂಳ ಸುಲಿಗೆಯೂ ಒಂದು ಮುಖ್ಯ ಅಂಶವಾಗಿತ್ತು. (ಬಿ.ಎಸ್.ಕೆ.)

**ಅಯೋನಿಯನ್ನರು :** ಏಷ್ಯಮೈನರ್‌ನ ಪಶ್ಚಿಮ ತೀರದ ಒಂದು ಭಾಗಕ್ಕೂ ಮತ್ತು ಅದರ ಸಮೀಪವಿರುವ ಕೆಲವು ಮೆಡಿಟರೇನಿಯನ್ ದ್ವೀಪಗಳಿಗೂ ಅಯೋನಿಯ ಎಂಬ ಹೆಸರಿದೆ. ಇಲ್ಲಿಯ ಜನ ಅಯೋನಿಯನ್ನರು. ಪ್ರ.ಶ.ಪೂ. 10ನೆಯ ಶತಮಾನಕ್ಕೂ ಹಿಂದೆಯೇ ಅಥೆನ್ಸಿನಿಂದ ಗ್ರೀಕರು ಇಲ್ಲಿಗೆ ಬಂದು ನೆಲೆಸಿದ್ದರೆಂದು ತಿಳಿದುಬಂದಿದೆ. ಇಲ್ಲಿಯ ಕೇರಿಯನ್ನರೇ ಮೊದಲಾದ ಜನರೊಂದಿಗೆ ಬೆರೆತರೂ ಅವರ ಭಾಷೆ, ಸಂಸ್ಕೃತಿ ಎಲ್ಲವೂ ಗ್ರೀಸಿನದೇ ಆಗಿ ಉಳಿಯಿತು. ಕ್ರಮೇಣ ಗ್ರೀಸಿನಲ್ಲಿದ್ದಂತೆ ಅಲ್ಲೂ ಕೆಲವು ನಗರರಾಜ್ಯಗಳೇರ್ಪಟ್ಟವು. ಈ ರಾಜ್ಯಗಳು ಸರಳವಾದ ಒಕ್ಕೂಟವನ್ನೂ ಸ್ಥಾಪಿಸಿಕೊಂಡವು. ಹಿತಕರ ವಾಯುಗುಣ, ಫಲವತ್ತಾದ ಭೂಮಿ, ಸುರಕ್ಷಿತವಾದ ರೇವುಬಂದರುಗಳು–ಈ ಎಲ್ಲ ಅನುಕೂಲತೆಗಳಿಂದ ಅಯೋನಿಯನ್ನರು ಬೇಗ ಪ್ರಗತಿ ಹೊಂದಿ, ಪಶ್ಚಿಮದಲ್ಲಿ ಸ್ಪೇನಿನವರೆಗೂ ಪೂರ್ವದಲ್ಲಿ ಕಪ್ಪುಸಮುದ್ರ ತೀರಕ್ಕೂ ತಮ್ಮ ವಲಸೆ ಬೆಳೆಸಿದರು. ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಲಿಡಿಯದ ದೊರೆ ಕ್ರೀಸಸ್ ಅಯೋನಿಯವನ್ನು ಸ್ವಾಧೀನಪಡಿಸಿಕೊಂಡ. ಸ್ವಲ್ಪಕಾಲದ ಬಳಿಕ ಪರ್ಷಿಯದ ದೊರೆ ಕೈರಸ್ ಮಹಾಶಯ ಕ್ರೀಸಸ್‌ನನ್ನು ಸೋಲಿಸಿದ ಮೇಲೆ ಅಯೋನಿಯ ಪರ್ಷಿಯದ ಆಡಳಿತಕ್ಕೆ ಒಳಪಟ್ಟಿತು. ಈ ಮಧ್ಯೆ ಅಯೋನಿಯನ್ನರು ಬೆಳೆಸಿಕೊಂಡು ಬಂದಿದ್ದ ಗ್ರೀಕ್ ಸಂಸ್ಕೃತಿ ದೂರದೇಶಗಳಿಗೂ ಹರಡುತ್ತಿತ್ತು. ಪ್ರ.ಶ.ಪೂ. 5ನೆಯ ಶತಮಾನದ ಪ್ರಾರಂಭದಲ್ಲೆ ಅಯೋನಿಯನ್ನರು ದಂಗೆಯೆದ್ದರು. ಅಥೆನ್ಸ್ ಮತ್ತು ಇತರ ಕೆಲವು ಗ್ರೀಕ್ ರಾಜ್ಯಗಳು ಇವರಿಗೆ ಬೆಂಬಲಕೊಟ್ಟವು. ಈ ದಂಗೆಯನ್ನು ಅಡಗಿಸಿದರೂ ಪರ್ಷಿಯದ ದೊರೆ ಡೇರಿಯಸ್ (ಒಂದನೆಯ) ಗ್ರೀಸಿನ ರಾಜ್ಯಗಳ ಮೇಲೆ ಯುದ್ಧ ಹೂಡುವುದು ಅನಿವಾರ್ಯವಾಯಿತು. ಗ್ರೀಸಿಗೂ ಪರ್ಷಿಯಕ್ಕೂ ಯುದ್ಧನಡೆಯುತ್ತಿದ್ದ ಕಾಲದಲ್ಲಿ ಅಯೋನಿಯ ಶಾಂತಿಯನ್ನು ಕಾಣಲಿಲ್ಲ. ಅಲೆಕ್ಸಾಂಡರ್ ಅಯೋನಿಯವನ್ನು ಸುಲಭವಾಗಿ ಸ್ವಾಧೀನಪಡಿಸಿಕೊಂಡ. ಮುಂದೆ ಅದು ಮೊದಲು ಬಿಜ಼ಾಂಟೀಯನ್ ಸಾಮ್ರಾಜ್ಯಕ್ಕೆ, ಅನಂತರ ತುರ್ಕಿ ಚಕ್ರಾಧಿಪತ್ಯಕ್ಕೆ ಸೇರಿತು. ಈ ಕಾಲದಲ್ಲಿ ಜನಜೀವನವೇನೋ ನೆಮ್ಮದಿಯಾಗಿತ್ತು. ಅಯೋನಿಯನ್ನರು ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದರು. ಮುಂದೆ ಇವರ ಪುರೋಭಿವೃದ್ಧಿ ಕುಂಠಿತವಾಯಿತು. (ಎ.ಎಂ.)

**ಅಯೋನಿಯಮ್ :** ಕ್ಯಾನರಿ ದ್ವೀಪಗಳು, ವರ್ಡೆ ಭೂಶಿರ, ಮಡೇರಿಯ ಮತ್ತು ಉತ್ತರ ಆಫ್ರಿಕ ದೇಶಗಳಲ್ಲಿ ಅಧಿಕವಾಗಿ ಕಾಣುವ ಸಸ್ಯಗಳು (ಕ್ರ್ಯಾಸುಲೇಸಿ ಕ್ರ್ಯಾಸ್ಸುಲೇಸೀ ಕುಟುಂಬಕ್ಕೆ ಸೇರಿದೆ). ಕೊಂಬೆಗಳಿರಬಹುದು ಅಥವಾ ಇಲ್ಲದೆ ಬರಿ ಗಟ್ಟಿ ಕಾಂಡವಿರಬಹುದು; ಮೇಲುಭಾಗದಲ್ಲಿ ಗಾಳಿಬೇರುಗಳು; ಎಲೆಗಳು ಕಾಂಡದ ಮೇಲೆ ಪರ್ಯಾಯರೂಪದಲ್ಲಿ ಅಥವಾ ಗುಲಾಬಿ ಹೂವಿನಂತೆ; ಹೂಗೊಂಚಲುಗಳು ಕಾಂಡದ ತುದಿಯಲ್ಲಿ–ಇವು ಮುಖ್ಯ ವೈಶಿಷ್ಟ್ಯಗಳು. ಈ ಜಾತಿಯ ಸಸ್ಯಗಳು ಹವಾಮಾನದ ತೀವ್ರ ಏರಿಳಿತ ಸಹಿಸುವುದಿಲ್ಲ. ತಂಪು ವಾತಾವರಣದಲ್ಲಿ ಸಮೃದ್ಧಿಯಾಗಿ ಬೆಳೆಯಬಹುದು. ಲಿಂಗ (ಬೀಜಗಳಿಂದ) ಮತ್ತು ನಿರ್ಲಿಂಗ (ತುಂಡುಗಳಿಂದ) ಎರಡು ರೀತಿಗಳಿಂದಲೂ ಈ ಸಸ್ಯಗಳನ್ನು ವೃದ್ಧಿಮಾಡಬಹುದು. ಎರಡನೆಯ ರೀತಿಗೆ ಕ್ಷಿಪ್ರವೇಳೆ ಸಾಕು. ಅ.ಅರ್‌ಬೋರಿಯಮ್, ಅ. ಬಾಲ್‌ಸಮಿಫೆರಮ್, ಅ. ಹವೊರ್ತಿ, ಅ. ಲಿಂಡ್‌ಲೆಯಿ ಮತ್ತು ಅ. ಟೆಬ್ಯುಲಿಫೊರ್ಮೆ–ಇವು ಅಯೋನಿಯಮ್ಮಿನ ವಿವಿಧ ಪ್ರಭೇದಗಳು. (ಡಿ.ಎಂ.)

**ಅಯೋವ :** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ಈಗಿನ ಅಯೋವ, ಮಿನಿಸೋಟ ಹಾಗೂ ಡಕೋಟಗಳ ಭಾಗಗಳನ್ನೊಳಗೊಂಡಂತೆ ಅಯೋವರಾಜ್ಯ 1832ರಲ್ಲಿ ರಚಿತವಾಯಿತು. 35 ವರ್ಷಗಳ ಮೊದಲೇ ಸಂಯುಕ್ತಸಂಸ್ಥಾನ ಸ್ವಾಧೀನಪಡಿಸಿಕೊಂಡ ಲ್ಯೂಸಿಯಾನದ ಬೃಹತ್ ಪ್ರದೇಶದ ಒಂದು ಭಾಗವಿದು. ಈ ಪ್ರಾಂತ್ಯದ ಅಯೋವ ಭಾಗವನ್ನು ಒಂದು ರಾಜ್ಯವನ್ನಾಗಿ ಮಾಡಿ ಸಂಯುಕ್ತಸಂಸ್ಥಾನದ ಅಂಗವಾಗಿ 1846ರಲ್ಲಿ ಸೇರಿಸಿಕೊಳ್ಳಲಾಯಿತು. ಈ ಪ್ರಾಂತ್ಯದ ಮಧ್ಯೆ ಡೆಸ್ಮೊಯಿನ್ ನದಿ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. ಪೂರ್ವಗಡಿಯಲ್ಲಿ ಮಿಸಿಸಿಪಿ ನದಿ ಹಾಗೂ ಪಶ್ಚಿಮ ಗಡಿಯಲ್ಲಿ ಮಿಸೌರಿ ನದಿ ಹರಿಯುತ್ತದೆ. ಇವುಗಳಿಗೆ ಹಲವು ಉಪನದಿಗಳು ಹರಿಯುತ್ತವೆ. ಸಂಯುಕ್ತಸಂಸ್ಥಾನದ ವಿಸ್ತಾರವಾಗಿರುವ ಮಧ್ಯಪ್ರದೇಶದ ಕೇಂದ್ರಭಾಗದಲ್ಲಿರುವ ಅಯೋವ ಮಿಸಿಸಿಪಿ ಮತ್ತು ಮಿಸ್ಸೌರಿ ನದಿಗಳ ಸಂಗಮಕ್ಕೆ ಅನತಿದೂರದಲ್ಲಿ 400 ಕಿಮೀಗಳವರೆಗಿನ ಹುಲ್ಲುಗಾವಲಿನ ಪ್ರೈರಿ ಪ್ರದೇಶವನ್ನು ಆವರಿಸಿಕೊಂಡಿದೆ. ಮೈದಾನದ ಮಧ್ಯಭಾಗ ಉತ್ತರಕ್ಕಿರುವುದರಿಂದ, ಈ ಪ್ರದೇಶ ಖಂಡಾಂತರ ವಾಯುಗುಣವನ್ನು ಪಡೆದಿದೆ. ಈ ಪ್ರಾಂತ್ಯ ಸ್ಥಾಪಿತವಾದ ಕೆಲವೇ ವರ್ಷಗಳಲ್ಲಿ ಅಭಿವೃದ್ಧಿಕಾರ್ಯ ಪ್ರಾರಂಭವಾಗಿ, ವಿಸ್ತರಣಾಕಾರ್ಯ ಮುಂದುವರಿದಿದೆ. ವ್ಯವಸಾಯವೇ ಮುಖ್ಯ ಕಸುಬಾಗಿದ್ದು, ರಾಜ್ಯದ ಆರ್ಥಿಕ ಉತ್ಪನ್ನದಲ್ಲಿ 2/3 ಭಾಗ ವ್ಯವಸಾಯದಿಂದಲೇ ಬರುವುದು. ಜೋಳ ಮುಖ್ಯ ಬೆಳೆ. ರಾಷ್ಟ್ರದ ಧಾನ್ಯದಲ್ಲಿ 1/6 ಭಾಗ ಇಲ್ಲಿ ದೊರೆಯುತ್ತದೆ ಕೋಳಿ, ದನಕರುಗಳ ಸಾಕಣೆ ಮುಖ್ಯವಾಗಿದೆ. ಹಾಲಿನ ಹಾಗೂ ಮಾಂಸದ ಉದ್ಯಮ ಬೆಳೆದಿದ್ದು ರಾಷ್ಟ್ರದ 1/4 ಭಾಗ ಹಂದಿಮಾಂಸ ಇಲ್ಲಿ ದೊರಕುತ್ತದೆ. ಅಲ್ಪವಾಗಿ ಕಲ್ಲಿದ್ದಲು, ಜಿಪ್ಸಮ್ ಮತ್ತು ಸುಣ್ಣಕಲ್ಲು ದೊರೆಯುತ್ತವೆ. ಮಾಂಸ ಮತ್ತು ಧಾನ್ಯಗಳಂಥ ಆಹಾರಪದಾರ್ಥಗಳ ಕೈಗಾರಿಕೆಗಳೇ ಹೆಚ್ಚು. ಕೃಷಿ ಯಂತ್ರೋಪಕರಣಗಳು, ವಿಮಾನಭಾಗಗಳ ತಯಾರಿಕೆ, ಅಲ್ಯೂಮಿನಿಯಂ ಉತ್ಪಾದನೆ ಮುಂತಾದವು ಸಹಾಯಕ ಉದ್ಯಮಗಳಾಗಿವೆ. ಒಟ್ಟು ಜನಸಂಖ್ಯೆ 2,926,324 (2000). ವಿಸ್ತೀರ್ಣ. 145,755 ಚ.ಕಿಮೀ. ಶೇ.50ರಷ್ಟು ಜನ ಡೆಮೊಯಿನ್ಸ್, ಸೀಡರ್ ರ್‍ಯಾಪಿಡ್ಸ್, ಡೆವನ್‌ಪೋರ್ಟ್, ಡುಬೂಕ್, ಕೌನ್ಸೆಲ್ ಬ್ಲಫ್ಸ್ ಮತ್ತು ಸೂ ನಗರಗಳಂಥ ಪಟ್ಟಣಗಳಲ್ಲಿ ವಾಸಮಾಡುತ್ತಾರೆ. ರಾಜಧಾನಿ: ಡೆಸ್ಮೋಯಿಸ್ (ಸಿ.ಎಂ.)

**ಅಯ್ಯಂಗಾರ್, ಎಚ್.ವಿ.ಆರ್.:** 1902 –. ರಿಸರ್ವ್‌ಬ್ಯಾಂಕ್ ಆಫ್ ಇಂಡಿಯದ ಮಾಜಿ ಗವರ್ನರ್, ಬ್ರಿಟಿಷ್ ಭಾರತದಲ್ಲೂ ಸ್ವತಂತ್ರ ಭಾರತದಲ್ಲೂ ಉನ್ನತ ಅಧಿಕಾರಗಳಲ್ಲಿದ್ದು ಸೇವೆ ಸಲ್ಲಿಸಿದ ಕನ್ನಡಿಗ. ಹರವು ವರದರಾಜ ಅಯ್ಯಂಗಾರ್ ಇವರ ಪೂರ್ತಿಹೆಸರು. ಇವರು 1902ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ಮೊದಲ ವಿದ್ಯಾಭ್ಯಾಸ ಮೈಸೂರಿನಲ್ಲೆ ನಡೆಯಿತು. ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ವಿಜ್ಞಾನ ಪದವಿ ಗಳಿಸಿದರು. ಅನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದು, ಭಾರತೀಯ ಪ್ರಶಾಸನ ಸೇವಾ (ಸಿವಿಲ್ ಸರ್ವಿಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ

(1924) ಭಾರತ ಸರ್ಕಾರದ ಸೇವೆಯನ್ನು ಪ್ರವೇಶಿಸಿದರು. ಇವರ ಉದ್ಯೋಗದ ಮೊದಮೊದಲ ವರ್ಷಗಳಲ್ಲಿ ಇವರು ಅನೇಕ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದರಿಂದ ಭಾರತದ ಜನಜೀವನದ ಪರಿಚಯ ಇವರಿಗೆ ಆಯಿತು. ಅಯ್ಯಂಗಾರರು ಮುಂಬಯಿಯ ಸಚಿವಾಲಯವನ್ನು (ಸೆಕ್ರೆಟೇರಿಯಟ್) 1931ರಲ್ಲಿ ಪ್ರವೇಶಿಸಿ, ಹಣಕಾಸು ಇಲಾಖೆಯ ಉಪಕಾರ್ಯದರ್ಶಿಯಾದರು. ಅನಂತರ ಇವರಿಗೆ ಕಾರ್ಯದರ್ಶಿಯ ಹುದ್ದೆಗೆ ಬಡ್ತಿ ಸಿಕ್ಕಿತು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯ ಸಮಯದಲ್ಲಿ ಇವರು ಮುಂಬಯಿ ಪ್ರಾಂತ್ಯದ ಗೃಹ ಕಾರ್ಯದರ್ಶಿಯಾಗಿ ಆಗಿನ ಸೂಕ್ಷ್ಮಪರಿಸ್ಥಿತಿಯನ್ನು ಕೌಶಲದಿಂದ ನಿರ್ವಹಿಸಿದರು. ಇವರು ನವದೆಹಲಿಗೆ ವರ್ಗವಾದದ್ದು 1944ರಲ್ಲಿ. ಯೋಜನೆ ಮತ್ತು ಅಭಿವೃದ್ಧಿ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ನೇಮಕಗೊಂಡ ಇವರು ದೇಶದ ಅಭಿವೃದ್ಧಿ ಯೋಜನಾ ಕಾರ್ಯಕ್ಕೆ ಭದ್ರವಾದ ಅಸ್ತಿಭಾರ ನಿರ್ಮಿಸಲು ನೆರವಾದರು. ಅನಂತರ ಇವರು ಭಾರತ ಸಂವಿಧಾನ ಸಭೆಯ ಕಾರ್ಯದರ್ಶಿಯಾಗಿಯೂ ಪ್ರಧಾನಿಯ ಪ್ರಮುಖ ಆಪ್ತಕಾರ್ಯದರ್ಶಿಯಾಗಿಯೂ ಗೃಹ ಕಾರ್ಯದರ್ಶಿಯಾಗಿಯೂ (1948) ಕೆಲಸ ಮಾಡಿ ಭಾರತದ ಆಡಳಿತ ಹಾಗೂ ಆರ್ಥಿಕ ವಿಚಾರಗಳಲ್ಲಿ ಬಹುಮುಖವಾದ ಅನುಭವ ಗಳಿಸಿದರಲ್ಲದೆ, ಸ್ವತಂತ್ರ ಭಾರತದ ಆರಂಭದ ವರ್ಷಗಳಲ್ಲಿ ದೇಶದ ಭವಿಷ್ಯವನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದರು. 1952ರಲ್ಲಿ ಇವರು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಕಾರ್ಯದರ್ಶಿಯಾದರು.

1956ರಲ್ಲಿ ಭಾರತದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಒಂದು ಮಹತ್ತ್ವದ ಬದಲಾವಣೆಯಾಯಿತು. ಭಾರತದ ಅತ್ಯಂತ ದೊಡ್ಡ ವಾಣಿಜ್ಯ ಬ್ಯಾಂಕ್ ಆಗಿದ್ದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯವಾಗಿ (ಭಾರತೀಯ ಸ್ಟೇಟ್ ಬ್ಯಾಂಕ್) ಪರಿವರ್ತಿಸಲಾಯಿತು. ಸರ್ಕಾರಿ ವಲಯದ ದೊಡ್ಡ ವಾಣಿಜ್ಯ ಬ್ಯಾಂಕ್ ಆಗಿ, ಹಲವು ರಾಜ್ಯ ಬ್ಯಾಂಕುಗಳನ್ನು ಅಂಗ ಸಂಸ್ಥೆಗಳಾಗಿ ಒಳಗೊಂಡು ಭಾರತದ ಆರ್ಥಿಕತೆಯಲ್ಲಿ ಮಹತ್ತ್ವದ ಪಾತ್ರ ವಹಿಸುವ ಕರ್ತವ್ಯವನ್ನು ನಿರ್ವಹಿಸಲು ರೂಪಿತವಾದ ಈ ಬ್ಯಾಂಕಿನ ಆರಂಭದ ವರ್ಷದಲ್ಲಿ ಅಯ್ಯಂಗಾರರು ಇದರ ಅಧ್ಯಕ್ಷರಾಗಿ ಬ್ಯಾಂಕಿಗೆ ಒಂದು ಒಳ್ಳೆಯ ಪರಂಪರೆಯನ್ನು ನಿರ್ಮಿಸಿದರು. ಮರುವರ್ಷ (1957) ಇವರು ರಾಷ್ಟ್ರದ ಕೇಂದ್ರೀಯ ಬ್ಯಾಂಕೂ ಬ್ಯಾಂಕುಗಳ ಬ್ಯಾಂಕೂ ಆದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯದ (ಭಾರತೀಯ ರಿಸರ್ವ್ ಬ್ಯಾಂಕ್) ಗವರ್ನರ್ ಆಗಿ, ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದುವವರೆಗೂ (1962) ಆ ಹುದ್ದೆಯಲ್ಲಿದ್ದು, ದೇಶದ ಎರಡನೆಯ ಪಂಚವಾರ್ಷಿಕ ಯೋಜನೆಯ ಕಷ್ಟದ ದಿನಗಳಲ್ಲಿ ದೇಶದ ಆರ್ಥಿಕ ಹಾಗೂ ಹಣ ನೀತಿ ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಇವರ ಬಹುಮುಖ ಸೇವೆಯನ್ನು ಗಮನಿಸಿ ಭಾರತ ಸರ್ಕಾರ ಇವರಿಗೆ 'ಪದ್ಮವಿಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಿತು (1962). ನಿವೃತ್ತಿಯ ಅನಂತರವೂ ಇವರು ತಮ್ಮ ಕಾರ್ಯಶೀಲ ಜೀವನವನ್ನು ಮುಂದುವರಿಸಿದರು. ಇವರು ಅನೇಕ ಕಂಪನಿಗಳ ಮತ್ತು ಮದರಾಸಿನ ಭಾರತೀಯ ತಂತ್ರಶಾಸ್ತ್ರ ಸಂಸ್ಥೆಯ ಉಸ್ತುವಾರಿ

ಮಂಡಳಿಯ (ಗವರ್ನಿಂಗ್ ಬೋರ್ಡ್) ಅಧ್ಯಕ್ಷರಾಗಿಯೂ ಅನ್ವಯ ಅರ್ಥಶಾಸ್ತ್ರ ಸಂಶೋಧನೆಯ ರಾಷ್ಟ್ರೀಯ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ಮದರಾಸಿನ ಪ್ರಮುಖ ಉದ್ಯಮ ಸಂಸ್ಥೆಯೊಂದರಲ್ಲಿ ಹುದ್ದೆ ಪಡೆದ ಅಯ್ಯಂಗಾರರು ಮದರಾಸಿನಲ್ಲಿ ನೆಲಸಿದರು. (ಎಚ್.ಎಸ್.ಕೆ.)

**ಅಯ್ಯನಾರ್ :** ಶಾತ್ತಾ ಎಂದು ನಾಮಾಂತರ. ದಾರುಕಾ ವನದ ಋಷಿಗಳ ಅಹಂಕಾರವನ್ನಡಗಿಸುವುದಕ್ಕಾಗಿ ಹರಿಹರರು ಅಲ್ಲಿಗೆ ಬಂದಾಗ ಮೋಹಿನಿ ರೂಪವನ್ನು ತಳೆದ ವಿಷ್ಣುವನ್ನು ಮೋಹಿಸಿದ ಈಶ್ವರನಿಂದ ಮೋಹಿನಿಯಲ್ಲಿ ಹುಟ್ಟಿದವ. ಗ್ರಾಮಸಂರಕ್ಷಣೆಗಾಗಿ ಗ್ರಾಮದ ಉತ್ತರ ದಿಕ್ಕಿನಲ್ಲಿ ದೇವಾಲಯದಲ್ಲಿ ಪ್ರತಿಷ್ಠಿತ. ತಮಿಳುನಾಡಿನ ಪುರುಷದೇವತೆಗಳಲ್ಲಿ ಪ್ರಸಿದ್ಧ. ಮಳೆಗೋಸ್ಕರ ಈತನ ಪೂಜೆ ಮತ್ತು ಉಪಾಸನೆ ಮಾಡುವುದುಂಟು.

**ಅಯ್ಯವೊಳೆ ಐನೂರ್ವರು:** ಮಧ್ಯಕಾಲೀನ ಕರ್ನಾಟಕದಲ್ಲಿ ಅತ್ಯಂತ ಪ್ರಭಾವಿಯಾಗಿದ್ದ ವಾಣಿಜ್ಯಸಂಘ. ಇದು ಮೊದಲು ಅಯ್ಯಾವೊಳೆಯಲ್ಲಿ (ಈಗಿನ ಐಹೊಳೆ) ಬಾದಾಮಿ ಚಳುಕ್ಕರ ಆಡಳಿತ ಕಾಲದಲ್ಲಿ ಸ್ಥಾಪನೆಯಾಗಿರಬೇಕೆಂದು ಊಹಿಸಲಾಗಿದೆ. ಕಲ್ಯಾಣ, ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಕಾಲದ ಅನೇಕ ಶಾಸನಗಳಲ್ಲಿ ಅಯ್ಯಾವೊಳೆ ಐನೂರ್ವರ ಸಂಘಕ್ಕೆ ಸಂಬಂಧಿಸಿದ ಮಾಹಿತಿ ದೊರೆಯುತ್ತದೆ. ಈ ಸಂಘವನ್ನು ನಾನಾದೇಶಿ ಎಂದೂ ಸಂಬೋಧಿಸಲಾಗಿದೆ. ಕನ್ನಡನಾಡಿನ ಪ್ರಸಿದ್ಧ ವಣಿಕರ ಜೊತೆಗೆ ತಮಿಳುನಾಡು ಮತ್ತು ಕೇರಳದ ವರ್ತಕರೂ ಈ ಸಂಘದ ಸದಸ್ಯತ್ವ ಹೊಂದಿದ್ದರು. ಎಂಟನಾಡ ಪದಿನರ್ವರು, ಗವರೆಗಳು, ಗಾತ್ರಿಗಳು, ಸೆಟ್ಟಿಯರು ಸೆಟ್ಟಿಗುತ್ತರು, ಅಂಕಕಾರರು, ಬೀರರು, ಬೀರವಣಿಗರು, ಗಂದಿಗರು, ಗಾವುಂಡರು ಇವರೆಲ್ಲಾ ಈ ಸಂಘದ ಸದಸ್ಯರಾಗಿದ್ದರು. 1150ರ ಬಳ್ಳಿಗಾಮೆಯ ಶಾಸನ ವೊಂದರಲ್ಲಿ ಅಯ್ಯಾವೊಳೆ ಐನೂರ್ವರು ಸಂಘದ ಸದಸ್ಯರು ವೀರಬಣಂಜು ಧರ್ಮ ಪ್ರತಿಪಾಳರು ಭಗವತೀಲಬ್ಧವರ ಪ್ರಸಾದರು, ಬ್ರಹ್ಮ ವಿಷ್ಣು ಮಹೇಶ್ವರಪಾದಾರಾಧಕರು ಎಂಬುದಾಗಿ ಕರೆದುಕೊಂಡಿದ್ದಾರೆ. ಇವರು ಹಸುಂಬೆಯಲ್ಲಿ ಅಮೂಲ್ಯ ವಸ್ತುಗಳನ್ನು ತುಂಬಿಕೊಂಡು ಚೇರ ಚೋಳ ಮಲಯ ಮಗಧ ಕೌಶಲ ಸೌರಾಷ್ಟ್ರ ಕಾಂಭೋಜ ಗೌಳ ಲಾಳ ಪಾರಸ ನೇಪಾಳ ಎಂಬ ನಾನಾದೇಶಗಳಲ್ಲಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖ ಸಂವಾಹನವೆಂಬ ದಿಗುದಂತಿ ಪಟ್ಟಣಗಳನ್ನು ಸಂಚರಿಸಿ ಸರಕುಗಳನ್ನು ಕೊಳ್ಳುವ ಮತ್ತು ಮಾರುವ ಕಾರ್ಯದಲ್ಲಿ ತೊಡಗಿದ್ದರು. ಪಾದಮಾರ್ಗ ಜಲಮಾರ್ಗವಾಗಿ ಷಟ್ಖಂಡ ಮಂಡಲಗಳಿಗೆ ಹೋಗಿಬರುತ್ತಿದ್ದರು. ಅಂತರ್ದೇಶೀಯ ಸಾಗಾಣಿಕೆಗೆ ಕುದುರೆ, ಎತ್ತು, ಕತ್ತೆ, ಕೋಣ, ಒಂಟೆ, ಆನೆಗಳನ್ನು ಉಪಯೋಗಿಸುತ್ತಿದ್ದರು. ದ್ವೀಪಾಂತರಗಳಿಗೆ ಹಡಗುಗಳ ಮುಖಾಂತರ ಹೋಗಿಬರುತ್ತಿದ್ದರು. ಈ ವರ್ತಕರು ಬಟ್ಟೆ, ಬತ್ತ, ಹತ್ತಿ, ಸಕ್ಕರೆ, ಗೋದಿ, ಅಡಕೆ, ಸಾಸುವೆ, ಜೀರಿಗೆ, ಮೆಣಸು, ಅರಿಶಿನ, ಇಂದ್ರನೀಲ, ಚಂದ್ರಕಾಂತ ಮತ್ತು ಮಾಣಿಕ್ಯ ವಜ್ರ ವೈಡೂರ್ಯ ಗೋಮೇಧಿಕ ಪುಷ್ಯರಾಗ ಪದ್ಮರಾಳ ಪವಳ ಮರಕತ ಕರ್ಕೇತನ ಚಂದನ ಕಸ್ತೂರಿ ಕುಂಕುಮ ಮೊದಲಾದ ವಸ್ತುಗಳನ್ನು ಅವು ದೊರೆಯುವ ಪ್ರದೇಶಗಳಲ್ಲಿ ಕೊಂಡು ಬೇಡಿಕೆಯಿದ್ದ ಪ್ರದೇಶಗಳಿಗೆ ಸಾಗಿಸಿ ಮಾರುತ್ತಿದ್ದರು. ಕನ್ನಡನಾಡಿನ ಅನೇಕ ಪಟ್ಟಣಗಳಲ್ಲಿ ಈ ಸಂಘದ ವರ್ತಕರು ದೇವಾಲಯಗಳು, ಅನ್ನಸತ್ರಗಳು ಮತ್ತು ಕೆರೆಗಳನ್ನು ಕಟ್ಟಿಸಿರುವರಲ್ಲದೆ, ದೇವಾಲಯಗಳಿಗೂ ಮಠಗಳಿಗೂ ಉದಾರವಾಗಿ ದಾನದತ್ತಿಗಳನ್ನು ನೀಡಿರುವರು. ಮುಖ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ಬಡಬಗ್ಗರಿಗೂ ಯಾತ್ರಾರ್ಥಿಗಳಿಗೂ ಉಚಿತ ಅನ್ನಸತ್ರಗಳು ಹಾಗೂ ರೋಗಿಗಳ ಶುಶ್ರೂಷೆಗೆ ಔಷಧಾಲಯಗಳನ್ನು ತೆರೆಯಲು ಉದಾರ ಕಾಣಿಕೆ ನೀಡಿರುವರು. ಅಯ್ಯಾವೊಳೆ ಐನೂರ್ವರ ಸದಸ್ಯರು ಪ್ರಾಮಾಣಿಕತೆ ಉದಾರನೀತಿ ಕಾರ್ಯತತ್ಪರತೆಗೆ ಪ್ರಸಿದ್ಧರಾಗಿದ್ದರು. ಈ ಸಂಘದ ಹಲವು ದೊಡ್ಡ ವ್ಯವಹಾರಿಗಳು ಆಗಿನ ಕಾಲದ ಪ್ರಭುಗಳ ಮನ್ನಣೆಗೂ ಪಾತ್ರರಾಗಿದ್ದರು. ಈ ಸಂಘವು ಸಾಕಷ್ಟುಕಾಲ ಅಸ್ತಿತ್ವದಲ್ಲಿದ್ದು ಯಲಹಂಕ ಪ್ರಭುಗಳ ಕಾಲಕ್ಕೆ ಸೇರಿದ ಬೆಂಗಳೂರಿನ ಶಾಸನವೊಂದರಲ್ಲಿ ಅದರ ಉಲ್ಲೇಖವಿದೆ. (ಜಿ.ಆರ್.ಆರ್.)

**ಅಯ್ಯರ್, ಕೆ.ವಿ. :** 1898 –1980. ಪ್ರಸಿದ್ಧ ಕಾದಂಬರಿಕಾರ, ವ್ಯಾಯಾಮ ಪಟು, ವ್ಯಾಯಾಮ ಶಿಕ್ಷಕ, ಲೇಖಕ. ಪೂರ್ತಿ ಹೆಸರು ಕೋಲಾರ ವೆಂಕಟೇಶ ಅಯ್ಯರ್. ಕೋಲಾರ ಜಿಲ್ಲೆಯ ದೇವರಾಯನ ಸಮುದ್ರದಲ್ಲಿ 1898ರಲ್ಲಿ ಜನಿಸಿದರು. ತಂದೆ ರಾಮಸ್ವಾಮಯ್ಯ. ಬಡತನದಿಂದಾಗಿ ಅಯ್ಯರ್ ಎಸ್.ಎಸ್.ಎಲ್.ಸಿ.ಯಿಂದ ಮುಂದೆ ವಿದ್ಯಾಭ್ಯಾಸ ಮುಂದು ವರಿಸಲು ಸಾಧ್ಯವಾಗಲಿಲ್ಲ. ಅಂಗ ಸಾಧನೆಯಲ್ಲಿ ಆಸಕ್ತಿವಹಿಸಿ, ವಿಶ್ವಖ್ಯಾತಿ ಗಳಿಸಿ, ಸ್ವಂತ ವ್ಯಾಯಾಮ ಶಾಲೆಯನ್ನು ಬೆಂಗಳೂರಿನಲ್ಲಿ ತೆರೆದು ಅನೇಕ ಅಂಗಸಾಧಕರನ್ನು ತಯಾರು ಮಾಡಿದರು. ವಿಶ್ವದ ಮಹಾನ್ ಅಂಗಸಾಧಕ ಸ್ಯಾಂಡೋಬಿನಂತೆ ತಾವೂ ಆಗಬೇಕೆಂಬುದು ಇವರ ಬಯಕೆಯಾಗಿತ್ತು. ಇವರಿಗೆ ನಾಟಕದಲ್ಲಿ ವಿಶೇಷ ಅಭಿರುಚಿಯಿತ್ತು. ಇದರಿಂದಾಗಿ ಟಿ.ಪಿ. ಕೈಲಾಸಂ ಅವರು ಪರಿಚಿತರಾದರು. ಕೈಲಾಸಂ ಕೆಲಕಾಲ ಅಯ್ಯರ್ ಮನೆಯಲ್ಲೇ ಇರುತ್ತಿದ್ದರು. ಇವರ ಸ್ನೇಹ ಗಾಢವಾಯಿತು. ಅಂಗಸಾಧನೆಯಲ್ಲಿ ಅಯ್ಯರ್ ಅವರಿಗಿದ್ದ ಆಸಕ್ತಿಯನ್ನು ಗಮನಿಸಿದ ಕೈಲಾಸಂ ಬರೀ ದೇಹವನ್ನು ಮಾಂಸಖಂಡವನ್ನು ಗಟ್ಟಿಗೊಳಿಸುವುದರಿಂದ ಪ್ರಯೋಜನವಿಲ್ಲ 'ಬುದ್ಧಿಯನ್ನು, ಮಿದುಳನ್ನು ಗಟ್ಟಿಗೊಳಿಸಬೇಕು' ಎಂದು ಹೇಳಿದ ಮಾತನ್ನು ಇವರು ಸವಾಲಾಗಿ ಸ್ವೀಕರಿಸಿ ಓದು ಬರೆಹಗಳಲ್ಲಿ ಹೆಚ್ಚು ಆಸಕ್ತಿವಹಿಸತೊಡಗಿದರು. ದಯ್ಯದ ಮನೆ ಅಥವಾ ಆಷಾಢ ಬಹುಳ ಅಮಾವಾಸ್ಯೆ (1949) ಎಂಬ ಕಥಾರೂಪವನ್ನು ಬರೆದರು. ಇದರಿಂದ ತೃಪ್ತರಾಗದೆ ಜಿ.ಪಿ.ರಾಜರತ್ನಂ ಅವರಿಂದ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಪಡೆಯತೊಡಗಿದರು. ರೀಡರ್ಸ್ ಡೈಜೆಸ್ಟ್ ಮಾಸಿಕದಲ್ಲಿ ಪ್ರಕಟವಾದ ಪ್ರಖ್ಯಾತ ಕಲಾವಿದ ಮೈಕೇಲ್ ಏಂಜಲೋವಿನ ಕುರಿತಾದ ಕಲ್ಪಿತ ಕಥೆಯೊಂದನ್ನು ಆಧರಿಸಿ ಕಾದಂಬರಿಯೊಂದನ್ನು ಬರೆಯುವ ಯೋಚನೆಯನ್ನು ರಾಜರತ್ನಂ ಅವರ ಮುಂದೆ ಇಟ್ಟರು. ರಾಜರತ್ನಂ ಅವರು ಅಯ್ಯರ್ ಅವರ ಅಸ್ಪಷ್ಟ ಯೋಚನೆಗಳಿಗೆ ಖಚಿತ ರೂಪ ನೀಡಿದರು. ರೂಪದರ್ಶಿ (1952) ಕಾದಂಬರಿ ಅಯ್ಯರ್ ಅವರಿಗೆ ಖ್ಯಾತಿಯನ್ನು ತಂದುಕೊಟ್ಟಿತು.



ಕ್ರಮೇಣ ಅಯ್ಯರ್ ಅವರ ಬರೆಹಕ್ಕೆ ಒಂದು ಸ್ಪಷ್ಟರೂಪ ದೊರಕಿತು. ಅನಂತರ ಹೊಯ್ಸಳ ರಾಜವಂಶದ ಮಹಾರಾಣಿ ನಾಟ್ಯರಾಣಿ ಶಾಂತಲೆಯನ್ನು ಕುರಿತ ಚಾರಿತ್ರಿಕ ವಸ್ತುವುಳ್ಳ ಶಾಂತಲಾ ಎಂಬ ಹೃದಯಸ್ಪರ್ಶಿ ಕಾದಂಬರಿಯನ್ನು ಬರೆದರು (1954). ಪತಿ–ಪತ್ನಿ, ತಂದೆ–ಮಗಳು, ಅಣ್ಣ–ತಂಗಿ, ರಾಜ–ರಾಣಿ ಹಾಗೂ ಪ್ರಜೆಗಳ ಸಂಬಂಧವನ್ನು ಮನಮುಟ್ಟುವಂತೆ ಚಿತ್ರಿಸುವ ಈ ಕಾದಂಬರಿ ಅಯ್ಯರ್ ಅವರಿಗೆ ಅಪಾರ ಖ್ಯಾತಿಯನ್ನೂ ಯಶಸ್ಸನ್ನೂ ತಂದುಕೊಟ್ಟಿತು. ಈ ಎರಡೂ ಕಾದಂಬರಿಗಳು ಅನೇಕ ಮುದ್ರಣಗಳನ್ನು ಕಂಡಿವೆಯಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳೂ ಆಗಿದ್ದವು.

ಬಾನುಲಿಗಾಗಿ ಅನೇಕ ಪಸಾರ ನಾಟಕಗಳನ್ನು ಬರೆದ ಅಯ್ಯರ್ ಅವರು ಸ್ನೇಹಿತ ಕೈಲಾಸಂ ಕುರಿತು ಕೈಲಾಸಂರವರ ಸ್ಮರಣೆ ಎಂಬ ಆತ್ಮೀಯ ಒಡನಾಟದ ಚಿತ್ರಣವನ್ನು ನೀಡಿದ್ದಾರೆ (1973). ಲೀನಾ ಎಂಬುದು ರೂಪದರ್ಶಿ ಕಾದಂಬರಿಯ ಎರಡನೆಯ (ಮುಂದವರೆದ) ಭಾಗ (1971). ಸಮುದತಾ (1968) ಇವರ ಮತ್ತೊಂದು ಕೃತಿ. ಇತರ ಸ್ನೇಹಿತರೊಂದಿಗೆ ಸೇರಿ ಹೊಸಕ್ಷಿತಿಜ (1965) ಎಂಬ ಸಂದರ್ಶನ ಪ್ರಬಂಧಗಳ ಸ್ವರೂಪವುಳ್ಳ ಕೃತಿಯನ್ನು ಇವರು ಹೊರತಂದಿದ್ದಾರೆ. ತಮ್ಮ ಆಸಕ್ತಿಯ ಕ್ಷೇತ್ರವಾದ ಅಂಗಸಾಧನೆ ಕುರಿತು ಇಂಗ್ಲಿಷಿನಲ್ಲಿ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ನಾಟಕ ಕ್ಷೇತ್ರವೂ ಇವರಿಗೆ ಪ್ರಿಯವಾಗಿತ್ತು. ರವಿ ಕಲಾವಿದರು ಎಂಬ ನಾಟಕ ಸಂಘವೊಂದನ್ನು ಕಟ್ಟಿ ಇವರು ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಅಯ್ಯರ್ ಅವರ ಸಾಹಿತ್ಯ ಸೃಷ್ಟಿ ಸಂಖ್ಯೆಯ ದೃಷ್ಟಿಯಿಂದ ದೊಡ್ಡದಲ್ಲ. ಆದರೆ ಗುಣದಲ್ಲಿ ಹಿರಿಮೆಯುಳ್ಳದ್ದು. ಇವರ ಸಾಹಿತ್ಯಕ ಕೊಡುಗೆಯನ್ನು ಗಮನಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಯನ್ನು ನೀಡಿದೆ (1979). ಇವರು 1980ರಲ್ಲಿ ನಿಧನಹೊಂದಿದರು. *

**ಅಯ್ಯರ್, ಜಿ.ವಿ.:** 1917 –2003 ಕನ್ನಡ ಚಲನಚಿತ್ರ ನಟ, ನಿರ್ದೇಶಕ ಹಾಗೂ ಸಾಹಿತಿ. ಗಣಪತಿ ವೆಂಕಟರಮಣ ಅಯ್ಯರ್ ಇವರ ಪೂರ್ತಿ ಹೆಸರು. ಇವರು ಮೂಲತಃ ಮೈಸೂರು ಜಿಲ್ಲೆ ನಂಜನಗೂಡಿನವರು. ಕಡುಬಡತನದಲ್ಲೇ ಬಾಲ್ಯ ಕಳೆದ ಇವರು ಮೂಕಿ ಚಿತ್ರಗಳಿಂದ ಆಕರ್ಷಿತರಾದರು. ತಮ್ಮ 10ನೆಯ ವಯಸ್ಸಿನಲ್ಲಿ ಗುಬ್ಬಿ ಕಂಪನಿ ಸೇರಿದರು. ಚಲನಚಿತ್ರ ನಟನಾಗಬೇಕೆಂಬ ಹಂಬಲದಿಂದ ಪುಣೆಗೆ ತೆರಳಿ ಪ್ರಭಾತ್ ಸ್ಟುಡಿಯೋ ಬಾಗಿಲು ತಟ್ಟಿದರು. ಆದರೆ ನಿರಾಶರಾಗಿ ಹಿಂದಿರುಗಿದರು. 15ನೆಯ ವಯಸ್ಸಿನಲ್ಲಿ ಪುನಃ ಬಾಲಕೃಷ್ಣರ ಜೊತೆ ಗುಬ್ಬಿ ಕಂಪನಿ ಸೇರಿದರು. ಈ ಅವಧಿಯಲ್ಲಿ ಹೆಸರಾಂತ ನಾಟಕಕಾರ ಟಿ.ಪಿ.ಕೈಲಾಸಂ ಅವರಿಂದ ಸ್ಫೂರ್ತಿ ಪಡೆದರು. ಅನಂತರ ರಂಗಭೂಮಿಯ ಗಂಭೀರ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಇವರು ರಾಧಾರಮಣ ಚಿತ್ರದ ಮೂಲಕ ತಮ್ಮ ನಟನಾ ವೃತ್ತಿಯನ್ನು ಆರಂಭಿಸಿದರು (1943). ಮೊದಲ ಹಂತದಲ್ಲಿ ಹಾಸ್ಯ ನಟರಾಗಿ ಕಾಣಿಸಿ ಕೊಂಡರು. ಬೇಡರ ಕಣ್ಣಪ್ಪ(1954) ಚಿತ್ರ ಇವರ ಜನಪ್ರಿಯತೆಯನ್ನು ಹೆಚ್ಚಿಸಿತು. ವಿಕ್ರಮ್ ಪ್ರೊಡಕ್ಷನ್‌ರವರ ದಶಾವತಾರ ಚಿತ್ರವನ್ನು ನಿರ್ದೇಶಿಸಿದರು. 1960ರ ದಶಕದಲ್ಲಿ ಕನ್ನಡ ಚಲನಚಿತ್ರಗಳ ತಯಾರಿಕೆ ಇಳಿಮುಖ ವಾಗಲಾರಂಭಿಸಿದಾಗ ರಾಜ್ ಕುಮಾರ್, ನರಸಿಂಹರಾಜು ಮತ್ತು ಟಿ.ಎನ್. ಬಾಲಕೃಷ್ಣರವರ ಜೊತೆಗೂಡಿ ಕನ್ನಡ ಕಲಾವಿದರ ವೇದಿಕೆ ರಚಿಸಿಕೊಂಡರು.

ಕನ್ನಡಿಗರನ್ನು ಸಂಘಟಿಸುವುದು ಹಾಗೂ ಚಲನಚಿತ್ರದ ಬಗ್ಗೆ ಆಸಕ್ತಿ ಮೂಡಿಸುವುದು ಈ ವೇದಿಕೆಯ ಉದ್ದೇಶವಾಗಿತ್ತು. ಈ ಕಲಾವಿದರೆಲ್ಲಾ ಸೇರಿಕೊಂಡು ಕನ್ನಡದ 100ನೆಯ ವಾಕ್ ಚಿತ್ರವಾಗಿ ರಣಧೀರ ಕಂಠೀರವ ಎಂಬ ಐತಿಹಾಸಿಕ ಚಿತ್ರ ನಿರ್ಮಿಸಿದರು (1960). ಈ ಚಿತ್ರ ಜಯಭೇರಿ ಬಾರಿಸಿತು. ಅನಂತರ ಅಯ್ಯರ್ ಅವರು ಚಿತ್ರಕಥೆ, ಸಂಭಾ ಷಣೆ ಮತ್ತು ಗೀತೆಗಳನ್ನು ರಚಿಸುವ ಮೂಲಕ ತಮ್ಮ ಪರ್‌ತಿಭೆಯನ್ನು ಮೆರೆದರು. ಕಿತ್ತೂರು ಚನ್ನಮ್ಮ ಇವರು ಸಂಭಾಷಣೆ ರಚಿಸಿದ ಹೆಸರಾಂತ ಚಿತ್ರಗಳಲ್ಲೊಂದು. ಬಿ.ವಿ.ಕಾರಂತ ಮತ್ತು ಗಿರೀಶ್ ಕಾರ್ನಾಡ್ ಅವರ ನಿರ್ದೇಶನದಲ್ಲಿ ವಂಶವೃಕ್ಷ ಚಿತ್ರ ತಯಾರಿಸಿದರು (1972). ಇದು ಅಯ್ಯರ್ ಅವರ ವೃತ್ತಿ ಜೀವನ ಕ್ಕೊಂದು ತಿರುವು ನೀಡಿತು. ಇವರು ನಿರ್ದೇಶಿಸಿದ ಹಂಸಗೀತೆ (1975) ಇವರ ನಿರ್ದೇಶನ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ಅಯ್ಯರ್ ಅವರದು ಸದಾ ಪ್ರಯೋಗಶೀಲ ಮನಸ್ಸು. ಚಿತ್ರರಂಗದಲ್ಲಿ ಹಲವು ಸಾಹಸ ಕಾರ್ಯಗಳನ್ನು ಇವರು ಕೈಗೊಂಡರು. ಸಂಸ್ಕೃತ ಭಾಷೆಯಲ್ಲೂ ಚಿತ್ರ ನಿರ್ಮಾಣಕ್ಕೆ ತೊಡಗಿದ ಇವರು ಆದಿ ಶಂಕರಾಚಾರ್ಯ ಎಂಬ ಪ್ರಥಮ ಸಂಸ್ಕೃತ ಚಿತ್ರವನ್ನು ನಿರ್ದೇಶಿಸಿದರು. ಈ ಚಿತ್ರ ಅತ್ಯುತ್ತಮ ಚಿತ್ರವೆಂದು ಸ್ವರ್ಣ ಕಮಲ ಪ್ರಶಸ್ತಿ ಗಳಿಸಿತು (1983). ಅನಂತರ ಮಧ್ವಾಚಾರ್ಯ, ಭಗವದ್ಗೀತೆ, ಸ್ವಾಮಿ ವಿವೇಕಾನಂದ ಮೊದಲಾದ ಚಿತ್ರಗಳನ್ನು ನಿರ್ಮಿಸಿ ಪ್ರಯೋಗಶೀಲ ನಿರ್ದೇಶಕರೆನಿಸಿಕೊಂಡರು. ಸಾಹಿತ್ಯ, ಮತ್ತು ತತ್ತ್ವಜ್ಞಾನ ಇವರ ಇತರ ಪ್ರಿಯ ಆಸಕ್ತಿಯ ವಿಷಯಗಳು. ಇವರು ಉತ್ತಮ ವಾಗ್ಮಿಗಳೂ ಚಿಂತಕರೂ ಆಗಿದ್ದರು. ಕನ್ನಡ ಚಿತ್ರರಂಗದ ಆಚಾರ್ಯರೆಂದೇ ಹೆಸರಾದ ಅಯ್ಯರ್ 2003 ಡಿಸೆಂಬರ್ 21ರಂದು ಮುಂಬಯಿಯಲ್ಲಿ ನಿಧನರಾದರು. (ಜಿ.ಎಂ.ಯು.)



**ಅಯ್ಯಶಾಸ್ತ್ರೀ, ಸೋಸಲೆ :** 1854–1934. ಕನ್ನಡ ಸಾಹಿತ್ಯ ಆಧುನಿಕ ಯುಗವನ್ನು ಪ್ರವೇಶಮಾಡುತ್ತಿದ್ದ ಸಂಧಿಕಾಲದಲ್ಲಿ ಸಾಂಪ್ರದಾಯಿಕ ಮಾರ್ಗದಲ್ಲಿ ಕಾವ್ಯರಚನೆ ಮಾಡಿದ ಹೆಸರಾಂತ ಕವಿಗಳಲ್ಲಿ ಒಬ್ಬರು. ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳು, ಅಳಿಯ ಲಿಂಗರಾಜ ಅರಸುರವರು, ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ) ಇವರ ಸಮಕಾಲೀನರು. ಆಗತಾನೇ ರೂಪುಗೊಳ್ಳುತ್ತಿದ್ದ ಕನ್ನಡ ರಂಗಭೂಮಿಗೂ ಕನ್ನಡ ನಾಟಕ ಸಾಹಿತ್ಯಕ್ಕೂ ಸೇವೆ ಸಲ್ಲಿಸಿದವರಲ್ಲಿ ಮೊದಲಿಗರು.



ಇವರು 1854 ಮಾರ್ಚ್ 20 ರಂದು ಮೈಸೂರು ಜಿಲ್ಲೆಯ ತಿರುಮ ಕೂಡಲು ನರಸೀಪುರ ತಾಲ್ಲೂಕು ಸೋಸಲೆಯಲ್ಲಿ ಜನಿಸಿದರು. ಗರಳ ಪುರಿ ಶಾಸ್ತ್ರಿಗಳು ಇವರ ತಂದೆ. ಗರಳ ಪುರಿಯವರು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಮಹಾ ವಿದ್ವಾಂಸರಾಗಿಯೂ ಚಾಮರಾಜ ಒಡೆಯರ ಸಂಸ್ಕೃತೋಪಾಧ್ಯಾಯ ರಾಗಿಯೂ ಇದ್ದರು; ಸಂಸ್ಕೃತ ದಲ್ಲಿ ಗ್ರಂಥರಚನೆ ಮಾಡಿದ್ದರು. ಹೀಗೆ ಅಯ್ಯಶಾಸ್ತ್ರಿಗಳ ಹುಟ್ಟು ವಿದ್ವಾಂಸ ಮನೆತನದಲ್ಲಿ ಆಯಿತು. ಶಾಸ್ತ್ರಿಗಳಿಗೆ ಇಟ್ಟಿದ್ದ ಹೆಸರು ವೆಂಕಟಸುಬ್ಬಶರ್ಮ. ತಂದೆ ಕರೆಯುತ್ತಿದ್ದ ಅಯ್ಯ ಎಂಬ ಅಡ್ಡಹೆಸರೇ ರೂಢಿಗೆ ಬಂದು, ಮುಂದೆ ಅಯ್ಯಶಾಸ್ತ್ರಿ ಎಂದೇ ಪ್ರಸಿದ್ಧರಾದರು.

ತಂದೆಯ ಕೋರಿಕೆಯಂತೆ ಅವರ ಶಿಷ್ಯರಾಗಿದ್ದ ಪೆರಿಯಸ್ವಾಮಿ ತಿರುಮಲಾಚಾರ್ಯರ ಬಳಿ ಅಯ್ಯಶಾಸ್ತ್ರಿಗಳು ಕಾವ್ಯ, ಅಲಂಕಾರಶಾಸ್ತ್ರ, ತರ್ಕ, ವ್ಯಾಕರಣ ಮುಂತಾದುವನ್ನು ವ್ಯಾಸಂಗಮಾಡಿದರು. ಶಾಸ್ತ್ರಿಗಳಿಗೆ ಬಾಲ್ಯದಿಂದಲೂ ಸಂಸ್ಕೃತ ಕವಿತಾರಚನೆಯಲ್ಲಿ ಆಸಕ್ತಿ; ಇದಕ್ಕೆ ಗುರುಹಿರಿಯರ ಉತ್ತೇಜನವೂ ಇತ್ತು. ಕನ್ನಡ ಕವಿತ್ವದಲ್ಲಿ ಇವರಿಗೆ ಆಸಕ್ತಿ ಉಂಟಾದದ್ದು ಅಳಿಯ ಲಿಂಗರಾಜರ ಹಾಗೂ ಬಸವಪ್ಪಶಾಸ್ತ್ರಿಗಳ ಸಹವಾಸ, ಉತ್ತೇಜನ, ಮಾರ್ಗದರ್ಶನಗಳಿಂದ. ಜೊತೆಗೆ, ಸ್ವಂತ ವ್ಯಾಸಂಗದಿಂದಲೂ ಶಾಸ್ತ್ರಿಗಳು ಕನ್ನಡ ಪಾಂಡಿತ್ಯವನ್ನು ಬಲಪಡಿಸಿಕೊಂಡರು. ಇವರು ಕೆಲವು ವರ್ಷಗಳ ಕಾಲ ಸದ್ವಿದ್ಯಾಪಾಠ ಶಾಲೆಯಲ್ಲೂ ಭಾಷೋಜ್ಜೀವಿನೀ (ಕನ್ನಡ) ಪಾಠಶಾಲೆಯಲ್ಲೂ ಸಂಸ್ಕೃತ, ಕನ್ನಡ ಭಾಷಾಬೋಧಕರಾಗಿದ್ದರು. ಚಾಮರಾಜ ಒಡೆಯರ ಅಪ್ಪಣೆಯಂತೆ, ಅರಮನೆಯ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ಸಂಸ್ಕೃತ ಕನ್ನಡ ಗ್ರಂಥಗಳ ಪರಿಶೋಧಕ ಪಂಡಿತರಾಗಿ ಕೆಲಸ ಮಾಡಿದರು. ಆಗ ಇವರು ಪರಿಶೋಧಿಸಿದ ಕನ್ನಡ ಗ್ರಂಥಗಳಿವು: ಕರ್ಣಾಟಕ ಶಬ್ದಾನುಶಾಸನಂ, ಕರ್ಣಾಟಕ ಕಾದಂಬರಿ, ನಾಗರಸನ ಕರ್ಣಾಟಕ ಭಗವದ್ಗೀತೆ, ಕರ್ಣಾಟಕ ವಚನಭಾರತ.

ಚಾಮರಾಜ ಒಡೆಯರ ಅನುಜ್ಞೆಯಂತೆ ಶಾಸ್ತ್ರಿಗಳು ಕೆಲವು ಕಾಲ ರಾಜಕುಮಾರಿಯರ ಉಪಾಧ್ಯಕ್ಷರಾಗಿದ್ದರು. ಆ ಕಾಲದಲ್ಲಿ ಶಾಸ್ತ್ರಿಗಳ ಗ್ರಂಥರಚನೆಗೆ ಪ್ರಭುಗಳಿಂದ ವಿಶೇಷ ಪ್ರೋತ್ಸಾಹ ದೊರಕಿತು. ಸಾಂಗಲಿಯ ಮಹಾರಾಷ್ಟ್ರ ನಾಟಕ ಸಂಘವೊಂದು ಮೈಸೂರಿನಲ್ಲಿ ಆಡಿದ ಮರಾಠಿ ನಾಟಕಗಳು ಪ್ರಭುಗಳನ್ನು ಆಕರ್ಷಿಸಿದುವು. ಕನ್ನಡದಲ್ಲೂ ನಾಟಕಗಳನ್ನು ಬರೆಯಿಸಿ ಆಡಿಸಬೇಕೆಂಬ ತೀವ್ರ ಅಭಿಲಾಷೆ ಅವರಲ್ಲಿ ಮೊಳೆಯಿತು. ಆ ಕಾಲದಲ್ಲಿ ಚಾಮರಾಜ ಒಡೆಯರೊಂದಿಗೆ ಬೊಂಬಾಯಿಗೆ ಹೋಗಿ ಅಲ್ಲಿ ಪಾರ್ಸಿ ನಾಟಕಗಳನ್ನು ನೋಡಿಕೊಂಡು ಬಂದವರಲ್ಲಿ ಅಯ್ಯಶಾಸ್ತ್ರಿಗಳೂ ಒಬ್ಬರು. ಅಲ್ಲಿಂದ ಹಿಂದಿರುಗಿದ ಮೇಲೆ ಪ್ರಭುಗಳು ತಮ್ಮ ಆಸ್ಥಾನಕವಿಗಳಿಂದ ನಾಟಕಗಳನ್ನು ಬರೆಸಿದರು: ಅರಮನೆಯಲ್ಲಿ ನಾಟಕಸಂಘವೊಂದನ್ನು ಸ್ಥಾಪಿಸಿದರು. ಹೀಗೆ, ರಾಜರ ಪ್ರೋತ್ಸಾಹದಿಂದ ಅಯ್ಯಶಾಸ್ತ್ರಿಗಳು ಕಾಳಿದಾಸನ ವಿಕ್ರಮೋರ್ವಶೀಯವನ್ನು ಓದುವವರಿಗೂ ನಾಟಕದವರಿಗೂ ಅನುಕೂಲ ವಾಗುವಂತೆ ಅನುವಾದ ಮಾಡಿದರು (1891). ಇದೇ ಉದ್ದೇಶದಿಂದ ಪೂರ್ವದಲ್ಲಿ ಹಿಂದೂಸ್ಥಾನಿ ಭಾಷೆಯಲ್ಲಿದ್ದ ಪ್ರತಾಪಸಿಂಹಚರಿತ್ರೆ ನಾಟಕವನ್ನೂ ಕನ್ನಡಕ್ಕೆ ಅನುವಾದಿಸಿದರು (1930). ಶಾಸ್ತ್ರಿಗಳು ರಚಿಸಿದ ಸ್ವಂತ ನಾಟಕವೆಂದರೆ ರಾಮಾಯಣದ ಸಂಪೂರ್ಣ ಕಥೆಯನ್ನು ಒಳಗೊಂಡ ಶ್ರೀ ರಾಮಾಯಣನಾಟಕಂ ಅಚ್ಚಾದದ್ದು 1904. ಇವರಿಂದ ರಚಿತವಾದ ಇನ್ನೊಂದು ನಾಟಕ ನಳಚರಿತ್ರೆ. ಇವುಗಳಲ್ಲಿ ವಿಕ್ರಮೋರ್ವಶೀಯ ಮೊಟ್ಟಮೊದಲು ಅರಮನೆಯ ನಾಟಕಸಂಘದವರಿಂದ ಪ್ರದರ್ಶಿತವಾಯಿತು. ಸಂಘದ ಮೇಲ್ವಿಚಾರಣೆ ಕೆಲವುಕಾಲ ಶಾಸ್ತ್ರಿಗಳ ಕೈಯಲ್ಲಿತ್ತು. ಹೀಗೆ, ಕನ್ನಡ ನಾಟಕ ಸಾಹಿತ್ಯದ ಹಾಗೂ ರಂಗಭೂಮಿಯ ಬೆಳವಣಿಗೆಯ ಆರಂಭಾವಸ್ಥೆಯಲ್ಲಿ ಶಾಸ್ತ್ರಿಗಳು ಗಮನಾರ್ಹ ಪಾತ್ರವನ್ನು ವಹಿಸಿದ್ದರು.

ಚಾಮರಾಜ ಒಡೆಯರ ಪಟ್ಟಾಭಿಷೇಕದ (1884) ಸಂದರ್ಭದಲ್ಲಿ ಆ ಮಹೋತ್ಸವವನ್ನು ಕುರಿತು ಅಯ್ಯಶಾಸ್ತ್ರಿಗಳು ಸಂಸ್ಕೃತ ಚಂಪೂಕಾವ್ಯವೊಂದನ್ನು ರಚಿಸಿದರು. ಅದೇ ಅವರ ಮೊದಲ ಕಾವ್ಯ. ಅವರ ಒಲವು ಕನ್ನಡದ ಕಡೆಗೆ ಹರಿದ ಮೇಲೆ, ಮೈಸೂರು ಮಹಾರಾಜ ಚರಿತಂ ಎಂಬ ಚಂಪೂಕಾವ್ಯವನ್ನೂ ವಾರ್ಧಕ ಷಟ್ಪದಿಯಲ್ಲಿ ಶೇಷರಾಮಾಯಣಂ ಎಂಬ ಪದ್ಯಮಹಾಕಾವ್ಯವನ್ನೂ (1901) ದಮಯಂತೀಚರಿತ್ರೆ, ಯಕ್ಷಪ್ರಶ್ನೆ, ರಾಜಭಕ್ತಿಲಹರಿ ಎಂಬ ಇತರ ಕೆಲವು ಷಟ್ಪದೀ ಕಾವ್ಯಗಳನ್ನೂ ರಚಿಸಿದರು. ಅಗ್ಗೆ ದಮಯಂತೀಚರಿತ್ರೆ ಜನಪ್ರಿಯವೆನಿಸಿತು. ಶಾಸ್ತ್ರಿಗಳ ಉಭಯ ಭಾಷಾಪಾಂಡಿತ್ಯ ಮತ್ತು ಕವಿತಾಸಾಮರ್ಥ್ಯಗಳನ್ನು ಮೆಚ್ಚಿ, 1905 ರಲ್ಲಿ ಮಹಾವಿದ್ವಾನ್ ಪದವಿಯನ್ನೂ 1902 ರಲ್ಲಿ ಕವಿತಿಲಕ ಎಂಬ ಬಿರುದನ್ನೂ ನಾಲ್ಮಡಿ ಕೃಷ್ಣರಾಜ ಒಡೆಯರು ಅವರಿಗೆ ದಯಪಾಲಿಸಿದರು.

ಶೇಷರಾಮಾಯಣ ಒಂದು ಮಹತ್ವದ ಕಾವ್ಯ. ಉತ್ತರರಾಮಾಯಣದ ರಾಮಾಶ್ವಮೇಧದ ಕಥಾಭಾಗವನ್ನು ಪದ್ಮಪುರಾಣೋಕ್ತ ರೀತಿಯಿಂದ ಕನ್ನಡಿಗರಿಗೆ ಸುಲಭವಾಗಿ ತಿಳಿಯುವಂತೆ ನಿರೂಪಣೆ ಮಾಡುವುದು ಕಾವ್ಯದ ಉದ್ದೇಶ. ಕಥೆಯ ವಿವರಗಳಲ್ಲಿ ಇದು ಮುದ್ದಣನ ರಾಮಾಶ್ವಮೇಧವನ್ನು ಹೋಲುತ್ತದೆ; ಶೈಲಿಯಲ್ಲಿ ಲಕ್ಷ್ಮೀಶನ ಜೈಮಿನಿಭಾರತದ ಪ್ರಭಾವ ಕಂಡುಬರುತ್ತದೆ.

ಅಯ್ಯಶಾಸ್ತ್ರಿಗಳು ಸಂಸ್ಕೃತದಲ್ಲಿ ಚಾಮರಾಜೇಂದ್ರ ಪಟ್ಟಾಭಿಷೇಕ ಮತ್ತು ಕೃಷ್ಣಾಂಬಾಪರಿಣಯ ಎಂಬ ಚಂಪೂಕಾವ್ಯಗಳನ್ನೂ ದಶಸ್ತೋತ್ರ, ಆಶೀರ್ವಚನ ಪಂಚಕ, ಭಗವತ್ಪಾದಾಚಾರ್ಯಪ್ರಶಂಸೆ–ಇವೇ ಮುಂತಾದ ಸಣ್ಣ ಕವಿತೆಗಳನ್ನೂ ರಚಿಸಿರುವರು.

(ಎಂ.ವಿ.ಎಸ್.)

**ಅರ್ (ಉರ್) :** ದಕ್ಷಿಣ ಮೆಸಪೊಟೇಮಿಯದ ಸುಮೇರಿಯನ್ ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚೀನ ನಗರ. ಯೂಫ್ರೆಟಿಸ್ ನದಿಯ ದಡದಲ್ಲಿ ಈಗಿನ ಬಾಗ್ದಾದ್‌ಗೆ ಸಮೀಪದಲ್ಲಿದೆ. ಅರ್‌ನಲ್ಲಿ ನಡೆದ ಪುರಾತತ್ತ್ವ ಶೋಧನೆಗಳಿಂದ ಸುಮೇರಿಯನ್ ಸಂಸ್ಕೃತಿಯ ವೈಶಿಷ್ಟ್ಯ ಬೆಳಕಿಗೆ ಬಂದಿದೆ. ಈಗಿನ ಟೆಲ್ ಮುಕಾಯರ್ ಪ್ರದೇಶವೇ ಪ್ರಾಚೀನ ಅರ್ ಪಟ್ಟಣ. ಇದು 19ನೆಯ ಶತಮಾನದಿಂದಲೂ ಐತಿಹಾಸಿಕ ಸ್ಥಳವೆಂದು ಪ್ರಸಿದ್ಧಿಯಾಗಿದ್ದರೂ ಇಲ್ಲಿ ಪರಿಶೋಧನೆ ಪ್ರಾರಂಭವಾದದ್ದು 1854ರಿಂದ. ಈ ಸ್ಥಳವನ್ನು ಮೊದಲಬಾರಿಗೆ ಉತ್ಖನನಮಾಡಿ ಅವಶೇಷಗಳನ್ನು ಬೆಳಕಿಗೆ ತಂದ ಕೀರ್ತಿ ಜೆ. ಇ. ಟೇಲರ್ ಎಂಬ

ಪುರಾತತ್ತ್ವಶೋಧಕನಿಗೆ ಸೇರಿದ್ದು. ಅನಂತರ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ಅಧಿಕಾರಿಗಳೂ ಪೆನ್‌ಸಿಲ್ವೇನಿಯ ವಿಶ್ವವಿದ್ಯಾನಿಲಯದ ಅಧಿಕಾರಿಗಳೂ ಅರ್‌ನಲ್ಲಿ ಶೋಧ ನಡೆಸಿದರು. 1922ರಿಂದ 12 ವರ್ಷಗಳ ಕಾಲ ಸತತವಾಗಿ ಕೆಲಸಮಾಡಿ ಅರ್ ನಗರದ ಅವಶೇಷಗಳನ್ನು ಬಹುವಾಗಿ ಹೊರತೆಗೆದ ಕೀರ್ತಿ ಸರ್ ಲಿಯೋನಾರ್ಡ್ ವೂಲಿ ಎಂಬ ಪ್ರಾಕ್ತನಶಾಸ್ತ್ರಜ್ಞನಿಗೆ ಸೇರಬೇಕು. ಈತ ನಡೆಸಿದ ಉತ್ಖನನಗಳಿಂದ ಅರ್ ನಗರದ ಸಂಪೂರ್ಣ ಚರಿತ್ರೆ ಬೆಳಕಿಗೆ ಬಂದಿದೆ.

ಈ ನಗರಕ್ಕೆ ಸಮೀಪ ದಲ್ಲಿರುವ ಉಬಾಯ್ಡ್‌ನಲ್ಲಿ ದೊರಕಿರುವ ಅವಶೇಷಗಳೇ ಇಲ್ಲಿನ ಪ್ರಾಚೀನತಮ ನಾಗರಿಕತೆಯ ಕುರುಹುಗಳು. ಮಣ್ಣಿನ ಮಡಕೆಯ ಹೋಲಿಕೆಗಳಿಂದ ಇಲ್ಲಿಯ ನಾಗರಿಕತೆ ಇರಾನಿಗೆ ಸಂಬಂಧಿಸಿ ತ್ತೆಂದು ಹೇಳಬಹುದು. ಉಬಾಯ್ಡ್ ಸಂಸ್ಕೃತಿಯ ಅನಂತರ ಸುಮೇರಿಯ ಸಂಸ್ಕೃತಿ ಬೇರೂರುವುದಕ್ಕೆ ಮೊದಲು ಈ ಎರಡು ವಿಭಿನ್ನ ಸಂಸ್ಕೃತಿಯ ಜನಗಳು ಅಲ್ಲಿ ವಾಸವಾಗಿದ್ದರೆಂದು ಉರುಕ್‌ನಲ್ಲಿ ದೊರಕಿರುವ ಅವಶೇಷಗಳಿಂದಲೂ ಜಂಡೆಟ್‌ನಾಸ್ರ್ ಎಂಬಲ್ಲಿ ದೊರಕಿರುವ ಅವಶೇಷಗಳಿಂದಲೂ ತಿಳಿದು ಬರುತ್ತದೆ. ಈ ಸಂಸ್ಕೃತಿಯ ಕಾಲವನ್ನು ಪ್ರ.ಶ.ಪೂ. 4400–3000 ಎಂದು ನಿರ್ಧರಿಸಬಹುದು. ಇವುಗಳ ಅನಂತರ ಅರ್ ನಗರದ ರಾಜವಂಶಗಳ ಸಂಸ್ಕೃತಿಯ ಕಾಲವನ್ನು ಕಾಣುತ್ತೇವೆ. ಈ ರಾಜವಂಶದ ಸ್ಥಾಪಕ ಮೆಸ್–ಅನ್ನಿ ಪದ್ದನೆಂದು ತಿಳಿಯುತ್ತದೆ.



ಶಿಥಿಲವಾದ ಜಿಗ್ಗುರಾಟ್ ದೇವಾಲಯದ ಪುನರ್ನಿರ್ಮಾಣ– ಒಂದು ಕಲ್ಪನೆ

ಈ ವಂಶದ ಅನೇಕ ರಾಜರುಗಳ ನೇತೃತ್ವದಲ್ಲಿ ಅರ್ ನಗರ ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಿ ಸುಮೇರಿಯ ಸಂಸ್ಕೃತಿ ಪ್ರಸಿದ್ಧವಾಗಲು ಸಹಾಯ ಮಾಡಿತು. ಈ ಕಾಲದಲ್ಲಿ ರಾಜವಂಶ ಬೇರೂರಿದಂತೆ ನ್ಯಾಯಾಂಗ ವಿಶೇಷವಾಗಿ ಬೆಳೆಯಿತು. ರಾಜತ್ವದ ಜೊತೆಯಲ್ಲೇ ಮತೀಯ ಧರ್ಮಗಳೂ ಬೆಳೆದುವು. ಇದರಿಂದ ದೇವತೆಗಳ ಸಮೂಹವೊಂದು ರಚಿತವಾಯಿತು. ದೇವತೆಗಳಿಗೆ ದೇವಾಲಯವನ್ನು ಕಟ್ಟುವ ಕಾರ್ಯಕ್ಕೆ ಹೆಚ್ಚಾಗಿ ಪ್ರೋತ್ಸಾಹ ಸಿಕ್ಕಿ, ವಾಸ್ತು ಮತ್ತು ಶಿಲ್ಪಕಲೆಗಳು ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದುವು. ಇವುಗಳನ್ನು ಕಾಪಾಡಿಕೊಂಡು ಬರಲು ಮತ್ತು ಶತ್ರುಗಳನ್ನು ಸೋಲಿಸಲು ಸುಭದ್ರ ಸೈನ್ಯದ ವ್ಯವಸ್ಥೆ ರೂಢಿಗೆ ಬಂದಿತು. ಈ ಎಲ್ಲ ಪ್ರಗತಿಗಳಿಂದ ಸಾಮಾನ್ಯ ಜನಗಳ ಜೀವನ ಸುಖಮಯವಾಗುವಂತೆ ಆಯಿತು. ಇದಕ್ಕೆ ಉದಾಹರಣೆಯಾಗಿ ಮೊದಲನೆಯ ರಾಜವಂಶದ ಗೋರಿಗಳನ್ನು ನೋಡಬಹುದು. ಅಗೆದ ಈ ಗೋರಿಗಳು ವಿಶಾಲವಾಗಿದ್ದು ಬಹು ಬೆಲೆಬಾಳುವ ಆಭರಣಗಳು, ಮಂಚ, ಕುರ್ಚಿ, ಮಡಕೆ ಮುಂತಾದ ವುಗಳನ್ನೊಳಗೊಂಡಿವೆ. ಜೊತೆಗೆ ರಾಜನ ಸೇವೆಯಲ್ಲಿ ನಿರತರಾಗಿದ್ದ ಎಲ್ಲ ಆಳುಕಾಳುಗಳ ಗೋರಿಗಳನ್ನೂ ಕಾಣಬಹುದು. ಸ್ವಲ್ಪ ಕಾಲಾನಂತರ ಅರ್ ನಗರ ಇತರ ನಗರಗಳ ಆಳ್ವಿಕೆಗೆ ಒಳಪಟ್ಟಿತು. ಮೂರನೆಯ ರಾಜವಂಶದ ಸ್ಥಾಪಕನಾದ ಅರ್‌ನಮ್ಮು ಎಂಬ ರಾಜನ ಕಾಲದಲ್ಲಿ ಮತ್ತೆ ಪ್ರಾಮುಖ್ಯಕ್ಕೆ ಬಂತು. ಈತ ನಿರ್ಮಿಸಿದ (2100) ಕಟ್ಟಡಗಳಲ್ಲಿ ಜಿಗ್ಗುರಾಟ್ ಮುಖ್ಯವಾದುದು. ಇದು 64 ಮೀ ಉದ್ದ, 43 ಮೀ ಅಗಲ ಮತ್ತು 16 ಮೀ ಎತ್ತರವಿರುವ ಇಟ್ಟಿಗೆಗಳಿಂದ ಕಟ್ಟಿದ ಭವ್ಯಸೌಧ. ಎಲ್ಲ ಜಿಗ್ಗುರಾಟ್‌ಗಳಂತೆ ಇದೂ ಚೌಕ ಪ್ರಾಕಾರಗಳನ್ನುಳ್ಳ ಕಟ್ಟಡ. ಹೊರಗಿನ ಪ್ರಾಕಾರಕ್ಕಿಂತ ಒಳಗಿನ ಪ್ರಾಕಾರ ಕಿರಿದಾಗಿರುತ್ತ ಬಂದು ಕೊನೆಗೆ ಎತ್ತರದ ಜಗಲಿಯಲ್ಲಿ ಕೊನೆಗೊಳ್ಳುತ್ತದೆ. ಇದೇ ದೇವರ ವಾಸಸ್ಥಾನ. ಅರ್‌ನಮ್ಮುವಿನಿಂದ ರಚಿತವಾದ ಜಿಗ್ಗುರಾಟ್ ದೇವಾಲಯಕ್ಕೆ ಮುಂಭಾಗದಲ್ಲಿ ಮೂರು ದಿಕ್ಕಿನಲ್ಲೂ ಮೆಟ್ಟಲುಗಳಿವೆ. ಇವುಗಳನ್ನು ಹತ್ತಿ ಒಳಗಿನ ಪ್ರಾಕಾರಕ್ಕೆ ಹೋಗಬೇಕು. ಈ ಪ್ರಾಕಾರಗಳ ಗೋಡೆಯ ಒಳಭಾಗಗಳು ಶಿಲ್ಪಫಲಕಗಳಿಂದ ಅಲಂಕೃತವಾಗಿವೆ. ಈ ಫಲಕಗಳು ಅರ್ ನಗರದ ಚರಿತ್ರೆಯನ್ನು ತಿಳಿಸುತ್ತವೆ.

ಪ್ರ.ಶ.ಪೂ. 1800ರಲ್ಲಿ ಉಂಟಾದ ಕ್ಷೋಭೆಯಲ್ಲಿ ಅರ್ ನಗರ ನಾಶವಾಗಿ ಕಟ್ಟಡಗಳೆಲ್ಲ ಒಡೆಯಲ್ಪಟ್ಟು, ಅವುಗಳ ಭವ್ಯತೆ ನಾಶವಾಯಿತು. 300 ವರ್ಷಗಳ ಅನಂತರ ಅಲ್ಲಿ ಆಳಿದ ರಾಜರು ಅರ್ ನಗರದ ಪುನರ್ನಿರ್ಮಾಣ ಕಾರ್ಯವನ್ನು ಕೈಗೊಂಡರು. ಪ್ರ.ಶ.ಪೂ.7ನೆಯ ಶತಮಾನದಿಂದ ಮತ್ತೆ ಅರ್ ನಗರ ಪ್ರಾಮುಖ್ಯ ಪಡೆಯಿತು. ನೆಬುಚೆಡ್ನೆಸರ್ ಎಂಬ ರಾಜ ಇಲ್ಲಿನ ದೇವಾಲಯಗಳನ್ನು ಪುನರ್ನಿರ್ಮಿಸಿ ಅರ್ ನಗರದ ಸೌಂದರ್ಯವನ್ನು ಹೆಚ್ಚಿಸಿದ. ಆದರೆ ಪರ್ಷಿಯನ್ನರ ದಂಡಯಾತ್ರೆಗಳ ಅನಂತರ ಸುಮೇರಿಯ ಮತಧರ್ಮಗಳು ಅವನತಿ ಹೊಂದಿದುವು. ಅವುಗಳ ಜೊತೆಯಲ್ಲಿಯೇ ಜಿಗ್ಗುರಾಟ್‌ಗಳೂ ನಾಶವಾದುವು. ಹೀಗಾಗಿ ಪ್ರ.ಶ.ಪೂ. ಸು. 4ನೆಯ ಶತಮಾನದಿಂದ ಅರ್ ನಗರ ಪೂರ್ಣ ನಾಶವಾಗಿ ಮತ್ತೆ ಉಚ್ಛ್ರಾಯ ಸ್ಥಿತಿಯನ್ನು ಕಾಣಲೇ ಇಲ್ಲ. (ಎ.ವಿ.ಎನ್.)

**ಅರಕಲಗೂಡು** : ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ತಾಲ್ಲೂಕಿನ ಕೇಂದ್ರ. ಆಡಳಿತ ಕೇಂದ್ರ. ಹಾಸನ, ಆಲೂರು, ಕೊಡಗು ಜಿಲ್ಲೆಯ ಸೋಮವಾರಪೇಟೆ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕುಗಳು ಇದನ್ನು ಸುತ್ತುವರಿದಿವೆ. ವಿಸ್ತೀರ್ಣ 674ಚ.ಕಿಮೀ. ಜನಸಂಖ್ಯೆ 1,99,243. (2001). ಈ ತಾಲ್ಲೂಕಿನಲ್ಲಿ ಅರಕಲಗೂಡು, ಕೊಣನೂರು ಪಟ್ಟಣಗಳೂ 300 ಗ್ರಾಮಗಳೂ ಇವೆ. ಹೋಬಳಿಗಳು ಅರಕಲಗೂಡು, ಮಗ್ಗೆ, ಮಲ್ಲಿಪಟ್ಟಣ, ರಾಮನಾಥಪುರ ಮತ್ತು ಕೊಣನೂರು.

ತಾಲ್ಲೂಕಿನ ಉತ್ತರ ಗಡಿಯಲ್ಲಿ ಹೇಮಾವತಿ ಮತ್ತು ದಕ್ಷಿಣ ಭಾಗದಲ್ಲಿ ಸ್ವಲ್ಪ ದೂರ ಕಾವೇರಿ ಹರಿಯುತ್ತವೆ. ಪಶ್ಚಿಮದಲ್ಲಿ ಕಾಡುಗಳಿಂದ ಕೂಡಿದ ಅನೇಕ ಬೆಟ್ಟಗಳಿವೆ. ಅಲ್ಲಲ್ಲಿ ವಿಶಾಲವಾದ ಕುರುಚಲು, ಹುಲ್ಲು ಮತ್ತು ಮರಗಳುಳ್ಳ ಕಾವಲುಗಳಿವೆ. ವರ್ಷಕ್ಕೆ ಸು.824ಮಿಮೀ ಮಳೆಯಾಗುತ್ತದೆ. ರಾಗಿ ಮುಖ್ಯ ಬೆಳೆ. ಜೋಳ, ದ್ವಿದಳ ಧಾನ್ಯಗಳು, ಈರುಳ್ಳಿ, ಕಡಲೆಕಾಯಿ, ಹೊಗೆಸೊಪ್ಪು, ಮೆಣಸಿನಕಾಯಿ ಇವನ್ನು ಹೆಚ್ಚಾಗಿ ಬೆಳೆಯುತ್ತಾರೆ. ತಾಲ್ಲೂಕಿನಲ್ಲಿ ಅನೇಕ ಕೆರೆಗಳು ಇವೆ. ತಾಲ್ಲೂಕಿನಲ್ಲಿ ಕಾಲುವೆಗಳಿಂದ 8996, ಕೆರೆಗಳಿಂದ 4032, ಬಾವಿಗಳು ಮತ್ತು ಕೊಳವೆಬಾವಿಗಳಿಂದ 505 ಹೆ.ಗಳ ಜಮೀನು ನೀರಾವರಿಗೆ ಒಳಪಟ್ಟಿದೆ. ಕಾವೇರಿ ನದಿಗೆ ಕೃಷ್ಣರಾಜಕಟ್ಟೆ ಎಂಬ ಚಿಕ್ಕ ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ರಾಮನಾಥಪುರ ಮತ್ತು ಕಟ್ಟೆಪುರ ಎಂಬ ಕಾಲುವೆಗಳನ್ನು ನಿರ್ಮಿಸಲಾಗಿದೆ. ಇದರಿಂದ ಬತ್ತ, ಕಬ್ಬು, ತೋಟದ ಬೆಳೆಗಳು, ಅಡಕೆ, ತೆಂಗು ಮುಂತಾದವನ್ನು ಬೆಳೆಯುತ್ತಾರೆ. ಪಶ್ಚಿಮದ ಬೆಟ್ಟಗಳ ಮೇಲೆ ಅಲ್ಲಲ್ಲಿ ಚಿಕ್ಕ ಕಾಫಿ ತೋಟಗಳೂ ಇವೆ.

ಈ ತಾಲ್ಲೂಕಿನಲ್ಲಿರುವ ರಾಮನಾಥಪುರ (**ನೋಡಿ**) ಪುಣ್ಯಕ್ಷೇತ್ರ. ಕೊಣನೂರು (**ನೋಡಿ**) ಸಹ ಮುಖ್ಯಸ್ಥಳ. ಸೋಮಪುರ ಗ್ರಾಮದ ಬಳಿ ಬೃಹತ್ ಶಿಲಾಸಮಾಧಿಗಳಿವೆ. ಶಂಭುನಾಥಪುರದಲ್ಲಿ 13ನೆಯ ಶತಮಾನದಲ್ಲಿ ಕಟ್ಟಿದ ಮತ್ತು ಪಾಳೆಯಗಾರ ಕಾಲದ ಗೋಪುರ ಇತ್ಯಾದಿಗಳನ್ನೊಳಗೊಂಡ ದೇವಾಲಯವಿದೆ. ಕಾಶೀಪುರ ವಿಜಯನಗರ ಕಾಲದಲ್ಲಿ ಪ್ರಸಿದ್ಧವಾಗಿದ್ದ ಸ್ಥಳ. ಬಸವಾಪಟ್ಟಣದಲ್ಲಿ ಹೊಯ್ಸಳ ದೇವಾಲಯಗಳು ಮತ್ತು ಕೋಟೆಯ ಅವಶೇಷಗಳಿವೆ. ಹಿಂದೆ ಇದೊಂದು ಅಗ್ರಹಾರವಾಗಿತ್ತು.

ಅರಕಲಗೂಡು ಈ ತಾಲ್ಲೂಕಿನ ಆಡಳಿತ ಕೇಂದ್ರ, ದೊಡ್ಡ ಊರು. ಜಿಲ್ಲಾ ಕೇಂದ್ರ ಹಾಸನದಿಂದ 32ಕಿಮೀ ದಕ್ಷಿಣಕ್ಕಿದೆ. ಹಾಸನ ಪಿರಿಯಾಪಟ್ಟಣ ಮತ್ತು ಹೊಳೆನರಸೀಪುರ ಕೊಡ್ಲಿಪೇಟೆ ರಸ್ತೆಗಳು ಈ ಊರಿನ ಮೂಲಕ ಹಾದು ಹೋಗುತ್ತವೆ. ಜನಸಂಖ್ಯೆ 15,184. ಊರು ನಗರಸಭೆಯ ಆಡಳಿತಕ್ಕೆ ಒಳಪಟ್ಟಿದೆ.

ಗೌತಮ ಋಷಿ ಸೂರ್ಯನನ್ನು ಕುರಿತು ಇಲ್ಲಿ ತಪಸ್ಸು ಮಾಡಿದ್ದರಿಂದ ಈ ಊರಿಗೆ ಅರ್ಕಪುರಿ ಎಂಬ ಹೆಸರಿತ್ತು ಎಂದು ಐತಿಹ್ಯ. ಐಗೂರು ಪಾಳೆಯಗಾರ ಕೃಷ್ಣಪ್ಪನಾಯಕ ಈ ಊರನ್ನು ಸ್ಥಾಪಿಸಿದ (1560). ಕಂಠೀರವ ನರಸರಾಜ 1647ರಲ್ಲಿ ಇದನ್ನು ಆಕ್ರಮಿಸಿಕೊಂಡ. ಅನಂತರ ಇದು ಕೆಳದಿಯ ಶಿವಪ್ಪನಾಯಕನ ವಶವಾಯಿತು. ಮುಂದೆ ಚಿಕ್ಕದೇವರಾಜನಿಂದ ಮೈಸೂರು ಸಂಸ್ಥಾನಕ್ಕೆ ಸೇರಿತು.

ಊರಿನಲ್ಲಿ ಶಿಥಿಲವಾದ ಕೋಟೆ ಇದೆ. ಕೋಟೆಯ ಒಳಗೆ ಲಕ್ಷ್ಮೀನರಸಿಂಹ, ಅಮೃತೇಶ್ವರ ಮತ್ತು ವೀರಭದ್ರ ದೇವಾಲಯಗಳಿವೆ. ಮೊದಲೆರಡು ದೇವಾಲಯಗಳು ಪ್ರಾಯಶಃ ಹೊಯ್ಸಳ ಕಾಲದವು. ಆದರೆ ಇವುಗಳಲ್ಲಿ ಹೆಚ್ಚಿನ ಕಲೆಗಾರಿಕೆಯೇನೂ ಕಂಡುಬರುವುದಿಲ್ಲ. *

**ಅರಕಾನ್ ಕರಾವಳಿ** : ಬಂಗಾಲ ಕೊಲ್ಲಿಗೆ ಎದುರಾಗಿರುವ ಮಯನ್ಮಾರ್ ತೀರಪ್ರದೇಶ. ಇದು ಮುಳುಗಿರುವ ಅನೇಕ ಕಣಿವೆಗಳು, ಆಳವಾದ ಖಾರಿಗಳು, ಮೆಕ್ಕಲುಮಣ್ಣಿನ ನದೀಮುಖಗಳು, ತೀರಕ್ಕೆ ದೂರವಾಗಿರುವ ದ್ವೀಪಗಳು–ಇವನ್ನು ಒಳಗೊಂಡಿರುವ ಕಲ್ಲುಬಂಡೆಯ ಪ್ರದೇಶ. ಈ ದ್ವೀಪಗಳು ಒಂದಾನೊಂದು ಕಾಲದಲ್ಲಿ ಅಕ್ಯಾಬ್‌ನಿಂದ ಆಗ್ನೇಯ ದಿಕ್ಕಿನಲ್ಲಿ ವಿಸ್ತರಿಸಿದ್ದು ಅನಂತರ ಉಂಟಾದ ಭೂಪಲ್ಲಟದಿಂದ ಅಳಿದುಳಿದಿರುವ ಅವಶೇಷಗಳು. ಅರಕಾನ್ ತೀರದ ಉದ್ದಕ್ಕೂ ಚಿಕ್ಕ ಚಿಕ್ಕ ಶಂಕುವಿನಾಕೃತಿಯ ಒಣಮಣ್ಣಿನ ದಿಣ್ಣೆಗಳು ಇವೆ; ಇವು ಜಲಜನಕ ಮತ್ತು ಇಂಗಾಲ ಸಂಯುಕ್ತ ಅನಿಲವನ್ನು ಹೊರಬಿಡುತ್ತಿರುತ್ತವೆ. ಇವುಗಳನ್ನು ಮಣ್ಣಿನ ಅಗ್ನಿಪರ್ವತಗಳೆಂದು ಕರೆಯುತ್ತಾರೆ. ಇವು 91.4 ಮೀ ಎತ್ತರವಾಗಿವೆ. ಇವುಗಳಲ್ಲಿ ಸಾಧಾರಣವಾದ ಜಲಪ್ರವಾಹ ಕಂಡುಬಂದು ಸಾಮಾನ್ಯವಾಗಿ ಆಗಾಗ್ಗೆ ಸ್ಫೋಟಗಳಾಗುತ್ತಿರುತ್ತವೆ. ಈ ಮಣ್ಣಿನ ಅಗ್ನಿಪರ್ವತಗಳಿಂದ ಹೊರಬಂದ ಅನಿಲ ಪೆಟ್ರೋಲಿಯಂನ ಗುಣಲಕ್ಷಣಗಳನ್ನು ಹೊಂದಿದೆ. ಮಯನ್ಮಾರ್‌ನಲ್ಲಿ ದೊರೆಯುವ ಅಲ್ಪಪ್ರಮಾಣದ ಪೆಟ್ರೋಲಿಯಂ ಇವುಗಳಿಂದ ದೊರೆಯುತ್ತದೆ. ಇದರ ತೀರಪ್ರದೇಶ ಒಳದೇಶದ ಒಂದು ಸ್ವಾಭಾವಿಕ ವೈಲಕ್ಷಣ್ಯಕ್ಕೆ ಸಮಾನಾಂತರವಾಗಿದೆ. ಈ ತೀರದಲ್ಲಿ ಅಕ್ಯಾಬ್ ಒಂದು ಮುಖ್ಯ ಪಟ್ಟಣ. (ಎನ್.ಎ.)

**ಅರಕಾನ್‌ಯೋಮ** : ಆಲ್ಪೈನ್ ಶ್ರೇಣಿಯಷ್ಟೇ ಹಳೆಯ ಪರ್ವತಪಂಕ್ತಿ. ಮಯನ್ಮಾರ್–ಭಾರತಗಳ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದೆ. ತಳದ ಕಿಬ್ಬೆಟ್ಟಗಳು ಬಂಗಾಲಕೊಲ್ಲಿಯವರೆಗೂ ಚಾಚಿವೆ. ಮಧ್ಯಭಾಗ ಸ್ಫಟಿಕಶಿಲೆಯಿಂದಾಗಿದೆ. ಎರಡೂ

ಪಾರ್ಶ್ವಗಳಲ್ಲಿ ಮೂರನೆಯ ಭೂಯುಗದ ಪದರಪದರವಾಗಿರುವ ಮಡ್ಡಿ ಬಂಡೆಗಳಿವೆ. ಕೆಲವು ಶಿಖರಗಳು 3,000 ಮೀ ಗಿಂತ ಹೆಚ್ಚು ಎತ್ತರವಾಗಿವೆ. ಸರಾಸರಿ ಎತ್ತರ (2,000) ಮೀ. ಕ್ರೋಮೈಟ್ ಮತ್ತು ಇತರ ಖನಿಜಗಳು ದೊರಕುತ್ತವೆಯಾದರೂ ಅವನ್ನು ತೆಗೆಯಲಾಗಿಲ್ಲ. ಮಳೆಯನ್ನು ಹೊತ್ತು ತರುವ ಮಾರುತಗಳಿಗೆ ಈ ಬೆಟ್ಟಗಳು ಅಡ್ಡಲಾಗಿರುವುದರಿಂದ–ಒಂದು ಪಾರ್ಶ್ವದಲ್ಲಿ (203ಸೆಂಮೀ) ಮಳೆಯಾಗುತ್ತದೆ. ಅಲ್ಲಿ ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳಿವೆ. ವ್ಯವಸಾಯ ಜನರ ಮುಖ್ಯವೃತ್ತಿ. (ಎಸ್.ಎ.)

**ಅರಕೇರಿಯ :** ಅರಕೇರಿಯೇಸೀ ಕುಟುಂಬಕ್ಕೆ ಸೇರಿದ ನಿತ್ಯ ಹಸುರಾಗಿರುವ, ದೈತ್ಯಾಕಾರದ ಮರ. ಇದರಲ್ಲಿ 15 ಪ್ರಭೇದಗಳಿದ್ದು ಇವು ಮುಖ್ಯವಾಗಿ ಆಸ್ಟ್ರೇಲಿಯ, ದಕ್ಷಿಣ ಅಮೆರಿಕ ಹಾಗೂ ಪೆಸಿಫಿಕ್ ದ್ವೀಪಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆ. ಹೀಗೆ ಈ ಸಸ್ಯ ಮೂಲತಃ ದಕ್ಷಿಣಾರ್ಧಗೋಳ ದ್ದಾದರೂ ಇದರ ಹಲವು ಪ್ರಭೇದ ಗಳನ್ನು ಪ್ರಪಂಚದ ಬೇರೆ ಬೇರೆ ದೇಶಗಳಲ್ಲೂ ಬೆಳೆಸಿದ್ದಾರೆ. ಭಾರತದಲ್ಲೂ ಇದರ ಪ್ರಭೇದಗಳಾದ ಕುಕಿಯೈ, ಕನಿಂಗ್‌ಹ್ಯಾಮಿಯೈ ಎಕ್ಸೆಲ್ಸ ಮತ್ತು ಇಂಬ್ರಿಕೇಟಗಳನ್ನು ಬೆಳೆಸಲಾಗುತ್ತಿದೆ. ಗೋಪುರಾಕೃತಿಯ ಈ ಮರ ಸಾಮಾನ್ಯವಾಗಿ 30–60 ಮೀ ಎತ್ತರಕ್ಕೆ ಬೆಳೆದು, ಸುಮಾರು 3–4 ಮೀ ದಪ್ಪವಿರುತ್ತದೆ. ಈ ಮರಕ್ಕೆ ಅದರದೇ ಆದ ವಿಶಿಷ್ಟ ಹಾಗೂ ಸುಂದರವಾದ ಆಕೃತಿ ಇದ್ದು ಉದ್ಯಾನಗಳಿಗೆ ಶೋಭೆ ಯನ್ನುಂಟು ಮಾಡುತ್ತದೆ. ಮರದಿಂದ ಸುತ್ತಲೂ ಮೇಲ್ಮುಖವಾಗಿ ಬಾಗಿರುವ ರೆಂಬೆಗಳು ಹೊರಟಿರುತ್ತವೆ. ಕಾಂಡದಿಂದ ರಾಳ ತಯಾರಾಗುತ್ತದೆ.

ಇದರ ಎಲೆಗಳು ಹಸುರು, ಚೂಪು ಮತ್ತು ಬಿರುಸು. ಕೆಲವು ಪ್ರಭೇದಗಳಲ್ಲಿ ಎರಡು ರೀತಿಯ ಎಲೆಗಳಿರುವುದೂ ಉಂಟು. ಈ ಜಾತಿಯಲ್ಲಿ ಗಂಡು ಮತ್ತು ಹೆಣ್ಣುಮರಗಳು ಬೇರೆ ಬೇರೆಯಾಗಿರುತ್ತವೆ. ಗಂಡುಮರದಲ್ಲಿ ಕೊಳವೆಯಾಕಾರದ ಗಂಡು ಶಂಕುಗಳಿರುತ್ತವೆ. ಪ್ರತಿಯೊಂದು
ಶಂಕುವಿನಲ್ಲೂ ಒತ್ತಾಗಿ ಸುತ್ತುವರಿದು ಜೋಡಣೆಗೊಂಡಿರುವ ಅನೇಕ ಕೇಸರಗಳಿರುತ್ತವೆ. ಹೆಣ್ಣುಮರದಲ್ಲಿ ಗುಂಡಗಿರುವ ಹೆಣ್ಣು ಶಂಕುಗಳಿದ್ದು ಪ್ರತಿಯೊಂದರಲ್ಲಿಯೂ ಅನೇಕ ಅಂಡಕಧರ ಬೀಜಗಳಿವೆ. ಇವು ಪಟ್ಟಿಗೆ ಅಂಟಿಕೊಂಡಿರುತ್ತವೆ. ಈ ಮರದ ಹಲವಾರು ಪ್ರಭೇದಗಳನ್ನು ಸಾಮಾನ್ಯವಾಗಿ ಉದ್ಯಾನಗಳಲ್ಲೂ ತೋಟಗಳಲ್ಲೂ ಅಲಂಕಾರಕ್ಕಾಗಿ ಬೆಳೆಸುತ್ತಾರೆ. ಶೀತ ದೇಶಗಳಲ್ಲಿ ಈ ಮರಗಳನ್ನು ಎಳೆಯವಾಗಿರುವಾಗ ಕುಂಡಗಳಲ್ಲಿ ಬೆಳೆಸುತ್ತಾರೆ. ಭಾರತದಲ್ಲಿ ಬೆಳೆಯುವ ಕನಿಂಗ್‌ಹ್ಯಾಮಿಯೈ ಪ್ರಭೇದದಿಂದ ಒಳ್ಳೆಯ ಬೆಲೆಬಾಳುವ ಚೌಬೀನೆ ದೊರಕುತ್ತದೆ. ಇದನ್ನು ಬೀರು, ಪೆಟ್ಟಿಗೆ, ಪ್ಲೈವುಡ್ ತಯಾರಿಕೆ ಇತ್ಯಾದಿ ಕೆಲಸಗಳಿಗೆ ಉಪಯೋಗಿಸುತ್ತಾರೆ. (ಕೆ.ಬಿ.ಎಸ್.)

**ಅರಗಿಸುವ ದೊಳೆ** : ಆಹಾರದೊಡನೆ ಜಠರವನ್ನು ಸೇರುವ ಮಾಂಸ, ಮೊಟ್ಟೆಗಳು, ಬೀಜಗಳಂತಹವಲ್ಲಿನ ಪ್ರೋಟೀನುಗಳನ್ನು ಅರಗಿಸುವ ಜಠರರಸದಲ್ಲಿರುವ ಬಲವಾದ ದೊಳೆ (ಕಿಣ್ವ; ಎಂಜೈಮು). ತೀರ ಸ್ವಲ್ಪ ಪ್ರಮಾಣದಲ್ಲಿ ಹಾಕಿದರೂ ಸಾಮಾನ್ಯವಾಗಿ ಅವು ಬದಲಾಗದೆ ಇತರ ವಸ್ತುಗಳ ನಡುವೆ ಜೀವರಾಸಾಯನಿಕ ಕೆಲಸಗಳನ್ನು ವೇಗಗೊಳಿಸುವ ಹೆರಲಯಕಗಳೇ (ಕೆಟಲಿಸ್ಟ್) ದೊಳೆಗಳು. ಬದುಕಿರುವ ಪ್ರಾಣಿಗಳ ಊತಕದಲ್ಲಿ (ಟಿಷ್ಯೂಸ್) ತಯಾರಾಗುವ ಇವು ನಿಸರ್ಗದ ರಸಾಯನವಿಜ್ಞಾನಿಗಳು ಎನ್ನಬಹುದು. ಇವು ಕೃತಕವಾಗಿ ತಯಾರಾಗಿಲ್ಲ. ಇವಿಲ್ಲದಿದ್ದರೆ ತೀರ ನಿಧಾನವಾಗುವಂಥ ಅನೇಕ ರಾಸಾಯನಿಕ ಕೆಲಸಗಳಿಗಾಗಿ ಎಲ್ಲ ಜೀವಕಣಗಳೂ ಇವನ್ನು ನೆಚ್ಚಿವೆ.

ಆಲ್ಬುಮಿನ್ನುಗಳನ್ನು ಅರದೊಳೆ (ಪೆಪ್ಸಿನ್) ಸರಳರೂಪಕ್ಕೆ ಬದಲಿಸುವುದನ್ನು ತೋರಿ, ಗುರುತಿಸಿ, ಹೆಸರಿಸಿದವ ಜರ್ಮನಿಯ ಥಿಯೊಡೋರ್ ಶ್ವಾನ್ (1835). ಅಮೆರಿಕದ ಜಾನ್ ನಾರ್ತ್‌ರಾಪ್ ಇದನ್ನು ಹರಳುಗಳಾಗಿ ಪಡೆದು ಪ್ರೋಟೀನೆಂದು ತೋರಿಸಲು ಇನ್ನೊಂದು ಶತಮಾನ (1930) ಹಿಡಿಯಿತು.

ಜಠರ ಒಳವರಿ ಪೊರೆಯ ಮುಖ್ಯ ಜೀವಕಣಗಳಲ್ಲಿ ಅರದೊಳೆ, ಜಡರೂಪವಾದ ಅರದೊಳೆಜನಕವಾಗಿ ತಯಾರಾಗಿ ಕೂಡಿರುತ್ತದೆ. ಅರದೊಳೆಜನಕ ಜಠರದೊಳಕ್ಕೆ ಸುರಿದುಬಂದಾಗ ಅಲ್ಲಿನ ಜಠರದ ಆಮ್ಲೀಯ ರಸದೊಂದಿಗೆ ಕೂಡಿದ ಕೂಡಲೇ ಅರದೊಳೆಯಾಗುತ್ತದೆ. ಅರದೊಳೆ ಜಠರದಲ್ಲಿದ್ದರೆ ಇನ್ನಷ್ಟು ಅರದೊಳೆ ಆಗುವುದು ಇನ್ನಷ್ಟು ಚುರುಕು. ಅರದೊಳೆಯ ಅರಗಿಸುವ ಒಳ ಪರಿಸರದ ಆಮ್ಲತೆಗೆ ಅನುಗುಣವಾಗಿರುವುದು. ಜಠರದ ಸಹಜವಾದ ಆಮ್ಲತೆ (ಕ್ಷಾರಾಮ್ಲಾಂಕ pH :1.5–2.5) ಮಟ್ಟದಲ್ಲಿ ಬಲುಬೇಗ ಅರಗಿಸುತ್ತದೆ. ಕ್ಷಾರೀಯದ ದ್ರಾವಣದಲ್ಲಿ ಅಷ್ಟೇ ಬೇಗನೆ ಹಾಳಾಗುತ್ತದೆ.

ಪ್ರೋಟೀನುಗಳಲ್ಲಿ ಸಾಮಾನ್ಯವಾಗಿ ಸುಮಾರು 20 ಬೇರೆಬೇರೆ ಬಗೆಯ ಅಮೈನೊಆಮ್ಲಗಳು ಒಂದುಗೂಡಿರುತ್ತವೆ. ಇವುಗಳಲ್ಲಿನ ಕೆಲವು ಜೋಡಿ ಅಮೈನೊಆಮ್ಲಗಳ ನಡುವಣ ಕೊಂಡಿಗಳನ್ನು ಮಾತ್ರ ಅರದೊಳೆ ಬಿಡಿಸುತ್ತದೆ. ಜಠರದಲ್ಲಿ ಬಿಡಿ ಹೈಡ್ರೊಕ್ಲೋರಿಕ್‌ಆಮ್ಲ ಇರುವ ತನಕ ಇದರಿಂದ ಪ್ರೋಟೀನು ಒಡೆದು ಪ್ರೊಟಿಯೇಸು, ಪೆಪ್ಟೋನುಗಳೆಂಬ ಚೂರುಗಳಾಗುತ್ತವೆ. ಈ ಚೂರುಗಳು ಮೂಲ ಪ್ರೋಟೀನುಗಳಂತಲ್ಲ. ನೀರಿನಲ್ಲಿ ಕರಗುತ್ತವೆ. ಕೆಲವು ಪ್ರಾಣಿಗಳ ಪೊರೆಗಳಲ್ಲಿ ತೂರಿಹೋಗುತ್ತವೆ. ರಕ್ತಗತವಾಗಲು ಇವು ಇನ್ನೂ ಚೂರಾಗಿ ಒಡೆಯಬೇಕು. ಕೊನೆಗೆ ಕರುಳಲ್ಲಿ ಮತ್ತೆ ಚೂರು ಚೂರಾಗಿ ರಕ್ತಗತವಾಗುತ್ತವೆ. ಇದಕ್ಕೆ ಕಾರಣ ಮುಖ್ಯವಾಗಿ ಮಾಂಸಲಿಯ (ಪ್ಯಾಂಕ್ರಿಯಾಸ್) ದೊಳೆಗಳು. ಮೈಯ ಕಾವಿನಲ್ಲಿ ತಾಸಿನಲ್ಲಿ 2 ಲಕ್ಷ ಗ್ಯಾಲನ್ ಹಾಲನ್ನು ಹೆಪ್ಪುಗಟ್ಟಿಸಲು (ಅರಗಣೆಯ ಮೊದಲ ಹೆಜ್ಜೆ) ಒಂದೇ ಒಂದು ಔನ್ಸಿನಷ್ಟು ಅಚ್ಚ ಅರದೊಳೆ ಸಾಕು. ಇಲ್ಲವೆ ಅದೇ ಕಾಲದಲ್ಲಿ ಅದರ ಸಾವಿರಾರು ಪಾಲಿನಷ್ಟು ತೂಕದ ಮೊಟ್ಟೆಲೋಳೆಯಂಥ ಬೇರೆ ಪ್ರೋಟೀನುಗಳನ್ನು ಅರಗಿಸಬಲ್ಲುದೆಂದರೆ, ಅರದೊಳೆಯ ಅರಗಿಸುವ ಹೆಬ್ಬಲುಮೆ ಗೊತ್ತಾಗುತ್ತದೆ. ಅರದೊಳೆ ಕೂಡ ಪ್ರೋಟೀನೇ ಆಗಿದ್ದರೂ ಅದನ್ನು ತಾನೇ ಅರಗಿಸಿಕೊಳ್ಳದು.

ಬೇರೆ ದೊಳೆಗಳು, ಪ್ರೊಟೀನುಗಳ ಹಾಗೆ ಅರದೊಳೆಯ ದೊಡ್ಡ ಸಮ್ಮಿಶ್ರ ಅಣು. ಜಲಜನಕದ ಅಣುವಿನ ತೂಕ (1), ಅಡಿಗೆ ಉಪ್ಪಿನ ಅಣುವಿನ ತೂಕ 58 ಆಗಿದ್ದರೆ, ಅರದೊಳೆಜನಕದ್ದು 42,500. ಅರದೊಳೆಯ ಅಣು 35,000 ತೂಗುತ್ತದೆ.

ಮದ್ದಾಗಿ ಬಳಕೆಯಾಗುವ ಅರದೊಳೆ ಹಂದಿಗಳ ಜಠರಗಳಿಂದ ತಯಾರಾಗುವುದು. ಒಂದು ಜಠರದಲ್ಲಿ ಸುಮಾರು ಒಂದು ಗ್ರಾಮ್ ತೂಕದಷ್ಟಿರುವುದು. ದನಕರು, ಕುರಿಗಳಿಂದಲೂ ತೆಗೆಯಬಹುದು. ಹಳದಿ ಬೂದು ಬಣ್ಣದ ಪುಡಿ ಇಲ್ಲವೇ ನಸುಹಳದಿ ಬಣ್ಣದ, ಬೆಳಕು ಹಾಯಿಸದ ಹಗರಿನಂಥ ವಸ್ತುವಿದು. ಕೆಲಬಗೆಯ ಅಜೀರ್ಣಗಳಲ್ಲಿ ಇದರ ಕೊರೆ ಇರುವುದೆಂಬ ಭಾವನೆಯಿಂದ ಇದನ್ನು ಮದ್ದಾಗಿ ಕೊಡುವುದುಂಟು. ಇದಕ್ಕೆ ಆಧಾರವಿಲ್ಲ. ಏಕೆಂದರೆ, ಇಲ್ಲಿ ಕೊರೆಯಾಗುವುದು ಆಮ್ಲವೇ ಹೊರತು ಈ ದೊಳೆಯಲ್ಲ. ಸಾಕಷ್ಟು ಆಮ್ಲವನ್ನು ಸೇರಿಸಿದ ಕೂಡಲೇ ಪ್ರೋಟೀನುಗಳನ್ನು ಸುಲಭವಾಗಿ ಅರಗಿಸುತ್ತದೆ. ಆದರೆ ಹೈಡ್ರೊಕ್ಲೋರಿಕಾಮ್ಲವನ್ನು ಮಾತ್ರ ರೋಗಿಗೆ ಕೊಟ್ಟರೆ ಜಠರರಸದ ಸುರಿಕೆಯನ್ನೇ ತಗ್ಗಿಸುತ್ತದೆ. ಆದ್ದರಿಂದಲೇ ಆಮ್ಲದೊಂದಿಗೆ ಅರದೊಳೆಯನ್ನೂ ಸೇರಿಸುವುದು ವಾಡಿಕೆ. ಹದಗೊಳಿಸುವ ಮುಂಚೆ ಪ್ರಾಣಿಗಳ ತೊಗಲಿನ ಕೂದಲು, ಕಸರನ್ನು ತೆಗೆದುಹಾಕಲು ಕಚ್ಚಾ ಅರದೊಳೆಯನ್ನು ಚರ್ಮ ಹದಮಾಡುವವರು ಬಳಸುವರು. ಬೆಳ್ಳಿಯ ಸಂಯುಕ್ತವನ್ನು ಹಿಡಿದಿರುವ ಜೆಲಟೀನನ್ನು ಅರಗಿಸುವುದರಿಂದ, ಬಿಸಾಡಿದ ಹಳೆಯ ಚಲನಚಿತ್ರ ಸುರುಳಿಗಳಿಂದ ಬೆಳ್ಳಿಯನ್ನು ಮರಳಿ ಪಡೆಯಲೂ ಇದನ್ನು ಬಳಸುವುದುಂಟು. ಏಕಾಣುಜೀವಿಗಳು ಮತ್ತಿತರ ಜೀವಾಣುಗಳನ್ನು ಪ್ರಯೋಗಾಲಯದಲ್ಲಿ ಬೆಳೆಸಲು ಬರುವ ನಡುವರ್ತಿ ವಸ್ತುವಿನ ಮುಖ್ಯ ಭಾಗವಾದ ಪೆಪ್ಟೋನು (ಅರೆಬರೆ ಅರಗಿಸಿದ ಪ್ರೋಟೀನು) ತಯಾರಿಕೆ ಇದರ ಇನ್ನೊಂದು ಬಳಕೆ. (**ನೋಡಿ– ಪಚನ; ಪ್ರೋಟೀನುಗಳು**) (ಡಿ.ಎಸ್.ಎಸ್.)

**ಅರಗು :** ಲ್ಯಾಕಿಫರ ಲ್ಯಾಕ ಎಂಬ ಜಾತಿಯ ಹೆಣ್ಣು ಕೀಟಗಳು, ಮುತ್ತುಗ, ಜಾಲರಿ ಮುಂತಾದ ಗಿಡಗಳನ್ನು ಕೊರೆದು, ಒಳಗೆ ವಾಸಿಸುವಾಗ, ಸ್ರವಿಸುವ ದ್ರವ ಗಟ್ಟಿಗೊಂಡು ಉಂಟಾಗುವ ಹೊರಪೊರೆಗೆ (ಇನ್‌ಕ್ರಸ್‌ಟೇಷನ್) ಈ ಹೆಸರಿದೆ (ಲ್ಯಾಕ್). ಇಂಗ್ಲಿಷ್ ಪದ ಲ್ಯಾಕ್, ಲಕ್ಷ ಎಂಬ ಸಂಖ್ಯೆಯ ಸೂಚಕವಾಗಿದ್ದು ಲಕ್ಷಾಂತರ ಕೀಟಗಳ ಮೇಳ ಎಂಬರ್ಥದಿಂದ ಬಂದಿದೆ. ಇದು ಒಂದು ರಾಳ. ಪೋಷಣೆ ಮತ್ತು ತಾಯ್ತನಗಳು ಹೊರತು ಜೀವನದಲ್ಲಿ ಬೇರೆ ಯಾವ ಆಕಾಂಕ್ಷೆಯೂ ಇಲ್ಲದ ಈ ಹೆಣ್ಣುಕೀಟಗಳ ಚರ್ಮದಲ್ಲಿ ಅಥವಾ ಚರ್ಮದ ಮೇಲುಭಾಗದಲ್ಲಿರುವ ಸ್ರಾವಕಗ್ರಂಥಿಗಳಿಂದ ಜಿನುಗುತ್ತದೆ. ಹೀಗೆ ಉತ್ಪನ್ನವಾದ ಅರಗನ್ನು ಮಾನವ ತೆಗೆದು ತನ್ನ ಅನೇಕ ಅಪೇಕ್ಷಿತ ಔದ್ಯೋಗಿಕ ಕಾರ್ಯಗಳಿಗೆ ಬಳಸಿಕೊಳ್ಳುತ್ತಾನೆ. ಈ ಗಟ್ಟಿಪದರ ಕಡ್ಡಿಗಳ ಮೇಲೆ ಬೆಳೆಯುವುದು. ಕಡ್ಡಿಗಳ ಮೇಲಿನಿಂದ ಹೊರತೆಗೆದ ಅರಗನ್ನು ಅಂಟು ಅರಗು (ಸ್ಟಿಕ್‌ಲ್ಯಾಕ್) ಎನ್ನುವರು. ಇದರಲ್ಲಿರುವ ಕಡ್ಡಿ ಮತ್ತು ರಾಳ ಪದಾರ್ಥಗಳನ್ನು ಪ್ರತ್ಯೇಕಿಸಿದ ಅನಂತರ ಇದನ್ನು ಅರ್ಧಗೋಳಾಕಾರದ ತೊಟ್ಟಿಗಳಲ್ಲಿ ತೊಳೆಯುತ್ತಾರೆ. ಮುಂದೆ ಕಡಾಯಿಗಳಲ್ಲಿ ಕರಗಿಸಿ ಶೋಧಿಸಿದ ಮೇಲೆ ಕೈಕೆಲಸದಿಂದಲೇ ಚಕ್ಕೆಯ ಆಕಾರಕ್ಕೆ ರೂಪಿಸುತ್ತಾರೆ.

**ಕೈಗಾರಿಕೆಗಳಲ್ಲಿ ಅರಗಿನ ಉಪಯೋಗ ಹಲವಾರು :** (1) ಗ್ರಾಮಫೋನ್ ತಟ್ಟೆಗಳ ತಯಾರಿಕೆ (2) ಸಂದುಮುಚ್ಚುವ ಸಿಮೆಂಟಿನ ತಯಾರಿಕೆ ಮತ್ತು ಲೋಹಗಳನ್ನು ಅಲೋಹಗಳೊಡನೆ ಬೆಸೆಯುವಿಕೆ (3) ಫ್ರೆಂಚ್ ಮೆರುಗೆಣ್ಣೆ ಎಂದು ಕರೆಯುವ ಅನೇಕ ಮೆರುಗೆಣ್ಣೆಗಳ ತಯಾರಿಕೆ (4) ವಿದ್ಯುನ್ನಿರೋಧಕ ಮೆರುಗೆಣ್ಣೆಯ ತಯಾರಿಕೆ (5) ಮೊಹರಿನ ಮೇಣದ ತಯಾರಿಕೆ (6) ಪೆಟ್ರೋಲ್ ನಿರೋಧಕ ವಸ್ತುವಾಗಿ ಮತ್ತು ಸಾಮಾನ್ಯವಾಗಿ

ಘರ್ಷಣೆ ಕಡಿಮೆ ಮಾಡಲು ಉಪಯೋಗಿಸುವ ಮೃದುಚಾಲಕ ತೈಲಗಳು, ಜಿಡ್ಡುಗಳು, ಕೊಬ್ಬುಗಳು ಇವುಗಳ ವರ್ತನೆಗಳನ್ನು ನಿರೋಧಿಸುವ ಲೇಪನಗಳ ತಯಾರಿಕೆ (7) ಮದ್ಯಸಾರದಲ್ಲಿ ಕರಗಿಸಿ ಬಂದ ಮಿಶ್ರಣಕ್ಕೆ ಅನುಕೂಲವಾದ ಬಣ್ಣ ಸೇರಿಸಿ ಅರಗಿನ ಮೆರುಗನ್ನು ತಯಾರಿಸಿ ಲೋಹಪದಾರ್ಥಗಳಿಗೆ ಬಣ್ಣಕಟ್ಟಲು ಶುದ್ಧ ಅರಗಿನ ಬಳಸಿಕೆ.

ಕಳೆದ ಶತಮಾನದ ಆರಂಭದಲ್ಲಿ ಗ್ರಾಮಫೋನಿನ ತಟ್ಟೆಗಳ ತಯಾರಿಕೆಗಾಗಿಯೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಅರಗನ್ನು ಬಳಸಲಾಗುತ್ತಿತ್ತು. ಈಚೆಗೆ ಅರಗಿನ ಬದಲು ಇತರ ಸಂಶ್ಲೇಷಿತ ರಾಳಗಳು ಬಂದು ಅರಗನ್ನು ಈ ಕ್ಷೇತ್ರದಿಂದ ತಳ್ಳಿ ಹಾಕಿವೆ. ಇದೇ ಕಾರಣದಿಂದ ಎಲ್ಲೋ ಕೆಲವು ಸಂದರ್ಭಗಳಲ್ಲಿ ಮಾತ್ರ ಅರಗನ್ನು ವಿದ್ಯುನ್ನಿರೋಧಕ ಮೆರುಗೆಣ್ಣೆಯ ಉತ್ಪಾದನೆಯಲ್ಲಿ ಬಳಸುವರು. ಮರಗೆಲಸದ ಉದ್ಯೋಗದಲ್ಲಿ ಅರಗನ್ನು ಇನ್ನೂ ಬೃಹತ್ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದ್ದು, ಇನ್ನು ಮುಂದಿನ ಅನೇಕ ವರ್ಷಗಳಲ್ಲಿ ಇದರ ಉಪಯೋಗ ಇದೇ ಮಟ್ಟದಲ್ಲಿ ಮುಂದುವರಿಯಬಹುದು. ಮೆರುಗೆಣ್ಣೆಯ ಉಪಯೋಗ ಮತ್ತು ಮರಗೆಲಸಕ್ಕೆ ನಾಜೂಕಾದ ಪೂರ್ಣತೆಯನ್ನು ಕೊಡುವ ಎರಡು ಕಾರ್ಯಗಳು ಕಷ್ಟಕರ. ಉತ್ತಮವಾದ ಅಂತ್ಯಮೆರುಗನ್ನು ಬೇರೆ ವಿಧಗಳಿಂದ ಕೊಡಲು ಹೆಚ್ಚಿನ ಪ್ರಯತ್ನಗಳು ನಡೆಯುತ್ತಿದ್ದರೂ ಅರಗು ಮೆರುಗೆಣ್ಣೆಯನ್ನು ಮರದ ಸಾಮಾನುಗಳಿಗೆ ಉಪಯೋಗಿಸುವುದರ ಪ್ರಾಮುಖ್ಯಕ್ಕೆ ಕುಂದುಬಂದಿಲ್ಲ. ಸ್ವಲ್ಪಮಟ್ಟಿಗೆ ಅರಗನ್ನು ಸಂದಿಮುಚ್ಚುವ ಸಿಮೆಂಟ್ ತಯಾರಿಸಲೂ ಲೋಹಗಳನ್ನು ಲೋಹಗಳ ಮತ್ತು ಅಲೋಹಗಳ ಜೊತೆ ಸೇರಿಸಲು ಅಗತ್ಯವಾದ ಬಂಧಕ ಸಿಮೆಂಟಿನ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಒಟ್ಟಿನಲ್ಲಿ ಯಾವೆರಡು ಪದಾರ್ಥಗಳನ್ನೂ ಒಂದರೊಡನೊಂದು ಜೊತೆಗೂಡಿಸಲೂ ಇದನ್ನು ಉಪಯೋಗಿಸಬಹುದು. ತಾಮ್ರ, ಸೀಸ ಹಾಗೂ ಇತರ ಭಾರವಾದ ಲೋಹಗಳನ್ನು ಜೊತೆಗೂಡಿಸುವ ಅರಗಿನ ಸಂಲಗ್ನತ್ವ ಗುಣ (ಅಡ್ಹೆಸಿವ್ ಪವರ್) ಬಹಳ ಉಪಯುಕ್ತ. ಸಂಲಗ್ನತೆ ಎಲ್ಲಿ ಪ್ರಥಮ ಅಪೇಕ್ಷಿತಗುಣವೋ ಅಲ್ಲೆಲ್ಲ ಅರಗಿಗೆ ಈಗಲೂ ಆದ್ಯಸ್ಥಾನವಿದೆ.

**ಅರಗು ಬಣ್ಣ :** ಭಾರತ ಮತ್ತು ಪರ್ಷಿಯ ದೇಶಗಳಲ್ಲಿ ಹೊಳಪಾದ ಕೆಂಪು, ಕೇಸರಿಬಣ್ಣಗಳನ್ನು ಉಣ್ಣೆಯ ಮೇಲೆ ತರಲು ಅರಗುಬಣ್ಣವನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದರು. ಬ್ರಿಟನ್ನಿನಲ್ಲಿ ಈ ಬಣ್ಣ ಬಳಕೆಗೆ ಬಂದದ್ದು 18ನೆಯ ಶತಮಾನದ ಕೊನೆಯಲ್ಲಿ. ಅರಗುಬಣ್ಣ ತಯಾರಿಕೆ ಒಂದು ಕಾಲಕ್ಕೆ ಪ್ರಮುಖ ಉದ್ಯಮವಾಗಿತ್ತು. ಷೆಲ್ಯಾಕ್ ಅದರ ಒಂದು ಉಪೋತ್ಪನ್ನ. (ಎನ್.ಕೆ.ಆರ್.; ವಿ.ಎಸ್.ವಿ.; ಕೆ.ಎಸ್.ಕೆ.)

**ಅರಗುರೆಕ್ಕೆ ಹಕ್ಕಿ :** ರೆಕ್ಕೆಯ ಗರಿಗಳ ಕೊನೆ ಅರಗಿನಂತೆ ಕೆಂಪಗಿರುವುದರಿಂದ ಈ ಹೆಸರು (ವ್ಯಾಕ್ಸ್‌ವಿಂಗ್). ಇದು ಪ್ಯಾಸೆರಿಫಾರ್ಮೀಸ್ ಗಣದ ಬಾಂಬಿಸಿಲಿಡೀ ಕುಟುಂಬಕ್ಕೆ ಸೇರಿದೆ. ತಲೆಯ ಮೇಲೆ ಗರಿಗಳಿಂದಾದ ಒಂದು ಜುಟ್ಟು ಇದೆ. ಹಕ್ಕಿ ನೋಡಲು ಬಲುಸುಂದರ. ಸೈಬೀರಿಯ ಮತ್ತು ಜಪಾನ್ ದೇಶಗಳಲ್ಲಿ ಗರಿಗಳ ತುದಿ ಮಾತ್ರವಲ್ಲದೆ ಬಾಲದ ಪುಕ್ಕಗಳೂ ಕೆಂಪು ಅರಗಿನ ಹೊಳಪನ್ನು ಹೊಂದಿರುತ್ತವೆ. ಕೆಲವು ಜಾತಿಯವು ಸಿಡರ್ (ದೇವದಾರು) ಮರವನ್ನು ಅವಲಂಬಿಸಿರುವುದರಿಂದ ಅವನ್ನು ಸಿಡರ್ ಹಕ್ಕಿಗಳೆಂದು ಕರೆಯುವುದುಂಟು.

ಇವು ಉತ್ತರ ಅಮೆರಿಕದಲ್ಲಿ ಹೇರಳ. ಚಳಿಗಾಲ ಸಮೀಪಿಸಿದಂತೆ ತಂಡೋಪತಂಡವಾಗಿ ಮಧ್ಯ ಮತ್ತು ದಕ್ಷಿಣ ಯುರೋಪ್ ಖಂಡಗಳಿಗೆ ವಲಸೆಹೋಗುತ್ತವೆ. ಹಿಂದಿನ ಕಾಲದಲ್ಲಿ ಇವುಗಳ ಬರವನ್ನು ಅಷ್ಟಾಗಿ ಸಹಿಸುತ್ತಿರಲಿಲ್ಲ. ಅದು ಮುಂಬರುವ ಗಂಡಾಂತರದ ಸೂಚನೆ ಎಂದು ನಂಬಿದ್ದರು. (ಜಿ.ಎಂ.ಬಿ.)

**ಅರಟನಾಲಗೆ :** ಕಿರಣ ಅಣಬೆ (ರೇ ಫಂಗಸ್) ಎಂಬ ಬೂಸ್ಟ್‌ನಿಂದ ದನಗಳಿಗೆ ನಿಧಾನವಾಗಿ ಬರುವ, ಬೇರೂರುವ ರೋಗ (ಆಕ್ಟಿನೊಮೈಸೋಸಿಸ್ ಅಥವಾ ಲಂಪಿ ಜಾ). ಅಪೂರ್ವವಾಗಿ ಕುರಿ ಆಡುಗಳಲ್ಲೂ ತುಂಬ ಅಪರೂಪವಾಗಿ ನಾಯಿಗಳಲ್ಲೂ ಕಾಣಬರುತ್ತದೆ. ಇದರ ಹುಣ್ಣುಗಳಿಂದ ಹೊರಡುವ ಕೀವು, ರಸಿಕೆಗಳಿಂದ ಇನ್ನೊಂದು ಪ್ರಾಣಿಗೆ ರೋಗ ಅಂಟುವುದು. ರೋಗ ಮುಖ್ಯವಾಗಿ ಕಾಣುವುದು ದವಡೆ ಮೂಳೆ ಮತ್ತದರ ಹೊರಪದರದಲ್ಲಿ. ತಲೆಯ ಬೇರೆ ಮೂಳೆಗಳಿಗೂ ಹರಡುವುದುಂಟು. ದನದ ಕಿರಣ ಅಣಬೆ ಹೊಲಗಳಲ್ಲಿದ್ದು, ಮೇವಿನ ಮೂಲಕ ದನಗಳ ಕರುಳೊಳಗೆ ಹೊಕ್ಕರೂ ಎಲ್ಲಾದರೂ ಗಾಯವಿದ್ದರೆ ಮಾತ್ರ ಅಲ್ಲಿ ರೋಗ ಹೊರಕಾಣಿಸಿಕೊಳ್ಳುತ್ತದೆ. ಶಾಶ್ವತ ದವಡೆ ಹಲ್ಲುಗಳು ಹುಟ್ಟುವ ಕಾಲದಲ್ಲಿ ಈ ರೋಗ ದನಗಳಲ್ಲಿ ಕಾಣುವುದು ಸಾಮಾನ್ಯ. ಹೊಟ್ಟೆಯಲ್ಲಿರುವ ಈಲಿಗೂ (ಯಕೃತ್ತು) ರೋಗತಾಕಬಹುದು. ಪುಪ್ಪುಸಗಳಲ್ಲೂ ರೋಗಕಂಡಿದೆ. ಕೆಚ್ಚಲಿಗೂ ರೋಗ ಅಂಟಬಹುದು. ರೋಗಾಣುವಿನ ಸುತ್ತಲೂ ಗಡಸು ಗಂಟುಗಳು ಆಗುವುದರಿಂದ ಮೂಳೆ ಊದಿಕೊಳ್ಳುತ್ತದೆ. ಇದರೊಂದಿಗೆ ತಂತುವಿನ ಕಣಜಾಲ (ಫೈಬ್ರಸ್‌ಟಿಷ್ಯೂ) ದಟ್ಟವಾಗಿ ಬೆಳೆಯುವುದು. ದವಡೆ ಮೂಳೆ ದಪ್ಪನಾಗಿ ಊದಿಕೊಂಡು, ಒಳಗೆ ತಂತುವಿನ ಕಣಜಾಲ ಸೇರಿಕೊಳ್ಳುವುದು. ಕೆಚ್ಚಲಿನಲ್ಲಿ ಮೊಲೆ ಚರ್ಮದ ತಳದಲ್ಲಿ ಗಂಟುಗಳಂತಿರುತ್ತವೆ. ಈ ಗಂಟಿನಲ್ಲಿ ಕೀವು ಸೇರಿಕೊಂಡು ಕುರುವಾಗಿ ಒಡೆದುಕೊಂಡು ಹುಣ್ಣಾಗಬಹುದು. ಇಲ್ಲವೇ ಹಾಲಿನ ಗ್ರಂಥಿನಾಳದ ಮೂಲಕ ಹಾಲನ್ನು ಸೇರಬಹುದು. ಅಂಥ ಹಾಲು ಕುಡಿದವರಿಗೆ ಈ ರೋಗ ಅಂಟುತ್ತದೆ.

ಇದರ ಚಿಕಿತ್ಸೆಯಲ್ಲಿ ಮುಖ್ಯವಾಗಿ, ಸೋಡಿಯಂ ಅಯೊಡೈಡನ್ನು ರಕ್ತನಾಳಗಳ ಮೂಲಕ ಚುಚ್ಚಿಹೊಗಿಸಬಹುದು. ಬಾಯ ಮೂಲಕವಾದರೆ, ಪೊಟ್ಯಾಸಿಯಂ ಅಯೊಡೈಡಿನ ದ್ರಾವಣವನ್ನು ಬಹಳ ದಿನ ಕೊಡಬೇಕು. ಜೀವಿವಿರೋಧಕ ಪೆನಿಸಿಲಿನ್‌ನಿಂದ ಹೆಚ್ಚಿನ ಅನುಕೂಲ ಆಗಬಹುದು. ಸಕಾಲದಲ್ಲಿ ಚಿಕಿತ್ಸೆ ಮಾಡಿದರೆ ಈ ರೋಗದಿಂದ ಸಾವು ಅಪರೂಪ. (ಎಸ್.ಎಂ.)

**ಅರಣ್ಯಗಳು ಮತ್ತು ಅರಣ್ಯಶಾಸ್ತ್ರ :** ಗಿಡಮರಗಳಿಂದ ಕೂಡಿ ಯಾವುದೇ ಒಂದು ಯಾಜಮಾನ್ಯಕ್ಕೆ ಅಥವಾ ಆಡಳಿತಕ್ಕೆ ಸೇರಿರುವ ಅಥವಾ ವನಖಂಡಗಳಿಂದ ಕೂಡಿರುವ ಪ್ರದೇಶ ಅರಣ್ಯ (ಫಾರೆಸ್ಟ್). ಅರಣ್ಯಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸಿ, ಬೆಳೆಸಿ ಅವುಗಳಿಂದ ಪರಮಾವಧಿ ಉಪಯೋಗ ಹೊಂದುವ ವಿಧಾನ ಅರಣ್ಯಶಾಸ್ತ್ರ (ಫಾರೆಸ್ಟ್ರಿ). ಸಂಯುಕ್ತರಾಷ್ಟ್ರಗಳ (ಯು.ಎನ್.) ಆಹಾರ ಮತ್ತು ಕೃಷಿ ವಿಭಾಗ (ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಸೇಷನ್, ಎಫ್.ಎ.ಓ.) ನೀಡಿರುವ ವ್ಯಾಖ್ಯೆಯ ಪ್ರಕಾರ ಸಸ್ಯಸಮುದಾಯದಿಂದ ವ್ಯಾಪ್ತವಾಗಿರುವ, ಎಲ್ಲ ಗಾತ್ರದ ಗಿಡಮರಗಳು ಪ್ರಧಾನವಾಗಿರುವ, ಕಡಿಯಲಿ ಬಿಡಲಿ ಮರಮುಟ್ಟು, ಸೌದೆ ಒದಗಿಸಲು ಸಮರ್ಥವಾಗಿರುವ ಅಥವಾ ಸ್ಥಳೀಯ ಹವೆಯ ಮೇಲೆ ಅಥವಾ ಜಲಸಂಪತ್ತಿನ ಮೇಲೆ ಪ್ರಭಾವ ಬೀರಲು ಶಕ್ತವಾಗಿರುವ, ಎಲ್ಲ ನೆಲಗಳಿಗೂ ಅರಣ್ಯ ಎಂಬ ಹೆಸರಿದೆ. ಕಾಡು, ಅಡವಿ ಪರ್ಯಾಯ ಪದಗಳು. ಕಾಡನ್ನು ಈಚೆಗೆ ಕಡಿದುಳಿಸಿರುವ ಆದರೆ ಬೇಗನೆ ಹೊಸಕಾಡನ್ನು ಬೆಳೆಸಲು ಉದ್ದೇಶಿಸಿರುವ ನೆಲವೂ ಅರಣ್ಯವೇ. ಉದ್ಯಾನವನಗಳು, ದಾರಿಕರೆ ಮರಸಾಲುಗಳು, ವ್ಯಾವಸಾಯಿಕೋತ್ಪನ್ನಕ್ಕಾಗಿ ನೆಟ್ಟು ಬೆಳೆಸಿದ ತೋಟಗಳು ಅರಣ್ಯ ಪದದ ವ್ಯಾಪ್ತಿಯಲ್ಲಿಲ್ಲ.

ಕೇವಲ ಗಿಡಮರ ಮುಂತಾದ ಸಸ್ಯಸಮುದಾಯಕ್ಕೆ ಮಾತ್ರ ಅರಣ್ಯ ಪದ ಸೀಮಿತವಲ್ಲ; ಆ ಪ್ರದೇಶದಲ್ಲಿ ಇರುವ ಕ್ರಿಮಿಕೀಟಗಳು, ಪ್ರಾಣಿಗಳು, ಅರಣ್ಯೋತ್ಪತ್ತಿಗಳು ಇವೆಲ್ಲವನ್ನೂ ಈ ಪದ ಒಳಗೊಂಡಿದೆ.

**ಬೆಳವಣಿಗೆ :** ಅರಣ್ಯಗಳ ಬೆಳವಣಿಗೆಯ ಮೇಲೆ ಪ್ರಭಾವಬೀರುವ ನೈಸರ್ಗಿಕ ಬಲಗಳು ನಾಲ್ಕು: 1 ಭೂಲಕ್ಷಣ–ಬೆಟ್ಟ ಕಣಿವೆಗಳು, ಮಟ್ಟಸಪ್ರದೇಶಗಳು, ಕೊರಕಲುಗಳು, ಮರುಭೂಮಿ ಮುಂತಾದುವು. 2 ಮಣ್ಣಿನ ಗುಣ–ಮಣ್ಣಿನ ರಾಸಾಯನಿಕ ರಚನೆ, ಮರಳು, ಜೇಡಿಮಣ್ಣು, ಜೌಗುನೆಲ, ಒಣನೆಲ ಮುಂತಾದವುಗಳಿಂದ ನಿರ್ಧರಿತವಾಗುವುದು. 3 ವಾಯುಗುಣ–ಹವೆಯ ಮೇಲೆ ಇದರ ಪ್ರಭಾವವಿದೆ. ಒಂದು ಪ್ರದೇಶದ ವಾಯುಗುಣ ಆ ಪ್ರದೇಶದ ಭೌಗೋಳಿಕ ಸ್ಥಾನವನ್ನೂ ಋತುಭೇದಗಳನ್ನೂ ವಿಶೇಷವಾಗಿ ಅವಲಂಬಿಸಿದೆ. 4 ತೇವಕಾರಕ ಗುಣ–ಆಯಾ ಸ್ಥಳದ ಸಸ್ಯವರ್ಗದ ನಮೂನೆಯನ್ನು ಆಯಾ ಭೂಮಿಯ ಹಿಂದಿನ ಸಂಸ್ಕಾರ ಬಹುವಾಗಿ ಪ್ರಭಾವಿಸುತ್ತದೆ. ಹೊರಗಿನ ಕಾರಕಗಳ ಪ್ರವೇಶವಿಲ್ಲದೆ ಯಾವ ಅಡವಿಯೂ ಬೆಳೆಯುವುದಿಲ್ಲ. ದೊಡ್ಡ ದೊಡ್ಡ ಮೃಗಗಳ ಅದರಲ್ಲೂ ಮನುಷ್ಯ ಮತ್ತು ಅವನು ಸಾಕುವ ಮೃಗಗಳ ಪ್ರಭಾವ ನೇರವಾಗಿಯೋ ಪರೋಕ್ಷವಾಗಿಯೋ ಕಾಡಿನ ಬೆಳವಣಿಗೆಯ ಮೇಲೆ ಪ್ರಭಾವಬೀರುತ್ತವೆ.

ಉಷ್ಣ, ಸಮಶೀತೋಷ್ಣ ಮುಂತಾದ ಯಾವುದೇ ಒಂದು ವಲಯದಲ್ಲಿ ಬೆಳೆಯುವ ಕಾಡುಗಳು ಬೇರೆ ಒಂದು ವಲಯದಲ್ಲಿ ಬೆಳೆಯುವ ಕಾಡುಗಳಿಗಿಂತ ಭಿನ್ನವಾಗಿರುತ್ತವೆ. ಒಂದೇ ಹವೆಯ ವಲಯದಲ್ಲಿಯೇ ನೆಲದ ಏರು ತಗ್ಗು ಗಾಳಿಯ ಹೊಡೆತದ ದಿಕ್ಕು, ಮಳೆ, ಹವೆಯ ಮಣ್ಣಿನ ಗುಣ ಮುಂತಾದುವನ್ನು ಅನುಸರಿಸಿ ಭಿನ್ನತೆ ತಲೆದೋರುವುದು. ಒಂದು ಪ್ರದೇಶದ ಸಸ್ಯವರ್ಗವನ್ನು ಪರೀಕ್ಷಿಸಿ ಆ ಸ್ಥಳದ ವಾಯುಗುಣವನ್ನೂ ವಿಲೋಮವಾಗಿ ವಾಯುಗುಣವನ್ನು ಪರಿಶೀಲಿಸಿ ಅಲ್ಲಿನ ಸಸ್ಯವರ್ಗವನ್ನೂ ವಿವರಿಸುವುದು ಸಾಧ್ಯವಿದೆ. ವಾಯುಗುಣ ಸ್ಥೂಲವಾಗಿ ಸಸ್ಯಗಳ ನಮೂನೆಯನ್ನು ನಿರ್ಧರಿಸಿದರೆ ಮಣ್ಣಿನ ಗುಣ ಸಸ್ಯಗಳ ಸೂಕ್ಷ್ಮ ವಿವರಗಳನ್ನು ನಿರ್ದಿಷ್ಟಗೊಳಿಸುವುದು. ಭೂಲಕ್ಷಣದ ಮೇಲೆ ನೀರಿನ ಅಭಿಮುಖತೆ (ಡ್ರೈನೇಜ್), ಮುಖ (ಆಸ್‌ಪೆಕ್ಟ್) ಮತ್ತು ಎತ್ತರ (ಆಲ್‌ಟಿಟ್ಯೂಡ್) ಇವುಗಳ ಪ್ರಭಾವ ವಿಶೇಷವಾಗಿದೆ. ಇಳಿಜಾರು ಪ್ರದೇಶದಲ್ಲಿ ನೀರಿನ ಬಸಿತದಿಂದ ಮಣ್ಣುತೊಳೆದು ಹೋಗಬಹುದು; ಸಮತಟ್ಟು ಪ್ರದೇಶದಲ್ಲಿ ನೀರು ನಿಂತು ಜೌಗುನೆಲವಾಗಬಹುದು; ಎತ್ತರದಿಂದ ತಗ್ಗಿನ ಕಣಿವೆಗಳಿಗೆ ಮಣ್ಣು ಯಾಂತ್ರಿಕವಾಗಿ ಜರುಗುವುದರಿಂದ ಎತ್ತರ ಸ್ಥಳಗಳಲ್ಲಿ ಮಣ್ಣಿನ ಸಾರ ಕಡಿಮೆಯೂ ತಗ್ಗು ಸ್ಥಳಗಳಲ್ಲಿ ಹೆಚ್ಚೂ ಆಗಬಹುದು; ಆಗ್ನೇಯ ಮತ್ತು ಪೂರ್ವದಿಕ್ಕಿಗೆ ಮುಖಮಾಡಿರುವ ಪ್ರದೇಶ ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಿಗೆ ಮುಖಮಾಡಿರುವ ಪ್ರದೇಶಗಳಿಗಿಂತ ತಂಪಾಗಿರುವುದು.

ಅರಣ್ಯ ಒಂದು ಪುಟ್ಟ ಪ್ರಪಂಚ. ಅಲ್ಲಿ ನಿರಂತರ ಹುಟ್ಟು, ಬೆಳವಣಿಗೆ, ಸಾವು ಎಂಬ ಆವರ್ತನೆ ನಡೆದೇ ಇದೆ. ಸಾಮಾನ್ಯವಾಗಿ ಉಷ್ಣವಲಯದಲ್ಲಿ ಮುಂಗಾರು ಮಳೆ ಪ್ರಾರಂಭವಾಗುತ್ತಲೇ ಬೀಜೋತ್ಪತ್ತಿ ಪ್ರಾರಂಭವಾದರೆ, ಸಮಶೀತೋಷ್ಣ ವಲಯದಲ್ಲಿ

ಮಾಗಿಯ ಕಾಲದಲ್ಲಿ ಬೀಜೋತ್ಪತ್ತಿ ಆಗುವುದು. ಫಲಗಳೂ ಬೀಜಗಳೂ ತಾಯಿಮರದಿಂದ ದೂರಪ್ರದೇಶಗಳಿಗೆ ಪ್ರಸಾರಗೊಂಡು ಅಲ್ಲಿ ನೆಲೆಸಲು ತಕ್ಕ ಉಪಾಯಗಳನ್ನು ನಿಸರ್ಗವೇ ನಿರ್ಮಿಸಿದೆ. ಹಣ್ಣು ಬಿರಿದು ಬೀಜ ದೂರಕ್ಕೆ ಸಿಡಿಯಬಹುದು; ಗಾಳಿ, ನೀರು, ಹಕ್ಕಿ, ಮೃಗ, ಮನುಷ್ಯರ ಮೂಲಕ ಬೀಜಗಳು ಬಲುದೂರ ಒಯ್ಯಲ್ಪಡುವುವು. ಇಂಥ ಬೀಜಗಳು ಅನುಕೂಲ ಸನ್ನಿವೇಶದಲ್ಲಿ ಮೊಳೆತು ಗಿಡಗಳಾಗುತ್ತವೆ. ಹೊಸ ಪರಿಸರಕ್ಕೆ ಹೊಂದಿಕೊಂಡು ಮರುಹುಟ್ಟಿನಿಂದ ಒಂದು ನೂತನ ವನಸ್ಪತಿ ಕೇಂದ್ರವನ್ನೇ ಸ್ಥಾಪಿಸುತ್ತವೆ. ಇಂಥ ಬೆಳವಣಿಗೆಯಲ್ಲಿ ಬೆಳಕು, ಗೊಬ್ಬರ, ಗಾಳಿ, ನೀರು ಇವುಗಳಿಗಾಗಿ ಸ್ಪರ್ಧೆ ಇದ್ದೇ ಇದೆ.

**ಪ್ರಯೋಜನಗಳು:** (1) ಸೌದೆ, ದಿಮ್ಮಿ, ಮರಮುಟ್ಟುಗಳ ಪೂರೈಕೆ ಮತ್ತು ಅರಣ್ಯಜನ್ಯವಸ್ತುಗಳು ಮನುಷ್ಯ ಜೀವನಕ್ಕೆ ಅತ್ಯಾವಶ್ಯಕ. (2) ನಿಸರ್ಗದ ಸಮತೋಲವನ್ನು ಕಾಪಾಡುವ ಮನುಷ್ಯನಿಗೆ ವಿನೋದ ಮತ್ತು ಆಹಾರ ಒದಗಿಸುವ ವನ್ಯಮೃಗಗಳ ನಿವಾಸ ಅರಣ್ಯ. (3) ನೀರಿನ ಸವೆತದಿಂದ, ಗಾಳಿಯ ಹೊಡೆತದಿಂದ ಮಣ್ಣಿನ ಫಲವತ್ತಾದ ಹೊರಪದರ ಸವೆದುಹೋಗದಂತೆ ರಕ್ಷಿಸುವ ಕವಚ ಅರಣ್ಯ. ಅಲ್ಲದೆ ಮಣ್ಣಿನ ಫಲವಂತಿಕೆಯನ್ನು ಅರಣ್ಯ ವರ್ಧಿಸುತ್ತದೆ. (4) ಮಳೆ ನೀರಿನ ಹರಿವನ್ನು ತಡೆಯುವುದರ ಮೂಲಕ ತೋಡುಹೊಳೆಗಳಲ್ಲಿ ಒಂದೇ ಸಲ ಪ್ರವಾಹವೇರಿ ಊರು, ಜನ ನಾಶವಾಗದಂತೆ ಅರಣ್ಯ ರಕ್ಷಣೆ ನೀಡುತ್ತದೆ. (5) ಮಳೆ ಬೀಳುವುದಕ್ಕೂ ಅಡವಿಗೂ ಏನು ಸಂಬಂಧವಿದೆ ಎಂಬ ಸಮಸ್ಯೆ ಇನ್ನೂ ತಿಳಿವಿಗೆಟುಕದೆ ಉಳಿದಿದೆ. ಆದರೆ ಅಡವಿ ಸಂಪೂರ್ಣವಾಗಿ ನಾಶವಾದಾಗ ಆ ಪ್ರದೇಶದಲ್ಲಿ ಮಳೆಯ ಪ್ರಮಾಣ ಬದಲಾಯಿಸಿದ ಪ್ರಸಂಗಗಳು ಉಲ್ಲೇಖಿತವಾಗಿವೆ. ಪರಿಸರದ ಹವೆಯ ಮೇಲೆ ಅಡವಿಯ ಸ್ಪಷ್ಟ ಪ್ರಭಾವ ಇದೆ. (6) ನೆಲದಲ್ಲಿ ನೀರಿನ ಪಸೆ ಉಳಿದಿರಲು ಅಡವಿಗಳ ನೆರವು ಅಗತ್ಯ. ಅಲ್ಲದೆ, ಮಳೆನೀರು ನೆಲದಲ್ಲಿ ಇಂಗಿ ಆಸರೆಗಳಿಗೆ ಪೂರೈಕೆಯಾಗಿ ಮುಂದೆ ಒರತೆಗಳಾಗಿ ಉಗಮಿಸಿ ಜನಜೀವನವನ್ನು ಹಸನುಗೊಳಿಸುವುದರಲ್ಲಿ ಅರಣ್ಯಗಳ ಪಾತ್ರ ಹಿರಿದು. ಜಲಾಶಯ ಪ್ರದೇಶಗಳಲ್ಲಿ ಅರಣ್ಯ ಸಂವರ್ಧನೆ ಮಾಡುವುದು ಈ ಕಾರಣದಿಂದ. (7) ಹಲವಾರು ಭೌಗೋಳಿಕ ಕಾರಣಗಳಿಂದ ನೆಲದಡಿಯಲ್ಲಿ ಹುದುಗಿಹೋದ ಕಾಡುಗಳು ಕಾಲಾಂತರದಲ್ಲಿ ಕಲ್ಲಿದ್ದಲು, ಕಲ್ಲೆಣ್ಣೆ ಮುಂತಾದ ಇಂಧನಗಳ ಉಗಮಗಳಾಗುತ್ತವೆ.

**ಪ್ರಪಂಚದ ಕಾಡುಗಳು:** ಭೂಮಿಯ ಹೊರಮೈ ಲಕ್ಷಣದಲ್ಲಿ ಕಾಡುಗಳಿಗೆ ಒಂದು ಮುಖ್ಯಸ್ಥಾನವಿದೆ. ತೀವ್ರತೆ ಅತಿಯಾಗದ ಮತ್ತು ದೀರ್ಘಕಾಲ ವ್ಯಾಪಿಸಿದ ಚಳಿಗಾಲವಿರುವ ಪ್ರದೇಶಗಳಲ್ಲಿ ಅರಣ್ಯಗಳು ಸ್ವಾಭಾವಿಕವಾಗಿ ಬೆಳೆಯುತ್ತವೆ. 20ನೆಯ ಶತಮಾನದ ದ್ವಿತಿಯಾರ್ಧದಲ್ಲಿ ಪ್ರಪಂಚದ ನೆಲದ ಶೇ. 33 ಭಾಗ ಅರಣ್ಯಾವೃತವಾಗಿತ್ತು. ಇನ್ನೂ ಶೇ.25 ಭಾಗ ಒಂದು ಕಾಲದಲ್ಲಿ ಅರಣ್ಯವಾಗಿದ್ದರೂ ಇಂದು ಅದು ವ್ಯವಸಾಯ ಪ್ರದೇಶವಾಗಿದೆ. ಉಳಿದ ಶೇ.42 ಭಾಗ ಪೇಟೆ–ಪಟ್ಟಣಗಳು, ಬೋಳುಬೆಟ್ಟಗಳು, ರಸ್ತೆಗಳು, ಮರುಭೂಮಿಗಳು ಮುಂತಾದವುಗಳಿಂದ ಕೂಡಿದೆ. ಎಫ್. ಎ. ಓ., ವರದಿಯ 1960 ಈ ಕೆಳಗಿನ ವಿವರ ನೋಡಬಹುದು.

**ಪ್ರಾದೇಶಿಕವಾಗಿ ಅರಣ್ಯಗಳ ವಿತರಣೆ**

| ಪ್ರದೇಶ | | ಪ್ರಪಂಚದ ಅರಣ್ಯ ಪ್ರದೇಶದ % | | ಅರಣ್ಯಗಳು ವ್ಯಾಪಿಸಿರುವ ಪ್ರದೇಶದ % |
|---|---|---|---|---|
| ಯುರೋಪ್ | . . . | 3 | . . . | 30 |
| ಯು.ಎಸ್.ಎಸ್.ಆರ್. | . . . | 26 | . . . | 51 |
| ಉತ್ತರ ಅಮೆರಿಕ | . . . | 17 | . . . | 39 |
| ಲ್ಯಾಟಿನ್ ಅಮೆರಿಕ | . . . | 23 | . . . | 46 |
| ಆಫ್ರಿಕ | . . . | 17 | . . . | 25 |
| ಏಷ್ಯ | . . . | 12 | . . . | 19 |
| ಪೆಸಿಫಿಕ್ ಪ್ರದೇಶ | . . . | 2 | . . . | 11 |
| ಪ್ರಪಂಚದಲ್ಲಿ | | 100 | . . . | 33 |

ಪ್ರಪಂಚದ ಸೌದೆ, ಯಂತ್ರ ಕಾರ್ಖಾನೆಗಳ ಸಮಗ್ರ ಆವಶ್ಯಕತೆ ನೆಲದ (ಶೇ.33) ಅಂಶ ಮಾತ್ರ ವ್ಯಾಪಿಸಿರುವ ಕಾಡುಗಳಿಂದಲೇ ಪೂರೈಕೆಯಾಗಬೇಕು. ಕಾಡುಗಳ ಮೇಲೆ ಬಿದ್ದಿರುವ ಒತ್ತಡದ ತೀವ್ರತೆ ಎಷ್ಟು ಎಂದೂ ಕ್ರಮರಹಿತ ಅರಣ್ಯನಾಶ ಎಂಥ ಗಂಡಾಂತರ ತಂದೊಡ್ಡಬಹುದೆಂದೂ ಸುಲಭವಾಗಿ ಊಹಿಸಬಹುದು. ರಚನೆಯ ದೃಷ್ಟಿಯಿಂದ ಪ್ರಪಂಚದ ಕಾಡುಗಳನ್ನು ಎರಡು ಮುಖ್ಯ ಭಾಗಗಳಾಗಿ ವಿಭಾಗಿಸಲಾಗಿದೆ–ಕೋನಿಫರಸ್ (ಶಂಕುವಿನಾಕಾರದ ಕಾಯಿ ಬಿಡುವ ನಿತ್ಯಹಸುರು ಮರಗಳು) ಅಥವಾ ಮಿದುಮರಗಳು; ಮತ್ತು ಅಗಲ ಎಲೆ ಮರಗಳು ಅಥವಾ ಗಡಸು ಮರಗಳು. ಗಡಸುಮರ ಎಂಬ ಹೆಸರು ಅಷ್ಟೊಂದು ನಿಖರವಲ್ಲ–ಇದರಲ್ಲಿ ಎಷ್ಟೋ ಪ್ರಭೇದಗಳ ಕಾಂಡ ಮಿದುಮರಕ್ಕಿಂತಲೂ ಮಿದುವಾಗಿರುವುದು ಕಂಡುಬಂದಿದೆ.

**ಕರ್ನಾಟಕ ರಾಜ್ಯದ ಕಾಡುಗಳ ಮುಖ್ಯ ನಮೂನೆಗಳು :**

1. ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣ ಅರಣ್ಯಗಳು (ಟ್ರಾಪಿಕಲ್ ಎವರ್‌ಗ್ರೀನ್ ಫಾರೆಸ್ಟ್ಸ್)–ವಾರ್ಷಿಕ ಮಳೆ 250 ಸೆಂಮೀ ಗಿಂತ ಹೆಚ್ಚು; 375–800 ಸೆಂಮೀ ವರೆಗೆ ಇರಬಹುದು. ಕಾಡು 150–1500 ಮೀ ಎತ್ತರಪ್ರದೇಶದವರೆಗೆ ಹಬ್ಬಿದೆ. ನಿತ್ಯ ಹಸುರಾಗಿರುವ ಎಲೆಗಳ ಮೇಲ್ಕಟ್ಟು ಇದರ ಲಕ್ಷಣ. ಇಂಥ ಹೇರಡವಿಗಳ ಭೌತಕಾರಣ ವಿಪುಲ ಆರ್ದ್ರತೆ. ಬೆಳಕಿಗಾಗಿ ಸ್ಪರ್ಧೆ, ಜಾಗಕ್ಕಾಗಿ ಸೆಣೆಸಾಟ, ಸತ್ತುಮಣ್ಣಾಗುತ್ತಿರುವ ಸಸ್ಯಾವಶೇಷಗಳ ಸಮೃದ್ಧಿ ಇವು ಇಂಥ ಸಂಪನ್ನ ಸಸ್ಯೋತ್ಪತ್ತಿಗೆ ಇತರ ಕಾರಣಗಳು. ಮರಗಳ ಎತ್ತರ 50 ಮೀ. ಗಿಂತಲೂ ಹೆಚ್ಚು. ತಳದಲ್ಲಿ ಬೆಳೆಯುವ ಸಸ್ಯಗಳು ಇಲ್ಲವೇ ಇಲ್ಲ ಎನ್ನಬಹುದು. ಬಳ್ಳಿಗಳ ಪ್ರಾಬಲ್ಯ ಬಲು ಕಡಿಮೆ.

2. ಉಷ್ಣವಲಯದ ಭಾಗಶಃ ನಿತ್ಯ ಹರಿದ್ವರ್ಣ ಅರಣ್ಯಗಳು (ಟ್ರಾಪಿಕಲ್ ಸೆಮಿ ಎವರ್‌ಗ್ರೀನ್ ಫಾರೆಸ್ಟ್ಸ್)–ವಾರ್ಷಿಕ ಮಳೆ 150–250 ಸೆಂಮೀ ವರೆಗೆ, ನಿತ್ಯಹಸುರು ಮರಗಳೂ ಎಲೆ ಉದುರಿಸುವ ಮರಗಳೂ ಇಲ್ಲಿವೆ. ಆದರೆ ಈ ಉದುರುವಿಕೆ ಬೇಸಿಗೆಯ ಕೊನೆಯ ದಿವಸಗಳಲ್ಲಿ ತಡವಾಗಿ ಆರಂಭವಾಗುವುದು. ಮುಂದೆ ಬಲುಬೇಗ ಹಸುರೆಲೆಗಳು ಚಿಗುರೊಡೆಯುವುವು. ಮೊದಲನೆಯ ಜಾತಿಯ ಅರಣ್ಯಗಳಲ್ಲಿ ಕಂಡುಬರುವ ಮಹಾವೃಕ್ಷಗಳು ಇಲ್ಲಿಲ್ಲ. ಬಳ್ಳಿಗಳು ಸ್ವಲ್ಪ ಮಾತ್ರ ಇವೆ.

3. ಉಷ್ಣವಲಯದ ತೇವ ಪರ್ಣಪಾತಿ ಅರಣ್ಯಗಳು (ಟ್ರಾಪಿಕಲ್ ಮಾಯಿಸ್ಟ್ ಡೆಸಿಡ್ಯೂಅಸ್ ಫಾರೆಸ್ಟ್ಸ್)–ವಾರ್ಷಿಕ ಮಳೆ 100–160 ಸೆಂಮೀ ವರೆಗೆ. ಇಲ್ಲಿ ಹೆಬ್ಬಿದಿರು, ಕಿರುಬಿದಿರು ಸಾಕಷ್ಟು ಬೆಳೆಯುತ್ತವೆ. ತೇವಗೊಂಡಿರುವ ನೆರಳಿನ ಜಾಗಗಳಲ್ಲಿ ಅಪ್ಪುಗಿಡಗಳೂ (ಎಪಿಫೈಟ್ಸ್) ಬಳ್ಳಿಗಳೂ ದಟ್ಟವಾಗಿವೆ.

4. ಉಷ್ಣವಲಯದ ಶುಷ್ಕ ಪರ್ಣಪಾತಿ ಅರಣ್ಯಗಳು (ಟ್ರಾಪಿಕಲ್ ಡ್ರೈ ಡೆಸಿಡ್ಯೂಅಸ್ ಫಾರೆಸ್ಟ್ಸ್–ವಾರ್ಷಿಕ ಮಳೆ 50–100 ಸೆಂಮೀ ವರೆಗೆ. ಮರಗಳ ಎತ್ತರ ಸಾಮಾನ್ಯವಾಗಿ 15–20 ಮೀ ವರೆಗೆ. ಇದೇ ಈ ಕಾಡುಗಳ ಲಕ್ಷಣ. ಮೂರನೆಯ ಮತ್ತು ಈ ಜಾತಿಯ ಕಾಡುಗಳನ್ನು ಒಟ್ಟಾಗಿ ಕಾರ್ಗಾಲದ ಕಾಡುಗಳೆಂದು ಕರೆಯುವುದುಂಟು. ಕರ್ನಾಟಕ ರಾಜ್ಯದಲ್ಲಿ ಇವೇ ಪ್ರಧಾನ. ವರ್ಷದ ನಾಲ್ಕಾರು ತಿಂಗಳ ಕಾಲ ಮಳೆಯಿಲ್ಲದಿದ್ದಾಗ ಒಣಗಿ ಬಿದ್ದ ತರಗೆಲೆಗಳು, ಟೊಂಗೆಗಳು ಕಾಡುಬೆಂಕಿಗೆ ಒಳ್ಳೆ ಗ್ರಾಸ. ಪ್ರತಿ ವರ್ಷವೂ ಕಾಡ್ಗಿಚ್ಚು ಹುಟ್ಟುವುದು ಕಾರ್ಗಾಲದ ಕಾಡುಗಳ ಇನ್ನೊಂದು ಲಕ್ಷಣ.

5. ಕಳ್ಳಿ ಕುರುಚಲು ಗಿಡಗಳಿರುವ ಒಣಕಾಡುಗಳು (ಟ್ರಾಪಿಕಲ್ ಡ್ರೈಥಾರ್ನ್ ಫಾರೆಸ್ಟ್ಸ್)–ವಾರ್ಷಿಕ ಮಳೆ 50 ಸೆಂ.ಮೀ. ವರೆಗೆ. ಮುಳ್ಳಿಡಿದ ಗಟ್ಟಿ ಜಾತಿಯ ಗಿಡ್ಡಮರಗಳು ಹೆಚ್ಚಾಗಿ ಇರುವ ಕಾಡುಗಳು. ನೆಲದ ಶುಷ್ಕತೆಯ ಪರಿಣಾಮವಾಗಿ ಬಳ್ಳಿಗಳು ಕಡಿಮೆ.

**ಕರ್ನಾಟಕ**

| | |
|---|---|
| ಒಟ್ಟು ಭೂಪ್ರದೇಶ | 191791 ಚ.ಕಿಮೀ |
| ಒಟ್ಟು ಅರಣ್ಯ ಪ್ರದೇಶ | 38724 ಚ.ಕಿಮೀ |
| ಕಾಯ್ದಿಟ್ಟ ಅರಣ್ಯ ಪ್ರದೇಶ | 28671 ಚ.ಕಿಮೀ |
| ಸಂರಕ್ಷಿತ ಅರಣ್ಯ ಪ್ರದೇಶ | 3932 ಚ.ಕಿಮೀ |
| ಅವರ್ಗೀಕೃತ ಅರಣ್ಯ ಪ್ರದೇಶ | 6181 ಚ.ಕಿಮೀ |

ಕರ್ನಾಟಕದ ಭೂ ಪ್ರದೇಶದ ಶೇಕಡ 20.19 ಭಾಗದಲ್ಲಿ ಅರಣ್ಯಗಳಿವೆ (ಫಾರೆಸ್ಟ್ ಸರ್ವೆ ಆಫ್ ಇಂಡಿಯ 2001)

**ಭಾರತದ ಅರಣ್ಯಗಳು :** ಭಾರತದಲ್ಲಿ ಅರಣ್ಯಾವೃತ ಪ್ರದೇಶ ಒಟ್ಟು ನೆಲದ ಶೇ.20.55 ಇದೆ. ಇದು ಪ್ರಪಂಚದ ಮಿತಿಗಿಂತ (ಶೇ.33) ಕಡಿಮೆ. ಈ ಪ್ರಮಾಣವನ್ನು ಶೇ.33.3ಗೆ ಏರಿಸಬೇಕೆಂದು 1952 ರಲ್ಲಿ ರಾಷ್ಟ್ರೀಯ ಅರಣ್ಯಧೋರಣೆ ಠರಾವು ಸರ್ಕಾರಕ್ಕೆ ಸೂಚಿಸಿದೆ. ಭಾರತದ ಅರಣ್ಯಗಳನ್ನು ಐದು ಭಾಗಗಳಾಗಿ ವರ್ಗೀಕರಿಸಲಾಗಿದೆ–1 ನಿತ್ಯಹರಿದ್ವರ್ಣ: 2 ತೇವ ಪರ್ಣಪಾತಿ ಅಥವಾ ಕಾಲಕಾಲಕ್ಕೆ ಎಲೆ ಉದುರುವ ಅರಣ್ಯ: 3 ಶುಷ್ಕ ಪರ್ಣಪಾತಿ 4. ಬೆಟ್ಟ ಪ್ರದೇಶದ ಉಷ್ಣವಲಯದ ಅರಣ್ಯ–ಮಾಂಟೇನ್ ಸಬ್ ಟ್ರಾಪಿಕಲ್, 5. ನದೀಮುಖದ ಅರಣ್ಯ.

**ಅರಣ್ಯಶಾಸ್ತ್ರ :** ಇದರ ಬೆಳವಣಿಗೆ ಈಚಿನದು. ಜನಸಂಖ್ಯೆ ಏರಿದಂತೆ ನೈಸರ್ಗಿಕವಾಗಿಯೊ ಮನುಷ್ಯಕೃತವಾಗಿಯೊ ಅರಣ್ಯಗಳ ಅವ್ಯಾಹತ ನಾಶ ಮುಂದುವರಿದಿದೆ. ತತ್ಪರಿಣಾಮವಾಗಿ ಘೋರ ವಿಪತ್ತುಗಳು ತಲೆದೋರಿದವು. ಇದರಿಂದಾಗಿ ಅರಣ್ಯಗಳ ಶಾಸ್ತ್ರೀಯ ಅಧ್ಯಯನ ಆವಶ್ಯಕ ಮತ್ತು ಅನಿವಾರ್ಯವಾಯಿತು. ಆಧುನಿಕ ಅರಣ್ಯ ಶಾಸ್ತ್ರವನ್ನು ಕುರಿತು ಇರುವ ಹಲವಾರು ವ್ಯಾಖ್ಯೆಗಳ ಸಾರ ಹೀಗಿದೆ–ಆರ್ಥಿಕ ಮತ್ತು ಸಾಮಾಜಿಕ ಕಾರಣಗಳನ್ನು ಅವಲಂಬಿಸಿ ವೈಜ್ಞಾನಿಕ ವಿವರಗಳ ತಳಹದಿಯ ಮೇಲೆ ರಚಿಸಿರುವ ಒಂದು ಕಲೆ ಅರಣ್ಯಶಾಸ್ತ್ರ. ಇಂಥ ಕಲೆಯ ಯಶಸ್ವೀ ಪ್ರಯೋಗದ ಮೇಲೆ ವಿಜ್ಞಾನದ ವಿವಿಧ ಅಂಗಗಳಾದ ರಸಾಯನ, ಪ್ರಾಣಿ, ಸಸ್ಯ, ಜೀವವಿಜ್ಞಾನ, ಗಣಿತ, ಭೌತ ಮುಂತಾದ ಎಲ್ಲ ಶಾಸ್ತ್ರಗಳನ್ನೂ ಅನ್ವಯಿಸುವುದು ಆವಶ್ಯಕವಾಗುತ್ತದೆ. ಅರಣ್ಯಶಾಸ್ತ್ರದಲ್ಲಿ ಅರಣ್ಯಗಳ ವೈಜ್ಞಾನಿಕ ಅಭ್ಯಾಸ,

ವರ್ಧನೆ, ಪೋಷಣೆ, ಸಂರಕ್ಷಣೆ ಮತ್ತು ಅವುಗಳಿಂದ ಪರಮಾವಧಿ ಉಪಯೋಗಗಳನ್ನು ಇಂದೂ ಮುಂದೂ ಹೊಂದುವ ವಿಧಾನಗಳು ಮತ್ತು ಅವುಗಳ ವೈಜ್ಞಾನಿಕ ಆಡಳಿತದ ಏರ್ಪಾಡು ಅಡಕವಾಗಿವೆ. ಮರಗಳು ಬೆಳೆದು ಉಪಯೋಗಕಾರಿಯಾಗಲು ಹಲವಾರು ವರ್ಷಗಳೇ ಬೇಕಾದುದರಿಂದ ಅರಣ್ಯಗಳ ಪ್ರಶ್ನೆ ದೀರ್ಘಕಾಲದ್ದು. ಆದ್ದರಿಂದ ಅರಣ್ಯಗಳನ್ನು ಕುರಿತು ದೀರ್ಘಕಾಲದ ಯೋಜನೆ ಆವಶ್ಯಕ. ಬೆಳೆಸಬೇಕಾದ ಮರಗಳ ಜಾತಿ ಪರಿಸರದ ಹವೆ, ಮಣ್ಣಿನ ಗುಣ, ಮರಗಳ ಪೋಷಣೆಗೆ ಮಾಡಬೇಕಾದ ಉಪಚಾರ ಇವೆಲ್ಲವನ್ನೂ ಕ್ರಮಬದ್ಧವಾಗಿ ಅಭ್ಯಸಿಸಿ, ಪ್ರಯೋಗಗಳಿಂದ ಪರೀಕ್ಷಿಸಿ ಮುಂದುವರಿಯಬೇಕು.

**ಅರಣ್ಯನಾಶ, ಸಂರಕ್ಷಣೆ :** ಅರಣ್ಯನಾಶದ ಕಾರಣಗಳು–1 ಮನುಷ್ಯ ; 2 ಬೆಂಕಿ ; 3 ಪ್ರಾಣಿಗಳು, ಕೀಟಗಳು ಮತ್ತು ರೋಗಗಳು; 4 ಇತರ ನೈಸರ್ಗಿಕ ಕಾರಣಗಳು.

ಮನುಷ್ಯ ತನ್ನ ತಾತ್ಕಾಲಿಕ ಸೌಕರ್ಯ, ಲಾಭಗಳಿಗಾಗಿ ಉಂಟುಮಾಡುವ ಹಾನಿ ಅಪಾರವಾಗಿದೆ. ಇಂಥ ಹಾನಿಯಿಂದ ಅರಣ್ಯ ಸಂರಕ್ಷಣೆ ಮಾಡಲು ಸರ್ಕಾರ ಕಾನೂನು ಕಾಯಿದೆ ಮಾಡಿ, ತಪ್ಪಿತಸ್ಥರನ್ನು ಹಿಡಿದು ಶಿಕ್ಷಿಸುವುದು. ಆದರೆ ಮನುಷ್ಯನಿಂದೊದಗುವ ಪ್ರತ್ಯಕ್ಷ ಪರೋಕ್ಷಹಾನಿ ಪೂರ್ಣ ನಿವಾರ್ಯವಲ್ಲ.

ಬೆಂಕಿ ಮನುಷ್ಯನ ಅಜಾಗರೂಕತೆಯಿಂದ ಅಥವಾ ವಿನಾಶಕಾರೀ ಭಾವನೆಯಿಂದ ಉಂಟಾಗಬಹುದು; ಅಥವಾ ಕಾಡ್ಗಿಚ್ಚಾಗಿ ತೊಡಗಬಹುದು. ಕಾಡ್ಗಿಚ್ಚುಗಳಲ್ಲಿ ಎರಡು ವಿಧ–ತಳದ ಕಿಚ್ಚು, ತಲೆಯ ಕಿಚ್ಚು. ಮೊದಲಿನವೇ ಹೆಚ್ಚು. ನೆಲದಲ್ಲಿ ಹರಡಿದ ತರಗೆಲೆ, ಹುಲ್ಲು, ಹೊದರುಗಳನ್ನು ದಹಿಸಿ ಬೇಗನೆ ಹರಡಿದ ಈ ಕಿಚ್ಚು ಮರಗಳ ತಳಕ್ಕೆ ಗಾಸಿ ಉಂಟುಮಾಡುತ್ತದೆ. ಆದರೆ ಸ್ವಲ್ಪಕಾಲದಲ್ಲಿಯೇ ಶಾಂತವಾಗುವುದು. ತಳದ ಕಿಚ್ಚು ಸುಲಭವಾಗಿ ಹತೋಟಿಗೆ ಒಳಪಡುವುದು. ತಲೆಯ ಕಿಚ್ಚುಗಳು ಮರಗಳ ಮೇಲುಭಾಗವನ್ನೆಲ್ಲ ಉರಿಸಿ ಮರಗಳನ್ನು ನಾಶ ಮಾಡುತ್ತವೆ. ಗಾಳಿ ಬೀಸಿದಂತೆ ಸರ್ವವ್ಯಾಪಿಯಾಗುವ ಈ ಕಿಚ್ಚುಗಳನ್ನು ಹತೋಟಿಗೆ ತರುವುದು ಕಷ್ಟ. ಇಂಥ ಕಿಚ್ಚುಗಳಿಂದ ಅರಣ್ಯಕ್ಕೆ ತುಂಬ ಹಾನಿಯಾಗುವುದು. ಬೆಂಕಿ ಒಳ್ಳೆ ಆಳು, ಆದರೆ ಕೆಟ್ಟ ಯಜಮಾನ ಎನ್ನುವುದಕ್ಕೆ ಕಾಡ್ಗಿಚ್ಚು ಉತ್ತಮ ನಿದರ್ಶನ. ಕಾಡ್ಗಿಚ್ಚುಗಳಿಂದ ಅರಣ್ಯ ಸಂರಕ್ಷಣೆ ಮಾಡಲು ಅನುಸರಿಸುವ ಕ್ರಮಗಳು–(1) ಶಿಕ್ಷಣದಿಂದ, ಶಿಕ್ಷೆಯಿಂದ ಮನುಷ್ಯಕೃತ ಅಪರಾಧಗಳನ್ನು ಕಡಿಮೆ ಮಾಡುವುದು; (2) ಕಾಡುಗಳ, ತೋಪುಗಳ ಸುತ್ತ ಒಳಗೂ ಹೊರಗೂ ಕಿಚ್ಚನ್ನು ತಡೆಯುವ ಅಷ್ಟಿಷ್ಟಗಲದ ಪಾಕುಸಾಲುಗಳನ್ನು (ಬೆಂಕ್ರೋಟು) ಮಾಡಿ ಅವು ಮುಚ್ಚಿಹೋಗದಂತೆ ಎಚ್ಚರ ವಹಿಸುವುದು. ಹೊರಗಿನಿಂದ ಹರಡಿಬಂದ ಬೆಂಕಿ ಈ ಸಾಲಿನಲ್ಲಿ ಗ್ರಾಸ ದೊರೆಯದೆ ನಂದಿಹೋಗುವುದು ಅಥವಾ ಅಲ್ಲಿ ಅದನ್ನು ಹತೋಟಿಗೆ ತರಬಹುದು. ಅಡವಿಯಲ್ಲಿನ ರಸ್ತೆಗಳ ಅಕ್ಕಪಕ್ಕಗಳಲ್ಲೂ ಪಾಕುಮಾಡಿ ಅಲ್ಲಿ ಸಸ್ಯಗಳು ಇರದಂತೆ ನಿರ್ಮೂಲಿಸುತ್ತಾರೆ. ಇದರಿಂದ ಬೆಂಕಿಯ ಹರಡುವಿಕೆಗೆ ತಡೆ ಉಂಟಾಗುತ್ತದೆ. ಕಾಡ್ಗಿಚ್ಚನ್ನು ತಡೆಯಲು ಇನ್ನೊಂದು ವಿಧಾನವೂ ಇದೆ–ಬೆಂಕಿ ಹಿಡಿಯಬಹುದಾದ ಪ್ರದೇಶಗಳನ್ನು ಮೊದಲೇ ಗುರುತಿಸಿ ಅಲ್ಲಿ ನಿಯಂತ್ರಿತವಾದ ಬೆಂಕಿ ಹಾಕುವುದು. ಇದರಿಂದ ನೈಸರ್ಗಿಕವಾಗಿ ಅಕಸ್ಮಾತಾಗಿ ಸಂಭವಿಸಬಹುದಾದ ಅಪಘಾತ ಇಲ್ಲದಾಗುತ್ತದೆ. ವಿಧಾನ ಏನೇ ಇರಲಿ, ಅರಣ್ಯ ಸಿಬ್ಬಂದಿಯವರ ನಿರಂತರ ಜಾಗರೂಕತೆ ಅತ್ಯಾವಶ್ಯಕ. ಹೆಲಿಕಾಪ್ಟರ್ ಸಹಾಯದಿಂದ ರಾಸಾಯನಿಕಗಳನ್ನು ಕಾಡ್ಗಿಚ್ಚಿನ ಮೇಲೆ ಮಳೆಗೆರೆದು ಶಮನಗೊಳಿಸುವುದೂ ಸಾಧ್ಯವಿದೆ.

ಪ್ರಾಣಿಗಳು, ಕೀಟಗಳು ಮತ್ತು ರೋಗಗಳು: ಅಡವಿಯ ಉತ್ಪನ್ನಗಳಿಗೆ ಘಾತವುಂಟು ಮಾಡುವ ಪ್ರಾಣಿಗಳು, ಕೀಟಗಳು, ರೋಗಗಳು ಯಾವುವು; ಅವುಗಳಿಂದಾಗುವ ಘಾತದ ಸ್ವರೂಪವೇನು ಎಂಬುದರ ತಿಳಿವಳಿಕೆಯ ಮೇಲೆ ರಕ್ಷಣೋಪಾಯ ಅವಲಂಬಿಸಿದೆ. ಸಾಕುಪ್ರಾಣಿಗಳಾದ ದನ, ಆಡುಗಳಿಂದ, ಕಾಡುಪ್ರಾಣಿಗಳಾದ ಆನೆ, ಕಾಡುಕೋಣ, ಕಾಡುಹಂದಿ ಮುಂತಾದವುಗಳಿಂದ ಸಾಕಷ್ಟು ನಾಶ ಉಂಟಾಗುವುದು. ಮಿಡತೆ ಮುಂತಾದ ಕೀಟಗಳು ಮಹಾರಣ್ಯಗಳನ್ನೇ ನಿರ್ಮೂಲ ಮಾಡಿದುದಕ್ಕೆ ನಿದರ್ಶನಗಳಿವೆ. ಸೂಕ್ಷ್ಮಾಣುಗಳಿಂದ ಶಿಲೀಂಧ್ರಗಳಿಂದ ಹರಡುವ ರೋಗಗಳು–ಅರಣ್ಯಗಳಿಗೆ ಮಾರಕ. ಇವುಗಳಲ್ಲಿ ಪ್ರತಿಯೊಂದರಿಂದ ಆಗುವ ಹಾನಿಯನ್ನು ಪ್ರತ್ಯೇಕವಾಗಿ ಅಭ್ಯಸಿಸಿ ಅದಕ್ಕೆ ಪರಿಹಾರ ಹುಡುಕಬೇಕು. ಅರಣ್ಯಶಾಸ್ತ್ರ ಸಂಶೋಧನಾಗಾರದಲ್ಲಿ ನಿರಂತರವಾಗಿ ನಡೆಯುವ ಕೆಲಸವಿದು.

ಇತರ ನೈಸರ್ಗಿಕ ಕಾರಣಗಳು : ಮಳೆ ಗಾಳಿಯಿಂದ ಸಾಕಷ್ಟು ನಾಶ ಸಂಭವಿಸುವುದಿದೆ. ನೆಲ ಜರಿದು ಅರಣ್ಯದ ಸ್ವರೂಪ ಬದಲಾಗುವುದಿದೆ. ಕಡು ಬೇಸಿಗೆಯಿಂದ ತಂಪಿಲ್ಲದೆ ಕಾಡು ಒಣಗಬಹುದು. ನೆಲ ಸವೆದು ಕುಸಿಯದಂತೆ ಕಾಪಾಡುವುದರ ಮೂಲಕ ಗಾಳಿಯ ಸಂಚಾರ ಸರಾಗವಾಗಿರುವಂತೆ ಮರಗಳ ಇರವನ್ನು ನಿಯಂತ್ರಿಸುವುದರ ಮೂಲಕ ಕಾಡಿನ ಝರಿಗಳನ್ನು ಸಂರಕ್ಷಿಸಿಕೊಂಡು ಬರುವುದರ ಮೂಲಕ ಇಂಥ ಅಪಾಯಗಳಿಂದ ಅರಣ್ಯಗಳನ್ನು ರಕ್ಷಿಸಬಹುದು.

**ಅರಣ್ಯ ಇಲಾಖೆಯಲ್ಲಿ ಜಾರಿಯಲ್ಲಿರುವ ಹತೋಟಿ ಕ್ರಮಗಳು:** (1) ನೆಲದ ಸದುಪಯೋಗ ; (2) ಎಲ್ಲೆಕಟ್ಟನ್ನು ಹಾಕುವುದು ; (3) ಎಲ್ಲೆಯ ಸುತ್ತ ಅಗಳನ್ನು ತೋಡುವುದು ; (4) ವಾಟ್ ಕಟ್ಟೆಯನ್ನು ಹಾಕುವುದು (ಭೂಮಿಯ ಎಲ್ಲ ಕಡೆಗಳಲ್ಲೂ ಮಣ್ಣನ್ನು ಎಲ್ಲೆಗಳಲ್ಲಿ ರಾಶಿಹಾಕಿ ಯಾವ ರೂಪದಲ್ಲೇ ಆಗಲಿ ಕಟ್ಟೆಗಳನ್ನೋ ಏಣುಗಳನ್ನೋ ಕಟ್ಟುವ ವಿಧಾನ. ಕೊಚ್ಚಿ ಹೋಗುವ ನೀರನ್ನು ತಡೆದಿಡುವುದು ಇವುಗಳ ಉದ್ದೇಶ): 5 ಸೋಪಾನಸ್ತರಗಳನ್ನು ಮಾಡುವುದು; 6 ಕೊರಕಲುಗಳನ್ನು ಮುಚ್ಚುವುದು; 7 ತಡೆಗಟ್ಟುಗಳನ್ನು ಹಾಕುವುದು; 8 ಪ್ರವಾಹಗಳನ್ನೂ ಹುಚ್ಚು ಹೊಳೆಗಳನ್ನೂ ಸರಿಯದ ಕಡೆಗೆ ಹರಿಯುವಂತೆ ಮಾಡುವುದು; 9 ಹುಲ್ಲುಗಾವಲುಗಳನ್ನು ವ್ಯವಸ್ಥೆಯಿಂದ ನೋಡಿಕೊಳ್ಳುವುದು; ಮತ್ತು 10 ಅಡವಿಗಳನ್ನು ಬೆಳೆಸುವುದು.

**ಅರಣ್ಯದ ಲಘು ಫಸಲುಗಳು:** ಅರಣ್ಯದ ಪ್ರಧಾನ ಫಸಲುಗಳು ಚೌಬೀನೆ (ನಾಟಾ), ಸೌದೆ (ಉರಿಸುವ ಕಟ್ಟಿಗೆ ಮತ್ತು ಇದ್ದಲು). ಉಳಿದವುಗಳ ಹೆಸರು ಲಘು ಫಸಲುಗಳು. ಅರಣ್ಯ ಸಂಪತ್ತಿನಲ್ಲಿರುವ ಸಸ್ಯ, ಪ್ರಾಣಿ ಮತ್ತು ಖನಿಜ ಸಂಬಂಧ ಉತ್ಪನ್ನಗಳೆಲ್ಲ ಲಘು ಫಸಲುಗಳೇ. ಇವುಗಳ ವಿಂಗಡಣೆ ಈ ಕೆಳಗಿನಂತಿದೆ.

1. ಸಸ್ಯಸಂಬಂಧ ಫಸಲುಗಳು — 1 ಕಾಡುಹುಲ್ಲು, ಬಿದಿರು ಬೆತ್ತ, 2 ಮರದ ಎಲೆಗಳು (ಮೇವಿನ ಎಲೆ, ಗೊಬ್ಬರದ ಎಲೆ). 3 ನಾರುಗಳು ಮತ್ತು ಮಡ್ಡಿ ರೇಷ್ಮೆ. 4 ಎಣ್ಣೆ ಬೀಜಗಳು. 5 ಧರ್ಮ ಹದಮಾಡುವ ಟ್ಯಾನ್ ಮತ್ತು ಬಣ್ಣಗಳು. 6 ಅಂಟು ರಾಳ, ತೈಲರಾಳ, 7 ಔಷಧಿ, ಸಾಂಬಾರ ಪದಾರ್ಥಗಳು, ತಿನಿಸು ಪದಾರ್ಥಗಳು ಮತ್ತು ವಿಷಪೂರಿತ ವಸ್ತುಗಳು. 8 ಬಟ್ಟಿ ಇಳಿಸಿ ಅಥವಾ ಕಷಾಯದಿಂದ ಬರುವ ಉತ್ಪನ್ನಗಳು. 9 ಇನ್ನುಳಿದ ವಿವಿಧ ಉತ್ಪನ್ನಗಳು.

2 ಪ್ರಾಣಿಸಂಬಂಧ ಫಸಲುಗಳು —1 ಅರಗು. 2 ಜೇನುತುಪ್ಪ. ಮೇಣ 3 ರೇಷ್ಮೆ, 4 ಧರ್ಮ, 5 ದಂತ, 6 ಹಕ್ಕಿಗಳ ಗೂಡು, 7 ಮೀನು, 8 ಷಿಕಾರಿಯ ಸಂಗ್ರಹಗಳು.

3 ಖನಿಜ ಸಂಬಂಧ ಉತ್ಪನ್ನಗಳು —1 ಅಭ್ರಕ, ಮ್ಯಾಂಗನೀಸ್, ಕಬ್ಬಿಣದ ಅದುರು. 2 ಸುಣ್ಣಕಲ್ಲು, 3 ಬಳಪದಕಲ್ಲು, 4 ಕಟ್ಟಡದ ಕಲ್ಲು ಇತ್ಯಾದಿ.

**ಅರಣ್ಯ ಕೈಗಾರಿಕೆಗಳು:** ಇವುಗಳ ವಿಭಾಗಗಳು ಈ ಕೆಳಗಿನಂತಿವೆ. 1 ಚೌಬೀನೆ ತಯಾರಿಕೆ (ಲಾಗಿಂಗ್), ಹದಮಾಡುವಿಕೆ ಮತ್ತು ಮರ ಸಂಸ್ಕರಣ, 2 ಮರಕೊಯ್ತು ಮತ್ತು ಪೀಠೋಪಕರಣ. 3 ಪದರ ಹಲಗೆ (ಪ್ಲೈವುಡ್) ಹಲಗೆ ಮತ್ತು ಗಟ್ಟಿ (ಹಾರ್ಡ್) ಹಲಗೆ. 5 ಕಾಗದದ ಪಲ್ಪ್ ಮತ್ತು ರೇಯಾನ್. 6 ಬೆಂಕಿಕಡ್ಡಿ, 7 ಸೌದೆ, ಇದ್ದಲು, 8 ಗಂಧದ ಎಣ್ಣೆ, 9 ಕಾಚು ರೇಸಿನ್, ಟರ್ಪೆಂಟೈನ್, ಅರಗು, ಕರ್ಪೂರ, ಹುಲ್ಲು ಸರಬರಾಜು ಇತ್ಯಾದಿ. ಭಾರತದಲ್ಲಿ ಕೈಗಾರಿಕೆಯ ದೃಷ್ಟಿಯಿಂದ ಚೌಬೀನೆಯ ಆವಶ್ಯಕತೆ ತುಂಬ ಇದೆ.

**ಅರಣ್ಯಮೃಗ ಸಂರಕ್ಷಣೆ :** ಜನಸಂಖ್ಯೆಯ ಬೆಳವಣಿಗೆ, ಕಾಡುಗಳ ನಿರ್ಮೂಲನ, ಮೃಗ ಪಕ್ಷಿಗಳ ನಿರಾಶ್ರಿತತ್ವ, ನಾಶ—ಈ ಸಮಸ್ಯೆಗಳು ಕ್ರಮೇಣ ಬೃಹತ್ಪ್ರಮಾಣ ತಾಳಿವೆ. ಅರಣ್ಯಮೃಗಸಂರಕ್ಷಣೆ ಅರಣ್ಯಶಾಸ್ತ್ರದ ಬಹು ಮುಖ್ಯ ಅಂಗ. ನಿಸರ್ಗದ ಸಮತೋಲ ಕಾಪಾಡುವುದರಲ್ಲಿ ಆ ಮೂಲಕ ಮನುಷ್ಯ ಜೀವನ ಸುಗಮಗೊಳಿಸುವುದರಲ್ಲಿ ಇದರ ಪಾತ್ರ ಹಿರಿದು. ಇದಕ್ಕಾಗಿ ರಕ್ಷಿತ ಅರಣ್ಯಗಳು, ಬೇಟೆ ನಿಷೇಧಿಸಿರುವ ಪ್ರದೇಶಗಳು, ಮೃಗಪಕ್ಷಿಗಳಿಗೇ ಮೀಸಲಾಗಿರುವ ಉದ್ಯಾನಗಳು, ಅಭಯಾರಣ್ಯಗಳು ಎಂದು ಮುಂತಾಗಿ ಸರಕಾರಗಳು ವಿಧಿಸಿವೆ. ಮುಖ್ಯ ಉದೇಶವಿಷ್ಟು—ಪ್ರಾಣಿಗಳು ಸಹಜ ಪರಿಸರದಲ್ಲಿ ವಿಕಾಸ ಹೊಂದಲು ಅವಕಾಶ ಒದಗಿಸಬೇಕು; ಇದರಿಂದ ಮನುಷ್ಯನ ಜ್ಞಾನಾಭಿವೃದ್ಧಿಯಾಗುವುದರ ಜೊತೆಗೆ ರಸಾನುಭವವೂ ಇದೆ.

ಕರ್ನಾಟಕ ರಾಜ್ಯದಲ್ಲಿ 1907ರಲ್ಲಿ ಬೇಟೆ ಕಾನೂನು ಜಾರಿಗೆ ಬಂದಿತು. ಇದರ ಪ್ರಕಾರ ಆಗ ಪ್ರಚಾರವಾಗಿದ್ದ ಮೃಗಯಾನಿಯಮಗಳಿಗೆ ಅನುಸಾರವಾಗಿ ವನ್ಯಜೀವಿಗಳು ಹೇರಳವಾಗಿದ್ದ ಅನೇಕ ಕಾಡುಗಳಲ್ಲಿ ಬೇಟೆಯನ್ನು ನಿಷೇಧಿಸಲಾಗಿತ್ತು. 1941ರಲ್ಲಿ ನೀಲಗಿರಿಗೂ ವೈನಾಡಿಗೂ ಹೊಂದಿಕೊಂಡಿರುವ ಸುಮಾರು 321 ಚ.ಮೈ. ಪ್ರದೇಶದ ವೇಣುಗೋಪಾಲ ವನ್ಯಮೃಗ ಅಭಯಾರಣ್ಯ ಇದರಲ್ಲಿದೆ. ಬಂಡೀಪುರದ ವಿಸ್ತೀರ್ಣವನ್ನು ಹೆಚ್ಚಿಸಲು ಮತ್ತು ಇದನ್ನು ರಾಷ್ಟ್ರೀಯ ಮೃಗೋದ್ಯಾನವಾಗಿ ರೂಪಿಸಲು ಪ್ರಯತ್ನಗಳು ನಡೆದಿವೆ. ಕರ್ನಾಟಕದ ಇತರ ಪ್ರಸಿದ್ಧ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನವನಗಳೆಂದರೆ ನಾಗರಹೊಳೆ (573 ಚ.ಕಿಮೀ.), ಬಂಡೀಪುರ (820 ಚ.ಕಿಮೀ), ಭದ್ರಾ (490 ಚ.ಕಿಮೀ) ಇತ್ಯಾದಿ. *

**ಅರಣ್ಯ ಕಾಯಿದೆಗಳು:** ಅರಣ್ಯ ಪದದ ವ್ಯಾಖ್ಯೆ ಆಯಾದೇಶದ ಸಂವಿಧಾನಕ್ಕೆ ಅನುಗುಣವಾಗಿದೆ. ಇಂಥ ವ್ಯಾಖ್ಯೆ ಕಾಲಾನುಸಾರ ಬದಲಾವಣೆಗೊಂಡಿದೆ. ಈಗ ಸರಕಾರ ಅರಣ್ಯ ಎಂದು ವಿಧಿಸುವ ಪ್ರದೇಶಗಳ ಆಡಳಿತಕ್ಕಾಗಿ ರೂಪಿಸುವ ನಿಯಮಗಳಿಗೆ ಅರಣ್ಯ ಕಾಯಿದೆಗಳೆಂದು ಹೆಸರು. ಅರಣ್ಯಕ್ಕೆ ಸೇರದ ಭೂಮಿಯ ಒಡೆತನ ಯಾರದ್ದಾಗಿದ್ದರೂ ಕಾಯಿದೆಗಳಿಗೆ ಸರ್ವವ್ಯಾಪ್ತಿಯಿದ್ದೇ ಇದೆ. ಅರಣ್ಯ ರಾಷ್ಟ್ರದ ಸಂಪತ್ತು. ಅದರ ಏಳ್ಗೆ, ನಾಶಗಳೊಡನೆ ದೇಶದ ಏಳ್ಗೆ ನಾಶಗಳು ನಿಕಟವಾಗಿ ಹೊಂದಿಕೊಂಡಿವೆ—ಇದು ಒಂದು ರಾಷ್ಟ್ರದ ಅರಣ್ಯ ನೀತಿ.

ಭಾರತಸರ್ಕಾರ ಮೊದಲಿನಿಂದಲೂ ಇದ್ದ ಕಾಯಿದೆಗಳನ್ನು ಕ್ರೋಡೀಕರಿಸಿ 1927ರಲ್ಲಿ ಹೊಸ ಕಾಯಿದೆ ಪ್ರಕಟಿಸಿತು. ಕರ್ನಾಟಕ 1900ರಲ್ಲಿ ಪ್ರಕಟಿಸಿದ ಕಾಯಿದೆ 1901ರ ಜನವರಿ ಒಂದನೆಯ ತಾರೀಕಿನಿಂದ ಜಾರಿಗೆ ಬಂದಿತು. ಇಂಥ ಕಾಯಿದೆಗಳಿಗೆ ಕಾಲಕಾಲಕ್ಕೆ ತಿದ್ದುಪಡಿಗಳೂ ಬಂದಿವೆ. (ಎಸ್.ವಿ.)

**ವನಮಹೋತ್ಸವ:** ಭಾರತ ದೇಶದ ಜನತೆಗೆ ಅರಣ್ಯಗಳ ಆವಶ್ಯಕತೆ, ಉಪಯೋಗ ಇವುಗಳ ವಿಷಯ ಹೆಚ್ಚಿನ ಅರಿವು ಮೂಡುವಂತೆ ಮಾಡಲು ದೇಶದ ಅರಣ್ಯ ಸಂಪತ್ತನ್ನು ಕ್ರಮಬದ್ಧವಾಗಿ ವರ್ಧಿಸಲು ವನಮಹೋತ್ಸವ ಎಂಬ ರಾಷ್ಟ್ರೀಯ ಸಪ್ತಾಹವನ್ನು 1950ರಿಂದ ಆಚರಿಸಲಾಗುತ್ತಿದೆ.

**ಭಾರತದಲ್ಲಿ ಅರಣ್ಯ ಸಂಶೋಧನ ಸಂಸ್ಥೆಗಳು:** ಡೆಹರಾಡೂನಿನಲ್ಲಿರುವ ಫಾರೆಸ್ಟ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪ್ರಧಾನವಾದದ್ದು. ಇದು 1878ರಲ್ಲಿ ಅರಣ್ಯ ಶಾಖೆ ಎಂಬ ಹೆಸರಿನಿಂದ ರೂಪ ತಳೆಯಿತು. ಅರಣ್ಯಶಾಸ್ತ್ರದ ಅಭ್ಯಾಸ, ಅರಣ್ಯಾಧಿಕಾರಿಗಳ ತರಪೇತು ಮುಖ್ಯೋದ್ದೇಶಗಳು. 1906ರಲ್ಲಿ ಶಾಲೆ ವಿಸ್ತರಿಸಿ ಅಧ್ಯಯನದ ವ್ಯಾಪ್ತಿ ಬೆಳೆಯಿತು. ಸು.1300 ಎಕರೆ ಪ್ರದೇಶದಲ್ಲಿ ಸಂಸ್ಥೆಯ ಆಡಳಿತ ಕಛೇರಿ, ಸಂಶೋಧನಾಲಯಗಳು, ವಸ್ತು ಸಂಗ್ರಹಾಲಯಗಳು ಮುಂತಾದುವುಗಳನ್ನು ರಚಿಸಲಾಗಿದೆ (1920). ಆಧುನಿಕ ವೈಜ್ಞಾನಿಕ ತಳಹದಿಯ ಮೇಲೆ ನಿಂತ ಅರಣ್ಯದಶಾಸ್ತ್ರದ ವಿಶಿಷ್ಟ ವಿಭಾಗಗಳಲ್ಲೂ ಸಂಶೋಧನೆ ನಡೆಸುತ್ತಿರುವ, ಶಿಕ್ಷಣ ನೀಡುತ್ತಿರುವ ಈ ಸಂಸ್ಥೆ ದೇಶದ ಪ್ರಗತಿಯ ಒಂದು ಭವ್ಯ ಸಂಕೇತ.

ಭಾರತದಲ್ಲಿ ಇತರ ಅರಣ್ಯ ಸಂಶೋಧನ ಸಂಸ್ಥೆಗಳು ಕೊಯಮತ್ತೂರು, ಬೆಂಗಳೂರು ಗಳಲ್ಲಿವೆ. ಜಬ್ಬಲ್‌ಪುರದಲ್ಲಿ ಒಂದನ್ನು ಸ್ಥಾಪಿಸಲು ಪ್ರಯತ್ನ ನಡೆದಿದೆ.

**ಬೆಂಗಳೂರಿನಲ್ಲಿರುವ ಅರಣ್ಯ ಸಂಶೋಧನ ಪ್ರಯೋಗಾಲಯ :** ಇದು 2 ಜನವರಿ 1936ರಲ್ಲಿ ಅಸ್ತಿತ್ವಕ್ಕೆ ಬಂದಿತು. ಮುಂದೆ ಇದೊಂದು ಬೃಹತ್ ಅರಣ್ಯ ಸಂಶೋಧನ ಪ್ರಯೋಗಾಲಯವಾಗಿ ಮಾರ್ಪಾಟು ಹೊಂದಿತು. ಇದನ್ನು ಜರ್ಮನಿಯ ಮ್ಯೂನಿಕ್ ಅರಣ್ಯ ಸಂಶೋಧನ ಪ್ರಯೋಗಾಲಯದ ಮಾದರಿಯಲ್ಲಿ ಸ್ಥಾಪಿಸಲಾಗಿದೆ. 1940 ರಿಂದೀಚೆಗೆ ಅರಣ್ಯಾಧಿಕಾರಿಗಳ ಶಿಕ್ಷಣವೂ ಈ ಸಂಸ್ಥೆಯಲ್ಲಿ ನಡೆಯುತ್ತಿದೆ. ಬಿದಿರನ್ನು ರೇಯಾನ್ ಪಲ್ಪ್ ಆಗಿ ಉಪಯೋಗಿಸಲು ಮೊದಲು ಭಾರತಕ್ಕೆ ತೋರಿಸಿಕೊಟ್ಟ ಹಿರಿಮೆ ಈ ಸಂಸ್ಥೆಯದು. ಅರಗಿನ ಕೀಟ ಸಾಕಲು ವಿವಿಧ ವೃಕ್ಷಗಳ ಬಳಕೆಯನ್ನು (ಎಲಚಿ, ಜಾಲರಿ ಮುಂತಾದವು) ಜನಸಾಮಾನ್ಯರಿಗೆ ಪರಿಚಯ ಮಾಡಿಸಿ ಅರಗಿನ ತಯಾರಿಕೆ ಹೆಚ್ಚು ಮಾಡಿರುವ ಹಿರಿಮೆ ಈ ಸಂಸ್ಥೆಗೇ ಸಲ್ಲುತ್ತದೆ. ಈ ಸಂಸ್ಥೆ ಮಾಡಿರುವ ಮತ್ತೊಂದು ಕೆಲಸವೆಂದರೆ ಔಷಧಿ ಸಸ್ಯಗಳ ಕನ್ನಡದ ಹೆಸರುಗಳನ್ನೆಲ್ಲ ಕಲೆ ಹಾಕಿ ಅವುಗಳ ಲ್ಯಾಟಿನ್ ಹೆಸರನ್ನು ಗುರುತಿಸಿ ನಿರ್ಧರಿಸಿ ಆಯುರ್ವೇದೀಯ ವೈದ್ಯರಿಗೆ ಸಹಾಯ ಮಾಡಿರುವುದು. ಸುಗಂಧದ ಎಣ್ಣೆಗಳ ತಯಾರಿಕೆ, ಕಾಗದದ ತಯಾರಿಕೆ, ಗಂಧದ ಎಣ್ಣೆ ಕೈಗಾರಿಕೆ, ಪ್ಲೈವುಡ್ ಕೈಗಾರಿಕೆ ಮುಂತಾದುವಕ್ಕೆಲ್ಲ ಈ ಸಂಸ್ಥೆ ಗಮನಾರ್ಹಸೇವೆ ಸಲ್ಲಿಸಿದೆ. ಗಂಧದ ಮರಕ್ಕೆ ಪಿಡುಗಾಗಿರುವ ಸ್ಪೈಕ್ ಕಾಯಿಲೆಯ ವಿಷಯವಾಗಿ ಇಲ್ಲಿ 1938ನೇ ಇಸವಿಯಿಂದಲೂ ಸಂಶೋಧನೆಗಳು ನಡೆಯುತ್ತಿವೆ. ಇವನ್ನು ಕುರಿತು ಈಚೆಗೆ ಎಫ್.ಎ.ಓ. ಸರ್ಕಾರದೊಂದಿಗೆ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೂ ಈ ಕಾಯಿಲೆಯ ಬಗ್ಗೆ ಇನ್ನೂ ಸಾಕಷ್ಟು ವಿವರ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. 26–10–1956ರಲ್ಲಿ ಈ ಸಂಸ್ಥೆಯನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡಲಾಯಿತು.

**ಪ್ರಾಚೀನ ಭಾರತದಲ್ಲಿ ಅರಣ್ಯಶಾಸ್ತ್ರ:** ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಅರಣ್ಯ, ವೃಕ್ಷ, ಮತ್ತು ಮೂಲಿಕೆಗಳ ಉಲ್ಲೇಖಗಳು ಅನೇಕ ಕಡೆ ಇವೆ. ವೇದಗಳಲ್ಲಿ ಅರಣ್ಯವೃಕ್ಷಗಳ ಬಗ್ಗೆ ಪ್ರಸ್ತಾಪವಿದೆ. ಪಾಣಿನಿಯ (ಪ್ರ.ಶ.ಪೂ. 5ನೆಯ ಶತಮಾನ)ಸೂತ್ರಗಳಲ್ಲಂತೂ ವಿವಿಧ ಅರಣ್ಯ ವೃಕ್ಷಗಳು, ಅರಣ್ಯಗಳ ವರ್ಗೀಕರಣ, ಪ್ರಾಮುಖ್ಯ ಇವುಗಳ ಬಗ್ಗೆ ಮಾಹಿತಿ ಇದೆ. ಪಾಣಿನಿ, ಪ್ರಾಕೃತಿಕ ಅರಣ್ಯಗಳಾದ ಪುರಾಗವನ, ಮಿಸ್ರಕವನ ಮತ್ತು ಉದ್ಯಾನಗಳಾದ ಅಮರವನ, ಖದಿರವನ, ಇಕ್ಷುವನ ಇವುಗಳ ಬಗ್ಗೆ ವಿವರ ನೀಡಿದ್ದಾನೆ. ಅರಣ್ಯಶಾಸ್ತ್ರದ ಬಗ್ಗೆ ಪಾಣಿನಿಗಿಂತ ಹಿಂದೆಯೂ ಭಾರತೀಯರಿಗೆ ಸ್ಪಷ್ಟ ಜ್ಞಾನವಿತ್ತು ಎಂದು ಅನೇಕ ವಿದ್ವಾಂಸರು ವಾದಿಸುತ್ತಾರೆ (ಮುಜುಂದಾರ್, 1946). ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಂತೂ ವೃಕ್ಷಗಳ ಮತ್ತು ಅರಣ್ಯಗಳ ವರ್ಣನೆ ಹೇರಳ ವಾಗಿ ಬರುತ್ತದೆ. ಈ ವರ್ಣನೆಗಳಲ್ಲಿ ಪ್ರಾಚೀನ ಬೌದ್ಧ ಮತ್ತು ಜೈನಸಾಹಿತ್ಯಗಳೇನೂ ಕಡಿಮೆ ಇಲ್ಲ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಅಂದಿನ ಅರಣ್ಯಶಾಸ್ತ್ರದ ಬಗ್ಗೆ ಕೆಲವು ರೂಪರೇಖೆಗಳನ್ನೂ, ವಿವರಗಳನ್ನು ಕೊಟ್ಟಿದ್ದಾನೆ. ಆಗಿನ ಕಾಲದಲ್ಲಿ ಅರಣ್ಯಗಳಿಗೆ ಎಷ್ಟು ಪ್ರಾಮುಖ್ಯ ಕೊಡಲಾಗುತ್ತಿತ್ತು, ಅರಣ್ಯಗಳನ್ನು ಮತ್ತು ಅರಣ್ಯೋತ್ಪನ್ನಗಳನ್ನು ಹಾಳು ಮಾಡುವವರಿಗೆ ಯಾವ ಶಿಕ್ಷೆ ಕೊಡಲಾಗುತ್ತಿತ್ತು ಎಂಬ ಬಗ್ಗೆ ಅತ ವಿವರಿಸಿದ್ದಾನೆ. ಆತನೇ ಹೇಳಿಕೊಂಡಿರುವಂತೆ ಅಂದು ಅರಣ್ಯಗಳ ರಕ್ಷಣೆಗೆಂದೇ ಒಬ್ಬ ರಕ್ಷಣಾಧಿಕಾರಿ ಇರುತ್ತಿದ್ದ. ಅವನನ್ನು ಕುಪ್ಯಾಧ್ಯಕ್ಷ ಎಂದು ಕರೆಯಲಾಗುತ್ತಿತ್ತು. ಈತ ಅಂದಿನ ಅರಣ್ಯ ಇಲಾಖೆಯ ಮುಖ್ಯಸ್ಥನಾಗಿದ್ದ. ಇವನ ಕೆಲಸ ಅರಣ್ಯಗಳಿಂದ ಬರುವ ಆದಾಯ ಮತ್ತು ಅರಣ್ಯಗಳ ರಕ್ಷಣೆಗೆ ಗಮನಕೊಡು ವುದೂ ಸಾರ್ವಜನಿಕರಿಗೆ ಅರಣ್ಯಗಳ ಬಗ್ಗೆ ತಿಳಿವಳಿಕೆ ನೀಡುವುದೂ ಆಗಿತ್ತು. ಕುಪ್ಯಾಧ್ಯಕ್ಷನಿಗೆ ಸಹಾಯಕವಾಗಿರಲು ಅನೇಕ ಕೆಳದರ್ಜೆಯ ಅರಣ್ಯ ಸಂರಕ್ಷಕರಿದ್ದರು. ಹಡಗುಗಳು, ಮನೆಗಳು, ರಥಗಳು, ವ್ಯವಸಾಯದ ಉಪಕರಣಗಳು ಮುಂತಾದುವಕ್ಕೆಲ್ಲ ಯಾವ ಯಾವ ಮರಗಳು ಒಳ್ಳೆಯ ಬಾಳಿಕೆ ಬರುವಂಥವುಗಳು ಎಂಬುದರ ಬಗ್ಗೆ ಕೌಟಿಲ್ಯನ ಕಾಲದಲ್ಲೇ ಜನರಿಗೆ ಸ್ಪಷ್ಟ ಪರಿಜ್ಞಾನವಿತ್ತು.

ಶುಕ್ರನೀತಿಸಾರದಲ್ಲೂ ಅರಣ್ಯಶಾಸ್ತ್ರದ ಪ್ರಸ್ತಾಪ ಬರುತ್ತದೆ. ಅರಣ್ಯಗಳ ಮೇಲ್ವಿಚಾರಣೆಗೆ ವನಸ್ಪತಿಶಾಸ್ತ್ರ ಕೋವಿದನಾದ ಒಬ್ಬ ಮುಖ್ಯಾಧಿಕಾರಿ ಇರುತ್ತಿದ್ದ. ಆತ ಅರಣ್ಯಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ. ಆತನ ಕಾಲದಲ್ಲಿ ಪ್ರತಿ ಆರು ಯೋಜನ ಸುತ್ತಳತೆಯುಳ್ಳ ಎಲ್ಲ ಅರಣ್ಯಗಳೂ ಒಂದೊಂದು ರಾಜಮಾರ್ಗವನ್ನು ಹೊಂದಿರಬೇಕು ಎಂಬ ನಿಯಮ ವಿತ್ತು. ಸುಮಂತ್ರ (ಅರ್ಥಸಚಿವ) ರಾಜನಿಗೆ ರಾಜ್ಯದ ಅರಣ್ಯಗಳ ಬಗ್ಗೆ, ರಾಜಮಾರ್ಗಗಳು, ವ್ಯವಸಾಯ ಯೋಗ್ಯ ಭೂಮಿ ಇವುಗಳ ವಿಷಯವಾಗಿ ವಿವರಗಳನ್ನು ಒದಗಿಸಬೇಕಾಗಿತ್ತು. ಉಪಯುಕ್ತ ಮರಗಳನ್ನೇ ಅರಣ್ಯಗಳಲ್ಲಿ ಹೆಚ್ಚಾಗಿ ರಕ್ಷಿಸಲು, ಬೆಳೆಸಲು ಪ್ರೋತ್ಸಾಹಿಸಲಾಗು ತ್ತಿತ್ತು. ಶುಕ್ರಾಚಾರ್ಯರು ಈ ಕೆಲಸಕ್ಕೆ ಸಸ್ಯಜ್ಞಾನದಲ್ಲಿ ಚೆನ್ನಾಗಿ ಪರಿಜ್ಞಾನ, ಪರಿಶ್ರಮಗಳಿರುವ ವ್ಯಕ್ತಿಗಳು ಬೇಕು ಎಂಬ ಬಗ್ಗೆ ಅಂದೇ ಹೇಳಿರುವುದು ಮೆಚ್ಚಬೇಕಾದ ವಿಷಯ. (ಎಸ್.ಎನ್.ಆರ್.)

**ಅರಣ್ಯ ನೀತಿ ಮತ್ತು ಸಹಭಾಗಿತ್ವ ಅರಣ್ಯಾಭಿವೃದ್ಧಿ :** ಕರ್ನಾಟಕವೂ ಸೇರಿದಂತೆ ಭಾರತದಲ್ಲಿನ ಅರಣ್ಯ ನಿರ್ವಹಣೆಗೆ ಒಂದೂವರೆ ಶತಮಾನಕ್ಕೂ ಹೆಚ್ಚಿನ ಕಾಲಾವಧಿಯ ಇತಿಹಾಸವಿದೆ. ಬ್ರಿಟಿಷ್ ಸರಕಾರ 'ವೈಜ್ಞಾನಿಕ ಮತ್ತು ವ್ಯವಸ್ಥಿತ' ಎಂದು ಕರೆದ ಅರಣ್ಯ ನಿರ್ವಹಣೆ ಪ್ರಾರಂಭವಾದುದು 1850ರ ನಂತರ. ಪ್ರಾರಂಭದಿಂದಲೂ, ಭೂಮಿಯ ವೈಜ್ಞಾನಿಕ ಹಾಗೂ ಲಾಭದಾಯಕ ಬಳಕೆಗೆ ಅರಣ್ಯಗಳ ಬಹುದೊಡ್ಡ ಅಡಚಣೆಯೆಂಬ ನಿಲುವು ತಳೆದಿದ್ದ ಬ್ರಿಟಿಷ್ ಸರಕಾರ ಅರಣ್ಯಗಳನ್ನು ನೆಲಸಮ ಮಾಡಿ ಆ ಜಾಗವನ್ನು ಕೃಷಿಗಾಗಿ ಬಳಸುವ ನೀತಿಯನ್ನು ಆಚರಣೆಗೆ ತಂದಿತು. 1894ರಲ್ಲಿ ಘೋಷಿತವಾದ ಮೊಟ್ಟಮೊದಲ ಅರಣ್ಯನೀತಿ 'ಮೀಸಲು ಅರಣ್ಯ'ಗಳ (ರಿಸರ್ವ್ಡ್ ಫಾರೆಸ್ಟ್) ಅಸ್ತಿತ್ವಕ್ಕೆ ದಾರಿಮಾಡಿಕೊಟ್ಟು, ಸ್ಥಳೀಯ ಸಮುದಾಯದ ಹಕ್ಕುಗಳನ್ನು ನಿಯಂತ್ರಿಸಿ, ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ, ಬಳಸುವವರ ಅನುಭೋಗದ ಸ್ವಾತಂತ್ರ್ಯವನ್ನು ಮೊಟಕುಗೊಳಿ ಸಿತು. ಸಾಮಾನ್ಯವಾಗಿ ಸಮುದಾಯದ ನಿರ್ವಹಣೆಗೆ ಒಳಪಟ್ಟಿರುತ್ತಿದ್ದ ಅರಣ್ಯಗಳನ್ನು ಬ್ರಿಟಿಷ್ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿದ್ದರಿಂದ ಅಂಥ ಪ್ರದೇಶಗಳಿಂದ ದೊರೆಯುತ್ತಿದ್ದ ಉತ್ಪನ್ನಗಳಿಂದ ಸ್ಥಳೀಯರು ವಂಚಿತರಾದರು. ಅರಣ್ಯ ಇಲಾಖೆಯೇ ನಿರ್ವಹಿಸುತ್ತಿದ್ದ 'ಸಂರಕ್ಷಿತ ಅರಣ್ಯ'ದಿಂದ (ಪ್ರೊಟೆಕ್ಟಡ್ ಫಾರೆಸ್ಟ್) ಹಣ್ಣು, ಹಂಪಲು, ಎಲೆ–ಹುಲ್ಲುಗಳನ್ನು ಸಂಗ್ರಹಿಸುವ ಹಕ್ಕನ್ನು ಸ್ಥಳೀಯರಿಗೆ ನೀಡಲಾಗಿತ್ತು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೂ ಇದೇ ನೀತಿ ಮುಂದುವರೆದು 1952ರಲ್ಲಿ ನೂತನ ಅರಣ್ಯನೀತಿ ಜಾರಿಗೆ ಬಂದಿತು.

1952ರ ಅರಣ್ಯ ನೀತಿ, ಜೀವಿ ಪರಿಸ್ಥಿತಿ ಸಮತೋಲನ ಹಾಗೂ ಉತ್ತಮ ಭೂಬಳಕೆಯ ದೃಷ್ಟಿಯಿಂದ ದೇಶದ ಒಟ್ಟು ಭೂಭಾಗದ ಸರಾಸರಿ 33ರಷ್ಟು ಭಾಗ ಅರಣ್ಯಗಳಿಂದ ಆಚ್ಛಾದಿತವಾಗಿರಬೇಕೆಂದು ಸೂಚಿಸಿತು. ರಕ್ಷಣೆ, ಸಂವಹನ ಹಾಗೂ ದೇಶದ ಜೀವಾಳವೆನಿ ಸುವ ಕೆಲವು ಕೈಗಾರಿಕೆಗಳನ್ನು 'ರಾಷ್ಟ್ರೀಯ ಹಿತ'ವೆಂದು ಪರಿಗಣಿಸಿ, ಅವುಗಳಿಗೆ ತೊಂದರೆ ಯಾಗುವಂತಹ ಯಾವುದೇ ಬಳಕೆಯನ್ನು ಅರಣ್ಯಗಳಿಗೆ ಸಮೀಪವಾಗಿ ಬದುಕುವ ಸಮುದಾಯಗಳು ಮಾಡಕೂಡದೆಂದು ಈ ಅರಣ್ಯನೀತಿ ವಿಧಿಸಿತು. ರಾಷ್ಟ್ರೀಯ ಉದ್ದೇಶಗಳಿಗೆ ಅಗತ್ಯವಾದ ಬೆಲೆಬಾಳುವ ಮರಮುಟ್ಟುಗಳನ್ನು ಉತ್ಪಾದಿಸುವುದೇ ಅರಣ್ಯಗಳ ಪರಮಗುರಿ ಯಾಯಿತು. 1952ರ ಈ ಅರಣ್ಯನೀತಿಗೆ ಅನುಗುಣವಾಗಿ, ಮೊದಲನೆಯ ಪಂಚ ವಾರ್ಷಿಕ ಯೋಜನೆಯಿಂದಲೇ ಕಡಿಮೆ ಮೌಲ್ಯದ ಮಿಶ್ರ ಅರಣ್ಯಗಳನ್ನು ಕಡಿದು ಹಾಕಿ, ಅದೇ ಜಾಗದಲ್ಲಿ ಹೆಚ್ಚಿನ ಆರ್ಥಿಕ ಮೌಲ್ಯದ ಮಿಶ್ರ ಪ್ರಭೇದಗಳಾದ ನೀಲಗಿರಿ, ತೇಗ ಮುಂತಾದವುಗಳ ನೆಡುತೋಪಗಳನ್ನು ಬೆಳೆಸಲು ಪ್ರಯತ್ನ ಪ್ರಾರಂಭವಾಯಿತು. ಅರಣ್ಯ ವಿಜ್ಞಾನವನ್ನು ಕೈಗಾರಿಕೆಗಳಿಗೆ ಬೇಕಾದ ಮರಮುಟ್ಟುಗಳನ್ನು ಉತ್ಪಾದಿಸುವುದರೊಂದಿಗೆ ಸಮೀಕರಿಸಲಾಯಿತು. 1976ರವರೆಗೂ ಈ ನೀತಿಯನ್ನೇ ಅನುಸರಿಸಿದ್ದರಿಂದ ನೈಸರ್ಗಿಕ ಅರಣ್ಯಗಳು ದೊಡ್ಡ ಪ್ರಮಾಣದಲ್ಲಿ ಹೇಳ ಹೆಸರಿಲ್ಲದಂತೆ ನಿರ್ನಾಮವಾದವು. ಅವುಗಳ ಜಾಗದಲ್ಲಿ ನೆಡುತೋಪುಗಳು ತಲೆಯೆತ್ತಿದವು. ಅರಣ್ಯ ಸಂಪನ್ಮೂಲ ತ್ವರಿತ ಗತಿಯಲ್ಲಿ ಕ್ಷೀಣಿಸಿತು. ಅರಣ್ಯಾಧಾರಿತ ಸ್ಥಳೀಯ ಜನ ತಮ್ಮ ನೆಲ ಮತ್ತು ಜೀವನೋಪಾಯವನ್ನು ಕಳೆದುಕೊಂಡರು.

1976ರಲ್ಲಿ ರಾಷ್ಟ್ರೀಯ ಕೃಷಿ ಆಯೋಗ ನಾವು ಅನುಸರಿಸಿಕೊಂಡು ಬಂದಿದ್ದ ಅರಣ್ಯನೀತಿಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿತು. 70ರ ದಶಕದ ಮಧ್ಯಭಾಗದ ವೇಳೆಗೆ ಅರಣ್ಯಸಮೀಪದ ಜನಸಮುದಾಯಗಳ ಬೇಡಿಕೆಗಳನ್ನು ಈಡೇರಿಸದಿದ್ದರೆ

ಅರಣ್ಯಗಳನ್ನು ಉಳಿಸಿಕೊಳ್ಳುವುದೇ ಅಸಾಧ್ಯವೆಂಬುದು ಸ್ಪಷ್ಟವಾಗಿತ್ತು. ಅದೇ ಸಮಯದಲ್ಲಿ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುಗಳು, ಮರಮುಟ್ಟುಗಳು ಹಾಗೂ ಉರುವಲಿನ ತೀವ್ರ ಕೊರತೆಯನ್ನು ದೇಶ ಎದುರಿಸುತ್ತಿತ್ತು. ಈ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದ, ಭಾರತ ಸರ್ಕಾರ ಅಂತಾರಾಷ್ಟ್ರೀಯ ನೆರವು ನೀಡಿಕೆ ಸಂಸ್ಥೆಗಳ ಧನಸಹಾಯದೊಂದಿಗೆ ಬೃಹತ್ ಪ್ರಮಾಣದಲ್ಲಿ 'ಸಾಮಾಜಿಕ ಅರಣ್ಯ ಯೋಜನೆ'ಯನ್ನು ಪ್ರಾರಂಭಿಸಿತು. ಅರಣ್ಯದ ಹೊರಗಿನ ಸರ್ಕಾರಿ ಭೂಮಿ ಮತ್ತು ಖಾಸಗಿ ಜಮೀನುಗಳಲ್ಲಿ ತ್ವರಿತಗತಿಯಲ್ಲಿ ಬೆಳೆಯುವ ಪ್ರಭೇದಗಳ ಮರಗಿಡಗಳನ್ನು ಕೋಟಿಗಟ್ಟಲೆಯಲ್ಲಿ ಬೆಳೆಸಿ, ಸ್ಥಳೀಯ ಸಮುದಾಯಗಳ ಅಗತ್ಯಗಳನ್ನು ಪೂರೈಸಿ, ಆ ಮೂಲಕವಾಗಿ ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದ ಸಾಮಾಜಿಕ ಅರಣ್ಯ ಯೋಜನೆ ಭಾರತದ ಅರಣ್ಯನೀತಿಯಲ್ಲಿ ಮತ್ತೊಂದು ಮುಖ್ಯ ಘಟ್ಟವಾಯಿತು.

ಸಾಮಾಜಿಕ ಅರಣ್ಯ ಯೋಜನೆಯ ಫಲವಾಗಿ ಕಟ್ಟಡ ಕೆಲಸಗಳಿಗೆ ಬೇಕಾದ ಕಂಬಗಳು, ಕಾಗದ, ರೇಯಾನ್, ಕಾರ್ಖಾನೆಗಳಿಗೆ ಅಗತ್ಯವಾದ ಮೆದು ಮರಗಳ ಪ್ರಮಾಣದಲ್ಲಿ ಏರಿಕೆ ಕಂಡುಬಂದಿತು. ಇದರೊಟ್ಟಿಗೆ ಸಣ್ಣ ಮರಮಟ್ಟುಗಳ ಉತ್ಪಾದನೆಯ ಪ್ರಮಾಣವೂ ಹೆಚ್ಚಿತು. ಆದರೆ ಈ ಹೆಚ್ಚಳಗಳು ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲಿಲ್ಲ. ಇದರ ಬದಲಿಗೆ ಅರಣ್ಯ ಇಲಾಖೆಯ ಗಮನ ಕಾಡಿನ ಹೊರಗೆ ನೆಡುತೋಪುಗಳನ್ನು ಬೆಳೆಸುವುದರ ಮೇಲೆ ಕೇಂದ್ರೀಕೃತವಾಗಿದ್ದರಿಂದ ನೈಸರ್ಗಿಕ ಅರಣ್ಯದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಊರೊಟ್ಟಿನ ಸಾಮೂಹಿಕ ಆಸ್ತಿಯಾದ ಗೋಮಾಳ, ಕೆರೆಯಂಗಳ ಮುಂತಾದವುಗಳನ್ನು ಸಾಮಾಜಿಕ ಅರಣ್ಯದಡಿ ತಂದಿದ್ದರಿಂದ ಅಂಥ ಜಮೀನುಗಳಿಂದ ದೊರೆಯುತ್ತಿದ್ದ ಉತ್ಪನ್ನಗಳಿಗೂ ಸಂಚಕಾರ ಬಂದಿತು. ಸಾಮಾಜಿಕ ಅರಣ್ಯ ಯೋಜನೆಯನ್ನು ರೂಪಿಸುವುದರಲ್ಲಿದ್ದ ಸಮಸ್ಯೆಗಳು, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳು ಮತ್ತು ಅನುಷ್ಠಾನದಲ್ಲಿನ ತೊಂದರೆಗಳಿಂದಾಗಿ ಸಾಮಾಜಿಕ ಅರಣ್ಯ ಯೋಜನೆ ಗ್ರಾಮೀಣ ಸಮುದಾಯಗಳಿಗೆ ಉರುವಲು, ಮೇವು, ಹಸುರುಗೊಬ್ಬರ, ಸಣ್ಣ ಮರಮಟ್ಟುಗಳನ್ನು ಪೂರೈಸುವ ತನ್ನ ಉದ್ದೇಶದಲ್ಲಿ ಸಫಲತೆ ಪಡೆಯಲಿಲ್ಲ. ಇದರ ಜೊತೆಗೆ ಹೊಸ ನೆಡುತೋಪುಗಳನ್ನು ಬೆಳೆಸಲು ಸೂಕ್ಷ್ಮ ಪ್ರದೇಶಗಳಲ್ಲೂ ಅರಣ್ಯಗಳನ್ನು ನೆಲಸಮ ಮಾಡಿದ್ದರಿಂದ ಮಣ್ಣಿನ ಸವೆತ, ನದಿ ಜಲಾಶಯಗಳಲ್ಲಿ ಹೂಳು ತುಂಬುವುದು ಮುಂತಾದ ಪರಿಸರ ಸಮಸ್ಯೆಗಳೂ ಪ್ರಾರಂಭವಾದವು.

ಈ ಮುಂಚಿನ ಎರಡು ಅರಣ್ಯನೀತಿಗಳಿಗಿಂತ ಆಮೂಲಾಗ್ರವಾಗಿ ಭಿನ್ನವಾದ ಮತ್ತೊಂದು ನೂತನ ಅರಣ್ಯ ನೀತಿ 1988ರಲ್ಲಿ ಘೋಷಿತವಾಯಿತು. ಈ ಹೊಸ ಅರಣ್ಯನೀತಿಯಂತೆ ಅರಣ್ಯಗಳನ್ನು ವಾಣಿಜ್ಯೋದ್ಯಮದ ದೃಷ್ಟಿಯಿಂದ ಕೈಗಾರಿಕೆಗಳಿಗಾಗಿ ಅತಿ ಬಳಕೆಗೆ ಒಳಪಡಿಸಬಾರದು. ಅದರ ಬದಲಿಗೆ ನೆಲ ಮತ್ತು ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕು. ಅರಣ್ಯದಿಂದ ಬರುವ ಆದಾಯಕ್ಕಿಂತ ಪರಿಸರದ ಸ್ಥಿರತೆಯೇ ಹೆಚ್ಚು ಮುಖ್ಯ. ಏಕ ಪ್ರಭೇದದ ನೆಡುತೋಪಿಗಿಂತ ವೈವಿಧ್ಯವಿರುವ ಮಿಶ್ರ ಪ್ರಭೇದಗಳ ಅರಣ್ಯಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಬೇಕು. ಅರಣ್ಯಕ್ಕೆ ಸಮೀಪವಾಗಿ ವಾಸಿಸುವ ಸಮುದಾಯಗಳ ಕನಿಷ್ಠ ಅಗತ್ಯಗಳನ್ನು ಪೂರೈಸಿ, ಗುಡ್ಡಗಾಡು ಜನ ಹಾಗೂ ಅರಣ್ಯಗಳ ನಡುವಿನ ಸಂಬಂಧವನ್ನು ಉತ್ತಮಪಡಿಸಬೇಕು. ಅರಣ್ಯಗಳ ರಕ್ಷಣೆ ಪುನರುಜ್ಜೀವನ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳೆಯರನ್ನೂ ಒಳಗೊಂಡಂತೆ ಸ್ಥಳೀಯರನ್ನು ಬೃಹತ್ ಪ್ರಮಾಣದಲ್ಲಿ ಸಕ್ರಿಯವಾಗಿ ಬಳಸಿಕೊಳ್ಳಬೇಕು.

1988ರ ಅರಣ್ಯ ನೀತಿಯನ್ನು ಅನುಷ್ಠಾನಕ್ಕೆ ತಂದು ಅರಣ್ಯ ಸಂರಕ್ಷಣೆ, ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನಸಾಮಾನ್ಯರ ಭಾಗವಹಿಸುವಿಕೆಗೆ ಅವಕಾಶಮಾಡಿಕೊಡಲು ಜಂಟಿ ಅರಣ್ಯ ಯೋಜನೆಯನ್ನು ಭಾರತ ಸರ್ಕಾರ 1990ರಲ್ಲಿ ಜಾರಿಗೆ ತಂದಿತು. ಭಾರತದ ಅರಣ್ಯ ಇತಿಹಾಸದಲ್ಲಿ ಇದು ಮತ್ತೊಂದು ಮಹತ್ವದ ಮೈಲಿಗಲ್ಲು.

ಜಂಟಿ ಅರಣ್ಯ ಯೋಜನೆಯು ಅಭಿವೃದ್ಧಿ ಯೋಜನೆಗಳಲ್ಲಿ ಜನರ ಸಕ್ರಿಯ ಸಹಭಾಗಿತ್ವಕ್ಕೆ ಅವಕಾಶಮಾಡಿಕೊಡುವ ಒಂದು ಮಾದರಿ. 'ಅಧಿಕಾರದಲ್ಲಿ ಸಮಪಾಲು, ಜವಾಬ್ದಾರಿಯಲ್ಲಿ ಸಮಪಾಲು, ಫಲಾನುಭವದಲ್ಲೂ ಸಮಪಾಲು'– ಇದು ಈ ಯೋಜನೆಯ ಮೂಲಭೂತ ತತ್ತ್ವ. ಈ ಯೋಜನೆಯಲ್ಲಿ ಅರಣ್ಯಕ್ಕೆ ಅಥವಾ ಅವನತಿ ಹೊಂದಿದ ಅರಣ್ಯ ಭೂಮಿಗೆ ಸಮೀಪವಾಗಿ ವಾಸಿಸುವ ಜನಸಮುದಾಯ ಅರಣ್ಯ ಸಂರಕ್ಷಣೆಯಲ್ಲಿ, ಮರಗಿಡಗಳನ್ನು ಬೆಳೆಸುವುದರಲ್ಲಿ ಜವಾಬ್ದಾರಿಯುತವಾಗಿ ಭಾಗವಹಿಸುತ್ತದೆ. ಈ ಕೆಲಸದ ಒಟ್ಟಾರೆ ಜವಾಬ್ದಾರಿಯನ್ನು 'ಗ್ರಾಮ ಅರಣ್ಯ ಸಮಿತಿ' ಹೊರುತ್ತದೆ. ಈ ಸಮಿತಿ ಪ್ರಜಾಪ್ರಭುತ್ವದ ತತ್ತ್ವಗಳಿಗೆ ಅನುಸಾರವಾಗಿ ರೂಪುಗೊಂಡು, ಕೆಲಸ ಮಾಡುವ ಸ್ಥಳೀಯ ಸಂಸ್ಥೆ. ಈ ಸಮಿತಿಯಲ್ಲಿ ಮಹಿಳೆಯರು, ದುರ್ಬಲವರ್ಗದವರಿಗೂ ಪ್ರಾತಿನಿಧ್ಯವಿದೆ. ಅರಣ್ಯ ಸಿಬ್ಬಂದಿ, ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳೂ ಇರುತ್ತಾರೆ. ಅರಣ್ಯ ಸಂರಕ್ಷಣೆ, ಅರಣ್ಯಾಭಿವೃದ್ಧಿ, ಸಂಪನ್ಮೂಲಗಳ ಸಂಗ್ರಹ, ಅರಣ್ಯ ಉತ್ಪನ್ನಗಳ ಹಂಚಿಕೆ, ಹಣಕಾಸಿನ ಜವಾಬ್ದಾರಿ ಎಲ್ಲವನ್ನೂ ಈ ಗ್ರಾಮ ಅರಣ್ಯ ಸಮಿತಿಯೇ ನಿರ್ವಹಿಸುತ್ತದೆ. ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದರ ಜೊತೆಗೆ ಅರಣ್ಯವನ್ನು ಸಂರಕ್ಷಿಸುವ ಈ ಯೋಜನೆ ತಾತ್ತ್ವಿಕವಾಗಿ ಅಭಿವೃದ್ಧಿಯ ಒಂದು ಅತ್ಯುತ್ತಮ ಮಾದರಿ, ನೂತನ ಅರಣ್ಯ ನೀತಿಯ ಅಪಾರ ಸಾಧ್ಯತೆಗಳಿಗೆ ಹಿಡಿದ ಕನ್ನಡಿ.

1990ರ ಜೂನ್ 1ರಂದು ಭಾರತ ಸರ್ಕಾರ ಹೊರಡಿಸಿದ ಆದೇಶದಿಂದ ವಿಧ್ಯುಕ್ತವಾಗಿ ಪ್ರಾರಂಭವಾದ ಜಂಟಿ ಅರಣ್ಯ ಯೋಜನೆ ಇಂದು ನಮ್ಮ ದೇಶದ 27 ರಾಜ್ಯಗಳಲ್ಲಿ ಅನುಷ್ಠಾನಗೊಂಡಿದೆ. ಈ 27 ರಾಜ್ಯಗಳಲ್ಲಿ 65,000 ಗ್ರಾಮ ಅರಣ್ಯ ಸಮಿತಿಗಳು ಒಟ್ಟು 1,50,000 ಚ.ಕಿಮೀ. ಅರಣ್ಯಪ್ರದೇಶವನ್ನು ಆಯಾ ರಾಜ್ಯದ ಅರಣ್ಯ ಇಲಾಖೆಗಳ ಜೊತೆಗೂಡಿ ಸಂರಕ್ಷಿಸಿ ನಿರ್ವಹಿಸುತ್ತಿವೆ. ಭಾರತದ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ 6,33,400 ಚ.ಕಿಮೀ ಇದರಲ್ಲಿ ಶೇಕಡ 40ಭಾಗ ಅಂದರೆ 2,53,360 ಚ.ಕಿಮೀ ವಿಸ್ತೀರ್ಣದ ಅರಣ್ಯ ಪ್ರದೇಶ ಅವನತಿಗೊಳಗಾಗಿದೆ. ಇದರಲ್ಲಿ 1,50,000 ಚ.ಕಿಮೀ ಪ್ರದೇಶ ಈಗ ಜಂಟೀ ಅರಣ್ಯ ನಿರ್ವಹಣೆಗೆ ಒಳಪಟ್ಟಿದೆ. ಅಂದರೆ, ಒಟ್ಟಾರೆಯಾಗಿ ಭಾರತದಾದ್ಯಂತ ಸು. 65,000 ಗ್ರಾಮ ಅರಣ್ಯ ಸಮಿತಿಗಳು, ಅರಣ್ಯ ಇಲಾಖೆಯ ಜೊತೆಗೂಡಿ, ಅವನ್ನು ಹೊಂದಿದ ಅರಣ್ಯದ ಒಟ್ಟು ವಿಸ್ತೀರ್ಣ ಶೇಕಡ 59ರಷ್ಟನ್ನು ಪುನರುಜ್ಜೀವನಕ್ಕಾಗಿ ಜಂಟಿ ಅರಣ್ಯ ನಿರ್ವಹಣೆಗೆ ಒಳಪಡಿಸಿದೆ ಎಂದಂತಾಯ್ತು. ಅಂಕಿಅಂಶಗಳ ದೃಷ್ಟಿಯಿಂದ ಇದು ನಿಜಕ್ಕೂ ಉತ್ತಮ ಸಾಧನೆ.

1988ರ ನೂತನ ಅರಣ್ಯ ನೀತಿ ಮತ್ತು ಅದರ ಫಲಶ್ರುತಿಯಾಗಿ ರೂಪುಗೊಂಡು, 90ರ ದಶಕದಲ್ಲಿ ಜಾರಿಗೆ ಬಂದ ಸಮುದಾಯ ಸಹಭಾಗಿತ್ವದ ಅತ್ಯುತ್ತಮ ಮಾದರಿ ಎನ್ನಿಸಿಕೊಂಡ, ಜಂಟೀ ಅರಣ್ಯ ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗಿದೆಯೇ? ಖಂಡಿತವಾಗಿಯೂ ಇಲ್ಲ. ಯಶಸ್ವಿಯಾಗಿರುವ ಉಜ್ವಲ ಉದಾಹರಣೆಗಳು ನಮಗೆ ದೊರೆಯುತ್ತವೆ ನಿಜ. ಆದರೆ ಅವುಗಳ ಸಂಖ್ಯೆ ಬೆರಳೆಣಿಸುವಷ್ಟು ಮಾತ್ರ. ಉಳಿದಂತೆ ಆಗಬೇಕಾದ ಕೆಲಸಗಳು, ಪರಿಹಾರವಾಗಬೇಕಾದ ಸಮಸ್ಯೆಗಳು ಅಪಾರವಾಗಿವೆ. ಇಂಥ ಕೆಲವು ಸಮಸ್ಯೆ ನ್ಯೂನತೆಗಳನ್ನು ನಾವು ಉದಾಹರಿಸಬೇಕಾದುದು ಅಗತ್ಯ. ಅದರೊಂದಿಗೆ ಆ ಸಮಸ್ಯೆಗಳನ್ನು ಬಗೆಹರಿಸುವ ಮಾರ್ಗವನ್ನು ತಿಳಿಯಬೇಕು.

ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಸ್ಥಳೀಯ ಅರಣ್ಯ ಸಂಪನ್ಮೂಲಗಳ ರಕ್ಷಣೆ, ಬಳಕೆ, ನಿಯಂತ್ರಣ, ಪುನರುಜ್ಜೀವನಗಳಿಗೆ ಸಂಬಂಧಿಸಿದಂತೆ, ಅಧಿಕಾರದಲ್ಲಿ ತೀವ್ರ ಅಸಮತೋಲನಗಳಿವೆ. ಇದನ್ನು ನಿವಾರಿಸಲು ಅಧಿಕಾರದ ಮರುಹಂಚಿಕೆಯಾಗಿ ಗ್ರಾಮ ಅರಣ್ಯ ಸಮಿತಿಗೆ ಮತ್ತಷ್ಟು ಅಧಿಕಾರ ದೊರೆಯಬೇಕು.

ಅರಣ್ಯಾಭಿವೃದ್ಧಿಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರದಲ್ಲಿ ಗ್ರಾಮ ಅರಣ್ಯ ಸಮಿತಿಗೆ ಯಾವುದೇ ಪಾತ್ರವಿಲ್ಲ. ಈ ಪರಿಸ್ಥಿತಿಯನ್ನು ಬದಲಿಸಲು ಸ್ಥಳೀಯ ಹಂತದಲ್ಲಿ ಅರಣ್ಯಾಭಿವೃದ್ಧಿಗೆ ಮೀಸಲಾದ ಹಣದಲ್ಲಿ ಶೇಕಡ 50 ಭಾಗವನ್ನು ನೇರವಾಗಿ ಉತ್ತಮವಾಗಿ ಕೆಲಸಮಾಡುತ್ತಿರುವ ಆಯ್ದ ಅರಣ್ಯ ಸಮಿತಿಗಳಿಗೆ ನೀಡಬೇಕು. ಸಹಭಾಗಿತ್ವಕ್ಕೆ ಇದು ಉತ್ತಮ ಪ್ರೋತ್ಸಾಹಕವಾಗುತ್ತದೆ.

ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿರುವ ನೆಡುತೋಪುಗಳಿಂದ ಬರುವ ಒಟ್ಟು ಆದಾಯದ ಶೇಕಡ 25 ಭಾಗ ಮಾತ್ರ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಹಂಚಿಕೆಯಾಗುತ್ತಿದೆ. ಇದಕ್ಕಾಗಿ 8–10 ವರ್ಷಗಳು ಕಾಯಬೇಕು. ಇದು ತೀರಾ ಅನಾಕರ್ಷಕ, ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಇದನ್ನು ಮರು ಪರಿಶೀಲಿಸಬೇಕು.

ಸಮುದಾಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸುವಂತಹ ಗುಣಲಕ್ಷಣಗಳಿರುವ ಹಳ್ಳಿಗಳನ್ನು ಕಟ್ಟುನಿಟ್ಟಾಗಿ ಆಯ್ಕೆ ಮಾಡಿ ಅಂತಹ ಜಾಗಗಳಲ್ಲಿ ಮಾತ್ರ ಯೋಜನೆಯನ್ನು ಜಾರಿಗೆ ತರಬೇಕು.

ಇಡೀ ಯೋಜನೆಯಲ್ಲಿ ಮಹಿಳೆಯರ ಹಾಗೂ ದುರ್ಬಲ ವರ್ಗದವರ ಭಾಗವಹಿಸುವಿಕೆಗೆ ಕೇವಲ ಸಾಂಕೇತಿಕ ಸ್ಥಾನವಿದೆ. ಇದು ಬದಲಾಗಿ ಅವರ ಸಹಭಾಗಿತ್ವಕ್ಕೆ ಆದ್ಯತೆಯ ಸ್ಥಾನ ದೊರೆಯಬೇಕು.

ಗ್ರಾಮೀಣ ಅಭಿವೃದ್ಧಿಯ ವಿವಿಧ ಯೋಜನೆಗಳ ಅಡಿಯಲ್ಲಿ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳುವ, ಕೌಶಲ ವರ್ಧಿಸುವ ಎಲ್ಲ ಅವಕಾಶಗಳನ್ನೂ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಬಳಸಿಕೊಂಡು ಅರಣ್ಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಪ್ರೋತ್ಸಾಹಿಸಬೇಕು.

1988ರ ನೂತನ ಅರಣ್ಯ ನೀತಿಯ ಫಲವಾದ ಜಂಟೀ ಅರಣ್ಯ ಯೋಜನೆಯ ಅಂತಿಮ ಗುರಿ ಸ್ಥಳೀಯ ಅರಣ್ಯ

ಸಂಪನ್ಮೂಲಗಳ ಸಂಪೂರ್ಣ ನಿಯಂತ್ರಣ ಹಾಗೂ ನಿರ್ವಹಣೆಗಳ ಅಧಿಕಾರವನ್ನು ಸಮುದಾಯಕ್ಕೆ ವರ್ಗಾಯಿಸುವುದು. ಕಳೆದ ಮೂರು ದಶಕಗಳಿಂದ ಭಾರತದ ಅರಣ್ಯ ನೀತಿ, ಅರಣ್ಯ ನಿರ್ವಹಣೆಯ ಪದ್ಧತಿಗಳನ್ನು ವಿಶೇಷ ಮುತುವರ್ಜಿಯಿಂದ ಅಧ್ಯಯನ ಮಾಡುತ್ತಿರುವ ಪರಿಣಿತರು, ಮುಂದಿನ 25–30 ವರ್ಷಗಳಲ್ಲಿ ಸ್ಥಳೀಯ ಅರಣ್ಯ ಸಂಪನ್ಮೂಲಗಳ ಮೇಲೆ ಸಮುದಾಯದ ಅಧಿಕಾರ ಗರಿಷ್ಠ ಮಟ್ಟ ಮುಟ್ಟಲಿದ್ದು, ಅರಣ್ಯ

ಇಲಾಖೆ, ನಿರ್ವಹಣೆಗೆ ಅಗತ್ಯವಾದ ತಾಂತ್ರಿಕ ನೆರವನ್ನು ಒದಗಿಸುವ ವಿಶೇಷ ಪರಿಣಿತಿಯ ವಿಸ್ತರಣಾ ಅಂಗವಾಗಿ ಕೆಲಸ ನಿರ್ವಹಿಸಲಿದೆಯೆಂದು ಅಭಿಪ್ರಾಯ ಪಡುತ್ತಾರೆ. ಅರಣ್ಯ ಇಲಾಖೆಯಿಂದ ಸಮುದಾಯಕ್ಕೆ ಆಗಬೇಕಾದ ಅಧಿಕಾರದ ಹಸ್ತಾಂತರ ಅತ್ಯಂತ ಕಷ್ಟ ಸಾಧ್ಯವಾದ ಕೆಲಸ. ಇದಕ್ಕೆ ಸಾಕಷ್ಟು ಸಮಯ ಪ್ರಯತ್ನಗಳು ಬೇಕು. ಈ ದೀರ್ಘಾವಧಿಯಲ್ಲಿ ಅರಣ್ಯ ಇಲಾಖೆ ಹಾಗೂ ಸ್ಥಳೀಯ ಸಮುದಾಯಗಳೆಂದೂ ಕಲಿಯಬೇಕಾದ ವಿಷಯಗಳು, ಪಡೆದುಕೊಳ್ಳಬೇಕಾದ ಸಾಮರ್ಥ್ಯಗಳು ಅಗಾಧವಾಗಿವೆ ಎನ್ನುವುದರಲ್ಲಿ ಸಂಶಯವಿಲ್ಲ.

(ಎಚ್.ಆರ್.ಕೆ)

**ಅರಬ್ಬೀ ಒಕ್ಕೂಟ :** 1945ರ ಮಾರ್ಚ್ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಕೇಂದ್ರ ಕಛೇರಿ ಕೈರೊನಲ್ಲಿದೆ. ಇದರ ಸ್ಥಾಪನೆಗೆ ಇಂಗ್ಲೆಂಡ್ ದೇಶವೇ ಮುಖ್ಯ ಕಾರಣವಾಗಿದೆ. ಮೊದಲ ಮಹಾಯುದ್ಧ ಸಮಯದಲ್ಲಿ ಇದರ ಸ್ಥಾಪನೆಗೆ ಪ್ರಯತ್ನಗಳು ನಡೆದು ಎರಡನೆಯ ಮಹಾಯುದ್ಧ ಮುಗಿಯುವುದರೊಳಗೆ ಇದು ಕಾರ್ಯಗತವಾಯಿತು. ಈಜಿಪ್ಟ್ ದೇಶದ ಸಹಾಸ್ ಪಾಷ ಕೈರೊದಲ್ಲಿ ಕೂಡಿಸಿದ ಅರಬ್ ರಾಷ್ಟ್ರಗಳ ಸಭೆಯ ತೀರ್ಮಾನದಂತೆ ಒಕ್ಕೂಟ ಸ್ಥಾಪನೆಯಾಯಿತು. ಈ ಕೂಟದಲ್ಲಿ ಸಿರಿಯ, ಟ್ರಾನ್ಸ ಜೋರ್ಡಾನ್, ಇರಾಕ್, ಸೌದಿ ಅರೇಬಿಯ, ಲೆಬನಾನ್, ಯೆಮೆನ್ ಮತ್ತು ಈಜಿಪ್ಟ್—ಹೀಗೆ ಏಳು ರಾಷ್ಟ್ರಗಳು ಸೇರಿವೆ. ಈ ಕೂಟದ ನಿಬಂಧನೆಗಳ ಪ್ರಕಾರ, ಇವುಗಳ ಜೊತೆಗೆ ಬೇರೆ ಯಾವ ರಾಷ್ಟ್ರಗಳಾದರೂ ಸೇರಿಕೊಳ್ಳಲು ಅವಕಾಶವಿದೆ. ತನ್ನ ಸದಸ್ಯರಾಷ್ಟ್ರಗಳ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗುವುದೇ ಈ ಒಕ್ಕೂಟದ ಧ್ಯೇಯ. ಈ ಕೂಟದ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕೆಂತಲೂ ಯಾವುದೇ ಅಪಾಯವನ್ನು ಎದುರಿಸಬೇಕಾಗಿ ಬಂದಾಗ ಪರಸ್ಪರ ಸಹಾಯ ನೀಡಬೇಕೆಂತಲೂ ಒಪ್ಪಿಕೊಂಡಿವೆ. ಹೆಚ್ಚಾಗಿ ಇಸ್ಲಾಂ ರಾಷ್ಟ್ರಗಳೇ ಈ ಕೂಟದಲ್ಲಿ ಇದ್ದರೂ ಇದು ಇಸ್ಲಾಂ ಒಕ್ಕೂಟವಲ್ಲ. ಇದು ಅರಬ್ಬೀ ರಾಷ್ಟ್ರಗಳ ಮತ್ತು ಜನಗಳ ಏಳಿಗೆಗಾಗಿ ಕೆಲಸಮಾಡುವ ಒಂದು ಸಂಸ್ಥೆ ಮಾತ್ರ. ಈಚೆಗೆ ಇದು ಆಲ್ಜೀರಿಯ, ಸೂಡಾನ್, ಲಿಬಿಯ, ಟುನೀಷಿಯ ಮತ್ತು ಮೊರಾಕೊ ರಾಷ್ಟ್ರಗಳ ಸೇರುವಿಕೆಯಿಂದ ಬಲಗೊಂಡಿದೆ. ಮಧ್ಯಪ್ರಾಚ್ಯದಲ್ಲಿ ಇದು ಒಂದು ವಿಶಿಷ್ಟ ಅರಬ್ಬೀಪ್ರಪಂಚವೆಂದು ಪರಿಗಣಿಸಲ್ಪಟ್ಟಿದೆ. ಈ ಕೂಟದ ರಾಷ್ಟ್ರಗಳು ಎಣ್ಣೆ ಮತ್ತು ಪೆಟ್ರೋಲಿಯಮ್‌ನ ತವರುಗಳಾಗಿರುವುದರಿಂದ ಕೂಟದ ಪ್ರಾಮುಖ್ಯ ಹೆಚ್ಚಿದೆ. ಸರ್ಕಾರಗಳ ಧ್ಯೇಯ ಧೋರಣೆಗಳಲ್ಲಿ ರಾಜಕೀಯ ಉದ್ದೇಶಗಳಲ್ಲಿ ರಾಷ್ಟ್ರ ರಾಷ್ಟ್ರಕ್ಕೂ ವ್ಯತ್ಯಾಸವಿರುವುದರಿಂದ ಕೂಟದ ಭದ್ರತೆಗೆ ಸ್ವಲ್ಪ ಧಕ್ಕೆ ಬರುವ ಸಂಭವಗಳಿವೆಯೆಂದು ಹೇಳಬಹುದು. (ಎಂ.ಕೆ.ಆರ್.)

**ಅರಬ್ಬೀ ಗಣರಾಜ್ಯ :** ಈಜಿಪ್ಟ್ ಮತ್ತು ಸಿರಿಯಗಳ ನಡುವಿನ ರಾಜಕೀಯ ಒಪ್ಪಂದದಂತೆ ಏರ್ಪಟ್ಟು 1958–61ರ ವರೆಗೆ ಅಸ್ತಿತ್ವದಲ್ಲಿತ್ತು. ಈಜಿಪ್ಟ್ 1958–61 ರವರೆಗೆ ಅಸ್ತಿತ್ವದಲ್ಲಿತ್ತು. ಈಜಿಪ್ಟ್ ಗಣರಾಜ್ಯವಾದದ್ದು 1953ರ ಜನವರಿ 18ನೆಯ ತಾರೀಖು. ರಾಜ್ಯದ ಆದಾಯವನ್ನೆಲ್ಲ ತಮ್ಮ ಭೋಗವಿಲಾಸಗಳಿಗೆ ವಿನಿಯೋಗಿಸಿಕೊಂಡು ಪ್ರಜೆಗಳ ಅಭ್ಯುದಯವನ್ನು ಕಡೆಗಣಿಸಿದ ರಾಜಪ್ರಭುತ್ವವನ್ನು ಕೊನೆಗಾಣಿಸಿ, ಬೆ, ಪಾಷಾ ಮುಂತಾದ ಶ್ರೀಮಂತಿಕೆಯ ಬಿರುದುಗಳನ್ನು ರದ್ದುಗೊಳಿಸಿ, ಮೊಹಮ್ಮದ್ ನಗೀಬನ ನಾಯಕತ್ವದಲ್ಲಿ ಇದನ್ನು ಸಾಧಿಸಲಾಯಿತು.

ಆದರೆ ಈಜಿಪ್ಟನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ ತುಂಬ ಹದಗೆಟ್ಟಿತ್ತು. ಸೂಯೆಜ್ ಕಾಲುವೆ ಪ್ರಶ್ನೆ ಮತ್ತು ಸೂಡಾನಿನ ಭವಿಷ್ಯ—ಇವೆರಡೂ ಬಗೆಹರಿದಿಲ್ಲದೆ ಇಂಗ್ಲೆಂಡಿನೊಂದಿಗೆ ಸಂಬಂಧ ಸರಿಹೋಗುವಂತಿರಲಿಲ್ಲ. ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿತ್ತು. ಹೊಸ ಆಡಳಿತವರ್ಗ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೆ ತಂದಿತು. 1954ರಲ್ಲಿ ನಾಸೆರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಇಂಗ್ಲೆಂಡಿನೊಂದಿಗೆ ಸಂಬಂಧವನ್ನು ಸರಿಪಡಿಸಿಕೊಳ್ಳುವ ಪ್ರಯತ್ನ ನಡೆಯಿತು. ಇಂಗ್ಲೆಂಡ್ ಸೂಡಾನಿನ ಸ್ವಾತಂತ್ರ್ಯವನ್ನು ಘೋಷಿಸಿತು. 1954ರ ಒಪ್ಪಂದದಂತೆ ಈಜಿಪ್ಟ್‌ನಲ್ಲಿಟ್ಟಿದ್ದ ಬ್ರಿಟಿಷ್ ರಕ್ಷಣಾಪಡೆಯನ್ನು ಸ್ವಲ್ಪ ಸ್ವಲ್ಪವಾಗಿ 20 ತಿಂಗಳಲ್ಲಿ ಹಿಂದಕ್ಕೆ ಕರೆಸಿಕೊಳ್ಳುವ ಭರವಸೆ ಕೊಟ್ಟಿತು. ಒಪ್ಪಂದಕ್ಕನುಸಾರವಾಗಿ ರಕ್ಷಣಾಪಡೆ ಈಜಿಪ್ಟನ್ನು ಬಿಟ್ಟು ಹೋಯಿತು. ಇಂಗ್ಲೆಂಡಿನೊಂದಿಗೆ ಸ್ನೇಹ ಸಂಬಂಧ ಮಾತ್ರ ಹೆಚ್ಚು ಕಾಲ ಉಳಿಯಲಿಲ್ಲ. ಬಾಗ್ದಾದ್ ಒಪ್ಪಂದದಿಂದ ಹುಟ್ಟಿದ, ಇರಾನ್, ಇರಾಕ್, ತುರ್ಕಿ, ಪಾಕಿಸ್ತಾನ ಮತ್ತು ಇಂಗ್ಲೆಂಡ್ ರಾಜ್ಯಗಳನ್ನೊಳಗೊಂಡ ಸೆಂಟೋಕೂಟಕ್ಕೆ ಸೇರಲು ನಾಸೆರ್ ನಿರಾಕರಿಸಿದ, ಈ ಕೂಟಕ್ಕೆ ಅರಬ್ಬೀ ಜನತೆಯಲ್ಲಿ ತೀವ್ರ ವಿರೋಧವಿತ್ತು; ಆದ್ದರಿಂದ ಇವರಿಗೆ ನಾಸೆರ್ ಒಬ್ಬನೇ ಅರಬ್ಬರ ಗೌರವ ಮತ್ತು ಹಿತರಕ್ಷಣೆಯಲ್ಲಿ ಆಸಕ್ತನಾದವನೆಂಬ ಭಾವನೆ ಬೆಳೆದು ಆತ ಅವರ ಮುಖಂಡನಾದ. ಬಾಗ್ದಾದ್ ಒಪ್ಪಂದಕ್ಕೆ ವಿರೋಧಿಯಾಗಿದ್ದ ಭಾರತ ಮತ್ತು ಯುಗೋಸ್ಲಾವಿಯ ರಾಜ್ಯಗಳೊಡನೆ ಸ್ನೇಹವ್ಯವಹಾರ ಬೆಳೆಸಿ, ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಸ್ವತಂತ್ರ ಈಜಿಪ್ಟ್ ಪಾತ್ರವಹಿಸುವಂತೆ ಮಾಡಿದ. 1955ರಲ್ಲಿ ಜರುಗಿದ ಬಾಂಡುಂಗ್ ಸಮ್ಮೇಳನದಲ್ಲಿ ಭಾಗವಹಿಸಿ, ಅಲಿಪ್ತನೀತಿಗೆ ಬೆಂಬಲ ನೀಡಿದ.

ನಾಸೆರ್ ಇಸ್ರೇಲಿನ ಅಸ್ತಿತ್ವವನ್ನು ಒಪ್ಪಿಕೊಂಡೇ ಇರಲಿಲ್ಲ. ಅರಬ್ಬರೇ ಬಹು ಸಂಖ್ಯಾತರಾಗಿದ್ದ ಪಶ್ಚಿಮ ಏಷ್ಯದಲ್ಲಿ ದೊಡ್ಡ ಪಾಶ್ಚಾತ್ಯ ರಾಷ್ಟ್ರಗಳ ಬೆಂಬಲ ಪಡೆದ ರಾಜ್ಯವೊಂದು ನಿರ್ಮಿತವಾದರೆ ಅದು ಅನೇಕ ಹೊಸ ರಾಜಕೀಯ ಸಮಸ್ಯೆಗಳನ್ನು ತಂದೊಡ್ಡಿ ತಮ್ಮ ರಾಷ್ಟ್ರಗಳ ಬೆಳವಣಿಗೆಗೆ ಅಡ್ಡಿಯಾಗಬಹುದು ಎಂದು ಅರಬ್ಬರ ಅಭಿಪ್ರಾಯ. ಇಸ್ರೇಲಿನ ಬಹಿಷ್ಕಾರಕ್ಕೆ ಈಜಿಪ್ಟೇ ಮುಂದಾಳಾಗಿತ್ತು. 1955ರ ಫೆಬ್ರವರಿಯಲ್ಲಿ ಇಸ್ರೇಲ್ ಸೈನ್ಯ ಗಾಜ್ಞಾದ ಸೈನ್ಯ ಠಾಣೆಯ ಮೇಲೆ ದಾಳಿ ನಡೆಸಿತು. ಮುಂದೆ ಗಂಡಾಂತರ ಕಾದಿದೆಯೆಂಬುದನ್ನರಿತು ಅರಬ್ಬೀ ಗೆರಿಲ್ಲಾ ಯೋಧರ ತಂಡಗಳನ್ನು ಈಜಿಪ್ಟ್ ಸಿದ್ಧಪಡಿಸಿತು. ಪಾಶ್ಚಾತ್ಯ ದೇಶಗಳೂ ಮುಖ್ಯವಾಗಿ ಅಮೆರಿಕದ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್ ಮತ್ತು ಫ್ರಾನ್ಸ್ ಈಜಿಪ್ಟ್ ವಿರೋಧವಾಗಿ ನಿಂತುವು. ಆಗ ಕಮ್ಯೂನಿಸ್ಟ್ ರಾಷ್ಟ್ರಗಳೊಂದಿಗೆ ಈಜಿಪ್ಟ್ ಹೆಚ್ಚಾಗಿ ಸಂಬಂಧ ಬೆಳೆಸಬೇಕಾಯಿತು. 1956–59ರಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಸ್ರೇಲ್‌ಗಳ ವಿರುದ್ಧ ನಿಂತು ಯುದ್ಧ ಮಾಡುವ ಪರಿಸ್ಥಿತಿ ಈಜಿಪ್ಟಿಗೆ ಬಂತು; ಆದರೆ ವಿಶ್ವಸಂಸ್ಥೆ ಇದನ್ನು ತಡೆಗಟ್ಟಿತು.

ಈಜಿಪ್ಟಿನ ಮತ್ತು ಇತರ ಅರಬ್ ರಾಷ್ಟ್ರಗಳ ರಾಜಕೀಯದಲ್ಲಿ ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳ ಪ್ರಭಾವವನ್ನು ಮುರಿದು ಕಮ್ಯೂನಿಸ್ಟ್ ರಾಷ್ಟ್ರಗಳ ಒಕ್ಕೂಟವೊಂದನ್ನು ನಿರ್ಮಿಸುವುದೇ ಸರಿಯಾದ ಉಪಾಯವಾದ್ದರಿಂದ, ಮೊದಲ ಹೆಜ್ಜೆಯೆಂಬಂತೆ, ಈಜಿಪ್ಟ್ ಮತ್ತು ಸಿರಿಯ ದೇಶಗಳ ಅಧ್ಯಕ್ಷರು ತಮ್ಮ ಎರಡು ರಾಷ್ಟ್ರಗಳೂ ಒಂದಾಗಿ ಸಂಯುಕ್ತ ಅರಬ್ ಗಣರಾಜ್ಯವಾಗಿದೆಯೆಂದು ಘೋಷಿಸಿದರು (1958 ಫೆಬ್ರವರಿ 1). ಅದೇ ತಿಂಗಳ 21ನೆ ತಾರೀಖು ಜನಾಭಿಪ್ರಾಯವನ್ನು ಕೋರಲಾಯಿತು; ಬಹುಸಂಖ್ಯಾತ ಮತದಾರರು ಒಪ್ಪಿಗೆ ನೀಡಿದರು. ಮಾರ್ಚ್ ತಿಂಗಳಲ್ಲಿ ಯೆಮೆನ್ ಕೂಡ ಈ ಕೂಟಕ್ಕೆ ಸೇರಿತು. ನಾಸೆರ್ ಈ ಸಂಯುಕ್ತ ರಾಜ್ಯಗಳ ಅಧ್ಯಕ್ಷನಾಗಿ ಆರಿಸಲ್ಪಟ್ಟ, ಹೊರರಾಷ್ಟ್ರ ವ್ಯವಹಾರದಲ್ಲಿ, ಶಿಕ್ಷಣ ಮತ್ತಿತರ ಸಾಂಸ್ಕೃತಿಕ ವಿಷಯಗಳಲ್ಲಿ ಮಾತ್ರ ಏಕತೆಯಿರಬೇಕು. ಇತರ ವಿಷಯಗಳಲ್ಲಿ ಪ್ರತಿ ಸದಸ್ಯರಾಷ್ಟ್ರವೂ ಸ್ವತಂತ್ರವಾಗಿರಬೇಕು ಎಂಬ ನಿರ್ಣಯಕ್ಕೆ ಒಪ್ಪಿಗೆ ದೊರಕಿತು. ಹೊಸ ರಾಜ್ಯಾಂಗವ್ಯವಸ್ಥೆಯಲ್ಲಿ ಅಧ್ಯಕ್ಷ ಉಚ್ಚ ಸೇನಾಪತಿಯಾದ ಉಪರಾಷ್ಟ್ರಪತಿಗಳನಗಳನ್ನು ಮತ್ತು ಮಂತ್ರಿಗಳನ್ನು ನೇಮಿಸುವುದು, ವಜಾ ಮಾಡುವುದು ಅವನ ಅಧಿಕಾರಕ್ಕೊಳಪಟ್ಟಿತು.

ಐಕ್ಯ ಸಾಧನೆಗೆ ಪ್ರಥಮ ಹಂತವೆಂದು ಪರಿಗಣಿತವಾಗಿದ್ದ ಈ ಗಣರಾಜ್ಯ ವ್ಯವಸ್ಥೆಯಲ್ಲಿ ಒಡಕುಗಳು ಬಹುಬೇಗ ಕಂಡುಬಂದುವು. ಸರಕಾರದ ಉಚ್ಚಸ್ಥಾನಗಳಲ್ಲಿ ಕೇಂದ್ರ ಸರ್ಕಾರ ತನ್ನ ಅಧಿಕಾರ ಕ್ಷೇತ್ರವನ್ನು ಕೊಂಚಕೊಂಚವಾಗಿ ವಿಸ್ತರಿಸತೊಡಗಿತು. ಸಿರಿಯದಲ್ಲಿ ಕಳವಳ ಹೆಚ್ಚಿ ಸೈನಿಕ ಕ್ರಾಂತಿಯುಂಟಾಗಿ (1961) ಆ ದೇಶ ಒಕ್ಕೂಟದಿಂದ ಹೊರಬಂತು. ಕೊಂಚಕಾಲದಲ್ಲೇ ಯೆಮೆನ್ ಕೂಡ ಹೊರಬಂತು. ಆದರೆ, ಒಂದು ಕಡೆ ಸಾಮ್ರಾಜ್ಯವಾದಿ ಗಳು, ಇನ್ನೊಂದುಕಡೆ ಕಮ್ಯೂನಿಸ್ಟರು—ಇವರಿಬ್ಬರ ಪ್ರಭಾವಕ್ಕೂ ಬಗ್ಗದೆ ಅರಬ್ಬರ ಸ್ವಾತಂತ್ರ್ಯ, ಉತ್ಕರ್ಷಗಳಿಗಾಗಿ ಮಾತ್ರ ಶ್ರಮಿಸುತ್ತಿದ್ದ ನಾಸೆರನ ವಿಷಯದಲ್ಲಿ ಜನಾನುರಾಗ ಕುಗ್ಗಲಿಲ್ಲ; ಸಿರಿಯ, ಯೆಮೆನ್ ಬೇರೆಯಾದರೂ ಸಂಯುಕ್ತ ಗಣರಾಜ್ಯದ ಹೆಸರು ಮುಂದುವರಿಯಿತು. ನಾಸೆರ್ ಅರಬ್ಬೀಯರ ಸ್ವಾತಂತ್ರ್ಯ, ರಾಷ್ಟ್ರಗೌರವಗಳ ಪ್ರತೀಕವಾಗಿ ನಿಂತ. 1963ರಲ್ಲಿ ಪುನಃ ಸಂಯುಕ್ತ ಅರಬ್ ಗಣರಾಜ್ಯವೊಂದನ್ನು ಸ್ಥಾಪಿಸುವ ಪ್ರಯತ್ನಗಳು ನಡೆದುವು. ಈ ಸಲ ಈಜಿಪ್ಟ್, ಸಿರಿಯ, ಇರಾಕ್‌ಗಳ ನಡುವೆ ತಾತ್ತ್ವಿಕವಾಗಿ ಒಮ್ಮತವೂ ಕಂಡುಬಂತು. ಆದರೆ ಸಂಯುಕ್ತ ರಾಜ್ಯಾಂಗದಲ್ಲಿ ಸದಸ್ಯರ ಸ್ವಾತಂತ್ರ್ಯವೆಷ್ಟಿರಬೇಕೆಂಬ ವಿಷಯದಲ್ಲಿ ಭಿನ್ನಭಿಪ್ರಾಯಗಳು ತಲೆದೋರಿ, ಆ ಯೋಜನೆ ಅಷ್ಟಕ್ಕೇ ನಿಂತಿತು. ಅರಬ್ಬೀಯರೆಲ್ಲ ಒಟ್ಟುಗೂಡಿ ಹೊರರಾಷ್ಟ್ರಗಳ ಒತ್ತಾಯಗಳಿಗೆಡೆಕೊಡದೆ ತಮ್ಮ ಉತ್ಕರ್ಷವನ್ನು ಸಾಧಿಸಿದಲ್ಲದೆ ಬೇರೆ ಮಾರ್ಗವೇ ಇಲ್ಲ ಎಂಬುದನ್ನು ನಂಬಿ ಅದಕ್ಕಾಗಿ ಶ್ರಮಿಸುತ್ತಿರುವ ಸಂಖ್ಯೆಯೇನೂ ಇನ್ನೂ ಕಡಿಮೆಯಾಗಿಲ್ಲ. 1967ರಲ್ಲಿ ಇಸ್ರೇಲ್‌ನೊಂದಿಗೆ ಮಿಂಚಿನವೇಗದಲ್ಲಿ ನಡೆದ ಯುದ್ಧ ಇದಕ್ಕೆ ಸಮರ್ಥನೆಯನ್ನೂ ಕೊಟ್ಟಿದೆ.

*

**ಅರಬ್ಬೀ ಛಂದಸ್ಸು :** ಅರಬ್ಬೀ ಭಾಷೆಯಲ್ಲಿ ಛಂದಸ್ಸನ್ನು ಮೊದಲು ಪ್ರಯೋಗಿಸಿದವ ಬಾಸ್ರದ ಅಹಮದ್‌ನ ಮಗ ಖಲೀಲ್ (ಪ್ರ.ಶ. 718–19; ಇವನ ಜನನ ಮರಣಗಳೆರಡೂ ನಡೆದುದು ಭಾನುವಾರವೇ). ಒಮ್ಮೆ ಬಾಸ್ರ ನಗರದ ಕಂಚುಗಾರರ ಬೀದಿಯಲ್ಲಿ ಹೋಗುತ್ತಿದ್ದಾಗ ಯಾವನೋ ತಟ್ಟೆಯೊಂದರ ಮೇಲೆ ಸುತ್ತಿಗೆಯಿಂದ ಬಡಿದ, ಅದರಿಂದ ಉಂಟಾದ ನಾದದ ಸ್ಪಂದನವನ್ನು ಕೇಳಿ ಖಲೀಲ್ ಸಂತೋಷದಿಂದ ನೆಗೆಯುತ್ತ ತನಗೆ ಆ ಕ್ಷಣದಲ್ಲಿ ಹೊಳೆದ ಹೊಸ ವಿಷಯವೊಂದರ ಬಗ್ಗೆ ತೀವ್ರವಾಗಿ ಆಲೋಚಿಸಿ, ಅಂದಿನಿಂದ ಸ್ವರಮೇಳದ ಸಾಧ್ಯತೆಯನ್ನು ಕುರಿತು ಕನಸುಕಾಣತೊಡಗಿದ.

ಅರಬ್ಬೀ ಭಾಷೆಯ ಶಬ್ದರಚನೆ ಫ, ಅ, ಲ ಎಂಬ ಮೂರು ಅಕ್ಷರಗಳ ತಳಹದಿಯ ಮೇಲೆ ನಿಂತಿದೆ. ಒಂದಾದ ಮೇಲೊಂದರಂತೆ ಬರುವ ಹೊಡೆತಗಳಿಂದಲೂ ಆ ಮೂರು ಅಕ್ಷರಗಳ ಮೇಲೆ ನಿರ್ದಿಷ್ಟ ಪ್ರಮಾಣದಲ್ಲಿ ಯತಿಯನ್ನು ಹಾಕುವುದರಿಂದಲೂ ಆತ ಛಂದಸ್ಸಿನ ಲಯಗಳನ್ನು ಗೊತ್ತುಪಡಿಸಿದ.

ಛಂದಸ್ಸು ಸಂಗೀತದ ಶಿಶು. ತಂತಿಯೊಂದನ್ನು ಮೀಟುವ ಸಾಧನದಿಂದ ಬಡಿದಾಗ ಸ್ವರವೊಂದರ ಉತ್ಪನ್ನವಾಗುತ್ತದೆ. ಇದು ಪ್ರತಿನಿಧಿಸುವುದು ಚಲಿತಾಕ್ಷರವೊಂದನ್ನು—ಎಂದರೆ ತ ವನ್ನು (ᴗ). ಆ ಸ್ವರ ನಿಲ್ಲುವ ಅಕ್ಷರಕ್ಕೆ ಜಡಾಕ್ಷರವೆಂದು ಹೆಸರು. ತನ್(–) ಅಕ್ಷರ ಸಂಯೋಜನೆಯಲ್ಲಿರುವ ನ್ ಇಂಥ ಅಕ್ಷರ. ಉದಾಹರಣೆಗೆ ನಾವು ಮ ಫಾ।ಈ।ಲುನ್ (ᴗ – –) ಎಂಬ ಗಣವನ್ನು ಉಚ್ಚರಿಸಬೇಕಾದರೆ ಮೊದಲು ಅನುಕ್ರಮವಾಗಿ ಎರಡು ಸಾರಿ ಬಡಿಯಬೇಕು. ಈ ಎರಡು ಸ್ವರಗಳೂ ಕೊನೆಯಲ್ಲಿ ಬರುವ ಜಡಾಕ್ಷರವೂ ಸೇರಿ ಮ ಫಾ ಗೆ (ᴗ–) ಸಮವಾಗುತ್ತದೆ. ಅನಂತರ ಒಂದು ಕ್ಷಣ ಬಿಟ್ಟು ಮೂರನೆಯ ಬಾರಿ ಬಡಿದಾಗ ಒಂದು ಚಲಿತಾಕ್ಷರ ವ್ಯಂಜನವೂ ಅದರ ಹಿಂದೆಯೆ ಒಂದು ಜಡಾಕ್ಷರವೂ ಎಂದರೆ, ಈ (–) ಬರುತ್ತವೆ. ಇದಾದ ಅನಂತರ ನಾಲ್ಕನೆಯ ಪೆಟ್ಟು ಬೀಳುತ್ತದೆ. ಅದು ಲುನ್‌ಗೆ(–) ಸಮವಾದುದು. ಪದ್ಯಪಂಕ್ತಿಯೊಂದರ ಗಣಗಳಲ್ಲಿ ಪ್ರತಿಯೊಂದೂ ರೂಪಿತವಾಗುವುದು ಹೀಗೆಯೆ.

ಸಂಗೀತಗಾರರು ತಮ್ಮ ಗಾಯನಕ್ಕೆ ಮುಖ್ಯವಾಗಿ ತ ಮತ್ತು ನ ಎಂಬ ಅಕ್ಷರಗಳನ್ನು ಅವಲಂಬಿಸಿರುತ್ತಾರೆ. ಗಾಯನದಲ್ಲಿ ಮ ಫಾ।ಈ।ಲುನ್ ತನನ್।ತನ್। ತನ್ (ᴗ––) ಎಂದು ಪರಿವರ್ತನ ಹೊಂದುತ್ತದೆ. ಚಲಿತಾಕ್ಷರ ಮತ್ತು ಜಡಾಕ್ಷರಗಳ ಸಂಯೋಜನೆಯಿಂದ ರಚಿತವಾದ ಪದಗಳು ಅವ್ಯಯಗಳೆಂದು ಕರೆಯಲ್ಪಡುತ್ತವೆ. ಇಂಥ ಅವ್ಯಯಗಳು ಮೂರು, ಅವುಗಳಲ್ಲಿ ಒಂದೊಂದರಲ್ಲೂ ಎರಡು ವರ್ಗಗಳುಂಟು. ಆದ್ದರಿಂದ ಅವುಗಳ ಸಂಖ್ಯೆ ಒಟ್ಟು ಆರು.

**1. ಸಬಬ್:** 1 ಇದರಲ್ಲಿ ಚಲಿತಾಕ್ಷರ ವ್ಯಂಜನದ ಅನಂತರ ಒಂದು ಜಡಾಕ್ಷರ ಬರುತ್ತದೆ—(ಸಬಬ್–ಎ–ಖಫೀಫ್ ಅಥವಾ ಲಘು ಸಬಬ್) ಉದಾಹರಣೆಗೆ, ತನ್ (–). 2 ಅಥವಾ ಇನ್ನೊಂದು ಚಲಿತಾಕ್ಷರವೂ ಬರಬಹುದು. ಉದಾರಣೆಗೆ, ತನ (ᴗᴗ) (ಸಬಬ್–ಎ–ಸಕೀಲ್ ಅಥವಾ ಗುರು ಸಬಬ್)

**2. ವತದ್:** 1 ಚರಾಕ್ಷರಗಳು ಎರಡನ್ನು ಒಳಗೊಂಡಿರುವ ಒಂದು ಅವ್ಯಯ ಅದರ ಹಿಂದೆಯೇ ಒಂದು ಜಡಾಕ್ಷರ (ವತದ್–ಎ–ಮಜಮೂ ಅಥವಾ ಸಂಕಲಿತ ವತದ್); ಉದಾಹರಣೆಗೆ, ತನನ್ (ᴗ–). 2 ಅವ್ಯಯವೊಂದರ ಎರಡು ಚರ ಅಕ್ಷರಗಳ ಮಧ್ಯೆ ಜಡಾಕ್ಷರವೊಂದು ಬಂದು ಅವನ್ನು ಬೇರ್ಪಡಿಸಬಹುದು; ಉದಾಹರಣೆಗೆ, ತನ್ ನ (–ᴗ). ಇದಕ್ಕೆ ವತದ್–ಎ–ಮಫರೂಕ್, ಪ್ರತ್ಯೇಕವಾಗಿರುವ ವತದ್ ಎಂದು ಹೆಸರು

**3. ಫಾಸಿಲ:** 1 ಮೊದಲು ಮೂರು ಚಲಿತಾಕ್ಷರಗಳು ಅನಂತರ ಒಂದು ಜಡಾಕ್ಷರ; ಉದಾಹರಣೆಗೆ, ತನನನ್ (ᴗᴗ–) (ಫಾಸಿಲ–ಎ–ಸುಗರಾ ಅಥವಾ ಕಡಿಮೆ ಸ್ಥಳ). 2 ನಾಲ್ಕು ಚಲಿತಾಕ್ಷರಗಳು ಅನಂತರ ಒಂದು ಜಡಾಕ್ಷರ; ಉದಾಹರಣೆಗೆ ತನನನನ್ (ᴗᴗᴗ–). (ಫಾಸಿಲ–ಎ–ಕುಬ್ರಾ ಅಥವಾ ಹೆಚ್ಚಿನ ಸ್ಥಳ).

ಈ ಆರು ಅವ್ಯಯಗಳೆಲ್ಲವುಗಳ ಸಂಯೋಜನೆ ಹೀಗಾಗುತ್ತದೆ:

ಲಮ್ ಅರ ಅಲಾ ರಾಸಿ ಜಬಲಿನ್ ಸಮಕತನ್

– ᴗᴗ ᴗ– –ᴗ ᴗᴗ– ᴗᴗᴗ–

ತನ್ ತನ ತನನ್ ತನ್‌ನ ತನನನ್ ತನನನನ್

ನನಗೆ ಬೆಟ್ಟದ ತುದಿಯಲ್ಲಿ ಒಂದಾದರೂ ಮೀನು ಕಾಣಿಸಲಿಲ್ಲ ಎಂಬುದು ಈ ಸಾಲಿನ ಅರ್ಥ.

ಈ ಆರು ಅವ್ಯಯಗಳಲ್ಲಿ ಕನಿಷ್ಠ ಪಕ್ಷಕ್ಕೆ ಎರಡು, ಹೆಚ್ಚೆಂದರೆ ಮೂರು ಅವ್ಯಯಗಳು ಸೇರಿದರೆ ಪದ್ಯಪಂಕ್ತಿಯ ಒಂದು ಗಣವಾಗುತ್ತದೆ. ಪದ್ಯದ ಪ್ರತಿ ಪಂಕ್ತಿಯಲ್ಲೂ ಎರಡು ಭಾಗಗಳಿದ್ದು ಅವುಗಳಲ್ಲಿ ಒಂದೊಂದರಲ್ಲೂ ಒಂದಕ್ಕೆ ಕಡಿಮೆಯಿಲ್ಲದಂತೆ ನಾಲ್ಕಕ್ಕೆ ಹೆಚ್ಚಿಲ್ಲದಂತೆ ಗಣಗಳಿರಬೇಕು. ಅತ್ಯಂತ ಹೆಚ್ಚೆಂದರೆ ಎಂಟು ಗಣಗಳಿರಬಹುದು. ತತ್ಫಲವಾಗಿ ಒಂದು ಪದ್ಯಪಂಕ್ತಿಯಲ್ಲಿ ಎರಡು, ನಾಲ್ಕು, ಆರು, ಅಥವಾ ಎಂಟು ಅಥವಾ ಹದಿನಾರು ಗಣಗಳಿರಬೇಕು. ಅತ್ಯಂತ ಹೆಚ್ಚೆಂದರೆ ಹದಿನಾರು ಗಣಗಳಿರಬಹುದು. ಆಧುನಿಕ ಕವಿಗಳು ಅರುವತ್ತುನಾಲ್ಕು ಗಣಗಳಿರುವ ಅರ್ಧಪಂಕ್ತಿಗಳನ್ನೂ ರಚಿಸಿದ್ದಾರೆ. ಇದಕ್ಕೆ ಬಹ್–ರ–ಎ–ತಮೀಲ್ ಎಂದು ಹೆಸರು. ಬಹ್–ರ ಎಂದರೆ ಛಂದಸ್ಸು ಎಂದರ್ಥ.

ಎರಡು ಅಥವಾ ಹೆಚ್ಚೆಂದರೆ ಮೂರು ಅವ್ಯಯಗಳನ್ನು ಸೇರಿಸಿ ಗಣವೊಂದನ್ನು ಹತ್ತು ರೀತಿಯಲ್ಲಿ ರೂಪಿಸಬಹುದು. ಈ ಹತ್ತು ರೀತಿಗಳನ್ನು ನಾಲ್ಕು ಪಂಗಡಗಳಾಗಿ ಹೀಗೆ ವಿಂಗಡಿಸಬಹುದು:

I i ಒಂದು ವತದ್ (ಮೊದಲನೆಯದು), ತನನ್ (ᴗ–/) ಮತ್ತು ಎರಡು ಸಬಬ್‌ಗಳು (ಮೊದಲನೆಯವು), ತನ್ (–) ಇವನ್ನು ಜೋಡಿಸಿ ಒಂದೊಂದೂ ಮೂರು ಅವ್ಯಯಗಳನ್ನೊಳಗೊಂಡಿರುವ ಐದು ಗಣಗಳನ್ನು ನಿರ್ಮಿಸಬಹುದು. ಹೀಗೆ ರಚಿತವಾದ ಮೂಲಗಣ ಮಫಾ।ಈ।ಲುನ್ (ᴗ–/–/–) ತನನ್।ತನ್।ತನ್ ಎಂದಾಗುತ್ತದೆ. ಇದು ಹಜಸ್ ಎಂಬ ಛಂದಸ್ಸಿನಲ್ಲಿ ಒಂದು ಗಣವಾಗುತ್ತದೆ.

ii ಎ. ಮೂಲಗಣವನ್ನು ಎರಡನೆಯ ಅವ್ಯಯದಿಂದ ಹಿಡಿದು ಓದಿದರೆ ಮೊದಲನೆಯ ಅವ್ಯಯವನ್ನು ಕೊನೆಗೆ ಓದಬೇಕಾಗುತ್ತದೆ. ಉದಾಹರಣೆಗೆ ಈ।ಲುನ್।ಮಫಾ. ಇದು ಬದಲಾಗಿ ಮುಸ್।ತಫ್।ಇಲುನ್=ತನ್।ತನ್।ತನನ್=—।–।ᴗ– ಎಂದಾಗುತ್ತದೆ. ಈ ಛಂದಸ್ಸಿಗೆ ರಜಸ್ ಎಂದು ಹೆಸರು.

ii ಬಿ. ಈ ಗಣದಲ್ಲಿ ಮೇಲೆ ಹೇಳಿದ ಮುಸ್।ತಫ್।ಇಲುನ್ ಎಂಬ ಗಣದ ಎರಡನೆಯ ಅವ್ಯಯ ಮೊದಲನೆಯ ಸಬಬ್ ಆಗಿ ಮೂರನೆಯ ಅವ್ಯಯ ಮೊದಲನೆಯ ವತದ್ ಆಗುತ್ತದೆ. ಇವೆರಡನ್ನೂ ತಫ್ ಇ।ಲುನ್ ಎಂದೂ ಓದಬಹುದು. ಹೀಗೆ ಮಾಡಿದಾಗ ಮೊದಲನೆಯ ಸಬಬ್ ಎರಡನೆಯ ವತದ್ ಅಗಿಯೂ ಮೊದಲನೆಯ ವತದ್ ಮೊದನೆಯ ಸಬಬ್ ಆಗಿಯೂ ಬದಲಾವಣೆ ಹೊಂದುತ್ತವೆ. ತತ್ಫಲವಾಗಿ ಮುಸ್।।ತಫ್।ಇಲುನ್ ಅಥವಾ ತನ್।ತನ್।ತನ್ ಎಂಬುದು ಮುಸ್।ತಫ್।ಇಲುನ್ ಅಥವಾ ತನ್।ತನ್‌ನ।ತನ್ ಅಥವಾ –। –ᴗ । – ಎಂಬುದು ಮುಸ್।ತಫ್।ಇಲುನ್ ಅಥವಾ ತನ್।ತನ್‌ನ।ತನ್ ಅಥವಾ –।–ᴗ।– ಆಗಬಹುದು.

iii ಎ. ಮೂಲಗಣವನ್ನು ಮೂರನೆಯ ಅವ್ಯಯದಿಂದ ಓದಿದರೆ ಮೊದಲನೆಯ ಮತ್ತು ಎರಡನೆಯ ಅವ್ಯಯಗಳು ಎರಡನೆಯ ಮತ್ತು ಮೂರನೆಯ ಅವ್ಯಯಗಳಾಗುತ್ತವೆ. ಈ ರೀತಿ:

ಲನ್।ಮ ಫಾ।ಈ=ತನ್।ತನನ್।ತನ್

ಇದಕ್ಕೆ ಪ್ರತಿಯಾಗಿ ಫಾ।ಇಲಾ।ತುನ್=ತನ್।ತನನ್।ತನ್ ಬರುತ್ತವೆ. ಈ ಛಂದಸ್ಸು ರಮಲ್.

iii ಬಿ. ಇಲ್ಲಿ ಫಾ। ಇಲಾ (ಒಂದನೆಯ ಸಬಬ್ ಮತ್ತು ಒಂದನೆಯ ವತದ್‌ಗಳು) ಫಾ ಇ ।ಲಾ ಆಗುತ್ತದೆ. (ಎರಡನೆಯ ವತದ್ ಮತ್ತು ಮೊದಲನೆಯ ಸಬಬ್). ಆದ್ದರಿಂದ ತನ್।ತನನ್।ತನ್ ಇವು ತನ್‌ನ।ತನ್।ತನ್ ಆಗುತ್ತದೆ.

II ಎರಡು ಗಣಗಳನ್ನು ಎರಡು ಅವ್ಯಯಗಳಿಂದಲೇ (ಎಂದರೆ ಒಂದನೆಯ ವತದ್ ಒಂದು, ಒಂದನೆಯ ಸಬಬ್ ಒಂದು) ನಿರ್ಮಿಸಬಹುದು. ಉದಾಹರಣೆಗೆ, ಫ ಊ।ಲುನ್, ಈ ಮೂಲಗಣವನ್ನು ತಿರುಗುಮುರುಗು ಮಾಡಿದರೆ ಲುನ್।ಫ ಊ ಆಗುತ್ತದೆ. ಅದಕ್ಕೆ ಬದಲಾಗಿ ಫಾ ಇಲುನ್ ಬರಬಹುದು.

6. ಫ ಊ ।ಲುನ್ =ತನನ್।ತನ್ = ᴗ–/– ಛಂದಸ್ಸು—ಮುತಕರಿಬ್.

7. ಫಾ । ಇಲುನ್= ತನ್ । ತನನ್ =/ᴗ– ಛಂದಸ್ಸು—ಮುತದಾರಿಕ್.

III ಎರಡು ಅವ್ಯಯಗಳನ್ನು ಉಪಯೋಗಿಸಿಕೊಂಡು ಎರಡು ಗಣಗಳನ್ನು ರಚಿಸಬಹುದು (ಎಂದರೆ, ಮೊದಲನೆಯ ವತದ್, ಮೊದಲನೆಯ ಫಸಿಲಾ). ಉದಾಹರಣೆಗೆ, ಮಫಾ। ಇಲತುನ್. ಈ ಮೂಲಗಣವನ್ನು ಮಗುಚಿ ಹಾಕಿದರೆ ಇಲತುನ್ । ಮಫಾ ಆಗುತ್ತದೆ. ಅದಕ್ಕೆ ಬದಲಾಗಿ ಮುತಫಾ । ಇಲುನ್ ಬರಬಹುದು.

8. ಮಫಾ । ಇಲತುನ್ = ತನನ್। ತನತನ್= ᴗ–ᴗᴗ–/ ಛಂದಸ್ಸು—ವಾಫಿರ್.

9. ಮುತಫಾ। ಇಲುನ್ = ತನತನ್ । ತನನ್।=ᴗᴗ–ᴗ–/ ಛಂದಸ್ಸು —ಕಾಮಿಲ್.

ಈ ಒಂಬತ್ತು ಗಣಗಳೂ ಒಂದೊಂದೂ ಒಂದು ಛಂದಸ್ಸಾಗುತ್ತವೆ. ಈ ಛಂದಸ್ಸುಗಳಿಗೆ ಸರಳ ಛಂದಸ್ಸುಗಳೆಂದು ಹೆಸರು.

IV ಈ ಗಣ ಎರಡು ಮೊದಲನೆಯ ಸಬಬ್‌ಗಳೂ ಮತ್ತು ಒಂದು ಎರಡನೆಯ ವತದ್—ಇವುಗಳ ಸಂಯೋಜನೆಯಿಂದ ಬರುತ್ತದೆ. ಉದಾಹರಣೆಗೆ,

10. ಮಫ್।ಊ।ಲಾತು=ತನ್।ತನ್।ತನ್‌ನ= – – – ᴗ ಈ ಮೂಲ ಗಣ ತಾನೇ ಒಂದು ಛಂದಸ್ಸಾಗುವುದಿಲ್ಲ. ಅದು ಬರುವುದು ಇತರ ಗಣಗಳ ಜೊತೆಯಲ್ಲಿ. ಉದಾಹರಣೆಗೆ,

ಮುಸಾತಫ್ ಇಲುನ್, ಮುಸ್‌ತಫ್ ಇಲುನ್, ಮಫ್।ಊ।ಲಾತು

ತನ್ ತನ್ ತನನ್, ತನ್ ತನ್ ತನನ್, ತನ್ ತನ್ ತನ್‌ನ

– – ᴗ–, – – ᴗ–, – – –ᴗ

ಛಂದಸ್ಸು –ಸರೀ.

ಅಥವಾ

ಮುಸ್‌ತಫ್ ಇಲುನ್, ಮಫ್ ।ಊ।ಲಾತು, ಮಸ್‌ತಫ್ ಇಲುನ್

ತನ್ ತನ್ ತನನ್, ತನ್ ತನ್ ತನ್‌ನ, ತನ್ ತನ್ ತನನ್

– – ᴗ–, – – –ᴗ, – – ᴗ–

ಛಂದಸ್ಸು–ಮುನ್ ಸರೆಹ್.

ಅರಬ್ಬೀ ಭಾಷೆಯಲ್ಲಿ ಒಟ್ಟು ಹತ್ತೊಂಬತ್ತು ಛಂದಸ್ಸುಗಳಿವೆ. ಇವುಗಳಲ್ಲಿ—ಮೇಲೆ ಹೇಳಿದಂತೆ—ಒಂಬತ್ತಕ್ಕೆ ಸರಳ ಛಂದಸ್ಸುಗಳೆಂದು ಹೆಸರು. ಮಿಕ್ಕ ಹತ್ತು ಛಂದಸ್ಸುಗಳು ರಚಿತವಾಗುವುದು ಮೊದಲನೆಯ ಹತ್ತು ಮೂಲಗಣಗಳಿಂದ ಆಯ್ದುಕೊಂಡ ಎರಡೆರಡು

ಬೇರೆ ಬೇರೆ ಗಣಗಳ ಸಂಯೋಜನೆಯ ಫಲವಾಗಿ. ಈ ಛಂದಸ್ಸುಗಳಿಗೆ ಸಂಯುಕ್ತ ಛಂದಸ್ಸುಗಳೆಂದು ಹೆಸರು. ಒಂದೊಂದು ಮೂಲಗಣವೂ ಕೆಲವು ವೇಳೆ ಅಕ್ಷರಗಳನ್ನು ಬಿಟ್ಟುಬಿಡುವುದರಿಂದ ಇನ್ನು ಕೆಲವುವೇಳೆ ಚರಾಕ್ಷರಗಳನ್ನೂ ಜಡಾಕ್ಷರಗಳನ್ನೂ ಸೇರಿಸುವುದ ರಿಂದ ಅನೇಕ ಬದಲಾವಣೆಗಳನ್ನು ಹೊಂದುತ್ತದೆ. ಉದಾಹರಣೆಗೆ, ಮ ಫಾ ಈ ಲುನ್ = ತನನ್ ತನ್ ತನ್ (ಬಹಾರೆ ಹಜಸ್ ಛಂದಸ್ಸಿನಿಂದ) ಎಂಬುದನ್ನು ಈ ಕೆಳಗಿನ ರೀತಿಗಳಲ್ಲಿ ಮಾರ್ಪಡಿಸಬಹುದು:

1. ತನನ್।ತನನ್ 2. ತನನ್।ತನ್ನ 3. ತನನ್।ತನ್ 4. ತನನ್।ತನ್।ತಾನ್

5. ತನನ್ ।ತಾನ್ 6. ತನಾನ್ 7. ತನನ್ ।ತನ್ 8. ತನ್।ತನ್ ।ತಾನ್ 9. ತನ್।ತಾನ್ 10. ತನ್ ತನ್ ಇತ್ಯಾದಿ.

ಮೂಲಗಣಗಳು ಹತ್ತರಲ್ಲೂ ಉಂಟಾಗಬಹುದಾದ ಬದಲಾವಣೆಗಳು ಒಟ್ಟು ಒಂದುನೂರ ಹದಿನಾಲ್ಕು. ಚಮತ್ಕಾರಮಯವೂ ಸೂಕ್ಷ್ಮವೂ ಆದ ಈ ಕಲೆಯಲ್ಲಿ ಪೂರ್ಣ ಪರಿಶ್ರಮ ಪಡೆಯಲು ಕೆಲವು ದಶಕಗಳ ಸತತ ಪ್ರಯತ್ನ ಅಗತ್ಯ. (ಎಫ್.ಎಂ.ಕೆ.)

**ಅರಬ್ಬೀ ಭಾಷೆ :** ಬ್ಯಾಬಿಲೋನಿಯನ್, ಹೀಬ್ರೂ, ಹಿಮ್ಯರೈಟ್ (ದಕ್ಷಿಣ ಅರಬ್ಬೀ), ಅರಾಮೇಯಿಕ್, ಫೊನೀಷಿಯನ್, ಇಥಿಯೋಪಿಕ್ ಮತ್ತು ಅರಬ್ಬೀ ಇಂಥ ಏಷ್ಯದ ನೈರುತ್ಯ ಭಾಗದಲ್ಲಿರುವ ದೇಶಗಳ ಪ್ರಾಚೀನಭಾಷೆಗಳು ಸಿಮಿಟಿಕ್ ಭಾಷೆಯ ಗುಂಪಿಗೆ ಸೇರಿವೆ. ಬೈಬಲಿನ ವಂಶಾನುಕ್ರಮಣಿಕೆಯ ಪ್ರಕಾರ ಆದಂ ಎಂಬುವನ ವಂಶಪರಂಪರೆಗೆ ಸೇರಿದ ನೋವ ಎಂಬಾತನ ಮಗ ಸ್ಯಾಮ್‌ನ ಹೆಸರನ್ನು ಅನುಸರಿಸಿ ಈ ಭಾಷೆಗಳನ್ನು ಸಿಮಿಟಿಕ್ ಭಾಷೆಗಳೆಂದು ಕರೆಯುತ್ತಾರೆ. ಅವುಗಳ ಮೂಲಮಾತೃಕೆ ಎಲ್ಲಿ ಯಾವಾಗ ಹುಟ್ಟಿತು ಎಂಬುದು ತಿಳಿಯದು. ಆದರೆ ಅವುಗಳಲ್ಲಿ ಪರಸ್ಪರವಾಗಿ ನಿಕಟ ಸಂಬಂಧವಿರುವುದ ಲ್ಲದೆ ಪದಗಳಲ್ಲೂ ವ್ಯಾಕರಣನಿಷ್ಪತ್ತಿಗಳಲ್ಲೂ ಕಂಡುಬರುವ ಹೊಂದಾಣಿಕೆಯನ್ನು ನೋಡಿದರೆ ಅವುಗಳೆಲ್ಲ ಯಾವುದೋ ಒಂದು ಮೂಲ ಭಾಷೆಯಿಂದ ಹುಟಿರುವಂತಹವು ಎಂಬಂತೆ ತೋರುತ್ತದೆ. ಸಿಮಿಟಿಕ್ ಭಾಷೆಗಳ ಮೂಲಮಾತೃಕೆ ಸಂಪೂರ್ಣವಾಗಿ ಕಣ್ಮರೆಯಾಗಿದೆ. ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಬೇರೆ ಯಾವ ಐತಿಹಾಸಿಕಾಂಶಗಳೂ ದೊರೆಯದಿ ರುವ ಪ್ರಯುಕ್ತ ಮೇಲೆ ನಮೂದಿಸಿರುವ ಜನ್ಯಭಾಷೆಗಳಲ್ಲಿ ಅರಬ್ಬೀ ಭಾಷೆಯೊಂದೇ ಅತ್ಯಂತ ಕಿರಿಯದೆಂದೂ ಈಗ ಅದೊಂದೇ ಜೀವಂತವಾಗಿದೆಯೆಂದೂ ಊಹಿಸಲಾಗಿದೆ. ಅಲ್ಲದೆ ಅರಬ್ಬರು ತಮ್ಮ ಭೌಗೋಳಿಕ ಸ್ಥಾನದ ದೆಸೆಯಿಂದಲೂ ಮರಳುಗಾಡಿನಲ್ಲಿ ವಾಸ ಮಾಡುತ್ತಿರುವುದರಿಂದಲೂ ಮೂಲ ಭಾಷೆಯ ಗುಣವನ್ನು ಹೆಚ್ಚು ಶುದ್ಧವಾಗಿ, ಹೆಚ್ಚು ಸ್ಫುಟವಾಗಿ ತಮ್ಮ ಭಾಷೆಯಲ್ಲಿ ಉಳಿಸಿಕೊಂಡಿದ್ದಾರೆ. ಈ ಭಾಷೆಗಳಿಗೆ ತಮ್ಮದೇ ಆದ ವಿಶಿಷ್ಟವಾದ ಗುಣಗಳಿವೆ. ಅವುಗಳನ್ನು ಕೆಳಗೆ ಕಾಣಿಸಿರುವಂತೆ ಮೂರು ವರ್ಗಗಳಾಗಿ ವಿಂಗಡಿಸಬಹುದು. 1 ಪೂರ್ವ ಸಿಮಿಟಿಕ್, (ಬ್ಯಾಬಿಲೋನಿಯನ್ ಮತ್ತು ಅಸ್ಸೀರಿಯನ್ – ಇಂಥವುಗಳು). 2 ಉತ್ತರ ಮತ್ತು ವಾಯವ್ಯ ಭಾಗದ ಸಿಮಿಟಿಕ್ (ಫೊನೀಷಿಯನ್, ಹೀಬ್ರೂ, ಅರಾಮೇಯಿಕ್). 3 ದಕ್ಷಿಣ ಮತ್ತು ನೈರುತ್ಯ ಭಾಗದ ಸಿಮಿಟಿಕ್. ಇದನ್ನು ಉತ್ತರ ಅರಬ್ಬೀ ದಕ್ಷಿಣ ಅರಬ್ಬೀ, (ಹಿಮ್ಯರೈಟ್) ಎಂದು ವಿಭಾಗಿಸಲಾಗಿದೆ. ಕೆಲವು ವ್ಯಾಕರಣಸಿದ್ಧರೂಪಗಳಲ್ಲೂ ಅಕ್ಷರಮಾಲಿಕೆಯಲ್ಲೂ ಶಬ್ದಗಳಲ್ಲೂ ದಕ್ಷಿಣ ಅರಬ್ಬೀ ಭಾಷೆ ಚೊಕ್ಕಭಾಷೆಯನ್ನು ಹೋಲುತ್ತದೆ. ಪ್ರ.ಶ. 6ನೆಯ ಶತಮಾನದ ವೇಳೆಗೆ ಯೆಮೆನ್ನಿನಲ್ಲಿ ಹಿಮ್ಯರೈಟ್ ಸಾಮ್ರಾಜ್ಯದ ಪತನವಾದ ಬಳಿಕ, ದಕ್ಷಿಣ ಅರಬ್ಬೀ ಮೃತಭಾಷೆಯಾಯಿತು. ಉತ್ತರ ಅರಬ್ಬೀ ಭಾಷೆ ಎಲ್ಲೆಲ್ಲೂ ತನ್ನ ಪ್ರಭುತ್ವವನ್ನು ಸ್ಥಾಪಿಸಿತು.

ಪ್ರಾಚೀನ ಸಂಶೋಧನೆಗಳು ಅರಬ್ಬೀಯರ ನಾಗರಿಕತೆಯ ಚರಿತ್ರೆಯನ್ನು ಪ್ರ.ಶ.ಪೂ. 4,000 ವರ್ಷಗಳ ಹಿಂದಕ್ಕೆ ಒಯ್ದರೂ ಬ್ಯಾಬಿಲೋನಿಯನ್ ಶಾಸನಗಳು ಪ್ರ.ಶ.ಪೂ. 3,000–500 ವರ್ಷಗಳ ಪರ್ಯಂತ ಹೋಗುತ್ತವೆ. ಹೀಬ್ರೂ ಶಾಸನಗಳು ಪ್ರ.ಶ.ಪೂ. 1,500ರಿಂದ ಪ್ರಾರಂಭವಾಗುತ್ತವೆಯಲ್ಲದೆ ದಕ್ಷಿಣ ಅರಬ್ಬೀಯವು ಪ್ರ.ಶ.ಪೂ. 800ರಿಂದ ಮೊದಲಾಗುತ್ತದೆ. ಅವುಗಳಲ್ಲಿ ಉಪಯೋಗಿಸಿರುವ ಭಾಷೆ ತಕ್ಕಷ್ಟು ಸುಸಂಸ್ಕೃತವಾಗಿತ್ತೆಂಬು ದನ್ನೂ ಪ್ರ.ಶ.ಪೂ. 1,500 ವರ್ಷಗಳ ವೇಳೆಗೆ ಲೇಖನಕಲೆ ಸಂಪೂರ್ಣವಾಗಿ ಬೆಳೆದಿತ್ತೆಂಬು ದನ್ನೂ ಈ ಶಾಸನಗಳು ತೋರಿಸುತ್ತವೆ. ಅಲ್ಲದೆ ಉತ್ತರ ಅರಬ್ಬೀ ಭಾಷೆಯೂ ಪೌರ ಸಂಸ್ಕೃತಿಯೊಂದನ್ನು ಬೆಳೆಸಿಕೊಂಡಿತ್ತು. ಬಹು ಪುರಾತನ ಕಾಲದಿಂದಲೂ ಧರ್ಮ ಮತ್ತು ಸಂಸ್ಕೃತಿಗಳ ಕೇಂದ್ರವಾಗಿದ್ದ ಮೆಕ್ಕ ಪಟ್ಟಣವೂ ಉತ್ತರ ಅರಬ್ಬೀ ಭಾಷೆಯನ್ನು ಅಭಿವೃದ್ಧಿಗೊಳಿಸುವುದರಲ್ಲಿ ಬಹು ಪರಿಣಾಮಕಾರಿಯಾದ ಪಾತ್ರ ವಹಿಸಿದೆ. ದಕ್ಷಿಣ ಅರೇಬಿಯ ದೇಶದ ಕುಲಗಳು, ಮೆಕ್ಕಕ್ಕೆ ಯಾತ್ರೆ ಹೋಗುತ್ತಿದ್ದು ಪರ್ಷಿಯನ್ನರಂತೆಯೇ ಆಗಿರುವ ಮೆಸಪೊಟೇಮಿಯ ದೇಶದ ಅರಬ್ಬರ ಪ್ರಭಾವಗಳೂ ಉತ್ತರ ಅರಬ್ಬೀ ಭಾಷೆಯ ಬೆಳವಣಿಗೆಗೆ ಪುಷ್ಟಿಕೊಟ್ಟವೆ. ಉತ್ತರ ಅರೇಬಿಯದ ಶಾಸನಗಳು, ಮುಖ್ಯವಾಗಿ ಥಾಮುಡಿಯನ್, ಲಿಹ್ಯಾನಿ, ಸಾಫ ಮತ್ತು ಆನ್–ನಮಾರಗಲ (ಪ್ರ.ಶ.328) ಶಾಸನಗಳು, ಉತ್ತರ ಅರಬ್ಬೀ ಭಾಷೆ ಪ್ರಾರಂಭದಲ್ಲಿ ಹೇಗೆ ಬೆಳೆಯಿತೆಂಬ ವಿಚಾರದಲ್ಲಿ ಪೂರ್ಣ ಮಾಹಿತಿಗಳನ್ನು ಒದಗಿಸಿಲ್ಲ. ಈಗ ಉಪಯೋಗದಲ್ಲಿರುವ ಅರಬ್ಬೀ ಲಿಪಿಗಳು 6ನೆಯ ಶತಮಾನದ ಶಾಸನಗಳಲ್ಲಿ ಮಾತ್ರ ಕಂಡುಬರುತ್ತವೆ.

ಈ ಭಾಷೆಗಳ, ಅದರಲ್ಲೂ ಅರಬ್ಬೀ ಭಾಷೆಗಳ, ಮುಖ್ಯ ವೈಲಕ್ಷಣ್ಯಗಳು ಹೀಗಿವೆ: ವಾಕ್ಯಗಳು ಚಿಕ್ಕವು, ನಿಷ್ಕೃಷ್ಟಾರ್ಥವನ್ನು ಕೊಡಲೂ ಬಹು ಸೂಕ್ಷ್ಮಭಾವಗಳನ್ನು ವಿವರಿಸಲೂ ತಕ್ಕವು. ಒಂದೇ ಒಂದು ವಸ್ತುವನ್ನು ಹೇಳಲು ನೂರಾರು ಪದಗಳಿವೆ. ಮೂಲ ಭಾವನೆಗಳನ್ನು ಹೇಳಬೇಕಾದರೆ ವ್ಯಂಜನಗಳ ಉಪಯೋಗವಿದೆ. ನಾಮಪದಗಳಿಗೂ ಕ್ರಿಯಾಪದಗಳಿಗೂ ಪ್ರಕೃತಿಯಾಗಿರುವ ಮೂರೇ ಮೂರು ವ್ಯಂಜನಗಳಿಂದ ಭಾವನೆಗಳಲ್ಲಿ ಹೆಚ್ಚಿನವನ್ನು ನಿರ್ವಹಿಸುತ್ತಾರೆ. ಈ ಮೂಲ ಪ್ರಕೃತಿಗಳ ಅರ್ಥದಲ್ಲಿ ಮುಖ್ಯ ಬದಲಾವಣೆಗಳನ್ನು ಮಾಡಬೇಕಾದಾಗ ಅವುಗಳೊಳಗಿನ ಸ್ವರಗಳನ್ನು ಬದಲಾಯಿಸುವುದರ ಮೂಲಕವೋ ಅವುಗಳಿಗೆ ಪ್ರತ್ಯಯಗಳನ್ನು ಹಚ್ಚುವುದರ ಮೂಲಕವೋ ನಿರ್ವಹಿಸುತ್ತಾರೆ. ಹೀಗೆ ಸರಳವಾದ ಕ್ರಿಯಾಪದಗಳಿಂದ, ಆಧಿಕ್ಯಾರ್ಥ, ಕಾರಕಾರ್ಥ ಮತ್ತು ಸ್ವಾರ್ಥಕ ಕ್ರಿಯಾವಾಚಕಗಳು ನಿಷ್ಪನ್ನವಾಗುತ್ತವೆ. ಪ್ರಕೃತಿಯನ್ನು ಹೀಗೆ ಬದಲಾಯಿಸಿಕೊಳ್ಳುವ ಸೌಲಭ್ಯ, ಶಬ್ದಭಂಡಾರ ಹಾಗೂ ಪರ್ಯಾಯಪದಗಳ ಬಾಹುಳ್ಯ ಅರಬ್ಬೀ ಭಾಷೆಯ ಅಡಕವಾದ ಶೈಲಿಗೆ ತುಂಬ ಸಹಾಯಕವಾಗಿದೆ. ಈ ಒಂದು ವಿಶಿಷ್ಟಗುಣದಿಂದಲೂ ಶಬ್ದಸಮೃದ್ಧಿಯಿಂದಲೂ ಅರಬ್ಬೀ ಭಾಷೆ ಅನ್ಯಭಾಷೆಗಳಿಂದ ಏನನ್ನೂ ಬೇಡದೆ, ಪ್ರತಿಯೊಂದು ನವ ನಿರ್ಮಾಣಕ್ಕೆ ತಕ್ಕ ಪದಗಳನ್ನು ತನ್ನ ಪ್ರಕೃತಿರೂಪದ ಅಲ್ಪಸ್ವಲ್ಪ ಬದಲಾವಣೆಯ ಮೂಲಕ ಕಲ್ಪಿಸಬಲ್ಲ ಸಿರಿವಂತಿಕೆಯನ್ನು ಪಡೆದಿದೆ. ಅಲ್ಲದೆ ತನ್ನ ಈ ಆಂತರಿಕ ಚೈತನ್ಯದ ಪ್ರಭಾವದಿಂದಲೇ ಅದು ತನ್ನ ಬಳಗಕ್ಕೆ ಸೇರಿದ ಇತರ ಎಲ್ಲ ಸಮಕಾಲೀನ ಭಾಷೆಗಳು ನಾಶವಾಗಿದ್ದರೂ ತಾನು ಮಾತ್ರ ಪುರಾತನ ಕಾಲದಿಂದ ಇದುವರೆಗೂ ಉಳಿದುಕೊಂಡು ಬಂದಿದೆ. ಇಸ್ಲಾಮ್ ಧರ್ಮ ತಲೆ ಎತ್ತಿದ ಸಂಧಿಕಾಲದಲ್ಲಿ ಅರಬ್ಬರು ಕೌಳಿಕ ಮತ್ತು ಚರ ಜೀವನವನ್ನು ನಡೆಸುತ್ತಿದ್ದರಲ್ಲದೆ ಭಿನ್ನ ಭಿನ್ನ ಉಪಭಾಷೆಗಳನ್ನಾಡುತ್ತಿದ್ದರು. ಶಬ್ದ ಮತ್ತು ವ್ಯಾಕರಣಗಳ ರಚನೆಯಲ್ಲಿ ಈ ಉಪಭಾಷೆಗಳು ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಹೊಂದಿದ್ದರೂ ಎಲ್ಲರಿಗೂ ಸಾಮಾನ್ಯವಾಗಿ ತಿಳಿಯುವಂಥ ಸಾಮಾನ್ಯ ಸಾಹಿತ್ಯಭಾಷೆಯೊಂದು ಅವರಲ್ಲಿತ್ತು; ಆದ್ದರಿಂದಲೆ ಮೆಕ್ಕದ ಅರಬ್ಬೀ ಕವಿಗಳ ಸ್ತುತಿಗೀತೆಗಳನ್ನು ಇರಾಕಿನ (ಮೆಸಪೊಟೇಮಿಯ) ಅರಸರೂ ಮತ್ತು ಸಿರಿಯದ ದೊರೆಗಳೂ ತಮ್ಮ ಉಪಭಾಷೆಗಳು ಭಿನ್ನವಾಗಿದ್ದರೂ ಮೆಚ್ಚುತ್ತಿದ್ದರು.

ಇಸ್ಲಾಮ್ ಧರ್ಮ ಹರಡಿದ ಮೇಲೆ ಕುರಾನು ಕುರೈಷಿಗಳ (ಉತ್ತರ ಅರಬ್ಬೀ ಮಾತನಾಡುವ ಕುಲ) ಭಾಷೆಯನ್ನು ಶ್ರೇಷ್ಠ ದರ್ಜೆಯನ್ನಾಗಿ ಮಾಡಿತು; ಮಿಕ್ಕೆಲ್ಲ ಕುಲಗಳ ಉಪಭಾಷೆಗಳನ್ನೂ ಹಿಂದಕ್ಕೆ ಹಾಕಿತು. ಕುರಾನಿನ ಉಪದೇಶಗಳು ಹರಡಿದಂತೆಲ್ಲ, ಅರೇಬಿಯದ ಪ್ರವಾದಿಯ ಕುಟುಂಬದ ಜನರೂ ಆತನ ಸಂಗಡಿಗರೂ ಕುರಾನಿನ ಪ್ರತಿಗಳನ್ನು ತಯಾರಿಸುವುದರಲ್ಲಿ ತೊಡಗಿದುದರ ಪರಿಣಾಮವಾಗಿ ಭಾಷೆಯ ಪ್ರವಾದಿಯ ಆಚರಣೆಯ ಸಂಪ್ರದಾಯಗಳನ್ನು ಸಂಗ್ರಹಿಸಲು ತೊಡಗಿದುದರ ಪರಿಣಾಮವಾಗಿ ಭಾಷೆಯ ಲೇಖನವಾಚನಗಳೂ ಅಭಿವೃದ್ಧಿ ಹೊಂದಿದುವು. ಸಾಮಾಜಿಕ ಜೀವನವನ್ನು ಧಾರ್ಮಿಕ ತಳಹದಿಯ ಮೇಲೆ ಸಂಸ್ಥಾಪಿಸುವುದಕ್ಕಾಗಿ ಕುರಾನಿನ ದೈವಶಾಸ್ತ್ರವನ್ನೂ ಪ್ರಚೋದಿಸಿದವಲ್ಲದೆ ವಿದ್ಯಾಪ್ರಸರಣ ಕಾರ್ಯಗಳನ್ನೂ ಚುರುಕುಗೊಳಿಸುದವು. ತತ್ಫಲವಾಗಿ ಹೊಸ ಶಬ್ದಗಳ ನಿರ್ಮಾಣ, ಪ್ರಾಚೀನಶಬ್ದಗಳಿಗೆ ಹೊಸ ಅರ್ಥಗಳನ್ನು ಹೊಂದಿಸುವುದು, ಧಾರ್ಮಿಕಕಲ್ಪಗ ಳಿಗೂ ಹೊಸಪರಿಭಾಷೆಯನ್ನು ರಚಿಸುವುದು ಮುಂತಾದ ಕೆಲಸಗಳು ನಡೆದುವು.

ಪೂರ್ವದ ನಾಲ್ವರು ಕಲೀಫರ ಆಳ್ವಿಕೆಯಲ್ಲಿ ರಾಜಕೀಯ ಮತ್ತು ಆಡಳಿತಗಳಿಗೆ ಬೇಕಾದ ಪದಗಳನ್ನು ಅರಬ್ಬಿಗೆ ತರಲಾಯಿತು. ಕುರಾನಿನ ಪದಗಳೂ ಪದಪುಂಜಗಳೂ ಇಸ್ಲಾಮೀ ಶಬ್ದಗಳೂ ಅರಬ್ಬೀ ಗದ್ಯ ಮತ್ತು ಪದ್ಯಗಳಲ್ಲಿ ತಲೆದೋರಲು ಮೊದಲಿಟ್ಟುವು. ಉಮಾಯಿದ್ ಕಲೀಫರ ಆಳ್ವಿಕೆಯಲ್ಲಿ (661–750) ಇಸ್ಲಾಮೀ ಚಕ್ರಾಧಿಪತ್ಯ ಸ್ಪೇನ್ ಮತ್ತು ಸಿಸಿಲಿಯಿಂದ ಭಾರತಕ್ಕೆ ಹಬ್ಬಿ ಇಸ್ಲಾಮಿನ ಆಸರೆಗೆ ಅನೇಕ ಕುಲಗಳೂ ರಾಷ್ಟ್ರಗಳೂ ಜನಾಂಗಗಳೂ ಬಂದುದರ ಪರಿಣಾಮವಾಗಿ, ಪರ್ಷಿಯನ್, ಲ್ಯಾಟಿನ್ ಮತ್ತು ಸಂಸ್ಕೃತ ಶಬ್ದಗಳು ಅರಬ್ಬೀ ಭಾಷೆಗೆ ಬಂದು ಸೇರಿಕೊಂಡುವು. ಜೊತೆಗೆ ಅರಬ್ಬೀ ವ್ಯಾಕರಣವನ್ನು ಸೂತ್ರೀಕರಿಸಲಾಯಿತು. ವೈದ್ಯ, ರಸಾಯನಶಾಸ್ತ್ರ, ದರ್ಶನ ಮುಂತಾದ ಅನೇಕ ವಿಷಯಗಳಲ್ಲಿ ವಿದೇಶೀಯ ಶಾಸ್ತ್ರಗ್ರಂಥಗಳನ್ನು ಅರಬ್ಬೀ ಭಾಷೆಗೆ ಪರಿವರ್ತಿಸಲಾಯಿತು. ಕುರಾನಿನ ಭಾಷ್ಯ, ಪ್ರವಾದಿಯ ಪರಂಪರೆಯಿಂದ ಪ್ರಾಪ್ತವಾದ ಉಪದೇಶಗಳು, ಭಾಷಾಶಾಸ್ತ್ರ ಇತ್ಯಾದಿ ಕುರಾನಿಗೆ ಸಂಬಂಧಪಟ್ಟ ಶಾಸ್ತ್ರಗಳ ಮೇಲೆ ಪುಸ್ತಕಗಳು ರಚಿತವಾದುವು.

ಅಬ್ಬಾಸಿದ್ ಕಲೀಫರ ಕಾಲದಲ್ಲಿ ಭಾಷೆಯ ಲಿಪಿಮಾಲಿಕೆ ಸಂಪೂರ್ಣವಾಗಿ ಬೆಳೆಯಿತಲ್ಲದೆ ಸೊಬಗುಳ್ಳದ್ದೂ ಆಯಿತು. ಒಂದು ಕಡೆ ಕುರಾನಿಗೆ ಸಂಬಂಧಪಟ್ಟ ಕುರಾನು ಭಾಷ್ಯ, ನ್ಯಾಯಶಾಸ್ತ್ರ, ಅತಿಸೂಕ್ಷ್ಮತರ್ಕದ ದೇವತಾಶಾಸ್ತ್ರ, ಸೂಫೀತತ್ತ್ವ, ಇತಿಹಾಸ ಇತ್ಯಾದಿ ಶಾಸ್ತ್ರಗ್ರಂಥಗಳು ರಚಿತವಾದುವಲ್ಲದೆ ಗ್ರೀಕರ ವಿಜ್ಞಾನಕ್ಕೆ ಸಂಬಂಧಪಟ್ಟ ಖಗೋಳ,

ಗಣಿತ, ವೈದ್ಯ, ಭೂಗೋಳ–ಇತ್ಯಾದಿ ವಿಜ್ಞಾನಗಳ ವ್ಯಾಸಂಗವೂ ನಡೆದು ಅನೇಕ ಗ್ರೀಕ್ ಪುಸ್ತಕಗಳು ಅರಬ್ಬಿಗೆ ಭಾಷಾಂತರಗೊಂಡವು. ಈ ಭಾಷಾಂತರಗಳು ವಿಜ್ಞಾನಕ್ಕೂ ದರ್ಶನಕ್ಕೂ ಸಂಬಂಧಿಸಿದ ಅನೇಕ ಹೊಸ ಶಬ್ದಗಳನ್ನು ಭಾಷೆಗೆ ಒದಗಿಸಿದುವು. ಇವುಗಳನ್ನೆಲ್ಲ ಸೇರಿಸಿಕೊಂಡು, ಅಬ್ಬಾಸಿದ್ ಕಾಲದ ಒಬ್ಬ ಭಾಷಾವಿಜ್ಞಾನಿ ಗುಣಿಸಿರುವ ಪ್ರಕಾರ ಆಗಿನ ಅರಬ್ಬೀ ಭಾಷೆಯಲ್ಲಿ 1,22,35,412 ಶಬ್ದಗಳಿದ್ದುವು. ಮತ್ತೆ ಕೆಲವರ ಅಭಿಪ್ರಾಯದಲ್ಲಿ ಈ ಶಬ್ದಗಳ ಸಂಖ್ಯೆ 66,99,400.

ಈ ಪ್ರಕಾರ 7ನೆಯ ಶತಮಾನದಿಂದ ಈಚೆಗೆ ಇಸ್ಲಾಮ್ ಧರ್ಮ ಹರಡಿದಂತೆಲ್ಲ ಅರಬ್ಬೀ ಭಾಷೆ ಜನಜೀವನದಲ್ಲೂ ರಾಜ್ಯ ಮತ್ತು ಆಡಳಿತಗಳಲ್ಲೂ ತನ್ನ ಸತ್ತ್ವವನ್ನು ಮೆರೆಯಿತು. ಅರೇಬಿಯ ಪರ್ಯಾಯ ದ್ವೀಪವೊಂದರಲ್ಲೇ ಅಲ್ಲದೆ ಮಧ್ಯಪ್ರಾಚ್ಯದ ಎಲ್ಲ ಏಷ್ಯ ರಾಜ್ಯಗಳಲ್ಲೂ ಆಫ್ರಿಕದ ಉತ್ತರ ಮತ್ತು ಪೂರ್ವಭಾಗದ ಪ್ರದೇಶಗಳಲ್ಲೂ ಸ್ಪೇನ್, ಸಿಸಿಲಿ ಮುಂತಾದ ಪಾಶ್ಚಾತ್ಯ ದೇಶಗಳಲ್ಲೂ ಅರಬ್ಬೀ ಭಾಷೆ ಹರಡಲು ಮೊದಲಿಟ್ಟು ಆಯಾ ದೇಶಭಾಷೆಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು. ಅಲ್ಲದೆ, ಕೆಲವು ಪ್ರಾಂತ್ಯಗಳಲ್ಲಿ ಈಜಿಪ್ಟಿನಲ್ಲೆಸಗಿದಂತೆ, ಸ್ಥಳೀಯ ಉಪಭಾಷೆಗಳನ್ನು ಮೂಲೆಗೊತ್ತಿತ್ತು. ಲೌಕಿಕಾಧಿಕಾರ ಕಳೆದುಕೊಂಡ ಮೇಲೂ ಅರಬ್ಬೀ ಭಾಷೆ ತನ್ನ ಮತೀಯ ಪ್ರಭಾವವನ್ನು ದೃಢಪಡಿಸಿಕೊಳ್ಳದಿರಲಿಲ್ಲ, ಏಕೆಂದರೆ ಈಗಲೂ ಇಸ್ಲಾಮ್ ಧರ್ಮ ಪಶ್ಚಿಮ ಏಷ್ಯದಲ್ಲೂ ಆಫ್ರಿಕದಲ್ಲೂ ಸಾರ್ವಭೌಮ ಪದವಿಯಲ್ಲಿದೆ. ಯುರೋಪಿನ ನೆಲದಲ್ಲೂ ಸ್ಪೇನ್–ಸಿಸಿಲಿಗಳು ತನ್ನನ್ನು ಹೊರಹಾಕಿದ್ದಕ್ಕೆ ತಕ್ಕ ಪರಿಹಾರವನ್ನು ಅದು ತುರ್ಕಿದೇಶದಲ್ಲಿ ಪಡೆದಿದೆ. ಈ ಪ್ರದೇಶಗಳ ಸ್ಥಳೀಯ ಪ್ರಭಾವಗಳಿಂದ ಅರಬ್ಬೀ ಭಾಷೆ ಅನೇಕ ಉಪಭಾಷೆಗಳಾಗಿ ಬೆಳೆದಿದ್ದರೂ ಕುರಾನಿನ ಭಾಷೆಯನ್ನೇ ಮಾದರಿಯನ್ನಾಗಿ ಕಳೆದ 1,400 ವರ್ಷಗಳಿಂದಲೂ ಇಟ್ಟುಕೊಂಡಿದ್ದರ ಪರಿಣಾಮವಾಗಿ ಈ ದೇಶಗಳ ಗ್ರಾಂಥಿಕ ಭಾಷೆ ಒಂದೇ ತೆರನಾಗಿ ಉಳಿದುಬಂದಿದೆ. ಮಧ್ಯಪ್ರಾಚ್ಯದ ಅನೇಕ ದೇಶಗಳಲ್ಲಿ ಇದು ಮಾತೃಭಾಷೆಯಾಗಿರುವುದಲ್ಲದೆ, ಸಮಸ್ತ ಮುಸ್ಲಿಮ್ ಜಗತ್ತಿನ ಧರ್ಮ ಮತ್ತು ಸಂಸ್ಕೃತಿಯ ಭಾಷೆಯಾಗಿದೆ. ಈ ಭಾಷೆಯಲ್ಲಿ ಸಾವಿರಾರು ದಿನಪತ್ರಿಕೆಗಳನ್ನೂ ಕಾಲಿಕ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಇಂದಿಗೂ ಪ್ರಕಟಿಸುತ್ತಿರುವ ಅರಬ್ಬೀ ಭಾಷೆಯನ್ನಾಡುವ ದೇಶಗಳಲ್ಲಿ ಇದು ಪಾಠಪ್ರವಚನಗಳಿಗೂ ಸಂಭಾಷಣೆಗೂ ಉಪಯೋಗಿಸಲ್ಪಡುತ್ತಿದೆಯಲ್ಲದೆ ಉತ್ತರ ಮತ್ತು ದಕ್ಷಿಣ ಅಮೆರಿಕಗಳಲ್ಲಿ ವಲಸೆ ಹೋಗಿ ನಿಂತಿರುವ ಅರಬ್ಬರ ನೆಲೆಗಳಲ್ಲಿ ಬರೆವಣಿಗೆಗೂ ಸಂಭಾಷಣೆಗೂ ಬಳಕೆಯಾಗುತ್ತಿದೆ. ಅನೇಕ ಸಿಮಿಟಿಕ್ ಭಾಷೆಗಳು, ಸಂದಿಗ್ಧವಾದ ಐತಿಹಾಸಿಕ ದಾಖಲೆಗಳನ್ನು ಮಾತ್ರ ಉಳಿಸಿ ನಾಶಹೊಂದಿವೆಯಾದರೂ ಅರಬ್ಬೀ ಭಾಷೆಯಲ್ಲಿ ಮಾತ್ರ ಅದರ ಬೆಳೆವಣಿಗೆಯ ಪ್ರತಿಯೊಂದು ಮುಖವನ್ನು ರೇಖಿಸುವುದಕ್ಕೂ ಅರಬ್ಬರ ರಾಷ್ಟ್ರೀಯ ಜೀವನಕ್ರಮ ಮತ್ತು ಆಲೋಚನೆಗಳ ಇತಿಹಾಸವನ್ನು ಬರೆಯುವುದಕ್ಕೂ ಸಹಕಾರಿಯಾಗುವ ವಿಪುಲ ವಿಷಯಸಂಪತ್ತು ಇದೆ.

(ಎಂ.ಎ.ಎಂ.)

**ಅರಬ್ಬೀ ವಿಮರ್ಶೆ :** ಪ್ರ.ಶ.ಪೂ. 10ನೆಯ ಶತಮಾನಕ್ಕಿಂತ ಮುಂಚೆ ಅರಬ್ಬೀ ಸಾಹಿತ್ಯದಲ್ಲಿ ಗುರುತಿಸಿ ಹೆಸರು ಹೇಳುವಂಥ ವಿಮರ್ಶನ ಗ್ರಂಥಗಳು ತೀರಾ ವಿರಳವೆಂದೇ ಹೇಳಬಹುದು. ಸ್ವಂತಿಕೆಯುಳ್ಳ ವಿಮರ್ಶೆಯ ಸಂಪ್ರದಾಯವನ್ನು ಕಾಣುವುದು ಇನ್ನೂ ಕಷ್ಟ ಮುಸ್ಲಿಮ್ ಪವಿತ್ರಗ್ರಂಥ ನಿರ್ದೇಶಿಸಿದ ಕಟ್ಟುಪಾಡುಗಳು, ರೂಪಿಸಿದ ಸಂಪ್ರದಾಯಶೀಲತೆ, ಧರ್ಮಶ್ರದ್ಧೆ, ಅಷ್ಟಾಗಿ ಸಾಹಿತ್ಯ ವಿಮರ್ಶೆಯ ಬೆಳೆವಣಿಗೆಗೆ ನೆರವು ನೀಡಿದಂತೆ ಕಾಣುವುದಿಲ್ಲ. ಪರ್ಷಿಯನ್, ಗ್ರೀಕ್ ಸಂಸ್ಕೃತಿಗಳ ಸಂಪರ್ಕದಿಂದ ಸ್ಫೂರ್ತಿ, ಪ್ರಭಾವಗಳನ್ನು ಪಡೆದಾಗ ಅರಬ್ಬೀ ಸಾಹಿತ್ಯ ತನ್ನ ಸಾಮರ್ಥ್ಯದ ಸಾಧ್ಯತೆಗಳನ್ನು ಗುರುತಿಸಿಕೊಂಡಿರಬೇಕೆನ್ನುವ ಮಾತು ಆ ಭಾಷೆಯ ಸಾಹಿತ್ಯ ವಿಮರ್ಶೆಗೂ ಅನ್ವಯಿಸುತ್ತದೆ.

ಪ್ರ.ಶ.ಪೂ. 10ನೆಯ ಶತಮಾನಕ್ಕಿಂತ ಪೂರ್ವದಲ್ಲಿ ಕುರಾನಿನಲ್ಲಿನ ಭಾಷಾಸೌಂದರ್ಯವನ್ನು ಕುರಿತ ವಿಶ್ಲೇಷಣೆ ಹಲವು ಗ್ರಂಥಗಳಲ್ಲಿ ಕಂಡುಬರುತ್ತದೆ. ಧರ್ಮಗ್ರಂಥವನ್ನು ವಿವರಿಸುವ ಲೇಖನಗಳೇ ಅರಬ್ಬೀ ಸಾಹಿತ್ಯ ಹಾಗೂ ಶೈಕ್ಷಣಿಕ ಸಂಪ್ರದಾಯದ ರೀತಿನೀತಿಗಳನ್ನು ರೂಪಿಸಿತು. ಬಾಗ್ದಾದ್‌ದಿನ ಅಬ್ಬಾಸಿದ್ ಮನೆತನದ ಆಳ್ವಿಕೆಯ ಕಾಲದ ಸಾಹಿತ್ಯದಲ್ಲಿ ಮಾನವೀಯತೆ ಹಾಗೂ ವಿಚಾರಪ್ರವೃತ್ತಿಯ ಅಂಶಗಳು ವ್ಯಕ್ತವಾದುವು. ಆ ಯುಗದ ಚಿಂತನಶಕ್ತಿ ಅರಬ್ಬೀ ಸಾಹಿತ್ಯ ಸಂಪ್ರದಾಯಕ್ಕೆ ಹೊಸ ದಾರಿ ಸೂಚಿಸಿತು. ಅಲ್ ಅಮೀದಿ (10ನೆಯ ಶತಮಾನ) ಬರೆದ ಭಾಷಾಶಾಸ್ತ್ರ ಗ್ರಂಥ ಹಾಗೂ ಪತ್ರಗಳಲ್ಲಿ ಕಾಣಸಿಗುವ ಅಬು ತಮಾಮ್ ಮತ್ತು ಅಲ್ ಬುಹ್ತುರಿ ಎಂಬ ಕವಿಗಳನ್ನು ಕುರಿತ ತೌಲನಿಕ ವಿವರಣೆ ಆ ಕಾಲದ ವಿಮರ್ಶನ ಸಾಹಿತ್ಯದ ರೂಪುರೇಷೆಗಳನ್ನು ಚಿತ್ರಿಸುತ್ತದೆ. ಗ್ರೀಕ್ ಅಲಂಕಾರಶಾಸ್ತ್ರದ (ರೆಟೊರಿಕ್) ಸೂತ್ರಗಳನ್ನು ಅರಬ್ಬೀ ಸಾಹಿತ್ಯಕ್ಕೆ ಅನ್ವಯಿಸುವಂತೆ ಪ್ರಯೋಗಿಸುವ ಸೂಚನೆ ಖುದಾಮಾ – ಇಬ್ನ್ – ಜಾಫರ್‌ನ (10ನೆಯ ಶತಮಾನ) ಗ್ರಂಥದಲ್ಲಿದೆ. ಒಂದೇ ದಿನ ಕಲೀಫನಾಗಿದ್ದು ಕೊಲೆಗೀಡಾದ ದುರ್ದೈವಿ, ಅಬ್ಬಾಸಿದ್ ಮನೆತನದ ರಾಜಕುಮಾರ ಇಬ್ನ್ ಅಲ್ ಮುತಾಜ್ ಬರೆದ ಕಿತಾಬ್ ಅಲ್ ಬಾದಿ ಅರಬ್ಬೀ ಭಾಷೆಯಲ್ಲಿನ ಪ್ರಥಮ ಕಾವ್ಯ ಮೀಮಾಂಸ ಗ್ರಂಥ; ಅರಬ್ಬೀ ವಿಮರ್ಶೆ ತನ್ನತನ ಮತ್ತು ಸ್ವಾತಂತ್ರ್ಯ ಪ್ರಿಯತೆಯನ್ನು ಪ್ರದರ್ಶಿಸುವ ಸ್ವಾರಸ್ಯವಾದ ಶಾಸ್ತ್ರಗ್ರಂಥ. ಅತು – ಹಿಲಾಲ್ – ಅಲ್ – ಅಸ್ಕಾರಿಯ ಗ್ರಂಥ ಕಿತಾಬ್–ಅಲ್–ಸಿನಾ ಅ ತಯನ್‌ನಲ್ಲಿ ಗದ್ಯ ಪದ್ಯ ರಚನೆಯನ್ನು ಕುರಿತ ಸೂತ್ರಗಳ ವಿವೇಚನೆ ಇದೆ. ಕುರಾನಿನ ಅದ್ಭುತ ಗದ್ಯ ಶೈಲಿಯನ್ನು ಕುರಿತು ಆತ ನೀಡಿದ ವಿವರಣೆ ಅನಂತರದ ಹಲವು ಲೇಖಕರನ್ನು ಆಕರ್ಷಿಸಿತು. ಅಲ್ ಬಾಖಿಲಾನಿ ಧರ್ಮಗ್ರಂಥದ ಶೈಲಿಯನ್ನು ಕುರಿತು ಬರೆದ ಲೇಖನವೇ ಅರಬ್ಬೀ ಸೌಂದರ್ಯ ಶಾಸ್ತ್ರದ ಆಕರಗ್ರಂಥವೆನ್ನುತ್ತಾರೆ. 10–11ನೆಯ ಶತಮಾನದ ಸುಪ್ರಸಿದ್ಧ ಅರಬ್ಬೀ ಸಾಹಿತಿಗಳಲ್ಲಿ ಪ್ರಮುಖರಾದ ಆಲಲ್–ಮುತಾನ್ ಅಬ್ಬಿ ಮತ್ತು ಅಬುಲ್–ಅಲಾ ಅಲ್–ಮಅರ್ರಿ ಕಾವ್ಯ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟರು.

ಪ್ರ.ಶ.ಪೂ. 1080ರಲ್ಲಿ ಕಾಲವಾದ ಅಬು–ಮನ್‌ಸುರ್–ಥಾ ಅಲಿಬಿ ತನ್ನ ಸಮಕಾಲೀನ ಕವಿಗಳ ಕೃತಿಗಳನ್ನೊಳಗೊಂಡ ಒಂದು ಕಾವ್ಯ ಸಂಕಲನವನ್ನು (ಯತಿ ಮತ್‌ಅಲ್ ದಹ್ರ್) ಸಿದ್ಧಪಡಿಸಿದ. ಅದು ಅಂದಿನ ಅಭಿರುಚಿ, ವೈದುಷ್ಯಗಳ ಪ್ರತಿಬಿಂಬವೆನ್ನುತ್ತಾರೆ. ಇಬ್ನ್ ರಷೀಖ್‌ನ ಅಲ್‌ಉಮ್‌ದಾದಲ್ಲಿ ಹಳತು ಹೊಸತುಗಳ ಘರ್ಷಣೆ ಹಾಗೂ ಹೊಸಕಾಲದ ಕವಿಗಳನ್ನು ಕುರಿತು ಹೇಳುವ ಮಾತುಗಳು ಗಮನಾರ್ಹವಾಗಿವೆ: ಹಳೆಯ ಕವಿಗಳಿಗಿಂತ ಹೊಸ ಕವಿಗಳು ಹೆಚ್ಚು ಸ್ವಾತಂತ್ರ್ಯ ಪ್ರವೃತ್ತಿಯುಳ್ಳವರು. ಬೇರುಸತ್ತ ಹಳೆಯ ಸಂಪ್ರದಾಯವನ್ನು ಅವರು ಪೂರ್ಣವಾಗಿ ತ್ಯಜಿಸಿದರೆ ಹೆಚ್ಚಿನ ಮನ್ನಣೆಗಳಿಸಬಹುದು. ಕವಿಗಳು ವಾಸ್ತವಿಕತೆ ಹಾಗೂ ಪ್ರಕೃತಿಯಿಂದ ಸ್ಫೂರ್ತಿ ಪಡೆಯಬೇಕು. ಹಳೆಯ ರಚನಾತಂತ್ರ, ಪ್ರಕಾರಗಳನ್ನು ಕುರುಡು ಕುರುಡಾಗಿ ಅನುಕರಿಸುವುದನ್ನು ನಿರಾಕರಿಸಬೇಕು ಇತ್ಯಾದಿ. ಈ ಮಾತುಗಳು ಸಾರ್ವತ್ರಿಕವಾದ ಕೆಲವು ವಿಮರ್ಶನ ಮೌಲ್ಯಗಳನ್ನು ಅಭಿವ್ಯಕ್ತಗೊಳಿಸುತ್ತವೆ; ಅರಬ್ಬೀ ವಿಮರ್ಶೆಯ ಸ್ವರೂಪದ ಒಂದು ಮುಖವನ್ನು ಚಿತ್ರಿಸುತ್ತವೆ.

ಪ್ರಕೃತಿ ವಿಜ್ಞಾನವನ್ನು ಅಭ್ಯಸಿಸಿ ಆಳವಾದ ಅರಿವನ್ನು ಪಡೆದಿದ್ದ ಹಲವರು ಹೊಸ ಸಾಹಿತ್ಯ ಸೂತ್ರಗಳನ್ನು ಕುರಿತ ತಮ್ಮ ಕಳಕಳಿಯನ್ನು ಪ್ರದರ್ಶಿಸಿದರು.

16ನೆಯ ಶತಮಾನದ ಅನಂತರ ಖಿಲವಾಗುತ್ತ ಬಂದ ಅರಬ್ಬೀ ಪ್ರಭಾವ ಅವರ ಸಾಹಿತ್ಯದ ಇತಿಹಾಸವನ್ನು ಮಸುಕುಗೊಳಿಸಿತು. ಹೊಸ ಹುಟ್ಟಿನ (ರಿನೇಸಾನ್ಸ್) ಕಾಲದಲ್ಲಿ ಯುರೋಪಿನ ಮೂಲೆ ಮೂಲೆಯಲ್ಲಿ ಹೊಸ ಚೈತನ್ಯ, ಉತ್ಸಾಹ ತುಂಬಿ ತುಳುಕಿ ಅಲ್ಲಿನ ವಿವಿಧ ದೇಶೀಯ ಸಾಹಿತ್ಯಗಳಲ್ಲಿ ಹೊಸ ತಳಿರು ಚಿಗುರುತ್ತಿದ್ದಾಗ ಅರಬ್ಬರ ಪ್ರಭಾವ ಕ್ಷೀಣವಾಗಲು ಐತಿಹಾಸಿಕ ಘಟನೆಗಳೂ ಸ್ವಲ್ಪಮಟ್ಟಿಗೆ ಕಾರಣ. ವ್ಯಾಪಾರಕ್ಕಾಗಿ ಹೊಸ ಕಡಲುಮಾರ್ಗಗಳನ್ನು ಕಂಡುಹಿಡಿದಾಗ ಮೆಡಿಟೇರಿಯನ್ ಸುತ್ತಲಿನ ಅರಬ್ಬೀ ಪ್ರದೇಶಗಳು ಹಿಂದುಳಿದವು. ಆದರೂ ಅರಬ್ಬೀ ಸಾಹಿತಿಗಳು ಮಂದಗಾಮಿಗಳಾದರೂ ಸತ್ತ್ವರಹಿತವಾಗಿರಲಿಲ್ಲ. ಇದಕ್ಕೆ ಆ ಕಾಲದ ಸ್ಪೇನಿನ ಮುಸ್ಲಿಮ್ ಲೇಖಕರ ಉಜ್ವಲ ಇತಿಹಾಸವೇ ಸಾಕ್ಷಿ. ಆದರೆ ವಿಮರ್ಶೆಯ ದೃಷ್ಟಿಯಿಂದ ಗಮನಾರ್ಹ ಅಂಶವೆಂದರೆ ಆ ಕಾಲದಲ್ಲಿ ರಚಿತವಾದ ವೈಜ್ಞಾನಿಕ ಗ್ರಂಥ; ಗ್ರಂಥದಲ್ಲಿ ಸೇರಿಸಲಾದ ಅರಬ್ಬೀ ಗ್ರಂಥಗಳ ಪ್ರಮಾಣ ಗ್ರಂಥಸೂಚಿ (ಬಿಬ್ಲಿಯೊಗ್ರಫಿ).

ಅಹ್ಮದ್ ಇಬ್ನ್–ಮುಹಮ್ಮದ್ ಅಲ್–ಮಖಾರಿ ಆ ಕಾಲದಲ್ಲಿ ಇಂಥ ಒಂದು ಗ್ರಂಥವನ್ನು ರಚಿಸಿದ. ಇದಕ್ಕೆ ಮುಂಚೆ, 14ನೆಯ ಶತಮಾನದಲ್ಲಿ ಅರಬ್ಬರು ಪ್ರಪಂಚದ ಹಲವು ಕಡೆಗಳಲ್ಲಿ ಇಸ್ಲಾಂ ಧರ್ಮವನ್ನು ಹರಡಿ ವ್ಯಾಪಕವಾದ ಪ್ರಭಾವ ಬೀರಿದ್ದರು.

15ನೆಯ ಶತಮಾನದಲ್ಲಿ ಅರೇಬಿಯದ ಆಟೊಮನ್ ಸಾಮ್ರಾಜ್ಯ ಸ್ಥಾಪನೆಯಾದ ಅನಂತರ ಹಾಜಿ ಕಲ್ಫ ಮುಂತಾದವರು ಅರಬ್ಬೀ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಿ, ಭಾಷೆಯ ಸೌಂದರ್ಯವನ್ನು ಹೆಚ್ಚು ನಿಚ್ಚಳವಾಗಿ ಪ್ರಕಟಪಡಿಸಿದರು.

18ನೆಯ ಶತಮಾನದಲ್ಲಿ ವಾಹಬಿ ಧರ್ಮಸುಧಾರಣೆ ನಡೆಯುತ್ತಿದ್ದು ಎಲ್ಲೆಡೆ ರಕ್ತಪಾತವಾಗುತ್ತಿದ್ದಾಗ ದಕ್ಷಿಣ ಅರೇಬಿಯದಲ್ಲಿನ ಆಲ್–ಸೈಯೀದ್ ಆಲ್ ಮುಂತಾದ ತನ್ನ ಅಲ್–ಯಮನ್ ವಿದ್ಯಾಲಯದಲ್ಲಿ ಜ್ಞಾನದ ನಂದಾದೀವಿಗೆಯನ್ನು ಬೆಳಗಿದ. ಅತ ಬರೆದ ಸಂಪಾದಕೀಯ ಟಿಪ್ಪಣಿಗಳು ಹೊಸ ಅಭಿರುಚಿ, ಆಸಕ್ತಿಗಳನ್ನು ಸೂಚಿಸುತ್ತವೆ. ಅಲ್ ಘಜಾಲಿಯನ್ನು ಕುರಿತ ವಿಮರ್ಶೆಯಲ್ಲಿ ಹಳೆಯ ಸಂಪ್ರದಾಯದ ಟೀಕೆಯಿದೆ.

18ನೆಯ ಶತಮಾನದಲ್ಲಿ ಕಲೀಫರುಗಳನ್ನು ಕುರಿತ ಕೇವಲ ಪ್ರಶಸ್ತಿಕಾವ್ಯಗಳನ್ನು ಬರೆದು ಕವಿಗಳು ಕೃತಕೃತ್ಯತೆಯನ್ನು ಪಡೆದುಕೊಂಡರು. 19ನೆಯ ಹಾಗೂ 20ನೆಯ ಶತಮಾನದ ಅರಬ್ಬೀ ಸಾಹಿತಿಗಳು ಯುರೋಪಿನ ಸಾಹಿತ್ಯಸೂತ್ರಗಳಿಂದ ಹಲವು ತೆರನಾದ ಪ್ರಭಾವ ಪಡೆದಿದ್ದಾರೆ ಎಂಬುದು ವಿದ್ವಾಂಸರ ಮತ. ಅಬ್ಬಾಸಿದ್ ಸ್ವರ್ಣಯುಗ ಹಾಗೂ ಅಂಡಲ್ಯೂಷಿಯನ್ ಕಾಲದ ಸಾಹಿತ್ಯ, ದರ್ಶನ, ಸೂತ್ರಗಳನ್ನು ಪುನರುಜ್ಜೀವನಗೊಳಿಸುವ ಆಕಾಂಕ್ಷೆ ಆ ಯುಗದ ಕೃತಿಗಳಲ್ಲಿ ವ್ಯಕ್ತವಾಗುತ್ತದೆ. ಅಲ್‌ಮರಾಹಿಲ್‌ನಂಥ ಈ ಕಾಲದ ಹಲವು ಸಾಹಿತ್ಯಚರಿತ್ರೆಗಳಲ್ಲಿ ಹೊಸ ಸೂತ್ರಗಳ ಪ್ರಸ್ತಾಪವಿದೆ. (ಎಚ್.ಕೆ.ಆರ್.)

**ಅರಬ್ಬೀ ಸಮುದ್ರ :** ಹಿಂದೂ ಮಹಾಸಾಗರದ ಒಂದು ಭಾಗ. ಅದರ ವಾಯವ್ಯ ಭಾಗದಲ್ಲಿದೆ. ಇದರ ಹಳೆಯ ಹೆಸರು ಎರಿಥ್ರಿಯನ್ ಸಮುದ್ರ. ಅರಬ್ಬರ ವಾಣಿಜ್ಯ ಈ ಭಾಗದಲ್ಲಿ ಹೆಚ್ಚಾಗಿರುವುದರಿಂದ, ಇದನ್ನು ಅರಬ್ಬೀ ಸಮುದ್ರವೆಂದು ಕರೆಯಲಾಯಿತು. ಪೂರ್ವಕ್ಕೆ ಭಾರತವೂ ಉತ್ತರಕ್ಕೆ ಪಾಕಿಸ್ತಾನ ಮತ್ತು ಇರಾನ್ ದೇಶಗಳ ಪಶ್ಚಿಮ ಭಾಗಗಳೂ ಪಶ್ಚಿಮಕ್ಕೆ ಅರೇಬಿಯ, ಆಫ್ರಿಕಗಳ ಪೂರ್ವಭಾಗಗಳೂ ಇವೆ. ಕೆಂಪು ಸಮುದ್ರವೂ ಪರ್ಷಿಯ ಕೊಲ್ಲಿಯೂ ಅರಬ್ಬೀ ಸಮುದ್ರಕ್ಕೆ ಸೇರಿಕೊಂಡಿವೆ. ಸಿಂಧು, ನರ್ಮದಾ ಮತ್ತು ತಪತಿ––ಇವು ಈ ಸಮುದ್ರವನ್ನು ಸೇರುವ ಮುಖ್ಯ ನದಿಗಳು. ಒಂದಾನೊಂದು ಕಾಲದಲ್ಲಿ ಈ ಸಮುದ್ರತೀರ ಹಡಗಿನ ಸಂಚಾರಕ್ಕೆ ಪ್ರಖ್ಯಾತಿ ಹೊಂದಿತ್ತು. ಈಗ ಯುರೋಪ್ ಮತ್ತು ಭಾರತಗಳ ಮಧ್ಯೆ ಪ್ರಮುಖ ನೌಕಾಮಾರ್ಗವಾಗಿದೆ. ಅಕ್ಟೋಬರ್‌ನಿಂದ ಮೇವರೆಗೆ ಈಶಾನ್ಯ ವಾಣಿಜ್ಯ ಮಾರುತವೂ ಜೂನ್‌ನಿಂದ ಸೆಪ್ಟೆಂಬರ್ ವರೆಗೆ ನೈರುತ್ಯ ವಾಣಿಜ್ಯ ಮಾರುತವೂ ಬೀಸುತ್ತವೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನೈರುತ್ಯ ವಾಣಿಜ್ಯ ಮಾರುತವೂ ಅರಬ್ಬೀ ಸಮುದ್ರದ ಪ್ರಾಮುಖ್ಯ ಸೂಯೆಜ್ ಕಾಲುವೆಯನ್ನು ತೆರೆದ ಅನಂತರ (1869) ಬಹಳ ಹೆಚ್ಚಿತು. ಏಡನ್, ಬೊಂಬಾಯಿ ಮತ್ತು ಕರಾಚಿ ಈ ಸಮುದ್ರತೀರದ ಪ್ರಖ್ಯಾತ ಬಂದರುಗಳು. ಇಲ್ಲಿನ ಕೆಲವು ದ್ವೀಪಗಳಲ್ಲಿ ಸೊಕೊಟ್ರಾ ಮತ್ತು ಲಕ್ಷದ್ವೀಪ ಎಂಬುವು ಮುಖ್ಯವಾದುವು.

ಒಟ್ಟು ವಿಸ್ತೀರ್ಣ 3,863,000 ಚ.ಕಿಮೀ. ಸರಾಸರಿ ಆಳ 2,734 ಮೀ. ಸಮುದ್ರದ ಮಧ್ಯಭಾಗದ ಆಳ 2,900 ಮೀ ಮೀರುತ್ತದೆ. ಇಲ್ಲಿ ಯಾವುದೇ ದ್ವೀಪಗಳಿಲ್ಲ, ದಾಖಲಾಗಿರುವ ಸಮುದ್ರದ ಅತೀ ಆಳ 4,850 ಮೀ. ಬೇಸಗೆಯಲ್ಲಿ ಸಮುದ್ರದ ಮಧ್ಯ ಭಾಗದ ಮೇಲ್ಮೈ ನೀರಿನ ಉಷ್ಣಾಂಶ $24^0$–$25^0$ ಸೆಂ. ಸಮುದ್ರ ಪಶ್ಚಿಮ ಭಾಗ ಸಮೃದ್ಧ ಮೀನು ಸಂಪತ್ತು ಹೊಂದಿದೆ. (ಎಂ.ಎಸ್.ಎಂ.)

**ಅರಬ್ಬೀ ಸಾಹಿತ್ಯ :** ಪ್ರಪಂಚದ ಎಲ್ಲ ಶ್ರೇಷ್ಠ ಸಾಹಿತ್ಯಗಳಂತೆ, ಇಸ್ಲಾಮಿಗೆ ಹಿಂದಿನ ಅರಬ್ಬರ ಬೌದ್ಧಿಕ ಜೀವನ ಕಾವ್ಯರೂಪದಲ್ಲಿ ಪ್ರಕಟವಾಯಿತು. ಧರ್ಮಬಾಹಿರರು ತಮ್ಮ ಆವೇಶಕಾಲದಲ್ಲಿ ಉಚ್ಚರಿಸುತ್ತಿದ್ದ ಅಶರೀರವಾಣಿಗಳ ಪ್ರಾಸಬದ್ಧ ಗದ್ಯದಲ್ಲಿ ಅರಬ್ಬೀ ಕಾವ್ಯ ಪ್ರಾರಂಭವಾಯಿತು. ಕಾಲಕ್ರಮದಲ್ಲಿ ಅದು ಹೆಚ್ಚು ಛಂದೋಬದ್ಧ ರೂಪ ಪಡೆಯಿತು. ತದನಂತರ ಅದು 16 ಮುಖ್ಯ ಛಂದಸ್ಸುಗಳಾಗಿ ವರ್ಗೀಕೃತವಾಯಿತು.

ಅರಬ್ಬರ ಪ್ರತಿಭಾಸಂಪನ್ನ ಸಾಹಿತ್ಯ ಈ ಛಂದಸ್ಸುಗಳ ಚೌಕಟ್ಟಿನಲ್ಲಿ ಮೈದೋರಿತು. ಕಾಲಕ್ಕೆ ವಶವಾಗಿ ನಾಶಹೊಂದದೆ ಉಳಿದಿರುವ ಈ ಕಾವ್ಯದ ತುಣುಕುಗಳು ಪ್ರ.ಶ. 5ನೆಯ ಶತಮಾನಕ್ಕೆ ಈಚಿನವು. ನಮಗೆ ದೊರೆತಿರುವ ಅತ್ಯಂತ ಪ್ರಾಚೀನ ಪದ್ಯಗಳು ಆ ಕವಿಗಳಿಗಿದ್ದ ಭಾಷಾಪ್ರಭುತ್ವ ಮತ್ತು ಉಕ್ತಿಕೌಶಲವನ್ನು ತೋರುತ್ತವೆ. ಉಕಾಜ್ ಮತ್ತು ಮೆಕ್ಕ ಪಟ್ಟಣಗಳಲ್ಲಿ ಜರುಗುತ್ತಿದ್ದ ಸಾಹಿತ್ಯ ಸಮ್ಮೇಳನಗಳಲ್ಲಿ ಕವಿಗಳು ಕಲೆತು ಕವಿತ್ವದಲ್ಲಿ ಒಬ್ಬರೊಡನೊಬ್ಬರು ಸ್ಪರ್ಧಿಸುತ್ತಿದ್ದುದೂ ಇದಕ್ಕೆ ಕಾರಣವಾಗಿರಬಹುದು. ಆದರೆ ಸ್ಥಳೀಯವಾದ ಅನೇಕ ಉಪಭಾಷೆಗಳಿದ್ದರೂ ಅರೇಬಿಯದ ಎಲ್ಲ ಭಾಗಗಳ ಕವಿಗಳೂ ತಮ್ಮ ಕವಿತ್ವಕ್ಕೆ ಒಂದೇ ವಿಧವಾದ ಭಾಷೆಯನ್ನು ಉಪಯೋಗಿಸಿರುವ ಅಂಶ ಒಂದು ಒಗಟಾಗಿಯೇ ಉಳಿದಿದೆ.

ಇವರು ರಚಿಸಿದ ಕವಿತೆಗಳಿಗೆ ಕಾಸಿಡ (ಪ್ರಗಾಥ) ಗಳೆಂದು ಹೆಸರು. ಅವುಗಳ ಪ್ರಮಾಣ 60 ಸಾಲುಗಳಿಂದ ಹಿಡಿದು 100 ಸಾಲುಗಳವರೆಗೆ, ಅತ್ಯಂತ ಪ್ರಾಚೀನ ಕಾಲದಿಂದಲೂ ಪ್ರಗಾಥಕ್ಕೆ ಒಂದು ಸಾಂಪ್ರದಾಯಿಕವಾದ ಕವಿತಾ ತಂತ್ರವಿದೆ. ಅದು ಸಾಮಾನ್ಯವಾಗಿ, ಪಾಂಥನೊಬ್ಬ ತನ್ನ ಮಿತ್ರರೊಂದಿಗೆ ಸುಖಜೀವನ ನಡೆಸಿ ಸ್ವಗ್ರಾಮಕ್ಕೆ ಹಿಂದಿರುಗಿ ಬಂದು, ಅದು ಪಾಳು ಬಿದ್ದಿರುವುದನ್ನೂ, ಮಿತ್ರರಿಂದ ತಾನು ಅಗಲಿದುದನ್ನೂ ನೆನೆದುಕೊಂಡು ಪರಿತಪಿಸುವುದರ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಬಳಿಕ ಆತ ಅದರ ಹಿಂದಿನ ನಿರ್ಮಲ ಸೌಂದರ್ಯವನ್ನು ಈಗಣ ಅದರ ಉಳಿಕೆಯ ಹಾಳುತನದೊಂದಿಗೆ ಹೋಲಿಸುತ್ತಾನೆ; ಅಂದಿನ ಸುಖಗಳನ್ನು ನೆನೆಯುತ್ತಾನೆ, ಕಾಸಿಡದಲ್ಲಿ ಮರಳುಗಾಡಿನ ಮತ್ತು ಬೆದೂಯಿನ್ ಸಮಾಜದ ವಿವಿಧ ಮುಖಗಳು, ಪಾಂಥನ ಒಂಟೆ ಅಥವಾ ಕುದುರೆ, ಇತರ ಪ್ರಾಣಿಗಳ ಜೀವೋಲ್ಲಾಸ, ಮೃಗಯಾವಿನೋದ, ಇಲ್ಲದಿದ್ದರೆ ಚಂಡಮಾರುತದ ಕುಶಲವರ್ಣನೆ––ಇತ್ಯಾದಿ ಚಿತ್ರಗಳು ಸಾಲುಸಾಲಾಗಿ ಬರುತ್ತವೆ. ಕಥೆಯ ಮುಖ್ಯ ವಿಷಯವೇನೇ ಇರಲಿ ಈ ನಿಯತಪ್ರಸಂಗಗಳನ್ನು (ಅಥವಾ ಪ್ರಣಯ ಪೀಠಿಕೆಯನ್ನು) ಬಿಡದೆ ಹೇಳುತ್ತಾನೆ. ಈ ಕಾಸಿಡಗಳಲ್ಲಿ ಕೆಲವು (ಅವುಗಳ ಸಂಖ್ಯೆ 7 ಅಥವಾ 10) ಅವುಗಳ ಆಂತರಿಕ ಸೌಂದರ್ಯಕ್ಕಾಗಿಯೂ ಕಲೆಗಾಗಿಯೂ ಸಾಹಿತ್ಯ ಸಮ್ಮೇಳನಗಳಲ್ಲಿ ಬಹುಮಾನಿತವಾದವೆಂದು ಊಹಿಸಲಾಗಿದೆ. ಅವನ್ನು ಮು ಅಲ್ಲಾಕತ್ (ಎಂದರೆ ತಮ್ಮ ಅಮೋಘವಾದ ಗುಣದ ದೆಸೆಯಿಂದ ಕಾಬಾದ ಮೇಲೆ ನೇತು ಹಾಕಿದ ಪದ್ಯಗಳು) ಎಂದು ಕರೆಯಲಾಗಿದೆ.

ಇಸ್ಲಾಮಿಗೆ ಪೂರ್ವಭಾವಿಯಾಗಿ ಅರೇಬಿಯದ ಕೆಲವು ಆದರ್ಶಕವಿಗಳಲ್ಲಿ ಪ್ರಥಮ ಸ್ಥಾನ ಇಮ್–ರಉಲ್–ಕೈಸ್‌ಗೆ (560) ದೊರೆತಿದೆ. ಆತ ದೇಶಭ್ರಷ್ಟನಾದ ದೊರೆಯೊಬ್ಬನ ಮಗ; ಜೀವಮಾನದ ಕೊನೆಯ ವರ್ಷಗಳನ್ನು ತಂದೆಯ ಮರಣಕ್ಕೆ ಮುಯ್ಯಿ ತೀರಿಸುವ ಉದ್ಯಮದಲ್ಲಿ ಕಳೆದ ಅವನ ಮು ಅಲ್ಲಾಕತ್ (ಪ್ರಗಾಥ) ಮರಳುಗಾಡಿನ ವರ್ಣನೆಗಾಗಿಯೂ ಮುಚ್ಚುಮರೆಯಿಲ್ಲದ ಪ್ರಣಯ ಪೀಠಿಕೆಗಾಗಿಯೂ ಪ್ರಸಿದ್ಧವಾಗಿದೆ. ಇವನಂತೆ ಲಬೀದ್ (675), ತರಾಫ (550), ತ'ಅಬ್ಬತ ಷರ್ರ (530), ಅಷ್–ಷನ್ಫಾರ (510) ಅನ್ತರ (615), ಮೊದಲಾದ ದರೋಡೆಕೋರ (ರಾಬರ್) ಕವಿಗಳು ಮರಳುಗಾಡಿನ ಜೀವನದ ಚಿತ್ರಗಳನ್ನು ಕಳಕಳಿಸುವಂತೆ ವರ್ಣಿಸಿದ್ದಾರೆ. ಅಮ್ರ್–ಬ್–ಕುಲ್‌ತುಮ್ (600), ಹರಿತ್–ಬ್–ಹಿಲ್ಲಿಜ್ಜ (580) ಎಂಬುವರು ತಮ್ಮ ಕುಲದವರ ಮಹತ್ ಕಾರ್ಯಗಳನ್ನು ಕುರಿತು ಹಾಡುಗಳನ್ನು ಕಟ್ಟಿದ್ದಾರೆ. ಜುಹೇರ್‌ನಿಗೆ (631) ಉಪದೇಶ ಮಾಡುವುದರಲ್ಲೂ ಧರ್ಮವನ್ನು ಕುರಿತು ಹೇಳುವುದರಲ್ಲೂ ಇಷ್ಟ. ಆತ ತನ್ನ ಪದ್ಯಗಳನ್ನು ತಮ್ಮ ಭ್ರಾತೃಘಾತಕ ವೈರವನ್ನು ಬಗೆಹರಿಸಿಕೊಂಡ ಇಬ್ಬರು ಕುಲನಾಯಕರ ಪ್ರಶಂಸೆಗೆ ಮೀಸಲಿಟ್ಟಿದ್ದಾನೆ.

ಇಸ್ಲಾಮಿಗೆ ಪೂರ್ವದ ಅರೇಬಿಯದಲ್ಲಿ ಅರಬ್ಬರ ಎರಡು ರಾಜಾಸ್ಥಾನಗಳಿದ್ದುವು. ಘಸ್ಸನಿದ್ ವಂಶದವರು ಆಳುತ್ತಿದ್ದ ಪ್ರದೇಶ ಅರೇಬಿಯದ ಈಶಾನ್ಯ ಭಾಗಗಳಲ್ಲಿ ಹಬ್ಬಿತ್ತು. ಲಖ್ಮಿದ್ ವಂಶದವರು ಆಳುತ್ತಿದ್ದ ಪ್ರದೇಶ ಯೂಫ್ರೆಟೀಸ್ ನದಿಯ ಪಶ್ಚಿಮಕ್ಕೆ ಹರಡಿತ್ತು. ಘಸ್ಸನಿದ್ ಭಾಗದ ಸಂಸ್ಕೃತಿಯಿಂದ ಪ್ರಭಾವಿತವಾಯಿತು. ಎರಡು ದರ್ಬಾರುಗಳೂ ರೋಮ್ ಮತ್ತು ಪರ್ಷಿಯಗಳ ನಡುವೆ ಜರುಗಿದ ಯುದ್ಧದಲ್ಲಿ ಮುಖ್ಯ ಪಾತ್ರವನ್ನು ವಹಿಸಿದವು. ಈ ರಾಜ್ಯಗಳು ತಮ್ಮ ರಾಜಸಭೆಗೆ ಬರುತ್ತಿದ್ದ ಅನೇಕ ಕವಿಗಳನ್ನು ಪ್ರೋತ್ಸಾಹಿಸುತ್ತಿದ್ದುವು. ಈ ರೀತಿಯಲ್ಲಿ ಪ್ರಗಾಥ ಬೆದೂಯಿನ್ ಜನಾಂಗದ ಉತ್ತಮ ಕಾವ್ಯವಾಗಿ ಬೆಳೆದುದಲ್ಲದೆ ರಾಜಸಭೆಗೆ ಯೋಗ್ಯವಾದ ರಚನೆಯೂ ಆಯಿತು. ಈ ಕಾರಣದಿಂದ ಮೆಸಪೊಟೇಮಿಯ ಅರಸರ ಪ್ರಭಾವಕ್ಕೊಳಗಾದ ಕವಿಗಳ ಒಂದು ಪಂಗಡವೂ ಕ್ರೈಸ್ತರಾದ ಸಿರಿಯ ದೇಶದ ಘಸ್ಸನಿದ್ ದೊರೆಗಳ ಆಶ್ರಯಕ್ಕೆ ಸೇರಿದ ಕವಿಗಳ ಮತ್ತೊಂದು ಪಂಗಡವೂ ಏರ್ಪಟ್ಟುವು. ಈ ಕವಿಗಳ ಪ್ರಭಾವದಿಂದ ಬೈಜಾಂಟೈನ್ ಮತ್ತು ಅರಾಮೇಯಿಕ್ ಸಂಸ್ಕೃತಿ ದನಗಾಹಿ ಅಲೆಮಾರಿ ಜನರ ಕೈಸೇರಿತು. ಈ ಕವಿಗಳ ಪೈಕಿ ಜುಬ್ಬಿಯನ್ನರ ಆನ್–ನಬಿಘ (604), ಅಲ್‌ಅಷ (629) ಮುಖ್ಯರು. ಆನ್–ನಬಿಘನ ಕವಿತೆಯಲ್ಲಿ ಆತನಿದ್ದ ರಾಜಾಸ್ಥಾನದ ಪ್ರಭಾವಗಳು ಎದ್ದು ಕಾಣುತ್ತವೆ. ಅವುಗಳಲ್ಲಿ ಕಂಡುಬರುವ ನೀತಿ ಮತ್ತು ಉಪದೇಶಗಳ ಧ್ವನಿಗಾಗಿ ಆತ ತುಂಬ ಪ್ರಸಿದ್ಧನಾಗಿದ್ದಾನೆ. ಗಾಯಕ ವೃತ್ತಿಯ ಅಲ್'ಅಷನ ಯಶಸ್ಸು ಆತನ ವಿಡಂಬನ ಮತ್ತು ವಿಲಾಸ ಗೀತಗಳನ್ನವಲಂಬಿಸಿದೆ.

ಇಸ್ಲಾಮಿಗೆ ಪೂರ್ವದ ಪದ್ಯಗಳಲ್ಲಿ ಕಂಡುಬರುವ ಹಾಗೆ, ಈ ಮರಳುಗಾಡಿನ ಮಕ್ಕಳು ತಾವು ತಂಗಲು ಅನುಕೂಲವಾದ ಹುಲ್ಲುಗಾವಲುಗಳನ್ನೂ ಫಲವತ್ತಾದ ಭೂಮಿಗಳನ್ನು ಹುಡುಕುತ್ತಾ ಅಲೆಯುತ್ತಿದ್ದರು. ಅವರು ಪ್ರಕೃತಿಯನ್ನು ಬಹಳ ಸೂಕ್ಷ್ಮ ದೃಷ್ಟಿಯಿಂದ ನೋಡತಕ್ಕವರು ಮತ್ತು ಇದ್ದುದನ್ನು ಇದ್ದ ಹಾಗೆ ಗ್ರಹಿಸುವುದು ಅವರ ಸಹಜ ಮನೋಧರ್ಮ. ಮರಳುಗಾಡಿನ ಏಕಪ್ರಕಾರದ ಜೀವನವನ್ನು ಮುಚ್ಚುಮರೆಯಿಲ್ಲದೆ ಹೇಳಿ, ಮನುಷ್ಯ ಮತ್ತು ಪ್ರಾಣಿಗಳ ಸಹಜ ಪ್ರವೃತ್ತಿಗಳನ್ನು ವರ್ಣಿಸುವುದರಲ್ಲಿ ಬಹಳ ಆಸಕ್ತಿಯನ್ನು ತೋರಿದ ಬೆದೂಯಿನ್ ಕವಿಗಳ ಬಗೆಗೆ, ಅವರದೆಲ್ಲ ಒಂದೇ ರಾಗವೆಂದೂ ಭಾಷಾಪಂಡಿತರಿಗೆ ಮಾತ್ರ ರುಚಿಸಬಲ್ಲ ಶಬ್ದಪ್ರಯೋಗಗಳಿಂದ ತುಂಬಿವೆ ಎಂದೂ ಮುಂದಿನ ತಲೆಮಾರಿನವರು ಭಾವಿಸಿದರು. ಇಸ್ಲಾಮಿಗೆ ಹಿಂದಿನ ಕವಿತೆಗಳಲ್ಲಿ ಯಾವ ತಾತ್ತ್ವಿಕ ವಿಚಾರವಾಗಲಿ ದೈವನಿಷ್ಠೆಯಾಗಲಿ ಇಲ್ಲವೆಂಬುದು ನಿಜ. ಬೆದೂಯಿನ್ ಅರಬ್ಬರು ನೀತಿಯಲ್ಲಿ ಮತ್ತು ಸಾಮಾಜಿಕ ಜೀವನದಲ್ಲಿ ತಮ್ಮ ಕುಲಾಚಾರಕ್ಕೆ ತುಂಬ ಮರ್ಯಾದೆ ಕೊಡುತ್ತಿದ್ದರು. ಅವರನ್ನು ಆಕರ್ಷಿಸಿದ ಕೆಲವು ಜನಪ್ರಿಯ ವಿಷಯಗಳೆಂದರೆ ಶೌರ್ಯ, ಪ್ರಣಯ, ಶೋಕ, ಅವಮಾನ, ಪ್ರತಿಷ್ಠಾ ವೈಭವ, ಆತಿಥ್ಯ – ಮೊದಲಾದುವು. ಅವರು ಧಾರ್ಮಿಕ ಕ್ರಿಯಾವಿಧಿಗಳನ್ನು ಆಚರಿಸುತ್ತಿದ್ದುದು ಶ್ರದ್ಧಾಭಕ್ತಿಯಿಂದಲ್ಲ; ಬರಿಯ ಕುಲಾಚಾರವೆಂದು. ಯಾವ ದೇವರೇ ಆಗಲಿ ಅವನಿದಿರು ದೀನಭಾವವನ್ನು ತೋರುವುದು ಅವರ ಸಹಜಪ್ರವೃತ್ತಿಗೆ ಸರಿಹೊಂದುತ್ತಿರಲಿಲ್ಲ. ಆದರೆ ದಕ್ಷಿಣ ಅರಬ್ಬರ ವರ್ತನೆ ತದ್ವಿರುದ್ಧವಾದುದು. ಅವರ ಜೀವನದ ಸ್ಥಿತಿಗತಿಗಳು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಕುಲದೇವತೆಗಳಿಗೆ ಅಂಟಿಕೊಂಡಿದ್ದವು. ಉತ್ತರ ಅರಬ್ಬರು ಸ್ವೇಚ್ಛಾಪ್ರವೃತ್ತಿಯುಳ್ಳವರು, ಚಪಲರು, ತಿಂದು ಕುಡಿದು ವಿಲಾಸಮಗ್ನರಾಗುವುದೇ ಅವರ ಜೀವನದ ಗುರಿ. ಸದ್ಧರ್ಮ ಮಾರ್ಗದಿಂದ ತಮ್ಮ ನಡತೆಯನ್ನು ತಿದ್ದಿಕೊಳ್ಳುವುದು ಅವರಿಗೆಷ್ಟರಮಟ್ಟಿಗೂ ಸೇರುತ್ತಿರಲಿಲ್ಲವೆಂಬುದು ಪ್ರವಾದಿಗಳಾದ ಮಹಮ್ಮದರ ಉಪದೇಶಗಳನ್ನು ಪರಿಗ್ರಹಿಸುವುದರಲ್ಲಿ ಅವರು ತೋರಿದ ಶುದ್ಧ ಮೂರ್ಖಪ್ರತಿಭಟನೆಯಲ್ಲಿ ವ್ಯಕ್ತವಾಯಿತು.

ಒಂದು ಮಾತಿನಲ್ಲಿ ಹೇಳಬೇಕಾದರೆ, ಪ್ರಾಚೀನ ಅರೇಬಿಯದ ಕವಿತೆ ಅರಬ್ಬರ ಎಲ್ಲ ರಾಗೋದ್ರೇಕಗಳನ್ನೂ ಕುಲಾಚಾರಗಳನ್ನೂ ಒಳಗೊಂಡ ಅವರ ಕುಲಜೀವನವನ್ನು ಪ್ರತಿಫಲಿಸುತ್ತದೆ. ಕುದುರೆ ಜೂಜಿನ ಯಾವುದೋ ಒಂದು ಸಣ್ಣ ನಿಯಮಭಂಗದಂಥ ಅಲ್ಪ ವಿಷಯಗಳು ಹೇಗೆ ಕುಲಗಳಲ್ಲಿ ತಳಮಳ ಎಬ್ಬಿಸಿ ವರ್ಷಗಟ್ಟಲೆ ನಡೆಯುವ ಯುದ್ಧಗಳನ್ನು ಪ್ರೇರಿಸುತ್ತಿದ್ದವು, ಅವು ಹೇಗೆ ಕಾವ್ಯ ವಸ್ತುಗಳಾಗುತ್ತಿದ್ದವು ಎಂಬುದನ್ನು ಈ ಕವಿತೆ ತಿಳಿಸಿಕೊಡುತ್ತದೆ. ಆದರೂ ಇಸ್ಲಾಂ ಪೂರ್ವದ ಕವಿತೆಗಳಲ್ಲಿ ಕುಲಗಳೊಳಗಿನ

ಯುದ್ಧ ಸಾಹಸಗಳು, ಆತಿಥ್ಯಕ್ಕೆ ಹೆಸರಾದ ಮನುಷ್ಯರ ಪ್ರಶಂಸೆಗಳು, ಲೋಭಿಗಳು ಮತ್ತು ಹೇಡಿಗಳನ್ನು ಕುರಿತ ನಿಂದೆಗಳು—ಇವುಗಳ ವರ್ಣನೆಗಳಿವೆ. ಹೀಗೆ ಅವು ಅರಬ್ಬರ ಕುಲಜೀವನ, ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಯಲು ಆಕರಗ್ರಂಥಗಳಾಗಿವೆ.

ಯುದ್ಧಕಾಲದಲ್ಲಿ ಆತ್ಮಗೌರವ ಸಂರಕ್ಷಕರಾಗಿರುತ್ತ ಶಾಂತಿಸಮಯದಲ್ಲಿ ಜ್ಞಾನಿಗಳಂತೆ ಇದ್ದ ಈ ಕವಿಗಳ ಸುತ್ತಲೂ ಕುಲಗಳ ಮಹತ್ಕಾರ್ಯಗಳ ಚರಿತ್ರೆ ಹಬ್ಬಿಕೊಂಡಿತು. ಮುಂದೆ ಇದು ಕುಲದೊಳಗಿನ ಕಾಳಗಗಳ ಇತಿಹಾಸವಾಗಿ ಬೆಳೆಯಿತು. ಜನಜನಿತವಾಗಿ, ಜನರ ಕಲ್ಪನೆಯಲ್ಲಿ ಅದ್ಭುತ ನಾಟಕೀಯ ಪ್ರಸಂಗಗಳೆನಿಸಿದ ಈ ಕಥಾನಕಗಳು, ಅವುಗಳಲ್ಲಿನ ಕೆಲವು ಭಾಷಣಗಳು, ಕಣಿ ಹೇಳುವವರ ಪ್ರಾಸಬದ್ಧ ರಚನೆಗಳು – ಇವು ಹೊರತು ಇಸ್ಲಾಮಿಗೆ ಹಿಂದಿನ ಕಾಲದಲ್ಲಿ ಗದ್ಯ ಸಾಹಿತ್ಯವಿದ್ದುದರ ಕುರುಹು ಕಂಡುಬರುವುದಿಲ್ಲ. ಆದರೆ ಖಗೋಳ, ವಾಯುಗುಣ, ಸಾಮುದ್ರಿಕ, ವಂಶಾನುಕ್ರಮಣಿಕೆ – ಇವುಗಳ ತಿಳಿವಳಿಕೆ ಇಸ್ಲಾಮಿಗೆ ಹಿಂದಿನ ಅರೇಬಿಯದಲ್ಲಿ ಇದ್ದಿತೆಂಬುದು ತಿಳಿದು ಬಂದಿದೆ.

ಲೇಖನಕಲೆ ಅರೇಬಿಯದ ಜನಕ್ಕೆ ತಿಳಿದೇ ಇರದಿರಲಿಲ್ಲವೆಂದು ಹೇಳಲಾಗದಿದ್ದರೂ ಅಷ್ಟಾಗಿ ಜನರಲ್ಲಿ ಹರಡದಿದ್ದುದು ಅಲ್ಲಿನ ಗದ್ಯ ಸಾಹಿತ್ಯದ ಕ್ಷಾಮಕ್ಕೆ ಕಾರಣವಿರಬಹುದು. ಇದು ಹೇಗಾದರೂ ಇರಲಿ, ಅರೇಬಿಯದ ಸಾಹಿತ್ಯದಲ್ಲಿ ನಮ್ಮ ಕಣ್ಣಿಗೆ ಬೀಳುವ ಪ್ರಥಮ ಪುಸ್ತಕ ಯಾವುದೆಂದರೆ – ಜೀವನವನ್ನು ಶ್ರದ್ಧಾಭಕ್ತಿಗಳಿಂದ ಋಜುಮಾರ್ಗದಲ್ಲಿ ನಡೆಸಿಕೊಳ್ಳಲು ಅನುಕೂಲವಾಗುವಂತೆ ಧಾರ್ಮಿಕ ನೀತಿಗಳನ್ನೂ ಸಾಮಾಜಿಕ ನಿಯಮಗಳನ್ನೂ ವಿಧಿಸಿರುವ ಕುರಾನು–ಇಸ್ಲಾಂ ಮತದ ಪವಿತ್ರಶಾಸನ, ಸಮಸ್ತ ಜನಕ್ಕೂ ಉಪದೇಶಿಸಲೆಂದು ಪ್ರವಾದಿ ಮಹಮ್ಮದನಿಗೆ ದೇವರೇ ವಿಶದಗೊಳಿಸಿದ ಶಾಶ್ವತ ವಚನವಿದೆಂದು ಮುಸ್ಲಿಮರು ಭಾವಿಸುತ್ತಾರೆ. ಅದನ್ನು ಸಾಹಿತ್ಯದ ಮಹಾಕೃತಿಯೆಂದು ಪರಿಭಾವಿಸುವುದಾದರೆ, ಅದೊಂದು ಅಸದೃಶಗ್ರಂಥ; ಶೈಲಿಯೊಂದರಲ್ಲೇ ಅಲ್ಲದೆ ವಿಷಯದಲ್ಲೂ ಅದು ಅನನುಕರಣೀಯವೆಂದು ಎಲ್ಲ ಕಾಲದ ಅರಬ್ಬರೂ ಏಕಕಂಠದಿಂದ ಸಾರಿದ್ದಾರೆ. ಅರಬ್ಬೀ ಸಾಹಿತ್ಯದ ಬೆಳೆವಣಿಗೆಯ ಮೇಲೆ ಅದು ಬೀರಿರುವ ಪ್ರಭಾವ ಬಹುವಿಸ್ತೃತವೂ ಬಹುಮುಖವೂ ಆದದ್ದು. ಕುರಾನು ಆವಿರ್ಭವಿಸುವುದಕ್ಕೆ ಬಹಳ ಹಿಂದೆಯೇ ಇಸ್ಲಾಮ್ ಪೂರ್ವದ ಕವಿಗಳು ಅರಬ್ಬೀ ಸಾಹಿತ್ಯಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದರೂ ಮುಸ್ಲಿಮರಿಗೆ ದಿವ್ಯ ಹಾಗೂ ಪ್ರಥಮ ಧರ್ಮಶಾಸ್ತ್ರವೆನಿಸಿದ್ದ ಕುರಾನಿನ ಸ್ಥಾನಮಾನದ ದೆಸೆಯಿಂದ ಅರಬ್ಬೀ ವಿಶ್ವಭಾಷೆಯಾಯಿತು; ಅಲ್ಲದೆ ಎಲ್ಲರೂ ಬಳಸುವಂಥ ಸಾಹಿತ್ಯಮಾಧ್ಯಮವಾಯಿತು. ತಾನು ಹುಟ್ಟಿ ಹರಡಿದ ನೂರು ವರ್ಷಗಳೊಳಗೆ ಪಶ್ಚಿಮಕ್ಕೆ ಬೈಜಾಂಟೈನ್ ಸಾಮ್ರಾಜ್ಯದ ಪ್ರಾಂತ್ಯಗಳನ್ನೂ ಪೂರ್ವಕ್ಕೆ ಸಸ್ಸೇನಿಯನ್ ಚಕ್ರಾಧಿಪತ್ಯವನ್ನೂ ಒಳಗೊಂಡು ಪಿರನೀಸಿನಿಂದ ಪಾಮಿರ್‌ವರೆಗೆ ಹಬ್ಬಿದ ಇಸ್ಲಾಮಿನ ಹರಹು ಮುಸ್ಲಿಮರ ದೈವ ಜ್ಞಾನವನ್ನೂ ಸಂಸ್ಕೃತಿಯನ್ನೂ ಆಶ್ಚರ್ಯಕರವಾದ ರೀತಿಯಲ್ಲಿ ಪ್ರವರ್ಧಮಾನಕ್ಕೆ ತಂದಿತು. ಅರಬ್ಬರ ವಿಜಯಗಳ ಸಾರತಮಪರಿಣಾಮ ಯಾವುದೆಂದರೆ, ತಾವು ಗೆದ್ದ ಜನಗಳನ್ನು ಕ್ರಮೇಣ ಇಸ್ಲಾಮಿನ ಭ್ರಾತೃವರ್ಗದಲ್ಲಿ ಸೇರಿಹೋಗುವಂತೆ ಮಾಡುವುದು. ಅವರು ತಮ್ಮೊಂದಿಗೆ ತಮ್ಮ ವಿಶಿಷ್ಟ ಸಂಸ್ಕೃತಿಗಳ ಅನುಭವಗಳನ್ನೂ ನಡೆವಳಿಕೆಗಳನ್ನೂ ತಂದರು. ಆ ಕಾರಣದಿಂದ ಸಾಹಿತ್ಯವನ್ನು ಮೇಲುಮಟ್ಟಕ್ಕೇರಿಸಿ ಅಭಿವೃದ್ಧಿಗೊಳಿಸಿದರು; ಜೊತೆಗೆ ಅರಬ್ಬರೂ ಅರಬ್ಬರಲ್ಲದವರೂ ಅರಬ್ಬೀ ಜ್ಞಾನಭಂಡಾರವನ್ನು ಬೆಳೆಸಲು ಕಲಿತರು.

ಪ್ರವಾದಿಗಳ ಜೀವಿತಕಾಲದಲ್ಲಿ ಇಸ್ಲಾಮಿನ ಪವಿತ್ರ ಗ್ರಂಥದ ರಚನೆಯಾಗುತ್ತಿರುವಾಗ ಅರಬ್ಬೀ ಅಕ್ಷರಮಾಲಿಕೆ ಅಸಮಗ್ರವಾಗಿತ್ತು. ಸಮಗ್ರವಾದ ಅಕ್ಷರಮಾಲಿಕೆಯನ್ನೂ ವ್ಯಾಕರಣ ಸೂತ್ರಗಳನ್ನೂ ರಚಿಸಿ ಗ್ರಂಥವನ್ನು ಅದರ ಪಾಠ ಕೆಡದ ಹಾಗೆ ಸಂರಕ್ಷಿಸುವುದು ಕ್ಷಿಪ್ರವಾಗಿ ನಡೆಯಬೇಕಾದ ಕೆಲಸವೆನಿಸಿತು. ಕುರಾನನ್ನು ವ್ಯಾಖ್ಯಾನಿಸುವುದಕ್ಕೆ ಶಬ್ದಕೋಶ ಮತ್ತು ವ್ಯಾಕರಣಗಳನ್ನು ಎಚ್ಚರಿಕೆಯಿಂದ ಕಲಿಯುವುದು ಅಗತ್ಯವಾಯಿತು. ಇಸ್ಲಾಮಿಗೆ ಪೂರ್ವದ ಕವಿಗಳ ಪ್ರಯೋಗಗಳನ್ನು ನೋಡಿಕೊಂಡು ಶಬ್ದಗಳಿಗೆ ಖಚಿತವಾದ ಅರ್ಥಗಳು ನಿರ್ಣೀತ ವಾದವು; ಈ ಕೆಲಸದ ನಿಮಿತ್ತವಾಗಿ ಇಸ್ಲಾನ್ ಪೂರ್ವದ ಕವಿಗಳ ಕೃತಿಗಳ ಸಂಗ್ರಹಣೆ ಅವಶ್ಯವಾಯಿತು. ಈ ರೀತಿಯಲ್ಲಿ ಭಾಷಾವಿಜ್ಞಾನ ಮತ್ತು ಶಬ್ದಕೋಶ ರಚನವಿಧಾನಗಳು ಪ್ರವೃತ್ತವಾದವು. ಪ್ರವಾದಿಗಳ ಸದಾಚಾರಗಳನ್ನೂ ಸದುಕ್ತಿಗಳನ್ನೂ ಕ್ರೋಡೀಕರಿಸುವುದರ ಮೂಲಕ ಕುರಾನಿನ ತತ್ತ್ವಗಳ ಅನುಸಂಧಾನ ಸ್ಥಿರೀಕೃತವಾಯಿತು. ಈ ಮೇರೆಗೆ ಪವಿತ್ರಸಂಪ್ರದಾಯ ಶಾಸ್ತ್ರ (ಹಾಡಿತ್) ಜನ್ಮ ತಾಳಿತು. ಕುರಾನ್ ಮತ್ತು ಸಂಪ್ರದಾಯಗಳ ಕಲಿಕೆ ದೈವ ಮತ್ತು ಧರ್ಮಶಾಸ್ತ್ರಗಳ ನಿರ್ಮಾಣಕ್ಕೆ ಒಳ್ಳೆ ತಳಪಾಯವನ್ನು ಒದಗಿಸಿತು. ಭಾಷಾವಿಜ್ಞಾನದ ವ್ಯಾಸಂಗಗಳು ಇಸ್ಲಾಮ್ ಪೂರ್ವದ ಅರೇಬಿಯದ ಚರಿತ್ರೆಯ ವಿಷಯ ದಲ್ಲೂ ಕುಲಗಳ ವಂಶಾನುಕ್ರಮಣಿಕೆಗಳ ವಿಚಾರದಲ್ಲೂ ಸಂಶೋಧನೆ ನಡೆಸಲು ದಾರಿ ತೋರಿದವು. ಇಸ್ಲಾಮ್ ಪೂರ್ವದ ಅರೇಬಿಯದ ಪೌರಾಣಿಕ ಕಥೆಗಳನ್ನು ಸಂಗ್ರಹಿಸುವಲ್ಲಿ ಬೈಬಲ್ ಮತ್ತು ಜೂಡೋ ಕ್ರಿಶ್ಚಿಯನ್ ಮೂಲಗಳಿಂದ ಅನೇಕ ವಿಷಯಗಳನ್ನು ಎರವಲು ತಂದುಕೊಳ್ಳಲಾಗಿದೆ. ಅಂದಿನ ಎಳೆಯ ಗದ್ಯ, ಮುಂದಿನ ಎಲ್ಲ ಗದ್ಯದ ಬರೆಹಗಳಿಗೂ ಒಳ್ಳೆ ಮಾದರಿಯ ಮೇಲುಪಂಕ್ತಿಯನ್ನು ಹಾಕಿಕೊಟ್ಟ ಕುರಾನಿನ ಶೈಲಿಯನ್ನು ಅವಲಂಬಿಸಿ ಬೆಳೆಯತೊಡಗಿತು.

ದೇವನೊಬ್ಬ, ಜನಾಂಗವೊಂದು, ಮನಸ್ಸೂ ಗೆಯ್ಮೆಯೂ ಭಿನ್ನವಾಗಿರಕೂಡದು – ಹೀಗೆ ಐಕ್ಯವನ್ನೇ ಒತ್ತಿ ಒತ್ತಿ ಹೇಳುತ್ತಿದ್ದ ಇಸ್ಲಾಂ ಧರ್ಮ, ಕುಲ ಕುಲಗಳಲ್ಲಿಯೂ ಕಲಹವನ್ನು ಹಬ್ಬಿಸುವುದರಲ್ಲಿಯೇ ತನ್ನ ಮೇಲ್ಮೆಯನ್ನು ಕಾಣುತ್ತಿದ್ದ ಕಾಲಿಕ ಧ್ಯೇಯಕ್ಕೆ ಭಾರಿ ಪೆಟ್ಟು ಕೊಟ್ಟಿತು. ದೈವವನ್ನು ಕುರಿತ ಚರ್ಚೆ, ಧರ್ಮವನ್ನು ಕುರಿತ ಉಪನ್ಯಾಸಗಳಿಗೆ ಪದ್ಯಕ್ಕಿಂತ ಗದ್ಯವೇ ತಕ್ಕುದಾಗಿತ್ತು. ಆದ್ದರಿಂದ ಪ್ರವಾದಿಗಳ ಜೀವಿತಕಾಲದಲ್ಲೂ ನಿಷ್ಠಾವಂತ ರಾದ ಕಲೀಫರ ಕಾಲದಲ್ಲೂ ಪದ್ಯದ ಬೆಳೆವಣಿಗೆಗೆ ಸದವಕಾಶವಿರಲಿಲ್ಲ. ಆ ಕಾಲದಲ್ಲಿ ಮುಸ್ಲಿಂ ಕವಿಗಳೂ ಮುಸ್ಲಿಮೇತರ ಕವಿಗಳೂ ಇದ್ದರು, ಕಾಅಬ್ಬ ಜುಹೇರ್ ಮತ್ತು ಹಸ್ಸನ್–ಬ್–ಥಬ್ಬಿತ್ ಮುಂತಾದ ಮತೋತ್ಸಾಹವುಳ್ಳ ಕವಿಗಳಿಗೆ ಮಾತ್ರ ಹೆಚ್ಚು ಪ್ರೋತ್ಸಾಹ ಆದರಗಳು ದೊರೆಯುತ್ತಿದ್ದುವು.

ಹಿಂದಿನ ನಾಲ್ವರು ಕಲೀಫರ ಕಾಲ ಮುಗಿದ ಬಳಿಕ ಇಸ್ಲಾಮಿನ ವಿದ್ಯಾಕೇಂದ್ರ ಆ ಶ್ರದ್ಧಾಳುಗಳ ರಾಜಧಾನಿಯಾದ ಮದೀನದಿಂದ ದಮಾಸ್ಕಸ್‌ಗೆ ಸ್ಥಳಾಂತರಿಸಲ್ಪಟ್ಟಿತು. ಅಲ್ಲಿ ಮೆಕ್ಕದ ಒಂದು ಮನೆತನವಾದ ಉಮಾಯಿದ್‌ರು ಹಿಂದಿನ ಗಣತಂತ್ರದ ಆಡಳಿತವನ್ನು ತಪ್ಪಿಸಿ ದೊರೆಮನೆತನದ ಆಳಿಕೆಯ ಕ್ರಮವನ್ನು ಜಾರಿಗೆ ತಂದಿದ್ದರು. ಅವರೆಲ್ಲ ಲೌಕಿಕರು. ಉಮಾಯಿದ್ ಮನೆತನದವರು ಪಟ್ಟಕ್ಕೇರಲು ಇಸ್ಲಾಂ ಪೂರ್ವದ ಆಚಾರಗಳು ಮತ್ತು ಧ್ಯೇಯಗಳು ಮತ್ತೆ ಹರಡಲಾರಂಭಿಸಿದುವು. ಪೂರ್ವದ ಶ್ರದ್ಧಾಜೀವನ ಭೋಗವಿಲಾಸಕ್ಕೆಡೆ ಗೊಟ್ಟಿತು. ಗೆದ್ದ ರಾಜ್ಯಗಳಿಂದ ಅರೇಬಿಯಕ್ಕೆ ಹೊಳೆಯಂತೆ ಹರಿಯುತ್ತಿದ್ದ ಐಶ್ವರ್ಯ, ಒಂದು ಕಡೆ ಬೈಜಾಂಟೀಯನ್ ಸಂಸ್ಕೃತಿಯೊಂದಿಗೂ ಮತ್ತೊಂದು ಕಡೆ ಇರಾನಿ ನಾಗರಿಕತೆ ಯೊಂದಿಗೂ ಅವರಿಗಿದ್ದ ಸಂಪರ್ಕ, ಇವುಗಳ ದೆಸೆಯಿಂದ ಅವರಿಗೆ ಭೋಗರಾಗಗಳ ವಿಷಯಲಂಪಟತನದ ರೂಢಿ ಬೆಳೆಯಿತು. ಶ್ರದ್ಧಾಳುವಾದ ಮೂರನೆಯ ಕಲೀಫನ ಕೊಲೆಯಾದ ಬಳಿಕ ತಲೆದೋರಿದ ರಾಜಕೀಯ ಕ್ರಾಂತಿ ಮತ್ತು ಅಂತರ್ಯುದ್ಧಗಳ ವಾತಾವರಣದಲ್ಲಿ ಹಳೆಗಾಲದ ಪಂಥಾಭಿಮಾನಗಳು ಹುಲುಸಾಗಿ ಬೆಳೆಯಲು ಪ್ರಾರಂಭಿಸಿ ದುವು. ಈ ಆಳ್ವಿಕೆಯಲ್ಲಿ ಕುಲಕಲಹಗಳಿಗೆ ರಾಜಕೀಯ ಬಣ್ಣ ಬಂದು ಅರಬ್ಬರ ಸಮಾಜ ರಾಜಕೀಯ ಬಣಗಳಾಗಿ ಒಡೆದು ಹೋಯಿತು. ಕಿಲಾಫತ್ತಿಗೆ ವಾರಸುದಾರಾದ ಬನುಹಷೀಂ ಮತ್ತು ಬನು ಉಮಯ್ಯ ಎಂಬುವರು ಪರಸ್ಪರ ಯುದ್ಧದಲ್ಲಿ ತೊಡಗಿದ್ದರು. ಉತ್ತರದ ಮತ್ತು ದಕ್ಷಿಣದ ಕುಲಗಳಲ್ಲಿ ಅಲ್ಲದೆ, ಅರಬ್ಬರು ಮತ್ತು ಅರಬ್ಬರಲ್ಲದವರು ಹಾಗೂ ಷಿಯ, ಜುಬೈರಿದ್ ಮತ್ತು ಖವಾರಿಜ್ ಮುಂತಾದ ರಾಜಕೀಯ ಮತ್ತು ಧಾರ್ಮಿಕ ಪ್ರತಿಪಕ್ಷಗಳಲ್ಲೂ ಪರಸ್ಪರ ವೈಷಮ್ಯ ಬಹಳ ತೀವ್ರವಾಯಿತು. ಬನು ಹಷೀಂನ ಕಡೆಯವರು ಷಿಯ ಪಂಥದವರು. ಅಬ್ದುಲ್ಲ–ಬ್–ಜುಬೈರ್‌ನ ಕಡೆಯವರು ಜುಬೈರಿದ್ ಎಂಬ ಪಕ್ಷದವರು. ಇಸ್ಲಾಮಿನ ವೀರನಿಷ್ಠೆಯನ್ನು ಉತ್ಸಾಹದಿಂದ ಎತ್ತಿ ಹಿಡಿಯುವ ಪಂಥದವರಾದ ಖವಾರಿಜ್ ಪಕ್ಷದವರು ಮತ್ತೊಂದು ಪಂಗಡದವರು, ಕುರಾನು ಮತ್ತು ಸಂಪ್ರದಾಯಗಳಿಗೆ ತಮ್ಮದೇ ಆದ ಒಂದು ವಿಶಿಷ್ಟಾರ್ಥವನ್ನು ಕೊಡುತ್ತಿದ್ದ ಈ ಪಂಥದವರಿಗೆ ಈ ಲೋಕದಲ್ಲೂ ಇದರ ಸುಖಗಳ ವಿಷಯದಲ್ಲೂ ಆಸಕ್ತಿಯಿರಲಿಲ್ಲ. ಇವರ ಪ್ರಕಾರ ಕೌಲಿಕ ಸಂಬಂಧವೊಂದೂ ಇಲ್ಲದೆ ಜನ ಮತದಿಂದ ಆರಿಸಿಬಂದ ಕಲೀಫರ ದೈವನಿಷ್ಠವಾದ ಆಳ್ವಿಕೆಯನ್ನು ಸ್ಥಾಪಿಸುವ ಒಂದೇ ಗುರಿಗಾಗಿ ಅವರು ಬಾಳಿದರು ಮತ್ತು ಮಡಿದರು. ಹೀಗೆ ಹುರುಡುಗಟ್ಟಿ ನಿಂತ ರಾಜಕೀಯ ಪಕ್ಷಗಳ ಒಳಜಗಳಗಳು ಬೆದೂಯಿನ್ ಅರಬ್ಬರಿಗೆ ನಾಗರಿಕ ಜನರ ಸಂಪರ್ಕವನ್ನು ತಂದವು. ಅವರೊಂದಿಗೆ ಬೆದೂಯಿನ್ ಕಾವ್ಯದ ಹಳೆಯ ಪ್ರವೃತ್ತಿಗಳೂ ಪಟ್ಟಣಕ್ಕೆ ಬಂದವು. ಆವೇಗ ಮತ್ತು ಉದ್ರೇಕಗಳನ್ನು ಉದ್ದೀಪನಗೊಳಿಸುವುದೇ ಈ ಕಾವ್ಯಗಳ ಉದ್ದೇಶವಾದುದರಿಂದ ಅವು ಸಂವರ್ಧಿಸಲು ಅಲ್ಲಿ ಅನುಕೂಲ ವಾತಾವರಣ ಸಿಕ್ಕಿತು. ಆದರೆ ಆ ವಿಧರ್ಮಿಗಳ ವ್ಯಂಗ್ಯ (ಹಿಜ) ಮತ್ತು ಸ್ತುತಿ ವಚನಗಳು (ಮಧ್) ರಾಜಕೀಯ ವಿಷಯಗಳಿಗೆ ಎಡೆಕೊಟ್ಟವು. ಈ ಕಾಲದಲ್ಲಿ ರಾಜಕೀಯ ಕವಿತೆಗಳೂ ವಿಡಂಬನೆಗಳೂ ಹುಟ್ಟಿಕೊಂಡವು. ಪ್ರತಿಯೊಂದು ಪಕ್ಷವೂ ಧ್ಯೇಯ ಧೋರಣೆಗಳನ್ನು ಪ್ರಚುರಪಡಿಸಲು ತನ್ನದೇ ಆದ ಕವಿಗಳನ್ನು ಹೊಂದಿತ್ತು. ಈ ಧ್ಯೇಯಗಳಿಗನುಸಾರವಾಗಿ ಅರೇಬಿಯ, ಸಿರಿಯ, ಕೂಫ, ಇರಾಕ್ ಮತ್ತು ಮೆಕ್ಕ ಮುಂತಾದವುಗಳ ರಾಜಕೀಯ ಪಂಗಡಗಳಲ್ಲಿ ಹಂಚಿಹೋಯಿತು.

ಭೋಗಜೀವನ ರಹಸ್ಯಪ್ರಣಯದ ಮತ್ತು ಶೃಂಗಾರರಸದ ಕವಿಗಳನ್ನು ಹುಟ್ಟು ಹಾಕಿತು. ಮುಖ್ಯವಾಗಿ ಮರಳುಕಾಡಿನ ವಸತಿಗಳಲ್ಲಿ (ವಸಾಹತುಗಳಲ್ಲಿ) ಕೇವಲ ನಿಷ್ಕಾಮ ಪ್ರೇಮಕ್ಕೆ ಹತ್ತಿರ ಬರುವ ಶುದ್ಧ ಪ್ರಣಯ ಕವಿತೆಗಳ ಬೆಳಸು ಬೆಳೆಯುತ್ತಿತ್ತು. ನಾಗರಿಕರ ಪ್ರಣಯದ ರೀತಿಗಳಿಗೆ ಇದಿರಾಗಿ ಮರಳುಕಾಡಿನ ಕವಿಯ ಪ್ರಣಯಾನುಭವವನ್ನು ಅದು ವಿವರವಾಗಿ ನಿರೂಪಿಸುತ್ತದೆ. ಬೂಥೈನ್ ಎಂಬುವಳ ಪ್ರಿಯ, ಜಾಮಿಲ್–ಬ್–ಮಾ ಮಾರ್ (ಸ್ವರ್ಗಸ್ಥ 701) ಲುಬ್ನ ಎಂಬುವಳ ಪ್ರಿಯ ಕೈಯಸ್–ಬ್–ಜಾರಿಹ್, ಲೈಲಾ ಎಂಬುವಳ ಪ್ರಿಯ ಮಜ್ನನ್ ಇವರು ಶುದ್ಧ ಪ್ರೇಮಕವಿತೆಗಳ ಕೆಲವು ಪ್ರತಿನಿಧಿಗಳು. ಈ ಕವಿಗಳ ಪ್ರಣಯ ಪ್ರಸಂಗಗಳು ಗಾದೆಯ ಮಾತಾಗಿವೆ ಮತ್ತು ಅರಬ್ಬೀ ಕವಿತೆಯನ್ನಲ್ಲದೆ, ಪರ್ಷಿಯನ್ ಮತ್ತು ತುರ್ಕಿ ಕವಿತೆಗಳನ್ನೂ ಎಲ್ಲ ಮುಸ್ಲಿಮರ ಪುರಾತನ ಆಖ್ಯಾಯಿಕೆಗಳನ್ನೂ

ಪ್ರಭಾವಿಸಿವೆ. ಅನೈತಿಕವಾದ ಪ್ರಣಯಕವಿತೆಯನ್ನು ಬರೆವವರಲ್ಲಿ ಅಗ್ರಗಣ್ಯರೆಂದರೆ ಕುರೈಷಿ ಕುಲದ ಉಮರ್-ಬ್-ಅಬ ರಬಿಯ (8ನೆಯ ಶತಮಾನ). ಇವನ ಪ್ರಣಯಗೀತೆಗಳನ್ನು ದಿವಾನ್ ಒಂದರಲ್ಲಿ ಸಂಗ್ರಹಿಸಲಾಗಿದೆ. ಶುದ್ಧ ಮತ್ತು ಅನೈತಿಕ ಪ್ರಣಯಗೀತೆಗಳೆಂಬ ಎರಡು ಪ್ರಕಾರಗಳೂ ವಿಧರ್ಮಿಗಳ ಪ್ರಣಯ ಪದ್ಯಗಳಿಗಿಂತ ಮುಂದುವರಿದವೆಂದು ಹೇಳಬೇಕು. ಇಸ್ಲಾಂ ಮತ ಉದಿಸುವುದಕ್ಕೂ ಮುಂಚಿನ ದಿನಗಳಲ್ಲಿ ಘಜಲ್ (ಅಷ್ಟಷಟ್ಪದಿ) ಎಂಬ ಕವಿತಾಪ್ರಕಾರ ಪ್ರಗಾಥದ ಒಂದು ಸಾಂಪ್ರದಾಯಿಕ ಅಂಗವಾಗಿತ್ತು, ಅದಕ್ಕೆ ಪ್ರತ್ಯೇಕವಾದ ಅಸ್ತಿತ್ವ ಇರಲಿಲ್ಲ. ಆದರೆ ಉಮಯಿದ್ ಕಾಲದಲ್ಲಿ ಪ್ರತ್ಯೇಕ ಪ್ರಕಾರವಾಗಿ ನಿಂತಿತು.

ಮೇಲೆ ಹೇಳಿದ ಹಾಗೆ, ಈ ಕಾಲದ ಹಿರಿಯ ಕವಿಗಳು ಶೋಕಗೀತೆ ಮತ್ತು ಪ್ರಶಂಸಾಪದ್ಯಗಳನ್ನು ಕೈಬಿಡದೆ ಅಭಿರುಚಿಯಂತೆ ವಿಡಂಬನೆಗಳನ್ನೂ (ಹಿಜ) ರಚಿಸುತ್ತಿದ್ದರು. ವಿಡಂಬನಾತ್ಮಕವಾದ ಕಾವ್ಯರಚನೆಯಲ್ಲಿ ಅತ್ಯಂತ ಪ್ರಸಿದ್ಧರಾದವರೆಂದರೆ ಡಾರಿಂ ಕುಲದ ಅಲ್-ಫರಾಝ್ದಕ್ (ಸ್ವ 728), ಕುಲಾಯಬ್ ಕುಲದ ಜಾರಿರ್ (728) ಮತ್ತು ತಘ್ಲಿಬ್ ಎಂಬ ಕ್ರಿಶ್ಚಿಯನ್ ಕುಲದ ಅಲ್-ಅರ್‌ತಲ್, ಕೊನೆಯವ. ಉಮಾಯಿದ್ ಕಲೀಫರನ್ನು ಕುರಿತು ಆಸ್ಥಾನದಲ್ಲಿ ಹೇಳಿದ ಪ್ರಶಂಸಾ ಪದ್ಯಗಳು ಈಗಲೂ ಪ್ರಸಿದ್ಧವಾಗಿವೆ. ಜರೀರ್ ಮತ್ತು ಅಲ್ಫರಾಜ್‌ದಕ್ ಎಂಬುವರ ನಡುವೆ ಜರುಗಿದ ಕವಿತಾ ಸ್ಪರ್ಧೆಗಳಿಗೆ ನಕಾಯಿದ್ ಎಂದು ಹೆಸರು. ಇವು ಉಮಾಯಿದ್ ಕಾಲದ ಸ್ವರೂಪವನ್ನು ಬಹಳ ನೈಜವಾಗಿ ತೋರಿಕೊಡುತ್ತವೆಯೆಂದು ಹೇಳುತ್ತಾರೆ.

ಉಮಾಯಿದ್ ಕವಿತೆ ಆ ಕಾಲದ ಸಾಮಾಜಿಕ ಮತ್ತು ಆರ್ಥಿಕ ವಿದ್ಯಮಾನಕ್ಕನುಸಾರವಾಗಿ ಬದಲಾವಣೆ ಹೊಂದಿದ್ದರೂ ಸಾಮಾನ್ಯವಾಗಿ ಅದರ ರೂಪ ಮತ್ತು ಭಾವಗಳೆರಡರ ಮೇಲೂ ವಿಧರ್ಮಿಗಳ ಒತ್ತಡ ಬಿದ್ದಿದೆ. ಇದರಲ್ಲಿ ಪ್ರಾಚೀನ ಕವಿತೆಯ ಶೈಲಿ ಉಳಿದುಕೊಂಡು ಬಂದಿರುವುದಕ್ಕೆ ಕಾರಣವೆಂದರೆ, ಉಮಾಯಿದ್ ಕಲೀಫರು ಈ ತೆರದ ಕವಿತೆಯಲ್ಲಿ ಹೊಂದಿದ್ದ ಆಸಕ್ತಿ, ಕೊಟ್ಟ ಪ್ರೋತ್ಸಾಹ. ಇಸ್ಲಾಂ ಪೂರ್ವದ ಕವಿತ್ವದಲ್ಲಿ ಜನಗಳ ಆಸಕ್ತಿಗೆ ಮತ್ತೊಂದು ಕಾರಣವುಂಟು. ದಾರ್ಶನಿಕ ವ್ಯಾಸಂಗ, ಕೆಲವು ಕುರಾನಿನ ಶಬ್ದಗಳಿಗಿರುವ ಅರ್ಥಛಾಯೆಗಳ ವಿಶದೀಕರಣಗಳಿಗೆ ಅವು ಬೇಕಾದವು. ಸಾಹಿತ್ಯ, ಸಂಸ್ಕೃತಿಗಳ ಅಭಿವೃದ್ಧಿಗೆ ಇಸ್ಲಾಂ ಕೊಟ್ಟ ಪ್ರೋತ್ಸಾಹದ ಪರಿಣಾಮವಾಗಿ ವಿದ್ವಾಂಸರು ಪ್ರಾಚೀನ ಕಾವ್ಯಗಳ ಸಂಗ್ರಹಣೆಗೆ ತೊಡಗಿದರು. ಕವಿತೆಗಳನ್ನು ಕಲಿತು ಹಾಡುವುದನ್ನೇ ಕಸಬಾಗಿಟ್ಟುಕೊಂಡಿದ್ದ ರೂವಾತ್ ಎಂಬ ಗಮಕಿಗಳು ಈ ಕಾರ್ಯವನ್ನು ತಮ್ಮ ಕೈಗೆ ತೆಗೆದುಕೊಂಡರು. ಪ್ರಾಚೀನ ಕಾವ್ಯಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಪ್ರಮುಖರಾದವರ ಪೈಕಿ ಅತ್ಯಂತ ಪ್ರಸಿದ್ಧರಾದವರು ಹಮ್ಮದ್-ಅರ್-ರವಿಯಾ ಮತ್ತು ಕಲಾಫ್-ಅಲ್-ಅಹ್‌ಮರ್(800) ಎಂಬುವರು. ಈ ಜನಪದ ಸಾಹಿತ್ಯ ಪ್ರಚಾರಕರು ಈ ಹಳೆಯ ಕವನಗಳನ್ನು ಪ್ರೇರಿಸಿದ ಕದನಗಳನ್ನು ಸಹ ವರ್ಣಿಸುತ್ತಿದ್ದರು. ಈ ಐತಿಹ್ಯಗಳು ಆ ಬಳಿಕ ಆಯಾ ಕುಲಗಳ ಸಾಂಪ್ರದಾಯಿಕ ಇತಿಹಾಸಗಳಾಗಿ ಪರಿಣಮಿಸಿದವು. ಬೆದೂಯಿನ್ ಕುಲಗಳಲ್ಲಿ ಬಳಕೆಯಲ್ಲಿದ್ದ ಗಾದೆಗಳನ್ನು ಕೂಡ ಅವರು ಸಂಗ್ರಹಿಸಿದರು. ಪ್ರಾಚೀನ ಅರಬ್ಬೀ ಕಾವ್ಯಗಳನ್ನು ವ್ಯಾಖ್ಯಾನಿಸುವುದರಲ್ಲಿ ನೆರವಾದರು. ಇದೇ ಕಾಲದಲ್ಲಿಯೆ ಧರ್ಮಪ್ರವರ್ತಕರ ಆಚಾರವಿಚಾರಗಳ ಸಂಗ್ರಹಣ, ಸಂಪಾದನ ಆಗಿ ಅವನ್ನು ಬರೆಹಕ್ಕೆ ಇಳಿಸುವ ಕಾರ್ಯ ಇನ್ನೂ ಹೆಚ್ಚಿನ ಹುರುಪಿನಿಂದ ಜರುಗಿತು.

**750ರಿಂದ 1258ರ ವರೆಗಿನ ಅರಬ್ಬೀ ಸಾಹಿತ್ಯದ ಲಕ್ಷಣ:** ಅರಬ್ಬರ ರಾಷ್ಟ್ರಾಭಿಮಾನದ ಪುನರುಜ್ಜೀವನ, ಸಾಮಾನ್ಯವಾಗಿ ಎಲ್ಲೆಡೆಯೂ ಹಬ್ಬಿದ್ದ ಅಶಾಂತಿಗಳ ದೆಸೆಯಿಂದ ಮುಸ್ಲಿಂ ಚಕ್ರಾಧಿಪತ್ಯದಲ್ಲಿ ಉಮಾಯಿದ್ ವಂಶದವರಿಗೆ ವಿರುದ್ಧವಾಗಿದ್ದ ಶಕ್ತಿಗಳು ಪ್ರಬಲವಾಗಿ ಕ್ರಮೇಣ ಆ ವಂಶದವರನ್ನು ಪದಚ್ಯುತರನ್ನಾಗಿ ಮಾಡಿದವು. 750ರಿಂದ ಪ್ರವಾದಿಗಳ ಚಿಕ್ಕಪ್ಪ ಅಬ್ಬಾಸನ ಪೀಳಿಗೆ ಪರ್ಷಿಯನ್ ಜನರ ಮತ್ತು ಅರಬ್ಬರಲ್ಲದ ಇತರರ ನೆರವಿನಿಂದ ಪಟ್ಟಕ್ಕೆ ಬಂತು. ಅಬ್ಬಾಸನ ವಂಶದವರು ದೊರೆಗಳಾದ ಮೇಲೆ ಅರಬ್ಬರ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಮೂಲಭೂತವಾದ ಬದಲಾವಣೆಗಳು ಉಂಟಾದವು. ಕಲೀಫರ ರಾಜಧಾನಿ ಡಮಾಸ್ಕಸ್ಸಿನಿಂದ ಬಾಗ್ದಾದಿಗೆ ಹೋಯಿತು. ಅಲ್ಲಿ ಆಡಳಿತ ಕ್ರಮದಲ್ಲೂ ಸಾಂಸ್ಕೃತಿಕ ನಡೆವಳಿಕೆಯಲ್ಲೂ ಪರ್ಷಿಯನ್ನರ ಪ್ರಭಾವ ಮೇಲುಗೈಯಾಗಲು ಪ್ರಾರಂಭಿಸಿತು. ಹೀಗೆ ಹೊಸ ಬಗೆಯ ಸಾಹಿತ್ಯದ ಬೆಳೆವಣಿಗೆಗೆ ಒಂದು ಸ್ಥಾನ ಸಿದ್ಧವಾಯಿತು. ಅಬ್ಬಾಸನ ಪೀಳಿಗೆಯವರು ಅರಬ್ಬರ ರಾಜ್ಯಭಾರದ ಹಳೆಯ ಸಂಪ್ರದಾಯಗಳನ್ನು ಎತ್ತಿ ಹಿಡಿಯುವುದಕ್ಕೆ ಬದಲಾಗಿ ಗದ್ಯಪದ್ಯಗಳೆರಡಕ್ಕೂ ಆಶ್ರಯಕೊಟ್ಟುದಲ್ಲದೆ ಅಪಾರವಾದ ವೈಜ್ಞಾನಿಕ ಸಾಹಿತ್ಯವನ್ನೂ ಬೆಳೆಸಿ ಸಂಸ್ಕೃತಿಯ ವಿಕಾಸಕ್ಕೆ ಬಹಳ ಪ್ರೋತ್ಸಾಹ ಕೊಟ್ಟರು. ಈ ಕಾಲದ ಸಾಹಿತ್ಯವನ್ನು ಆಧ್ಯಾತ್ಮಿಕ ಶಾಸ್ತ್ರ, ಶಬ್ದವಿಜ್ಞಾನ, ಗದ್ಯ ಮತ್ತು ಪದ್ಯ, ಚರಿತ್ರೆ ಮತ್ತು ಭೂಗೋಳವಿಜ್ಞಾನಗಳು, ದರ್ಶನ ಮತ್ತು ಪ್ರಕೃತಿ ವಿಜ್ಞಾನಗಳು—ಈ ರೀತಿಯಾಗಿ ವಿಂಗಡಿಸಬಹುದು.

ಕುರಾನಿನ ಜೊತೆಗೆ ಮುಸ್ಲಿಮರ ಮುಖ್ಯ ಆಸಕ್ತಿ ಪ್ರವಾದಿಗಳ ಎಲ್ಲ ಮಾತುಗಳನ್ನೂ ನಡೆವಳಿಕೆಗಳನ್ನೂ ಸಂಗ್ರಹಿಸುವುದರಲ್ಲಿತ್ತು. ಏಕೆಂದರೆ ಶ್ರದ್ಧೆ ಮತ್ತು ನಿಷ್ಠೆಗೆ ಸಂಬಂಧಪಟ್ಟ ಆಚರಣೆಗಳಲ್ಲಿ ಯಾವುದು ಸಾಧು ಯಾವುದನ್ನು ಮಾಡಲೇಬೇಕು ಎಂಬುದನ್ನು ತಿಳಿಯಲು ಈ ಸಂಪ್ರದಾಯಗಳೇ ಆಧಾರ. ದೈನಂದಿನ ಜೀವನಕ್ಕೆ ಕುರಾನಿನ ತತ್ತ್ವವನ್ನು ಅನ್ವಯಗೊಳಿಸುವುದು ಹೇಗೆಂಬುದನ್ನು ಈ ಸಂಪ್ರದಾಯಗಳು ಮಾತ್ರ ನಿರ್ಧರಿಸತಕ್ಕವು. ಕಾಲ ಕಳೆದಂತೆ, ಹಾದಿತ್ತಿನ (ಸತ್ಸಂಪ್ರದಾಯದ) ವಸ್ತು ದೊಡ್ಡದಾಗುತ್ತ ಬಂದಿತು. ಅನಧಿಕೃತವಾದ ಎಷ್ಟೋ ಅಂಶಗಳು ಅದರೊಳಕ್ಕೆ ತೂರಿಕೊಂಡುವು. ಆದ್ದರಿಂದ ಅವುಗಳನ್ನೆಲ್ಲ ಬಹು ಸೂಕ್ಷ್ಮವಾದ ಪರಿಶೀಲನೆಗೆ ಒಳಪಡಿಸಿ ಯಾವುದನ್ನು ಪ್ರಮಾಣವೆಂದು ನಂಬಬಹುದು ಯಾವುದನ್ನಲ್ಲ ಎಂಬುದನ್ನು ವಿಂಗಡಿಸಬೇಕಾಯಿತು. ಇದರಲ್ಲಿ ಯಾರ ಮಾತು ನಂಬಿಕೆಗೆ ಅರ್ಹ ಯಾರದು ಅಲ್ಲ ಎಂಬುದನ್ನು ಗೊತ್ತು ಮಾಡುವುದಕ್ಕಾಗಿ ಸಂಪ್ರದಾಯವಾಹಕರೆಲ್ಲರ ಜೀವನಚರಿತ್ರೆಯನ್ನು ಪರಾಮರ್ಶಿಸಲು ಈ ವಿಮರ್ಶಾತ್ಮಕ ಸಂಶೋಧನೆಗಳು ಹಾದಿ ಹಾಕಿ ಕೊಟ್ಟವು. 1. ಅಲ್-ಬುಖಾರಿ (870). 2. ಮುಸ್ಲಿಂ (878). 3. ಅಬು ದಾವುದ್ (885), 4. ಅಬು ಈಸ ತಿರ್ ಮಿಧಿ (892), 5. ನಸಾಯಿ, 6. ಇಬ್ನ್-ಮಜ (896)-ಈ ವ್ಯಕ್ತಿಗಳು ಮಾಡಿರುವ ಸಂಗ್ರಹಗಳು ಬಹು ಪ್ರಾಮಾಣಿಕವೆನಿಸಿವೆ. ಇನ್ನೂ ಮುಂದಿನ ಕಾಲದಲ್ಲಿ ಪ್ರಮಾಣವಾಕ್ಯಗಳು ಸುಲಭವಾಗಿ ದೊರೆಯುವ ಸೌಕರ್ಯವನ್ನು ಒದಗಿಸುವುದಕ್ಕಾಗಿಯೂ ನ್ಯಾಯಕ್ಕೆ ಸಂಬಂಧಪಟ್ಟ ಸತ್ಸಂಪ್ರದಾಯಗಳನ್ನು ನೀತಿಗೆ ಸಂಬಂಧಪಟ್ಟವುಗಳಿಂದ ಪ್ರಮಾಣ ವಾಕ್ಯಗಳನ್ನು ಅಪ್ರಾಮಾಣಿಕವಾದುವುಗಳಿಂದ ಪ್ರತ್ಯೇಕಿಸುವುದಕ್ಕಾಗಿಯೂ ಕೆಲವು ಸಂಕಲನಗಳನ್ನು ರಚಿಸಲಾಯಿತು. ಇದೇ ರೀತಿ ಸತ್ಸಂಪ್ರದಾಯಗಳು ಯಾರಿಂದ ಲಬ್ಧವಾದವೋ ಅವರ ಜೀವನಚರಿತ್ರೆಯ ಪರಾಮರ್ಶೆಯೂ ನಡೆಯುತ್ತಲೇ ಇತ್ತು. ಅಂಥ ಸಂಶೋಧನೆಗಳ ಫಲಿತಾಂಶಗಳನ್ನೆಲ್ಲ 1. ಅಬ್ದುಲ್ ಬರ್ರ್ ಅನ್-ನಮಾರಿಯ (1070), ಕಿತಾಬ್-ಅಲ್-ಇಸ್‌ತಿಅಬ್, 2. ಇಬ್ನ್-ಅಲ್-ಅಧೀರ್ ಅಲ್‌ಜ ಅಜ್ಞಿಯ (1232), ಉಸದಲ್-ಘಬ (5 ಸಂಪುಟಗಳು), 3. ಅಲ್-ಧಹಬಿಯ (1374), ತಜ್ರಿದ್, 4. ಇಬ್ನ್ ಹಜರ್ ಅಲ್-ಅಸ್ಕಲಾನಿಯ (1448), ಅಲ್ ಇಸಾಬಾ ಎಂಬ ಸುದೀರ್ಘಕೃತಿಗಳಲ್ಲಿ ಅಳವಡಿಸಲಾಗಿದೆ. ಇಂಥ ದೇವತಾಶಾಸ್ತ್ರ ಸಾಹಿತ್ಯದ ವರ್ಗಕ್ಕೆ ಕುರಾನಿನ ಭಾಷ್ಯ ಸೇರಿದೆ. ಗ್ರಂಥದಲ್ಲಿ ಬರುವ ಐತಿಹಾಸಿಕ ಮತ್ತು ಇತರ ವಿಷಯಗಳ ಸಂದರ್ಭ ವಿವರಣೆ, ಅದರ ವ್ಯಾಕರಣ ವ್ಯಾಖ್ಯೆಗಳು, ಅಲಂಕಾರಗಳ ಗುಣವಿಮರ್ಶೆ, ಮತತತ್ತ್ವ ಸಿದ್ಧಾಂತ ಮತ್ತು ನ್ಯಾಯವ್ಯವಹಾರದ ಶ್ರೇಷ್ಠತೆ, ಅಲ್ಲಿನ ಬೋಧನೆಗಳ ದೈವಿಕತೆಯ ಬಗ್ಗೆ ವ್ಯಾಖ್ಯೆಗಳು – ಇವೇ ಕುರಾನಿನ ಅಭ್ಯಾಸದಲ್ಲಿ ಮುಖ್ಯ ವಿಷಯಗಳು. ಪ್ರಾರಂಭದಲ್ಲಿ ಅದು ಹಾದಿತ್ತನ (ಸತ್ಸಂಪ್ರದಾಯ) ಸಾಹಿತ್ಯದ ಒಂದು ಅಂಗವಾಗಿದ್ದು ಆಮೇಲೆ ಸ್ವತಂತ್ರವೂ ಕ್ರಮಬದ್ಧವೂ ಆದ ಶಾಸ್ತ್ರವಾಗಿ ಬೆಳೆಯಿತು. ಹಿಂದಿನ ಸಂಶೋಧನೆಗಳನ್ನೆಲ್ಲ ಒಂದು ದೊಡ್ಡ ಸಂಕಲನದಲ್ಲಿ ಶೇಖರಿಸಿದ ಬಹುಪ್ರಖ್ಯಾತ ಪಂಡಿತನಾರೆಂದರೆ ಇಬ್ನ್ ಜರೀರ್ ಅಲ್-ತಬಾರಿ (922). ಆ ಬಳಿಕ ಭಾಷ್ಯಸಾಹಿತ್ಯ ಗಾತ್ರದಲ್ಲಿ ಬೆಳೆಯಿತು. ಬೇರೆ ಬೇರೆ ದೃಷ್ಟಿಕೋನಗಳಿಂದ ಈ ವ್ಯಾಖ್ಯಾನಗಳು ಸಂಕಲಿತವಾದುವು. ಉದಾಹರಣೆಗೆ, ಫಕ್ರುದ್ದೀನರ್ ರಜಿ (1209) ಕುರಾನಿನ ದೈವಿಕತೆ ಮತ್ತು ದಾರ್ಶನಿಕ ತತ್ತ್ವಗಳ ಹಿನ್ನೆಲೆಯಲ್ಲಿ ಖುರಾನಿನ ವಾಕ್ಯಗಳನ್ನು ವಿವರಿಸುತ್ತ ಮುಫತೀಹ್-ಅಲ್-ಘಯಿಬ್ ಎಂಬ ಗ್ರಂಥ ಬರೆದ. ಹಾಗೆಯೇ ಅಜ್‌ಜಮಕರಿ (1143) ಮತ್ತು ಅಲ್‌ಬೈದಾವಿ (1288) ದಾರ್ಶನಿಕದೃಷ್ಟಿಯಿಂದಲೂ ಇಬ್ನ್ ಅರಾಬಿ ಅತೀಂದ್ರಿಯನುಭೂತಿಯ (ಸೂಫಿ) ದೃಷ್ಟಿಯಿಂದಲೂ ಕುರಾನಿನ ವ್ಯಾಖ್ಯಾನಗಳನ್ನು ಬರೆದರು. ಇಸ್ಲಾಮಿನ ಪಶ್ಚಿಮ ಭಾಗದಲ್ಲಿ ಧಾರ್ಮಿಕ ಸಾಹಿತ್ಯವನ್ನು ಪ್ರತಿನಿಧಿಸಿದವರು ಅಲ್ ಸುಹೈಲಿ (1185), ಅಲ್-ಕುರ್‌ತುಬಿ (1272), ಅನ್-ನವಾವಿ, ಕುರಾನಿನ ಆಧಾರದ ಮೇಲೆ ಕರ್ತವ್ಯಕರ್ಮಗಳ ನಿಯಮಗಳು ರಚಿತವಾದುವು. ತತ್ಪರಿಣಾಮವಾಗಿ ನ್ಯಾಯತತ್ತ್ವಶಾಸ್ತ್ರ ಬೆಳೆಯಿತು. ಇದರ ಫಲವಾಗಿ ಷಿಯ ಪಂಥದ ಜೊತೆಗೆ ನಾಲ್ಕು ಬೇರೆ ಬೇರೆ ನ್ಯಾಯಶಾಸ್ತ್ರ ಪಂಥಗಳು ಕವಲೊಡೆದುವು; 1. ಅಬು ಹನೀಫನಿಂದ ಪ್ರವೃತ್ತವಾದ ಹನಾಫೈಟ್ ಪಂಥ, 2. ಮಲಿಕ್-ಬ್-ಅನಾಸ್‌ನ ಮುಖಂಡತ್ವದಲ್ಲಿ ಪ್ರಾರಂಭವಾದ ಮಲಿಕೈಟ್ ಪಂಥ, 3. ಆಷ್-ಷಫಿನ ಮುಂದಾಳುತನದಲ್ಲಿ ಷಫೈಟ್ ಪಂಥ, 4. ಇಬ್ ಹನ್‌ಬಲ್‌ನ ಯಾಜಮಾನ್ಯದಲ್ಲಿ ಬೆಳೆದ ಹನ್ಬಲೈಟ್ ಪಂಥ – ಇವು ಎಲ್ಲ ಮುಸ್ಲಿಂ ದೇಶಗಳ ಹರಹಿನಲ್ಲಿ ಭೌಗೋಳಿಕವಾಗಿ ವಿಂಗಡಗೊಂಡಿವೆ. ತಮ್ಮ ತಮ್ಮ ಪರಿಚಿಂತನ ರೀತಿಗಳಲ್ಲೂ ಮತ್ತು ನ್ಯಾಯದ ಮೂಲಗಳನ್ನು ಕುರಿತ ವ್ಯಾಖ್ಯಾನ ಕ್ರಮಗಳಲ್ಲೂ ಈ ನಾಲ್ಕು ಪಂಥಗಳೂ ಭಿನ್ನ ಭಿನ್ನವಾಗಿವೆ. ಪರಿಣಾಮವಾಗಿ ಇಸ್ಲಾಮಿನ ನ್ಯಾಯ ಮೂಲಗಳು ಕುರಾನು ಮತ್ತು ಸತ್ಸಂಪ್ರದಾಯಗಳಿಗೇ ಮಿತಿಗೊಳ್ಳಲಿಲ್ಲ. ಆದರೆ ಕಿಯಾಸ್ (ಸಾಮ್ಯ) ಮತ್ತು ಇಜ್ಮ (ಒಟ್ಟಭಿಪ್ರಾಯ) ಇವೇ ಮೊದಲಾದ ಆತ್ಮಪ್ರೇರಣೆ ಮತ್ತು ಪರಿಚಿಂತನೆಯ ಕ್ರಮಗಳನ್ನು ಕೂಡ ನ್ಯಾಯನಿಯಮದ ರಚನೆಗಳಿಗೆ ಅಳವಡಿಸಿಕೊಳ್ಳಲಾಯಿತು. ನ್ಯಾಯತತ್ತ್ವಕ್ಕೆ ಸಂಬಂಧಿಸಿದ ಸಾಹಿತ್ಯದಂತೆ ಧರ್ಮಶಾಸ್ತ್ರಕ್ಕೆ ಹಾಕಬೇಕಾದ ತಾತ್ತ್ವಿಕ ತಳಹದಿ ಕೂಡ ವಿಸ್ತಾರವಾದ ಸಾಹಿತ್ಯವನ್ನು ಉತ್ಪಾದಿಸಿದೆ. ಉಸುಲ್ ಫಿಖ್ (ನ್ಯಾಯತತ್ತ್ವ ಸೂತ್ರಗಳು) ಎಂಬುದರ ಮೇಲೆ ಅನೇಕ ಗ್ರಂಥಗಳನ್ನು ಷಫೈ ಮತ್ತು ಹನಾಫಿ ಪಂಥಗಳು ರಚಿಸಿವೆ.

ನ್ಯಾಯತತ್ತ್ವ ಸೂತ್ರಗಳ ಜೊತೆಗೆ, ಮತಕ್ಕೆ ಸಂಬಂಧಪಟ್ಟ ಧರ್ಮಶಾಸ್ತ್ರವೂ ಉದ್ಭವಿಸಿತು. ಅಬ್ಬಾಸಿದ್ ಕಾಲದ ಪ್ರಾರಂಭದಿಂದಲೂ ಅತೀಂದ್ರಿಯಜ್ಞಾನ (ರೆವೆಲೇಷನ್) ಪ್ರಾಪ್ತಿ, ಸ್ವಪ್ರೇರಣೆ, ದಿವ್ಯ ಕಲ್ಯಾಣಗುಣಸಂಪತ್ತಿ ಇತ್ಯಾದಿ ಮತ ಸಿದ್ಧಾಂತಗಳು ಕ್ರಿಶ್ಚಿಯನ್ನರ ದೇವತಾಶಾಸ್ತ್ರ ಮತ್ತು

ಬೃಹದ್ದರ್ಶನದೊಡನೆ ಚರ್ಚೆಗೂ ವಾದ ವಿವಾದಕ್ಕೂ ಒಳಗಾಗಿ ತನ್ಮೂಕ ಸಾಂಪ್ರದಾಯಿಕತೆಗೆ ವಿರೋಧವಾದ ಮುತಾಜಿಲಿಸಂ ಎಂಬ ತರ್ಕಪಾರಮ್ಯವಾದದ ಬೆಳವಣಿಗೆಗೆ ಎಡೆಗೊಟ್ಟವು. ಮೇಲೆ ಹೇಳಿದ ಎರಡು ಗುಂಪುಗಳೊಳಗಿನ ವಿವಾದಗಳು ಅಬುಲ್ ಹಸನ್ ಅಲ್ ಅಷಾರಿ (953), ಅಬು ಮನ್ ಸೂರ್ ಅಲ್-ಮತುರಿದಿ (944) ಎಂಬಿಬ್ಬರು ವಿದ್ವಾಂಸರ ನೇತೃತ್ವದಲ್ಲಿ ರೂಪುಗೊಂಡ ಹೊಸತೊಂದು ತಾತ್ತ್ವಿಕ ಪಂಥಕ್ಕೆ ದಾರಿ ಮಾಡಿಕೊಟ್ಟವು. ಈ ವಿದ್ವಾಂಸರು ಮುತಜಿಲೈಟರ ತರ್ಕಪಾರಮ್ಯವಾದಕ್ಕೂ ಸಂಪ್ರದಾಯನಿಷ್ಠೆಗೂ ನಡುವೆ ಮಧ್ಯಸ್ಥಿಕೆವಹಿಸಿ ಜಯಶೀಲರಾದರು. ಇದು ಕಲಾಂ (ತಾರ್ಕಿಕ ಪದ್ಧತಿ) ಎಂಬ ದಾರ್ಶನಿಕ ಜಿಜ್ಞಾಸಾಕ್ರಮದ ಬೆಳವಣಿಗೆಗೆ ಕಾರಣವಾಯಿತು. ಅದರ ಉದ್ದೇಶ ಮತ ಸಿದ್ಧಾಂತಗಳಿಗೆ ದಾರ್ಶನಿಕ ರೂಪರೇಖೆಗಳನ್ನು ಕೊಡುವುದು ಕಲಾಮಿನ. ಸಾಹಿತ್ಯ ಪ್ರತಿನಿಧಿಗಳು ಯಾರೆಂದರೆ: ಅಬುಬಕರ್ ಅಲ್-ಬಾಕಿಲ್ಲಾನಿ (1085) ಮತ್ತು ಅಬುಲ್ ಮ ಅಲಿ ಮತ್ತು ಆ ಕಾಲದ ದೈವಶಾಸ್ತ್ರವೇತ್ತರಲ್ಲಿ ಶ್ರೇಷ್ಠತಮನೆಂದು ಪರಿಗಣಿತನಾಗಿ ಅಲ್‌ಗಜ್ಜಾಲಿಯ ಗುರುವಾಗಿದ್ದ ಇಮಾಂ ಅಲ್-ಹರ್‌ಮಾಯನ್ ಅಲ್-ಜುವೈನಿ (1085). ಇವರಲ್ಲದೆ, ಆ ಕಾಲದಲ್ಲಿ ಪ್ರಚಲಿತವಾಗಿದ್ದ ಎಲ್ಲ ಮತ ಮತ್ತು ದರ್ಶನ ಪ್ರಕಾರಗಳನ್ನೂ ಇಸ್ಲಾಮಿನ ಸಮಸ್ತ ಪಂಥಗಳನ್ನೂ ತಮ್ಮ ಕಿತಾಬ್ ಅಲ್-ಮಿಲಾಲ್‌ವಾನ್‌ನಿಹಾಲ್ ಎಂಬ ಮಹಾಗ್ರಂಥದಲ್ಲಿ ವಿವರಿಸಿರುವ ಅಬುಲ್ ಫಾತ್ ಅಷ್ ಷರಸ್ತಾನಿ (1153) ಬಾಗ್ದಾದಿಗೆ ಬಂದ ವಿದ್ವಾಂಸರ ಪೈಕಿ ಅತ್ಯಂತ ಪ್ರಭಾವಶಾಲಿ.

ಇದೇ ಕಾಲದಲ್ಲಿ ಅತೀಂದ್ರಿಯ ಜ್ಞಾನದಲ್ಲಿ (ಅನುಭಾವ) ಶ್ರದ್ಧೆಯುಳ್ಳ ಅಲ್-ಹಾರೀತ್ ಅಲ್-ಮುಹಾಸಿಬಿ(828), ಧುನ್ ನನ್ ಅಲ್-ಮಿಸ್ರಿ (859), ಅಲ್ ಜುನೈದ್ (900) ಮುಂತಾದವರು ಕಲಾಂ ಅನ್ನೂ ಮತಾಚರಣೆಯ ಬಾಹ್ಯನಿಷ್ಠೆಯನ್ನೂ ಖಂಡಿಸಲು ತೊಡಗಿದ್ದರು. ಇವರು ನೀತಿಗಳ ವಿಷಯದಲ್ಲಿ ಸಣ್ಣ ಸಣ್ಣ ಪ್ರಬಂಧಗಳನ್ನು ರಚಿಸಿದುದಲ್ಲದೆ ತಪಸ್ವೀಜೀವನವನ್ನು ನಡೆಸಿ ತಮ್ಮ ಆತ್ಮಗಳನ್ನು ಪರಿಪಕ್ವಗೊಳಿಸಲು ಪ್ರಯತ್ನಿಸಿದರು. ಅಲ್-ಕುಷೈರಿ (1072) ಬರೆದ ಪ್ರಸಿದ್ಧವಾದ ರಿಸಾಲ ಎಂಬ ಗ್ರಂಥ ಈ ಪ್ರವೃತ್ತಿಗಳ ಸಾರಾಂಶವನ್ನೂ ಕೊಡುತ್ತದೆ. ಈ ಕಾಲದ ಅಲ್-ತಸವ್ವುಫ಼ನ (ಅನುಭಾವ) ಪ್ರತಿನಿಧಿಗಳಲ್ಲಿ ಅತಿ ಪ್ರಮುಖರಾರೆಂದರೆ, ಅಲ್-ಕದರಿಯ ಎಂಬ ವರ್ಗವೊಂದನ್ನು ಸ್ಥಾಪಿಸಿದ ಷೇಕ್ ಅಬ್ದುಲ್ ಖಾದರ್ ಅಲ್-ಗಿಲನಿ, ಷಿಹಾಬುದ್ದೀನ್ ಉಮರ್ ಅಸ್-ಸಹ್ರವರ್ದಿ (1234) ಮತ್ತು ಮುಹಿಯುದ್ದೀನ್ ಇಬ್ನ್ ಅರಾಬಿ (1240). ಷೇಕ್ ಅಬ್ದುಲ್ ಖಾದರ್ ಮತ ನಿಷ್ಠೆಗಳ ತಳಹದಿಯ ಮೇಲೆ ತನ್ನ ಪಂಥವನ್ನು ರೂಪಿಸಿರುವ ತಪಸ್ವಿ. ಆದರೆ ಈ ಕಾಲದ ಸೂಫೀ ದಾರ್ಶನಿಕರಲ್ಲಿ ಅತ್ಯಂತ ಶ್ರೇಷ್ಠನಾದ ಅಲ್-ಗಜ್ಜಾಲಿ (1111) ಎಂಬಾತ ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಅನೇಕ ಪಂಥಗಳಲ್ಲಿನ ಪರಸ್ಪರ ವಿರೋಧವನ್ನು ತೀವ್ರವಾಗಿ ವ್ಯಾಸಂಗಮಾಡಿ, ಬಹಳ ಕೌಶಲದಿಂದ ಅಧ್ಯಾತ್ಮ ಜವನ ನಡೆಸುವುದೇ ಎಲ್ಲ ದೈವಶಾಸ್ತ್ರಗಳ ಅಂತಿಮ ಫಲವೆಂಬುದನ್ನು ಕಂಡುಕೊಂಡ, ಈತನ ಪ್ರಖ್ಯಾತವಾದ ಇಹ್ಯ ಅಲ್-ಉಲೂಮುದ್ದೀನ್ ಎಂಬ ಗ್ರಂಥ ಆತನ ಸಿದ್ಧಾಂತದ ಸಾರವನ್ನು ಸಮಗ್ರವಾಗಿ ಕೊಡುತ್ತದೆ. ಅದರಲ್ಲಿ ಇಸ್ಲಾಮಿನ ಧ್ಯೇಯಕ್ಕೆ ಸೂಫೀತತ್ತ್ವದ ಆಧ್ಯಾತ್ಮಿಕತೆ ವ್ಯಾಪಿಸಿದೆ.

ಈ ಶಾಖೆಯ ಪಶ್ಚಿಮ ಭಾಗದ ಪ್ರತಿನಿಧಿ ಇಬ್ನ್ ಹಜಮ್ (1063) ಆಲ್ ಮಿಲಾಲ್ ಅಲ್ ನಿಹಾಲ್ ಎಂಬ ಗ್ರಂಥದಲ್ಲಿ ಮುಸಲ್ಮಾನ ಮತ್ತು ಇತರ ಮತ ಪಂಥಗಳ ವಿಷಯದಲ್ಲಿ ಆತ ತೋರಿಸಿರುವ ತೀವ್ರ ಅಸಹನೆ ಅನೇಕರಿಗೆ ಅಸಮಾಧಾನ ತಂದಿದೆ.

**ಭಾಷಾವಿಜ್ಞಾನ :** ಅರಬ್ಬರಲ್ಲದವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ, ಮುಸ್ಲಿಮ್ ರಾಷ್ಟ್ರಗಳ ದೂರಪ್ರಾಂತ್ಯಗಳಲ್ಲಿ ಅರಬ್ಬರು ನೆಲೆಸಲು ಮೊದಲು ಮಾಡಿದಾಗ, ಭಾಷೆ ಬಾರದ ಜನ ಕುರಾನನ್ನು ತಪ್ಪಿಲ್ಲದಂತೆ ಓದಲು ಬೇಕಾದ ಶಾಸ್ತ್ರ ಸಹಾಯವನ್ನೊದಗಿಸುವ ಕೆಲಸ ಮೊದಲಾಯಿತು. ಸ್ಪೇನಿನಂಥ ಪಾಶ್ಚಾತ್ಯ ಇಸ್ಲಾಮ್ ಪ್ರದೇಶಗಳಲ್ಲಿ ಅಲ್-ದನಿ ಮತ್ತು ಅಲ್-ಷಾತಿಬಿ ಎಂಬುವರು ಧ್ವನಿ ಜ್ಞಾನ, ಕುರಾನಿನ ಓದುಗಾರಿಕೆಗಳ ಮೇಲೆ ಗ್ರಂಥಗಳನ್ನು ಬರೆದರು.

ಅಲಿ ಎಂಬ ಕಲೀಫನ ನಿರ್ದೇಶನದಂತೆ ಅಬುಲ್ ಅಸವಾದ್ ಅದ್ ದು ಅಲಿ (685) ವ್ಯಾಕರಣದ ಮೂಲತತ್ತ್ವಗಳನ್ನು ಮೊದಲು ವಿಮರ್ಶಿಸಿದ. ಕೂಫ ಮತ್ತು ಬಸ್ರ ಎಂಬ ಇರಾಕಿನ ಎರಡು ಪಟ್ಟಣಗಳಲ್ಲಿ ಅರಬ್ಬೀ ಭಾಷೆಯ ವ್ಯಾಕರಣಶಾಸ್ತ್ರದ ವ್ಯಾಸಂಗ ನಡೆಯುತ್ತಿತ್ತು. ಭಾಷೆಯ ಸೂತ್ರ, ಜಾಯಮಾನಗಳ ವಿಚಾರದಲ್ಲಿದ್ದ ದೃಷ್ಟಿಭೇದದ ದೆಸೆಯಿಂದ ಅಲ್ಲಿ ಎರಡು ವ್ಯಾಕರಣ ಪಂಥಗಳು ಏರ್ಪಟ್ಟವು. ವೈಯಾಕರಣರಲ್ಲಿ ಅತ್ಯಂತ ಪ್ರಸಿದ್ಧರಾದವರು; ಛಂದಶ್ಶಾಸ್ತ್ರ ಪ್ರವರ್ತಕ ಖಲೀಲ್-ಬ್-ಅಹಮದ್(786), ಅಲ್ ಕಿತಾಬ್‌ನ ಕರ್ತೃ ಅಬು ಬಿಷ್ರ್ ಅಮ್ರ್ ಉ ಥ್‌ಮನ್ ಸಿಬ್‌ವೈಯ (796).

ಭಾಷೆಗೂ ನಿಘಂಟಿಗೂ ಸಂಬಂಧಪಟ್ಟ ವಿಷಯಗಳನ್ನು ಬೆದೂಯಿನ್ ಜನರಿಂದ ಶೇಖರಿಸಲಾಯಿತು. ಕಾಡುಮೃಗಗಳು, ಕುದುರೆಗಳು, ಒಂಟೆಗಳು, ಮಳೆ ಮತ್ತು ಮನುಷ್ಯನ ವಾಸಸ್ಥಾನಗಳು-ಇತ್ಯಾದಿ ವಿಷಯಗಳ ಮೇಲಿನ ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಲಾಯಿತು. ಈ ಪುಸ್ತಕಗಳನ್ನು ಅವಕ್ಕಿಂತಲೂ ದೊಡ್ಡವೂ ಕ್ರಮಬದ್ಧವೂ ಆದ ನಿಘಂಟುಗಳಲ್ಲಿ ಸೇರಿಸಿಕೊಳ್ಳಲಾಯಿತು. ಬಸ್ರ ಪಂಥಕ್ಕೆ ಸೇರಿದ ಅಬುಬಕರ್ ಇಬ್ನ್ ದುರೈದನು ಜಂಹರ ಎಂಬ ದೊಡ್ಡ ಪ್ರಮಾಣದ ನಿಘಂಟನ್ನೂ ಶಬ್ದಗಳ ಮೂಲರೂಪ, ನಿಷ್ಪನ್ನರೂಪಗಳನ್ನು ವಿವರಿಸುವ ಕಿತಾಬ್-ಅಲ್-ಇಷ್ತಿಕಾಕ್ ಎಂಬ ಗ್ರಂಥವನ್ನು ರಚಿಸಿದ ಈ ವರ್ಗಕ್ಕೆ ಸೇರಿದವನಾದ ಅಲ್ ಮುಬರ್ರಾದ್ (898) ಭಾಷೆ ಮತ್ತು ಸಾಹಿತ್ಯಗಳನ್ನಲ್ಲದೆ ಪ್ರಾಚೀನ ಇತಿಹಾಸ ಮತ್ತು ಸಂಪ್ರದಾಯಗಳನ್ನೂ ಒಳಗೊಂಡಿರುವ ಕಿತಾಬ್-ಅಲ್-ಕಮೀಲ್ ಎಂಬ ವಿಶ್ವಕೋಶವನ್ನು ರಚಿಸಿದ. ಮತ್ತೊಂದು ಕಡೆಯಲ್ಲಿ ಕೂಫ ನಗರದ ಪಂಥವನ್ನು ಪ್ರತಿನಿಧಿಸುವ ಕಿಸಾಯಿ, ಫರ್ರ, ಇಬ್ನ್ ಅಸ್ ಸಿಕ್ಕಿತ್ ಶಾಸ್ತ್ರಜ್ಞರ ಇಸ್‌ಲಾಹ್ ಅಲ್ ಮನ್ತಿಕ್, ಕಿತಬ್ ಅಲ್ ಅಲ್ಫಿಜ್ ಕೃತಿಗಳು ಮುಖ್ಯವಾಗಿವೆ. ಅಲ್-ಮುಬರ್ರಾದ್‌ನಷ್ಟೇ ಮುಖ್ಯನಾದ ಥ ಅಲಬ್ (903) ತನ್ನ ಕಿತಾಬ್-ಅಲ್-ಫಸೀಷ್ ಗ್ರಂಥದಿಂದ ಪ್ರಸಿದ್ಧನಾದ. ಈತನ ಶಿಷ್ಯ ಇಬ್ನ್ ಅಲ್-ಅನ್‌ಬರಿ ವಿರೋಧಾರ್ಥಕ ಶಬ್ದಗಳ ಮೇಲೆ ಒಂದು ಪುಸ್ತಕವನ್ನು ಬರೆದ. ದಿವಾನಗಳನ್ನು ಸಂಗ್ರಹಿಸಿದ; ಅವುಗಳ ಮೇಲೆ ವ್ಯಾಖ್ಯಾನ ಬರೆದ. ಬಾಗ್ದಾದಿನಲ್ಲಿ ಇಬ್ನ್-ಖಲವೈಯ, ಇಬ್ನ್‌ಅಬ್ಬಾದ್, ಇಬ್ನ್ ಫಾರಿಸ್ ಎಂಬುವರು ಗಣ್ಯರಾಗಿದ್ದರು. ಸ್ಪೇನಿನಲ್ಲಿ ಭಾಷಾಶಾಸ್ತ್ರವನ್ನು ಪ್ರಾರಂಭಗೊಳಿಸಿದವ ಅಬು ಅಲಿ ಅಲ್-ಕಾಲಿ (966). ಆತನ ಅಮಾಲಿ ಎಂಬ ಪುಸ್ತಕ ವಿಷಯದಲ್ಲೂ ಉದ್ದೇಶದಲ್ಲೂ ಅಲ್-ಮುಬರ್ರಾದಾನ ಕಾಮಿಲ್ ಎಂಬ ಗ್ರಂಥವನ್ನು ಹೋಲುತ್ತದೆ. ಇಬ್ನ್‌ಸಿದ (1065) ಎಂಬಾತ ಬರೆದ ಅಲ್-ಮುಖಸ್ಸಾಸ್ ಎಂಬ ಗ್ರಂಥ ಸ್ಪೇನ್ ದೇಶದಲ್ಲಿ ಬರೆದ ಭಾಷಾಶಾಸ್ತ್ರ ಗ್ರಂಥದಲ್ಲಿ ಬಹಳ ದೊಡ್ಡದು. ನಿಘಂಟುಗಳ ರಚನೆಯಲ್ಲಿ ಇಂಥ ಪ್ರಯತ್ನಗಳಿಗೆ ಕಿರೀಟಪ್ರಾಯವಾಗಿರುವುದು ಅಲ್-ಚೌಹರಿಯ ಸಹಾಹ್ (1002) ಎಂಬ ಪುಸ್ತಕ. ಈಜಿಪ್ಟಿನ ವಿದ್ವಾಂಸ ಇಬ್ನ್ ಮನ್‌ಜುರ್ (1311) ಈ ಗ್ರಂಥಕ್ಕೆ ಇತರ ನಿಘಂಟುಗಳ ವಿಷಯಗಳನ್ನು ಅಳವಡಿಸಿ ನಿಸಾನ್ ಅಲ್ ಅರಬ್ ಎಂಬ ಹೆಸರಿನಲ್ಲಿ 20 ಸಂಪುಟಗಳಿಗೆ ವಿಸ್ತರಿಸಿದ. ವ್ಯಾಕರಣ ಮತ್ತು ಭಾಷಾಶಾಸ್ತ್ರಗಳಲ್ಲಿ ಮತ್ತೊಬ್ಬ ಗಣ್ಯವ್ಯಕ್ತಿ ಜಮಕ್ಷರಿ. ಈತ ಬರೆದ ಫೈಕ್ ನಿಘಂಟು, ವ್ಯಾಕರಣಕ್ಕೆ ಕೈಪಿಡಿಯೆನಿಸಿರುವ ಅಲ್-ಮುಫಾಸ್ಸಲ್‌ಗಳು ಈಗಲೂ ಜನಪ್ರಿಯವಾಗಿವೆ. ಆದರೆ ಇಬ್ನ್‌ಮಾಲಿಕ್ಸ್‌ನ ಅಲ್ಫಿಯ ಎಂಬುದು ಅರಬ್ಬೀ ಭಾಷೆಯನ್ನು ಕಲಿಸುವೆಡೆಯಲ್ಲೆಲ್ಲ ವ್ಯಾಕರಣಕ್ಕೆ ಪಠ್ಯ ಪುಸ್ತಕವಾಗಿದೆ.

**ಗದ್ಯ ಮತ್ತು ಪದ್ಯ ಸಾಹಿತ್ಯ :** ಅಬ್ಬಾಸಿದ್ ವಂಶದವರು ಬೌದ್ಧಿಕ ಕಾರ್ಯ ಕಲಾಪಗಳಿಗೆ ಕೊಡುತ್ತಿದ್ದ ಪ್ರೋತ್ಸಾಹ ಪದ್ಯಕ್ಕೂ ದೊರೆಯಿತು. ವಿಧರ್ಮಿಗಳ ಕೈಸಿದನ ಮಾದರಿಯ ಒಂದೇ ಪಡಿಯಚ್ಚಿನ ರೂಪಗಳ ಶೈಲಿಯನ್ನು ಮುಂದುವರಿಸಿಕೊಂಡು ಬಂದುದರ ಜೊತೆಗೆ ಹೊಸ ಅಂಶಗಳನ್ನೂ ಪದ್ಯಕ್ಕೆ ಅಳವಡಿಸಲಾಯಿತು. ಕವಿತಾಶೈಲಿ ಇರಾನಿನವರ ಸಂಪರ್ಕದಿಂದುಂಟಾದ ಹೊಸ ಪರಿಸ್ಥಿತಿಯಲ್ಲಿ ಲಾಲಿತ್ಯದ ಕಡೆಗೆ ತಿರುಗಿ ಮೃದುವಾಗಿದ್ದರೂ ಪದಗಳ ಜೋಡಣೆ, ಪದ್ಯದ ಶೈಲಿ ಪ್ರಾಚೀನ ಪ್ರೌಢಮಾರ್ಗವನ್ನೇ ಹಿಡಿದಿತ್ತು. ಪರಕೀಯರ ಪ್ರಭಾವಗಳಿಂದ ಪ್ರವೃತ್ತವಾಗಿದ್ದ ಮತವಿರುದ್ಧ ಚಟುವಟಿಕೆಗಳು ಅನೇಕ ಕವಿಗಳ ಮೇಲೆ ತಮ್ಮ ಪ್ರಭಾವವನ್ನು ಬಹಳವಾಗಿ ಬೀರಿದವು. ಅವರಲ್ಲಿ ಅನೇಕರು ಜಿಂಡಿಕ್ (ಪಾಷಂಡಿ) ಎನ್ನಿಸಿಕೊಂಡಿದ್ದರು. ಇರಾನಿನ ದ್ವೈತಸಿದ್ಧಾಂತದಿಂದ ಪ್ರಭಾವಿತರಾದ ಕವಿಗಳೆಂದರೆ, ಬಾಷ್ಷಾರ್ ಇಬ್ನ್ ಬುರ್ದ್ (783) ಮತ್ತು ಸಲೀಹ್ ಇಬ್ನ್ ಅಬ್ದುಲ್ ಕುದ್ದುಸ್(813), ಕೆಲವು ಹಿಂದಿನ ಕವಿಗಳ ಜೊತೆಗೆ, ಆ ಕಾಲದಲ್ಲಿ ಬಹು ಪ್ರಖ್ಯಾತರಾದ ಕವಿಗಳೆಂದರೆ, ಅಬು ನುವಾಸ್, ಅಬುಲ್ ಅತಾಹಿಯ, ಅಬು ತಮ್ಮಮ್ ಮತ್ತು ಅಲ್-ಬಹ್‌ತೂರಿ. ಅಬು ನುವಾಸ್(810) ಬಹು ಚಪಲ ಮತ್ತು ಸ್ವೇಚ್ಛಾಪ್ರವೃತ್ತಿಯುಳ್ಳ ಕವಿಯಾದರೂ ವೃದ್ಧಾಪ್ಯದಲ್ಲಿ ಸಾರವತ್ತಾದ ವಿಷಯಗಳ ಕಡೆಗೆ ತನ್ನ ಮನಸ್ಸನ್ನು ತಿರುಗಿಸಿದ. ಆತನ ಪಾನಗೀತೆಗಳೂ ಪ್ರಣಯ ಪದ್ಯಗಳೂ ಅತ್ಯಂತ ಖ್ಯಾತಿಗಳಿಸಿವೆ. ಮತ್ತೊಂದು ಕಡೆಯಲ್ಲಿ ಅಬುಲ್-ಅತಾಹಿಯ (828) ಜುಹ್ದ್‌ಗಳನ್ನು (ದೈವಭಕ್ತಿ ಮತ್ತು ಸದಾಚಾರ) ಕುರಿತ ಪದ್ಯರಚನೆಯಲ್ಲಿ ನಿರತನಾಗಿ ಸರಳವೂ ಬೋಧಕವೂ ಆದ ಶೈಲಿಯಲ್ಲಿ ನೀತಿಪದ್ಯಗಳನ್ನು ರಚಿಸಿದ.

ಪ್ರಾಚೀನ ಸಂಪ್ರದಾಯವನ್ನು ವಿರೋಧಿಸಿದ ಸ್ವೈರ ಪ್ರವೃತ್ತಿ ಅಬ್ದುಲ್ಲ ಇಬ್ನ್ ಅಲ್ ಮುತಾಜ್ಜ್ ಎಂಬ ಸುಸಂಸ್ಕೃತ ರಾಜಪುತ್ರನ ಕವಿತಾ ಕೌಶಲದ ವಿಶಿಷ್ಟಗುಣ. ಆತನೇ ಬರೆದಿರುವ ಅಲ್-ಮುತದಾದ್ ಎಂಬ ಕಲೀಫನನ್ನು ಕುರಿತ 419 ಪದ್ಯಗಳ ದೀರ್ಘಕವಿತೆ ಪರ್ಷಿಯನ್ ಮುತ್‌ನವಿಯ ಮಾದರಿಯಲ್ಲಿದೆ.

ಪ್ರಾಚೀನ ಕಸೀದ ಶೈಲಿಯನ್ನು ಉಳಿಸಿಕೊಂಡು ಬಂದ ಕವಿಗಳ ಪೈಕಿ ಅಬು ತಮ್ಮಮ್, ಅಲ್-ಬುಹ್‌ತರಿ ಗಣ್ಯರು. ಇಬ್ಬರೂ ಸಿರಿಯದವರು. ಬಾಗದಾದಿಗೆ ಬಂದು ನೆಲೆಸಿ ಆಸ್ಥಾನಕವಿಗಳಾಗಿ ಬಾಳಿದರು. ಒಳ್ಳೆಯ ಶೈಲಿಯ ಪ್ರಶಂಸಾ ಪದ್ಯಗಳನ್ನು ಬರೆಯುವುದರೊಂದಿಗೆ ಇಬ್ಬರೂ ಬೇರೆ ಬೇರೆಯಾಗಿ ಅರೇಬಿಯದ ಪ್ರಾಚೀನ ಕವಿಗಳ ಪದ್ಯಸಂಗ್ರಹವೊಂದನ್ನು ಸಂಕಲಿಸಿದರು. ಅದಕ್ಕೆ ಅಲ್-ಹಮಾಸ ಎಂದು ಹೆಸರು. ಅಬು-ತಮ್ಮಮ್‌ನ ಸಂಗ್ರಹವೇ ಮಿಕ್ಕೆಲ್ಲ ಸಂಗ್ರಹಗಳಿಗಿಂತಲೂ ಸರ್ವಶ್ರೇಷ್ಠವಾದುದೆಂದು ಪರಿಗಣಿತವಾಗಿದೆ. ಸ್ಪೇನ್ ದೇಶದಲ್ಲಿ ಹೊಸ ಕವಿತಾ ಪ್ರಕಾರಗಳು ಹುಟ್ಟಿದವು. ಅರಬ್ಬರ ಹಾಡುಗಬ್ಬದ ಸಾಹಿತ್ಯ ಸ್ಪೇನ್ ಒಂದರಲ್ಲೇ ಅಲ್ಲದೆ ಉತ್ತರ ಆಫ್ರಿಕದಲ್ಲೂ ಸಿಸಿಲಿಯಲ್ಲೂ ಅಭಿವೃದ್ಧಿ ಹೊಂದಿತು.

ಅಬ್ಬಾಸಿದ್ ವಂಶದವರ ಕಿಲಾಫತ್ತು ಒಡೆದು ಹೋದ ಮೇಲೆ, ಇಸ್ಲಾಂ ಸಾಮ್ರಾಜ್ಯದ ಪ್ರಾಂತ್ಯಗಳಲ್ಲಿ ಬೇರೂರಿದ್ದ ಸಣ್ಣ ಸಣ್ಣ ರಾಜಕುಲಗಳ ಆಸ್ಥಾನಗಳು ಬೌದ್ಧಿಕ ಕಾರ್ಯಕಲಾಪಗಳಿಗೆ ಕೇಂದ್ರವಾದವು. ಅಲೆಪೊನಲ್ಲಿ ಸೈಫುದ್ದೌಲ ಎಂಬಾತನ ಹಮ್‍ದೋಸಿದ್ ಆಸ್ಥಾನ ಸಾಹಿತ್ಯಕ್ಕೆ ಅತ್ಯಂತ ಶ್ರೇಷ್ಠ ಕೇಂದ್ರವಾಗಿತ್ತು. ಅಲ್ಲಿ ಇದ್ದ ಅಲ್–ಮುತನಬ್ಬಿ (965) ಎಂಬ ಖ್ಯಾತ ಕವಿಯ ಕವಿತೆಗಳಿಗೆ ಸತತವಾಗಿ ಮೆಚ್ಚುಗೆ, ಮನ್ನಣೆ ದೊರೆತಿದೆ. ಅವುಗಳನ್ನು ಅಭ್ಯಾಸ ಮಾಡುವುದೂ ಟೀಕೆ ಟಿಪ್ಪಣಿಗಳನ್ನು ಬರೆಯುವುದೂ ಎಲ್ಲ ಕಾಲದಲ್ಲೂ ನಡೆದಿದೆ. ಗ್ರೀಕರೊಡನೆ ನಲವತ್ತು ಸಲ ಕಾದಿದ್ದ ಅಲೆಪೊನ ದೊರೆ ಸೈಫುದ್ದೌಲನ ಕದನಗಳನ್ನು ಕುರಿತು ಅನೇಕ ಹಾಡುಗಳನ್ನು ಈತ ತನ್ನ ಗೆಳೆಯನೊಂದಿಗೆ ರಚಿಸಿದ್ದಾನೆ.

ಕುರುಡನಾದ ಅಲ್ ಮಅರ್ರಿ (1054) ಎಂಬ ಕವಿಯ (ನೋಡಿ– ಅಬುಲ್–ಅಲಾ–ಅಲ್––ಮ–ಅರ್ರಿ) ತಲೆಮಾರಿಗೆ ಪ್ರೌಢಶೈಲಿಯ ಕವಿತಾ ಪ್ರಕಾರ ಕೊನೆಗೊಂಡಿತು. ಈ ಕವಿ ಇಸ್ಲಾಮ್ ಸಾಹಿತ್ಯದಲ್ಲಿನ ವೈಜ್ಞಾನಿಕ ವಿಚಾರಗಳನ್ನರಿತಿದ್ದನಲ್ಲದೆ ಸಿರಿಯ ಬಾಗದಾದ್‍ಗಳಲ್ಲಿ ಗ್ರೀಕ್ ಮತ್ತು ಭಾರತದ ದರ್ಶನಗಳ ವಿಸ್ತಾರವಾದ ಪಾಂಡಿತ್ಯ ಸಂಪಾದಿಸಿಕೊಂಡಿದ್ದ. ಆತ ತನ್ನ ರಸೈಲ್ ಎಂಬ ಸಾಹಿತ್ಯ ಕಪತ್ರ–ವ್ಯವಹಾರಗಳಿಗಾಗಲ್ಲದೆ, ಸಖ್ತ್ ಅಲ್–ಜಂಡ್ ಮತ್ತು ಲುಜುಂ ಮ ಲ ಯಲ್‍ಜಂ ಎಂಬ ಎರಡು ಕವಿತಾಗ್ರಂಥಗಳಿಗಾಗಿಯೂ ಪ್ರಖ್ಯಾತನಾಗಿದ್ದಾನೆ. ಈತನ ವಿಚಾರಸರಣಿಯಲ್ಲಿ ಬೌದ್ಧಮತದ ಪ್ರಭಾವಗಳೂ ಸಹ ಗೋಚರಿಸುತ್ತವೆ.

ಅಬ್ಬಾಸಿದ್ ಕಲೀಫರ ಪರ್ಷಿಯನ್, ಗ್ರೀಕ್ ಮತ್ತು ಸಿರಿಯನ್ ಭಾಷೆಗಳಿಂದ ಅರಬ್ಬೀ ಭಾಷೆಗೆ ಗ್ರಂಥಗಳನ್ನು ತರ್ಜುಮೆ ಮಾಡಲು ಕೊಟ್ಟ ಪ್ರೋತ್ಸಾಹದ ಫಲವಾಗಿ ಸಾಹಿತ್ಯದಲ್ಲಿ ಉತ್ತಮ ಗದ್ಯದ ವ್ಯವಸಾಯಕ್ಕೆ ಹೆಚ್ಚಾಗಿ ಅನುವು ದೊರೆಯಿತು. ಪರ್ಷಿಯನ್ನರ ದಾರ್ಶನಿಕ ಗ್ರಂಥಗಳಿಂದ ಹಗುರವಾದ ಸಾಹಿತ್ಯ ಭಾಗವನ್ನೂ ಗ್ರೀಕಿನಿಂದ ನಿಸರ್ಗ ವಿಜ್ಞಾನವಿಷಯಗಳನ್ನೂ ಭಾರತದಿಂದ ಗಣಿತವನ್ನೂ ಭಾಷಾಂತರ ಮಾಡುವ ಕೆಲಸ ಚುರುಕಾಯಿತು. ಸಂಸ್ಕೃತಭಾಷೆಯ ಪಂಚತಂತ್ರವೆಂಬ ಪುಸ್ತಕದ ಪಹ್ಲವೀಭಾಷೆಯ ಪಾಠವನ್ನು ಕಲೀಲ ವಾ ದಿಮ್ನ ಎಂಬ ಶಿರೋನಾಮೆಯಲ್ಲಿ ಇಬ್ನ್ ಅಲ್–ಮುಕಪ್ಪ (757) ಅನುವಾದ ಮಾಡಿದ. ಆತ ಕುದೈನಾಮ ಎಂಬ ಪರ್ಷಿಯಾದ ಇತಿಹಾಸ ಗ್ರಂಥವನ್ನು ಭಾಷಾಂತರಿಸಿದ್ದಾನೆ. ಕಲಾತ್ಮಕ ಗದ್ಯಕ್ಕೆ ನೈಜತಮ ಪ್ರತಿನಿಧಿಯಾದ ಬಸ್ರ ನಗರದ ಅಲ್–ಜಹೀಜ್‍ನ (862) ಕಿತಾಬ್–ಅಲ್–ಹಯವಾನ್, ಕಿತಾಬ್–ಅಲ್ ಬಯನ್–ವಲ್–ತ್ಯಾಬಿನ್, ಕಿತಾಬ್–ಅಲ್–ಬುಖಾಲ ಎಂಬ ಗ್ರಂಥಗಳು ದೇಸೀ ನುಡಿಗಟ್ಟುಗಳಿಗೂ ಸಂಸ್ಕೃತಿ, ಸಾಹಿತ್ಯಗಳ ಇತಿಹಾಸಕ್ಕೂ ಭಂಡಾರವೆನಿಸಿವೆ. ಆತ ಒಳ್ಳೆ ಚುರುಕುಬುದ್ಧಿಯ ಬರೆಹಗಾರನಲ್ಲದೆ ಮುಂದಿನ ತಲೆಮಾರುಗಳ ಮೇಲೆ ತುಂಬ ಪ್ರಭಾವ ಬೀರಿರುವ ಗದ್ಯಶೈಲಿಯ ಅಧಿನಾಯಕನೂ ಆಗಿದ್ದಾನೆ. ಅಲ್–ಜಹೀಜ್‍ಗೆ ಕಿರಿಯ ಸಮಕಾಲೀನನಾದ ಇಬ್ನ್ ಕುತೈಬ (883) ಭಾಷಾಶಾಸ್ತ್ರಜ್ಞ ಮತ್ತು ಚರಿತ್ರೆಯನ್ನು ತಿಳಿದವ. ಅದಬ್–ಅಲ್–ಕಲಿಬ್ ಎಂಬ ಪುಸ್ತಕದಲ್ಲಿ ಆತ ಭಾಷೆ ಮತ್ತು ವ್ಯಾಕರಣಗಳ ಮುಖ್ಯ ಸಮಸ್ಯೆಗಳನ್ನು ಸಂಗ್ರಹಿಸಿದ್ದಾನೆ. ಯಾವ ಬರೆಹಗಾರನಿಗಾದರೂ ಇದರ ತಿಳಿವಳಿಕೆ ಅವಶ್ಯ. ಆತನ ಕಿತಾಬ್–ಅಲ್–ಮಾಅರಿಫ್ ಮತ್ತು ಉಯುನ್ ಅಲ್–ಅಕಬರ್ ಎಂಬ ಗ್ರಂಥಗಳಲ್ಲಿ ಐತಿಹಾಸಿಕ, ರಾಜಕೀಯ ಮತ್ತು ಸಾಹಿತ್ಯಕ ವಿಷಯಗಳನ್ನು ಕುರಿತು ಬರೆದಿದ್ದಾನೆ. ಇವನ ತರುವಾಯ ಕಲಾತ್ಮಕ ಗದ್ಯದ ಬರೆವಣಿಗೆಯಲ್ಲಿ ನಿಪುಣನಾಗಿ ದೊಡ್ಡವನೆನಿಸಿದವನೆಂದರೆ ಅಬುಲ್ ಅಲಾ ಅಲ್–ಮಅರ್ರಿ.

ಕಲಾತ್ಮಕ ಗದ್ಯದಲ್ಲಿ ವಿಧವಿಧವಾದ ವಿಷಯಗಳ ಮೇಲೆ ಬರೆದ ಅನೇಕ ಕೃತಿಗಳ ಜೊತೆಗೆ ಸಾಮಾನ್ಯ ವಿದ್ಯಾಭ್ಯಾಸಕ್ಕೆ ತಕ್ಕ ವಿಷಯಗಳನ್ನು ಒದಗಿಸುವ ವಿಶ್ವಕೋಶದಂಥ ಕೃತಿಗಳೂ ಬಳಕೆಗೆ ಬಂದುವು. ಅಂಥ ಕೃತಿಗಳ ಪೈಕಿ ಸ್ಪೇನ್ ದೇಶದವನಾದ ಇಬ್ನ್ ಅಬ್ದಾರಬ್ಬಿಹಿ (929) ಬರೆದ ಇಕ್ದ್–ಅಲ್–ಫರೀದ್ ಎಂಬುದೊಂದು. ಅದರಲ್ಲಿ ಇಸ್ಲಾಮಿಗೆ ಹಿಂದಿನ ಚರಿತ್ರೆ ಮತ್ತು ಇಸ್ಲಾಮಿನ ಚರಿತ್ರೆ, ಕವಿತೆ, ಛಂದಸ್ಸು, ಗಾದೆಗಳು, ಸಾಹಿತ್ಯಕ ಮತ್ತು ಐತಿಹಾಸಿಕ ಪ್ರಸಂಗಗಳು ಇತ್ಯಾದಿಗಳನ್ನು ಕುರಿತ ಇಪ್ಪತ್ತೈದು ಅಧ್ಯಾಯಗಳಿವೆ. ಅದೇ ಮಾದರಿಯ ಆದರೆ ಆ ಕಾಲಕ್ಕೀಚಿನ ಗ್ರಂಥಗಳಾವುವೆಂದರೆ ರಫೀಬ್–ಅಲ್–ಇಸಫ್‍ಹಾನಿ (1108) ಎಂಬುವನ ಮುಹದರತ್–ಅಲ್–ಉದಾಬ ಮತ್ತು ಅಜ್–ಜಮಾಕ್ಷರಿಯ (1193) ರಬಿ–ಅಲ್–ಅಬ್ರಾರ್ ಎಂಬುವು.

ರಾಜ್ಯದ ಸರ್ಕಾರಿ ಪತ್ರಗಳು ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಪಟ್ಟ ಪತ್ರವ್ಯವಹಾರಗಳು ಮುಂತಾದುವುಗಳಿಗೆ ಕಲಾತ್ಮಕ ಗದ್ಯ ಅವಶ್ಯವೆನಿಸಿ ಅದರ ಬೆಳೆವಣಿಗೆ ಹೆಚ್ಚಿತು. ಹಿಂದಿನ ಕಾಲದ ಸರಳಶೈಲಿಗೆ ಬದಲಾಗಿ ಆಲಂಕಾರಿಕ ಕಲ್ಪನೆಗಳು, ಸಾಜಗಳನ್ನು (ಪ್ರಾಸಬದ್ಧ ಗದ್ಯ) ಹೇರಳವಾಗಿ ಬಳಸುವುದು ಬಳಕೆಗೆ ಬಂತು. ಇಂಥ ಸರ್ಕಾರಿ ಬರೆವಣಿಗೆಗಳನ್ನು ಪ್ರತಿನಿಧಿಸುವವರಲ್ಲಿ ಮುಖ್ಯರಾದವರು. ಹಿಲಾಲ್–ಅಸ್ಸ್‌ಸಬಿ(994), ಅಲ್–ಖವರಾಜ್‍ಮಿ(ಸು.1000), ಅಲ್–ಮ–ಅರ್ರಿ, ಅಲ್–ಕಾದಿ ಅಲ್ ಫದಿಲ್(1199), ಇಬ್ನ್ ಅಲ್ –ಅಥಿರ್ (1239).

ಈ ಕಲಾಪೂರ್ಣ ಲೇಖನಗಳು (ಮಾಕಮಾ) ವಿಚಿತ್ರರೂಪದ ಸಾಹಿತ್ಯ ಪ್ರಕಾರದ ಉಗಮಕ್ಕೆ ಕಾರಣವಾದವು. ಮಾಕಮಾ ಏಕಾಂಕ ನಾಟಕದಂತಿದೆ. ಇದರಲ್ಲಿ ಕಥೆ ಹೇಳುವವನೆ ಮರೆಸಿಕೊಂಡಿರುವ ಕಥಾನಾಯಕನನ್ನು ತಪ್ಪದೆ ಓದುಗರ ಮುಂದೆ ತರುತ್ತಾನೆ. ಈ ಕಥಾನಾಯಕ ಯಾವಾಗಲೂ ಒಬ್ಬ ಘಾಟಿ ಮುದುಕ: ಇವನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಪ್ರಯಾಣ ಮಾಡುತ್ತ ಅನೇಕ ಹೂಟಗಳನ್ನು ಹೂಡಿ ತನ್ನ ದೇಹ ಪೋಷಣೆಯನ್ನು ಮಾಡಿಕೊಳ್ಳುತ್ತಾನೆ. ಇವನ ಹೂಟಗಳು ಜನಗಳ ಮೆಚ್ಚಿಗೆಯನ್ನು ಪಡೆಯದಿರುವುದು ಅಪೂರ್ವ. ಈ ಉಕ್ತಿ ವೈಚಿತ್ರ್ಯಗಳೆಲ್ಲವನ್ನೂ ಪ್ರಾಸಬದ್ಧಗದ್ಯದಲ್ಲಿ ಹೇಳಲಾಗಿದೆ. ಈ ಸಾಹಿತ್ಯಪ್ರಕಾರವನ್ನು ಮೊದಲು ಪ್ರಾರಂಭಿಸಿದವ ಅಹಮದ್–ಅಲ್–ಹಮ್‍ದಾನಿ. ಅಡ್ಡ ಹೆಸರು ಬಡ್ಡಿ ಉಜ್ಜಮಾನ್(1007). ಆದರೆ ಮಾಕಮಾದ ಶೈಲಿ ತನ್ನ ಪರಿಪೂರ್ಣ ಸೌಂದರ್ಯವನ್ನು ಅಲ್–ಹರೀರಿಯ (1121) ಕೈಯಲ್ಲಿ ಪಡೆಯಿತು.

ಮಾಕಾಮಾ ಕತೆಗಾರಿಕೆಯ ಒಂದು ವಿಕಸಿತ ರೂಪವೆಂದು ತೋರುತ್ತದೆ; ಅರಬ್ಬೀ ಮಾತನಾಡುವ ದೇಶಗಳಲ್ಲೆಲ್ಲ ಇಂಥವನ್ನು ರಚಿಸಲು ಜನರು ಬಹು ಇಷ್ಟಪಡುತ್ತಾರೆ. ಇಸ್ಲಾಮಿಗೆ ಪೂರ್ವದ ಕುಲಯುದ್ಧಗಳ ಪುರಾತನ ಕಥೆಗಳಂತೆ, ಈ ಸಾಹಸಗಳು ಸೈಫ್–ಇಬ್ನ್‌ಧಿ ಯಜನ್ ಎಂಬ ದಕ್ಷಿಣ ಅರೇಬಿಯದ ದೊರೆಯ ಪ್ರಣಯಪ್ರಸಂಗ, ಬಾನು ಹಿಲಾಲನ ಕಾಲ್ಪನಿಕ ಕಥನಗಳು ವಿಸ್ತಾರವಾಗಿ ಹಬ್ಬಿ ಜನರು ಅವನ್ನು ಬಹಳ ಉತ್ಸಾಹದಿಂದ ಓದುತ್ತಿದ್ದರು. ಅರಬ್ಬೀ ಸಾಹಿತ್ಯದಲ್ಲೊಂದರಲ್ಲದೆ ಪ್ರಪಂಚದ ಸಾಹಿತ್ಯದಲ್ಲೇ ಪ್ರಖ್ಯಾತವಾದ ಅರೇಬಿಯನ್ ನೈಟ್ಸ್ ಇದೇ ವರ್ಗದಲ್ಲಿ ಬರುತ್ತದೆ. ಇವು ಹಜಾರ ಅಫಸಾನೆ ಎಂಬ ಹೆಸರಿನ ಭಾರತೀಯ ಮೂಲವಾದ ಪರ್ಷಿಯನ್ ಕಥೆಗಳೆಂದು ಹೇಳುತ್ತಾರೆ (**ನೋಡಿ–ಸಾವಿರದೊಂದು ರಾತ್ರಿಗಳು**).

**ದರ್ಶನ ಮತ್ತು ಪ್ರಕೃತಿ ವಿಜ್ಞಾನ:**– ಗದ್ಯದಂತೆ, ವೈಜ್ಞಾನಿಕ ಸಾಹಿತ್ಯವೂ ಗ್ರೀಕ್ ಕೃತಿಗಳ ಭಾಷಾಂತರದಿಂದ ಪ್ರಾರಂಭವಾಯಿತು. ಬೈತ್–ಅಲ್–ಹಿಕ್ಮಹ್ ಎಂಬ ಸಂಸ್ಥೆ ಹಾರೂನ್–ಅಲ್–ರಷೀದ್ ಎಂಬ ಕಲೀಫನಿಂದ ಸ್ಥಾಪಿಸಲ್ಪಟ್ಟು ಮಗ ಅಲ್–ಮಾಮೂನನಿಂದ ಬೆಳೆದು ಭಾಷಾಂತರ ಕಾರ್ಯವನ್ನು ಮುಂದುವರಿಸಿತು. ಖುಸ್ತ–ಬ್–ಲೂಕ (835) ಅರಿಸ್ಟಾಟಲ್‍ನ ಕೃತಿಗಳನ್ನಲ್ಲದೆ ಗಣಿತ ಮತ್ತು ಖಗೋಳ ವಿಜ್ಞಾನದ ಮೇಲಿನ ಕೃತಿಗಳನ್ನು, ಮುಖ್ಯವಾಗಿ ಯೂಕ್ಲಿಡ್ಡನ ಕೃತಿಗಳನ್ನು ಭಾಷಾಂತರಿಸಿದ. ಹುನೈನ್–ಇಬ್ನ್–ಇಷಾಕ್ (973) ವೈದ್ಯ ಗ್ರಂಥಗಳ ಜೊತೆಗೆ ಪ್ಲೇಟೋನ ಬರೆಹಗಳನ್ನೂ ಹುಬಾಯಸ್ ವನಸ್ಪತಿ ಮತ್ತು ವೈದ್ಯ ಗ್ರಂಥಗಳನ್ನೂ ಭಾಷಾಂತರಿಸಿದರು. ಥಬಿತ್ ಇಬ್ನ್‌ಕುರ್ರ ಮುಖ್ಯವಾಗಿ ವೈಜ್ಞಾನಿಕ ಪುಸ್ತಕಗಳಲ್ಲಿ ಮಾತ್ರ ಆಸಕ್ತನಾದ. ಆ ಕಾಲದಲ್ಲಿ ರಚನೆಗೊಂಡ ಶಾಸ್ತ್ರ ಗ್ರಂಥಗಳ ಪ್ರಮಾಣವೆಷ್ಟೆಂಬುದು ಇಬ್ನ್ ನಾದಿಮ್‍ನ (995) ಕಿತಾಬ್–ಅಲ್–ಫಿಹ್ರಿಸ್ತ್‌ನಿಂದ (ಪುಸ್ತಕಗಳ ಪಟ್ಟಿ) ತಿಳಿಯುತ್ತದೆ. ಆತ ಸಾಹಿತ್ಯ ಮತ್ತು ವಿಜ್ಞಾನಗ್ರಂಥಗಳ ವಿಷಯದಲ್ಲಿ ತನಗೆ ದೊರೆತ ವಿವರಗಳನ್ನೆಲ್ಲ ತನ್ನ ಅಮೂಲ್ಯ ಗ್ರಂಥದಲ್ಲಿ ಕಲೆಹಾಕಿದ್ದಾನೆ.

ಅರಿಸ್ಟಾಟಲನ ಕೃತಿಗಳ ಜೊತೆಗೆ ಪ್ಲೇಟೊವಿನ ಅನೇಕ ಕೃತಿಗಳೂ ಭಾಷಾಂತರಗೊಂಡವು. ನವ್ಯ ಪ್ಲೇಟೊ ಸಿದ್ಧಾಂತ ಇಸ್ಲಾಮಿನ ವಿವೇಚನಾಪರರ ಮೇಲೆ ಹಿರಿಯ ಪ್ರಭಾವವನ್ನು ಬೀರಿತು. ಅವರ ಭಾವನಾವಿಚಾರ ನಾಲ್ಕನೆಯ ಶತಮಾನದಲ್ಲಿ ಇಖ್‍ವಾನ್–ಅಸ್–ಸಾಫ ಎಂಬ ಸಂಘದಲ್ಲಿ ಬಹು ವಿಸ್ತೃತದರ್ಶನವಾಗಿ ಬೆಳೆಯಿತು. ಈ ಸಂಘದ ಗುರಿ ಯಾವುದೆಂದರೆ, ಇಸ್ಲಾಂ ತತ್ತ್ವವನ್ನು ನವ್ಯ ಪ್ಲೇಟೋ ಸಿದ್ಧಾಂತದ ತಳಹದಿಯ ಮೇಲೆ ನಿಲ್ಲಿಸಬೇಕೆಂಬುದು. ಅವರ ಅಭಿಪ್ರಾಯಗಳು ಅಜ್ಞಾತನೊಬ್ಬನಿಂದ ಸಂಪಾದಿತವಾದ ರಸೈಲ್ ಇಖ್‍ವಾನಸ್ ಸಾಫ ಎಂಬ ಕೃತಿಯಲ್ಲಿ ಸಂಗ್ರಹಗೊಂಡಿದೆ.

ದರ್ಶನವನ್ನು ಕುರಿತು ಬರೆದ ಅಚ್ಚ ಅರಬ್ಬೀ ಲೇಖಕ ಅಬು ಯೂಸುಫ್ ಯಾಕುಬ್ ಅಲ್–ಕಿಂದಿ (862). ಆತ ದರ್ಶನ, ವೈದ್ಯ, ಖಗೋಳ, ಗಣಿತ ಮತ್ತು ಸಂಗೀತಶಾಸ್ತ್ರಗಳ ಮೇಲೆ ಸುಮಾರು ಇನ್ನೂರು ಪುಸ್ತಕಗಳನ್ನು ಬರೆದಿದ್ದಾನೆ. ಆ ಕಾಲದ ಪ್ರಮುಖ ದಾರ್ಶನಿಕ ಅಬು ನಾಸ್ತ್ ಅಲ್–ಫರಾಬಿ (950). ಈತ ಅರಿಸ್ಟಾಟಲನ ಮೇಲೂ ಗಣಿತ ವಿಜ್ಞಾನ ಮತ್ತು ಸಂಗೀತ ಶಾಸ್ತ್ರಗ್ರಂಥಗಳ ಮೇಲೂ ವ್ಯಾಖ್ಯಾನಗಳನ್ನು ಬರೆದಿದ್ದಾನೆ. ಅಬು ಅಲಿ ಇಬ್ನ್ ಸಿನ ದೇವತಾಶಾಸ್ತ್ರ, ದರ್ಶನ, ವೈದ್ಯ. ಖಗೋಳ ಮತ್ತು ನಿಸರ್ಗ ವಿಜ್ಞಾನಗಳು ಇತ್ಯಾದಿ ಸಮಸ್ತಜ್ಞಾನ ಶಾಖೆಗಳಲ್ಲೂ ಕೃತಿರಚನೆ ಮಾಡಿದ್ದಾನೆ. ಆತನ ದಾರ್ಶನಿಕ ಗ್ರಂಥವಾದ ಕಿತಾಬ್–ಅಷ್–ಷಿಫ್ ಎಂಬುದೂ ವೈದ್ಯ ಗ್ರಂಥವಾದ ಅಲ್–ಕನೂನ್–ಪಿತ್–ತಿಬ್ ಎಂಬುದೂ ಪ್ರಖ್ಯಾತ. ಇವು ತಮ್ಮ ಲ್ಯಾಟಿನ್ ಭಾಷಾಂತರಗಳಲ್ಲಿ ಮಧ್ಯಯುಗದ ಯುರೋಪಿನಲ್ಲೂ ಅತ್ಯಂತ ಶ್ರೇಷ್ಠ ಪ್ರಮಾಣ ಗ್ರಂಥಗಳಾಗಿ ಉಳಿದಿವೆ. ದಾರ್ಶನಿಕರಿಗೆ ವಿರುದ್ಧವಾಗಿ ಅಲ್–ಘಜ್ಜಾಲಿ ಮಕಾಸಿದ್–ಅಲ್–ಫಲಾಸಫ ಎಂಬ ಸುಪ್ರಸಿದ್ಧ ಕೃತಿಯನ್ನು ಬರೆದ. ಅವರ ವಾದಗಳನ್ನು ನಿರಾಕರಿಸುತ್ತ ಆತ ತಫತ್ ಅಲ್–ಫಲಾಸಫ ಎಂಬ ಗ್ರಂಥ ಬರೆದನಲ್ಲದೆ ಮತ ತತ್ತ್ವಗಳ ಸಮಸ್ಯೆಗಳನ್ನು ದರ್ಶನ ಬಿಡಿಸಲಾರದೆಂಬುದನ್ನು ತೋರಿಸಿಕೊಟ್ಟ.

ಆದರೆ ಸ್ಪೇನ್ ದೇಶದಲ್ಲೂ ಉತ್ತರ ಆಫ್ರಿಕದಲ್ಲೂ ದರ್ಶನ ಒಂದು ಹೊಸ ಮಾರ್ಗ ಹಿಡಿಯಿತು. ಇಬ್ನ್ ರಷ್ದ್ (1198), ಅಲ್ ಘಜ್ಜಾಲಿ ಎಂಬಾತನ ವಾದಗಳಿಗೆ ವಿರುದ್ಧವಾಗಿ ಒಂದು ದರ್ಶನವನ್ನು ಎತ್ತಿ ಹಿಡಿದ. ಇಬ್ನ್ ಬಜ್ಜ (1138), ಸಯ್ಯ್ನ್ ಇಬ್ನ್ ಯಕ್‍ಜ಼ಾನ್

ಎಂಬ ಅನ್ಯೋಕ್ತಿ ಕಥಾನಕವನ್ನು ಬರೆದು ಪ್ರಸಿದ್ಧನಾದ. ಇಬ್ನ್ ತುಫೈಲ್ (1185) ಮೊದಲಾದ ಶ್ರೇಷ್ಠ ದಾರ್ಶನಿಕರು ಪಶ್ಚಿಮ ಇಸ್ಲಾಂ ಪ್ರದೇಶಗಳಲ್ಲಿ ಉದಿಸಿದರು. ಇಫಾಲ್ ಖವಾರ್ ಜ಼ಾಮಿ (820), ಧಬೀತ್–ಇಬ್ನ್–ಕುರ್ರ, ಅಲ್–ಕರ್ಖಿ ಎಂಬುವರು ಗಣಿತವಿಜ್ಞಾನದ ಮೇಲೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಇಬ್ರಾಹಿಂ ಅಲ್‌ಫಜಾರಿ ಖಗೋಳವಿಜ್ಞಾನಕ್ಕೆ ಸಂಬಂಧಪಟ್ಟ ಕೋಷ್ಟಕಗಳನ್ನು ತಯಾರಿಸಿದ. ಅಲ್ ಮನ್‌ಸೂರ್ ಎಂಬ ಕಲೀಫನ ಆಜ್ಞೆಯ ಮೇರೆಗೆ ಭಾರತೀಯ ಗಣಿತ ಗ್ರಂಥಗಳು ಪರಿವರ್ತಗೊಂಡವು. ಅದರದೊಂದು ಸಾರಾಂಶವನ್ನು ಅಲ್ ಖವಾರಿಜ್‌ಮೆ ಎಂಬಾತ ಬರೆದ. ಅಲೆಕ್ಸಾಂಡ್ರಿಯದ ಟಾಲೆಮಿಯ ಅಲ್ ಮಜೆಸ್ತ್ ಎಂಬ ಪುಸ್ತಕವನ್ನು ಇಬ್ನ್ ಮತರ್ (829) ಎಂಬಾತ ಭಾಷಾಂತರಿಸಿದ್ದರಿಂದ ಖಗೋಳವಿಜ್ಞಾನ ಸಾಹಿತ್ಯ ಇನ್ನೂ ಹೆಚ್ಚಾಗಿ ಪುಷ್ಟಿ ಹೊಂದಿತು. ಅರಬ್ಬೀ ಖಗೋಳವಿಜ್ಞಾನದ ಪ್ರಖ್ಯಾತ ಪ್ರತಿನಿಧಿಗಳಾರೆಂದರೆ, ಅಲ್–ಫರ್‌ಘನಿ, ಅಲ್–ಬತ್ತಾನಿ, ಇಬ್ನ್ ಯೂನಸ್, ಇಬ್ನ್ ಅಲ್ ಹೈಥಂ ಮತ್ತು ಜಬರ್ ಇಬ್ನ್ ಅಫ್‌ಲ ಎಂಬುವರು. ಬಾಗದಾದ್, ಡಮಾಸ್ಕಸ್ ಮತ್ತು ಕೈರೋ ಪಟ್ಟಣಗಳಲ್ಲಿ ಪ್ರತಿಷ್ಠಾಪಿತವಾದ ವೀಕ್ಷಣಕೇಂದ್ರಗಳಿಂದ ಈ ವ್ಯಾಸಂಗಗಳಿಗೆ ಬಹಳ ನೆರವು ಸಿಕ್ಕಿತು.

ಇತರ ನಿಸರ್ಗ ವಿಜ್ಞಾನಗಳಂತೆ, ಅರಬ್ಬರ ವೈದ್ಯವಿಜ್ಞಾನವೂ ಗ್ರೀಕ್ ವೈದ್ಯಗ್ರಂಥಗಳ ವ್ಯಾಸಂಗ, ಭಾಷಾಂತರಗಳಿಂದ ಪ್ರಾರಂಭವಾಯಿತು.  ಆದರೆ ಅರೇಬಿಯದ ವಿದ್ವಾಂಸರ ಪ್ರತ್ಯಕ್ಷ ಪರೀಕ್ಷೆ ಮತ್ತು ಸ್ವಾನುಭವಗಳು ವೈದ್ಯಜ್ಞಾನದ ಮೊತ್ತವನ್ನು ಇನ್ನೂ ಹೆಚ್ಚಿಸಿದುವು ; ಅದಕ್ಕೆ ವಿಸ್ತೃತವೂ ಸ್ವತಂತ್ರವೂ ಆದ ಕೊಡುಗೆಯನ್ನಿತ್ತವು. ಆ ಕಾಲದ ವೈದ್ಯರಲ್ಲಿ ಬಹುಪ್ರಖ್ಯಾತರು – ಅಬು ಜಕಾರಿಯ ಅರ್–ರಜಿ (932), ಅಜ್ಜಹ್ ರವಿ (1009), ಇಬ್ನ್ ಸಿನ (1036), ಇಬ್ನ್ ಮಸಾವಯಹ್ (1015), ಇಬ್ನ್ ಬೂತ್ತನ್ (1052), ಇಬ್ನ್ ಮೈಮುನ್ (1204), ಇಬ್ನ್ ನಾಫಿಜ್ (1290). ಅರೇಬಿಯದ ವೈದ್ಯರು ಔಷಧಜ್ಞಾನದಲ್ಲೂ ಮತ್ತು ರೋಗನಿದಾನದಲ್ಲೂ ಬೆರಗುಪಡಿಸುವಂಥ ಮುನ್ನಡೆಯನ್ನು ತೋರಿದರು.  ಅವರ ಆಸ್ಪತ್ರೆಗಳೂ ವೈದ್ಯ ಸಂಸ್ಥೆಗಳೂ ಪಾಶ್ಚಾತ್ಯರಿಗೆ ಮಾದರಿಯೆನಿಸಿದುವು.  ಜಬರ್ ಇಬ್ನ್ ಹಯ್ಯಾನ್ ಎಂಬುವನಿಂದ ಪ್ರಾರಂಭವಾದ ರಸಾಯನವಿಜ್ಞಾನ ಬೆಳೆದು ಆಶ್ಚರ್ಯಕರವಾದ ವಿಷಯಗಳು ಸಂಶೋಧನೆಗೊಂಡುವು. ಆಧುನಿಕ ರಸಾಯನವಿಜ್ಞಾನದ ಅನೇಕ ಯಂತ್ರೋಪ ಕರಣಗಳೂ ಪಾರಿಭಾಷಿಕ ಶಬ್ದಗಳೂ ಅರಬ್ಬರ ಕೊಡುಗೆಯಾಗಿವೆ. ಇದೇ ರೀತಿಯಲ್ಲಿ ಪ್ರಕೃತಿಚರಿತ್ರೆ, ಸಸ್ಯವಿಜ್ಞಾನ, ಕೃಷಿವಿಜ್ಞಾನಗಳೂ ಮುಂದುವರೆದುವು. ಅಲ್‌ಖಿಫ್ತಿಯಿಂದ ಪ್ರಣೀತವಾದ ತರೀಖ್–ಅಲ್–ಹುಕುಮ, ಇಬ್ನ್ ಅಬಿ ಉಸೈಬಿಯನ ಕಿತಾಬ್ ಅಲ್–ಉಯುನ್–ಅಲ್–ಅನ್‌ಬ ಮುಂತಾದ ದಾರ್ಶನಿಕರ ಮತ್ತು ವೈದ್ಯರ ಜೀವನಚರಿತ್ರೆಗಳು ಸಂಕಲಿತವಾದುವು.

**ಭೂಗೋಳ ಮತ್ತು ಚರಿತ್ರೆ :** ಯಾತ್ರಿಕರು ತಾವು ಸಂಚರಿಸುವ ದೇಶಗಳ ಪರಿಚಯವನ್ನು ಮಾಡಿಕೊಳ್ಳಬೇಕಾದ ಆವಶ್ಯಕತೆಯ ಜೊತೆಗೆ, ಅಂಚೆಯ ವ್ಯವಸ್ಥೆ ಮತ್ತು ಕಲೀಫರ ಕಾಲದ ದಕ್ಷ ಆಡಳಿತ – ಇವುಗಳು ಭೌಗೋಳಿಕ ವಿಷಯಗಳನ್ನು ಕುರಿತ ಲೇಖನಗಳಿಗೆ ಉತ್ತೇಜನ ಕೊಟ್ಟವು ಈ ಭೌಗೋಳಿಕ ಲೇಖನಗಳು ಬರಿಯ ದಾರಿಗಳನ್ನೂ ವಾಣಿಜ್ಯ ವ್ಯಾಪಾರಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಸಂಸ್ಥೆಗಳನ್ನು ಕುರಿತು ವಿವರಿಸಿರುವುದಲ್ಲದೆ ಜೊತೆಗೆ ಆಯಾ ದೇಶದ ಜನರ ಧಾರ್ಮಿಕ, ಸಾಮಾಜಿಕ, ಹಾಗೂ ಸಾಂಸ್ಕೃತಿಕ ಜೀವನಕ್ರಮವನ್ನೂ ಕುರಿತು ವಿಷಯಗಳನ್ನು ನಿರೂಪಿಸಿವೆ. ಯಾತ್ರಿಕರು ಪೂರ್ವ ಮತ್ತು ಪಶ್ಚಿಮ ದೇಶಗಳಿಗೆ ಸಂಬಂಧಪಟ್ಟ ಉಪಯುಕ್ತವಾದ ಸಂಗತಿಗಳನ್ನೂ ಇಲ್ಲಿ ಸೇರಿಸಿದ್ದಾರೆ. ಭೌಗೋಳಿಕ ಕೃತಿಗಳಲ್ಲಿ ಮುಖ್ಯವಾದುವು ಯಾವುವೆಂದರೆ: ಇಬ್ನ್ ಖುರ್‌ದಾಧ್‌ಭಿಯ ಕಿತಾಬ್–ಅಲ್–ಮಸಾಲಿಕ್ ವಾಲ್ ಮಮಾಲಿಕ್, ಯಾಕೂಬಿಯ ಕಿತಾಬ್–ಅಲ್–ಬಲ್‌ದನ್, ಇಬ್ನ್ ರುಸ್ತಾನ ಅಲ್–ಅಲಾಖ್ ಅನ್ ನಫಿಸ, ಅಲ್ ಇಸ್ತಖ್ರಿ ಮತ್ತು ಇಬ್ನ್ ಹೌಕಲ್ ಎಂಬುವರ ಕಿತಾಬ್–ಅಲ್–ಮಸಾಲಿಕ್ ವಾಲ್ ಮಮಾಲಿಕ್, ಅಲ್–ಮಕ್ ದಸಿ ಎಂಬವನ ಅಹ್‌ಸಾನ್ ಅಲ್–ತಕಾಸಿಂ ಫಿಮಾರೀಫತ್ ಅಲ್–ಅಕಾಲಿಂ, ಇದ್ರಿಸಿ ಎಂಬವನ ನುಜ್ಹತ್ ಅಲ್–ಮುಷ್‌ಟಕ್, ತಾರೀಖ್–ಅಲ್–ಹಿಂದ್ ಎಂಬ ಗ್ರಂಥದಿಂದ ಪ್ರಸಿದ್ಧನಾದ ಅಲ್–ಬರೂನಿಯ ಅಲ್–ಅಥಾರ್ ಅಲ್ ಬಕಿಯ ಅನ್ ಅಲ್ ಕುರನ್ ಅಲ್–ಖಲಿಯಾ. ಇಬ್ನ್ ಫದ್ಲಾನ್, ಅಬು ದುಲಾಫ್, ಖಜ್ರಾಜಿ, ಇಬ್ನ್ ಜುಹೈರ್, ಇಬ್ನ್ ಬತೂತ (**ನೋಡಿ–**) ಮುಂತಾದ ಪ್ರವಾಸಿಗರ ಕೃತಿಗಳೂ ಅರಬ್ಬರ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನೂ ಅವರು ಸಂಚರಿಸಿದ ದೇಶಗಳ ಜನರ ರೂಢಿಗಳನ್ನೂ ಸಂಸ್ಥೆಗಳನ್ನೂ ಕುರಿತು ವಿವರವಾದ ಸಂಗತಿಗಳನ್ನು ಒದಗಿಸುತ್ತವೆ. ಭೌಗೋಳಿಕ ಹೆಸರುಗಳನ್ನು ಅಕಾರಾದಿಯಾಗಿ ಉಲ್ಲೇಖಿಸಿರುವ ಬಕ್ರಿಯ ಮುಜಂ–ಮ–ಎಸ್ತಾಜಂ ಮತ್ತು ಯಾಕುತ್ ನ ಮುಜಂ ಅಲ್–ಬುಲ್ ದಾನ್ ಮೊದಲಾದ ಭೌಗೋಳಿಕ ನಿಘಂಟುಗಳೂ ಸಂಗ್ರಹ ರೂಪದಲ್ಲಿವೆ.

ಪ್ರಾಚೀನ ಕವಿತೆ ಮತ್ತು ಕುಲಗಳ ವಂಶಾವಳಿಯ ಕತೆಗಳು ಚರಿತ್ರೆಯ ವ್ಯಾಸಂಗಗಳನ್ನು ಬೆಳೆಸಿದುವು. ಇಸ್ಲಾಮಿನ ಪ್ರಾರಂಭಕಾಲದ ತಿಳಿವಳಿಕೆಯನ್ನು ಪಡೆಯುವ ಸಲುವಾಗಿ ಪ್ರವಾದಿಗಳ ಸುಸಂಗತವಾದ ಜೀವನಚರಿತ್ರೆಯನ್ನು ಮೊಟ್ಟಮೊದಲು ಬರೆದವ ಮಹಮದ್ ಇಬ್ನ್ ಇಷಾಕ್. ಈತನ ಗ್ರಂಥ ನಮಗೆ ಇಬ್ನ್ ಹಿಷಾಂನ ಪರಿಷ್ಕೃತ ಪಾಠದಲ್ಲಿ ದೊರೆತಿದೆ. ಅಲ್ ವಕೀದಿ (822) ಮೊದಲು ಕೂಡುಹಾಕಿದ್ದ ಪ್ರವಾದಿಗಳ ಜೀವನಚರಿತ್ರೆಗೆ ಸಂಬಂಧಿಸಿದ ಸಾಹಿತ್ಯವನ್ನು ಆತನ ಶಿಷ್ಯ ಮತ್ತು ಕಾರ್ಯದರ್ಶಿಯಾಗಿದ್ದ ಇಬ್ನ್‌ಸಾದ್(844) ಸಂಗ್ರಹಿಸಿದ್ದಾನೆ; ಅದರ ಹೆಸರು ತಬಕತ್–ಇಬ್ನ್–ಸಾದ್ ಎಂದು. ಅರಬ್ಬರ ಐತಿಹಾಸಿಕ ಲೇಖನಗಳು ಅಸಾಧಾರಣ ಶಾಸ್ತ್ರವಾಗಿ ಬೆಳೆದಿವೆ. ಸ್ಥಳಚರಿತ್ರೆ, ಜೀವನಚರಿತ್ರೆ, ಲೋಕೇತಿಹಾಸಗಳು ಮುಂತಾದವುಗಳನ್ನು ಪರಿಶೀಲಿಸಿ, ಸಂವಾಹಕರ ಮಾತುಗಳನ್ನು ಎತ್ತಿ ಹೇಳುವುದು, ಕಾಲಾನುಕ್ರಮವಾಗಿ ನಿರೂಪಿಸುವುದು ಮುಂತಾದ ಅನೇಕ ವಿಧಾನಗಳನ್ನು ಇತಿಹಾಸಕಾರರು ಅವಲಂಬಿಸಿದ್ದಾರೆ. ಇತಿಹಾಸಕಾರರಲ್ಲಿ ಅತ್ಯಂತ ಗಣ್ಯರಾದವರು: ಇನ್ ಜರೀರ್ ಅಲ್–ತಬರಿ(922), ಅಲ್ ಬಲಾಧುರಿ (892). ಅಲ್–ಮಸ್‌ಊದಿ (956). ಅಲ್–ಅಜ್ರ್‌ಕಿ (885), ಅಲ್–ಖತಿಬ್–ಅಲ್–ಬಾಗ್‌ದಾದಿ (1070), ಇಬ್ನ್ ಅಸಕರ್ (1175), ಇಬ್ನ್ ಅಥಿರ್ (1232). ಜೀವನಚರಿತ್ರೆಗಳ ಕರ್ತೃಗಳಲ್ಲಿ ಮುಖ್ಯರು: ಅಲ್–ಉತ್‌ಬಿ (1035), ಇಮಾಮುದ್ದಿನ್ ಅಲ್–ಇಸ್‌ಫಹಾನಿ (1200), ಇಬ್ನ್ ಅಬು ಉಸಾಯ್‌ಬಿಯ, ಅಲ್–ಕುಫೀತಿ ಮತ್ತು ಇಬ್ನ್ ಕಲ್ಲೀಕಾನ್.

ಸ್ಪೇನ್ ದೇಶದ ಇತಿಹಾಸಕಾರರಲ್ಲಿ ಅತ್ಯಂತ ಶ್ರೇಷ್ಠನೆಂದರೆ ಹಿಸಾಮುದ್ದೀನ್ ಇಬ್ನ್–ಅಲ್–ಖತೀಬ್(1374). ಈತ ಬರೆದ ಚರಿತ್ರೆ ಅಲ್–ಇಹಾತ ಫೀ ತಾರೀಖ್–ಐ–ಘರ್‌ನಕ ಪ್ರಖ್ಯಾತವಾಗಿದೆ. ಆದರೆ ಸ್ಪೇನ್ ದೇಶದ ಅರಬ್ಬರ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ವೈಜ್ಞಾನಿಕ ಜೀವನವನ್ನು ವಿವರವಾಗಿ ತನ್ನ ಪ್ರಸಿದ್ಧವಾದ ನಾಫ್–ಅಲ್–ತಿಬ್–ಮಿನ್–ಘಸ್ನ್–ಅಲ್–ಅಂಡಾಲಸ್–ಅರ್–ರತೀಬ್ ಎಂಬ ಕೃತಿಯಲ್ಲಿ ವಿವರವಾಗಿ ನಿರೂಪಿಸಿರುವವ ಉತ್ತರ ಆಫ್ರಿಕದ ಇತಿಹಾಸಕಾರ ಅಲ್–ಮುಕ್ಕಾರಿ.

ಮಂಗೋಲರ ಆಕ್ರಮಣದಿಂದ ಬಾಗ್ದಾದ್ ಪಟ್ಟಣ ಧ್ವಂಸವಾದ ಬಳಿಕ (1258), ಸಾಂಸ್ಕೃತಿಕ ಕೇಂದ್ರ ಮತ್ತೆ ಸಿರಿಯ ಮತ್ತು ಈಜಿಪ್ಟಿಗೆ ಮರಳಿತಲ್ಲದೆ ಸಾಹಿತ್ಯದ ಸಾಮಾನ್ಯ ಲಕ್ಷಣವನ್ನು ಬದಲಾಯಿಸಿತು. ರಾಜಕೀಯದಲ್ಲಿ ವಿಪ್ಲವವೆದ್ದು ಅಶಾಂತಿ ಎಲ್ಲೆಲ್ಲೂ ಹರಡಿದ್ದರೂ ಸಹ, ವಿದ್ವಾಂಸರು ಪ್ರಾಚೀನ ಗ್ರಂಥಕಾರರ ಕೃತಿಗಳನ್ನು ಅವಲೋಕಿಸುವುದ ರಲ್ಲೂ ಅವುಗಳಿಗೆ ವ್ಯಾಖ್ಯಾನಗಳನ್ನು ಬರೆಯುವುದರಲ್ಲೂ ನಿರತರಾಗಿದ್ದರು. ಈ ಅವಧಿಯಲ್ಲಿ ಸಂಕಲನ ಕಾರ್ಯದಷ್ಟು ಸೃಜನ ಸಾಹಿತ್ಯ ಕಾರ್ಯ ಜರುಗಿರುವುದು ಕಂಡುಬರುವುದಿಲ್ಲ. ಸಾಂಪ್ರದಾಯಿಕ ಸಾಹಿತ್ಯ ಮತ್ತು ಭಾಷ್ಯಗಳಲ್ಲಿ ಈ ಕಾಲದ ದೊಡ್ಡ ಪಂಡಿತರೆನಿಸಿದವರು– ಇಬ್ನ್ ಹಜಾರ್ ಅಲ್–ಅಸ್‌ಕಲಾನಿ (1448), ಆಲಾಲುದ್ದೀನ್ ಅಲ್ ಮಹಲ್ಲಿ (1459), ಜಲಾಲುದ್ದೀನ್ ಅಸ್–ಸುಯುತಿ (1505), ಷಹಾಬುದ್ದೀನ್ ಅಲ್ ಕಾಸ್ತಲಾನಿ (1517), ಮುಸ್ಲಿಂ ದೈವಶಾಸ್ತ್ರ ಮತ್ತು ಮತತತ್ತ್ವಗಳಲ್ಲಿ ಇಬ್ನ್ ತೈಮಿಯ್ಯ (1327), ಇಬ್ನ್–ಅಲ್–ಜಾಉಜ಼ಿಯ (1350) ಮತ್ತು ತಾಕಿಯುದ್ದೀನ ಅಸ್ ಸುಬ್‌ಕಿ (1369) ಎಂಬುವರು ಮುಖ್ಯರು. ಅಲ್–ಷರಾನಿ (1565) ಎಂಬಾತ ಷಿಯಾ ಮತಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ಅರ್ಪಿಸಿದ್ದಾನೆ. ಇಬ್ನ್ ಸಯ್ಯಿದ್ ಅನ್–ನಸ್(1333), ಬದ್ರುದ್ದೀನ್ ಅಲ್–ಹಲಾಬಿ (1034), ಜೈನಿ ದಹ್ಲಾನ್ (1886) ಎಂಬುವರು ಪ್ರವಾದಿಗಳ ಜೀವನ ಚರಿತ್ರೆಯ ಮೇಲಣ ಕೃತಿಗಳನ್ನು ಸಂಗ್ರಹಿಸಿದರು. ಚರಿತ್ರೆ ಮತ್ತು ಜೀವನಚರಿತ್ರೆಗಳಿಗೆ ಸಂಬಂಧಪಟ್ಟ ಸಾಹಿತ್ಯಕ್ಕೆ ಇಬ್ನ್ ಟಿಕ್‌ಟಿಕ (1301). ಅಬುಲ್ ಫಿದ ಇಸ್‌ಮಾಯಿಲ್(1331), ಅಬು ಅಬ್‌ಮಲ್ಲ ಅಧ್‌ಧಬಿ (1347), ಇಬ್ನ್ ಕಥೀರ್ (1372), ತಕೀಉದೀನ್ ಅಲ್–ಮಕ್ರಿಜಿ (1441), ಅಬುಲ್ ಮಹಸಿನ್ ಅಲ್–ತಘ್ರಿಬಿದಿ (1469) ಎಂಬುವರು ಅಮೂಲ್ಯವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಅರಬ್ಬರ ಐತಿಹಾಸಿಕ ಲೇಖನಕ್ಕೆ ಹೊಸ ಆಲೋಚನಾ ಮಾರ್ಗಗಳನ್ನೂ ಕ್ರಮಗಳನ್ನೂ ತಂದವನು ಅತ್ಯಂತ ಶ್ರೇಷ್ಠ ಇತಿಹಾಸಕಾರನಾದ ಇಬ್ನ್ ಖುಲ್‌ದುನ್ (1406). ಈತ ಐತಿಹಾಸಿಕ ಸಂಗತಿಗಳ ಅವಲೋಕನಕ್ಕೆ ನಿಯಮಗಳನ್ನು ರಚಿಸಿದುದಲ್ಲದೆ ಸಮಾಜಶಾಸ್ತ್ರದ ಮೂಲತತ್ತ್ವಗಳಿಗೆ ತಳಹದಿಯನ್ನು ಹಾಕಿಕೊಟ್ಟ. ಈ ಮೂಲತತ್ತ್ವಗಳನ್ನು ಪ್ರಾಚ್ಯರಲ್ಲದೆ, ಪಾಶ್ಚಾತ್ಯ ಇತಿಹಾಸಕಾರರೂ ಅನುಸರಿಸಿದ್ದಾರೆ. ಅರಬ್ಬೀ ಸಾಹಿತ್ಯದ ಅತ್ಯಂತ ಸಮಗ್ರವಾದ ಸಮೀಕ್ಷೆಯನ್ನು ತುರ್ಕಿ ವಿದ್ವಾಂಸ ಹಾಜ್ಜಿ ಖಲ್‌ಫಾ (1057) ತನ್ನ ಕಷ್‌ಫಾಜ್ ಜ಼ುನುಂ ಎಂಬ ಕೃತಿಯಲ್ಲಿ ಮಾಡಿದ್ದಾನೆ. ಈ ಪುಸ್ತಕ ಅರಬ್ಬೀ ಸಾಹಿತ್ಯ ಸಂಶೋಧನೆಗಳಿಗೆಲ್ಲ ಇಂದಿಗೂ ಬಿಡಲಾಗದ ಆಕರ ಗ್ರಂಥವಾಗಿದೆ.

ಈ ಕಾಲದಲ್ಲಿ ನಿಜವಾದ ಕವಿತೆ ಹುಟ್ಟದಿದ್ದರೂ ಕವಿತಾಭ್ಯಾಸ ನಡೆಯದೆ ಇರಲಿಲ್ಲ. ಈ ಅವಧಿಯ ಪ್ರಖ್ಯಾತ ಕವಿಗಳೆಂದರೆ, ಸಫಿ ಉದ್ದೀನ್–ಅಲ್–ಹಿಲ್ಲಿ (1344), ಅಲ್–ಬುಸೀರಿ (1295) ಮತ್ತು ಸಲಾಹುದ್ದೀನ್ ಅಲ್–ಸಫಾದಿ (1362).

ಶಬ್ದವಿಜ್ಞಾನ ಮತ್ತು ನಿಘಂಟುಗಳ ಮೇಲಿನ ಕೆಲವು ಸಣ್ಣ ಪುಟ್ಟ ಕೃತಿಗಳ ಜೊತೆಗೆ, ಈ ವ್ಯಾಸಂಗಕ್ಕೆ ಉತ್ಕೃಷ್ಟವಾದ ಕಾಣಿಕೆಯನ್ನು ಸಲ್ಲಿಸಿದವರು–ಅಲ್–ಫಿರೋಜಬಾದಿ (1414), ಇಬ್ನ್ ಮನ್‌ಜೂರ್ (1311) ಮತ್ತು ಮುರ್‌ತಾದ ಅಜ್–ಜ ಬೀದಿ (1790). ಈ ಕಾಲದಲ್ಲಿ ಪ್ರಕೃತಿ ಚರಿತ್ರೆ ಮತ್ತು ಜೀವವಿಜ್ಞಾನಗಳಲ್ಲಿ ರಚಿತವಾದ ಶ್ರೇಷ್ಠತಮ ಕೃತಿ ಕಮಾಲುದ್ದೀನ್ ಅದ್–ದಮಿರಿಯ ಹಯತ್ ಅಲ್–ಹೈವಾನ್.

**ಭಾರತದಲ್ಲಿ ಹುಟ್ಟಿದ ಅರಬ್ಬೀ ಸಾಹಿತ್ಯದ ಸ್ವರೂಪ** : ಭಾರತ ದೇಶದ ದಕ್ಷಿಣ ತೀರಪ್ರದೇಶಗಳು ಅರೇಬಿಯ ದೇಶದೊಂದಿಗೆ ವಾಣಿಜ್ಯ ಸಂಬಂಧಗಳನ್ನು ಇಸ್ಲಾಮಿಗೆ ಹಿಂದಿನಕಾಲದಿಂದ ಹೊಂದಿದ್ದರೂ ಸಿಂಧ್, ಮುಲ್ತಾನ್ ಮತ್ತು ಬಲೂಚಿಸ್ತಾನಗಳನ್ನು ಬಿಟ್ಟರೆ, ಮಿಕ್ಕಾವ ಪ್ರದೇಶವೂ ಅರಬ್ಬೀ ಭಾಷೆಯನ್ನಾಡುವ ಜನರ ಆಳ್ವಿಕೆಗೆ ಒಳಪಟ್ಟಿರಲಿಲ್ಲ. ಆದ್ದರಿಂದ ಅರಬ್ಬೀ ಭಾಷೆಗೆ ಪಾರ್ಸಿ ಭಾಷೆಯನ್ನಾಡುವ ದೊರೆಗಳ ಆಶ್ರಯ ದೊರೆಯಲಿಲ್ಲ. 7ನೆಯ ಶತಮಾನದಷ್ಟು ಹಿಂದಿನಿಂದಲೂ ಅರಬ್ಬರ ಸಾಮ್ರಾಜ್ಯಕ್ಕೆ ಒಳಪಟ್ಟ ಭಾರತದ ಉತ್ತರಪ್ರದೇಶಗಳು ಹಿಂದಿನಿಂದಲೂ ಅರಬ್ಬರ ಆಳ್ವಿಕೆಯಲ್ಲಿ ಬಹಳ ಕಾಲ ಉಳಿಯಲಿಲ್ಲ. ಈ ಕಾರಣದಿಂದಲೂ ಮತ್ತು ದಕ್ಷಿಣ ಭಾರತಕ್ಕೆ ವಲಸೆ ಬಂದ ಅರಬ್ಬರು ತಮ್ಮ ತಮ್ಮ ವ್ಯವಹಾರಗಳನ್ನು ವಾಣಿಜ್ಯ ಮತ್ತು ವ್ಯಾಪಾರಗಳಿಗೆ ಮಾತ್ರ ಮಿತಿಗೊಳಿಸಿದ್ದರಿಂದಲೂ ಕೆಲವು ದೇಶ್ಯ ಶಬ್ದಗಳನ್ನು ಸ್ಥಳೀಯರಿಂದ ಸ್ವೀಕರಿಸಿ ಅರಬ್ಬೀ ಭಾಷೆಗೆ ಸೇರಿಸಿಕೊಂಡಿರುವುದನ್ನು ಬಿಟ್ಟರೆ, ಅರಬ್ಬರ ಅಂದಿನ ಮಿಕ್ಕಾವ ಬೌದ್ಧಿಕಕಾರ್ಯಕಲಾಪಗಳೂ ನಮಗೆ ತಿಳಿದುಬಂದಿಲ್ಲ. ಭೌಗೋಳಿಕವಾಗಿಯೂ ರಾಜಕೀಯವಾಗಿಯೂ ಕೆಲವು ಅಡಚಣೆಗಳಿದ್ದರೂ ಭಾರತೀಯ ಮುಸ್ಲಿಮರಿಗೆ ಅರಬ್ಬೀ ಭಾಷೆಯೇ ಮತೀಯ ಸಂಸ್ಥೆಗಳ ಮತ್ತು ವ್ಯಾಸಂಗಗಳ ಭಾಷೆಯಾಗಿ ಉಳಿಯಿತು. ಭಾರತೀಯ ಮುಸ್ಲಿಮರಲ್ಲಿ ಕೆಲವರು ಉಮಾಯಿದ್ ಮತ್ತು ಅಬ್ಬಾಸಿದ್ ಕಾಲದಲ್ಲಿ ಅಲ್-ಹಿಜಾಸ್ ಮತ್ತು ಇರಾಕಿಗೆ ವಲಸೆ ಹೋಗಿ ಅಲ್ಲೇ ನಿಂತರು. ದೊಡ್ಡ ಕವಿಗಳೆಂದೂ ಲೇಖಕರೆಂದೂ ಪ್ರಖ್ಯಾತರಾದರು. ಅವರ ಪೈಕಿ ಅಬು ಅತಾ ಅಲ್-ಸಿಂಧಿ ಎಂಬ ಕವಿ, ಅಸ್ಸನ್ ಅಲ್-ಸಘಾನಿ (1252) ಎಂಬ ಭಾಷಾವಿಜ್ಞಾನಿ, ಸಫಿ ಉದ್ದೀನ್-ಅಲ್-ಹಿಂದಿ (1315) ಎಂಬ ನ್ಯಾಯಶಾಸ್ತ್ರಜ್ಞ-ಇವರೇ ಮೊದಲಾದವರಿದ್ದರು. ಹಾಗೆಯೇ ಅರಬ್ಬೀ ವಿದ್ವಾಂಸರೂ ಭಾರತಕ್ಕೆ ಬಂದು ಮೌಲ್ಯಯುತವಾದ ಅನೇಕ ಗ್ರಂಥಗಳನ್ನು ಅರಬ್ಬೀ ಭಾಷೆಯಲ್ಲಿ ರಚಿಸಿದರು. ಹಿಂದುಗಳ ಸಂಸ್ಕೃತಿ ಮತ್ತು ಶಾಸ್ತ್ರಗಳನ್ನು ಅಭ್ಯಾಸ ಮಾಡಿ ತನ್ನ ಪ್ರಖ್ಯಾತ ಗ್ರಂಥವಾದ ಕಿತಾಬ್-ಅಲ್-ಹಿಂದ್ ಎಂಬುದಕ್ಕೆ ವಿಷಯವನ್ನು ಸಂಗ್ರಹಿಸಲು ಆಲ್ಬೆರೂನಿ (ನೋಡಿ) ಭಾರತಕ್ಕೆ ಬಂದ. ಹಾಡಿತ್ತಿನ ವ್ಯಾಸಂಗಗಳನ್ನು ಭಾರತದಲ್ಲಿ ಹರಡಲು ಈಜಿಪ್ಟಿನಿಂದ ಮುಲ್ತಾನಿಗೆ ಷಂಷುದ್ದೀನ್ ಬಂದ. ಆದರೆ ಘಜ್ನವಿದ್ (998) ಕಾಲದಿಂದ ಮೊಗಲ್ ವಂಶದವರ (1539) ಕಾಲದವರೆಗಿನ ಮುಸ್ಲಿಮರ ಆಳ್ವಿಕೆಯಲ್ಲಿ, ಭಾರತೀಯ ಮುಸ್ಲಿಮರಿಂದ ಅರಬ್ಬೀ ಸಾಹಿತ್ಯಕ್ಕೆ ಉತ್ತಮ ದರ್ಜೆಯ ಯಾವ ಸಂಶೋಧನೆಗಳೂ ಲಭಿಸಲಿಲ್ಲ. ಅರಬ್ಬೀ ಸಾಹಿತ್ಯದ ಗದ್ಯ, ದರ್ಶನ ಮತ್ತು ಪ್ರಕೃತಿ ವಿಜ್ಞಾನ ಇತ್ಯಾದಿ ಶಾಖೆಗಳಲ್ಲಿ ಭಾರತೀಯ ಮುಸ್ಲಿಮರ ಸ್ವಂತಗಳಿಕೆ ಬಹಳ ಸ್ವಲ್ಪ. ಈ ಶಾಸ್ತ್ರಶಾಖೆಗಳ ವ್ಯಾಖ್ಯಾನಗಳನ್ನು ಸಂಗ್ರಹಿಸುವುದರಲ್ಲಿ ಅವರು ನಿರತರಾದರು. ಆದರೆ ಭಾರತೀಯ ಮುಸ್ಲಿಮರ ಮನಸ್ಸಿಗೆ ತುಂಬ ಹಿಡಿದ ಶಾಸ್ತ್ರವೆಂದರೆ ತರ್ಕಶಾಸ್ತ್ರ. ಮುಹಿಬ್ಬುಲ್ಲ ಬಿಹಾರಿ (1707) ಬರೆದ ಸುಲ್ಲಂ ಅಲ್ ಉಲುಂ ಎಂಬ ಗ್ರಂಥ ಈಗಲೂ ತರ್ಕಶಾಸ್ತ್ರದ ಮಾದರಿ ಕೃತಿ ಎನಿಸಿದೆ. ಸದ್-ಬ್-ಸುಲ್‌ಮನ್, ನಿಜಾಮುದ್ದೀನ್ ಔಲಿಯಾ, ನಾಸಿರುದ್ದೀನ್ ಚಿರಾಗ್ ದಿಹ್ಲವಿ ಮತ್ತು ಷಹಬುದ್ದೀನ್ ಹಾಗೂ ಅಮೀರ್ ಖುಸ್ರು ಇವರೇ ಮೊದಲಾದವರು ಬರೆದ ಅರಬ್ಬೀ ಕವಿತೆಗಳ ತುಣುಕುಗಳು ನಮಗೆ ದೊರೆತಿವೆ. ತಮ್ಮ ಕವಿತೆಗಳ ಸಮಗ್ರವಾದ ದಿವಾನಿಗಳನ್ನು ತಮ್ಮ ಹಿಂದೆ ಉಳಿಸಿಹೋಗಿರುವ ಕವಿಗಳೂ ಇದ್ದಾರೆ. ಅಂತಹವರೆಂದರೆ- ಮಲಬಾರಿನ ಮಹಮದ್-ಬ್-ಅಬ್ದುಲ್ ಅಜೀಜ್ (10ನೆಯ ಶತಮಾನ), ಸೈಯ್ಯಿದ್ ಅಲಿ ಖಾನ್ ಇಬ್ನ್ ಮಾ ಸುಂ (1705), ಸೈಯಿದ್ ಅಬ್ದುಲ್ ಜಲೀಲ್ ಬಿಲ್‌ಗ್ರಾಮಿ (1715) ಮತ್ತು ಸಯಿದ್ ಗುಲಾಂ ಅಲಿ ಅಜಾದ್, (1785). ಈ ಕವಿಗಳೆಲ್ಲ ಪರ್ಷಿಯನ್ ಕವಿತೆಯಿಂದ ತುಂಬ ಪ್ರಭಾವಿತರಾದರು. ಇವರಿಗೆ ಅಲಂಕಾರಗಳಲ್ಲೂ ಪರ್ಷಿಯನ್ ಕವಿತೆಗಳ ರೂಪದಲ್ಲೂ ತುಂಬ ಪ್ರೀತಿ. ಮಹಮದ್ ಇಬ್ನ್ ಅಬ್ದುಲ್ ಅಜೀಜ್ ಅರಬ್ಬಿಯಲ್ಲಿ ಸು. 500 ಪದ್ಯಗಳ ಮತ್‌ನವಿಯೊಂದನ್ನು (ಮಸ್ನವಿ) ಬರೆದ. ಅದರಲ್ಲಿ ಕಲ್ಲಿಕೋಟೆ ಜಾಮೊರಿನ್ ಪೋರ್ಚುಗೀಸರೊಡನೆ ನಡೆಸಿದ ಕಾಳಗವನ್ನೂ ಆತ ಇಸ್ಲಾಂ ಧರ್ಮದ ವಿಷಯದಲ್ಲಿ ತೋರುತ್ತಿದ್ದ ಅಭಿಮಾನವನ್ನೂ ವರ್ಣಿಸಲಾಗಿದೆ. ಇಬ್ನ್ ಮಾಸುಂ ತನ್ನ ಅಲ್-ಬದೀಯ ಗ್ರಂಥದಲ್ಲಿ ಆಲಂಕಾರಿಕ ಕಲ್ಪನೆಗಳ ಉದಾಹರಣೆಗಳನ್ನು ಸಂಗ್ರಹಿಸಿದ್ದಾನೆ. ಭಾರತದ ಇತರ ಕವಿಗಳಂತೆ ಅಜಾದ್ ಎಂಬವನಿಗೂ ಆಲಂಕಾರಿಕ ಕಲ್ಪನೆಗಳಲ್ಲಿ ತುಂಬ ವಿಶ್ವಾಸ. ಆತ ತನ್ನ ಕವಿತೆಗಳಲ್ಲಿ ಹಿಂದಿ ಮತ್ತು ಸಂಸ್ಕೃತ ಭಾಷೆಗಳ ಉಪಮಾನಾದಿ ಅಲಂಕಾರಗಳನ್ನು ಉಪಯೋಗಿಸಿದ್ದಾನೆ.

ಧರ್ಮಕ್ಕೆ ಸಂಬಂಧಪಟ್ಟ ವ್ಯಾಸಂಗಗಳಿಗೆ ಭಾರತದ ಮುಸ್ಲಿಮರು ನಿಜವಾಗಿ ತುಂಬ ಬೆಲೆಯುಳ್ಳ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಮುಸ್ಲಿಂ ನ್ಯಾಯತತ್ತ್ವ ಶಾಸ್ತ್ರದಲ್ಲಿ ಫತ್‌ವೈ ಅಲಮ್‌ಗಿರಿ ಎಂಬ ಗ್ರಂಥ, ಮುಹಿಬ್ಬುಲ್ಲ ಬಿಹಾರಿಯ (1707) ಮೂಲ ನಿಯಮಗಳನ್ನು ಕುರಿತ ಮುಸಲ್ಲಂ-ಅಲ್ ಥೂಬೂತ್ ಎಂಬುದು, ಬರ್‌ಹಾಂಪುರದ ಅಲಿ ಮುತ್ತಾಕಿಯ (1557) ಕಾನ್ ಜುಲ್ ಉಮ್ಮಾಲ್, ದಿಲ್ಲಿಯ ಷಾ ವಾಲಿ ಉಲ್ಲನ (1762) ಮಸಾವವ ಎಂಬ ಸಂಪ್ರದಾಯದ ಮೇಲಣ ಕೃತಿ, ಅಲ್-ಫಯ್‌ದಿಯ (1595) ಸವಾತಿಉಲ್- ಇಲ್‌ಹಾಂ ಎಂಬ ಕುರಾನಿನ ಭಾಷ್ಯ, ಷಾ ವಾಲಿ ಉಲ್ಲನ ಹುಜ್ಜತ್ ಉಲ್ಲಹಿಲ್ ಬಲಿಘ ಎಂಬ ಮತಪಂಥೀಯ ದೇವತಾಶಾಸ್ತ್ರದ ಮೇಲಣ ಕೃತಿ ಮತ್ತು ಸಘಾನಿಯ ಉಬಾಬ್ ಹಾಗೂ ಜಬೀದಿಯ ತಾಜ್ ಎಂಬ ದಾರ್ಶನಿಕಗ್ರಂಥ - ಇವು ಅರಬ್ಬೀ ಭಾಷೆಯನ್ನಾಡುವ ದೇಶಗಳಲ್ಲೂ ಚಿರಸ್ಮರಣೀಯವಾದ ಕೃತಿಗಳೆಂದು ಪರಿಗಣಿತವಾಗಿವೆ.

**ನವೀನ ಅರಬ್ಬೀ ಸಾಹಿತ್ಯ** : (1798-1960). 1798ರಲ್ಲಿ ಅರಬ್ಬರು ಪಾಶ್ಚಾತ್ಯಸಂಸ್ಕೃತಿಯ ಸಂಪರ್ಕವನ್ನು ಪುನಃ ಹೊಂದಿದಾಗ ಅರಬ್ಬೀ ಸಾಹಿತ್ಯದ ನವೀಕರಣ ಪ್ರಾರಂಭವಾಯಿತು. ಈಗ ಪ್ರವೃತ್ತವಾಗಿರುವ ಈ ನವೀಕರಣಕ್ಕೆ ರಂಗಸ್ಥಳ ಈಜಿಪ್ಟ್. ಈ ಪಾಶ್ಚಾತ್ಯೀಕರಣಕ್ಕೆ ಕಾರಣಭೂತವಾದ ಅಂಶಗಳು ಯಾವುವೆಂದರೆ ಯುರೋಪಿನ ಮಾದರಿಯ ಶಾಲೆಗಳನ್ನು ತೆರೆದುದು, ಅರಬ್ಬೀ ಅಚ್ಚುಕೂಟಗಳ ಸ್ಥಾಪನೆ, ಪತ್ರಿಕೋದ್ಯಮ ಬೇಗ ಹಬ್ಬಿದುದು, ಯುರೋಪಿನ ಆಧುನಿಕ ಕೃತಿಗಳನ್ನು ಅರಬ್ಬಿಗೆ ಭಾಷಾಂತರ ಮಾಡಿದುದು. ಹಳೆಯ ಪ್ರಾಸಬದ್ಧ ಗದ್ಯವನ್ನು ವಿಸರ್ಜಿಸಲಾಯಿತು; ಅದರ ಸ್ಥಾನವನ್ನು ಈಗಿನ ಔದ್ಯೋಗಿಕ ಯುಗಕ್ಕೆ ಒದಗುವಂಥ ಸರಳ ಸ್ಪಷ್ಟ ಗದ್ಯ ಪಡೆಯಿತು. ಷೇಕ್ ಮಹಮದ್ ಅಬ್‌ದುಹ್ ಅಜ್‌ಹರ್‌ನಲ್ಲಿ ಮಾಡಿದ ಉಪದೇಶದ ಫಲವಾಗಿ ಕುರಾನ್, ನ್ಯಾಯ, ತತ್ತ್ವಶಾಸ್ತ್ರ ಮತ್ತು ಇಸ್ಲಾಂದರ್ಶನ-ಇವಕ್ಕೆ ಹೊಸತರದ ವ್ಯಾಖ್ಯಾನಗಳು ಹುಟ್ಟಿದುವು. ಪ್ರವಾದಿಗಳು, ಕವಿಗಳು ಮತ್ತು ವಿದ್ವಾಂಸರು ಮೊದಲಾದವರ ವಿಷಯಕವಾದ ತುಲನಾತ್ಮಕ ಹಾಗೂ ವಿಶ್ಲೇಷಣಾತ್ಮಕ ವ್ಯಾಸಂಗಗಳು ವೈಜ್ಞಾನಿಕ ಸಂಶೋಧನೆ ಮತ್ತು ಆಧುನಿಕರೀತಿಯ ವಿಮರ್ಶನಪದ್ಧತಿಗಳಿಗೆ ದಾರಿ ಹಾಕಿಕೊಟ್ಟುವು. ಯೂರೋಪಿನ ಪ್ರಭಾವ ಕಥಾಕ್ಷೇತ್ರದಲ್ಲಿ ಎದ್ದು ಕಾಣುತ್ತದೆ. ಐತಿಹಾಸಿಕ ಕಾದಂಬರಿಗಳ ಮೂಲಕ ಕಥೆ ಹೇಳುವುದು ಒಂದು ಕಲೆಯಾಗಿ ಪರಿಣಮಿಸಿತು. ಯುರೋಪಿನ ದೇಶಗಳಲ್ಲಿ ವ್ಯಾಸಂಗ ಮಾಡಿದ ಅರಬ್ಬೀ ವಿದ್ವಾಂಸರು ಫ್ರೆಂಚ್, ಇಂಗ್ಲಿಷ್, ಜರ್ಮನ್, ಇಟಾಲಿಯನ್ ಮತ್ತು ಸ್ಪೇನಿನ ಭಾಷೆಗಳ ಪುಸ್ತಕಗಳನ್ನು ತರ್ಜುಮೆ ಮಾಡಲು ಪ್ರಾರಂಭಿಸಿದರು. ಅಲ್-ಮನ್ ಫಲೂತಿ ಅಜ್ಜಯ್ಯತ್ ಮತ್ತು ಅಲ್-ಮಜಿನಿ ಎಂಬುವರು ಯುರೋಪಿನ ಕಾಲ್ಪನಿಕ ಕಾದಂಬರಿಗಳನ್ನು ತಮ್ಮ ಅಭಿರುಚಿಗೆ ತಕ್ಕಂತೆ ಅಳವಡಿಸಿಕೊಳ್ಳುವ ದಾರಿಯನ್ನು ತೋರಿಕೊಟ್ಟರು. ಆ ಬಳಿಕ, ತೌಫಿಕ್ ಅಲ್ ಹಕೀಂ, ಅಲ್-ಮಜಿನಿ ಮತ್ತು ಅಹ್ಮದ್ ತೈಮೂರ್ ಎಂಬುವರು ಶುದ್ಧ ಈಜಿಪ್ಷಿಯನ್ ಮೂಲದ ಕಾಲ್ಪನಿಕ ಕಥೆಗಳನ್ನು ಬರೆದರು.

ಈಜಿಪ್ಷಿಯನ್ ರಂಗಸ್ಥಳಗಳೂ ಸಿನಿಮಾ ಕಂಪನಿಗಳೂ ಮತ್ತು ರೇಡಿಯೋ ಕೇಂದ್ರಗಳೂ ಪ್ರತಿಷ್ಠಾಪಿತವಾದ ಮೇಲೆ ನಾಟಕ, ಏಕಾಂಕ ರೂಪಕಗಳು ಮತ್ತು ಚಲನಚಿತ್ರ ಗೀತೆಗಳು - ಮುಂತಾದ ಸಾಹಿತ್ಯ ಪ್ರಕಾರಗಳು ಸಾಕಷ್ಟು ಹುಟ್ಟಿವೆ.

ಗದ್ಯದಂತೆಯೇ ಆಧುನಿಕ ಕವಿತೆ ಫ್ರೆಂಚ್ ಕವಿಗಳ ಕೃತಿಗಳನ್ನು ಜಾನಪದಗೀತೆಗಳ ರೂಪದಲ್ಲಿ ಭಾಷಾಂತರಿಸುವುದರ ಮೂಲಕ ಉದಿಸಿತು. ಕಾಸಿಡಾದ ವಿನಾ ಸಾಂಪ್ರದಾಯಿಕ ರೂಪವನ್ನು ಪ್ರಾಸ ಮತ್ತು ಛಂದಸ್ಸುಗಳೊಂದಿಗೆ ಇಟ್ಟುಕೊಂಡೂ ಆಧುನಿಕ ರೀತಿಗಳನ್ನೂ ಮತ್ತು ಒಂದು ರೀತಿಯ ಪಾಶ್ಚಾತ್ಯ ಮತ್ತು ಇಸ್ಲಾಂ ದರ್ಶನಗಳ ಸಂಮಿಳಿತವನ್ನೂ ಕವಿತೆಯೊಳಕ್ಕೆ ತರಲಾಗಿದೆ. ಪ್ರಗಾಥ, ಶೋಕಗೀತೆಗಳು, ಸ್ತುತಿಗಳು, ಸುನೀತಗಳು - ಇಂಥ ಹಳೆಯ ರೂಪಗಳ ಜೊತೆಗೆ ದೇಶಭಕ್ತಿ, ಸ್ವಭಾವೋಕ್ತಿ, ರಾಜಕೀಯ ಮತ್ತು ಸಾಮಾಜಿಕ ಪ್ರಸಂಗಗಳೂ-ಜನಪ್ರಿಯ ಕವಿತಾ ವಿಷಯಗಳಾದುವು. ಅಲ್‌ಬರೂದಿ (1839-1904), ಹಾಫೀಜ್ ಮತ್ತು ಕಾಕಿ ಇವರೇ ಮೊದಲಾದ ಈ ಕಾಲದ ಮುಖ್ಯ ಕವಿಗಳು ಅರಬ್ಬೀ ದೇಶದ ಪ್ರೇಮಗೀತೆಗಳನ್ನು ಕಟ್ಟಿ ಹಾಡಿ ಅರಬ್ಬರಿಗೆ ಆ ದೇಶದ ಪ್ರಾಚೀನ ಸಂಸ್ಕೃತಿಯ ಹಿರಿಮೆಯನ್ನು ನೆನಪುಮಾಡಿಕೊಟ್ಟರು. (ಎಂ.ಎ.ಎಂ.)

**ಅರಮೀನು** : ಬ್ಯಾಲಿಸ್ಟಿಡೀ ಕುಟುಂಬಕ್ಕೆ ಸೇರಿರುವ ಮಾನೊಕಾಂತಸ್ ಜಾತಿಯ ಮೀನುಗಳಿಗಿರುವ ಸಾಮಾನ್ಯ ಹೆಸರು (ಫೈಲ್ ಫಿಷ್). ಇದೇ ಕುಟುಂಬದ ಬಾಲಿಸ್ಟಸ್ ಜಾತಿಯ ಮೀನುಗಳಿಗೆ ಟ್ರಿಗರ್ ಮೀನುಗಳು ಎಂದು ಕರೆಯಲಾಗುತ್ತದೆ. ಉಷ್ಣ ಮತ್ತು ಉಪೋಷ್ಣ ಸಮುದ್ರಗಳಲ್ಲಿ ಅಂದರೆ ಅಟ್ಲಾಂಟಿಕ್, ಪೆಸಿಫಿಕ್, ಹಿಂದೂ ಮಹಾಸಾಗರದ ಉಷ್ಣವಲಯದ ಭಾಗಗಳಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ 60 ಸೆಂಮೀ ಉದ್ದ ಬೆಳೆಯುತ್ತವೆ. ಬಣ್ಣ ಹಳದಿ, ಕೆಂಪು ನೀಲಿ.

ಬ್ಯಾಲಿಸ್ಟಿಡೀ ಕುಟುಂಬದ ಮೀನುಗಳಲ್ಲಿ ಬೆನ್ನುರೆಕ್ಕೆಯ ಮೊದಲನೆಯ ಮುಳ್ಳು ಸೆಟೆದು ನಿಲ್ಲಲು ಹಿಂದಿರುವ ಸಣ್ಣ ಮುಳ್ಳು ನೆರವಾಗುತ್ತದೆ (ಬಂದೂಕಿನ ಒತ್ತು ಗುಂಡಿಯಂತೆ). ಅದಕ್ಕಾಗಿಯೇ ಈ ಮೀನುಗಳಿಗೆ ಟ್ರಿಗರ್ ಮೀನುಗಳು ಎಂದು ಹೆಸರು. ಅರಮೀನುಗಳಲ್ಲಿ ಎರಡನೆಯ ಸಣ್ಣ ಮುಳ್ಳು ದೇಹದಲ್ಲಿ ಹುದುಗಿಹೋಗಿರಬಹುದು. ಇವು ಸಾಮಾನ್ಯವಾಗಿ ತೀರಕ್ಕೆ ಸಮೀಪದಲ್ಲಿ ಮಣ್ಣು ಅಥವಾ ಮರಳಿನಿಂದ ಕೂಡಿದ ತಳಗಳಲ್ಲಿ ಹವಳ, ಸ್ಪಾಂಜ್ ಮತು ಪಾಚಿಗಳ ಸಮೀಪದಲ್ಲಿ ವಾಸಿಸುತ್ತವೆ.

ಇವೆರಡಕ್ಕೂ ಚೂಪಾದ, ಬಲವಾದ ಬಾಚಿಹಲ್ಲುಗಳಿವೆ. ಇವುಗಳಿಂದ ಹವಳದ ಚೂರುಗಳನ್ನು ಕಡಿದು ತಿನ್ನಲು, ಮೃದ್ವಂಗಿಗಳ ಚಿಪ್ಪನ್ನು ಒಡೆದು ಒಳಗಿನ ಮಾಂಸವನ್ನು ತಿನ್ನಲು ಸಾಧ್ಯವಾಗಿದೆ. ಈ ಕಾರಣದಿಂದ ಮುತ್ತಿನ ಮತ್ತು ಮುತ್ತಿನ ಚಿಪ್ಪುಗಳ ವ್ಯವಸಾಯಕ್ಕೆ ಈ ಮೀನುಗಳಿಂದ ಹೆಚ್ಚು ನಷ್ಟ. ಈ ಗುಂಪಿನ ಕೆಲವು ಮೀನುಗಳ ಮಾಂಸ ವಿಷಪೂರಿತವಾದದ್ದು. (ಸಿ.ಜಿ.ಕೆ.)

**ಅರವಿಂದ್, ಜಿ. ಸವುರ್ :** 1941–. ಬಿಲಿಯರ್ಡ್ಸ್ ಮತ್ತು ಸ್ನೂಕರ್ ಆಟಗಾರ. 1941 ಡಿಸೆಂಬರ್ 17ರಂದು ಮುಂಬಯಿಯಲ್ಲಿ ಜನಿಸಿದರು. ಬೆಂಗಳೂರಿನ ಸೇಂಟ್ ಜೋಸೆಫ್ ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಕ್ರೀಡೆಯಲ್ಲಿ ಆಸಕ್ತಿ ತಳೆದು 1957ರಲ್ಲಿ ಟೇಬಲ್ ಟೆನ್ನಿಸ್ ಆಟದಲ್ಲಿ ಕಿರಿಯರ ರಾಷ್ಟ್ರೀಯ ಟೇಬಲ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಅನಂತರ ಇವರು ಬಿಲಿಯರ್ಡ್ಸ್‌ಗೆ ಒಲಿದರು. ಆ ಕ್ರೀಡೆಯ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಸೆಣಸಿದರು. ರಾಷ್ಟ್ರೀಯ ಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯವನ್ನು 1960ರಲ್ಲಿ ಪ್ರತಿನಿಧಿಸಿದರು. ಅನಂತರ ನಿರಂತರವಾಗಿ 1966ರ ತನಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ರಾಜ್ಯದ ಪ್ರತಿನಿಧಿಯಾಗಿದ್ದರು. 1975–87ರ ತನಕ ಕರ್ನಾಟಕ ರಾಜ್ಯ ತಂಡದ ನಾಯಕರಾಗಿದ್ದರು.

ಸವುರ್ ಅವರ ದೇಹದ ತೂಕ ಹಾಗೂ ನಿಲುವು ಬಿಲಿಯರ್ಡ್ಸ್ ಆಟಗಾರರಿಗೆ ಆಶ್ಚರ್ಯವನ್ನುಂಟು ಮಾಡಿತು. ಏಕೆಂದರೆ ಬಿಲಿಯರ್ಡ್ಸ್ ಆಟಕ್ಕೆ ಸರಿತೂಗದ ಆಕೃತಿ ಇವರದು. ಇವರನ್ನು 1967ರಲ್ಲಿ ರಾಷ್ಟ್ರೀಯ ಚಾಂಪಿಯನ್ ಎಂದು ಘೋಷಿಸಿದಾಗ ಎಲ್ಲರಿಗೂ ಆಶ್ಚರ್ಯವಾಯಿತು. 1976ರ ತನಕ ಇವರು ಸ್ನೂಕರ್ ಆಟದಲ್ಲಿ ಪ್ರಮುಖ ಸ್ಥಾನ ಗಳಿಸಿದ್ದೊಂದು ವೈಶಿಷ್ಟ್ಯ. 1976ರಲ್ಲಿ ಇವರು ರಾಷ್ಟ್ರೀಯ ಸ್ನೂಕರ್ ಚಾಂಪಿಯನ್ ಎನಿಸಿಕೊಂಡರು. 1972ರಲ್ಲಿ ಇಂಗ್ಲೆಂಡಿನ ವೇಲ್ಸ್‌ನಲ್ಲಿ ನಡೆದ ಪ್ರಥಮ ವಿಶ್ವಚಾಂಪಿಯನ್ ಷಿಪ್‌ನಲ್ಲಿ ಭಾಗವಹಿಸಿದರು. 1980ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ಹಂತವನ್ನು ತಲಪಿದರು. ಇದಲ್ಲದೆ 1974 ಹಾಗೂ 78ರಲ್ಲಿ ಐರ್ಲೆಂಡ್ ಹಾಗೂ ಮಾಲ್ಟದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ ಪಂದ್ಯಗಳಲ್ಲೂ ಇವರು ಕ್ವಾರ್ಟರ್ ಫೈನಲ್ ಹಂತ ಪ್ರವೇಶಿಸಿದರು.

ಇವರು ಭಾರತೀಯ ರೈಲ್ವೆ ವಿಭಾಗದ ಕ್ರೀಡಾಪಟುವಾಗಿ 1968ರಲ್ಲಿ ಅತ್ಯುತ್ತಮ ರೈಲ್ವೆ ಕ್ರೀಡಾಪಟು ಎನಿಸಿಕೊಂಡರು. ಇವರು ಆಟಗಾರರಷ್ಟೇ ಅಲ್ಲದೆ ಭಾರತದ ಮುಖ್ಯ ತರಬೇತುದಾರರಾಗಿ ಮಾಧ್ಯಮದ ನಿರ್ವಾಹಕರಾಗಿ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಅಖಿಲ ಭಾರತ ವೃತ್ತಿನಿರತ ಬಿಲಿಯರ್ಡ್ಸ್ ಹಾಗೂ ಸ್ನೂಕರ್ ಸಂಘದ ಕಾರ್ಯದರ್ಶಿಯಾಗಿಯೂ ಕರ್ನಾಟಕ ರಾಜ್ಯ ಸಂಘದ ಅಧ್ಯಕ್ಷರಾಗಿಯೂ ಇದ್ದರು. 1998ರ ಬ್ಯಾಂಕಾಕ್ ಏಷ್ಯನ್ ಕ್ರೀಡೆಗಳಲ್ಲಿ ಭಾಗವಹಿಸಿದ ಬಿಲಿಯರ್ಡ್ಸ್ ಮತ್ತು ಸ್ನೂಕರ್ ತಂಡದ ಮುಖ್ಯ ತರಬೇತುದಾರರಾಗಿ 1 ಚಿನ್ನ, 1 ಬೆಳ್ಳಿ ಹಾಗೂ 4 ಕಂಚಿನ ಪದಕವನ್ನು ಭಾರತ ತಂಡ ಪಡೆಯಲು ನೆರವಾಗಿದ್ದಾರೆ. ವಿಶ್ವ ಬಿಲಿಯರ್ಡ್ಸ್ ಕ್ರೀಡಾಗಾರರ ಬೆಳವಣಿಗೆಗೆ ಸ್ಫೂರ್ತಿ ದೊರಕಿಸಿಕೊಟ್ಟಿದ್ದಾರೆ. ಇವರು ಉತ್ತಮ ಬರೆಹಗಾರರೂ ಕ್ರೀಡಾ ವಿಮರ್ಶಕರೂ ಆಗಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1982) ಏಕಲವ್ಯ ಪ್ರಶಸ್ತಿ (1993) ಲಭಿಸಿವೆ. ಭಾರತ ಸರ್ಕಾರ ಇವರಿಗೆ ಅರ್ಜುನ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ (1978–79). (ಎಸ್.ಆರ್.ಯು.)

**ಅರವಿಂದ ಘೋಷ್ :** 1872–1950. ಪೂರ್ಣಯೋಗಮಾರ್ಗವನ್ನು ಜಗತ್ತಿಗೆ ತೋರಿದ ಮಹಾಯೋಗಿಗಳು. 1872 ಆಗಸ್ಟ್ 15ರಂದು ಜನಿಸಿದರು. ತಂದೆ ಕೃಷ್ಣಧನ ಘೋಷ್, ತಾಯಿ ಸ್ವರ್ಣಲತಾದೇವಿ, ವಿನಯಭೂಷಣ ಅಣ್ಣ, ಮನಮೋಹನ ತಮ್ಮ, ಸರೋಜಿನಿ ತಂಗಿ.

ಐದು ವರ್ಷ ವಯಸ್ಸಾದಾಗ ತಮ್ಮ ಸಹೋದರರೊಡನೆ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಆರಂಭವಾಯಿತು. 1879–92ವರೆಗೆ, ಹದಿನಾಲ್ಕು ವರ್ಷಗಳ ಕಾಲ ಮ್ಯಾಂಚೆಸ್ಟರ್, ಲಂಡನ್, ಕೇಂಬ್ರಿಜ್‌ಗಳಲ್ಲಿ ಅಧ್ಯಯನಮಾಡಿ ಲ್ಯಾಟಿನ್, ಗ್ರೀಕ್‌ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದು ಪ್ರಥಮಶ್ರೇಣಿಯಲ್ಲಿ ತೇರ್ಗಡೆ ಯಾದರು. ತಂದೆಯ ಅಭಿಲಾಷೆಯಂತೆ ಐ.ಸಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಕುದುರೆ ಸವಾರಿಯ ಪರೀಕ್ಷೆಗೆ ಹೋಗದಿದ್ದುದರಿಂದ ಐ.ಸಿ.ಎಸ್. ಪದವಿಗೆ ಅನರ್ಹರಾದರು. ಗಾಯಕವಾಡದ ಮಹಾರಾಜರ ಆಹ್ವಾನವನ್ನು ಸ್ವೀಕರಿಸಿ 1893ರ ಫೆಬ್ರವರಿ 2ರಂದು ಬರೋಡವನ್ನು ಸೇರಿದರು. ಕೆಲವು ಕಾಲದ ಬಳಿಕ ಬರೋಡ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. ಜೊತೆಗೆ ಅವರು ಮಹಾರಾಜರ ಆಪ್ತಕಾರ್ಯದರ್ಶಿಯಾಗಿಯೂ ಕೆಲಸ ಮಾಡಬೇಕಾಯಿತು. ಇದೇ ಸಮಯದಲ್ಲಿ ತಂದೆ ಕಾಲವಾಗಲು ತಾಯಿ, ತಮ್ಮ ತಂಗಿಯರ ಜೀವನನಿರ್ವಹಣದ ಹೊರೆ ಇವರ ಮೇಲೆಯೇ ಬಿತ್ತು. ಅರವಿಂದರ ದೃಷ್ಟಿ ತಮ್ಮ ಮಾತೃಭಾಷೆಯಾದ ಬಂಗಾಲಿಯನ್ನು ಕಲಿತು, ಬಂಕಿಮಚಂದ್ರ, ಮಧುಸೂದನದತ್, ಸ್ವಾಮಿ ವಿವೇಕಾನಂದ, ರವೀಂದ್ರನಾಥಠಾಕೂರ್ ಮೊದಲಾದವರ ಕೃತಿಗಳನ್ನು ಮೂಲದಲ್ಲಿಯೇ ಅಧ್ಯಯನ ಮಾಡುವತ್ತ ಹರಿಯಿತು. ಸ್ವಾಮಿ ವಿವೇಕಾನಂದರ ಕೃತಿಗಳ ಭಾಷೆಯ ಶಕ್ತಿ, ಗಾಂಭೀರ್ಯ, ಅವುಗಳ ರಸಾಸ್ವಾದನೆ ಅವರನ್ನು ಆಕರ್ಷಿಸಿತು. ಅವರ ಮೇಲೆ ಪ್ರಭಾವ ಬೀರಿದ ಶ್ರೇಷ್ಠಕೃತಿ ಶ್ರೀ ರಾಮಕೃಷ್ಣ ಪರಮಹಂಸರ ವಚನಾಮೃತ, ಭರ್ತೃಹರಿಯ ನೀತಿಶತಕ, ಕಾಳಿದಾಸನ ವಿಕ್ರಮೋರ್ವಶೀಯ ಮೊದಲಾದವು. ಈ ಸಂಸ್ಕೃತ ಕೃತಿಗಳನ್ನು ಅವರು ಇಂಗ್ಲಿಷಿಗೆ ಭಾಷಾಂತರ ಮಾಡಿದುದಲ್ಲದೆ, ವಾಲ್ಮೀಕಿರಾಮಾಯಣ ಮತ್ತು ವ್ಯಾಸ ಭಾರತದ ಕೆಲವು ಭಾಗಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ್ದಾರೆ.

ಮೃಣಾಲಿನಿ ಎಂಬ 14 ವರ್ಷದ ಕನ್ಯೆಯನ್ನು 1901ರಲ್ಲಿ ಅರವಿಂದರು ವಿವಾಹವಾದರು. ಆ ಸಮಯದಲ್ಲಿ ಅವರು ಬರೋಡ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಆಗ ಅವರಿಗೆ ಬರುತ್ತಿದ್ದ ಮಾಸಿಕ ವೇತನ 710 ರೂಪಾಯಿಗಳು. ಅಂತರ್ಮುಖಿಗಳಾದ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಂಕಲ್ಪಮಾಡಿದರು. ಸರ್ಕಾರದ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಕೇವಲ 150 ರೂಪಾಯಿಗಳ ಮಾಸಿಕ ವೇತನಕ್ಕೆ ರಾಷ್ಟ್ರೀಯ ಕಾಲೇಜಿನ ಪ್ರಾಂಶುಪಾಲರಾದರು.

1906ರ ಡಿಸೆಂಬರ್ 26ರಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಪೂರ್ಣಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಧ್ಯೇಯವೆಂದು ನಿರ್ಣಯಮಾಡಲು ಅರವಿಂದರು ಕಾರಣರಾದರು. ಅಂದಿನ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೆ ಕಾಂಗ್ರೆಸ್ಸಿನ ಧ್ಯೇಯ ಅದೇ ಆಗಿತ್ತು. 1907ರ ಡಿಸೆಂಬರ್ ತಿಂಗಳಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿ ಸಂಚರಿಸಿ, ಜನರಲ್ಲಿ ದೇಶಪ್ರೇಮವನ್ನುಕ್ಕಿಸುವ ಉಜ್ಜ್ವಲ ಭಾಷಣ ಮಾಡಿದರು. ಬೊಂಬಾಯಿಯಿಂದ ಬರೋಡಕ್ಕೆ ಹೋದಾಗ, ಅಲ್ಲಿ ವಿಷ್ಣು ಭಾಸ್ಕರಲೀಲೆ ಎಂಬ ಯೋಗಿಯ ಸಂದರ್ಶನವಾಯಿತು. ಅವನ ಸಾನ್ನಿಧ್ಯದಲ್ಲಿ ಪ್ರಾಣಾಯಾಮ ಮೊದಲಾದ ಯೋಗಸಾಧನೆ ಮಾಡಿ ವಿಶೇಷ ಅನುಭವಗಳನ್ನು ಪಡೆದರು. ಈ ಜಗತ್ತು ಈಶ್ವರನ ಭೂಮಿಕೆ ಎಂಬುದು ಅವರಿಗೆ ಸ್ಪಷ್ಟವಾಯಿತು. ಭಾರತಮಾತೆ ಸಾಕ್ಷಾತ್ ರಾಜೇಶ್ವರಿಯಾಗಿ ಅವರಿಗೆ ಕಾಣಿಸಿದಳು. ಬ್ರಹ್ಮತೇಜಸ್ಸಿನಿಂದಲೇ ಭಾರತದ ಸ್ವಾತಂತ್ರ್ಯ ಸಾಧ್ಯವೆಂದು ಅವರಿಗೆ ಭಾಸವಾಯಿತು.

ಕಲ್ಕತ್ತೆಗೆ ಹಿಂತಿರುಗಿದ ಬಳಿಕ, ಬಿಪಿನ್‌ಚಂದ್ರಪಾಲರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ವಂದೇಮಾತರಂ ಎಂಬ ಇಂಗ್ಲಿಷ್ ವಾರಪತ್ರಿಕೆಯಲ್ಲಿ ತೇಜೋಪೂರ್ಣವಾದ ಲೇಖನಗಳನ್ನು ಬರೆದು ಯುವಕರನ್ನು ಸ್ವಾತಂತ್ರ್ಯ ಸಮರಕ್ಕೆ ಸಿದ್ಧಮಾಡಿದರು. ಫಲವಾಗಿ ಭಾರತದಲ್ಲಿ ಸ್ವಾತಂತ್ರ್ಯಸಂಗ್ರಾಮ ಉಗ್ರರೂಪಕ್ಕೆ ತಿರುಗಿತು. ಅದನ್ನು ಕಂಡ ಬ್ರಿಟಿಷ್ ಸರ್ಕಾರ ಆ ಪತ್ರಿಕೆಯ ಸಂಪಾದಕರನ್ನೂ ಅರವಿಂದರನ್ನೂ ರಾಜದ್ರೋಹದ ಆಪಾದನೆಯ ಮೇಲೆ ಸೆರೆಮನೆಗೆ ಕಳುಹಿಸಿತು. ಕೆಲವು ದಿನಗಳ ಬಳಿಕ ಅರವಿಂದರನ್ನು ಬಿಟ್ಟರೂ ಪುನಃ 1908ರ ಮೇ 4ರಂದು ಸುಮಾರು ಒಂದು ವರ್ಷ ಕಾಲ ಅವರಿಗೆ ಕಾರಾಗೃಹವಾಸದ ಶಿಕ್ಷೆಯಾಯಿತು. ಸೆರೆಮನೆ ಅವರಿಗೆ ಯೋಗಸಾಧನೆಯ ಕ್ಷೇತ್ರವಾಯಿತು. ವೇದ, ಉಪನಿಷತ್ತು, ಗೀತೆ ಮೊದಲಾದ ಸದ್ಗ್ರಂಥಗಳ ಪಠನದಿಂದ ಅವರಿಗಾದುದು ಸರ್ವಂ ಖಲ್ವಿದಂ ಬ್ರಹ್ಮ ಎಂಬುದರ ಅನುಭೂತಿ. ಕಡೆಗೆ ಕಲ್ಕತ್ತೆಯ ಸುಪ್ರಸಿದ್ಧ ವಕೀಲರಾದ ಚಿತ್ತರಂಜನದಾಸರ ಪ್ರಯತ್ನದಿಂದಾಗಿ ಸೆರೆಮನೆಯಿಂದ ಹೊರಬರುವಂತಾಯಿತು.

ಕಾರಾಗೃಹದಿಂದ ಹೊರಬಂದ ಅರವಿಂದರು ಇಂಗ್ಲಿಷಿನಲ್ಲಿ ಕರ್ಮಯೋಗಿ, ಬಂಗಾಳಿಯಲ್ಲಿ ಧರ್ಮ ಎಂಬ ಸಾಪ್ತಾಹಿಕಗಳನ್ನು ಆರಂಭಿಸಿದರು. ಪ್ರಚಂಡಶಕ್ತಿಯ ಅವತರಣವಾಗದೆ ಭಾರತಕ್ಕೆ ಸ್ವಾತಂತ್ರ್ಯ ಅಸಾಧ್ಯವೆಂಬುದು ಅವರ ಲೇಖನಗಳಲ್ಲಿ ವ್ಯಕ್ತವಾಯಿತು. ಅವರ ಲೇಖನಗಳು ಅನೇಕ ಯುವಕರಿಗೆ ಸ್ಫೂರ್ತಿ ನೀಡಿದುವು. ಅಂತರ್ಮುಖಿಗಳಾದ ಅವರು ಯೋಗಸಾಧನೆಯಲ್ಲಿ ತೊಡಗಲು ಸಂಕಲ್ಪಮಾಡಿದರು. 1910 ಏಪ್ರಿಲ್ 4ರಂದು ಪಾಂಡಿಚೆರಿಯನ್ನು ಪ್ರವೇಶಿಸಿ, ತಮ್ಮ ಭೌತಿಕಶರೀರವನ್ನು ತ್ಯಜಿಸುವವರೆಗೆ ಅವರು ಅಲ್ಲಿಂದ ಚಲಿಸಲಿಲ್ಲ. ದಿವ್ಯಜೀವನದಲ್ಲಿ ಸುಪ್ರತಿಷ್ಠಿತವಾಗುವುದೆ ಮಾನವನ ಆದರ್ಶವೆಂಬುದು ಅವರಿಗೆ ಸ್ಪಷ್ಟವಾಯಿತು. ಸು. 7 ವರ್ಷಗಳ ಕಾಲ ಆರ್ಯ ಎಂಬ ಪತ್ರಿಕೆಯಲ್ಲಿ ವೇದರಹಸ್ಯ, ಉಪನಿಷತ್ತುಗಳ ವ್ಯಾಖ್ಯಾನ, ದಿವ್ಯಜೀವನದ ಆದರ್ಶ, ಯೋಗಸಮನ್ವಯ, ಭಾರತೀಯ ಸಂಸ್ಕೃತಿಯ ಹಿರಿಮೆ, ಮಾನವಕುಲದ ಅಭ್ಯುದಯ, ಸಾಹಿತ್ಯ, ದರ್ಶನ—ಇತ್ಯಾದಿ ಹಲವು ವಿಷಯಗಳನ್ನು

ಕುರಿತ ಅವರ ಪ್ರಬುದ್ಧ ಲೇಖನಗಳು ಪ್ರಕಟವಾದುವು. 1920 ಏಪ್ರಿಲ್ 24ರಂದು ಮೇರಿ ರಿಚರ್ಡ್ಸ್ ಎಂಬ ಫ್ರಾನ್ಸ್ ದೇಶದ ಮಹಿಳೆ ಅರವಿಂದರ ಶಿಷ್ಯೆಯಾಗಿ ಪಾಂಡಿಚೇರಿಯಲ್ಲಿ ನೆಲೆಸಿ ಅರವಿಂದಾಶ್ರಮವನ್ನು ರೂಪಿಸುವುದರಲ್ಲಿ ಕಾರ್ಯಶೀಲಳಾದಳು, ಮಹಾಸಾಧಕರಾದ ಅರವಿಂದರಲ್ಲಿ 1926ರ ನವೆಂಬರ್ 24ರಂದು ಅತಿಮಾನಸತ್ವ ಅವತರಣವಾಯಿತು, ಅಷ್ಟರಿಂದಲೇ ಅವರು ತೃಪ್ತರಾಗದೆ, ಸಮಷ್ಟಿಯಲ್ಲಿ ಅತಿಮಾನಸತ್ವ ಅವಿರ್ಭವಿಸಲೆಂಬ ಅಭೀಪ್ಸೆಯಿಂದ ಅವರು ಮಹತ್ತರ ತಪಸ್ಸಿನಲ್ಲಿ ನಿರತರಾದರು. ಅವರ ಸಂದರ್ಶನ ದೊರಕುವುದು ಸಾಧಕರಿಗೆ ದುರ್ಲಭವಾದರೂ ವರ್ಷಕ್ಕೆ ನಾಲ್ಕು ಬಾರಿ ಅವರನ್ನು ಸಂದರ್ಶಿಸಲು ಅವಕಾಶವಿತ್ತು. ಸಾಧಕರು ಬರೆಯುತ್ತಿದ್ದ ಸಹಸ್ರಾರು ಪತ್ರಗಳಿಗೆ ಉತ್ತರ ಬರೆಯಲು ಅವರು ಮರೆಯುತ್ತಿರಲಿಲ್ಲ. ಮಹಾಯೋಗಿ ಅರವಿಂದರು 1950 ಡಿಸೆಂಬರ್ 5ರಂದು ತಮ್ಮ ಶರೀರವನ್ನು ತ್ಯಜಿಸಿ ಮಹಾಸಮಾಧಿಯಲ್ಲಿ ಲೀನವಾದರು.

ಅರವಿಂದರ ಕೃತಿಗಳು ಹಿಮಾಲಯ ಸದೃಶವಾಗಿವೆ. ಅವರ ಕೃತಿಶ್ರೇಣಿಗಳಲ್ಲಿ ಗೀತಾಪ್ರಬಂಧಗಳು, ಯೋಗಸಮನ್ವಯ, ದಿವ್ಯಜೀವನ, ಸಾವಿತ್ರಿ—ಈ ಕೃತಿಗಳ ಸ್ಥೂಲಪರಿಚಯವನ್ನು ಮಾತ್ರ ಇಲ್ಲಿ ನಿರೂಪಿಸಿದೆ.

ಗೀತೆಯ ಚಿಂತನೆ, ಭಾವ ವಿಚಾರ—ಇವೆಲ್ಲ ಯಾವ ಮತಪ್ರಚಾರಕ್ಕಾಗಿಯೂ ನಿಯೋಜಿತವಾಗಿಲ್ಲ. ಅನಾದಿಬ್ರಹ್ಮದಿಂದ ಈ ಜಗತ್ತಿನ ಸೃಷ್ಟಿಯಾಯಿತೆಂದು ಗೀತೆ ಪ್ರತಿಪಾದಿಸುವುದರಿಂದ ಅದು ಅದ್ವೈತ ತತ್ತ್ವವನ್ನು ನಿರೂಪಿಸುವ ಗ್ರಂಥವಲ್ಲ. ಮಾಯೆಯ ವಿಚಾರವನ್ನು ಹೇಳಿದರೂ ಮಾಯಾವಾದವನ್ನು ಪುಷ್ಟೀಕರಿಸುವುದಿಲ್ಲ. ಸಾಂಖ್ಯತತ್ತ್ವವಿದ್ದರೂ ಅದು ಪ್ರತಿಪಾದಿಸುವುದು ಸಾಂಖ್ಯತತ್ತ್ವವನ್ನಲ್ಲ. ಶ್ರೀಕೃಷ್ಣನ ವಿಚಾರ ಬಂದರೂ ಅದು ನಿರೂಪಿಸುವುದು ವೈಷ್ಣವತತ್ತ್ವವನ್ನಲ್ಲ. ಅದು ಹಲವು ದೃಷ್ಟಿಗಳನ್ನು ಸಮನ್ವಯಗೊಳಿಸುವ ಅಪೂರ್ವಕೃತಿ. ವಿಶ್ವವ್ಯಾಪಕ ತತ್ತ್ವಗಳನ್ನು ರೂಪಿಸಿ, ಮಾನವತ್ವದಿಂದ ದೇವತ್ವಕ್ಕೇರುವ ಸತ್ಪಥವನ್ನು ತೋರುವ ಸದ್ಗ್ರಂಥವಿದು. ಆಧುನಿಕ ನಾಗರಿಕಜೀವನ ಪ್ರಾಣ, ಮನಸ್ಸು, ಬುದ್ಧಿ—ಇಷ್ಟರಲ್ಲಿಯೇ ವ್ಯವಹರಿಸುತ್ತದೆ; ಆಧ್ಯಾತ್ಮಿಕ ಜೀವನದೆತ್ತರಕ್ಕೆ ಏರಿಲ್ಲ. ಭಗವಂತನಲ್ಲಿ ವಾಸಿಸುತ್ತ, ಜಗತ್ತಿನ ಕಲ್ಯಾಣಕಾಗಿ ಕರ್ಮತತ್ಪರರಾಗಬೇಕೆಂಬುದೇ ಗೀತೆಯ ಸಾರ.

ಅರವಿಂದರ ಯೋಗಸಮನ್ವಯ ಎಂಬ ಕೃತಿ ನಮ್ಮ ದೃಷ್ಟಿಯನ್ನು ದಿವ್ಯಜೀವನದತ್ತ ಅರಳಿಸುವ ಸತ್ಕೃತಿ. ಜೀವನವೆಲ್ಲ ಒಂದು ರೀತಿಯ ಯೋಗ, ವಿಶ್ವಪ್ರಕೃತಿಯೇ ಮಹಾಯೋಗದಲ್ಲಿ ತನ್ಮಯವಾಗಿದೆ. ಕೇವಲ ಪ್ರಕೃತಿಗೆ ಬಿಟ್ಟರೆ, ಸಹಸ್ರಾರು ವರ್ಷಗಳಲ್ಲಾಗಬೇಕಾದ ಕಾರ್ಯವನ್ನು ಒಂದೇ ಜೀವನದಲ್ಲಿ ಸಾಧಿಸುವುದು ಯೋಗ. ಯೋಗದಲ್ಲಿ ಪ್ರಕೃತಿ, ಮಾನವ, ಆತ್ಮ, ಭಗವಂತ—ಈ ಶಕ್ತಿಗಳ ಮಿಳನವಾಗುತ್ತದೆ. ಎಲ್ಲ ಶಾಸ್ತ್ರಗಳೂ ಜ್ಞಾನದ ಅಂಶ. ಯೋಗಿ ಶಾಸ್ತ್ರಗ್ರಂಥಗಳ ನೆರವಿನಿಂದ ಯುಕ್ತ ಮಾರ್ಗದಲ್ಲಿ ಮುನ್ನಡೆದು ಅನಂತಜ್ಞಾನವನ್ನೇ ಸಾಧಿಸಲು ಪ್ರಯತ್ನಿಸುತ್ತಾನೆ. ಭಗವಂತನ ಕೃಪೆಗೆ, ಸಾಕ್ಷಾತ್ಕಾರಕ್ಕೆ ಅಭೀಪ್ಸೆಯೇ ಕ್ರತುಶಕ್ತಿ. ಅದನ್ನು ಕುಗ್ಗದಂತೆ ರಕ್ಷಿಸುವ ಶಕ್ತಿ ಉತ್ಸಾಹ, ಯೋಗದಲ್ಲಿ ಮಾರ್ಗದರ್ಶಕನಾಗುವವ, ಹೃದಯದಲ್ಲಿ ಸ್ಥಿತನಾಗಿರುವ ಗುರು ಲಭಿಸಲು ಕಾಲಬೇಕು. ಈ ಕಾಯುವ ಕೆಲಸ ಕಠೋರವಾಗಿ ಕಾಣಬಹುದು. ಸಮನ್ವಯದೃಷ್ಟಿಯ ಯೋಗಸಾಧಕನಿಗೆ ಹುಟ್ಟು ಸಾವುಗಳು ಆತ್ಮಯಾತ್ರಾಪಥದಲ್ಲಿರುವ ನಿಲ್ದಾಣಗಳು.

ದಿವ್ಯಜೀವನ ಒಂದು ದಿವ್ಯ ಕೃತಿ. ತಮ್ಮ ದರ್ಶನವನ್ನು ತರ್ಕಬದ್ಧವಾಗಿ, ವಿಚಾರಪೂರ್ವಕವಾಗಿ ಯೌಗಿಕ ಬೆಳಕಿನಿಂದ ರೂಪಿಸಿದ್ದಾರೆ ಈ ಬೃಹತ್‌ಗ್ರಂಥದಲ್ಲಿ. ಇಂದು ವಿಜ್ಞಾನಿಯ ದೃಷ್ಟಿ ಜಡಶಕ್ತಿಯ ಮೇಲೆ ಪ್ರಭುತ್ವಪಡೆವತ್ತ ಸಾಗಿದೆ. ವಿಜ್ಞಾನಿಯ ಸಾಧನೆಯಿಂದ ದೇಶ ಕಾಲಗಳು ತುಂಬ ಹತ್ತಿರ ಬಂದಿವೆ. ಒಬ್ಬ ವಿಜ್ಞಾನಿಯ ಸಂಶೋಧನೆಯ ಫಲ ಸಮಸ್ತ ಮಾನವಕುಲಕ್ಕೆ ಇಂದು ದೊರಕುವಂತಾಗಿದೆ. ವಿಜ್ಞಾನಿಗೆ ಜಡವೇ ಏಕಮಾತ್ರ ಸತ್ಯ. ಅವನ ದೃಷ್ಟಿಯಲ್ಲಿ ದೇವರಿಗೆ ಅಸ್ತಿತ್ವವಿಲ್ಲ. ಸಂನ್ಯಾಸಿಗೆ ಏಕಮಾತ್ರ ಸತ್ಯ ದೇವರು. ಜಡವಾದಿ ಸ್ಥೂಲದಲ್ಲಿರುವ ಸೂಕ್ಷ್ಮವನ್ನು ಮರೆತಿದ್ದಾನೆ. ಜಡದಲ್ಲಿಯೂ ಆತ್ಮತತ್ತ್ವವಿದೆ—ಎಂಬುದನ್ನು ಸಂನ್ಯಾಸಿ ಮರೆತಿದ್ದಾನೆ. ವಿಜ್ಞಾನಿ ಮತ್ತು ಸಂನ್ಯಾಸಿ—ಇವರಿಬ್ಬರಿಗೂ ದೃಷ್ಟಿ ವಿಶಾಲವಾದರೆ ಜಡ ಮತ್ತು ಆತ್ಮ—ಎರಡೂ ಸತ್ಯವೆಂಬ ಅರಿವು ಮೂಡುತ್ತದೆ. ಜೀವ, ಜಗತ್ತು, ಬ್ರಹ್ಮ—ಈ ಮೂರು ತತ್ತ್ವಗಳನ್ನು ಒಪ್ಪಿಕೊಂಡ ಅರವಿಂದರು ಈ ಜಗತ್ತನ್ನು ಅವಿದ್ಯಾಭೂಮಿಕೆಯಿಂದಾಗಲಿ, ಮಿಥ್ಯೆಯಿಂದಾಗಲಿ ತಿರಸ್ಕರಿಸುವುದಿಲ್ಲ. ಸಚ್ಚಿದಾನಂದಸ್ವರೂಪವಾದ ಬ್ರಹ್ಮವೇ ಅತಿಮಾನಸ, ಮಾನಸ, ಚೈತ್ಯಪುರುಷ, ಪ್ರಾಣ ಮತ್ತು ಜಡವಾಗಿ ಅವತರಿಸಿರುವುದು; ಜಡದಿಂದ ಅತಿಮಾನಸಕ್ಕೇರುವುದೇ ಜೀವದ ಗುರಿ. ಅತಿ ಮಾನಸದಲ್ಲಿ ಮಾನವರು ಸ್ಥಿತರಾದಾಗ, ದಿವ್ಯಜೀವನ ಪ್ರಪಂಚದಲ್ಲಿ ಪ್ರತಿಷ್ಠಿತವಾಗುತ್ತದೆ. ಆ ದಿವ್ಯಜೀವನದ ಉದಯಕ್ಕೆ ಈ ಕೃತಿ ದಾರಿದೀಪವಾಗಿದೆ.

ಸಾವಿತ್ರಿ ಒಂದು ಯೌಗಿಕ ಕಾವ್ಯ. ಅರವಿಂದರ ಯೌಗಿಕಾನುಭವಗಳು ಇಲ್ಲಿ ಕಾವ್ಯರೂಪದಲ್ಲಿ ಮೈವೆತ್ತಿವೆ. ಮಹಾಭಾರತದ ಕಥಾಸೂತ್ರವನ್ನೇ ಇಟ್ಟುಕೊಂಡು ಯೋಗದರ್ಶನವನ್ನು ಕಾವ್ಯಮಯವಾಗಿ ಚಿತ್ರಿಸಿದ್ದಾರೆ. ಪ್ರಾರ್ಥನೆ, ಮಹಾಕಾರ್ಯ, ಮಹಾಭಾವ—ಇವು ಮಾನವನನ್ನು ಅತೀತಶಕ್ತಿಯೊಡನೆ ಸೇರಿಸುವ ದಿವ್ಯ ಶಕ್ತಿಗಳೆಂಬುದನ್ನು ಬಾಲ್ಯದಲ್ಲಿಯೇ ಸಾವಿತ್ರಿ ಅರಿತಿದ್ದಳು. ಅವಳು ಮೃತ್ಯುವನ್ನು ಪ್ರಜ್ಞಾಪೂರ್ವಕವಾಗಿ ಗೆದ್ದು ತಪಶ್ಶಕ್ತಿಯ ಹಿರಿಮೆಯನ್ನು ತೋರಿಸಿದ ಮಹಾಯೋಗಿನಿ. ಯೋಗಸಾಧನೆಯ ಶಿಖರವನ್ನು ಈ ಕೃತಿಯಲ್ಲಿ ಕಾಣಬಹುದು.

ಅರವಿಂದರು ಸಾಧಕರಿಗೆ ಬರೆದ ಪತ್ರದಲ್ಲಿ ಕೆಲವು ಹಿತವಚನಗಳು ದೇದೀಪ್ಯಮಾನವಾಗಿ ಬೆಳಗುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನಿರೂಪಿಸಿದೆ. ಭಗವಂತನನ್ನು ಜೀವನದಲ್ಲಿ ಸುಪ್ರಕಟಗೊಳಿಸುವುದೇ ಮಾನವಜೀವನದ ಉದ್ದೇಶ. ನಿಮ್ಮಲ್ಲಿ ಎಂಥ ದೋಷಗಳೇ ಇರಲಿ ಭಗವಂತನನ್ನು ಪ್ರೀತಿಸಿ, ಅವನ ಸಂದರ್ಶನಕ್ಕಾಗಿ ಹಾರೈಸಿ, ಅವನ ಮನೆಯ ಬಾಗಿಲು ಎಂದೂ ಮುಚ್ಚಿರುವುದಿಲ್ಲ. ಪರರ ದೋಷಗಳನ್ನು ಹುಡುಕುವುದರಲ್ಲಿ ನಿರತರಾಗಬೇಡಿ. ಅದರಿಂದ ಪ್ರಯೋಜನವಿಲ್ಲ. ಶಾಂತವಾಗಿರುವುದನ್ನು ಅಭ್ಯಾಸಮಾಡಿ. ಕಾಯಕ ಕೆಳದರ್ಜೆಯದೆಂದು ಭಾವಿಸಬೇಡಿ. ಬುದ್ಧಿಜೀವಿಗಳೇ ಕಾಯಕವನ್ನು ಹೀನವೆಂದು ಭಾವಿಸುವುದು, ಭಗವದರ್ಪಿತ ಕಾಯಕಕ್ಕಿಂತ ಸ್ವಾರ್ಥಮೂಲವಾದ ಪಾಂಡಿತ್ಯ ಕೀಳಾದುದು. ಭಗವದರ್ಪಿತಕಾಯಕ ದಿವ್ಯವಾದುದು. ವಿದ್ವಾಂಸನಾಗುವುದೇ ಸರ್ವೋತ್ಕೃಷ್ಟವೆಂದು ತಿಳಿದು ಕಾಯಕವನ್ನು ತಿರಸ್ಕರಿಸುವುದು ಅಹಂಕಾರದ ಚಿಹ್ನೆ. ಮನಸ್ಸು ಚಂಚಲವಾಗಿರು ವಾಗ ಅದು ಯೋಗದಲ್ಲಿ ನೆಲಸುವ ಸಂಭವವಿಲ್ಲ. ಪ್ರಥಮತಃ ಮನಸ್ಸು ನಿಶ್ಚಲವಾಗಬೇಕು. ವ್ಯಕ್ತಿಯ ಚೇತನವನ್ನು ಲುಪ್ತಗೊಳಿಸುವುದು ಯೋಗದ ಉದ್ದೇಶವಲ್ಲ; ಚೇತನವನ್ನು ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಅರಳಿಸುವುದೇ ಯೋಗದ ಪ್ರಥಮ ಕರ್ತವ್ಯ. ಈ ಕಾರಣಕ್ಕಾಗಿ ನಿಶ್ಚಲ ಮನಸ್ಸು ಅವಶ್ಯ.

ಇಂಥ ಮಾರ್ಗದರ್ಶನದ ಬೆಳಕು ಅವರ ನಿರ್ದೇಶನದಲ್ಲಿ ಬೆಳಗುತ್ತದೆ. ಅರವಿಂದರ ಕೃತಿಗಳ ಅಧ್ಯಯನದಿಂದ ಹೊಸ ದೃಷ್ಟಿ, ಹೊಸ ಅಭಿರುಚಿಗಳನ್ನು ಚೇತನದಲ್ಲಿ ಮೂಡಿಸುವ ಜೀವನಪಥ ದೃಗ್ಗೋಚರವಾಗುತ್ತದೆ.

ಲೋಕದಲ್ಲಿ ಇದುವರೆಗೆ ಉದಿಸಿದ ಮಹಾತ್ಮರೆಲ್ಲ ದೈವೀಶಕ್ತಿ ಪ್ರಪಂಚದಲ್ಲಿ ವಿಕಾಸವಾಗಲು ಶ್ರಮಿಸಿದ್ದಾರೆ. ಅರವಿಂದರು ಹಿಂದಿನ ಮಹಾತ್ಮರೆಲ್ಲರ ವಿಚಾರಧಾರೆಗಳನ್ನು ವಿಮರ್ಶಿಸಿ, ಮಹತ್ತ್ವಪೂರ್ಣ ಪೂರ್ಣಯೋಗಮಾರ್ಗವನ್ನು ಜನತೆಯ ಮುಂದೆ ಇರಿಸಿದ್ದಾರೆ. ಈ ಯೋಗಮಾರ್ಗದಲ್ಲಿ ಯಾರು ಬೇಕಾದರೂ ಸಾಧಕರಾಗಬಹುದು. ಯೋಗಸಾಧನೆ ಕೇವಲ ಆತ್ಮಸಾಕ್ಷಾತ್ಕಾರಕ್ಕಾಗಿಯಲ್ಲ, ಅದು ಸಮಷ್ಟಿಯ ಉದ್ಧಾರಕ್ಕೆಂಬುದನ್ನು ಅರವಿಂದರು ಸ್ಪಷ್ಟಪಡಿಸಿದ್ದಾರೆ. (ಯು.ಕೆ.ಎಸ್.)

ಅರವಿಂದರು ಭಾರತದ ಪ್ರಸಿದ್ಧ ದಾರ್ಶನಿಕ, ಕವಿ, ನಾಟಕಕಾರ, ವಿಮರ್ಶಕ. ಸಾಹಿತಿಯಾಗಿ ಗಳಿಸಿರುವುದಕ್ಕಿಂತ ಹೆಚ್ಚಿನ ಪ್ರಾಮುಖ್ಯವನ್ನು ಆಧ್ಯಾತ್ಮಿಕಮಾರ್ಗದರ್ಶಕರಾಗಿ, ವಂದೇಮಾತರಂ ಮತ್ತು ಕರ್ಮಯೋಗಿ ಪತ್ರಿಕೆಗಳಲ್ಲಿ ಬರೆದ ವಿಪುಲ ಲೇಖನಗಳಿಂದ, ಪ್ರಕಟಿಸಿದ ಗ್ರಂಥಗಳಿಂದ, ಕೊಟ್ಟ ಉಪದೇಶಪ್ರವಚನಗಳಿಂದ ಗಳಿಸಿದ್ದಾರೆ. ಅವರ ಕೃತಿಗಳಲ್ಲಿ ಕೆಲವನ್ನು ಮಾತ್ರ ಹೆಸರಿಸಬಹುದು: ಭಾರತದಲ್ಲಿ ನವೋದಯ (1920), ಕಾಳಿದಾಸ (1929), ಕವನಗಳು ಮತ್ತು ನಾಟಕಗಳು (1942), ಸಾವಿತ್ರಿ—ಪೌರಾಣಿಕ ಕಥೆ ಮತ್ತು ಪ್ರತಿಮೆ (1946–54), ಭಾರತೀಯ ಸಂಸ್ಕೃತಿಯ ಅಸ್ತಿಭಾರ (1953), ಕಾವ್ಯದ ಭವಿಷ್ಯ (1953), ವ್ಯಾಸ ಮತ್ತು ವಾಲ್ಮೀಕಿ (1956) —ಇವು ಸಾಹಿತ್ಯ ಚರಿತ್ರೆ ಮತ್ತು ಸಾಹಿತ್ಯವಿವರಣೆ ಮತ್ತು ವಿಮರ್ಶೆಗಳಲ್ಲಿ ಇವರ ಕೆಲವು ಪ್ರಯತ್ನಗಳು.

ಡಾಂಟೆಯ ಅನುಭಾವಿಕ ಗುಲಾಬಿಯನ್ನು ನೆನಪಿಗೆ ತರುವ ಭಗವಂತನ ಗುಲಾಬಿ ಅನುಭಾವಿಕ ಭಕ್ತಿಯ ಅಭಿವ್ಯಕ್ತಿಯಾದರೆ, ಚಿತ್ರ ಮತ್ತು ಪ್ರತಿಮೆಗಳಿಂದ ಶ್ರೀಮಂತವಾದ ಭಾವಗೀತೆ—ಅತೀವ ವಾಸ್ತವಿಕತೆಯ ಕನಸು ಎ ಡ್ರೀಮ್ ಆಫ್ ಸರ್ರಿಯಲ್ ಸೈನ್ಸ್ ಎನ್ನುವ ಅಷ್ಟಷಟ್ಪದಿ. ಇದು ಆಧುನಿಕ ವಿಜ್ಞಾನ ಮತ್ತು ಕಲೆಗಳ ವಿಮರ್ಶೆಯಾಗಿದ್ದು, ಕವಿಯ ವಿಡಂಬನಶಕ್ತಿಯ ಅಳತೆಗೋಲಾಗಿದೆ. ಷೇಕ್ಸ್‌ಪಿಯರ್ ಮತ್ತು ಹೋಮರರ ಭವ್ಯಕೃತಿಗಳು, ಬುದ್ಧನ ದರ್ಶನ ಮತ್ತು ಆಧ್ಯಾತ್ಮಿಕ ಅನುಕಂಪ, ನೆಪೋಲಿಯನ್ನನ ಚಂಡಮಾರುತದಂಥ ಸಮರೋತ್ಸಾಹ ಜೀವನ—ಇವುಗಳಿಗೆ ಯಾವ ವೈಜ್ಞಾನಿಕ ಸಿದ್ಧಾಂತವೂ ವಿವರಣೆ ನೀಡಲಾರದೆಂದು ಕವಿ ಸಾಧಿಸುತ್ತಾರೆ. ವಾಸ್ತವಿಕತೆಯ ಇಂಥ ಅವಶ್ಯ ತಿಳಿವಳಿಕೆ, ಸಮರ ಮತ್ತು ನಾಗರಿಕತೆ ಹಾಗೂ ಜೀವನದ ಸರ್ವನಾಶದ ಹಾದಿ ಎಂದು ಸೂಚಿಸುತ್ತಾರೆ. ಆಧುನಿಕ ಜೀವನ ಮತ್ತು ಸಾಹಿತ್ಯಗಳ ಬಗೆಗೆ ತನ್ನ ವಿಮರ್ಶೆಯನ್ನು ಹಲವು ಪತ್ರಗಳಲ್ಲೂ ಕಾವ್ಯದ ಭವಿಷ್ಯ ಭಾರತೀಯ ಸಂಸ್ಕೃತಿಯ ಅಸ್ತಿಭಾರ, ಭಾರತದಲ್ಲಿ ನವೋದಯ – ಇಂಥ ಕೃತಿಗಳಲ್ಲೂ ನೀಡಿದ್ದಾನೆ. ಸಾಹಿತಿಯಾಗಿ ಮತ್ತು ವೈಚಾರಿಕನಾಗಿ ವಿಜೃಂಭಿಸಿರುವ ಕವಿಯ ಜೀವನವನ್ನು ಮಹಾಮಾತೆಯ ಅಷ್ಟೇ ಉಜ್ಜ್ವಲವಾದ ಜೀವನದೊಡನೆ ನೋಡಿ ತಿಳಿಯಬೇಕಾಗುತ್ತದೆ. ತಮ್ಮ ವೈಚಾರಿಕತೆಯಿಂದ ಅರವಿಂದರು ಬೇಂದ್ರೆ, ಪುಟ್ಟಪ್ಪ, ಗೋಕಾಕರಂಥ ಹಲವಾರು ಸುಪ್ರಸಿದ್ಧ ಸಾಹಿತಿಗಳ ಮೇಲೆ ಗಣನೀಯ ಪ್ರಭಾವ ಬೀರಿದ್ದಾರೆ. (ಕೆ.ಎ.)

**ಅರವಿಂದಾಶ್ರಮ :** ಪಾಂಡಿಚೇರಿಯಲ್ಲಿ ಅರವಿಂದರು ಸ್ಥಾಪಿಸಿದ ಆಧ್ಯಾತ್ಮಿಕ ಸಾಧನೆಯ ಸಂಸ್ಥೆ. ಅರವಿಂದರ ಶಿಷ್ಯೆ ಶ್ರೀಮಾತೆ ಪ್ರಾಚೀನ ಭಾರತದ ಗುರುಕುಲಗಳ ಆದರ್ಶದಲ್ಲಿ ಇದನ್ನು ಬೆಳೆಸಿದರು. ಈಗ ಆಶ್ರಮಕ್ಕೆ ಸೇರಿದ ಮನೆಗಳೂ ಹೊಲಗಳೂ ತೋಟಗಳೂ

ಪಾಂಡಿಚೆರಿಯ ಬೇರೆ ಬೇರೆ ಸ್ಥಳಗಳಲ್ಲಿವೆ. ಇಂದು ಆಶ್ರಮದಲ್ಲಿ ವಿದ್ಯಾವಂತರು, ಕಲಾವಿದರು, ಯಂತ್ರಜ್ಞರು, ಯೋಗಸಾಧಕರು ಮೊದಲಾದ ಭಿನ್ನರುಚಿಯವರು ಇದ್ದಾರೆ. ಆಶ್ರಮಕ್ಕೆ ಸೇರುವವನಿಗೆ ಶ್ರೀಮಾತೆಯಲ್ಲಿ ಸಂಪೂರ್ಣ ಸಮರ್ಪಣಭಾವವಿರಬೇಕಾದುದು ಮುಖ್ಯ ಅರ್ಹತೆ. ಯಾವ ಕೆಲಸವನ್ನಾದರೂ ಆಶ್ರಮವಾಸಿಗಳು ಸಾಧನೆಯೆಂದೇ ಮಾಡಬೇಕು.

ಅರವಿಂದರು ಸ್ಥಾಪಿಸಿದ ಆಧ್ಯಾತ್ಮಿಕ ಸಂಸ್ಥೆ, ಪಾಂಡಿಚೆರಿ

ಧ್ಯಾನ, ಕರ್ಮ, ಸೇವೆ, ಜ್ಞಾನ—ಇವುಗಳಿಗೆ ಆಶ್ರಮದಲ್ಲಿ ಸಮಾನವಾದ ಅವಕಾಶವಿದೆ. ಮಾಡುವ ಕೆಲಸದಲ್ಲಿ ಶ್ರದ್ಧೆ, ಚಿತ್ತಶುದ್ಧಿ ಮುಖ್ಯ. ಮಾನವನ ಪರಿಪೂರ್ಣ ವಿಕಾಸಕ್ಕೆ ದೇಹವಿಕಾಸವೂ ಆವಶ್ಯಕ ಎಂದು ತಿಳಿದು ಅಂಗಸಾಧನೆ, ಕುಸ್ತಿ, ಈಜುವುದು, ಟೆನ್ನಿಸ್—ಮೊದಲಾದ ಸೌಲಭ್ಯಗಳನ್ನು ಆಶ್ರಮದ ಸಾಧಕರಿಗೆ ಒದಗಿಸಿದ್ದಾರೆ. ಆಶ್ರಮದ ಶಿಸ್ತು, ನೈರ್ಮಲ್ಯ ಅನುಕರಣೀಯ. ಇಲ್ಲಿ ಒಂದೇ ಬಾರಿಗೆ ಸುಮಾರು ಒಂದು ಸಾವಿರ ಮಂದಿ ಊಟಕ್ಕೆ ಕುಳಿತುಕೊಳ್ಳುವ ದೊಡ್ಡ ವಿಶಾಲಭವನವಿದೆ. ಇಲ್ಲಿ ಕೊಡುವ ಆಹಾರ ಸರಳವಾಗಿದ್ದರೂ ದೇಹಪೋಷಣೆಗೆ ಯುಕ್ತವಾಗಿದೆ. ಎಲ್ಲ ಕಾರ್ಯದಲ್ಲಿಯೂ ಶುಚಿತ್ವಕ್ಕೆ ಅಗ್ರಸ್ಥಾನ.

ಆಶ್ರಮಕ್ಕೆ ಬೇಕಾದ ತರಕಾರಿ, ಹಣ್ಣು ಮುಂತಾದ ಆಹಾರ ಪದಾರ್ಥಗಳನ್ನು ಆಶ್ರಮದ ತೋಟಗಳಲ್ಲಿ ಬೆಳೆಸುತ್ತಾರೆ. ಆಶ್ರಮಕ್ಕೆ ಸೇರಿದ ಗೋಶಾಲೆಯಿಂದ ಸಾಕಷ್ಟು ಹಾಲು ದೊರಕುತ್ತದೆ. ಪುಸ್ತಕ ಪ್ರಕಟಣಶಾಖೆ, ಪುಸ್ತಕ ಭಂಡಾರ, ಶಾಲೆಗಳು, ಅತಿಥಿಗೃಹ, ಯಾಂತ್ರಿಕ ಶಿಕ್ಷಣಶಾಖೆ, ವೃತ್ತಿಶಿಕ್ಷಣ ಶಾಲೆಗಳು, ಶ್ರೀ ಅರವಿಂದ ಅಂತಾರಾಷ್ಟ್ರೀಯ ವಿದ್ಯಾಕೇಂದ್ರ–ಇವೆಲ್ಲ ಆಶ್ರಮದ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಆಶ್ರಮಕ್ಕೆ ಸೇರಿದ ರಂಗಮಂದಿರ ಸು. 2,000 ಪ್ರೇಕ್ಷಕರು ಕುಳಿತು ನೋಡುವಷ್ಟು ವಿಶಾಲವೂ ಭವ್ಯವೂ ಆಗಿದೆ. ಸಾಧಕರ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಪ್ರಗತಿಗಾಗಿ ಆಶ್ರಮ ಸರ್ವಪ್ರಯತ್ನಗಳನ್ನೂ ಮಾಡುತ್ತಿದೆ. *

**ಅರಸೀಕೆರೆ** : ಹಾಸನ ಜಿಲ್ಲೆಯ ಒಂದು ತಾಲ್ಲೂಕು, ಆ ತಾಲ್ಲೂಕಿನ ಮುಖ್ಯ ಸ್ಥಳ. ತಾಲ್ಲೂಕನ್ನು ಕಡೂರು, ಚಿಕ್ಕನಾಯಕನಹಳ್ಳಿ, ತಿಪಟೂರು, ಚನ್ನರಾಯಪಟ್ಟಣ, ಹಾಸನ, ಬೇಲೂರು ಮತ್ತು ಚಿಕ್ಕಮಗಳೂರು ತಾಲ್ಲೂಕುಗಳು ಸುತ್ತವರಿದಿವೆ. ಕಸಬ, ಕಣಕಟ್ಟೆ, ಬಾಣಾವರ, ಜಾವಗಲ್ಲು, ಗಂಡಸಿ ಹೋಬಳಿಗಳಿವೆ. ಒಟ್ಟು 370 ಗ್ರಾಮಗಳೂ ಅರಸೀಕೆರೆ ಮತ್ತು ಬಾಣಾವರ ಪಟ್ಟಣಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 1278ಚ.ಕಿಮೀ. ಜನಸಂಖ್ಯೆ 3,03,000. ಮೊದಲು ಹಾರ್ನಹಳ್ಳಿ ತಾಲ್ಲೂಕ್ಕಾಗಿದ್ದು 1882ರಲ್ಲಿ ಅರಸೀಕೆರೆ ತಾಲ್ಲೂಕಾಯಿತು.

ಇದು ಬೆಟ್ಟಗುಡ್ಡಗಳ ಪ್ರದೇಶ. ಹಿರೇಕಲ್ಲುಬೆಟ್ಟ ಎಂಬುದು ಎತ್ತರವಾದ ಬೆಟ್ಟಗಳಲ್ಲೊಂದು. ಈ ತಾಲ್ಲೂಕಿನ ದಕ್ಷಿಣಭಾಗದಲ್ಲಿ ಸಾಧಾರಣವಾದ ಅನೇಕ ಕುರುಚಲು ಕಾಡುಗಳೂ ಹುಲ್ಲು ಬೆಳೆಯುವ ಪ್ರದೇಶಗಳೂ ಇವೆ. ಇಲ್ಲೆಲ್ಲ ಸಾಧಾರಣ ಫಲವತ್ತಾದ, ಗಡುಸಾದ ಕೆಂಪು ಮತ್ತು ಬೂದುಬಣ್ಣದ ಮಣ್ಣಿದೆ. ಭೂಮಿ ದಕ್ಷಿಣದಿಂದ ಉತ್ತರದ ಕಡೆಗೆ ಇಳಿಜಾರಾಗಿದೆ. ಮಳೆ ಕಡಿಮೆ, ವಾರ್ಷಿಕ ಸರಾಸರಿ 671ಮಿಮೀ. ರಾಗಿ, ತೆಂಗು, ಮೆಣಸಿನಕಾಯಿ, ಎಣ್ಣೆಕಾಳುಗಳು, ಜೋಳ ಮುಖ್ಯ ಬೆಳೆಗಳು. ಕೆರೆಗಳಿಂದ 1770, ಬಾವಿಗಳಿಂದ 820 ಮತ್ತು ಕೊಳವೆ ಬಾವಿಗಳಿಂದ 2800ಹೆ.ಗಳ ಜಮೀನು ನೀರಾವರಿಗೆ ಒಳಪಟ್ಟಿದೆ. ದಕ್ಷಿಣಕ್ಕೆ ಅಮೃತಮಹಲ್ ಕಾವಲುಗಳು ಅನೇಕವಿದ್ದು ಇಲ್ಲಿ ಒಳ್ಳೆಯ ದನಕರುಗಳನ್ನು ಸಾಕುತ್ತಾರೆ. ಕುರಿ ಸಾಕಣೆಯೂ ಹೆಚ್ಚು.

ಬಾಣಾವರ, ಗರುಡನಗಿರಿ, ಹಾರನಹಳ್ಳಿ, ಹುಲ್ಲೆಕೆರೆ ಮತ್ತು ಜಾವಗಲ್ಲು ಈ ತಾಲ್ಲೂಕಿನ ಪ್ರಸಿದ್ಧ ಸ್ಥಳಗಳು (ಆಯಾ ಲೇಖನಗಳನ್ನು ನೋಡಿ). ಅರಕೆರೆ ಎಂಬ ಗ್ರಾಮದಲ್ಲಿ ಚೆನ್ನಕೇಶವ ಮತ್ತು ರಾಮೇಶ್ವರ ದೇವಾಲಯಗಳಿವೆ. ಇಲ್ಲಿ ಗಂಗದೊರೆ ಎಚಿಯಪ್ಪನ ಕಾಲಕ್ಕೆ ಸಂಬಂಧಿಸಿದ ಶಾಸನವಿರುವ ಒಂದು ದೊಡ್ಡ ವೀರಗಲ್ಲಿದೆ. ಕಂಚಿನಕೋವಿ ಮರತಿ ಎಂಬುದು ಅರಸೀಕೆರೆ ಪಟ್ಟಣಕ್ಕೆ 4ಕಿಮೀ ದೂರದಲ್ಲಿರುವ ಒಂದು ಸಣ್ಣ ಬೆಟ್ಟ. ಇಲ್ಲಿ ದೇವಾಲಯಗಳ ಅವಶೇಷಗಳಿವೆ. ಹಿಂದೆ ಇಲ್ಲೊಂದು ಊರಿದ್ದಿರಬಹುದೆಂದು ಹೇಳುತ್ತಾರೆ. ಮಾಲೇಕಲ್ಲುತಿರುಪತಿ ಅರಸೀಕೆರೆಗೆ 3ಕಿಮೀ ದೂರದಲ್ಲಿರುವ ಒಂದು ಯಾತ್ರಾಸ್ಥಳ. ಇಲ್ಲಿನ ಹಿರೇಕಲ್ಲು ಬೆಟ್ಟದ ಮೇಲಿರುವ ವೆಂಕಟರಮಣಸ್ವಾಮಿ ಮತ್ತು ಬೆಟ್ಟದ ಬುಡದಲ್ಲಿರುವ ಗೋವಿಂದರಾಜಸ್ವಾಮಿ ದೇವಾಲಯಗಳು ಪ್ರಸಿದ್ಧವಾದವು. ಮಾವತ್ತನ ಹಳ್ಳಿಯಲ್ಲಿ ಹೊಯ್ಸಳ ಶೈಲಿಯ ಮಹಾಲಿಂಗೇಶ್ವರ ದೇವಾಲಯವಿದೆ. ಅಗ್ಗುಂದದಲ್ಲಿ ಶಿಥಿಲವಾದ ಎರಡು ಹೊಯ್ಸಳ ದೇವಾಲಯಗಳಿವೆ. ಅರಸೀಕೆರೆಗೆ ಉತ್ತರದಲ್ಲಿ 11ಕಿಮೀ ದೂರದಲ್ಲಿರುವ ನಾಗಪುರಿ ಕೋಟೆಯಲ್ಲಿ ಹೈದರ್ ಅಲಿ ಕಟ್ಟಿದ ಕೋಟೆಯ ಅವಶೇಷವಿದೆ. ಅರಸೀಕೆರೆಗೆ 28ಕಿಮೀ ದೂರದಲ್ಲಿ ತಿಮ್ಮನಹಳ್ಳಿಯ ಹತ್ತಿರ ವೇದಾವತಿ ನದಿಗೆ ಹಿರೆಕಟ್ಟೆವಡ್ಡು ಎನ್ನುವ ಕಟ್ಟೆ ಕಟ್ಟಲಾಗಿದೆ.

ತಾಲ್ಲೂಕಿನ ಕೇಂದ್ರ ಅರಸೀಕೆರೆಯ ಜನಸಂಖ್ಯೆ 45,160. ಮೈಸೂರು ಮತ್ತು ಬೆಂಗಳೂರು ಕಡೆಗಳಿಂದ ಅರಸೀಕೆರೆಗೂ ಮುಂದಕ್ಕೂ ರೈಲು ಮಾರ್ಗಗಳಿವೆ. ಇದೊಂದು ವ್ಯಾಪಾರ ಕೇಂದ. ಪ್ರತಿ ಶುಕ್ರವಾರ ಇಲ್ಲಿ ನಡೆಯುವ ದೊಡ್ಡ ಸಂತೆ ತೆಂಗಿನಕಾಯಿ ಮತ್ತು ಕೊಬ್ಬರಿ ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ. 1882ರಷ್ಟು ಹಿಂದೆಯೇ ಅಸ್ತಿತ್ವಕ್ಕೆ ಬಂದ ಇಲ್ಲಿನ ಪುರಸಭೆ ಹಳೆಯ ಪುರಸಭೆಗಳಲ್ಲೊಂದು. ಈ ಊರಿಗೆ ಸಮೀಪವಾಗಿ ಕಸ್ತೂರಬಾ ಗ್ರಾಮವೆಂಬ ಒಂದು ಮಾದರಿ ಗ್ರಾಮ ಸ್ಥಾಪಿತವಾಗಿದೆ. ಇದನ್ನು ಶ್ರೀಮತಿ ಯಶೋಧರಾ ದಾಸಪ್ಪ ಅವರು ಸ್ಥಾಪಿಸಿದರು.

ಈ ಊರು ಹೊಯ್ಸಳರ ಆರಂಭಕಾಲದಲ್ಲಿಯೆ ಹುಟ್ಟಿಕೊಂಡಿತು. 11ನೆಯ ಶತಮಾನದ ಕಡೆಯಲ್ಲಿ ಎರೆಯಂಗನ ಪಟ್ಟದರಸಿ ಮಹಾದೇವಿ ಕೆರೆಯನ್ನು ಕಟ್ಟಿಸಿದಂತೆ ಒಂದು ಶಾಸನದಿಂದ ತಿಳಿದುಬರುವುದರಿಂದ ಈ ಅರಸಿಯ ಹೆಸರಿನಿಂದಲೇ ಅರಸೀಕೆರೆ ಎಂಬ ಹೆಸರು ಈ ಊರಿಗೆ ಬಂದಿರಬಹುದು. ಮುಂದೆ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಈ ಊರು ಅಭ್ಯುದಯದ ಪರಾಕಾಷ್ಠೆಯನ್ನು ಕಂಡಿತು. ಬಲ್ಲಾಳನ ಪಿರಿಯರಸಿ ಉಮಾದೇವಿಯ ತವರಾಗಿದ್ದ ಈ ಊರು ಅವನ ಕಾಲದಲ್ಲಿ ಹೊಯ್ಸಳ ರಾಜ್ಯದ 'ಭಂಡಾರವಾಡ' ವಾಯಿತು. ಇದಕ್ಕೆ ಜಯಗೊಂಡ ಬಲ್ಲಾಳಪುರ, ವೀರವಿಜಯ ಬಲ್ಲಾಳಪುರ ಎಂಬ ಹೆಸರುಗಳೂ ಇದ್ದು ಶಾಸನಗಳಲ್ಲಿ ರಾಜಧಾನಿ ಅರಸಿಯಕೆರೆ ಎನ್ನಿಸಿಕೊಂಡಿದೆ.

ಈಶ್ವರ ದೇವಸ್ಥಾನ

ವೇದವಿದರಾದ ವಿಪ್ರರು, ವೀರರಾದ ಕಾಯ್ವಾಳುಗಳು, ಆಢ್ಯರಾದ ಪರದರು, ಅಲಕಾಧೀಶ ಕುಬೇರನನ್ನೂ ಧಿಕ್ಕರಿಸುವ ವಾಣಿಜ್ಯರು, ಅಚಲವಾಕ್ಯರಾದ ಜನ, ವಿನೂತಾಕಾರರಾದ ಕಾಂತಾಜನ, ಇಳೆಗೆ ಮಂಡನಪ್ರಾಯವಾದ ದೇವಾಗಾರ ಸಂದೋಹ, ಸಾಗರತೀರದಂತೆ ಶೋಭಿಸುವ ತುಂಬುಕೆರೆಗಳು, ಫಲಭರಿತ ವನಗಳು, ಪುಷ್ಪಭರಿತ ತೋಟಗಳು, ಸುರವೃಕ್ಷದಂತಿರುವ ಮಾವು, ಸುರಲತೆಯಂತಿರುವ ತಾಂಬೂಲ, ತೆಂಗು, ಕೌಂಗುಗಳು, ಗಂಧಶಾಲೀ ಪರಿಮಳಗಳಿಂದ ಕೂಡಿ ಉದ್ಯತ್ ಪ್ರಜಾಪೂರಿತವಾದ ಈ ನಗರಿಯು ಸುತ್ತಲೂ ಬಳಸಿದ್ದ ಕೋಟೆಯಿಂದ ಉರ್ವೀಮಂಡನ ವಾಯಿತೆಂದು ಇಲ್ಲಿನ ಹಲವಾರು ಶಾಸನಗಳನ್ನು ರಚಿಸಿರುವ ದೇವಪಾರ್ಯ, ತ್ರಿವಿಕ್ರಮಪಂಡಿತ, ಶಾಂತಿನಾಥ ಮೊದಲಾದ ಕವಿಗಳು ಹಾಡಿ ಹೊಗಳಿದ್ದಾರೆ.

ಪ್ರಸನ್ನ ಚೆನ್ನಕೇಶವ, ನಖರ ಜಿನಾಲಯ, ಸಹಸಕೂಟ ಚೈತ್ಯಾಲಯ, ಕೊಯ್ಲಾಳೇಶ್ವರ, ಜಗತೇಶ್ವರ, ಮೇಳೇಶ್ವರ, ಬ್ರಹ್ಮ, ಕತ್ತಮೇಶ್ವರ, ಬಲ್ಲೇಶ್ವರ, ಅರೆಯಶಂಕರದೇವ ಮುಂತಾದ ಹಲವು ಗುಡಿಗೋಪುರಗಳನ್ನು ಅನೇಕ ರಾಜ್ಯಾಧಿಕಾರಿಗಳು ಹಾಗೂ ವಣಿಕ್ ಮತ್ತು ವೃತ್ತಿಶ್ರೇಣಿಗಳು, ಸರಸ್ವತಿ ಗಣದಾಸಿ ಕೇತೋಜ, ಪುಲಿಗೆಯ ಏಚೋಜ, ಸಿಂಗೋಜ

ಮುಂತಾದ ಬಿರುದ ರೂವಾರಿಗಳನ್ನು ನಿಯೋಜಿಸಿ ಕಟ್ಟಿಸಿದರೆಂದು ಹೊಯ್ಸಳ ಶಾಸನಗಳಿಂದ ತಿಳಿಯುತ್ತದೆ. ವಿದ್ಯೆಗೆ, ಕಲೆಗೆ, ಐಶ್ವರ್ಯಕ್ಕೆ ಹೆಸರಾಗಿದ್ದ ಈ ಊರು ತೆಂಕಣ ಅಯ್ಯಾವೊಳೆ ಯಾಯಿತು. ಅಭಿನವ ದ್ವಾರಾವತಿಯಾಯಿತು. ಇಲ್ಲಿನ ಧರ್ಮಪ್ರತಿಪಾಲಕ ಶಕ್ತಿಯನ್ನು ಕೇಳಿದ ಕಳಚೂರ್ಯರ ಸಚಿವ ರೇಚರಸ ಬಲ್ಲಾಳನನ್ನಾಶ್ರಯಿಸಿ ಸಹಸ್ರಕೂಟ ಚೈತ್ಯಾಲಯಕ್ಕೆ ಸಹಸ್ರಕೂಟ ಜಿನಬಿಂಬವನ್ನು ಮಾಡಿಸಿಕೊಟ್ಟ.

ಆದರೆ ಇಷ್ಟು ಉನ್ನತಿಗೇರಿದ ಈ ಊರು ಹೊಯ್ಸಳ ರಾಜ್ಯದ ಅವನತಿಯೊಂದಿಗೆ ಇಳಿಮುಖವಾಯಿತು. ಮುಂದೆ ಕ್ರಮವಾಗಿ ಚನ್ನಪಟ್ಟಣದ ಜಗದೇವರಾಯ, ತರೀಕೆರೆಯ ತಿಮ್ಮಪ್ಪನಾಯಕ, ಇಕ್ಕೇರಿಯ ಶಿವಪ್ಪನಾಯಕ ಇವರ ಅಧೀನದಲ್ಲಿ ಒಂದು ಸಾಮಾನ್ಯ ಊರಾಗಿದ್ದು ಕಡೆಯಲ್ಲಿ ಮೈಸೂರರಸರಿಗೆ ಸೇರಿತು. ಆದರೆ ಮರಾಠಿಗರ ದಾಳಿಗೆ ಬೆದರಿ ಕಪ್ಪ ತೆತ್ತು ಸಾಕಾಗಿದ್ದ ಮೈಸೂರು ಕಪ್ಪದ ಹೊರೆ ತೀರುವವರೆಗೆ ಒತ್ತೆ ಇಟ್ಟ ಮೈಸೂರು ರಾಜ್ಯದ ಭಾಗಗಳಲ್ಲಿ ಈ ಊರು ಸೇರಿತು. ಆಗ ಇದು ಸುಲಿಗೆಗೊಳಗಾಗಿ ಹಾಳುಹಳ್ಳಿಯಾಗಿ ದಾರಿಹೋಕರನ್ನು ಸುಲಿಯುವ ದರೋಡೆಕೋರರಿಗೆ ಆಶ್ರಯಸ್ಥಾನವಾಯಿತು. 19ನೆಯ ಶತಮಾನದ ಕೊನೆಯಲ್ಲಿ ಬೆಂಗಳೂರು– ಪುಣೆ ರೈಲುಮಾರ್ಗ ಹಾಕಿದಮೇಲೆ ಈ ಊರು ಪುನಃ ಬೆಳೆಯಲಾರಂಭಿಸಿತು.

ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳು ಈಗ ಬಹುಮಟ್ಟಿಗೆ ನಾಶವಾಗಿವೆ. ಆದರೆ ಬಹುಶಃ 2ನೆಯ ಬಲ್ಲಾಳ ಕಟ್ಟಿಸಿರಬಹುದಾದ ಈಶ್ವರದೇವಾಲಯ ಉಳಿದಿದೆ. ಪುಟ್ಟಪುಟ್ಟ ಗರ್ಭಗೃಹ ಸುಕನಾಸಿ, ನವರಂಗ, ಮುಖಮಂಟಪಗಳು, ನಕ್ಷತ್ರಾಕಾರದಲ್ಲಿ ವೈವಿಧ್ಯಮಯವಾಗಿ ಸುಂದರವಾಗಿರುವ ಹೊರವಿನ್ಯಾಸ, ಅದೇ ವಿನ್ಯಾಸದಲ್ಲಿಯೇ ನೀಳವಾಗಿ ಗರ್ಭಗೃಹದ ಮೇಲೆದ್ದಿರುವ ಲಾವಣ್ಯಮಯವಾದ ಗೋಪುರ, ಹೊರಗೂ ಒಳಗೂ ಯಾವ ಭಾಗವನ್ನೂ ಬಿಡದಂತೆ ಚಾತುರ್ಯದಿಂದ ಕಡೆದು ತುಂಬಿಸಿದ್ದರೂ ಅತಿಯಾಯಿತು ಎನ್ನಿಸದ ಶಿಲ್ಪಜ್ಞಾನ್ಮೆಯಿಂದ ಕೂಡಿರುವ ಈ ದೇವಾಲಯದ ಹೊರಗೋಡೆಯ ಮೇಲೆ ಒಂದು ಸಾಲು ಮಾತ್ರ ಮೂರ್ತಿಶಿಲ್ಪವಿದೆ. ಹಲವಾರು ಮೂಲೆಗಳುಳ್ಳ ನಕ್ಷತ್ರಾಕಾರದ ಮುಖಮಂಟಪಕ್ಕೆ ದೊಡ್ಡದಾದ ಒಂದೇ ಭುವನೇಶ್ವರಿಯಿದ್ದು ಅಪರೂಪವಾದ ರೀತಿಯಲ್ಲಿದೆ. ನವರಂಗದ ಒಳಗೋಡೆಯ ಕಲಾತ್ಮಕವಾದ ಗೂಡುಗಳು, ಸುಂದರವಾಗಿ ಲಲಿತವಾಗಿ ಕಡೆದಿರುವ ಕಂಬಗಳು, ಕುಸುರಿ ಕೆಲಸದ ಪರಾಕಾಷ್ಠೆಯನ್ನು ಮುಟ್ಟಿರುವ ಗರ್ಭಗೃಹದ ಬಾಗಿಲು ಎಲ್ಲವೂ ಆಕರ್ಷಕವಾಗಿವೆ. ಈ ದೇವಾಲಯದ ಪಕ್ಕದಲ್ಲಿಯೇ ಇರುವ ಜೋಡಿ ಗರ್ಭಗೃಹಗಳುಳ್ಳ ಸಾಮಾನ್ಯ ಶಿವಾಲಯವೊಂದು, ಸಹಸ್ರಕೂಟ ಬಸದಿಯೊಂದು ಈಗ ಉಳಿದು ಬಂದಿರುವ ಆ ಕಾಲದ ಕಟ್ಟಡಗಳು. (ಎಂ.ಎಚ್.)

**ಅರಸೊತ್ತಿಗೆ :** ಸಾರ್ವಭೌಮತ್ವವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ದೇಶದ ಒಂದು ಕುಟುಂಬದಲ್ಲಿ ಮಾತ್ರವೇ ಅಡಕವಾಗಿರುವುದು ರೂಢಿ. ಹೆಚ್ಚಾಗಿ ವಂಶಪಾರಂಪರ್ಯ ವಾಗಿ ನಡೆದುಬರುತ್ತಿತ್ತು. ಒಮ್ಮೊಮ್ಮೆ ಅರಸರನ್ನು ಚುನಾಯಿಸುವ ಕ್ರಮವೂ ಇತ್ತು. ಅರಸೊತ್ತಿಗೆಯ ಮೂಲ ಮತ್ತು ಅದರಲ್ಲಿ ಅಂತರ್ಗತವಾಗಿರುವ ಸರ್ವಾಧಿಕಾರ ದೈವನಿರ್ಮಿತ ಎಂಬ ಸಿದ್ಧಾಂತ ಯುರೋಪಿನಲ್ಲಿ 17ನೆಯ ಶತಮಾನದಲ್ಲಿ ಪ್ರಚಲಿತವಾಗಿತ್ತು. ಅರಸೊತ್ತಿಗೆ ರಾಜಕುಟುಂಬದ ಹಿರಿಯನಿಗೆ ಮಾತ್ರ ಪ್ರಾಪ್ತವಾಗುವ ಪದ್ಧತಿ. ಕುಟುಂಬದ ಕಲಹಗಳನ್ನು ತಡೆಗಟ್ಟಲು ಅನುಕೂಲವಾಗುವುದಕ್ಕಾಗಿ ಈ ಪದ್ಧತಿ ಬೆಳೆದುಬಂದಿದೆ. ಕೆಲವು ದೇಶಗಳಲ್ಲಿ ಸ್ತ್ರೀಯರು ಅರಸೊತ್ತಿಗೆಗೆ ಅನರ್ಹರಾಗಿರುವುದರಿಂದ ಕಲಹಸಂಭವ ಇನ್ನೂ ಕಡಿಮೆಯಾಗಿದೆ. ಅರಸೊತ್ತಿಗೆಯಲ್ಲಿ ಧಾರ್ಮಿಕ ಕಾರ್ಯಗಳನ್ನು ಅಡಕಮಾಡುವ ಪದ್ಧತಿ ಪೂರ್ವರಾಷ್ಟ್ರಗಳಿಂದ, ಕ್ರೈಸ್ತಧರ್ಮದಿಂದ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿದೆ. ಆದರೆ ಮತೀಯಕ್ಷೇತ್ರ ಅಥವಾ ಧಾರ್ಮಿಕರಂಗದಲ್ಲೂ ಅರಸನ ಸಾರ್ವಭೌಮತ್ವ 16ನೆಯ ಶತಮಾನದ ಪ್ರಾಟೆಸ್ಟಂಟ್ ಸುಧಾರಣೆಯ ಅನಂತರ ಪ್ರಾಟೆಸ್ಟಂಟ್ ರಾಷ್ಟ್ರಗಳಲ್ಲಿ ಮಾತ್ರವೇ ಆರಂಭವಾಯಿತು.

ಪ್ರಜಾಪ್ರಭುತ್ವದ ಬೆಳೆವಣಿಗೆ ಮತ್ತು ಪ್ರಭಾವದಿಂದ ಅರಸೊತ್ತಿಗೆ ಒಂದು ಕಾಲದ ವೈಭವ, ಅಧಿಕಾರವನ್ನೆಲ್ಲ ಕಳೆದುಕೊಂಡು ಹೆಸರನ್ನು ಮಾತ್ರ ಉಳಿಸಿಕೊಂಡಿದೆ. ಇಂಗ್ಲೆಂಡ್ ಇದಕ್ಕೆ ಉದಾಹರಣೆ. ಸ್ವಾತಂತ್ರ್ಯಾನಂತರ ಭಾರತದ ಪುನರ್‌ನಿರ್ಮಾಣವಾದಾಗ ಅಲ್ಲಿನ 600ಕ್ಕೂ ಮೇಲ್ಪಟ್ಟ ಅರಸೊತ್ತಿಗೆಗಳು ಕ್ರಮೇಣ ರದ್ದಾಗಿವೆ. (ವಿ.ಆರ್.ಎಚ್.)

**ಅರಳಗುಪ್ಪೆ :** ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿ ಬಾಣಸಂದ ರೈಲ್ವೆ ನಿಲ್ದಾಣದಿಂದ ಪಶ್ಚಿಮಕ್ಕೆ ಸು.7ಕಿಮೀ ದೂರದಲ್ಲಿರುವ, ಪ್ರಾಚೀನ ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾದ ಒಂದು ಹಳ್ಳಿ.

ಇಲ್ಲಿ ಚೆನ್ನಕೇಶವ, ಕಲ್ಲೇಶ್ವರ ಎಂಬ ಎರಡು ಸುಂದರ ದೇವಾಲಯಗಳಿವೆ. ಚೆನ್ನಕೇಶವ ದೇವಾಲಯ ಹೊಯ್ಸಳ ವಾಸ್ತುಶೈಲಿಯಲ್ಲಿ ಬಳಪದ ಕಲ್ಲಿನಿಂದ ಕಟ್ಟಲಾದ ಗರ್ಭಗೃಹ, ಸುಕನಾಸಿ, ನವರಂಗಗಳಿಂದ ಕೂಡಿದ ಸುಂದರ ದೇವಾಲಯ. ಚೆನ್ನಕೇಶವ ದೇವಾಲಯ ಪೂರ್ವಾಭಿ ಮುಖವಾಗಿದ್ದು ಪ್ರವೇಶದ್ವಾರದ ಒಳಗೆ ಆಚೀಚೆ ಸುಂದರ ಸ್ತಂಭಗಳಿಂದ ಕೂಡಿದ ಜಗಲಿಗಳಿವೆ. ಇದನ್ನು ಹೋನೋಜನೆಂಬ ಶಿಲ್ಪಿ 13ನೆಯ ಶತಮಾನದ ಮಧ್ಯಭಾಗದಲ್ಲಿ ಕಟ್ಟಿರಬೇಕು. ಹೊರಪ್ರಾಕಾರದಲ್ಲಿ ಆನೆ, ಕುದುರೆ, ಹಂಸ, ವ್ಯಾಳಿ, ಲತೆ, ಮೂರ್ತಿಗಳ ಮೆರವಣಿಗೆಯ ಶಿಲ್ಪಪಂಕ್ತಿಗಳಿವೆ. ನವರಂಗದ ಕಂಬಗಳು ಬೇಲೂರು ಹಳೇಬೀಡುಗಳಲ್ಲಿಯ ಕಂಬಗಳಿಗಿಂತ ವಿಶಿಷ್ಟಶಿಲ್ಪಕಲಾ ವಿನ್ಯಾಸದಿಂದ ಕೂಡಿವೆ. ಒಟ್ಟಿಗೆ

ಶಿವತಾಂಡವ ನೃತ್ಯ

ಹತ್ತು ಭುವನೇಶ್ವರಿಗಳಿವೆ. ಒಂದೊಂದರಲ್ಲೂ ಸ್ವಸ್ತಿಕ, ಬಾಳೆಯ ಮೋತೆಯಂಥ ರಚನೆಗಳು ಚೇತೋಹಾರಿಯಾಗಿವೆ. ಗರ್ಭಗೃಹದ ಪ್ರವೇಶದ್ವಾರದ ಬಲಕ್ಕೆ ಇರುವ ಗಣಪತಿವಿಗ್ರಹ ಮತ್ತು ಎಡಭಾಗದಲ್ಲಿರುವ ಮಹಿಷಾಸುರಮರ್ದಿನಿ ತುಂಬ ಮೋಹಕಭಂಗಿಯಲ್ಲಿ ನಿಂತಿದೆ. ದೇವಾಲಯದ ದಕ್ಷಿಣದ ಗೋಡೆಗೆ ತಾಗಿದಂತೆ ಸ್ವಲ್ಪ ಇತ್ತೀಚಿನ ಉಗ್ರನರಸಿಂಹನ ವಿಗ್ರಹವಿದೆ.

ಕಲ್ಲೇಶ್ವರ ದೇವಾಲಯದ ನವರಂಗ ದ್ವಾರ

ಊರಿನ ಈಶಾನ್ಯಭಾಗದಲ್ಲಿ ಸು.10ನೆಯ ಶತಮಾನದ ಕಲ್ಲೇಶ್ವರ ದೇವಾಲಯವಿದೆ. ಸುತ್ತಮುತ್ತಲೂ ಪಂಚಲಿಂಗ ಗುಡಿಗಳಿವೆ. ನವರಂಗದ ಮೇಲ್ಛಾವಣಿಯಲ್ಲಿರುವ ಭುವನೇಶ್ವರಿ ಒಂದು ಅದ್ಭುತರಮ್ಯ ಶಿಲ್ಪಕಲಾಸೃಷ್ಟಿ. ಕೇವಲ 6' ಚಚ್ಚೌಕದ ಕಪ್ಪುಕಲ್ಲಿನಲ್ಲಿ ಅಷ್ಟದಿಕ್ಪಾಲಕರು ತಮ್ಮ ತಮ್ಮ ವಾಹನಾರೂಢರಾಗಿದ್ದು ಮಧ್ಯದಲ್ಲಿ ತಾಂಡವೇಶ್ವರ ಮೆರೆಯುತ್ತಿದ್ದಾನೆ. ಅಷ್ಟದಿಕ್ಪಾಲಕರ ಮೂರ್ತಿಯಲ್ಲಿ ಮೂಡಿದ ಬಗೆಬಗೆಯ ಭಾವಗಳನ್ನೂ ತಾಂಡವೇಶ್ವರನ ಪ್ರಳಯ ಕಾಲದ ರುದ್ರನೃತ್ಯಭಂಗಿಯನ್ನೂ ಆ ಶಿಲಾಫಲಕದಲ್ಲಿ ಶಿಲ್ಪಿ ಸೆರೆಹಿಡಿದಿಟ್ಟಿದ್ದಾನೆ. ಎಂಟು ದಿಕ್ಕುಗಳಲ್ಲಿ ಅಷ್ಟದಿಕ್ಪಾಲಕರು ತಮ್ಮ ಅಂಗನೆಯರನ್ನು ಅಪ್ಪಿ ವಾಹನಗಳನ್ನೇರಿದ್ದಾರೆ. ತಾಂಡವೇಶ್ವರ ತಾಂಡವ ನೃತ್ಯದಲ್ಲಿ ಮಗ್ನನಾಗಿದ್ದಾನೆ. ಶಿವನ ನಡುವೆ ಸುತ್ತಲೂ ನಾಲ್ಕು ಮೂಲೆಗಳಲ್ಲಿ ಹಗ್ಗದಲ್ಲಿ ಜೋಲಾಡು ತ್ತಿರುವ ಭಂಗಿಯಲ್ಲಿರುವ ನಾಲ್ಕು ಗಣಗಳ ಮೂರ್ತಿಗಳಿವೆ. ಇದೊಂದು ಭುವನಮೋಹಕ ಶಿಲ್ಪಸೃಷ್ಟಿ. ಕಲ್ಲೇಶ್ವರನಿಗೆ ಅಭಿಮುಖವಾಗಿ ಸುಮಾರು 10' ಉದ್ದ 6' ಎತ್ತರದ ಕರಿಯ ಕಲ್ಲಿನ ಬಸವವಿಗ್ರಹ ಮುದ್ದಾಗಿದೆ. ಅರಳಗುಪ್ಪೆಯಲ್ಲಿ ಪಾಳೆಯಗಾರರ ಚಾವಡಿ ಎಂಬ ಒಂದು ಮಂಟಪವಿದೆ. *

**ಅರಳಿ ಮರ :** ಮೊರೇಸೀ ಕುಟುಂಬಕ್ಕೆ ಸೇರಿದ ಮರ (ಫೈಕಸ್ ರಿಲಿಜಿಯೋಸ ಇದರ ವೈಜ್ಞಾನಿಕ ಹೆಸರು). ಅಶ್ವತ್ಥವೃಕ್ಷ ಪರ್ಯಾಯನಾಮ. ಉಗಮಸ್ಥಾನ ಭಾರತ. ಹಲವು ಶತಮಾನಗಳಕಾಲ ಇದು ಜೀವಂತವಾಗಿದ್ದ ದಾಖಲೆಗಳಿವೆ. ಪ್ರ.ಶ.ಪೂ. 288ರಲ್ಲಿ ನೆಟ್ಟ ಒಂದು ಮರ ಶ್ರೀಲಂಕದಲ್ಲಿ ಇದ್ದಿತು. ವಿದುರಾಶ್ವತ್ಥದಲ್ಲಿರುವ ಅರಳಿಮರವೂ ಬಹು ಹಳೆಯದು. ಅರಳಿಯ ಎಳೆಯ ಎಲೆ ತಾಮ್ರವರ್ಣದ್ದು, ಬಲಿತ ಎಲೆ ಹಸಿರು, ಹೂಗೊಂಚಲು ಹೈಪ್ಯಾಂತೋಡಿಯಂ ಮಾದರಿಯದು. ಬೆಳೆಯುವ ಆರಂಭದಲ್ಲಿ ಅಪ್ಪು ಸಸ್ಯವಾಗಿದ್ದು ಅನಂತರ ಸ್ವತಂತ್ರ ಮರವಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಕೊಂಬೆಗಳಿವೆ. ಇದು ನಿತ್ಯಹರಿದ್ವರ್ಣದ ಮರ, ಬುದ್ಧದೇವನಿಗೆ ಜ್ಞಾನೋದಯವಾದ ಬುದ್ಧಗಯದಲ್ಲಿರುವ ಬೋಧಿವೃಕ್ಷ ಒಂದು ಪ್ರಸಿದ್ಧ ಅರಳಿ ಮರ. ಹಿಂದುಗಳಿಗೂ ಬೌದ್ಧರಿಗೂ ಪವಿತ್ರ. 10–30 ಮೀ ಎತ್ತರ ಬೆಳೆಯಬಲ್ಲುದು. ಬೀಜಗಳಿಂದ ಅಥವಾ ಬೆಳೆದ ಸಸ್ಯಗಳಿಂದ ಈ ಸಸ್ಯಗಳನ್ನು ವೃದ್ಧಿ ಮಾಡಬಹುದು. ನಿರ್ಲಿಂಗ ರೀತಿಯಲ್ಲಿ ಇದನ್ನು ವೃದ್ಧಿಮಾಡಲಾಗುವುದಿಲ್ಲ. (ಎ.ಕೆ.ಎಸ್.; ಎಂ.ಎಚ್.ಎಂ.)



ಸರ್ವದೇವತಾತ್ಮಕವಾಗಿ ವೃಕ್ಷರಾಜನೆನಿಸಿಕೊಂಡಿರುವ ಈ ಮರವನ್ನು ದೇವಾಲಯಗಳಲ್ಲಿ ಬೆಳೆಸುತ್ತಾರೆ. ಸಾಲುಮರಗಳಾಗಿ ಬೆಳೆಸುವುದೂ ವಾಡಿಕೆ. ಮರ ಬಹು ಗಟ್ಟಿಯಾಗಿದ್ದು ಮಳೆಗಾಳಿಗೆ ಬೀಳುವುದಿಲ್ಲ. ಸೊಂಪಾದ ನೆರಳು ಕೊಡುತ್ತದೆ. ಸಾವಿರಾರು ಹಕ್ಕಿಗಳಿಗೆ ಆಶ್ರಯ ನೀಡುತ್ತದೆ. ಹುಲ್ಲಿಗಿಂತ ಎರಡು ಮೂರು ಪಟ್ಟು ಪ್ರೋಟೀನು ಹೆಚ್ಚಾಗಿರುವ ಇದರ ಎಲೆಗಳು ದನಕರುಗಳಿಗೆ, ಆನೆಗಳಿಗೆ ಉತ್ತಮ ಮೇವು. ಮಯನ್ಮಾರ್‌ನಲ್ಲಿ ಹಕ್ಕಿಗಳು ತಿನ್ನುತ್ತವೆ, ಇದರ ತೊಗಟೆಯಿಂದ ಟ್ಯಾನಿನ್ ತೆಗೆಯುತ್ತಾರೆ. ಬರ್ಮದಲ್ಲಿ ಇದರ ನಾರಿನಿಂದ ಕಾಗದ ತಯಾರಿಸುತ್ತಿದ್ದರಂತೆ. ಇದರಿಂದ ಹಾಲ್ರೊರೆ(ಲೇಟೆಕ್ಸ್) ದೊರೆಯುತ್ತದೆ. ಅಸ್ಸಾಂ, ಮಧ್ಯಪ್ರದೇಶ, ಬಂಗಾಲಗಳಲ್ಲಿ ಅರಗಿನ ಕೀಟಕ್ಕೆ ಆಶ್ರಯವೆನಿಸಿದೆ. ಅಸ್ಸಾಮಿನಲ್ಲಿ ಇದರ ಎಲೆಗಳನ್ನು ಒಂದು ಬಗೆಯ ರೇಷ್ಮೆ ಹುಳುಗಳಿಗೆ ಆಹಾರವಾಗಿ ಬಳಸುತ್ತಾರೆ. ಇದರ ಅರಗನ್ನು ಮರದ ರಂಧ್ರ ಮುಚ್ಚಲು, ಆಭರಣಮಾಡಲು ಬಳಸುತ್ತಾರೆ. ಪೆಟ್ಟಿಗೆ, ಬೆಂಕಿಪೊಟ್ಟಣ ತಯಾರಿಕೆಗೆ ಮರದ ಹಲಗೆ ಉಪಯೋಗವಾಗುತ್ತದೆ. ಚಿಗುರು ವಿರೇಚಕ. ತೊಗಟೆ ಬಾಯಿಹುಣ್ಣು, ಆಮಶಂಕೆ, ಮೇಹರೋಗಗಳಿಗೆ ಔಷಧ. ಎಲೆಯ ಬೂದಿಯನ್ನು ಸುಟ್ಟಗಾಯಕ್ಕೆ ಎಣ್ಣೆಯೊಂದಿಗೆ ಲೇಪನ ಮಾಡುತ್ತಾರೆ. ಒಣ ಎಲೆಯ ನಾರಿನಿಂದ ದೇಹದ ಮೇಲೆ ಸುಂದರ ಚಿತ್ರಗಳನ್ನು ಬರೆಯುತ್ತಾರೆ. ಬೆಳೆಯುವುದು ನಿಧಾನವಾದರೂ ಶಾಶ್ವತವಾಗಿದ್ದು ಅನೇಕ ಉಪಯೋಗಗಳಿಗೆ ಒದಗುತ್ತದಾದ ಕಾರಣ ಇದನ್ನು ಹೇರಳವಾಗಿ ಬೆಳೆಸಬಹುದು. (ಎಂ.ಎಚ್.ಎಂ.)

**ಅರಾಗೊ, ಡೊಮಿನಿಕ್ ಫ್ರಾಂಕೊಜೀನ್ :** 1786–1853. ಫ್ರಾನ್ಸಿನ ಎಸ್ಟಜೆಲ್‌ನಲ್ಲಿ ಜನಿಸಿದ ಭೌತವಿಜ್ಞಾನಿ. ಫ್ರಾನ್ಸಿನ ರೇಖಾಂಶ ಸಂಸ್ಥೆಯ (ಬ್ಯೂರೊ ಆಫ್ ಲಾಂಜಿಟ್ಯೂಡ್ಸ್) ಕಾರ್ಯದರ್ಶಿಯಾಗಿ ಬದುಕನ್ನು ಪ್ರಾರಂಭಿಸಿ, 1806ರಲ್ಲಿ ಡಿಲ್ಯಾಂಬರ್ ಮತ್ತು ಮೆಕ್ಯೆಸ್ ಅವರು ಪೂರ್ಣಮಾಡದೆ ಬಿಟ್ಟಿದ್ದ ಮಧ್ಯಾಹ್ನರೇಖೆಯ ಕಂಸದ ಅಳತೆಗಳನ್ನು ಪೂರೈಸುವ ಸಲುವಾಗಿ ಬಿಯೋಟ್ ಎಂಬುವನ ಜೊತೆ ಸ್ಪೇನಿಗೆ ಪ್ರಯಾಣ ಮಾಡಿದ. ಹಿಂತಿರುಗುವಾಗ ಅವನ ಹಡಗು ಬಿರುಗಾಳಿಗೆ ಸಿಲುಕಿ ನಾಶಗೊಂಡು ಆಲ್ಜೀರಿಯರ್ಸ್‌ನಲ್ಲಿ ಬಂಧಿತನಾದ. ಭೌತವಿಜ್ಞಾನದಲ್ಲಿ ಪ್ರತಿಭಾಪೂರ್ಣ ಸಂಶೋಧನೆಗಳನ್ನು ನಡೆಸಿ, ಬೆಳಕಿನ ವೇಗವನ್ನು ನಿರ್ಧರಿಸಲು ತಿರುಗುವ ಕನ್ನಡಿಯ ವಿಧಾನವನ್ನು ತಿಳಿಸಿಕೊಟ್ಟ, ಈತ ಫ್ರೇನೆಲ್ ಎಂಬ ಮತ್ತೊಬ್ಬ ಭೌತವಿಜ್ಞಾನಿಯೊಡನೆ ಬೆಳಕಿನ ವಿವರ್ತನೆಯ (ಡಿಫ್ರಾಕ್ಷನ್) ಮೇಲೆ ನಡೆಸಿದ ಪ್ರಯೋಗಗಳಿಂದಾಗಿ, ಬೆಳಕಿನ ತರಂಗಸಿದ್ಧಾಂತವನ್ನು (ವೇವ್ ಥಿಯೊರಿ) ಸ್ಥಿರೀಕರಿಸಿದ. ಕಬ್ಬಿಣವೊಂದೇ ಅಲ್ಲದೆ ಇತರ ಕೆಲವು ಲೋಹಗಳಿಗೂ ಕಾಂತೀಯ ಗುಣಗಳಿವೆ ಎಂಬುದನ್ನು ತೋರಿಸಿದವರಲ್ಲಿ ಈತನೇ ಮೊದಲಿಗ. ಇದರ ಸಲುವಾಗಿ ಇವನಿಗೆ ಕಾಪ್ಲಿ ಪದಕ 1825 ರಲ್ಲಿ ದೊರಕಿತು. 1818–1822ರವರೆಗೆ ಶಬ್ದದ ಬಗ್ಗೆಯೂ ಕೆಲಸಮಾಡಿ ಕಾಂತೀಯವಲ್ಲದ ವಾಹಕದ ಭ್ರಮಣದಿಂದ ಕಾಂತತೆ ಉಂಟಾಗುವುದನ್ನು ಆವಿಷ್ಕರಿಸಿದ. (ಎ.ಕೆ.ಜಿ)

**ಅರಾಜಕತಾವಾದ :** ದೇಶದಲ್ಲಿ ಯಾವುದೇ ವಿಧವಾದ ರಾಜಕೀಯ ಅಧಿಕಾರ ಅನಾವಶ್ಯಕ, ಅನಪೇಕ್ಷಣೀಯ ಎಂಬ ತಳಹದಿಯ ಮೇಲೆ ರಚಿತವಾಗಿರುವ ರಾಜ್ಯಶಾಸ್ತ್ರದ ಒಂದು ವಾದ (ಅನಾರ್ಕಿಸಂ). ಬಹು ಹಿಂದಿನಿಂದ ಇದ್ದರೂ 19ನೆಯ ಶತಮಾನದ ಅಂತ್ಯಭಾಗದಲ್ಲಿ ಪ್ರಾಮುಖ್ಯ ಪಡೆಯಿತು. ಆಧುನಿಕ ಕಾಲದಲ್ಲಿ ಈ ವಾದದ ಮುಖ್ಯ ಪ್ರವರ್ತಕರು. ಜೋಸೆಫ್ ಪ್ರೌಧನ್, ಮ್ಯಾಕ್ಸ್ ಸ್ಟರ್ನರ್, ಬೆಂಜಮಿನ್ ಟಕರ್, ಮೈಕೆಲ್ ಬಾಕುನಿನ್ ಮತ್ತು ಪ್ರಿನ್ಸ್ ಕ್ರೋಪೋಟ್‌ಕಿನ್ ಸಮಾಜದಲ್ಲಿ ಮಾನವನಿಗೆ ಸ್ವಾತಂತ್ರ್ಯ ಅತಿ ಪ್ರಧಾನವಾದುದು; ಅದನ್ನು ಕಾಪಾಡಿಕೊಳ್ಳಬೇಕಾದರೆ ರಾಜ್ಯವನ್ನು ರದ್ದುಗೊಳಿಸಬೇಕು; ದೇಶದಲ್ಲಿ ಯಾವ ವಿಧವಾದ ರಾಜಕೀಯ ಅಧಿಕಾರವೂ ಇರಬಾರದು; ರಾಜ್ಯದ ಪ್ರಜೆಗಳ ಮೇಲೆ ಹತೋಟಿಯಿಡುವ ಎಲ್ಲ ಸಂಸ್ಥೆಗಳನ್ನೂ ನಿರ್ಮೂಲನ ಮಾಡಬೇಕು; ಬಲಪ್ರಯೋಗ ಕೂಡದು–ಇಷ್ಟು ಅರಾಜಕತಾವಾದದ ಸಾರ. ಅರಾಜಕತಾವಾದ ಇಂದು ಜನಪ್ರಿಯವಾಗಿಲ್ಲ.
*

**ಅರಾಟಸ್ :** ಪ್ರ.ಶ.ಪೂ. 315–245. ಗ್ರೀಸ್ ದೇಶದ ಕವಿ. ಜನನ ಸಿಸಿಲಿಯ ಸೋಲಿಯಲ್ಲಿ. ಮ್ಯಾಸಿಡೋನಿಯ ದೊರೆ ಆ್ಯಂಟಿಗೋನ ಗಾನಟಾಸ್ ಆಸ್ಥಾನದಲ್ಲಿದ್ದ. ಈತ ಖಗೋಳವಿಜ್ಞಾನದ ಮೇಲೆ ಬರೆದ ಫೆನೋಮೆನ ಎಂಬ ಪ್ರಖ್ಯಾತ ಪದ್ಯವನ್ನು ಸಿಸಿರೊ ಲ್ಯಾಟಿನ್ ಭಾಷೆಗೆ ತರ್ಜುಮೆ ಮಾಡಿದ್ದಾನೆ. ಅರಾಟಸ್ ರಾಜಧಾನಿಯಲ್ಲೇ ಕಾಲವಾದ. (ಟಿ.ಎಚ್.ಎಚ್.)

**ಅರಾಮೇಯಿಕ್ ಲಿಪಿ :** ಪ್ರಾಚೀನ ಸಿರಿಯದ ಜನ ಬಳಸುತ್ತಿದ್ದ ಈ ಲಿಪಿ ಉತ್ತರ ಸಿಮೆಟಿಕ್ ವರ್ಗಕ್ಕೆ ಸೇರಿದೆ. ಈ ಲಿಪಿಯ ಅತ್ಯಂತ ಪ್ರಾಚೀನ ಶಾಸನ ಟೆಲ್–ಹಲಾಫ್‌ನಲ್ಲಿ ದೊರಕಿದ್ದು, ಪ್ರ.ಶ.ಪೂ. 9ನೆಯ ಶತಮಾನಕ್ಕೆ ಸೇರಿದುದಾಗಿದೆ. ಇದು ಪಶ್ಚಿಮ ಏಷ್ಯದಲ್ಲಿ, ಅದರಲ್ಲೂ ಪರ್ಷಿಯ ರಾಜ್ಯದಲ್ಲಿ ವಿಶೇಷವಾಗಿ ಬಳಕೆಯಲ್ಲಿತ್ತು. ಈ ಲಿಪಿ ಹೀಬ್ರೂ, ಸಿರಿಯಕ್, ಮಂಡೇನ್, ಮನಿಷೇನ್, ಖರೋಷ್ಠೀ, ಪಹ್ಲವಿ, ಅವೆಸ್ತ ಮುಂತಾದ ಲಿಪಿಗಳ ವಿಕಾಸಕ್ಕೆ ಕಾರಣವಾಯಿತು. ಭಾರತದಲ್ಲಿ ಪ್ರಚಾರದಲ್ಲಿದ್ದ ಖರೋಷ್ಠೀ ಮತ್ತು ಬ್ರಾಹ್ಮೀ ಲಿಪಿಗಳ ಉತ್ಪತ್ತಿಗೂ ಅರಾಮೇಯಿಕ್ ಲಿಪಿಯೇ ಕಾರಣವೆಂದು ಕೆಲ ವಿದ್ವಾಂಸರು ವಾದಿಸುತ್ತಾರೆ. ಆಫ್ಘಾನಿಸ್ತಾನದಲ್ಲಿ ಈ ಲಿಪಿಯಲ್ಲಿ ಬರೆದ ಅಶೋಕನ ಶಾಸನಗಳು ಸಿಕ್ಕಿವೆ. (ಎ.ವಿ.ಎನ್.)



**ಅರಾವಳಿ ಸಮುದಾಯ :** ಭಾರತದ ಪರ್ಯಾಯದ್ವೀಪ ಭಾಗದ ಒಂದು ಮುಖ್ಯ ಪರ್ವತ ಶ್ರೇಣಿ. ಕೇಟ್ರಿಯಿಂದ (28° ಉ—75° 47' ಪೂ) ಭಕಾರ್‌ವರೆಗೆ (24°20' ಉ–72° 53' ಹಬ್ಬಿದೆ. ರಾಜಸ್ತಾನದ ಮಧ್ಯೆ ಹಾದುಹೋಗಿದೆ. ಇಲ್ಲಿನ ಅಬುಪರ್ವತ (ನೋಡಿ) ಒಂದು ಪುಣ್ಯಕ್ಷೇತ್ರ. ಈಶಾನ್ಯದಲ್ಲಿ ದೆಹಲಿಯಿಂದ ನೈರುತ್ಯದಲ್ಲಿ ಗುಜರಾತಿನವರೆಗೆ ಉದ್ದವಾಗಿವೆ. ಸಿಂಧೂ ಮತ್ತು ಗಂಗಾ ನದಿಗಳ ಜಲಾನಯನ ಪ್ರದೇಶಗಳನ್ನು ಪ್ರತ್ಯೇಕಿಸುತ್ತವೆ. ಸರಾಸರಿಎತ್ತರ 400 ರಿಂದ 600 ಮೀ. ಈಶಾನ್ಯದಲ್ಲಿ ಅಲ್ವಾರ್ ಮತ್ತು ತೋರಾವಲಿ ಮತ್ತು ನೈರುತ್ಯದಲ್ಲಿ ಮೇವಾರದ ಬೆಟ್ಟಗಳಿವೆ. ಈಶಾನ್ಯಕ್ಕಿಂತ ನೈರುತ್ಯದಲ್ಲಿ ಹೆಚ್ಚು ಎತ್ತರ ಇಲ್ಲಿನ ಮೌಂಟ್ ಅಬು (1158 ಮೀ)ವಿನಲ್ಲಿ ಗುರುಶಿಕಾರ್ ಎಂಬುದು ಅತಿಎತ್ತರದ ಶಿಖರ (1,722 ಮೀ) ಅಬುಪರ್ವತ ರಾಜಸ್ತಾನದ ಪ್ರಸಿದ್ಧ ಗಿರಿಧಾಮ. ಖೋ (979ಮೀ), ರಘುನಾಥಪುರ (1052 ಮೀ) ಮತ್ತು ತಾತಾಘುಕ್ (870ಮೀ) ಇತರ ಶಿಖರಗಳು. ಅರಾವಳಿ ಸ್ತೋಮಗಳಲ್ಲಿ ಲೂನಿ ಮತ್ತು ಬನಾಸ್ ನದಿಗಳು ಉಗಮವಾಗುತ್ತವೆ. (ಎಸ್.ಡಿ.ಎಂ.)

ಈ ಶ್ರೇಣಿಯ ಬಹುಭಾಗ ಹೆಚ್ಚಿನ ರೀತಿಯ ಶಿಥಿಲೀಕರಣಕ್ಕೊಳಗಾಗದಿರುವ ಕಾರಣ ನೆಲಭಾಗದಿಂದ ಆವೃತವಾಗಿದ್ದು ಪ್ರಸ್ಥಭೂಮಿಯಂತೆ ಮಾರ್ಪಟ್ಟಿದೆ. ಇವುಗಳನ್ನು ಅವಶೇಷ ಮಡಿಕೆ ಪರ್ವತ ಶ್ರೇಣಿಗಳೆಂದು ಕರೆಯುವರು. ಪರ್ಯಾಯದ್ವೀಪಭಾಗದ ಮೇಲ್ಮೈಲಕ್ಷಣವನ್ನು ರೂಪಿಸುವಲ್ಲಿ ಇದರ ಪಾತ್ರ ಹಿರಿದು. ಕ್ಷೋಭೆಗೆ ಕಾರಣವಾದ ಶಕ್ತಿಗಳ ಅಕ್ಷ ಸಮುದಾಯಕ್ಕೆ ಸಮಾಂತರವಾಗಿರುವುದೇ ಈ ಸಮುದಾಯದ ಲಕ್ಷಣ. ಸಮಾಂತರವಾಗಿ ರಾಜಸ್ತಾನದಲ್ಲಿ ಈ ಪರ್ವತಶ್ರೇಣಿ ಈಶಾನ್ಯ–ನೈರುತ್ಯ ದಿಕ್ಕಿನಲ್ಲಿ ಹಬ್ಬಿದೆ. ಅಜ್ಮೀರ್‌ನಿಂದ ಪ್ರಾರಂಭವಾಗಿ ನೈರುತ್ಯ ದಿಕ್ಕಿನಲ್ಲಿ ಮುಂದುವರಿದು ಅಬುಪರ್ವತದವರೆಗೂ ಬೆಟ್ಟದ ಸಾಲು ಹಬ್ಬಿದೆ. ಉತ್ತರ ಹಿಮಾಚಲ ಮತ್ತು ದಕ್ಷಿಣ ನೀಲಗಿರಿಗಳ ಮಧ್ಯೆ ಕಂಡುಬರುವ ಅತ್ಯಂತ ಉನ್ನತ ಪ್ರದೇಶಗಳಲ್ಲಿ ಈ ಸ್ತೋಮ ಒಂದಾಗಿದೆ. ನೈರುತ್ಯದಲ್ಲಿ ಥಾರ್ ಮರುಭೂಮಿಯ ಮರಳಿನಿಂದಲೂ ನದಿಮೆಕ್ಕಲಿನಿಂದಲೂ ಆವೃತವಾಗಿದೆ. ಅಲ್ಲದೆ ಮರುಭೂಮಿಯ ಮರಳು ಇನ್ನಷ್ಟು ಹರಡದಂತೆ ಅಡ್ಡಗಟ್ಟುವ ಒಂದು ದೊಡ್ಡ ತಡೆಯಾಗಿದೆ. ದೆಹಲಿಯತ್ತ ಅರಾವಳಿ ಅಲ್ಲೊಂದು ಇಲ್ಲೊಂದರಂತೆ ಕಂಡುಬರುವ ಬೆಟ್ಟಗಳಂತೆ, ಕಡಿದಾದ ಬಂಡೆಗಳಂತೆ ಹಬ್ಬಿದೆ. ಅಲ್ಲದೆ ಕಾಥೆವಾರ್ ಮತ್ತು ಕಚ್ ಪ್ರದೇಶಗಳಲ್ಲಿ ಅಳಿದುಳಿದ ಹಲವಾರು ಶಿಖರಗಳಿವೆ.

ಈ ಸಮುದಾಯದ ಶಿಲೆಗಳು ಭೂಚರಿತ್ರೆಯಲ್ಲಿ ಅತ್ಯಂತ ಪುರಾತನಯುಗವಾದ ಅರ್ಷೀಯಕಲ್ಪ ಮತ್ತು ಪ್ರಿ–ಕೇಂಬ್ರಿಯನ್ ಯುಗಕ್ಕೆ ಸೇರಿವೆ. ಪುರಾಣಯುಗದ ವಿಂಧ್ಯ ಶಿಲಾಸಮುದಾಯ ಅರಾವಳಿ ಶ್ರೇಣಿಯ ಇಕ್ಕೆಲದಲ್ಲೂ ಕಂಡುಬಂದಿರುವುದರಿಂದ ಇದು ಪುರಾಣಯುಗಕ್ಕಿಂತ ಹಿಂದಿನದೆಂದು ಹೇಳಬಹುದು. ಅಲ್ಲದೆ ವಿಂಧ್ಯ ಶಿಲಾ ಸಮುದಾಯಕ್ಕೆ ಸೇರಿದ ಪ್ರಸ್ತರಗಳು ಯಾವ ವಿಧವಾದ ಮಡಿಕೆ, ಸ್ತರಭಂಗ ಮುಂತಾದವನ್ನು ತೋರಿಸದೆ ಸಮತಲವಾಗಿ ಕಂಡುಬರುವುದು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ನಿರ್ಜೀವಯುಗದ ಲ್ಲಾದ ಖನಿಜಪರಿವರ್ತನೆ ಈ ಸಮುದಾಯದ ಹಲವಾರು ಭಾಗಗಳಲ್ಲಿ ಕಂಡು ಬರುತ್ತದೆ.

ಅರಾವಳಿ ಶಿಲಾಸ್ತೋಮವನ್ನು ಈ ರೀತಿ ವಿಭಜಿಸಲಾಗಿದೆ:

4 ಖನಿಜ ನಿಕ್ಷೇಪಗಳು

7. ರಾಂಥಂಬೋರ್ ಮರಳು ಶಿಲಾಪದರಗಳು ಮತ್ತು ಸರಿಸಮವರ್ಗಗಳು

6. ಖಾರ್ಡಿಯೋಲ ಒರಟು ಮರಳುಶಿಲೆ

5. ಕನೋಜ್ ಒರಟು ಮರಳುಶಿಲೆ

4. ಅಂತರಪದರಯುತ ಮತ್ತು ಅಡ್ಡ ಹಾಯ್ದ ಕ್ವಾರ್ಟ್ಸೈಟ್ ಪ್ರಸ್ತರಗಳು

3. ಖೇರ್ ಮಾಲಿಯ ಲಾವಾಗಳು

2. ಕಬ್ಬಿಣಯುಕ್ತ ಜಾಸ್ಪರ್ ಮತ್ತು ಹಿಮಟೈಟ್ ಪ್ರಸ್ತರಗಳು

1. ಬಿನೋಟ ಜೇಡುಶಿಲೆ

3 ಜೇಡು ಶಿಲಾಸಮೂಹ

2 ತಳದ ಕಬ್ಬಿಣಯುಕ್ತ ಸುಣ್ಣಶಿಲೆ

1 ತಳದ ಕ್ವಾರ್ಟ್ಸೈಟ್ ಅಥವಾ ಪೆಂಟೆ ಶಿಲೆ

ಮೇಲ್ಕಾಣಿಸಿರುವ ವಿವಿಧ ಘಟ್ಟದ ಶಿಲಾಪ್ರಸ್ತರಗಳನ್ನು ಕೆಳಗಿನಿಂದ ಮೇಲಕ್ಕೆ ಓದಬೇಕು. ಏಕೆಂದರೆ ಅವನ್ನು ಇಲ್ಲಿ ನಿಕ್ಷೇಪಗೊಂಡ ಕ್ರಮದಲ್ಲೇ ಜೋಡಿಸಿದೆ. ಅವುಗಳ ಒಟ್ಟು ಮಂದ 3050 ಮೀ.

**1. ತಳದ ಕ್ವಾರ್ಟ್ಸೈಟ್ ಅಥವಾ ಪೆಂಟೆಶಿಲೆ:** ಬಹುಮಟ್ಟಿಗೆ ಮೇವಾರದಲ್ಲಿ ಕಂಡುಬಂದಿದೆ. ಇವು ಭಾರತದ ಭೂಚರಿತ್ರೆಯಲ್ಲಿನ ಬಹು ಪುರಾತನವಾದ ಸಮುದ್ರತೀರದ ಅಸ್ತಿತ್ವವನ್ನು ಸಾರಿಹೇಳುತ್ತದೆ. ಈ ಗುಂಪಿನಲ್ಲಿ ಬಹು ಸಣ್ಣನೆಯ ಕಣಗಳಿಂದ ಕೂಡಿದ ಕ್ವಾರ್ಟ್ಸೈಟ್ ಒರಟು ಕಣಗಳಿಂದಾದ ಮರಳು ಶಿಲೆ ಮತ್ತು ದಪ್ಪ ದಪ್ಪ ಪೆಂಟೆಗಳಿಂದಾದ ಪೆಂಟೆಕಲ್ಲು—ಇವುಗಳನ್ನು ಕಾಣಬಹುದು. ತಳಭಾಗದಲ್ಲಿರುವ ನೈಸ್ ಶಿಲಾಸ್ತೋಮಕ್ಕೂ ಇವುಗಳಿಗೂ ನಡುವೆ ಅಷ್ಟು ಮಂದವಲ್ಲದೆ ಆರ್ಕೋಸ್ ಪ್ರಸ್ತರವಿದೆ. ಇದಕ್ಕೂ ನೈಸ್ ಶಿಲೆಗೂ ಹೆಚ್ಚಿನ ಸಂಬಂಧವನ್ನು ಗುರುತಿಸಬಹುದು. ಪೆಂಟೆಶಿಲೆಯಲ್ಲಿರುವ ಉರುಟು ಕಲ್ಲುಗಳು (ಪೆಬಲ್ಸ್) ದುಂಡಗೆ ಅದರ ವಕ್ರಾಕಾರವನ್ನು ತೋರಿಸುತ್ತವೆ. ಹಲವು ಬಾರಿ ಒಂದೇ ದಿಕ್ಕಿನಲ್ಲಿ ಚಪ್ಪಟೆಯಾಗಿ ಹರಡಿರುತ್ತವೆ. ಇವು ಗಾತ್ರದಲ್ಲಿ ಕ್ರಿಕೆಟ್ ಚೆಂಡಿನಿಂದ ಹಿಡಿದು ತೆಂಗಿನಕಾಯಷ್ಟು ದಪ್ಪವಾಗಿವೆ.

**2. ತಳದ ಕಬ್ಬಿಣಯುಕ್ತ ಸುಣ್ಣಶಿಲೆ:** ತಳದ ಕ್ವಾರ್ಟ್ಸೈಟ್‌ಗಳ ಮೇಲೆ ಹರಡಿವೆ. ಮಂದದಲ್ಲಿ ಒಂದೇ ರೀತಿಯಾಗಿಲ್ಲ. ಹಲವು ಕಡೆ ನೈಸ್ ಶಿಲೆಗಳ ಮೇಲೂ ಇವೆ. ಒಮ್ಮೊಮ್ಮೆ ಈ ಸುಣ್ಣ ಶಿಲೆಯ ಪದರಗಳು ಪರಸ್ಪರ ಹೆಣೆದುಕೊಂಡಿವೆ. ಹಲವು ಪ್ರದೇಶಗಳಲ್ಲಿ ಇವುಗಳಲ್ಲಿ ಮೊನಚಾದ ಬೆನಚಿನ ಹರಳುಗುಚ್ಛಗಳನ್ನು ಕಾಣಬಹುದು. ತಳಭಾಗದ ಗ್ರಾನೈಟ್‌ಗಳು ಶಿಥಿಲಗೊಂಡಾಗ ಅವುಗಳಲ್ಲಿನ ಸುಣ್ಣ ಶಿಲಾಪ್ರಸ್ತರಗಳು ಆಗಿರಬಹುದು ಎಂದು ಊಹಿಸಲಾಗಿದೆ. ಇವುಗಳಲ್ಲಿ ಆಗಾಗ್ಗೆ ಅಭ್ರಕ ಮತ್ತು ಆಂಫಿಬೋಲ್ ಖನಿಜಗಳ ಕಣಗಳನ್ನು ಗುರುತಿಸಬಹುದು.

ಈ ಎರಡು ಘಟ್ಟಗಳನ್ನು ಕೆಳ ಅರಾವಳಿ ಸ್ತೋಮವೆಂದು ಪರಿಗಣಿಸಲಾಗಿದೆ. ಇವು ರಾಜಸ್ತಾನದ ದಕ್ಷಿಣದ ತುದಿಯಲ್ಲಿ ಒಂದೇ ಸರಪಳಿಯ ಕೊಂಡಿಗಳಂತಿರುವ ಬೆಟ್ಟಗುಡ್ಡಗಳ ಸಾಲಿನಂತೆ ಹಬ್ಬಿವೆ. ಈ ಗುಡ್ಡಗಳು ಕ್ವಾರ್ಟ್ಸೈಟ್ ಮತ್ತು ಒರಟು ಮರಳುಶಿಲೆಯಿಂದ ಕೂಡಿವೆ. ವಾಯವ್ಯ ತುದಿಯಲ್ಲಿ ವಿಶೇಷವಾಗಿ ಪೆಂಟೆ ಶಿಲೆಯ ಗುಡ್ಡಗಳೂ ಉತ್ತರಕ್ಕೆ ಥಾನ ಬಳಿ ಹಿಮಟೈಟ್ ಪದರಶಿಲೆಯೂ ಹಬ್ಬಿವೆ. ಬರುಂದಿಯ ಪಶ್ಚಿಮಕ್ಕೆ 0.9 ಮೀ. ಮಂದ ಪೆಂಟೆಶಿಲೆಯ ಪ್ರಸ್ತರಗಳನ್ನೂ ನೋಡಬಹುದು. ಈ ಶಿಲೆಯಲ್ಲಿ ಕಡುಬಿನಾಕಾರದ ಕ್ವಾರ್ಟ್ಸ್, ಜಾಸ್ಪರ್ ಮತ್ತು ಚೆರ್ಟ್‌ಪೆಂಟೆಗಳಿವೆ. ಆದರೆ ಈ ಭಾಗದಲ್ಲಿ ನೈಸ್ ಮತ್ತು ಪೆಂಟೆಶಿಲೆಯ ಪರಸ್ಪರ ಸಂಬಂಧ ಅಸ್ಪಷ್ಟ ಮತ್ತು ಅನಿಶ್ಚಿತ.

ಇವುಗಳ ಅಧ್ಯಯನದಿಂದ ಕೆಳ ಅರಾವಳಿ ಶಿಲಾಸ್ತೋಮ ನಿಕ್ಷೇಪಗೊಂಡಾಗ ಇದ್ದ ಪರಿಸ್ಥಿತಿಯನ್ನು ಊಹಿಸಬಹುದು. ಬಹುಶಃ ಈ ಸ್ತೋಮ ಪ್ರಸ್ತರಗಳಿಗೆ ಬೇಕಾದ ಜೇಡು ಬುಂದೇಲ್‌ಖಂಡ ಕಣಶಿಲಾಭಾಗದಿಂದ ಬಂದಿರಬಹುದೆಂದು ತಿಳಿದರೆ ತಪ್ಪಾಗಲಾರದು. ಹಿಂದಿನ ಈ ಕರಾವಳಿ ಪ್ರದೇಶದಲ್ಲಿ ತೇವವಾದ ಅದರ ಉಷ್ಣವಲಯದ ವಾಯುಗುಣವನ್ನು ಸೂಚಿಸುವ ಯಾವ ರುಜುವಾತೂ ದೊರೆಯದೆ ಎಲ್ಲೆಡೆಯೂ ಒಣಹವೆ ಇದ್ದಿತೆಂದು ಹೇಳಬಹುದು.

**3 ಜೇಡುಶಿಲಾಸಮೂಹ:** ಅರಾವಳಿಸ್ತೋಮದ ಬಹುಭಾಗ ಫಿಲೈಟ್ ಮತ್ತು ಬಯೋಟೈಟ್ ಅಭ್ರಕ ಪದರು ಶಿಲೆಗಳಿಂದ ಆವೃತವಾಗಿದೆ. ಅನೇಕ ಕಡೆ ಈ ಪ್ರಸ್ತರಗಳು ಕೆಳಗಣ ಅರಾವಳಿ ಘಟ್ಟದ ತಳದ ಕ್ವಾರ್ಟ್ಸೈಟ್ ಮತ್ತು ಸುಣ್ಣಶಿಲಾಪ್ರಸ್ತರಗಳ ಮೇಲೆ ಹರಡಿವೆ. ಆದರೆ ಕೆಲವು ಪ್ರದೇಶಗಳಲ್ಲಿ ಈ ಘಟ್ಟವೇ ಇಲ್ಲದೆ ನೇರವಾಗಿ ಬುಂದೇಲ್‌ಖಂಡ ನೈಸ್ ಮೇಲೆ ಕಂಡುಬಂದಿದೆ. ಇದು ಬಹುಶಃ ತೀವ್ರ ಗತಿಯ ಭೂಕ್ಷೋಭೆ ಯಿಂದಾಗಿರಬಹುದೆಂದು ಭಾವಿಸಬಹುದು. ಬುಂದೇಲ್‌ಖಂಡ ಗ್ರಾನೈಟ್ ಹೆಚ್ಚಿನ ದರ್ಜೆಯ ರೂಪಾಂತರವನ್ನು ಸಹ ಉಂಟು ಮಾಡಿದೆ ಎಂದು ಭಾವಿಸಲಾಗಿದೆ.

ಈ ಜೇಡುಶಿಲೆಗಳು ರಚನೆಯಲ್ಲಿ ಬಹುಸೂಕ್ಷ್ಮವಾಗಿದ್ದು ಬಣ್ಣದಲ್ಲಿ ವಿವಿಧ ಛಾಯೆಗಳನ್ನು ತೋರ್ಪಡಿಸುತ್ತವೆ. ಪ್ರಸ್ತರೀಕರಣವನ್ನು ವರ್ಣವಿಭೇದದಿಂದಲೂ ಸುಲಭವಾಗಿ ಗುರುತಿಸಬಹುದು. ಹಲವು ಬಾರಿ ವಿವಿಧ ವರ್ಣದ ಪಟ್ಟೆಗಳು ಶಿಲಾಪ್ರಸ್ತರಗಳನ್ನೂ ಸೀಳುಗಳನ್ನೂ ಹಾಯ್ದುಹೋಗುವುದುಂಟು.

**ಬಿನೋಟ ಜೇಡುಶಿಲೆಗಳು:** ಅರಾವಳಿಯ ಪೂರ್ವ ಇಳಿಜಾರಿನ ಉದ್ದಕ್ಕೂ ಕಂಡುಬಂದು ಬಹುಶಃ ಪ್ರಮುಖ ಸೀಮಾಸ್ತರಭಂಗವನ್ನು (ಗ್ರೇಟ್ ಬಾಂಡರಿ ಫಾಲ್ಟ್) ಸೂಚಿಸಬಹುದು.

ಕಬ್ಬಿಣವಿರುವ ಜಾಸ್ಪರ್ ಮತ್ತು ಹಿಮಟೈಟ್ ಪ್ರಸ್ತರಗಳು: ಅರಾವಳಿ ಶಿಲಾಸ್ತೋಮದ ಸಿಲಿಕಯುಕ್ತ ಶಿಲೆಗಳು ಮತ್ತು ಕಬ್ಬಿಣದ ಶಿಲೆಗಳು ಹಲವು ದ್ರವಗಳ ಚಟುವಟಿಕೆಯಿಂದ ಉಂಟಾದುವೆಂದು ನಂಬಲಾಗಿದೆ. ಬಹುಶಃ ಈ ಚಟುವಟಿಕೆಯೇ ಕಬ್ಬಿಣವುಳ್ಳ ಜಾಸ್ಪರ್ ಮತ್ತು ಹಿಮಟೈಟ್ ಪ್ರಸ್ತರಗಳಿಗೂ ಕಾರಣವಾಗಿರಬಹುದು. ಜಾಸ್ಪರ್ ಮತ್ತು ಹಿಮಟೈಟ್ ಪ್ರಸ್ತರಗಳು ಪರಸ್ಪರ ಒಂದರ ಮೇಲೊಂದು ಸಂಚಿತವಾಗಿವೆ. ಕೆಲವು ಪ್ರದೇಶಗಳಲ್ಲಿ ಒರಟು ಮರಳುಶಿಲೆಯ ಪ್ರಸ್ತರಗಳು ಅನುರೂಪವಾಗಿ ಇವುಗಳ ಮೇಲೆ ಶೇಖರಗೊಂಡಿರುವುದನ್ನೂ ಕಾಣಬಹುದು. ಇವು ಅನಾದಿಕಾಲದ ಸ್ತರಗಳನ್ನು ಪ್ರತಿನಿಧಿಸುವುವೆಂದು ತಿಳಿಯಲಾಗಿದೆ. ಅಲ್ಲದೆ ಇವುಗಳನ್ನು ಬುಂದೇಲ್‌ಖಂಡ ಗ್ರಾನೈಟಿನ ಅಂತಸ್ಸರಣಗಳು ತೂರಿಕೊಂಡುಬರುತ್ತವೆ.

**ಖೇರ್‌ಮಾಲಿಯ ಲಾವಾಗಳು:** ಖೇರ್‌ಮಾಲಿಯ ಪ್ರದೇಶಗಳಲ್ಲಿ ಒರಟು ಮರಳುಶಿಲೆ ಮತ್ತು ಸ್ಲೇಟ್‌ಗಳ ನಡುವೆ ಈ ಅಗ್ನಿಶಿಲೆಯ ಪ್ರಸ್ತರಗಳನ್ನು ನೋಡಬಹುದು. ಇವು ಬಹುಶಃ ಸ್ಲೇಟ್ ಶಿಲಾಪದರಗಳಲ್ಲಿ ಮತ್ತು ಬುಂದೇಲ್‌ಖಂಡ ಗ್ರಾನೈಟ್‌ಗಳಲ್ಲಿ ಕಂಡುಬರುವ ಡಾಲರೈಟ್ ಅಂತಸ್ಸರಣಗಳ ಬಾಹ್ಯರೂಪಗಳೆಂದು ಭಾವಿಸಲಾಗಿದೆ. ಇವು ನೀರಳೆ ಕಪ್ಪುಬಣ್ಣದಿಂದಿದ್ದು ನಾನಾ ಗಾತ್ರದ, ಆಕಾರದ ರಂಧ್ರಗಳಿಂದ ಕೂಡಿವೆ. ಹಲವು ರಂಧ್ರಗಳಲ್ಲಿ ಆನುಷಂಗಿಕ ಖನಿಜಗಳು ತುಂಬಿವೆ.

**ಅಂತರಪದರಯುತ ಮತ್ತು ಅಡ್ಡಹಾಯ್ದ ಕ್ವಾರ್ಟ್ಸೈಟ್ ಪ್ರಸ್ತರಗಳು:** ಅರಾವಳಿ ಸ್ತೋಮದ ಹಲವೆಡೆ ಕಡುಬಿನಾಕಾರದ (ಮಸೂರಾಕಾರದ)ಕ್ವಾರ್ಟ್ಸೈಟ್ ಮತ್ತು ಪೆಂಟೆಕಲ್ಲಿನ ಪ್ರಸ್ತರಗಳು ಫಿಲೈಟ್ ಮತ್ತು ಪದರುಶಿಲೆಗಳೊಡನೆ ಕಾಣಿಸುತ್ತವೆ. ಅಲ್ಲದೆ ಸ್ಲೇಟ್‌ಗಳ ಮಧ್ಯೆಯೂ ನಿರಾಕಾರ ಕ್ವಾರ್ಟ್ಸೈಟ್‌ಗಳನ್ನು ನೋಡಬಹುದು. ಹಲವು ಪ್ರದೇಶಗಳಲ್ಲಿ ಇವು ನೂರಾರು ಅಡಿಗಳಷ್ಟು ಮಂದವಾಗಿದ್ದು ಕಡಿದಾದ ಬೆಟ್ಟದ ಏಣಿನಂತೆ ಕಂಡುಬರುತ್ತವೆ. ಬಡೆಸಾರ್ ಮತ್ತು ಮೇವಾರ್ ಬಳಿ ಇವುಗಳ ಜಾಡಿನಲ್ಲಿ ತೀವ್ರ ಬದಲಾವಣೆಯನ್ನು ಕಾಣಬಹುದು. ಅಲ್ಲಿ ಇವು ಸ್ಲೇಟ್‌ಗಳೊಡನೆ ಹಾಸುಹೊಕ್ಕಾಗಿವೆ. ಡಾ.ಹೆರಾನ್ ಅವರ ಅಭಿಪ್ರಾಯದಂತೆ ಬಹುಶಃ ಸ್ಲೇಟುಗಳು ಈ ಕ್ವಾರ್ಟ್ಸೈಟ್‌ಗಳ ಮಧ್ಯೆ ಸಿಕ್ಕಿಬಿದ್ದು ಇರುಕಲ್ಪಟ್ಟಿವೆ.

ಕನೂಜ್ ಒರಟು ಮರಳುಶಿಲೆ: ಕನೂಜ್ ಸಮೀಪದಲ್ಲಿ ಹೆಚ್ಚು ಕಬ್ಬಿಣಾಂಶವುಳ್ಳ ಒರಟು ಮರುಳುಶಿಲೆ ಮತ್ತು ಜೇಡುಶಿಲಾಪ್ರಸ್ತರಗಳು ಅನುರೂಪವಾಗಿ ಬಿಳಿಯ ಬೆಣಚಿನ ಪದರುಶಿಲೆಗಳ ಮೇಲಿವೆ. ಇವು ಬೂದುಬಣ್ಣದವು. ಬಹು ಸುಲಭವಾಗಿ ಶಿಥಿಲವಾಗುತ್ತವೆ.

**ಖಾರ್ಡಿಯೋಲ ಒರಟು ಮರಳುಶಿಲೆ:** ಇವು ಖೇರ್‌ಮಾಲಿಯ ಲಾವಾಪ್ರಸ್ತರಗಳ ಮೇಲೆ ಸಂಚಿತವಾಗಿವೆ. ಅಲ್ಲದೆ ಇವುಗಳ ಮೇಲೆ ವಯಸ್ಸಿನಲ್ಲಿ ಕಿರಿದಾದ ರಯಾಲೋ ಪ್ರಸ್ತರಗಳು ಶೇಖರವಾಗಿರುವುದನ್ನು ಕಾಣಬಹುದು. ಕೆಲವೆಡೆ ಬುಂದೇಲ್‌ಖಂಡ ಗ್ರಾನೈಟ್, ಅರಾವಳಿ ಸ್ಲೇಟ್ ಶಿಲಾಸಮೂಹ ಮತ್ತು ಡಾಲರೈಟ್‌ಗಳ ಮೇಲೆ ಅನನುರೂಪವಾಗಿ ಇವೆ. ತಳಭಾಗದಲ್ಲಿ ಮರಳುಮಿಶ್ರಿತ ಜೇಡು, ಸ್ಲೇಟು ಮತ್ತು ಸುಣ್ಣಶಿಲೆಯ ನಾನಾ ಗಾತ್ರದ ತೇಪೆಗಳಿವೆ.

**ರಾಂಥಂಬೋರ್ ಕ್ವಾರ್ಟ್ಸೈಟ್ ಪ್ರಸ್ತರಗಳ ಸಮವರ್ಗಗಳು:** ಅರಾವಳಿ ಸ್ತೋಮದ ತುದಿಯಲ್ಲಿ ಜಯಪುರದ ಒರಿಸಾದ್ರಿ ಮತ್ತು ಮೇವಾರದ ಮಂಡಲ್‌ಘರ್ ಬಳಿ ಕಂಡುಬಂದಿವೆ. ಇವುಗಳಲ್ಲಿ ಸಮುದ್ರದ ಅಲೆಗಳ ಗುರುತುಗಳೂ ಪ್ರವಾಹ ಪ್ರಸ್ತರಗಳೂ ಇವೆ. ಜಯಪುರದ ಬಳಿ ಅಲ್ಪಸ್ವಲ್ಪವಾಗಿ ಕಂಡುಬಂದರೂ ಹೊರಾ ಸಮೀಪದಲ್ಲಿ 450–600 ಮೀ ಮಂದವಾಗಿದ್ದು ಬೆಟ್ಟಗಳಂತೆ ಕಂಡುಬರುತ್ತವೆ.

**ಅಂತರಪದರ ಸುಣ್ಣಶಿಲೆ :** ಬಹುಮಟ್ಟಿಗೆ ದಕ್ಷಿಣ ಮೇವಾರ ಪ್ರಾಂತ್ಯದಲ್ಲಿವೆ. ಸಂಯೋಜನೆಯಲ್ಲಿ ಡಾಲೊಮೈಟ್ ಎನ್ನಬಹುದು. ಜೇಡುಶಿಲಾಪ್ರಸ್ತರಗಳೊಡನೆ ಬೆರೆತಿರುವುದೂ ಉಂಟು. ಸಂಯೋಜನೆಯಲ್ಲಿ ಜೇಡಿನ ಅಂಶ ಸಹ ಕಂಡುಬಂದಿದೆ. ಕ್ಯಾಲ್ಕ್

ನೈಸ್‌ಗಳಂತೆ ಬಯೊಟೈಟ್ ಮತ್ತು ಆಂಫಿಬೋಲ್ ಖನಿಜಗಳಿಂದ ಕೂಡಿರುವುದೂ ಉಂಟು. ಹಲವುಬಾರಿ ಟ್ರೆಮೊಲೈಟ್, ಫೆಲ್ಡ್‌ಸ್ಪಾರ್ ಮತ್ತು ಮ್ಯಾಗ್ನಟೈಟ್ ಖನಿಜಗಳಿಂದ ಕೂಡಿದ ಪಟ್ಟಿಗಳನ್ನೂ ಕಾಣಬಹುದು. ಹಲವು ಬಾರಿ ಕಂದು ಬಣ್ಣದ ಸಿಲಿಕಾಂಶಯುಕ್ತ ಮತ್ತು ಕಬ್ಬಿಣಾಂಶಯುಕ್ತ ಫಿಲೈಟ್ ಪಟ್ಟಿಗಳನ್ನೂ ನೋಡಬಹುದು. ಉದಯಪುರದ ಸುತ್ತಮುತ್ತ ಮಸೂರಾಕಾರದ ಕಪ್ಪುಬಣ್ಣದ ಸುಣ್ಣ ಶಿಲಾಪ್ರಸ್ತರಗಳಿವೆ. ಹಲವು ಪ್ರದೇಶಗಳಲ್ಲಿ ಒರಟು ಬ್ರೆಕ್ಷಿಯ (ಪೆಂಟೆಕಲ್ಲು) ನಿಕ್ಷೇಪಗಳು ಸುಣ್ಣಶಿಲೆಯ ಮಧ್ಯೆ ಎದ್ದು ಕಾಣುತ್ತವೆ.

**ಅಂತಸ್ಸರಣಗಳು :** ಶಿಲೆಯ ರಾಸಾಯನಿಕ ಸಂಯೋಜನೆಗನುಗುಣವಾಗಿ ಈ ಸ್ತೋಮದ ಅಂತಸ್ಸರಣಗಳನ್ನು ಅತಿಕ್ಷಾರೀಯ, ಕ್ಷಾರೀಯ ಮತ್ತು ಆಮ್ಲೀಯವೆಂದು ವಿಭಜಿಸಬಹುದು. ಅತಿಕ್ಷಾರೀಯ ಅಂತಸ್ಸರಣಗಳು ಮೇವಾರ, ದುಂಗರ್‌ಪುರ ಮತ್ತು ಇದರ್ ಪ್ರಾಂತ್ಯಗಳಲ್ಲಿವೆ. ಮೊದಲಿಗೆ ಪೆರಿಡೊಟೈಟ್ ಅಥವಾ ಪೈರಾಕ್ಸಿನೈಟ್‌ಗಳಂತೆ ಇದ್ದವೆಂದು ಹೇಳಬಹುದು. ಕ್ರಮೇಣ ಭೂಮಿಯ ಬದಲಾವಣೆಗೊಳಗಾಗಿ ಪ್ರಸಕ್ತ ಟಾಲ್ಕ್, ಸರ್ಪೆಂಟೀನ್, ಕ್ಲೋರೈಟ್ ಪದರುಶಿಲೆಗಳಂತೆ ಕಂಡುಬರುತ್ತವೆ. ಇವು ಬಣ್ಣದಲ್ಲಿ ಹಸುರು ಹಲವು ವೇಳೆ ಟೈಟನೈಟ್, ಗಾರ್ನೆಟ್, ಕ್ರೋಮೈಟ್ ಆಂಫಿಬೋಲ್ ಫ್ಲಾಗೋಪೈಟ್, ಕ್ಯಾಲ್ಸೈಟ್ ಇತ್ಯಾದಿ ಖನಿಜಗಳನ್ನು ಇವುಗಳಲ್ಲಿ ಗುರುತಿಸಬಹುದು. ಇವು ಹುಗಿದ ಕಡೆ ಫಿಲೈಟ್‌ಗಳು ಅಭ್ರಕಪದರು ಶಿಲೆಗಳಾಗಿ ರೂಪಾಂತರ ಹೊಂದಿವೆ. ಈ ಕಾರಣಕ್ಕಾಗಿಯೇ ಬಿಳಿಯ ಕ್ವಾರ್ಟ್ಸೈಟ್‌ಗಳು ಬೂದು ಬಣ್ಣವನ್ನು ತಳೆದಿವೆ. ಕ್ಷಾರೀಯ ಅಂತಸ್ಸರಗಳು ಮೊದಲಿಗೆ ಡಾಲರೈಟ್ ಮತ್ತು ಆಂಫಿಬೊಲೈಟ್‌ಗಳಂತಿದ್ದು ಪ್ರಸಕ್ತ ಎಪಿಡಿಯೊರೈಟ್ ಮತ್ತು ಹಾರ್ನ್‌ಬ್ಲೆಂಡ್ ಪದರುಶಿಲೆಗಳಾಗಿ ಮಾರ್ಪಟ್ಟಿವೆ. ಡೈಕ್ ಮತ್ತು ಸಿಲ್‌ಗಳಂತೆ ಇವನ್ನು ಸ್ತೋಮದ ನಾನಾ ಭಾಗಗಳಲ್ಲಿ ಸುಲಭವಾಗಿ ಗುರುತಿಸಬಹುದು. ಆಮ್ಲೀಯ ಅಂತಸ್ಸರಣಗಳು ಬಹುಮಟ್ಟಿಗೆ ಕ್ವಾರ್ಟ್ಸ್ ಸಿರಗಳೋಪಾದಿಯಲ್ಲಿ ಅರಾವಳಿ ಸ್ತೋಮದ ಫಿಲೈಟ್‌ಗಳ ನಡುವೆ ಕಂಡುಬಂದಿವೆ. ಅಲ್ಲದೇ ಪೆಗ್ಮಟೈಟ್ ಮತ್ತು ಆಪ್ಲೈಟ್ ಸಿರಗಳನ್ನೂ ಕಾಣಬಹುದು. ಇವು ನೈಸ್ ಮತ್ತು ಪದರುಶಿಲೆಗಳನ್ನು ಅಡ್ಡಹಾಯುವುದೂ ಉಂಟು. ಹಲವು ಬಾರಿ ಅವುಗಳೊಡನೆ ಬೆರೆತು ಮಿಶ್ರ ಶಿಲೆಗಳಿಗೂ ಕಾರಣವಾಗಿವೆ.

**ಖನಿಜನಿಕ್ಷೇಪಗಳು :** ಅರಾವಳಿ ಶಿಲಾಸ್ತೋಮದಲ್ಲಿ ಇವಕ್ಕೆ ಕೊರತೆಯಿಲ್ಲ. ಸೀಸ ಮತ್ತು ಸತುವಿನ ಸಿರಗಳು, ಶಿಲಾಸೀಳು, ಬಿರುಕು ಮತ್ತು ಸ್ತರಭಂಗಗಳ ಜಾಡಿನಲ್ಲಿ ಹರಡಿವೆ. ಜೈಪುರ ಮತ್ತು ಮೇವಾರ್‌ದಲ್ಲಿನ ಡಾಲೊಮೈಟ್, ಫಿಲೈಟ್ ಮತ್ತು ಕ್ವಾರ್ಟ್ಸೈಟ್ ಶಿಲಾಪ್ರಸ್ತರಗಳು ಈ ಖನಿಜಗಳಿಗೆ ತವರು. ಭಾರತದ ಏಕೈಕ ಸೀಸ ಮತ್ತು ಸತುವಿನ ಗಣಿ ಎನಿಸಿದ ಜಾವರ್ ಗಣಿ ಉದಯಪುರದ ಬಳಿ ಇದೆ. ಈ ಲೋಹ ಖನಿಜಗಳಲ್ಲದೆ ಅರಾವಳಿ ಸ್ತೋಮದಲ್ಲಿ ಉತ್ತಮ ದರ್ಜೆಯ ಸುಣ್ಣಶಿಲೆ ಮತ್ತು ಹಾಸುಗಲ್ಲುಗಳೂ ದೊರೆಯುತ್ತವೆ. ಕಟ್ಟಡದ ಕೆಲಸಗಳಿಗೆ ಇವು ಹೆಚ್ಚು ಉಪಯುಕ್ತವಾಗಿವೆ. ಬುಂಡಿ ಬಳಿಯ ಉಮ್ರೊರ್ ಸುತ್ತಲಿನ ಸುಣ್ಣಶಿಲೆಯೂ ಜೈಪುರದ ಬಳಿಯ ರಘುನಾಥ್ ಘರ್‌ನ ಹಾಸುಗಲ್ಲುಗಳೂ ಬಹು ಪ್ರಸಿದ್ಧವಾದುವು. (ಎಂ.ಎಸ್.ಎಸ್.)

**ಅರಿಕಮೇಡು :** ಪಾಂಡಿಚೇರಿಯ ದಕ್ಷಿಣಕ್ಕೆ ಎರಡು ಮೈಲಿ ದೂರದಲ್ಲಿ ಸಮುದ್ರತೀರದಲ್ಲಿ ಪೆರಿಪ್ಲಸ್ ಆಫ್ ದಿ ಎರಿಥ್ರಿಯನ್ ಸೀ (ಪ್ರಶ.60–100) ಎಂಬ ಗ್ರಂಥದಲ್ಲಿ ಬರುವ ಪೊಡೊಕಿ, ಬಹುಶಃ ಇದೇ ಊರು ಆಗಿರಬೇಕೆಂದು ವಿದ್ವಾಂಸರ ಊಹೆ. ಮೇಡು



ಚಿತ್ರ 1. ಒಡೆದ ಮಡಕೆ

ಎಂದರೆ ದಿನ್ನೆ, ಅರಿಯಾನ್ಕುಪ್ಪಂ ನದಿಯ ಮೇಲಿರುವುದರಿಂದ ಇದಕ್ಕೆ ಅರಿಕಮೇಡು ಎಂಬ ಹೆಸರು ಬಂದಂತೆ ತೋರುವುದು. ಇದು ಭಾರತ ಮತ್ತು ರೋಮ್‌ಗಳ ನಡುವೆ ವ್ಯಾಪಾರ ನಡೆಸುತ್ತಿದ್ದ ಒಂದು ಪಟ್ಟಣವಾಗಿತ್ತೆಂದು ಅಲ್ಲಿ ದೊರೆತ ಮಣ್ಣಿನ ಪಾತ್ರೆಗಳು, ಬೆಲೆಯುಳ್ಳ ಕಲ್ಲಿನ ಮುದ್ದೆಗಳು ಮುಂತಾದುವುಗಳಿಂದ ನಿರ್ಧರಿಸಬಹುದು. ವೆಜಂಟಿಲ ಡಿ.ಜೆವೇವುಡಿಬ್ರಿಲ ಮತ್ತು ಪಾಂಡಿಚೇರಿಯ ಎಲ್. ಫೌಜೆಕ್ಸ್ ಮತ್ತು ಆರ್.ಸುರ್ತೀವು ಮೊದಲಾದವರು ಅರಿಕ ಮೇಡುವಿನಲ್ಲಿಯ ಅವಶೇಷಗಳ ಪ್ರಾಚೀನತೆ ಮತ್ತು ಮಹತ್ತ್ವವನ್ನು



ಚಿತ್ರ 2. ಒಡೆದ ತಟ್ಟೆ, ಬಟ್ಟಲುಗಳು

ಬೆಳಕಿಗೆ ತಂದರು. ಆರ್. ಮಾರ್ಟಿಮರ್ ವ್ಹೀಲರ್ 1944ರಲ್ಲಿ ಪಾಂಡಿಚೇರಿಗೆ ಹೋದ ವೇಳೆಯಲ್ಲಿ ಇಟಲಿಯ ಹೊಳೆಯುವ ಕೆಂಪು ಮಡಕೆಯ ಚೂರುಗಳು ಅರಿಕಮೇಡಿನ ಅವಶೇಷಗಳಲ್ಲಿದ್ದುದನ್ನು ನೋಡಿ ಅವುಗಳ ಸಹಾಯದಿಂದ ಅರಿಕಮೇಡಿನ ಪ್ರಾಚೀನತೆಯನ್ನು ನಿರ್ಧರಿಸಲು 1945–46ರಲ್ಲಿ ಆ ಸ್ಥಳದ ಉತ್ಖನನವನ್ನು ಕೈಗೊಂಡ. ಆ ಊರಿನಲ್ಲಿ ವಸಾಹತು ಯಾವ ಪ್ರಕಾರದ್ದಿತ್ತು ಮತ್ತು ಅದು ರೋಮ್ ಮತ್ತು ಇತರ ದೇಶಗಳೊಡನೆ ಯಾವ ರೀತಿಯ ಸಂಬಂಧವನ್ನಿಟ್ಟುಕೊಂಡಿತ್ತೆಂಬುದನ್ನು ಕಂಡುಹಿಡಿಯುವುದೇ ಆ ಅನ್ವೇಷಣೆಯ ಉದ್ದೇಶವಾಗಿತ್ತು.



ಚಿತ್ರ 3. ಉತ್ಖನನದ ಒಂದು ಚಿತ್ರ

ಭಾರತದಿಂದ ಪಾಶ್ಚಾತ್ಯ ರಾಷ್ಟ್ರಗಳಿಗೆ ಮೆಣಸು ಮತ್ತು ತೆಳುವಾದ ಬಟ್ಟೆ, ಆಮೆಯ ಚಿಪ್ಪು, ಹಸ್ತಿದಂತ ಮತ್ತು ರೇಷ್ಮೆ ಇವು ಹೋಗಿ ಆ ರಾಷ್ಟ್ರಗಳಿಂದ ಹವಳ, ಸೀಸ, ತಾಮ್ರ, ಗಾಜು ಪಾತ್ರೆಗಳು, ಮದ್ಯ ಮತ್ತು ನಾಣ್ಯ ಮೊದಲಾದವುಗಳು ಬರುತ್ತಿದ್ದುವು. ಈ ಪ್ರಕಾರ ರಫ್ತಾಗುವ ಮತ್ತು ಆಮದು ಮಾಡಿಕೊಳ್ಳುವ ವ್ಯವಹಾರ ಹಲವುಶತಮಾನಗಳಿಂದ ನಡೆದೇ ಇತ್ತು. ಅದು ಈ ಊರಲ್ಲಿ ಪ್ರ.ಶ.50ರ ಸುಮಾರಿಗೆ ನಡೆಯಿತೆಂದು ವ್ಹೀಲರ್ ನಿಶ್ಚಯಿಸಿದ್ದಾನೆ. ಪ್ರಶ. ಒಂದನೆಯ ಶತಮಾನದಲ್ಲಿ ಈ ಊರಲ್ಲಿ ತೆಳ್ಳನೆಯ ಬಟ್ಟೆಗಳಿಗೆ ಬಣ್ಣಹಾಕುವ, ಮಣಿಗಳನ್ನು ತಯಾರಿಸುವ ಉದ್ಯೋಗಗಳು ಪ್ರಚಲಿತವಿದ್ದುವೆಂದು ಅಲ್ಲಿ ದೊರೆತ ಅವಶೇಷಗಳಿಂದ ನಿರ್ಧರಿಸಲಾಗಿದೆ. ಗ್ರೀಸ್, ರೋಮ್‌ಗಳಿಂದ ಬಂದ ಮುದ್ರೆಯನ್ನೊಳಗೊಂಡ ಹಳಕಲ್ಲುಗಳು, ಅರಿಟೈನ್ ಮಣ್ಣಿನ ಪಾತ್ರೆಗಳು, ಗುಂಡುತಳದ ಮಣ್ಣಿನ ತಟ್ಟೆಗಳು, ಮದ್ಯತುಂಬಿಡಲು ಉಪಯೋಗಿಸುತ್ತಿದ್ದ ಮಣ್ಣಿನ ಎರಡು ಹಿಡಿಯ ಜಾಡಿಗಳು (ಆಂಪೋರ), ಮೆಡಿಟರೇನಿಯನ್ ಪ್ರದೇಶದೊಡನೆ ಭಾರತಕ್ಕೆ ಇದ್ದ ವಾಣಿಜ್ಯ ಸಂಪರ್ಕವನ್ನು ಸೂಚಿಸುತ್ತವೆ. ಪರದೇಶದಿಂದ ಬಂದ ಕೆಲವು ಮಣ್ಣಿನ ಪಾತ್ರೆಗಳ ಮೇಲೆ ಬ್ರಾಹ್ಮೀ ಅಕ್ಷರಗಳೂ ಇವೆ. ಪ್ರ.ಶ. 1–2ನೆಯ ಶತಮಾನಗಳಲ್ಲಿ ಅರಿಕಮೇಡಿನಲ್ಲಿ ಇದ್ದ ಗ್ರೀಕ್–ರೊಮ್ ವ್ಯಾಪಾರಿಗಳ ವಸಾಹತು, ನದಿಯ ಆಘಾತಕ್ಕೆ ಒಳಗಾಗಿ ನಾಶವಾದಂತೆ ತೋರುತ್ತದೆ. (ಎ.ಎಂ.ಎ.)

**ಅರಿಕೇಸರಿ II :** ವೇಮುಲವಾಡದ ಚಳುಕ್ಯ ಶಾಖೆಯಲ್ಲಿನ ಮೂವರು ಅರಿಕೇಸರಿಗಳಲ್ಲಿ ಎರಡನೆಯ ಅರಿಕೇಸರಿ ಆ ವಂಶದಲ್ಲೇ ಪ್ರಖ್ಯಾತ, ಪರಾಕ್ರಮಿ, ಪಂಪಮಹಾಕವಿಗೆ ಆಶ್ರಯದಾತನಾಗಿದ್ದವ. ಹೀಗೆ ಚರಿತ್ರೆ ಮತ್ತು ಸಾಹಿತ್ಯ ಈ ಎರಡು ದೃಷ್ಟಿಯಿಂದಲೂ ಈತ ಮುಖ್ಯವೆನಿಸುತ್ತಾನೆ.

ಕನ್ನಡನಾಡಿನ ಚರಿತ್ರೆಯಲ್ಲಿ ಬಾದಾಮಿಯ ಚಾಳುಕ್ಯರು, ಕಲ್ಯಾಣಿಯ ಚಾಳುಕ್ಯರು, ವೆಂಗಿಯ ಚಾಳುಕ್ಯರು ಮತ್ತು ಗುಜರಾತಿನ ಚಾಳುಕ್ಯರು ಎಂಬುದಾಗಿ ನಾಲ್ಕು ಮುಖ್ಯ ಚಾಳುಕ್ಯ ಮನೆತನಗಳು ಪ್ರಸಿದ್ಧವಾಗಿವೆ. ಇವಲ್ಲದೆ ಇನ್ನೂ ಕೆಲವು ಚಾಳುಕ್ಯ ಶಾಖೆಗಳಿವೆ. ಅವುಗಳಲ್ಲಿ ಒಂದು ವೇಮುಲವಾಡದ ಚಾಳುಕ್ಯ ಶಾಖೆ. ಈ ಶಾಖೆಯ ಅರಸರು 7–8ನೆಯ ಶತಮಾನದಿಂದ ಹಿಡಿದು 10ನೆಯ ಶತಮಾನದವರೆಗೆ ಇಂದಿನ ಆಂಧ್ರಪ್ರದೇಶದ ನಿಜಾಮಾಬಾದ್ 'ಕರೀಂನಗರ್' ನಲ್ಗೊಂಡ ಮತ್ತು ಕರ್ನಾಟಕ ರಾಯಚೂರು ಜಿಲ್ಲೆಗಳನ್ನು ಬಹುಮಟ್ಟಿಗೆ ಒಳಗೊಂಡ ಪ್ರದೇಶದಲ್ಲಿ ರಾಷ್ಟ್ರಕೂಟದ ಅಧೀನತೆಯಲ್ಲಿ ರಾಜ್ಯವಾಳುತ್ತಿದ್ದರು. ಇಂದಿನ ಅಂಧ್ರಪ್ರದೇಶದ ಕರೀಂನಗರ್ ಜಿಲ್ಲೆಯ ವೇಮುಲವಾಡವೇ (ಲೇಮುಲವಾಡ) ಅಂದು ಲೆಂಬುಳಪಾಟಕವೆಂಬ (ವೆಂಬುಳವಾಟಕಪತ್ತನ/ವೆಂಬುಳವಾಟ) ಹೆಸರಿಂದ ಅವರ ರಾಜಧಾನಿಯಾಗಿತ್ತು. ಈ ಕಾರಣವಾಗಿಯೇ ಇವರನ್ನು ವೇಮುಲವಾಡದ ಚಾಳುಕ್ಯರು ಎಂಬುದಾಗಿ ಕರೆಯುವುದು ರೂಢಿಯಾಗಿದೆ. ಈ ಮನೆತನದ ಮೂಲಪುರುಷ 1ನೆಯ ಯುದ್ಧಮಲ್ಲ ವಿನಯಾದಿತ್ಯ. ಈತ ಇಮ್ಮಡಿ ಪುಲಕೇಶಿಯ ಪುತ್ರರಲ್ಲಿ ಲಾಟದ ಜಯಸಿಂಹಧಾರಾಶ್ರಯನ ಮಗನಿರಬೇಕೆಂದು ಕೆಲವರೂ ಪೃಥುವಿಕ್ರಮ ರಾಜಾದಿತ್ಯನೆನ್ನಿಸಿದ ಬಾದಾಮಿಯ 1ನೆಯ ವಿಕ್ರಮಾದಿತ್ಯನ ಮಗನಿರಬೇಕೆಂದು ಕೆಲವರೂ ವಾದಿಸಿರುತ್ತಾರೆ. ಹೀಗೆ ವೇಮುಲವಾಡದ ಚಾಳುಕ್ಯರು ಆದಿಯ ಬಾದಾಮಿಯ ಚಳುಕ್ಯ ಮನೆತನಕ್ಕೆ ಸೇರಿದವರೇ ಆದರೂ ಆ ಸಂಬಂಧವನ್ನು ಇನ್ನೂ ಸರ್ವಸಮ್ಮತವಾಗಿ ಗುರುತಿಸುವುದು ಸಾಧ್ಯವಾಗಿಲ್ಲ.

ಈ ಚಾಳುಕ್ಯಶಾಖೆಯ ಅರಸರಾದ 1ನೆಯ ಅರಿಕೇಸರಿಯ ಕೊಲ್ಲಿಪಾರದ ತಾಮ್ರಪಟಗಳು (ಸು.750), 2ನೆಯ ಅರಿಕೇಸರಿಯ ವೇಮುಲವಾಡದ ಶಿಲಾಶಾಸನ(ಸು.927) ಮತ್ತು 3ನೆಯ ಅರಿಕೇಸರಿಯ ಪರಭಣಿಯ ತಾಮ್ರಪಟಗಳು (966) ಇವುಗಳಿಂದಲೂ ಪಂಪಕವಿಯ ವಿಕ್ರಮಾರ್ಜುನವಿಜಯ (941) ಎಂಬ ಕನ್ನಡಕಾವ್ಯ ಹಾಗೂ ಸೋಮದೇವಸೂರಿಯ ಯಶಸ್ತಿಲಕ ಚಂಪೂ (959) ಎಂಬ ಸಂಸ್ಕೃತಕಾವ್ಯಗಳಿಂದಲೂ ಆ ಮನೆತನದ ಅರಸರ ವಿಚಾರವಾಗಿ ಹಲವು ಚಾರಿತ್ರಿಕ ವಿವರಗಳು ಬೆಳಕಿಗೆ ಬಂದಿವೆ. ಇವುಗಳಿಂದ ತಿಳಿದುಬರುವ ಇವರ ವಂಶಾನುಕ್ರಮಣಿಕೆ ಹೀಗಿದೆ: ಯುದ್ಧಮಲ್ಲ ವಿನಯಾದಿತ್ಯ I→ಅರಿಕೇಸರಿ I→ ನರಸಿಂಹ I ಮತ್ತು ಭದ್ರದೇವ I→(ನರಸಿಂಹನ ಜ್ಯೇಷ್ಠಪುತ್ರ) ಯುದ್ಧಮಲ್ಲ II→ಭದ್ರದೇವ II(ಬದ್ದೆಗ) →ಯುದ್ಧಮಲ್ಲ III→ನರಸಿಂಹ II→ಅರಿಕೇಸರಿ II→ಭದ್ರದೇವ III→ಅರಿಕೇಸರಿ III. ಕೊಲ್ಲಿಪಾರದ ತಾಮ್ರಪಟಗಳಲ್ಲಿ ಮೊದಲು ನಾಲ್ಕು ತಲೆಗಳು ಹೆಚ್ಚಾಗಿವೆ.

ಇಮ್ಮಡಿ ಅರಿಕೇಸರಿಯ ವಿಚಾರವಾಗಿ ವೇಮುಲವಾಡ ಮತ್ತು ಪರಭಣಿ ಶಾಸನಗಳಲ್ಲಿಯೂ ಪಂಪನ ವಿಕ್ರಮಾರ್ಜುನ ವಿಜಯದಲ್ಲಿಯೂ (ಪಂಪಭಾರತ) ದೊರೆಯುವ ಕೆಲವು ಸಂಗತಿಗಳನ್ನು ಚರಿತ್ರಕಾರರು ವಿಮರ್ಶಿಸಿರುತ್ತಾರೆ. ಅವನ್ನು ಇಲ್ಲಿ ಸಂಗ್ರಹಿಸಿದೆ : ಅರಿಕೇಸರಿ ಇಮ್ಮಡಿ ನರಸಿಂಹನಿಗೆ ಜಾಕವ್ವೆಯಲ್ಲಿ ಮಗನಾಗಿ ಜನಿಸಿದ. ಜಾಕವ್ವೆ ರಾಷ್ಟ್ರಕೂಟ ಚಕ್ರವರ್ತಿ 3ನೆಯ ಇಂದ್ರನ ಸೋದರಿಯಿರಬಹುದೆಂದು ಕೆಲವರ ಊಹೆ. ಪಂಪ ಇಂದ್ರೇಂದ್ರನ ತೋಳೆ ತೊಟ್ಟಿಲಾಗಿರೆ ಬಳೆದಂ ಎಂಬುದಾಗಿ ಅರಿಕೇಸರಿಯ ಬಾಲ್ಯವನ್ನು ವರ್ಣಿಸಿರುವುದರಿಂದ, ಅರಿಕೇಸರಿ ಮುಮ್ಮಡಿ ಇಂದ್ರನ ಪ್ರೀತ್ಯಾದರಗಳಿಗೆ ಪಾತ್ರನಾಗಿದ್ದನೆಂದು ತಿಳಿದುಬರುತ್ತದೆ. ಆತ ಇಂದ್ರನ ಪುತ್ರಿ ರೇವಕನಿರ್ಮಡಿಯನ್ನು ವರಿಸಿದ್ದನೆಂಬುದಾಗಿ ವೇಮುಲವಾಡದ ಶಾಸನದಲ್ಲಿ ಹೇಳಿದೆ. ಆದರೆ ರಾಷ್ಟ್ರಕೂಟ ಕುಲದ ಲೋಕಾಂಬಿಕೆಯೆಂಬುವಳು ಪತ್ನಿ ಎಂಬುದಾಗಿ ಪರಭಣಿ ತಾಮ್ರಪಟಗಳಲ್ಲಿದೆ. ಲೋಕಾಂಬಿಕೆ ಎಂಬುದು ರೇವಕನಿರ್ಮಡಿಯ ಬಿರುದೇ, ಪ್ರತಿನಾಮವೇ ಅಥವಾ ಇನ್ನೊಬ್ಬ ಹೆಂಡತಿಯ ಹೆಸರೇ ಎಂಬುದು ಸ್ಪಷ್ಟವಿಲ್ಲ. ಕೆಲವರು ಲೋಕಾಂಬಿಕೆಯೊಬ್ಬಳೇ ಅರಿಕೇಸರಿಯ ಪತ್ನಿಯೆನ್ನುತ್ತಾರೆ; ಮತ್ತೆ ಕೆಲವರು ಅತನಿಗೆ ರೇವಕನಿರ್ಮಡಿ ಮತ್ತು ಲೋಕಾಂಬಿಕೆ ಇಬ್ಬರೂ ಪತ್ನಿಯರೆನ್ನುತ್ತಾರೆ. ಅರಿಕೇಸರಿಗೆ ಸಾಮಂತಚೂಡಾಮಣಿ, ಉದಾತ್ತ ನಾರಾಯಣ, ಆರೂಢ ಸರ್ವಜ್ಞ, ಕದನ ತ್ರಿಣೇತ್ರ, ಸಹಜಮನೋಜ, ಶರಣಾಗತ ಜಳನಿಧಿ, ಗುಣಾರ್ಣವ, ಪ್ರಿಯಗಳ್ಳ ಮೊದಲಾದ ಹಲವು ಬಿರುದುಗಳಿದ್ದುವೆಂಬುದಾಗಿ ವೇಮುಲವಾಡದ ಶಾಸನದಿಂದಲೂ ವಿಕ್ರಮಾರ್ಜುನ ವಿಜಯದಿಂದಲೂ ತಿಳಿದುಬರುತ್ತದೆ.

ಅರಿಕೇಸರಿಯ ಸಾಹಸಗಳಲ್ಲಿ ಮೂರರ ಬಗೆಗೆ ಮಾತ್ರ ಉಲ್ಲೇಖಗಳು ದೊರೆಯುತ್ತವೆ. ರಾಷ್ಟ್ರಕೂಟ ಚಕ್ರವರ್ತಿ 4ನೆಯ ಗೋವಿಂದರಾಜ (ಗೊಜ್ಜಿಗ 928–33) ಚಾಳುಕ್ಯವಂಶದ ವಿಜಯಾದಿತ್ಯನ (ಬಿಜ್ಜ) ಮೇಲೆ ಮುಳಿಯಲು ಈ ಚಾಳುಕ್ಯರಾಜ ಅರಿಕೇಸರಿಗೆ ಶರಣುಹೋದನೆಂದೂ ಅರಿಕೇಸರಿ ಆತನಿಗೆ ರಕ್ಷಣೆ ನೀಡಿದನೆಂದೂ ವೇಮುಲವಾಡದ ಶಾಸನದಿಂದಲೂ ವಿಕ್ರಮಾರ್ಜುನ ವಿಜಯದಿಂದಲೂ ತಿಳಿದುಬರುತ್ತದೆ. ಇದು ಮೊದಲನೆಯದು– ಚರಿತ್ರಕಾರರು ಈ ಪ್ರಸಂಗವನ್ನು ಹೀಗಿರಬಹುದೆಂದು ವಿವರಿಸಿರುತ್ತಾರೆ: ರಾಷ್ಟ್ರಕೂಟ ಚಕ್ರವರ್ತಿ 3ನೆಯ ಇಂದ್ರನ (ಸು. 914–22) ಆಳ್ವಿಕೆಯ ಕೊನೆಗೆ ವೆಂಗಿಯ ಚಾಳುಕ್ಯರಲ್ಲಿ ಅರಸೊತ್ತಿಗೆಯ ಕಲಹಗಳು, ಗೊಂದಲಗಳು ತಲೆದೋರತೊಡಗಿದ್ದವು. 4ನೆಯ ಗೋವಿಂದ ವೆಂಗಿಯ ಇಮ್ಮಡಿ ಯುದ್ಧಮಲ್ಲನಿಗೆ ಆತನ ವಿರೋಧಿಗಳಿಗೆ ಪ್ರತಿಯಾಗಿ ನೆರವುನೀಡಿದ. ಇದನ್ನು ಒಂದು ಕಡೆ ಹಿರಿಯ ಶಾಖೆಯ 2ನೆಯ ಭೀಮ ಗೋವಿಂದ ವಿರೋಧಿಗಳ ಒತ್ತಾಸೆಯೊಡನೆ ಪ್ರತಿಭಟಿಸಿದರೆ, ಅದರ ಬೆನ್ನಿಗೇ ಇನ್ನೊಂದು ಕಡೆ ಮುದುಗೊಂಡ ಚಾಳುಕ್ಯಶಾಖೆಯ (ವೇಮುಲವಾಡದ ಸೀಮೆಗೆ ಸೇರಿದಂತೆ ಸ್ವಲ್ಪ ದಕ್ಷಿಣದಲ್ಲಿದ್ದ ಪ್ರದೇಶವನ್ನು ಆಳುತ್ತಿದ್ದ ಚಾಳುಕ್ಯರು) ಬಿಜ್ಜ ಅಥವಾ ವಿಜಯಾದಿತ್ಯ ಮೇಲೆದ್ದು ಪ್ರತಿಭಟಿಸಿದ. ಈ ಮೊದಲು ಭೀಮನ ದಂಗೆಯನ್ನಡಗಿಸಲು ಗೋವಿಂದ ಸಾಮಂತರ ಕೈಕೆಳಗೆ ಸೇನೆಯೊಂದನ್ನು ಅಟ್ಟಿದ್ದ ಹಾಗೆಯೇ ಈಗ ಇನ್ನೊಂದು ಸೇನೆಯನ್ನು ಬಿಜ್ಜನ ಮೇಲೆ ಕಳುಹಿಸಿದ. ಈ ಘಟ್ಟದಲ್ಲಿ ಬಿಜ್ಜ ಅರಿಕೇಸರಿಯ ನೆರವನ್ನು ಕೋರಿದ. ಅರಿಕೇಸರಿ ಬಿಜ್ಜನಿಗೆ ಸಹಾಯವಾಗಿ ಗೋವಿಂದನ ಸೈನ್ಯವನ್ನು ಸೋಲಿಸಿ ಓಡಿಸಿ, ಶರಣಾಗತ ಜಳನಿಧಿ, ಸಾಮಂತ ಚೂಡಾಮಣಿ ಎನ್ನಿಸಿದ (ಚಾಳುಕ್ಯ ರಾಜ್ಯದಲ್ಲಿ ಅರಸೊತ್ತಿಗೆಗಾಗಿ ಮೇಲಾಟ ಹೋರಾಟಗಳು ನಡೆದಿದ್ದಾಗ ಕೊಲ್ಲಭಿಗಂಡ ವಿಜಯಾದಿತ್ಯನೆಂಬವ ಬದ್ದೆಗ ಅರಿಕೇಸರಿಗಳಿಗೆ ಶರಣಾಗತನಾಗಿರಬೇಕೆಂದು ಮುಂತಾಗಿ ಬೇರೆ ರೀತಿಯಲ್ಲಿ ಈ ಪ್ರಸಂಗವನ್ನು ವಿವರಿಸಿರುತ್ತಾರೆ).

ಅರಿಕೇಸರಿ ಮಿತಿಮೀರಿ ನಡೆಯುತ್ತಿದ್ದ ಚಕ್ರವರ್ತಿ ಗೋವಿಂದನನ್ನು ಕೆಡಿಸಿ ತನ್ನನ್ನು ನಂಬಿ ಬಂದ ಬದ್ದೆಗದೇವನಿಗೆ ಸಾಮ್ರಾಜ್ಯಪದವನ್ನು ಕೈಗೂಡಿಸಿದನೆಂದು ಪಂಪಭಾರತದಲ್ಲಿ ಹೇಳಿದೆ. ಇದು ಎರಡನೆಯ ಸಾಹಸಕಾರ್ಯ. ಇದರ ಬಗೆಗೆ ಚರಿತ್ರಕಾರರ ವಿವರಣೆಯಿದು: ರಾಷ್ಟ್ರಕೂಟ ಚಕ್ರವರ್ತಿ 4ನೆಯ ಗೋವಿಂದ ತನ್ನ ಅಣ್ಣ ಇಮ್ಮಡಿ ಅಮೋಘವರ್ಷನನ್ನು ಪದಚ್ಯುತಿಗೊಳಿಸಿ ರಾಷ್ಟ್ರಕೂಟ ಸಿಂಹಾಸನವನ್ನು ಹಿಡಿದಿದ್ದ (ಸು.930). ಇದು ಆತನ ಕೆಲವು ಆಸ್ಥಾನಿಕರಿಗೆ, ಮಂತ್ರಿ ಸಾಮಂತರಿಗೆ ಇಷ್ಟವಾಗಿರಲಿಲ್ಲ. ಇವರಿಗೆ ರಾಜಕುಟುಂಬದಲ್ಲಿಯೇ ಗೋವಿಂದನ ಚಿಕ್ಕಪ್ಪನಾದ ಬದ್ದೆಗದೇವನಿಂದಲೂ ಆತನ ಪುತ್ರ ಮುಮ್ಮಡಿ ಕೃಷ್ಣನಿಂದಲೂ ಒತ್ತಾಸೆ ದೊರೆಯಿತು. ಗೋವಿಂದ ಇಂಥವರನ್ನು ದೇಶದಿಂದ ಹೊರಹಾಕಿದಾಗ ಅವರು ಬದ್ದೆಗನ ಪತ್ನಿಯ (ಚೇರಿಯ ರಾಜಕುಮಾರಿ, ಒಂದನೆಯ ಯುವರಾಜದೇವನ ಪುತ್ರಿ) ತವರುರಾಜ್ಯವಾದ ತ್ರಿಪುರಿಗೆ ತೆರಳಿ ಚೇದಿಯ ಆಸ್ಥಾನವನ್ನು ಸೇರಿಕೊಂಡರು. ಅಲ್ಲಿಂದಲೇ ಅವರು ಗೋವಿಂದನ ಪುತ್ರಿಯಾಗಿ ಕುಟಿಲೋಪಾಯಗಳನ್ನು ಜರುಗಿಸುತ್ತಿದ್ದ ಹಾಗೆ ತೋರುತ್ತದೆ. ಇತ್ತ ಗೋವಿಂದನಾದರೋ ಪ್ರಜಾನುರಾಗವನ್ನು ಗಳಿಸಲು ಏನೊಂದೂ ಮಾಡಲಿಲ್ಲ. ಆತ ವ್ಯಸನಾಸಕ್ತನಾಗಿದ್ದುದರಿಂದ ಪ್ರಜೆಗಳಿಗೂ ಕೂಡ ಆತನ ಆಳ್ವಿಕೆ ಬೇಸರವನ್ನು ತಂದಿತ್ತು; ರಾಜ್ಯ ಸೂತ್ರಗಳು ಸಡಿಲವಾಗುತ್ತಿದ್ದುವು. ತನಗೆ ಗೋವಿಂದ ಭಾವಮೈದುನನೇ ಆದರೂ, ಅರಿಕೇಸರಿ ಪ್ರಜಾಭಿಪ್ರಾಯವನ್ನು ಲಕ್ಷಿಸಿ ಆತನ ಹಗೆಗಳ ಕಡೆಯೇ ಸೇರಿಕೊಂಡು, ಪ್ರಜೆಗಳ ಗೌರವಾದರಗಳನ್ನು ಗಳಿಸಿದ್ದ ಬದ್ದೆಗನ ಆಶೋತ್ತರಗಳನ್ನೇ ಪೋಷಿಸಿದ ಹಾಗೆ ತೋರುತ್ತದೆ. ಬದ್ದೆಗನಿಗೆ ಆತನ ಅಳಿಯ ಗಂಗಬೂತುಗನ ಬೆಂಬಲವೂ ಇದ್ದಿತು. ಗೋವಿಂದ ಚಾಳುಕ್ಯವಂಶದ ಅರಸರ ಅರಸೊತ್ತಿಗೆಯ ಕಲಹದಲ್ಲಿ ಕೈಹಾಕಿ ಇಕ್ಕಟ್ಟಿಗೆ ಸಿಕ್ಕಿಕೊಂಡ. ಬಿಜ್ಜನ ವ್ಯವಹಾರದಲ್ಲಿ ಅತನ ಸೈನ್ಯ ಅರಿಕೇಸರಿಯಿಂದ ಸೋಲನ್ನು ಅನುಭವಿಸಿತು. ಈ ವಿದ್ಯಮಾನಗಳನ್ನೆಲ್ಲ ತ್ರಿಪುರಿಯಿಂದ ವೀಕ್ಷಿಸುತ್ತಿದ್ದ ಬದ್ದೆಗನಿಗೆ ಕರೆ ಹೋಯಿತು. ಆತ ಅಲ್ಲಿಂದ ಬರುತ್ತಲೇ ಪ್ರಾಯಶಃ ವೇಮುಲವಾಡದಲ್ಲಿಯೆ ಆತನನ್ನು ರಾಷ್ಟ್ರಕೂಟ ಚಕ್ರವರ್ತಿಯೆಂದು ಘೋಷಿಸಲಾಯಿತು. ಅರಿಕೇಸರಿ ಗೋವಿಂದನನ್ನು ಪದಚ್ಯುತಿಗೊಳಿಸಿ ಆತನ ಸ್ಥಾನದಲ್ಲಿ ಬದ್ದೆಗ ಮುಮ್ಮಡಿ ಅಮೋಘವರ್ಷನನ್ನು ನಿಲ್ಲಿಸಿದ. ಇದು ಪ್ರಾಯಶಃ ನಡೆದದ್ದು 934–35ರಲ್ಲಿ.

ಮೂರನೆಯದಾಗಿ ಅರಿಕೇಸರಿ, ಮದ್ದಾನೆಯ ಸೈನ್ಯದೊಡನೆ ಆಟೋಪದಿಂದ ಬಂದು ತನ್ನನ್ನಿದಿರಿಸಿದ ಕಕ್ಕಲನ ತಮ್ಮ ಶೂರನಾದ ಬಪ್ಪುವನೆಂಬುವನನ್ನು, ತಾನು ಒಂದೇ ಆನೆಯ ಮೇಲಿದ್ದುಕೊಂಡು ಓಡಿಸಿದನೆಂಬುದಾಗಿ ಪಂಪಭಾರತದಲ್ಲಿ ಹೇಳಿದೆ. ಈ ಪ್ರಕರಣವನ್ನು ಹೆಚ್ಚು ಸಮರ್ಪಕವಾಗಿ ವಿವರಿಸುವುದು ಅಶಕ್ಯವೆಂದು ಚರಿತ್ರಕಾರರ ಅಭಿಪ್ರಾಯ. ಕಕ್ಕಲನೆಂಬುವನು ಅಚಳಪುರದ ಅರಸನೆಂದೂ ಆತ ಬದ್ದೆಗನ ಮರಣಾನಂತರದಲ್ಲಿ ಗಂಗಬೂತುಗನಿಂದ ಹತನಾದನೆಂದು ಮುಂತಾಗಿ ಕೂಡಲೂರಿನ ಒಂದು ಶಾಸನದಲ್ಲಿದೆ. ಬದ್ದೆಗ ಆಳುತ್ತಿದ್ದಾಗಲೇ ದಂತಿಗ ಮತ್ತು ಬಪ್ಪುಗ ಎಂಬ ದುಷ್ಟರಿಬ್ಬರು ಆತನಿಗೆ ಎದುರುಬಿದ್ದು 3ನೆಯ ಕೃಷ್ಣನಿಂದ ನಾಶವಾದರೆಂದು ದೇವೋಳಿಯ ಒಂದು ಶಾಸನದಲ್ಲಿ (940) ಹೇಳಿದೆ. ಈ ಬಪ್ಪುಗನೇ ಕಕ್ಕಲನ ತಮ್ಮನಾದ ಬಪ್ಪುವನಿರಬೇಕೆಂದು ಕೆಲವರು ಹೇಳುತ್ತಾರೆ. ಅಂತೂ ಈತ 940ರ ಮೊದಲಲ್ಲಿ ಎಂದೋ ಒಮ್ಮೆ ಅರಿಕೇಸರಿಗೆ ಎದುರು ಬಿದ್ದು ಆತನಿಂದ ಪರಾಜಿತನಾಗಿ ಓಡಿಹೋಗಿರಬೇಕು ಎಂದು ತಿಳಿಯುತ್ತದೆ.

ಅರಿಕೇಸರಿ ರಾಜಧಾನಿಯಾದ ವೇಮುಲವಾಡದಲ್ಲಿ ಸೂರ್ಯದೇವಾಲಯವೊಂದನ್ನು ಕಟ್ಟಿಸಿದ್ದ. ಆ ದೇವಾಲಯದಲ್ಲಿ ಪೂಜೆಗಾಗಿ ಬರುವವರ ಅಶನಾರ್ಥವಾಗಿ ಸತ್ರವೊಂದನ್ನು ಕಟ್ಟಿಸಲು ಪೆದ್ದಣಾರ್ಯನೆಂಬುವನ ಕೋರಿಕೆಯಂತೆ 100 ನಿವರ್ತನಗಳ ಭೂಮಿಯನ್ನು ಉತ್ತರಾಯಣ ಪುಣ್ಯ ಸಂಕ್ರಾಂತಿ ದಿವಸದಲ್ಲಿ ದತ್ತಿಯಾಗಿ ಕೊಟ್ಟನೆಂಬುದಾಗಿಯೂ ಹಾಗೆಯೇ ಕುಡಿಯುವ ನೀರಿನಕೊಳವೊಂದನ್ನು ಕಟ್ಟಿಸಲು ಅಲ್ಲಿಯೆ ಎಂಟು ನಿವರ್ತನಗಳ ಭೂಮಿಯನ್ನು ದತ್ತಿಬಿಟ್ಟಂತೆಯೂ ವೇಮುಲವಾಡದ ಶಾಸನದಲ್ಲಿ ಹೇಳಿದೆ.

ಪಂಪ ಮಹಾಕವಿ ಅರಿಕೇಸರಿಯ ಆಸ್ಥಾನದಲ್ಲಿ ಕವಿಯಾಗಿದ್ದುದು ಪ್ರಸಿದ್ಧ ವಿಷಯ. ಅರಿಕೇಸರಿ ಪಂಪನನ್ನು ಸ್ನೇಹಾದರಪೂರ್ವಕವಾಗಿ ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದ ನೆಂಬುದು, ಪಂಪ ಯುದ್ಧವೀರನಾಗಿ ಅರಿಕೇಸರಿ ಕೈಕೊಂಡ ಯುದ್ಧಪ್ರಸಂಗಗಳಲ್ಲಿ ಪ್ರತ್ಯಕ್ಷ ವಾಗಿ ಪಾಲ್ಗೊಂಡಿದ್ದನೆಂಬುದು ಇಲ್ಲಿ ನೆನೆಯತಕ್ಕದ್ದಾಗಿದೆ. ಆದಿಪುರಾಣವನ್ನು ಶ್ರೇಷ್ಠರೀತಿಯಿಂದ ರಚಿಸಿ ಪ್ರಖ್ಯಾತನಾಗಿದ್ದ ಪಂಪನನ್ನು ಅರಿಕೇಸರಿ ಪ್ರೀತಿಯಿಂದ ತನ್ನಲ್ಲಿಗೆ ಬರಮಾಡಿಕೊಂಡು ವಿಶೇಷವಾಗಿ ಸನ್ಮಾನಿಸಿ ತನ್ನ ವಿಖ್ಯಾತಿ ಲೋಕದಲ್ಲಿ ಸ್ಥಿರಗೊಳ್ಳುವ ಹಾಗೆ ಭಾರತವನ್ನು ಬರೆಯುವಂತೆ ಕೋರಿದ. ಅರಿಕೇಸರಿ ಸಾಮಂತರಾಜನಾಗಿಯೂ ಅತಿ ಸಾಹಸಿಯೂ ಪ್ರಭಾವಶಾಲಿಯೂ ಆಗಿದ್ದ; ಗುಣವಂತನೂ ಸ್ನೇಹಪ್ರಿಯನೂ ಆಗಿದ್ದ. ತನ್ನ ಕಾಲದ ರಾಜಕೀಯ ಜೀವನದ ನೇತಾರನಾಗಿದ್ದ. ಆದ್ದರಿಂದ ಪಂಪಕವಿ ಅರಿಕೇಸರಿಯ ಆಶಯವನ್ನು ಈಡೇರಿಸಲು ಒಪ್ಪಿಕೊಂಡಿದ್ದಲ್ಲದೆ ಅತನನ್ನೇ ತನ್ನ ಮಹಾಕಾವ್ಯದ ಕಥಾನಾಯಕನನ್ನಾಗಿಟ್ಟುಕೊಂಡ. ಅರಿಕೇಸರಿ ಅರ್ಜುನರನ್ನು ಅಭೇದವಾಗಿ ಗಣಿಸಿದ. ಅರ್ಜುನನ ಹೆಸರು ವ್ಯಕ್ತಿತ್ವ ಶೌರ್ಯ ಪ್ರತಾಪಗಳು ಕಥೆಯಲ್ಲಿ ಬರುವ ಕಡೆಗಳಲ್ಲಿ ಅರಿಕೇಸರಿಯ ಹೆಸರು ಬಿರುದುಗಳು ವ್ಯಕ್ತಿತ್ವ ಶೌರ್ಯ ಪ್ರತಾಪಗಳನ್ನು ಯೋಜಿಸಿದ. ತತ್ಕಾಲೀನ ರಾಜಕೀಯವನ್ನು ಭಾರತ ಕಥೆಯೊಡನೆ ಸಾಧ್ಯವಿದ್ದಮಟ್ಟಿಗೆ ಹೊಂದಿಸಿ ಅಪೂರ್ವ ರೀತಿಯಲ್ಲಿ ವಿಕ್ರಮಾರ್ಜುನ ವಿಜಯವೆಂಬ ಸಮಸ್ತ ಭಾರತವನ್ನು ರಚಿಸಿದ. ಹೀಗೆ ರಚಿಸಿದ ಮೇಲೆ ಅರಿಕೇಸರಿ ಇನ್ನೂ ಅತಿಶಯವಾಗಿ ವಸ್ತ್ರವಿಭೂಷಣಾದಿಗ ಳಿಂದ ಪಂಪಕವಿಯನ್ನು ಸನ್ಮಾನಿಸಿ ಕೀರ್ತಿಸಿ ಸಬ್ಬಿಸಾಸಿರದಲ್ಲಿ ಧರ್ಮವುರವೆಂಬ ಅಗ್ರಹಾರ ವನ್ನು ಆತನಿಗೆ ಶಾಸನ ಹಾಕಿಸಿಕೊಟ್ಟ. ಸಬ್ಬಿನಾಡು ಎಂಬುದು ಇಂದಿನ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆ ಎಂಬುದಾಗಿಯೂ ಆ ಜಿಲ್ಲೆಯಲ್ಲಿಯೇ ಈಗ 2–3 ಧರ್ಮವುರಗಳಿರುವುದ ರಿಂದ ಇವುಗಳಲ್ಲಿ ಯಾವುದೋ ಒಂದು ಪಂಪನಿಗೆ ಅರಿಕೇಸರಿ ಕೊಟ್ಟ ಶಾಸನದ ಅಗ್ರಹಾರವಾದ ಧರ್ಮವುರವಿರಬೇಕೆಂಬುದಾಗಿಯೂ ಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಹಾಗೆಯೇ ಜಿನವಲ್ಲಭನ ಗಂಗಾಧರಂ ಶಾಸನದಲ್ಲಿ ಜಿನವಲ್ಲಭ ಪಂಪನ ತಮ್ಮನೆಂಬ ವಿಚಾರ ತಿಳಿದು ಬಂದಿದೆ. (ಟಿ.ವಿ.ವಿ.)

**ಅರಿಜೋನ :** ಅಮೆರಿಕ ಸಂಯುಕ್ತಸಂಸ್ಥಾನಗಳ 48ನೆಯ ಪ್ರಾಂತ್ಯ. 31° 20'—37° ಉ. ಅಕ್ಷಾಂಶ, 109° 2'-114° 45' ಪ. ರೇಖಾಂಶಗಳಿಂದ ಸೀಮಿತವಾಗಿದೆ. ಅ.ಸಂ.ಸಂಸ್ಥಾ ನದ ನೈರುತ್ಯದಲ್ಲಿದ್ದು, ಉತ್ತರಕ್ಕೆ ಉಟ್ಟಾ, ಪೂರ್ವಕ್ಕೆ ನ್ಯೂಮೆಕ್ಸಿಕೊ, ದಕ್ಷಿಣಕ್ಕೆ ಮೆಕ್ಸಿಕೊ ದೇಶದ ಸೊನೊರ ಪ್ರಾಂತ್ಯ ಹಾಗೂ ಪಶ್ಚಿಮಕ್ಕೆ ಕೊಲೊರಾಡೊ ನದಿಗಳಿವೆ. ಫೀನಿಕ್ಸ್ ರಾಜಧಾನಿ. ಟಸ್ಕಾನ್ ಮತ್ತು ಟೆಂಪೆ ಇತರ ಮುಖ್ಯ ನಗರಗಳು. ವಿಸ್ತೀರ್ಣ 2,95,260 ಚ.ಕಿಮೀ. ಅಪಾಚೀ ಇಂಡಿಯನ್ ಜನರ ನೆಲೆಯಾದ್ದರಿಂದ ಅಪ್ಪಾಚೀ ಪ್ರಾಂತ್ಯವೆಂದೂ ಪ್ರಪಂಚದ ಅತಿ ದೊಡ್ಡ ಹಿತ್ತಾಳೆ ಗಣಿಗಳನ್ನು ಹೊಂದಿರುವುದರಿಂದ ಹಿತ್ತಾಳೆ ಪ್ರಾಂತ್ಯವೆಂದೂ ಹೆಸರು ಪಡೆದಿದೆ. ಜನಸಂಖ್ಯೆ 47,78332 (2009). ಬಿಳಿಯರು, ಉಳಿದರವರು ನೀಗ್ರೋಗಳು, ಆದಿವಾಸಿ ಇಂಡಿಯನ್ನರು ಇತ್ಯಾದಿ. ವಿಸ್ತೀರ್ಣದಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ 6ನೆಯ ಸ್ಥಾನ ಪಡೆದಿರುವ ಅರಿಜೋನ ಒಟ್ಟು ಜನಸಂಖ್ಯೆಯಲ್ಲಿ ಶೇ. 84 ಭಾಗ ನಗರವಾಸಿಗಳು ಉಳಿದ ಶೇ 16 ಭಾಗಮಾತ್ರ ಗ್ರಾಮೀಣರು. (ಕೆ.ಆರ್)

**ಮೇಲ್ಮೈಲಕ್ಷಣ:** ಅರಿಜೋನ ಸಮುದ್ರಮಟ್ಟದಿಂದ ಅಷ್ಟೊಂದು ಎತ್ತರವಾಗಿರದ ಭೂಸ್ವರೂಪಗಳನ್ನು ಹೊಂದಿದೆ. ನೈರುತ್ಯ ಭಾಗ 30 ಮೀ ಎತ್ತರವಾಗಿದೆ. ಆದರೆ ಉತ್ತರ ಭಾಗ 3,6600 ಮೀ. ಎತ್ತರವಾಗಿದೆ. ಉತ್ತರ ಮತ್ತು ಈಶಾನ್ಯ ಭಾಗಗಳು ಕೊಲೊರಾಡೊ ಪ್ರಸ್ಥಭೂಮಿಯಲ್ಲಿವೆ. ಈ ಭಾಗವು ಲಕ್ಷಾಂತರ ವರ್ಷಗಳಿಂದ ಕೊಲೊರಾಡೊ ನದಿಯ ಸವೆಗೊಳಪಟ್ಟ ಅತ್ಯಂತ ಆಳವಾದ ಗ್ರಾಂಡ್‌ಕ್ಯಾನಿಯನ್ (ಕಂದರ) ಮತ್ತು ಕೊರಕಲುಗಳನ್ನು ಹೊಂದಿದೆ. ಅನೇಕ ಉನ್ನತಶಿಖರಗಳಿವೆ. ಅವುಗಳಲ್ಲಿ ಹಂಪ್ರಿಶಿಖರ ಅತಿ ಎತ್ತರವಾದುದು (3,862ಮೀ) ನೈರುತ್ಯಭಾಗವು ತಗ್ಗಾಗಿದೆ. ಅಲ್ಲಲ್ಲಿ ಚದುರಿದಂತಹ ಕೆಲವು ಬೆಟ್ಟಗುಡ್ಡಗಳಿವೆ. ಕೊಲೊರಾಡೊ ಅರಿಜೋನದ ಪ್ರಮುಖ ನದಿವ್ಯೂಹ. ಲಿಟ್ಲ್ ಕೊಲೊರಾಡೊ, ಬಿಲ್ ವಿಲಿಯಂ ಮತ್ತು ಗಿಲಗಳು ಇದರ ಮುಖ್ಯ ಉಪನದಿಗಳು.

**ವಾಯುಗುಣ :** ನೈರುತ್ಯಭಾಗ ಬೇಸಗೆಯಲ್ಲಿ ಅಧಿಕ ಉಷ್ಣಾಂಶದಿಂದಾಗಿ 38 ಸೆಂ. (100) ಶುಷ್ಕವಾಗಿರುತ್ತದೆ. ಹಗಲಿಗಿಂತ ರಾತ್ರಿ ತಂಪು. ಪೂರ್ವ–ಮಧ್ಯದ ಉನ್ನತ ಭಾಗಗಳಲ್ಲಿ ಚಳಿಗಾಲದ ಉಷ್ಣಾಂಶ $30^0$ ಸೆಂ ಗೆ ಇಳಿಯುತ್ತದೆ. ಮಳೆಯ ಹಂಚಿಕೆ ಕಡಿಮೆ. ಸರಾಸರಿ ವಾರ್ಷಿಕ ಮಳೆ 8 ಸೆಂಮೀಗಳು.

**ಸಸ್ಯ ಮತ್ತು ಪ್ರಾಣಿವರ್ಗ :** ಮಳೆಯ ಕೊರತೆಯಿಂದ ಸಸ್ಯವರ್ಗ ಮರುಭೂಮಿ ಯಂತಹದ್ದು. ಕಳ್ಳಿಯಂತಹ ಗಿಡ–ಮರಗಳು ಬೆಳೆಯುತ್ತವೆ. ಸಿಂಹ, ಜಿಂಕೆ, ಚಿರತೆ ಕಾಡುಬೆಕ್ಕು ಪ್ರಮುಖ ವನ್ಯಪ್ರಾಣಿಗಳು, ವೈನ್, ಫರ್ ಮತ್ತು ಸ್ಪ್ರೂಸ್ ಮುಖ್ಯ ಮರಗಳು.

ನೈಸರ್ಗಿಕ ಸಂಪತ್ತು ಅರಿಜೋನವು ಪ್ರಮುಖವಾಗಿ ತಾಮ್ರ ಉತ್ಪಾದಿಸುವ ಪ್ರಾಂತ್ಯ. ಜೊತೆಗೆ ಚಿನ್ನ, ಸೀಸ, ಬೆಳ್ಳಿ, ಸತು ಮತ್ತು ಕಲ್ನಾರುಗಳನ್ನು ಉತ್ಪಾದಿಸುತ್ತದೆ.

**ಕೃಷಿ :** ಒಣಹವೆ, ಮರುಭೂಮಿಯಂತಹ ಭೂಭಾಗವಿದ್ದರೂ ನೀರಾವರಿ ಸಹಾಯ ದಿಂದ ಕೃಷಿ ಸಾಗುತ್ತದೆ. ಹತ್ತಿ ಮತ್ತು ಹಣ್ಣು ಬೆಳೆ ಮುಖ್ಯವಾದವು. ಸಾರಿಗೆ–ಸಂಪರ್ಕದ ವ್ಯವಸ್ಥೆ ಸಾಧಾರಣ. ಕೈಗಾರಿಕೋದ್ಯಮ ಬಹಳಷ್ಟು ಮಟ್ಟಿಗೆ ಸ್ಥಳೀಯವಾಗಿ ದೊರೆಯುವ ಲೋಹಾಂಶ ಖನಿಜಗಳನ್ನಾಧರಿಸಿದೆ. ಅವುಗಳಲ್ಲಿ ತಾಮ್ರದ ಲೋಹತಯಾರಿಕೆ ಮುಖ್ಯ. ಒಟ್ಟಾರೆ ಅರಿಜೋನದ ಆರ್ಥಿಕತೆಯು ಐದು ಅಂಶಗಳನ್ನಾಧರಿಸಿದೆ: ತಾಮ್ರ, ಹತ್ತಿ, ವಾಯುಗುಣ, ದನಗಳು ಮತ್ತು ಹುಳಿಹಣ್ಣುಗಳು. (ಕೆ.ಆರ್.)

**ಅರಿಪ್ಪು :** ಕೇರಳದ ಕೊಲ್ಲಮ್ ಜಿಲ್ಲೆಯಲ್ಲಿರುವ ಒಂದು ಬೃಹತ್ ಶಿಲಾಗೋರಿ ನೆಲೆ. 1991ರ ಉತ್ಖನನದಲ್ಲಿ ನೆಲದಡಿಯ ಆಯತಾಕಾರದ ಕಂಡಿಗಳಿಲ್ಲದ ಕೋಣೆ ಗೋರಿಗಳನ್ನು ಬೆಳಕಿಗೆ ತರಲಾಯಿತು. ಕೋಣೆಯೊಳಗಿನ ನೆಲದ ಮೇಲೆ ಮರಳನ್ನು ತುಂಬಲಾಗಿತ್ತು. ಈ ಮರಳಿನ ಕೆಳ ಹಂತದಲ್ಲಿ ಮಡಕೆ, ಲೋಟ, ಮುಚ್ಚಳ ಮೊದಲಾದ ಮಣ್ಪಾತ್ರೆಗಳು ಮತ್ತು ಅವುಗಳ ಕೆಳಗೆ ಕಬ್ಬಿಣದ ಸಲಕರಣೆಗಳಿದ್ದವು. ಪೂರ್ಣ ಕೆಂಪು, ಕಪ್ಪು ಲೇಪನದ ಮತ್ತು ಕೆಂಪು–ಕಪ್ಪು ದ್ವಿವರ್ಣ ಪ್ರಕಾರಗಳ ಪಾತ್ರೆಗಳು, ಚೂರಿ, ಕತ್ತಿ, ಚಾಕು ಮೊದಲಾದ ಕಬ್ಬಿಣದ ಉಪಕರಣಗಳೂ ಇದ್ದವು. (ಎ.ಎಸ್.)

**ಅರಿಮರ್ದನಪುರ ಸಾಮ್ರಾಜ್ಯ :** ಭಾರತೀಯ ಸಂಸ್ಕೃತಿಯನ್ನು ಮಯನ್ಮಾರ್ ದೇಶದಲ್ಲಿ ಹರಡಲು ನೆರವಾದ ಸಾಮ್ರಾಜ್ಯಗಳಲ್ಲಿ ಅತಿ ಮುಖ್ಯವಾದುದು. 11ನೆಯ ಶತಮಾನದಿಂದ ಮೂರು ಶತಮಾನಗಳವರೆಗೆ ಈ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮಯನ್ಮಾರ್ (ಹಿಂದಿನ ಬರ್ಮ) ಚರಿತ್ರೆಯಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಅನೋರಥನೇ ಈ ವಂಶದ ಸ್ಥಾಪಕ. ಆ ಸಮಯದಲ್ಲಿ ಅರಿ ಎಂಬ ಬೌದ್ಧರ ತಂಡವೊಂದು ಬಹು ಕೀಳುಮಟ್ಟದ ತಾಂತ್ರಿಕ ಬೌದ್ಧಧರ್ಮವನ್ನು ಪ್ರಚಾರ ಮಾಡುತ್ತಿತ್ತು. ಷಿನ್ ಅರ್ಹನ್ ಎಂಬ ಬೌದ್ಧಗುರುವಿನ ಸಹಾಯದಿಂದ ಅನೋರಥ ಅರಿಗಳ ಬೌದ್ಧಸಂಪ್ರದಾಯಗಳನ್ನು ನಾಶಮಾಡಿದ. ಇದರಿಂದ ಅರಿಗಳು ನಿರ್ನಾಮವಾಗಿ ಹೋದರು. ಥೇಟನ್ನಿನ ರಾಜನ ಮೇಲೆ ಯುದ್ಧವನ್ನು ಮಾಡಿ, ಅನೋರಥ ಬೌದ್ಧ ತ್ರಿಪಿಟಕ ಗ್ರಂಥಗಳ ಪ್ರತಿಗಳನ್ನು ಪಡೆದು ಥೇರವಾದ ಬೌದ್ಧಧರ್ಮ ಮಯನ್ಮಾರ್‌ನಲ್ಲಿ ಬೇರೂರುವಂತೆ ಮಾಡಿದ. ಥೇಟನ್ನಿನ ಮಾನ್ ಜನಗಳು ಬರ್ಮೀಯರ ಮೇಲೆ ಪ್ರಭಾವ ಬೀರಿ ಮಯನ್ಮಾರ್‌ಗೆ ಹೊಸಲಿಪಿಯನ್ನು ಕೊಟ್ಟರು. ಅನೋರಥನ ಖ್ಯಾತಿಯನ್ನು ನೋಡಿದ ಸಿಂಹಳದ ವಿಜಯಬಾಹು ಚೋಳರ ಮೇಲೆ ಯುದ್ಧಮಾಡಲು ಅವನ ಸಹಾಯ ಕೋರಿದ. ವಿಜಯಬಾಹು ಬೌದ್ಧ ಅವಶೇಷಗಳನ್ನು ಅನೋರಥನಿಗೆ ಕಳುಹಿಸಿದ. ಇವುಗಳನ್ನು ಷೆಜಿಗಾನ್ ಪಗೋಡದಲ್ಲಿ ಸ್ಥಾಪಿಸಲಾಯಿತು. ಅನೋರಥ ಅನೇಕ ಶಾಸನಗಳನ್ನು ಬರೆಸಿ ಬೌದ್ಧಧರ್ಮಕ್ಕೆ ವಿಶೇಷವಾಗಿ ಪ್ರೋತ್ಸಾಹಕೊಟ್ಟ. ಈತ 1077ರಲ್ಲಿ ಮರಣ ಹೊಂದಿದ.

ಅನಂತರ ಇವನ ಮಗನಾದ ಕ್ಯಾನ್‌ಜಿತ್ಥ ಪಟ್ಟಕ್ಕೆ ಬಂದ. ಇವನೂ ತನ್ನ ತಂದೆಯಂತೆ ಮಯನ್ಮಾರ್‌ದ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾನೆ. ಇವನ ಕಾಲದಲ್ಲಿ ಭಾರತಕ್ಕೂ ಬರ್ಮಕ್ಕೂ ಸಾಂಸ್ಕೃತಿಕ ಸಂಬಂಧಗಳು ವಿಶೇಷವಾಗಿದ್ದುವು. ಬೌದ್ಧಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದರೂ ವೈಷ್ಣವಧರ್ಮ ಪಾಲಿಸಲ್ಪಡುತ್ತಿತ್ತು. ಇವನ ಅತಿ ಮುಖ್ಯ ಕೊಡುಗೆ ಆನಂದ ದೇವಾಲಯ. ಇದು ಭಾರತದ ಒರಿಸ್ಸದಲ್ಲಿರುವ ಉದಯಗಿರಿಯ ಅನಂತ ದೇವಾಲಯದ ಮಾದರಿಯಲ್ಲಿದೆ. ಇಂದಿಗೂ ಇದು ಬೌದ್ಧರ ಮುಖ್ಯ ಯಾತ್ರಾಸ್ಥಳಗಳ ಲ್ಲೊಂದು. ಕ್ಯಾನ್‌ಜಿತ್ಥ ಭಾರತದ ಬುದ್ಧಗಯ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನೂ ಮಾಡಿದ. ಈತ 1112ರಲ್ಲಿ ಮರಣ ಹೊಂದಿದ.

ಕ್ಯಾನ್‌ಜಿತ್ಥನ ಮರಣಾನಂತರ ಅವನ ಮೊಮ್ಮಗನಾದ ಅಲಾಂಗ್ ಸಿಥುಜಯಶೂರ ಎಂಬ ಹೆಸರಿನಿಂದ ರಾಜನಾದ. ಇವನು ದಕ್ಷಿಣ ಅರಕಾನ್ ರಾಜ್ಯದ ದಂಗೆಯನ್ನು ಅಡಗಿಸಿದ. ಲೋಕೋಪಯೋಗಿ ಕಾರ್ಯಗಳನ್ನು ವಿಶೇಷವಾಗಿ ಮಾಡಿ, ದೇವಾಲಯ ಗಳನ್ನೂ ಆಶ್ರಮಗಳನ್ನೂ ನಿರ್ಮಿಸಿದ. ಪಾಳಿಭಾಷೆಯ ಪಂಡಿತರಿಗೆ ವಿಶೇಷ ಪ್ರೋತ್ಸಾಹ ಕೊಟ್ಟ. 1167ರಲ್ಲಿ ತನ್ನ ಮಗನಾದ ನರಥುವಿನಿಂದ ಕೊಲೆಯಾದ.

1173ರಲ್ಲಿ ರಾಜನಾದ ನರಪತಿ ಸಿಥುವಿನ ಕಾಲದಲ್ಲಿ ಥೇರವಾದ ಬೌದ್ಧಧರ್ಮ ಕ್ಷೀಣಿಸಿ, ಸಿಂಹಳದ ಬೌದ್ಧಧರ್ಮ ಮಯನ್ಮಾರ್‌ನಲ್ಲಿ ಬೆಳೆಯಿತು. 1210ರಲ್ಲಿ ನರಪತಿಮಸಿಥುವಿನ ಮಗನಾದ ಜಯಥೆಲಿಕ ರಾಜನಾದ. ಈತ ಭಾರತದ ಬುದ್ಧಗಯ ದೇವಾಲಯದ ಮಾದರಿಯಲ್ಲಿ ಮಹಾಬೋಧಿ ದೇವಾಲಯವನ್ನು ನಿರ್ಮಿಸಿದ. ಮುಂದೆ ಬಂದ ರಾಜರು ಅಶಕ್ತರಾದುದರಿಂದ ಮಂಗೋಲಿಯನ್ನರು ಮಯನ್ಮಾರ್‌ನ ಮೇಲೆ ದಾಳಿ ನಡೆಸಿ 1287ರಲ್ಲಿ ಲೂಟಿ ಮಾಡಿ ರಾಜ್ಯವನ್ನು ವಶಪಡಿಸಿಕೊಂಡರು. (ಎ.ವಿ.ಎನ್.)

**ಅರಿಯಲೂರ್ :** ತಮಿಳುನಾಡಿನ ತಿರುಚ್ಚಿರಾಪಳ್ಳಿ ಜಿಲ್ಲೆಯ ಉಡ್ಯೆಯಾರ್ ಪಾಳೆಯಂ ತಾಲ್ಲೂಕಿನ ಒಂದು ಮುಖ್ಯಪಟ್ಟಣ. ಜನಸಂಖ್ಯೆ 27,822 (2001). ಉಡ್ಯೆಯಾರ್ ಪಾಳೆಯಂ ಮತ್ತು ಪೆರಂಬಲೂರ್ ತಾಲ್ಲೂಕುಗಳ ಆಡಳಿತವಿಭಾಗಕ್ಕೆ ಕೇಂದ್ರಸ್ಥಾನ. ಜಮೀನ್ದಾರಿ ಪದ್ಧತಿಗೆ ಹಿಂದೆ ಪ್ರಮುಖವೆನಿಸಿತ್ತು. ಇಲ್ಲಿಯ ಪಟ್ನೂಲ್‌ಕಾರಾನ್ಸ್

ಪಂಗಡದ ಜನ ಸೀರೆಗಳನ್ನು ನೇಯುವುದರಲ್ಲಿ ಹೆಸರುವಾಸಿಯಾಗಿದ್ದಾರೆ. ಕರ್ನಾಟಕ ಯುದ್ಧದ ವೇಳೆಯಲ್ಲಿ ಅರಿಯಲೂರ್‌ನ ಪಾಳೆಯಗಾರರು ಹೆಚ್ಚು ಕಷ್ಟ ಅನುಭವಿಸಿದರು. 1801ರಲ್ಲಿ ಇಲ್ಲಿಯ ಪಾಳೆಯಗಾರರನ್ನು ಈಸ್ಟ್ ಇಂಡಿಯ ಕಂಪನಿ ವಶಪಡಿಸಿಕೊಂಡಿತು. ರೈಲು ನಿಲ್ದಾಣದ ಅನುಕೂಲವನ್ನು ಹೊಂದಿದ್ದು ದಕ್ಷಿಣ ಭಾರತದಲ್ಲಿನ ಒಂದು ಉತ್ತಮ ಮಾರುಕಟ್ಟೆಯ ವ್ಯವಸ್ಥೆ ಪಡೆದಿದೆ. ಈ ಪಟ್ಟಣಕ್ಕೆ 6.4 ಕಿಮೀ ದೂರದಲ್ಲಿ ಒಂದು ಹಿಂದೂ ದೇವಸ್ಥಾನವಿದೆ. ಈ ದೇವಸ್ಥಾನಕ್ಕೆ ರೋಗಿಗಳು ಭೇಟಿಕೊಟ್ಟರೆ ಆರೋಗ್ಯವಂತ ರಾಗುವರೆಂದು ಪ್ರತೀತಿ. *

**ಅರಿವಳಿಕೆ, ಅರಿವಳಿಕಗಳು** : ತಿಳಿವೂ ಅರಿವೂ ಕಳೆದಿರುವುದೇ ಅರಿವಳಿಕೆ (ಆ್ಯನಿಸ್ತೀಸಿಯ). ಅರಿವನ್ನು ಅಳಿಸುವ ಕಾರಕಗಳೇ ಅರಿವಳಿಕಗಳು (ಆ್ಯನಿಸ್ತೆಟಿಕ್ಸ್). ಮುಖ್ಯವಾಗಿ ಶಸ್ತ್ರಕ್ರಿಯೆ ಆಗುವಾಗಿನ ನೋವು ಗೊತ್ತಾಗದಂತೆ ಮಾಡುವುದೇ ಅರಿವಳಿಕೆಯ ಉದ್ದೇಶ. ಆದರೂ ಮಿದುಳು, ಬೆನ್ನುಹುರಿಗಳ ಹಲವು ರೋಗಗಳಲ್ಲೂ ಇದೊಂದು ಲಕ್ಷಣವಾಗಿಯೂ ಇರುವುದುಂಟು. ಶಸ್ತ್ರಕ್ರಿಯೆಯ ಅರಿವಳಿಕೆ ಮೈಯೆಲ್ಲದರ ಇಲ್ಲವೇ ಒಂದು ತಾವಿನದು (ಲೋಕಲ್) ಆಗಿರಬಹುದು. ದೇಹದ ಒಂದು ಭಾಗದಲ್ಲಿ (ತಾವು) ಮಾತ್ರ ಹೀಗೆ ಅರಿವು ಇಲ್ಲದಾಗುವುದು.

ಅರಿವಳಿಕೆ ಎಂಬುದರ ಸಮ ಪದವಾಗಿ ಕೆಲವೇಳೆ ಬಳಸುವ ನೋವರಿವಳಿಕೆಯ (ಅನ್ಯಾಲ್ಜೀಸಿಯ) ಅರ್ಥವೇ ಬೇರೆ. ನೋವರಿವಳಿಕೆಯಲ್ಲಿ ರೋಗಿಯ ಮೈಯ ಒಂದು ಭಾಗದಲ್ಲಿ ಇಲ್ಲವೇ ಪೂರ್ತಿಯಾಗಿ ನೋವು ಗೊತ್ತಾಗದಂತೆ ಇದ್ದರೂ ಮುಟ್ಟಿದರೆ ಗೊತ್ತಾಗುತ್ತದೆ. ಒತ್ತಿದರೂ ತಿಳಿಯುತ್ತದೆ. ನೋವಿನ ಅರಿವು ಬಿಟ್ಟು ಇತರೆಲ್ಲ ಅರಿವುಗಳೂ ಚೆನ್ನಾಗಿರುವುವು. ಅದೇ ಅರಿವಳಿಕೆಯಲ್ಲಿ, ಮೈಯೆಲ್ಲ ಆದರೂ ಸರಿಯೆ. ತಾವಿನಲ್ಲಾದರೂ ಸರಿಯೆ, ಅಲ್ಲಿ ನೋವಿನದೂ ಸೇರಿದಂತೆ ಯಾವ ತೆರನ ಅರಿವೂ ತಿಳಿವಿಗೆ ಬರುವುದಿಲ್ಲ.

**ಚರಿತ್ರೆ:** ಅರಿವನ್ನು ಮಂದಗೊಳಿಸಿ, ನೋವು ಕಳೆಯಲು ಮಾನವ ಆದಿಯಿಂದಲೂ ಯತ್ನಿಸಿದ್ದಾನೆ. ಹಿಂದಿನ ಕಾಲದಲ್ಲಿ ಇದಕ್ಕಾಗಿ ಗಾಂಜಾವನ್ನು ಬಳಸುತ್ತಿದ್ದರು, ಮದ್ದುಗಳನ್ನು ನುಂಗಿಸಿ ಮೇಲೆ ಬಳಿದುದಲ್ಲದೆ, ಹೊಗೆ ಹಾಕುವುದು, ಮಾಯಮಂತ್ರ, ನರ, ರಕ್ತನಾಳಗಳ ಮೇಲೆ ಒತ್ತುವುದೇ ಇತ್ಯಾದಿ ಮಾಡಿನೋಡಿದ್ದಾಗಿದೆ. ನೋವು ಕಳೆಯಲು ಅಫೀಮನ್ನು ಕೊಡಲು ಮೊದಲು ಮಾಡಿದವ ಫ್ರಾನ್ಸಿನ ಅಂಗಕೆಲಸ ಶಾಸ್ತ್ರಜ್ಞ ಮೆಜೆಂಡಿ. ಆದರೆ ಅಲೆಕ್ಸಾಂಡರ್ ವುಡ್ (1853) ಚರ್ಮದಡಿ ಚುಚ್ಚುವ ಜೀಕಳಿಯನ್ನು (ಸಿರಿಂಜ್) ಕಂಡುಹಿಡಿವ ತನಕ ಇದನ್ನು ನುಂಗಿಸುತ್ತಿದ್ದರು. ಅರಿವಳಿಕಗಳು ಇಲ್ಲದಿದ್ದ ಹಿಂದಿನ ಕಾಲದಲ್ಲಿ ಸಕತ್ತು ಖಾಯಿಲೆಯಿಂದ ರೋಗಿಯನ್ನು ಉಳಿಸಲು ಮಾತ್ರ ಶಸ್ತ್ರಕ್ರಿಯೆ ನಿಮಿಷದೊಳಗಾಗಿ ಆಗುತ್ತಿತ್ತು. ಅರಿವಳಿಕಗಳು ಬಂದ ಹೊಸದರಲ್ಲಿ, ಸರಳ ಚಿಕ್ಕ ಶಸ್ತ್ರಕ್ರಿಯೆಗಳು ಆಗುತ್ತಿದ್ದುವು.

ಸುಮಾರು ಶತಮಾನದಿಂದಲೂ ಬಳಕೆಯಲ್ಲಿರುವ ನೈಟ್ರಸ್ ಆಕ್ಸೈಡು, ಕ್ಲೋರೊಫಾರ್ಮ್, ಈಥರುಗಳು ಹೆಚ್ಚುಕಡಿಮೆ ಒಂದೇ ಬಾರಿಗೆ ಗೊತ್ತಾದುವು ಎನ್ನಬಹುದು. ಶಸ್ತ್ರಕ್ರಿಯೆ ಆಗುವಾಗ ನೋವಾಗದಂತೆ ಇರಿಸಲು ಈಥರಿನ ಬಳಕೆಯನ್ನು 1846ರ ಅಕ್ಟೋಬರ್ 16ರಲ್ಲಿ ಚಾರ್ಲ್ಸ್ ಜಾಕ್ಸನ್, ವಿಲಿಯಂ ಟಿ.ಜಿ. ಮಾರ್ಟನ್ ಜನರೆದುರು ಮಾಡಿತೋರಿದ ಮೇಲೆ, ಆ ಕೆಲಸಕ್ಕಾಗಿ ಬರುವ ಅರಿವಳಿಕೆ, ಅರಿವಳಿಕ ಪದಗಳನ್ನು ಆಲಿವರ್ ವೆಂಡೆಲ್ ಹೋಮ್ಸ್ ಸೂಚಿಸಿದ. ಈಥರನ್ನು ಕಂಡುಹಿಡಿವುದರಲ್ಲಿ ಕ್ರಾಫರ್ಡ್ ಲಾಂಗ್‌ನ ಪಾತ್ರವೂ ಇದೆ. ಈ ಮೂವರಲ್ಲಿ ಯಾರು ಹೆಸರಿಗೆ ಪಾತ್ರರು ಎನ್ನುವುದು ತಕರಾರಿನ ವಿಚಾರ. ಇದಕ್ಕೂ ಹಿಂದಿನ ಕಾಲದಿಂದ ನೋವು ಕಳೆವ ಯತ್ನಗಳು ಬೇಕಾದಷ್ಟು ಆಗಿದ್ದುವು. ಜೋಸೆಫ್ ಪ್ರೀಸ್ಟ್ಲಿ ನೈಟ್ರಸ್ ಆಕ್ಸೈಡನ್ನೂ (1772), ಆಮ್ಲಜನಕವನ್ನೂ (1774) ಕಂಡುಹಿಡಿದಾಗಿನಿಂದ, ಇವುಗಳ ಮತ್ತಿತರ ಕಾರಕಗಳ ಶೋಧನೆಗಳಿಂದ ಶಸ್ತ್ರಕ್ರಿಯೆಯಲ್ಲಿನ ಬಳಕೆಗಾಗಿ ಅರಿವಳಿಕೆ ಕೊನೆಗೆ ಹುಟ್ಟಿಕೊಂಡಿತು. ನೈಟ್ರಸ್ ಆಕ್ಸೈಡನ್ನು ಉಸಿರಲ್ಲಿ ಎಳೆದುಕೊಳ್ಳಲು ಕೊಟ್ಟು ಹಲ್ಲಿನ ನೋವು ಕಳೆದು, ಹಂಫ್ರಿ ಡೇವಿ (1799) ಶಸ್ತ್ರಕ್ರಿಯೆಗಳಲ್ಲಿ ಇದನ್ನು ಬಳಸಲು ಸೂಚಿಸಿದ್ದ. ಇದನ್ನು ಯಾರೂ ಗಮನಿಸಲಿಲ್ಲ. ಹೀಗೆ ಸ್ವಲ್ಪ ಮಟ್ಟಿಗೆ ಉಸಿರುಕಟ್ಟಿಸಿ, ಇಂಗಾಲದ ಡೈಆಕ್ಸೈಡನ್ನು ಉಸಿರಲ್ಲೆಳೆಸಿದರೆ ಅರಿವು ತಪ್ಪಿ, ನೋವಿಲ್ಲದಾಗುವುದೆಂದು ತೋರಿಸಿದ. ಇನ್ನೂ ವೈದ್ಯ ಕಲಿಯುತ್ತಿದ್ದ ಹೆನ್ರಿ ಹಿಲ್ ಹಿಕ್ಮನ್, ಇದನ್ನು ಅವನು ಪ್ರಕಟಿಸಿದರೂ (1824), ಯಾರೂ ಆಸಕ್ತಿ ತೋರಲಿಲ್ಲ. ಪ್ರಾಣಿಗಳಲ್ಲಿ ಅವನ ಪ್ರಯೋಗಗಳಿಗೆ ವೈದ್ಯ ಸಂಘಗಳು ಅಡ್ಡಿ ಒಡ್ಡಿದುವು. ಮೈಕೆಲ್‌ಫ್ಯಾರೆಡೆ ಈಥರನ್ನು ಉಸಿರಲ್ಲೆಳೆದುಕೊಂಡು ನೋಡಿ ಏನಾಯಿತೆಂದು ವರದಿ ಮಾಡಿದ. 1842ನೆಯ ಮಾರ್ಚ್ 30ರಲ್ಲಿ ಕ್ರಾಫರ್ಡ್ ವಿಲಿಯಂ ಲಾಂಗ್ ಶಸ್ತ್ರಕ್ರಿಯೆಯಲ್ಲಿ ಅರಿವಳಿಸಲು ಈಥರನ್ನು ಬಳಸಿದ್ದರೂ ಅದನ್ನು ಯಾರಿಗೂ ತಿಳಿಸದೆ ತೆಪ್ಪಗಿದ್ದ. ಡಿಸೆಂಬರ್ 1844ರಲ್ಲಿ ಹಲ್ಲು ವೈದ್ಯ ವೆಲ್ಸ್ ಹಲ್ಲು ಕೀಳಿಸಿಕೊಳ್ಳಲು ತಾನೇ ನೈಟ್ರಸ್ ಆಕ್ಸೈಡನ್ನು ತೆಗೆದುಕೊಂಡ. ಶಸ್ತ್ರಕ್ರಿಯೆಯಲ್ಲಿ ಇದರ ಬಳಕೆಯನ್ನು ಜನರಿಗೆಲ್ಲ ತೋರುವ ಇವನ ಯತ್ನ ಗಲಾಟೆಯಿಂದ ಕೈಗೂಡಲಿಲ್ಲ. ಇದರಿಂದಾಗಿ ಇವನನ್ನು ಮೋಸಗಾರನೆಂದರು. ಆಮೇಲಿನ ಯತ್ನಗಳು ಕೈಗೂಡಿದುವು. 16ನೆಯ ಶತಮಾನದಲ್ಲಿ ಸ್ಪೇನಿನವರು ಆಕ್ರಮಿಸುವುದಕ್ಕೆ ಮುಂಚೆಯೂ ಪೆರು ನಿವಾಸಿಗಳು ದಣಿವು, ಹಸಿವು ತಡೆಯಲು ಕೋಕ ಎಲೆಗಳನ್ನು ಅಗಿಯುತ್ತಿದ್ದರು. ಅದರ ಕ್ಷಾರರೂಪಿಯಾದ ಕೊಕೇನನ್ನು ಕಣ್ಣಿನ ಶಸ್ತ್ರಕ್ರಿಯೆಯಲ್ಲಿ ಮೊಟ್ಟ ಮೊದಲಾಗಿ 1884ರಲ್ಲಿ ವಿಯನ್ನಾದ ವೈದ್ಯ ಕಾರ್ಲ್ ಕೊಲ್ಲರ್ ಬಳಸಿದಾಗ ತಾವಿನ ಅರಿವಳಿಕೆ ಕಾಲಿಟ್ಟಿತು. ಕೊಕೇನ್ ಅಪಾಯಕರ, ವಿಷಕರವಾದ್ದರಿಂದ ಅಷ್ಟಾಗಿ ಈಗ ಬಳಕೆಯಲ್ಲಿಲ್ಲ.

**ಮೈಯೆಲ್ಲದರ ಅರಿವಳಿಕೆ :** ಉಸಿರೆಳೆತ: ರೋಗಿ ಉಸಿರಲ್ಲಿ ಎಳೆದುಕೊಳ್ಳುವ ಅನಿಲದ ಇಲ್ಲವೇ ಆರಿಹೋಗುವ ಕಾರಕಗಳಿಂದ ಉಸಿರೆಳೆತದ ಅರಿವಳಿಕೆ ಆಗುವುದು. ಬಾಯಿ, ಮೂಗು ಮೊಗಗಳ ಮೇಲಿನ ಮುಖ್ಯವಾಗಿ ಈಚೆಗೆ ಬಳಕೆ ಇರುವ ಪ್ಲಾಸ್ಟಿಕ್ ಶಸ್ತ್ರಕ್ರಿಯೆ ಆಗುತ್ತಿರುವಾಗ, ಬಾಯಿ ಮೂಗುಗಳ ಮೂಲಕ ಅರಿವಳಿಕ ಅನಿಲಗಳನ್ನು ಒಳಹೊಗಿಸುವಾಗ ಆತಂಕವಾಗುತ್ತಿತ್ತು. ಕೊನೆಗೆ ಉಸಿರ್ನಾಳಾಂತರ ಒಂದು ರಬ್ಬರ್ ಕೊಳವೆಯನ್ನು ಇರಿಸುವಂತಾದಾಗ ಅನುವಾಯಿತು. ಬಹಳ ಹೊತ್ತು ನಡೆಸಬೇಕಾದ ಶಸ್ತ್ರಕ್ರಿಯೆಗಳಲ್ಲಿ ತಲೆಯನ್ನು ಹೇಗೆಂದರೆ ಹಾಗೆ ತಿರುಗಿಸಬೇಕಿರುವ ಮಿದುಳಿನ ಶಸ್ತ್ರಕ್ರಿಯೆಗೆ ಇದು ಅನುಕೂಲ. ರೋಗಿಯನ್ನು ದೂರದಿಂದಲೇ ಅರಿವಳಿಕೆಗಾರ ಹತೋಟಿಯಲ್ಲಿ ಇಟ್ಟುಕೊಳ್ಳಬಹುದು.

ಭಾಗವಾಗಿಯೋ ಪೂರ್ತಿಯಾಗಿಯೋ ಪುಪ್ಪುಸ ತೆಗೆಯುವಲ್ಲಿ, ವಪೆಯ ಬೂರನ್ನು (ಹರ್ನಿಯ) ನೇರ್ಪಡಿಸುವಲ್ಲಿ ಶಸ್ತ್ರಕ್ರಿಯೆ ಆಗಬೇಕಾದ ಅಂಗವೇ ಉಸಿರಾಟದಿಂದ ಆಡುತ್ತಿದ್ದುದರಿಂದ ಕಷ್ಟವಾಗುತ್ತಿತ್ತು. ಇದಕ್ಕಾಗಿ ಹಿಡಿತದಲ್ಲಿನ ಉಸಿರಾಟ ಹುಟ್ಟಿಕೊಂಡಿತು. ಅಂದರೆ ಅರಿವಳಿಕೆಗಾರನೇ ತನ್ನ ಕೈಯಲ್ಲಿನ ರಬ್ಬರ್ ಚೀಲದಿಂದ ಬಲವಂತವಾಗಿ ಒತ್ತಿ ಉಸಿರನ್ನು ಒಳತಳ್ಳಿ ಸಡಿಲಿಸುತ್ತಿರುವನು, ಅಲ್ಲಿಗೆ ರೋಗಿಯ ಉಸಿರಾಟ ಪೂರ್ತಿ ಇವನ ಕೈಯಲ್ಲಿರುವುದು. ನಿತ್ಯದ ಉಸಿರಾಟವನ್ನು ಹಲವಾರು ವಿಧಾನಗಳಿಂದ ತುಸು ಹೊತ್ತು ತಡೆದಿಡಲೂಬಹುದು.

ಸತತ ಸುಧಾರಣೆ ಮತ್ತು ಬದಲಾವಣೆ ವಿಶೇಷ ಅರಿವಳಿಕ ತಂತ್ರಗಳ ಬಳಕೆಗೆ ಅನುಕೂಲಿಸಿತು. ಅರಿವಳಿಕಗಳ ಮಿಶ್ರಣಗಳಿಂದ ಇಂಗಾಲದ ಡೈಯಾಕ್ಸೈಡನ್ನು ಸೋಡಾ ಲೈಮಿನಿಂದ ಹೀರುತ್ತಿದ್ದರೆ, ಅರಿವಳಿಸುತ್ತಿರಲು ಅರಿವಳಿಕ ಸ್ವಲ್ಪವೇ ಸಾಕು.

ನೈಟ್ರಸ್ ಆಕ್ಸೈಡ್ ಈಗ ಎಲ್ಲೆಲ್ಲೂ ಬಳಕೆಯಲ್ಲಿದೆ. ಆದರೂ ಸಾಕಷ್ಟು ಆಮ್ಲಜನಕ ದೊರಕದೆ ಆಮೇಲೆ ಮಿದುಳಿಗೆ ಕೆಡುಕಾಗಿಸುವ ಅಪಾಯವಂತೂ ಅರಿವಳಿಕೆಗಾರನ ಗಮನದಲ್ಲಿ ಇದ್ದೇ ಇರುತ್ತದೆ. ದುರ್ಬಲ ಅರಿವಳಿಕವಾದ್ದರಿಂದ, ಇತರ ಅರಿವಳಿಕಗಳೊಂದಿಗೇ ಇದರ ಬಳಕೆ ಹೆಚ್ಚು:

ಉಸಿರೆಳೆತದ ಅರಿವಳಿಕಗಳಲ್ಲಿ ಡೈಯೆತಿಲ್ ಈಥರಿನ ಪಾತ್ರ ಹೆಚ್ಚಿನದು. ಇದನ್ನು ಕೊಟ್ಟಾಗ, ಜೊಲ್ಲುಸುರಿಕೆ, ವಾಂತಿ, ಎದೆಗೆಮ್ಮು ಆಗುವುದರಿಂದ ಸೈಕ್ಲೋಪ್ರೊಪೈಲ್, ಸೆಪ್ರೆತಿಲೀನ್ ಇತ್ಯಾದಿ ಬೇರೆ ಈಥರುಗಳನ್ನು ಕೊಟ್ಟು ನೋಡಿದ್ದಾಗಿದೆ. ಡೈವಿನೈಲ್ ಈಥರು ಮಕ್ಕಳಲ್ಲಿನ ತುಸು ಕಾಲದ ಅರಿವಳಿಕೆಗೆ ಚೆನ್ನು. ಇದು ಎಷ್ಟೇ ಬಲವಾಗಿದ್ದರೂ ಹೆಚ್ಚು ಹೊತ್ತು ಕೊಡುತ್ತಿದ್ದರೆ, ಆಗಾಗ್ಗೆ ಇದರಿಂದ ಕೆಡಕಾಗುವುದರಿಂದ ಅಷ್ಟಾಗಿ ಹೆಚ್ಚಿನ ಬಳಕೆಯಲ್ಲಿಲ್ಲ.

ಎಡಿನ್‌ಬರೋದ ಜೇಮ್ಸ್ ಯಂಗ್ ಸಿಂಪ್ಸನ್ ತನ್ನ ಮೇಲೂ ತನ್ನ ಒಂದಿಗರ ಮೇಲೂ ಮೊದಲು ನವೆಂಬರ್ 1847ರಲ್ಲಿ ಬಳಸಿನೋಡಿ ಬಳಕೆಗೆ ತಂದ ಕ್ಲೋರೊಫಾರ್ಮ್, ಈಥರಿಗಿಂತ ಬಲವಾದರೂ ಇನ್ನೂ ವಿಷಕರ. ಮೊದಮೊದಲು ಈಥರಿನ ಬದಲಾಗಿ ಇದೇ ಎಲ್ಲೆಲ್ಲೂ ಬಳಕೆಯಲ್ಲಿತ್ತು. ಇದರ ಅಪಾಯಗಳನ್ನು ಗಮನಿಸಿದಂತೆಲ್ಲ ಅರಿವಳಿಕವಾಗಿ ಇದರ ಬಳಕೆ ತೀರ ಇಳಿದಿದೆ.

ಶಸ್ತ್ರಕ್ರಿಯೆಯ ಹರವು ಹರಡಿದಂತೆಲ್ಲ, ನಿತ್ರಾಣಿ ರೋಗಿಗಳಲ್ಲೂ ಅರಿವಳಿಕೆ ಬಳಸುವಂತಾಯಿತು. ಇದಕ್ಕೆ ಈಥರು, ಕ್ಲೋರೊಫಾರ್ಮ್ ಸಾಕಾಗಲಿಲ್ಲ. ಇವುಗಳಿಂದ ಅರಿವು ತಪ್ಪುವುದು ನಿಧಾನ. ಆಮೇಲೆ ಕೆಮ್ಮು ಹುಟ್ಟಿಸುತ್ತಿದ್ದುವು. ಮೊದಲ ಹಂತದಲ್ಲೇ ಕ್ಲೋರೊಫಾರ್ಮ್ ಗುಂಡಿಗೆಗೆ ಮಾರಕವಾಗಿ, ಕೆಲವು ತಾಸುಗಳು ಕೊಟ್ಟಮೇಲೆ ಈಲಿಗೂ ವಿಷಕರವಾಗುವುದು. ಇದಕ್ಕಾಗಿ ಇವನ್ನು ಕಡಿಮೆ ಮಾಡಿ, ಬಹುವಾಗಿ ನೈಟ್ರಸ್ ಆಕ್ಸೈಡ್, ಆಮ್ಲಜನಕ ಕೊಡುವುದನ್ನು ಹೆಚ್ಚಿಸಲಾಯಿತು.

ಕ್ಲೋರೊಫಾರ್ಮ್‌ಗಿಂತ ಟ್ರೈಕ್ಲೋರೊಯೆತಿಲೀನ್ (ಟ್ರೈಲೀನ್) ಗುಂಡಿಗೆಗೆ ಅಷ್ಟಾಗಿ ಕೆಡುಕಾಗದಂತಿದ್ದರೂ ಯಾವಾಗಲೂ ಸ್ನಾಯುಗಳನ್ನು ಪೂರ್ತಿ ಸಡಿಲಗೊಳಿಸದು. ಹೆರಿಗೆಯಲ್ಲೂ ಹಲ್ಲು ಕೀಳುವಾಗಲೂ ಇದೀಗ ನೋವರಿವಳಿಸಲು ಚೆನ್ನಾಗಿದೆ. ಇದು ಇಂಗ್ಲೆಂಡಿನಲ್ಲಿ ತುಂಬ ಜನಪ್ರಿಯವಾಗಿತ್ತು. ಮೈಯೆಲ್ಲದರ ಅರಿವಳಿಕವಾಗಿ ಇದನ್ನು ನೈಟ್ರಸ್ ಆಕ್ಸೈಡ್, ಆಮ್ಲಜನಕಗಳೊಂದಿಗೆ ಕೊಡುವುದುಂಟು. ಮುಚ್ಚಿದ ಹರಿಸುತ್ತಿನಲ್ಲಿ (ಕ್ಲೋಸ್ಡ್ ಸರ್ಕ್ಯೂಟ್) ಟ್ರೈಕ್ಲೋರೊಯೆತಿಲೀನನ್ನು ಸೇವಿಸಲು ಕೊಟ್ಟರೆ, ಹರಿಸುತ್ತಿನಲ್ಲಿರುವ ಸೋಡಾ ಲೈಮ್‌ನೊಂದಿಗೆ ಇದು ಕೂಡಿ ವಿಷಕರ ವಸ್ತುವಾಗುವುದು. ಅಲ್ಲದೆ ವಿದ್ಯುತ್ತಿನ ಸುಡಿಕವೇ (ಕಾಟರಿ) ಮುಂತಾದವುಗಳಿಂದ ಬರುವ ಕಾವಿನಲ್ಲಿ ಇದು ಒಡೆದು ವಿಷಕರವಾಗುತ್ತದೆ.

ಸಿಡಿವ ಅನಿಲವಾದ ಎತಿಲೀನ್ 1923ರಲ್ಲಿ ಬಳಕೆಗೆ ಬಂದಿತು. ನೈಟ್ರಸ್ ಆಕ್ಸೈಡಿಗಿಂತ ಇದು ಬಲು ಬಲವಾಗಿದ್ದುದರಿಂದ ಇದರೊಂದಿಗೆ ಒಂದಿಷ್ಟು ಆಮ್ಲಜನಕವನ್ನು ಸೇರಿಸಿಕೊಡಬಹುದು.

ತುಸು ಹೊತ್ತಿನ ಉಸಿರೆಳೆತದ ಅರಿವಳಿಕವಾಗಿ, ಹೆಫೆಲ್ಡರ್ (1848) ಮೊದಲು ಬಳಸಿದ ಈತಿಲ್‌ಕ್ಲೋರೈಡಿನ ಬಳಕೆ ಹೆಚ್ಚಾಗಿಲ್ಲದಿದ್ದರೂ ಇದು ಕ್ಲೋರೊಫಾರ್ಮಿನಷ್ಟೇ ಗುಂಡಿಗೆಗೆ ವಿಷಕರ. ಸಿಂಚನ ಯಂತ್ರದಿಂದ ಚರ್ರನೆ ಹೊರಬಿಟ್ಟು, ಮೈಮೇಲಿನ ಚರ್ಮ, ಅದರಡಿಯ ಊತಕಗಳನ್ನು (ಟಿಷ್ಯೂಸ್) ನೀರ್ಗಲ್ಲಂತಾಗಿಸಲು ಈತಿಲ್ ಕ್ಲೋರೈಡನ್ನು ಬಳಸಬಹುದು.

ಬಹುಪಾಲು ಹೈಡ್ರೋಕಾರ್ಬನ್ ಅನಿಲಗಳು ಅರಿವಳಿಕಗಳು ಕೆಲಕಾಲ ಜನಪ್ರಿಯವಾಗಿದ್ದ, ಅಮೆರಿಕದ ಈತಿಲೀನೂ ಜರ್ಮನಿಯ ಅಸಿಟಿಲೀನೂ ಇಂಥವೇ. ಸೈಕ್ಲೊಪ್ರೋಪೇನು 1934 ರಲ್ಲಿ ಮೊದಲು ರೋಗಿಗಳಲ್ಲಿ ಬಳಕೆಗೆ ಬಂದು ಈಗಲೂ ಚೆನ್ನಾದ ಅರಿವಳಿಕ ಎನಿಸಿದೆ. ಬಲವಾದ ಮಂಪರಕಾರಿಯಾದ್ದರಿಂದ, ಇದರೊಂದಿಗೆ ಹೆಚ್ಚಾಗಿ ಆಮ್ಲಜನಕವನ್ನು ಸೇರಿಸುವುದು ಒಂದು ಅನುಕೂಲ. ಉಸಿರಾಟವನ್ನು ಕುಂದಿಸುವುದರಿಂದ ಎದೆಗೂಡಿನ ಶಸ್ತ್ರಕ್ರಿಯೆಗಳಲ್ಲಿ ಕೋಡುವಂಥದು. ಇದು ಹತ್ತಿಕೊಂಡು ಉರಿವುದರಿಂದಲೂ ಬಲೆ ದುಬಾರಿ ಆದ್ದರಿಂದಲೂ ಮುಚ್ಚಿದ ಹರಿಸುತ್ತಿನಲ್ಲೇ ಇದನ್ನು ಕೊಡಬೇಕು. ಗುಂಡಿಗೆ ಮೇಲಿನ ಇದರ ಪರಿಣಾಮ ಇನ್ನೂ ನಿರ್ಧಾರವಾಗಿಲ್ಲ. ಕ್ಯುರೇರ್‌ರೆ ಬಂದ ಮೇಲೆ ಇದರ ಬಳಕೆ ಹೆಚ್ಚಿತು.

1956ರಲ್ಲಿ ಎಲ್ಲೆಲ್ಲೂ ಬಳಕೆಗೆ ಬಂದ, ಹ್ಯಾಲೋತೇನ್ (ಫ್ಲೂವೋತೇನ್) ಬಣ್ಣವಿರದ, ಆರಿಹೋಗುವ, ಸುವಾಸನೆಯ, ಎಷ್ಟು ಆಮ್ಲಜನಕ ಸೇರಿಸಿದರೂ ಹೊತ್ತಿ ಉರಿಯದ, ಸಿಡಿಯದ ದ್ರವ. ಇಷ್ಟಾದರೂ ಇದರಿಂದ ರಕ್ತನಾಳ ಹಿಗ್ಗಲಿಕೆ, ರಕ್ತದೊತ್ತಡದ ಇಳಿತ, ನಿಧಾನ ಗುಂಡಿಗೆಬಡಿತ ಇವೆಲ್ಲ ಆಗುವುವಲ್ಲದೆ, ಇದರ ಬಳಕೆಯಿಂದ ಎಷ್ಟೋ ಮಂದಿ ಸತ್ತಿದ್ದಾರೆ. ಈಡಾಗುವವರಲ್ಲಿ ಯಕೃತ್ತಿಗೆ ಅಪಾಯಕಾರಿ (ಲಿವರ್ ).

**ಗುದನಾಳಗಳಲ್ಲಿ:** ಗುದನಾಳದೊಳಕ್ಕೆ (ರೆಕ್ಟಂ) ಸೇರಿಸಿಟ್ಟು ಅರಿವು ತಪ್ಪಿಸುವ ವಿಧಾನವೇ ಗುದನಾಳ (ರೆಕ್ಟಲ್) ಅರಿವಳಿಕೆ. ಇದರಲ್ಲಿ ಬಹುವಾಗಿ ಬಳಸುವ ಮದ್ದುಗಳು ಈಥರ್, ಬಾರ್ಬಿಟುರೇಟುಗಳು, ಅಮೈಲೀನ್ ಹೈಡ್ರೇಟಿನಲ್ಲಿ ಕರಗಿಸಿದ ಟ್ರೈಬ್ರೋಮೊಯೆತಿಲ್ ಮದ್ಯಸಾರ. ಈ ಕೊನೆಯದು ನೇರವಾಗಿ ಮೂತ್ರನಾಳಕದೊಳಕ್ಕೆ (ಯೂರಿಟರ್) ಚುಚ್ಚಿ ಹೊಗಿಸಿ ಮೂತ್ರಪಿಂಡಗಳಲ್ಲಿನ ಸುತ್ತಲೂ ಹಿಡಿದಿರುವ ತೂತಡಕನ್ನು (ಸ್ಟ್ರಿಕ್ಚರ್) ಬಿಡಿಸಲು ಅನುಕೂಲ. ಎರಡನೆಯ ಮಹಾಯುದ್ಧದಲ್ಲಿ ಅರಿವಳಿಕೆಗಾಗಿ ಇದನ್ನೇ ರಕ್ತನಾಳಾಂತರ ಕೊಡಲಾಗುತ್ತಿತ್ತು. ಶಸ್ತ್ರಕ್ರಿಯೆಯ ಮುನ್ನ ಕೊಡುವ ಮೂಲ ಅರಿವಳಿಕಗಳಾಗಿ ಮಾತ್ರ ಗುದನಾಳ ಅರಿವಳಿಕಗಳು ಈಗ ಬಳಕೆಯಲ್ಲಿವೆ, ತಾಸುಗಳ ಹೊತ್ತು ಅರಿವಳಿಸಲು ಇವು ತಕ್ಕವಲ್ಲ.

**ವಶ್ಯಸುಪ್ತಿ (ಹಿಪ್ನೋಟಿಸಂ):** ಯುದ್ಧ ಸೆರೆವಾಸಿಗಳ ಶಿಬಿರದಲ್ಲಿದ್ದಂತೆ ಬೇಕಾದಷ್ಟು ಅರಿವಳಿಕೆ ವಸ್ತುಗಳು ಇಲ್ಲದಾಗಲೂ ಹಲ್ಲಿನ ಚಿಕಿತ್ಸೆಗಳಲ್ಲೂ ಸ್ವಲ್ಪಮಟ್ಟಿಗೆ ಹೆರಿಗೆ ಕಾಲದಲ್ಲೂ ಇದನ್ನು ಬಳಸಬಹುದು.

**ರಕ್ತನಾಳಾಂತರ:** ಮೊಟ್ಟಮೊದಲು ರಕ್ತನಾಳಾಂತರ ಕ್ಲೋರಾಲ್ ಹೈಡ್ರೇಟನ್ನು ಚುಚ್ಚಿ ನೋಡಿದವ ಲಯನ್ನಿನ ಓರೆ(1872). ಸಿರ ರಕ್ತನಾಳದಲ್ಲಿನ ಹರಿವಿನೊಳಕ್ಕೆ ನೇರವಾಗಿ ಅರಿವಳಿಕವನ್ನು ಚುಚ್ಚಿಬಿಡುವ ರಕ್ತನಾಳಾಂತರ ಅರಿವಳಿಕೆ 1932ರಿಂದ ಬಳಕೆಯಲ್ಲಿದೆ. ಯುದ್ಧಕಾಲದಲ್ಲಂತೂ ವಿಶೇಷ ಪರಿಕರಗಳಿಲ್ಲದೆ ಕೊಡುವುದರಿಂದ ಹೆಚ್ಚಿನ ಬಳಕೆಯಲ್ಲಿತ್ತು. ಕೊಟ್ಟಕೂಡಲೇ ವರ್ತಿಸುವ ಬಾರ್ಬಿಟುರೇಟುಗಳೇ ಈ ಕೆಲಸಕ್ಕೆ ಚೆನ್ನು. ಈ ತೆರನ ಅರಿವಳಿಕೆಯಲ್ಲಿ, ರೋಗಿಗೆ ಮೊಗದ ಮುಸುಕಿನ ಮೇಲೆ ಅಹಿತವಾದ ಮದ್ದು ಸುರಿಸಿಕೊಳ್ಳುವ ತೊಡಕಿರದು; ಆದರೆ ಇದರಿಂದ ರಕ್ತ ಒತ್ತಡವಿಳಿದು, ಉಸಿರಾಟ ಕುಂದುವುದಲ್ಲದೆ, ಕೊಟ್ಟು ಬಿಟ್ಟ ಮೇಲೆ ಇದರ ಪ್ರಮಾಣವನ್ನು ಹೆಚ್ಚು ಕಡಿಮೆ ಮಾಡಲು ಬರದು. ಅಲ್ಲದೆ, ದನಿತಂತು (ಲಾರಿಂಕ್ಸ್) ಸೆಡೆತುಕೊಂಡರೆ ಉಸಿರುಕಟ್ಟುವ ಅಪಾಯವಿದೆ. ಅನುಭವಿ ಮಾತ್ರ ಕೈಗೊಳ್ಳಬೇಕಾದ ವಿಧಾನವಿದು. ಕರಗುವ ಹೆಕ್ಸೊಬಾರ್ಬಟೋನ್ (ಇವಿಪಾನ್ ಸೋಡಿಯಂ) ಹಿಂದೆ ಬಳಕೆಯಲ್ಲಿತ್ತು. ಈಗ ಕರಗುವ ತಯೋಷೆಂಟೋನ್ ಸೋಡಿಯಂ (ಪೆಂಟೋತಾಲ್ ಸೋಡಿಯಂ) ಎಲ್ಲರ ಮೆಚ್ಚುಗೆ ಗಳಿಸಿದೆಯಲ್ಲದೆ, ಇನ್ನಾವ ಬಾರ್ಬಿಟುರೇಟೂ ಇದರಷ್ಟು ಬಳಕೆಯಲ್ಲಿಲ್ಲ. ತಯೊಪೆಂಟಾಲ್ ಸೋಡಿಯಂನಷ್ಟೇ ಪ್ರಭಾವ ಸುರಿಟಾಲ್‌ಗೂ ಇದೆ. ಈ ಮದ್ದುಗಳನ್ನು ಒಂದೇ ಬಾರಿಯೋ ಭಾಗವಾಗಿಯೋ ಕೊಡಬಹುದು. ಬೇರೆ ತೆರನ ಅರಿವಳಕೆಯೊಂದಿಗೂ ಕೊಡಬಹುದು. ಶಸ್ತ್ರಕ್ರಿಯೆ ಆದಮೇಲಿನ ನೋವಿಗಾಗಿ ಮದ್ಯಸಾರವನ್ನು ರಕ್ತನಾಳಾಂತರ ಚುಚ್ಚಿಹೋಗಿಸುವ ವಾಡಿಕೆಯಿತ್ತು. ಅನೇಕ ತೆರನ ನೋವುಗಳಿಗೂ ಕೆಲವೇಳೆ ಶಸ್ತ್ರಕ್ರಿಯೆಗೋಸ್ಕರವಾದ ಅರಿವಳಿಕೆಗಾಗಿಯೂ ರಕ್ತನಾಳಾಂತರ ಪ್ರೊಕೆಯ್ನ್ ಹೈಡ್ರೊಕ್ಲೋರೈಡನ್ನು ಚುಚ್ಚಿಹೊಗಿಸಲಾಗಿದೆ. ಇದನ್ನು ಹೀಗೆ ಕೊಟ್ಟಾಗ, ರಕ್ತನಾಳದ ಸೆಡೆತವನ್ನೂ ಕೆರೆತವನ್ನೂ ಕಳೆಯುತ್ತದೆ.

ಕೆಲವೇಳೆ ಉಸಿರುಕಟ್ಟುವ ಸಂಭವ ಇರುವುದರಿಂದ, ರಕ್ತನಾಳಾಂತರದ ಅರಿವಳಿಕೆಯನ್ನು ಸುಲಭ, ಹಗುರ ಎನ್ನುವಂತಿಲ್ಲ. ರಕ್ತನಾಳಾಂತರ ಕೊಡಲು ತಯೊಪೆಂಟೋನ್ ಸೋಡಿಯಂಗಿಂತಲೂ ಒಳ್ಳೆಯ ಅರಿವಳಿಕ ವಸ್ತುವನ್ನು ತರುವ ಯತ್ನಗಳು ಕೈಗೂಡಿಲ್ಲ. ಹೆಚ್ಚು ಬಳಕೆಯಲ್ಲಿರುವ ವಿಧಾನ ಒಂದಿದೆ. ಶಸ್ತ್ರಕ್ರಿಯೆಯ ಹಿಂದಿನ ರಾತ್ರಿ, ಮಾರನೆಯ ಬೆಳಗ್ಗೆ ಶಾಮಕ ಮದ್ದುಗಳನ್ನು ಕೊಟ್ಟು, ಶಸ್ತ್ರಕ್ರಿಯೆಯ ಸದ್ಯ ಮುಂಚೆ ರಕ್ತನಾಳಾಂತರವಾಗಿ ಸ್ನಾಯು ಸಡಿಲಕವಾದ (ಮಸಲ್ ರಿಲ್ಯಾಕ್ಸೆಂಟ್) ಸಕ್ಸಿನೈಲ್ ಕೋಲೀನೊಂದಿಗೆ ತಯೊಪೆಂಟೋನ್ ಸೋಡಿಯಮ್ಮನ್ನೂ ಉಸಿರಲ್ಲಿ ನೈಟ್ರಸ್ ಆಕ್ಸೈಡೊಂದಿಗೆ ಆಮ್ಲಜನಕವನ್ನೂ ಕೊಡುವುದು 1945ರಿಂದ ಬಳಕೆಯಲ್ಲಿದೆ. ಈ ವಿಧಾನದಲ್ಲಿ ಅರಿವಳಿಕ ಅನಿಲವನ್ನು ರೋಗಿಗೆ ಕೊಡಲು ಒಂದು ಪ್ಲಾಸ್ಟಿಕ್ ಕೊಳವೆಯನ್ನು ಉಸಿರ್ನಾಳದಲ್ಲಿ ತೂರಿಸಬೇಕು. ಕೊಳವೆ ಸರಿಯಾದ ಜಾಗದಲ್ಲಿದ್ದು ಉಸಿರು ಆಡುತ್ತಿರುವುದನ್ನು ಗಮನಿಸಿ, ಟ್ಯೂಬೊಕ್ಯುರಾರೀನ್ ಕೊಡಬೇಕು. ಈ ಜೋಡಿ ಬಳಕೆಯಿಂದ ಅನಿಲದಂಥ ವಸ್ತುಗಳನ್ನು ಕೊಡಲು ತೆರೆದಿರುವ (ಓಪನ್) ವಿಧಾನಗಳಿಂದ ಆಗಬಹುದಾದ ಬೆಂಕಿ, ಸಿಡಿತಗಳ ಅಪಾಯಗಳೇ ಇಲ್ಲದೆ, ಅರಿವಳಿಕೆ ಸರಾಗವಾಗಿ, ಸ್ನಾಯು ಸಡಿಲತೆ ಚೆನ್ನಾಗುವುದು. ಅರಿವಳಿಕಗಳು ಮತ್ತಿತರ ಮದ್ದುಗಳನ್ನು ಹೀಗೆ ಜೊತೆಗೂಡಿಸಿ ಕೊಡುವುದರಿಂದ ಯಾವುದನ್ನೂ ಹೆಚ್ಚಿಗೆ ಕೊಡಬೇಕಿಲ್ಲ. ಇದರಿಂದ ಅಪಾಯ ತಗ್ಗುತ್ತದೆ. ಈ ವಿಧಾನಕ್ಕೆ ಸಮತೋಲದ ಅರಿವಳಿಕೆ ಎಂದು ಹೆಸರು.

**ಎಲುಬಾಂತರ:** ಚುಚ್ಚಲು ರಕ್ತನಾಳ ಸಿಗದಾಗ ಎಲುಬಿನ ಒಳಗಿರುವ ಮಜ್ಜೆಯೊಳಕ್ಕೆ ದ್ರಾವಣವನ್ನು ಚುಚ್ಚಿ ಹೊಗಿಸುವುದರಿಂದಲೂ ತಯೋಪೆಂಟಾಲ್ ಸೋಡಿಯಂನಂಥ ಅರಿವಳಿಕಗಳನ್ನು ರೋಗಿಗೆ ಕೊಡಲು ಅವಕಾಶವಿದೆ. ಈ ವಿಧಾನಕ್ಕೆ ಎಲುಬಾಂತರ ಅರಿವಳಿಕೆ ಎಂದು ಹೆಸರು.

**ತಾವಿನ ಅರಿವಳಿಕೆ :** ಮೈಯಲ್ಲಿ ಒಂದೆಡೆಯಲ್ಲಿ ಅರಿವಿಲ್ಲದಂತೆ ಮಾಡುವ ವಿಧಾನವೇ ತಾವಿನ ಅರಿವಳಿಕೆ. ನೆಪೋಲಿಯನ್ನನ ಸೇನೆಯ ಶಸ್ತ್ರವೈದ್ಯನಾಗಿದ್ದ ಬ್ಯಾರನ್ ಲ್ಯಾರಿ (1812) ಮೊದಲು ಈ ವಿಧಾನ ಬಳಸಿದ. ಮಾಸ್ಕೋದಿಂದ ಹಿಂದಿರುಗುತ್ತಿದ್ದ ಊನಗೊಂಡ ಸೈನಿಕರನ್ನು ಮೊದಲು ಹಿಮಗಟ್ಟಿಸಿ ನೋವಿಲ್ಲದಂತೆ ಮಾಡಿ ಕೈಕಾಲುಗಳನ್ನು ಕತ್ತರಿಸುತ್ತಿದ್ದ. ಅನೇಕ ರಾಸಾಯನಿಕಗಳನ್ನು ತಾವಿನ ಅರಿವಳಿಕಗಳಾಗಿ ಬಳಸಿದ್ದರೂ ಪ್ರೊಕೆಯ್ನ್ ಹೈಡ್ರೋಕ್ಲೋರೈಡಿನಿಂದ ಅಪಾಯ ತೀರ ಕಡಿಮೆ, ಸಿಂಕೊಕೆಯ್ನ್, ಪೈಪರೊಕೆಯ್ನ್, ಡೈಬುಕೆಯ್ನ್, ಟೆಟ್ರಕೆಯ್ನ್‌ಗಳ ಹೈಡ್ರೋಕ್ಲೋರೈಡುಗಳೂ ಬಳಕೆಯಲ್ಲಿವೆ.

**ನರತಡೆ :** ಒಂದೆಡೆಯ ನರ ಪೂರೈಕೆಯನ್ನು ತಡೆಗಟ್ಟುವಂತೆ ಒಂದು ತಾವಿನ ಅರಿವಳಿಕವನ್ನು ಒಂದೆಡೆ ಚುಚ್ಚಿಹೊಗಿಸುವ ವಿಧಾನ. ನರತಡೆಯ (ನರ್ವ್‌ಬ್ಲಾಕ್) ಇಲ್ಲವೆ ವಹನ (ಕಂಡಕ್ಷನ್) ಅರಿವಳಿಕೆ. ಬೆನ್ನುಹುರಿಯಲ್ಲಿ ಚುಚ್ಚಿ ಹೊಗಿಸಿದ ಭಾಗಕ್ಕೆ ತಕ್ಕಂತೆ ಹೆಸರು ಪಡೆವ, ಬಾಲದ (ಕಾಡಲ್), ಪಾವನಿಯ(ಸೇಕ್ರಲ್), ತೋಳಿನ ಹೆಣಿಲಿನ (ಬ್ರೇಕಿಯಲ್ ಪ್ಲೆಕ್ಸಸ್), ಬೆನ್ನು ಹುರಿಯಂಥ (ಸ್ಪೈನಲ್) ವಿಶೇಷ ಮಾದರಿಯ ನರತಡೆಗಳಿವೆ. ಬಾಲದ ಅರಿವಳಿಕೆಯ ಮಾರ್ಪಾಟಾದದ್ದು ಎಡೆಬಿಡದ ವಿಧಾನ. ಅರಿವಳಿಕೆಯನ್ನು ಒಂದೇ ಸಮನಾಗಿ ಇರಿಸಿರಲು, ಬಾಲದ ಸಾಗುನಾಳದಲ್ಲಿ ಒಂದು ದಪ್ಪ ನಾಳಸೂಜಿಯನ್ನೋ ತೂರ್ನಳಿಕೆಯನ್ನೋ (ಕೆತೀಟರ್) ಚುಚ್ಚಿ ಇರಿಸಿ, ತಾವಿನ ಅರಿವಳಿಕವನ್ನು ಮತ್ತೆ ಮತ್ತೆ ಚುಚ್ಚಿಹೊಗಿಸುತ್ತಿರುವುದುಂಟು. ಮುಖ್ಯವಾಗಿ ಈ ವಿಧಾನ ಹೆರಿಗೆಯಲ್ಲಿ ಅನುಕೂಲ ಎನ್ನಬಹುದು.

ಬೆನ್ನುಹುರಿಯ ದ್ರವದೊಳಗೆ (ಸ್ಪೈನಲ್ ಫ್ಲೂಯಿಡ್) ತಾವಿನ ಅರಿವಳಿಕದ ದ್ರಾವಣವನ್ನು ಚುಚ್ಚುವುದರಿಂದ ನರತಡೆಯ ಅರಿವಳಿಕೆಯ ಇನ್ನೊಂದು ಬಗೆಯಾದ ಬೆನ್ನುಹುರಿಯ ಅರಿವಳಿಕೆ ಆಗುತ್ತದೆ. ಚುಚ್ಚಿಬಿಡುವ ಮದ್ದಿನ ದ್ರಾವಣದ ಪ್ರಮಾಣ, ಸಾಂದ್ರತೆಗಳು, ರೋಗಿ ಇರುವ ಭಂಗಿಗಳಂತೆ ಯಾವ ಭಾಗದಲ್ಲಿ ನೋವರಿಳಿವುದೆಂದು ಖಚಿತವಾಗಿ ಹೇಳಬಹುದು. ಒಂದೇ ಬಾರಿ ಚುಚ್ಚಿ ಹೊಗಿಸುವ ವಿಧಾನದ ಮಾರ್ಪಾಟಾಗಿ ಎಡೆಬಿಡದಿರುವುದು ಬಂದಿದೆ. ಇದರಲ್ಲಿ ಅರಿವು ತಪ್ಪಿ ಹಾಗೇ ಇರುವಂತೆ ಆಗಾಗ್ಗೆ ಚುಚ್ಚುತ್ತಿರಲು, ನಾಳಸೂಜಿಯನ್ನೋ ತೂರ್ನಳಿಕೆಯನ್ನೋ ಬೆನ್ನಲ್ಲಿ ಚುಚ್ಚಿಅಲ್ಲೇ ಬಿಟ್ಟಿರುವುದುಂಟು. ಈ ವಿಧಾನದಲ್ಲಿ ಒಂದೊಂದು ಸಾರಿಗೂ ಸ್ವಲ್ಪವೇ ಮದ್ದನ್ನು ಕೊಡುವುದರಿಂದ ಕೆಡುಕಿಲ್ಲ. ಮದ್ದನ್ನು ಒಂದೇ ಬಾರಿಗೆ ಕೊಟ್ಟುಬಿಟ್ಟು ಬೇಗ ಅರಿವಳಿಕೆ ಕಳೆವ ಅನಾನುಕೂಲ ಇದರಲ್ಲಿಲ್ಲ.

ಅದರಲ್ಲಿಯೂ ಸೋಂಕು ಹತ್ತಿರುವ ಜಾಗಗಳಲ್ಲಿ ಸೊಂಕು ಹರಡದಂತೆ ಇರಿಸಲು, ತಾವಿನ ಅರಿವಳಿಕ ದ್ರಾವಣಗಳೊಂದಿಗೆ ಪೆನಿಸಿಲಿನ್ನನ್ನು ಸೇರಿಸುವುದುಂಟು. ಪೆನಿಸಿಲಿನ್ನಿನ ಪ್ರಭಾವಕ್ಕೆ ಪ್ರೋಕೆಯ್ನ್ ಹೈಡ್ರೋಕ್ಲೋರೈಡ್ ಅಡ್ಡಿಯಾಗದು.

ಹಲ್ಲಿನ ಚಿಕಿತ್ಸೆಯಲ್ಲಿ ತಾವಿನ ಅರಿವಳಿಕೆಯ ಬಳಕೆ ಅಪಾರ. ಹಲ್ಲುಗಳನ್ನು ಕೀಳಲೂ ಹಲ್ಲು ನೋಯಿಸುವ ಚಿಕಿತ್ಸೆಯ ಅನೇಕ ವಿಧಾನಗಳಲ್ಲೂ ತಾವಿನ ಅರಿವಳಿಕದಿಂದ ಹಲ್ಲಿನ ನರಗಳ ಅರಿವಳಿಸುವುದುಂಟು. ಹಲ್ಲಿನ ಚಿಕಿತ್ಸೆಗಳಲ್ಲಿ ಮೈಯೆಲ್ಲದರ ಅರಿವಳಿಕೆ ಸುಮಾರು ಅರೆಶತಮಾನಗಳ ಕಾಲದಿಂದಲೂ ಬಳಕೆಯಲ್ಲಿದೆ. ತಾವಿನ ಅರಿವಳಿಕವನ್ನು

ಕೊಟ್ಟೋ ಕೊಡದೆಯೋ ಆಮ್ಲಜನಕದೊಂದಿಗಿನ ನೈಟ್ರಸ್ ಆಕ್ಸೈಡನ್ನು ಬಳಸುವುದೇ ಸಾಮಾನ್ಯ. ಇಷ್ಟಾದರೂ ಹಲ್ಲಿನ ಚಿಕಿತ್ಸಾಲಯದಲ್ಲೂ ರಕ್ತನಾಳಾಂತರದ ಅರಿವಳಿಕೆ ಕೂಡ ಬಳಕೆಗೆ ಬರುತ್ತಿದೆ. ಅರಿವಳಿಸುವುದಕ್ಕಿಂತಲೂ ನೋವರಿವಳಿಸಲು ಆಮ್ಲಜನಕದೊಂದಿಗಿನ ನೈಟ್ರಸ್ ಆಕ್ಸೈಡ್ ಜೊತೆಯಲ್ಲಿ ಕೆಲವೇಳೆ ಟ್ರೈಕ್ಲೋರೊಯೆತಿಲೀನನ್ನೋ ವೈನಿತೀನನ್ನೋ ತುಸು ಸೇರಿಸುವುದುಂಟು. ತಾವಿನ ಅರಿವಳಿಸಿ ಹಲ್ಲುಗಳನ್ನು ಕಿತ್ತರೆ, ಇದಕ್ಕಾಗಿ ಮೈಯೆಲ್ಲದರ ಅರಿವಳಿಸಿದುದಕ್ಕಿಂತಲೂ ಹೆಚ್ಚು ನೋವಿಡುವುದೆಂದು ಇಂದಿನ ತಿಳಿವಳಿಕೆ.

**ನೀರ್ಗಲ್ಲಾಗಿಸಿಕೆ:** ಮೈಯಲ್ಲಿ ಒಂದು ಭಾಗದಲ್ಲಿ ತಣ್ಣಗೆ ನೀರ್ಗಲ್ಲಾಗಿಸುವುದೂ ಒಂದು ತೆರನ ಅರಿವಳಿಕೆ. ಇದನ್ನು ನೀರ್ಗಲ್ಲಾಗಿಸುವ (ರೆಫ್ರಿಜರೇಷನ್) ಅರಿವಳಿಕೆ




**ಬಾಯ್ಲ್ ಉಪಕರಣ : ಎಡಬಲ ಎರಡು ಪಕ್ಕಗಳಲ್ಲೂ ತೂಗುಬಿದ್ದಿರುವ ಲೋಹದ ಉರುಳೆಗಳಲ್ಲಿ (3) ಬಗೆಬಗೆಯ ಅನಿಲಗಳಿವೆ. ಇವುಗಳಿಂದ ಬಂದು ಮುಂದೆಸಾಗುವ ಪ್ರಮಾಣಗಳನ್ನು ಅಳೆಯುತ್ತಿರಲು ಹರಿವುಮಾಡಿಗಳಿವೆ (ಫ್ಲೋಮೀಟರ್) (4) ಹರಿದು ಬರುತ್ತಿರುವುದರೊಂದಿಗೆ ಈಥರ್, ಟ್ರೈಲೀನ್ ಮುಂತಾದುವನ್ನು ಆವಿಗೊಳಿಸುವ ಸೀಸೆಗಳಿವೆ. (2) ಮೇಲೆದ್ದಿರುವ ಕಡ್ಡಿಯಿಂದ ಆವಿಯಾಗುವುದನ್ನು ನಿಯಂತ್ರಿಸಬಹುದು. ಇಂಗಾಲದ ಡೈ ಆಕ್ಸೈಡನ್ನು ಹೀರಿಹಾಕುವ ಲೋಹಕೋಶವಿದೆ (7) ರೋಗಿಯ ಉಸಿರು ನಿಂತುಹೋದಾಗ ಬಲವಂತವಾಗಿ ರಬ್ಬರ್ ಚೀಲವೊಂದರ (8) ನೆರವಿನಿಂದ ಉಸಿರುತುಂಬುತ್ತಿರಬಹುದು. ಹೇಗೆ ಮಡಿಚಿದರೂ ಕೊಂಕಿಡಿದ, ಸುಕ್ಕಿಡಿದ ರಬ್ಬರ್‌ಕೊಳವೆಗಳು (5) ಮೊಗದ ಮುಸುಕಿನ (6) ಮೂಲಕ ರೋಗಿಗೆ ಅನಿಲಗಳು ಒದಗುತ್ತವೆ. ಇನ್ನುಳಿದ ಚಿಲ್ಲರೆ ವಸ್ತುಗಳನ್ನು ಅರೆಯಲ್ಲಿರಿಸಿದೆ.**

ಎನ್ನುವುದುಂಟು. ನೀರ್ಗಲ್ಲಿನ ತಂಪಿನಲ್ಲಿ ನೋವಿನ ಅರಿವು ನರಗಳಲ್ಲಿ ಸಾಗದು. ಕೈ ಚರ್ಮ ಇಲ್ಲವೇ ಕಾಲಿನ ಮೇಲೆ ಮಂಜುಗಡ್ಡೆ ಇರಿಸಿ ಸುಮಾರು $5^0$ ಸೆಂ.ಗ್ರೇ.ಗೆ ತಂಪುಗೊಳಿಸಿ ಆ ಭಾಗವನ್ನು ಕತ್ತರಿಸಿ ಹಾಕಿದರೂ ನೋವು ತಿಳಿಯದಂತೆ ಮಾಡಬಹುದು. ಹೀಗೆ ಚರ್ಮದ ನಾಡಿಗಳನ್ನು (ಗ್ರಾಫ್ಟ್ಸ್) ನೋವಿಲ್ಲದೆ ತೆಗೆದಿದ್ದಾರೆ; ಅದರಲ್ಲೂ ಸಿಹಿಮೂತ್ರ ರೋಗಿಗಳಲ್ಲಿ ಒಂದು ಅವಯವವನ್ನೇ ಶಸ್ತ್ರಕ್ರಿಯೆಯಿಂದ ಅಷ್ಟಾಗಿ ಅಪಾಯವಿಲ್ಲದಂತೆ ಕತ್ತರಿಸಿಹಾಕಲು ಸಾಧ್ಯ.

**ಅರಿವಳಿಕೆಯ ಅಪಾಯಗಳು:** ಉಸಿರೆಳೆತದ ಮೈಯೆಲ್ಲದರ ಅರಿವಳಿಕೆಗಾಗಿ ಅನೇಕ ವೇಳೆ ಹೊತ್ತಿ ಉರಿಯುವ, ಸಿಡಿವ ಅರಿವಳಿಕಗಳನ್ನು ಬಳಸಬೇಕಾಗುವುದು. ಇದು ಬಲು ಅಪಾಯಕರ. ಏಕೆಂದರೆ, ರೋಗಿಯ ಪುಪ್ಪುಸಗಳೊಳಗೆ ಸಿಡಿಯಬಹುದು. ಈಥರ್, ಎತಿಲೀನ್, ಸೈಕ್ಲೊಪ್ರೋಪೇನುಗಳಿಂದ ಹೀಗಾಗಬಹುದು. ಅರಿವಳಿಕ ಅನಿಲಗಳನ್ನು ಬಳಸಲು ಅನಿಲದ ಉರುಳೆಯಿಂದ (ಸಿಲಿಂಡರ್) ಉಸಿರಾಟಿಕ ಚೀಲಕ್ಕೆ ಅನಿಲ ಹರಿಯುವುದನ್ನು ನಿಯಂತ್ರಿಸಲು ಯಂತ್ರವೊಂದನ್ನು ಬಳಸಲೇಬೇಕು. ಕೂಡಲೇ ಗಮನಕ್ಕೆ ಬರದೆ ಆಮ್ಲಜನಕ ತುಂಬಿದ್ದ ಉರುಳೆ ಬರಿದಾಗಿ ಬಿಡುವ ಅಪಾಯ ಯಾವಾಗಲೂ ಇರುವುದು. ಹೀಗೇನಾದರೂ ಆದರೆ, ರೋಗಿಗೆ ಉಸಿರು ಕಟ್ಟಿದಂತಾಗಿ ಸದ್ದಿಲ್ಲದೆ ಸಾಯಲೂ ಬಹುದು. ಅನಿಲದ ಉರುಳೆಯನ್ನು ಅದರ ಜಾಗದಲ್ಲಿ ಸರಿಯಾಗಿ ಇರಿಸದೆ, ರೋಗಿಗೆ ಬೇಕಾಗುವಷ್ಟು ಆಮ್ಲಜನಕ ಸಿಗದಂತೆ ಆಗಿರುವುದೂ ಉಂಟು. ಒಂದು ಅನಿಲದ ಉರುಳೆ ಬರಿದಾದಾಗ ಬೇರೊಂದು ಅನಿಲದ ಉರುಳೆಯನ್ನು ಅಲ್ಲಿ ಜೋಡಿಸಿದ್ದರಿಂದ ರೋಗಿಗಳು ಸತ್ತಿದ್ದಾರೆ. ಉರುಳೆಗಳಲ್ಲಿ ಅರಿವಳಿಕ ಅನಿಲಗಳು, ಆಮ್ಲಜನಕ ಇತ್ಯಾದಿ ಬಹಳಷ್ಟು ಒತ್ತಡದಲ್ಲಿ ಇರುತ್ತವೆ. ಇದರಿಂದ ಎಷ್ಟೋ ವೇಳೆ ಇವುಗಳಲ್ಲಿ ಕೈ ಹಾಕಿ ಬಳಸಲೂ ಕಷ್ಟವಾಗಬಹುದು. ಉರುಳೆಯ ಕವಾಟಗಳು ಮುರಿದುಬಿದ್ದರೆ ಉರುಳೆ ಬಿರುಸಿನ ಆಕಾಶಬಾಣದಂತೆ ಕೋಣೆಯಲ್ಲೆಲ್ಲ ಉರುಳಾಡುತ್ತದೆ.

ಟ್ರೈಕ್ಲೋರೊಯೆತಿಲೀನಿನಂಥ ಹಲವಾರು ಅರಿವಳಿಕಗಳನ್ನು ಪೂರ್ತಿ ಅರಿವಳಿಸುವ ಪ್ರಮಾಣಗಳಲ್ಲಿ ಕೊಟ್ಟರೆ ಗುಂಡಿಗೆಯ ಬಡಿತವೇ ನಿಲ್ಲಬಹುದು. ಹೀಗೆ ತಾವಿನ ಅರಿವಳಿಕೆಗಳ ವಿಚಾರದಲ್ಲಾದರೋ ರಕ್ತದ ಹರಿವನ್ನು ಸೇರುವ ತಾವಿನ ಅರಿವಳಿಕಗಳ ಪ್ರಮಾಣ ಸೆಳವು ಬರಿಸಲೂ ಕೊನೆಗೆ ಗುಂಡಿಗೆ ಬಡಿವುದನ್ನೇ ನಿಲ್ಲಿಸಲೂ ಸಾಕಾಗಬಹುದು. ತಯೊಪೆಂಟೋನ್ ಸೋಡಿಯಂನಂಥ ಒಂದು ಬಾರ್ಬಿಟುರೇಟನ್ನು ರಕ್ತನಾಳಾಂತರ ಕೂಡಲೇ ಕೊಡುವುದರಿಂದ ಸೆಳವುಗಳನ್ನು ತಡೆಯಬಹುದು. ಸೆಳವಿನಲ್ಲಿ ಉಸಿರಾಡದಂತಾಗುವುದೇ ರೋಗಿ ಸಾಯಲು ಮುಖ್ಯ ಕಾರಣವೆಂಬ ನಂಬಿಕೆಯಿಂದ ಆಮ್ಲಜನಕವನ್ನೂ ಕೊಡಬಹುದು. ರಕ್ತದ ಒತ್ತಡವೂ ತೀರ ಅಪಾಯಕರವಾಗಿ ಕುಸಿಯಬಹುದು. ತರಬೇತು, ಕೈಚಳಕ ಇಲ್ಲದವರು ಅರಿವಳಿಸಿದರೆ ಈ ಅನಾಹುತಗಳು ಆಗುತ್ತವೆ. ಅನುಭವೀ ಅರಿವಳಿಕಗಾರನಿಂದ ಹೀಗೆಂದೂ ಆಗದು.

ತಾವಿನ ಅರಿವಳಿಕ ದ್ರಾವಣವನ್ನು ರೋಗಿ ಎಂಜಲೊಂದಿಗೆ ನುಂಗಿದರೂ ಗಂಟಲಲ್ಲಿ ಮೇಲ್ಮೈ (ಸರ್ಫೇಸ್) ಅರಿವಳಿಕವನ್ನು ಸಿಂಪಡಿಸುವುದರಿಂದ ಕೂಡ ಅಪಾಯ ಆಗಬಹುದು. ಏಕೆಂದರೆ ಹಾಗೆ ಸಿಂಪಡಿಸಲು ಬಳಸುವ ದ್ರಾವಣದ ಸಾಂದ್ರತೆ ತುಸು ಹೆಚ್ಚಾಗಿಯೇ ಇರುತ್ತದೆ. ಅಂದರೆ ಸ್ವಲ್ಪವೇ ದ್ರಾವಣದಲ್ಲಿ ಅರಿವಳಿಕ ವಸ್ತು ಹೊಲಿಕೆಯಲ್ಲಿ ಹೆಚ್ಚಾಗಿರುವುದು.

ಗೊತ್ತಾದ ಕೆಲವು ತಾವಿನ ಅರಿವಳಿಕಗಳಿಗೆ ಎಲ್ಲೋ ಕೆಲವರು ಬಲು ಸುಲಭವಾಗಿ ಈಡಾಗುವರು. ಅಂಥವರನ್ನು ಅಪಾಯದಿಂದ ದೂರವಿರಿಸಲು ಹೆಚ್ಚು ಎಚ್ಚರದಿಂದಿರಬೇಕು. ಅರಿವಳಿಕದೊಂದಿಗೆ ಎಪಿನೆಫ್ರೀನನ್ನು (ಅಡ್ರಿನಲೀನ್) ಸೇರಿಸಿದರೆ ಅನೇಕ ವೇಳೆ, ಅದನ್ನು ಸೇರಿಸದಿದ್ದರೆ ಆಗುವುದಕ್ಕಿಂತಲೂ ಹೆಚ್ಚು ಹೊತ್ತು ಒಂದೇ ತಾವಿನಲ್ಲಿ ಅರಿವಳಿಕ ಉಳಿವುದು. ಅಂದರೆ ಬೇಕಿರುವ ಒಂದೇ ಕಡೆ ಅರಿವಳಿಕದ ಪ್ರಭಾವ ಚನ್ನಾಗಿರುತ್ತದೆ. ಎಪಿನೆಫ್ರೀನ್ ರಕ್ತನಾಳವನ್ನು ಕುಗ್ಗಿಸುವುದರಿಂದ ಆ ಜಾಗಕ್ಕೆ ರಕ್ತದ ಹರಿವು ತಗ್ಗಿ, ತಾವಿನ ಅರಿವಳಿಕವನ್ನು ರಕ್ತ ಅಲ್ಲಿಂದ ಹೊರಸಾಗಿಸುವುದು ನಿಧಾನವಾಗುತ್ತದೆ. ಅದೇ ಹೊತ್ತಿನಲ್ಲಿ ಆ ಜಾಗದಿಂದ ರಕ್ತಸುರಿವುದೂ ತಗ್ಗುತ್ತದೆ. ಇದರಿಂದ ಶಸ್ತ್ರವೈದ್ಯನಿಗೆ ಎಷ್ಟೋ ಅನುಕೂಲ. ಆದರೂ ಶಸ್ತ್ರಕ್ರಿಯೆ ಆಗುವುದೆಂಬ ಅಂಜಿಕೆಯಿಂದ ಮೆಕ್ಕಲು ರೋಗಿಗಳಲ್ಲೆ ಎಪಿನೆಫ್ರೀನ್ ಒಂದಿಷ್ಟು ಮೈಯಲ್ಲೇ ತಯಾರಾಗುವುದು. ಅಂಥವರಿಗೆ ತಾವಿನ ಅರಿವಳಿಕದೊಂದಿಗೆ ಮತ್ತಷ್ಟು ಎಪಿನೆಫ್ರೀನನ್ನು ಸೇರಿಸಿದರೆ ತಡೆಯದೆ ಕುಸಿದು ಬೀಳುವರು.

**ಅರಿವಳಿಕದ ಆಯ್ಕೆ :** ಅರಿವಳಿಕವನ್ನು ಆಯುವುದರಲ್ಲಿ ಅನೇಕ ಅಂಶಗಳಿವೆ. ಒಂದು ಗೊತ್ತಾದ ವಸ್ತುವನ್ನೋ ವಿಧಾನವನ್ನೋ ಬಳಸುವುದನ್ನು ತಿಳಿದವರು ಆಸ್ಪತ್ರೆಯಲ್ಲಿ ಯಾರೂ ಇಲ್ಲದಿದ್ದಲ್ಲಿ ಅಂಥ ವಸ್ತುವನ್ನೂ ವಿಧಾನವನ್ನೂ ಬಳಸುವುದು ಸುಲಭವಲ್ಲ. ಶಸ್ತ್ರಕ್ರಿಯೆ ಆಗುವಾಗ ರೋಗಿಯ ಸ್ನಾಯುಗಳು ತೀರ ಸಡಿಲವಾಗಿರಬೇಕು. ಅದಕ್ಕಾಗಿ ಬಲವಾದ ಅರಿವಳಿಕವನ್ನೋ ಜೊತೆಗೆ ಸ್ನಾಯು ಸಡಿಲಕವನ್ನೋ ಕೊಡಬೇಕಾಗಬಹುದು. ಇಂದಿನ ಅರಿವಳಿಕೆಯಲ್ಲಿ ಸ್ನಾಯು ಸಡಿಲಕಗಳ ಪಾತ್ರ ಹಿರಿದು. ತಯೋಪೆಂಟೋನ್ ಸೋಡಿಯಂನಿಂದ ಸ್ನಾಯುಗಳು ಸಡಿಲಗೊಳ್ಳವು. ನೈಟ್ರಸ್ ಆಕ್ಸೈಡು, ಆಮ್ಲಜನಕಗಳಿಂದ ಇನ್ನೂ ಸರಿಯೆ. ಸಡಿಲತೆಗಾಗಿ ಸಕ್ಸಿನೈಲ್‌ಕೋಲಿನ್, ಟ್ಯೂಬೊಕ್ಯುರೇರಂಥ ಮದ್ದುಗಳ ಬಳಕೆಯಿಂದ ತೊಡಕಿಲ್ಲ. ಇವೆರಡು ಮದ್ದುಗಳಿಂದ ಅರಿವಳಿಕಗಳ ಬಳಕೆಯೇ ಬದಲಾಯಿಸಿದೆ.

ರಕ್ತನಾಳಾಂತರವಾಗಿ ಅರಿವಳಿಸುವುದು ಬಲು ಸುಲಭ. ಸಿರದೊಳಕ್ಕೆ ಸೂಜಿ ಹೊಕ್ಕಿತೆಂದರೆ ತೀರಿತು. ದ್ರಾವಣವನ್ನು ಒಳಹೊಗಿಸಲು ಎಂಥ ಚಾಲಾಕುತನವೂ ಬೇಕಿಲ್ಲ; ಆದರೆ ಎಷ್ಟು ಮದ್ದನ್ನು ಎಷ್ಟುಬೇಗನೆ ಕೊಡಬೇಕೆಂದು ಸ್ವಲ್ಪವಾದರೂ ಅಂದಾಜು ಮಾಡುವಂತಿರಬೇಕು. ಶಸ್ತ್ರಕ್ರಿಯೆ ಮಾಡಿಸಿಕೊಳ್ಳುವ ಹಸುಗೂಸುಗಳಿಗೆ ಗುದನಾಳ

ಅರಿವಳಿಕೆಯೇ ಸರಿ. ಮೆಂಡಿಕೆಗಳು (ಟಾನ್ಸಿಲ್ಸ್), ಮೂಗಳೆಗಳನ್ನು (ಅಡೆನಾಯ್ಡ್ಸ್) ತೆಗೆಸಬೇಕಿದ್ದರಂತೂ ಇನ್ನೂ ಅನುಕೂಲ. ಏಕೆಂದರೆ ಆಗ ಮಗು ಹಾಸಿಗೆಯಲ್ಲೋ ತೊಟ್ಟಿಲಲ್ಲೋ ಮದ್ದಿನಿಂದ ಮಲಗಿದ್ದಂತೆಯೇ ಶಸ್ತ್ರಕ್ರಿಯೆ ಕೋಣೆಗೆ ಸಾಗಿಸಿ, ಅಲ್ಲಿ ಉಸಿರೆಳೆತದ ಅರಿವಳಿಕವನ್ನು ಕೊಡಬಹುದು. ಉಸಿರಾಟ ಸಲೀಸಾಗಲೆಂದು ಉಸಿರ್ನಾಳ ದೊಳಗೆ ಒಂದು ರಬ್ಬರ್ ಕೊಳವೆಯನ್ನು ತೂರಿಸಿಡುವುದು ಸಾಮಾನ್ಯ. ಮಗು ತನ್ನ ಕೋಣೆಗೆ ಹಿಂದಿರುಗಿದಾಗ, ಅಲ್ಲಿಂದ ಹೊರಟದ್ದೇ ಅದಕ್ಕೆ ತಿಳಿಯದು. ಇದರಿಂದ ಶಸ್ತ್ರಕ್ರಿಯೆ ಆಗುವುದರ ಅಂಜಿಕೆಯೇ ಹುಟ್ಟದು.

ಇಷ್ಟಾದರೂ, ಮೈಯೆಲ್ಲದರ ಅರಿವಳಿಕವನ್ನು ಕೊಡಲು ಅರಿವಳಿಕೆಗಾರ ಹಿಂದೆಗೆವ ಸಂದರ್ಭಗಳೂ ಇವೆ. ಉದಾಹರಣೆಗೆ, ಒಬ್ಬ ರೋಗಿಯ ಗುಂಡಿಗೆ ತೀರ ಕ್ರಮಗೆಟ್ಟಿರುವಾಗ, ಆಮ್ಲಜನಕದ ಕೊರತೆಯಾದರೆ ಇಲ್ಲವೇ ಅವನ ರಕ್ತದಲ್ಲಿ ಸಾಕಷ್ಟು ಆಮ್ಲಜನಕ ಇರದಿದ್ದರೆ ಗುಂಡಿಗೆಯೇ ನಿಂತುಬಿಡಬಹುದು. ಅದೇ ಬೆನ್ನು ಹುರಿಯ ಅರಿವಳಿಕೆಯಾಗಿದ್ದರೆ, ರಕ್ತದ ಒತ್ತಡ ತೀರ ಇಳಿಯದ ತನಕ ಯಾವ ತೊಂದರೆಯೂ ಕಾಣದು. ಆದರೆ ಇಂಥ ಅರಿವಳಿಕೆಯಲ್ಲಿ ಎದೆ ಗೂಡಿನ ಶಸ್ತ್ರಕ್ರಿಯೆ ಸಾಧ್ಯವಿಲ್ಲ. ಏಕೆಂದರೆ ಎದೆ ಮಟ್ಟಕ್ಕೇರಿಸಿದರೆ, ವಪೆಯೂ ಎದೆಗೂಡಿನ ಸ್ನಾಯುಗಳೂ ಕುಸಿದುಬಿಟ್ಟು ಉಸಿರು ನಿಂತು ಹೋಗುತ್ತದೆ.

**ಬಳಕೆಯ ವಿಧಾನಗಳು :** ಅರಿವಳಿಕೆಯೊಂದಿಗೆ ಬಹುವಾಗಿ ಬಳಸುವ ಕ್ರಮವೆಂದರೆ, ರೋಗಿಗೆ ಚೆನ್ನಾಗಿ ವಿಶ್ರಾಂತಿ ಸಿಗುವಂತೆ ಶಸ್ತ್ರಕ್ರಿಯೆಯ ಹಿಂದಿನ ರಾತ್ರಿ ಹೊತ್ತಿನ ಮದ್ದು ಕೊಡುಗೆ, ಕೆಮ್ಮನ್ನು ತಪ್ಪಿಸಲು, ಹಿಂದಿನ ಸಂಜೆಯಿಂದ ಮಾರನೆಯ ದಿನ ಶಸ್ತ್ರಕ್ರಿಯೆ ಆಗುವ ತನಕ ಹೊಗೆ ಬತ್ತಿ ಸೇದಕೂಡದೆಂದು ರೋಗಿಗೆ ಹೇಳಲಾಗುತ್ತದೆ. ಆಮೇಲೆ ಶಸ್ತ್ರಕ್ರಿಯೆಯ ಮುನ್ನ ಸಾಕಾದಷ್ಟು ಮದ್ದು ಕೊಡುವುದರಿಂದ ರೋಗಿ ಸ್ವಲ್ಪವೂ ಉದ್ರೇಕಗೊಳ್ಳದೆ ತುಸು ಮಂಪರ ಬಂದ ಹಾಗಿರಬಹುದು. ಹೀಗೆ ಮೊದಲೇ ಕೊಟ್ಟ ಮದ್ದುಗಳಿಂದ ನೋವಿನ ಭಾರ ಆಗಲೇ ಎಷ್ಟೋ ಇಳಿದಿರುವುದು. ಶಸ್ತ್ರಕ್ರಿಯೆ ಕೋಣೆಯಲ್ಲಿ ರಕ್ತನಾಳಾಂತರ ತಯೋಪೆಂಟೋನ್ ಸೋಡಿಯಂ ಕೊಟ್ಟು, ಸಕ್ಸಿನೈಲ್ ಕೋಲೀನನ್ನೂ (ಸ್ಕೋಲೀನ್) ಕೊಡುತ್ತಾರೆ. ಹಲವೇಳೆ ಉಸಿರ್ನಾಳದೊಳಗೆ ರಬ್ಬರ್ ಕೊಳವೆಯನ್ನು ಇರಿಸುವರು. ಈ ಕೊಳವೆಯ ಮೂಲಕ ನೈಟ್ರಸ್ ಆಕ್ಸೈಡ್, ಆಮ್ಲಜನಕಗಳು ಸಾಗುತ್ತಿರುತ್ತವೆ, ತಯೊಪೆಂಟೋನ್ ಸೋಡಿಯಮ್ಮನ್ನೂ ಟ್ಯೂಬೊಕ್ಯುರಾರೆನ್ನೂ ಆಗಾಗ್ಗೆ ತುಸು ಕೊಡುತ್ತಿರಬಹುದು. ಉಸಿರಾಟ ತೀರ ಇಳಿವುದನ್ನು ಬೇರೆ ಮದ್ದುಗಳಿಂದ ತಡೆಯಬಹುದು.

ಇಂಗ್ಲೆಂಡಿನಲ್ಲಿ, ಜೆ.ಟಿ. ಕ್ಲೋವರ್ (1825–82) ಬೇಗನೆ ಅರಿವಳಿಸುವ, ಬಿಟ್ಟ ಉಸಿರನ್ನೆ ಮತ್ತೆ ಸೇದಿಸುವ ಸಲಕರಣೆಯನ್ನು ತಯಾರಿಸಿದ, ನೈಟ್ರಸ್ ಆಕ್ಸೈಡು ಆಮ್ಲಜನಕಗಳನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ಬೆರೆಸಿಡುವ ಸಲಕರಣೆಯನ್ನು ಕೊಟ್ಟವನು ಸರ್ ಫ್ರೆಡರಿಕ್ ಹೆವಿಟ್ (1892). ಅರಿವಳಿಕೆ ಮೊದಲು ಬಳಕೆಗೆ ಬಂದಾಗ, ರೋಗಿಯ ಮೊಗದ ಮೇಲಿರಿಸಿದ ತಂತಿಕಟ್ಟಿಗೆ ಹೊದಿಸಿದ ಜಾಳರಿವೆಯ (ಗಾಜ) ಮುಸುಕಿನ ಮೇಲೆ ಕ್ಲೋರೋಫಾರ್ಮ್, ಈಥರನ್ನು ಸುರಿವುದು ವಾಡಿಕೆಯಲ್ಲಿತ್ತು. ಈಚೆಗೆ ಹೊಸ ಕಾರಕಗಳು ಬಂದ ಮೇಲೆ ಮೈಯೆಲ್ಲದರ ಅರಿವಳಿಕೆಯನ್ನು ತೋರಬಲ್ಲ ಸುಧಾರಿಸಿದ ಯಂತ್ರಗಳು ಬಳಕೆಗೆ ಬಂದಿವೆ.

**ಸಂಬಂಧಿತ ಕಾರಕಗಳು :** ಬಾರ್ಬಿಟುರೇಟಿಂದ ವಿಷವೇರಿದ್ದಾಗ, ಅದರ ಒಂದು ವಿಷಮುರಿಯಾಗಿ ಗ್ಲುಟೇರಿಮೈಡಿನ (ಮೆಗಿಮೈಡ್) ಬಳಕೆಯನ್ನು ಷಾ (1854) ಜಾರಿಗೆ ತಂದ. ಶಸ್ತ್ರಕ್ರಿಯೆಯ ಅರಿವಳಿಕೆಯನ್ನು ಕೊನೆಗೊಳಿಸುವಾಗ, ಇದು ಉಸಿರಾಟವನ್ನು ಚೋದಿಸುವುದರಿಂದ ಅರಿವಳಿಕೆಯಲ್ಲೂ ಈಚೆಗೆ ಬಳಕೆಗೆ ಬಂದಿದೆ. ಬಾರ್ಬಿಟುರೇಟುಗ ಳಿಂದ ಅರಿವಳಿಸುವುದು ಗೊತ್ತಿರುವುದರೊಂದಿಗೆ ರಕ್ತನಾಳಾಂತರ ಅರಿವಳಿಕೆಯನ್ನು ಇಂಥ ಇನ್ನೊಂದು ಬಾರ್ಬಿಟುರೇಟಿಂದಲೇ ಕೊಡುವುದು ಸಾಧ್ಯ ಎನ್ನುವುದು ಒಂದು ಹೊಸ ಕಲ್ಪನೆಗೆ ಎಡೆಗೊಟ್ಟಿತು. ಇಂಥ ಕಟ್ಟು ಮದ್ದುಗಳು (ಆಂಟಿಡೋಟ್ಸ್) ಇನ್ನೂ ಇವೆ. ಇವುಗಳ ಬಳಕೆಯಿಂದ ಹಿಂದೆ ಕೊಡುತ್ತಿದ್ದ ಪ್ರಮಾಣಗಳಿಗಿಂತಲೂ ಇನ್ನೂ ಹೆಚ್ಚಿನ ಪ್ರಮಾಣಗಳಲ್ಲಿ ಅಪಾಯ ತೊಡಕುಗಳಿರದೆ ಅನೇಕ ಗೊತ್ತಾದ ಅರಿವಳಿಕ ಮದ್ದುಗಳ ಕೊಡುಗೆ ಸಾಧ್ಯವಾಯಿತು. ಉಸಿರಾಟದ ತುಸು ಚೋದಕವಾದ ಅಮಿಫಿನಜೋಲಿಂದ ತೀವ್ರವಾದ (ಅಕ್ಯೂಟ್) ನೋವನ್ನು ತಡೆಯಲು, ನೋವರಿವಳಿಕ ಮದ್ದುಗಳನ್ನು ಇನ್ನೂ ಬೇಕಾದಷ್ಟು ಕೊಡಲೂ ಸಾಧ್ಯ.

ಕೆಲವು ತಾಂತ್ರಿಕ ಉಪಾಯಗಳಿಂದ ಹೆಚ್ಚಿನ ಅನುಕೂಲವಿದೆ. ಉಸಿರ್ನಾಳದೊಳಕ್ಕೆ ತೂರಿಸುವ ಕೊಳವೆ ಇಳಿದಿರುವ ಮಟ್ಟವನ್ನು ಸೂಚಿಸುವ ಗೆರೆಗಳನ್ನು ಹೊರಗೆ ಗುರುತಿಸಿರುವುದುಂಟು. ದನಿತಂತುಗಳ ನಡುವೆ ಇದು ಇದ್ದರೆ ಕೊಳವೆ ಮೇಲಿನ ಗುರುತು ಹೊರಗಾಣುತ್ತಿರುವುದು. ಹಿಂದಿನ ಕಾಲದಲ್ಲಿ ಈ ಗುರುತಿಲ್ಲದೆ ಕೊಳವೆಯನ್ನು ತೀರ ಆಳಕ್ಕೆ ತಳ್ಳುತ್ತಿದ್ದರು.

ಅನ್ನನಾಳದ ಮೂಲಕ ಸ್ಟೆತಸ್ಕೋಪನ್ನೂ (ಎದೆದರ್ಶಕ) ತೂರಿಸಿಡುವುದರಿಂದ ಗುಂಡಿಗೆ, ಪುಪ್ಪುಸಗಳು ಇಲ್ಲವೇ ಇವೆಲ್ಲವಲ್ಲೂ ಆಗುವ ತೊಡುಕುಗಳನ್ನು ಕೂಡಲೇ ಕಂಡುಕೊಳ್ಳುವುದು ಬಲು ಅನುಕೂಲ.

ಅರಿವಳಿಕಗಳಿಗೆ ಸಂಬಂಧಿಸಿದ ಇತರ ಮದ್ದುಗಳೂ ಇವೆ. ಪ್ರೋಕೇನ್ ಹೈಡ್ರೊಕ್ಲೋರೈಡಿಗೆ ಸಲ್ಫೋನಮೈಡ್ ರೋಧಕ ಪ್ರಭಾವವಿದೆ. ಅಲ್ಲದೆ ಸಲ್ಫೊರಮೈಡ್ ರೋಗಚಿಕಿತ್ಸೆ ಪಡೆವವರಲ್ಲಿ ಉಸಿರೆಳೆತದ ಅರಿವಳಿಕಗಳನ್ನು ಚೆನ್ನಾಗಿ ಕೊಡಬಹುದು.

ಅರಿವಳಿಕಗಳೊಂದಿಗೆ 1942ರಲ್ಲಿ ಮೊದಲು ಬಳಸಿದ ಕ್ಯುರಾರಿ (ಡಿ–ಟ್ಯೂಬೊಕ್ಯುರ ರೀನ್, ಇಂಟೊಕಾಸ್ಟ್ರಿನ್) ಅರಿವಳಿಕವಲ್ಲ, ಇದು ಸ್ನಾಯುಗಳನ್ನು ಮಾತ್ರ ಇನ್ನೂ ಚೆನ್ನಾಗಿ ಸಡಿಲಗೊಳಿಸುವುದು. ಇದನ್ನು ರಕ್ತನಾಳಾಂತರವಾಗಿಯೂ ಸ್ನಾಯುವಿನಲ್ಲೂ ಕೊಡಬಹುದು. ಬಾಯಲ್ಲಿ ನುಂಗಿದರೆ ಫಲವಿಲ್ಲ. ಪ್ರಮಾಣ ಮೀರಿದರೆ, ಇಲ್ಲವೇ ಬೇಗನೆ ಚುಚ್ಚಿಬಿಟ್ಟರೆ ಉಸಿರಾಟ ಕುಂದುತ್ತದೆ. ಇಲ್ಲವೇ ನಿಂತೇ ಹೋಗುವುದು, ಕೃತಕ ಉಸಿರಾಟವೂ ನಿಯೋಸ್ಟಿಗ್ಮಿನೂ, ಕೂಡಲೇ ವರ್ತಿಸುವ ಟೆನ್ಸಿಲಾನೂ ಟ್ಯೂಬೊಕ್ಯುರಾರೀನಿಗೆ ಕಟ್ಟುಮದ್ದುಗಳು (ಆಂಟಿಡೊಟ್ಸ್), (ನೋಡಿ– ಕ್ಯುರೇರ್)

ಅರಿವಳಿಕೆಗೂ ಜೀವಾತುಗಳಿಗೂ ಇರುವ ಸಂಬಂಧದ ವಿಷಯ ಶೋಧನೆಯಾಗಿದೆ. ಅರಿವಳಿಸಲು ಬೇಕಾಗುವ ಹೊತ್ತು ತೇರಿಕೊಳ್ಳುವ ಹೊತ್ತೂ ಸಿ ಜೀವಾತುಕೊರೆಯಲ್ಲಿ ಹೆಚ್ಚುತ್ತವೆ, ಜೀವಕಣದ ಉಸಿರಾಟದ ತಂತ್ರ ಚೆನ್ನಾಗಿ ಕೆಲಸಮಾಡುತ್ತಿರಲು ರಿಬೋಫ್ಲೇವಿನ್ ಜೀವಾತು ಬೇಕು.

ಶಸ್ತ್ರಕ್ರಿಯೆ ಆಗುವಾಗ ಆಗಬಹುದಾದ, ಅದರ ಮುಂಚೆಯೂ ಇರುವ ಸುಸ್ತು ಬೀಳಿಸುವ ಆಘಾತವನ್ನೂ (ಷಾಕ್) ಆಳವಾಗಿ ಪರಿಶೀಲಿಸಲಾಗಿದೆ. ಅದನ್ನು ತಪ್ಪಿಸಲು ಚಿಕಿತ್ಸೆ ಮಾಡಲೂ ರೋಗಿಯನ್ನು ಚೆನ್ನಾಗಿ ಚೇತರಿಸುವ ಸಾಧನಗಳಿವೆ. ರಕ್ತತುಂಬಿಕೆ ರಕ್ತ ರಸದ (ಪ್ಲಾಸ್ಮ) ತುಂಬಿಕೆ, ರಕ್ತರಸದ ಬದಲಿ ಇಲ್ಲವೇ ರಕ್ತರಸವನ್ನು ಹಿಗ್ಗಿಸುವುವು. ಇವೆಲ್ಲ ಶಸ್ತ್ರಕ್ರಿಯೆಯಿಂದೇಳುವ ಆಘಾತವನ್ನು ತೀರ ತಗ್ಗಿಸಿವೆ.

ಹಲವೇಳೆ ಅನಿಲರೋಗಚಿಕಿತ್ಸೆ ಅರಿವಳಿಕೆಗಾರನ ಉಸ್ತುವಾರಿಯಲ್ಲಿ ಆಗುತ್ತದೆ. ಅರಿವಳಿಕೆ ಮುಗಿದಮೇಲೆ ಆಮ್ಲಜನಕ, ಇಂಗಾಲದ ಡೈಯಾಕ್ಸೈಡೊಂದಿಗೆ ಆಮ್ಲಜನಕ ಇಲ್ಲವೇ ಹೀಲಿಯಂ ಕೊಡುವುದರಿಂದ ತಾಕುತೊಡಕುಗಳನ್ನು ತಪ್ಪಿಸುವುದರಲ್ಲಿ ಅನುಕೂಲ, ಹೀಲಿಯಂ, ಆಮ್ಲಜನಕ, ಇಂಗಾಲದ ಡೈಯಾಕ್ಸೈಡುಗಳು ಅನಿಲರೋಗ ಚಿಕಿತ್ಸೆಯಲ್ಲೇ ಅಲ್ಲದೆ ಅರಿವಳಿಕಗಳೊಂದಿಗೂ ಬಳಕೆಗೆ ಬರುತ್ತವೆ.

ನಿದಾನದಲ್ಲಿ, ಶಸ್ತ್ರಕ್ರಿಯೆ ಮುಂಚೆಯೂ ಆಮೇಲೂ ಉಸಿರ್ನಾಳ ಪಂಗುಸಿರ್ನಾಳಗ ಳಿಂದ (ಬ್ರಾಂಕಸ್) ಲೋಳೆ ದ್ರವವನ್ನು ಹೀರಿ ತೆಗೆವುದರಿಂದ ಪುಪ್ಪುಸದ ಕಟ್ಟುನಿಟ್ಟಿನ ತಾಕುತೊಡಕುಗಳನ್ನು ತಗ್ಗಿಸಬಹುದು. ಶಸ್ತ್ರಕ್ರಿಯೆ ಆದ ಕೂಡಲೇ ರೋಗಿಯನ್ನು ಗಮನಿಸುತ್ತಿರಲು, ಕಣ್ಣರಿಕೆಗಾಗಿರುವ ಬೇರೆ ಕೋಣೆಗಳು ಕೆಲವು ಆಸ್ಪತ್ರೆಗಳಲ್ಲಿವೆ. ರೋಗಿಯ ರಕ್ತ ಸುತ್ತಾಟ ಉಸಿರಾಟಗಳನ್ನು ಚೆನ್ನಾಗಿ ಬಲ್ಲವನಾದ್ದರಿಂದ ಅರಿವಳಿಕೆಗಾರನೇ ಹಲವೇಳೆ ಮರುಚೇತರಿಸುವನು. ಅರಿವಳಿಕೆಶಾಸ್ತ್ರಕ್ಕೆ ಸಂಬಂಧಿಸಿದ ಅಂಗಕೆಲಸಶಾಸ್ತ್ರದಲ್ಲಿನ ಶೋಧನೆಗ ಳಿಂದ ಎಷ್ಟೋ ವಿಷಯಗಳು ಗೊತ್ತಾಗುತ್ತಿವೆ. ಇಂದಿನ ಅರಿವಳಿಕೆ ಶಾಸ್ತ್ರದ ಮುನ್ನಡೆಗಳಿಂದಾಗಿ ಈಗ ಯಾವ ಚಿಂತೆ, ಕಳವಳ, ಅಂಜಿಕೆ, ನೋವು ಆಮೇಲಿನ ತೊಡಕುಗಳು ಇವೇನನ್ನೂ ಅನುಭವಿಸದೆ ರೋಗಿ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಬಹುದು. (ಡಿ.ಎಸ್.ಎಸ್.)

**ಅರಿವು**[1] **:** ಎಂದರೆ ತಿಳಿವು, ಜ್ಞಾನ ಎಂದು ಸಾಮಾನ್ಯವಾದ ಅರ್ಥ. ಮನಶ್ಶಾಸ್ತ್ರದ ಪ್ರಕಾರ ಅರಿವು (ಕಾಗ್ನಿಷನ್); ಸಂವೇದನೆ, ಭಾವನೆ, ಅನುಭೂತಿ (ಫೀಲಿಂಗ್); ಮತ್ತು ಸಂಕಲ್ಪ, ಇಚ್ಛಾಶಕ್ತಿ, ಪ್ರೇರಣೆ (ಕೊನೇಷನ್) – ಇವು ಪ್ರಜ್ಞೆಯ (ಕಾನ್ಷಸ್‌ನೆಸ್) ಮೂರು ಅಂತಿಮಕ್ರಿಯೆಗಳು. ಜೀವನದಲ್ಲಿ ಇವನ್ನು ಪ್ರತ್ಯೇಕವಾಗಿ ಕಾಣುವುದು ಕಷ್ಟ ಎಲ್ಲ ಕಡೆಯೂ ಇವು ಮೂರು ಒಟ್ಟಿಗೇ ಕೆಲಸ ಮಾಡುತ್ತವೆ. ಒಂದೊಂದು ಕಡೆ ಒಂದೊಂದರ ಪ್ರಭಾವ ಹೆಚ್ಚಿರುವುದರಿಂದ ಅದನ್ನು ಗುರುತಿಸಲು ಸಾಧ್ಯ. ಅನುಭೂತಿ ಮತ್ತು ಇಚ್ಛಾಶಕ್ತಿಗಳಿಲ್ಲದೆ ಉಂಟಾಗುವ ಪ್ರಜ್ಞೆಯನ್ನು ಅರಿವು ಎನ್ನಬಹುದು.

ಎಲ್ಲ ಪ್ರಾಣಿಗಳ ಮೂಲ ಪ್ರವೃತ್ತಿ ಹೊರಗಿನ ಜಗತ್ತನ್ನು ಅರಿಯುವುದು, ಪರಿಸರ ಮತ್ತು ಜೀವಗಳ ನಡುವೆ ಇರುವ ಅನಿವಾರ್ಯ ಸಂಬಂಧದ ಒಂದು ಸಾಧನವಾಗಿ ಅರಿವು ಅಥವಾ ಬೋಧೆ ಜೀವಿಯ ಪ್ರಗತಿಪಥದಲ್ಲಿ ಕಾಣಿಸಿಕೊಳ್ಳುತ್ತದೆ. ಅಮೀಬದಂಥ ಏಕಾಣುಜೀವಿಯೂ ಬಾಹ್ಯ ಜಗತ್ತನ್ನು ಅರಿಯಬಲ್ಲದು. ಈ ಅರಿವಿನ ಅಗತ್ಯ ಬರಬರುತ್ತ ಹೆಚ್ಚಿದಂತೆಲ್ಲ ಅದನ್ನು ಸಮರ್ಪಕವಾಗಿ ಸಿದ್ಧಿಸಿಕೊಳ್ಳುವ ಸಾಧನಗಳು ಕಾಣಿಸಿಕೊಂಡುವು. ಇಂದ್ರಿಯಗಳು ಈ ಅರಿವಿನ ಸಾಧನೆಯಲ್ಲಿ ಒಂದು ವಿಧಾನ. ವಿಲಿಯಂ ಜೇಮ್ಸ್ ಹೇಳಿದಂತೆ ಅರಿವಿನ ದಾರಿಯಲ್ಲಿ ಮೊದಲ ಹೆಜ್ಜೆ ಈ ಇಂದ್ರಿಯಾನುಭವ(ಸೆನ್ಸೇಷನ್). ಆದ್ದರಿಂದ ಇಂದ್ರಿಯಗಳನ್ನು ಜ್ಞಾನದ್ವಾರಗಳು ಎಂದೂ ಕರೆಯುತ್ತಾರೆ. ಇಂದ್ರಿಯಾನುಭವಗಳು ಮೂಲಭೂತವಾದ ಮಾನಸಿಕ ಪ್ರಕಾರಗಳು ಎಂದು ಟಿಚ್ನರ್ ಬಣ್ಣಿಸಿದ; ಅರಿವಿನ ರಚನೆ ಇಂದ್ರಿಯಾನುಭವಗಳ ಮೂಲಕ ಆಗುತ್ತದೆಂಬುದು ಅವನ ವಾದ. ಮನಸ್ಸಿನ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಇಂದ್ರಿಯಗಳನ್ನು ಅರ್ಥಮಾಡಿಕೊಳ್ಳಬೇಕೆಂಬುದು ಅವನ ಅಭಿಪ್ರಾಯ. ಅಂತೂ ಇಂದ್ರಿಯಗಳನ್ನು ದಾಟಿದರೆ ಆಂತರಿಕ, ದೈಹಿಕ ರಚನೆಯಲ್ಲಿ ಗ್ರಾಹಕಾಂಗಗಳು (ರಿಸೆಪ್ಟರ್) ಇಂದ್ರಿಯಸಂಭೃತವಾದ ವಿವರಗಳನ್ನು ಸ್ವೀಕರಿಸಿ ಮನಸ್ಸಿನ ಮುಂದಿಟ್ಟು ಜ್ಞಾನಕ್ಕೆ ವಿಷಯವನ್ನಾಗಿ ಮಾಡುತ್ತವೆ.

ಜೀವಂತವಾಗಿರುವ ಪ್ರಾಣಿ ಹೊರಗಣ ಜಗತ್ತಿನಿಂದ ಬರುವ ಪ್ರಚೋದಕ ವಿವರಗಳಿಗೆ ಸಮರ್ಪಕವಾಗಿ ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆಯಷ್ಟೆ. ಜೀವಿಯಿಂದ ಜಗತ್ತಿಗೆ ಹರಿಯುವ ಪ್ರವಾಹಗಳಿಗೆ ಪ್ರವೃತ್ತಿಕ್ರಿಯೆ, ಪ್ರತಿಕ್ರಿಯೆ (ರೆಸ್ಪಾನ್ಸ್) ಎಂದರೆ ಜಗತ್ತಿನಿಂದ ಜೀವಿಗೆ ಹರಿಯುವ ಪ್ರವಾಹಗಳಿಗೆ ಅರಿವು , ಬೋಧೆ ಎನ್ನುತ್ತಾರೆ. ಪ್ರತಿಕ್ರಿಯೆ ಸಮರ್ಪಕವಾಗಿ ಇರಬೇಕಾದರೆ ಅರಿವು ಪ್ರೌಢವಾಗಿರಬೇಕು. ಹಾಗೆಂದೇ ಪ್ರಾಣಿಗಳು ವಿಕಾಸ ಹೊಂದುವಾಗ ಸನ್ನಿವೇಶ ಜಟಿಲಗೊಂಡು ಪ್ರತಿಕ್ರಿಯೆ ಕ್ಲಿಷ್ಟವಾಗಲು ಅರಿವಿನ ಪ್ರಕಾರಗಳೂ ಪ್ರೌಢವಾಗುತ್ತವೆ. ಅಮೀಬದ ಅರಿವಿಗೂ ಮನುಷ್ಯನ ಅರಿವಿಗೂ ಮೂಲಭೂತವಾದ ಪ್ರಯೋಜನ ಒಂದೇ ಇದ್ದರೂ ಅವುಗಳ ರೀತಿ ರಿವಾಜು ವಿಭಿನ್ನ. ಮಾನವನಲ್ಲಿ ಇಂದ್ರಿಯದ್ವಾರಗಳು ಹೆಚ್ಚಾಗಿರುವುದು ಮಾತ್ರವಲ್ಲ, ಅವುಗಳ ಸಾಮರ್ಥ್ಯವೂ ಹೆಚ್ಚಾಗಿದೆ. ಮನಸ್ಸಿನ ಕೌಶಲ ಹೆಚ್ಚಿದೆ. ಸಂವೇದನೆಗಳ ಇಂಗಿತವನ್ನು ಪರಿಷ್ಕಾರವಾಗಿ ಅರಿಯುವ ವ್ಯವಧಾನ ಮನುಷ್ಯನ ವೈಶಿಷ್ಟ್ಯ ಎಂದರೆ ಉತ್ಪ್ರೇಕ್ಷೆಯಲ್ಲ. ಈ ಕಾರಣದಿಂದಲೇ ಮನುಷ್ಯ ಪ್ರಕೃತಿಯ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಶಕ್ತನಾಗಿರುವುದು. ಅರಿವಿನ ಮೇರೆಯ ವಿಸ್ತರಣದೊಂದಿಗೆ ಪ್ರಗಲ್ಭತೆಯೂ ಸೇರಿದೆ.

ಜಗತ್ತಿನ ಪ್ರಚೋದನೆಗಳಿಗೆ ಪ್ರತಿಕ್ರಿಯೆಯನ್ನು ಕೈಗೊಳ್ಳಲು ಮನುಷ್ಯನಿಗೆ ಇಂದ್ರಿಯಸ್ಥಾನಗಳು, ನರಮಂಡಲ ವ್ಯವಸ್ಥೆ, ಕ್ರಿಯಾಸಮರ್ಥವಾದ ಸ್ನಾಯು, ಮಾಂಸಖಂಡ–ಮುಂತಾದವು ನೆರವು ನೀಡುತ್ತವೆ. ಮನುಷ್ಯ ಜಾಗೃತನಾಗಿರುವಾಗೆಲ್ಲ ಬಾಹ್ಯವಸ್ತುಗಳಿಂದ ಅವಿರತವಾದ ಪ್ರಚೋದನೆಗಳಿಗೆ ಈಡಾಗುತ್ತಾನೆ. ಈ ಪ್ರಚೋಚನೆಯೆಂಬುದು ಕ್ರಿಯಾಶಕ್ತಿಯ (ಎನರ್ಜಿ) ಹಲವು ಪ್ರಕಾರಗಳಂತೆ ಇಂದ್ರಿಯಗಳನ್ನು ಮುಟ್ಟಿ ಸಂವೇದನೆಗಳನ್ನು ಉದ್ಬೋಧನೆಗೊಳಿಸುತ್ತವೆ. ಒಂದೊಂದು ಇಂದ್ರಿಯ ಒಂದೊಂದು ಬಗೆಯ ಪ್ರಚೋದನೆಯನ್ನು ಗ್ರಹಣ ಮಾಡಲು ಸಮರ್ಥವಾಗಿರುತ್ತದೆ. ಕಣ್ಣು ಬೆಳಕನ್ನು, ಕಿವಿ ಶಬ್ದವನ್ನು , ಚರ್ಮ ಸ್ಪರ್ಶವನ್ನು, ಮೂಗು ವಾಸನೆಯನ್ನು ಗ್ರಹಿಸುತ್ತವೆ. ಹೀಗೆ ಇಂದ್ರಿಯಗಳಿಗೆ ನಿಯತವ್ಯಾಪಾರವಿದೆ. ಇವೆಲ್ಲ ಅರಿವಿನ ಪ್ರಕಾರಗಳೇ. ಸಾಮಾನ್ಯವಾಗಿ ನಾವು ಯಾವುದಾದರೊಂದು ವಸ್ತುವನ್ನು ಗ್ರಹಿಸುವಾಗ ಹಲವಾರು ಇಂದ್ರಿಯಗಳು ಒಟ್ಟಿಗೆ ಕೆಲಸ ಮಾಡುತ್ತವೆ. ಪ್ರತ್ಯಭಿಜ್ಞೆಯಲ್ಲಂತೂ (ರೆಕಾಗ್ನಿಷನ್) ನಾನಾ ಇಂದ್ರಿಯಾರ್ಥಗಳ ಸಮಷ್ಟಿವ್ಯಾಪಾರವಿರುತ್ತದೆ. ಇಂದ್ರಿಯಗಳು ಮಾತ್ರ ಕೆಲಸ ಮಾಡಿದರೆ ಅರಿವು ಮೂಡುವುದಿಲ್ಲ. ಇಂದ್ರಿಯಗಳಿಂದ ಸಿದ್ಧವಾದ ಅನುಭವಗಳಿಗೆ ಅರ್ಥವನ್ನು ಸೇರಿಸಿ ಪ್ರತ್ಯಕ್ಷಾನುಭವ (ಪರ್ಸೆಪ್ಷನ್) ಆದಾಗಲೇ ಅರಿವು ಪೂರ್ಣವಾಗುವುದು (**ನೋಡಿ– ಪ್ರತ್ಯಕ್ಷಾನುಭವ**). ಆದರೆ ಈ ಇಂದ್ರಿಯಾನುಭವ ಎಲ್ಲಿ ಯಾವಾಗ, ಬೋಧೆಯ ಸ್ಥಿತಿಯನ್ನು ಮುಟ್ಟುತ್ತದೆ ಎಂಬುದು ಶಾಸ್ತ್ರಕ್ಕೂ ಮನಶ್ಶಾಸ್ತ್ರಕ್ಕೂ ಸಮನಾದ ಸಮಸ್ಯೆ. ಇದು ಇನ್ನೂ ಸಮರ್ಪಕವಾಗಿ ಪರಿಹಾರವಾಗಿಲ್ಲ.

ಅರಿವಿನ ಸಮಸ್ಯೆ ತತ್ತ್ವಶಾಸ್ತ್ರದಿಂದಲೇ ಮನಶ್ಶಾಸ್ತ್ರಕ್ಕೆ ಬಂದ ದತ್ತಿ. ಕಾಗ್ನಿಷನ್ ಎಂಬ ಇಂಗ್ಲಿಷಿನ ಪದ ಗ್ನಾಸಿಸ್ ಎಂಬ ಧಾತುವಿನಿಂದ ಬಂದುದು. ಇದಕ್ಕೆ ಸಂಸ್ಕೃತದ ಜ್ಞಾ ಧಾತು ಸಮಾನ; ಜ್ಞಾ ಎಂದರೆ ತಿಳಿಯುವುದು ಎಂದರ್ಥ. ಆದರೆ ಇಂಗ್ಲಿಷಿನ ಕಾಗ್ನಿಷನ್ ಪದದಲ್ಲಿ ಸಹಕಾರದಿಂದ, ಒಡನೆ ಎಂಬರ್ಥದ ಕೊ ಎಂಬ ಉಪಸರ್ಗಕ್ಕೂ ಪ್ರಾಧಾನ್ಯವಿದೆ. ಒಟ್ಟಾರೆ, ವಸ್ತುವಿನ ಸಹಕಾರದಿಂದ ತಿಳಿಯುವುದು ಬೋಧೆ; ಯಾವುದಾದರೂ ಒಂದು ವಸ್ತು ಇಂದ್ರಿಯಗೋಚರವಾಗಿ ಎದುರಿಗೆ ಇದ್ದರೇನೆ ಬೋಧೆಯಾಗುವುದು. ಪ್ರತ್ಯಕ್ಷಕಲ್ಪನೆ, ಪ್ರತ್ಯಯ (ಕಾನ್ಸೆಪ್ಟ್), ಸ್ಮೃತಿ, ನಿರೀಕ್ಷೆ, ಪ್ರತ್ಯಭಿಜ್ಞೆ ಮುಂತಾದ ಕ್ರಿಯೆಗಳೆಲ್ಲವನ್ನೂ ಬೋಧೆಯಲ್ಲಿ ಸೇರಿಸುತ್ತಾರೆ. ವಸ್ತು ಎದುರಿಗೆ ಇದ್ದು ಅದು ಇಂದ್ರಿಯ ವಿವರಗಳನ್ನು ಹೊಕ್ಕು ಆ ವಸ್ತುವಿನ ಅರಿವುಂಟಾದರೆ ಅದು ಪ್ರತ್ಯಕ್ಷ. ವಸ್ತು ದೂರವಿದ್ದು ಇಂದ್ರಿಯಗಳಿಗೆ ನೇರವಾದ ಸಂಬಂಧ ಇಲ್ಲವಾದರೂ ಅದರ ಅರಿವು ಉಂಟಾದರೆ ಅದು ಕಲ್ಪನೆ. ಪ್ರತ್ಯಕ್ಷದಿಂದ ಉಂಟಾದ ಚಿತ್ತದೊಳಗಿನ ಚಿತ್ರವೇ ಪ್ರತ್ಯಯ. ದೂರದ ವಸ್ತು ಕಾಲದ ದೃಷ್ಟಿಯಿಂದ ಭೂತವಾಗಿದ್ದರೆ ಸ್ಮೃತಿ. ಭವಿಷ್ಯತ್ತಾದರೆ ನಿರೀಕ್ಷೆ. ಅಂತೂ ವಸ್ತುವಿನ ಸಾಕ್ಷಾತ್ ಅಥವಾ ಪರೋಕ್ಷ ಸಂಪರ್ಕವಿದ್ದಾಗ ನಮ್ಮ ಚಿತ್ತವೃತ್ತಿಗಳು ಉದ್ಭೂತವಾಗಿ ವಸ್ತುವಿನ ವಿವರಗಳನ್ನು ಗ್ರಹಿಸುವುದು ನೈಜವಾದ ವ್ಯವಹಾರ. ಪ್ರತ್ಯಕ್ಷ ಅರಿವಿನ ಮುಖ್ಯ ಪ್ರಕಾರವಾದುದರಿಂದ ಹಲವೊಮ್ಮೆ ಅರಿವನ್ನೂ ಪ್ರತ್ಯಕ್ಷಾನುಭವವನ್ನೂ ಸಮಾನಾರ್ಥಕ ಪದಗಳಂತೆ ಉಪಯೋಗಿಸುವ ವಾಡಿಕೆ ಇದೆ.

ಆದರೆ ಆಧುನಿಕ ಮನಶ್ಶಾಸ್ತ್ರದ ಪ್ರಕ್ರಿಯೆಯಲ್ಲಿ ಅರಿವನ್ನು ಹೆಚ್ಚಾಗಿ ಬಳಸುವ ಪದ್ಧತಿಯಿಲ್ಲ. 1854ರಲ್ಲಿ ಜೆ.ಎಫ್.ಫೆರಿಯರ್ ಎಂಬ ತತ್ತ್ವಜ್ಞಾನಿ ಜ್ಞಾನದ ವಿಶ್ಲೇಷಣೆ, ಅಧ್ಯಯನಗಳನ್ನೇ ತತ್ತ್ವಶಾಸ್ತ್ರದ ಪ್ರಮುಖವಿಷಯವನ್ನಾಗಿ ಗ್ರಹಿಸಿ ಜ್ಞಾನಮೀಮಾಂಸೆ (ಎಪಿಸ್ಟಮಾಲಜಿ) ಎಂಬ ತತ್ತ್ವಶಾಸ್ತ್ರಶಾಖೆಯನ್ನು ಆರಂಭಿಸಿದ. ವಸ್ತುತಃ ಇದು ಮನಶ್ಶಾಸ್ತ್ರಪರವಾದ ಅಧ್ಯಯನವೇ ಆಗಿದ್ದುದರಿಂದ ಪ್ರಾಯೋಗಿಕ ವಿಭಾಗವನ್ನಷ್ಟೇ ಮನಶ್ಶಾಸ್ತ್ರದ ಪಾಲಿಗೆ ಬಿಟ್ಟರು. ಬರಬರುತ್ತ ಆತ್ಮ ಅಥವಾ ಚೈತನ್ಯ (ಕಾನ್ಷಸ್‌ನೆಸ್) ಎಂಬ ಕಲ್ಪನೆಗಳು ಸಡಿಲವಾಗಿ ವರ್ತನೆ, ಕ್ರಿಯೆ (ಬಿಹೇವಿಯರ್) ಪ್ರಮುಖವಾದಾಗ ಅರಿವಿನ ಬಳಕೆಯೂ ಹಿಂದೆ ಬಿತ್ತು. ಈ ಕಾರಣದಿಂದ ಬಹುಮಟ್ಟಿಗೆ ಅರಿವು ಎಂಬುದನ್ನು ಇಂದ್ರಿಯಾನುಭವ, ಪ್ರತ್ಯಾಕ್ಷಾನುಭವಗಳಲ್ಲಿ ಮುಗಿಸಿಬಿಡುತ್ತಾರೆ.

ಆದರೆ, ಐತಿಹಾಸಿಕ ದೃಷ್ಟಿಯಿಂದ ಇದರಷ್ಟು ಪ್ರಭಾವಶಾಲಿಯಾದ ಕಲ್ಪನೆ ಮತ್ತೊಂದಿಲ್ಲ. ಪ್ರಾಚೀನಕಾಲದಿಂದ ಮನಶ್ಶಾಸ್ತ್ರದ ಮುಖ್ಯ ವಸ್ತುಗಳಲ್ಲಿ ಒಂದಾದ ಅರಿವು ವಿಲಿಯಂ ಜೇಮ್ಸ್, ವಿಲ್ಹೆಲ್ಮ್ ಉಂಟ್, ಸ್ಟೌಟ್, ಸ್ಟರ್ನ್, ಸ್ಪಿಯರ್‌ಮನ್ ಮುಂತಾದವರ ಸಂಶೋಧನೆಗೆ ಒಳಪಟ್ಟ ವಿಷಯವಾಗಿತ್ತು. ಚಾರಲ್ಸ್ ಸ್ಪಿಯರ್‌ಮನ್ ಈ ವಿಚಾರವಾಗಿ ಅಮೂಲ್ಯವಾದ ಪ್ರಯೋಗಗಳನ್ನು ನಡೆಸಿ ಮೂರು ನಿಯಮಗಳನ್ನು ನಿರೂಪಿಸಿದ. ಅನುಭವಗಳನ್ನು ಅರಿಯುವೆವು ಎಂದರೆ, ಮೊದಲನೆಯದಾಗಿ, ನಾವು ಹೊರಜಗತ್ತನ್ನು ತಿಳಿಯುವುದು ಮಾತ್ರವಲ್ಲ. ಇಂದ್ರಿಯಾನುಭವಗಳನ್ನು ಪಡೆಯುವುದು ಮಾತ್ರವಲ್ಲ. ಪ್ರಯತ್ನ ಪಡುವುದು ಮಾತ್ರವಲ್ಲ, ಉದ್ವಿಗ್ನರಾಗುವುದು ಮಾತ್ರವಲ್ಲ. ಈ ತಿಳಿವಳಿಕೆ. ಇಂದ್ರಿಯನುಭವ, ಪ್ರಯತ್ನ, ಉದ್ವೇಗ–ಇವು ನಮ್ಮಲ್ಲಿ ಉಂಟಾಗುವುದನ್ನು ಅರಿಯುವುದೂ ಸಾಧ್ಯ. ಎರಡನೆಯ ನಿಯಮ ಕಲ್ಪನೆಗಳ ನಡುವೆ ಸಂಬಂಧದ ಪ್ರಸಾರಗಳನ್ನು ಸ್ಪಷ್ಟಪಡಿಸುವುದು, ಎಳೆಯುವುದು ಸಹಜವಾದ ಪ್ರವೃತ್ತಿ ಎಂಬುದು ಈ ಮೂರು ನಿಯಮಗಳು ಪ್ರತೀತ್ವಸಂಬೋಧಿ (ನಿಯೋಜೆನೆಸಿಸ್) ಎನಿಸಿಕೊಳ್ಳುತ್ತದೆ. ಅರಿವು ಉತ್ಪನ್ನವಾಗಲು ಅವಶ್ಯವಾದ ಉಪಾಧಿಗಳನ್ನು, ಅನುಭವದ ಪ್ರಕಾರಗಳನ್ನು, ಈ ನಿಯಮತ್ರಯ ವಿವರಿಸುತ್ತದೆ. ಈ ನಿಯಮಗಳನ್ನು ಮಂಡಿಸಿದ ಸ್ಪಿಯರ್‌ಮನ್ ಅವಿಶ್ರಾಂತವಾಗಿ ಪ್ರಯೋಗಗಳನ್ನು ನಡೆಸಿ ಬುದ್ಧಿಶಕ್ತಿ, ಸ್ಮೃತಿಶಕ್ತಿ, ಕಲಿಕೆ ಮುಂತಾದ ಮಾನಸಿಕಪ್ರವೃತ್ತಿಗಳಲ್ಲಿ ಅರಿವಿನ ಪಾತ್ರವನ್ನು ವಿಶದೀಕರಿಸಿದ. ಮನಶ್ಶಾಸ್ತ್ರದ ವಿಶ್ವದಲ್ಲಿ ಅರಿವಿಗೆ ಪ್ರಯೋಗಸಿದ್ಧವಾದ ಸ್ಥಾನವನ್ನು ಒದಗಿಸಿದವ ಸ್ಪಿಯರ್‌ಮನ್.

ಸಮಷ್ಟಿಮನಶ್ಶಾಸ್ತ್ರದ (ಗೆಸ್ಟಾಲ್ಟ್ ಮನಶ್ಶಾಸ್ತ್ರ) ಬೆಳವಣಿಗೆ ಅರಿವಿನ ಸ್ಥಾನವನ್ನು ಮತ್ತೆ ಸ್ಥಾಪಿಸಿತು. ಈ ಪಂಥದವರು ಪ್ರತ್ಯಕ್ಷಾನುಭವದ ವಿಚಾರವಾಗಿ ನಡೆಸಿದ ಅಧ್ಯಯನ ಅರಿವಿನ ಪ್ರಕಾರಗಳನ್ನು ಸ್ಫುಟಪಡಿಸಿತು. ಕರ್ಟ್ ಲೆವಿನ್ ಎಂಬ ಪ್ರಖ್ಯಾತ ಮನಶ್ಶಾಸ್ತ್ರಜ್ಞ ನಿರೂಪಿಸಿದ ಚಿತ್ತಕ್ಷೇತ್ರವಾದ ಅರಿವಿನ ನೆಲೆಯನ್ನು ಚಿತ್ತವೃತ್ತಿಗಳ ವ್ಯವಹಾರದ ಹಿನ್ನೆಲೆಯಲ್ಲಿ ನಿರ್ದೇಶಿಸಿತು. ಪ್ರಸಂಗವಾದದ (ಫೆನಾಮಿನಾಲಜಿ) ದೃಷ್ಟಿಯಿಂದ ಮನುಷ್ಯನ ಇಡೀ ವ್ಯಕ್ತಿತ್ವವನ್ನು ವ್ಯವಹಾರಕ್ಷೇತ್ರವೆಂದು ಪರಿಗಣಿಸಿದರೆ ಯಾವೊಂದು ವರ್ತನೆಯೂ ಈ ಕ್ಷೇತ್ರದ ವಿವರಗಳಿಂದ ನಿರ್ದಿಷ್ಟವಾಗುವುದು. ಈ ಕ್ಷೇತ್ರ ಸಂದರ್ಭಶುದ್ಧವಾಗಿ ವ್ಯವಸ್ಥೆಗೊಳ್ಳಲು ಅರಿವು ಮುಖ್ಯವಾದ ಸಾಧನ. ಅರಿವು ಕೂಡ ಒಂದು ಕ್ರಿಯೆ ಎನ್ನುವ ವಾದ ಮನಶ್ಶಾಸ್ತ್ರದ ಇತಿಹಾಸದ ಮಧ್ಯಯುಗದಲ್ಲಿ ಪ್ರಚಲಿತವಾಗಿತ್ತು. ಈ ವಾದ ಚಿತ್ತಕ್ಷೇತ್ರವಾದಿಗಳಿಂದ ಮತ್ತೆ ಪ್ರಚಾರಕ್ಕೆ ಬಂದಿತು. ಅರಿವು ಬೇರೆ, ವ್ಯವಸ್ಥೆ ಬೇರೆ, ಅಗತ್ಯಬಿದ್ದರೆ ಕ್ಷೇತ್ರದ ಪುನರ್ವ್ಯವಸ್ಥೆ ಆಗಬೇಕು; ಇದಕ್ಕೆ ಕೂಡ ಅರಿವು ಪ್ರಮುಖವಾದ ಸಾಧನೆ ಎಂಬ ನಿಲುವು ಸ್ಪಷ್ಟವಾಯಿತು. ಅರಿವಿನ ಪ್ರಕಾರವೇ ವ್ಯವಸ್ಥೆ. ಅರಿವೆಂದರೆ ವ್ಯವಸ್ಥೆಯ ಒಂದು ಮುಖ–ಎಂದು ಸಮಷ್ಟಿವಾದಿಗಳು ನಿರೂಪಿಸಿದ್ದರು. ಲೆವಿನ್ನನಂತೆ ಅರಿವಿಗೆ ವ್ಯವಸ್ಥೆಗಿಂತ ಭಿನ್ನವಾದ ಅಸ್ತಿತ್ವವನ್ನು ಹೇಳಬೇಕಾಗುತ್ತದೆ. ಪ್ರತ್ಯಕ್ಷಾನುಭವ ಎನ್ನುವುದು ಈ ವಾದದವರ ಪ್ರಕಾರ ಬೋಧೆಯ ಕ್ಷೇತ್ರ ಇದ್ದಕ್ಕಿದ್ದಂತೆ ಪುನರ್ವ್ಯವಸ್ಥಿತವಾಗುವುದು.

ಸಂಕೇತಸಮಷ್ಟಿ ನಿರೀಕ್ಷೆಯ (ಸೈನ್ ಗೆಸ್ಟಾಲ್ಟ್ ಎಕ್ಸ್‌ಪೆಕ್ಟೆನ್ಸಿ) ವಾದವನ್ನು ಮಂಡಿಸಿದ ಇ.ಸಿ.ಟೋಲ್‌ಮನ್ ಅರಿವಿನ ಸಮಸ್ಯೆಯನ್ನು ಮತ್ತೊಂದು ದೃಷ್ಟಿಯಿಂದ ಅಧ್ಯಯನ ಮಾಡಿದ, ಜೀವಿ ನಿರ್ದಿಷ್ಟ ಗುರಿ ಮುಟ್ಟಲು ವ್ಯವಸ್ಥಿತವಾದ ಸಾಧನಗಳನ್ನೂ ಸಂಕೇತಗಳನ್ನೂ ಬಳಸಿಕೊಳ್ಳುವಾಗ ಅರಿವು ಉಪಯೋಗಕ್ಕೆ ಬರುತ್ತದೆ. ಇಲ್ಲಿ ಅರಿವು ಎಂದರೆ ಸಾಧನ–ಸಾಧ್ಯಗಳ ಮಧ್ಯೆ ಇರುವ ಸಂಬಂಧ; ವಸ್ತುವನ್ನು ಪ್ರತ್ಯಕ್ಷದಿಂದ ಗ್ರಹಿಸುವುದು, ಅರಿಯುವುದು. ಅಂದರೆ ಅದರ ಆಕಾರ, ಸ್ವಭಾವ, ಮೌಲ್ಯ, ಪ್ರಯೋಜನ, ಇಂಗಿತಗಳನ್ನು ಗ್ರಹಿಸುವುದು. ಸ್ಮೃತಿಯಲ್ಲಿ ಧರಿಸಿಕೊಳ್ಳುವುದು. ಈ ಮೂರೂ ಅರಿವಿನ ಅಂಗಗಳು. ಹೀಗೆ ಯವುದಾದರೊಂದು ಪ್ರಾಣಿ ಹೊರಗಿನ ವಸ್ತುವನ್ನು ನೋಡುವಾಗ ಆ ವಸ್ತುವಿನ ಸಂಕೇತವನ್ನೂ ಇಂಗಿತವನ್ನೂ ಗ್ರಹಿಸಿ ವಸ್ತುಗಳಿಗೂ ತನಗೂ ಇರುವ ಸಂಬಂಧವನ್ನೂ ನಿರೀಕ್ಷೆಯಿಂದ ಕ್ರಿಯೋನ್ಮುಖವಾಗಿ ಮಾಡುವುದರಿಂದ ಇದಕ್ಕೆ ಸಂಕೇತಸಮಷ್ಟಿವಾದ ಎಂಬ ಹೆಸರು ಬಂದಿದೆ. ಈ ಸಂಧರ್ಭದಲ್ಲಿ ಟೋಲ್ಮನ್ ಮೂರುಬಗೆಯ ಅರಿವನ್ನು ಹೇಳುತ್ತಾನೆ: 1. ಮೂಲಭೂತವಾದ ಗುರಿಗಳಿಗೆ ಸಂಬಂಧಪಟ್ಟಂತೆ ತೃಪ್ತಿಪಡೆದುಕೊಳ್ಳಲು ಸಿದ್ಧವಾದ ಅರಿವು ಕ್ಯಾಥೆಕ್ಸಿಸ್, 2. ಮೂಲಭೂತವಾದ ಗುರಿಗಳಿಗೂ ಸನ್ನಿವೇಶದ ವಸ್ತುಗಳಿಗೂ ಸಂಬಂಧವನ್ನು ಕಲ್ಪಿಸಿ ಉಪಗುರಿಗಳನ್ನು ಏರ್ಪಡಿಸುವ ಅರಿವು ಈಕ್ವಿವೆಲೆಂಟ್ ಬಿಲೀಫ್ಸ್. 3. ಹೊರಗಿನ ಸನ್ನಿವೇಶದ ಪ್ರಸಂಗಗಳಲ್ಲಿ ಅನುಕ್ರಮವನ್ನು ಉಂಟಮಾಡಿ ಅದರ ಮೂಲಕ ಮುಂದೆ ಬರಬಹುದಾದ ಫಲರೂಪಿ ವಸ್ತುಗಳನ್ನು ನಿರೀಕ್ಷಿಸುವ ಅರಿವು ಫೀಲ್ಡ್ ಎಕ್ಸ್‌ಪೆಕ್ಟೆನ್ಸೀಸ್. ಈ ವಿಭಾಗದ ಇಂಗಿತವಾಗಿ ಟೋಲ್ಮನ್ ವಾದಿಗಳು ಅರಿವಿನ ಭೂಪಟಗಳನ್ನು ಸಿದ್ಧಪಡಿಸಿದ್ದಾರೆ.

ಮೂಲಭೂತ ಪ್ರವೃತ್ತಿಗಳಿಗೂ ಮೋಟಿವೇಷನ್ ಅರಿವಿಗೂ ಇರುವ ಸಂಬಂಧವನ್ನು ಆಧುನಿಕ ಮನಶ್ಶಾಸ್ತ್ರ ಸ್ಪಷ್ಟಪಡಿಸಿದೆ. ಪ್ರವೃತ್ತಿಗಳಿಂದ ವ್ಯಕ್ತಿಯಲ್ಲಿ ಉಂಟಾದ ಒತ್ತಡವನ್ನು ಕಡಿಮೆಮಾಡಲು ಅರಿವು ಬಲವಾಗುತ್ತದೆ. ಇದರಿಂದಾಗಿ ಗೌಣವಾದ ಪ್ರವೃತ್ತಿಗಳು ಅರಿವಿನ ಫಲದಂತೆ ಕಾಣಿಸಿಕೊಳ್ಳುತ್ತವೆ. ಅರಿವು ಹೀಗೆ ಫಲಕಾರಿಯಾಗಬೇಕಾದರೆ ಪೂರ್ವಾನುಭವ

ಅಥವಾ ಕಲಿತ ಕೌಶಲ ಅಗತ್ಯ. ಹೊರಗಿನ ಸನ್ನಿವೇಶವನ್ನು ಯಥಾರ್ಥವಾಗಿ ಗ್ರಹಿಸಲು ಮೌಲಿಕ ವೈವಿಧ್ಯವನ್ನು ಆಶ್ರಯಿಸಿ ವಿಭಿನ್ನ ಕ್ರಿಯೆಗಳನ್ನು ವ್ಯವಸ್ಥೆಗೊಳಿಸಲೂ ಅರಿವು ಅಗತ್ಯವಾಗುತ್ತದೆ.

ಸಾಮಾಜಿಕ ಮನಶ್ಶಾಸ್ತ್ರದ ಇಂದಿನ ಸ್ಥಿತಿಯಲ್ಲಿ ಸಾಮಾಜಿಕ ಸಂಬಂಧಗಳನ್ನು ಮತ್ತು ಸಾಮಾಜಿಕ ಮೌಲ್ಯಗಳನ್ನು ಅರಿಯುವ ಪ್ರಕಾರಕ್ಕೆ ಸಾಮಾಜಿಕಬೋಧೆ ಎಂದು ಹೆಸರು. ಡೇವಿಡ್ ಕ್ರೆಚ್ ಮುಂತಾದ ಸಾಮಾಜಿಕ ಮನಶ್ಶಾಸ್ತ್ರಜ್ಞರು ಪೂರ್ವಗ್ರಹ ಜನಾಂಗಗಳಲ್ಲಿನ ವೈವಿಧ್ಯ, ಪಂಗಡಗಳ ವೈಷಮ್ಯ ಮುಂತಾದ ವಿವರಗಳನ್ನು ಇದೇ ದೃಷ್ಟಿಯಿಂದ ಅಧ್ಯಯನ ಮಾಡಿದ್ದಾರೆ. ಈ ಪ್ರವೃತ್ತಿಗಳೆಲ್ಲವೂ ಪ್ರಸಂಗವಾದದ ನೆಲೆಯಲ್ಲಿ ಅರಿವಿನ ಪ್ರಕಾರಗಳೇ. ಇನ್ನೊಬ್ಬ ವ್ಯಕ್ತಿಯ ಸ್ವಭಾವವನ್ನು ಅರಿಯುವುದು ನಮ್ಮ ನಿತ್ಯ ಜೀವನದಲ್ಲಿ ಅತ್ಯಾವಶ್ಯಕ; ನಮ್ಮ ಅನುಭವದ ಆಧಾರದ ಮೇಲೆಯೇ ಇದನ್ನು ಸಾಧನೆಗಳ ಸಮಷ್ಟಿಜ್ಞಾನ ಸಾಮಾಜಿಕ ಬೋಧೆಯೆನಿಸಿಕೊಳ್ಳುತ್ತದೆ. ವ್ಯಕ್ತಿಯ ರೂಪ ಗ್ರಹಣ ಪ್ರತ್ಯಕ್ಷದಲ್ಲಿ ಆಗುತ್ತದೆ; ಆದರೆ ಅವನ ಮನೋಧರ್ಮ, ಪ್ರವೃತ್ತಿಗಳು, ಅವಧಾನಗಳು, ಸಹಿಷ್ಣುತೆ ಮುಂತಾದ ಆಂತರಿಕ ವಿವರಗಳನ್ನು ಸಾಮಾಜಿಕ ಬೋಧೆಯಿಂದ ಅರಿಯದೆ ವ್ಯಕ್ತಿಯ ಸಂಪೂರ್ಣ, ಅರ್ಥಕ್ರಿಯಾಕಾರಿಜ್ಞಾನ ಸಾಧ್ಯವಾಗಲಾರದು. ಹಾಗೆಯೇ ಸಮಾಜವೊಂದರಲ್ಲಿ ವ್ಯವಸ್ಥಿತವಾದ ಪದ್ಧತಿಗಳು, ಸಂಪ್ರದಾಯ, ಆರ್ಥಿಕ ಧಾರ್ಮಿಕ ನೀತಿ, ಸಮಾಜರಚನೆ ಮುಂತಾದವನ್ನು ಅರಿಯಲೂ ಈ ಬಗೆಯ ಬೋಧೆ ಅಗತ್ಯ. ಇದಿಲ್ಲದೆ ಸಮಾಜದಲ್ಲಿ ಪಾಲುಗೊಳ್ಳಲು ಸಾಧ್ಯವಿಲ್ಲ. ಈ ಜ್ಞಾನ ಸಂಪನ್ನವಾಗಲು ನೆರವಾಗುವ ಶಿಕ್ಷಣವನ್ನು ಮಕ್ಕಳಿಗೆ ಕೊಡಿಸಬೇಕೆಂಬ ಶ್ರದ್ಧೆ ಪ್ರಗತಿಪರರಾಷ್ಟ್ರಗಳಲ್ಲಿ ಕಾಣಬರುತ್ತಿದೆ.

ಮನಶ್ಶಾಸ್ತ್ರದ ಇತಿಹಾಸದಲ್ಲಿ ಬ್ರೆಂಟಾನೊ ಬೇನ್, ವಾರ್ಡ್, ಜೇಮ್ಸ್ ಮುಂತಾದವರು ಅರಿವು ಮನಶ್ಶಾಸ್ತ್ರದ ಮುಖ್ಯ ಅಧ್ಯಯನವಸ್ತುವೆಂದು ಗ್ರಹಿಸಿ ಅದರ ಅನುಸಂಧಾನದ ಕಡೆ ತಮ್ಮ ಲಕ್ಷ್ಯವನ್ನು ಹರಿಸಿದರು. ಜೇಮ್ಸ್ ವಾರ್ಡ್ ಅನುಭವಕ್ಕೆ ಅನಿವಾರ್ಯವಾಗಿ ವಿಷಯಿ (ಸೆಲ್ಫ್, ಈಗೊ) ಇದ್ದೇ ಇರಬೇಕೆಂದು ವಾದಿಸಿ ಅರಿವು ಮುಂತಾದ ಎಲ್ಲ ಕ್ರಿಯೆಗಳೂ ಅದರ ಪ್ರಸಾರಗಳೆಂದೇ ನಿಶ್ಚಯಿಸಿದ. ಚಂದ್ರನಿಗೂ ಅವನ ಕಲೆಗಳಿಗೂ ತಾದಾತ್ಮ್ಯ ಇರುವಂತೆ ವಿಷಯಿಗೂ ಅರಿವಿಗೂ ತಾದಾತ್ಮ್ಯ ಸಂಬಂಧ ಇದೆ. ಹೊರಗಿನ ವಸ್ತು ದತ್ತವಾಗಿ ಪ್ರಾತಿಭಾಸಿಕವಾಗಿ ಇಂದ್ರಿಯಾನುಭವಗಳ ಮೂಲಕ ವಿಷಯಿಯನ್ನು ಮುಟ್ಟುವುದು. ಈ ಪ್ರಾತಿಭಾಸಿಕಪ್ರವೃತ್ತಿಗಳು ವ್ಯಕ್ತಿಯ ಗಮನವನ್ನು ಸೆಳೆಯುತ್ತವೆ ಮತ್ತು ಪ್ರಾತಿಭಾಸಿಕಪ್ರವೃತ್ತಿಗಳ ಹಿಂದಿರುವ ವಸ್ತುವಿನ ವಿಚಾರವಾಗಿ ವಿಷಯಿಯ ಸಂಬಂಧವನ್ನು ರೂಪಿಸುತ್ತವೆ. ಬೇನ್ ಪ್ರಾಣಿಶಾಸ್ತ್ರದ ನಿಲುವನ್ನು ಹಿಡಿದು ನರಪ್ರವಾಹಗಳು ಅನುಭವದಲ್ಲಿ ಏಕತಾನವನ್ನುಂಟುಮಾಡಬಲ್ಲುವೆಂದು ಹೇಳಿದೆ. ಅವನ ಪ್ರಕಾರ–ನರಪ್ರವಾಹವಿಲ್ಲದಿದ್ದರೆ ಮನಸ್ಸೂ ಇಲ್ಲ. ಮಿದುಳಿನ ರಚನೆ, ಅಲ್ಲಿ ನಡೆಯುವ ವೃತ್ತಿ–ಇವುಗಳಿಂದಲೇ ಅರಿವು ಮುಂತಾದ ಮಾನಸಿಕಕ್ರಿಯೆಗಳು ಉಂಟಾಗುವುವೆಂಬುದು ಅವನ ವಾದ. ಇಂದ್ರಿಯಾನುಭವಗಳಲ್ಲಿ ಅರಿವಿಗೂ ನಿಕಟಸಂಬಂಧವಿದೆ ಎಂದು ತೋರಿಸುವುದು ಈ ಎಲ್ಲ ಸಂಶೋಧಕರ ಉದ್ದೇಶವಾಗಿತ್ತು.

ಮೊದಲಿನಿಂದ ಅರಿವಿಗೂ ಪ್ರತ್ಯಕ್ಷಾನುಭವಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿದ್ದಾರೆ. ಬಾಹ್ಯವಸ್ತುಗಳನ್ನು ಅವಲಂಬಿಸಿ ರೂಪತಳೆದ ಇಂದ್ರಿಯಾನಭವಗಳು ಪ್ರತ್ಯಕ್ಷಾನುಭವಕ್ಕೆ ಅತ್ಯಾವಶ್ಯಕ; ಇದನ್ನು ಮೀರಿ ಪ್ರತ್ಯಕ್ಷ ಆಗಲಾರದು. ಆದರೆ ಅರಿವು ಈ ಮೇರೆಯನ್ನು ಮೀರಿ ಇಂದ್ರಿಯಾನುಭವದಲ್ಲಿ ಬಾರದ ವಿವರಗಳನ್ನು ಗ್ರಹಿಸುತ್ತದೆ. ಪ್ರತ್ಯಕ್ಷ ಒಮ್ಮೊಮ್ಮೆ ತಪ್ಪಾಗಿ ಗ್ರಹಿಸಿವುದುಂಟು. ಮರಳುಗಾಡಿನಲ್ಲಿ ನಡೆಯುವಾಗ ನೀರಿನ ಭಾಸ ಆಗುವಂತೆ, ಆದರೆ ಇದರ ಪರಿಚಯ ಇದ್ದವನು, ಅನುಭವ ಇದ್ದವನು ಅದನ್ನು ನೀರೆಂದು ಗ್ರಹಿಸುವುದಿಲ್ಲ. ಇಂದ್ರಿಯಾನುಭವದ ವಿವರವನ್ನೂ ಅವನು ಅರಿವಿನಲ್ಲಿ ಮಾರ್ಪಡಿಸಿಕೊಳ್ಳುತ್ತಾನೆ. ಪ್ರತ್ಯಕ್ಷದಲ್ಲಿ ಯುಕ್ತಿ, ತರ್ಕ, ನಿರ್ಣಯ ಇವಕ್ಕೆ ಸ್ಥಾನವಿರದು; ಹೆಚ್ಚು ಕಡಿಮೆ ವಸ್ತುತಂತ್ರವಾದದ್ದೇ ಇದು. ಆದರೆ ಅರಿವಿನಿಲ್ಲಿ ಈ ಮಾನಸಿಕಕ್ರಿಯೆಗಳು ಅವಶ್ಯವಾಗಿ ಒದಗಿಬರುತ್ತವೆ. ಪ್ರತ್ಯಕ್ಷದಲ್ಲಿ ದೃಕ್‌ಪ್ರತ್ಯಯವೇ (ಪರ್ಸೆಪ್ಟ್) ಆಧಾರವಾದರೆ, ಅರಿವಿನಲ್ಲಿ ಮಾನಸಪ್ರತ್ಯಯ (ಕಾನ್ಸೆಪ್ಟ್) ಹೆಚ್ಚಿನ ಪಾತ್ರವನ್ನು ವಹಿಸುತ್ತದೆ. ಪ್ರತ್ಯಕ್ಷ ತಾತ್ಕಾಲಿಕವಾದ ಅನುಭವ, ಕ್ಷಣಭಂಗುರವಾದ ಪ್ರಸಂಗ. ಅರಿವಾದರೋ ಚಿತ್ತಭಿತ್ತಿಯಲ್ಲಿ ಉಳಿದಿರಬಲ್ಲುದು. ಅಷ್ಟು ಮಾತ್ರವಲ್ಲ. ಹಲವಾರು ಮಾನಸಪ್ರತ್ಯಯಗಳು ಕಲೆತು, ವ್ಯವಸ್ಥಿತವಾಗಿ ಜ್ಞಾನವನ್ನು ಉಂಟುಮಾಡಬಲ್ಲವು. ಜ್ಞಾನ (ನಾಲೆಡ್ಜ್) ಎಂಬುದು ವ್ಯವಸ್ಥಿತವಾದ ಚಿತ್ತಪ್ರವೃತ್ತಿ. ಅರಿವು ಅನಿರ್ದಿಷ್ಟ ಗ್ರಹಣವಾದರೆ, ಜ್ಞಾನವೆಂಬುದು ನಿರ್ದಿಷ್ಟ ಸಾಕಾರಗ್ರಹಣ. ಅದರಿಂದಲೇ ಕ್ರಿಯೆ ಹೊರಬರಲು ಸಾಧ್ಯ. ಇದನ್ನು ಭಾರತೀಯರು ವ್ಯವಹಾರಯೋಗ್ಯ ಎಂದು ವಿವರಿಸುತ್ತಾರೆ.

ಕರ್ಟ್ ಲೆವಿನ್ ಎರಡು ವಿಭಿನ್ನ ಭಾಷೆಗಳನ್ನು ಉಲ್ಲೇಖಿಸುತ್ತಾನೆ. ವಸ್ತುತಂತ್ರವಾಗಿರುವ (ಫೆನೊಟಿಪಿಕಲ್) ಭಾಷೆ, ಮಾನಸಪ್ರತ್ಯಯಗಳನ್ನು ಅವಲಂಬಿಸಿರುವ (ಜೆನೊಟಿಪಿಕಲ್)ಭಾಷೆ. ಮೊದಲನೆಯದಕ್ಕೆ ಆಧಾರ ದತ್ತಾಂಶಗಳು, ಇಂದ್ರಿಯ ಗ್ರಾಹ್ಯವಾದ ವಿವರಗಳು. ಇದು ಪ್ರತ್ಯಕ್ಷ. ಎರಡನೆಯದಕ್ಕೆ ಆಧಾರ ಕಲ್ಪನೆಗಳು (ಕಾನ್ಸ್‌ಟ್ರಕ್ಟ್ಸ್). ಇದು ಜ್ಞಾನ, ಎರಡರಲ್ಲೂ ಅರಿವು ಇದ್ದರೂ ಎರಡನೆಯದರಲ್ಲಿ ಅರಿವಿನ ಪಾತ್ರ ಹೆಚ್ಚು. ಅರಿವು ಕೇವಲ ವ್ಯಕ್ತಿನಿಷ್ಠ. ಇಂದ್ರಿಯ ದತ್ತಾಂಶಗತಿಗೆ ಅತೀತವಾದದ್ದು (ಟ್ರಾನ್ಸೆಂಡೆಂಟಲ್). ಆದರೆ ಇದು ತತ್ತ್ವಶಾಸ್ತ್ರದಲ್ಲಿ ಹೇಳುವಂತೆ ಸತ್ತಾಮಾತ್ರವಾದುದಲ್ಲ. ಬ್ರೆಂಟಾನೊ ಹೇಳುವಂತೆ ಕ್ರಿಯೆ. ಈ ಕ್ರಿಯೆಯಿಂದ ವಸ್ತು ಸೂಚ್ಯವಾಗುತ್ತದೆ. ಆದರೆ ಪ್ರತ್ಯಕ್ಷದಲ್ಲಿದ್ದಂತೆ ಬಾಹ್ಯವಸ್ತುವೇ ಆಗಿರಬೇಕೆಂಬ ನಿಯಮ ಇಲ್ಲ. ಆಂತರಿಕವಸ್ತು ಅಥವಾ ಭಾವನೆಯೂ ಅರಿವಿಗೆ ವಸ್ತುವೇ. ಮೈನಾಂಗ್‌ನ ಶಿಷ್ಯ ಬೆನುಸ್ಸಿ ಅತೀಂದ್ರಿಯ ಕ್ರಿಯೆಗಳಿಂದ ಉತ್ಪನ್ನವಾದ ಸಮಷ್ಟಿ ಸ್ವರೂಪವೇ ಅರಿವು ಎಂದು ಹೇಳಿ ಬಾಹ್ಯ ವಸ್ತುಗಳು ವಾಸ್ತವಿಕವಾದುದರಿಂದ ಉಚ್ಚ ಶ್ರೇಣಿಯದು ಎಂದೂ ಮಾನಸ ವಸ್ತುಗಳು, ಇವುಗಳನ್ನು ಆಶ್ರಯಿಸಿ ಕಲ್ಪಿತವಾದುದರಿಂದ ನೀಚ ಶ್ರೇಣಿಯದು ಎಂದೂ ವಾದಿಸಿದ್ದಾನೆ. ಈ ವಾದವನ್ನು ಸಮಷ್ಟಿವಾದಿಗಳು ನಿರಾಕರಿಸಿ ಸಮಷ್ಟಿಸ್ವರೂಪದ ಅರಿವು ಉಚ್ಚಶ್ರೇಣಿಯ ಕ್ರಿಯೆಯೇ ಎಂದು ಸಮರ್ಥಿಸುತ್ತಾರೆ. ಇಂದ್ರಿಯಜನ್ಯಸಂವೇದನೆಗಳು ಕೂಡ ಆಂತರಿಕ ವಿವರಗಳನ್ನು ಆಶ್ರಯಿಸಿರುತ್ತವೆ ಎಂದೂ ಕಾಫ್ಕಾ ಸ್ಪಷ್ಟಪಡಿಸಿ ಸಮಷ್ಟಿಸ್ವರೂಪಗಳು ವಾಸ್ತವವಾಗಿ ಹೊರಗಿನ ಭೌತಪ್ರಪಂಚದಲ್ಲಿ ಇರುವುವೆಂದೂ ಸಂವೇದನೆಗಳಂತೆ ಅವೂ ನಿರ್ಣಯಕ್ಕೆ ಬರುವುದು ಸಾಧ್ಯ ಎಂದೂ ವಾದಿಸಿದ.

ಆಧುನಿಕ ಮನಶ್ಶಾಸ್ತ್ರದಲ್ಲಿ ಅರಿವು ಎಂಬ ಕಲ್ಪನೆ ವಿಶೇಷವಾಗಿ ಕಲಿಕೆಯ ಕ್ಷೇತ್ರದಲ್ಲಿ ನಡೆಯುತ್ತಿರುವ ಪ್ರಯೋಗಗಳಲ್ಲಿ ಬರುತ್ತದೆ. ಒಂದು ಪ್ರಾಣಿಯ ಮುಂದೆ ಸಮಸ್ಯೆಯನ್ನು ಒಡ್ಡಿದಾಗ ಅದು ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುತ್ತದೆ ಎಂಬುದನ್ನು ನಿರ್ಧರಿಸಲು ಕೊಹ್ಲರ್, ಟೋಲ್ಮನ್, ಕ್ರೆಷೆವ್ಸ್ಕಿ, ಜೆನಿಂಗ್ಸ್ ಮುಂತಾದವರು ಪ್ರಯತ್ನಪಟ್ಟಿದ್ದಾರೆ. ಬಹುಮಟ್ಟಿಗೆ ಸಮ್ಮತವಾದ ಅಭಿಪ್ರಾಯವೆಂದರೆ ಸಮಸ್ಯೆಯ ಸನ್ನಿವೇಶವನ್ನು ಪ್ರಾಣಿ ಅರಿಯುವಾಗಲೇ ಅದರ ಪರಿಹಾರದ ಸೂಚನೆಯೂ ಕಂಡುಬರುತ್ತದೆ ಎಂಬುದು. ಸಮಸ್ಯೆಯ ಸನ್ನಿವೇಶವನ್ನು ಪ್ರಾಣಿ ವಿಶಿಷ್ಟವಾಗಿ ಗ್ರಹಿಸುತ್ತದೆ. ಆ ಅನುಭವಗಳೊಂದಿಗೆ ಸಂದರ್ಭದ ಅಗತ್ಯದಿಂದಾದ ಅಂತಃಪ್ರವೃತ್ತಿಗಳು ದೃಶ್ಯವನ್ನು ಪರಿಷ್ಕರಿಸಿ ಅರ್ಥವತ್ತಾಗಿ ಮಾರ್ಪಡಿಸುತ್ತವೆ. ಇದಕ್ಕೆ ಅರಿವಿನ ಪುನಾರಚನೆ ಎಂದು ಹೆಸರು. ಇದರಲ್ಲಿ ಪ್ರತ್ಯಕ್ಷಾನುಭವವೂ ಅಗತ್ಯವೂ ಅವಧಾನವೂ ಬುದ್ಧಿಶಕ್ತಿಯೂ ಪಾತ್ರವಹಿಸಿತ್ತವೆ.

ಅರಿವು ಮನೋದೇಹಸಂಘಾತದ ಒಂದು ಪ್ರಕಾರವೆಂದು ಪರಿಗಣಿಸಿ ಅದೂ ಇತರ ದೈಹಿಕ ಮತ್ತು ಮಾನಸಿಕ ಕ್ರಿಯೆಗಳಂತೆ ಅನುಕ್ರಮವಾಗಿ ವಿಕಾಸಗೊಳ್ಳುವುದೆಂದು ಈಚೆಗೆ ನಿರ್ಧರಿಸಿದ್ದಾರೆ. ಅಲ್ಲಿ ಅರಿವು ಎಂಬ ಪ್ರತ್ಯಯದಲ್ಲಿ ಇಂದ್ರಿಯಾನುಭವ, ಪ್ರತ್ಯಕ್ಷಾನುಭವ, ವಿವೇಕ, ಚಿಂತನೆಗಳನ್ನು ಸೇರಿಸುತ್ತಾರೆ. ಹುಟ್ಟಿದ ಮಗುವಿನಲ್ಲಿ ಅರಿವು ಮೂಡುವುದಕ್ಕೆ ಮುನ್ನವೇ ಹತ್ತಾರು ದೈಹಿಕವ್ಯಾಪಾರಗಳು ಸಿದ್ಧವಾಗಿರುತ್ತವೆ. ಸಹಜವಾಗಿ ಒದಗಿಬಂದ ನರಮಂಡಲದ ವ್ಯವಸ್ಥೆಯಿಂದ ಹೊರಗಿನ ಪ್ರೇರಕಗಳಿಗೆ ಸಮರ್ಪಕವಾದ ಪ್ರತಿಕ್ರಿಯೆಯನ್ನು ಮಾಡುವ ಸೌಲಭ್ಯ ಮಗುವಿಗೆ ಇರುತ್ತದೆ. ಮಗು ದೊಡ್ಡದಾದ ಮೇಲೂ ಉತ್ಕ್ಷೇಪಕ್ರಿಯೆ (ರಿಫ್ಲೆಕ್ಸ್ ಆಕ್ಷನ್) ಇದ್ದೇ ಇರುತ್ತದೆ. ಉತ್ಕ್ಷೇಪಕ್ರಿಯೆಗೂ ಅರಿವಿಗೂ ಸಂಬಂಧ ಏನು ಎಂಬುದು ಮನಶ್ಶಾಸ್ತ್ರದಲ್ಲಿ ಜಿಜ್ಞಾಸೆಗೆ ಬಂದಿದೆ. ಹಲವು ಮನಶ್ಶಾಸ್ತ್ರಜ್ಞರು ಅರಿವು ಮೂಲಭೂತವಾಗಿ, ಪ್ರಾಣಿಯ ಜೀವನದ ದೃಷ್ಟಿಯಿಂದ ಸಹಜವಾದುದಲ್ಲವೆಂದೂ ಉತ್ಕ್ಷೇಪಕ್ರಿಯೆಗಳಿಂದಲೇ ಉತ್ಪನ್ನವಾದುದೆಂದೂ ಹೇಳುತ್ತಾರೆ. ಜೀಗ್ಲರ್, ಲೋಎಚ್, ನುವೆಲ್ ಮುಂತಾದ ಪ್ರಾಣಿಶಾಸ್ತ್ರಜ್ಞರು ತಮ್ಮ ನಿರೂಪಣೆಯಲ್ಲಿ ಅರಿವನ್ನು ಪ್ರಸ್ತಾಪಿಸುವುದೇ ಇಲ್ಲ. ಅವರ ಪಾಲಿಗೆ ಅರಿವು ಉಚ್ಚಪ್ರಾಣಿಗಳಲ್ಲಿ ಎಂದರೆ ವಾನರ, ಮನುಷ್ಯ ಇವರಲ್ಲಿ ಆಗಾಗ ಕಾಣಿಸುವ ವ್ಯಾಪಾರವಿಶೇಷ. ಇದೂ ಮಿದುಳು, ನರಮಂಡಲಗಳ ಒಂದು ವ್ಯವಸ್ಥೆಯ ಅಭಿವ್ಯಕ್ತಿ ಅಷ್ಟೆ. ಆದರೆ ಈ ವಾದಕ್ಕಿಂತ ಹೆಚ್ಚು ಪ್ರಚಲಿತವಾದ ವಾದವೆಂದರೆ ಮಗು ಹುಟ್ಟಿದಾಗಲೇ ಅರಿವು ಮೂಡುವುದೆಂದೂ ಅರಿವಿನಿಂದಲೇ ಎಲ್ಲ ಕ್ರಿಯೆಗಳೂ (ದೈಹಿಕ, ಮಾನಸಿಕ) ವ್ಯವಸ್ಥಿತವಾಗುವುದೆಂದೂ ಹೇಳುವುದು. ಪ್ರಾಣಿಗಳ ಸಂತತಿಯಲ್ಲಿ ಮೊದಲ ಸ್ಥಿತಿಗಳಲ್ಲಿ ಉತ್ಕ್ಷೇಪಕ್ರಿಯೆಗಳಾಗುತ್ತವೆ ಎಂಬ ನಿಲುವನ್ನು ತಳೆದಿದ್ದಾರೆ. ಪ್ರಯತ್ನದ ಮಿತವ್ಯಯ ಎಂಬ ನಿಯಮದ ಪ್ರಕಾರ ಪ್ರತಿಯೊಂದು ಕ್ರಿಯೆಯೂ ಮತ್ತೆ ಮತ್ತೆ ಪುನರಾವರ್ತಿತವಾದಾಗ ಅರಿವಿನ ಒತ್ತಾಸೆ ಕಮ್ಮಿಯಾಗುತ್ತ ಬಂದು ಕಡೆಗೆ ಆ ಕ್ರಿಯೆ ಸ್ವಚ್ಛಂದವಾಗಿಬಿಡುತ್ತದೆ. (ಸ್ಪಾನ್ಟೇನಿಯಸ್). ಇದು ಅರಿವು ಉತ್ಕ್ಷೇಪಕ್ರಿಯೆ ಆಗುವ ಬಗೆ. ಯಾವುದಾದರೂ ಕಾರಣದಿಂದ ಆ ಕ್ರಿಯೆಗೆ ಅಡಚಣೆ ಬಂದಾಗ ಮಾತ್ರ ಅರಿವು ಒಡನೆಯೇ ಉಂಟಾಗುತ್ತದೆ. ಕೋಣೆಯಲ್ಲಿ ದಿನಂಪ್ರತಿ ಕಾಣುವ ವಸ್ತುಗಳು ನಮ್ಮ ಅರಿವಿಗೆ ಮೀರಿ ಇರುತ್ತವೆ; ಆದರೆ ಆ ವಸ್ತುಗಳಲ್ಲಿ ಒಂದು ಕಾಣದಾದಾಗ ಅಥವಾ ಹೊಸದೊಂದು ವಸ್ತು ಸೇರಿದಾಗ, ಅಥವಾ ಇದ್ದ ಭಂಗಿ ಬದಲಾದಾಗ ತಟ್ಟನೆ ಅರಿವು ಮೂಡುತ್ತದೆ; ಪ್ರತ್ಯಕ್ಷದ ಪ್ರಕಾರಗಳಲ್ಲಿ ಇದೂ ಒಂದು. ಹೀಗೆ ಒಂದೇ ಪ್ರೇರಕನೆಲೆಗೆ ಸಮನ್ವಯ ಮಾಡಿಕೊಂಡಾಗ ಅರಿವು ಜಾರುವುದನ್ನು ಇಂದ್ರಿಯಾನುಭವದ ಮಟ್ಟಕ್ಕೆ ಹೊಂದಿಸುವುದು ಎಂದು ವ್ಯವಹರಿಸುತ್ತಾರೆ. ಇಲ್ಲಿ ಅರಿವು ಇಲ್ಲವೆಂದಲ್ಲ; ಅರಿವಿನೊಂದಿಗೆ ಇರಬೇಕಾದ ಅವಧಾನ ಇಲ್ಲವೆಂದು.

ಪ್ರಾಣಿಯ ಬಾಳುವೆಯಲ್ಲಿ ಅರಿವು ಬೆಳೆಯುವ ನೆಲೆ ಎನ್ನುವ ಕಲ್ಪನೆ ಇದೆ. ಇದಕ್ಕೆ ಸಂಬಂಧಿಸಿದಂತೆ ನರಮಂಡಲದ ವ್ಯವಸ್ಥೆ ಹೆಚ್ಚು ಹೆಚ್ಚಾಗಿ ಕ್ರಿಯಾಶೀಲವಾಗಿ ಸಮರ್ಥವಾಗುವುದು. ದೈಹಿಕ ವ್ಯವಸ್ಥೆ ಅಚ್ಚುಕಟ್ಟಾಗುವುದು. ಮಾನಸಿಕ ಪ್ರವೃತ್ತಿಗಳು ಅಭಿವ್ಯಕ್ತವಾಗುವುವು.

ಅರಿವಿನ ಪ್ರಕಾರಗಳನ್ನು ದೈಹಿಕ ಉತ್ಕ್ಷೇಪಕ್ರಿಯೆಗಳು, ಇಂದ್ರಿಯಾನು ಭವಗಳು, ಪ್ರತ್ಯಕ್ಷಾನುಭವ, ಅನಧಾನ, ಸಹಜ ಪ್ರವೃತಿಗಳು (ಇನ್‌ಸ್ಟಿಂಕ್ಟ್ಸ್), ಭಾವಪ್ರವೃತಿಗಳು, ಸಂಕಲ್ಪಸ್ಮೃತಿ, ಕಲ್ಪನೆ (ಇಮೇಜರಿ), ಭಾಷೆ ಮತ್ತು ಚಿಂತನೆ ಎಂದು ವಿಭಾಗ ಮಾಡುವ ಪದ್ಧತಿ ಇದೆ. ಉತ್ಕ್ಷೇಪಕ್ರಿಯೆಗಳನ್ನು ಅನಭಿವ್ಯಕ್ತ ಅರಿವು ಎಂದು ವ್ಯಹರಿಸುತ್ತಾರೆ. ಜೆ.ಎ.ಗಿಲ್ಬರ್ಟ್ ಎಂಬ ಮನಶ್ಶಾಸ್ತ್ರಜ್ಞ ಯೇಲ್ ವಿಶ್ವವಿದ್ಯಾಲಯದ ಪ್ರಯೋಗಶಾಲೆಯಲ್ಲಿ ಮಕ್ಕಳ ಇಂದ್ರಿಯಾನುಭವಗಳಿಗೆ ಸಂಬಂಧಪಟ್ಟಂತೆ ಸ್ವಾರಸ್ಯವಾದ ಸಂಶೋಧನೆಗಳನ್ನು ನಡೆಸಿ ಮೊದ ಮೊದಲು ಇಂದ್ರಿಯಾನುಭವಗಳಿಗೆ ವಿಮುಖವಾದ ಮಗು ಬರುಬರುತ್ತ ವಿವೇಕವನ್ನು ಬೆಳೆಸಿಕೊಂಡು ಬರುವ ಬಗೆಯನ್ನು ಈ ಪ್ರಯೋಗಗಳ ಆಧಾರದ ಮೇಲೆ ನಿರೂಪಿಸಿದ್ದಾನೆ. ವಿವೇಕದ ಆವಿಷ್ಕರಣ ಅರಿವಿನ ಪ್ರಭಾವದಿಂದ ಎಂಬುದು ಅವನ ವಾದ. ಪ್ರತ್ಯಕ್ಷಾನುಭವದಲ್ಲೂ ಆರಂಭದಿಶೆಯಲ್ಲಿ ಐಂದ್ರಿಯ ಉತ್ಕ್ಷೇಪಗಳ ಪಾತ್ರವೇ ಹೆಚ್ಚಾಗಿದ್ದು ಅಭ್ಯಾಸಬಲದಿಂದ, ವಿವೇಚನಾಶಕ್ತಿ ಬರುಬರುತ್ತಾ ಮೂಡುವುದೆಂದು ಪ್ರೆಯರ್ ಲಾಯ್ಡ್ ಮೋರ್ಗನ್, ಮೆಗ್‌ಡೂಗಲ್, ಮುಂತಾದ ಪ್ರಯೋಗಶೀಲ ಮನಶ್ಶಾಸ್ತ್ರಜ್ಞರು ಸ್ಪಷ್ಟಪಡಿಸಿದ್ದಾರೆ. ಇಂದ್ರಿಯಾನುಭವಗಳಲ್ಲಿ ಮೂಲಭೂತವಾದ ವರಣಪ್ರವೃತ್ತಿ (ಸೆಲೆಕ್ಟಿವಿಟಿ) ಇದ್ದೇ ಇರುವುದೆಂದು ಹಲವಾರು ಸಂಶೋಧನೆಗಳು ತೋರಿಸಿವೆ. ಇದರ ಆಧಾರದ ಮೇಲೆ ಸಂಕಲ್ಪವೂ ಅವಧಾನವೂ ಕಾಣಿಸಿಕೊಳ್ಳುವವು. ಈ ಕ್ರಿಯೆಗಳಿಗೆ ಅರಿವಿನ ಒತ್ತಡ ಎನ್ನುತ್ತಾರೆ. ಸಮಾವಸ್ಥಾನದ (ಹೋಮೋಸ್ಟ್ಯಾಟಿಸ್) ಪ್ರತಿಪಾದಕರು ಅರಿವನ್ನು ಈ ದೃಷ್ಟಿಯಿಂದಲೇ ವಿಮರ್ಶೆ ಮಾಡಿದ್ದಾರೆ. ಅರಿವು ಅವಧಾನದೊಂದಿಗೆ ಸೇರಿದಾಗ ಜ್ಞಾನಕ್ಕೆ ನೆರವಾಗುತ್ತದೆ.

(ಎಸ್.ಕೆ.ಆರ್.)

**ಅರಿವು² :** ಅರಿವುಗಳು ನಮ್ಮ ಮೈಯ ಹೊರಗಣ ಪ್ರಪಂಚದ ತಿಳಿವಳಿಕೆಯನ್ನೇ ಅಲ್ಲದೆ, ಮೈ ಒಳಗೂ ಆಗುತ್ತಿರುವುದನ್ನೂ ತಿಳಿಸಿಕೊಡುವವು. ನಮ್ಮ ಮೈ ಸರಿಯಾಗಿದೆಯೋ ಇಲ್ಲವೋ ಗೊತ್ತಾಗುವುದೂ ಇವುಗಳಿಂದಲೇ. ಅಚ್ಚ ಅರಿವು ಕೇವಲ ಮನಸ್ಸಿನ ಕಲ್ಪನೆ, ಎಳೆಗೂಸಿನ ಅನುಭವವದು. ಆದರೆ ಬರಬರುತ್ತ ಅನುಭವಗಳೊಂದಿಗೆ ಸೇರಿಕೊಂಡು ಅರಿವುಗಳಿಗೆ ಬೇರೆ ಬೇರೆ ಅರ್ಥಗಳು ಬರುತ್ತವೆ. ಅಂಥ ಅನುಭವಗಳನ್ನು ಕಣ್ಣರಿಕೆಗಳು (ಪರ್ಸೆಪ್ಷನ್ಸ್) ಎನ್ನಬಹುದು. ಕಣ್ಣಿಗೆ ಕಂಡಿದ್ದರಿಂದ ನಾವು ಅರಿವನ್ನು ಜೋಡಿಸುವುದು ಸಾಮಾನ್ಯ. ಆದರೆ ನಮಗೆ ತೋರಿಬರುವ ಅರಿವುಗಳು ಕೆಲವು ಸಮಯಗಳಲ್ಲಿ ನಮ್ಮನ್ನು ತಪ್ಪು ದಾರಿಗೆ ಎಳೆಯಬಹುದು.

ಎಲ್ಲ ಪ್ರಾಣಿಗಳೂ ಅರಿವಿಗೆ ಈಡಾಗುವಂತಿದ್ದರೂ ಅವುಗಳ ಬೇಡಿಕೆಗಳಿಗೆ ತಕ್ಕಂತೆ ಅರಿವಿನ ಆಳವು ಹೆಚ್ಚು ಕಡಿಮೆ ಆಗುವುದು. ನೋಟದ, ಆಲಿಸುವ ಅರಿವುಗಳು ಕೆಲವು ಪ್ರಾಣಿಗಳಲ್ಲಿ ಇರುವಷ್ಟು ಮಾನವನಲ್ಲೂ ಇರವು. ಕ್ರಿಮಿಕೀಟಗಳಲ್ಲಿ ಮುಟ್ಟುವ ಅರಿವು ಎಲ್ಲಕ್ಕೂ ಮುಖ್ಯ. ಒಟ್ಟಿನಲ್ಲಿ, ಬುದ್ಧಿವಂತಿಕೆಯ ಹೆಚ್ಚಳಿಕೆಗೆ ನೋಡುವುದೂ ಕೇಳುವುದೂ ಬಲಗೊಂಡು, ಉಳಿದವು ಅಷ್ಟಾಗಿ ಮುಖ್ಯವಾಗಿರವು. ಹೀಗೆ, ಮೂಡುವುದರಲ್ಲಿ ನಾಗರಿಕ ಮಾನವ ತೀರ ಹಿಂದುಳಿದಿದ್ದಾನೆ.

**ಅರಿವಿನ ಲಕ್ಷಣಗಳು:** ಗುಣ, ತೀವ್ರತೆ, ಅವಧಿ, ಹರವು–ಇವು ಅರಿವಿನ ಮುಖ್ಯ ಲಕ್ಷಣಗಳು. ಬಗೆಬಗೆಯ ಅರಿವುಗಳನ್ನೆಲ್ಲ ಮೈಯಲ್ಲಿರುವ ವಿಶೇಷೀಕೃತ ಅಂಗಾಂಶಗಳಾದ (ಎಂಡಾರ್ಗನ್ಸ್) ಪಡೆಕಗಳು (ರಿಸೆಪ್ಟರ್ಸ್) ಗುರುತಿಸುತ್ತವೆ. ಬೇರೆ ಬೇರೆ ಅರಿವುಗಳಿಗೆ ಬೇರೆ ಬೇರೆ ಪಡೆಕಗಳಿವೆ. ಚೋದನೆಯಾದಾಗ ಪಡೆಕಗಳು ಅರಿವಿನ ನರಗಳ ಮೂಲಕ ನರದ ಆವೇಗಗಳನ್ನು (ಇಂಪಲ್ಸಸ್)ಕಳುಹಿಸುತ್ತವೆ. ಮಿದುಳಲ್ಲಿರುವ ಅರಿವಿನ ವಿಭಾಗಕ್ಕೆ ಆವೇಗಗಳು ತಲುಪಿದಾಗ ಮಾತ್ರ ಆ ಒಂದು ಅರಿವಿನ ಅನುಭವ ಆಗುತ್ತದೆ. ಬೇರೆ ಬೇರೆ ಬಗೆಗಳ ಚೋದನೆಗಳನ್ನು ಪಡೆವ ಬಗೆಬಗೆಯ ಪಡೆಕಗಳು ಎಲ್ಲ ಬಗೆಯ ಚೋದನೆಗಳಿಗೂ ಈಡಾಗುತ್ತವೆ. ಹೀಗಿದ್ದರೂ ಒಂದೊಂದು ಪಡೆಕ ವಿಶೇಷವಾಗಿ ಯಾವುದಾದರೂ ಒಂದು ಬಗೆಯ ಚೋದನೆಯನ್ನು ಪಡೆಯುವುದು. ಆಯಾ ಇಂದ್ರಿಯ ಮತ್ತದರ ನರಗಳಂತೆ ಅರಿವಿನ ಗುಣ ಇರುತ್ತದೆ. ಕಣ್ಣೊಳಗಿರುವ ನೋಟದ ಪಡೆಕಗಳಾದ ಸರಳುಗಳು, ಸಂಕಗಳು (ರಾಡ್ಸ್, ಕೋನ್ಸ್)ಇದರ ಉದಾಹರಣೆ. ಬೆಳಕಿನ ಕಿರಣಗಳು ಇವುಗಳ ಮೇಲೆ ಬಿದ್ದಾಗ ಚೋದಿಸುತ್ತವೆ. ಕಣ್ಣು ಮುಚ್ಚಿ, ಕಣ್ಣುಗುಡ್ಡೆಯನ್ನು ಒತ್ತಿದಾಗ ನೋಟದ ಅರಿವು ಗೊತ್ತಾಗುವಂತೆ ಈ ಪಡೆಕಗಳನ್ನು ಯಾಂತ್ರಿಕವಾಗೂ ಚೋದಿಸಬಹುದು,. ಒತ್ತಡದ ಶಕ್ತಿಗಿಂತಲೂ ಬೆಳಕಿನ ಕಿರಣಗಳ ಶಕ್ತಿ ಅತೀ ಕಿರಿದು. ಇದನ್ನು ಸಾಕಷ್ಟು ಚೋದನೆ ಎನ್ನಬಹುದು. ಒಂದು ಗೊತ್ತಾದ ಪಡೆಕವನ್ನು ಯಂತ್ರ, ಕಾವು, ವಿದ್ಯುತ್ತ್ ಇತ್ಯಾದಿ ಯಾವ ವಿಧಾನದಿಂದಲೇ ಚೋದಿಸಲಿ, ಅದರ ಪರಿಣಾಮ ಯಾವಾಗಲೂ ಒಂದೇ. ನೋಟದ ಪಡೆಕಗಳಾದ ಸರಳು, ಸಂಕಗಳು ಚೋದನೆ ಆದಾಗಲೆಲ್ಲ ನೋಟದ ಅರಿವನ್ನೇ ಕೊಡುತ್ತವೆ. ಕಣ್ಣಿನ ನರವನ್ನು ಚೋದಿಸಿದರೆ ಬೆಳಕಿನ ಅರಿವು ಮೂಡುವುದೇ ಹೊರತು ಬೇರೇನೂ ಆಗದು. ಕಿವಿಯ ನರದಿಂದ ಆಲಿಸಬಹುದು. ಇದನ್ನು ವಿಶಿಷ್ಟ ನರದ ಶಕ್ತಿಗಳ ಸಿದ್ಧಾಂತ ಎನ್ನುವುದುಂಟು. ಒಂದೊಂದು ಬಗೆಯ ಅರಿವಿನಲ್ಲೂ ಹಲವಾರು ಕಿರಿಯ ಬಗೆಗಳನ್ನು ಗುರುತಿಸಬಹುದು. ಎಚ್ಚರದಿಂದ ನಯವಾಗಿ ಚರ್ಮವನ್ನು ಚೋದಿಸಿದರೆ, ಚೋದಿಸಿದ ಗೊತ್ತಾದ ತಾವಿನಂತೆ ಒತ್ತಡ, ನೋವು, ಕಾವು, ತಂಪುಗಳ ಅರಿವುಗಳು ಏಳುತ್ತವೆ.

ಭೇದಗಾಣಿಕೆಯ ನಿಯಮದಂತೆ (ಲಾ ಆಫ್ ಕಾಂಟ್ರಾಸ್ಟ್) ನಮ್ಮ ಅರಿವುಗಳಲ್ಲಿ ಹೆಚ್ಚು ಕಡಿಮೆ ಆಗುವುದು. ಒಂದು ವಸ್ತುವಿನ ಹೊಳಪು, ಬಣ್ಣಗಳು ಅದೇ ಹೊತ್ತಿನಲ್ಲೋ ಆಮೇಲೊ ಕಣ್ಣಿಗೆ ಬೀಳುವ ಇನ್ನೊಂದರ ಹೊಳಪು, ಬಣ್ಣಗಳ ಅರಿವಿಗೆ ಅಡ್ಡಬರುತ್ತದೆ. ಕಣ್ಣು ಕೋರೈಸುವ ಏನನ್ನಾದರೂ ನೋಡಿ, ಬೇರೆಡೆ ಕಣ್ಣು ತಿರುಗಿಸಿದರೆ ಅದರ ಪೂರಕ (ಕಾಂಪ್ಲಿಮೆಂಟರಿ) ಬಣ್ಣವೂ ಹೊಳಪಿನ ಎದುರು ಮಟ್ಟವೂ ಎರಡನೆಯ ವಸ್ತುವಿನ ಬಣ್ಣ, ಹೊಳಪುಗಳೊಂದಿಗೆ ಬೆರೆಯುತ್ತವೆ. ಸುತ್ತಣದು ಕಪ್ಪಾಗಿದ್ದರೆ ನಡುವೆ ಇರುವ ಹೊಳೆವ ವಸ್ತು ಇನ್ನಷ್ಟು ಹೊಳೆವಂತೆ ತೋರುವುದು; ಪರಿಸರ ಹೊಳೆಯುತ್ತಿದ್ದರೆ ಕಪ್ಪು ವಸ್ತು ಇನ್ನೂ ಕಪ್ಪಾಗಿ ಕಾಣುವುದು. ಅಕ್ಕಪಕ್ಕಗಳಲ್ಲಿ ಇರಿಸಿದ ಬಣ್ಣಗಳೂ ಬೆರೆತಂತೆ ತೋರುವವು. ಹೀಗೆ ತೋರಿಕೆಯಲ್ಲಿ ಅರಿವು ಬೇರೆಯಾಗಿ ಕಾಣಬಹುದು.

ಅರಿವಿನ ತೀವ್ರತೆಯನ್ನು ಗಮನಿಸಬಹುದು. ಒಂದು ನಾದ ಜೋರಾಗೋ ಮೆತ್ತಗೋ ಇರಬಹುದು. ತೀವ್ರತೆ ಹೆಚ್ಚಿದಷ್ಟೂ ಅರಿವಿನ ನರದಲ್ಲಿ ಸಾಗುವ ಆವೇಗಗಳೂ ಹೆಚ್ಚಿರುವುದರಿಂದ ಇದು ಗೊತ್ತಾಗುತ್ತದೆ. ಬಹಳ ಆವೇಗಗಳು ಮಿದುಳಿಗೆ ಹೋದಾಗ, ತೀವ್ರತೆ ತಿಳಿವುದು. ತೀವ್ರತೆ ಹೆಚ್ಚಿದಂತೆಲ್ಲ ಇನ್ನಷ್ಟು ಪಡೆಕಗಳ ಚೋದನೆ ಆಗುವುದು ಇನ್ನೊಂದು ರೀತಿ. ಅರಿವಿನ ತೀವ್ರತೆ ಬಲು ಕಡಿಮೆಯಾಗಿದ್ದರೆ ಗಮನ ಸೆಳೆಯದಿರಬಹುದು. ಬಲು ಬಲವಾದರೆ ಅರಿವೇ ಬದಲಾಗಿ ನೋವಾಗಬಹುದು. ಕಣ್ಣು ಕುಕ್ಕುವ ಬೆಳಕಿನಿಂದ ಕಣ್ಣಿಗೆ ನೋವು ಆಗುವಂತೆ, ಗುಯ್ಯುಗುಡಿಕೆ, ಕಚಗುಳಿಗಳಂತೆ ಅರಿವುಗಳು ತೀರ ದುರ್ಬಲವಾಗಿದ್ದರೆ ಬೇಡವೆನಿಸುತ್ತವೆ. ಅರಿವಿಗೆ ಬರಬೇಕಾದರೆ, ಒಂದೊಂದು ಚೋದನೆಯೂ (ಸ್ಟಿಮ್ಯುಲಸ್) ಗೊತ್ತಾದ ಅವಧಿ ಉಳಿಯಬೇಕು. ಒಂದೇ ಚೋದನೆಯನ್ನು ಎಡೆಬಿಡದೆ ಮಾಡುತ್ತಿದ್ದರೆ, ಬರಬರುತ್ತ ಅರಿವಿನ ತೀವ್ರತೆ ತಗ್ಗುತ್ತ ಹೋಗಿ ಕೊನೆಗೆ ನಿಂತೇ ಬಿಡಬಹುದು. ಒಂದೇ ಬಣ್ಣವನ್ನು ನೋಡುತ್ತಲೇ ಇದ್ದರೆ, ಆ ಬಣ್ಣ ಕುಂದುವಂತೆ ತೋರುತ್ತದೆ. ಬಟ್ಟೆಗಳನ್ನು ತೊಟ್ಟುಕೊಳ್ಳುವಾಗ ನಮಗೆ ತಾಕುವ ಅರಿವು ಇದ್ದರೂ ಆಮೇಲೆ ಅದು ನಮ್ಮ ಗಮನಕ್ಕೆ ಬರದಾಗುತ್ತದೆ. ಇದಕ್ಕೆ ಹೊಂದಾಣಿಕೆ (ಅಡಾಪ್ಟೇಷನ್) ಎಂದಿದೆ. ಪಡೆಕಗಳನ್ನು ಒಂದೇ ಸಮನಾಗಿ ಚೋದಿಸುತ್ತಿದ್ದರೆ ಅರಿವಿನ ನರದಲ್ಲಿ ಆವೇಗಗಳು ಹುಟ್ಟದಾಗಿ ಅಣಗುತ್ತವೆ. ಆದರೆ ಸದ್ದಿನ ಕೆಲವು ಅರಿವುಗಳು ಏರುವಂತೆ ತೋರುತ್ತ ನೋವಿಡುತ್ತವೆ.

ಇವೆಲ್ಲ ಲಕ್ಷಣಗಳಲ್ಲೂ ಬಲು ಮುಖ್ಯವಾದುದು ಗುಣ. ಇವುಗಳ ಹೆಚ್ಚಿನ ನಿಜಗೆಲಸವೆಂದರೆ, ಅರಿವಿನ ಮರುವರ್ತನೆಯಾಗುವ ಚಲನೆ. ಈ ಚಲನೆ ತಂತಾನಾಗಿ ಹಿಮ್ಮರಿವ (ರಿಫ್ಲೆಕ್ಸ್) ಇಲ್ಲವೇ ಬೇಕಾಗಿ ಮಾಡಿದ್ದಾಗಿರಬಹುದು. ಏನಾದರೂ ಸದ್ದಾದರೆ ಸರಕ್ಕನೆ ಹಾರಿ ಮುಂದಿನ ಕೆಲಸ ಕೈಗೊಳ್ಳಬಹುದು. ಇಂಥ ಬೇರೆ ಬೇರೆ ಚೋದನೆಗಳಿಂದ ಪರಿಸರದೊಂದಿಗೆ ನಾವು ಹೊಂದಿಕೊಂಡು ಮೇಲೆ ಬೀಳುವ, ಕಾಪಾಡಿಕೊಳ್ಳುವ ಇಲ್ಲವೇ ಓಡಿಹೋಗುವ ವರ್ತನೆ ತೋರಲು ಅರಿವುಗಳು ನಮಗೆ ನೆರವಾಗುತ್ತವೆ.

ಇಂದ್ರಿಯಗಳ ಚೋದನೆಯಾದರೆ ಒಂದು ವಸ್ತುವಿನ ಗುಣಕ್ಕಿಂತಲೂ ಹೆಚ್ಚಾಗಿ ವಸ್ತುವೇ ನಮ್ಮ ಗಮನಕ್ಕೆ ಬರುವುದು. ಇದರಿಂದಲೇ ಬಹುಪಾಲು ಅರಿವುಗಳು ತಿಳಿಸಿ ಕೊಡುತ್ತವೆ. ನಮ್ಮ ಅನುಭವದಂತೆ ಅರಿವುಗಳಿಗೆ ನಾವು ಅರ್ಥಕೊಟ್ಟು ಬರುಬರುತ್ತ ನಮ್ಮ ಚಿಂತನೆ, ಬುದ್ಧಿಗೆ ತಳಹದಿ ಹಾಕುವುದರಿಂದ, ಅರಿವುಗಳ ಮೂಲಕವೇ ಹೊರಗಣ ಪ್ರಪಂಚ ತಿಳಿವಳಿಕೆ ಬೆಳೆವುದು. ಪಡೆಕಗಳನ್ನು ಒಂದು ಚೋದನೆ ಚೋದಿಸಿದಾಗ ಎದ್ದ ಆವೇಗಗಳು ಆ ಪಡೆಕಗಳಿಗೆ ಸಂಬಂಧಿಸಿದ ಅರಿವಿನ ನರಗಳ ಮೂಲಕ ಸಾಗಿ ಕೊನೆಗೆ ಮಿದುಳಲ್ಲಿನ ಅರಿವಿನ ಪ್ರದೇಶವನ್ನು ಸೇರುತ್ತದೆ. ಈ ನರಗಳ ದಾರಿಯಲ್ಲಿ ಎಲ್ಲಿ ಚೋದಿಸಿದರೂ ಸರಿಯೆ ಅದರ ಅರಿವನ್ನು ಯಾವಾಗಲೂ ಆ ನರಗಳ ಪಡೆಕಗಳ ತಾವಿಗೇ ಸೂಚಿಸುತ್ತದೆ. ಇದನ್ನು ಚಾಚಿಕೆಯ ನಿಯಮ (ಲಾ ಆಫ್ ಪ್ರೊಜೆಕ್ಷನ್) ಎನ್ನುವುದುಂಟು. ಉದಾಹರಣೆಯಾಗಿ, ನೋವಿನ ಅರಿವನ್ನು ಹೊತ್ತು ಕೈಗಳಿಂದ ಮಿದುಳಿಗೆ ಹೋಗುತ್ತಿರುವ ಅರಿವಿನ ನರಗಳನ್ನು ಬೆನ್ನುಹುರಿಯಲ್ಲಿ ಚೋದಿಸಿದರೂ ಕೈಯಲ್ಲಿ ನೋವಿಡುವ ಅರಿವಾಗುತ್ತದೆ.

**ಅರಿವಿನ ಮೂಲಗಳು :** ಅರಿವುಗಳನ್ನು ಸಾಮಾನ್ಯವಾಗಿ ವಿಶೇಷ ಇಂದ್ರಿಯಗಳವು (ಸ್ಪೆಷಲ್ ಸೆನ್ಸಸ್), ಒಳಾಂಗಗಳವು (ವಿಸರಲ್) ಎಂದು ವಿಂಗಡಿಸಬಹುದು. ವಿಶೇಷದ ವರ್ಗದಲ್ಲಿ ಹೊಳಪು, ಬಣ್ಣಗಳ ನೋಟದವೂ; ದನಿ ನಾದಗಳ ಆಲಿಕೆಯವೂ; ವಾಸನೆ, ರುಚಿಗಳವೂ: ಮುಟ್ಟುವೆ, ಒತ್ತಡ, ಕಾವು, ತಂಪು ನೋವುಗಳ ಚರ್ಮದವೂ ಸೇರಿವೆ. ಒಳಾಂಗಗಳಲ್ಲಿ ಸ್ನಾಯು, ಕಂಡರ, ಕೀಲುಗಳಿಂದೇಳುವ (ಚರಿಕರಿವಿನವು–ಕೈನೀಸ್ತೆಟಿಕ್) ಅರಿವುಗಳೊಂದಿಗೆ ಬೇರೆ ಬೇರೆ ಒಳಗಣ ಅಂಗಗಳು ಎಚ್ಚರದ ತಿಳಿವಿಗೆ ಕಳುಹುವ ಸುದ್ದಿಗಳೂ ಇವೆ. ದಣಿವು, ಉತ್ಸಾಹ, ಬಾಯಾರಿಕೆ, ಹಸಿವು, ಲಿಂಗಚಿಂತನೆ, ಯಾರಿಗೂ ಬೇಕೆನಿಸದ ಓಕರಿಕೆ, ಶೂಲೆಗಳು ಇವೆಲ್ಲ ಒಳಾಂಗದ ಅರಿವುಗಳು. ಒಂದು ಅಂಗದಿಂದ ಏಳುವ ನೋವು ಹಲವೇಳೆ ಮೈಯಲ್ಲಿ ಇನ್ನೆಲ್ಲೋ ತೋರುವುದು. ಗುಂಡಿಗೆಯಲ್ಲಿನ ನೋವು ಎಡತೋಳಿನಲ್ಲಿ ಕಾಣಬಹುದು; ವಪೆಯದು ಬಲ ಹೆಗಲಲ್ಲಿ ತೋರುವುದು.

ಚರ್ಮದಲ್ಲಿ ಒಂದೊಂದು ಬಗೆಯ ಚೋದನೆಯೂ ಚರ್ಮದ ಹಲವಾರು ಅರಿವುಗಳಿಗೆ ಕಾರಣವಾಗುವುದು. ಯಾವ ನರದ ಅಂಗಾಂತ ಚೋದನೆಯಾಗಿದೆ ಎಂಬಂತೆ ಕೆಲವೆಡೆ ತಂಪು, ಕಾವು, ನೋವು ಇಲ್ಲವೆ ಒತ್ತಡ ತಿಳಿಯುತ್ತದೆ. ಆದರೆ ನಿಜವಾಗಿ

ಏನನ್ನಾದರೂ ಮುಟ್ಟಿದರೆ, ಹೆಚ್ಚು ಭಾಗ ತಾಕುವುದರಿಂದ ಹಲತೆರನ ಅರಿವುಗಳೆದ್ದು ಕಾವು, ಗಡುಸು, ಮೆತುವು, ಒರಟುತನ, ನುಣುಪು, ತೇವ ಇತ್ಯಾದಿ ಒಂದೇ ಬಾರಿಗೆ ಗೊತ್ತಾಗುತ್ತವೆ. ಈ ಶತಮಾನದ ಮೊದಲಲ್ಲಿ ಚರ್ಮದ ಅರಿವುಗಳೆಲ್ಲ ಮುಟ್ಟುವ ಅರಿವಿನ ಬಗೆಗಳೆಂಬ ತಪ್ಪು ಕಲ್ಪನೆಯಿತ್ತು. ಕೆರೆತ, ಕಚಗುಳಿ ಇತ್ಯಾದಿ ಅರಿವುಗಳು ಚರ್ಮದಲ್ಲಿನ ನರಗಳ ಅಂಗಾಂತಗಳಲ್ಲಿ ಆಗುವ ರಕ್ತ ಹರಿವಿನ ವ್ಯತ್ಯಾಸಗಳಿಂದ ಆಗುತ್ತವೆ. ಚರ್ಮದ ಎಲ್ಲೆಡೆಗಳಲ್ಲೂ ಅರಿವುಗಳ ತಿಳಿವಳಿಕೆ ಒಂದೇ ಸಮನಾಗಿರದು. ಹಿಂಗೈಗಿಂತಲೂ ಬೆರಳ ತುದಿಗಳು ಚುರುಕಾಗಿರುತ್ತವೆ. ಎದೆಗಿಂತಲೂ ಬೆನ್ನು ಚರ್ಮ ಮಂದ. ನಾಲಗೆಯಲ್ಲಂತೂ ವ್ಯತ್ಯಾಸಗಳು ಬಲು ಚುರುಕಾಗಿ ಗೊತ್ತಾಗುತ್ತವೆ. ಜೀವಿಯನ್ನು ಕಾಪಿಡುವುದಕ್ಕಾಗಿ ಬಹುವಾಗಿ ಬೇಕಿರುವೆಡೆ ಅರಿವು ಬಲು ಚುರುಕು. ಮುಟ್ಟುವ ಅರಿವಿನಲ್ಲಿ ತಾಕಿದ ಜಾಗವನ್ನು ಖಚಿತವಾಗಿ ಗುರುತಿಸಬಹುದು (**ನೋಡಿ – ಚರ್ಮದ ಅರಿವಿನ ನಿಜಗೆಲಸಗಳು**).

ರುಚಿಯ ಮೂಲ ಅರಿವುಗಳು ನಾಲ್ಕು : ಹುಳಿ, ಉಪ್ಪು, ಕಹಿ ಮತ್ತು ಸಿಹಿ. ಉಳಿದ ರುಚಿಗಳು ಸಾಮಾನ್ಯವಾಗಿ ಇವುಗಳ ಬೆರಕೆ; ಕೆಲವೇಳೆ ಇವು ವಾಸನೆಯೊಂದಿಗೂ ಒಂದಿಷ್ಟು ಕೂಡಿರಬಹುದು. ಹುಟ್ಟಿದಾಗ ವಾಸನೆಯ ಅರಿವು ಬಲವಾಗಿರುತ್ತದೆ. ಮೂಗನ್ನು ಮುಚ್ಚಿ ಕೊಂಡರೆ, ನೆಗಡಿಯಿಂದ ಮೂಗು ಕಟ್ಟಿದರೆ ವಾಸನೆ ಕೆಟ್ಟು ರುಚಿಯೇ ಬೇರೆಯಾಗುತ್ತದೆ.

ಆರೋಗ್ಯದಲ್ಲಾಗಲೀ ಬೇನೆಯಲ್ಲಾಗಲಿ ಮೂಸುವ ಅರಿವು ಮಾನವನಲ್ಲಿ ಅಷ್ಟು ಮುಖ್ಯವಲ್ಲ. ವಾಸನೆಗಳನ್ನು ಗುರುತಿಸಲು ಯಾವುದರಿಂದ ಬಂದಿತೆಂದು ಹೇಳುತ್ತೇವೆ. ಒಳ್ಳೆಯದು ಕೆಟ್ಟದ್ದೆಂದು ಮಾತ್ರ ವಿವರಿಸುವೆವು. ಸುಮಾರು ಏಳನೆಯ ವರುಷದ ತನಕ ವಾಸನೆಯ ಅರಿವುಗಳ ವ್ಯತ್ಯಾಸಗಳು ಅಷ್ಟಾಗಿ ಗೊತ್ತಾಗವು (**ನೋಡಿ– ವಾಸನೆ ಮತ್ತು ರುಚಿ**).

ಹುಟ್ಟಿದ ಕೂಡಲೇ ಆಲಿಸುವ ಅರಿವುಗಳು ತೋರುತ್ತವೆ. ಎತ್ತರದ ಮಟ್ಟದ ಸದ್ದುಗಳು ಮೊದಲು ಗೊತ್ತಾಗುತ್ತವೆ. ಅಂಥ ಅರಿವುಗಳು ಕ್ರಮವಾದ ಅಲೆಗಳಲ್ಲಿ ಕಿವಿಯ ಮೇಲೆ ಬಿದ್ದರೆ ಗೊತ್ತಾದ ನಾದವಾಗಿರುವುದು. ಕ್ರಮಗೆಟ್ಟಿದ್ದರೆ ಸದ್ದು ಎನಿಸುವುದು. ಆಲಿಕೆಯಲ್ಲಿ ಬೇರೆ ಬೇರೆ ಸ್ವರಗಳನ್ನು ಗುರುತಿಸುವುದಲ್ಲದೆ ಯಾವ ದಿಕ್ಕಿಂದ ಬಂದಿದೆ ಎಂದೂ ತಿಳಿಯಬಹುದು(**ನೋಡಿ– ಕೇಳುವಿಕೆ**). ಒಳಗಿವಿಯಲ್ಲಿನ ಅರೆಸುತ್ತಿನ ಸಾಗಾಲುವೆಗಳೂ (ಸೆಮಿಸರ್ಕ್ಯುಲರ್ ಕೆನಾಲ್ಸ್) ಒಂದಿಷ್ಟು ಎಡೆಬಲದ (ಸ್ಟ್ಯಾಟಿಕ್) ಅರಿವುಗಳಿಗೆ ಮೂಲವಾಗುತ್ತವೆ. ಇದೆ ಆಳದರಿವು (ಪ್ರೋಪ್ರಿಯೋಸೆಪ್ಷನ್), ಮೈ ಇರವು, ಸಮತೋಲಗಳ ಈ ತಿಳಿವನ್ನು ಕೊಡಲು ಕಣ್ಣೂ ಕಿರ್ಮಿದುಳೂ (ಸೆರಿಬೆಲಂ) ನೆರವಾಗುತ್ತವೆ. ಗಾಡಿಯಲ್ಲೋ ಎತ್ತುಗೆಯಲ್ಲೋ (ಲಿಫ್ಟ್) ಹೋಗುವಾಗ ಆಗುವಂತೆ ಮೈ ಅಲುಗಾಡುವಾಗ ಇಂಥ ಅರಿವು ತಿಳಿಯುತ್ತದೆ. ಉಯ್ಯಾಲೆ, ಮೋಟಾರು, ವಿಮಾನ, ಹಡಗುಗಳಲ್ಲಿ ಸುತ್ತಿದಂತೆ, ಆಗಾಗ ತಲೆ ತಿರುಗಿದಂತಾಗಿ ಮೈ ಸಮತೋಲ ತಪ್ಪುವುದೂ ಇದರಿಂದಲೇ; ಓಕರಿಕೆ, ನರಳಿಕೆ, ವಾಂತಿ ಆಗುತ್ತದೆ.

ನೋಟದಲ್ಲಿ ಬೆಳಕು, ಕತ್ತಲೆಗಳೇ ಅಲ್ಲದೆ ಬಗೆಬಗೆಯ ಬಣ್ಣಗಳನ್ನೂ ಗುರುತಿಸಬಹುದು. ಬಹುಮಟ್ಟಿಗೆ ಇವೆರಡೂ ಬೆರೆತಿರುತ್ತವೆ. ಕೆಂಪು, ಹಳದಿ, ಹಸುರು, ನೀಲಿ ಮೂಲಬಣ್ಣಗಳು. ಉಳಿದವೆಲ್ಲ ಇವುಗಳ ಬೆರಕೆಗಳು, ಕೆಲವರಿಗೆ ಕೆಲವು ಬಣ್ಣಗಳು ಅರಿವಿಗೆ ಬಾರದೆ ಬಣ್ಣಗುರುಡಾಗಿರುವರು (**ನೋಡಿ– ನೋಟ**). ಪೂರ್ತಿ ಬಣ್ಣಗುರುಡಾಗಿದ್ದರೆ, ಎಲ್ಲ ಬಣ್ಣಗಳೂ ಬಿಳಿ, ಬೂದು ಕಪ್ಪುಗಳಾಗಿ ತೋರುತ್ತವೆ. ನೋಟದ ಅರಿವಿನಲ್ಲಿ ತರುವಾಯದ ಬಿಂಬಗಳು (ಆಫ್ಟರ್ ಇಮೇಜಸ್) ತೋರುವುದು ವಿಶೇಷ. ಕೋರೈಸುವ ಬೆಳಕನ್ನು ನೋಡಿ ಕಣ್ಣು ಮುಚ್ಚಿಕೊಂಡರೂ ತುಸು ಹೊತ್ತು ಬೆಳಕಿನ ಅರಿವು ಉಳಿವುದು. ಹಾಗೇ ಒಂದು ಬಣ್ಣವನ್ನೇ ನೋಡುತ್ತಿದ್ದರೆ ತರುವಾಯದ ಬಿಂಬ ಪೂರಕ–ಬಣ್ಣದಲ್ಲಿ ಇರುತ್ತದೆ; ನೀಲಿ ಬಣ್ಣ ಕಂಡಿದ್ದರೆ ಹಳದಿ ಉಳಿವುದು.

ಕೈಕಾಲುಗಳೂ ಮೈಯೂ ಯಾವ ಭಂಗಿ ಇರವುಗಳಲ್ಲಿವೆ ಎಂದು ತಿಳಿಸಿಕೊಡಲು, ಚರ್ಮದಾಳದಲ್ಲಿ ಸ್ನಾಯು, ಕಂಡರಗಳಿಂದ ಎಲುಬುಗಳ ರಚಗಟ್ಟುಗಳಿಂದ ಏಳುವ ಸ್ನಾಯುಸಂವೇದಿ (ಕೈನೀಸ್ತಟಿಕ್) ಅರಿವುಗಳಿವೆ. ಕಣ್ಣಿಂದ ನೋಡದಿದ್ದರೂ ಕೈಯಲ್ಲಿಟ್ಟ ವಸ್ತುಗಳ ವಿಚಾರವಾಗಿ ತಿಳಿವಳಿಕೆಗೂ (ಘನದರಿವು–ಸ್ಟೀರಿಯೊಗ್ನೋಸಿಸ್) ಇವೇ ಕಾರಣ. ಒಂದಕ್ಕೂ ಹೆಚ್ಚು ಬಗೆಗಳ ಅರಿವುಗಳು ಒಂದುಗೂಡಿ ಘನದರಿವು ಆಗುತ್ತದೆ. ಇದೊಂದು ಕೃತಕ (ಸಿಂತೆಟಿಕ್) ಅರಿವು. ಕಚಗುಳಿ, ತುರಿಕೆ, ಸೀನು, ಆಕಳಿಕೆ ಇಂಥವೇ. ಮೈಯೊಳಗಣ ಸ್ಥಿತಿಯನ್ನು ತಿಳಿಸಿಕೊಡುವ ಒಳಾಂಗಗಳ ಅರಿವುಗಳು ಭಾವ, ಉದ್ವೇಗಗಳಿಗೆ ನಿಕಟವಾಗಿ ಸಂಬಂಧಿಸಿರಬಹುದು. ಕೋಪ, ಮುನಿಸು, ಚಿಂತೆ, ಕಳವಳಗಳಲ್ಲಿ ಮೈಗೆ ಕಸಿವಿಸಿ ಆಗುವುದರ ಕಾರಣ ಇವೇ. ಅದಿರಿಕ ಅರಿವೂ ಒಂದಿದೆ. ಮೂಳೆಯ ಮೇಲೆ ಇರಿಸಿದ ಅದಿರುತ್ತಿರುವ ಶ್ರುತಿ ಕವೆಯಿಂದ(ಟ್ಯೂನಿಂಗ್‌ಫೋರ್ಕ್) ಇದು ಗೊತ್ತಾಗುವುದು. ಒತ್ತಡ ಬಿಟ್ಟು ಬಿಟ್ಟು ಬೀಳುವುದರಿಂದ ಹೀಗಾಗುತ್ತದೆ.

ಕೆಲವರಲ್ಲಿ ಹಲವಾರು ಅರಿವುಗಳು ಸೋಜಿಗವಾಗಿ ಬೆರೆಯುತ್ತವೆ. ಒಂದು ಅರಿವಿನ ಚೋದನೆಯಾದರೆ, ತಿಳಿವಿಗೆ ಬರುವುದು ಇನ್ನೊಂದು. ಇದಕ್ಕೆ ಕೂಡರಿವು (ಸೈನೀಸ್ತೀಸಿಯ) ಎಂದಿದೆ. ಸಂಗೀತ ಕೇಳುತ್ತಿದ್ದರೆ ಕೆಲವರಿಗೆ ಬಣ್ಣಗಳ ಅರಿವಾಗುವುದು.

**ಅರಿವೀಡುತನ:** ಕಣ್ಣು, ಕಿವಿ, ಚರ್ಮ, ನಾಲಗೆ, ಮೂಗು, ಒಳಾಂಗಗಳಿಂದ ಎಡೆಬಿಡದೆ ಸುದ್ದಿಗಳು ಮಿದುಳಿಗೆ ಸಾಗುತ್ತಿರುವುದರಿಂದ ಮಾನವನಿಗೆ ಪರಿಸರದ ತಿಳಿವಳಿಕೆ ಆಗುತ್ತದೆ. ಈ ಸುದ್ದಿಗಳನ್ನು ತಿಳಿವ ಬಲವೇ ಅರಿವೀಡುತನ (ಸೆನ್ಸಿಬಿಲಿಟಿ). ಈ ಬಲ ಒಬ್ಬೊಬ್ಬರಲ್ಲಿ ಒಂದೊಂದು ತರ. ಕಿವಿಯಿಂದ ಕೇಳುವುದನ್ನೇ ತೆಗೆದುಕೊಂಡರೆ ಎಲ್ಲೆಲ್ಲೂ ಸದ್ದಿಲ್ಲದಾಗ ನಾಲ್ಕೈದು ಕಿಲೊಮೀಟರುಗಳ ದೂರದಲ್ಲಿ ಪಟಾಕಿ ಹಾರಿಸಿದ್ದನ್ನು ಬಹಳ ಮಂದಿ ಕೇಳಿಸಿಕೊಳ್ಳಬಲ್ಲರು. ಇನ್ನು ಕೆಲವರು ಇನ್ನೂ ದೂರದ್ದನ್ನು ಕೇಳಿಸಿಕೊಳ್ಳುವರು. ನೋವು, ಬೆಳಕು, ಒತ್ತಡಗಳ ಅರಿವುಗಳಲ್ಲೂ ಅಷ್ಟೆ ನೋವು, ಮುಟ್ಟುವಿಕೆಗಳಿಗೆ ಮೈದುಡಿತದ ಕೂಲಿ ಆಳುಗಳಿಗಿಂತ ಪಟ್ಟಣಿಗರೇ ಸುಲಭವಾಗಿ ಈಡಾಗುವರು. ಓದಿದವರೂ ಕರಿಯರಿಗಿಂತ ಬಿಳಿಯರೂ ಈಡಾಗುವರು. ಉಪ್ಪು ಒಂದನ್ನು ಬಿಟ್ಟರೆ ರುಚಿ ಕಂಡುಕೊಳ್ಳುವುದರಲ್ಲಿ ಹೆಂಗಸರೇ ಮುಂದು; ವಾಸನೆ, ಆಲಿಕೆಗಳಲ್ಲಿ ಗಂಡಸರು ಮುಂದು. ಅಂತೂ ಒಬ್ಬರದಿದ್ದಂತೆ ಇನ್ನೊಬ್ಬರ ಕಾಣ್ಕೆ ಇರದು. ಒಬ್ಬರಲ್ಲೇ ಒಂದೊಂದು ಹೊತ್ತಿನಲ್ಲಿ ಒಂದೊಂದು ತೆರ. ಅರಿವೀಡುತನ ದಣಿವಾದಾಗ, ನಿದ್ದೆ ಬರುವಾಗ ಕುಂದಿರುವುದು. ಬಲು ಚಳಿಯಲ್ಲೂ ಅಷ್ಟೇ. ಅರಿವುಗಳಲ್ಲಿ ವಿಶೇಷವಾಗಿ ಮನಸ್ಸಿಟ್ಟರೆ ಅರಿವಿಗೆ ಈಡಾಗುವುದೂ ಹೆಚ್ಚುತ್ತದೆ.

ಮಿದುಳಿನ ರೋಗಗಳಲ್ಲಿ ಅರಿವೀಡುತನ ಏರುಪೇರಾಗುವುದು. ಕೆಲವು ಹುಚ್ಚರು 12–15 ಮೀ ದೂರದಲ್ಲಿ ಪಿಸುಮತಾಡಿದ್ದನ್ನೂ ಕೇಳಿಸಿಕೊಳ್ಳುವರು. ಉನ್ಮಾದವೇರಿದ ಹುಡುಗಿಯರೂ ಸದ್ದುಗಳಿಗೆ ಅಷ್ಟೇ ಸುಲಭವಾಗಿ ಈಡಾಗುತ್ತಾರೆ. ಮೆಲ್ಲಾಗರ ರೋಗಿಗಳಲ್ಲಿ ಇದರ ಅದಲು ಬದಲು. ವಾಸನೆ, ಬಣ್ಣಗಳಲ್ಲಿ ತುಸು ಬದಲಾದರೆ ಅವರಿಗೇನೂ ಗೊತ್ತಾಗದು.

ಅರಿವುಗಳಲ್ಲೆಲ್ಲ ರೋಗಿಗಳಲ್ಲಿ ಸಾಮಾನ್ಯ ಲಕ್ಷಣವಾಗಿ ವೈದ್ಯನಿಗೆ ನಿದಾನದಲ್ಲಿ ಬಹು ನೆರವಾಗುವುದು ನೋವಿನ ಅರಿವು. ಮೈಯಲ್ಲಿನ ಜೀವಕಣಗಳಿಗೆ ಕೆಡುಕಾದಾಗ, ಪೆಟ್ಟಾದಾಗ ನೋವು ಕಾಣಿಸಿಕೊಳ್ಳುತ್ತದೆ. ನೋವು ಕಾಣಿಸಿಕೊಳ್ಳಲು ಇಂತಿಷ್ಟೇ ಚೋದಿಸಬೇಕೆಂದಿಲ್ಲ. ಊತಕಗಳಿಗೆ (ಟಿಷ್ಯೂಸ್) ಅಪಾಯವಾಗುವಷ್ಟು ಬಲವಾಗಿದ್ದರೆ ಸಾಕು, ನೋವು ತೋರುವುದು. ಉಳಿದ ಅರಿವುಗಳಿಗಾಗಿ ಇರುವಂತೆ ನೋವಿನ ಪಡೆಕಗಳು ಬೇರೆಯಾಗಿ ವಿಶೇಷದವಲ್ಲ. ನರಗಳ ಬಿಡಿಯಾದ ತುದಿಗಳೇ ನೋವಿನ ಪಡೆಕಗಳು. ತರಚಲು, ಜಜ್ಜುಗಾಯಗಳಲ್ಲಿ ಇದು ಜೋರಾಗಿ ತೋರುತ್ತದೆ.

ಬೇನೆಬಿದ್ದವರಲ್ಲಿ ಅರಿವೀಡುತನವನ್ನು ಕುಂದಿಸಬೇಕಾಗುವುದು. ಇದಕ್ಕಾಗಿ ಹಲವಾರು ವಿಧಾನಗಳಿವೆ. ಹಲ್ಲು ಕೀಳುವಾಗ ಮಾಡುವಂತೆ, ಮೈಯಲ್ಲಿ ಎಲ್ಲಾದರೂ ಒಂದೆಡೆ ಇದು ಇಲ್ಲವಾಗಿಸಲು, ಆ ಜಾಗದ ಸುತ್ತಲೂ ಕೊಕೇನಿನ ತಾವಿನ ಅರಿವಳಿಕವನ್ನು (ಅನೀಸ್ತೆಟಿಕ್) ಚುಚ್ಚಬಹುದು. ತತ್ಕಾಲ ಮಾತ್ರ ಎಚ್ಚರ ಕಳೆಯಲು ಈಥರಿನಂತ ಒಂದು ಸಾಮಾನ್ಯ ಅರಿವಳಿಕವನ್ನೇ ಕೊಡಬಹುದು. ನಿದ್ದೆಗೇಡು, ಬಲು ಕಳವಳ, ನರನಿತ್ರಾಣಗಳಲ್ಲಿ ಎಂದಿನ ಸಾಮಾನ್ಯ ಅರಿವುಗಳನ್ನು ರೋಗಿಯ ಅರಿವ ಬಲವನ್ನು ಕೆಲವೇಳೆ ಕುಂದಿಸದೆಯೇ ಅರಿವೀಡುತನವನ್ನು ತಗ್ಗಿಸಬೇಕಾಗುತ್ತದೆ. ಶಮನಿಕಗಳು ಇದಕ್ಕೆ ಒಳ್ಳೆಯವು. (ಎಂ.ಬಿ.)

**ಅರಿಷಡ್ವರ್ಗ :** ಮನುಷ್ಯನ ಮನಶ್ಶಾಂತಿಯನ್ನು ಕದಡುವ, ಸ್ವಾಸ್ಥ್ಯಕ್ಕೆ ಪ್ರತಿಬಂಧಕರೂಪವಾಗಿರುವ ಭಾವನೆಗಳನ್ನು ಶತ್ರುಗಳೆಂದು (ಅರಿ) ಬಗೆದು, ಅವನ್ನು ಆರು ಗುಂಪಾಗಿ ವರ್ಗೀಕರಣ ಮಾಡುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯ—ಇವೇ ಅರಿಷಡ್ವರ್ಗಗಳು. ಇದನ್ನು ಕಾಮಕ್ರೋಧ, ಲೋಭ ಮೋಹ, ಮದಮಾತ್ಸರ್ಯ ಎಂದು ಮತ್ತೆ ದೀರ್ಘವಾಗಿ ವಿಂಗಡಿಸುವ ಪದ್ಧತಿಯೂ ಉಂಟು. ಯೋಗಿಯಾದವ ಈ ಆರನ್ನೂ ಜಯಿಸಬೇಕು. ಇವು ಆರೂ ಅಂತಃಶತ್ರುಗಳೆಂದು ಕಲ್ಪನೆ. ಇವನ್ನು ಗೆದ್ದರೆ ಮನುಷ್ಯ ಲೋಕವನ್ನೇ ಗೆದ್ದಂತೆ; ಇವನ್ನು ಗೆಲ್ಲದೆ ಲೋಕವನ್ನೇ ಗೆದ್ದರೂ ಪರಾಜಿತನಾದಂತೆಯೇ. ಇವೆಲ್ಲವೂ ರಜೋಗುಣದಿಂದ ಉಂಟಾದುವೆಂದೂ ಇವನ್ನು ಧೃತಿಯಿಂದ ಗೆಲ್ಲಬೇಕೆಂದೂ ಅಧಿಕಾರವಿಧಿ ಹೇಳುತ್ತದೆ. ಚತುರ್ವಿಧ ಸಾಧನಗಳು ಈ ಅರಿಷಡ್ವರ್ಗಗಳನ್ನು ಜಯಿಸುವ ಸಲುವಾಗಿಯೇ ನಿಂತಿವೆ. (**ನೋಡಿ– ಸಾಧನಗಳು –ಚತುರ್ವಿಧ**) (ಎಸ್.ಕೆ.ಆರ್.)

**ಅರಿಸಾಯೆಮ :** ಅಂದವಾದ ಹೂ ಬಿಡುವ ಅಲಂಕಾರ ಸಸ್ಯ. ಏರೇಸೀ ಕುಟುಂಬಕ್ಕೆ ಸೇರಿದೆ. 60 ಪ್ರಭೇದಗಳನ್ನು ಒಳಗೊಂಡಿದೆ. ಇವೆಲ್ಲ ಬಹುವಾರ್ಷಿಕ ಪರ್ಣಸಸಿಗಳು, ಕಾಂಡ ಗಿಡ್ಡ, ಎಲೆಯ ತುದಿ ತೊಟ್ಟು ತೆಳ್ಳಗೆ ಉದ್ದವಾಗಿದ್ದು ಎಲೆ ತುದಿ ಸೀಳಿರುತ್ತದೆ. ಹೂ ಕೊಳವೆಯಾಕಾರವಾಗಿದ್ದು ಉದ್ದವಾಗಿ ಎತ್ತರಕ್ಕೆ ಬೆಳೆಯುತ್ತದೆ. ಹೂಗೊಂಚಲ ಕವಚ ಗೊಂಚಲನ್ನು ಆವರಿಸಿದ್ದು ತುದಿ ನಾಗರಹೆಡೆಯಂತೆ ಗೊಂಚಲನ್ನು ಮುಚ್ಚಿರುತ್ತದೆ. ಗೊಂಚಲು ಸ್ಪೇಡಿಕ್ಸ್ ಮಾದರಿಯದು. ತುದಿಯಲ್ಲಿ ಬಂಜೆ ಅನುಬಂಧಗಳಿವೆ. ಲಿಂಗ ಪ್ರತ್ಯೇಕವಾಗಿವೆ. ಗಂಡು ಹೂಗಳಲ್ಲಿ 2–4 ಭಾಗಗಳುಳ್ಳ ಪರಾಗಕೋಶಗಳು ಹೆಣ್ಣು ಹೂಗಳಲ್ಲಿ ಒಂದು ಅಥವಾ ಹಲವು ಬೀಜಗಳುಳ್ಳ ಒಂದು ಅಂಡಾಶಯವೂ ಇವೆ. ಫಲ ಒಂದು ಅಥವಾ ಹಲವು ಬೀಜವುಳ್ಳ ಬೆರಿ ಮಾದರಿಯದು. ಗೊಂಚಲಾಗಿದ್ದು ಮಾಗಿದಾಗ ಕೆಂಪಗೆ ಕಾಣುತ್ತದೆ.

ಅರಿಸಾಯೆಮ ಸ್ಪೀಸಿಯೋಸ, ಅರಿಸಾಯೆಮ ಫಿಂಬ್ರಿಯೇಟಮ್ ಪ್ರಭೇದಗಳು ಜನಪ್ರಿಯವಾಗಿವೆ. ಲಶುನಗಳಿಂದ ಸಸಿಗಳನ್ನು ವೃದ್ಧಿಮಾಡಬಹುದು. (ಡಿ.ಎಂ.)

**ಅರಿಸಿನ :** ಮುಖ್ಯವಾದ ಸಾಂಬಾರ ಬೆಳೆಗಳಲ್ಲೊಂದು. ಜಿಂಜಿಎರೇಶೀ ಕುಟುಂಬಕ್ಕೆ ಸೇರಿದ ಉಪಯುಕ್ತ ಸಸ್ಯ. ಕರ್ಕ್ಯೂಮ ಲಾಂಗ ಇದರ ವೈಜ್ಞಾನಿಕ ಹೆಸರು. ಟರ್ಮೆರಿಕ್ ಇದರ ಸಾಮಾನ್ಯ ಇಂಗ್ಲಿಷ್ ಹೆಸರು. ಶುಂಠಿ ಬೆಳೆಯಂತೆಯೇ ಈ ಬೆಳೆಗೆ ಮತ್ತು ಭೂಮಿಯಲ್ಲಿ ಯಾವಾಗಲೂ ತೇವಾಂಶವಿರಬೇಕು. ಅರಿಶಿನವನ್ನು ಆಹಾರ ಪದಾರ್ಥಗಳಿಗೆ ಬಣ್ಣ ಮತ್ತು ಪರಿಮಳ ಬರಿಸಲು, ಸಾಂಬಾರ ಪುಡಿ ತಯಾರಿಸಲು, ಬಟ್ಟೆ ಕಾರ್ಖಾನೆಗಳಲ್ಲಿ ಬಣ್ಣ ಹಾಕಲು, ಆಯುರ್ವೇದ ಔಷಧಿ ಹಾಗೂ ಸುಗಂಧ ತಯಾರಿಕೆಯಲ್ಲಿ ಹೆಚ್ಚು ಬಳಸಲಾಗುತ್ತದೆ.

**ಮಣ್ಣು :** ಅರಿಶಿನವನ್ನು ಹಲವಾರು ವಿಧದ ಮಣ್ಣುಗಳಲ್ಲಿ ಬೆಳೆಯಬಹುದು. ಆದರೆ ಚೆನ್ನಾಗಿ ನೀರು ಬಸಿದು ಹೋಗುವಂಥಹ ಸಾವಯವಯುಕ್ತ ಮರಳು ಮಿಶ್ರಿತ ಗೋಡು ಹಾಗೂ ಕಪ್ಪು ಗೋಡು ಮಣ್ಣುಗಳು ಬೆಳೆಗೆ ಉತ್ತಮ.

**ಹವಾಗುಣ :** ಈ ಬೆಳೆಗೆ ಗಾಳಿಯಲ್ಲಿ ಹೆಚ್ಚು ತೇವಾಂಶವಿರುವ ಉಷ್ಣಭರಿತ ವಾತಾವರಣ ಬೇಕು. ಸಮುದ್ರಮಟ್ಟದಿಂದ 1500 ಮೀ. ಎತ್ತರದ ಪ್ರದೇಶ, 1500–2250 ಮಿಮೀ ಮಳೆ ಬೀಳುವ ಹಾಗೂ $20^0$ ರಿಂದ $30^0$ ಸೆಂ. ಉಷ್ಣತೆಯಿರುವಲ್ಲಿ ಉತ್ತಮವಾಗಿ ಕೃಷಿ ಮಾಡಬಹುದು.

ಹೆಚ್ಚು ಮಳೆ ಬೀಳುವ ಮಲೆನಾಡು ಪ್ರದೇಶಗಳಲ್ಲಿ ಇದನ್ನು ಮಳೆ ಆಶ್ರಯದಲ್ಲಿ ಬೆಳೆಯಲಾಗುತ್ತದೆ. ಇತರೆ ನೀರಾವರಿ ಪ್ರದೇಶಗಳಲ್ಲಿ ಬೆಳೆಯಬಹುದು.

**ನಾಟಿ ಕಾಲ :** ಮೇ–ಜೂನ್ ತಿಂಗಳುಗಳು ಅತಿ ಸೂಕ್ತ.

**ತಳಿಗಳು : ದಕ್ಷಿಣ ಒಣಪ್ರದೇಶ**

1. ಕಸ್ತೂರಿ : ಗಡ್ಡೆಯ ಒಳಭಾಗ ತೆಳು ಹಳದಿಯಿಂದ ಬಿಳಿ ಬಣ್ಣ. ಈ ತಳಿಯನ್ನು ಹದಮಾಡಿದ ಅನಂತರ ಹೆಚ್ಚು ಸುವಾಸನೆ ಹೊಮ್ಮತ್ತದೆ.

2. ಮುಂಡಗ : ಈ ತಳಿಯು ದಪ್ಪ ಹಾಗೂ ಅಗಲವಾದ ಕೊಂಬುಗಳನ್ನು ಕೊಡುತ್ತದೆ.

**3. ಬಾಳಗ :** ಇದು ಸಾಧಾರಣ ಗಾತ್ರದ ಕೊಂಬುಗಳನ್ನು ಕೊಡುತ್ತದೆ. ಮೈದುಕ್ಕೂರ್, ಸಿ.ಬ–1,

ಗುಡ್ಡಗಾಡು ಪ್ರದೇಶ

**1. ಆರ್ಮರ್ :** ದೊಡ್ಡ ಗಾತ್ರದ ಕೊಂಬುಗಳನ್ನು ಹೊಂದಿದ್ದು ಮಧ್ಯಮ ಗಾತ್ರದ ಇಲುಕುಗಳು ಇರುತ್ತವೆ.

**2. ಎಲಚಗ :** ಇದು ಚಿಕ್ಕ ಗಾತ್ರದ ಕೊಂಬುಗಳನ್ನು ಹೊಂದಿದ್ದು ಹೇರಳವಾದ ಇಲುಕುಗಳನ್ನು ಬಿಡುತ್ತದೆ.

**ಕರಾವಳಿ ಪ್ರದೇಶ :** ಕಸ್ತೂರಿ, ಮುಂಡಗ, ಬಾಳಗ, ಮೂವಾತುಪುಜ, ಅಲೆಪ್ಪಿ ಮತ್ತು ಟೆಕ್ಕೂರ್‌ಪೇಟ್ ಸ್ಥಳೀಐ ತಳಿಗಳು ಹಾಗೂ ಸುಧಾರಿತ ತಳಿಯಾದ ಸುದರ್ಶನದಿಂದ ಈ ಪ್ರದೇಶದಲ್ಲಿ ಅಧಿಕ ಇಳುವರಿ ಮತ್ತು ಉತ್ತಮ ಗುಣಮಟ್ಟದ ಗಡ್ಡೆಗಳು ಬಂದಿದ್ದು ಈ ಪ್ರದೇಶಕ್ಕೆ ಸೂಕ್ತವೆಂದು ಹೇಳಲಾಗಿದೆ.

ಇವುಗಳಲ್ಲದೆ ಅರಿಶಿನ ಬೆಳೆಯುವ ಎಲ್ಲಾ ಪ್ರದೇಶಗಳಲ್ಲಿ ಅಲ್ಲಲ್ಲಿ ಇತ್ತೀಚಿನ ಸುಧಾರಿತ ತಳಿಗಳಾದ ರೋಮ, ಸುರೋಮ, ರಂಗ, ರಶ್ಮಿ, ಐ.ಐ.ಎಸ್.ಆರ್. ಅಲೆಪ್ಪಿ ಸುಪ್ರೀಮ್ ಮತ್ತು ಕೇಪಾರಮ್ ತಳಿಗಳು ಸಹ ಅಲ್ಪಮಟ್ಟಿಗೆ ಕೃಷಿಯಲ್ಲಿವೆ.

| **ಬೇಸಾಯ ಸಾಮಗ್ರಿಗಳು** | **ಪ್ರತಿ ಹೆಕ್ಟೇರಿಗೆ** |
|---|---|
| 1. ಬಿತ್ತನೆಯ ಕೊಂಬುಗಳು | 2.25 ಟನ್ |
| 2. ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ | 50 ಟನ್ |
| 3. ರಾಸಾಯನಿಕ ಗೊಬ್ಬರಗಳು | |
| ಸಾರಜನಕ | 150 ಕಿಗ್ರಾಂ |
| ರಂಜಕ | 125 ಕಿಗ್ರಾಂ |
| ಪೊಟ್ಯಾಷ್ | 250 ಕಿಗ್ರಾ |

**ಬೇಸಾಯ ಕ್ರಮ**

**ನಾಟಿ ಮಾಡುವುದು :** ಭೂಮಿಯನ್ನು ಉಳುವೆ ಮಾಡಿ, ಕುಂಟೆ ಹೊಡೆದು ಹದಕ್ಕೆ ತರಬೇಕು. ಉಳುವೆ ಮಾಡುವಾಗಲೇ ಸಾವಯವ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸಬೇಕು. ನಾಟಿ ಮಾಡುವ ಮೊದಲು ಶೇ. 50 ಸಾರಜನಕ, ಶಿಫಾರಸ್ಸು ಮಾಡಿದ ರಂಜಕ ಮತ್ತು ಪೊಟ್ಯಾಷ್ ಗೊಬ್ಬರಗಳನ್ನು ಸಾಲಿನಲ್ಲಿ ಹಾಕಿ ಮಣ್ಣಿನಲ್ಲಿ ಬೆರೆಸಬೇಕು. ಬೀಜದ ಕೊಂಬುಗಳನ್ನು 45 ಸೆಂಮೀ ಸಾಲುಗಳಲ್ಲಿ 30 ಸೆಂಮೀ ಅಂತರದಲ್ಲಿ ನಾಟಿ ಮಾಡಬೇಕು. ಬೀಜದ ಕೊಂಬುಗಳನ್ನು ಶೇ. 0.3 ರ ಮ್ಯಾಂಕೊಜೆಬ್ ಅಥವಾ ಪಾದರಸ ಸಂಯುಕ್ತ ಶಿಲೀಂಧ್ರ ನಾಶಕದಿಂದ ಉಪಚರಿಸಿ ಬಿತ್ತನೆಗೆ ಬಳಸಿ, ಉಳಿದ ಶೇ. 50 ಸಾರಜನಕವನ್ನು ನಾಟಿ ಮಾಡಿದ 45 ದಿವಸಗಳ ನಂತರ ಕೊಡಬೇಕು.

ನೀರಾವರಿ ಹಾಗೂ ಅಂತರ ಬೇಸಾಯ

ಮಣ್ಣಿನ ವಿಧ ಮತ್ತು ಹವಾಗುಣಕ್ಕನುಸಾರವಾಗಿ 6 ರಿಂದ 8 ದಿನಗಳಿಗೊಮ್ಮೆ ನೀರು ಹರಿಸಬೇಕು. ಮಡಿಗಳನ್ನು 2–3 ಬಾರಿ ಕಳೆ ತೆಗೆದು, ಕಳೆಗಳಿಂದ ಮುಕ್ತವಾಗಿಡಬೇಕು. ಹೂಗೊಂಚಲು ಕಂಡಕೂಡಲೆ ಅವುಗಳನ್ನು ತೆಗೆಯಬೇಕು. ಶುಂಠಿಯಲ್ಲಿ ಅಳವಡಿಸಿದಂತೆ ಬೆಳೆ ಪರಿವರ್ತನೆ ಮಾಡಿ.

**ಸಸ್ಯ ಸಂರಕ್ಷಣೆ**

ಕೀಟಗಳು : ಶುಲ್ಕ ಕೀಟ, ಎಲೆ ತಿನ್ನುವ ಹುಳು, ಕಾಂಡ ಕೊರೆಯುವ ಹುಳು, ಗೆಡ್ಡೆ ಶಲ್ಕ ಕೀಟಗಳು, ಎಲೆ ಸುತ್ತುವ ಹುಳು.

ರೋಗಗಳು : ಎಲೆ ಚುಕ್ಕಿ ರೋಗ, ಎಲೆ ಮಚ್ಚೆರೋಗ, ಕೊಂಬು ಮತ್ತು ಬೇರು ಕೊಳೆಯುವ ರೋಗ, ಚಿಬ್ಬು ರೋಗ.

**ಹತೋಟಿ ವಿಧಾನ :**

1. ಕೀಟ ಬಾಧೆ ಕಂಡುಬಂದಲ್ಲಿ 2 ಮಿಲೀ ಎಂಡೋಸಲ್ಫಾನ್ ಅಥವಾ 2 ಮಿಲೀ ಕ್ವಿನಾಲ್‌ಫಾಸ್ ಅಥವಾ 2 ಮಿಲೀ ಫೋಸಲೋನ್ ಹಾಗೂ ರೋಗಗಳ ಬಾಧೆ ಕಂಡು ಬಂದಲ್ಲಿ 2 ಗ್ರಾಂ ಮ್ಯಾಂಕೋಜೆಬ್‌ನ್ನು ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು.

2. ಕಾಂಡ ಕೊರೆಯುವ ಹುಳುವಿನ ಹತೋಟಿಗೆ ಪ್ರತಿ ಹೆಕ್ಟೇರಿಗೆ 25 ಕಿಗ್ರಾಂ ಕಾರ್ಬೋಫ್ಯುರಾನ್ ಹರಳುಗಳನ್ನು ಮಣ್ಣಿನಲ್ಲಿ ಬೆರೆಸಬೇಕು.

3. ಶುಲ್ಕ ಕೀಟದ ಬಾಧೆಯ ಹತೋಟಿಗೆ 17 ಮೀಲಿ ಡೈಮಿಥೊಯೇಟ್ ಅಥವಾ 5 ಮಿಲೀ ಫಾಸ್ಫಾಮಿಡಾನ್ 10 ಲೀಟರ್ ನೀರಿನಲ್ಲಿ ಬೆರೆಸಿ ಬೀಜೋಪಚಾರ ಮಾಡಿ.

4. ಕೊಂಬು ಕೊಳೆ ರೋಗಕ್ಕೆ, ಏರುಮಡಿಗಳಲ್ಲಿ ಬೆಳೆ ಬೆಳೆಯಬೇಕು. ಶೇಕಡ 1ರ ಬೋರ್ಡೊ ದ್ರಾವಣ ಸಿಂಪಡಿಸಬೇಕು. ಕೊಂಬುಗಳನ್ನು ಕ್ಯಾಪ್ಟಾನ್‌ನಲ್ಲಿ (ಶೇ. 0.3) ಅಥವಾ ರಿಡೋಮಿಲ್ ಎಂ.ಜೆಡ್ ನಲ್ಲಿ ಅದ್ದಿ ನಾಟಿ ಮಾಡಬೇಕು. ಮುಂದೆ ಬೆಳಯುವ ಹಂತದಲ್ಲಿ ರೋಗ ಕಂಡಾಗ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಅಥವಾ ಮೆಟಲಾಕ್ಸಿಲ್ – ಮಾಂಕೊಜೆಬ್ 1 ಲೀಟರ್ ನೀರಿನಲ್ಲಿ ಕರಗಿಸಿ ಭೂಮಿಗೆ ಹಾಕಬೇಕು.

**ಕೊಯ್ಲು ಮತ್ತು ಇಳುವರಿ :**

ಅರಿಸಿನ ಸುಮಾರು ಏಳರಿಂದ ಒಂಬತ್ತು ತಿಂಗಳುಗಳಲ್ಲಿ ಕೊಯ್ಲಿಗೆ ಬರುತ್ತದೆ. ಕೊಯ್ಲಿಗೆ 4–5 ದಿವಸ ಮೊದಲು ಒಣಗಿದ ಎಲೆ ಮತ್ತು ಕಾಂಡದ ಭಾಗಗಳನ್ನು ತೆಗೆದು ನೀರು ಹರಿಸಬೇಕು. ಗೆಡ್ಡೆಗಳಿಗೆ ಹಾನಿಯಾಗದಂತೆ ಅವುಗಳನ್ನು ಅಗೆದು ತೆಗೆಯಬೇಕು.

**ಅರಿಸಿನ ಸಂಸ್ಕರಣೆ**

ಅರಿಸಿನದ ಕೊಂಬುಗಳನ್ನು ತಾಯಿ ಕಾಂಡದಿಂದ ಬೇರ್ಪಡಿಸಬೇಕು. ತಾಯಿ ಕಾಂಡವನ್ನು ಬಿತ್ತನೆ ಬೀಜವಾಗಿ ಉಪಯೋಗಿಸುತ್ತಾರೆ. ಬೇರ್ಪಡಿಸಿದ ಕೊಂಬುಗಳನ್ನು ಒಂದೆರಡು ದಿನ ನೆರಳಿನಲ್ಲಿ ಒಣಗಿಸಬೇಕು. ಇದರಿಂದ ಕೊಂಬುಗಳಿಗೆ ಅಂಟಿಕೊಂಡಿರುವ ಮಣ್ಣನ್ನು ಬೇರ್ಪಡಿಸುವುದು ಸುಲಭವಾಗುತ್ತದೆ.

**ಕುದಿಸುವುದು :** ಸ್ವಚ್ಛವಾದ ಅರಿಸಿನದ ಹಸುರು ಕಾಂಡಗಳನ್ನು ತಾಮ್ರದ ಪಾತ್ರೆಯಲ್ಲಿ ಅಥವಾ ಸತು ಲೇಪನ ಮಾಡಿದ ಕಬ್ಬಿಣದ ಕಡಾಯಿಯಲ್ಲಿ ಹಾಕಿ, ಎಲ್ಲ ಕೊಂಬೆಗಳು ಮುಳುಗಿದ ಮೇಲೆ ನೀರು ಹಾಕಿ, 45 ರಿಂದ 60 ನಿಮಿಷಗಳವರೆಗೆ ಕುದಿಸಬೇಕು. ಆ ಹಂತದಲ್ಲಿ ಕಾಯಿ ಮೆತ್ತಗಾಗಿರುವುದನ್ನು ಕೈ ಬೆರಳುಗಳ ಮಧ್ಯೆ ಒತ್ತಿ ಪರೀಕ್ಷಿಸಬೇಕು. ಹೆಚ್ಚಾಗಿ ಬೇಯಿಸುವುದು ಅಂತಿಮವಾಗಿ ಉತ್ತಮ ಬಣ್ಣ ಬರುವುದಿಲ್ಲ. ಬೇಕಾದ್ದಕ್ಕಿಂತ ಕಡಿಮೆ ಬೇಯಿಸುವುದರಿಂದ ಕೊಂಬುಗಳು ಸುಲಭವಾಗಿ ಮುರಿದುಹೋಗುತ್ತವೆ.

**ಒಣಗಿಸುವುದು :** ನೀರಿನಲ್ಲಿ ಬೇಯಿಸಿದ ಕೊಂಬುಗಳನ್ನು ಹೊರತೆಗೆದು ಅಂಗಳ ಒಣಗಿಸಲೆಂದು ಮಾಡಿರುವ ನೆಲದ ಮೇಲೆ ಅಥವಾ ಬಿದಿರಿನ ಚಾಪೆಯ ಮೇಲೆ 5 – 7 ಸೆಂ.ಮೀ. ದಪ್ಪ ಪದರವಾಗಿ ಹರಡಿರಬೇಕು. ಬಿಸಿಲಿನಲ್ಲಿ ಸರಿಯಾದ ಹಂತಕ್ಕೆ ಒಣಗಿಸಲು 10 ರಿಂದ 15 ದಿನಗಳು ಬೇಕು.

**ಹೊಳಪು ಕೊಡುವುದು :** ಒಣ ಅರಿಸಿನವು ಮೇಲಿನ ಸಿಪ್ಪೆ ಮತ್ತು ಬೇರಿನ ತುಣುಕುಗಳಿಂದ ಕೂಡಿದ್ದು ನೋಡಲು ಆಕರ್ಷಕವಾಗಿರುವುದಿಲ್ಲ. ಆದ್ದರಿಂದ ಪಾಲಿಷ್ ಮಾಡುವುದು ಅತ್ಯವಶ್ಯಕ. ಕೊಂಬುಗಳನ್ನು ಒರಟಾಗಿರುವ ನೆಲಕ್ಕೆ ತಿಕ್ಕುವ ಮೂಲಕ ಇಲ್ಲವೆ ಗೋಣಿಚೀಲದಲ್ಲಿ ತುಂಬಿ ಕಾಲಿನಿಂದ ತುಳಿಯುವ ಮೂಲಕ ಹೊಳಪು ಕೊಡಬಹುದು. ಇದಲ್ಲದೆ ಒರಟಾದ ಒಳಮೇಲ್ಮೈ ಹೊಂದಿದ ತಿರುಗುವ ಡ್ರಮ್ಮಿನ ಸಹಾಯದಿಂದ ಪಾಲಿಷ್ ಮಾಡಬಹುದು. 100 ಕಿಗ್ರಾಂ ಕಚ್ಚಾ ಅರಿಸಿನ ಕೊಂಬುಗಳಿಂದ 15 ರಿಂದ 25 ಕಿಗ್ರಾಂ ಪಾಲಿಷ್ ಮಾಡಿದ ಅರಿಸಿನವನ್ನು ಪಡೆಯಬಹುದು.

**ಬಣ್ಣ ಹಾಕುವುದು :** ಅರಿಶಿನಕ್ಕೆ ಆಕರ್ಷಕ ಹಳದಿ ಬಣ್ಣವನ್ನು ಎರಡು ವಿಧವಾಗಿ ಕೊಡಬಹುದು – ಡ್ರಮ್ಮಿನಲ್ಲಿ ಪಾಲಿಶ್ ಮಾಡುತ್ತಿರುವಾಗ, ಕೊನೆಯ ಹತ್ತು ನಿಮಿಷಗಳ ಕಾಲ ಅರಿಶಿನದ ಪುಡಿಯನ್ನ ಹಾಕಿ ತಿರುಗಿಸಬೇಕು. ಇಲ್ಲವೆ ಅರಿಶಿನ ಪುಡಿಯ ದ್ರಾವಣ ಮಾಡಿ ಡ್ರಮ್ಮಿನಲ್ಲಿ ಅರ್ಧ ಪಾಲಿಷ್ ಕೊಂಬುಗಳಿಗೆ ಮಿಶ್ರಮಾಡಿ ತಿರುಗಿಸಬೇಕು. ಅನಂತರ ಸ್ವಲ್ಪ ಕಾಲ ಬಿಸಿಲಿನಲ್ಲಿ ಒಣಗಿಸಬೇಕು 100 ಕಿಗ್ರಾಂ ಒಣ ಅರಿಶಿನ ಕೊಂಬುಗಳಿಗೆ ಬಣ್ಣ ಹಾಕಲು 2 ಕಿಗ್ರಾಂ ಅರಿಶಿನ ಪುಡಿ, 0.04 ಕಿಗ್ರಾಂ ಸ್ಫಟಿಕ, ಹರಳೆಣ್ಣೆ 0.14 ಕಿಗ್ರಾ ಸೋಡಿಯಂ ಬೈಸಲ್ಫೇಟ್ 30 ಗ್ರಾಂ ಮತ್ತು 30 ಮಿಲೀ ಹೈಡ್ರೊಕ್ಲೋರಿಕ್ ಆಮ್ಲ ಬಳಸಬೇಕು.(ಡಿ.ಎಂ)

**ಅರಿಸಿನ ಗುರುಗಿ :** ಗಟ್ಟಿಫೆರೀ (ಕ್ಲೂಸಿಯೇಸೀ) ಕುಟುಂಬದ ಗಾರ್ಸಿನಿಯ ಮೊರೆಲ ಎಂಬ ವೃಕ್ಷ. ಇದಕ್ಕೆ ಅರದಾಳ, ಕಣ್‌ಕುಟಿಗ, ದೇವನಹುಳಿ ಎಂಬ ಹೆಸರುಗಳೂ ಇವೆ. ಇದು ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಚಿಕ್ಕ ಗಾತ್ರದ ಮರ, ಇದರ ಅಂಟು ಔಷಧಿಗೂ ಬಣ್ಣಕ್ಕೂ ಉಪಯುಕ್ತವಾಗಿದೆ; ಕ್ರಿಮಿನಾಶಕವೂ ಹೌದು. ಇದರ ವಿಶೇಷ ವ್ಯವಸಾಯ ಥೈಲೆಂಡ್ ಪ್ರದೇಶಗಳಲ್ಲಿದೆ. ಮಳೆಗಾಲದಲ್ಲಿ ಕಾಂಡದಲ್ಲಿ ಗೀರಿ ಅಂಟನ್ನು ಶೇಖರಿಸುತ್ತಾರೆ. ಒಣಗಿದ ಅಂಟನ್ನು ನೀರಿಗೆ ಹಾಕಿದರೆ ಹಳದಿ ಬಣ್ಣದ ಜಿಡ್ಡುದ್ರವ ಬರುತ್ತದೆ. ಅಮೋನಿಯ ದ್ರಾವಣ ಹಾಕಿದಾಗ ಕರಗಿ ಬರುವ ಹಳದಿ ದ್ರವ ಝಿಂಕ್ ಅಲ್ಯೂಮಿನಿಯಮ್, ಸುಣ್ಣ ಇತ್ಯಾದಿ ಬಣ್ಣಗಚ್ಚುಗಳಿಂದ ಹಳದಿ ಅಥವಾ ಕೆಂಪು ಬಣ್ಣಕೊಡುತ್ತದೆ. ಬೀಜದ ಎಣ್ಣೆ ದೀಪ ಉರಿಸಲು ಬರುತ್ತದೆ. ಕೊಬ್ಬನ್ನು ತುಪ್ಪದಂತೆ ಬಳಸುತ್ತಾರೆ. (ಎ.ಕೆ.ಎಸ್.)

**ಅರಿಸಿನ ತೇಗ :** ರೂಬಿಯೇಸೀ ಕುಟುಂಬಕ್ಕೆ ಸೇರಿದ ಅರಣ್ಯವೃಕ್ಷ. ಹೆತ್ತೇಗ, ಹೆದ್ದಿ ಎಂಬ ಹೆಸರುಗಳನ್ನೂ ಉಳ್ಳ ಈ ಮರದ ವೈಜ್ಞಾನಿಕ ಹೆಸರು ಅಡಿನ ಕಾರ್ಡಿಫೋಲಿಯ. ಮಧ್ಯಮ ಗಾತ್ರದಿಂದ ಹಿಡಿದು ಅತಿ ದೊಡ್ಡ ಗಾತ್ರದ ಮರವಾಗಿ ಬೆಳೆಯುತ್ತದೆ. ಫಲವತ್ತಾದ ಪ್ರದೇಶದಲ್ಲಿ ಸುಮಾರು 5 ಮೀ ಸುತ್ತಳತೆಯವರೆಗೂ ಬೆಳೆದ ನಿದರ್ಶನಗಳಿವೆ. ವರ್ಷಂಪ್ರತಿ ಎಲೆ ಉದುರುವ ಅರಣ್ಯಗಳಲ್ಲಿ (ಡೆಸಿಡ್ಯುವಸ್) ಹೆಚ್ಚಾಗಿ ಬೆಳೆಯುತ್ತದೆ.

ಇದು ನುಣುಪಾದ ಕಣರಚನೆಯುಳ್ಳ (ಈವನ್‌ಗ್ರೇನ್ಡ್) ಸಾಧಾರಣ ಗಟ್ಟಿ ಜಾತಿಯ ಮರ. ಹೊಸದಾಗಿ ಕಡಿದಾಗ ಈ ಮರದ ಬಣ್ಣ ನಿಂಬೆ ಹಳದಿ. ಕ್ರಮೇಣ ಮಾಸಲು ಹಳದಿಬಣ್ಣಕ್ಕೆ ತಿರುಗುತ್ತದೆ. ಮರ ಕೊರೆಯಲು ಸುಲಭ, ಹದಮಾಡಲು ತುಂಬ ಯೋಗ್ಯವಾಗಿದೆ. ಮರವನ್ನು ಮನೆಯ ಮರಮುಟ್ಟು ಸಾಮಾನು, ಬಾಚಣಿಗೆ, ಕೆತ್ತನೆ ಸಾಮಾನು, ಕಂಡರಣೆ ಸಾಮಾನು, ಆಟದ ಸಾಮಾನು, ಬ್ಯಾಟರಿ ಸೆಪರೇಟರ್ ಮತ್ತು ಸಣ್ಣ ಪೆಟ್ಟಿಗೆಗಳುಇತ್ಯಾದಿಗಳನ್ನು ಮಾಡಲು ಸಾಧಾರಣವಾಗಿ ಉಪಯೋಗಿಸುತ್ತಾರೆ. ಇತ್ತೀಚೆಗೆ, ನೂಲಿನ ಮತ್ತು ಬಟ್ಟೆ ಗಿರಣಿಗಳಲ್ಲಿ ಉಪಯೋಗಿಸುವ ಉರುಟಣೆಗಳನ್ನು (ಬಾಬಿನ್ಸ್) ತಯಾರಿಸಲು ವಿಶೇಷವಾಗಿ ಉಪಯೋಗಿಸುತ್ತಾರೆ. ಪಶ್ಚಿಮ ಕರಾವಳಿಯಲ್ಲಿ ಸಣ್ಣ ಸಣ್ಣ ದೋಣಿಗಳನ್ನು ತಯಾರಿಸಲು ಇದನ್ನು ಬಳಸುತ್ತಾರೆ. (ಟಿ.ಜಿ.)

**ಅರಿಸಿನ ಬೂರುಗ :** ಕಾಕ್ಲೊಸ್ಪರ್ಮೇಸೀ ಕುಟುಂಬಕ್ಕೆ ಸೇರಿದ ಮರ. ಕಾಕ್ಲೊಸ್ಪರ್ಮಮ್ ರಿಲಿಜಿಯೋಸಮ್ ಇದರ ವೈಜ್ಞಾನಿಕ ಹೆಸರು(ಯೆಲೊ ಸಿಲ್ಕ್ ಕಾಟನ್). ಇದು ಹಿಮಾಲಯದ ವಾಯವ್ಯ ಪ್ರದೇಶಗಳು, ಬಿಹಾರ್, ಮಧ್ಯಪ್ರದೇಶ, ಒರಿಸ್ಸ, ಗುಜರಾತ್ ಮತ್ತು ದಖನ್ ಪ್ರದೇಶಗಳಲ್ಲಿ ಬೆಳೆಯುವುದು ಹೆಚ್ಚು.

ಇದು ಸಾಮಾನ್ಯ ಎತ್ತರ ಹಾಗೂ ಗಾತ್ರದ್ದಾಗಿದ್ದು ಎಲೆ ವರ್ಷಕ್ಕೊಮ್ಮೆ ಉದುರಿಹೋಗುತ್ತದೆ. ತೊಗಟೆ ದಪ್ಪ, ನಾರು ಹಳದಿ ಮತ್ತು ಮಿಶ್ರ ಬಣ್ಣ ಉಳ್ಳದ್ದು. ತೊಗಟೆಯ ಮೇಲೆ ಹಳ್ಳದಿಣ್ಣೆಗಳುಂಟು. ಎಳೆಯ ಕೊಂಬೆಗಳ ಮೇಲೆ ದಟ್ಟವಾದ ಕೂದಲಿನ ಹೊದಿಕೆ ಇದೆ. ಕೊಂಬೆಗಳ ಮೇಲೆ ಅಲ್ಲಲ್ಲಿ ಎಲೆ ಉದುರಿದ ಜಾಗದಲ್ಲಿ ಗುರುತುಗಳಿರುತ್ತವೆ. ಕೊಂಬೆಗಳ ತುದಿಯಲ್ಲಿ ಎಲೆಗಳು ವಿರಳವಾಗಿರುತ್ತವೆ. ಎಲೆಯ ಮೇಲೆ ಅಂಗೈ ಬೆರಳುಗಳಂತೆ 3–5 ನರಗಳೂ ಎಲೆಯ ಕೆಳಭಾಗದಲ್ಲಿ ದಟ್ಟವಾದ ರೋಮದ ಹೊದಿಕೆಯೂ ಇರುತ್ತವೆ. ಎಲೆಯ ಬಣ್ಣ ಬೂದು; ತೊಟ್ಟು ತೆಳುವಾಗಿದ್ದು ನೀಲಿಯಾಗಿರುತ್ತದೆ.

ಹೂಗಳು ದೊಡ್ಡವು. ಐದು ಅಂಗುಲ ಉದ್ದದವೂ ಉಂಟು. ಬಣ್ಣ ಬಂಗಾರಹಳದಿ; ಕೆಲವೇ ಹೂಗಳಿದ್ದು ಗೊಂಚಲು ಕೊಂಬೆಗಳ ತುದಿಯಲ್ಲಿದ್ದು ಮಿಶ್ರ ಮಂಜರಿಯಾಗಿರುತ್ತದೆ; ಐದು ದಳಗಳಿದ್ದು ಪರಸ್ಪರ ಹರಡಿಕೊಂಡಿರುತ್ತದೆ. ಶುಷ್ಕಫಲಗಳು ಜೋತುಬೀಳುತ್ತವೆ, ಹಣ್ಣುಗಳು ಆಕಾರದಲ್ಲಿ ಅಂಜೂರದಂತಿವೆ. ದಪ್ಪ ಎರಡು ಮೂರು ಅಂಗುಲ, ಬಣ್ಣ ಕಂದು, ಒಂದೊಂದು ಫಲವೂ 3–5 ಭಾಗಗಳಾಗಿ ಸೀಳುತ್ತವೆ. ಬೀಜಗಳು ಅಸಂಖ್ಯಾತ, ಬಣ್ಣ ಕಂದು. ಮೇಲೆ ಮೃದುವಾದ ರೇಷ್ಮೆಯಂಥ ಹೊದಿಕೆಯುಂಟು.

ತೊಗಟೆಯಿಂದ ಸ್ರವಿಸುವ ಬಿಳಿಯಾದ ಅಂಟುದ್ರವ ಸುಗಂಧ ದ್ರವ್ಯಗಳ ತಯಾರಿಕೆಯಲ್ಲೂ ಐಸ್‌ಕ್ರೀಮನ್ನು ಮಂದಗೊಳಿಸುವುದಕ್ಕೂ ಪುಸ್ತಕಗಳಿಗೆ ರಟ್ಟು ಹಾಕುವುದಕ್ಕೂ ಚರ್ಮ ಹದಮಾಡುವ ಕೆಲಸಕ್ಕೂ ಬಳಕೆಯಾಗುತ್ತದೆ. ಔಷಧಿಯಾಗೂ ಇದನ್ನು ಬಳಸುತ್ತಾರೆ. ಇದರ ಹತ್ತಿ ಕುರ್ಚಿ, ಸೋಫ ಮುಂತಾದವುಗಳ ದಿಂಬು ತುಂಬುವುದಕ್ಕೆ ಉಪಯುಕ್ತವೆನಿಸಿದೆ. ತೊಗಟೆಯಿಂದ ಹಗ್ಗ ಮತ್ತು ಹುರಿಗೆ ಯೋಗ್ಯವಾದ ನಾರು ದೊರೆಯುತ್ತದೆ. ಕೆಲವು ಕಡೆ ಮೆದುವಾದ ಕಾಂಡವನ್ನು ಆಹಾರ ರೂಪದಲ್ಲಿ ಬಳಸುವುದೂ ಉಂಟು. ಕೊಂಬೆ, ಕಾಂಡ ಹಸಿಯಾಗಿದ್ದರೂ ಸರಾಗವಾಗಿ ಉರಿಯುವುದರಿಂದ ಕೊಳ್ಳಿ ದೀಪವಾಗಿ ಉಪಯೋಗಿಸುತ್ತಾರೆ. (ಎಂ.ಎಸ್.ಎಸ್.ಆರ್.)

**ಅರಿಸ್ಟಾಟಲ್ :** ಪ್ರ.ಶ.ಪೂ.384–322. ಗ್ರೀಸ್ ದೇಶದ ಪ್ರಸಿದ್ಧ ತತ್ತ್ವಜ್ಞಾನಿ. ಥ್ರೇಸಿನ ರೇವುಪಟ್ಟಣವಾದ ಸ್ಟಗಿರದಲ್ಲಿ ಜನಿಸಿದ. ತಂದೆ ನೈಕೊಮ್ಯಾಕಸ್ ಮ್ಯಾಸಿಡೋನಿಯ ದೊರೆ ಎರಡನೆಯ ಅಮಿನ್‌ಟಾಸ್‌ನ ಆಸ್ಥಾನ ವೈದ್ಯನಾಗಿದ್ದ.

17ನೆಯ ವಯಸ್ಸಿನಲ್ಲಿ ಉಚ್ಚ ಶಿಕ್ಷಣಕ್ಕಾಗಿ ಅಥೆನ್ಸ್ ಪಟ್ಟಣಕ್ಕೆ ಹೋಗಿ ಪ್ಲೇಟೋನ ಅಕಾಡೆಮಿಯನ್ನು ಸೇರಿ ಅಲ್ಲಿ 20 ವರ್ಷಗಳ ಕಾ ವ್ಯಾಸಂಗ ನಡೆಸಿದ. ಪ್ಲೇಟೋ ಇವನನ್ನು ತನ್ನ ವಿದ್ಯಾಪೀಠದ ವಿಚಾರ ಚೈತನ್ಯವೆಂದು ಕರೆದಿರುತ್ತಾನೆ. ಗುರು ಏನನ್ನು ಬೋಧಿಸಿದರೂ ಅರಿಸ್ಟಾಟಲ್ ಅದಕ್ಕೆ ಪ್ರತಿಯಾದ ಪಕ್ಷವನ್ನು ಮಂಡಿಸದೆ ಬಿಡುತ್ತಿರಲಿಲ್ಲ. ಕರುಗಳು ತಾಯ ಮೊಲೆಯುಣ್ಣುವಾಗ ಅದನ್ನು ತಿವಿದು ಗುದ್ದುವಂತೆ ಪಾಠ ಹೇಳುವಾಗ ಅರಿಸ್ಟಾಟಲ್ ತನ್ನನ್ನು

ತಿವಿದು ಗುದ್ದುತ್ತಾನೆಂದು ಪ್ಲೇಟೋ ನಕ್ಕು ನುಡಿದಿದ್ದಾನೆ. ತನ್ನ ಸ್ವಂತ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ಕೊಟ್ಟದ್ದು ಪ್ಲೇಟೋನ ಉದಾರನೀತಿಯನ್ನು ಸ್ಪಷ್ಟ ಪಡಿಸುತ್ತದೆಯಲ್ಲದೆ ಅರಿಸ್ಟಾಟಲನ ವಿಚಾರನಿಷ್ಠೆಯನ್ನು ವ್ಯಕ್ತಗೊಳಿಸುತ್ತದೆ. ಅರಿಸ್ಟಾಟಲ್ ಆದರ್ಶ ಗುರುವಿನ ಶಿಷ್ಯ. ಅರಿಸ್ಟಾಟಲ್ ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ: ನಾನು ಪ್ಲೇಟೋನನ್ನು ಪ್ರೀತಿಸುತ್ತೇನೆ; ಆದರೆ ಸತ್ಯವನ್ನು ಇನ್ನೂ ಹೆಚ್ಚಾಗಿ ಪ್ರೀತಿಸುತ್ತೇನೆ. ಈ ಹೇಳಿಕೆ ಎಲ್ಲ ಗುರುಶಿಷ್ಯರೂ ಗಮನಿಸಿಬೇಕಾದ ಆದೇಶವನ್ನು ಒಳಗೊಂಡಿದೆ.



ಪ್ಲೇಟೋನ ಮರಣಾನಂತರ ಅವನ ಸೋದರನ ಮಗ ಸ್ಪಿಸಿಪಸ್ ಪ್ಲೇಟೋನ ಅಕಾಡೆಮಿಯ ಉತ್ತರಾಧಿಕಾರಿಯಾದನೇ ಹೊರತು ಪ್ಲೇಟೋನಂತೆ ಅದರ ಉತ್ತಮಾಧಿಕಾರಿಯಾಗಲಿಲ್ಲ. ಆದ್ದರಿಂದ ಅರಿಸ್ಟಾಟಲನಿಗೆ ಅಲ್ಲಿ ಇರಲು ಒಗ್ಗದೆ ತನ್ನ ಸಹಪಾಠಿಯಾದ ಝೆನೊಕ್ರೇಟೀಸನೊಡನೆ ಅಕಾಡೆಮಿಯನ್ನು ಬಿಟ್ಟು ತನ್ನ ಸ್ನೇಹಿತ ಹರ್ಮೀಸ್ ತನಗೆ ಬಹುಮಾನವಾಗಿ ಕೊಟ್ಟಿದ್ದ ಅಸ್ಸಸ್ ಪಟ್ಟಣದಲ್ಲಿ ನೆಲಸಿ ಒಂದು ವಿದ್ಯಾನಿಲಯವನ್ನು ಸ್ಥಾಪಿಸಿ ತನ್ನ ಸಹಪಾಠಿಯೊಡನೆ ಅದನ್ನು ಮೂರು ವರ್ಷಗಳ ಕಾಲ ನಡೆಸಿದ, ಇದೇ ಕಾಲದಲ್ಲಿ ಹರ್ಮೀಸ್ ತನ್ನ ತಂಗಿ ಪಿಥಿಯಾಸಳನ್ನು ಅರಿಸ್ಟಾಟಲನಿಗೆ ಕೊಟ್ಟು ಮದುವೆ ಮಾಡಿದ. ಅರಿಸ್ಟಾಟಲ್ ತನ್ನ ಹೆಂಡತಿಯೊಡನೆ ವಿಹರಿಸಲು ಲೆಸ್‌ಬಾಸ್ ದ್ವೀಪಕ್ಕೆ ಹೋದ. ಎರಡು ವರ್ಷಗಳ ಪರ್ಯಂತ ಅಲ್ಲಿ ಆತ ವಿಹಾರದ ಜೊತೆಗೆ ಪ್ರಾಣಿ ವಿಜ್ಞಾನದಲ್ಲೂ ಆಸಕ್ತನಾಗಿದ್ದ. ಹೆಂಡತಿ ತೀರಿಕೊಂಡಮೇಲೆ ಹರ್ವಿದಿಥೀಸ್‌ಳನ್ನು ಮದುವೆಯಾದ. ಅವಳಲ್ಲಿ ಹುಟ್ಟಿದ ಮಗನ ಹೆಸರು ನೈಕೊಮ್ಯಾಕಸ್, ಅವನ ಹೆಸರಿನಲ್ಲಿ ಅರಿಸ್ಟಾಟಲ್ ಎಥಿಕಾ ನೈಕೊಮ್ಯಾಕಿಯ ಎಂಬ ಪ್ರಸಿದ್ಧ ನೀತಿಗ್ರಂಥವನ್ನು ಬರೆದಿದ್ದಾನೆ.

ಪ್ರ.ಶ.ಪೂ. 343ರಲ್ಲಿ ಮ್ಯಾಸಿಡಾನಿನ ದೊರೆ ಫಿಲಪ್ ತನ್ನ ಮಗ ಅಲೆಕ್ಸಾಂಡರನಿಗೆ ಗುರುವಾಗಬೇಕೆಂದು ಅರಿಸ್ಟಾಟಲನಿಗೆ ಆಹ್ವಾನವಿತ್ತ. ದೊರೆಯ ಆಹ್ವಾನವನ್ನು ಅಂಗೀಕರಿಸಿ ಫಿಲಿಪ್ಪನ ಆಸ್ಥಾನದಲ್ಲಿ ನೆಲಸಿ ಅಲೆಕ್ಸಾಂಡರನಿಗೆ ಕೆಲವು ವರ್ಷಗಳ ಕಾಲ ಅರಿಸ್ಟಾಟಲ್ ಪಾಠ ಹೇಳುತ್ತಿದ್ದ. ಫಿಲಿಪ್ ತೀರಿಕೊಂಡಮೇಲೆ ಇನ್ನೂ ಹರೆಯದಲ್ಲಿ ಕಾಲಿಡುತ್ತಿದ್ದ ಅಲೆಕ್ಸಾಂಡರ್ ವ್ಯಾಸಂಗಕ್ಕಿಂತಲೂ ದೇಶದ ಆಡಳಿತಕ್ಕೆ ಹೆಚ್ಚು ಗಮನ ಕೊಡಬೇಕಾಯಿತು. ಸಿಂಹಾಸನವನ್ನೇರಿದ ಕೂಡಲೆ ತನ್ನ ಜೈತ್ರಯಾತ್ರೆಗೆ ಸಜ್ಜುಗೊಳಿಸುವುದರಲ್ಲಿ ಮಗ್ನನಾದ. ಆದ್ದರಿಂದ ಅರಿಸ್ಟಾಟಲನಿಗೆ ಅವನನ್ನು ಭೇಟಿ ಮಾಡುವ ಅವಕಾಶ ಕಡಿಮೆಯಾಯಿತು. ಅವನಿಗೆ ಬೋಧಕನಾಗಿರುವ ಅಗತ್ಯ ತುಂಬ ಕಡಿಮೆಯೆಂದು ಅರಿಸ್ಟಾಟಲನಿಗೆ ಅನ್ನಿಸಿತು. ಪ್ರ.ಶ.ಪೂ.335ರಲ್ಲಿ ಅಥೆನ್ಸಿಗೆ ಹಿಂತಿರುಗಿ ಅಲ್ಲಿ ಲಿಷಿಯಂ ಎಂಬ ತನ್ನ ವಿದ್ಯಾಪೀಠವನ್ನು ಸ್ಥಾಪಿಸಿ ಪ್ರ.ಶ.ಪೂ.323ರ ವರೆಗೆ ಹನ್ನೆರಡು ವರ್ಷಗಳ ಕಾಲ ಅದರ ಆಚಾರ್ಯನಾಗಿ ಇದ್ದ. ಇವನು ನಿಧಾನವಾಗಿ ಅಡ್ಡಾಡುತ್ತ ಶಿಷ್ಯವೃಂದಕ್ಕೆ ಪಾಠ ಹೇಳುತ್ತಿದ್ದನಾದುದರಿಂದ ಇವನ ಶಾಲೆಗೆ ಪೆರಿಪೆಟಟಿಕ್ ಶಾಲೆಯೆಂದು ಹೆಸರು ಬಂತು; ಇವನ ಅನುಯಾಯಿಗಳನ್ನು ಪೆರಿಪೆಟಟಿಕ್ಸ್ ಎಂದು ಕರೆಯುವುದು ವಾಡಿಕೆಯಾಯಿತು. ಅಲೆಕ್ಸಾಂಡರನ ಮರಣಾನಂತರ ಅಥೆನ್ಸಿನಲ್ಲಿ ಅವನ ವಿರೋಧಪಕ್ಷದವರು ಬಲಗೊಂಡು ಅವನಿಗೆ ಗುರುವಾದ ಅರಿಸ್ಟಾಟಲ್

ತಮ್ಮ ಹಗೆಯೆಂದೂ ದೇಶದ್ರೋಹಿ ಯೆಂದೂ ಅವನ ಮೇಲೆ ಆಪಾದನೆ ಹೂಡಿದರು. ಇನ್ನೊಬ್ಬ ತತ್ತ್ವಶಾಸ್ತ್ರಜ್ಞನನ್ನು ಕೊಂದ ಅಪಕೀರ್ತಿ ಅಥೆನ್ಸಿಗೆ ಬಾರದಿರಲೆಂದು ಎಣಿಸಿ ಅರಿಸ್ಟಾಟಲ್ ತಲೆತಪ್ಪಿಸಿಕೊಂಡು ಯುಬಾಕ್ಕೆ ಓಡಿಹೋದ. ಸ್ವಲ್ಪಕಾಲದಲ್ಲೇ ಅಂದರೆ ಪ್ರ.ಶ.ಪೂ.322ರಲ್ಲಿ ಅಲ್ಲೇ ದೈವಾಧೀನನಾದ. ಪ್ರಕೃತಿಯ ವ್ಯಾಪಾರಗಳಲ್ಲಿ ಕುತೂಹಲ, ತೀಕ್ಷ್ಣವಾದ ತರ್ಕಶಕ್ತಿ, ಅನುಪಮವಾದ ಸ್ನೇಹಪರತೆ ಮತ್ತು ಔದಾರ್ಯ—ಇವು ಅವನ ವ್ಯಕ್ತಿತ್ವದ ಮುಖ್ಯಗುಣಗಳು. ತತ್ತ್ವಾವಲೋಕನ ಅವನ ಜೀವನದ ಅಮೂಲ್ಯ ಸೌಖ್ಯವಾಗಿತ್ತು. ಅವನ ಕಾಲದಲ್ಲಿದ್ದ ಸಮಸ್ತ ಕಲೆಗಳಲ್ಲೂ ಶಾಸ್ತ್ರಗಳಲ್ಲೂ ಅವನು ವಿಶೇಷ ಆಸಕ್ತಿ ಪಡೆದಿದ್ದನಲ್ಲದೆ ಅವುಗಳನ್ನು ಕುರಿತು ಸಾವಿರಾರು ವರ್ಷಗಳ ಕಾಲ ನಿಲ್ಲಬಹುದಾದ ಪ್ರಮಾಣಗ್ರಂಥಗಳನ್ನು ರಚಿಸಿದ.

ಪ್ಲೇಟೋನಂತೆ ಅರಿಸ್ಟಾಟಲ್ ಕೂಡ ಕೆಲವು ಸಂವಾದಗಳನ್ನು ಬರೆದಿದ್ದ. ಪೊಟ್ರಿಸಿಕಸ್ ಮತ್ತು ಡಿಫಿಲಸೋಫಿಯ ಎಂಬ ಸಂವಾದಗಳು ತತ್ತ್ವಕ್ಕೂ ಪೊಲಿಟಿಕಸ್, ಸೊಫಿಸ್ಟಿಕಸ್ ಮತ್ತು ಜೆಸ್ಟಿಸ್ ಎಂಬ ಸಂವಾದಗಳು ರಾಜಕೀಯಕ್ಕೂ ನೀತಿಗೂ ಸಂಬಂಧಪಟ್ಟವು. ಅವು ಈಗ ನಮಗೆ ದೊರೆತಿಲ್ಲ. ಅವುಗಳ ಕೆಲವು ತುಣುಕುಗಳು ಮಾತ್ರ ಸಿಕ್ಕಿವೆ. ಅವನ ಮಾತು ಸುವರ್ಣಧಾರೆ ಎಂದು ಸಿಸಿರೋ; ಶೈಲಿ ಸುಂದರವಾದದ್ದು, ಸಾರವತ್ತಾದದ್ದು ಎಂದು ಕ್ವಿನ್‌ಟಿಲಿಯನ್; ಶಕ್ತಿಯುತವಾದದ್ದು, ಸ್ಪಷ್ಟವಾದದ್ದು, ಲಲಿತವಾದದ್ದು ಎಂದು ಡಯೋನಿಯಸ್ ಹೊಗಳಿದ್ದಾರೆ. ಈ ಪ್ರಶಂಸೆಗಳು ಬಹುಶಃ ಈಗ ನಮಗೆ ದೊರೆಯದಿರುವ ಅವನ ಸಂವಾದಗಳನ್ನು ಕುರಿತವಾಗಿರಬಹುದು. ಈ ಗುಣಗಳೂ ಈಗ ನಮಗೆ ದೊರೆತಿರುವ ಅರಿಸ್ಟಾಟಲನ ಗ್ರಂಥಗಳಲ್ಲಿ ಕಾಣಬರುವುದಿಲ್ಲ. ಇವು ಬಹುಶಃ ಪ್ರಕಟಣೆಗಾಗಿ ಸಿದ್ಧಗೊಳಿಸಿದ ಗ್ರಂಥಗಳಲ್ಲ; ಪಾಠ ಹೇಳಲು ಅವನು ಗುರುತು ಮಾಡಿಕೊಂಡಿದ್ದ ಟಿಪ್ಪಣಿಗಳಿರಬಹುದು. ಇವನು ನಾಲ್ಕುನೂರು ಗ್ರಂಥಗಳನ್ನು ಬರೆದಿದ್ದನೆಂದು ತಿಳಿದಿದೆ. ಆದರೆ ಅವುಗಳಲ್ಲಿ ಹೆಚ್ಚು ಭಾಗ ನಷ್ಟವಾಗಿದೆ. ಉಳಿದಿರುವವುಗಳಲ್ಲಿ ಮುಖ್ಯವಾದುವನ್ನು ಆರು ಭಾಗಗಳಾಗಿ ವಿಂಗಡಿಸಬಹುದು.

1. ತರ್ಕಶಾಸ್ತ್ರ: ಕೆಟಿಗೊರಿಯ, ಡಿ ಇಂಟರ್‌ಪ್ರಿಟೇಷನ, ಅನಲಿಟಿಕ ಪ್ರಯೋರ, ಅನಲಿಟಿಕ ಪಾಸ್ಟೇರಿಯೋರ, ಟಾಪಿಕ, ಡಿ ಸೋಫಿಸ್ಟಿಕ ಮತ್ತು ಎಲೆಂಕಿಸ್.

2. ಭೌತವಿಜ್ಞಾನ: ಫಿಸಿಕ, ಡಿ ಕೋಲೊ, ಡಿ ಜನರಾಸಿಯೋನಿ, ವಿಟ್‌ಕರಪ್ಷನಿ ಮತ್ತು ಮೀಟಿಯೊರೊಲಾಜಿಕ.

3. ಜೀವವಿಜ್ಞಾನ: ಹಿಸ್ಟೋರಿಯ ಅನಿಮೇಲಿಯಂ, ಡಿ ಪಾರ್ಟಿಬಸ್ ಅನಿಮೇಲಿಯಂ, ಡಿ ಅನಿಮಾ ಮತ್ತು ಪಾರ್ವಾನ್ಯಾಟುರಾಲಿಯ.

4. ಪ್ರಥಮ ತತ್ತ್ವಗಳು: ಮೆಟಫಿಸಿಕ.

5. ನೀತಿಶಾಸ್ತ್ರ ಮತ್ತು ರಾಷ್ಟ್ರಶಾಸ್ತ್ರ: ಎಥಿಕ ನೈಕೊಮ್ಯಾಕಿಯ, ಎಥಿಕ ಈಡೆಮಿಯ, ಮ್ಯಾಗ್ನಾ ಮೊರೇಲಿಯ, ಪೊಲಿಟಿಕ ಮತ್ತು ಎಕನಾಮಿಕ.

6. ಅಲಂಕಾರಶಾಸ್ತ್ರ ಮತ್ತು ಕಾವ್ಯಮೀಮಾಂಸೆ: ರೆಟೊರಿಕ, ಪೊಯೆಟಿಕ. ಈ ಶಾಸ್ತ್ರಗಳನ್ನು ಕುರಿತ ವಿಷಯಗಳ ತುಂಬ ಸಂಗ್ರಹವಾದ ಪರಿಚಯ ಇಲ್ಲಿದೆ.

**ತರ್ಕಶಾಸ್ತ್ರ :** ಅರಿಸ್ಟಾಟಲನಿಗೆ ಮುಂಚೆ ತರ್ಕಶಾಸ್ತ್ರ ಬೇರೆಯ ಶಾಸ್ತ್ರವಾಗಿರದೆ ವಾದವಿದ್ಯೆಯಲ್ಲಿ ಅಡಗಿಹೋಗಿತ್ತು. ಸಾಕ್ರಟೀಸ್ ಲಕ್ಷಣನಿರೂಪಣೆಗೂ ಪ್ಲೇಟೊ ಆನ್ವೀಕ್ಷಿಕಿಗೂ ಜ್ಞಾನಮೀಮಾಂಸೆಗೂ ಹೆಚ್ಚು ಪ್ರಾಶಸ್ತ್ಯ ಕೊಟ್ಟರು. ಅರಿಸ್ಟಾಟಲ್ ಈ ಅಂಶಗಳನ್ನು ಸೇರಿಸಿಕೊಂಡು ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಅನುಮಾನದ ಸ್ವರೂಪವನ್ನು ಖಚಿತಗೊಳಿಸಿ ಇಂದಿನ ಪಾಶ್ಚಾತ್ಯ ತರ್ಕಶಾಸ್ತ್ರಕ್ಕೆ ತಳಹದಿ ಹಾಕಿದ. ಅವನ ತರ್ಕಶಾಸ್ತ್ರದಲ್ಲಿ, ಇಂದಿನ ಸಾಮಾನ್ಯ ತರ್ಕಶಾಸ್ತ್ರಗ್ರಂಥಗಳಲ್ಲಿ ಸೇರಿರುವ ವಿಷಯಗಳು ಅಡಕವಾಗಿವೆಯಲ್ಲದೆ ಜ್ಞಾನಮೀಮಾಂಸೆಯ ಅಂಶಗಳೂ ಸೇರಿವೆ. ಅವನ ಮೊದಲನೆಯ ತಾರ್ಕಿಕಗ್ರಂಥವಾದ ಕೆಟಿಗೊರಿಯದಲ್ಲಿ ವೈಶೇಷಿಕ ದಾರ್ಶನಿಕರು ಅಲೋಚ್ಯವಿಷಯಗಳನ್ನು ಹತ್ತು ಪದಾರ್ಥಗಳಾಗಿ ವಿಂಗಡಿಸಿದ್ದಾನೆ. ದ್ರವ್ಯ, ಗುಣ, ಪರಿಮಾಣ, ಸಂಬಂಧ, ದೇಶ, ಕಾಲ, ಭಂಗಿ, ಸ್ಥಿತಿ, ಕರ್ಮ ಮತ್ತು ಕರ್ಮಣಿತ್ವ—ಇವು ಆ ಹತ್ತು ಪದಾರ್ಥಗಳು. ಎರಡನೆಯ ತಾರ್ಕಿಕಗ್ರಂಥವಾದ ಇಂಟರ್‌ಪ್ರಿಟೇಷನಾನಲ್ಲಿ ಲಕ್ಷಣನಿರೂಪಣೆ ಮತ್ತು ಶಾಬ್ದಬೋಧ ಸೇರಿವೆ. ಮೂರನೆಯದಾದ ಅನಲಿಟಿಕ ಪ್ರಯೋರದಲ್ಲಿ ನಿಗಮನತರ್ಕವೂ ನಾಲ್ಕನೆಯದಾದ ಅನಲಿಟಿಕ ಪಾಸ್ಟೇರಿಯೋರದಲ್ಲಿ ಅನುಗಮನತರ್ಕವೂ ಸೇರಿವೆ. ಕೊನೆಯದಾದ ಎಲೆಂಕಿಸ್‌ನಲ್ಲಿ ತರ್ಕಾಭಾಸಗಳನ್ನು ವರ್ಣಿಸಿದೆ. ಅನಲಿಟಿಕ ಪ್ರಯೋರದಲ್ಲಿ ಆತ ಮೂರು ಅವಯವಗಳುಳ್ಳ ನ್ಯಾಯವನ್ನು ನಿರೂಪಿಸಿ ಸಮಧ್ಯಮ ಅನುಮಾನದ ಸ್ವರೂಪವನ್ನು ಖಚಿತಪಡಿಸಿದ್ದಾನೆ. ಆತ ಸ್ಥಾಪಿಸಿದ ಮೂರು ಅವಯವಗಳ ನ್ಯಾಯ ಇಂದಿಗೂ ಪಾಶ್ಚಾತ್ಯ ತರ್ಕಶಾಸ್ತ್ರದಲ್ಲಿ ವಿರಾಜಿಸುತ್ತಿದೆ.

ಅರಿಸ್ಟಾಟಲನ ಕಾಲದಿಂದ ಸುಮಾರು 19 ಶತಮಾನಗಳ ಕಾಲ ಪಾಶ್ಚಾತ್ಯ ತಾರ್ಕಿಕರು ಅವನ ನಿಗಮನತರ್ಕಕ್ಕೆ ಮಾತ್ರ ಗಮನ ಕೊಟ್ಟು ಅವನ ಅನುಗಮನತರ್ಕವನ್ನು ಅಲಕ್ಷಿಸಿದರು. ಪರಿಣಾಮವಾಗಿ ಅರಿಸ್ಟಾಟಲನ ತರ್ಕ ಕೇವಲ ನಿಗಮನತರ್ಕವೆಂಬ ತಪ್ಪು ಅಭಿಪ್ರಾಯ ನೆಲೆಗೊಂಡಿತು. ಪ್ರ.ಶ.16ನೆಯ ಶತಮಾನದಲ್ಲಿ ಬೇಕನ್ ಎಂಬ ಆಂಗ್ಲೇಯ ತಾರ್ಕಿಕ ಅರಿಸ್ಟಾಟಲನ ತರ್ಕಕ್ಕೆ ಅನುಗಮನದ ಆಧಾರವಿಲ್ಲದ್ದರಿಂದ ಅದು ಅಪ್ರಯೋಜಕವೆಂದು ಖಂಡಿಸಿ ಅನುಗಮನ ಪದ್ಧತಿಯ ಪತಾಕೆಯನ್ನು ಎತ್ತಿಹಿಡಿದ. ಆದ್ದರಿಂದ ಅವನ ತರ್ಕಪದ್ಧತಿಗೆ ಬೇಕನ್ ಪದ್ಧತಿಯೆಂಬ ಹೆಸರು ಬಂದಿದೆ. ಆದರೆ ಈಚಿನ ಪಾಶ್ಚಾತ್ಯ ತಾರ್ಕಿಕರು ಬೇಕನ್ನನ ಪದ್ಧತಿ ಹೊಸದೇನೂ ಅಲ್ಲವೆಂದೂ ಅದು ಅರಿಸ್ಟಾಟಲನ ಅನಲಿಟಿಕ ಪಾಸ್ಟೇಏರಿಯೋರದಲ್ಲೇ ಉಕ್ತವಾಗಿದೆಯೆಂದೂ ಅರಿಸ್ಟಾಟಲನ ಗಮನತರ್ಕಕ್ಕೆ ಆಧಾರವಾಗಿ ಅನುಗಮನವನ್ನೂ ಒಳಗೊಂಡಿದೆಯೆಂದೂ ಸ್ವಷ್ಟಪಡಿಸಿದ್ದಾರೆ. ಅರಿಸ್ಟಾಟಲ್ ತನ್ನ ಜೀವವಿಜ್ಞಾನದಲ್ಲಿ ಉಪಯೋಗಿಸಿರುವುದು ವಿಶೇಷವಾಗಿ ಅನುಗಮನತರ್ಕ, ಆತ ಪ್ರಾಣಿಶಾಸ್ತ್ರದಲ್ಲಿ ನಡೆಸಿದ ಸಂಶೋಧನೆಗಳ ಮೂಲಕ ಆಧುನಿಕ ವೈಜ್ಞಾನಿಕ ಪದ್ಧತಿಗೆ ಅಸ್ತಿಭಾರ ಹಾಕಿದನೆಂದು ಹೇಳಬಹುದು.

ಅರಿಸ್ಟಾಟಲ್ ತರ್ಕಶಾಸ್ತ್ರಕ್ಕೆ ಮಾಡಿದ ಮಹದುಪಕಾರವೆಂದರೆ ಸಾಮಾನ್ಯಗಳು ಪ್ರತ್ಯೇಕಗಳಿಂದ ಬೇರೆಯಾದುವಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದು. ಸಾಮಾನ್ಯವೂ ಪ್ರತ್ಯೇಕವೂ ಒಂದಕ್ಕೊಂದು ಆಂತರಿಕವಾದುವು; ಒಂದನ್ನೊಂದು ಬಿಟ್ಟು ಇರಲಾರವು ಎಂಬುದನ್ನು ತಿಳಿಸಿ ಆತ ಪ್ಲೇಟೊನ ಜ್ಞಾನಮೀಮಾಂಸೆಯನ್ನು ಪರಿಪೂರ್ಣಗೊಳಸಿದ. ಈ ವಿಚಾರದಲ್ಲಿ ಅರಿಸ್ಟಾಟಲ್ ಪ್ಲೇಟೊನ ಸಿದ್ಧಾಂತವನ್ನು ಖಂಡಿಸಿದಂತೆ ತೋರಿದರೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಂತಿಮದಲ್ಲಿ ಅವರಿಬ್ಬರ ಭಾವಗಳು ವಿರುದ್ಧವಲ್ಲವೆಂದು ಬೋಧೆಯಾಗುತ್ತದೆ.

**ಭೌತವಿಜ್ಞಾನ :** ಅರಿಸ್ಟಾಟಲ್‌ನ ಸಿದ್ಧಾಂತಗಳು ಈಗ ಮೂಲೆಗೆ ಬಿದ್ದಿವೆಯಾದರೂ ಅನೇಕ ಶತಮಾನಗಳ ಪರ್ಯಂತ ಅವು ಪಾಶ್ಚಾತ್ಯರಿಗೆ ಪರಮಸತ್ಯಗಳಾಗಿದ್ದವು. ಭೌತವಸ್ತು, ಆಕಾಶ, ಕಾಲ ಮತ್ತು ಚಲನೆ ಅರಿಸ್ಟಾಟಲನ ಭೌತವಿಜ್ಞಾನದ ಮೂಲ ಭಾವನೆಗಳು. ಅವನ ಅಭಿಪ್ರಾಯದಲ್ಲಿ, ಭೌತವಸ್ತು ತೀರ ಜಡವಾದದ್ದು, ಚಲನೆ ಇಲ್ಲದ್ದು. ಅದು ಬರಿದಾದ, ಅನಂತವಲ್ಲದ ಆಕಾಶದಲ್ಲಿ ನೇತುಬಿದ್ದಿರುವ ವಸ್ತು. ಕಾಲವೂ ಚಲನೆಯೂ ಇದಕ್ಕೆ ಬಾಹಿರವಾದಂತಹವು. ರೂಪವಿಲ್ಲದ ಭೌತವಸ್ತು ರೂಪತಾಳುವುದಕ್ಕೆ ಕಾರಣ. ಚಲನೆ ಚಲನೆ ನಾಲ್ಕು ಬಗೆಯಾಗಿದೆ. ಮೊದಲ ಬಗೆಯ ಚಲನೆ ಭೌತವಸ್ತುವಿನ ರೂಪವನ್ನು ಬದಲಾಯಿಸುತ್ತದೆ. ಎರಡನೆಯದು ಗುಣವನ್ನು ಬದಲಾಯಿಸುತ್ತದೆ. ಮೂರನೆಯದು ಪ್ರಮಾಣವನ್ನು ಬದಲಾಯಿಸುತ್ತದೆ. ನಾಲ್ಕನೆಯದು ಸ್ಥಳವನ್ನು ಬದಲಾಯಿಸುತ್ತದೆ. ಕಾಲ ಮತ್ತು ಆಕಾಶಗಳು ಅನಂತವಾಗಿ ವಿಭಾಗವಾಗತಕ್ಕವು. ಸೂರ್ಯಚಂದ್ರಾದಿಗಳು ಭೌತವಸ್ತುಗಳಲ್ಲ. ಅವುಗಳ ಸತ್ತ್ವವೂ ಸ್ವರೂಪವೂ ಭೌತವಸ್ತುವಿನಿಂದ ಬೇರೆಯಾದುವು. ಅವು ಶುದ್ಧ ಸತ್ತ್ವಪಡೆದ ದಿವ್ಯ ವಸ್ತುಗಳು.

**ಪ್ರಾಣಿವಿಜ್ಞಾನ:** ಇದು ಅವನ ಭೌತವಿಜ್ಞಾನದಂತೆ ಆಕಾಶಪುರಾಣವಲ್ಲ. ಪ್ರಾಣಿಗಳನ್ನೂ ಅವುಗಳ ಎಲುಬುಗಳನ್ನೂ ಚಿಪ್ಪುಗಳನ್ನೂ ಸಾವಧಾನದಿಂದ ನಿರಂತರವಾಗಿ ಕಣ್ಣಿಟ್ಟು ಪರೀಕ್ಷಿಸಿ ಕ್ರಮವರಿತು ವಿಂಗಡಿಸಿ, ವರ್ಗೀಕರಿಸಿ, ಅನುಗಮನದ ಆಧಾರದ ಮೇಲೆ ರಚಿಸಿದ ವಿಜ್ಞಾನವಿದು. ಅರಿಸ್ಟಾಟಲನಿಗೆ ಬಾಲ್ಯದಿಂದ ಈ ವಿಜ್ಞಾನದಲ್ಲಿ ಅತಿಶಯವಾದ ಆಸಕ್ತಿ ಇತ್ತು. ತಂದೆ ವೈದ್ಯನಾಗಿದ್ದುದೂ ಪ್ರಾಣಿವಿಜ್ಞಾನಿಯಾದ ಅಸ್‌ಕ್ಲಿಪಿಯಸ್ ಬಾಲ್ಯದಲ್ಲೇ ಪರಿಚಯವಾದದ್ದೂ ಆಸಕ್ತಿ ಬೆಳೆಯಲು ಕಾರಣವಿರಬಹುದು. ಮದುವೆ ಮಾಡಿಕೊಂಡು ತನ್ನ ಹೆಂಡತಿಯೊಡನೆ ವಿಹಾರಾರ್ಥವಾಗಿ ಲೆಸ್‌ಬಾಸ್ ದ್ವೀಪಕ್ಕೆ ಹೋದಾಗ ಎರಡು ವರ್ಷಗಳ ಕಾಲ ಸಸ್ಯಗಳ ಮಾದರಿಗಳನ್ನೂ ಸಮುದ್ರದ ಪ್ರಾಣಿಗಳ ಎಲುಬುಗಳನ್ನೂ ಚಿಪ್ಪುಗಳನ್ನೂ ಸಂಗ್ರಹಿಸುವುದೊಂದೇ ಅವನ ಮುಖ್ಯ ಕೆಲಸವಾಗಿತ್ತು.

ಅಲೆಕ್ಸಾಂಡರ್‌ನ ಗುರುವಾಗಿದ್ದ ಕಾಲದಲ್ಲಿ ಸಂಶೋಧನೆಗೆ ಬೇಕಾದ ಸಸ್ಯಗಳನ್ನೂ ಪ್ರಾಣಿಗಳನ್ನೂ ಅವುಗಳ ಅವಶೇಷಗಳನ್ನೂ ರಾಜಭಟರು ಒದಗಿಸುತ್ತಿದ್ದರು. ಅಲೆಕ್ಸಾಂಡರ್ ತನ್ನ ಜೈತ್ರಯಾತ್ರೆಯ ಕಾಲದಲ್ಲಿ ವಿದೇಶಗಳಲ್ಲಿ ದೊರೆತ ಚಿತ್ರವಿಚಿತ್ರ ಪ್ರಾಣಿಗಳ ಮಾದರಿಗಳನ್ನು ತಿಳಿಯುವುದು ಎಷ್ಟು ಮಹತ್ತ್ವದ ಕೆಲಸ, ಅದನ್ನು ತಿಳಿಯಲು ಯಾವ ವಿಶೇಷ ವಿಧಾನಗಳನ್ನು ಅನುಸರಿಸಬೇಕು ಎಂಬುದನ್ನು ಅರಿಸ್ಟಾಟಲ್ ತನ್ನ ಪಾರ್ಟಿಬಸ್ ಅನಿಮೇಲಿಯಂ ಗ್ರಂಥದಲ್ಲಿ ಆಧುನಿಕರನ್ನೂ ಅಚ್ಚರಿಗೊಳಿಸುವಷ್ಟು ಚೆನ್ನಾಗಿ ವಿವರಿಸುತ್ತಾನೆ, ವೈಜ್ಞಾನಿಕ ವರ್ಗೀಕಕರಣವಿಧಾನಕ್ಕೆ ಭದ್ರವಾದ ಬುನಾದಿಯನ್ನು ಏರ್ಪಡಿಸಿದ ಯಶಸ್ಸು ಆತನಿಗೆ ಸಲ್ಲಬೇಕು.

ಅರಿಸ್ಟಾಟಲ್ ಪರಿಣಾಮವಾದಿಯೆಂದು ಹೇಳುವುದುಂಟು. ಪ್ರಕೃತಿಯಲ್ಲಿ ಕ್ರಮವಾದ ಬೆಳೆವಣಿಗೆ ಇದೆ. ಕೆಳಮಟ್ಟದ ಪ್ರಕೃತಿಯ ಪರಿಣಾಮಗಳು ಮೇಲ್ಮಟ್ಟದ ಪ್ರಕೃತಿಯ ಪರಿಣಾಮಗಳಿಗೆ ತಳಹದಿಯಾಗಿವೆ. ಎಂದು ಮಾತ್ರ ಅರಿಸ್ಟಾಟಲ್ ತಿಳಿದಿದ್ದ. ಈಚಿನ ಪರಿಣಾಮಗಳಂತೆ ಮಾನವಜಾತಿಯೂ ಕಪಿಜಾತಿಯೂ ಒಂದೇ ಮೂಲದಿಂದ ಪರಿಣಾಮ ಗೊಂಡವೆಂದು ಆತ ತಿಳಿದಿರಲಿಲ್ಲ. ಅವನ ಪರಿಣಾಮವಾದ ಮುಖ್ಯವಾಗಿ ತಾತ್ತ್ವಿಕ ವೈಜ್ಞಾನಿಕವಲ್ಲ. **(ಜಿ.ಎಚ್.)**

**ಮನಶ್ಶಾಸ್ತ್ರ :** ಅರಿಸ್ಟಾಟಲನ ಮನಶ್ಶಾಸ್ತ್ರದಲ್ಲಿ ವೈಜ್ಞಾನಿಕ ವಿಷಯಗಳೂ ತಾತ್ತ್ವಿಕ ವಿಷಯಗಳೂ ಮಿಲನವಾಗಿವೆ. ಅವುಗಳನ್ನು ಇಲ್ಲಿ ಹೀಗೆ ಸಂಗ್ರಹಿಸಬಹುದು. ನಿರ್ಜೀವ ವಸ್ತುಗಳಿಂದ ಜೀವಿಗಳನ್ನು ಪ್ರತ್ಯೇಕಿಸುವುದು ಆತ್ಮ. ಶರೀರ ಆತ್ಮದ ವಿಕಾಸ; ಆತ್ಮ

ಶರೀರದ ವಿಕಾಸವಲ್ಲ. ಶರೀರಸಂರಕ್ಷಣೆ, ಸಂತಾನೋತ್ಪತ್ತಿ, ಇಂದ್ರಿಯವ್ಯಾಪಾರಗಳು, ವಾಸನಾವ್ಯಾಪಾರಗಳೂ ಇಚ್ಛೆ, ಪ್ರತಿಭೆ, ತರ್ಕ–ಇವು ಆತ್ಮದ ವ್ಯಾಪಾರಗಳು. ಸಸ್ಯಗಳ ಆತ್ಮವ್ಯಾಪಾರ ಆಹಾರಾರ್ಜನೆ ಮತ್ತು ಬೀಜೋತ್ಪತ್ತಿ ಮಾತ್ರವೇ. ಪ್ರಾಣಿಗಳ ಆತ್ಮಗಳ ಆತ್ಮಗಳು ಆಹಾರವನ್ನು ಸಂಪಾದಿಸಿಕೊಂಡು ಸಂತಾನವನ್ನು ಪೋಷಿಸುತ್ತವೆಯಲ್ಲದೆ ವಾಸನಾತ್ಮಕ ಸಂಸ್ಕಾರಗಳನ್ನೂ ಇಂದ್ರಿಯಾನುಭವಗಳನ್ನೂ ಪಡೆದಿರುತ್ತವೆ, ಮಾನವನ ಆತ್ಮಕ್ಕಾದರೋ ಇವೆಲ್ಲಕ್ಕಿಂತ ಬುದ್ಧಿಶಕ್ತಿ ವಿಶಿಷ್ಟವಾದುದ್ದು. ಪಂಚೇಂದ್ರಿಯಗಳಿಂದ ಹುಟ್ಟಿದ ಆಕೃತಿಗಳನ್ನು ಸಂವಿಧಾನಗೊಳಿಸುವುದು ಬುದ್ಧಿಯ ಕೆಲಸ. ಲೋಕಸಹಜವಾದ ತಿಳಿವನ್ನು ಪಾಶ್ಚಾತ್ಯರು ಕಾಮನ್‌ಸೆನ್ಸ್ ಎಂದು ಕರೆಯುವುದು ವಾಡಿಕೆ. ಇದು ಕೇವಲ ಬೌದ್ಧಿಕವಲ್ಲ, ಅಪ್ಪಟ ತಾರ್ಕಿಕ ಜ್ಞಾನವೂ ಅಲ್ಲ. ಅದು ವಿಶೇಷವಾಗಿ ಹೃದಯದ ಭಾವಗಳಿಂದ ಮಿಳಿತವಾದ ತಿಳಿವು. ಲೋಗರು ತಮಗೆ ತಿಳಿದಿದ್ದನ್ನು ನಾನು ತಿಳಿದಿದ್ದೇನೆ ಎಂದು ಹೇಳುವುದಕ್ಕಿಂತ ನನಗೆ ಹಾಗೆ ಅನ್ನಿಸುತ್ತದೆ; ನನ್ನ ಹೃದಯಕ್ಕೆ ಹಾಗೆ ತೋರುತ್ತದೆ ಎಂದು ಹೇಳುವುದು ರೂಢಿ. ಆದ್ದರಿಂದ ಅರಿಸ್ಟಾಟಲ್ ಸಾಮಾನ್ಯರ ತಿಳಿವಿಗೆ ಹೃದಯವೇ ಕಾರಣವೆಂದು ಹೇಳಿದ್ದಾನೆ. ಅರಿಸ್ಟಾಟಲ್‌ನ ಪ್ರಕಾರ ಬುದ್ಧಿಯ ಕೆಲಸ ಎರಡು ಬಗೆಯಾಗಿದೆ. ಇಂದ್ರಿಯಗಳಿಂದ ಬಂದ ಆಕೃತಿಗಳನ್ನು ಅಂಗೀಕರಿಸುವುದು ಮೊದಲನೆಯದು; ಅವುಗಳ ಸ್ವಭಾವಕ್ಕೆ ಯೋಗ್ಯವಾದ ಬೌದ್ಧಿಕರೂಪಗಳನ್ನು ಕೊಟ್ಟು ಸಂಯೋಗಗೊಳಿಸುವುದು ಎರಡನೆಯದು. ಬುದ್ಧಿಶಕ್ತಿಯನ್ನು ವಿಚಾರಚೈತನ್ಯವೆಂದು ಕರೆಯಬಹುದು. ಈ ಚೈತನ್ಯ ಪ್ರಕೃತಿಯಲ್ಲಿ ಸುಪ್ತವಾಗಿದೆ. ಮಾನವನಲ್ಲಿ ಎಚ್ಚೆತ್ತಿದೆ. ಸಮಸ್ತ ವಸ್ತುಗಳಿಗೂ ಆಧಾರವಾಗಿ ಅವುಗಳಲ್ಲಿ ಸುಪ್ತವಾಗಿರುವ ಭಾವಸತ್ತ್ವಗಳನ್ನು ತಿಳಿಯುವ ಶಕ್ತಿಯೇ ಬುದ್ಧಿಶಕ್ತಿ. ಅಥವಾ ವಿಚಾರಚೈತನ್ಯ. ಇಲ್ಲಿ ಅರಿಸ್ಟಾಟಲ್ ಒಪ್ಪಿಕೊಂಡಿರುವ ಭಾವಸತ್ತ್ವಗಳು ಪ್ಲೇಟೊನ ಭಾವಸತ್ತ್ವಗಳೇ. ಇದರಿಂದ ಪ್ಲೇಟೊನ ಅಂತಿಮ ಸಿದ್ಧಾಂತಕ್ಕೂ ಅರಿಸ್ಟಾಟಲನ ಸಿದ್ಧಾಂತಕ್ಕೂ ವಿರೋಧವಿಲ್ಲವೆಂಬುದು ಸ್ಪಷ್ಟ.

ಪ್ಲೇಟೋ ಮತ್ತು ಪೈಥಾಗೊರಸ್ ಹೇಳುವಂತೆ ಆತ್ಮ ಶರೀರದಿಂದ ಬೇರೆ ಎಂಬುದನ್ನು ಅರಿಸ್ಟಾಟಲ್ ಅನುಮೋದಿಸುವುದಿಲ್ಲ. ಪೈಥಾಗೊರಸ್ ಹೇಳುವಂತೆ ಅದು ಒಂದು ಶರೀರದಿಂದ ಬೇರ್ಪಟ್ಟು ಮತ್ತೊಂದರಲ್ಲಿ ಸೇರಲಾರದು. ಒಂದೊಂದು ಪ್ರಾಣಿಯ ಶರೀರರಚನೆಯೂ ಅದಕ್ಕೆ ವಿಶಿಷ್ಟವಾದದ್ದು. ಅದರ ವ್ಯಾಪಾರವೂ ಅದಕ್ಕೇ ವಿಶಿಷ್ಟವಾದದ್ದು. ಆಯಾ ಶರೀರದ ರಚನೆ ಅದರ ಆತ್ಮ. ಪ್ರಾಣಿಗಳ ಶರೀರದ ರಚನೆಯೇ ಬೇರೆ. ಮನುಷ್ಯನ ಶರೀರದ ರಚನೆಯೇ ಬೇರೆ. ಆದ್ದರಿಂದ ಪ್ರಾಣಿಗಳ ಆತ್ಮ ಮನುಷ್ಯನ ಶರೀರದಲ್ಲಿ ಸೇರಲಾರದು. ಹಾಗೆಯೇ ಮನುಷ್ಯನ ಆತ್ಮ ಪ್ರಾಣಿಗಳ ಶರೀರದಲ್ಲಿ ಸೇರಲಾರದು. ಆಯಾ ಪ್ರಾಣಿಯಜೀವನ ವ್ಯಾಪಾರ ಕೊನೆಗೊಂಡಾಗ ಅದರ ಆತ್ಮ ಲಯವಾಗುತ್ತದೆ. ಆದ್ದರಿಂದ ಅದಕ್ಕೆ ಅಮರತ್ವವಿಲ್ಲ, ಪುನರ್ಜನ್ಮವಿಲ್ಲ, ಪರಲೋಕವಿಲ್ಲ. ಮಾನವನ ಆತ್ಮ ವಿಚಾರ ಚೈತನ್ಯರೂಪವಾದದ್ದು, ಆದ್ದರಿಂದ ಅದು ಪ್ರಾಣಿಗಳ ಆತ್ಮಗಳಿಗಿಂತ ಬೇರೆಯೇ ಸ್ವರೂಪಪಡೆದದ್ದು, ಅದು ದಿವ್ಯಚೈತನ್ಯಕ್ಕೆ ಅನುರೂಪವಾದದ್ದು. ಪ್ರತಿಯೊಬ್ಬ ಮಾನವನೂ ಸತ್ತಾಗ ಅವನ ವ್ಯಕ್ತಿತ್ವವನ್ನು ಕಳೆದು ಕೊಂಡು ಕೇವಲ ದಿವ್ಯರೂಪದಲ್ಲಿ, ದಿವ್ಯವಾದ ಪರಮಾತ್ಮನಲ್ಲಿ ಲೀನವಾಗುತ್ತದೆ. ಹಾಗೆ ಅದರಲ್ಲಿ ಲೀನವಾದುದರಿಂದ ಅದಕ್ಕೆ ನಿತ್ಯತ್ವ ಸಿದ್ಧಸುತ್ತದೆ. ಆಗ ಅದಕ್ಕೆ ಕಾಲ ಮತ್ತು ದೇಶಭೇದಗಳು ಅಂಟಿರುವುದಿಲ್ಲ. ಏಕೆಂದರೆ ಪರಮಾತ್ಮ ಕಾಲದೇಶಗಳಿಗೆ ಅತೀತವಾದದ್ದು. ಕಾಲದೇಶಗಳು ಪರಮಾತ್ಮನಲ್ಲಿ ಇವೆ. ಆದರೆ ಪರಮಾತ್ಮ ಕಾಲದೇಶಗಳಲ್ಲಿ ಇಲ್ಲ. **(ಎಸ್.ಕೆ.ಆರ್.)**

**ಪ್ರಥಮ ತತ್ತ್ವಗಳು :** ಎಲ್ಲಕ್ಕೂ ಕಾರಣವಾದ ಎಲ್ಲವನ್ನೂ ಸೇರಿಸುವ, ಎಲ್ಲದರ ಮನಕ್ಕೂ ಗುರಿಯಾದ ಸುತ್ತಿನ ಸ್ವರೂಪವನ್ನು ತಿಳಿಸುವ ಶಾಸ್ತ್ರವನ್ನು ಅರಿಸ್ಟಾಟಲ್ ತತ್ತ್ವಶಾಸ್ತ್ರವೆಂದು ಕರೆದಿರುತ್ತಾರೆ. ಇವನ ತತ್ತ್ವಶಾಸ್ತ್ರದ ಮೂಲತತ್ತ್ವಗಳು ಎರಡು: ಪರಮಚೈತನ್ಯ ಮತ್ತು ಮೂಲಭೌತವಸ್ತು. ಮೂಲ ಭೌತವಸ್ತು ಪ್ರತ್ಯೇಕಗಳನ್ನು ಒದಗಿಸುತ್ತದೆ. ಚೈತನ್ಯರೂಪಗಳನ್ನು ಒದಗಿಸುತ್ತದೆ. ಇವೆರಡರ ಸಂಯೋಗದಿಂದ ವಿವಿಧ ವಸ್ತುಗಳಾಗುತ್ತವೆ. ಆಯಾರೂಪಕ್ಕೆ ಅನುಗುಣವಾಗಿ ಒಂದೊಂದು ವಸ್ತುವೂ ಬೇರೆ ಬೇರೆ ಅಂತಸ್ತನ್ನು ಪಡೆಯುತ್ತದೆ. ಪೃಥ್ವಿ, ಅಪ್, ವಾಯು, ತೇಜಸ್, ಸಸ್ಯಗಳು, ಪ್ರಾಣಿಗಳು, ಮಾನವರು ಹೀಗೆ ಕ್ರಮವಾಗಿ ಒಂದಕ್ಕಿಂತ ಒಂದು ಮೇಲಿನ ಪ್ರಾಣಿಗಳು, ಮಾನವರು ಹೀಗೆ ಕ್ರಮವಾಗಿ ಒಂದಕ್ಕಿಂತ ಒಂದು ಮೇಲಿನ ಅಂತಸ್ತಿನವು. ಎಲ್ಲಕ್ಕೂ ಕೆಳಗಿನದಾದ ಭೌತವಸ್ತುವಿನಿಂದ ಹಿಡಿದು ಎಲ್ಲಕ್ಕೂ ಮೇಲಿನದಾದ ಚೈತನ್ಯದವರೆಗೆ ಪ್ರಕೃತಿಯಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಬೇರೆ ಬೇರೆ ಅಂತಸ್ತಿನ ವಸ್ತುಗಳಿವೆ, ಕೆಳಗಿನ ಅಂತಸ್ತಿನ ವಸ್ತುಗಳು ಮೇಲಿನ ಅಂತಸ್ತಿನ ವಸ್ತುಗಳಿಗೆ ಆಧಾರಗಳು; ಅವು ತಮಗಿಂತ ಮೇಲಿನವಾದ ವಸ್ತುಗಳಿಗೆ ಆಧಾರಗಳು. ಹೀಗೆ ಪ್ರಕೃತಿಯಲ್ಲಿ ಕ್ರಮವಾದ ಏರಿಕೆ, ಹೊಂದಿಕೆ ಇದೆ.

ಪ್ರಕೃತಿಯಲ್ಲಿ ಸಾಮಾನ್ಯಗಳೂ ಪ್ರತ್ಯೇಕಗಳೂ ಬೇರೆ ಬೇರೆಯಾಗಿ ಇರಲಾರವು. ಇರವು ಕೇವಲ ಭಾವರೂಪವೂ ಅಲ್ಲ; ಕೇವಲ ಸಾಮಾನ್ಯವೂ ಅಲ್ಲ; ಪ್ರತ್ಯೇಕವೂ ಅಲ್ಲ. ಸಾಮಾನ್ಯವನ್ನು ಬಿಟ್ಟು ಪ್ರತ್ಯೇಕಗಳು ಇರಲಾರವು. ಅಂದರೆ ವಸ್ತುರೂಪದಲ್ಲಿ ಪ್ರಕಟವಾಗದ ಸಾಮಾನ್ಯಗಳು ಬರಿದಾದ, ಜೊಳ್ಳಾದ ಭಾವಗಳು. ಭಾವಗರ್ಭಿತವಲ್ಲದ ಪ್ರತ್ಯೇಕಗಳು ಅರ್ಥವಿಲ್ಲದವು. ನಿಜವಾದ ಸಾಮಾನ್ಯಗಳು ವ್ಯಕ್ತಿನಿಷ್ಠಭಾವಗಳು, ವಿಶಿಷ್ಟ ಸಾಮಾನ್ಯಗಳು ಈ ಸಾಮಾನ್ಯಗಳು ನಿಷ್ಕ್ರಿಯರೂಪದವಲ್ಲ. ಇವು ವಸ್ತುಗಳ ಅಂತರ್ಭಾವಗಳಾಗಿ ಅವು ತಮಗೆ ಸಹಜವಾದ ಪರಿಪೂರ್ಣತೆ ಪಡೆಯುವಂತೆ ಚೇತನಗೊಳಿಸುತ್ತವೆ. ಆ ಪರಿಪೂರ್ಣತೆಯನ್ನು ಪಡೆಯದ ವಿನಾ ಅವಕ್ಕೆ ನಿಲುಗಡೆ ಇಲ್ಲ, ಸಾರ್ಥಕ್ಯವಿಲ್ಲ, ವಿಶ್ರಾಂತಿ ಇಲ್ಲ. ಬೀಜ ಫಲಭರಿತ ವೃಕ್ಷವಾಗಲು ಮಿಡಿಯುತ್ತಾನೆ. ಅದು ಸಿದ್ಧಿಸಿದಾಗ ಅವನಿಗೆ ರೂಪ ಸಿದ್ಧಿಸುತ್ತದೆ. ಪರಿಪೂರ್ಣವಾಗುತ್ತದೆ.

ಹೀಗೆ ವಿಶ್ವದಲ್ಲಿರುವ ಪ್ರತಿಯೊಂದು ವಸ್ತುವೂ ತನ್ನ ಗುರಿಯನ್ನು ಸಾಧಿಸಿಕೊಳ್ಳುವುದ ಲ್ಲದೆ, ತಮಗಿಂತ ಮೇಲಿನ ಅಂತಸ್ತಿನ ವಸ್ತುಗಳಿಗೆ ಆಧಾರವಾಗುತ್ತದೆ. ಭೂಮಿ, ಬೆಂಕಿ, ಗಾಳಿ, ಬೆಳಕು ತಮ್ಮ ಸ್ವಭಾವವನ್ನು ಸಾಧಿಸಿಕೊಳ್ಳುವುದರ ಜೊತೆಗೆ ಸಸ್ಯಗಳ, ಪ್ರಾಣಿಗಳ, ಮನುಷ್ಯನ ಪ್ರಾಣಾಧಾರಗಳಾಗುತ್ತವೆ. ಆದರೆ ತನ್ನ ಸ್ವಭಾವವನ್ನು ಈಡೇರಿಸಿಕೊಳ್ಳುವುದೇ ಒಂದೊಂದರ ಗುರಿಯೂ ಆಗಿದೆ. ಮೇಲಂತಸ್ತಿನ ವಸ್ತುಗಳಿಗೆ ಅದು ಆಧಾರವಾದರೂ ಅವು ಸಾಧಿಸಿಕೊಳ್ಳಬೇಕಾದ ಗುರಿ ಅದರ ಗುರಿಯಲ್ಲ. ಮಾನವನ ಶ್ರೇಯಸ್ಸು ಪ್ರಕೃತಿಯ ಗುರಿಯಲ್ಲ. ಪ್ರಕೃತಿ ಮಾನವನಿಗೆ ಅಗತ್ಯ. ಮಾನವನ ಶ್ರೇಯಸ್ಸನ್ನು ಈಡೇರಿಸುವುದು ಪ್ರಕೃತಿಗೆ ಸೇರಿದ ಕೆಲಸವಲ್ಲ.

ಮಾನವನೇ ಎಲ್ಲಕ್ಕೂ ಮೇಲಿನವನಲ್ಲ. ಈ ಭೂಮಿಯಿಂದ ಆಚೆ ಮಾನವನಿಗಿಂತ ಉತ್ತಮವಾದ ವಸ್ತುಗಳಿವೆ ಎಂದು ಅರಿಸ್ಟಾಟಲನ ಭಾವನೆ. ಸೂರ್ಯಚಂದ್ರಾದಿಗಳು, ನಕ್ಷತ್ರಗಳು ಮಾನವನಿಗಿಂತ ಭಿನ್ನವಾದ ಕ್ವಿಂಟಸೆನ್ಸ್ ಅಂದರೆ ಶುದ್ಧಸತ್ತ್ವದಿಂದ ಕೂಡಿದವು. ಸೂರ್ಯಚಂದ್ರಾದಿಗಳು ದಿವ್ಯಮೂರ್ತಿಗಳು ಎಂಬುದು ಗ್ರೀಕರ ನಂಬಿಕೆ. ಅರಿಸ್ಟಾಟಲ್ ಕೂಡ ಆ ನಂಬಿಕೆಯಲ್ಲಿ ಭಾಗಿ. ನಕ್ಷತ್ರಗಳಿಗಿಂತಲೂ ಆಚೆ, ಅಂದರೆ ಆಕಾಶದ ಮಿತಿಯನ್ನು ಮೀರಿ ಇರುವಂಥದ್ದು ಎಲ್ಲಕ್ಕಿಂತಲೂ ಪರಿಪೂರ್ಣವಾದದ್ದು–ಪರಮಚೈತನ್ಯ, ಈಶ್ವರ.

ಪ್ರಕೃತಿಯಲ್ಲಿ ಮೆಟ್ಟಿಲು ಮೆಟ್ಟಿಲಾಗಿ ವಸ್ತುಗಳು ಪರಿಣಾಮಗೊಳ್ಳುತ್ತವೆಯೆಂದು ಈಗಾಗಲೇ ತಿಳಿದೆವಷ್ಟೆ, ಈ ಪರಿಣಾಮಗಳು ಉಂಟಾಗುವುದು ಹೇಗೆ ಎಂಬುದು ಮುಂದಿನ ಪ್ರಶ್ನೆ. ಒಂದು ವಸ್ತು ಪರಿಣಾಮಗೊಂಡಾಗ ಅದು ಯಾವ ಕಾರಣದಿಂದ ಹಾಗೆ ಪರಿಣಾಮ ಗೊಂಡಿತು ಎಂಬುದನ್ನು ತಿಳಿಸದ ವಿನಾ ಅದರ ಅರ್ಥ ಪೂರ್ಣವಾಗುವುದಿಲ್ಲ. ಪ್ರತಿಯೊಂದು ವಸ್ತುವೂ ಸಂಪೂರ್ಣವಾಗಿ ಪರಿಣಮಿಸಲು ಅರಿಸ್ಟಾಟಲ್ ನಾಲ್ಕು ಕಾರಣಗಳನ್ನು ತಿಳಿಸುತ್ತಾನೆ. ಈ ಕಾರಣಗಳು ಮಾನವನ ಪರಿಣಾಮಕ್ಕಲ್ಲದೆ ಎಲ್ಲ ವಸ್ತುಗಳ ಪರಿಣಾಮಕ್ಕೂ ಒಂದೇ ಸಮನಾಗಿ ಅನ್ವಯಿಸುತ್ತವೆ. ಇದನ್ನು ಸ್ಪಷ್ಟಪಡಿಸಲು ಮಾನವನನ್ನು ಬಿಟ್ಟು ಒಂದು ಸಸ್ಯವನ್ನು ಉದಾಹರಣೆಯಾಗಿ ಇಲ್ಲಿ ತೆಗೆದುಕೊಂಡಿದೆ. ಒಂದು ಗಿಡಕ್ಕೆ ಬೀಜ ಉಪಾದಾನಕಾರಣ. ವೃಕ್ಷತ್ವ, ಅದರ ಭಾವ ಅಥವಾ ರೂಪ ಕಾರಣ. ಬೀಜ ಮೊಳೆತು ಬೆಳೆಯುವುದಕ್ಕೆ ಮಣ್ಣು, ನೀರು, ಗಾಳಿ, ಬೆಳಕು–ಇವೆಲ್ಲ ಸೇರಿ ನಿಮಿತ್ತಕಾರಣ. ಫಲಭರಿತವಾಗುವುದು ಅದರ ಗುರಿ. ಅದು ಅದರ ಅಂತಿಮಕಾರಣ. ಈ ಕಾರಣ ಚತುಷ್ಟಯದಲ್ಲಿ ಯಾವುದೊಂದಿಲ್ಲ ದಿದ್ದರೂ ಯಾವುದೊಂದು ವಸ್ತುವೂ ಸಂಪೂರ್ಣವಾಗಿ ವಿಕಾಸವಾಗಲಾರದು.

ಇದುವರೆಗೂ ವಿಶ್ವವನ್ನು ವ್ಯಕ್ತಿದೃಷ್ಟಿಯಿಂದ ನೋಡಿದ್ದಾಯಿತು. ಈಗ ವಿಶ್ವವನ್ನು ಸಮಷ್ಟಿದೃಷ್ಟಿಯಿಂದ ನೋಡಬಹುದು. ವಿಶ್ವಕ್ಕೆಲ್ಲ ಕಾರಣ ಯಾವುದು ಎಂಬುದೇ ಸಮಷ್ಟಿ ದೃಷ್ಟಿಯಿಂದ ಹುಟ್ಟುವ ಪ್ರಶ್ನೆ. ಅರಿಸ್ಟಾಟಲನ ಅಭಿಪ್ರಾಯದಲ್ಲಿ ಈ ವಿಶ್ವ ಬದಲಾವಣೆಯುಳ್ಳದ್ದು, ಇದಕ್ಕೆ ಅಸ್ತಿತ್ವವಿಲ್ಲ. ಇದು ಕೇವಲ ಸಂಭಾವನಾರೂಪವಾದದ್ದು, ಅವ್ಯಕ್ತ, ಇರಬಹುದಾದ ಎಲ್ಲ ಪ್ರತ್ಯೇಕಗಳೂ ಇದರಲ್ಲಿ ಅಡಗಿವೆ. ಇದಕ್ಕೆ ಸ್ವತಃ ಚಲಿಸುವ ಶಕ್ತಿ ಇಲ್ಲ. ಇದನ್ನು ಚಲಿಸುವುದು ಪರಮಚೈತನ್ಯ. ಪರಮಚೈತನ್ಯ ಜಡವಸ್ತುವಿನಲ್ಲಿ ಅಡಗಿರುವ ಅನೇಕಾನೇಕ ಪ್ರತ್ಯೇಕಗಳಿಗೆ ತನ್ನಿಂದ ಹುಟ್ಟಿದ ರೂಪಕೊಟ್ಟು ಅವುಗಳನ್ನು ಮೂರ್ತವಸ್ತುಗಳನ್ನಾಗಿಸುತ್ತದೆ. ಈ ರೂಪಗಳೇ ಆಯಾ ವಸ್ತುವಿಗೆ ಕಾರಣಗಳು. ಈ ವಿಶ್ವದ ವಿವಿಧವಸ್ತುಗಳು ತಮ್ಮ ಗುರಿಯನ್ನು ಸಾಧಿಸಿಕೊಂಡು ಮೇಲಿನ ಅಂತಸ್ತಿನ ವಸ್ತುಗಳಿಗೆ ಆಧಾರವಾಗಿ ವ್ಯವಸ್ಥೆಗೊಳ್ಳು ವುದೇ ಈ ವಿಶ್ವದ ಅಂತಿಮ ಗುರಿ. ಹಾಗೆ ಆಗಿಸುವುದೆ ಈಶ್ವರನ ಉದ್ದೇಶ. ಈಶ್ವರನೇ ವಿಶ್ವದ ಅಂತಿಮಕಾರಣ. ಹೀಗೆ ವಿಶ್ವಕ್ಕೆ ಕಾರಣವಾದ ಕರಣಚತುಷ್ಟಯದಲ್ಲಿ ಜಡವಸ್ತು ಉಪಾದಾನಕಾರಣ, ಉಳಿದೆಲ್ಲ ಕಾರಣಗಳೂ ಪರಮಚೈತನ್ಯದಿಂದ ಬಂದುವು. ಅಂತಿಮದಲ್ಲಿ ಜಡವಸ್ತುವೂ ಚೈತನ್ಯವೂ ಬೇರೆಯಾದವು. ಆದ್ದರಿಂದ ಅರಿಸ್ಟಾಟಲನ ತತ್ತ್ವ ದ್ವೈತವಾಗಿಯೇ ಉಳಿಯುತ್ತದೆ.

ಅರಿಸ್ಟಾಟಲನ ತತ್ತ್ವದಲ್ಲಿ, ಈ ವಿಶ್ವವನ್ನು, ಮುಖ್ಯವಾಗಿ ಪ್ರಕೃತಿತತ್ತ್ವವನ್ನು ನಿರೂಪಿಸಿರುವ ರೀತಿ ರಮಣೀಯವಾಗಿದೆ. ವ್ಯಕ್ತಿತ್ವ ಮಂಜವಾದ ಪಾತ್ರಗಳಿಂದ ತುಂಬಿತುಳುಕುವ ನಾಟಕದಂತೆ ಅರಿಸ್ಟಾಟಲನ ಪ್ರಕೃತಿವಿಮರ್ಶೆ ಚಿತ್ತಾಕರ್ಷಕವಾದದ್ದು. ಆದರೆ ಅವನ ಈಶ್ವರತತ್ತ್ವವಾಗಲಿ ಮೂಲಜಡವಸ್ತುವಾಗಲಿ ಅವೆರಡಕ್ಕಿರುವ ಸಂಬಂಧವಾಗಲಿ ವಿಚಾರರಮಣೀಯಗಳಲ್ಲ, ಅವೆರಡೂ ಅತ್ಯಂತ ವಿರುದ್ಧವಾದ ದ್ವಂದ್ವಗಳು. ಅವನ ಜಡವಸ್ತು ನಿಷ್ಕ್ರಿಯವಾದದ್ದು, ನಿಸ್ಸತ್ತ್ವವಾದದ್ದು. ಅವನ ಈಶ್ವರ ಚಲಿಸದ ಚಾಲಕ. ಒಂದನ್ನೊಂದು ಬಹಿಷ್ಕರಿಸುವ ಈ ಎರಡು ತತ್ತ್ವಗಳು ಸೇರುವುದೆಂತು? ಚಲಿಸದಯೇ ಚಾಲಕನಾಗುವುದೆಂತು? ಎಲ್ಲ ಪ್ರತ್ಯೇಕಗಳಿಗೂ ಕಾರಣವಾದ ಜಡವಸ್ತುವಿಗೆ ಅಸ್ತಿತ್ವವೇ

ಇಲ್ಲವಾದರೆ ಅದು ಅವುಗಳಿಗೆ ಕಾರಣವಾಗುವುದು ತಾನೆ ಹೇಗೆ? ಅಂತಿಮದಲ್ಲಿ ಪೂರ್ಣ ಅಸ್ತಿತ್ವವನ್ನು ಪಡೆದ ಪರಿಪೂರ್ಣವಾದ ಚೈತನ್ಯವೇ ಪರಮಚೈತನ್ಯವೆಂಬುದು ಅರಿಸ್ಟಾಟಲನ ಇಂಗಿತ. ಅದೇ ಅವನ ಇಂಗಿತವಾದ ಪಕ್ಷದಲ್ಲಿ ಅವನ ತತ್ತ್ವ ಪ್ಲೇಟೋನ ಅದ್ವೈತವನ್ನು ಸಮೀಪಿಸುತ್ತದೆ. ಅಸ್ತಿತ್ವವಿಲ್ಲದ ಭೌತವಸ್ತುವೂ ಚಲನೆ ಇಲ್ಲದ ಚೈತನ್ಯವೂ ಬೇರೆಯಾಗಿ ಉಳಿಯಲಾರವು.

**ನೀತಿಶಾಸ್ತ್ರ:** ಪಾಶ್ಚಾತ್ಯರಲ್ಲಿ ನೀತಿಶಾಸ್ತ್ರವನ್ನು ಪ್ರತ್ಯೇಕವಾಗಿ ಮೊಟ್ಟಮೊದಲಿಗೆ ಸ್ಥಾಪಿಸಿದವ ಅರಿಸ್ಟಾಟಲ್. ಇಂದಿಗೂ ಪಾಶ್ಚಾತ್ಯ ನೀತಿಶಾಸ್ತ್ರಜ್ಞರು ಆತ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ಅವನ ಮಾತುಗಳನ್ನು ಸ್ಮರಿಸಿ ತಮ್ಮ ನೀತಿವಿಚಾರವನ್ನು ಪ್ರಾರಂಭಿಸುತ್ತಾರೆ. ಮಾನವನ ಸದ್ವರ್ತನೆಯ ಧ್ಯೇಯವೇನು? ಯಾವುದನ್ನು ಲಕ್ಷ್ಯವಾಗಿ ಇಟ್ಟುಕೊಂಡು ಅವನು ನೀತಿಯ ದಾರಿಯಲ್ಲಿ ನಡೆಯಬೇಕು? ಇದು ನೀತಿಶಾಸ್ತ್ರದ ಮುಖ್ಯ ಪ್ರಶ್ನೆ.

ಪ್ರತಿಯೊಂದು ವಸ್ತುವಿನ ಪರಿಣಾಮಕ್ಕೂ ಒಂದು ಲಕ್ಷ್ಯ, ಅಂತಿಮ ಕಾರಣ ಇದೆ. ಅದು ಅದರ ಸ್ವಭಾವದಿಂದ ಬೇರೆಯಲ್ಲ. ಅದರ ಸ್ವಭಾವವನ್ನು ಪರಿಪೂರ್ಣಗೊಳಿಸಿ ಕೊಳ್ಳುವುದೇ ಅದರ ಲಕ್ಷ್ಯ. ಹಾಗೆಯೇ ಮಾನವ ತನ್ನ ಸ್ವಭಾವವನ್ನು ಪರಿಪೂರ್ಣಗೊಳಿಸಿ ಕೊಳ್ಳುವುದೇ ಅವನ ನೀತಿಯ ಲಕ್ಷ್ಯ. ಮಾನವ ಎಲ್ಲ ಪ್ರಾಣಿಗಳಂತೆ ಹಸಿವೆ, ಕಾಮ, ಪೌರುಷ ಮುಂತಾದ ವಾಸನಾಸಂಸ್ಕಾರಗಳನ್ನು ಪಡೆದಿರುತ್ತಾನೆ. ಆದರೆ ಮಾನವನಿಗೇ ವಿಶಿಷ್ಟವಾದದ್ದು ಅವನ ವಿವೇಚನಾಶಕ್ತಿ. ವಿವೇಚನೆ ಇಲ್ಲದೆ ವರ್ತಿಸುವ ನಿಜವಾದ ಪಶುಸಮಾನನೇ. ವಿವೇಚನೆಯಿಂದ ತನ್ನ ಹಸಿವು, ಕಾಮ, ಪುರುಷ ಮುಂತಾದವನ್ನು ಈಡೇರಿಸಿಕೊಳ್ಳುವುದು ಅವನಿಗೆ ಸಹಜವಾದ ನೀತಿ. ನೀತಿಯಿಂದ ನಡೆದುಕೊಳ್ಳುವುದು ಮಾನವನಿಗೆ ಸಹಜವಾದದ್ದು. ಹಾಗೆಂದರೆ ಎಲ್ಲರೂ ಎಲ್ಲ ಕಾಲದಲ್ಲೂ ನೀತಿವಂತರೆಂದಲ್ಲ. ಒಟ್ಟಿನಲ್ಲಿ ಮಾನವನ ಗಮನ ಅನೀತಿಗಿಂತಲೂ ನೀತಿಯ ಕಡೆ ಹರಿಯುವುದು ಸಹಜ. ನೀತಿ ಮಾನವನಿಗೆ ಸಹಜವಲ್ಲದಿದ್ದರೆ ನೀತಿ ತಪ್ಪಿದವ ತನ್ನ ನಡೆತೆಗಾಗಿ ನಾಚುತ್ತಿರಲಿಲ್ಲ. ಪರಮನೀಚನೂ ತಾನು ನಡೆಸಿದ ನೀಚಕೃತ್ಯಕ್ಕಾಗಿ ತತ್‌ಕ್ಷಣದಲ್ಲಿ ಅಲ್ಲದಿದ್ದರೂ ಕಾಲಾಂತರದಲ್ಲಿ ಮರುಗಿಯೇ ಮರುಗುತ್ತಾನೆ. ಅನೀತಿ ಆ ಕ್ಷಣದಲ್ಲಿ ಅವನಿಗೆ ಸಂತೋಷವಾಗಿ ತೋರಬಹುದು. ಆದರೆ ಅದು ನಿರಂತರವಾಗಿ ಸುಖಪ್ರದವಲ್ಲ. ನೀತಿಯಾದರೋ ಸದಾ ಸುಖಪ್ರದ. ನೀತಿಗಾಗಿ ಒಬ್ಬ ತನ್ನ ಸರ್ವಸ್ವವನ್ನೂ ಕಳೆದುಕೊಳ್ಳುತ್ತಾನಲ್ಲವೇ? ಅದು ಸುಖವೇ ಎಂದು ಕೇಳಬಹುದು. ಹೌದು, ಅದು ಸುಖ. ಹಾಗೆ ಕಳೆದುಕೊಳ್ಳುವುದು ಅವನಿಗೆ ಹಿತ. ಹಾಗೆ ಅವನು ನಡೆದುಕೊಳ್ಳದಿದ್ದಲ್ಲಿ ಆತ ಜೀವಮಾನಪರ್ಯಂತ ದುಃಖಪಡುತ್ತಿದ್ದ. ಧರ್ಮವೇ, ನಿನಗಾಗಿ ನಾನು ಎಲ್ಲವನ್ನೂ ಬಿಡಬೇಕಲ್ಲ ! ಎಂದು ಗೋಳು ಸುರಿಸುತ್ತಾ ಕೆಲವರು ನಡೆದುಕೊಳ್ಳುವುದಿಲ್ಲವೇ? ಆ ನಡತೆಯಲ್ಲಿ ಸುಖವೆಲ್ಲಿದೆ, ಹಿತವೆಲ್ಲಿದೆ. ಎಂದು ಕೇಳಬಹುದು. ಅದಕ್ಕೆ ಅರಿಸ್ಟಾಟಲ್‌ನ ಉತ್ತರ ಇದು: ಅಂಥ ನಡತೆ ನಿಜವಾಗಿ ನೀತಿಯಲ್ಲ, ಮನಸ್ಸೊಪ್ಪಿ ನಡೆಸಿದ್ದೇ ನೀತಿ, ತನ್ನ ಮನಸ್ಸಿಗೆ ಒಪ್ಪಿದ್ದು ಹಿತವೇ. ಹಿತ ಅಥವಾ ಸುಖ ನೀತಿಯಲ್ಲಿ ಅಗತ್ಯವಾಗಿ ಸೇರಿರುವ ಅಂಶ, ನೀತಿ ಆತ್ಮಪರಿಪೂರ್ಣ. ಆ ಪರಿಪೂರ್ಣತೆಯಲ್ಲಿ ಆತ್ಮಾನಂದ ಸೇರಿದೆ. ಆನಂದದಾಯಕವಾದ ಆತ್ಮಪರಿಪೂರ್ಣ ತೆಯೇ ನೀತಿಯ ನೆಲೆ. ಅರಿಸ್ಟಾಟಲನ ಈ ವಾದಕ್ಕೆ ಪರಿಪೂರ್ಣತಾವಾದವೆಂದು (ಯೂಡೀಮಾನಿಸಂ) ಹೆಸರು. ಆತ್ಮಪರಿಪೂರ್ಣತೆಯೇ ಆನಂದ. ಆನಂದವನ್ನು ಬಿಟ್ಟು ಆತ್ಮಪರಿಪೂರ್ಣತೆ ಇಲ್ಲ; ಆತ್ಮ ಪರಿಪೂರ್ಣತೆ ಮತ್ತು ಆನಂದ ಇವೆರಡೂ ಒಂದೇ ಎಂಬುದನ್ನು ಯೂಡೀಮಾನಿಸಂ ಪದದಲ್ಲಿ ಸೇರಿಸುವ ಮಾನಿಸಂ ಪದ ಸ್ಪಷ್ಟಪಡಿಸುತ್ತದೆ.

ವಿವೇಚನಾಪರನಾದರೂ ಮಾನವ ವಿವೇಚಿಸುವ ಯಂತ್ರವಲ್ಲ. ಮಾನವ ಚೈತನ್ಯ ಜ್ಞಾನರೂಪವಾದದ್ದು, ಕ್ರಿಯಾರೂಪವಾದದ್ದು, ಪ್ರೇಮರೂಪವಾದದ್ದು ಅದ್ದರಿಂದ ಜ್ಞಾನ ಒಂದನ್ನೇ ಆಗಲಿ, ಕರ್ಮ ಒಂದನ್ನೇ ಆಗಲಿ, ಪ್ರೇಮ ಒಂದನ್ನೇ ಆಗಲಿ ಆಶ್ರಯಿಸುವುದು ಆತ್ಮಕ್ಕೆ ಸ್ವಾಭಾವಿಕವಲ್ಲ. ಅದು ಏಕಪಕ್ಷೀಯನೀತಿ. ಅರಿಸ್ಟಾಟಲನದು ಏಕಪಕ್ಷೀಯ ನೀತಿಯಲ್ಲ. ಏಕಪಕ್ಷೀಯ ನೀತಿ ಅತಿನೀತಿ. ಅನೀತಿ, ಅತಿನಿಷ್ಠೆ ಅನಿಷ್ಠೆ. ಅತಿಯನ್ನು ಸರ್ವತ್ರ ತ್ಯಜಿಸಬೇಕು ಎಂಬುದು ಅವನ ಸಮನ್ವಯನೀತಿ, ಸಮಧ್ಯಮ ನೀತಿ, ಸುವರ್ಣ ನೀತಿ. ಕಾಮವನ್ನು ಅದುಮಿಡು ಎಂದೂ ಆತ ಹೇಳುವುದಿಲ್ಲ. ಹರಿಯಬಿಡೆಂದೂ ವಾದಿಸುವುದಿಲ್ಲ. ಮಿತಿಯಲ್ಲಿಡು ಎಂಬುದೇ ಅವನ ಸುವರ್ಣಸೂತ್ರ. ಈ ಸೂತ್ರಕ್ಕನುಗುಣವಾದ ಸದ್ವೃತ್ತಿಗಳೇ ಸದ್ಗುಣಗಳು. ಅಭೋಗಕ್ಕೂ ಅತಿಭೋಗಕ್ಕೂ ಮಧ್ಯಸ್ಥವಾದ ಸದ್ಗುಣ ಮಿತಭೋಗ. ಹುಚ್ಚುಸಾಹಸಕ್ಕೂ ಹೇಡಿತನಕ್ಕೂ ಮಧ್ಯಸ್ಥವಾದ ಸದ್ಗುಣ ಧೈರ್ಯ. ಲೋಭಕ್ಕೂ ದುಂದುಗಾರಿಕೆಗೂ ಮಧ್ಯಸ್ಥವಾದದ್ದು ಔದಾರ್ಯ. ಇವುಗಳಲ್ಲದೆ ಜ್ಞಾನಕ್ಕೇ ಸಂಬಂಧಪಟ್ಟ ಸದ್ಗುಣಗಳನ್ನೂ ಅರಿಸ್ಟಾಟಲ್ ವಿವರಿಸುತ್ತಾನೆ. ಅವುಗಳಲ್ಲಿ ಲೋಕೋಚಿತಜ್ಞಾನ ಒಂದು. ಇದು ಮಾನವನಲ್ಲಿರಬೇಕಾದ ಒಂದು ಸದ್ಗುಣ ಎಂದು ಹೇಳಿರುವುದು ಅವನ ಔಚಿತ್ಯಜ್ಞಾನಕ್ಕೆ ಸಾಕ್ಷಿ. ಇದು ನಡೆನುಡಿಯ ರಮ್ಯತೆಗೆ ಸೇರಿದ್ದು, ಉಚಿತವರಿತವನನ್ನು ನೀತಿವಂತನೆಂದಾಗಲಿ ಉಚಿತವರಿಯದವನನ್ನು ನೀತಿಗೆಟ್ಟವನೆಂದಾಗಲಿ ನಾವು ಭಾವಿಸುವುದಿಲ್ಲ. ಸೌಂದರ್ಯಪ್ರಿಯನಾದ ಅರಿಸ್ಟಾಟಲನಿಗೆ ಉಚಿತವಲ್ಲದ ನಡೆಯಾಗಲಿ ನುಡಿಯಾಗಲಿ ಸಹ್ಯವಲ್ಲ, ಅರಿಸ್ಟಾಟಲ್ ಹೀಗೆ ಹೇಳಿರುವುದು ಉಚಿತವೇ ಎಂದು ಕೇಳಬಹುದು. ಉಚಿತವಾದ ನಡೆ ನುಡಿ ಕಡ್ಡಾಯವೆಂದು ಆತ ಹೇಳಿದ್ದರೆ ಅದು ಅನುಚಿತವಾಗುತ್ತಿತ್ತು. ಅವನು ಹಾಗೆ ಹೇಳಿಲ್ಲ. ಒಬ್ಬನ ನಡೆನುಡಿಯಲ್ಲಿ ಔಚಿತ್ಯವಿರಲೇಬಾರದೆಂದು ನಾವಾದರೂ ವಾದಿಸಬಹುದೇ?

ಜ್ಞಾನಕ್ಕೆ ಸಂಬಂಧಪಟ್ಟ ಸದ್ಗುಣಗಳಲ್ಲಿ ತಾತ್ತ್ವಿಕವಿವೇಕ ಎಲ್ಲಕ್ಕಿಂತ ಮೇಲಿನದೆಂದು ಅರಿಸ್ಟಾಟಲನ ಅಭಿಮತ. ಬರಿಯ ತತ್ತ್ವಜ್ಞಾನ ತತ್ತ್ವವಿವೇಕವಲ್ಲ. ಜೀವನವನ್ನು ಹದಗೊಳಿಸಿ ಕೊಳ್ಳಲು ಆ ಜ್ಞಾನವನ್ನು ಉಪಯೋಗಿಸಿಕೊಳ್ಳುವುದು ವಿವೇಕ. ತಾತ್ತ್ವಿಕನಾದವನು ಹೇಗೆ ನಡೆಯಬೇಕು ನುಡಿಯಬೇಕು ಎಂಬುದನ್ನು ಅರಿಸ್ಟಾಟಲ್ ವರ್ಣಿಸಿದ್ದಾನೆ. ಈ ವರ್ಣನೆಯನ್ನು ಓದಿದಾಗ ನಮ್ಮೊಳಗೆ ಮೆಲುನಗೆ ಹುಟ್ಟಬಹುದು. ನಮಗೆ ತತ್ತ್ವ ಕೇವಲ ವಿಚಾರ ವಿಷಯ. ಅದು ನಮ್ಮ ಜೀವನಕ್ಕೆ ಹೊರತಾದದ್ದು. ಆದರೆ ಅದು ಅವನ ಜೀವನಕ್ಕೆ ಆಂತರಿಕವಾದದ್ದು. ನಂಬಿದಂತೆ ನಡೆಯುವುದು ಅವನಿಗೆ ಆಚಾರವಾಗಿ ತೋರಿತು. ಅದು ಅವನಿಗೆ ಪ್ರಿಯವಾಗಿ ಕಂಡಿತು. ಹಾಗಿರುವುದೇ ಪ್ರಾಮಾಣಿಕವೆನ್ನಿಸಿತು. ಅದೇ ಜೀವನದ ಶಾಂತಿ ಎಂದು ಬೋಧನೆಯಾಯಿತು. ತತ್ತ್ವಜ್ಞಾನ ವಿವೇಕವಾದರೆ ಬಾಧಕವೇನೂ ಅಲ್ಲ, ಒಳ್ಳಯದೇ. ಹಾಲು ಕೆನೆ ಕಟ್ಟಿದಂತಾಗುತ್ತದೆ, ತತ್ತ್ವವನ್ನು ಜೀವನದ ಒರೆಗಲ್ಲಿಗಿಟ್ಟು ನೋಡುವುದೇ ವಿವೇಕ. ವಿವೇಕದ ವಿಚಾರವಾಗಿ ಇಂದಿನ ಪಾಶ್ಚಾತ್ಯ ತಾತ್ತ್ವಿಕರು ಏನೇ ಹೇಳಲಿ ಅದು ಭಾರತೀಯರಿಗೆ ಒಪ್ಪು.

ಹೀಗೆ ಸುವರ್ಣ ಮಾಧ್ಯಮಕ್ಕೆ ಅನುಗುಣವಾದ ನಡತೆಯೇ ನ್ಯಾಯ, ನ್ಯಾಯವಾದ ನಡೆತೆ, ನ್ಯಾಯ ಎಂಬುದು ಎಲ್ಲ ಸದ್ಗುಣಗಳಿಗಿಂತ ವಿಶಾಲವಾದದ್ದು. ಎಲ್ಲ ಸದ್ಗುಣಗಳೂ ಅದರಲ್ಲಿ ಸೇರಿವೆ. ನ್ಯಾಯ ಎಂದರೆ ಸಕಲ ಸದ್ಗುಣಗಳ ಸಮ್ಮಿಳನ.

ಇವು ಸದ್ಗುಣಗಳು ಎಂದು ತಿಳಿದಮಾತ್ರಕ್ಕೆ ಒಬ್ಬ ಸದ್ಗುಣಿಯಾಗುವುದಿಲ್ಲ; ಶೀಲವಂತನಾಗುವುದಿಲ್ಲ, ಶೀಲ ಸಾಧನೆಯಿಂದ ಮಾತ್ರ ಸಿದ್ಧಿಸತಕ್ಕದ್ದು. ನಿರಂತರವಾದ ಅಭ್ಯಾಸದಿಂದ ಅದು ಕುದುರುತ್ತದೆ. ಸದ್ವರ್ತನೆ ನಿತ್ಯಗಟ್ಟಲೆಯದಾದಾಗ ಅದು ನಮ್ಮ ಮರು ಸ್ವಭಾವವಾಗುತ್ತದೆ. ಅಭ್ಯಾಸಬಲದಿಂದ ಶೀಲ ಸುಗಮವಾಗುತ್ತದೆ; ಸುಖಪ್ರದವಾಗುತ್ತದೆ. ನೀತಿಜೀವನ ಹದವಾದ ಹಿತವಾದ ಜೀವನವಾಗುತ್ತದೆ, ಅಂಥ ಜೀವನದಿಂದ ತನಗೂ ಅನ್ಯಾಯವಿಲ್ಲ, ಪರರಿಗೂ ಅನ್ಯಾಯವಿಲ್ಲ. ಧರ್ಮವನ್ನೇ ಆತ್ಮಾರ್ಥವಾಗಿ ಉಳ್ಳವನು ಧರ್ಮಾತ್ಮ. ಅಂಥವನ ಆತ್ಮಾರ್ಥದಲ್ಲಿ ಪರಾರ್ಥವೂ ಸೇರಿದೆ. ಆತ್ಮತ್ಯಾಗವೂ ಸೇರಿದೆ. ಧರ್ಮಾತ್ಮ ತನ್ನ ದೇಶಕ್ಕಾಗಿ, ಸ್ನೇಹಿತನಿಗಾಗಿ ಐಶ್ವರ್ಯವನ್ನೂ ಯಶಸ್ಸನ್ನೂ ಪ್ರಾಣವನ್ನೂ ಒಪ್ಪಿಸಿ ಆನಂದಿಸುತ್ತಾನೆ. ಧರ್ಮವು ಆನಂದಮಯ, ಆನಂದವಿಲ್ಲದ ಧರ್ಮ ಗೊಡ್ಡುಧರ್ಮ. ಆದರೆ ಅರಿಸ್ಟಾಟಲ್ ಸುಖವೇ ಧರ್ಮವೆಂಬ ಸುಖತಾವಾದಿಯಲ್ಲ. ಫಲವೇ ಧರ್ಮವೆಂಬ ಫಲವಾದಿಯಲ್ಲ. ಧರ್ಮವೇ ಆನಂದವೆಂಬ ಧರ್ಮಾನಂದವಾದಿ.

**ರಾಜ್ಯಶಾಸ್ತ್ರ :** ಚೆನ್ನಾಗಿ ಬಾಳಲು ಮಾನವನಿಗೆ ಜೀವನದ ಸೌಕರ್ಯಗಳು ಬೇಕು. ಸುಂದರವಾದ ಕೃತಿಗಳು ಬೇಕು. ಧರ್ಮಾಚರಣೆಗೆ ಸತ್ಯಾನ್ವೇಷಣಗಳಿಗೆ ಅವಕಾಶ ಬೇಕು. ಇವೆಲ್ಲವೂ ಅವನಿಗೆ ಸಾಧ್ಯವಾಗುವುದು ಆತ ಸಮಾಜಜೀವಿಯಾದ್ದರಿಂದ. ಸೇರಿ ಬಾಳುವುದು ಅವನಿಗೆ ಸಹಜವಾದ್ದರಿಂದ ಸಮಾಜಜೀವನ ಅವನ ಬೆನ್ನೇರಿ ಬಂದದ್ದು. ಆತ ಹುಟ್ಟಿದ್ದು ಸಮಾಜದಲ್ಲಿ, ಬೆಳೆಯುವುದು ಸಮಾಜದಲ್ಲಿ. ಇತರರೊಡನೆ ಬಾಳದೆ ತನ್ನ ಶ್ರೇಯಸ್ಸನ್ನು ಗಳಿಸಲಾರ. ತಾನು ಹುಟ್ಟಿದ ಸಮಾಜ ಪ್ರತಿಯೊಬ್ಬನ ಅಭ್ಯುದಯಕ್ಕೂ ಅಗತ್ಯವಾದ ಸಂಸ್ಥೆ. ರಾಷ್ಟ್ರ ನಮ್ಮ ಮಹಾಸಮಾಜ, ಗ್ರೀಕರಿಗಂತೂ ರಾಷ್ಟ್ರವೇ ಜೀವನದ ಉಸಿರು, ರಾಷ್ಟ್ರಜೀವನದಲ್ಲಿ ಅವರಿಗಿದ್ದ ಆಸಕ್ತಿ ಅನುಪಮ. ಅವರು ತಮ್ಮ ನಗರ ರಾಷ್ಟ್ರಗಳಲ್ಲಿ ನೇರವಾಗಿ ಭಾಗವಹಿಸುತ್ತಿದ್ದರು. ರಾಷ್ಟ್ರ ಸ್ವಾಭಾವಿಕ ಸಂಸ್ಥೆ ಎಂದು ಅವರು ಭಾವಿಸಿದ್ದು ಸಹಜವೇ. ಅರಿಸ್ಟಾಟಲನ ಭಾವನೆಯೂ ಅದೇ. ಅವನು ಪ್ರಥಮತತ್ತ್ವಕ್ಕೆ ಕೊಟ್ಟಷ್ಟೇ ರಾಷ್ಟ್ರತತ್ತ್ವಕ್ಕೂ ಪ್ರಾಶಸ್ತ್ಯ ಕೊಟ್ಟಿದ್ದೇನೂ ಆಶ್ಚರ್ಯಕರವಲ್ಲ.

ಒಂದು ಸಮಾಜಕ್ಕೆ ಸೇರಿದ ಜನ ಎಲ್ಲರೂ ಸಮಾನ ಸ್ವಭಾವ ಪಡೆದಿರುವುದಿಲ್ಲ. ಆದ್ದರಿಂದ ಅವರ ಹಕ್ಕು ಬಾಧ್ಯತೆಗಳು ಸಮಾನವಾಗಿರಲಾರವು. ಕೆಲವರಿಗೆ ಬೇಸಾಯಗಾರರಾಗುವ ಯೋಗ್ಯತೆ ಹೆಚ್ಚಾಗಿದೆ. ಮತ್ತೆ ಕೆಲವರಿಗೆ ಯೋಧರಾಗುವ ಯೋಗ್ಯತೆ ಹೆಚ್ಚಾಗಿದೆ. ಮೇಧಾವಿಗಳಾದ ಕೆಲವರಿಗೆ ಶಾಸ್ತ್ರ, ಸಾಹಿತ್ಯ ಮತ್ತು ತತ್ತ್ವಾನ್ವೇಷಣದ ಯೋಗ್ಯತೆ ಬಲವಾಗಿದೆ. ಯೋಗ್ಯತೆಗೆ ತಕ್ಕಂತೆ ಹಕ್ಕುಬಾಧ್ಯತೆಗಳು ಹಂಚಿಕೆಯಾಗಬೇಕು. ಅದೇ ಸ್ವಭಾವಕ್ಕನುಗುಣವಾದ ರಾಷ್ಟ್ರದ ನ್ಯಾಯ, ಹಕ್ಕುಬಾಧ್ಯತೆಗಳನ್ನು ನ್ಯಾಯವಾಗಿ ವಿಧಾಯಕ ಮಾಡುವ ರಾಷ್ಟ್ರವೇ ನ್ಯಾಯವಾದ ರಾಷ್ಟ್ರ, ಒಳ್ಳೆಯ ರಾಷ್ಟ್ರ.

ರಾಷ್ಟ್ರಗಳು ಹಲವು ಬಗೆಯಾಗಿವೆ. ಪ್ರಭುತ್ವಕ್ಕೆ ಯಾವುದು ಆಶ್ರಯವೋ ತದನುಗುಣವಾಗಿ ರಾಷ್ಟ್ರಗಳನ್ನು ವಿಂಗಡಿಸುವುದು ವಾಡಿಕೆ. ಪ್ರಭುತ್ವ ಒಬ್ಬ ರಾಜನಲ್ಲಿ ಕೇಂದ್ರೀಕೃತವಾಗಿದ್ದರೆ ಅದು ರಾಜಪ್ರಭುತ್ವದ ರಾಷ್ಟ್ರ. ಕೆಲವು ಶ್ರೀಮಂತರಲ್ಲಿ ಕೇಂದ್ರಿಕೃತವಾಗಿದ್ದರೆ ಶ್ರೀಮಂತರ ರಾಷ್ಟ್ರ, ಪ್ರಜೆಗಳಲ್ಲಿ ಕೇಂದ್ರೀಕೃತವಾಗಿದ್ದರೆ ಪ್ರಜಾಪ್ರಭುತ್ವರಾಷ್ಟ್ರ.

ಒಂದು ರಾಷ್ಟ್ರ ನ್ಯಾಯರಾಷ್ಟ್ರವಾಗಬೇಕಾದರೆ ಅದು ರಾಜಪ್ರಭುತ್ವ, ಪ್ರಮುಖರ ಪ್ರಭುತ್ವ ಅಥವಾ ಪ್ರಜಾಪ್ರಭುತ್ವ ಮಾತ್ರವೇ ಆಗಬೇಕಾದ್ದಿಲ್ಲ. ರಾಜಪ್ರಭುತ್ವ ಒಳ್ಳೆಯದಾಗಬಹುದು ಅಥವಾ ಕೆಟ್ಟದಾಗಬಹುದು. ಪ್ರಮುಖರ ಪ್ರಭುತ್ವವೂ ಉಚ್ಚವಾದದ್ದಾಗಬಹುದು ಅಥವಾ

ನೀಚವಾದದ್ದಾಗಬಹುದು. ಪ್ರಜಾಪ್ರಭುತ್ವವೂ ಸುವ್ಯವಸ್ಥಿತವಾಗಿರಬಹುದು ಅಥವಾ ಅವ್ಯವಸ್ಥಿತವಾಗಿರಬಹುದು. ಅರಿಸ್ಟಾಟಲನ ಅಭಿಪ್ರಾಯದಲ್ಲಿ ಪ್ರಮುಖರ ಪ್ರಭುತ್ವ ಉತ್ತಮ ಪ್ರಭುತ್ವವಾಗುವ ಸಂಭವ ಹೆಚ್ಚು.

ಸಾಮೂಹಿಕ ಸ್ವಾಮ್ಯವನ್ನೂ ಸಾಮೂಹಿಕ ಕುಟುಂಬ ಜೀವನವನ್ನೂ ತಾತ್ತ್ವಿಕರ ನಾಯಕತ್ವವನ್ನೂ ಪುರಸ್ಕರಿಸುವ ರಾಷ್ಟ್ರವೇ ಆದರ್ಶರಾಷ್ಟ್ರವೆಂದು ಪ್ಲೇಟೋನ ಸಿದ್ಧಾಂತ. ಈ ಸಿದ್ಧಾಂತವನ್ನು ಅರಿಸ್ಟಾಟಲ್ ತೀವ್ರವಾಗಿ ಖಂಡಿಸಿದ್ದಾನೆ. ವೈಯಕ್ತಿಕವಾಗಿ ಆಸ್ತಿ ಪಡೆಯಲೂ ಕುಟುಂಬಜೀವನವನ್ನು ನಡೆಸಲೂ ಮಾನವನಿಗೆ ಸ್ವಾತಂತ್ರ್ಯವಿಲ್ಲದಿದ್ದರೆ ಅವನಲ್ಲಿ ಸದ್ಗುಣಗಳು ಹುಟ್ಟಲು ಅವಕಾಶ ತಪ್ಪುತ್ತದೆ. ಅವುಗಳಿಗೆ ಅವಕಾಶ ಕೊಡದ ರಾಷ್ಟ್ರ ಮಾನವನ ನೈತಿಕ ಜೀವನವನ್ನೂ ಕುಂಠಿತಗೊಳಿಸುತ್ತದೆ ಎಂದು ಅರಿಸ್ಟಾಟಲನ ಅಭಿಮತ.

**ಸೌಂದರ್ಯ ಮೀಮಾಂಸೆ :** ಪ್ಲೇಟೋ ಸ್ವತಃ ಶ್ರೇಷ್ಠ ಕವಿ. ಆದರೂ ಹೋಮರನಂಥ ಶ್ರೇಷ್ಠ ಕವಿಗಳಿಗೆ ತನ್ನ ಆದರ್ಶ ರಾಷ್ಟ್ರದಲ್ಲಿ ಮಾನ್ಯ ಸ್ಥಾನ ಕೊಡಲಿಲ್ಲ. ಅವನ ಆದರ್ಶರಾಷ್ಟ್ರದಲ್ಲಿ ತಾತ್ತ್ವಿಕರ ವಿಧಾಯಕತ್ವಕ್ಕೆ ತಲೆಬಾಗಿ ಕವಿಗಳು ಉಳಿಯಬಹುದಾಗಿತ್ತು. ನೀತಿಗೆ ವಿರುದ್ಧವಾದ ಕವಿತೆಗಳನ್ನು ರಚಿಸಿದವರಿಗೆ ಆ ರಾಷ್ಟ್ರದಿಂದ ಉಚ್ಚಾಟನೆ ಸಿದ್ಧ. ಅರಿಸ್ಟಾಟಲ್ ಕವಿಯಲ್ಲದಿದ್ದರೂ ಕವಿಗಳ ಅಂತರಂಗವನ್ನು ಚೆನ್ನಾಗಿ ಬಲ್ಲವ; ಕವಿಗಳ ಸ್ವಾತಂತ್ರ್ಯದ ಹಕ್ಕನ್ನು ಎತ್ತಿ ಹಿಡಿದವ. ಕವಿಯೂ ತತ್ತ್ವಜ್ಞಾನಿಯಷ್ಟೇ, ಬಹುಶಃ ಇನ್ನೂ ವಿಶೇಷರೀತಿಯಲ್ಲಿ ಸತ್ಯವನ್ನು ಹೃದ್ಯವಾಗಿ ತೋರಿಸಬಲ್ಲನೆಂದು ಅವನು ಸಾರಿದ. ಗ್ರೀಕರ ನಾಟಕಗಳನ್ನೂ ಪೌರಾಣಿಕ ಕಾವ್ಯಗಳನ್ನೂ ಕುರಿತು ಆತ ಬರೆದ ವಿಮರ್ಶೆಗಳು ಇಂದಿಗೂ ಮಾನ್ಯವಾಗಿವೆ.

ಪ್ಲೇಟೋ ಲಲಿತಕಲೆಗಳನ್ನು ಉಪಯುಕ್ತ ಕಲೆಗಳಿಂದ ಪ್ರತ್ಯೇಕಿಸಿ ವಿಮರ್ಶಿಸಲಿಲ್ಲ. ಇವೆರಡರ ಸ್ವರೂಪ ಭಿನ್ನವೆಂದು ಮೊಟ್ಟಮೊದಲಿಗೆ ಪ್ರತಿಪಾದಿಸಿದವ ಅರಿಸ್ಟಾಟಲ್. ಉಪಯುಕ್ತ ಕಲೆಗಳಲ್ಲಿ ಸೌಕರ್ಯ ಮುಖ್ಯವಾದದ್ದು, ಸೌಂದರ್ಯ ಅದಕ್ಕೆ ವಿಧೇಯವಾದದ್ದು, ಲಲಿತಕಲೆಗಳಲ್ಲಾದರೋ ಅವುಗಳ ಉಪಯೋಗ ಮುಖ್ಯವಲ್ಲ. ಲಲಿತ ಕಲೆಗಳನ್ನು ನಾವು ಅಪೇಕ್ಷಿಸುವುದು ಅದರ ಉಪಯುಕ್ತತೆಯ ಸಲುವಾಗಿ ಅಲ್ಲ, ಅವು ಕೊಡುವ ಸೌಂದರ್ಯಾನುಭವಕ್ಕಾಗಿಯೇ. ಲಲಿತಕಲೆಗಳಲ್ಲಿ ಚಿತ್ರ, ಶಿಲ್ಪ, ಸಂಗೀತ, ಸಾಹಿತ್ಯ ಇವೆಲ್ಲವೂ ಸೇರಿವೆ, ಆದರೆ ಎಲ್ಲ ಕಲೆಗಳಿಗಿಂತಲೂ ಶ್ರೇಷ್ಠವಾದದ್ದು ರುದ್ರನಾಟಕ ಮತ್ತು ಪೌರಾಣಿಕಕಾವ್ಯ.

ಪ್ಲೇಟೋನಂತೆ ಅರಿಸ್ಟಾಟಲ್ ಕೂಡ ಕಲೆ ಅನುಕರಣವೆಂದು ಹೇಳುತ್ತಾನೆ. ಆದರೆ ಅರಿಸ್ಟಾಟಲನ ಅನುಕರಣತತ್ತ್ವ ಪ್ಲೇಟೋನ ತತ್ತ್ವದಿಂದ ಭಿನ್ನವಾದದ್ದು. ಪ್ಲೇಟೋನ ಪ್ರಕಾರ ಕಲೆ ಭೌತಿಕ ವಸ್ತುಗಳ ಅನುಕರಣ; ಲೌಕಿಕವಸ್ತು, ಭಾವನೆಗಳ ಅನುಕರಣ. ಭಾವನೆಗಳೇ ನಿತ್ಯಸತ್ಯಗಳಾದುದರಿಂದ ಲೌಕಿಕವಸ್ತುಗಳನ್ನು ಅನುಕರಿಸುವ ಕಲೆ ಸತ್ಯದಿಂದ ಮೂರು ಮೆಟ್ಟಿಲು ಕೆಳಗಿನದು. ಅರಿಸ್ಟಾಟಲನ ಅಭಿಪ್ರಾಯದಲ್ಲಿ ಕಲೆ ಲೌಕಿಕವಿಷಯಗಳ ಅನುಕರಣವಲ್ಲ. ಅದು ಪರಿಪೂರ್ಣವಾದ ಭಾವಗಳ ಅನುಕರಣ. ಆದ್ದರಿಂದ ಅದು ಲೌಕಿಕ ವಸ್ತುಗಳಿಗಿಂತಲೂ ಮೇಲಾದದ್ದು; ಸತ್ಯಕ್ಕೆ ಸಮೀಪವಾದದ್ದು. ವಸ್ತು ಮತ್ತು ವ್ಯಕ್ತಿಗಳನ್ನು ಲೌಕಿಕ ಪೂರ್ವಕಲ್ಪನೆಗಳಿಂದ ಬಿಡುಗಡೆ ಮಾಡಿ ಅವು ಸ್ವಾಭಾವಿಕವಾಗಿ ಇರಬೇಕಾದ ರೀತಿಯಲ್ಲಿ, ಅಂದರೆ ಸ್ವಸ್ವರೂಪದಲ್ಲಿ ಕಲೆ ರೂಪಗೊಳಿಸುತ್ತದೆ.

ಕಲೆ ಬುದ್ಧಿಯ ಕಲ್ಪನೆಯಲ್ಲ; ಬರಿಯ ಇಂದ್ರಿಯಬಿಂಬವಲ್ಲ. ಇಂದ್ರಿಯಗಮ್ಯಬಿಂಬಗಳು ಹೃದಯದ ಭಾವಗಳೊಡನೆ ಪ್ರತಿಭೆಯ ಮೂಲಕ ಸಂಯೋಗವಾಗಿ ನಿರ್ಮಾಣವಾದದ್ದು ಕಲೆ. ಕಲೆಯ ಸೃಷ್ಟಿ ಪ್ರಕೃತಿಸೃಷ್ಟಿಗಿಂತ ಉತ್ತಮವಾದದ್ದು. ಅದು ಎಲ್ಲ ಬಗೆಯಾದ ವೈಪರೀತ್ಯಗಳನ್ನೂ ಅಸಂಭಾವ್ಯಗಳನ್ನು ತೊರೆದು ಮನೋಹರ ಭಾವಗಳನ್ನು ಸಾಕ್ಷಾತ್ಕರಿಸುತ್ತದೆ. ಕಲೆ ಜೀವಂತವಾದ ವ್ಯಕ್ತಿಯನ್ನು ಸೃಷ್ಟಿಸುತ್ತದೆ; ಅದು ನಿರ್ಮಿಸುವ ವ್ಯಕ್ತಿ ಪ್ರತ್ಯೇಕವೂ ಅಲ್ಲ, ಸಾಮಾನ್ಯವೂ ಅಲ್ಲ. ಮಾನವ ಸಹಜಸತ್ತ್ವವನ್ನು ಪಡೆದಿರುವ ವ್ಯಕ್ತಿ. ಮಾನವಹೃದಯದಲ್ಲಿ ತಳಮಳಗುಟ್ಟುವ ಭಾವಗಳನ್ನು ಕವಿ ಸತ್ತ್ವರೂಪದಲ್ಲಿ ಪ್ರಕಾಶಪಡಿಸುವುದರಿಂದ ಲೌಕಿಕ ಸ್ಥಿತಿಯಲ್ಲಿ ಅವು ಪಡೆದಿದ್ದ ಕ್ಲೇಶವನ್ನು ಕಳೆದುಕೊಂಡು ವಿಶ್ರಾಂತ ಸ್ಥಿತಿಯಲ್ಲಿ ನಮ್ಮ ಹೃದಯಕ್ಕೆ ಗೋಚರವಾಗುತ್ತದೆ. ಲೌಕಿಕಭಾವಕ್ಕೆ ಅಂಟಿದ ಕ್ಲೇಶವನ್ನು ಮರೆಸಿ, ಕ್ಲೇಶಪಡಿಸದ ಶುದ್ಧಭಾವವನ್ನು ಸಾಕ್ಷಾತ್ಕಾರ ಮಾಡುವುದೇ ಅದರ ಕೆಲಸ. ಇದು ಅರಿಸ್ಟಾಟಲ್ ಪ್ರತಿಪಾದಿಸಿದ ಭಾವಶುದ್ಧಿ (ಕೆಥಾರ್ಸಿಸ್) ತತ್ತ್ವದ ಅರ್ಥವೆಂದು ಭಾವಿಸಬಹುದು. ಇದು ಹೀಗೆಯೇ ಎಂದು ಖಂಡಿತವಾಗಿ ಹೇಳಲಾಗದು.

ಕಲೆ ವಿಜ್ಞಾನದಂತೆ ವಾಸ್ತವಸತ್ಯವನ್ನು ವ್ಯಕ್ತಗೊಳಿಸಲಾರದು. ಕಲೆ ತೋರಿಕೆ, ತೋರಿಕೆಯಾದರೂ ಅದು ಹೃದಯಸಮ್ಮತವೆಂಬ ಭಾವವನ್ನು ಹುಟ್ಟಿಸುವುದು. ಕವಿಯ ಚಮತ್ಕಾರ, ಮಾಟ, ಲೌಕಿಕ ಅನುಭವಗಳು ವಾಸ್ತವವಾದಂತಹವು. ಆದರೂ ವಾಸ್ತವಸ್ಥಿತಿಯಲ್ಲೇ ಅವುಗಳನ್ನು ವಿವರಿಸಿದರೆ ಅದು ಹೃದ್ಯವಾಗುವುದಿಲ್ಲ, ಹೃದಯ ಸಂಗತವಾಗುವುದಿಲ್ಲ. ಕಲೆಯ ಅಲೌಕಿಕದೃಷ್ಟಿಯಿಂದ ಮಾರ್ಪಟ್ಟಾಗ ವಾಸ್ತವವಲ್ಲದಿದ್ದರೂ ಸಂಭಾವ್ಯವಾಗುತ್ತವೆ. ಹೃದಯಕ್ಕೆ ಸಂಗತವಾಗುತ್ತವೆ. ಹೃದಯದಲ್ಲಿ ವಿಶ್ರಾಂತವಾಗುತ್ತವೆ. ಆದ್ದರಿಂದ ಅಸಂಭಾವ್ಯವಾದ ವಾಸ್ತವವಿಷಯಕ್ಕಿಂತಲೂ ಸಂಭಾವ್ಯವಾದ ತೋರಿಕೆಯೇ ಕಾವ್ಯದಲ್ಲಿ ಸೇರಲು ಯೋಗ್ಯವಾದದ್ದೆಂದು ಅರಿಸ್ಟಾಟಲ್ ಸ್ಪಷ್ಟಪಡಿಸಿದ್ದಾನೆ. ಕಲೆ ತೋರಿಕೆಯಾದರೂ ವಾಸ್ತವವಾದುದಕ್ಕಿಂತ ಸತ್ಪರಿಣಾಮಕಾರಿ, ಆನಂದದಾಯಕವಾದದ್ದು. (ಜಿ.ಎಚ್.)

ಸಾಕ್ರಟೀಸ್ ಮತ್ತು ಪ್ಲೇಟೋ ಆದರ್ಶವಾದಿಗಳು. ಅಲೌಕಿಕವೂ ಅತೀಂದ್ರಿಯವೂ ಆದ ಬೇರೊಂದು ಸತ್ಯಪ್ರಪಂಚ ಉಂಟೆಂದೂ ಈ ಪ್ರಪಂಚ ಅದರ ನೆರಳೆಂದೂ ಅವರ ನಂಬಿಕೆ. ಸತ್ಯಸಾಕ್ಷಾತ್ಕಾರಕ್ಕೆ ಪ್ರಯತ್ನಿಸಿ ಮಾನವ ತನ್ನ ಪಾರ್ಥಿವ ಆವರಣದಿಂದ ಮುಕ್ತನಾಗಬೇಕೆಂದು ಅವರ ಉಪದೇಶ. ಅದಕ್ಕೆ ವಿರುದ್ಧವಾಗಿ ಪ್ಲೇಟೋನ ಶಿಷ್ಯನಾದ ಅರಿಸ್ಟಾಟಲ್ ತನ್ನ ಗುರು ಹೇಳಿದ ಅಲೌಕಿಕ ಸತ್ಯ ಮತ್ತು ಸೌಂದರ್ಯವನ್ನು ಇಲ್ಲಿಯೇ ಈ ಲೋಕದಲ್ಲಿಯೇ ಸಾಧಿಸಬಹುದು, ಸಾಧಿಸಬೇಕು ಎಂದು ಹೇಳಿದ.

ಅರಿಸ್ಟಾಟಲನ ಅಭಿಮತದಂತೆ ಸ್ವಯಂಪೂರ್ಣವಸ್ತುಗಳಲ್ಲಿನ ಸಾಮರಸ್ಯವನ್ನು ಗ್ರಹಿಸುವುದೇ ಸೌಂದರ್ಯಾನುಭವ. ಪ್ರಪಂಚದಲ್ಲಿನ ಪ್ರತಿಯೊಂದು ವಸ್ತುವೂ ಒಂದೊಂದು ಕಾರ್ಯಸಾಧನೆಗೆ ಉಪಕರಣವಾಗುವ ಯುಕ್ತತೆಯನ್ನು ಪಡೆದಿರುತ್ತದೆ. ಉದಾಹರಣೆಗೆ ಏಣಿ. ಅದು ಮೇಲಕ್ಕೆ ಏರಲು ಉಪಯೋಗವಾಗುವ ಸಾಧನ. ಅದರ ಯುಕ್ತತೆಯನ್ನು ಕಾರ್ಯನಿರ್ವಹಣ ದೃಷ್ಟಿಯಿಂದ ತಿಳಿಯಬೇಕಾಗಿದೆ. ಅದಕ್ಕೆ ಮೆಟ್ಟಿಲುಗಳು ಇಲ್ಲದಿದ್ದಲ್ಲಿ ನಿರುಪಯುಕ್ತವೆಂದೆನ್ನಿಸಿಕೊಂಡು ಕಾರ್ಯನಿರ್ವಹಣ ದೃಷ್ಟಿಯಿಂದ ಅದು ತಿರಸ್ಕೃತವಾಗುತ್ತದೆ. ಹಾಗೆಯೇ ಹಕ್ಕಿಗಳಿಗೆ ಹಾರಾಡಲು ನೆರವಾಗುವ ರೆಕ್ಕೆಗಳು ಯೋಗ್ಯಸಾಧನಗಳು, ಪದಗಳಿಗೆ ಅರ್ಥಗಳು ಇತ್ಯಾದಿ, ಪ್ರತಿಯೊಂದು ವಸ್ತುವಿನ ಯುಕ್ತತೆ ಅದರ ನಿರ್ಮಾಣದ ಉದ್ದೇಶವನ್ನು ಸಫಲಗೊಳಿಸುವುದರಲ್ಲಿದೆ.

ಪ್ರಪಂಚದಲ್ಲಿ ಅನೇಕ ವಸ್ತುಗಳೂ ಇಂಥ ಯುಕ್ತತೆಯನ್ನು ಪಡೆದಿರುತ್ತವೆ. ಹಾಗೆಯೇ ಅನೇಕವು ಸ್ವಯಂ ಪರಿಪೂರ್ಣ, ಇಂಥ ಯುಕ್ತತೆಯಿಂದ ಕೂಡಿದ ಸ್ವಯಂ ಪರಿಪೂರ್ಣ ವಸ್ತುಗಳು ತಮ್ಮ ಸಂಕೀರ್ಣವ್ಯವಸ್ಥೆಗಳಲ್ಲಿ ಸಾಮರಸ್ಯದಿಂದ ಸೇರಿಕೊಂಡರೆ ಆಗ ಸೌಂದರ್ಯಸೂಚಕ.

ಈ ವಿಚಾರಸರಣಿಯಂತೆ, ನಾನಾ ಸಾಧನೆಗಳ ಸಂಕಲನ ಅಯಾಚಿತವಾಗಿ, ಅನಪೇಕ್ಷವಾಗಿ ಮತ್ತು ಸುಲಭವಾಗಿ ತೋರಿಸಿಕೊಡುವ ಒಂದು ಮೌಲ್ಯವೇ ಸೌಂದರ್ಯ. ಒಂದು ವಸ್ತುವಿನ ಅಂಶಗಳು ಆಯಾಚಿತವಾಗಿ ಒಂದು ಸಮಗ್ರಕ್ಕೆ ಅಂಗಗಳಾದರೆ, ಆ ಸಮಗ್ರದ ವೃದ್ಧಿಗೂ ಸುಸ್ಥಿತಿಗೂ ಅವು ಕಾರಣವಾಗುತ್ತವೆ. ಒಂದು ನೂತನ ಚೈತನ್ಯ ಅವುಗಳ ಕೂಡುವಿಕೆಯಿಂದ ಉದ್ಭವಿಸಿದಂತಾಗಿ ಸಮಗ್ರದ ಸೃಷ್ಟಿಗೂ ಸ್ಥಿತಿಗೂ ಕಾರಣವಾಗುತ್ತದೆ. ಎಂದರೆ ಸಮಗ್ರದ ಭಾಗಿಗಳಾಗುವುದರಲ್ಲಿ ಅಂಶಗಳು ತಮ್ಮ ಶ್ರೇಷ್ಠತೆಯನ್ನು ಸಾಧಿಸುತ್ತವೆ.

ಜಡವಸ್ತುವಿನ ಮೌಲ್ಯವೂ ಶ್ರೇಷ್ಠತೆಯೂ ಹೆಚ್ಚಬೇಕಾದರೆ ಅದು ಒಂದು ಚೈತನ್ಯದ ರೂಪವನ್ನಾದರೂ ಪಡೆಯಬೇಕು. ಉದಾಹರಣೆಗೆ, ಒಂದು ಕಲ್ಲು ಬರಿಯ ಕಲ್ಲಾಗಿರದೆ ವಿಗ್ರಹವಾಗಿ ಮಾರ್ಪಟ್ಟರೆ ಅದರ ಮೌಲ್ಯ ಹೆಚ್ಚುತ್ತದೆ. ಹಾಗೆಯೇ ಆ ಚೈತನ್ಯ ಮತ್ತೂ ಶ್ರೇಷ್ಠವಾಗಬೇಕಾದರೆ ಚಿತ್ತದ ಸಂಸರ್ಗವನ್ನು ಹೊಂದಬೇಕು. ಎಂದರೆ ಚೈತನ್ಯ ಮೂಕಪ್ರಾಣಿಗಳಲ್ಲಿಯೂ ಮಾನವನ ಚಿತ್ತಪ್ರವೃತ್ತಿಗಳಿಂದಲೂ ವ್ಯಕ್ತಗೊಳ್ಳಬೇಕು. ಹಾಗಾದರೆ ಅದರ ಮೌಲ್ಯ ಉನ್ನತವಾಗುತ್ತದೆ.

ಅಂಶಗಳು ಸಮಗ್ರವಾಗುವುದರಲ್ಲಿ ಜಡ ಚೇತನವಾಗುವುದರಲ್ಲಿ, ಚೇತನ ಚಿತ್ತಸಂಸರ್ಗವನ್ನು ಹೊಂದುವುದರಲ್ಲಿ ಮೌಲ್ಯ ರೂಪುಗೊಳ್ಳುತ್ತದೆ. ಭೌತಿಕ ಪ್ರಪಂಚದಲ್ಲಿಯೇ ಅಂಥ ಕಾರ್ಯವಿಶೇಷದಿಂದ ರೂಪುಗೊಂಡ ಮೌಲ್ಯವೇ ಸೌಂದರ್ಯ. ಕಲಾಕೃತಿಗಳು ಅಂಥ ಮೌಲ್ಯವನ್ನು ಸಾಧಿಸುತ್ತವೆ. ಕೆಳದರ್ಜೆಯ ವಸ್ತುಗಳು ಉತ್ತಮಸ್ಥಿತಿಗಳನ್ನು ಅನುಕರಣೆ ಮಾಡುವಂತೆ ಅಥವಾ ಉತ್ತಮ ಗುಣವಿಶೇಷಗಳನ್ನು ತಮ್ಮಲ್ಲಿಯೇ ಪ್ರತಿಬಿಂಬಿಸುವಂತೆ ಎಸಗುವುದೇ ಕಲೆ. ಇದೇ ಕಲೆಯ ಸ್ವರೂಪ ಮತ್ತು ಕಲಾನಿರ್ಮಾಣದ ಚರಿತ್ರೆ. ಶ್ರೇಷ್ಠಮೌಲ್ಯಗಳೆಂದು ಪರಿಗಣಿತವಾಗಿರುವ ಧರ್ಮ, ನೀತಿಜ್ಞಾನ ಮುಂತಾದುವನ್ನು ಕಲೆ ಚಿತ್ರಿಸಿದರೆ ಅಥವಾ ಅಭಿವ್ಯಕ್ತಗೊಳಿಸಿದರೆ ಅದರ ಮೌಲ್ಯ ಹೆಚ್ಚುತ್ತದೆ. ತನ್ನ ಈ ಸಾಧನೆಯಿಂದ ಕಲೆ ಪಾರಲೌಕಿಕ ಅಥವಾ ಅತೀಂದ್ರಿಯ ಆದರ್ಶಗಳನ್ನು ಇಲ್ಲಿಯೇ ಈ ಭೌತಪ್ರಪಂಚದ ಆವರಣದಲ್ಲಿಯೇ ತೋರಿಸಿಕೊಡಬಲ್ಲುದು. ಇದೇ ಕಲೆಯ ಹಿರಿಮೆ ಮತ್ತು ಉದ್ದೇಶ.

ಅರಿಸ್ಟಾಟಲ್ ಮುಂದೆ ಹೋಗಿ, ಕಲಾವಿದನ ಪ್ರತಿಭೆ ವಿರುದ್ಧ ಗುಣಗಳ ಸಾಮರಸ್ಯವನ್ನು ಸಾಧಿಸುವುದರ ಮೂಲಕ ವಿಶ್ವಬಾಂಧವ್ಯವನ್ನು ಏರ್ಪಡಿಸುವ ಒಂದು ಶಕ್ತಿ ಎನ್ನುತ್ತಾನೆ. ಕಲಾವಿದನೆಂದರೆ ಸಮದೃಷ್ಟಿ ಇರುವವ ಎಂದರ್ಥ. ಆತನಿಗೆ ಯಾವುದರಲ್ಲಿಯೂ ವಿರೋಧ, ಆಭಾಸ, ವಿಕೃತಿ ಎನ್ನುವುದು ಕಂಡುಬರುವುದಿಲ್ಲ. ಎಲ್ಲದರಲ್ಲೂ ಸಮರ್ಪಕವಾದುದನ್ನು ಕಾಣುವ ಮತ್ತು ಅರ್ಥಮಾಡಿಕೊಳ್ಳುವ ವಿಶಿಷ್ಟ ಜಾಣ್ಮೆ ಕಲಾವಿದನ ಹುಟ್ಟುಗುಣ. ಹೀಗೆ ಕಲೆ ನಿಷ್ಪ್ರಯೋಜಕವನ್ನಾಗಿಯೂ ಮಾಡಬಲ್ಲುದು. (ಕೆ.ಬಿ.ಆರ್.)

**ಭಾಷಣವಿದ್ಯೆ (ರೆಟೊರಿಕ್) :** ತನ್ನ ಹಿಂದೆ ಆಗಿಬಂದ ವಿದ್ವಾಂಸರನ್ನೂ ಅವರ ಸೂತ್ರ ಸಿದ್ಧಾಂತಗಳನ್ನೂ ಆಸಕ್ತಿಯಿಂದ ಓದಿ ಮನನ ಮಾಡಿಕೊಂಡಿದ್ದ ಅರಿಸ್ಟಾಟಲ್ ನೂರಾರು ನಿದರ್ಶನಗಳನ್ನು ಮುಂದಿಟ್ಟುಕೊಂಡು ನಾನಾ ಅಭಿಪ್ರಾಯಗಳನ್ನು ವಿವೇಚಿಸಿ, ಒಪ್ಪ ಓರಣದಿಂದ ಅಚ್ಚುಕಟ್ಟಾದ ತನ್ನ ವಿಧಾನವನ್ನು ರಚಿಸಿ ಕೊಟ್ಟ. ಮುಖ್ಯವಾದ ಎಲ್ಲ ಅಂಶಗಳನ್ನೂ ಅವನ ಪ್ರಕ್ರಮದಲ್ಲಿ ನಾವು ಕಾಣುತ್ತೇವೆ. ಅವನಿಂದೀಚೆ ಸಾವಿರಾರು ವರ್ಷ ಪ್ರಪಂಚ ಪ್ರಗತಿ ಹೊಂದುತ್ತ ಬಂದಿದ್ದರೂ ಭಾಷಣವಿದ್ಯೆಗೆ ಸಂಬಂಧಿಸಿದ ಮುಖ್ಯಾಂಶ

ಒಂದೂ ಹೊಸದಾಗಿ ಎದ್ದುಬಂದಿಲ್ಲ. ಅರಿಸ್ಟಾಟಲನ ಭಾಷಣವಿದ್ಯೆ ಮೇಲಾಗಿ ಗದ್ಯಸಾಹಿತ್ಯವನ್ನು ಕುರಿತ ವ್ಯಾಖ್ಯಾನ, ಗದ್ಯವೂ ಸಾಹಿತ್ಯವಾಗಬಹುದು ಎಂಬ ನಿಜಾಂಶ ಜನರ ಮನಸ್ಸನ್ನು ಹೊಗುವುದು ಎಲ್ಲ ದೇಶಗಳಲ್ಲಿಯೂ ಕಡಿಮೆ. ಆದರೆ ವಾಕ್ ಪದ್ಯನಿರ್ಮಾಣಕ್ಕಿಂತಲೂ ಮೊದಲು ಎಂಬುದನ್ನು ಎಲ್ಲರೂ ಬಲ್ಲರು. ಪ್ರಾಚೀನ ಗ್ರೀಕರು ಮಾತಾಳಿಗಳಾಗಿದ್ದರು–ವಾಚಾಳತ್ವದ ವಿಮೋಹ ದಿಂದಲ್ಲ, ಅವರ ಬಾಳಿನ ಅತ್ಯಾವಶ್ಯಕತೆಯ ಸಲುವಾಗಿ. ಆದ್ದರಿಂದ ಅರಿಸ್ಟಾಟಲನ ಹೊತ್ತಗೆಗೆ ಈಚಿನ ಅಲಂಕಾರಶಾಸ್ತ್ರ ಎಂಬ ಅರ್ಥವನ್ನು ಕೊಡಬಾರದು, ಪದ್ಯದ ಗುರಿ ಸಂತೋಷವಾದರೆ, ಭಾಷಣದ ಗುರಿ ಮನವೊಪ್ಪಿಸುವುದು. ತಂತ್ರ ಹೂಡಿ, ಅದೋ ಇದೋ ಆಕರ್ಷಣೆಯನ್ನಿಟ್ಟು, ಮೋಸದಿಂದ ಭಾಷಣವಿದ್ಯೆಯನ್ನೇ ಪ್ಲೇಟೊ ತಿರಸ್ಕರಿಸಿಬಿಟ್ಟಿದ್ದ, ಅರಿಸ್ಟಾಟಲನ ಶ್ರದ್ಧೆಯೆಲ್ಲ ನ್ಯಾಯ ಸತ್ಯಗಳ ಕಡೆಗಿತ್ತು. ವಾಗ್ಮಿತೆಯ ಜಾಣ್ಮೆಯನ್ನು ಅವುಗಳ ಸೇವೆಗೂ ಏತಕ್ಕೆ ಉಪಯೋಗಿಸಬಾರದು?

ಭಾಷಣವಿದ್ಯೆಯ ಒಂದು ಮತ್ತು ಎರಡನೆಯ ಅಧ್ಯಾಯಗಳ ವಿಷಯ ಮನವೊಪ್ಪಿಸುವ ಸಾಮಗ್ರಿಯ (ಪಿಸ್ಟಿಸ್) ತಪಶೀಲು, ವಿಚಾರಣೆ. ಅಲ್ಲಿ ಮಾನವಸ್ವಭಾವದ ಮತ್ತು ಮಾನವ ಜೀವನದ ವಿವರಗಳನ್ನು ಕುರಿತ ಹೇಳಿಕೆಗಳು ನಿಬಿಡವಾಗಿವೆ. ಸೌಖ್ಯ, ಸ್ನೇಹ, ಸದ್ಗುಣ, ಸಂತಸ, ಭೀತಿ, ವೈಷಮ್ಯ ಮೊದಲಾದ ಯಾವ ವಿಚಾರವೇ ಆಗಲಿ ನೀತಿ ಪ್ರಮುಖವಾದ ಅದರ ಪ್ರತಿಪಾದನೆ ಅಲ್ಲಿ ಕಂಡುಬರುತ್ತದೆ. ಅರಿಸ್ಟಾಟಲನ ಸೂಕ್ತಿಗಳು ಬೇಕನ್ನನ ಪ್ರಬಂಧಗಳಲ್ಲಿ ಸಪ್ಪಳಗೈಯುವ ಚಾಟೂಕ್ತಿಗಳಂತೆ ಕಿವಿ ಹೋಗುತ್ತವೆ ಎಂದಿದ್ದಾರೆ ವಿಮರ್ಶಕರು. ಮೂರನೆಯ ಅಧ್ಯಾಯ ಪ್ರಮಾಣದಲ್ಲಿ ಚಿಕ್ಕದು. ನಮ್ಮ ಗಮನಕ್ಕೆ ಹೆಚ್ಚಾಗಿ ಬರಬೇಕಾದುದು ಅದೇ. ಅದರಲ್ಲಿ ವಿಷಯದ ಮಿಕ್ಕೆರಡು ಅಂಗಗಳಾದ ಶೈಲಿ (ಲೆಕ್ಸಿಸ್–ಸ್ಟೈಲ್). ಸುವ್ಯವಸ್ಥೆಗಳ (ಟ್ಯಾಕ್ಸಿಸ್–ಅರೇಂಜ್‌ಮೆಂಟ್)ವಿವರಣೆಯಿದೆ. ಅರಿಸ್ಟಾಟಲ್ ಪರಿಶೋಧನೆ ನಡೆಸಿ, ಯುಕ್ತವೆಂದು ಕಂಡುಕೊಂಡು, ಸುಲಭವಾಗಿಯೂ ಸ್ಪಷ್ಟವಾಗಿಯೂ ಉಚ್ಚರಿಸಿರುವ ವಿಧಿನಿಯಮ ಸಂಕೇತಗಳು ಈಗಲೂ ಮನ್ನಣೆಗೆ ಅರ್ಹವಾಗಿವೆ. ಶೈಲಿ ತಿಳಿಯಾಗಿರಬೇಕು, ಹಾಗೂ ಅದು ವಿಷಯಕ್ಕಿಂತ ಕೆಳಕ್ಕೂ ಇಳಿಯಬಾರದು ಮೇಲಕ್ಕೂ ಏರಬಾರದು. ರೂಪಕಾಲಂಕಾರ ಗದ್ಯಶೈಲಿಯ ಹಾಳತವಾದ ಭೂಷಣ. ಶ್ರೋತೃಗಳಲ್ಲಿ ಭಾವೋತ್ಕರ್ಷ ತುಂಬಿಸುವುದಕ್ಕೋಸ್ಕರ ಅತಿಕ್ಲಿಷ್ಟ ಅಥವಾ ಅನ್ಯದೇಶೀಯ ಅಥವಾ ರಭಸದ ಪದಗುಚ್ಛಗಳನ್ನು ಪ್ರಯೋಗಿಸಿದರೆ ನೀರಸವಾಗುತ್ತದೆ. ಪರಿಣಾಮ ಹಳಸಿಹೋದ ವಿಶೇಷಣಗಳೂ ಅತಿಗಳಹದ ಬಲನುಡಿಯೂ ನಿಷಿದ್ಧ. ಶೈಲಿ ಶುದ್ಧವಾಗಿ ಔನ್ನತ್ಯದಿಂದ ಕೂಡಿ ಅನುರೂಪವಾಗಿರತಕ್ಕದ್ದು. ಗದ್ಯಶೈಲಿಗೆ ಲಯಶೂನ್ಯತೆ (ಅರಿಹಿತ್ಮಾನ್) ಛಂದೋಬದ್ಧತೆ (ಎಮ್ಮೊಟ್ರಾನ್) ಎರಡೂ ಸಲ್ಲದು. ವಾಕ್ಯಧೋರಣೆ ಎರಡು ವಿಧ; ಪದಕ್ಕೆ ಪದವನ್ನು ಪೋಣಿಸುವ ಶಿಥಿಲಕ್ರಮ, ಪದಗುಚ್ಛಗಳನ್ನು ಹೊಸಿದು ಹುರಿ ಮಾಡುವ ಪೆಡಸು ಪದ್ಧತಿ (ಪೀರಿಯಾಡಿಕ್).

ರೋಮನ್ನರ ಮೂಲಕ, ಅವರ ಕೆಲವು ಅನುಬಂಧಗಳೊಡನೆ, ಭಾಷಣವಿದ್ಯೆ ಮಧ್ಯಯುಗ, ಹೊಸಹುಟ್ಟು, 17,18, 19ನೆಯ ಶತಮಾನಗಳು–ಹೀಗೆ ಎಲ್ಲ ಕಾಲಮಾನಗಳಲ್ಲೂ ವಿದ್ಯಾಭ್ಯಾಸದಲ್ಲೂ ಗ್ರಂಥರಚನೆಯಲ್ಲೂ ಗುರುಸ್ಥಾನವನ್ನು ಪಡೆದುಕೊಂಡಿತು. ಪಾಶ್ಚಾತ್ಯ ಸಂಸ್ಕೃತಿಗೆ ಅರಿಸ್ಟಾಟಲ್ ಎಷ್ಟರಮಟ್ಟಿಗೆ ಆಧಾರಪುರುಷ ಎಂಬುದನ್ನು ಇದರಿಂದ ಊಹಿಸಬಹುದು.

**ಕಾವ್ಯಕಲೆ** : ಪೊಯೆಟಿಕ್ಸ್ ಎಂದು ಪ್ರಖ್ಯಾತವಾಗಿರುವ ಅರಿಸ್ಟಾಟಲನ ಗ್ರಂಥ ಉದ್ದೇಶಪೂರ್ವಕವಾಗಿ ಅಚ್ಚುಕಟ್ಟಾಗಿ ಬರೆದು ಮುಗಿಸಿದ ಲೇಖನವಲ್ಲ; ಉಪನ್ಯಾಸದಿಂದ ಹುಟ್ಟಿಬಂದ ನೆನಪು, ಟಿಪ್ಪಣಿಗಳ (ಎಪೊಮ್ನೆಮಾಟ–ನೋಟ್ಸ್ ಅಂಡ್ ಮೆಮೊರ್‍ಯಡ) ಸಮೂಹ. ಆದ್ದರಿಂದ ಹಲವು ಪ್ರಸ್ತಾವಗಳಲ್ಲಿ ಅವನ ಇಂಗಿತ ಏನಿದ್ದಿರಬಹುದೆಂದು ತಿಳಿದುಕೊಳ್ಳುವುದೇ ಕಷ್ಟ; ವಾದ ವಿವಾದಕ್ಕಂತೂ ಕೊನೆಯೇ ಇಲ್ಲ. ಹೀಗಿದ್ದರೂ ಪಾಶ್ಚಾತ್ಯ ವಿಮರ್ಶೆಗೆ ಅಂದಿನಿಂದ ಇಂದಿನವರೆಗೂ ಅದೇ ತಳಹದಿ, ಆಕರ, ಪ್ರಚೋದನೆ. ಅದನ್ನು ವಿಮರ್ಶೆಯ ಪವಿತ್ರ ಪುಸ್ತಕವೆಂದು ಹೊಗಳುತ್ತಾರೆ.ಅದರ ಸಾರಾಂಶ ಹೀಗಿದೆ:

ಭವ್ಯಕಾವ್ಯ (ರುದ್ರನಾಟಕ), ಗಂಭೀರ ನಾಟಕ, ಹರ್ಷನಾಟಕ, ಪ್ರಗಾಥ, ಸಮಗೀತ, ಎಲ್ಲದರ ಸ್ಥೂಲ ಆಶಯವೂ ಅನುಕರಣೆ (ಮಿಮೆಸಿಸ್–ಇಮಿಟೇಷನ್), ಅವುಗಳಲ್ಲಿ ಒಂದರಿಂದ ಒಂದಕ್ಕೆ ಮೂರು ಅಂಶಗಳಲ್ಲಿ ವ್ಯತ್ಯಾಸ, 1 ವಾಹಕ (ಮೀಡಿಯಂ), 2 ವಿಷಯ(ಆಬ್ಜೆಕ್ಟ್), 3 ಅನುಕರಣ ರೀತಿ (ಮೋಡ್ ಆಫ್ ಇಮಿಟೇಷನ್). ಲಯ, ಭಾಷೆ, ನಾದಸಂಯೋಗಗಳು ಒಂದೊಂದೇ ಆಗಿಯೋ ಕೂಡಿಕೊಂಡೋ ವಾಹಕವಾಗುತ್ತವೆ. ಭಾಷೆಯೇ ಮಾಧ್ಯಮವಾಗಿರುವ ಒಂದು ಕಲೆಯಿದೆ; ಅದರ ಎಲ್ಲ ಪ್ರಕಾರಗಳಿಗೂ ಅನ್ವಯಿಸುವ ಒಂದೇ ಹೆಸರು ಇಲ್ಲದಿರುವುದರಿಂದ ತೊಂದರೆ, ಛಂದಸ್ಸಿನಲ್ಲಿ ಬರೆದ ಮಾತ್ರಕ್ಕೆ ಬರಹ ಕಾವ್ಯವಾಗುವುದಿಲ್ಲ, ಬರೆದವ ಕವಿಯಾಗುವುದಿಲ್ಲ.

ಕಾರ್ಯದಲ್ಲಿ ತೊಡಗಿರುವ ಮನುಷ್ಯರೇ ಅನುಕರಣದ ವಿಷಯ. ವಾಸ್ತವಿಕ ಜೀವನದಲ್ಲಿರುವಂತೆಯೋ ಅದಕ್ಕಿಂತ ಮೇಲಾಗಿಯೋ ಅಥವಾ ಕೀಳಾಗಿಯೊ ಜನರನ್ನು ಅನುಕರಿಸಬಹುದು. ಗಂಭೀರ ನಾಟಕದ್ದು (ಟ್ರ್ಯಾಜಿಡಿ) ಎರಡನೆಯ ವಿಧ, ಹರ್ಷನಾಟಕದ್ದು (ಕಾಮೆಡಿ) ಮೂರನೆಯ ವಿಧ. ಇನ್ನೊಂದು ವ್ಯತ್ಯಾಸವನ್ನೂ ಗಮನಿಸಬೇಕು. ಕವಿ ಕಥೆಯನ್ನು ಹೇಳಬಹುದು ಅಥವಾ ಪಾತ್ರಗಳನ್ನು ನಮ್ಮ ಮುಂದೆ ನಡೆದಾಡಿಸಬಹುದು. ಎರಡನೆಯ ಬಗೆಯ ಕಾವ್ಯಗಳನ್ನು ನಾಟಕ ಎನ್ನುತ್ತಾರೆ.

ಕಾವ್ಯದ ಉದ್ಭವಕ್ಕೆ ಕಾರಣ ಎರಡು: ಅವೆರಡೂ ನಮ್ಮ ಆಂತರ್ಯದ ಆಳದಲ್ಲಿ ಇರುವಂಥವು. ಅನುಕರಣೆ ಮನುಷ್ಯನಿಗೆ ಬಾಲ್ಯದಿಂದ ಬಂದ ಸಹಜಗುಣ, ಅವನಿಗೆ ಅದೊಂದು ಹರ್ಷದಾಯಕ ಹವ್ಯಾಸ. ಎರಡನೆಯದಾಗಿ, ಮನುಷ್ಯನಿಗೆ ಲಯ ಮತ್ತು ನಾದಸಾಮರಸ್ಯಗಳೆಂದರೆ ಅಕ್ಕರೆ, ಸಹಜಪ್ರವೃತ್ತಿಯಿಂದ ಆರಂಭವಾದ ಒರಟು ಆಶುಕೃತಿಗಳಿಂದ ಕ್ರಮೇಣ ರೂಪುಗೊಂಡ ಕಾವ್ಯ ಆಮೇಲೆ ಇಬ್ಭಾಗವಾಗಿ ಬೆಳೆಯಿತು. ಗಂಭೀರ ಮನಸ್ಕರು ವೀರಪುರುಷರನ್ನೂ ಉದಾತ್ತ ಘಟನಾವಳಿಗಳನ್ನೂ ಕುರಿತು ಕಾವ್ಯ ಕಟ್ಟಿದರು. ಅವರಿಗೆಲ್ಲ ಹೋಮರ್ ಶಿರೋರತ್ನ. ಗಂಭೀರ ಕವಿಯಾದರೂ ಹೋಮರ್ ಹಾಸ್ಯಚತುರನಾಗಿದ್ದುದರಿಂದ ಉತ್ತಮ ಹರ್ಷನಾಟಕಕ್ಕೂ ಅವನೇ ಮಾರ್ಗದರ್ಶಿಯಾದ. ಲಘು ಜಾಯಮಾನದ ಗೇಲಿಗಾರರಾದರೋ ವೈಯಕ್ತಿಕ ವಿಡಂಬನೆಗಳನ್ನು ಕಟ್ಟಿ ತೃಪ್ತಿಪಟ್ಟರು.

ಗಂಭೀರನಾಟಕ ತನ್ನ ರೂಪವನ್ನು ಇನ್ನೂ ಪರಿಪೂರ್ಣತೆಗೆ ಕೊಂಡೊಯ್ದಿದೆಯೊ ಇಲ್ಲವೋ ಅದರ ಮೇಲೆ ತೀರ್ಮಾನವನ್ನೀಯುವಾಗ ಅದೊಂದನ್ನೇ ಪರಿಗಣಿಸಬೇಕೊ ಪ್ರೇಕ್ಷಕವರ್ಗವನ್ನೂ ಜೊತೆಯಲ್ಲಿ ಭಾವಿಸಬೇಕೋ ಅದು ಬೇರೆ ನಮ್ಮ ವಿಚಾರವನ್ನು ಕೆರಳಿಸುತ್ತದೆ. ಅದೆಂತಾದರೂ ಇರಲಿ. ಗಂಭೀರ ನಾಟಕ ಹರ್ಷನಾಟಕ ಎರಡೂ ಮೊದಮೊದಲು ಕೇವಲ ಆಶುರಚನೆಯಾಗಿದ್ದವು. ಒಂದು ಜನ್ಯವಾದದ್ದು ಪ್ರಗಾಥದಿಂದ; ಇನ್ನೊಂದಕ್ಕೆ ಮೂಲ ನಮ್ಮ ಎಷ್ಟೋ ನಗರಗಳಲ್ಲಿ ಈಗಲೂ ಬಳಕೆಯಲ್ಲಿರುವ ಶೃಂಗಾರ ರಸಭರಿತ ಲಾವಣಿಗಳು. ಗಂಭೀರನಾಟಕದ ಬೆಳೆವಣಿಗೆ ನಿಧಾನವಾಗಿ ನಡೆಯಿತು; ಒಂದು ಮಜಲನ್ನು ಮುಟ್ಟಿ ಅದು ನಿಂತುಬಿಟ್ಟಿದೆ. ಈಸ್ಕಿಲಸ್ ಎರಡನೆಯ ನಟನನ್ನು ತಂದು ಕೂಡಿಸಿದ; ನಾಟ್ಯಮೇಳದ (ಕೋರಸ್) ಪ್ರಭಾವವನ್ನು ಅವನು ಕುಗ್ಗಿಸಿದ. ಸೊಫೊಕ್ಲೀಸ್ ನಟರ ಸಂಖ್ಯೆಯನ್ನು ಮೂರಕ್ಕೆ ಏರಿಸಿದ; ವರ್ಣಚಿತ್ರದ ಪರದೆಗಳನ್ನು ಒದಗಿಸಿಕೊಟ್ಟ. ಬರುಬರುತ್ತ ಗಂಭೀರನಾಟಕದ ಭಾಷೆ ಕಸಕೀಳನ್ನು ಕೊಡವಿಕೊಂಡು ವೈಭವದ ಕಡೆಗೆ ತಿರುಗಿತು. ಟ್ರೋಕೀ ಗಣದ ಛಂದಸ್ಸು ಬಳಕೆಗೆ ಬಂದದ್ದು ಸಹಜವೆ. ಕಥಾವಸ್ತು ಸರಳತೆಯನ್ನು ಬಿಟ್ಟುಕೊಟ್ಟು ಸಂಕೀರ್ಣವಾಗಿ ಮೈತುಂಬಿಕೊಂಡಿತು.

ಕ್ಷುದ್ರ ಪಾತ್ರಗಳ ಅನುಕರಣೆ ಬರುತ್ತದೆ. ಹರ್ಷನಾಟಕದಲ್ಲಿ, ಅದರ ಮುಖ್ಯಾಂಗ ನೋವನ್ನಾಗಲಿ ನಾಶವನ್ನಾಗಲಿ ಉಂಟುಮಾಡದ ನ್ಯೂನತೆ ಅಥವಾ ಕುರೂಪ. ಹರ್ಷನಾಟಕದ ಚರಿತ್ರೆ ಅಷ್ಟೊಂದಾಗಿ ನಮಗೆ ಗೊತ್ತಿಲ್ಲ. ಮೊದಮೊದಲು ಅದನ್ನು ಯಾರೂ ಚಿತ್ತವಿಟ್ಟು ಲಕ್ಷಿಸಲಿಲ್ಲ. ಹರ್ಷನಾಟಕಕ್ಕೆ ನಾಟ್ಯಮೇಳದ ಬಳಕೆ ಉಂಟಾದದ್ದು ಈಚೆಗೆ.

ಭವ್ಯಕಾವ್ಯ ಗಂಭೀರನಾಟಕ ಎರಡಕ್ಕೂ ಮೇಲುತೆರದ ಪಾತ್ರಗಳೇ ಆಧಾರ. ಭವ್ಯಕಾವ್ಯದ ರೂಪ ಗಂಭೀರನಾಟಕದ ಹಾಗಲ್ಲ. ಸೂರ್ಯನ ಒಂದು ವರ್ತುಲ ಸಂಚಾರದ ಕಾಲದೊಳಗೇ ಮಿತಿಗೊಳ್ಳಲು ಗಂಭೀರನಾಟಕ ಯತ್ನಿಸುತ್ತದೆ; ಅದನ್ನು ಮೀರಿದರೂ ಅತ್ಯಲ್ಪ ಮೀರುತ್ತದೆ. ಭವ್ಯಕಾವ್ಯಕ್ಕಾದರೋ ಕಾಲ ಪರಿಮಿತಿ ಏನೇನೂ ಇಲ್ಲ. ಭವ್ಯಕಾವ್ಯದ ಸಮಸ್ತ ಮೂಲಾಂಶಗಳೂ ಗಂಭೀರನಾಟಕದಲ್ಲಿ ಇವೆ; ಆದರೆ ಅದರ ಮೂಲಾಂಶಗಳೆಲ್ಲ ಭವ್ಯ ಕಾವ್ಯದಲ್ಲಿ ಕಾಣಬರುವುದಿಲ್ಲ.

ಗಂಭೀರನಾಟಕ ಅನುಕರಿಸುವ ಕಾರ್ಯಾವಳಿ ಘನಗಂಭೀರವಾದದ್ದು, ಪೂರ್ಣಕೃತಿಯುಳ್ಳದ್ದು, ಸಾಕಷ್ಟು ವಿಸ್ತಾರವುಳ್ಳದ್ದು, ಗಂಭೀರನಾಟಕದ ಭಾಷೆ ಅದರ ಬೇರೆ ಬೇರೆ ಭಾಗಗಳಿಗೆ ಸಮಂಜಸವಾದ ಅಲಂಕಾರಗಳಿಂದ ಕೂಡಿದ್ದು, ನಾಟಕಕ್ಕೆ ಕಾರ್ಯ ರೂಪ, ಕಥನ ರೂಪವಲ್ಲ; ಭಯ ಮರುಕಗಳ ಮೂಲಕ ಯುಕ್ತಭಾವ ವಿರೇಚನೆ (ಕ್ಯಥಾರ್ಸಿಸ್) ಅನ್ನು ಆಗಗೊಳಿಸುತ್ತದೆ ಅದು. ಗಂಭೀರನಾಟಕದ ಅಂಗಗಳು ಆರು; ವಸ್ತು ಸಂವಿಧಾನ, ಪಾತ್ರ, ಪದಕೋಶ, ಚಿಂತನೆ, ನೋಟ, ಸಂಗೀತ.

ಇವುಗಳಲ್ಲಿ ಅತ್ಯಂತ ಮುಖ್ಯವಾದದ್ದು ವಸ್ತುಸಂವಿಧಾನ. ಏತಕ್ಕೆಂದರೆ, ಗಂಭೀರನಾಟಕ ಘಟನಾವಳಿಯ ಅನುಕರಣೆ, ಮನುಷ್ಯರ ಅನುಕರಣೆಯಲ್ಲ; ಘಟನೆಗಳು ಅವುಗಳ ಹೊಂದಾವಣೆ–ಇದೇ ಅದರ ಗುರಿ. ಸಂವಿಧಾನ ಇಲ್ಲದಿದ್ದರೆ ಗಂಭೀರನಾಟಕ ಇಲ್ಲ; ಪಾತ್ರವಿಲ್ಲದೆ ಅದು ಇರಬಹುದು; ಟ್ರ್ಯಾಜಿಡಿಯ ರಸ, ಪರಿಣಾಮ ಘಟನೆಗಳಿಂದಲೇ ಒದಗತಕ್ಕದ್ದು. ಅಲ್ಲದೆ, ಪರಿಸ್ಥಿತಿಯ ಕ್ಷಿಪ್ರ ಪರಿಣಾಮ ಘಟನೆಗಳಿಂದಲೇ ಒದಗತಕ್ಕದ್ದು, ಅಲ್ಲದೆ, ಪರಿಸ್ಥಿತಿಯ ಕ್ಷಿಪ್ರ ಮಾರ್ಪಾಟು (ಪೆರಿಪೆಟೈಯ), ನಿಜದ ಗ್ರಹಿಕೆ (ರೆಕಾಗ್ನಿಷನ್), ಇವೆರಡೂ ರಾಗಚೋದಕ ವಿದ್ಯಮಾನಗಳು ಗಂಭೀರನಾಟಕದಲ್ಲಿ; ಅವು ವಸ್ತುಸಂವಿಧಾನಕ್ಕೆ ಸೇರಿದವು. ಈ ನಾಟಕದ ರಚನೆಯನ್ನು ಕಲಿಯುವವರು ಮೊದಲು ನುಡಿನೈಪುಣ್ಯವನ್ನೂ ಪಾತ್ರಚಿತ್ರಣವನ್ನೂ ಕಲಿತು, ಅನಂತರ ಸಂವಿಧಾನ ಕೌಶಲವನ್ನು ಅಭ್ಯಾಸಮಾಡುತ್ತಾರೆ. ಹೀಗೆ ಕಥಾಸಂವಿಧಾನ ಮೊಟ್ಟಮೊದಲ ತತ್ತ್ವ; ಅದೇ ಒಂದು ಬಗೆಯಲ್ಲಿ ಗಂಭೀರನಾಟಕದ ಆತ್ಮ. ಪಾತ್ರಕ್ಕೆ ಅಲ್ಲಿ ಎರಡನೆಯ ಸ್ಥಾನ; ಮೂರನೆಯದು ಚಿಂತನೆ: ನಾಲ್ಕನೆಯದು ನುಡಿಗಟ್ಟು; ಐದನೆಯ ಜಾಗ ಸಂಗೀತಕ್ಕೆ; ಕಡೆಯದಾಗಿ ನೋಟದಲ್ಲಿನ ಕಲಾಂಶ ಬಲು ಸ್ವಲ್ಪ.

ಸಮರ್ಪಕವಾದ ಆದಿ ಮಧ್ಯ ಅಂತ್ಯಗಳಿಂದ ಕೂಡಿರುವುದೇ ಸಂವಿಧಾನದ ಪೂರ್ಣಾಕಾರ; ಅದು ಹೇಗೋ ಪ್ರಾರಂಭವಾಗಿ ಹೇಗೋ ಕೊನೆಗೊಳ್ಳಬಾರದು. ಮಹತ್ತ್ವವೂ ಅದಕ್ಕೆ ಅತ್ಯಾವಶ್ಯಕ; ಅದಿಲ್ಲದಿದ್ದರೆ ಅದರ ಸೌಂದರ್ಯಕ್ಕೆ ಲೋಪ. ಎಂದರೆ, ಘಟನಾವಳಿಯ ನಡೆ ದುರದೃಷ್ಟದಿಂದ ಸೌಭಾಗ್ಯಕ್ಕೊ ಸೌಭಾಗ್ಯದಿಂದ ದುರದೃಷ್ಟಕ್ಕೊ ನ್ಯಾಯಸಮ್ಮತವಾಗಿ ತಿರುಗುವುದಕ್ಕೆ ಸೂಕ್ತ ಅವಕಾಶ ಇರುವುದೇ ಮಹತ್ತ್ವದ ತಾತ್ಪರ್ಯ.

ಒಬ್ಬನೇ ನಾಯಕನಿದ್ದರೆ ಕಥೆಗೆ ಏಕತೆ ಉಂಟಾಯ್ತೆಂದು ಯೋಚಿಸುತ್ತಾರೆ. ಅದು ತಪ್ಪು. ಹೆರಕ್ಲೀಸ್ ಒಬ್ಬನೇ ಆದರೂ ಅವನ ಅನೇಕಾನೇಕ ಆಗುಹೋಗುಗಳನ್ನು ಒಟ್ಟುಗೂಡಿಸಿ ಏಕತೆ ಸಿದ್ಧಿಸುವುದಿಲ್ಲ. ಏಕತೆಯ ರಹಸ್ಯ ಹೋಮರನಿಗೆ ಗೊತ್ತಿದ್ದಿತು. ಒಡೀಸಿಯಸ್ಸನ ಕಥೆಯಲ್ಲಿ ಎಷ್ಟು ಬೇಕೊ ಅಷ್ಟನ್ನು ಮಾತ್ರ ಅವನು ಉಳಿಸಿಕೊಂಡ.

ಇತಿಹಾಸಕಾರನಿಗೂ ಕವಿಗೂ ಇರುವ ಭೇದ ಬರೀ ಗದ್ಯ ಪದ್ಯ ಲೇಖನವಲ್ಲ. ಏನು ನಡೆದಿದೆಯೊ ಅದನ್ನು ಇತಿಹಾಸಕಾರ ತಿಳಿಸುತ್ತಾನೆ; ಏನು ನಡೆಯಬಹುದೊ ಅದನ್ನು ಕವಿ ತಿಳಿಸುತ್ತಾನೆ. ಆದ್ದರಿಂದ ಚರಿತ್ರೆಗಿಂತ ಕಾವ್ಯ ಉಚ್ಚ, ಜ್ಞಾನಾತ್ಮಕ, ಅದು ವ್ಯಷ್ಟಿಯ ನಿರೂಪಣೆ, ಇದು ವಿಶ್ವವ್ಯಾಪಿಯಾದ ಸಮಷ್ಟಿಯ ನಿರೂಪಣೆ. ಎಲ್ಲ ಚಾರಿತ್ರಿಕ ಸಂಗತಿಗಳಲ್ಲದಿದ್ದರೂ ಅದೊ ಇದೊ ನಾಟಕದ ವಿಷಯವಾಗಬಹುದು. ಹಾಗೆ ಆಗಿರಬಹುದು ಎಂಬ ನ್ಯಾಯಕ್ಕೆ ಅದು ಅನುಸಾರವಾಗಿದ್ದಲ್ಲಿ, ಸುಮ್ಮನೆ ಒಂದಾದ ಮೇಲೊಂದರಂತೆ ಘಟನಾವಳಿಗಳನ್ನು ತಂದಿಟ್ಟರೆ ಸೊಗಸಾದ ಕಥಾವಸ್ತುವಾಗುವುದಿಲ್ಲ. ನಮ್ಮಲ್ಲಿ ಭಯ ಅಥವಾ ಮರುಕವನ್ನು ಹುಟ್ಟಿಸುವ ಶಕ್ತಿ ಘಟನೆಗೆ ಇರಬೇಕು; ಅರ್ಥಾತ್ ಆ ಘಟನೆ ಕಾರ್ಯಕಾರಣ ಸಂಬಂಧಕ್ಕೆ ಹೊಂದಿಕೊಂಡು ಆಶ್ಚರ್ಯಯುಕ್ತವಾಗಿರಬೇಕು.

ಕಥಾವಸ್ತುವಿನಲ್ಲಿ ಎರಡು ಬಗೆ : ಸರಳ ಮತ್ತು ಸಂಕೀರ್ಣ. ಸ್ಥಿತಿಬದಲಾವಣೆಯೂ ನಿಜಗ್ರಹಿಕೆಯೂ ಯಾವುದರಲ್ಲಿ ಇವೆಯೋ ಅದೇ ಸಂಕೀರ್ಣ ಸಂವಿಧಾನ. ಸ್ಥಿತಿಬದಲಾವಣೆಯೊಂದಿಗೇ ನಿಜದ ಗ್ರಹಿಕೆಯೂ ಉಂಟಾದರೆ ಅದು ಅತ್ಯುತ್ತಮ; ಈಡಿಪಸ್‌ನಲ್ಲಿ ಹಾಗಿದೆ. ಸೂಕ್ತ ಕಟ್ಟಡದ ಕಥಾವಸ್ತು ಏಕಮುಖವಾಗಿ ನೇರವಾಗಿರಬೇಕು. ಸೌಖ್ಯದಿಂದ ಅಸೌಖ್ಯಕ್ಕೆ ಸ್ಥಿತಿಗತಿ ಬದಲಾಯಿಸತಕ್ಕದ್ದು. ಆ ಬದಲಾವಣೆಗೆ ದುರ್ಗುಣ ನಿಮಿತ್ತವಾಗದೆ ಯಾವುದೊ ದೊಡ್ಡ ಪ್ರಮಾದ ಅಥವಾ ನ್ಯೂನತೆ (ಹಮಾರ್ಷಿಯ–ಎರರ್ ಅಥವಾ ಫ್ರೇಲ್ಟಿ) ನಿಮಿತ್ತವಾಗಬೇಕು. ನಾಯಕ ಸಂಪೂರ್ಣ ಸಜ್ಜನನೂ ಶುದ್ಧದುರ್ಜನನೂ ಆಗಿರಬಾರದು; ಮೊದಲನೆಯವನಿಗೆ ಕೇಡು ಪ್ರಾಪ್ತವಾದರೆ ಅದರಿಂದ ನಮಗೆ ಆಶಾಭಂಗ, ಜುಗುಪ್ಸೆ; ಎರಡನೆಯವನ ಪತನ ನ್ಯಾಯವೇ ಆದ್ದರಿಂದ ಕನಿಕರಕ್ಕೆ ಆಸ್ಪದವಿರದು. ನಮ್ಮ ಹೇಳಿಕೆಯನ್ನು ನಾಟಕರಂಗದ ವಾಡಿಕೆ ಅನುಮೋದಿಸುತ್ತದೆ. ಯೂರಿಪಿಡೀಸನನ್ನು ಹಳಿಯುವವರು ತಪ್ಪು ಮಾಡಿದ್ದಾರೆ. ಅವನ ನಾಟಕಗಳಲ್ಲಿ ಹಲವು ಅಸೌಖ್ಯದಲ್ಲಿ ಸಮಾಪ್ತಿಗೊಳ್ಳುತ್ತವೆ; ಅದೇ, ನಾವು ತಿಳಿದಂತೆ ಸರಿಯಾದ ಸಮಾಪ್ತಿ. ಯೂರಿಪಿಡೀಸನಲ್ಲಿ ಯಾವುದೇ ದೋಷವಿದ್ದರೂ ಕವಿಗಳಲ್ಲಿ ಅತ್ಯಂತ ಟ್ರ್ಯಾಜಿಕ್ ಕವಿ ಅವನೇ ಎನ್ನಿಸುತ್ತದೆ.

ಒಳ್ಳೆಯವರಿಗೆ ಒಂದು, ಕೆಟ್ಟವರಿಗೆ ಬೇರೊಂದು, ಇಂಥ ದ್ವಿಮುಖ ಪರಿಣಾಮವಿರುವ ಗಂಭೀರನಾಟಕ ಎರಡನೆಯ ದರ್ಜೆಯದು; ಅದನ್ನೇ ಪ್ರಥಮದರ್ಜೆಯದೆಂದು ಬಗೆಯುತ್ತಾರೆ, ಕೆಲವರು. ಅದಕ್ಕೆ ಪ್ರೇರಣೆ ನೋಟಕರ ದೌರ್ಬಲ್ಯ; ಅವರಿಗೆ ಇಷ್ಟವಾದಂತೆ ಬರೆಯುತ್ತಾನೆ ಕವಿ. ತನ್ಮೂಲಕ ಉತ್ಪತ್ತಿಯಾಗುವ ಸಂತೋಷ ನೈಜ ಟ್ರ್ಯಾಜಿಕ್ ಸಂತೋಷವಲ್ಲ; ಹರ್ಷನಾಟಕಕ್ಕೆ ಸರಿಯಾದದ್ದು.

ದೃಶ್ಯ ಪ್ರದರ್ಶನದ ಮೂಲಕ ದಿಗಿಲುದಯೆಗಳನ್ನು ಎಬ್ಬಿಸಬಹುದು. ಆದರೆ ಕಥಾವಳಿಯ ಒಳಸಂವಿಧಾನದಿಂದ ಅವನ್ನು ಪ್ರಚೋದಿಸುವುದು ಅದಕ್ಕಿಂತ ಉತ್ಕೃಷ್ಟವಾದ ರೀತಿ. ಗಂಭೀರನಾಟಕದಿಂದ ಯಾವ ಯಾವುದೋ ಸಂತೋಷವನ್ನು ಬಯಸಬಾರದು ನಾವು, ಅದಕ್ಕೆ ಒಪ್ಪುವಂಥದನ್ನೇ ಬಯಸಬೇಕು.

ಭಯವನ್ನೊ ಕನಿಕರವನ್ನೊ ಉಂಟುಮಾಡಬಲ್ಲ ಸಂಗತಿಗಳನ್ನು ಪಟ್ಟಿ ಮಾಡೋಣ. ಇಬ್ಬರು ಸ್ನೇಹಿತರ ಮಧ್ಯೆ ಇಬ್ಬರು ಶತ್ರುಗಳ ಮಧ್ಯೆ ಅಪರಿಚಯಸ್ಥರಿಬ್ಬರ ಮಧ್ಯೆ ಜರುಗಬೇಕು ತಾನೆ ವ್ಯವಹಾರ. ಶತ್ರುಗಳಾಗಲಿ ಅಪರಿಚಯಸ್ಥರಾಗಲಿ ಒಬ್ಬರೊನ್ನಬ್ಬರು ಕೊಂದುಹಾಕಿದರೆ ಅದರಲ್ಲಿ ಯಾವ ಅನುಕಂಪೆಗೂ ಆಸ್ಪದವಿಲ್ಲ. ತಂದೆ, ತಾಯಿ, ಅಣ್ಣ ತಮ್ಮ ಇತ್ಯಾದಿ ರಕ್ತಸಂಬಂಧಿಗಳ ನಡುವೆ ಅಂಥ ವ್ಯಾಪಾರ ನಡೆದ ವರ್ತಮಾನ ದೊರೆತರೆ ಕವಿಗೆ ಪ್ರಯೋಜನ. ರೌದ್ರ ಕಾರ್ಯವನ್ನು ತಿಳಿದೂ ತಿಳಿದೂ ಮಾಡಬಹುದು; ಪೂರ್ತಿ ಅಜ್ಞಾನದಿದ ಮಾಡಬಹುದು; ವಿಚಾರವೆಲ್ಲವನ್ನೂ ಅರಿತು ಕೆಲಸಗೈಯುವುದಕ್ಕೆ ಹೋಗಿ ಹಠಾತ್ತಾಗಿ ಕಾರ್ಯಸಂಕಲ್ಪವನ್ನು ಬಿಟ್ಟುಕೊಡಬಹುದು. ನಾಲ್ಕನೆಯದಾಗಿ, ತಿಳಿವಳಿಕೆಯಿಲ್ಲದೆ ಕೈಗೊಂಡ ಕಾರ್ಯ ಇನ್ನೇನು ಆಗಲಿದೆ ಅನ್ನುವಾಗ ಕರ್ತನಿಗೆ ಅರಿವುಂಟಾಗಿ ಕರ್ಮಸಾಧನೆಯೇ ಆಗದೆ ನಿಲ್ಲಬಹುದು. ಇವು ನಾಲ್ಕೇ ಕಾರ್ಯಸಾಧನೆ ವಿಧಗಳು, ಇವುಗಳಲ್ಲಿ ಮೂರನೆಯದು ಅತಿ ಹೀನವಾದದ್ದು. ಕಾರ್ಯಾಚರಣೆ ನಡೆದುಹೋಗುವುದು ಅದಕ್ಕಿಂತ ಮೇಲು; ಅಜ್ಞಾನದಿಂದ ಅದು ಆಗುವುದು ಇನ್ನೂ ವಾಸಿ, ಎಲ್ಲಕ್ಕಿಂತ ಉತ್ಕೃಷ್ಟವಾದದ್ದು ನಾಲ್ಕನೆಯ ತೆರೆದ ನಿದರ್ಶನ.

ಪಾತ್ರದ ವಿಚಾರದಲ್ಲಿ ನಾಲ್ಕು ಉದ್ದೇಶಗಳನ್ನು ಗುರಿಯಾಗಿ ಇಟ್ಟುಕೊಳ್ಳತಕ್ಕದ್ದು. ಅದಕ್ಕೆ ಯೋಗ್ಯತೆ ಇರಬೇಕು; ಔಚಿತ್ಯವಿರಬೇಕು; ಪ್ರತ್ಯಕ್ಷ ಬಾಳಿನ ಯಥಾರ್ಥತೆ ಅದರಲ್ಲಿ ಕಂಡುಬರಬೇಕು; ಅವಿರೋಧತೆಯಿಂದ ಅದು ಶೋಭಿಸಬೇಕು. ಒಬ್ಬ ವ್ಯಕ್ತಿ ನುಡಿಯಲ್ಲಾಗಲಿ ಕೆಲಸದಲ್ಲಾಗಲಿ ತನ್ನ ಸ್ವಭಾವವನ್ನೂ ಆವಶ್ಯಕತೆಯನ್ನು ಎಂದೂ ಮೀರಬಾರದು, ಕಥಾಸಂವಿಧಾನದಿಂದಲೇ ಗೋಜುಗೊಂದಲು (ಕಾಂಪ್ಲಿಕೇಷನ್) ಏಳಬೇಕು. ಅದರ ಅಂತಿಮ ಪರಿಹಾರ(ರೆಸಲೂಷನ್) ಆಗಬೇಕು. ಯಂತ್ರದಿಂದ ಇಳಿದು ಅವತರಿಸಿದ ದೇವತೆಯಿಂದ ಮುಕ್ತಾಯ ಆಗಕೂಡದು, ಕಥಾವಳಿಯೊಳಕ್ಕೆ ಅಸಂಬದ್ಧವಾದ (ಇರ್‍ರ್ಯಾಷನಲ್) ಅಂಶ ಯಾವೊಂದೂ ಪ್ರವೇಶಿಸಲಾಗದು. ಮಾನವಾತೀತ ಸಂಗತಿ ಕಥೆಯಲ್ಲಿ ಇರಲೇಬೇಕಾದರೆ ಅದು ನಾಟಕದ ವಸ್ತುವಿಗೆ ಹೊರಚ್ಚಾಗಿರತಕ್ಕದ್ದು. ದೃಶ್ಯ ಕಣ್ಣಿಗೆ ಕಟ್ಟುವಂತೆ ರಚಿಸಬೇಕು. ಕವಿ, ಅನುಕಾರ್ಯರಿಗೆ ಸಮಂಜಸ ಸಾಮಾನು ಸರಂಜಾಮನ್ನೂ ಸೂಕ್ತ ಹಾವಭಾವಗಳನ್ನೂ ಸೂಚಿಸಿಕೊಡಬೇಕು.

ಪ್ರತಿಯೊಂದು ಗಂಭೀರನಾಟಕವೂ ಎರಡು ಭಾಗವಾಗಿರುತ್ತದೆ, ಗೋಜು ಗೊಂದಲದ ತೊಡಕು ಒಂದು ಭಾಗ; ಅದನ್ನು ಬಿಡಿಸುವುದು ಎರಡನೆಯ ಭಾಗ; ಸ್ಥಿತಿ ಬದಲಾವಣೆಯ ವರೆಗೂ ಮೊದಲನೆಯ ಭಾಗ ಅಲ್ಲಿಂದ ಮುಕ್ತಾಯದವರೆಗೂ ಎರಡನೆಯ ಭಾಗ. ಎರಡರಲ್ಲೂ ಸಮಾನ ದಕ್ಷತೆಯನ್ನು ತೋರಬೇಕು, ಕವಿ. ಭವ್ಯಕಾವ್ಯದ ಸಡಿಲತೆ ಗಂಭೀರನಾಟಕಕ್ಕೆ ಆಗದು.

ನಾಟ್ಯಮೇಳವನ್ನು (ಕೋರಸ್) ಪಾತ್ರಗಳಲ್ಲಿ ಒಂದನ್ನಾಗಿ ಭಾವಿಸತಕ್ಕದ್ದು. ಆಂಗಿಕವಾಗಿ ಹೊಂದಿಕೊಂಡು ಅದು ಕಾರ್ಯಾವಳಿಯಲ್ಲಿ ಭಾಗವಹಿಸಬೇಕು. ಸೊಫೊಕ್ಲೀಸನ ಪದ್ಧತಿ ಸರಿ; ಯೂರಿಪಿಡೀಸನದು ಸರಿಯಲ್ಲ. ಇತ್ತೀಚಿನ ಕವಿಗಳಲ್ಲಿ ನಾಟ್ಯಮೇಳಕ್ಕೂ ನಾಟಕದ ವಸ್ತುವಿಗೂ ಏನೇನೂ ಸಂಬಂಧವಿಲ್ಲ; ಅಗೇಥಾನ್ ಅಂಥ ವಿರಚನೆಯನ್ನು ಪ್ರಾರಂಭಿಸಿದ. ಎಂದರೆ, ಒಂದು ನಾಟಕದ ಮೇಳಗೀತವನ್ನೋ ಭಾಷಣವನ್ನೋ ಅಂಕವನ್ನೋ ಇನ್ನೊಂದಕ್ಕೆ ಸುಲಭವಾಗಿ ವರ್ಗಾಯಿಸಬಹುದಲ್ಲವೇ.

ಮುಂದಿನ ನಾಲ್ಕು ಅಧ್ಯಾಯಗಳಲ್ಲಿನ ಚಿಂತನೆ ನುಡಿಗಟ್ಟುಗಳ ಚರ್ಚೆ ಬರುತ್ತದೆ. ಅವೆಲ್ಲ ಆ ಕಾಲ ದೇಶಗಳಿಗೆ ಮಾತ್ರ ಅನ್ವಯಿಸತಕ್ಕವು.

ಒಂದೇ ಛಂದಸ್ಸನ್ನು ಉಪಯೋಗಿಸುತ್ತ ಕಥನವಿಧಾನದಲ್ಲಿ ಅನುಕರಣೆ ನೆರವೇರಿಸುವ ಕಾವ್ಯವೂ ತನ್ನ ವಸ್ತುಸಂವಿಧಾನವನ್ನು ಗಂಭೀರನಾಟಕದಲ್ಲಿರುವಂತೆಯೇ ಕಟ್ಟತಕ್ಕದ್ದು. ನಾಟಕದ ನಿಯಮಗಳನ್ನೇ ಹಿಂಬಾಲಿಸತಕ್ಕದ್ದು. ಈ ದೃಷ್ಟಿಯಿಂದ ವೀಕ್ಷಿಸಿದರೆ ಹೋಮರನ ಮಹೋನ್ನತಿ ಸ್ವಯಂವೇದ್ಯ. ಭವ್ಯ ಕಾವ್ಯಕ್ಕೆ ವಿಸ್ತೀರ್ಣ ಅಧಿಕವಾಗಿದೆ; ಅನೇಕ ಘಟನಾವಳಿಗಳನ್ನು ಒಂದೇ ಸಲ ಅದು ಪ್ರದರ್ಶಿಸಬಲ್ಲದು. ಕವಿ ತಾನೇ ಮಾತನಾಡುವುದನ್ನು ಆದಷ್ಟು ಕಡಿಮೆ ಮಾಡಬೇಕು; ಇದನ್ನು ಹೋಮರ್ ಚೆನ್ನಾಗಿ ಬಲ್ಲ. ಅದ್ಭುತ ಕ್ರಿಯೆಗಳಿಗೆ ಭವ್ಯಕಾವ್ಯದಲ್ಲಿ ಹೆಚ್ಚು ಅವಕಾಶವಿದೆ; ನೇಪಥ್ಯದ ಮೇಲೆ ಅವು ಬಂದರೆ ನಗೆಗೀಡಾದೀತು. ಗಂಭೀರ ನಾಟಕದಲ್ಲಿ ಕವಿ ಆಗಬಹುದಲ್ಲದ ಆಗುಹೋಗನ್ನು ಹಿಂದಿಕ್ಕಿ, ಆಗದಿದ್ದರೂ ಆಗಬಹುದಾದ್ದನ್ನು ಸ್ವೀಕರಿಸತಕ್ಕದ್ದು.

ಕಾವ್ಯದೋಷಗಳಲ್ಲಿ ಎರಡು ವಿಧ; ಕಾವ್ಯದ ತಿರುಳಿಗೆ ಅಂಟಿಕೊಂಡವು ಮತ್ತು ಪ್ರಾಸಂಗಿಕವಾದವು. ವಿಮರ್ಶೆಮಾಡುವಾಗ ಇದನ್ನು ಮರೆಯಬಾರದು; ಹಾಗೂ ವಾಕ್ಯವೊಂದನ್ನು ಪ್ರತ್ಯೇಕಿಸಿಟ್ಟು, ಸಮಯ ಸನ್ನಿವೇಶಗಳನ್ನು ಬದಿಗೊತ್ತಿ, ಇದೇನು ಹೀಗಿದೆ? ಎನ್ನಬಾರದು.

ಇನ್ನೊಂದು ಪ್ರಶ್ನೆಯುಂಟು; ಭವ್ಯಕಾವ್ಯ ಹೆಚ್ಚೋ ಗಂಭೀರನಾಟಕ ಹೆಚ್ಚೋ? ಟ್ರ್ಯಾಜಿಕ್ ಕಲೆ ವಯಸ್ಸಿನಿಂದ ಕಿರಿಯದು, ಭವ್ಯಕಾವ್ಯ ವಾಚನದ ಮೂಲಕ ಸುಸಂಸ್ಕೃತ ಮಂದಿಗೆ ರುಚಿಯಾಗುತ್ತದೆ; ನಾಟಕವಾದರೋ ಅಭಿನಯದ ಮೂಲಕ ಸಾಮಾನ್ಯ ಜನತೆಗೆ ಪ್ರಿಯವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ಇದನ್ನು ಒಪ್ಪುವಂತಿಲ್ಲ. ಅಂಗಚೇಷ್ಟೆ, ವಿಕಟತ್ವ, ವೈಪರೀತ್ಯ, ಅತಿ ಮುಂತಾದವು ಕಾವ್ಯವಾಚನದಲ್ಲೂ ಆಗಬಹುದು. ಅಭಿನಯ ವ್ಯಾಪಾರವನ್ನೆಲ್ಲ ಒಟ್ಟಿಗೆ ಖಂಡಿಸುವುದು ಅನ್ಯಾಯ. ಗಂಭೀರನಾಟಕವನ್ನು ಓದಿ ಹರ್ಷಪಡುವುದಕ್ಕೆ ಅಡಚಣೆ ಏನೂ ಇಲ್ಲ. ಹೀಗೆ ಮೇಲೆ ಆರೋಪಿಸಿದ ಕಳಂಕ ಯಾವುದೂ ಗಂಭೀರನಾಟಕವನ್ನು ತಟ್ಟುವುದಿಲ್ಲ. ಗಂಭೀರನಾಟಕ ಭವ್ಯಕಾವ್ಯದ ಸಕಲ ಸದ್ಗುಣಗಳಿಂದಲೂ ಭರಿತವಾಗಿದೆ. ಭವ್ಯ ಕಾವ್ಯದ ಸಡಿಲತೆ ಅಸ್ಪಷ್ಟತೆ ವಿಳಂಬ ಯಾವುದೂ ಅದನ್ನು ಬಾಧಿಸದು. ಆದ್ದರಿಂದ ಗಂಭೀರನಾಟಕವೇ ಹೆಚ್ಚಿನ ಪ್ರಭಾವದ ಕಲೆಯೆಂಬುದು ಸುವ್ಯಕ್ತ.

ಇದು ಕಾವ್ಯಕಲೆಯ ಗಣಿಯಿಂದ ಆಯ್ದುತಂದ ಹಲಕೆಲವು ವಜ್ರ ವೈಡೂರ್ಯ; ಅದರಲ್ಲಿ ಕೊನೆಗೆ ಇಷ್ಟೇ ಮೊತ್ತದ ಇತರ ನವರತ್ನಗಳೂ ಹುದುಗಿರುವುದು ನಿಸ್ಸಂದೇಹ, ಇಂಥ ಪ್ರಸ್ಥಾನಗ್ರಂಥವನ್ನು ಅರಿಸ್ಟಾಟಲ್ ಏಕಾಂಗಿ ನಿರ್ಮಿಸಿದ. ಪ್ಲೇಟೋನ ಸವಾಲಿಗೆ ಅದು ಜವಾಬೆಂದು ಅನೇಕರ ನಂಬಿಕೆ, ಕಾವ್ಯನಾಟಕಗಳಿಂದ ಪುರುಷರಿಗೂ ಸಮಾಜಕ್ಕೂ ತುಂಬ ಅಪಾಯವೆಂಬ ದೂರನ್ನು ಪ್ಲೇಟೊ ತನ್ನ ಸಾಕ್ರಟೀಸನ ಮುಖದಿಂದ ಘೋಷಿಸಿದ.

ಹೇಗೆಂದರೆ, ಕವಿಗಳು ಬರೆಯುವುದೆಲ್ಲ ಸುಳ್ಳು; ದೇವತೆಗಳಿಗೆ ರೋಷ ಮಾತ್ಸರ್ಯ ದುರ್ಮೋಹಗಳನ್ನಿತ್ತು ಅವರನ್ನು ಅವಹೇಳನಕ್ಕೆ ಈಡುಮಾಡುತ್ತಾರೆ; ಕವಿಕಲ್ಪನೆಯೆಲ್ಲ ಸ್ಥಿರಸತ್ಯದ ನಕಲಾದ ವಾಸ್ತವಿಕ ಪ್ರಪಂಚದ ನಕಲು. ನಾಟಕಮಂದಿರದಲ್ಲಿ ಕುಳಿತ ಜನ ಗಟ್ಟಿಯಾಗಿ ಅಳುವಂತೆಯೂ ಕನಿಕರಾಧಿಕ್ಯದಿಂದ ಕರಗುವಂತೆಯೂ ನಿಯಂತ್ರಿಸಿ, ಧೈರ್ಯಸ್ಥೈರ್ಯ ಸಾಹಸಗಳನ್ನು ಅವರು ಕಳೆದುಕೊಂಡು ನಿಸ್ಸತ್ತ್ವರೂ ನಿಸ್ತೇಜರೂ ಆಗುವಂತೆ ಕವಿಗಳು ಮಾಡಿ ಬಿಡುತ್ತಾರೆ. ಅಂಥ ಪುರುಷರಿಂದ ಸ್ವದೇಶದ ಸಂರಕ್ಷಣೆ ಎಂತು ನೆರವೇರೀತು? ದ್ರೋಹಿಗಳಾದ ಈ ಕವಿಗಡಣವನ್ನು ಆದರ್ಶರಾಜ್ಯದಿಂದ ಗಡಿಪಾರು ಮಾಡುವುದೇ ಉತ್ತಮ ಮಾರ್ಗ. ತನ್ನ ಗುರುವಿನಿಂದಾದ ಈ ಆಕ್ಷೇಪಣೆಗೆ ಸಮಗ್ರ ಸಮಾಧಾನವನ್ನು ಮುಂದಿಡುವುದಕ್ಕಾಗಿ ಅರಿಸ್ಟಾಟಲ್ ಕಾವ್ಯಕಲೆಯನ್ನು ರಚಿಸಿದನೆ? ಅರಿಸ್ಟಾಟಲನ ಸ್ಮೃತಿಯಲ್ಲಿ ಪ್ಲೇಟೊ, ಸಾಕ್ರಟೀಸರು ಮಬ್ಬುಮಬ್ಬಾಗಿ ಸುಳಿದಾಡುತ್ತಿದ್ದಿರಬಹುದು, ಅಷ್ಟೆ. ಅಪೂರ್ಣ ಟಿಪ್ಪಣಿಗಳ ಮೂಟೆಯಾದರೂ ಅದರಲ್ಲಿ ಅರಿಸ್ಟಾಟಲ್ ಪ್ರಕಟಿಸುವ ಕಲಾಭಕ್ತಿ, ಸತ್ಯಶ್ರದ್ಧೆ, ಪ್ರಾಮಾಣಿಕತೆ, ವಿವೇಕ, ವಿಚಕ್ಷಣೆ, ಏಕಾಗ್ರಚಿತ್ತ ಮೊದಲಾದುವನ್ನು ಬಗೆದರೆ, ಲೇಖಕನಿಗೆ ವಿಚಾರಸರಣಿ ಒಂದರ ಮೇಲೆ ಮನಸ್ಸತು ನಿಶ್ಚಲವಾಗಿದೆ ಎಂದು ತೋರುತ್ತದೆಯೇ ಹೊರತು ವಾದವಿವಾದಕ್ಕೆ ಆತ ಚಿತ್ತ ತಿರುಗಿಸಬಲ್ಲನೆಂದು ಭಾಸವಾಗುವುದಿಲ್ಲ.

ಅರಿಸ್ಟಾಟಲ್ ಪರಿಪೂರ್ಣ ದೇವತೆಯಲ್ಲ; ನಿರ್ದುಷ್ಟ ಮೇಲ್ಪಂಕ್ತಿಯಲ್ಲ, ನಿತ್ಯ ಬಳಕೆಯ ಕೈಪಿಡಿಯಲ್ಲ, ಅವನ ಕಾವ್ಯಕಲೆ. ಸಂಕುಚಿತತ್ವ ದೃಷ್ಟಿಮಾಂದ್ಯಗಳು ಅವನಲ್ಲಿ ಇಲ್ಲದೆ ಇಲ್ಲ; ಅರ್ಧೋಕ್ತಿ ಅತ್ಯುಕ್ತಿಗಳಿಂದ ತುಂಬಿದೆ ಅವನ ಕಿರುಹೊತ್ತಗೆ. ಗಂಭೀರನಾಟಕ ಭವ್ಯಕಾವ್ಯಕ್ಕಿಂತ ಹೆಚ್ಚು ಎನ್ನುವಾತನ ಮನೋರಾಜ್ಯ ವಿಶಾಲವಾದುದಲ್ಲ; ಅಷ್ಟೇಕೆ, ಆ ಪ್ರಶ್ನೆಗೆ ಬೇರಿಲ್ಲ, ಬುಡವಿಲ್ಲ. ಟ್ರ್ಯಾಜಿಕ್ ಘಟನೆಗಳನ್ನು ವರ್ಗೀಕರಣ ಮಾಡುವುದೂ ಒಂದೇ, ತಾರಾಪುಂಜಗಳನ್ನು ಎಣಿಸಿ ಪೂರೈಸುವುದೂ ಒಂದೇ. ಗಂಭೀರನಾಟಕದ ನಾಯಕ ಕಳಂಕಬಾಹಿರನಾಗಿರಬಾರದೇ? ಕಳಂಕಪೂರ್ಣನಾದ ದುರುಳ ವ್ಯಕ್ತಿ ಅದರ ನಾಯಕನಾಗಲಾರನೆ? ಅರಿಸ್ಟಾಟಲನ ಸೂತ್ರಗಳಿಗೆ ನಿಷೇಧ ಪ್ರಾಚೀನ ಗ್ರೀಕ್ ಗಂಭೀರನಾಟಕಗಳಲ್ಲೇ ಸಿಗುತ್ತವೆ; ಅವೇತಕ್ಕೆ ಆ ಚಾಣಾಕ್ಷನ ಕಣ್ಣಿಗೆ ಬೀಳಲಿಲ್ಲ? ಅಸೌಖ್ಯವೇ ಗಂಭೀರನಾಟಕಕ್ಕೆ ಸರಿಯಾದ ಕೊನೆಯೆಂದು ಒಂದು ಕಡೆ ಉಗ್ಗಡಿಸಿದರೆ, ಇನ್ನೊಂದು ಕಡೆ ಇನ್ನೇನು ದುರಂತ ಆಗಲಿದೆ ಎನ್ನುವಾಗ ಜ್ಞಾನೋದಯವಾಗಿ ಅದು ಆಗದೇ ಹೋಗುವುದು ಅತ್ಯುತ್ತಮ ಅಂತ್ಯ ಎಂದು ಉಚ್ಚರಿಸುತ್ತಾನೆ, ಸಮಾಧಾನದಿಂದ. ಇಂಥ ಪೂರ್ವಾಪರ ವಿರೋಧವಷ್ಟೆ ಅಲ್ಲದೆ, ನೀತಿಬೋಧೆಯ ಹೆಚ್ಚಳವೂ ಅವನ ಕೊರತೆ.

ಈ ಪಟ್ಟಿಗೆ ಇನ್ನಷ್ಟು ವಿವರಗಳನ್ನು ಕೂಡಿಸಿದರೂ ಅರಿಸ್ಟಾಟಲ್ ದಿಟವಾಗಿ ಮಹಾಮೇಧಾವಿ, ಜ್ಞಾನಬೊಕ್ಕಸದ ಖಜಾಂಚಿ, ವಿಮರ್ಶೆಯ ಮುಂದಾಳು ಎಂಬ ಮಾತನ್ನು ಮಾತ್ರ ನಾವು ಮರೆಯುವಂತಿಲ್ಲ. ಲಲಿತಕಲೆಯ ಸ್ವರೂಪ, ಭವ್ಯಕಾವ್ಯದ ಲಕ್ಷಣ, ಚರಿತ್ರೆಯ ಕೆಲಸ, ಗಂಭೀರನಾಟಕದ ಉದ್ದೇಶ, ಅಂಗಾಂಗಗಳು, ಫಲ, ವಿಮರ್ಶೆಯ ಧ್ಯೇಯ, ವಿಧಾನ ಇತ್ಯಾದಿ ಜಟಿಲ ವಿಚಾರಗಳ ಮೇಲೆ ಎಷ್ಟೊಂದು ಬೆಳಕನ್ನು ಚೆಲ್ಲಿದ್ದಾನೆ ಆತ!

ನಿರಂತರವಾಗಿ ಜಿಜ್ಞಾಸೆಯನ್ನು ಎಬ್ಬಿಸುವ ವಿಮರ್ಶನಗ್ರಂಥಗಳಲ್ಲಿ ಅರಿಸ್ಟಾಟಲನ ಕಾವ್ಯಕಲೆಯ ಸಮೀಪಕ್ಕೆ ಬರುವ ಗ್ರಂಥ ಒಂದೂ ಇಲ್ಲ. (ಎಸ್.ವಿ.ಆರ್.)

ಸರ್ವತೋಮುಖವಾದ ಅರಿಸ್ಟಾಟಲನ ಜ್ಞಾನವನ್ನು ಒಂದು ವಿಶ್ವಕೋಶಕ್ಕೆ ಹೋಲಿಸಬಹುದು. ಅರಿಸ್ಟಾಟಲನ ಜ್ಞಾನ ವಿಶಾಲವಾಗಿರುವುದರ ಜೊತೆಗೆ ಆಳವಾಗಿಯೂ ಇದೆ. ತರ್ಕಶಾಸ್ತ್ರ, ಪ್ರಥಮತತ್ತ್ವ, ನೀತಿಶಾಸ್ತ್ರ, ರಾಜ್ಯಶಾಸ್ತ್ರ, ಸೌಂದರ್ಯಮೀಮಾಂಸೆ–ಇವು ವಿದ್ವಾಂಸರ ಗಮನವನ್ನು ಸೆಳೆಯುತ್ತವೆ.

ಸಾಕ್ರಟೀಸ್ ತನಗೆ ಸಮಾನನಾದ ಶಿಷ್ಯನನ್ನು ಪಡೆದ. ಪ್ಲೇಟೊ ಕೂಡ ತನ್ನಷ್ಟೇ ಪ್ರತಿಭಾಶಾಲಿಯಾದ ಶಿಷ್ಯನನ್ನು ಪಡೆದ. ಆದರೆ ಅರಿಸ್ಟಾಟಲನಿಗೆ ತನ್ನಷ್ಟೇ ಪ್ರಭಾವಶಾಲಿಯಾದ ಶಿಷ್ಯನನ್ನು ಪಡೆಯುವ ಸೌಭಾಗ್ಯ ದೊರೆಯಲಿಲ್ಲ. (ಜಿ.ಎಚ್.)

**ಅರಿಸ್ಟೈಡೀಸ್ :** ಪ್ರ.ಶ.ಪೂ. 6ನೆಯ ಶತಮಾನಪೂರ್ವದ, ಪ್ರಾಚೀನ ಅಥೆನ್ಸ್ ರಾಜ್ಯದ ಉಜ್ಜ್ವಲ ರಾಷ್ಟ್ರನಾಯಕ; ಅಥೆನ್ಸಿನ ಸಂಯುಕ್ತರಾಜ್ಯದ (ಡೇಲಿಯನ್ ಲೀಗ್) ಸಂಸ್ಥಾಪಕ, ಮುಖಂಡ. ಪ್ರಜಾಪ್ರಭುತ್ವ–ತಂತ್ರ ನಿರೂಪಣ ಮಾರ್ಗವನ್ನು ರಾಜನೀತಿ–ಸಿದ್ಧಾಂತಕ್ಕೆ ರೂಢಿಮಾಡಿಕೊಟ್ಟ ಪ್ರಜಾಪ್ರಭುತ್ವವಾದಿ. ದಕ್ಷ, ಅಸಾಧಾರಣ ನಿಷ್ಪಕ್ಷಪಾತ ಆಡಳಿತಗಾರನಾಗಿದ್ದರಿಂದ ನ್ಯಾಯವಾದಿ (ದಿ ಜಡ್ಜ್) ಎಂದು ಹೆಸರು ಪಡೆದಿದ್ದಾನೆ. ಈತ ಮಧ್ಯಮ ತರಗತಿಯ ಸ್ಥಿತಿವಂತ ಉಂಬಳಿ ಮನೆತನವೊಂದರಲ್ಲಿ ಜನಿಸಿ ಅಥೆನ್ಸಿನ ನಿರಂಕುಶ ಸಾಂಪ್ರದಾಯಿಕ ಪಕ್ಷದ ಧುರೀಣನಾಗಿ ಎರಡು ಬಾರಿ ಚುನಾಯಿತ ಪ್ರಮುಖನಾಗಿದ್ದ. ಪ್ರ.ಶ.ಪೂ. 490ರಲ್ಲಿ ಅಥೆನ್ಸ್ ರಾಜ್ಯದ ಭೂ ಸೈನ್ಯ ಸಂಘಟನೆಯನ್ನು ಅತ್ಯಂತ ದಕ್ಷತೆಯಿಂದ ಮಾಡಿದ್ದರಿಂದ ಅದು ಅಜೇಯರಾಷ್ಟ್ರವೆಂದು ಪರಿಗಣಿಸಲ್ಪಟ್ಟಿತ್ತು. ಆದರೆ ಆ ರಾಜ್ಯ ನೌಕಾಪಡೆಯ ಅಭಾವದ ಮೂಲಕ ಪರ್ಷಿಯದ ನೌಕಾದಳಗಳ ಹಾವಳಿಗಳಿಗೆ ಎದುರಾಗುತ್ತಲೇ ಇರಬೇಕಾಯಿತು. ಥೆಮಿಸ್ಟೊಕಿಸ್ ಎಂಬುವನು ರಾಜ್ಯದ ವಿರೋಧಿಗುಂಪಿನ ನಾಯಕನಾಗಿ, ಆಡಳಿತವನ್ನು ಉಗ್ರವಾಗಿ ಟೀಕಿಸುತ್ತಿದ್ದ. ಅರಿಸ್ಟೈಡೀಸ್ ಪ್ರಸಂಗಾವಧಾನ ಚಾತುರ್ಯದಿಂದ ವಿರೋಧಿಗುಂಪಿನ ಸಮರ್ಥ ನೌಕಾದಳದ ಆಗ್ರಹವನ್ನು ಶಮನ ಮಾಡಿ ಹೊರತಳ್ಳಲ್ಪಟ್ಟಿದ್ದ ಮ್ಯಾರಥಾನಿನ ಬಂಡುಗಾರರನ್ನು ಉಪಾಯದಿಂದ ಒಲಿಸಿಕೊಂಡು ಅವರನ್ನು ತಿರುಗಿ ಸ್ವದೇಶಕ್ಕೆ ಕರೆಸಿಕೊಂಡು ರಾಷ್ಟ್ರದ ಐಕ್ಯತೆಯನ್ನು ಸಾಧಿಸಿ ಬಲಿಷ್ಠರಾಜ್ಯವನ್ನು ಕಟ್ಟಿದ. ಸ್ಪಾರ್ಟನ್ನರನ್ನು ಜಾಣ್ಮೆಯಿಂದ ಮನವೊಲಿಸಿಕೊಂಡು ರಕ್ಷಣಾ ವ್ಯೂಹವೊಂದನ್ನು ರಚಿಸಿ ಅಥೆನ್ಸಿನ ಅದ್ಭುತ ಗೋಡೆಗಳನ್ನು ಬಲಗೊಳಿಸಿ ರಾಜ್ಯದ ರಕ್ಷಣೆಯನ್ನು ಸಾಧಿಸಿದ.

ಪ್ರ.ಶ.ಪೂ. 480ರಲ್ಲಿ ಡೇಲಿಯನ್ ಲೀಗ್ ಎಂಬ ಸಂಯುಕ್ತ ಸಭೆಯನ್ನು ಸ್ಥಾಪಿಸಿ ಆ ಸಭೆಯಿಂದ ಸ್ವಯಂ ನಿರ್ಣಾಯಕ ಅಧಿಕಾರಗಳನ್ನು ಪಡೆದು ಸೈನ್ಯದಲ್ಲಿಯ ಅನೈಕ್ಯವನ್ನು ತೊಡೆದುಹಾಕಿ ಸುವ್ಯವಸ್ಥೆಯನ್ನುಂಟುಮಾಡಿದ್ದಲ್ಲದೆ ಅದರ ಸಂಸ್ಥಾಪಕನಾಗಿ ಅದರ ರಕ್ಷಣೆಗೆ ಸೇರಿದ ಎಲ್ಲ ಸಂಸ್ಥಾನಗಳಿಗೂ ಸಮಾನದರ್ಜೆಯನ್ನು ಕಲ್ಪಿಸಿಕೊಟ್ಟು, ನ್ಯಾಯಸಮ್ಮತ ಮತ್ತು ನಿಷ್ಪಕ್ಷಪಾತ ರೀತಿಯಲ್ಲಿ ಆಡಳಿತ ನಡೆಸಿದ.

ಈತ ಶ್ರೀಮಂತರ ಪಕ್ಷಪಾತಿಯಾಗಿದ್ದನೆಂದು ಟೀಕಿಸಿಕೊಂಡರೂ ಅಥೆನ್ಸ್ ರಾಜ್ಯದ ಉಜ್ಜ್ವಲ ದೇಶಾಭಿಮಾನಿಯೆಂದೂ ನಾಡಿನ ಏಳ್ಗೆಗಾಗಿ ಶ್ರಮಿಸಿದ ನಿಷ್ಠುರ ರಾಷ್ಟ್ರಭಕ್ತನೆಂದೂ ರಾಜನೀತಿಸಿದ್ಧಾಂತಕ್ಕೆ ಪ್ರಜಾಪ್ರಭುತ್ವ ಮಾರ್ಗದ ಕೊಡುಗೆಯನ್ನು ದಯಪಾಲಿಸಿದ ದಕ್ಷ ಸೈನಿಕನೆಂದೂ ನ್ಯಾಯನಿಷ್ಠುರ ನಿಷ್ಪಕ್ಷಪಾತಿಯೆಂದೂ ಉಚ್ಚಮಟ್ಟದ ರಾಜಕಾರಣಿಯೆಂದೂ ಹೆಸರು ಪಡೆದು ರಾಜಕೀಯ ಆದರ್ಶ ವ್ಯಕ್ತಿಗಳ ಮಾಲಿಕೆಯಲ್ಲಿ ಅಗ್ರಗಣ್ಯನಾಗಿದ್ದಾನೆ. (ಟಿ.ಆರ್.ಪಿ.)

**ಅರಿಸ್ಟೋಫೇನೀಸ್ :** ನಲವತ್ತು ವರ್ಷಕ್ಕೂ ಮೀರಿ ಕೃತಿರಚನೆಯಲ್ಲಿ ನಿರತನಾಗಿದ್ದು ಸುಮಾರು 43 ಕೃತಿಗಳನ್ನು ಹೊರತಂದ ಸುಪ್ರಸಿದ್ಧ ಗ್ರೀಕ್ ಕವಿ. ಅವುಗಳಲ್ಲಿ ಹನ್ನೊಂದು ಯಾವ ವಿಕೃತಿಗೂ ಒಳಗಾಗದೆ ಉಳಿದು ಬಂದಿವೆ. ಪುರಾತನ ಗ್ರೀಕರಲ್ಲಿ ಆಗಿಬಂದ ವಿನೋದ ನಾಟಕಕಾರರಲ್ಲಿ ಅವನೇ ಅಗ್ರೇಸರನೆಂಬುದು ನಿರ್ವಿವಾದ. ಆದರೂ ನಮಗೆ ಗೊತ್ತಾಗಿರುವ ಅವನ ಜೀವನಸಂಗತಿಗಳು ತೀರ ಕಡಿಮೆ. ಹುಟ್ಟಿದ್ದು ಆ್ಯಟಿಕದಲ್ಲಿ ಪ್ರ.ಶ.ಪೂ. ಸು. 448ರಲ್ಲಿ, ಪ್ರ.ಶ.ಪೂ. 385 ಅಥವಾ 380ರಲ್ಲಿ ಈತ ನಿಧನನಾದನೆಂದು ಊಹಿಸಿದ್ದಾರೆ. ತಂದೆ ಫಿಲಿಪ್ಪಸ್ ಅಥೆನ್ಸಿನ ಒಂದು ಬುಡಕಟ್ಟಿನವನಾಗಿ, ಒಂದು ಅಧಿಕೃತ ಮೊಹಲ್ಲಾಕ್ಕೆ ಸೇರಿದವನಾಗಿದ್ದ. ಈಜಿನ್ ದ್ವೀಪದಲ್ಲಿ ಅವನಿಗೊಂದು ಸಣ್ಣ ಭೂಸ್ವಾಮ್ಯವಿತ್ತು.



ಅರಿಸ್ಟೋ ಫೇನೀಸ್ ಇನ್ನೂ ಚಿಕ್ಕ ಹುಡುಗ ನಾಗಿದ್ದಾಗಲೇ ತಂದೆಯೊಂದಿಗೆ ಈಜಿನಕ್ಕೆ ಹೋಗಿ ಇರ ಬೇಕಾಯಿತು. ಬಹುಶಃ ಅದನ್ನೇ ಆಧಾರ ಮಾಡಿಕೊಂಡು ಮುಂದೆ ಜನನಾಯಕನಾದ ಕ್ಲಿಯಾನ್ ಅವನ ಮೇಲೆ ಅಥೆನ್ಸಿನ ಪೌರತ್ವದ ದುರಾಕ್ರಮಣದ ಆಪಾದನೆ ಹೊರಿಸಿ ನ್ಯಾಯಸ್ಥಾನದ ಮುಂದೆ ಅವನನ್ನು ನಿಲ್ಲಿಸಿದ, ಆಪಾದನೆ ತೀರ ಸುಳ್ಳು; ಮುಯ್ಯಿ ತೀರಿಸಿಕೊಳ್ಳುವ ಸಲುವಾಗಿ ಕ್ಲಿಯನ್ ಹಾಗೆ ಮಾಡಿದ್ದು. ಯುವಕನಾಗಿದ್ದಾಗಲೇ ಆತ ನಾಟಕ ಬರೆಯಲಾರಂಭಿಸಿದ. ಪ್ರಥಮ ಕೃತಿ ಪ್ರ.ಶ.ಪೂ. 427ರಲ್ಲಿ ಪ್ರದರ್ಶಿತವಾದ ಔತಣಪ್ರಿಯರು. ಅದಕ್ಕೆ ಸ್ಪರ್ಧೆಯಲ್ಲಿ ಎರಡನೆಯ ಬಹುಮಾನ ಬಂತು. 426ರಲ್ಲಿ ನೇಪಥ್ಯವನ್ನು ಕಂಡ ಅವನ ಎರಡನೆಯ ಸಾಹಿತ್ಯ ಸಾಹಸ ಬ್ಯಾಬಿಲೋನಿಯನ್ನರು, ಅದಕ್ಕೂ ಎರಡನೆಯ ಬಹುಮಾನ ದೊರಕಿತು. ಇವೆರಡೂ ಈಗ ನಷ್ಟವಾಗಿವೆ. ತನ್ನ ಮೂರನೆಯ ನಾಟಕ ಅಕಾರ್ನ್ನಿಯನ್ನರು ಎಂಬುದನ್ನು 425ರಲ್ಲಿ ಪ್ರದರ್ಶಿಸಿ, ಎದುರಾಳಿಗಳಾದ ಹೆಸರಾಂತ ವಿನೋದನಾಟಕಕಾರರಾದ ಕ್ರ್ಯಾಟಿನಸ್ ಮತ್ತು ಯುಪೊಲಿಸ್‌ರನ್ನು ಸೋಲಿಸಿ, ಪ್ರಥಮಸ್ಥಾನ ಪಡೆದುಕೊಂಡ. ಲೋಕಕೆ ಉಪಲಬ್ಧವಾಗಿರುವ ಅವನ ನಾಟಕಗಳು, ಜನಿಸಿದ ಕ್ರಮ, ಆರ್ಜಿಸಿದ ಫಲ, ಹೀಗಿವೆ.

ಪ್ರ.ಶ.ಪೂ. 425 ಅಕಾರ್ನ್ನಿಯನ್ನರು ಮೊದಲನೆಯ ಸ್ಥಾನ; ಹೈಪೀಸ್ ಪ್ರ.ಶ.ಪೂ. 424 ರಕ್ಷಕವೀರರು ಮೊದಲನೆಯ ಸ್ಥಾನ; ನೆಫೆಲೈ ಪ್ರ.ಶ.ಪೂ. 423 ಮೋಡಗಳು ಮೊದಲನೆಯ ಸ್ಥಾನ; ಸ್ಫೆಕ್ಸ್ ಪ್ರ.ಶ.ಪೂ. 422 ಖಣಜಗಳು ಮೊದಲನೆಯ ಸ್ಥಾನ ಪ್ರಶ.ಪೂ. 421 ಶಾಂತಿ ಐರ್ನೆ ಎರಡನೆಯ ಸ್ಥಾನ ಮುಂದಣ ಏಳು ವರ್ಷದ ದಾಖಲೆಯೆಲ್ಲ ಮಾಯವಾಗಿದೆ. ಪ್ರ.ಶ.ಪೂ. 414 ಹಕ್ಕಿಗಳು ಎರಡನೆಯ ಸ್ಥಾನ; ಆರ್ನಿತೆಸ್ ಪ್ರ.ಶ.ಪೂ.

411 ಲೂಸಿಸ್ಟ್ರಾಟಿ ಲುಸಿಟ್ರಾಟಿ ಪ್ರ.ಶ. ಪೂ. 411 ಥೆಸ್ಮೊಫರಿಯ ವ್ರತದ ಹೆಣ್ಣುಗಳು ತೆಸ್ಮೊಫ್ರಿಯಝುಸಿಯ ಪ್ರ.ಶ.ಪೂ. 408 ಐಶ್ವರ್ಯ ಪ್ಲೌಟಸ್ ಪ್ರಥಮ ಪ್ರತಿ ಪ್ರ.ಶ.ಪೂ. 405 ಕಪ್ಪೆಗಳು ಬಟ್ರಕೊಯ್ ಪ್ರ.ಶ.ಪೂ. 392 ಮಂತ್ರಾಲೋಚನೆಯ ಮಹಿಳೆಯರು ಈಟಿಸಿಯ ಜೌಸೈ ಪ್ರ.ಶ.ಪೂ. 388 ಐಶ್ವರ್ಯ ಪ್ಲೌಟಸ್ (ದ್ವಿತೀಯ ಪ್ರತಿ)

ಅನಂತರ ಎರಡು ನಾಟಕಗಳನ್ನು ಮಗ ಅರೇರಸ್‍ಗಾಗಿ ರಚಿಸಿದ ಆದರೆ ಈ ಎರಡೂ ನಾಟಕಗಳು ಉಪಲಬ್ಧವಿಲ್ಲ. ಅವುಗಳಲ್ಲಿ ಒಂದಾದ ಇಕೊಕಲಸ್ ಹೊಸಬಗೆಯ ವಿನೋದ ನಾಟಕಕ್ಕೆ ದಾರಿ ತೋರಿತು.

ತನ್ನ ಪ್ರಥಮ ರೂಪಕವಾದ ಔತಣಪ್ರಿಯರು ತನಗಿಂತ ವಯಸ್ಸಿನಲ್ಲಿ ದೊಡ್ಡವನಾದ ನಟ ಕ್ಯಾಲಿಸ್ಟ್ರಾಟಸ್‍ನ ಅಂಕಿತದಲ್ಲಿ ಪ್ರದರ್ಶಿಸಿದ. ಹಾಗೇ ಬ್ಯಾಬಿಲೋನಿಯನ್ನರು, ಅಕಾರ್ನ್ನಿಯನ್ನರು, ಹಕ್ಕಿಗಳು, ಲೂಸಿಸ್ಟ್ರಾಟಿಗಳಿಗೂ ಆ ನಟನೇ ಬಹಿರಂಗದ ಆಶ್ರಯ. ಮುಂದೆ, ಖಣಜಗಳು, ಕಪ್ಪೆಗಳು ಎಂಬ ಕೃತಿಗಳಿಗೂ ಇನ್ನೊಬ್ಬ ನಟ ಫಿಲಾನಿಡೀಸ್‍ಸಟೆ ಜನಕನಾದ. ನಾಟಕಗಳ ಕರ್ತೃ ಅರಿಸ್ಟೋಫೆನೀಸ್ ಎಂಬ ನಿಜಾಂಶ ಎಲ್ಲರಿಗೂ ಚೆನ್ನಾಗಿ ತಿಳಿದಿದ್ದಿತು. ಹಾಗಾದರೆ ಕೃತ್ರಿಮವೇತವಾಕ್ಕೆಂದು ಕರಾರುಕ್ಕಾಗಿ ಹೇಳಲಾಗುವುದಿಲ್ಲ. ಬಹುಶಃ ಕವಿ ಇನ್ನೂ ವಯೋಧರ್ಮದಿಂದ ಕಿರಿಯನಾಗಿದ್ದುದು ಒಂದು ಕಾರಣ. ನಾಟ್ಯ ಮೇಳಕ್ಕೆ ಶಿಕ್ಷಣಕೊಟ್ಟು ಸಮರ್ಪಕವಾಗಿ ತರಬೇತುಮಾಡುವ ಜವಾಬ್ದಾರಿಗೆ ಅವಶ್ಯಕವಾದ ಜ್ಞಾನವೂ ಅನುಭವವೂ ಅವನಲ್ಲಿ ಇರಲಿಲ್ಲವೆನ್ನಬಹುದು. ಆದರೆ ಅವನ ಉದ್ಭಕೃತಿಯಾದ ಹಕ್ಕಿಗಳು ಬೆಳಕು ಕಾಣುವ ಹೊತ್ತಿಗೆ ಅವನಿಗೆ ವಯಸ್ಸು 37; 13 ವರ್ಷಕ್ಕೂ ಮೇಲ್ಪಟ್ಟು ನಾಟಕ ಶಾಲೆಯ ನಿಕಟ ಸಂಪರ್ಕ ಏರ್ಪಟ್ಟಿತ್ತು. ಕಪ್ಪೆಗಳು ನಾಟಕ ರಚನೆಯ ಹೊತ್ತಿಗೆ ಅವನ ವಯಸ್ಸು 42. ನಾಟಕಶಾಲೆಯ ಸಂಬಂಧ ಪೂರ್ತಿ 22 ವರ್ಷ. ಯಥಾರ್ಥವಾಗಿ ಹೀಗಿದ್ದರೂ ತನ್ನ ನಾಮಧೇಯವನ್ನು ಮರೆಮಾಚಿದ್ದೇಕೆಂದು ತಿಳಿಯದು. ಅವನ ವಿನೋದನಾಟಕವೆಲ್ಲ ಕುಚೋದ್ಯಕ್ಕೆ ಮೀಸಲು. ಲೇಖಕರೆಂಬ ಅಂಶವನ್ನೂ ಹುಡುಗಾಟಕ್ಕೆ ಈಡುಮಾಡುವ ಬಯಕೆ ಪ್ರಾಯಶಃ ಅವನಲ್ಲಿ ಮೂಡಿರಬಹುದೆನಿಸುತ್ತದೆ.

ಪುರಾತನ ವಿನೋದಕಾರರಲ್ಲಿ ಹಳೆಯ ಬಗೆಗೆ (ಓಲ್ಡ್ ಕಾಮಿಡಿ) ಸೇರಿದವರೆಲ್ಲ ಸಾಮಾನ್ಯವಾಗಿ ಹಿಂದಿನದನ್ನು ಹೊಗಳುವವರು, ಇಂದಿನದನ್ನು ತೆಗಳುವವರು. ಅವರಲ್ಲಿ ಅತ್ಯಂತ ಮೇಧಾವಿಯೂ ಪ್ರಚಂಡಪ್ರತಿಭಾವಂತನೂ ಆದ ಅರಿಸ್ಟೋಫೆನೀಸ್‍ಗಂತೂ ಅಥೆನ್ಸಿನ ಸುವರ್ಣಸಮಯವೆಂದು ಪ್ರಕಾಶಮಾನವಾಗಿದ್ದ ಮ್ಯಾರಥಾನ್ ದಿವಸಗಳು ಬಾಯಲ್ಲಿ ನೀರೂರಿಸುತ್ತಿದ್ದುವು. ಆ ತಲೆಮಾರಿನ ಗ್ರೀಕ್ ಜನತೆಯಲ್ಲಿ ರೂಢಮೂಲವಾಗಿದ್ದ ದೈವಭಕ್ತಿ, ದೇಶಭಕ್ತಿ, ಪೂರ್ವಾಚಾರಪ್ರಿಯತೆ, ಹಿರಿಯರಲ್ಲಿ ಕಿರಿಯರಿಗಿದ್ದ ಹೆಗ್ಗೌರವ, ನಿಷ್ಕಾಪಟ್ಯ, ಸೌಶೀಲ್ಯ, ಸರಳತೆ, ಕುಟುಂಬ ಗೃಹಸ್ವಾಮಿಯ ಹಿಡಿತದಲ್ಲಿರುವಿಕೆ, ಧೈರ್ಯ, ಧಾರಾಳ, ಪರಾಕ್ರಮ, ಆಶಾವಾದ–ಎಲ್ಲವೂ ಅವನಿಗೆ ಅಚ್ಚುಮೆಚ್ಚು. ಅಂಥ ಉದಾತ್ತ ಆದರ್ಶದಿಂದ ಎಷ್ಟೋ ಕೀಳುಮಟ್ಟದಲ್ಲಿ ಸಡಿಲವಾಗಿ ನಡೆಯುತ್ತಿದ್ದ ತನ್ನ ಸಮಕಾಲೀನ ಸನ್ನಿವೇಶಗಳನ್ನು ಪರೀಕ್ಷಿಸಿ ಆತ ರೋಷಭರಿತನಾಗುತ್ತಿದ್ದ. ಮಂದಿಯ ವೈಯಕ್ತಿಕ ರೀತಿನೀತಿಗೆ ಹದ್ದುಂಟೆ? ಹಾಳತವುಂಟೆ? ನಾನಾ ವಿಧದ ಸ್ವೇಚ್ಛಾಚಾರ ತಾನೇ ತಾನು. ಸಾಮಾಜಿಕ ಬದುಕಿನಲ್ಲಿ ಬರೀ ನಟನೆ, ಮೋಸ, ಸ್ವಾರ್ಥಪರತೆ, ರಾಜಕೀಯದಲ್ಲಿ ಅಪ್ರಾಮಾಣಿಕತೆ, ವಾಗಾಡಂಬರ, ವಂಚನೆ, ದ್ರೋಹ. ವಿದ್ಯಾಭ್ಯಾಸದಲ್ಲಿ ನವೀನಸಿದ್ಧಾಂತಗಳ ಪ್ರಚಾರ, ಮೇಲುಮೇಲಣ ಬುರುಗು, ಕುತರ್ಕ, ಸಂಗೀತ, ಕಾವ್ಯರೂಪಗಳಲ್ಲಿ ವಿಕಾರವಾದ ಮಾರ್ಪಾಟುಗಳು. ಇಂಥ ಆತಂಕಕಾರಿ ವ್ಯವಹಾರಗಳಿಂದ ರೋಸಿಹೋಗಿ, ಅವನ್ನು ಕವಿ ತನ್ನ ಭಯಂಕರ ಅಣಕಕ್ಕೂ ಲೇವಡಿಗೂ ತಿರುತಿರುಗಿ ಈಡುಮಾಡಿ ನೊಂದ ತನ್ನ ಹೃದಯಕ್ಕೆ ಕೊಂಚ ಸಮಾಧಾನವನ್ನು ತಂದುಕೊಂಡ. ಸೋಲನ್, ಪೀಸಿಸ್ಟ್ರಾಟಸ್‍ರ ಜಾಗದಲ್ಲಿ ಕ್ಲಿಯಾನ್, ಲುಮಾಕಸ್ಸರೆ? ಈಸ್ಕಿಲಸ್ಸನ ಗದ್ದುಗೆಯ ಮೇಲೆ ಯೂರಿಪಿಡೀಸ್? ಅಂತರ್ಯದಲ್ಲಿ ಜ್ಯೋತಿಯನ್ನು ಹೊತ್ತುತ್ತಿದ್ದ ಜ್ಞಾನಿಗಳ ಬದಲು ಶುಲ್ಕ ಪಡೆದು ಪಾಠಕಲಿಸುವ ಸೋಫಿಸ್ಟ್ ಉಪಾಧ್ಯಾಯರೆ? ಇದೇ ಅವನ ತೀವ್ರ ತಾಪ. ಬಾಳಿನ ಸಕಲ ಮುಖ್ಯ ಶಾಖೆಗಳನ್ನೂ ತನ್ನ ದೃಷ್ಟಿಗೆ ತೆಗೆದುಕೊಂಡು ವಿಮರ್ಶನಗೈದ ಕವಿಗೆ ಯಾವುದನ್ನೇ ಆಗಲಿ ಯಾರನ್ನೇ ಆಗಲಿ ಅವಲೋಕಿಸುವಾಗ ಹುಚ್ಚು ನಗು ಎಬ್ಬಿಸುವ ತೀಕ್ಷ್ಣ ಹಾಸ್ಯವೇ ಸಾಧನ. ಗಂಭೀರನಾಟಕ ಎಲ್ಲೂ ಹಗುರವಾಗಬಾರದು. ವಿನೋದ ನಾಟಕದೊಳಕ್ಕೆ ಗಾಂಭೀರ್ಯ ನುಗ್ಗಬಾರದು. ಇದೊಂದು ಕಟ್ಟಾಜ್ಞೆಯಂತಿತ್ತು. ಆ ಸಮಯದಲ್ಲಿ ಪರಿಣಾಮವಾಗಿ ಸಾಮಾಜಿಕರು ಅರಿಸ್ಟೋಫೆನೀಸ್‍ನ ಪರಿಹಾಸ, ಹದಿರುನುಡಿ, ಗೇಲಿಗಳಿಂದ ಉಲ್ಲಾಸ ಹೊಂದುತ್ತಿದ್ದರೇ ವಿನಾ ಅವನ ಹಾಸ್ಯ ವ್ಯಂಗ್ಯಗಳ ಒಳಗಡೆ ಮಂಡಿಸಿದ್ದ ಉತ್ತಮ ತತ್ತ್ವಗಳ ಕಡೆಗೆ ತಮ್ಮ ಲಕ್ಷ್ಯವನ್ನು ಹರಿಯಗೊಡುತ್ತಿರಲಿಲ್ಲ. ಬರುಬರುತ್ತ ತನ್ನ ಅಪಹಾಸ್ಯದಿಂದ ಏನೊಂದು ಸತ್ಪರಿಣಾಮವೂ ಆಗಲಿಲ್ಲವೆಂಬ ಸತ್ಯಾಂಶ ಕಂಡು, ಮನಗಂಡು, ಕವಿ ಬೇಸರಪಟ್ಟ. ಹತಾಶೆ ಅವನನ್ನು ಆವರಿಸಿತು. ಆದರೂ ಕವಿತಾಶಕ್ತಿ ತೆಪ್ಪಗೆ ಕುಳ್ಳಿರುತ್ತದೆಯೆ ಬರಿ ಅಭೀಷ್ಟ, ಕೇವಲ ಕನಸು ಕೂಡ ನಾಚದ ಅದ್ಭುತಗಳ ಮೇಲೆ ಕೆಲವು ವಿನೋದ ನಾಟಕಗಳನ್ನು ರಚಿಸಿದ.

ಇಷ್ಟೇ ಆಗಿದ್ದಿದ್ದರೆ ಅವನು ಪ್ರಪಂಚದ ಸಾಹಿತಿಗಳಲ್ಲಿ ಒಬ್ಬ ಎನ್ನಿಸಿಕೊಳ್ಳುತ್ತಿರಲಿಲ್ಲ. ಆ ಧವಳಕೀರ್ತಿಯನ್ನು ಅವನಿಗೆ ತಂದುಕೊಟ್ಟಿರುವುದು ಅವನ ಅದ್ವಿತೀಯ ಕಾವ್ಯಶಕ್ತಿ. ಯೂರಿಪಿಡೀಸನ ನಾಟಕಕ್ರಮವನ್ನೂ ಪಾತ್ರಚಿತ್ರಣವನ್ನೂ ಆತ ಎಷ್ಟೇ ಕಟುವಾಗಿ ದೂಷಿಸಿದರೂ ಆ ಕವೀಶ್ವರನ ಮಧುವಾಣಿಗೆ ಮನಸೋತಿದ್ದ. ಯೂರಿಪಿಡೀಸನನ್ನು ಪೂರ್ತಿ ಕಂಠಪಾಟಮಾಡಿದ್ದ. ಅಯತ್ನಿತವಾಗಿ ತನ್ನ ವಿನೋದನಾಟಕದಲ್ಲೂ ಅವನಂತೆಯೇ ಇಂಪಾದ ಗೀತೆಗಳನ್ನು ತಂದು ಜೋಡಿಸಿ ಶ್ರೋತೃಗಳನ್ನು ಮುಗ್ಧಗೊಳಿಸಿದ. ಶೈಲಿಯಲ್ಲಿ ಅವರಿಬ್ಬರಿಗೂ ಸಾದೃಶ್ಯ ಎಷ್ಟರಮಟ್ಟಿಗೆ ಕಂಡುಬಂದಿತೆಂದರೆ, ಅದನ್ನು ಬಣ್ಣಿಸುವುದಕ್ಕೆ ಕ್ರ್ಯಾಟಿನಸ್ ಯೂರಿಪಿಡರಿಸ್ಟೋಫೇನೀಸ್ ಎಂಬ ಹೊಸಪದವನ್ನು ನಿರ್ಮಿಸಿದ. ಅದಿರಲಿ, ಅರಿಸ್ಟೋಫೆನೀಸ್ ಹೀಗೆ ಜೀವನವಿಮರ್ಶೆಯನ್ನೂ ಘನವೂ ಸೂಕ್ಷ್ಮವೂ ಆದ ಅಭಿಪ್ರಾಯಪುಂಜವನ್ನೂ ಒದಗಿಸುತ್ತಾನೆ. ಹಾಸ್ಯಪ್ರಮುಖವಾದ ವಿಡಂಬನವನ್ನು ಎಂದೂ ಎಲ್ಲೂ ಕೈಬಿಡುವುದಿಲ್ಲ. ಜೊತೆಗೆ ಜಾಣ ವಿಭಾವನೆಯಿಂದಲೂ ತೀವ್ರರಾಗದಿಂದಲೂ ಕೂಡಿದ ಸುಶ್ರಾವ್ಯ ಭಾವಗೀತೆಗಳನ್ನೂ ಮಳೆಗರೆಯುತ್ತಾನೆ. ಇಂಥ ಸತ್ಕಾರಯೋಗ್ಯವಾದ ಸಂಮಿಶ್ರತೆಯ ವೈಚಿತ್ರ್ಯ ಮತ್ತಾವ ಕವಿವರ್ಯನಲ್ಲೂ ಗೋಚರಿಸುವುದಿಲ್ಲ.

ನಾಟಕವಸ್ತುವಿನ ಸಂವಿಧಾನದಲ್ಲೂ ಆತನ ಮಾದರಿಗೆ ಪ್ರತ್ಯೇಕ ವೈಲಕ್ಷಣ್ಯವಿದೆ. ನಾಲ್ಕಾರು ಘಟನಾವಳಿಗಳಿಂದಾದ ಸಮಕಟ್ಟಿನ ಆಖ್ಯಾನ ಅವನಂಗಡಿಯ ಮಾಲಲ್ಲ. ನಿಜ ನುಡಿಯಬೇಕಾದರೆ, ಅವನ ಉದ್ದೇಶ ಕಥೆ ಹೇಳುವುದಲ್ಲ. ಸಿಡಿಲಿನಂತೆ ಸಿಡಿದು ಕ್ಷೋಭೆ ಉಂಟು ಮಾಡುವ ಯಾವುದೋ ವಿನೂತನ ಮನೋಗತ ಅಥವಾ ಮಹಾಸಂಕಲ್ಪವೇ ನಾಟಕದ ತಿರುಳು, ಸರ್ವಸ್ವ. ಅದನ್ನು ಹಲವು ಪುಟ್ಟ ದೃಶ್ಯಗಳ ಸಹಾಯದಿಂದಲೂ ಮೇಳಗೀತಗಳ ಮೂಲಕವೂ ಪ್ರತಿಪಾದಿಸುವುದೇ ಕವಿಯ ಕೆಲಸ. ನಾಟಕದಲ್ಲಿ ಮೂರು ಅಂಗಗಳನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ನಾಯಕ ಪಾತ್ರ ಆಗಮಿಸಿ ತನ್ನಲ್ಲಿ ಉದಯವಾಗಿರುವ ವಿಸ್ಮಯಕಾರಕವಾದರೂ ಉಪಯುಕ್ತವಾದ ಹೆಬ್ಬಯಕೆಯನ್ನು ವಚನಿಸುತ್ತದೆ, ಅದನ್ನು ಕಾರ್ಯಾಚರಣೆಗೆ ತರುವ ಕರ್ತವ್ಯವನ್ನು ಕೂಡಲೇ ಕೈಗೊಂಡು ಕಠೋರ ಅಡಚಣೆಗಳು ಅಡ್ಡಬಂದರೂ ಉಪಾಯದಿಂದ ಅವನ್ನು ಅತಿಕ್ರಮಿಸಿ, ಹಿಡಿದ ಪ್ರಯತ್ನವನ್ನು ನೆಲೆಗೆ ಮುಟ್ಟಿಸಿ, ಕೃತಕೃತ್ಯವಾಗುತ್ತದೆ. ಅನಂತರ, ಮಧ್ಯದ ಭಾಗವಾಗಿ, ನಾಟ್ಯಮೇಳ ಸಾಮಾಜಿಕ ಸಂದೋಹದ ಎದುರಿಗೆ ನಿಂತು, ಕವಿಯ ಪರವಾಗಿ ಹಾಡು ಹಾಡಿ, ಭಾಷಣ ಮಾಡಿ, ಹುರಿದುಂಬಿಸುತ್ತದೆ. ಇದೇ ಮುಂಭಾಗಕ್ಕೆ ಅಡಿಯಿಡುವಿಕೆ (ಪ್ಯಾರಬಸಿಸ್) ಎಂಬ ಕುತೂಹಲಜನಕವಾದ ಸಂಗತಿ. ಮೂರನೆಯ ಭಾಗದಲ್ಲಿ ನಾಯಕನ ಯೋಜನೆಯಿಂದ ಉಂಟಾಗಿರುವ ಸತ್ಫಲಗಳನ್ನು ಕೆಲವು ಬಿಡಿ ದೃಶ್ಯಗಳು ತೋರಿಕೊಡುತ್ತವೆ. ನಾಯಕನ ಹಿರಿಮೆಯನ್ನು ಸ್ಪಷ್ಟಗೊಳಿಸಿ, ಆತನನ್ನು ಒಂದು ವಿಧದ ದೇವತ್ವಕ್ಕೆ ಏರಿಸಿ ಮುಕ್ತಾಯವಾಗುತ್ತದೆ, ಸಡಗರದ ನಾಟಕ. ಅಸಾಧಾರಣವಾದ ವಿಚಿತ್ರಾಭಿಪ್ರಾಯವೇ ನಾಟಕದ ರಸಯುಕ್ತ ಕೊಡುಗೆ. ಲೋಕಾಚಾರಕ್ಕೆ ವಿಪರ್ಯಾಸವಾದರೂ ಅದು ತಿರಸ್ಕಾರಯೋಗ್ಯವಾದ ತಿರುಗು ಮುರುಗಲ್ಲ, ತಲೆಕೆಳಗಲ್ಲ. ಚಿಂತನೆಯನ್ನು ಕೆರಳಿಸುವ ಪ್ರಚೋದನೆ ಅದು. ಆತನ ಪ್ರತಿಯೊಂದು ನಾಟಕವೂ ಕಾರ್ಯಗತವಾದ ಒಂದೊಂದು ತಮಾಷೆ. ನಗು ಬರಿಸುವ ವಾಕ್ಯವೂ ಕೈ ಮೈ ಒಲೆದಾಟವೂ ಹಾಗಿರಲಿ, ಇಡೀ ವಿರಚನೆಯೇ ಒಂದು ಕುಚೋದ್ಯ.

ವಿನೋದನಾಟಕವನ್ನು ತಾನೇ ತಿದ್ದಿ ಸಿಂಗರಿಸಿ ಕೊಳೆ ಮಾಲಿನ್ಯವೆಲ್ಲವನ್ನೂ ತೊಡೆದು ಹಾಕಿ ಅಂದಗೊಳಿಸಿದಾತನೆಂದು ಹೆಮ್ಮೆಯಿಂದ ಹೇಳಿಕೊಂಡ, ಅರಿಸ್ಟೋಫೆನೀಸ್. ತನ್ನ ಕೈಗೆ ಅದು ಬಂದಾಗ ಒರಟು, ಒಡ್ಡು, ಪೋಕರಿತನಗಳಿಂದ ಅದರ ರೂಪ ಕುರೂಪವಾಗಿ ತ್ತಂತೆ, ಗ್ರಾಮ್ಯತೆ, ಅಶ್ಲೀಲ, ಅವಲಕ್ಷಣಗಳನ್ನು ತೆಗೆದುಹಾಕಿ, ಸುಸಂಸ್ಕೃತ ನಡೆನುಡಿ ಹಾವ ಭಾವ ಒಯ್ಯಾರಗಳನ್ನು ಹೊಂದಿಸಿಕೊಟ್ಟು, ನಾಗರಿಕ ಸಮಾಜಕ್ಕೆ ಅದು ಸಮಂಜಸವಾಗುವಂತೆ ಏರ್ಪಡಿಸಿದನಂತೆ. ಒಣ ಜಂಭವಲ್ಲ ಈ ಮಾತು. ಅರಿಸ್ಟೋಫೆನೀಸ್ ವಿನೋದನಾಟಕಕ್ಕೆ ಶಿಸ್ತನ್ನು ತಂದುಕೊಟ್ಟ; ಆದರೆ ಅಶ್ಲೀಲತೆ ಅತಿರೇಕಗಳು ಅವನಲ್ಲೂ ಅಲ್ಪ ಸ್ವಲ್ಪ ಉಂಟು.

ಅಕಾರ್ನ್ನಿಯನ್ನರು ಎಂಬ ನಾಟಕದ ಮುಖ್ಯ ಪಾತ್ರ ಡಿಕಿಯೊಪೊಲಿಸ್ (ಪ್ರಾಮಾಣಿಕತೆ, ರಾಜ್ಯನೀತಿ) ಗ್ರಾಮಾಂತರದವನಾದರೂ ವಿವೇಕಶಾಲಿ. ಅಥೆನ್ಸ್ ಎಚ್ಚರಗೇಡಿತನದಿಂದ ಸ್ಪಾರ್ಟದೊಂದಿಗೆ ಯುದ್ಧ ಹೂಡಿರುವುದರಿಂದ ಆತ ತನ್ನ ಮನೆ ಜಮೀನನ್ನು ಬಿಟ್ಟುಕೊಟ್ಟು ನಗರಕ್ಕೆ ಬಂದು ನಿಲ್ಲಬೇಕಾಯಿತು. ಸೌಕರ್ಯವಿಲ್ಲ, ವಿಶ್ರಾಂತಿಯಿಲ್ಲ. ಹೊತ್ತನ್ನು ಮರೆಸುವ ವ್ಯವಸಾಯವಿಲ್ಲ. ನರಳುತ್ತಿದ್ದಾನೆ, ಅರ್ಧದೇವತೆ ಆಂಫಿತಿಯಸ್‍ನನ್ನು ದೇವವರ್ಗ ಮಧ್ಯಸ್ಥಿಕೆಗೋಸ್ಕರ ನೇಮಿಸಿ ಕಳಿಸಿದ್ದಾರೆ; ಆದರೆ ಅವನ ಬಳಿ ಸ್ಪಾರ್ಟಕ್ಕೆ ಹೋಗಿಬರುವ ಖರ್ಚಿಗೆ ದುಡ್ಡಿಲ್ಲ. ರಾಷ್ಟ್ರಸಭೆಯನ್ನು ಹೊಕ್ಕು ಪ್ರಯಾಣದ ವೆಚ್ಚವನ್ನು ಬೇಡುತ್ತಾನೆ; ಆಡಳಿತಗಾರರಿಂದ ಅವನಿಗೆ ಕೋಲುಸೇವೆಯಾಗುತ್ತದೆ. ಪರ್ಷಿಯಕ್ಕೆ ಹೋಗಿದ್ದ ರಾಯಭಾರಿಗಳು ಆ ಆಸ್ಥಾನದ ಸಚಿವ ಶ್ರೀಮಂತ ರಾಜನೇತ್ರನೊಂದಿಗೆ ಹಿಂತಿರುಗಿ, ಅಲ್ಲಿಂದ ಹೇರಳ ಹೊನ್ನು ಬರುವ ಭರವಸೆ ಇದೆ ಎನ್ನುತ್ತಾರೆ. ಅದೆಲ್ಲ ಮೋಸದ

ಕುತಂತ್ರವೆಂಬುದನ್ನು ಡಿಕಿಯೊಪೊಲಿಸ್ ಬಲ್ಲ, ಆದರೆ ಅವನೊಬ್ಬನೇ ಕದನವಿರೋಧಿ, ಏನನ್ನು ತಾನೇ ಮಾಡಬಲ್ಲ? ಬಲಿದ ದುಗುಡದ ಮಧ್ಯೆ ಅವನಿಗೊಂದು ಯೋಜನೆ ಹೊಳೆಯುತ್ತದೆ. ಅಂಪಿತಿಯಸ್‌ನನ್ನು ಗುಟ್ಟಾಗಿ ಕರೆದು, ಎಂಟು ಹಣವನ್ನು ಅವನಿಗಿತ್ತು, ತನ್ನೊಂದು ಸಂಸಾರಕ್ಕೆ ಮಾತ್ರ ಅನ್ವಯಿಸುವ ಪ್ರತ್ಯೇಕ ಶಾಂತಿಕೌಲಿಗೆ ಸ್ಪಾರ್ಟವನ್ನು ಒಪ್ಪಿಸೆಂದು ನಿರೂಪವಿತ್ತು ಬೀಳ್ಕೊಡುತ್ತಾನೆ. ಥ್ರೇಸಿನಿಂದ ಕಾಡುಜನರ ರೌದ್ರಸೈನ್ಯವೊಂದು ಅಥೆನ್ಸಿನ ಸಹಾಯಕ್ಕೆ ಬರುತ್ತದೆ; ಅವರು ಸಿಕ್ಕಿದ್ದೆಲ್ಲವನ್ನೂ ಅಧಿಕಾರಿಗಳ ಕಣ್ಣೆದುರೇ ದೋಚಿಕೊಳ್ಳುತ್ತಾರೆ. ಪಾಪ, ಡಿಕೊಯೊಪೊಲಿಸನ ತಿಂಡಿತೀರ್ಥವೂ ಅವರ ಪಾಲು. ಇಮ್ಮಡಿಯಾಗುತ್ತದೆ ಅವನ ವ್ಯಸನ. ಆ ಸಮಯಕ್ಕೆ ಶುಭವಾರ್ತೆಯೊಡನೆ ಅಲ್ಲಿಗೆ ಬರುತ್ತಾನೆ, ಆಂಪಿತಿಯಸ್, ಸ್ಪಾರ್ಟದವರು ಮೂರು ಬಗೆಯ ಮದ್ಯವನ್ನು ಶಾಂತಿ ಕರಾರಾಗಿ ಕಳಿಸಿದ್ದಾರೆ. 5 ವರ್ಷದ್ದು, 10ವರ್ಷದ್ದು, 30 ವರ್ಷದ್ದು. ಡಿಕಿಯೋಪೊಲಿಸಿನಿಗೆ ಕಡೆಯದೇ ಬಲುರುಚಿ. ಆದರೂ ಅವನ ಕಷ್ಟಗಳು ಕೊನೆಗೊಂಡಿಲ್ಲ. ದೇಶದ್ರೋಹಿಯೆಂದು ಅವರನ್ನು ಸಂಬೋಧಿಸುತ್ತ ಉಗ್ರರಾದ ಜನ ದಂಡ ವಿಧಿಸುವುದಕ್ಕೆ ಹಾತೊರೆಯುತ್ತಿದ್ದಾರೆ. ಡಿಕಿಯೊಪೊಲಿಸ್ ಯೂರಿಪಿಡೀಸನಲ್ಲಿಗೆ ಓಡಿಹೋಗಿ ಅವನಿಂದ ಟ್ರ್ಯಾಜಿಕ್ ನಟನ ಚಿಂದಿ ಬಟ್ಟೆ ಮಣ್ಣು ಪಾತ್ರೆ ದೊಣ್ಣೆಗಳನ್ನು ಎರವು ಪಡೆದು, ಸಭೆಗೆ ಹಿಂದಿರುಗಿ, ಭಾಷಣ ಮಾಡುತ್ತಾನೆ. ಎದುರಾಳಿ ಯುದ್ಧಾಪೇಕ್ಷಿ ಲಮಾಕಸ್‌ನನ್ನು ಸೋಲಿಸುತ್ತಾನೆ, ವಾಕ್ಸಮರದಲ್ಲಿ. ಅನಂತರ ಪ್ಯಾರಬಸಿಸ್. ಮೂರನೆಯ ಭಾಗದಲ್ಲಿ ಡಿಕಿಯೊಪೊಲಿಸ್‌ನೊಡನೆ ಕೊಟ್ಟು ತೆಗೆದುಕೊಳ್ಳುವುದಕ್ಕೆ ತಮ್ಮ ತಮ್ಮ ಸರಕಿನೊಂದಿಗೆ ಮೆಗಾರದಿಂದ ಥೀಬ್ಸಿನಿಂದ ಜನ ಧಾವಿಸುತ್ತಾರೆ. ಅಲ್ಲಿಗೆ ಬಂದ ಕೆಲವು ಅಥೆನ್ಸಿನವರಿಗೆ ಅದೃಷ್ಟಶಾಲಿಯನ್ನು ಕಂಡು ಮೆಚ್ಚಿಕೆ, ಅಸೂಯೆ. ಲಮಾಕಸ್ಸನಾದರೊ ಸಂಗರತೃಷ್ಣೆಯನ್ನು ಬಿಡುವುದಿಲ್ಲ. ಪೆಟ್ಟುತಿಂದು ಗಾಯಗಳ ನೋವಿನಿಂದ ಬಸವಳಿದು ಹಿಂತಿರುಗಿ ಗೋಳಾಡುತ್ತಾನೆ, ಹಠಮಾರಿ. ಡಿಕಿಯೋಪೊಲಿಸನಿಗೆ ಕುಗ್ಗದ ಸಮ್ಮೋದ.

ರಕ್ತವೀರರು ವಿಲಕ್ಷಣಪ್ರತಾಪದಿಂದ ಕ್ರಾಂತಿಪೂರ್ಣವಾಗಿರುವ ರೂಪಕ. ಕೇಂದ್ರ ವ್ಯಕ್ತಿ ಡೀಮಸ್–ಆಸತಿವಂತ, ಮುಂಗೋಪಿ, ಸಂಶಯ ಸ್ವಭಾವದವ. ಮನೆ ಮಂದಿ ಆಳುಕಾಳು ಯಾರನ್ನೂ ಆತ ನಂಬುವುದಿಲ್ಲ; ಆದರೆ ಪ್ಯಾಫ್ಲಗೋನಿಯದ ಒಬ್ಬನನ್ನು ಗುಲಾಮನಾಗಿ ಕೊಂಡಂದಿನಿಂದ ಅವನಿಗೆ ತಾನೇ ಅಡಿಯಾಳಾಗಿದ್ದಾನೆ. ಗುಲಾಮ ಯಜಮಾನನನ್ನು ತನ್ನ ಕೈಗೊಂಬೆಯಂತೆ ಆಡಿಸುತ್ತಿದ್ದಾನೆ. ಆ ಠಕ್ಕನಿಂದ ಇತರ ಸೇವಕರೆಲ್ಲರಿಗೂ ಚಿತ್ರಹಿಂಸೆ. ತಡೆದು ತಡೆದು ಸಾಕಾಗಿ ಇಬ್ಬರೂ ಮಸಲತ್ತು ನಡೆಸುತ್ತಾರೆ. ಬಹಳ ಹಿಂದೆ ಬಾಕಿಸ್ ದೇವತೆ ಕಣಿ ಹೇಳುತ್ತದೆಂದು ಡೀಮಸ್‌ಗೆ ಬಿನ್ನವಿಸುತ್ತಾರೆ. ಅದೇನೆಂದರೆ, ಡೀಮಸ್ ಕ್ರಮವಾಗಿ ನಾಲ್ಕು ಚಿಲ್ಲರೆ ವ್ಯಾಪಾರಿಗಳ ಉಸ್ತುವಾರಿಗೆ ಒಳಗಾಗತಕ್ಕದ್ದು; ಅಗಸೆಹಗ್ಗದವ, ಕುರಿಮಂದೆಯವ, ಚಕ್ಕಳದವ, ಕರಿಗಡುಬನ್ನು ಮಾರುವವ, ಪ್ಯಾಫ್ಲಗೋನಿಯದ ಮನುಷ್ಯನೇ ಚಕ್ಕಳದ ವರ್ತಕ; ಅವನ ಅಧಿಕಾರ ಇನ್ನೇನು ಮುಗಿಯುತ್ತದೆ ಆತ ಬಂದು ಗುಡುಗಾಡಿದರೂ ಅಂಜದೆ, ಅವರಿಬ್ಬರೂ ಹುಡುಕಾಡಿ ನಾಲ್ಕನೆಯ ಬೀದಿ ವ್ಯಾಪಾರಿಯನ್ನು ಕಂಡುಹಿಡಿದು, ಅವನ ಭವಿಷ್ಯ ದೊಡ್ಡದೆಂದು ಪುಸಲಾಯಿಸಿ, ತಮ್ಮ ವೈರಿಯೆದುರು ಹೋರಾಟಕ್ಕೆ ಅವನನ್ನು ಕೆರಳಿಸುತ್ತಾರೆ. ಸುಳ್ಳು, ಕಳವು, ಭಾಷಾಭಂಗ, ಧೃಷ್ಟತನ, ಬಡಾಯಿ ಎಲ್ಲದರಲ್ಲೂ ಅವನ ಕೈಯೇ ಮೇಲಾಗಿ, ಪ್ಯಾಫ್ಲಗೋನಿಯದವನ ವಂಚನೆಯೂ ಟೊಳ್ಳೂ ಬಯಲಾಗುತ್ತವೆ. ಅಪಜಯವನ್ನು ಒಪ್ಪಿಕೊಂಡು ಆತ ಹಿಂದಕ್ಕೆ ಸರಿಯುತ್ತಾನೆ. ಅವನಿಗೆ ಇನ್ನು ಮುಂದೆ ಕೋರಿಸೆಟ್ಟಿಯಾಗುವುದೊಂದೇ ಉದರಭರಣಕ್ಕೆ ಇರುವ ಉಪಾಯ. ಹಿತಚಿಂತಕನ ಅಧಿಕಾರಮುದ್ರೆಯನ್ನು ಡೀಮಸ್ ಹೊಸಬನಿಗೆ ಕೊಡುತ್ತಾನೆ. ಹಾಗೆ ಮಾಡಿದ ತಕ್ಷಣವೇ ಡೀಮಸ್‌ಗೆ ತಾರುಣ್ಯ, ಲವಲವಿಕೆ, ಗೆಲವು, ಆಸಕ್ತಿಗಳು ಕೂಡಿಬರುತ್ತವೆ. ಕಳೆಯೇರುತ್ತದೆ, ಅವನ ಮುಖ. ಕಣ್ಮರೆಯಾಗಿದ್ದ ಶಾಂತಿ ಸುಭಿಕ್ಷದ ಕಾಲ ಪುನಃ ಪ್ರಾಪ್ತಿಸಿದಂತೆ ಅವನಿಗೆ ಸಂತೋಷವಾಗುತ್ತದೆ.

ಕವಿಯ ಇಂಗಿತವನ್ನು ಸರ್ವರೂ ಸುಲಭವಾಗಿ ಗ್ರಹಿಸಬಹುದಾಗಿತ್ತು. ಅಥೆನ್ಸಿನ ಜನತೆಯೇ ಡೀಮಸ್. ವಿಧೇಯ ಸೇವಕರು ನೀಕಿಯಸ್, ಡಿಮೀಟ್ರಿಯಸ್ ಎಂಬ ದಂಡಾಧೀಶರು. ಪ್ಯಾಫ್ಲಗೋನಿಯದ ದಗಾಕೋರನೇ ದುಷ್ಟನೂ ದಬ್ಬಾಳಿಕೆಯವನೂ ಆದ ಮುಖಂಡ ಕ್ಲಿಯಾನ್. ಪ್ರ.ಶ.ಪೂ 426ರಲ್ಲಿ ಕ್ಲಿಯಾನ್ ಅನ್ನು ಹೆಸರಿಟ್ಟು ಅವಹೇಳನಗೈದು, ಅವನ ಸೇಡಿಗೆ ಪಕ್ಕಾಗಿ, ಸಂಕಟಪಟ್ಟಿದ್ದ, ಯುವಕ ಅರಿಸ್ಟೋಫೆನೀಸ್. ಆಕಸ್ಮಿಕ ವಿದ್ಯಮಾನಗಳಿಂದ ಕ್ಲಿಯಾನ್ ದರ್ಪ ಮೇಲಕ್ಕೇರಿತು. ವ್ಯಕ್ತಿಗಳನ್ನು ನಿರ್ದೇಶಿಸಿ ನಕಲಿ ಮಾಡಕೂಡದೆಂಬ ಕಾನೂನನ್ನು ಪ್ರಾಯಶಃ ಜಾರಿಗೆ ತಂದ. ಆದ್ದರಿಂದ 424ರಲ್ಲಿ ಅರಿಸ್ಟೋಫೆನೀಸ್ ಕಪಟೋಪಾಯವನ್ನು ಹಿಡಿಯಬೇಕಾಯಿತು. ರಕ್ಷಕ ವೀರರಲ್ಲಿ ಯಾರ ಹೆಸರನ್ನೂ ಕವಿ ಪ್ರತ್ಯಕ್ಷವಾಗಿ ಉಚ್ಚರಿಸಿಲ್ಲ. ಆದರೆ ಪ್ಯಾಫ್ಲಗೋನಿಯದ ಕೊಂಡಾಳೇ ಕ್ಲಿಯಾನ್ ಎಂಬುದು ಅರೆಬುದ್ಧಿಯ ನೋಟಕರಿಗೂ ತಕ್ಷಣ ಅರ್ಥವಾಗುತ್ತಿತ್ತು. ಪ್ಯಾಫ್ಲಸ್ ಎಂದರೆ ನೊರೆ. ಭಾಷಣ ಮಾಡುವಾಗ ಕ್ಲಿಯಾನ್‌ನ ತುಟಿಗಳಿಂದ ನೊರೆ ಉಕ್ಕುತ್ತಿತ್ತು. ಆ ಪಾತ್ರವನ್ನು ವಹಿಸಿಕೊಳ್ಳಲು ಯಾವ ನಟನೂ ಮುಂದಕ್ಕೆ ಬರಲಿಲ್ಲವಂತೆ, ಅರಿಸ್ಟೋಫೆನೀಸ್‌ನೇ ಅದನ್ನು ಕೈಗೊಳ್ಳಬೇಕಾಯಿತು. ಅಷ್ಟಕ್ಕೆ ಮುಗಿಯಲಿಲ್ಲ ತಡೆಗಳ ಕಥೆ. ಕ್ಲಿಯಾನ್‌ನ ವಿಕಟಾನುಕರಣದ ಮೊಗವಾಡ ಅವಶ್ಯಕವಾಗಿತ್ತು. ಅದನ್ನು ತಯಾರಿಸಿ ಕೊಡುವ ಕುಶಲಕೆಲಸಗಾರ ಎಲ್ಲಿಂದ ಬರಬೇಕು? ಆದರೂ ಕವಿ ಛಲವನ್ನು ಬಿಡಲಿಲ್ಲ. ಆದಿಯಲ್ಲಿ ನಟರು ಬಳಸಿಕೊಳ್ಳುತ್ತಿದ್ದ ವೇಷದ್ರವ್ಯವನ್ನು ನೆನಪಿಗೆ ತಂದುಕೊಂಡು ತನ್ನ ಮುಖಕ್ಕೆ ಹೆಂಡದ ಗಷ್ಟನ್ನು ಸವರಿಕೊಂಡು ಅನುಕಾರ್ಯನಾದನಂತೆ, ಕೆಟ್ಟ ಧೈರ್ಯಕ್ಕೆ ಇದೊಂದು ಉತ್ತಮ ನಿದರ್ಶನ.

ಕಲಾದೃಷ್ಟಿಯಿಂದ ಕಳಪೆಯೂ ಸಪ್ಪೆಯೂ ಆಗಿರುವ ಮೋಡಗಳು ಕವಿಯ ನಾಟಕಚಕ್ರದಲ್ಲಿ ಅತ್ಯಂತ ಪ್ರಸಿದ್ಧವಾದದ್ದು, ಬಹಳ ಪರಿಚಿತವಾದದ್ದು. ಅದರಲ್ಲಿ ಅಪಹಾಸ್ಯಕ್ಕೆ ಪಶುವಾಗಿರುವಾತನಿಗೆ ಸಾಕ್ರಟೀಸ್ ಎಂದು ನಾಮಧೇಯ. ಚಾರಿತ್ರಿಕ ಮಹಾವ್ಯಕ್ತಿ ಸಾಕ್ರಟೀಸನ ವ್ಯಂಗ್ಯಚಿತ್ರವಲ್ಲ ಅದು. ನಿರ್ಬಂಧವೇನನ್ನೂ ಲೆಕ್ಕಿಸದ ಆವೇಶ ಕಲ್ಪನೆಯ ನಿರ್ಮಾಣವಷ್ಟೇ. ಅಷ್ಟೇಕೆ, ನಾಟಕ ಜರುಗುತ್ತಿದ್ದಾಗ ತತ್ತ್ವಜ್ಞ ಸಾಕ್ರಟೀಸ್ ಪ್ರೇಕ್ಷಕನಾಗಿದ್ದ, ಮಗ್ಗುಲಿನವರಿಗಿಂತ ಹೆಚ್ಚು ಗಟ್ಟಿಯಾಗಿ ನಗುತ್ತಿದ್ದ. ನಾಟಕದ ಕಥಾವಸ್ತು ಹೀಗಿದೆ: ವಯಸ್ಕ ರೈತ ಸ್ಟ್ರೆಪ್ಸಿಯಡೀಸ್‌ನು ಹೆಂಡತಿಯ ಷೋಕಿಯಿಂದಲೂ ಮಗನ ಜೂಜುಕೋರತನದಿಂದಲೂ ಕೈ ಬರಿದುಮಾಡಿಕೊಂಡು ಋಣಭಾರದಿಂದ ಬಾಗಿ ತೊಳಲುತ್ತಿದ್ದಾನೆ. ಸಾಲಗಾರರನ್ನು ವಂಚಿಸುವ ತಂತ್ರ ಬೇಕಾಗಿದೆ ಅವನಿಗೆ. ಸಾಕ್ರಟೀಸನೆಂಬ ಉಪಾಧ್ಯಾಯ ತಪ್ಪನ್ನು ಸರಿಯೆಂದು ಸಮರ್ಥಿಸಬಲ್ಲ ನವ್ಯನೈಪುಣ್ಯ ವನ್ನು ಬೋಧಿಸುತ್ತಿರುವ ಸುದ್ದಿ ತಾಕುತ್ತದೆ, ಆ ವಿದ್ಯೆಯನ್ನು ಕಲಿತುಕೊಂಡು ಬಾ ಎಂದು ಮಗ ಫೀಡಿಪ್ಪಿಡೀಸನಿಗೆ ಹೇಳುತ್ತಾನೆ. ಆತ ಒಪ್ಪವುದಿಲ್ಲ. ಮುದುಕ ತಾನೇ ವಿದ್ಯಾರ್ಥಿಯಾಗುತ್ತಾನೆ, ಸಾಕ್ರಟೀಸನ ಫಂಟಿಸ್ಟೀರಿಆನ್ ಶಾಲೆಯಲ್ಲಿ. ಗುಡುಗು ಮಳೆಗಳನ್ನು ಕರೆಯುವ ಮೋಡಗಳೇ ದೇವರು ಜ್ಯೂಸ್ ಅಲ್ಲ ಎಂಬುದೇ ಪ್ರಥಮಪಾಠ. ಮುಂದಣ ಪಾಠಗಳು ಇನ್ನೂ ಜಟಿಲ, ಶ್ರಮಸಾಧ್ಯ. ಸ್ಟ್ರೆಪ್ಸಿಯಡೀಸನ ಚಿತ್ತವೆಲ್ಲ ಕಡದ ಕಡೆ; ಬೋಧನೆಯನ್ನು ಅದೆಂತು ಒಳಕ್ಕೆ ತೆಗೆದುಕೊಂಡೀತು? ಫೀಡಿಪ್ಪಿಡೀಸ್ ಅವನ ಜಾಗಕ್ಕೆ ಬರಲೇಬೇಕಾಗುತ್ತದೆ. ಗುರು ಸಾಕ್ರಟೀಸ್ ಅವನನ್ನು ನ್ಯಾಯ ಅನ್ಯಾಯಗಳ ಹತ್ತಿರಕ್ಕೆ ಕಳಿಸುತ್ತಾನೆ. ವಿವಾದ ನಡೆದು ಅನ್ಯಾಯ ಗೆಲ್ಲುತ್ತದೆ. ಪ್ರಬುದ್ಧನಾದ ಫೀಡಿಪ್ಪಿಡೀಸ್ ಮನೆಗೆ ಹಿಂತಿರುಗಿ, ಹಣ ಕೊಟ್ಟಿದ್ದವರನ್ನು ತಬ್ಬಿಬ್ಬು ಮಾಡಿ ಬರಿಗೈಯಲ್ಲಿ ಹೋಗುವಂತೆ ವ್ಯವಸ್ಥೆಗೊಳಿಸುತ್ತಾನೆ ಮತ್ತು ಅದೇ ಜಾಣ್ಮೆಯನ್ನು ಉಪಯೋಗಿಸಿಕೊಂಡು ತಂದೆ ಏಟು ಕೊಡುತ್ತಾನೆ. ಕಾರ್ಯದಲ್ಲಿ ತಂದೆಗೆ ಉತ್ತಮ ನೆರವು ನೀಡುತ್ತಾನೆ. ನವ್ಯ ವಿದ್ಯೆಯೆಂದರೆ ಸ್ಟ್ರೆಪ್ಸಿಯಡೀಸನಿಗೆ ಈಗ ಸೇರುವುದಿಲ್ಲ; ರೋಷದಿಂದ ಉನ್ಮತ್ತನಾಗಿ ಸಾಕ್ರಟೀಸನ ವಿದ್ಯಾಲಯಕ್ಕೆ ಬೆಂಕಿಯಿಡುವ ನಿರ್ಧಾರದಿಂದ ಅದರತ್ತ ಸರಿಯುತ್ತಾನೆ. ಈ ರೂಪಕವೇ ತನ್ನ ಕೃತಿಗಳಲ್ಲಿ ಅತ್ಯುತ್ತಮವಾದುದೆಂಬ ನೆಚ್ಚಿಕೆ ಕವಿಗಿದ್ದಂತೆ ತೋರುತ್ತದೆ.

ಕಣಜಗಳು (ದಿ ವಾಸ್ಪ್‌ಸ್) ಎಂಬ ನಾಟಕದಲ್ಲಿ ನ್ಯಾಯದರ್ಶಿಗಳ (ಜ್ಯೂರಿ) ನೇಮಕವನ್ನು ಹಳಿಯಲಾಗಿದೆ. ಅದರಲ್ಲೂ ತಂದೆ ಮಕ್ಕಳ ವಿರುದ್ಧ ನಡತೆಯ ಹೋರಾಟವೇ ಅದರ ಸಾರ ವಿಷಯ.

ಕಲ್ಪನಾವೈಭವ ಒಡೆದುಮೂಡಿರುವುದು ಶಾಂತಿ (ದಿ ಪೀಸ್) ಎಂಬ ರೂಪಕದಲ್ಲಿ, ಅಲ್ಲದೆ ಅದರಲ್ಲಿ ನೀಕಿಯಸ್ಸನ ನೇತೃತ್ವದಲ್ಲಿ ಇನ್ನೇನು ಆಗಲಿರುವ ಅಥೆನ್ಸ್ ಸ್ಪಾರ್ಟಗಳ ಹಂಗಾಮಿ ಒಡಂಬಡಿಕೆಯ ಮುಂಗಾಣ್ಕೆ ಆಶ್ಚರ್ಯಕರವಾಗಿ ಕಾಣಬಂದಿದೆ. ಅಥೆನ್ಸಿನ ದ್ರಾಕ್ಷಿತೋಟಗಾರ ಟ್ರಿಗಾಯಿಅಸ್‌ಗೂ ಅವನ ಮನೆಯವರಿಗೂ ಅನ್ನಾಭಾವ ತಟ್ಟಿದೆ. ರೆಕ್ಕೆಯ ತೇಜಿ ಪೇಗಾಸಸ್ಸನ್ನು ಹತ್ತಿ ಆಕಾಶಕ್ಕೇರಿದ ಪುರಾಣವೀರ ಬೆಲರಫಾನನ್ನು ತಾನೇಕೆ ಹಿಂಬಾಲಿಸಬಾರದು ಎಂದು ನಾಯಕ ಆಲೋಚಿಸುತ್ತಾನೆ. ಕುದುರೆಯ ಬದಲು ಅವನಿಗೊಂದು ದೈತ್ಯಾಕಾರದ ಜೀರುಂಡೆ ದೊರಕುತ್ತದೆ. ಅದರ ಮೇಲೆ ಕುಳಿತು ಎಟ್ನ ಪರ್ವತದ ಶಿಖರದಿಂದ ಕುಪ್ಪಳಿಸಿ, ಹಾರಿ ಏರಿ, ಒಲಿಂಪಸ್ ಸ್ವರ್ಗವನ್ನು ತಲುಪುತ್ತಾನೆ ಆ ಲೋಕ ಶೂನ್ಯವಾಗಿದೆ; ಬಾಗಿಲಬಂಟ ಹರ್ಮಿಸ್, ಆಡಳಿತಗಾರ ಯುದ್ಧದೇವ ಪಾಲಿಮಸ್, ಇಬ್ಬರ ಹೊರತು ಮಿಕ್ಕ ದೂತರುಗಳೆಲ್ಲರೂ ಸುಮ್ಮನೆ ಕಚ್ಚಾಡುತ್ತಿರುವ ಗ್ರೀಕರ ಮೇಲಣ ಜುಗುಪ್ಸೆಯಿಂದ ಒಲಿಂಪಸ್ಸನ್ನು ಪರಿತ್ಯಜಿಸಿ ಎಲ್ಲಿಗೋ ಹೊರಟುಹೋಗಿದ್ದಾರೆ. ಶಾಂತಿಯನ್ನು ಕೂಪದ ತಟ್ಟತಳದಲ್ಲಿ ಹುದುಗಿಸಿದ್ದಾನೆ ಸಂಗರ ದೇವ. ಸಮಸ್ತ ಗ್ರೀಕ್ ರಾಷ್ಟ್ರಗಳನ್ನೂ ಒರಳಿನಲ್ಲಿ ಕುಟ್ಟಿ ಪುಡಿಮಾಡುವುದೇ ಆ ಕ್ರೂರಿಯ ಇಚ್ಛೆ. ಎಂದರೆ, ಒರಳಿನೊಳಕ್ಕೆ ಈರುಳ್ಳಿ (ಮೆಗಾರ), ಲೀಕ್‌ಗಡ್ಡೆ (ಪ್ರಾಸಿಯ), ಚೀಸ್(ಸಿಸಿಲಿ), ಜೇನುತುಪ್ಪ (ಅಥೆನ್ಸ್)ಗಳನ್ನು ಸುರಿದಿದ್ದಾನೆ. ನೇರ್ಪಾಗಿ ಜಜ್ಜುವ ಎರಡು ಒನಕೆಗಳಿಗಾಗಿ ಅರಸುತ್ತ ನಡೆಯುತ್ತಾನೆ, ದೂರ. ಅದೇ ಸೂಕ್ತ ಗಳಿಗೆಯೆಂದು ಬಗೆದು, ಟ್ರಿಗಾಯಿಅಸ್ ಗ್ರೀಸಿನಿಂದ ರೈತರನ್ನು ಬೇಗ ಕರೆಸಿಕೊಳ್ಳುತ್ತಾನೆ. ಹರ್ಮಿಸನ ಕೈ ಬೆಚ್ಚಗೆ ಮಾಡಿ ಅವನನ್ನು ಒಲಿಸಿಕೊಳ್ಳುತ್ತಾರೆ. ಎಲ್ಲರ ಮೆಹನತ್ತಿನ ಫಲವಾಗಿ ಬಾವಿಯಿಂದ ಮೇಲಕ್ಕೆದ್ದು ಬರುತ್ತಾಳೆ ಶಾಂತಿ. ಸ್ವಲ್ಪವೂ ವಿಳಂಬವಿಲ್ಲದೆ ಅವಳೊಂದಿಗೆ ಎಲ್ಲರೂ ಭೂಮಿಗೆ ಇಳಿದುಬಿಡುತ್ತಾರೆ. ಗ್ರೀಸಿನಲ್ಲೆಲ್ಲ ಮಹದಾನಂದ. ಟ್ರಿಗಾಯಿಅಸ್‌ಗೂ ಶಾಂತಿಗೂ ವಿವಾಹಕ್ಕಾಗಿ ಸಿದ್ಧತೆಗಳ ಸಂಭ್ರಮವೇ ಸಂಭ್ರಮ.

ಲೂಸಿಸ್ಟ್ರಾಟಿ ರೂಪಕದಲ್ಲಿ (ಲೂಸಿಸ್ಟ್ರಾಟ=ದಳ ವಿಸರ್ಜಕ) ಅಥೆನ್ಸಿನ ಹಠಮಾರಿತನ, ಕಾಳಗಾಪೇಕ್ಷೆಗಳಿಂದ ತನಗಾದ ಅಗಾಧ ಹೇವರಿಕೆಯನ್ನು ಕವಿ ಸುವ್ಯಕ್ತಗೊಳಿಸಿದ್ದಾನೆ. ಏನಾದರೂ ಒಂದು ಮನುಷ್ಯಾತೀತ ವೈಪರೀತ್ಯ ಜರುಗಿದಲ್ಲದೆ ತನ್ನ ನಾಡಿಗೆ ಬುದ್ಧಿ ಬರುವುದಿಲ್ಲವೆಂದು ಅವನ ಮತ. ನಾಟಕದಲ್ಲಿ ಜಗಳಗಂಟಿ ಪುರುಷಜಾತಿಗೆ ವಿವೇಕ ಬೋಧಿಸುವ ಹೊಣೆಗಾರಿಕೆಯನ್ನು ತನ್ನ ಕೈಗೆ ತೆಗೆದುಕೊಳ್ಳುತ್ತದೆ, ಸ್ತ್ರೀಜಾತಿ. ಲೂಸಿಸ್ಟ್ರಾಟ ಮಹಿಳೆಯರ ಮುಖ್ಯಸ್ಥೆ. ಸ್ಪಾರ್ಟದಿಂದ ಲ್ಯಾಂಪಿತೊವನ್ನು ಕರೆಸಿಕೊಳ್ಳುತ್ತಾಳೆ. ಇತರ ಶತ್ರುರಾಜ್ಯಗಳಿಂದಲೂ ಅವಳ ಆಹ್ವಾನದಂತೆ ಪ್ರತಿನಿಧಿಗಳು ಬಂದು ಗುಂಪಾಗುತ್ತಾರೆ. ಶಯನಾಗಾರಗಳಿಂದ ತಮ್ಮ ತಮ್ಮ ಗಂಡಂದಿರನ್ನು ಹೊರದೂಡುವುದೇ ಅವರ ಸಂಗ್ರಾಮಭೇರಿ. ಆಮೇಲೆ ಗಂಡಸರೆಲ್ಲ ಎಲ್ಲೊ ದಣಿದು ನಿದ್ದೆಗೈಯ್ಯುತ್ತಿರುವಾಗ ಹೆಂಗಸರು ಪಟ್ಟಣದ ದುರ್ಗವನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ. ಅದನ್ನು ಕಸಿದುಕೊಳ್ಳುವ ಪ್ರಯತ್ನದಲ್ಲಿ ಪುನಃ ಪುನಃ ಸೋಲಾಗುತ್ತದೆ, ಪುರುಷರಿಗೆ. ಯಾವ ಪ್ರಲೋಭನೆಗೂ ಸಿಕ್ಕವುದಿಲ್ಲ, ಗಟ್ಟಿಮನಸ್ಸಿನ ಹೆಂಗಸರು. ಆಗ ಕದನವಿರಾಮದ ಘೋಷಣೆಯೊಡನೆ ದೂತ ಆಗಮಿಸುತ್ತಾನೆ. ಸ್ಪಾರ್ಟದಿಂದ, ಲೂಸಿಸ್ಟ್ರಾಟಳ ಸಮಾಧಾನದ ಸಲಹೆ ಸರ್ವರಿಗೂ ಒಪ್ಪಾಗುತ್ತದೆ, ಭರ್ತಭಾರ್ಯೆಯರು ಜೋಡಿ ಜೋಡಿಯಾಗಿ ಮೆರವಣಿಗೆ ತೆರಳುತ್ತಾರೆ, ಉಲ್ಲಾಸಪೂರಿತರಾಗಿ.

ಅದೇ 411ರಲ್ಲಿ ಬಂದ (ಥೆಸ್ಮೊಫರಿಯ ವ್ರತದ ಹೆಣ್ಣುಗಳು) ಎಂಬ ನಾಟಕದಲ್ಲೂ ಕಾರುಬಾರು ಹೆಂಗಸರದ್ದೇ. ಯೂರಿಪಿಡೀಸ್ ಹೆಂಗಸರನ್ನು ಹೀನಾ ಮಾನವಾಗಿ ಬೈದು ಲಜ್ಜೆಗೆ ದಬ್ಬಿದ್ದಾನೆಂದು ಅವನ ಮೇಲೆ ಅವರಿಗೆಲ್ಲ ಕೆಂಡಗೋಪ. ಯಾವ ರೀತಿ ಸೇಡು ತೀರಿಸಿಕೊಳ್ಳಬೇಕೆಂಬುದನ್ನು ಕಂಡುಹಿಡಿಯುವುದಕ್ಕೆ ಹಬ್ಬದ ನೆಪದಲ್ಲಿ ಗುಪ್ತ ಸಭೆ ಸೇರುತ್ತದೆ. ಯೂರಿಪಿಡೀಸ್ ನರಸೋಗಿನ ನರಿ. ಮಾವನಿಗೆ ಹೆಣ್ಣುವೇಷ ಹಾಕಿ ಅವನನ್ನು ಕಳಿಸುತ್ತಾನೆ, ರಹಸ್ಯಬೇದನಕ್ಕೆ. ಚಾಣಾಕ್ಷಮಹಿಳೆಯರಿಗೆ ಅವನಾರೆಂದು ಗೊತ್ತಾಗುತ್ತದೆ. ನಿರ್ಭಾಗ್ಯ ವೃದ್ಧನನ್ನು ಬಂಧನದಲ್ಲಿ ಇಡುತ್ತಾರೆ. ಯೂರಿಪಿಡೀಸನ ಗಂಭೀರ ನಾಟಕವೆಲ್ಲ ಅರಿಸ್ಟೋಫೆನೀಸ್ ಅಂಗೈ ಮೇಲಿದ್ದದ್ದು ಪ್ರಮಾಣವಾಗುತ್ತದೆ, ಈ ನಾಟಕದಲ್ಲಿ!

ಹಳೆಯ ಬಗೆಯ ವಿನೋದ ನಾಟಕದಲ್ಲಿ ಎಂಥ ಅಳ್ಳಯರಾಮ ವಿಕಟತ್ವ ಕುಣಿದಾಡುತ್ತಿದ್ದರೂ ಅದು ಎಷ್ಟು ಎತ್ತರಕ್ಕೆ ಹತ್ತಬಹುದೆಂಬುದನ್ನು ಸಾರುತ್ತದೆ–ಹಕ್ಕಿಗಳು ದಿ ಬರ್ಡ್ಸ್ ಎಂಬ ಕೃತಿ. ಅದೇ ಕವಿಯ ಶ್ರೇಷ್ಠತಮಸೃಷ್ಟಿ. ಅದರಲ್ಲಿ ವರ್ಣನೆಗೊಂಡಿರುವ ಮೇಘಕೋಗಿಲೆಯೂರು ನೆಫೆಲೊಕೊಸೈಜ಼ಿಯ ಕವಿಯ ಸ್ವಪ್ನದ ಆದರ್ಶರಾಜ್ಯ. ಪೀತಿಟಾಯರಸ್ ಮತ್ತು ಯುಎಲ್‌ಪಿಡೀಸ್ ಇಬ್ಬರಿಗೂ ಅಥೆನ್ಸಿನ ಬಾಳು ಅತ್ಯಂತ ದುಸ್ಸಹವಾಗಿದೆ. ಪುರಾತನ ಯುಗದಲ್ಲಿ ಥ್ರೇಸಿನ ದೊರೆಯಾದ ಟೇರಿಅಸ್ ಅಥೆನ್ಸಿನ ರಾಜಕುಮಾರಿ ಪ್ರೋಕ್ನಿಯನ್ನು ವರಿಸಿ, ಕಾರಣಾಂತರದಿಂದ ಹೂಪೊ ಹಕ್ಕಿಯಾಗಿ ಪರಿವರ್ತನಗೊಂಡು ಉಪಾಖ್ಯಾನ ಅವರ ಜ್ಞಾಪಕಕ್ಕೆ ಬರುತ್ತದೆ. ಆ ಪಕ್ಷಿಯ ಬಳಿಗೆ ನಡೆದು, ತಮ್ಮ ವಾಸಕ್ಕೆ ಯಾವ ಪ್ರದೇಶ ಸಲ್ಲಬಹುದೆಂದು ಕೇಳುತ್ತಾರೆ. ಟೇರಿಅಸ್ ನಿರ್ದೇಶಿಸುವ ಯಾವ ಜಾಗವೂ ಅವರಿಗೆ ಸರಿತೋರುವುದಿಲ್ಲ. ಆಗೊಂದು ಸ್ಫೂರ್ತಿ ಚಿಮ್ಮುತ್ತದೆ, ಪೀತಿಟಾಯರಸ್ಸನ ಆಂತರ್ಯದಿಂದ. ಖಗಪ್ರಪಂಚ ಒಟ್ಟುಗೂಡಿ, ನೀಳ್ದನಿಂದ ಭೀತಿಗಳಿಂದ ದುರ್ಭೇದ್ಯವಾದ ನಗರವೊಂದನ್ನು ವಾಯುಮಂಡಲದಲ್ಲಿ ಏತಕ್ಕೆ ಕಟ್ಟಿ ಎಬ್ಬಿಸಬಾರದು, ಹಾಗೆ ಮಾಡಿದರೆ ಮೇಲಣ ದೇವತೆಗಳೂ ಕೆಳಗಣ ಮನುಷ್ಯರೂ ವಿಹಗಸಂಕುಲಕ್ಕೆ ತಲೆಬಾಗಲೇ ಬೇಕಾಗುತ್ತದೆ. ಬಿತ್ತಿದ ಬೀಜಗಳನ್ನು ಭಕ್ಷಿಸತೊಡಗಿದರೆ ಭೂಮಿಯವರು ಹತೋಟಿಗೆ ಸಿಕ್ಕುತ್ತಾರೆ. ಅವರು ಹರಕೆ ಹೊತ್ತು ಅರ್ಪಿಸುವ ಬಲಿಗಳ ಧೂಮವನ್ನು ತಡೆಗಟ್ಟಿಬಿಟ್ಟರೆ ದೇವತೆಗಳಿಗೆ ಕ್ಷಾಮ. ಅವರೂ ಮಣಿಯಬೇಕಾಗುತ್ತದೆ, ಹಕ್ಕಿಗಳಿಗೆ. ಪಕ್ಷಿಗಳ ನೃತ್ಯಮೇಳ ಯುಕ್ತಿಯುಕ್ತವಾದ ಆ ಉದ್ಯಮವನ್ನು ನಿರಾಕರಿಸುತ್ತದೆ. ಪ್ರಾರಂಭದಲ್ಲಿ, ಕೊನೆಗೆ ತನ್ನ ಸಮ್ಮತಿಯನ್ನು ಕೊಡುತ್ತದೆ. ಪೀತಿಟಾಯರಸ್, ಯೂರಿಟಿಡೀಸರೇ ವಾಸ್ತುಶಿಲ್ಪಿಗಳು. ಬಗಲಿನಲ್ಲಿ ಅವರಿಗೂ ಪಕ್ಷ ಅಂಕುರಿಸಿ ಹೊಮ್ಮಿ ಅವರ ಮೇಸ್ತ್ರಿ ಕಾಯ ಸಂಗಮವಾಗುತ್ತದೆ. ಕ್ಷಿಪ್ರದಲ್ಲಿ ಎದ್ದು ನಿಂತ ನಗರ ನಭಕ್ಕೆ ಭೂಷಣವಾಗತ್ತದೆ.

ಕೂಡಲೇ ಅತಿಥಿಗಳು ಸಾಲಾಗಿ ದಯಮಾಡಿಸುತ್ತಾರೆ. ಮೊದಲು ಬಂದ ಕವಿಗೆ ಅವನ ಪ್ರಶಂಸಾಪ್ರಗಾಥಕ್ಕಾಗಿ ಅಂಗಿ, ಒಳ ಅಂಗಿಯ ಉಡುಗೊರೆ ಲಭ್ಯವಾಗುತ್ತದೆ. ಆಮೇಲಣ ಶಕುನಗಾರ, ನಕ್ಷತ್ರವಿಜ್ಞಾನಿ, ಅಥೆನ್ಸಿನ ನಿಯೋಗಿ–ಮೂವರನ್ನೂ ಛೀಮಾರಿಮಾಡಿ ಬಡಿತದ ಬೆದರಿಕೆ ಹಾಕಿ ಓಡಿಸುತ್ತಾನೆ, ಪೀತಿಟಾಯರಸ್. ಹೊಸ ಶಾಸನದ ಪ್ರತಿಗಳನ್ನು ಮಾರುವ ಬೀದಿವ್ಯಾಪಾರಿ ಕಾಲಿಡುತ್ತಾನೆ; ಅವನಿಗೂ ಆಗುತ್ತದೆ ಅದೇ ಶಾಸ್ತಿ. ಅನಂತರ ಪ್ಯಾರಬಸಿಸ್, ಆ್ಯರಿಸ್ಟಾಫ಼ನೀಸನ ಗಂಭೀರಜ್ಞಾನಕ್ಕೂ ವಿಭಾವನಾವೈವಿಧ್ಯಕ್ಕೂ ರಸಪುಷ್ಟ ಕವಿತ್ವಕ್ಕೂ ಅದೊಂದು ಸಾಕ್ಷ್ಯ ಸಾಕು.

ಮೇದಿನಿಗೆ ಇಳಿಯಬಂದ ದೇವದೂತಿ ಈರಿಸ್ ಕೋಗಿಲೆಯೂರಿನ ಕಾವಲು ಸಿಪಾಯಿಗಳಿಗೆ ಸೆರೆಸಿಕ್ಕುತ್ತಾಳೆ. ಅವಳ ಹತ್ತಿರ ರಹದಾರಿ ಇಲ್ಲ. ಮುಂದಕ್ಕೆ ಹೋಗಗೊಡದೆ, ಪ್ರಶ್ನೆ ಕೇಳಿ ಆಕೆಯನ್ನು ತಲ್ಲಣಗೊಳಿಸಿ ಪೀಡಿಸುತ್ತಾನೆ, ಪೀತಿಟಾಯರಸ್. ಅಳುತ್ತ ಅವಳು ಹಿಂತಿರುಗುತ್ತಾಳೆ ತಂದೆ ಜೂಸನ ಬಳಿಗೆ. ಆಮೇಲೆ ದೂತನೊಬ್ಬ ಬಂದು, ಭೂಮಂಡಲವನ್ನೆಲ್ಲ ಮುಸುಕಿರುವ ಹಕ್ಕಿ ಹುಚ್ಚನ್ನು ಕಣ್ಣಿದುರಿಗೆ ಇಟ್ಟಂತೆ ಬಣ್ಣ ಬಣ್ಣದ ನುಡಿಗಳಿಂದ ಬಣ್ಣಿಸುತ್ತಾನೆ. ಹಕ್ಕಿಯಂತೆ ನಡಿಗೆ, ಹಕ್ಕಿಯಂತೆ ಚಿಲಿಪಿಲಿ, ಹಕ್ಕಿಯಂತೆ ಊಟ, ಹಕ್ಕಿಯ ಹೆಸರನ್ನಿಟ್ಟುಕೊಳುವುದೇ ಹೆಮ್ಮೆ ಮಂದಿಗೆಲ್ಲ. ಕೋಗಿಲೆಯೂರಿನಲ್ಲಿ ನೆಲಸುವುದಕ್ಕೆ ಅನೇಕರು ಬಂದುಬಿಡಬಹುದೆಂದು ಅಲ್ಲಿಗೆ ಹಿಂದಿರುಗಿಸುತ್ತಾನೆ, ಅವರನ್ನು ಪೀತಿಟಾಯರಸ್.

ಭಾರಿ ಛತ್ರಿಯ ಕೆಳಗೆ ಅವಿತುಕೊಂಡು ಹೆಜ್ಜೆಯಿಡುತ್ತ ಆಗಮಿಸುತ್ತಾನೆ, ಹಳೆಯ ಮನುಷ್ಯಮಿತ್ರ ಪ್ರಾಮಿತಿಅಸ್. ದೇವಲೋಕದಲ್ಲಿ ಪರಿಸ್ಥಿತಿ ತುಂಬ ಹದಗೆಟ್ಟಿದೆಯೆಂದು ವರದಿ ಹೇಳಿ, ಅಲ್ಲಿಂದ ಬರುವ ರಾಯಭಾರಿಗಳೊಂದಿಗೆ ಗಡುಸಾಗಿ ವರ್ತಿಸಿ, ಬಿರುಸು ಷರತ್ತುಗಳನ್ನು ಅವರ ಮೇಲೆ ಹೇರಬೇಕೆಂದು ಉಪದೇಶ ಮಾಡುತ್ತಾನೆ. ಬರುವ ರಾಯಭಾರಿಗಳಾರು? ಮತಿವಂತ ಪಾಸೀಡನ್, ಹೊಟ್ಟೆಬಾಕ ಹೆರಾಕ್ಲೀಸ್, ಪೆದ್ದ ಟ್ರೈಬಲಸ್. ಪೆದ್ದನಿಗೆ ಏನೂ ಅರ್ಥವಾಗುವುದಿಲ್ಲ. ಅವನ ಮಾತು ಯಾರಿಗೂ ಅರ್ಥವಾಗುವುದಿಲ್ಲ; ಹೆರಾಕ್ಲೀಸನಿಗೆ ತಿಂಡಿತೀರ್ಥದ ಯೋಚನೆಯೇ ಯೋಚನೆ. ಪೀತಿಟಾಯರಸ್ ಹೇಳುವುದಕ್ಕೆಲ್ಲ ಹೂಗುಟ್ಟಿಬಿಡುತ್ತಾರೆ, ಅವರು. ಪಾಸೀಡನ್ ಆಗುವುದಿಲ್ಲವೆಂದರೆ ಕೇಳುವರಾರು, ಯತ್ನವಿಲ್ಲದೆ ಅವನೂ ಒಪ್ಪಿಕೊಳ್ಳುತ್ತಾನೆ. ಪೃಥ್ವಿಯ ಅರಸೊತ್ತಿಗೆ ಬಹಳ ಹಿಂದೆ ಇದ್ದಂತೆ ಪಕ್ಷಿಗಳಿಗೇ ಮರಳಿ ಬರುತ್ತದೆ; ಜೂಸನ ಮಗಳಾದ ಬ್ಯಾಸಲಿಯ (ಪ್ರಭುತ್ವ) ಪತ್ನಿಯಾಗುತ್ತಾಳೆ, ಮಹಾಪರಾಕ್ರಮಿ ಪೀತಿಟಾಯರಸ್ಸಿಗೆ. ವಿವಾಹದ ಸಿದ್ಧತೆಗಳಿಂದ ನಾಟಕಕ್ಕೆ ಸಮಾಪ್ತಿ. ರಾಜಕೀಯದ ಗೊಂದಲವಿಲ್ಲದ ಶುದ್ಧಸಾಹಿತ್ಯವನ್ನು ಕವಿ ಇಲ್ಲಿ ಒದಗಿಸಿದ್ದಾನೆ.

ರಾಜಕೀಯದ ಸೋಂಕಿಲ್ಲದ ಅರ್ಥಗರ್ಭಿತವಾದ ಕಪ್ಪೆಗಳು (ಫ್ರಾಗ್ಸ್) ನಾಟಕದಲ್ಲಿ ಯೂರಿಪಿಡೀಸನ ಮರಣದಿಂದ ಗಂಭೀರನಾಟಕ ಕುಗ್ಗಿ ಕುಂಟಾಗಿದೆ. ಕಲಾಭೀಮಾನದೇವತೆ ಡಯೋನಿಸಸ್ಸಿಗೆ ದುಗುಡ. ನರಕಕ್ಕಿಳಿದು ಪ್ಲೂಟೊನನ್ನು ಒಲಿಸಿಕೊಂಡು ಯೂರಿಪಿಡೀಸ್ ಮತ್ತೆ ಹುಟ್ಟಿ ಬರುವಂತೆ ಎಸಗಬೇಕೆಂದು ಸಂಕಲ್ಪಗೊಳ್ಳುತ್ತಾನೆ. ಹಿಂದೊಮ್ಮೆ ಹಿರಾಕ್ಲೀಸ್ ನರಕಕ್ಕೆ ಇಳಿಯುವ ಸಾಹಸದಲ್ಲಿ ವಿಜಯಿಯಾಗಿದ್ದ. ಅವನಿಂದ ಸಿಂಹದ ಚರ್ಮ ಮತ್ತು ದೊಣ್ಣೆಯನ್ನು ಎರವಲು ಪಡೆದು ದಾಸ ಗ್ಸಾಂತಿಯಸ್ನೊಡನೆ ಇಳಿಯುತ್ತಾನೆ, ಅಧೋಲೋಕಕ್ಕೆ. ಅಲ್ಲಿ ಈಸ್ಕಿಲಸ್ಸಿಗೂ ಯೂರಿಪಿಡೀಸಿಗೂ ಜಗಳ. ಇಬ್ಬರ ಪದ್ಯಪಂಕ್ತಿಗಳನ್ನು ಎದುರುಬದುರು ತಟ್ಟೆಯಲ್ಲಿಟ್ಟು ತೂಗುತ್ತಾರೆ. ಈಸ್ಕಿಲಸ್ಸನ ತೂಕ ಪ್ರತಿಯೊಂದು ಬಾರಿಯೂ ಅಧಿಕ. ಕೊನೆಗೆ ಅವನಿಂದಲೇ ಗಂಭೀರನಾಟಕಕ್ಕೆ ಪುನರ್ಜೀವವೆಂದು ನಿಶ್ಚಯಿಸಿ ಅವನನ್ನು ವರದಾನವಾಗಿ ಪಡೆದುಕೊಂಡು ಹಿಂದಿರುಗುತ್ತಾನೆ, ಡಯೋನೀಸಸ್. ಕೈ ಕೈ ಹಿಸುಕಿಕೊಳ್ಳುತ್ತ ಹಲ್ಲು ಕಡಿಯುತ್ತ ಗೊಣಗುಟ್ಟುತ್ತಾನೆ, ಯೂರಿಪಿಡೀಸ್.

ಸೈರಕ್ಯೂಸಿನ ಸರ್ವಾಧಿಕಾರಿ ಅಥೆನ್ಸಿನ ರಾಜಕೀಯ ವೃತ್ತಾಂತವನ್ನು ಅರಿಯಬಯಸಿದನಂತೆ. ಉತ್ತರವಾಗಿ ಪ್ಲೇಟೊ ಅವನಿಗೆ ಅರಿಸ್ಟೋಫೆನೀಸ್‌ನ ರಕ್ಷಕವೀರರು ನಾಟಕವನ್ನು ಓದೆಂದು ಕೊಟ್ಟನಂತೆ! ಓದುಗರಿಗೆ ಕೆಲವು ಶತಮಾನಗಳ ಕಾಲ ಅರಿಸ್ಟೋಪೆನೀಸ್ ಹೋಮರನಿಗೆ ಎರಡನೆಯವನಾಗಿದ್ದ. ಅನಂತರ ಅಂಕೆಗೆಟ್ಟವನೂ ಅಸಂಸ್ಕೃತನೂ ಆಗಿ ತೋರಿಬಂದ. ಹಲವಾರು ಶತಮಾನಗಳ ಕಾಲ, 19ನೆಯ ಶತಮಾನದ ಎರಡನೆಯ ಭಾಗದಿಂದ ವಿನೋದ ನಾಟಕದಲ್ಲಿ ಪ್ರಥಮ ಪೀಠ ಅವನಿಗೆ ಸಲ್ಲತಕ್ಕದ್ದೆಂಬ ಅಭಿಪ್ರಾಯ ಮಾನ್ಯವಾಗುತ್ತದೆ.

ವಿಮರ್ಶಕ : ಅರಿಸ್ಟೋಫೆನೀಸ್‌ನನ್ನು ವಿಮರ್ಶಕನೆಂದು ಕರೆಯಲು ಅನೇಕ ಪಂಡಿತರು ಒಪ್ಪರು. ಆದರೂ ನುರಿತ ವಿಮರ್ಶನ ಮನೋಭಾವ, ಧೀಶಕ್ತಿ, ಕೈಚಳಕಗಳನ್ನು ನಾವು ಅವನಲ್ಲಿ ಕಾಣುತ್ತೇವೆ. ಪ್ರಾಚೀನ ಗ್ರೀಕ್ ಹರ್ಷನಾಟಕ–ಅದರಲ್ಲೂ ಅದರ ಹಳೆಯ ಪ್ರಭೇದ–ಉದ್ದಕ್ಕೂ ಜೀವನದ ವಿಮರ್ಶೆಯಾಗಿತ್ತು. ಆತನಿಗಂತೂ ತನ್ನ ಪರಿಹಾಸ್ಯದ ಹಿಂದೆ ಇರುತ್ತಿದ್ದ ವಿಮರ್ಶೆಯನ್ನು ಮಂದಿ ಗ್ರಹಿಸಬೇಕೆಂಬುದೇ ಮುಖ್ಯ ಅಭೀಷ್ಟ. ಯೂರಿಪಿಡೀಸ್ ಗಂಭೀರನಾಟಕದ ಮಟ್ಟವನ್ನು ಮೇಲಿನಿಂದ ಕೆಳಕ್ಕಿಳಿಸಿ ಅದನ್ನು ಕೀಳುಮಾಡಿದನೆಂಬ ನಂಬಿಕೆ ಅರಿಸ್ಟೋಫೆನೀಸ್ ಸಮಕಾಲೀನರಲ್ಲಿ ಅನೇಕರಿಗೆ ದೃಢವಾಗಿತ್ತು. ಆದ್ದರಿಂದ ಆ ಟ್ರ್ಯಾಜಿಕ್ ಕವಿಯನ್ನು ಕಟು ಟೀಕೆಗೆ ಗುರಿ ಮಾಡುವ ಉದ್ಯಮದಲ್ಲಿ ಆತ ಸುಮಾರು ಇಪ್ಪತ್ತು ವರ್ಷ ನಿರತನಾಗಿದ್ದ. ಅವನ ಆಕ್ಷೇಪ ಅಭಿಪ್ರಾಯ ಆಶಯಗಳೆಲ್ಲ ಅವನ ಕಪ್ಪೆಗಳು ಎಂಬ ನಾಟಕದಲ್ಲಿ ಒಡೆದು ಮೂಡಿವೆ. ಯೂರಿಪಿಡೀಸನ ಸಂಶಯ ಪ್ರಮುಖ ಚಿತ್ತವೃತ್ತಿ, ಕುಯುಕ್ತಿ ಕೂಡಿದ ವಾದಚಟ, ಧಾರ್ಷ್ಟ್ಯ, ಅತಿ ಮರುಕದ ವೈಪರೀತ್ಯ, ನವೀನತೆಗೆ ಆತುರ–ಇವ್ಯಾವುದೂ ಸರಿಬೀಳಲಿಲ್ಲ. ಅರಿಸ್ಟೋಫೆನೀಸ್‌ನಿಗೆ, ಯೂರಿಪೀಡಿಸನ ನಾಟಕಗಳಲ್ಲಿ ತಪ್ಪದೆ ಬರುವ ದೀರ್ಘ ಪೀಠಿಕೆಯ ಶುಷ್ಕವರದಿ, ಬೇಸರ ಹಿಡಿಸುವ ಆಖ್ಯಾನ ಸಮುಚ್ಚಯ, ಶಬ್ದಚಮತ್ಕಾರ, ಎರಡರ್ಥದ ಸಂದಿಗ್ಧವಾಕ್ಯ, ಯಂತ್ರದ ಮೂಲಕ ಆಕಾಶದಿಂದ ಭೂಮಿಗೆ ಇಳಿದುಬಂದು ರಾಜಿಮಾಡಿಸಿ ಹೋರಾಟ ನಿಲ್ಲಿಸುವ ದೇವತೆ–ಮುಂತಾದುವುಗಳಿಂದ ಗಂಭೀರನಾಟಕದ ಮಹಿಮೆಯೂ ಬೆಡಗೂ ಕಳೆಗುಂದಿದವೆಂದು ಅರಿಸ್ಟೋಫೆನೀಸ್‌ನ ಪ್ರಧಾನ ದೂಷಣೆ. ಆದ್ದರಿಂದ ಅವನ ಅಭಿಪ್ರಾಯದಂತೆ ಅಥೆನ್ಸಿನ

ಯೋಗಕ್ಷೇಮಕ್ಕೆ ಇರುವುದು ಒಂದೇ ಉಪಾಯ; ನೈಜ ಗಂಭೀರನಾಟಕ ಕವಿಯಾದ ಈಸ್ಕಿಲಸ್ಸನನ್ನು ಪುನರುಜ್ಜೀವನಗೊಳಿಸಿ ಅಧೋಲೋಕದಿಂದ ಇಹಲೋಕಕ್ಕೆ ಬರುವಂತೆ ಮಾಡಬೇಕು; ನವ್ಯತೆಯ ಗೀಳು ಎಂಥ ವಿಕಟಾತಿಶಯಕ್ಕೂ ಅಭಾಸಕ್ಕೂ ಕವಿಗಳನ್ನು ಎಳೆಯುತ್ತದೆ ಎಂಬುದನ್ನು ಲವಲವಿಕೆಯಿಂದ ಆತ ದೃಷ್ಟಾಂತಗೈಯುತ್ತಾನೆ. ಈ ಕೃತಿಯಲ್ಲಿ ಗಂಭೀರ ನಾಟಕದ ಅಗ್ರಪೀಠ ತನ್ನದೆ ಎಂದು ರಂಪ ಮಾಡುತ್ತಾನೆ ಯೂರಿಪಿಡೀಸ್. ಉಚ್ಚಪ್ರತಾಪದ ಈಸ್ಕಿಲಸ್ಸನಿಗೆ ಆ ಭಂಡನನ್ನು ಕಂಡು ಕಡುಗೋಪ, ತೀವ್ರ ಜುಗುಪ್ಸೆ, ಯತ್ನವಿಲ್ಲದೆ ಆತನೊಡನೆ ಪಂದ್ಯಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ನಾಟಕಾಲಯದ ಅಧಿದೇವತೆ ಡಯೊನೀಸನೇ ತೀರ್ಪುಗಾರ. ಸ್ಪರ್ಧೆಯ ವಿಧಾನ ಅಚ್ಚರಿಯ ಬಗೆಯದು. ತಕ್ಕಡಿಯನ್ನು ಇಡುತ್ತಾರೆ. ಅದರ ಒಂದು ತಟ್ಟೆಯನ್ನು ಕೈಯಿಂದ ಹಿಡಿದುಕೊಂಡು ಈಸ್ಕಿಲಸ್ ತನ್ನೊಂದು ಹೇಳಿಕೆಯನ್ನೂ ಉಚ್ಚರಿಸಬೇಕು.; ಇನ್ನೊಂದು ತಟ್ಟೆಯನ್ನು ಹಿಡಿದುಕೊಂಡು ಯೂರಿಪಿಡೀಸನೂ ಹಾಗೆಯೇ ಮಾಡಬೇಕು. ಯಾರ ಕಡೆ ಪಾತ್ರೆ ಹೆಚ್ಚು ಭಾರದಿಂದ ಕೆಳಕ್ಕೆ ಕುಸಿಯುತ್ತದೋ ಅವನೇ ವಿಜಯಶಾಲಿ ! ಯೂರಿಪಿಡೀಸನಿಗೆ ಸೋಲಿನ ಮೇಲೆ ಸೋಲು. ಹಾಗೂ ಅವನ ಕಾವ್ಯಪಂಕ್ತಿಗಳ ಏಕನಾದವನ್ನು ಪ್ರತ್ಯಕ್ಷಗೊಳಿಸಿ ಅವಹೇಳನ ಗೈಯುತ್ತಾನೆ, ಈಸ್ಕಿಲಸ್. ಹೀಗಾದರೂ ಅರಿಸ್ಟೋಫೆನೀಸ್ ತನ್ನ ಕೈಯಲ್ಲಾಗುವಷ್ಟು ನಿಷ್ಪಕ್ಷಪಾತ ವರ್ತನೆಯನ್ನೇ ಪ್ರಕಟಿಸುತ್ತಾನೆ. ಯೂರಿಪೀಡಿಸನಲ್ಲಿ ಏನೇ ದೋಷವಿರಲಿ, ಅವನ ಕವಿತೆಯ ಮಾಧುರ್ಯಕ್ಕೂ ಹೃದಯಂಗಮತ್ವಕ್ಕೂ ಎಲ್ಲರೂ ಕಾಣಿಕೆ ನೀಡಬೇಕು. ಅವನ ನಾಟಕಗಳನ್ನೆಲ್ಲ ಕಂಠಪಾಠ ಮಾಡಿಕೊಂಡಿದ್ದ ಅರಿಸ್ಟೋಫೆನೀಸ್! ಅತ್ತ ಕಡೆ, ಈಸ್ಕಿಲಸ್ಸನ ಮಹಾ ಘನತೆಯ ಶೈಲಿ ಎಷ್ಟೋಸಾರಿ ಬರಿ ವಾಗಾಡಂಬರಕ್ಕೂ ಆಟಾಟೋಪಕ್ಕೂ ಪಕ್ಕಾಗುವುದನ್ನು ಅವನು ಗಮನಿಸಿದ್ದಾನೆ. ಪಾತ್ರವನ್ನು ರಂಗದ ಮೇಲೆ ತಂದು ತುಸುಹೊತ್ತು ಅದು ಮೌನದಿಂದ ನಿಲ್ಲುವಂತೆ ಏರ್ಪಡಿಸುವುದು. ಈಸ್ಕಿಲಸ್ಸನ ಪ್ರೀತಿಯ ರಚನಾಕ್ರಮ. ಅದು ಪದೇ ಪದೇ ಕಾಣಬಂದು ಅದೇನು ಕೃತ್ರಿಮ ಕಲೋಪಾಯವೋ ಎಂಬ ಶಂಕೆ ಉಂಟಾಗುವ ಸಂಭವವಿದೆಯೆಂಬುದನ್ನು ಅರಿಸ್ಟೋಫೆನೀಸ್ ಮರೆತಿಲ್ಲ.

ಉತ್ತಮ ವಿಮರ್ಶಕನ ಲಾಂಛನ ಹೀಗೆ ಅರಿಸ್ಟೋಫೆನೀಸ್‌ನ ಹಣೆಯಲ್ಲಿ ಕಂಗೊಳಿಸುತ್ತದೆ. (ಎಸ್.ವಿ.ಆರ್.)

**ಅರೀಢಕ ಸಂಧಿದೇಹಿಗಳು :** ಬ್ರಾಕಿಯೋಪೊಡ ವಂಶದ ಒಂದು ಉಪವರ್ಗ. ಪಾರ್ಶ್ವಸಮಸೌಷ್ಠವವುಳ್ಳ, ಚಿಪ್ಪಿರುವ ಸಮುದ್ರ ಜೀವಿಗಳು (ಆರ್ಟಿಕ್ಯುಲೇಟ). ಈಗ ಜೀವಿಸಿರುವ ಬ್ರಾಕಿಯೋಪೊಡಗಳಲ್ಲಿ ಹೆಚ್ಚು ಪ್ರಾಣಿಗಳು ಈ ವರ್ಗಕ್ಕೆ ಸೇರಿವೆ. ಇವುಗಳಿಗೆ ಸುಣ್ಣದಿಂದಾದ ಎರಡು ಚಿಪ್ಪುಗಳಿವೆ. ಒಂದರಂತೆ ಮತ್ತೊಂದಿಲ್ಲ. ತಮ್ಮ ಹಿಂಬದಿಯಲ್ಲಿ ಕುಳಿ ಮತ್ತು ಹಲ್ಲುಗಳಿಂದ ಒಂದಕ್ಕೊಂದು ಕಚ್ಚಿಕೊಳ್ಳುವಂತಿವೆ. ಆರ್ಟಿಕ್ಯುಲೇಟದಲ್ಲಿ ಬ್ರೇಕಿಡಿಯಂ ಎಂಬ ದೃಢತೆಯಿಂದಾಗುವ ಆಂತರಿಕ ಪಂಜರ ಇದೆ. ಕೆಲವಕ್ಕೆ ತೊಟ್ಟು ಉಂಟು. ಈ ತೊಟ್ಟು ಹೊರಗೆ ಬರಲು ಕೆಳಗಿನ ಚಿಪ್ಪಿನಲ್ಲಿ ಒಂದು ರಂಧ್ರವಿದೆ. ಇದರಲ್ಲಿನ ಬಿಳಂಗಿ (ಮ್ಯಾಂಟಲ್) ರೂಪಪರಿವರ್ತನೆಯ ಕಾಲದಲ್ಲಿ ತಿರುಗು ಮುರುಗಾಗುವುದು. ಈ ಪ್ರಾಣಿಗಳು ಸಮುದ್ರದಲ್ಲಿ ಉಬ್ಬರವಿಳಿತದ ಜಾಗದಿಂದ ಹಿಡಿದು ಅತಿ ಆಳದವರೆಗೆ ಸಮುದ್ರ ತಳದಲ್ಲಿನ ಪ್ರಾಣಿ, ವಸ್ತುಗಳಿಗೆ ಕಚ್ಚಿಕೊಂಡಿರುತ್ತವೆ. ಮ್ಯೂರ್‌ವುಡ್‌ನ ಪ್ರಕಾರ ಇರುವ 25 ಕುಟುಂಬಗಳಲ್ಲಿ 21 ಈಗ ಅಳಿದು ಹೋಗಿವೆ. (ಸಿ.ಎಂ.ಎಸ್.)

**ಅರುಂಧತಿ :** ವಸಿಷ್ಠ ಮಹರ್ಷಿಯ ಹೆಂಡತಿ. ಶಕ್ತಿ ಮಹರ್ಷಿಯ ತಾಯಿ. ಸ್ವಾಯಂಭುವಮನುಪುತ್ರಿಯಾದ ದೇವಹೂತಿ ಇವಳ ತಾಯಿ. ಕರ್ದಮಮುನಿ ತಂದೆ. ಅಕ್ಷಮಾಲೆ, ಊರ್ಜೆ ಈಕೆಯ ಇನ್ನೆರಡು ಹೆಸರುಗಳು. ಅನಸೂಯೆ, ಶಾಂತಿ, ಖ್ಯಾತಿ, ಕ್ರಿಯೆ, ಗತಿ, ಹವಿರ್ಭುಕ್, ಶ್ರದ್ಧೆ, ಕಲೆ ಮುಂತಾದ ಋಷಿಪತ್ನಿಯರೂ ಕಪಿಲ ಮಹರ್ಷಿಯೂ ಈಕೆಯ ಒಡಹುಟ್ಟಿದವರು. ಒಮ್ಮೆ ಪತಿದ್ರೋಹ ಮಾಡಿದ್ದರಿಂದ ಸೂಕ್ಷ್ಮ ರೂಪವನ್ನು ತಳೆದಳು. ಅಗ್ನಿ ಸಪ್ತರ್ಷಿಗಳ ಹೆಂಡಿರನ್ನು ಕಾಮಿಸಿದಾಗ, ಸ್ವಾಹಾದೇವಿ ಆರು ಋಷಿಪತ್ನಿಯರ ರೂಪವನ್ನು ಮಾತ್ರ ಧರಿಸಲು ಸಮರ್ಥಳಾಗಿ ಅಗ್ನಿಯನ್ನು ಸಂತುಷ್ಟಿಪಡಿಸಿದಳು; ಆದರೆ ಅರುಧಂತಿಯ ರೂಪವನ್ನು ಧರಿಸಲು ಅವಳಿಂದಾಗಲಿಲ್ಲ. ಈಕೆ ತನ್ನ ಪತಿಯ ಎದುರಿಗೆ ಬಂದರೆ ಅದು ಲೋಕಕ್ಕೊಂದು ಬಗೆಯ ಉತ್ಪಾತಸೂಚಕ ಎಂದು ಹೇಳುತ್ತಾರೆ. ಒಮ್ಮೆ ಉಕ್ಕಿನ ಬೋರೆ ಹಣ್ಣುಗಳನ್ನು ಪಾಕಮಾಡಿ ಈಶ್ವರನನ್ನು ಮೆಚ್ಚಿಸಿ, ಅವನಿಂದ ವರ ಪಡೆದಳು. ಈಕೆಯ ಹೆಸರಿನ ನಕ್ಷತ್ರವನ್ನು ಕಾಣಲು ಆಗದವರಿಗೆ ಮೃತ್ಯು ಸನ್ನಿಹಿತವಾಗಿದೆಯೆಂಬುದೊಂದು ಹೇಳಿಕೆ ಇದೆ. ಒಮ್ಮೆ ಋಷಿಸಮೂಹಕ್ಕೆ ಅನೇಕ ಧರ್ಮರಹಸ್ಯಗಳನ್ನು ಬೋಧಿಸಿದಳು. ಮದುವೆಯಾದ ರಾತ್ರಿ ಹೊಸ ದಂಪತಿಗಳಿಗೆ ಈ ನಕ್ಷತ್ರವನ್ನು ತೋರಿಸುವ ಪದ್ಧತಿ ತ್ರಿವರ್ಣದವರಲ್ಲೂ ಸಂಪ್ರದಾಯವಾಗಿದೆ. (ಎಸ್.ಕೆ.ಆರ್.)

ಸಪ್ತರ್ಷಿಮಂಡಲ (ಅರ್ಸಾ ಮೇಜರ್) ನಕ್ಷತ್ರಪುಂಜದ ಹಿಡಿಯಭಾಗದಲ್ಲಿ ಎರಡನೆಯ ನಕ್ಷತ್ರವಾದ ವಸಿಷ್ಠದ (ಮೈಝಾರ್) ಒತ್ತಿಗೆ, ಧ್ರುವನಕ್ಷತ್ರದೆಡೆಗೆ ಇರುವ ಮಂದ ಪ್ರಕಾಶದ ನಕ್ಷತ್ರ ಅರುಧಂತಿ (ಆಲ್ಗೋರ್).

*

**ಅರುಂಧತಿ ನಾಗ್ :** ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆ. ಪ್ರಸಿದ್ಧ ನಟ ಹಾಗೂ ನಿರ್ದೇಶಕ ಶಂಕರ್‌ನಾಗ್ (ನೋಡಿ) ಅವರ ಪತ್ನಿ. ಇವರ ಆರಂಭದ ಜೀವನ ಮುಂಬಯಿಯಲ್ಲಿ ಕಳೆಯಿತು. ಅಲ್ಲಿರುವಾಗ ಮುಂಬಯಿನ ಹವ್ಯಾಸಿ ರಂಗಭೂಮಿಯ ಸಕ್ರಿಯ ವ್ಯಕ್ತಿಯಾಗಿದ್ದರು. ಮರಾಠಿ, ಗುಜರಾತಿ, ಹಿಂದಿ, ಇಂಗ್ಲಿಷ್ ಮೊದಲಾದ ಭಾಷೆಗಳಲ್ಲೂ ಅಭಿನಯಿಸುತ್ತಿದ್ದರು. ಇವರು ಕೆಲವೊಮ್ಮೆ ತಿಂಗಳಲ್ಲಿ 42

ಪ್ರದರ್ಶನಗಳನ್ನು ಕೊಟ್ಟದ್ದೂ ಇದೆ. ಈ ದಿನಗಳಲ್ಲೇ ಸಹ ರಂಗನಟ ಶಂಕರನಾಗ್ ಅವರ ಪರಿಚಯವಾಯಿತು. ಪರಿಚಯ ಪ್ರೇಮವಾಗಿ ವಿವಾಹ ವಾದರು. ಅನಂತರ ಇಬ್ಬರೂ ಬೆಂಗಳೂರಿನಲ್ಲಿ ನೆಲೆಸಿ ರಂಗ ಭೂಮಿ ಹಾಗೂ ಚಲನಚಿತ್ರ – ಈ ಎರಡೂ ಕ್ಷೇತ್ರಗಳಲ್ಲಿ ಇಬ್ಬರೂ ಕೆಲಸ ಮಾಡ ತೊಡಗಿದರು. ಈ ಎಲ್ಲ ಸಂದರ್ಭಗಳಲ್ಲಿ ಪತಿ ಶಂಕರನಾಗ್‌ಗೆ ನೆರವಾದರು. ಕೆಲವು ಸಂದರ್ಭಗಳಲ್ಲಿ ಶಂಕರನಾಗ್ ಅವರಿಗೆ ಸಹಾಯಕ ನಿರ್ದೇಶಕರಾಗಿಯೂ ಕೆಲಸ ಮಾಡಿದರು. ಶಂಕರನಾಗ್ ಹಿಂದಿಯ ಕಿರುತೆರೆಗಾಗಿ ಸಿದ್ಧಪಡಿಸಿದ

ಆರ್.ಕೆ.ನಾರಾಯಣ್ ಅವರ 'ಮಾಲ್ಗುಡಿ ಡೇಸ್' ಇವರಿಬ್ಬರಿಗೂ ಅಪಾರ ಖ್ಯಾತಿಯನ್ನು ತಂದುಕೊಟ್ಟಿತು. ಅರುಂಧತಿಯವರು ಅನೇಕ ನಾಟಕ ಹಾಗೂ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನೋಡಿ ಸ್ವಾಮಿ ನಾವಿರೋದು ಹೀಗೆ ಎಂಬ ನಾಟಕ ಇವರ ಅಭಿನಯದ ಅತ್ಯಂತ ಜನಪ್ರಿಯ ನಾಟಕ. ಇದು ಚಲನಚಿತ್ರವಾಗಿಯೂ ಅಪಾರ ಯಶಸ್ವಿಯಾಯಿತು. ಆಕ್ಸಿಡೆಂಟ್, ಗೋಲಿಬಾರ್, ಪರಮೇಶಿಯ ಪ್ರೇಮ ಪ್ರಸಂಗ ಇವರ ಅಭಿನಯದ ಇತರ ಚಿತ್ರಗಳು. ಮಣಿರತ್ನಂ ಅವರ ದಿಲ್‌ಸೆ ಎಂಬ ಹಿಂದಿ ಚಿತ್ರದಲ್ಲಿ ಒಂದು ಚಿಕ್ಕ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅನಂತರ 'ಪಾ' ಎಂಬ ಹಿಂದಿ ಚಿತ್ರದಲ್ಲಿ ಅಭಿನಯಿಸಿ ಅಪಾರ ಮನ್ನಣೆಗಳಿಸಿದರು. ಶಂಕರ್‌ನಾಗ್ ನಿರ್ದೇಶನದ 'ಒಂದು ಮುತ್ತಿನ ಕಥೆ' ಚಿತ್ರಕ್ಕೆ ವಸ್ತ್ರ ವಿನ್ಯಾಸಕಿಯಾಗಿ ದುಡಿದಿದ್ದಾರೆ. ಕಾರು ಅಪಘಾತವೊಂದರಲ್ಲಿ ಶಂಕರನಾಗ್ ನಿಧನರಾದಾಗ ಅದೇ ಕಾರಿನಲ್ಲಿದ್ದ ಅರುಂಧತಿ ಪ್ರಾಣಾಪಾಯದಿಂದ ಪಾರಾದರು. ಪತಿಯನ್ನು ಕಳೆದುಕೊಂಡು ಕೆಲಕಾಲ ಎಲ್ಲ ಚಟುವಟಿಕೆಗಳಿಂದ ದೂರವಿದ್ದ ಇವರು ಅನಂತರ ಶಂಕರನಾಗ್ ಅವರ ಕನಸಿನ ಕಲ್ಪನೆಯ ರಂಗಶಂಕರ ಎಂಬ ಸಮಗ್ರ ನಾಟಕ ಚಟುವಟಿಕೆಯ ಕೇಂದ್ರವೊಂದರ ನಿರ್ಮಾಣದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಸುಮಾರು ಮೂರು ಕೋಟಿ ರೂಪಾಯಿ ವೆಚ್ಚದ ಈ ರಂಗಭೂಮಿ ಸಂಕೀರ್ಣ ಯೋಜನೆ ಈಗ ಪೂರ್ಣಗೊಂಡಿದ್ದು ಕಾರ್ಯ ಚಟುವಟಿಕೆಯನ್ನು ಆರಂಭಿಸಿದೆ (2004). ಸಂಕೇತ್ ಟ್ರಸ್ಟ್ 'ರಂಗಶಂಕರ'ದ ಚಟುವಟಿಕೆಗಳನ್ನು ನೋಡಿಕೊಳ್ಳುತ್ತದೆ. ಗಿರೀಶ್ ಕಾರ್ನಾಡ್ ರಂಗಶಂಕರದ ಅಧ್ಯಕ್ಷರು. ಅರುಂಧತಿ ಅದರ ಕಾರ್ಯನಿರ್ವಾಹಕ ಸದಸ್ಯರು.

*

**ಅರುಣಗಿರಿ :** ನೋಡಿ – ಅರುಣಾಚಲ

**ಅರುಣಗಿರಿನಾಥ :** 15ನೆಯ ಶತಮಾನದ ತಮಿಳು ಕವಿ. ತಮಿಳುನಾಡಿನ ಉತ್ತರ ಆರ್ಕಾಟು ಜಿಲ್ಲೆಯಲ್ಲಿರುವ ತಿರುವಣ್ಣಾಮಲೈ ಜನ್ಮಸ್ಥಳ. ತಾಯಿ ಮುತ್ತಮ್ಮೈ. ಅಕ್ಕನ ಆರೈಕೆಯಲ್ಲಿ ಬೆಳೆದು, ಹೆಚ್ಚೇನೂ ಓದದೆ ಚಿಕ್ಕವನಾಗಿದ್ದಾಗಲೇ ದುರ್ವ್ಯಸನಗಳಿಗೆ ಬಲಿಯಾಗಿ, ದೇಹಾರೋಗ್ಯವನ್ನೂ ಕುಟುಂಬದ ಆಸ್ತಿಯನ್ನೂ ಕಳೆದುಕೊಂಡ. ಸೋದರಿ ಇದಕ್ಕಾಗಿ ಖಂಡಿಸಿ ಬಿರುನುಡಿಯಲು ಮನನೊಂದು ಆತ್ಮಹತ್ಯೆಮಾಡಿಕೊಳ್ಳಲು ನಿರ್ಧರಿಸಿದ. ತಿರುವಣ್ಣಾಮಲೈ ದೇವಾಲಯದ ಗೋಪುರದ ಮೇಲೇರಿ ಸಾಯಬೇಕೆಂದು ಕೆಳಗೆ ಹಾರಿದ. ಆಗೊಬ್ಬ ಸನ್ಯಾಸಿ (ಸುಬ್ರಹ್ಮಣ್ಯನೆ ಆ ಸಂನ್ಯಾಸಿ ಎಂದು ನಂಬಿಕೆ) ಅವನನ್ನು ನೆಲಕ್ಕೆ ಬೀಳಗೊಡದೆ ಹಿಡಿದು ಕಾಪಾಡಿದುದಲ್ಲದೆ, ದೈವಜ್ಞಾನೋಪದೇಶ ಮಾಡಿದ. ಮುರುಗನನ್ನು ಸ್ತುತಿಸಿ ಹಾಡುವಂತೆ ಅಪ್ಪಣೆ ಮಾಡಿದ. ಕೂಡಲೇ ಅರುಣಗಿರಿನಾಥ ಭಕ್ತಿಪರವಶನಾಗಿ ಹಾಡಲಾರಂಭಿಸಿದ. ಇದಾದ ಮೇಲೆ ಸಂನ್ಯಾಸಿಯಾಗಿ ತಿರುವಣ್ಣಾಮಲೈನ ಒಂದು ಮಠದಲ್ಲಿ ವಾಸಿಸ ತೊಡಗಿದ. ಅರುಣಗಿರಿಯ ನಾಥನನ್ನು ಅಂದರೆ ತನ್ನ ಆರಾಧ್ಯದೈವವನ್ನು ಹಾಡುಗಳಿಂದ ಅನುದಿನವೂ ಸ್ತುತಿಸಿ ಅರ್ಚಿಸಿದ, ಕೆಲವು ಕಾಲಾನಂತರ ಶೈವ ನಾಯನಾರುಗಳಂತೆ ತಾನೂ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ಅಲ್ಲಲ್ಲಿಯ ದೇವರನ್ನು ಪೂಜಿಸಬೇಕೆಂದು ಬಯಸಿ, ತೀರ್ಥಯಾತ್ರೆ ಕೈಗೊಂಡ. ಮುಖ್ಯವಾಗಿ ಸುಬ್ರಹ್ಮಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ, ಹಲವು ಗೀತೆಗಳನ್ನು ಹಾಡಿದ, ದೇವರ ಮಹಿಮೆಗಳನ್ನು ಕೊಂಡಾಡುವ ಈ ಗೀತೆಗಳು, ತಿರುಪ್ಪುಗಳ್ ಎಂಬ ಹೆಸರಿನಿಂದ ಸಂಗ್ರಹಿತವಾಗಿವೆ.

ಭಾರತವನ್ನು ತಮಿಳಿನಲ್ಲಿ ರಚಿಸಿದ ವಿಲ್ಲಿಪುತ್ತೂರಾರ್ ಈತನ ಸಮಕಾಲೀನ. ಈತ ಸಾಧಾರಣಪಂಡಿತರನ್ನು ಕಂಡರೆ ವಾದಕ್ಕೆಳೆದು, ಸೋಲಿಸಿ ಸೋತವರ ಕಿವಿಗಳನ್ನು ಕೊಯ್ಯುತ್ತಿದ್ದ. ಅರುಣಗಿರಿನಾಥ ಈತನ ಗರ್ವಭಂಗಮಾಡಿದರೂ ಸ್ನೇಹ ಮತ್ತು ದಯೆಯಿಂದ ಕಂಡುಕೊಂಡ.

ಅರುಣಗಿರಿನಾಥನ ಪವಾಡಗಳು ಹಲವಿವೆ. ಅಂಥವುಗಳಲ್ಲಿ ಮುಖ್ಯವಾದ್ದು ಅವನ ಸಮಕಾಲೀನನಾದ ಪ್ರೌಢದೇವರಾಯನಿಗೆ ಸುಬ್ರಹ್ಮಣ್ಯನನ್ನು ಪ್ರತ್ಯಕ್ಷದರ್ಶನ ಮಾಡಿಸಿದ್ದು. ಅದಕ್ಕಾಗಿ ಮಯಿಲ್‌ವಿರುತ್ತಂ ಎಂಬ ಗ್ರಂಥ ರಚಿಸಿದ್ದಾನೆ. ಇನ್ನೊಂದು ಪವಾಡ, ದೇವಲೋಕದ ಪುಷ್ಪವಾದ ಕರ್ಪಕ ಮಲರ್ ಎಂಬುದನ್ನು ತರಲು ಗಿಳಿರೂಪದಲ್ಲಿ ಹೋದುದು. ಜೀವವಿಲ್ಲದ ಇವನ ದೇಹವನ್ನು ನೋಡಿದ ಜನರು, ಸತ್ತನೆಂದು ತಿಳಿದು ದೇಹವನ್ನು ದಹಿಸಿಬಿಡಲು, ಕವಿ ಗಿಳಿರೂಪದಲ್ಲಿಯೇ ಉಳಿದನಂತೆ.

ನಮಗೆ ದೊರೆಯುವ ತಿರುಪ್ಪುಗಳ್‌ನಲ್ಲಿ ಸಾವಿರಕ್ಕಿಂತ ಸ್ವಲ್ಪ ಹೆಚ್ಚು ಸಂಖ್ಯೆಯ ಹಾಡುಗಳು ಮಾತ್ರ ಸಿಗುತ್ತವೆ. ಅದಲ್ಲದೆ ಕಂದರ್ ಅನುಭೂತಿ, ಕಂದರ್ ಅಲಂಕಾರಂ, ಕಂದರ್ ಅಂತಾದಿ, ತಿರುವಗುಪ್ಪು, ವೇಲ್‌ವಿರುತ್ತಂ ಮತ್ತು ಮೊದಲೇ ಹೇಳಿದ ಮಯಿಲ್‌ವಿರುತ್ತಂ ಎಂಬ ಗ್ರಂಥಗಳನ್ನು ಈತ ರಚಿಸಿದ್ದಾನೆ.

ಸಂಗೀತರೂಪದಲ್ಲಿ ತಾಳಬದ್ಧವಾಗಿ ಹಾಡಲು ಅನುಕೂಲವಾಗುವಂತೆ ಅನುಪ್ರಾಸಾದಿ ಶಬ್ದಾಲಂಕಾರಗಳಿಂದ ಕೂಡಿ ಈ ಹಾಡುಗಳು ರಚಿತವಾಗಿವೆ. ಸುಬ್ರಹ್ಮಣ್ಯನ ಮೇಲೆ ವಿಶೇಷಭಕ್ತಿಯುಳ್ಳವರು ಇವನ್ನು ಮೆಚ್ಚಿ ಓದುತ್ತಾರೆ. ಆದರೆ, ಸಾಹಿತ್ಯದೃಷ್ಟಿಯಿಂದ ಈ ಗ್ರಂಥಗಳು ಸಾಧಾರಣ. ಹಾಡುಗಳು ಸಂಸ್ಕೃತ ಪದಭೂಯಿಷ್ಠವಾಗಿವೆ. ಹಲವು ಸಂಸ್ಕೃತ ಶಬ್ದಗಳು ತಮಿಳಿನಲ್ಲಿ ಪ್ರಯೋಗವಾಗುವಾಗ ಸಹಜವಾಗಿ ಆಗುವ ವ್ಯತ್ಯಾಸಗಳೂ ಆಗದೆ ಪ್ರಯೋಗವಾಗಿವೆ. ಇದು ಈ ಕವಿಯ ವೈಶಿಷ್ಟ್ಯ. ತಿರುಪ್ಪುಗಳ್‌ನಲ್ಲಿ ವೇಶ್ಯೆಯರ ನಡತೆಗಳ ಟೀಕೆ ಮತ್ತು ಇತರ ಶೃಂಗಾರ ವಿಷಯಗಳ ಪ್ರತಿಪಾದನೆ ಇದೆ.

ಒಂದೊಂದು ಹಾಡಿನಲ್ಲಿ ಹಲವು ಪುರಾಣ ಕಥೆಗಳು ಎಡೆಗೊಳ್ಳುತ್ತವೆ. ಸಾಮಾನ್ಯವಾಗಿ ಹಾಡುಗಳು ಕ್ಲಿಷ್ಟವಾಗಿದ್ದು, ಸುಲಭದಲ್ಲಿ ಅರ್ಥವಾಗುವುದಿಲ್ಲ. ಮುಖ್ಯವಾಗಿ ಇವು ಸುಬ್ರಹ್ಮಣ್ಯನನ್ನು ಕುರಿತಾದ ಭಕ್ತಿಸ್ತೋತ್ರಗಳಾಗಿರುವುವಾದರೂ ಅನ್ಯದೈವ ಸ್ತುತಿಗಳು, ಅನ್ಬಿನ್ ಶಿರಪ್ಪು (ಪ್ರೀತಿಯ ಹಿರಿಮೆ), ಶಿವನಡಿಯಾರ್ ಇಣಕ್ಕಂ (ಶಿವಭಕ್ತ ಸಂಗ), ಆಶೈ ಅಡಕ್ಕಂ (ಆಸೆಯನ್ನು ಅಂಕಿತಗೊಳಿಸುವುದು), ಅಯೋಗ್ಯರನ್ನು ಹಾಡಿಹೊಗಳುವುದರಿಂದ ಬರುವ ಕೇಡು, ಮತೀಯಕಲಹಗಳ ನಿಷ್ಫಲತೆ, ತೊಂಡಿನ್ ಶಿರಪ್ಪು (ಸೇವೆಯ ಮಹತ್ತ್ವ) ಮುಂತಾದ ಇತರ ವಿಷಯಗಳನ್ನೂ ಹೆಚ್ಚು ನಿಖರವಾಗಿ ಇಲ್ಲಿ ಕಾಣಬಹುದು. (ಎಸ್.ವಿ.ಎಸ್.)

**ಅರುಣಾಚಲ :** ಈಗಿನ ತಿರುವಣ್ಣಾಮಲೈ. ಅರುಣಗಿರಿ ಎಂಬ ಹೆಸರೂ ಇದೆ. ವಿಳ್ಳುಪುರಂ-ಕಾಟ್ಪಾಡಿ ರೈಲು ಮಾರ್ಗದಲ್ಲಿದೆ. ಇಲ್ಲಿನ ಅರುಣಾಚಲೇಶ್ವರ ದೇವಸ್ಥಾನ ಪಂಚ ಮಹಾಲಿಂಗಗಳಲ್ಲಿ ಒಂದಾದ ಜ್ಯೋತಿರ್ಲಿಂಗವಿರುವ ಸ್ಥಾನ. ವಿಷ್ಣುವಿಗೂ ಬ್ರಹ್ಮನಿಗೂ ನಾ ಹೆಚ್ಚು ತಾ ಹೆಚ್ಚು ಎಂಬ ವಿವಾದ ಹುಟ್ಟಿದಾಗ ಅವರ ಅಹಂಕಾರ ಮುರಿಯಲು ಶಿವ ಅನಂತ ತೇಜೋಲಿಂಗವಾಗಿ ಬೆಳೆದು ತನ್ನ ನಖಶಿಖಗಳನ್ನು ಗುರುತಿಸುವಂತೆ ಅವರನ್ನು ಕೇಳಿದನಂತೆ.

ವಿಷ್ಣು ವರಾಹನಾಗಿ ಶಿವನ ಅಡಿಯನ್ನೂ ಬ್ರಹ್ಮ ಹಂಸನಾಗಿ ಶಿವನ ಮುಡಿಯನ್ನೂ ಹುಡುಕಿ ಕಾಣಲಾಗದೆ ಶಿವ ತಮ್ಮಿಬ್ಬರಿಗಿಂತ ದೊಡ್ಡವನೆಂಬ ಸತ್ಯವನ್ನು ಕಂಡರಂತೆ. ಇದು ನಡೆದದ್ದು ಮಾಘಕೃಷ್ಣ ಚತುರ್ದಶಿ. ಬ್ರಹ್ಮ ವಿಷ್ಣುಗಳಿಗೆ ಶಿವಾನುಗ್ರಹ ದೊರೆತದ್ದು ಕಾರ್ತಿಕ ಪೂರ್ಣಿಮೆಯ ದಿನ. ಆ ದಿನದ ಉತ್ಸವ ಅರುಣಾಚಲದಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ. ಈ ದೇವಾಲಯದ ಪಕ್ಕದಲ್ಲಿರುವ 914 ಮೀ ಎತ್ತರದ ಪರ್ವತ ಲಿಂಗಾಕಾರವಾಗಿದ್ದು, ಅದೇ ಶಿವಸ್ವರೂಪವೆಂದು ಪ್ರಸಿದ್ಧವಾಗಿದೆ. ದೇವಾಲಯ ವಿಶಾಲವಾಗಿದ್ದು, ಶಿಲ್ಪಕಲಾಸಂಪನ್ನವಾಗಿದೆ. ಪಾರ್ವತಿ ಇಲ್ಲಿಯೇ ಶಿವನ ವಾಮಾರ್ಧಕ್ಕಾಗಿ ತಪಸ್ಸು ಮಾಡಿದಳಂತೆ. ಸುಬ್ರಹ್ಮಣ್ಯ ಭಕ್ತನಾದ ಅರುಣಗಿರಿನಾಥನಿಗೆ ಇದು ಜನ್ಮಸ್ಥಳ. ರಮಣ ಮಹರ್ಷಿಗಳು ಇಲ್ಲಿ ವಾಸವಾಗಿದ್ದು ಕ್ಷೇತ್ರದ ಪ್ರಖ್ಯಾತಿಗೆ ಕಾರಣರಾದರು.

(ಎಸ್.ಕೆ.ಆರ್.; ಜಿ.ಎಚ್.; ಎ.ಕೆ.)

**ಅರುಣಾಚಲ ಪ್ರದೇಶ :** ಭಾರತದ ಒಂದು ರಾಜ್ಯ. 1962ಕ್ಕಿಂತ ಹಿಂದೆ ಅರುಣಾಚಲ ಪ್ರದೇಶ ರಾಜ್ಯವನ್ನು ಈಶಾನ್ಯ ಗಡಿನಾಡಿನ ಏಜೆನ್ಸಿ ಎಂದು ಕರೆಯಲಾಗುತ್ತಿತ್ತಲ್ಲದೇ ಅಸ್ಸಾಂ ರಾಜ್ಯದ ಒಂದು ಭಾಗವಾಗಿತ್ತು. 1972ರಲ್ಲಿ ಕೇಂದ್ರಾಡಳಿತ ಪ್ರದೇಶವಾಗಿ ಪರಿಗಣಿಸಲ್ಪಡುವುದರ ಜೊತೆಗೆ ಅರುಣಾಚಲಪ್ರದೇಶವೆಂದು ಪುನರ್ ನಾಮಕರಣ ಮಾಡಲಾಯಿತು. 1987 ಫೆಬ್ರವರಿ 20 ರಂದು ಇದು ಭಾರತ ಒಕ್ಕೂಟದ 24ನೆಯ ರಾಜ್ಯವಾಗಿ ಜಾರಿಗೆ ಬಂದಿತು. ಸನ್ನಿವೇಶ ಮತ್ತು ವಿಸ್ತೀರ್ಣ: ಈ ರಾಜ್ಯ $26^{0}$–28′ ಉತ್ತರ ಅಕ್ಷಾಂಶದಿಂದ $29^{0}$–30′ ಉ.ಅಕ್ಷಾಂಶದ ವರೆಗೂ ರೇಖಾಂಶಿಕವಾಗಿ $91^{0}$30′ ಪೂ.ರೇ. ದಿಂದ $96^{0}$30′ ಪೂ.ರೇ. ದವರೆಗೂ ವಿಸ್ತರಿಸಿದೆ.

ಈ ರಾಜ್ಯ ಪೂರ್ವದಲ್ಲಿ ಮಯನ್ಮಾರ್, ಪಶ್ಚಿಮದಲ್ಲಿ ಭೂತಾನ್, ಉತ್ತರದಲ್ಲಿ ಚೀನ ಮತ್ತು ಟಿಬೆಟ್‌ಗಳ ಅಂತಾರಾಷ್ಟ್ರೀಯ ಗಡಿಗಳನ್ನು ಹೊಂದಿದ್ದರೆ, ದಕ್ಷಿಣದಲ್ಲಿ ಅಸ್ಸಾಂ ಮತ್ತು ನಾಗಾಲ್ಯಾಂಡ್ ರಾಜ್ಯಗಳ ಗಡಿಗಳನ್ನು ಹೊಂದಿದೆ. ಈ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 83,743 ಚ.ಕಿಮೀ. ಇದು 16 ಜಿಲ್ಲೆಗಳನ್ನು ಹೊಂದಿದ್ದು, ಇಟಾನಗರ ಈ ರಾಜ್ಯದ ರಾಜಧಾನಿಯಾಗಿದ್ದು ಸಮುದ್ರಮಟ್ಟದಿಂದ 530 ಮೀ ಎತ್ತರದಲ್ಲಿದೆ. ಜನಸಂಖ್ಯೆ 1,091,117.

ತಂಗಪಾಣಿಯಲ್ಲಿರುವ ಲೋಹಿತ ದೇವಾಲಯ

**ಮೇಲ್ಮೈ ಲಕ್ಷಣ :** ಅರುಣಾಚಲ ಪ್ರದೇಶ ಭಾರತದ ಈಶಾನ್ಯ ಗಡಿ ಭಾಗದ ಹಿಮಾಲಯ ಪರ್ವತಗಳ ಭಾಗದಲ್ಲಿರುವ ರಾಜ್ಯವಾಗಿದೆ. ಇದು ನಾಲ್ಕು ಮೇಲ್ಮೈ ಲಕ್ಷಣಗಳಿಂದ ಕೂಡಿದೆ. 1) ಪರ್ವತ ಶ್ರೇಣಿಗಳು 2) ಉಪ ಪರ್ವತ ಪ್ರದೇಶ 3) ನದಿ ಕಣಿವೆ ಪ್ರದೇಶಗಳು 4) ಪರ್ವತದ ಇಳಿಜಾರುಗಳು.

ಹಿಮಾಲಯದ ಶಿವಾಲಿಕ್ ಭಾಗ ಈ ರಾಜ್ಯದಲ್ಲಿ ಹಲವಾರು ಶ್ರೇಣಿಗಳನ್ನು ಹೊಂದಿದೆ. ಶಿವಾಲಿಕ್ ಪ್ರದೇಶಕ್ಕೆ ಹೊಂದಿಕೊಂಡಂತೆ ಹಬ್ಬಿರುವ ಹಲವಾರು ಬೆಟ್ಟ ಸರಣಿಗಳು ಈ ರಾಜ್ಯದಲ್ಲಿ ಉತ್ತರ ದಕ್ಷಿಣಾಭಿಮುಖವಾಗಿ ಹಬ್ಬಿವೆ. ಈ ರಾಜ್ಯದಲ್ಲಿ ಟಿಬೆಟ್‌ನಿಂದ ಭಾರತಕ್ಕೆ ಪ್ರವೇಶಿಸುವ ಬ್ರಹ್ಮಪುತ್ರಾ ನದಿ ಪ್ರಮುಖವಾದದ್ದು. ಇಲ್ಲಿನ ನದಿಗಳು ತಮ್ಮ ಪಾತ್ರವನ್ನು ಆಳವಾಗಿ ಕೊರೆದು ಕಣಿವೆ ಪ್ರದೇಶವನ್ನು ನಿರ್ಮಿಸುವುದರ ಜೊತೆಗೆ, ಅಸ್ಸಾಂ ರಾಜ್ಯದ ಮೈದಾನದಿಂದ ಇದನ್ನು ಪ್ರತ್ಯೇಕಿಸಿವೆ. ಎತ್ತರವಾದ ತಳ ಹಿಮಲಾಯದ (ಶಿವಾಲಿಕ್) ಭಾಗದಿಂದ ತಗ್ಗಾದ ನದಿ ಕಣಿವೆ ಪ್ರದೇಶದ ಕಡೆಗೆ ಈ ರಾಜ್ಯದುದ್ದಕ್ಕೂ ಇಳಿಜಾರು ಪ್ರದೇಶ ಕಂಡುಬರುತ್ತದೆ.

**ಜಲವ್ಯವಸ್ಥೆ :** ಈ ರಾಜ್ಯ ಎತ್ತರವಾದ ಪರ್ವತ ಭಾಗದಿಂದ ಕೂಡಿದ್ದು ಇಳಿಜಾರನ್ನು ಹೊಂದಿ ಹಾಗೂ ವಾರ್ಷಿಕವಾಗಿ 500 ಸೆಂಮೀ ಮಳೆಯನ್ನು ಪಡೆಯುವುದರಿಂದ ಇಲ್ಲಿ ಸರೋವರಗಳು ಮತ್ತು ನದಿಗಳು ಉಗಮ ಹೊಂದಿವೆ.

ಹಲವಾರು ನದಿಗಳು ತಗ್ಗು ಪ್ರದೇಶದ ಕಡೆಗೆ ಹರಿಯುವುದರ ಜೊತೆಗೆ ಆಳವಾದ ಕಣಿವೆಗಳನ್ನು ನಿರ್ಮಿಸಿವೆ. ಇಲ್ಲಿ ಹರಿಯುವ ಪ್ರಮುಖ ನದಿ ಬ್ರಹ್ಮಪುತ್ರ. ಇದು ಭಾರತದ ಪ್ರಮುಖ ನದಿಗಳಲ್ಲೊಂದಾ ಗಿದ್ದು, ಟಿಬೆಟ್ಟಿನಿಂದ ಹರಿದು ಬಂದು ಅರುಣಾಚಲ ಪ್ರದೇಶ ಹಾಗೂ ಅಸ್ಸಾಂ ರಾಜ್ಯಗಳ ಮೂಲಕ ಹರಿದು ಬಂಗಾಲಕೊಲ್ಲಿಗೆ ಸೇರುವ ಮೊದಲು ಬಾಂಗ್ಲಾದೇಶದ ಮೂಲಕವೂ ಹರಿಯುತ್ತದೆ. ಇಲ್ಲಿ ಕಾಮೆಂಗ್, ಸುಬನ್ ಸಿರಿ, ಸಿಯಾಂಗ್, ಲೋಹಿತ್ ಮತ್ತು ಟೆರಾಪ್, ಕಾಮ್ಲು, ಶಿವೂಮ್, ದಿಬಾಂಗ್, ನೋಹಾ – ದಿಹಾಂಗ್, ಕಾಮ್ಪಾಂಗ್ ಮುಂತಾದವು ಪ್ರಮುಖ ನದಿಗಳು.

**ಮಣ್ಣಿನ ಪ್ರಕಾರಗಳು :** ಈ ರಾಜ್ಯದ ಪರ್ವತ ಪ್ರದೇಶಗಳು ದಟ್ಟ ಅರಣ್ಯಗಳನ್ನು ಹೊಂದಿದ್ದು, ಹೆಚ್ಚು ಮಳೆಯನ್ನು ಪಡೆಯುವುದರಿಂದ ವಿಭಿನ್ನ ರೀತಿಯ ಮಣ್ಣುಗಳನ್ನು ಹೊಂದಿದೆ. ಇಲ್ಲಿ ನಾಲ್ಕು ವಿಧದ ಮಣ್ಣುಗಳನ್ನು ಕಾಣಬಹುದು: 1) ಅರಣ್ಯ ಮಣ್ಣು: ಇದು ಎತ್ತರವಾದ ಬೆಟ್ಟ ಹಾಗೂ ಪರ್ವತ ಪ್ರದೇಶಗಳಲ್ಲಿ ಕಂಡು ಬರುತ್ತದೆ. ತೆಳು ಕಪ್ಪು ಬಣ್ಣದಿಂದ ಕೂಡಿದ್ದು, ಸಾಕಷ್ಟು ಸಾರಜನಕವನ್ನು ಹೊಂದಿದೆ. ಮರದ ಎಲೆಗಳು ಮಣ್ಣಿನಲ್ಲಿ ಕೊಳೆತು ಹ್ಯೂಮಸ್ ಅಥವಾ ಜೈವಿಕಾಂಶದ ಪ್ರಮಾಣ ಅಧಿಕವಾಗಿದೆ. 2) ಜೌಗು ಮಣ್ಣು: ಬೆಟ್ಟಗಳಿಂದ ಕೂಡಿದ ಇಳಿಜಾರಿನ ತಗ್ಗು ಪ್ರದೇಶಗಳಲ್ಲಿ ಕಂಡು ಬರುವ ಮಣ್ಣನ್ನು ಜೌಗು ಮಣ್ಣು ಎನ್ನಲಾಗುತ್ತದೆ. ಇಲ್ಲಿ ಸದಾ ನೀರಿನ ಜಿನುಗುವಿಕೆ ಅಧಿಕ ಪ್ರಮಾಣದಲ್ಲಿದ್ದು, ಜೈವಿಕಾಂಶ ಹೆಚ್ಚಾಗಿರುತ್ತದೆ. ಬತ್ತ ಹಾಗೂ ಅಧಿಕ ನೀರಿನ ಆಶ್ರಯದಲ್ಲಿ ಬೆಳೆಯುವ ಇತರೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. 3) ಜಂಬಿಟ್ಟಿಗೆ ಮಣ್ಣು: ಈ ರಾಜ್ಯದಲ್ಲಿ ಮಳೆ ಯಥೇಚ್ಛವಾಗಿ ಬೀಳುವುದರಿಂದ ಇಳಿಜಾರು ಪ್ರದೇಶಗಳಲ್ಲಿ ಕಂಡು ಬರುವ ಸಿಲಿಕ ಮತ್ತು ಲವಣಾಂಶಗಳೆಲ್ಲವೂ ಕರಗಿ ಮತ್ತು ತೊಳೆಸಲ್ಪಟ್ಟು ಕೇವಲ ಅಲ್ಯೂಮಿನಿಯಂ ಮತ್ತು ಕಬ್ಬಿಣಾಂಶಗಳು ಹಾಗೆಯೇ ಉಳಿದಿರುತ್ತವೆ. ಈ ಮಣ್ಣನ್ನೇ ಜಂಬಿಟ್ಟಿಗೆ ಮಣ್ಣು ಎನ್ನುವರು. ಇದರಲ್ಲಿ ತರಕಾರಿ ಹಾಗೂ ಇತರೆ ಕೆಲವು ತೋಟಗಾರಿಕಾ (ಹಣ್ಣು) ಬೆಳೆಗಳನ್ನು ಬೆಳೆಯಲಾಗುತ್ತಿದೆ. 4) ಮೆಕ್ಕಲು ಮಣ್ಣು: ಪರ್ವತದ ಎತ್ತರ ಪ್ರದೇಶ ಹಾಗೂ ಇಳಿಜಾರುಗಳಿಂದ ಅಧಿಕ ಮಳೆಯ ನೀರು ಹಾಗೂ ನದಿಗಳಿಂದ ಸಾಗಿಸಲ್ಪಟ್ಟು, ನದಿ ಕಣಿವೆಗಳ ತಗ್ಗುಪ್ರದೇಶಗಳಲ್ಲಿ ಸಂಚಯಿಸಲ್ಪಟ್ಟಿರುವ ಮಣ್ಣನ್ನೇ ಮೆಕ್ಕಲು ಮಣ್ಣು ಎನ್ನುವರು. ಇದು ಹೆಚ್ಚು ಫಲವತ್ತಾಗಿದ್ದು ಬತ್ತ ಹಾಗೂ ಗೋದಿಗಳಂತಹ ಪ್ರಮುಖ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತಿದೆ.

**ವಾಯುಗುಣ:** ಎತ್ತರಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಈ ರಾಜ್ಯದ ದಕ್ಷಿಣ ಭಾಗ ಉಷ್ಣ ಮತ್ತು ತೇವಯುತ ಉಪ ಉಷ್ಣವಲಯ ವಾಯುಗುಣವನ್ನು ಹೊಂದಿದೆ. ಕೇಂದ್ರ ಭಾಗ ತಂಪಾದ ವಾಯುಗುಣವನ್ನು ಹೊಂದಿದ್ದರೆ, ಇದರ ಉತ್ತರ ಭಾಗ ಆಲ್ಪೈನ್ ವಾಯುಗುಣವನ್ನು ಹೊಂದಿದೆ. ಮಳೆ ಅಸಮಾನವಾಗಿ ಹಂಚಿಕೆಯಾಗಿದ್ದು, ವರ್ಷವಿಡೀ ಮಳೆ ಬೀಳುತ್ತದೆ. ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗಿನ ಅವಧಿ ಈ ರಾಜ್ಯದಲ್ಲಿನ ಅತಿ ತೇವಯುತ ಋತುವಾಗಿರುತ್ತದೆ. ಸೆಪ್ಟೆಂಬರ್ ತಿಂಗಳ ಮಧ್ಯ ಭಾಗದಿಂದ ಡಿಸೆಂಬರ್ ತಿಂಗಳ ಮಧ್ಯದವರೆಗೆ ಹಾಗೂ ಮಧ್ಯ ಮಾರ್ಚ್‌ನಿಂದ ಮಧ್ಯ ಜೂನ್‌ವರೆಗಿನ ಅವಧಿ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಲು ಒಳ್ಳೆಯ ಅವಧಿಯಾಗಿದ್ದು, ಆಗ ನಿರಭ್ರ ಆಕಾಶವಿರುವುದರ ಜೊತೆಗೆ ಉತ್ತಮ ಹವಾಗುಣವಿರುತ್ತದೆ. ಇಲ್ಲಿ ಮಳೆ 100 – 575 ಸೆಂಮೀವರೆಗೆ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ.

**ಸಸ್ಯವರ್ಗ:** ಇದು ಶ್ರೀಮಂತವಾದ ಸಸ್ಯ ಸಂಪತ್ತನ್ನು ಹೊಂದಿದ್ದು, ಸು. 5000 ಜಾತಿಯ ಮರಗಿಡಗಳಿವೆ. ಇದರಲ್ಲಿ ಸು. 500 ಅಪರೂಪದ ಸಸ್ಯ ಸಂಕುಲಗಳಿವೆ. ಇಲ್ಲಿನ ಸ್ವಾಭಾವಿಕ ಸಸ್ಯ ವರ್ಗ ಈ ರಾಜ್ಯದ ಮಳೆಯ ಹಂಚಿಕೆ, ಎತ್ತರ ಮತ್ತು ಮಣ್ಣಿನ ಲಕ್ಷಣಗಳನ್ನು ಆಧರಿಸಿದಂತೆ ಹಂಚಿಕೆಗೊಂಡಿದೆ. ಈ ರಾಜ್ಯದಲ್ಲಿ ಕಂಡು ಬರುವ ಸಸ್ಯವರ್ಗವನ್ನು ಅಗಲ ಎಲೆಯುಳ್ಳ ಐದು ವಿಧದ ಅರಣ್ಯಗಳಾಗಿ ವಿಂಗಡಿಸಲಾಗಿದೆ: 1) ಉಷ್ಣ ವಲಯದ ಅರಣ್ಯಗಳು 2) ಉಪ ಉಷ್ಣವಲಯದ ಅರಣ್ಯಗಳು 3) ಪೈನ್ ಅರಣ್ಯಗಳು 4) ಸಮಶೀತೋಷ್ಣ ವಲಯದ ಅರಣ್ಯಗಳು 5) ಆಲ್ಪೈನ್ ಅರಣ್ಯಗಳು. ಈ ಮೇಲಿನ ಎಲ್ಲಾ ವಿಧದ ಅರಣ್ಯಗಳಲ್ಲೂ ಬಿದಿರು ಮತ್ತು ಇತರೆ ಹುಲ್ಲುಜಾತಿಯ ಸಸ್ಯ ವರ್ಗಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಈ ರಾಜ್ಯದ ಕಣಿವೆಗಳ ತಗ್ಗು ಪ್ರದೇಶಗಳು ಉಷ್ಣವಲಯದ ಅರಣ್ಯವನ್ನು ಹೊಂದಿದ್ದು ದಟ್ಟವಾದ ಹಾಗೂ ಗಟ್ಟಿ ಜಾತಿಯ ಮರಗಳು ಕಂಡುಬರುತ್ತವೆ. ಪೈನ್ ಅರಣ್ಯಗಳು ಬೆಟ್ಟಮಯ ಪ್ರದೇಶಗಳಲ್ಲಿದ್ದು, ಮೊನಚಾದ ಎಲೆಗಳನ್ನು ಒಳಗೊಂಡಿರುವ ಮೃದು ಮರಗಳಿಂದ ಕೂಡಿವೆ. ಆಲ್ಪೈನ್ ಅರಣ್ಯಗಳು ಪರ್ವತದ ಅತಿ ಉನ್ನತ ಅಥವಾ ಎತ್ತರ ಪ್ರದೇಶಗಳಲ್ಲಿ ಕಂಡುಬರುತ್ತಿದ್ದು, ಕೇವಲ ಹುಲ್ಲುಜಾತಿಗೆ ಸೇರಿದ ಸಸ್ಯವರ್ಗದಿಂದ ಕೂಡಿವೆ.

**ಪ್ರಾಣಿವರ್ಗ:** ಈ ರಾಜ್ಯ ವನ್ಯಪ್ರಾಣಿ ಸಂಕುಲ ಹೊಂದಿರುವ ಭಾರತದ ರಾಜ್ಯಗಳಲ್ಲಿ ಶ್ರೀಮಂತವಾದದ್ದು. ಇಲ್ಲಿ ವಿಶಿಷ್ಟ ಹಾಗೂ ವಿವಿಧ ಜಾತಿಯ 85 ಪ್ರಾಣಿ ಸಂಕುಲಗಳು ಕಂಡುಬರುತ್ತವೆ. ಇಲ್ಲಿನ ಶಿವಾಲಿಕ್ ಮತ್ತು ಮೈದಾನದ ಅಂಚುಗಳಲ್ಲಿ ಆನೆ, ಕಾಡೆಮ್ಮೆಗಳು ಕಂಡುಬರುತ್ತವೆ. ಹುಲಿ, ಚಿರತೆ, ಬಿಳಿಬಣ್ಣದ ಗಿಬ್ಬನ್, ಹಿಮಜಿಂಕೆ, ಕೆಂಪು ಬಣ್ಣದ ಚಿರತೆ, ಹಿಮಾಲಯದ ಕಪ್ಪು ಕರಡಿ ಮುಂತಾದ ಪ್ರಾಣಿಗಳು ಇಲ್ಲಿ ವಾಸಿಸುತ್ತಿವೆ. ಇದಲ್ಲದೇ 500 ವಿವಿಧ ಜಾತಿಯ ಪಕ್ಷಿಗಳು ಇಲ್ಲಿ ವಾಸಿಸುತ್ತಿದ್ದು, ಭಾರತೀಯ ಹಾರ್ನ್‌ಬಿಲ್ ಜಾತಿಯ ಪಕ್ಷಿಗಳಿಗೆ ಈ ರಾಜ್ಯ ತವರಿದ್ದಂತೆ. ಬಿಳಿ ರೆಕ್ಕೆಗಳಿರುವ ಮರದ ಬಾತುಕೋಳಿ, ಹಸುರು ಪಾರಿವಾಳ, ಬಂಗಾಲದ ಫ್ಲೋರಿಕಾನ್, ಟೆಮ್ಮಿನಿಕ್ಸ್, ಸ್ಕ್ಲಾಟರ್ ಮಾನಾರ್ ಟಿಗೋಡಾನ್‌ಗಳಂತಹ ಪಕ್ಷಿಗಳು ಇಲ್ಲಿವೆ. ಇವುಗಳ ಸಂರಕ್ಷಣೆಗಾಗಿ ಹಲವು ವನ್ಯಜೀವಿ ಸಂರಕ್ಷಣಾ ಹಾಗೂ ಪಕ್ಷಿಧಾಮಗಳು ಈ ರಾಜ್ಯದಲ್ಲಿ ಸ್ಥಾಪನೆಗೊಂಡಿವೆ; ಇಲ್ಲಿ ಎರಡು ರಾಷ್ಟ್ರೀಯ ಉದ್ಯಾನವನಗಳಾದ ನಾಮ್ ದಫ್ಪಾ ಮತ್ತು ಮೌಲಿಂಗ್‌ಗಳು ಹಾಗೂ ಈ ರಾಜ್ಯದ ಅರಣ್ಯ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ 8 ವನ್ಯಜೀವಿ ಸಂರಕ್ಷಣಾ ಧಾಮಗಳಾದ ಪಾಕಾಯ್, ಇಟಾನಗರ, ಡೇಯಿಂಗ್ ಇರಿಂಗ್, ಮೆಹಾಪೋಕಾನೆ, ಈಗಲ್ಸ್ ನೆಸ್ಟ್, ಕಮ್ಲಾಂಗ್ ಮತ್ತು ದಿಬಾಂಗ್‌ಗಳು ಇವೆ.

**ಕೃಷಿ :** ಈ ರಾಜ್ಯದಲ್ಲಿ ವರ್ಗಾವಣೆ ಬೇಸಾಯ ಕ್ರಮ (ಜೂಮಿಂಗ್) ಜಾರಿಯಲ್ಲಿದೆ. ಒಗ್ಗೂಡಿ ಕೃಷಿ ಮಾಡುವ ಪದ್ಧತಿ ಮುಖ್ಯಸ್ಥಾನವನ್ನು ಪಡೆದುಕೊಂಡಿದೆ. ಈ ರಾಜ್ಯದ ಬಹುತೇಕ ಜನ ಈ ಪದ್ಧತಿಯನ್ನು ಪ್ರಾಚೀನ ಕಾಲದಿಂದಲೂ ಅನುಸರಿಸುತ್ತಾ ಬಂದಿದ್ದಾರೆ. ಜೂಮಿಂಗ್ ಬೇಸಾಯ ಪದ್ಧತಿಯಲ್ಲಿ (ಕುಂಬ್ರಿ) ಅಲ್ಲಲ್ಲಿ ಅರಣ್ಯದಲ್ಲಿರುವ ಮರಗಳನ್ನು ಕಡಿದು ಕೆಲವು ವರ್ಷಗಳ ಅನಂತರ ಬೆಂಕಿಯಲ್ಲಿ ಸುಟ್ಟು ಹಾಕಿ ಆ ಪ್ರದೇಶವನ್ನು ನೇಗಿಲಿನಂತಹ ಉಪಕರಣದಿಂದ ಉಳುಮೆ ಮಾಡಿ ನೇಗಿಲ ಹಿಂದೆ ಬಿತ್ತನೆ ಬೀಜಗಳನ್ನು ಬಿತ್ತಿ, ಕನಿಷ್ಠ ಪಕ್ಷ ನಾಲ್ಕು ಭಾರಿ ಕಳೆ ತೆಗೆದು, ಬೆಳೆಯುತ್ತಿರುವ ಬೆಳೆಯನ್ನು ಕಾಡು ಪ್ರಾಣಿಗಳು ಮತ್ತು ಪಕ್ಷಿಗಳಿಂದ ಕಾಯುವ ಹಾಗೂ ಸಂರಕ್ಷಿಸುವುದರ ಮೂಲಕ ಅಳಿದುಳಿದ ಮಿಶ್ರ ಫಸಲನ್ನು ಪಡೆದುಕೊಳ್ಳುತ್ತಾರೆ. ಇಲ್ಲಿ ಕೆಲಸಗಾರರು ಪುರುಷ, ಮಹಿಳೆ ಹಾಗೂ ಮಕ್ಕಳು ಸು. 5–6 ತಿಂಗಳುಗಳ ಕಾಲ ಇದಕ್ಕಾಗಿ ಶ್ರಮವಹಿಸುವರು. ಬತ್ತ, ತೃಣ ಧಾನ್ಯಗಳು, ಗೋದಿ ಮತ್ತು ಮೆಕ್ಕೆಜೋಳ ಇಲ್ಲಿನ ಪ್ರಮುಖ ಬೆಳೆಗಳು. ಆಲೂಗಡ್ಡೆ, ಬದನೆ, ಶುಂಠಿ, ಮೆಣಸಿನಕಾಯಿ, ಕುಂಬಳ, ಸೌತೆ, ಅನಾನಸ್, ಕಿತ್ತಳೆ, ನಿಂಬೆ ಪರಂಗಿ, ಬಾಳೆ ಇತ್ಯಾದಿ ತರಕಾರಿ ಮತ್ತು ಹಣ್ಣುಗಳನ್ನು ಇಲ್ಲಿ ಬೆಳೆಯಲಾಗುತ್ತಿದೆ.

**ನೈಸರ್ಗಿಕ ಸಂಪನ್ಮೂಲಗಳು :** ಈ ರಾಜ್ಯ ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಹೊಂದಿದೆ. ಕಲ್ಲಿದ್ದಲು, ಸುಣ್ಣಕಲ್ಲು ಕಬ್ಬಿಣದ ಅದಿರು, ಗ್ರಾಫೈಟ್, ಬೆಣಚು ಶಿಲೆ, ಅಭ್ರಕ, ತಾಮ್ರ, ಡಾಲೋಮೈಟ್, ಕಚ್ಚಾ ತೈಲ, ಸ್ವಾಭಾವಿಕ ಅನಿಲ ಹಾಗೂ ಅಮೃತ ಶಿಲೆಗಳಂತಹ ಖನಿಜ ಸಂಪನ್ಮೂಲಗಳು ಈ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಹಂಚಿಕೆಯಾಗಿವೆ. ಇದರ ಜೊತೆಗೆ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಲ್ಲ ಸಂಭಾವ್ಯ ಪ್ರದೇಶವಾಗಿದೆ. ಇಲ್ಲಿ 1991 ರಲ್ಲಿ ಅರುಣಾಚಲ ಪ್ರದೇಶ ಖನಿಜ ಅಭಿವೃದ್ಧಿ ಮತ್ತು ವಾಣಿಜ್ಯ ಕಾರ್ಪೋರೇಷನ್ ಲಿಮಿಟೆಡ್ ಅರಂಭವಾಯಿತು. ನಾಮ್‌ಚಿಕ್ ನಾಮ್‌ಹುಕ್ ಪ್ರದೇಶಗಳಲ್ಲಿನ ಕಲ್ಲಿದ್ದಲು ಕ್ಷೇತ್ರಗಳು ಈ ಸಂಸ್ಥೆಯ ಅಧೀನದಲ್ಲಿವೆ.

**ಕೈಗಾರಿಕೆಗಳು :** ಈ ರಾಜ್ಯ ಹೊಂದಿರುವ ಅರಣ್ಯ ಸಂಪನ್ಮೂಲದ ಆಧಾರದ ಮೇಲೆ ಹಲವಾರು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಹೊಂದಿದೆ. ಇಲ್ಲಿ ಸಿಮೆಂಟ್ ಉತ್ಪಾದನ ಸ್ಥಾವರಗಳೂ ಹಣ್ಣು ಸಂರಕ್ಷಣಾ ಘಟಕಗಳೂ ತಲೆಯೆತ್ತಿವೆ. ಅಸಂಖ್ಯಾತ ಕರಕುಶಲ ಉತ್ಪನ್ನ ತರಬೇತಿ ಕೇಂದ್ರಗಳಿವೆ. ಇಲ್ಲಿನ ಕೈಮಗ್ಗ ಕೈಗಾರಿಕೆಗಳು ಅತ್ಯುತ್ತಮ ಪ್ರಗತಿಯನ್ನು ಸಾಧಿಸಿವೆ. ಇಲ್ಲಿನ ಜನ ಬೆತ್ತ ಮತ್ತು ಬಿದಿರಿನ ಬುಟ್ಟಿಗಳನ್ನು ಹೆಣೆಯುವುದರಲ್ಲಿ ಪ್ರಾವೀಣ್ಯತೆ ಪಡೆದಿದ್ದಾರೆ. ಮರದ ಕೆತ್ತನೆ, ಕಮ್ಮಾರಿಕೆಗಳಂತಹ ವೃತ್ತಿಗಳೂ ಕೆಲವು ಹಳ್ಳಿಗಳಲ್ಲಿ ಕಂಡು ಬರುತ್ತವೆ. ಗುದ್ದಲಿ, ಹಾರೆ ಇತ್ಯಾದಿ ಕೃಷಿ ಯೋಗ್ಯ ಹಾಗೂ ದೈನಂದಿನ ಚಟುವಟಿಕೆಗಳಿಗೆ ಅಗತ್ಯವೆನಿಸುವ ಉಪಕರಣಗಳನ್ನೂ ತಯಾರಿಸಲಾಗುತ್ತದೆ. ಇಲ್ಲಿ ಸಣ್ಣ ಪ್ರಮಾಣದ ಗುಡಿ ಕೈಗಾರಿಕೆಗಳು, ಪ್ಲೈವುಡ್ ಹಾಗೂ ಮೇಣದ ಬತ್ತಿ ತಯಾರಿಕಾ ಘಟಕಗಳೂ ಸ್ಥಾಪನೆಗೊಂಡಿವೆ.

**ಸಾರಿಗೆ ಸಂಪರ್ಕ :** ಈ ರಾಜ್ಯ ಉತ್ತಮ ರಸ್ತೆ, ರೈಲ್ವೆ ಮತ್ತು ವಾಯುಸಾರಿಗೆ ಸಂಪರ್ಕಗಳನ್ನು ಹೊಂದಿದೆ. ರಾಜ್ಯ ಸಾರಿಗೆ ಸಂಸ್ಥೆ ಕ್ರಮಬದ್ಧವಾಗಿ ಹಾಗೂ ನಿರಂತರವಾಗಿ ರಾಜ್ಯದ ವಿವಿಧ ಪ್ರದೇಶಗಳ ನಡುವೆ ಸಂಪರ್ಕವನ್ನು ಕಲ್ಪಿಸುತ್ತಿರುವುದರ ಜೊತೆಗೆ ನೆರೆ ರಾಜ್ಯಗಳೊಡನೆ ಸಂಪರ್ಕವನ್ನು ಕಲ್ಪಿಸಿಕೊಟ್ಟಿದೆ. ನಾಹರ್‌ಲಗೂನ್ ಮಾರ್ಗವಾಗಿ ಉತ್ತರ ಲಖಿಂಪುರ ಮತ್ತು ಇಟಾನಗರಗಳ ನಡುವೆ ನೇರ ಸಾರಿಗೆ ಸೇವೆಯನ್ನು ಕಲ್ಪಿಸಲಾಗಿದೆ. ಪ್ರತಿ ನಿತ್ಯವೂ ಇಟಾನಗರದಿಂದ 429 ಕಿಮೀ ದೂರದಲ್ಲಿರುವ ಗುವಾಹಟಿಗೆ ಬಸ್ ಸಂಪರ್ಕವಿದೆ. ಇಟಾನಗರದಿಂದ 33 ಕಿಮೀ ಹಾಗೂ ನಹಾರ್ ಲಗೂನ್‌ನಿಂದ 23 ಕಿಮೀ ದೂರದಲ್ಲಿರುವ ಅಸ್ಸಾಮಿನ ಹಾರ್ಮುಟಿ ರೈಲ್ವೆ ನಿಲ್ದಾಣ ಈ ರಾಜ್ಯಕ್ಕೆ ಹತ್ತಿರದ ರೈಲು ನಿಲ್ದಾಣ. ಆದರೂ ಇಟಾನಗರದಿಂದ 60 ಕಿಮೀ, ನಹರ್ ಲಗೂನ್‌ನಿಂದ 50 ಕಿಮೀ ದೂರದಲ್ಲಿರುವ ಅಸ್ಸಾಂ ರಾಜ್ಯದ ಉತ್ತರ ಲಖಿಂಪುರ ರೈಲ್ವೆ ನಿಲ್ದಾಣ, ಆಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ನಿಲ್ದಾಣ. ಇಟಾನಗರದಿಂದ 67 ಕಿಮೀ ನಹರ್‌ಲಗೂನ್‌ನಿಂದ 57 ಕಿಮೀ ದೂರದಲ್ಲಿರುವ ಅಸ್ಸಾಂನ ಉತ್ತರ ಲಖಿಂಪುರದಲ್ಲಿರುವ ಲಿಲಾಬಾರಿಯಲ್ಲಿಯ ವಿಮಾನ ನಿಲ್ದಾಣ ಅತಿ ಸಮೀಪವಾದದ್ದಾಗಿದೆ. ಇಂಡಿಯನ್ ಏರ್‌ಲೈನ್ಸ್ ಸಂಸ್ಥೆ ಪ್ರತೀ ಬುಧವಾರ, ಶುಕ್ರವಾರ ಮತ್ತು ಭಾನುವಾರಗಳಂದು ಕೋಲ್ಕತ್ತದಿಂದ ತೇಜ್‌ಪುರಗಳ ನಡುವೆ (ಇಟಾನಗರದಿಂದ 216 ಕಿಮೀ ದೂರದಲ್ಲಿರುವ) ನೇರ ವಿಮಾನ ಸೇವೆಯನ್ನೂ ಕಲ್ಪಿಸುತ್ತಿದೆ. ಗುವಾಹಟಿಯಿಂದ ನಹರ್ ಲಗೂನ್‌ಗಳ ನಡುವೆ ಹೆಲಿಕಾಪ್ಟರ್ ಸೇವೆಯನ್ನು ಕಲ್ಪಿಸಲಾಗಿದೆ.

**ವಾಣಿಜ್ಯ :** ರಾಜ್ಯದಲ್ಲಿ ಹಲವು ಪಟ್ಟಣ, ನಗರ ಮತ್ತು ವಾಣಿಜ್ಯ ಕೇಂದ್ರಗಳಿವೆ. ಸಾಮಾನ್ಯವಾಗಿ ಪ್ರವಾಸಿ ಕೇಂದ್ರಗಳು ವಾಣಿಜ್ಯ ಕೇಂದ್ರಗಳಾಗಿಯೂ ಕಂಡುಬರುತ್ತವೆ. ತವಾಂಗ್, ಬಾಮ್ದಿಲಾ, ಟಿಪಿ, ಇಟಾನಗರ, ಝಿರೋ, ಡಾಪೋರಿಜೋ, ಅಲಾಂಗ್, ಪರಶುರಾಮ್‌ರಾಯ್ ಕುಂಡ್, ಮಲಿನಿತನ್, ಲಿಕ್‌ಬಾಲಿ, ನಾಮ್‌ಸಾಯ್, ಮಾಯಾವೋ ಮತ್ತು ಚಾಂಗ್‌ಲಾಂಗ್ ಇಲ್ಲಿನ ಪ್ರವಾಸಿ ತಾಣಗಳು. ಇಲ್ಲಿನ ಮರದ ಕೆತ್ತನೆ, ಬಿದಿರು ಮತ್ತು ಬೆತ್ತದ ಬುಟ್ಟಿ ಮತ್ತು ಕರಕುಶಲ ಉತ್ಪನ್ನಗಳು ಈ ರಾಜ್ಯವನ್ನು ವಾಣಿಜ್ಯಾತ್ಮಕವಾಗಿ ಖ್ಯಾತಿಗೊಳಿಸಿದೆ.

ರಾಜ್ಯದ ಜನಸಂಖ್ಯೆ 10,91,117. ಅದರಲ್ಲಿ 5,73,951 ಪುರುಷರು, 5,17,166 ಸ್ತ್ರೀಯರು. ಇಲ್ಲಿನ ಲಿಂಗಾನುಪಾತ ಪ್ರಮಾಣ 1000 ಪುರುಷರಿಗೆ 901 ಸ್ತ್ರೀಯರು. ಈ ರಾಜ್ಯದ ಸಾಕ್ಷರತೆಯ ಪ್ರಮಾಣ ಶೇ. 54.74. ಇಲ್ಲಿನ ಜನಸಂಖ್ಯೆ ಮುಖ್ಯವಾಗಿ ಬುಡಕಟ್ಟು ಸಮುದಾಯದವರಿಂದ ಕೂಡಿದೆ. ಈ ರಾಜ್ಯ 20 ಮುಖ್ಯ ಬುಡಕಟ್ಟು ಹಾಗೂ ಅವುಗಳ ಅಸಂಖ್ಯಾತ ಉಪಬುಡಕಟ್ಟುಗಳನ್ನು ಹೊಂದಿದೆ. ಮುಖ್ಯವಾದ ಬುಡಕಟ್ಟುಗಳೆಂದರೆ ಆದೀಸ್, ನಿಶಿ, ಅಪತಾನಿ, ಟಾಗಿನ್, ವಿಸ್ಮಿ, ಖಾಮ್ಟಿ, ನಾಯ್ಟಿ, ವಾಂಖೋ, ಟಾಂಗ್‌ಕಾ, ಸಿಂಗ್‌ಪ್ಪೋ, ಮೊನ್ಪಾ, ಕೆರ್ಡೂಕ್‌ಪೆನ್ ಮತ್ತು ಅಕಾಗಳು. ಇವರು ತಮ್ಮದೇ ಆದ ಭಾಷೆಗಳನ್ನು ಮಾತನಾಡುತ್ತಾರೆ. ಇಲ್ಲಿನ ಪ್ರಮುಖ ಭಾಷೆಗಳು ಮೋದ್ವಾ, ಅಪತಾನಿ, ಹಿಲ್ ಮಿರಿ, ಇಡು, ಟಾಗಿನ್ ಆದಿ, ಕಾಮ್ಟಿ, ಸಿಂಗ್‌ಪ್ಪೋ ಟಾಂಗ್‌ಸಾ, ನೋಕ್ಟೆ, ವಾಂಖೋ, ದಿಗಾರೂ, ಮಿಜಿ.

ಪ್ರಮುಖ ನಗರ ಮತ್ತು ಪಟ್ಟಣಗಳು: ಇಟಾನಗರ, ನಹರ್‌ಲಗೂನ್, ಟವಾಂಗ್, ಬಾಮ್ದಿಲಾ, ರೂಪ, ಭಾಲುಕ್ ಪೊಂಗ್, ಸೆಪ್ಪಾ, ದಾಪೋರಿಜೋ, ಅಲಾಂಗ್, ಪಾಸಿಘಾಟ್, ಯಿಂಗ್ ಕಿಯಾಂಗ್ ರೋಯಿಂಗ್, ಟೆಝು, ನಾಮ್‌ಸಾಯ್, ಖೋನ್ಸಾ, ಅದಿನಿ, ಚಾಂಗ್‌ಲಾಂಗ್ ಮುಂತಾದವು.

*

**ಅರುವತ್ತನಾಲ್ಕು ಉಪಚಾರಗಳು :** ಅರುವತ್ತನಾಲ್ಕು ವಿದ್ಯೆ, ಅರುವತ್ತನಾಲ್ಕು ಕಲೆಗಳಿದ್ದಂತೆ ಈ ಉಪಚಾರಗಳೂ ಕೂಡ. ಜ್ಞಾನಿಯಾದವನು ಇವುಗಳನ್ನು ತಿಳಿದು ಚಾಚೂತಪ್ಪದಂತೆ ಆಚರಿಸಬೇಕೆಂಬ ನಿಯಮ ಭಾರತೀಯರಲ್ಲಿದೆ. ಇವು ನಮ್ಮ ಜೀವನದ ನಿತ್ಯಕರ್ಮಗಳಲ್ಲಿ ಹಾಸುಹೊಕ್ಕಾಗಿ ಬಳಕೆಯಲ್ಲಿವೆ. ಇವುಗಳನ್ನು ವಿಧ್ಯುಕ್ತರೀತಿಯಲ್ಲಿ ನಡೆಸಬೇಕಾದರೆ ಆಯಾ ವಿದ್ಯೆ, ಶಾಸ್ತ್ರ, ಕಲೆಗಳ ಅಧ್ಯಯನ, ಅನುಭವ ಅಗತ್ಯ.. ಈ ಉಪಚಾರಗಳನ್ನು ಭಾರತೀಯರ ಕಾವ್ಯ, ಪುರಾಣಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಇವನ್ನು ಪೂಜಾ ಸಮಯದಲ್ಲಿ ಇಷ್ಟದೇವತೆ ಪ್ರಸನ್ನವಾಗಲು ಆಚರಿಸತಕ್ಕವಾಗಿವೆ.

ಧ್ಯಾನ, ಆವಾಹನ, ಆಸನ, ಪದ್ಯ, ಅರ್ಘ್ಯ, ಆಚಮನ, ಮಧುಪರ್ಕ, ಪಂಚಾಮೃತಸ್ನಾನ, ಫಲೋದಕಸ್ನಾನ, ಶುದ್ಧೋದಕಸ್ನಾನ, ವಸ್ತ್ರ, ಯಜ್ಞೋಪವೀತ, ಗಂಧ, ಅಕ್ಷತೆ, ಪುಷ್ಪ, ಅವಯವೋಪಚಾರ, ಆಭರಣ, ಕಿರೀಟ, ತಿಲಕರತ್ನಧಾರಣ, ಅಸ್ತ್ರಧಾರಣ, ಪುಷ್ಪಬಾಣಧಾರಣ, ಪಾನಪಾತ್ರಧಾರಣ, ಪಾದುಕೆ, ಧೂಪ, ದೀಪ, ನೈವೇದ್ಯ, ತಾಂಬೂಲ, ನೀರಾನ, ಛತ್ರ, ಚಾಮರ, ದರ್ಪಣ, ವ್ಯಜನ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಉಪನಿಷತ್ತು, ಪುರಾಣ, ಇತಿಹಾಸ, ಪಂಚಾಂಗಶ್ರವಣ, ಚೂರ್ಣಿಕೆ, ಅಷ್ಟಪದಿ, ಸಂಗೀತ, ಶೋಭನ, ಮಂಗಳ, ಲಾಲಿ, ಜೋಜೋ, ಮಂತ್ರಪುಷ್ಪ, ಉದ್ವಾಸನ, ಆಂದೋಳನ, ಅಶ್ವಾರೋಹಣ, ಗಜಾರೋಹಣ, ಶಂಖನಾದ, ತುತ್ತುರಿ, ನೃತ್ಯ, ಗೀತ, ವಾದ್ಯ, ವೀಣಾನಾದ, ಭಕ್ಷ್ಯೋಪಚಾರ, ಶಕ್ತ್ಯೋಪಚಾರ, ಪ್ರದಕ್ಷಿಣ, ನಮಸ್ಕಾರ, ಪವಳಿಂಚು, ಉತ್ತರನೀರಾಜನ ಈ ಉಪಚಾರಗಳಲ್ಲಿ ಹಲವು ರಾಜಮಹಾರಾಜರಿಗೂ ಮಠಾಧಿಪತಿಗಳಿಗೂ ಗುರುಹಿರಿಯರಿಗೂ ಅನ್ವಯವಾಗುತ್ತವೆ. ಸುಸಂಸ್ಕೃತವೂ ಕಲಾಪೂರ್ಣವೂ ಆದ ಮಾನವಜೀವನದ ತಿರುಳಿನಂತಿರುವ ಸಂಗೀತ, ನೃತ್ಯ, ವಾದ್ಯ, ಅಲಂಕರಣ ಮೊದಲಾದವು ಕೇವಲ ದೇವರ ಪ್ರೀತ್ಯರ್ಥವಾಗಿ, ಗುರುಹಿರಿಯರ ಸಂತುಷ್ಟಿಗಾಗಿ ಇವೆ ಎಂಬ ಕಲ್ಪನೆ ನಿಜಕ್ಕೂ ಅಮೋಘವಾದುದು. ಸ್ವಸಂತೋಷವನ್ನು ಕೊಟ್ಟರೂ ಅವು ಯೋಗ್ಯರೀತಿಯಲ್ಲಿ ಅರ್ಪಣೆಯಾದಾಗಲೇ ಪೂರ್ಣ ತುಷ್ಟಿ ಕಂಡೀತು.

*

**ಅರುವತ್ತನಾಲ್ಕು ಕಲೆಗಳು :** ವಾತ್ಸ್ಯಾಯನನ ಕಾಮಸೂತ್ರದಲ್ಲಿ ಇವುಗಳ ಉಲ್ಲೇಖವಿದೆ. ಇವು ಅರುವತ್ತನಾಲ್ಕು ಎಂಬುದರ ಬಗ್ಗೆ ಪಂಚಾಲ, ವಾತ್ಸ್ಯಾಯನ, ಯಶೋಧರ, ಶ್ರೀಧರಸ್ವಾಮಿ, ರಾಮಚಂದ್ರರೂ ಶುಕ್ರನೀತಿಸಾರ ಎಂಬ ಗ್ರಂಥವೂ ಒಪ್ಪುತ್ತವೆ. ವಾತ್ಸ್ಯಾಯನನೇ ತನ್ನ ಪಟ್ಟಿಗಿಂತ ಭಿನ್ನವಾದ ಪಟ್ಟಿ ಪಂಚಾಲನದು ಎಂದು ಒಂದು ಕಡೆ ಹೇಳಿದ್ದಾನೆ. ಯಶೋಧರ ತನ್ನ ಜಯಮಂಗಲ ಎಂಬ ಕಾಮಸೂತ್ರದ ವ್ಯಾಖ್ಯಾನದಲ್ಲಿ ಈ ಕಲೆಗಳ ವಿವರಗಳನ್ನು ಕೊಡುವುದಲ್ಲದೆ ಒಟ್ಟು 512 ಕಲೆಗಳಿದ್ದುವೆಂದು ಹೇಳುತ್ತಾನೆ. ಶ್ರೀಮದ್ಭಾಗವತದ ವ್ಯಾಖ್ಯಾನಕಾರ ಶ್ರೀಧರಸ್ವಾಮಿ ಶೈವತಂತ್ರದ 64 ಕಲೆಗಳನ್ನು ಉದ್ಧರಿಸುತ್ತಾನೆ. ಆ ಪಟ್ಟಿ ವಾತ್ಸ್ಯಾಯನನ ಪಟ್ಟಿಯನ್ನೇ ಸ್ಥೂಲವಾಗಿ ಹೋಲುತ್ತದೆ. ಚಂಪೂ ರಾಮಾಯಣದ ರಾಮಚಂದ್ರ ಮತ್ತು ಶುಕ್ರನೀತಿಸಾರಗಳು ತೀರ ಭಿನ್ನವಾದ 64 ಕಲೆಗಳ ಪಟ್ಟಿಯನ್ನು ಕೊಡುತ್ತವೆ.

ಎ.ವೆಂಕಟಸುಬ್ಬಯ್ಯನವರು ದಿ ಕಲಾಸ್ (ಕಲೆಗಳು) ಎಂಬ ಗ್ರಂಥದಲ್ಲಿ ಇವುಗಳ ಬಗ್ಗೆ ದೀರ್ಘ ವಿವೇಚನೆ ನಡೆಸಿದ್ದಾರೆ.

ವಾತ್ಸ್ಯಾಯನನ ಅಭಿಪ್ರಾಯದಂತೆ ಕಲೆಗಳು 64 ಎಂದು ನಿರ್ಧರಿಸುವಲ್ಲಿ ಋಗ್ವೇದದ ಹತ್ತು ಮಂಡಲಗಳ 64 ವಿಭಾಗಗಳು ಮಾದರಿಯಾಗಿವೆ.

**ವಾತ್ಸ್ಯಾಯನನ ರೀತ್ಯಾ ಅರುವತ್ತನಾಲ್ಕು ಕಲೆಗಳು:** 1. ಗೀತಂ: ಹಾಡುಗಾರಿಕೆ; 2. ವಾದ್ಯಂ: ವಾದ್ಯಗಳನ್ನು ನುಡಿಸುವುದು; 3. ನೃತ್ಯಂ: ನಾಟ್ಯವಾಡುವುದು; 4. ಆಲೇಖ್ಯಂ: ಚಿತ್ರಬರೆಯುವಿಕೆ, ಗೊಂಬೆಮಾಡುವಿಕೆ ಇತ್ಯಾದಿ; 5. ವಿಶೇಷಯಕ ಚ್ಛೇದ್ಯಂ: ವಿವಿಧ ಆಕಾರಗಳ ಹಣೆಯ ಅಲಂಕಾರ: 6. ತಂಡುಲಕುಸುಮಬಲಿವಿಕಾರಾಃ: ಬಣ್ಣದ ಅಕ್ಕಿ ಮತ್ತು ಹೂಗಳಿಂದ ರಂಗವಲ್ಲಿಯಂತೆ ವಿವಿಧಾಕಾರಗಳ ರಚನೆ; 7. ಪುಷ್ಪಾಸ್ತರಣಂ: ಪುಷ್ಪದಿಂದ ಗೃಹಾಲಂಕಾರ; 8. ದಶನವಸನಂಗರಾಗಃ; ತುಟಿ ಬಟ್ಟೆ ಮತ್ತು ಅಂಗಗಳಿಗೆ ಬಣ್ಣ ಹಚ್ಚುವಿಕೆ; 9. ಮಣಿಭೂಮಿಕಾಕರ್ಮ: ಮಣಿ ಮೊದಲಾದವುಗಳಿಂದ ನೆಲದ ಅಲಂಕಾರ; 10. ಶಯನರಚನಂ: ಹಾಸಿಗೆಯನ್ನು ಸಿದ್ಧಪಡಿಸುವುದು; 11. ಉದಕವಾದ್ಯಂ: ನೀರಿನ ಸಹಾಯದಿಂದ ವಿವಿಧ ವಾದ್ಯಗಳ ಧ್ವನಿಯನ್ನು ಹೊರಡಿಸುವುದು–ಜಲತರಂಗ ನುಡಿಸುವುದು; 12. ಉದಕಘಾತಃ: ಜಲ ಕ್ರೀಡೆಯಲ್ಲಿ ಬೊಗಸೆ ನೀರಿನಿಂದ ಹೊಡೆಯುವುದು; 13. ಚಿತ್ರಾಶ್ಚಯೋಗಾಃ: ಇತರರಿಗೆ ನಿಶ್ಶಕ್ತಿ, ಹುಚ್ಚು, ಅಕಾಲವೃದ್ಧಾಪ್ಯ ಮುಂತಾದುವು ಬರುವಂತೆ ನಡೆಸುವ ಔಷಧ ಪ್ರಯೋಗ ಮತ್ತು ಮಾಟ ಇತ್ಯಾದಿ; 14. ಮಾಲ್ಯಗ್ರಥನ ವಿಕಲ್ಪಾಃ: ವಿವಿಧ ಬಗೆಯ ಹೂವಿನ ಹಾರಗಳ ರಚನೆ: 15. ಶೇಖರಕಾಪೀಡಯೋಜನಂ: ತಲೆಗೆ ಮಾಡುವ ವಿವಿಧ ಹೂಗಳ ಅಲಂಕಾರ; 16. ನೇಪಥ್ಯಪ್ರಯೋಗಾಃ: ನೇಪಥ್ಯದಲ್ಲಿ ನಡೆಸುವ ವಸ್ತ್ರಾಲಂಕಾರ; 17. ಕರ್ಣಪತ್ರಭಂಗಃ: ದಂತ ಮೊದಲಾದುವುಗಳಿಂದ ಕಿವಿಯ ಒಡವೆಗಳನ್ನು ತಯಾರಿಸುವುದು; 18. ಗಂಧಯುಕ್ತಿಃ: ಸುವಾಸನಾದ್ರವ್ಯಗಳನ್ನು ತಯಾರಿಸು ವುದು: 19. ಭೂಷಣಯೋಜನಂಃ: ಒಡವೆಗಳನ್ನು ತಯರಿಸುವುದು; 20. ಐಂದ್ರಜಾಲಯೋಗಾಃ: ಕಣ್ಕಟ್ಟು ಮುಂತಾದ ಇಂದ್ರಜಾಲವನ್ನು ಮಾಡುವುದು; 21. ಕೌಚುಮಾರಾಶ್ಚಯೋಗಾಃ: ಕುಚುಮಾರನ ರೀತ್ಯ ಶಾರೀರಕ ದೌರ್ಬಲ್ಯ ಮತ್ತು ಅಕಾಲ ವೃದ್ಧಾಪ್ಯಗಳನ್ನು ಹೋಗಲಾಡಿಸಲು ನಡೆಸುವ ವಾಜೀಕರಣ ಇತ್ಯಾದಿ; 22. ಹಸ್ತಲಾಘವಂ ಕಾರ್ಯಯೋಜನೆಗಿರಬೇಕಾದ ಕೈಚಳಕ; 23. ವಿಚಿತ್ರ ಶಾಕಯೂಷಭಕ್ಷ್ಯ ವಿಕಾರಕ್ರಿಯಾ: ನಾನಾ ತರಕಾರಿ, ಸಾರು ಮತ್ತು ಭಕ್ಷ್ಯಗಳನ್ನು ತಯಾರಿಸುವುದು; 24. ಪಾನಕರಸರಾಗಾಸವಯೋಜನಂ: ಪಾನಕ ರಸ ಮೊದಲಾದ ಪಾನೀಯಗಳನ್ನು

ತಯಾರಿಸುವುದು; 25. ಸೂಚೀವಾನಕರ್ಮಾಣಿ: ಹೊಲಿಯುವುದು, ನೇಯುವುದು, ಕಸೂತಿ ಮುಂತಾದ ಸೂಜಿಕೆಲಸ; 26. ಸೂತ್ರ ಕ್ರೀಡಾ; ಬೆರಳಿನಿಂದ ದಾರವನ್ನು ವಿವಿಧಾಕಾರಗಳನ್ನಾಗಿ ಮಾಡುವ ಆಟ; 27. ವೀಣಾ ಡಮರುಕವಾದ್ಯಾನಿ: ವೀಣೆ, ಡಮರು ಮುಂತಾದ ವಾದ್ಯಗಳನ್ನು ನುಡಿಸುವುದು; 28. ಪ್ರಹೇಲಿಕಾ: ಒಗಟುಗಳನ್ನು ಹೇಳುವುದು; 29. ಪ್ರತಿಮಾಲಾ: ಶ್ಲೋಕದ ಕಡೆಯ ಅಕ್ಷರವನ್ನು ಬಳಸಿ ಪರಸ್ಪರರು ಶ್ಲೋಕ ಕಟ್ಟುವುದು: ಅಂತ್ಯಾಕ್ಷರಿ; 30. ದುರ್ವಾಚಕಯೋಗಾಃ: ಪ್ರತಿವಾದಿ ಪುನಃ ಹೇಳಲಾಗದಂತೆ ಕಠಿಣಾಕ್ಷರಗಳಿಂದ ಕೂಡಿದ ಶ್ಲೋಕವನ್ನು ರಚಿಸುವುದು; 31. ಪುಸ್ತಕ ವಾಚನಂ– ಪುಸ್ತಕಗಳನ್ನು ಓದುವುದು; 32. ನಾಟಕಾಖ್ಯಾಯಿಕಾದರ್ಶನಂ– ನಾಟಕ ಮತ್ತು ಕಥೆಗಳ ತಿಳಿವಳಿಕೆ; 33. ಕಾವ್ಯಸಮಸ್ಯಾಪೂರಣಂ– ಕಡೆಯ ಕಾಲು ಭಾಗವನ್ನು ಕೊಟ್ಟಾಗ ಶ್ಲೋಕವನ್ನು ಪೂರ್ತಿ ಮಾಡುವುದು; 34. ಪಟ್ಟಿಕಾವೇತ್ರವಾನವಿಕಲ್ಪಾಃ – ಬೆತ್ತ, ಬಿದಿರು ಮೊದಲಾದುವುಗಳಿಂದ ಮಂಚ, ಆಸನ ಮೊದಲಾದುವುಗಳನ್ನು ಮಾಡುವುದು; 35. ತಕ್ಷಕರ್ಮಾಣಿ– ಲೋಹ ಮತ್ತು ಮರಗಳಲ್ಲಿ ನಡೆಸುವ ಕೆತ್ತನೆಯ ಕೆಲಸ; 36. ತಕ್ಷಣಂ– ಬಡಗಿ ಕೆಲಸ; 37. ವಾಸ್ತುವಿದ್ಯಾ– ಕಟ್ಟಡ (ಗೃಹ) ರಚನೆಯ ವಿದ್ಯೆ; 38. ರೂಪ್ಯರತ್ನಪರೀಕ್ಷಾ: ನಾಣ್ಯ ಮತ್ತು ರತ್ನಗಳ ಪರೀಕ್ಷೆ; 39. ಧಾತುವಾದಃ – ಅದಿರಿನಿಂದ ಲೋಹಗಳನ್ನು ಬೇರ್ಪಡಿಸುವ ಕಲೆ; 40. ಮಣಿರಾಗಾಕರ ಜ್ಞಾನಂ– ರತ್ನಗಳಿಗೆ ಬಣ್ಣಹಾಕುವುದು, ಅವುಗಳ ನಿಕ್ಷೇಪ ಕಂಡುಹಿಡಿಯುವುದು; 41. ವೃಕ್ಷಾಯುರ್ವೇದಯೋಗಾಃ – ಗಿಡಮರಗಳ ಆರೋಗ್ಯ, ಬೆಳವಣಿಗೆ ನೋಡುವುದು— ಅವುಗಳಿಂದ ಹೆಚ್ಚಿನ ಉಪಯೋಗವನ್ನು ಪಡೆಯುವುದು; 42. ಮೇಷ ಕುಕ್ಕುಟಲಾವಕಯುದ್ಧವಿಧಿಃ – ಟಗರು, ಕೋಳಿ, ಲಾವಕಗಳ ಕಾಳಗವನ್ನು ಏರ್ಪಡಿಸುವುದು; 43. ಶುಕಸಾರಿಕಾಪ್ರಲಾಪನಂ– ಗಂಡು ಮತ್ತು ಹೆಣ್ಣು ಗಿಳಿಗಳಿಗೆ ಮಾತು ಕಲಿಸುವುದು; 44. ಉತ್ಸಾದನೇ ಸಂವಾಹನೇ ಕೇಶಮರ್ದನೇ ಚ ಕೌಶಲಂ– ಶರೀರವನ್ನು ಕಾಲಿನಿಂದ ಮರ್ದಿಸುವುದು, ಕೈಯಿಂದ ಉಜ್ಜುವುದು, ತಲೆಯನ್ನು ತಿಕ್ಕುವುದರಲ್ಲಿನ ಜಾಣ್ಮೆ ಇತ್ಯಾದಿ; 45. ಅಕ್ಷರಮುಷ್ಟಿಕಾಕಥನಂ– ಕೈಯ ಬೆರಳುಗಳ ಚಳಕದಿಂದ ಅಕ್ಷರಗಳನ್ನು ತಿಳಿಸುವುದು; 46. ಮ್ಲೇಚ್ಛಿತವಿಕಲ್ಪಾಃ – ವಿವಿಧ ಅರ್ಥಗಳನ್ನುಳ್ಳ ಸಂಕೇತ (ಶೂನ್ಯ) ಭಾಷೆ; 47. ದೇಶಭಾಷಾವಿಜ್ಞಾನಂ–; ವಿವಿಧ ದೇಶಗಳ ಭಾಷೆಗಳ ಜ್ಞಾನ; 48. ಪುಷ್ಪಶಕಟಿಕಾ: ಹೂವಿನಿಂದ ರಥ, ಕುದುರೆ, ಆನೆ ಮುಂತಾದುವನ್ನು ಮಾಡುವುದು; 49. ನಿಮಿತ್ತಜ್ಞಾನಂ– ಶಕುನ ಹೇಳುವುದು; 50. ಯಂತ್ರಮಾತೃಕಾ: ಪಯಣಕ್ಕಾಗಿ, ನೀರು ಸರಬರಾಜಿಗಾಗಿ, ಯುದ್ಧಕ್ಕಾಗಿ ಯಂತ್ರಗಳನ್ನು ತಯಾರಿಸುವುದು; 51. ಧಾರಣಮಾತೃಕಾ– ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು; 52. ಸಂಪಾಠ್ಯಂ: ಪಂದ್ಯದಲ್ಲಿ ಒಬ್ಬ ಹೇಳಿದ ಶ್ಲೋಕವನ್ನು ಇನ್ನೊಬ್ಬ ಹೇಳುವುದು; 53. ಮಾನಸೀ– ಪಂದ್ಯದಲ್ಲಿ ಒಂದು ಶ್ಲೋಕದಲ್ಲಿರುವ ಅನುಸ್ವಾರ ಮತ್ತು ವಿಸರ್ಗಗಳನ್ನು ಬರೆದು ಅಕ್ಷರಗಳನ್ನು ಬಿಟ್ಟಾಗ ಆ ಅಕ್ಷರಗಳನ್ನು ಕೂಡಿಸಿ ಶ್ಲೋಕ ಪೂರ್ತಿಗೊಳಿಸುವುದು; 54. ಕಾವ್ಯಕ್ರಿಯಾ – ಕಾವ್ಯಗಳನ್ನು ರಚಿಸುವುದು; 55. ಅಭಿಧಾನಕೋಶಛಂಧೋವಿಜ್ಞಾನಂ: ನಿಘಂಟು ಮತ್ತು ಛಂದಸ್ಸುಗಳ ಪರಿಚಯ ಜ್ಞಾನ; 56. ಕ್ರಿಯಾಕಲ್ಪಃ : ಕಾವ್ಯಾಲಂಕಾರಗಳ ಜ್ಞಾನ; 57. ಛಲಿತಕಯೋಗಾಃ – ಬೇರೆಯವನಿಗೆ ಗೊತ್ತಾಗದಿರಲು ವೇಷ ಮತ್ತು ಧ್ವನಿಯನ್ನು ಬದಲಾಯಿಸುವುದು; 58. ವಸ್ತ್ರಗೋಪನಾನಿ – (i) ಭ್ರಮೆ ಪಡಿಸುವಂತೆ, ಮೋಸ ಮಾಡುವಂತೆ ಬಟ್ಟೆ ಧರಿಸುವುದು, ಚಿಕ್ಕ ಬಟ್ಟೆಯನ್ನೇ ದೊಡ್ಡದಾಗಿ ಕಾಣುವಂತೆ ಉಡುವುದು; (ii) ಬಟ್ಟೆಯ ಹರಿದ ಭಾಗವು ಕಾಣದಂತೆ ಉಡುವುದು; 59. ದ್ಯೂತವಿಶೇಷಾಃ – ಹಲವು ಜೂಜುಗಳ ಜ್ಞಾನ; 60. ಆಕರ್ಷಕ್ರೀಡಾ– ಜೂಜಿನಲ್ಲಿ ನಿರ್ದಿಷ್ಟವಾದ ಒಂದು ಆಟ; 61. ಬಾಲ ಕ್ರೀಡನಕಾನಿ– ಮಕ್ಕಳಿಗಾಗಿ ಚೆಂಡಿನಿಂದ, ಗೊಂಬೆ ಮುಂತಾದುವುಗಳಿಂದ ಆಟಗಳನ್ನು ಮಾಡುವುದು; 62. ವೈನಯಿಕೀನಾಂ ವಿದ್ಯಾನಾಂ ಜ್ಞಾನಂ – ಒಬ್ಬನಿಗೆ ತಿಳಿವನ್ನು ಕೊಡುವ ವಿಜ್ಞಾನ ಮತ್ತು ಕಲೆಗಳ ತಿಳಿವಳಿಕೆ; 63. ವೈಜಯಿಕೀನಾಂ ವಿದ್ಯಾನಾಂ ಜ್ಞಾನಂ : ಗೆಲುವನ್ನು ಖಚಿತಪಡಿಸುವ ವಿದ್ಯೆಗಳ ತಿಳಿವಳಿಕೆ; 64. ವ್ಯಾಯಾಮಿಕೀನಾಂ ವಿದ್ಯಾನಾಂ ಜ್ಞಾನಂ : ಈಜು, ಕುಸ್ತಿ ಮೊದಲಾದ ದೈಹಿಕ ವ್ಯಾಯಾಮಗಳ ತಿಳಿವಳಿಕೆ.

ಭಾರತೀಯರು ನಾಗರಿಕರಾದಂತೆ ಜೀವನವನ್ನು ಸುಂದರಗೊಳಿಸಲು ಪ್ರಯತ್ನಿಸಿದಂತೆ ಕಲೆ ಎಂಬ ಮಾತು ಬಳಕೆಗೆ ಬಂತು. ಕಾಳಿಕಾಪುರಾಣದಲ್ಲಿ ಕಲೆಗಳ ಹುಟ್ಟಿನ ಬಗ್ಗೆ ಒಂದು ಕುತೂಹಲಕಾರಿ ಕಥೆಯಿದೆ. ಆದರೆ ಅದಕ್ಕಿಂತ ಹಿಂದಿನದಾದ ವಿಷ್ಣು ಪುರಾಣ, ವಾಯುಪುರಾಣಗಳಲ್ಲಿ ಕಲೆಯ ಹುಟ್ಟಿನ ಬಗ್ಗೆ ಯಾವ ಮಾತೂ ಇಲ್ಲ. ಇದರಿಂದ ತಿಳಿದು ಬರುವುದೇನೆಂದರೆ ಆ ಸಮಯಕ್ಕೆ ಕಲೆಗಳ ಹುಟ್ಟಿನ ಬಗ್ಗೆ ಒಂದು ಪಟ್ಟಿ ಸಿದ್ಧವಾಗಿರಲಿಲ್ಲ. 64 ಕಲೆಗಳು ಭಾರತೀಯರ ಜೀವನದ ಮೇಲೆ ಮಹತ್ತ್ವಪೂರ್ಣ ಪರಿಣಾಮವನ್ನು ಬೀರಿವೆ. ಚತುಃಷಷ್ಟಿಕಲಾಗಮಪ್ರಯೋಗಚತುರ, ಸಕಲಕಲಾ ಪ್ರವೀಣ—ಹೀಗೆ ವ್ಯಕ್ತಿಗಳನ್ನು ವಿಶೇಷಿಸಿರುವುದೂ ಉಂಟು. ಅಂದರೆ 64 ಕಲೆಗಳಲ್ಲಿ ಒಬ್ಬ ವ್ಯಕ್ತಿ ಪ್ರವೀಣನಾಗಿರಬೇಕು ಎಂದು ಆಶಿಸುವುದು ಸಹಜವಾದರೂ ಎಲ್ಲರಲ್ಲಿಯೂ ಈ ಪ್ರಾವೀಣ್ಯವಿದ್ದಿತೆಂದಲ್ಲ. ಜನಸಾಮಾನ್ಯರಿಗಿಂತ ಹೆಚ್ಚು ಕಲೆಗಳಲ್ಲಿ ಪ್ರವೀಣನಾದವನನ್ನು ನಿರ್ದೇಶಿಸುವಲ್ಲಿ ಚತುಃಷಷ್ಟಿ ಕಲೆಗಳಲ್ಲಿ ಪರಿಣತನೆಂದು ಬಳಸುತ್ತಿದ್ದರು. ಅಲ್ಲದೆ ಈ 64 ಕಲೆಗಳ ಪಟ್ಟಿಯನ್ನು ನೋಡಿದಾಗ ಅವು ಜೀವನದಲ್ಲಿ ಹಾಸು ಹೊಕ್ಕಾಗಿವೆಯೆಂಬ ಅಂಶ ಸ್ಪಷ್ಟವಾಗುತ್ತದೆ. ಆದ್ದರಿಂದ ವಿಶೇಷ ಶ್ರಮವಿಲ್ಲದೆ ಇವುಗಳ ನಿರ್ವಹಣೆ ಸಾಧ್ಯ. ಕರ್ನಾಟಕ ಕಲೆಗಳ ತವರು. ಇಲ್ಲಿನ ಜನ ಜೀವನವೈಭವವನ್ನು ಕಂಡವರು. ರಾಜ ಮಹಾರಾಜರು ಕಲೆಗಳಲ್ಲಿ ಸ್ವಯಂ ಪರಿಣಿತರಲ್ಲದೆ ಪೋಷಕರೂ ಆಗಿದ್ದರು. ಇಲ್ಲಿ ಅನೇಕಾನೇಕ ಪರಿಣತರಿದ್ದರೆನ್ನಲು ಚರಿತ್ರೆಯ ನಿದರ್ಶನಗಳಿವೆ. (ಜಿ.ಜಿ.ಎಂ.)

**ಅರುವತ್ತನಾಲ್ಕು ವಿದ್ಯೆಗಳು :** ಪ್ರಪಂಚದಲ್ಲಿ ಬಾಳಿಬದುಕಿ ಯಶಸ್ಸುಗಳಿಸಬೇಕಾದರೆ ಈ ವಿದ್ಯೆಗಳ ಜ್ಞಾನ ಅತ್ಯಾವಶ್ಯಕವೆಂಬ ದೃಷ್ಟಿಯಿಂದ ಹಿಂದೆ ಪ್ರಚಲಿತವಿದ್ದ ವಿದ್ಯೆಗಳನ್ನೆಲ್ಲ ಒಂದೆಡೆ ಕಲೆ ಹಾಕಲಾಗಿದೆ. ಇವನ್ನು ಅಭ್ಯಸಿಸಿ ತಿಳಿದವನೇ ಪಂಡಿತ. ಅಂತಹವನನ್ನು ಪೂರ್ವದಲ್ಲಿ ಜ್ಞಾನಿ ಎನ್ನುತ್ತಿದ್ದರು. ಈ ವಿದ್ಯೆಗಳಲ್ಲಿ ಪಾರಂಗತನಾದವನು ತನ್ನ ಪಾಂಡಿತ್ಯವನ್ನು ಮೆರೆಯಲು ದೇಶವಿದೇಶಗಳನ್ನು ಸುತ್ತಿ, ರಾಜಾಶ್ರಯ ಪಡೆದು, ಆಯಾ ಸ್ಥಳದ ಪಂಡಿತರನ್ನು ಈ ವಿದ್ಯೆಗಳ ಹಿನ್ನೆಲೆಯ ವಾದ ವಿವಾದಗಳಲ್ಲಿ ಸೋಲಿಸಿ ದಿಗ್ವಿಜಯ ಪಡೆದು ರಾಜರುಗಳಿಂದ ಬಹುಮಾನಿತನಾಗಿ ಬರುವುದು ರೂಢಿಯಲ್ಲಿತ್ತು. ಭಾರತೀಯ ಇತಿಹಾಸದಲ್ಲಿ ದಿಗ್ವಿಜಯ ಪಡೆದು ಬಂದ ಪಂಡಿತರುಗಳ ಐತಿಹ್ಯಗಳಿಗೆ ಕೊರತೆಯೇನಿಲ್ಲ. ಈ ವಿದ್ಯೆಗಳಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ತಾಂತ್ರಿಕ, ಜ್ಯೋತಿಷ್ಯ, ಕ್ಷುಲ್ಲಕ– ಎಲ್ಲ ವಿಷಯಗಳೂ ಸೇರುತ್ತವೆ, ಆಧುನಿಕ ಪ್ರಪಂಚದ ವಿದ್ಯೆಗಳಿಗೆಲ್ಲ ಈ ಅರುವತ್ತನಾಲ್ಕು ವಿದ್ಯೆಗಳೇ ಮೂಲ ಎಂಬುದನ್ನು ಮರೆಯುವಂತಿಲ್ಲ. ಈ ಮೂಲಗಳಿಂದ ಆಧುನಿಕ ಜ್ಞಾನ ಹೇಗೆ ಶಾಖೋಪಶಾಖೆಗಳಾಗಿ ಬೆಳೆದಿವೆಯೆಂಬುದನ್ನು ಗಮನಿಸಿದಾಗ ಆಶ್ಚರ್ಯವಾಗದಿರದು. ಅವು ಹೀಗಿವೆ:

ನಾಲ್ಕು ವೇದಗಳು: ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ.

ಆರು ಅಂಗಗಳು : ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ.

ಆರು ಶಾಸ್ತ್ರಗಳು : ವೇದಾಂತ, ಧರ್ಮ, ಕಾವ್ಯ, ಶಿಲ್ಪ, ಕಾಮ, ಅಲಂಕಾರ.

ಹದಿನೆಂಟು ಪುರಾಣಗಳು: ಬ್ರಾಹ್ಮ, ಪದ್ಮ, ವೈಷ್ಣವ, ಶೈವ, ಭಾಗವತ, ಭವಿಷ್ಯತ್, ನಾರದೀಯ, ಮಾರ್ಕಂಡೇಯ, ಆಗ್ನೇಯ, ಬ್ರಹ್ಮ ವೈವರ್ತ, ಲಿಂಗ, ವರಾಹ, ಸ್ಕಂದ ವಾಮನ, ಕೂರ್ಮ, ಮತ್ಸ್ಯ, ಗರುಡ, ಬ್ರಹ್ಮಾಂಡ.

ಹದಿನೆಂಟು ಸ್ಮೃತಿಗಳು: ಮನು, ಅತ್ರಿ, ವಿಷ್ಣು, ಹಾರೀತ, ಯಾಜ್ಞವಲ್ಕ್ಯ, ಉಶನ, ಅಂಗಿರ, ಯಮ, ಆಪಸ್ತಂಬ, ವಾತ್ಸ್ಯಾಯನ, ಬೃಹಸ್ಪತಿ, ಪರಾಶರ, ವ್ಯಸ, ಶಂಕಲಿಖಿತ, ದಕ್ಷ, ಗೌತಮ, ಶಾಂತಾತಪ, ವಸಿಷ್ಠ.

ಅಲ್ಲದೆ ಗಾಂಧರ್ವ, ವಿಶ್ವಕರ್ಮ, ಸೂದ ಭೈಷಜ, ಕಾವ್ಯ, ನರ್ತನ, ನಾಟಕ, ಅಲಂಕಾರ, ಕೃತಕ, ಚೋರ, ಕಳ, ಮಹೇಂದ್ರ ಈ ವಿದ್ಯೆಗಳ ಉಲ್ಲೇಖವನ್ನು ಭಾರತೀಯ ಕಾವ್ಯ, ಪುರಾಣಗಳಲ್ಲಿ ಕಾಣಬಹುದು. *

**ಅರುವತ್ತನಾಲ್ಕು ಶೀಲಗಳು :** ವೀರಶೈವಧರ್ಮದಲ್ಲಿ ನಿಷ್ಠೆಯುಳ್ಳವರು ಇವನ್ನು ಆಚರಿಸಬೇಕೆಂಬ ನಿಯಮವಿದೆ. ಪ್ರಖ್ಯಾತ ಶರಣರಾದ ಪಾಲ್ಕುರಿಕೆ ಸೋಮನಾಥ, ಸರ್ವಶೀಲೆ ಚೆನ್ನಮ್ಮ, ಈ ಶೀಲಗಳನ್ನು ಚಾಚೂ ತಪ್ಪದೆ ಆಚರಿಸುತ್ತಿದ್ದರೆಂದು ಪುರಾಣಗಳಲ್ಲಿ ಹೇಳಿದೆ.

ಇವುಗಳಲ್ಲಿ ಶಿವಭಕ್ತ ಹೇಗಿರಬೇಕೆಂಬ ಎಲ್ಲ ವಿವರಗಳೂ ಸಿಕ್ಕುತ್ತವೆ. ಲಿಂಗಪೂಜೆ, ಮನೆಯ ವಾತಾವರಣ, ಲಿಂಗಜಂಗಮ ಭಕ್ತಾದಿಗಳ ವಿಚಾರದಲ್ಲಿ ತೋರಬೇಕಾದ ನಡೆವಳಿಕೆಗಳು, ತಿನ್ನಬೇಕಾದ ಆಹಾರ, ಪಾನೀಯಗಳ ವಿವರ, ವಿಹಾರ ವರ್ಜನೆ, ಪಶುಪ್ರಾಣಿಗಳ ಸಂಬಂಧವಾದ ನಡೆವಳಿಕೆ, ಇತರ ಜಾತಿಗಳವರ ಬಗ್ಗೆ ಇರಬೇಕಾದ ವರ್ತನೆ–ಹೀಗೆ ಅನೇಕ ವಿವರಗಳಿವೆ. ಇವೆಲ್ಲವನ್ನೂ ಆಚರಿಸಬೇಕೆಂಬುದು ಕಟ್ಟಳೆಯಾದರೂ ಮುಖ್ಯವಾಗಿ ಭವಿಪಾಕ, ಪರಸ್ತ್ರೀ, ಬಹುಜಲ, ಅನ್ಯದೈವ, ಭವಿಗಳನ್ನು ಬಿಟ್ಟು ಸರ್ವಾಚಾರ ಸಂಪನ್ನನಾಗಿ, ನಿರ್ಮಲತೆಯಿಂದ ನಡೆಯಲು ಪ್ರತಿಯೊಬ್ಬನೂ ಪ್ರಯತ್ನಿಸಬಹುದು.

ನಿದರ್ಶನಕ್ಕಾಗಿ ಕೆಲವು ಶೀಲಗಳನ್ನು ನೋಡಬಹುದು: ಲೌಕಿಕವನ್ನು ಅತಿಗಳೆವುದು, ಸತಿಪತಿಗಳಿಬ್ಬರೂ ಶೀಲವಂತರಾಗಿರುವುದು, ಶಿವಭಕ್ತರಲ್ಲಿ ಜಾತಿಯನ್ನು ಅರಸದಿರುವುದು, ಎಮ್ಮೆ ಹಾಲು ವರ್ಜಿಸುವುದು, ಮರದ ಹಾವುಗೆ ಮೆಟ್ಟುವುದು, ಹುಸಿಯ ನುಡಿಯದಿರುವುದು, ತ್ರಿವಿಧ ದಾಸೋಹ ಮಾಡುವುದು, ಉಚಿತವರಿತು ದಾನ ಮಾಡುವುದು; ಡಂಭದ ಲಿಂಗಾರ್ಚನೆ, ಆಸೆಯ ಶಿವದೀಕ್ಷೆ ಮಾಡದಿರುವುದು, ಕಿವಿಯಿಂದ ಕೆಟ್ಟ ಶಬ್ದಗಳನ್ನು ಕೇಳದಿರುವುದು. ಗುರುವಿನ ಸೇವೆಗೆಯ್ಯುವುದು, ಆಚಾರವೇ ಗುರು; ಲಿಂಗವೇ ಜಂಗಮ ಎಂದು ತಿಳಿಯುವುದು, ಎಲ್ಲವೂ ಶಿವಾಧೀನವೆಂದು ಭಾವಿಸುವುದು, ನಿರಂತರ ಸಾವಧಾನಿಯಾಗಿರುವುದು, ಬಯಸಿ ಬಂದುದು ಅಂಗಭೋಗ, ಬಯಸದೆ ಬಂದುದು ಲಿಂಗಭೋಗವೆಂದು ಅನುಭವಿಸುವುದು, ಅಷ್ಟ ಮಹಾಸಿದ್ಧಿಗಳನ್ನು ತೃಣೀಕರಿಸುವುದು; ಶೀಲವೇ ಜ್ಞಾನ; ಜ್ಞಾನವೇ ಶೀಲವೆಂಬುದನ್ನು ತಿಳಿಯುವುದು. *

**ಅರುವತ್ತಮೂರು ಪುರಾತನರು :** ತಮಿಳಿನ ಪೆರಿಯಪುರಾಣದಲ್ಲಿ ನಿರೂಪಿತರಾಗಿರುವ ಶರಣರು, ಕನ್ನಡ ವಚನಕಾರರು ಇವರನ್ನು ಪುರಾತನರು, ಪ್ರಮಥರು ಎಂದೂ ತಮಿಳರು ನಾಯನಾರ್ ಎಂದೂ ಕರೆಯುವರು. ತಮಿಳುನಾಡಿನ ಶಿವದೇವಾಲಯಗಳಲ್ಲೂ

ಕರ್ನಾಟಕದಲ್ಲಿ ನಂಜನಗೂಡು, ಚಾಮರಾಜನಗರದ ದೇವಾಲಯಗಳಲ್ಲೂ ಈ ಭಕ್ತರ ವಿಗ್ರಹಗಳಿವೆ. ಇವರಲ್ಲಿ ಮೂವರು ತೇವಾರ ಎಂಬ ತಮಿಳು ವೇದ ಬರೆದು ಪ್ರಸಿದ್ಧರಾಗಿದ್ದಾರೆ. ತಮಿಳು, ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಇವರನ್ನು ಕುರಿತು ಹಲವಾರು ಮಂದಿ ಗ್ರಂಥಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ಹಂಪೆಯ ಹರೀಶ್ವರ, ಸುರಂಗಕವಿ, ವೀರಭದ್ರ, ಚತುರ್ಮುಖ ಬೊಮ್ಮರಸ, ನಿಜಗುಣಶಿವಯೋಗಿ, ಬಸವಪ್ಪಶಾಸ್ತ್ರೀ–ಇವರು ಈ ಪುರಾತನರನ್ನು ಕುರಿತು ಕಾವ್ಯಗಳನ್ನು ಬರೆದಿದ್ದಾರೆ. ಬಸವಪುರಾಣಾದಿ ಗ್ರಂಥಗಳಲ್ಲೂ ಇವರ ಉಲ್ಲೇಖವಿದೆ. ಇವರಲ್ಲಿ 15 ಮಂದಿ ಬ್ರಾಹ್ಮಣರು, 12 ಮಂದಿ ಕ್ಷತ್ರಿಯರು, 5 ಮಂದಿ ವೈಶ್ಯರು, ಒಬ್ಬ ಪಂಚಮ, 24 ಮಂದಿ ಶೂದ್ರರು ಇಬ್ಬರು ಸ್ತ್ರೀಯರಾದಿಯಾಗಿ ಎಲ್ಲ ಕುಲ ಜಾತಿ ಪಂಥದವರೂ ಇದ್ದಾರೆಂದೂ ಇವರ ಕಾಲ ಪ್ರಸಕ್ತಶಕದ ಆರಂಭದಿಂದ 10ನೆಯ ಶತಮಾನದವರೆಗೆ ಹೋಗುತ್ತದೆಂದೂ ವಿದ್ವಾಂಸರ ಅಭಿಪ್ರಾಯ. ಇವರನ್ನು ಕುರಿತು ತಮಿಳಿನಲ್ಲಿ ಪೆರಿಯಪುರಾಣವನ್ನು ಬರೆದ ಕವಿಯ ಹೆಸರು ಶೆಕ್ಕಿರಾರ್, ಈ ಗ್ರಂಥವನ್ನು ಚಿದಂಬರಂ ಕ್ಷೇತ್ರದಲ್ಲಿ ಬರೆದಂತೆ ಪ್ರತೀತಿಯಿದೆ. 63 ಹೆಸರುಗಳು ಈ ರೀತಿ ಇವೆ:

| **ಪೆರಿಯಪುರಾಣದ ಪ್ರಕಾರ** | **ಹರಿಹರನ ರಗಳೆಗಳ ಪ್ರಕಾರ** |
|---|---|
| 1 ತಿರುನೀಲಕಂಟ | ತಿರುನೀಲಕಂಠ |
| 2 ಇಯರ್‌ಪಗೈಯರ್ | ಇಹಪ್ಪಗೆಯಾಂಡ |
| 3 ಇಳೆಯಾನ್ ಕುಡಿಮರ | ಇಳೆಯಾಂಡಗುಡಿಮಾರ |
| 4 ಮೆಯ್‌ಪ್ಪೊರುಳರ್ | ಸೇದಿರಾಜ |
| 5 ವಿರನ್‌ಮಿಂಡರ್ | ಮೆರೆಮಿಂಡ |
| 6 ಅಮರನೀತಿ | ಅಮರನೀತಿ |
| 7 ಎರಿಪತ್ತರ್ | ಇರಿಭಕ್ತ |
| 8 ಏಣಾದಿನಾಥರ್ | ಏಣಾಧಿನಾಥ |
| 9 ಕಣ್ಣಪ್ಪ | ಕಣ್ಣಪ್ಪ |
| 10 ಕುಂಗುಲಿಯಕ್ಕಲಿಯರ್ | ಕೊಂಗುಲಿಯ ಕಲಿಯರು |
| 11 ಮಾನಕ್ಕಂಜಾರರ್ | ಮಾನಕಂಜರ |
| 12 ಅರಿವಾಳ್ತಾಯರ್ | ಅರಿವಾಳ್ತಾಂಡ (ಅರಿವಾಟ್ಟಾಯರ್) |
| 13 ಆನಾಯರ್ | ಅನಾಯನಾರ |
| 14 ಮೂರ್ತಿನಾಯನಾರ್ | ಒಲಘಾಂಡಮೂರ್ತಿ |
| 15 ಮುರುಗರ್ | ನಮಶ್ಶಿವಾಯ ಮುರುಘರು |
| 16 ರುದ್ರಪಶುಪತಿ | ರುದ್ರಪಶುಪತಿ |
| 17 ತಿರುನಾಳೈಪ್ಪೋವರ್ | ತಿರುನಾಳ್ಪೋವರು |
| 18 ತಿರುಕುರುಪ್ಪು ತೊಂಡರ್ | ತಿರುಕುರುಂಪೆತೊಂಡ |
| 19 ಕಂಡೇಶ್ವರರ್ | ಚಂಡೇಶ |
| 20 ತಿರುನಾವುಕ್ಕರಸರ್ (ಅಪ್ಪಾರ್) | ವಾಗೀಶ |
| 21 ಕುಲಚ್ಚಿರೈಯಾರ್ | ಕುಲಚೆರೆಯ |
| 22 ಪೆರುಮಿಳಲೈಕ್ಕುರುಂಬರ್ | ಪೆರುಮಳಿಲೆಯ ಕುರುಂಬರು |
| 23 ಕಾರೈಕ್ಕಾಲ್ ಅಮ್ಮೆಯರ್ | ಕಾರಿಕಾಲಮ್ಮೆ |
| 24 ಅಪ್ಪೊದಿಯಡಿಗಳ್ | ಅಃಪೂತಿ ಅಡಿಗಳು |
| 25 ತಿರುನೀಲನಕ್ಕರ್ | ತಿರುನೀಲನಕ್ಕರು |
| 26 ನಮಿನಂದಿಯಡಿಗಳ್ | ನಮಿನಂದಿಯಡಿಗಳು |
| 27 ತಿರುಞಾನಸಂಬಂಧರ್ | ತಿರುಜ್ಞಾನಸಂಬಂಧರು |
| 28 ಏಯರ್‌ಕೋನ್–ಕಲಿಕ್ಕಾಮರ್ | ಕಲಿಕಾಮ |
| 29 ತಿರುಮೂಲರ್ | ತಿರುಮೂಲರು |
| 30 ತಂಡಿಯಡಿಗಳ್ | ದಂಡೀಶ |
| 31 ಮೂರ್ಕ್ಕನಾಯನಾರ್ | ಅಚ್ಯುತ |
| 32 ಸೋಮಾಸಿಮರರ್ | ಸೋಮಾಸಿಮಾರ |
| 33 ಸಾಕ್ಕಿಯನಾಯನಾರ್ | ಸಾಂಖ್ಯತೊಂಡ |
| 34 ಶಿರುಪ್ಪುಲಿನಾಯನಾರ್ | ಚಿರುಪ್ಪುಲಿಯಾಂಡ |
| 35 ಶಿರುತ್ತೊಂಡರ್ | ಚಿರುತೊಂಡ |
| 36 ಸೇರ್‌ಮಾನ್ ಪೆರುಮಾಳ್ | ಚೇರಮ |
| 37 ಕಣನಾದರ್ | ಗಣನಾಥ |
| 38 ಕುರುವನಾಯನಾರ್ | ವೇಳೂತ |
| 39 ಪುಗಳ್‌ಚೋಳರ್ | ಪಗಲ್ಚೋಳ |
| 40 ನರಸಿಂಗಮುನ್ನೈಯಾರೈಯಾರ್ | ನರಸಿಂಗ ಮೊನೆಯರು |
| 41 ಆದಿಬತ್ತನಾಯನರ್ | ಅತಿಭಕ್ತ |
| 42 ಕಲಿಕ್ಕಂಬರ್ | ಕಲಿಕಂಬ |
| 43 ಕಲಿಯನಾಯನಾರ್ | ಕಲಿಯನಾಯನಾರ |
| 44 ಸತ್ತಿನಾಯನಾರ್ | ಕಲಿಚೆತ್ತಿಯಾಂಡರು |
| 45 ಐಯಡಿಗಳ್ ಕಾಡವರ್‌ಕೋನ್ | ಅಯ್ಯಡಿ |
| 46 ಕಣಂಬುಲ್ಲನಾಯನಾರ್ | ಕಣಂಬುಲ್ಲನಂಬಿ |
| 47 ಕಾರಿನಯನಾರ್ | ಕಡವೂರಕಾರಿ |
| 48 ನೆಡುಮಾರನಾಯನಾರ್ | ಸೌಂದರಪಾಂಡ್ಯರಾಜ (ಕೂನಪಾಂಡ್ಯ) |
| 49 ವಾಯಿಲಾರ್ ನಾಯನಾರ್ | ವಾಹಿಲ್ಯ |
| 50 ಮುನ್ನೈಯಡುವರ್ | ಮೊನೆಯಿಡುವರು |
| 51 ಕಳರ್ಚಿಂಗರ್ | ಕಳಚೆಂಗರು |
| 52 ಇಡಂಗಳಿಯಾರ್ | ಎಡಗಳೆಯರು |
| 53 ಸೆರುತುಣ್ಣೈಯಾರ್ | ಚಿರುತ್ತೊಣೆಯಾಂಡ |
| 54 ಪುಗಳ್‌ತ್ತುಣ್ಣೈನಾಯನಾರ್ | ಪಗಲ್ತೊಣೆಯಾಂಡರು (ಎಡಗೆಳೆಯ) |
| 55 ಕೋಟ್ಪುಲಿನಾಯನಾರ್ | ಕೊಲ್ಬುಲಿಯಾಂಡ |
| 56 ಪೂಸಲಾರ್ | ಪೂಸಲೆಯಾಂಡ |
| 57 ಮುಂಗೈಯರ್ಕ್ಕರಸಿಯಾರ್ | ಪಾಂಡ್ಯ ಮಹಾದೇವಿ |
| 58 ನೇಶನಯನಾರ್ | ನೇಶರ್ |
| 59 ಕೋಚ್ಚಂಗಣ್‌ಚೋಳರ್ | ಕಳಚಂಗ ಪೆರುಮಾಳ್ |
| 60 ತಿರುನೀಲಕಂಟಯಾಳ್ಪಾಣರ್ | ತಿರುನೀಲಕಂಠಪಾಣರು |
| 61 ಶಡೈಯನಾಯನಾರ್ | ಜಡೆಯನಾಯನಾರ್ |
| 62 ಇಸೈಞಾನಿಯಾರ್ | ಯಸ್ಯಜ್ಞಾನಿದೇವಿಯರು |
| 63 ಸುಂದರಮೂರ್ತಿ | ನಂಬಿಯಣ್ಣ |

ಇವರನ್ನು ಕುರಿತ ಮಂಟಪಪೂಜೆ ವೀರಶೈವರಲ್ಲಿ ಬಳಕೆಯಲ್ಲಿದೆ. ಧಾರವಾಡದ ಮುರುಘಾಮಠದಲ್ಲಿ 63 ಹೆಸರಿನ ಕೋಣೆಗಳಿವೆ. ಬೆಳಗಾಂವಿ ಜಿಲ್ಲೆಯ ಅಥಣಿಯಲ್ಲಿ ಶ್ರೀ ಮುರುಘೇಂದ್ರ ಶಿವಯೋಗಿಗಳು 63 ಮಂಟಪಗಳ ಸ್ಥಾಪನೆ ಮಾಡಿದ್ದಾರೆ. (ಬಿ.ಎಸ್.)

**ಅರೆಂಗ :** ಅರಕೇಸೀ (ಪಾಮೀ) ಕುಟುಂಬಕ್ಕೆ ಸೇರಿದ ಉದ್ಯಾನ ಸಸ್ಯ. ಸಾಲುಮರವಾಗಿ ನೆಡುವ ವಾಡಿಕೆ ಇದೆ.

ಕಾಂಡದ ಆಕಾರ, ನಾರು, ಗರಿ, ಹೂಗೊಂಚಲು ಮತ್ತು ಕಾಯಿಗಳು ಚಿತ್ರ ವಿಚಿತ್ರವಾಗಿದ್ದು ಗಿಡ ನೋಡಲು ಭವ್ಯವಾಗಿ ಕಾಣುತ್ತದೆ. ಹಡಗುಗಳಲ್ಲಿ ಸೋಸುವುದಕ್ಕೂ ಹಲಗೆಗಳ ಮಧ್ಯದ ರಂಧ್ರ ಮುಚ್ಚುವುದಕ್ಕೂ ಇದರ ನಾರನ್ನು ಬಳಸುತ್ತಾರೆ. ಈ ಜಾತಿಯ ಕೆಲವು ಪ್ರಭೇದಗಳ ಸಸ್ಯರಸದಿಂದ ಅರೆಂಗ ಸಕ್ಕರೆ ತಯಾರು ಮಾಡುತ್ತಾರೆ.

ಗಿಡ ಉದ್ದವಾಗಿ ಬೆಳೆಯುತ್ತದೆ. ಮುಳ್ಳಿಲ್ಲ. ಗರಿ ತೊಟ್ಟುಗಳ ಅಕ್ಕಪಕ್ಕದಲ್ಲಿ ನಾರಿರುತ್ತದೆ. ಎಲೆ ಸಂಯುಕ್ತ ಮಾದರಿಯದು. ಹೂಗೊಂಚಲು ಸ್ಪೇಡಿಕ್ಸ್ ಮಾದರಿಯದು. ಹೂ ಏಕಲಿಂಗಿ, ತೊಟ್ಟಿಲ್ಲ. ಉಪದಳಗಳು ಎರಡು.

ಅರೆಂಗ ಪಿನೇಟ: ಈ ಪ್ರಭೇದದ ಮೂಲ ಮಲಯ, 12 ಮೀ ಎತ್ತರ ಬೆಳೆಯುತ್ತದೆ. ಕಾಂಡ ಕಪ್ಪು; ಇದರ ಮೇಲುಭಾಗದಲ್ಲಿ ನಾರು ಹೆಣದುಕೊಂಡಿದ್ದು, ಇದರಿಂದ ಗರಿಗಳು ತೂರಿಕೊಂಡು ಹೊರಬಂದಿರುತ್ತದೆ. ಗರಿಗಳ ಬಣ್ಣ ಅತೀ ಕಪ್ಪು; ತಳಭಾಗದಲ್ಲಿ ಬಿಳಿಯ ನಯವಾದ ದೂಳು ತುಂಬಿರುತ್ತದೆ. ಗಿಡ ಹೂ ಬಿಡಬೇಕಾದರೆ 10–12 ವರ್ಷಗಳು ಬೇಕು. ಹೂಗೊಂಚಲಲ್ಲಿ ಮೇಲುಭಾಗದಲ್ಲಿ ಗಂಡು ಹೂಗಳೂ ಕೆಳಭಾಗದಲ್ಲಿ ಹೆಣ್ಣು ಹೂಗಳೂ ಇರುತ್ತವೆ. ಗಂಡು ಹೂಗಳ ವಾಸನೆ ಮಧುರವಲ್ಲ, ಅನ್ಯಪರಾಗದಿಂದ ಗರ್ಭಧಾರಣೆ, ಕಾಯಿಗಳು ಗೊಂಚಲಾಗಿ ನೇತಾಡುತ್ತಿರುತ್ತವೆ. ಹಣ್ಣಾಗಲು ಸುಮಾರು 2–3 ವರ್ಷ ಬೇಕು. ಒಂದು ಮರದಲ್ಲಿ ಹಲವಾರು ಹೂಗೊಂಚಲು ಕಾಯಿ ಮತ್ತು ಹಣ್ಣುಗೊಂಚಲು ಇರುತ್ತವೆ. ಬಣ್ಣ ಕಂದು.

ಅರೆಂಗ ಎಂಗ್ಲೆರಿ: ಪಾರ್‌ಮೋಸ್ ದ್ವೀಪದ ಮೂಲದ್ದು. ಅನೇಕ ವಿಧಗಳಲ್ಲಿ ಅರೆಂಗ ಪಿನೇಟ ಸಸ್ಯವನ್ನು ಹೋಲುತ್ತದೆ. ಗಿಡ ಸುಮಾರು 3 ಮೀ ಎತ್ತರಕ್ಕೆ ಬೆಳೆಯುತ್ತದೆ. ಎಲೆ ಗರಿಯ ರೂಪದ ಸಂಯುಕ್ತ ಪತ್ರ. ಕಾಂಡದ ಪಕ್ಕದಲ್ಲಿ ಅನೇಕ ಮೋಸುಗಳು ಇದ್ದು ಗುಂಪಾಗಿ ಕಾಣುತ್ತವೆ. ಗರಿಯ ಉದ್ದ ಸುಮಾರು 1.3 ಮೀ. ಬೀಜಗಳಿಂದ ಮಾತ್ರ ವೃದ್ಧಿ ಮಾಡಬಹುದು. ಬೇಸಾಯ ಅಡಕೆ ತೆಂಗುಗಳಂತೆ. (ಡಿ.ಎಂ.)

**ಅರೆ ಅಥವಾ ಕಲ್ಲುಗಣಿ :** ನೆಲದಲ್ಲಿ ಹುದುಗಿರುವ ನೆಲಶಿಲೆಗಳನ್ನು ಬೇರ್ಪಡಿಸಿ ಹೊರತೆಗೆಯುವ ಸ್ಥಳ (ಕ್ವಾರಿ). ಹೀಗೆ ಬೇರ್ಪಡಿಸಿದ ಶಿಲೆಗಳನ್ನು ಕಟ್ಟಡಗಳ ನಿರ್ಮಾಣದಲ್ಲಿ ಹಾಸುಗಲ್ಲು, ಪಾಯಗಲ್ಲು, ಚಪ್ಪಡಿ ಕಲ್ಲು ಮುಂತಾದ ರೀತಿಯಲ್ಲಿ ಉಪಯೋಗಿಸುವರು.

ಅರೆಗಳಲ್ಲಿ ಎರಡು ವಿಧ: 1 ಬಯಲೆಗಳು (ಓಪನ್ ಕ್ವಾರೀಸ್); 2 ನೆಲದ ಅಡಿಯಲ್ಲಿರುವ ಅರೆಗಳು (ಅಂಡರ್‌ಗ್ರೌಂಡ್ ಕ್ವಾರೀಸ್).

ಬಯಲು ಅರೆಗಳು : ಇವು ಸಾಮಾನ್ಯವಾಗಿ ಭೂಮಿಯ ಮಟ್ಟದ ಮೇಲೆಯೇ ಇರುವುವು. ಇವನ್ನು ಅಂತಸ್ತು ಅರೆಗಳೂ (ಷೆಲ್ಫ್ ಕ್ವಾರೀಸ್) ಎನ್ನಲೂಬಹುದು. ಮೇಲುಹೊದಿಕೆ ಇಲ್ಲದ ಈ ಶಿಲೆಗಳನ್ನು ಭೂಮಿಯ ಹೊರಮೈಯಿಂದಲೇ ತೋಡಿ ತೆಗೆಯುವರು.

ನೆಲದಡಿಯಲ್ಲಿರುವ ಅರೆಗಳು : ಇಲ್ಲಿ ಭೂಮಿಯೊಳಗಿರುವ ಬಂಡೆಗಳಿಂದ ಶಿಲೆಗಳನ್ನು ಸೀಳಿ ಹೊರಕ್ಕೆ ತೆಗೆಯುತ್ತಾರೆ.

ಅರೆಗಳ ಉತ್ಪನ್ನಗಳು : 1 ಪ್ರಮಾಣಕಲ್ಲು (ಡೈಮೆನ್‌ಷನಲ್ ಆರ್‌ಸೈಜ್‌ಸ್ಟೋನ್); 2 ಜರ್ಝರಿತಕಲ್ಲು (ಕ್ರಷ್ಟ್ ಸ್ಟೋನ್); 3 ಮುರಿದಕಲ್ಲು (ಬ್ರೋಕನ್ ಸ್ಟೋನ್).

ಪ್ರಮಾಣಕಲ್ಲು : ಇದು ನಿರ್ದಿಷ್ಟವಾದ ಆಕೃತಿ ಮತ್ತು ಗಾತ್ರವಿರುವ ಹೆಚ್ಚು ಕಡಿಮೆ ಒಂದೇ ರೀತಿಯ ಕಲ್ಲು. ಇದನ್ನು ಕಟ್ಟಡಗಳನ್ನು ಕಟ್ಟಲು ಹೇರಳವಾಗಿ ಉಪಯೋಗಿಸುವರು (ಉದಾ: ಗ್ರಾನೈಟ್, ಮರಳುಗಲ್ಲು, ಸುಣ್ಣಕಲ್ಲು, ಮತ್ತು ಇತರೆ ಕಲ್ಲುಗಳು).

ಜರ್ಝರಿತ ಅಥವಾ ಚೂರುಕಲ್ಲು : ಪ್ರಮಾಣಕಲ್ಲಿನ ಉತ್ಪಾದನೆ ಇಳಿಮುಖವಾದುದರಿಂದ ಜರ್ಝರಿತ ಕಲ್ಲಿನ ಕೈಗಾರಿಕೆ ಅಭಿವೃದ್ಧಿ ಹೊಂದಿತು. ಬೆಲೆಯಲ್ಲಿ ಇದು ಪ್ರಮಾಣ ಕಲ್ಲಿಗಿಂತಲೂ ಕಡಿಮೆ, ಇದನ್ನು ಟನ್ ಅಥವಾ ಘನಗಜದ ಆಧಾರದ ಮೇಲೆ ಮಾರುವರು, ಈ ವ್ಯತ್ಯಾಸ ದೂರ ಸಾಗಾಣಿಕೆಯಲ್ಲಿ ಕಡಿಮೆ ಭಾಗವಾದರೂ ಜರ್ಝರಿತ ಕಲ್ಲಿನ ಬೆಲೆಯಲ್ಲಿ ಅತಿ ಮುಖ್ಯ ವಿಷಯ.

ಮುರಿದ ಕಲ್ಲು: ನೀರಿನ ಕಾರ್ಯದಿಂದಾಗುವ ಸವೆತ ಮತ್ತು ಅಲೆಗಳ ಕ್ರಿಯೆಯಿಂದ ಭೂಮಿಯ ಮೇಲ್ತೊಗಟೆಯನ್ನು ರಕ್ಷಿಸಲು ಮುರಿದ ಕಲ್ಲುಗಳನ್ನು ರಕ್ಷಣಾ ಪದರವನ್ನಾಗಿ ಉಪಯೋಗಿಸುವರು.

**ಶಿಲೆಯ ತಾಂತ್ರಿಕ ಗುಣ ನಿರ್ಧಾರದಲ್ಲಿ ಗಮನಿಸಬೇಕಾದ ಅಂಶಗಳು:**

**ಹಿಮಕ್ರಿಯೆ(ಹಿಗ್ಗುವಿಕೆ ಮತ್ತು ಕುಗ್ಗುವಿಕೆ):** ಬಿಸಿಲಿನಲ್ಲಿ ಬಂಡೆ ಕಾಯುವುದರಿಂದ ಅದರ ಮೈ ಹಿಗ್ಗುವುದು, ಮಳೆಯ ನೀರು ಅದರ ಮೇಲೆ ಬಿದ್ದಾಗ ಅದು ಕುಗ್ಗುವುದು. ಈ ರೀತಿ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯಿಂದ ಶಿಲೆಯ ಹೊರಪದರಗಳು ಶಿಥಿಲವಾಗಿ ಕಳಚಿ ಬೀಳುವುವು; ಮತ್ತು ಬಂಡೆಗಳಲ್ಲಿ ಬಿರುಕುಗಳುಂಟಾಗುವುವು. ಶೀತವಲಯ ಪ್ರದೇಶಗಳಲ್ಲಿ ಶಿಲೆಗಳಲ್ಲಿರುವ ಸೂಕ್ಷ್ಮ ರಂಧ್ರಗಳಲ್ಲಿ ಹಿಮಗಟ್ಟಿದ ನೀರು ವಿಸ್ತಾರಗೊಳ್ಳಲು ಸಾಕಷ್ಟು ಸ್ಥಳಾವಕಾಶವಿಲ್ಲದಿರುವಾಗ ಶಿಲೆಗಳಲ್ಲಿ ಸಾಮಾನ್ಯವಾಗಿ ಬಿರುಕುಗಳುಂಟಾಗುವುವು. ರಂಧ್ರಗಳು ದೊಡ್ಡವಾಗಿದ್ದರೆ ನೀರನ್ನು ಶೀಘ್ರವಾಗಿ ಬಿಟ್ಟುಕೊಡುವುವು. ಆಗ ಶೀತಸ್ಥಿತಿಯಲ್ಲಿಯೂ ಕುಗ್ಗುವಿಕೆಯ ಅಪಾಯಕ್ಕೆ ಅವಕಾಶವಿರುವುದಿಲ್ಲ.

ಶಿಲೆಗಳು ಶಿಥಿಲತೆ, ಹೆಪ್ಪುಗಟ್ಟುವ ಮತ್ತು ಕರಗುವ ಕ್ರಿಯೆಗಳಿಗೊಳಗಾದಾಗ ಕುಗ್ಗುವಿಕೆ ಬಹಳ ತೀವ್ರವಾಗಿರುತ್ತದೆ. ಶಿಲೆ ಹೆಚ್ಚಾಗಿ ಲೋಮನಾಳಾಕರ್ಷಣ (ಕ್ಯಾಪಿಲ್ಯಾರಿಟಿ) ಪ್ರಭಾವಕ್ಕೆ ಒಳಗಾದಾಗ ಅಥವಾ ಹೆಚ್ಚಿನ ಬಿರುಕುಗಳಿಂದ ಕೂಡಿದ್ದರೆ ಅದು ಕುಗ್ಗುವುದರ ಮೂಲಕ ಶೀಘ್ರವಾಗಿ ನಾಶವಾಗುವುದು.

**ರಾಸಾಯನಿಕ ವಿನಾಶ:** ದೊಡ್ಡ ನಗರಗಳಲ್ಲಿ ಕಟ್ಟಡದ ಶಿಲೆಗಳು ವಿಧ್ವಂಸಕ ವಸ್ತುಗಳಿಗಿಂತ ವಾಯುಮಂಡಲದ ಅನಿಲಗಳಿಂದ ಹೆಚ್ಚಿನ ತೊಂದರೆಗೊಳಗಾಗುತ್ತವೆ. ಇವುಗಳಲ್ಲಿ ಇಂಗಾಲಾಮ್ಲ ($CO_2$) ಮತ್ತು ಗಂಧಕದ ಆಮ್ಲಗಳು ($SO_2$-$SO_3$) ಮುಖ್ಯ ವಿನಾಶಕಾರಿ ಅನಿಲಗಳು.

**ಭೌತಿಕ ವಿನಾಶ:** ಈ ವರ್ಗದ ವಿನಾಶಕಾರಿಗಳು ಕಲ್ಲಿನ ಬಿರುಕುಗಳನ್ನು ಅಥವಾ ಬಂಧವಸ್ತುಗಳನ್ನು ನಾಶಗೊಳಿಸಬಹುದು. ಕೆಲವು ವೇಳೆ ಕಟ್ಟಡಗಳ ಶಿಲೆಯ ಹೊರ ಮೈಮೇಲೆ ಲವಣದ ಸ್ಫಟಿಕೀಕರಣ ಬಿಳಿ ಚುಕ್ಕೆಗಳ ರೀತಿಯಲ್ಲಿ ಕಾಣಿಸಿಕೊಳ್ಳುವುದು, ಇದರ ಹೆಸರು ಉಪ್ಪೇಳುವಿಕೆ (ಎಫ್ಲೋರೆಸೆನ್ಸ್), ನಿರಂತರವಾಗಿ ಮಳೆ ಬಿದ್ದಾಗ ಶಿಲೆಯ ಹೊರಮೈ ಮೇಲಿರುವ ಸೂಕ್ಷ್ಮ ರಂಧ್ರಗಳೂ ಪರ್ಯಾಪ್ತ ಲವಣ ದ್ರಾವಣದಿಂದ ತುಂಬಿದಾಗ ಹರಳುಗಳ ಬೆಳೆವಣಿಗೆ ಉಂಟಾಗುವುದು. ಈ ಬೆಳೆವಣಿಗೆ ಅಧಿಕ ಜಲಸಮಸ್ಥಿತಿ ಒತ್ತಡವನ್ನು (ಹೈಡ್ರೊಸ್ಟ್ಯಾಟಿಕ್ ಪ್ರೆಷರ್) ಉಂಟುಮಾಡುವುದು. ಇದರ ಪರಿಣಾಮವಾಗಿ ಶಿಲೆ ಶಿಥಿಲಗೊಳ್ಳುವುದು. ಅಲ್ಲದೆ ನಿರಂತರ ಜಲಸಂಯೋಗದಿಂದ (ಹೈಡ್ರೇಷನ್) ಹರಳಿನ ಗಾತ್ರ ಹೆಚ್ಚಾಗಿ ಜಲಸಮಸ್ಥಿತಿ ಒತ್ತಡ ಹೆಚ್ಚಾಗುವುದು.

ಅಧಿಕ ಉಷ್ಣ ಮತ್ತು ಶೀತದ ಪರಿಣಾಮವಾಗಿ ಶಿಲೆಯ ಹೊರಪದರಗಳು ಶಿಥಿಲಗೊಂಡು ಕಳಚಿ ಬೀಳುವುವು. ಉದಾ : ಶಿಲೆ ಕ್ಯಾಲ್ಸೈಟ್ ಮತ್ತು ಫೆಲ್ಡ್‌ಸ್ಪಾರ್ ಖನಿಜಗಳಿಂದ ಕೂಡಿದ್ದಲ್ಲಿ ಅದು ಕಾದಾಗ ಕ್ಯಾಲ್ಸೈಟ್ ಖನಿಜ ಸ್ಫಟಿಕದ ಅಕ್ಷರೇಖೆಯ (C–ಅಕ್ಷರೇಖೆಯ) ಉದ್ದಕ್ಕೂ ಹಿಗ್ಗುವುದು ಮತ್ತು ಈ ಅಕ್ಷರರೇಖೆಗೆ ಲಂಬವಾಗಿರುವ ದಿಕ್ಕಿನ ಉದ್ದಕ್ಕೂ (A ಅಥವಾ B ಅಕ್ಷರೇಖೆ) ಕುಗ್ಗುವುದು, ಆರ್ಥೋಕ್ಲೇಸ್ ಫೆಲ್ಡ್‌ಸ್ಪಾರ್‌ನಲ್ಲಿ ಹಿಗ್ಗುವಿಕೆ A ಅಕ್ಷರೇಖೆಗಿಂತಲೂ B ಅಕ್ಷರೇಖೆಯ ದಿಕ್ಕನಲ್ಲಿ 12ರಷ್ಟು ಹೆಚ್ಚಾಗಿರುವುದು. ಶಾಖದ ವ್ಯತ್ಯಾಸವೂ ಶಿಲೆಯ ಹೊರ ಪದರವನ್ನು ಚಕ್ಕೆಯಂತೆ ಎಬ್ಬಿಸುವುದು ಅಥವಾ ಪದರ ಪದರವಾಗಿ (ಎಕ್ಸ್ ಫೋಲಿಯೆಷನ್) ಕಳಚಿ ಬೀಳುವಂತೆ ಮಾಡುವುದು. (ಜಿ.ಎಸ್.ಎ.)

**ಅರೆಗೇಣಿ ಆದಾಯ : ನೋಡಿ– ಗೇಣಿ, ಗೇಣಿ ಸಿದ್ಧಾಂತ.**

**ಅರೆತಲೆಬೇನೆ :** ತಲೆನೋವುಗಳಲ್ಲೆಲ್ಲ ಬಲುನರಳಿಸುವ ತಲೆಯ ಒಂದುಪಕ್ಕದಲ್ಲಿ ಬರುವ ಬೇನೆ. ಮೇಲಿಂದ ಮೇಲೆ ಬರುವ ಸಿಡಿವಂಥ ತಲೆನೋವಿನೊಂದಿಗೆ ಕೆಲವೇಳೆ ವಾಂತಿ, ತಲೆಸುತ್ತು, ದೃಷ್ಟಿಯ ವೈಚಿತ್ರ್ಯಗಳು ತೋರುವುದು ಬಹುಮಟ್ಟಿಗೆ ಸಾಮಾನ್ಯ. ಚಂಚಲಮನದವರ ಮನೆತನಗಳಲ್ಲಿ ಹೆಚ್ಚು. ಆವರಣವೂ ಅನುವಾಗಿದ್ದರೆ, ಇದು ಸಿದ್ಧ. ಓದಿದವರಲ್ಲೂ ಬುದ್ಧಿವಂತರಲ್ಲೂ ಸಾಮಾನ್ಯ. ಅದರಲ್ಲೂ ಮಾಡುವ ಎಲ್ಲ ಕೆಲಸಗಳಲ್ಲೂ ಕಟ್ಟುನಿಟ್ಟಾಗಿರುವ ಹೊತ್ತಿನಲ್ಲೂ ಕಟ್ಟು ಪಾಡು ತೋರುವ ಜನಕ್ಕೆ ಇದು ಅಂಟಿಬಂದದ್ದು, ಮೊಲ್ಲಾಗರದ (ಎಪಿಲೆಪ್ಸಿ) ರೋಗಿಗಳಲ್ಲೂ ಕಾಣಿಸಿಕೊಳ್ಳಬಹುದು.

ಅನೇಕ ವೇಳೆ ಒಗ್ಗದಿರುವಿಕೆಯೇ (ಅಲರ್ಜಿ) ಇದರ ಕಾರಣ. ಅಂದರೆ ಯಾವುದೋ ವಸ್ತುಗಳು ಅವರಿಗೆ ಒಗ್ಗದಿರಬಹುದು. ಮಿದುಳಿನ ಹೊರಮೈಮೇಲಿರುವ ಧಮನಿಗಳಲ್ಲಿ ಏನೋ ವ್ಯತ್ಯಾಸವಾಗುವುದು; ಅಜೀರ್ಣ, ಮಲಕಟ್ಟು, ಜೀವ ವಿಷ ರಕ್ತ, ಆಗಿಸುವ ಮತ್ತಿತರ ಬೇನೆಗಳೊಂದಿಗೆ ಜೀವವಸ್ತುಕರಣದ (ಮೆಟಬಾಲಿಕ್) ಏರುಪೇರುಗಳಲ್ಲದೆ, ಕಣ್ಣಿನ ಕುಂದುಗಳು ಈ ಬೇನೆಯನ್ನು ಕೆರಳಿಸುತ್ತವೆ. ತಲೆನೋವು ಇಲ್ಲದಾಗ ಉಳಿದೆಲ್ಲ ರೀತಿಗಳಲ್ಲೂ ರೋಗಿ ಆರೋಗ್ಯವಾಗಿಯೇ ಇರುವನು. ಎಳೆಯರಲ್ಲಿ ಬಂದರೆ ವಾಂತಿ ಆಗುವುದರಿಂದ ಅಜೀರ್ಣವೆಂದು ತಪ್ಪು ತಿಳಿದುಕೊಳ್ಳುವಂತಾಗುವುದು. ಸಾಮಾನ್ಯವಾಗಿ ನಿಜವಾದ ಅರೆತಲೆಬೇನೆ ಹರೆಯದಲ್ಲಿ, ಕೆಲವೇಳೆ ನಡುವಯಸ್ಸಿನಲ್ಲಿ, ತಲೆ ಹಾಕಿ ವಯಸ್ಸಾದಂತೆ ಇಳಿದುಹೋಗುತ್ತದೆ.

ಇನ್ನೇನು ತಲೆನೋವು ಬರುತ್ತದೆ ಎನ್ನುವಂತೆ ತಲೆ ದಿಮ್ಮೆನ್ನುತ್ತದೆ. ಕೆಲವರು ಆಗ ಎಂದೂ ಇರದಷ್ಟು ಚುರುಕಾಗಿ ಲವಲವಿಕೆಯಲ್ಲಿ ಇರುವರು. ರಕ್ತ ಒತ್ತಡ ಏರಿರುತ್ತದೆ. ಸಾಮಾನ್ಯವಾಗಿ ಕಣ್ಣಿನ ಭಾಗದಿಂದ ಹುಟ್ಟುವ ಈ ತಲೆನೋವು ಹೆಚ್ಚಿದಾಗ ಬಿಳಿಚಿಕೊಂಡು ಚಳಿಗುಟ್ಟುವರು. ಕೆಲವೇಳೆ ಅದೇ ಪಕ್ಕದ ತಲೆಯಲ್ಲೂ ಕೈ, ತುಟಿಗಳು, ನಾಲಗೆಗಳಲ್ಲೂ ಚುಮುಗುಟ್ಟಿ ಜೋಮು ಹಿಡಿದಂತಿರುವುದು. ಬಲದ ಪಕ್ಕದಲ್ಲಿ ಹೀಗಾದರೆ ಮಾತೂ ತೊಡರಬಹುದು. ಮಿನುಗುವ ಬೆಳಕೋ ಚುಕ್ಕೆಗಳೋ ಕಣ್ಣಿಗೆ ತೋರುತ್ತ ಕೊನೆಗೆ ಮತ್ತೇನೂ ಕಾಣದಾಗಬಹುದು. ಪೂರ್ತಿ ಕಣ್ಣು ಹೀಗಾಗದು. ಬಾಯಲ್ಲಿ ಕಿಲುಬು ರುಚಿ ತೋರುವುದು. ಈ ಮುನ್ಸೂಚಕ ಲಕ್ಷಣಗಳು ಕೆಲವರಲ್ಲಿ ಯಾವಾಗಲೂ ಕೆಲವರಲ್ಲಿ ಅಪೂರ್ವವಾಗಿ ಕಾಣಿಸಿಕೊಳ್ಳುತ್ತದೆ.

ಈ ಲಕ್ಷಣಗಳೆಲ್ಲ 15–20 ಮಿನಿಟುಗಳಲ್ಲಿ ಇಳಿದುಹೋಗಿ ತಲೆಯ ಒಂದು ಪಕ್ಕದಲ್ಲಿ (ಕಣ್ಣು ಮಂಜಾಗಿರುವುದರ ಎದುರು) ಕಣತಲೆಯಲ್ಲೋ ಕಣ್ಣಿನ ಮೇಲೋ ಕೊರೆಯುವ ಮೊಂಡು ನೋವಿರುತ್ತದೆ. ಬರುವ ಮೊದಲಲ್ಲಿ ತಲೆನೋವು ತಲೆಯ ಒಂದೇ ಪಕ್ಕಕ್ಕಿದ್ದು ಹಾಗೇ ಉಳಿಯಬಹುದು. ಅಷ್ಟೇ ಸಾರಿ ಬೇರೆಡೆಗಳಿಗೂ ಹರಡಿ ತಲೆಯ ಪೂರಾ ಹತ್ತಬಹುದು. ಬರುಬರುತ್ತ ನೋವೇರಿ ಇನ್ನಷ್ಟು ನರಳಿಸುತ್ತದೆ. ನೋವೇರಿದಾಗ ರೋಗಿಗೆ ಸುಸ್ತಾಗಿ ಓಕರಿಕೆ, ವಾಂತಿ ಆಗುವುದು, ಬೇನೆ ಹಲವು ಬಾರಿ ಬೆಳಗಿನ ಜಾವಕ್ಕೇ ಮೊದಲಾಗಿ, ತಾಸಿನಿಂದ ಹಿಡಿದು ಮೂರು ದಿವಸಗಳ ತನಕ ಇರಬಹುದು. ಇವನ್ನು ಬಿಟ್ಟರೆ, ರೋಗಿ ಬೇಗನೆ ಪೂರಾ ಚೇತರಿಸಿಕೊಳ್ಳುವನು.

ದಣಿವು ಮೈ ಮತ್ತು ಮನದ ಒತ್ತಡ, ಚಿಂತೆ, ಉದ್ರೇಕ, ಗಲಾಟೆ, ಕೋರೈಸುವ ಬೆಳಕು, ಎಷ್ಟು ಹೊತ್ತಾದರೂ ಹೊಟ್ಟೆಹಸಿದಿರುವಿಕೆ. ಇವು ತಲೆನೋವು ಬರಿಸುವ ತತ್ಕಾಲದ ಮುಖ್ಯ ಕಾರಣಗಳು. ಬರಿಹೊಟ್ಟೆಯಲ್ಲಿ ಹೊಗೆಬತ್ತಿ ಸೇದಿಕೆ, ಮಿತಿಗೆಟ್ಟ ಉಣಿಸು, ಮಲಕಟ್ಟು, ಚಲನಚಿತ್ರ ನೋಡುವುದು, ರೈಲು ಪ್ರಯಾಣವೇ ಮುಂತಾದವಿಂದಲೂ ತಲೆನೋವು ಕೆರಳಬಹುದು; ನೋಟ ಸರಿಪಡಿಸುವ ಕನ್ನಡಕವನ್ನು ಹಾಕದೆ ಬಿಟ್ಟರೂ ಬರಬಹುದು. ಅಂತೂ ಒಬ್ಬೊಬ್ಬರಲ್ಲಿ ಒಂದೊಂದು ತೆರನ ಕಾರಣ. ಹೆಂಗಸರಲ್ಲಿ ಮುಟ್ಟಿಗೆ ಮುನ್ನ, ಇಲ್ಲವೇ ಮುಟ್ಟಾದಾಗ ಸಾಮಾನ್ಯ. ಕೆಲವೇಳೆ ಮುಟ್ಟು ನಿಂತಮೇಲೆ (ಮೆನೋಪಾಸ್) ಹೆಚ್ಚಾಗುತ್ತದೆ.

ರೋಗದ ಕಾರಣಗಳನ್ನು ತಡೆಯುವುದೇ ನಿವಾರಣ ಕ್ರಮ. ವಿರಾಮ, ಕತ್ತಲುಗಳಿಂದ ತುಸು ಇಳಿಯುತ್ತದೆ. ಲಘುನಿದ್ದೆಯಿಂದ ಎಷ್ಟೋ ಮೇಲಾಗುತ್ತದೆ ರಕ್ತನಾಳಗಳ ಗೋಡೆಗಳಲ್ಲಿನ ನಯ ಸ್ನಾಯುಗಳನ್ನು, ಕುಗ್ಗಿಸಿ ನಾಡಿ ಬಡಿವುದನ್ನು ತಗ್ಗಿಸುವ ಎರ್ಗಟ್ ಮದ್ದಿನ ಉತ್ಪನ್ನವಾದ ಎರ್ಗಟಮೀನನ್ನು (ಫಿಮರ್ಜಿನ್, ಕೇಫೆರ್ಗಟ್) ಕೊಡುವುದೇ ಅರೆತಲೆಬೇನೆಗೆ ಬಲು ಚೆನ್ನಾಗಿ ಹಿಡಿವ ಚಿಕಿತ್ಸೆ. ನೋವು ಕಂಡ ಎಳಸಿನಲ್ಲೇ ತೆಗೆದುಕೊಂಡರೆ ಬರದಂತೆ ತಡೆಯಬಹುದು. (ಎಸ್.ಸಿ.)

**ಅರೇಟಿಡೀ :** ಲೆಪಿಡಾಪ್ಟರ ಗಣಕ್ಕೆ ಸೇರಿದ ಕೀಟಕುಟುಂಬ. ಹುಲಿಪಟ್ಟೆ ಚಿಟ್ಟೆಗಳು (ಟೈಗರ್ ಮಾತ್ಸ್), ಪದಾತಿ ಚಿಟ್ಟೆಗಳು (ಫುಟ್‌ಮನ್ ಮಾತ್ಸ್) ಈ ಕುಟುಂಬಕ್ಕೆ ಸೇರಿವೆ. ಇವು ಸಣ್ಣದರಿಂದ ಮಧ್ಯಮಗಾತ್ರದವರೆಗಿನ ಸ್ಥೂಲ ಶರೀರದವು. ಎದ್ದು ಕಾಣುವ ಪ್ರಕಾಶಮಾನವಾದ ಚಿಕ್ಕೆ ಅಥವಾ ಪಟ್ಟೆಗಳನ್ನು ಹೊಂದಿವೆ. ರೆಕ್ಕೆಗಳು ತಕ್ಕಮಟ್ಟಿಗೆ ಅಗಲವಾಗಿದ್ದು ಪತಂಗ ಕುಳಿತಾಗ ಮನೆಯ ಛಾವಣಿ ರೀತಿಯಲ್ಲಿ ಹೊಟ್ಟೆಯ ಮೇಲೆ ಕವುಚಿಕೊಳ್ಳುತ್ತವೆ. ಒಂದೆರಡು ಜಾತಿಗಳನ್ನು ಬಿಟ್ಟರೆ, ಸಾಮಾನ್ಯವಾಗಿ ಇವುಗಳ ಹಾರಾಟ ರಾತ್ರಿಯ ಕಾಲದಲ್ಲಿ, ದೀಪದ ಬೆಳಕು ಇವನ್ನು ಆಕರ್ಷಿಸುತ್ತದೆ. ಇವು ಪ್ರಪಂಚದ ಎಲ್ಲ ಭಾಗಗಳಲ್ಲಿದ್ದರೂ ಉಷ್ಣದೇಶಗಳಲ್ಲಿ ಇವುಗಳ ಸಂಖ್ಯೆ ಹೆಚ್ಚು. ಈ ಕುಟುಂಬದ ಪತಂಗಗಳು ಹೆಚ್ಚಾಗಿ ನಾಕ್ಟುಯಿಡೀ ಕುಟುಂಬದವನ್ನು ಹೋಲುವುದಾದರೂ ಇವುಗಳ ಹಿಂಭಾಗದ ರೆಕ್ಕೆಗಳಲ್ಲಿ ಕ್ಯುಬಿಟಸ್ ನರ ನಾಲ್ಕು ಕವಲಾಗಿದೆ. ನಾಕ್ಟುಯಿಡೀ ಕುಟುಂಬದ ಪತಂಗಗಳು ಹಿಂದಿನ ರೆಕ್ಕೆಗಳಲ್ಲಿ ಕ್ಯುಬಿಟಸ್ ನರ ಮೂರು ಕವಲಾಗಿದೆ. ಕೆಲವು ಜಾತಿಯ ಆರ್ಕ್ಟೈಯಿಡ್ ಪತಂಗಗಳು ಶಬ್ದವನ್ನುಂಟುಮಾಡಬಲ್ಲವು. ಈ ಗುಂಪಿಗೆ ಸೇರಿದ ಪ್ರಭೇದಗಳ ಸಂಖ್ಯೆ 3,500 ಕ್ಕಿಂತಲೂ ಹೆಚ್ಚು. ಮರಿಗಳ ಮೈಮೇಲೆ ತುಂಬ ಕೂದಲು ಇದೆ. ತೆಳ್ಳನೆಯ ಕೀಟಕೋಶದಲ್ಲಿ ಮರಿಗಳ ಕೆಲವು ಕೂದಲು ಕೋಶವಾಗುತ್ತವೆ. ಅರೇಟಿಡೀ ಕುಟುಂಬದ ಉಪಕುಟುಂಬಗಳು: 1 ಲಿಥೋಸಿನಿ; 2 ನಿಕ್ಟಿಯೋಲಿನಿ, 3 ಆರ್ಕ್ಟೈಯಿನಿ. ಲಿಥೋಸಿನಿ ಉಪಕುಲಕ್ಕೆ ಸೇರಿದ ಈ ಪದಾತಿ ಪತಂಗಗಳು ಗಾತ್ರದಲ್ಲಿ ಸಣ್ಣ; ಶರೀರ ನೀಳವಾಗಿದ್ದು ಮಂಕು ಬಣ್ಣದ್ದಾಗಿವೆ. ಮುಂಬೆಳಕಿನಲ್ಲಿ ಮತ್ತು ಬೆಳಗಿನ ಕಾಲದಲ್ಲಿ ಇವು ಹಾರಾಡುತ್ತವೆ. ಮುಂದಿನ ರೆಕ್ಕೆಗಳು ಉದ್ದ ಮತ್ತು ನೀಳವಾಗಿವೆ. ಈ ಉಪಕುಟುಂಬದ ಚಿಟ್ಟೆಯ ಮರಿಗಳಿಗೆ ಸರಳ ಕಣ್ಣು ಇಲ್ಲ. ಮೈಮೇಲೆ ಕೂದಲು ಕಡಿಮೆ. ಮರಗಳ ಮತ್ತು ಬಂಡೆಗಳ ಮೇಲೆ ಬೆಳೆಯುವ ಕಲ್ಲು ಹೂವುಗಳೇ (ಲೈಕೆನ್ಸ್) ಮರಿಗಳಿಗೆ ಆಹಾರ. ನಿಕ್ಟಿಯೋಲಿನಿ ಉಪಕುಟುಂಬಕ್ಕೆ ಸೇರಿದ ಪತಂಗಗಳ ಬಣ್ಣ ಸಾಮಾನ್ಯವಾಗಿ ಹಸಿರು. ಇವುಗಳ ಮರಿಗಳ ಮೈಮೇಲೆ ಕೂದಲು ಬಲು ಕಡಿಮೆ. ಕೀಟಕೋಶಗಳು ದೋಣಿಯ ಆಕಾರದವಾಗಿರುತ್ತವೆ. ಬೆಂಡೆಕಾಯಿಗೆ ಬೀಳುವ, ಈರಿಯಸ್, ಫೇಬಿಯಾ ಮತ್ತು ಈರಿಯಾಸ್ ಇನ್ಸುಲಾನಎಂಬವು ಒಳ್ಳೆಯ ಉದಾಹರಣೆ, ಉಪಕುಟುಂಬ ಆರ್ಕ್ಟೈಯಿನಿಗೆ ಸೇರಿದ ಪತಂಗಗಳು ಪ್ರಕಾಶಮಾನವಾದ ನಾನಾ ಮಾದರಿಯ ಬಣ್ಣದಿಂದ ಕೂಡಿವೆ. ಇವುಗಳನ್ನು ಹುಲಿಪಟ್ಟೆ ಪತಂಗಗಳೆಂದು ಕರೆಯಲು ಇದೇ ಕಾರಣ. ಮರಿಗಳಿಗೆ ಮೈತುಂಬ ಕೂದಲು. ಸರಳ ಕಣ್ಣುಗಳಿವೆ. ಇವುಗಳ ಮರಿಗಳು ಮರಗಿಡಗಳ ಎಲೆಗಳನ್ನೂ ಬೆಳೆಗಳನ್ನೂ ತಿಂದು ಹಾಳುಮಾಡುತ್ತವೆ. ಪ್ರಪಂಚದ ನಾನಾ ಭಾಗಗಳಲ್ಲಿ ಕಂಡುಬಂದಿರುವ ಯುಟಿಥೀಸಿಯ ಪಲ್‌ಚಲ್ಲಾ ಎಂಬ ಪತಂಗದ ಮರಿ ಭಾರತದಲ್ಲಿ ಅಪಸೆಣಬು (ಸನ್‌ಹೆಂಪ್) ಗಿಡದ ಎಲೆಗಳನ್ನು ತಿಂದು ಹಾಳುಮಾಡುತ್ತವೆ. ಇದರ ಮುಂದಿನ ರೆಕ್ಕೆಗಳು ಬೂದು ಬಿಳುಪಾಗಿದ್ದು ಸಣ್ಣ ಕಪ್ಪು ಮತ್ತು ಕೆಂಪು ಮಚ್ಚೆಗಳನ್ನು ಹೊಂದಿವೆ. ಹಿಂದಿನ ರೆಕ್ಕೆಗಳು ನೀಲಿ ಮಿಶ್ರವಾದ ಬಿಳುಪಾಗಿದ್ದು ಅಲ್ಲಲ್ಲಿ ದೊಡ್ಡ ಕಪ್ಪು ಮಚ್ಚೆಗಳಿವೆ. ಭಾರತದಲ್ಲಿ ಈ ಉಪಕುಟುಂಬಕ್ಕೆ ಸೇರಿದ ಮತ್ತೆ ಕೆಲವು ಜಾತಿಯ ಪತಂಗಗಳು ಧಾನ್ಯದ ಬೆಳೆಗಳನ್ನೂ ಎಣ್ಣೆಬೀಜಗಳ ಬೆಳೆಗಳನ್ನೂ ಹಾಳುಮಾಡುತ್ತವೆ. ಆಮ್‌ಸೆಕ್ಟ ಆಲ್ಬಿಸ್ಟ್ರೈಗಾ, ಕಡಲೆಕಾಯಿ, ತೊಗರಿ, ಜೋಳ ಮುಂತಾದ ಬೆಳೆಗಳಿಗೂ ಡೈಯಾಕ್ರಿಸಿಯಾ ಒಬ್ಲಿಕ್ವ ಮತ್ತು ಎಸ್ಟಿಗ್ಮೀನ್ ಲಾಕ್ಟೀನಿಯ ರಾಗಿ ಬೆಳೆಗೂ ಪೆರಿಕೇಲಿಯಾ ರಿಸಿನಿ ಹರಳು ಮತ್ತು ಬಾಳೆಯ ಗಿಡಕ್ಕೂ ಅಂಟಿಕೊಂಡು ವಿಪರೀತ ಹಾನಿಯನ್ನುಂಟು ಮಾಡುತ್ತವೆ. (ಟಿ.ಎಸ್.ಟಿ.)

**ಅರೇಟೇನೋ, ಪಿ ಎತ್ರೊ :** 1492–1556. ಇಟಲಿಯ ಗದ್ಯ ಕವಿ ಮತ್ತು ನಾಟಕಕಾರ. ಉತ್ತರ ಇಟಲಿಯ ಮಧ್ಯಭಾಗದ ಅರೆಜ್ಜೋವಿನದಲ್ಲಿ ಜನಿಸಿದುದರಿಂದ ಅರೇಟೇನೊ ಎಂಬ ಹೆಸರಿನಲ್ಲಿ ಪ್ರಖ್ಯಾತನಾಗಿದ್ದಾನೆ. ಸಾಹಿತ್ಯದಲ್ಲಿ ಸಂಪ್ರದಾಯದ ಹೆಜ್ಜೆಗಳನ್ನು ತೊರೆದು ಹೊಸ ಹಾದಿಯನ್ನು ಹಿಡಿದವ. ಆ ಶತಮಾನದ ಮೊದಲ ಪತ್ರಿಕಾಕರ್ತನೆಂದು ಕರೆಸಿಕೊಂಡಿದ್ದಾನೆ. ಚಿಕ್ಕವನಾಗಿದ್ದಾಗಲೇ ಪೆರುಜಿಯಕ್ಕೆ ಹೊರಟು ಅಲ್ಲಿ ಚಿತ್ರಕಲೆಯನ್ನು ಅಭ್ಯಾಸಮಾಡಿ ಅನಂತರ ರೋಮಿಗೆ ಹಿಂತಿರುಗಿ ರೋಮಿನಲ್ಲಿ ವಿಡಂಬನಾತ್ಮಕ ಪದ್ಯಗಳನ್ನು ಬರೆದು ಪ್ರಕಟಿಸಿದ. 1527ರಲ್ಲಿ ವೆನಿಸ್ಸಿಗೆ ಬಂದು ಸಾಯುವವರೆಗೂ ಅಲ್ಲಿಯೇ ಇದ್ದ. ಈತ ಅನೇಕ ಭಾವಗೀತೆ, ವಿಡಂಬನ ಗೀತೆಗಳನ್ನು ರಚಿಸಿದ್ದಾನೆ. ಅಪೂರ್ಣವಾದ 4 ಮಹಾಕಾವ್ಯಗಳನ್ನು ರಚಿಸಿದ್ದಾನೆ. ಅಲ್ಲದೆ ಸಂಭಾಷಣಾರೂಪದ ಗದ್ಯ ಸಾಹಿತ್ಯ ಮತ್ತು ಸುಖಾಂತ (ಕಾಮೆಡಿ) ನಾಟಕಗಳನ್ನು ರಚಿಸಿದ್ದಾನೆ. ಇವನ 3,000ಕ್ಕೂಮಿಕ್ಕ ಪತ್ರಗಳಲ್ಲಿ 16ನೆಯ ಶತಮಾನದ ಇಟಲಿಯ ಜನಜೀವನವನ್ನು ಚಿತ್ರಿಸುವುದರ ಮೂಲಕ ತನ್ನ ಅದ್ಭುತ ಪ್ರತಿಭೆಯನ್ನು ಪ್ರದರ್ಶಿಸಿದ್ದಾನೆ. ಒರೇಜ಼ಿಯ ಎಂಬ ರುದ್ರನಾಟಕವನ್ನು (ಟ್ರ್ಯಾಜಿಡಿ) ಬರೆದಿದ್ದಾನೆ. ಇವನು ಸುಖಾಂತ ನಾಟಕಗಳು ಪ್ರಸಿದ್ಧವಾಗಿವೆ. 18ನೆಯ ಶತಮಾನದ ಲೇಖಕರನೇಕರಮೇಲೆ ಇವನ ಪ್ರಭಾವ ಸಾಕಷ್ಟು ಬಿದ್ದಿದೆ. ಆಧುನಿಕ ಲೇಖಕರಿಗೆ ಇವನ ಸಾಹಿತ್ಯದಲ್ಲಿ ಕಾಣುವ ಆ ಕಾಲದ ಜನಜೀವನದ ವಾಸ್ತವಿಕಾಂಶಗಳಿಂದಾಗಿ ಈತ ಮೆಚ್ಚುಗೆಯವನೂ ಮುಖ್ಯನೂ ಆಗಿದ್ದಾನೆ.

ಇವನ ಮುಖ್ಯ ಕೃತಿಗಳು: ಲಾ ಕಾರ್ಟಜಿಯಾನ (ಆಸ್ಥಾನ ಜೀವನ), ಇಲ್ ಮಾರೆಸ್ಕಾಲೊ (ಅಶ್ವವೈದ್ಯ), ಲೊ ಇಪೊಕ್ರಿಟೊ (ಆಷಾಢಭೂತಿ) ಮೊದಲಾದ ಐದು ಹರ್ಷನಾಟಕಗಳು ಮತ್ತು ಒರೇಜ಼ಿಯ ಎಂಬ ಗಂಭೀರ ನಾಟಕ. (ಎಚ್.ಕೆ.ಆರ್.)

**ಅರೇನಿಯಸ್ :** 1859–1927. ಸ್ವೀಡನ್ ದೇಶದ ಭೌತವಿಜ್ಞಾನಿ ಹಾಗೂ ರಸಾಯನ ವಿಜ್ಞಾನಿ. ವಿದ್ಯಾರ್ಥಿದೆಸೆಯಲ್ಲಿದ್ದಾಗ ಗಣಿತವಿಜ್ಞಾನದಲ್ಲಿ ವಿಶೇಷ ಸಾಮರ್ಥ್ಯ ತೋರಿಸಿದ್ದ. ಆಂಸ್ಟರ್‌ಡಾಮ್‌ನಲ್ಲಿ ವಾಂಟ್‌ಹಾಫ್ ಜೊತೆಗೂಡಿ ಕೆಲಸ ಮಾಡಿದ ಅನಂತರ ಸ್ಟಾಕ್‌ಹೋಂನಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕನಾದ. 1887ರಲ್ಲಿ ಈತ ಪ್ರತಿಪಾದಿಸಿದ ವಿದ್ಯುತ್ ವಿಶ್ಲೇಷಣ ತತ್ತ್ವದ (ಥಿಯೊರಿ ಆಫ್ ಎಲೆಕ್ಟ್ರಾಲಿಟಿಕ್ ಡಿಸೋಸಿಯೇಷನ್) ಸಲುವಾಗಿ ಇವನಿಗೆ ರಸಾಯನವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಕ ಲಭಿಸಿತು (1903). ವಾಯುಮಂಡಲದ ವಿದ್ಯುತ್ತಿನ ಬಗ್ಗೆಯೂ ಇದೇ ತತ್ತ್ವವನ್ನು ವಿಸ್ತರಿಸಿದ. ಇದಲ್ಲದೆ ದ್ರಾವಣಗಳ ಸ್ನಿಗ್ಧತ್ವವನ್ನೂ (ವಿಸ್‌ಕಾಸಿಟಿ) ಪ್ರತಿಕ್ರಿಯಾವೇಗವನ್ನೂ ಪರಿಶೀಲಿಸಿದ. ಇವನಿಗೆ ವಿಶ್ವದ ರಚನೆಯ ಬಗ್ಗೆ, ಬೆಳಕಿನ ಒತ್ತಡ ಹಾಗೂ ವಿಶ್ವ ಭೌತವಿಜ್ಞಾನದಲ್ಲಿ ಅದರ ಪಾತ್ರ–ಇವುಗಳ ಬಗ್ಗೆ ವಿಶೇಷ ಆಸಕ್ತಿ ಇತ್ತು. ಸೂರ್ಯನ ಸುತ್ತ ತಿರುಗುವ ಧೂಮಕೇತುಗಳ ಬಾಲ ಯಾವರೀತಿ ಸೂರ್ಯನ ರಶ್ಮಿ ವಿಸರಣದಿಂದ ನಿರಸನಹೊಂದುತ್ತವೆ ಎಂಬುದನ್ನು ಅಧ್ಯಯನ ಮಾಡಿದ.

**ಅರೇಬಿಯ :** ಏಷ್ಯದ ನೈಋತ್ಯ ಭಾಗದಲ್ಲಿ ಕೆಂಪುಸಮುದ್ರ ಮತ್ತು ಪರ್ಷಿಯನ್ ಕೊಲ್ಲಿಗಳ ಮಧ್ಯದಲ್ಲಿರುವ ಪರ್ಯಾಯದ್ವೀಪ. ಉ. ಅ. $12^\circ$,45'–$34^\circ$ 50' ಪೂ. ರೇ. $30^\circ$ 30'–$60^\circ$. ವಿಸ್ತೀರ್ಣ ಸು. 25,90,000 ಚಕಿಮೀ. ಜನಸಂಖ್ಯೆ ಸುಮಾರು 15,000,000. ಹೆಚ್ಚಿನ ಪ್ರದೇಶ ಮರಳುಗಾಡು. ಇಂದು ಈ ಪರ್ಯಾಯ ದ್ವೀಪದಲ್ಲಿ 7 ದೇಶಗಳಿವೆ: ಕುವೈಟ್, ಓಮಾನ್, ಕತಾರ್, ಅರಬ್ ಎಮಿರೆಟಿಸ್ ಯಮನ್ ಅರಬ್ ಗಣರಾಜ್ಯ, ಪೀಪಲ್ಸ್ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಯಮನ್, ಮತ್ತು ಬಹುನ್. ಸ್ವಲ್ಪಭಾಗ ಜೋರ್ಡಾನ್ ಮತ್ತು ಇರಾಕ್‌ಗಳಲ್ಲಿಯೂ ವಿಸ್ತರಿಸಿದೆ. ದಕ್ಷಿಣೋತ್ತರವಾಗಿ ಅರಬ್ಬಿಸಮುದ್ರದಿಂದ ಜೋರ್ಡಾನ್ ಮತ್ತು ಇರಾಕ್‌ವರೆಗೆ 2,250 ಕಿಮೀ ಉದ್ದವಾಗಿದೆ. ಅಗಲ ಕೆಂಪುಸಮುದ್ರ ಮತ್ತು ಓಮನ್ ಖಾರಿಗಳನಡುವೆ 2,000 ಕಿಮೀಗಳು.

ಬಹಳಷ್ಟು ಪ್ರದೇಶದಲ್ಲಿ ಶುಷ್ಕವಾಯುಗುಣವಿದೆ. ಹಗಲಿನ ಉಷ್ಣಾಂಶದ ಗರಿಷ್ಠ ಮಟ್ಟ $60^0$ ಸೆಂ. ರಾತ್ರಿಯ ಕನಿಷ್ಠ ಮಟ್ಟ 1 ರಿಂದ $4^0$ ಸೆಂ. ಮಳೆ ಬಹಳ ವಿರಳ. ಯಾವುದೇ ಸಾರ್ವಕಾಲಿಕ ನದಿ ಮತ್ತು ಸರೋವರಗಳಿಲ್ಲ. ಸಮುದ್ರ ತೀರಗಳಲ್ಲಿ ಮಾತ್ರ ಸೇ. 90 ರಷ್ಟು ಆರ್ದ್ರತೆಯಿರುತ್ತದೆ. ಸಸ್ಯವರ್ಗ ವಿರಳ ಜುನಿಫರ್ ಮರ ಬೆಳೆಯುತ್ತವೆ. ಪ್ರಮುಖ ಪ್ರಾಣಿಗಳೆಂದರೆ ಆರಿಕ್ಸ್ ಜಿಂಕೆ, ಒಂಟೆ, ಕತ್ತೆಕಿರುಬ, ತೋಳ, ನರಿ, ಹಾವು ಮುಂತಾದವು. ಕೆಲವು ಪ್ರದೇಶಗಳಲ್ಲಿ ಎತ್ತರವಾದ ಪರ್ವತಗಳಿದ್ದು ಮಳೆಯಾಗಲು ಸಹಾಯಕವಾಗಿವೆ. ಇಂಥ ಕೆಲವುಕಡೆ ಬೇಸಾಯ ನಡೆಯುತ್ತದೆ. ಉತ್ತರ ಅರೇಬಿಯದಲ್ಲಿ ಅನೇಕ ಅಲೆಮಾರಿ ಜನಾಂಗಗಳಿದ್ದು ಕುರಿಕಾಯುವ ಉದ್ಯೋಗವನ್ನವಲಂಬಿಸಿವೆ. ಇಲ್ಲಿ ಶ್ರೀಮಂತ ತೈಲನಿಕ್ಷೇಪಗಳಿದ್ದು ಅಮೆರಿಕ ಮತ್ತು ಯುರೋಪಿಯನ್ನರು ಇವುಗಳನ್ನು ಉಪಯೋಗಿಸಿಕೊಂಡಿದ್ದಾರೆ. ಇಲ್ಲಿಯ ಅನೇಕ ಜನಾಂಗಗಳು ಪರಸ್ಪರ ಕಾದಾಡುತ್ತಿದ್ದವು. 7ನೆಯ ಶತಮಾನದಲ್ಲಿ ಮಹಮ್ಮದ್ ಪೈಗಂಬರರ ಪ್ರೇರಣೆ ಅರಬ್ ಜನಾಂಗಗಳನ್ನೆಲ್ಲ ಒಂದುಗೂಡಿಸಿತು. ಆಡಳಿತಕೇಂದ್ರ ಮದೀನದಿಂದ ಡಮಾಸ್ಕಸ್‌ಗೆ ಸ್ಥಳಾಂತರ ಹೊಂದಿದಾಗ ಅರೇಬಿಯ ಪುನಃ ತನ್ನ ರಾಜಕೀಯ ಪ್ರಾಮುಖ್ಯ ಕಳೆದುಕೊಂಡಿತು. 1517ರಿಂದ ಆಟೋಮನ್ ಟರ್ಕರಿಂದ ಹೆಸರಿಗೆ ಮಾತ್ರ ಆಳಲ್ಪಡುತ್ತಿತ್ತು. 18–19ನೆಯ ಶತಮಾನದಲ್ಲಿ ವಹಾಬಿ ಆಂದೋಳನದಿಂದ ಕಿರುಕುಳ ಉಂಟಾಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಟರ್ಕಿಯವರ ಆಡಳಿತ ಕುಸಿದುಬಿತ್ತು. (ಜಿ.ಎಸ್.ಬಿ.)

**ಅರೇಬಿಯದ ಚರಿತ್ರೆ :** ಏಷ್ಯಖಂಡದ ನೈಋತ್ಯ ಭಾಗದಲ್ಲಿರುವ ಅರೇಬಿಯ ಪರ್ಯಾಯದ್ವೀಪದ ಉದ್ದ 463 ಕಿಮೀ. ದೇಶದ ಬಹುಭಾಗವೆಲ್ಲ ಮರಳುಗಾಡು. ಚರಿತ್ರಪೂರ್ವಕಾಲದಲ್ಲಿ ಇಲ್ಲಿನ ಜನರ ಸ್ಥಿತಿ ಹೇಗಿತ್ತು, ಸೆಮಿಟಿಕ್ ಭಾಷೆಯನ್ನಾಡುವ ಇತರ ಜನಾಂಗಗಳೊಂದಿಗೆ ಇವರು ಎಂಥ ಸಂಬಂಧವನ್ನು ಹೊಂದಿದ್ದರು, ಎಂಬ ವಿಷಯಗಳು ಖಚಿತವಾಗಿ ತಿಳಿದುಬಂದಿಲ್ಲ.

ಪ್ರ.ಶ.ಪೂ. 1000 ವರ್ಷಗಳ ಹಿಂದೆಯೇ ಅರೇಬಿಯದಲ್ಲಿ ಪ್ರತ್ಯೇಕ ಬುಡಕಟ್ಟಿಗೆ ಸೇರಿ, ಪ್ರತ್ಯೇಕ ಸಮಾಜ ವ್ಯವಸ್ಥೆ ಹೊಂದಿದ್ದ ಎರಡು ಜನಾಂಗದವರಿದ್ದರು ಎಂದು ತಿಳಿದುಬರುತ್ತದೆ. ಒಂದು ಜನಾಂಗದವರು ಕಹತನಿ ಎಂಬ ಬುಡಕಟ್ಟಿಗೆ ಸೇರಿದವರು ತಾವು ಶುದ್ಧ ಅರಬ್ಬೀಯರು ಎಂದು ಅವರು ನಂಬಿದ್ದರು; ತಮ್ಮದೇ ಆದ ಭಾಷೆ ಸಂಸ್ಕೃತಿ, ಮತಧರ್ಮಗಳನ್ನು ಬೆಳೆಸಿಕೊಂಡು ಬಂದಿದ್ದರು. ಇವರು ನೆಲೆಸಿದ್ದುದು, ದಕ್ಷಿಣ ಸಮುದ್ರತೀರಪ್ರದೇಶಗಳಲ್ಲಿ. ಅರೇಬಿಯದ ಇತರ ಭಾಗಗಳೆಲ್ಲ ಮರಳುಗಾಡು, ಇದರಲ್ಲಿ ಅಲ್ಲಲ್ಲೆ ನೀರಿನ ಆಸರೆ ಇದ್ದ ತಂಪುಜಾಗಗಳು (ಓಯೆಸಿಸ್) ಇದ್ದುವು. ಇಲ್ಲಿನ ಬೆದೂಯಿನ್ ಜನ ಒಂದು ಕಡೆ ನೆಲೆಸದೆ ಸ್ಥಳದಿಂದ ಸ್ಥಳಕ್ಕೆ ಸುತ್ತಬೇಕಾಗಿತ್ತು. ಒಂಟೆ ಅವರ ವಾಹನ, ಮುಖ್ಯ ಜೀವನಾಧಾರ. ಏಬ್ರಹಾಂ ಮತ್ತು ಅವನ ಹೆಣ್ಣಾಳು (ಈಜಿಪ್ಟಿನವಳು)

ಹೇಗರರ ಮಗನಾದ ಇಸ್ಮೇಲ್ ಇವರಲ್ಲಿ ಹನ್ನೆರಡು ಪಂಗಡಗಳಿಗೆ ಮೂಲಪುರುಷನೆಂದೂ ಅವರು ಮಿಶ್ರಜನಾಂಗದವರೆಂದೂ ಪರಿಗಣಿಸಲ್ಪಟ್ಟಿದ್ದರು. ಬೆದೂಯಿನ್ನರ ವ್ಯಾಪ್ತಿ ಉತ್ತರದ ಸಿರಿಯ, ಮೆಸಪೊಟೇಮಿಯ ರಾಜ್ಯಗಳವರೆಗೂ ಇತ್ತು. ದಕ್ಷಿಣ ಅರೇಬಿಯದಲ್ಲಿ ನೆಲೆಸಿದ್ದ ಅರಬ್ಬೀಯರು ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಬೆದೂಯಿನ್ನರ ಮೇಲೂ ಅವರ ಸಂಸ್ಕೃತಿಯ ಪ್ರಭಾವ ಕೊಂಚ ಬಿದ್ದಿತ್ತು; ಏಕೆಂದರೆ ಅವರು ಅರೇಬಿಯದ ಮಧ್ಯ ಮತ್ತು ಉತ್ತರ ಭಾಗಗಳಲ್ಲಿ ನೆಲಸುನಾಡುಗಳನ್ನು ನಿರ್ಮಿಸಿಕೊಂಡಿದ್ದರು.

ಪ್ರಸಕ್ತಶಕೆ ಪ್ರಾರಂಭವಾದ ಮೇಲೆ ಅರೇಬಿಯದ ಜನ ಅರೇಮಿಯನ್ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರು. ಅಲ್ಲಲ್ಲೇ ವಾಸಿಸುತ್ತಿದ್ದ ಯಹೂದ್ಯರು ಮತ್ತು ಕ್ರೈಸ್ತರ ಸಂಪರ್ಕದಿಂದ ಈ ಪ್ರಭಾವ ಬಲಗೊಂಡಿತು. ಪ್ರಶಕೆಯ ಮೊದಲಿನ ಎರಡು ಮೂರು ಶತಮಾನಗಳಲ್ಲಿ ಅರೇಮಿಯನ್ ಸಂಸ್ಕೃತಿಯನ್ನು ಹೊಂದಿದ್ದ ಕೆಲವು ಸಣ್ಣ ರಾಜ್ಯಗಳು ಹೆಚ್ಚಾಗಿ ಸ್ಥಾಪಿಸಲ್ಪಟ್ಟುವು. ಇವುಗಳಲ್ಲಿ ಟ್ರಾನ್ಸ್‍ಜೋರ್ಡಾನಿನ ನಬಟೆಯನ್ ರಾಜ್ಯ ಮತ್ತು ಎಡೆಸ್ಸ, ಪಾಲ್ಮೈರ ರಾಜ್ಯಗಳು ಮುಖ್ಯವಾದವು. 5ನೆಯ ಶತಮಾನದಿಂದ 7ನೆಯ ಶತಮಾನದವರೆಗಿನ ಅವಧಿಯಲ್ಲಿ ಟ್ರಾನ್ಸ್ ಜೋರ್ಡಾನಿನ ದೊರೆಗಳು ಉತ್ತರದ ಬಜಾಂಟೀಯನ್ ದೊರೆಗಳೊಂದಿಗೆ ಮೈತ್ರಿ ಬೆಳೆಸಿಕೊಂಡು ಪ್ರಬಲರಾದರು. ಪೂರ್ವಭಾಗದ ರಾಜ್ಯಗಳು, ಪರ್ಷಿಯದ ಸಸ್ಸೇನಿಯನ್ ದೊರೆಗಳೊಂದಿಗೆ ಮೈತ್ರಿ ಬೆಳೆಸಿದುವು.

ದಕ್ಷಿಣ ಅರೇಬಿಯದ ಜನ ಪ್ರಶ.ಪೂ. 6ನೆಯ ಶತಮಾನದಿಂದ 2ನೆಯ ಶತಮಾನದ ವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿದ್ದರು. ಉತ್ತಮ ರೀತಿಯಲ್ಲಿ ಭೂವ್ಯವಸಾಯ ನಡೆಸುತ್ತಿದ್ದರು. ಸಾಂಬ್ರಾಣಿ ಮುಂತಾದ ಧೂಪದ ವಸ್ತುಗಳನ್ನೂ ಮೆಣಸು ಮುಂತಾದ ಸಾಂಬಾರ ದಿನಸಿಗಳನ್ನೂ ಹೊರದೇಶಗಳಿಗೆ ಕಳುಹಿಸುತ್ತಿದ್ದರು. ಭಾರತ ಮತ್ತು ಆಫ್ರಿಕಗಳೊಂದಿಗೆ ವ್ಯಾಪಾರ ಸಂಪರ್ಕವಿತ್ತು. ಆದರೆ ಈಕಾಲದ ಉತ್ತರಾರ್ಧದಲ್ಲಿ ಹಿಮ್ಯಾರೈಟ್ ಎಂಬ ಜನರ ಪ್ರಾಬಲ್ಯ ಹೆಚ್ಚಿ ಇವರ ಅವನತಿ ಪ್ರಾರಂಭವಾಯಿತು. ಮಾರಿಬ್ ಎಂಬ ಭಾರಿ ಜಲಾಶಯದ ಅಣೆಕಟ್ಟೆ ಒಡೆದು ಫಲವತ್ತಾದ ಪ್ರದೇಶಗಳು ನಗರಗಳು ಕೊಚ್ಚಿಹೋದದ್ದು ಈ ಜನರ ಅವನತಿಗೆ ಕಾರಣ ಎಂದು ಹೇಳಲಾಗಿದೆ. ಇವರಲ್ಲಿ ಅನೇಕರು ಉತ್ತರದ ಪ್ರದೇಶಗಳಿಗೆ ವಲಸೆ ಹೋದರು; ಬೆದೂಯಿನ್ ಜನರ ಮೇಲೆ ತಮ್ಮ ಪ್ರಭಾವ ಬೀರಿದರು. ಆದರೆ ಈ ಕಾಲದ ಘಟನೆಗಳ ವಿವರ ಅಸ್ಪಷ್ಟ.

5–6ನೆಯ ಶತಮಾನಗಳು ಅರೇಬಿಯದ ಚರಿತ್ರೆಯಲ್ಲಿ ವೀರಯುಗಗಳೆಂದು ಕೆಲವರು ಭಾವಿಸುತ್ತಾರೆ. ಆ ಕಾಲದ ಬೆದೂಯಿನ್ನರ ಹುರುಪು, ಉತ್ಸಾಹ, ಚೈತನ್ಯ, ಔದಾರ್ಯ, ಭ್ರಾತೃತ್ವ, ಅವರ ಸ್ವಾತಂತ್ರ್ಯಪ್ರಿಯತೆ ಮತ್ತು ಪ್ರತಿವೈರ ಸಾಧನೆ - ಇವೆಲ್ಲ ಆಗಿನ ಕವಿತೆಗಳಲ್ಲಿ ಚಿತ್ರಿತವಾಗಿವೆ. ಎಲ್ಲ ಬೆದೂಯಿನ್ ಜನರೂ ಅಲೆಮಾರಿಜೀವನ ನಡೆಸುತ್ತಿರಲಿಲ್ಲ. ನೆಲೆಸಿ ನಿಂತು ವ್ಯವಸ್ಥಿತ ಜೀವನ ನಡೆಸಿಕೊಂಡು ಬಂದಿದ್ದ ಪಂಗಡಗಳೂ ಕೆಲವು ಕಡೆಗಳಲ್ಲಿ ಇದ್ದುವು. ಆದರೆ, ಕುರಾನಿನಲ್ಲಿ ವರ್ಣಿತವಾಗಿರುವ ಬೆದೂಯಿನ್ ಜೀವನಚಿತ್ರದಲ್ಲಿ ಅವರ ಅನಾಗರೀಕತೆ, ವಂಚನೆ, ಕುಡಿತ, ಹೆಣ್ಣು ಶಿಶುಗಳನ್ನು ಸಜೀವವಾಗಿ ಹೂಳುವುದು, ಸ್ತ್ರೀದಾಸ್ಯ ಮುಂತಾದವೇ ಹೆಚ್ಚಾಗಿ ವರ್ಣಿತವಾಗಿವೆ.

ದಕ್ಷಿಣದ ಯೆಮೆನ್ ಪ್ರಾಂತ್ಯದಲ್ಲಿ ಪ್ರಾಚೀನಕಾಲದ ವೈಭವ ಅಳಿಸಿಹೋಗಿದ್ದರೂ ಹಿಂದಿನ ಸಂಸ್ಕೃತಿ ನಡೆದುಬಂದಿತ್ತು. 525ರಲ್ಲಿ ಇವರು ಅಬಿಸೀನಿಯ (ಇಂದಿನ ಇಥಿಯೋಪಿಯ) ಸೈನ್ಯದ ದಾಳಿಯನ್ನು ಎದುರಿಸಬೇಕಾಯಿತು. ಐವತ್ತು ವರ್ಷಗಳ ತರುವಾಯ ಪರ್ಷಿಯದ ಸೈನ್ಯ ನುಗ್ಗಿ ಬಂದು ಅಪಾರ ಕಷ್ಟನಷ್ಟಗಳನ್ನುಂಟುಮಾಡಿತು. ಇವೆರಡು ದಾಳಿಗಳ ಪರಿಣಾಮವಾಗಿ ಯೆಮೆನ್ ರಾಜ್ಯ ನಾಶಹೊಂದಿತು.

ಹೀಗೆ 7ನೆಯ ಶತಮಾನದವರೆಗೂ ಅರೇಬಿಯ ನಾನಾ ರೀತಿಯ ರಾಜಕೀಯ ವಿಪ್ಲವಗಳಿಗೆ ಸಿಕ್ಕಿ ಐಕ್ಯವನ್ನೇ ಕಂಡಿರಲಿಲ್ಲ. ರೋಮನರು, ಕಾನ್‍ಸ್ಟಾಂಟಿನೋಪಲ್‍ನ ದೊರೆಗಳು, ಪರ್ಷಿಯನ್ನರು, ಅರೇಬಿಯ ತಮಗೆ ಸೇರಿದ್ದೆಂದು ಹೇಳಿಕೊಳ್ಳುತ್ತಾ ಬಂದರು, ಆದರೆ ವಾಸ್ತವವಾಗಿ ಅರಬ್ಬರು ಸ್ವತಂತ್ರರಾಗಿಯೇ ಉಳಿದಿದ್ದರು. ಕ್ರೈಸ್ತರು, ಯಹೂದ್ಯರು, ಪರ್ಷಿಯನ್ನರು ಮುಂತಾದವರ ಮತ, ಸಂಸ್ಕೃತಿಗಳು ಗಡಿ ಪ್ರದೇಶಗಳ ಅರಬ್ಬೀಯರ ಮೇಲೆ ಪ್ರಭಾವ ಬೀರಿದ್ದುವು. ಒಮಾನ್ ಮತ್ತು ಪರ್ಷಿಯ ಕೊಲ್ಲಿ ಪ್ರಾಂತ್ಯಗಳಲ್ಲಿ ವ್ಯಾಪಾರದಲ್ಲಿ ತೊಡಗಿ ಸ್ತಿಮಿತ ಜೀವನ ನಡೆಸುತ್ತಿದ್ದ ಗುಂಪುಗಳಿದ್ದುವು. ಪಶ್ಚಿಮ ಭಾಗದ ಹೆಜಾಜ್ ಮತ್ತು ನೆಜ್ಡ್ ನಂಥ ಮಧ್ಯದ ವಿಶಾಲ ತಂಪುಜಾಗಗಳಲ್ಲಿ ಚಿಕ್ಕ ನಗರರಾಜ್ಯಗಳು ಬೆಳೆದಿದ್ದುವು. ಇವುಗಳಲ್ಲಿ ಮದೀನ ಮತ್ತು ಮೆಕ್ಕ ಮುಖ್ಯವಾದುವು. ಮದೀನ ನಗರದಲ್ಲಿ ಯೆಮೆನ್ನಿಂದ ವಲಸೆ ಬಂದು ನೆಲಸಿದ್ದ ಜನರೇ ಹೆಚ್ಚಾಗಿದ್ದರು. ಜನಸಂಖ್ಯೆ ಸು. 15,000. ಮೆಕ್ಕ ಅದಕ್ಕಿಂತ ಕೊಂಚ ದೊಡ್ಡ ನಗರ, ಇವೆರಡೂ ಕಾರವಾನ್ ಮೂಲಕ ನಡೆಯುತ್ತಿದ್ದ ದೊಡ್ಡ ವ್ಯಾಪಾರಕೇಂದ್ರಗಳೂ ಆಗಿದ್ದವು. ಮೆಕ್ಕ ನಗರದ ಪ್ರಾಮುಖ್ಯ. ಅದು ಅರಬ್ಬೀಯರೆಲ್ಲರಿಗೂ ಯಾತ್ರಾಸ್ಥಳವಾಗಿದ್ದುದರಿಂದ ಹೆಚ್ಚಾಗಿತ್ತು. ಇಲ್ಲಿ ವಾಸಿಸಿದ್ದವರು ಬಹುಮಟ್ಟಿಗೆ ಅರಬ್ಬೀಯರು. ಇವರೆಲ್ಲ ಮೆಕ್ಕದಲ್ಲಿದ್ದ ಕಾಬ ಎಂಬ ಉಲ್ಕಾಶಿಲೆಯೊಂದನ್ನು ಪೂಜಿಸುತ್ತಿದ್ದರು.

ಬಹುಸಂಖ್ಯಾತ ಅರಬ್ಬರು ಮೂರ್ತಿಪೂಜೆಯನ್ನು ಮಾಡುತ್ತಿದ್ದರೂ ಗಡಿ ಪ್ರದೇಶಗಳ ಜನರಲ್ಲಿ ಅನೇಕರು ಕ್ರೈಸ್ತಧರ್ಮದ ಪ್ರಭಾವಕ್ಕೆ ಒಳಗಾಗಿದ್ದುದರಿಂದ ಅನೇಕರ ಮನಸ್ಸು ದೇವರೊಬ್ಬನೇ ಎಂಬ ಕಲ್ಪನೆಯ ಕಡೆಗೆ ಹರಡಿತ್ತು ಎಂದು ಹೇಳಬಹುದು. ಇಂಥವರಲ್ಲಿ ಖುರೈಷ್ ಪಂಗಡವೇ ಮುಖ್ಯವಾದುದು. ಈ ಜನ ವ್ಯಾಪಾರ ನಡೆಸುತ್ತ ಹೊರದೇಶ ಗಳೊಂದಿಗೆ ಸಂಪರ್ಕವನ್ನು ಹೊಂದಿದ್ದರು. ಈ ಗುಂಪಿನವನಾದ ಮಹಮ್ಮದ್ ಪೈಗಂಬರನೇ ಅರಬ್ಬೀಯರನ್ನೆಲ್ಲ ಒಟ್ಟುಗೂಡಿಸಿ, ಇಸ್ಲಾಂ ಧರ್ಮವನ್ನು ಸ್ಥಾಪಿಸಿ, ಮುಸ್ಲಿಮರ ಏಳಿಗೆಗೆ ಕಾರಣನಾದ.

ಅವನ ಉಪದೇಶವೇ ಪವಿತ್ರ ಕುರಾನು. ಶಾಂತಿ, ವಿಶ್ವಬಂಧುತ್ವ - ಇವು ಅವನ ಸಂದೇಶದ ತಿರುಳು. ಹಿಂದಿನಿಂದಲೂ ವ್ಯಾಪಾರಕೇಂದ್ರವಾಗಿ, ಅರಬ್ಬರೆಲ್ಲ ಸಂಧಿಸುತ್ತಿದ್ದ ಯಾತ್ರಾಸ್ಥಳವಾದ ಮೆಕ್ಕಪಟ್ಟಣ ಹೀಗೆ ಅವರನ್ನು ಒಟ್ಟುಗೂಡಿಸಿ ಅವರಲ್ಲಿ ನವಚೈತನ್ಯ, ಸ್ಫೂರ್ತಿಗಳನ್ನು ತುಂಬಿ ಹೊಸ ರಾಷ್ಟ್ರನಿರ್ಮಾಣಕ್ಕೆ ಯೋಗ್ಯವಾದ ಕೇಂದ್ರವಾಯಿತು.

ಇಸ್ಲಾಂ ರಾಜ್ಯಸ್ಥಾಪನೆ ಆದದ್ದು ಪೈಗಂಬರ್ ಮೆಕ್ಕದಿಂದ ಮದೀನಕ್ಕೆ ಹೋದ ವರ್ಷ (622) ಎಂದು ಹೇಳಬಹುದು. ಏಕೆಂದರೆ, ಆಗಿನಿಂದಲೇ ಆತ ಹೆಜಾಜ್ ಮತ್ತು ನೆಜ್ಡ್ ಜನರಲ್ಲಿ ತನ್ನ ಸಂದೇಶವನ್ನು ಬೀರಿ, ಮೆಕ್ಕ ವರ್ತಕರು ಕಾರವಾನ್ ಮೂಲಕ ನಡೆಸುತ್ತಿದ್ದ ವ್ಯಾಪಾರಕ್ಕೆ ತಡೆಹಾಕುವಂತೆ ಮಾಡಿ, ಕೊನೆಗೆ ಮೆಕ್ಕದ ಜನರೂ ತನಗೆ ಶರಣಾಗತರಾಗುವಂತೆ ಮಾಡುವ ಕಾರ್ಯವನ್ನು ಕೈಗೊಂಡದ್ದು. ಈ ಕೆಲಸಕ್ಕೆ ಎಂಟು ವರ್ಷ ಬೇಕಾಯಿತು.; ಕೊನೆಗೆ 630ರಲ್ಲಿ ಮೆಕ್ಕದ ಜನರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. 632ರಲ್ಲಿ ಆತ ಮರಣಹೊಂದಿದಾಗ ಪಶ್ಚಿಮ ಅರೇಬಿಯದ ಜನರೆಲ್ಲ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು; ಇಸ್ಲಾಂ ರಾಜ್ಯ ಸ್ಥಾಪನೆ ಆಗಿತ್ತು.

ಪೈಗಂಬರನ ತರುವಾಯ ಅವನ ಸ್ಥಾನಕ್ಕೆ ಬಂದು ಅಬೂಬಕರ್‍ನ ಕಾಲದಲ್ಲಿ ಅರೇಬಿಯದ ಪೂರ್ವಭಾಗವೂ ಹೊಸ ಇಸ್ಲಾಂ ರಾಜ್ಯಕ್ಕೆ ಸೇರಿ, ಅರಬ್ಬೀಯರು ಸುತ್ತಲಿನ ರಾಜ್ಯಗಳಲ್ಲೆಲ್ಲ ನುಗ್ಗಿದರು. ಕೆಲವೇ ವರ್ಷಗಳಲ್ಲಿ ಪಶ್ಚಿಮ ಏಷ್ಯದ ಮತ್ತು ಆಫ್ರಿಕದ ಉತ್ತರತೀರ ಪ್ರದೇಶಗಳೂ ಅವರ ಕೈವಶವಾಗಿ ಇಸ್ಲಾಂ ಚಕ್ರಾಧಿಪತ್ಯವೇ ನಿರ್ಮಿತವಾಯಿತು. ಅಷ್ಟು ದೂರ ವ್ಯಾಪಿಸಿದ ರಾಜ್ಯವನ್ನಾಳಲು ಮದೀನ ಅನುಕೂಲವಾದ ಕೇಂದ್ರವಾಗಿರಲಿಲ್ಲ; ಆದ್ದರಿಂದ 660ರಲ್ಲಿ ರಾಜಧಾನಿಯನ್ನು ಡಮಾಸ್ಕಸ್‍ಗೆ ವರ್ಗಾಯಿಸಿದರು. 745ರವರೆಗೂ ಉಮ್ಮಾಯಿದ್ ಮನೆತನದ ಅರಸರು ಆಳಿದರು. ಅವರ ಕಾಲದಲ್ಲಿ ಸಾಮ್ರಾಜ್ಯದ ಒಗ್ಗಟ್ಟಿಗೆ ಭಂಗವುಂಟಾಗಲಿಲ್ಲ. ತರುವಾಯ ಆಳಿದ ಅಬ್ಬಾಸಿದ್ ಕಲೀಫರ ಕಾಲದಲ್ಲಿ ಅರೇಬಿಯದ ಮೇಲೆ ಕೇಂದ್ರ ಸರ್ಕಾರದ ಹಿಡಿತ ಕಡಿಮೆಯಾಗಿ, ಅಲ್ಲಿನ ಬೆದೂಯಿನ್ ಗುಂಪುಗಳು ಸ್ವತಂತ್ರಜೀವನ ನಡೆಸತೊಡಗಿದುವು. ಎಲ್ಲರೂ ಮುಸ್ಲಿಮರೇ ಆಗಿದ್ದರೂ ಅವರ ಆಚಾರವಿಚಾರಗಳಲ್ಲಿ ವೈವಿಧ್ಯ ಬೆಳೆಯತೊಡಗಿತು. ಅರೇಬಿಯದ ರಾಜಕೀಯ ಏಕತೆ ಮಾಯವಾಯಿತು.

ಯೆಮೆನ್ ಮತ್ತು ಒಮೆನ್ ಪ್ರಾಂತ್ಯಗಳು ಮೊದಲು ಸ್ವತಂತ್ರವಾದವು. ಅಲ್ಲಿನ ಬೆದೂಯಿನ್ನರು ಸುತ್ತಲಿನ ಪ್ರಾಂತ್ಯಗಳಿಗೆ ನುಗ್ಗಿ ಲೂಟಿ ದರೋಡೆ ನಡೆಸತೊಡಗಿದರು; ಮೆಕ್ಕ ಯಾತ್ರಿಕರೂ ಇವರ ಹಾವಳಿಗೆ ತುತ್ತಾದರು. ಇಸ್ಲಾಂ ಧರ್ಮದ ಜನ್ಮಸ್ಥಳಗಳಾದ ಮೆಕ್ಕ, ಮದೀನ ಮತ್ತು ಅವುಗಳ ಸುತ್ತಮುತ್ತಲಿನ ಪ್ರಾಂತ್ಯಗಳ ಮೇಲೆ, ಧರ್ಮಗುರುಗಳು ಎಂಬ ತಮ್ಮ ಗೌರವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಕಲೀಫರು ತಮ್ಮ ಹತೋಟಿಯನ್ನು ಇಟ್ಟುಕೊಳ್ಳಲೆತ್ನಿಸಿದರು. ಆದರೆ ಆ ಹತೋಟಿ ಹೆಸರಿಗೆ ಮಾತ್ರ. ಅಲ್ಲಿ ಪೈಗಂಬರನ ವಂಶೀಯರಾದ ಷರೀಫರು ಯಾದವೀ ಕಲಹಗಳಲ್ಲಿ ತೊಡಗಿ ಬಹುಮಟ್ಟಿಗೆ ಸ್ವತಂತ್ರರಾಗಿಯೇ ಇದ್ದರು. ಈಜಿಪ್ಟಿನ ದೊರೆಗಳ ಬೆಂಬಲ ತಮ್ಮ ವ್ಯಾಪಾರಕ್ಕೆ ಅತ್ಯವಶ್ಯವಾಗಿದ್ದುದರಿಂದ ಹೆಸರಿಗೆ ಮಾತ್ರ ಅವರಿಗೆ ಪ್ರಭುನಿಷ್ಠಾಪ್ರತಿಜ್ಞೆಯನ್ನು ಸಲ್ಲಿಸುತ್ತಿದ್ದರು. ಯೆಮೆನ್ ಪ್ರಾಂತ್ಯದಲ್ಲೂ ಇದೇ ರೀತಿ ಪರಸ್ಪರ ಕಲಹಗಳಲ್ಲಿ ತೊಡಗಿದ್ದ ಗುಂಪುಗಳು ಇದ್ದವು. 1174ರಲ್ಲಿ ಈಜಿಪ್ಟಿನ ಸುಲ್ತಾನ ಸಲಾವುದ್ದೀನನ ತಮ್ಮ ಈ ಪ್ರಾಂತ್ಯವನ್ನು ಗೆದ್ದು ಸ್ವಾಧೀನಪಡಿಸಿಕೊಂಡ. ಕೊಂಚ ಕಾಲದಲ್ಲೇ ಆ ಹತೋಟಿ ಸಡಿಲವಾಗಿ ಅಲ್ಲಿನ ಪಂಗಡಗಳಲ್ಲಿ ಪರಸ್ಪರ ಕಲಹಗಳು ಮತ್ತೆ ಪ್ರಾರಂಭವಾದವು. ಏಡನ್ ಮತ್ತು ಅದರ ಸುತ್ತಣ ಪ್ರಾಂತ್ಯಗಳ ಪರಿಸ್ಥಿತಿ ಮಾತ್ರ ಬಹುಮಟ್ಟಿಗೆ ಉತ್ತಮವಾಗಿತ್ತು. ಕೆಂಪು ಸಮುದ್ರ ಮತ್ತು ಅರಬ್ಬೀ ಸಮುದ್ರಗಳ ಮೇಲಿನ ವ್ಯಾಪಾರಕ್ಕೆ ಇದು ಮಧ್ಯ ಪ್ರದೇಶವಾಗಿದ್ದುದೇ ಇದಕ್ಕೆ ಕಾರಣ. ಜೈದಿ ಷಿಯೈಟರ ಮನೆತನದ ಆಳ್ವಿಕೆಯಲ್ಲಿತ್ತು ಆ ಪ್ರಾಂತ್ಯ. ಒಮೆನ್ ಪ್ರಾಂತ್ಯವನ್ನು ಖಾರಿಜೈಟ್ ಪಂಗಡದವರು ಆಳುತ್ತಿದ್ದರು. ಪರ್ಷಿಯ ಕೊಲ್ಲಿಯ ಮೂಲಕ ನಡೆಯುತ್ತಿದ್ದ ವ್ಯಾಪಾರದಲ್ಲಿ ತೊಡಗಿದ್ದ ಈ ಜನರ ಜೀವನ ಪ್ರತ್ಯೇಕವಾಗಿದ್ದು ಅರೇಬಿಯದ ಇತರ ಭಾಗಗಳೊಂದಿಗೆ ಯಾವ ಸಂಪರ್ಕವನ್ನೂ ಹೊಂದಿರಲಿಲ್ಲ.

15ನೆಯ ಶತಮಾನದಲ್ಲೇ ಮುಸ್ಲಿಮರು ಕಾನ್‍ಸ್ಟಾಂಟಿನೋಪಲ್ ಅಥವಾ ಬೈಸಾಂಟಿಯಂ ನಗರವನ್ನು ಸ್ವಾಧೀನಪಡಿಸಿಕೊಂಡು ಯುರೋಪಿನೊಳಗೂ ವ್ಯಾಪಿಸತೊಡಗಿ ದರು. ಆಟೋಮನ್‍ರ ಸುಲ್ತಾನರೆಂದು ಅವರ ಹೆಸರು. 16ನೆಯ ಶತಮಾನದಲ್ಲಿ ಇವರ

ಸಾರ್ವಭೌಮತ್ವವನ್ನು ಹೆಜಾಜ್ ಜನರೂ ಒಪ್ಪಿಕೊಂಡರು; ಏಕೆಂದರೆ ಈಜಿಪ್ಟ್ ಕೂಡ ಆ ಸುಲ್ತಾನರ ಕೈವಶವಾಗಿತ್ತು. ಮದೀನದಲ್ಲೊಬ್ಬ ಪ್ರಾಂತ್ಯಾಧಿಕಾರಿಯನ್ನು ನೇಮಿಸಲಾಯಿತು. 1536ರಲ್ಲಿ ಯೆಮೆನ್ ಪ್ರಾಂತ್ಯವೂ ಸುಲ್ತಾನರ ಕೈವಶವಾಯಿತು. ಆದರೆ ಮುಂದಿನ ಶತಮಾನದಲ್ಲೇ ಅಲ್ಲಿನ ಜೈದಿಗಳು ಅಲ್ಲಿದ್ದ ಆಟೊಮನ್ ಅಧಿಕಾರಿಗಳನ್ನು ಓಡಿಸಿ ಸ್ವತಂತ್ರರಾದರು. ಅವರ ಆಳ್ವಿಕೆ (19ನೆಯ ಶತಮಾನದಲ್ಲಿ ಕೊಂಚ ಕಾಲ ಹೊರತು) ಇಂದಿನವರೆಗೂ ನಡೆದುಕೊಂಡು ಬಂದಿದೆ. ಆದರೆ ಏಡನ್ ಮತ್ತು ಲಾಹೆಜ್‌ಗಳಲ್ಲಿ ಅಬ್ದಾಲಿಗಳು, ಹಧ್ರಮೌತ್‌ನಲ್ಲಿ ಕಾಥೀರಿಗಳು ಸ್ವತಂತ್ರರಾದರು. ಪೂರ್ವದ ಓಮೆನ್ ಪ್ರಾಂತ್ಯ 16ನೆಯ ಶತಮಾನದಲ್ಲಿ ಪರ್ಷಿಯನ್ ಖಾರಿಯನ್ನು ತಮ್ಮ ಹತೋಟಿಗೆ ತಂದುಕೊಂಡ ಪೋರ್ಚುಗೀಸರ ಪ್ರಭಾವಕ್ಕೆ ಸಿಕ್ಕಿತು. ಆದರೆ ಬ್ರಿಟಿಷರ ಸಹಾಯದಿಂದ ಪರ್ಷಿಯನ್ನರು ಅವರನ್ನು ಹೊಡೆದೋಡಿಸಿದರು; ಸ್ಥಳಿಯ ಮುಸ್ಲಿಂ ನಾಯಕರು ಓಮೆನ್ನಿಂದಲೂ ಅವರನ್ನೂ ಓಡಿಸಿದರು. ಈ ಘಟನೆಗಳಿಗೆ ಮುಖ್ಯ ಕಾರಣ, ಅರಬ್ಬೀ ಸಮುದ್ರದ ಮೂಲಕ ಬಹುಕಾಲದಿಂದಲೂ ಅರಬ್ಬೀಯರು ಪೂರ್ವದೇಶಗಳೊಂದಿಗೆ ನಡೆಸುತ್ತಿದ್ದ ವ್ಯಾಪಾರವನ್ನು ವಶಪಡಿಸಿಕೊಳ್ಳುವುದಕ್ಕೆ ಮೊದಲು ಪೋರ್ಚುಗೀಸರು, ಅನಂತರ ಬ್ರಿಟಿಷರು ನಡೆಸಿದ ಸ್ಪರ್ಧೆ.

18ನೆಯ ಶತಮಾನದ ಮಧ್ಯಕಾಲ ಕಳೆದ ಅನಂತರ ಅರೇಬಿಯದ ಚರಿತ್ರೆ ಬದಲಾವಣೆ ಹೊಂದಿತು. ವಹಾಬೀ ಎಂಬ ವೀರನಿಯಮಿಗಳಾದ ಮುಸ್ಲಿಂ ಪಂಗಡದವರು ನೆಜ್ಡ್ ಪ್ರಾಂತ್ಯದಲ್ಲಿ ರಾಜ್ಯವೊಂದನ್ನು ಕಟ್ಟಿದರು. ದರೈಯದ ಸೌದಿ ಅಮೀರರು ಇವರ ಮುಖಂಡರು. 18ನೆಯ ಶತಮಾನದ ಅಂತ್ಯಕಾಲಕ್ಕೆ ಇವರ ರಾಜ್ಯ ಉತ್ತರ ಅರೇಬಿಯವನ್ನೆಲ್ಲ ಒಳಗೊಂಡು ಸಿರಿಯ ಮತ್ತು ಇರಾಕ್ ದೇಶಗಳವರೆಗೂ ಹರಡಿತು. ಆದರೆ ಇದರಿಂದ ಆಟೊಮನ್ ಸುಲ್ತಾನನ ಅಧೀನನಾಗಿದ್ದ ಈಜಿಪ್ಟಿನ ಸುಲ್ತಾನ್ ಮೆಹಮ್ಮೆಟ್ ಆಲಿಗೂ ಸೌದಿ ಅಮೀರರಿಗೂ ಯುದ್ಧ ಪ್ರಾಪ್ತವಾಯಿತು. ಮೆಹಮ್ಮೆಟ್ ಆಲಿಗೆ ಬ್ರಿಟಿಷರ ಬೆಂಬಲ ಇತ್ತು. ಮೆಕ್ಕ, ಮದೀನ ಮತ್ತು ರಾಜಧಾನಿಯಾದ ದರೈಯ ಶತ್ರುಗಳ ಕೈಸೇರಿದುವು; ರಿಯಾದ್ ಎಂಬ ನಗರ ಹೊಸ ರಾಜಧಾನಿಯಾಯಿತು. ಯುದ್ಧ ಬಹುಕಾಲ ನಿಲ್ಲದೆ ಅರೇಬಿಯದ ಈ ಪ್ರಾಂತ್ಯ ಬಹಳ ರಾಜಕೀಯ ಗೊಂದಲಕ್ಕೆ ಸಿಕ್ಕಿತು. ಹತ್ತೊಂಬತನೆಯ ಶತಮಾನ ಪೂರ್ತ ಈ ಪರಿಸ್ಥಿತಿ ಮುಂದುವರೆಯಿತು. ಕೊನೆಗೆ 1902ರಲ್ಲಿ ಸಮರ್ಥನಾದ ಅಬ್ದುಲ್ ಅಜೀಜ್ ಇಬ್ನ್‌ಸೌದ್ ಎಂಬ ಅಮೀರ ರಾಜಧಾನಿಯಾದ ರಿಯಾದನ್ನು ವಶಪಡಿಸಿಕೊಂಡು ವಹಾಬೀ ರಾಜ್ಯವನ್ನು ಪುನರುಜ್ಜೀವಿತಗೊಳಿಸುವ ಪ್ರಯತ್ನ ಕೊಗೊಂಡ. ತುರ್ಕಿ ಸುಲ್ತಾನರ ಅಧಿಕಾರ ಸಡಿಲವಾದರೂ ಪೂರ್ತ ಹೋಗಿರಲಿಲ್ಲ; 1869 ರಲ್ಲಿ ಸೂಯೆಜ್ ಕಾಲುವೆ ನಿರ್ಮಿತವಾದ ಮೇಲೆ ಅವರು ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳಲೆತ್ನಿಸಿದರು. ಆದರೆ ಬ್ರಿಟಿಷರಿಗೂ ತಮ್ಮ ಸಾಮ್ರಾಜ್ಯ ರಕ್ಷಣೆಗಾಗಿ ಆ ಕಾಲುವೆಯ ಮೇಲೆ ಹತೋಟಿಯನ್ನಿಟ್ಟುಕೊಳ್ಳುವುದು ಅತ್ಯವಶ್ಯವಾಗಿತ್ತು. ಈ ಮಧ್ಯೆ ಮೆಕ್ಕದ ಷರೀಫರು ಪ್ರಬಲರಾಗುತ್ತ ಬಂದರು. ಅವರಲ್ಲಿ ಅತ್ಯಂತ ಸಮರ್ಥನಾದ ಹುಸೇನ್ ಇಬ್ನ್ ಆಲಿ ಕೊಂಚ ಕೊಂಚವಾಗಿ ತನ್ನ ಅಧಿಕಾರವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತ ಬಂದ ಮೊದಲನೆಯ ಮಹಾಯುದ್ಧಕ್ಕೆ ಮುಂಚೆಯೇ ಇಬ್ನ್ ಸೌದನಿಗೂ ಅವನಿಗೂ ಘರ್ಷಣೆ ಪ್ರಾರಂಭವಾಯಿತು.

ಆಟೊಮನ್ ರಾಜ್ಯದ ಶಕ್ತಿ 18ನೆಯ ಶತಮಾನದಲ್ಲಿ ಕ್ರಮೇಣ ಕುಂದುತ್ತ ಬಂತು. ಪಶ್ಚಿಮ ಅರೇಬಿಯದಲ್ಲಿ ಪ್ರಾಬಲ್ಯ ಬೆಳೆಸಿಕೊಂಡು ತನ್ನ ಸಾಮ್ರಾಜ್ಯರಕ್ಷಣೆಗೆ ಅನುಕೂಲ ಮಾಡಿಕೊಳ್ಳಬೇಕೆಂದು ಇಂಗ್ಲೆಂಡ್ 19ನೆಯ ಶತಮಾನದ ಮೊದಲಿನಿಂದಲೂ ಪ್ರಯತ್ನಿಸುತ್ತ ಬಂದಿತ್ತು. ನೆಪೋಲಿಯನ್ನನೊಡನೆ ನಡೆಸಿದ ಯುದ್ಧದ (1802–15) ಕಾಲದಲ್ಲೆ ಪರ್ಷಿಯ ಕೊಲ್ಲಿಯನ್ನು ತನ್ನ ಹತೋಟಿಗೆ ತಂದುಕೊಂಡಿತು. 1839ರಲ್ಲಿ ಬ್ರಿಟಿಷ್ ಸೈನ್ಯ ಏಡನನ್ನು ವಶಪಡಿಸಿಕೊಂಡಿತು. ಆಟೊಮನ್ ಸುಲ್ತಾನರೊಂದಿಗೂ ಸ್ಥಳೀಯ ಸಮೀರರೊಂದಿಗೂ ಒಪ್ಪಂದಗಳನ್ನು ಮಾಡಿಕೊಂಡು ಅದರ ಉತ್ತರದ ಮತ್ತು ಪೂರ್ವದ ತೀರಪ್ರದೇಶಗಳ ಮೇಲೆ ತನ್ನ ಪ್ರಭಾವ ಬೆಳೆಸಿತು. 1914ರಲ್ಲಿ ಒಂದನೆಯ ಮಹಾಯುದ್ಧ ಪ್ರಾರಂಭವಾದ ಮೇಲೆ, ತುರ್ಕಿ ಸುಲ್ತಾನನಿಗೆ ವಿರೋಧವಾಗಿ ನಿಂತ ಅರಬ್ಬೀ ಅಮೀರರಿಗೆಲ್ಲ ಇಂಗ್ಲೆಂಡಿನ ಸಹಾಯ ದೊರಕಿತು. ಷರೀಫ್ ಹುಸೇನನ ಮಗ ಫೈಸಲ್ ಅಕಾಬವನ್ನು ಸ್ವಾಧೀನಪಡಿಸಿಕೊಂಡ. ಉತ್ತರ ಅರೇಬಿಯದ ಜನ ಅವನೊಂದಿಗೆ ಸೇರಿಕೊಂಡರು. ಫೈಸಲ್ ಹೆಜಾಜಿನ ದೊರೆಯಾದ. ಇದರಿಂದ ಇಬ್ನ್ ಸೌದನೊಂದಿಗೆ ಯುದ್ಧ ಪ್ರಾರಂಭವಾಯಿತು. 1924ರಲ್ಲಿ ಮೆಕ್ಕ ಕೂಡ ವಹಾಬಿಗಳ ಕೈಸೇರಿತು.

ನಾಲ್ಕು ಶತಮಾನಗಳ ಕಾಲ ಅರೇಬಿಯ ಆಟೊಮನ್ ಚಕ್ರಾಧಿಪತ್ಯಕ್ಕೆ ಸೇರಿದ್ದರೂ ಅರೇಬಿಯರು ತಮ್ಮ ಸಂಸ್ಕೃತಿ, ಜೀವನ ಕ್ರಮಗಳನ್ನು ಕಳೆದುಕೊಂಡಿರಲಿಲ್ಲ. ಅವುಗಳನ್ನು ಬೆಳೆಸಬೇಕೆಂಬ ಆಸೆ 19ನೆಯ ಶತಮಾನದಲ್ಲಿ ತೀವ್ರವಾಯಿತು. ಮೊದಲ ಮಹಾಯುದ್ಧಾನಂತರ 1919ರಲ್ಲಿ ಆದ ಒಪ್ಪಂದದಲ್ಲಿ ಬ್ರಿಟಿಷರ ಮತ್ತು ಫ್ರೆಂಚರ ಮೇಲ್ವಿಚಾರಣೆಗೆ ಒಳಪಟ್ಟ ಅನೇಕ ಸಣ್ಣ ರಾಜ್ಯಗಳು ನಿರ್ಮಿತವಾದುವು. ಸೌದಿ ಅರೇಬಿಯ ಮತ್ತು ಯೆಮೆನ್ ಮಾತ್ರ ಸ್ವತಂತ್ರ ರಾಜ್ಯಗಳಾಗಿ ಉಳಿದುವು. 1943ರ ಕಾಲಕ್ಕೆ ಇವೆಲ್ಲ ಸ್ವತಂತ್ರವಾದುವು. 1944ರಲ್ಲಿ ಅರೇಬಿಯದ ಎಲ್ಲಾ ರಾಜ್ಯಗಳ ಸಮ್ಮೇಳನವೊಂದು ನಡೆದು ಅರಬ್ಬೀ ಒಕ್ಕೂಟವೊಂದನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು. ಮರುವರ್ಷ ಒಪ್ಪಂದವೂ ಆಯಿತು. ಈಗ ಇರುವ ಅರಬ್ಬೀ ರಾಜ್ಯಗಳು–ಸೌದಿ ಅರೇಬಿಯದ, ಯೆಮನ್, ಮಸ್ಕತ್ ಮತ್ತು ಒಮೆನ್, ಬೆಹರೀನ್, ಕುವೈಟ್, ಕ್ವಾತಾರ್, ಕೆಲವು ಷೇಕ್ ರಾಜ್ಯಗಳು ಮತ್ತು ಏಡನ್, ಏಡನ್ ಮಾತ್ರ ಇನ್ನೂ ಬ್ರಿಟಿಷರ ರಕ್ಷಣಾವ್ಯವಸ್ಥೆಗೆ ಸೇರಿದೆ. ಈ ಎಲ್ಲ ರಾಜ್ಯಗಳ ಮುಖ್ಯ ಆಸ್ತಿ ತೈಲ. ಇದಕ್ಕಾಗಿ ಪಶ್ಚಿಮದ ದೊಡ್ಡ ರಾಷ್ಟ್ರಗಳು–ಮುಖ್ಯವಾಗಿ ಅಮೆರಿಕದ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡ್–ಅಪಾರ ಹಣ ವೆಚ್ಚ ಮಾಡಿರುವುದರಿಂದ ಆ ಸರ್ಕಾರಗಳ ರಾಜಕೀಯ ಪ್ರಭಾವ ಇದ್ದೇ ಇದೆ. ಏಡೆನ್ನಿನಲ್ಲಿ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ. ಚಳುವಳಿ ನಡೆಯುತ್ತಿದೆ. ಅರಬ್ಬೀ ಗಣರಾಜ್ಯ (**ನೋಡಿ**) 1958–61 ರವರೆಗೆ ಅಸ್ತಿತ್ವದಲ್ಲಿತ್ತು.

**ಭಾರತದಲ್ಲಿ ಅರಬ್ಬೀಯರು:** ಪೈಗಂಬರ್ ಮಹಮ್ಮದನ ಇಸ್ಲಾಂ ಧರ್ಮಬೋಧೆ ಅರಬ್ಬೀಯರಿಗೆ ಹೊಸ ಹುರುಪನ್ನು ಕೊಟ್ಟಿತ್ತು. ಬಾಗ್ದಾದಿನ ಕಲೀಫರ ಕಾಲದಲ್ಲಿ ಏಳನೆಯ ಶತಮಾನ ಮುಗಿಯುವುದರೊಳಗೇ ಅರಬ್ಬರು ಉತ್ತರ ಆಫ್ರಿಕದ ಮೆಡಿಟರೇನಿಯನ್ ತೀರಪ್ರದೇಶಗಳನ್ನಲ್ಲದೆ ಭಾರತದ ವಾಯವ್ಯ ಸರಹದ್ದಿನವರೆಗೂ ಇದ್ದ ಪಶ್ಚಿಮ ಏಷ್ಯ ಪ್ರದೇಶಗಳನ್ನೆಲ್ಲ ವಶಪಡಿಸಿಕೊಂಡಿದ್ದರು. ವ್ಯಾಪಾರಕ್ಕಾಗಿ ಬರುತ್ತಲೇ ಇದ್ದ ಅರಬ್ಬರಿಗೆ ಭಾರತದ ಪರಿಚಯವಿತ್ತು. ಬಲೂಚಿಸ್ತಾನ್ ಮತ್ತು ಆಫ್ಘಾನಿಸ್ತಾನ್ ಪ್ರಾಂತ್ಯಗಳನ್ನು ಗೆದ್ದ ಮೇಲೆ ಭಾರತಕ್ಕೆ ನುಗ್ಗುವ ಯೋಚನೆ ಮಾಡಿದರು. ಆಗ ದಾಹಿರ್ ಸಿಂಧೂದೇಶವನ್ನಾಳುತ್ತಿದ್ದ. ಇರಾಕಿನ ಪ್ರಾಂತ್ಯಾಧಿಪತಿಯಾಗಿದ್ದ ಅಲ್ ಹಜಾಜ್ ಎಂಬುವನು ಸಿಂಧೂ ದೇಶಕ್ಕೆ ಸೈನ್ಯವೊಂದನ್ನು ಕಳುಹಿಸಿದ. ದಾಹಿರ್ ಅದನ್ನು ಸೋಲಿಸಿ ಹಿಮ್ಮೆಟ್ಟಿಸಿದ. ಇಂಥ ಪ್ರಯತ್ನಗಳು ಹಲವು ನಡೆದು ವಿಫಲವಾದವು. ಕೊನೆಗೆ ಅಲ್ ಹಜಾಜ್ ತನ್ನ ಅಳಿಯ ಮಹಮ್ಮದ್ ಬಿನ್ ಕಾಸಿಂನ ಕೈಕೆಳಗೆ ದೊಡ್ಡ ಸುಸಜ್ಜಿತ ಸೈನ್ಯವೊಂದನ್ನು ಕಳುಹಿಸಿದ. ಸ್ವಧರ್ಮಭ್ರಷ್ಟರಾದ ಕೆಲವು ಅಧಿಕಾರಿಗಳು, ಕೆಲವು ಬೌದ್ಧ ಪುರೋಹಿತರು, ದಾಹಿರ್‌ನನ್ನು ತ್ಯಜಿಸಿ ಶತ್ರುವಿನ ಕಡೆ ಸೇರಿದರು. ಇದರಿಂದ ಸಿಂಧೂನದಿಯವರೆಗಿನ ಪ್ರಾಂತ್ಯಗಳನ್ನು ಗೆದ್ದು ಆ ನದಿಯನ್ನು ದಾಟಿಬರುವುದಕ್ಕೂ ಕಾಸಿಂನಿಗೆ ಅನುಕೂಲವಾಯಿತು. ರಾವೋರ್ ಎಂಬಲ್ಲಿ ಭೀಕರ ಕದನ ನಡೆಯಿತು(712). ದಾಹಿರ್ ಸೋತದ್ದಲ್ಲದೆ ರಣರಂಗದಲ್ಲಿ ಮಡಿದ. ರಾವೋರ್ ಕೋಟೆ ಕಾಸಿಂನ ಕೈವಶವಾಯಿತು. ಸಿಂಧೂರಾಜ್ಯದ ದಕ್ಷಿಣ ಭಾಗವೆಲ್ಲ ಅರಬ್ಬರ ಸ್ವಾಧೀನವಾಯಿತು. ಮುಸ್ಲಿಮರ ಈ ಆಕ್ರಮಣದಿಂದ ಪಶ್ಚಿಮ ಏಷ್ಯದ ರಾಜ್ಯಗಳಿಗೂ ಭಾರತಕ್ಕೂ ನಡುವೆ ಹೆಚ್ಚು ಸಾಂಸ್ಕೃತಿಕ ಸಂಪರ್ಕವೇರ್ಪಡಲು ಅನುಕೂಲವಾಯಿತೆನ್ನಬಹುದು. (ಎಂ.ಎ.)

**ಅರೇಬಿಯನ್ ನೈಟ್ಸ್ : ನೋಡಿ– ಸಾವಿರದ ಒಂದು ರಾತ್ರಿಗಳು.**

**ಅರೇಲಿಯ :** ಅರೇಲೀಯೇಸೀ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ಸಸ್ಯ. ಪೊದೆಯಾಗಿ, ಪರ್ಣಸಸಿಯಾಗಿ, ಮರವಾಗಿ ಬೆಳೆಯುತ್ತದೆ. ಅಲಂಕಾರದ ಗಿಡವಾಗಿ, ಬೇಲಿಯ ಗಿಡವಾಗಿ ಬೆಳೆಸುತ್ತಾರೆ. ಕಾಂಡದ ಮೇಲೆ ಮುಳ್ಳುಗಳಿರುತ್ತವೆ. ಪತ್ರಗಳು ಸಂಯುಕ್ತ ಮಾದರಿಯವಾಗಿದ್ದು ಪರ್ಯಾಯ ರೀತಿಯಲ್ಲಿ ಜೋಡಣೆಗೊಂಡಿವೆ. ಹೂಗೊಂಚಲು ಅಂಬೆಲ್ ಮಾದರಿಯದು. 5 ಕೇಸರಗಳೂ 5 ಭಾಗದ ಅಂಡಾಶಯವೂ ಇವೆ. ಇದರದ್ದು ಬಹುಬೀಜಫಲ, ಬೆರಿ ಅಥವಾ ಡ್ರೂಪ್ ಮಾದರಿಯದು.

ಅರೇಲಿಯ ಗಯಿಲ್‌ಪೊಲ್ಶೈ ಪ್ರಸಿದ್ಧ ಪ್ರಭೇದ. ಎಲೆಗಳು ಮನೋಹರವಾಗಿರುತ್ತವೆ. ಅರೇಲಿಯ ರೆಸಿಮೋಸ ಬಹು ಕವಲೊಡೆಯುವ ದೀರ್ಘಾವಧಿ ಸಸ್ಯ. ಅರೇಲಿಯ ನೂಡಿಕ್ಯಾಲಿಸ್ ಕುಬ್ಜ ಅರೇಲಿಯ ಎಂದು ಹೆಸರುವಾಸಿಯಾಗಿದೆ. ಅರೇಲಿಯ ಕಾರ್ಡೇಟ ಪ್ರಭೇದದ ಎಳೆಯ ಕಾಂಡವನ್ನು ಜಪಾನಿಗಳು ತಿನ್ನುತ್ತಾರಾದ ಕಾರಣ ಇದಕ್ಕೆ ಅರೇಲಿಯ ಎಡುಲಿಸ್ ಎಂಬ ಹೆಸರಿದೆ. ಇದು ಜಪಾನ್, ಚೀನಗಳ ಮೂಲದ್ದು. ಗಿಡ 3 ಮೀ ಎತ್ತರಕ್ಕೆ ಬೆಳೆಯುತ್ತದೆ. ಅರೇಲಿಯ ಹಿಸ್ಪಿಡ 1 ಮೀ ಎತ್ತರಕ್ಕೆ ಬೆಳೆಯುವ ಪೊದೆ. ಹೂ ಬಿಳುಪು; ಹಣ್ಣು ಕಡುಗೆಂಪು. 10 ಮೀ ಎತ್ತರ ಬೆಳೆಯುವ ಪ್ರಭೇದವೆಂದರೆ ಅರೇಲಿಯ ಸ್ಪೈನೋಸ.

ತುಂಡುಗಳಿಂದ ಹೊಸಗಿಡಗಳನ್ನು ಬೆಳೆಸುತ್ತಾರೆ. ದೀರ್ಘಾವಧಿ ಸಸ್ಯವಾದ್ದರಿಂದ ಒಳ್ಳೆಯ ಗೊಬ್ಬರ ಅಗತ್ಯ. ಜೌಗಿನಲ್ಲಿ ಇದು ಚೆನ್ನಾಗಿ ಬೆಳೆಯದು. ಬಿಸಿಲು ಹೆಚ್ಚಾದರೆ ಎಲೆ, ಹೂಗಳ ಬಣ್ಣ ಮಾಸುತ್ತದೆ. ನೆರಳು ಇದ್ದಲ್ಲಿ ಬೆಳೆ ಹಸನಾಗುತ್ತದೆ.

ಸಾಮಾನ್ಯವಾಗಿ ಗಿಡಗಳಿಗೆ ಹುಳು ಬೀಳದು. ಕೆಲವು ಬಾರಿ ಮೀಲೀ ಬಗ್ಸ್, ಶಲ್ಕ ಕೀಟಗಳು ಹತ್ತಬಹುದು. ಹತ್ತಿದರೂ ಅವುಗಳ ನಿವಾರಣೆ ಸುಲಭ. (ಡಿ.ಎಂ.)

**ಅರ್ರೈಆನ್ :** ಅರ್ಧಚಾರಿತ್ರಿಕ ಅರ್ಧಪೌರಾಣಿಕ ಪುರುಷ. ಲೆಸ್ಬಸ್ ದ್ವೀಪದ ಮೆತಿಮ್ನಾದಲ್ಲಿ ಜನಿಸಿದನೆಂದು ಪುರಾಣಕಥೆ. ಪ್ರ.ಶ.ಪೂ. 7ನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಆಲ್ಕ್‌ಮಾನ್ ಎಂಬ ಭಾವಗೀತೆಗಳನ್ನು ರಚಿಸಿದ ಕವಿಯ ಶಿಷ್ಯನಾಗಿದ್ದನಂತೆ. ಅರ್ರೈಆನನ ಜೀವಿತದ ಬಹುಭಾಗ ಕಾರಿನ್ತಿನ ಸರ್ವಾಧೀಶ ಪೆರಿಆಂಡರ್‌ನ (ಪ್ರ.ಶ.ಪೂ.

625–585) ಆಶ್ರಯದಲ್ಲಿ ಕಳೆಯಿತೆಂದು ಊಹೆ. ಆತನ ಆಸ್ಥಾನದಲ್ಲೂ ತಾನು ಪ್ರವಾಸಗೊಂಡ ಇಟಲಿ, ಸಿಸಿಲಿ ಇತ್ಯಾದಿ ಪ್ರದೇಶಗಳಲ್ಲೂ ಪುಷ್ಕಳ ಬಹುಮಾನವನ್ನು ಪಡೆದು ಅರೈಆನ್ ವಿಶೇಷ ಧನಿಕನಾದ.

ಇವನ ಹಾಡುಗಾರಿಕೆಯ ವಿಷಯವಾಗಿ ಸೊಗಸಾದ ದಂತಕಥೆ ಇದೆ. ಒಮ್ಮೆ ತಾನು ಗಳಿಸಿದ್ದ ಹೇರಳ ದ್ರವ್ಯದೊಂದಿಗೆ ಟಾರೆಂಟಮ್ಮಿನಿಂದ ಕಾರಿನ್ತಿಗೆ ಯಾನ ಹೂಡಿದ್ದ ನೌಕೆಯಲ್ಲಿ ಪ್ರಯಾಣ ಮಾಡುವಾಗ ಇವನ ವಿತ್ತ ರಾಶಿಯನ್ನು ಅಪಹರಿಸುವ ದುರಾಶೆ ನಾವಿಕರಲ್ಲಿ ತೀವ್ರವಾಯಿತು. ಅವರು ಇವನಿಗೆ, ಹೇಗಾದರೂ ನೀನು ಸಾಯಲೇ ಬೇಕು. ಕಠಾರಿಯಿಂದ ಇರಿದುಕೊ ಅಥವಾ ಸಮುದ್ರಕ್ಕೆ ಬೀಳು ಎಂದರಂತೆ. ಸಾಯುವ ಮುನ್ನ ಚರಮಗೀತೆಯೊಂದನ್ನು ಹಾಡಲು ಅನುಮತಿಬೇಡಿ, ಬೆಲೆಯುಳ್ಳ ಅಂಗಿ ವಸ್ತ್ರಗಳನ್ನು ಧರಿಸಿ, ಲೈರ್ ವಾದ್ಯವನ್ನು ಬಾರಿಸುತ್ತ , ಕವಿ ದನಿ ಎತ್ತಿದ. ಇವನ ದಿವ್ಯಗಾಯನವನ್ನು ಆಲಿಸಿದ ಹಂದಿ ಮೀನುಗಳು(ಡಾಲ್ಫಿನ್) ನೌಕೆಯ ಹಿಂದೆ ಹಿಂಡು ಹಿಂಡಾಗಿ ಸಾಗಿದುವು. ಹಾಡು ನಿಲ್ಲಿಸಿ ನೀರಿಗೆ ದುಮ್ಮಿಕ್ಕಿದ ಅರೈಆನ್‌ನನ್ನು ಮೀನುಗಳು ಹೆಗಲಲ್ಲಿ ಹೊತ್ತು ಟೆನಿರಸ್ ಬೆಟ್ಟಕ್ಕೆ ಕೊಂಡೊಯ್ದುವು. ಅಲ್ಲಿಂದ ಇವನು ಕಾರಿನ್ತಿಗೆ ಹೋಗಿ ದೊರೆಗೆ ದೂರಿತ್ತ. ನೌಕೆ ಕಾರಿನ್ತಿಗೆ ಬಂದ ಕೂಡಲೆ ನಾವಿಕರನ್ನು ಕರೆಸಿ, ಅರೈಆನ್ ಎಲ್ಲಿ? ಎಂದು ಕೇಳಿದ, ಪೆರಿಆಂಡರ್. ಟಾರೆಂಟಮ್ಮಿನಲ್ಲೇ ಅವನು ಉಳಿದುನಿಂತ ಎಂದರು, ನಾವಿಕರು. ತಾನು ಅಂದು ಉಟ್ಟಿದ್ದ ಉಡುಪಿನಲ್ಲೇ ಅರೈಆನ್ ಕಾಣಿಸಿಕೊಂಡದ್ದನ್ನು ನೋಡಿದ ಆ ಧೂರ್ತರು ಬೆವರಿಡುತ್ತ ತಮ್ಮ ಅಪರಾಧವನ್ನು ಒಪ್ಪಿಕೊಂಡು ದಂಡನೆಗೆ ಒಳಗಾದರು.

ಅರೈಆನಿಗೆ ಡಿತಿರ್‍ಯಾಂಬ್ ಎಂಬ ನೃತ್ಯಗೀತದ ಜನಕನೆಂಬ ಕೀರ್ತಿಯಿದೆ. ಅದನ್ನು ಅವನೇ ಸೃಜಿಸಿ, ಹೆಸರಿಟ್ಟು ಹೇಳಿಕೊಟ್ಟನಂತೆ. ಪಾನದೇವತೆಯಾದ ಡಯೋನೀಸಸ್ಸನ ಆರಾಧನೆಯ ಮುಖ್ಯಾಂಗಗಳಲ್ಲಿ ಡಿತಿರ್‍ಯಾಂಬ್ ಒಂದು. ಮೋಜುಗಾರರು ಕುಣಿಯುತ್ತ ಕೂಗುತ್ತಿದ್ದ ಅಸಂಬದ್ಧ ಪಲ್ಲವಿಗಳಿಂದ ಅದು ಬೆಳೆದುಬಂದಿರಬೇಕು. ಅದಕ್ಕೆ ಕ್ರಮವನ್ನೂ ಕಾವ್ಯರೂಪವನ್ನೂ ಹೊಂದಿಸಿಕೊಟ್ಟು, ಪ್ರಾಯಶಃ 50 ಮಂದಿ ನರ್ತಕರು ವರ್ತುಲಾಕಾರವಾಗಿ ನಿಂತು, ಅದನ್ನು ತಾಳಬದ್ಧವಾಗಿ ಹಾಡುವಂತೆ ಶಿಕ್ಷಣವಿತ್ತವ ಅರೈಆನ್. ಎರಡನೆಯದಾಗಿ, ಸಂಗೀತಕ್ಕೆ ಟ್ರ್ಯಾಜಿಕ್ ಧಾಟಿಯನ್ನು ತಂದುಕೊಟ್ಟವನೂ ಇವನೇ. ಎಂದರೆ, ಗಂಭೀರನಾಟಕ ಬಳಸಿಕೊಂಡ ಸಂಗೀತವಿಧಾನವನ್ನು ಇವನೇ ನಿರ್ಮಾಣಗೈದ. ಇವನ ಕೃತಿ ಯಾವುದೂ ಉಳಿದುಬಂದಿಲ್ಲ. (ಎಸ್.ವಿ.ಆರ್.)

**ಅರೋರಾ ಬೆಳಕು :** ಅರೋರಾ ಒಂದು ವರ್ಣಮಯ ಪ್ರಭೆ, ಸೂರ್ಯನಿಂದ ಪ್ರವಹಿಸಿ ಬರುವ ವಿದ್ಯುದಾವಿಷ್ಟ ಕಣಗಳ ಧಾರೆಗೆ ಸೌರಮಾರುತವೆಂದು ಹೆಸರು. ಭೂಮೇಲ್ಮೈಯಿಂದ ಭೂತ್ರಿಜ್ಯದ ಎಷ್ಟೋಪಟ್ಟು ದೂರದಲ್ಲಿರುವ ಕೆಲಬಿಂದುಗಳಲ್ಲಿ ಭೂಕಾಂತ



ಅರೋರಾ ಬೆಳಕುಗಳ ವೈವಿಧ್ಯ

ಕ್ಷೇತ್ರವನ್ನು ಸೌರಮಾರುತದಲ್ಲಿನ ಪ್ರೋಟಾನ್ ಮತ್ತು ಎಲೆಕ್ಟ್ರಾನುಗಳ ಧಾರೆಗಳು ವಿಕೃತಗೊಳಿಸುತ್ತವೆ. ಇದರಿಂದ ವಾಯುಮಂಡಲದಲ್ಲಿರುವ ಪರಮಾಣುಗಳು ಉದ್ರೇಕಗೊಳ್ಳುತ್ತವೆ. ವಿವಿಧ ಅನಿಲಗಳ ಉದ್ರೇಕಿತ ಪರಮಾಣುಗಳು ವಿವಿಧ ಬಣ್ಣದ ಬೆಳಕನ್ನು ಉತ್ಸರ್ಜಿಸುತ್ತವೆ. ಅರೋರಾ ಪ್ರಭೆಯಲ್ಲಿರುವ ಹಸುರು ಬಣ್ಣಕ್ಕೆ ಕಾರಣ ಆಕ್ಸಿಜನ್ ಪರಮಾಣುಗಳು. ನೈಟ್ರೋಜನ್ ಮತ್ತು ಆಕ್ಸಿಜನ್‌ಗಳೆರಡೂ ಕೆಂಪು ಬೆಳಕನ್ನು ಉತ್ಸರ್ಜಿಸುತ್ತವೆ. ಭೂಮಿಯ ಉತ್ತರ ಧ್ರುವದ ಸಮೀಪದ ಅಕ್ಷಾಂಶಗಳಲ್ಲಿನ ಧ್ರುವ ಪ್ರಭೆಗೆ ಅರೋರಾ ಬೋರಿಯಾಲಿಸ್ ಎಂದು ಹೆಸರು. ದಕ್ಷಿಣ ಧ್ರುವದ ಸಮೀಪದಲ್ಲಿಯೂ ಇಂತಹದೇ ಪ್ರಭೆ ಗೋಚರಿಸುತ್ತದೆ. ಇದಕ್ಕೆ ಅರೋರಾ ಆಸ್ಟ್ರೇಲಿಯಾಸ್ ಎಂದು ಹೆಸರು.

**ಅರ್ಕನ್‌ಸೋ :** ಅಮೆರಿಕ ಸಂಯುಕ್ತ ಸಂಸ್ಥಾನದ ದಕ್ಷಿಣಭಾಗದ ರಾಜ್ಯಗಳಲ್ಲೊಂದು. ಜನ ಸುಯೋಗದ ನಾಡು ಎಂದು ಕರೆಯುತ್ತಾರೆ. ವಿಸ್ತೀರ್ಣ 53183.ಚ.ಕಿಮೀ. ಜನಸಂಖ್ಯೆ 2362239(2001) 1836 ರಲ್ಲಿ 25 ನೆಯ ರಾಜ್ಯವಾಗಿ ಸಂಯುಕ್ತ ಸಂಸ್ಥಾನಗಳಲ್ಲಿ ಸೇರಿತು. ಲಿಟ್ಲ್ ರಾಕ್ ಇದರ ರಾಜಧಾನಿ. 1541–42 ರಲ್ಲಿ ಈ ಪ್ರದೇಶದೊಳಕ್ಕೆ ಮೊಟ್ಟ ಮೊದಲು ಬಿಳಿ ಜನರ ತಂಡವೊಂದು ಪ್ರವೇಶಿಸಿತು. 1686 ರಲ್ಲಿ ಫ್ರೆಂಚರ ವ್ಯಾಪಾರ ವಸಾಹತು ಆರಂಭವಾಯಿತು. 1819 ರಲ್ಲಿ ಇದು ಒಂದು ವಸಾಹತಾಯಿತು. ಇಲ್ಲಿಯ ಜನಸಂಖ್ಯೆಯ 1/4 ಭಾಗ ನೀಗ್ರೊಗಳಾಗಿದ್ದಾರೆ. ಕಪ್ಪು ಜನರ ಹಕ್ಕು ಬಾಧ್ಯತಾಕಾನೂನಿಗೆ ಬಿಳಿಜನರು ವಿರೋಧವನ್ನು ವ್ಯಕ್ತಪಡಿಸಿದ ರಾಜ್ಯಗಳಲ್ಲಿ ಇದೂ ಒಂದು. ದಕ್ಷಿಣಭಾಗದಲ್ಲಿರುವುದರಿಂದ ಹಿತಕರ ವಾಯುಗುಣವಿದ್ದು ಬೇಸಾಯಕ್ಕೆ ಅವಶ್ಯಕವಾದ ಅನುಕೂಲತೆಗಳೆಲ್ಲ ಇವೆ; ಜನಜೀವನದಲ್ಲಿ ನೆಮ್ಮದಿ ನೆಲೆಸಿದೆ. ಭೂ ಪ್ರದೇಶದ ವೈವಿಧ್ಯದಿಂದ ನಾಡು ರಮಣೀಯವಾಗಿದೆ. ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ಅಗತ್ಯ ಇಂಧನ ಮೊದಲಾದ ಖನಿಜ ಸಂಪತ್ತು ಹೇರಳವಾಗಿ ದೊರಕುತ್ತದೆ.

ಅರ್ಕನ್ ಸೋಸ್‌ನಲ್ಲಿ ಮುಖ್ಯವಾದ ಎರಡು ಭೂಗೋಳಿಕ ವಿಭಾಗಗಳಿವೆ ; ದಕ್ಷಿಣ ಮತ್ತು ಪೂರ್ವಕ್ಕೆ ಮೈದಾನ, ತೀರದ ಖಾರಿ ಹಾಗೂ ಉತ್ತರ ಮತ್ತು ಪಶ್ಚಿಮಕ್ಕೆ ಒಳಭಾಗದ ಎತ್ತರ ಪ್ರದೇಶಗಳು. ಎತ್ತರದ ಪ್ರದೇಶ ಮಿಸಿಸಿಪ್ಪಿ ನದಿಯ ಹತ್ತಿರ ಸಮುದ್ರ ಮಟ್ಟಕ್ಕಿಂತ 30.18ಮೀ ಗಳಷ್ಟು ಮಾತ್ರ ಎತ್ತರವಾಗಿದ್ದು ಕ್ರಮೇಣ ಹೆಚ್ಚುತ್ತ ಹೋಗಿ ವಾಯುವ್ಯದ ಮ್ಯಾಗ್ಜೀನ್ ಪರ್ವತದ ಬಳಿ 862.27ಮೀ ಗಳಷ್ಟಿದೆ. ಓಜಾರ್ಕ್ ಪ್ರಸ್ಥಭೂಮಿ ಉತ್ತರದ ಮಧ್ಯಭಾಗ ಹಾಗೂ ವಾಯವ್ಯದ ಪ್ರದೇಶಗಳನ್ನಾವರಿಸಿ ಅಕ್ಕಪಕ್ಕದ ರಾಜ್ಯಗಳಲ್ಲಿ ಹರಡಿದೆ. ಈ ಪ್ರಸ್ಥಭೂಮಿಯ ಕೆಲವು ಭಾಗಗಳು ಅನೇಕ ತೊರೆಕಣಿವೆಗಳಿಂದ ಬೇರ್ಪಟ್ಟಿವೆ; ಕೆಲವು ಕಡೆಗಳಲ್ಲಿ ಕಾಡು ಹರಡಿದೆ. ಆದರೆ ಇದರ ಅಧಿಕ ಭಾಗ ಮೈದಾನ ಅಥವಾ ಕ್ರಮೇಣ ಎತ್ತರವಾಗುತ್ತ ಹೋಗುವ ಪ್ರದೇಶ. ಭೂ ವ್ಯವಸಾಯ, ಹಾಲಿನ ಮತ್ತು ಅದಕ್ಕೆ ಸಂಬಂಧಿಸಿದ ಪದಾರ್ಥಗಳ ಉತ್ಪಾದನೆ ಮತ್ತು ಹಣ್ಣು–ತರಕಾರಿಗಳ ಬೆಳೆ ಇಲ್ಲಿ ವಿಶೇಷವಾಗಿವೆ. ಅತ್ಯಂತ ಎತ್ತರವಾಗಿರುವ ಈ ಪ್ರಸ್ಥಭೂಮಿಯ ದಕ್ಷಿಣಭಾಗ ಆಳವಾಗಿ ನಾನಾ ರೀತಿಯಲ್ಲಿ ಕೊರೆಯಲ್ಪಟ್ಟು, ರಾಜ್ಯದಲ್ಲೇ ಅತ್ಯಂತ ಒರಟು ಆಕೃತಿಯನ್ನು ಹೊಂದಿದೆ. ಇದೇ ಬಾಸ್ಟನ್ ಪರ್ವತ ಪ್ರದೇಶ.

ಅರ್ಕನ್‌ಸೋಸ್‌ನ ಪಶ್ಚಿಮದ ಮಧ್ಯಪ್ರದೇಶದಲ್ಲಿರುವ ಓಷಿಟೋ ಎಂಬ ಪರ್ವತ ಪ್ರದೇಶ ಕಣಿವೆಯ ಮಟ್ಟದಿಂದ 304–608 ಮೀ ಎತ್ತರಕ್ಕೆ ಸಮಾನಾಂತರವಾಗಿ ಹಬ್ಬಿರುವ ಬೆಟ್ಟಗಳ ಪ್ರದೇಶ. ಇತರ ಕಡೆಗಳಲ್ಲಿರುವಂತೆಯೇ ಈ ಪರ್ವತ ಪ್ರದೇಶವೂ ಅರಣ್ಯಮಯವಾಗಿದ್ದು ಇದರ ಅನೇಕ ಇಳಿಜಾರು ಪ್ರದೇಶ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಾಗಿದೆ.

ಇಳಿಜಾರು ಪ್ರದೇಶ 48,64ಕಿಮೀ. ಮೈಲಿಗಳವರೆಗೆ ವಿಸ್ತರಿಸುವ ಬಾಸ್ಟನ್ ಮತ್ತು ಓಷಿಟೋ ಪರ್ವತಗಳ ನಡುವೆ ಒಂದು ಮೊಗಸಾಲೆಯಂತಿರುವ ಸ್ಥಳ. ಓಷಿಟೋ ಪರ್ವತದ ಆಚೆ ಇರುವ ಬೇರೆ ಬೇರೆ ಪರ್ವತಗಳು ಇಳಿಜಾರು ಭೂಮಿಯಿಂದ 2000' ಎತ್ತರವಿದ್ದು ಬಹಳ ಒರಟಾಗಿವೆ. ಮೆಕ್ಕಲು ಮಣ್ಣಿನಿಂದ ನಿರ್ಮಿತವಾದ ಸಮ ಪ್ರದೇಶಕ್ಕೆ ಸೇರಿದಂತೆ, ಫಲವತ್ತಾದ ತಗ್ಗು ಪ್ರದೇಶಗಳು ಹೆಚ್ಚು ಕಡಿಮೆ ಎಲ್ಲ ಭಾಗವನ್ನು ಆವರಿಸಿ ಕೊಂಡಿದ್ದು ಪೂರ್ವ ಪ್ರದೇಶದಲ್ಲಿ ಪಶ್ಚಿಮದ ಗಡಿಯಿಂದ ರಾಜ್ಯದ ಮಧ್ಯಪ್ರದೇಶಕ್ಕೂ ಹರಡಿಕೊಂಡಿವೆ.

ತೀರಪ್ರದೇಶಗಳಲ್ಲಿ ಮರಳು ಮಿಶ್ರಿತ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುವ ಬೆಲೆಬಾಳುವ ಪೈನ್ ಮರದ ಕಾಡುಗಳು ಹೆಚ್ಚಾಗಿವೆ. ಈ ಪ್ರದೇಶದ ಅಧಿಕ ಭಾಗದಲ್ಲಿ ಹೆಚ್ಚಾಗಿ ಹತ್ತಿ, ಬತ್ತ, ಬಟಾಣಿ, ತರಕಾರಿಗಳು ಹಾಗೂ ಇತರ ಕೃಷಿ ಪದಾರ್ಥಗಳನ್ನು ಬೆಳೆಯುತ್ತಾರೆ. ಮಿಸಿಸಿಪಿ ನದಿಯ ನೀರಿನ ಪ್ರವಾಹದಿಂದಾಗಿರುವ ಸಮಭೂಮಿಯ ತಗ್ಗು ಪ್ರದೇಶ ಹೆಚ್ಚು ಫಲವತ್ತಾಗಿದೆ. ಕೆಲವು ಸಮಭೂಪ್ರದೇಶಗಳು ಪ್ರವಾಹಕ್ಕೊಳಗಾಗಿವೆ. ಈ ಪ್ರದೇಶದಲ್ಲಿ ಸಾಕಷ್ಟು ನೀರ್ಗಾಲುವೆಗಳಿಲ್ಲ. ನದಿಗಡ್ಡಲಾಗಿ ಕಟ್ಟಿರುವ ಅಣೆಕಟ್ಟುಗಳು ಈ ಪ್ರದೇಶವನ್ನು ರಕ್ಷಿಸುತ್ತವೆ. ಅಲ್ಲದೆ ನೀರ್ಗಾಲುವೆಗಳಿಗೆ ಚರಂಡಿ ಹಾಗೂ ಕಾಲುವೆಯ ನೀರನ್ನು ಹಾಯಿಸಿಕೊಳ್ಳಲಾಗುತ್ತದೆ. ಮಾಂಸ ಮತ್ತು ಹಾಲಿಗಾಗಿ ದನಗಳನ್ನು ಇಲ್ಲಿ ಸಾಕುತ್ತಾರೆ.

ಕಲ್ಲಿದ್ದಲು, ಪೆಟ್ರೋಲಿಯಂ, ಸ್ವಾಭಾವಿಕ ಅನಿಲ, ಬಾಕ್ಸೈಟು, ಕಟ್ಟಡದ ಕಲ್ಲುಗಳು ಇಲ್ಲಿನ ಮುಖ್ಯ ಖನಿಜ ಸಂಪತ್ತು. ಅಲ್ಯೂಮಿನಿಯಂ ಲೋಹವನ್ನು ತೆಗೆಯುವ ಬಾಕ್ಸೈಟ್‌ನ ಗಣಿಗಳು ಸಂಯುಕ್ತ ಸಂಸ್ಥಾನದಲ್ಲಿ ಮಾತ್ರ ಇವೆ. ಇಲ್ಲಿನ ಖನಿಜೋತ್ಪನ್ನದ ವಾರ್ಷಿಕ ಮೊತ್ತ 140 ದಶಲಕ್ಷ ಡಾಲರುಗಳು. ದೇಶದ ವಿವಿಧ ಸಂಪನ್ಮೂಲಗಳಿಂದ ಬಂದ ಲಾಭವನ್ನು ಅಲ್ಯೂಮಿನಿಯಂ ಉತ್ಪಾದನೆಗೆ ಹಾಕಲಾಗುತ್ತಿದೆ. ಇಲ್ಲಿನ ಶೇ.18 ರಷ್ಟು ಕಾರ್ಮಿಕರು ಕೃಷಿ ಕೆಲಸದಲ್ಲೂ ಕಾಡಿನ ರಕ್ಷಣೆಯ ಕಾರ್ಯದಲ್ಲೂ ಗಣಿ ಕೆಲಸದಲ್ಲೂ ಶೇ.20 ಜನ ಕೈಗಾರಿಕೆಗಳಲ್ಲೂ ನಿರತರು. (ಜಿ.ಇ.ಕೆ.)

**ಅರ್ಕಾವತಿ :** ಕಾವೇರಿಯ ಮುಖ್ಯ ಉಪನದಿಗಳಲ್ಲೊಂದು. ನಂದಿದುರ್ಗದಲ್ಲಿ ಹುಟ್ಟಿ ಬೆಂಗಳೂರು ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. 161 ಕಿಮೀ ಉದ್ದವಿದೆ. ಜಲಾನಯನ ಪ್ರದೇಶ 4,359 ಚ.ಕಿಮೀ. ನೆಲಮಂಗಲದ ದಕ್ಷಿಣದ ಕಡೆಯಿಂದ ಬರುವ ಕುಮುದ್ವತಿ, ಬೆಂಗಳೂರಿನ ಕಡೆಯಿಂದ ಬರುವ ವೃಷಭಾವತಿಗಳು ಇದರ ಉಪನದಿಗಳು. ಸಾವನದುರ್ಗ, ರಾಮಗಿರಿ, ಶಿವಗಿರಿ ಮೊದಲಾದ ಬೆಟ್ಟಗುಡ್ಡ ಪ್ರದೇಶ ಮತ್ತು ಸಾಧಾರಣ ಕಾಡುಪ್ರದೇಶಗಳ ಮೂಲಕ ದಕ್ಷಿಣಕ್ಕೆ ಹರಿಯುವುದರಿಂದ ನೀರಾವರಿಗೆ ಹೆಚ್ಚು ಪ್ರಯೋಜನಕಾರಿಯಾಗಿಲ್ಲ. ಆದರೂ ಮೇಲ್ದಣಿವೆಯಲ್ಲಿ ಹೆಸರುಘಟ್ಟ ಮೊದಲಾದ ದೊಡ್ಡ ಕೆರೆಗಳಿಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೊಡ್ಡಬಳ್ಳಾಪುರ, ಕಾಕೋಳು ಮುಂತಾದ ಕೆರೆಗಳಿಗೂ ನೀರನ್ನೊದಗಿಸುತ್ತದೆ. ಮುಂದುವರಿದು ನೆಲಮಂಗಲ, ಮಾಗಡಿ, ರಾಮನಗರ ಮತ್ತು ಕನಕಪುರ ತಾಲ್ಲೂಕುಗಳ ಮೂಲಕ ಹರಿದು ಕನಕಪುರದ ಹತ್ತಿರ ಕಾವೇರಿಯನ್ನು ಸಂಗಮದ ಬಳಿ ಸೇರುತ್ತದೆ. ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿರುವುದರಿಂದ ಬೇಸಗೆಯಲ್ಲಿ ಬಹುಮಟ್ಟಿಗೆ ಇದರ ಪಾತ್ರ ಒಣ ಮರಳಿನಿಂದ ತುಂಬಿರುತ್ತದೆ. ಆದರೂ ಸಂಪೂರ್ಣವಾಗಿ ಬತ್ತಿಹೋಗದೆ ನೀರು ಸಣ್ಣ ಪ್ರಮಾಣದಲ್ಲಿ ಹರಿಯುತ್ತಿರುತ್ತದೆ. ಮಳೆಗಾಲದಲ್ಲಿ ಅನೇಕ ಉಪನದಿಗಳ ನೀರು ಒದಗುವುದರಿಂದ ತುಂಬಿ ಹರಿಯುತ್ತದೆ. ಒಮ್ಮೊಮ್ಮೆ ಪ್ರವಾಹಗಳೂ ಕಾಣಿಸಿಕೊಳ್ಳುತ್ತವೆ. ಪ್ರವಾಹದ ಚಲನೆ 3500 ರಿಂದ 5000 ಕ್ಯೂಸೆಕ್ಸ್‌ವರೆಗಿರುವುದು. ನೆಲಮಂಗಲ, ಮಾಗಡಿ ಮತ್ತು ರಾಮನಗರಗಳಿಂದ ಬೆಂಗಳೂರಿಗೆ ಹೋಗುವ ಮಾರ್ಗಗಳಲ್ಲಿ ನದಿಗೆ ಅಡ್ಡಲಾಗಿ ದೊಡ್ಡ ಸೇತುವೆಗಳನ್ನು ನಿರ್ಮಿಸಿದ್ದಾರೆ. ನದಿಯ ನೀರನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲು ಯೋಜನಾರೂಪವಾದ ಪ್ರಯತ್ನ ನಡೆಯುತ್ತಿದೆ. (ಎ.ಕೆ.)

**ಅರ್ಕೋಣಂ :** ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯ ವಾಲಾಜಪೇಟೆ ತಾಲ್ಲೂಕಿನ ಒಂದು ವಾಣಿಜ್ಯ ಕೇಂದ್ರ. ವಿಸ್ತೀರ್ಣ 6.48 ಚ.ಕಿಮೀ. ಜನಸಂಖ್ಯೆ 77300 (2001). ತಮಿಳುನಾಡಿನಲ್ಲಿ ಮುಖ್ಯ ಮಾರ್ಗಕೇಂದ್ರವಾಗಿದೆ. ದಕ್ಷಿಣ ರೈಲ್ವೆಯ ವಾಯವ್ಯ ಮತ್ತು ನೈರುತ್ಯ ಶಾಖೆಗಳು ಅರ್ಕೋಣಂ ಜಂಕ್ಷನ್ನಿನಲ್ಲಿ ಸೇರುವುದರಿಂದ ತಮಿಳುನಾಡು ಮತ್ತು ಮೈಸೂರುಗಳಿಗೆ ಸಂಪರ್ಕವನ್ನು ಕಲ್ಪಿಸಲಾಗಿದೆ. (ಎ.ಆರ್.)

**ಅರ್ಚಕ, ಬಿ. ರಂಗಸ್ವಾಮಿ :** 1895–1991. ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಆದ್ಯ ವಿದ್ವಾಂಸರು. ಇವರ ಪೂರ್ಣ ಹೆಸರು ಬಿ. ರಂಗಸ್ವಾಮಿ ಭಟ್ಟ. ಕೃಷ್ಣರಾಜಪೇಟೆ ತಾಲ್ಲೂಕಿನ ಬಂಡಿಹೊಳೆ ಇವರ ಹುಟ್ಟೂರು. ತಂದೆ ನಾರಾಯಣ ಭಟ್ಟ, ತಾಯಿ ಶೇಷಮ್ಮ. ನಾಲ್ಕನೆಯ ತರಗತಿಯವರೆಗೆ ಬಂಡಿಹೊಳೆಯಲ್ಲಿ ವಿದ್ಯಾಭ್ಯಾಸಮಾಡಿ ಹೆಚ್ಚಿನ ವಿದ್ಯಾಭ್ಯಾಸಕ್ಕೂ ಸಂಸ್ಕೃತ ವಿದ್ಯಾಭ್ಯಾಸಕ್ಕೂ ಮೈಸೂರನ್ನು ಆಶ್ರಯಿಸಿದ ಇವರು ರಾಮಾನುಜ ಕೂಟ ಎಂಬ ಉಚಿತ ವಿದ್ಯಾರ್ಥಿನಿಲಯದಲ್ಲಿ ಹನ್ನೆರಡು ವರ್ಷ ವಾರಾನ್ನ ಉಂಡು, ನಾಲ್ಕು ವರ್ಷ ಸ್ವಯಂಪಾಕ – ಹೀಗೆ ಇಪ್ಪತ್ತು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದರು. ಆ ಅವಧಿಯಲ್ಲಿ ಯಜುರ್ವೇದದ ಪೂರ್ಣ ಅಧ್ಯಯನ, ಆಗಮದಲ್ಲಿ ವಿದ್ವತ್ತು ಸಾಧಿಸಿದರು. 1930ರಲ್ಲಿ ಇವರ ಸಂಸ್ಕೃತ ಆಗಮ ಗ್ರಂಥಶ್ರೀ ವೈಖಾನನ ಆಲಯಾರಾಧನಾ ಪದ್ಧತಿ: ಪ್ರಕಟವಾಯಿತು. ಇವರು ಬರೆದ ಸನಾತನ ಧರ್ಮ ಎಂಬ ಕೃತಿ ಇನ್ನೂ ಹಸ್ತಪ್ರತಿಯ ಹಂತದಲ್ಲೇ ಇದೆ. ಬಂಡಿಹೊಳೆಯ ದೊಡ್ಡಮ್ಮನ ಹಬ್ಬದ ಸಂದರ್ಭದಲ್ಲಿ ಕೋಲಾಟದ ಪದಗಳು, ರಂಗದ ಕುಣಿತದ ಹಾಡುಗಳು, ಸುಗ್ಗಿಯ ಕಾಲದಲ್ಲಿ ಊರಿಗೆ ಬಂದು ಮನೆಮನೆಯ ಮುಂದೆ ನಿಂತು ಹಾಡುತ್ತಿದ್ದ ದೊಂಬಿದಾಸರು, ತೊಗಲು ಗೊಂಬೆಯಾಟದವರು, ಊರಿ ನೊಳಗೆ ಸದಾ ಕೇಳಿಸುತ್ತಿದ್ದ ಬೀಸುವ ಪದಗಳು, ಕುಟ್ಟುವ ಪದಗಳು, ಸೋಬಾನೆ, ಪದಗಳು, ದೇವರ ಪದಗಳು ಮುಂತಾದುವೆಲ್ಲ ರಂಗ ಸ್ವಾಮಿಯವರಿಗೆ ಬಾಲ್ಯದಿಂದಲೇ ಪ್ರಭಾವ ಬೀರಿದ್ದುವು. ಜೊತೆಗೆ ಆಲೂರು ವೆಂಕಟರಾಯ, ಪ್ರೊಫೆಸರ್ ಹಿರಿಯಣ್ಣ, ವೆಂಕಟಕೃಷ್ಣಯ್ಯ(ತಾತಯ್ಯ), ಮುದವೀಡು ಕೃಷ್ಣರಾಯ ಮುಂತಾದ ವಿದ್ವಾಂಸರು ಮಾಡುತ್ತಿದ್ದ ಭಾಷಣಗಳು ಇವರ ಮೇಲೆ ಜನಪದ ಸಂಸ್ಕೃತಿಯ ಗಾಢ ಪ್ರಭಾವ ಬೀರಿದುವು. ಪರಿಣಾಮವಾಗಿ ಬಂಡಿಹೊಳೆಯಲ್ಲಿ ಅರ್ಚಕರು ಒಂದು ಆಶ್ರಮ ಸ್ಥಾಪಿಸಿ ಹಲವಾರು ವರ್ಷ ನಡೆಸಿದರು. ಸ್ವಯಂ ಉದ್ಯೋಗವನ್ನು ಉದ್ದೇಶವಾಗಿರಿಸಿಕೊಂಡು ಆ ಆಶ್ರಮದಲ್ಲಿ ಅರ್ಚಕರು ನೂಲುವುದು, ಬಟ್ಟೆ ಹೊಲಿಯುವುದು, ಚಾಪೆ ಹೆಣೆಯುವುದು, ಬೆತ್ತದ ಕೆಲಸ ಕಲಿಸಿಕೊಟ್ಟು ಹಳ್ಳಿಗರ ಸ್ವಾವಲಂಬನೆಯಲ್ಲಿ ಪ್ರಮುಖ ಸಾಧನೆ ಮಾಡಿದರು. ಜೊತೆಗೆ ರಾಮಾಯಣ, ಮಹಾಭಾರತಗಳ ನಿತ್ಯ ಪಾರಾಯಣದಿಂದ ಜನಪದರನ್ನು ಸನ್ಮಾರ್ಗದಲ್ಲಿ ನಡೆಯಲು ಪ್ರಚೋದಿಸಿದರು. ಇವರ ಜನಪರ ಕಾರ್ಯವನ್ನು ನೋಡಲು ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾಇಸ್ಮಾಯಿಲ್ ಎರಡು ಬಾರಿ ಈ ಆಶ್ರಮಕ್ಕೆ ಭೇಟಿ ನೀಡಿದ್ದರು. ಮೈಸೂರಿನಲ್ಲಿ ದ್ದಾಗ ಒಮ್ಮೆ ಓದಿದ್ದ 'ಪಾಮರರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂಬ ಲೇಖನವೂ ಪ್ರಭಾವ ಬೀರಿತು. ಪರಿಣಾಮವಾಗಿ ಅಂಥ ಸಾಹಿತ್ಯವನ್ನು ಸಂಗ್ರಹಿಸಬೇಕೆಂಬ ಆಸಕ್ತಿ ಮೂಡಿತು. ಹಲವಾರು ಅಡಚಣೆಗಳ ನಡುವೆಯೂ



ಸಂಗ್ರಹಕಾರ್ಯ ಕೈಗೊಂಡು 1933ರಲ್ಲಿ ಹುಟ್ಟಿದ ಹಳ್ಳಿ–ಹಳ್ಳಿಯ ಹಾಡು ಎಂಬ ಗ್ರಂಥವನ್ನು ಪ್ರಕಟಿಸಿದರು. ಈ ಕೃತಿ ಹುಟ್ಟಿದ ಹಳ್ಳಿ ಎಂಬ ಹೆಸರಿನಲ್ಲಿ ಪುನರ್ಮುದ್ರಣ ಗೊಂಡಿದೆ (1971). ಬಂಡಿಹೊಳೆಯನ್ನು ಕೇಂದ್ರವಾಗಿಟ್ಟು ಕೊಂಡು ಈ ಗ್ರಂಥವನ್ನು ರಚಿಸಿದ್ದರೂ ಸಮಗ್ರ ಬಯಲುಸೀಮೆಯ ಹಳ್ಳಿಗಳ ಜೀವನಾಡಿಯನ್ನು ಇದರಲ್ಲಿ ಕಾಣಬಹುದು. ಬಯಲುಸೀಮೆಯ ಗ್ರಾಮಾಂತರ ಸಂಸ್ಕೃತಿಯನ್ನು ಇಲ್ಲಿ ಕ್ರೋಡೀಕರಿಸಲಾಗಿದೆ. ಜನಪದ ಸಾಹಿತ್ಯದ ದೃಷ್ಟಿಯಿಂದಲೂ ವೈಜ್ಞಾನಿಕ ಸಂಗ್ರಹ ದೃಷ್ಟಿಯಿಂದಲೂ ಈ ಕೃತಿಗೆ ಅಗ್ರಸ್ಥಾನ ಅಭ್ಯವಾಗುತ್ತದೆ. ಹಾಡಿನ ಸಂಪ್ರದಾಯಗಳು, ಆ ಸಂಪ್ರದಾಯಗಳ ವಿವರಗಳು, ಹಾಡುಗಳು, ಹಾಡಿದವರ ವಿವರಗಳು ಇಲ್ಲಿವೆ. ಕೋಲಾಟ, ಮದುವೆ ಹಾಗೂ ದೇವರ ಪದಗಳು ಹೀಗೆ ಸಾಕಷ್ಟು ಹಾಡುಗಳ ವೈವಿಧ್ಯವಿದೆ. ಹಲವು ಪ್ರಸಿದ್ಧ ಲಾವಣಿಗಳು ಇಲ್ಲಿ ಮೊದಲ ಸಲ ಕಾಣಿಸಿಕೊಂಡಿವೆ. 500ಕ್ಕೂ ಹೆಚ್ಚು ಗಾದೆಗಳಿವೆ. ನೇರವಾದ ಸಂಭಾಷಣೆಗಳನ್ನು ಹಿಡಿದಿಡುವ ಮೂಲಕ ಜನಪದ ಭಾಷೆಯ ಸೊಗಸನ್ನು ಪರಿಚಯಿಸಲಾಗಿದೆ. ಮಕ್ಕಳ ಪದಗಳು ಹಾಗೂ ಮಕ್ಕಳ ಆಟಗಳ ಹಿನ್ನೆಲೆಯನ್ನುಳ್ಳ ಚರ್ಚೆಯಿದೆ. ಹಳ್ಳಿಯ ನ್ಯಾಯ ತೀರ್ಮಾನದ ವೈಖರಿ, ಅಲ್ಲಿನ ಮೇಳಗಳ ಸೊಗಸು, ಉತ್ಸವಗಳ, ಹಬ್ಬಗಳ ವೈಭವ, ವರ್ಷದ ಪ್ರತಿಯೊಂದು ತಿಂಗಳಿನಲ್ಲಿಯೂ ನಿಸರ್ಗದ ಬದಲಾವಣೆಯೊಡನೆ ಕಾಣಬರುವ ಬದುಕಿನ ರೀತಿನೀತಿಗಳು ಮುಂತಾದ ಹಳ್ಳಿಯ ಬದುಕಿನ ಸಮಸ್ತ ಮುಖಗಳನ್ನೂ ಏಕಸೂತ್ರದಲ್ಲಿ ಕೊಂಡೊಯ್ಯಲಾಗಿದೆ. ಕಲಾತ್ಮಕ ನಿರೂಪಣೆಯಿದೆ. ಕಲಾದೃಷ್ಟಿ ಹಾಗೂ ಶಾಸ್ತ್ರದೃಷ್ಟಿಗಳಿಂದ ಇದೊಂದು ಸಮಗ್ರ ಜಾನಪದ ದೃಷ್ಟಿಯುಳ್ಳ ಪ್ರಮುಖ ಗ್ರಂಥವೆನಿಸಿದೆ. ಇವರು 1991 ಸೆಪ್ಟೆಂಬರ್ 29ರಂದು ನಿಧನಹೊಂದಿದರು (ಕೆ.ಆರ್.)

**ಅರ್ಚನೆ :** ಪೂಜ್ಯವಾದ ಒಂದು ವಸ್ತುವಿಗೆ ವಿಧ್ಯುಕ್ತವಾಗಿ ನೀಡುವ ಗೌರವ. ಎಲ್ಲ ಮತಧರ್ಮಗಳಲ್ಲಿಯೂ ಕಂಡುಬರುವ ಅಂಶ. ಇದು ಮಾನಸಿಕವಾಗಿರಬಹುದು, ಕಾಯಕವಾಗಿರಬಹುದು. ಒಂದೊಂದು ಮತಧರ್ಮದಲ್ಲಿ ಒಂದೊಂದು ರೀತಿಯ ಅರ್ಚನಾವಿಧಿ ಇದೆ, ಪೂಜ್ಯಭಾವವನ್ನು ತೋರಿಸುವ ಅನೇಕ ಪ್ರಕಾರಗಳಿವೆ. ಈ ಪ್ರಕಾರಗಳು ವಿವಿಧವಾದರೂ ಇವೆಲ್ಲದರ ಹಿಂದೆ ಇರುವ ಮನೋಭಾವ ಒಂದೇ. ವರ್ಷಿಪ್, ಆರಾಧನೆ, ಪೂಜೆ ಇವೆಲ್ಲ ಸಮಾನಾರ್ಥಕ ಪದಗಳು.

ಮತಧರ್ಮಗಳಿಗೆ ಸಂಬಂಧಿಸಿದ ಆಚಾರ ಅನುಷ್ಠಾನಗಳಲ್ಲಿ ಪೂಜಾವಿಧಾನಗಳು ಪ್ರಮುಖ ಪಾತ್ರವಹಿಸಿವೆ. ಇವುಗಳಲ್ಲಿ ಕೆಲವು ಪುರೋಹಿತರ ಮೂಲಕ ನಡೆಸುವಂಥವು. ಯಜ್ಞಯಾಗಾದಿಗಳು, ವ್ರತೋಪವಾಸಗಳು, ಉತ್ಸವಗಳು, ವಿಗ್ರಹಾರಾಧನೆ ಇವೆಲ್ಲವೂ ಪೂಜೆಯ ಅಥವಾ ಅರ್ಚನೆಯ ಅಂಗಗಳು. ಪತ್ರಪುಷ್ಪಫಲಗಳ ನಿವೇದನೆಯೂ ಇದರ ಒಂದು ಅಂಗ. ತೀರ್ಥಪ್ರಸಾದ ವಿನಿಯೋಗ ಮತ್ತೊಂದು ಅಂಗ. ಗಂಟೆ ಬಾರಿಸುವುದು, ವೇದಘೋಷ, ವಾದ್ಯ ಸಂಗೀತ ಇವೂ ಅನೇಕ ಸಲ ಅರ್ಚನೆಯ ಅಂಗವಾಗುತ್ತವೆ. ಇವೆಲ್ಲದರ ಉದ್ದೇಶ ಭಕ್ತವೃಂದದ ಭಕ್ತಿಯನ್ನು ವೃದ್ಧಿ ಮಾಡುವುದಾಗಿದೆ, ಅವರ ಆಧ್ಯಾತ್ಮಿಕ ಜೀವನವನ್ನು ಪೂರ್ತಿಗೊಳಿಸುವುದಾಗಿದೆ.

ಮನೆ ಮನೆಗಳಲ್ಲಿನ ದೇವಮಂದಿರಗಳಲ್ಲಿ ಪೂಜೆ ಮಾಡುವುದು ಒಂದು ಬಗೆಯಾದರೆ ಸಾರ್ವಜನಿಕ ದೇವಾಲಯಗಳಲ್ಲಿ ಎಲ್ಲರೊಂದಾಗಿ ಪೂಜೆ ಮಾಡುವುದು ಮತ್ತೊಂದು ಬಗೆ. ಮಸೀದಿ, ಚರ್ಚು, ಮಂದಿರಗಳು, ವಿಹಾರಗಳು, ಯಾತ್ರಾಸ್ಥಳಗಳಲ್ಲಿನ ಪ್ರಸಿದ್ಧದೇವಾಲಯಗಳು ಅರ್ಚನೆ, ಆರಾಧನೆಗಳ ಸ್ಥಾನಗಳಾಗಿ ಬೆಳಗುತ್ತಿವೆ. ಪಕ್ಷೋತ್ಸವ, ಮಾಸೋತ್ಸವ, ವರ್ಷೋತ್ಸವಗಳೂ ನಡೆಯುತ್ತವೆ. ದೂರದಿಂದ ಯಾತ್ರಾರ್ಥಿಗಳು ಅಲ್ಲಿಗೆ ಬಂದು ಆರಾಧನೆಯಲ್ಲಿ ಭಾಗವಹಿಸುತ್ತಾರೆ, ಹರಿಕಥೆಗಳನ್ನು ಶ್ರವಣ ಮಾಡುತ್ತಾರೆ. ಪುಣ್ಯತೀರ್ಥಗಳಲ್ಲಿ ಮಿಂದು ಪೂತರಾದೆವೆಂದುಕೊಳ್ಳುತ್ತಾರೆ. ಹೀಗೆ ಮನೋರಂಗದಲ್ಲಿ ನೆಲೆಸಿರುವ ಪೂಜ್ಯ ಭಾವಕ್ಕೆ ಬಾಹ್ಯಾಚರಣೆಯ ರೂಪವನ್ನು ಕೊಡುವಂಥದು ಅರ್ಚನೆ. ಅಂತಿಮವಾಗಿ ಅರ್ಚನೆಯ ನೆಲೆ ಕೇವಲ ಮಾನಸಿಕವಾಗಬಹುದು.

ಆತ್ಮಾತ್ವಂ ಗಿರಿಜಾಮತಿಃ ಪರಿಜನಾಃ ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ
ಸಂಚಾರಃ ಪದಯೋಃ ಪ್ರದಕ್ಷಿಣ ವಿಧಿಃ ಸ್ತೋತ್ರಾಣಿ ಸರ್ವಾಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಂ

–ಎಂದು ಮೊದಲಾಗುವ ಪ್ರಸಿದ್ಧ ಸ್ತೋತ್ರ ಮಾನಸಪೂಜೆಯ ಚಿತ್ರವನ್ನು ಬಹು ಚೆನ್ನಾಗಿ ಕೊಡುತ್ತದೆ. ಹೃದಯಕಮಲದಲ್ಲಿ ನೆಲೆಸಿರುವ ಪರಮಾತ್ಮನನ್ನು ಮಾನಸಿಕವಾಗಿ ಧ್ಯಾನಿಸಿ ಪೂಜಿಸುವ ವಿಧಾನವನ್ನು ಶಂಕರಾಚಾರ್ಯರೇ ಆದಿಯಾಗಿ ಎಲ್ಲ ವಿಭೂತಿ ಪುರುಷರು ಅನುಸರಿಸಿದ್ದಾರೆ, ಬೋಧಿಸಿದ್ದಾರೆ. (ಎಂ.ವೈ.)

**ಅರ್ಚಶಿಷ್ಟ ಘೋಷಣೆ :** ಯೇಸು ಬೋಧಿಸಿದ ಕ್ರೈಸ್ತಧರ್ಮದಂತೆ ನಡೆದು, ಆಧ್ಯಾತ್ಮಿಕ ಜೀವನದಲ್ಲಿ ಹೆಚ್ಚಿನ ಸಾಧುತ್ವಗಳಿಸಿ, ದೈವಾಧೀನನಾದ ತಿರುಸಭಾಸದಸ್ಯ, ತನ್ನ ಅಂತ್ಯ ಗುರಿಯಾದ ಸ್ವರ್ಗೀಯ ಆನಂದವನ್ನು ಅನುಭವಿಸುವನೆಂಬ ದೃಢವಾಕ್ಯವನ್ನು ಪೋಪ್ ಜಗದ್ಗುರು ಬಹಿರಂಗವಾಗಿಯೂ ಅಧಿಕಾರದಿಂದಲೂ ಸಾರುವ ವಿಶಿಷ್ಟ ಕಾರ್ಯ (ಕ್ಯಾನೊನೈಸೇಷನ್). ಅರ್ಚಶಿಷ್ಟನೆಂಬ ಗೌರವ ದೊರಕಬೇಕಾದರೆ ಅಂಥ ವ್ಯಕ್ತಿಯಿಂದ ಕೊನೆಯಪಕ್ಷ ಎರಡಾದರೂ ಲೋಕೋತ್ತರ ಪವಾಡ ಕೃತ್ಯಗಳು ನಡೆದು ಸಾಧಾರಣವಾಗಿ ಅವು ರುಜುವಾತಾಗಬೇಕು. ಈ ಗೌರವಕ್ಕೆ ಭಾಜನನಾದ ಕಾರ್ಯದ ಅನಂತರ ಆ ವ್ಯಕ್ತಿ ತಿರುಸಭೆಯಲ್ಲಿ ಅರ್ಚಶಿಷ್ಟ ಅಥವಾ ಸಂತ ಎಂದು ಪರಿಗಣಿಸಲ್ಪಟ್ಟು ವಿಶೇಷ ಗೌರವಕ್ಕೆ ಪಾತ್ರನಾಗುತ್ತಾನೆ. (ಡಿ.ಎಸ್.ಬಿ.)

**ಅರ್ಚಾವತಾರ :** ಪಾಂಚರಾತ್ರಾಗಮಗಳಂತೆ ಆರಾಧಕನಾದವ ಪೂಜೆ ಮಾಡುವ ವಿಗ್ರಹ. ಅವನ ದೃಷ್ಟಿಯಲ್ಲಿ ಪೂಜೆಗೆ ಅರ್ಹವಾದ ವಿಗ್ರಹವೂ ದೇವರ ಅವತಾರವೇ. ಪಾಂಚರಾತ್ರಾಗಮಗಳಿಗೆ ವಿಶಿಷ್ಟವಾದ ಜ್ಞಾನವನ್ನು ವ್ಯೂಹಸಿದ್ಧಾಂತವೆಂದು ಕರೆದಿದೆ. ಪರಮಾತ್ಮನ ಅತೀಂದ್ರಿಯವೂ ಮಾತು ಮನಸ್ಸುಗಳಿಗೆ ಅಗೋಚರವೂ ಆದ ಪರಸ್ವರೂಪ ಅತಿ ಸೂಕ್ಷ್ಮವಾದದ್ದು, ಅಚಿಂತ್ಯವೂ ಆದದ್ದು. ಇಂಥ ಪರಮಾತ್ಮ ಭಕ್ತನಿಗೆ ಅತಿ ಸಮೀಪನೂ ಸುಲಭನೂ ಇಂದ್ರಿಯಗೋಚರನೂ ಆಗಬೇಕಾದರೆ ಅರ್ಚಾವತಾರದಿಂದ ಮಾತ್ರ ಸಾಧ್ಯವೆಂದು ಆಗಮಗಳು ಹೇಳುತ್ತವೆ. ವಿಗ್ರಹ (ಅರ್ಚೆ) ಮರ, ಲೋಹ ಅಥವಾ ಶಿಲೆಯವಾಗಿರಬಹುದು. ಅದು ಪೂಜೆಗೆ ಅರ್ಹವಾಗಬೇಕಾದರೆ ಮಂತ್ರಪೂತವಾದುದಾಗಿರಬೇಕು. ಶಿಷ್ಟಪರಿಗ್ರಹ ಶಕ್ತಿಯನ್ನು ಹೊಂದಿರಬೇಕು. ಅರ್ಚೆಗೆ ಜೀವಕೊಡತಕ್ಕದ್ದು ಪ್ರಾಣಪ್ರತಿಷ್ಠೆ ಎಂಬ ಮಂತ್ರವತ್ತಾದ ಶಾಸ್ತ್ರವಿಧಿ. ಇದು ಎಲ್ಲ ದೇವಸ್ಥಾನಗಳಲ್ಲಿ ವಿಗ್ರಹ ಪ್ರತಿಷ್ಠಾಪನಾ ಸಮಯದಲ್ಲಿ ನಡೆಯುವ ವಿಧಿಯಾಗಿದೆ. (ಎಂ.ವೈ.)

**ಅರ್ಜುನ :** 1. ಧರ್ಮವ್ಯಾಧನ ಮಗ. 2. ಚಂದ್ರವಂಶದ ಕೃತವೀರ್ಯರಾಜನ ಮಗ ಕಾರ್ತವೀರ್ಯನಿಗೂ ಈ ಹೆಸರು ಸಲ್ಲುತ್ತದೆ. ಇವನಿಗೆ ಕಾರ್ತವೀರ್ಯಾರ್ಜುನ ಎಂಬ ಹೆಸರು ರೂಢಿಯಲ್ಲಿದೆ (ಕಾರ್ತವೀರ್ಯ ಎಂಬ ಹೆಸರಿನ ಜೈನಚಕ್ರವರ್ತಿಯೂ ಇದ್ದ ಎಂದು ತಿಳಿದುಬರುತ್ತದೆ). 3. ಪಂಚಪಾಂಡವರಲ್ಲಿ ಮಧ್ಯದವ. ಪಾಂಡುರಾಜನ ಮೊದಲ ಹೆಂಡತಿಯಾದ ಕುಂತಿಯಲ್ಲಿ ಇಂದ್ರನ ವರಪ್ರಸಾದದಿಂದ ಹುಟ್ಟಿದ. ಗಂಗಾನದಿಯಲ್ಲಿ ಸ್ನಾನಕ್ಕಿಳಿದ ದ್ರೋಣಾಚಾರ್ಯರ ಕಾಲನ್ನು ಹಿಡಿದುಕೊಂಡ ಮೊಸಳೆಯನ್ನು ಕೊಂದ. ದ್ರೋಣಾಚಾರ್ಯರ ಇಷ್ಟದಂತೆ ದ್ರುಪದನನ್ನು ಹಿಂಗಟ್ಟು ಬಿಗಿದುತಂದು ಗುರುದಕ್ಷಿಣೆಯಾಗಿ ಅರ್ಪಿಸಿದ. ಅರ್ಜುನ, ನರ, ಫಲ್ಗುಣ, ಪಾರ್ಥ, ಕಿರೀಟಿ, ಶ್ವೇತವಾಹನ, ಭೀಭತ್ಸು, ವಿಜಯ, ಕೃಷ್ಣ, ಸವ್ಯಸಾಚಿ, ಧನಂಜಯ–ಎಂಬ ಹನ್ನೊಂದು ಹೆಸರುಗಳು ಅರ್ಜುನನಿಗಿವೆ. ದ್ರೌಪದಿಸ್ವಯಂವರಕ್ಕಾಗಿ ಹೋಗುತ್ತಿದ್ದಾಗ ಗಂಗಾತೀರದಲ್ಲಿ ರಾತ್ರಿಯವೇಳೆ ಅಡ್ಡಗಟ್ಟಿದ ಗಂಧರ್ವ ಅಂಗಾರಪರ್ಣನನ್ನು ಸೋಲಿಸಿ ಅವನಿಂದ ಚಾಕ್ಷುಷೀ ವಿದ್ಯೆಯನ್ನು ಗಳಿಸಿ ಅವನ ಸೂಚನೆಯಂತೆ ತಮ್ಮ ಪುರೋಹಿತನನ್ನಾಗಿ ಧೌಮ್ಯಾಚಾರ್ಯರನ್ನು ಒಪ್ಪಿಕೊಂಡ. ಬ್ರಾಹ್ಮಣವೇಷದಲ್ಲಿದ್ದು ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ವರಿಸಿದ. ಇದೇ ಸಂದರ್ಭದಲ್ಲಿ ಯುದ್ಧಕ್ಕೆ ಬಂದ ಕರ್ಣನನ್ನು ಸೋಲಿಸಿದ. ಹಸ್ತಿನಾವತಿಯಲ್ಲಿದ್ದಾಗ ಅನಿವಾರ್ಯವಾಗಿ ಆಯುಧಶಾಲೆಗೆ ಹೋಗಬೇಕಾಗಿ ಬಂದು ಅಲ್ಲಿಗೆ ಹೋಗಿ ಧರ್ಮರಾಯ ದ್ರೌಪದಿಯರು ಏಕಾಂತದಲ್ಲಿದ್ದುದನ್ನು ಕಂಡು ಪಾಪಪರಿಹಾರಕ್ಕಾಗಿ ತೀರ್ಥಯಾತ್ರೆ ಕೈಗೊಂಡ. ನಾರದನಿಂದ ತೀರ್ಥ ಮಾಹಾತ್ಮ್ಯೆಗಳನ್ನು ತಿಳಿದುಕೊಂಡ. ನಾರೀ ತೀರ್ಥದಲ್ಲಿ ಮೀಯುತ್ತಿದ್ದಾಗ ಹಿಡಿದುಕೊಂಡ ಒಂದು ಮೊಸಳೆಯನ್ನು ಹೊರಗೆಳೆಯಲಾಗಿ ಶಾಪವಿಮೋಚನೆ ಹೊಂದಿದ ಅಪ್ಸರೆ ನಿಜರೂಪ ತಳೆದಳು. ಹಾಗೆಯೆ ನೆರೆಹೊರೆಯ ತೀರ್ಥಗಳಲ್ಲಿ ಶಾಪಗ್ರಸ್ತರಾಗಿದ್ದ ಇತರ ಅಪ್ಸರೆಯರನ್ನೂ ವಿಮೋಚನೆಗೊಳಿಸಿದ. ಕೃಷ್ಣನ ಸೂಚನೆಯಂತೆ ಯತಿವೇಷವನ್ನು ಧರಿಸಿ ಸುಭದ್ರೆಯನ್ನು ವರಿಸಿದ. ಕೃಷ್ಣಾರ್ಜುನರು ಯಮುನಾ ನದಿಯಲ್ಲಿ ಜಲಕ್ರೀಡೆಯಾಡುತ್ತಿದ್ದಾಗ ಬ್ರಾಹ್ಮಣ ರೂಪದಲ್ಲಿ ಬಂದ ಅಗ್ನಿ, ಶ್ವೇತಕಿ ರಾಜನ ಯಜ್ಞದಲ್ಲಿ ಅಜೀರ್ಣವುಂಟಾಗಿದೆಯೆಂದೂ ತಡೆಯಲು ಬರುವ ಇಂದ್ರನ ಸೇವಕರನ್ನು ಅಡ್ಡಗಟ್ಟಿ ಖಾಂಡವ ವನವನ್ನು ಭಕ್ಷಿಸಲು ಸಹಾಯ ಮಾಡಬೇಕೆಂದೂ ಕೇಳಿಕೊಂಡಾಗ ಒಪ್ಪಿಕೊಂಡ ಅರ್ಜುನ ತುಷ್ಟನಾದ ಅಗ್ನಿಯಿಂದ ದಿವ್ಯಧನುಸ್ಸಾದ ಗಾಂಡೀವ, ಅಕ್ಷಯ ತೂಣೀರಗಳು, ಬಿಳಿಯ ಕುದುರೆಗಳನ್ನು ಹೂಡಿದ ದಿವ್ಯರಥ–ಇವುಗಳನ್ನು ಪಡೆದ. ಯುದ್ಧಕ್ಕೆ ಬಂದ ಇಂದ್ರನನ್ನು ಸೋಲಿಸಿ ಮಾಯಾಸುರನಿಗೆ ಅಭಯ ಪ್ರದಾನ ಮಾಡಿದ. ಮಾಯಾಸುರನಿಂದ ದೇವದತ್ತ ಎಂಬ ಶಂಖವನ್ನು ಗಳಿಸಿದ. ರಾಜಸೂಯಯಾಗಕ್ಕೆ ಮುಂಚೆ ಜೈತ್ರಯಾತ್ರೆಗೆಂದು ಹೊರಟು ಅಂತಗಿರಿ, ಉಲೂಕಪುರ, ಮೋದಾಪುರ, ಉರಗಾಪುರ, ಕಾಂಭೋಜ, ಋಷಿಕ ಮುಂತಾದ ದೇಶಗಳನ್ನೂ ಕಿಂಪುರುಷ, ಇಲಾವೃತ, ಕೇತುಮಾಲ ಮುಂತಾದ ಖಂಡಗಳನ್ನೂ ಗೆದ್ದ. ಪೂರು ಎಂಬುವನು ಸಾರಥಿ. ಇಂದ್ರಕೀಲಪರ್ವತದಲ್ಲಿ ತಪಸ್ಸು ಮಾಡಿ ಕಿರಾತವೇಷಿಯಾಗಿ ಬಂದ ಶಿವನೊಂದಿಗೆ ಹೋರಾಡಿ ಪಾಶುಪತಾಸ್ತ್ರವನ್ನು ಗಳಿಸಿದ. ಚಿತ್ರಸೇನೆ ಎಂಬ ಗಂಧರ್ವನಿಂದ ಗಾಂಧರ್ವವೇದವನ್ನು ಅಭ್ಯಾಸ ಮಾಡಿದ. ನಿವಾತಕವಚರನ್ನೂ ಪೌಲೋಮ ಕಾಲಕೇಯರೆಂಬ ದೈತ್ಯರನ್ನೂ ಸಂಹರಿಸಿದ. ಸಂತುಷ್ಟನಾದ ಇಂದ್ರ ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿಕೊಂಡು ಕವಚ ಕಿರೀಟ ಇತ್ಯಾದಿಗಳನ್ನು ಕೊಟ್ಟು ಗೌರವಿಸಿದ. ನಪುಂಸಕನಾಗುವಂತೆ ಊರ್ವಶಿ ಶಾಪ ಕೊಟ್ಟಿದ್ದರಿಂದ ಅಜ್ಞಾತವಾಸದ ಕಾಲದಲ್ಲಿ ಅನುಕೂಲವೇ ಆಯಿತು. ಆಗ ಇವನ ಹೆಸರು ಬೃಹನ್ನಳೆ. ಅಜ್ಞಾತವಾಸಕ್ಕಾಗಿ ವಿರಾಟ ನಗರಕ್ಕೆ ನಡೆದು ಬರುವಾಗ ಆಯಾಸಗೊಂಡ ದ್ರೌಪದಿಯನ್ನು ಹೆಗಲಮೇಲೆ ಹೊತ್ತು ತಂದ. ಗೋಹರಣ ಕಾಲದಲ್ಲಿ ಕರ್ಣ, ದ್ರೋಣ, ಅಶ್ವತ್ಥಾಮ, ದುಶ್ಯಾಸನ, ದುರ್ಯೋಧನ ಮುಂತಾದವರು ಇವನ ಸಮ್ಮೋಹನಾಸ್ತ್ರದಿಂದ ಪರಾಜಯ ಹೊಂದಿದರು. ಮಹಾಭಾರತದ ಯುದ್ಧದ ಕಾಲದಲ್ಲಿ ಕೃಷ್ಣ ಇವನ ಸಾರಥಿ. ಕೃಷ್ಣನಿಂದ ಸಂಧಿ, ವಿಗ್ರಹಗಳ ಉಪದೇಶ ಪಡೆದ. ದ್ರೌಪದಿ, ಸುಭದ್ರೆ, ಉಲೂಪಿ, ಚಿತ್ರಾಂಗದೆಯರಲ್ಲಿ ಕ್ರಮವಾಗಿ ಶ್ರುತಕೀರ್ತಿ, ಅಭಿಮನ್ಯು, ಇರಾವಂತ, ಬಭ್ರುವಾಹನರೆಂಬ ಮಕ್ಕಳನ್ನು ಪಡೆದ. ಭೀಷ್ಮನ ಶರಮಂಚಕ್ಕೊಂದು ಬಾಣದ ತಲೆದಿಂಬನ್ನೊದಗಿಸಿದ. ವರುಣಾಸ್ತ್ರವನ್ನು ಪ್ರಯೋಗಿಸಿ ಭೀಷ್ಮನ ದಾಹವನ್ನು ಹೋಗಲಾಡಿಸಿದ. ಜಯಗಳಿಕೆಗಾಗಿ ಕೃಷ್ಣನ ಸೂಚನೆಯಂತೆ ರಾತ್ರಿಯಲ್ಲಿ ಪರಮೇಶ್ವರನನ್ನು ಪೂಜಿಸಿದ. ಕರ್ಣ ಇನ್ನೂ ಸಾಯಲಿಲ್ಲವೆಂಬ ಕೋಪದಿಂದ ನಿಂದಿಸಿ ಗಾಂಡೀವವನ್ನು ಕೃಷ್ಣನಿಗೆ ಕೊಡುವಂತೆ ಧರ್ಮರಾಯ ಹೇಳಿದಾಗ ಕೋಪಗೊಂಡ ಅರ್ಜುನ ಧರ್ಮರಾಯನನ್ನು ಕೊಲ್ಲುವ ಪ್ರಯತ್ನ ಮಾಡಿದ. ಅನಂತರ ಕರ್ಣನ ಮಗ ವೃಷಸೇನನನ್ನು ಕೊಂದ. ಕರ್ಣಬಿಟ್ಟ ಬಾಣ ಅವನ ಕಿರೀಟವನ್ನು ತಗುಲಲು ಕೃಷ್ಣನ ತುಳಿತದಿಂದ ರಥ ಕುಸಿದುದೇ ಕಾರಣವಾಯಿತು. ಅನಂತರ ಕರ್ಣನನ್ನು ವಧಿಸಿದ. ಅಶ್ವಮೇಧಯಾಗದ ಕುದುರೆಯನ್ನು ಸಂರಕ್ಷಿಸಿ ದಿಗ್ವಿಜಯಕ್ಕೆ ಕಾರಣನಾದ. ಬಭ್ರುವಾಹನನಿಂದ ಇವನ ವಧೆಯಾದಾಗ ಉಲೂಪಿ ಸಂಜೀವಕ ರತ್ನದಿಂದ ಬದುಕಿಸಿದಳು. ಜರಾಸಂಧನ ಮೊಮ್ಮಗನಾದ ಮೇಘಸಂಧಿ ಇವನಿಂದ ಸೋತ. ಇವನ ದುರ್ಲಕ್ಷಣಗಳನ್ನು ಕೃಷ್ಣ ಪಟ್ಟಿಮಾಡಿದ್ದಾನೆ. ಕೃಷ್ಣ ನಿರ್ವಾಣ ಹೊಂದಿದ ಮೇಲೆ ವಸುದೇವಾದಿಗಳನ್ನು ಸಂತೈಸಲು ದ್ವಾರಕೆಗೆ ಬಂದ. ಕೃಷ್ಣನ ಹದಿನಾರು ಸಾವಿರ ಸ್ತ್ರೀಯರನ್ನು ಹಸ್ತಿನಾವತಿಗೆ ಕರೆತರುವಾಗ ಮಾರ್ಗ ಮಧ್ಯದಲ್ಲಿ ಮ್ಲೇಚ್ಛರೊಂದಿಗೆ ಹೋರಾಡಿ ಸೋತುಹೋದ.

ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧನಾದ ಪಂಪನ ವಿಕ್ರಮಾರ್ಜುನ ವಿಜಯವೆಂಬ ಸಂಗ್ರಹಭಾರತಕ್ಕೆ ಅರ್ಜುನನೇ ಕಥಾನಾಯಕ. (ಆರ್.)

ಅರ್ಜುನನ ಧನುರ್ವೇದವಿದ್ಯಾಗುರು ದ್ರೋಣಾಚಾರ್ಯರು. ಈತ ಆಚಾರ್ಯರ ಅತ್ಯಂತ ಪ್ರೀತಿಯ ಶಿಷ್ಯ. ಗುರುಭಕ್ತಿ ಮತ್ತು ಸತತ ಪ್ರಯತ್ನದಿಂದ ವಿದ್ಯಾಭ್ಯಾಸ ಮಾಡಿ ರಥದಲ್ಲಿ, ಆನೆ ಕುದುರೆಗಳ ಮೇಲೆ ಕುಳಿತು, ನೆಲದ ಮೇಲೆ ನಿಂತು, ಬಿಲ್ಲು ಗದೆ ಖಡ್ಗ ತೋಮರ ಮುಂತಾದ ಶಸ್ತ್ರಾಸ್ತ್ರಗಳನ್ನು ಹಿಡಿದು ಕೂಟ ಯುದ್ಧ ನಡೆಸಬಲ್ಲ ಶಕ್ತಿ ಅವನಿಗಿತ್ತು. ಶಬ್ದ ಕೇಳಿ ಲಕ್ಷ್ಯವನ್ನು ಭೇದಿಸುವ ಮತ್ತು ಬಲಗೈಯಂತೆ ಎಡಗೈಯಿಂದಲೂ ಬಾಣಪ್ರಯೋಗ ಮಾಡುವ ಜಾಣ್ಮೆ ಅವನದು. ಅಂದು ಏಕಲವ್ಯನನ್ನು ಬಿಟ್ಟರೆ ಚಾಪವಿದ್ಯೆಯಲ್ಲಿ ಸರಿಸಮಾನರು ಯಾರೂ ಇರಲಿಲ್ಲ. ಒಮ್ಮೆ ಶಿಷ್ಯರ ವಿದ್ಯಾಪ್ರಗತಿಯನ್ನು ಪರೀಕ್ಷಿಸಲು ದ್ರೋಣಾಚಾರ್ಯ ಕೃತಕಪಕ್ಷಿಯನ್ನು ಮರದ ತುದಿಯಲ್ಲಿರಿಸಿ ಬಾಣಪ್ರಯೋಗ ಮಾಡಿ ಅದರ ತಲೆಯನ್ನು ಬೀಳಿಸಬೇಕೆಂದು ಹೇಳಿದರು. ಬಾಣತೊಟ್ಟ ಶಿಷ್ಯರೆಲ್ಲ ಗುರಿಯೊಂದಿಗೆ ತಮಗೆ ಲಕ್ಷ್ಯವಲ್ಲದ ಮರ, ಗುರು ಮತ್ತು ನೆರೆದ ಮಂದಿಯೆಲ್ಲ ಕಾಣುತ್ತವೆ ಎಂದು ಹೇಳಿದರು. ಅರ್ಜುನನು ಮಾತ್ರ ಹಕ್ಕಿಯ ತಲೆಯಲ್ಲದೆ ತನಗೇನೂ ಕಾಣದೆಂದು ಹೇಳಿ ಬಾಣ ಹೊಡೆದು ಹಕ್ಕಿಯ ತಲೆಯನ್ನು ಹಾರಿಸಿದ. ಇಲ್ಲಿ ಆತನ ಚಿತ್ತದ ಏಕಾಗ್ರತೆ ಸ್ಪಷ್ಟವಾಗುತ್ತದೆ. ದ್ರೋಣಾಚಾರ್ಯ ನೆರೆದ ಸಭೆಗೆ ಶಿಷ್ಯರ ವಿದ್ಯಾ ಪ್ರದರ್ಶನವನ್ನು ಮಾಡುವ ಸಮಯದಲ್ಲಿ ಅರ್ಜುನ ಗರಗರನೆ ತಿರುಗುವ ಲೋಹದ ಹಂದಿಯ ಬಾಯಲ್ಲಿ ಐದು ಬಾಣಗಳನ್ನು ಒಂದೇ ಬಾಣದಂತೆ ಹೊಗಿಸಿದ. ಆಗ್ನೇಯಾಸ್ತ್ರದಿಂದ ಅಗ್ನಿ, ವಾರುಣಾಸ್ತ್ರದಿಂದ ನೀರು, ಪರ್ಜನ್ಯಾಸ್ತ್ರದಿಂದ ಮೇಘಗಳನ್ನೆಬ್ಬಿಸುವ, ಅಂತರ್ಧಾನಾಸ್ತ್ರದಿಂದ ಅಡಗುವ ವಿವಿಧ ಮಾಯಾಸಾಮರ್ಥ್ಯವೂ ಅರ್ಜುನನಲ್ಲಿತ್ತು.

ದ್ರೌಪದಿಯ ಸ್ವಯಂವರದ ಸಮಯದಲ್ಲಿ ಅರ್ಜುನನು ಕರ್ಣ ಶಲ್ಯ ಮುಂತಾದ ಮಹಾವೀರರಿಂದಲೂ ಬಗ್ಗಿಸಲಾಗದ ಬಿಲ್ಲಿಗೆ ಒಮ್ಮೆಲೆ ಬಾಣಹೂಡಿ ಆಕಾಶಯಂತ್ರದ ಹಿಂದಿದ್ದ ಲಕ್ಷ್ಯವನ್ನು ಲೀಲಾಜಾಲವಾಗಿ ಭೇದಿಸಿದ. ಆಗಿನ ಕಾಲದಲ್ಲಿ ಐಂದ್ರ, ಪಾಶುಪತ, ಬ್ರಾಹ್ಮ, ಆಗ್ನೇಯ, ವಾರುಣ, ವಾಯವ್ಯ ಮುಂತಾದ ಸಮಸ್ತ ದಿವ್ಯಾಸ್ತ್ರ ವಿದ್ಯೆಯಲ್ಲಿ ಕೃಷ್ಣನನ್ನು ಬಿಟ್ಟರೆ ಅರ್ಜುನನೊಬ್ಬನೆ ಬಲ್ಲಿದನಾಗಿದ್ದ. (ಎಸ್.ಎಸ್.ಎಂ.)

**ಅರ್ಜುನ ಪ್ರಶಸ್ತಿ :** ವಿವಿಧ ಆಟಗಳಲ್ಲಿ ವಿಶಿಷ್ಟ ಕೀರ್ತಿಗಳಿಸಿ 'ವರ್ಷದ ಆಟಗಾರ' ರೆನಿಸಿಕೊಳ್ಳಬಲ್ಲವರಿಗೆ ಸಲ್ಲುವ ಪ್ರಶಸ್ತಿ. ಭಾರತದಲ್ಲಿ 1961ರಿಂದ ನಡೆದುಬರುತ್ತಿದೆ. 1967ರಲ್ಲಿ ಅಂಗಸಾಧನೆ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಕ್ರಿಕೆಟ್, ಫುಟ್‌ಬಾಲ್, ಗಾಲ್ಫ್, ಹಾಕಿ, ಲಾನ್ ಟೆನಿಸ್, ಟೇಬಲ್ ಟೆನಿಸ್, ಈಜುವುದು, ಭಾರ ಎತ್ತುವುದು, ಕುಸ್ತಿ–ಈ ಭಾಗಗಳಲ್ಲಿ ಪ್ರಶಸ್ತಿ ಕೊಡಲಾಗಿದೆ. ಧನುರ್ವಿದ್ಯಾಪಾರಂಗತನಾದ ಅರ್ಜುನನ ಹೆಸರಿನಲ್ಲಿ ನಿಷ್ಣಾತರಾದ ಈಗಿನ ಆಟಗಾರರನ್ನು ಗೌರವಿಸಬೇಕೆಂಬುದೇ ರಾಷ್ಟ್ರಮಟ್ಟದ ಈ ಪಾರಿತೋಷಕದ ಉದ್ದೇಶ.

**ಅರ್ಜುನ ಪ್ರಶಸ್ತಿಗಳು:**

**ಬಿಲ್ಲುಗಾರಿಕೆ (ಆರ್ಚರಿ)**

| ಕ್ರ. ಸಂ | ವರ್ಷ | ಹೆಸರು |
|---|---|---|
| 1. | 1981 | ಕೃಷ್ಣದಾಸ್ |
| 2. | 1989 | ಶ್ಯಾಮ್‌ಲಾಲ್ |
| 3. | 1991 | ಲಿಂಬಾರಾಮ್ |
| 4. | 1992 | ಸಂಜೀವ್ ಕುಮಾರ್ ಸಿಂಗ್ |
| 5. | 2005 | ತರುಣ್‌ದೀಪ್ ರಾಯ್ |
| 6. | 2005 | ದೋಲ ಬ್ಯಾನರ್ಜಿ |
| 7. | 2006 | ಜಯಂತ್ ತಾಲ್ಲೂಕ್‌ದಾರ್ |
| 8. | 2009 | ಮಂಗಲ್‌ಸಿಂಗ್ ಚಂಪಿಯ |

**ಅಥ್ಲೆಟಿಕ್ಸ್**

| | | |
|---|---|---|
| 9. | 1961 | ಗುರುಬಚನ್‌ಸಿಂಗ್ ರಾಂಧವ |
| 10. | 1962 | ತರಲೋಕ್‌ಸಿಂಗ್ |
| 11. | 1963 | ಸ್ಟೆಫಿಡಿಸೌಜ |
| 12. | 1964 | ಮಖನ್‌ಸಿಂಗ್ |
| 13. | 1965 | ಕೆನ್ನೆತ್‌ಪೊವೆಲ್ |
| 14. | 1966 | ಅಜ್ಮೇರ್ ಸಿಂಗ್ |
| 15. | 1966 | ಬಿ.ಎಸ್. ಬರುವ |
| 16. | 1967 | ಪ್ರವೀಣ್‌ಕುಮಾರ್ |
| 17. | 1967 | ಭೀಮ್‌ಸಿಂಗ್ |
| 18. | 1968 | ಜೋಗಿಂದರ್ ಸಿಂಗ್ |
| 19. | 1968 | ಮಂಜಿತ್‌ವಾಲಿಯ |
| 20. | 1969 | ಹರನೇಕ್ ಸಿಂಗ್ |
| 21. | 1970 | ಮೊಹಿಂದರ್ ಸಿಂಗ್ ಗಿಲ್ |
| 22. | 1971 | ಎಡ್ವರ್ಡ್ ಸಿಕ್ವೇರ |
| 23. | 1972 | ವಿಜಯ್‌ಸಿಂಗ್ ಚೌಹಾನ್ |
| 24. | 1973 | ಶ್ರೀರಾಮಸಿಂಗ್ |
| 25. | 1974 | ಟಿ.ಸಿ. ಯೊಹಾನನ್ |
| 26. | 1974 | ಶಿವನಾಥ್ ಸಿಂಗ್ |
| 27. | 1975 | ಹರಿಚಂದ್ |
| 28. | 1975 | ವಿ. ಅನುಸೂಯ ಬಾಯಿ |
| 29. | 1976 | ಬಹದ್ದೂರ್‌ಸಿಂಗ್ ಚೌಹಾನ್ |
| 30. | 1976 | ಗೀತಜುಟ್ಸಿ |
| 31. | 1978–79 | ಸುರೇಶ್‌ಬಾಬು |
| 32. | 1978–79 | ಎಂಜೆಲ್ ಮೇರಿ ಜೋಸೆಫ್ |
| 33. | 1979–80 | ಆರ್. ಗ್ಯಾನಶೇಕರನ್ (ಜ್ಞಾನಸೇಕರನ್) |
| 34. | 1980–81 | ಗೋಪಾಲ್ ಸಾಯ್‌ನಿ |
| 35. | 1981 | ಶಬೀರ್ ಅಲಿ |
| 36. | 1982 | ಚಾರ್ಲ್ಸ್ ಬೊರೊಮಿಯೊ |
| 37. | 1982 | ಚಾಂದ್‌ರಾಮ್ |
| 38. | 1982 | ಎಂ.ಡಿ. ವಲ್ಸಮ್ಮ |
| 39. | 1983 | ಸುರೇಶ್‌ಯಾದವ್ |
| 40. | 1983 | ಪಿ.ಟಿ. ಉಷಾ |
| 41. | 1984 | ರಾಜ್‌ಕುಮಾರ್ |
| 42. | 1984 | ಶೈನಿಅಬ್ರಹಾಂ |
| 43. | 1985 | ರಘುಬಿರ್‌ಸಿಂಗ್‌ಬಾಲ್ |
| 44. | 1985 | ಆಶಾಅಗರ್‌ವಾಲ್ |
| 45. | 1985 | ಅದಿಲ್ಲೆ ಸುಮರಿವಾಲ |
| 46. | 1986 | ಸುಮನ್ ರಾವತ್ |
| 47. | 1987 | ಬಲ್ವಿಂದರ್ ಸಿಂಗ್ |
| 48. | 1987 | ವಂದನಾರಾವ್ |
| 49. | 1987 | ಬಗಿಚಸಿಂಗ್ |
| 50. | 1987 | ವಂದನಾ ಶಾನಬಾಗ್ |
| 51. | 1988 | ಅಶ್ವಿನಿ ನಾಚಪ್ಪ |
| 52. | 1989 | ಮರ್ಸಿಕುಟ್ಟನ್ |
| 53. | 1990 | ದೀನಾರಾಮ್ |
| 54. | 1992 | ಬಹದ್ದೂರ್ ಪ್ರಸಾದ್ |
| 55. | 1993 | ಕೆ. ಸಾರಮ್ಮ |
| 56. | 1994 | ರೋಸಕುಟ್ಟಿ |
| 57. | 1995 | ಶಕ್ತಿಸಿಂಗ್ |
| 58. | 1995 | ಜ್ಯೋತಿರ್ಮಯಿ ಸಿಕ್‌ದರ್ |
| 59. | 1996 | ಅಜಿತ್ ಭದುರಿಯ |
| 60. | 1996 | ಪದ್ಮಿನಿ ತಾಮಸ್ |
| 61. | 1997 | ರೀತ್ ಅಬ್ರಹಾಮ್ |
| 62. | 1998 | ಸಿರಿಚಂದ್‌ರಾಮ್ |
| 63. | 1998 | ನೀಲಂಜಸ್ವಂತ್ ಸಿಂಗ್ |
| 64. | 1998 | ಎಸ್.ಡಿ. ಈಶನ್ |
| 65. | 1998 | ರಚಿತ ಮಿಸ್ತ್ರಿ |
| 66. | 1998 | ಪರಮಜಿತ್‌ಸಿಂಗ್ |
| 67. | 1999 | ಗುಲಾಬ್‌ಚಂದ್ |
| 68. | 1999 | ಗುರುಮೀತ್‌ಕೌರ್ |
| 69. | 1999 | ಪರ್ದುಮನ್‌ಸಿಂಗ್ |
| 70. | 1999 | ಸುನೀತರಾಣಿ |
| 71. | 2000 | ಕೆ.ಎಂ. ಬೀನಮೊಲ್ |
| 72. | 2000 | ಯಾದವೇಂದ್ರ ವಸಿಷ್ಠ |
| 73. | 2000 | ವಿಜಯ್‌ಬಾಲಚಂದ್ರ ಮುನಿಶ್ವೇರ |
| 74. | 2000 | ಜೋಗಿಂದರ್‌ಸಿಂಗ್ ಬೇಡಿ |
| 75. | 2002 | ಅಂಜುಬಾಬ್ಬಿ ಜಾರ್ಜ್ |
| 76. | 2002 | ಸರಸ್ವತಿ ಸಾಹಾ |
| 77. | 2003 | ಸೋಮ ಬಿಸ್ವಾಸ್ |
| 78. | 2003 | ಮಾಧುರಿ ಸಕ್ಸೆನಾ |
| 79. | 2004 | ಅನಿಲ್ ಕುಮಾರ್ |
| 80. | 2004 | ಜೆ.ಜೆ ಶೋಭಾ |
| 81. | 2004 | ದೇವೇಂದ್ರ ಜಜಾರಿಯ |
| 82. | 2005 | ಮಂಜಿತ್ ಕೌರ್ |
| 83. | 2005 | ರಾಜಿಂದರ್ ಸಿಂಗ್ ರಹೇಲು |
| 84. | 2006 | ಕೆ.ಎಮ್. ಬಿನು |
| 85. | 2007 | ಚಿತ್ರ ಕೆ. ಸೋಮನ್ |
| 86. | 2009 | ಸಿನಿಮೊಲ್ ಪೌಲ್‌ಸೆ |

**ಷಟಲ್ ಬ್ಯಾಡ್ಮಿಂಟನ್**

| | | |
|---|---|---|
| 87. | 1961 | ನಂದುನಟೇಕರ್ |
| 88. | 1962 | ಮೀನಾ ಷಹ |
| 89. | 1965 | ದಿನೇಶ್‌ಖನ್ನ |
| 90. | 1967 | ಸುರೇಶ್‌ಗೋಯೆಲ್ |
| 91. | 1969 | ದೀಪುಘೋಷ್ |
| 92. | 1970 | ಡಿ.ವಿ. ತಾಂಬೆ |
| 93. | 1971 | ಎಸ್.ಮೂರ್ತಿ |
| 94. | 1972 | ಪ್ರಕಾಶ್ ಪಡುಕೋಣೆ |
| 95. | 1974 | ರಾಮನ್‌ಘೋಷ್ |

96. 1975 ದಾವಿಂದರ್ ಅಹುಜ
97. 1976 ಅಮಿಗಿಯಾ
98. 1977–78 ಕೆ.ಟಿ. ಸಿಂಗ್
99. 1980–81 ಸೈಯ್ಯದ್ ಮೋದಿ
100. 1982 ಪಿ. ಗಂಗೂಲಿ
101. 1982 ಮಧುಮಿತ ಬಿಷ್ಟ್
102. 1991 ರಾಜೀವ್ ಬಗ್ಗ
103. 2000 ಪುಲ್ಲೇಲ ಗೋಪಿಚಂದ್
104. 1999 ಜಾರ್ಜ್ ತಾಮಸ್
105. 2003 ಮದಾಸು ಶ್ರೀನಿವಾಸರಾವ್
106. 2004 ಅಭಿನ್ ಶ್ಯಾಮಗುಪ್ತ
107. 2005 ಅಪರ್ಣಾ ಪೋಪಟ್
108. 2006 ಚೇತನ್ ಆನಂದ್
109. 2006 ರೋಹಿತ್ ಬಾಕರ್
110. 2008 ಅನುಪ್ ಶ್ರೀಧರ್
111. 2009 ಸೈನ ನೆಹವಾಲ್

**ಬಾಲ್ ಬ್ಯಾಡ್ಮಿಂಟನ್**

112. 1970 ಜೆ. ಪಿಚ್ಚೈಯ್ಯ
113. 1972 ಜೆ. ಶ್ರೀನಿವಾಸನ್
114. 1973 ಎ. ಕರೀಮ್
115. 1975 ಎಲ್.ಎ. ಇಕ್ಬಾಲ್
116. 1976 ಎ. ಸ್ಯಾಮ್‌ಕ್ರೈಸ್ಟ್‌ದಾಸ್
117. 1984 ಡಿ. ರಾಜಾರಾಮನ್

**ಬ್ಯಾಸ್ಕೆಟ್‌ಬಾಲ್**

118. 1961 ಸರ್ಬ್‌ಜಿತ್ ಸಿಂಗ್
119. 1967 ಖುಷಿರಾಮ್
120. 1968 ಗುರ್ದಯಾಲ್ ಸಿಂಗ್
121. 1969 ಹವಲ್ದಾರ್ ಹರಿದತ್
122. 1970 ಗುಲಾಮ್ ಅಬ್ಬಾಸ್ ಮೂನ್ತಸರ್
123. 1971 ಮನ್‌ಮೋಹನ್‌ಸಿಂಗ್
124. 1973 ಎಸ್.ಕೆ. ಕಟಾರಿಯ
125. 1974 ಎ.ಕೆ. ಪೂನ್ಜ್
126. 1975 ಹನುಮಾನ್‌ಸಿಂಗ್
127. 1977–78 ಟಿ. ವಿಜಯರಾಘವನ್
128. 1979–80 ಓಂ ಪ್ರಕಾಶ್
129. 1982 ಅಜ್ಮೀರ್‌ಸಿಂಗ್
130. 1991 ರಾಧೇಯ್‌ಶ್ಯಾಮ್
131. 1991 ಎಸ್. ಶರ್ಮ
132. 1999 ಸಜ್ಜನ್‌ಸಿಂಗ್ ಚೀಮ

**ಬಿಲಿಯರ್ಡ್ಸ್ ಅಂಡ್ ಸ್ನೂಕರ್**

133. 2002 ಅಲೋಕ್ ಕುಮಾರ್
134. 2003 ಪಂಕಜ್ ಅಡ್ವಾನಿ
135. 2005 ಅನುಜ ಪ್ರಕಾಶ್ ಠಾಕೂರ್
136. 1983 ಸುಭಾಷ್ ಅಗ್ರವಾಲ್

**ಬಾಕ್ಸಿಂಗ್**

137. 1961 ಎಲ್. ಬಡ್ಡಿ ಡಿಸೌಝ
138. 1962 ಹವಲ್ದಾರ್ ಪಿ. ಬದಾದುರ್ ಮಾಲ್
139. 1966 ಹವಾಸಿಂಗ್
140. 1968 ಹವಲ್ದಾರ್ ಡೆನ್ನಿಸ್ ಸ್ವಾಮಿ
141. 1971 ಹವಲ್ದಾರ್ ಮುನಿಸ್ವಾಮಿ ವೇಣು
142. 1972 ಹವಲ್ದಾರ್ ಚಂದ್ರನಾರಾಯಣನ್
143. 1973 ಹವಲ್ದಾರ್ ಮೆಹತಬ್ ಸಿಂಗ್
144. 1977–78 ಬಿ.ಎಸ್. ಥಾಪ
145. 1978–79 ಸಿ.ಸಿ. ಮಾಚಯ್ಯ
146. 1979–80 ಬಿ. ಸಿಂಗ್
147. 1980–81 ಐಸಾಕ್ ಅಮಲ್‌ದಾಸ್
148. 1981 ಹವಲ್ದಾರ್ ಜಿ. ಮನೋಹರನ್
149. 1982 ಹವಲ್ದಾರ್ ಕೌರ್‌ಸಿಂಗ್
150. 1983 ಜೆಸ್‌ಲಾಲ್ ಪ್ರಧಾನ್
151. 1986 ಜಯಪಾಲ್‌ಸಿಂಗ್
152. 1987 ಸೀವಾ ಜಯರಾಮ್
153. 1989 ಗೋಪಾಲ್ ದೇವಾಂಗ್
154. 1991 ಡಿ.ಎಸ್. ಮಾದವ್
155. 1992 ರಾಜೇಂದ್ರ ಪ್ರಸಾದ್
156. 1993 ಮನೋಜ್ ಪಿಂಗಲೆ
157. 1993 ಮುಕುಂದ್‌ಕಿಲ್ಲೆಕರ್
158. 1995 ವಿ. ದೇವರಾಜನ್
159. 1996 ರಾಜ್‌ಕುಮಾರ್ ಸಂಗ್‌ವಾನ್
160. 1998 ಎನ್.ಜಿ. ಹಿಂಗ್ಕೊ ಸಿಂಗ್
161. 1999 ಗುರ್‌ಚರಣ್ ಸಿಂಗ್
162. 1999 ಜಿತೇಂದರ್ ಕುಮಾರ್
163. 2002 ಮಹಮ್ಮದ್ ಅಲಿಕಮರ್
164. 2003 ಮಂಗ್ಟೆ ಚುಂಗ್ನಿಜಂಗ್ ಮರಿಕೊಂ
165. 2005 ಅಖಿಲ್ ಕುಮಾರ್
166. 2006 ವಿಜೇಂದರ್ ಕುಮಾರ್
167. 2008 ವರ್ಗೀಸ್ ಜಾನ್‌ಸನ್
168. 2009 ಎಲ್. ಸರಿತದೇವಿ

**ಕೇರಮ್**

169. 1996 ಮಾರಿಯ ಇರುದಯಾಮ್

**ಚೆಸ್**

170. 1961 ಮ್ಯಾನುಯಲ್ ಆರನ್
171. 1980–81 ರೋಹಿಣಿ ಖಾದಿಲ್‌ಕರ್
172. 1983 ದಿಬ್ಯೆಂದು ಬರುವ
173. 1984 ಪ್ರವೀನ್ ಥಿಪ್ಸೆ
174. 1985 ವಿಶ್ವನಾಥನ್ ಆನಂದ್
175. 1987 ಡಿ.ವಿ. ಪ್ರಸಾದ್
176. 1987 ಭಾಗ್ಯಶ್ರೀ ಥಿಪ್ಸೆ
177. 1990 ಅನುಪಮ ಗೋಖಲೆ
178. 2000 ಸುಬ್ಬರಾಮನ್ ವಿಜಯಲಕ್ಷ್ಮಿ
179. 2002 ಕೃಷ್ಣನ್ ಶಶಿಕಿರಣ್
180. 2003 ಕೊನೇರು ಹಂಪಿ
181. 2005 ಸೂರ್ಯಶೇಖರ್ ಗಂಗೂಲಿ
182. 2006 ಪೆಂಟ್ಯಾಲ ಹರಿಕೃಷ್ಣ
183. 2008 ದ್ರೋನವಲ್ಲಿ ಹರಿಕೆ
184. 2009 ತಾನಿಯ ಸಚ್‌ದೇವ್

**ಕ್ರಿಕೆಟ್**

185. 1961 ಸಲೀಂ ದುರಾನಿ
186. 1964 ಮನ್ಸೂರ್ ಅಲಿಖಾನ್ ಪಟೌಡಿ
187. 1965 ವಿಜಯ್ ಮಂಜ್ರೇಕರ್
188. 1966 ಚಂದುಬೋರ್ಡೆ
189. 1967 ಅಜಿತ್ ವಾಡೇಕರ್
190. 1968 ಇ.ಎ.ಎಸ್. ಪ್ರಸನ್ನ
191. 1969 ಬಿಷನ್‌ಸಿಂಗ್ ಬೇಡಿ
192. 1970 ದಿಲಿಪ್ ಸರ್‌ದೇಸಾಯ್
193. 1971 ಶ್ರೀನಿವಾಸ ರಾಘವನ್ ವೆಂಕಟರಾಘವನ್

| | | |
|---|---|---|
| 194. | 1972 | ಏಕನಾಥ್ ಸೋಲ್ಕರ್ |
| 195. | 1972 | ಬಿ.ಎಸ್. ಚಂದ್ರಶೇಖರ್ |
| 196. | 1975 | ಸುನಿಲ್‌ಗವಾಸ್ಕರ್ |
| 197. | 1976 | ಶಾಂತಾರಂಗಸ್ವಾಮಿ |
| 198. | 1977–78 | ಗುಂಡಪ್ಪ ವಿಶ್ವನಾಥ್ |
| 199. | 1979–80 | ಕಪಿಲ್‌ದೇವ್ ನಿಖಾನ್ಜಿ |
| 200. | 1980–81 | ಚೇತನ್ ಚೌವ್ಹಾಣ್ |
| 201. | 1980–81 | ಸೈಯದ್ ಕಿರ್ಮಾನಿ |
| 202. | 1981 | ದಿಲೀಪ್ ವೆಂಗ್‌ಸರ್ಕಾರ್ |
| 203. | 1982 | ಮೊಹಿಂದರ್ ಅಮರ್‌ನಾಥ್ |
| 204. | 1983 | ಡಯಾನಾ ಎಡುಲ್ಜಿ |
| 205. | 1984 | ರವಿಶಾಸ್ತ್ರಿ |
| 206. | 1985 | ಶುಭಾಂಗಿ ಕುಲಕರ್ಣಿ |
| 207. | 1986 | ಮೊಹಮ್ಮದ್ ಅಜ್ಹರುದ್ದೀನ್ |
| 208. | 1986 | ಸಂಧ್ಯಾ ಅಗ್ರವಾಲ್ |
| 209. | 1989 | ಮದನ್‌ಲಾಲ್ |
| 210. | 1993 | ಮನೋಜ್ ಪ್ರಭಾಕರ್ |
| 211. | 1993 | ಕಿರಣ್‌ಮೋರೆ |
| 212. | 1994 | ಸಚಿನ್ ತೆಂಡೂಲ್ಕರ್ |
| 213. | 1995 | ಅನಿಲ್‌ಕುಂಬ್ಳೆ |
| 214. | 1996 | ಜಾವಗಲ್ ಶ್ರೀನಾಥ್ |
| 215. | 1997 | ಅಜಯ್ ಜಡೇಜ |
| 216. | 1997 | ಸೌರವ್ ಗಂಗೂಲಿ |
| 217. | 1998 | ರಾಹುಲ್ ದ್ರಾವಿಡ್ |
| 218. | 1998 | ನಯನ್ ಮೋಂಗಿಯ |
| 219. | 2000 | ಬಿ.ಕೆ. ವೆಂಕಟೇಶ್ ಪ್ರಸಾದ್ |
| 220. | 2001 | ವಿವಿಎಸ್ ಲಕ್ಷ್ಮಣ್ |
| 221. | 2002 | ವೀರೇಂದರ್ ಸೆಹ್ವಾಗ್ |
| 222. | 2003 | ಹರಭಜನ್‌ಸಿಂಗ್ |
| 223. | 2003 | ಮೈಥಿಲಿ ರಾಜ್ |
| 224. | 2005 | ಅಂಜು ಜೈನ್ |
| 225. | 2006 | ಅಂಜುಮ್ ಚೋಪ್ರಾ |
| 226. | 2009 | ಗೌತಮ್ ಗಂಭೀರ್ |
| | | **ಸೈಕ್ಲಿಂಗ್** |
| 227. | 1975 | ಅಮರ್‌ಸಿಂಗ್ |
| 228. | 1978–79 | ಎಮ್. ಮಹಾಪಾತ್ರ |
| 229. | 1983 | ಎ.ಆರ್. ಅರ್ತ್ನ |
| | | **ಈಕ್ವೆಸ್ಟ್ರಿಯನ್** |
| 230. | 1973 | ದಫಾದರ್‌ಖಾನ್ ಎಮ್. ಖಾನ್ |
| 231. | 1976 | ಎಚ್.ಎಸ್. ಸೋಧಿ |
| 232. | 1982 | ಮೇಜರ್, ಆರ್. ಸಿಂಗ್ ಬ್ರಾರ್ |
| 233. | 1982 | ರಘುಬಿರ್‌ಸಿಂಗ್ |
| 234. | 1984 | ಕ್ಯಾಪ್ಟನ್ ಜಿ. ಮೊಹಮದ್‌ಖಾನ್ |
| 235. | 1987 | ಮೇಜರ್ ಜೆ.ಎಸ್ ಅಹ್ಲುವಾಲಿಯ |
| 236. | 1991 | ಕ್ಯಾಪ್ಟನ್ ಆಧಿರಾಜ್‌ಸಿಂಗ್ |
| 237. | 2003 | ಕ್ಯಾಪ್ಟನ್ ರಾಜೇಶ್‌ಪಟ್ಟು |
| 238. | 2004 | ಮೇಜರ್ ದೀಪ್‌ಕುಮಾರ್ ಅಹ್ಲಾವತ್ |
| | | **ಫುಟ್‌ಬಾಲ್** |
| 239. | 1961 | ಪಿ.ಕೆ. ಬ್ಯಾನರ್ಜಿ |
| 240. | 1962 | ತುಲಸೀದಾಸ್ ಬಲರಾಮ್ |
| 241. | 1963 | ಚುನಿಗೋಸ್ವಾಮಿ |
| 242. | 1964 | ಜರ್‍ನೈಲ್ ಸಿಂಗ್ |
| 243. | 1965 | ಅರುಣ್ ಲಾಲ್ ಘೋಷ್ |
| 244. | 1966 | ಯೂಸುಫ್‌ಖಾನ್ |
| 245. | 1967 | ಪೀಟರ್ ತಂಗರಾಜ್ |
| 246. | 1969 | ಇಂದರ್‌ಸಿಂಗ್ |
| 247. | 1970 | ಸೈಯದ್ ನಯೀಮುದ್ದೀನ್ |
| 248. | 1971 | ಸಿ.ಪಿ. ಸಿಂಗ್ |
| 249. | 1973 | ಮಗನ್ ಸಿಂಗ್ |
| 250. | 1978–79 | ಗುರುದೇವ್ ಸಿಂಗ್ ಗಿಲ್ |
| 251. | 1979–80 | ಪ್ರಸುನ್ ಬ್ಯಾನರ್ಜಿ |
| 252. | 1980–81 | ಮೊಹಮ್ಮದ್ ಹಬೀಬ್ |
| 253. | 1981 | ಸುಧೀರ್‌ಕರ್ಮಕರ್ |
| 254. | 1983 | ಶಾಂತಿ ಮುಲ್ಲಿಕ್ |
| 255. | 1989 | ಎಸ್. ಭಟ್ಟಾಚಾರ್‌ಜೀ |
| 256. | 1997 | ಬ್ರಹ್ಮಾನಂದ್ ಸಂಕ್‌ವಾಲ್‌ಕರ್ |
| 257. | 1998 | ಬೈಚಂಗ್ ಬೂಟಿಯ |
| 258. | 2002 | ಐ.ಎಮ್. ವಿಜಯನ್ |
| 259. | 2010 | ದೀಪಕ್ ಕುಮಾರ್ ಮಂಡಲ್ |
| | | **ಗಾಲ್ಫ್** |
| 260. | 1999 | ಚಿರಂಜೀವ್ ಮಿಲ್ಖಾಸಿಂಗ್ (ಜೀವ್ ಮಿಲ್ಖಾಸಿಂಗ್) |
| 261. | 2002 | ಶಿವ್‌ಕಪೂರ್ |
| 262. | 2004 | ಜ್ಯೋತಿಂದರ್ ಸಿಂಗ್ ರಾಂಧವ |
| 263. | 2007 | ಅರ್ಜುನ್ ಅತ್‌ವಾಲ್ |
| | | **ಜಿಮ್ನಾಸ್ಟಿಕ್ಸ್** |
| 264. | 1961 | ಶ್ಯಾಮ್‌ಲಾಲ್ |
| 265. | 1975 | ಮಾಂಟುದೇಬ್‌ನಾಥ್ |
| 266. | 1985 | ಎಸ್. ಶರ್ಮ |
| 267. | 1989 | ಕೃಪಾಲಿ ಪಟೇಲ್ |
| 268. | 2000 | ಕಲ್ಪನಾದೇಬ್‌ನಾಥ್ |
| | | **ಹಾಕಿ** |
| 269. | 1961 | ಪ್ರಿಥಿಪಾಲ್ ಸಿಂಗ್ |
| 270. | 1961 | ಆ್ಯನ್ ಲುಮ್ಸ್‌ಡನ್ |
| 271. | 1963 | ಚರಣ್‌ಜಿತ್ ಸಿಂಗ್ |
| 272. | 1964 | ಎಸ್. ಲಕ್ಷ್ಮಣ್ |
| 273. | 1965 | ಉಧಾಮ್ ಸಿಂಗ್ |
| 274. | 1965 | ಇ. ಬ್ರಿಟ್ಟೊ |
| 275. | 1966 | ವಿ.ಜೆ. ಪೀಟರ್ |
| 276. | 1966 | ಸುನೀತಪುರಿ |
| 277. | 1966 | ಗುರುಬಕ್ಷ್ ಸಿಂಗ್ |
| 278. | 1967 | ಹರ್ಬಿಂದರ್ ಸಿಂಗ್ |
| 279. | 1967 | ಮೊಹಿಂದರ್ ಲಾಲ್ |
| 280. | 1968 | ಬಲಬೀರ್ ಸಿಂಗ್ ಕುಲಾರ್ |
| 281. | 1970 | ಅಜಿತ್‌ಪಾಲ್ ಸಿಂಗ್ |
| 282. | 1971 | ಪಿ. ಕೃಷ್ಣಮೂರ್ತಿ |
| 283. | 1972 | ಮೈಕೆಲ್ ಕಿಂಡೋ |
| 284. | 1973 | ಎಂ.ಪಿ. ಗಣೇಶ್ |
| 285. | 1973 | ಒ. ಮಾಸ್ಕರೆನ್ಹಾಸ್ |
| 286. | 1974 | ಅಶೋಕ ಕುಮಾರ್ |
| 287. | 1974 | ಎ. ಕೌರ್ |
| 288. | 1975 | ಬಿ.ಪಿ. ಗೋವಿಂದ |
| 289. | 1975 | ಆರ್. ಸೈನಿ |
| 290. | 1977–78 | ಕ್ಯಾಪ್ಟನ್ ಹರ್‌ಚರಣ್‌ಸಿಂಗ್ |
| 291. | 1977–78 | ಎಲ್.ಎಲ್. ಫರ್ನಾಂಡಿಸ್ |
| 292. | 1979–80 | ವಾಸುದೇವನ್ ಬಾಸ್ಕರನ್ |

| | | |
|---|---|---|
| 293. | 1979–80 | ಆರ್.ಬಿ. ಮುಂಡ್‌ಫನ್ |
| 294. | 1980–81 | ಮೊಹಮದ್ ಶಾಹಿದ್ |
| 295. | 1980–81 | ಎಲಿಜ಼ಾ ನೆಲ್ಸನ್ |
| 296. | 1981 | ವರ್ಷ ಸೋನಿ |
| 297. | 1983 | ಜಾಫರ್ ಇಕ್ಬಾಲ್ |
| 298. | 1984 | ರಾಜ್‌ಬೀರ್ ಕೌರ್ |
| 299. | 1984 | ಎಸ್. ಮಾನೆ |
| 300. | 1985 | ಪ್ರೇಮ್ ಮಾಯಾ ಸೋನಿರ್ |
| 301. | 1985 | ಎಮ್.ಎಮ್. ಸೌಮ್ಯ |
| 302. | 1986 | ಜೆ.ಎಮ್. ಕರ್ವಾಲೋ |
| 303. | 1988 | ಎಮ್.ಪಿ. ಸಿಂಗ್ |
| 304. | 1989 | ಪರ್ಗತ್ ಸಿಂಗ್ |
| 305. | 1990 | ಜಗಬೀರ್ ಸಿಂಗ್ |
| 306. | 1992 | ಮೆರ್ವಿನ್ ಫರ್ನಾಂಡಿಸ್ |
| 307. | 1994 | ಜೂಡ್ ಫೆಲಿಕ್ಸ್ ಸೆಬಾಸ್ಟಿನ್ |
| 308. | 1995 | ಧನರಾಜ್ ಪಿಳ್ಳೈ |
| 309. | 1995 | ಮುಖೇಶ್ ಕುಮಾರ್ |
| 310. | 1996 | ಎ.ಬಿ. ಸುಬ್ಬಯ್ಯ |
| 311. | 1996 | ಆಶೀಶ್ ಕುಮಾರ್ ಬಲ್ಲಾಳ್ |
| 312. | 1997 | ಹರ್ಮಿಕ್ ಸಿಂಗ್ |
| 313. | 1997 | ಸುರಿಂದರ್ ಸಿಂಗ್ ಸೋಧಿ |
| 314. | 1997 | ರಾಜೀಂದರ್ ಸಿಂಗ್ |
| 315. | 1998 | ಎಸ್. ಸುರ್ಜಿತ್ ಸಿಂಗ್ |
| 316. | 1998 | ಪ್ರೀತಮ್ ರಾನಿ ಸಿವಾಚ್ |
| 317. | 1998 | ಬಿ.ಎಸ್. ಧಿಲ್ಲೋನ್ |
| 318. | 1998 | ಎಸ್. ಒಮನ ಕುಮಾರಿ |
| 319. | 1998 | ಮೊಹಮದ್ ರಿಯಾಜ಼್ |
| 320. | 1998 | ಬಲದೇವ್ ಸಿಂಗ್ |
| 321. | 1998 | ಮಹಾರಾಜ್ ಕೃಷ್ಣ ಕೌಶಿಕ್ |
| 322. | 1999 | ಬಲಬೀರ್ ಸಿಂಗ್ ಕುಲ್ಲರ್ |
| 323. | 1998 | ಲೆಫ್ಟಿನೆಂಟ್ ಕರ್ನಲ್ ಹರಿಪಾಲ್ ಕೌಶಿಕ್ |
| 324. | 1998 | ರಮಣ್‌ದೀಪ್ ಸಿಂಗ್ |
| 325. | 1998 | ವಿ.ಜೆ. ಫಿಲಿಪ್ಸ್ |
| 326. | 2000 | ಬಲ್‌ಜೀತ್ ಸಿಂಗ್ ಸೈನಿ |
| 327. | 2000 | ತಿಂಗೊನ್‌ಲೀಮಾ ಚಾನು |
| 328. | 2000 | ಕ್ಯಾಪ್ಟನ್ ಆರ್.ಎಸ್. ಭೋಲಾ |
| 329. | 2000 | ಬಲಕಿಶನ್ ಸಿಂಗ್ |
| 330. | 2000 | ಜಲಾಲುದ್ದೀನ್ ರಿಜ್ವೀ |
| 331. | 2000 | ಮಧು ಯಾದವ್ |
| 332. | 2002 | ದಿಲೀಪ್ ತಿರ್ಕೆ |
| 333. | 2002 | ಗಗನ್ ಅಜಿತ್ ಸಿಂಗ್ |
| 334. | 2002 | ಮಮತ ಖಾರಬ್ |
| 335. | 2003 | ದೇವೇಶ್ ಚೌಹಾಣ್ |
| 336. | 2003 | ಸೂರಜ್ ಲತಾದೇವಿ |
| 337. | 2004 | ದೀಪಕ್ ಠಾಕೂರ್ |
| 338. | 2004 | ಇನೋಸೆಂಟ್ ಹೆಲೆನ್ ಮೇರಿ |
| 339. | 2005 | ವಿರೆನ್ ರಾಸ್‌ಕ್ವಿನ್ |
| 340. | 2006 | ಜ್ಯೋತಿ ಸುನೀತ ಕುಲ್ಲು |
| 341. | 2008 | ಪ್ರಭ್‌ಜೋತ್ ಸಿಂಗ್ |
| 342. | 2009 | ಸುರಿಂದರ್ ಕೌರ್ |
| 343. | 2009 | ಇಗ್ನೇಸ್ ತಿರ್ಕೆ |

**ಜೂಡೋ**

| | | |
|---|---|---|
| 344. | 1992 | ಸಂದೀಪ್ ಬ್ಯಾಲಾ |
| 345. | 1993 | ಕಾವಾಸ್ ಬಿಲ್ಲಿಮೋರಿಯಾ |
| 346. | 1996 | ಪೂನಮ್ ಚೋಪ್ರಾ |
| 347. | 1998 | ನರೇಂದರ್ ಸಿಂಗ್ |
| 348. | 2003 | ಅಕ್ರಂ ಷಾ |
| 349. | 2004 | ಅಂಗೊಮ್ ಅನಿತ ಚಾನು |
| 350. | 2007 | ತೊಂಬಿ ದೇವಿ |
| | | **ಕಬಡ್ಡಿ** |
| 351. | 1998 | ಆಶನ್ ಕುಮಾರ್ |
| 352. | 1998 | ಬಿಸ್ವಜಿತ್ ಪಲಿತ್ |
| 353. | 1999 | ಬಲ್‌ವಿಂದರ್ ಸಿಂಗ್ |
| 354. | 1999 | ತೀರ್ಥ ರಾಜ್ |
| 355. | 2000 | ಸಿ. ಹೊನ್ನಪ್ಪ |
| 356. | 2002 | ರಾಮ್ ಮೆಹರ್ ಸಿಂಗ್ |
| 357. | 2003 | ಸಂಜೀವ್ ಕುಮಾರ್ |
| 358. | 2004 | ಸುಂದರ್ ಸಿಂಗ್ |
| 359. | 2005 | ರಮೇಶ್ ಕುಮಾರ್ |
| 360. | 2006 | ನವೀನ್ ಗೌತಮ್ |
| 361. | 2008 | ಪಂಕಜ್ ನವ್‌ನಾಥ್ ಶ್ರೀಸತ್ |
| | | **ಟೆನ್ನಿಸ್** |
| 362. | 1961 | ರಾಮನಾಥನ್ ಕೃಷ್ಣನ್ |
| 363. | 1962 | ನರೇಶ್ ಕುಮಾರ್ |
| 364. | 1966 | ಜಯದೀಪ್ ಮುಖರ್ಜಿ |
| 365. | 1967 | ಪ್ರೇಮ್‌ಜಿತ್ ಲಾಲ್ |
| 366. | 1974 | ವಿಜಯ್ ಅಮೃತ್‌ರಾಜ್ |
| 367. | 1978–79 | ನಿರುಪಮ ಮಂಕಡ್ |
| 368. | 1980–81 | ರಮೇಶ್ ಕೃಷ್ಣನ್ |
| 369. | 1985 | ಆನಂದ್ ಅಮೃತ್‌ರಾಜ್ |
| 370. | 1990 | ಲಿಯಾಂಡರ್ ಪೇಸ್ |
| 371. | 1995 | ಮಹೇಶ್ ಭೂಪತಿ |
| 372. | 1996 | ಗೌರವ್ ನಟೇಕರ್ |
| 373. | 1997 | ಆಸಿಫ್ ಇಸ್ಮಾಯಿಲ್ |
| 374. | 2000 | ಅಖ್ತರ್ ಅಲಿ |
| 375. | 2004 | ಸಾನಿಯಾ ಮಿರ್ಜಾ |
| | | **ರೋಯಿಂಗ್** |
| 376. | 1981 | ಮೇಜರ್ ಪರ್ವಿನ್ ಒಬೆರಾಯ್ |
| 377. | 1984 | ಕ್ಯಾಪ್ಟನ್ ಎಂ.ಎ. ನಾಯಕ್ |
| 378. | 1991 | ನಾಯಿಬ್ ಸುಬೇದಾರ್ ದಳವೀರ್ ಸಿಂಗ್ |
| 379. | 1994 | ಮೇಜರ್ ಆರ್.ಎಸ್. ಭಾನ್‌ವಾಲಾ |
| 380. | 1996 | ಸುರೇಂದರ್ ಸಿಂಗ್ ವಾಲ್ಡಿಯಾ |
| 381. | 1999 | ಜಗಜಿತ್ ಸಿಂಗ್ |
| 382. | 2000 | ಸುರೇಂದರ್ ಸಿಂಗ್ ಕಾನ್‌ವಸಿ |
| 383. | 2004 | ಜೆನಿಲ್ ಕೃಷ್ಣನ್ |
| 384. | 2008 | ಭಜ್‌ರಂಗ್ ಲಾಲ್ ಥಕ್ಕರ್ |
| 385. | 2009 | ಸತೀಶ್ ಜೋಶಿ |
| | | **ಷೂಟಿಂಗ್** |
| 386. | 1961 | ಕರ್ನಿ ಸಿಂಗ್ |
| 387. | 1968 | ರಾಜ್ಯಶ್ರೀ ಕುಮಾರಿ |
| 388. | 1969 | ಭುವನೇಶ್ವರಿ ಕುಮಾರಿ |
| 389. | 1971 | ಭೀಮ್‌ಸಿಂಗ್ |
| 390. | 1972 | ಉದಯನ್ ಚಿನುಭಾಯ್ |
| 391. | 1978–79 | ರಣಧೀರ್ ಸಿಂಗ್ |

392. 1981 ಎಸ್.ಪಿ. ಚೌಹಾಣ್
393. 1983 ಮೊಹಿಂದರ್ ಲಾಲ್
394. 1983 ಸೋಮದತ್ತ
395. 1985 ಎ.ಜೆ. ಪಂಡಿತ್
396. 1986 ಭಗೀರಥ ಸಮಯ್
397. 1993 ಮನ್ಶೈರ್ ಸಿಂಗ್
398. 1994 ಜಸ್‌ಪಾಲ್ ರಾಣಾ
399. 1996 ಮೊರಾದ್ ಎ. ಖಾನ್
400. 1997 ಸತ್ಯೇಂದ್ರ ಕುಮಾರ್
401. 1997 ಶಿಲ್ಪಿಸಿಂಗ್
402. 1998 ಮಾನವ್‌ಜಿತ್ ಸಿಂಗ್
403. 1998 ರೂಪಾ ಉನ್ನಿಕೃಷ್ಣನ್
404. 1999 ವಿವೇಕ್ ಸಿಂಗ್
405. 2000 ಅಂಜಲಿ ವೇದಪಾಠಕ್ ಭಾಗವತ್
406. 2000 ಅಭಿನವ್ ಬಿಂದ್ರಾ
407. 2000 ಗುರುಬೀರ್ ಸಿಂಗ್
408. 2002 ಅನ್ವರ್ ಸುಲ್ತಾನ್
409. 2002 ಸುಮಾ ಶಿರೂರ್
410. 2003 ರಾಜ್ಯವರ್ಧನ್ ಸಿಂಗ್ ರಾಥೋರ್
411. 2004 ದೀಪಾಲಿ ಎ. ದೇಶಪಾಂಡೆ
412. 2005 ಗಗನ್ ನಾರಂಗ್
413. 2006 ವಿಜಯ್‌ಕುಮಾರ್
414. 2008 ಅವನೀತ್ ಕೌರ್ ಸಿಧು
415. 2009 ರಂಜನ್ ಸೋಧಿ

**ಸ್ಕ್ವಾಷ್**

416. 2006 ಸೌರವ್ ಘೋಸಲ್

**ಈಜು**

417. 1961 ಜಾಮ್, ಭಜರಂಗೀ ಪ್ರಸಾದ್
418. 1966 ರೀಮಾದತ್ತ
419. 1967 ಅರುಣ್ ಷಾ
420. 1969 ಬೈದ್ಯನಾಥ್ ನಾಥ್
421. 1971 ಬನ್‌ವಾರ್ ಸಿಂಗ್
422. 1973 ಡಿ. (ಟಿಂಗೂ) ಖಟಾವ್
423. 1974 ಎ.ಬಿ. ಸಾರಂಗ್
424. 1974 ಮಂಜರಿ ಭಾರ್ಗವ್
425. 1975 ಎಮ್.ಎಸ್. ರಾಣಾ
426. 1975 ಸ್ಮಿತಾ ದೇಸಾಯಿ
427. 1982 ಪರ್ಸಿಸ್ ಮದನ್
428. 1983 ಅನಿತ ಸೂದ್
429. 1984 ಖಾಜನ್‌ಸಿಂಗ್
430. 1988 ವಿಲ್ಸನ್ ಚೆರಿಯನ್
431. 1990 ಬುಲಾ ಚೌಧುರಿ
432. 1996 ವಿ. ಕುತ್ರಲೀಶ್ವರನ್
433. 1998 ಭಾನು ಸಚ್‌ದೇವ
434. 1999 ನಿಶಾಮಿಲೆಟ್
435. 2000 ಸೆಬಾಸ್ಟಿಯನ್ ಕ್ಸೇವೀರ್
436. 2000 ಜೆ. ಅಭಿಜಿತ್
437. 2005 ಶಿಖಾ ಟಂಡನ್

**ಟೇಬಲ್ ಟೆನ್ನಿಸ್**

438. 1961 ಜೆ.ಸಿ. ವೊಹ್ರಾ
439. 1965 ಜಿ.ಆರ್. ದೀವಾನ್
440. 1966 ಯು. ಸುಂದರರಾಜ್
441. 1967 ಎಫ್.ಆರ್. ಖೋಡೈಜಿ
442. 1969 ಮೀರ್‌ಕಾಸಿಮ್ ಅಲಿ
443. 1970 ಜಿ. ಜಗನ್ನಾಥ್
444. 1971 ಕೆ.ಎಫ್. ಖೋಡೈಜಿ
445. 1973 ಎನ್.ಆರ್. ಬಜಾಜ್
446. 1976 ಎಸ್. ಶೈಲಜಾ
447. 1979–80 ಇಂದುಪುರಿ
448. 1980–81 ಮಂಜಿತ್ ದುವಾ
449. 1982 ವಿ. ಚಂದ್ರಶೇಖರ್
450. 1985 ಕಮಲೇಶ್ ಮೆಹ್ತಾ
451. 1987 ಮೊನಾಲಿಸಾ ಬರುವ
452. 1989 ನಿಯತಿ ಷಾ
453. 1990 ಎಮ್.ಎಸ್. ವಾಲಿಯಾ
454. 1997 ಚೇತನ್ ಬಬೂರ್
455. 1998 ಸುಬ್ರಮಣಿಯಮ್ ರಾಮನ್
456. 2002 ಮಾಂಟು ಘೋಷ್
457. 2004 ಅಚಂತ ಶರತ್ ಕಮಲ
458. 2005 ಸೌಮ್ಯದೀಪ್ ರಾಯ್
459. 2006 ಸುಭಾಜಿತ್ ಸಹಾ
460. 2009 ಪೌಲೊಮಿ ಘಾಟಕ್

**ವಾಲಿಬಾಲ್**

461. 1961 ಎ. ಪಳನಿಸ್ವಾಮಿ
462. 1962 ನೃಪ್‌ಜಿತ್ ಸಿಂಗ್
463. 1972 ಬಲವಂತ್ ಸಿಂಗ್ ಬಲ್ಲು
464. 1973 ಜಿ.ಎಮ್. ರೆಡ್ಡಿ
465. 1974 ಎಮ್.ಎಸ್. ರಾವ್
466. 1975 ಸಬ್‌ಇನ್ಸ್‌ಪೆಕ್ಟರ್ ಆರ್. ಸಿಂಗ್
467. 1975 ಕೆ.ಸಿ. ಎಲಮ್ಮ
468. 1976 ಜಿಮ್ಮಿ ಜಾರ್ಜ್
469. 1977–78 ಎ. ರಮಣರಾವ್
470. 1978–79 ಕುಟ್ಟಿ ಕೃಷ್ಣನ್
471. 1979–80 ಎಸ್.ಕೆ. ಮಿಶ್ರಾ
472. 1982 ಜಿ.ಇ. ಶ್ರೀಧರನ್
473. 1983 ಆರ್.ಕೆ. ಪುರೋಹಿತ್
474. 1984 ಸ್ಯಾಲಿ ಜೋಸೆಫ್
475. 1986 ಸಿರಿಲ್ ಸಿ. ವಲ್ಲೂರ್
476. 1989 ಅಬ್ದುಲ್ ಬಸೀತ್
477. 1990 ದಲೇಲ್ ಸಿಂಗ್ ರೊರ್
478. 1991 ಕೆ. ಉದಯಕುಮಾರ್
479. 1999 ಸುಖ್‌ಪಾಲ್ ಸಿಂಗ್
480. 2000 ಪಿ.ವಿ. ರಮಣ
481. 2001 ಅಮೀರ್ ಸಿಂಗ್
482. 2002 ರವಿಕಾಂತ್ ರೆಡ್ಡಿ
483. 2010 ಕೆ.ಜೆ. ಕಪಿಲ್‌ದೇವ್

**ವೆಯ್ಟ್‌ಲಿಫ್ಟಿಂಗ್**

484. 1961 ಎ.ಎನ್. ಘೋಷ್
485. 1962 ಎಲ್.ಕೆ. ದಾಸ್
486. 1963 ಕೆ.ಇ. ರಾವ್
487. 1965 ಬಿ.ಎಸ್. ಭಾಟಿಯಾ
488. 1966 ಮೋಹನ್ ಲಾಲ್ ಘೋಷ್
489. 1967 ಎಸ್. ಜಾನ್ ಗೇಬ್ರಿಯಲ್
490. 1970 ಅರುಣ್‌ಕುಮಾರ್ ದಾಸ್
491. 1971 ಎಸ್.ಎಲ್. ಸಾಲ್‌ವಾನ್
492. 1972 ಅನಿಲ್‌ಕುಮಾರ್ ಮಂಡಲ್

| | | |
|---|---|---|
| 493. | 1974 | ಎಸ್. ವೆಲ್ಲೈಸ್ವಾಮಿ |
| 494. | 1975 | ದಲ್‌ಬೀರ್ ಸಿಂಗ್ |
| 495. | 1976 | ಕೆ. ಬಾಲಮುರುಗನಂದಮ್ |
| 496. | 1977–78 | ಎಮ್.ಟಿ. ಸೆಲ್ವನ್ |
| 497. | 1978–79 | ಎ. ಕರುಣಾಕರನ್ |
| 498. | 1981 | ಬಿ.ಕೆ. ಸತ್‌ಪತಿ |
| 499. | 1982 | ತಾರಾ ಸಿಂಗ್ |
| 500. | 1983 | ವಿಸ್ಪಿ ಕೆ. ದರೋಗ |
| 501. | 1985 | ಮೆಹರ್ ಚಂದ್ ಭಾಸ್ಕರ್ |
| 502. | 1986 | ಜಗ್‌ಮೋಗನ್ ಸಪ್ರ |
| 503. | 1987 | ಜಿ. ದೇವನ್ |
| 504. | 1989 | ಜ್ಯೋತ್ಸ್ನಾ ದತ್ತ |
| 505. | 1990 | ಆರ್. ಚಂದ್ರ |
| 506. | 1990 | ಎನ್. ಕುಂಜರಾಣಿ |
| 507. | 1991 | ಛಾಯಾ ಅದಕ್ |
| 508. | 1993 | ಭಾರತಿ ಸಿಂಗ್ |
| 509. | 1994 | ಕೆ. ಮಲ್ಲೇಶ್ವರಿ |
| 510. | 1997 | ಪರಮ್‌ಜಿತ್ ಶರ್ಮಾ |
| 511. | 1997 | ಎನ್. ಲಕ್ಷ್ಮಿ |
| 512. | 1998 | ಸತೀಶ ರಾಯ್ |
| 513. | 1999 | ದಲ್‌ಬೀರ್ ಸಿಂಗ್ |
| 514. | 2000 | ಸನಮಚ ಚಾನು ತಿಂಗ್‌ಬೈಜನ್ |
| 515. | 2002 | ತಾಂಡವಮೂರ್ತಿ ಮುತ್ತು |
| 516. | 2006 | ಗೀತಾರಾಣಿ |

**ಕುಸ್ತಿ**

| | | |
|---|---|---|
| 517. | 1961 | ಹವಲ್ದಾರ್ ಉದಯ್ ಚಾನ್ಫ |
| 518. | 1962 | ಮಾಳ್ವ |
| 519. | 1963 | ಜಿ. ಅಂಡಾಳ್‌ಕರ್ |
| 520. | 1964 | ಬಿಶಾಂಬರ್ ಸಿಂಗ್ |
| 521. | 1966 | ಭೀಮ್ ಸಿಂಗ್ |
| 522. | 1967 | ಮುಕ್ತಿಯಾರ್ ಸಿಂಗ್ |
| 523. | 1969 | ಮಾಸ್ಟರ್ ಚಾಂಡ್ಗಿ ರಾಮ್ |
| 524. | 1970 | ಸುದೇಶ್ ಕುಮಾರ್ |
| 525. | 1972 | ಪ್ರೇಮ್‌ನಾಥ್ |
| 526. | 1973 | ಜಗ್‌ರೂಪ್ ಸಿಂಗ್ |
| 527. | 1974 | ಸತ್ಪಾಲ್ |
| 528. | 1978–79 | ರಾಜೇಂದರ್ ಸಿಂಗ್ |
| 529. | 1980–81 | ಜಗ್‌ಮಿಂದರ್ ಸಿಂಗ್ |
| 530. | 1982 | ಕರ್ತಾರ್ ಸಿಂಗ್ |
| 531. | 1985 | ಮಹಾಬೀರ್ ಸಿಂಗ್ |
| 532. | 1987 | ಸುಭಾಷ್ |
| 533. | 1988 | ರಾಜೇಶ್ ಕುಮಾರ್ |
| 534. | 1989 | ಸತ್ಯವಾನ್ |
| 535. | 1990 | ಓಂಬೀರ್ ಸಿಂಗ್ |
| 536. | 1992 | ಪಪ್ಪು ಯಾದವ್ |
| 537. | 1993 | ಅಶೋಕ್ ಕುಮಾರ್ |
| 538. | 1997 | ಜಗದೀಶ್ ಸಿಂಗ್ |
| 539. | 1997 | ಸಂಜಯ್ ಕುಮಾರ್ |
| 540. | 1998 | ಕಾಕ ಪವಾರ್ |
| 541. | 1998 | ರೋಹ್ತಾಸ್ ಸಿಂಗ್ ದಹಿಯಾ |
| 542. | 1999 | ಅಶೋಕ್ ಕುಮಾರ್ |
| 543. | 2000 | ರಣಧೀರ್ ಸಿಂಗ್ |
| 544. | 2000 | ಕೃಪಾ ಷಕರ್ ಪಟೇಲ್ |
| 545. | 2000 | ಕೆ.ಡಿ. ಜಾಧವ್ |
| 546. | 2000 | ನರೇಶ್ ಕುಮಾರ್ |
| 547. | 2002 | ಪಲ್ವಿಂದರ್ ಸಿಂಗ್ ಚೀಮಾ |
| 548. | 2002 | ಸುಜೀತ್ ಮನ್ |
| 549. | 2003 | ಶೋಖಿಂದರ್ ತೊಮಾರ್ |
| 550. | 2004 | ಅನೂಜ್ ಕುಮಾರ್ |
| 551. | 2005 | ಸುಶೀಲ್ ಕುಮಾರ್ |
| 552. | 2006 | ಗೀತಿಕಾ ಜಾಖರ್ |
| 553. | 2008 | ಅಲ್ಕಾ ತೊಮಾರ್ |
| 554. | 2009 | ಯೋಗೇಶ್ವರ್ ದತ್ |

**ಯಾಚಿಂಗ್**

| | | |
|---|---|---|
| 555. | 1970 | ಲೆಫ್ಟಿನೆಂಟ್ ಕಮಾಂಡರ್ ಎಸ್.ಜೆ. ಕಂಟ್ರಾಕ್ಟರ್ |
| 556. | 1973 | ಅಫ್ಜರ್ ಹುಸೇನ್ |
| 557. | 1978–79 | ಎಸ್.ಕೆ. ಮೋಂಗಿಯ |
| 558. | 1981 | ಜ಼ರೀರ್ ಕರಂಜಿಯಾ |
| 559. | 1982 | ಫರೂಖ್ ತಾರಾಪುರ್ |
| 560. | 1982 | ಫಲಿ ಅನ್ವಲ್ಲ |
| 561. | 1982 | ಜೀಜ ಅನ್ವಲ್ಲ |
| 562. | 1986 | ಲೆಫ್ಟಿನೆಂಟ್ ಧ್ರುವ್ ಭಂಡಾರಿ |
| 563. | 1987 | ಸಿ.ಎಸ್. ಪ್ರದೀಪಕ್ |
| 564. | 1990 | ಪಿ.ಕೆ. ಗಾರ್ಗ್ |
| 565. | 1993 | ಕಮಾಂಡರ್ ಹೋಮಿ ಮೋತಿವಾಲಾ |
| 566. | 1996 | ಲೆಫ್ಟಿನೆಂಟ್ ಕಮಾಂಡರ್ ಕೆಲ್ಲಿ ಸುಬ್ಬಾನಂದ್ ರಾವ್ |
| 567. | 1999 | ಆಶಿಮ್ ಮೋಂಗಿಯ |
| 568. | 2002 | ನಿತಿನ್ ಮೋಂಗಿಯ |

**ಅರ್ಜುನಸಿಂಗ್ :** ಸಿಖ್ಖರ ನಾಲ್ಕನೆಯ ಗುರುವಾದ ರಾಮದಾಸನ ಮಗ. ತಂದೆಯ ಮರಣಾನಂತರ 1581 ರಲ್ಲಿ ಗುರುಪಟ್ಟಕ್ಕೆ ಬಂದ. ತಂದೆ ಪ್ರಾರಂಭಿಸಿದ್ದ ಅಮೃತಸರದ ಸ್ವರ್ಣದೇವಾಲಯವನ್ನು ಪೂರ್ಣವಾಗಿ ಕಟ್ಟಿಸಿದ. ಸಿಖ್ಖರ ಪವಿತ್ರ ಗ್ರಂಥವಾದ ಆದಿಗ್ರಂಥದ ಸಂಪಾದನಾ ಕಾರ್ಯವನ್ನು ಪೂರ್ಣಗೊಳಿಸಿದ. ಧಾರ್ಮಿಕ ಮತ್ತು ಆಧ್ಯಾತ್ಮಿಕ ನೀತಿಯಿಂದ ಜನಪ್ರಿಯತೆ ಗಳಿಸಿದ್ದುದಲ್ಲದೆ ಅಕ್ಬರನ ವಿಶೇಷ ಮನ್ನಣೆಗೆ ಪಾತ್ರನಾಗಿದ್ದ. ಜಹಾಂಗೀರನ ಸಿಂಹಾಸನಾರೋಹಣಾನಂತರ ಆತನ ಮಗ ಖುಸ್ರು ದಂಗೆಯೆದ್ದು ದುಃಸ್ಥಿತಿಯಲ್ಲಿ ಲಾಹೋರಿನತ್ತ ಹೋಗುತ್ತಿದ್ದಾಗ ಅರ್ಜುನಸಿಂಗನನ್ನು ಸಂಧಿಸಿ ಆಶೀರ್ವಾದ ಬೇಡಿದ. ಬಾದಷಹನ ಮೊಮ್ಮಗನ ದುಃಸ್ಥಿತಿಯನ್ನು ಕಂಡು ಮರುಗಿದ ಅರ್ಜುನಸಿಂಗ್ ಖುಸ್ರುವಿಗೆ 5000 ರೂಪಾಯಿಗಳನ್ನು ಕೊಟ್ಟ. ಜಹಾಂಗೀರ್ ಖುಸ್ರುವನ್ನು ಸೆರೆಹಿಡಿದು ಶಿಕ್ಷಿಸಿದ ಅನಂತರ ಖುಸ್ರುವಿಗೆ ಸಹಾಯಮಾಡಿದ ಆರೋಪವನ್ನು ಹೊರಿಸಿ ಅರ್ಜುನಸಿಂಗನಿಗೆ ಎರಡು ಲಕ್ಷ ರೂಪಾಯಿಗಳ ದಂಡವನ್ನು ವಿಧಿಸಿದ. ದಂಡದ ರೂಪದಲ್ಲಿ ಒಂದು ಕಾಸನ್ನೂ ಕೊಡಲು ಗುರು ಒಪ್ಪಲಿಲ್ಲ. ಕುಪಿತನಾದ ಜಹಾಂಗೀರ್ ಅರ್ಜುನಸಿಂಗನಿಗೆ 1606 ರಲ್ಲಿ ಮರಣದಂಡನೆ ವಿಧಿಸಿದ. ಮೊಗಲರಿಗೂ ಸಿಖ್ಖರಿಗೂ ಅದುವರೆಗೆ ಇದ್ದ ಸ್ನೇಹ ದೊರೆಯ ಈ ಕೃತ್ಯದಿಂದ ಕೊನೆಗೊಂಡಿತು. ಅರ್ಜುನಸಿಂಗನ ಅನಂತರ ಗುರು ಪಟ್ಟಕ್ಕೆ ಬಂದ ಹರಗೋವಿಂದಸಿಂಗನ ಕಾಲದಿಂದಲೂ ಸಿಖ್ಖರು ಮೊಗಲರಿಗೆ ಕಡು ವಿರೋಧಿಗಳಾದರು. **(ಜಿ.ಆರ್.ಆರ್.)**

**ಅರ್ಜುನಾಯನರು :** ಸು. 200–400ರ ವರೆಗೆ ಅಸ್ತಿತ್ವದಲ್ಲಿದ್ದ ಒಂದು ಸಮುದಾಯ. ಬೃಹತ್‌ಸಂಹಿತೆಯ ಕರ್ತೃವಾದ ವರಾಹಮಿಹಿರನು, ಇವರು ಉತ್ತರ ಭಾರತದವರೆಂದು ಹೇಳುತ್ತಾನೆ. ಟಾಲಮಿ ಹೆಸರಿಸುವ, ಪಂಜಾಬಿನ ಪಂಡೂನೋಯಿ ಜನಾಂಗವೇ ಇವರು ಎಂಬ ಒಂದು ಅಭಿಪ್ರಾಯವಿದೆ. ಪಾಂಡವ ಅರ್ಜುನ ಇವರ ಮೂಲಪುರುಷನಾಗಿದ್ದು ಅವನಿಂದಲೇ ಇವರಿಗೆ ಅರ್ಜುನಾಯನ ಎಂಬ ಹೆಸರು ಬಂತೆಂದು ಕೆಲವರು ಭಾವಿಸಿದರೆ, ಹೈಹಯವಂಶದ ಕಾರ್ತವೀರ್ಯ ಅರ್ಜುನನಿಂದ ಇವರಿಗೆ ಈ ಹೆಸರು ಬಂತೆಂದು ಇನ್ನು ಕೆಲವರು ತರ್ಕಿಸುತ್ತಾರೆ. ಸಮುದ್ರಗುಪ್ತನ ಅಲಹಾಬಾದ್ ಶಾಸನದಲ್ಲಿ, ಅರ್ಜುನಾಯನರು ಅವನಿಗೆ ವಿಧೇಯರಾಗಿದ್ದರೆಂದು ಹೇಳಿದೆ. ಇದು ಅರ್ಜುನಾಯನ ಪೂರ್ವದ ಕಳಚುರಿ ಅರಸರಿಗೆ ಸಂಬಂಧಿಸಿದ್ದೆಂದು ಫ್ಲೀಟ್‌ನ ಅಭಿಪ್ರಾಯ.

ಅರ್ಜುನಾಯನ ಜನಾಂಗ ಪ್ರಾಚೀನ ಗಣರಾಜ್ಯಗಳಲ್ಲಿ ಒಂದಾಗಿತ್ತು. ಅರಸನಿಂದ ಆಳ್ವಿಕೆ ನಡೆಯದೆ ಜನರ ಪ್ರತಿನಿಧಿಗಳಿಂದ ನಡೆಯುತ್ತಿತ್ತು. ಇವರ ಸು. ಪ್ರ.ಶ.ಪೂ. 100ರ ಕೆಲವು ನಾಣ್ಯಗಳು ಮಥುರಾ ವಿಭಾಗದಲ್ಲಿ ದೊರಕಿದ್ದು ಅವುಗಳಲ್ಲಿ ಅರ್ಜುನಾಯನಾನಾಂ ಜಯಃ ಎಂದಿದೆ. ಅರ್ಜುನಾಯನರು ಇಂದಿನ ಆಗ್ರ–ಜಯಪುರ ಪ್ರದೇಶದಲ್ಲಿದ್ದರೆಂದು ತಿಳಿಯಲಾಗಿದೆ. ಈ ಪ್ರದೇಶದ ಉತ್ತರಕ್ಕೆ ಯೌಧೇಯ ಎಂಬ ಇನ್ನೊಂದು ಜನಾಂಗವಿತ್ತು. ಇವರದೂ ಗಣರಾಜ್ಯವೇ. ಎರಡೂ ಜನಾಂಗಗಳು ಕುಶಾನರ ಸತ್ತೆಯನ್ನು ಪ್ರತಿಭಟಿಸಿ ಸ್ವತಂತ್ರವಾದವೆಂದು ತೋರುತ್ತದೆ. ಈ ಎರಡೂ ಗಣರಾಜ್ಯಗಳು ಸಮುದ್ರಗುಪ್ತನ ಅಧೀನವಾದ ವೆಂದು ಅಲಹಾಬಾದಿನ ಶಾಸನದಿಂದ ಖಚಿತವಾಗಿ ತಿಳಿದುಬರುತ್ತವೆ. (ಎಸ್.ಆರ್.)

**ಅರ್ಟವಹಿಷ್ಟ್ :** ಪಾರ್ಸಿ ಪಂಚಾಂಗದ ಪ್ರಕಾರ ತಿಂಗಳ ಮೂರನೆಯ ದಿವಸ. ಕೆಲವು ವೇಳೆ ಚಳಿಗಾಲವಾದ ಮೇಲೆ ಭೂಮಿ ಚೇತರಿಸಿಕೊಳ್ಳುವ ಕಾಲವನ್ನು ಸೂಚಿಸುತ್ತದೆ. ಇದು ವಸಂತಋತುವಿನಲ್ಲಿ ಮೊದಲನೆಯದು, ಹೋರ್ವದಾತ್‌ನ ಅನಂತರದ್ದು. (ಜಿ.ಎಚ್.)

**ಅರ್ಥ[1] :** ಚತುರ್ವಿಧ ಪುರುಷಾರ್ಥಗಳಲ್ಲೊಂದು **ನೋಡಿ–ಪುರುಷಾರ್ಥಗಳು.**

**ಅರ್ಥ[2] :** ದರ್ಶನ ಮತ್ತು ಮನಶ್ಶಾಸ್ತ್ರಗಳಲ್ಲಿನ ಅತ್ಯಂತ ಜಟಿಲವಾದ ಸಮಸ್ಯೆಗಳ ಲ್ಲೊಂದು. ತುಂಬ ಬಳಕೆಯಲ್ಲಿದ್ದರೂ ಯಾರಿಗೂ ಸರಿಯಾಗಿ ಅರ್ಥವಾಗದ ಶಬ್ದ (ಮೀನಿಂಗ್).

ಅರ್ಥ ಶಬ್ದಕ್ಕೆ ಅನೇಕಾರ್ಥಗಳಿವೆಯೆಂದು ಈ ಜಿಜ್ಞಾಸೆಯನ್ನು ಪ್ರಾರಂಭಿಸಬಹುದು. ಎಷ್ಟು ಶಾಸ್ತ್ರಗಳಿವೆಯೋ ಅಷ್ಟು ಅರ್ಥವಿದೆ, ಈ ಶಬ್ದಕ್ಕೆ ಎಂದು ಹೇಳಿದರೂ ಸಮರ್ಪಕ ವಾಗದು. ಏಕೆಂದರೆ ಯಾವ ಒಂದೇ ಶಾಸ್ತ್ರದಲ್ಲೂ ಈ ಪದಕ್ಕೆ ಏಕಮುಖವಾದ ಅರ್ಥವಿಲ್ಲ. ಒಂದು ಪದದ ಅರ್ಥವೇನೆಂಬುದನ್ನು ನಿರ್ಧರಿಸಲು ಇಡೀ ಜೀವಮಾನವಾದರೂ ಸಾಕಾಗದಿರಬಹುದು. ಹುಡುಕ ಹೊರಟವರು ನಿರಾಸೆಯಿಂದ ಕೊನೆಗೆ ಇದು ನಮ್ಮ ಅರ್ಥ ಎಂದಂದುಬಿಡಬಹುದು. ಯಾವುದರ ಅರ್ಥವಾಗಲಿ ಅರ್ಥೈಸುವ ವ್ಯಕ್ತಿಯನ್ನವ ಲಂಬಿಸಬೇಕಾಗುತ್ತದೆ. ಅರ್ಥದ ಅರ್ಥವನ್ನು ಹೇಳಹೊರಟ ತಜ್ಞರು ಹದಿನಾರು ವಿವರಣೆಗಳನ್ನು ನೀಡಿದ್ದಾರೆಂದರೆ ಆಶ್ಚರ್ಯವಾಗದಿರದು.

ಈ ಗೊಂದಲ, ವಾದವಿವಾದಗಳಿಂದ ಆಯ್ದ ಕೆಲವು ಸ್ಥೂಲ ನಮೂನೆಗಳನ್ನು ನೋಡಬಹುದು.

1. ಯಾವುದಾದರೂ ಒಂದು ಪ್ರಸಂಗದ, ಸಂಗತಿಯ, ಸೂಚನೆ ಸಂಕೇತ: ಉದಾಹರಣೆ, ಬ್ಯಾರಾಮೀಟರಿನ ಪಾದರಸ ಇಳಿದರೆ ಮಳೆ ಬರುತ್ತದೆ. ಹುಣ್ಣಿಮೆ ಎಂದರೆ ಉಬ್ಬರವಿಳಿತಗಳಾಗುತ್ತವೆ. ಪಾವ್‌ಲೋವ್‌ನ ಸಿದ್ಧಾಂತದಂತೆ ಗಂಟೆ ಎಂದರೆ ಆಹಾರ. ಅಂದರೆ $x$ಎಂಬ ತತ್ತ್ವ $y$ ಆಗಬಹುದಾದರೆ $x$ ಮತ್ತು $y$ಗಳಿಗೆ ನಿಕಟ ಸಂಬಂಧವೇರ್ಪಟ್ಟು $x$ ಆದಾಗಲೆಲ್ಲ $y$ ಆಗಬೇಕೆಂಬ ತರ್ಕ ಬಲಗೊಳ್ಳುತ್ತದೆ.

2. ಸ್ವಯಂಪ್ರೇರಿತವಾದ ಕ್ರಿಯೆಯ ಆಶಯ, ಗುರಿ, ಉದ್ದೇಶ: ಅವನ ಅರ್ಥ ಕೆಟ್ಟದ್ದಲ್ಲ. ಅವನ ಅರ್ಥ ಒಳ್ಳೆಯದು. ಯಾಂತ್ರಿಕವಾದ ಜಗತ್ತು ಅರ್ಥವಿಲ್ಲದ್ದು ಎನ್ನುವಾಗ ಇದು ಸ್ಪಷ್ಟವಾಗಿದೆ.

3. ನಾವು ಇಟ್ಟುಕೊಂಡಿರುವ ಸಂಕೇತ ಏನನ್ನು ಸೂಚಿಸುತ್ತದೋ ಅದು: 1. ಬೋಧಾರ್ಥ: ಅನುಭವೈಕ ಪ್ರಾಮಾಣ್ಯವುಳ್ಳ ಪ್ರಮೇಯಗಳಿಂದ ತಿಳಿದುಬರುವ ಅಂಶಗಳು. ಅವು ನಿಜವಿರಬಹುದು, ಸುಳ್ಳಿರಬಹುದು. ಉದಾ: ಸತತಾಭ್ಯಾಸದಿಂದ ನೆನಪಿಗೆ ತಂದು ಕೊಳ್ಳುವುದಕ್ಕಿಂತ ಹೆಚ್ಚಿನ ಅಂಶಗಳನ್ನು ಗುರುತುಹಿಡಿಯಬಹುದು. 2. ನಿರ್ದೇಶಾರ್ಥ: ಆಜ್ಞೆ, ಕೋರಿಕೆಗಳನ್ನೂ ಹೇಳುವಂಥದು. ಉದಾ. ನೀನು ಕೊಲ್ಲಕೂಡದು. 3. ಭಾವೋದ್ವೇಗ ಸೂಚಕಾರ್ಥ: ನಿರ್ದಿಷ್ಟವಾಗಿ ಏನನ್ನೂ ಸೂಚಿಸದಿದ್ದರೂ ಅಲ್ಲಿನ ಉದ್ರೇಕ ಸ್ಪಷ್ಟ ಚೆನ್ನಾಗಿದೆ, ಸುಂದರ, ತುಂಬ ಕೆಟ್ಟಿದೆ–ಎಂಬುವು ಉದಾಹರಣೆಗಳು. 4. ಒಂದು ಹೇಳಿಕೆಯಲ್ಲಿ ಈ ಅರ್ಥಗಳೆಲ್ಲವೂ ಇರಬಹುದು. ಜೊತೆಗೆ ಇತರ ವಿಧವಾದ ಅರ್ಥಗಳೂ ಇರಬಹುದು. ಉದಾಹರಣೆ : ಜನಪ್ರಿಯನಾದ ಒಬ್ಬ ನಾಯಕನ ಭಾಷಣ ಅಥವಾ ಪತ್ರಿಕಾಲೇಖನ. ಅನೇಕ ವೇಳೆ ಒಂದು ಹೇಳಿಕೆಯ ಅರ್ಥ ಅಂದಿನ ಪರಿಸ್ಥಿತಿಯನ್ನವಲಂಬಿಸಿದ್ದು ಅದು ಬದಲಾದಂತೆಲ್ಲ ಮತ್ತು ಹೇಳುವವರ, ಕೇಳುವವರ ಮನಃಸ್ಥಿತಿಗಳನ್ನವಲಂಬಿಸಿ ಬದಲಾವಣೆ ಹೊಂದುತ್ತಿರುತ್ತದೆ. ಹಾಸ್ಯ ಲೇಖಕ ಅಥವಾ ನಗೆಗಾರನೆಂದು ಪ್ರಖ್ಯಾತನಾದವನೊಬ್ಬ ಎಂಥ ಗಂಭೀರವಾದ ಮಾತನ್ನೇ ಆಡಲಿ ಅದು ನಗೆಯನ್ನೇ ಬರಿಸಬಹುದು. ಈ ಬಗೆಯ ವಿವೇಚನೆಯನ್ನು ಸಂಕೇತಗಳ ಸಾಮಾನ್ಯ ಸಿದ್ಧಾಂತವನ್ನು ಕುರಿತ ಶಾಸ್ತ್ರದ (ಸೆಮಿನೋಟಿಕ್ಸ್) ಅಂಗವಾದ ಫಲಪ್ರಮಾಣಶಾಸ್ತ್ರದಲ್ಲಿ (ಪ್ರಾಗ್ಮ್ಯಾಟಿಕ್ಸ್) ನಡೆಸಲಾಗುತ್ತದೆ. ಆದರೆ, ಮುಖ್ಯವಾದ ಕೆಲವು ತಾರ್ಕಿಕವಾದಗಳನ್ನು ನಡೆಸುವುದಕ್ಕಾಗಿಯೂ ನಿಘಂಟುಗಳ ರಚನೆಯೇ ಮೊದಲಾದ ಕೆಲವು ಭಾಷಾಶಾಸ್ತ್ರದ ಪ್ರಕಟಣೆಗಳಿಗಾಗಿಯೂ ಶುದ್ಧ ಶಬ್ದಾರ್ಥ ವಿಜ್ಞಾನಲಬ್ಧವಾದ ಅರ್ಥವನ್ನು ಸ್ವೀಕರಿಸುವುದು ಮೇಲು. ಇದರಿಂದ ಸಂಕೇತಗಳನ್ನು ಉಪಯೋಗಿಸುವವರಾರೆಂಬ ಪರಿಗಣನೆ ತಪ್ಪಿ ಹೋಗಿ ಒಂದು ಶಬ್ದದ ಅರ್ಥ ಒಂದು ವಸ್ತು, ಗುಣ ಅಥವಾ ಶಬ್ದದಿಂದ ಸೂಚಿತವಾದಷ್ಟಕ್ಕೆ ಮಾತ್ರ ಸೀಮಿತವಾಗುತ್ತದೆ. ಆಗ ಶಬ್ದಾರ್ಥ ವಿಜ್ಞಾನದಿಂದ ಉದಿಸುವ ಅರ್ಥ ಸಂಕೇತಗಳಿಗೂ ಅವು ಯಾವುದನ್ನು ಸೂಚಿಸುತ್ತವೋ ಅವಕ್ಕೂ ಇರುವ ಸಂಬಂಧಕ್ಕೆ ಮಾತ್ರ ಅನ್ವಯಿಸುತ್ತದೆ.

ಅನೇಕರು ಅರ್ಥ ಎರಡು ಬಗೆಯದು ಎನ್ನುತ್ತಾರೆ. ಒಂದು ಅದರ ನಿರ್ದೇಶನಾರ್ಥ (ಡಿನೋಟೇಷನ್). ಇನ್ನೊಂದು ಅದರ ಲಕ್ಷಣಸೂಚಕಾರ್ಥ (ಕಾನೋಟೇಷನ್). ಒಂದು ಶಬ್ದ ಒಂದು ವಸ್ತುವನ್ನು ನಿರ್ದೇಶಿಸುವಂತೆ ಅದರ ಗುಣವನ್ನು ಸೂಚಿಸುತ್ತದೆ. ಒಂದು ಪದದ, ನಿರ್ದೇಶನಾರ್ಥ ಯಾವುವೆಂದರೆ ಆ ಶಬ್ದ ಯಾವುದರ ಕಡೆಗೆ ಬೆರಳಿಟ್ಟು ತೋರಿಸುತ್ತದೋ ಅದು. ಲಕ್ಷಣಸೂಚಕಾರ್ಥ ಗುಣಗಳನ್ನು ಕುರಿತು ಹೊರಡುತ್ತವೆ. ಭಾವನೆಗಳು, ಸಂವೇದನೆಗಳು, ಕಾರ್ಯಪ್ರವೃತ್ತಿಗಳು ಮತ್ತು ಅರ್ಥದಲ್ಲಿ ಅಡಗಿರುವ ಇತರ ಮನಃಪ್ರವೃತ್ತಿಯ ಅಂಶಗಳು ಇವುಗಳತ್ತ ಸಾಗುತ್ತವೆ.

ಒಂದು ಅರ್ಥಛಾಯೆಯನ್ನುಳ್ಳ ಭಾಷಾರೂಪಗಳಿಗೆ ಪರ್ಯಾಯ ಪದಗಳೆಂದು (ಸಿನನಿಮ್ಸ್) ಹೆಸರು. ಉದಾಹರಣೆ, ತಂದೆ ತಾಯಿಗಳ ತಾಯಿ ಅಜ್ಜಿ. ಒಂದು ಶಬ್ದದ ಅಥವಾ ಪದಪುಂಜದ ಅರ್ಥವನ್ನು ವಿವರಿಸುವುದರಲ್ಲಿ ಸಾಮಾನ್ಯವಾಗಿ ಅದರ ಆಶಯವನ್ನು ಹೇಳಲು ಅದಕ್ಕೆ ಸಮಾನಾರ್ಥವುಳ್ಳ ಅಥವಾ ಪರ್ಯಾಯವಾದ ಪದಗಳ ಮೂಲಕ ಅದರ ಲಕ್ಷಣವನ್ನು ವಿವರಿಸುತ್ತೇವೆ. ಒಂದು ಶಬ್ದವನ್ನು ಅನೇಕ ಆಶಯಗಳನ್ನು ವ್ಯಕ್ತಪಡಿಸುವುದಕ್ಕೆ ಉಪಯೋಗಿಸಿದ್ದೇ ಆದರೆ ಅದು ಸಂದಿಗ್ಧಾರ್ಥಕವೆನಿಸುತ್ತದೆ. ಇದಕ್ಕೆ ಈ ವಿವೇಚನೆಯ ವಸ್ತುವಾದ ಅರ್ಥ ಎಂಬ ಪದವೇ ಉತ್ತಮ ಉದಾಹರಣೆ.

ಪ್ರಾಯೋಗಿಕವಾಗಿ ಸಮರ್ಥಿಸಬಲ್ಲ ಹೇಳಿಕೆಗಳು ಮಾತ್ರ ಅರ್ಥವುಳ್ಳವು. ಇವು ವಾಸ್ತವಿಕತಾತತ್ತ್ವ ಪ್ರತಿಪಾದಕರಾದ ತಾರ್ಕಿಕರ ಮತ.

ಈ ವಿಷಯದ ಬಗ್ಗೆ ಅವರಲ್ಲೂ ಒಮ್ಮತವಿದ್ದಂತಿಲ್ಲ. ಈ ಎಪ್ಪತ್ತು ವರ್ಷಗಳಲ್ಲಿ ಈ ವಿಷಯ ಬಹು ಮುಖ್ಯವಾಗಿ ಅವರೆಲ್ಲರ ಗಮನವನ್ನು ಸೆಳೆದಿದೆ. ಎಫ್. ಸಿ. ಬರ್ಟ್‌ಲೆಟ್ಟನ ಪ್ರಕಾರ ಮನುಷ್ಯ ಅರಿಯುವ ಪ್ರಯತ್ನ ಮಾಡುವಾಗಿನ ಸಮೀಕ್ಷಣೆ, ಕಲ್ಪನೆ, ಆಲೋಚನೆ ಮತ್ತು ತಾರ್ಕಿಕಾನುಮಿತಿಗಳು ಆತನ ಅರ್ಥಪ್ರವೃತ್ತ ಪ್ರಯತ್ನಗಳು.

ಪಾವ್‌ಲೋವ್‌ನ ಔಪಾಧಿಕತೆಯನ್ನು ಮುಗ್ಧವಾಗಿ ಅನ್ವಯಿಸುವುದರಿಂದ ಗಂಟೆ ಎಂದರರೇನೇ ಅನ್ನ ಎಂಬ ಅರ್ಥ ಸ್ಫುರಿಸುತ್ತದೆ. ವಾಟ್ಸನ್ ಮುಂತಾದ ಹಿಂದಿನ ಕಾಲದ ವರ್ತನಾವಾದಿಗಳು (ಬಿಹೇವಿಯರಿಸ್ಟ್ಸ್) ಸಂಕೇತಸೂಚಿತವಸ್ತುಗಳು ಮೊದಲು ಯಾವ ಪ್ರತಿಕ್ರಿಯೆಯನ್ನು ಹುಟ್ಟಿಸಿದವೊ ಆ ಸಂಕೇತಗಳಿಗೆ ಆಯಾ ಅರ್ಥಗಳು ಕೂಡಿಕೊಂಡಿರುತ್ತವೆ ಎಂದು ಹೇಳುತ್ತಾರೆ. ಆದರೆ ಈ ದೃಷ್ಟಿ ತುಂಬ ಸರಳವಾದದ್ದು. ಸಂಕೇತಗಳು ಪ್ರತಿನಿಧಿಸುವ ವಸ್ತುಗಳಿಗೆ ಒಂದು ಜೀವಿ ತೋರುವ ಬಾಹ್ಯ ಪ್ರತಿಕ್ರಿಯೆಯನ್ನು ಅದು ಎಂದಿಗೂ ಆ ಸಂಕೇತಗಳಿಗೆ ತೋರಿಸುವುದಿಲ್ಲ. ನಾಯಿ ಗಂಟೆಯನ್ನು ತಿನ್ನುವುದಿಲ್ಲ !

ಆಲೋಚನೆ ಯಾವುದೋ ಒಂದು ವಿಚಿತ್ರ ರೀತಿಯಲ್ಲಿ ತನ್ನ ಅರ್ಥವನ್ನು ಪ್ರಕಟಗೊಳಿಸುತ್ತದೆ ಎಂದು ಅನೇಕ ವೇಳೆ ಭಾವಿಸಲಾಗುತ್ತದೆ. ಅರ್ಥವೆಂಬುದು ಒಂದು ವಿಚಾರದ ಅಥವಾ ವಿಷಯದ ಬೋಧೆಯ ಪ್ರಮುಖಾಂಶ, ಅರ್ಥೈಸುವಾಗ ತತ್‌ಕ್ಷಣದಲ್ಲಿ ಮಿದುಳಿಗೆ ಸಂಬಂಧವೇರ್ಪಡಬೇಕಾಗಿಲ್ಲವೆಂದು ಮೆಗ್ಡುಗಲ್ಲನ ಅಭಿಪ್ರಾಯ. ವರ್ತನಾವಾದಿ ವಾಸ್ತವವಾಗಿ ಅರ್ಥವನ್ನು ಯಾವ ಅರ್ಥದಲ್ಲೂ ಮನಸ್ಸಿಗೆ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಏಕೆಂದರೆ ವರ್ತನಾವಾದಿತತ್ತ್ವದ ಪ್ರಕಾರ, ನಿಷ್ಕೃಷ್ಟವಾಗಿ ವಿಶ್ಲೇಷಿಸಿ ವ್ಯಾಖ್ಯಾನಿಸುವುದಾದರೆ, ಆಲೋಚನೆ ಕೂಡ ಸ್ನಾಯುವಿನ ಒಂದು ಕಾರ್ಯವಷ್ಟೇ ಹೊರತು ಬೇರೇನೂ ಅಲ್ಲ. ಅವರು ಹೇಳುವ ಹಾಗೆ, ನಾವು ನಮ್ಮ ಸ್ನಾಯುವಿನೊಡನೆ ಆಲೋಚಿಸುತ್ತೇವೆ. ಮತ್ತು ಆಲೋಚನೆ ಎಂಬುದು ಅಪ್ರಕಟವಾದ ಮಾತು ಅಷ್ಟೆ.

ಇಲ್ಲಿ ಟಿಚ್ನರ್ ಅರ್ಥದ ವಿಷಯದಲ್ಲಿ ಪ್ರತಿಪಾದಿಸಿರುವ ಸಾಂದರ್ಭಿಕ ಸಿದ್ಧಾಂತದ (ಕಾಂಟೆಕ್ಸ್ಟ್ ಥಿಯೊರಿ) ವಿಚಾರವನ್ನು ಕುರಿತು ಪ್ರಸ್ತಾಪಿಸಬಹುದು. ಮನಶ್ಶಾಸ್ತ್ರದ ಪ್ರಕಾರ ಅರ್ಥವೆಂದರೆ ಸಂದರ್ಭ, ಅನುಭವದ ಮುಖ್ಯಾಂಶಗಳು. ಪ್ರತ್ಯಕ್ಷಾನುಭವ ಮತ್ತು ಪ್ರತಿರೂಪಗಳು ಸಂದರ್ಭ, ಸಂಬಂಧಗಳ ಮೂಲಕ ಅರ್ಥವನ್ನು ಪಡೆದುಕೊಳ್ಳುತ್ತವೆ.

ಪ್ರತ್ಯಕ್ಷಾನುಭವದಲ್ಲಿ ಪರಸ್ಪರ ಸಂಬಂಧವುಳ್ಳ ಪ್ರತಿರೂಪಗಳು ಒಂದು ಸಂದರ್ಭವನ್ನು ರೂಪಿಸುತ್ತವೆ. ಅವನ್ನೆಲ್ಲ ಒಟ್ಟಾಗಿ ಎತ್ತಿ ಹಿಡಿದುಕೊಂಡು ಅದಕ್ಕೊಂದು ನಿರ್ದಿಷ್ಟ ಅರ್ಥವನ್ನು ಕೊಡುತ್ತವೆ ಮತ್ತು ಈ ಅರ್ಥದ ಅಂಚೇ ಸಂವೇದನೆಗಳನ್ನು ಬರೀ ಸಂವೇದನೆಗಳನ್ನಾಗಿ ಮಾಡದೆ ಸಂಕೇತಗಳನ್ನಾಗಿ ಮಾಡುತ್ತದೆ. ಈ ತೆರದಲ್ಲಿ ಒಂದು ಕಿತ್ತಳೆಯ ಹಣ್ಣಿನ ಬಣ್ಣದ ಮತ್ತು ಅದರ ಹೊಳಪಿನ ಕೆಲವು ಪ್ರತ್ಯಕ್ಷಾನುಭವವನ್ನು ನಾವು ಪಡೆದಾಗ ಸಾಂದರ್ಭಿಕವಾದ ವಾಸನೆ ಮತ್ತು ರುಚಿಯ ಪ್ರತಿರೂಪಗಳೂ ಸಹ ಉದ್ಬೋಧನಗೊಳ್ಳುತ್ತವೆ; ಇವುಗಳು ಆ ವಸ್ತುವಿನ ನೆಲೆಯನ್ನು ಪತ್ತೆ ಮಾಡಲು ಅಥವಾ ಅದನ್ನು ಗುರುತಿಸಲು ನಮಗೆ ನೆರವಾಗುತ್ತವೆ; ಎಂದರೆ, ರಸವತ್ತಾದ ಒಂದು ಕಿತ್ತಳೆ ಹಣ್ಣಿನ ಅರ್ಥವನ್ನು ನಮ್ಮ ಕಣ್ಣಿನ ಸಂವೇದನೆಗಳೇ ಕೊಡುತ್ತವೆ. ಟಿಚ್ನರನ ಅಭಿಪ್ರಾಯದ ಪ್ರಕಾರ ಪ್ರತ್ಯಕ್ಷಾನುಭೂತಿಗಳು ಅರ್ಥವತ್ತಾಗಿವೆಯೇ ಹೊರತು ಬರಿ ಇಂದ್ರಿಯಾನುಭವಗಳಲ್ಲ. ಬೋರಿಂಗ್ ಹೇಳಿರುವಂತೆ

ಒಂದು ಅರ್ಥವನ್ನು ನಿರೂಪಿಸಲು ಎರಡು ಮಾನಸಿಕ ಪ್ರಕ್ರಿಯೆಗಳು ಬೇಕು. ಒಂದು ಪ್ರತ್ಯಕ್ಷಾನುಭವ; ಮತ್ತೊಂದು ಪ್ರತಿರೂಪ. ಸಂವೇದನೆ ಅಥವಾ ಪ್ರತಿರೂಪ ಜೊತೆಗೂಡಿದ್ದೇ ಆದರೆ ಒಂದು ಪ್ರತ್ಯಕ್ಷಾನುಭವದ ರೂಪದಲ್ಲಿ ಅಥವಾ ಒಂದು ಭಾವದ ರೂಪದಲ್ಲಿ ಅದಕ್ಕೆ ಅರ್ಥಪ್ರಾಪ್ತವಾಗುತ್ತದೆ.

ನೋಬಲ್ ಎಂಬಾತ ಎರಡು ಶಬ್ದಗಳ ನಡುವೆ ಇರುವ ವಿಲಕ್ಷಣವಾದ ಸಂಬಂಧವೇ ಅರ್ಥವೆಂದು ಪರಿಭಾವಿಸಿಕೊಂಡು, ಅರ್ಥದ ವಾಚ್ಯಾರ್ಥಗಳಿಗಿಂತಲೂ ಲಕ್ಷ್ಯಾರ್ಥಗಳಿಗೇ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದಾನೆ. ಎಂದರೆ, ಅನೇಕ ವ್ಯಂಗ್ಯಾರ್ಥಗಳುಳ್ಳ ಶಬ್ದ ಅದಕ್ಕಿಂತ ಕಡಿಮೆ ವ್ಯಂಗ್ಯಾರ್ಥವುಳ್ಳ ಶಬ್ದಕ್ಕಿಂತ ಹೆಚ್ಚು ಅರ್ಥವತ್ತಾದುದು ಎಂದು ಭಾವಿಸಿದ್ದಾನೆ. ಆತ ತಾತ್ಪರ್ಯದ ತಾರ್ಕಿಕ ಸಂಬಂಧ ಮಾನಸಿಕವಾದ ಸಾಂಬಂಧಿಕ ಪ್ರಕ್ರಿಯೆಯೊಡನೆ ಸಂಗತವಾಗುತ್ತದೆಯೆಂದು ವಾದಿಸಿದ. ಒಂದು ಅರ್ಥವನ್ನು ಅದಕ್ಕಿಂತಲೂ ಹೆಚ್ಚಾಗಿ ಅದರ ಪೂರ್ಣತೆಯನ್ನು ಆ ಪದ ಕೊಡುವ ಸಂಬಂಧಗಳನ್ನು ಎಣಿಕೆ ಮಾಡಿ ಅಳೆಯಲು ಪ್ರಯತ್ನಿಸಿದ.

ಮತ್ತೊಂದು ಗಮನಾರ್ಹವಾದ ಪ್ರಯತ್ನ ಓಸಗುಡ್‌ನ ಶಬ್ದಾರ್ಥ ವ್ಯತ್ಯಾಸಗಳನ್ನು ಅಳೆಯುವ ಮಾಪಕ. ಇದು ಭಾವನೆಗಳ ಅರ್ಥದ ಆಳತೆಯನ್ನು ಪಡೆಯಲು ಯತ್ನಿಸುತ್ತದೆ. ಈ ಮಾಪನ ಪ್ರಕ್ರಿಯೆಯ ತಳದಲ್ಲಿ ಯಾವ ಭಾವವಿದೆಯೆಂದರೆ, ಪದಾರ್ಥದಲ್ಲಿ ಅದಕ್ಕಿಂತ ಸೂಕ್ಷ್ಮವಾದ, ವಿವರಿಸಲು ಕಷ್ಟವಾದ ಅರ್ಥಗಳೂ ಇವೆ ಎಂಬುದು. ಈ ಒಳಾರ್ಥಗಳನ್ನು ಅಳೆಯುವುದಕ್ಕೆ ಒಂದು ಹೊಸ ದಾರಿಯನ್ನು ಹಿಡಿಯಲಾಗಿದೆ. ಉದಾಹರಣೆಗೆ, ಅಡಿಗೆ ಮನೆ ಎಂಬುದಕ್ಕೆ ಇಪ್ಪತ್ತು ಗುಣವಾಚಕಗಳನ್ನು ಉಪಯೋಗಿಸಬಹುದು. ಒಳ್ಳೆಯದು–ಕೆಟ್ಟದು, ದೊಡ್ಡದು–ಚಿಕ್ಕದು, ಶುಚಿಯಾದ್ದು–ಕೊಳಕಾದ್ದು–ಹೀಗೆ. ಈ ಭಿನ್ನ ಭಿನ್ನ ಗುಣವಾಚಕಗಳ ಸಪ್ತಾಂಶಿಕ ಸೂಚನಾನಕ್ಷೆಯಲ್ಲಿ ಯಾವ ಅಂಕಗಳನ್ನು ಕೊಡುತ್ತವೋ ಅವುಗಳ ಮೊತ್ತದ ನಮೂನೆ ಅವನ ಅರ್ಥವನ್ನು ಸೂಚಿಸುತ್ತದೆ. ಇದರ ಮೇಲಿನ ಸಾಮಾನ್ಯ ಟೀಕೆ ಏನೆಂದರೆ, ಈ ಶಬ್ದಾರ್ಥ ವ್ಯತ್ಯಾಸಗಳ ಪ್ರಮಾಣಗಳು ಅದರ ಅರ್ಥವನ್ನು ತಿಳಿಸದೆ ಅದರ ರಾಗೋದ್ಬೋಧಕ ಪ್ರಭಾವವನ್ನು ಮಾತ್ರ ತಿಳಿಸುತ್ತವೆ ಎಂದು.

ಅರ್ಥವನ್ನು ಅಳೆಯುವ ಈ ಪ್ರಯತ್ನಗಳು ವಿಶ್ವಾಸಾರ್ಹವಾಗಿಯೂ ಉಪಯುಕ್ತವಾಗಿಯೂ ಇವೆ. ಅರ್ಥಕ್ಕೆ ಅನೇಕ ಪರಿಮಾಣಗಳಿವೆ. ಆದ್ದರಿಂದ ಅದನ್ನು ಅಳೆಯುವ ಕ್ರಮಗಳು ಮುಂದುವರಿಯಬೇಕು. ಅರ್ಥದ ಅರ್ಥಗಳನ್ನು ವಿಂಗಡಿಸಿ ನೋಡಿ ತಿಳಿಯದಿದ್ದರೆ ಬಹುಮಟ್ಟಿನ ಅಪಾಯ, ವೈಮನಸ್ಯ, ತೊಂದರೆಗಳು ತಪ್ಪಿದ್ದಲ್ಲ. (ವಿ.ಕೆ.ಕೆ.)

**ಅರ್ಥಕ್ರಿಯಾಕಾರಿತ್ವ :** ಸತ್ ಎಂಬ ಪದದ ಸ್ವರೂಪವೆಂಥದ್ದು ಎಂಬುದನ್ನು ವಿವರಿಸುವಾಗ ಈ ವಾದ ಬರುತ್ತದೆ. ಈ ಪ್ರಶ್ನೆಗೆ ಸ್ಥೂಲವಾಗಿ ಎರಡು ಬಗೆಯ ಉತ್ತರಗಳಿವೆ. ಹುಟ್ಟು ಸಾವಿಲ್ಲದೆ ಯಾವ ವಿಧವಾದ ಬದಲಾವಣೆಗೂ ಒಳಪಡದೆ ಎಲ್ಲ ಕಾಲಕ್ಕೂ ಸ್ಥಿರವಾಗಿ ಇರುವುದೇ ಸತ್ ಎಂಬುದು ಒಂದು. ಭಾರತದಲ್ಲಿ ವೇದಾಂತಿಗಳು–ಅದರಲ್ಲೂ ಮುಖ್ಯವಾಗಿ ಅದ್ವೈತ ವೇದಾಂತಿಗಳು, ಪಾಶ್ಚಾತ್ಯರಲ್ಲಿ ಪಾರ್ಮನಿಡೀಸ್, ಪ್ಲೇಟೊ, ಹೆಗೆಲ್ ಮೊದಲಾದರು ಈ ರೀತಿಯಾದ ಉತ್ತರ ಕೊಡುತ್ತಾರೆ. ಇದಕ್ಕೆ ಪ್ರತಿಯಾದದ್ದು ಇನ್ನೊಂದು: ಸತ್ ಎಂದರೆ ಸದಾ ಕ್ರಿಯಾಕಾರಿಯಾಗಿರುವುದೇ ವಿನಾ ಏನೂ ಮಾಡದೆ ತಟಸ್ಥವಾಗಿರುವುದು ಸತ್ ಎಂದು ಕರೆಯಿಸಿಕೊಳ್ಳಲು ಯೋಗ್ಯವಲ್ಲ ಎಂಬುದು. ಭಾರತೀಯರು ಮುಖ್ಯವಾಗಿ ಕ್ರಿಯಾಪ್ರಧಾನತತ್ತ್ವವನ್ನು ಅನುಸರಿಸುವ ಬೌದ್ಧರೂ ಜೈನರೂ ಪೂರ್ವಮೀಮಾಂಸಕರೂ ಪಾಶ್ಚಾತ್ಯರಲ್ಲಿ ಹೆರಾಕ್ಲಿಟಸ್, ಪ್ರೊಟಾಗರಾಸ್, ವಿಲಿಯಂ ಜೇಮ್ಸ್, ಜಾನ್‌ಡ್ಯೂಯಿ, ಎನ್. ಸಿ. ಎಸ್. ಷಿಲ್ಲರ್ ಮೊದಲಾದವರು ಕ್ರಿಯಾಕಾರಿತ್ವ ತತ್ತ್ವವನ್ನು ಎತ್ತಿ ಹಿಡಿದವರು.

ಇವರೆಲ್ಲರೂ ಕ್ರಿಯಾಕಾರಿಯಾಗಿರುವುದೇ ಸತ್ ಎಂದು ಒಪ್ಪಿದರೂ ಸತ್ಯದ ಸ್ವರೂಪ ಮತ್ತು ಪ್ರಮಾಣವೇನು ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಹೊರ ವಸ್ತುವಿಗೆ ಸಂವಾದಿಯಾದ ಜ್ಞಾನವೇ ಸತ್ಯದ ಸ್ವರೂಪ ಎಂದು ವಾಸ್ತವವಾದಿಗಳೆಲ್ಲರೂ ಒಪ್ಪುತ್ತಾರೆ. ಬೌದ್ಧರಲ್ಲಿ ವಿಜ್ಞಾನವಾದಿಗಳು ಮಾತ್ರ ಇದನ್ನು ಒಪ್ಪುವುದಿಲ್ಲ. ಫಲಕಾರಿಯಾದುದೇ ಸತ್ಯವೆಂದು ಹೇಳುತ್ತಾರೆ. ವೈಶೇಷಿಕರು ವಾಸ್ತವವಾದಿಗಳಾದುದರಿಂದ ಸತ್ಯದ ಸ್ವರೂಪ ಫಲವೆಂದು ಒಪ್ಪುವುದಿಲ್ಲ. ಸಕ್ಕರೆ ಎಂದು ಋಜುವಾತಾಗಬೇಕಾದರೆ ಅದು ನೀರಿನಲ್ಲಿ ಕರಗಬೇಕು, ಬಾಯಲ್ಲಿ ಹಾಕಿಕೊಂಡರೆ ಸಿಹಿಯಾಗಿರಬೇಕು. ಆದ್ದರಿಂದ ಸತ್ಯವನ್ನು ಸ್ಥಾಪಿಸುವುದು ಅದರಿಂದ ಉಂಟಾಗುವ ಫಲದಿಂದ ಎನ್ನುತ್ತಾರೆ. ಇದು ಪಾಶ್ಚಾತ್ಯರ ಕ್ರಿಟಿಕಲ್ ರಿಯಲಿಸ್ಟ್ ಪಂಥದ ವಾದವನ್ನು ಹೋಲುತ್ತದೆ. ಪಾಶ್ಚಾತ್ಯರಲ್ಲಿ ಎಸ್. ಸಿ. ಎಸ್. ಷಿಲ್ಲರ್ ಅಪ್ಪಟ ಫಲವಾದಿ. ಜಾನ್ ಡ್ಯೂಯಿಯ ವಾದ ವೈಜ್ಞಾನಿಕ ಮಾರ್ಗಕ್ಕೆ ಸಂಗತವಾದ ಫಲವಾದ. (ಜಿ.ಎಚ್.)

**ಅರ್ಥ – ದರ್ಶನ :** ಅರ್ಥ ಎಂಬ ಶಬ್ದಕ್ಕೆ ಅನೇಕಾರ್ಥಗಳು ಬಳಕೆಯಲ್ಲಿವೆ. ವಿಶಾಲಾರ್ಥದಲ್ಲಿ ಬಳಸಿದರೆ, ಮತ್ತೊಂದನ್ನು ಸೂಚಿಸುವ, ಆದರೆ ಪ್ರತಿಕೃತಿಯಾಗಿರದ, ಯಾವುದೇ ಒಂದು ವಸ್ತು ಇಲ್ಲವೆ ಕ್ರಿಯೆ ಅರ್ಥವತ್ತೆನ್ನಬಹುದು. ಅರ್ಥತ್ವದಿಂದಾಗಿ ಅದನ್ನು ಸಂಜ್ಞೆ ಅಥವಾ ಸಂಕೇತವೆನ್ನಲೂಬಹುದು. ಭಾವಚಿತ್ರ ಒಬ್ಬನನ್ನು ಚಿತ್ರಿಸಿದರೂ ಅವನು ಅದರ ಅರ್ಥವಲ್ಲ; ಅವನ ವರ್ಣನೆಗಳ ಅರ್ಥ ಅವನಾಗಬಹುದು. ಮನಬಂದಂತೆ ಒಂದನ್ನು ಇನ್ನೊಂದಕ್ಕೆ ಪ್ರತೀಕವಾಗಿಸಬಹುದು. ತ್ರಿವರ್ಣಧ್ವಜ ಭಾರತ ರಾಷ್ಟ್ರವನ್ನು ಪ್ರತಿನಿಧಿಸುವುದು ಉದಾಹರಣೆ. ಕೆಲವೊಂದು ಸ್ವಾಭಾವಿಕ ಸಂಬಂಧಗಳನ್ನು ಅನುಲಕ್ಷಿಸಿಯೂ ಪ್ರತೀಕಗಳನ್ನು ಬಳಸಬಹುದು. ಉದಾಹರಣೆಗೆ, ಉಂಗುರ ವಿವಾಹಕ್ಕೆ ಪ್ರತೀಕವಾಗಿರುವಂತೆ, ಕೆಲವೊಂದು ವಸ್ತುಗಳಿಗೆ ತಮ್ಮ ಸ್ವರೂಪಕ್ಕೆ ಸಂಬಂಧಿಸಿದ ಆದರೆ ಅರ್ಥಕ್ಕೆ ಮಾತ್ರ ಸಂಬಂಧಿಸಿದ ಹೆಸರುಗಳೂ ಇರುವುದುಂಟು. ಉದಾಹರಣೆ–ಮುಟ್ಟಿದರೆ ಮುನಿ. ಹೀಗೆ ವಿಶಾಲಾರ್ಥದಲ್ಲಿ ಎಲ್ಲ ಕಲೆಗಳ, ವಿಜ್ಞಾನಗಳ, ಗುರಿಯೂ ವಸ್ತುಗಳ ಅರ್ಥ ಶೋಧನೆಯೇ ಎಂದರೆ ಸಲ್ಲುತ್ತದೆ. ಮನುಷ್ಯ ಪ್ರಾಣಿಯಿಲ್ಲದಿದ್ದರೂ ಧ್ವನಿಗಳೂ ವಸ್ತುಗಳೂ ಜಗತ್ತಿನಲ್ಲಿ ಇರಬಲ್ಲವು; ಆದರೆ ಅವು ಅರ್ಥವತ್ತಾದ ಪ್ರತೀಕಗಳೆನಿಸುವುದು ಮನುಷ್ಯ ಬುದ್ಧಿಯಿಂದ ಮಾತ್ರ. ಆದ್ದರಿಂದ ಎಲ್ಲ ಮನುಷ್ಯನ ವಿಚಾರಗಳೂ ಕಲ್ಪನೆಗಳೂ ಅರ್ಥದ ಪ್ರಕಾರ ಲೇಶಗಳೇ ಸರಿ. ಆದರೆ ಅತಿ ಪ್ರಸಿದ್ಧವೂ ಅತಿ ಪರಿಚಿತವೂ ಆದ ಪ್ರತೀಕವೆಂದರೆ ಭಾಷೆಯೊಂದೇ. ಆದ್ದರಿಂದ ತತ್ತ್ವಶಾಸ್ತ್ರದಲ್ಲಿ ವಿವೇಚಿಸುವ ಅರ್ಥ ಭಾಷೆಗೆ ಮಾತ್ರ ಸಂಬಂಧಿಸಿದ್ದು.

ತರ್ಕಶಾಸ್ತ್ರದಲ್ಲಿ ಅರ್ಥವನ್ನು ಎರಡು ಬಗೆಗಳಾಗಿ ವಿಂಗಡಿಸಿದ್ದಾರೆ : 1. ಕರ್ತೃಪದ ಇಲ್ಲವೆ ಕ್ರಿಯಾಪದಕ್ಕಿರುವ ಅನ್ವಯವ್ಯಾಪ್ತಿ. ಯಾವುದಕ್ಕೆ ಒಂದು ಪದ ಅನ್ವಯಿಸುವುದೆಂಬ ಜ್ಞಾನವಿದ್ದರೆ ಈ ಬಗೆಯ ಅರ್ಥಜ್ಞಾನವಿದೆಯೆನ್ನಬಹುದು. ರಾಮ ಎಂಬ ಪದ ದಶರಥಪುತ್ರನೆಂಬ ವ್ಯಕ್ತಿಗೆ ಅನ್ವಯಿಸುವುದೆಂಬ ಪರಿಜ್ಞಾನವೇ ಅದರ ವ್ಯಾಪ್ತಿ ನಿರ್ದೇಶಕ ಅರ್ಥ 2. ಒಂದು ಪದದಿಂದ ಅಭಿಪ್ರೇತವಾಗಿರುವ ಅರ್ಥಸ್ವರೂಪ. ಪದ ಸೂಚಿಸುವ ಗುಣ ಹಾಗೂ ಲಕ್ಷಣಾದಿಗಳು ಇದರಲ್ಲಿ ಸೇರುತ್ತವೆ. ಇದು ಶ್ರೋತೃಗಳಿಗೆ ಬೇರೆ ಬೇರೆಯಾಗಿದ್ದರೆ ವೈಯಕ್ತಿಕ ಅರ್ಥ ಎಲ್ಲರಿಗೂ ಸಮಾನವಾಗಿರುವಾಗ ಸಾಂಕೇತಿಕ ಅರ್ಥ. ಮನುಷ್ಯ ಎಂದರೆ ಆಲೋಚನಾ ಸಾಮರ್ಥ್ಯವುಳ್ಳ ಪ್ರಾಣಿಯೆಂಬುದು ಇದಕ್ಕೆ ಉದಾಹರಣೆ.

ತತ್ತ್ವಶಾಸ್ತ್ರದಲ್ಲಿ ಅರ್ಥಮೀಮಾಂಸೆಯನ್ನು ಕುರಿತು ಅನೇಕ ಸಿದ್ಧಾಂತಗಳು ಹುಟ್ಟಿವೆ. ಪುರೋಭಾಗಿ ಎಂದರೆ ದೋಷಗಳನ್ನು ಮಾತ್ರ ಎತ್ತಿ ಹಿಡಿಯುವವನು ಎಂದರ್ಥವೆಂಬ ವಾಕ್ಯವನ್ನು ನೋಡೋಣ. ಇಲ್ಲಿ ಅರ್ಥದ ಸ್ವರೂಪವೇನು? ಶಬ್ದದ ಶ್ರೋತೃಗ್ರಾಹ್ಯ ಅಂಶವಾಗಲಿ, ಅದರ ಪರಿಣಾಮ ವಿಶೇಷವಾಗಲಿ, ಅರ್ಥವೆನಿಸಲಾರದೆಂಬುದು ಸ್ಪಷ್ಟ. ಶಬ್ದಾಂಶದಿಂದಾಚೆಗೆ ಅದು ಸೂಚಿಸುವ ಅರ್ಥವೊಂದಿರಬೇಕೆಂದಾಯಿತು. ಇದಾವುದು? ಇದೇ ತಾತ್ತ್ವಿಕರ ಮೀಮಾಂಸೆಗೆ ಮೂಲಸಮಸ್ಯೆ.

ಈ ಸಮಸ್ಯೆಯ ಪರಿಹಾರಕ್ಕೆ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಶೋಧಿಸಿರುವ ವಾದಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ವರ್ಗೀಕರಿಸಬಹುದು: 1. ಅನ್ವಿತ ವಸ್ತುವೇ ಶಬ್ದದ ಅರ್ಥವೆಂಬ ಬಹುಪ್ರಚಲಿತ ವಾದವನ್ನು ಸಾನ್ವಯಸಿದ್ಧಾಂತ (ರೆಫರೆನ್ಷಿಯಲ್ ಥಿಯರಿ) ಎನ್ನಬಹುದು. ರಾಮ ಮುಂತಾದ ಅಂಕಿತನಾಮಗಳಿಗೆ ಅನ್ವಿತವ್ಯಕ್ತಿಯೇ ಅರ್ಥವೆಂದು ಇದರ ಆಶಯ. ಅನ್ವಿತ ವಸ್ತು ಸಂಬಂಧ ಮಾತ್ರ ಅರ್ಥವೆಂಬ ವಿವರಣೆಯೂ ಈ ಸಿದ್ಧಾಂತದ ಪ್ರಕಾರಾಂತರವೇ. ಈ ವಾದದ ಪುರಸ್ಕರ್ತರಲ್ಲಿ ಜೆ. ಎಸ್. ಮಿಲ್ (ಎ ಸಿಸ್ಟಮ್ ಆಫ್ ಲಾಜಿಕ್), ಬರ್ಟ್‌ರೆಂಡ್ ರಸೆಲ್ (ಎನ್ ಇನ್‌ಕ್ವೈರಿ ಇಂಟು ಮೀನಿಂಗ್ ಅಂಡ್ ಟ್ರೂತ್), ರುಡೋಲ್ಫ್ ಕಾರ್‌ನಾಸ್ (ಇಂಟ್ರೊಡಕ್ಷನ್ ಟು ಸೆಮ್ಯಾಂಟಿಕ್ಸ್) ಇವರನ್ನು ಉಲ್ಲೇಖಿಸಬಹುದು. ಭಿನ್ನ ಶಬ್ದಗಳು ಸೀತೆಯ ಗಂಡ, ಭರತನ ಅಣ್ಣ ಇತ್ಯಾದಿ ಒಬ್ಬನೇ ವ್ಯಕ್ತಿಗೆ ಅನ್ವಯಿಸಬಹುದಾದ್ದರಿಂದ, ಇವೆಲ್ಲ ಸಮಾನಾರ್ಥವೆನ್ನುವುದು ಅಷ್ಟು ಸರಿಯಾಗುವುದಿಲ್ಲ. ಶಬ್ದಭೇದದಿಂದ ಅರ್ಥಭೇದವನ್ನು ಒಪ್ಪದೆ ಗತ್ಯಂತರವಿಲ್ಲ. ಅನ್ವಯಿಸುವಿಕೆ ಒಂದು ಶಾಬ್ದಿಕಕ್ರಿಯೆಯಾದರೆ, ಅರ್ಥಬೋಧಕತೆ ಒಬ್ಬ ವಕ್ತೃವಿನ ಕಾರ್ಯವೆಂಬುದನ್ನು ಮರೆಯುವಂತಿಲ್ಲ. ಅನ್ವಯಗಳಿಗೆಲ್ಲ ಅನ್ವಿತಬಾಹ್ಯಾರ್ಥವನ್ನು ನಿರ್ದೇಶಿಸುವುದೂ ಅಶಕ್ಯ. ಇಡಿಯ ವಾಕ್ಯವೊಂದಕ್ಕೂ ಇದೇ ರೀತಿ ಅನ್ವಿತವಾದ ಬಾಹ್ಯಾರ್ಥವನ್ನು ತೋರಿಸುವುದು ಹೇಗೆ ?

ಆದ್ದರಿಂದ ಅಭಿಪ್ರಾಯಸಿದ್ಧಾಂತ (ಐಡಿಯೇಷನಲ್ ಥಿಯರಿ) ಎಂಬ ಮತ್ತೊಂದು ಅರ್ಥವಿವರಣೆ ಹೊರಡುವಂತಾಯಿತು. ಜಾನ್ ಲಾಕ್ (ಎಸ್ಸೆ ಕನ್ಸರ್ನಿಂಗ್ ಹ್ಯೂಮನ್ ಅಂಡರ್‌ಸ್ಟ್ಯಾಂಡಿಂಗ್) ಈ ವಾದದ ಮುಖ್ಯ ಪ್ರವರ್ತಕ. ಭಾಷೆಯಿರುವುದೇ ಅಭಿಪ್ರಾಯ ಪ್ರಕಟಣೆಗಾಗಿ; ಬುದ್ಧಿಯಲ್ಲಿ ಮೂಡುವ ವಿಚಾರ ತರಂಗಗಳೇ ಅಭಿಪ್ರಾಯಗಳು. ವಕ್ತೃ ತನ್ನ ವೈಯಕ್ತಿಕ ವಿಚಾರಗಳ ಪ್ರಕಟಣೆಗಾಗಿ ಭಾಷೆಯನ್ನು ಬಳಸುತ್ತಾನೆ. ಇದೇ ಅಭಿಪ್ರಾಯ ಶ್ರೋತೃವಿನಲ್ಲೂ ಮೂಡಿದಾಗ ಅರ್ಥಗ್ರಾಹ್ಯವಾದಂತೆ. ಈ ಸಿದ್ಧಾಂತದ ಪರಿಷ್ಕೃತ ರೂಪಗಳು ಹೆನ್ರಿ ಲಿಯೊನಾರ್ಡ್‌ನ ಎನ್ ಇಂಟ್ರೊಡಕ್ಷನ್ ಟು ಪ್ರಿನ್ಸಿಪಲ್ ಆಫ್ ರೀಸನ್ ಇತ್ಯಾದಿಗಳಲ್ಲಿ ಕಾಣಬರುತ್ತವೆ. ಜೀವನ ವೆಚ್ಚ ಏರುತ್ತಿದೆ ಎಂಬಂಥ ಸಣ್ಣ ವಾಕ್ಯಗಳಲ್ಲಿಯೇ ಆಗಲಿ ಪ್ರತಿ ಶಬ್ದಕ್ಕೂ ಅದರ ಹಿಂದಿನ ಅಭಿಪ್ರಾಯದ ವಿಶಿಷ್ಟಸ್ವರೂಪ ಬೇರೆಯಾಗಿ ಅನುಭವಕ್ಕೆ ಬರುತ್ತದೆಯೆ? ಈ ವಾದದಲ್ಲಿ ಅಭಿಪ್ರಾಯ, ಅರ್ಥ–ಇವಕ್ಕೆ ಅನ್ಯೋನ್ಯಾಶ್ರಯ ದೋಷವೂ ತಪ್ಪದು.

ಅರ್ಥ ಪ್ರತಿವ್ಯಕ್ತಿಯ ಅಭಿಪ್ರಾಯಕ್ಕಿಂತ, ಇಡಿಯ ಸಮಾಜದಿಂದ ಸ್ವೀಕೃತವಾದದ್ದನ್ನು ಪ್ರತಿನಿಧಿಸುತ್ತದೆಂಬ ವಿಚಾರವನ್ನು ಮುಂದೆ ಮಾಡಿ ಆಧುನಿಕ ಮನಶ್ಶಾಸ್ತ್ರಕಾರರಲ್ಲಿ ಅನೇಕರು ಪ್ರಚೋದನೆ ಹಾಗೂ ಪರಿಣಾಮ (ಸ್ಟಿಮ್ಯುಲಸ್, ರೆಸ್ಪಾನ್ಸ್) ಎಂಬ ಮೂರನೆಯ ವಿವರಣೆ ಯನ್ನಿತ್ತಿದ್ದಾರೆ. ಎಲ್. ಬ್ಲೂಮ್‍ಫೀಲ್ಡ್ ಮುಂತಾದ ಭಾಷಾಶಾಸ್ತ್ರಜ್ಞರೂ ಸಿ.ಕೆ. ಆಗ್ಡನ್, ಐ. ಎ. ರಿಚರ್ಡ್ಸ್ ಮುಂತಾದವರೂ ಈ ಸಿದ್ಧಾಂತದ ಅನುಯಾಯಿಗಳೇ. ಪ್ರಚೋದನಾ ಸಾಮಗ್ರಿಗಳ ಸಮಾವೇಶ–ಮನಃಪರಿಣಾಮಗಳ ಸಮೂಹ, ಇವುಗಳಿಂದ ತೋರುವ ಚರ್ಯೆಗಳೇ (ಬಿಹೇವಿಯರ್) ಶಬ್ದಾರ್ಥವೆಂದರೂ ಇಲ್ಲಿ ಕೂಡ ವೈಯಕ್ತಿಕ ಭೇದಗಳಿಗೆ ಸಂಪೂರ್ಣ ವ್ಯಾಖ್ಯೆ ದೊರೆಯದು.

ಅತ್ಯಾಧುನಿಕರಲ್ಲಿ ವಿಟ್‍ಗೈನ್‍ಸ್ಟೈನ್‍ನ ವಾದಸರಣಿ (ಫಿಲಸಾಫಿಕಲ್ ಇನ್‍ವೆಸ್ಟಿಗೇಷನ್ಸ್) ಗಮನಾರ್ಹವಾಗಿದೆ. ವಕ್ತೃವಿನ ಕಾರ್ಯದಲ್ಲಿ ಪ್ರಾರ್ಥನೆ, ಗದರಿಕೆ, ವಿಧಿ, ನೀಷೇಧ ಮುಂತಾದ ಅಂಗಗಳನ್ನು ಗಮನಿಸಿ ಅವನ ಶಬ್ದ ವ್ಯವಹಾರಕ್ಕೆ ಸಂಬಂಧಿಸಿದ ಅದೆಲ್ಲವನ್ನೂ ಅರ್ಥವೆಂದು ತಿಳಿಯಬೇಕೆಂಬುದು ಈ ನೂತನ ದೃಷ್ಟಿ. ಇಡಿಯ ವಾಕ್ಯ ತಾತ್ಪರ್ಯದೊಡನೆ ಪ್ರತಿ ಶಬ್ದಕ್ಕಿರುವ ಸಾಮಂಜಸ್ಯವೇ ಅದರ ಅರ್ಥ. ಶಬ್ದಾಂತರವನ್ನಿಟ್ಟಾಗಲೂ ಈ ಸಾಮಂಜಸ್ಯ ತಪ್ಪದಿದ್ದರೆ ಅದು ಸಮಾನಾರ್ಥಕ. ಹೀಗೆ ಅರ್ಥಮೀಮಾಂಸೆ ಇನ್ನೂ ನಡೆಯುತ್ತಲೇ ಇದೆ.

**(ಕೆ.ಕೆ.)**

**ಅರ್ಥಪೂರ್ಣ ರೂಪ :** ಕಲಾಕೃತಿಯಿಂದ ಅದರ ಕಥಾವಸ್ತು, ಮಾನವೀಯ ಭಾವ ಭಾವನೆಗಳು, ಅಂದ ಚೆಂದ ಮುಂತಾದುವನ್ನು ಒಂದು ಪಕ್ಕಕ್ಕೆ ತೆಗೆದಿಟ್ಟರೆ ಅದರಲ್ಲಿ ಉಳಿಯುವುದು ಬರಿ ರೇಖೆಗಳು, ಬಣ್ಣಗಳು, ಅವುಗಳ ಸಂಯೋಜನೆ. ಅವೇ ಆಕೃತಿಯ ಅರ್ಥಪೂರ್ಣ ರೂಪ (ಸಿಗ್ನಿಫಿಕೆಂಟ್ ಫಾರಂ), ಸಾರ್ಥಕರೂಪ. ಅವನ್ನು ಕೇವಲ ಆಕೃತಿಯೆಂದೂ ವರ್ಣಗಳೆಂದೂ ಅಸಡ್ಡೆ ಮಾಡಬಾರದು. ಅವೂ ಅವು ಕೂಡಿಕೊಂಡಿರುವ ರೀತಿಯೂ ನಿಜವಾಗಿ ಭಾವಪ್ರಚೋದಕ, ಅರ್ಥಪೂರ್ಣ.

19 ನೆಯ ಶತಮಾನದ ಕೊನೆಯ ದಶಕದಲ್ಲಿ ಜಾರ್ಜ್ ಸ್ಯೂರಾ ಈ ತತ್ತ್ವವನ್ನು ತನ್ನ ಕಲೋದ್ಯಮಕ್ಕೆ ಅಡಿಪಾಯವಾಗಿ ಇಟ್ಟುಕೊಂಡಿದ್ದ. ಅನಂತರ ಕ್ಲೈವ್ ಬೆಲ್ 1913 ರಲ್ಲಿ ನಿರ್ದಿಷ್ಟವಚನದಿಂದ ಅದನ್ನೊಂದು ಕಲಾಸೂತ್ರವನ್ನಾಗಿ ಮುಂದಕ್ಕೆ ತಂದ. ರೋಜರ್‍ಫ್ರೈನಿಂದ ಅದಕ್ಕೆ ವಿಶದೀಕರಣ ಒದಗಿ ಬಂತು.

ಅತ್ಯಾಧುನಿಕ ಕಲಾಮಾರ್ಗ ಜನತೆಗೆ ಗ್ರಾಹ್ಯವಾಗುವುದಕ್ಕೆ ಅದು ಉತ್ತೇಜನವನ್ನೂ ಸಹಾಯವನ್ನೂ ನೀಡಿತು. ಸಾಹಿತ್ಯ ಪ್ರಪಂಚದ ಮೇಲೆ ಅದರ ಪ್ರಭಾವ ತೀರ ಕಡಿಮೆ.

**(ಎಸ್.ವಿ.ಆರ್.)**

**ಅರ್ಥಮಿತಿ ಅಥವಾ ಅರ್ಥಮಾಪನಶಾಸ್ತ್ರ :** ಅರ್ಥಶಾಸ್ತ್ರದ ತತ್ತ್ವಗಳು ಸಿದ್ಧಾಂತಗಳು ಮತ್ತು ಅವುಗಳ ಅನ್ಯೋನ್ಯ ಸಂಬಂಧಗಳನ್ನು ಗಣಿತೋಕ್ತಿಗಳ ರೂಪದಲ್ಲಿ ನಿರೂಪಿಸಿ ಈ ಉಕ್ತಿಗಳನ್ನು ಪ್ರತ್ಯಕ್ಷ ಸನ್ನಿವೇಶದಲ್ಲಿ ಪರೀಕ್ಷಿಸಿ ಅರ್ಥಶಾಸ್ತ್ರದ ತತ್ತ್ವಗಳನ್ನು ಬೆಳೆಸುವ ಶಾಸ್ತ್ರ (ಎಕೊನೊಮೆಟ್ರಿಕ್ಸ್).

ತಾತ್ತ್ವಿಕ ದೃಷ್ಟಿಯಿಂದ ನೋಡಿದರೆ (ಮಾರ್ಷಲನ) ಅರ್ಥಶಾಸ್ತ್ರ ತತ್ತ್ವದಲ್ಲಿ ಪ್ರತಿಪಾದಿತ ವಾದ ಬೇಡಿಕೆಯ ಪ್ರತಿನಮ್ಯತೆ (ಎಲ್ಯಾಸ್ಟಿಸಿಟಿ ಆಫ್ ಡಿಮಾಂಡ್) ಅರ್ಥಮಿತಿಗೆ ತಳಹದಿಯನ್ನು ಹಾಕಿತೆನ್ನಬಹುದು. ಪೆರೇಟೋ ಮತ್ತು ಎಡ್ಜ್‍ವರ್ಥ್ ಇವರು ತಮ್ಮ ಉದಾಸೀನ ರೇಖೆಗಳ (ಇಂಡಿಫರೆನ್ಸ್ ಕರ್ವ್ಸ್) ಮೂಲಕ ಈ ಕ್ಷೇತ್ರದ ವ್ಯಾಪ್ತಿ ಹೆಚ್ಚಿಸಿರುವರು. ಸಂಶ್ಲೇಷಕ ಅರ್ಥ ವಿಜ್ಞಾನ (ಸಿಂತೆಟಿಕ್ ಎಕನಾಮಿಕ್ಸ್) ಎಂಬ ಗ್ರಂಥವನ್ನು ಬರೆದ ಮೂರ್ ಎಂಬಾತ ಈ ವಿಷಯದ ವಿಮರ್ಶೆಯನ್ನು ಮತ್ತಷ್ಟು ಮುಂದುವರಿಸಿದ. 1930ರಿಂದ ಈಚೆಗೆ ಈ ಶಾಸ್ತ್ರ ಕ್ರಮಬದ್ಧವಾಗಿ ಅಭಿವೃದ್ಧಿ ಹೊಂದುತ್ತಿದೆ.

ಅನೇಕ ದೇಶಗಳಿಗೆ ಆರ್ಥಿಕ ಸಂಕಟ ಒದಗಿದ ಕಾಲದಲ್ಲಿ ಸರ್ಕಾರದ ಆರ್ಥಿಕ ನೀತಿಯ ಪರಿಣಾಮಗಳನ್ನು ಖಚಿತವಾಗಿ ಲೆಕ್ಕಿಸಿ ಮಾಹಿತಿಗಳನ್ನು ತಿಳಿಯಬೇಕಾದ ಅಗತ್ಯ ಏರ್ಪಟ್ಟಿತು. ಆರ್ಥಿಕ ಕ್ಷೇತ್ರದಲ್ಲಿ ಘಟಿಸುವ ವಿಧಾನಗಳ ವಿಷಯವಾಗಿಯೂ ಅವುಗಳ ಸಾಪೇಕ್ಷಿಕ ಪರಿಮಾಣಗಳನ್ನು ಕುರಿತೂ ಅರ್ಥಶಾಸ್ತ್ರ ಯುಕ್ತ ವಿವರಣೆಗಳನ್ನು ಕೊಡುವುದು, ಆದರೂ ಲೆಕ್ಕ ಹಾಕಿ ಅವುಗಳ ಮಾನವನ್ನು ಸ್ಫುಟವಾಗಿ ತಿಳಿಸುವುದಿಲ್ಲ. ಅಲ್ಲದೆ, ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಯಾವ ಆರ್ಥಿಕ ತತ್ತ್ವಗಳು, ನಿಯಮಗಳು ಸಾಧು ಅಥವಾ ಅನ್ವಯಾರ್ಹ ಎಂಬುದನ್ನು ಪ್ರಯೋಗಸಿದ್ಧ ರೀತಿಯಲ್ಲಿ ತಾಳೆ ನೋಡಿ ತನಿಖೆ ನಡೆಸಿದ ಹೊರತು ತಿಳಿಯುವುದಿಲ್ಲ. ಈ ಅಗತ್ಯವನ್ನು ಪೂರ್ತಿಮಾಡುವ ಉದ್ದೇಶದಿಂದ ಅರ್ಥಮಿತಿ ಜನಿಸಿತು.

ಉದಾಹರಣೆಗೆ, ಕೆಲವು ಬಳಕೆಯ ವಸ್ತುಗಳ ಬೇಡಿಕೆಯಲ್ಲಿ ಆಗಬಹುದಾದ ಬದಲಾವಣೆ, ಬೆಲೆ ಮತ್ತು ಆದಾಯಗಳಲ್ಲಿನ ಬದಲಾವಣೆಗಳನ್ನು ಅನುಸರಿಸುತ್ತದೆಯೆಂದು ಅರ್ಥಶಾಸ್ತ್ರ ಸೂಚಿಸುತ್ತದೆ. ಇಂಥ ಸಂಬಂಧ ನಿಜವಾಗಿಯೂ ಇದೆಯೇ ಎಂಬುದನ್ನು ಅರ್ಥಮಿತಿಯಿಂದ ತಿಳಿದುಕೊಳ್ಳಬೇಕು; ಮಾತ್ರವಲ್ಲ, ಆದಾಯ ಮತ್ತು ಬೆಲೆಯ ಪ್ರತಿನಮ್ಯತೆಗಳನ್ನು ಎಣಿಸಿ ಅವುಗಳ ಸಹಾಯದಿಂದ ಈ ಸಂಬಂಧವನ್ನು ಮತ್ತಷ್ಟು ಸ್ಫುಟವಾಗಿ ನಿರೂಪಿಸಲು ಸಾಧ್ಯವಾಗುವುದು. ಆದಾಯದ ಸೇಕಡ ವ್ಯತ್ಯಾಸಕ್ಕೂ ಇದರಿಂದ ಸಂಭವಿಸುವ ಬೇಡಿಕೆಯ ಸೇಕಡ ವ್ಯತ್ಯಾಸಕ್ಕೂ ಇರುವ ನಿಷ್ಪತ್ತಿಗೆ ಆದಾಯದ ಪ್ರತಿನಮ್ಯತೆ (ಇನ್‍ಕಮ್ ಎಲ್ಯಾಸ್ಟಿಸಿಟಿ) ಎಂದು ಹೆಸರು. ಹೀಗೆಯೇ ಬೆಲೆಯ ಶೇಕಡ ವ್ಯತ್ಯಾಸಕ್ಕೂ ಇದರಿಂದೊದಗುವ ಬೇಡಿಕೆಯ ಶೇಕಡ ವ್ಯತ್ಯಾಸಕ್ಕೂ ಇರುವ ನಿಷ್ಪತ್ತಿಯ ಹೆಸರು ಬೆಲೆಯ ಪ್ರತಿನಮ್ಯತೆ (ಪ್ರೈಸ್ ಎಲ್ಯಾಸ್ಟಿಸಿಟಿ).

ಆರ್ಥಿಕಚರಗಳ ಎಲ್ಲ ವಿಧವಾದ ಸಂಬಂಧಗಳನ್ನೂ ಪರಿಮಾಣೀಕರಿಸಿದ ಅನಂತರವೇ ದೊರೆಯುವ ಜ್ಞಾನವನ್ನು ಆರ್ಥಿಕ ಧೋರಣೆಗೆ ಮಾರ್ಗದರ್ಶಕವಾಗಿ ಬಳಸಲು ಸಾಧ್ಯ. ಮೊತ್ತ ಮೊದಲಿನ ಅರ್ಥಮಿತಿಜ್ಞನಾದ ಟಿನ್‍ಬರ್ಗನ್ ಎಂಬಾತ ಅರ್ಥಶಾಸ್ತ್ರದಲ್ಲಿ ಪ್ರತಿಪಾದಿತ ವಾದ ವಾಣಿಜ್ಯ ಆವರ್ತ (ಟ್ರೇಡ್ ಸೈಕಲ್) ತತ್ತ್ವಗಳನ್ನು ಸಂಖ್ಯಾಶಾಸ್ತ್ರ ವಿಧಾನಗಳಿಂದ ಪರೀಕ್ಷಿಸಿ, ಅನ್ಯಾದೃಶ ಆರ್ಥಿಕ ಘಟನೆಗಳ ಅನ್ಯೋನ್ಯ ಸಂಬಂಧಗಳನ್ನು ಸೂಚಿಸುವ ಹಲವಾರು ಗುಣಕಗಳನ್ನು ಸಂಗ್ರಹಿಸಿದ.

ಫ್ರಾನ್ಸ್ ದೇಶದ ಕೂರ್ನೊ ಎಂಬ ಗಣಿತಜ್ಞ ಅರ್ಥಶಾಸ್ತ್ರದ ತತ್ತ್ವ ವಿಶ್ಲೇಷಣೆಗಳಿಗೆ ಸಂಭಾವ್ಯತಾಶಾಸ್ತ್ರವನ್ನೂ (ಪ್ರಾಬಬಿಲಿಟಿ) ಗಣಿತಶಾಸ್ತ್ರವನ್ನೂ ಪ್ರಯೋಗಿಸಿ ಸಂಶೋಧನೆ ನಡೆಸಿದ. ಸಂಪತ್ತತ್ತ್ವಗಳ ಗಣಿತ ಸಿದ್ಧಾಂತಗಳ ಸಂಶೋಧನೆ ಎಂಬ ಹೆಸರಿನ ಗ್ರಂಥವನ್ನು ಪ್ರಕಟಿಸಿದ. (1837). ಈತನನ್ನೇ ಅರ್ಥಮಿತಿಯ ಪ್ರವರ್ತಕ ಎನ್ನಬಹುದು. ಇರ್ವಿಂಗ್ ಫಿಷರ್ ಸಹ ಈ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ನಡೆಸಿ ಮೌಲ್ಯ ಮತ್ತು ಬೆಲೆಗಳ ತತ್ತ್ವದ ಗಣಿತ ಸಂಶೋಧನೆಗಳು ಎಂಬ ಹೆಸರಿನ ಒಂದು ಪ್ರೌಢ ಪ್ರಬಂಧ ಬರೆದು ಯೇಲ್ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ. ಇಂಗ್ಲೆಂಡಿನ ಜೆವನ್ಸ್ ಎಡ್ಜ್ ವೋರ್ಥ್ ನಾರ್ವೆ ದೇಶದ ರೆಗ್ನರ್‍ಫ್ರಿಷ್ ಮತ್ತು ಅಮೆರಿಕದ ರೂಸ್ ಎಂಬ ವಿದ್ವಾಂಸರು ಗಣಿತಶಾಸ್ತ್ರವನ್ನೂ ಸಂಖ್ಯಾಶಾಸ್ತ್ರವನ್ನೂ ಅರ್ಥಶಾಸ್ತ್ರಕ್ಕೆ ಪ್ರಯೋಗಿಸಿ ಸಂಶೊಧನೆಗಳನ್ನು ನಡೆಸುವ ಕಾರ್ಯದಲ್ಲಿ ತೊಡಗಿದರು. ಮೂರ್ ಎಂಬಾತ ಬೇಡಿಕೆಯ ಪ್ರತಿನಮ್ಯತೆಯ ವಿಷಯವಾಗಿ ಸಂಶೋಧನೆಗ ಳನ್ನು ನಡೆಸಿ ಸಂಶ್ಲೇಷಣ ಅರ್ಥಶಾಸ್ತ್ರ ಎಂಬ ಗ್ರಂಥ ಪ್ರಕಟಿಸಿದ. ಪ್ರತಿನಮ್ಯತೆ ಸ್ಥಿರ ಸಂಖ್ಯೆಯಾಗಿರಬಹುದು ಅಥವಾ ಬೆಲೆಯ ಸರಳ ಉತ್ಪನ್ನವಾಗಿಯಾಗಲಿ (ಸಿಂಪಲ್ ಫಂಕ್ಷನ್) ವರ್ಗೀಯ ಉತ್ಪನ್ನವಾಗಿಯಾಗಲಿ (ಕ್ವಾಡ್ರಾಟಿಕ್ ಫಂಕ್ಷನ್) ಇರಬಹುದೆಂದು ಭಾವಿಸಿ ಬೇಡಿಕೆಯ ಉತ್ಪನ್ನವನ್ನು ಮೂರ್ ರೂಪಿಸಿದ್ದಾನೆ. ಇದೇ ರೀತಿಯಲ್ಲಿ ಸರಬರಾಜು ಉತ್ಪನ್ನವನ್ನು $X=Ap_1^{a1}p_2^{a2}......Pm^{am}$ ಸಮೀಕರಣದಿಂದ ಸೂಚಿಸಲು ಮೇಲ್ಪಂಕ್ತಿ ಹಾಕಿಕೊಟ್ಟಂತಾಯಿತು. ಪ್ರತಿನಮ್ಯತೆಗಳೆಲ್ಲವೂ ಸ್ಥಿರಸಂಖ್ಯೆಯಾಗಿರುವುವೆಂದಿಟ್ಟುಕೊಂಡು ಈ ಸಮೀಕರಣವನ್ನು ರಚಿಸಲಾಗಿದೆ. ಇದರ ಹೆಸರು ಡಗ್ಲಸ್ ಉತ್ಪನ್ನ.

ಅರ್ಥಮಿತಿಯ ಬೆಳವಣಿಗೆಗೆ ಅಲನ್‍ನ ಸೇವೆ ಗಮನಾರ್ಹ. ಆದೇಶ ಸಿದ್ಧಾಂತ (ಪ್ರಿನ್ಸಿಪಲ್ ಆಫ್ ಸಬ್‍ಸ್ಟಿಟ್ಯೂಷನ್) ಮತ್ತು ಘಟಕಗಳ ಅನುಕೂಲತಮ ಉಪಯೋಗ ಎಂಬ ತತ್ತ್ವಗಳನ್ನು ಬಳಸಿಕೊಂಡು ಸಂಶೋಧನೆಗಳನ್ನು ನಡೆಸಿದ. ಒಟ್ಟು ಹುಟ್ಟುವಳಿ x ಆದಾಗ, ಸರಬರಾಜಿನ ಒಟ್ಟು ವೆಚ್ಚ ಠ ಆದರೆ, ಇವೆರಡು ಚರಗಳನ್ನೂ ಸಂಬಂಧಿಸುವ ಠ$=ax^2+bx+c$ ಎಂಬ ಸಮೀಕರಣವನ್ನು ಪಡೆದ. ನಿಯತ ಹುಟ್ಟುವಳಿಯನ್ನು ಒದಗಿಸಲು ಕನಿಷ್ಠತಮ ವೆಚ್ಚ ದತ್ತವೆಚ್ಚದಲ್ಲಿ ಗರಿಷ್ಠತಮ ಹುಟ್ಟುವಳಿ ಒದಗಿಸುವ ವಿಧಾನವನ್ನೂ ಈ ಸಮೀಕರಣದಿಂದ ತಿಳಿಯಬಹುದು.

ಅನ್ಯಾದೃಶ ಆರ್ಥಿಕ ಘಟನೆಗಳ ಸಂಖ್ಯಾತ್ಮಕ ವಿವರಣೆ 1920–60ರ ಮಧ್ಯದ ಅವಧಿಯಲ್ಲಿ ಬಹಳವಾಗಿ ಮುಂದುವರಿಯಿತು. ಇದರ ಪರಿಣಾಮವಾಗಿ ಹಲವು ದೇಶಗಳಲ್ಲಿ ಪ್ರತಿವರ್ಷದಲ್ಲೂ ಸಂಭವಿಸತಕ್ಕ ಸಮಸ್ತ ಆರ್ಥಿಕ ವ್ಯವಹಾರಗಳ ನಿಜಸ್ಥಿತಿ ತಿಳಿಸುವುದು ಸಾಧ್ಯವಾಗಿದೆ. ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ಹರಿಯತಕ್ಕ ಸರಕುಗಳನ್ನೂ ಸೇವೆಗಳನ್ನೂ ಒಟ್ಟಾರೆ ರಾಷ್ಟ್ರೀಕರಿಸಿದ ಲೆಕ್ಕಚಾರದ ಕ್ರಮದಿಂದ ಇದನ್ನು ಸಾಧಿಸುತ್ತೇವೆ. ಆರ್ಥಿಕ ವ್ಯವಹಾರದಲ್ಲಿ ಕುಳಗಳು, ಉದ್ಯಮಗಳು, ಸರ್ಕಾರ, ಪರರಾಷ್ಟ್ರಗಳು ಮತ್ತು ಮೂಲಧನಸಂಚಯ ಎಂಬ ಬೇರೆ ಬೇರೆ ಕ್ಷೇತ್ರಗಳನ್ನು ಪರಿಗಣಿಸುತ್ತೇವೆ.

ಆರ್ಥಿಕ ಪರಿಮಾಣಗಳನ್ನು ಹಣದ ಮಾನದಲ್ಲಿ ಅಳೆಯುವುದು ರೂಢಿ. ಅನುಕ್ರಮವಾಗಿ ಹಲವು ವರ್ಷಗಳಲ್ಲಿ ಒಂದು ಪರಿಮಾಣದ ಬೆಳವಣಿಗೆಯನ್ನು ಪ್ರದರ್ಶಿಸಬೇಕಾದಲ್ಲಿ ಸೂಚ್ಯಂಕಗಳಿಂದ (ಇಂಡೆಕ್ಸ್ ನಂಬರ್ಸ್) ಇದನ್ನು ಸಾಧಿಸುವುದು ಸುಲಭ. ಯಾವುದಾದರೂ ಒಂದು ವರ್ಷವನ್ನು ಮೂಲ ವರ್ಷವೆಂದಿಟ್ಟುಕೊಂಡು, ಆ ವರ್ಷದಲ್ಲಿ ಆ ಪರಿಮಾಣದ ಬೆಲೆ 100 ಎಂದು ಭಾವಿಸಿ, ಇತರ ವರ್ಷಗಳ ಬೆಲೆಗಳನ್ನು ಇದರ ಸೇಕಡಾಂಶದಲ್ಲಿ ನಿರೂಪಿಸಬಹುದು. ಇಂಥ ಶೇಕಡಾಂಶಗಳ ಹೆಸರು ಸೂಚ್ಯಂಕಗಳು.

ಕಾಲಸರಣಿಯ(ಟೈಮ್ ಸೀರಿಸ್) ವಿಶ್ಲೇಷಣದ ಬೆಳವಣಿಗೆಯಿಂದ ಅರ್ಥಮಿತಿಗೆ ಮಹತ್ತರವಾದ ಲಾಭ ದೊರೆತಿದೆ. ದೀರ್ಘಕಾಲಿಕ ಪ್ರವೃತ್ತಿ ಯಾದೃಚ್ಛಿಕ ಚರದ (ರ್‍ಯಾಂಡಮ್ ವೇರಿಯಬಲ್) ವಿಮರ್ಶೆ ನಿಯತಕಾಲಿಕ ಪರಿಲೇಖ ವಿಶ್ಲೇಷಣೆ (ಪೀರಿಯಡೋಗ್ರಾಂ ಅನ್ಯಾಲಿಸಿಸ್) ಮುಂತಾದ ಬೆಲೆಯ ತಪಶೀಲಿಗೆ ಸಂಬಂಧಿಸಿದ ಅಧ್ಯಯನಗಳು ಈಗ ಸಂಶೋಧನೆಯ ವಿಶೇಷ ಕ್ಷೇತ್ರಗಳಾಗಿ ಪರಿಣಮಿಸಿವೆ.

ಜನಸಂಖ್ಯೆಯ ಬಳೆವಣಿಗೆಯನ್ನು ಕುರಿತು ಮಾಡಲಾದ ಹಲವು ಅಧ್ಯಯನಗಳು ಉಲ್ಲೇಖನೀಯವಾಗಿವೆ. ಬೆಳೆವಣಿಗೆಯ ಲಾಜಿಸ್ಟಿಕ್ ನಿಯಮದ $y=\frac{L}{1+Ae^{-kt}}$ ಸಮೀಕರಣದಲ್ಲಿ ಬರುವ ಪ್ರಾಚಲಗಳನ್ನು (ಪ್ಯರ್ಯಾಮಿಟರ್ಸ್) ಅಂದಾಜು ಮಾಡುವುದು ಅರ್ಥಮಿತಿಯ ಕಾರ್ಯ. ವ್ಯಕ್ತಿ ವರಮಾನದ ವಿತರಣೆಯ ಬಗ್ಗೆ ಹುಟ್ಟಿರುವ ತತ್ತ್ವಗಳೂ ಗುರುತರವಾದವುಗಳೇ. ಅರ್ಥಶಾಸ್ತ್ರಜ್ಞರು ಪ್ರತಿಪಾದಿಸಿರುವ ಸಮಾನ ತ್ಯಾಗ (ಈಕ್ವಲ್ ಸ್ಯಾಕ್ರಿಫೈಸ್) ಅನುಪಾತ ತ್ಯಾಗ (ಪ್ರಪೋರ್ಶನಲ್ ಸ್ಯಾಕ್ರಿಫೈಸ್) ಮತ್ತು ಕನಿಷ್ಠತಮ ತ್ಯಾಗ (ಮಿನಿಮಮ್ ಸ್ಯಾಕ್ರಿಫೈಸ್) ಮುಂತಾದ ತತ್ತ್ವಗಳ ಪರೀಕ್ಷಣವನ್ನು ಸಂಖ್ಯಾಶಾಸ್ತ್ರದ ಸಹಾಯದಿಂದಲೇ ಮಾಡಲಾಗುವುದು. ಅರ್ಥಶಾಸ್ತ್ರಜ್ಞ ಆರ್ಥಿಕ ಧೋರಣೆಯನ್ನು ನಿರ್ಧರಿಸುತ್ತಾನೆ. ಆದರೆ ಅದರ ಫಲಾಫಲಗಳನ್ನು ಅರ್ಥಮಿತಿಯ ವಿಧಾನಗಳಿಂದಲೇ ಗೊತ್ತು ಹಚ್ಚಬೇಕಾಗುವುದು. ಇಂಥ ವಿಧಾನಗಳ ಅನುಸರಣೆಯಿಂದ ಕೆಲವು ತೆರಿಗೆಯ ಸೂತ್ರಗಳನ್ನೂ ಹೊಸತಾಗಿ ಕಂಡುಹಿಡಿಯಲಾಯಿತು. ಉದಾಹರಣೆಗೆ, $\eta=a+bx+cx^2$ ಎಂಬ ಸೂತ್ರದಲ್ಲಿ x ಆದಾಯದ ಮೇಲೆ ವಿಧಿಸತಕ್ಕ ದರ $\eta$ ವನ್ನು ಸೂಚಿಸುತ್ತದೆ. ಇದನ್ನೇ ಮುಂದುವರಿದು $x-T=\alpha x^{\beta}$ ಎಂಬ ಸೂತ್ರವನ್ನು ಎಡ್ಜ್‌ವೋರ್ಥ್ ಕೊಟ್ಟಿರುವನು. x ಆದಾಯದ ಮೇಲೆ ವಿಧಿಸತಕ್ಕ ಒಟ್ಟು ತೆರಿಗೆ T ಯನ್ನು ಸೂಚಿಸುವ ಸೂತ್ರವಿದು. $\alpha$, $\beta$ ಪ್ರಾಚಲಗಳು. ಅಸಮತೆಯ ಮಾನ (ಮೆಷರ್‌ಮೆಂಟ್ ಆಫ್ ಇನೀಕ್ವಾಲಿಟಿ) ಎಂಬ ಲೇಖನದಲ್ಲಿ ಡಾಲ್ಟನ್ ಆರ್ಥಿಕ ಹಿತ ಎಂಬ ಒಂದು ಹೊಸ ಗುಣಕವನ್ನು ಪ್ರಸ್ತಾಪಿಸಿ ಅದನ್ನು $\frac{w_i}{w_a}$ ಎಂಬ ನಿಷ್ಪತ್ತಿಯಿಂದ ನಿರೂಪಿಸುತ್ತಾನೆ. ಸಮಾಜದಲ್ಲಿನ ಎಲ್ಲರ ಆದಾಯವೂ ಸಮವಾಗಿದ್ದಾಗ ಲಭಿಸಬಹುದಾದ ಆದರ್ಶ ಧ್ಯೇಯವನ್ನು $w_i$ ಎಂದೂ ಸಂಕಲನ ನಿಯಮಕ್ಕನುಗುಣವಾಗಿ ಲಭ್ಯವಾದ ಹಿತವನ್ನು $w_a$ ಎಂದೂ ಸೂಚಿಸಿದರೆ,

$$\frac{w_i}{w_a}=\frac{\log(\text{ಆದಾಯಗಳ ಸಮಾಂತರ ಮಧ್ಯಕ})}{\log(\text{ಆದಾಯಗಳ ಗುಣೋತ್ತರ ಮಧ್ಯಕ})}\left[=\frac{\log(AM\ of\ incomes)}{\log(GM\ of\ incomes)}\right]$$

ಎಂಬ ಸರಳ ಸಮೀಕರಣ ದೊರೆಯುವುದು.

ಅರ್ಥಶಾಸ್ತ್ರದ ತತ್ತ್ವಗಳಿಗೆ ಅನುಸಾರವಾಗಿ ಅನ್ಯಾದೃಶ ಆರ್ಥಿಕ ಘಟನೆಗಳ ಪರಸ್ಪರ ಸಂಬಂಧವನ್ನು ಪರಿಮಾಣಾತ್ಮಕವಾಗಿ ನಿರೂಪಿಸುವುದೇ ಅರ್ಥಮಿತಿಯ ಮುಖ್ಯ ಕೆಲಸ. ಈ ಸಂಬಂಧಗಳನ್ನು ಗಣಿತ ಸಮೀಕರಣಗಳ ರೂಪದಲ್ಲಿ ನಿರೂಪಿಸಲು ಯತ್ನಿಸಲಾಗುತ್ತಿದೆ. ಅಂದರೆ ಕಾಲಪರಂಪರೆಯಲ್ಲಿ ಒಂದು ಆರ್ಥಿಕ ಗಣಿತೋಕ್ತಿಯ ಬದಲಾವಣೆಗಳೂ ಇತರ ಆರ್ಥಿಕ ಅಥವಾ ಅನಾರ್ಥಿಕ ಚರಗಳೂ ಪರಸ್ಪರಾವಲಂಬಿಗಳಾಗಿರುವುದರಿಂದ, ಬಿಡಿ ಬಿಡಿಯಾದ ಸಮೀಕರಣಗಳನ್ನು ರಚಿಸಿದರೆ ಸಾಲದು. ಮುಖ್ಯವಾದ ಎಲ್ಲಾ ಚರಗಳನ್ನೂ ಏಕಕಾಲದಲ್ಲಿ ವಿವರಿಸಲು ಸಾಧ್ಯವಾಗುವಂತೆ ಸಮೀಕರಣ ವ್ಯವಸ್ಥೆಯನ್ನು ಸ್ಥಾಪಿಸಿಕೊಳ್ಳಬೇಕು. ಅಂಥ ಸಮೀಕರಣಗಳ ವ್ಯವಸ್ಥೆಯ ಹೆಸರು ಅರ್ಥಮಿತಿಯ ಮಾದರಿ (ಎಕನಾಮೆಟ್ರಿಕ್ ಮಾಡಲ್). ಇಂಥ ಮಾದರಿ ಈಚೆಗೆ ಅರ್ಥಮಿತಿಯ ಮುಖ್ಯ ಕಾರ್ಯಕ್ಷೇತ್ರ.

ಒಂದು ಗಣಿತೋಕ್ತಿಯ ವಿವರಣೆಯನ್ನೀಯುವ ಸಮೀಕರಣವನ್ನು ನಮೂದಿಸುವುದೇ ಅರ್ಥಮಿತಿಯ ವಿಶ್ಲೇಷಣದ ಮೊದಲನೆಯ ಮೆಟ್ಟಲು. ಅಂದರೆ, ಯಾವ ಆರ್ಥಿಕ ಮತ್ತು ಇತರ ರಾಶಿಗಳನ್ನು ವಿವರಣಾತ್ಮಕ ಚರಗಳೆಂದು ಉಪಯೋಗಿಸಬೇಕು ಮತ್ತು ಸಮೀಕರಣಗಳ ಗಣಿತರೂಪವೇನಿರಬೇಕು ಎಂಬುದನ್ನು ತಾತ್ತ್ವಿಕ ದೃಷ್ಟಿಯಿಂದ ಮೊದಲು ನಿರ್ಧರಿಸಿಕೊಳ್ಳಬೇಕು. ಸಾಮಾನ್ಯವಾಗಿ ರೇಖೀಯ ರೂಪಗಳನ್ನು ಅಥವಾ ಲಾಗ್‌ರೇಖೀಯ ರೂಪಗಳನ್ನು ಉಪಯೋಗಿಸುವುದು ರೂಢಿ. ಈ ಆಧಾರದ ಮೇಲೆ, ಅನುಭೋಕ್ತರ ವರ್ತನೆಯ ತತ್ತ್ವದಿಂದ ಒಂದು ವರ್ಷದಲ್ಲಿ ಒಂದು ವಸ್ತುವಿನ ಒಟ್ಟು ರಾಷ್ಟ್ರೀಯ ಅನುಭೋಗ ಅದೇ ಕಾಲಾವಧಿಯ ರಾಷ್ಟ್ರೀಯ ಆದಾಯ ಮತ್ತು ಧಾರಣೆವಾಸಿಗಳ ಮಟ್ಟವನ್ನು ಸಹ ಅವಲಂಬಿಸಿರುವುದೆಂದು ಪ್ರತಿಪಾದಿಸಬಹುದು.

ಸಮರ್ಥನೀಯವಾದ ಕೆಲವು ಆಧಾರಗಳ ಮೇಲೆ ಮಾದರಿಯನ್ನು ರಚಿಸಲಾಗುವುದು. ಒಟ್ಟು ರಾಷ್ಟ್ರೀಯ ಆದಾಯ ತೆರಿಗೆಗಳು ಮುಂತಾದುವುಗಳನ್ನು ವಿವರಿಸಲು ಇಂಥ ಮಾದರಿಗಳನ್ನು ರಚಿಸಬಹುದು. ಆರ್ಥಿಕ ಯೋಜನೆಗಳ ಫಲಿತಾಂಶಗಳನ್ನು ನಿರೂಪಿಸಲು ಮಾದರಿಗಳನ್ನು ರಚಿಸಲಾಗುತ್ತದೆ.

ಒಟ್ಟು ರಾಷ್ಟ್ರೀಯ ಉತ್ಪನ್ನ, ತೆರಿಗೆಗಳು, ವಿನಿಯೋಗಾರ್ಹ ಆದಾಯ, ಸಂಸ್ಥೆಗಳ ವರಮಾನ ಮತ್ತು ವರ್ಗಾವಣೆ ಇವುಗಳನ್ನು ಘಟಕಗಳನ್ನಾಗಿಟ್ಟುಕೊಂಡು ರಾಷ್ಟ್ರಾದಾಯದ ಮಾದರಿ ನಿರ್ಮಿಸಬಹುದು. ವ್ಯಾಪಾರದ ಹಿಂಜರಿತ ಮತ್ತು ವ್ಯಾಪಾರದ ಮಂದವನ್ನು ನಿರೂಪಿಸಲು ಮಾದರಿಗಳನ್ನು ಅಮೆರಿಕದ ಅರ್ಥವಿಜ್ಞಾನಿಗಳು ರಚಿಸಿಕೊಂಡಿದ್ದಾರೆ. ಭಾರತದೇಶದ ಪಂಚವಾರ್ಷಿಕ ಯೋಜನೆಗಳನ್ನೂ ಫಲಿತಾಂಶಗಳನ್ನೂ ವಿವರಿಸಲು ಅರ್ಥಮಿತಿಯ ಪಟುಗಳು ಕೆಲವು ಮಾದರಿಗಳನ್ನು ರಚಿಸಿಕೊಂಡಿರುವರು. ಇವುಗಳಿಂದ ರಾಷ್ಟ್ರದ ಆರ್ಥಿಕ ಧೋರಣೆಗೆ ಸರಿಯಾದ ಮತ್ತು ಶಾಸ್ತ್ರಸಮ್ಮತವಾದ ಆಧಾರಗಳು ದೊರೆಯುವುವು.

ರಾಷ್ಟ್ರದ ಒಟ್ಟು ಅನುಭೋಗ ರಾಷ್ಟ್ರಾದಾಯ ಮತ್ತು ಧಾರಣೆವಾಸಿಗಳ ಮಟ್ಟ ಇವುಗಳ ಮೇಲೆ ಅವಲಂಬಿಸಿರುವುದು. ಈ ಸಂಬಂಧವನ್ನು ನಿರೂಪಿಸುವ ರೇಖೀಯ ಉತ್ಪನ್ನವನ್ನು ಹೀಗೆ ಬರೆಯಬಹುದು: $C_t=\alpha_0+\alpha_1 Y_t+\alpha_2 P_t+u_t$ ಲಾಗ್ ರೇಖೀಯ ಉತ್ಪನ್ನ ಹೆಚ್ಚು ಅನುಕೂಲವಾದುದು ಎಂದು ಕಂಡುಬಂದರೆ $\log Ct=\alpha_0+\alpha_1\log Y_t+\alpha_2\log P_t+v_t$ ಎಂಬ ಸಮೀಕರಣವನ್ನು ಬಳಸಬಹುದು. ಇಲ್ಲಿ ಬಳಸಿರುವ ಸಂಜ್ಞೆಗಳ ಅರ್ಥವಿವರಣೆ: $C_t$=t ವರ್ಷದಲ್ಲಿನ ಅನುಭೋಗ; $Y_t$=t ವರ್ಷದಲ್ಲಿನ ತೆರಿಗೆಗಳನ್ನು ಕಳೆದ ರಾಷ್ಟ್ರಾದಾಯ. $P_t$=t ವರ್ಷದಲ್ಲಿನ ಅನುಭೋಕ್ತರ ಸರಾಸರಿ ಬೆಲೆ: $u_t$ ಮತ್ತು $V_t$ ಗಳು ಭ್ರಂಶ ಪದಗಳು (ಎರರ್ ಟರ್ಮ್ಸ್).

ಮೇಲೆ ಕೊಟ್ಟಿರುವ ಸಮೀಕರಣಗಳು ಶುದ್ಧ ಸಮೀಕರಣಗಳಲ್ಲ. ಸರಿಸುಮಾರಾದ ಸಮೀಕರಣಗಳು. ಏಕೆಂದರೆ, C ಯ ಮೇಲೆ ಪ್ರಭಾವ ಬೀರುವ ಎಲ್ಲ ಚರಗಳನ್ನೂ ಈ ಸಮೀಕರಣದಲ್ಲಿ ಸೇರಿಸಿಲ್ಲ. ಅತಿ ಮುಖ್ಯವಾದವುಗಳನ್ನು ಮಾತ್ರ ತೆಗೆದುಕೊಂಡಿದೆ. ಉದಾಹರಣೆಗೆ, ಆದಾಯ ವಿತರಣೆಯನ್ನು ಕೈಬಿಟ್ಟಿದ್ದೇವೆ; ಮಾತ್ರವಲ್ಲ, ಏಕಘಾತಸಂಬಂಧವನ್ನು ಬಳಸಿಕೊಂಡಿದ್ದೇವೆ; ಆದರೆ ಸಂಬಂಧ ವಕ್ರೀಯವಾಗಿರಬಹುದು. ಹಾಗೂ C, Y, P ಎಂಬ ಗಣಿತೋಕ್ತಿಗಳ ಅಳತೆಯಲ್ಲಿ ಭ್ರಂಶಗಳು ಇರಬಹುದು. ಆದ್ದರಿಂದ ಈ ಸಮೀಕರಣಗಳಲ್ಲಿ ಕೆಲವು ನ್ಯೂನಾತಿರೇಕಗಳು ಸಂಭವಿಸುವುದು ಸಾಧ್ಯ.

ಇಲ್ಲಿ $u_t$ ಎಂಬ ಅರ್ಥಮಿತಿಯ ಭ್ರಂಶ ಚರವನ್ನು ಸಂಭವಚರ ಎಂದು ಪರಿಗಣಿಸಲಾಗುವುದು. ಅಂದರೆ, ನಿರ್ದಿಷ್ಟ ಸಂಭಾವ್ಯದಿಂದ ನಮೂದಿಸಿದ ಹಲವು ಮೌಲ್ಯಗಳನ್ನು $u_t$ ಪಡೆಯುವುದು. ಸಾಧಾರಣವಾಗಿ ಇದರ ವಿತರಣೆ ನಾರ್ಮಲ್ ಎಂದೂ ಮಧ್ಯಕ O ಎಂದೂ ಮತ್ತು ಪ್ರಮಾಪಿ ವಿಚಲನೆ ಕ್ಲುಪ್ತವಾದುದೆಂದೂ ಭಾವಿಸುತ್ತೇವೆ; ಅಲ್ಲದೆ, ವಿವರಣಾತ್ಮಕ ಚರಗಳಿಂದ ಸ್ವತಂತ್ರವಾಗಿರುವುದೆಂದೂ ಮತ್ತು ಕಾಲಾನುಕ್ರಮದಲ್ಲಿ ಬದಲಾವಣೆ ಹೊಂದುವುದಿಲ್ಲವೆಂದೂ ಭಾವಿಸುತ್ತೇವೆ.

ಒಂದು ಆರ್ಥಿಕ ಆಡಳಿತದ ಎಲ್ಲ ಮುಖ್ಯ ಚರಗಳಿಗೂ ಇಂಥ ಸಮೀಕರಣಗಳನ್ನು ಸಾಧಿಸಿದ ಮೇಲೆ ಅವೆಲ್ಲವೂ ಒಟ್ಟಾರೆ ಆ ಆರ್ಥಿಕ ಆಡಳಿತದ ಅರ್ಥಮಿತೀಯ ಮಾದರಿ ಎನ್ನಿಸುವುವು. ಎಲ್ಲ ಆರ್ಥಿಕ ಚರಗಳೂ ಪರಸ್ಪರ ಸಂಬಂಧವುಳ್ಳವಾದರೂ ಎಲ್ಲ ಕ್ಷೇತ್ರಗಳಲ್ಲೂ ಸಮಾನ ಬಲಯುತವಾಗಿರುವುದಿಲ್ಲ. ಸಣ್ಣ ಆರ್ಥಿಕ ಆಡಳಿತವನ್ನು ತೆಗೆದುಕೊಂಡರೆ, ಅನ್ಯ ದೇಶದ ವ್ಯಾಪಾರ ಸ್ಥಿತಿಗತಿ ಜಗತ್ತಿನ ವಿಕಾಸ ಬಲು ಮುಖ್ಯವಾದುದು. ಎದುರಾಗಿ, ಒಂದು ಸಣ್ಣದೇಶದ ವ್ಯಾಪಾರ ಸ್ಥಿತಿಗತಿ ಜಗತ್ತಿನ ವ್ಯಾಪಾರದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಾರದು. ರಾಷ್ಟ್ರದ ಒಳಾಡಳಿತದಲ್ಲೂ ಇದೇ ಪರಿಸ್ಥಿತಿಯನ್ನು ಕಾಣಬಹುದು. ಸರ್ಕಾರಿ ವೆಚ್ಚ ದೇಶದ ಆರ್ಥಿಕ ವಿಕಾಸದ ಮೇಲೆ ಗಣನೀಯವಾದ ಪರಿಣಾಮವನ್ನುಂಟು ಮಾಡಬಹುದು. ಹೀಗೆ, ಅರ್ಥಮಿತಿಯ ಆದರ್ಶದಲ್ಲಿ ಎರಡು ಬಗೆಯ ಚರಗಳಿರುವುವು: ಅವಲಂಬಿತ ಅಥವಾ ಅಂತಸ್ಥ (ಎಂಡೋಜಿನಸ್) ಚರಗಳು ಮತ್ತು ಸ್ವತಂತ್ರ ಅಥವಾ ಬಾಹ್ಯಜ (ಎಕ್ಸೋಜಿನಸ್) ಚರಗಳು. ಅಂತಸ್ಥಚರಗಳನ್ನು ಅನ್ಯೋನ್ಯ ಪ್ರಭಾವದಿಂದಲೂ ಬಾಹ್ಯಜ ಚರಗಳ ಪ್ರಭಾವದಿಂದಲೂ ನಿರ್ಧರಿಸಲಾಗುವುದು. ಆದರೆ ಬಾಹ್ಯಜ ಚರಗಳನ್ನು ಆ ಆರ್ಥಿಕ ಆಡಳಿತಕ್ಕೆ ಹೊರಗಿನ ಕಾರಕಗಳಿಂದ ನಿರ್ಧರಿಸಲಾಗುವುದು.

ಅಂತಸ್ಥ ಚರಗಳ ಸಂಖ್ಯೆಯಷ್ಟು ಸಮೀಕರಣಗಳನ್ನು ಹೊಂದಿರುವ ಮಾದರಿಯ ಹೆಸರು ಪೂರ್ಣ ಮಾದರಿ. ಈ ಪರಿಸ್ಥಿತಿಯಲ್ಲಿ ಈ ಸಮೀಕರಣಗಳನ್ನು ಬಿಡಿಸಿ ಪ್ರತಿಯೊಂದು ಅಂತಸ್ಥ ಚರವನ್ನೂ ಬಾಹ್ಯಜ ಚರಗಳ ಉತ್ಪನ್ನಗಳನ್ನಾಗಿ ನಿರೂಪಿಸಬಹುದು. ಈ ಉತ್ಪನ್ನಗಳಿಗೆ ರೆಡ್ಯೂಸ್ಡ್ ಫಾರ್ಮ್ ಈಕ್ವೇಷನ್ಸ್ ಎಂದು ಹೆಸರು.

ಬಾಹ್ಯಜ ಚರಗಳಿಂದ ಅಂತಸ್ಥ ಚರಗಳ ಮೇಲಾಗುವ ಆಘಾತವನ್ನು ಇಂಥ ಇಳಿಸಿದ ರೂಪ ಸಮೀಕರಣಗಳ ಸಹಾಯದಿಂದ ವಿಶ್ಲೇಷಿಸಬಹುದು. ಬಾಹ್ಯಜ ಚರಗಳಲ್ಲಿ ಕೆಲವು ರಾಜ್ಯಶಾಸನಾಧೀನವಾಗಿರುವುವು. ಉದಾಹರಣೆಗೆ, ಸರ್ಕಾರಿ ವೆಚ್ಚ, ತೆರಿಗೆಯ ದರ, ಅನುಭೋಗ ಮತ್ತು ಉತ್ಪನ್ನಗಳ ಹತೋಟಿ, ಕೆಲವು ಸಂದರ್ಭಗಳಲ್ಲಿ ಸರ್ಕಾರ ತನ್ನ ಆರ್ಥಿಕ ಗುರಿಗಳನ್ನು ಸಾಧಿಸಲು ಈ ಬಾಹ್ಯಜ ಚರಗಳನ್ನು ತನ್ನ ಧೋರಣೆಯಿಂದ ನಿಯಂತ್ರಣಗೊಳಿಸಿ ಏರುಪೇರುಗಳನ್ನು ತೊಡೆದು ಹಾಕಿ ಆರ್ಥಿಕ ವಿಕಾಸವನ್ನು ಸರಿಪಡಿಸಬಹುದು. ಯಾವ ಯಾವ ಕಾರ್ಯಕ್ರಮವನ್ನು ಯಾವ ಯಾವ ಮಟ್ಟದಲ್ಲಿ ಕೈಗೊಳ್ಳಬೇಕು ಎಂಬುದನ್ನು ಇದರ ಪರಿಣಾಮ ಏನಾಗಬಹುದು ಎಂಬುದರ ಅಂದಾಜು ಇಳಿಸಿದ ರೂಪ ಸಮೀಕರಣಗಳಿಂದ ತಿಳಿಯಲಾಗುವುದು.

ಒಂದು ಕಾಲಮಾನಕ್ಕೆ ಅನ್ವಯಿಸುವ ಎರಡು ಚರಗಳು ಒಂದಕ್ಕಿಂತ ಹೆಚ್ಚು ಸಮೀಕರಣಗಳ ಮೂಲಕ ಸಂಬಂಧಿತವಾಗಿರಬಹುದು. ಅಂಥ ಸಂದರ್ಭದಲ್ಲಿ ಸರಿಯಾಗಿ ಗುರುತುಹಚ್ಚಿ ಅವುಗಳ ಅರ್ಥಸಿದ್ಧಿ ಮಾಡಿಕೊಳ್ಳಬಹುದಾದ ರೀತಿಯಲ್ಲಿ ಆ ಸಮೀಕರಣಗಳನ್ನು ನಿರೂಪಿಸಬೇಕು. ಹಾಗಿಲ್ಲದಿದ್ದರೆ, ಸಮೀಕರಣಗಳು ಮೂಲ ಸಂಬಂಧಕ್ಕೆ ಅರ್ಥಾರ್ಥ ಸಂಬಂಧವಿಲ್ಲದೆ ಹೋಗುವುದು. ಮೇಲೆ ಹೇಳಿದ ರೀತಿಯ ನಿರೂಪಣೆಯ ಹೆಸರು ಗುರುತುಖರೆ ಮಾಡುವುದು (ಐಡೆಂಟಿಫಿಕೇಷನ್).

ಒಂದು ನಿರ್ದಿಷ್ಟ ಸಮೀಕರಣ ಗುರುತು ಖರೆಯಾಗಿದೆ ಎಂದು ಹೇಳಬೇಕಾದರೆ, ವ್ಯವಸ್ಥೆಯ ಸಮೀಕರಣಗಳ ಯಾವ ವಿಧವಾದ ರೇಖೀಯ ಸಂಯೋಜನೆಯಿಂದಲೂ ಇದೇ ಚರಗಳನ್ನು ಸಂಬಂಧಿಸುವ ಮತ್ತೊಂದು ಸಮೀಕರಣವನ್ನು ಪಡೆಯುವುದು ಸಾಧ್ಯವಿಲ್ಲದಿರಬೇಕು. ಒಂದು ಉದಾಹರಣೆಯ ಮೂಲಕ ಇದನ್ನು ಸ್ಪಷ್ಟಪಡಿಸಬಹುದು, ಬೇಡಿಕೆಯ ಸಮೀಕರಣವನ್ನು ತೆಗೆದುಕೊಳ್ಳೋಣ.

$$q^d_t = a + bp_t + u_t \qquad \cdot\cdot\ (1)$$

ಇದರಲ್ಲಿ $q^d_t$ = $t$-ಕಾಲದಲ್ಲಿನ ಬೇಡಿಕೆಯ ಪರಿಮಾಣ; $p_t$= $t$ ಕಾಲದಲ್ಲಿನ ಬೆಲೆ; $u_t$= $t$ ಕಾಲದ ಭ್ರಂಶ ಮತ್ತು $a, b$ ಸ್ಥಿರ ಪ್ರಾಚಲಗಳು.

ಹೀಗೆಯೇ ಸರಬರಾಜಿನ ಸಮೀಕರಣವನ್ನು ತೆಗೆದುಕೊಳ್ಳೋಣ.

$$q^s_t = c + dp_t + v_t \qquad (2)$$

ಇದರಲ್ಲಿ $q^d_t$ = $t$ ಕಾಲದಲ್ಲಿನ ಸರಬರಾಜಿನ ಪರಿಮಾಣ; $p_t$= $t$ ಕಾಲದಲ್ಲಿನ ಬೆಲೆ; $v_t$= $t$ ಕಾಲದ ಭ್ರಂಶ ಮತ್ತು $c, d$ ಸ್ಥಿರ ಪ್ರಾಚಲಗಳು.

ಬೇಡಿಕೆ ಮತ್ತು ಸರಬರಾಜು ಇದನ್ನು ಸಂಬಂಧಿಸಿದ ಸಮೀಕರಣ :

$$q^d_t = q^s_t + w_t \qquad (3)$$

ಇಲ್ಲಿ $w_t$= $t$ ಕಾಲದ ಭ್ರಂಶ.

ಈ ಮೂರು ಸಮೀಕರಣಗಳ ರೇಖೀಯ ಸಂಯೋಜನೆಯಿಂದ ಮತ್ತೊಂದು ಸಮೀಕರಣವನ್ನು ಪಡೆಯಬಹುದು.

$$\cdot\cdot\ (4)$$

ಈ ಸಂಕರ ಸಮೀಕರಣಕ್ಕೂ ನಿಜವಾದ ಬೇಡಿಕೆಯ ಸಮೀಕರಣಕ್ಕೂ ಇರುವ ವ್ಯತ್ಯಾಸ ತಿಳಿಯುವುದು ಸಾಧ್ಯವಿಲ್ಲ. ಈ ಎರಡೂ ಸಮೀಕರಣಗಳೂ $q^d_t$ ಮತ್ತು $p_t$ ಗಳಿಗಿರುವ ಸಂಬಂಧಗಳನ್ನು ಸೂಚಿಸುತ್ತವೆ. ಎರಡೂ ಅಜ್ಞಾತ ಸ್ಥಿರ ಗುಣಕಗಳನ್ನೂ ಮತ್ತು ಅಜ್ಞೇಯ ಸಂಕಲ್ಯ ಭ್ರಂಶಗಳನ್ನೂ ಒಳಗೊಂಡಿವೆ. ಹೀಗಾಗಿ ಬೇಡಿಕೆಯ ಸಮೀಕರಣದ ಗುರುತುಖರೆಯಾಗಲಿಲ್ಲ.

ಕೆಲವು ಅತಿರಿಕ್ತ ಷರತ್ತುಗಳನ್ನು ಅಥವಾ ನಿರ್ಬಂಧಗಳನ್ನು ವಿಧಿಸಿದರೆ ಈ ಸಂದಿಗ್ಧತೆಯನ್ನು ದೂರ ಮಾಡಬಹುದು. ಆಗ ಬೇಡಿಕೆಯ ಸಮೀಕರಣದ ಗುರುತು ಖರೆಯಾಗುವುದು. ಸಂಭವ ಚರಭ್ರಂಶಗಳ ಸ್ವರೂಪವನ್ನು ಕುರಿತ ವಿವರಣೆಯಿಂದ ಗುರುತುಖರೆಮಾಡಲು ಸಾಧ್ಯ. ಕೆಲವು ಸಂದರ್ಭಗಳಲ್ಲಿ ಮತ್ತೊಂದು ಚರವನ್ನು ಸೇರಿಸಿಕೊಂಡು ಸಮೀಕರಣವನ್ನು ರಚಿಸಿದರೆ, ಸಮೀಕರಣದ ಗುರುತುಖರೆ ಆಗುವುದು. ಉದಾಹರಣೆಗೆ, ವರಮಾನವನ್ನು $I$ ಎಂದು ಸೂಚಿಸಿದರೆ, ಬೇಡಿಕೆಯ ಸಮೀಕರಣವನ್ನು $q^d_t = \alpha + \beta p_t + \varepsilon I_t + u_t$ ಎಂದು ನಿರೂಪಿಸಬಹುದು. ಈಗ ಈ ಸಮೀಕರಣದ ಗುರುತುಖರೆ ಮಾಡುವುದರಲ್ಲಿ ಯಾವ ತೊಡಕೂ ಇರುವುದಿಲ್ಲ.

ರೇಖೀಯ ಸಮೀಕರಣಗಳ ವ್ಯವಸ್ಥೆಯಿಂದ ಮೆಟ್ರಿಕ್ ಅಂಕನದಲ್ಲಿ (ಮ್ಯಾಟ್ರಿಕ್ಸ್ ನೋಟೆಷನ್)

$$(6)$$

ಎಂಬ ವ್ಯಕ್ತ ಸಮೀಕರಣವನ್ನು ಪಡೆಯಬಹುದು. ಈ ಇಳಿಸಿದ ರೂಪ ಸಮೀಕರಣದ ಪ್ರಾಚಲಗಳಿಂದ ರಚನಾ ಸಂಬಂಧದ (ಸ್ಟ್ರಕ್‌ಚರಲ್ ರಿಲೇಷನ್ಸ್ ) ಪ್ರಾಚಲಗಳನ್ನು ನಿಗಮನ ಮಾಡುವುದಕ್ಕೆ ಗುರುತುಖರೆ ಮಾಡುವುದು ಎನ್ನುತ್ತೇವೆ. $u_t$ಯ ವಿಕೀರ್ಣ (ಡಿಸ್‌ಪರ್ಷನ್) ಮ್ಯಾಟ್ರಿಕ್ಸ್ Ø=E($u_t$ $u'_t$) ಇರುವುದು. B ಮತ್ತು ಮ್ಯಾಟ್ರಿಕ್ಸ್‌ಗಳ ಮೇಲೆ ಯಾವ ವಿಧವಾದ ನಿರ್ಬಂಧಗಳೂ ಇಲ್ಲದಿದ್ದರೆ ಮ್ಯಾಟ್ರಿಕ್ಸ್ ಪ್ರಾಚಲಗಳು ಅನಂತ ಬಾಹುಳ್ಯವಾದ ಕಟ್ಟಡಗಳಿಗೆ ಅನ್ವಯಿಸುವಂತಿರುವುವು. ಆದ್ದರಿಂದ B, , Ø, ಮ್ಯಾಟ್ರಿಕ್ಸ್‌ಗಳ ಮೇಲೆ ಯಾವುದಾದರೂ ಒಂದು ಉಪಯುಕ್ತವಾದ ಕಟ್ಟನ್ನು ಹಾಕಿದರೆ ಮಾತ್ರ ಗುರುತುಖರೆ ಸಾಧ್ಯವಾಗುವುದು. B ಮತ್ತು ಗಳ ಕೆಲವು ಮೂಲಾಂಶಗಳು ಶೂನ್ಯ ಎಂದು ವಿಧಿಸುವುದು ಅತಿ ಸರಳ ನಿಬಂಧನೆ. ಅಂದರೆ ವ್ಯೂಹದ ಕೆಲವು ಸಮೀಕರಣಗಳಲ್ಲಿ ನಿರ್ದಿಷ್ಟವಾದ ಕೆಲವು ಚರಗಳು ಸೇರುವುದಿಲ್ಲ. ಈ ಷರತ್ತು ಆವಶ್ಯಕವಾದರೂ ಪರ್ಯಾಪ್ತವೇನೂ ಅಲ್ಲ. ಇಂಥ ಆವಶ್ಯಕವಾದ ಎರಡು ನಿಯಮಗಳನ್ನು ಇಲ್ಲಿ ನಿರೂಪಿಸುತ್ತೇವೆ.

ಸಮೀಕರಣ ಪುಂಜದ ವ್ಯವಸ್ಥೆಯ ಮೊದಲನೆಯ ಸಮೀಕರಣದ ಗುರುತುಖರೆ ಮಾಡಬೇಕೆಂದಿಟ್ಟುಕೊಳ್ಳೋಣ. ಆ ಸಮೀಕರಣವನ್ನು

$$(7)$$

ಎಂದು ಬರೆಯಬಹುದು. ಇಲ್ಲಿ ಎಂಬುದು B ಯ ಮೊದಲನೆಯ ಸಾಲು ಮತ್ತು $Y_1$ ಎಂಬುದು h ದ ಮೊದಲನೆಯ ಸಾಲು. GÄ ಅಂತಸ್ಥ ಚರಗಳೂ K* ಪೂರ್ವವಿದಿತ ಚರಗಳೂ ಈ ಸಮೀಕರಣದಲ್ಲಿ ಬರುವುವು ಎಂದಿಟ್ಟುಕೊಳ್ಳೋಣ. ಆಗ GÄÄ=G-GÄ ಅಂತಸ್ಥ ಚರಗಳೂ K**=K-K* ಪೂರ್ವವಿದಿತ ಚರಗಳೂ ಈ ಸಮೀಕರಣದಲ್ಲಿ ಇರುವುದಿಲ್ಲ.

(i) ಉಕ್ತ ಸಮೀಕರಣದ ಗುರುತುಖರೆಯಾಗಬೇಕಾದರೆ

$$\cdot\cdot\ (8)$$

ಇದಕ್ಕೆ ಗುರುತುಖರೆಯ ನಿಯಮವೆಂದು (ಆರ್ಡರ್ ಕಂಡೀಷನ್) ಹೆಸರು. ಇದು ಅವಶ್ಯವಾದರೂ ಪರ್ಯಾಪ್ತವಲ್ಲ.

(ii) IIಮ್ಯಾಟ್ರಿಕ್ಸಿನ ಮೊದಲನೆಯ Ä ಅಡ್ಡಸಾಲುಗಳು (ರೋಸ್) ಮತ್ತು ಕೊನೆಯ K** ನೀಟಸಾಲುಗಳಿಂದಾದ (ಕಾಲಂಸ್) ಉಪಮೇಟ್ರಿಕ್ಸಿನ ದರ್ಜೆ (ರ್‍ಯಾಂಕ್) ಆದರೆ ಎಂಬುದು ಉಕ್ತ ಸಮೀಕರಣದ ಗುರುತುಖರೆಯ ಆವಶ್ಯಕ ಮತ್ತು ಪರ್ಯಾಪ್ತ ನಿಯಮವಾಗುವುದು.

ರಾಷ್ಟ್ರಾನುಭೋಗ, ರಾಷ್ಟ್ರಾದಾಯ ಮುಂತಾದ ಮಹದಾರ್ಥಿಕ (ಮ್ಯಾಕ್ರೊ – ಎಕನಾಮಿಕ್) ಅನ್ಯಾದೃಶ ಘಟನೆಗಳ ವಿಚಾರವಾಗಿ ಇಲ್ಲಿಯವರೆಗೂ ಹೇಳಲಾಗಿದೆ. ಅತಿ ಸೂಕ್ಷ್ಮಾರ್ಥಿಕ (ಮೈಕ್ರೊ–ಎಕನಾಮಿಕ್) ವಿಶ್ಲೇಷಣವನ್ನೂ ಅರ್ಥಮಿತಿಯಲ್ಲಿ ಪರಿಶೀಲಿಸಲಾಗುವುದು. ಸಂಸಾರದ ಸರ್ವೇಕ್ಷಣದ ವಿಶ್ಲೇಷಣೆಯನ್ನು ಕುರಿತು ಸಾಕಷ್ಟು ಸಂಶೋಧನೆ ನಡೆದಿದೆ. ಇದರಿಂದ ಅನುಭೋಕ್ತರ ವೆಚ್ಚದ ನಮೂನೆಯನ್ನು ತಿಳಿಯಲಾಗುವುದು.

ಅರ್ಥಮಿತಿಯ ವಿಧಾನಗಳು ಬಹಳ ಜಟಿಲ. ಅವನ್ನು ಬಳಸುವುದರಲ್ಲಿ ಬಹಳ ಕಾಲ ವ್ಯಯವಾಗುವುದು. ಪೂರ್ವಸಿದ್ಧತೆ, ಮಾಹಿತಿ ಶೇಖರಣೆಗಾಗಿ ಅಪಾರ ಹಣ ಖರ್ಚು ಮಾಡಬೇಕಾಗುವುದು. ಮೂರು ನಾಲ್ಕು ವರ್ಷಗಳಿಗೊಮ್ಮೆ ಮಾದರಿಗಳನ್ನು ಬದಲಾಯಿಸುತ್ತಿರಬೇಕು. ಈ ಕಾರಣಗಳಿಂದ ಅರ್ಥಮಿತಿಯ ಪ್ರಯೋಗ ಸುಲಭವಲ್ಲ.

(ಎಂ.ಆರ್.ಡಿ.)

**ಅರ್ಥಮೀಮಾಂಸೆ :** ಅರ್ಥವೆಂಬುದು ಸಂಸ್ಕೃತದಲ್ಲಿ ನಾನಾರ್ಥಕ ಶಬ್ದ. ಶಬ್ದವಾಚ್ಯಾರ್ಥ, ಹಣ, ವಸ್ತು ಇತ್ಯಾದಿಗಳನೆಲ್ಲ ಒಳಗೊಳ್ಳುತ್ತದೆ. ಆದರೆ ದಾರ್ಶನಿಕರ ಬಹುಮುಖ ವಿವೇಚನೆಗೆ ವಿಷಯವೆಂದರೆ ಶಬ್ದಗಳಿಂದ ಪ್ರತೀತವಾಗುವ ಅರ್ಥ ಮಾತ್ರ. [illegible] ಸ್ವರೂಪವೇನು, [illegible]ವೇನು, ರಹಸ್ಯವೇನು, ಭಾಷೆಯಲ್ಲಿ [illegible] ಪ್ರತೀತಿಯಿಂದ ಶಬ್ದಾರ್ಥ ಪ್ರತೀತಿಯೋ ಇಲ್ಲವೆ ಶಬ್ದಾರ್ಥದ್ವಾರಾ ವಾಕ್ಯಾರ್ಥ ಜ್ಞಾನವ್ರೋ ಎಂಬ ಪ್ರಶ್ನೆಗಳು ಭಾರತೀಯ ದಾರ್ಶನಿಕರಿಂದ ಮತ್ತೆ ಮತ್ತೆ ವಿಮರ್ಶಿಸಲ್ಪಟ್ಟಿವೆ; ಹಲವಾರು ಸಿದ್ಧಾಂತಗಳಿಗೆ ಅವಕಾಶವನ್ನಿತ್ತಿವೆ. ಅವನ್ನಿಲ್ಲಿ ಸಂಗ್ರಹವಾಗಿ ನಿರೂಪಿಸಲಾಗಿದೆ.

ವ್ಯಾಕರಣಶಾಸ್ತ್ರದಲ್ಲಿ ಶಬ್ದಾರ್ಥಮೀಮಾಂಸೆಗೆ ಅಗ್ರಸ್ಥಾನವನ್ನು ಕಲ್ಪಿಸಿದ ಯಶಸ್ಸು ವಾಕ್ಯಪದೀಯವೆಂಬ ಉದ್ಗ್ರಂಥವನ್ನು ಬರೆದ ಭರ್ತೃಹರಿಯದು. ಇವನ ತತ್ತ್ವಜ್ಞಾನದಲ್ಲಿ ಶಬ್ದವೆಂಬುದು ಅಖಂಡ, ಅವಿನಾಶಿ, ಶಾಶ್ವತಬ್ರಹ್ಮತತ್ತ್ವವೇ; ಅರ್ಥವೆಲ್ಲ ಶಬ್ದದ ವಿವರ್ತ ಅಥವಾ ರೂಪಾಂತರವೇ. ಕಿವಿಗೆ ಬೀಳುವ ಶಬ್ದಾಂಶಗಳು–ಉದಾಹರಣೆಗೆ ಹಸು ಎನ್ನುವಾಗ ಕೇಳಿಸುವ ಹಕಾರ, ಅಕಾರ, ಸಕಾರ ಉಕಾರಗಳು, ಅವುಗಳ ಉಚ್ಚಾರಣೆಯ ನಾದದಲ್ಲಿ ಏರಿಳಿತಗಳು ಇತ್ಯಾದಿ–ಇವು ಸ್ವಯಂ ಖಂಡ ಖಂಡವೂ ನಶ್ವರವೂ ಆಗಿದ್ದು ಇವುಗಳ ಹಿಂದಿರುವ ಅಖಂಡಶಬ್ದ ರೂಪದ ಅಭಿವ್ಯಂಜಕಗಳಾಗಿವೆ. ಆ ಅಖಂಡ ಶಬ್ದರೂಪ ಅನಾದಿ ಹಾಗೂ ಅನಂತ. ಅರ್ಥವನ್ನು ತಟ್ಟನೆ ಬೆಳಗುವುದೇ ಅದರ ಸ್ವಭಾವಸಿದ್ಧ ಲಕ್ಷಣ. ಈ ಅರ್ಥ ಜ್ಯೋತಿಯನ್ನೇ ವೈಯಾಕರಣರು ಸ್ಫೋಟವೆನ್ನುತ್ತಾರೆ. ಸ್ಫೋಟಕ್ಕೆ ಅಭಿವ್ಯಂಜಕವಾದ ಶಬ್ದವೇ ಧ್ವನಿ. ಅರ್ಥಸ್ಫೂರ್ತಿ ಇಲ್ಲವೇ ಸ್ಫೋಟ ಧ್ವನಿಯಿಂದ ವ್ಯಂಗ್ಯವೇ ಹೊರತು ವಾಚ್ಯವಲ್ಲವೆನ್ನುವುದು ಸಿದ್ಧಾಂತ. ವಸ್ತುತಃ ಒಂದು ಅರ್ಥ ಪ್ರತೀತಿಗೆ ಇಡಿಯ ವಾಕ್ಯವೇ ವ್ಯಂಜಕವಾದ್ದರಿಂದ ಭರ್ತೃಹರಿಯ ಸಿದ್ಧಾಂತದಲ್ಲಿ ಅಖಂಡಾರ್ಥಕ್ಕೆ ವಾಕ್ಯವೇ ಬೇಕು. ವಾಕ್ಯಸ್ಫೋಟದಲ್ಲಿ ಭಾಗವಹಿಸುವ ಪದಸ್ಫೋಟ ವರ್ಣಸ್ಫೋಟಗಳನ್ನೂ ಸಡಿಲವಾದ ಭಾಷೆಯಲ್ಲಿ ಸ್ಫೋಟವೆನ್ನಬಹುದು. ವೈಯಾಕರಣರ ಈ ಸ್ಫೋಟವಾದ ಮಿಕ್ಕ ದಾರ್ಶನಿಕರ ಖಂಡನೆಗೇ ಹೆಚ್ಚು ಗುರಿಯಾದುದನ್ನು ನೋಡುತ್ತೇವೆ.

ಸ್ಫೋಟವಿರೋಧಿಗಳಲ್ಲಿ ಅಗ್ರಸ್ಥಾನ ಮೀಮಾಂಸಕರಿಗೆ ಸಲ್ಲುತ್ತದೆ. ಅಪೌರುಷೇಯವೆಂದು ವೇದವಾಕ್ಯವನ್ನಂಗೀಕರಿಸಿ ವಿವರಿಸಹೊರಟ ಮೀಮಾಂಸಕರಿಗೂ ವೇದಶಬ್ದವೆಲ್ಲ ನಿತ್ಯವೇ. ಶಬ್ದಗಳ ಅರ್ಥವಾದರೂ ನಿತ್ಯವೇ ನಿಜ. ನಿತ್ಯವಾದುದೇ ಶಬ್ದ. ಅನಿತ್ಯ ಅಪಶಬ್ದ. ನಿತ್ಯವೇ ಅರ್ಥ, ಅನಿತ್ಯವಾದುದು ಅಪಾರ್ಥ. ಇದು ಅವರ ನಿಲುವು. ಆದರೂ ತತ್ತ್ವಚಿಂತನೆಯಲ್ಲಿ ಅವರು ಹೆಚ್ಚು ವಾಸ್ತವತಾವಾದಿಗಳು. ಸ್ಫೋಟವೆಂಬ ಅವಾಸ್ತವ ಕಲ್ಪನೆಯಿಲ್ಲದೆಯೇ ಶಬ್ದಾರ್ಥಪ್ರತೀತಿಯನ್ನು ವಿವರಿಸುವುದು ಸುಕರವೆಂದು ಅವರ ಆಶಯ. ವಾಕ್ಯಾಂತರ್ಗತ ಶಬ್ದಗಳಿಗೆ ತಂತಮ್ಮ ಅರ್ಥವಿರುವುದೂ ಇವು ವಾಕ್ಯದಲ್ಲಿ ಪ್ರಯುಕ್ತವಾದಾಗ ಅನ್ಯೋನ್ಯ ಅನ್ವಯ ಸಂಬಂಧವನ್ನು ಪಡೆಯುವುದೂ ಕಡೆಗೆ ಇಡಿಯ ವಾಕ್ಯಾರ್ಥಜ್ಞಾನವನ್ನು ಮಾಡಿ

ಕೊಡುವುದೂ ಅನುಭವಸಿದ್ಧವೆಂದು ಕುಮಾರಿಲಭಟ್ಟರೇ ಮುಂತಾದ ಪೂರ್ವಮೀಮಾಂಸಕರ ಸಿದ್ಧಾಂತ. ಇದಕ್ಕೆ ಅಭಿಹಿತಾನ್ವಯವಾದವೆಂದೂ ಹೆಸರಿದೆ. ಮೀಮಾಂಸಕರಲ್ಲೇ ಇನ್ನೊಂದು ಸಂಪ್ರದಾಯವನ್ನು ಆರಂಭಿಸಿದ ಪ್ರಭಾಕರಭಟ್ಟನ ಪ್ರಕಾರ ಪದಾರ್ಥಜ್ಞಾನದ ಅನಂತರ ವಾಕ್ಯಾರ್ಥ ಜ್ಞಾನ ಬರುವುದಿಲ್ಲ; ವಾಕ್ಯಾರ್ಥ ಜ್ಞಾನದ ಮೂಲಕವೇ ಪದಾರ್ಥಪ್ರತೀತಿಯುಂಟಾಗುತ್ತದೆ. ಭಾಷೆಯನ್ನು ಮೊತ್ತ ಮೊದಲು ಕಲಿಯಲಾರಂಭಿಸುವ ಬಾಲಕ ಹಿರಿಯರ ವಾಕ್ಯ ಪ್ರಯೋಗಗಳ ಸಂಸ್ಕಾರದಿಂದ ಈ ಶಬ್ದಕ್ಕೆ ಈ ಅರ್ಥವೆಂದು ಗ್ರಹಿಸುತ್ತಾನೆಂದು ಪ್ರಭಾಕರನ ವಾದ. ಇದಕ್ಕೆ ಅನ್ವಿತಾಭಿದಾನವಾದವೆಂದೂ ಹೆಸರಿದೆ. ಕುಮಾರಿಲನಿಗೆ ವಾಕ್ಯಾರ್ಥ ಪ್ರತೀತಿಯನ್ನು ವಿವರಿಸಲು ತಾತ್ಪರ್ಯವೆಂಬ ಶಕ್ತಿಯನ್ನು ಕಲ್ಪಿಸಬೇಕಾಗುತ್ತದೆ. ಪ್ರಭಾಕರನ ಅನುಯಾಯಿಗಳಿಗೆ ಅದನ್ನು ಬಿಟ್ಟರೂ ನಡೆಯುತ್ತದೆ. ವೇದಾಂತಿಗಳು ಕೂಡ ಸ್ಫೋಟನಿರಾಕರಣೆಯಲ್ಲಿ ಮೀಮಾಂಸಕರನ್ನು ಅನುಸರಿಸುತ್ತಾರೆ.

ಶಬ್ದ-ಅರ್ಥ ಇವುಗಳ ಸಂಬಂಧವನ್ನು ವಿವರಿಸಲು ಅಭಿಧಾ, ಲಕ್ಷಣಾ ಮತ್ತು ವ್ಯಂಜನಾ ಎಂಬ ಶಬ್ದಶಕ್ತಿಗಳನ್ನು (ಅಥವಾ ಶಬ್ದವೃತ್ತಿ ಅಥವಾ ಶಬ್ದ ವ್ಯಾಪಾರ) ಉಲ್ಲೇಖಿಸುವುದು ಭಾರತೀಯ ದಾರ್ಶನಿಕರ ವೈಶಿಷ್ಟ್ಯ. ಒಂದು ಭಾಷೆಯನ್ನಾಡುವ ಸಮಾಜದಲ್ಲಿ ಬಹು ಜನರು ಒಪ್ಪಿರುವ ಮುಖ್ಯಾರ್ಥವನ್ನು ಬೋಧಿಸುವ ಶಬ್ದ ಶಕ್ತಿಯೇ ಅಭಿಧೆ. ಈ ಅರ್ಥಕ್ಕೆ ವಾಚ್ಯಾರ್ಥ, ಅಭಿಧೇಯ, ಸಂಕೇತಿತಾರ್ಥ ಎಂದೂ ನಾಮಾಂತರಗಳುಂಟು. ಈ ಶಕ್ತಿ ಈಶ್ವರನ ಇಚ್ಛಾಧೀನವೆಂದು ಮತ್ತೆ ತಾರ್ಕಿಕರಲ್ಲಿ ಕೆಲವರು ಹೇಳಿದರೆ, ಪುರುಷರ ಇಚ್ಛಾಧೀನವೆಂದು ಮತ್ತೆ ಕೆಲವರು ಹೇಳುತ್ತಾರೆ. ಮುಖ್ಯಾರ್ಥ ಅನ್ವಿತವಾಗದಂತಿದ್ದ ಪ್ರಯೋಗದಲ್ಲಿ ಅದಕ್ಕೆ ಸಂಬಂಧಿಸಿದ ಅಥವಾ ಹೋಲಿಕೆಯಿರುವ ಮತ್ತೊಂದು ಅರ್ಥವನ್ನು ಗ್ರಹಿಸಬೇಕಾಗುತ್ತದೆ. ಇಲ್ಲಿ ಕಾಣುವುದು ಲಕ್ಷಣಾಶಕ್ತಿ. ಈ ಹುಡುಗನೊಬ್ಬ ಕತ್ತೆಯೆಂಬಲ್ಲಿ ಕತ್ತೆಯೆಂದರೆ ದಡ್ಡನೆಂಬುದು ಲಕ್ಷ್ಯಾರ್ಥ. ಇವೆರಡನ್ನು ಪ್ರಾಯಿಕವಾಗಿ ಸಕಲ ದಾರ್ಶನಿಕರೂ ಒಪ್ಪುತ್ತಾರೆ. ಆದರೆ ವಕ್ತೃವಿನ ವೈಯಕ್ತಿಕ ಚಿತ್ತವೃತ್ತಿಗಳನ್ನೂ ಶ್ರೋತೃವಿನಲ್ಲುದಯಿಸುವ ಚಿತ್ತವೃತ್ತಿವಿಶೇಷಗಳನ್ನೂ ಇವೆರಡೂ ವಿವರಿಸಲಾರವು. ಇವುಗಳಿಂದಲೇ ಕಾವ್ಯಭಾಷೆ ತುಂಬಿರುವುದನ್ನು ರಸಿಕರು ಬಲ್ಲರು. ಆದ್ದರಿಂದ ಆನಂದವರ್ಧನನೇ ಮುಂತಾದ ಆಲಂಕಾರಿಕರು ವ್ಯಂಜಕತ್ವ ಅಥವಾ ಧ್ವನಿ ಎಂಬ ಮೂರನೆಯ ಶಬ್ದ ಶಕ್ತಿಯನ್ನು ಒಪ್ಪಬೇಕೆಂದು ಪ್ರಬಲವಾಗಿ ಸಾಧಿಸಿದ್ದಾರೆ. ಹೀಗೆ ಅರ್ಥದಲ್ಲಿ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳೆಂಬ ಮೂರು ಪ್ರಕಾರಗಳನ್ನು ಭಾರತೀಯರು ಗುರುತಿಸಿದ್ದಾರೆ.

ಬೌದ್ಧ ದಾರ್ಶನಿಕರು ಕ್ಷಣಿಕವಾದಿಗಳಾದ್ದರಿಂದ ಇದಾವುದನ್ನೂ ಒಪ್ಪುವಂತಿಲ್ಲ. ಒಂದು ಶಬ್ದಕ್ಕೆ ಅದು ಇನ್ನೊಂದಿಲ್ಲವೆನ್ನುವುದೇ ಅರ್ಥವೆಂದು ಅವರು ವಾದಿಸುತ್ತಾರೆ. ಇದಕ್ಕೆ ಅಪೋಹವಾದವೆಂದು ಹೆಸರು. ಹಸುವೆಂದರೆ ಆಡಲ್ಲದ್ದು, ಕುರಿಯಲ್ಲದ್ದು, ಇತ್ಯಾದಿಯೇ ಎಂದು ಇವರ ವಿವರಣೆ.

ಸಂಕೇತ ಅಥವಾ ಅಭಿಧಾಶಕ್ತಿ ಯಾವ ಯಾವ ರೀತಿಯ ಶಬ್ದಗಳಿಗೆ ಹೇಗೆ ಅನ್ವಯಿಸುತ್ತದೆಂಬ ಪ್ರಶ್ನೆಗೆ ಮೀಮಾಂಸಕರು ಎಲ್ಲ ಶಬ್ದಗಳಿಗೂ ಜಾತಿ ಅಥವಾ ಸಾಮಾನ್ಯವೇ (ಮನುಷ್ಯನಲ್ಲಿ ಮನುಷ್ಯತ್ವ, ಕಪಿಯಲ್ಲಿ ಕಪಿತ್ವ ಇತ್ಯಾದಿ) ಮುಖ್ಯಾರ್ಥವೆನ್ನುತ್ತಾರೆ. ಜಾತಿಬೋಧೆಯಲ್ಲಿ ವ್ಯಕ್ತಿಬೋಧೆ ಅಂತರ್ಗತವೆಂದು ಅವರ ಅಭಿಪ್ರಾಯ. ಜಾತಿ, ಗುಣ, ಕ್ರಿಯೆ, ದ್ರವ್ಯ-ನಾಲ್ಕೂ ಮುಖ್ಯಾರ್ಥ ವಿಷಯಗಳೆಂದು ವೈಯಾಕರಣರ ಮತ. ಜಾತಿ, ಆಕೃತಿ, ವ್ಯಕ್ತಿ-ಈ ಮೂರು ಶಬ್ದಬೋಧದಲ್ಲಿ ಉಂಟೆಂದು ಪ್ರಾಚೀನ ನೈಯಾಯಿಕರ ಹೇಳಿಕೆ. **(ಕೆ.ಕೆ.)**

**ಅರ್ಥಶಾಸ್ತ್ರ :** ಸಂಪತ್ತು ಮತ್ತು ಕ್ಷೇಮಾಭ್ಯುದಯಶಾಸ್ತ್ರ ಎಂದು ಕೆಲವರ ಮತ; ಮಾನವ ತನ್ನ ಬಯಕೆಗಳನ್ನು ಪೂರೈಸಿಕೊಳ್ಳುವಲ್ಲಿ ಅನುಸರಿಸುವ ರೀತಿಯ ಅಧ್ಯಯನ ಎಂದು ಇತರರ ಮತ (ಎಕನಾಮಿಕ್ಸ್ ). ಸಮಾಜವಿಜ್ಞಾನಗಳಲ್ಲಿ ಅರ್ಥಶಾಸ್ತ್ರಕ್ಕೆ ಪ್ರಮುಖ ಸ್ಥಾನವಿದೆ. ಮಾನವನ ಆರ್ಥಿಕ ಸಮಸ್ಯೆಗಳ ಕೂಲಂಕಷಾಭ್ಯಾಸ ಮತ್ತು ಪರಿಹಾರಾನ್ವೇಷಣೆ ಅದರ ಧ್ಯೇಯ. ಮನುಷ್ಯನ ಬಯಕೆಗಳು ನಿರಂತರವಾಗಿ ಬೆಳೆಯುತ್ತವೆ. ಆಹಾರ, ವಸತಿ, ಬಟ್ಟೆ, ಅನುಕೂಲತೆ ವಿಶಿಷ್ಟದರ್ಜೆಯ ಸೇವೆ ಇತ್ಯಾದಿ. ಈ ಬಯಕೆಗಳ ತೃಪ್ತಿಗೋಸ್ಕರ ಪ್ರಕೃತಿಯ ಕೊಡುಗೆ, ಮನುಷ್ಯ ಪ್ರಯತ್ನ ಪರಸ್ಪರ ಪೂರಕವಾಗಿ ಮುಂದುವರಿಯಬೇಕು. ಬಯಕೆ, ಪ್ರಯತ್ನ, ತೃಪ್ತಿ ಈ ನಿರಂತರ ಚಕ್ರದ ಅಂಗವಾಗಿ ಉತ್ಪಾದನೆ, ವಿನಿಮಯ, ಅನುಭೋಗ ಇವೆ. ಇವುಗಳಿಂದ ಉಂಟಾಗುವ ಸಮಸ್ಯೆಗಳ ಅಭ್ಯಾಸ ಅರ್ಥಶಾಸ್ತ್ರ.

**ಸಂಪತ್ತು ಮತ್ತು ಕ್ಷೇಮಾಭ್ಯುದಯ ವ್ಯಾಖ್ಯೆ:** ಆಡಮ್ ಸ್ಮಿತ್ ಮತ್ತು ಇನ್ನೂ ಇತರ ಪ್ರಾಚೀನ ಪಂಥದ ಅರ್ಥಶಾಸ್ತ್ರಜ್ಞರು ಅರ್ಥಶಾಸ್ತ್ರಕ್ಕೆ ಈ ವ್ಯಾಖ್ಯೆ ನೀಡಿದರು. ಆಡಮ್ ಸ್ಮಿತ್ ತಾನು ಬರೆದ ಗ್ರಂಥವನ್ನು ರಾಷ್ಟ್ರಗಳ ಸಂಪತ್ತಿನ ಬಗ್ಗೆ ವಿಚಾರಮಥನ ಎಂದು ಕರೆದಿದ್ದಾನೆ. ಸಂಪತ್ತಿನ ಉತ್ಪಾದನೆ, ವಿನಿಮಯ ಮತ್ತು ವಿತರಣೆಗೆ ಸಂಬಂಧಿಸಿದ ಶಾಸ್ತ್ರ ಅರ್ಥಶಾಸ್ತ್ರ ಎಂದು ಅವನು ವ್ಯಾಖ್ಯಾನಿಸಿದ್ದಾನೆ. ಸಂಪತ್ತಿನ ಕ್ರೋಡೀಕರಣೆಯೇ ಪ್ರಮುಖ ಗುರಿಯಾಗಿದ್ದ ಅರ್ಥಶಾಸ್ತ್ರವನ್ನು 19 ನೆಯ ಶತಮಾನದ ಆದಿಯಲ್ಲಿ ಧಾರ್ಮಿಕ ಬರೆಹಗಾರರುಗಳಾದ ಕಾರ್ಲೈಲ್, ರಸ್ಕಿನರೇ ಮೊದಲಾದವರು ನಿರುತ್ಸಾಹಿ ವಿಜ್ಞಾನ ಮತ್ತು ಐಶ್ವರ್ಯದೂತ ಎಂದು ವರ್ಣಿಸಿದರು. ಸಂಪತ್ತೇ ಪ್ರಧಾನ; ಮನುಷ್ಯ ಕೇವಲ ಸಂಪತ್ತನ್ನು ಆಶಿಸುವ ಆರ್ಥಿಕ ವ್ಯಕ್ತಿ ಎಂಬ ವಿಚಾರ ಸರಣಿ ಅನೇಕರಿಗೆ ಒಪ್ಪಿಗೆಯಾಗದೆ ಜನರು ಅರ್ಥವಿಜ್ಞಾನವನ್ನು ಕೀಳಾಗಿ ನೋಡತೊಡಗಿದರು. ಆಡಮ್ ಸ್ಮಿತ್‌ನ ವ್ಯಾಖ್ಯೆಯ ಲೋಪದೋಷಗಳನ್ನು ತೆಗೆದು ಹಾಕಿ ದಾರ್ಶನಿಕರ ಕಟುಟೀಕೆಯಿಂದ ಅದನ್ನು ವಿಮುಕ್ತಿಗೊಳಿಸಲು ಮಾರ್ಷಲ್, ಪಿಗೊ ಮುಂತಾದ ಅರ್ಥಶಾಸ್ತ್ರಜ್ಞರು ಪ್ರಯತ್ನಪಟ್ಟರು. ಮಾನವ ಕಲ್ಯಾಣವನ್ನು ಸಾಧಿಸಲು ಸಂಪತ್ತನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕೆಂದು ತಿಳಿಸುವ ಶಾಸ್ತ್ರ ಅರ್ಥಶಾಸ್ತ್ರ ಎಂದು ಇವರು ವಾದಿಸಿದರು. ಮಾರ್ಷಲ್ ಹೇಳಿರುವಂತೆ ಐಹಿಕ ಸಂಪತ್ತಿನ ಸಾಧನೆ ಮತ್ತು ಅದರ ಅನುಭೋಗ ಇವೇ ಅರ್ಥಶಾಸ್ತ್ರದ ಅಧ್ಯಯನ ವಿಷಯಗಳು. ಅರ್ಥಶಾಸ್ತ್ರ ಸಂಪತ್ತಿನ ವಿಜ್ಞಾನ ಮಾತ್ರವಲ್ಲ; ಮೂಲತಃ ಒಂದು ಮಾನವೀಯ ವಿಜ್ಞಾನ. ಮಾನವ ಸಂಪತ್ತು ಗಳಿಸಿ ತನ್ನ ಸುಖಕ್ಕಾಗಿಯೇ ಅದನ್ನು ಉಪಯೋಗಿಸುತ್ತಾನೆ. ಈ ಸಂಪಾದನೆ ಹಾಗೂ ಉಪಯೋಗಗಳನ್ನು ಅರ್ಥಶಾಸ್ತ್ರ ಪರೀಶೀಲಿಸುತ್ತದೆ. ಹೀಗೆ ಒಂದು ಕಡೆ ಸಂಪತ್ತಿನ ಪರಿಶೀಲನೆ ಮತ್ತು ಇನ್ನೊಂದು ಕಡೆ ಮುಖ್ಯವಾಗಿ ಮಾನವನ ಪರಿಶೀಲನೆ ಮಾಡುತ್ತದೆ. ಸಂಪತ್ತು ಮಾನವನಿಗೋಸ್ಕರ; ಮಾನವ ಸಂಪತ್ತಿಗೋಸ್ಕರವಲ್ಲ. ಸಂಪತ್ತು ಮಾನವಕಲ್ಯಾಣವನ್ನು ಸಾಧಿಸಲು ಒಂದು ಸಾಧನ. ಇದೇ ಮಾರ್ಷಲ್‌ನ ವ್ಯಾಖ್ಯೆಯ ಸಾರಾಂಶ. ಮಾರ್ಷಲ್ ಮತ್ತು ಅವನ ಅನುಯಾಯಿಗಳು ಕೊಟ್ಟ ಕ್ಷೇಮಾಭ್ಯುದಯ ವ್ಯಾಖ್ಯೆ ಅರ್ಥಶಾಸ್ತ್ರದಲ್ಲಿ ಇದ್ದ ಕೆಲವು ತಪ್ಪುಭಾವನೆಗಳನ್ನು ಹೋಗಲಾಡಿಸಿ ಅದು ಮನುಷ್ಯನ ಸುಖ ಸಂಪತ್ತನ್ನು ಮತ್ತು ಕ್ಷೇಮಾಭ್ಯುದಯವನ್ನು ಸಾಧಿಸುವ ಶಾಸ್ತ್ರವಾಯಿತು.

**ವಿರಳತೆ ವ್ಯಾಖ್ಯೆ :** ಬಯಕೆಗಳ ಪೂರೈಕೆ ಎಂದು ವಿವರಿಸುವ ಎರಡನೆಯ ಮತಕ್ಕೆ ಈ ಹೆಸರಿದೆ. ಲಯೋನಲ್ ರಾಬಿನ್ಸ್‌ನ ಅರ್ಥಶಾಸ್ತ್ರದ ಸ್ವರೂಪವನ್ನು ಕುರಿತ ಪ್ರಸಿದ್ಧ ಪ್ರಬಂಧ (1932) ಅರ್ಥಶಾಸ್ತ್ರದ ವ್ಯಾಖ್ಯೆ ಮತ್ತು ವ್ಯಾಪ್ತಿಯ ಬಗ್ಗೆ ಹೊಸ ಚರ್ಚೆಯನ್ನು ಆರಂಭಿಸಿತು. ಹಿಂದಿನ ಲೇಖಕರಂತೆ ಸಂಪತ್ತಿನ ಅಥವಾ ಕ್ಷೇಮಾಭ್ಯುದಯದ ಗೊಡವೆಗೆ ರಾಬಿನ್ಸ್ ಹೋಗದೆ, ಒಂದು ನೂತನ ವಿಚಾರಸರಣಿಯನ್ನೇ ಮುಂದಿಟ್ಟ.. ಮಾನವನ ಬಯಕೆಗಳು ಅಮಿತ; ಅವುಗಳನ್ನು ಸಂತೃಪ್ತಿಸಬಲ್ಲ ಸಾಮಗ್ರಿಗಳು ವಿರಳ. ಈ ವಿರಳ ಸಾಮಗ್ರಿಗಳಿಂದ ಅತ್ಯಂತ ಹೆಚ್ಚಿನ ತೃಪ್ತಿಯನ್ನು ಪಡೆಯಲು ಮಾನವ ತನ್ನ ಅನೇಕ ಬಯಕೆಗಳಲ್ಲಿ ಆಯ್ಕೆ ಮಾಡಬೇಕಾಗುತ್ತದೆ. ಆದ್ದರಿಂದ ಆದ್ಯತೆ ಪಟ್ಟಿ ಮಾಡಬೇಕಾದ ಸಮಸ್ಯೆಗಳು ಉದ್ಭವಿಸುತ್ತದೆ. ಇವೇ ಮುಖ್ಯ ಆರ್ಥಿಕ ಸಮಸ್ಯೆಗಳು. ಅತ್ಯಂತ ಹೆಚ್ಚಿನ ತೃಪ್ತಿಯನ್ನು ಹೊಂದಲು ಸರಿಯಾದ ದಾರಿ ಯಾವುದೆಂಬುದು ಮಾನವನ ಆರ್ಥಿಕ ಸಮಸ್ಯೆ. ಅವನಿಗಿರುವ ಬಯಕೆಗಳು ಮಿತಿಯುಳ್ಳ ಮತ್ತು ವಿವಿಧ ಉಪಯೋಗಗಳಿಗೆ ಆಗುವ ಸಾಧನಗಳು. ಈ ಕಾರಣಗಳಿಂದ ಉದ್ಭವಿಸುವ ಆಯ್ಕೆ-ಈ ಪರಿಸ್ಥಿತಿಯಲ್ಲಿ ಮನುಷ್ಯ ನಡೆದುಕೊಳ್ಳುವ ರೀತಿಯನ್ನು ಅಧ್ಯಯನ ಮಾಡುವುದೇ ಅರ್ಥಶಾಸ್ತ್ರದ ಹೆಗ್ಗುರಿಯಾಗಿದೆ. ಇದು ರಾಬಿನ್ಸ್‌ನ ವ್ಯಾಖ್ಯೆ ಒಳಗೊಂಡಿರುವ ಮುಖ್ಯಾಂಶ.

ಅರ್ಥಶಾಸ್ತ್ರದ ಕ್ಷೇತ್ರ ನಿರೂಪಣೆಯಲ್ಲಿ ಈಗ ಮಾರ್ಷಲ್‌ನ ದಾರಿಯನ್ನು ಅನುಸರಿಸುವವರೂ ಇದ್ದಾರೆ; ರಾಬಿನ್ಸ್ ದಾರಿಯನ್ನು ಅನುಸರಿಸುವವರೂ ಇದ್ದಾರೆ. ಕ್ಷೇಮಾಭ್ಯುದಯ ಮತ್ತು ಮಾನವನ ಸಾಮಾಜಿಕ ಸ್ವಭಾವ ಇವುಗಳಿಗೆ ಸರಿಯಾದ ಸ್ಥಾನವನ್ನು ರಾಬಿನ್ಸ್ ಕೊಟ್ಟಿಲ್ಲ; ಇದರಿಂದ ಮಾರ್ಷಲ್‌ನ ವಿತರಣೆಯ ದೃಷ್ಟಿಕೋನವೇ ಸರಿ ಎಂದು ಕೆಲವು ಅರ್ಥವಿಜ್ಞಾನಿಗಳು ವಾದಿಸುತ್ತಾರೆ. ವಿರಳತೆ ಅಥವಾ ದುರ್ಬಲತೆ ಮತ್ತು ಇದರಿಂದ ಉದ್ಭವಿಸುವ ಸಮಸ್ಯೆಗಳ ಪರಿಶೀಲನೆಗೆ ಮಿತಿಗೊಳಿಸಿದ ಅರ್ಥಶಾಸ್ತ್ರ ವ್ಯಾಸಂಗಕ್ಷೇತ್ರದಲ್ಲಿ ಒಂದು ಏಕತೆ ಇದೆ. ಆದ್ದರಿಂದ ರಾಬಿನ್ಸ್‌ನ ಮೇಲ್ಪಂಕ್ತಿ ಉತ್ತಮವಾದುದೆಂದು ಅನೇಕ ಅರ್ಥಶಾಸ್ತ್ರ ಬರೆಹಗಾರರ ಅಭಿಪ್ರಾಯ. ಇಂಥ ಭಿನ್ನಾಭಿಪ್ರಾಯಗಳು ಅನಿವಾರ್ಯ. ಮನುಷ್ಯ ಮತ್ತು ಸಮಾಜಕ್ಕೆ ಸಂಬಂಧಿಸಿದ ಅಧ್ಯಯನ ಅರ್ಥಶಾಸ್ತ್ರ; ಮಾನವನ ನಡೆವಳಿಕೆ, ಸಮಾಜದ ನ್ಯಾಯ, ನೀತಿ ಮತ್ತು ಆಗುಹೋಗುಗಳನ್ನು ನಿರ್ದಿಷ್ಟವಾಗಿ ಆರ್ಥಿಕ, ರಾಜಕೀಯ, ನೈತಿಕ ಇತ್ಯಾದಿಯಾಗಿ ಬೇರ್ಪಡಿಸುವುದು ಅಸಾಧ್ಯ. ಆದ್ದರಿಂದ ವಿವಿಧ ಸಮಾಜ ಶಾಸ್ತ್ರಗಳ ಎಲ್ಲೆಗಳೂ ಒಂದರೊಡನೆ ಒಂದು ಸೇರಿಹೋಗುವುವು. ಈ ಕಾರಣದಿಂದ ಅರ್ಥಶಾಸ್ತ್ರಕ್ಕೆ ಸರ್ವಸಮ್ಮತ ವ್ಯಾಖ್ಯೆಯನ್ನು ನೀಡುವುದಾಗಲಿ, ಎಲ್ಲೆಯನ್ನು ಮಿತಗೊಳಿಸುವುದಾಗಲಿ ಸುಲಭ ಕಾರ್ಯವಲ್ಲ.

ಅರ್ಥಶಾಸ್ತ್ರ ಅತ್ಯಂತ ಉಪಯುಕ್ತವಾದ ಅಧ್ಯಯನಗಳಲ್ಲಿ ಒಂದು ಎಂಬ ಮನ್ನಣೆ ಪಡೆದಿದೆ. ಇದು ಕೇವಲ ಜ್ಞಾನಪ್ರಕಾರವಷ್ಟೇ ಆಗಿರದೆ ಫಲದಾಯಕವೂ ಆಗಿದೆ. ತಾತ್ತ್ವಿಕ ಅರ್ಥಶಾಸ್ತ್ರ (ಥಿಯೊರೆಟಿಕಲ್ ಇಕನಾಮಿಕ್ಸ್ ) ಸಮಸ್ಯಾ ವಿಶ್ಲೇಷಣೆಗೆ ಹೆಚ್ಚು ನಿರ್ದಿಷ್ಟ ಮಾರ್ಗಗಳನ್ನು ತೋರಿಸಿದೆ. ಈ ಎರಡು ವಿಭಾಗಗಳ ಅಧ್ಯಯನದ ಮುನ್ನಡೆಯ ಫಲವಾಗಿ ಇಂದು ಅರ್ಥಶಾಸ್ತ್ರದ ಮಹತ್ತ್ವ ಹೆಚ್ಚಿದೆ. ವಿವಿಧ ಸಾಮಾಜಿಕ ಆರ್ಥಿಕ ವ್ಯವಸ್ಥೆಗಳ ಅನುಕೂಲ ಪ್ರತಿಕೂಲಗಳನ್ನು ತಿಳಿಸಿ ಯೋಗ್ಯ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ನಮಗೆ ಸಹಾಯಕವಾಗಿದೆ. ಆಧುನಿಕ ಪ್ರಪಂಚದಲ್ಲಿ ಸುಶಿಕ್ಷಿತ ನಾಗರಿಕರು ಅವರ ಜವಾಬ್ದಾರಿಗಳನ್ನು ಯೋಗ್ಯವಾಗಿ ನಿರ್ವಹಿಸಲು ತಿಳಿಯಬೇಕಾದ ವಿಷಯಗಳಲ್ಲಿ ಆರ್ಥಿಕಜ್ಞಾನ ಮುಖ್ಯವಾದುದು.

ಸರ್ಕಾರದ ಆರ್ಥಿಕ ಚಟುವಟಿಕೆಗಳೂ ಹೊಣೆಗಾರಿಕೆಯೂ ಹೆಚ್ಚಿರುವ ಇಂದು ಸರ್ಕಾರದ ನೀತಿ ನಿರೂಪಕರೂ ಕಾರ್ಯನಿರ್ವಾಹಕರೂ ಅರ್ಥಶಾಸ್ತ್ರದ ಅಧ್ಯಯನದಿಂದ ಪ್ರಯೋಜನ ಪಡೆಯುವರು. ಆರ್ಥಿಕ ನಿರ್ವಹಣೆಯಲ್ಲಿ ಭಾಗವಹಿಸಿರುವ ಉದ್ಯಮಿಗಳು ಕಾರ್ಮಿಕರು ಇತ್ಯಾದಿ ಪಂಗಡಗಳ ಆರ್ಥಿಕತೆಗೂ ತಮಗೂ ಸಂಬಂಧಪಟ್ಟ ಸಮಸ್ಯೆಗಳನ್ನು ನಿಷ್ಪಕ್ಷಪಾತ ರೀತಿಯಲ್ಲಿ ವಸ್ತು ನಿಷ್ಠೆಯಿಂದ ವಿವೇಚಿಸುವ ಶಕ್ತಿ ಬೆಳೆಸಿಕೊಳ್ಳಲು ಅರ್ಥಶಾಸ್ತ್ರಜ್ಞರು ಸಹಾಯ ಮಾಡಬಲ್ಲರು.

ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳಿಗೆ ನಿಕಟ ಬಾಂಧವ್ಯವಿದೆ. ಆರ್ಥಿಕ ಚಟುವಟಿಕೆಗಳು ಒಂದು ನಿರ್ದಿಷ್ಟ ರಾಜಕೀಯ ಚೌಕಟ್ಟಿನೊಳಗೆ ನಡೆಯುವುದೂ ಆರ್ಥಿಕತೆಯಲ್ಲಿ ಸರ್ಕಾರಗಳ ಪಾತ್ರ ಮುಖ್ಯವಾಗಿರುವುದೂ ಇದರ ಕಾರಣ. ಅರ್ಥಶಾಸ್ತ್ರದ ನಿಯಮಗಳೂ ಅಧ್ಯಯನವೂ ಮಾನವನ ವರ್ತನೆಗೆ ಸಂಬಂಧಿಸಿದುದರಿಂದ ಈ ವರ್ತನೆಯನ್ನು ವೈಜ್ಞಾನಿಕ ಮಾರ್ಗದಲ್ಲಿ ಅಧ್ಯಯನ ಮಾಡಿ ನಿರೂಪಿಸಲಾಗುವ ಮನಶ್ಶಾಸ್ತ್ರದ ಸಿದ್ಧಾಂತಗಳು ಅರ್ಥಶಾಸ್ತ್ರದಲ್ಲಿ ಬಹು ಉಪಯುಕ್ತ. ಆರ್ಥಿಕ ವ್ಯವಹಾರ ಮತ್ತು ಪ್ರಗತಿಗೂ ಜನರ ನೈತಿಕಮಟ್ಟಕ್ಕೂ ಸಂಬಂಧವಿದೆ ಎಂದು ಹೇಳುವುದಾದರೆ ಈ ನೈತಿಕ ಮೌಲ್ಯಗಳನ್ನು ಪರಿಶೀಲಿಸುವ ನೀತಿಶಾಸ್ತ್ರಕ್ಕೂ ಅರ್ಥಶಾಸ್ತ್ರಕ್ಕೂ ಇರುವ ಸಂಬಂಧ ತಿಳಿಯುವುದು. ಅರ್ಥಶಾಸ್ತ್ರ ಶಿಲ್ಪವಿಜ್ಞಾನದೊಡನೆಯೂ ಸಂಬಂಧ ಹೊಂದಿದೆ. ಶಿಲ್ಪ ವಿಜ್ಞಾನ ಆರ್ಥಿಕ ಪ್ರಗತಿಯ ಒಂದು ತಳಹದಿ. **(ಜಿ.ಟಿ.ಎಚ್.)**

**ಇತ್ತೀಚಿನ ಬೆಳೆವಣಿಗೆ:** 1920ರಿಂದೀಚೆಗೆ ಅರ್ಥಶಾಸ್ತ್ರದಲ್ಲಾದ ಮಹತ್ತರ ಪ್ರಗತಿಯನ್ನು ನಾಲ್ಕು ಶೀರ್ಷಿಕೆಗಳಡಿಯಲ್ಲಿ ವಿಶ್ಲೇಷಿಸಬಹುದು. ಸುಖೀ ಅರ್ಥಶಾಸ್ತ್ರ, ಏಕಸ್ವಾಮ್ಯಸ್ಪರ್ಧೆಯ ತತ್ತ್ವ, ರಾಷ್ಟ್ರೀಯ ಆದಾಯ ನಿರ್ಧರಿಸುವ ತತ್ತ್ವ ಮತ್ತು ಉದ್ಯೋಗ, ಗಣಿತೀಯ ಅರ್ಥಶಾಸ್ತ್ರ ಈ ಬೆಳೆವಣಿಗೆಯ ಅಸ್ತಿಭಾರವನ್ನು ಮೊದಲಿನ ಕೆಲಸಗಳಲ್ಲಿ ಗುರುತಿಸಬಹುದು. ವೈಜ್ಞಾನಿಕ ವಿಶ್ಲೇಷಣೆ ಮತ್ತು ಅದಕ್ಕೆ ದೊರೆತ ವಿಶೇಷ ಗಮನ ತೀರ ಇತ್ತೀಚಿನದು.

ಸುಖೀ ಅರ್ಥಶಾಸ್ತ್ರದ ಬಗ್ಗೆ ಇದು ಪೂರ್ಣ ಸತ್ಯ. 20ನೆಯ ಶತಮಾನದಲ್ಲಿ ಇದು ಪ್ರತ್ಯೇಕ ಮತ್ತು ಸವಿವರಣೆಯ ವಿಭಾಗದ ಇಲಾಖೆಯಾಗಿದೆ. ಆರ್ಥಿಕ ಧೋರಣೆಯ ತತ್ತ್ವವನ್ನು ಸುಖೀ ಅರ್ಥಶಾಸ್ತ್ರವೆನ್ನಬಹುದು. ವಿವಿಧ ಆರ್ಥಿಕ ವಿಷಯಗಳು ಮತ್ತು ಸರ್ಕಾರದ ನೀತಿ ಇವು ಸುಖೀ ಸಮಾಜದ ಮೇಲೆ ಮಾಡುವ ಪರಿಣಾಮದ ಅನ್ವೇಷಣೆಯನ್ನು ನಡೆಸುತ್ತಿವೆ. ಸರ್ಕಾರದ ಧೋರಣೆಯಿಂದ ವಿವಿಧ ಮಾರುಕಟ್ಟೆಗಳ ಮೇಲಾಗುವ ಪರಿಣಾಮ (ಏಕಸ್ವಾಮ್ಯ ಮತ್ತು ಸ್ಪರ್ಧೆ) ಆರ್ಥಿಕ ಸಂಪತ್ತಿನ ವಿತರಣೆ ಜನತೆಯ ಆಕಾಂಕ್ಷೆಗಳಿಗೆ ಅವುಗಳ ಸಂಬಂಧಗಳಿಗೆ ಇದು ಹೆಚ್ಚು ಗಮನವೀಯುತ್ತದೆ. ವಿವಿಧ ಮಾದರಿಯ ತೆರಿಗೆಗಳ ಪರಿಣಾಮ, ಆಮದು ತೆರಿಗೆ, ಬೆಲೆನಿಯಂತ್ರಣ, ಪಡಿತರ ರಾಷ್ಟ್ರೀಕರಣ, ಸಮಾಜವಾದ ಮೊದಲಾದ ವಿಷಯಗಳ ಬಗ್ಗೆಯೂ ಅಧ್ಯಯನ ನಡೆಸಲಾಗಿದೆ ಈ ದಾರಿಯಲ್ಲಿ ಆರ್ಥರ್ ಸಿಸಿಲ್ ಪಿಗೂನ ದಿ ಎಕನಾಮಿಕ್ಸ್ ಆಫ್ ವೆಲ್‌ಫೇರ್ (1920) ಪುಸ್ತಕ ವ್ಯವಸ್ಥಿತವಾಗಿ ಮಾಡಿದ ಪ್ರಥಮ ಮತ್ತು ಮಹತ್ತ್ವವಾದ ಕೆಲಸ. 1940ರ ಅನಂತರದ ಕೆಲಸಗಳೆಲ್ಲ ಸುಖೀ ಅರ್ಥಶಾಸ್ತ್ರದ ತಾತ್ತ್ವಿಕ ವಿಷಯಗಳನ್ನೊಳಗೊಂಡಿವೆ. ಆದರೆ ತೀರ ಇತ್ತೀಚೆಗೆ ಸರ್ಕಾರದ ಬಂಡವಾಳ ಹೂಡುವಿಕೆ ಧೋರಣೆಯನ್ನು ಕುರಿತು ಆಸಕ್ತಿ ಹುಟ್ಟಿದೆ.

ಅರ್ಥಶಾಸ್ತ್ರ ತತ್ತ್ವದಲ್ಲಿಯ ಎರಡನೆಯ ಮುಖ್ಯ ಬೆಳೆವಣಿಗೆ ಏಕಸ್ವಾಮ್ಯ ಸ್ಪರ್ಧೆಯ ತತ್ತ್ವ. ಇದು ಅಪ್ಪಟ ಸ್ಪರ್ಧೆ ಮತ್ತು ಅಪ್ಪಟ ಏಕಸ್ವಾಮ್ಯಕ್ಕೆ ಮಾರುಕಟ್ಟೆಯಲ್ಲಿ ಸಂಪೂರ್ಣವಾಗಿ ಮಾನ್ಯತೆ ನೀಡಿತು. ಈ ವಿಷಯದ ಬಗ್ಗೆ ಬಹಳ ಜನ ಅರ್ಥಶಾಸ್ತ್ರಜ್ಞರು ತಮ್ಮ ಗಮನವನ್ನಿತ್ತರು. ಇವರಲ್ಲಿ ಮುಖ್ಯವಾಗಿ ಜೆಕೊಬ್ ವಿನರ್, ರೋಯ್ ಎಫ್ ಹೆರೊಡ್ ಮತ್ತು ಫ್ರೆಡ್ರಿಕ್ ಝೀತನ್ ಇವರುಗಳನ್ನು ಹೆಸರಿಸಬಹುದು. ಈ ಸಿದ್ಧಾಂತದ ಪ್ರಕಾರ ಪ್ರತಿಯೊಬ್ಬ ವ್ಯಾಪಾರಿಯೂ ತನ್ನ ಸರಕುಗಳನ್ನೊಯ್ಯುವಾಗ ಗ್ರಾಹಕನನ್ನು ದೃಷ್ಟಿಯಲ್ಲಿಟ್ಟುಕೊಳ್ಳುತ್ತಾನೆ. ಇದರಿಂದ ವ್ಯಾಪಾರಿಗೆ ಆಂಶಿಕ ಏಕಸ್ವಾಮ್ಯ ಪಡೆಯಲು ಅನುಕೂಲವಾಗುತ್ತದೆ. ಬೃಹತ್ ಉದ್ದಿಮೆಗಳು ಅಲ್ಪ ಸಂಖ್ಯೆಯಲ್ಲಿರುವ ಒಂದು ಕೈಗಾರಿಕಾ ಕ್ಷೇತ್ರದಲ್ಲಿನ ಅಲ್ಪಾಧಿಕಾರವನ್ನು (ಆಲಿಗೊಪೊಲಿ) ವಿಶ್ಲೇಷಿಸಲಾಯಿತು. ಏಕಸ್ವಾಮ್ಯ ಮತ್ತು ಅಲ್ಪಾಧಿಕಾರದಲ್ಲಿರುವ ವ್ಯತ್ಯಾಸವನ್ನು ಇದು ತೋರಿಸಿತು. ಏಕಾಧಿಕಾರವಿರುವಲ್ಲಿ ಸಾಮಗ್ರಿಯನ್ನು ವಿವಿಧ ಬೆಲೆಗಳಿಗೆ ಮಾರಲಾಗುತ್ತಿದ್ದು, ಏಕಕ್ರಯವಿರುವಲ್ಲಿ (ಮೊನೊಪ್ಸೊನಿ) ಒಬ್ಬನೆ ಖರೀದಿದಾರನಿರುತ್ತಾನೆ. ಈ ವಿಶ್ಲೇಷಣೆ ವಿಶೇಷ ಆಸಕ್ತಿಯನ್ನು ಪ್ರಚೋದಿಸಿತು.ಆದರೆ ಇದರ ದಾರಿಯಲ್ಲಿರುವ ಅನೇಕ ಜಟಿಲ ಸಮಸ್ಯೆಗಳು ಈ ವಿಶ್ಲೇಷಣೆಯ ಪ್ರಗತಿಗೆ ಪ್ರತಿಬಂಧಕವಾಗಿವೆ.

ಆದಾಯನಿರ್ಧಾರತತ್ತ್ವ ಮೂರನೆಯ ಪ್ರಮುಖ ಬೆಳೆವಣಿಗೆ. ಜಾನ್ ಮೇಯ್ನಾರ್ಡ್ ಕೀನ್ಸ್‌ನ ಹೆಸರು ಇದಕ್ಕೆ ಸಂಬಂಧಿಸಿದೆ. ದಿ ಜನರಲ್ ಥಿಯೊರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್, ಅಂಡ್ ಮನಿ (1936) ಎಂಬ ಇವನ ಪುಸ್ತಕದಲ್ಲಿ ಆದಾಯನಿರ್ಧಾರತತ್ತ್ವ ಒಬ್ಬನ ಕೆಲಸಕ್ಕೆ ಸಂಬಂಧಿಸಿದ್ದು ಎಂದಿದ್ದಾನೆ. ಈತನ ವಿಶ್ಲೇಷಣೆಯ ಪ್ರಕಾರ ಉತ್ಪಾದಕರ ಮತ್ತು ಗ್ರಾಹಕರ ವಸ್ತುಗಳಿಗಿರುವ ಪರಿಣಾಮಕಾರಿ ಬೇಡಿಕೆ ಕೆಲವು ವೇಳೆ ದೇಶದ ಉತ್ಪಾದನಾ ಸಾಮರ್ಥ್ಯಕ್ಕಿಂತ ಕಡಿಮೆಯಾಗಬಹುದು ಅಥವಾ ಹೆಚ್ಚಾಗಬಹುದು. ಮೊದಲನೆಯದರಲ್ಲಿ ನಿರುದ್ಯೋಗ ಸಮಸ್ಯೆ ಮತ್ತು ಹಣದುಬ್ಬರ ಇವು ಕಂಡುಬರುತ್ತವೆ. ಎರಡನೆಯದು ಆರ್ಥಿಕ ಕುಸಿತಕ್ಕೆ (ಡಿಪ್ರೆಷನ್) ಮಾರ್ಗ ಮಾಡಿಕೊಡುತ್ತದೆ. ಪರಿಣಾಮಕಾರಿ ಬೇಡಿಕೆಯನ್ನು ನಿರ್ಧರಿಸುವುದರ ಬಗ್ಗೆ ಅವನು ಚರ್ಚಿಸುತ್ತಾನೆ. ಒಟ್ಟಾರೆ ಗ್ರಾಹಕನ ಬೇಡಿಕೆಯ ನಿರ್ಧಾರ ರಾಷ್ಟ್ರೀಯ ಆದಾಯವನ್ನವಲಂಬಿಸಿದೆ. ಅಂದರೆ ಗ್ರಾಹಕನ ಕೊಂಡುಕೊಳ್ಳುವ ಶಕ್ತಿಯನ್ನವಲಂಬಿಸಿದೆ. ಉತ್ಪಾದಕರ ಸಾಮಗ್ರಿಗಿರುವ ಬೇಡಿಕೆ ಮುಖ್ಯವಾಗಿ ಲಾಭ ಮತ್ತು ಸರಕುಗಳನ್ನು ಕೊಂಡುಕೊಳ್ಳಲು ಅವರು ವಿನಿಯೋಗಿಸುವ ಬಂಡವಾಳ ಹೂಡಿಕೆ ಜಮಾ–ಖರ್ಚು ಇವುಗಳನ್ನವಲಂಬಿಸಿದೆ. ಬಡ್ಡಿಯ ದರ ಹೆಚ್ಚಾದರೆ ನೂತನ ಯಂತ್ರ–ಸಾಮಗ್ರಿಗಳನ್ನು ಸ್ಥಾಪಿಸಲು ಹಣ ಪಡೆಯುವುದು ಅಸಾಧ್ಯ; ಹೆಚ್ಚಿನ ಬಡ್ಡಿದರ ಉತ್ಪನ್ನದ ಸಾಮಗ್ರಿಗಳ ಬೇಡಿಕೆಯನ್ನು ಕಡಿಮೆ ಮಾಡುತ್ತದೆ. ಇದು ಒಮ್ಮೊಮ್ಮೆ ನಿರುದ್ಯೋಗ, ಹಣದುಬ್ಬರಗಳನ್ನು ತಡೆಗಟ್ಟಲು ವಿವಿಧ ಮಾರ್ಗಗಳನ್ನು ಸೂಚಿಸುತ್ತದೆ. ಉದಾಹರಣೆ, ಕುಸಿತದ ಕಾಲದಲ್ಲಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು: ಹಣದ ಸರಬರಾಜು ಕಡಿಮೆ ಮಾಡುವುದು; ಬಡ್ಡಿ ದರವನ್ನು ಹೆಚ್ಚಿಸಿ ಉತ್ಪಾದಕರ ವಸ್ತುಗಳಿಗೆ ಬೇಡಿಕೆ ಕಡಿಮೆ ಮಾಡುವುದು; ಸರ್ಕಾರಿ ವೆಚ್ಚವನ್ನು ಕಡಿಮೆಮಾಡಿ ಅದರಿಂದ ಸರಕುಗಳಿಗಿರುವ ಬೇಡಿಕೆ ತಗ್ಗಿಸುವುದು; ತೆರಿಗೆಗಳನ್ನು ಏರಿಸಿ ಅಥವಾ ಸರಕಾರಿ ಭದ್ರತಾ ಠೇವಣಿಗಳನ್ನು ಸಾರ್ವಜನಿಕರಿಗೆ ನೀಡಿ ಗ್ರಾಹಕರ ಕೊಂಡುಕೊಳ್ಳುವ ಸಾಮರ್ಥ್ಯ ಕಡಿಮೆ ಮಾಡುವುದು. ಇವೆಲ್ಲ ತಂತ್ರಗಳಿಗೂ ಅಡೆತಡೆಗಳಿರುವುದಿಲ್ಲ. ಆದರೆ ನಿರುದ್ಯೋಗ ಮತ್ತು ಹಣದುಬ್ಬರಗಳು ತುಂಬಾ ಗಂಭೀರವಾಗಿದ್ದರೆ ಮಾತ್ರ ಇಂಥ ಕ್ರಮಕೈಗೊಳ್ಳುವುದು ಉಚಿತ. ಇಂಥ ಧೋರಣೆಗಳು ಸರ್ಕಾರಕ್ಕೆ ಯುದ್ಧ ಕಾಲದಲ್ಲಿ ಹಣದುಬ್ಬರ ಅಥವಾ ನಿರುದ್ಯೋಗವನ್ನು ತಡೆಗಟ್ಟಲು ಸಹಾಯಕಾರಿ, ಸಂಬಳದಲ್ಲಿ ಖೋತಾ ಮಾಡುವುದು ನಿರುದ್ಯೋಗಕ್ಕೆ ಪರಿಣಾಮಕಾರಿಯಾದ ಪರಿಹಾರವಲ್ಲವೆಂದು ಕೀನ್ಸ್ ಹೇಳಿದ್ದಾರೆ. ಪ್ರಾರಂಭದಲ್ಲಿ ಉತ್ಪಾದನಾ ವೆಚ್ಚದಲ್ಲಿ ಇಳಿತವನ್ನು ತೋರಿಸಿದರೂ ಇದು ಜನಸಾಮನ್ಯರ ಕೊಂಡುಕೊಳ್ಳುವ ಶಕ್ತಿ ಕಡಿಮೆ ಮಾಡುತ್ತದೆ.

ಗಣಿತೀಯ ಅರ್ಥಶಾಸ್ತ್ರದ ವಿಸ್ತರಣೆ ನಾಲ್ಕನೆಯ ಮಹತ್ತರ ಪ್ರಗತಿ (**ನೋಡಿ– ಅರ್ಥಮಿತಿ ಅಥವಾ ಅರ್ಥಮಾಪನಶಾಸ್ತ್ರ**). ಕಲನಶಾಸ್ತ್ರದ ವಿಸ್ತೃತ ಅನ್ವಯ ಅರ್ಥಶಾಸ್ತ್ರದ ಹಲವಾರು ಸಮಸ್ಯೆಗಳನ್ನು ಪರಿಮಾಣೀಕರಿಸಿ ನಿರಪೇಕ್ಷವಾದ ವಿಶ್ಲೇಷಣೆಯನ್ನು ಸಾಧ್ಯವಾಗಿಸಿದೆ. ಇತ್ತೀಚೆಗೆ ಆರ್ಥಿಕ ಚಲನಶಾಸ್ತ್ರ, ಚಟುವಟಿಕೆ ವಿಶ್ಲೇಷಣಶಾಸ್ತ್ರ, ಕ್ರೀಡಾಸಿದ್ಧಾಂತ (ಗೇಮ್ ಥಿಯೊರಿ) ಇವು ಸ್ವತಂತ್ರ ಶಾಖೆಗಳಾಗಿ ಬೆಳೆದು ಅರ್ಥ ಮತ್ತು ಗಣಿತ ವಿಜ್ಞಾನಗಳ ನಿಕಟ ಮತ್ತು ನಿರಂತರ ಬಾಂಧವ್ಯಗಳನ್ನು ಸ್ಥಿರಗೊಳಿಸಿವೆ.

ಅರ್ಥಶಾಸ್ತ್ರ ವ್ಯಕ್ತಿಯ, ಸಮಾಜದ, ಸರ್ಕಾರದ, ಅಂತಾರಾಷ್ಟ್ರೀಯ ವ್ಯವಹಾರದ ಪ್ರತಿ ಚಟುವಟಿಕೆಯಲ್ಲಿಯೂ ಹಾಸುಹೊಕ್ಕಾಗಿದೆ. ನೋಡಿ: ಹಣ, ಬ್ಯಾಂಕುಗಳು, ವ್ಯಾಪಾರ ಸಂಸ್ಥೆಗಳು, ವಿಮೆ, ಸಹಕಾರ ಸಂಘಗಳು, ರಾಷ್ಟ್ರೀಯ ಆಯವ್ಯಯ, ಅಂತಾರಾಷ್ಟ್ರೀಯ ಆರ್ಥಿಕ ಮಂಡಲಿ, ಅಂತಾರಾಷ್ಟ್ರೀಯ ದ್ರವ್ಯನಿಧಿ, ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು

**ಅರ್ಥಶಾಸ್ತ್ರ, ಕೌಟಿಲ್ಯನ : ನೋಡಿ– ಕೌಟಿಲ್ಯ**

**ಅರ್ಥಾಪತ್ತಿ :** ಜ್ಞಾನದ ಪ್ರಮಾಣಗಳಲ್ಲಿ ಒಂದು. ದತ್ತವಾದ ಎರಡು ಅಂಶಗಳಿಂದ ಸಿದ್ಧಿಸುವ ಮೂರನೆಯ ಅಂಶವನ್ನು ಗ್ರಹಿಸುವುದು. ಇದನ್ನು ಎಲ್ಲ ಭಾರತೀಯ ದಾರ್ಶನಿಕರೂ ಅಂಗೀಕರಿಸುವುದಿಲ್ಲ. ಇದು ಪೂರ್ವ ಮೀಮಾಂಸಾ ದರ್ಶನಕ್ಕೂ ಪ್ರಮಾಣದ ವಿಚಾರದಲ್ಲಿ ಮೀಮಾಂಸಕರನ್ನೇ ಅನುಸರಿಸುವ ಅದ್ವೈತಕ್ಕೂ ವಿಶಿಷ್ಟವಾದ ಪ್ರಮಾಣ. ಇದನ್ನು ವಿವರಿಸಲು ಸಾಮಾನ್ಯವಾಗಿ ಕೊಡುವ ಉದಾಹರಣೆಗಳು ಇವು: ದೇವದತ್ತ ಬದುಕಿದ್ದಾನೆ ಮತ್ತು ಆತ ಮನೆಯಲ್ಲಿ ಇಲ್ಲ ಎಂಬ ಎರಡು ನಿಶ್ಚಯವಾದ ಪ್ರತಿಜ್ಞೆಗಳಿಂದ ದೇವದತ್ತ ಮನೆಯ ಹೊರಗೆ ಇರಬೇಕು ಎಂದು ತಿಳಿಯಬಹುದು. ದೇವದತ್ತ ಪುಷ್ಟನಾಗಿದ್ದಾನೆ ಮತ್ತು ಆತ ಹಗಲು ಊಟ ಮಾಡುವುದಿಲ್ಲ ಎಂಬ ಎರಡು ನಿಶ್ಚಿತ ಪ್ರತಿಜ್ಞೆಗಳು ತಿಳಿದಿದ್ದರೆ, ಆ ಪ್ರತಿಜ್ಞೆಗಳಿಂದ ದೇವದತ್ತ ರಾತ್ರಿ ಊಟ ಮಾಡುತ್ತಿರಬೇಕು ಎಂದು ತಿಳಿಯಬಹುದು. ಈ ತಿಳಿವು ಹುಟ್ಟಿಸುವ ಪ್ರಮಾಣವೇ ಅರ್ಥಾಪತ್ತಿ. **(ಜಿ.ಎಚ್.)**

**ಅರ್ಥಾಲಂಕಾರ :** ಶಬ್ದಾಲಂಕಾರಗಳು ಕವಿತಾವನಿತೆಗೆ ಶರೀರದ ಬಾಹ್ಯ ಅಲಂಕಾರಗಳಂತಿದ್ದರೆ, ಇವನ್ನು ಇನ್ನೂ ಅಭ್ಯಂತರವಾದ ಲಕ್ಷಣಗಳು ಮತ್ತು ಹಾವಭಾವಗಳಂತೆನ್ನಬಹುದು. ಅಲಂಕಾರವಿಲ್ಲದ ವಾಣಿ ವಿಧವೆಯೇ ಸರಿ ಎಂಬ ಉಕ್ತಿ ಸಂಸ್ಕೃತ ಲಾಕ್ಷಣಿಕರಿಗಿದ್ದ ಅಲಂಕಾರ ವ್ಯಾಮೋಹಕ್ಕೆ ಸಾಕ್ಷಿಯಾಗಿದೆ.

ಮೊದ ಮೊದಲು ಇವುಗಳ ಸಂಖ್ಯೆ ಸಣ್ಣದಾಗಿತ್ತು. ಭರತನ ನಾಟ್ಯಶಾಸ್ತ್ರದಲ್ಲಿ ಉಪಮಾ, ರೂಪಕ, ದೀಪಕಗಳೆಂಬ ಮೂರೇ ನಿರ್ದಿಷ್ಟವಾಗಿವೆ. ಸಾದೃಶ್ಯವೇ ಇವಕ್ಕೆಲ್ಲ ಮೂಲ. ಕವಿಪ್ರತಿಭೆ ವಸ್ತುಗಳನ್ನು ವರ್ಣಿಸಹೊರಟಾಗ ತತ್ಸದೃಶವಾದ್ದನ್ನು ನಾನಾ ಭಂಗಿಗಳಿಂದ ತಂದು ತೋರಿಸಬಹುದು. ಹೀಗೆ ಸಕಲ ಅರ್ಥಾಲಂಕಾರಗಳಿಗೂ ಉಪಮಾತತ್ತ್ವವೇ ಮೂಲವೆಂದು ವಾಮನ, ಅಪ್ಪಯ್ಯದೀಕ್ಷಿತ ಮುಂತಾದವರು ನಿರ್ಣಯಿಸಿದ್ದಾರೆ. ನಿರೂಪಣೆಯಲ್ಲಿ ಉಪಮಾನೋಪಮೇಯಗಳ ಭೇದವನ್ನೋ ಅಭೇದವನ್ನೋ ಭೇದಾಭೇದವನ್ನೋ

ಆರೋಪಿತ ಭೇದಾಭೇದಗಳನ್ನೋ ಒತ್ತಿ ಹೇಳಿದಾಗ ಉಪಮೆ, ರೂಪಕ, ದೀಪಕ, ಉತ್ಪ್ರೇಕ್ಷೆ, ಅತಿಶಯೋಕ್ತಿ ಮುಂತಾದ ಬೇರೆ ಬೇರೆ ಅಲಂಕಾರಗಳಾಗುತ್ತವೆಂದು ಪ್ರಾಚೀನರ ಅಭಿಪ್ರಾಯ. ಆದರೆ ಭಾಮಹ, ದಂಡಿ, ಕುಂತಕ ಮುಂತಾದ ಲಾಕ್ಷಣಿಕರು ಅಲಂಕಾರಗಳಿಗೆಲ್ಲ ಮೂಲವಾದ ಸಾಮಾನ್ಯ ತತ್ತ್ವಕ್ಕೆ ಸಾದೃಶವಲ್ಲ, ವಕ್ರೋಕ್ತಿ ಅಥವಾ ಅತಿಶಯೋಕ್ತಿಯೆಂದರು. ಕವಿಪ್ರತಿಭೆ ವಸ್ತುವನ್ನು ಇದ್ದಂತೆ ವರ್ಣಿಸದೆ, ಚಮತ್ಕಾರವಾಗಿ ಬಳಸು ಬಳಸಾಗಿ ಹೆಚ್ಚು ಮಾಡಿ ಹೇಳುವುದೇ ಈ ತತ್ತ್ವ. ಇದರ ಪ್ರಕಾರ ಸ್ವಭಾವೋಕ್ತಿ ಅಲಂಕಾರವೇ ಆಗುವುದಿಲ್ಲ. ವಕ್ರೋಕ್ತಿಯಿಲ್ಲವಾದ್ದರಿಂದ, ಇವರ ಕಾಲಕ್ಕೆ ಅಲಂಕಾರಗಳ ಸಂಖ್ಯೆ ಸುಮಾರು ನಲವತ್ತಕ್ಕೇರಿತು.

ರುಯ್ಯಕ ತನ್ನ ಅಲಂಕಾರ ಸರ್ವಸ್ವದಲ್ಲಿ ಈ ತತ್ತ್ವಗಳ ಜೊತೆಗೆ ಅರುವತ್ತನ್ನು ಮೀರಿ ಬೆಳೆದಿದ್ದ ಅಲಂಕಾರಗಳನ್ನೆಲ್ಲ ಶಾಸ್ತ್ರೀಯವಾಗಿ ವರ್ಗೀಕರಿಸಲು ತತ್ತ್ವಾಂತರಗಳನ್ನು ಬಳಸಿದ. ತರ್ಕಬದ್ಧವಾದ ಇವನ ಪರಿಭಾಷೆಯಲ್ಲಿ ಉತ್ಪ್ರೇಕ್ಷಾತಿಶಯೋಕ್ತಿಗಳು ಅಧ್ಯವಸಾಯಮೂಲ; ಸಮಾಸೋಕ್ತಿ, ಅಪ್ರಸ್ತುತಪ್ರಶಂಸಾ, ಪರ್ಯಾಯೋಕ್ತಿ ಮುಂತಾದವು ವ್ಯಂಗ್ಯಮೂಲ; ವಿರೋಧಾಭಾಸ, ಅಸಂಗತಿ, ವಿಷಮ, ವಿರೋಧಮೂಲ; ಸಾರ, ಏಕಾವಲಿ ಮುಂತಾದವು ಶೃಂಖಲಾಮೂಲ, ಇದರಂತೆ ತರ್ಕನ್ಯಾಯವನ್ನು ಕಾವ್ಯಲಿಂಗದಲ್ಲಿಯೂ ವಾಕ್ಯ ನ್ಯಾಯವನ್ನು ಯಥಾಸಂಖ್ಯದಲ್ಲಿಯೂ ಲೋಕನ್ಯಾಯವನ್ನು ವಕ್ರೋಕ್ತಿಯಲ್ಲಿಯೂ ಕಾಣಬಹುದು.

ಮಮ್ಮಟ, ರುಯ್ಯಕ, ವಿಶ್ವನಾಥ, ಜಗನ್ನಾಥ, ಅಪ್ಪಯ್ಯದೀಕ್ಷಿತ ಮುಂತಾದ ಲಕ್ಷಣಗ್ರಂಥ ಕಾರರೆಲ್ಲರೂ ತಮ್ಮ ನಿರೂಪಣೆಯಲ್ಲಿ ಎಲ್ಲಕ್ಕಿಂತ ಹೆಚ್ಚಿನ ಸ್ಥಾನವನ್ನು ಅರ್ಥಾಲಂಕಾರಗಳ ನಿರೂಪಣೆಗಾಗಿಯೇ ಮೀಸಲಿಡುತ್ತಾರೆ. ಅಲಂಕಾರಗಳ ಲಕ್ಷಣ ನಿರ್ವಚನ, ವಿಭಾಗ, ಅನ್ಯಾಲಂಕಾರಗಳಿಂದ ಪೃಥಕ್ಕರಣ, ಉದಾಹರಣೆ–ಈ ಕ್ರಮವನ್ನು ಸಾಮಾನ್ಯವಾಗಿ ಎಲ್ಲರೂ ಅನುಸರಿಸುತ್ತಾರೆ. ಷಡ್ದರ್ಶನಗಳಲ್ಲಿ ಹಾಗೂ ವ್ಯಾಕರಣ ಕೋಶಾದಿಗಳಲ್ಲಿದ್ದ ಶಾಸ್ತ್ರೀಯವಿಚಾರ ಗಳಿಗನುಗುಣವಾಗಿ ವಿದ್ವಾಂಸರು ಕಾವ್ಯಾಲಂಕಾರಗಳನ್ನು ಕುರಿತು ವಿಮರ್ಶಿಸುತ್ತಿದ್ದುದರಿಂದ ಅರ್ಥಾಲಂಕಾರಗಳು ಬರಬರುತ್ತ ಸಂಖ್ಯೆಯಲ್ಲಿ ನೂರಕ್ಕೂ ಹೆಚ್ಚಾಗಿ ಬೆಳೆದು ಕೇವಲ ವಿದ್ವತ್ಪ್ರಿಯವೆನಿಸುವಂತಾದವು. ವಾಲ್ಮೀಕಿ, ಕಾಳಿದಾಸಾದಿಗಳಲ್ಲಿ ಮಾತ್ರ ಅವುಗಳ ಸರಳಸೌಂದರ್ಯವುಂಟು. (ಕೆ.ಕೆ.)

**ಅರ್ಧನಾರೀಶ್ವರ :** ಅರ್ಧಭಾಗ ಪಾರ್ವತಿಯೂ ಅರ್ಧಭಾಗ ಈಶ್ವರನೂ ಇರುವ ಮೂರ್ತಿ. ಶಿವನೂ ಶಕ್ತಿಯೂ ಅವಿನಾಭಾವದಿಂದ ಒಂದೇ ದೇಹದಲ್ಲಿರುತ್ತಾರೆಂದೂ ಶಿವನ ವಾಮಾರ್ಧವೇ ಪಾರ್ವತಿಯೆಂದೂ ಕಲ್ಪನೆಯಿದೆ. ಪಾರ್ವತಿ ಶಿವನ ಅರ್ಧಭಾಗವನ್ನು ಆಕ್ರಮಿಸಿದ ಕಥೆ ಶಿವಪುರಾಣದಲ್ಲಿ ಬರುತ್ತದೆ. ಶಿವನ ಗಣಾಧಿಪತಿಯಾದ ಭೃಂಗಿ ಮೋಕ್ಷಾರ್ಥಿಯಾಗಿ ತಪಸ್ಸು ಮಾಡುವಾಗ, ಕೇವಲ ಶಿವರೂಪವನ್ನೇ ಅವಲಂಬಿಸಿ, ಪಾರ್ವತಿಯನ್ನು ಕಡೆಗಾಣಿಸಿದನೆಂದು ಪಾರ್ವತಿ ಕೋಪಗೊಂಡು ಭೃಂಗಿಯ ತೇಜಸ್ಸನ್ನು ಕುಗ್ಗಿಸಿದಳು. ಶಿವಭಕ್ತನ ಮೇಲಣ ಅಭಿಮಾನದಿಂದ ಭೃಂಗಿಗೆ ತನ್ನ ದಂಡಾಯುಧ ಕೊಡಲು ಪಾರ್ವತಿ ಇನ್ನಷ್ಟು ಕ್ರುದ್ಧಳಾಗಿ ಕೇದಾರದಲ್ಲಿ ತಪಸ್ಸು ಮಾಡಿ ಶಿವನ ಅರ್ಧಾಂಗ ಆಕ್ರಮಿಸಿಕೊಂಡಳು. (ಎಸ್.ಕೆ.ಆರ್.)

**ಅರ್ಧಮಾಗಧೀ :** ಪ್ರಾಕೃತದ ಒಂದು ಉಪಭಾಷೆ. ಮಗಧ ದೇಶದ ಅರ್ಧಭಾಗದಲ್ಲಿ ಪ್ರಚಲಿತವಿದ್ದುದರಿಂದ ಈ ಹೆಸರು. ಮಾಗಧೀ ಉಪಭಾಷೆಗೆ ಸಮೀಪದ್ದಾಗಿದೆ. ಬುದ್ಧ ಮಾಗಧೀ ಭಾಷೆಯಲ್ಲಿ ಉಪದೇಶ ಮಾಡಿದಂತೆ, ಮಹಾವೀರ ತೀರ್ಥಂಕರ ಅರ್ಧಮಾಗಧಿ ಯಲ್ಲಿ ಅಥವಾ ಸರ್ವಾರ್ಧಮಾಗಧಿಯಲ್ಲಿ ಉಪದೇಶ ಮಾಡಿದ್ದನೆಂಬ ನಂಬಿಕೆಯುಂಟು. ಜೈನಾಗಮಗ್ರಂಥಗಳ ಭಾಷೆ ಕ್ರಮೇಣ ತುಸು ಬದಲಾಗಿದ್ದರೂ ಮೂಲದಲ್ಲಿ ಇವೆಲ್ಲ ಅರ್ಧಮಾಗಧಿಯಲ್ಲೇ ಲಿಖಿತವಾಗಿದ್ದಿತೆಂಬುದನ್ನು ಒಪ್ಪಲಿಕ್ಕೆ ಯಾವ ತೊಂದರೆಯೂ ಇಲ್ಲ. ಮಾಗಧಿಯಂತೆ ಅಕಾರಾಂತ ಶಬ್ದಗಳ ಪ್ರಥಮಾವಿಭಕ್ತಿಯ ಏಕವಚನ ಏಕಾರದಲ್ಲಿ ದೊರೆಯುತ್ತದೆ. ಪುಲ್ಲಿಂಗನಾಮಗಳ ಸಪ್ತಮೀ ವಿಭಕ್ತಿ ಏಕವಚನ ರೂಪುದೇವಂಸಿ–ಈ ರೀತಿ ದೊರೆಯುತ್ತದೆ. ಕೆಲವೆಡೆಯಲ್ಲಿ ಕಕಾರ ಗಕಾರವಾದದ್ದು ಕಂಡುಬರುತ್ತದೆ. ಹಲವು ಈ ಶಬ್ದಗಳಲ್ಲಿ ರಕಾರವು ಲಕಾರವಾಗುತ್ತದೆ. ಇವೆಲ್ಲ ಮಾಗಧಿಗೆ ಸಮಾನವಾದ ಲಕ್ಷಣಗಳು. ಇವಲ್ಲದೆ ಅರ್ಧಮಾಗಧಿಯಲ್ಲಿ ಮತ್ತೂ ಕೆಲವು ವೈಶಿಷ್ಟ್ಯಗಳು ಕಂಡು ಬರುತ್ತವೆ. ಸದ್ಯದ ಜೈನಾಗಮದ ವಿಸ್ತಾರವನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ ಸುಮಾರು 45 ಗ್ರಂಥಗಳು ಅರ್ಧಮಾಗಧೀಯಲ್ಲಿ ದೊರೆಯುತ್ತವೆಂದು ಹೇಳಬಹುದು. ಇವುಗಳ ವಿವರ ಈ ರೀತಿ ಇದೆ: 11 ಅಂಗಗಳು, 12 ಉಪಾಂಗಗಳು, 6 ಛೇದಸೂತ್ರಗಳು, 4 ಮೂಲಸೂತ್ರಗಳು, 10 ಪ್ರಕೀರ್ಣಕಗಳು ಮತ್ತು ನುದಿಯಾದಿ ಎರಡು ಗ್ರಂಥಗಳು. ಇವೆಲ್ಲ ಒಂದೇ ಕಾಲದವಲ್ಲ. ಆಚಾರಾಂಗ ಮತ್ತು ಸೂತ್ರಕೃತಾಂಗ ಇವುಗಳ ಪ್ರಥಮ ಶ್ರುತಸ್ಕಂಧಗಳು ಅತ್ಯಂತ ಪ್ರಾಚೀನ ವಾಗಿದ್ದು, ಅರ್ಧಮಾಗಧಿಯ ಕೆಲವು ಲಕ್ಷಣಗಳು ಅವುಗಳಲ್ಲಿ ದೊರೆಯುತ್ತವೆ. ಈ ಆಗಮಗಳಲ್ಲಿ ಕೆಲವು ಪ್ರಾಚೀನ ಮತ್ತು ಕೆಲವು ಅರ್ವಾಚೀನ ಅಂಶಗಳು ಒಟ್ಟುಗೂಡಿಹೋಗಿವೆ. ಪ್ರಾಚೀನ ಅಂಶಗಳು ಪ್ರಶಕ್ತಶಕದ ಪೂರ್ವದಲ್ಲಿಯೇ ರೂಪುಗೊಂಡಿವೆ. ಇವುಗಳ ಅಂತಿಮ ಸ್ವರೂಪ 5ನೆಯ ಶತಮಾನದ ಮಧ್ಯದ್ದು. ಸಂಸ್ಕೃತನಾಟಕಗಳಲ್ಲಿ ಉಕ್ತವಾಗಿರುವ ಅರ್ಧಮಾಗಧೀ ಭಾಷೆಯ ಸ್ವರೂಪ ಮಾತ್ರ ಬೇರೆ. (ಎ.ಎನ್.ಯು.)

**ಅರ್ನ್ ಬರಿಯಲ್ :** ಹೈಡ್ರಿಯೊಟೊಫಿಯ ಇಂಗ್ಲಿಷ್ ಗದ್ಯ ಸಾಹಿತಿ ಬ್ರೌನ್‌ನ ಕೃತಿ (1658). ಇನ್ನೊಂದು ಹೆಸರು ಹೈಡ್ರಿಯೊಟಫೈಯ. ನಾರ್‌ಫೋಕ್‌ನಲ್ಲಿ ಮನುಷ್ಯರ ಅಸ್ಥಿಗಳ ಸಂಚಯನಪಾತ್ರೆಗಳು ದೊರೆತುದು ಈ ಕೃತಿಯ ಮೂಲ ಪ್ರಚೋದನೆ. ವಿವಿಧ ದೇಶಗಳಲ್ಲಿ, ವಿವಿಧಕಾಲಗಳಲ್ಲಿ ಅಂತ್ಯಸಂಸ್ಕಾರ ಪದ್ಧತಿಗಳು, ಅಸ್ಥಿಪಾತ್ರೆಗಳು, ಅವುಗಳ ಬಳಕೆ–ಇವನ್ನು ವಿಮರ್ಶಿಸಿ ಬ್ರೌನ್ ಸಾವು, ಅಮರತ್ವ, ಅಂತ್ಯ, ನಾಶಗಳ ವಿವಾದದತ್ತ ಸಾಗುತ್ತಾನೆ. ಇವನ ಅಸಾಧಾರಣ ವಿದ್ವತ್ತು ಈ ಕೃತಿಯ ರಚನೆಯಲ್ಲಿ ಸಹಾಯಕವಾಯಿತು. ಇದರಲ್ಲಿ ಆತ್ಮಪ್ರಶಂಸೆಯ ಛಾಯೆ ಓದುಗರನ್ನು ಅತೃಪ್ತಿ ಪಡಿಸಬಹುದು. ಆದರೆ ಜೀವನದ ಒಗಟನ್ನು ಕುರಿತ ಬ್ರೌನ್‌ನ ಯೋಚನಾಲಹರಿ, ವಿಷಣ್ಣತೆ, ಕಾವ್ಯ ಮನೋಧರ್ಮಗಳು ಅತೃಪ್ತಿಯನ್ನು ಮರೆಸುತ್ತವೆ. ಮನುಷ್ಯನ ಬಾಳಿನ ಕ್ಷಣಭಂಗುರತೆ, ಅಮರತ್ವದ ಬಯಕೆಯ ನಿರರ್ಥಕತೆ–ಇವನ್ನು ಕುರಿತು ಬಹುಕಾಲ ಮನಸ್ಸಿನಲ್ಲಿ ಸುಳಿದಾಡುತ್ತಿದ್ದ ಭಾವನೆಗಳು ಭವ್ಯವಾದ ಗದ್ಯದಲ್ಲಿ ನಿರೂಪಣೆ ಪಡೆಯುತ್ತವೆ. (ಎಲ್.ಎಸ್.ಎಸ್.)

**ಅರ್ಪಣೆ :** ಮಾನವ ತನ್ನ ಪೂಜ್ಯ ಭಾವವನ್ನು ಅಭಿವ್ಯಕ್ತಿಸಲು ತಾನು ಗೌರವಿಸುವ ಪೂಜ್ಯ ವ್ಯಕ್ತಿಗೆ ಮಾಡುವ ಸೇವೆ. ಇದು ನಾಗರಿಕವಾಗಿರಬಹುದು, ಅನಾಗರಿಕವಾಗಿರಬಹುದು. ಪ್ರಾಕೃತಜನ ತಾವು ಒಲಿದ ದೇವತೆಗೆ ಅಥವಾ ಶಕ್ತಿಗೆ ಕುರಿ, ಕೋಣ, ಕೋಳಿ ಇತ್ಯಾದಿ ಪ್ರಾಣಿಗಳನ್ನು ಬಲಿ ಕೊಡುತ್ತಾರೆ. ಪ್ರಾಣಿವಧೆಯನ್ನು ನಿಷೇಧಿಸುವ ಜೈನರು ಮತ್ತು ಇತರರು ಹಿಟ್ಟಿನ ಕೋಳಿಯನ್ನು ಅರ್ಪಿಸುತ್ತಾರೆ. ನಯವಾಗಿ ತಮ್ಮ ಪೂಜ್ಯ ಭಾವನೆಯನ್ನು ಅಭಿವ್ಯಕ್ತಿಗೊಳಿಸಲು ಭಕ್ಷ್ಯಭೋಜ್ಯಗಳನ್ನೂ ಫಲಗಳನ್ನೂ ಅರ್ಪಿಸುತ್ತಾರೆ. ಇನ್ನೂ ನಯವಾಗಿ ತಮ್ಮ ಭಾವವನ್ನು ವಿಷಯೀಕರಿಸಲು ಒಂದು ಉದ್ಧರಣೆ ನೀರನ್ನೋ, ಒಂದು ಪತ್ರವನ್ನೋ, ಪುಷ್ಪವನ್ನೋ ಅರ್ಪಿಸುತ್ತಾರೆ. ಭಕ್ತಿಯಿಂದ ಅರ್ಪಿಸಿದ ಒಂದು ಎಲೆಯಿಂದ ಅಥವಾ ಒಂದು ತೊಟ್ಟು ನೀರಿನಿಂದಲೇ ಭಗವದ್ಗೀತೆಯಲ್ಲಿ ಹೇಳಿರುವಂತೆ ದೇವರು ತೃಪ್ತನಾಗುತ್ತಾನೆ. ಇದಕ್ಕಿಂತ ಮೇಲ್ಮಟ್ಟದ್ದು ಹೃದಯಪೂರ್ವಕವಾದ ಪ್ರೀತಿಯ ಅರ್ಪಣೆ. ಮೇಲೆ ಹೇಳಿದ ಎಲ್ಲ ಅರ್ಪಣೆಗಳೂ ಭಕ್ತಿಯ ಕುರುಹುಗಳು. ಆದರೆ ಮೊದಲನೆಯವು ತಾಮಸಭಕ್ತಿಯವು. ಎರಡನೆಯವು ರಾಜಸಭಕ್ತಿಯವು. ನನಗೆ ಬೇರೆ ದಿಕ್ಕಿಲ್ಲ, ಎಲ್ಲವೂ ನೀನೆ, ಶರಣಾಗತಿಯೇ ನನ್ನ ಜೀವನದ ಗತಿ ಎಂಬ ಭಾವ ಸಾತ್ತ್ವಿಕಭಕ್ತಿ. ಭಕ್ತ ತನ್ನೆಲ್ಲವನ್ನೂ ಪರಮಾತ್ಮನಿಗೆ ಅರ್ಪಣೆ ಮಾಡುವುದನ್ನು ಪ್ರಪತ್ತಿ ಎನ್ನುತ್ತಾರೆ. ಆಯಾ ಭಕ್ತನ ಸಂಸ್ಕೃತಿಗೆ ಅನುಗುಣವಾಗಿ ಅವನು ತನ್ನ ಭಕ್ತಿಯನ್ನು ಪ್ರಕಟಿಸುತ್ತಾನೆ. ತಾಮಸಿಕ, ರಾಜಸಿಕ, ಸಾತ್ತ್ವಿಕ ಅರ್ಪಣೆಗಳು ಅವನವನ ಸಂಸ್ಕೃತಿಗೆ ಅನುಗುಣವಾದುವು. ಇವೆಲ್ಲವೂ ಭಕ್ತಿಯ ಕುರುಹುಗಳಾದ್ದರಿಂದ ತಾಮಸ ಅರ್ಪಣೆ ಒಂದು ಮಟ್ಟದ ಜನಕ್ಕೆ ಅನಿವಾರ್ಯವಾದ್ದರಿಂದ ಸಾತ್ತ್ವಿಕ ಮಟ್ಟ ಮುಟ್ಟಿದವನು ಆ ಅರ್ಪಣೆಯನ್ನು ಹೀನಾಯವಾಗಿ ಕಾಣಬಾರದು. ತನ್ನ ಅರ್ಪಣೆ ಹೆಚ್ಚೆಂದು ಹೆಮ್ಮೆಪಡಬಾರದು. ಹಾಗೆ ಮಾಡಿದ್ದರಿಂದ ಸಾತ್ತ್ವಿಕ ತಾಮಸಿಕನಾಗುತ್ತಾನೆ. ಕಾಲಾನುಕ್ರಮದಲ್ಲಿ ಪ್ರಾಕೃತಮಾನವನೂ ತಾಮಸಿಕ ಅರ್ಪಣೆಯನ್ನು ಬಿಟ್ಟು ಸಾತ್ತ್ವಿಕ ಅರ್ಚನೆಯನ್ನು ಅವಲಂಬಿಸಬಹುದು ಎಂಬ ಆಶಾಭಾವನೆಯನ್ನು, ಸಹನೆಯನ್ನು ತಳೆಯುವುದು ಸಾತ್ತ್ವಿಕ ಭಕ್ತನ ಲಕ್ಷಣ. (ಜಿ.ಎಚ್.)

**ಅರ್ಯಮನ್ :** ಸೂರ್ಯ. ದ್ವಾದಶಾದಿತ್ಯರಲ್ಲಿ ಒಬ್ಬ. ಸೂರ್ಯನಲ್ಲಿರುವ ಪುರುಷ ಎನ್ನುವ ಕಾರಣದಿಂದ ವಿಶಿಷ್ಟವಾಗಿದ್ದಾನೆ. ಸೂರ್ಯನ ಪ್ರತೀಕವಾದ ಉತ್ತರ ಫಲ್ಗುಣೀ ನಕ್ಷತ್ರಕ್ಕೂ ಇದೇ ಕಾರಣದಿಂದ ಅರ್ಯಮನೆಂಬ ಹೆಸರು ಬಂದಿದೆ. ಪಿತೃಗಳಲ್ಲಿ ನಾನು ಅರ್ಯಮ (ಪಿತೃಣಾಂ ಅರ್ಯಮಾ ಚಾಸ್ಮಿ) ಎಂದು ಭಗವದ್ಗೀತೆ ಹೇಳಿ ಅರ್ಯಮನ ವೈಶಿಷ್ಟ್ಯವನ್ನು ಸೂಚಿಸುತ್ತದೆ. ಸೂರ್ಯಸಂಬಂಧಿಯಾದ ಅರ್ಕವೃಕ್ಷಕ್ಕೂ (ಎಕ್ಕದ ಗಿಡ) ಇದೇ ಹೆಸರು. (ಎಸ್.ಕೆ.ಆರ್.)

**ಅರ್ವಿಂಗ್, ವಾಷಿಂಗ್‌ಟನ್ :** 1783–1859. ಅಮೆರಿಕದ ವಿಶ್ವವಿಖ್ಯಾತರಾದ ಮೊದಲ ಸಾಹಿತಿಗಳಲ್ಲೊಬ್ಬ, ಕಾದಂಬರಿಕಾರ. ಜನನ ನ್ಯೂಯಾರ್ಕ್‌ನಲ್ಲಿ. ಅಣ್ಣ ಪೀಟರ್ ಸಂಪಾದಕನಾಗಿದ್ದ ಕ್ರಾನಿಕಲ್ ಪತ್ರಿಕೆಗೆ ನ್ಯೂಯಾರ್ಕ್ ಜನಜೀವನವನ್ನು ಕುರಿತು ವಿಡಂಬನೆ ಗಳನ್ನು ಬರೆದ (1802–03). ವಕೀಲವೃತ್ತಿ ಬಿಟ್ಟು ಸಾಹಿತ್ಯರಚನೆಗೆ ತೊಡಗಿ

ವಿಲಿಯಂ ಅರ್ವಿಂಗ್, ಜೇಮ್ಸ್ ಕೆ. ಪಾಡ್ಲಿಂಗರೊಡನೆ ಸೇರಿ ಸಲ್ಮಗುಂಡಿ (1807–08) ಲೇಖನಮಾಲೆಯನ್ನೂ ನಿಕರ್ ಬಾಕರ್ ಎಂಬ ಸಾಹಿತ್ಯನಾಮದಿಂದ ಹಿಸ್ಟರಿ ಆಫ್ ನ್ಯೂಯಾರ್ಕ್(1809) ಎಂಬ ಹಾಸ್ಯಗ್ರಂಥವನ್ನೂ ರಚಿಸಿದ. ಲಿವರ್‌ಪೂಲ್‌ನಲ್ಲಿದ್ದ ತಮ್ಮ ಕುಟುಂಬದ ವ್ಯಾಪಾರಶಾಖೆಯನ್ನು ನೋಡಿಕೊಳ್ಳಲು ಅಲ್ಲಿಗೆ ಹೋದರೂ ವ್ಯಾಪಾರದಲ್ಲಿ ನಷ್ಟವಾದ್ದರಿಂದ ಜೀವನಕ್ಕಾಗಿ ಬರೆಹವನ್ನೇ ಅವಲಂಬಿಸಿದ. ದಿ ಸ್ಕೆಚ್ ಬುಕ್ ಆಫ್ ಜೊಫ್ರೆ ಕ್ರಯಾನ್ (1819–20) ಎಂಬ ಪ್ರಬಂಧ ಮತ್ತು ಸಣ್ಣಕಥೆಗಳ ಸಂಗ್ರಹವೂ ಬೇಸ್ ಬ್ರಿಜ್ ಹಾಲ್ (1822) ಎಂಬ ಕೃತಿಯೂ ಇವನಿಗೆ ಪ್ರಸಿದ್ಧಿ ತಂದುವು. ಟೇಲ್ಸ್ ಆಫ್ ಎ ಟ್ರ್ಯಾವಲರ್ (1824) ವಿಪರೀತ ಟೀಕೆಗೊಳಗಾಯಿತು. 1826ರಿಂದ ಮೂರು ವರ್ಷ ಸ್ಪೇನಿನ ರಾಯಭಾರಿ ವರ್ಗದಲ್ಲಿದ್ದು ಕೊಲಂಬಸ್ಸನ ಜೀವನಚರಿತ್ರೆ (1828), ದಿ ಕಾಂಕ್ವೆಸ್ಟ್ ಆಫ್ ಗ್ರಾನಡಾ (1829) ಮತ್ತು ದಿ ಅಲ್‌ಹಾಂಬ್ರ (1832) ಗ್ರಂಥಗಳನ್ನು ಬರೆದ. ಐದು ಸಂಪುಟಗಳ ಲೈಫ್ ಆಫ್ ವಾಷಿಂಗ್‌ಟನ್ (1855–59) ಎಂಬುದು ಈತನ ಉತ್ತಮ ಜೀವನಚರಿತ್ರೆ. (ಎಸ್.ಎಸ್.ಎಲ್.ಬಿ.)

**ಅರ್ಸಿನಿಯ ಅನೆತಾಯ್ಡಿಸ್ :** ದಕ್ಷಿಣ ಆಫ್ರಿಕದ, ಬೇಸಗೆಯಲ್ಲಿ ಹೂ ಬಿಡುವ, ವಾರ್ಷಿಕ ಸಸ್ಯ. 18" ಎತ್ತರ ಬೆಳೆಯುತ್ತದೆ. ಹೂಗಳು ಡೈಸಿಯದಂತೆ ಬಹುಸುಂದರ. ಬಣ್ಣ ಕಿತ್ತಳೆ ಹಳದಿ ಮತ್ತು ನೀಲಿ. ಗಿಡ ಬಹಳ ದಿನಗಳವರೆಗೆ ಹೂ ಬಿಡುತ್ತಿರುತ್ತದೆ. ಬಿಡಿಹೂಗಳಾಗಿ ಉಪಯೋಗಿಸಲು ಇವು ಅನುಕೂಲವಾಗಿವೆ. ಬೀಜವನ್ನು ಮಡಿಗಳಲ್ಲಿ ಇಲ್ಲವೆ ಕುಂಡಗಳಲ್ಲಿ ಬಿತ್ತನೆ ಮಾಡಿ ಬೆಳೆಸಬೇಕು. ಸಸಿಗಳನ್ನು ನಾಟಿಮಾಡಿ ಬೆಳೆಸುವುದು ಕಷ್ಟ. ಮೈದಾನಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುವುದಿಲ್ಲ. (ಕೆ.)

**ಅರ್ಹತ್ :** ನಾಲ್ಕು ವಿಧವಾದ ಘಾತಿಕರ್ಮಗಳನ್ನೂ ಗೆದ್ದು ಜಿನರೆನ್ನಿಸಿಕೊಂಡವರೇ. ಅರ್ಹಂತರು ಇವರಿಗೆ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖಗಳು ಪ್ರಾಪ್ತವಾಗಿರುತ್ತವೆ. ಇವರಿಗೆ ಹಸಿವು, ನೀರಡಿಕೆ ಮೊದಲಾದ ಹದಿನೆಂಟು ದೋಷಗಳಿರುವುದಿಲ್ಲ. ಅರ್ಹತ್ ಪರಮೇಷ್ಠಿಗಳು ಜೀವ ಮಾತ್ರವನ್ನು ಉದ್ಧರಿಸುವ ಧರ್ಮತೀರ್ಥವನ್ನು ಪ್ರವರ್ತಿಸುವುದರಿಂದ ತೀರ್ಥಂಕರರೆನಿಸುವರು. ಇದರಿಂದಾಗಿ ಪಂಚಪರಮೇಷ್ಠಿಗಳಲ್ಲಿ ಇವರ ಹೆಸರು ಮೊದಲು ಬರುತ್ತದೆ. ಅನಂತಜ್ಞಾನ ದರ್ಶನಾದಿಗಳನ್ನುಳ್ಳವರಾದ್ದರಿಂದ ಇವರು ಉಪದೇಶ ಮಾಡಲು ಅರ್ಹರು, ಆಪ್ತರು. ಇವರ ದೇಹ ಪವಿತ್ರವಿದ್ದು ಸಪ್ತಧಾತು ರಹಿತವಾಗಿದೆ, ಅತ್ಯುಜ್ಜ್ವಲವಾಗಿದೆ. ಇವರು ಶುದ್ಧಾತ್ಮರು. (ಎ.ಎಸ್.ಯು.)

**ಅರ್ಹತೆಗಳು :** ಯಾವುದೇ ಹುದ್ದೆಗೆ ಅಭ್ಯರ್ಥಿಯನ್ನು ಆರಿಸುವಾಗ ಆತನಲ್ಲಿ ಇರಬೇಕಾದ ಗುಣಗಳು (ಕ್ವಾಲಿಫಿಕೇಷನ್ಸ್), ವಿಶ್ವವಿದ್ಯಾನಿಲಯದ ಅಥವಾ ಬೇರೆ ತರಹದ ಪದವಿ (ಡಿಗ್ರಿ), ಅನುಭವ (ಎಕ್ಸ್‌ಪೀರಿಯನ್ಸ್), ಸಂಶೋಧನ ಪತ್ರಗಳು, ಗ್ರಂಥರಚನೆ ಇತ್ಯಾದಿ ಉದಾಹರಣೆಗಳು. ಸರ್ಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವ ತತ್ತ್ವ ಸರ್ಕಾರದ ಆಡಳಿತ ಪದ್ಧತಿಯಲ್ಲಿ ಬಹು ಮುಖ್ಯವಾದುದು. ಇತರ ಖಾಸಗಿ ಸಂಸ್ಥೆಗಳಿಗೂ ಈ ತತ್ತ್ವ ಅನ್ವಯವಾಗುವುದು. ಆಡಳಿತದ ಯಾವುದೇ ಒಂದು ಹುದ್ದೆಗೆ ಹಲವಾರು ಅಭ್ಯರ್ಥಿಗಳು ಇರುತ್ತಾರೆ. ಅವರಲ್ಲಿ ಹೆಚ್ಚಿನ ಅರ್ಹತೆಗಳು ಆ ಹುದ್ದೆಯ ಆವಶ್ಯಕತೆಗಳಿಗೆ ಅನುಗುಣವಾಗಿ ಯಾರಿಗೆ ಇವೆಯೋ ಅವರು ನೇಮಕಗೊಳ್ಳಬೇಕಾದುದು ಕ್ರಮ. ಸರ್ಕಾರದಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಯಾವುದೇ ಒಂದು ಸ್ಥಾನ ಖಾಲಿಯಾದಾಗ ಅದಕ್ಕೆ ಕೆಲವು ಅರ್ಹತೆಗಳನ್ನು ಗೊತ್ತು ಮಾಡಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ತೆಗೆದುಕೊಳ್ಳಲಾಗುವುದು. ಪ್ರತಿಯೊಬ್ಬ ಅಭ್ಯರ್ಥಿಯೂ ನಿಗದಿಯಾದ ಕನಿಷ್ಠ ಅರ್ಹತೆಗಳನ್ನು ಹೊಂದಿರಲೇಬೇಕು. ಈ ಅರ್ಹತೆಗಳನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು: 1. ಸಾಮಾನ್ಯ ಅರ್ಹತೆಗಳು; 2. ವಿಶಿಷ್ಟ ಅಥವಾ ವಿಶೇಷ ಅರ್ಹತೆಗಳು. ಹುದ್ದೆಗೆ ಅಭ್ಯರ್ಥಿಯನ್ನು ನೇಮಕ ಮಾಡುವ ಪದ್ಧತಿಯಲ್ಲಿ ಇವೆರಡು ಅರ್ಹತೆಗಳೂ ಬಹು ಮುಖ್ಯವೆಂದು ಪರಿಗಣಿಸಲಾಗಿದೆ. ಅದರಂತೆ ಪ್ರತಿಯೊಬ್ಬ ಅಭ್ಯರ್ಥಿಯೂ ಕೆಲವು ಸಾಮಾನ್ಯ ಅರ್ಹತೆಗಳನ್ನು ಪಡೆದಿರಲೇಬೇಕು. ಇಂಥವುಗಳಲ್ಲಿ ನಿವಾಸ ಸಂಬಂಧ ಅರ್ಹತೆ ಒಂದು. ಅದರ ಪ್ರಕಾರ ಅಭ್ಯರ್ಥಿ ಆ ದೇಶದ ಪ್ರಜೆಯಾಗಿರಬೇಕು. ನಮ್ಮ ದೇಶದಲ್ಲಿ ಈ ಅರ್ಹತೆ ಬಹು ಮುಖ್ಯ. ಬೇರೆ ದೇಶದ ಪ್ರಜೆಗಳು ಹುದ್ದೆಗಳಿಗೆ ಅಭ್ಯರ್ಥಿಗಳಾಗಲು ಅವಕಾಶವಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಸರಿಯಾದ ಅರ್ಹತೆಗಳನ್ನು ಪಡೆದಿರುವ ಸ್ಥಳೀಯ ಅಭ್ಯರ್ಥಿಗಳು ಸಿಗದಿದ್ದಾಗ ಇದರಿಂದ ತೊಂದರೆಯಾಗುತ್ತದೆ. ಸಾಮಾನ್ಯ ಅರ್ಹತೆಗಳಲ್ಲಿ ವಯಸ್ಸಿನ ಅರ್ಹತೆಯೂ ಸೇರಿದೆ. ಇದರ ಪ್ರಕಾರ ಅಭ್ಯರ್ಥಿಗಳು ಒಂದು ಗೊತ್ತುಪಡಿಸಿದ ವಯಸ್ಸಿನೊಳಗಿರಬೇಕು. ಈ ವಯೋಮಿತಿ ಬೇರೆ ಬೇರೆ ರಾಷ್ಟ್ರಗಳಲ್ಲಿ ಬೇರೆಬೇರೆ ರೀತಿ. ನಾಗರಿಕ ಗಣ್ಯತೆಯೂ ಸಾಮಾನ್ಯ ಅರ್ಹತೆಗಳಲ್ಲಿ ಒಂದು. ಅದರ ಪ್ರಕಾರ ಪ್ರತಿಯೊಬ್ಬ ಅಭ್ಯರ್ಥಿಯೂ ಒಂದು ಗೊತ್ತಾದ ನಾಗರಿಕ ಗಣ್ಯತೆ ಅಥವಾ ಮಾನ್ಯತೆ ಹೊಂದಿರಬೇಕು. ಇವುಗಳ ಜೊತೆಗೆ ಅಭ್ಯರ್ಥಿ ಗಂಡೋ ಹೆಣ್ಣೋ ಎಂಬುದೂ ಅರ್ಹತೆಗೆ ಆವಶ್ಯಕವೆಂದು ಪರಿಗಣಿಸಬಹುದು. ಕೆಲವು ಹುದ್ದೆಗಳಿಗೆ ಪುರುಷರು ಮಾತ್ರ ಅರ್ಹರಾಗಿರುತ್ತಾರೆ; ಮತ್ತೆ ಕೆಲವು ಹುದ್ದೆಗಳಿಗೆ ಸ್ತ್ರೀಯರು ಮಾತ್ರ ಅರ್ಹರಾಗಿರುತ್ತಾರೆ. ಹಿಂದೆ ಇಂಥ ಅರ್ಹತೆ ಮುಖ್ಯವಾಗಿತ್ತು. ಆದರೆ ಇಂದು ಸಾಮಾನ್ಯವಾಗಿ ಲಿಂಗಭೇದ ಅರ್ಹತೆಯ ಪಟ್ಟಿಯಲ್ಲಿ ಇರುವುದಿಲ್ಲ.

ಸಾಮಾನ್ಯ ಅರ್ಹತೆಗಳ ಜೊತೆಗೆ ಅಭ್ಯರ್ಥಿಗಳು ಕೆಲವು ವಿಶೇಷ ಅರ್ಹತೆಗಳನ್ನು ಪಡೆದಿರಬೇಕು. ಮೊದಲನೆಯದು ವಿದ್ಯಾ ಅರ್ಹತೆ. ಈ ಅರ್ಹತೆ ಅಭ್ಯರ್ಥಿಯ ಶಿಕ್ಷಣಕ್ಕೆ ಸಂಬಂಧಿಸಿದುದು. ಪ್ರತಿಯೊಬ್ಬ ಅಭ್ಯರ್ಥಿಯೂ ನಿಯಮಿತ ವಿದ್ಯಾ ವ್ಯಾಸಂಗ ಮಾಡಿರಬೇಕು. ಎರಡನೆಯದು ವೈಯಕ್ತಿಕ ಗುಣಗಳು: ಪ್ರಾಮಾಣಿಕತೆ, ನಿಷ್ಪಾಪಟ್ಯ, ನೈಪುಣ್ಯ, ಧೈರ್ಯ ಮತ್ತು ಸಂಘಟನಾಸಾಮರ್ಥ್ಯ ಇತ್ಯಾದಿ. ಇವುಗಳನ್ನು ಕಂಡುಹಿಡಿಯುವುದಕ್ಕೋಸ್ಕರ ಸಾಮೂಹಿಕ ಪರೀಕ್ಷೆ, ಮನಶ್ಶಾಸ್ತ್ರೀಯ ಸಂಬಂಧ ಪರೀಕ್ಷೆ ಮುಂತಾದುವುಗಳನ್ನು ನಡೆಸುತ್ತಾರೆ. ಮೂರನೆಯದು ಅನುಭವ ಮತ್ತು ಉದ್ಯೋಗಶೀಲತೆ. ಇದರ ಪ್ರಕಾರ ಅಭ್ಯರ್ಥಿಗಳು ಕೆಲವು ಸಂದರ್ಭಗಳಲ್ಲಿ ಆ ಕೆಲಸದಲ್ಲಿ ಸಾಕಷ್ಟು ಪೂರ್ವಾನುಭವ ಹೊಂದಿರಬೇಕು. ಇವುಗಳ ಜೊತೆಗೆ ವಿಶೇಷ ಜ್ಞಾನವೂ ಒಂದು ಹೆಚ್ಚಿನ ಅರ್ಹತೆಯಾಗಿ ಪರಿಗಣಿಸಲ್ಪಟ್ಟಿದೆ. ಇಂದು ಆಡಳಿತಾಂಗ ಹೆಚ್ಚು ಹೆಚ್ಚಾಗಿ ವೈಶಿಷ್ಟ್ಯ ಹೊಂದಿರುವುದರಿಂದ ಅಭ್ಯರ್ಥಿಗಳು ಆಡಳಿತದಲ್ಲಿ ವಿಶೇಷ ಜ್ಞಾನವನ್ನು ಪಡೆದಿರಲೇಬೇಕಾಗುತ್ತದೆ.

ಇವೆಲ್ಲದರ ಜೊತೆಗೆ ವ್ಯಕ್ತಿಯ ಸಾಮಾನ್ಯ ವ್ಯಕ್ತಿತ್ವ ಬಹು ಮುಖ್ಯ ಅರ್ಹತೆಗಳಲ್ಲೊಂದಾಗುತ್ತದೆ. ಇಲ್ಲಿ ವ್ಯಕ್ತಿತ್ವ ಎಂಬ ಪದದ ಅರ್ಥ ಬಹು ವ್ಯಾಪಕವಾಗಿದೆ. ಅವನ ಎತ್ತರ, ನಡಿಗೆ, ನೋಟ, ಚರ್ಯೆ, ನಡತೆ, ಸೂಕ್ಷ್ಮಬುದ್ಧಿ, ಪರಿಚ್ಛೇದಗುಣ ಇವೆಲ್ಲ ಸೇರುತ್ತವೆ. ಒಂದು ದೊಡ್ಡ ಸಂಸ್ಥೆಯ ಮೇಲ್ವಿಚಾರಣೆಯಂಥ ಜವಾಬ್ದಾರಿಯ ಕೆಲಸಗಳಿಗೆ ವ್ಯಕ್ತಿಗಳನ್ನಾಯುವಾಗ, ವ್ಯಾಪಾರೀ ಸಂಸ್ಥೆಗಳವರು ಸಿಬ್ಬಂದಿಯನ್ನು ಆಯ್ಕೆ ಮಾಡುವಾಗ ಅಭ್ಯರ್ಥಿಯ ವ್ಯಕ್ತಿತ್ವಕ್ಕೆ ಅತಿ ಹೆಚ್ಚಿನ ಗಮನ ಕೊಡುತ್ತಾರೆ. ಇದಕ್ಕಾಗಿಯೇ ಸಂದರ್ಶನ ಪರೀಕ್ಷೆಗಳು ಏರ್ಪಟ್ಟಿವೆ. ಒಟ್ಟಿನಲ್ಲಿ ಅರ್ಹತೆಗಳಲ್ಲಿ ಮೇಲಿನ ಎಲ್ಲ ಅಂಶಗಳನ್ನೂ ಸೇರಿಸಲಾಗಿದೆ. ಈ ಎಲ್ಲ ಅರ್ಹತೆಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಕೆಲಸಗಳಿಗೆ ನೇಮಿಸಲಾಗುತ್ತದೆ. (ಎಂ.ಕೆ.ಆರ್.)

**ಅಲ್ ಅಹ್ರಾಂ :** ಈಜಿಪ್ಟ್ ದೇಶದ ರಾಷ್ಟ್ರೀಯ ಹಾಗೂ ಪ್ರಭಾವಿ ದಿನಪತ್ರಿಕೆ. ಈ ಹೆಸರಿಗೆ ಪಿರಮಿಡ್ ಎಂಬ ಅರ್ಥವಿದೆ. ಸ್ಥಾಪನೆ 1875. ಭಾಷೆ ಅರಬ್ಬಿ. ಅಲೆಕ್ಸಾಂಡ್ರಿಯದಲ್ಲಿ ಇದನ್ನು ಪ್ರಾರಂಭಿಸಿದವರು ಲೆಬನಾನಿನ ಸಲೀಂ ಮತ್ತು ಬಿಷ್ರಾ. ಅನಂತರ ಇದನ್ನು ಕೈರೋಗೆ ವರ್ಗಾವಣೆ ಮಾಡಲಾಯಿತು. ಬ್ರಿಟಿಷರ ಕಾಲದಲ್ಲಿ ಇದರ ಪ್ರಕಟಣೆ ಮೇಲೆ ನಿರ್ಬಂಧ ವಿಧಿಸಿತು. ಆದರೂ ಈ ಪತ್ರಿಕೆ ಧೈರ್ಯವಾಗಿ ಸ್ವತಂತ್ರ ನೀತಿ ಅನುಸರಿಸಿತು. ಸೈನ್ಯಕ್ರಾಂತಿಯಾದ ಮೇಲೆ ಇದರ ಪ್ರಭಾವ ಹೆಚ್ಚಿತು. ಅಬುಲ್ ನಾಸರ್ ಅಧಿಕಾರಕ್ಕೆ ಬಂದ ಮೇಲೆ ತಮ್ಮ ಮಿತ್ರ ಮಹಮದ್ ಹುಸೇನ್ ಅವರನ್ನು ಸಂಪಾದಕರಾಗಿ ನೇಮಿಸಿದರು. ಹಕೀಲ್ ಒಬ್ಬ ಉತ್ತಮ ಪತ್ರಕರ್ತರು. ಪತ್ರಿಕೆಯನ್ನು ಉತ್ತಮ ರೀತಿಯಲ್ಲಿ ರೂಪಿಸಿದರು. ನಾಸರ್ ಅನಂತರ ಅಧಿಕಾರಕ್ಕೆ ಬಂದ ಅನ್ವರ್ ಸಾದತ್ ಅವರಿಂದ ಹಕೀಲ್ ಪದಚ್ಯುತಿ. ಆದರೆ ಅಲ್ ಅಹ್ರಾಂ ಹಕೀಲ್ ರೂಪಿಸಿದಂತೆಯೇ ಮುಂದುವರೆಯಿತು. ಸಾರ್ವಜನಿಕ ಹಾಗೂ ಸರ್ಕಾರಿ ಮನೋಧರ್ಮಗಳನ್ನು ರೂಪಿಸುವುದರ ಮೂಲಕ ಜನಪ್ರಿಯವಾಗಿದೆ. ಅರಬ್ಬೀ ವೃತ್ತಪತ್ರಿಕಾಪ್ರಪಂಚದಲ್ಲದೆ ಅಂತಾರಾಷ್ಟ್ರೀಯವಾಗಿ ಹೆಸರುಗಳಿಸಿದೆ. (ಎನ್.ಕೆ.)

**ಅಲ್ ಉತ್ಬಿ :** ಹೆಸರಾಂತ ಚರಿತ್ರಕಾರ. ಘಜ್ನಿ ಮಹಮ್ಮದನ (998–1030) ಆಸ್ಥಾನದಲ್ಲಿದ್ದ ಅನೇಕ ಮೇಧಾವಿಗಳಲ್ಲೊಬ್ಬ. ಕಿತಾಬುಲ್ ಯಾಮಿನೀ ಎಂಬ ಚಾರಿತ್ರಿಕ ಗ್ರಂಥವೊಂದನ್ನು ರಚಿಸಿದ್ದಾನೆ. ಇದು ಅರಬ್ಬೀ ಭಾಷೆಯಲ್ಲಿದ್ದು ಅನಂತರ ಪಾರಸೀ ಭಾಷೆಗೆ ಅನುವಾದವಾಗಿದೆ. ಇದು ಸಬುಕ್ತಗೀನ್ ಹಾಗೂ ಘಜ್ನಿ ಮಹಮ್ಮದರ ವಿಚಾರವನ್ನು ತಿಳಿಸುತ್ತದೆ. ಗ್ರಂಥವನ್ನು ಮಹಮ್ಮದನ ಆಡಳಿತದ ಮಧ್ಯಾವಧಿಯಲ್ಲಿ ಬರೆದಿರುವಂತೆ ಕಂಡುಬರುವುದು. ಚರಿತ್ರಕಾರ. ಘಜ್ನಿ ಮಹಮ್ಮದ್ ತನ್ನ ರಾಜಧಾನಿಯಾದ ಘಜ್ನಿಯಲ್ಲಿ ಕಟ್ಟಿಸಿದ್ದ ಜುಮ್ಮಾಮಸೀದಿಯನ್ನೂ ಇತರ ಭವ್ಯ ಭವನಗಳನ್ನೂ ತನ್ನ ಗ್ರಂಥದಲ್ಲಿ ಮನಸಾರೆ ಹೊಗಳಿದ್ದಾನೆ. ಘಜ್ನಿಯ ಧನಿಕರು ತಮ್ಮ ಗೃಹಗಳನ್ನು ನಯ ನಾಜೂಕುಗಳಿಂದ ನಿರ್ಮಿಸಿಕೊಳ್ಳಲು ಇವನ ವಿವರಣೆಗಳು ಸ್ಫೂರ್ತಿ ನೀಡಿದುವೆಂದು ತಿಳಿದುಬರುತ್ತದೆ. (ಆರ್.ಜಿ.ಎಸ್.)

**ಅಲ್ ಉಬೈದ್ :** ಮೆಸಪೊಟೇಮಿಯದ ಪುರಾತನ ಸಂಸ್ಕೃತಿಗಳಲ್ಲಿ ಒಂದು. ಇರಾಕ್‍ನ ಅಲ್ ಉಬೈದ್ ಗ್ರಾಮದ ಬಳಿ ನಡೆದ ಭೂ ಸಂಶೋಧನೆಯಿಂದ ಮೊದಲು ಗುರುತಿಸಲ್ಪಟ್ಟಿತು. ಪ್ರ.ಶ.ಪೂ. 4000 ವರ್ಷಗಳ ಸುಮಾರಿನಲ್ಲಿ ದಕ್ಷಿಣ ಭಾಗದಿಂದ ಮೆಸಪೊಟೇಮಿಯಕ್ಕೆ ವಲಸೆ ಬಂದ ಈ ಸಂಸ್ಕೃತಿಯ ಜನರಿಗೆ ಲೋಹದ ಉಪಯೋಗ ಅಲ್ಪಸ್ವಲ್ಪ ತಿಳಿದಿತ್ತು. ಚಕ್ರದ ಬಳಕೆಯಿಲ್ಲದೆ ಕೈಯಿಂದ ಮಡಕೆಗಳನ್ನು ಮಾಡುವ ವಿಧಾನವೂ ಇವರಿಗೆ ತಿಳಿದಿತ್ತು. ಮಣ್ಣಿನ ಇಟ್ಟಿಗೆಯ ತಯಾರಿಕೆ, ದೇವಾಲಯಗಳ ಕಟ್ಟಡ ಮುಂತಾದುವನ್ನು ರೂಢಿಗೆ ತಂದ ಈ ಜನ ಮೆಸಪೊಟೇಮಿಯದ ನಾಗರಿಕತೆಗೆ ಅಡಿಗಲ್ಲು ಹಾಕಿದರೆಂದು ಹೇಳಬಹುದು. (ಎಸ್.ಎಂ.)

**ಅಲ್ ಖೈದಾ :** ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ಷೋಭೆಯುಂಟುಮಾಡುತ್ತಿರುವ ಪ್ರಮುಖ ಭಯೋತ್ಪಾದಕ ಸಂಘಟನೆ. ಅಮೆರಿಕ, ಬ್ರಿಟನ್‍ನಂಥ ಪಾಶ್ಚಾತ್ಯ ರಾಷ್ಟ್ರಗಳು ಅಲ್‍ಖೈದಾ ಸಂಘಟನೆ ಮತ್ತು ಅದರ ಸದಸ್ಯಬಲವನ್ನು ಬಗ್ಗು ಬಡಿಯಲು ಸಮರ ತಂತ್ರಗಳನ್ನು ಹೂಡುತ್ತಿದ್ದರೂ ಆ ಸಂಘಟನೆ ಮತ್ತಷ್ಟು ಶಕ್ತಿಶಾಲಿ ಆಗುತ್ತಿದೆ ಎನ್ನುವುದಕ್ಕೆ ಅಲ್‍ಖೈದಾ ಮುಖ್ಯಸ್ಥ ಬಿನ್‍ಲಾಡನ್ ತಲೆಯ ಮೌಲ್ಯ ದುಪ್ಪಟ್ಟಾಗಿರುವುದೇ ಸಾಕ್ಷಿ.

ಪ್ರಪಂಚವನ್ನೇ ನೆಲೆಯನ್ನಾಗಿ ಮಾಡಿಕೊಂಡಿರುವ ಈ ಭಯೋತ್ಪಾದಕ ಸಂಘಟನೆ ತನ್ನ ಹಿಂಸಾಕೃತ್ಯಗಳಿಂದ ಪ್ರಪಂಚವನ್ನೇ ನಡುಗಿಸುತ್ತಿದೆ. ಅಲ್‍ಖೈದಾ ಎಂದರೆ ಅರೆಬಿಕ್ ಭಾಷೆಯಲ್ಲಿ ನೆಲೆ ಎಂದರ್ಥ. ಸುನ್ನಿ ಪಂಗಡಕ್ಕೆ ಸೇರಿದ ಮೂಲಭೂತವಾದಿಗಳ ಜಿಹಾದಿ ಸಂಘಟನೆ ಇದು. 1989ರ ಆಸುಪಾಸಿನಲ್ಲಿ ಆಫ್ಘಾನಿಸ್ತಾನದಲ್ಲಿ ಸೋವಿಯತ್ ಒಕ್ಕೂಟದ ಅಸ್ತಿತ್ವವನ್ನು ಕೊನೆಗಾಣಿಸಲು ಒಸಾಮ ಬಿನ್ ಲಾಡೆನ್ ಮತ್ತು ಇತರರು ಸೇರಿ ಇದನ್ನು ಕಟ್ಟಿದರು. ಆದರೆ ಮತ್ತಷ್ಟು ಅದರ ಮೂಲ ಹುಡುಕುತ್ತ ಹೋದರೆ ಇದರ ಬೇರು ಇರುವುದು 1978ರಲ್ಲಿ ಸೋವಿಯತ್ ಒಕ್ಕೂಟದ ಪ್ರಾಬಲ್ಯ ಮುರಿಯಲು ಅಮೆರಿಕ ಮತ್ತು ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆಗಳು ಆಫ್ಘಾನಿಸ್ತಾನದ ಮುಜಾಹಿದ್ದೀನ್‍ಗಳಿಗೆ ನೆರವು ನೀಡಿದವು. ಇದಕ್ಕೆ ಇಟ್ಟಹೆಸರು ಆಪರೇಷನ್ ಸೈಕ್ಲೋನ್ ಶೀತಲ ಸಮರದ ಆ ಸಂದರ್ಭದಲ್ಲಿ ಅಮೆರಿಕ ಸಿಐಎ ಸ್ವತಃ ಲಾಡೆನ್‍ಗೆ ಹಣಕಾಸಿನ ನೆರವು ನೀಡಿತ್ತು. ಸೋವಿಯತ್ ಒಕ್ಕೂಟ ತನ್ನ ಪಡೆಗಳನ್ನು ಹಿಂತೆಗೆದುಕೊಂಡಾಗ ಅಲ್‍ಖೈದಾದ ಗೆರಿಲ್ಲಾ ಪಡೆಗಳನ್ನು ಕಾಡಿದ್ದು ನಿರುದ್ಯೋಗ. ಆಗ ಜಿಹಾದ್‍ನತ್ತ ಅಲ್‍ಖೈದಾ ಗಮನ ಹರಿಸಿತು. ಮುಸ್ಲಿಂ ರಾಷ್ಟ್ರಗಳಲ್ಲಿ ವಿದೇಶಿ ರಾಷ್ಟ್ರಗಳ ಪ್ರಭಾವವನ್ನು ಕೊನೆಗಾಣಿಸುವುದು, ಅಮೆರಿಕ, ಇಸ್ರೇಲ್‍ನಂಥ ರಾಷ್ಟ್ರಗಳನ್ನು ನಾಶ ಮಾಡಿ ಜಾಗತಿಕವಾಗಿ ಹೊಸ ಇಸ್ಲಾಂ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವುದು ಅದರ ಈಗಿನ ಗುರಿ. ಅಮೆರಿಕದ ಕೈಗೂಸಾದ ಅಲ್‍ಖೈದಾ ಅದರ ವಿರುದ್ಧವೇ ತಿರುಗಿ ಬಿದ್ದಿದ್ದು ಪರಿಸ್ಥಿತಿಯ ವಿಪರ್ಯಾಸ. ಉಗ್ರಗಾಮಿಗಳಿಗೆ ಪ್ರಚೋದನೆ ನೀಡಿದ ರಾಷ್ಟ್ರಗಳು ಮತ್ತು ವ್ಯಕ್ತಿಗಳಿಗೆ ಅದೇ ವ್ಯವಸ್ಥೆ ತಿರುಗೇಟು ನೀಡುತ್ತಿರುವುದು ಐತಿಹಾಸಿಕ ಮತ್ತು ಪ್ರಚಲಿತ ಸತ್ಯ. ಪಾಕಿಸ್ತಾನ ಇದಕ್ಕೊಂದು ಹಾಲಿ ನಿದರ್ಶನ.

ತಾಲಿಬಾನ್‍ಗಳ ಮೂಲಕ ಆಫ್ಘಾನಿಸ್ತಾನವನ್ನು ತನ್ನ ಭದ್ರನೆಲೆ ಮಾಡಿಕೊಂಡಿದ್ದ ಅಲ್‍ಖೈದಾ ಈಗ ಎಲ್ಲ ಮುಸ್ಲಿಂ ರಾಷ್ಟ್ರಗಳಲ್ಲಿ ಸಕ್ರಿಯವಾಗಿದೆ. ಮಧ್ಯಪ್ರಾಚ್ಯ ರಾಷ್ಟ್ರಗಳು, ಉತ್ತರ ಆಫ್ರಿಕಾದ ರಾಷ್ಟ್ರಗಳಲ್ಲಿ ವಿವಿಧ ಸಂಘಟನೆಗಳ ಹೆಸರಿನಲ್ಲಿ ಅಲ್‍ಖೈದಾ ಈಗಾಗಲೇ ಅಸ್ತಿತ್ವವನ್ನು ಹೊಂದಿದೆ. ಧರ್ಮಕ್ಕಾಗಿ ಪ್ರಾಣ ಕೊಡುವ ವ್ಯಕ್ತಿಗಳು ಅಲ್‍ಖೈದಾ ಹೋರಾಟಕ್ಕೆ ಜೀವತುಂಬುತ್ತಲೇ ಇದ್ದಾರೆ. ಮೊದಲು ಸಾಮಾನ್ಯ ಜನರು, ನಿರುದ್ಯೋಗಿಗಳು ಹಣಕ್ಕಾಗಿ ಈ ಸಂಘಟನೆ ಸೇರಿಕೊಂಡು ಬಂದೂಕು ಹಿಡಿದರೆ ಈಗ ಸುಶಿಕ್ಷಿತರೂ ಅಲ್‍ಖೈದಾ ಜಾಡಿನಲ್ಲಿ ಸಾಗುತ್ತಿರುವುದು ಘೋರ ದುರಂತ 2000 ದ ಸೆಪ್ಟೆಂಬರ್ 11 ದಾಳಿಯ ಬಳಿಕ. ಅಮೆರಿಕ, ಆಫ್ಘಾನಿಸ್ತಾನದ ಮೇಲೆ ನಡೆಸಿದ ಆಕ್ರಮಣದಿಂದಾಗಿ ಛಿದ್ರವಾಗಿದ್ದ ಅಲ್‍ಖೈದಾ ಸಂಘಟನೆ ಈಗ ಮತ್ತೆ ಚಿಗುರಿಕೊಂಡಿದೆ. ಬ್ರಿಟನ್ನಿನಲ್ಲಿ ನಡೆದ ವಿಧ್ವಂಸಕ ಕೃತ್ಯಗಳು ಮತ್ತೊಮ್ಮೆ ಅಲ್‍ಖೈದಾದ ಪ್ರಬಲ ಅಸ್ತಿತ್ವವನ್ನು ಸಾಬೀತು ಪಡಿಸಿವೆ. ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನ ಗಡಿಯಲ್ಲಿರುವ ರಕ್ಷಣೆಯನ್ನು ದುರುಪಯೋಗ ಪಡಿಸಿಕೊಂಡಿರುವ ಅಲ್‍ಖೈದಾ ಶಕ್ತಿಯೊಂದಿಗೆ ಇನ್ನಷ್ಟು ದಾಳಿಗಳಿಗೆ ಸಜ್ಜಾಗುತ್ತಿದೆ ಎಂದು ಅಮೆರಿಕದ ಭಯೋತ್ಪಾದನಾ ನಿಗ್ರಹ ದಳದ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ವಿದ್ಯಮಾನಗಳು ಈ ಅವ್ಯಕ್ತ ಭಯವನ್ನು ಸಮರ್ಥಿಸಿವೆ.

ವಿಶ್ವ ವಾಣಿಜ್ಯ ಕೇಂದ್ರದ ಎರಡು ಗೋಪುರಗಳ ಮೇಲೆ ನಡೆಸಿದ ಧಾಳಿಯಿಂದ ಅಲ್‍ಖೈದಾ ತನ್ನದೇ ಚರಮಗೀತೆ ಹಾಡಿತು ಎಂದು ಭಾವಿಸಲಾಗಿದೆ. ಈ ಧಾಳಿಯಿಂದ ಕಂಗೆಟ್ಟ ಅಮೆರಿಕ ಅಲ್‍ಖೈದಾದ ಕೇಂದ್ರ ಸ್ಥಳವೆಂದು ಭಾವಿಸಲಾದ ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನಡೆಸಿತು. ತಾಲಿಬಾನ್‍ಗಳನ್ನು ಹಿಮ್ಮೆಟ್ಟಿಸುವಲ್ಲಿ ಅಮೆರಿಕ ಯಶಸ್ವಿಯಾದರೂ ಅವರನ್ನು ಪೂರ್ತಿ ಚಿವುಟಿಹಾಕಲು ಸಾಧ್ಯವಾಗಲಿಲ್ಲ. ಅದಕ್ಕಿಂತ ದೊಡ್ಡ ವೈಫಲ್ಯವೆಂದರೆ ಅಲ್‍ಖೈದಾದ ಪರಮೋಚ್ಚ ನಾಯಕ ಒಸಾಮ ಬಿನ್ ಲಾಡೆನ್‍ನನ್ನು ಹಿಡಿಯಲು ಅಥವಾ ಕೊಲ್ಲಲು ಅಮೆರಿಕ ಮಾಡಿದ ಎಲ್ಲ ಸಮರ ತಂತ್ರವೂ ವಿಫಲವಾಯಿತು. ಲಾಡೆನ್ ಸತ್ತ ವದಂತಿಗಳಿಂದಷ್ಟೇ ಅಮೆರಿಕ ತೃಪ್ತಿ ಪಡಬೇಕಾಯಿತು. ಸತತ ಆರು ವರ್ಷಗಳ ಕಾಲ ಆಫ್ಘಾನಿಸ್ತಾನದ ಮೇಲೆ ಬಾಂಬ್‍ಗಳ ಸುರಿಮಳೆ ಸುರಿಸಿದರೂ ಅಲ್‍ಖೈದಾ ಬಗ್ಗಿದಂತೆ ಕಾಣುತ್ತಿಲ್ಲ. ಬದಲಾಗಿ ಹೊಸ ತಂತ್ರಗಳು, ಊಹಿಸಲೂ ಅಸಾಧ್ಯವಾದ ವ್ಯಕ್ತಿಗಳ ನೆರವಿನೊಂದಿಗೆ ಅಲ್‍ಖೈದಾ ದಾಳಿಗಳಿಗೆ ಮುಂದಾಗಿದೆ. ಅತೃಪ್ತ ಜನಸಾಮಾನ್ಯರಿಗಿಂತ ಮೇಧಾವಿಗಳ ದೊಡ್ಡ ಪಡೆ ಅಲ್‍ಖೈದಾದ ಬತ್ತಳಿಕೆಯಲ್ಲಿರುವುದೇ ದೊಡ್ಡ ಆತಂಕದ ವಿಷಯ.

ಇರಾಕ್ ಮೇಲೆ ನಡೆದ ಅಮೆರಿಕದ ಧಾಳಿ ಅಲ್‍ಖೈದಾಕ್ಕೆ ಪರೋಕ್ಷ ಪರವಾನಗಿ ಬಂದಂತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳ ಬಗ್ಗೆ ಇಸ್ಲಾಂ ಧರ್ಮದ ಒಂದು ವರ್ಗದಲ್ಲಿರುವ ದ್ವೇಷವನ್ನು ಮೂಲಭೂತವಾದಿ ಧಾರ್ಮಿಕ ಗುರುಗಳು ಚೆನ್ನಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಅಲ್‍ಖೈದಾ ದಿನದಿಂದ ದಿನಕ್ಕೆ ಪ್ರಬಲವಾಗುತ್ತಿರುವುದು ಪಾಶ್ಚಿಮಾತ್ಯ ರಾಷ್ಟ್ರಗಳ ತಪ್ಪುಗಳಿಂದಲೇ ಎನ್ನಬಹುದು.

ಹಿಂದಿನ ವರ್ಷಗಳಿಗಿಂತ ಅಲ್‍ಖೈದಾ ಬಲಗೊಳ್ಳುತ್ತಲೇ ಸಾಗುತ್ತಿದೆ. 2001 ರಿಂದೀಚೆಗೆ ಆ ಸಂಘಟನೆಯ ಉಗ್ರರು ಹೆಚ್ಚು ಸಂಘಟಿತರಾಗಿದ್ದಾರೆ. ಅಮೆರಿಕ ಮತ್ತು ಅದರ ಮಿತ್ರ ಪಕ್ಷಗಳು ತಮ್ಮ ರಕ್ಷಣೆಯನ್ನು ಹೇಗೆ ಬಲಗೊಳಿಸುತ್ತಿವೆಯೋ ಹಾಗೆಯೇ ಅಲ್‍ಖೈದಾ ಸಂಘಟನೆಯೂ ರಕ್ಷಣೆಯನ್ನು ಬಿಗಿಗೊಳಿಸುವುದರೊಂದಿಗೆ ತನ್ನ ಬಲವನ್ನೂ ಹೆಚ್ಚಿಸಿಕೊಳ್ಳುತ್ತಿದೆ ಎಂದು ಅಮೆರಿಕದ ಭಯೋತ್ಪಾದನಾ ನಿಗ್ರಹ ತಜ್ಞರ ವರದಿಯಲ್ಲಿ ಹೇಳಲಾಗಿದೆ.

ಇತ್ತೀಚೆಗೆ ಅಲ್‍ಖೈದಾ ಪರಮೋಚ್ಚ ನಾಯಕ ಒಸಾಮ ಬಿನ್ ಲಾಡೆನ್ ಸಾರ್ವಜನಿಕವಾಗಿ ಯಾವುದೇ ಹೇಳಿಕೆ ನೀಡಿಲ್ಲದಿದ್ದರೂ ಅಲ್‍ಖೈದಾದ ಯೋಜನೆಯಲ್ಲಿ ಈತ ಪಾತ್ರವಹಿಸುತ್ತಿದ್ದಾನೆ ಎಂದು ಬೇಹುಗಾರಿಕೆ ಸಂಸ್ಥೆಗಳು ಹೇಳಿವೆ. ಇದಕ್ಕಾಗಿ ಅಮೆರಿಕ ಈತನ ತಲೆಯ ಮೌಲ್ಯವನ್ನು ದ್ವಿಗುಣಗೊಳಿಸಿ ಐದು ಕೋಟಿ ಡಾಲರ್‌ಗೆ ಹೆಚ್ಚಿಸಿದೆ.

ಆದರೆ ಅಲ್‍ಖೈದಾ ತನ್ನ ಆರ್ಥಿಕ ಜೀವನಾಡಿಗಳನ್ನು ಚುರುಕುಗೊಳಿಸಿ, ಜಾಗತಿಕ ಕಾರ್ಯಾಚರಣೆಗೆ ಸಜ್ಜಾಗಿದೆ. ಆಫ್ಘಾನಿಸ್ತಾನ ಮತ್ತು ಇರಾಕ್‍ಗಳಲ್ಲಿ ದಿನಂಪ್ರತಿ ತನ್ನ ಅಸ್ತಿತ್ವವನ್ನು ಸಾಬೀತು ಪಡಿಸುತ್ತಲೇ ಅಲ್‍ಖೈದಾ, ಯುರೋಪ್ ಮತ್ತು ಮುಸ್ಲಿಂ ವಿರೋಧಿ ರಾಷ್ಟ್ರಗಳ ಮೇಲೆರಗಲು ಯೋಜನೆ ರೂಪಿಸುತ್ತಲೇ ಇದೆ. ಗೆರಿಲ್ಲಾ ಸಮರ ತಂತ್ರ ಅಲ್‍ಖೈದಾದ ದೊಡ್ಡ ಶಕ್ತಿ. ಉಗ್ರರನ್ನು ಎದುರಿಸಲು ಎಷ್ಟೇ ಸಿದ್ಧತೆ ನಡೆಸಿದರೂ ಊಹಿಸಿದ ವಿಧಾನದಲ್ಲಿ ಮೇಲೆರಗುವುದು ಅದರ ತಂತ್ರ. ಹೀಗಾಗಿ ಅಮೆರಿಕದಂಥ ಶಿಸ್ತುಬದ್ಧ ರಾಷ್ಟ್ರವೂ ಅಲ್‍ಖೈದಾ ದಾಳಿಯನ್ನು ಎದುರಿಸಲು ವಿಫಲವಾಗುತ್ತಿದೆ. ಏಷ್ಯನ್ ಟೈಮ್ಸ್ ಆನ್‍ಲೈನ್ ಪತ್ರಿಕೆಯ ವರದಿಯ ಪ್ರಕಾರ ಅಲ್‍ಖೈದಾ ಕ್ಷಿಪಣಿ ಮತ್ತು ರಾಕೆಟ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಒಸಾಮ ಬಿನ್ ಲಾಡೆನ್ ಬಳಿ ಪರಮಾಣು ತಂತ್ರಜ್ಞಾನ ಇರುವುದು ಈಗ ರಹಸ್ಯವಾಗಿ ಉಳಿದಿಲ್ಲ. ಪರಮಾಣುಬಾಂಬ್‍ಗಳನ್ನು ಕೊಂಡೊಯ್ಯಬಲ್ಲ ಕ್ಷಿಪಣಿಗಳನ್ನೂ ಅಲ್‍ಖೈದಾ ಹೊಂದಿದೆ ಎಂದರೆ ಅದರ ಶಕ್ತಿಯ ಕಲ್ಪನೆ ಮಾಡಬಹುದು. (ಎನ್‍ಆರ್.)

**ಅಲ್ ಗಂಹರಿಯಾ :** ಕೈರೊ ನಗರದಿಂದ ಪ್ರಕಟವಾಗುವ ಅರಬ್ಬಿ ದಿನಪತ್ರಿಕೆ. ಈ ಮಾತಿಗೆ ಗಣರಾಜ್ಯ ಪ್ರಭುತ್ವ ಎಂಬ ಹೆಸರಿದೆ. ಪ್ರಸಾರ ಒಂದು ಲಕ್ಷ ಪ್ರತಿಗೂ ಮೀರಿತ್ತು. ಪ್ರಧಾನ ಸಂಪಾದಕರನ್ನು ಈಜಿಪ್ಟಿನ ರಾಷ್ಟ್ರಾಧ್ಯಕ್ಷರೇ ನೇಮಕಮಾಡುತ್ತಾರೆ. ಅಭಿಪ್ರಾಯಗಳು ಸ್ವತಂತ್ರವಾದರೂ ಪತ್ರಿಕೆ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ಕೊಡುತ್ತದೆ.

ರಾಷ್ಟ್ರೀಕೃತ ಪತ್ರಿಕೆಗಳಲ್ಲಿ ಒಂದಾದ ಇದು ತನಗೆ ಬಂದ ಲಾಭದಲ್ಲಿ ಅರ್ಧದಷ್ಟನ್ನು ತನ್ನಲ್ಲಿ ಕೆಲಸ ಮಾಡುವವರಿಗೆ ಹಂಚಿ, ಉಳಿದರ್ಧವನ್ನು ಪತ್ರಿಕೆಯ ಬೆಳವಣಿಗೆಗೆ ಉಪಯೋಗಿಸುತ್ತದೆ. (ಎನ್.ಕೆ.)

**ಅಲ್ ಮಸೂದ್ :** ಬಾಗದಾದಿನ ಮುಸ್ಲಿಂ ಚರಿತ್ರಕಾರ ಮತ್ತು ಪ್ರವಾಸಿ. ಹೊನ್ನಿನ ಹುಲ್ಲುಗಾವಲು ಎಂಬ ಇವನ ಗ್ರಂಥ ಬಲು ಹೆಸರಾದುದು. ಇದು ಅರಬ್ಬರ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ತಿಳಿಯಲು ಉಪಯುಕ್ತವಾಗಿದೆ. ಮಸೂದನನ್ನು ಅರಬ್ಬರ ಹೆರೊಡೋಟಸ್ ಎಂದು ಪರಿಗಣಿಸಿದ್ದಾರೆ. ಇವನು ಬಹುಶಃ ಇಸ್ಲಾಂ ಧರ್ಮ ಪ್ರಚಾರದಲ್ಲಿದ್ದ ಕಡೆಗಳಲ್ಲೆಲ್ಲ ಪ್ರವಾಸಮಾಡಿ ಭಾರತಕ್ಕೂ ಅನೇಕ ಸಲ ಬಂದಿರುವಂತೆ ಕಂಡುಬರುತ್ತದೆ (900–40). ಇವನು ಹುಟ್ಟಿದ ಕಾಲ ಗೊತ್ತಿಲ್ಲವಾದರೂ 956ರಲ್ಲಿ ನಿಧನನಾದನೆಂದು ತಿಳಿದುಬಂದಿದೆ. (ಆರ್.ಜಿ.ಎಸ್.)

**ಅಲ್ ಹಿಲಾಲ್ :** ರಾಷ್ಟ್ರೀಯ ಉರ್ದು ಪತ್ರಿಕೆ. ನವಭಾರತದ ನಿರ್ಮಾಪಕರಲ್ಲೊಬ್ಬರೂ ಭಾರತದ ಮಾಜಿ ಶಿಕ್ಷಣ ಮಂತ್ರಿಗಳೂ ಆಗಿದ್ದ ಮೌಲಾನಾ ಅಬುಲ್ ಕಲಂ ಆಜ್ಞಾದರು 1 ಜೂನ್ 1902ರಂದು ಕಲ್ಕತ್ತ ನಗರವನ್ನು ಸ್ಥಾಪಿಸಿದರು. ಭಾರತದ ರಾಷ್ಟ್ರೀಯ ಸಂಗ್ರಾಮದಲ್ಲಿ ಮುಸ್ಲಿಂ ಸಹೋದರರು ಭಾಗವಹಿಸುವಂತೆ ಅವರ ಮನವೊಲಿಸುವ ಕೆಲಸವನ್ನು ನಿರ್ವಹಿಸಿ ಬಹುಬೇಗನೆ ಜನಪ್ರಿಯತೆಗಳಿಸಿದ ಈ ಪತ್ರಿಕೆಯ ಮೇಲೆ ಬ್ರಿಟಿಷ್ ಸರ್ಕಾರ ಗದಾಪ್ರಹಾರ ಮಾಡಿತು. ಕೆಲವು ಮುಸ್ಲಿಂ ಉಗ್ರಪಂಥಿಗಳು ಈ ಪತ್ರಿಕೆಯನ್ನು ವಿರೋಧಿಸಿದರು. ಆದರೂ ಪತ್ರಿಕೆಯ ಪ್ರಸಾರ ಇಳಿಮುಖವಾಗಲಿಲ್ಲ.

ಆಝಾದರ ಬರೆವಣಿಗೆಯ ಪ್ರಭಾವ ಭಾರತದ ಮುಸಲ್ಮಾನರ ಮೇಲಲ್ಲದೆ, ನೆರೆ ದೇಶಗಳ ಮುಸ್ಲಿಮರ ಮೇಲೂ ಆಯಿತು. ಪುಟಗಳನ್ನು ರೂಪಿಸುವ ವಿಧಾನದಲ್ಲಿ, ಭಾಷೆ ಶೈಲಿಗಳಲ್ಲಿ, ಸುದ್ದಿ ಮತ್ತು ಲೇಖನಗಳನ್ನು ಕೊಡುವ ರೀತಿಯಲ್ಲಿ, ಇದು ಇತರ ಉರ್ದು ಪತ್ರಿಕೆಗಳಿಗೆ ಮಾದರಿಯಾಗಿತ್ತು. ಭಾರತದ ರಾಜಕೀಯ ಜೀವನದಲ್ಲಿ ಮುಸ್ಲಿಮರು ತಮ್ಮ ಅದ್ಭುತವಾದ ಕಾಣಿಕೆಯನ್ನು ಸಲ್ಲಿಸಲು ಈ ಪತ್ರಿಕೆ ಅನುಕೂಲ ಮಾಡಿಕೊಟ್ಟಿತು. ಉರ್ದು ಪತ್ರಿಕೋದ್ಯಮದಲ್ಲಿ ಕ್ರಾಂತಿಯ ಹಾದಿಯನ್ನು ತೋರಿಸಿದ ಕೀರ್ತಿ ಈ ಪತ್ರಿಕೆಗೆ ಮತ್ತು ಅದರ ಸಂಪಾದಕರಿಗೆ ಸಲ್ಲುತ್ತದೆ. (ಎನ್.ಕೆ.)

**ಅಲಂಕರಣ ಕಲೆ :** ಭಾರತದ ಅರವತ್ತನಾಲ್ಕು ಕಲೆಗಳಲ್ಲೊಂದಾಗಿದ್ದು ಮನುಷ್ಯನ ಕಲಾ ಪ್ರವೃತ್ತಿಯ ಪ್ರಾಚೀನತೆಯ ದ್ಯೋತಕವಾಗಿದೆ. ಉದರಂಭರಣ, ನಿದ್ರೆ, ಜೀವಸಂರಕ್ಷಣೆ, ಸಂತತಿಪರಿಪಾಲನೆಗಳಂಥ ಅತ್ಯಗತ್ಯಗಳನ್ನೂ ಆವರಿಸಿ, ಅವನ್ನೂ ಮೀರಿ ಮಾನವನ ಸೌಂದರ್ಯಾಭಿಲಾಷೆ ಕೆಲಸ ಮಾಡುತ್ತಿರುವುದನ್ನು ಆದಿ ಮಾನವನ ಗುಹೆ, ಬಳಕೆಯ ವಸ್ತುಗಳು, ಅಲ್ಲಿನ ಚಿತ್ರಕಲೆಗಳು ಸ್ಪಷ್ಟಪಡಿಸುತ್ತವೆ. ಆದಿಮಾನವನ ನಡೆನುಡಿಗಳಲ್ಲಿ ಕಾವ್ಯಾಂಶ ಸ್ಫುರಿಸಿರುವಂಥ, ಅವನ ದೈನಂದಿನ ಜೀವನದಲ್ಲಿ ಕಲೆ ಪ್ರವೇಶಿಸಿರುವುದನ್ನು, ತತ್ತ್ವದರ್ಶನ ಮೂಡಿರುವುದನ್ನು ಆಜ಼್ಟೆಕ್, ಇಂಕ, ಮಾಯ, ನಾರ್ಸ್, ದ್ರಾವಿಡ ಮೊದಲಾದ ಬಹು ಪ್ರಾಚೀನ ಸಂಸ್ಕೃತಿಗಳಲ್ಲಿ ಕಾಣುತ್ತೇವೆ. ಕಾಲ ಕಳೆದಂತೆ ಸಂಸ್ಕೃತಿ, ನಾಗರಿಕತೆಗಳು ಬದಲಾದಂತೆ, ಪರಿಸರ ಮಾರ್ಪಾಟಾದಂತೆ ಕಾಲ, ದೇಶ, ಸನ್ನಿವೇಶಗಳ ಪ್ರಚೋದನೆಗಳಿಗನುಗುಣವಾಗಿ ಅಲಂಕರಣ ಕಲೆ ವ್ಯತ್ಯಾಸವಾಗುತ್ತ ಬಂದಿದೆ. 20ನೆಯ ಶತಮಾನದಲ್ಲಿ ಇದು ವ್ಯಾಪಾರೀ ಉದ್ಯಮವಾಗಿ ಬೃಹದಾಕಾರದಲ್ಲಿ ಬೆಳೆದಿದೆ. ವ್ಯಕ್ತಿಯ ದೇಹಾಲಂಕರಣಕ್ಕೆ ಸಂಬಂಧಿಸಿದಂತೆ ಅಂಗರಾಗಗಳ ಬಳಕೆಯನ್ನು ನೋಡಬಹುದು **(ನೋಡಿ– ಅಂಗರಾಗಗಳು, ಅಂಗರಾಗಶಾಸ್ತ್ರ)**. ಪರಿಸರದ ಅಲಂಕರಣಕ್ಕೆ ಸಂಬಂಧಿಸಿದಂತೆ ಗೃಹಾಲಂಕರಣ ಮೊದಲು ಬರುತ್ತದೆ. ಸುಲಭ ಖರ್ಚಿನಲ್ಲಿ ಕಟ್ಟಿದವಾದರೂ ಜಪಾನೀಯರ ಮನೆಗಳು ಬಹು ಸುಂದರವಾಗಿರುತ್ತವೆಂದು ಪ್ರಸಿದ್ಧವಾಗಿವೆ. ಶುಚಿ, ಸೌಂದರ್ಯದ ಮುಖ್ಯ ಭಾಗ. ಅಲಂಕರಣ ಅದಕ್ಕೆ ಅಡ್ಡಿಬರಬಾರದು. ಅತ್ಯಲಂಕರಣವೂ ದೋಷವೆ. ಹಳ್ಳಿಯ ಗುಡಿಸಲುಗಳನ್ನು ನೋಡಿದಾಗ ಅಲ್ಲಿನವರ ಬಡತನ ಎದ್ದು ಕಂಡರೂ ಗುಡಿಸಲ ಶುಭ್ರತೆ ಮತ್ತು ಅಲಂಕಾರ ಯಾರನ್ನಾದರೂ ಬೆರಗುಗೊಳಿಸುತ್ತದೆ **(ನೋಡಿ– ಗೃಹಾಲಂಕರಣ)**. ಅನಂತರ ರಂಗೋಲಿ, ಸಾರಣೆಕಾರಣೆಗಳು ಬರುತ್ತವೆ. ಜ್ಯಾಮಿತಿಯ ಸಾಮಾನ್ಯ ನಿಯಮಗಳನ್ನನುಸರಿಸಿ ಭಾರತೀಯ ಹೆಣ್ಣುಮಕ್ಕಳು ಮನೆಯ ಮುಂದಿನ ಅಂಗಳದಲ್ಲಿ, ಹಸೆಯ ಜಾಗದಲ್ಲಿ, ಆರತಿ ತಟ್ಟೆಗಳಲ್ಲಿ ಬಿಡಿಸುವ ಚಿತ್ರಗಳು ಬಹು ಸುಂದರವಾಗಿರುತ್ತವೆ. **(ನೋಡಿ– ರಂಗವಲ್ಲಿ)**. ಇನ್ನು ವಿಶೇಷ ಸಂದರ್ಭಗಳಾದ ಉತ್ಸವಾದಿಗಳಲ್ಲಿ ಸಾಮೂಹಿಕವಾಗಿ ಜನ ಕೈಗೊಳ್ಳುವ ಅಲಂಕರಣದ ಕೆಲಸ ಗಮನಾರ್ಹವಾದುದು. ಮಂಟಪಾಲಂಕರಣ, ವಾಹನಾದಿಗಳ ಅಲಂಕರಣ, ಮೆರವಣಿಗೆಯ ಅಲಂಕರಣ, ತಳಿರು ತೋರಣಗಳು, ಅವುಗಳ ವೈವಿಧ್ಯ–ಇವು ಒಂದೊಂದರಲ್ಲೂ ಜನತೆಯ ಸದಭಿರುಚಿ ಎದ್ದು ಕಾಣುವಂತಿರುತ್ತದೆ **(ನೋಡಿ– ಉತ್ಸವಗಳು)**. ಇವೆಲ್ಲಕ್ಕಿಂತ ಭಾರತೀಯರು ಹೂಗಳನ್ನು ಬಳಸಿಕೊಂಡಿರುವ ರೀತಿ ಪ್ರಶಂಸನೀಯವಾದುದು. ಕಟ್ಟುವ ಹಾರಗಳಲ್ಲಿ ಮುಡಿಯುವ ವೈಖರಿಯಲ್ಲಿ ಚಿತ್ರ ವಿಚಿತ್ರಬಗೆಗಳನ್ನು ಕಾಣಬಹುದು. ಉದ್ಯಾನಗಾರಿಕೆಯಲ್ಲಿ ಹೂಗಿಡಗಳ ವ್ಯವಸಾಯ, ಮೇಜು ಅಲಂಕರಣದಲ್ಲಿ ಹೂಗಳ ಬಳಕೆ ಈಚೆಗೆ ಪ್ರಮುಖವಾಗುತ್ತಿವೆ. **(ನೋಡಿ–ಹೂಗಳ ಅಲಂಕರಣ)** ಭಾರತೀಯರಲ್ಲಿ ಅಲಂಕರಣದ ಪ್ರಚೋದನೆ ಲೌಕಿಕವಾಗಿರುವುದಕ್ಕಿಂತ ಹೆಚ್ಚಾಗಿ ಧಾರ್ಮಿಕವೂ ಮತೀಯವೂ ಆಗಿದೆ. ಹಬ್ಬ ಹರಿದಿನಗಳಲ್ಲಿ, ನಿತ್ಯದ ದೇವರ ಪೂಜೆಯಲ್ಲಿ, ದೇವಸ್ಥಾನಗಳಲ್ಲಿ ಅನೇಕ ಅಲಂಕರಣಗಳನ್ನು ನಾವು ಕಾಣುತ್ತೇವೆ **(ನೋಡಿ– ಹಬ್ಬ)**. ಮಠಾಧಿಪತಿಗಳ ಮತ್ತು ರಾಜಮಹಾರಾಜರ ಆಸ್ಥಾನಗಳು ಅಲಂಕಾರದ ವೈಭವಕ್ಕೆ ನಿದರ್ಶನಗಳಾಗಿವೆ. ಈಚೆಗೆ ಸಾರ್ವಜನಿಕ ವಿಶೇಷ ಸಭೆಗಳಲ್ಲಿ ನಾವಿದನ್ನು ಕಾಣಬಹುದು. ವಾಸ್ತು ಶಿಲ್ಪದಲ್ಲಿ ಹಿಂದಿಗೂ ಇಂದಿಗೂ ಖಚಿತವಾದ ವ್ಯತ್ಯಾಸ ಕಂಡು ಬರುತ್ತದೆ. ಅಲಂಕರಣ ವಾಸ್ತವಿಕತೆ ಹಾಗೂ ಉಪಯುಕ್ತತೆಗೆ ದಾರಿಮಾಡಿಕೊಟ್ಟಿರುವುದು ಇಲ್ಲಿ ಗಮನಾರ್ಹವಾದ ಅಂಶ. ನಗರಾಲಂಕರಣದಲ್ಲೂ ಈ ವಿಷಯ ಸ್ಪಷ್ಟವಾಗಿದೆ. ವ್ಯಾಪಾರೋದ್ಯಮವಂತೂ ಮನುಷ್ಯನ ಈ ಸೌಂದರ್ಯಾಭಿಲಾಷೆಯ ಮನೋಧರ್ಮವನ್ನು ಅರ್ಥಮಾಡಿಕೊಂಡು ಅದಕ್ಕೆ ಆಹಾರವಿತ್ತು ತನ್ನ ಸರಕುಗಳನ್ನು ಮಾರಾಟಮಾಡುತ್ತಿರುವ ವಿಷಯ ಎಲ್ಲರಿಗೂ ತಿಳಿದದ್ದೇ ಆಗಿದೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಅಲಂಕರಣ, ಅದರ ಶಾಸ್ತ್ರೀಯ ಅಧ್ಯಯನ ನಡೆಯುತ್ತಿದೆ.

(ಎಲ್.ಆರ್.ಪಿ.)

**ಅಲಂಕಾರದ ಎಲೆಸಸ್ಯಗಳು ಮತ್ತು ಬೇಲಿಗಳು :** ಉದ್ಯಾನವನದಲ್ಲಿ ವಿವಿಧ ಆಕಾರ, ಬಣ್ಣಗಳಲ್ಲಿ ಆಕರ್ಷಕವಾಗಿ ಎಲೆ ಬಿಡುವ ಸಸ್ಯಗಳ ಹೆಸರು ಅಲಂಕಾರದ ಎಲೆ ಸಸ್ಯಗಳು (ಆರ್ನಮೆಂಟಲ್ ಫೋಲಿಯೇಜ್ ಪ್ಲಾಂಟ್ಸ್). ಮನೆಗಳ ಸುತ್ತ ಮತ್ತು ಉದ್ಯಾನದಲ್ಲಿ ಹುಲ್ಲು ವಿವಿಧ ಭಾಗಗಳು ಮುಂತಾದುವನ್ನು ಬೇರ್ಪಡಿಸಲು ಬೆಳೆಸುವ ಸಸ್ಯಗಳ ಸಾಲುಗಳಿಗೆ ಅಲಂಕಾರದ ಬೇಲಿಗಳೆಂದು ಹೆಸರು (ಹೆಜ್ ಪ್ಲಾಂಟ್ಸ್).

ಜನಪ್ರಿಯವಾಗಿರುವ ಕೆಲವು ಅಲಂಕಾರ ಸಸ್ಯಗಳು ಹೀಗಿವೆ: ಅಗ್ಲೋನಿಮ ಅಲೋಕೇಷಿಯ, ಅಲೊಪಿಕ್ಟಸ್, ಅಲ್‌ಪಿನಿಯ, ಅಂತೂರಿಯಮ್ ಅಸ್‌ಪರ್ಯಾಗಸ್, ಕಾರ್ಡುಲೋವಿಕ, ಕ್ರೋಟನ್, ಡ್ರೆಸೀನ, ಕೇದಗೆ (ಪೆಂಡನಸ್), ಕ್ರಿಸ್‌ಟ್ಯಾಂತಸ್, ಸೈಪೆರಸ್, ಅಂತೆರಿಕಮ್ ಇತ್ಯಾದಿ.

ಅಲಂಕಾರದ ಬೇಲಿಗಳು ಸೌಂದರ್ಯ ಸಾಧನಗಳಾಗಿರುವುದರ ಜೊತೆಗೆ ಉದ್ಯಾನ ರಕ್ಷಕಗಳೂ ಆಗಿರಬೇಕು. ಮುಳ್ಳು ಪೊದೆಗಳು, ದಟ್ಟವಾಗಿ ಹರಡಿ ಬೆಳೆಯುವ ಕುರುಚಲು ಗಿಡಗಳು ಈ ಸಾಲಿಗೆ ಸೇರಿವೆ. ಇಂಥ ಸಸ್ಯಗಳನ್ನು ಸರಿಯಾಗಿ ಕತ್ತರಿಸಿ ಆಕಾರದಲ್ಲಿಟ್ಟರೆ ಬೇಲಿ ಸುಂದರವಾಗಿ ಕಾಣುವುದು. ಜನಪ್ರಿಯವಾಗಿರುವ ಕೆಲವು ಅಲಂಕಾರದ ಬೇಲಿ ಸಸ್ಯಗಳ ಹೆಸರು ಹೀಗಿವೆ : ಕ್ಲೀರೊಡೆಂಡ್ರಾನ್, ಅಕ್ಯಾಲಿಫ, ದಾಸವಾಳ, ಅಲ್ಲಮಂಡ. ಗುಲಾಬಿ, ಬೊಗನ್‌ವಿಲ್ಲ, ಟೆಕೊಮ ಇತ್ಯಾದಿ **(ನೋಡಿ– ತೋಟಗಾರಿಕೆ)**.

(ಡಿ.ಎಂ.; ಎಂ.ಎಚ್.ಎಂ.)

**ಅಲಂಕಾರ ಶಾಸ್ತ್ರ :** ಸಂಸ್ಕೃತದಲ್ಲಿ ಸಾಹಿತ್ಯಮೀಮಾಂಸಾಶಾಸ್ತ್ರಕ್ಕೆ ಈ ಹೆಸರಿದೆ. ಇಂದು ಅಲಂಕಾರವೆಂದರೆ ಅನುಪ್ರಾಸ, ಉಪಮಾದಿಗಳೆಂಬ ಸಂಕುಚಿತಾರ್ಥ ರೂಢವಾಗಿದೆ. ಆದರೆ ಹಿಂದೆ ರಸ, ರೀತಿ, ಗುಣ, ವಕ್ರೋಕ್ತಿ ಮುಂತಾದ ಪ್ರಕ್ರಿಯೆಗಳನ್ನೆಲ್ಲ ತನ್ನಲ್ಲಿ ಅಳವಡಿಸಿಕೊಳ್ಳುವಷ್ಟು ವಿಶಾಲಾರ್ಥ ಅಲಂಕಾರ ಶಬ್ದಕ್ಕಿದ್ದಂತೆ ತೋರುತ್ತದೆ. ಭಾಮಹನಿಂದ ಹಿಡಿದು ರುದ್ರಟನವರೆಗೆ ಲೇಖಕರೆಲ್ಲರೂ ಗ್ರಂಥಗಳ ಹೆಸರಿನಲ್ಲೇ ಅಲಂಕಾರವನ್ನು ಪ್ರಾಯಃ ಕೂಡಿಸುತ್ತಾರೆ. ಆದರೆ ಅಲ್ಲಿ ಕೇವಲ ಶಬ್ದಾಲಂಕಾರಗಳ ಪಟ್ಟಿ ಇರುವುದಿಲ್ಲ. ಸಾಹಿತ್ಯದ ಎಲ್ಲ ಅಂಶಗಳ ಚರ್ಚೆಯೂ ಇರುತ್ತದೆ. ಇದರಂತೆ ಕಾವ್ಯಲಕ್ಷಣ, ಕ್ರಿಯಾಕಲ್ಪ ಎಂಬ ಹೆಸರುಗಳೂ ಈ ಶಾಸ್ತ್ರಕ್ಕೆ ಬಹಳ ಪೂರ್ವದಲ್ಲಿ ಇದ್ದುವು.

ಅಲಂಕಾರದ ವಿಸ್ತೃತಾರ್ಥವೇನು? ಕಾವ್ಯಶೋಭಕರಗಳಾದ ಧರ್ಮಗಳು ಎಂಬುದು ದಂಡಿಯ ಉತ್ತರವಾದರೆ, ಸೌಂದರ್ಯವೇ ಅಲಂಕಾರ ಎನ್ನುವುದು ವಾಮನನ ಸೂತ್ರ. ಇಷ್ಟಾಭಿಧೇಯವಕ್ರೋಕ್ತಿರಿಷ್ಟಾ ವಾಚಾಮಲಂಕೃತಿಃ ಎನ್ನುವ ಭಾಮಹನ ಅಭಿಪ್ರಾಯವಾದರೂ ಇದೇ. ಈ ವ್ಯಾಪಕಾರ್ಥದಲ್ಲಿ ಮಾತ್ರ ದಂಡಿ ಹೇಳುವಂತೆ ಸಂಧ್ಯಂಗ, ವೃತ್ತ್ಯಂಗ, ಲಕ್ಷಣ ಮುಂತಾದ ನಾಟ್ಯಶಾಸ್ತ್ರ ಪ್ರಕ್ರಿಯೆಗಳೆಲ್ಲ ಇಲ್ಲಿ ಅಲಂಕಾರವೆನಿಸಲು ಶಕ್ಯ. ಹಾಗೆಯೇ ಗುಣ, ರಸಗಳೂ ಅಲಂಕಾರವೆನಿಸಲು ಸಾಧ್ಯ. ಆದರೆ ಇಂದಿನ ಸಂಕುಚಿತಾರ್ಥದಲ್ಲಿ ಅಶಕ್ಯ. ಆದ್ದರಿಂದ ಪ್ರಾಚೀನ ಆಲಂಕಾರಿಕರು ಕಾವ್ಯದ ಆತ್ಮ ಅಲಂಕಾರವೆಂದರೆ, ಚಾರುತ್ವ ಪ್ರತೀತಿ ಕಾವ್ಯದ ಆತ್ಮವೆಂದೇ ಅವರ ಅಭಿಪ್ರಾಯ ಹೊರತು, ವಿಶಿಷ್ಟ ಶಬ್ದಾರ್ಥಾಲಂಕಾರಗಳೆಂದಲ್ಲ. ಈ ಮಾತನ್ನು ಅಭಿನವಗುಪ್ತ ಕೂಡ ಒಪ್ಪುತ್ತಾನೆ (ಯಚ್ಚೋಕ್ತಮ್–ಚಾರುತ್ವಪ್ರತೀತಿಸ್ತರ್ಹಿ ಕಾವ್ಯಸ್ಯಾತ್ಮಾಸ್ಯಾದಿತಿ, ತದಂಗೀಕುರ್ಮ ಏವ ನಾಸ್ತಿ ಖಲ್ವಯಂ ವಿವಾದಃ). ಕುಂತಕನ ವಕ್ರೋಕ್ತಿಜೀವಿತದ ನಾಮಾಂತರ ಅಲಂಕಾರ. ಈ ವಿಶಾಲಾರ್ಥದಲ್ಲಿಯೇ ನಾಟ್ಯಾಲಂಕಾರ, ಪಾಠ್ಯಾಲಂಕಾರ, ಸತ್ವಾಲಂಕಾರ, ವರ್ಣಾಲಂಕಾರ ಮುಂತಾದ ಶಬ್ದಪ್ರಯೋಗಗಳು ನಾಟ್ಯಶಾಸ್ತ್ರದಲ್ಲಿ ಬಂದಿವೆ. ಹಾಗೆಯೇ ಅಲ್ಲಿ ಹೇಳಿರುವ 36 ಲಕ್ಷಣಗಳು ಮುಂದೆ ಅಲಂಕಾರಗಳಾಗಿ ಬೆಳೆದಂತೆ ತೋರುತ್ತದೆ. ಅಲಂಕಾರಗಳ ವಿಕಲ್ಪನೆಗೆ ಬೀಜವನ್ನು ಪೂರ್ವಾಚಾರ್ಯರೇ ತಿಳಿಸಿದ್ದಾರೆ ಎನ್ನುವ ದಂಡಿಯ ಮಾತು ಲಕ್ಷಣಗಳನ್ನೇ ಕುರಿತಂತಿದೆ.

ಭರತನಿಗೂ ಪೂರ್ವದ ಯಾಸ್ಕ, ಪಾಣಿನಿಗಳೇ ಉಪಮೆಯ ಪರಿಚಯವನ್ನು ತೋರಿಸುತ್ತಾರೆ. ಬ್ರಹ್ಮಸೂತ್ರದಲ್ಲಿ ರೂಪಕದ ಉಲ್ಲೇಖವಿದೆ. ಮೀಮಾಂಸಕರು ವೇದಮಂತ್ರಗಳ ವಿವರಣೆಯಲ್ಲಿ ಹೇತು, ನಿರ್ವಚನ, ನಿಂದಾ, ಪ್ರಶಂಸಾ, ಸಂಶಯ, ವಿಧಿ, ಮುಂತಾದ ಲಕ್ಷಣಗಳನ್ನು ಹೇಳುತ್ತಾರೆ (ತಂತ್ರವಾರ್ತಿಕ). ಇವೇ ಕಾವ್ಯಲಕ್ಷಣಗಳ ಕಲ್ಪನೆಗೆ ಸ್ಫೂರ್ತಿಯನ್ನಿತ್ತಿರಬಹುದು. ಸಂದೇಹ, ದೃಷ್ಟಾಂತವೆಂಬ ಲಕ್ಷಣಗಳು, ಸಸಂದೇಹ, ದೃಷ್ಟಾಂತವೆಂಬ ಅಲಂಕಾರಗಳಾಗಿ ಬೆಳೆದಂತೆ, ಉಳಿದವೂ ನಾಮಾಂತರದಿಂದ ವಿಕಾಸಗೊಂಡವೆನ್ನಬಹುದು. ಈ ಶಬ್ದಾರ್ಥ ಮಾತ್ರ ಶೋಭಾಕಾರಕಗಳಾದ ಬಾಹ್ಯಧರ್ಮಗಳು ಸಂಕುಚಿತಾರ್ಥದ ಅಲಂಕಾರಗಳೇ ಸರಿ. ರಮಣಿ ಬಾಹ್ಯವಾದ ಹಾರದಿಂದ ಅಲಂಕೃತಳಾಗುವಂತೆ, ಅವಳ ವರ್ಣನೆ ಕವಿಬುದ್ಧಿಯಿಂದ ಸಮರ್ಪಿತವಾದ ಚಂದ್ರಾದಿ ಉಪಮಾನಗಳಿಂದಲೂ ಅಲಂಕೃತವಾಗುತ್ತದೆ. ಅನುಪ್ರಾಸಾದಿಗಳಿಂದ ಶಬ್ದ ಅಲಂಕೃತವಾಗುತ್ತದೆ. ಹೀಗೆ ಅಲಂಕಾರಗಳಲ್ಲಿ ಮುಖ್ಯವಾಗಿ ಶಬ್ದಾಲಂಕಾರ **(ನೋಡಿ)**, ಅರ್ಥಾಲಂಕಾರಗಳೆಂಬ **(ನೋಡಿ– ಅರ್ಥಾಲಂಕಾರ)** ಎರಡು ಭೇದಗಳಿವೆ. ಶಬ್ದಾರ್ಥಗಳು ರಸಾಭಿವ್ಯಕ್ತಿಪರವಾದಾಗ ತೋರುವ ಧರ್ಮಗಳೇ ಶಬ್ದಾರ್ಥ ಗುಣಗಳು. ಹೀಗೆ ರಸೋಚಿತ ಗುಣಾಲಂಕಾರಗಳಿಂದ ಕೂಡಿರುವುದೇ ಕಾವ್ಯದ ವೈಶಿಷ್ಟ್ಯ. ಗುಣಾಲಂಕಾರಗಳಿಗೆ ಕಾವ್ಯದೊಡನೆ ಇರುವ ಸಂಬಂಧದಲ್ಲಿ ವಾಮನ ಒಪ್ಪಿದರೆ, ಉದ್ಭಟ ಅದನ್ನೂ ಒಪ್ಪುವುದಿಲ್ಲ. ದಂಡಿ ರಸವತ್ತೆಯನ್ನೇ ಮಾಧುರ್ಯ ಗುಣವೆಂದಿರುವುದು ಗಮನಾರ್ಹ. ವಾಮನನಾದರೂ ರಸವನ್ನು ಕಾಂತಿಗುಣವೆಂದೇ ಬರೆಯುತ್ತಾನೆ. ಸಕಲಾಲಂಕಾರಗಳಿಗೂ ವಕ್ರೋಕ್ತಿ ಅಥವಾ ಅತಿಶಯವೇ ಮೂಲವೆಂದು ಹೇಳುವ ಭಾಮಹ ಅಲ್ಲಿಗೇ ನಿಲ್ಲದೆ, ಸೈಷಾ ಸರ್ವತ್ರ ವಕ್ರೋಕ್ತಿಃ, ಅನಯಾರ್ಥೋ ವಿಭಾವ್ಯತೇ ಎಂದು ಸ್ಪಷ್ಟವಾಗಿ ಅರ್ಥರಸಕ್ಕೆ ವಿಭಾವತ್ವವನ್ನು ತಳೆಯುವುದನ್ನು ಕೂಡ

ನಿರ್ದೇಶಿಸಿದ್ದಾನೆ. ರುದ್ರಟನಂತೂ ವಿರಸವನ್ನು ದೋಷವೆಂದೇ ಬಗೆಯುತ್ತಾನೆ. ಇದನ್ನೆಲ್ಲ ಗಮನಿಸಿದರೆ, ಇವರು ರಸಾದಿಗಳನ್ನು ಕೂಡ ಅಲಂಕಾರವೆಂದಾಗ ವಿಶಾಲಾರ್ಥದಲ್ಲಿ ಮಾತ್ರ ಹಾಗೆನ್ನುವರೇ ಹೊರತು ಸಂಕುಚಿತಾರ್ಥದಲ್ಲಲ್ಲವೆಂದು ತಿಳಿದುಬರುತ್ತದೆ.

ಶಬ್ದಾರ್ಥಾಲಂಕಾರಗಳ ಸಂಖ್ಯೆಯ ಬೆಳವಣಿಗೆಯ ಇತಿಹಾಸ ಭಾರತೀಯರ ಭೇದಪ್ರಭೇದ ಮೋಹವನ್ನು ತೋರಿಸುತ್ತದೆ. ಭರತನಲ್ಲಿದ್ದ ನಾಲ್ಕೇ ಅಲಂಕಾರಗಳು ಅಗ್ನಿ ಪುರಾಣದಲ್ಲಿ 16, ಭಾಮಹನಲ್ಲಿ 38, ದಂಡಿಯಲ್ಲಿ 37, ಉದ್ಭಟನಲ್ಲಿ 41, ವಾಮನನಲ್ಲಿ 31, ರುದ್ರಟನಲ್ಲಿ 55, ಭೋಜನಲ್ಲಿ 54, ಮಮ್ಮಟನಲ್ಲಿ 69, ರುಯ್ಯಕನಲ್ಲಿ 81, ವಿಶ್ವನಾಥನಲ್ಲಿ 89, ಅಪ್ಪಯ್ಯ ದೀಕ್ಷಿತನಲ್ಲಿ 100 ಕ್ಕಿಂತ ಹೆಚ್ಚಾಗಿ ವಿಸ್ತಾರಗೊಳ್ಳುತ್ತವೆ. ಇವುಗಳ ಲಕ್ಷಣ-ಲಕ್ಷ್ಯ ಸಮನ್ವಯ, ವಿಭಾಗ ನಿರ್ಣಯಗಳಿಗೆ ಇಲ್ಲಿ ಎಡೆಯಿಲ್ಲ.

ಅಲಂಕಾರಗಳನ್ನೆಲ್ಲ ಕೆಲವೊಂದು ಮುಖ್ಯ ತತ್ತ್ವಗಳ ಆಧಾರದಿಂದ ವರ್ಗೀಕರಣ ಮಾಡಿದ ಕೀರ್ತಿ ರುಯ್ಯಕನದು. ಇವನ ಪ್ರಕಾರ-ಸಾದೃಶ್ಯ, ವಿರೋಧ, ಶೃಂಖಲಾ, ನ್ಯಾಯ ಕಾವ್ಯನ್ಯಾಯ, ಲೋಕನ್ಯಾಯ, ಗೂಢಾರ್ಥ-ಇವು ಮುಖ್ಯ ವಿಭಾಜಕ ತತ್ತ್ವಗಳು. ಭೇದ, ಅಭೇದ, ಆರೋಪ, ಅಧ್ಯವಸಾಯ, ವಿಶೇಷ್ಯ-ವಿಶೇಷಣಭಾವ ಪದ-ವಾಕ್ಯಗತತ್ತ್ವ-ಇತ್ಯಾದಿಗಳು ಪ್ರಭೇದಗಳಿಗೆ ಕಾರಕ ಧರ್ಮಗಳು.

ರಸೌಚಿತ್ಯದ ದೃಷ್ಟಿಯನ್ನು ಬಿಟ್ಟು, ಕೇವಲ ಚಕಿತಗೊಳಿಸುವ ಉದ್ದೇಶದಿಂದ, ತಮ್ಮ ಶಕ್ತಿಪ್ರದರ್ಶನಕ್ಕಾಗಿ ಬರೆಯುವ ಅಲಂಕಾರಗಳಿಗೆ ಕಾವ್ಯದಲ್ಲಿ ಹೆಚ್ಚಿನ ಸ್ಥಾನವಿಲ್ಲವೆಂದು ಸ್ಪಷ್ಟವಾಗಿ ಧ್ವನಿವಾದಿಗಳು ತೋರಿಸಿದರು. ಇದಕ್ಕೆ ಚಿತ್ರವೆಂಬ ಹೆಸರನ್ನು ಕೊಟ್ಟು ಅಧಮಕಾವ್ಯವೆಂದರೆ ಇದೇ ಎಂದು ತೀರ್ಮಾನಿಸಿದರು. ದುಷ್ಕರ ಯಮಕಾದಿ ಚಮತ್ಕಾರ ಪ್ರದರ್ಶನ ಕಾವ್ಯದ ಗುರಿಯಲ್ಲವೆಂಬುದನ್ನು ಸಾರಿದರು. ಇದು ತಪ್ಪುದಾರಿ ಹಿಡಿದ ಕವಿಗಳ ಮಾರ್ಗದರ್ಶನಕ್ಕೆಂದು ನುಡಿದ ಮಾತು; ಕಾವ್ಯದಲ್ಲಿ ವಿಶಾಲಾರ್ಥದ ಉಚಿತಾಲಂಕಾರಕ್ಕೆ ಸ್ಥಾನವಿಲ್ಲವೆಂದು ಹೇಳಿದ ಮಾತಲ್ಲ. ಕಾವ್ಯದಲ್ಲಿ ಸೌಂದರ್ಯಮಯವಾದ ಶಬ್ದಾರ್ಥ ಸಾಹಿತ್ಯದ ಅಗತ್ಯವನ್ನು ಭಾರತೀಯ ಲಾಕ್ಷಣಿಕರಾರೂ ಅಲ್ಲಗಳೆದಿಲ್ಲ. ಸೌಂದರ್ಯಕ್ಕೆ ಪರ್ಯಾಯವಾದ ಅಲಂಕಾರ ಕಾವ್ಯದ ಆತ್ಮವೇ ಸರಿ. ವ್ಯಂಗ್ಯಾರ್ಥ ಸ್ಪರ್ಶವಿದ್ದಾಗಲೂ ಅಲಂಕಾರದ ಚಮತ್ಕಾರಕ್ಕೆ ಕುಂದಿಲ್ಲ. ವ್ಯಂಗ್ಯಾರ್ಥಶೂನ್ಯವಾದ ಅಲಂಕಾರ ಮಾತ್ರ ನಿಷ್ಪ್ರಯೋಜಕ; ಅದು ಅಲಂಕಾರವೇ ಅಲ್ಲ. (ನೋಡಿ ಭಾರತೀಯ ಕಾವ್ಯಮೀಮಾಂಸೆ)

**(ಕೆ.ಕೆ.)**

**ಅಲಂಕಾರ ಶಿಲೆಗಳು :** ವಿಶಿಷ್ಟವಾದ ರಚನೆ, ಬಣ್ಣ ಇರುವ ಉತ್ತಮ ಕೆತ್ತನೆ ಕೆಲಸಕ್ಕೆ ಒಳಗಾಗಿ ಕಟ್ಟಡದ ಸೌಂದರ್ಯ ವರ್ಧಿಸುವ ಕಲ್ಲುಗಳು. ಸುಂದರ ವಿಗ್ರಹಗಳು ಮತ್ತು ಇತರ ಅಲಂಕಾರ ಸಾಧನಗಳನ್ನು ಕಡೆಯುವುದರಲ್ಲಿಯೂ ಬಳಸುವರು.

ಭಾರತದಲ್ಲೂ ಕರ್ನಾಟಕದಲ್ಲೂ ಈ ವರ್ಗದ ಅನೇಕ ಮನಮೋಹಕ ಶಿಲೆಗಳು ಸಿಗುತ್ತವೆ.

ದೆಹಲಿ, ಕರ್ನಾಟಕ ಈ ಪ್ರಾಂತ್ಯಗಳಲ್ಲಿ ಗತಕಾಲದ ಅನೇಕ ಭವ್ಯಸೌಧಗಳನ್ನು ವಿಂಧ್ಯಶಿಲಾಸ್ತೋಮಕ್ಕೆ ಸೇರಿದ ಒಂದು ಬಗೆಯ ಕೆಂಪುಬಣ್ಣದ ಜಲಜಶಿಲೆಯಿಂದ ನಿರ್ಮಿಸಿದ್ದಾರೆ. ನೂರಾರು ವರ್ಷಗಳಾದರೂ ಈ ಸೌಧಗಳು ಇಂದಿಗೂ ಭವ್ಯವಾಗಿ ರಾರಾಜಿಸುತ್ತಿವೆ. ಅಲ್ಲದೆ ಈಚೆಗೆ ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾದ ನವದೆಹಲಿಯ ಅನೇಕ ಭವ್ಯಸೌಧಗಳ ನಿರ್ಮಾಣಕ್ಕೂ ಈ ಕೆಂಪು ಮರಳುಶಿಲೆಯನ್ನೇ ಬಳಸಿದ್ದಾರೆ. ಇದು ಸಮಕಣ ರಚನೆಯನ್ನು ಹೊಂದಿರುವುದೆ ಅಲ್ಲದೆ ಶಿಲ್ಪಿಯ ಚಾಣಕ್ಕೆ ಸುಲಭವಾಗಿ ಬಗ್ಗುವ ವಿಶೇಷ ಗುಣವನ್ನು ಹೊಂದಿದೆ. ಇವುಗಳಲ್ಲಿ ಕೆಂಬಣ್ಣದ ಜೊತೆಗೆ ಬಿಳಿ, ತಿಳಿಹಳದಿ, ಊದಾ ಮುಂತಾದ ಬಣ್ಣಗಳೂ ಉಂಟು. ಇವು ಬಹು ನಾಜೂಕಾದ ಕೆತ್ತನೆ ಕೆಲಸಕ್ಕೂ (ಫ಼ಿಲಿಗ್ರೀ ವರ್ಕ್) ಹೆಸರುವಾಸಿ.

ಇದಕ್ಕೂ ಮಿಗಿಲಾದ ಸುಂದರಶಿಲೆ ಎಂದರೆ ಅಮೃತಶಿಲೆ-ಹಾಲ್ಗಲ್ಲು. ಇದು ಬಹುಮಟ್ಟಿಗೆ ಹಾಲಿನಂತೆ ಬಿಳುಪಾಗಿದ್ದರೂ ಇದರಲ್ಲಿ ನಾನಾ ವರ್ಣವೈವಿಧ್ಯಗಳಿವೆ. ತಿಳಿಹಸಿರು, ತಿಳಿಗೆಂಪು, ಕೃಷ್ಣವರ್ಣ, ಬಣ್ಣಬಣ್ಣದ ಚಿಕ್ಕೆಗಳು ಇತ್ಯಾದಿ. ಜಲಜ ಶಿಲಾವರ್ಗದ ಸುಣ್ಣಶಿಲೆ ಹೆಚ್ಚಿನ ಶಾಖ, ಒತ್ತಡಗಳ ಪ್ರಭಾವಕ್ಕೆ ಒಳಗಾಗಿ ಅಮೃತಶಿಲೆಯಾಗಿ ಮಾರ್ಪಡುತ್ತದೆ. ಹೀಗಾಗಿ ಇದೊಂದು ರೂಪಾಂತರಿತಶಿಲೆ. ಕಣರಚನೆ ಒಂದೇಸಮನಾಗಿರುವ ಕಾರಣ ಇದು ಶಿಲ್ಪಕ್ಕೆ, ಕೆತ್ತನೆಗೆ ಬಹು ಒಪ್ಪವಾದ ಶಿಲೆ. ಅದರಲ್ಲೂ ಕಣಗಳ ಗಾತ್ರ ಸೂಕ್ಷ್ಮವಾಗಿದ್ದಲ್ಲಿ ವಿಗ್ರಹಗಳನ್ನು ಕಡೆಯುವುದಕ್ಕೆ ಬಹು ಉತ್ತಮ. ನಮ್ಮ ದೇಶದ ಅಮೃತಶಿಲೆ ಅರಾವಳಿ ಶಿಲಾಸ್ತೋಮಕ್ಕೆ ಸೇರಿದ್ದು ಜೋಧಪುರ ಬಳಿಯ ಮಕ್ರಾನ, ಅಜ್ಮೀರ್‌ನ ಖಾರ್ವಾ, ಜೈಪುರದ ಮಾಂಡ್ಲ ಮತ್ತು ಭೈನ್‌ಸ್ಲಾನ-ಈ ಪ್ರದೇಶಗಳಲ್ಲಿ ಸಿಗುತ್ತದೆ. ಜಬ್ಬಲ್‌ಪುರದ ಬಳಿ ನರ್ಮದಾನದಿ ಹಾದು ಹೋಗುವ ಇಕ್ಕೆಲಗಳಲ್ಲೂ ಬಣ್ಣಬಣ್ಣದ ಮನಮೋಹಕ ಅಮೃತಶಿಲೆಗಳಿವೆ. ಜಗತ್ಪ್ರಸಿದ್ಧವಾದ ಸುಂದರ ತಾಜಮಹಲ್, ಅಬುವಿನ ಜೈನದೇವಾಲಯಗಳು, ಇತ್ತೀಚಿನ ಪಿಲಾನಿಯ ಸರಸ್ವತಿ ಮಂದಿರ ಮತ್ತು ದಯಾಲ್‌ಬಾಗ್ ಬಳಿಯ ರಾಧಾ ಸ್ವಾಮಿಮಂದಿರ ಮುಂತಾದವುಗಳ ನಿರ್ಮಾಣದಲ್ಲೂ ಅಮೃತಶಿಲೆಯನ್ನು ವಿಶೇಷವಾಗಿ ಬಳಸಿ ಸುಂದರ ಕೆತ್ತನೆಗಳನ್ನು ಮೂಡಿಸಿದ್ದಾರೆ.

**ಕರ್ನಾಟಕದ ಅಲಂಕರಣ ಶಿಲೆಗಳು:** ಕರ್ನಾಟಕ ಅಮೂಲ್ಯ ಖನಿಜಸಂಪನ್ಮೂಲಗಳನ್ನು ಹೊಂದಿದೆ. ಖನಿಜಗಳನ್ನಾಧರಿಸಿದ ಕೈಗಾರಿಕಾ ಪ್ರಗತಿಯಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. ಲೋಹ ಖನಿಜಗಳಂತೆಯೇ ಅಲಂಕರಣ ಶಿಲೆಗಳೂ ರಾಜ್ಯದ ಬೊಕ್ಕಸಕ್ಕೆ ಹೇರಳ ಆದಾಯ ತರುವ ಸಂಪನ್ಮೂಲವೆನ್ನಿಸಿವೆ. ನಮ್ಮ ನಾಡಿನ ಶಿಲಾ ಬಳಕೆಗೆ ಸುದೀರ್ಘವಾದ ಇತಿಹಾಸವಿದೆ. ಪ್ರಾಚೀನ ಕಾಲದಿಂದಲೂ ಕಟ್ಟಡಗಳಿಗಾಗಿ ವಿಶೇಷವಾಗಿ ಅಲಂಕರಣ ವಸ್ತುವಾಗಿ ವೈವಿಧ್ಯಮಯ ಶಿಲೆಗಳನ್ನು ಉಪಯೋಗಿಸಿರುವುದನ್ನು ಕಾಣಬಹುದು. ಅದರಲ್ಲೂ ಗ್ರಾ ನೈಟ್ ಮತ್ತು ಕರೀಕಲ್ಲಿನ ಹೇರಳ ಸಂಪನ್ಮೂಲ ನಮ್ಮ ನಾಡಿನಲ್ಲಿದೆ. ಅವುಗಳ ಬೇಡಿಕೆ ಮತ್ತು ಬಳಕೆ ದಿನೇದಿನೇ ಹೆಚ್ಚುತ್ತಿದೆ.

ಅಲಂಕರಣ ಶಿಲೆಗಳನ್ನು ವಿಶೇಷವಾಗಿ ಬಳಸಿದ ನುರಿತ ಶಿಲ್ಪಿಗಳು ಅದ್ಭುತ ಸ್ಮಾರಕ, ದೇವಾಲಯ, ಮೂರ್ತಿಗಳನ್ನು ನಿರ್ಮಿಸಿ ವಿಶ್ವದ ಗಮನ ಸೆಳೆದಿದ್ದಾರೆ. ಬೇಲೂರು, ಹಳೇಬೀಡುಗಳ ಹೊಯ್ಸಳರ ಕಲಾಕೃತಿಗಳು, ಶ್ರವಣಬೆಳಗೊಳದ ವಿಶ್ವವಿಖ್ಯಾತ ಬಾಹುಬಲಿಯ ವಿಗ್ರಹ, ಬೆಂಗಳೂರಿನ ಭವ್ಯ ವಿಧಾನಸೌಧ, ಹಂಪೆಯ ಸುಂದರ ಶಿಲಾರಥ ಮುಂತಾದವು ವಾಸ್ತುಶಿಲ್ಪದ ಉತ್ಕೃಷ್ಟ ಮಾದರಿಗಳು ಎನ್ನಿಸಿವೆ.

ನಾಡಿನುದ್ದಗಲಕ್ಕೂ ಕಂಡುಬರುವ ಬುರುಜುಗಳು, ದೇವಸ್ಥಾನ, ಶಿಲಾಶಾಸನ, ಕಲ್ಲುಕಂಬ, ಗರುಡಗಂಬ, ಮಾಸ್ತಿಕಲ್ಲು, ಯುದ್ಧಸ್ಮಾರಕಗಳು ಜೊತೆಗೆ ಭಿತ್ತಿಗಳ ಮೇಲೆ ಮೂಡಿಸಿದ ಕಲ್ಲು ಹೂಬಳ್ಳಿ, ದೇವತೆ, ಪ್ರಾಣಿಗಳು ಹೀಗೆ ಶಿಲೆಯಲ್ಲಿ ವಾಸ್ತುಶಿಲ್ಪ ಅರಳಿರುವುದನ್ನು ಎತ್ತಿ ತೋರಿಸುತ್ತದೆ.

ಕರ್ನಾಟಕದಲ್ಲಿ ಬೆಟ್ಟಗುಡ್ಡಗಳಲ್ಲಿ ಮತ್ತು ನೆಲ ಮಟ್ಟದಲ್ಲಿ ವೈವಿಧ್ಯಮಯ ಶಿಲಾ ಸಂಪನ್ಮೂಲ ಅಡಗಿದೆ. ಇವುಗಳಲ್ಲಿ ಅಗ್ನಿಶಿಲೆಗಳಾದ ಗ್ರಾ ನೈಟ್, ಡಾಲೆರೈಟ್, ಬಸಾಲ್ಟ್ ಬಹು ಮುಖ್ಯವಾದ ಅಲಂಕರಣ ಶಿಲೆಗಳು. ಇವಲ್ಲದೆ ಬೆಣಚುಕಲ್ಲು, ಬಳಪದ ಕಲ್ಲು, ಮರಳುಗಲ್ಲು, ಪದರುಶಿಲೆ, ಸುಣ್ಣಶಿಲೆ ಹಾಗೂ ಅನೇಕ ರೂಪಾಂತರಿತ ಶಿಲೆಗಳು ಶಿಲಾ ಉದ್ಯಮದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿವೆ. ಅಖಂಡವಾಗಿ ದೊರೆಯುವ ವೈವಿಧ್ಯಮಯ ಶಿಲೆಗಳನ್ನು ಗುರುತಿಸಿ ಸರ್ಕಾರದಿಂದ ಗುತ್ತಿಗೆ ಪಡೆದು ಕಲ್ಲು ಗಣಿಗಾರಿಕೆ ಮಾಡುತ್ತಿರುವ ಖಾಸಗಿ ಸಂಸ್ಥೆಗಳು ನಾಡಿನಾದ್ಯಂತ ಕಾರ್ಯಾಚರಣೆ ಮಾಡುತ್ತಿವೆ. ಉತ್ತಮ ತಂತ್ರಜ್ಞಾನದ ಫಲವಾಗಿ ಇಂದು ಯಾಂತ್ರೀಕರಣವಾಗಿರುವ ಶಿಲಾ ಗಣಿಗಾರಿಕೆ ಉದ್ಯಮದಲ್ಲಿ ಹೆಚ್ಚು ಪ್ರಗತಿ ಸಾಧಿಸಿದೆ. ಶಿಲೆಗಳ ಸ್ವಭಾವ, ಅವುಗಳಲ್ಲಿರುವ ಸೀಳು ಮುಂತಾದವುಗಳನ್ನಾಧರಿಸಿ ಹಲಗೆ, ಫಲಕ, ಘನಾಕೃತಿಗಳಾಗಿ ಕಲ್ಲನ್ನು ಗಣಿಯಿಂದ ತೆಗೆಯಲಾಗುತ್ತದೆ. ವಜ್ರದ ತುದಿ, ಬ್ಲೇಡು ಮುಂತಾದ ಸಾಧನಗಳಿಂದ ಶಿಲೆಯನ್ನು ಕೊರೆದು ಅಪೇಕ್ಷಿತ ರೂಪಕ್ಕೆ ತಂದು ಕತ್ತರಿಸಿ ಮೆರಗು ಕೊಟ್ಟು ಕಲ್ಲನ್ನು ಆಕರ್ಷಕ ಕಲ್ಲನ್ನಾಗಿ ಮಾಡುವ ಈ ಉದ್ಯಮ ಹಲವು ಕೋಟಿ ರೂಪಾಯಿಗಳ ಬಂಡವಾಳದೊಂದಿಗೆ ಬೆಳೆಯುತ್ತಿದೆ.

ಅಲಂಕರಣ ಶಿಲೆಯಿಂದಾಗಿ ಗ್ರಾನೈಟ್ ಹೆಚ್ಚು ಪ್ರಾಮುಖ್ಯ ಗಳಿಸಿದೆ. ಈ ಶಿಲೆಯಲ್ಲಿನ ಖನಿಜಗಳ ಗಾತ್ರ, ಕಣಬಂಧ, ಆಕಾರ, ಬಣ್ಣ, ರಚನೆ ರಾಸಾಯನಿಕ ಸಂಯೋಜನೆ ಅಲಂಕರಣ ಶಿಲೆಯಾಗಲು ಹೆಚ್ಚು ಯುಕ್ತವೆನಿಸಿದೆ. ಅತ್ಯುತ್ತಮ ಬಣ್ಣ ಹೊಂದಿದ್ದೂ ಸೂಕ್ಷ್ಮ ಬಿರುಕುಗಳು ಮೂಡಿದ್ದರೆ, ಅಂತಹ ಶಿಲೆಯ ಮೌಲ್ಯ ಕಡಿಮೆ. ಅಲ್ಲದೆ ಪೈರೆಟ್, ಮ್ಯಾಗ್ನಟೈಟ್, ಸ್ಫೀನ್, ಟೂರ್ಮಲೀನ್ ಮುಂತಾದ ಖನಿಜಗಳಿದ್ದಲ್ಲಿ ಬೇಗ ಶಿಥಿಲವಾಗಿ ಶಿಲೆಯ ಗುಣಮಟ್ಟವನ್ನು ಕುಂದಿಸುತ್ತವೆ. ಸಾಮಾನ್ಯವಾಗಿ ಏಕರೂಪ ಬಣ್ಣವಿರುವ ಹೆಚ್ಚು ವ್ಯಾಪ್ತಿ ಇರುವ ಶಿಲೆಗಳು ಆಲಂಕರಣ ಶಿಲೆಯಾಗಿ ಹೆಚ್ಚು ಬೇಡಿಕೆಗಳಿಸುತ್ತವೆ. ಗ್ರಾನೈಟ್ ಶಿಲೆಯನ್ನು ಸಾಧಾರಣವಾಗಿ ಮೀಟರಿನ ಅಳತೆಗಲ್ಲನ್ನಾಗಿ ಗಣಿಯಿಂದ ತೆಗೆಯುತ್ತಾರೆ. ಇಂದಿನ ದರದಲ್ಲಿ ಅತ್ಯುತ್ತಮ ಗುಣದ ಘನಾಕೃತಿಯ ಅಳತೆಗಲ್ಲು 1500 ಡಾಲರಿಗೂ ಹೆಚ್ಚು ಬೆಲೆ ಹೊಂದಿದೆ. ವಿಶೇಷವಾಗಿ ಹೊರ ದೇಶಗಳಲ್ಲಿ ಅಲಂಕರಣ ಶಿಲೆಗಳ ಬೇಡಿಕೆ ಹೆಚ್ಚಾಗುತ್ತಿದೆ. ಅಲಂಕರಣ ಶಿಲೆಯ ಉದ್ಯಮ ಈ ದಿನಗಳಲ್ಲಿ ವಾರ್ಷಿಕ ಸಾವಿರಾರು ಕೋಟಿ ರೂಪಾಯಿಗೂ ಹೆಚ್ಚಿನ ವಿದೇಶೀ ವಿನಿಮಯ ಗಳಿಸುತ್ತಿದೆ. ರಾಜ್ಯದಲ್ಲಿ ಆಲಂಕಾರಿಕ ಶಿಲೆಗಳು ವಿಸ್ತಾರವಾಗಿ ಹರಡಿದ್ದರೂ ಅವುಗಳನ್ನು ಸೂಕ್ತವಾಗಿ ಪತ್ತೆ ಹಚ್ಚಿ, ಉತ್ಪಾದನೆಯ ಕಾರ್ಯಾಚರಣೆ ಮಾಡುತ್ತಿರುವುದು ಕೇವಲ ಸೀಮಿತ ಪ್ರದೇಶದಲ್ಲಿ ಮಾತ್ರ. ಭೂಮಿಯಲ್ಲಿ ಅವುಗಳ ವ್ಯಾಪ್ತಿಯನ್ನು ವೈಜ್ಞಾನಿಕವಾಗಿ ಅರಿತು ಸಂಪನ್ಮೂಲದ ಪ್ರಮಾಣವನ್ನು ನಿಖರವಾಗಿ ಅಳೆದು ಸ್ಪಷ್ಟವಾದ ಜಾಡುಗಳನ್ನು ಇನ್ನೂ ಗುರುತಿಸಬೇಕಾಗಿದೆ. ಆದ್ದರಿಂದ ಗ್ರಾ ನೈಟ್ ಗಣಿಗಾರಿಕೆ ಇನ್ನೂ ಹೆಚ್ಚಿನ ಯಶಸ್ಸು ಸಾಧಿಸಬೇಕಾಗಿದೆ. ಸದ್ಯದಲ್ಲಿ ಈ ಉದ್ಯಮ ಖಾಸಗಿಯವರ ಕೈಯಲ್ಲಿದ್ದು ಸಹಸ್ರಾರು ಮಂದಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿದೆ.

ಅಲಂಕರಣ ಶಿಲೆಗಳ ಉಪಯೋಗ ಕೂಡ ಬಹುಮುಖವಾಗಿದೆ. ಕಟ್ಟಡಗಳಿಗೆ ಮುಖ್ಯವಾಗಿ ಚಪ್ಪಡಿ ರೂಪದಲ್ಲಿ ನೆಲಹಾಸುಗಳಾಗಿ, ಭಿತ್ತಿಗಳ ಫಲಕವಾಗಿ, ಗೋರಿಗಳಲ್ಲಿ ಕೆತ್ತನೆಗಾಗಿ, ಉತ್ತಮ ಗುಣಮಟ್ಟದ ಹಲವು ರಂಗಿನ ಮೆರುಗು ಕೊಟ್ಟ ಗ್ರಾ ನೈಟನ್ನು ಬಳಸಲಾಗುತ್ತಿದೆ. ಆಧುನಿಕ ಮನೆಗಳಲ್ಲಿ ಅಡುಗೆ ಮನೆಯ ಜಗುಲಿಯಿಂದ ಹಿಡಿದು

ಹೂದಾನಿಗಳವರೆಗೆ ಗ್ರ್ಯಾನೈಟ್ ಬಳಕೆಯಾಗುತ್ತಿದೆ. ಇತ್ತೀಚೆಗೆ ಗ್ರಾನೈಟುಗಳಂತೆಯೇ ಮೆರಗು ಪಡೆಯುವ ಯಾವ ಶಿಲೆಯನ್ನೂ ಅಲಂಕರಣ ಶಿಲೆಯಾಗಿ ಬಳಸುವ ಪರಿಪಾಟ ಹೆಚ್ಚುತ್ತಿದೆ. ಅನಾರ್ಥೊಸೈಟ್, ಲೆಪ್ಟಿನೈಟ್, ಮರಳುಗಲ್ಲು, ಪಟ್ಟೆಶಿಲೆ, ಹಸುರು ಮಿಶ್ರಿತ ಕ್ವಾರ್ಟ್ಸೈಟ್ ಎಲ್ಲವೂ ಬೇಡಿಕೆ ಗಳಿಸುತ್ತಿವೆ.

**ಸಂಪನ್ಮೂಲ:** ವಿವಿಧ ಬಣ್ಣದ ಶಿಲೆಗಳು ರಾಜ್ಯದಲ್ಲಿ ಲಭ್ಯವಿರುವುದರಿಂದ ಅವುಗಳ ದೇಶೀಯ ಹಾಗೂ ವಿದೇಶೀಯ ಬೇಡಿಕೆ ಹೆಚ್ಚುತ್ತಿದೆ. ಕರ್ನಾಟಕದ ಒಟ್ಟು 1,91,791 ಚ.ಕಿಮೀ ಪ್ರದೇಶದಲ್ಲಿ ಕೇವಲ ಶೇ 2.2 ಭಾಗ ಮಾತ್ರ ಉತ್ತಮ ದರ್ಜೆಯ ಅಲಂಕರಣ ಶಿಲಾ ಸಂಪನ್ಮೂಲವನ್ನು ಹೊಂದಿದೆಯೆಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಇದರಲ್ಲಿ ಶೇ 1 ಭಾಗ ಮಾತ್ರ ಗಣಿ ಕಾರ್ಯಾಚರಣೆಗೆ ಒಳಪಟ್ಟಿದೆ. ಈಗಿನ ಗಣಿಗಾರಿಕೆಯಿಂದ ಶೇ. 10 ಭಾಗ ಹೆಚ್ಚಳವಾದರೆ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಲಾಭವಾಗಲಿದೆ. ಮೈಸೂರು, ಬಳ್ಳಾರಿ, ಬೆಂಗಳೂರು, ಮಂಡ್ಯ, ತುಮಕೂರು, ಕೋಲಾರ, ಚಿತ್ರದುರ್ಗ, ರಾಯಚೂರು, ಬಿಜಾಪುರ ಜಿಲ್ಲೆಗಳಲ್ಲಿ ಅಲಂಕರಣ ಶಿಲೆಗಳ ಜಾಡು ವ್ಯಾಪಕವಾಗಿ ಹಂಚಿಕೆಯಾಗಿದೆ. ವಾಸ್ತವವಾಗಿ ರಾಮನಗರದಿಂದ ಪ್ರಾರಂಭವಾಗಿ ಬಿಜಾಪುರದವರೆಗೆ ಹಬ್ಬಿರುವ ಕ್ಲೋಸ್‌ಪೇಟ್ ಗ್ರಾನೈಟ್ ಶಿಲಾ ಜಾಡು ಅಲಂಕರಣ ಶಿಲೆಗಳ ಉಗ್ರಾಣ ಎನಿಸಿದೆ. ವಿಶ್ವವಿಖ್ಯಾತವಾದ ಪಾಟಲವರ್ಣದ ಇಳಕಲ್ ಗ್ರಾನೈಟ್ ಸಂಪನ್ಮೂಲವಿರುವುದು ಈ ಜಾಡಿನಲ್ಲೇ. ಚಾಮರಾಜನಗರದ ಸುತ್ತಮುತ್ತ ನೈಸ್ ಶಿಲೆಗಳಲ್ಲಿ ಅಡ್ಡ ಹಾಯ್ದಂತೆ ಕಂಡುಬರುವ ಗಾಢ ಕಪ್ಪು ಬಣ್ಣದ ಡಾಲರೈಟ್ ಅಲಂಕರಣ ಶಿಲೆಯಾಗಿ ಉಳಿದೆಲ್ಲ ಶಿಲೆಗಳಿಗಿಂತ ಹೆಚ್ಚು ಬೇಡಿಕೆ ಮೌಲ್ಯ ಗಳಿಸಿದೆ. ಸರ್ ಥಾಮಸ್ ಹಾಲೆಂಡ್ ಎಂಬ ಭೂವಿಜ್ಞಾನಿ ಕಟ್ಟಡ ಕಲ್ಲುಗಳ ಪ್ರಾಮುಖ್ಯ ಕುರಿತಂತೆ ಅವುಗಳನ್ನು ಸೂಕ್ತವಾಗಿ ವಿಂಗಡಿಸಿದಲ್ಲಿ ದೇಶದ ಔದ್ಯೋಗಿಕ ಬೆಳವಣಿಗೆಗೆ ಮಾರ್ಗದರ್ಶನವಾಗಬಲ್ಲದು ಎಂದು ಈ ಶತಮಾನದ ಪ್ರಾರಂಭದಲ್ಲೇ ನುಡಿದಿದ್ದ.

ಅಲಂಕರಣ ಶಿಲೆಗಳ ಸಂಪನ್ಮೂಲವನ್ನು ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಮೀಕ್ಷೆ ಮಾಡಿ ನಮ್ಮ ರಾಜ್ಯದಲ್ಲಿ ಅದರ ಹಂಚಿಕೆಯ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ನೀಡುತ್ತ ಬಂದಿದೆ. ಇತ್ತೀಚಿನ ಸಮೀಕ್ಷೆಯಂತೆ ಲಭ್ಯವಿರುವ 1,780 ಚ.ಕಿಮೀ ನಷ್ಟು ತಿಳಿಗೆಂಪು ಗ್ರಾನೈಟ್ ಸಂಪನ್ಮೂಲದಲ್ಲಿ ಸದ್ಯದಲ್ಲಿ ಗುರುತಿಸುವುದು ಕೇವಲ 110 ಚ.ಕಿಮೀ ಮಾತ್ರ. ಬೂದುಬಣ್ಣದ ಗ್ರಾನೈಟ್ ಕರ್ನಾಟಕದಲ್ಲಿ ಸುಮಾರು 1,080 ಚ.ಕಿಮೀ ವ್ಯಾಪ್ತಿ ಹೊಂದಿದ್ದರೂ ಗಣಿ ಕಾರ್ಯಾಚರಣೆಗಾಗಿ ಗುರುತಿಸಿರುವ ಪ್ರದೇಶ 36ಚ.ಕಿ.ಮೀ. ಮಾತ್ರ. ಕರಿಕಲ್ಲಿನ ಉದ್ಯಮ ಉಳಿದೆಲ್ಲವುಗಳಿಗಿಂತ ಹೆಚ್ಚು ಲಾಭ ಗಳಿಸುತ್ತಿದ್ದರೂ ಲಭ್ಯವಿರುವ 250ಚ.ಕಿಮೀ ಸಂಪನ್ಮೂಲದಲ್ಲಿ ಗಣಿಗಾರಿಕೆ ನಡೆಯುತ್ತಿರುವುದು ಕೇವಲ 14ಚ.ಕಿಮೀ ಪ್ರದೇಶದಲ್ಲಿ ಮಾತ್ರ. ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಸು. 606 ದಶಲಕ್ಷ ಘನ ಮೀಟರುಗಳಷ್ಟು ಗ್ರಾನೈಟ್ ಸಂಪನ್ಮೂಲವಿದೆ. ಇದರಲ್ಲಿ 195 ಘನ ಕಿಮೀ ಸಂಪನ್ಮೂಲ ಅಥವಾ ಶೇ 30. ಭಾಗ ನಮ್ಮ ರಾಜ್ಯದ ಸಂಪನ್ಮೂಲವಾಗಿದೆ. ಒಂದು ಚ.ಕಿಮೀ ಪ್ರದೇಶದಲ್ಲಿ 10 ದಶಲಕ್ಷ ಘನ ಮೀಟರ್ ಅಥವಾ 25 ದಶಲಕ್ಷ ಟನ್ನು ಕಲ್ಲನ್ನು 10 ಮೀಟರ್ ಆಳದವರೆಗೆ ಗಣಿ ಮಾಡಬಹುದಾದರೂ ಅಲಂಕರಣ ಶಿಲೆಯಾಗಿ ಶೇ. 10ರಷ್ಟು ಭಾಗ ಮಾತ್ರ ಉಪಯೋಗಕ್ಕೆ ಬರುತ್ತದೆ. ಅಲಂಕರಣ ಶಿಲೆಯ ಜಿಲ್ಲಾವಾರು ಉತ್ಪಾದನೆಯ ಬಗ್ಗೆ ಸ್ಪಷ್ಟವಾದ ಅಂಕಿ ಅಂಶಗಳು ಲಭ್ಯವಿಲ್ಲ. 1980ರ ದಶಕದಲ್ಲಿ ರಾಜ್ಯದ ಗ್ರಾನೈಟ್ ಉತ್ಪಾದನೆ ಸುಮಾರು 78,000 ಟನ್ನುಗಳಿದ್ದು ಆಗಿನ ಮೌಲ್ಯ 34,695,000 ರೂಪಾಯಿಗಳಾಗಿತ್ತು. 90ರ ದಶಕದಲ್ಲಿ ಕರ್ನಾಟಕ 274,052,000 ರೂಪಾಯಿ ಮೌಲ್ಯದ 560,000 ಟನ್ ಅಲಂಕರಣ ಶಿಲೆಗಳನ್ನು ಉತ್ಪಾದಿಸಿದೆ. ಬಹುತೇಕ ಐರೋಪ್ಯ ರಾಷ್ಟ್ರಗಳು, ಜರ್ಮನಿ, ವಿಶೇಷವಾಗಿ ಜಪಾನ್, ಇಟಲಿ, ಭಾರತದ ಅಲಂಕರಣ ಶಿಲೆಗಳನ್ನು ಆಮದು ಮಾಡಿಕೊಳ್ಳುತ್ತಿರುವ ರಾಷ್ಟ್ರಗಳು. ಕಳೆದ 20 ವರ್ಷಗಳಲ್ಲಿ ಗ್ರಾನೈಟ್ ಉದ್ಯಮ ತ್ವರಿತ ಗತಿಯಲ್ಲಿ ಪ್ರಗತಿ ಸಾಧಿಸಿದೆ. ಗ್ರಾನೈಟ್‌ನ ಶೇ.70 ಭಾಗ ಕಟ್ಟಡಗಳಿಗೂ, ಶೇ. 25 ಭಾಗ ಸ್ಮಾರಕಗಳಿಗೂ, ಶೇ. 5 ಭಾಗ ಶಿಲ್ಪಗಳಿಗೂ ಬಳಕೆಯಾಗುತ್ತಿದೆ. ದೇಶದ ಒಟ್ಟು ಗ್ರಾನೈಟ್ ರಫ್ತಿನಲ್ಲಿ ಕರ್ನಾಟಕದ ಕೊಡುಗೆ ಶೇ. 40 ಭಾಗ. ಅಲ್ಲದೆ ಈ ಉದ್ಯಮ ರಾಜ್ಯದಲ್ಲಿ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಮಂದಿಗೆ ಉದ್ಯೋಗ ದೊರಕಿಸಿದೆ.

**ಐತಿಹಾಸಿಕ ಬೆಳವಣಿಗೆ:** ಗ್ರಾನೈಟ್ ರಫ್ತು ವ್ಯಾಪಾರ ಸುಮಾರು 1930ರಲ್ಲಿ ಪ್ರಾರಂಭವಾಗಿ ಬೆಂಗಳೂರು ಉದ್ಯಮದ ಕೇಂದ್ರವಾಗಿ ಬೆಳೆಯಿತು. ವಿಶೇಷವಾಗಿ ಬೆಂಗಳೂರು, ದೊಡ್ಡಬಳ್ಳಾಪುರದ ಸುತ್ತಮುತ್ತ ಲಭ್ಯವಿರುವ ಗ್ರಾನೈಟ್ ಕಚ್ಚಾಶಿಲೆಗಳನ್ನಲ್ಲದೆ ಮೆರಗು ಕೊಟ್ಟ ಅಲಂಕರಣ ಶಿಲೆಗಳನ್ನು ಐರೋಪ್ಯ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿತ್ತು. ಆರಂಭದಲ್ಲಿ ಕೈ ಕೆಲಸಗಾರರಿಂದ ಗಣಿಗಾರಿಕೆ ಪ್ರಾರಂಭವಾಗಿ 70ರ ದಶಕದಲ್ಲಿ ಹೊಸತಂತ್ರಜ್ಞಾನದೊಂದಿಗೆ ರಫ್ತಿನ ಪ್ರಮಾಣದಲ್ಲೂ ಹೆಚ್ಚಳ ಕಂಡಿತು. ಗ್ರಾನೈಟ್ ಉದ್ಯಮ ಈ ದಶಕದಲ್ಲಿ ಹೆಚ್ಚು ಅಭಿವೃದ್ಧಿಯಾಯಿತು. ದಕ್ಷಿಣ ರಾಜ್ಯಗಳಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಈ ಉದ್ಯಮವನ್ನು ಹೆಚ್ಚು ಬೆಳೆಸಿದವು. ವಿಶೇಷವಾಗಿ ಕೊಳ್ಳೇಗಾಲ, ಚಾಮರಾಜನಗರದ ಕರಿಕಲ್ಲು ವಿದೇಶಗಳಿಂದ ಹೆಚ್ಚು ಬೇಡಿಕೆ ಪಡೆದವು. ವಾಷಿಂಗ್‌ಟನ್ನಿನಲ್ಲಿ ನಿಲ್ಲಿಸಿರುವ ವಿಯೆಟ್ನಾಂ ಯುದ್ಧ ಸ್ಮಾರಕ ಕೊಳ್ಳೇಗಾಲದ ಡಾಲರೈಟ್ (ಬ್ಲಾಕ್ ಗ್ರಾನೈಟ್) ಕಲ್ಲಿನಿಂದ ನಿರ್ಮಿತವಾಗಿದೆ. ರಾಜ್ಯದಲ್ಲಿ ಹಿಂದೆ ವಡ್ಡರು, ಕಲ್ಲು ಕುಟುಕರ ಜೀವನಾಧಾರವಾಗಿದ್ದ ಕಲ್ಲು ಉದ್ಯಮ ಈಗ ಕರ್ನಾಟಕದಲ್ಲಿ ಭಾರಿ ಉದ್ಯಮವಾಗಿ ಬೆಳೆದಿದೆ. ನಗರಗಳಲ್ಲಿ ಸಣ್ಣ ಮನೆಗಳಿಂದ ಹಿಡಿದು ಬಹುಮಹಡಿ ಕಟ್ಟಡಗಳವರೆಗೆ ಅಲಂಕರಣ ಶಿಲೆಗಳ ಬಳಕೆ ಹೆಚ್ಚುತ್ತಿದೆ. ಗೋಡೆಗಳಿಗೆ ಹೊದಿಸುವ ತೆಳು ಹಲಗೆಗಳಾಗಿ, ಹೆಂಚುಗಳಾಗಿ ನೆಲ ಹಾಸುಗಳಾಗಿ, ಅಡುಗೆ ಮನೆಯ ಜಗಲಿಗಳಿಗೆ, ರುಬ್ಬು ಗುಂಡುಗಳಿಗೆ, ಗ್ರಾನೈಟ್ ಮತ್ತು ಡಾಲರೈಟ್ ಶಿಲೆಗಳ ಕಚ್ಚಾ ಕ್ಯೂಬುಗಳು ಮಂಗಳೂರಿನ ಬಂದರಿನಿಂದ ವಿದೇಶಕ್ಕೆ ಭಾರೀ ಪ್ರಮಾಣದಲ್ಲಿ ರಫ್ತಾಗುತ್ತಿದೆ. ಗ್ರಾನೈಟ್ ಉದ್ಯಮ ಕರ್ನಾಟಕದಲ್ಲಿ ಸುಮಾರು 6000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಆದಾಯ ತರುತ್ತಿದೆ. ರಾಜ್ಯದಲ್ಲಿ ಗ್ರಾನೈಟ್ ಸಂಸ್ಕರಿಸುವ ಇಪ್ಪತ್ತು ದೊಡ್ಡ ಘಟಕಗಳಿವೆ.

**ಕಲ್ಲುಗಣಿಗಾರಿಕೆ ಮತ್ತು ಪರಿಸರ:** ಕರ್ನಾಟಕದಲ್ಲಿ ಅಲಂಕರಣ ಗ್ರಾನೈಟ್ ರಫ್ತು ಮಾಡುವ 20 ಭಾರಿ ಕೈಗಾರಿಕೆಗಳಿವೆ. ಇವೆಲ್ಲವೂ ಸಂಪೂರ್ಣವಾಗಿ ಖಾಸಗಿ ಒಡೆತನದಲ್ಲಿವೆ. ಪ್ರತಿ ಸಂಸ್ಥೆ ಈ ಉದ್ಯಮಕ್ಕೆ ಸರಾಸರಿ 15 ಕೋಟಿ ರೂಪಾಯಿಗಳ ಬಂಡವಾಳ ತೊಡಗಿಸಿದೆ. ವಾರ್ಷಿಕ 1,00,000 ಚ.ಮೀ ಅಲಂಕರಣ ಶಿಲೆಯನ್ನು ಉತ್ಪಾದಿಸುವ ಸಾಮರ್ಥ್ಯ ಈ ಘಟಕಗಳಿವೆ.

ತ್ವರಿತವಾಗಿ ಆರ್ಥಿಕ ಲಾಭ ಗಳಿಸುತ್ತಿರುವ ಈ ಉದ್ಯಮ ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. 1972ರಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ಮಾನವ ಪರಿಸರ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯವನ್ನು 1977 ರಲ್ಲಿ ಭಾರತವೂ ತನ್ನ ಪರಿಸರ ರಕ್ಷಣೆಗೆ ಅಳವಡಿಸಿಕೊಂಡಿತು. ಉಳಿದ ಕೈಗಾರಿಕೆಗಳಂತೆ ಗಣಿಗಾರಿಕೆ ಅದರಲ್ಲೂ ವಿಶೇಷವಾಗಿ ಕಲ್ಲು ಗಣಿ ಕೈಗಾರಿಕೆ ಪರಿಸರದ ಮೇಲೆ ದೀರ್ಘಕಾಲಿಕ ದುಷ್ಪರಿಣಾಮ ಬೀರುತ್ತದೆ. ಮುಖ್ಯವಾಗಿ ಗಣಿಯಿಂದ ಉತ್ಪನ್ನವಾಗುವ ಸಣ್ಣ ಕಲ್ಲು ಚೂರು, ದೂಳು, ವಾಯು ಮಾಲಿನ್ಯಕ್ಕೆ ಕಾರಣವಾಗುತ್ತವೆ. ಫಲವತ್ತಾದ ನೆಲದ ಮೇಲು ಪದರ, ಗಣಿಗಾರಿಕೆಯಿಂದಾಗಿ ನಾಶವಾಗಿ ಕೃಷಿಗೆ ಅನುಪಯುಕ್ತವಾಗುತ್ತದೆ. ಸುತ್ತಮುತ್ತಲಿನ ಸಸ್ಯರಾಶಿಯ ಮೇಲೆ ಕಲ್ಲು ಕಣಗಳು ಕುಳಿತು ದ್ಯುತಿಸಂಶ್ಲೇಷಣೆಗೆ ತಡೆಯೊಡ್ಡುತ್ತವೆ. ಇದರ ಫಲವಾಗಿ ಇಳುವರಿ ಕಡಿಮೆಯಾಗುತ್ತದೆ. ಕಲ್ಲು ಗಣಿ ಕಾರ್ಮಿಕರು ದೀರ್ಘ ಕಾಲ ದೂಳನ್ನು ಸೇವಿಸುವುದರಿಂದ ಬಹುಬೇಗ ಶ್ವಾಸಕೋಶ ರೋಗಕ್ಕೆ ಬಲಿಯಾಗುತ್ತಾರೆ. ಇದನ್ನು ಸಿಲಿಕೋಸಿಸ್ ಎಂದು ಗುರುತಿಸಿದ್ದಾರೆ. ಹತ್ತಿರದ ಬಾವಿಗಳ ನೀರು ಕೂಡ ಮಲಿನವಾಗುತ್ತದೆ. ಅರಣ್ಯಗಳಲ್ಲಿ ಉತ್ತಮ ದರ್ಜೆಯ ಅಲಂಕರಣ ಶಿಲೆಗಳು ಹಂಚಿಕೆಯಾಗಿದ್ದರೂ ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಅದನ್ನು ಗಣಿ ಮಾಡುವುದನ್ನು ಪರಿಸರ ಪ್ರೇಮಿಗಳು ವಿರೋಧಿಸುತ್ತಾರೆ. ಕಲ್ಲು ಗಣಿಯ ಸುತ್ತಮುತ್ತ ಪರಿಸರ ಮಾಲಿನ್ಯ ನಿಯಂತ್ರಿಸಲು ಹಲವು ಉಪಾಯಗಳಿವೆ. ಟನ್ನುಗಟ್ಟಳೆ ದೂಳು ಶಮನ ಮಾಡುವ ಯಂತ್ರೋಪಕರಣಗಳನ್ನು ಬಳಸಿ ಪರಿಸರದ ಕಲುಷತೆಯನ್ನು ಸ್ವಲ್ಪಮಟ್ಟಿಗೆ ತಡೆಯಬಹುದು. ಗಣಿ ಕಾರ್ಯ ಮುಗಿಯುವ ಮೊದಲೇ ಸುತ್ತ ನೆಡು ತೋಪು ಸೃಷ್ಟಿಸಿ, ಆ ಪ್ರದೇಶದಲ್ಲಿ ಹಸುರು ಬೆಳೆಯುವಂತೆ ನೋಡಿಕೊಳ್ಳಬಹುದು. ಗಣಿಗಾರಿಕೆಯ ಲಾಭದಲ್ಲಿ ಬರುವ ಒಂದು ಅಂಶವನ್ನು ಇದಕ್ಕಾಗಿ ವಿನಿಯೋಗಿಸಿದರೆ ಗಣಿಯ ಸುತ್ತಮುತ್ತಲಿನ ಪ್ರದೇಶವೂ ಅಭಿವೃದ್ಧಿಯಾಗುತ್ತದೆ, ಪರಿಸರ ಮಾಲಿನ್ಯವನ್ನು ತಕ್ಕಮಟ್ಟಿಗೆ ನಿಯಂತ್ರಿಸಬಹುದು.

**ಕರ್ನಾಟಕದ ಅಲಂಕರಣ ಶಿಲೆಗಳ ಹಂಚಿಕೆ**

| ಅಲಂಕರಣ ಶಿಲೆಗಳ ವಿಧ | ಶಿಲೆ ದೊರೆಯುವ ತಾಲ್ಲೂಕು/ಜಿಲ್ಲೆ |
|---|---|
| ಡಾಲರೈಟ್ ರೂಪಾಂತರಿತ (ಬ್ಲಾಕ್ ಗ್ರಾನೈಟ್) ಶಿಲೆಗಳು ವಿಶೇಷವಾಗಿ ಪೆನಿನ್‌ಸುಲಾರ್ ಚಾರ್ನೋಕೈಟ್ ಮತ್ತು ಗ್ರಾನೈಟ್ ಶಿಲೆಗಳು | ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಮಳವಳ್ಳಿ, ತಿರುಮಕೂಡಲು ನರಸೀಪುರ, ಹುಣಸೂರು, ಕನಕಪುರ, ಪಿರಿಯಾಪಟ್ಟಣ, ನಂಜನಗೂಡು, ನೈಸ್, ಗುಂಡ್ಲುಪೇಟೆ, ಕಾರ್ಕಳ, ಮಂಡ್ಯ. |
| ಕಂದು ಮತ್ತು ಕೆಂಪು ನಸುಗೆಂಪು ಗ್ರಾನೈಟ್ ಗ್ರಾನೈಟ್ ಜಾಡು | ಇಳಕಲ್ಲು, ಕುಷ್ಟಗಿ, ಮಾಗಡಿ, ಕ್ಲೋಸ್‌ಪೇಟ್ ಸಿರಿಗುಪ್ಪ, ಬಳ್ಳಾರಿ, ಕೊಪ್ಪಳ್, |

| | |
|---|---|
| | ರಾಮನಗರ, ದೇವದುರ್ಗ, |
| | ಸುರಪುರ, ಲಿಂಗಸಗೂರು |
| ತಿಳಿಹಸುರು ಮಿಶ್ರಿತ | ಬೇಲೂರು, ಚಿಕ್ಕಮಗಳೂರು, |
| | ಗ್ರಾನೈಟ್ ಮಿಶ್ರಿತ |
| ಡಾಲರೈಟ್ ಮತ್ತು ಗ್ರಾನೈಟ್ | ಶ್ರೀನಿವಾಸಪುರ, ಮಾಲೂರು, |
| | ನೈಸ್ |
| | ಕೋಲಾರ, ಹೊಸಕೋಟೆ, ಬಳ್ಳಾರಿ, |
| | ಚಳ್ಳಕೆರೆ, ತಿಪಟೂರು, ನೆಲಮಂಗಲ, |
| | ಕುಣಿಗಲು |
| ನಸುಗೆಂಪು, ಹಸುರು | ದೇವದುರ್ಗ, ಮಾಗಡಿ, ತುಮಕೂರು, ಕ್ಲೋಸ್‌ಪೆಟ್ |
| ಬೂದುಬಣ್ಣದ ಗ್ರಾನೈಟ್ | ಕೊಪ್ಪಳ, ಕೂಡ್ಲಿಗಿ, ರಾಮನಗರ, |
| ಗ್ರಾನೈಟ್ ಮತ್ತು | |
| | ಗುಡಿಬಂಡೆ, ಬಾಗೇಪಲ್ಲಿ, ಕೋಲಾರ |
| ನಮೂನೆಯ | |
| ಗ್ರಾನೈಟ್ | |
| ಗ್ರಾನೈಟ್ ಪಾರ್ಫಿರಿ | ಗೌರಿಬಿದನೂರು. |
| ಬಹುವರ್ಣದ ಗ್ರಾನೈಟ್ | ಕನಕಪುರ, ಚನ್ನಪಟ್ಟಣ, ಯಲಬುರ್ಗಿ, ಕ್ಲೋಸ್‌ಪೆಟ್ |
| | ಕುಣಿಗಲು, ಮಳವಳ್ಳಿ, ತುಮಕೂರು, |
| ಗ್ರಾನೈಟ್ ಜಾಡು | |
| | ಕುಷ್ಟಗಿ, ಮದ್ದೂರು, ಬೆಂಗಳೂರು, |
| ಮತ್ತು | |
| | ಲಿಂಗಸಗೂರು, ಇಳಕಲ್ಲು |
| ಪೆನಿನ್‌ಸುಲಾರ್ | |
| | ನೈಸ್ |
| ಬೂದುಬಣ್ಣದ ಗ್ರಾನೈಟ್ | ಶಿರಾ, ಚಿಂತಾಮಣಿ, ಬಳ್ಳಾರಿ, |
| ಪೆನಿನ್‌ಸುಲಾರ್ | |
| | ಚಿತ್ರದುರ್ಗ, ಗಂಗಾವತಿ, ದೇವದುರ್ಗ |
| ನೈಸ್ ಮತ್ತು | |
| | ಮತ್ತು ಹೆಗ್ಗಡದೇವನಕೋಟೆ. |
| ಅದರಲ್ಲಿ ಹಂಚಿಕೆ | |
| ಯಾಗಿರುವ | |
| ಗ್ರಾನೈಟ್ | |

**ಅಲಂಕರಣ ಶಿಲೆಗಳು**

| **ವಾಣಿಜ್ಯ ಹೆಸರು** | **ಭೂವೈಜ್ಞಾನಿಕ ಹೆಸರು** |
|---|---|
| **ಬ್ಲಾಕ್ ಗ್ರಾನೈಟ್ (ಕರಿಕಲ್ಲು)** | |
| ಮೈಸೂರು ಬ್ಲಾಕ್ | ಡಾಲರೈಟ್ |
| ಬ್ಲಾಕ್ ಗೆಲಾಕ್ಸಿ | ಗಾಬ್ರೊ |
| ಕುನ್ನಮ್ ಮತ್ತು ಚಾಮರಾಜನಗರ ಬ್ಲಾಕ್ | ಡಾಲರೈಟ್ |
| ಹಾಸನ್ ಗ್ರೀನ್ | ಡಾಲರೈಟ್ |
| **ಕೆಂಪು, ಕಂದು ಮತ್ತು ಬಹುವರ್ಣದ ಗ್ರಾನೈಟ್ ನೈಸ್‌ಗಳು** | |
| ರೂಬಿ ರೆಡ್ | ಕೆಂಪು ಗ್ರಾನೈಟ್ |
| ಇಂಪೀರಿಯಲ್ ರೆಡ್ | ಕ್ಲೋಸ್‌ಪೆಟ್ ಗ್ರಾನೈಟ್ |
| ಪರ್ದೇಶೀಯ ಗ್ರಾನೈಟ್ | ಕಂದು ಪಾರ್ಫಿರಿಟಿಕ್ |
| ರೆಡ್ ಮಲ್ಟಿ ಕಲರ್ | ಕಂದು, ಕೆಂಪುಮಿಶ್ರಿತ ನೈಸ್ |
| ಕಾಶ್ಮೀರ್ ವೈಟ್ | ಬಿಳಿ ಗ್ರಾನೈಟ್ ಮತ್ತು ನೈಸ್ |
| ಫಿಷ್‌ಬೆಲ್ಲಿ ಗ್ರಾನೈಟ್ | ಬಿಳಿ ಮತ್ತು ಬೂದು ನೈಸ್ ಮತ್ತು ಆಗನ್ ನೈಸ್, ಬೂದು ನೈಸ್ |
| **ರಾಯಲ್ ಖಾದಿ ಇತರೆ ಕಲ್ಲುಗಳು** | |
| ಇಂಡಿಯನ್ ಸನ್‌ರೈಸ್ | ಚಾರ್ನೋಕೈಟ್ |
| ಶಿರಾ ಗ್ರೇ | ಬೂದು ಗ್ರಾನೈಟ್ |
| ಹಿಮಾಲಯನ್ ಬ್ಲೂ | ಬೂದು ಮಿಶ್ರಿತ ನೈಸ್ |
| ಕನಕಪುರ ಮಲ್ಟಿ ಕಲರ್ | ಕೆಂಪು ಬೂದು ಮಿಶ್ರಿತ ನೈಸ್ ಮತ್ತು ಗ್ರಾನೈಟ್ |
| ಇಳಕಲ್ ಪಿಂಕ್ | ಗ್ರಾನೈಟ್ |
| ಸರ್ವನ್ ರೋಸ್ ಮತ್ತು ಮಾಗಡಿ ಪಿಂಕ್ | ಕ್ಲೋಸ್‌ಪೆಟ್ ಗ್ರಾನೈಟ್ |
| ಪಿಂಕ್ ಫ್ಯಾಂಟಸಿ | ಗ್ರಾನೈಟ್ |
| ಕ್ವೀನ್ ರೋಸ್ | ಗ್ರಾನೈಟ್ |

*

**ಅಲಂಕಾರಾತಿರೇಕ :** ಸಾಹಿತ್ಯಸೃಷ್ಟಿಯಲ್ಲಿ ಕವಿಗಳು ಬಳಸಿರುವ ಆಡಂಬರದ ಶೈಲಿಗೆ ಈ ಹೆಸರಿದೆ. ಇದರ ಎರಡು ಬಗೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಸ್ಪೇನಿನ ಕವಿ ಗಾಂಗರ (1561–1627) ಜಾರಿಗೆ ತಂದ ಕ್ಲಿಷ್ಟ ಪದ್ಧತಿ ಒಂದು. ಅದಕ್ಕೆ ಗಾಂಗರಿಸಮ್ ಎಂಬ ಹೆಸರು. ಕಲ್ಟರಿಸಮ್ ಎಂದೂ ಅದನ್ನು ಕೆಲವರು ಕರೆದರು. ಸುಲಭವೂ ತಿಳಿಯೂ ಆದ ರೀತಿಯಲ್ಲಿ ಕಾವ್ಯ ಕಟ್ಟುತ್ತಿದ್ದ ಗಾಂಗರ 1609ರಲ್ಲಿ ತನ್ನ ನುಡಿವೈಖರಿಯನ್ನು ಬದಲಾಯಿಸಿದ. ಪಾಲಿಫೀಮ್ ಎಂಬ ಬೃಹತ್ಕಾವ್ಯಕ್ಕೆ ಸಾಧಾರಣ ಶೈಲಿ ಸಾಲದೆಂದು ಬಗೆದು ಪೆಡಸಾದ ಶೈಲಿಯೊಂದನ್ನು ತಯಾರಿಸಿಕೊಂಡ. ಅದರ ಆಕೃತಿಯೇನೆಂದರೆ– 1. ಲ್ಯಾಟಿನ್ನಿಂದ ನಿರಾತಂಕವಾಗಿ ತೆಗೆದುಕೊಂಡ ಶಬ್ದಗಳು, ಶಬ್ದಗುಚ್ಛಗಳು. 2. ಸಂಕೀರ್ಣವೂ ಗೋಜು ಗೋಜೂ ಆದ ಉಪಮಾನಗಳಿಂದ ಎದ್ದ ಸಾದೃಶ್ಯಗಳು. 3. ಪುರಾತನರ ಮೂಲ ಕಥಾವಳಿಯಿಂದ ಆಯ್ದ ವಿಚಿತ್ರ ನಿದರ್ಶನಗಳು. 4. ಜರ್ಮನ್, ಇಟ್ಯಾಲಿಯನ್ ಭಾಷೆಗಳ ಪದಗಳ ಬಳಕೆ. 5. ನಾಮವಾಚಕ, ಕ್ರಿಯಾಪದ ಇತ್ಯಾದಿಗಳಿಗೆ ವ್ಯಾಕರಣದಂತೆ ನಿರ್ದಿಷ್ಟವಾಗಿರುವ ಕ್ರಮದ ಪಲ್ಲಟ, ತಿರುಗು ಮುರುಗು.

ಗಾಂಗರನ ಈ ವಾಕ್ಯ ರೀತಿ ದೊಡ್ಡ ವಾದವಿವಾದ ಎಬ್ಬಿಸಿತು. ಪ್ರಖ್ಯಾತ ನಾಟಕಕಾರ ಲೋಪ್‌ಡ ವೇಗ ಅದನ್ನು ಅವಹೇಳನಗೈದು ಬೇಗ ಯಾವುದೋ ಕಾರಣಕ್ಕಾಗಿ ತನ್ನ ಆಕ್ಷೇಪವನ್ನು ಹಿಂದಕ್ಕೆ ತೆಗೆದುಕೊಂಡ. ಇತರರ ನಿಂದೆಯೂ ನಿತ್ರಾಣದಿಂದ ಕುಂದಿತಾಗಿ, ಗಾಂಗರನ ಪದ್ಧತಿ ವಿಜಯ ಗಳಿಸಿತು. ಕೊಂಚಕಾಲ ಅದರ ಆಧಿಪತ್ಯ ನಡೆಯಿತು. ಆದರೆ ಬೇಗ ಅದರಿಂದ ರಸಿಕವೃಂದಕ್ಕೆ ಬೇಸರ ಉಂಟಾಯಿತು. ವಿರೋಧಿಗಳು ಹೆಚ್ಚಾಗುತ್ತಾ ಬಂದರು. ಕೊನೆಗೆ ಗಾಂಗರಿಸಮ್ ಎಂದರೆ ಕಡುಮಬ್ಬು, ಒಣಪಾಂಡಿತ್ಯ ಎಂಬ ಅರ್ಥವೆಂದಾಯಿತು. 20ನೆಯ ಶತಮಾನದಲ್ಲಿ ಇದ್ದಕ್ಕಿದ್ದಂತೆ ಒಂದು ಗುಂಪಿನ ಲೇಖಕರಿಗೆ ಗಾಂಗರ್ ಅತ್ಯುತ್ತಮ ಕವಿ, ಅವನ ಶೈಲಿ ಅನುಕರಣೀಯ ಎಂದು ಭಾಸವಾದರೂ ಆ ಭಾವನೆ ಹೆಚ್ಚು ದಿವಸ ಉಳಿಯಲಿಲ್ಲ. ಇಟಲಿಯ ಮಾರೀನೊ (1569–1625) ಪ್ರಯೋಗಿಸಿ ಪ್ರಚಾರಕ್ಕೆ ತಂದ ಮಾರೀನಿಸಮ್ ಇನ್ನೊಂದು ಅಲಂಕಾರ ವೈಪರೀತ್ಯ. ತನ್ನ ಸುದೀರ್ಘಕಾವ್ಯವಾದ ಲ್‌ಆಡೊನೆಯಲ್ಲಿ ಆತ ಬಳಸಿದ ಪದ್ಧತಿ 16ನೆಯ ಶತಮಾನದ ಇಟಲಿಯ ಗುಣಧರ್ಮವನ್ನು ಪ್ರತಿಫಲಿಸಿತು. ಕಾವ್ಯದಲ್ಲಿ 50ಪರಿಚ್ಛೇದಗಳೂ 5000ಕ್ಕೂ ಮೀರಿದ ವೃತ್ತಗಳೂ ಇದ್ದುವು. ಆಗ ಇಟಲಿ ಪರಕೀಯ ಆಳರಸರ ದಾಸ್ಯದಲ್ಲಿ ಕೊರಗುತ್ತ, ಮತಧರ್ಮ ನಯನೀತಿಗಳಲ್ಲಿ ಹುಸಿಗೂ ಕಪಟಕ್ಕೂ ಪಕ್ಕಾಗಿ ಇಳಿಗತಿಯಲ್ಲಿತ್ತು. ತನ್ನ ಕವಿ ಮಾರ್ಗದ ಕೃತಕತೆ, ಉತ್ಪ್ರೇಕ್ಷೆ, ಅತ್ಯಾಡಂಬರಗಳು ಆ ಸಮಯಕ್ಕೂ ಪರಿಸ್ಥಿತಿಗೂ ತಕ್ಕುದಾಗಿರುವಂತೆ ಮಾರೀನೊ ಮಾಡಿದ. ಆದ್ದರಿಂದ ಮಾರೀನಿಸಮ್ ಸೆಸೆಂಟಿಸ್ಮೊ (ಹದಿನಾರನೆಯ ಶತಮಾನ) ಎಂಬ ಹೆಸರೂ ಬಂತು. ಮಾರೀನೊನ ಮುಖ್ಯ ಉದ್ದೇಶ ಓದುಗರಿಗೆ ಕಣ್ಣು ಕೋರೈಸುವಂತೆಯೂ ಭಾರಿ ವಿಸ್ಮಯ ಬಡಿಯುವಂತೆಯೂ ಮಾಡುವುದು. ಅದಕ್ಕಾಗಿ ಅವನು ಉಪಯೋಗಿಸಿದ ಕಾವ್ಯೋಪಾಯಗಳು ಇವು: 1 ತಲೆಚಿಟ್ಟು ಹಿಡಿಸುವಷ್ಟು ಅಲಂಕಾರಗಳ, ಅದರಲ್ಲೂ ರೂಪಕಾಲಂಕಾರದ ಬಳಕೆ; 2 ಅಸಾಧಾರಣವೂ ಅನಿರೀಕ್ಷಿತವೂ ಆದ ಪದಪುಂಜ ಮತ್ತು ವಾಕ್ಸರಣಿ, ಅನಿರೀಕ್ಷ್ಯ, ಅದ್ಭುತ ಸನ್ನಿವೇಶ ರಚನೆ; 3 ಅತಿ ಬುದ್ಧಿವಂತಿಕೆಯಿಂದ ಮಿಶ್ರಣಗೈದ ವಿರುದ್ಧ ಭಾವಗಳು; 4 ಅಂದವಿಲ್ಲ ಎನ್ನಲಾಗದ ಚತುರವೂ ಸೂಕ್ಷ್ಮವೂ ಆದ ಕೃತಕ ಭಂಗಿಗಳು; 5 ದೂರದ ವಿಕಾರವಾದ ಹೋಲಿಕೆಗಳು; 6 ಆಡಂಬರದ ಬಡಾಯಿ ಮಾತು, ಅತ್ಯುಕ್ತಿ; 7 ಅತಿಶಯೋಕ್ತಿಯ ಸುರಿಮಳೆ. ಹೀಗಿದ್ದರೂ ಇಟಲಿಯ ಭಾಷೆಗೂ ಸಾಹಿತ್ಯಕ್ಕೂ ಮಾರೀನೊ ದೊಡ್ಡ ಉಪಕಾರ ಮಾಡಿದನೆಂದೇ ಪಂಡಿತರ ಅಭಿಮತ. (ಎಸ್.ವಿ.ಆರ್.)

**ಅಲಂಗೀರ್‌ಪುರ :** 1958–59ರಲ್ಲಿ ನಡೆಸಿದ ಉತ್ಖನನದಲ್ಲಿ ಹರಪ್ಪ ಸಂಸ್ಕೃತಿಯ ಅವಶೇಷಗಳು ಸಿಕ್ಕ ಗ್ರಾಮ. ದೆಹಲಿಯಿಂದ 45 ಕಿಮೀ ದೂರದಲ್ಲಿದೆ. ಇಲ್ಲಿ ಹರಪ್ಪ ಸಂಸ್ಕೃತಿಯ ಪದರಗಳ ಮೇಲೆ ಅನುಕ್ರಮವಾಗಿ ಚಿತ್ರಿತ ಬೂದು ಬಣ್ಣದ ಮಡಕೆಗಳ

ಪದರಗಳೂ, ಉತ್ತರದ ಹೊಳಪು ಕಪ್ಪು ಬಣ್ಣದ ಮಡಕೆಗಳ ಪದರಗಳೂ ಶುಂಗರ ಕಾಲದ ಅವಶೇಷಗಳೂ ಕಂಡುಬಂದಿವೆ. ಇವು 4000 ವರ್ಷಗಳ ಹಿಂದಿನಿಂದ ಗಂಗಾ ಬಯಲಿನಲ್ಲಿ ಪಸರಿಸಿದ್ದ ವಿವಿಧ ಸಂಸ್ಕೃತಿಗಳ ಬಗ್ಗೆ ಮಾಹಿತಿ ದೊರಕಿಸಿಕೊಡುತ್ತವೆ.
(ಎಸ್.ಎನ್.)

**ಅಲಕನಂದ :** ಗಂಗಾನದಿಯ ಜಲಮೂಲಗಳಲ್ಲಿ ಒಂದು. ಹಿಮಾಲಯ ಪರ್ವತ ಶ್ರೇಣಿಗಳಲ್ಲಿ, ಟಿಬೆಟ್ಟಿನ ಗಂಗೋತ್ರಿ ಹಿಮನದಿಯಿಂದ ಸು. 28 ಕಿಮೀ ದೂರದ ಗೋಮುಖ್ ಎಂಬ ಗುಹೆಯಲ್ಲಿ ಸು. 6600 ಮೀ ಎತ್ತರದಲ್ಲಿ ಉಗಮ ಹೊಂದುತ್ತದೆ. ಅನಂತರ ಪೂರ್ವಾಭಿಮುಖವಾಗಿ ಹರಿದು ದೇವಪ್ರಯಾಗದ ಬಳಿ ಭಾಗೀರಥಿ ಜಲ ಮೂಲವನ್ನು ಸೇರುತ್ತದೆ. ಅಲ್ಲಿಂದ ಮುಂದೆ ಈ ಎರಡೂ ನದಿಗಳು ಸೇರಿ ಗಂಗಾನದಿಯಾಗಿ ಹರಿಯುತ್ತವೆ. ಸರಸ್ವತೀ ನದಿಯಲ್ಲದೆ ಇದಕ್ಕೆ ಅನೇಕ ಉಪನದಿಗಳಿವೆ. ನಂದಾಕಿನಿ ನಂದಪ್ರಯಾಗದಲ್ಲೂ ಪಿಂದಾರ ಕರ್ಣಪ್ರಯಾಗದಲ್ಲೂ ಮಂದಾಕಿನಿ ರುದ್ರಪ್ರಯಾಗದಲ್ಲೂ ಈ ನದಿಗೆ ಸೇರಿ ಆಯಾ ಸ್ಥಳಗಳನ್ನು ಪವಿತ್ರ ಸಂಗಮಕ್ಷೇತ್ರಗಳಾಗಿ ಮಾಡಿವೆ. (ಪಿ.ಡಿ.ಎಂ.)

ತ್ರಿಪಥಗಾಮಿನಿಯಾದ ಗಂಗೆ ದೇವಲೋಕದಲ್ಲಿ ಹರಿಯುವಾಗ ಈ ಹೆಸರನ್ನು ಪಡೆಯುತ್ತಾಳೆಂದು ಪುರಾಣದ ವಿವರಣೆ. ದಡದ ಮೇಲೆ ಬ್ರಹ್ಮಕಪಾಲವೆಂಬುದು ಪ್ರಸಿದ್ಧ ಪವಿತ್ರಸ್ಥಳ. ಬದರೀಯಾತ್ರೆಗೆ ಹೋಗುವವರೆಲ್ಲ ಇಲ್ಲಿ ಬಂದು ಪಿತೃಗಳಿಗೆ ಪಿಂಡಪ್ರದಾನ ಮಾಡುವುದು ರೂಢಿ. ಇಲ್ಲಿ ಮಾಡಿದ ಶ್ರಾದ್ಧದಿಂದ ವಿಷ್ಣು ಪದ ದೊರೆಯುವುದೆಂದು ನಂಬಿಕೆ. (ಎಸ್.ಕೆ.ಆರ್.)

**ಅಲಕಪಾದಿಗಳು :** ಸಿರ್ರಿಪೀಡಿಯ ಎಂದರೆ ಕೂದಲಿನಂತಹ ಕಾಲುಗಳುಳ್ಳ ಜೀವಿಗಳು. ಕ್ರಸ್ಟೇಷಿಯ ವರ್ಗದ ಒಂದು ಉಪವಿಭಾಗ. ಕುರುಳುಪಾದಿಗಳು. ಇವನ್ನು ಬಾರ್ನಕಲ್ಸ್ (ಚಿಪ್ಪುಳ್ಳ ಪ್ರಾಣಿಗಳು) ಎಂದು ಕರೆಯುತ್ತಾರೆ. ಇವು ಸಾಮಾನ್ಯವಾಗಿ ಸಮುದ್ರದಲ್ಲಿ ತೇಲುವ ಮರದ ದಿಮ್ಮಿಗಳಿಗೂ ಹಡಗಿನ ತಳಕ್ಕೂ ಅಂಟಿಕೊಂಡು ಬದುಕುತ್ತವೆ. ಬಾರ್ನಕಲ್‌ಗಳ ಪ್ರಭೇದಗಳಲ್ಲಿ ಸಾಮಾನ್ಯವಾಗಿ ಹಡಗುಗಳಿಗೆ ಅಂಟಿಕೊಂಡಿರುವ ಪ್ರಾಣಿಗೆ ಲಿಪಾಸ್ ಎಂದು ಹೆಸರು; ಸಾಮಾನ್ಯ ರೂಢನಾಮ ಬಾತುಕೋಳಿಬಾರ್ನಕಲ್ (ಗೂಸ್ ಬಾರ್ನಕಲ್). ಇದು ಕ್ರಸ್ಟೇಷಿಯ ವರ್ಗದ ಯಾವ ಪ್ರಾಣಿಯನ್ನೂ ಹೋಲುವುದಿಲ್ಲ. ಉದ್ದವಾದ ಮಾಂಸಖಂಡಗಳ ತೊಟ್ಟಿನಿಂದ ಆಧಾರಕ್ಕೆ ಅಂಟಿಕೊಂಡಿರುತ್ತದೆ. ತೊಟ್ಟಿನ ತುದಿಯಲ್ಲಿ ಒಂದರೊಡನೊಂದು ಬೆಸುಗೆ ಹಾಕಿದಂತೆ ಸೇರಿರುವ ಕಠಿಣವಾದ ಐದು ತಟ್ಟೆಗಳ ಚಿಪ್ಪು ಇದೆ. ಚಿಪ್ಪಿನ ಒಂದು ತುದಿಯಲ್ಲಿ ಸೀಳಿನಂತಿರುವ ಒಂದು ರಂಧ್ರವಿದೆ. ಪ್ರಾಣಿ ರಂಧ್ರದ ಮೂಲಕ ಸುರುಳಿಯಂತಿರುವ ತನ್ನ ಆರು ಜೊತೆ ಕುರುಳು ಕಾಲುಗಳನ್ನು ಬೇಕೆಂದಾಗ ಹೊರಚಾಚಬಲ್ಲದು, ಒಳಗೆ ಎಳೆದುಕೊಳ್ಳಬಲ್ಲದು. ಈ ಕಾಲುಗಳು ಅತ್ಯಂತ ಕಠಿಣವಾದ ಮತ್ತು ಒಂದರೊಡನೊಂದು ಭದ್ರವಾಗಿ ಹೆಣೆದುಕೊಂಡಿರುವ ರೋಮಗಳಂತಿರುವ ರಚನೆಗಳನ್ನು ಹೊಂದಿವೆ.



**ಚಿತ್ರ 1. ಲಿಪಾಸ್ ಲಾರ್ವ**

ಲಿಪಾಸ್ ಪ್ರಾಣಿ ಅದರ ಕಾಲುಗಳನ್ನು ಹೊರಚಾಚಿ ಪೂರ್ಣವಾಗಿ ಬಿಡಿಸಿದಾಗ ಈ ರೋಮಗಳಂಥ ರಚನೆಗಳು ಒಂದು ರೀತಿಯ ಬಲೆಯಂತೆ ಕಾಣುತ್ತವೆ. ಇದರ ಸಹಾಯದಿಂದ ಅದು ನೀರನ್ನು ಶೋಧಿಸಿ ಅದರೊಳಗಿರುವ ಸೂಕ್ಷ್ಮ ಜೀವಿಗಳನ್ನು ಹಿಡಿದು ಆಹಾರವಾಗಿ ಸೇವಿಸುತ್ತದೆ; ಹಿಡಿದ ಮೇಲೆ ಕಾಲುಗಳನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುತ್ತದೆ. ಲಿಪಾಸ್ ಅಂಟಿಕೊಂಡಿರುವ ತೊಟ್ಟು ಮುಂದಲೆ. ಇದು 5 ಚಿಪ್ಪುಗಳಿಂದ ರಕ್ಷಿಸಲ್ಪಟ್ಟಿದೆ. ಒಂದು ಜೊತೆ ಕುಡಿಮೀಸೆಗಳು ಈ ತೊಟ್ಟು ಉತ್ಪತ್ತಿ ಮಾಡುವ ಅಂಟಾದ ವಸ್ತುವಿನೊಳಗೆ ಅಡಗಿವೆ. ಆಹಾರ ಬೇಟೆಯಾಡುವ ವಿಧಾನವನ್ನು ಗಮನಿಸಿದ ಜೀವಶಾಸ್ತ್ರಜ್ಞ ಹಕ್ಸ್ಲೀ ಈ ಪ್ರಾಣಿಯನ್ನು ತಲೆಯ ಮೇಲೆ ನಿಂತು ಕಾಲಿನಿಂದ ಆಹಾರವನ್ನು ಬಾಯಿಗೆ ಬೀಳುವಂತೆ ಒದೆಯುವ ಪ್ರಾಣಿ ಎಂದು ವಿವರಿಸಿದ್ದಾನೆ.

**ಬಲಾನಸ್:** ಅಲಕಪಾದಿಗಳ ಗುಂಪಿಗೆ ಸೇರಿದ ಮತ್ತೊಂದು ಪ್ರಾಣಿ. ರಚನೆಯಲ್ಲಿ ಲಿಪಾಸನ್ನೇ ಹೋಲುತ್ತದೆ. ಆದರೆ ಇದಕ್ಕೆ ಲಿಪಾಸ್‌ನಂತೆ ಉದ್ದವಾದ ತೊಟ್ಟು ಇಲ್ಲ. ಈ ಪ್ರಾಣಿ ತ್ರಿಕೋಣಾಕಾರದ ಗಟ್ಟಿ ಪದಾರ್ಥಕ್ಕೆ ಅಂಟಿಕೊಂಡಿರುವ ಗಟ್ಟಿಯಾದ ಚಿಪ್ಪಿನೊಳಗಿರುತ್ತದೆ. ಚಿಪ್ಪಿನ ಮೇಲುಭಾಗದಲ್ಲಿ ಒಂದು ದೊಡ್ಡ ರಂಧ್ರವಿದೆ. ಇದನ್ನು ಬಾಗಿಲುಗಳಂಥ ಕವಾಟವುಳ್ಳ ಒಂದು ಜೊತೆ ಚಿಪ್ಪುಗಳು ಮುಚ್ಚಿಕೊಂಡಿವೆ. ಚಿಪ್ಪುಗಳ ರಂಧ್ರದ ಮೂಲಕ ಪ್ರಾಣಿ ತನ್ನ ಪಾದಗಳನ್ನು ಹೊರಚಾಚಬಲ್ಲುದು.

ಬಾರ್ನಕಲ್‌ಗಳಿಗೆ ಮೃದ್ವಂಗಿ ಗಳಂತೆಯೇ ಶರೀರವು ಚಿಪ್ಪಿನಿಂದ ಆವೃತವಾಗಿರುವುದರಿಂದ ಇವನ್ನು ಮೃದ್ವಂಗಿಗಳೆಂದೇ ತಿಳಿಯಲಾಗಿತ್ತು. ಆದರೆ ಜೆ.ವಿ. ಥಾಮ್ಸನ್ ಎಂಬ ನೌಕಾಪಡೆಯ ವೈದ್ಯ ಬಾರ್ನಕಲ್‌ಗಳ ಲಾರ್ವಾ (ಡಿಂಬ)ಗಳು ಕ್ರಸ್ಟೇಷಿಯ ವರ್ಗದ



**ಚಿತ್ರ 2. ನಾಪ್ಲಿಯಸ್ ಲಾರ್ವ**
**1 ಮಾಂಡಿಬಲ್ 2 ಸ್ಪರ್ಶಾಂಗ (ಆಂಟೆನ್ನಾ) 3 ಗ್ರಂಥಿಗಳಿರುವ ಮುಂದಿನ ಕೋಡುಗಳು (ಕೊಂಬುಗಳು) 4 ಸ್ಪರ್ಶಾಂಗ (ಟೆಂಟಕಲ್) 5 ಸ್ಪರ್ಶಾಂಗ (ಅಂಟೆನ್ಯೂಲ್) 6 ಎದೆ 7 ಉದರ**

ಲಾರ್ವಾಗಳನ್ನು ಹೋಲುತ್ತವೆಂದು ಕಂಡುಹಿಡಿದ (1830). ಆದ್ದರಿಂದ ಕುತೂಹಲ ಗೊಂಡ ಆ ವೈದ್ಯ ಬಾರ್ನಕಲ್ ಜೀವಿಯ ಮೊಟ್ಟೆಗಳನ್ನೂ ಭ್ರೂಣ ಬೆಳವಣಿಗೆಯ ಪ್ರಥಮ ಹಂತದಲ್ಲಿ ಪರಿಶೀಲಿಸಿದ. ಈ ಎರಡು ರೀತಿಯ ಮೊಟ್ಟೆಗಳಿಂದಲೂ ಒಂದೇ ರೀತಿ ಇರುವ ಲಾರ್ವಾ ಜೀವಿಗಳು ಹೊರಬಂದುವು. ಇವೇ ನಾಪ್ಲಿಯಸ್ ಲಾರ್ವಾಗಳು. ಬಾರ್ನಕಲ್‌ನ

ನಾಪ್ಲಿಯಸ್ ಲಾರ್ವಾಗಳಿಗೂ ಕ್ರಸ್ಟೇಷಿಯದ ನಾಪ್ಲಿಯಸ್ ಲಾರ್ವಾಗಳಿಗೂ ಕೇವಲ ಕೆಲವೇ ಸೂಕ್ಷ್ಮ ರಚನೆಗಳಲ್ಲಿ ಭಿನ್ನತೆಯಿದೆ. ನಾಪ್ಲಿಯಸ್ ಲಾರ್ವಾ ನೀರಿನಲ್ಲಿ ಈಸಿ ಬೆಳೆದು ಮುಂದೆ ಸೈಪ್ರಿಸ್ ಎಂಬ ಮತ್ತೊಂದು ರೀತಿಯ ಲಾರ್ವಾ ಆಗಿ ಪರಿವರ್ತನೆಗೊಳ್ಳುತ್ತದೆ. ಈ ಸೈಪ್ರಿಸ್ ಸಂದಿಪದಿಗಳ ಆಸ್ಟ್ರಕೋಡ ಗುಂಪಿನ ಲಾರ್ವಾಗಳನ್ನು ಹೋಲುತ್ತದೆ. ಈ ಲಾರ್ವ ತನ್ನ ಶರೀರವನ್ನು ಎರಡು ಚಿಪ್ಪುಗಳಿಂದ ಮುಚ್ಚಿಕೊಂಡಿರುತ್ತದೆ.

ಶರೀರದ ಮುಂಭಾಗದಲ್ಲಿ ಒಂದು ಜೊತೆ ವಿಚಿತ್ರರೀತಿಯ ಕುಡಿಮೀಸೆಗಳಿರುತ್ತವೆ. ಈ ಅವಸ್ಥೆಯಲ್ಲಿ ಅವಕ್ಕೆ ಆರು ಜೊತೆ ಪಾದಗಳಿರುತ್ತವೆ. ಅದರ ಕುಡಿಮೀಸೆಗಳಲ್ಲಿ ಅಂಟುಸಿಂಬಿ ಗಳಿದ್ದು ಸಕಾಲದಲ್ಲಿ ಯಾವುದಾದರೊಂದು ಗಟ್ಟಿ ಪದಾರ್ಥಕ್ಕೆ ಅಂಟಿಕೊಳ್ಳಲು ಸಹಾಯ ಮಾಡುತ್ತವೆ. ಈ ಜೀವಿ ಸಂಪೂರ್ಣವಾಗಿ ಅಂಟಿಕೊಂಡ ಮೇಲೆ ಅದರ ಶರೀರದ ಎರಡು ಚಿಪ್ಪುಗಳನ್ನು ವಿಸರ್ಜಿಸಿ ರೂಪಾಂತರಣ ಹೊಂದುತ್ತದೆ.

ಬಾರ್ನಕಲ್ ಪ್ರಾಣಿ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ದಂತಕಥೆಗಳು ಪ್ರಚಾರದಲ್ಲಿವೆ. ಜೀವವಿಕಾಸದ ಬಗೆಗೆ ವಿವರಣೆ ನೀಡುವಾಗ ಕೆಲವರು ಇವೇ ಹೇಗೆ ಬದಲಾಗಿ ಮುಂದೆ ಸಮುದ್ರದ ಬಾತುಕೋಳಿಯಾದುವೆಂದು ಕಥೆಯರೂಪದಲ್ಲಿ ಹೇಳುತ್ತಾರೆ. ಇವೆಲ್ಲ ಕಾಲ್ಪನಿಕ ಕಥೆಗಳು. ಬಾತುಕೋಳಿಗೂ ಬಾರ್ನಕಲ್ ಪ್ರಾಣಿಗಳಿಗೂ ಯಾವ ಸಂಬಂಧವೂ ಇಲ್ಲ.

**ಸಾಕ್ಯುಲೈನ :** ಅಲಕಪಾದಿಗಳ ವಿಭಾಗದಲ್ಲಿ ಆಶ್ಚರ್ಯಕರವಾದ ಪರತಂತ್ರ ಜೀವಿಗಳೂ ಇವೆ. ಇವುಗಳಿಗೂ ಬಾರ್ನಕಲ್ ಪ್ರಾಣಿಗಳಿಗೂ ಮತ್ತಿತರ ಸಂದಿಪದಿಗಳಿಗೂ ಬಾಹ್ಯವಾಗಿ ಯಾವ ರೀತಿಯಲ್ಲಿಯೂ ಹೋಲಿಕೆ ಇಲ್ಲ. ಕೆಲವು ಏಡಿಗಳಲ್ಲಿ ಅವುಗಳ ಉದರದ ತಳಭಾಗದಲ್ಲಿ ಒಂದು ರೀತಿಯ ಮಾಂಸದ ಮುದ್ದೆಯಂತಿರುವ ಮೃದುವಾದ ಗಡ್ಡೆಯನ್ನು ಕಾಣಬಹುದು. ಈ ಗಡ್ಡೆ ತನ್ನ ನೈಜರೂಪವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ಒಂದು ಅಲಕಪಾದಿ. ಇದೊಂದು ಪರತಂತ್ರ ಜೀವಿ. ಇದರ ಹೆಸರು ಸಾಕ್ಯುಲೈನ. ಗಡ್ಡೆಯಂತೆ ಕಾಣುವ ಈ ಜೀವಿ ಏಡಿಯ ಶರೀರಕ್ಕೆ ತನ್ನ ಒಂದು ಚಿಕ್ಕ ತೊಟ್ಟಿನಂತಿರುವ ರಚನೆಯಿಂದ ಅಂಟಿಕೊಂಡಿದೆ. ಸೂಕ್ಷ್ಮ ದಾರಗಳಂತಿರುವ ಬೇರುಗಳಂಥ ರಚನೆಗಳನ್ನು ಏಡಿಯ ಶರೀರದ ಎಲ್ಲ ಭಾಗಗಳಿಗೂ ಹರಡುತ್ತದೆ. ಈ ರೀತಿಯ ರಚನೆಗಳು ಏಡಿಯ ಕಾಲಿನ ತುದಿಯವರೆಗೂ ಹರಡಿರುವುದನ್ನು ಕಾಣಬಹುದು. ಬೇರುಗಳಂಥ ಈ ರಚನೆಗಳಿಂದ ಸಾಕ್ಯುಲೈನ ಜೀವಿ ಏಡಿಯ ಶರೀರದಿಂದ ತನಗೆ ಬೇಕಾದ ಆಹಾರ ಪದಾರ್ಥಗಳನ್ನು ಹೀರಿಕೊಳ್ಳುತ್ತದೆ. ಅದಕ್ಕೆ ಆಹಾರವನ್ನು ಅಗಿಯಲು ದವಡೆಗಳಿಲ್ಲ; ಜೀರ್ಣಿಸಿಕೊಳ್ಳಲು ಜೀರ್ಣಾಂಗಗಳಿಲ್ಲ; ಚಲನೆಗೆ ಕಾಲುಗಳಿಲ್ಲ; ವಿವರಿಸಲು ಸರಿಯಾದ ರೂಪವೇ ಇಲ್ಲ! ಈ ರೀತಿಯಲ್ಲಿರುವ ಸಂಪೂರ್ಣ ಅಂಗವಿಕಾರವನ್ನು ಹೊಂದಿರುವ ಈ ಜೀವಿ ಪ್ರಾಪ್ತವಯಸ್ಸಿಗೆ

ಬಂದಾಗ ಮೊಟ್ಟೆಯ ಚೀಲದಂತಿರುತ್ತದೆ. ಇದು ಪ್ರಾಯಕ್ಕೆ ಬಂದಾಗ ಕುರುಳುಪಾದಿಯೆನ್ನುವುದಕ್ಕಾಗಲಿ ಅಥವಾ ಸಂದಿಪದಿಯೆನ್ನುವುದಕ್ಕಾಗಲಿ ಯಾವ ಆಧಾರವೂ ಇಲ್ಲ. ಆದರೆ ಇದರ ಭ್ರೂಣ ಬೆಳವಣಿಗೆಯ ಅಧ್ಯಯನದಿಂದ ಇದು ಕುರುಳುಪಾದಿ ವಿಭಾಗಕ್ಕೆ ಸೇರಿದ್ದೆಂದು ಸ್ಥಿರಪಡಿಸಬಹುದು. ಇದರ ಮೊಟ್ಟೆಗಳಿಂದ ನಾಪ್ಲಿಯಸ್ ಲಾರ್ವಾ ಹೊರಬರುತ್ತದೆ. ಇದು ಮುಂದೆ ಸೈಪ್ರಿಸ್ ಲಾರ್ವಾ ಆಗಿ ಪರಿವರ್ತನೆಗೊಳ್ಳುತ್ತದೆ. ಸಾಕ್ಯುಲೈನ ಪ್ರಾಣಿಯಿಂದ ಹುಟ್ಟಿ ಬರುವ ಸೈಪ್ರಿಸ್ ಲಾರ್ವಾಗೂ ಇತರ ಬಾರ್ನಕಲ್ ಪ್ರಾಣಿಗಳ ಸೈಪ್ರಿಸ್ ಪ್ರಾಣಿಗಳಿಗೂ ವ್ಯತ್ಯಾಸವೇನಿಲ್ಲ. ಆದರೆ ಈ ಪ್ರಾಣಿಯ ಸೈಪ್ರಿಸ್ ಲಾರ್ವಾಕ್ಕೆ ಅನ್ನನಾಳ, ಬಾಯಿಗಳಿರುವುದಿಲ್ಲ. ಈ ಸೈಪ್ರಿಸ್ ಯಾವುದಾದರೊಂದು ಏಡಿಯ ಉದರಕ್ಕೆ ಅಂಟಿಕೊಂಡು ಬೆಳೆದು ದೊಡ್ಡದಾಗಿ ಸಾಕ್ಯುಲೈನ ಜೀವಿಯಾಗಿ ಪರಿವರ್ತನೆಗೊಳ್ಳುತ್ತದೆ. ಸಾಕ್ಯುಲೈನ ಪ್ರಾಣಿ ತನ್ನ ಆತಿಥೇಯ ಪ್ರಾಣಿಯಲ್ಲಿ ಲಿಂಗ ಪರಿವರ್ತನೆ ಮಾಡುವುದು ಕಂಡುಬಂದಿದೆ. ಈ ಪರತಂತ್ರ ಜೀವಿ ಗಂಡು ಏಡಿಗಳ ಆತಿಥೇಯದಲ್ಲಿ ಹೆಣ್ಣು ಏಡಿಗಳ ಬಾಹ್ಯ ಲಕ್ಷಣಗಳುಂಟಾಗುವಂತೆ ಮಾಡುತ್ತವೆ. ಹೆಣ್ಣು ಏಡಿಗಳ ಆತಿಥೇಯದಲ್ಲಿ ಅವುಗಳ ಅಂಡಾಶಯ ಕ್ಷೀಣಿಸುವಂತೆ ಮಾಡುತ್ತವೆ. ಲಿಂಗಪರಿವರ್ತನೆ ಮಾಡುವ ಈ ವಿಧಾನವನ್ನು ಪರತಂತ್ರ ನಿರ್ವೀರ್ಯಗೊಳಿಸುವಿಕೆ ಎನ್ನುತ್ತೇವೆ. **(ನೋಡಿ– ಕಠಿಣ–ಚರ್ಮಿಗಳು)** (ಎಲ್.ಎಸ್.ಜಿ.)

**ಅಲಘನಿ ಪರ್ವತಗಳು :** ಪೆನ್ಸಿಲ್ವೇನಿಯ, ವರ್ಜಿನಿಯ ಸಂಸ್ಥಾನಗಳಲ್ಲಿ ಮತ್ತು ನ್ಯೂಯಾರ್ಕ್ ಸಂಸ್ಥಾನದ ಕೆಲವು ಭಾಗಗಳಲ್ಲಿ ಹಬ್ಬಿವೆ. ಹಡ್ಸನ್ ನದಿಯ ದಕ್ಷಿಣ ಮತ್ತು ಪಶ್ಚಿಮಕ್ಕೆ ಬರುತ್ತವೆ. ಸರಾಸರಿ ಎತ್ತರ 1460 ಮೀ. ಪ್ರಮುಖವಾಗಿ ಅಪಲೇಷಿಯನ್ ಪರ್ವತಗಳ ಭಾಗ. ಹಿಮಯುಗದಲ್ಲಿ ಹಿಮಭರಿತವಾಗಿದ್ದುವು. ಹಿಮನದಿಗಳ ಪ್ರವಾಹ ತಂದ ಮೆಕ್ಕಲು ಮಣ್ಣಿನಿಂದಾಗಿ ಅನೇಕ ಆಳವಾದ ಕಣಿವೆಗಳು ಫಲವತ್ತಾಗಿವೆ. ಪ್ರಸ್ಥಭೂಮಿ ಪ್ರದೇಶ ಬಹು ಒರಟಾಗಿದೆ. ಆದ್ದರಿಂದ ಈ ಭಾಗದಲ್ಲಿನ ಅಲಘನಿ ಮುಂತಾದ ಅನೇಕ ನದೀಪಾತ್ರಗಳಲ್ಲಿ ಹಲವು ಜಲಪಾತಗಳಿವೆ. ಪ್ರಸ್ಥಭೂಮಿಯ ಅನೇಕ ಕಡೆಗಳಲ್ಲಿ ವ್ಯವಸಾಯಕ್ಕೆ ಅನುಕೂಲವಾಗಿದೆ. ತರಕಾರಿಗಳನ್ನು ಬೆಳೆಯುವುದು ಇಲ್ಲಿನ ಅತಿ ಮುಖ್ಯ, ಲಾಭದಾಯಕ ಉದ್ಯಮ. (ಜಿ.ಕೆ.ಜಿ.)

**ಅಲಬಾಮ :** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ಸಂಯುಕ್ತ ಸಂಸ್ಥಾನದ ಆಗ್ನೇಯದಲ್ಲಿರುವ ಈ ರಾಜ್ಯವನ್ನು ಉತ್ತರದಲ್ಲಿ ಟೆನೆಸ್ಸಿ, ಪೂರ್ವಕ್ಕೆ ಜಾರ್ಜಿಯ, ದಕ್ಷಿಣದಲ್ಲಿ ಫ್ಲಾರಿಡ, ಪಶ್ಚಿಮದಲ್ಲಿ ಮಿಸಿಸಿಪ್ಪಿ ಸಂಸ್ಥಾನಗಳು ಸುತ್ತುವರೆದಿವೆ. ವಿಸ್ತೀರ್ಣ 13,3950. ಚ.ಕಿಮೀ. ಜನಸಂಖ್ಯೆ. 4,369,862 (1999). ರಾಜಧಾನಿ ಮಾಂಟ್ಗೊಮರಿ.

ಅಲಬಾಮ : ಸಂಯುಕ್ತಸಂಸ್ಥಾನಕ್ಕೆ ಸ್ಪೇನ್ ದೇಶದಿಂದ 1795 ಮತ್ತು 1813ರಲ್ಲಿ ಒಪ್ಪಿಸಲ್ಪಟ್ಟು, 1817ರಲ್ಲಿ ಒಂದು ಸೀಮೆಯಾಗಿ 1819ರಲ್ಲಿ ಪ್ರಾಂತ್ಯವಾಗಿ ಕೇಂದ್ರಕ್ಕೆ ಸೇರಿಸಲ್ಪಟ್ಟಿತು. ಒಳಯುದ್ಧದ ಕಾಲದಲ್ಲಿ (1861) ದಕ್ಷಿಣದ ಪಕ್ಷಕ್ಕೆ ಸೇರಿ ಪ್ರತ್ಯೇಕಗೊಂಡು, ಯುದ್ಧ ಮುಗಿದ ಅನಂತರ 1865ರಲ್ಲಿ ಮತ್ತೆ ಕೇಂದ್ರಕ್ಕೆ ಸೇರಿತು. ಮೆಕ್ಸಿಕೊ ಖಾರಿಯ 80 ಕಿಮೀ ಉದ್ದನೆಯ ತೀರ ಪ್ರದೇಶವಲ್ಲದೆ ಅಪಲೇಷಿಯನ್ ಪರ್ವತಗಳ ದಕ್ಷಿಣದ ತುದಿಯವರೆಗಿರುವ ತೀರದ ಮೈದಾನದವರೆಗೂ 213 ಕಿಮೀ ವಿಸ್ತರಿಸಿದೆ. ದಕ್ಷಿಣಭಾಗದಲ್ಲಿ ಇರುವುದರಿಂದ, ಮೇಲ್ಮೈ ಲಕ್ಷಣದ ಪರಿಣಾಮವಾಗಿ ಹಿತಕರವಾದ ಉಷ್ಣವಲಯದ ವಾಯುಗುಣವನ್ನು ಹೊಂದಿದೆ; ಬೇಸಗೆ ದೀರ್ಘವಾದರೂ ಉಷ್ಣ ಹೆಚ್ಚಿರುವುದಿಲ್ಲ. ಗಾಳಿ ತೇವವಾಗಿರುತ್ತದೆ. ಚಳಿಗಾಲ ಹ್ರಸ್ವವಲ್ಲದೆ ಹಿತಕರವಾಗಿರುತ್ತದೆ. ಉತ್ತರದ ಪರ್ವತ ಪ್ರದೇಶದಲ್ಲಿ ಸ್ವಲ್ಪ ಹಿಮ ಬೀಳುತ್ತದೆ. ಜನವಸತಿ ಪ್ರಾರಂಭವಾದುದು ಬಹು ಹಿಂದೆಯೇ; ಚಾರಿತ್ರಿಕ ಮತ್ತು ಆರ್ಥಿಕ ತೊಂದರೆಗಳು ಆಗಾಗ್ಗೆ ಬಂದರೂ ಬೆಳವಣಿಗೆ ಒಂದೇ ಸಮನಾಗಿ ಮುಂದುವರಿದಿದೆ. ಹತ್ತೊಂಬತ್ತನೆಯ ಶತಮಾನ ಕಳೆಯುವವರೆಗೂ ಅದರ ಪ್ರಗತಿ ವಿಶೇಷವಾಗಿ ಕೃಷಿರಂಗದಲ್ಲಿತ್ತು; ಹತ್ತಿ ಅದರ ಸಂಪತ್ತಿನ ಬಹುಭಾಗವನ್ನೊದಗಿಸಿತು. ಈಗ ಧಾನ್ಯ, ನೆಲಗಡಲೆ, ಹಣ್ಣುಗಳು, ಕಾಯಿಪಲ್ಯಗಳಲ್ಲದೆ ಹತ್ತಿಯನ್ನೂ ಬೆಳೆಸುತ್ತಾರೆ; ಪಶುಪಾಲನೆಯೂ ಬಹಳ ಹೆಚ್ಚಿದೆ. ಇತ್ತೀಚಿನ ದಶಕಗಳಲ್ಲಿ ಕಲ್ಲಿದ್ದಲು, ಕಬ್ಬಿಣಗಳ ಉತ್ಪಾದನೆ ಹೆಚ್ಚಿದೆ. ಆಲಬ್ಯಾಮದ ಕೈಗಾರಿಕಾ ಪ್ರಗತಿ, ಅದರ ಖನಿಜೋತ್ಪನ್ನಗಳ ಪ್ರಮಾಣಕ್ಕನುಸಾರವಾಗಿ ಮುಂದುವರಿದಿದೆ; ಈ ಉತ್ಪನ್ನವೇ ಇಡೀ ದೇಶದ ಉತ್ಪನ್ನದ ಮೂರನೆಯ ಎರಡರಷ್ಟಿದೆ; ಕಬ್ಬಿಣ, ಉಕ್ಕು, ನೇಯ್ಗೆ ಪದಾರ್ಥಗಳು, ಕಲ್ಲೆಣ್ಣೆ, ರಾಸಾಯನಿಕಗಳು, ಮರಮುಟ್ಟುಗಳು, ಕಾಗದ, ಸಂಸ್ಕರಿಸಿದ ಮಾಂಸದ 'ಪ್ಯಾಕ್' ಮಾಡುವುದು ಮತ್ತು ಯಂತ್ರೋಪಕರಣಗಳು– ಇವು ಮುಖ್ಯವಾದುವು. ಶೇ.30 ಜನ ನೀಗ್ರೋಗಳು. ಮುಖ್ಯ ಪಟ್ಟಣಗಳು, ಬರ್ಮಿಂಗ್ ಹ್ಯಾಂ, ಮೊಬೈಲ್ ಮತ್ತು ಮಾಂಟ್ಗೊಮರಿ. ದಕ್ಷಿಣ ಪ್ರದೇಶದಲ್ಲಿನ ಗತವೈಭವವನ್ನು ಜ್ಞಾಪಕಕ್ಕೆ ತರುವಂಥ ರಾಜ್ಯದ ಚರಿತ್ರಾರ್ಹವಾದ, ಹಿಂದಿನ ಯುದ್ಧಪೂರ್ವ ಸ್ಥಳಗಳು ಮತ್ತು ಹಳೆಯ ದೊಡ್ಡ ಮರದ ತೋಪುಗಳನ್ನು ನೋಡಲು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. (ಸಿ.ಎಂ.)

**ಅಲಭ್ಯತೆ :** ಒಂದು ವ್ಯವಸ್ಥೆ (ಸಿಸ್ಟಂ) ಹಠಾತ್ ಬದಲಾವಣೆ ಹೊಂದುವ ಸಾಧ್ಯತೆಯನ್ನು ಅಳತೆ ಮಾಡುವ ಅಂಕ (ಎಂಟ್ರೊಪಿ). ಈ ಅಂಕದ ಹೆಸರು ವ್ಯವಸ್ಥೆಯ ಅಲಭ್ಯತೆ. ಉಷ್ಣ ಚಲನಶಾಸ್ತ್ರದ (ಥರ್ಮೋಡೈನಮಿಕ್ಸ್) ಮತ್ತು ಸಂಖ್ಯಾಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್) ಇವುಗಳನ್ನು ಆಧರಿಸಿ ಅಲಭ್ಯತೆಯ ವ್ಯಾಖ್ಯೆ ನೀಡಬಹುದು. ಹೀಗೆ ದೊರೆಯುವ ಎರಡು ವ್ಯಾಖ್ಯೆಗಳೂ ಪರಸ್ಪರ ಸಂಗತವಾಗಿವೆ.

ಉಷ್ಣಚಲನಶಾಸ್ತ್ರದ ಪ್ರಕಾರ ಅಲಭ್ಯತೆ S ನ ಬೆಲೆಯನ್ನು ನೀಡುವ ಸಮೀಕರಣ ds=äq/T ; q ಉಷ್ಣ ಪರಿಣಾಮ, T ನಿರಪೇಕ್ಷ ಉಷ್ಣತೆ.

ಸಂಖ್ಯಾಶಾಸ್ತ್ರದ ಪ್ರಕಾರ ಅಲಭ್ಯತೆ ಒಂದು ವ್ಯವಸ್ಥೆಯ ಯಾದೃಚ್ಛಿಕತೆಯ ಮಾನ ಅಥವಾ ಕ್ರಮರಾಹಿತ್ಯದ ಅಥವಾ ಗೊಂದಲದ ಡಿಗ್ರಿ. ಉದಾಹರಣೆಗೆ, ವ್ಯವಸ್ಥೆಯನ್ನು ಒಂದು ಕೋಣೆಯಲ್ಲಿರುವ ಗಾಳಿಯ ಅಣುಗಳು ಎಂದು ಭಾವಿಸಬಹುದು. ಅಣುಚಲನ ಶಾಸ್ತ್ರದ (ನೋಡಿ– ಅಣುಚಲನವಾದ,–ವಸ್ತುವಿನ) ಪ್ರಕಾರ ಈ ಅಣುಗಳ ಯಾದೃಚ್ಛಿಕ ಚಲನೆಯೇ ಉಷ್ಣ. ಅಂದರೆ ಕೋಣೆಯಲ್ಲಿರುವ ಗಾಳಿಯ ಎಲ್ಲ ಅಣುಗಳೂ 3.048 ಮೀ. X 1.524X 2.743 ಮೀ. ಘನಗಾತ್ರದ ಕೋಣೆಯಲ್ಲಿ ಸುಮಾರು $10^{27}$ ಅಣುಗಳಿವೆಯೆಂದು ತಿಳಿದಿದೆ) ನಿರಂತರ ಯಾದೃಚ್ಛಿಕ ಚಲನೆಯಲ್ಲಿರುತ್ತವೆ. ಒಂದು ಊಹ್ಯ ಊರ್ಧ್ವ ಸಮತಳದಿಂದ ಕೋಣೆಯನ್ನು ಎರಡು ಭಾಗಗಳಾಗಿ ವಿಭಾಗಿಸಲಾಗಿದೆಯೆಂದು ಭಾವಿಸಿದರೆ ಅಣುಗಳ ಯಾದೃಚ್ಛಿಕ ಚಲನೆಯಿಂದ ಯಾವುದೋ ಒಂದು ಗಳಿಗೆಯಲ್ಲಿ ಅವೆಲ್ಲವೂ ಒಂದು ಭಾಗದಲ್ಲಿ ನಿಬಿಡವಾಗಿ ಸೇರಿಕೊಳ್ಳಬಹುದು; ಇನ್ನೊಂದು ಭಾಗ ಆ ಗಳಿಗೆಯಲ್ಲಿ ಅತಿ ವಿರಳವಾಗಬಹುದು. ಹೀಗೆ ಆಗುವ ಸಂಭಾವ್ಯತೆಯನ್ನು (ಪ್ರಾಬಬಿಲಿಟಿ) ಗಣಿತಶಾಸ್ತ್ರದ ಪ್ರಕಾರ ಲೆಕ್ಕ ಹಾಕಿದಾಗ ಸುಮಾರು $10^{299\ 999\ 999\ 999\ 999\ 999\ 999\ 998}$ ಸೆಕೆಂಡುಗಳಷ್ಟು ಕಾಲ ಬೇಕಾಗಬಹುದು ಎಂದು ತಿಳಿಯಿತು. ವಿಶ್ವದ ಪ್ರಾಯಕ್ಕಿಂತಲೂ ($10^{17}$ ಸೆಕೆಂಡ್‌ಗಳು) ಈ ಅವಧಿ ದೊಡ್ಡದು; ಸಾರಾಂಶವಿಷ್ಟೆ: ಕೋಣೆಯ ಒಂದು ಪಾರ್ಶ್ವ ನಿರ್ವಾತವೂ ಇನ್ನೊಂದು ಪಾರ್ಶ್ವ ಗಾಳಿ ಅಣುಗಳ ಅತಿ ನಿಬಿಡ ಸೇರ್ಪಡೆಯೂ ಆಗುವಂಥ ಘಟನೆ ಅಸಾಧ್ಯವಲ್ಲ; ಆದರೆ ಅತಿ ಅಸಂಭವನೀಯ.

ಜಗತ್ತಿನ ಯಾವ ಎರಡು ಪದಾರ್ಥಗಳಿಗೆ ಉಷ್ಣಾಂಶ ವ್ಯತ್ಯಾಸವಿದ್ದರೂ ಉಷ್ಣಶಕ್ತಿಯು ತಾನಾಗಿಯೇ ಬಿಸಿ ವಸ್ತುವಿನಿಂದ ಶೀತವಸ್ತುವಿಗೆ ಹರಿಯುತ್ತದೆ. ಬೇಕಿದ್ದರೆ ನಮ್ಮ ಪ್ರಯತ್ನದಿಂದ ಇದನ್ನು ಶೀಘ್ರವಾಗಿ ಹರಿಯುವಂತೆ ಮಾಡಬಹುದು ಅಷ್ಟೆ. ಹೀಗೆ ಹರಿಯುವಾಗ ಉಷ್ಣಶಕ್ತಿಯ ಒಂದು ಭಾಗವನ್ನು ನಾವು ನಮಗೆ ಬೇಕಾದ ರೂಪಕ್ಕೆ ತಿರುಗಿಸಿಕೊಳ್ಳಬಹುದು. ಆದರೆ ಹರಿದದ್ದಾದ ಮೇಲೆ ಶೀತವಸ್ತು ಹೀರಿಕೊಂಡ ಶಕ್ತಿಯು ನಮಗೆ ಅಲಭ್ಯವಾಗುತ್ತದೆ. ಉಷ್ಣ ಪ್ರವಾಹವಾದಾಗಲೆಲ್ಲ–ಉಷ್ಣಪ್ರವಾಹವು ಯಾವಾಗಲೂ ಆಗುತ್ತಲೇ ಇರುತ್ತದೆ– ವಿಶ್ವದ ಶಕ್ತಿಯ ಸಂಗ್ರಹದಲ್ಲಿ ಹೀಗೆ ಸ್ವಲ್ಪ ಭಾಗವು ಅಲಭ್ಯರೂಪವನ್ನು ಪಡೆಯುತ್ತದೆ. ಶೀತತಮ ಪದಾರ್ಥದಲ್ಲಿ ಮುಳುಗಿರುವ ಶಕ್ತಿಯು ನಮಗೆ ಅಲಭ್ಯವಾದುದರಿಂದ, ಪದಾರ್ಥದ ಉಷ್ಣಾಂಶವು ಹೆಚ್ಚಿದಂತೆಲ್ಲಾ ಲಭ್ಯಶಕ್ತಿಯು ಹೆಚ್ಚು ಎಂದು ಹೇಳುವ ಹಾಗಿಲ್ಲ. ಶಕ್ತಿಯನ್ನು ಬಳಸಿಕೊಳ್ಳಲು ನಮಗೆ ಮತ್ತೊಂದು ಶೀತಪದಾರ್ಥದ ಅಗತ್ಯವಿರುವುದರಿಂದ ಎಲ್ಲ ಪದಾರ್ಥಗಳ ಉಷ್ಣಾಂಶವೂ ಅಧಿಕವಾಗಿದ್ದರೆ ಆಗಲೂ ಶಕ್ತಿಯು ಅಲಭ್ಯವೇ. ಆದ ಕಾರಣ ಪದಾರ್ಥಗಳ ಉಷ್ಣಾಂಶಗಳ ವ್ಯತ್ಯಾಸ ಹೆಚ್ಚಿದಂತೆ ಶಕ್ತಿಯ ಲಭ್ಯತೆಯು ಹೆಚ್ಚುತ್ತದೆ. ಉಷ್ಣವಿನಿಮಯ ವ್ಯಾಪಾರಗಳಲ್ಲಿ ಬಿಸಿ ಪದಾರ್ಥವು ಆರಿ, ಶೀತ ಪದಾರ್ಥವು ಬಿಸಿಯಾಗುವುದರಿಂದ ಉಷ್ಣಾಂಶ ವ್ಯತ್ಯಾಸವು ಕಡಿಮೆಯಾಗುತ್ತದೆ. ಅಂದರೆ ಶಕ್ತಿಯು ಲಭ್ಯರೂಪದಿಂದ ಅಲಭ್ಯರೂಪಕ್ಕೆ ಇಳಿಯುತ್ತದೆ.

"ಶಕ್ತಿಯು ಅಲಭ್ಯತೆಯ ಪರಿಮಾಣಕ್ಕೆ–ಅಲಭ್ಯ ಶಕ್ತಿಯ ಪರಿಮಾಣಕ್ಕೆಲ್ಲ–ವಿಜ್ಞಾನಿಯು ಎಂಟ್ರೊಪಿ ಎಂದು ಹೆಸರಿಟ್ಟಿದ್ದಾನೆ. ಒಂದು ವಸ್ತುವಿನ ಗಾತ್ರ (ಘನಾವಕಾಶ), ಒತ್ತಡ, ಉಷ್ಣಾಂಶಗಳು ಹೇಗೆ ಅದರ ಸ್ಥಿತಿವಿಧಾಯಕಗಳೋ ಹಾಗೆಯೇ ವಸ್ತುವಿನ ಎಂಟ್ರೊಪಿಯೂ ಅದರ ಸ್ಥಿತಿವಿಧಾಯಕ ಪರಿಮಾಣ. ಕೆಲವು ಕ್ರಿಯೆಗಳಲ್ಲಿ ವಸ್ತುಗಳ ಗಾತ್ರ, ಉಷ್ಣಾಂಶಗಳು ಏರಬಹುದು, ಕೆಲವು ಕ್ರಿಯೆಗಳಲ್ಲಿ ಇವು ಇಳಿಯಬಹುದು; ಆದರೆ ಒಂದು ವ್ಯವಸ್ಥೆಯ ಎಂಟ್ರೊಪಿಯು ಮಾತ್ರ ಎಲ್ಲ ಕ್ರಿಯೆಗಳಲ್ಲಿಯೂ ವೃದ್ಧಿಯಾಗುತ್ತದೆ. ಏಕೆಂದರೆ ಸಮಸ್ತ ಕ್ರಿಯೆಗಳಲ್ಲಿಯೂ ಒಂದಲ್ಲ ಒಂದು ಕಡೆ ಹೆಚ್ಚು ಪ್ರಮಾಣದಲ್ಲಿಯೋ, ಕಡಿಮೆ ಪ್ರಮಾಣದಲ್ಲಿಯೋ ಉಷ್ಣವಿನಿಮಯವಾಗುತ್ತದೆ. ಇದಾದರೆ, ಶಕ್ತಿಯ ಅಲಭ್ಯ ರೂಪವು ಹೆಚ್ಚುತ್ತದೆ, ಅಂದರೆ ಎಂಟ್ರೊಪಿಯು ವೃದ್ಧಿಯಾಗುತ್ತದೆ. ಇದರ ಅರ್ಥ: ಕಾಲ ಕಳೆದಂತೆ, ವಿಶ್ವದ ವಯಸ್ಸು ಹೆಚ್ಚಾದಂತೆ, ಎಂಟ್ರೊಪಿಯೂ ವೃದ್ಧಿಯಾಗುತ್ತ ಹೋಗುತ್ತದೆ ಎಂದು ಇದರಿಂದ ಕೆಲವು ವಿಜ್ಞಾನಿಗಳು ಎಂಟ್ರೊಪಿಯ ವೃದ್ಧಿಯನ್ನೇ ನಮ್ಮ ಇಂದ್ರಿಯಗಳು ಕಾಲಗತಿ ಎಂದು ಗ್ರಹಿಸುತ್ತವೆ ಎಂದು ಹೇಳುವಷ್ಟರಮಟ್ಟಿಗೆ ಹೋಗಿದ್ದಾರೆ. ಎಂಟ್ರೊಪಿ ಹೆಚ್ಚುತ್ತ ಹೆಚ್ಚುತ್ತ ಅಧಿಕತಮವಾದಾಗ, ಅಂದರೆ ಎಲ್ಲ ಪದಾರ್ಥಗಳ ಉಷ್ಣಾಂಶವೂ ಒಂದೇ ಆದಾಗ,

ವಿಶ್ವವು ಕೊನೆಗಾಣುತ್ತದೆ. ಏಕೆಂದರೆ ಶಕ್ತಿಯ ಸಂಪೂರ್ಣ ಅಧೋಗತಿಯ ಕಾರಣವಾಗಿ ಯಾವ ಕ್ರಿಯೆಯೂ ನಡೆಯುವುದಿಲ್ಲ. ಇದು ವಿಶ್ವದ ಉಷ್ಣಮರಣವಾದಿಗಳ ಮತ. ವಿವಿಧ ಕ್ರಿಯೆಗಳಿಂದ ವಸ್ತುಗಳ ಎಂಟ್ರೋಪಿಯಲ್ಲಿ ಆದ ವ್ಯತ್ಯಾಸಗಳನ್ನು ಮಾತ್ರ ಉಷ್ಣಚಲನವಿಜ್ಞಾನದ ಎರಡನೆಯ ನಿಯಮದಿಂದ ಗಣಿಸಬಹುದೇ ಹೊರತು ಎಂಟ್ರೊಪಿಯನ್ನೇ ಗುಣಿಸಲಾಗುವುದಿಲ್ಲ. ಈ ಕೊರತೆಯನ್ನೂ ಜರ್ಮನ್ ವಿಜ್ಞಾನಿ ನರ್ನ್‌ಸ್ಟ್ ಎಂಬುವನು ತಾತ್ತ್ವಿಕವಾಗಿ ಹೋಗಲಾಡಿಸಿದ. ಈತನು ಪದಾರ್ಥಗಳ ಉಷ್ಣಾಂಶ ಸಹಜಶೂನ್ಯ ಡಿಗ್ರಿ (273.1 ಸೆಂಟಿಗ್ರೇಡ್ ಡಿಗ್ರಿಗಳು) ಆದರೆ ಅವುಗಳ ಎಂಟ್ರೋಪಿ ಶೂನ್ಯವೆಂದೂ ಉಷ್ಣಾಂಶ ಸಹಜಶೂನ್ಯ ಡಿಗ್ರಿಯ ಸಮೀಪದಲ್ಲಿದ್ದರೆ ಯಾವ ಕ್ರಿಯೆ ಜರುಗಿದರೂ ಎಂಟ್ರೋಪಿಯಲ್ಲಿ ವ್ಯತ್ಯಾಸವಾಗುವುದಿಲ್ಲವೆಂದೂ ತೋರಿಸಿದ. ಇದಕ್ಕೆ ಉಷ್ಣಚಲನ ವಿಜ್ಞಾನದ ಮೂರನೆಯ ನಿಯಮವೆಂದು ಹೆಸರಿಟ್ಟಿದ್ದಾರೆ.

ಈ ನಮ್ಮ ವಿಚಾರಗಳ ಸಾರಾಂಶವನ್ನು ಈ ರೀತಿ ನಿರೂಪಿಸಬಹುದು : ಪ್ರಕೃತಿ ವ್ಯಾಪಾರಗಳೆಲ್ಲ ಶಕ್ತಿಯು ಲಭ್ಯ ರೂಪದಿಂದ ಅಲಭ್ಯ ರೂಪಕ್ಕೆ ಮಾರ್ಪಾಡಾಗುತ್ತದೆ. ಪದಾರ್ಥಗಳ ಉಷ್ಣಾಂಶ ಸಹಜಶೂನ್ಯ ಡಿಗ್ರಿಯ ಸಮೀಪದಲ್ಲಿದ್ದರೆ ಶಕ್ತಿ ವಿನಿಮಯವಾದರೂ ಶಕ್ತಿಯ ಅಲಭ್ಯತೆ ಹೆಚ್ಚುವುದಿಲ್ಲ. ಉಷ್ಣಾಂಶ ಸಹಜ ಶೂನ್ಯ ಡಿಗ್ರಿಯೇ ಇದ್ದರೆ ಶಕ್ತಿಯ ಅಲಭ್ಯತೆ ಶೂನ್ಯ. (ಆರ್.ಎಲ್.ಎನ್)

**ಅಲರಿಪು :** ಭರತನಾಟ್ಯ ಮತ್ತು ಇತರ ನೃತ್ಯ ಪ್ರದರ್ಶನಗಳಲ್ಲಿ ದೇವಾಧಿದೇವತೆಗಳಿಗೆ ಪ್ರಾರ್ಥನಾರೂಪವಾಗಿ ಮಾಡುವ ಪ್ರಥಮ ನೃತ್ಯ. ಕೈಗಳನ್ನು ಅಂಜಲಿ ಬದ್ಧವಾಗಿ ಹಿಡಿದುಕೊಂಡು ಸಮಪಾದವಾಗಿ ನಿಂತು ಇಡೀ ದೇಹವನ್ನು ಚಲನೆಯ ಮೂಲಕ ದೇವರಿಗೆ ಅರ್ಪಿಸತಕ್ಕದ್ದು. ಚಲನೆ ತಲೆಯಿಂದ ಮೊದಲ್ಗೊಂಡು ಕ್ರಮೇಣ ಕತ್ತು ಭುಜ ತೋಳುಗಳು

ಅಲರಿಪು ನೃತ್ಯದ ಒಂದು ಭಂಗಿ

ಸೊಂಟ ಮತ್ತು ಕಾಲುಗಳವರೆಗೆ ಅನುಕ್ರಮದಲ್ಲಿದ್ದು ದ್ವಿತೀಯ ತೃತೀಯ ಕಾಲಗಳಲ್ಲಿ ತಾಳಲಯಬದ್ಧವಾಗಿ ನರ್ತಿಸತಕ್ಕದ್ದು. ಇದನ್ನು ಕರ್ನಾಟಕ ಸಂಗೀತಪದ್ಧತಿಯ ಚತುರಶ್ರ, ತ್ರಿಶ್ರ, ಮಿಶ್ರ, ಖಂಡ, ಸಂಕೀರ್ಣ, ಎಂಬ ಐದು ಮೂಲಜಾತಿಗಳಲ್ಲಿ ನರ್ತಿಸ ಬಹುದು. ಆದರೆ ಸಾಮಾನ್ಯವಾಗಿ ನಾವು ತ್ರಿಶ್ರ, ಮಿಶ್ರ, ಚತುರಶ್ರ, ಜಾತಿಗಳಲ್ಲಿ ಅಲರಿಪು ಪ್ರದರ್ಶನವನ್ನು ರಂಗಭೂಮಿಗಳ ಮೇಲೆ ಕಾಣುತ್ತೇವೆ. ಖಂಡ ಮತ್ತು ಸಂಕೀರ್ಣ ಜಾತಿಯ ಅಲರಿಪುಗಳು ಪ್ರದರ್ಶನಗಳು ಸ್ವಲ್ಪ ಅಪರೂಪ.

ಅಲರಿಪುವಿನಲ್ಲಿ ತಲೆಯ ಮೊದಲ ಚಲನೆಗಳು ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರಿಗೆ ವಂದನೆಗಳು ಎಂದು ಕೆಲವರು ತಜ್ಞರು ಅಭಿಪ್ರಾಯಪಡುತ್ತಾರೆ. ಇನ್ನು ಕೆಲವರು ಅಲರಿಪು ಎಂದರೆ ಅರಳುವಿಕೆ. ಆತ್ಮ ಚಲನೆಯ ಮೂಲಕ ಅರಳಿ ದೈವಕ್ಕೆ ಅರ್ಪಿತವಾಗುವುದು ಎಂದು ಹೇಳುತ್ತಾರೆ. ಮತ್ತೂ ಕೆಲವರು ಅಲರಿಪುವನ್ನು ಗೋಪಿಕಾವಸ್ತ್ರಾಪರಣದ ತಿರುಳನ್ನೊಳಗೊಂಡು, ತಾನು, ತನ್ನದು ಎಂಬ ಅಹಂಭಾವವನ್ನು ತ್ಯಜಿಸಿ ದೇವರಿಗೆ ಶರಣಾಗಿ ಪ್ರಾರ್ಥಿಸುವ ನೃತ್ಯ ಎಂದು ಪರಿಗಣಿಸುತ್ತಾರೆ. (ಯು.ಎಸ್.ಕೆ.)

**ಅಲಸಂದೆ :** ಅಲಸಂದೆಯ ಎಳೆಯ ಕಾಯಿಗಳನ್ನು ತರಕಾರಿಯಾಗಿ ಉಪಯೋಗಿಸಲಾಗುತ್ತಿದೆ. ಇದರ ಕಾಯಿಗಳು ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕ, ಅನ್ನಾಂಗ 'ಬಿ' ಮತ್ತು ಲವಣಾಂಶಗಳನ್ನು ಹೊಂದಿರುತ್ತವೆ.

ಮಣ್ಣು : ಇದನ್ನು ಹೆಚ್ಚಾಗಿ ನೀರು ಬಸಿದು ಹೋಗುವಂತಹ ಎಲ್ಲಾ ತರಹದ ಮಣ್ಣುಗಳಲ್ಲಿ ಬೆಳೆಯಬಹುದು.

ಕಾಲ : ವರ್ಷದಲ್ಲಿ ಈ ಬೆಳೆಯನ್ನು ಎರಡು ಸಲ ಬೆಳೆಯಬಹುದು. ಈ ಬೆಳೆಯನ್ನು ಮೇ–ಜುಲೈ ಮತ್ತು ಡಿಸೆಂಬರ್– ಜನವರಿ ತಿಂಗಳುಗಳಲ್ಲಿ ಪ್ರಾರಂಭಿಸಬಹುದು. ಗುಡ್ಡಗಾಡು ಪ್ರದೇಶಗಳಲ್ಲಿಜನವರಿ – ಫೆಬ್ರವರಿ ಸೂಕ್ತ ಕಾಲ. ಕರಾವಳಿ ಪ್ರದೇಶದಲ್ಲಿ ಬತ್ತದ ಕಟಾವಿನ ಅನಂತರ ಗದ್ದೆಗಳಲ್ಲಿ ಈ ಬೆಳೆಯನ್ನು ಬೆಳೆಸಬಹುದು.

ತಳಿಗಳು

ದಕ್ಷಿಣ ಒಣ ಪ್ರದೇಶಗಳಿಗೆ

1. ಪೂಸಾ ಫಲ್ಗುಣಿ : ಗಿಡಗಳು ಗಿಡ್ಡವಾಗಿದ್ದು ಪೊದೆಯಾಕಾರದಲ್ಲಿವೆ. ಈ ತಳಿಯು ಚಳಿಗಾಲಕ್ಕೆ ಉತ್ತಮವಾದ ತಳಿ. ಕಾಯಿಗಳು 12.5 ಸೆಂಮೀ ಉದ್ದವಿದ್ದು ದಟ್ಟ ಕಡುಹಸುರು ಬಣ್ಣದ್ದಾಗಿವೆ. ಬಿತ್ತನೆ ಮಾಡಿದ 60 ದಿವಸಗಳ ನಂತರ ಕಾಯಿಗಳು ಕೊಯ್ಲಿಗೆ ಬರುತ್ತವೆ.

2. ಪೂಸಾ ಬರಸಾತಿ : ಇದು ಬೇಗನೆ ಕಟಾವಿಗೆ ಬರುವ ತಳಿಯಾಗಿದೆ (45 ದಿನಗಳು) ಮತ್ತು ಮಳೆಗಾಲಕ್ಕೆ ಸೂಕ್ತವಾಗಿದೆ.

3. ಪೂಸಾ ದೋ ಫಸಲಿ : ಇದು ಹೆಚ್ಚು ಇಳುವರಿ ಕೊಡುವ ತಳಿಯಾಗಿದ್ದು ಮಳೆಗಾಲ ಚಳಿಗಾಲಕ್ಕೆ ಯೋಗ್ಯವಾಗಿದೆ.

4. ಎಸ್. –288 : ಇದು ಶೀಘ್ರ ಕಟಾವಿಗೆ ಬರುವ ತಳಿಯಾಗಿದೆ (55 ದಿನಗಳು). ಈ ತಳಿಯನ್ನು ವರ್ಷದ ಯಾವುದೇ ಕಾಲದಲ್ಲೂ ಬೆಳೆಯಬಹುದು.

5. ಅರ್ಕಾ ಗರಿಮೆ : ಈ ತಳಿಯನ್ನು ಭಾರತೀಯ ತೋಟಗಾರಿಕಾ ಸಂಶೋಧನ ಸಂಸ್ಥೆ, ಬೆಂಗಳೂರು ಅಭಿವೃದ್ಧಿಪಡಿಸಿದೆ. ಗಿಡಗಳು ಎತ್ತರವಾಗಿದ್ದು ಪೊದೆಯಾಕಾರದಲ್ಲಿ ಬೆಳೆಯುತ್ತವೆ. ವರ್ಷದ ಎಲ್ಲ ಕಾಲಗಳಲ್ಲಿಯೂ ಬೆಳೆಯಬಹುದು. ಎಲೆಗಳು ತಿಳಿ ಹಸುರು ಬಣ್ಣವನ್ನು ಹೊಂದಿರುತ್ತವೆ. ಹೂವಿನ ಬಣ್ಣ ನೇರಳೆ, ಕಾಯಿಗಳು ಉದ್ದವಾಗಿದ್ದು, ಗುಂಡಾಗಿದ್ದು, ದಪ್ಪವಾಗಿದ್ದು, ತಿಳಿ ಹಸಿರು ಬಣ್ಣವನ್ನು ಹೊಂದಿದ್ದು ರಸಭರಿತವಾಗಿರುತ್ತವೆ ಹಾಗೂ ನಾರು ಇರುವುದಿಲ್ಲ, ತರಕಾರಿಯಾಗಿ ಉಪಯೋಗಿಸಲು ಸೂಕ್ತ. ಈ ತಳಿಗೆ ಅತಿ ಉಷ್ಣತೆ ಮತ್ತು ನೀರಿನ ಕೊರತೆಯನ್ನು ತಡೆದುಕೊಳ್ಳುವ ಶಕ್ತಿ ಇದೆ. ಬೆಳೆಯ ಅವಧಿ 90 ದಿವಸಗಳು. ಒಂದು ಹೆಕ್ಟೇರಿಗೆ 18 ಟನ್ ಇಳುವರಿ ಪಡೆಯಬಹುದು.

6. ಅರ್ಕಾ ಸುಮನ್ : ಈ ತಳಿಯನ್ನು ಭಾರತೀಯ ತೋಟಗಾರಿಕಾ ಸಂಶೋಧ ಸಂಸ್ಥೆ, ಬೆಂಗಳೂರು ಆಬಿವೃದ್ಧಿಪಡಿಸಿದೆ. ಗಿಡಗಳು ಪೊದೆಯಾಕಾರವಾಗಿದ್ದು, ನೇರವಾಗಿ ಬೆಳೆಯುತ್ತವೆ. ವರ್ಷದ ಎಲ್ಲಾ ಕಾಲಗಳಲ್ಲೂ ಬೆಳೆಯಬಹುದು. ಇದು ಅಲ್ಪಾವಧಿ ತಳಿ (70–75 ದಿವಸಗಳು) ಹಾಗೂ ಕಾಯಿಗಳು ಗಿಡದ ಮೇಲ್ಭಾಗದಲ್ಲಿ ಇರುತ್ತವೆ. ಕಾಯಿಗಳು ಮಧ್ಯಮ ಉದ್ದವಿದ್ದು, ಮೃದುವಾಗಿ ಇರುತ್ತವೆ ಮತ್ತು ರಸಭರಿತವಾಗಿರುತ್ತವೆ. ನಾರಿನ ಅಂಶ ಇರುವುದಿಲ್ಲ. ಒಳ್ಳೆಯ ಅಡುಗೆ ಗುಣಗಳನ್ನು ಹೊಂದಿದೆ. ಒಂದು ಹೆಕ್ಟೇರಿಗೆ 18 ಟನ್ ಇಳುವರಿ ಪಡೆಯಬಹುದು.

7.ಅರ್ಕಾ ಸಮೃದ್ಧಿ : ಈ ತಳಿಯನ್ನು ಭಾರತೀಯ ತೋಟಗಾರಿಕಾ ಸಂಶೋಧನ ಸಂಸ್ಥೆ, ಬೆಂಗಳೂರು ಆಬಿವೃದ್ಧಿಪಡಿಸಿದೆ. ಗಿಡಗಳು ಪೊದೆಯಾಕಾರವಾಗಿದ್ದು ನೇರವಾಗಿ ಬೆಳೆಯುತ್ತವೆ. ವರ್ಷದ ಎಲ್ಲ ಕಾಲಗಳಲ್ಲೂ ಬೆಳೆಯಬಹುದು. ಇದು ಅಲ್ಪಾವಧಿ ತಳಿ (70–75 ದಿವಸಗಳು). ಕಾಯಿಗಳು ಗಿಡದ ಮೇಲ್ಭಾಗದಲ್ಲಿರುತ್ತವೆ. ಕಾಯಿಗಳು ಹಸುರಾಗಿದ್ದು, ಮಧ್ಯಮ ಉದ್ದವಿದ್ದು ಗುಂಡಾಗಿರುತ್ತವೆ ಹಾಗೂ ಮೃದುವಾಗಿದ್ದು, ರಸಭರಿತವಾಗಿದ್ದು ನಾರಿನ ಅಂಶ ಇರುವುದಿಲ್ಲ. ಒಳ್ಳೆಯ ಅಡುಗೆ ಗುಣಗಳನ್ನು ಹೊಂದಿದೆ. ಒಂದು ಹೆಕ್ಟೇರಿಗೆ 19 ಟನ್ ಇಳುವರಿ ಪಡೆಯಬಹುದು.

ಕರಾವಳಿ ಪ್ರದೇಶಗಳಿಗೆ : ಪೂಸಾ ಬರಸಾತಿ, ಪೂಸಾ ದೋ ಫಸ್‌ಲಿ, ಎಸ್– 288

ಗುಡ್ಡಗಾಡು ಪ್ರದೇಶಗಳಿಗೆ : ಎಸ್–288

ಬೇಸಾಯ ಸಾಮಗ್ರಿಗಳು: ಪ್ರತಿ ಹೆಕ್ಟೇರಿಗೆ 1. ಬೀಜ 15 ಕಿಗ್ರಾಂ; 2. ಕೊಟ್ಟಿಗೆ ಗೊಬ್ಬರ 25 ಟನ್; 3. ರಾಸಾಯನಿಕ ಗೊಬ್ಬರಗಳು ಸಾರಜನಕ 25 ಕಿಗ್ರಾಂ; ರಂಜಕ 75 ಕಿಗ್ರಾಂ; ಪೊಟ್ಯಾಷ್ 60 ಕಿಗ್ರಾಂ; ರೈಜೋಬಿಯಂ 375 ಗ್ರಾಂ.

ಬಿತ್ತನೆ : ಭೂಮಿಯನ್ನು ಹದಮಾಡಿದ ನಂತರ 40 ಸೆಂಮೀ ಅಂತರದಲ್ಲಿ ಸಾಲುಗಳನ್ನು ಮಾಡಿ, ಶಿಫಾರಸು ಮಾಡಿದ ಪೂರ್ಣ ಪ್ರಮಾಣದ ಕೊಟ್ಟಿಗೆ ಗೊಬ್ಬರ, ಸಾರಜನಕ, ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರಗಳನ್ನು ಸಾಲಿನಲ್ಲಿ ಹಾಕಿ ಮಣ್ಣಿಗೆ

ಸೇರಿಸಿ. ಮಳೆಗಾಲದ ಬೆಳೆಗೆ ಕರಾವಳಿ ಪ್ರದೇಶಗಳಲ್ಲಿ ಶೇ. 50 ರಷ್ಟು ಸಾರಜನಕ, ಪೂರ್ಣ ಪ್ರಮಾಣದ ರಂಜಕ ಮತ್ತು ಪೊಟ್ಯಾಷ್ ಮಣ್ಣಿಗೆ ಸೇರಿಸಿ. ಬಿತ್ತನೆಗಿಂತ ಮೊದಲು ಬೀಜಗಳನ್ನು ರೈಜೋಬಿಯಂ ಅಣುಜೀವಿ ಗೊಬ್ಬರದಿಂದ ಬೀಜೋಪಚಾರ ಮಾಡಿ ಬಿತ್ತಿ ನೀರು ಹಾಯಿಸಬೇಕು.

**ಅಲಹಾಬಾದ್ :** ಭಾರತದ ಉತ್ತರ ಪ್ರದೇಶ ರಾಜ್ಯದ ಒಂದು ಜಿಲ್ಲೆ ಹಾಗೂ ಆಡಳಿತ ಕೇಂದ್ರ ನಗರ. ಗಂಗಾ ಮತ್ತು ಯಮುನಾ ನದಿಗಳ ಸಂಗಮಕ್ಷೇತ್ರ. ಇದನ್ನು ಪ್ರಯಾಗವೆಂದೂ ಕರೆಯುವರು. ವಿಸ್ತೀರ್ಣ 5482 ಚ.ಕಿಮೀ. ಜನಸಂಖ್ಯೆ 4936105 (2001). ತ್ರಿವೇಣೀ ಸಂಗಮವೆಂದು ಧಾರ್ಮಿಕ ಪ್ರಸಿದ್ಧಿ ಗಳಿಸಿದೆ. ಪವಿತ್ರವಾದ ಮೂರು



ಗಂಗಾನದಿಯ ದಡದಲ್ಲಿರುವ ಅಲಹಾಬಾದ್‌ನ ಒಂದು ನೋಟ

ನದಿಗಳು ಅಂದರೆ ಗಂಗಾ, ಯಮುನಾ ಮತ್ತು ಗುಪ್ತಗಾಮಿನಿಯಾದ ಸರಸ್ವತೀ ನದಿಗಳು ಇಲ್ಲಿ ಸೇರುತ್ತವೆ ಎಂಬುದಾಗಿ ಪುರಾಣದಿಂದ ಗೊತ್ತಾಗುತ್ತದೆ. ಪ್ರತಿವರ್ಷವೂ ನಡೆಯುವ ಮಾಘಮೇಳಕ್ಕೂ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳಕ್ಕೂ ಭಾರತದ ನಾನಾ ಭಾಗಗಳಿಂದ ಜನರನ್ನು ಆಕರ್ಷಿಸುತ್ತಿರುವ ತೀರ್ಥಕ್ಷೇತ್ರ. ಅಕ್ಬರನ ಆಳ್ವಿಕೆಯಲ್ಲಿ ಉತ್ತರ ಭಾರತದ ಮೂರನೆಯ ಪ್ರಮುಖ ಸೈನ್ಯಕೇಂದ್ರವಾಗಿತ್ತು. ಅಕ್ಬರ್ ಆಳ್ವಿಕೆಯಲ್ಲಿ ನಿರ್ಮಿಸಿದ ಕೋಟೆಯಿದೆ. ರಸ್ತೆ, ಜಲ ಮತ್ತು ರೈಲುಮಾರ್ಗಗಳು ಅಲಹಾಬಾದನ್ನು ಕೇಂದ್ರಸ್ಥಳವಾಗಿ ಮಾರ್ಪಡಿಸಿವೆ. ಗಂಗಾ ಮೈದಾನದ ಮಧ್ಯದಲ್ಲಿ ನೆಲೆಸಿರುವುದರಿಂದ ಸಾಮಗ್ರಿಗಳ ಶೇಖರಣೆಗೆ, ಹಂಚಿಕೆಗೆ ಪ್ರಸಿದ್ಧಿ ಪಡೆದಿದೆ. ದಕ್ಷಿಣ, ಪಶ್ಚಿಮ ಮತ್ತು ಪೂರ್ವಭಾರತದಿಂದ ಬರುವ ರೈಲುಗಳು ಇಲ್ಲಿ ಸಂಧಿಸುತ್ತವೆ. ಹಿಂದಿನಿಂದಲೂ ಬೆಳೆದು ಬಂದಿರುವ ಅನೇಕ ಕೈಗಾರಿಕೆಗಳಿವೆ. ವಿಶ್ವವಿದ್ಯಾನಿಲಯದ ಕ್ಷೇತ್ರವಾಗಿರುವುದಲ್ಲದೆ, ಉತ್ತರ ಪ್ರದೇಶದ ಮುಖ್ಯ ನ್ಯಾಯಲಯವನ್ನು ಹೊಂದಿದೆ. ಪುರಾತನ ಪಟ್ಟಣವಾದರೂ ಇತ್ತೀಚಿನ ಅನೇಕ ಮಾರ್ಪಾಡುಗಳಿಂದ ಆಧುನಿಕವಾಗುತ್ತಿದೆ. ಜವಹರ್‌ಲಾಲ್‌ನೆಹರುರವರ ತವರೂರು ಅವರ ನಿವಾಸ ಆನಂದಭವನ ಇಲ್ಲಿದೆ. ಅದು ಇಂದು ವಸ್ತು ಸಂಗ್ರಹಾಲಯವಾಗಿದೆ. (ಆರ್.ಪಿ.ಎಸ್.)

**ಅಲಾಉದ್ದೀನ್ I :** ಬಹಮನೀ ರಾಜ್ಯದ ಸ್ಥಾಪಕ (1347–58). ಮೊದಲ ಹೆಸರು ಜಾಫರ್‌ಖಾನ್ ಅಥವಾ ಹಸನ್. ಇವನು ಆಫ್ಘನ್ ಅಥವಾ ತುರ್ಕಿ ಮೂಲದವನಾಗಿದ್ದು ದೆಹಲಿಯ ಸುಲ್ತಾನ ಮಹಮ್ಮದ್ ಬಿನ್ ತುಗಲಕನ ಸೇವೆಯಲ್ಲಿ ದಖನ್ನಿನಲ್ಲಿ ಅಧಿಕಾರಿಯಾಗಿದ್ದ. ಇವನು ಗಂಗು ಎಂಬ ಬ್ರಾಹ್ಮಣ ಜ್ಯೋತಿಷಿಯ ಆಶ್ರಯದಲ್ಲಿದ್ದು ರಾಜನಾದ ಮೇಲೆ ಅವನ ಗೌರವದ ಮೇಲೆ ತನ್ನ ಹೆಸರನ್ನು ಹಸನ್‌ಗಂಗು ಎಂದೂ ವಂಶವನ್ನು ಬಹಮನೀ ಎಂದೂ ಕರೆದುಕೊಂಡನೆಂಬ ಒಂದು ಕಥೆ ಇದೆ. ಇದಕ್ಕೆ ಆಧಾರವಿಲ್ಲ. ಇವನು ಇರಾನಿನ ಬಹಮನ್ ಷಾನ ವಂಶಸ್ಥನಿರಬೇಕು ಎಂದು ಚರಿತಕಾರರ ಅಭಿಪ್ರಾಯ. ಮಹಮದ್ ಬಿನ್ ತುಗಲಕನ ದುರಾಡಳಿತವನ್ನು ಸಹಿಸದ ದಖನ್ನಿನ ಅಮೀರರು ದಂಗೆ ಎದ್ದು ದೌಲತಾಬಾದನ್ನು ತಮ್ಮ ಕೇಂದ್ರ ಕಾರ್ಯಸ್ಥಾನವನ್ನಾಗಿ ಮಾಡಿಕೊಂಡು ಇಸ್ಮಾಯಿಲ್ ಮಖ್‌ನನ್ನು ತಮ್ಮ ಸುಲ್ತಾನನೆಂದು ಘೋಷಿಸಿದರು. ಆದರೆ ಇಸ್ಮಾಯಿಲ್ ಅನೇಕ ಕಾರಣಗಳಿಂದಾಗಿ ಒಂದು ವರ್ಷದೊಳಗೆ ರಾಜೀನಾಮೆ ನೀಡಿದ. ಅನಂತರ ಅಮೀರರು ಹಸನನನ್ನು (ಜಾಫರ್ ಖಾನ್) 1347ರಲ್ಲಿ ಸುಲ್ತಾನನೆಂದು ಘೋಷಿಸಿದರು. ಹಸನ್ ರಾಜನಾದ ಮೇಲೆ ಅಲಾಉದ್ದೀನ್ ಹಸನ್ ಷಾ ಅಲ್‌ವಲಿ ಅಲ್ ಬಹಮನೀ ಎಂಬ ಬಿರುದು ಸಹಿತವಾದ ಹೆಸರನ್ನು ಧರಿಸಿ ಗುಲ್ಬರ್ಗದಲ್ಲಿ ತನ್ನ ವಂಶದ ಆಳ್ವಿಕೆಯನ್ನು ಪ್ರಾರಂಭಿಸಿದ. ಅನಂತರ ಸುಭದ್ರ ಸರ್ಕಾರವನ್ನು ರಚಿಸುವುದರ ಕಡೆ ಗಮನ ಹರಿಸಿ ರಾಜ್ಯವನ್ನು ಗುಲ್ಬರ್ಗ, ದೌಲತಾಬಾದ್, ಬೇರಾರ್, ಬಿದರೆ ವಿಭಾಗಗಳನ್ನಾಗಿ ವಿಂಗಡಿಸಿ ಅವುಗಳ ಆಡಳಿತವನ್ನು ಆಶಿತ ಅಮೀರರಿಗೆ ವಹಿಸಿದ. ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದಮೇಲೆ ಸುತ್ತಲ ಪ್ರದೇಶಗಳ ಮೇಲೆ ದಾಳಿ ಮಾಡಿ ಅವನ್ನು ಗೆದ್ದುಕೊಂಡ. ಖಂದಹಾರ್ ಕೋಟೆಯಿಂದ ಮಹಮ್ಮದ್ ಬಿನ್ ತುಗಲಕನ ಸೈನ್ಯವನ್ನು ಹೊಡೆದೋಡಿಸಿ ಅದನ್ನು ಗೆದ್ದುಕೊಂಡ. ಇವನ ದಂಡನಾಯಕ ಸಿಕಂದರ್ ಖಾನ್ ತೆಲಂಗಾಣದ ಮೇಲೆ ದಂಡೆತ್ತಿಹೋಗಿ ಅದರ ರಾಜನಾದ. ಕಾಪಯ ನಾಯಕನನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ವಸೂಲು ಮಾಡಿದ. ಮಳಖೇಡ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳ ಮೇಲೆ ದಾಳಿಮಾಡಿ ಅವು ಮಹಮ್ಮದೀಯರ ಅಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದ. ಬುರ್ಹಾನ್–ಇ–ಮಾಸಿರ್ ಎಂಬ ಚಾರಿತಿಕ ಗ್ರಂಥ ಈತ ನ್ಯಾಯನಿಷ್ಠ ದೊರೆಯೆಂದೂ ಇಸ್ಲಾಮ್ ಧರ್ಮಪ್ರಸಾರಕ್ಕೆ ಶ್ರಮಿಸಿದನೆಂದೂ ತಿಳಿಸುತ್ತದೆ. ಗೋವ, ದಾಬೋಲ್, ಕೊಲ್ಹಾಪುರ ಮುಂತಾದ ಪ್ರದೇಶಗಳನ್ನೂ ಗೆದ್ದುಕೊಂಡ. 1358ರಲ್ಲಿ ಮೃತನಾದ. ಸಾಯುವ ವೇಳೆಗೆ ಬಹಮನೀ ರಾಜ್ಯ ಉತ್ತರದಲ್ಲಿ ವೈನಗಂಗಾದಿಂದ ದಕ್ಷಿಣದಲ್ಲಿ ಕೃಷ್ಣಾನದಿಯವರೆಗೆ ವಿಸ್ತರಿಸಿತ್ತು. ಇವನ ಹಿರಿಯ ಮಗ 1ನೆಯ ಮಹಮ್ಮದ್ ರಾಜ್ಯದ ಉತ್ತರಾಧಿಕಾರಿಯಾದ. (ಎಸ್.)

**ಅಲಾಉದ್ದೀನ್ ಅಹ್ಮದ್ II :** ಬಹಮನೀ ರಾಜ್ಯದ ಹತ್ತನೆಯ ಸುಲ್ತಾನ 1436–58. ಪಟ್ಟಕ್ಕೆ ಬಂದ ಅನಂತರ ವಿಜಯನಗರ ಮತ್ತು ಖಾನ್‌ದೇಶಗಳ ವಿರುದ್ಧ ಅನೇಕ ಯುದ್ಧಗಳನ್ನು ಕೈಗೊಂಡ. ವಿಜಯನಗರದಿಂದ ಸಲ್ಲಬೇಕಾಗಿದ್ದ ಪೊಗದಿಯ ವಸೂಲಿ ಗೋಸ್ಕರ ತನ್ನ ಸೋದರ ಮಹಮ್ಮದನನ್ನು ಕಳುಹಿಸಿಕೊಟ್ಟ. ಪೊಗದಿಯನ್ನು ವಸೂಲಿ ಮಾಡುವುದರಲ್ಲಿ ಯಶಸ್ವಿಯಾದರೂ ಮಹಮ್ಮದ್ ತನ್ನ ಹಿಂಬಾಲಕರಿಂದ ಮತ್ತು ವಿಜಯನಗರದ ಇಮ್ಮಡಿ ದೇವರಾಯನಿಂದ ಪ್ರೇರಿತನಾಗಿ ರಾಜ್ಯದಲ್ಲಿ ಅರ್ಧಭಾಗವನ್ನು ತನಗೆ ಕೊಡಬೇಕೆಂದು ಅಲಾಉದ್ದೀನನ ವಿರುದ್ಧ ದಂಗೆ ಎದ್ದ. ರಾಯಚೂರು, ಮುದ್ಗಲ್, ನಲ್ದುರ್ಗಗಳನ್ನು ಆಕ್ರಮಿಸಿದ. ಸುಲ್ತಾನ ಮಹಮ್ಮದನನ್ನು ಯುದ್ಧದಲ್ಲಿ ಸೋಲಿಸಿದ. ಅಲಾಉದ್ದೀನ್ ಅನಂತರ ಅವನನ್ನು ಕ್ಷಮಿಸಿ ರಾಯಚೂರಿನ ಜಹಗೀರುದಾರನನ್ನಾಗಿ ನೇಮಿಸಿದ. ಸುಲ್ತಾನನ ಪ್ರಧಾನಮಂತ್ರಿಯಾಗಿದ್ದ ದಿಲಾವರ್ ಖಾನ್ ಕೊಂಕಣದಮೇಲೆ ದಂಡೆತ್ತಿ ಹೋಗಿ ಸಂಗಮೇಶ್ವರದ ರಾಜನನ್ನು ಸೋಲಿಸಿದ. ಸಂಗಮೇಶ್ವರದ ರಾಜ ತನ್ನ ಮಗಳನ್ನು ಅಲಾಉದ್ದೀನನಿಗೆ ಕೊಟ್ಟು ವಿವಾಹಮಾಡಿದ. ಈ ವಿವಾಹದಿಂದಾಗಿ ಸುಲ್ತಾನನ ಹಿರಿಯ ರಾಣಿಯ ತಂದೆ ಖಾನ್ ದೇಶದ ಸುಲ್ತಾನ ನಾಸಿರ್ ಖಾನ್ ಕುಪಿತನಾಗಿ ಗುಜರಾತಿನ ಸುಲ್ತಾನನ ಸಹಾಯ ಪಡೆದು ಅಲಾಉದ್ದೀನನ ರಾಜ್ಯವನ್ನು ಮುತ್ತಿ ಕೆಲವು ಪ್ರಾಂತ್ಯಗಳನ್ನು ಗೆದ್ದುಕೊಂಡನಾದರೂ ಸುಲ್ತಾನನ ಸೈನ್ಯ ಅವನನ್ನು ಸೋಲಿಸಿ ಹಿಮ್ಮೆಟ್ಟಿಸಿತು. ಇತ್ತ ಇಮ್ಮಡಿ ದೇವರಾಯ ಅನೇಕ ಮಹಮ್ಮದೀಯರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡು ಬಲಯುತನಾಗಿ ಬಹಮನೀ ರಾಜ್ಯವನ್ನು ಮುತ್ತಿ ಮುದ್ಗಲ್ಲನ್ನು ಗೆದ್ದು ಬಿಜಾಪುರ ಮತ್ತು ಅದರ ಸುತ್ತ ಮುತ್ತಣ ಪ್ರದೇಶಗಳನ್ನು ಕೊಳ್ಳೆಹೊಡೆದ. ಇಬ್ಬರಲ್ಲಿ ಭೀಕರ ಹೋರಾಟವಾಗಿ ದೇವರಾಯ ಸೋತ. ಅವನು ಬಾಕಿ ಇದ್ದ ಕಪ್ಪಕಾಣಿಕೆಗಳನ್ನೆಲ್ಲಾ ಸಲ್ಲಿಸಿ ತುಂಗಭದ್ರಾನದಿಯನ್ನು ತನ್ನ ರಾಜ್ಯದ ಗಡಿಯಾಗಿ ಒಪ್ಪಿಕೊಂಡ.

ಅಲಾಉದ್ದೀನನ ಕಾಲದಲ್ಲಿ ಸುನ್ನಿ ಪಂಗಡದ ದಖನ್ನಿನ ಅಮೀರರಿಗೂ ಷಿಯಾಪಂಥದ ಅರಬ್, ತುರ್ಕಿ, ಪರ್ಷಿಯ ಮತ್ತು ಮುಗಲ್–ಈ ವಿದೇಶೀ ಅಮೀರರಿಗೂ ಒಳಜಗಳಗಳು ಸರ್ವೇ ಸಾಮಾನ್ಯವಾಗಿದ್ದುವು. ದಖನ್ನಿನ ಅಮೀರರು ಒಳಸಂಚು ನಡೆಸಿ ಚಾಕಣದಲ್ಲಿ ಸು.2,000 ವಿದೇಶೀ ಅಮೀರರನ್ನು ಕೊಲೆಮಾಡಿದರು. ಬಹಮನೀ ರಾಜ್ಯದ ಇತಿಹಾಸದಲ್ಲಿ ಈ ಘಟನೆ ಚಾಕಣ ಘಟನೆ ಎಂದು ಪ್ರಸಿದ್ಧಿಯಾಗಿದೆ. ಅಲಾಉದ್ದೀನನ ಆಳ್ವಿಕೆಯ ಕೊನೆಗಾಲದಲ್ಲಿ ಸುಲ್ತಾನನ ಸಂಬಂಧಿ ಜಲಾಲ್ ಖಾನ್ ದಂಗೆ ಎದ್ದು ನಲಗೊಂಡಾದಲ್ಲಿ ಸುಲ್ತಾನನೆಂದು ಘೋಷಿಸಿಕೊಂಡಾಗ ಸುಲ್ತಾನನ ಮಂತ್ರಿ ಮಹ್ಮೂದ್ ಗಾವಾನನು ಜಲಾಲ್ ಮತ್ತು ಅವನ ಮಗ ಸಿಕಂದರ್ ಇವರನ್ನು ಬಂಧಿಸಿದ. ಆದರೆ ಗವಾನನ ಮಾತಿನಂತೆ ಸುಲ್ತಾನ್ ಅವರನ್ನು ಕ್ಷಮಿಸಿ ಪುನಃ ನಲಗೊಂಡಾದ ಜಹಗೀರನ್ನು ವಹಿಸಿಕೊಟ್ಟ. ಅಲಾಉದ್ದೀನ್ ಅನೇಕ ಮಸೀದಿ, ಶಾಲೆ ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಿದ. ಬಿದರೆಯಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಿ ನುರಿತ ವೈದ್ಯರನ್ನು ನೇಮಿಸಿದ. ದರೋಡೆಕೋರರನ್ನೂ ಕಳ್ಳಕಾಕರನ್ನೂ ಕ್ರೂರವಾಗಿ ಶಿಕ್ಷಿಸಿ ಶಾಂತಿ ನೆಲಸುವಂತೆ ಮಾಡಿದ. ಈತ 1458ರಲ್ಲಿ ಮೃತನಾದ. ಅನಂತರ ಇವನ ಮಗ ಹುಮಾಯೂನ್ ಪಟ್ಟಕ್ಕೆ ಬಂದ. (ಎಸ್.)

**ಅಲಾರ್ಕಾನ್ :** 1833–1891. ಸ್ಪೇನಿನ ಕಾದಂಬರಿಕಾರ. ಇಪ್ಪತ್ತೊಂದನೆಯ ವರ್ಷದಲ್ಲಿ ಮ್ಯಾಡ್ರಿಡ್‌ಗೆ ಬಂದು ಲ್ಯಾಟಿಗೊ ಎಂಬ ಕ್ರಾಂತಿಕಾರಕ ಪತ್ರಿಕೆಯ ಸಂಪಾದಕನಾದ. ಕಾಲಕ್ರಮೇಣ ಸಂಪ್ರದಾಯಶರಣನಾಗಿ ಮಾರ್ಪಟ್ಟು, ಉಗ್ರ ಕ್ಯಾಥೊಲಿಕ್ ಪಂಥದ ಅನುಯಾಯಿಯಾದ. ಇದಕ್ಕೆ ಮುಂಚೆ ಆಫ್ರಿಕದ ಯುದ್ಧ ಕಾಲದಲ್ಲಿ ಪತ್ರಿಕಾವರದಿಗಾರನಾಗಿದ್ದಾಗ ಬರೆದ ದಿನಚರಿ (ಡಿಯಾರೊ ಡಿ ಅನ್‌ಟೆಸ್ಟಿಗೊ ಡಿ ಲ ಗುಎರ್ರ ಎನ್ ಆಫ್ರಿಕ) ಅವನಿಗೆ ಹೇರಳವಾದ ಹಣ ಹಾಗೂ ಖ್ಯಾತಿ ತಂದಿತು. ಸುಮಾರು 10 ವರ್ಷ ರಾಜಕೀಯದಲ್ಲಿ ಮುಳುಗಿದ್ದು ಚುನಾವಣೆಯಲ್ಲಿ ಸೋತು, ಮತ್ತೆ ಲೇಖನ ವೃತ್ತಿಯನ್ನು ಕೈಗೊಂಡು

ಅನೇಕ ಕಾದಂಬರಿಗಳನ್ನು ಬರೆದ. ಯಾವ ಗುಂಪಿಗೆ ಸೇರದಿದ್ದರೂ ಕೆಲವು ಕಾಲ ರೊಮ್ಯಾಂಟಿಕ್ ಪಂಥವನ್ನು ಕೆಲವು ಬಾರಿ ಬಾಲ್ಜಾಕ್‌ನನ್ನು ಅನುಸರಿಸುವ ಮನೋಭಾವವನ್ನು ತೋರಿದ. ಹಲವಾರು ಕವನ, ಪ್ರವಾಸಕಥನ, ಪ್ರಬಂಧಗಳನ್ನು ಬರೆದಿದ್ದರೂ ಇವನಿಗೆ ಶಾಶ್ವತವಾದ ಕೀರ್ತಿ ದೊರೆತಿರುವುದು ಇವನ ಎಲ್ ಸೊಂಬ್ರಿರೊ ಡೆಸ್ ಟ್ರೆಸ್ ಪಿಕೊಸ್ (ಮೂರು ಮೂಲೆಯ ಟೋಪಿ) ಎಂಬ ಹಾಸ್ಯರಸಭರಿತ ಪ್ರೇಮಕಥೆಯ ಮೂಲಕವೇ ಎನ್ನಬಹುದು. ಈ ಸುಂದರ ಕೃತಿಯನ್ನು ಸರ್ವಾಂಟಿಸ್‌ನ ಡಾನ್‌ಕ್ವಿಕ್ಸೊಟ್ ಕಾದಂಬರಿಗೆ ಹೋಲಿಸುತ್ತಾರೆ. (ಎಚ್.ಕೆ.ಆರ್.)

**ಅಲಾಸ್ಕ:** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ಸಂಯುಕ್ತ ಸಂಸ್ಥಾನದ ಹೊರಗೆ ಪ್ರತ್ಯೇಕವಾಗಿ ಉತ್ತರ ಅಮೆರಿಕದ ವಾಯವ್ಯದಲ್ಲಿರುವ ಈ ರಾಜ್ಯದ ವಿಸ್ತೀರ್ಣ 1522596 ಚ.ಕಿಮೀ. ಜನಸಂಖ್ಯೆ 6,26,932 (2000). ರಾಜಧಾನಿ ಜೂನೆ.

**ಅಲಾಸ್ಕ :** ಅಮೆರಿಕ ಸಂಯುಕ್ತಸಂಸ್ಥಾನ, 1867ರಲ್ಲಿ ರಷ್ಯದಿಂದ ಈ ಭಾಗವನ್ನು ಕೊಂಡು 1884ರಲ್ಲಿ ಆರೆಗಾನ್ ಸಂಸ್ಥಾನದ ಒಂದು ಜಿಲ್ಲೆಯಾಗಿ ಪರಿಗಣಿಸಿತು. 1912ರಲ್ಲಿ ಒಂದು ಸೀಮೆಯಾಗಿ ರೂಪಗೊಂಡು 1959ರಲ್ಲಿ 49ನೆಯ ಪ್ರಾಂತ್ಯವಾಗಿ ಸಂಯುಕ್ತಸಂಸ್ಥಾನ ದಲ್ಲಿ ವಿಲೀನ ಹೊಂದಿತು. 1912ರಿಂದ ಈಚೆಗೆ ಸಂಯುಕ್ತಸಂಸ್ಥಾನಕ್ಕೆ ಸೇರಿದ ರಾಜ್ಯಗಳಲ್ಲಿ ಇದು ಮೊದಲನೆಯದು. ಬಹು ದೊಡ್ಡ ರಾಜ್ಯ. ಖಂಡದ ಇತರ ರಾಜ್ಯಗಳಿಗಿಂತ ಪ್ರತ್ಯೇಕವಾಗಿ ವಾಯವ್ಯದ ಅಂಚಿನಲ್ಲಿದ್ದು ಪರ್ವತಮಯವಾಗಿದೆ. ಉತ್ತರ ಅಕ್ಷಾಂಶ $65^0$ ಮತ್ತು ಪಶ್ಚಿಮ ರೇಖಾಂಶ $150^0$ ಯಲ್ಲಿದೆ. ಆಗ್ನೇಯ ಮತ್ತು ಪೂರ್ವಕ್ಕೆ ಕೆನಡ ದೇಶ, ಪಶ್ಚಿಮಕ್ಕೆ ಬೆರಿಂಗ್ ಜಲಸಂಧಿ ಮತ್ತು ಬೇರಿಂಗ್ ಸಮುದ್ರ, ಉತ್ತರಕ್ಕೆ ಮೆಕೆಂಜಿ ಕೊಲ್ಲಿ ಹಾಗೂ ದಕ್ಷಿಣಕ್ಕೆ ಅಲಾಸ್ಕ ಖಾರಿಗಳು ಸುತ್ತುವರಿದಿವೆ. ಅಮೆರಿಕೆಯ ಬಹು ದೊಡ್ಡ ಪರ್ವತಶ್ರೇಣಿಯ ವಾಯವ್ಯದ ಬಾಗಿದ ವಿಸ್ತೃತಭಾಗ ಇರುವುದು ಇಲ್ಲಿಯೇ. ದಕ್ಷಿಣದ ಸಾಧಾರಣ ಎತ್ತರದ ತೀರಪ್ರದೇಶದ ಶ್ರೇಣಿಯ ಜೊತೆಗೆ ಒಳಭಾಗದಲ್ಲಿ ಸ್ವಲ್ಪ ಎತ್ತರವಾದ ಸಮಾನಾಂತರ ಶ್ರೇಣಿ ಇದೆ. ಉತ್ತರ ಅಮೆರಿಕದ ಅತ್ಯಂತ ಎತ್ತರದ ಮೆಕಿನ್ಲೆ ಶಿಖರ (6193.5 ಮೀ) ಈ ಒಳಭಾಗದ ಶ್ರೇಣಿಯಲ್ಲಿದೆ. ತಗ್ಗಾದ ಉತ್ತರದ ಶ್ರೇಣಿ ಕಮಾನಿನಂತೆ ಬಾಗಿದೆ ಅಲಾಸ್ಕದ ಎತ್ತರಭಾಗ ಉತ್ತರಧ್ರುವದ ಆಚೆಗೆ ವ್ಯಾಪಿಸಿ ವಿಲಕ್ಷಣವಾದ ಖಂಡಾಂತರ ವಾಯುಗುಣವನ್ನು ಹೊಂದಿದೆ. ದಕ್ಷಿಣತೀರ ಜಪಾನ್ ಪ್ರವಾಹದ ಮಾರುತಗಳಿಂದ ಉಷ್ಣತೆಯನ್ನು ಪಡೆದು ಆಹ್ಲಾದಕರ ವಾಯುಗುಣವನ್ನು ಪಡೆದಿದೆ. 1898ರ ಸುವರ್ಣ ಶೋಧದ (ಗೋಲ್ಡ್ ರಷ್) ದಿನಗಳಲ್ಲಿ ಅಲಾಸ್ಕದ ಖನಿಜಗಳಲ್ಲಿ ಚಿನ್ನ ಅಗ್ರಸ್ಥಾನ ಪಡೆಯಿತು. ಇಂದು ಕಲ್ಲಿದ್ದಲು ಆ ಸ್ಥಾನಕ್ಕೇರಿದೆ. ಪೆಟ್ರೋಲಿಯಂ, ಸ್ವಾಭಾವಿಕ ಅನಿಲ ತವರ, ಕ್ರೋಮೈಟ್, ಪಾದರಸ, ತಾಮ್ರ, ಆಂಟಿಮನಿ, ಟಂಗ್‌ಸ್ಟನ್ ಮುಂತಾದ ಖನಿಜಗಳೂ ಅಲ್ಪ ಸ್ವಲ್ಪ ದೊರೆಯುತ್ತವೆ. ಅದಾಗ್ಯೂ 1977 ರಲ್ಲಿ ಟ್ರಾನ್ಸ್–ಅಲಾಸ್ಕ ಕೊಳವೆ ಮಾರ್ಗವನ್ನು ನಿರ್ಮಿಸಿದ ಅನಂತರ ಅಲಾಸ್ಕದ ಆರ್ಥಿಕ ವ್ಯವಸ್ಥೆಯಲ್ಲಿ ಬಹಳಷ್ಟು ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲಗಳ ಉತ್ಪಾದನೆಯನ್ನಾಧರಿಸಿದೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕಚ್ಚಾ ತೈಲ ಉತ್ಪಾದಿಸುವ ಪ್ರಾಂತ್ಯಗಳಲ್ಲಿ ಟೆಕ್ಸಾಸ್ ಅನಂತರ ಅಲಾಸ್ಕ ದ್ವಿತೀಯ ಸ್ಥಾನದಲ್ಲಿದೆ. ಮಧ್ಯ ಅಕ್ಷಾಂಶ ಪ್ರದೇಶದ ಬೆಳೆಗಳ ಜೊತೆಗೆ ಪಶುಪಾಲನೆಯ ಉತ್ಪನ್ನವೂ ಸೇರುತ್ತದೆ. ಆಂಕೊರೇಜಿನ ಬಳಿಯ ಮಟನುಸ್ಕ ಕಣಿವೆಯ ಬೆಳೆ ರಾಜ್ಯದ ಅರ್ಧ ಉತ್ಪತ್ತಿಯಷ್ಟಾದರೂ ವ್ಯವಸಾಯ ಅಲ್ಲಿ ಅಷ್ಟಾಗಿ ಮುಂದುವರಿದಿಲ್ಲ; ಮೀನುಗಾರಿಕೆ ಮತ್ತು ಅದರ ರಫ್ತು ಅಲಾಸ್ಕದ ಮುಖ್ಯ ಕೈಗಾರಿಕೆ. ಇದರಲ್ಲಿ ಸಾಲ್ಮನ್ ಜಾತಿಯ ಮೀನುಗಳೇ ಹೆಚ್ಚು. ಈ ಕೈಗಾರಿಕೆ ರಾಜ್ಯದ ಬಹುಪಾಲು ಕಾರ್ಮಿಕವರ್ಗಕ್ಕೆ ಉದ್ಯೋಗಾವಕಾಶವನ್ನು ಕಲ್ಪಿಸಿದೆ.

ಸಣ್ಣ ಕಣಿವೆಗಳಲ್ಲಿ ದಕ್ಷಿಣದ ತೀರಪ್ರದೇಶಗಳಲ್ಲಿ ಬಹುಪಾಲು ಪ್ರಜೆಗಳು ವಾಸಿಸಿದರೆ, 15,800ರಷ್ಟು ಅಲ್ಪ ಸಂಖ್ಯೆಯ ಎಸ್ಕಿಮೋಜನರು ರಾಜ್ಯದ ಉತ್ತರ ಹಾಗೂ ಪಶ್ಚಿಮ, ಭಾಗದಲ್ಲಿ ವಾಸಿಸುವರು. ಆಂಕೊರೇಜ್, ಫೇರ್‌ಬ್ಯಾಂಕ್ಸ್, ಜೂನೆ ಮತ್ತು ಕೆಚಿಕನ್–ಇವು ಮುಖ್ಯ ನಗರಗಳು. ಜೂನ್ ಅಲಾಸ್ಕದ ರಾಜಧಾನಿ. (ಸಿ.ಎಂ.)

**ಅಲಿಂಗ್ ಹ್ಯಾಂ, ವಿಲಿಯಂ :** 1824–89. ಐರ್ಲೆಂಡಿನ ಕವಿ. 1846–1870ರವರೆಗೆ ಸುಂಕದ ಇಲಾಖೆಯಲ್ಲಿ ಕೆಲಸಮಾಡಿ 1874ರಲ್ಲಿ ಫ್ರೇಸರ್ಸ್ ಮ್ಯಾಗಜಿನ್ ಎಂಬ ಪ್ರಸಿದ್ಧ ನಿಯತಕಾಲಿಕ ಪತ್ರಿಕೆಯ ಸಂಪಾದಕನಾದ. ಅದೇ ವರ್ಷ ಪತ್ರಿಕೆಗಳಿಗೆ ಆಲಂಕಾರಿಕ ಚಿತ್ರಗಳನ್ನು ಬರೆಯುತ್ತಿದ್ದ ಹೆಲೆನ್ ಪ್ಯಾಟರ್‌ಸನ್ ಎಂಬುವಳನ್ನು ಮದುವೆಯಾದ. 1890ರಲ್ಲಿ ಇವನ ಬರೆಹಗಳು ಆರು ಸಂಪುಟಗಳಲ್ಲಿ ಪ್ರಕಾಶಗೊಂಡವು. ಇವುಗಳಲ್ಲಿ ಡೇ ಅಂಡ್ ನೈಟ್ ಸಾಂಗ್ಸ್, ಲಾರೆನ್ಸ್ ಬ್ಲೂಂ ಫೀಲ್ಡ್ ಇನ್ ಐರ್ಲೆಂಡ್, ಐರಿಷ್ ಸಾಂಗ್ಸ್ ಅಂಡ್ ಪೊಯಂಸ್ ಎಂಬುವು ಹೆಸರು ಗಳಿಸಿವೆ. ಇವನ ದಿನಚರಿಯನ್ನು ಇವನ ಪತ್ನಿಯೇ ಸಂಪಾದಿಸಿದ್ದಾಳೆ.

**ಅಲಿ ಆದಿಲ್ ಷಾ I :** ಬಿಜಾಪುರದ 5ನೆಯ ಸುಲ್ತಾನ (1558–80). ಇಬ್ರಾಹೀಮನ ಮಗ ಮತ್ತು ಉತ್ತರಾಧಿಕಾರಿ. ಷಿಯಾ ಪಂಥದ ಅನುಯಾಯಿ. ಈತ ಆ ಪಂಥಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದರಿಂದ ಸುನ್ನಿ ಪಂಗಡದವರಿಗೆ ಅಸಮಾಧಾನವುಂಟಾಯಿತಾಗಿ ಇವನು ತನ್ನ ಆಳ್ವಿಕೆಯ ಮೊದಲಲ್ಲಿಯೇ ಅನೇಕ ಎಡರುಗಳನ್ನು ಎದುರಿಸಬೇಕಾಯಿತು. ಪಟ್ಟಕ್ಕೆ ಬರುತ್ತಿದ್ದಂತೆಯೇ 1558ರಲ್ಲಿ ವಿಜಯನಗರದ ರಾಜನೊಡನೆ ಒಪ್ಪಂದವನ್ನು ಮಾಡಿಕೊಂಡು ಅಹಮದ್‌ನಗರದ ಮೇಲೆ ದಾಳಿ ಮಾಡಿದ. ಆದರೆ ಈ ಸಂದರ್ಭದಲ್ಲಿ ರಾಮರಾಯ ಮಹಮ್ಮದೀಯರ ಮೇಲೆ ಎಸಗಿದ ಕೃತ್ಯಗಳು ಬೇರೆ ರಾಜ್ಯಗಳ ಮಹಮ್ಮದೀಯರ ಮನನೋಯಿಸಿ ರೊಚ್ಚಿಗೇಳುವಂತೆ ಮಾಡಿದ್ದರಿಂದ ಅಲಿ ಮತ್ತು ರಾಮರಾಯನ ಮೈತ್ರಿ ಕಡಿಯಿತು. ಅನಂತರ ಮಹಮ್ಮದೀಯ ರಾಜ್ಯಗಳಾದ ಬಿಜಾಪುರ, ಅಹಮದ್‌ನಗರ, ಬಿದರೆ ಮತ್ತು ಗೋಲ್ಕೊಂಡದ ಸುಲ್ತಾನರು ಒಂದು ಒಕ್ಕೂಟವನ್ನು ಮಾಡಿಕೊಂಡು ವಿಜಯನಗರದ ಮೇಲೆ ಯುದ್ಧ ಸಾರಿದರು. ತಾಳೀಕೋಟೆಯಲ್ಲಿ 1565ರಲ್ಲಿ ನಡೆದ ಯುದ್ಧದಲ್ಲಿ ರಾಮರಾಯ ಸೋತು ಕೊಲೆಗೀಡಾದ. ಈ ಯುದ್ಧದಲ್ಲಿ ಹಾಗೂ ಅನಂತರ ವಿಜಯನಗರವನ್ನು ಸೂರೆಗೊಳ್ಳುವಲ್ಲಿ ಅಲಿ ಪ್ರಮುಖ ಪಾತ್ರ ವಹಿಸಿದ್ದ. ತಾಳೀಕೋಟೆಯ ಯುದ್ಧಾನಂತರ ಅಹಮದ್‌ನಗರದ ಸುಲ್ತಾನನೊಡನೆ ಒಪ್ಪಂದ ಮಾಡಿಕೊಂಡು ಪಶ್ಚಿಮ ಕರಾವಳಿಯಲ್ಲಿದ್ದ ಪೋರ್ಚುಗೀಸರ ವಿರುದ್ಧ ದಂಡೆತ್ತಿಹೋಗಿ ಗೋವೆಯನ್ನು ಮುತ್ತಿದ. ಆದರೆ ಪೋರ್ಚುಗೀಸರು ಇವನನ್ನು ಹಿಮ್ಮೆಟ್ಟಿಸಿದರು. ರಾಜ್ಯಕ್ಕೆ ಹಿಂದಿರುಗುವ ಮೊದಲು ಇವನು ಆದವಾನಿ ಕೋಟೆಯನ್ನು ಗೆದ್ದುಕೊಂಡ. 1573ರಲ್ಲಿ ತುರ್ಕಲನ್ನು ಗೆದ್ದ. ತರುವಾಯ, ವಿಜಯನಗರದ ಅಧೀನದಲ್ಲಿದ್ದು, ತಾಳೀಕೋಟೆಯ ಯುದ್ಧದ ಅನಂತರ ಸ್ವತಂತ್ರನಾಗಿ ಬಂಕಾಪುರದಲ್ಲಿ ಆಳುತ್ತಿದ್ದ ವೇಲಪರಾಯನ ಮೇಲೆ ದಂಡೆತ್ತಿಹೋದ. 15 ತಿಂಗಳ ಸತತ ಹೋರಾಟದಿಂದ ಬಂಕಾಪುರವನ್ನು ವಶಪಡಿಸಿಕೊಂಡ. ಅನಂತರ ಇವನ ದಂಡನಾಯಕ ಮಸ್ತಫ ಖಾನ್ ಚಂದಗುತ್ತಿಯನ್ನು ಸಾಧಿಸಿಕೊಂಡನಲ್ಲದೆ ಕರ್ನಾಟಕದ ಕೆಲವು ಸಣ್ಣಪುಟ್ಟ ನಾಯಕರುಗಳಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡುವುದರಲ್ಲೂ ಯಶಸ್ವಿಯಾದ. ಅಲಿ ಆದಿಲ್ ಷಾ ಅನೇಕ ಬಾರಿ ಪೆನುಕೊಂಡವನ್ನು ಗಳಿಸಲು ಪ್ರಯತ್ನ ಪಟ್ಟು ವಿಫಲನಾದ. 1580ರಲ್ಲಿ ತನ್ನ ಅರಮನೆಯಲ್ಲಿಯೇ ಕೊಲೆಯಾದ. ಅನಂತರ ಇವನ ಸೋದರನ ಮಗ ಇಬ್ರಾಹೀಂ ಪಟ್ಟಕ್ಕೆ ಬಂದ. ಪ್ರಸಿದ್ಧ ಚಾಂದಬೀಬಿ **(ನೋಡಿ)** ಅಲಿಯ ಹೆಂಡತಿ. (ಎಸ್.)

**ಅಲಿ ಆದಿಲ್ ಷಾ II :** ಬಿಜಾಪುರದ 8ನೆಯ ಸುಲ್ತಾನ (1656–72). ಮಹಮ್ಮದನ ಮಗ. ತಂದೆಯ ಮರಣಾನಂತರ ಈತ ಕೇವಲ 18 ವರ್ಷದವನಾಗಿದ್ದಾಗ ಪಟ್ಟಕ್ಕೆ ಬಂದ. ಈ ಸಂದರ್ಭದ ಲಾಭ ಪಡೆಯಲು ದಖನ್ನಿನಲ್ಲಿ ವೈಸ್‌ರಾಯಿಯಾಗಿದ್ದ ಔರಂಗ್‌ಜೇಬ್ ಬಿಜಾಪುರ ರಾಜ್ಯದ ಮೇಲೆ ದಂಡೆತ್ತಿ ಬಂದ. ಪೆರೆಂಡ ಕೋಟೆ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳನ್ನೂ ಅನಂತರ ಕಲ್ಯಾಣಿ ಮತ್ತು ಬಿದರೆಯನ್ನೂ ಮುತ್ತಿ ಗೆದ್ದುಕೊಂಡ. ಬಿಜಾಪುರಕ್ಕೆ ನುಗ್ಗಿ ಅಲಿಯನ್ನು ಸೋಲಿಸಿದ. ಅಲಿ ಒಪ್ಪಂದಕ್ಕೆ ಒಡಂಬಟ್ಟು ಔರಂಗ್‌ಜೇಬ್ ಗೆದ್ದುಕೊಂಡಿದ್ದ ಬಿದರೆ, ಕಲ್ಯಾಣಿ ಮತ್ತು ಪೆರೆಂಡವನ್ನು ಮುಗಲರಿಗೆ ಬಿಟ್ಟುಕೊಟ್ಟ (1657).

ಈ ಮಧ್ಯದಲ್ಲಿ ಶಿವಾಜಿ ಬಿಜಾಪುರಕ್ಕೆ ಸೇರಿದ ಕೆಲವು ಪ್ರದೇಶಗಳನ್ನು ಹಿಡಿದಿದ್ದರಿಂದ ಅಲಿ ಶಿವಾಜಿಯ ವಿರುದ್ಧ ಅಫಜಲಖಾನನನ್ನು ಕಳುಹಿಸಿದ. ಆದರೆ ಅಫಜಲಖಾನ್ ಹತನಾದ. ಶಿವಾಜಿ ಪನ್ಹಾಳವನ್ನೂ ಗೆದ್ದುಕೊಂಡ. ಆಗ ಅಲಿಯಿಂದ ನಿಯೋಜಿತನಾದ ಸಿದ್ದಿ ಜೌಹಾರ್ ಶಿವಾಜಿಯ ಮೇಲೆ ಜಯ ಗಳಿಸುವ ಹಂತ ತಲುಪಿದ್ದಾಗ ಶಿವಾಜಿ ಪನ್ಹಾಳದಿಂದ ತಪ್ಪಿಸಿ ಕೊಂಡು ಪಾರಾದ. ಅಲಿ ಆದಿಲ್ ಷಾ ಪನ್ಹಾಳವನ್ನು ವಶಪಡಿಸಿಕೊಂಡ. ಶಿವಾಜಿ ದಾಳಿಗಳನ್ನು ಮುಂದುವರಿಸಿ ಕೊಂಕಣದ ಹಲವು ಪ್ರದೇಶಗಳನ್ನು ಅಲಿಯಿಂದ ಗೆದ್ದುಕೊಂಡ. ಅಲ್ಲಿಂದಲೂ ಶಿವಾಜಿ ಹಿಮ್ಮೆಟ್ಟುವಂತೆ ಅಲಿ ಆದಿಲ್ ಷಾ ಕ್ರಮ ಕೈಗೊಂಡ. ಔರಂಗಜೇಬ್ ದೆಹಲಿಯ ಸುಲ್ತಾನನಾದಮೇಲೆ ಬಿಜಾಪುರದ ವಿರುದ್ಧ ಯುದ್ಧವನ್ನು ಮುಂದುವರಿಸಲು ದಂಡನಾಯಕ ಜಯಸಿಂಗನನ್ನು ಕಳುಹಿಸಿ ಕೊಟ್ಟ (1665). ಜಯಸಿಂಗ್ ಶಿವಾಜಿಯ ಮೇಲೆ ಯುದ್ಧ ಮಾಡಿ ಪುರಂದರ ಒಪ್ಪಂದವನ್ನು ಮಾಡಿಕೊಂಡ. ಅನಂತರ ಜಯಸಿಂಗ್ ಶಿವಾಜಿಯ ಸಹಾಯ ಪಡೆದು ಬಿಜಾಪುರದ ಮೇಲೆ ದಂಡೆತ್ತಿಬಂದ. ಆದರೆ ಬಿಜಾಪುರವನ್ನು ಅಲಿ ಆದಿಲ್ ಷಾನಿಂದ ಗೆದ್ದುಕೊಳ್ಳಲು ಸಾಧ್ಯವಾಗಲಿಲ್ಲ. ಒಟ್ಟಿನಲ್ಲಿ ಅಲಿ ಆದಿಲ್ ಷಾ ಮುಗಲರ ಮತ್ತು ಮರಾಠರ ವಿರುದ್ಧ ಹೋರಾಡಿ ಬಿಜಾಪುರ ರಾಜ್ಯವನ್ನು ರಕ್ಷಿಸಿದ. ಆದರೆ ತನ್ನ ಆಳ್ವಿಕೆಯ ಕೊನೆಯ ಆರು ವರ್ಷಗಳನ್ನು ಸುಖಲೋಲುಪನಾಗಿ ಕಳೆದು 1672ರಲ್ಲಿ ಮೃತನಾದ. (ಎಸ್.)

**ಅಲಿಗೇಟರ್ ಮೊಸಳೆ :** ಸರೀಸೃಪವರ್ಗಕ್ಕೆ ಸೇರಿದ ಒಂದು ಜಾತಿಯ ಮೊಸಳೆ (ನೋಡಿ– ಮೊಸಳೆ). ಅಮೆರಿಕದ ಸಂಯುಕ್ತಸಂಸ್ಥಾನಗಳ ದಕ್ಷಿಣಭಾಗ ಮತ್ತು ಚೀನ ದೇಶಗಳಲ್ಲಿ ಜೀವಿಸುತ್ತದೆ. ತಲೆ ಅಗಲ ಮತ್ತು ಚಿಕ್ಕದಾಗಿಯೂ ಮೂತಿ ಮೊಂಡಾಗಿಯೂ ಇದೆ. ಕೆಳದವಡೆಯ ನಾಲ್ಕನೆಯ ಹಲ್ಲು ಮೇಲ್ದವಡೆಯಲ್ಲಿರುವ ಗುಳಿಯಲ್ಲಿ ಹುದುಗಿದೆ. ಆದರೆ ಇತರ ಮೊಸಳೆಗಳಲ್ಲಿ ನಾಲ್ಕನೆಯ ಹಲ್ಲು ಮೇಲ್ದವಡೆಯ ಒಂದು ಸಂದಿಯಲ್ಲಿ ಸೇರಿಕೊಂಡಿದೆ. ಉಳಿದ ಮೊಸಳೆಗಳಂತೆ ಕಾಲಿನ ಪಾದದಲ್ಲಿ ಹಲ್ಲೊಡೆದ ಅಂಚು ಇರುವುದಿಲ್ಲ; ಜಲಪಾದ ಕಾಲು ಬೆರಳುಗಳ ತುದಿಯವರೆಗೂ ಆವರಿಸಿರುವುದಿಲ್ಲ.

**ಅಲಿಗೇಟರ್ ಮೊಸಳೆಗಳಲ್ಲಿ ಎರಡು ಪ್ರಭೇದಗಳು :** 1. ಉತ್ತರ ಅಮೆರಿಕದ ದಕ್ಷಿಣ ಭಾಗದಲ್ಲಿರುವ ಮಿಸಿಸಿಪ್ಪಿಯ ಆ್ಯಲಿಗೇಟರ್ 2. ಚೀನ ದೇಶದ ಯಾಂಗ್ಟ್‌ಜಿಕಿಯಾಂಗ್ ಭಾಗದಲ್ಲಿರುವ ಸೈನೆಸಿಸ್ ಆ್ಯಲಿಗೇಟರ್.

ಅಲಿಗೇಟರುಗಳು ಮಧ್ಯ ಮತ್ತು ದಕ್ಷಿಣ ಅಮೆರಿಕದಲ್ಲಿರುವ ಕೈಮಾನ್‌ಗಳನ್ನು ಕೆಲವು ವಿಧಗಳಲ್ಲಿ ಹೋಲುತ್ತವೆ. ಇವು ಸಾಮಾನ್ಯವಾಗಿ ಅಪಾಯಕಾರಿ ಪ್ರಾಣಿಗಳು. ಬಲಿತ ದೊಡ್ಡದಾದ ಅಲಿಗೇಟರುಗಳು ಮಕ್ಕಳನ್ನು ಹಿಡಿದು ಕೊಂದುಹಾಕಿದ್ದೂ ಉಂಟು. ಆದರೆ



ಈಗ 7 ಅಡಿಗಿಂತ ಉದ್ದದ ಅಲಿಗೇಟರುಗಳು ಅತಿ ವಿರಳ. ಇದರ ಮಾಂಸವನ್ನು ತಿನ್ನುವುದಕ್ಕೂ ಚರ್ಮವನ್ನು ಸೊಂಟಪಟ್ಟಿ, ಕೈಚೀಲ ತಯಾರಿಸುವುದಕ್ಕೂ ಉಪಯೋಗಿಸುತ್ತಾರೆ. (ಬಿ.ಎನ್.ಎ.)

ಅಲಿಗೇಟರ್ ಮರಳಲ್ಲಿ ಮೊಟ್ಟೆ ಇಡುತ್ತದೆ. ಸುಮಾರು 3 ತಿಂಗಳು ಕಾವು ಕೂತಮೇಲೆ ಮೊಟ್ಟೆ ಒಡೆದು ಮರಿ ಹೊರಬರುವುದು. ಮೀನು, ಟರ್ಟಲ್ ಮುಂತಾದ ಶತ್ರುಗಳಿಂದ ಮರಿಗಳನ್ನು ಕಾಪಾಡಲು ತಾಯಿ ಮುತುವರ್ಜಿ ವಹಿಸುತ್ತದೆ. ಆ್ಯಲಿಗೇಟರ್ ನೀರಿನಲ್ಲಿ ಈಜುವಾಗ ಅದರ ಬಾಲದ ಚಲನೆಯಿಂದ ಶಬ್ದವಾಗುತ್ತದೆ. *

**ಅಲಿಘರ್ :** ಉತ್ತರ ಪ್ರದೇಶ ರಾಜ್ಯದ ಒಂದು ಜಿಲ್ಲೆ. ಜಿಲ್ಲಾ ಆಡಳಿತ ಮುಖ್ಯಪಟ್ಟಣ; ದೆಹಲಿಯಿಂದ 128 ಕಿಮೀ ದೂರದಲ್ಲಿದೆ. ವಿಸ್ತೀರ್ಣ 3650 ಚ.ಕಿಮೀ. ಜನಸಂಖ್ಯೆ 36,20,436 (2001). ಊರಿನ ಹಿಂದಿನ ಹೆಸರು ಕೊಯಿಲ್ ಅಥವಾ ಕೋಲ್. ಮುಸ್ಲಿಂ ಸಂತರ ಅನೇಕ ಗೋರಿಗಳಿವೆ. 1889ರಲ್ಲಿ ಸ್ಥಾಪಿತವಾದ ದೊಡ್ಡ ಲಯಾಲ್ ಗ್ರಂಥಭಂಡಾರವನ್ನು ಈಗ ಮಾಳವೀಯ ಗ್ರಂಥ ಭಂಡಾರ ಎಂದು ಕರೆಯುತ್ತಾರೆ. ಬೀಗಗಳು ಮುಂತಾದ ಲೋಹಪದಾರ್ಥಗಳು, ಜಮಖಾನಗಳು, ರತ್ನಗಂಬಳಿಗಳು ಇಲ್ಲಿ ಹೆಚ್ಚಾಗಿ ತಯಾರಾಗುತ್ತವೆ. ಇದು ಮುಸ್ಲಿಮರ ಪ್ರಸಿದ್ಧ ವಿದ್ಯಾಕೇಂದ್ರ . 1875 ರಲ್ಲಿ ಮುಸ್ಲಿಮರ ಅಭ್ಯುದಯಕ್ಕಾಗಿ ಸರ್ ಸೈಯದ್ ಅಹಮದ್ ಸ್ಥಾಪಿಸಿದ ವಿದ್ಯಾಶಾಲೆ ಪ್ರೌಢವಿದ್ಯಾಶಾಲೆಯಾಗಿ ಬೆಳೆದು ಈಗ ಅಲಿಘರ್ ವಿಶ್ವವಿದ್ಯಾಲಯವಾಗಿದೆ. ಇದಕ್ಕೆ ಸಂಬಂಧಿಸಿದ ಕಾಲೇಜುಗಳು, ವೃತ್ತಿಶಿಕ್ಷಣ ಶಾಲೆಗಳು, ವಿವಿಧ ಕಲಾಶಾಲೆಗಳು ಅನೇಕ ಇವೆ. ಇಲ್ಲಿನ ನೇತ್ರವಿದ್ಯಾಕೇಂದ್ರ ತುಂಬ ಪ್ರಸಿದ್ಧಿ ಪಡೆದಿದೆ. (ಜ.ಕಿ.ಜ.)

**ಅಲಿಘರ್ ಚಳವಳಿ :** 19ನೆಯ ಶತಮಾನದ ಕೊನೆಯ ದಶಕದಲ್ಲಿ ರಾಷ್ಟ್ರೀಯ ಆಂದೋಲನದ ಬಗ್ಗೆ ಮುಸ್ಲಿಮರ ಮನೋಧರ್ಮ ಕೊಂಚ ಬದಲಾದುದನ್ನು ಸೂಚಿಸುವ ಒಂದು ಘಟನೆ. ರಾಮಮೋಹನರಾಯ್, ಟಿಳಕ್, ರಾನಡೆ ಮುಂತಾದ ಅನೇಕ ಸಮಾಜ ಸುಧಾರಕರ ನಿರಂತರ ಶ್ರಮದ ಫಲವಾಗಿ ಹಿಂದೂಗಳಲ್ಲಿ ಜನಜಾಗೃತಿಯುಂಟಾಗಿತ್ತು; ಅವರು ಇಂಗ್ಲಿಷ್ ವ್ಯಾಸಂಗ ಮಾಡಿ ಸರ್ಕಾರದ ಹುದ್ದೆಗಳನ್ನು ದೊರಕಿಸಿಕೊಂಡಿದ್ದರು. ಮುಸ್ಲಿಮರು ಮಾತ್ರ ಹಿಂದುಳಿದಿದ್ದರು. ಹಿಂದೂಗಳಂತೆಯೇ ಅವರೂ ಆಧುನಿಕ ಶಿಕ್ಷಣ ಪಡೆದು ಮುಂದುವರಿಯಲೆಂಬ ಉದ್ದೇಶದಿಂದ ಆಗ ಮುಸಲ್ಮಾನರ ಮುಖಂಡರಾಗಿದ್ದ ಸರ್ ಸೈಯದ್ ಅವರ ಪ್ರೇರಣೆಯಂತೆ ಅಲಿಘರ್‌ನಲ್ಲಿ ಮಹಮ್ಮದ್ ಆಂಗ್ಲೋ ಓರಿಯಂಟಲ್ ಕಾಲೇಜ್ ಎಂಬ ವಿದ್ಯಾಸಂಸ್ಥೆ ಸ್ಥಾಪಿತವಾಯಿತು (1875). ಭಾರತದಲ್ಲಿ ಅಂದು ಬೀಸುತ್ತಿದ್ದ ರಾಜಕೀಯ ಮಾರುತದ ವೇಗ ಒತ್ತಡಗಳ ಸೂಕ್ಷ್ಮವನ್ನರಿತ ಬ್ರಿಟಿಷ್ ಅಧಿಕಾರವರ್ಗ ಹಿಂದೂ ಮುಸಲ್ಮಾನರ ಐಕ್ಯದಿಂದ ಒದಗಬಹುದಾದ ವಿಪತ್ತನ್ನು ಮನಗಂಡು ಅದನ್ನು ಆಗದಂತೆ ಮಾಡಲು ಯತ್ನಿಸಿದರು. ಹೆಚ್ಚಾಗಿ ಹಿಂದೂಗಳೇ ಇದ್ದ ಕಾಂಗ್ರೆಸ್ಸಿಗೆ ಮುಸ್ಲಿಮರು ಸೇರದಂತೆ ಮಾಡಲೆತ್ನಿಸಿದರು. 1883–1899ರವರೆಗೆ ಅಲಿಘರ್ ಕಾಲೇಜಿನ ಪ್ರಾಧ್ಯಾಪಕನಾಗಿದ್ದ ಬೆಕ್, ಸೈಯದ್ ಅಹಮದ್ ಮತ್ತು ಇತರ ಮುಸ್ಲಿಂ ಮುಖಂಡರ ಮನಸ್ಸನ್ನು ಕಾಂಗ್ರೆಸ್ಸಿಗೆ ವಿರೋಧವಾಗಿ ತಿರುಗಿಸುವ ಕಾರ್ಯದಲ್ಲಿ ಯಶಸ್ವಿಯಾದ; ಕಾಂಗ್ರೆಸ್ಸಿಗೆ ಸೇರಿದರೆ ಅಲ್ಪ ಸಂಖ್ಯಾತರಾದ ಮುಸ್ಲಿಮರಿಗೆ ಯಾವ ರೀತಿಯ ಪ್ರಯೋಜನವೂ ಇಲ್ಲ; ಅವರು ಬಹುಸಂಖ್ಯಾತರಾದ ಹಿಂದೂಗಳ ಅಡಿಯಾಳುಗಳಾಗಿ ಬಾಳಬೇಕಾಗುತ್ತದೆ ಎಂದು ಬೋಧಿಸಿದ. ಅವನ ಯತ್ನ ಫಲಿಸಿತು. ಸರ್ ಸೈಯದ್ ಅಹಮದ್ ಕೂಡ ಕಾಂಗ್ರೆಸ್ಸಿಗೆ ಸೇರುವುದರಿಂದ ಮುಸ್ಲಿಮರಿಗೆ ಯಾವ ಪ್ರಯೋಜನವೂ ಇಲ್ಲ ಎಂದು ನಂಬಿದ.

ಅಲಿಘರ್‌ನಲ್ಲಿ ಹೀಗೆ ಪ್ರಾರಂಭವಾದ ಈ ಚಳವಳಿ, ಬ್ರಿಟಿಷ್ ರಾಜಕಾರಣಿಗಳ ಒಡೆದು ಆಳುವ ನೀತಿಯಿಂದ ಪುಷ್ಟಿಗೊಂಡು ಬೆಳೆಯಿತು. (ಬಿ.ಎಸ್.ಎ)

**ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ :** ಸರ್ ಸೈಯದ್ ಅಹಮದ್ ಖಾನ್ ಅವರಿಂದ ಸ್ಥಾಪಿತವಾದ ಮಹಮ್ಮಡನ್ ಆಂಗ್ಲೋ ಓರಿಯಂಟಲ್ ಕಾಲೇಜು ಬೆಳೆದು 1920ರಲ್ಲಿ ವಿಶ್ವವಿದ್ಯಾನಿಲಯದ ರೂಪ ಪಡೆಯಿತು. ಮುಸ್ಲಿಮರಿಗೆ ಪ್ರೌಢವಿದ್ಯಾವಕಾಶವನ್ನು ಕಲ್ಪಿಸುವುದೇ ಇದರ ಉದ್ದೇಶ. ಇದರ ಅಧಿಕಾರ ವ್ಯಾಪ್ತಿ ಇದರ ವಿಶ್ವವಿದ್ಯಾನಿಲಯದ ಮಸೀದಿಯಿಂದ 16ಕಿಮೀ ದೂರವಿರುವ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದೆ. ಸ್ವಾತಂತ್ರ್ಯಾನಂತರ ಯುನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿನ ನಿಬಂಧನೆಗೆ ಮತ್ತು ರಾಜ್ಯಾಂಗದ ನಿಯಮಗಳಿಗೆ ಅನುಸಾರವಾಗಿರುವಂತೆ ಈ ವಿಶ್ವವಿದ್ಯಾನಿಲಯದ ವ್ಯವಸ್ಥೆಯನ್ನು ಹೊಸದಾಗಿ ರೂಪಿಸಲಾಯಿತು. ರಾಜ್ಯದ ನಾನಾ ಕಡೆಗಳಿಂದ, ಜಾತಿ ಮತ ಮುಂತಾದ ಭೇದವಿಲ್ಲದೆ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳು ಸ್ಥಳದಲ್ಲೇ ವಾಸಮಾಡಬೇಕೆಂಬ ನಿಯಮವಿದೆ. ಆದರೂ ಶೇಕಡ 25 ರಷ್ಟು ಹೊರಗಿನ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸಲಾಗಿದೆ. ಸು. 5,000ಕ್ಕೂ ಹೆಚ್ಚು ವಿದ್ಯಾರ್ಥಿಗಳ ವಸತಿಗೆ ಏರ್ಪಾಟಿದೆ.

ಇಲ್ಲಿ ಕಲೆ, ವಿಜ್ಞಾನಗಳಿಗೆ ಸಂಬಂಧಪಟ್ಟ ಎಲ್ಲ ವಿಭಾಗಗಳೂ ಇವೆ. ವಿಜ್ಞಾನಕ್ಕೆ ಸಂಬಂಧಿಸಿದ ಕಾಲೇಜುಗಳಲ್ಲಿ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಮತ್ತು ನೇತ್ರಶಾಸ್ತ್ರಕ್ಕೂ ಏಷ್ಯದಲ್ಲಿ ಅತ್ಯುತ್ತಮವಾದುದೆಂದು ಹೆಸರು ಪಡೆದಿದೆ. ಇತ್ತೀಚೆಗೆ ಗ್ರಂಥಾಲಯವಿಜ್ಞಾನ

ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ

ಮುಂತಾದ ಅನೇಕ ಹೊಸಶಾಖೆಗಳನ್ನೂ ಸೇರಿಸಿದ್ದಾರೆ. ಇಲ್ಲಿನ ದೊಡ್ಡ ಗ್ರಂಥಾಲಯಕ್ಕೆ ಮೌಲಾನಾ ಅಬುಲ್ ಕಲಂ ಆಜ್ಹಾದರ ಹೆಸರನ್ನು ಕೊಟ್ಟಿದ್ದಾರೆ.

ಪ್ರೌಢಶಾಲೆಗಳನ್ನೂ ತನ್ನ ವ್ಯಾಪ್ತಿಗೆ ಒಳಪಡಿಸಿಕೊಂಡಿರುವ ಏಕೈಕ ವಿಶ್ವವಿದ್ಯಾಲಯ ಇದು. ಇದರ ವ್ಯಾಪ್ತಿಗೆ ಒಳಪಟ್ಟಿರುವ ಐದು ಶಾಲೆಗಳಲ್ಲಿ ಒಂದು ಅಂಧರಿಗಾಗಿ ಮೀಸಲಾದದ್ದು.

ಈ ವಿಶ್ವವಿದ್ಯಾನಿಲಯದಲ್ಲಿ ಸು. 30,000 ವಿದ್ಯಾರ್ಥಿಗಳು, 1400 ಶಿಕ್ಷಕರು ಮತ್ತು 6000 ಶಿಕ್ಷಕೇತರ ಸಿಬ್ಬಂದಿ ಇದ್ದಾರೆ. 95 ವಿಭಾಗಗಳು ಮತ್ತು 73 ಹಾಸ್ಟೆಲ್‌ಗಳು ಹಾಗೂ ವಿವಿಧ ಕೋರ್ಸುಗಳು ಇವೆ. ಈ ವಿ.ವಿ.ನಿಲಯಕ್ಕೆ ಸೇರಿದಂತೆ ಜೆಡ್.ಎಚ್.ಕಾಲೇಜ್ ಆರ್ಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ಜವಾಹರ್‌ಲಾಲ್ ನೆಹರು ಮೆಡಿಕಲ್ ಕಾಲೇಜು, ಡಾ.ಜಿಯಾ ಉದ್ದೀನ್ ಡೆಂಟಲ್ ಕಾಲೇಜು, ಇನ್‌ಸ್ಟಿಟ್ಯೂಟ್ ಆಫ್ ಆಫ್ತಾಲ್ಮಾಲಜಿ ಆ್ಯಂಡ್ ಫುಡ್‌ಕ್ರಾಫ್ಟ್ ಇನ್‌ಸ್ಟಿಟ್ಯೂಟ್, ಅಕ್ಯಾಡೆಮಿಕ್ ಸ್ಟಾಫ್ ಕಾಲೇಜು ಮೊದಲಾದವು ಇವೆ. ವಿ.ವಿ.ನಿಲಯದ ಕ್ಯಾಂಪಸ್ ಸು.468 ಹೆಕ್ಟೇರ್ ವ್ಯಾಪಿಸಿದೆ.

ಈ ವಿ.ವಿ.ನಿಲಯಕ್ಕೆ ಪ್ರಪಂಚದ ನಾನಾ ಕಡೆಗಳಿಂದ ಮುಖ್ಯವಾಗಿ ಆಫ್ರಿಕ, ಆಗ್ನೇಯ ಏಷ್ಯಗಳಿಂದ–ವಿದ್ಯಾರ್ಥಿಗಳು ಓದಲು ಬರುತ್ತಾರೆ. ಇಲ್ಲಿ ಇಂಗ್ಲಿಷ್, ಹಿಂದಿ, ಉರ್ದು, ಅರ್ಯಾಬಿಕ್, ಪರ್ಷಿಯನ್, ಸಂಸ್ಕೃತ, ತೆಲುಗು, ತಮಿಳು, ಬಂಗಾಳಿ, ಮಲಿಯಾಳಂ, ಮರಾಠಿ, ಪಂಜಾಬಿ, ಕಾಶ್ಮೀರಿ, ಫ್ರೆಂಚ್, ಟರ್ಕಿಷ್, ಜರ್ಮನ್ ಮತ್ತು ರಷ್ಯನ್ ಭಾಷೆಗಳನ್ನು ಕಲಿಯಲು ಅವಕಾಶವಿದೆ.

**ಅಲಿವರ್ದಿಖಾನ್ :** ಉದ್ಯಮಶೀಲತೆ ಮತ್ತು ಪರಾಕ್ರಮದಿಂದ ಬಂಗಾಲದ ಆಡಳಿತವನ್ನು ಪಡೆದು 1740–1756ರವರೆಗೆ ಸ್ವತಂತ್ರವಾಗಿ ಆಳಿದವ. ಹಿಂದಿನ ಹೆಸರು ಮಿರ್ಜ್ಹಾ ಮಹಮದ್ ಅಲಿ. ತಂದೆಯ ಕಡೆಯಿಂದ ಅರಬ್ಬೀಯರ, ತಾಯಿಯ ಕಡೆಯಿಂದ ತುರ್ಕೀಯರ ಸಂಬಂಧ ಉಳ್ಳವ. ಬಿಹಾರ್ ಪ್ರಾಂತ್ಯಾಧಿಕಾರಿ ಷೂಜಾ ಉದ್ದೀನನ ಕೈಕೆಳಗೆ ಕೆಲಸಮಾಡಿ ದಕ್ಷ ಆಡಳಿತಗಾರನೆಂದು ಹೆಸರು ಪಡೆದಿದ್ದ. ಅಧಿಕಾರಕ್ಕೆ ಬಂದುದು ಕ್ರೌರ್ಯದಿಂದ. ಹದಿನಾರು ವರ್ಷಗಳ ಕಾಲ ರಾಜ್ಯವಾಳಿದ. ಆ ಕಾಲದಲ್ಲಿ ಬಂಗಾಲ ಅನೇಕ ಉತ್ಕಟ ಸಮಸ್ಯೆಗಳನ್ನೆದುರಿಸಬೇಕಾಗಿತ್ತು. ಜಮೀನ್ದಾರರೂ ವ್ಯಾಪಾರಿಗಳೂ ಮತ್ತು ಮಿಲಿಟರಿ ಸರದಾರರೂ ಬಂಗಾಲದಲ್ಲಿ ಅಶಾಂತಿಯನ್ನು ಉಂಟುಮಾಡಿದ್ದರು. ಜೊತೆಗೆ ಪರಕೀಯರ ವ್ಯಾಪಾರ ಸಂಸ್ಥೆಗಳನ್ನು ಹತೋಟಿಗೊಳಪಡಿಸಬೇಕಾಗಿತ್ತು. ಮರಾಠರ ದಾಳಿಗಳು ಮತ್ತು ಪಠಾಣರ ದಂಗೆಗಳು ಸಂದಿಗ್ಧ ಪರಿಸ್ಥಿತಿಯನ್ನುಂಟುಮಾಡಿದ್ದುವು. ಬಂಗಾಲದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು, ಖಾನ್ ಸಮರ್ಥವಾಗಿ ಹೋರಾಡಿದ. ಹಿಂದೂ ಮತ್ತು ಮಹಮದೀಯ ಅಧಿಕಾರಿಗಳ ಸಹಾಯದಿಂದ ಸುಭದ್ರವಾದ ಆಡಳಿತವನ್ನು ನೀಡಲು ಸತತವಾಗಿ ಪ್ರಯತ್ನಪಟ್ಟ. (ಬಿ.ಎಸ್.ಎ.)

**ಅಲಿಸಮ್ :** ಬ್ರಾಸಿಕೇಸೀ (ಕ್ರುಸಿಫೆರೀ) ಕುಟುಂಬದ ಅಲಂಕಾರ ಸಸ್ಯ. ಗಿಡ ಕುಳ್ಳು ಬಗೆಯದು. ಎತ್ತರ 8–25 ಸೆಂಮೀ ಮಾತ್ರ. ಹಲವಾರು ಪುಟ್ಟ ಬಿಳಿ ಪುಷ್ಪಗಳ ಗುಚ್ಛಗಳಿಂದಾಗಿ ಇದು ನೋಡಲು ಬಲು ಅಂದ. ಸುವಾಸನೆ ಇದೆ. ಗುಂಪಿನಲ್ಲಿ, ಮಡಿಗಳ ಅಂಚಿನಲ್ಲಿ, ಕಾರ್ಪೆಟ್ ಮಡಿಗಳಲ್ಲಿ ಮತ್ತು ತೂಗುಬುಟ್ಟಿಗಳಲ್ಲಿ ಬೆಳೆಸಲು ಗಿಡ ಬಹು ಚೆನ್ನಾಗಿದೆ. ಇದನ್ನು ಪ್ರದರ್ಶನಾಲಯಗಳಲ್ಲಿ ಪ್ರದರ್ಶಿಸುವುದಕ್ಕೂ ಕುಂಡಗಳಲ್ಲಿ ಬೆಳೆಸಬಹುದು. ಬೀಜವನ್ನು ನೇರವಾಗಿ ಮಡಿಗಳಲ್ಲಿ ಇಲ್ಲವೆ ಕುಂಡಗಳಲ್ಲಿ ಬಿತ್ತನೆ ಮಾಡಿ, ಸಸಿಗಳು 5–8 ಸೆಂಮೀ ಎತ್ತರ ಬೆಳೆದ ಮೇಲೆ 15 ಸೆಂಮೀ ಅಂತರಕ್ಕೆ ಒಂದು ಸಸಿ ಇರುವಂತೆ ಉಳಿಸಿಕೊಂಡು ಉಳಿದವುಗಳನ್ನೆಲ್ಲ ಕಿತ್ತುಹಾಕಬೇಕು. ಬಿತ್ತನೆಯಾದ 15ನೆಯ ದಿವಸ ಒಂದು ಸಾರಿ ಗೊಬ್ಬರವನ್ನು ಮೇಲ್ಪದರವಾಗಿ ಕೊಡಬೇಕು. 20, 35 ಮತ್ತು 50ನೆಯ ದಿವಸಗಳಲ್ಲಿ 3 ಸಾರಿ ಹಿಂಡಿಯ ಗೊಬ್ಬರದ ದ್ರಾವಣವನ್ನು ಕೊಡಬೇಕು. 20, 30 ಮತ್ತು 40ನೆಯ ದಿವಸಗಳಲ್ಲಿ ತುದಿಯನ್ನು ಚಿವುಟಿದರೆ, ಗಿಡ ಹರಡಿಕೊಂಡು ಬೆಳೆದು 60 ದಿವಸಗಳಲ್ಲಿ ಪೂರ್ಣ ಹೂವಿಗೆ ಬರುತ್ತದೆ. ಮುಂದೆ 90–100 ದಿವಸಗಳಲ್ಲಿ ಬೀಜಗಳಾಗುತ್ತವೆ. ಸುಣ್ಣದ ಅಂಶವುಳ್ಳ ಹಗುರವಾದ ಭೂಮಿಯಲ್ಲಿ ಗಿಡ ಚೆನ್ನಾಗಿ ಬೆಳೆಯುತ್ತದೆ. ಅಕ್ಟೋಬರ್‌ನಿಂದ ಜನವರಿ ತಿಂಗಳವರೆಗೆ ಮೈದಾನ ಪ್ರದೇಶಗಳಲ್ಲೂ ಮಾರ್ಚ್‌ನಿಂದ ಜೂನ್ ತಿಂಗಳವರೆಗೆ ಬೆಟ್ಟಗುಡ್ಡಗಳ ಪ್ರದೇಶಗಳಲ್ಲೂ ಬಿತ್ತನೆ ಮಾಡಬಹುದು. (ಕೆ.)

**ಅಲೀಘರ್, ಮಾರ್ಗರಿಟ ಯೊಸಿಫಾವ್ನ :** ಎರಡನೆಯ ಮಹಾಯುದ್ಧದ ಕಾಲದಲ್ಲಿ ದೇಶಭಕ್ತಿ ಕವನಗಳಿಂದ ಕೀರ್ತಿ ಪಡೆದ ಕವಯಿತ್ರಿ. ಒಬ್ಬ ವೀರ ರಷ್ಯನ್ ಬಾಲಿಕೆಯ ಚಿತ್ರವನ್ನು ಚಿತ್ರಿಸುವ ಜ಼ೋಯೋ ಎಂಬ ಇವಳ ಕಾವ್ಯಕ್ಕೆ ಸ್ಟಾಲಿನ್ ಬಹುಮಾನ ದೊರೆಯಿತು. ಜೀವನದ ಉತ್ಸಾಹಪೂರ್ಣಸ್ವೀಕಾರ ಇವಳ ಕವನಗಳ ಅಸ್ತಿಭಾರ. (ಎಲ್.ಎಸ್.ಎಸ್.)

**ಅಲುಬು :** ಅವಶ್ಯವಲ್ಲದ ಸಸ್ಯ (ವೀಡ್). ಕಳೆ ಪರ್ಯಾಯ ನಾಮ. ಇವು ಸಾಗುವಳಿಗಾಗಿ ಆರಿಸಿಕೊಂಡ ಎಲ್ಲ ಪ್ರದೇಶಗಳ ಮೇಲೂ ಆಕ್ರಮಣ ನಡೆಸುತ್ತವೆ. ಈ ಗಿಡಗಳು ವಿವಿಧ ರೀತಿಯ ಮಣ್ಣು ಹವಾಗುಣಗಳ ಪರಿಸ್ಥಿತಿಗಳಿಗೆ ಹೊಂದಿಕೊಂಡು ಬಾಳುತ್ತವೆ. ಮಂಜಿನ ವಾತಾವರಣದಲ್ಲಿಯೂ ಜೀವಿಸುವ ಸಾಮರ್ಥ್ಯ ಪಡೆದಿವೆ. ಸಾಗುವಳಿ ಮಾಡದ ಅಥವಾ ಬಂಜರು ಭೂಮಿಯಲ್ಲಿ ಪ್ರಬಲವಾಗಿರುವುವಲ್ಲದೆ ಪೈರಿನೊಂದಿಗೆ ನೀರು ಬೆಳಕು ಮತ್ತು ಆಹಾರಕ್ಕಾಗಿ ಅವು ಸತತ ಹೋರಾಟ ನಡೆಸುತ್ತವೆ. ಅವುಗಳ ಕ್ಷೀಣತೆ ಅಥವಾ ಪ್ರವರ್ಧಮಾನತೆ ಪೈರಿನ ಸ್ಥಿತಿಯನ್ನು ಅವಲಂಬಿಸಿದೆ. ದುರ್ಬಲ ಪೈರಿನಲ್ಲಿ ಕಳೆಯದೇ ಮೇಲುಗೈ. ಸರಿಯಾಗಿ ಬೆಳೆದ ಪೈರಿನ ನಡುವೆ ಕಳೆ ಇದ್ದೂ ಇಲ್ಲದಂತಾಗುವುದು.

ಕಳೆ ಉಪಯೋಗಕರವೂ ಹೌದು; ಉಪದ್ರವಕಾರಿಯೂ ಹೌದು. ತಾತ್ಕಾಲಿಕವಾಗಿ ಅನುಪಯುಕ್ತ ಅಥವಾ ಪರಿತ್ಯಕ್ತ ಭೂಮಿಯ ಮೇಲೆ ಬೇರೆ ಏನೂ ಆಕ್ರಮಣ ನಡೆಸದಂತೆ ನಿರ್ಬಂಧಿಸುವಲ್ಲಿ ಕಳೆಯ ಪಾತ್ರ ಮಹತ್ವವುಳ್ಳದ್ದು. ಅದು ಮಣ್ಣಿನ ಸವೆತ ತಡೆಗಟ್ಟುವುದು; ನೀರು ಹರಿದು ಹೋಗುವ ವೇಗ ಕಡಿಮೆ ಮಾಡುವುದು. ಮೀನು ಮತ್ತಿತರ ಜಲಚರ ಪ್ರಾಣಿಗಳಿಗೆ ಪಾಚಿಕಳೆ ಸ್ವಭಾವಸಿದ್ಧ ಆಹಾರ. ಕೆಲವು ಕಳೆಗಳನ್ನು ಮನುಷ್ಯ ಆಹಾರ, ವಸ್ತ್ರಗಳಿಗೂ ಮತ್ತೆ ಕೆಲವನ್ನು ವಸತಿ ಸೌಕರ್ಯಕ್ಕಾಗಿಯೂ ದನಗಳ ಮೇವಿಗಾಗಿಯೂ ಔಷಧಿಗಳಿಗಾಗಿಯೂ ಉಪಯೋಗಿಸುತ್ತಾನೆ. ಹೂ ಬಿಟ್ಟಿರುವ ಕಳೆ ಆ ಪ್ರದೇಶಕ್ಕೆ ಅಲಂಕಾರ ತರುವುದುಂಟು.

ವ್ಯವಸಾಯ ರಂಗದಲ್ಲಿ ತಲೆದೋರುವ ಬೂಷ್ಟು, ಕ್ರಿಮಿಕೀಟಗಳಂಥ ಉಪದ್ರವಕಾರಿಗಳು ಉಂಟುಮಾಡುವ ಒಟ್ಟು ನಷ್ಟಕ್ಕಿಂತ ಅಲುಬು ಕಳೆಯಿಂದ ಆಗುವ ನಷ್ಟ ಹೆಚ್ಚಿನದು. ಫಸಲು ಕಲುಷಿತವಾದರೆ ಅದರ ಆದಾಯದ ಬೆಲೆ ಇಳಿಯುವುದು. ಕಳೆಯನ್ನೊಳಗೊಂಡ ಜಮೀನಿನ ಬೆಲೆ ತಗ್ಗುವುದು. ಬೇಸಾಯದ ವೆಚ್ಚ ಮತ್ತು ಸಾಮಾನು ಸರಂಜಾಮಿನ ಏರ್ಪಾಡು ಏರುವುದು. ಬೆಳೆಯ ಆಯ್ಕೆಯೂ ಪರಿಮಿತಿಗೊಳ್ಳುವುದು. ರೋಗರುಜಿನಗಳನ್ನು ಉಂಟುಮಾಡುವ ಬೂಷ್ಟು, ಕ್ರಿಮಿಕೀಟಗಳಿಗೆ ಕಳೆ ಆಶ್ರಯ ಕೊಟ್ಟು ಬೆಳೆಗಳ ಮೇಲೆ ಅವು ಆಕ್ರಮಣ ನಡೆಸಲು ಕಾರಣವಾಗುತ್ತದೆ. ಕಳೆ ಹೊಳೆಯನ್ನಾಗಲಿ ಚರಂಡಿಯನ್ನಾಗಲಿ ಪ್ರತಿಬಂಧಿಸಿ ತೊಡಕನ್ನುಂಟುಮಾಡಬಹುದು. ಸರೋವರಗಳನ್ನೂ ಕೊಳಗಳನ್ನೂ ಹೊದಿಕೆಯಂತೆ ಮುಚ್ಚಿದ್ದು ನೀರನ್ನು ಕಲುಷಿತಗೊಳಿಸಬಹುದು.

ಅಲುಬು ಕಳೆಯನ್ನು ವಾರ್ಷಿಕ, ದ್ವೈ ವಾರ್ಷಿಕ ಮತ್ತು ಬಹುವಾರ್ಷಿಕ ಗಿಡಗಳನ್ನಾಗಿ ವರ್ಗೀಕರಿಸಲಾಗಿದೆ. ಕಾಕಲ್‌ಬರ್, ಕ್ರ್ಯಾಬ್‌ಗ್ರಾಸ್, ಫಾಕ್ಸ್‌ಟೇಲ್ ವ್ಯವಸಾಯದ ಭೂಮಿಯಲ್ಲಿ ಸಾಮಾನ್ಯವಾಗಿ ಬೆಳೆಯುವ ಕಳೆ ಸಸ್ಯಗಳು ವಾರ್ಷಿಕ ಗುಂಪಿಗೆ ಸೇರಿವೆ. ದ್ವೈ ವಾರ್ಷಿಕ ಕಳೆಯ ಗುಂಪು ವೈಲ್ಡ್ ಕ್ಯಾರಟ್, ಬರ್‌ಡಾಕ್ ಮುಂತಾದ ಕೆಲವೇ ಕಳೆಗಳನ್ನು ಹೊಂದಿದೆ. ಬಹುವಾರ್ಷಿಕ ಕಳೆಯ ಗುಂಪಿನಲ್ಲಿ ನಟ್‌ಗ್ರಾಸ್, ಪ್ರಿಕ್ಲಿಪಿಯರ್, ರೆಡ್ ಸಾರೆಲ್, ಪಂಕ್ ಚರ್ ವೈನ್ ಮುಂತಾದುವನ್ನು ಸೇರಿಸಲಾಗಿದೆ.

ಸಾಮಾನ್ಯವಾಗಿ ಎಲ್ಲೆಡೆಗಳಲ್ಲೂ ಕಾಣಬರುವ ಕಳೆಯ ಹಣ್ಣು ಮತ್ತು ಬೀಜಗಳ ಪ್ರಸಾರ ಬಹಳ ವಿಧಗಳಲ್ಲಾಗುವುದು. ಹಣ್ಣು ಬೀಜಗಳ ರಚನೆಯಲ್ಲಿನ ಮಾರ್ಪಾಡುಗಳು ಗಾಳಿ, ನೀರು ಮತ್ತು ಪ್ರಾಣಿಗಳಿಂದ ಪ್ರಸಾರವಾಗಲು ಅನುಕೂಲವಾಗಿವೆ. ಅವು ಪ್ರಾಣಿಗಳ ರೋಮಕ್ಕೆ ಅಂಟಿಕೊಳ್ಳಬಹುದು, ಗೊರಸಿಗೆ ಸಿಕ್ಕಿಕೊಳ್ಳಬಹುದು, ಅಥವಾ ಜೀರ್ಣಾಂಗದ ಜಾಡಿನಲ್ಲಿ ಹಾದು ಹೊರಬಂದು ಪ್ರಸಾರವಾಗಬಹುದು. ಹರಿಯುವ ನೀರು ಲಕ್ಷೋಪಲಕ್ಷ ಬೀಜಗಳನ್ನು ಕೊಂಡೊಯ್ದು ವಿಶಾಲ ಪ್ರದೇಶಗಳಲ್ಲಿ ಹರಡುವುದು. ಸರಿಯಾಗಿ ಶುದ್ಧಿಗೊಳಿಸದ ಬೀಜ ಬಿತ್ತುವ ಬೇಜವಾಬ್ದಾರಿತನ, ಹೊರದೇಶಗಳಿಗೆ ರಫ್ತು ಮಾಡುವ ಬಿತ್ತನೆಬೀಜವನ್ನು ಒಣ ಹುಲ್ಲು, ಆಹಾರ ಸಾಮಗ್ರಿ, ಗಿಡ ಶೇಖರಣೆ ಮುಂತಾದುವುಗಳೊಂದಿಗೆ ಕಳಿಸುವ ನಿರ್ಲಕ್ಷ್ಯ ಇವೂ ಕಳೆಯ ಪ್ರಸಾರಕ್ಕೆ ಕಾರಣವಾಗುತ್ತವೆ. ಬಹುಶಃ ಇದೇ ಕಾರಣದಿಂದಾಗಿ ಅಮೆರಿಕ, ಕೆನಡ ದೇಶಗಳಲ್ಲಿನ ಅನೇಕ ಜಾತಿಯ ಕಳೆಗಳು ಯುರೋಪ್ ಮತ್ತಿತ್ತರ ಏಷ್ಯ ಪ್ರದೇಶಗಳಿಗೆ ಸಾಗಿ ಬಂದಿರಬಹುದು.

ಕಳೆಯನ್ನು ನಿಯಂತ್ರಿಸುವುದರಲ್ಲಿ ಉಳುಮೆ ಅಥವಾ ಬೇಸಾಯ ಅತ್ಯಂತ ಪರಿಣಾಮ ಕಾರಿಯೂ ಮಿತವ್ಯಯದ್ದೂ ಆದ ಮಾರ್ಗ. ಕಳೆಕೀಳುವುದು, ಸುಡುವುದು, ಕತ್ತರಿಸುವುದು, ಇವೂ ನಿಯಂತ್ರಣದ ಹಲವು ವಿಧಗಳು. ಕಳೆ ವಿಸ್ತರಿಸಿದಂತೆಲ್ಲ ಹೊಸ ಕಳೆ ನಾಶಕಗಳೂ ಬಳಕೆಗೆ ಬರುತ್ತಿವೆ. ಕಳೆನಾಶಕಗಳಲ್ಲಿ ಎರಡು ವಿಧ. ಆರಿಸಿದ ಕಳೆನಾಶಕ ಮತ್ತು ಆರಿಸದ ಕಳೆನಾಶಕ. ಐರನ್ ಸಲ್ಫೇಟ್, ಕಾಪರ್ ನೈಟ್ರೇಟ್ ಮುಂತಾದ ಆರಿಸಿದ ಕಳೆನಾಶಕವನ್ನು ಮಿಶ್ರಿತ ಕಳೆಯಮೇಲೆ ನಿಶ್ಚಿತ ಪ್ರಮಾಣದಲ್ಲಿ ಸಿಂಪಡಿಸಿದರೆ ಬೇಡವಾದ ಕಳೆಮಾತ್ರ ನಾಶವಾಗುತ್ತದೆ. ಆರಿಸದ ಕಳೆನಾಶಕಗಳಾದ ಸೋಡಿಯಮ್ ಮತ್ತು ಅಮೋನಿಯಮ್ ಥೈಯೋಸೈನೈಟ್, ಅಮೋನಿಯಮ್ ಸಲ್ಫೇಟ್ ಪೆಟ್ರೋಲಿಯಂ ಎಣ್ಣೆ ಸಿಂಪಡಿಸಿದಾಗ ಅವುಗಳೊಂದಿಗೆ ಸಂಪರ್ಕ ಪಡೆಯುವ ಎಲ್ಲ ಕಳೆಯೂ ನಾಶವಾಗುತ್ತದೆ. ಭಾರತದಲ್ಲಿ 2,4–ಡಿ(2,4–ಡೈಕ್ಲೋರೋ ಫೀನೈಲ್, ಅಸಿಟಿಕ್ ಆಮ್ಲ) ಅಥವಾ ಎಂ. ಸಿ. ಪಿ. ಎ (2–ಮೀಥೈಲ್ 4 ಫೀನಾಕ್ಸಿ ಅಸಿಟಿಕ್ ಆಮ್ಲ) ಹುಲ್ಲು ಕಳೆಯನ್ನುಳಿದು ಮಿಕ್ಕೆಲ್ಲ ವಾರ್ಷಿಕ ಕಳೆಯ ನಿಯಂತ್ರಣದಲ್ಲಿ ಪರಿಣಾಮಕಾರಿಯಾಗಿರುವುದು ಕಂಡುಬಂದಿದೆ. (ಕೆ.ಎಂ.)

**ಅಲೆಕ್ಸಾಂಡರ್ :** ಪ್ರ.ಶ.ಪೂ. 356–323. ಮ್ಯಾಸಿಡೋನಿಯದ ದೊರೆ. ಪರ್ಷಿಯ ಸಾಮ್ರಾಜ್ಯವನ್ನು ಸೋಲಿಸಿ ಭಾರತದವರೆಗೂ ದಂಡೆತ್ತಿ ಬಂದ ಮಹಾನಾಯಕ. ತಂದೆ ಫಿಲಿಪ್, ರಾಜನಾಗಿ ದೇಶವನ್ನು ಸುಭದ್ರ ತಳಹದಿಯ ಮೇಲೆ ಸತತವಾಗಿ ದುಡಿದು ಮಗನ ಪ್ರಗತಿಗೆ ಕಾರಣನಾದ. ತಂದೆಯ ಮರಣಾನಂತರ ಪ್ರ.ಶ.ಪೂ. 336ರಲ್ಲಿ ತನ್ನ 20ನೆಯ ವಯಸ್ಸಿನಲ್ಲಿ ಅಲೆಕ್ಸಾಂಡರ್ ಪಟ್ಟಕ್ಕೆ ಬಂದು ದೇಶದಲ್ಲಿ ತಲೆ ಎತ್ತುತ್ತಿದ್ದ ಅಶಾಂತಿ ಅನಾಯಕತೆಗಳನ್ನು ನಿವಾರಿಸಿದ. ತಂದೆಯಂತೆ ರಾಜ್ಯವಿಸ್ತರಣೆಗೆ ಮನಸ್ಸು ಮಾಡಿದ. ಬಾಲ್ಯದಲ್ಲೇ ತಂದೆಯ ನೇತೃತ್ವದಲ್ಲಿ ಪಡೆದ ಉತ್ತಮ ವಿದ್ಯಾಭ್ಯಾಸದ ಜೊತೆಗೆ ಇವನಲ್ಲಿದ್ದ ಪ್ರತಿಭೆಯೂ ಸೇರಿ ಯುವಕ ಅಲೆಕ್ಸಾಂಡರನ ವ್ಯಕ್ತಿತ್ವ ಪ್ರಜ್ವಲಿಸತೊಡಗಿತು. ಈತ ಎತ್ತರವಾದ ಆಳು, ಸ್ಫುರದ್ರೂಪಿ, ದೇಹದಾರ್ಢ್ಯವುಳ್ಳವ. ಸಂಕಲ್ಪದಂತೆ ಗುರಿಸಾಧಿಸುವ ದೃಢಬುದ್ಧಿ ಹೊಂದಿದ್ದ ಈತನಲ್ಲಿ ತಾಯಿಯ ಬುದ್ಧಿವಿಚಾರ, ಅಹಂಕಾರ, ಉದ್ರೇಕಗಳು ಸೇರಿಕೊಂಡಿದ್ದವು.

ಗ್ರೀಕ್ ನಾಗರಿಕತೆ ಸಂಸ್ಕೃತಿಗಳನ್ನು ಈತ ಬಹುವಾಗಿ ಮೆಚ್ಚಿದ. ಹೋಮರನ ಇಲಿಯಡ್ ಮಹಾಕಾವ್ಯ ಇವನ ತುದಿನಾಲಗೆಯಲ್ಲಿತ್ತು. ಪ್ರಸಿದ್ಧ ವಿದ್ವಾಂಸನಾದ ಅರಿಸ್ಟಾಟಲ್ ಇವನ ಗುರು. ತತ್ತ್ವಶಾಸ್ತ್ರ, ವೈದ್ಯ, ವಿಜ್ಞಾನಗಳಲ್ಲಿ ಅಪಾರ ಆಸಕ್ತಿಯುಳ್ಳವ. ಗ್ರೀಕ್ ರಾಜ್ಯಗಳನ್ನು ಸೋಲಿಸಿದನಾದರೂ ತಂದೆಯಂತೆ ಉದಾರ ನೀತಿಯನ್ನನುಸರಿಸಿ ಅವರ ಬೆಂಬಲವನ್ನು ಗಳಿಸಿಕೊಂಡ. ತಂದೆಯ ಕೊಲೆಗೆ ಕಾರಣರೆಂದು ಕಂಡುಬಂದ ಲೈಸೆಸ್ಟಿಸ್‌ನ ರಾಜರನ್ನು ತೀರಿಸಿ ತನ್ನ ವೈರಿಗಳೆನಿಸಿದ ಇತರರನ್ನೂ ನಿರ್ನಾಮ ಮಾಡಿದ. ಅನಂತರ ದಕ್ಷಿಣಕ್ಕೆ ತಿರುಗಿ ಥೆಸಲೆಯನ್ನು ಗಿಟ್ಟಿಸಿ ಗ್ರೀಕ್ ಒಕ್ಕೂಟದಲ್ಲಿ ಮುಂದಿನ ಏಷ್ಯ ದಿಗ್ವಿಜಯ ಕಾರ್ಯದ ಮಹಾದಂಡನಾಯಕನಾಗಿ ಆಯ್ಕೆಯಾದ. ಆದರೂ ಉತ್ತರ ಗ್ರೀಸಿನ ಇಲಿರಿಯ ಮತ್ತು ಥ್ರೇಸ್ ಪ್ರದೇಶಗಳಲ್ಲಿ ಅಲೆಕ್ಸಾಂಡರನಿಗೆ ವಿರುದ್ಧವಾಗಿ ದಂಗೆಗಳಾದುವು. ಆದರೆ ಅಲೆಕ್ಸಾಂಡರ್ ತತ್‌ಕ್ಷಣವೇ ಆ ಪ್ರದೇಶಗಳಿಗೆ ಹೋಗಿ ದಂಗೆಗಳನ್ನು ಅಡಗಿಸಿದ. ಥ್ರೇಸ್‌ನಲ್ಲಿ ಯಾರೋ ಅಲೆಕ್ಸಾಂಡರನನ್ನು ಕೊಂದುಹಾಕಿದರೆಂಬ ಸುಳ್ಳು ಸಮಾಚಾರ ಥೀಬ್ಸ್ ನಗರದಲ್ಲಿ ಹರಡಿ ಥೀಬನ್ನರು ಮ್ಯಾಸಿಡೋನಿಯದ ರಕ್ಷಣಾ ಸೈನ್ಯಗಳಿಗೆ ಮುತ್ತಿಗೆ ಹಾಕಿದರು. ಅಲೆಕ್ಸಾಂಡರ್ ಥೀಬ್ಸ್ ನಗರದ ಮೇಲೆ ದಾಳಿಮಾಡಿ ಆ ನಗರವನ್ನು ನಾಶ ಮಾಡಿದ. ಹೆಂಗಸರು, ಮಕ್ಕಳು ಎಂದು ಲಕ್ಷಿಸದೆ ಸು. 30,000 ಥೀಬನ್ನರನ್ನು ಸೆರೆಹಿಡಿದು ಗುಲಾಮರನ್ನಾಗಿಸಿದ. ಗ್ರೀಕರ ಸೊಲ್ಲು ಅಡಗಿ ಅವರು ಅಲೆಕ್ಸಾಂಡರನನ್ನು ತಮ್ಮ ನಾಯಕನೆಂದು ಒಪ್ಪಿಕೊಳ್ಳ ಬೇಕಾಯಿತು. ಗ್ರೀಸ್ ದೇಶ ಅಲೆಕ್ಸಾಂಡರನ ಹತೋಟಿಗೆ ಒಳಗಾಯಿತು.

**ಅಲೆಕ್ಸಾಂಡರನ ದಂಡಯಾತ್ರೆ :** ಗ್ರೀಸಿನಲ್ಲಿ ಸುಭದ್ರ ಆಡಳಿತವನ್ನು ಸ್ಥಾಪಿಸಿ, ತನ್ನ ಜೀವನದ ಮಹತ್ತ್ವಾಕಾಂಕ್ಷೆಯನ್ನು ಸಾಧಿಸಲು ಸಂಕಲ್ಪ ಮಾಡಿದ. ಪರ್ಷಿಯ ದೇಶ ಗ್ರೀಸಿನಲ್ಲಿ ತನಗೆ ಮಾಡಿದ ದೌರ್ಜನ್ಯಕ್ಕೋಸ್ಕರ ಸೇಡು ತೀರಿಸಿಕೊಳ್ಳುವುದು; ಪ್ರಪಂಚವನ್ನೇ

ಗೆದ್ದು ಎಲ್ಲೆಲ್ಲಿಯೂ ಗ್ರೀಕರ ನಾಗರಿಕತೆಯನ್ನು ಸ್ಥಾಪಿಸುವುದು–ಇವೇ ಇವನ ಮುಖ್ಯ ಉದ್ದೇಶಗಳಾಗಿದ್ದವು. ಗ್ರೀಸಿನ ಆಡಳಿತವನ್ನು ತನ್ನ ಅನುಯಾಯಿಯಾದ ಅಂಟಿಪೇಟರ್‌ಗೆ ವಹಿಸಿ, ಸರಿಯಾದ ವ್ಯವಸ್ಥೆ ಮಾಡಿ, ತನ್ನ ಪ್ರಬಲವಾದ ಸೈನ್ಯದೊಡನೆ ಹೆಲೆಸ್ಪಾಂಟ್ ಪ್ರದೇಶಕ್ಕೆ ಹೋದ. ಮೊದಲು ಪುರಾತನವಾದ ಟ್ರಾಯ್ ನಗರವನ್ನು ಪ್ರವೇಶಿಸಿ ಅಕಿಲಿಸ್ಸನ ಸಮಾಧಿಗೆ ತನ್ನ ಗೌರವ ಸಲ್ಲಿಸಿದ (ಪ್ರ.ಶ.ಪೂ.334). ಹೆಲೆಸ್ಪಾಂಟನ್ನು ದಾಟಿ ಏಷ್ಯಮೈನರಿಗೆ ಬಂದ. ಪರ್ಷಿಯ ದೇಶದ ರಾಜನಾದ ಡೇರಿಯಸ್ ಯುದ್ಧಕ್ಕೆ ಯಾವ ಸಿದ್ಧತೆಗಳನ್ನೂ ಮಾಡಿರಲಿಲ್ಲವಾಗಿ ಕಷ್ಟವಿಲ್ಲದೆ ಫ್ರಿಜಿಯ ಪ್ರದೇಶ ತಲುಪಿದ.

ಅಲೆಕ್ಸಾಂಡರ್ ಪರ್ಷಿಯನ್ ಯೋಧನನ್ನು ಹೊಡೆಯುತ್ತಿರುವುದು

ಗ್ರಾನಿಕಸ್ ನದಿತೀರದಲ್ಲಿ ಪರ್ಷಿಯನ್ನರು ಅಲೆಕ್ಸಾಂಡರನ ಸೈನ್ಯವನ್ನು ಎದುರಿಸಿದರು. ಗ್ರೀಕರ ಸೈನ್ಯ ಸುವ್ಯವಸ್ಥಿತ ರೀತಿಯಲ್ಲಿ ಕಾದಾಡಿತು. ಪರ್ಷಿಯನ್ನರ ರಾವುತರನ್ನು ಚದರಿಸಲಾಯಿತು. ಕೊನೆಗೆ ಪರ್ಷಿಯನ್ನರು ಸಂಪೂರ್ಣವಾಗಿ ಸೋತರು (ಪ್ರ.ಶ.ಪೂ. 334). ಏಷ್ಯಮೈನರನ್ನು ಪ್ರವೇಶಿಸಲು ಅಲೆಕ್ಸಾಂಡರನಿಗೆ ಯಾವ ತೊಂದರೆಯೂ ಇರಲಿಲ್ಲ. ಆದರೂ ಮೊದಲು ಫಿನಿಷಿಯನ್ನರ ನೌಕೆಯನ್ನು ಸೋಲಿಸಬೇಕಾಗಿತ್ತು. ಸಾರ್ಡಿಸ್ ಮತ್ತು ಇಫಿಸಸ್ ನಗರಗಳನ್ನು ಕಷ್ಟವಿಲ್ಲದೆ ಹಿಡಿದುದಾಯಿತು. ಮಿಲೆಟಸ್ ನಗರವನ್ನು ದೌರ್ಜನ್ಯದಿಂದ ವಶಮಾಡಿಕೊಳ್ಳಬೇಕಾಯಿತು. ರೋಡಸ್‌ನ ಮೆಮ್ನಾನ್ ಎಂಬಾತ ಪರ್ಷಿಯನ್ನರ ಪರವಾಗಿ ಹಾಲಿಕರ್ನಸೆಸ್‌ನಲ್ಲಿ ಯುದ್ಧಕ್ಕೆ ಸಿದ್ಧತೆ ಮಾಡಿಕೊಂಡಿದ್ದ.

ಡೇರಿಯಸ್ ಧೈರ್ಯಮಾಡಿ ಪ್ರಬಲವಾದ ಸೈನ್ಯದೊಡನೆ ಸಿಲೀಸಿಯ ಪ್ರದೇಶಕ್ಕೆ ಬಂದ. ಇಸಸ್ ನಗರದಲ್ಲಿ ಯುದ್ಧವಾಯಿತು (ಪ್ರ.ಶ.ಪೂ. 333). ಪರ್ಷಿಯನ್ನರ ಸೈನ್ಯ ಸಣ್ಣ ಮೈದಾನದಲ್ಲಿ ಚಲಿಸುವುದೇ ಕಷ್ಟವಾಯಿತು. ಡೇರಿಯಸ್ ಭಯಪಟ್ಟು ಓಡಿಹೋದ. ಪರ್ಷಿಯನ್ನರು ದಿಕ್ಕುತೋಚದೆ ಚದರಿದರು. ಬಿಟ್ಟುಹೋದ ಐಶ್ವರ್ಯ ಗ್ರೀಕರ ವಶವಾಯಿತು. ಕೊನೆಗೆ ಡೇರಿಯಸ್ಸನ ತಾಯಿ, ಹೆಂಡತಿ, ಸಂಸಾರವೆಲ್ಲವೂ ಅಲೆಕ್ಸಾಂಡರನ ಆಶ್ರಯ ಪಡೆಯಬೇಕಾಯಿತು. ಅಲೆಕ್ಸಾಂಡರ್ ಅವರನ್ನು ಮರ್ಯಾದೆಯಿಂದ ರಕ್ಷಿಸಿದ.

ಅಲೆಕ್ಸಾಂಡರ್ ಪರ್ಷಿಯ ದೇಶದ ಮೇಲೆ ನುಗ್ಗುವುದಕ್ಕೆ ಮುಂಚೆ ದಕ್ಷಿಣಕ್ಕೆ ತಿರುಗಿ ಸಿರಿಯ ಮತ್ತು ಈಜಿಪ್ಟಿಗೆ ಹೋದ. ಮಧ್ಯದಲ್ಲಿ ಸಿಕ್ಕಿದ ನಗರಗಳು ಇವನ ವಶವಾದವು. ಟೈರ್ ನಗರ ಸುಲಭವಾಗಿ ಸ್ವಾಧೀನವಾಗಲಿಲ್ಲ. ಅದು ಒಂದು ದ್ವೀಪ. ಸುತ್ತಲೂ ಭದ್ರವಾದ ಕೋಟೆಯಿತ್ತು. ಅಲೆಕ್ಸಾಂಡರ್ ದಡದಿಂದ ದ್ವೀಪಕ್ಕೆ ಸೇತುವೆಯನ್ನು ರಚಿಸಿ, ಕೋಟೆಗೆ ಲಗ್ಗೆ ಹಾಕಿ ವಶಪಡಿಸಿಕೊಂಡ. ಇವನ ಕೀರ್ತಿ ಹರಡಿತು. ಆದರೆ ಅಲ್ಲಿ ಈತ ಮಾಡಿದ ಅಮಾನುಷ ಕೊಲೆಗಳೂ ಹಿಂಸೆಗಳೂ ಥೀಬ್ಸ್‌ನಲ್ಲಿ ಮಾಡಿದ ಅನ್ಯಾಯಗಳಿಗೆ ಯಾವ ರೀತಿಯಲ್ಲೂ ಕಡಿಮೆಯಾಗಿರಲಿಲ್ಲ. 8,000 ಜನರನ್ನು ಕೊಂದ. 30,000 ಜನರನ್ನು ಗುಲಾಮರನ್ನಾಗಿ ಮಾಡಿದ. ಒಡನೆ ನಗರ ಕಷ್ಟವಿಲ್ಲದೆ ಇವನ ವಶವಾಯಿತು. ಮುಂದಕ್ಕೆ ಪ್ಯಾಲಸ್ಟೈನ್ ಮೇಲೆ ದಾಳಿ ಮಾಡಿ, ವಶಪಡಿಸಿಕೊಂಡ. ನಗರದ ರಾಜ್ಯಪಾಲನಾದ ಬೇಟಿಸ್ ಕ್ರೂರವಾದ ಶಿಕ್ಷೆಗೆ ಗುರಿಯಾದ. ಅವನನ್ನು ರಥದ ಹಗ್ಗಕ್ಕೆ ಕಟ್ಟಿ , ಸಾಯುವವರೆಗೂ ಎಳಸಲಾಯಿತು.

**ಗಾರ್ಡಿಯನ್ ಗಂಟು :** ಇಸಸ್ ಕದನಕ್ಕೆ ಮುಂಚೆ ಅಲೆಕ್ಸಾಂಡರ್ ಫ್ರಿಜಿಯ ದೇಶದ ಹಿಂದಿನ ರಾಜಧಾನಿಯಾದ ಗಾರ್ಡಿಯಂ ನಗರಕ್ಕೆ ಬಂದ. ಈ ಸ್ಥಳದಲ್ಲಿ ಒಂದು ಪುರಾತನವಾದ ರಥವಿತ್ತು. ಇದನ್ನು ಫ್ರಿಜಿಯನ್ನರ ಮೊದಲನೆಯ ದೊರೆಯಾದ ಗಾರ್ಡಿಯಸ್ ಕಟ್ಟಿದನೆಂಬ ಐತಿಹ್ಯವಿತ್ತು. ರಥದ ಕಂಬಕ್ಕೆ ಕಟ್ಟಿದ್ದ ತೊಗಟೆಯ ಗಂಟನ್ನು ಯಾರು ಬಿಚ್ಚುವರೋ ಅವರು ಏಷ್ಯವನ್ನು ಆಳುವರು ಎಂದು ಭವಿಷ್ಯ ಹೇಳುತ್ತಿದ್ದರು. ಅಲೆಕ್ಸಾಂಡರ್ ಕಷ್ಟವಿಲ್ಲದೆ ತನ್ನ ಕತ್ತಿಯಿಂದ ಗಾರ್ಡಿಯನ್ ಗಂಟನ್ನು ಕತ್ತರಿಸಿದ. ಅಕಸ್ಮಾತ್ತಾಗಿ ಉಂಟಾದ ಸಿಡಿಲು ಜ್ಯೂಸ್ ದೇವತೆಯ ಒಪ್ಪಿಗೆಯ ಸಂಕೇತ ಎಂದು ಹೇಳಿದರು. ಮುಂದಕ್ಕೆ ಅಲೆಕ್ಸಾಂಡರ್ ಟಾರಸ್ ಗುಡ್ಡದಿಂದ ಸಿಲಿಸಿಯ ಪ್ರದೇಶಕ್ಕೆ ಹೋದ. ಪರ್ಷಿಯನ್ನರು ಯುದ್ಧಮಾಡದೆ ಹಿಮ್ಮೆಟ್ಟಿದರು. ಚಾರ್ಸಸ್‌ನಗರ ವಶವಾಯಿತು.

**ಈಜಿಪ್ಟಿನ ದಂಡಯಾತ್ರೆ :** ಟೈರ್ ಮುತ್ತಿಗೆಯ ಅನಂತರ ಅಲೆಕ್ಸಾಂಡರ್ ಈಜಿಪ್ಟನ್ನು ಸೇರಿದ. ಈಜಿಪ್ಟ್ ಎರಡು ಶತಮಾನಗಳಿಂದ ಪರ್ಷಿಯ ದೇಶಕ್ಕೆ ಅಡಿಯಾಳಾಗಿ ನೊಂದಿತ್ತು. ಅಲೆಕ್ಸಾಂಡರ್‌ನನ್ನು ಜನ ಹರ್ಷದಿಂದ ಗೌರವಿಸಿದರು. ಇವನನ್ನು ತಮ್ಮ ರಾಜನೆಂದು ಭಾವಿಸಿ ಹೂಮಾಲೆ ಹಾಕಿದರು. ನಾಲ್ಕು ತಿಂಗಳುಗಳ ಕಾಲ ಅಲ್ಲಿದ್ದು ಈಜಿಪ್ಷನವರು ತೋರಿದ ಆದರ ಸತ್ಕಾರ ಪೂಜೆಗಳಿಂದ ಅಲೆಕ್ಸಾಂಡರ್ ಸಂತುಷ್ಟನಾದ. ದೈವಾಂಶಸಂಭೂತನೆಂದು ಹೆಮ್ಮೆಪಟ್ಟ. ನೈಲ್ ನದಿಯ ಪಶ್ಚಿಮಕ್ಕೆ ಹೋಗಿ ಅಲೆಕ್ಸಾಂಡ್ರಿಯ ನಗರವನ್ನು ಸ್ಥಾಪಿಸಿದ. ಮುಂದೆ ಅದು ಅನೇಕ ಶತಮಾನಗಳವರೆಗೂ ಗ್ರೀಕರ ವಾಣಿಜ್ಯ ಮತ್ತು ನಾಗರಿಕತೆಯ ಕೇಂದ್ರವಾಯಿತು. ಮರುಭೂಮಿಯ ಹಸುರು ನೆಲದಲ್ಲಿದ್ದ ಅಮನ್ ದೇವಾಲಯವನ್ನು ಭೇಟಿಮಾಡಿದ. ಈಜಿಪ್ಟಿನವರು ಇವನ ದೈವಭಕ್ತಿಯಿಂದ ಮುಗ್ಧರಾಗಿ, ವಿಶೇಷ ಗೌರವವನ್ನು ತೋರಿಸಿದರು. ಈಜಿಪ್ಟ್ ದಂಡಯಾತ್ರೆಯಾದ ಮೇಲೆ ಪ್ರ.ಶ.ಪೂ. 331ರಲ್ಲಿ ಟೈರ್‌ಗೆ ಬಂದ. ಮೆಸಪೊಟೇಮಿಯ ಮರುಭೂಮಿಯ ಉಷ್ಣತೆಯನ್ನು ತಪ್ಪಿಸಿಕೊಳ್ಳಲು ಥಾಪ್ಸಕಸ್ ನಗರದಲ್ಲಿ ಯೂಫ್ರಟೀಸ್ ನದಿಯನ್ನೂ ಅಲ್ಲಿಂದ ಮುಂದೆ ಟೈಗ್ರಿಸ್ ನದಿಯನ್ನೂ ದಾಟಿ, ಎಡದಡದಲ್ಲಿದ್ದ ಗಾಗಮೇಲ ಪಟ್ಟಣವನ್ನು ಸೇರಿದ.

ಡೇರಿಯಸ್ ಬಹು ಸಂಖ್ಯಾತ ಸೇನೆಯನ್ನು ಸಿದ್ಧಪಡಿಸಿದ್ದ. ಸುಮಾರು 1 ಕೋಟಿ ಕಾಲಾಳುಗಳೂ 40,000 ರಾವುತರೂ ಪರ್ಷಿಯನ್ನರ ಸೈನ್ಯದಲ್ಲಿದ್ದರು. ಆದರೆ ಸೈನ್ಯದಲ್ಲಿ ಏನೇನೂ ಶಿಸ್ತಿರಲಿಲ್ಲ. ಅಲೆಕ್ಸಾಂಡರ್ ತನ್ನ ರಾವುತರನ್ನು ಪರ್ಷಿಯನ್ನರ ಮೇಲೆ ನುಗ್ಗಿಸಿ ಚದುರಿಸಿದ. ಡೇರಿಯಸ್ ಮತ್ತೊಮ್ಮೆ ಓಡಿಹೋದ. ಗಾಗ್‌ಮೇಲ ಕದನದಿಂದ (ಪ್ರ.ಶ.ಪೂ. 331) ಅಲೆಕ್ಸಾಂಡರನಿಗೆ ಅದ್ಭುತ ಜಯವಾಯಿತು. ಡೇರಿಯಸ್ ಸಂಪೂರ್ಣವಾಗಿ ಸೋತು, ಮೀಡಿಯ ರಾಜಧಾನಿಯಾದ ಎಕ್ಬತಾನ ನಗರದಲ್ಲಿ ಬಚ್ಚಿಟ್ಟುಕೊಂಡ. ಪರ್ಷಿಯನ್ನರ ಸಾಮ್ರಾಜ್ಯ ನುಚ್ಚುನೂರಾಯಿತು.

ವಿಜಯಿಯಾದ ಅಲೆಕ್ಸಾಂಡರ್ ಬ್ಯಾಬಿಲೋನಿಯ ಸಾಮ್ರಾಜ್ಯವನ್ನು ಆಕ್ರಮಿಸಿದ. ಪರ್ಷಿಯ ದೇಶದ ರಾಜಧಾನಿಯಾದ ಸೂಸ ನಗರವನ್ನು ವಶಪಡಿಸಿಕೊಂಡ. ಅಲ್ಲಿ ಹೆಚ್ಚು ಕೊಳ್ಳೆ ಸಿಕ್ಕಿತು. ಅದರಲ್ಲಿ 50000 ಟಾಲೆಂಟ್ (12,000,000 ಪೌಂಡು) ನಗದು ಸೇರಿತ್ತು. ಪರ್ಷಿಯ ದೇಶದ ಸೇನಾನಾಯಕನಾದ ಏರಿಯೊಬರ್ಜನಿಸ್ ಅಲೆಕ್ಸಾಂಡರ್‌ನನ್ನು ವಿರೋಧಿಸಿದ. ಅಲೆಕ್ಸಾಂಡರ್ ಅವನ ಸೈನ್ಯವನ್ನು ಚದರಿಸಿ ಪರ್ಸಿಪೋಲಿಸ್ ಎಂಬ ಸುಂದರವಾದ ನಗರವನ್ನು ಹಿಡಿದ. ಇಲ್ಲಿಯೂ ಅಪರಿಮಿತವಾದ ಕೊಳ್ಳೆ ಸಿಕ್ಕಿತು. ಇಲ್ಲಿ ಸರಕ್ಸಸ್ಸನ ಅರಮನೆಯನ್ನು ಸುಡಲಾಯಿತು. ಅಲೆಕ್ಸಾಂಡರ್ ಈ ಅನಾಗರಿಕ ಕೃತ್ಯವನ್ನು ಕುಡಿತದ ಅಮಲಿನಲ್ಲಿದ್ದಾಗ ಕೇವಲ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ಮಾಡಿದನೆಂಬ ಪ್ರತೀತಿ ಇದೆ. ಸೈನ್ಯದವರು ಮಾಡಿದ ಸುಲಿಗೆ ಅಮಾನುಷ ಕೃತ್ಯಗಳಿಗೆ ಮಿತಿಯಿರಲಿಲ್ಲ.

ಅಲೆಕ್ಸಾಂಡರ್ ಡೇರಿಯಸ್ಸನನ್ನು ಬೆನ್ನಟ್ಟಿ ಹಿಡಿಯಬೇಕೆಂಬ ಸಂಕಲ್ಪ ಮಾಡಿದ. ತ್ವರೆಮಾಡಿ ಎಕ್ಬತಾನ ನಗರಕ್ಕೆ ಹೋದ. ಅಲ್ಲಿಂದ ಹಕ್ಕಿ ಹಾರಿ ಹೋಯಿತು ಎಂಬುದಾಗಿ ತಿಳಿಯಿತು. ಮುಂದಕ್ಕೆ ವೈರಿಯನ್ನು ಬೆನ್ನಟ್ಟಿ ಪೂರ್ವದ ಕಡೆಗೆ ಹೋದ. ಬಾಕ್ಟ್ರಿಯ ಪ್ರದೇಶದ ಬೆಸಸ್ ಡೇರಿಯಸ್ಸನನ್ನು ಸೆರೆಹಿಡಿದಿರುವನೆಂದು ತಿಳಿಯಿತು. ಅಲೆಕ್ಸಾಂಡರ್ ತತ್‌ಕ್ಷಣವೇ ಬಾಕ್ಟ್ರಿಯದ ಕಡೆ ಧಾವಿಸಿ, ಬೆಸಸ್‌ನನ್ನೂ ಆತನ ಸ್ನೇಹಿತರನ್ನೂ ಹಿಡಿಯುವುದರಲ್ಲಿದ್ದ. ಆದರೆ ಅವರು ತಮ್ಮ ಕುದುರೆಗಳನ್ನು ಹತ್ತಿ ತಪ್ಪಿಸಿಕೊಂಡರು. ಡೇರಿಯಸ್ ಓಡಿಹೋಗಲು ಒಪ್ಪದಿರಲು ಬೆಸಸ್ ಅವನನ್ನು ತಿವಿದು ಕೊಂದುಹಾಕಿದ. ಅಲೆಕ್ಸಾಂಡರನಿಗೆ ಈ ದುರಂತಸುದ್ದಿ ತಿಳಿಯಿತು. ಕನಿಕರದಿಂದ ಡೇರಿಯಸ್ಸನ ಶವವನ್ನು ಮರ್ಯಾದೆಯಿಂದ ಪರ್ಸಿಪೊಲಿಸ್ ನಗರದಲ್ಲಿ ಅಂತ್ಯಸಂಸ್ಕಾರ ಮಾಡಲು ವ್ಯವಸ್ಥೆಮಾಡಿದ.

ಅಲೆಕ್ಸಾಂಡರ್ ಬ್ಯಾಕ್ಟ್ರಿಯ (ಉತ್ತರ ಆಫ್ಘಾನಿಸ್ತಾನ) ದೇಶದ ಮೇಲೆ ದಂಡೆತ್ತಿ ಹೋದ. ಬೆಸಸ್ ತಾನೇ ಪರ್ಷಿಯ ದೇಶದ ರಾಜನೆಂದು ಘೋಷಿಸಿ ಅರ್ಟಗ್ಸರ್‌ಕ್ಸಸ್ ಎಂಬ ಬಿರುದನ್ನು ಪಡೆದ. ಅಲೆಕ್ಸಾಂಡರ್ ಈ ದಂಡಯಾತ್ರೆಯಲ್ಲಿ ಅದ್ಭುತ ಸಾಹಸ ತೋರಿಸಿದ. ಅನೇಕ ದಟ್ಟವಾದ ಗುಡ್ಡಗಾಡುಗಳನ್ನು ದಾಟಬೇಕಾಯಿತು. ಹಿರತ್ ಮತ್ತು ಕಾಂದಹಾರ್ ಬಳಿ ಹೊಸ ಅಲೆಕ್ಸಾಂಡ್ರಿಯ ಪಟ್ಟಣವನ್ನು ನಿರ್ಮಿಸಿದ. ಚಳಿಗಾಲದಲ್ಲಿ ಹಿಂದೂಕುಷ್ ಪರ್ವತವನ್ನು ದಾಟಿದ. ಆಕ್ಸಸ್ ನದಿಯನ್ನು ದಾಟುವಾಗ ಚರ್ಮದ ಮೇಲೆ ತೇಲಿಕೊಂಡು ಹೋದ. ಕೊನೆಗೆ ಬೆಸಸ್‌ನನ್ನು ಹಿಡಿದು, ಅಂಗವಿಹೀನನನ್ನಾಗಿ ಮಾಡಿ, ಅವನ ರಾಜಧಾನಿಯಲ್ಲೇ ಶೂಲಕ್ಕೇರಿಸಿದ. ಈ ದಂಡಯಾತ್ರೆಯಲ್ಲಿ ಮತ್ತೊಂದು ಅಮಾನುಷ ಕೃತ್ಯ ನಡೆಯಿತು. ತನ್ನ ರಾವುತರ ನಾಯಕನಾದ ಪರ್ಮಿನಿಯೋವಿನ ಮಗನಾದ ಫಿಲೋಟಸ್ ತನ್ನನ್ನು ಕೊಲೆಮಾಡಲು ಒಳಸಂಚು ಮಾಡಿದನೆಂಬ ಗುಮಾನಿ ಬರಲು,

ಸರಿಯಾಗಿ ವಿಚಾರಿಸದೆ ಅಲೆಕ್ಸಾಂಡರ್ ಅವನನ್ನು ಕೊಂದುದಲ್ಲದೆ ಎಕ್ಬಟಾನದಲ್ಲಿದ್ದ ಅವನ ತಂದೆ ಪರ್ಮಿಯೋನನ್ನೂ ಕೊಲ್ಲಿಸಿದ. ಬ್ಯಾಕ್ಟ್ರಿಯದಿಂದ ಅಲೆಕ್ಸಾಂಡರ್ ಸೊಗ್ಡಿಯಾನದ (ತುರ್ಕಿಸ್ತಾನದ) ಮೇಲೆ ನುಗ್ಗಿದ. ಈ ಪ್ರಾಂತ್ಯ ಆಕ್ಸಸ್ ನದಿಯ ಆಚೆ ಪರ್ಷಿಯನ್ನರಿಗೆ ಸೇರಿತ್ತು. ಇಲ್ಲಿನ ಸಿಥಿಯನ್ನರು ಭಯಂಕರವಾಗಿ ಕಾದಾಡಿದರು. ಆದರೆ ಅಲೆಕ್ಸಾಂಡರ್ ಅವರನ್ನು ಜಯಿಸಿ ಜಕ್ಸಾರ್ಟಿಸ್ ನದಿಯ ತೀರವನ್ನು ತನ್ನ ಸಾಮ್ರಾಜ್ಯದ ಎಲ್ಲೆಯಾಗಿ ಗೊತ್ತು ಮಾಡಿದ. ಈ ಪ್ರದೇಶದಿಂದಲೇ ಮಂಗೋಲರ ತಂಡಗಳು ಪಾಶ್ಚಾತ್ಯ ದೇಶಗಳ ದಂಡಯಾತ್ರೆಯನ್ನು ಕೈಗೊಂಡವು.

ದಂಗೆಯನ್ನಡಗಿಸಲು ಅಲೆಕ್ಸಾಂಡರ್ ಸಮರ್‌ಖಂಡ್‌ನಲ್ಲಿದ್ದಾಗ ಒಂದು ದುರಂತ ನಡೆಯಿತು. ಅಲೆಕ್ಸಾಂಡರನ ನಡತೆ, ಪೌರ್ವಾತ್ಯ ನಡೆನುಡಿ ಬ್ಯಾಕ್ಟ್ರಿಯ ರಾಜಕುಮಾರಿ ರಾಕ್ಸಾನಳನ್ನು ಮದುವೆಯಾದದ್ದು, ಏಷ್ಯದವರನ್ನು ತನ್ನ ಸೈನ್ಯದಲ್ಲಿ ಸೇರಿಸಿದ್ದುದು ಅವನ ಸೈನಿಕರಿಗೆ ಸರಿಬೀಳಲಿಲ್ಲ. ಒಂದು ರಾತ್ರಿ ನಾಯಕ ಕುಡಿತದ ಅಮಲಿನಲ್ಲಿದ್ದಾಗ ಭಟ್ಟಂಗಿಗಳು ಇವನನ್ನು ಹೊಗಳುತ್ತಿದ್ದರು. ಇವನ ಪ್ರಿಯ ಮಿತ್ರನಾದ ಕ್ಲೀಟಸ್‌ಗೆ ಈ ಹೊಗಳಿಕೆ ಹಿಡಿಸಲಿಲ್ಲ. ದಿಗ್ವಿಜಯಕ್ಕೆ ಫಿಲಿಪ್‌ನ ಸೈನ್ಯವೇ ಕಾರಣವೆಂದೂ ಗ್ರಾನಿಕಸ್ ಕದನದಲ್ಲಿ ತಾನು ಅಲೆಕ್ಸಾಂಡರನನ್ನು ಬದುಕಿಸಿದುದಾಗಿಯೂ ಬಹಿರಂಗವಾಗಿ ಘೋಷಿಸಿದ. ಹೀಗೆ ಹಂಗಿಸಿದ್ದರಿಂದ ಅಲೆಕ್ಸಾಂಡರನಿಗೆ ನಾಚಿಕೆಯಾಗಿ, ರೋಷದಿಂದ ಕ್ಲೀಟಸ್‌ನನ್ನು ತತ್‌ಕ್ಷಣವೇ ತನ್ನ ಭಲ್ಲೆಯಿಂದ ತಿವಿದು ಕೊಂದುಹಾಕಿದ. ಕುಡಿತದ ಅಮಲು ಕಳೆದ ಮೇಲೆ ಪಶ್ಚಾತ್ತಾಪಪಟ್ಟು, ಮೂರು ದಿನಗಳವರೆಗೂ ಊಟ ನಿದ್ರೆ ಇಲ್ಲದೆ ದುಃಖಿಸಿದ.

ಅಲೆಕ್ಸಾಂಡರ್ ಪ್ರ.ಶ.ಪೂ. 327ರಲ್ಲಿ ಹಿಂದೂಸ್ಥಾನದ ಮೇಲೆ ದಂಡಯಾತ್ರೆ ಪ್ರಾರಂಭಿಸಿದ. ಹಿಂದೂಕುಷ್ ಪರ್ವತವನ್ನು ದಾಟಿ, ಕಾಬೂಲಿಗೆ ಬಂದ. ತಕ್ಕ ಸೈನ್ಯ ವ್ಯವಸ್ಥೆಯನ್ನು ಮಾಡಿ, ಕಾಬೂಲಿನಿಂದ ಖೈಬರ್ ಕಣಿವೆಗೆ ಬಂದು, ವಾಯವ್ಯದಲ್ಲಿ ಗುಡ್ಡಗಾಡಿನ ಜನರ ಮೇಲೆ ನುಗ್ಗಿದ. ಸಿಂಧೂನದಿಯನ್ನು ದಾಟಿದಾಗ ಸಮರ್ಥನಾದ ಪುರೂರವಸ್‌ನ ಮೇಲೆ ಯುದ್ಧ ಮಾಡಬೇಕಾಯಿತು. ಜೀಲಂ ನದಿಯ ತೀರದಲ್ಲಿ ಪುರೂರವಸ್ ಪ್ರಬಲವಾದ ಸೈನ್ಯವನ್ನೂ ಆನೆಗಳನ್ನೂ ಸಿದ್ಧಪಡಿಸಿದ್ದ. ಅಲೆಕ್ಸಾಂಡರನ ಕುದುರೆಗಳು ಆನೆಗಳನ್ನು ನೋಡಿ ಬೆದರಿದವು. ಹಿಂದೂಸ್ಥಾನವನ್ನು ಜಯಿಸುವುದು ಕಷ್ಟವೆಂದು ಮನದಟ್ಟಾಯಿತು. ಸೈನಿಕರಿಗೆ ಆನೆಗಳ ಹೊಡೆತವನ್ನು ತಪ್ಪಿಸಿಕೊಳ್ಳುವುದೇ ಬಹಳ ಕಷ್ಟವಾಯಿತು. ಚತುರನಾದ ಅಲೆಕ್ಸಾಂಡರ್ ಪಕ್ಕದಿಂದ ಆನೆಗಳ ಮೇಲೆ ದಾಳಿ ಮಾಡಿ ಅವುಗಳನ್ನು ಗಾಬರಿ ಪಡಿಸಿದ. ಇದರಿಂದ ಅವು ಚೆಲ್ಲಾಪಿಲ್ಲಿಯಾಗಿ ಓಡಿಹೋದವು. ಪುರೂರವಸ್ ಶತ್ರುಗಳ ವಶನಾದ. ತನ್ನನ್ನು ರಾಜನನ್ನಾಗಿ ಕಾಣು ಎಂದು ಪುರೂರವಸ್ ಕೇಳಿಕೊಂಡ. ಆತ ತೋರಿಸಿದ ಧೈರ್ಯ ಸಾಹಸಗಳನ್ನು ಕಂಡು ಮೆಚ್ಚಿ ಅಲೆಕ್ಸಾಂಡರ್ ಅವನ ದೇಶವನ್ನು ಮತ್ತೆ ಅವನಿಗೇ ಕೊಟ್ಟ. ಅನಂತರ ಪೂರ್ವಾಭಿಮುಖವಾಗಿ ನಂದರ ರಾಜ್ಯವನ್ನು ಗೆಲ್ಲಬೇಕೆಂದು ಹೊರಟ. ಆದರೆ ಸಟ್ಲೆಜ್ ನದಿಯ ತೀರದಲ್ಲಿ ಅವನ ಸೈನಿಕರು ಮುಂದಕ್ಕೆ ಹೋಗಲು ಅವಕಾಶ ಕೊಡದೆ ದಂಗೆಯೆದ್ದರು. ಅವರು ಜೈತ್ರಯಾತ್ರೆಗಳಿಂದ ದಣಿದಿದ್ದರು. ಅದರಲ್ಲೂ ನಂದರ ಸೈನ್ಯಶಕ್ತಿ ಅದ್ಭುತವಾದುದೆಂದು ತಿಳಿದಮೇಲೆ, ಏನು ಮಾಡಿದರೂ ಮಗಧ ರಾಜ್ಯದ ಮೇಲೆ ಯುದ್ಧ ಮಾಡುವುದಿಲ್ಲವೆಂದು ಸಂಕಲ್ಪಿಸಿ ಹಿಂದಕ್ಕೆ ಹೋಗಬೇಕೆಂದು ಹಟಮಾಡಿದರು. ಕೊನೆಗೆ ಅಲೆಕ್ಸಾಂಡರ್ ಅವರ ಕೋರಿಕೆಗೆ ಒಪ್ಪಬೇಕಾಯಿತು. ಸಿಂಧೂನದಿಯನ್ನು ದಾಟಿ ಪ್ರ.ಶ.ಪೂ. 325ರಲ್ಲಿ ಸೂಸ ಪಟ್ಟಣವನ್ನು ಸೇರಿದ. ಅಲ್ಲಿಂದ ಬ್ಯಾಬಿಲಾನ್ ನಗರಕ್ಕೆ ಹೋದಾಗ ಅಕಸ್ಮಾತ್ತಾಗಿ ಜ್ವರ ಬಂದು ಕೇವಲ 32ನೆಯ ವಯಸ್ಸಿನಲ್ಲಿ (ಪ್ರ.ಶ.ಪೂ. 323) ನಿಧನನಾದ.

ಅಲೆಕ್ಸಾಂಡರನ ವಿಶಾಲ ಸಾಮ್ರಾಜ್ಯ ಗ್ರೀಸಿನಿಂದ ಪಂಜಾಬಿನವರೆಗೂ ವಿಸ್ತರಿಸಿತ್ತು. ಈತನ ಕೀರ್ತಿ ಎಲ್ಲೆಲ್ಲಿಯೂ ಹರಡಿತ್ತು. ಕೇವಲ 12 ವರ್ಷಗಳಲ್ಲಿ ಈತ ಇಡೀ ಒಂದು ಜೀವಮಾನದ ಸಾಧನೆಯನ್ನು ಸಾಧಿಸಿದ್ದ. ಈತನ ರಾಜನೀತಿ ಕುಶಲತೆಯ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಈತ ಮಾಡಿದ ಕಾರ್ಯಸಾಧನೆ ಅದ್ಭುತವಾದುದೆಂದು ಹೇಳಬೇಕು. ಮುಖ್ಯವಾಗಿ ಪಾಶ್ಚಾತ್ಯ ಪೌರ್ವಾತ್ಯ ನಾಗರಿಕತೆಗಳನ್ನು ಒಂದುಗೂಡಿಸಬೇಕೆಂಬುದು ಇವನ ಅಭಿಲಾಷೆಯಾಗಿತ್ತು. ಇವನ ವಿಷಯವಾಗಿ ನಡೆದದ್ದನ್ನು ಹೇಳಿದರೂ, ಕಥೆಯಂತೆಯೇ ತೋರುತ್ತದೆ. ಇವನ ಜೀವನ ಅಷ್ಟು ಆಶ್ಚರ್ಯಕರವಾದದ್ದು. ಪರ್ಷಿಯ ಸಾಮ್ರಾಜ್ಯವನ್ನು ಉರುಳಿಸಿ ಈತ ಪ್ರಪಂಚವನ್ನು ಅಚ್ಚರಿಗೊಳಿಸಿದ. ಸೈನಿಕರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿದ. ಹ್ಯಾನಿಬಾಲ್, ಸೀಸರ್, ನೆಪೋಲಿಯನ್‌ರ ಹಾಗೆ ಯುದ್ಧದಲ್ಲಿ ಕೀರ್ತಿ ಪಡೆದ. ಆದರೆ ಇವನ ಶಾಶ್ವತವಾದ ಕೀರ್ತಿ ಪೂರ್ವ ಪಶ್ಚಿಮ ಭೇದಗಳನ್ನು ತೊಡೆದುಹಾಕಿ, ಎಲ್ಲ ಜನಾಂಗಗಳೂ ಕಲೆತು ಸೌಹಾರ್ದದಿಂದ ಬಾಳುವಂತೆ ಮಾಡುವ ಉತ್ತಮ ಹಿರಿಯಾಸೆಯಲ್ಲಿ ಅಡಗಿತ್ತು. ಅಂತರ್ವಿವಾಹ ಪದ್ಧತಿ, ಏಷ್ಯದವರನ್ನು ತನ್ನ ಸೈನ್ಯದಲ್ಲಿ ಸೇರಿಸುವುದು, ಅಲೆಕ್ಸಾಂಡ್ರಿಯ ಹೆಸರಿನ ನವೀನ ನಗರಗಳನ್ನು ಸ್ಥಾಪಿಸುವುದು–ಇವುಗಳ ಮೂಲಕ ಗ್ರೀಕರ ನಾಗರಿಕತೆಯನ್ನು ಭದ್ರವಾಗಿ ಸ್ಥಾಪಿಸಿ ಹರಡುವುದೇ ಇವನ ಸಂಕಲ್ಪವಾಗಿತ್ತು. ಇವನ ಅಕಾಲಮರಣ ಶಾಶ್ವತವಾದ ಕಾರ್ಯಸಾಧನೆಗೆ ಅಡಚಣೆಯನ್ನುಂಟುಮಾಡಿತಾದರೂ ಇವನನ್ನು ಮಹಾಶಯನೆಂದು ಹೇಳಲು ಯಾವ ಸಂಶಯವೂ ಇಲ್ಲ. ಪ್ರಪಂಚದ ಚರಿತ್ರೆಯಲ್ಲಿ, ಪೂರ್ವ ಪಶ್ಚಿಮ ದಿಕ್ಕುಗಳ ಸಂಪರ್ಕದ ಇತಿಹಾಸದಲ್ಲಿ ಈತ ಅಚ್ಚಳಿಯದ ಕೀರ್ತಿ ಗಳಿಸಿದ್ದಾನೆ. ಅಲೆಕ್ಸಾಂಡರನ ಆಶೆ ಬಹುಮಟ್ಟಿಗೆ ನೆರವೇರಿತೆಂದೇ ಹೇಳಬೇಕು. ಕ್ರಮೇಣ ಪೂರ್ವ ಪಶ್ಚಿಮ ರಾಷ್ಟ್ರಗಳ ಮಧ್ಯದ ಸಂಪರ್ಕ ಬೆಳೆದು ನಿಕಟವಾಯಿತು. ವ್ಯಾಪಾರ ಅಭಿವೃದ್ಧಿಯಾದುದಲ್ಲದೆ ಕಾಲಕ್ರಮೇಣ ಗ್ರೀಕ್ ಮತ್ತು ಮಗಧರಾಜ್ಯಗಳ ನಡುವೆ ರಾಜತಾಂತ್ರಿಕ ಸಂಬಂಧಗಳು ಏರ್ಪಟ್ಟವು. ಎರಡೂ ಸಂಸ್ಕೃತಿಗಳು ಪರಸ್ಪರ ಬೆರೆತು ಬೆಳೆದವು. ಬಹುಕಾಲದವರೆಗೆ ಭಾರತದ ನಾಣ್ಯ ಪದ್ಧತಿಯ ಮೇಲೆ ಗ್ರೀಕ್ ಪ್ರಭಾವ ಕಾಣಬರುತ್ತಿತ್ತೆಂದು ವಿದ್ವಾಂಸರ ಮತ. ಹಿಂದೂದರ್ಶನ, ತತ್ತ್ವಶಾಸ್ತ್ರಗಳೂ ಗ್ರೀಕ್ ಜನರ ಹೃದಯವನ್ನು ಗೆದ್ದುವು. ಅಲೆಕ್ಸಾಂಡರನ ಜೊತೆ ಬಂದಿದ್ದ ಗ್ರೀಕ್ ವಿದ್ವಾಂಸರು ಭಾರತದ ಬಗ್ಗೆ ಬರೆದಿದ್ದಾರೆ. ಒಟ್ಟಿನಲ್ಲಿ ಅಲೆಕ್ಸಾಂಡರನ ದಂಡಯಾತ್ರೆ ಕೇವಲ ರಾಜ್ಯಾಕ್ರಮಣದಲ್ಲೇ ಪರ್ಯವಸಾನವಾಗಲಿಲ್ಲ, ವೈಮನಸ್ಸು ದ್ವೇಷಗಳಲ್ಲಿ ಮುಗಿಯಲಿಲ್ಲ. ಪೂರ್ವಪಶ್ಚಿಮಗಳ ನಂಟು ಅದರಿಂದ ಹೆಚ್ಚಾಯಿತು.

(ಬಿ.ಎಸ್.ಕೆ.;ಜಿ.ಆರ್.ಆರ್.)

**ಅಲೆಕ್ಸಾಂಡರ್ ಪೋಪರು : ಅಲೆಕ್ಸಾಂಡರ್ ಪೋಪ್ I:** ಪೋಪರ ಪರಂಪರೆಯಲ್ಲಿ ಐದನೆಯವ. ಅಧಿಕಾರಾವಧಿ 106–115 ಅಥವಾ 109–110. ಹುಟ್ಟಿನಿಂದ ರೋಮನ್ನಾಗಿದ್ದು ಟ್ರೋಜನರ ಕಾಲದಲ್ಲಿ ಚರ್ಚಿನ ಆಡಳಿತ ವಹಿಸಿದ್ದು ವೀರಮರಣ ಪಡೆದ. ಕ್ರೈಸ್ತರು ಶುದ್ಧೀಕರಣಕ್ಕಾಗಿ ಉಪ್ಪು ಬೆರಸಿದ ಪವಿತ್ರ ಜಲವನ್ನು ಉಪಯೋಗಿಸುವ ಪದ್ಧತಿಯನ್ನು ಬಳಕೆಗೆ ತಂದನೆಂದು ಹೇಳಲಾಗಿದೆ. 1855ರಲ್ಲಿ ರೋಮಿನ ಸಮೀಪದಲ್ಲಿ ಈತನ ಸಮಾಧಿ ಇರುವ ವಿಷಯ ಗೊತ್ತಾಯಿತು.

**ಅಲೆಕ್ಸಾಂಡರ್ ಪೋಪ್ II:** 1061–73. ಪೂರ್ವನಾಮ ಎನ್‌ಸೆಲ್ಮ್. ಕುಲೀನ ಕುಟುಂಬದವ. ಸುಧಾರಣೆಗಳನ್ನು ಬಳಕೆಗೆ ತರಲು ಬಹಳ ಕುತೂಹಲವುಳ್ಳವನಾಗಿದ್ದ. 1057ರಲ್ಲಿ ಚಕ್ರವರ್ತಿ ಮೂರನೆಯ ಹೆನ್ರಿ ಲಕ್ಕಾದ ಗುರು ಸ್ಥಾನಕ್ಕೆ ಇವನನ್ನು ನೇಮಿಸಿದ. ಪೋಪ್ ನಿಕೊಲಸ್‌ನ ಮರಣಾನಂತರ ಇವನನ್ನು ಪೋಪನನ್ನಾಗಿ ಆರಿಸಿ ಎರಡನೆಯ ಅಲೆಕ್ಸಾಂಡರ್ ಎಂದು ಕರೆದರು. ಆದರೆ ರೋಮನ್ ಅಧ್ಯರ ನಿಯೋಗವೊಂದು ಮರುಚುನಾವಣೆ ಆಗಬೇಕೆಂದು ಬಯಸಿ ಪ್ರತಿಸ್ಪರ್ಧಿಯನ್ನು ನಿಲ್ಲಿಸಿದರೂ ಅಲೆಕ್ಸಾಂಡರನೇ ನ್ಯಾಯವಾದ ಪೋಪನೆಂದು ಕೊನೆಗೆ ಮಾನ್ಯ ಮಾಡಲಾಯಿತು.

**ಅಲೆಕ್ಸಾಂಡರ್ ಪೋಪ್ III:** 1159–81. ಇಟಲಿಯ ಪ್ರಸಿದ್ಧ ಸೈಯನೀಸ್ ಕುಟುಂಬದಲ್ಲಿ ಜನಿಸಿ, ಪ್ರಾಧ್ಯಾಪಕನಾಗಿ ಹೆಸರು ಗಳಿಸಿದ್ದು, 1159ರಲ್ಲಿ ಪೋಪನಾಗಿ ಆರಿಸಲ್ಪಟ್ಟ. ಚಕ್ರವರ್ತಿಯನ್ನು ಬಹಿಷ್ಕರಿಸಿ ಪ್ರಜೆಗಳನ್ನು ರಾಜಭಕ್ತಿಯ ಪ್ರಮಾಣಗಳಿಂದ ಬಿಡುಗಡೆಗೊಳಿಸಿದ. 1179ರಲ್ಲಿ 300ಕ್ಕೂ ಮೇಲ್ಪಟ್ಟು ಬಿಷಪ್ಪರ ಸಭೆ ಕೂಡಿಸಿ ಅದರ ಅಧ್ಯಕ್ಷ ಸ್ಥಾನದಿಂದ ಕ್ರೈಸ್ತ ಧರ್ಮದ ಏಳಿಗೆಗೆ ಸಂಬಂಧಿಸಿದ ಹಲವು ಮಹತ್ತ್ವದ ತೀರ್ಮಾನಗಳನ್ನಿತ್ತ.

**ಅಲೆಕ್ಸಾಂಡರ್ ಪೋಪ್ IV:** 1254–61. ಪ್ರಸಿದ್ಧ ಪೋಪರಾದ ಮೂರನೆಯ ಇನೊಸೆಂಟ್ ಮತ್ತು ಒಂಬತ್ತನೆಯ ಗ್ರೆಗರಿ–ಇವರ ಮನೆತನದವ. ಒಮ್ಮತದಿಂದ ಪೋಪ್ ಪದವಿಗೆ ಆರಿಸಲ್ಪಟ್ಟ. ದಯಾಳುವೂ ಧರ್ಮಾಭಿಮಾನಿಯೂ ಕಡು ವಿರಾಗಿಯೂ ಆಗಿದ್ದರೂ ಹೊಗಳುಭಟ್ಟರ ಮಾತಿಗೆ ಮಾತ್ರ ಬಹು ಸುಲಭದಲ್ಲಿ ಮರುಳಾಗುತ್ತಿದ್ದ. ವಿವೇಕ ಹಾಗೂ ವರ್ಚಸ್ಸಿನಿಂದ ಚರ್ಚಿನ ಕಾರ್ಯಕಲಾಪಗಳನ್ನು ನಿರ್ವಹಿಸಿದವನೆಂಬ ಕೀರ್ತಿಗೆ ಭಾಜನನಾದ.

**ಅಲೆಕ್ಸಾಂಡರ್ ಪೋಪ್ V:** 1409–10. 1339ರಲ್ಲಿ ಕ್ರೀಟ್ ದ್ವೀಪದಲ್ಲಿ ಜನಿಸಿದ ಪೀಟರ್ ಎಂಬ ಹೆಸರಿನ ಅನಾಥಬಾಲಕನನ್ನು ಕಾಪುಚಿನ್ ಗುರುವೊಬ್ಬ ಸಲಹಿದ, ಈತ ಅಸಾಮಾನ್ಯ ಬುದ್ಧಿವಂತಿಕೆಯಿಂದ ಇಟಲಿ, ಆಕ್ಸ್‌ಫರ್ಡ್ ಮತ್ತು ಪ್ಯಾರಿಸ್‌ನಲ್ಲಿ ಶಿಕ್ಷಣ ಪಡೆದು ಪ್ರಾಧ್ಯಾಪಕನಾಗಿಯೂ ಧರ್ಮೋಪದೇಶಕನಾಗಿಯೂ ಗ್ರಂಥಕರ್ತನಾಗಿಯೂ ಪ್ರಸಿದ್ಧಿ ಹೊಂದಿದ. 1409 ಜೂನ್ 26ರಂದು ಪೋಪನಾಗಿ ಒಮ್ಮತದಿಂದ ಚುನಾಯಿಸಲ್ಪಟ್ಟ. ಅತ್ಯುತ್ತಮವಾದ ಸ್ವಭಾವ, ವಿಶಾಲವಾದ ತಿಳಿವಳಿಕೆ ಮತ್ತು ಆಡಳಿತ ಸಾಮರ್ಥ್ಯದಿಂದಾಗಿ ಪೋಪನ ಪದವಿಗೂ ಚರ್ಚಿಗೂ ಘನತೆಯನ್ನು ತಂದ.

**ಅಲೆಕ್ಸಾಂಡರ್ ಪೋಪ್ VI:** 1492–1503 ಸ್ಪೇನಿನಲ್ಲಿ ಜನವರಿ ಒಂದರಂದು ಜನಿಸಿದ. ರೊಡ್ರಿಗೊ ಬೋರ್ಜಿಯ ಈತನ ಮೊದಲ ಹೆಸರು. ಸೋದರಮಾವ ಪೋಪ್ ಮೂರನೆಯ ಕ್ಯಾಲಿಕ್ಸ್‌ಟಸ್‌ನಿಂದ ಕಾಯಿದೆ ಶಿಕ್ಷಣ ಪಡೆಯುವ ಸಲುವಾಗಿ ವಿಶ್ವವಿದ್ಯಾಲಯ ಸೇರಿದ. 25ನೆಯ ವರ್ಷದಲ್ಲಿ ಕಾರ್ಡಿನಲ್ ಬಿಷಪ್ ಆಗಿಯೂ ಕ್ರಮೇಣ ರೋಮ್ ಚರ್ಚಿನ ಉಪಕುಲಪತಿಯಾಗಿಯೂ ನೇಮಕ ಹೊಂದಿದ. 1492 ಆಗಸ್ಟ್ 11 ರಂದು ಬಹುಮತದಿಂದ ಪೋಪನಾಗಿ ಆಯ್ಕೆಯಾದ. ಪಟ್ಟಣದಲ್ಲಿದ್ದ ಅನ್ಯಾಯಗಳಿಗೆಲ್ಲ ತಡೆ ಹಾಕಿ ಬಹು ಸಾಮರ್ಥ್ಯದಿಂದ ನ್ಯಾಯಪಾಲನೆ ಮಾಡುತ್ತಿದ್ದ. ವಿಜ್ಞಾನ, ಸಾಹಿತ್ಯ, ನಾಟಕ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟ. ಅವನ ಭವ್ಯವಾದ ರೂಪು ನಡೆಯುತ್ತಿದ್ದ ಧಾರ್ಮಿಕ ಸಮಾರಂಭಗಳಿಗೆ ವಿಶೇಷವಾದ ಅಲಂಕಾರವನ್ನೂ ಘನತೆಯನ್ನೂ ನೀಡುತ್ತಿತ್ತು. ಹೊಸತಾಗಿ ವಶವಾದ ಪ್ರದೇಶಗಳ ಬಗ್ಗೆ ಸ್ಪೇನ್ ಮತ್ತು ಪೋರ್ಚುಗಲ್‌ಗಳೊಳಗೆ

ಆಗಬಹುದಾಗಿದ್ದ ಘರ್ಷಣೆಯನ್ನು ತಪ್ಪಿಸಿದ. ಫ್ರಾನ್ಸಿನ ಎಂಟನೆಯ ಚಾರಲ್ಸ್ ಇಟಲಿಯನ್ನು ಆಕ್ರಮಿಸುವುದನ್ನು ತಡೆದ. ಚೆಲುವಿನ ರೋಮನ್ ಸುಂದರಿಯೊಬ್ಬಳೊಡನೆ ಸಂಬಂಧವಿಟ್ಟು ಕೊಂಡುದರಿಂದ ಅಪಕೀರ್ತಿಗೊಳಗಾದ. ತನ್ನ ಮಕ್ಕಳನ್ನು ಉನ್ನತ ಪದವಿಗಳಿಗೇರಿಸಲು ಸರ್ವಪ್ರಯತ್ನವನ್ನೂ ಮಾಡಿದ. ಫ್ರಾನ್ಸ್ ಮತ್ತು ಸ್ಪೇನ್‌ಗಳ ನಡುವೆ ಯುದ್ಧವಾದಾಗ ಯಾರ ಪಕ್ಷ ವಹಿಸಬೇಕೆಂದು ತಿಳಿಯದೆ ಪೇಚಾಡಿದ.

**ಅಲೆಕ್ಸಾಂಡರ್ ಪೋಪ್ VII:** 1655–67. 1599ರ ಫೆಬ್ರವರಿ 13ರಂದು ಇಟಲಿಯ ಪ್ರಸಿದ್ಧ ಕುಟುಂಬವೊಂದರಲ್ಲಿ ಜನಿಸಿದ. ತಾಯಿ ತಂದೆಗಳಿಂದ ಉತ್ತಮ ಶಿಕ್ಷಣ ಪಡೆದ ಬಳಿಕ ಸೈನ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳಲ್ಲಿ ಡಾಕ್ಟರೇಟ್ ಪದವಿ ಗಳಿಸಿದ. 1626ರಲ್ಲಿ ಧರ್ಮೋಪದೇಶಕನಾಗಿ 1655ರಲ್ಲಿ ಪೋಪ್ ಪದವಿಗೆ ಆಯ್ಕೆಯಾದ. ಜೀವನ ಪವಿತ್ರತೆ, ನೈತಿಕ ನಿಷ್ಠೆ , ವೈರಾಗ್ಯಗಳಿಂದ ಜನಾದರಣೆ ಗಳಿಸಿದ. ರೋಮ್ ನಗರವನ್ನು ಅಂದಗೊಳಿಸಲು ಬಹಳ ಶ್ರಮಿಸಿದ. ಅಲ್ಲಿಯ ವಿಶ್ವವಿದ್ಯಾಲಯವನ್ನು ಊರ್ಜಿತಗೊಳಿಸಿದ.

**ಅಲೆಕ್ಸಾಂಡರ್ ಪೋಪ್ VIII:** 1689–91. ವೆನಿಸ್‌ನ ಪ್ರಧಾನಿಯ ಮಗನಾಗಿ 1610ರ ಏಪ್ರಿಲ್ ನಲ್ಲಿ ಜನಿಸಿದ. ಕ್ರೈಸ್ತ ಧರ್ಮಶಾಸ್ತ್ರ ಸಂಹಿತೆಯಲ್ಲೂ ಕಾಯಿದೆ ಶಾಸ್ತ್ರದಲ್ಲೂ ಪಾರಂಗತನಾಗಿ ಡಾಕ್ಟರೇಟ್ ಪದವಿ ಗಳಿಸಿದ. 1689ರಲ್ಲಿ ಪೋಪ್‌ನ ಸ್ಥಾನಕ್ಕೆ ಚುನಾಯಿತ ನಾದ. ಈತನ ಶಾಂತಗುಣ, ಪ್ರಭಾವಗಳಿಂದ ಫ್ರಾನ್ಸಿನ ರಾಜನಾಗಿದ್ದ ಹದಿನಾಲ್ಕನೆಯ ಲೂಯಿ ಬಹಳ ಪ್ರಯೋಜನ ಹೊಂದಿದ. (ಎ.ಪಿ.)

**ಅಲೆಕ್ಸಾಂಡರ್ ದ್ವೀಪಗಳು :** ದಕ್ಷಿಣ ಅಂಟಾರ್ಕ್‌ಟಿಕ್ ಪ್ರದೇಶದಲ್ಲಿರುವ ಈ ದ್ವೀಪಗಳಲ್ಲಿನ ಮುಖ್ಯ ಭೂಭಾಗ ಗ್ರಹ್ಯಾಮ್‌ಲ್ಯಾಂಡ್ ಪರ್ಯಾಯ ದ್ವೀಪದ ಪಶ್ಚಿಮಕ್ಕಿದೆ. ಬೆಲಿಂಗ್‌ಹೌಸೆನ್ ಇವನ್ನು ಕಂಡುಹಿಡಿದು (1821) ಅಲೆಕ್ಸಾಂಡರ್ ಭೂ ಪ್ರದೇಶ ಎಂಬುದಾಗಿ ಹೆಸರಿಟ್ಟ (ಈ ದ್ವೀಪಗಳ ಭೌಗೋಳಿಕ ಮೊದಲಾದ ಲಕ್ಷಣವನ್ನು 1940ರಲ್ಲಿ ತಿಳಿಯಲಾ ಯಿತು). ಫಾಕ್‌ಲೆಂಡ್ ದ್ವೀಪಗಳ ವಿಸ್ತೃತ ಭಾಗವಾಗಿರುವ ಈ ದ್ವೀಪಗಳಲ್ಲಿ ಮೀನುಗಾರಿಕೆ ವಿಶೇಷ. ತಿಮಿಂಗಿಲಗಳನ್ನು ಹಿಡಿವ ತಂಡಗಳು ಈ ದ್ವೀಪಗಳಿಗೆ ಆಗಾಗ್ಗೆ ಬರುತ್ತಿರುತ್ತವೆ. (ಜಿ.ಕೆ.ಜಿ.)

**ಅಲೆಕ್ಸಾಂಡರ್, ಸರ್ ವಿಲಿಯಂ :** (1567–1640). ಇಂಗ್ಲೆಂಡಿನ ರಾಜಕಾರಣಿ. ಕವಿ. ಕ್ಲಾಕ್‌ಮನ್‌ಷೈರ್‌ನ ಅಲ್ವ ಎಂಬಲ್ಲಿ ಜನಿಸಿದ. ಗ್ಲ್ಯಾಸ್‌ಗೊ ಮತ್ತು ಲೀಡನ್‌ಗಳಲ್ಲಿ ಶಿಕ್ಷಣ ಪಡೆದು ಇಂಗ್ಲೆಂಡಿನ ಪ್ರಭು 6ನೆಯ ಜೇಮ್ಸ್‌ನೊಡನೆ ಇಂಗ್ಲೆಂಡಿಗೆ ಹೋಗಿ ಅಲ್ಲಿ ಆಸ್ಥಾನಾಧಿಕಾರಿಯಾದ. 1626ರಲ್ಲಿ ಸ್ಕಾಟ್‌ಲೆಂಡಿನ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಂಡು 1633ರಲ್ಲಿ ಅರ್ಲ್ ಗೌರವವನ್ನು ಪಡೆದ. ಇವನ ಕೃತಿಗಳಲ್ಲಿ ಅರೋರಾ (1604) ಮತ್ತು ರಿಕ್ರಿಯೇಷನ್ಸ್ ವಿತ್ ದಿ ಮ್ಯೂಸಸ್ (1937) ಪ್ರಸಿದ್ಧಿ ಪಡೆದಿವೆ. ಈತ ಡೇರಿಯಸ್ (1603), ಕ್ರೋಸಸ್ (1904), ದಿ ಮಾನಾರ್ಕಿಕ್ ಟ್ರಾಜಿಡೀಸ್ (1605) ಮತ್ತು ಜೂಲಿಯಸ್ ಸೀಸರ್ (1907) ಎಂಬ ನಾಲ್ಕು ರುದ್ರನಾಟಕಗಳನ್ನೂ ಡೂಮ್ಸ್‌ಡೇ ಎಂಬ ಮಹಾಕಾವ್ಯವನ್ನು ಬರೆದಿದ್ದಾನೆ. *

**ಅಲೆಕ್ಸಾಂಡ್ರಿಯ :** ಉತ್ತರ ಈಜಿಪ್ಟಿನ ಮುಖ್ಯ ರೇವುಪಟ್ಟಣ. ಪ್ರ.ಶ.ಪೂ. 332ರಲ್ಲಿ ಮ್ಯಾಸಿಡೋನಿಯದ ದೊರೆ ಅಲೆಕ್ಸಾಂಡರ್ ಮಹಾಶಯನಿಂದ ಕಟ್ಟಲ್ಪಟ್ಟಿತೆಂದು ಪ್ರತೀತಿ.

ಈಜಿಪ್ಟ್ ದೇಶದ ಪ್ರಾಚೀನ ಮತ್ತು ಐತಿಹಾಸಿಕ ಪಟ್ಟಣವಾದರೂ ಈಗ ಇದೊಂದು ಆಧುನಿಕ ಮಹಾನಗರವಾಗಿದೆ. ಇದು ಕೆಳ ಈಜಿಪ್ಟಿನ ನೈಲ್‌ನದಿ ಹಾಗೂ ಮೆಡಿಟರೇನಿಯನ್ ಸಮುದ್ರಕ್ಕೆ ಸಮೀಪದಲ್ಲಿದೆ. ಇಲ್ಲಿಂದ ಕೈರೋಗೆ 207 ಕಿಮೀ ಈಜಿಪ್ಟಿನ ದೊಡ್ಡ ಪಟ್ಟಣಗಳ ರೈಲು ಸಂಪರ್ಕವಿದೆ. ಜನಸಂಖ್ಯೆ 33,80,000 (2001). ಅರಬ್ಬರೇ ಅಧಿಕ ಸಂಖ್ಯೆಯಲ್ಲಿ ದ್ದಾರೆ. ಮೆಡಿಟರೇನಿಯನ್ ವಾಯುಗುಣವಿದ್ದು ಮಳೆ ಕಡಿಮೆ. ಬೇಸಗೆಯಲ್ಲಿ ಆಲಿಕಲ್ಲಿನ ಮಳೆಯಾಗುತ್ತದೆ. ಡಿಸೆಂಬರ್‌ನಿಂದ ಮಾರ್ಚ್‌ತಿಂಗಳವರೆಗೆ ಬಿಸಿಲಿನಿಂದ ಕೂಡಿದ ಹಿತಕರ ಹವೆ ಇರುತ್ತದೆ. ಅಗಲವಾದ ಕಾಲುವೆಗಳಿಂದ ನೀರು ಹಾಯಿಸಿ ಎರಡು ಬಂದರುಗಳನ್ನು ಈ ನಗರದ ಸಮೀಪದಲ್ಲಿ ನಿರ್ಮಿಸಲಾಗಿದೆ. ದೊಡ್ಡ ಕೈಗಾರಿಕೆ ಮತ್ತು ವ್ಯಾಪಾರಕೇಂದ್ರ. ಈಜಿಪ್ಟಿನ ಆಮದು ರಫ್ತುಗಳ ಬಹುಭಾಗ ಈ ರೇವುಪಟ್ಟಣದ ಮುಖಾಂತರವೇ ನಡೆಯುತ್ತಿದೆ. ಅಲೆಕ್ಸಾಂಡ್ರಿಯ ವಿಶ್ವವಿದ್ಯಾನಿಲಯದ ಕೇಂದ್ರ ಇಲ್ಲಿದೆ. (ಇದೇ ಹೆಸರಿನ ಅನೇಕ ಪಟ್ಟಣಗಳು ಯುರೋಪು ಮತ್ತು ಅಮೆರಿಕ ಖಂಡಗಳಲ್ಲಿವೆ). (ಜಿ.ಕೆ.ಜಿ.)

ಅಲೆಕ್ಸಾಂಡರನ ಮರಣಾನಂತರ ಟಾಲಮಿ ಸಂತತಿಯ ಅರಸರು ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಈ ಅರಸರ ಆಳ್ವಿಕೆಯ ಕಾಲದಲ್ಲಿ ಈ ನಗರ ಸರ್ವತೋಮುಖವಾದ ಅಭಿವೃದ್ಧಿ ಹೊಂದಿತು. ಕಲೆ, ಮತ, ವಿಜ್ಞಾನ ಹಾಗೂ ವ್ಯಾಪಾರ ಮುಂತಾದುವುಗಳಿಗೆ ಕೇಂದ್ರವಾಯಿತು. ಆ ಕಾಲದಲ್ಲಿ ಅಲೆಕ್ಸಾಂಡ್ರಿಯ ಮತ್ತು ಭಾರತದ ಮೌರ್ಯರ ರಾಜಧಾನಿಯಾದ ಪಾಟಲೀಪುತ್ರದ ಮಧ್ಯೆ ವಾಣಿಜ್ಯ, ರಾಜತಾಂತ್ರಿಕ ಹಾಗೂ ಮತೀಯ ಸಂಪರ್ಕವೇರ್ಪಟ್ಟಿತ್ತು. ವಿಶಾಲವಾದ ಮತ್ತು ಸುಂದರವಾದ ಅರಮನೆಗಳಿಂದಲೂ ಸುಸಜ್ಜಿತವಾದ ರಂಗಮಂಟಪಗಳಿಂದಲೂ ವಾಣಿಜ್ಯೋದ್ಯಮಗಳಿಂದಲೂ ಅಲೆಕ್ಸಾಂಡ್ರಿಯ ಶೋಭಿಸುತ್ತಿತ್ತು. ಜ್ಞಾನಪ್ರಿಯರೂ ಕಲಾಸಂಪನ್ನರೂ ಆದ ಟಾಲಮಿ ಅರಸರು ಸಹಸ್ರಾರು ಗ್ರಂಥಗಳಿಂದ ಕೂಡಿದ್ದ ಭವ್ಯ ಪುಸ್ತಕಭಂಡಾರವನ್ನು ಸ್ಥಾಪಿಸಿದ್ದರು. ಈ ಗ್ರಂಥಭಂಡಾರದಲ್ಲಿ ರೋಂ, ಗ್ರೀಸ್, ಭಾರತ ಮತ್ತು ಈಜಿಪ್ಟಿಗೆ ಸಂಬಂಧಿಸಿದ ಗ್ರಂಥಗಳಿದ್ದವು. ಪ್ರ.ಶ. 1ನೆಯ ಶತಮಾನದಲ್ಲಿ ಕ್ರೈಸ್ತಧರ್ಮ ಅಲ್ಲಿ ಪ್ರಚಾರವಾಯಿತು.

ಈಜಿಪ್ಟ್‌ರಾಜ್ಯ ರೋಮನ್‌ಸಾಮ್ರಾಜ್ಯಕ್ಕೆ ಸೇರಿದ ಅನಂತರ ಈ ನಗರದ ಪ್ರಾಮುಖ್ಯ ಇನ್ನೂ ಹೆಚ್ಚಿತು. ಇಡೀ ರೋಮನ್ ಸಾಮ್ರಾಜ್ಯದಲ್ಲಿ ಇದು ಎರಡನೆಯ ದೊಡ್ಡ ಮುಖ್ಯ ಪಟ್ಟಣವಾಗಿದ್ದು ವ್ಯಾಪಾರ ಮತ್ತು ನಾನಾ ಸಂಸ್ಕೃತಿಗಳ ಕೇಂದ್ರವಾಗಿತ್ತು. ಅಲ್ಲದೆ ರೋಮನ್ ಸಾಮ್ರಾಜ್ಯದ ದಾಸ್ತಾನು ಸಂಗ್ರಹನಗರಗಳಲ್ಲೊಂದಾಗಿತ್ತು. ಪ್ರ.ಶ. 641ರಲ್ಲಿ ಬಾಗ್ದಾದ್ ಕಲೀಫನಾದ ಉಮರನ ದಂಡನಾಯಕನೊಬ್ಬ ಅಲೆಕ್ಸಾಂಡ್ರಿಯವನ್ನು ಮುತ್ತಿ ವಶಪಡಿಸಿ ಕೊಂಡ. ತುರುಕರ ಪ್ರಾಬಲ್ಯ ಹೆಚ್ಚಿದಂತೆ ಈ ನಗರ ತನ್ನ ವಾಣಿಜ್ಯ ಮತ್ತು ಇತರ ಪ್ರಾಮುಖ್ಯಗಳನ್ನು ಕಳೆದುಕೊಂಡಿತು. 15ನೆಯ ಶತಮಾನದಲ್ಲಿ ಹೊಸ ಜಲಮಾರ್ಗಗಳನ್ನು ಕಂಡುಹಿಡಿದ ಅನಂತರ ಇತಿಹಾಸದ ಪುಟಗಳಿಂದ ಕಣ್ಮರೆಯಾಯಿತು. 1798ರಲ್ಲಿ ನೆಪೋಲಿಯನ್ ಈಜಿಪ್ಟಿನ ದಂಡಯಾತ್ರೆಯನ್ನು ಕೈಗೊಂಡು ಅಲೆಕ್ಸಾಂಡ್ರಿಯವನ್ನು ಮುತ್ತಿದಮೇಲೆ ಈ ನಗರ ಪುನಶ್ಚೇತನಗೊಳ್ಳತೊಡಗಿತು. 19ನೆಯ ಶತಮಾನದ ಪೂರ್ವಾರ್ಧ ದಲ್ಲಿ ಮಹಮದಾಲಿಯ ಆಳ್ವಿಕೆಯಲ್ಲಿ ಅದರ ನವೋದಯ ಪ್ರಾರಂಭವಾಯಿತು. ಸಯ್ಯದ್ ಪಾಷಾನ ಆಳ್ವಿಕೆಯಲ್ಲಿ ಮತ್ತೆ ರಾಜಧಾನಿಯಾಯಿತು. (ಜಿ.ಆರ್.ಆರ್.)

ಗ್ರೀಕ್ ರೋಮನ್ ಮತ್ತು ಅರಬ್ಬೀ ಲೇಖಕರ ಕೆಲವು ಕೃತಿಗಳಿಂದ ಈ ಊರು ಹಿಂದೆ ಸಾಂಸ್ಕೃತಿಕ ಚಟುವಟಿಕೆಗಳ ನೆಲೆಯೂ ವ್ಯಾಪಾರ ಕೇಂದ್ರವೂ ಆಗಿದ್ದಿತಲ್ಲದೆ, ಇಲ್ಲಿ ಬೇರೆ ಬೇರೆ ಕಾಲಗಳ ಸುಂದರ ಕಟ್ಟಡಗಳೂ ಇದ್ದುವೆಂದು ತಿಳಿದುಬರುತ್ತದೆ. ಪ್ರಪಂಚದ ಏಳು ಅದ್ಭುತಗಳಲ್ಲೊಂದೆಂದು ಪ್ರಸಿದ್ಧವಾಗಿರುವ 122 ಮೀ ಎತ್ತರದ ದೀಪಸ್ತಂಭ ಇಲ್ಲಿಯ ಫ್ಯಾರೋಸ್ ದ್ವೀಪದಲ್ಲಿದೆ. ಹಳೆಯ ವಾಸ್ತುಕೃತಿಗಳಲ್ಲಿ ಈಗ ಉಳಿದಿರುವುದು ಅತ್ಯಲ್ಪ. ಪಾಂಪೆಯ ಕಂಬವೆಂದು ಕರೆಯಲ್ಪಡುವ ಡಯೋಕ್ಲಿಷಿಯನ್ನನ ಸ್ಮಾರಕ ಅವುಗಳಲ್ಲೊಂದು. ಇದರ ಅಡಿಪಾಯದ ಕಟ್ಟೆಯ ಕಲ್ಲುಗಳ ಮೇಲೆ ಫಾರೋಗಳ ಕೆಲವು ಕುರುಹುಗಳು ಮಾತ್ರ ದೊರಕಿವೆ. ರೋಮ್‌ನ ಆಗಸ್ಟಸ್‌ನಿಂದ ಇಲ್ಲಿ ಸ್ಥಾಪಿತವಾದ ಎರಡು ದೊಡ್ಡ ಚೂಪು ಕಂಬಗಳಲ್ಲಿ (ಕ್ಲಿಯೋಪಾತ್ರಳ ಸೂಜಿಗಳು) ಈಗ ಒಂದು ನ್ಯೂಯಾರ್ಕ್‌ನಲ್ಲೂ ಇನ್ನೊಂದು ಲಂಡನ್‌ನಲ್ಲೂ ಇವೆ. ರೋಮನ್ನರ ಕಾಲದ ಕೆಲವು ಗೋರಿಗಳು ಊರಿನ ಸಮೀಪದಲ್ಲಿಯೇ ಉಳಿದುಬಂದಿವೆ. (ಎಸ್.ಎನ್.)

**ಅಲೆಕ್ಸಾಂಡ್ರೆಸ್ಕೂ, ಗ್ರಿಗರಿ :** 1812–89. ರೊಮೇನಿಯದ ಕವಿ. ರೊಮೇನಿಯದ ಜನಾಂಗ ಮತ್ತು ಭಾಷೆಗಳಿಗೆ ಪ್ರಾಚೀನ ರೋಮನ್ ಜನಾಂಗ ಮತ್ತು ಭಾಷೆಗಳೇ ಮೂಲ ಎಂಬ ಅರಿವಿನ ಹೊಸ ದೃಷ್ಟಿಕೋನದಿಂದ ಬರೆದ ಸಾಹಿತಿಗಳ ಪಂಥಕ್ಕೆ ಸೇರಿದವ. ರಾಜಕೀಯವನ್ನು ಪ್ರವೇಶಿಸಿ ವಿದ್ಯಾಮಂತ್ರಿಯಾದ. ನಾಡಿನ ಗತವೈಭವ, ಪ್ರಾಚೀನ ಸ್ಮಾರಕಗಳ ಮಹತ್ತ್ವ–ಇವು ಇವನ ಕವನಗಳ ವಸ್ತುಗಳು. ನೀತಿಕಥೆಗಳಲ್ಲಿ ಸಮಕಾಲೀನ ಸಮಾಜದ ದೋಷಗಳ ವಿಡಂಬನೆಯನ್ನು ಕಾಣಬಹುದು. (ಎಲ್.ಎಸ್.ಎಸ್.)

**ಅಲೆಕ್ಸಾಂದ್ರಿ ವ್ಯಸಿಲಿ :** 1821–90 ರೊಮೇನಿಯದ ಕವಿ ಮತ್ತು ನಾಟಕಕಾರ. ಪ್ಯಾರಿಸ್‌ನಲ್ಲಿ ವೈದ್ಯಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳನ್ನು ಅಭ್ಯಾಸಮಾಡಿದ. ಎರಡನ್ನೂ ತ್ಯಜಿಸಿ ಸಾಹಿತ್ಯಕ್ಕೆ ಮುಡಿಪಾದ. ಇಟಲಿ ಎಂದರೆ ಪ್ರಾಣ. ಆಧುನಿಕ ರೊಮೇನಿಯದ ಸಾಹಿತ್ಯದಲ್ಲಿ ಇವನದು ಹಿರಿಯ ಸ್ಥಾನ. ಇವನು ಯವನ ಪಂಥಕ್ಕೆ ಸೇರಿದವ. 1844–71ರವರೆಗೆ ಲಘು ದುರಂತನಾಟಕಗಳು, ಹಾಸ್ಯನಾಟಕಗಳು, ಪ್ರಹಸನಗಳು, ಏಕಾಂಕನಾಟಕ ಗಳು ಮತ್ತು ಗೀತನಾಟಕಗಳನ್ನು ಬರೆದ. ಅನಂತರ ಬರೆದ ನಾಟಕಗಳು ಹೆಚ್ಚು ಕಲಾತ್ಮಕವಾಗಿವೆ. ಇವುಗಳಲ್ಲಿ ಡೆಸ್ಪಾಟ್ ವೋಡಾ (1879), ಫಾಂತಾನಾ ಬ್ಲಾಂಡಿಸಿ (1883), ಒವಿಡಿಯಾ (1885)–ಇವು ಪ್ರಸಿದ್ಧ ಕೃತಿಗಳು. ಫ್ರಾನ್ಸಿನ ಸಾಹಿತ್ಯದ ಪ್ರಭಾವವನ್ನು ಇವುಗಳಲ್ಲಿ ಕಾಣಬಹುದು. ಒಟ್ಟು ಮುನ್ನೂರಕ್ಕೂ ಹೆಚ್ಚು ಕವನಗಳನ್ನೂ ಜಾನಪದಗೀತೆಗ ಳನ್ನೂ ಸಂಪಾದಿಸಿದ. ಇವನ ಕೃತಿಗಳಲ್ಲಿ ಗಹನತೆ ಇಲ್ಲದಿದ್ದರೂ ಉಜ್ಜ್ವಲತೆ ಉಂಟು. ಕವನಗಳಲ್ಲಿ ಲಾಲಿತ್ಯ, ಮಾಧುರ್ಯಗಳುಂಟು. ಇವನ ಗ್ರಾಮಜೀವನ ಕವನಗಳೂ ರಾಷ್ಟ್ರೀಯ ಐಕಮತ್ಯದ ಮಹತ್ತ್ವವನ್ನು ಮತ್ತೆ ಘೋಷಿಸಿದ ಕೃತಿಗಳೂ ರೊಮೇನಿಯದ ಆಧುನಿಕ ಸಾಹಿತ್ಯದ ಚರಿತ್ರೆಯಲ್ಲಿ ಇವನಿಗೆ ಹಿರಿಯ ಸ್ಥಾನ ಗಳಿಸಿಕೊಟ್ಟಿವೆ.(ಎಲ್.ಎಸ್.ಎಸ್.)

**ಅಲೆಕ್ಸಿಸ್, ವಿಲಿಬಲ್ಡ್ :** 1798–1871. ಜರ್ಮನಿಯ ಪ್ರಸಿದ್ಧ ಚಾರಿತ್ರಿಕ ಕಾದಂಬರಿ ಕಾರ ಜಾರ್ಜ್‌ವಿಲ್‌ಹೆಲ್ಮ್ ಹೈನ್ರಿಚ್ ಹೇರಿಂಗ್‌ನ ಕಾವ್ಯನಾಮ. ಈತ 1823ರಲ್ಲಿ ಬರೆದ ವಲ್ಲಾಡ್ಮೊರ್ ಎಂಬ ಚಾರಿತ್ರಿಕ ಪ್ರೇಮಕಥಾನಕ ತುಂಬ ಯಶಸ್ವಿಯಾಯಿತು. ಡರ್‌ರೋಲಾಂಡ್ ಫಾನ್ ಬರ್ಲಿನ್, ಡರ್ ಫಾಲ್ಶೆ ವೊಲ್ಡೆಮಾರ್ ಮೊದಲಾದ ಈತನ ಚಾರಿತ್ರಿಕ ಕಾದಂಬರಿಗಳು ದೇಶಭಕ್ತಿಪ್ರೇರಕವಾಗಿದ್ದು ಜನಪ್ರಿಯವಾಗಿವೆ. ಮಹಾಕಾವ್ಯಗಳಲ್ಲಿ ಕಾಣುವ ಕಲ್ಪನೆಯ ವೈಭವವನ್ನು ಇವನ ಉತ್ಕೃಷ್ಟ ಕಾದಂಬರಿಗಳಲ್ಲಿ ಕಾಣಬಹುದು. (ಎಚ್.ಕೆ.ಆರ್.)

**ಅಲೆಗಳ ಉಬ್ಬರವಿಳಿತದ ಶಕ್ತಿ :** ಸಮುದ್ರದ ಅಲೆಗಳು ಏಳುವಾಗ ಬೀಳುವಾಗ ಉತ್ಪನ್ನವಾಗುವ ಶಕ್ತಿ (ಟೈಡಲ್ ಪವರ್). ಈ ಅಲೆಗಳಲ್ಲಿ ಮೂರು ವಿಧಗಳಿವೆ: 1. ಗಾಳಿಯ ಅಲೆಗಳು; 2. ತೆರೆನೊರೆ (ಸರ್ಫ್); 3. ಅಲೆಗಳ ಉಬ್ಬರವಿಳಿತ ಅಥವಾ ಭರತವಿಳಿತ. ಗಾಳಿಯ ಅಲೆಗಳು 10,000 ಟನ್ ತೂಕದ ಜಹಜುಗಳನ್ನು ನೂರಾರು ಸೆಂಮೀಎತ್ತರಕ್ಕೆ ಎತ್ತಬೇಕಾಗಿದ್ದರೆ ಅವುಗಳಲ್ಲಿ ಅಪಾರ ಶಕ್ತಿಯಿರಬೇಕು. ಆದರೆ ಈ ಶಕ್ತಿ ನಿರಂತರವಾಗಿ ದೊರಕುವುದಿಲ್ಲ. ತೆರೆನೊರೆಯಿಂದ ಶಕ್ತಿಕೇಂದ್ರಗಳನ್ನು ಸ್ಥಾಪಿಸಲು ಎಲ್ಲ ಕಡಲ ತೀರಗಳೂ ಒಂದೇ ಕ್ರಮದಲ್ಲಿ ನಡೆಯುವ ಖಗೋಳೀಯ ಘಟನೆಯಾದ್ದರಿಂದ ಅದು ಯಾವಾಗ ಬರುವುದೆಂದು ಮುಂಚೆಯೇ ಹೇಳಬಹುದು.

ಭರತದ ಮುಖ್ಯ ಕಾರಣ ಚಂದ್ರನ ಗುರುತ್ವಾಕರ್ಷಣ ಬಲ. ಚಂದ್ರ ಭೂಮಿಯನ್ನು ಆಕರ್ಷಿಸುತ್ತದೆ. ಭೂಮಿಯ ಮುಕ್ಕಾಲು ಭಾಗವನ್ನು ಆವರಿಸಿ ಚಲನೆಗೆ ಪ್ರತಿರೋಧವನ್ನು ಕೊಡದೆ ಇರುವ ನೀರಿನ ಮೇಲ್ಮೈ ಇದರಿಂದ ಕೊಂಚ ಉಬ್ಬುತ್ತದೆ. ಜೊತೆಗೆ ಸೂರ್ಯ ಹೀಗೆಯೇ ಸಮುದ್ರವನ್ನು ಉಬ್ಬಿಸುತ್ತದೆ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ಸೂರ್ಯ ಮತ್ತು ಚಂದ್ರರಿಂದ ಸಂಭವಿಸಿದ ಉಬ್ಬುಗಳು ಒಂದೇ ದಿಕ್ಕಿನಲ್ಲಿದ್ದು ಭರತಗಳು ಎತ್ತರವಾಗಿರುತ್ತವೆ. ಸೂರ್ಯ ತಗ್ಗನ್ನು ಮಾಡುವ ಕಡೆ ಚಂದ್ರ ಉಬ್ಬನ್ನು ಮಾಡಿದರೆ ಭರತ ಕೊಂಚ ತಗ್ಗುತ್ತದೆ. ತೆರೆದ ಕಡಲಿನಲ್ಲಿ ಇದು ಸೌಮ್ಯವಾಗಿರುತ್ತದೆ. ಸಮುದ್ರತೀರದಲ್ಲಿ ಒಳಚಾಚುಗಳಿದ್ದರೆ ಅದ್ಭುತವಾದ ದೃಶ್ಯಗಳು ಕಾಣಿಸುತ್ತವೆ. ಇಂಗ್ಲೆಂಡಿನಲ್ಲಿ ಸೆವರ್ನ್ ನದೀಮುಖದಲ್ಲಿ 7–15 ಮೀ ಎತ್ತರದ ಉಬ್ಬರ ಸಾಮಾನ್ಯ. ಲಂಡನ್ ನಗರಕ್ಕೆ ಮೊದಲು ಕುಡಿಯುವ ನೀರು ದೊರೆತದ್ದು ಥೇಮ್ಸ್ ನದಿಯ ಸೇತುವೆಯ ಮೇಲೆ ಸ್ಥಾಪಿತವಾದ ಹುಟ್ಟುಗಾಲಿಯಿಂದ (ಪ್ಯಾಡಲ್ ವೀಲ್).

ಉಬ್ಬರ ಶಕ್ತಿಯನ್ನು ಬಳಸಲು ಹಲವು ಮಾರ್ಗಗಳಿವೆ. ನದಿಯ ಅಳಿವೆಯಲ್ಲಿ ಸುಮಾರು 6 ಮೀ ಎತ್ತರದ ಭರತವಿದ್ದು ಕಟ್ಟೆಯನ್ನು ಕಟ್ಟಬಹುದಾದ ಹಳ್ಳವಿದ್ದರೆ ಕಟ್ಟೆಯಲ್ಲಿ ಬಾಗಿಲುಗಳನ್ನಿಟ್ಟು ಉಬ್ಬರದ ಕಾಲದಲ್ಲಿ ಎಲ್ಲ ಬಾಗಿಲುಗಳನ್ನೂ ತೆರೆದು ಹಳ್ಳವನ್ನು ತುಂಬಬಹುದು. ಉಬ್ಬರ ಎತ್ತರಕ್ಕೆ ಹೋದಾಗ ಬಾಗಿಲುಗಳನ್ನು ಮುಚ್ಚಿ ಕೂಡಿಟ್ಟ ನೀರನ್ನು ತಿರುಬಾನಿಗಳ ಮೂಲಕ ಬಿಡಬಹುದು. ಕಟ್ಟೆಯ ಎರಡು ಮುಖಗಳಲ್ಲಿಯೂ ನೀರು ಒಂದೇ ಮಟ್ಟಕ್ಕೆ ಬರುವವರೆಗೂ ಕೆಲವು ಗಂಟೆಗಳ ಕಾಲ ಈ ನೀರು ಒದಗುತ್ತದೆ.

ಎತ್ತರದ ಉಬ್ಬರದ ಮಟ್ಟದಲ್ಲಿ ಒಂದು, ತಗ್ಗಿನ ಮಟ್ಟದಲ್ಲಿ ಇನ್ನೊಂದು–ಹೀಗೆ ಎರಡು ಕೊಳಗಳಿದ್ದರೆ ಒಂದೇ ಸಮವಾಗಿ ವಿದ್ಯುತ್ತಿನ ಉತ್ಪಾದನೆಯಾಗುತ್ತದೆ. ಟರ್ಬೊ–ಜನರೇಟರುಗಳನ್ನು ಕೂರಿಸಿದ ಕಟ್ಟೆ ಈ ಕೊಳಗಳನ್ನು ಪ್ರತ್ಯೇಕಿಸುತ್ತದೆ. ಟರ್ಬೈನುಗಳಿಂದ (ತಿರುವಾನಿ) ನೀರು ತಗ್ಗಿನ ಕೊಳಕ್ಕಾದರೂ ಬೀಳಬಹುದು. ಇಲ್ಲವೆ ನೇರವಾಗಿ ಸಮುದ್ರವನ್ನಾದರೂ ಸೇರಬಹುದು. ಸಮುದ್ರದಿಂದ ಕೊಳಗಳಿಗೂ ಕೊಳದಿಂದ ಕೊಳಕ್ಕೂ ಬಾಗಿಲುಗಳನ್ನು ಸರಿಯಾದ ಕಾಲದಲ್ಲಿ ತೆರೆದರೆ ದಿನವೆಲ್ಲ ತಿರುಬಾನಿಗಳನ್ನು ನಡೆಸುವುದು ಸಾಧ್ಯ. ಇದರಲ್ಲಿ ಒಂದು ಕೊಳದ ಯೋಜನೆಯಿಂದ ಬರುವಷ್ಟು ಗರಿಷ್ಠ ವಿದ್ಯುತ್ ಉತ್ಪಾದನೆಯಾಗಲಾರದು. ಆದರೆ ಒಂದೇ ಕೊಳವಿದ್ದರೆ ದಿನಕ್ಕೆ ಎರಡು ಸಾರಿ ವಿದ್ಯುತ್ತಿನ ಉತ್ಪತ್ತಿಯೇ ಇರುವುದಿಲ್ಲ. ಪ್ರತಿಯಾಗಿ ಮತ್ತೆರಡು ಸಾರಿ ಗರಿಷ್ಠ ವಿದ್ಯುತ್ತೂ ಬರುತ್ತದೆ. ಅದು ನಮಗೆ ಆವಶ್ಯಕವಾದದ್ದಕ್ಕಿಂತ ಹೆಚ್ಚಾಗಬಹುದು. ಆಗ ಮತ್ತೊಂದು ಎರಡು ಕೊಳಗಳ ಯೋಜನೆಯನ್ನೂ ಇಡಬಹುದು. ಗರಿಷ್ಠ ಎತ್ತರದ ಉಬ್ಬರ ಬಂದಾಗ ನೀರನ್ನು ಎತ್ತರದಲ್ಲಿರುವ ಎರಡನೆಯ ಕೊಳಕ್ಕೆ ಪಂಪುಮಾಡಿ ಶೇಖರಿಸಿ ಬೇಕಾದಾಗ ಬಳಸಿಕೊಳ್ಳಬಹುದು.

ಇಂಗ್ಲೆಂಡಿನಲ್ಲಿ ಸೆವರ್ನ್ ನದೀಮುಖದಲ್ಲಿಯೂ ಫ್ರಾನ್ಸ್‌ನಲ್ಲಿ ರೋನ್ ನದಿಯಲ್ಲಿಯೂ ಕೆನಡದಲ್ಲಿ ಫಂಡಿ ಕೊಲ್ಲಿಯಲ್ಲಿಯೂ ಈ ಯೋಜನೆಗೆ ಸನ್ನಿವೇಶಗಳು ಅನುಕೂಲವಾಗಿವೆ. ಬೇರೆ ವಿಧಾನಗಳಲ್ಲಿ ತಗಲುವ ವೆಚ್ಚಕ್ಕಿಂತ ಈ ಕ್ರಮದಲ್ಲಿ ಉತ್ಪಾದನಾ ವೆಚ್ಚ ಕೊಂಚ ಹೆಚ್ಚಾಗಿರುವುದರಿಂದ ದೊಡ್ಡ ಯೋಜನೆಗಳಿಗೆ ಅವಕಾಶವಾಗಿಲ್ಲ. ಆದರೆ ಭೂಗರ್ಭದಲ್ಲಿ ಇಂಧನಗಳು ತೀರಿದಂತೆ ಇಂಗ್ಲೆಂಡಿನಂಥ ಪ್ರದೇಶಗಳಲ್ಲಿ ಈ ಯೋಜನೆ ಸಾಧ್ಯವಾಗುತ್ತದೆ. ಸೆವರ್ನ್ ನದಿಗೆ ಅಡ್ಡಲಾಗಿ 4 ಕಿಮೀ ಉದ್ದದ ಕಟ್ಟೆಯನ್ನು ಕಟ್ಟಿ ಒಂದು ಕೊಳದ ಯೋಜನೆಯನ್ನು ಪ್ರಾರಂಭಿಸಬಹುದು. ಸುಮಾರು ಹತ್ತು ಕೋಟಿ ಪೌಂಡು ಖರ್ಚಿನಿಂದ ವರ್ಷಕ್ಕೆ 200 ಕೋಟಿ ಕಿಲೊವಾಟ್ ಗಂಟೆಗಳ (ಕೆಡಬ್ಲೂಎಚ್) ವಿದ್ಯುತ್ತನ್ನು ಉತ್ಪತ್ತಿಮಾಡಿ 10 ಲಕ್ಷ ಟನ್ ಕಲ್ಲಿದ್ದಲನ್ನು ಪ್ರತಿ ವರ್ಷವೂ ಉಳಿಸಬಹುದು.

ನೋವಸ್ಕೋಷಿಯವನ್ನು ಕೆನಡದಿಂದ ಪ್ರತ್ಯೇಕಿಸುವ ಫಂಡಿ ಕೊಲ್ಲಿಯಲ್ಲಿ ಇಂಥ ಎರಡು ಯೋಜನೆಗಳು ಸಾಧ್ಯ. ಪೆಟಕೋಡಿಯಾಕ್ ನದಿಯ ಮೇಲಿನ ಯೋಜನೆಯಿಂದ ವರ್ಷಕ್ಕೆ 130 ಕೋಟಿ ಕಿಲೋವಾಟ್ ಗಂಟೆಗಳಷ್ಟು ವಿದ್ಯುತ್ತು ಬರಬಹುದು. ಪಾಸಮಕ್ವಾಡಿ ಯೋಜನೆಯಲ್ಲಿ ನಡುವೆ ದ್ವೀಪಗಳಿರುವುದರಿಂದ ಕಟ್ಟೆಯ ಖರ್ಚು ಕಡಿಮೆಯಾಗುತ್ತದೆ. ಇಲ್ಲಿ 60 ಕೋಟಿ ಕಿಲೊವಾಟ್ ಗಂಟೆಗಳ ಶಕ್ತಿಯನ್ನು ಒಂದೇ ಸಮವಾಗಿ ತೆಗೆಯುವುದು ಸಾಧ್ಯ. ಖರ್ಚು ಕಲ್ಲಿದ್ದಲಿನ ಯೋಜನೆಯ ಎರಡರಷ್ಟು ಆಗುತ್ತದೆ. ಆದರೆ ಇನ್ನೊಂದು ಶತಮಾನದ ಅನಂತರವೂ ಹೀಗೆಯೇ ಕಲ್ಲಿದ್ದಲು ಸಿಕ್ಕುತ್ತದೆಯೆ? ಉಬ್ಬರವಿಳಿತಗಳು ಮಾತ್ರ ನಿಲ್ಲುವುದಿಲ್ಲ. ಭಾರತದಲ್ಲಿಯೂ ನದೀ ಮುಖಜ ಭೂಮಿಯಲ್ಲಿ ಇಂತಹುದೇ ಯೋಜನೆಗಳು ಸಾಧ್ಯ. **(ನೋಡಿ– ಉಬ್ಬರವಿಳಿತಗಳು)** (ಎಚ್.ಸಿ.ಕೆ.)

**ಅಲೆತಡೆ :** ಸಮುದ್ರದ ಅಲೆಗಳ ರಭಸ ತಡೆಯಲು ನಿರ್ಮಿಸಿದ ಕೃತಕ ತಡೆ (ಬ್ರೇಕ್ ವಾಟರ್). ಕೃತಕ ಬಂದರುಗಳಿಗೆ ಇದು ಅಲೆಗಳಿಂದ ರಕ್ಷಣೆ ಒದಗಿಸುತ್ತದೆ. ನೈಸರ್ಗಿಕ ಬಂದರುಗಳಲ್ಲಿ ರಕ್ಷಣೆ ಪೂರ್ತಿ ಮಾಡುತ್ತದೆ. ಅಲೆತಡೆಗಳನ್ನು ಸಾಮಾನ್ಯವಾಗಿ ದಡಕ್ಕೆ ಭದ್ರವಾಗಿ ಬಿಗಿಯುತ್ತಾರೆ. ಒಂದೇ ಕಟ್ಟಡವನ್ನು ದೋಣಿಗಳನ್ನು ನಿಲ್ಲಿಸುವುದಕ್ಕೂ ಅಲೆಗಳನ್ನು ಎದುರಿಸುವುದಕ್ಕೂ ಉಪಯೋಗವಾಗುವ ಹಾಗೆ ಕಟ್ಟಬಹುದಾದರೂ ರಕ್ಷಣೆಯ ಭಾಗವೇ ಇದರಲ್ಲಿ ಮುಖ್ಯ. ಅಲೆತಡೆಗಳನ್ನು ಕಟ್ಟುವುದಕ್ಕೆ ಖರ್ಚು ವಿಶೇಷವಾಗುವುದರಿಂದ ಅವುಗಳ ಸ್ಥಾನನಿರ್ದೇಶನವನ್ನು ಜಾಗರೂಕತೆಯಿಂದ ಮಾಡಬೇಕು. ಕಟ್ಟಡದ ಮೇಲೆ ಅಲೆಗಳು ನೇರವಾಗಿ ಬಡಿದರೆ ಆಘಾತ ಹೆಚ್ಚು. ಆದರೆ ಓರೆಯಾಗಿ ಹೊಡೆದಾಗ ಕಟ್ಟಡದ ಮೇಲಿನ ಹೊಡೆತ ಕಡಿಮೆಯಾದರೂ ಬಂದರಿನ ಪ್ರವೇಶಮಾರ್ಗಕ್ಕೆ ಅಡ್ಡಲಾಗಿ ಅಲೆಗಳು ಹರಿದು ಸಮುದ್ರ ಪ್ರಕ್ಷುಬ್ಧವಾಗಿದ್ದಾಗ ಹಡಗುಗಳು ಒಳಗೆ ಬರುವುದೇ ಅಪಾಯವಾಗಬಹುದು. ಅದಕ್ಕಾಗಿ ಅಲೆತಡೆಗಳನ್ನು ಯಾವ ದಿಕ್ಕಿನಲ್ಲಿ ಕಟ್ಟಿದರೆ ಅಲೆಗಳು ಬೇರೆ ದಿಕ್ಕಿಗೆ ತಿರುಗಿ ಬಂದರಿನ ಹೊರಗಡೆಯ ತೀರಕ್ಕೆ ಬಡಿಯುವುವೋ ಆ ದಿಕ್ಕಿನಲ್ಲಿ ಕಟ್ಟಬೇಕು. ನದಿಗಳ ಅಳಿವೆಗಳಲ್ಲಿ ಬಂದರುಗಳಿರುವಾಗ ಅಲೆಗಳನ್ನು ಎಲ್ಲ ಕಾಲದಲ್ಲಿಯೂ ತಡೆಯುವುದು ಸಾಧ್ಯವಾಗಲಾರದು. ಅಂಥ ಕಡೆಗಳಲ್ಲಿ ಅಲೆಬಲೆಗಳನ್ನು (ವೇವ್–ಟ್ರ್ಯಾಪ್ಸ್) ಕಟ್ಟಬೇಕಾಗುತ್ತದೆ. ಪ್ರವೇಶನಾಲೆಯ ಪಕ್ಕಗಳಲ್ಲಿ ಸಮುದ್ರದ ಕಡೆಗೆ ಮುಖವನ್ನು ತಿರುಗಿಸಿರುವ ಈ ಆಳವಾದ ಬಾಯಿಗಳು ಅಲೆಗಳನ್ನು ಹೀರುತ್ತವೆ. ಸಮುದ್ರತೀರದಲ್ಲಿರುವ ಒಳಚಾಚುಗಳು, ಭೂಶಿರಗಳು, ತೀರಕ್ಕೆ ದೂರವಾದ ದ್ವೀಪಗಳು, ನೀರೊಳಗಣ ಬಂಡೆಗಳು–ಇವನ್ನೆಲ್ಲ ಸರಿಯಾಗಿ ಬಳಸಿಕೊಳ್ಳಬೇಕು. ಬಂದರಿನ ಪ್ರವೇಶಮಾರ್ಗದಲ್ಲಿ ಯಾವ ಅಡಚಣೆಗಳೂ ಇಲ್ಲದೆ ದೊಡ್ಡ ಹಡಗುಗಳೂ ಸರಾಗವಾಗಿ ಒಳಕ್ಕೆ ಬರುವ ಹಾಗಿರಬೇಕು.

ಬಂದರಿನಲ್ಲಿರಬೇಕಾದ ನೀರಿನ ಕನಿಷ್ಠ ಆಳಕ್ಕೆ ಅನುಸಾರವಾಗಿ ಅಲೆತಡೆಯ ಕನಿಷ್ಠ ಎತ್ತರವನ್ನು ನಿರ್ಣಯಿಸಬೇಕು. ನೀರಿನ ಆಳ 23ಮೀಗಿಂತಲೂ ಹೆಚ್ಚಾದರೆ ಅಲೆತಡೆಯ ಬಾಹುಗಳ ಉದ್ದವೂ ಹೆಚ್ಚಾಗುತ್ತದೆ. ಕಟ್ಟಡದ ಖರ್ಚೂ ವಿಪರೀತವಾಗುತ್ತದೆ. ಹೂಳನ್ನೆತ್ತುವುದು (ಡ್ರೆಡ್ಜಿಂಗ್) ಹೆಚ್ಚಾಗದ ಹಾಗೂ ಆವಶ್ಯಕವಾದ ಬಂದರಿನ ವಿಸ್ತೀರ್ಣ ದೊರಕುವ ಹಾಗೂ ಅಲೆತಡೆಯ ಜಾಗವನ್ನು ಆಖೈರಾಗಿ ನಿಶ್ಚಯಿಸಬೇಕಾಗುತ್ತದೆ. ಈ ವಿಸ್ತೀರ್ಣವನ್ನು ದಡದ ಕಡೆಗೆ ಹೂಳನ್ನು ತೆಗೆಯುವುದರಿಂದಲೂ, ಸಮುದ್ರದ ಕಡೆಗೆ ಅಲೆತಡೆಯ ಉದ್ದವನ್ನು ಹೆಚ್ಚಿಸುವುದರಿಂದಲೂ ಬೇಕಾದಷ್ಟು ದೊಡ್ಡದಾಗಿ ಮಾಡಬಹುದು. ತಳಪಾಯದ ಸ್ವಭಾವದ ಮೇಲೂ ಅಲೆತಡೆಯ ಜಾಗ ಬದಲಾಗಬಹುದು. ತಳದಲ್ಲಿ ಬಹಳ ಆಳದವರೆಗೂ ಮೆದುವಾದ ಮಣ್ಣೇ ಇದ್ದರೆ ಅದಕ್ಕೆ ಕಟ್ಟಡದ ಭಾರವನ್ನು ಹೊರುವ ಸಾಮರ್ಥ್ಯವಿರುವುದಿಲ್ಲ. ಗಟ್ಟಿಯಾದ ತಳಪಾಯವಿರುವ ಕಡೆ ನೀರಿನ ಆಳ ಹೆಚ್ಚಾಗಿದ್ದರೂ ಚಿಂತೆಯಿಲ್ಲ.

ಅಲೆತಡೆಯ ಪರಿಣಾಮವಾಗಿ ಸಮುದ್ರತೀರದಲ್ಲಿ ಮಣ್ಣು ಕೊರೆದು ಹೋಗಬಹುದು; ಇಲ್ಲವೆ ತುಂಬಿಕೊಳ್ಳಬಹುದು. ಅಲೆಗಳು ಸಮುದ್ರತೀರವನ್ನು ಓರೆಯಾಗಿ ಬಡಿದರೆ ಉತ್ಪನ್ನವಾಗುವ ಪ್ರವಾಹಗಳು ತೀರದ ಮಣ್ಣನ್ನು ಕೊರೆದು ಬೇರೆ ಕಡೆಗೆ ಸಾಗಿಸಬಹುದು. ಇದರಿಂದ ಅಲೆತಡೆಯ ಪಕ್ಕದಲ್ಲಿ ಕೆಲವು ಕಿಲೋಮೀಟರುಗಳವರೆಗೂ ಸಮುದ್ರತೀರದ ಆಸ್ತಿಗಳಿಗೆ ನಷ್ಟವಾಗಬಹುದು.

ಭಾರತದ ಉಬ್ಬರವಿಳಿತಗಳ ವ್ಯಾಪ್ತಿಯೂ ಅಲೆತಡೆಯ ಜಾಗದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಉಬ್ಬರದ ನೀರಿನ ಇಳಿತದ ಪ್ರವಾಹ ಕಡಿಮೆಯಾಗಿದ್ದರೆ ಬಂದರಿನ ದಾರಿಯಲ್ಲಿ ಆಳ ಕಡಿಮೆಯಾಗುವುದಿಲ್ಲ. ಸಮುದ್ರವನ್ನು ಸೇರುವ ನದಿಗಳ ಪ್ರವಾಹವನ್ನೂ ಅಲೆತಡೆಯ ಜಾಗವನ್ನು ನಿರ್ಣಯಿಸುವಾಗ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ನದಿಯಲ್ಲಿ ಬರುವ ನೀರಿನ ಪ್ರಮಾಣ, ಅದರ ವೇಗ, ಮೇಲಿನಿಂದ ಬರುವ ಮೆಕ್ಕಲುಮಣ್ಣು–ಇವುಗಳಿಂದ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕು.

**ಮಾರುತಗಳು :** ಗಾಳಿಯಿಂದ ಅಲೆಗಳು ಉತ್ಪನ್ನವಾಗುತ್ತವೆ. ಬಂದರಿನ ಪ್ರವೇಶಮಾರ್ಗದಲ್ಲಿಯೂ ಒಳಗಡೆಯೂ ಹಡಗುಗಳ ಚಲನೆಗಳಿಗೆ ಗಾಳಿಯಿಂದ ತೊಂದರೆಯಾಗುವುದುಂಟು. ಸಮುದ್ರವು ವರ್ಷದ ಯಾವ ಕಾಲದಲ್ಲಿ ಶಾಂತವಾಗಿರುವುದೆಂದು ನೋಡಿ ಅಲೆತಡೆಗಳ ರಿಪೇರಿಯನ್ನು ತೆಗೆದುಕೊಳ್ಳಬೇಕು. ಭಾರತದಲ್ಲಿರುವ ಹಾಗೆ ಕ್ಲುಪ್ತಮಾರುತಗಳು (ಮಾನ್‌ಸೂನ್ಸ್) ಬೀಸುವ ಕಡೆ ಋತುಗಳಿಗೆ ಅನುಸಾರವಾಗಿ ಗಾಳಿಯ ದಿಕ್ಕೂ ಬಲವೂ ನಿಯತಕ್ರಮದಲ್ಲಿ ಬದಲಾಗುತ್ತವೆ. ಚಂಡಮಾರುತಗಳೂ ಸುಂಟರಗಾಳಿಗಳೂ ಕ್ಲುಪ್ತಕಾಲದಲ್ಲಿ ಬೀಸುತ್ತವೆ.

ಅಲೆಗಳನ್ನು ಹೆಚ್ಚು ಆಳವಾದ ನೀರಿನ ಅಲೆಗಳು ಮತ್ತು ಆಳ ಕಡಿಮೆಯಾದ ನೀರಿನ ಅಲೆಗಳು ಎಂದು ಎರಡು ಭಾಗವಾಗಿ ವಿಂಗಡಿಸಬಹುದು. ಅಲೆಯ ಉದ್ದದ ಅರ್ಧಕ್ಕಿಂತಲೂ ಹೆಚ್ಚು ಆಳದ ನೀರಿನ ಅಲೆಗಳು ಮೊದಲನೆಯ ವರ್ಗಕ್ಕೆ ಸೇರುತ್ತವೆ. ಇವುಗಳಲ್ಲಿ ಅಲೆಗಳ ವೇಗ ಅವುಗಳ ಉದ್ದಕ್ಕೆ ಅನುಗುಣವಾಗಿದೆ. ಆಳ ಕಡಿಮೆಯಾದ ಕಡೆ ಸಮುದ್ರದ ತಳದ ಎಳೆತಕ್ಕೆ ಅಲೆಗಳು ಒಳಪಟ್ಟು ಅಲೆಯ ವೇಗ ಕಡಿಮೆಯಾಗುತ್ತದೆ.

ನೀರು ಗಾಳಿಗೆ ಒಡ್ಡಿದ ದೂರ (ಫೆಚ್) ಹೆಚ್ಚಾದಷ್ಟೂ ಗಾಳಿಯ ವೇಗವೂ ಅದು ಬೀಸುವ ಅವಧಿಯೂ ಹೆಚ್ಚಾಗಿ ಅಲೆಗಳ ಎತ್ತರವೂ ಉದ್ದವೂ ವೇಗವೂ ಹೆಚ್ಚಾಗುತ್ತವೆ. ಕೆಲವು ಸಾಗರದ ಅಲೆಗಳು ಉತ್ಪತ್ತಿಯಾದ ಜಾಗದಿಂದ ಸಾವಿರಾರು ಮೈಲಿಗಳ ದೂರ

ಸಂಚರಿಸಿ ದಡವನ್ನು ಬಡಿಯುತ್ತವೆ. ಸಾಮಾನ್ಯವಾಗಿ ಸಮುದ್ರ ಮಧ್ಯದಲ್ಲಿ ಕಾಣುವ ದೊಡ್ಡ ಅಲೆಗಳು ದಡವನ್ನು ತಲುಪುವುದೇ ಇಲ್ಲ. ಆಲಿಕೆಯಂತೆ (ಫನಲ್) ಅಗಲ ಕಿರಿದಾಗುತ್ತ ಹೋಗುವ ಕೊಲ್ಲಿಯಲ್ಲಿ ಅಲೆಗಳ ಎತ್ತರವೂ ವಿಧ್ವಂಸಕ ಶಕ್ತಿಯೂ ಹೆಚ್ಚು. ಕೊಲ್ಲಿ ಬಲಿಷ್ಠವಾದ ಮಾರುತಗಳ ದಿಕ್ಕಿಗೆ ಅಭಿಮುಖವಾಗಿದ್ದರಂತೂ ಈ ಶಕ್ತಿ ಇನ್ನೂ ಹೆಚ್ಚಾಗುತ್ತದೆ. ಅಲೆಗಳು ಸಂಚರಿಸುವ ವೇಗ ಅಲೆಗಳ ಉದ್ದಕ್ಕೆ ಅನುಗುಣವಾಗಿದೆ. ಆಳವಾದ ನೀರಿನಲ್ಲಿ 600 ಉದ್ದವಾದ ಅಲೆಗಳ ಉದ್ದ 33 ನಾಟುಗಳು ಎಂದರೆ ಗಂಟೆಗೆ 31 ಕಿಮೀ

ಅಲೆ ಸಮುದ್ರತೀರವನ್ನು ತಲುಪಿದಾಗ ಅದು ಒಡೆದು ಚದರಿಹೋಗುತ್ತದೆ ಇಲ್ಲವೇ ಪ್ರತಿಫಲಿತವಾಗುತ್ತದೆ. ಆಳವಿಲ್ಲದ ನೀರಿನಲ್ಲಿ ಮರಳುದಿಬ್ಬಕ್ಕೆ ತಗುಲಿದಾಗ ಅಲೆ ಒಡೆದು ಇಳಿಜಾರಾದ ದಿಬ್ಬಕ್ಕೆ ಎದುರಾಗಿ ನುಗ್ಗಿ ಬಲವನ್ನೆಲ್ಲಾ ಕಳೆದುಕೊಂಡು ಸಮುದ್ರದ ಮೇಲೆ ಹಿನ್ನೆಗೆಯುತ್ತದೆ. ದಡದ ಕಡೆಗೆ ಉರುಳುವಾಗ ಸುಮಾರಾಗಿ ಲಂಬವಾಗಿರುವ (ವರ್ಟಿಕಲ್) ಅಡಚಣೆಯನ್ನು ಬಲವಾಗಿ ಒದೆಯುತ್ತದೆ. ಒಡೆಯುವ ಅಲೆ ಒಂದು ಪರಿಮಿತ ಜಾಗದ ಮೇಲೆ ಬೀಳುವುದರಿಂದ ಅದರ ಆಘಾತ ಪ್ರತಿಫಲಿತ ಅಲೆಯ ಆಘಾತಕ್ಕಿಂತ ಹೆಚ್ಚು. ಅಲೆಗಳು ಒಡೆದ ಕಡೆ ಸಮುದ್ರದ ತೀರ ಕೊರೆದುಹೋಗುತ್ತದೆ. ಅಂಥ ಇಳಿಕಲುಗಳು ಮತ್ತಷ್ಟು ಕೊರೆಯದ ಹಾಗೆ ಮಾಡಲು ದೊಡ್ಡ ಕಾಂಕ್ರೀಟಿನ ದಿಮ್ಮಿಗಳನ್ನು ಪೇರಿಸಬೇಕಾಗುತ್ತದೆ. ಆದರೆ ಲಂಬವಾದ ಅಡಚಣೆಯ ಮೇಲೆಯೇ ಅಲೆಗಳು ಒಡೆದರೆ ಅಲ್ಲಿ ಆಳ ಸಾಕಷ್ಟು ಇಲ್ಲದೆ ಹೋದಾಗ ಅಡಚಣೆಯ ತಳದಲ್ಲಿನ ಮರಳು ತೊಳೆದುಹೋಗುತ್ತದೆ.

ನೈಸರ್ಗಿಕ ಸನ್ನಿವೇಶಗಳ ಮಾದರಿಗಳನ್ನು ಜಲಶಾಸ್ತ್ರದ ಪ್ರಯೋಗಶಾಲೆಗಳಲ್ಲಿ ಕಟ್ಟಿ ಅಲೆಗಳ ಒತ್ತಡವನ್ನು ಈಗ ಅಳೆಯುತ್ತಾರೆ. ಹೀಗೆ ಶುದ್ಧವಿಜ್ಞಾನದ ನೆರವನ್ನು ಪಡೆದು ಪ್ರಯೋಗವಿಜ್ಞಾನ ಸಂವಿಧಾನಗಳನ್ನು ಶಾಸ್ತ್ರೀಯವಾಗಿ ಮಾಡುವುದರಿಂದ ಇಂಥ ಅನಿಶ್ಚಿತವಾದ ಪರಿಸ್ಥಿತಿಗಳಲ್ಲಿ ತುಂಬ ಅನುಕೂಲವಾಗುತ್ತಿದೆ. ಪ್ರತಿಫಲಿತ ಅಲೆಯಿಂದ ಅಲೆತಡೆಯ ಮೇಲಿನ ಆಘಾತ ಚದರ ಅಡಿಗೆ ಒಂದು ಟನ್ನಿನಷ್ಟಿರಬಹುದು. ಆದರೆ ಅಲೆಗಳು ಒಡೆಯುವ ಮಿತವಾದ ಜಾಗದಲ್ಲಿ ಇದು ಚದರ ಅಡಿಗೆ 6 ಟನ್ನುಗಳವರೆಗೂ ಹೋಗಬಹುದು.

**ಅಲೆತಡೆಗಳ ನಮೂನೆಗಳು:** ಮುಖ್ಯವಾಗಿ ಇವು ಮೂರು ನಮೂನೆಗಳಲ್ಲಿರುತ್ತವೆ: 1. ಭರ್ತಿ ಕಲ್ಲಿನ ಮಾದರಿ; 2. ಸಂಕೀರ್ಣ ಮಾದರಿ; 3. ಲಂಬವಾದ ಗೋಡೆಯ ಮಾದರಿ..

**ಭರ್ತಿಕಲ್ಲಿನ ಮಾದರಿ :** ಇಲ್ಲಿ ಕಲ್ಲುಗಳನ್ನು ಒಂದರ ಮೇಲೊಂದು ಪೇರಿಸಿ ಹೊರಗಡೆ ದೊಡ್ಡ ಕಲ್ಲುಗಳಿಂದ ರಕ್ಷಣೆಯನ್ನು ಕೊಡುತ್ತಾರೆ. ಇದನ್ನು ಉಬ್ಬರವಿಳಿತದ ವ್ಯಾಪ್ತಿ ಹೆಚ್ಚಾಗಿರದೆ ಇರುವ ಕಡೆ 18ಮೀ ನೀರಿನ ಆಳದವರೆಗೆ ಉಪಯೋಗಿಸಬಹುದು. ತಳಪಾಯ ಗಟ್ಟಿಯಾಗಿರದ ಕಡೆ ಕಲ್ಲಿನ ರಾಶಿ ಕೆಳಕ್ಕೆ ಇಳಿದರೆ ಹೊಸದಾಗಿ ಕಲ್ಲುಗಳನ್ನು ತುಂಬಿ ಸರಿಮಾಡಬಹುದು. ಈ ನಮೂನೆಯಲ್ಲಿ ಭರತದ ಕೆಳಮಟ್ಟದಲ್ಲಿ ಅಲೆಗಳಿಂದ ಕಟ್ಟಡಕ್ಕೆ ಅಪಾಯ ಹೆಚ್ಚು. ಒಳಕ್ಕೆ ಬರುವ ಅಲೆಗಳು ಕಲ್ಲುಗಳನ್ನು ಎತ್ತಿ ಸಾಗಿಸುತ್ತವೆ. ನೀರು ಹಿಂದಕ್ಕೆ ಸರಿದಾಗ ಕಲ್ಲುಗಳು ಕೆಳಕ್ಕೆ ಉರುಳುತ್ತವೆ. ಏರಿಯ ಆಕಾರ ಅನೇಕ ವಿಧ. ಸಾಮಾನ್ಯವಾಗಿ ಮಧ್ಯದಲ್ಲಿ ಸಣ್ಣ ಕಲ್ಲುಗಳನ್ನು ತುಂಬಿ ಇಳಿಕಲಿನ ಹೊರಭಾಗದಲ್ಲಿ ದಪ್ಪ ಕಲ್ಲುಗಳನ್ನು ಜೋಡಿಸುತ್ತಾರೆ. ತಳಪಾಯ ಮೆದುವಾಗಿರುವ ಕಡೆ ಕಲ್ಲಿನ ರಾಶಿಯೇ 6 ರಿಂದ 10ಮೀ.ವರೆಗೂ ಕೆಳಕ್ಕೆ ಇಳಿದ ನಿದರ್ಶನಗಳಿವೆ. ಏರಿಯ ಹೊರಭಾಗದಲ್ಲಿ ಮೇಲುಗಡೆ ಕಲ್ಲು ಇಲ್ಲವೆ ವಿಶಿಷ್ಟವಾದ ಆಕಾರದ ಕಾಂಕ್ರೀಟಿನ ದಿಮ್ಮಿಗಳನ್ನು ಮಾಡಿ ಅಡ್ಡಾದಿಡ್ಡಿಯಾಗಿ ಪೇರಿಸುತ್ತಾರೆ. ಭಾರವಾದ ಕಲ್ಲುಗಳನ್ನು ಏರಿಯ ನೆತ್ತಿಯ ಮೇಲೂ ಸಮುದ್ರದ ಕಡೆ ನೀರಿನ ಕೆಳಮಟ್ಟಕ್ಕಿಂತ 3–6ಮೀ ಆಳದವರೆಗೂ ತುಂಬುತ್ತಾರೆ. ಅಲೆಗಳ ಬಲವಾದ ಒದೆತವನ್ನು ಎದುರಿಸಬೇಕಾಗಿರುವುದರಿಂದ ಈ ಕೆಲಸಕ್ಕೆ ಉಪಯೋಗಿಸುವ ಭಾರವಾದ ಕಲ್ಲಿನ ತೂಕ 10–20 ಟನ್ನುಗಳವರೆಗೂ ಕಾಂಕ್ರೀಟಿನ ದಿಮ್ಮಿಗಳ ತೂಕ 40 ಟನ್ನುಗಳವರೆಗೂ ಹೋಗುತ್ತದೆ. ನಡುವಂತರದ ಕಲ್ಲುಗಳ ತೂಕ 1–10 ಟನ್ನುಗಳವರೆಗೂ ಸಣ್ಣ ಕಲ್ಲುಗಳ ತೂಕ 100 ಪೌಂಡುಗಳವರೆಗೂ ವ್ಯತ್ಯಾಸವಾಗುತ್ತದೆ. ಈ ಅಲೆತಡೆಗಳನ್ನು ಕಟ್ಟುವಾಗ ದಸಿಗಳ ತಳಪಾಯದ (ಪೈಲ್ ಫೌಂಡೇಷನ್ಸ್) ಮೇಲೆ ನಿಲ್ಲಿಸಿದ ಊರೆಕಟ್ಟುಗಳ (ಟ್ರೆಸ್‌ಲ್‌ಸ್) ಮೇಲೆ ರೈಲ್ವೆಕಂಬಿಗಳನ್ನೆಳೆದು ಟ್ರಾಲಿಗಳ ಮೇಲೆ ಭಾರವಾದ ಕಲ್ಲುಗಳನ್ನು ಸಾಗಿಸಬೇಕಾಗುತ್ತದೆ. ವಿಶೇಷಭಾರವನ್ನು ಹೊರಬಲ್ಲ ಆಧುನಿಕ ಟ್ರಕ್ಕುಗಳೂ ಕ್ರೇನುಗಳೂ ಬಂದಮೇಲೆ ಕೆಲಸ ಸುಲಭವಾಗಿದೆ. ಈಚೆಗೆ ಒಂದು ಅಲೆತಡೆಯ ಮುಂದೆ ಇನ್ನೊಂದನ್ನು ಕಟ್ಟುವುದು ರೂಢಿಯಾಗುತ್ತಿದೆ. ಈ ಕ್ರಮದಲ್ಲಿ ಎರಡು ಪ್ರತ್ಯೇಕವಾದ ಕಲ್ಲಿನ ಏರಿಗಳಿವೆ. ಹಿಂದಿನದು ದೊಡ್ಡ ಏರಿ. ಎರಡು ಏರಿಗಳಿಗೂ ನಡುವೆ ಅಲೆಗಳು ಸ್ತಬ್ಧವಾಗುವುದಕ್ಕೆ ಅವಕಾಶವಿದೆ. ಸಮುದ್ರದ ಕಡೆಯ ಏರಿ ತಗ್ಗಾಗಿದ್ದು ದಡದ ಕಡೆಯ ದೊಡ್ಡ ಏರಿಯನ್ನು ಕಾಪಾಡುತ್ತದೆ. ಉಬ್ಬರವಿಳಿತಗಳ ವ್ಯಾಪ್ತಿ ಕಡಿಮೆಯಾಗಿರುವ ಕಡೆ ಈ ಮಾದರಿಯ ಉಪಯೋಗ ಹೆಚ್ಚು.

**ಸಂಕೀರ್ಣ ಮಾದರಿ (ಕಾಂಪೊಸಿಟ್ ಟೈಪ್) :** ನೀರು ಬಹಳ ಆಳವಾಗಿರುವ ಕಡೆಗಳಲ್ಲಿಯೂ ಉಬ್ಬರವಿಳಿತಗಳ ವ್ಯಾಪ್ತಿ ಹೆಚ್ಚಾಗಿರುವ ಕಡೆಗಳಲ್ಲಿಯೂ ತಳದಿಂದ ಮೇಲಿನವರೆಗೂ ಭರ್ತಿಕಲ್ಲನ್ನೇ ತುಂಬುವುದು ಸಾಧ್ಯವಾಗದು. ಅಂಥ ಕಡೆಗಳಲ್ಲಿ ಭರ್ತಿಕಲ್ಲಿನ ತಳಪಾಯದ ಮೇಲೆ ಬೇರೆ ನಮೂನೆಯ ಕಟ್ಟಡವನ್ನು ಕಟ್ಟುತ್ತಾರೆ. ಭದ್ರವಾದ ಮೇಲುಕಟ್ಟಡ ನೀರಿನ ಮಟ್ಟದವರೆಗೂ ಹೋಗಬಹುದು ಅಥವಾ ನೀರಿನ ಮಟ್ಟಕ್ಕೆ ಕೊಂಚ ಕೆಳಗಡೆ ಇರಬಹುದು. ಈ ನಮೂನೆಯಲ್ಲಿ ದಪ್ಪಕಲ್ಲು ಹೆಚ್ಚಾಗಿ ಬೇಕಾಗುವುದಿಲ್ಲ. ಅಲೆಗಳಿಂದ ತೊಂದರೆಯಿಲ್ಲ. ಮೇಲು ಕಟ್ಟಡದ ಲಂಬವಾದ ಗೋಡೆಗಳ ಮೇಲೆ ಅಲೆಗಳು ಹೊಡೆಯುವುದರಿಂದ ಅದು ಕೆಳಕ್ಕೆ ಉರುಳದಷ್ಟು ಬಲವಾಗಿರಬೇಕು. ಮೇಲು ಕಟ್ಟಡವನ್ನು ತಳಪಾಯದ ಏರಿಯ ಮೇಲೆ ಕಾಂಕ್ರೀಟಿನ ದಿಮ್ಮಿಗಳನ್ನು ವರಸೆಯಾಗಿ ಇಟ್ಟು ಕಟ್ಟಬಹುದು. ಇದರ ಎತ್ತರ ಉಬ್ಬರವಿಳಿತದ ವ್ಯಾಪ್ತಿಯ ಮೇಲೆ ಹೋಗುತ್ತದೆ. ನೀರಿನ ಮಟ್ಟದಿಂದ 10ಮೀ ಆಳದವರೆಗೂ ಬಲಿಷ್ಠವಾದ ಅಲೆಗಳು ಕಟ್ಟಡಗಳನ್ನು ಉರುಳಿಸಬಲ್ಲವು. ಫ್ರಾನ್ಸಿನಲ್ಲಿ ಮಾರ್ಸೇಲ್ಸಿನ ಅಲೆತಡೆಯನ್ನು ಆರಿಸಿದ ಭರ್ತಿಕಲ್ಲುಗಳಿಂದ ಕಟ್ಟಿದ್ದಾರೆ. ಸಮುದ್ರದ ಕಡೆಯ ಇಳಿಕಲಿನಲ್ಲಿ ಭಾರವಾದ ಕಾಂಕ್ರೀಟಿನ ದಿಮ್ಮಿಗಳನ್ನು ಕಲ್ಲಿನ ಏರಿಯ ಮೇಲೆ ಅಡ್ಡಾದಿಡ್ಡಿಯಾಗಿ ತುಂಬಿ ಏರಿಯ ಕಲ್ಲು ಕೊರೆದುಹೋಗದ ಹಾಗೆ ಮಾಡಿದ್ದಾರೆ. ಒಳಮುಖದಲ್ಲಿ ಹಡಗಿನ ಭರ್ತಿಕಟ್ಟೆಯಿದೆ (ಕ್ವೇ). ಏರಿಯ ಮೇಲುಭಾಗದಲ್ಲಿ ಕಾಂಕ್ರೀಟಿನ ದಿಮ್ಮಿಗಳನ್ನಿಟ್ಟು ರಕ್ಷಣೆಯನ್ನು ಕೊಟ್ಟಾಗ ಈ ವರಸೆಗಳು ನೀರಿನ ಹೊಡೆತದಿಂದ ಒಂದು ಹೆಚ್ಚು, ಇನ್ನೊಂದು ಕಮ್ಮಿಯಾಗಿ ಇಳಿಯುವುದರಿಂದ ಸಮುದ್ರದ ಕಡೆಯ ಮುಖವನ್ನು ಕಾಪಾಡುವುದು ಮಾರ್ಸೇಲ್ಸಿನಲ್ಲಿ ಜಾಗರೂಕತೆಯಿಂದ ಮಾಡಬೇಕಾದ ಕೆಲಸ. ಭರ್ತಿಕಲ್ಲನ್ನೇ ಉಬ್ಬರವಿಳಿತದ ಮೇಲಿನ ಮಟ್ಟದವರೆಗೂ ತುಂಬಿ ಮೇಲುಗಡೆ ಕಾಂಕ್ರೀಟಿನ ಮೇಲುಕಟ್ಟಡವನ್ನೂ ಕೈಪಿಡಿಯ ಗೋಡೆಯನ್ನೂ ಕಟ್ಟಿದಾಗ ಸಮುದ್ರದ ಮುಖದ ಕಡೆ ಕಲ್ಲುಗಳು ಉರುಳಿ ಅಪಾರವಾದ ನಷ್ಟವಾಗುತ್ತದೆ. ಅದಕ್ಕಾಗಿ 40 ಟನ್ ತೂಕದ ಕಾಂಕ್ರೀಟಿನ ದಿಮ್ಮಿಗಳನ್ನು ಅಡ್ಡಾದಿಡ್ಡಿಯಾಗಿ ಭರತದ ಕೆಳಮಟ್ಟದ ಮೇಲುಗಡೆ ತುಂಬುತ್ತಾರೆ. ಅಲೆಗಳು ಪ್ರಬಲವಾಗಿದ್ದಾಗ 300 ಟನ್ನಿನ ತೂಕದ ಕಾಂಕ್ರೀಟಿನ ದಿಮ್ಮಿಗಳನ್ನೂ ಜಾರಿಸಬಲ್ಲವು. ಸಂಕೀರ್ಣ ಮಾದರಿಯ ಅಲೆತಡೆಗಳ ಮೇಲುಕಟ್ಟಡವನ್ನು ಕಟ್ಟುವಾಗ ಟೊಳ್ಳಾದ ಇಟ್ಟಿಗೆಗಳೂ ಬಹು ಭಾರವಾದ ಕಲ್ಲುಗಳೂ ಬಳಕೆಗೆ ಬರುವುದಕ್ಕೆ ಮುಂಚೆ ಪ್ರಬಲಿತ ಕಾಂಕ್ರೀಟ್ ಇಲ್ಲವೆ ಉಕ್ಕಿನಿಂದ ಮಾಡಿದ ಕೇಸಾನುಗಳನ್ನು ತಳಪಾಯದಲ್ಲಿ ಉಪಯೋಗಿಸುತ್ತಿದ್ದರು. ಸಮುದ್ರತಳ ಕೊರೆದು ಹೋಗದಂತೆ ಗಟ್ಟಿಯಾಗಿದ್ದರೆ ಕೇಸಾನುಗಳನ್ನು ಧಾರಾಳವಾಗಿ ಉಪಯೋಗಿಸಬಹುದು. ಹಿಂದಿನ ಕಾಲದಲ್ಲಿ ದಡದ ಮೇಲೆ ಕೇಸಾನುಗಳನ್ನು ಕಟ್ಟಿ ದೋಣಿಗಳಲ್ಲಿ ಸಾಗಿಸಿ ಸರಿಯಾದ ಜಾಗದಲ್ಲಿ ಇಳಿಸುವುದು ಕಷ್ಟವಾಗಿತ್ತು. ಆದರೆ ಈಚೆಗೆ ತಾಂತ್ರಿಕ ಕೌಶಲ ಹೆಚ್ಚಾಗಿದೆ. ಎರಡನೆಯ ಮಹಾಯುದ್ಧದ ಕಾಲದಲ್ಲಿ 60ಮೀ ಉದ್ದ, 18ಮೀ ಅಗಲ, 10ಮೀ ಎತ್ತರದ ಕೇಸಾನುಗಳನ್ನು ಕಟ್ಟಿ ಇಂಗ್ಲಿಷ್ ನಾಲೆಯ ಮೇಲೆ ಸಾಗಿಸಿ ಕೃತಕವಾದ ಬಂದರನ್ನು ಉತ್ತರ ಫ್ರಾನ್ಸಿಗೆ ಮುತ್ತಿಗೆ ಹಾಕುವಾಗ ನಿರ್ಮಿಸಿದರು. ಕೊಲಂಬೊ ಬಂದರಿನ ಅಲೆತಡೆಯನ್ನು ಸಮುದ್ರದ ತಳದ ಮೇಲೆ ಭರ್ತಿಕಲ್ಲಿನ ಏರಿಯನ್ನು ಕಟ್ಟಿ, ಅದರ ತಳಪಾಯದ ಮೇಲೆ ಇಳಿಜಾರಾದ ಕಾಂಕ್ರೀಟಿನ ದಿಮ್ಮಿಗಳ ಸಾಲುಗಳನ್ನು ಉಬ್ಬರದ ಮೇಲಿನ ಮಟ್ಟಕ್ಕೂ ಎತ್ತರವಾಗಿ ಕಟ್ಟಿ, ಅದರ ಮೇಲು ಭಾಗದಲ್ಲಿ ಕಾಂಕ್ರೀಟನ್ನು ರಸ್ತೆಯ ಮಟ್ಟದಲ್ಲಿ ತುಂಬಿದ್ದಾರೆ. ಸಮುದ್ರದ ಕಡೆಯ ಮುಖದಲ್ಲಿ 30 ಟನ್ ತೂಕದ ಭಾರವಾದ ಕಾಂಕ್ರೀಟಿನ ದಿಮ್ಮಿಗಳನ್ನು ಅಲೆಗಳನ್ನು ಒಡೆಯುವುದಕ್ಕಾಗಿ ಅಡ್ಡಾದಿಡ್ಡಿಯಾಗಿ ಭರ್ತಿಕಲ್ಲಿನ ಏರಿಯ ಮೇಲುಗಡೆ ತುಂಬಿದ್ದಾರೆ. ಮದರಾಸಿನ ಬಂದರಿನಲ್ಲಿಯೂ ಮಾರ್ಮಗೋವ ಬಂದರಿನಲ್ಲಿಯೂ ಅಲೆತಡೆಗಳು ಇದೇ ಮಾದರಿಯಾಗಿವೆ. ಪೆಸಿಫಿಕ್ ಸಾಗರದ ಉತ್ತರ ದಿಕ್ಕಿನ ಚಂಡಮಾರುತಗಳನ್ನು ಎದುರಿಸಬೇಕಾಗಿರುವ ಚಿಲಿಯ ವಾಲ್ಪರೈಸೊ ಬಂದರಿನಲ್ಲಿ ಅಲೆತಡೆಗಳು ಸಂಕೀರ್ಣ ಮಾದರಿಯಲ್ಲಿವೆ. ಒಳಭಾಗದಲ್ಲಿ ಆಳವಾದ ಭರ್ತಿಕಲ್ಲಿನ ಏರಿಯ ಮೇಲೆ ಮಟ್ಟವಾಗಿ ವರಸೆಯಾಗಿ ಕಾಂಕ್ರೀಟಿನ ದಿಮ್ಮಿಗಳನ್ನು ಜೋಡಿಸಿದೆ. ಇದರ ಸಮುದ್ರದ ಕಡೆಯ ಇಳಿಕಲಿನಲ್ಲಿ ಕೊಲಂಬೊ ಬಂದರಿನಲ್ಲಿ ಇರುವ ಹಾಗೆ ಕಾಂಕ್ರೀಟಿನ ದಿಮ್ಮಿಗಳನ್ನು ಅಡ್ಡಾದಿಡ್ಡಿಯಾಗಿ ತುಂಬಿದ್ದಾರೆ. ಹೊರಭಾಗದ ಮೇಲು ಕಟ್ಟಡದಲ್ಲಿ ಭದ್ರಕಾಂಕ್ರೀಟಿನ ಕೇಸಾನುಗಳನ್ನು ದಡದ ಮೇಲೆ ತಯಾರಿಸಿ ದೋಣಿಗಳ ಮೇಲೆ ಸ್ಥಳಕ್ಕೆ ತಂದು ಸಮುದ್ರದ ಸರಾಸರಿ ಮಟ್ಟದ ಕೆಳಗೆ 12ಮೀ ಆಳದಲ್ಲಿ ಇಳಿಸಿದ್ದಾರೆ. ಒಂದೊಂದು ಕೇಸಾನೂ 19.5ಮೀ. ಉದ್ದ, 15.6ಮೀ ಅಗಲ, 14.7 ಮೀ ಎತ್ತರವಾಗಿದೆ. ಈ ಕೇಸಾನುಗಳ ಒಳಗಡೆ ಕಾಂಕ್ರೀಟನ್ನು ತುಂಬಿದ್ದಾರೆ. ಇವುಗಳ ಮೇಲುಗಡೆ ಕಾಂಕ್ರೀಟಿನ ಮೇಲುಕಟ್ಟಡವನ್ನೂ ಕೈಪಿಡಿಯ ಗೋಡೆಯನ್ನೂ ಕಟ್ಟಿದ್ದಾರೆ. ಕೆನಡದಲ್ಲಿ ವೆಲ್ಲಂಡ್ ಹಡಗಿನ ನಾಲೆಯ ರಕ್ಷಣೆಗಾಗಿ ಕಟ್ಟಿದ ಅಲೆತಡೆಗಳಲ್ಲಿ 33ಮೀ ಉದ್ದ, 11.8ಮೀ ಅಗಲ, 10.2ಮೀ ಎತ್ತರದ ಕಾಂಕ್ರೀಟಿನ ಕೇಸಾನುಗಳನ್ನು ಉಪಯೋಗಿಸಿದ್ದಾರೆ. ಸಂಯುಕ್ತಸಂಸ್ಥಾನಗಳಲ್ಲಿ ಮಹಾಸರೋವರಗಳ ಪ್ರದೇಶದಲ್ಲಿ ಕಟ್ಟಿದ ಸಂಕೀರ್ಣ ಮಾದರಿಯ ಅಲೆತಡೆಗಳಲ್ಲಿಯೂ ಕಾಂಕ್ರೀಟಿನ ಕೇಸಾನುಗಳನ್ನು ಬಳಸಿದ್ದಾರೆ. ಒಳಗಡೆ ಕಲ್ಲನ್ನು ತುಂಬಿದ್ದಾರೆ.

**ಲಂಬವಾದ ಗೋಡೆಯ ಮಾದರಿ :** ಇವು ನೀರಿನಲ್ಲಿ ತಳಪಾಯವನ್ನು ಹಾಕಿ ಎತ್ತಿದ ಗಟ್ಟಿಯಾದ ಕಟ್ಟಡಗಳು. ಇವನ್ನು ಸಮುದ್ರದ ತೀರಕ್ಕೆ ಸೇರಿಸಿದ್ದರೆ ಅಲೆಗಳು ಅವುಗಳ ಮೇಲೆ ಬಡಿಯುವುದರಿಂದ ಸಾಕಷ್ಟು ಭದ್ರವಾಗಿರಬೇಕು. ಇಂಗ್ಲೆಂಡಿನಲ್ಲಿ ಡೋವರ್

ಬಂದರಿನ ಅಲೆತಡೆ ಈ ಮಾದರಿಯಲ್ಲಿದೆ. ಅಲೆತಡೆಗಳನ್ನು ಕಾಂಕ್ರೀಟಿನ ದಿಮ್ಮಿಗಳಿಂದ ವರಸೆಯಾಗಿ ಕಟ್ಟಿದ್ದಾರೆ. ಉಬ್ಬರವಿಳಿತದ ತಗ್ಗಿನ ನೀರಿನ ಮಟ್ಟದ ಮೇಲುಗಡೆ ಹೊರಗೋಡೆ ಯನ್ನು ಕಗ್ಗಲ್ಲುಗಾರೆಯಿಂದ ಕಟ್ಟಿದ್ದಾರೆ. ಈ ದಿಮ್ಮಿಗಳನ್ನು ಸಂಚರಿಸುವ ಕ್ರೇನುಗಳಿಂದ ಕೆಳಕ್ಕೆ ಇಳಿಸಲಾಯಿತು. ಇಂಗ್ಲೆಂಡಿನಲ್ಲಿ ಟೈನ್ ನದಿಯ ಮುಖದಲ್ಲಿರುವ ಎರಡು ಅಲೆತಡೆ ಗಳನ್ನು ಮೊದಲು ಸಂಕೀರ್ಣ ನಮೂನೆಯಲ್ಲಿ ಕಟ್ಟಿದರು. ಆದರೆ ಕೆಲವು ಕಾಲದ ಮೇಲೆ ಒಂದು ಕಂಬ ಅದರ ತಳಪಾಯ ಕೊರೆದು ಹೋದದ್ದರಿಂದ ಬಿರುಕು ಬಿಟ್ಟಿತು. ಅದನ್ನು ಆಮೇಲೆ ಡೋವರ್ ಬಂದರಿನ ಅಲೆತಡೆಯ ಮಾದರಿಯಲ್ಲಿ ಕಟ್ಟಿದರು. ಅಮೆರಿಕದ ಮಹಾಸರೋವರಗಳಲ್ಲಿ ಲಂಬವಾದ ಮುಖಗಳುಳ್ಳ ಅಲೆತಡೆಗಳನ್ನು ಇಳಿಸಿದ ಕೇಸಾನು ಗಳಿಂದ ಈ ನಮೂನೆಯ ಅಲೆತಡೆಗಳನ್ನು ಫ್ರಾನ್ಸಿನಲ್ಲಿ ಕಟ್ಟಿದ್ದಾರೆ. ಕಾಂಕ್ರೀಟಿನ ಕೇಸಾನುಗ ಳಿಂದಲೂ ಅಲೆತಡೆಗಳನ್ನು ಕಟ್ಟಬಹುದು. ಅಲೆತಡೆಗಳ ಸಂವಿಧಾನವನ್ನು ಮಾಡುವಾಗ ಒಂದೊಂದು ಕಟ್ಟಡದ ಮೇಲೂ ಬೀಳುವ ಅಲೆಗಳ ವೈಲಕ್ಷಣ್ಯ , ಅಲೆಗಳ ಒತ್ತಡಗಳನ್ನು ಪರಿಶೀಲಿಸಿ ಅಲೆತಡೆಯ ನಮೂನೆ ಮತ್ತು ಅದರ ಅಡ್ಡಕೊಯ್ತದ ರೂಪ (ಕ್ರಾಸ್ ಸೆಕ್‍ಷನ್) ಇವನ್ನು ನಿರ್ಧರಿಸಬೇಕು. (ಎಚ್.ಸಿ.ಕೆ., ಎಂ.ಜಿ.ಎಸ್.)

**ಅಲೆನ್ ಫ್ಲೇಗರ್ ಆ್ಯಡಂ ಗೊಟ್ಲಾಬ್ :** 1770–1850. ಡೆನ್ಮಾರ್ಕಿನ ಕವಿ, ನಾಟಕಕಾರ. ಡೆನ್ಮಾರ್ಕಿನ ರೊಮ್ಯಾಂಟಿಕ್ ಪಂಥದ ಸಾರಸರ್ವಸ್ವವನ್ನು ಅವನ ನಡುಬೇಸಗೆ ಇರುಳಿನ ರೂಪಕವೆಂಬ ನಾಟಕೀಯ ಕವನದಲ್ಲಿ ಗುರುತಿಸಬಹುದು. ಪುರಾತನ ನಾರ್ಸ್ ಕಥಾನಕ ರೂಢಿಗಳನ್ನನುಸರಿಸಿ ಬರೆದ ಇವನ ಕವನ ಸಂಕಲನ ದೀರ್ಘ ಭವ್ಯಕಾವ್ಯಗಳಲ್ಲಿ ಹಾಗೂ ಗದ್ಯಕಥೆಗಳಲ್ಲಿ ಇವನ ಕಾವ್ಯಪ್ರಜ್ಞೆ, ಪ್ರಯೋಗಶೀಲ ಮನೋಧರ್ಮ ವ್ಯಕ್ತವಾಗಿವೆ. ಡೆನ್ಮಾರ್ಕಿನಲ್ಲಿ ಮೊಟ್ಟಮೊದಲು ಐತಿಹಾಸಿಕ ದುರಂತನಾಟಕವನ್ನು ರಚಿಸಿ ಪ್ರಸಿದ್ಧನಾದ ಇವನ ರಚನೆಗಳಲ್ಲಿನ ವಸ್ತುವೈವಿಧ್ಯವನ್ನು ತಂತ್ರಪರಿಣತಿಯನ್ನು ವಿಮರ್ಶಕರು ಬಹುವಾಗಿ ಮೆಚ್ಚಿಕೊಂಡಿದ್ದಾರೆ. 1830ರಲ್ಲಿ ಈತ ತನ್ನ ಆತ್ಮಚರಿತ್ರೆಯನ್ನು ರಚಿಸಿದ. (ಎಚ್.ಕೆ.ಆರ್.)

**ಅಲೆನ್ಬಿ, ಎಡ್‍ಮಂಡ್ ಹೆನ್ರಿ ಹೈನ್‍ಮನ್ :** 1861–1936. ಪ್ರಸಿದ್ಧ ಬ್ರಿಟಿಷ್ ಯೋಧ. 19ನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟನ್ನಿಗೂ ದಕ್ಷಿಣ ಆಫ್ರಿಕ, ಈಜಿಪ್ಟ್, ತುರ್ಕಿಸ್ಥಾನ ಮೊದಲಾದ ರಾಜ್ಯಗಳಿಗೂ ನಡೆದ ಯುದ್ಧಗಳಲ್ಲಿ ಬ್ರಿಟಿಷ್ ಅಶ್ವಪಡೆಯ ಮುಖಂಡನಾಗಿ ಪ್ಯಾಲೆಸ್ಟೈನಿನಲ್ಲಿ ಯುದ್ಧಮಾಡಿದ. ಮೆಡಿಟರೇನಿಯನ್ ಸಮುದ್ರದ ಮೇಲಿನ ಬ್ರಿಟನ್ನಿನ ಹತೋಟಿಯನ್ನೂ ಜೆರುಸಲೆಮ್ಮಿನ ರಕ್ಷಣಾಕಾರ್ಯವನ್ನೂ ಯಶಸ್ವಿಗೊಳಿಸಿ ಡಮಾಸ್ಕಸ್ ಮತ್ತು ಅಲೆಪ್ಪೊಗಳನ್ನು ಸ್ವಾಧೀನಪಡಿಸಿಕೊಂಡು ತುರ್ಕಿ ಸೈನ್ಯವನ್ನು ಚದರಿಸಿ ಮಹತ್ಕಾರ್ಯ ಸಾಧಿಸಿದ್ದುದರಿಂದ ವೈಕೌಂಟ್ ಪದವಿಯನ್ನು ಗಳಿಸಿದ. 1919ರಿಂದ 1925ರವರೆಗೆ ಈಜಿಪ್ಟಿನ ಹೈಕಮಿಷನರಾಗಿ ಪಕ್ಷಪಾತವಿಲ್ಲದೆ ಸಹಾನುಭೂತಿಯಿಂದ ಕಾರ್ಯಭಾರಮಾಡಿ ಬ್ರಿಟಿಷ್ ಸೈನಿಕ ಇತಿಹಾಸದಲ್ಲಿ ಗಣ್ಯಸ್ಥಾನ ಪಡೆದಿದ್ದಾನೆ. (ಸಿ.ವಿ.ಆರ್.)

**ಅಲೆಪ್ಪಿ :** ಭಾರತದ ಕೇರಳ ರಾಜ್ಯದ ಪಶ್ಚಿಮ ಕರಾವಳಿಯಲ್ಲಿರುವ ಒಂದು ಜಿಲ್ಲೆ ಮತ್ತು ವ್ಯಾಪಾರ ಕೇಂದ್ರ. ಅಲಪುಲ್ಯೆ, ಔಲಪುಲ್ಯೆ ಎಂದೂ ಕರೆಯುತ್ತಾರೆ. 1958ರಲ್ಲಿ ಕ್ವಿಲಾನಿನ ಆರು ತಾಲ್ಲೂಕುಗಳ ಜೊತೆ ಕೊಟ್ಟಾಯಮ್‍ನ ಒಂದು ತಾಲ್ಲೂಕನ್ನು ಸೇರಿಸಿ

ವಿಹಾರದ ದೋಣಿಮನೆ

ಈ ಜಿಲ್ಲೆಯನ್ನು ನಿರ್ಮಿಸಲಾಯಿತು. ವಿಸ್ತೀರ್ಣ ಸುಮಾರು 1841 ಚ.ಕಿಮೀ ಅಲೆಪ್ಪಿ ಪಟ್ಟಣ ಕೇರಳ ರಾಜ್ಯದ ಒಂದು ಸುರಕ್ಷಿತವಾದ ಪ್ರಮುಖ ರೇವುಪಟ್ಟಣಗಳಲ್ಲೊಂದು. ಕೊಚ್ಚಿನ್ ಪಟ್ಟಣದಿಂದ 40 ಕಿಮೀ ದೂರದಲ್ಲಿದೆ. ವಿಸ್ತೀರ್ಣ 32.4 ಚ.ಕಿಮೀ ಮತ್ತು ಜನಸಂಖ್ಯೆ 567850 (2001). 18ನೆಯ ಶತಮಾನದಿಂದಲೂ ಪ್ರಸಿದ್ಧಿ ಪಡೆದಿದೆ; ಇಂಗ್ಲಿಷರು 18ನೆಯ ಶತಮಾನದ ಕೊನೆಯವರೆಗೂ ಈ ರೇವಿನ ಮೂಲಕ ವ್ಯಾಪಾರ ನಡೆಸುತ್ತಿದ್ದರು. ರೈಲು ಅಥವಾ ಒಳ್ಳೆಯ ರಸ್ತೆ ಮಾರ್ಗಗಳಿಲ್ಲ. ಒಳನಾಡಿನ ಹೆಚ್ಚು ಸಂಚಾರಸೌಕರ್ಯ ಮತ್ತು ಸರಕುಗಳ ಸಾಗಾಣಿಕೆ ಕಾಲುವೆಗಳ ಮೂಲಕವೇ. ಜಿಲ್ಲೆಯ ಮುಖ್ಯ ಬೆಳೆ ತೆಂಗು. ಜನರ ಮುಖ್ಯ ಕಸುಬು ತೆಂಗಿನ ಎಣ್ಣೆ ತೆಗೆಯುವುದು. ತೆಂಗಿನ ನಾರು ಬಿಡಿಸುವುದು. ಚಾಪೆ ನೇಯುವುದು ಇತ್ಯಾದಿ; ರೇವುಪಟ್ಟಣದಿಂದ ಮುಖ್ಯವಾಗಿ ತೆಂಗು, ಜಮಖಾನಗಳು, ಏಲಕ್ಕಿ, ಮೆಣಸು ರಫ್ತಾಗುವುವು. ಇಲ್ಲಿ ಸನಾತನಧರ್ಮದ ಕಾಲೇಜಿದೆ; ಇದು ತಿರುವಾಂಕೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸೇರಿದೆ. (ಎಸ್.ಎನ್.1.)

**ಅಲೆಮಾರಿಜನ, ಜೀವನ :** ಒಂದು ಕಡೆ ಬಹುಕಾಲ ನೆಲೆಯಾಗಿ ನಿಲ್ಲದೆ, ಜೀವನೋಪಾಯಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಅಲೆಯುವ ಜನಕ್ಕೆ ಅಲೆಮಾರಿಗಳೆನ್ನುತ್ತಾರೆ (ನೋಮ್ಯಾಡ್ಸ್).

ಪ್ರಾಚೀನ ಮಾನವನ ಇತಿಹಾಸವನ್ನು ಪರಿಶೀಲಿಸಿದಾಗ, ಆತ ತನ್ನ ಜೀವನೋಪಾಯ ಕ್ಕಾಗಿ ಬೇಟೆಯಾಡುವುದು, ಮೀನು ಹಿಡಿಯುವುದು, ವ್ಯವಸಾಯ, ಪಶುಪಾಲನೆ– ಮುಂತಾದುವನ್ನು ಅವಲಂಬಿಸಿಕೊಂಡಿದ್ದುದು ಕಂಡುಬರುತ್ತದೆ. ವ್ಯವಸಾಯ ಮತ್ತು ಪಶುಪಾಲನೆಗೆ ನೀರು ಅತ್ಯಗತ್ಯ. ಮೀನು ಹಿಡಿಯುವುದಕ್ಕೂ ಬೇಟೆಗೂ ತಕ್ಕ ಸನ್ನಿವೇಶ ಸದಾಕಾಲವೂ ಒಂದೇ ಸ್ಥಳದಲ್ಲಿ ದೊರೆಯದಿದ್ದಾಗ, ಜಲದ ಅಭಾವ ತಲೆದೋರಿದಾಗ ಅವನ್ನರಸಿಕೊಂಡು ಮನುಷ್ಯ ಅಲೆದಾಡುವುದು ಸ್ವಾಭಾವಿಕ. ಈ ದೃಷ್ಟಿಯಿಂದ ಆದಿಮಾನವ ಅಲೆಮಾರಿಯಾಗಿ ತನ್ನ ಜೀವನವನ್ನು ಪ್ರಾರಂಭಿಸಿದನೆನ್ನಬಹುದು.

ಹಳೆ ಮತ್ತು ನವ ಶಿಲಾಯುಗದ ಜನ ಚೂಪಾದ ಕಲ್ಲಿನ ಆಯುಧಗಳಿಂದ ಮೃಗಗಳನ್ನು ಬೇಟೆಯಾಡಿ, ಗೆಡ್ಡೆಗೆಣಸುಗಳನ್ನು ಅಗೆದು ತಿಂದು ಜೀವನ ನಡೆಸುತ್ತಿದ್ದರಾದ ಕಾರಣ ಅಲೆಮಾರಿತನ ಅವರಿಗೆ ಸ್ವಾಭಾವಿಕವಾಗಿತ್ತು. ಬರಬರುತ್ತ ನಾಗರಿಕತೆ ಹಾಗೂ ಸಂಸ್ಕೃತಿ ಹುಟ್ಟಿ ಬೆಳೆದಂತೆ ಅವರಲ್ಲಿ ಕೆಲವು ಜನ ಸ್ಥಿರ ವಸತಿಗಳನ್ನು ಕಲ್ಪಿಸಿಕೊಂಡು ವಾಸಿಸತೊಡಗಿದರೂ ಮತ್ತೆ ಕೆಲವರು ಅಲೆಮಾರಿ ಜೀವನವನ್ನೇ ಮುಂದುವರಿಸಿದರು.

ನಾಗರಿಕ ಮಾನವ ಹಳ್ಳಿ, ಊರು, ಪಟ್ಟಣಗಳನ್ನು ನಿರ್ಮಿಸಿಕೊಂಡು ನೆಲೆನಿಲ್ಲಲು ಪ್ರಾರಂಭಿಸಿದಂತೆ ಸುತ್ತಲಿನ ಅರಣ್ಯಗಳು ಹಾಳಾದುವಲ್ಲದೆ ಅವನ್ನೇ ಆಶ್ರಯಿಸಿದ್ದ ಪ್ರಾಣಿಗಳೂ ಇಲ್ಲವಾದುವು; ಅಥವಾ ಕಾಡಿನೊಂದಿಗೆ ಹಿಂದೆ ಹಿಂದೆ ಸರಿದು ದೂರದ ಅರಣ್ಯಗಳನ್ನು ಸೇರಿದುವು. ನಾಗರಿಕ ಜೀವನದ ಬಗ್ಗೆ ಅವರಿಗಿದ್ದ ಸಹಜ ಭಯ ಮತ್ತು ತಮ್ಮ ಜೀವನಕ್ರಮ ದಲ್ಲಿ ಅವರಿಗಿದ್ದ ಆಸ್ಥೆ–ಈ ಕಾರಣಗಳಿಂದಾಗಿ ಅವರು ಹಾಗೆ ಮಾಡಿರಬಹುದು. ಪ್ರಪಂಚದ ಎಲ್ಲ ಭಾಗಗಳಲ್ಲೂ ಅಲೆಮಾರಿ ಜೀವನ ನಡೆಸುವ ಜನಾಂಗಗಳು ಇವತ್ತಿಗೂ ಕಂಡು ಬರಲು ಇದೇ ಕಾರಣವಿರಬೇಕು. ಇದಕ್ಕೆ ಉತ್ತರ ಅಮೆರಿಕದ ಎಸ್ಕಿಮೊಗಳು, ಆಸ್ಟ್ರೇಲಿಯದ ಮೂಲನಿವಾಸಿಗಳು, ಆಫ್ರಿಕದ ಬುಷ್ ಜನ, ಅಂಡಮಾನಿನ ನಿವಾಸಿಗಳು–ಮುಂತಾದವರು ಇದಕ್ಕೆ ಉತ್ತಮ ನಿದರ್ಶನ. ನಿಂತ ಕಡೆ ನಿಲ್ಲದೆ ಸದಾಕಾಲ ಅಲೆಯುವುದರಲ್ಲಿ ಅಗ್ರಗಣ್ಯರೆಂದರೆ ಜಿಪ್ಸಿಗಳು. ಇವರು ಪ್ರಪಂಚದ ಎಲ್ಲ ಭಾಗಗಳಲ್ಲೂ ಕಂಡುಬರುವರು.

ಅಲೆಮಾರಿಜೀವನದ ದೃಷ್ಟಾಂತವಾಗಿ ಬೇಟೆಯಾಡುವ, ಗೆಡ್ಡೆಗೆಣಸು ಕೂಡಿಡುವ, ಪಶುಪಾಲನೆಯಿಂದ ಜೀವಿಸುವ ಜನರನ್ನು ನೋಡಬಹುದು. ಅಲೆಮಾರಿಜೀವನದ ಜೀವಾಳವೆಂದರೆ ಪಶುಪಾಲನಾವೃತ್ತಿ. ದ್ರಾವಿಡರು ಭಾರತಕ್ಕೆ ವಲಸೆಬಂದವರೆಂದು ಹೇಳುತ್ತಾರೆ. ಅವರಿಗಿಂತ ಹಿಂದಿನವರಾದ ಕೋಲರೂ ಅಲೆಮಾರಿಗಳೇ. ಅನಂತರ ಮಧ್ಯ ಏಷ್ಯದಿಂದ ಆರ್ಯರು ವಲಸೆ ಬಂದರು. ಅವರ ಮುಖ್ಯ ವೃತ್ತಿ ಪಶುಪಾಲನೆಯಾಗಿತ್ತು. ದನಗಳ ಮೇವು ನೀರಿಗಾಗಿ ಅವರು ದೇಶದಿಂದ ದೇಶಕ್ಕೆ ಅಲೆಯುತ್ತ ಬಂದರು.

ಆಂಧ್ರಪ್ರದೇಶದ ಇರ್ಕುಳ ಮತ್ತು ಎನ್ನಡಿಗಳು ಹಕ್ಕಿಗಳನ್ನು ಬೇಟೆಯಾಡಿ ಜೀವನ ನಡೆಸುತ್ತಾರೆ. ಬಿರ್‍ಹರ್, ಖ್ಹರಿಯಾ, ಚೆಂಚು, ಮಲಪನ್‍ತರಂ, ಕಾಡಾರರು, ಪಾಳಿಯನ್, ಪನಿಯನ್, ಕುರುಂಬ ಮುಂತಾದವರು ಗೆಡ್ಡೆಗೆಣಸನ್ನು ಅಗೆದು ಶೇಖರಿಸಲು ಸುತ್ತಮುತ್ತಲ ಕಾಡುಮೇಡುಗಳಲ್ಲಿ ಅಲೆಯುತ್ತಾರೆ. ನೀಲಗಿರಿಯ ತೋಡರು, ಉತ್ತರಭಾರತದ ಗಾಡ್ಡಿಗಳು ಪಶುಪಾಲನೆಯಿಂದ ಜೀವನ ನಡೆಸುತ್ತಾರೆ. ಗಾಡ್ಡಿಗಳು ತಮ್ಮ ಕುರಿಮಂದೆಯೊಡನೆ ಹಿಮಾಲಯದ ದಟ್ಟ ಪ್ರದೇಶಗಳಲ್ಲಿ ಹವಾಮಾನಕ್ಕನುಗುಣವಾಗಿ ಸಂಚರಿಸುತ್ತಾರೆ. ತೋಡರು ತಮ್ಮ ಎಮ್ಮೆ ಹಿಂಡಿನೊಡನೆ ಮೇವಿಗಾಗಿ ನೀಲಗಿರಿಯ ದಟ್ಟ ಮೈದಾನದಲ್ಲೆಲ್ಲ ಸಂಚರಿಸುತ್ತಾರೆ. ಗೊತ್ತಾದ ನೆಲೆಯಿಲ್ಲದೆ, ಚಿರಕಾಲ ಅಲೆಮಾರಿಯಾಗಿ ಅಥವಾ ಒಂದು ಸ್ಥಳಕ್ಕೆ ಎರಡನೆಯ ಸಲ ಹಿಂತಿರುಗಿ ಬರದೆ ಅಲೆಯುವ ಜನಾಂಗ ಯಾವುದೂ ಇಲ್ಲ.

ಕರ್ನಾಟಕ ರಾಜ್ಯದಲ್ಲಿ ಅಲೆಮಾರಿ ಜೀವನ ನಡೆಸುವ ಕೆಲವು ಜನಾಂಗಗಳಿವೆ. ಅನೇಕ ದಶಕಗಳ ಹಿಂದೆ ಲಂಬಾಣಿ, ಮಣ್ಣು ಒಡ್ಡರು, ಕೊರಚ, ಕೊರಮ, ಬುಡಬುಡಿಕೆ, ಮೊಂಡರು, ಡೊಂಬರು, ಹಾವಾಡಿಗರು, ಶಿಳ್ಳೆಕ್ಯಾತ, ಹಂದಿಜೋಗಿ, ಸೋಲಿಗರು, ಇರುಳಿಗರು, ಯರವರು, ಮುಂತಾದವರೆಲ್ಲ ಅಲೆಮಾರಿ ಜೀವನವನ್ನೇ ಅವಲಂಬಿಸಿದ್ದರು. ಇತ್ತೀಚೆಗೆ ಈ ಜನಾಂಗಗಳಲ್ಲಿ ಅನೇಕರು ಸ್ಥಿರಜೀವನ ನಡೆಸಲು ಸರ್ಕಾರ ವಸತಿ ಮತ್ತು ಸಣ್ಣಪುಟ್ಟ ಕೈಗಾರಿಕೆ ವಗೈರೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದೆ. ಆದರೂ ಈ ಜನಾಂಗದವರೆಲ್ಲ ಅಲೆಯುವುದನ್ನು ಸಂಪೂರ್ಣ ಬಿಟ್ಟಿಲ್ಲ. ಜೀವನೋಪಾಯಕ್ಕಾಗಿ ಅಲೆಯುವ ಈ ಜನ ಏನಾದರೊಂದು ಕಸುಬನ್ನು ಅವಲಂಬಿಸಿಯೇ ಇರುತ್ತಾರೆ.

ಉದಾಹರಣೆಗಾಗಿ, ಲಂಬಾಣಿಗಳು ಮೊದಲಿಗೆ ಉಪ್ಪು ಮುಂತಾದ್ದನ್ನು ಎತ್ತುಗಳ ಮೇಲೆ ಸಾಗಿಸಿ ಮಾರಾಟ ಮಾಡಲು ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದರು. ಈಗಲಾದರೂ ಅವರು ಬೇರೆ ಜನರೊಂದಿಗೆ ಸೇರದೆ, ಪ್ರತ್ಯೇಕ ತಾಂಡಗಳನ್ನು ನಿರ್ಮಿಸಿಕೊಂಡು ವ್ಯವಸಾಯ ಮಾಡುತ್ತಾರೆ. ಲಂಬಾಣಿ ಹೆಂಗಸರು ಗುಡ್ಡಗಾಡಿನಲ್ಲಿ ಸೌದೆ, ಹಣ್ಣುಹಂಪಲನ್ನು ಕೂಡಿಟ್ಟು, ಹಳ್ಳಿಗಳಲ್ಲಿ ಮಾರಿ, ಹಣ, ಧಾನ್ಯ ಸಂಪಾದಿಸುತ್ತಾರೆ. ಡೊಂಬರು ಅನೇಕ ತರದ ತಮಾಷೆ ಆಟಗಳನ್ನು ಜನರಿಗೆ ತೋರಿಸುತ್ತ ಊರಿಂದೂರಿಗೆ ಗುಂಪುಗಳಲ್ಲಿ ಅಲೆಯುತ್ತ ಅನ್ನ ಬಟ್ಟೆ ಸಂಪಾದಿಸುತ್ತಾರೆ. ಹಾವಾಡಿಗರೂ ಹಾಗೆಯೇ. ಕಿಳ್ಳೇಕ್ಯಾತರೂ (ಶಿಳ್ಳೆಕ್ಯಾತ) ಬೊಂಬೆ ಆಟ ಆಡಿಸುತ್ತಾರೆ; ಅಲ್ಲದೆ ರಾಮಾಯಣ, ಮಹಾಭಾರತದಿಂದ ಆರಿಸಿದ ಕಥಾವಸ್ತುಗಳನ್ನು ಬಯಲಾಟ ರೂಪದಲ್ಲಿ ಆಡಿ, ಹಳ್ಳಿಗರಿಗೆ ಮನರಂಜನೆ ಒದಗಿಸುತ್ತಾರೆ. ಇವರ ಹೆಂಗಸರು ಹಚ್ಚೆ (ಹಸುರು) ಹಾಕುತ್ತಾರೆ, ಹಂದಿ ಸಾಕುತ್ತಾರೆ ಮತ್ತು ಕೊರವಂಜಿಗಳಾಗಿ ಭವಿಷ್ಯ ಹೇಳುತ್ತಾರೆ.

ಮಣ್ಣು ಒಡ್ಡರು ಮಣ್ಣಿನ ಮನೆಗೆಲಸ, ಬಾವಿ ತೋಡುವ ಕೆಲಸ, ರಸ್ತೆ ಕೆಲಸಕ್ಕಾಗಿ ಊರಿಂದೂರಿಗೆ ಹೋಗುತ್ತಾರೆ. ಕೊರಚ, ಕೊರಮ ಇವರು ಈಚಲು ಗರಿಯ ಪೊರಕೆ, ಚಾಪೆ, ಬುಟ್ಟಿಗಳನ್ನು ಹೆಣೆದು ಊರೂರಿಗೆ ತಿರುಗಿ ಮಾರಾಟ ಮಾಡುತ್ತಾರೆ. ಚಾಪೆ ಗುಡಿಸಲುಗಳನ್ನು ಊರ ಹೊರಗೆ ನಿರ್ಮಿಸಿ, ಬೇಕಾದಾಗ ಅವುಗಳನ್ನು ಕಿತ್ತು, ಎತ್ತು ಅಥವಾ ಕತ್ತೆಗಳ ಮೇಲೆ ಹೇರಿಕೊಂಡು ಬೇರೆ ಕಡೆ ಸಾಗಿಸುತ್ತಾರೆ.

ಹಂದಿಜೋಗಿಗಳು ಹಂದಿ ಮಂದೆಯೊಡನೆ ಊರೂರಿಗೆ ಅಲೆಯುತ್ತಾರೆ. ಕೆಲವೊಮ್ಮೆ ಭಿಕ್ಷೆ ಮಾಡುತ್ತಾರೆ. ಅವರು ನಾರು ಬೇರುಗಳಿಂದ ಕಷಾಯ ಮತ್ತು ಔಷಧಿ ಮಾಡುತ್ತಾರೆ. ಬುಡುಬುಡಿಕೆ ಜನಾಂಗದ ಗಂಡಸರು ಕೆಲವು ಹಕ್ಕಿಗಳ ಶಕುನ ಹಿಡಿದು, ಬೇರೆಯವರಿಗೆ ಶಕುನ ಹೇಳಿ ಧನಧಾನ್ಯ, ಬಟ್ಟೆಬರೆಗಳನ್ನು ಸಂಪಾದಿಸುತ್ತಾರೆ. ಇದಕ್ಕಾಗಿ ಅವರು ಯಾವಾಗಲೂ ಊರೂರು ಸುತ್ತುತ್ತಾರೆ.

ಇವರಲ್ಲದೆ ಹೆಗ್ಗಡದೇವನಕೋಟೆ, ನೀಲಗಿರಿ, ವೈನಾಡು ಮತ್ತು ಕೇರಳದ ಕೆಲವೆಡೆಗಳಲ್ಲಿ ಕಾಡು ಕುರುಬರು, ಕುರುಂಬರು ಮತ್ತು ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿರುವ ಹಕ್ಕಿಪಿಕ್ಕಿ ಜನಾಂಗದವರು ಅಲೆಮಾರಿಜೀವನ ನಡೆಸುವರು. ಹಕ್ಕಿಪಿಕ್ಕಿಯವರಿಗೆ ಹಕ್ಕಿಗಳನ್ನು ಬೇಟೆಯಾಡುವುದೇ ಮುಖ್ಯ ಕಸಬು.

ಹೆಗ್ಗಡದೇವನಕೋಟೆ ಕಡೆ ಇತ್ತೀಚೆಗೆ ಸ್ಥಿರ ವಸತಿಗಳಲ್ಲಿರುವವರೆಂದರೆ ಕಾಡು ಕುರುಬರ ಬುಡಕಟ್ಟಿನವರು. ಇವರೂ ಹಿಂದೆ ಅಲೆಮಾರಿಗಳಾಗಿದ್ದರು. ಕಾಡುಕುರುಬರಲ್ಲಿ ಬೆಟ್ಟಕುರುಬರು, ಜೇನುಕುರುಬರೆಂಬ ಪಂಗಡಗಳುಂಟು. ಬೆಟ್ಟಕುರುಬರಲ್ಲಿ ಆನೆ, ಬೇವು ಮತ್ತು ಕೊಳ್ಳಿ ಎಂಬ ಶಾಖೆಗಳಿವೆ. ಈ ಗುಂಪುಗಳ ಮಧ್ಯೆ ಊಟೋಪಚಾರ ನಡೆದರೂ ಹೆಣ್ಣು ಕೊಟ್ಟು ತರುವುದಿಲ್ಲ.

ಕಾಡಿನ ಮಧ್ಯದಲ್ಲಿ ನೀರಿರುವ ಕಡೆ ಗಿಡಮರಗಳನ್ನು ಕಡಿದು ಹಾಕಿ, ವಸತಿಗಾಗಿ ಹುಲ್ಲು ಎಲೆ ಮನೆಗಳನ್ನು ಈ ಜನ ಕಟ್ಟುತ್ತಾರೆ. ಇವರ ಮನೆಯಲ್ಲಿನ ಮುಖ್ಯ ಪದಾರ್ಥಗಳೆಂದರೆ ಹುಲ್ಲು ಚಾಪೆ, ಮಡಕೆ–ಕುಡಿಕೆ, ಬಿದಿರು ಕೊಳವೆ ಮತ್ತು ಒಂದೆರಡು ಹಿತ್ತಾಳೆ ಪಾತ್ರೆಗಳು.

ಒಂದು ಸಂಸಾರದಲ್ಲಿ ಗಂಡ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಹೆಂಗಸರು ಮಕ್ಕಳ ಯೋಗಕ್ಷೇಮ ನೋಡಿಕೊಂಡು ಮನೆ ಕೆಲಸ ಮಾಡಿಕೊಂಡು, ಜೊತೆಗೆ ತಿನ್ನಲು ಯೋಗ್ಯವಾದ ಗೆಡ್ಡೆಗೆಣಸು ತಂದು ಗಂಡಸರು ತಂದ ಆಹಾರದಲ್ಲಿ ಕಡಿಮೆ ಬಿದ್ದುದನ್ನು ಈ ವಿಧದಲ್ಲಿ ತುಂಬುತ್ತಾರೆ.

ಕಾಡುಕುರುಬರಿಗೆ ಮಾಟ, ಮಂತ್ರ, ಮಾಯಾಜಾಲಗಳಲ್ಲಿ ನಂಬಿಕೆಯಿದೆ. ಇವರೂ ಹಿಂದೂಗಳ ಹಾಗೆ ಮಡಿ ಮೈಲಿಗೆ ಆಚರಿಸುತ್ತಾರೆ. ಮೈನೆರೆದ ಹುಡುಗಿಯರು, ಮುಟ್ಟಾದ ಹೆಂಗಸರು ಕೆಲವು ದಿನ ಪ್ರತ್ಯೇಕವಾಗಿರುತ್ತಾರೆ.

ಕಾಡು ಕುರುಬರು ಯಾವಾಗಲೂ ಚಟುವಟಿಕೆಯಿಂದಿರುತ್ತಾರೆ. ಹಾಗಿಲ್ಲದಿದ್ದರೆ ಅವರ ಜೀವನ ಸಾಗದು. ಇತ್ತೀಚೆಗೆ ಸರ್ಕಾರದ ಅರಣ್ಯಇಲಾಖೆಯ ಪರವಾಗಿ, ಕಾಡಿನಲ್ಲಿ ಮರ ಕಡಿಯುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ಹೀಗೆ ಕೂಲಿನಾಲಿ ಮಾಡಿ, ಸಂಪಾದಿಸಿ ಹೊಟ್ಟೆ ತುಂಬಿಕೊಳ್ಳುತ್ತಾರಲ್ಲದೆ ಸಾಧಾರಣವಾಗಿ ಭೂಮಿ ಸಾಗುವಳಿ ಮಾಡಲು ಮುಂದೆ ಬಂದಿಲ್ಲ. ಕೆಲವೊಮ್ಮೆ ಇವರು ವಾಸಿಸುವ ಗುಡಿಸಲಿನ ಸುತ್ತಮುತ್ತಲ ನೆಲ ಅಗೆದು, ರಾಗಿ ಮುಂತಾದವುಗಳನ್ನು ಅಲ್ಪ ಪ್ರಮಾಣದಲ್ಲಿ ಬೆಳೆದುಕೊಳ್ಳುತ್ತಾರೆ. ಜೇನು, ಮರದ ಅಂಟು, ಕಾಡಿನಲ್ಲಿ ಸಿಕ್ಕುವ ಮತ್ತಿತರ ಪದಾರ್ಥಗಳನ್ನು ಶೇಖರಿಸಿ, ಹಳ್ಳಿಗರಿಗೆ ಮಾರಿ ಆಹಾರ ಧಾನ್ಯ, ಬಟ್ಟೆಬರೆ ಮುಂತಾದುವುಗಳನ್ನು ಕೊಂಡುಕೊಳ್ಳುತ್ತಾರೆ. ಇಷ್ಟೇ ಅಲ್ಲದೆ ಕಾಡು ಪ್ರಾಣಿಗಳ ಜಾಡು ಹಿಡಿದು ಪತ್ತೆಹಚ್ಚಿ ಬೇಟೆಯಾಡುವುದರಲ್ಲೂ ಇವರು ನಿಪುಣರು. ಇವರ ಬೇಟೆಯ ಕ್ರಮಗಳು, ಬೇಟೆಯಲ್ಲಿ ಇವರಿಗಿರುವ ಜಾಣ್ಮೆ ಎಂಥವರನ್ನಾದರೂ ಬೆರಗುಗೊಳಿಸುತ್ತದೆ. ಇವರು ಕಾಡೆಮ್ಮೆಯ ಮಾಂಸ ಒಂದನ್ನು ಬಿಟ್ಟರೆ ಉಳಿದ ಎಲ್ಲ ಪ್ರಾಣಿಗಳ ಮಾಂಸವನ್ನೂ ತಿನ್ನುತ್ತಾರೆ. ಬಿದಿರ ಕಳಲೆ, ಗೆಡ್ಡೆಗೆಣಸುಗಳನ್ನು ಅನೇಕ ಸಲ ಜೇನುತುಪ್ಪದೊಡನೆ ಬೆರೆಸಿಕೊಂಡು ತಿನ್ನುತ್ತಾರೆ. ಕಾಡಿನಲ್ಲಿರುವ ಜೇನಿನಿಂದ ಯಥೇಚ್ಛವಾಗಿ ತುಪ್ಪ, ಮೇಣ ಮುಂತಾದುವನ್ನು ಶೇಖರಿಸುತ್ತಾರೆ.

ಪಶುಪಾಲನೆ ಎಲ್ಲ ಕಡೆಯೂ ಒಂದೇ ರೀತಿಯಾಗಿರದೆ, ಆಯಾ ಪ್ರದೇಶದ ಭೌಗೋಳಿಕ ಪರಿಸ್ಥಿತಿಗೆ ಹೊಂದಿಕೊಂಡಿರುತ್ತದೆ. ಪಶುಪಾಲಕರು ಉತ್ತರ ಶೀತವಲಯದ ತಂಡ್ರ ಪ್ರದೇಶ, ಎತ್ತರ ಪ್ರಸ್ಥಭೂಮಿಯ ಹುಲ್ಲುಗಾವಲು ಪ್ರದೇಶ, ಮರುಭೂಮಿಗಳು, ಉಷ್ಣವಲಯದ ಸವನ್ನ ಹುಲ್ಲುಗಾವಲು ಪ್ರದೇಶಗಳಲ್ಲಿ ಅಲೆಮಾರಿಗಳಾಗಿ ವಾಸಿಸುತ್ತಾರೆ. ಉಷ್ಣ ಅಥವಾ ಸಮಶೀತೋಷ್ಣವಲಯದ ಕಾಡುಗಳಲ್ಲಿ ಹುಳುಹುಪ್ಪಟೆಗಳ ಹಾವಳಿಯಿಂದಲೂ ಹುಲ್ಲಿನ ಅಭಾವದಿಂದಲೂ ಪಶುಪಾಲನೆ ಕಷ್ಟವಾಗುತ್ತದೆ. ಏಷ್ಯ, ಆಫ್ರಿಕ ಖಂಡಗಳಲ್ಲಿ ಹಲವು ಬಗೆಯ ಪಶುಪಾಲನಾ ವಿಧಾನಗಳು ಕಂಡುಬರುತ್ತವೆ.

ಉತ್ತರ ಅರೇಬಿಯದ ರುವಾಲ ಬಿದೂಯಿನ್ ಜನಾಂಗದವರು ಒಂಟೆ, ಕುರಿ, ಮೇಕೆ ಮತ್ತು ಕುದುರೆಗಳನ್ನು ಸಾಕುತ್ತಾರೆ. ಈ ಪ್ರಾಣಿಗಳಿಗೆ ಹುಲ್ಲು ನೀರು ಯಥೇಚ್ಛವಾಗಿ ಸಿಕ್ಕುವ ನಿರ್ದಿಷ್ಟ ಪ್ರದೇಶಗಳನ್ನು ಹುಡುಕಿ ನಡೆಯುತ್ತಾರೆ. ಒಳಬೆಂಗಾಡು ಹುಲ್ಲುಗಾವಲಿನಲ್ಲಿ ವರ್ಷದಲ್ಲಿ 8–10 ತಿಂಗಳು ವಾಸಮಾಡಿ, ಬೇಸಗೆಯ ಬೇಗೆಯನ್ನು ತಪ್ಪಿಸಿಕೊಳ್ಳಲು ತಮ್ಮ ಪ್ರಾಣಿಗಳಿಗೆ ಹುಲ್ಲು ನೀರನ್ನು ಒದಗಿಸಲೂ ತಮ್ಮ ಜೀವನಕ್ಕೆ ಆವಶ್ಯಕವಾದ ಸಾಮಗ್ರಿಗಳನ್ನು ಕೊಳ್ಳಲೂ ಹಳ್ಳಿಗಳ ಕಡೆಗೆ ಧಾವಿಸುತ್ತಾರೆ.

ಇವರಿಗೆ ಒಂಟೆಯೇ ಬಹು ಮುಖ್ಯ ಪ್ರಾಣಿ. ಒಂಟೆಯ ಹಾಲೇ ವರ್ಷದಲ್ಲಿ ಅನೇಕ ತಿಂಗಳು ಅತಿ ಮುಖ್ಯವಾದ ಆಹಾರ. ತಂಬಾಲು ಮತ್ತು ಹುಳಿ ಹಾಲನ್ನು (ಮೊಸರು) ಕುಡಿಯುತ್ತಾರೆ. ಒಂಟೆಹಾಲಿನಲ್ಲಿ ಬೆಣ್ಣೆ ಮುಂತಾದ ಯಾವ ಪದಾರ್ಥವನ್ನೂ ಮಾಡಲಾಗುವುದಿಲ್ಲ. ಚರ್ಮ ಮತ್ತು ಕೂದಲುಗಳಿಂದ ಚೀಲ, ಹಗ್ಗ ಮುಂತಾದ ನಿತ್ಯ ಬಳಕೆಯ ವಸ್ತುಗಳನ್ನು ತಯಾರಿಸುತ್ತಾರೆ. ಒಂಟೆಗಳನ್ನು ಸವಾರಿ ಮಾಡಲೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬಿಡಾರ ಬದಲಾಯಿಸಿದಾಗ ತಮ್ಮ ಸರಕುಗಳನ್ನು ಸಾಗಿಸಲೂ ಉಪಯೋಗಿಸುತ್ತಾರೆ.

ಇವರು ಮಹಮದೀಯರು. ಇವರು ಪಿತೃ ವಂಶಾವಳಿಯನ್ನು ಅನುಸರಿಸುತ್ತಾರೆ. ಸಹೋದರ ಮಕ್ಕಳ (ಪ್ಯಾರಲಲ್ ಕಸಿನ್ಸ್) ಮದುವೆಗೆ ಬಹಳ ಪ್ರಾಶಸ್ತ್ಯ ಕೊಡುತ್ತಾರೆ. ಸ್ತ್ರೀಯರು ಪಿತ್ರಾರ್ಜಿತ ಮತ್ತು ಸ್ವಯಾರ್ಜಿತವಾಗಿ ಒಂಟೆಯ ಮಾಲಿಕತ್ವವನ್ನು ಹೊಂದಿರಬಹುದು. ಈ ಆಸ್ತಿ ಆಕೆಯ ಅನಂತರ ಗಂಡ ಮತ್ತು ಮಕ್ಕಳಿಗೆ ಸೇರುತ್ತದೆ. ಅನೇಕ ಮನೆತನಗಳು ಸೇರಿ ಒಂದು ಬುಡಕಟ್ಟಾಗುತ್ತದೆ. ಪ್ರತಿಯೊಂದು ಬುಡಕಟ್ಟಿಗೂ ಒಬ್ಬ ಮುಖ್ಯಸ್ಥನಿರುತ್ತಾನೆ.

ಏಷ್ಯದ ವಾಯವ್ಯದಲ್ಲಿರುವ ಕಜ಼ಾಕ್ ಜನಾಂಗದವರು ಕುದುರೆ, ಕುರಿ, ಮೇಕೆ, ದನ ಮತ್ತು ಒಂಟೆಗಳನ್ನು ಸಾಕುತ್ತಾರೆ. ಕುದುರೆ, ಅದರಲ್ಲೂ ಹೆಣ್ಣು ಕುದುರೆ ಇವರಿಗೆ ಅತಿ ಮುಖ್ಯವಾದ ಪ್ರಾಣಿ. ಕುದುರೆ ಹಾಲಿನಿಂದ ಕುಮಿಸ್ ಎಂಬ ಮಾದಕ ಪಾನೀಯವನ್ನು ತಯಾರಿಸುತ್ತಾರೆ. ಇವರು ಒಳ್ಳೆಯ ಕುದುರೆ ಸವಾರರು. ಆದರೆ ಹೆಣ್ಣು ಕುದುರೆ ಮೇಲೆ ಸವಾರಿ ಮಾಡುವುದಿಲ್ಲ. ಕೆಲವು ಕುದುರೆಗಳನ್ನು ಪವಿತ್ರವಾದವುಗಳೆಂದು ಯಾವ ಕೆಲಸಕ್ಕೂ ಉಪಯೋಗಿಸುವುದಿಲ್ಲ. ಕುದುರೆಯ ಮಾಂಸಕ್ಕೆ ಬಹಳ ಬೆಲೆ ಕೊಡುತ್ತಾರೆ. ಕುದುರೆಯ ಚರ್ಮದಿಂದ ಜೀನನ್ನೂ ಕೂದಲಿನಿಂದ ಹಗ್ಗವನ್ನೂ ತಯಾರಿಸುತ್ತಾರೆ. ವರ್ಷದಲ್ಲಿ ಸುಮಾರು ಆರು ಸಲ ವಸತಿ ಬದಲಾಯಿಸುತ್ತಾರೆ. ಇವರೂ ಇಸ್ಲಾಂ ಮತಾವಲಂಬಿಗಳು. ಸ್ತ್ರೀಯರು ಮುಖಪರದೆಯನ್ನು ಧರಿಸುವುದಿಲ್ಲ.

ಖಿರ್‌ಘೀಜ಼್ ಜನಾಂಗದವರು ಕಜ಼ಾಕರನ್ನೇ ಹೋಲುತ್ತಾರೆ. ಕುದುರೆ ಮತ್ತು ಚಮರೀಮೃಗಗಳನ್ನು ಸಾಕುತ್ತಾರೆ. ಆಹಾರ ಮತ್ತು ಹುಲ್ಲನ್ನು ಹುಡುಕುತ್ತ ಸ್ಥಳ ಬದಲಾಯಿಸುತ್ತಿರುತ್ತಾರೆ. ಅವರಲ್ಲಿ ಬಡವ ಬಲ್ಲಿದರೆಂಬ ವರ್ಗಗಳಿಲ್ಲ. ಗುಂಪಿಗೊಬ್ಬ ಮುಖ್ಯಸ್ಥನಿರುತ್ತಾನೆ.

ಮಂಗೋಲಿಯಾದ ವಾಯವ್ಯ ಪ್ರಸ್ಥಭೂಮಿಯಲ್ಲಿ ಕಾಲ್‌ಮಕ್ ಎಂಬ ತುರ್ಕಿ ಮಾತನಾಡುವ ಮಂಗೋಲಿಯನ್ ಬುಡಕಟ್ಟಿಗೆ ಸೇರಿದ ಜನರಿದ್ದಾರೆ. ಇವರು ಕುರಿ, ಮೇಕೆ, ದನ ಮತ್ತು ಕುದುರೆಗಳನ್ನು ಸಾಕುತ್ತಾರೆ. ಇವರಿಗೆ ಈ ಪ್ರಾಣಿಗಳ ಹಾಲು, ಮಾಂಸ, ಚರ್ಮ ಮತ್ತು ಉಣ್ಣೆ ಎಲ್ಲವೂ ಜೀವನಾಧಾರ ವಸ್ತುಗಳು. ಕಜ಼ಾಕರ ಹಾಗಲ್ಲದಿದ್ದರೂ ಇವರೂ ಪ್ರಾಣಿಗಳ ಹಿಂಡಿನೊಡನೆ ಮೇವನ್ನು ಹುಡುಕಿಕೊಂಡು ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಾರೆ. ಹೆಂಗಸರು ಮನೆಯ ಕೆಲಸಗಳನ್ನೂ ಗಂಡಸರೂ ಮಂದೆ ಕಾಯುವ ಕೆಲಸವನ್ನೂ ಮಾಡುತ್ತಾರೆ. ಏಷ್ಯದಲ್ಲೇ ಅತಿ ಚುರುಕಾದ ಮತ್ತು ಬಾಳಿಕೆಯುಳ್ಳ ಕುದುರೆಗಳನ್ನು ಸಾಕುತ್ತಾರೆ. ಕುದುರೆಯೇ ಇವರ ಸರ್ವಸ್ವ.

ಏಷ್ಯದ ಉತ್ತರ ಭಾಗದಲ್ಲಿ ಕುದುರೆ ಮತ್ತು ದನಗಳು ಜೀವಿಸಲಾರದ ಕಡೆ ಹಿಮಸಾರಂಗಗಳನ್ನು ಸಾಕುತ್ತಾರೆ. ಇವರಲ್ಲದೆ ಬೇಟೆಯಾಡಿ ಮತ್ತು ಮೀನು ಹಿಡಿದು ಜೀವಿಸುವ ತುಂಗು ಜನಾಂಗದವರು ಚಳಿಗಾಲದಲ್ಲಿ ಹಿಮಸಾರಂಗಗಳ ತುಳಿತದಿಂದ ನೆಲ ಗಟ್ಟಿಯಾಗಿ ಹುಲ್ಲು ಬೆಳೆಯದಿರುವುದರಿಂದ, ಮೇವಿಗಾಗಿ ವಸತಿಗಳನ್ನು ಹುಡುಕಿಕೊಂಡು ಅಲೆಯುತ್ತಾರೆ. ಹಿಮಸಾರಂಗ ಇವರಿಗೆ ಅತಿ ಮುಖ್ಯವಾದ ಪ್ರಾಣಿ. ಅದನ್ನು ಸವಾರಿಗೂ ಸಾಮಾನು ಸಾಗಿಸಲೂ ಚಿಕ್ಕ ಬಂಡಿಯನ್ನು ಎಳೆಯಲೂ ಉಪಯೋಗಿಸುತ್ತಾರೆ. ಅದರ ಹಾಲನ್ನು ಕುಡಿಯುತ್ತಾರೆ. ಚರ್ಮವನ್ನು ಉಡುಪಿಗಾಗಿ ಬಳಸುತ್ತಾರೆ. ಹಿಮಸಾರಂಗ ಇವರ ಧರ್ಮ ಮತ್ತು ನಂಬಿಕೆಗಳಲ್ಲಿ ಮುಖ್ಯ ಸ್ಥಾನ ಗಳಿಸಿದೆ. ಹಿಮಸಾರಂಗಗಳನ್ನು ಮಾತ್ರ ಅತ್ಯಂತ ಪವಿತ್ರವೆಂದು ಯಾವುದಕ್ಕೂ ಉಪಯೋಗಿಸುವುದಿಲ್ಲ. ಈ ಪ್ರಾಣಿ

ಮಾನವರಿಗೂ ದೇವತೆಗಳಿಗೂ ಸಂಬಂಧ ಕಲ್ಪಿಸುವ ದಿವ್ಯ ಸಾಧನವಾಗಿದ್ದು, ಆತ್ಮವನ್ನು ಸ್ವರ್ಗಕ್ಕೆ ಕರೆದೊಯ್ಯುವುದೆಂಬ ವಿಶಿಷ್ಟ ನಂಬಿಕೆಯೂ ಇದೆ. ವಿವಾಹಾದಿ ಮಂಗಳ ಕಾರ್ಯಗಳಲ್ಲೂ ಸಾವು ಮೊದಲಾದ ದುಃಖಸಮಯಗಳಲ್ಲೂ ಹಿಮಸಾರಂಗವನ್ನು ಆಹುತಿ ಕೊಟ್ಟು , ಅದರ ಮಾಂಸಭಕ್ಷಣೆ ಮಾಡುತ್ತಾರೆ.

ತುಂಗು ಜನರಲ್ಲಿ ಜನಾಂಗದ ಮುಖ್ಯಸ್ಥನಿಲ್ಲ. ಆದರೆ ಬಣಗಳಿಗೆ ಮುಖ್ಯಸ್ಥನಿದ್ದಾನೆ. ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಬಡವ ಬಲ್ಲಿದರೆಂಬ ವರ್ಗಗಳಿಲ್ಲ. ಜನಾಂಗದ ಪ್ರತಿಯೊಬ್ಬನೂ ಸಮಾನಾಧಿಕಾರವುಳ್ಳವನಾಗಿರುತ್ತಾನೆ. ಬೇಟೆ ಮತ್ತು ಪಶುಪಾಲನೆಗಳಿಂದ ಜೀವಿಸುತ್ತಾರೆ. ಗಂಡಸು ಬೇಟೆಯಾಡಿ ಆಹಾರ ಸಂಪಾದನೆ ಮಾಡುತ್ತಾನೆ. ಪ್ರಾಣಿಗಳನ್ನು ಮೇಯಿಸಲು ಮೊದಲೇ ನಿರ್ಧರಿಸಲ್ಪಟ್ಟ ಪ್ರದೇಶಕ್ಕೆ ಬಿಡಾರವನ್ನು ಸಾಗಿಸುವ ಕಾರ್ಯವನ್ನು ಹೆಂಗಸು ಮಾಡುತ್ತಾಳೆ. ಗಂಡಸು ಬೇಟೆಯನ್ನು ಮುಗಿಸಿಕೊಂಡು ಬದಲಾಯಿಸಿದ ಹೊಸ ಬಿಡಾರಕ್ಕೆ ಬಂದು ಸೇರುತ್ತಾನೆ.

ತಂಡ್ರ ಪ್ರದೇಶದಲ್ಲಿರುವ ಸಮೋಯದ್ ಚೋಕ್‌ಚಿ ಮತ್ತು ಕಾರ್‌ಯಾಕ್ ಜನಾಂಗಗಳ ಮುಖ್ಯ ಕಸುಬು ಬೇಟೆಯಾಡುವುದು, ಜಿಂಕೆ ಹಿಮಸಾರಂಗಗಳನ್ನು ಸಾಕುವುದು. ಯಕುಚ್ ಮತ್ತು ಯುಕಾಫಿರ್ ಜನಾಂಗದವರು ಸ್ಕ್ಯಾಂಡಿನೇವಿಯದ ಲ್ಯಾಪ್ ಜನರಂತೆ ಹಾಲಿಗಾಗಿ ಹಿಮಸಾರಂಗಗಳನ್ನು ಸಾಕುತ್ತಾರೆ. ಪಶುಪಾಲನೆ ಮಾಡಿಕೊಂಡು ನೆಲೆಯಿಲ್ಲದೆ ಅಲೆಯುವುದೇ ಈ ಜನಾಂಗಗಳ ವೈಶಿಷ್ಟ್ಯ.

ಆಫ್ರಿಕದ ಎಲ್ಲ ಭಾಗಗಳಲ್ಲೂ ಪಶುಪಾಲನೆಗಾಗಿ ಅಲೆಮಾರಿ ಜೀವನ ನಡೆಸುವ ಜನಾಂಗಗಳಿವೆ. ಪ್ರಸ್ಥಭೂಮಿಯ ಮೇಲಿರುವ ಟೊಂಗ, ಝೂಲು, ಲೋಜ಼ಿ ಮುಂತಾದವರು ಪಶುಪಾಲನೆ, ತೋಟಗಾರಿಕೆ, ವ್ಯವಸಾಯ ಮಾಡಿಕೊಂಡು ಹಳ್ಳಿಗಳನ್ನು ಕಟ್ಟಿಕೊಂಡು ಸ್ಥಿರಜೀವನ ನಡೆಸುತ್ತಾರೆ. ಇನ್ನು ಕೆಲವರು ಮುಖ್ಯವಾಗಿ ಪಶುಪಾಲನೆಯಿಂದಲೇ ಜೀವನ ಮಾಡುತ್ತಾರೆ. ಅವರಲ್ಲಿ ಬೇಜ, ಅಫರ್, ಸೋಮಾಲಿ, ನ್ಯೂಅರ್, ಡಿಂಕ, ನೈಜೀರಿಯದ ಫುಲಾನಿ, ಪೂರ್ವ ಆಫ್ರಿಕಾದ ಮಸ್ಸೈ ಮತ್ತು ಉಗಾಂಡದ ಬಹಿಮ ಮುಖ್ಯರಾದವರು. ಉಗಾಂಡದಲ್ಲಿ ಸಾಗುವಳಿ ಮಾಡುವ ಬೈರು ಜನಾಂಗದವರು ಬಹಿಮರಿಗೆ ಅಡಿಯಾಳಾಗಿ ನಿಕೃಷ್ಟಜೀವನ ನಡೆಸುತ್ತಾರೆ.

ಫುಲಾನಿಗಳ ಮುಖ್ಯ ಸಂಪತ್ತು ದನ. ಸ್ವಲ್ಪ ಮಟ್ಟಿಗೆ ಕುರಿ ಮೇಕೆಗಳನ್ನು ಸಾಕುತ್ತಾರೆ. ಭೌಗೋಳಿಕ ವಾತಾವರಣದಲ್ಲುಂಟಾಗುವ ಬದಲಾವಣೆಗಳು ವಸಾಹತುಗಳ ಬದಲಾವಣೆಗೆ ಪ್ರೇರಕಶಕ್ತಿಗಳಾಗುತ್ತವೆ. ಜನರ ಮತ್ತು ಪ್ರಾಣಿಗಳ ಸಂಖ್ಯೆ, ಮೇವು ನೀರಿನ ಸೌಕರ್ಯ, ವ್ಯಾಪಾರದ ಅನುಕೂಲತೆ–ಇವು ಅಲೆಮಾರಿ ಜೀವನಕ್ಕೆ ಮುಖ್ಯವಾದ ಅಂಶಗಳು.

ಇವರು ಬೇಸಗೆ ಮತ್ತು ಚಳಿಗಾಲಕ್ಕೆ ಬೇರೆ ಬೇರೆ ವಸತಿಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಸನ್ನಿವೇಶ ಮತ್ತು ಆಯಾ ಜನರ ಪದ್ಧತಿಯ ಅನುಕೂಲಕ್ಕೆ ಅನುಗುಣವಾಗಿ ಈ ವಸತಿಗಳ ಅಂತರವಿರುತ್ತದೆ. ಉದಾಹರಣೆಗಾಗಿ, 1951–52ರಲ್ಲಿ ಕೆಲವರು 40 ಕಿಮೀ ಮತ್ತೆ ಕೆಲವರು ನೂರಾರು ಕಿ.ಮೀ. ಅಂತರದಲ್ಲೂ ಇದ್ದರು. ಹಿಂದೆ, 1944ರಲ್ಲಿ ರಾಜಕೀಯ ಕಾರಣಗಳಿಂದಾಗಿ ಫುಲಾನಿ ಗುಂಪೊಂದು 770 ಕಿಮೀ ದೂರ ದನಗಳ ಹಿಂಡಿನೊಡನೆ ಮೇವು ನೀರಿಗಾಗಿ ಅಲೆದಿದ್ದುಂಟು. ಈ ಜನ ಬೇಸಗೆಯಲ್ಲಿ ಸಣ್ಣ ಸಣ್ಣ ಗುಂಪುಗಳಲ್ಲಿ ವಾಸಿಸುತ್ತಾರೆ. ಇದೇ ರೀತಿಯಾಗಿ, ಕರ್ನಾಟಕದ ಕಾಡುಗೊಲ್ಲರು ಕೂಡ ತಮ್ಮ ದನಕರುಗಳ ಮೇವು ನೀರಿಗಾಗಿ ಅಲೆದಾಡುವುದುಂಟು. ಮಳೆಗಾಲದಲ್ಲಿ ಒಟ್ಟಿಗೆ ಸೇರುತ್ತಾರೆ. ಮದುವೆ ಮುಂಜಿ ಮುಂತಾದ ವಿಶೇಷ ಕಾರ್ಯಗಳೆಲ್ಲ ಮಳೆಗಾಲದಲ್ಲಿಯೇ ನಡೆಯುವುವು.

ಇವರಲ್ಲಿ ಸ್ತ್ರೀ ಪುರುಷರ ನಡುವೆ ಕೆಲಸದ ಹಂಚಿಕೆಯಿದೆ. ಮನೆಯ ಯಜಮಾನ ದನಗಳ ಮಾಲೀಕ; ಅವನ ಮಕ್ಕಳು ದನ ಮೇಯಿಸುತ್ತಾರೆ. ಸ್ತ್ರೀಯರು ಹಾಲು ಹೈನನ್ನು ತಯಾರಿಸಿ, ಮನೆಯ ಉಪಯೋಗಕ್ಕಾಗಿ ಮಿಕ್ಕಿದ್ದನ್ನು ಸಂತೆಯಲ್ಲಿ ಮಾರಿ ಧಾನ್ಯ ಮುಂತಾದುವನ್ನು ಕೊಳ್ಳುತ್ತಾರೆ. ಹಣದ ಆವಶ್ಯಕತೆಯಿದ್ದಾಗ ಮಾತ್ರ ದನಗಳನ್ನು ಮಾರುವುದುಂಟು. ಇವರು ಇಸ್ಲಾಂ ಧರ್ಮಾನುಯಾಯಿಗಳು. ವಿಶೇಷ ಸಮಾರಂಭದಲ್ಲಿ ಮಾತ್ರ ಮಾಂಸ ತಿನ್ನುತ್ತಾರೆ.

ಪೂರ್ವ ಆಫ್ರಿಕದ ಮಸ್ಸೈ ಜನಾಂಗದವರೂ ಪಶುಪಾಲನೆಯಿಂದಲೇ ಜೀವನ ಸಾಗಿಸುತ್ತಾರೆ. ಕುರಿ, ಕತ್ತೆ ಮತ್ತು ಒಂಟೆಗಳನ್ನು ಸಾಕುತ್ತಾರೆ. ಬೇಸಗೆಯಲ್ಲಿ ದನಗಳ ಮೇವಿಗಾಗಿ ಅಲೆಯುತ್ತಾರೆ. ಒಂದು ಜಿಲ್ಲೆಯ ತರುಣ ಯೋಧರು ದನ ಕಾಯುವುದಲ್ಲದೆ ಬೇರೆ ನಾಡಿನ ದನಗಳನ್ನು ಕದಿಯುವುದರಲ್ಲೂ ತೊಡಗುತ್ತಾರೆ.

ಮಸ್ಸೈ ಜನರು ಪಶುಪಾಲನೆಯಿಂದಾಗಿ ಬೇಟೆಯನ್ನೂ ಭೂಮಿ ಉಳುವುದನ್ನೂ ಕಡೆಗಣಿಸಿದ್ದಾರೆ. ಎಷ್ಟೋ ಜನ ವ್ಯವಸಾಯಗಾರರನ್ನು ದನಗಳ ಮೇವಿಗಾಗಿ ಜಮೀನು ಬಿಡಿಸಿ ಓಡಿಸಿದ್ದಾರೆ. ಇವರು ಸವಾರಿ ಮಾಡಲು ಅಥವಾ ಸಾಮಾನು ಸಾಗಿಸಲು ದನಗಳನ್ನು ಉಪಯೋಗಿಸುವುದಿಲ್ಲ. ಹಾಲು, ಬೆಣ್ಣೆ, ಚರ್ಮಕ್ಕಾಗಿ ಅವನ್ನು ಸಾಕುತ್ತಾರೆ; ಬಳಸಿ ಮಿಕ್ಕಿದ್ದನ್ನು ನೆರೆಯವರಿಗೆ ಧಾನ್ಯಕ್ಕಾಗಿ ಮಾರುತ್ತಾರೆ. ಸಮಾರಂಭಗಳಲ್ಲಿ ಮತಾಚರಣೆಗಳಲ್ಲಿ ಮಾತ್ರ ದನಗಳನ್ನು ಕೊಂದು ಮಾಂಸವನ್ನು ತಿನ್ನುತ್ತಾರೆ. ಇವರು ಮಾಂಸ ಮತ್ತು ಹಾಲನ್ನು ಒಂದೇ ದಿನ ಸೇವಿಸುವುದಿಲ್ಲ. ಅಲ್ಲದೆ ಮಾಂಸದಡಿಗೆಯನ್ನು ವಸತಿಯಲ್ಲಿ ತಯಾರಿಸುವುದಿಲ್ಲ. ಪ್ರಾಣಿಗಳನ್ನು ಕೊಲ್ಲದೆಯೇ ಅವುಗಳ ರಕ್ತನಾಳಗಳಿಂದ ರಕ್ತ ಶೇಖರಿಸುವ ವಿಶಿಷ್ಟ ವಿಧಾನಗಳಿಂದ, ದನ ಮತ್ತು ಕುರಿಗಳ ರಕ್ತವನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಆಫ್ರಿಕದಲ್ಲಿ ಪಶುಪಾಲನೆಯಿಂದ ಜೀವಿಸುವ ಎಲ್ಲ ಜನಾಂಗಗಳ ಸಾಮಾಜಿಕ ಜೀವನದಲ್ಲೂ ದನಗಳ ಪಾತ್ರ ಬಹು ಮುಖ್ಯವಾದದ್ದು. ದನಗಳನ್ನು ಮದುವೆಯ ಕಾಲದಲ್ಲಿ ಕನ್ಯಾಶುಲ್ಕವಾಗಿ ಹೆಣ್ಣಿನ ಕಡೆಯವರಿಗೂ ಮತ್ತು ಉಳಿದ ಸಂದರ್ಭಗಳಲ್ಲಿ ಉಡುಗೊರೆಯಾಗಿಯೂ ಕೊಡುತ್ತಾರೆ.

ಪಶುಪಾಲನ ವೃತ್ತಿಯಿಂದ ಜೀವಿಸುವವರ ಸಂಪತ್ತೆಂದರೆ ದನದ ಹಿಂಡು, ಕುರಿಯ ಮಂದೆ ಮುಂತಾದುವು. ಹಾಲು ಹೈನುಗಳ ಆಧಾರದಿಂದ ಜೀವನ ಸಾಗಿಸುವ ಅವರ ಜೀವನ ಬೇಟೆಯಾಡುವವರ ಜೀವನಕ್ಕಿಂತ ಭದ್ರವಾಗಿರುತ್ತದೆ. ಸ್ಥಿರ ವ್ಯವಸಾಯ ಜೀವನಕ್ಕಿಂತ ಪಶುಪಾಲನೆಯ ಜೀವನ ಯಾವಾಗಲೂ ಕೀಳಾಗಿ ಕುಂದು ಕೊರತೆಗಳಿಂದಲೇ ಕೂಡಿರುವುದಿಲ್ಲ.

ಪಶುಪಾಲಕರ ಜೀವನ ವೈವಿಧ್ಯಪೂರ್ಣವಾದದ್ದು. ಅವರು ವಿವಿಧ ಧರ್ಮಾವಲಂಬಿಗಳು. ಆರ್ಥಿಕ ಜೀವನದಷ್ಟೇ ರಾಜಕೀಯ ಜೀವನವೂ ವೈವಿಧ್ಯದಿಂದ ಕೂಡಿದೆ. ತಂದೆಯೇ ಸಂಪೂರ್ಣ ಸರ್ವಾಧಿಕಾರಿಯಾಗಿರುವ ಜನಾಂಗವಾಗಲೀ ಸ್ತ್ರೀಗೆ ಏನೇನೂ ಸ್ಥಾನಮಾನಗಳನ್ನು ಕೊಡದಿರುವ ಜನಾಂಗವಾಗಲೀ ಅತಿ ವಿರಳ. ಹಾಗೆಯೇ ಬಹುಪತ್ನಿತ್ವಕ್ಕೆ ಪಶುಪಾಲನೆಯೇ ಕಾರಣವೆಂದು ಹೇಳಲಸಾಧ್ಯ. ಅಲೆದಾಡಿ, ಪಶುಪಾಲನೆಯಿಂದ ಜೀವಿಸಿದರೂ ಪ್ರಪಂಚದ ಯಾವ ಮಾನವವರ್ಗವೂ ನಿರಂತರವೂ ಒಂಟಿಯಾಗಿ, ಬೇರೆಯವರೊಂದಿಗೆ ಯಾವಾಗಲೂ ಬೆರೆಯದಂತೆ ಇಲ್ಲ.

ಹಲವಾರು ಜೀವನ ನಿರ್ವಹಣ ಮಾರ್ಗಗಳು ಪರಸ್ಪರ ವಿರೋಧಾಭಾಸದಿಂದ ಘರ್ಷಣೆಗೊಳಗಾಗಿ ನಾಶವಾಗದೆ, ಒಂದರೊಡನೊಂದು ಸಮರಸವಾಗಿ ಹೊಂದಿಕೊಂಡು, ಸಹಬಾಳ್ವೆಗೆ ಬುನಾದಿ ಹಾಕಿಕೊಟ್ಟಿರುವುದು, ಮಾನವನ ಅಲೆಮಾರಿ ಜೀವನವನ್ನು ಪರಿಶೀಲಿಸಿದಾಗ ಗೋಚರವಾಗದಿರದು. ಅಲೆಮಾರಿಗಳನ್ನು ಅನಾಗರಿಕ, ಅಸಂಸ್ಕೃತ ಜನಾಂಗವೆನ್ನಲು ಬರುವುದಿಲ್ಲ. ನಾಗರಿಕ ಜೀವನದಲ್ಲಿ ಕಾಣೆಯಾಗಿರುವ ಅನೇಕ ಗುಣಗಳು ಅವರಲ್ಲಿವೆ. ನಾಗರಿಕರಿಗಿಂತ ಹೆಚ್ಚಾಗಿ ಅವರು ಪ್ರಕೃತಿಗೆ ಹೊಂದಿ ನಡೆಯುವವರಾಗಿದ್ದಾರೆ. ಅವರ ದೇಹದಾರ್ಢ್ಯ, ಸಾಮಾನ್ಯಜೀವನಕ್ರಮ, ಶ್ರಮಜೀವನ, ವಿಶ್ವಾಸ, ಅನುಭವದಿಂದ ಬಂದಿರುವ ಅವರ ಅನೇಕ ಸಾಮಾಜಿಕ ಹಾಗೂ ನೈತಿಕ ಕಟ್ಟಳೆಗಳು ಇತರರಿಗೆ ಮಾದರಿಯಾಗಬೇಕು. ಈ ದೃಷ್ಟಿಯಿಂದ ಅವರನ್ನು , ಅವರ ಜೀವನವನ್ನು ಅಭ್ಯಸಿಸುವುದು ಅಗತ್ಯ. (ಸಿ.ಪಿ.)

**ಅಲೈಟಿಸ್ :** ನೆಲಗಪ್ಪೆ (ಟೋಡ್). ಸೂಲಗಿತ್ತಿ ಕಪ್ಪೆ (ಮಿಡ್‌ವೈಫ್ ಟೋಡ್) ಎಂದೂ ಹೆಸರಿದೆ. ಡೀಮಾರ್ಸ್ ಎಂಬ ವಿಜ್ಞಾನಿ (1724) ಈ ಕಪ್ಪೆಯ ವಿವರ ನೀಡಿದ್ದಾನೆ. ತಮ್ಮ ತತ್ತಿಗಳನ್ನು ರಕ್ಷಿಸುವುದರಲ್ಲಿ ಅಧಿಕ ಆಸಕ್ತಿ ವಹಿಸುವ ಈ ಉಭಯಜೀವಿಗೆ ಸೂಲಗಿತ್ತಿ ಕಪ್ಪೆ ಎಂಬ ಹೆಸರು ಉಚಿತವಾಗಿದೆ. ಇದರ ಉದ್ದ ಸುಮಾರು 2". ದೇಹಾಕೃತಿ ಸ್ವಲ್ಪಮಟ್ಟಿಗೆ ಗುಂಡು. ಮೈಮೇಲಿನ ಮಾಸಲು ಬೂದುಬಣ್ಣದ ಚರ್ಮ ಸದಾ ತೇವಯುತ. ಅಗಲವಾದ ಕಣ್ಣುಗಳು, ನೆಟ್ಟಗೆ ನಿಂತಿರುವ ಕಣ್ಣುಪಾಪೆ. ಬಾಯಿಯ ಮೇಲುದವಡೆ ಮತ್ತು ಮೇಲಂಗುಳಲ್ಲಿ ಹಲ್ಲುಗಳು ಇವೆ. ಗುಂಡಾದ ಅಂಟುಳ್ಳ ನಾಲಗೆ. ಈ ಕಪ್ಪೆ ಮಂದಗಮನದ ನಿಶಾಚರ ಪ್ರಾಣಿ. ಕೆಲವು ಸ್ತನಿಗಳು ನೆಲದಲ್ಲಿ ರಚಿಸಿದ ಬಿಲಗಳನ್ನು ಈ ಕಪ್ಪೆ ಹಗಲಲ್ಲಿ ತನ್ನ ಏಕಾಂತವಾಸಕ್ಕೆ ಆರಿಸುತ್ತದೆ. ಸಂಜೆಯ ಹೊತ್ತಿಗೆ ಸಿಳ್ಳು ಹಾಕುವ ಧ್ವನಿ ಮಾಡಿಕೊಂಡು ಹೊರಬರುತ್ತದೆ. ಗಂಡು ಹೆಣ್ಣು ಕಪ್ಪೆಗಳು ಕೂಡಿದ ಮೇಲೆ ಹೆಣ್ಣು ಕಪ್ಪೆ ಗರ್ಭಕಟ್ಟಿದ ತತ್ತಿಗಳನ್ನು ನೆಲದ ಮೇಲೆ ಇಡುತ್ತದೆ. ಇದರ ಸಂತಾನೋತ್ಪತ್ತಿಯ ಕಾಲ ವಸಂತ ಮತ್ತು ಗ್ರೀಷ್ಮಋತುಗಳು. ಹಳದಿ ಬಣ್ಣದ ದೊಡ್ಡ ತತ್ತಿಗಳು ಮಣಿಗಳಂತೆ ಎರಡು ಮೂಲೆಗಳಲ್ಲಿ ಕೂಡಿರುತ್ತವೆ. ತತ್ತಿಗಳ ರಕ್ಷಣೆಗೆ ಅವುಗಳ ಸುತ್ತ ಒಂದು ಲೋಳೆ ಆವರಿಸಿರುತ್ತದೆ. ಗರ್ಭಕಟ್ಟಿದ ನಂತರ ಗಂಡುಕಪ್ಪೆ ತತ್ತಿಗಳ ಮಾಲೆಯನ್ನು ತನ್ನ ಹಿಂದಿನ ಕಾಲುಗಳ ಮಧ್ಯೆ ಹೆಣೆದುಕೊಳ್ಳುತ್ತದೆ. ತತ್ತಿಗಳಲ್ಲಿ ಭ್ರೂಣ ಮೂರು ವಾರಗಳಲ್ಲಿ ಬೆಳೆಯುತ್ತದೆ. ಲೋಳೆಯಿಂದ ಆವೃತವಾದ ಕೋಶಗಳಿಂದ ಕಪ್ಪೆಯ ಮರಿಗಳು ಹೊರಬರುವ ವೇಳೆಗೆ ಗಂಡುಕಪ್ಪೆ ನೀರನ್ನು ಪ್ರವೇಶಿಸುತ್ತದೆ. ಅನಂತರ ಗೊದಮೊಟ್ಟೆಗಳು ಅಥವಾ ಮರಿಗಳು (ಟ್ಯಾಡ್‌ಪೋಲ್ ಲಾರ್ವ) ನೀರಿನಲ್ಲೇ ಜೀವಿಸುತ್ತ ರೂಪಾಂತರ ಹೊಂದಿ ಪ್ರೌಢ ಜೀವಿಗಳಾಗುತ್ತವೆ. (ಎಚ್.ಎಸ್.ಎನ್.)

**ಅಲೊ :** ದಕ್ಷಿಣ ಆಫ್ರಿಕ, ಅರೇಬಿಯ ಮತ್ತು ಮೆಡಿಟರೇನಿಯನ್ ದೇಶದ ಮೂಲವಾಸಿ ಸಸ್ಯಗಳು. ಕೆಲವು ಬಾಹ್ಯಲಕ್ಷಣಗಳಲ್ಲಿ ಅಗೆವೆ ಸಸ್ಯಗಳನ್ನು ಹೋಲುವುದರಿಂದ ಇವನ್ನು ಅಗೆವೆ ಸಸ್ಯಗಳೆಂದು ತಪ್ಪು ತಿಳಿವ ಸಾಧ್ಯತೆ ಇದೆ. ಕಾಂಡವಿಲ್ಲದೆ ಅಥವಾ ಚಿಕ್ಕ ಕಾಂಡವಿರುವ ಅಲೊ ಸಸ್ಯಗಳು ಪೊದೆಯಾಗಿ ಬೆಳೆಯುತ್ತವೆ. ಎಲೆಗಳು ಗುಂಪಾಗಿರುತ್ತವೆ. ಕೆಲವು ಸಸ್ಯಗಳಲ್ಲಿ ಎಲೆಗಳು ಸಾಲುಗಳಾಗಿ ಅಥವಾ ಹರಡಿಕೊಂಡು ಜೋಡಿಸಿಕೊಂಡಿರುತ್ತವೆ. ನೀಳವಾದ ಈ ಎಲೆಗಳ ಅಂಚು ನಯವಾಗಿದೆ. ಹಸಿರು ಬೂದು

ಅಥವಾ ಹಳದಿ ಬಣ್ಣದ ಒರಟಾದ ಮುಳ್ಳುಗಳಿಂದ ಕೂಡಿವೆ. ಹೂಗೊಂಚಲು ಎಲೆಯ ಗುಂಪಿನ ತುದಿಯಲ್ಲಿ ಹೊರಬಂದು ಉದ್ದವಾದ ಅಕ್ಷದಿಂದ ಚಾಚಿಕೊಂಡಿರುತ್ತದೆ. ಹೂಗೊಂಚಲು ಅಂತ್ಯಾರಂಭಿ ಮಾದರಿಯದು. ಅಗೆವೆ ಸಸ್ಯಗಳು ಹೂಗೊಂಚಲು ಬಿಟ್ಟ ಅನಂತರ ಸಾಯುತ್ತವೆ. ಆದರೆ ಅಲೊ ಜಾತಿಯ ಸಸ್ಯಗಳು ಸಾಯುವುದಿಲ್ಲ. ಹೂಗಳ ಬಣ್ಣ ಕಿತ್ತಳೆ, ಕೆಂಪು ಅಥವಾ ಹಳದಿ; ಗಂಟೆಯಾಕಾರ.

ಚಿತ್ರ 1. ಅಲೊ ಸೆರ್ರುಲೇಟ ಕುಂಡಸಸ್ಯ

ಎಲೆಗಳನ್ನು ಕತ್ತರಿಸಿದಾಗ ಒಂದು ದ್ರಾವಣ ಹೊರಬಂದು, ಅನಂತರ ಅದು ಘನರೂಪವನ್ನು ತಾಳುತ್ತದೆ.ಇದರಲ್ಲಿರುವ ರೆಜಿನಸ್ ವಸ್ತುಗಳನ್ನು ಔಷಧಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಬೀಜ ಮತ್ತು ಕಾಂಡದ ತುಂಡುಗಳಿಂದ ಸಸ್ಯವನ್ನು ವೃದ್ಧಿ ಮಾಡಬಹುದು. ಅನ್ಯ ಪರಾಗ ಸ್ಪರ್ಶವಾದರೆ ತಮ್ಮ ಮೂಲ ಲಕ್ಷಣಗಳನ್ನು ಕಳೆದು ಕೊಳ್ಳಬಹುದಾದ್ದರಿಂದ ಬೀಜಗಳಿಂದ ವೃದ್ಧಿ ಮಾಡುವುದು ಹಿತಕರವಲ್ಲ. ಅಲೊ ಸಸ್ಯ ಅಗೆವೆ ಸಸ್ಯಗಳಿಗಿಂತ ಬೇಗ ಬೆಳೆಯುವ ಗುಣ ಹೊಂದಿದೆ. ಅಲೊ ಅರ್ಬೊರಿಸ್ಕೆನ್ಸ್ ಈ ಜಾತಿಯ ಒಂದು ಪ್ರಭೇದ. ಇದು ತನ್ನ ಮೂಲಸ್ಥಾನದಲ್ಲಿ ಸ್ವೇಚ್ಛೆಯಾಗಿ ಬೆಳೆದು ಸುಮಾರು 12' ಎತ್ತರ ಮುಟ್ಟಿದರೂ ಅನ್ಯ ಪ್ರದೇಶಗಳಲ್ಲಿ ಸುಮಾರು 6' ಎತ್ತರ ಬೆಳೆಯುತ್ತದೆ. ಕಾಂಡದ ಕೆಳಭಾಗ ದಿಂದ ಹೊರಬಂದು ಸರಿಯಾದ ಅವಕಾಶ ಸಿಕ್ಕಿದರೆ ಬೇರು ಬಿಡುತ್ತವೆ. ನೀಳವಾಗಿ 2' ಉದ್ದವಾಗಿ ಹಿಂದಕ್ಕೆ ಬಾಗಿದ್ದು ಅಂಚುಗಳಲ್ಲಿ ಮುಳ್ಳುಗಳು ಇವೆ. ಇದರ ಆಕಾರ ಕತ್ತಿಯಂತೆ, ಬಣ್ಣ ಬೂದುಮಿಶ್ರಿತ ಹಸುರು. ಹೂಗೊಂಚಲು ಉದ್ದವಾದ ಅಕ್ಷದ ಮೇಲೆ ಗೋಪುರದಂತೆ ಇದೆ. ಕೆಂಪುಬಣ್ಣ, ಅಲೊ ಅರಸ್ಟೆಟ ಎಂಬುದು ಇನ್ನೊಂದು ಪ್ರಭೇದ. ಇದು ನೇಟಾಲ್ ಮತ್ತು ಕೇಪ್ ಪ್ರಾವಿನ್ಸ್‌ನ ಮೂಲವಾಸಿ. ಇದರಲ್ಲಿ ನಿರ್ದಿಷ್ಟವಾದ ಕಾಂಡವಿಲ್ಲದುದು ವಿಚಿತ್ರ; ಇದರ ಎಲೆಗಳು 2' ಉದ್ದ 2'' ಅಗಲವಾಗಿ ತೊಟ್ಟಿನ ಭಾಗದಲ್ಲಿ ಅಗಲವಾಗಿಯೂ ಮಂದವಾಗಿಯೂ ಇದ್ದು, ತುದಿಯ ಕಡೆಗೆ ಕಿರಿದಾಗಿ ತೆಳುವಾಗುತ್ತವೆ. ಎಲೆಗಳ ಆಕಾರ ಚಾಕುವಿನಂತೆ. ಅಂಚುಗಳು ಬಿಳಿಯ ಮುಳ್ಳುಗಳನ್ನು ಹೊಂದಿದ್ದು ಹೊಳೆಯುತ್ತವೆ. ಹೂಗೊಂಚಲಿನ ಬಣ್ಣ ಕೆಂಪು. ಈ ಜಾತಿಯ ಸಸ್ಯಗಳನ್ನು ಎಲೆಯ ತುಂಡುಗಳಿಂದ ವೃದ್ಧಿ ಮಾಡಬಹುದು. ಅಲೊ ಬ್ರೆವಿಫೋಲಿಯ ಎಂಬ ಪ್ರಭೇದದಲ್ಲಿ ಕಾಂಡ ಚಿಕ್ಕದು. ಅನೇಕ ಮೋಸುಗಳು ಹೊರಬಂದು ವೃತ್ತಾಕಾರದ ಗುಂಪುಗಳಾಗುತ್ತವೆ. ನೀಲಿಮಿಶ್ರಿತ ಹಸುರುಬಣ್ಣದ ಎಲೆಗಳು ತ್ರಿಕೋಣಾಕಾರವಾಗಿ ಚಿಕ್ಕದಾಗಿಯೂ ಮೆದುವಾ ಗಿಯೂ ಇವೆ. ಅಂಚುಗಳಲ್ಲೂ ಅಪೂರ್ವವಾಗಿ ಎಲೆಗಳ ಕೆಳಭಾಗದಲ್ಲೂ ಮುಳ್ಳುಗಳು ಇವೆ. ಸ್ಥಳೀಯವಾಗಿ ಈ ಸಸ್ಯವನ್ನು ಲೋಳೆಸರ, ಹಪ್ಪಳದ ಎಲೆ ಎಂದು ಕರೆಯುವುದಿದೆ.

ಚಿತ್ರ 2. ಅಲೊಮಿಟ್ರ ಫಾರ್ಮಿಸ್ ಕುಂಡಸಸ್ಯ

ಅಲೊ ಪೊಲಿಫಿಲಸ್ ಹೆಸರಿನ ಪ್ರಭೇದ ದಕ್ಷಿಣ ಆಫ್ರಿಕದಲ್ಲಿ ಹೆಚ್ಚು ಬೆಳೆಯುತ್ತದೆ. ಇದರ ಕಾಂಡದ ಎತ್ತರ 4''. ಎಲೆಗಳು ಕಾಂಡದ ಮೇಲೆ ಸುರುಳಿಯ ರೂಪದಲ್ಲಿವೆ. ಇವು ಸುಮಾರು 8''–12'' ಉದ್ದ, 3''–4'' ಅಗಲವಾಗಿದ್ದು ತೊಟ್ಟಿನ ಕಡೆ •''ಮಂದವಾಗಿವೆ. ಎಲೆ ಕುಡುಗೋಲು ಆಕಾರದಲ್ಲಿದ್ದು ತುದಿಯಲ್ಲಿ ಕಂದು ಚುಕ್ಕೆಗಳಿಂದಲೂ ಅಂಚುಗಳಲ್ಲಿ ಬೂದುಮಿಶ್ರಿತ ಹಸುರುಬಣ್ಣದಿಂದಲೂ ಕೂಡಿರುತ್ತವೆ. ಅದರ ಅಂಚುಗಳಲ್ಲಿ 2–12 ಬಾಗಿರುವ ಮತ್ತು ಮೂರು ಮೂಲೆಯುಳ್ಳ ಮುಳ್ಳುಗಳಿವೆ. ಹೂಗೊಂಚಲು 20''–24'' ಎತ್ತರವಾಗಿದ್ದು ಹೆಚ್ಚು ಕವಲುಭಾಗಗಳಿರುತ್ತವೆ. ಹೂವಿನ ಉದ್ದ ಸುಮಾರು 1''–y''. ಬಣ್ಣ ಹಸುರಾಗಿ ತುದಿ ಕಡುಗೆಂಪು.

ಅಲೊ ಕೊನ್‌ಸಿನ್ನಾ ಪ್ರಭೇದ ಬಹು ಅಂದವಾದ ಸಸ್ಯವೆಂದು ಹೆಸರು ಪಡೆದಿದೆ. ಇದರ ಎಲೆಗಳು ಗುಂಪಿನಲ್ಲಿ ತೆಳುವಾಗಿದ್ದು ತುದಿಗಳು ಹಿಂದಕ್ಕೆ ಬಾಗಿರುತ್ತವೆ; ಕೆಳಭಾಗದಲ್ಲಿ ಬಿಳಿಯ ಮಚ್ಚೆಗಳು ಇವೆ. ಎಲೆಯ ಅಂಚುಗಳಲ್ಲಿ ತ್ರಿಕೋಣಾಕಾರದ ಮುಳ್ಳುಗಳಿವೆ.

ಅಲೊ ಹ್ಯೂಮಿಲಿಸ್ ಪ್ರಭೇದವೂ ಅಂದವಾದ ಸಸ್ಯವೆಂದು ಖ್ಯಾತಿ ಗಳಿಸಿದೆ. ಈ ಪ್ರಭೇದದ ಸಸ್ಯಗಳ ಗುಂಪಿನಲ್ಲಿ ಎಲೆಗಳು ಒತ್ತಾಗಿದ್ದು ಮುಳ್ಳುಗಳಿಂದ ಕೂಡಿರುತ್ತವೆ. ಮೇಲು ಮತ್ತು ಕೆಳಭಾಗದ ಸಾಲುಗಳಲ್ಲಿ ಮುಳ್ಳುಗಳಿವೆ. ಸಸ್ಯಗಳ ಪಕ್ಕದಲ್ಲಿ ತನ್ನ ತಾಯಿಸಸ್ಯವನ್ನು ಹೋಲುವ ಮೋಸುಗಳು ಕಾಣುತ್ತವೆ.

ಅಲೊ ಸಪೊನಾರಿಯ ಒಂದು ಕುಬ್ಜ ಪ್ರಭೇದ. ಇದರ ಹಸುರು ಎಲೆಗಳ ಮೇಲೆ ಇರುವ ಬಿಳಿಯ ಮಚ್ಚೆಗಳೂ ಎಲೆಗಳು ಒತ್ತಾಗಿರುವ ಮತ್ತು ಮಧ್ಯೆ ತಗ್ಗಾಗಿರುವ ಗುಣಗಳೂ ಇದರ ವೈಚಿತ್ರ್ಯಕ್ಕೆ ಬಹುಮಟ್ಟಿನ ಕಾರಣವೆನಿಸಿವೆ. ಎಲೆಗಳು ಬುಡದಲ್ಲಿ ಅಗಲವಾಗಿದ್ದು ತುದಿಯ ಕಡೆ ಹೋದಂತೆ ಕಿರಿದಾಗುತ್ತವೆ; ಅಂಚುಗಳಲ್ಲಿ ತ್ರಿಕೋಣಾಕಾರದ ಕಂದುಬಣ್ಣದ ಮುಳ್ಳುಗಳಿವೆ.

ಅಲೊ ಸ್ಟ್ರಯೇಟ ಪ್ರಭೇದದಲ್ಲಿ ಕಾಂಡವಿಲ್ಲ. ಎಲೆಗಳು ನಿಬಿಡ. ಎಲೆಯ ಅಂಚುಗಳಲ್ಲಿ ಮುಳ್ಳುಗಳಿಲ್ಲದ ಬಿಳುಪಾದ ಎಳೆಗಳಿವೆ. ಲಾಲ್‌ಬಾಗಿನಲ್ಲಿ ಕೆಲವು ಕಲ್ಲೇರಿಗಳಲ್ಲಿ ಇವು ರಮ್ಯನೋಟಕ್ಕೆ ಹೆಸರಾಗಿವೆ. ಈ ಸಸ್ಯಗಳು ನಗರಗಳ ಅನೇಕ ಮನೆಗಳಲ್ಲಿ ಅಲಂಕಾರದ ಸಸ್ಯಗಳಾಗಿ ಶೋಭಿಸುತ್ತವೆ.

ಅಲೊವರಿಗೆಟ ಪ್ರಭೇದ ಸಾಮಾನ್ಯವಾಗಿ ಅನೇಕ ಕಡೆಗಳಲ್ಲಿ ಬೆಳೆಯುವುದನ್ನು ಕಾಣಬಹುದು. ಇದಕ್ಕೆ ನಿರ್ದಿಷ್ಟವಾದ ಕಾಂಡವಿಲ್ಲ. ಎಲೆಗಳು ಗುಂಪಾಗಿ ಕಾಣುತ್ತವೆ; ಅವುಗಳ ಅಂಚುಗಳಲ್ಲಿ ಮತ್ತು ಇತರ ಭಾಗಗಳಲ್ಲಿ ಬಿಳಿಯ ಮಚ್ಚೆಗಳು ಇವೆ. ಅತಿ ಹಸಿರು ಬಣ್ಣದ ಮಧ್ಯೆ ಇರುವ ಬಿಳಿಯ ಮಚ್ಚೆಗಳು ಅಂದಕ್ಕೆ ಮೆರುಗು ಕೊಡುತ್ತವೆ. ಈ ಸಸ್ಯಗಳ ಪಕ್ಕದಲ್ಲಿ ಮೋಸುಗಳು ಅಧಿಕವಾಗಿ ಬರುತ್ತವೆ. ಸಾಮಾನ್ಯವಾಗಿ ಮೋಸುಗಳಿಂದ ಈ ಸಸ್ಯವನ್ನು ವೃದ್ಧಿ ಮಾಡುತ್ತಾರೆ. (ಡಿ.ಎಂ.)

**ಅಲೋಕೇಷಿಯ :** ಏರೇಸೀ ಕುಟುಂಬಕ್ಕೆ ಸೇರಿದ ಸಸ್ಯ. ಅಲಂಕಾರದ ಎಲೆಗಳಿಂದ ಕೂಡಿದೆ. ಎಲೆಗಳ ಆಕಾರ, ಗಾತ್ರ, ಬಣ್ಣ ಬೇರೆಬೇರೆ ಬಗೆಯವಾಗಿದ್ದು, ನೋಡಲು ರಮ್ಯವಾಗಿದೆ. ಈ ಸಸ್ಯಗಳನ್ನು ತೇವಾಂಶವಿರುವ ಉದ್ಯಾನವನದ ತಗ್ಗುಪ್ರದೇಶಗಳಲ್ಲಿ ಸುಲಭವಾಗಿ ಬೆಳೆಸಬಹುದು. ಮನೆಯಲ್ಲೂ ಅಲಂಕಾರ ಸಸ್ಯವಾಗಿ ಬೆಳೆಸುವುದುಂಟು.

ಅಲೋಕೇಷಿಯ ಜಾತಿಯಲ್ಲಿ 70 ಬಹುವಾರ್ಷಿಕ ಪ್ರಭೇದಗಳಿವೆ, ಇವೆಲ್ಲ ಪರ್ಣಸಸಿಗಳು. ಇವುಗಳ ಎಲೆಗಳಿಗೆ ಉದ್ದ ತೊಟ್ಟುಗಳಿವೆ. ತೊಟ್ಟು ರೆಕ್ಕೆಗಳಿಂದ ಕೂಡಿದ್ದು ಕೊಳವೆಯಾಕಾರ, ಅರ್ಧ ಕೊಳವೆಯಾಕಾರ, ದಪ್ಪ, ಅಂಬಿನಾಕಾರ, ಹೃದಯಾಕಾರ ಇತ್ಯಾದಿ ವೈವಿಧ್ಯವನ್ನು ಪ್ರದರ್ಶಿಸುತ್ತವೆ; ಹಸುರು, ನೀಲಿಮಿಶ್ರಿತ ಹಸುರು ಮುಂತಾಗಿ ಹಲವು ಬಣ್ಣಗಳಿರುವುದರಿಂದ ಆಕರ್ಷಕವಾಗಿ ಕಾಣುತ್ತವೆ. ನಡುದಿಂಡು ಬುಡದಲ್ಲಿ ಅಗಲವಾಗಿದ್ದು ತುದಿಯ ಕಡೆಗೆ ಹೋದಂತೆ ಕಿರಿದಾಗುತ್ತದೆ. ನಡುದಿಂಡು ಮತ್ತು ನಾಳಗಳಿಗೆ ಹಲವು ಬಣ್ಣಗಳಿವೆ. ಹೂಗೊಂಚಲು, ತಾಳಗುಚ್ಛದ ಮಾದರಿಯಲ್ಲಿದ್ದು ಅದರ ಸುತ್ತ ಉಪಪತ್ರಯುಗ್ಮ ಇದೆ. ಹೂಗೊಂಚಲಿನ ಕವಚ ಹೂಗೊಂಚಲಿಗಿಂತ ಉದ್ದವಾಗಿದೆ; ಅದರ ನವಿರಾದ ರೋಮಯುಕ್ತ ಮೇಲುಭಾಗವೂ ವಿವಿಧ ವರ್ಣವಿನ್ಯಾಸಗಳೂ ಮನಮೋಹಕವಾಗಿವೆ. ಗಂಡು ಹೂಗಳು ಗೊಂಚಲಿನ ತಳಭಾಗದಲ್ಲಿ ಸ್ಥಿತವಾಗಿದ್ದು ಕಡಿಮೆ ಸಂಖ್ಯೆಯಲ್ಲಿರುತ್ತದೆ. ಗಂಡು ಹೂಗಳ ಕೇಸರುಗಳು ಸೇರಿಕೊಂಡು ಆರು ಕೋಣಾಕೃತಿಯಲ್ಲಿವೆ. ಅಂಡಾಶಯದಲ್ಲಿ 3–4 ಕೋಶಗಳಿದ್ದು, ಪ್ರತಿ ಕೋಶದ ತಳದಲ್ಲಿ ಹಲವು ಅಂಡಗಳು ಅಂಟಿಕೊಂಡಿರುತ್ತವೆ. ಹಣ್ಣು ಹಲವು ಬೀಜದ ಮತ್ತು ಕೆಂಪು ಬಣ್ಣದ ಬೆರ್ರಿ.

ಅಲೋಕೇಷಿಯ ಸೆಂಡರಿಯಾನ, ಅಲೋಕೇಷಿಯ ಜಬ್ರಿನ, ಅಲೋಕೇಷಿಯ ಇಂಡಿಕ (ಇಂಡಿಯಾ ದೇಶದ ಮೂಲವಾಸಿ), ಅಲೋಕೇಷಿಯ ಕುಪ್ರಿಯ, ಅಲೋಕೇಷಿಯ ಮ್ಯಾಕ್ರೊರೈಜ ಮುಂತಾದುವು ಪ್ರಮುಖ ಪ್ರಭೇದಗಳು.

ಬೇಸಾಯ: ಅಲೋಕೇಷಿಯ ಸಸ್ಯಗಳನ್ನು ಮೋಸುಗಳಿಂದ ಮತ್ತು ಗುಪ್ತಕಾಂಡದ ತುಂಡುಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಇವುಗಳನ್ನು ಬೀಜಗಳಿಂದ ವೃದ್ಧಿಮಾಡುವ ಸಾಧ್ಯತೆ ಇದ್ದರೂ ಆ ವಿಧಾನ ಹೆಚ್ಚಿನ ಬಳಕೆಯಲ್ಲಿಲ್ಲ. ಈ ಸಸ್ಯಗಳಿಗೆ ಯಥೇಚ್ಛವಾಗಿ ತೇವಾಂಶವಿರಬೇಕು: ಫಲವತ್ತಾದ ನೆಲ ಬೇಕು. ಬಿಸಿಲಿನ ಝಳವನ್ನು ಸಹಿಸುವ ಶಕ್ತಿ ಇವಕ್ಕಿಲ್ಲ. ನೀರು ಹರಿಯುವ ಅಥವಾ ತಗ್ಗಾದ ಉದ್ಯಾನವನ ಪ್ರದೇಶಗಳಲ್ಲಿ ಇವನ್ನು ಬೆಳೆಸಬಹುದು. ಈ ಸಸ್ಯಗಳು ಬಹಳ ಸೂಕ್ಷ್ಮಪ್ರಕೃತಿಯವಾದ್ದರಿಂದ ಇವನ್ನು ಕುಂಡಗಳಲ್ಲಿ ಬೆಳೆಸುವುದು ಲೇಸು. (ಡಿ.ಎಂ.)

**ಅಲೋಹಗಳು :** ಮೂಲವಸ್ತುಗಳಲ್ಲಿ ಒಂದು ಗುಂಪಿನವು (ನಾನ್‌ಮೆಟಲ್ಸ್). ಈ ಪದಕ್ಕೆ ಸಮರ್ಪಕವಾಗಿ ಲಕ್ಷಣ ನಿರೂಪಣೆ ಮಾಡುವುದು ಕಷ್ಟ. ಮೂಲವಸ್ತುಗಳನ್ನು ಲೋಹ ಮತ್ತು ಅಲೋಹಗಳೆಂದು ಎರಡು ಸ್ಥೂಲವಾದ ಗುಂಪುಗಳಾಗಿ ವಿಂಗಡಿಸಬಹುದು. ಇಂಥ ವಿಂಗಡಣೆಗೆ ಆಧಾರ ಈ ಮೂಲವಸ್ತುಗಳು ಭೌತ ಮತ್ತು ರಾಸಾಯನಿಕ ಗುಣಗಳಲ್ಲಿರುವ ಹಲವು ವ್ಯತ್ಯಾಸಗಳು.

ಅಲೋಹಗಳು ಘನ, ದ್ರವ ಅಥವಾ ಅನಿಲರೂಪದಲ್ಲಿರುವುವು. ಲೋಹಗಳಿಗಿರುವಂತೆ ಇವಕ್ಕೆ ಹೊಳಪಾಗಲಿ, ವಿಶಿಷ್ಟವಾದ ಶಬ್ದದಾಯಕ (ಬಡಿದಾಗ) ಗುಣವಾಗಲಿ ಇಲ್ಲ. ಲೋಹಗಳೊಡನೆ ಹೋಲಿಸಿದಾಗ ಇವುಗಳ ಸಾಂದ್ರತೆ, ಕರಗುವ ಬಿಂದು (ಮೆಲ್ಟಿಂಗ್ ಪಾಯಿಂಟ್) ಮತ್ತು ಕುದಿಯುವ ಬಿಂದು (ಬಾಯಿಲಿಂಗ್ ಪಾಯಿಂಟ್) ಸಾಮಾನ್ಯವಾಗಿ ಕಡಿಮೆ. ಸಾಮಾನ್ಯವಾಗಿ ಅಲೋಹಗಳು ವಿದ್ಯುತ್ ಮತ್ತು ಉಷ್ಣಶಕ್ತಿಗಳಿಗೆ ಒಳ್ಳೆಯ ವಾಹಕಗಳಲ್ಲ. ಅವು ಆ್ಯನಯಾನ್‌ಗಳಿಗೆ ಎಡೆಕೊಡುತ್ತವೆ. ಅವುಗಳ ಅಯಾನೀಕರಣ ವಿಭವ (ಅಯೊನೈಸೇಷನ್ ಪೊಟೆನ್‌ಷಿಯಲ್) ಹೆಚ್ಚು ಪ್ರಮಾಣವುಳ್ಳದ್ದು. ಲೋಹಗಳಂತೆ ಈ ಅಲೋಹಗಳನ್ನು ತಂತಿ ಅಥವಾ ಪದರ ರೂಪವಾಗಿ ಪರಿವರ್ತಿಸುವುದು ಸುಲಭವಲ್ಲ.

ಆಕ್ಸಿಜನ್‌ನೊಡನೆ ಮೂಲವಸ್ತುವಿನ ಪರಮಾಣು ಸಂಯೋಜಿಸಿದಾಗ ಆಕ್ಸೈಡ್ ಎಂಬ ಸಂಯುಕ್ತವಸ್ತು ಉತ್ಪನ್ನವಾಗುತ್ತದೆ. ಅಲೋಹಗಳ ಆಕ್ಸೈಡ್‌ಗಳು ಆಮ್ಲೀಯವಾದುವು. ವಿದ್ಯುದ್ವಿಶ್ಲೇಷಣ ಕ್ರಿಯೆಯಲ್ಲಿ (ಎಲೆಕ್ಟ್ರಾಲಿಸಿಸ್) ಅಲೋಹಗಳು ಧನಧ್ರುವದ ಬಳಿ (ಪಾಸಿಟಿವ್ ಕ್ಯಾಥೋಡ್) ಬಿಡುಗಡೆಯಾಗುವುದರಿಂದ ಅಲೋಹಗಳನ್ನು ವಿದ್ಯುದೃಣ (ಎಲೆಕ್ಟ್ರೋ ನೆಗೆಟಿವ್) ಎಂದು ಕರೆಯುವರು. ಅಲೋಹದ ಗುಣದ ಬದಲು ವಿದ್ಯುದೃಣ ಎಂಬುದನ್ನು ಪರ್ಯಾಯವಾಗಿ ಬಳಸುವುದೂ ಉಂಟು.

ಕ್ಲೋರೀನ್ ಎಂಬ ಅನಿಲ ಇನ್ನಾವುದಾದರೂ ಮೂಲವಸ್ತುವಿನೊಡನೆ ಸಂಯೋಗವಾದಾಗ ಕ್ಲೋರೈಡ್ ಎಂಬ ಸಂಯುಕ್ತವಸ್ತು ಉತ್ಪನ್ನವಾಗುತ್ತದೆ. ಅಲೋಹಗಳ ಕ್ಲೋರೈಡ್‌ಗಳು ಸಾಮಾನ್ಯವಾಗಿ ನೀರಿನಿಂದ ಪೂರ್ಣವಾಗಿ ವಿಭಜಿತವಾಗುತ್ತವೆ (ಹೈಡ್ರೊಲೈಸ್ಡ್).

ಹಲವಾರು ಭೌತ ಮತ್ತು ರಾಸಾಯನಿಕ ಗುಣಗಳನ್ನು ಪರೀಕ್ಷಿಸಿ, ಒಂದು ಮೂಲವಸ್ತು ಲೋಹವೇ ಅಥವಾ ಅಲೋಹವೇ ಎಂದು ನಿರ್ಣಯಿಸಬೇಕಾಗುತ್ತದೆ. ಆದರೆ ಒಂದೊಂದೇ ಗುಣವನ್ನು ತೆಗೆದುಕೊಂಡರೆ, ಕೆಲವು ವೇಳೆ ಲೋಹವೂ ಅಲೋಹವೂ ಎಂದು ಹೇಳುವುದು ಕಷ್ಟ.. ಕೆಲವು ಗುಣಗಳನ್ನು ತೆಗೆದುಕೊಂಡಾಗ ಲೋಹವೆಂದೂ ಮತ್ತೆ ಕೆಲವನ್ನು ಗಮನಿಸಿದಾಗ ಅಲೋಹವೆಂದೂ ಹೇಳಬೇಕಾಗಿ ಬರುವ ಉದಾಹರಣೆಗಳೂ ಉಂಟು.

92 ನೈಸರ್ಗಿಕ ಮೂಲವಸ್ತುಗಳಲ್ಲಿ ಸುಮಾರು 68 ಲೋಹಗಳು, ಉಳಿದವು ಅಲೋಹಗಳು ಪೈಕಿ ಹೈಡ್ರೊಜನ್, ಹೀಲಿಯಂ, ನೈಟ್ರೊಜನ್, ಆಕ್ಸಿಜನ್, ಫ್ಲೂರಿನ್, ನಿಯಾನ್, ಕ್ಲೋರೀನ್, ಆರ್ಗಾನ್, ಕ್ರಿಪ್ಟನ್, ಸೆನಾನ್, ಮತ್ತು ರೆಡಾನ್ ಎಂಬ ಹನ್ನೊಂದು ಮೂಲವಸ್ತುಗಳು ಅನಿಲರೂಪದಲ್ಲಿವೆ. ದ್ರವರೂಪದಲ್ಲಿರುವ ಏಕೈಕ ಅಲೋಹ ಬ್ರೋಮೀನ್. ಘನರೂಪದಲ್ಲಿರುವ ಒಂಬತ್ತು ಅಲೋಹಗಳು–ಬೋರಾನ್, ಕಾರ್ಬನ್, ಸಿಲಿಕಾನ್, ಫಾಸ್ಫರಸ್, ಗಂಧಕ, ಆರ್ಸೆನಿಕ್, ಸೆಲಿನಿಯಂ, ಆಂಟಿಮೊನಿ ಮತ್ತು ಅಯೊಡೀನ್.

ಮೂಲವಸ್ತುಗಳ ಆವರ್ತಕೋಷ್ಟಕದ (ಪೀರಿಯಾಡಿಕ್ ಟೇಬಲ್) ಮೇಲಿನ ಎಡಮೂಲೆಯಿಂದ ಕೆಳಗಿನ ಬಲಮೂಲೆಗೆ ವಿಕರ್ಣರೇಖೆಯೊಂದನ್ನು ಎಳೆದು ಇಬ್ಭಾಗ ಮಾಡಿದರೆ, ಅಲೋಹ ಮೂಲವಸ್ತುಗಳೆಲ್ಲವೂ ಈ ರೇಖೆಯ ಮೇಲುಭಾಗದಲ್ಲಿರುತ್ತವೆ. ತವರ ಎರಡೂ ರೂಪದಲ್ಲಿದೆ. ಅದರ ಲೋಹರೂಪ ಬೆಳ್ಳಗೆ ಹೊಳೆಯುತ್ತದೆ. ಟೆಲ್ಯೂರಿಯಂ ಎಂಬ ಲೋಹವೂ ಇದೇ ಗುಂಪಿಗೆ ಸೇರುತ್ತದೆ. ಆದ್ದರಿಂದ ಈ ಮೂಲವಸ್ತುಗಳನ್ನು ಉಪಲೋಹಗಳು (ಮೆಟಲಾಡ್ಸ್) ಎಂದು ಕರೆಯುತ್ತಾರೆ. ಬೋರಾನ್, ಸಿಲಿಕಾನ್, ಜರ್ಮೇನಿಯಂಗಳನ್ನು ಸಹ ಉಪಲೋಹಗಳ ಶ್ರೇಣಿಗೆ ಸೇರಿಸಬಹುದು. *

**ಅಲೌಕಿಕ :** ಲೌಕಿಕದಿಂದ ಬೇರೆಯಾದದ್ದು. ಅಲೌಕಿಕ ಮತ್ತು ಲೌಕಿಕ ಎಂಬ ಪದಗಳು ನಮ್ಮ ಜೀವನದೃಷ್ಟಿ, ಧ್ಯೇಯಗಳಿಗೆ ಸಂಬಂಧಪಟ್ಟವು. ಸಾಮಾನ್ಯವಾಗಿ ಇಹಕ್ಕೆ ಸಂಬಂಧಪಟ್ಟ ಎಲ್ಲ ಜ್ಞಾನವನ್ನೂ ಕ್ರಿಯೆಗಳನ್ನೂ ಲೌಕಿಕವೆಂದೂ ಪರಲೋಕಕ್ಕೆ ಸಂಬಂಧಪಟ್ಟ ಜ್ಞಾನ ಮತ್ತು ಕ್ರಿಯೆಗಳನ್ನು ಅಲೌಕಿಕ ಸತ್ಯ, ಜ್ಞಾನ ಮತ್ತು ಧರ್ಮಗಳೆಂದೂ ಭಾವಿಸಿ ಲೌಕಿಕದಿಂದ ಅಲೌಕಿಕವನ್ನು ಪ್ರತ್ಯೇಕಿಸುವುದು ಒಂದು ಬಗೆ. ಅರ್ಥ, ಕಾಮಗಳನ್ನು ಬಯಸುವ ಜೀವನವನ್ನು ಲೌಕಿಕ ಜೀವನವೆಂದೂ ಧರ್ಮ ಮತ್ತು ಮೋಕ್ಷಗಳನ್ನು ಬಯಸುವ ಜೀವನವನ್ನು ಅಲೌಕಿಕ ಜೀವನವೆಂದೂ ಭಾವಿಸಿ ಲೌಕಿಕದಿಂದ ಅಲೌಕಿಕವನ್ನು ಪ್ರತ್ಯೇಕಿಸುವುದು ಇನ್ನೊಂದು ಬಗೆ. ಈ ಎರಡು ವಿಂಗಡಣೆಗಳಲ್ಲೂ ಅಲೌಕಿಕ ಲೌಕಿಕಕ್ಕೆ ವಿರುದ್ಧವೆಂಬ ಭಾವನೆಗೆ ಅವಕಾಶವುಂಟು. ಇಹದ ಸುಖವನ್ನು ಸಾಧಿಸುವುದನ್ನು ಪ್ರವೃತ್ತಿಯೆಂದೂ ಅಭ್ಯುದಯವೆಂದೂ ಪರವನ್ನು ಸಾಧಿಸುವುದನ್ನು ನಿವೃತ್ತಿಯೆಂದೂ ನಿಶ್ರೇಯಸವೆಂದೂ, ಇವು ಒಂದೊಕ್ಕೊಂದು ಪ್ರತಿಯಾದುವೆಂದೂ ಭಾವಿಸುವುದು ಒಂದು ತಾತ್ತ್ವಿಕ ದೃಷ್ಟಿ. ಭಾರತದಲ್ಲೂ ಮಧ್ಯಯುಗದ ಯುರೋಪಿನಲ್ಲೂ ಸಂನ್ಯಾಸಕ್ಕೆ ತುಂಬ ಪ್ರಾಶಸ್ತ್ಯವಿದ್ದ ಕಾಲದಲ್ಲಿ ಈ ತತ್ತ್ವದೃಷ್ಟಿ ಪ್ರಬಲವಾಗಿತ್ತು. ಸಂಸಾರ ಬಂಧನವೆಂದೂ ಅದನ್ನು ತ್ಯಜಿಸಿ ಸಂನ್ಯಾಸವನ್ನು ಅವಲಂಬಿಸುವುದೇ ಬಿಡುಗಡೆಗೆ ದಾರಿ ಎಂಬ ತಾತ್ತ್ವಿಕ ದೃಷ್ಟಿಗೆ ಪ್ರಾಶಸ್ತ್ಯವಿತ್ತು. ಇದು ಜೀವನನಿರಾಕರಣೆಯ ತತ್ತ್ವವೆಂದೂ ಅದೇ ಭಾರತದ ತತ್ತ್ವವೆಂದೂ ಆಲ್ಬರ್ಟ್ ಷ್ವೈಟ್ಸರ್ ಎಂಬ ಪಾಶ್ಚಾತ್ಯತಾತ್ತ್ವಿಕ ಹೇಳುತ್ತಾನೆ. ಆದರೆ ಭಾರತದ ತತ್ತ್ವದೃಷ್ಟಿ ಕೇವಲ ಜೀವನನಿರಾಕರಣೆಯ ತತ್ತ್ವವಲ್ಲ. ಪ್ರವೃತ್ತಿಯಲ್ಲಿ ನಿವೃತ್ತಿ, ನಿವೃತ್ತಿಯಲ್ಲಿ ಪ್ರವೃತ್ತಿಯನ್ನು ಬೋಧಿಸುವ ತತ್ತ್ವವೂ ಭಾರತದಲ್ಲುಂಟು. ಇದು ಭಗವದ್ಗೀತೆಯ ನಿಷ್ಕಾಮ ಅಥವಾ ಅನಾಸಕ್ತಿಯೋಗ ತತ್ತ್ವ. ಮಹಾತ್ಮಗಾಂಧಿ ಎತ್ತಿಹಿಡಿದ ತತ್ತ್ವವೂ ಅದೇ. ಜೀವನವ್ಯವಹಾರಗಳನ್ನು ಪಾರಮಾರ್ಥಿಕ ದೃಷ್ಟಿಯಿಂದ ನಡೆಸುವುದೇ ಶ್ರೇಷ್ಠ ಮಾರ್ಗವೆಂದು ಅವರು ಬೋಧಿಸಿದುದಲ್ಲದೆ ತಮ್ಮ ಜೀವನದಲ್ಲೇ ಅದನ್ನು ಸಾಧಿಸಿದರು.

ಅಲೌಕಿಕ ದೃಷ್ಟಿ ಕೇವಲ ಮತ, ತತ್ತ್ವಗಳಿಗೆ ಮಾತ್ರ ಮೀಸಲಾದ ಭಾವನೆಯಲ್ಲ. ಕವಿಯ ದೃಷ್ಟಿಯೂ ಅಲೌಕಿಕವೆಂದು ಭಾರತೀಯ ಕಾವ್ಯಮೀಮಾಂಸಕರು ಬಗೆದಿರುತ್ತಾರೆ. ಆದರೆ ಅಲೌಕಿಕದೃಷ್ಟಿ ಎಂಬುದನ್ನು ಕಾವ್ಯಮೀಮಾಂಸೆಯಲ್ಲಿ ಒಂದು ಸಂಕುಚಿತ ಹಾಗೂ ವಿಶೇಷಾರ್ಥದಲ್ಲಿ ಉಪಯೋಗಿಸಿದ್ದಾರೆ. ಮತ ಜೀವನದಲ್ಲಿ ಅಲೌಕಿಕ ದೇಹ, ಮಾತು, ಮನಸ್ಸು ಈ ಮೂರರಲ್ಲೂ ವ್ಯಾಪಕವಾಗಿರಬೇಕಲ್ಲದೆ ನಿತ್ಯವಾಗಿರಬೇಕು. ಕವಿಜೀವನದಲ್ಲಿ ಹಾಗೆ ವ್ಯಾಪಕವಾಗಿಯೂ ನಿತ್ಯವಾಗಿಯೂ ಇರಬೇಕಾದ್ದಿಲ್ಲ. ಅದು ಕವಿಯ ತಾತ್ಕಾಲಿಕ ದರ್ಶನಕ್ಕೆ ಮತ್ತು ಅಭಿವ್ಯಕ್ತಿಗೆ ಮಾತ್ರ ಕ್ಲುಪ್ತವಾದದ್ದು. ವಾಲ್ಮೀಕಿಯಂಥ ಋಷಿ ಮತ್ತು ಕವಿಯಾದವನ ಜೀವನಸರ್ವಸ್ವವೂ ಅಲೌಕಿಕ. ಆದರೆ ಕಾಳಿದಾಸ, ಭವಭೂತಿ, ಭಾಸ, ಬಾಣ ಇಂಥ ಕವಿಗಳ ದೃಷ್ಟಿ ಕಾವ್ಯ ಸಮಾಧಿಯಲ್ಲಿರುವಷ್ಟು ಕಾಲ ಮಾತ್ರ ತಾತ್ಕಾಲಿಕವಾಗಿ ಅಲೌಕಿಕ. ಮುಮುಕ್ಷುವಿನಂತೆ, ಮೋಕ್ಷಸಾಧಕನಂತೆ ಕವಿಗಳು ಶಮದಮಾದಿ ಸಾಧನ ಚತುಷ್ಟಯಗಳನ್ನು ಅವಲಂಬಿಸುವುದಿಲ್ಲ; ಅವರು ಭಾವಿಸುವ ವಿಷಯವೂ ಲೋಕಾತೀತವಾದ ಬ್ರಹ್ಮವಸ್ತುವಲ್ಲ.

ಕವಿ ಅವಲೋಕಿಸುವ ವಸ್ತು ಲೌಕಿಕಜೀವನ; ಲೌಕಿಕಜೀವನದಲ್ಲಿ ಕಾಣಬರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೇ ಆತ ಅವಲೋಕಿಸುವ ವಿಷಯಗಳು ಆದರೆ ಆತ ಅವಲೋಕಿಸುವ ರೀತಿ ಋಷಿಯಂತೆ ನಿರ್ಮತ್ಸರವಾದದ್ದು, ನಿಷ್ಕಾಮವಾದದ್ದು. ಅದು ತಾತ್ಕಾಲಿಕ ಅನಾಸಕ್ತಿಯೋಗ. ಲೌಕಿಕ ಜೀವನವನ್ನೇ ತನ್ನ ವೈಯಕ್ತಿಕ ಈರ್ಷ್ಯಾಸೂಯೆಗಳಿಗೆ ಎಡೆಕೊಡದಂತೆ ವೀಕ್ಷಿಸುವುದು ಕವಿಯ ಅಲೌಕಿಕದೃಷ್ಟಿ.

ಭಟ್ಟನಾಯಕನೂ ಅಭಿನವಗುಪ್ತನೂ ಈ ಅಲೌಕಿಕ ದೃಷ್ಟಿಯನ್ನು ವರ್ಣಿಸಿರುವ ರೀತಿ ಇದು: ಸಾಮಾನ್ಯವಾಗಿ ಲೋಕದ ಪದಾರ್ಥಗಳನ್ನೂ ವ್ಯಕ್ತಿಗಳನ್ನೂ ಮೂರು ಬಗೆಯಾಗಿ ಭಾವಿಸುವುದು ಲೋಕರೂಢಿ. ಈ ಪದಾರ್ಥ ಅಥವಾ ವ್ಯಕ್ತಿ ನಮಗೆ ಅನುಕೂಲವಾದದ್ದೇ ಅಥವಾ ಪ್ರತಿಕೂಲವಾದದ್ದೇ, ನಮಗೆ ಇಷ್ಟವಾದದ್ದೇ ಅಥವಾ ಅನಿಷ್ಟವಾದದ್ದೇ ಅಥವಾ ಅನುಕೂಲವೂ ಅಲ್ಲದೆ ಪ್ರತಿಕೂಲವೂ ಅಲ್ಲದೆ ಕೇವಲ ತಟಸ್ಥವಾದದ್ದೇ ಎಂದು ಮೂರು ಬಗೆಯಾಗಿ ನಾವು ಭಾವಿಸುತ್ತೇವೆ. ಇಷ್ಟವಾದುದರ ವಿಚಾರದಲ್ಲಿ ನಾವು ಪಕ್ಷಪಾತ ತೋರಿಸುತ್ತೇವೆ. ನಮಗೆ ಒಗ್ಗದ ವಿಷಯದಲ್ಲಿ ಈರ್ಷ್ಯೆ ಮತ್ತು ಅಸೂಯೆಯನ್ನು ತೋರಿಸುತ್ತೇವೆ; ತಟಸ್ಥವಾದುದರಲ್ಲಿ ಔದಾಸೀನ್ಯ ತೋರಿಸುತ್ತೇವೆ. ಕವಿಯಾದರೋ ಈ ಮೂರು ಬಗೆಯಾದ ದೋಷಗಳಿಂದ ನಿವೃತ್ತನಾಗಿ ಲೋಕವನ್ನು ಅವಲೋಕಿಸುತ್ತಾನೆ. ಹೀಗೆ ಅವಲೋಕಿಸುವ ಕವಿದೃಷ್ಟಿಗೆ ಕಾವ್ಯಮೀಮಾಂಸಕರು ಅಲೌಕಿಕದೃಷ್ಟಿ ಎಂಬ ಪಾರಿಭಾಷಿಕ ಹೆಸರನ್ನು ಕೊಟ್ಟಿರುತ್ತಾರೆ.

ಕವಿ ಈ ರೀತಿಯಾಗಿ ಲೋಕವನ್ನು ಅವಲೋಕಿಸಿದಾಗಲೇ ಅವನಿಗೆ ಆನಂದಾನುಭೂತಿ ಯುಂಟಾಗುವುದು. ಈ ಆನಂದಾನುಭೂತಿಯಲ್ಲಿದ್ದಾಗ ರಚಿಸಿದುದೇ ಕಾವ್ಯವಾಗುವುದು. ಕಾವ್ಯಾನಂದವನ್ನು ಪಡೆಯಬೇಕೆಂಬ ಸಹೃದಯನೂ ಈ ಅಲೌಕಿಕದೃಷ್ಟಿಯಿಂದ ಕಾವ್ಯದಲ್ಲಿ ವರ್ಣಿತವಾದ ವಿಷಯವನ್ನು ನೋಡಬೇಕು. ಅಲೌಕಿಕದೃಷ್ಟಿ ಇಲ್ಲದಿದ್ದರೆ ಕವಿಗೂ ಆನಂದಾನುಭೂತಿ ಇಲ್ಲ; ಸಹೃದಯನಿಗೂ ಆನಂದಾನುಭೂತಿ ಇಲ್ಲ. ಈ ಕಾವ್ಯಾನಂದ ಬ್ರಹ್ಮಾನಂದದಂತೆ ಚಿರವೂ ಸ್ಥಿರವೂ ಅಲ್ಲ. ಕಾವ್ಯವನ್ನು ಭಾವಿಸಿದಷ್ಟು ಕಾಲ ಮಾತ್ರ ಅದು ಇರುತ್ತದೆ. ಈ ಅಲೌಕಿಕವಾದ ಕವಿಯ ಅನುಭೂತಿಯನ್ನೂ ಸಹೃದಯನ ಅನುಭೂತಿಯನ್ನೂ ಬ್ರಹ್ಮಾನಂದದಿಂದ ಪ್ರತ್ಯೇಕಿಸಲು ಅದನ್ನು ಬ್ರಹ್ಮಾನಂದಸೋದರ ಎಂದು ಕರೆಯುವುದು ವಾಡಿಕೆ. (ಜಿ.ಎಚ್.)

**ಅಲ್ಗಾಲ್ ನಕ್ಷತ್ರ :** ಪಾರ್ಥ (ಪರ್ಸಿಯಸ್) ಪುಂಜದ ದ್ವಿತೀಯ ನಕ್ಷತ್ರದ ಹೆಸರು. (ಸ್ಪೈಂಧವ). ಇದರ ಪ್ರಕಾಶ ಅತಿ ಚಂಚಲವಾಗಿದ್ದುದರಿಂದ ಬಲು ಹಿಂದಿನ ಕಾಲದಿಂದಲೂ ಇದು ಮಾನವನ ಗಮನವನ್ನು ಸೆಳೆದಿತ್ತು. ಎರಡು ನಕ್ಷತ್ರಗಳು ಒಂದರ ಸುತ್ತಲೂ ಇನ್ನೊಂದು ಪರಿಭ್ರಮಿ ಸುತ್ತ ಗ್ರಹಣ ಉಂಟುಮಾಡುವುದೇ ಇಂಥ ಅತಿಚಾಂಚಲ್ಯದ ಕಾರಣ. ಅಲ್ಗಾಲ್ ನಕ್ಷತ್ರ ಮತ್ತು ಅದರ ಜೊತೆ ನಕ್ಷತ್ರಗ ಳನ್ನು ಗ್ರಹಣಕಾರಕ ಯಮಳ ನಕ್ಷತ್ರಗಳೆಂದು (ಎಕ್ಲಿಪ್ಸಿಂಗ್ ಬೈನರೀಸ್) ಕರೆಯುತ್ತೇವೆ. ಅಲ್ಗಾಲ್ ನಕ್ಷತ್ರದ ಪ್ರಕಾಶ ವ್ಯತ್ಯ ಯದ ಕಾಲಾವಧಿ ಸುಮಾರು 69 ಗಂಟೆಗಳು.



ಪ್ರತಿ ಎರಡು ದಿನಗಳಿಗೊಮ್ಮೆ ನಿಯತಕಾಲಿಕವಾಗಿ ಇದರ ಪ್ರಕಾಶ ಕುಂದಿ ಮತ್ತೆ ಮೊದಲಿನಂತಾಗುತ್ತಿದ್ದುದನ್ನು ಗಮನಿಸಿದ್ದ ಅರಬ್ಬರು ಅಲ್ಗಾಲ್ ಎಂದು ಹೆಸರಿಟ್ಟರು. ಅರ್ಥ ಸೈತಾನನ ಕಣ್ಣು. ಇಂಥ ಅನೇಕ ಯಮಳ ನಕ್ಷತ್ರಗಳನ್ನು ಅಲ್ಗಾಲ್ ಚಂಚಲ ತಾರೆಗಳು ಎಂಬ ಹೆಸರಿನಿಂದಲೇ ವರ್ಗೀಕರಿಸಿದ್ದಾರೆ. (ಸಿ.ಎನ್.ಎಸ್.)

**ಅಲ್ಟಾಜಿಮತ್ :** ಆಕಾಶಕಾಯಗಳ ಉನ್ನತಿ (ಅಲ್ಟಿಟ್ಯೂಡ್) ಮತ್ತು ಅಜ಼ಿಮತ್ (ನೋಡಿ– ಅಜ಼ಿಮತ್) ಅಳತೆ ಮಾಡಲು ಬಳಸುವ ಸಾಧನ. ಇದರಲ್ಲಿ ಊರ್ಧ್ವಾಕ್ಷ ಮತ್ತು ಕ್ಷಿತಿಜಾಕ್ಷಗಳ ಮೇಲೆ ಅಳವಡಿಸಿದ ಒಂದು ಟೆಲಿಸ್ಕೋಪ್ ಇದೆ. ಅಕ್ಷಗಳಿಗೆ ಅಂಶಾಂಕಿತ (ಗ್ರ್ಯಾಜುಯೇಟೆಡ್) ವೃತ್ತಗಳನ್ನು ಜೋಡಿಸಿದೆ. ಬೇಕಾದ ಆಕಾಶಕಾಯದೆಡೆಗೆ ಟೆಲಿಸ್ಕೋಪನ್ನು ಗುರಿಹಿಡಿದಾಗ ಈ ವೃತ್ತಗಳ ಮೇಲಿನ ಅನುರೂಪ ಸಂಖ್ಯೆಗಳು ಆ ಕಾಯದ ಉನ್ನತಿ ಮತ್ತು ಅಜ಼ಿಮತ್‌ಗಳನ್ನು ನೀಡುತ್ತವೆ. ಇದನ್ನು ಭೂಮಿಯ ಮೇಲಿನ ವೀಕ್ಷಣೆಗಳಲ್ಲಿ ವಿಶೇಷವಾಗಿ ಬಳಸುತ್ತಾರೆ. *

**ಅಲ್ಟ್ರಾಮರೀನ್ :** ಹಸುರು ಮತ್ತು ಊದಾಬಣ್ಣದ ಹರಳುಗಳ ರೂಪದಲ್ಲಿ ದೊರೆಯುವ ಖನಿಜ. ಸ್ವಲ್ಪಾಂಶ ಗಂಧಕ ಇರುವ ಅಲ್ಯೂಮಿನಿಯಂ ಸೋಡಿಯಂ ಸಿಲಿಕೇಟ್ ಇದು ಎಂದು ಭಾವಿಸಲಾಗಿದೆ. ಕೃತಕ ಅಲ್ಟ್ರಾಮರೀನ್ ನೀಲಿಬಣ್ಣದ ವರ್ಣದ್ರವ್ಯ (ಪಿಗ್‌ಮೆಂಟ್). ಬಿಳಿ ಜೇಡಿಮಣ್ಣು, ಸೋಡ, ಇದ್ದಲು ಮತ್ತು ಗಂಧಕಗಳನ್ನು ಗಾಳಿ ಸಂಪರ್ಕವಿಲ್ಲದಂತೆ ಕಾಸಿದಾಗ ಒಂದು ಹಸಿರು ಬಣ್ಣದ ಪದಾರ್ಥ ಉತ್ಪನ್ನವಾಗುತ್ತದೆ. ಇದನ್ನು ನೀರಿನಲ್ಲಿ ತೊಳೆದು ಒಣಗಿಸಿ ಮತ್ತೆ ಗಂಧಕವನ್ನು ಸೇರಿಸಿ ಬೇಕಾದ ಬಣ್ಣದ ಛಾಯೆ ಬರುವವರೆಗೂ ಗಾಳಿಯಲ್ಲಿ ಕಾಸುತ್ತಾರೆ. ಈ ಪದಾರ್ಥವನ್ನು ನೀಲಿ (ನೋಡಿ– ನೀಲಿ) ಎಂಬ ಹೆಸರಿನಲ್ಲಿ ಬಟ್ಟೆ ಒಗೆದು ಅಲುಬುವಾಗ ಬಳಸುತ್ತಾರೆ. ಪೇಂಟ್ ಲಾಕ್ಕರ್, ಕ್ಯಾಲ್ಸಿಮೈನ್, ಲಿನೋಲಿಯಂ, ಕಾಗದ ತಯಾರಿಕೆ ಇಲ್ಲೆಲ್ಲ ಇದರ ಉಪಯೋಗವಿದೆ. (ಎನ್.ಎಸ್.)

ಯುರೋಪ್ ರಾಷ್ಟ್ರಗಳಿಗೆ ಈ ವಸ್ತುವನ್ನು ಕಡಲಾಚೆಯಿಂದ ಆಮದು ಮಾಡುತ್ತಿದ್ದುದ ರಿಂದ ಅಲ್ಟ್ರಾ (ಆಚೆಯಿಂದ) ಮರೀನ್ (ಕಡಲು) ಎಂಬ ಹೆಸರು ಬಂದಿತು. ಇದರ ಕೃತಕ ತಯಾರಿಕೆ ಯಶಸ್ವಿಯಾದದ್ದು 1820ರಲ್ಲಿ. ಅಲ್ಟ್ರಾಮರೀನಿನ ರಾಸಾಯನಿಕ ರಚನೆ ಸಮಸ್ಯಾತ್ಮಕವಾಗಿತ್ತು. 1929ರಲ್ಲಿ ಎಕ್ಸ್–ಕಿರಣಗಳ ಬಳಕೆಯಿಂದ ಇದನ್ನು ನಿರ್ಧರಿಸಿದರು. ಒಂದು ಘನರೂಪದ ಮತ್ತು ವಿಕೃತಶೃಂಗಗಳಿರುವ ಲ್ಯಾಟಿಸ್ ಇದರ ಆಕಾರ. ಅಲ್ಯೂಮಿನಿಯಂ ಮತ್ತು ಸಿಲಿಕಾನ್ ಪರಮಾಣುಗಳು ಇಲ್ಲಿ ಆಕ್ಸಿಜನ್ ಪರಮಾಣುಗಳ ನೆರವಿನಿಂದ ಬಂಧಿತ ವಾಗಿವೆ. ಅಲ್ಯೂಮಿನಿಯಂ ಮತ್ತು ಸಿಲಿಕಾನ್‌ಗಳ ನಿಷ್ಪತ್ತಿ ಮಿತಿಗಳೊಳಗೆ ಬದಲಾಗಬಹುದು; ಆದರೆ ಅವುಗಳ ಒಟ್ಟು ಮೊತ್ತ ಸದಾ 12. ಸಿಲಿಕಾನ್ ಪರಮಾಣುಗಳು ಅಲ್ಯೂಮಿನಿಯಂ ಪರಮಾಣುಗಳ ಸಂಖ್ಯೆಗಿಂತ ಸಾಮಾನ್ಯವಾಗಿ ಅಧಿಕ. ಇವುಗಳನ್ನು ಬಂಧಿಸುವ ಆಕ್ಸಿಜನ್ ಪರಮಾಣು ಸಂಖ್ಯೆ 24. ಲ್ಯಾಟಿಸ್‌ನ ಒಳಗೂ ಒತ್ತೊತ್ತಿಗೆ ಇರುವ ಲ್ಯಾಟಿಸ್‌ಗಳ ವಿಕೃತಶೃಂಗ ಗಳು ಒದಗಿಸುವ ಪ್ರದೇಶಗಳಲ್ಲಿಯೂ ಸೋಡಿಯಂ ಮತ್ತು ಗಂಧಕದ ಪರಮಾಣುಗಳಿವೆ. ಇವುಗಳ ಸಂಖ್ಯೆ ಅಥವಾ ಸ್ಥಾನ ನಿರ್ದಿಷ್ಟವಾಗಿಲ್ಲ. ಈ ಮೂಲವಸ್ತುಗಳ ಪ್ರಮಾಣ ಕೆಳಗೆ ತೋರಿಸಿದೆ.

| | | | |
|---|---|---|---|
| ಸಿಲಿಕಾನ್ | ... | 17.75%–20.0% | ಭಾರದಲ್ಲಿ |
| ಅಲ್ಯೂಮಿನಿಯಂ | ... | 12.30%–15.5% | “ |
| ಸೋಡಿಯಂ | ... | 12.80%–15.3% | “ |
| ಗಂಧಕ | ... | 10.00%–14.0% | “ |

ಆಕ್ಸಿಜನ್ ಉಳಿದ ಅಂಶ (ಅತ್ಯಲ್ಪಾಂಶ ನೀರು ಮತ್ತು ಕಲ್ಮಷಗಳೂ ಸೇರಿವೆ) ಮೂಲವಸ್ತುಗಳ ಪ್ರಮಾಣದಲ್ಲಿ ವ್ಯತ್ಯಾಸ ಸಾಧ್ಯವಾಗಿರುವುದರಿಂದ ಭಿನ್ನ ಗುಣಗಳ ಅಲ್ಟ್ರಾಮರೀನ್‌ಗಳು ಉಂಟಾಗುತ್ತವೆ. *

**ಅಲ್ಡಾನಾ, ಫ್ರಾನ್ಸಿಸ್ ಕೋಡೆ :** 1537–78. ಹದಿನಾರನೆಯ ಶತಮಾನದ ಸ್ಪೇನ್‌ದೇಶದ ಕವಿ. ದೊರೆ ಸೆಬ್ಯಾಸ್ಟಿಯನ್ ಮೊರ್‍ರಾಕೊನ ಮೇಲೆ ನಡೆಸಿದ ದುರದೃಷ್ಟಕರ ದಂಡಯಾತ್ರೆಯಲ್ಲಿ ಸೈನಿಕನಾಗಿ ಭಾಗವಹಿಸಿ ಯುದ್ಧದಲ್ಲಿ ಮಡಿದ. ಧಾರ್ಮಿಕ ಹಾಗೂ ಸೈನಿಕ ಜೀವನಕ್ಕೆ ಸಂಬಂಧಿಸಿದ ವಸ್ತುಗಳನ್ನು ಕುರಿತು ಬರೆದನಲ್ಲದೆ, ಹಲವು ಪ್ರಣಯಗೀತೆ ಗಳನ್ನು ರಚಿಸಿದ. ಕೃತಿಗಳನ್ನು ಈತ ನಿಧನನಾದ ಹತ್ತು ಹನ್ನೆರಡು ವರ್ಷಗಳ ಅನಂತರ ಪ್ರಕಟಿಸಲಾಯಿತು. ತ್ರಿಪದಿ ಕಾವ್ಯಶೈಲಿಯಲ್ಲಿ ಈತ ಸ್ಪೇನಿನ ಮತ್ತೊಬ್ಬ ಪ್ರತಿಭಾವಂತ ಕವಿ ಅರಿಯಸ್ ಮೊಂಟಾನೋಗೆ ಬರೆದ ಪತ್ರಗಳು ಸತ್ತ್ವಯುತವಾಗಿವೆ. (ಎಚ್.ಕೆ.ಆರ್.)

**ಅಲ್ತಮಷ್ :** ಗುಲಾಮೀ ಸಂತತಿಯ ಸುಲ್ತಾನರಲ್ಲಿ ಪ್ರಮುಖ 1210–1235. ದೆಹಲಿಯ ಮೊದಲನೆಯ ಸುಲ್ತಾನನಾದ ಕುತುಬುದ್ದೀನನ ಗುಲಾಮ. ಧೈರ್ಯಸ್ಥೈರ್ಯಕ್ಕೆ ಮೆಚ್ಚಿದ ಸುಲ್ತಾನ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ. ಯುದ್ಧಗಳಲ್ಲಿ, ರಾಜ್ಯಾಡಳಿತದಲ್ಲಿ ಪರಾಕ್ರಮ ಹಾಗೂ ಚಾಕಚಕ್ಯತೆಯನ್ನು ಪ್ರದರ್ಶಿಸಿ ಅಲ್ತಮಷ್ ರಾಜ್ಯದ ಪ್ರಮುಖ ಅಧಿಕಾರಿಗಳಲ್ಲೊಬ್ಬನಾದ. ಕುತುಬುದ್ದೀನನ ಮರಣಾನಂತರ ದತ್ತುಪುತ್ರ ಆರಾಮ್‌ಶಹ ದೆಹಲಿಯ ಸಿಂಹಾಸನವನ್ನೇರಿದ (1210). ಅವನು ಅಸಮರ್ಥನಾಗಿದ್ದುದರಿಂದ ಕೇವಲ ಒಂದು ವರ್ಷದೊಳಗಾಗಿ ದೆಹಲಿಯ ಸಾಮಂತರು ಮತ್ತು ಶ್ರೀಮಂತ ವರ್ಗದವರು ಪ್ರಾಂತ್ಯಾಧಿಕಾರಿಯಾಗಿದ್ದ ಅಲ್ತಮಷ್‌ನನ್ನು ಬರಮಾಡಿಕೊಂಡು ಸುಲ್ತಾನನಾಗಬೇಕೆಂದು ಕೇಳಿಕೊಂಡರು. ಆತ ಆರಾಮ್‌ಶಹನನ್ನು ಯುದ್ಧದಲ್ಲಿ ಸೋಲಿಸಿ ಸುಲ್ತಾನನಾದ. ಅಧಿಕಾರ ವನ್ನು ವಹಿಸಿಕೊಂಡಕೂಡಲೇ ಅನೇಕ ದಂಗೆ ಮತ್ತು ದಾಳಿಗಳನ್ನು ಎದುರಿಸಬೇಕಾಯಿತು. ಇಲ್ದುಸ್ ಮತ್ತು ಖುಬೇಚ ಎಂಬುವರು ಅವನ ಪರಮ ವಿರೋಧಿಗಳು. ಅಲ್ಲದೆ ಮಹಮ್ಮದೀಯರ ಆಳ್ವಿಕೆಯನ್ನು ತಡೆಗಟ್ಟಲು ಅನೇಕ ಹಿಂದೂ ರಾಜರೂ ಹೋರಾಟ ಪ್ರಾರಂಭಿಸಿದರು. ಮಂಗೋಲರ ದಾಳಿಯ ಭೀತಿ ಪ್ರಬಲವಾಗಿತ್ತು. ಅಲ್ತಮಷ್ ತನ್ನ ಅಧಿಕಾರವನ್ನು ಕ್ರಮೇಣ ಬಲಪಡಿಸಿಕೊಂಡು ವಿರೋಧಿಗಳನ್ನು ಒಬ್ಬೊಬ್ಬರನ್ನಾಗಿ ನಿರ್ನಾಮ ಮಾಡಿದ. 1215ರಲ್ಲಿ ಇಲ್ದುಸ್ ಸೋತು ಸಾವನ್ನಪ್ಪಿದ. ಖುಬೇಚ ಯುದ್ಧದಲ್ಲಿ ಸೋತು ತಲೆ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಸಿಂಧೂನದಿಯಲ್ಲಿ ಮುಳುಗಿ ಸತ್ತ. 1221ರಲ್ಲಿ ಚಂಗೇಸ್‌ಖಾನ್‌ನ ನಾಯಕತ್ವದಲ್ಲಿ ಮಂಗೋಲರ ದಾಳಿಯ ಭೀಕರ ಕುತ್ತನ್ನು ಭಾರತ ಅನುಭವಿಸುವ ಸಂಭವ ಹೆಚ್ಚಾಗಿತ್ತು. ಆದರೆ ಅನೇಕ ಕಾರಣಗಳಿಂದ ಮಂಗೋಲರು ಭಾರತವನ್ನು ಪ್ರವೇಶಿಸಲಿಲ್ಲ. ಅದೃಷ್ಟವಶಾತ್ ದೇಶದಂತೆ ಸುಲ್ತಾನನೂ ಈ ಸಂಕಟದಿಂದ ಪಾರಾದ. 1228ರಲ್ಲಿ ಇಸ್ಲಾಂ ಮತದ ಅತ್ಯುಚ್ಚ ಅಧಿಕಾರಿಯಾದ ಬಾಗ್‌ದಾದಿನ ಕಲೀಫ ಅಲ್ತಮಷ್‌ನ ಅಧಿಕಾರವನ್ನು ಮನ್ನಿಸಿ, ಸುಲ್ತಾನ್ ಇ ಅಜ಼ಮ್ ಎಂಬ ಬಿರುದನ್ನು ಕೊಟ್ಟ. ದಂಗೆ ದಾಳಿಗಳಿಂದ ಪಾರಾಗಿ, ಕಲೀಫನ ಮನ್ನಣೆಗೆ ಪಾತ್ರನಾದ ಅಲ್ತಮಷ್ ತನ್ನ ಅಧಿಕಾರ ಬಲಪಡಿಸಿಕೊಂಡು ರಾಜ್ಯವಿಸ್ತರಣೆಗೆ ಗಮನಹರಿಸಿದ. 1231ರಲ್ಲಿ ಬಂಗಾಳವನ್ನು ಸ್ವಾಧೀನಪಡಿಸಿಕೊಂಡ. 1232ರಲ್ಲಿ ಗ್ವಾಲಿಯರ್ ರಾಜ್ಯವನ್ನು ಮುತ್ತಿ ಅಲ್ಲಿನ ರಾಜ ಮಂಗಳದೇವನನ್ನು ಸೋಲಿಸಿ ತನ್ನ ಅಧಿಕಾರವನ್ನು ಸ್ಥಾಪಿಸಿದ. ಮಾಳವ ಮತ್ತು ಉಜ್ಜಯಿನಿ ಪ್ರದೇಶಗಳನ್ನು ಗೆದ್ದ. ಉಜ್ಜಯಿನಿಯ ಪ್ರಸಿದ್ಧ ಮಹಾಕಾಳಿ ದೇವಾಲಯವನ್ನು ನೆಲಸಮ ಮಾಡಿದ. ಅನಾರೋಗ್ಯ ನಿಮಿತ್ತ ಅಲ್ತಮಷ್ ದಾಳಿಯನ್ನು ಮುಂದುವರಿಸಲಾಗಲಿಲ್ಲ.

ಅಲ್ತಮಷ್ ಗುಲಾಮೀ ಸಂತತಿಯ ಸಂಸ್ಥಾಪಕನೆಂದೂ ಹಿಂದೂಸ್ಥಾನದಲ್ಲಿ ಮಹಮ್ಮದೀಯರ ಆಡಳಿತವನ್ನು ಭದ್ರಪಡಿಸಿದವನೆಂದೂ ಚರಿತ್ರೆಯಲ್ಲಿ ಹೆಸರಾಗಿದ್ದಾನೆ. ಇವನು ಅರಬ್ ನಾಣ್ಯ ಪದ್ಧತಿಯನ್ನು ಭಾರತದಲ್ಲಿ ಮೊಟ್ಟ ಮೊದಲು ಜಾರಿಗೆ ತಂದ. ಈತ ನಿಷ್ಠಾವಂತ ಮಹಮ್ಮದೀಯ. ಕಲೆ ಮತ್ತು ಸಾಹಿತ್ಯವನ್ನು ಪ್ರೋತ್ಸಾಹಿಸಿದ. ಮೀನಾಜ್ ಉಸ್ ಸಿರಾಜ್ ಎಂಬ ಇತಿಹಾಸಕಾರ ಈತನ ಆಸ್ಥಾನದಲ್ಲಿದ್ದ. 1231–32ರ ಸುಮಾರಿನಲ್ಲಿ ಅಲ್ತಮಷ್‌ನೇ ಕುತುಬ್‌ಮಿನಾರ್ ಕಟ್ಟಡವನ್ನು ಕಟ್ಟಿಸಿದನೆಂದು ಕೆಲವು ವಿದ್ವಾಂಸರ ಮತ. ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಇವನ ಅನಂತರ ಮಗಳು ರಜ಼ಿಯಾ ಉತ್ತರಾಧಿಕಾರಿಯಾದಳು. (ಜಿ.ಆರ್.ಆರ್.)

**ಅಲ್ತಮೀರ :** ಸ್ಪೇನ್ ದೇಶದ ಉತ್ತರ ಭಾಗದಲ್ಲಿ ಕ್ಯಾಂಟಬ್ರಿಯನ್ ಪರ್ವತಶ್ರೇಣಿಯ ಲ್ಲಿರುವ ಗುಹೆ. ಹಳೆ ಶಿಲಾಯುಗದ ಗವಿಚಿತ್ರಗಳಿಗೆ ಪ್ರಸಿದ್ಧವಾಗಿದೆ. ಹೊರಭಾಗದಲ್ಲಿ ಸುಣ್ಣಕಲ್ಲು ಬೆಟ್ಟಗಳಿದ್ದು, ಸು.27ಮೀ ವರೆಗೆ ಒಳಗೆ ಹೋಗಬಹುದಾದ ಈ ಗುಹೆಯಲ್ಲಿರುವ

ಮುಖ್ಯ ಚಿತ್ರಗಳೆಲ್ಲವನ್ನೂ ಗುಹೆಯ ಪ್ರಾರಂಭದಿಂದ ಸು.18–30ಮೀ ದೂರದಲ್ಲೇ ಕಾಣಬಹುದು. ಗೂಳಿ, ಕಾಡುಹಂದಿ, ಕಾಡುಕುದುರೆ, ಕಾಟಿ, ಜಿಂಕೆ ಮುಂತಾದ ಹಲವು ಕಾಡುಮೃಗಗಳ ವರ್ಣರಂಜಿತ ಚಿತ್ರಗಳು ಇಲ್ಲಿಯ ವೈಶಿಷ್ಟ್ಯ. ಗೂಳಿಗಳ ಬಲಿಷ್ಠ ದೃಢಕಾಯ



ಗೂಳಿ, ಶಿಲಾಚಿತ್ರ

ಎದ್ದು ಕಾಣುತ್ತದೆ. ಶಿಲಾಯುಗದ ಕಾಲಕ್ಕೆ ಸೇರಿದ್ದಾದರೂ ಇಲ್ಲಿಯ ಬಹುಪಾಲು ಚಿತ್ರಗಳು ಹಳೆಯ ಶಿಲಾಯುಗದ ಕೊನೆಯ ಭಾಗದಲ್ಲಿದ್ದ ಮ್ಯಾಗ್ಡಲೇನಿಯನ್ ಸಂಸ್ಕೃತಿಗೆ ಸೇರಿದ್ದವು. ಇಂಗಾಲ–14 ವೈಜ್ಞಾನಿಕ ವಿಧಾನದಿಂದ ಈ ಚಿತ್ರಗಳ ಕಾಲಮಾನ ಸು.ಪ್ರಶ.ಪೂ. 20,000–15,000ಗಳಷ್ಟು ಪುರಾತನದವೆಂದು ಗೊತ್ತುಮಾಡಲಾಗಿದೆ. (ಎಸ್.ಎನ್.)

**ಅಲ್ಥೂಸಿಯಸ್ ಜೊಹಾನಸ್ :** (1557–1638). ಜರ್ಮನ್ ಕಾಯಿದೆ ಪಂಡಿತ. ರಾಜನೀತಿಶಾಸ್ತ್ರಜ್ಞ. ಕೆಲ್ವಿನ್ನನ ಅನುಯಾಯಿ. ಲೌಕಿಕ ಮತ್ತು ಧಾರ್ಮಿಕ ನಿದರ್ಶನಗಳೊಂದಿಗೆ ಈತ ಸುಸಂಘಟಿತ ರಾಜನೀತಿಶಾಸ್ತ್ರವೊಂದನ್ನು ಬರೆದಿದ್ದಾನೆ (1610). ರಾಜನೀತಿಯ ಪಾಂಕ್ತವಾದ ಚರಿತ್ರೆ, ಆಧುನಿಕ ರಾಜನೀತಿಯ ವಿವರಗಳಿಂದ ಈ ಗ್ರಂಥ ಮುಖ್ಯವಾಗಿದೆ. ಸಮಾಜ ಅನೇಕ ಘಟಕಗಳಿಂದ, ಅನೇಕ ಸ್ತರಗಳಿಂದ ಕೂಡಿದ್ದು ಎಲ್ಲ ಗುಂಪುಗಳಿಗೂ ಸಾಮೂಹಿಕ ಸಮ್ಮತಿಯೇ ಆಧಾರವಾಗಿದೆ. ಹಾಗೆಯೇ ರಾಷ್ಟ್ರದ ಉಗಮ ವಿಕಾಸಗಳಿಗೆ ಸಾಮೂಹಿಕ ಸಮ್ಮತಿಯೇ ಅಡಿಗಲ್ಲು. ಸಾರ್ವಭೌಮ ಅಧಿಕಾರ ವ್ಯಕ್ತಿಯಲ್ಲಿಲ್ಲ, ಜನತೆಯಲ್ಲಿದೆ– ಇವು ಆತ ಮಂಡಿಸಿರುವ ಮುಖ್ಯ ವಿಚಾರಗಳು. (ಜಿ.ಎ.ಡಿ.)

**ಅಲ್ಪತಂತ್ರ :** ಕೇವಲ ಕೆಲವರ ಕೈಯಲ್ಲಿ ಆಡಳಿತಾಧಿಕಾರ ಸೀಮಿತವಾಗಿರುವ ಆಡಳಿತ ಪದ್ಧತಿ (ಆಲಿಗಾರ್ಕಿ). ಅಲ್ಪಸಂಖ್ಯಾಧಿಪತ್ಯವೆಂದೂ ಇದನ್ನು ಹೇಳಬಹುದು. ಪ್ರಜಾಪ್ರಭುತ್ವದಲ್ಲೂ (ಡೆಮಾಕ್ರಸಿ) ಚುನಾಯಿತ ಪ್ರತಿನಿಧಿಗಳು ಕೆಲವರೇ ಆಡಳಿತ ನಡೆಸುವವರಾದರೂ ಸರ್ಕಾರ ಪ್ರಜೆಗಳಿಗೆ ಹೊಣೆಯಾಗಿರುತ್ತದೆ. ಅಲ್ಪತಂತ್ರ ವ್ಯವಸ್ಥೆಯಲ್ಲಿ ತಾತ್ತ್ವಿಕವಾಗಿ ಆ ನಿರ್ಬಂಧವಿಲ್ಲ. ಪ್ರಾಚೀನ ಗ್ರೀಸಿನ ಥೀಬ್ಸ್, ಮೆಗಾರ, ಕಾರಿಂತ್‌ಗಳಲ್ಲಿ ಇಂಥ ಸರ್ಕಾರವಿತ್ತು. ಕುಲೀನತಂತ್ರವೇ (ಅರಿಸ್ಟಾಕ್ರಸಿ) ಕಾಲಕ್ರಮೇಣ ಅಲ್ಪತಂತ್ರವಾಗಿ ಮಾರ್ಪಾಟಾಗುತ್ತದೆಂಬ ಅಭಿಪ್ರಾಯವಿದೆಯಾದರೂ ಅವೆರಡಕ್ಕೂ ಖಚಿತವಾದ ವ್ಯತ್ಯಾಸವಿದೆ. ಅಲ್ಪತಂತ್ರ ವ್ಯವಸ್ಥೆ ಶ್ರೀಮಂತಾಧಿಪತ್ಯ. ಅಲ್ಲಿ ಆಡಳಿತವರ್ಗ ತನ್ನ ಹಿತ, ಮೇಲ್ಮೆ ಅಧಿಕಾರ ಭದ್ರತೆಗಾಗಿ ಮಾತ್ರ ವ್ಯವಹರಿಸುತ್ತದೆ. ಕುಲೀನತಂತ್ರದಲ್ಲಾದರೋ ಆಡಳಿತ ಉತ್ತಮರ ಕೈಯಲ್ಲಿದ್ದು ಸಾರ್ವಜನಿಕ ಹಿತಚಿಂತನೆಯೇ ಅದರ ಗುರಿಯಾಗಿರುತ್ತದೆ. (ಎಸ್.ವಿ.ಡಿ.)

**ಅಲ್ಪತಾಪ ಮತ್ತು ಅತಿವಾಹಕತ್ವ :** ವಸ್ತುವಿನಲ್ಲಿರುವ ಅಣುಗಳ ಯಾದೃಚ್ಛಿಕ ಚಲನೆಯ ರೂಪ ಉಷ್ಣ; ಉಷ್ಣದ ಮಾನ ಉಷ್ಣತೆ ಅಥವಾ ತಾಪ (ಟೆಂಪರೇಚರ್). ಅಧಿಕೋಷ್ಣ ಅಧಿಕತಾಪವನ್ನೂ ಅಲ್ಪೋಷ್ಣ ಅಲ್ಪತಾಪವನ್ನೂ ಉಂಟುಮಾಡುತ್ತವೆ. ಅಧಿಕೋಷ್ಣದಲ್ಲಿ ಅಣುಚಲನೆ ತೀವ್ರವಾಗಿಯೂ ಅಲ್ಪೋಷ್ಣದಲ್ಲಿ ಮಂದವಾಗಿಯೂ ಇರುತ್ತದೆ. ಹೀಗೆ ಅಣುಚಲನೆ ಮಂದವಾದಂತೆ ತಾಪ ಇಳಿಯುತ್ತದೆ. ಆದ್ದರಿಂದ ಅಲ್ಪತಾಪವನ್ನು ಕೃತಕವಾಗಿ ಉಂಟುಮಾಡಲು ಅಣುಚಲನೆಯನ್ನು ಅತಿ ಮಂದಗೊಳಿಸಬೇಕು.

ಲೋಹಗಳು ವಿದ್ಯುದ್ವಾಹಕಗಳು. ವಿದ್ಯುತ್ಪ್ರವಾಹ ಉಂಟಾಗುವುದು ಎಲೆಕ್ಟ್ರಾನ್ ಎಂಬ ಸಣ್ಣ ಕಣಗಳ ಚಲನೆಯಿಂದ. ಈ ಕಣಗಳು ತಡೆಯಿಲ್ಲದೆ ಚಲಿಸಿದರೆ ಆ ಲೋಹದ ವಾಹಕತ್ವ ಹೆಚ್ಚು ಎಂದೂ ಹಾಗಿಲ್ಲದಿದ್ದರೆ ವಾಹಕತ್ವ ಕಡಿಮೆ ಎಂದೂ ತಿಳಿಯುತ್ತೇವೆ. ವಾಹಕತ್ವ ಕಡಿಮೆಯಾಗುವುದರ ಕಾರಣ ಲೋಹದಲ್ಲಿರುವ ದೋಷ. ಜೋಡಣೆಗೊಂಡಿರುವ ಅಣುಗಳ ಸಮುದಾಯವೇ ಲೋಹ. ಇದರಲ್ಲಿ ಮಧ್ಯೆ ಮಧ್ಯೆ ಕ್ರಮ ತಪ್ಪಿ ಖಾಲಿ ಜಾಗವಿರುವುದುಂಟು. ಅದೇ ರೀತಿ ಅಣುಗಳು ಕ್ರಮ ಮೀರಿ ಅಲ್ಲಿ ಇಲ್ಲಿ ಸೇರಿರುವುದೂ ಉಂಟು. ಬೇರೆ ಒಂದು ಜಾತಿಯ ಅಣುವೂ ಸೇರಿರಬಹುದು. ಅನೇಕ ಅಣುಗಳು ಒಂದೊಂದು ಕಡೆ ಸೇರಿ ಲೋಹದಲ್ಲಿ ಎಲ್ಲೆಗಳನ್ನು ಉಂಟುಮಾಡಲೂಬಹುದು. ಇವೆಲ್ಲವೂ ಲೋಹದಲ್ಲಿ ಕಂಡುಬರುವ ದೋಷಗಳೇ. ಇವೆಲ್ಲಕ್ಕಿಂತಲೂ ವಿದ್ಯುತ್ಪ್ರವಾಹದಲ್ಲಿ ಹೆಚ್ಚಾಗಿ ತಡೆಯನ್ನುಂಟುಮಾಡುವುದು ಅಣುಗಳು ಸ್ಥಿರವಾಗಿರದೆ ಆಂದೋಳನ ರೀತಿಯ ಚಲನೆಯಿಂದ ಕೂಡಿರುವ ಒಂದು ಪರಿಸ್ಥಿತಿ (ಈ ಆಂದೋಳನಕ್ಕೂ ತಾಪಕ್ಕೂ ನಿಕಟ ಸಂಬಂಧವಿದೆ). ಲೋಹದಲ್ಲಿ ಕಂಡುಬರುವ ರೋಧ ಬಹುಪಾಲು ತಾಪಕ್ಕನುಗುಣವಾಗಿರುವುದು ಸ್ವಾಭಾವಿಕ. ತಾಪ ಕಡಿಮೆಯಾದಂತೆ ರೋಧವೂ ಕಡಿಮೆಯಾಗುತ್ತದೆ. 0°K ತಾಪವನ್ನು ಸೇರುವ ಹೊತ್ತಿಗೆ ರೋಧ ಕ್ರಮೇಣವಾಗಿ ಕಡಿಮೆಯಾಗಿ ಅಂತ್ಯದಲ್ಲಿ ರೋಧ ಇಲ್ಲವಾಗುತ್ತದೆ. ಸಾಮಾನ್ಯವಾಗಿ ಲೋಹಗಳಲ್ಲಿ ದೋಷಗಳಿರುವುದರಿಂದ 0°K ತಾಪದ ಹತ್ತಿರದಲ್ಲಿದ್ದರೂ ಅಲ್ಪಸ್ವಲ್ಪ ರೋಧ ಉಳಿದೇ ಇರುತ್ತದೆ.

ಬಹಳ ಶುದ್ಧವಾದ ವಾಹಕವನ್ನು ಒಂದು ವಸ್ತುವಿನಿಂದ ತಯಾರಿಸಿದರೆ ದೋಷಗಳನ್ನು ಆದಷ್ಟು ಕಡಿಮೆ ಮಾಡಬಹುದು. ಅಲ್ಲದೆ ಹರಳಿನ ರೀತಿಯಲ್ಲಿ ವಾಹಕ ಇದ್ದರೆ ರೋಧ ಅಣುಚಲನೆಯಿಂದಲೇ ಎಂದು ಪರಿಗಣಿಸಬಹುದು. ಇಂಥ ಶುದ್ಧವಾಹಕವನ್ನು ಪಾದರಸದಿಂದ ತಯಾರಿಸಿ ವಿದ್ಯುತ್‌ರೋಧವನ್ನು ಹೊಸದಾಗಿ ದ್ರವೀಕರಿಸಿದ ಹೀಲಿಯಮ್ ಅನ್ನು ಉಪಯೋಗಿಸಿಕೊಂಡು ಅಳೆಯಲು ಉದ್ಯುಕ್ತನಾದವನು ಮಹಾವಿಜ್ಞಾನಿ ಕ್ಯಾಮರ್ಲಿಂಗ್ ಓನ್ಸ್. ಹೀಗೆ ಅಳೆದಾಗ ಪಾದರಸ ಎಣಿಸಿದಂತೆ ವರ್ತಿಸದೆ ತಾಪ 4°K ಯಲ್ಲಿರುವಾಗಲೇ ರೋಧವನ್ನು ಕಳೆದುಕೊಂಡಿತು. ಈ ಹೊಸ ಗುಣ ಬಹಳ ಆಶ್ಚರ್ಯ ವುಂಟುಮಾಡಿತು. ರೋಧವೇ ಇಲ್ಲವೆಂದರೆ ಎಷ್ಟು ವಿದ್ಯುತ್ಪ್ರವಾಹವನ್ನಾದರೂ ಅದರ ಮೂಲಕ ಕಳುಹಿಸಲು ಸಾಧ್ಯ ಎಂಬುದಂತೂ ಅತ್ಯಾಶ್ಚರ್ಯವೇ ಸರಿ. ಹೀಗೆ ಒಂದು ನಿರ್ದಿಷ್ಟ ತಾಪದಲ್ಲಿ ಹೊಸದೊಂದು ರೋಧರಹಿತ ಗುಣವನ್ನು ತೋರ್ಪಡಿಸುವುದೇ ಅತಿವಾಹಕತ್ವ, ಅಥವಾ ಅಧಿಕವಾಹಕತೆ (ಸೂಪರ್ ಕಂಡಕ್ಟಿವಿಟಿ). ಇಂಥ ವಾಹಕವನ್ನು ಅತಿವಿದ್ಯುತ್‌ವಾಹಕ ಅಥವಾ ಅಧಿಕವಾಹಕ ಎಂದು ಕರೆಯುವುದು ವಾಡಿಕೆ. ಈ ನಾಮಾಂಕಿತವನ್ನು ಕ್ಯಾಮರ್ಲಿಂಗ್ ಓನ್ಸ್ ಮಾಡಿದನು. ಈ ನಿರ್ದಿಷ್ಟ ತಾಪವನ್ನು (4°K)




ಚಿತ್ರ 1. ಲೋಹದಲ್ಲಿ ಕಂಡುಬರುವ ದೋಷಗಳು ಮತ್ತು ಎಲ್ಲೆಗಳು

ಸಾಮಾನ್ಯ ವಾಹಕತ್ವದಿಂದ ಅತಿವಾಹಕತ್ವಕ್ಕೆ ಮಾರ್ಪಾಡಾಗುವ ತಾಪವೆನ್ನಬಹುದು (ಸಂಕ್ರಮಣ ಉಷ್ಣತೆ, ಟ್ರಾನ್ಸಿಷನ್ ಟೆಂಪರೇಚರ್). ಇಲ್ಲಿಂದ 0°K ವರೆಗೂ ಲೋಹ ಅತಿವಾಹಕವಾಗಿಯೇ ಇರುತ್ತದೆ.

ಈ ವಿಶೇಷ ಗುಣವನ್ನು ತೋರ್ಪಡಿಸುವ ವಾಹಕಗಳು ಸಾಮಾನ್ಯವಾಗಿ ಸುತ್ತಮುತ್ತಲಿನ ತಾಪದಲ್ಲಿ (300°K) ಅಷ್ಟಾಗಿ ಒಳ್ಳೆಯ ವಾಹಕಗಳಾಗಿರುವುದಿಲ್ಲ. ಏಕೆಂದರೆ ಒಳ್ಳೆಯ ವಾಹಕಗಳಾದ ಕ್ಷಾರಲೋಹಗಳು (ಲೀಥಿಯಮ್, ಪೊಟ್ಯಾಸಿಯಮ್, ರುಬಿಡಿಯಮ್ ಮುಂತಾದವು) ಮತ್ತು ಉತ್ತಮ ಲೋಹಗಳಾದ ತಾಮ್ರ, ಬೆಳ್ಳಿ, ಚಿನ್ನ ಮುಂತಾದುವುಗಳಲ್ಲಿ ಈ ಅತಿವಾಹಕತ್ವ ಕಂಡುಬಂದಿಲ್ಲ. ಈ ವಿಶೇಷ ಗುಣ ಇಂಥ ಹರಳಿನ ರಚನೆಗೆ (ಸ್ಟ್ರಕ್ಚರ್) ಸೇರಿದ್ದೆಂದು ಹೇಳಲಾಗುವುದಿಲ್ಲ. ಏಕೆಂದರೆ ಎಲ್ಲ ಹರಳಿನ ರಚನೆಗಳೂ ಅತಿವಾಹಕಗಳಲ್ಲಿ ಕಂಡುಬಂದಿವೆ. ತವರವನ್ನು ತೆಗೆದುಕೊಂಡರೆ ಒಂದು ರಚನೆಯ ತವರ ಅತಿವಾಹಕವಾಗಿಯೂ ಇನ್ನೊಂದು ರಚನೆಯ ತವರ ಸಾಮಾನ್ಯ ವಾಹಕವಾಗಿಯೂ ಇದೆ. ಅಂದರೆ ಒಂದೇ ಜಾತಿಯ ಅಣುಗಳು ಬೇರೆ ಬೇರೆ ಜೋಡಣೆಯಲ್ಲಿರುವುದರಿಂದಲೂ ಅಲ್ಲದೆ ಕೆಲವು ಮೂಲವಸ್ತುಗಳು ಸಾಮಾನ್ಯ ವಾಹಕಗಳಾಗಿಯೇ ಇರುವುದರಿಂದಲೂ ಇಂಥವುಗಳಲ್ಲಿಯೇ ವಿಶೇಷಗುಣ ಕಂಡುಬರುತ್ತದೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಮಾರ್ಪಾಟನ್ನು

ತೋರಿಸುವ ತಾಪ ಹ್ಯಾಫ್ನಿಯಂ ಲೋಹಕ್ಕೆ ಬಹಳ ಕನಿಷ್ಠವಾಗಿಯೂ (0.35°K), ನೈಯೋಬಿಯಂ ಲೋಹಕ್ಕೆ ಹೆಚ್ಚಾಗಿಯೂ (8°K) ಇನ್ನುಳಿದುವುಗಳಿಗೆ ಇವೆರಡರ ಅಂತರದಲ್ಲಿಯೂ ಇರುವುದಾಗಿ ಕಂಡುಬಂದಿದೆ. ಈವರೆಗೆ 22 ಮೂಲವಸ್ತುಗಳು ಅತಿವಾಹಕತ್ವ ಗುಣ ಪಡೆದಿವೆಯೆಂದು ತಿಳಿದಿದೆ. ಕೆಲವು ಮಿಶ್ರಲೋಹಗಳಲ್ಲಿ ಇದು ಇನ್ನೂ ಹೆಚ್ಚಿನ ತಾಪದಲ್ಲಿರುವುದು ಗಮನಾರ್ಹವೇ ಸರಿ. ಉದಾಹರಣೆಗೆ, ನೈಯೋಬಿಯಂ ನೈಟ್ರೈಡ್‌ಗೆ 15.5°K. ಅಲ್ಲದೆ ಮೂಲವಸ್ತುಗಳು ಅತಿವಾಹಕಗಳಲ್ಲದಿದ್ದರೂ ಮಿಶ್ರವಾದಾಗ



ಚಿತ್ರ 2. ಸ್ಥಿರಕಾಂತಕ್ಷೇತ್ರದಲ್ಲಿ ಶೈತ್ಯೀಕರಣಕ್ಕೊಳಪಟ್ಟ ಗೋಳವೊಂದರಲ್ಲಿ ಮೈಸ್ನರ್ ಪರಿಣಾಮ

ಈ ವಿಶೇಷಗುಣವನ್ನು ತೋರಿಸುವುದು ಇನ್ನೂ ಆಶ್ಚರ್ಯಕರ. ಉದಾಹರಣೆಗೆ, ಚಿನ್ನ ಮತ್ತು ಬಿಸ್ಮತ್ (Au, Bi). ಅತಿವಾಹಕದ ಮುಖ್ಯ ಲಕ್ಷಣಗಳು ವಿದ್ಯುತ್‌ಗುಣ ಮತ್ತು ಕಾಂತಗುಣಗಳ ಮೇಲೆ ಅವಲಂಬಿಸಿವೆ. ವಿದ್ಯುತ್‌ರೋಧಕ ಇಲ್ಲದಿರುವುದನ್ನು ಈಗಾಗಲೇ ಗಮನಿಸಿದ್ದೇವೆ.

ಕಾಂತಗುಣವನ್ನು ಗಮನಿಸಿದರೆ ಮ್ಯಾಕ್ಸ್‌ವೆಲ್ ನಿಯಮದ ಆಧಾರದ ಮೇಲೆ

ಮತ್ತು ಓಮ್ ನಿಯಮದ ಪ್ರಕಾರ ($J=\sigma E$) ಕಾಂತದ ರೇಖೆಗಳು ಕಾಲವನ್ನನುಸರಿಸದೆ ನಿಗದಿಯಾದಷ್ಟೇ ಇರಬೇಕು ಎಂಬುದು ನಮಗೆ ತಿಳಿದುಬರುವುದು. ಅಂದರೆ ಅತಿವಾಹಕದೊಳಗೆ ಎಷ್ಟು ಕಾಂತರೇಖೆಗಳಿರುತ್ತವೋ ಅಷ್ಟು ಬದಲಾವಣೆಯಾಗದೆ ಹೊರಗಿನ ಕಾಂತಕ್ಷೇತ್ರವನ್ನು ತೆಗೆದ ಮೇಲೂ ಇದ್ದೇ ಇರುತ್ತವೆ. ಆದರೆ ಇದನ್ನು ಪ್ರಾಯೋಗಿಕವಾಗಿ ತೋರಿಸದೆ ಪ್ರಾರಂಭದಲ್ಲಿ ಸರಿಯೆಂದೇ ಭಾವಿಸಿದ್ದರು. ಈ ಭಾವನೆಯನ್ನು ತಿದ್ದಿದ ವ್ಯಕ್ತಿಗಳೆಂದರೆ ಮೈಸ್ನರ್ ಮತ್ತು ಓಷನ್‌ಫೆಲ್ಡ್ ಎಂಬ ಜರ್ಮನ್ ವಿಜ್ಞಾನಿಗಳು. ಇವರು ಪ್ರಯೋಗದ ಮೂಲಕ ಅತಿವಾಹಕದಲ್ಲಿ ಕಾಂತರೇಖೆಗಳು ಹೊರದೂಡಲ್ಪಡುತ್ತವೆ ಎಂದು ತೋರಿಸಿ ಕಾಂತಗುಣ ಅಡ್ಡಕಾಂತೀಯ (ಡಯಾಮ್ಯಾಗ್ನೆಟಿಕ್) ಆಗಿರುತ್ತದೆ ಎಂದು ದೃಢೀಕರಿಸಿದರು. ಅಡ್ಡಕಾಂತೀಯ ಗುಣ ಎಂದರೆ ಒಂದು ವಸ್ತು ಪ್ರಬಲಕಾಂತಕ್ಷೇತ್ರಕ್ಕೊಳಗಾದರೆ ಅದು ಎಷ್ಟರಮಟ್ಟಿಗೆ ಕಾಂತಪ್ರಭಾವಕ್ಕೆ ಮಣಿಯುತ್ತದೆ ಎಂಬ ಸೂಚಕ ಸಂಖ್ಯೆ ($x$). ಇದು ಯಾವಾಗಲೂ ಋಣವಾಗಿಯೇ ಇರುತ್ತದೆ ($x<0$). ಇದನ್ನೇ ಮೈಸ್ನರ್




ಚಿತ್ರ 3.

ಸಾಧನೆಯೆಂದು ಕರೆಯುವುದುಂಟು. ವಿದ್ಯುನ್ನಿರೋಧ ಅವಧಿ ತಾಪದಲ್ಲಿ ($T_c$, ಕ್ರಿಟಿಕಲ್ ಟೆಂಪರೇಚರ್) ಇಲ್ಲದಂತಾಗುವುದನ್ನು ಕಾಣಬಹುದು. ಇವುಗಳಲ್ಲಿ ಮುಖ್ಯವಾದ ರೋಧವೇ ಇಲ್ಲದಿರುವುದು ಮತ್ತು ಕಾಂತ ಬಲರೇಖೆಗಳನ್ನು ವಾಹಕದೊಳಗೆ ಹೋಗದಂತೆ ತಡೆಯುವುದು ಎಂಬ ಗುಣಗಳನ್ನು ಪರಿಗಣಿಸಲಾಗಿದೆ.

ಅತಿವಾಹಕಗಳಲ್ಲಿ ನಿರೋಧವೇ ಇಲ್ಲ ಎಂದು ಹೇಳಿದರೆ ಹೆಚ್ಚಿನ ವಿದ್ಯುತ್ ಸಾಧ್ಯವೆಂದೂ ಮತ್ತು ಉಷ್ಣದಿಂದ ಶಕ್ತಿ ನಷ್ಟಕ್ಕೆ ಅವಕಾಶವಿಲ್ಲವೆಂದೂ ಗೊತ್ತಾಗುತ್ತದೆ.

ಈ ಗುಣವನ್ನು ಉಪಯೋಗಿಸಿಕೊಂಡು ಹೆಚ್ಚು ಕಾಂತೀಯ ಕ್ಷೇತ್ರವನ್ನು ಪಡೆಯಲು ಸಾಧ್ಯವೆನಿಸುವುದು ಸಹಜವೇ ಸರಿ. ಕಾರಣ, ಅತಿವಾಹಕತ್ವವನ್ನು ಕಾಂತೀಯ ಕ್ಷೇತ್ರದಿಂದ ನಾಶಮಾಡಲು ಸಾಧ್ಯವಿರುವುದರಿಂದ ಸಾಮಾನ್ಯ ವಾಹಕದಿಂದ ಅತಿವಾಹಕವಾಗಿ ಮಾರ್ಪಾಡಾಗುವ ತಾಪವನ್ನು Tc°Kಯಿಂದ ಗುರುತಿಸಿದೆ. ಅದಕ್ಕಿಂತ ಕಡಿಮೆ ತಾಪದಲ್ಲಿ ಒಂದು ನಿರ್ದಿಷ್ಟ ಕಾಂತಕ್ಷೇತ್ರದಿಂದ ಈ ವಿಶೇಷಗುಣವನ್ನು ನಾಶಮಾಡಲು ಇರುವ ಸಂಬಂಧವನ್ನೂ ತೋರಿಸಿದೆ. ಕಾಂತಕ್ಷೇತ್ರ ಈ ನಿರ್ದಿಷ್ಟ ಬೆಲೆಗಿಂತ ಕಡಿಮೆ ಇದ್ದರೆ ಈ ಗುಣವನ್ನು ನಾಶಮಾಡಲು ಸಾಧ್ಯವಿಲ್ಲ. ಈ ಕಾಂತಕ್ಷೇತ್ರವನ್ನು ವಿದ್ಯುತ್ಪ್ರವಾಹದಿಂದಲಾದರೂ ಪಡೆಯಬಹುದಾದ್ದರಿಂದ ಅತಿವಾಹಕಕ್ಕೆ ಒಂದು ನಿರ್ದಿಷ್ಟ ವಿದ್ಯುತ್ಪ್ರವಾಹದ ಮೇಲೆ ಕಳುಹಿಸಲು ಸಾಧ್ಯವಿಲ್ಲ (ಹೆಚ್ಚು ಹೆಚ್ಚು ಕಾಂತಕ್ಷೇತ್ರವನ್ನು ನೈಯೋಬಿಯನ್ ನೈಟ್ರೈಡ್‌ನ್ನು ಉಪಯೋಗಿಸಿ ಪಡೆಯಲು ಸಾಧ್ಯವಾಗಿದೆ). ಮೈಸ್ನರ್ ಮತ್ತು ಓಷನ್‌ಫೆಲ್ಡ್ ಅತಿವಾಹಕತ್ವವನ್ನು ಸಾಧಾರಣವಾಹಕತ್ವವಾಗಿಯೂ ಮತ್ತು ಸಾಧಾರಣವಾಹಕತ್ವವನ್ನು ಅತಿವಾಹಕತ್ವವಾಗಿಯೂ ಕಾಂತಕ್ಷೇತ್ರದಿಂದ ಬದಲಾಯಿಸಿ ಒಂದು ಸ್ವಿಚ್ ರೀತಿ ಉಪಯೋಗಿಸಬಹುದೆಂದು ತೋರಿಸಿದ್ದಾರೆ. ಇದಲ್ಲದೆ ಅತಿವಾಹಕತ್ವ ವನ್ನು ಉಪಯೋಗಿಸಿಕೊಂಡು ಒಂದು ತಂತಿಯ ಸುರುಳಿಯಲ್ಲಿ ಯಾವುದಾದರೊಂದು ವಿಧದಿಂದ ವಿದ್ಯುತ್ಪ್ರವಾಹವೇರ್ಪಡುವಂತೆ ಮಾಡಿದರೆ ಆ ಪ್ರವಾಹ ವರ್ಷಗಟ್ಟಲೆ ಕುಂದದೆ ಇರುತ್ತದೆಂದು ಕಂಡುಹಿಡಿದಿದ್ದಾರೆ. ಇದನ್ನೇ ಚಿರವಿದ್ಯುತ್ (ಪರ್ಸಿಸ್ಟೆಂಟ್ ಕರೆಂಟ್) ಎನ್ನುವುದು. ಈ ವಿಶೇಷ ಗುಣವನ್ನು ಕಂಪ್ಯೂಟರ್‌ನಲ್ಲಿ ಜ್ಞಾಪಕಶಕ್ತಿಯನ್ನು ಕೂಡಿಡುವ ಅಂಗವಾಗಿ ಉಪಯೋಗಿಸುವುದು ಸಾಧನೀಯವಾಗಿ ಕಂಡುಬಂದಿದೆ. ಇದರಿಂದ ಈ ಭಾಗದಲ್ಲಿ ಸಂಶೋಧನೆಯೂ ಇನ್ನೂ ಹೆಚ್ಚಿನ ಪ್ರಮಾಣಗಳಲ್ಲಿ ನಡೆಯುತ್ತಿದೆ.

ಒಂದೇ ತರಹದ ಲೋಹದಲ್ಲಿಯೇ ಅನೇಕ ಸಮಸ್ಥಾನಿಗಳಿರುವುದರಿಂದ (ಐಸೊಟೋಪ್ಸ್) ಅಣುವಿನ ತೂಕಕ್ಕೂ ಅತಿವಾಹಕತ್ವಕ್ಕೆ ಪರಿವರ್ತನೆಯಾಗುವ ತಾಪಕ್ಕೂ ಪ್ರಾಯೋಗಿಕವಾಗಿ ಸಂಬಂಧವನ್ನು ಕಂಡುಹಿಡಿದಿದ್ದಾರೆ. ($T_c M^{1/2}$ = ಸ್ಥಿರಾಂಕ). ಇದನ್ನು ಕಂಡುಹಿಡಿಯುವ ಮೊದಲೇ ಫ್ರೋಲಿಷ್ ಎಂಬ ವಿಜ್ಞಾನಿ ತನ್ನ ವಾದದ ಆಧಾರದ ಮೇಲೆ ಈ ತರಹದ ಸಂಬಂಧವನ್ನು ಸೂಚಿಸಿದ್ದ. ಇದು ದೃಢವಾದಾಗಿನಿಂದ ಫ್ರೋಲಿಷ್ ವಾದಕ್ಕೆ ಮನ್ನಣೆ ಹೆಚ್ಚಾಯಿತು. ಇದೇ ರೀತಿಯ ವಾದವನ್ನು ಅದೇ ಕಾಲದಲ್ಲಿ ಬರ್ಡೀನ್ ಎಂಬ ವಿಜ್ಞಾನಿ ಪ್ರತಿಪಾದಿಸಿದ್ದ. ಇವರಿಬ್ಬರ ವಾದ ವಿದ್ಯುತ್‌ವಾಹಕಕ್ಕೆ ಕಾರಣವಾದ ಎಲೆಕ್ಟ್ರಾನ್‌ಗಳು ಪರಮಾಣುಗಳ ಆಂದೋಳನ ರೀತಿಯ ಚಲನೆಯಿಂದಾದ ಫೋನಾನುಗಳ ಮೂಲಕ ಒಂದಕ್ಕೊಂದು ಪ್ರಭಾವಯುತವಾಗಿ ಫರ್ಮಿಮಟ್ಟದಲ್ಲಿ ಎಲೆಕ್ಟ್ರಾನ್‌ಗಳು ಒಂದು ದುಂಡುಗೋಳ ಆಗುವಂತೆ ವಿಂಗಡವಾದಾಗ ಈ ಅತಿವಾಹಕತ್ವ ಉಂಟಾಗಲು ಸಾಧ್ಯ ಎಂದು ತಿಳಿಸಿತು. ಈ ದುಂಡುಗೋಳ ಮತ್ತು ಒಳಗಡೆ ತೋರಿಸಿರುವ ಫರ್ಮಿಮಟ್ಟಕ್ಕೂ ಇರುವ ಅಂತರ ಒಂದು ಫೋನಾನಿನ ಶಕ್ತಿಗೆ ಅನುಗುಣವಾಗುತ್ತದೆ.

ಮುಂದಿನ ಬದಲಾವಣೆ ಎಲೆಕ್ಟ್ರಾನಿನ ಭ್ರಮಣೆಗೆ (ಸ್ಪಿನ್) ಸಂಬಂಧಿಸಿದಂತೆ ಇರುವ ಎರಡು ಸಾಧ್ಯತೆಗಳು. ಒಂದೊಂದಕ್ಕೂ ಶೂನ್ಯ ಉಷ್ಣತೆಯಲ್ಲೂ ಶಕ್ತಿ ಇರುವುದು ಕ್ವಾಂಟಮ್ ಸಿದ್ಧಾಂತದಿಂದ ತಿಳಿದುಬಂದಿದೆ. ಅತಿವಾಹಕತ್ವಕ್ಕೆ ಸಮರ್ಥ ಕಾರಣಗಳನ್ನು ಕೊಟ್ಟವರು ಬಾರ್ಡೀನ್, ಕೂಪರ್ ಮತ್ತು ಶ್ರೇಫರ್ ಎಂಬ ವಿಜ್ಞಾನಿಗಳು. ಇವರು ಪ್ರತಿಪಾದಿಸಿದ ಸಿದ್ಧಾಂತವನ್ನು ಬಿ.ಸಿ.ಎಸ್ ಸಿದ್ಧಾಂತವೆಂದು ಕರೆಯುತ್ತಾರೆ. (ಎನ್.ಎಂ.ಎ.)

$Curl\ E =$

**ಅಲ್ಪವೃಷ್ಟಿ ವ್ಯವಸಾಯ :** ಅಲ್ಪವೃಷ್ಟಿ ಅನಿಶ್ಚಿತ ವೃಷ್ಟಿ ಪ್ರದೇಶಗಳಲ್ಲಿ ಬೆಳೆ ತೆಗೆಯುವ ಸಾಗುವಳಿ ಪದ್ಧತಿ (ಡ್ರೈ ಫಾರ್ಮಿಂಗ್). ಇದಕ್ಕೆ ಒಣಬೇಸಾಯ, ಖುಷ್ಕಿಬೇಸಾಯ ಎಂಬ ಹೆಸರುಗಳೂ ಇವೆ. ಪಂಜಾಬ್, ರಾಜಸ್ತಾನ, ಉತ್ತರಪ್ರದೇಶ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ಮಳೆಕೊರತೆಯ ಪ್ರದೇಶಗಳಲ್ಲಿ ಈ ಪದ್ಧತಿ ರೂಢಿಯಲ್ಲಿದೆ. ಭಾರತದ ಒಟ್ಟು ಸಾಗುವಳಿ ಕ್ಷೇತ್ರದ ಸು. ಶೇ.22 ರಷ್ಟು ಭಾಗ ಒಣ ಬೇಸಾಯಕ್ಕೊಳಪಟ್ಟಿದೆ. ಈ ಪ್ರದೇಶಗಳಲ್ಲಿ ಮಳೆ 15-35 ಸೆಂ.ಮೀ.ವರೆಗೆ ಬೀಳುವುದು. ದೇಶದ ವಾಯವ್ಯ ಭಾಗದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿ ಬೇಸಿಗೆ ಕಾಲದಲ್ಲಿ ಆಗುವುದು. ಕರ್ನಾಟಕ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳ ಕೆಲ ಭಾಗಗಳಲ್ಲಿ ಹಿಂಗಾರು ಮಳೆ ಚಳಿಗಾಲದಲ್ಲಿ ಬೀಳುವುದು. ಇಲ್ಲೆಲ್ಲ ಅಲ್ಪ ಪ್ರಮಾಣದಲ್ಲಿ ಮಳೆಯಾಗುವುದಲ್ಲದೆ ಮಳೆಗಾಲದಲ್ಲಿಯೂ ಮಳೆ ಬೀಳದ ದಿನಗಳು ಹೆಚ್ಚು. ಹೀಗಾಗಿ ಮೇಲಿಂದ ಮೇಲೆ ತೀವ್ರ ಅನಾವೃಷ್ಟಿ. ದಕ್ಷಿಣದ ತಪ್ಪಲಿನ ಎರೆ ಭೂಮಿಗಳಲ್ಲಿ ನೀರು ಅಲ್ಪ ಪ್ರಮಾಣದಲ್ಲಿ ಇಂಗುವುದರಿಂದ ಬೆಳೆಗಳಿಗೆ ಮಳೆ ನೀರು ಸಾಕಾಗುವುದಿಲ್ಲ.

ಅಲ್ಪವೃಷ್ಟಿ ಪ್ರದೇಶಗಳಲ್ಲಿ ಮುಖ್ಯವಾಗಿ ಸಜ್ಜೆ, ನವಣೆ, ರಾಗಿ, ಜೋಳ, ಸಾಸಿವೆ ಮುಂತಾದುವುಗಳನ್ನು ಬೆಳೆಯುತ್ತಾರೆ. ಉತ್ತರ ಭಾರತದಲ್ಲಿ ಸಂಗ್ರಹಿಸಿಟ್ಟ ನೀರಿರುವ ಪ್ರದೇಶಗಳಲ್ಲಿ ಚಳಿಗಾಲದ ಉಪಬೆಳೆಗಾಗಿ ಕಡಲೆ, ಬಾರ್ಲಿ, ಸಾಸಿವೆ, ಎಣ್ಣೆಕಾಳು ಮತ್ತು ಗೋಧಿಗಳನ್ನು ಬೆಳೆಸುತ್ತಾರೆ. ಗೋರಿಕಾಯಿ, ಉದ್ದು, ಹೆಸರು ಮುಂತಾದ ದ್ವಿದಳಧಾನ್ಯಗಳನ್ನು ಸಜ್ಜೆಯ ಜೊತೆ ಮಿಶ್ರ ಬೆಳೆಯಾಗಿ ಬೆಳೆಸುವುದು ಸಾಮಾನ್ಯ. ಗುಜರಾತ್, ಮಹಾರಾಷ್ಟ್ರ ಮತ್ತು ದಖನ್ನಿನ ತಪ್ಪಲಿನ ಕೆಲಭಾಗಗಳಲ್ಲಿ ಸಜ್ಜೆ, ದ್ವಿದಳ ಧಾನ್ಯಗಳು ಮತ್ತು ಎಳ್ಳನ್ನು ಬೆಳೆಸುವ ಕ್ರಮವಿದೆ. ಕೆಲವು ಮಜ್ಜಿರೆ (ಹೆವಿ ಬ್ಲ್ಯಾಕ್ ಸಾಯಿಲ್) ಭೂಮಿಗಳಲ್ಲಿ ಅಗಸೆ, ಗೋಧಿ ಬೆಳೆಗಳನ್ನು ಚಳಿಗಾಲದ ಬೆಳೆಗಳಾಗಿ ತೆಗೆಯುತ್ತಾರೆ. ದಖ್ಖನ್ನಿನ ತಪ್ಪಲಿನ ಮಧ್ಯೆ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಜೋಳ, ಶೇಂಗ (ಕಡಲೆಕಾಯಿ) ಮತ್ತು ಹತ್ತಿ ಪ್ರಮುಖ ಬೆಳೆಗಳಾಗಿವೆ. ದಕ್ಷಿಣ ಕರ್ನಾಟಕದ ಅಲ್ಪವೃಷ್ಟಿ ಪ್ರದೇಶಗಳಲ್ಲಿ ರಾಗಿ ಪ್ರಧಾನ ಬೆಳೆ. ಇಟಲಿಯ ಕಿರುಧಾನ್ಯದ (ಮಿಲೆಟ್) ಪೈರನ್ನು ಕರ್ನಾಟಕ ಮತ್ತು ತಮಿಳುನಾಡಿನ ಕೆಂಪು ಭೂಮಿಯಲ್ಲಿ ಬೆಳೆಸುತ್ತಾರೆ. ತೊಗರಿ, ಉದ್ದುಗಳನ್ನು ರಾಗಿಯಂಥ ದವಸಧಾನ್ಯಗಳ ಜೊತೆಗೆ ಮಿಶ್ರ ಬೆಳೆಯಾಗಿ ಬೆಳೆಸುವರು. ಕೆಲ ಒಣ ಪ್ರದೇಶಗಳಲ್ಲಿ ಒಣಗಡಲೆಯನ್ನು ಜೋಳ ಅಥವಾ ಸಜ್ಜೆಯೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಸುವುದಿದೆ.

**ಅಲ್ಪವೃಷ್ಟಿ ವ್ಯವಸಾಯದಲ್ಲಿ ನಾಲ್ಕು ಹಂತಗಳಿವೆ:** 1. ಭೂಮಿಯಲ್ಲಿ ನೀರನ್ನು ಹಿಂಗಿಸಲು ನೇಗಿಲು ಹೊಡೆಯುವುದು 2. ಮಳೆ ನೀರನ್ನು ಭೂಮಿಯಲ್ಲಿ ಹಿಂಗಿಸಿ ಸಂಗ್ರಹಿಸುವುದು 3. ನೆಲದ ಮೇಲೆ ಸಣ್ಣಹುಡಿಮಣ್ಣಿನ ಪದರು ರಚಿಸುವುದು 4. ಬಿತ್ತನೆಗೆ ಮೊದಲು ಮತ್ತು ಬಿತ್ತನೆಯ ನಂತರದ ಸಾಗುವಳಿ ಕ್ರಮಗಳು.

ಮೇಲಿನ ನಾಲ್ಕು ಹಂತಗಳು ಬೆಳೆಗಳಿಗೆ ಮಳೆನೀರನ್ನು ಹೆಚ್ಚು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಮತ್ತು ಉತ್ಪಾದನೆ ಹೆಚ್ಚಿಸಲು ನೆರವಾಗುತ್ತವೆ. ಸೋಲಾಪುರ (ಮಹಾರಾಷ್ಟ್ರ), ರೋಹಟಕ (ಪಂಜಾಬ್), ಕರ್ನಾಟಕ ರಾಜ್ಯದ ಬಿಜಾಪುರ, ರಾಯಚೂರು, ಹಗರಿ ಈ ಸ್ಥಳಗಳಲ್ಲಿ ಸ್ಥಾಪಿತವಾದ ಭಾರತೀಯ ಕೃಷಿಸಂಶೋಧನ ಕೇಂದ್ರದ ಅಲ್ಪವೃಷ್ಟಿವ್ಯವಸಾಯ ಕೇಂದ್ರಗಳಲ್ಲಿ ಈ ನಾಲ್ಕು ಹಂತಗಳ ಮೇಲೆ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ.

ಕ್ಷೇತ್ರ ಸಾಗುವಳಿ ಕ್ರಮಗಳು: ಅಲ್ಪವೃಷ್ಟಿ ವ್ಯವಸಾಯ ಪದ್ಧತಿಗಳು ಭೂಮಿಯ ಗುಣಾನುಸಾರ ಭಿನ್ನವಾಗಿವೆ. ದಖನ್ನಿನ ತಪ್ಪಲಿನ ಕಪ್ಪುಭೂಮಿಯಲ್ಲಿ ಅನುಸರಿಸಲಾದ ವಿವಿಧ ಕ್ರಮಗಳು ಹೀಗಿವೆ:

1. ಸಮಪಾತಳಿಯ, ಒಡ್ಡು ಹಾಕುವುದು ಮತ್ತು ಭೂಮಿಯನ್ನು ಸಣ್ಣ ಭಾಗಗಳನ್ನಾಗಿ ವಿಂಗಡಿಸುವುದು 2. ಭೂಮಿಯ 20 ಸೆಂ. ಮೀ. ನಷ್ಟು ಮೇಲ್ಪ್ರೈಯನ್ನು ತಿರುವಿಹಾಕುವುದು 3. ಮಳೆಗಾಲದ ತಿಂಗಳುಗಳಲ್ಲಿ ಹಿಂಗಾರು ಪೈರಿಗಾಗಿ ಮೀಸಲಿಟ್ಟ ಭೂಮಿಯನ್ನು ಹರಗುವುದು. 4. ದನದ ಗೊಬ್ಬರವನ್ನು ತೆಳುವಾಗಿ ಭೂಮಿಯ ಮೇಲೆ ಹರಡುವುದು 5. ಬೀಜದ ಪ್ರಮಾಣ ತಗ್ಗಿಸಲು ಎರಡು ಸಾಲುಗಳ ಮಧ್ಯೆ ಸ್ವಲ್ಪ ಅಗಲವಾಗಿ ಕೂರಿಗೆಯಿಂದ ಬಿತ್ತುವುದು 6. ಎಡೆ ಹೊಡೆಯುವುದು 7. ಸುಧಾರಿಸಿದ ಮತ್ತು ತಜ್ಞರು ಶಿಫಾರಸು ಮಾಡಿದ ತಳಿ ಬೀಜಗಳನ್ನು ಬಿತ್ತುವುದು 8. ಎರಡು ವರ್ಷಕೊಮ್ಮೆ ಭೂಮಿಯನ್ನು ಪಡ ಬೀಳಿಸುವುದು.

ಈ ಪದ್ಧತಿಯನ್ನು ಅಲ್ಪ ಸ್ವಲ್ಪ ಬದಲಾಯಿಸಿ ಕೆಂಪು ಭೂಮಿಗಳಲ್ಲೂ ಉಪಯೋಗಿಸ ಬಹುದು. ಈ ಸಾಗುವಳಿ ಪದ್ಧತಿಗಳಿಂದ ಮಳೆಯ ನೀರಿನ ಸಮರ್ಪಕ ಉಪಯೋಗ, ಭೂಮಿಯ ಸಾರದ ರಕ್ಷಣೆ ಮತ್ತು ಲಾಭದಾಯಕ ಉತ್ಪನ್ನ ಮುಂತಾದ ಅನುಕೂಲಗಳಿವೆ.

ಇತ್ತೀಚೆಗೆ ಭೂಜಲ ಸಂರಕ್ಷಣಾ ಕ್ರಮಗಳ ಜೊತೆಗೆ ಅಲ್ಪ ಪ್ರಮಾಣದ ಕೃತಕ ಗೊಬ್ಬರಗಳ ಬಳಕೆಯಿಂದ ಬೆಳೆಗಳ ಉತ್ಪನ್ನವನ್ನು ಹೆಚ್ಚಿಸಲಾಗುತ್ತಿದೆ. ಕೃತಕ ಗೊಬ್ಬರ ಮತ್ತು ಬೀಜಗಳನ್ನು ಕ್ರಮವಾಗಿ ನಿರ್ದಿಷ್ಟ ಆಳಕ್ಕೆ ಹಾಕಲು ಉಪಯುಕ್ತ ಕೂರಿಗೆಗಳನ್ನು ರೂಪಿಸಲಾಗಿದೆ. ಕೃತಕ ಗೊಬ್ಬರವನ್ನು ಬೀಜದ ಪಕ್ಕಕ್ಕೆ ಅದೇ ಮಟ್ಟದಲ್ಲಿ ಹಾಕಿದರೆ ಸೂಕ್ಷ್ಮ ಸ್ವಭಾವದ ಹತ್ತಿ, ಶೇಂಗಾ (ಕಡಲೆಕಾಯಿ) ಮತ್ತು ಬಿರುಸು ಸ್ವಭಾವದ ಸಜ್ಜೆ, ರಾಗಿ, ನವಣೆ, ಜೋಳ ಮುಂತಾದುವು ಗೊಬ್ಬರ ಮತ್ತು ಲಭ್ಯವಿರುವ ತೇವ ಸರಿಯಾಗಿ ಉಪಯೋಗಿಸಿಕೊಂಡು ಉತ್ತಮವಾಗಿ ಬೆಳೆಯುತ್ತವೆ. ಪಡಭೂಮಿಗಳಲ್ಲಿ ಮಳೆ ನೀರನ್ನು ಸಂಗ್ರಹಿಸಲು ಸ್ಕೂಪರ್ (ಭೂಮಿಯಲ್ಲಿ ಸಣ್ಣ ಸಣ್ಣ ಬಟ್ಟಲಾಕಾರದ ತಗ್ಗುಗಳನ್ನು ತೋಡುವುದು) ಯಂತ್ರ ಉಪಯುಕ್ತ. ಅಲ್ಪವೃಷ್ಟಿಯ ಪ್ರದೇಶಗಳ ಹೊಲಗಳಲ್ಲಿ ಸಮಪಾತಳಿಯ ಒಡ್ಡುಗಳನ್ನು ಹಾಕಲು ಬಂಡ್ ಫಾರ್ಮರ್ (ಒಡ್ಡು ರಚಿಸುವ ಉಪಕರಣ)ಗಳನ್ನು ಉಪಯೋಗಿಸಲಾಗಿದೆ. ಭೂಮಿಯ ಮಣ್ಣನ್ನು ಆಳಕ್ಕೆ ತಿರುವು ಮುರುವು ಮಾಡಲು ಕಬ್ಬಿಣದ ನೇಗಿಲುಗಳು ತಯಾರಾಗಿವೆ. ಇವು ರೈತರ ಮೆಚ್ಚುಗೆ ಗಳಿಸಿವೆ. ಬಿತ್ತನೆ ತರುವಾಯದ ಸಾಗುವಳಿಯ ಎಡೆಗುಂಟೆ ಉಪಕರಣಗಳಿಂದ ಹೊಲದ ಕಸಕಡ್ಡಿಗಳನ್ನು ತೆಗೆಯಲು ಸಾಧ್ಯವಾಗಿದೆ. (ಪಿ.ಸಿ.ಆರ್.)

**ಅಲ್ಪಸಂಖ್ಯಾತರ ಹಕ್ಕುಗಳು :** ಯಾವುದೇ ದೇಶದ ಬಹುಜನರ ಬುಡಕಟ್ಟು, ಮತ, ಭಾಷೆ, ಆಚಾರವ್ಯವಹಾರ ಇತ್ಯಾದಿಗಳು ಒಂದು ತೆರನಾಗಿದ್ದು, ಇವುಗಳಿಂದ ಭಿನ್ನವಿರುವ ಬುಡಕಟ್ಟು, ಧರ್ಮ, ಭಾಷೆ ಇತ್ಯಾದಿಗಳನ್ನನುಸರಿಸುವ ಜನ ಸ್ವಲ್ಪವಿದ್ದರೆ ಅವರನ್ನು ಅಲ್ಪಸಂಖ್ಯಾತರು ಎನ್ನುತ್ತೇವೆ. ಜಾತಿಪದ್ಧತಿ ಇರುವ ಭಾರತ ದೇಶದಲ್ಲಿ ಪ್ರತ್ಯೇಕ ಆಚಾರ ವ್ಯವಹಾರಗಳಿಂದ ಅಲ್ಪಸಂಖ್ಯಾತರಾಗಿರುವ ಅನೇಕ ಪಂಗಡಗಳನ್ನು ಕಾಣಬಹುದು.

ಅಲ್ಪಸಂಖ್ಯಾತರ ಹಕ್ಕಿನ ಸಮಸ್ಯೆ ಎಲ್ಲ ದೇಶಗಳಲ್ಲೂ ಇರುವುದೇ ಆಗಿದೆ. ಸ್ಥೂಲವಾಗಿ ಸಮಸ್ಯೆಯ ಸ್ವರೂಪ ಹೀಗಿದೆ: ಬಹುಸಂಖ್ಯಾತರು ಅವಲಂಬಿಸಿರುವ ಧರ್ಮ, ಭಾಷೆ, ಆಚಾರವ್ಯವಹಾರಗಳನ್ನೇ ಅಲ್ಪಸಂಖ್ಯಾತರು ಅನುಸರಿಸಬೇಕೆ ಅಥವಾ ತಮ್ಮ ಮತ, ಭಾಷೆ ಮತ್ತು ಆಚಾರವ್ಯವಹಾರಗಳನ್ನು ಅವಲಂಬಿಸುವ ಹಕ್ಕು ಅವರಿಗಿರಬೇಕೆ? ಒಂದು ಪಕ್ಷ ಈ ಸೌಲಭ್ಯಕ್ಕೆ ಅವಕಾಶ ಕೊಡುವುದಾದರೆ ಯಾವ ಪ್ರಮಾಣದಲ್ಲಿ ಮತ್ತು ಹೇಗೆ ಅವಕಾಶಗಳನ್ನು ಕಲ್ಪಿಸಿಕೊಡಬೇಕು?

ಅಮೆರಿಕದಲ್ಲಿನ ನೀಗ್ರೋಗಳ ಪ್ರಶ್ನೆ ಸಂಪೂರ್ಣವಾಗಿ ಇನ್ನೂ ಇತ್ಯರ್ಥವಾಗಿಲ್ಲ. ಪರರಾಜ್ಯಗಳಲ್ಲಿ ವಾಸಿಸುತ್ತಿದ್ದ ಜರ್ಮನ್ ಅಲ್ಪಸಂಖ್ಯಾತರ ರಕ್ಷಣೆಯಾಗಬೇಕು ಎಂಬ ಸೋಗಿನಲ್ಲಿ ಹಿಟ್ಲರ್ ನಾಜಿ ಜರ್ಮನಿಯ ವಿಸ್ತರಣೆಯನ್ನು ಕೈಗೊಂಡ. ಅಲ್ಪಸಂಖ್ಯಾತರಿಗೆ ಸಮಾನ ಸ್ಥಾನಮಾನಗಳು ಸಿಗಬೇಕೆಂಬ ಕಾರಣದಿಂದಾಗಿ ದೇಶಗಳ ವಿಭಜನೆ ಆಗಿರುವುದೂ ಉಂಟು. ಕಂಟಕಪ್ರಾಯರೆಂಬ ದೂರು ಹೊರಿಸಿ ಹಿಟ್ಲರ್ ತನ್ನ ದೇಶದಲ್ಲಿದ್ದ ಅಲ್ಪಸಂಖ್ಯಾತ ರಾದ ಯಹೂದಿಯರನ್ನು ನಿರ್ನಾಮ ಮಾಡಲು ಯತ್ನಿಸಿದ. ಶತಮಾನಗಳು ಕಳೆದರೂ ಅಲ್ಪಸಂಖ್ಯಾತರು ಬಹುಸಂಖ್ಯಾತರೊಡನೆ ಬೆರೆಯದೆ ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲು ನಿರಂತರ ಯತ್ನ ಮಾಡಿ, ರಾಷ್ಟ್ರಜೀವನದಲ್ಲಿನ ಶಾಂತಿಯನ್ನು ಕಲಕಿರುವ ನಿದರ್ಶನಗಳೂ ಉಂಟು. ಹಲವು ಕಡೆ ದಮನಕ್ಕೆ ಒಳಗಾದವರು ಪ್ರತ್ಯೇಕತಾ ಚಳವಳಿಯನ್ನು ಮುಂದಿಟ್ಟರೆ ಇನ್ನು ಕೆಲವು ಕಡೆ ಚಳವಳಿ ಪ್ರತಿಗಾಮಿ ಸ್ವರೂಪಕ್ಕೆ ತಿರುಗಿದೆ.

ಎಲ್ಲ ಅಲ್ಪಸಂಖ್ಯಾತರುಗಳನ್ನೂ ಸ್ಥಳಾಂತರಗೊಳಿಸುವುದು ಇಲ್ಲವೆ ಇವರಿಗಾಗಿಯೆ ಪ್ರತ್ಯೇಕ ರಾಜ್ಯವೊಂದನ್ನು ಏರ್ಪಡಿಸುವುದು ಅಷ್ಟು ಸುಲಭದ ಕೆಲಸವಲ್ಲ. ಈ ಕಾರಣದಿಂದ ಪ್ರತಿದೇಶದಲ್ಲೂ ಅಲ್ಪಸಂಖ್ಯಾತರ ರಕ್ಷಣೆಗಾಗಿ ಹಲವು ಹಕ್ಕುಗಳನ್ನು ಕಾದಿಡಲಾಗಿದೆ. ಕೆಲವು ದೇಶಗಳಲ್ಲಿ ಅಲ್ಪಸಂಖ್ಯಾತರೇ ಬಹುಸಂಖ್ಯೆಯಲ್ಲಿರುವ ಪ್ರದೇಶಗಳನ್ನು ವಿಂಗಡಿಸಿ ಸ್ವಯಮಾಡಳಿತ ಪ್ರದೇಶಗಳನ್ನಾಗಿ ಅಂಗೀಕರಿಸುವುದೂ ಉಂಟು. ಭಾರತ ಸಂವಿಧಾನದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಮೂಲಭೂತ ಹಕ್ಕುಗಳಾಗಿ ಪರಿಗಣಿಸಲಾಗಿದೆ (ವಿಧಿ: 25–30). ರಾಷ್ಟ್ರ ಮತ್ತು ಸಮಾಜದ ಹಿತಗಳಿಗೆ ಧಕ್ಕೆ ಬಾರದಂತೆ, ಅಲ್ಪಸಂಖ್ಯಾತರು ಬಹುಸಂಖ್ಯಾತರ ಬಂಡಾಯಕ್ಕೆ ಒಳಗಾಗದಂತೆ, ಬಹುಸಂಖ್ಯಾತ ರಾಷ್ಟ್ರೀಯರಂತೆ ಅಲ್ಪಸಂಖ್ಯಾತರೂ ತಮ್ಮ ಧರ್ಮ, ಭಾಷೆ ಮತ್ತು ಆಚಾರ ವ್ಯವಹಾರಗಳನ್ನು ಉಳಿಸಿಕೊಳ್ಳಲು, ಅಭಿವೃದ್ಧಿಪಡಿಸಿಕೊಳ್ಳಲು ಎಲ್ಲ ಅನುಕೂಲತೆಗಳನ್ನೂ ಕಲ್ಪಿಸಿಕೊಡಲಾಗಿದೆ. (ಎಲ್.ಎಸ್.)

**ಅಲ್ಪಸಂಮರ್ದ :** ವಾಯುಮಂಡಲದ ಸಂಮರ್ದಕ್ಕಿಂತ ಗಮನಾರ್ಹವಾಗಿ ಕಡಿಮೆಯಿರುವ ಸಂಮರ್ದ (ಲೋಪ್ರೆಷರ್). ***(ನೋಡಿ– ಅಧಿಕ ಸಂಮರ್ದ)***. ಅತ್ಯುನ್ನತ ಪ್ರದೇಶಗಳಿಗೆ (ಹಿಮಾಲಯ ಪರ್ವತಾಗ್ರಗಳು, ಅಂತರಿಕ್ಷಯಾನ) ಹೋದಾಗ ಅಲ್ಪಸಂಮರ್ದ ಸ್ವಾಭಾವಿಕವಾಗಿ ಒದಗುವುದು. ಬೇರೆ ಪ್ರದೇಶಗಳಲ್ಲಿ ಇದನ್ನು ಕೃತಕವಾಗಿ ತಯಾರಿಸಬೇಕು. ಈ ಕ್ರಿಯೆಯಲ್ಲಿ ವಾಯುರೇಚಕ (ಏರ್ ಪಂಪ್) ಬಲು ಮುಖ್ಯ. ಆಟೋಫಾನ್ ಗೆರಿಕ್ ಎಂಬಾತ ವಾಯುರೇಚಕವನ್ನು (1650) ನಿರ್ಮಿಸಿ ಮಾಗ್ಡೆಬರ್ಗ್‌ನಲ್ಲಿ ತೋರಿಸಿದ ಅರ್ಧಗೋಳಗಳ ಪ್ರಯೋಗ ವಾತಾವರಣದ ಸಂಮರ್ದವನ್ನು ವ್ಯಕ್ತಪಡಿಸಿತು (1654). ಇವನ ರೇಚಕದಿಂದ ವಾತಾವರಣದ ಒತ್ತಡದಲ್ಲಿ 1/1000 ಪಾಲಿನಷ್ಟು (ಎಂದರೆ ಸ್ಥೂಲವಾಗಿ 1 ಮಿಮೀ. ಪಾದರಸದ ಕಾಂಡದಷ್ಟು) ಅಲ್ಪಸಂಮರ್ದವನ್ನು ಉಂಟುಮಾಡಲಾಯಿತು. 1855ರ ವೇಳೆಗೆ ಗೈಸ್ಲರ್ ನಿರ್ವಾತ ಪಾದರಸದ ರೇಚಕಗಳನ್ನು ನಿರ್ಮಿಸಿದರು. ಇದರಿಂದಲೇ ಅಲ್ಪಸಂಮರ್ದದಲ್ಲಿ ವಿದ್ಯುತ್ತು ಹೇಗೆ ಪ್ರವಹಿಸುವುದೆಂಬುದನ್ನು ಪರಿಶೀಲಿಸಲು ಸಾಧ್ಯವಾಯಿತು. ಜೆ. ಜೆ. ಥಾಮ್ಸನ್ ಎಲೆಕ್ಟ್ರಾನಿನ ಅಸ್ತಿತ್ವವನ್ನು ಸ್ಥಾಪಿಸಿದುದೂ ರಾಂಟ್ಜನ್ ಎಕ್ಸ್–ಕಿರಣಗಳನ್ನು ಕಂಡುಹಿಡಿದುದೂ ಅತ್ಯಲ್ಪ ಸಂಮರ್ದವುಳ್ಳ ಗಾಜಿನ ಕೊಳವೆಗಳ ಸಹಾಯವಿಲ್ಲದಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಅತಿನೇರಿಳೆಕಿರಣಗಳ ಶೋಧನೆಯೂ ಅಸಾಧ್ಯವಾಗುತ್ತಿತ್ತು. ಅಷ್ಟೇಕೆ, ಮನೆಗಳಲ್ಲಿ ಉರಿಸುವ ವಿದ್ಯುದ್ದೀಪಗಳಲ್ಲಿ ತಂತು (ಫಿಲಮೆಂಟ್) ಉರಿದುಹೋಗದೆ ಇರಬೇಕಾದರೆ ಗಾಳಿಯನ್ನು ಬುರುಡೆಯೊಳಗಿನಿಂದ ತೆಗೆದಿರಲೇಬೇಕು. ಗಾಳಿಯಲ್ಲದೆ ಬೇರೆ ಅನಿಲವನ್ನು ತುಂಬಬೇಕಾದರೂ ವಾಯುರೇಚಕಗಳು ಬೇಕು. ದ್ಯುತಿವಿದ್ಯುತ್ತಿನ ಬುರುಡೆ (ಫೋಟೋ ಎಲೆಕ್ಟ್ರಿಕ್ ಟ್ಯೂಬ್), ತ್ರಿವಾಟ ಬುರುಡೆ (ಟ್ರಯೋಡ್ ವಾಲ್ವ್), ಕ್ಯಾಥೋಡ್ ಕಿರಣ ಆಂದೋಳನ ಲೇಖಕ (ಕ್ಯಾಥೋಡ್ ರೇ ಆಸಿಲೋಗ್ರಾಫ್) ಇತ್ಯಾದಿ ಉಪಕರಣ ಗಳಲ್ಲಿಯೂ ಅತ್ಯಲ್ಪಸಂಮರ್ದ ಆವಶ್ಯಕ. ಈ ಉಪಕರಣಗಳಿಲ್ಲದಿದ್ದರೆ ಆಧುನಿಕ ಭೌತವಿಜ್ಞಾನವೇ ಈಗಿನಂತೆ ಇರುತ್ತಿರಲಿಲ್ಲ.




ಬೀಸಣಿಗೆಯಿಂದ ಗಾಳಿ ಬೀಸಿಕೊಳ್ಳುವಾಗ ಬೀಸಣಿಗೆ ವಾಯುವನ್ನು ತಳ್ಳುವುದೆಂಬ ಅನುಭವ ನಮಗೆ ಬರುತ್ತದೆ. ಇದರಿಂದ ಕೊಳವೆಯೊಳಕ್ಕೆ ಒಂದು ಬೆಣೆಯನ್ನು ತಳ್ಳಿದಾಗಲೂ ಬೆಣೆಯ ಮುಂದಿನ ಗಾಳಿಯನ್ನು ಅದುಮಲಾಗುವುದೆಂದು ಊಹಿಸಬಹುದು. ಇದರ ಜೊತೆಗೆ ಒಂದು ಕಡೆಗೆ ಮಾತ್ರ ತೆಗೆಯಲಾಗುವ ಮುಚ್ಚಳದ ಕಲ್ಪನೆಯನ್ನು ಸೇರಿಸಿದರೆ ಫಾನ್‌ಗೆರಿಕೆಯ ರೇಚಕದ ಸೃಷ್ಟಿ ಅರ್ಥವಾಗುತ್ತದೆ. ಇಲ್ಲಿ R ಎಂಬ ಪಾತ್ರೆಯೊಳಗಣ ಗಾಳಿಯನ್ನು ತೆಗೆದು ಹಾಕಲು ರೇಚಕದ ಮೂತಿಯನ್ನು ಪಾತ್ರೆಯ ಕತ್ತಿಗೆ ಗಾಳಿ ತೂರಲಾಗದಂತೆ ಸೇರಿಸಿದೆ. ಈಗ P ಎಂಬ ಕೊಂತವನ್ನು (ಪಿಸ್ಟನ್) AB ಎಂಬ ಕೊಳವೆಯ ಕೆಳಗಡೆಗೆ ಒತ್ತಿ ಗಾಳಿಯನ್ನು ಅದುಮಿದರೆ $V_1$ ಕವಾಟ (ವಾಲ್ವ್) ಮುಚ್ಚಿ, ಗಾಳಿಯ ಸಂಮರ್ದಕ್ಕಿಂತ ಹೆಚ್ಚಾದ ಕೂಡಲೆ $V_2$ ಕವಾಟ ತೆರೆದು, Pಯನ್ನು ಅದುಮಿದಾಗ ಕೊಳವೆಯೊಳಗಣ ಗಾಳಿ $V_2$ ಮೂಲಕ ಹೊರಕ್ಕೆ

ಹೋಗುತ್ತದೆ. ಇದು P ಕೊಳವೆಯ ಅಡಿಯಾದ A ಗೆ ಬರುವವರೆಗೆ ನಡೆಯುತ್ತದೆ. ಈಗ Pಯನ್ನು Aಯಿಂದ ಕೊಳವೆಯ ಮೇಲ್ತುದಿಯಾದ B ವರೆಗೆ ಎಳೆದರೆ ಬೆಣೆಗೂ $V_1$ ಕ್ಕೂ ಮಧ್ಯೆ ಅಲ್ಪಸಂಮರ್ದವಿರುವುದರಿಂದ (ಗಾಳಿ ಎಲ್ಲಿಯೂ ತೂರದಿದ್ದರೆ ಇಲ್ಲಿ ನಿರ್ವಾತವೇ ಇರುತ್ತಿತ್ತು.) ವಾತಾವರಣದ ಸಂಮರ್ದದಿಂದ $V_2$ ಮುಚ್ಚಿ, R ನಲ್ಲಿಯ ಗಾಳಿಯ ಒತ್ತಡದಿಂದ $V_1$ ತೆರೆದು, R ನಲ್ಲಿಯ ಗಾಳಿಯ ಒಂದು ಭಾಗ

ಕೊಳವೆಯೊಳಕ್ಕೆ ಬಂದು ತುಂಬುತ್ತದೆ. ಮತ್ತೆ ಕೊಂತವನ್ನು Aಯವರೆಗೆ ತಳ್ಳಿದರೆ ಕೊಳವೆಯೊಳಗಿನ ಗಾಳಿ $V_1$ ನ್ನು ಮುಚ್ಚುವುದರಿಂದ, ಪಾತ್ರೆಗೆ ಹಿಂದಕ್ಕೆ ಹೋಗಲಾರದೆ V2 ತೆರೆದು ದಾರಿ ಸಿಕ್ಕಿದೊಡನೆ ಹೊರಕ್ಕೆ ಹೋಗುತ್ತದೆ. ಹೀಗೆ ಹೆಚ್ಚು ಸಲ ಕೊಂತವನ್ನು ಓಡಾಡಿಸಿದರೆ R ನೊಳಗಿರುವ ಗಾಳಿಯ ಹೆಚ್ಚು ಭಾಗ ಹೊರದೂಡಲ್ಪಡುತ್ತದೆ.

ರೇಚಕಗಳಲ್ಲಿ ಕಾಲಾನುಕ್ರಮದಲ್ಲಿ ಅನೇಕ ಸುಧಾರಣೆಗಳಾಗಿ ಈಗಿನ ಉದ್ದೇಶಗಳಿಗೆ ನೆರವಾಗುವಂತೆ ರಚಿತವಾಗಿವೆ. ಅವುಗಳಲ್ಲಿ ಬಿರಡೆಯೊಡನೆ ಎಣ್ಣೆ ತುಂಬಿದ ರೇಚಕಗಳು 0.05–0.02 ಮಿಮೀ ವರೆಗೆ ಹೋಗಬಲ್ಲುವು. ಎರಡು ಮೂರು ರೇಚಕಗಳನ್ನು ಕೂಡಿಸಿ 0.00005 ಮಿ. ಮೀ ವರೆಗೆ ಹೋಗಬಹುದು. ಆದರೆ ಇಂಥ ಅಲ್ಪಸಂಮರ್ದ ದೊರೆಯಲು ನೀರಿನ ಆವಿ, ಇತರ ಅನಿಲಗಳು ಮುಂತಾದುವು ಸ್ವಲ್ಪವೂ ಇಲ್ಲದಂತೆ ಮಾಡಬೇಕು. ನೀರಿನ ಆವಿಯನ್ನು ಹೀರಿಕೊಳ್ಳಲು ಪ್ರಬಲ ಗಂಧಕಾಮ್ಲ ($H_2SO_4$), ರಂಜಕದ ಪೆಂಟಾಕ್ಸೈಡ್ ($P_2O_5$) ಮುಂತಾದುವುಗಳಿರುವ ಕೊಳವೆಗಳನ್ನು ಪಾತ್ರೆಗೂ ರೇಚಕಕ್ಕೂ ಮಧ್ಯೆ ಸೇರಿಸಬೇಕು. ತೆಂಗಿನ ಕರಟದ ಇಂಗಾಲ ಅನಿಲಗಳನ್ನು ಚೆನ್ನಾಗಿ ಹೀರಿಕೊಳ್ಳುತ್ತದೆ. ಇದು ಚೆನ್ನಾಗಿ ಕೆಲಸ ಮಾಡಲು ಇದನ್ನು ಡಿವಾರ್ ಪಾತ್ರೆಯಲ್ಲಿರುವ ದ್ರವವಾಯುವಿನಲ್ಲಿ (ಲಿಕ್ವಿಡ್ ಏರ್) ತಣ್ಣಗೆ ಮಾಡಬೇಕು. ಉಪಕರಣಗಳನ್ನು ಜೋಡಿಸುವುದರಲ್ಲಿಯೂ ವಿಶೇಷ ರೀತಿಯ ಉಪಕರಣಗಳು ಬೇಕು.

ಧಾರಾರೇಚಕ (ವಾಟರ್ ಜೆಟ್ ಪಂಪ್), ದಂತಚಕ್ರರೇಚಕ (ಕಾಗ್‍ವೀಲ್‍ಪಂಪ್), ಟೆಪ್ಲರ್ ರೇಚಕಗಳನ್ನು ಇಲ್ಲಿ ಹೆಸರಿಸಬಹುದು. ಗೇಡೆ (1907) ಬಳಕೆಗೆ ತಂದ ರೇಚಕ, ಸೆನ್‍ಕೋ ಸಂಸ್ಥೆಯವರ ಹೈವಕ್ ರೇಚಕ ಈಚೆಗಿನ ಸುಧಾರಿತ ರೂಪದವು. ಇವುಗಳ ನಿರ್ಗಮ ಸಂಮರ್ದ ವಾತಾವರಣ ಸಂಮರ್ದವೇ. ಆದರೆ ನಿರ್ಗಮ ಸಂಮರ್ದವನ್ನು ಸಹಾಯಕ ರೇಚಕದಿಂದ ಕಡಿಮೆಮಾಡಿ ಅಂತಿಮಸಂಮರ್ದ ಬಹಳ ಕಡಿಮೆಯಾಗಿ ಮಾಡುವ ಎರಡು ರೀತಿಯ ರೇಚಕಗಳನ್ನು ಗೇಡೆಯೇ ಮೊದಲು ರಚಿಸಿದ. ಅವುಗಳ ಹೆಸರು ವಿಸರಣರೇಚಕ (ಡಿಫ್ಯೂಷನ್ ಪಂಪ್, 1915) ಅಣುರೇಚಕ (1912). ಭಾರತದ ಎಚ್.ಪಿ.ವಾರನ್ ಸಹ (ಪರಮೇಶ್ವರನ್) ಒಂದೆರಡು ವಿಸರಣರೇಚಕಗಳನ್ನು ತಯಾರಿಸಿದ್ದಾರೆ.

**ವಿಸರಣ ರೇಚಕದ ತತ್ತ್ವ :** ಸಹಾಯಕ ರೇಚಕ ಹೀರುವುದರಿಂದ ಪಾದರಸ ಅಥವಾ ಎಣ್ಣೆಯ ಆವಿಯ ಪ್ರವಾಹ ಒಂದು ಕೊಳವೆಯೊಳಗೆ ಏರ್ಪಡುತ್ತದೆ. ಈ ಕೊಳವೆಗೆ ಸೇರಿದ ಪಕ್ಕದ ಕೊಳವೆಯ ನಿರ್ಗಮದ್ವಾರ ಅದರೊಳಗಿನ ಅನಿಲದ ಮಾಧ್ಯಮ ಮುಕ್ತ ಪಥಕ್ಕೆ (ಮೀನ್ ಫ್ರೀ ಪಾತ್) ಸರಿಸುಮಾರಾಗಿ ಸಮವಾಗಿದ್ದರೆ ಆ ಕೊಳವೆಯಿಂದ ಅನಿಲದ ಅಣುಗಳು ಪಾದರಸದ (ಅಥವಾ ಎಣ್ಣೆಯ) ಆವಿಯೊಳಕ್ಕೆ ವಿಸರಣ ಹೊಂದುತ್ತವೆ. ಆ ಅನಿಲಗಳನ್ನು ಆವಿಯ ಪ್ರವಾಹ ಹೊತ್ತು ಹೊರಕ್ಕೆ ಬರುವಾಗ ಆವಿಯನ್ನು ಶೀತಗೊಳಿಸಿ ದ್ರವರೂಪಕ್ಕೆ ತಿರುಗಿಸಿ ಅನಿಲವನ್ನು ಸಹಾಯಕರೇಚಕದಿಂದ ಎಳೆದು ಹೊರದೂಡಲಾಗುತ್ತದೆ. ದ್ರವರೂಪಕ್ಕೆ ಬಂದ ಪಾದರಸ (ಎಣ್ಣೆ) ಮತ್ತೆ ಆವಿಯನ್ನು ಉತ್ಪಾದಿಸುವ ಸ್ಥಳಕ್ಕೆ ಹರಿಯುವಂತೆ ಮಾಡುತ್ತಾರೆ. ಪಾದರಸದ (ಎಣ್ಣೆಯ) ಅಣುಗಳು ಸ್ವಲ್ಪಮಟ್ಟಿಗೆ ಮಾತ್ರ ಪಕ್ಕದ ಕೊಳವೆಯ ಅನಿಲದೊಳಕ್ಕೆ ವಿಸರಣಗೊಳ್ಳುತ್ತವೆ.

**ಅಣುರೇಚಕದ ತತ್ತ್ವ :** ನಮ್ಮ ಪಕ್ಕದಲ್ಲಿ ಮೋಟಾರು ಬಂಡಿ ವೇಗವಾಗಿ ಹೋದರೆ ಅದು ಹೊತ್ತು ತಂದ ಗಾಳಿ ನಮ್ಮ ಮೇಲೆ ಬೀಸುವುದಷ್ಟೆ? ಹೀಗೆ ಚಲಿಸುವ ವಸ್ತು ಅನಿಲವನ್ನು ಎಳೆದುಕೊಂಡು ಹೋಗಬಲ್ಲುದು. ಒಂದು ಬಗೆಯ ಘರ್ಷಣದಿಂದ ಚಲಿಸುವ ವಸ್ತುವಿಗೆ ಅನಿಲ ಹತ್ತಿಕೊಂಡಿರುತ್ತದೆ. ಇದರಿಂದ ವೇಗವಾಗಿ ತಿರುಗುತ್ತಿರುವ ವಸ್ತುವಿನ ಎರಡು ಪಕ್ಕಗಳಲ್ಲಿ ಸಂಮರ್ದಭೇದವುಂಟಾಗುತ್ತದೆ. ಸಾಮಾನ್ಯ ಸಂಮರ್ದದಲ್ಲಿ ಇದೇನೂ ಗಣ್ಯವಾಗಿರುವುದಿಲ್ಲ. ಆದರೆ ಸಂಮರ್ದ ಕಡಿಮೆಯಾಗಿ ಒಂದು ಅಣು ಇನ್ನೊಂದನ್ನು ತಾಟಿಸುವಷ್ಟರಲ್ಲಿ ಕ್ರಮಿಸುವ ಸರಾಸರಿ ದೂರ (ಮೀನ್ ಫ್ರೀ ಪಾತ್) ಹೆಚ್ಚಾಗಿ ಚಲಿಸುತ್ತಿರುವ ಕಡೆಗೆ ಒಯ್ಯಲ್ಪಡುತ್ತದೆ. ಇದು ಫಲಕಾರಿಯಾಗಬೇಕಾದರೆ ಸಂಮರ್ದ ಕಡಿಮೆಯಾಗಿದ್ದು ಭ್ರಮಣವೇಗ ಹೆಚ್ಚಾಗಿರಬೇಕು. ಗೇಡೆ ಇಂಥ ರೇಚಕವನ್ನು ಮೊದಲು ನಿರ್ಮಿಸಿದ.

**ಅಲ್ಪಸಂಮರ್ದಮಾಪಕಗಳು (ಲೋಪ್ರೆಷರ್ ಗೇಜ್):** ಅಲ್ಪಸಂಮರ್ದವನ್ನು ಅಳೆಯಲು ವಿಶೇಷ ಮತ್ತು ಸೂಕ್ಷ್ಮ ಉಪಕರಣಗಳು ಬೇಕು. ಇವುಗಳ ಹೆಸರು (ಆವರಣದಲ್ಲಿ ಸೂಚಿಸಿರುವ ಸಂಖ್ಯೆ ಮಿಲಿಮೀಟರಿನಲ್ಲಿ ಆಯಾ ಮಾಪಕ ಅಳೆಯಬಲ್ಲ ಸಂಮರ್ದ)– ಮೆಕ್ಲಿಯಡ್ ಮಾಪಕ ($10^{-5}$), ಕ್ನುಡ್‍ಸೆನ್ ರಶ್ಮಿಪುಂಜಮಾಪಕ (ರೇಡಿಯೋಮೀಟರ್) ($10^{-6}$), ಲ್ಯಂಗ್‍ಮ್ಯೂರ್ ಮತ್ತು ಡಷ್‍ಮನ್‍ರ ಮಾಪಕ ($10^{-7}$) ಪಿರಾನಿಯ ಮಾಪಕ ($10^{-7}$) ಅಯಾನೀಕರಣ ಮಾಪಕ (10–7). ಇದಲ್ಲದೆ ರೇಡಿಯೋ ವಿಕಿರಣದಿಂದ ಬರುವ ರಶ್ಮಿಗಳನ್ನು ಬಳಸಿ ಅಲ್ಪಸಂಮರ್ದವನ್ನು ಅಳೆಯುವುದೂ ಪ್ರಚಾರದಲ್ಲಿ ಬಂದಿದೆ.

(ಟಿ.ಎಸ್.ಎಸ್.)

**ಅತ್ಯುಚ್ಚ ನಿರ್ವಾತ :** ಎರಡನೆಯ ಮಹಾಸಮರಾನಂತರ ಅಲ್ಪಸಂಮರ್ದಗಳನ್ನು ಕನಿಷ್ಠ ಮಟ್ಟಕ್ಕಿಳಿಸುವ ಅಭ್ಯಾಸ ವಿಶೇಷವಾಗಿ ಬೆಳೆಯಿತು. ಸಂಮರ್ದ ಕಡಿಮೆಯಾದಂತೆ ಪ್ರದೇಶ ಹೆಚ್ಚು ಹೆಚ್ಚಾಗಿ ನಿರ್ವಾತಗೊಳ್ಳುವುದರಿಂದ ಈ ವಿಜ್ಞಾನದ ಶಾಖೆಯನ್ನು ಅತ್ಯುಚ್ಚ ನಿರ್ವಾತವಿಜ್ಞಾನ (ಅಲ್ಟ್ರಾ ಹೈ ವ್ಯಾಕ್ಯೂಂ) ಎಂದೇ ಹೆಸರಿಸಿದರು. ಪರಮಾಣುಗಳ ಬೀಜಗಳ ಅಧ್ಯಯನ ಮಾಡುತ್ತಿದ್ದ ಭೌತಶಾಸ್ತ್ರವಿಜ್ಞಾನಿಗಳಿಗೆ ಅತ್ಯುಚ್ಚ ನಿರ್ವಾತದ ವಿಷಯದಲ್ಲಿ ತೀವ್ರಾಸಕ್ತಿ ಮೂಡಿತು. ಇದರ ಪ್ರಕಾರ 10 ಮಿ ಮೀ ಗಿಂತ ಕಡಿಮೆಯಾಗಿರುವ ಸಂಮರ್ದಗಳನ್ನು ಪಡೆಯುವುದು, ಅವುಗಳನ್ನು ಅಳೆಯುವುದು ಮತ್ತು ಸಂಪರ್ಕ ಸೂಕ್ಷ್ಮೋಪಕರಣಗಳನ್ನು ರಚಿಸುವುದು ಎಂಬ ಸಮಸ್ಯೆಗಳು ತಲೆದೋರುವುವು. ಇಂಥ ಸೂಕ್ಷ್ಮೋಪಕರಣಗಳನ್ನು ಅತ್ಯುಚ್ಚ ನಿರ್ವಾತ ವ್ಯವಸ್ಥೆ (ಅಲ್ಟ್ರಾ ಹೈ ವ್ಯಾಕ್ಯೂಂ ಸಿಸ್ಟಮ್) ಎಂದು ಕರೆಯಲಾಗಿದೆ. ಅತ್ಯುಚ್ಚ ನಿರ್ವಾತ ಉಂಟುಮಾಡಬೇಕೆಂದಿರುವ ವಸ್ತುವಿನೊಳಗೆ (ವಿದ್ಯುತ್ತಿನ ಬಲ್ಬ್ ಇಂಥ ಒಂದು ವಸ್ತು) ಇರುವ ಅನಿಲದ ಸಕಲ ಅಣುಗಳನ್ನು ಹೊರತೆಗೆಯಬೇಕು. ಆಗ ಆ ಪ್ರದೇಶದ ಸಂಮರ್ದ ಇಳಿಯುವುದು. ಎಲ್ಲಿಯವರೆಗೆ ಇದು ಸಾಧ್ಯವಾದೀತು? ವಸ್ತುವಿನ ರಚನೆಯ ವೈಶಿಷ್ಟ್ಯದಿಂದ; ಹೊರವಾತಾವರಣದಿಂದ ಅಣುಗಳು ವಸ್ತುವಿನ ಗೋಡೆಗಳ ಮೂಲಕ ಒಳಗೆ ಒಸರುವುದರಿಂದ; ವಸ್ತುವಿನೊಳಗೆ ರಾಸಾಯನಿಕ ಕ್ರಿಯೆಯಿಂದ–ವಸ್ತುವಿನೊಳಗೆ ಉದ್ಭವಿಸುವ ಅನಿಲಾಣುಗಳನ್ನೂ ಪರಿಶೀಲನೆಗೆ ತೆಗೆದುಕೊಳ್ಳಲೇಬೇಕು. ಆದ್ದರಿಂದ ಯಾವುದೇ ಉಪಕರಣದಿಂದ ಪಡೆದ ಅತ್ಯುಚ್ಚ ನಿರ್ವಾತ ಎನ್ನುವುದು ಆ ವಸ್ತುವಿನೊಳಗೆ ಉದ್ಭವಿಸುವ ಅನಿಲಾಣುಗಳಿಗೂ ಹೊರತೆಗೆದ ಅನಿಲಾಣುಗಳಿಗೂ ನಡುವೆ ಏರ್ಪಟ್ಟ ಸಮತೋಲಸ್ಥಿತಿ. ಹೀಗೆ ಒಳಗೆ ಉದ್ಭವಿಸುವ ಅನಿಲಾಣುಗಳ ಸಂಖ್ಯೆಯನ್ನು ಅತಿಕನಿಷ್ಠ ಬೆಲೆಗೆ ಇಳಿಸುವುದೇ ಇಂಥ ಪ್ರಯೋಗದಲ್ಲಿ ಬಲು ಮುಖ್ಯ ಮತ್ತು ಜಟಿಲ ಸಮಸ್ಯೆ. ಈಚೆಗೆ (1966) ವಾಂಡರ್‍ಸ್ಲೈಸ್ ಎಂಬಾತ ಜನರಲ್ ಎಲೆಕ್ಟ್ರಿಕ್ ಸಂಶೋಧನಾಗಾರದಲ್ಲಿ $3x10^{-12}$ ಮಿಮೀ ನಿರ್ವಾತ ಸಂಮರ್ದ ಪಡೆದಿದ್ದಾನೆ (ಕೋಣೆ ಉಷ್ಣತೆಯಲ್ಲಿ).

(ಎ.ಕೆ.ಬಿ.)

## ಅಲ್ಪಸಿಲಿಕಾಂಶ ಶಿಲೆಗಳು

**ಅಲ್ಪಸಿಲಿಕಾಂಶ ಶಿಲೆಗಳು :** ಇವುಗಳ ರಾಸಾಯನಿಕ ಸಂಯೋಜನೆಯಲ್ಲಿ ಸಿಲಿಕಾಂಶ ಶೇ.55ಕ್ಕೂ ಕಡಿಮೆ ಇರುವ ಶಿಲೆಗಳು (ಬೇಸಿಕ್ ಅಥವಾ ಮ್ಯಾಫಿಕ್ ಶಿಲೆಗಳು). ಸಿಲಿಕ ಪ್ರತ್ಯೇಕ ಖನಿಜವಾಗಿ ಕಂಡುಬರುವುದೇ ಅಪೂರ್ವ. ಅಲ್ಲದೆ ಇತರ ಖನಿಜಗಳೊಡನೆ ರಾಸಾಯನಿಕವಾಗಿ ಸಂಯೋಜಿತವಾಗಿದ್ದರೂ ಅದರ ಪ್ರಮಾಣ ಅಷ್ಟು ಹೆಚ್ಚಲ್ಲ. ಒಟ್ಟಿನಲ್ಲಿ ಶಿಲೆಯ ಸಂಯೋಜನೆಯಲ್ಲಿ ಅದರ ಪಾತ್ರ ಗೌಣ. ಈ ಶಿಲೆಗಳಲ್ಲಿ ಕಪ್ಪು ಛಾಯೆಯ ಮೈಕ, ಹಾರ್ನ್‍ಬ್ಲೆಂಡ್ ಮತ್ತು ಪೈರಾಕ್ಸೀನ್ ಖನಿಜಗಳೇ ಅಧಿಕ ಪ್ರಮಾಣದಲ್ಲಿರುವುದರಿಂದ ಅವುಗಳ ಬಣ್ಣವೂ ಕಪ್ಪು.

ಇವು ಅಂತಸ್ಸರಣ (ಇನ್‍ಟ್ರೂಷನ್) ಮತ್ತು ಬಹಿಸ್ಸರಣ (ಎಕ್ಸ್‍ಟ್ರೂಷನ್) – ಈ ಎರಡೂ ವರ್ಗಗಳಲ್ಲಿ ಕಂಡುಬರುತ್ತವೆ. ಅಂತಸ್ಸರಣ ವರ್ಗದ ಪ್ರಮುಖ ಶಿಲೆಗಳನ್ನು ಪುನಃ ಅಂತರಾಳ (ಪ್ಲೂಟೋನಿಕ್) ಉಪವರ್ಗದವು ಮತ್ತು ಮಧ್ಯಾಂತರಾಳ (ಹೈಪಬಿಸ್ಸಲ್) ಉಪವರ್ಗದವು ಎಂದು ವಿಭಜಿಸಲಾಗಿದೆ. ಮೊದಲನೆಯ ಉಪವರ್ಗದ ಮುಖ್ಯ ಶಿಲೆಗಳು ಗ್ಯಾಬ್ರೊ ಗುಂಪಿನವು. ಇವು ಬಹುಮಟ್ಟಿಗೆ ಲ್ಯಾಕೊಲಿತ್, ಲೋಪೊಲಿತ್, ಬ್ಯಾಕೊಲಿತ್ ಮತ್ತು ಶಿಲಾಹಾಳೆಗಳು– ಈ ವಿವಿಧ ಹೊರ ಆಕಾರಗಳನ್ನು ತಳೆದಿವೆ. ಎರಡನೆಯ ಉಪವರ್ಗಕ್ಕೆ ಸೇರಿದ ಡಾಲರೈಟ್‍ಗಳು ಮುಖ್ಯವಾಗಿ ಡೈ ಅಥವಾ ಶಿಲಾಒಡ್ಡುಗಳಾಗಿಯೂ, ಅಪೂರ್ವವಾಗಿ ಸಿಲ್‍ಗಳಂತೆಯೂ ಕಂಡುಬರುತ್ತವೆ. ಬಹಿಸ್ಸರಣವರ್ಗದ ಪ್ರಮುಖ ಶಿಲೆಗಳು ಬೆಸಾಲ್ಟ್ ಗುಂಪಿನವು. ಇವು ಭೂಮಿಯ ಮೇಲೆ ಲಾವಾಪ್ರಸ್ತರಗಳಾಗಿ ಕಂಡುಬರುತ್ತವೆ.

ಈ ಎರಡು ವರ್ಗಗಳ ಶಿಲೆಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸೋಣ. ಗ್ಯಾಬ್ರೊ ಗುಂಪಿನ ಶಿಲೆಗಳು ಬಣ್ಣದಲ್ಲಿ ಕಪ್ಪು. ಸಮಕಣರಚನೆಯನ್ನು ತಳೆದಿವೆ. ಖನಿಜಕಣಗಳು ಸಾಮಾನ್ಯವಾಗಿ ದಪ್ಪನಾಗಿದ್ದು ಒಂದೇ ಗಾತ್ರವನ್ನು ಹೊಂದಿರುತ್ತವೆ. ಇವುಗಳಲ್ಲಿ ಮುಖ್ಯವಾದುವು ಗ್ಯಾಬ್ರೊ, ಆಲಿವೀನ್ ಗ್ಯಾಬ್ರೊ ನೋರೈಟ್, ಟ್ರಾಕ್ಟೊಲೈಟ್ ಮತ್ತು ಅನಾರ್ಥಸೈಟ್. ಈ ಪ್ರಭೇದಗಳು ಖನಿಜ ಸಂಯೋಜನೆಯನ್ನು ಅನುಸರಿಸಿವೆ. ಅವುಗಳ ವಿನ್ಯಾಸ ಮತ್ತು ರಾಸಾಯನಿಕ ಸಂಯೋಜನೆಯಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ.

ಗ್ಯಾಬ್ರೊ ಮುಖ್ಯವಾಗಿ ಪ್ಲೇಜಿಯೊಕ್ಲೇಸ್ ಮತ್ತು ಆಗೈಟ್ ಖನಿಜಗಳಿಂದ ಕೂಡಿದೆ. ಆಲಿವೀನ್ ಗ್ಯಾಬ್ರೊವಿನಲ್ಲಿ ಈ ಖನಿಜಗಳೇ ಪ್ರಧಾನವಾಗಿದ್ದು ಅಲ್ಪಸ್ವಲ್ಪ ಪ್ರಮಾಣದಲ್ಲಿ ಆಲಿವೀನ್ ಸಹ ಇರುತ್ತದೆ. ನೋರೈಟ್‍ನಲ್ಲಿ ಪ್ಲೇಜಿಯೊಕ್ಲೇಸ್ ಜತೆಗೆ ಎನ್‍ಸ್ಟ್ಯಟೈಟ್, ಬ್ರಾನ್‍ಜೈಟ್ ಅಥವಾ ಹೈಪರ್‍ಸ್ತೀನ್ ಪ್ರಧಾನವಾಗಿ ಕಂಡುಬರುತ್ತವೆ. ಟ್ರಾಕ್ಟೊಲೈಟ್‍ನಲ್ಲಿ ಪ್ರಮುಖವಾಗಿ ಪ್ಲೇಜಿಯೊಕ್ಲೇಸ್ ಮತ್ತು ಆಲಿವೀನ್ ಖನಿಜಗಳನ್ನು ಕಾಣಬಹುದು. ಅನಾರ್ಥಸೈಟ್‍ನಲ್ಲಿ ಶಿಲೆಯ ಮುಕ್ಕಾಲುಭಾಗ ತಿಳಿಛಾಯೆಯ ಪ್ಲೇಜಿಯೊಕ್ಲೇಸ್ ಗುಂಪಿನ ವಿವಿಧ ಫೆಲ್ಡ್‍ಸ್ಪಾರ್‍ಗಳಿಂದಾದುದು. ಇವಲ್ಲದೆ ಹಲವು ಬಾರಿ ಕ್ವಾರ್ಟ್ಸ್‍ಗ್ಯಾಬ್ರೊ ಎಂಬ ವಿಶೇಷ ಪ್ರಭೇದಗಳನ್ನೂ ಗುರುತಿಸಬಹುದು. ಖನಿಜ ಸಂಯೋಜನೆಯಲ್ಲಿ ಇದು ಸಾಮಾನ್ಯ ಗ್ಯಾಬ್ರೊವಿನಂತಿದ್ದು ಬಹು ಅಲ್ಪ ಪ್ರಮಾಣದಲ್ಲಿ ಕ್ವಾರ್ಟ್ಸ್ ಇರುತ್ತದೆ.

ಗ್ಯಾಬ್ರೋ, ಆಲಿವೀನ್ ಗ್ಯಾಬ್ರೊ, ನೋರೈಟ್ ಮತ್ತು ಟ್ರಾಕ್ಟೊಲೈಟ್‌ಗಳು ಬಹುಮಟ್ಟಿಗೆ ಬ್ರಿಟನ್ನಿನ ಕಾರ್ನ್‌ವಾಲ್, ಅಬರ್ಡೀನ್‌ಷೈರ್ ಮತ್ತು ಸ್ಕಾಟ್ಲೆಂಡಿನ ಪಶ್ಚಿಮ ದ್ವೀಪಗಳಲ್ಲಿ ಹರಡಿವೆ. ಕ್ವಾರ್ಟ್ಸ್‌ಗ್ಯಾಬ್ರೊಡೈಕ್ ಮತ್ತು ಸಿಲ್ಲುಗಳೋಪಾದಿಯಲ್ಲಿ ಬ್ರಿಟನ್, ಪೂರ್ವ ಅಮೆರಿಕ, ಗಯಾನ, ದಕ್ಷಿಣ ಆಫ್ರಿಕ ಮತ್ತು ಪಶ್ಚಿಮ ಆಸ್ಟ್ರೇಲಿಯಗಳಲ್ಲಿ ಕಂಡುಬಂದಿವೆ. ಬಹು ಪ್ರಸಿದ್ಧವಾದ ಅಮೆರಿಕದ ಸಡ್‌ಬರಿ ಮತ್ತು ಡುಲುಪ್ ಬೃಹತ್ ಲೋಪೊಲಿತ್‌ಗಳ ಬಹುಭಾಗ ಈ ಶಿಲೆಯಿಂದ ಕೂಡಿದೆ. ಈ ಸಂದರ್ಭದಲ್ಲಿ ದಕ್ಷಿಣ ಆಫ್ರಿಕದ ಬುಷ್‌ವೆಲ್ಡ್ ಲೋಪೊಲಿತ್ ಅನ್ನೂ ಹೆಸರಿಸಬಹುದು. ಅನಾರ್ಥಸೈಟ್ ಕೆನಡ, ನ್ಯೂಯಾರ್ಕ್ ಬಳಿಯ ಅಡಿರೋಂಡಾಕ್ಸ್ ಮತ್ತು ಸ್ಕ್ಯಾಂಡಿನೇವಿಗಳಲ್ಲಿ ಬ್ಯಾತೊಲಿತ್‌ಗಳಾಗಿ ಕಂಡುಬರುತ್ತವೆ. ನಮ್ಮ ದೇಶದ ತಮಿಳುನಾಡಿನ ಸಿತ್ತಂಪುಂಡಿ, ಬಿಹಾರ್, ಒರಿಸ್ಸ ಮತ್ತು ಪಶ್ಚಿಮ ಬಂಗಾಲದ ಹಲವಾರು ಪ್ರದೇಶಗಳಲ್ಲಿ ಈ ಶಿಲೆಯನ್ನು ಕಾಣಬಹುದು.

ಡಾಲರೈಟ್‌ಗಳು ಪ್ರಪಂಚದ ಅನೇಕ ಕಡೆ ಡೈಕ್ ಸಮೂಹಗಳಾಗಿ ಕಂಡುಬಂದಿವೆ. ಪ್ರತಿ ಸಮೂಹದಲ್ಲಿ ಒಂದೇ ಹರವುಳ್ಳ ನೂರಾರು ಡೈಕುಗಳನ್ನು ಗುರುತಿಸಲು ಸಾಧ್ಯ. ಒಂಟಿ ಡೈಕುಗಳು ಅಪೂರ್ವ. ಹಲವು ಪ್ರದೇಶಗಳಲ್ಲಿ ಈ ಶಿಲೆ ಸಿಲ್ ಆಕಾರವನ್ನೂ ತಳೆದಿದೆ. ಇವು ಸಹ ಬಣ್ಣದಲ್ಲಿ ಕಪ್ಪು. ಸಾಮಾನ್ಯವಾಗಿ ಪ್ಲೇಜಿಯೊಕ್ಲೇಸ್ ಮತ್ತು ಆಗೈಟ್ ಖನಿಜಗಳಿಂದಾಗಿದೆ. ಹಲವು ವೇಳೆ ಆಲಿವೀನ್ ಹೈಪರ್‌ಸ್ತೀನ್ ಮತ್ತು ಕ್ವಾರ್ಟ್ಸ್‌ಗಳನ್ನು ಅಲ್ಪಪ್ರಮಾಣದಲ್ಲಿ ಗುರುತಿಸಬಹುದು. ಇವುಗಳ ಇರುವಿಕೆಗನುಗುಣವಾಗಿ ಆಲಿವೀನ್ ಡಾಲರೈಟ್, ಹೈಪರ್‌ಸ್ತೀನ್ ಡಾಲರೈಟ್ ಮತ್ತು ಕ್ವಾರ್ಟ್ಸ್ ಡಾಲರೈಟ್ ಎಂಬ ವಿಶೇಷ ಬಗೆಗಳೂ ಉಂಟು. ಖನಿಜ ಮತ್ತು ರಾಸಾಯನಿಕ ಸಂಯೋಜನೆಗಳಲ್ಲಿ ಇವುಗಳಿಗೂ ಗ್ಯಾಬ್ರೊಗಳಿಗೂ ಹೆಚ್ಚಿನ ವ್ಯತ್ಯಾಸಗಳಿರುವುದಿಲ್ಲ. ಆದರೆ ರಚನೆ ಅಥವಾ ವಿನ್ಯಾಸದಲ್ಲಿ ಪರಸ್ಪರ ಹೋಲಿಕೆಯಿಲ್ಲ. ಇದು ಒಂದು ವಿಶೇಷ ರೀತಿಯ ಹೆಣಿಗೆ ರಚನೆಯನ್ನು ತೋರಿಸುತ್ತದೆ. ಮುಖ್ಯ ಖನಿಜಗಳಾದ ಪ್ಲೇಜಿಯೊಕ್ಲೇಸ್ ಮತ್ತು ಆಗೈಟ್ ಒಂದರೊಡನೊಂದು ಹೆಣೆದುಕೊಂಡಿರುತ್ತವೆ. ಇದನ್ನು ಡಾಲರಿಟಿಕ್ ಅಥವಾ ಓಫಿಟಿಕ್ ವಿನ್ಯಾಸವೆನ್ನಲಾಗಿದೆ. ನಮ್ಮ ಕರ್ನಾಟಕದಲ್ಲಿ ನೂರಾರು ಡಾಲರೈಟ್ ಡೈಕುಗಳನ್ನು ಗುರುತಿಸಲಾಗಿದೆ.

ಇನ್ನು ಬಹಿಸ್ಸರಣವರ್ಗದ ಸಾಲ್ಟ್ ಶಿಲಾಗುಂಪು. ಇದರಲ್ಲಿಯೂ ಖನಿಜ ಸಂಯೋಜನೆಯನ್ನನುಸರಿಸಿ ಹಲವಾರು ಪ್ರಭೇದಗಳಿವೆ. ಇವು ಬಣ್ಣದಲ್ಲಿ ಕಪ್ಪು ಅಥವಾ ಬೂದುಮಿಶ್ರಿತಕಪ್ಪು. ಜ್ವಾಲಾಮುಖಜ ಶಿಲೆಯಾದ ಕಾರಣ ರಚನೆ ಅಸ್ಪಷ್ಟ. ಖನಿಜಕಣಗಳನ್ನು ಬರಿಗಣ್ಣಿನಿಂದ ಗುರುತಿಸಲು ಸಾಧ್ಯವಿಲ್ಲ. ಹಲವು ಬಾರಿ ನಾನಾ ಆಕಾರ ಮತ್ತು ಗಾತ್ರದ ಅನಿಲರಂಧ್ರಗಳಿರುವುದುಂಟು. ಇವು ಸಾಮಾನ್ಯವಾಗಿ ಸಿಲಿಕ, ಜಿಯೊಲೈಟ್, ಎಪಿಡೋಟ್, ಕ್ಯಾಲ್ಸೈಟ್ ಮುಂತಾಗಿ ವಿವಿಧ ಆನುಷಂಗಿಕ ಖನಿಜಗಳಿಂದ ತುಂಬಿರುತ್ತವೆ.

ಆದರೆ ಸೂಕ್ಷ್ಮದರ್ಶಕದ ಮೂಲಕ ಶಿಲೆಯನ್ನು ಪರೀಕ್ಷಿಸಿದಾಗ ಒಂದು ಬಗೆಯ ವಿಶೇಷ ರಚನೆಯನ್ನು ಕಾಣಬಹುದು. ಇದನ್ನು ಬೆಸಾಲ್ಟಿಕ್ ವಿನ್ಯಾಸವೆಂದೂ ಕರೆಯುತ್ತಾರೆ. ಸೂಕ್ಷ್ಮ ಸೂಜಿಯಾಕಾರದ ಪ್ಲೇಜಿಯೊಕ್ಲೇಸ್‌ಗಳಿಂದುಂಟಾದ ಬಗೆಬಗೆಯ ಚೌಕಟ್ಟುಗಳ ನಡುವೆ ಆಗೈಟ್, ಆಲಿವೀನ್, ಮ್ಯಾಗ್ನಟೈಟ್ ಮುಂತಾದ ಖನಿಜಗಳ ಸೂಕ್ಷ್ಮಕಣಗಳು ಅಡಕವಾಗಿರುತ್ತವೆ. ಹಲವು ಸಂದರ್ಭಗಳಲ್ಲಿ ಪಾರ್‌ಫಿರಿಟಿಕ್ ಅಥವಾ ಅಸಮಕಣರಚನೆಯೂ ಕಂಡುಬರುವುದುಂಟು. ಸೂಕ್ಷ್ಮ ವಿನ್ಯಾಸದ ನಡುವೆ ಅಲ್ಲಲ್ಲಿ ದೊಡ್ಡ ದೊಡ್ಡ ಖನಿಜದ ಹರಳುಗಳು ತೋರಿಬರುತ್ತವೆ. ಇವೇ ಪಾರ್‌ಫಿರಿಟಿಕ್ ಬೆಸಾಲ್ಟ್‌ಗಳು.

ಬೆಸಾಲ್ಟ್ ಬಹುಮಟ್ಟಿಗೆ ಪ್ಲೇಜಿಯೊಕ್ಲೇಸ್ ಮತ್ತು ಆಗೈಟ್‌ಗಳನ್ನು ಪ್ರಧಾನ ಖನಿಜಗಳಾಗಿ ಹೊಂದಿರುತ್ತದೆ. ಹಲವು ಸಂದರ್ಭಗಳಲ್ಲಿ ಆಲಿವೀನ್ ಅಥವಾ ಕ್ವಾರ್ಟ್ಸ್ ಸಹ ಅಲ್ಪಪ್ರಮಾಣದಲ್ಲಿರಬಹುದು. ಇವನ್ನು ಕ್ರಮವಾಗಿ ಆಲಿವೀನ್ ಬೆಸಾಲ್ಟ್ ಅಥವಾ ಕ್ವಾರ್ಟ್ಸ್ ಬೆಸಾಲ್ಟ್ ಎಂದು ಹೆಸರಿಸಲಾಗಿದೆ.

ಬೆಸಾಲ್ಟ್ ಗುಂಪಿನ ಶಿಲೆಗಳು ದಕ್ಷಿಣ ಅಮೆರಿಕದ ಪರಾನಾ, ಬ್ರಿಟನ್ನಿನ ಉತ್ತರ ಭಾಗ, ಐಸ್ಲೆಂಡ್ ಮತ್ತು ಗ್ರೀನ್‌ಲೆಂಡ್ ಜಾಡು ಮತ್ತು ಭಾರತದ ದಖಿನ್‌ಪ್ರಸ್ಥಭೂಮಿಯಲ್ಲಿ ಪ್ರಮುಖವಾಗಿ ಕಂಡುಬಂದಿವೆ. ಇಲ್ಲೆಲ್ಲ ಇವು ಸಹಸ್ರಾರು ಚ. ಮೈ. ವಿಸ್ತೀರ್ಣವನ್ನಾಕ್ರಮಿಸಿವೆ. ನಮ್ಮ ದೇಶದಲ್ಲಿ ಇವುಗಳ ವ್ಯಾಪ್ತಿ ಸು. 4,82,700ಚ.ಕಿಮೀ. (ಬಿ.ವಿ.ಜಿ.)

**ಅಲ್ಪಾಕ :** ಈಕ್ವೆಡರ್ ಮತ್ತು ಪೆರುದೇಶಗಳಿಂದ ಪೆಟಗೋನಿಯ ಬಯಲುಗಳವರೆಗೆ ಹಬ್ಬಿರುವ ದಕ್ಷಿಣ ಅಮೆರಿಕದ ಕಾಡಿನಲ್ಲಿ ನೆಲೆಸಿರುವ ಗ್ವಾನಾಕೋ ಎಂಬ ಮೃಗಸಂತತಿಗೆ ಸೇರಿದ ಪ್ರಾಣಿ (*ಲಾಮ ಪಕೋಸ್*). ಇದು ಒಂಟೆಯ ವಂಶಕ್ಕೆ ಸೇರಿದೆ. ಆ ಜಾತಿ ಗಳಿಗಿರುವಂತೆಯೇ ನೀಳವಾದ ಕತ್ತಿದೆ; ಆದರೆ ಕೊಂಕಾಗಿಲ್ಲ. ಇದಕ್ಕೆ ಡುಬ್ಬವೂ ಇಲ್ಲ. ಇವು ಲಾಮಗಳಿಗಿಂತಲೂ ಸಣ್ಣವು. ಆಲ್ಪಾಕ ನೋಡಲು ವಿಕಾರ. ಒರಗುವ ಕುರ್ಚಿಗೆ ಕಂಬಳಿ ಹೊದಿಸಿ ಅದಕ್ಕೆ ಒಂಟೆ ಯಂಥ ಉದ್ದನೆಯ ಕತ್ತನ್ನು ಜೋಡಿಸಿದಂತೆ ಇದರ ಆಕಾರ. ಏಷ್ಯ ಖಂಡದಲ್ಲಿ ಒಂಟೆಗಳು ಹಿಂದಿನಿಂದ ಉಪಯುಕ್ತವಾಗಿರುವಷ್ಟೇ ಬಹು ಪ್ರಾಚೀನ ಕಾಲದಿಂದ ದಕ್ಷಿಣ ಅಮೆರಿಕದ ಜನರಿಗೆ ಆಲ್ಪಾಕಗಳು ಉಪಯುಕ್ತವಾಗಿವೆ. ಮತ್ತಾವ ಮೃಗವೂ ಏರಲಾರದ ಎತ್ತರದಲ್ಲಿ ನೂರು ಪೌಂಡುಗಳಿಗೂ ಹೆಚ್ಚಿನ ತೂಕವನ್ನು ಇವು ಹೊರಬಲ್ಲುವು. ಇದರ ಹಾಲು ಕುಡಿಯಬಹುದು, ಆದರೆ ಅಷ್ಟು ರುಚಿಯಾಗಿಲ್ಲ; ಮಾಂಸ ತಿನ್ನಬಹುದು. ಹೆಣ್ಣು ಆಲ್ಪಾಕ 11 ತಿಂಗಳು ಗರ್ಭಧರಿಸಿ ಒಂದೇ ಒಂದು ಕರು ಈಯುತ್ತದೆ. ತುಂಬ ನವಿರಾಗಿಯೂ ಬಲವಾಗಿಯೂ ಇರುವ ಉಣ್ಣೆಗಾಗಿ ಆಲ್ಪಾಕಗಳು ಪ್ರಖ್ಯಾತ. ಪೆರುವಿಯನ್ ಜನ ಇವನ್ನು ಸಹಸ್ರಾರು ವರ್ಷಗಳಿಂದ



ಪಳಗಿಸಿಕೊಂಡು ಸಾಕುತ್ತಿದ್ದಾರೆ. ಈ ಉಣ್ಣೆ ಹೊಳೆಗೆಂಪಿನಿಂದ ಕಪ್ಪಿನವರೆಗೆ, ಬಿಳುಪಿನಿಂದ ಬಲು ಬಗೆಯ ಕಂದು ಬಣ್ಣಗಳವರೆಗೆ ಅನೇಕ ತರದ ಬಣ್ಣಗಳಲ್ಲಿ ದೊರೆಯುತ್ತದೆ. ಉಣ್ಣೆ ತುಂಬ ಉದ್ದವಾಗಿ ಜಡೆಗಟ್ಟಿರುತ್ತದೆ. ಬೊಲಿವಿಯ ಮತ್ತು ದಕ್ಷಿಣ ಪೆರುವಿನ ಪ್ರಸ್ಥಭೂಮಿಗಳಲ್ಲಿ, 15,000' ಗಳಿಗೂ ಹೆಚ್ಚಿನ ಎತ್ತರದಲ್ಲಿ ಇವುಗಳನ್ನು ವರ್ಷಾದ್ಯಂತ ದೊಡ್ಡ ದೊಡ್ಡ ದೊಡ್ಡಿಗಳಲ್ಲಿ ಸಾಕುತ್ತಾರೆ. ಉಣ್ಣೆಯಿಳಿಸುವ ಕಾಲದಲ್ಲಿ ಪ್ರತಿವರ್ಷವೂ ಇವುಗಳನ್ನು ಹಳ್ಳಿಗಳಿಗೆ ಹೊಡೆಯುತ್ತಾರೆ. ಅದರ ಉಣ್ಣೆಯಲ್ಲಿ ಎರಡು ವಿಧವುಂಟು. ಹವಾಸ್ಕ ಎಂಬುದು ಉದ್ದವೂ ಒರಟೂ ಆದ ಉಣ್ಣೆ; ಅದಕ್ಕಿಂತ ನವಿರಾಗಿಯೂ ಸಣ್ಣದಾಗಿಯೂ ಇರುವ ಉಣ್ಣೆಗೆ ಕುಂಬಿ ಎಂದು ಹೆಸರು. ಇಂಗ್ಲೆಂಡ್ ದೇಶ ಆಲ್ಪಾಕದ ಉಣ್ಣೆಯನ್ನು ತರಿಸಿಕೊಂಡು (1808) ಇದರಿಂದ ದಾರ ತೆಗೆಯಲು ಪ್ರಾರಂಭಿಸಿತು. ಈ ಉಣ್ಣೆಯನ್ನು ಹತ್ತಿಯ ನೂಲಿನೊಡನೆ ಮಿಶ್ರಿಸಿ ಹೊಳಪುಳ್ಳ ನಯವಾದ ಹಲವು ತರಹದ ನೂಲು ತಯಾರಿಸುತ್ತಾರೆ. ಆಲ್ಪಾಕ ಉಣ್ಣೆಯಿಲ್ಲದಿರುವ ಕೆಲವು ಬಟ್ಟೆಗಳಿಗೂ ಈ ಗುಣವಿರುವ ಕಾರಣ ಆಲ್ಪಾಕವೆಂದೇ ಹೆಸರು ಬಂದಿದೆ. (ಎ.)

**ಅಲ್ಪಿನಿಯ :** ಅಲಂಕಾರದ ಎಲೆಸಸ್ಯ. ಹಬ್ಬುವ (ಕ್ರೀಪಿಂಗ್) ಗುಪ್ತ ಕಾಂಡವಿದೆ. ಎಲೆ ನೀಳಾಕಾರ, ನಯವಾದ ಅಂಚು, ಮೊನಚು ಅಥವಾ ಲಂಬಾಗ್ರ ತುದಿ. ಮಿಶ್ರ ಹೂಗೊಂಚಲು, ಹೂ ಎಲೆ ಹೂ ದಳ ಕೂಡಿಕೆ 6, ಎರಡು ವೃತ್ತ, ಮೊದಲನೆಯ ವೃತ್ತ 3, ಕೊಳವೆ ಆಕಾರದ ಎರಡನೆಯ ವೃತ್ತ 3. ಅಸಮಭಾಗ ಕೆಳಭಾಗ ದೊಡ್ಡದು; ಮತ್ತು ಉಳಿದ ಎರಡು ಪಕ್ಕ ಭಾಗ ಸಮ. ಈ ಅಸಮ ಭಾಗಗಳಿಂದ ಕೂಡಿದ ಹೂ ಬಲು ಸುಂದರ. ಕೇಸರಗಳು 2; ಇವುಗಳಲ್ಲಿ ಒಂದು ಅಗಲವಾದ ದಳಕೇಸರ, ಇನ್ನೊಂದು ಸಣ್ಣ ಬಂಜೆ ಕೇಸರ. ಹಣ್ಣು ಮೂರು ಕೋಶದ ಕ್ಯಾಪ್‌ಸೂಲ್. ಉದ್ಯಾನವನಗಳಲ್ಲಿ ಬೆಳೆಸುತ್ತಾರೆ. ಕುಂಡಗಳಲ್ಲಿಯೂ ತೇವಾಂಶವಿರುವ ಪ್ರದೇಶಗಳಲ್ಲಿಯೂ ಬೆಳೆಸಬಹುದು.

ಅಲ್ಪಿನಿಯ ಸ್ಯಾಂಕರೆ (ನ್ಯೂಗಿನಿಯದ ಮೂಲವಾಸಿ), ಅಲ್ಪಿನಿಯ ಗಲಾಂಗ, ಅಲ್ಪಿನಿಯ ಸ್ಪಿಸೀಯೋಸ ಮುಖ್ಯ ಪ್ರಭೇದಗಳು. ಅಲ್ಪಿನಿಯ ಕುಲದಲ್ಲಿ 150 ಬಹುವಾರ್ಷಿಕ ಜಾತಿ ಪರ್ಣಸಸಿಗಳಿವೆ. ಈ ಸಸ್ಯಗಳನ್ನು ಗುಪ್ತಕಾಂಡ ತುಂಡುಗಳಿಂದ ಸುಲಭವಾಗಿ ವೃದ್ಧಿಸಬಹುದು. ಹೆಚ್ಚು ಫಲವತ್ತಾದ ಮಣ್ಣಿನಲ್ಲಿ ಬೆಳೆಸಿದರೆ, ಎಲೆಗಳ ಮೇಲೆ ಅಲಂಕಾರದ ಬಣ್ಣದ ಗೆರೆಗಳು ನಶಿಸಿಹೋಗುತ್ತವೆ. ಜೌಗಿಲ್ಲದ ಸದಾ ತೇವವಾಗಿರುವ ಸ್ಥಿತಿ ಅನುಕೂಲಕರ. (ಎಂ.ಎಚ್.ಎಂ.)

**ಅಲ್ಬುಮೆನ್ :** ಕೋಳಿಮೊಟ್ಟೆಯೊಳಗಿರುವ ಬಿಳಿಯ ಭಾಗ. ಹರಳೆಣ್ಣೆಯಂತೆ ದ್ರವವೂ ಅಲ್ಲದ, ಘನವೂ ಅಲ್ಲದ ಸ್ಥಿತಿಯಲ್ಲಿರುವ ಈ ವಸ್ತುವನ್ನು ಕುದಿಯುವ ನೀರಿನಲ್ಲಿ ಸ್ವಲ್ಪಕಾಲ ಕಾಯಿಸಿದರೆ ಬಿಳುಪಾದ ಘನರೂಪಕ್ಕೆ ಬರುತ್ತದೆ. ಇದನ್ನು ಸಾಮಾನ್ಯವಾಗಿ

ಮೊಟ್ಟೆಯೊಳಗಿನ ಬಿಳಿ ಎನ್ನುತ್ತಾರೆ. ಗರ್ಭ ಧರಿಸಿದ ಮೊಟ್ಟೆ ಅಂಡಾಶಯದಿಂದ ಹೊರಹೊರಟ ಅನಂತರ ಅಂಡಾಶಯ ನಾಳದಲ್ಲಿ ಉರುಳುತ್ತ ಬರುವ ಈ ಮೊಟ್ಟೆಯ ಸುತ್ತಲೂ ಆ್ಯಲ್ಬುಮಿನ್ ಶೇಖರಗೊಳ್ಳತೊಡಗುತ್ತದೆ. ಅಂಡಾಶಯ ನಾಳದ ಗೋಡೆ ಈ ರಸವನ್ನು ಉತ್ಪಾದಿಸುತ್ತದೆ. ಮೊಟ್ಟೆಯೊಳಗೆ ಬೆಳೆಯುವ ಭವಿಷ್ಯಜೀವಿಗೆ ಇದು ಉತ್ತಮ ಆಹಾರ. ರಾಸಾಯನಿಕವಾಗಿ ಇದೊಂದು ಪ್ರೋಟೀನು (ಸಸಾರಜನಕಾದಿವಸ್ತು). ಇದರಲ್ಲಿ ಓವಾಲ್ಬುಮಿನ್, ಎನಾಲ್ಬುಮಿನ್, ಓವೊಮ್ಯೂಕಾಯ್ಡ್ ಮತ್ತು ಓವೊಮ್ಯೂಸಿನ್ ಎಂಬ ನಾಲ್ಕು ಬಗೆಯ ಪ್ರೋಟೀನುಗಳಿವೆ. ಅಲ್ಬುಮಿನ್‍ನಲ್ಲಿ ಓವಾಲ್ಬುಮಿನ್ ಶೇ.77 ಭಾಗವೂ ಎನಾಲ್ಬುಮೆನ್ ಶೇ.3 ಭಾಗವೂ ಓವೊಮ್ಯುಕಾಯ್ಡ್ ಶೇ.13 ಭಾಗವೂ ಓವೊಮ್ಯೂಸಿನ್ ಶೇ.7 ಭಾಗವು ಓವೊಗ್ಲೊಬುಲಿನ್ ಅತ್ಯಲ್ಪ ಭಾಗವೂ ಇರುತ್ತವೆ. ಮೇಲಿನ ವಸ್ತುಗಳ ಮಿಶ್ರಣದಿಂದಾಗಿ ಈ 'ಬಿಳಿ' ಲೋಳೆಯಾಗಿರುತ್ತದೆ. (ಎಲ್.ಎಸ್.ಜಿ.)

**ಅಲ್ಯೂಮಿನಿಯಂ :** ಈ ಮೂಲವಸ್ತುವಿನ ಸಂಕೇತ Al. ಅಮೆರಿಕ ದೇಶದಲ್ಲಿ ಅಲ್ಯೂಮಿನಂ ಎಂದು ಕರೆಯುತ್ತಾರೆ. ಇದರ ಪರಮಾಣು ಸಂಖ್ಯೆ 13. ಪರಮಾಣುತೂಕ 26.9815. ಎಲೆಕ್ಟ್ರಾನ್ ಜೋಡಣೆ 2,8,3 ಅಥವಾ [Ne] $3S^2$. $3P^1$. ಮೂಲವಸ್ತುಗಳ ಆವರ್ತಕೋಷ್ಟಕದಲ್ಲಿ 3ನೆಯ ಗುಂಪಿಗೆ ಸೇರಿರುವ ಮೂಲವಸ್ತು; ಒಂದು ಲೋಹ. ಇದು ಪ್ರಕೃತಿಯಲ್ಲಿ ಹೇರಳವಾಗಿ ದೊರೆಯುವುದು. ಆಧಿಕ್ಯ ಪ್ರಮಾಣದ ಮೂಲವಸ್ತುಗಳ ಪೈಕಿ ಆಕ್ಸಿಜನ್, ಸಿಲಿಕಾನ್ ಆದ ಮೇಲೆ ಮೂರನೆಯದು. ಲೋಹಗಳಲ್ಲಿ ಇದೇ ಮೊದಲನೆಯದು ಅಂದರೆ ಕಬ್ಬಿಣಕ್ಕಿಂತಲೂ ಹೇರಳವಾದುದು. ಭೂಮಿಯ ಮೇಲ್ಮೈನಲ್ಲಿನ ಪದರದಲ್ಲಿ ಸುಮಾರು ಶೇ.8 ಇದೆ. ಭೂಮಿಯ ಮೇಲಿನ ಕಲ್ಲು, ಮಣ್ಣು, ಜೇಡಿಮಣ್ಣುಗಳಲ್ಲೆಲ್ಲಾ ಹೊಕ್ಕಿದೆ. ಆದರೆ ಈ ಲೋಹ ಶುದ್ಧಮೂಲವಸ್ತುವಿನ ರೂಪದಲ್ಲಿ ದೊರೆಯುವುದಿಲ್ಲ. ತನ್ನ ರಾಸಾಯನಿಕ ಚಟುವಟಿಕೆಯಿಂದಾಗಿ, ಅದರಲ್ಲೂ ಆಕ್ಸಿಜನ್ನಿನೊಡನೆ ತೋರುವ ವಿಶೇಷ ಒಲವಿನಿಂದಾಗಿ ಪ್ರಕೃತಿಯಲ್ಲಿ ಅಲ್ಯೂಮಿನಿಯಂ ಆಕ್ಸಿಜನ್ನಿನೊಡನೆ ಸಂಯೋಗ ಹೊಂದಿರುತ್ತದೆ. ಮತ್ತು ಇದೇ ಕಾರಣದಿಂದ ಲೋಹವನ್ನು ಅದುರುಗಳಿಂದ ಬೇರ್ಪಡಿಸುವುದೂ ಕಷ್ಟ. ಅಲ್ಯೂಮಿನಿಯಂ ಅದುರುಗಳಲ್ಲಿ ಮುಖ್ಯವಾದುದು ಬಾಕ್ಸೈಟ್. ರಾಸಾಯನಿಕ




**ಬಾಕ್ಸೈಟ್‍ನಿಂದ ಅಲ್ಯೂಮಿನಿಯಂ ಉತ್ಪಾದನೆಯಲ್ಲಿ ಉಪಯೋಗಿಸುವ ವಿದ್ಯುತ್ಕೋಶ**
**1 ಇಂಗಾಲದ ಕಂಬಿಗಳು 2. ದ್ರವಲೋಹ 3. ಹೊರದ್ವಾರ 4. ಬಾಕ್ಸೈಟ್ ಮತ್ತು ಕ್ರಯೋಲೈಟ್ 5. ಇಂಗಾಲದ ಪದರ 6. ಉಕ್ಕಿನ ಹೊರಮೈ**

ವಾಗಿ ಬಾಕ್ಸೈಟ್ ಎಂಬುದು ಮುಖ್ಯವಾಗಿ ಅಲ್ಯೂಮಿನಿಯಂ ಆಕ್ಸೈಡ್ ($Al_2O_3$). ಆದರೆ ಅದರಲ್ಲಿ ನೀರಿನ ಅಂಶವೂ ಜೊತೆಗೆ ಕಲ್ಮಷಪ್ರಾಯವಾಗಿ ಕಬ್ಬಿಣ, ಸಿಲಿಕಾನ್ ಮತ್ತು ಟೈಟೇನಿಯಂ ಮತ್ತಿತರ ಲೋಹಗಳ ಆಕ್ಸೈಡ್‍ಗಳೂ ಬೆರೆತಿರುತ್ತವೆ. ಬಾಕ್ಸೈಟ್ ವಿವಿಧ ರಚನಾವಿನ್ಯಾಸ ಮತ್ತು ಬಣ್ಣಗಳನ್ನು ಪ್ರದರ್ಶಿಸುವ ಸಾಮರ್ಥ್ಯ ಹೊಂದಿರುವ ಖನಿಜ. ಕಬ್ಬಿಣದ ಅಂಶ ಕಡಿಮೆ ಇದ್ದರೆ ಬಿಳಿಯ ಅಥವಾ ಮಾಸಿದ ಬಿಳಿಯ ಬಣ್ಣವನ್ನು, ಕಬ್ಬಿಣದ ಅಂಶ ಹೆಚ್ಚಾದರೆ ಬೂದಿ ಅಥವಾ ಕಪ್ಪುಬಣ್ಣವನ್ನು ಹೊಂದಿರುವುದು. ಮೆದುವಾದ ಮುದ್ದೆಯಿಂದ ಹಿಡಿದು ಗಟ್ಟಿಯಾದ ಕಲ್ಲಿನ ಸ್ವರೂಪದವರೆಗೂ ವಿವಿಧ ಗಡಸುತನದ ಖನಿಜ. ಗ್ರೀನ್‍ಲ್ಯಾಂಡ್ ದೇಶದಲ್ಲಿ ರಾಸಾಯನಿಕವಾಗಿ ಸೋಡಿಯಂ ಅಲ್ಯೂಮಿನಿಯಂ ಫ್ಲೋರೈಡ್ ಸಂಯುಕ್ತವಾದ ($Na_3AlF_6$) ಕ್ರಯೊಲೈಟ್ ಎಂಬ ಖನಿಜ ನೋಡುವುದಕ್ಕೆ ಹಿಮಗಡ್ಡೆಯನ್ನು ಹೋಲುತ್ತಾ ಭಾರಿಪ್ರಮಾಣದಲ್ಲಿ ದೊರಕುತ್ತದೆ. ಅಲ್ಯೂಮಿನಿಯಂ ಲೋಹ ಸಸ್ಯ, ಪ್ರಾಣಿವರ್ಗಗಳಲ್ಲೂ ಇರುವುದು ತಿಳಿದಿದೆ. ಅಲ್ಯೂಮಿನಿಯಂ ಲೋಹ ತಯಾರಿಕೆಯ ಕೈಗಾರಿಕೆಯಲ್ಲಿ ಪ್ರಧಾನವಾಗಿ ಉಪಯೋಗಿಸುವ ಅದುರು ಬಾಕ್ಸೈಟ್. ಸು. 4 ಕಿಗ್ರಾಂ ಬಾಕ್ಸೈಟ್ ಅದುರಿನಿಂದ 2 ಕಿಗ್ರಾಂ ಶುದ್ಧ ಅಲ್ಯೂಮಿನಿಯಂ ಆಕ್ಸೈಡ್ ಸಂಯುಕ್ತವೂ ಮುಂದೆ ಅದರಿಂದ 1 ಕಿಗ್ರಾಂ ಅಲ್ಯೂಮಿನಿಯಂ ಲೋಹವೂ ದೊರೆಯುತ್ತವೆ. ಇದಲ್ಲದೆ ಇತ್ತೀಚೆಗೆ ಜೇಡಿಮಣ್ಣಿನಿಂದ ಅಲ್ಯೂಮಿನಿಯಂ ಲೋಹವನ್ನು ಕೈಗಾರಿಕಾ ಪ್ರಮಾಣದಲ್ಲಿ ಪಡೆಯುವುದಕ್ಕೆ ಯಶಸ್ವಿ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳು ತಾಂತ್ರಿಕವಾಗಿ ಸಾಧ್ಯವಾಗಿ ಕಂಡುಬಂದರೂ ಲೋಹದ ಉತ್ಪಾದನ ವೆಚ್ಚ ಹೆಚ್ಚು. ಉತ್ತಮ ದರ್ಜೆಯ ಬಾಕ್ಸೈಟ್ ನಿಕ್ಷೇಪಗಳು ದೊರಕುವವರೆಗೂ ಜೇಡಿಮಣ್ಣಿನಿಂದ ಕೈಗಾರಿಕಾಪ್ರಮಾಣದಲ್ಲಿ ಅಲ್ಯೂಮಿನಿಯಂ ಲೋಹ ತಯಾರಿಸುವುದು ಲಾಭದಾಯಕ ಉದ್ಯಮವಾಗಲಾರದು. ಘನರೂಪದಲ್ಲಿ ವಿಶಿಷ್ಟ ರಚನೆ ಹೊಂದಿರುವ ಮತ್ತು ಗುಣಸಂಪನ್ನ ಹರಳುಗಳೆಂದು ಪ್ರಸಿದ್ಧಿಯಾಗಿರುವ ಹಸುರು, ಕೆಂಪು, ನೀಲಿ ಹರಳುಗಳೂ ಕೂಡ ರಾಸಾಯನಿಕವಾಗಿ ಅಲ್ಯೂಮಿನಿಯಂ ಆಕ್ಸೈಡ್. ಉತ್ತಮ ಪಾರದರ್ಶಕತೆ, ಕಾಂತಿಯುತ ಹೊಳಪು ಮತ್ತು ಗಡುಸಿಗೆ ಹೆಸರುವಾಸಿಯಾಗಿದೆ. ಭಾರತದಲ್ಲಲ್ಲದೆ ಬರ್ಮಾ, ಥೈಲೆಂಡ್, ಶ್ರೀಲಂಕ, ಆಸ್ಟ್ರೇಲಿಯ ಮುಂತಾದ ಪೌರಸ್ತ್ಯ ದೇಶಗಳಲ್ಲಿ ಇವು ದೊರೆಯುವುವು. ಅಧಿಕ ಕಬ್ಬಿಣಾಂಶ ವಿರುವ ಬೂದು ಅಥವಾ ಕಪ್ಪು ಬಣ್ಣದ ಜಾತಿಯ ಅಲ್ಯೂಮಿನಿಯಂ ಆಕ್ಸೈಡ್‍ನ ಹೆಸರು ಕೊರಂಡಂ. ಅದು ವಜ್ರದಷ್ಟೇ ಗಡಸು. ಅದನ್ನು ಇತರ ಗಡಸು ವಸ್ತುಗಳನ್ನು ತೇಯುವ ಅಥವಾ ಸಾಣೆ ಹಿಡಿಯುವ ಕೆಲಸಕ್ಕೆ ಉಪಯೋಗಿಸುತ್ತಾರೆ. ಕಬ್ಬಿಣದ ಆಕ್ಸೈಡ್ ಮಿಶ್ರಿತ ಕೊರಂಡಂ, ಎಮರಿ ಕಲ್ಲು ಎಂಬ ಹೆಸರಿನಿಂದ ಲೋಕಪ್ರಸಿದ್ಧವಾಗಿದೆ. ಇದಲ್ಲದೆ ಪ್ರಕೃತಿಯಲ್ಲಿ ಅಲ್ಯೂಮಿನಿಯಂ, ಸಿಲಿಕೇಟ್ ಮತ್ತು ಸಲ್ಫೇಟ್ ಸಂಯುಕ್ತ ಸ್ವರೂಪದಲ್ಲಿಯೂ ದೊರೆಯುತ್ತದೆ.

ಪ್ರಕೃತಿಮೂಲ ಅಲ್ಯೂಮಿನಿಯಂ ಸಲ್ಫೇಟ್ ಮುಂತಾದ ಸಂಯುಕ್ತಗಳನ್ನು ಕಾಸಿ, ರಾಸಾಯನಿಕ ವಿಭಜನೆ ಹೊಂದುವಂತೆ ಮಾಡಿದರೆ ಅಲ್ಯೂಮಿನಿಯಂ ಆಕ್ಸೈಡ್ ಉತ್ಪತ್ತಿಯಾಗುವುದು. ಉಷ್ಣತೆಯ ಸೂಕ್ತ ನಿಯಂತ್ರಣ ಮತ್ತು ಕಬ್ಬಿಣದ ನಿಯಂತ್ರಿತ ಮಿಶ್ರಣದಿಂದ ಕೃತಕ ಎಮರಿ, ಕೊರಂಡಂ, ಕೆಂಪು ಹರಳುಗಳು ಮುಂತಾದುವನ್ನು ತಯಾರಿಸುವರು.

ಅಲ್ಯೂಮಿನಿಯಂ ಲೋಹದ ಪ್ರಥಮ ಬೇರ್ಪಡಿಕೆ ಆದದ್ದು 1825ರಲ್ಲಿ. 1855ರಲ್ಲಿ ಮೊದಲಬಾರಿಗೆ ಮಾರುಕಟ್ಟೆಗೆ (ಪ್ಯಾರಿಸ್) ಬಂದಾಗ ಜನರಿಗೆ ಇದರ ಪರಿಚಯವಾಯಿತು. 1866ರಲ್ಲಿ ಕೈಗಾರಿಕೆಯ ಲೋಹವಾಗಿ ಬಳಸಿದರು. ಪ್ರಕೃತಿಯಲ್ಲಿ ದೊರೆಯುವ ಅಲ್ಯೂಮಿನಿಯಂ ಸಲ್ಫೇಟ್ ಸಂಬಂಧಿತ ವಸ್ತುಗಳನ್ನು ಪುರಾತನ ಕಾಲದಿಂದಲೂ (ಪ್ರ.ಶ.ಪೂ. 5ನೆಯ ಶತಮಾನ) ಗಾಯಗಳಿಂದ ಸೋರುವ ರಕ್ತವನ್ನು ತಡೆಯುವುದಕ್ಕೆ, ಬಟ್ಟೆಗಳಿಗೆ ಬಣ್ಣ ಕಚ್ಚಿಸುವುದೇ ಮುಂತಾದ ಕೈಗಾರಿಕೆಗಳಲ್ಲಿಯೂ ಉಪಯೋಗಿಸುತ್ತಲಿದ್ದರು. ಆ ಜಾತಿಯ ಕೆಲ ವಸ್ತುಗಳಿಗೆ ಲ್ಯಾಟಿನ್ ಭಾಷೆಯಲ್ಲಿ ಅಲ್ಯೂಮಿನ ಎಂದು ಹೆಸರಿದ್ದು, ಅಲ್ಯೂಮಿನಿಯಂ ಎಂಬ ಹೆಸರಿಗೆ ಅದೇ ಮೂಲ.

ಉತ್ತಮ ಬಾಕ್ಸೈಟ್ ನಿಕ್ಷೇಪಗಳನ್ನು ಪಡೆದಿರುವ ಮತ್ತು ಲೋಹೋತ್ಪಾದನೆಯಲ್ಲಿ ಅಗ್ರಸ್ಥಾನಗಳಿಸಿರುವ ರಾಷ್ಟ್ರಗಳೆಂದರೆ ಫ್ರಾನ್ಸ್, ಕೆನಡ, ಅಮೆರಿಕ ಸಂಯುಕ್ತ ಸಂಸ್ಥಾನ, ರಷ್ಯ. ಮೊದಮೊದಲು ಬಾಕ್ಸೈಟ್ ನಿಕ್ಷೇಪಗಳೂ ಕೇವಲ ದಕ್ಷಿಣ ಫ್ರಾನ್ಸ್ ಮತ್ತು ಕೆಲ ದಕ್ಷಿಣ ಯುರೋಪಿನ ರಾಷ್ಟ್ರಗಳಲ್ಲಿ ಮಾತ್ರ ದೊರೆಯಬಲ್ಲವೆಂದು ತಿಳಿಯಲಾಗಿತ್ತು. ಇಂಥ ಸಮಶೀತೋಷ್ಣವಲಯದಲ್ಲಲ್ಲದೆ, ಭೂ ಮಧ್ಯರೇಖೆಯ ಸಮೀಪದ ಉಷ್ಣವಲಯದಲ್ಲೂ ಬಾಕ್ಸೈಟ್ ನಿಕ್ಷೇಪಗಳು ಹೇರಳವಾಗಿ ಹುದುಗಿರುವುದು ಈಗ ಖಚಿತವಾಗಿ ತಿಳಿದುಬಂದಿರುವ ವಿಷಯವಾಗಿದೆ. ಈ ಕಾರಣದಿಂದ ಅನೇಕ ಆಫ್ರಿಕನ್ ದೇಶಗಳೂ–ಉದಾಹರಣೆಗೆ, ಕ್ಯಾಮರೂನ್, ಗಿನಿ, ಘಾನ, ಕಾಂಗೋಗಳೂ ಅಲ್ಯೂಮಿನಿಯಂ ಕೈಗಾರಿಕೆಯಲ್ಲಿ ವಿಶಿಷ್ಟ ಸ್ಥಾನ ಗಳಿಸಿವೆ. ಅಲ್ಲೆಲ್ಲ ಭಾರಿ ಪ್ರಮಾಣದ ಅಲ್ಯೂಮಿನಿಯಂ ಲೋಹೋತ್ಪಾದನೆಯಲ್ಲಿ ಕೈಗಾರಿಕೆಗಳು ನೆಲೆಗೊಂಡಿವೆ. ಆಸ್ಟ್ರೇಲಿಯ ದೇಶದಲ್ಲೂ ಹೇರಳವಾಗಿ ಬಾಕ್ಸೈಟ್ ನಿಕ್ಷೇಪಗಳು ಇವೆ.

ಭಾರತದಲ್ಲಿ ಸು. 16.5 ಕೋಟಿ ಟನ್‍ಗಳಷ್ಟು ಬಾಕ್ಸೈಟ್ ಅದಿರಿನ ನಿಕ್ಷೇಪಗಳಿರುವುದೆಂದು ಅಂದಾಜುಮಾಡಲಾಗಿದೆ. ಅದರಲ್ಲಿ ಉನ್ನತ ದರ್ಜೆಯ ನಿಕ್ಷೇಪಗಳು ಸುಮಾರು 9.4 ಕೋಟಿ ಟನ್‍ಗಳು. ಬಿಹಾರಿನ ರಾಂಚಿ, ಮಧ್ಯಪ್ರದೇಶದ ಜಬ್ಬಲ್ಪುರ–ಕಟ್ನಿ ವಿಭಾಗ, ಮಹಾರಾಷ್ಟ್ರದ ಥಾನ ಜಿಲ್ಲೆ, ಕರ್ನಾಟಕ ರಾಜ್ಯದ ಬೆಳಗಾಂ ಜಿಲ್ಲೆ, ಜಮ್ಮು ಮತ್ತು ಕಾಶ್ಮೀರ್, ತಮಿಳುನಾಡಿನ (ಮದರಾಸು) ಸೇಲಂ ವಿಭಾಗ, ಒರಿಸ್ಸ, ಗುಜರಾತ್‍ಗಳಲ್ಲಿ ಬಾಕ್ಸೈಟ್ ನಿಕ್ಷೇಪಗಳಿವೆ. ಬಾಕ್ಸೈಟ್ ಅದಿರು ಕರ್ನಾಟಕ ರಾಜ್ಯದಲ್ಲಿ ಬಾಬಾಬುಡನ್‍ಗಿರಿ ವಲಯದಲ್ಲಿ ಸ್ವಲ್ಪಮಟ್ಟಿಗೂ, ಸಿಲಿಕಾನ್ ಮಿಶ್ರಿತ ರೂಪದಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲೂ ಇರುವುದು ತಿಳಿದಿದೆ.

ಭಾರತದಲ್ಲಿ ಪ್ರಥಮವಾಗಿ ಬಾಕ್ಸೈಟ್ ನಿಕ್ಷೇಪಗಳ ಪ್ರಯೋಜನ ಪಡೆಯುವ ಕಾರ್ಯ ಬಿಹಾರಿನಲ್ಲಿ ಆರಂಭವಾಯಿತು(1948). 1937ಕ್ಕೆ ಮುಂಚೆ ಭಾರತದಲ್ಲಿ ಅಲ್ಯೂಮಿನಿಯಂ ಲೋಹ ತಯಾರಿಕೆ ಇರಲಿಲ್ಲ. ಆ ವರ್ಷದಲ್ಲಿ ಎರಡು ಕಂಪನಿಗಳು ಅಲ್ಯೂಮಿನಿಯಂ ಕೈಗಾರಿಕಾರಂಗಕ್ಕಿಳಿದು ಮೊದಲು ಆಮದು ಮಾಡಿಕೊಂಡು ಅಲ್ಯೂಮಿನಿಯಂ ಮತ್ತು ಬಾಕ್ಸೈಟ್‍ಗಳನ್ನು ಆಧರಿಸಿದ ಕೈಗಾರಿಕೆಗಳನ್ನು ಆರಂಭಿಸಿದುವು. ಕೇರಳದ ಆಲ್ವೇಯಲ್ಲಿ ಮೊದಲು ಲೋಹ ತಯಾರಿಕಾ ಕುಲುಮೆ ಕಾರ್ಯಾರಂಭಿಸಿತು. ಸ್ವಾತಂತ್ರ್ಯಾನಂತರ ಹಿರಾಕುಡ್ ವಿವಿಧೋದ್ದೇಶ ಜಲಾಶಯದ ವಲಯದಲ್ಲಿ ಪ್ರಥಮ ಭಾರಿ ಪ್ರಮಾಣದ ಅಂದರೆ ಸುಮಾರು 10,000 ಟನ್ ಲೋಹೋತ್ಪಾದನ ಸಾಮರ್ಥ್ಯವುಳ್ಳ ಕೈಗಾರಿಕೆಯೊಂದು ಸ್ಥಾಪಿತವಾಯಿತು. ಅಲ್ಲಿಂದೀಚೆಗೆ ಅಲ್ಯೂಮಿನಿಯಂ ಲೋಹಕ್ಕೆ ಬೇಡಿಕೆ ಹೆಚ್ಚಾಗಿ, ಸರ್ಕಾರ

ಮತ್ತು ಸ್ವತಂತ್ರ ಕೈಗಾರಿಕೋದ್ಯಮಿಗಳ ಆಸಕ್ತಿಯ ಫಲವಾಗಿ ಅಲ್ಯೂಮಿನಿಯಂ ಲೋಹೋತ್ಪಾದನೆ ಹೆಚ್ಚುತ್ತಲಿದೆ. ಕರ್ನಾಟಕದ ಬೆಳಗಾಂವಿ–ಕಾರವಾರ ವಲಯದಲ್ಲೊಂದು ಕಾರ್ಖಾನೆ ಸದ್ಯದಲ್ಲೇ ಅಸ್ತಿತ್ವಕ್ಕೆ ಬರಲಿದೆ.

**ಲೋಹ ತಯಾರಿಕೆ :** ಬಾಕ್ಸೈಟ್ ಅದಿರನ್ನು ನೇರವಾಗಿ ಅಪಕರ್ಷಣ ಕ್ರಿಯೆಗೆ (ರಿಡಕ್ಷನ್) ಒಳಪಡಿಸಿದರೆ ಅದಿರಿನಲ್ಲಿರುವ ಇತರ ಲೋಹಗಳಾದ ಕಬ್ಬಿಣ, ಟೈಟೇನಿಯಮ್‍ಗಳು ಕೂಡ ಅಲ್ಯೂಮಿನಿಯಮ್‍ಗಿಂತ ಸುಲಭವಾಗಿ ಮೊದಲು ಹೊರಬಿದ್ದು ಅಲ್ಯೂಮಿನಿಯಂ ಲೋಹದೊಡನೆ ಬೆರತು ಅದರ ಗುಣಮಾರಕಗಳಾಗುತ್ತವೆ. ಹಾಗಲ್ಲದೆ ಇಂಗಾಲವನ್ನು ಅಪಕರ್ಷಕಾರಿಯಾಗಿ ಉಪಯೋಗಿಸಿದ್ದೇ ಆದರೆ, ಅದರಿಂದ ಅಲ್ಯೂಮಿನಿಯಂ ಆಕ್ಸೈಡ್ ಅಪಕರ್ಷಣ ಕ್ರಿಯೆಗೊಳಗಾಗಲು ಅವಶ್ಯವಾದ ಉಷ್ಣತೆಯ ಮಟ್ಟ ಜಾಸ್ತಿ (ಸು. $2000^0$ಸೆಂ. ಗ್ರೇ.). ಆ ಉಷ್ಣತೆಯ ಮಟ್ಟದಲ್ಲಿ ಬೇರ್ಪಟ್ಟ ಅಲ್ಯೂಮಿನಿಯಂ ಲೋಹ ಕುದಿಯಲು ಆರಂಭಿಸಿ ಆವಿಯಾಗಿ ನಷ್ಟವಾಗುವ ಸಂಭವವಿದೆ ಮತ್ತು ಇತರ ಲೋಹಗಳೊಡನೆ ಬೆರೆತು ಮಿಶ್ರ ಲೋಹವೂ ಆಗುವುದು. ಆದಿಯಲ್ಲಿ ಅಲ್ಯೂಮಿನಿಯಂ ಸಂಯುಕ್ತಗಳನ್ನು ಸೋಡಿಯಂ, ಪೊಟ್ಯಾಸಿಯಂಗಳಿಂದ ರಾಸಾಯನಿಕವಾಗಿ ಅಪಕರ್ಷಿಸಿ ಅಲ್ಯೂಮಿನಿಯಂ ಲೋಹವನ್ನು ಬೇರ್ಪಡಿಸುವುದು ಸರ್ವಸಾಮಾನ್ಯವಾಗಿತ್ತು. ಆದರೆ ಈ ವಿಧಾನಗಳಲ್ಲಿ ದೊರಕುವ ಪ್ರಮಾಣ ಅತ್ಯಲ್ಪ ಮತ್ತು ಖರ್ಚು ಜಾಸ್ತಿ. ಆಧುನಿಕ ಕೈಗಾರಿಕಾ ವಿಧಾನ ಅಲ್ಯೂಮಿನಿಯಂ ಆಕ್ಸೈಡ್‍ನ ವಿದ್ಯುದ್ವಿಭಜನೆ. ಈ ವಿಧಾನವನ್ನು ಫ್ರಾನ್ಸ್ ದೇಶದಲ್ಲಿ ಹೀರೋ ಮತ್ತು ಅಮೆರಿಕ ದೇಶದಲ್ಲಿ ಹಾಲ್ ಎಂಬ ವಿಜ್ಞಾನಿಗಳು ಕಂಡುಹಿಡಿದರು (1886). ಇದರಿಂದ ಕೈಗಾರಿಕಾಪ್ರಮಾಣದಲ್ಲಿ ಅಲ್ಯೂಮಿನಿಯಂ ಲೋಹವನ್ನು ಉತ್ಪಾದಿಸಲು ಬಹು ಅಗಾಧ ಪ್ರಮಾಣದಲ್ಲಿ ಮತ್ತು ಸುಲಭ ವೆಚ್ಚದಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಯಾಗಬೇಕು. ಈ ಕಾರಣದಿಂದ ಅಲ್ಯೂಮಿನಿಯಂ ಲೋಹದ ಅದಿರುಗಳು ಪ್ರಕೃತಿಯಲ್ಲಿ ಹೇರಳವಾಗಿ ದೊರಕುತ್ತಿದ್ದರೂ, ವಿದ್ಯುಚ್ಛಕ್ತಿ ಉತ್ಪಾದನಾರಂಗದಲ್ಲಿ ಪ್ರಗತಿಯಾಗಿ, ಸುಲಭ ವೆಚ್ಚದಲ್ಲಿ ಅಗಾಧಶಕ್ತಿ ಪೂರೈಕೆ ಆಗುವವರೆಗೂ ಅಲ್ಯೂಮಿನಿಯಂ ಲೋಹ ಜನಸಾಮಾನ್ಯರಿಗೆ ಅಗೋಚರವಾಗಿಯೇ ಪ್ರಕೃತಿಯಲ್ಲಿ ಹುದುಗಿಕೊಂಡಿರಬೇಕಾಯಿತು. ಡೈನಮೋ, ಕಲ್ಲಿದ್ದಲು, ಜಲಶಕ್ತಿ, ಇತ್ತೀಚೆಗೆ ಪರಮಾಣುಶಕ್ತಿ–ಹೀಗೆ ವಿದ್ಯುಚ್ಛಕ್ತಿ ಮೂಲಗಳು ವೃದ್ಧಿಯಾದಂತೆಲ್ಲ ಅಲ್ಯೂಮಿನಿಯಂ ಲೋಹೋತ್ಪಾದನೆ ಕ್ರಮೇಣ ಏರತೊಡಗಿತು. ಇಂದು ಈ ಲೋಹ ಕಬ್ಬಿಣ ಮತ್ತು ಉಕ್ಕುಗಳೊಡನೆ ಪೈಪೋಟಿ ನಡೆಸುತ್ತ ಜನಸಾಮಾನ್ಯರಿಗೆ ನಿತ್ಯಜೀವನದಲ್ಲಿ ಒಂದು ಅತ್ಯುಪಯುಕ್ತ ಲೋಹವಾಗಿ ಪರಿಣಮಿಸಿದೆ.

ಸಾಮಾನ್ಯವಾಗಿ ಇತರ ಸುಪರಿಚಿತ, ಸಾಧಾರಣ ಲೋಹಗಳೆನ್ನಬಹುದಾದ ಕಬ್ಬಿಣ, ತಾಮ್ರ, ಸೀಸ, ಸತು ಈ ಲೋಹಗಳ ಅದಿರನ್ನು ನೇರವಾಗಿ ಅಪಕರ್ಷಣ ಕ್ರಿಯೆಗೊಳಪಡಿಸಿದರೆ, ಸ್ವಲ್ಪಮಟ್ಟಿಗೆ ಅಶುದ್ಧ ಲೋಹಗಳು ಮೊದಲು ಹೊರಬೀಳುವುವು. ಅನಂತರ ಅವುಗಳನ್ನು ಶುದ್ಧೀಕರಣ ಕ್ರಿಯೆಗೊಳಪಡಿಸಿ ಬಲು ಶುದ್ಧ ಲೋಹವನ್ನು ಪಡೆಯುವುದು ವಾಡಿಕೆ. ಆದರೆ ಅಲ್ಯೂಮಿನಿಯಂ ಲೋಹೋತ್ಪಾದನೆಯಲ್ಲಿ ಪ್ರಕೃತಿ ಮೂಲ ಅದಿರನ್ನೇ ಆದಷ್ಟು ಶುದ್ಧಿ ಮಾಡಿ, ಆ ಶುದ್ಧೀಕೃತ ಅದುರಿನಿಂದ ನೇರವಾಗಿ ಶುದ್ಧ ಲೋಹವನ್ನು ಪಡೆಯುವುದೇ ವಿಹಿತ. ಏಕೆಂದರೆ ಅಶುದ್ಧ ಅಲ್ಯೂಮಿನಿಯಂ ಲೋಹದಿಂದ ಅದರಲ್ಲಿ ಬೆರೆತಿರುವ ಗುಣಮಾರಕಗಳಾದ ಇತರ ಲೋಹಗಳನ್ನು ಬೇರ್ಪಡಿಸುವುದು ಅತಿ ಕಷ್ಟಸಾಧ್ಯ ಮತ್ತು ದುಬಾರಿ. ಆದ್ದರಿಂದ ಬಾಕ್ಸೈಟ್ ಅದಿರನ್ನು ಮೊದಲು ನೀರಿನಲ್ಲಿ ಜಾಲಾಡಿ ಜೇಡಿಮಣ್ಣು ಮತ್ತು ಇತರ ಹಗುರ ಕಲ್ಮಷಗಳನ್ನು ಆದಷ್ಟು ತೆಗೆಯುವರು. ಅನಂತರ ಅದುರನ್ನು ಬೇಯರನು ಕಂಡುಹಿಡಿದ ವಿಧಾನದಿಂದ ಮೊದಲು ಶುದ್ಧಮಾಡುತ್ತಾರೆ. ಈ ವಿಧಾನದಲ್ಲಿ ಅಶುದ್ಧ ಬಾಕ್ಸೈಟ್ ಅದಿರನ್ನು ಮೊದಲು ನಯವಾಗಿ ಪುಡಿಮಾಡಿ, ಅದನ್ನು ಕಾಸ್ಟಿಕ್‍ಸೋಡಾ ಕ್ಷಾರ ದ್ರಾವಣದಲ್ಲಿ ಚೆನ್ನಾಗಿ ಬೇಯಿಸಿದರೆ ಅಲ್ಯೂಮಿನಿಯಂ ಲೋಹದ ಆಕ್ಸೈಡ್ ಮಾತ್ರ ಜೀರ್ಣವಾಗಿ ಲೀನವಾಗುತ್ತದೆ. ಕಬ್ಬಿಣ ಟೈಟೇನಿಯಂ ಆಕ್ಸೈಡ್‍ಗಳು ಜೀರ್ಣವಾಗದೆ ಕೆಂಪುಮಣ್ಣಿನಂತೆ ಉಳಿದುಕೊಳ್ಳುತ್ತವೆ. ಆಗ ಶೋಧಿಸಿದರೆ ಶುದ್ಧ ಅಲ್ಯೂಮಿನಿಯಂ ಲೋಹವನ್ನು ಲೀನಮಾಡಿಕೊಂಡಿರುವ ಪರಿಶುದ್ಧ ದ್ರಾವಣವೊಂದು ಪ್ರತ್ಯೇಕವಾಗುತ್ತದೆ. ರಾಸಾಯನಿಕವಾಗಿ ಅದು ಸೋಡಿಯಂ ಅಲ್ಯೂಮಿನೇಟ್. ಅದಕ್ಕೆ ಕೊಂಚ ಘನರೂಪದ ಅಲ್ಯೂಮಿನಿಯಂ ಆಕ್ಸೈಡ್‍ನ್ನು ಬೆರೆಸಿ ದ್ರಾವಣವನ್ನು ಸ್ವಲ್ಪ ಸಮಯ ನಿಲ್ಲಲು ಬಿಟ್ಟರೆ ಅದರಿಂದ ಜಲಮಿಶ್ರಿತ ಅಲ್ಯೂಮಿನಿಯಂ ಆಕ್ಸೈಡ್ ಘನರೂಪದಲ್ಲಿ ಹೊರಬೀಳುವುದು. ಅಥವಾ ಇಂಗಾಲದ ಡೈ ಆಕ್ಸೈಡ್ ಅನಿಲವನ್ನು ಹಾಯಿಸುವುದರಿಂದಲೂ ಅದೇ ಪರಿಣಾಮ ಸಾಧ್ಯ. ಹೊರಬಿದ್ದ ಘನವಸ್ತುವನ್ನು ಸೋಸಿ ತೆಗೆದು, ಚೆನ್ನಾಗಿ ಕಾಸಿದರೆ ನೀರೆಲ್ಲ ಹೊರಬಿದ್ದು ಶುದ್ಧ ಒಣ ಅಲ್ಯೂಮಿನಿಯಂ ಆಕ್ಸೈಡ್ ಆಗಿ ಮಾರ್ಪಾಟಾಗುತ್ತದೆ.

ಇಂಗಾಲದ ಒಳಮೈ ಪದರ ಹೊಂದಿರುವ ಬೀಡುಕಬ್ಬಿಣ ಅಥವಾ ಉಕ್ಕಿನ ಪಾತ್ರೆಯೊಂದರಲ್ಲಿ ಶುದ್ಧೀಕೃತ ಅಲ್ಯೂಮಿನಿಯಂ ಆಕ್ಸೈಡನ್ನು ಕ್ರಯೋಲೈಟ್ ಎಂಬ ಸೋಡಿಯಂ ಅಲ್ಯೂಮಿನಿಯಂ ಫ್ಲೋರೈಡ್ ಸಂಯುಕ್ತದ ದ್ರಾವಣದಲ್ಲಿ ಸುಮಾರು $800^0 - 1000^0$ಸೆಂ.ಗ್ರೇ. ಉಷ್ಣತೆಯ ಮಟ್ಟದಲ್ಲಿ ಲೀನಮಾಡಬೇಕು. ಇಂಗಾಲದ ಪದರವನ್ನು ಋಣವಿದ್ಯುತ್ ಧ್ರುವವನ್ನಾಗಿಯೂ ಇಂಗಾಲದ ಕಂಬಿಗಳನ್ನು ಮೇಲಿಂದ ಇಳಿಬಿಟ್ಟು ಅವುಗಳನ್ನು ಧನವಿದ್ಯುತ್ ಧ್ರುವವನ್ನಾಗಿಯೂ ಮಾಡಿ, ಅವುಗಳನ್ನು ವಿದ್ಯುತ್ ಮೂಲವೊಂದಕ್ಕೆ ಲಗತ್ತಿಸಿ, ವಿದ್ಯುತ್ತನ್ನು ದ್ರಾವಣದ ಮೂಲಕ ಹಾಯಿಸಬೇಕು. ಆಗ ಅಲ್ಯೂಮಿನಿಯಂ ಆಕ್ಸೈಡ್ ವಿಭಜನೆ ಹೊಂದಿ ಶುದ್ಧ ಅಲ್ಯೂಮಿನಿಯಂ ಲೋಹ ಋಣಧ್ರುವವಲಯದಲ್ಲಿಯೂ, ಆಕ್ಸಿಜನ್ ಧನಧ್ರುವವಲಯದಲ್ಲಿಯೂ ಹೊರಬೀಳುವುವು. ಆಕ್ಸಿಜನ್ ಹೊರಬೀಳುವಾಗ ಧನಧ್ರುವಗಳಾದ ಇಂಗಾಲದ ಕಂಬಗಳು ಉರಿದುರಿದು ನಶಿಸುತ್ತಲಿರುತ್ತವೆ. ಅವುಗಳನ್ನು ಆಗಾಗ್ಗೆ ಬದಲಾಯಿಸುತ್ತಿರಬೇಕು. ಅಲ್ಯೂಮಿನಿಯಂ ಲೋಹ ವಿದ್ಯುತ್‍ಕೋಶದ ತಳದಲ್ಲಿ ದ್ರವರೂಪದಲ್ಲಿ ಶೇಖರವಾಗುತ್ತದೆ. ಆಗಾಗ್ಗೆ ಶೇಖರಿತಲೋಹವನ್ನು ಹೊರಗೆಳೆದು ಗಟ್ಟಿಗಳ ರೂಪಕ್ಕೆ ಎರಕ ಹೊಯ್ಯುವರು.

ವಿದ್ಯುತ್‍ಕೋಶದ ತಳದಲ್ಲಿ ಶೇಖರಿತವಾಗುವ ಅಲ್ಯೂಮಿನಿಯಂ ಲೋಹದ ದ್ರವವನ್ನು ನಿರ್ವಾತದಲ್ಲಿ ಕೊಳವೆಗಳ ಮೂಲಕ ಹೊರತೆಗೆಯುವ ಆಧುನಿಕ ಕ್ರಮವೊಂದು ಬಳಕೆಗೆ ಬಂದಿದೆ. ಎರಕಗಳನ್ನು ಕಾಸಿ ದ್ರವೀಕರಿಸಿ ಪುನಃ ಘನೀಕರಣ ಮಾಡುವುದರ ಮೂಲಕ ಶುದ್ಧ ಅಲ್ಯೂಮಿನಿಯಂ ಲೋಹವನ್ನು ಪಡೆಯಬಹುದು. ಅಥವಾ ಎರಕಗಳನ್ನು ಪುನಃ ವಿದ್ಯುದ್ವಿಭಜನೆಗೊಳಪಡಿಸಿಯೂ ಶುದ್ಧ ಅಲ್ಯೂಮಿನಿಯಂ ಲೋಹವನ್ನು ಪಡೆಯಬಹುದು.

ಅಲ್ಯೂಮಿನಿಯಂ ಲೋಹದ ಉಪಯುಕ್ತ ಗುಣಗಳ ಪೂರ್ಣವಿಕಾಸಕ್ಕೆ ಅದರಲ್ಲೂ ಅದರ ವಿದ್ಯುದ್ವಾಹಕತೆಯ ಪೂರ್ಣಲಾಭ ಪಡೆಯುವುದಕ್ಕೆ ಅದರ ಪರಿಪೂರ್ಣ ಶುದ್ಧತೆಯನ್ನು ಖಚಿತಪಡಿಸಿಕೊಳ್ಳಬೇಕು. ವಿದ್ಯುದ್ವಿಭಜನಾಕ್ರಮದಿಂದ ಹೊರಬರುವ ಅಲ್ಯೂಮಿನಿಯಂ ಲೋಹದ ಶುದ್ಧತೆ ಶೇ.99–99.6ವರೆಗೂ ಇರುವುದು. ಮರುಶುದ್ಧೀಕರಣ ಕ್ಕೊಳಪಡಿಸಿ ಶೇ.99.99ವರೆಗೂ ಶುದ್ಧವಾದ ಲೋಹವನ್ನು ಪಡೆಯುವುದು ಸಾಧ್ಯ. ಹಾಗಾಗಿ ಕಲ್ಮಷಗಳ ಪ್ರಮಾಣ ಬಹಳ ಕನಿಷ್ಠ ಮಿತಿಯಲ್ಲಿರುವುದು. ಆ ಅಲ್ಪಪ್ರಮಾಣದಲ್ಲಿ ಕಲ್ಮಷಗಳ ನಿರ್ದಿಷ್ಟಾಂಶವನ್ನು ನಿಖರವಾಗಿ ತಿಳಿಯುವುದು ಅವಶ್ಯ. ಈ ಕನಿಷ್ಠ ಮಿತಿಯಲ್ಲಿ ಸಾಧಾರಣ ರಾಸಾಯನಿಕ ವಿಶ್ಲೇಷಣಾ ವಿಧಾನಗಳು ನಿಷ್ಕ್ರಿಯವಾಗುವುವು. ಆದ್ದರಿಂದ ಕೆಲ ವಿಶೇಷ ಸೂಕ್ಷ್ಮ ವಿಶ್ಲೇಷಣಾ ವಿಧಾನಗಳನ್ನು ಅನುಸರಿಸಬೇಕಾಗುವುದು. ಇವುಗಳಲ್ಲಿ ಒಂದು ಮುಖ್ಯವಾದುದು, ಲೋಹದ ವಿದ್ಯುನ್ನಿರೋಧಶಕ್ತಿಯನ್ನು ಬಹುತಗ್ಗಿದ ಉಷ್ಣತೆಯ ಮಟ್ಟದಲ್ಲಿ ಅಂದರೆ ದ್ರವರೂಪದ ಹೀಲಿಯಂನ ಉಷ್ಣತೆಯ ಮಟ್ಟದಲ್ಲಿ ಅಂದರೆ ಸುಮಾರು 272° ಸೆಂ. ಅಳೆಯುವುದು. ಕಲ್ಮಷ ಪ್ರಮಾಣ ಅಂದರೆ ಅಶುದ್ಧತೆ ಹೆಚ್ಚಿದಂತೆಲ್ಲ ವಿದ್ಯುನ್ನಿರೋಧಶಕ್ತಿಯೂ ಹೆಚ್ಚುವುದು. ಎರಡನೆಯದಾಗಿ ವಿಕಿರಣಶೀಲ ಆಧಾರಿತ ರಾಸಾಯನಿಕ ವಿಧಾನಗಳಿಂದಲೂ (ರೇಡಿಯೋ ಕೆಮಿಕಲ್ ಮೆಥಡ್ಸ್) ಕನಿಷ್ಠ ಮಿತಿಯ ಕಲ್ಮಷಗಳ ಪ್ರಮಾಣವನ್ನು ಅಳೆಯುವುದು ಸಾಧ್ಯ.

ಸಾಧಾರಣ ದರ್ಜೆಯ ಜೇಡಿಮಣ್ಣಿನಲ್ಲಿ ಶೇ.10–ಶೇ.20ರಷ್ಟು ಮಾತ್ರ ಅಲ್ಯೂಮಿನಿಯಂ ಆಕ್ಸೈಡ್ ಇರುತ್ತದೆ. ಅಲ್ಯೂಮಿನಿಯಂ ಆಕ್ಸೈಡ್ ಅಂಶ ಶೇ.30–ಶೇ.40 ಮಟ್ಟಕ್ಕೇರಿದಾಗ ಜೇಡಿಮಣ್ಣಿನ ಪ್ರಾಧಾನ್ಯ ಹೆಚ್ಚುತ್ತದೆ. ಅದನ್ನು ಪಿಂಗಾಣಿ ಕೈಗಾರಿಕೆ, ಉಷ್ಣ ಸಹಿಷ್ಣು ಇಟ್ಟಿಗೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಕಬ್ಬಿಣದ ಆಕ್ಸೈಡ್ ಮತ್ತು ಸಿಲಿಕಾನ್ ಡೈ ಆಕ್ಸೈಡ್ ಅಂಶ ಬಾಕ್ಸೈಟ್ ಅದಿರಿನಲ್ಲಿ ಹೆಚ್ಚಾದರೆ ಬೇಯರ್‍ನ ಶುದ್ಧೀಕರಣ ವಿಧಾನದಲ್ಲಿ ಬಹುಪಾಲು ಸೋಡಾಕ್ಷಾರ ಸಿಲಿಕಾನ್ ಆಕ್ಸೈಡ್‍ನ ಜೊತೆ ಕ್ರಿಯೆಹೊಂದಿ ವೃಥಾ ನಷ್ಟವಾಗುವುದು. ಸಿಲಿಕೇಟ್ ಅಂಶ ಹೆಚ್ಚಾಗಿರುವ ಬಾಕ್ಸೈಟ್ ಅದಿರುಗಳನ್ನು ಬೇಯರ್‍ನ ಶುದ್ಧೀಕರಣವಿಧಾನಕ್ಕೊಳಪಡಿಸಿದಾಗ, ಅವಶೇಷವಾಗಿ ಉಳಿಯುವ ಕೆಂಪುಮಣ್ಣಿನಿಂದ ಅದರಲ್ಲಿ ಅಲ್ಯೂಮಿನಿಯಂ ಅಂಶವನ್ನು ಸುಣ್ಣಕಲ್ಲು–ಸೋಡಿಯಂ ಕಾರ್ಬೊನೇಟ್ ಜೊತೆ ಕಾಸುವುದರ ಮೂಲಕ ಸೋಡಿಯಂ ಅಲ್ಯೂಮಿನೇಟ್ ಆಗಿ ಪರಿವರ್ತಿಸಬಹುದು. ಅನಂತರ ಅದನ್ನು ನೀರಿನಲ್ಲಿ ಸುಲಭವಾಗಿ ಕರಗಿಸಿಕೊಳ್ಳಬಹುದು. ಕಬ್ಬಿಣದ ಅಥವಾ ಜೇಡಿಮಣ್ಣಿನ ಅಂಶ ಬಾಕ್ಸೈಟಿನಲ್ಲಿ ಹೆಚ್ಚಾದಷ್ಟೂ ಅಂದರೆ, ಅಲ್ಯೂಮಿನಿಯಂ ಲೋಹಾಂಶ ಕಡಿಮೆಯಾದಷ್ಟೂ, ಅದಿರುಗಳ ದರ್ಜೆ ಕಡಿಮೆಯಾಗಿ, ಅವುಗಳನ್ನು ಸಾಗಿಸುವ ಮತ್ತು ಶುದ್ಧೀಕರಿಸುವ ಕಾರ್ಯಕ್ಕೆ ಖರ್ಚು ಹೆಚ್ಚಾಗುವುದು. ಅಂಥ ಕನಿಷ್ಠ ಬಾಕ್ಸೈಟ್ ಅದುರುಗಳ ಉಪಯೋಗವನ್ನು ಸುಣ್ಣ–ಸೋಡಿಯಂ ಕಾರ್ಬೊನೇಟ್ ಜೊತೆ ಕರಗಿಸಿ ಮುದ್ದೆಯಾಗುವಂತೆ ಕಾಸುವುದರ ಮೂಲಕ ನ್ಯಾಯಬೆಲೆಯಲ್ಲಿ ಪಡೆಯಲು ಸಾಧ್ಯ.

ಅಲ್ಯೂಮಿನಿಯಂ ಆಕ್ಸೈಡ್ ಸೋಡಿಯಂ ಅಲ್ಯೂಮಿನೇಟ್ ಆಗಿ ಪರಿವರ್ತನೆ ಹೊಂದಿ, ನೀರಿನಲ್ಲಿ ವಿಲೀನವಾಗುವ ಲಕ್ಷಣ ಸಂಪನ್ನವಾಗಿ, ಅದನ್ನು ಹೊರತೆಗೆಯಲು ಸಾಧ್ಯವಾಗುತ್ತದೆ. ಕ್ಯಾಲ್ಸಿಯಂ, ಸಿಲಿಕೇಟ್ ನೀರಿನಲ್ಲಿ ಲೀನವಾಗದೆ ಉಳಿಯುತ್ತದೆ. ಅದನ್ನು ಕಾಸಿ ಸಿಮೆಂಟ್ ತಯಾರಿಕೆಯಲ್ಲಿ ಉಪಯೋಗಿಸುವರು. ಬದಲಾಗಿ ಕಬ್ಬಿಣಾಂಶ ಹೆಚ್ಚಾಗಿರುವ ಬಾಕ್ಸೈಟ್ ಅದುರನ್ನು ರಾಸಾಯನಿಕವಾಗಿ ಕ್ಯಾಲ್ಸಿಯಂ ಕಾರ್ಬೊನೇಟ್ ಆದ ಸುಣ್ಣಕಲ್ಲಿನೊಡನೆ ಮೊದಲು ಕಾಸಿದರೆ ಕ್ಯಾಲ್ಸಿಯಂ ಅಲ್ಯೂಮಿನೇಟ್ ಮತ್ತು ಕಬ್ಬಿಣ ಬೇರೆ ಆಗುತ್ತವೆ. ಈಗ ಬಿಸಿ ಸೋಡಿಯಂ ಕಾರ್ಬೊನೇಟ್ ದ್ರಾವಣದಿಂದ ತೊಳೆದರೆ, ಕ್ಯಾಲ್ಸಿಯಂ ಅಲ್ಯೂಮಿನೇಟ್, ಸೋಡಿಯಂ ಅಲ್ಯೂಮಿನೇಟ್ ಆಗಿ ಪರಿವರ್ತನೆ ಹೊಂದಿ

ನೀರಿನ ಜೊತೆ ಲೀನವಾಗಿ ಪ್ರತ್ಯೇಕವಾಗುತ್ತದೆ. ಈ ವಿಧಾನವನ್ನು ರಷ್ಯದೇಶದಲ್ಲಿ ಬಳಸುವುದಾಗಿ ವರದಿಯಾಗಿದೆ. ವಿದ್ಯುತ್ ವಿಭಜನಾಕ್ರಮದಿಂದ ಅಲ್ಯೂಮಿನಿಯಂ ಲೋಹವನ್ನು ಪಡೆಯುವ ಕೈಗಾರಿಕೆಯಲ್ಲಿ ಬೇಯರ್‌ನ ಬಾಕ್ಸೈಟ್ ಶುದ್ಧೀಕರಣ ವಿಧಾನಕ್ಕೂ ವಿದ್ಯುಚ್ಛಕ್ತಿ ಪೂರೈಕೆಗೂ ಬಹಳ ಬಂಡವಾಳ ಬೇಕು. ಆದ್ದರಿಂದ ಕಡಿಮೆ ಬಂಡವಾಳ ಸಾಕಾಗುವ ರಾಸಾಯನಿಕ ಅಪಕರ್ಷಣ ವಿಧಾನಗಳನ್ನೂ, ಆಗ ಬೇರ್ಪಡುವ ಅಲ್ಯೂಮಿನಿಯಂ ಲೋಹವನ್ನು ಭಟ್ಟಿ ಇಳಿಸುವುದರ ಮೂಲಕ ಹೊರತೆಗೆಯುವ ಕ್ರಮವನ್ನೂ ಕೈಗಾರಿಕಾ ಮಟ್ಟದಲ್ಲಿ ಉಪಯೋಗಿಸುವ ಸಾಧ್ಯತೆಯ ಮೇಲೆ ಸಂಶೋಧನೆಗಳು ನಡೆಯುತ್ತಲೇ ಇವೆ.

**ಗುಣಗಳು :** ಬೆಳ್ಳಿಯ ಹೊಳಪಿನ, ಹಗುರತೆಗೆ ಪ್ರಸಿದ್ಧವಾದ ಲೋಹ. ಸಾಂದ್ರತೆ 2.708 ಗ್ರಾಂ. ಮಿ. ಲೀಟರ್ ಬಲು ಶುದ್ಧಲೋಹ. ಮೆದು ಮತ್ತು ದುರ್ಬಲವಾದುದಾದರೆ ಅಲ್ಪ ಪ್ರಮಾಣದಲ್ಲಿ ಇತರ ಲೋಹಗಳು ಮಿಶ್ರವಾದರೆ ಉತ್ತಮ ಗಡುಸು ಲೋಹವಾಗುತ್ತದೆ. ತೆಳ್ಳಗೆ ತಗಡಾಗಿ ಬಡಿಯಬಹುದು. ಸಣ್ಣ ವ್ಯಾಸದ ತಂತಿಯಾಗಿ ಎಳೆಯಲೂಬಹುದು. ಕಾಸಿದರೆ $660^0$ ಉಷ್ಣತೆಯಲ್ಲಿ ದ್ರವವಾಗುವುದು. ಆದರೆ ಕುದಿಯಲು $2450^0$ ಉಷ್ಣತೆಯ ಮಟ್ಟ ಬೇಕು. ಒಂದು ಅತ್ಯುತ್ತಮ ಉಷ್ಣವಾಹಕ ಮತ್ತು ವಿದ್ಯುದ್ವಾಹಕ ಲೋಹ. ಸಾಮಾನ್ಯ ವಾತಾವರಣದಲ್ಲಿ ಉತ್ತಮ ತುಕ್ಕು ನಿರೋಧಕ ಲಕ್ಷಣಕಾರಿ. ನಯವಾದ ಪುಡಿಯ ರೂಪದಲ್ಲಿ ಅಲ್ಯೂಮಿನಿಯಂ ಲೋಹ ಆಮ್ಲಜನಕ ಅಥವಾ ಗಾಳಿಯಲ್ಲಿ ಗಣನೀಯ ಪ್ರಮಾಣದಲ್ಲಿ ಉಷ್ಣ ಸೂಸುತ್ತ ಜಾಜ್ವಲ್ಯಮಾನವಾಗಿ ಉರಿಯಬಲ್ಲದು. ಈ ಗುಣವನ್ನು ಕ್ರೋಮಿಯಂ ಮುಂತಾದ ಲೋಹಗಳನ್ನು ಅವುಗಳ ಆಮ್ಲಜನಕ ಸಂಯುಕ್ತಗಳಾದ ಆಕ್ಸೈಡ್‌ಗಳಿಂದ ಬೇರ್ಪಡಿಸಲು ಬಳಸುವ ಒಂದು ವಿಶಿಷ್ಟ ಪದ್ಧತಿಯಲ್ಲಿ ಥರ್ಮೈಟ್ ವಿಧಾನದಲ್ಲಿ ಉಪಯೋಗಿಸಿಕೊಳ್ಳುವರು. ಶುದ್ಧ ಘನಲೋಹ ಗಾಳಿಯಲ್ಲಿನ ಆಕ್ಸಿಜನ್ನಿನೊಡನೆ ಬೇಗ ಸಂಯೋಗ ಹೊಂದುವುದಾದರೂ ಪರಿಣಾಮವಾಗಿ ಲೋಹದ ಮೇಲ್ಮೈ ಮಾತ್ರ ಆಕ್ಸೈಡ್ ಪೊರೆಯ ರಕ್ಷಣಾಕವಚದಿಂದ ಆವೃತವಾಗಿ, ಒಳಮೈ ಯಾವ ರಾಸಾಯನಿಕ ಕ್ರಿಯೆಗೂ ಸಿಕ್ಕದಂತಾಗುತ್ತದೆ. ಆದ್ದರಿಂದಲೇ ಅಲ್ಯೂಮಿನಿಯಂ ಲೋಹ ಉತ್ತಮ ತುಕ್ಕು ಅಥವಾ ಕಿಲುಬು ನಿರೋಧಕ ಲೋಹವಾಗಿ ವರ್ತಿಸುತ್ತದೆ. ಅಲ್ಯೂಮಿನಿಯಂ ಲೋಹಕ್ಕೆ ಬಣ್ಣ ಹಚ್ಚುವುದು ಅಥವಾ ಬೇರೊಂದು ಲೋಹ ಲೇಪನ ಮಾಡುವುದು ಅಥವಾ ಲೋಹವನ್ನು ಉದ್ದೇಶಪೂರ್ವಕವಾಗಿ ವಿದ್ಯುತ್ ಉತ್ಕರ್ಷಣಕ್ಕೆ (ಆಕ್ಸಿಡೇಷನ್) ಒಳಪಡಿಸುವುದು– ಹೀಗೆ ಅನೇಕ ವಿಧಗಳಿಂದ ಅಲ್ಯೂಮಿನಿಯಂ ಲೋಹವನ್ನು ತುಕ್ಕಿನಿಂದ ಮತ್ತಷ್ಟು ಕಾಪಾಡಬಹುದು. ಅಲ್ಯೂಮಿನಿಯಂ ಮೂಲವಸ್ತುವಿನ ಸಂಯೋಗಶಕ್ತಿ +3. ಅದರಿಂದಲೇ ಅದರ ಲವಣಗಳಿಗೆ ಸಾಮಾನ್ಯ ಸೂತ್ರ $AlX_3$. ಇದರಲ್ಲಿ X ಎಂಬುದು ಅಲ್ಯೂಮಿನಿಯಂ ನೊಡನೆ ಸಂಯೋಗ ಹೊಂದಿರುವ ಅಲೋಹ. ಅಸಿಟಿಕ್ ಆಮ್ಲ, ನೈಟ್ರಿಕ್ ಆಮ್ಲಗಳು ಅಲ್ಯೂಮಿನಿಯಂ ಲೋಹದ ಮೇಲೆ ನಿಷ್ಕ್ರಿಯವಾದ ಆಮ್ಲಗಳು. ಆದರೆ ಹೈಡ್ರೊಫ್ಲೋರಿಕ್ ಆಮ್ಲ, ಹೈಡ್ರೊಕ್ಲೋರಿಕ್ ಆಮ್ಲ, ಸಲ್ಫ್ಯೂರಿಕ್ ಆಮ್ಲಗಳಲ್ಲಿ ಲೋಹ ಕ್ರಿಯೆಗೊಳಗಾಗುವುದು. ಪ್ರಬಲಕ್ಷಾರ ದ್ರಾವಣಗಳು ಅಲ್ಯೂಮಿನಿಯಂ ಆಕ್ಸೈಡ್ ಹೊರಪೊರೆಯನ್ನು ಜೀರ್ಣಮಾಡಿ ಕೊಂಡು ಲೋಹವನ್ನು ಕ್ರಮೇಣ ತಿಂದುಹಾಕುತ್ತವೆ. ಉಪ್ಪಿನ ನೀರಿನಲ್ಲಿ ಅಲ್ಯೂಮಿನಿಯಂ ಲೋಹ ರಾಸಾಯನಿಕ ಕ್ರಿಯೆಗೊಳಗಾಗುವುದು. ಆದರೆ ಬಲು ಶುದ್ಧ ಅಲ್ಯೂಮಿನಿಯಂ ಲೋಹ ಅಥವಾ ಅಲ್ಯೂಮಿನಿಯಂ ಮೆಗ್ನೀಸಿಯಂ ಮಿಶ್ರಲೋಹ ಸಮುದ್ರದ ನೀರಿನಲ್ಲಿ ಅನೇಕ ವರ್ಷಗಳ ಕಾಲ ತುಕ್ಕು ಹಿಡಿಯುವುದಿಲ್ಲ. ಅಂದರೆ ಅಲ್ಯೂಮಿನಿಯಂ ಲೋಹದ ರಾಸಾಯನಿಕ ಚಟುವಟಿಕೆ ಬಲುಮಟ್ಟಿಗೆ ಅದರ ಶುದ್ಧತೆ, ಅದರೊಡನೆ ಬೆರೆತಿರುವ ಪ್ರಕೃತಿ ಮತ್ತು ಪ್ರಮಾಣವನ್ನವಲಂಬಿಸಿದೆ. ಅಲ್ಯೂಮಿನಿಯಂ ಆಕ್ಸೈಡ್ ಪ್ರಬಲ ಆಮ್ಲ ಮತ್ತು ಕ್ಷಾರಗಳೆರಡರಲ್ಲೂ ಲೀನವಾಗುವ ಲಕ್ಷಣ ಹೊಂದಿದೆ. ಪಾದರಸ ಅಥವಾ ಅದರ ಸಂಯುಕ್ತಗಳ ಸಂಪರ್ಕದಲ್ಲಿಯೂ ಅಲ್ಯೂಮಿನಿಯಂ ರಾಸಾಯನಿಕ ಕ್ರಿಯೆಗೊಳಗಾಗುವುದು. ಅಲ್ಯೂಮಿನಿಯಂ ಲೋಹ ಇಂಗಾಲ, ಸಾರಜನಕ, ಗಂಧಕ, ರಂಜಕಗಳೇ ಮುಂತಾದ ಅನೇಕ ಅಲೋಹಗಳೊಂದಿಗೆ ಸಂಯೋಗ ಹೊಂದಬಲ್ಲುದು. ಅಲ್ಯೂಮಿನಿಯಂ ಲೋಹ ಅಥವಾ ಅದರ ಆಮ್ಲಜನಕ ಸಂಯುಕ್ತಗಳು ಮಾನವ ಶರೀರದೊಳಕ್ಕೆ ಹೊಕ್ಕಲ್ಲಿ ಯಾವ ದುಷ್ಪರಿಣಾಮವೂ ಆಗುವುದಿಲ್ಲ. ಬದಲಾಗಿ ಅತಿಯಾಗಿ ದೂಳನ್ನು ಸೇವನೆ ಮಾಡಬೇಕಾದ ಸಂದರ್ಭಗಳಲ್ಲಿ ಆಗಬಹುದಾದ ಶರೀರದ ಆಂತರಿಕ ದುಷ್ಪರಿಣಾಮಗಳನ್ನು ತಡೆಗಟ್ಟುವ ಶಕ್ತಿ ಹೊಂದಿದೆ. ಜಠರದ ವ್ರಣರೋಗವನ್ನು ಗುಣಪಡಿಸಲು ಪರಿಣಾಮಕಾರಿಯಾದುದು ಅಲ್ಯೂಮಿನಿಯಂ ಹೈಡ್ರಾಕ್ಸೈಡ್. ಆದುದರಿಂದಲೇ ಅಲ್ಯೂಮಿನಿಯಂ ಪಾತ್ರೆಗಳಲ್ಲಿನ ಅಡುಗೆ ಯಾವ ರೀತಿಯಲ್ಲೂ ಅಹಿತವಲ್ಲ.

ಅಲ್ಯೂಮಿನಿಯಂ ಸಂಯುಕ್ತಗಳಲ್ಲಿ ಮುಖ್ಯವಾದುವು ಅಲ್ಯೂಮಿನಿಯಂ ಆಕ್ಸೈಡ್ ಮತ್ತು ಅಲ್ಯೂಮಿನಿಯಂ ಸಲ್ಫೇಟ್ ಸಂಬಂಧಿತ ಪಟಿಕ ಜಾತಿಯ ಲವಣಗಳು. ಇವುಗಳ ಪ್ರಾಮುಖ್ಯ ಮತ್ತು ಗುಣಗಳನ್ನು ಈಗಾಗಲೇ ವಿವರಿಸಲಾಗಿದೆ. ಅಲ್ಯೂಮಿನಿಯಂ ಪಟಿಕಗಳಿಗೆ $M' M''' (SO_4)_2.12\,H_2O$ ಎಂಬ ಸೂತ್ರ ಅನ್ವಯಿಸುತ್ತದೆ. ಇದರಲ್ಲಿ M' ಎಂಬುದು ಸೋಡಿಯಂ, ಪೊಟ್ಯಾಸಿಯಂ, ಅಮೋನಿಯಂ ಆಗಲಿ, M''' ಎಂಬುದು ಕಬ್ಬಿಣ, ಅಲ್ಯೂಮಿನಿಯಂ, ಕ್ರೋಮಿಯಂ ಆಗಲಿ ಅಲ್ಯೂಮಿನಿಯಂ ಸಂಯುಕ್ತಗಳನ್ನೆಲ್ಲ ಅಲ್ಯೂಮಿನಿಯಂ ಅಥವಾ ಅಲ್ಯೂಮಿನಿಯಂ ಆಕ್ಸೈಡ್ ಮೂಲದಿಂದ ತಯಾರಿಸಬಹುದು.

**ಅಲ್ಯೂಮಿನಿಯಂ ಮಿಶ್ರಲೋಹಗಳು :** ಅಲ್ಯೂಮಿನಿಯಂನೊಡನೆ ಇತರ ಲೋಹಗಳನ್ನು ಮಿಶ್ರ ಮಾಡುವ ಮುಖ್ಯೋದ್ದೇಶ ಅಲ್ಯೂಮಿನಿಯಂ ಲೋಹದ ಉಪಯುಕ್ತ ಗುಣಗಳನ್ನು ಮತ್ತಷ್ಟು ವೃದ್ಧಿಪಡಿಸುವುದು. ಸಾಮಾನ್ಯವಾಗಿ ಪೇಟೆಯಲ್ಲಿ ದೊರಕುವ ಅಲ್ಯೂಮಿನಿಯಂ ಲೋಹ ಶೇ.99–99.6 ರಷ್ಟು ಮಾತ್ರ ಶುದ್ಧ. ಅಲ್ಪಪ್ರಮಾಣದಲ್ಲಿ ಕಬ್ಬಿಣ, ಸಿಲಿಕಾನ್‌ಗಳು ಇದ್ದೇ ಇರುತ್ತವೆ. ಅವು ಇರುವುದು ಅಲ್ಯೂಮಿನಿಯಂಗೆ ಶಕ್ತಿದಾಯಕ. ಆದರೆ ತುಕ್ಕು ಹಿಡಿಯುವ ಪ್ರವೃತ್ತಿಗೆ ಉತ್ತೇಜನಕಾರಿ. ಅಲ್ಯೂಮಿನಿಯಂ ಮಿಶ್ರಲೋಹ ಉತ್ಪಾದನೆಯಲ್ಲಿ ಬಳಸುವ ಇತರ ಲೋಹಗಳೆಂದರೆ ಮುಖ್ಯವಾಗಿ ತಾಮ್ರ, ಮೆಗ್ನೀಸಿಯಂ, ಸತು, ನಿಕ್ಕಲ್ ಮತ್ತು ಮ್ಯಾಂಗನೀಸ್. ಇನ್ನೂ ಅನೇಕ ಇತರ ಲೋಹಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಬೆರೆಸುವುದೂ ಉಂಟು. ಡೂರಲ್ಯೂಮಿನ್, ಮೆಗ್ನೀಸಿಲಿಯಂ ಇವು ಕೆಲವು ಜನಪ್ರಿಯ ಮಿಶ್ರಲೋಹಗಳು.

**ಉಪಯೋಗಗಳು :** ಬಲು ಹಗುರವಾದ ಮತ್ತು ಇತರ ಸೂಕ್ಷ್ಮ ಲೋಹಗಳ ನಿಯಂತ್ರಿತ ಮಿಶ್ರಣದಿಂದ ವೃದ್ಧಿತ ಗಡಸು ಪಡೆಯುವ ಅಲ್ಯೂಮಿನಿಯಂ ಲೋಹದ ಅತಿ ಮುಖ್ಯ ಉಪಯೋಗ ವಿಮಾನ, ರೈಲು, ಲಾರಿ ಮತ್ತಿತರ ಪ್ರಯಾಣಿಕರ ವಾಹನಗಳಲ್ಲಿ; ಹಡಗುಗಳು, ಗೃಹನಿರ್ಮಾಣಕ್ಕೆ ಕಿಟಕಿ, ಬಾಗಿಲು, ಮೇಲ್ಚಾವಣಿಗಳೇ ಮುಂತಾದ ರಚನಾಕಾರ್ಯಗಳಲ್ಲಿ, ಇದರಿಂದ ವಾಹನಗಳ ತೂಕ ಕಡಿಮೆಯಾಗಿ, ವಾಹನಗಳ ಎಂಜಿನ್‌ಗಳು ಇನ್ನೂ ಹೆಚ್ಚಿನ ಭಾರದ ಸಾಮಗ್ರಿಗಳನ್ನು ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನು ಎಳೆಯುವ ಸಾಮರ್ಥ್ಯ ಹೊಂದುತ್ತವೆ. ರಚನಾ ಹಂತದಲ್ಲಿಯಾಗಲೀ ಅಥವಾ ರಿಪೇರಿ ಮಾಡಬೇಕಾದ ಸಂದರ್ಭಗಳಲ್ಲಿ ಯಾಗಲಿ ಅಲ್ಯೂಮಿನಿಯಂ ಲೋಹವನ್ನು ವೆಲ್ಡ್ ಮಾಡಬಹುದು, ರಿವೆಟ್ ಮಾಡಬಹುದು, ಅಂಟಿಸಬಹುದು. ಆದರೆ ಬೆಸುಗೆ ಸರಿಯಾಗಿ ಹಿಡಿಯುವುದಿಲ್ಲ. ಆಕರ್ಷಕ ಬಣ್ಣಗಳನ್ನು ಹಚ್ಚಬಹುದು ಅಥವಾ ಎನಾಮಲ್ ಮಾಡಲೂಬಹುದು. ಪ್ರಾಯೋಗಿಕವಾಗಿ ಸೇತುವೆಗಳೂ ಕೂಡ ನಿರ್ಮಾಣವಾಗಿವೆ. ಎರಡನೆಯ ಮುಖ್ಯ ಬಳಕೆ ಹಗುರತೆ, ಗಡಸು, ಉಷ್ಣವಾಹಕತೆ, ಕಿಲುಬು ಹಿಡಿಯದಿರುವಿಕೆಯ ಗುಣಗಳ ಮೇಲೆ ಆಧಾರಿತವಾಗಿದೆ. ಅದೆಂದರೆ ಆಹಾರ ಸಾಮಗ್ರಿಗಳ ಶೇಖರಣಾ ಡಬ್ಬಿಗಳು, ಔಷಧಿ ಮಾತ್ರೆಗಳ, ಲೇಹ್ಯಗಳ ಡಬ್ಬಿಗಳು, ಅಡಿಗೆ ಪಾತ್ರೆಗಳು, ಕ್ಷೀರಕೇಂದ್ರಗಳ ಸಲಕರಣೆಗಳು, ಮದ್ಯ ಸಾರಾಯಿ ತಯಾರಿಕಾ ಕೇಂದ್ರಗಳಲ್ಲಿನ ಪಾತ್ರೆ, ಸಲಕರಣೆಗಳು ಇತ್ಯಾದಿ. ಅಡುಗೆ ಪಾತ್ರೆಗಳಾಗಿ ಉಪಯೋಗಿಸುವಾಗ ಅನುಭವಕ್ಕೆ ಬಂದಿರುವ ಒಂದೆರಡು ಲೋಪದೋಷಗಳೆಂದರೆ ಪಾತ್ರೆಗಳು ಬಲುಬೇಗ ಕಾದು ಅಡುಗೆ ಸೀದುಹೋಗುವುದು, ಅಥವಾ ತಳಕ್ಕೆ ಅಂಟಿಕೊಳ್ಳುವುದು. ಪಾತ್ರೆಗಳ ಒಳಭಾಗಕ್ಕೆ ಟೆಫ್ಲಾನ್ ಎಂಬ ಉಷ್ಣ ಮತ್ತು ಅಂಟುನಿರೋಧಕವಸ್ತುವಿನ ಪೊರೆಯೊಂದನ್ನು ಬಳಿಯುವುದರ ಮೂಲಕ ಆ ಲೋಪದೋಷಗಳನ್ನು ನಿಯಂತ್ರಿಸುವುದು ಆಚರಣೆಗೆ ಬಂದಿದೆ. ಅಮೋನಿಯ, ನೈಟ್ರಿಕ್ ಆಮ್ಲ, ಹೈಡ್ರೊಜನ್ ಪೆರಾಕ್ಸೈಡ್, ಅಸಿಟಿಕ್ ಆಮ್ಲ ಸಂಬಂಧಿತ ರಾಸಾಯನಿಕ ಕೈಗಾರಿಕೆಗಳಲ್ಲಿನ ಶೇಖರಣಾ ಪಾತ್ರೆಗಳನ್ನು ಅಲ್ಯೂಮಿನಿಯಂನಿಂದಲೇ ಮಾಡಬಹುದು. ಶೇಖರಿತ ರಾಸಾಯನಿಕಗಳಿಂದ ಅಲ್ಯೂಮಿನಿಯಂ ಲೋಹದ ಮೇಲೆ ಆಗಬಹುದಾದ ರಾಸಾಯನಿಕ ಕ್ರಿಯೆಗಳನ್ನು ಸ್ತಬ್ಧಗೊಳಿಸಿ ಲೋಹ ಜೀರ್ಣವಾಗದಂತೆ ಕಾಪಾಡಬಹುದು. ಆ ಕಾರ್ಯ ಕೆಲ ರಾಸಾಯನಿಕ ವಸ್ತುಗಳನ್ನು ಬೆರೆಸುವುದರ ಮೂಲಕ ಸಾಧ್ಯ. ಸಾಮಾನ್ಯವಾಗಿ ಬಳಸುವ ಆ ಜಾತಿಯ ಕೆಲ ಸಂಯುಕ್ತಗಳೆಂದರೆ ಪಿಷ್ಟಗಳು, ಅಂಟುಗಳು, ಪೊಟ್ಯಾಸಿಯಂ ಡೈಕ್ರೋಮೇಟ್, ಹೈಡ್ರೊಜನ್ ಪೆರಾಕ್ಸೈಡ್ ಇತ್ಯಾದಿ.

ಉತ್ತಮ ವಿದ್ಯುದ್ವಾಹಕತೆಯ ಪರಿಣಾಮವಾಗಿ, ದುಬಾರಿ ಬೆಲೆಯ ವಿರಳಲೋಹ ತಾಮ್ರದ ಬದಲು, ವಿದ್ಯುಚ್ಛಕ್ತಿಯ ಪ್ರಸರಣಕ್ಕೆ ಇತ್ತೀಚೆಗೆ ವಿಶೇಷವಾಗಿ ಅಲ್ಯೂಮಿನಿಯಂ ಲೋಹ ಉಪಯೋಗವಾಗುತ್ತಿದೆ. ಗಟ್ಟಿ ಉಕ್ಕಿನ ತಂತಿಗಳ ಮೇಲೆ ಅಲ್ಯೂಮಿನಿಯಂ ಲೋಹವನ್ನು ಶೇಖರಿಸಿ ಬಲಾಢ್ಯ ಉತ್ತಮ ವಿದ್ಯುತ್ ಪ್ರಸರಣ ತಂತಿಗಳನ್ನು ತಯಾರಿಸುವರು. ಇತರ ಉಪಯೋಗಗಳಲ್ಲಿ ಉಕ್ಕಿನ ತಯಾರಿಕೆಯಲ್ಲಿ ಆಮ್ಲಜನಕವನ್ನು ಹೊರತೆಗೆಯಲು ಅಲ್ಯೂಮಿನಿಯಂ ಲೋಹದ ಬಳಕೆ ಮುಖ್ಯವಾದುದು. ಅಲ್ಯೂಮಿನಿಯಂ ಬಣ್ಣಗಳು, ಬೆಳಕಿನ ಕಿರಣಗಳನ್ನು ಪ್ರತಿಫಲಿಸುವ ಫಲಕಗಳ ತಯಾರಿಕೆ, ಗೃಹಾಲಂಕರಣ ವಸ್ತುಗಳ ಉತ್ಪಾದನೆ ಇವೇ ಮುಂತಾದ ಇತರ ಉಪಯೋಗಗಳೂ ಇವೆ. ಬಾಕ್ಸೈಟ್‌ಗೆ ಕುಲುಮೆಗಳಿಗಾಗಿ ಉಷ್ಣಸಹಿಷ್ಣು ಇಟ್ಟಿಗೆಗಳ ತಯಾರಿಕೆಯಲ್ಲಿಯೂ ಸಿಮೆಂಟ್ ತಯಾರಿಕೆಯಲ್ಲಿಯೂ ಜಲಾಂಶರಹಿತ ಅಲ್ಯೂಮಿನಿಯಂ ಆಕ್ಸೈಡ್‌ಗೆ ತೇವವನ್ನು ಹೀರುವುದಕ್ಕೂ ಪೆಟ್ರೋಲಿಯಂ ಕೈಗಾರಿಕೆಯಲ್ಲಿ ವೇಗವರ್ಧಕವಾಗಿಯೂ (ಕ್ಯಾಟಲಿಸ್ಟ್) ಉಪಯೋಗಗಳಿವೆ. ಅಲ್ಯೂಮಿನಿಯಂ ಪೊಟ್ಯಾಸಿಯಂ ಅಥವಾ ಅಲ್ಯೂಮಿನಿಯಂ ಅಮೋನಿಯಂ ಪಟಿಕ ಲವಣಗಳನ್ನು ನೀರನ್ನು ಶುದ್ಧಿಮಾಡುವ ಕಾರ್ಯದಲ್ಲಿ ಉಪಯೋಗಿಸುವರು. ಈ ಪಟಿಕಗಳಲ್ಲಿನ ಅಲ್ಯೂಮಿನಿಯಂ ($Al^{3+}$) ವಿದ್ಯುದ್ವಾಹಿ ಕಣಗಳು, ಬಗ್ಗಡದ ನೀರಿನಲ್ಲಿ ತೇಲುತ್ತಿರುವ ಸೂಕ್ಷ್ಮಕಣಗಳನ್ನು ಒಂದುಗೂಡುವಂತೆ ಮಾಡಿ, ತತ್ಪರಿಣಾಮವಾಗಿ ಅವು ಭಾರವಾಗಿ ಜಲಾಶಯಗಳಲ್ಲಿ ನೀರಿನಲ್ಲಿ ಮುಳುಗುವುವು. ನೀರು ತಿಳಿಯಾಗುವುದು. ಇನ್ನೂ ಕಡಿಮೆ ಬೆಲೆಯ ಅಲ್ಯೂಮಿನಿಯಂ ಸಲ್ಫೇಟ್ ಲವಣವನ್ನು ಈ ಉದ್ದೇಶಕ್ಕಾಗಿ ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಬಳಸುತ್ತಿರುವರು. ಪಟಿಕಗಳನ್ನು ಚರ್ಮ ಹದಮಾಡುವುದು, ಕಾಗದ ತಯಾರಿಕೆ, ಬಟ್ಟೆಗಳಿಗೆ ಬಣ್ಣ ಕಚ್ಚಿಸುವುದು ಇವೇ ಮುಂತಾದ ಕೈಗಾರಿಕೆಗಳಲ್ಲಿ ಬಳಸುವರು. ಲಿಥಿಯಂ

ಅಲ್ಯೂಮಿನಿಯಂ ಹೈಡ್ರೈಡ್ ಒಂದು ಉತ್ತಮ ರಾಸಾಯನಿಕ ಅಪಕರ್ಷಣಕಾರಿ. ಅಲ್ಯೂಮಿನಿಯಂ ಕ್ಲೋರೈಡ್ ಪೆಟ್ರೋಲಿಯಂ ಕೈಗಾರಿಕೆಯಲ್ಲಿ ಉಪಯೋಗಿಸುವ ಒಂದು ವೇಗವರ್ಧಕ. ಅಲ್ಯೂಮಿನಿಯಂ ಅಸಿಟೇಟ್ ಬಟ್ಟೆಗಳಿಗೆ ಬಣ್ಣ ಕಚ್ಚಿಸುವುದು, ಜ್ವಾಲೆಗಳನ್ನು ನಿರೋಧಿಸುವ ಬಟ್ಟೆಗಳ ತಯಾರಿಕೆ, ನೀರಿನಿಂದ ತೇವವಾಗದ ಕಾಗದಗಳ ತಯಾರಿಕೆಗಳಲ್ಲಿ ಉಪಯೋಗಕಾರಿ. ಬಿಳಿಯ ಜೇಡಿಮಣ್ಣಿನಿಂದ ಬಟ್ಟೆಗಳ ಬಿಳುಪಿಗೆ ಉಪಯೋಗಿಸುವ ನೀಲಿಯನ್ನು (ಅಲ್ಟ್ರಾಮರೀನ್ ಬ್ಲೂ) ತಯಾರಿಸುವರು.

**ಅಲ್ಯೂಮಿನಿಯಂ ಗುರುತಿಸುವಿಕೆ :** ಅಲ್ಯೂಮಿನಾನ್ ಎಂಬ ರಾಸಾಯನಿಕ ದ್ರಾವಣದ ಮಧ್ಯದಲ್ಲಿ ಅಚಲವಾಗಿರುತ್ತದೆ. ಈ ರಾಸಾಯನಿಕ ಕ್ರಿಯೆಯನ್ನು ಅಲ್ಯೂಮಿನಿಯಮನ್ನು ಗುರುತು ಹಚ್ಚಲು ಉಪಯೋಗಿಸುವರು. ಅದೇ ರೀತಿ ಅಲ್‌ಜರಿನ್ ರೆಡ್ ಎಸ್ ಎಂಬ ಬಣ್ಣದೊಂದಿಗೂ ಕೆಂಪು ಬಣ್ಣ ವೃದ್ಧಿಯಾಗಿ ಅದು ಅಸಿಟಿಕ್ ಆಮ್ಲದಲ್ಲಿ ನಾಶವಾಗದೇ ಇರುವುದು. ಅಲ್ಯೂಮಿನಿಯಮನ್ನು ಗುರುತು ಹಚ್ಚಲು ಉಪಯೋಗಿಸುವ ಮತ್ತೊಂದು ಪ್ರಯೋಗ.

**ಅಲ್ಯೂಮಿನಿಯಂ ಪ್ರಮಾಣಮಾಪನ :** ಅಲ್ಯೂಮಿನಿಯಂ ಮಿಶ್ರಲೋಹ ಒಂದರಲ್ಲಿಯಾಗಲಿ ಅಥವಾ ಅಲ್ಯೂಮಿನಿಯಂನ ಸಂಯುಕ್ತವಸ್ತುವೊಂದರಲ್ಲಿಯಾಗಲಿ ಅಲ್ಯೂಮಿನಿಯಂ ಲೋಹಾಂಶ ಪ್ರಮಾಣವನ್ನು ನಿಖರವಾಗಿ ಅಳೆಯಲು ಅನೇಕ ವಿಧಾನಗಳನ್ನು ಅನುಸರಿಸಬಹುದು. ಮೊದಲು ಘನವಸ್ತುವನ್ನು ದ್ರಾವಣ ರೂಪಕ್ಕೆ ಮಾರ್ಪಾಡು ಮಾಡಬೇಕು. ಪ್ರಬಲ ಹೈಡ್ರೋಕ್ಲೋರಿಕ್ ಆಮ್ಲದಲ್ಲಿ ಮಿಶ್ರ ಲೋಹ ಕರಗಿಸಬಹುದು. ಸಂಯುಕ್ತಗಳು ಪೂರ್ಣವಾಗಿ ನೀರಿನಲ್ಲಿ ವಿಲೀನವಾಗದೆ ಇದ್ದರೆ ಹೈಡ್ರೋಕ್ಲೋರಿಕ್ ಆಮ್ಲವನ್ನು ಉಪಯೋಗಿಸಬಹುದು. ದ್ರಾವಣದೊಳಗಿನ ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಆಗಿ ಪಡೆಯಬಹುದು. ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಬೆರೆಸುವುದರಿಂದ ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಆಗಿ ಪಡೆಯಬಹುದು, ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ನೀರಿನಲ್ಲಿ ಲೀನವಾಗುವುದಿಲ್ಲ. ಆದುದರಿಂದ ನೀರಿನಲ್ಲಿ ಚೆನ್ನಾಗಿ ತೊಳೆದರೆ ಅಂತ್ಯದಲ್ಲಿ ಬಿಳಿಯ ಗಷ್ಟು ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಉಳಿಯುತ್ತದೆ. ಅದನ್ನು ಪಿಂಗಾಣಿ ಮೂಸೆಯಲ್ಲಿ ಹಾಕಿ ಕಾಸಿದರೆ ಜಲಾಂಶ ವೆಲ್ಲವೂ ಹೊರಬಿದ್ದು ಶುದ್ಧ ಒಣ ಅಲ್ಯೂಮಿನಿಯಂ ಆಕ್ಸೈಡ್ ಉಳಿಯುತ್ತದೆ. ಅದರ ತೂಕವನ್ನು ಕಂಡುಹಿಡಿದು ಅಲ್ಯೂಮಿನಿಯಂ ಮೂಲ ದ್ರಾವಣದಲ್ಲಿ ಎಷ್ಟು ಇತ್ತು ಎಂಬುದನ್ನು ಲೆಕ್ಕಾಚಾರ ಮಾಡಿ ತಿಳಿಯಬಹುದು. ವಿಶ್ಲೇಷಣೆಗೆ ಒಳಪಡಿಸಿರುವ ಮೂಲ ವಸ್ತುವಿನಲ್ಲಿ ಕಬ್ಬಿಣದ ಅಂಶವೇನಾದರೂ ಇದ್ದಲ್ಲಿ ಅಮೋನಿಯಂ ಬದಲು ಪ್ರಬಲ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣವನ್ನು ಉಪಯೋಗಿಸಿದರೆ, ಕಬ್ಬಿಣದ ಆಕ್ಸೈಡ್ ವಿಲೀನವಾಗದೆ ಉಳಿದು, ಸೋಸಿ ಪ್ರತ್ಯೇಕಿಸಬಹುದು. ಅಲ್ಯೂಮಿನಿಯಂ ಮಾತ್ರ ಲೀನವಾಗುತ್ತದೆ. ತತ್ಪರಿಣಾಮವಾಗಿ ಉಂಟಾದ ಸೋಡಿಯಂ ಅಲ್ಯೂಮಿನೇಟ್ ದ್ರಾವಣದಿಂದ ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಹೊರಬರುವಂತೆ ಮಾಡಿ, ಮೇಲೆ ವಿವರಿಸುವಂತೆ ಅಲ್ಯೂಮಿನಿಯಂ ಪ್ರಮಾಣವನ್ನು ಲೆಕ್ಕಾಚಾರ ಮಾಡಬಹುದು. ಅಲ್ಯೂಮಿನಿಯಂ ದ್ರಾವಣದಿಂದ ಅಲ್ಯೂಮಿನಿಯಂ ಅಂಶವನ್ನು ಆಕ್ಸಿನ್ ಎಂಬ ಇಂಗಾಲ ಸಂಯುಕ್ತ ದೊಡನೆಯೂ ಕ್ರಿಯೆಗೊಳಪಡಿಸಿ, ಅಲ್ಯೂಮಿನಿಯಂ ಆಕ್ಸಿನೇಟ್ ಎಂಬ ನೀರಿನಲ್ಲಿ ಲೀನವಾಗದಿರುವ ಸಂಯುಕ್ತವನ್ನು ಹೊಂದಬಹುದು. ಅದನ್ನು ಸೋಸಿ ಬೇರ್ಪಡಿಸಿ ಒಣಗಿಸಿ ತೂಕ ಮಾಡಿ ಅದರಿಂದಲೂ ಅಲ್ಯೂಮಿನಿಯಂ ಲೋಹಾಂಶವನ್ನು ಲೆಕ್ಕಾಚಾರ ಮಾಡಬಹುದು. (ಎನ್.ಎಚ್.ಎಸ್.)

**ಅಲ್ಯೂಮಿನಿಯಮ್ ತಾಪನ :** ಅಲ್ಯೂಮಿನಿಯಮ್‌ನಿಂದ ಕೆಲವು ಲೋಹದ ಭಸ್ಮಗಳನ್ನು (ಆಕ್ಸೈಡ್) ಲೋಹವಾಗಿ ರೂಪಾಂತರಿಸುವ ವಿಧಾನ (ಅಲ್ಯೂಮಿನೋಥರ್ಮಿಕಸ್). ಸೂಕ್ಷ್ಮವಾಗಿ ವಿಭಜಿಸಿದ ಅಲ್ಯೂಮಿನಿಯಮ್ ಪುಡಿಯೊಡನೆ ಲೋಹಭಸ್ಮವನ್ನು ನಿಕಟವಾಗಿ ಬೆರೆಸಿ ಮಿಶ್ರಣವನ್ನು ಒಂದು ರಾಸಾಯನಿಕ–ಪ್ರಕ್ರಿಯಾ ಪಾತ್ರೆಯಲ್ಲಿ ದಹಿಸಲಾಗುವುದು. ಲೋಹಭಸ್ಮದ ಮತ್ತು ಅಲ್ಯೂಮಿನಿಯಮ್ ಚೂರ್ಣದ ನಿಕಟ ಮಿಶ್ರಣವನ್ನು ದಹಿಸಿದಾಗ, ಅಲ್ಯೂಮಿನಿಯಮ್ ಆಕ್ಸೈಡ್ ಉತ್ಪತ್ತಿಯಾಗುತ್ತದೆ. ಈ ಕ್ರಿಯೆಯಲ್ಲಿ ಉಂಟಾಗುವ ಉಷ್ಣ ಬೇರೆ ಲೋಹಗಳ ಭಸ್ಮದ ಪೃಥಕ್ಕರಣದಲ್ಲಿ ಹೀರಿದ ಉಷ್ಣಕ್ಕಿಂತ ಅಧಿಕವಾಗಿರುವುದರಿಂದ ಉತ್ಪತ್ತಿಯಾದ ಅಲ್ಯೂಮಿನ ಕರಗಿದ ಪರಿಸ್ಥಿತಿಯಲ್ಲಿ ದ್ರವರೂಪಿ ಕಿಟ್ಟದಂತೆ ಇದ್ದು, ಲೋಹಗಳನ್ನು ಅದರಿಂದ ತ್ವರಿತವಾಗಿ ಬೇರ್ಪಡಿಸಲು ಅನುಕೂಲವಾಗಿರುತ್ತದೆ. ದಹನ ಕ್ರಿಯೆಯನ್ನು ಪ್ರಾರಂಭಿಸಲು ಪ್ರಕ್ರಿಯಾ ಬೇರಿಯಂ ಪೆರಾಕ್ಸೈಡ್ ಮತ್ತು ಅಲ್ಯೂಮಿನಿಯಮ್‌ಗಳ ಸಕ್ರಿಯ ಮಿಶ್ರಣವನ್ನು ಉಪಯೋಗಿಸುತ್ತಾರೆ. ಅಪಘರ್ಷಣವಾಗಲು ಎರಡು ವಿಧಗಳಿವೆ. ಮೊದಲನೆಯದರಲ್ಲಿ ಪ್ರಕ್ರಿಯೆಯ ಪ್ರತ್ಯಾಘಾತದ ಪಾತ್ರೆಯನ್ನು ಭಸ್ಮ ಮತ್ತು ಅಲ್ಯೂಮಿನಿಯಮ್ ಮಿಶ್ರಣದಿಂದ ಭರ್ತಿಮಾಡಿ ಅದರ ಮೇಲೆ ಪ್ರಕ್ರಿಯೆಯ ಮಿಶ್ರಣ ಇದ್ದು ದಹನಕ್ಕೆ ಸಹಕಾರಿಯಾಗುವುದು. ಪ್ರಕ್ರಿಯೆ 50–90 ಸೆಕೆಂಡುಗಳಲ್ಲಿ ಪೂರ್ತಿಯಾಗಿ ಲೋಹ ಪಾತ್ರೆಯ ತಳದಲ್ಲಿ ಉಳಿದು ಪಾತ್ರೆಯ ಮೇಲೆ ಕಿಟ್ಟ ಕಟ್ಟುವುದು. ಒಂದು ಟನ್ನಿನಷ್ಟು ಮಿಶ್ರಣವನ್ನು ಒಂದೇ ಸಲ ಈ ವಿಧಾನದಿಂದ ಕಾಯಿಸುವುದು ಸಾಧ್ಯ. ಎರಡನೆಯ ವಿಧಾನದಲ್ಲಿ ಮಿಶ್ರಣದ ಸ್ವಲ್ಪಭಾಗವನ್ನು ಪ್ರತ್ಯಾಘಾತದ ಪಾತ್ರೆಯಲ್ಲಿ ಹಾಕಿ, ಪ್ರಕ್ರಿಯೆಯನ್ನು ಪುಷ್ಟೀಕರಿಸಲು ಮತ್ತಷ್ಟು ಮಿಶ್ರಣವನ್ನು ಎಚ್ಚರಿಕೆಯಿಂದ ಸ್ವಲ್ಪವಾಗಿ ಸೇರಿಸಲಾಗುವುದು. ಕಿಟ್ಟ ಮತ್ತು ಲೋಹದಿಂದ ಪಾತ್ರೆಯನ್ನು ಪೂರ್ತಿ ತುಂಬಿಸಬಹುದು. ಈ ರೀತಿ ಹಲವಾರು ಟನ್ನುಗಳಷ್ಟು ಪದಾರ್ಥವನ್ನು ಇಂಥ ಪ್ರಕ್ರಿಯೆಗೆ ಒಳಪಡಿಸಬಹುದು.

ಬರಿಯ ಲೋಹಗಳಲ್ಲದೆ ಕಬ್ಬಿಣದ ಮಿಶ್ರಲೋಹಗಳನ್ನೂ ಈ ವಿಧಾನದಿಂದ ತಯಾರಿಸಬಹುದು. ಈ ವಿಧಾನ ಕೆಲವು ಪದಾರ್ಥಗಳನ್ನು ಇದ್ದಲ್ಲಿಯೇ ಬೆಸೆಯಲು ಉಪಯೋಗವಾಗುತ್ತದೆ. ಉದಾಹರಣೆಗೆ ರೈಲು ಕಂಬಿಗಳು ಮತ್ತು ಹಡಗಿನಲ್ಲಿರುವ ಚಾಲಕ ದಂಡಗಳು ಇವುಗಳನ್ನು ಇರುವ ಜಾಗದಲ್ಲಿಯೇ ಮಿಶ್ರಣ ಹೊಯ್ದು ಕರಗಿಸಿ ಬೆಸುಗೆ ಹಾಕಬಹುದು. (ಜಿ.ಬಿ.)

**ಅಲ್ಯೂರೋಡಿಡೀ :** ಬಿಳಿ ನೊಣಗಳು. ದೇಹ ಮತ್ತು ರೆಕ್ಕೆಗಳ ಮೇಲೆ ಬಿಳಿಯ ದೂಳು ಆವರಿಸಿದ್ದು ಸಸ್ಯಹೇನುಗಳಂತೆ (ಆ್ಯಫಿಡ್ಸ್) ಇವೆ. ಈ ನೊಣದ ಮರಿಗಳಿಂದ ಸಸ್ಯಗಳಿಗೆ ಹಾನಿಯಿದೆ. ಇವು ತೆಳುಪೊರೆಯ ಕೀಟಗಳಿಂದ ಭಿನ್ನವಾಗಿವೆ. ಪೊರೆಹುಳುಗಳಿಗೆ ತೆಳುಪೊರೆ ಅಥವಾ ಕವಾಟ ಇರುವುದಿಲ್ಲ. ಬದಲಾಗಿ ಮೇಣದಂತಿರುವ ನವಿರಾದ ಹೊಳೆಯುವ ಬಿಳಿಯ ದಾರದಿಂದ ಸುತ್ತಲ್ಪಟ್ಟಿರುತ್ತವೆ. ಬಿಚ್ಚಿದಾಗ ಅದರ ಉದ್ದ ಸು. 2 ಮಿಮೀ ಇರುತ್ತದೆ. ಪ್ರೌಢ ಕೀಟ ಚಿಕ್ಕದಾಗಿ ಬಿಳಿ ಪತಂಗದಂತಿರುವುದು. ನಾಲ್ಕು ರೆಕ್ಕೆಗಳು ಇರುವುವು. ಇದರ ಮೊಟ್ಟೆಗಳಿಗೆ ತೊಟ್ಟು ಇದ್ದು ರೇತ್ರಾಣುಗಳು ಈ ತೊಟ್ಟಿನ ಮೂಲಕ ಹಾದು ಗರ್ಭಕಟ್ಟುತ್ತದೆ. ಅನಂತರ ಈ ತೊಟ್ಟುಗಳು ಮುದುರಿಕೊಳ್ಳುತ್ತವೆ. ಹೂದಾನಿಯಾಕಾರದ ಸಂದಿನಲ್ಲಿ ಗುದದ್ವಾರವಿರುವುದು ಇದರ ರಚನೆಯ ಒಂದು ವೈಶಿಷ್ಟ್ಯ. ಈ ದ್ವಾರಕ್ಕೆ ಒಂದು ಅಗಲವಾದ ಮುಚ್ಚಳವಿದೆ. ಈ ರಂಧ್ರದಿಂದ ಸಿಹಿಯಾದ ಅಂಟು ಪದಾರ್ಥ ಸ್ರವಿಸುತ್ತದೆ. ಹೆಚ್ಚು ಹಾವಳಿ ಮಾಡುವ ಈ ಜಾತಿಯ ಕೀಟಗಳು ಜಂಬೀರ (ಸಿಟ್ರಸ್) ಜಾತಿಯ ಮತ್ತು ಗಾಜಿನ ಮನೆಯಲ್ಲಿ ಬೆಳೆಸುವ ಕೋಮಲ ಸಸ್ಯಗಳನ್ನು ನಾಶಮಾಡುತ್ತವೆ. ಬಿಳಿ ನೊಣಗಳು ಪ್ರಪಂಚದ ಎಲ್ಲೆಡೆಯಲ್ಲಿಯೂ ವಾಸಿಸುತ್ತವೆ. ಇವಕ್ಕೆ ಕಂದು ಬಣ್ಣದ ದೇಹವೂ ನೀಲಿ ಬಣ್ಣದ ರೆಕ್ಕೆಗಳೂ ಇವೆ. (ಪಿ.ಎ.ಆರ್.)

**ಅಲ್ಯೂಷಿಯನ್ ದ್ವೀಪಗಳು :** ಉತ್ತರ ಪೆಸಿಫಿಕ್ ಸಾಗರದಲ್ಲಿರುವ ದ್ವೀಪಸ್ತೋಮ. (ಯು.ಎಸ್.ಎ.) ಸುಮಾರು 150 ದ್ವೀಪಗಳಿವೆ. ಇವು ಅಲಾಸ್ಕ ಪರ್ಯಾಯದ್ವೀಪದಿಂದ ಪಶ್ಚಿಮಕ್ಕೆ ಕಮ್‌ಚಟ್ಕಾ ಪರ್ಯಾಯದ್ವೀಪದ ಅಟ್ಟು ದ್ವೀಪದವರೆಗೆ ಸು. 1932 ಕಿಮೀ ಉದ್ದ ಹಬ್ಬಿವೆ. $52^0$–$55^0$ ಉತ್ತರ ರೇಖಾಂಶ, $163^0$–$170^0$ ಪಶ್ಚಿಮ ರೇಖಾಂಶ. ಜನಸಂಖ್ಯೆ ಸು. 5,600. ಪ್ರಮುಖ ದ್ವೀಪ ಸಮೂಹಗಳೆಂದರೆ; ಪಾಕ್ಸ್ ದ್ವೀಪಗಳು, ಫೋರ್‌ಮೌಂಟೀನ್ಸ್ ದ್ವೀಪಗಳು, ಆಂಡ್ರಿಯನ್ ಆಫ್ ದ್ವೀಪಗಳು ಮತ್ತು ಅಟ್ಟುದ್ವೀಪವನ್ನೊಳಗೊಂಡ ನಿಯರ್ ದ್ವೀಪಗಳು – ಇವು ಜ್ವಾಲಾಮುಖಿ ಕಾರ್ಯದಿಂದ ಆದುವು. ಅನೇಕ ಲುಪ್ತ ಹಾಗೂ ಜ್ವಲಂತ ಜ್ವಾಲಾಮುಖಿಗಳಿವೆ. ಸಾಗರಿಕ ವಾಯುಗುಣವಿದ್ದು ವರ್ಷವೆಲ್ಲ ಮಳೆ ಬೀಳುತ್ತದೆ. ವರ್ಷದ ಬಹುಕಾಲ ವಾತಾವರಣ ದಟ್ಟ ಮಂಜಿನಿಂದ ಕೂಡಿದ್ದು, ಸರಾಸರಿ $38^{\circ}$ ಸೆಂ. ಉಷ್ಣತೆಯಿರುತ್ತದೆ. ಪೈರು ಬೆಳೆಯುವ ಅವಧಿ ಸುಮಾರು 135 ದಿವಸಗಳು. ಇಲ್ಲಿಯ ನಿತ್ಯಹರಿದ್ವರ್ಣದ ಕೋನಿಫರಸ್ ಕಾಡುಗಳಲ್ಲಿ ಮೃದು ಮರ ದೊರೆತರೂ ಆ ಬಗ್ಗೆ ಕೈಗಾರಿಕೆ ಬೆಳೆದಿಲ್ಲ. ಮೀನುಗಾರಿಕೆ, ಬೇಟೆ ಜನರ ಮುಖ್ಯ ಉದ್ಯೋಗಗಳು. ಪ್ರಮುಖ ರೇವು ಹಾಗೂ ವ್ಯಾಪಾರ ಕೇಂದ್ರವಾದ ಯುನಲಾಸ್ಕ ಅತಿ ದೊಡ್ಡ ಪಟ್ಟಣ. ಇಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ನೌಕಾ ನೆಲೆ ಇದೆ.

ಈ ದ್ವೀಪ ಸ್ತೋಮಗಳನ್ನು ಮೊದಲಿಗೆ ಕಂಡು ಹಿಡಿದವರು. ರಷ್ಯನ್ನರು (1741) ಆ ಮುಂಚೆ ಅಲ್ಲಿ ಮೂಲ ನಿವಾಸಿಗಳಿದ್ದರು. ಈಗ ಅವರ ಸಂತತಿ ನಶಿಸಿದೆ. 1867 ರಲ್ಲಿ ರಷ್ಯ ಈ ದ್ವೀಪಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಬಿಟ್ಟುಕೊಟ್ಟಿತು. (ಜಿ.ಕೆ.ಜಿ.)

**ಅಲ್ಲಮಂಡ :** ಅಪೊಸೈನೇಸೀ ಕುಟುಂಬಕ್ಕೆ ಸೇರಿದ ಅಲಂಕಾರ ಸಸ್ಯಜಾತಿ. ಇದು ಬಹುವಾರ್ಷಿಕ ಪೊದೆಸಸ್ಯವಾಗಿರುವುದರಿಂದ ತೋಟಗಾರಿಕೆಯಲ್ಲಿ ಉಪಯುಕ್ತವೆನಿಸಿದೆ. ಬಳ್ಳಿಯಾಗಿಯೂ ಬೆಳೆಯುವುದುಂಟು. ವರ್ಷವಿಡೀ ಗಂಟೆಯಾಕಾರದ ಸುಂದರ ಹಳದಿ ಹೂ ಬಿಡುತ್ತದೆ. ಅಲ್ಲಮಂಡ ಸಸ್ಯಗಳ ಕಾಂಡ ಆಕಾರದಲ್ಲಿ ಗುಂಡು. ಎಳೆಯ ಬಳ್ಳಿಯ ಬಣ್ಣ ಹಸಿರು. ಬಲಿತ ಮೇಲೆ ಬೂದಿ ಬಣ್ಣ ತಳೆಯುತ್ತದೆ. ಅಲ್ಲಮಂಡದ ವಿವಿಧ ಪ್ರಭೇದಗಳನ್ನು ಅನುಸರಿಸಿ ಎಲೆಗಳು ಆಕಾರಗಳು ವಿಧವಿಧವಾಗಿರುತ್ತವೆ. ಗಿಣ್ಣಿನಲ್ಲಿ ಎಲೆಗಳು ವೃತ್ತಾಕಾರದಲ್ಲಿ ಜೋಡಣೆಗೊಂಡಿರುತ್ತವೆ. ಕೆಲವು ಸಸ್ಯಗಳಲ್ಲಿ ಎಲೆಗಳು ಅಭಿಮುಖವಾಗಿ ಜೋಡಣೆಯಾಗಿರುತ್ತವೆ. ಎಲೆಗಳ ಅಂಚು ನಯ. ಹೂಗಳು ಸಾಮಾನ್ಯವಾಗಿ ದ್ವಿತೀಯ ಹಂಬುಗಳ (ಸೈಡ್ ಷಾಟ್ಸ್) ತುದಿಯಲ್ಲಿರುತ್ತವೆ. ಮೊಗ್ಗು ಕಳಸದಾಕಾರ.

ಅಲ್ಲಮಂಡದ ಕೆಲವು ಪ್ರಭೇದಗಳು : 1. ಅಲ್ಲಮಂಡ ನಿರಿಫೋಲಿಯ–ತವರೂರು ದಕ್ಷಿಣ ಅಮೆರಿಕ ಖಂಡದ ಬ್ರೆಜಿಲ್. 2. ಅಲ್ಲಮಂಡ ನೊಬಿಲಿಸ್ ಅತ್ಯುತ್ತಮ ಪ್ರಭೇದ ಎಂದು ಪರಿಗಣಿಸಲಾಗಿದೆ. 3. ಅಲ್ಲಮಂಡ ಗ್ರಾಂಡಿಫ್ಲೋರ–ತವರೂರು ಬ್ರೆಜಿಲ್. 4. ಅಲ್ಲಮಂಡ ಕ್ಯಾಥರ್‌ಟಿಕ.

ಕನ್ನಡದಲ್ಲಿ ಅಲ್ಲಮಂಡದ ಹೆಸರು ಅರಸಿನ್ನು. ಈ ಜಾತಿ ಪೊದರಾಗಿಯೊ ಅಥವಾ ಸಣ್ಣ ಮರವಾಗಿಯೊ ಬೆಳೆಯುತ್ತದೆ. ಮೂರು ನಾಲ್ಕು ಗಿಣ್ಣುಗಳಿರುವಂತೆ ಕೊಂಬೆಗಳನ್ನು ಕತ್ತರಿಸಿ ಮೊದಲು ಕುಂಡಗಳಲ್ಲಿ ನೆಟ್ಟು ಬೆಳೆಸುತ್ತಾರೆ. ಇದರ ತೊಗಟೆ ಜಲೋದರ ಬೇನೆಯಲ್ಲಿ ಉಪಯುಕ್ತವೆನಿಸಿದೆ. ಮುಂಡ ಜನಾಂಗದವರು ಹಾವು ಕಚ್ಚಿದಾಗ ಬೇರನ್ನು ಔಷಧಿಯಾಗಿ ಬಳಸುತ್ತಾರೆ. (ಎಂ.ಎಚ್.ಎಂ.)

**ಅಲ್ಲಮಪ್ರಭು :** 12 ನೆಯ ಶತಮಾನದ ಕರ್ನಾಟಕದ ಮಹತ್ವಾದನೆಯ ಇತಿಹಾಸದಲ್ಲಿ ಬಹಳ ಪ್ರಮುಖ ವ್ಯಕ್ತಿ. ಬಸವಣ್ಣನವರ ನೇತೃತ್ವದಲ್ಲಿ ಧಾರ್ಮಿಕ ಕ್ರಾಂತಿಯ ಒಂದು ಮಹಾಪ್ರವಾಹ ಉಕ್ಕಿ ಹರಿದು ಜೀವನದ ಎಲ್ಲ ರಂಗಗಳನ್ನೂ ವ್ಯಾಪಿಸಿತಷ್ಟೆ. ನಾಡಿನ ನಾನಾ ಭಾಗಗಳಿಂದ ಬಂದ ನೂರಾರು ಶರಣರು ಕಲ್ಯಾಣ ಪಟ್ಟಣದಲ್ಲಿ ಸೇರಿದ್ದರು. ಕಳಚುರಿ ಬಿಜ್ಜಳನ ಬಳಿ ದಂಡಾಧೀಶರಾಗಿದ್ದ ಬಸವಣ್ಣನವರ ಮಾರ್ಗದರ್ಶನದಲ್ಲಿ ಸ್ವತಂತ್ರ ವಿಚಾರಮಥನದಿಂದ ಮೂಡಿಬಂದ ಹೊಸ ಬೆಳಕನ್ನು ಜನತೆಯಲ್ಲಿ ಬೀರಿದರು. ಆ ಶರಣರ ಅನುಭಾವಗೋಷ್ಠಿಯಲ್ಲಿ ಅಗ್ರಪೀಠವಹಿಸಿ ವಿಚಾರಮಥನಕ್ಕೆ ಕಾರಣವಾಗುತ್ತಿದ್ದ ಮಹಾವ್ಯಕ್ತಿ ಅಲ್ಲಮಪ್ರಭು. ಬಸವಣ್ಣನವರ ವಿಚಾರಕ್ರಾಂತಿಗೆ ಈತ ಬೆನ್ನೆಲುಬಾಗಿ ನಿಂತು, ತನ್ನ ಜ್ಞಾನ ವೈರಾಗ್ಯಗಳ ಕಾಂತಿಯನ್ನಿತ್ತು ಅದನ್ನು ಮುನ್ನಡೆಸಿದ. ಬಸವ ಅಲ್ಲಮರಿಬ್ಬರೂ ಆ ಯುಗದ ಮಹಾಶಕ್ತಿಗಳು.

ಇಂದು ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಹಳ್ಳಿಯಾಗಿ ಉಳಿದಿರುವ ಬಳ್ಳಿಗಾವೆ ಅಲ್ಲಮನ ಜನ್ಮಸ್ಥಳ. ತಂದೆಯ ಹೆಸರು ನಿರಹಂಕಾರ, ತಾಯಿ ಸುಜ್ಞಾನಿ. ಇವು ತಂದೆ ತಾಯಿಗಳ ನಿಜವಾದ ಹೆಸರುಗಳೋ ನಿರಹಂಕಾರ ಸುಜ್ಞಾನಗಳಿಂದ ಮಾತ್ರ ಅಲ್ಲಮಪ್ರಭುವಿನಂಥ ವ್ಯಕ್ತಿತ್ವ ಮೂಡಬಲ್ಲುದೆಂಬುದರ ಸಾಂಕೇತಿಕ ಸೂಚನೆಯೋ ತಿಳಿಯದು. ಅಂತೂ ಪ್ರಭುದೇವನ ತಂದೆ ಬಳ್ಳಿಗಾವೆಯಲ್ಲಿ ನಾಗವಾಸಾಧಿಪತಿಯಾಗಿದ್ದನೆಂಬ ಮಾತು ಬರುತ್ತದೆ. ಇವನ ಬಾಲ್ಯಜೀವನದ ಪರಿಸರಗಳಾಗಲಿ ಮನೋವಿಕಾಸದ ಚಿತ್ರವಾಗಲಿ ದೊರೆಯದು. ಆದರೆ ಈತನ ಜೀವನದಲ್ಲೊಂದು ಪರಿವರ್ತನೆಯ ಘಟ್ಟ ತಾರುಣ್ಯದಲ್ಲಿ ಪ್ರಾಪ್ತವಾದಂತೆ ತೋರುತ್ತದೆ. ಅದು ಹರಿಹರ ಹೇಳುವಂತೆ ಬಳ್ಳಿಗಾವೆಯ ಕಾಮಲತೆಯಿಂದ ಆಗಿರಲಿ ಅಥವಾ ಚಾಮರಸ ಹೇಳುವಂತೆ ಬನವಾಸಿಯ ಮಾಯಾದೇವಿಯಿಂದ ಆಗಿರಲಿ, ಅಂತೂ ಸಂಸಾರವನ್ನು ಮೆಟ್ಟಿ ಮೇಲೇರುವ ಸಾಧನೆಗೆ ಪ್ರಭುವನ್ನು ಪ್ರಚೋದಿಸಿದ ಒಂದು ಘಟನೆ ನಡೆದಿರಬೇಕು. ಅದರಿಂದ ಪ್ರಭುದೇವನಿಗೆ ತನ್ನ ಹೃದಯದ ಅಂತರಾಳದಲ್ಲಿ ಅಡಗಿದ್ದ ಅತೀವವಾದ ಆಕಾಂಕ್ಷೆಯ ಅರಿವು ಆದಂತೆ ತೋರುತ್ತದೆ. ಮುಂದೆ ಈತನ ವಚನಗಳಲ್ಲಿ ನಾವು ಕಾಣುವ ಜ್ಞಾನ ವೈರಾಗ್ಯಗಳು ಮೊದಲಿನಿಂದಲೂ ಈತನ ಜೀವನದಲ್ಲಿ ಉಸಿರಾಟದಂತೆ ಸಹಜವಾಗಿದ್ದುವು. ತನ್ನ ಸಹಜ ಸ್ವರೂಪದ ವಿಕಾಸಕ್ಕಾಗಿ ಹಂಬಲಿಸಿತ್ತು ಪ್ರಭುವಿನ ಮನಸ್ಸು, ಈ ಸಂಸಾರದ ವಿಷಯಸುಖಗಳಲ್ಲಿ ಆನಂದವನ್ನು ಪಡೆಯಲಾರದೆ ಹೋಯಿತು. ಆದುದರಿಂದ ಇದನ್ನು ತ್ಯಜಿಸಿ ಈತ ಅಗಾಧವಾದ ಸಾಧನೆಯನ್ನು ಕೈಕೊಂಡಂತೆ ತೋರುತ್ತದೆ.

ಈತನಲ್ಲಿ ಕಾಣುವ ಯೋಗಸಮನ್ವಯ ಸಿದ್ಧಿ ಆಶ್ಚರ್ಯಕರವಾದುದು. ಹಠಯೋಗ ರಾಜಯೋಗ ಮೊದಲಾದ ಎಲ್ಲ ಯೋಗಗಳಲ್ಲೂ ಈತ ನಡೆದು ಅವುಗಳ ಆಚೆಗೆ ಶಿವಯೋಗದತ್ತ ಸಾಗಿದುದರ ಸಾಕ್ಷಿಯನ್ನು ಇವನ ವಚನಗಳು ತಂದುಕೊಡುತ್ತವೆ. ಪರಿವ್ರಾಜಕ ಸಂನ್ಯಾಸಿಯಾಗಿ ಭರತಖಂಡದ ಆದ್ಯಂತವೂ ಈತ ಸಂಚರಿಸಿರಬೇಕು; ನೂರಾರು ಸಾಧಕರನ್ನು ಸಂಧಿಸಿ ಅನೇಕ ಬಗೆಯ ಅನುಭವಗಳನ್ನು ಪಡೆದಿರಬೇಕು. ಆದರೆ ಯಾವುದೂ ಈತನಿಗೆ ಪೂರ್ಣತೃಪ್ತಿಯನ್ನು ಕೊಟ್ಟಂತೆ ತೋರುವುದಿಲ್ಲ. ಭೂಮವಾದುದನ್ನು ಬಯಸಿದವನು ಈತ. ಆ ಅನುಭಾವವನ್ನು ಈತನಿಗೆ ತಂದುಕೊಟ್ಟವನು ಅನಿಮಿಷಯೋಗಿ. ಶಿವಯೋಗದ ನಿಲುವನ್ನು ಅನಿಮಿಷನಿಂದ ಅಲ್ಲಮ ಅರಿತುಕೊಂಡ. ಎಲ್ಲ ಯೋಗಗಳ ರಹಸ್ಯವನ್ನೂ ಅರಿತ ಅಲ್ಲಮಪ್ರಭುವಿನ ಸಾಧನೆಯ ಕೊನೆಯ ಹಂತದಲ್ಲಿ ಅನಿಮಿಷಯೋಗಿಯ ದರ್ಶನವಾಯಿತೆಂದು ಭಾವಿಸಬಹುದು. ಅನಿಮಿಷಯೋಗಿಯ ಕರಸ್ಥಲದ ಲಿಂಗ ಪ್ರಭುದೇವನ ಹಸ್ತಪೀಠವನ್ನು ಸೇರುತ್ತದೆ. ಅದರ ಮಹತ್ತಿನಲ್ಲಿ ಈತನ ಮನಸ್ಸು ಪರವಶವಾಗುತ್ತದೆ. ಇವನ ಅಂಗವೆಲ್ಲ ನಷ್ಟವಾಗಿ ಲಿಂಗದಲ್ಲಿ ಲೀನವಾಗುತ್ತದೆ. ನಿಜವನರಿದ ನಿಶ್ಚಿಂತ, ಮದನನ ಗೆಲಿದ ಮರಣವ ಗೆಲಿದ ಮಹಾಂತ, ಘನವನೊಳಕೊಂಡ ಮಹಿಮ, ಪರವನೊಳಕೊಂಡ ಪರಿಣಾಮಿಯಾಗಿ ಈತ ಪರಿಣಮಿಸುತ್ತಾನೆ. ಈ ಸನ್ನಿವೇಶವನ್ನು ಶೂನ್ಯ ಸಂಪಾದನೆ ಬಹಳ ಚೆನ್ನಾಗಿ ಚಿತ್ರಿಸಿದೆ.

ಅಲ್ಲಿಂದ ಮುಂದೆ ಸಾಧಕರನ್ನು ಉದ್ಧರಿಸುತ್ತ ಪ್ರಭು ಕಲ್ಯಾಣಕ್ಕೆ ಬರುತ್ತಾನೆ. ಅಲ್ಲಿ ಬಸವಣ್ಣನವರು ಕೈಗೊಂಡಿದ್ದ ಮಹಾಮಣಿಹದಲ್ಲಿ ಭಾಗಿಯಾಗುತ್ತಾನೆ. ಈತ ಅನುಭವ ಮಂಟಪದಲ್ಲಿ ಅಗ್ರಸ್ಥಾನ ವಹಿಸಿದುದು ಶರಣರ ಅನುಭಾವ ಗೋಷ್ಠಿಗಳಿಗೆ ಹೊಸ ಚೈತನ್ಯವನ್ನು ತುಂಬಿದಂತಾಗುತ್ತದೆ. ಅಲ್ಲಿ ಬಸವಣ್ಣನವರೊಡನೆ ಈತ ನಿರ್ವಹಿಸಿದ ಪಾತ್ರ ಬಹಳ ಪ್ರಮುಖವಾದುದು. ಕಲ್ಯಾಣದಲ್ಲಿ ಕೆಲವು ಕಾಲ ಇದ್ದ ಅನಂತರ ಅಲ್ಲಿ ತನ್ನ ಕರ್ತವ್ಯ ಮುಗಿಯುತ್ತ ಬಂದುದನ್ನು ತಿಳಿದು ಪ್ರಭು ಶ್ರೀಶೈಲದತ್ತ ಹೊರಟ. ಲಿಂಗಾಂಗ ಸಾಮರಸ್ಯದ ಕೊನೆಯ ನಿಲುವಿನಲ್ಲಿ ಲೀನವಾಗಲು ಉದ್ದೇಶಿಸಿ ಅದಕ್ಕಾಗಿ ಶ್ರೀಶೈಲದ ಕದಳಿಯ ವನವನ್ನು ಆರಿಸಿಕೊಂಡ. ಅಲ್ಲಿ ಇವನ ಚೈತನ್ಯಪ್ರಭೆ ಗುಹೇಶ್ವರನ ಹೃದಯಗಹ್ವರದಲ್ಲಿ ಒಡವೆರೆದು ಒಂದಾಯಿತು. ಬಳ್ಳಿಗಾವೆಯ ಪ್ರಭು ಜಗತ್ತಿನ ವಿಭುವಾಗಿ ಪರಿಣಮಿಸಿದ. ಇದು ಇವನ ವಚನಗಳಿಂದ ಮತ್ತು ಇತರ ಕಾವ್ಯಾಧಾರಗಳಿಂದ ಕಂಡುಬರುವ ಈತನ ಜೀವನಚಿತ್ರ.

ಈತನ ಜೀವನ ಚರಿತ್ರೆ ಅನೇಕ ಕಡೆಗಳಲ್ಲಿ ಅಸ್ಪಷ್ಟವಾಗಿದ್ದರೂ ಈತನ ವಚನಗಳಲ್ಲಿ ಮೂಡಿನಿಂತಿರುವ ಅನುಭವದ ಚಿತ್ರ ಅತ್ಯುಜ್ಜ್ವಲವಾಗಿದೆ. ಈತನ ವಚನಗಳ ಅದ್ಭುತಶಕ್ತಿಯನ್ನು ಕಂಡು ಆಶ್ಚರ್ಯಗೊಳ್ಳುತ್ತೇವೆ. ಕನ್ನಡ ಭಾಷೆ ಒಂದು ವಿಶಿಷ್ಟ ಶಕ್ತಿಯನ್ನು ಈತನಿಂದ ಪಡೆಯಿತು. ಸಾಸಿವೆಯಲ್ಲಿ ಸಾಗರವನ್ನು ತುಂಬಬಲ್ಲ ಸಾಹಸ ಈತನ ವಚನಗಳಲ್ಲಿ ಕಂಡುಬರುತ್ತದೆ. ತನ್ನ ಅಪಾರವಾದ ಅನುಭವವನ್ನು ಅನ್ಯಹೃದಯ ವೇದ್ಯವಾಗುವಂತೆ ಹೇಳುವ ಈತನ ಶಕ್ತಿ ಒಂದು ಅಪೂರ್ವವಾದ ಸಿದ್ಧಿ. ಇವನು ಉಪಯೋಗಿಸಿದ ಅಲಂಕಾರಗಳು, ಕೊಡುವ ಉಪಮಾನಗಳು, ಹೋಲಿಕೆಗಳು, ಗಾದೆಯಂತೆ ಸೂತ್ರರೂಪವಾದ ಮಾತುಗಳು–ಎಲ್ಲವೂ ಅವನ ಲೋಕಾನುಭವಕ್ಕೂ ಲೋಕಕಾರುಣ್ಯಕ್ಕೂ ಸಾಕ್ಷಿಯಾಗಿವೆ. ಅವು ಸಹೃದಯರ ಮನಸ್ಸನ್ನು ಮುಟ್ಟಿ ತಮ್ಮ ಉದ್ದೇಶವನ್ನು ಪರಿಣಾಮಕಾರಿಯಾಗಿ ಸಾಧಿಸಬಲ್ಲವು. ಮಾದರಿಯಾಗಿ ಆತನ ಒಂದೆರಡು ವಚನಗಳನ್ನು ಉದಾಹರಿಸಬಹುದು:

ಆಸೆಗೆ ಸತ್ತುದು ಕೋಟಿ ಕೋಟಿ ; ಆಮಿಷಕ್ಕೆ ಸತ್ತುದು ಕೋಟಿ ಕೋಟಿ ;
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ ಕೋಟಿ ;
ನಿಮಗಾಗಿ ಸತ್ತವರನಾರನೂ ಕಾಣೆ
ಹೊನ್ನು ಮಾಯೆಯೆಂಬರು, ಹೆಣ್ಣು ಮಾಯೆಯೆಂಬರು,
ಮಣ್ಣು ಮಾಯೆಯೆಂಬರು,
ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ
ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ , ಆಕಾಶ ಗಂಗೆಯಲ್ಲಿ ಮಜ್ಜನ
ಹೂವಿಲ್ಲದ ಪರಿಮಳದ ಪೂಜೆ ; ಹೃದಯ ಕಮಲದಲ್ಲಿ ಶಿವಶಿವ ಎಂಬ
ಗಗನವೇ ಗುಂಡಿಗೆ, ಆಕಾಶವೇ ಅಗ್ಗವಣಿ ; ಚಂದ್ರಸೂರ್ಯರಿಬ್ಬರು ಪುಷ್ಪ ;
ಬ್ರಹ್ಮಧೂಪ, ವಿಷ್ಣುದೀಪ, ರುದ್ರನೋಗರ ; ಸುಯಿಧಾನ ನೋಡಾ
ಗುಹೇಶ್ವರ ಲಿಂಗಕ್ಕೆ ಪೂಜೆ ನೋಡಾ

ಹೀಗೆ ಅನೇಕ ವಚನಗಳನ್ನು ಉದಾಹರಿಸಬಹುದು. ಅನುಭವದ ತೀವ್ರತೆಯನ್ನು ಮಾತಿನಲ್ಲಿ ಸಾಧಿಸುವ ಶಕ್ತಿಗೆ ಈತನ ವಚನಗಳು ಉಜ್ಜ್ವಲ ನಿದರ್ಶನಗಳಾಗಿವೆ. ಒಟ್ಟಿನಲ್ಲಿ ಶರಣರಲ್ಲೆಲ್ಲ ಒಂದು ಅದ್ವಿತೀಯವಾದ ಮೂರ್ತಿಸ್ವರೂಪ ಈತನದು. ಸಾಧಕನಾಗಿ, ಸಿದ್ಧನಾಗಿ, ಅನುಭಾವಿಯಾಗಿ, ಆ ಅನುಭಾವದ ಬೆಳಕನ್ನು ಬೀರುವ ದೀವಟಿಗನಾಗಿ, ಕವಿಯಾಗಿ, ಕಾವ್ಯದ ಮಟ್ಟವನ್ನೂ ಮೀರಿನಿಂತ ಪ್ರವಾದಿಯಾಗಿ, ಸಮಾಜ ಸುಧಾರಕನಾಗಿ, ಸಮಾಜವನ್ನೇ ವ್ಯಾಪಿಸಿ ಆಚೆ ನಿಂತ ಜಂಗಮನಾಗಿ–ಹೀಗೆ ಬಹುಮುಖದ ವ್ಯಕ್ತಿತ್ವವನ್ನು ಮೀರಿನಿಂತ ಮಹಾಜ್ಯೋತಿರ್ಲಿಂಗಸ್ವರೂಪ ಅಲ್ಲಮನದು. (ಎಚ್.ಟಿ.)

**ಅಲ್ಲಸಾನಿ ಪೆದ್ದನ :** ವಿಜಯನಗರ ಸಾಮ್ರಾಟ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಪ್ರಸಿದ್ಧ ಕವಿ. ಸ್ವಾರೋಚಿಷಮನುಸಂಭವ ಅಥವಾ ಮನುಚರಿತ್ರೆ ಎಂಬ ತೆಲುಗು ಮಹಾಕಾವ್ಯವನ್ನು ಬರೆದಿದ್ದಾನೆ. ವಂದರೀಕ ಬ್ರಾಹ್ಮಣ, ಚೊಕ್ಕ ವಾಮಾತ್ಯನ ಮಗ, ಶಠಕೋಪ ತಪಸ್ವಿಯ ಶಿಷ್ಯ. ಚತುರ್ವಿಧ ಕವಿತಾಪ್ರವೀಣ. ಸಾಹಿತೀ ಸಮರಾಂಗಣ ಸಾರ್ವಭೌಮ ಕೃಷ್ಣದೇವರಾಯನಿಂದ ಆಂಧ್ರಕವಿತಾಪಿತಾಮಹನೆಂಬ ಬಿರುದು ಪಡೆದು ಆಂಧ್ರ ಸಾಹಿತ್ಯದಲ್ಲಿ ಪ್ರಬಂಧ ಕವಿತ್ವಕ್ಕೆ ಮಾರ್ಗದರ್ಶಿಯಾದವ. ಅಂದಿನ ತೆಲುಗು ಸಾಹಿತ್ಯದ ಸ್ವರ್ಣಯುಗಕ್ಕೆ ಆತನ ಕಾಣಿಕೆ ಅಮೂಲ್ಯವಾದುದು.

ಸ್ವಾರೋಚಿಷಮನುಸಂಭವ ಆರು ಆಶ್ವಾಸಗಳುಳ್ಳ ಚಂಪೂಗ್ರಂಥ. ಕಥೆಯ ಮೂಲ ಮಾರ್ಕಂಡೇಯ ಪುರಾಣಾಂತರ್ಗತ ಪ್ರವರ ವೃತ್ತಾಂತ. ಮೊದಲ ಮೂರು ಆಶ್ವಾಸಗಳಲ್ಲಿ ವರೂಥಿನೀಪ್ರವರ ವೃತ್ತಾಂತವಿದೆ. ಮುಂದಿನ ಎರಡು ಆಶ್ವಾಸಗಳಲ್ಲಿ ಸ್ವಾರೋಚಿ ವನದೇವತೆಯೊಬ್ಬಳನ್ನು ಮದುವೆಯಾಗಿ ಸ್ವಾರೋಚಿಷನೆಂಬ ಮಗನನ್ನು ಪಡೆಯುತ್ತಾನೆ. ಮಗ ಮನುವಾಗಿ ವಿಷ್ಣುಸ್ತುತಿ ಮಾಡುತ್ತಾನೆ. ಅಲ್ಲಿಗೆ ಗ್ರಂಥ ಸಮಾಪ್ತವಾಗುತ್ತದೆ.

ಪೆದ್ದನನಿಗಿಂತ ಹಿಂದೆ ಅನೇಕ ಕವಿಗಳು ತೆಲುಗಿನಲ್ಲಿ ಪುರಾಣ ರಚನೆ ಮಾಡಿದ್ದರು. ಆದರೆ ಪೆದ್ದನ ಅವರ ಮಾರ್ಗವನ್ನು ಅನುಸರಿಸದೆ ಪುರಾಣಪ್ರಸಿದ್ಧವಾದ ಒಂದು ಕಥೆಯನ್ನು ಆರಿಸಿಕೊಂಡು ಅದನ್ನು ಸುಂದರಕಾವ್ಯವಾಗಿ ಪರಿವರ್ತಿಸಿದ್ದಾನೆ. ಕಾವ್ಯದ ಉದ್ದಕ್ಕೂ ಪ್ರವರನ ಗಂಭೀರ ವ್ಯಕ್ತಿತ್ವ, ವರೂಥಿನಿಯ ರೂಪಗುಣವಿಲಾಸಗಳು ರಸವತ್ತಾಗಿ ವರ್ಣಿತವಾಗಿವೆ. ಶುಕಮಹರ್ಷಿಯಂತೆ ಪ್ರವರ ಸಂಯಮಗುಣಕ್ಕೆ ಮಾದರಿಯಾಗಿದ್ದಾನೆ. ವರೂಥಿನಿ, ರಂಭೆ, ಊರ್ವಶಿಯರನ್ನು ಮೀರಿಸಿದ್ದಾಳೆ ತನ್ನ ವಿಲಾಸಾದಿಗುಣಗಳಲ್ಲಿ.

ಹೀಗೆ ಜನಮನವನ್ನಾಕರ್ಷಿಸಿ ಹೃದಯವನ್ನು ಸೂರೆಗೊಳ್ಳಬಲ್ಲ ಪಾತ್ರಗಳನ್ನು ಸೃಷ್ಟಿಸುವುದರಲ್ಲಿ ತಿಕ್ಕನನ ಅನಂತರ ಬಂದ ಕವಿಗಳಲ್ಲಿ ಪೆದ್ದನನೇ ಬಹು ಪ್ರಮುಖನೆಂದು ತೋರುತ್ತದೆ. ಪೆದ್ದನನ ಶೈಲಿ ಬಹು ಬಿಗಿಯಾದುದು. ವರ್ಣನೆಗಳು ಸಹಜ ಸುಂದರ. ರಸಪೋಷಣೆಯ ದೃಷ್ಟಿಯಿಂದ ಮೊದಲ ಮೂರು ಆಶ್ವಾಸಗಳಲ್ಲಿ ಕಾಣುವ ಐಕ್ಯ ಮುಂದಿನ ಆಶ್ವಾಸಗಳಲ್ಲಿಲ್ಲ.

ಒಮ್ಮೆ ಕೃಷ್ಣದೇವರಾಯ ಕವಿಸಭೆಯಲ್ಲಿ ಚಿನ್ನದ ಒಂದು ಕಾಲ್ಕಡಗವನ್ನು ಬಹುಮಾನ ವಾಗಿರಿಸಿ, ಸುಂದರವಾದ ಒಂದೇ ಒಂದು ಕವನವನ್ನು ಸಂಸ್ಕೃತಾಂಧ್ರ ಭಾಷೆಗಳೆರಡಕ್ಕೂ ಅನ್ವಯವಾಗುವಂತೆ ರಚಿಸುವ ಕವಿಗೆ ಅದನ್ನು ಕೊಡುವುದಾಗಿ ಹೇಳಿದನಂತೆ. ಆಗ ಎಲ್ಲರೂ ಬೆರಗಾಗಿ ಅವಾಕ್ಕಾಗಿ ಕುಳಿತಿರಲು ಪೆದ್ದನ ಪೂತಮೆರುಂಗುಲನ್ ಎಂಬ ಉತ್ಪಲಮಾಲಾವೃತ್ತವನ್ನು ಸಮಯಸ್ಫೂರ್ತಿಯಿಂದ ರಚಿಸಿ ರಾಜನಿಂದ ಆ ಪಾರಿತೋಷಕ ವನ್ನು ಪಡೆದನಂತೆ. ಇಷ್ಟೇ ಅಲ್ಲ, ಆನೆ ಸವಾರಿ ಮಾಡುತ್ತಿದ್ದ ಅರಸ ಕೃಷ್ಣದೇವರಾಯ ದಾರಿಯಲ್ಲಿ ಪೆದ್ದನನನ್ನು ಕಂಡು ಪ್ರೀತಿಯಿಂದ ಕವಿರಾಜ ಬಾ ಎಂದು ಕೈ ಹಿಡಿದೆತ್ತಿ ತನ್ನ ಪಕ್ಕದಲ್ಲಿ ಕೂಡಿಸಿಕೊಂಡನಂತೆ. ಮನುಚರಿತ್ರೆಯನ್ನು ಕವಿ ರಾಯನಿಗೆ ಸಮರ್ಪಣೆ ಮಾಡಿದಾಗ ವಿಶ್ವಾಸ ಉಕ್ಕೇರಿದ ಅರಸ ಪೆದ್ದನನ ಪಲ್ಲಕ್ಕಿಯನ್ನು ತನ್ನ ಹೆಗಲಲ್ಲಿ ಹೊತ್ತನಂತೆ. ಕೃಷ್ಣದೇವರಾಯನ ಮರಣಾನಂತರ ತನಗಾದ ದುಃಖವನ್ನು ಪೆದ್ದನ ತನ್ನ ಅನೇಕ ಪದ್ಯಗಳಲ್ಲಿ ಹೃದಯ ಮಿಡಿಯುವಂತೆ ತೋಡಿಕೊಂಡಿದ್ದಾನೆ.

ಪೆದ್ದನನ ವ್ಯಕ್ತಿತ್ವದಂತೆ ಅವನ ಕಾವ್ಯವೂ ಬಹಳ ದೊಡ್ಡದು. ತೆಲುಗು ಸಾಹಿತ್ಯದಲ್ಲಿ ಅದಕ್ಕೆ ಚಿರಸ್ಥಾಯಿಯಾದ ಗೌರವವಿದೆ. (ಬಿ.ಆರ್.)

**ಅಲ್ಲಾ :** ಇಸ್ಲಾಂ ಧರ್ಮದಲ್ಲಿ ದೇವರನ್ನು ಸಂಬೋಧಿಸುವ ಪದ. ಮೂಲ ಅರಬ್ಬೀ ಭಾಷೆಯ ಪದ ಅಲ್ ಇಲಾಹ್. ಇಸ್ಲಾಂ ಪೂರ್ವದಲ್ಲಿಯೇ ಈ ಪದ ಅರಬ್ಬರಲ್ಲಿ ಪ್ರಚಾರದಲ್ಲಿತ್ತು. ಅವರು ಪೂಜಿಸುತ್ತಿದ್ದ ಮೂರ್ತಿಗಳಲ್ಲಿ ಅಲ್ಲನ ಮೂರ್ತಿಯೇ ಪ್ರಮುಖ ವಾಗಿತ್ತು. ಇಸ್ಲಾಂಧರ್ಮ ಬಂದ ಮೇಲೆ ಈ ಪದಕ್ಕೆ ವಿಶಾಲವಾದ ಅರ್ಥ ಬಂತು. ಮುಸಲ್ಮಾನರಲ್ಲದೆ ಅರಬ್ಬೀ ಮಾತನಾಡುವ ಕ್ರಿಶ್ಚಿಯನ್ ದೇಶಗಳಲ್ಲೂ ಈ ಪದ ಬಳಕೆಯಲ್ಲಿದೆ. **(ನೋಡಿ– ಇಸ್ಲಾಂ)** *

**ಅಲಾವುದ್ದೀನ್ ಖಿಲ್ಜಿ :** 1296–1316. ಜಲಾಲುದ್ದೀನ್ ಖಿಲ್ಜಿಯ ಅಳಿಯ, ಉತ್ತರಾಧಿಕಾರಿ. ಈತ ದೆಹಲಿ ಸುಲ್ತಾನರಲ್ಲೆಲ್ಲ ಅತಿ ಕ್ರೂರಿ ಮತ್ತು ಬಲಿಷ್ಠ. ಭಾರತದಲ್ಲಿ ವಿಶಾಲ ಮಹಮ್ಮದೀಯ ಸಾಮ್ರಾಜ್ಯವನ್ನು ಸ್ಥಾಪಿಸಲೆತ್ನಿಸಿದವರಲ್ಲಿ ಮೊದಲಿಗ. ದಕ್ಷಿಣದ ಹಿಂದು ರಾಜ್ಯಗಳ ಮೇಲೆ ಮೊಟ್ಟಮೊದಲು ಮಹಮ್ಮದೀಯರ ರಾಜಕೀಯ ಪ್ರಭಾವವನ್ನು ಸ್ಥಾಪಿಸಿದ. ಜಲಾಲುದ್ದೀನನ ಆಳ್ವಿಕೆಯ ಕೊನೆಗಾಲದಲ್ಲಿ ಖಾರ ಮತ್ತು ಮಾಳವ ರಾಜ್ಯಗಳ ಪ್ರಾಂತ್ಯಾಧಿಕಾರಿಯಾಗಿದ್ದ, ಸುಖವಿಹೀನ ಗೃಹಜೀವನದಿಂದುದ್ದೀಪಿತನಾದ ಅಲಾವುದ್ದೀನ್ 1294 ರಲ್ಲಿ 8000 ಅಶ್ವಬಲ ಸಮೇತನಾಗಿ ವಿಂಧ್ಯಪರ್ವತವನ್ನು ದಾಟಿ, ದೇವಗಿರಿಯನ್ನು ಮುತ್ತಿ ಅಲ್ಲಿನ ರಾಜನಾದ ಯಾದವ ರಾಮಚಂದ್ರನನ್ನೂ ಆತನ ಮಗ ಶಂಕರದೇವನನ್ನೂ ಸೋಲಿಸಿ ಚಿನ್ನ, ಬೆಳ್ಳಿ, ರತ್ನ ಮೊದಲಾದ ಅಪಾರ ಸಂಪತ್ತಿನ ಕೊಳ್ಳೆಯೊಡನೆ ಹಿಂದಿರುಗಿದ. ವಿಜಯಿ ಅಲಾವುದ್ದೀನನನ್ನು ಸುಲ್ತಾನ್ ಜಲಾಲುದ್ದೀನನು ಗಂಗಾತೀರದಲ್ಲಿ ಸ್ವಾಗತಿಸುವಂತೆ ನಿಷ್ಕರ್ಷೆಯಾಯಿತು. ಗುಪ್ತವಾಗಿ ಮೊದಲೇ ನಿರ್ಧರಿಸಿದ್ದಂತೆ ಸಂದರ್ಶನದ ವೇಳೆಯಲ್ಲಿ ಅಲಾವುದ್ದೀನ್ ಕುತಂತ್ರದಿಂದ ಮಾವನನ್ನು ಕೊಲೆಮಾಡಿಸಿ ದಕ್ಷಿಣದಿಂದ ದೋಚಿ ತಂದಿದ್ದ ಐಶ್ವರ್ಯವನ್ನು ತನಗೆ ಬೇಕಾದವರಿಗೆ ಹಂಚಿ, 1296ರಲ್ಲಿ ದೆಹಲಿ ಸಿಂಹಾಸನವನ್ನಾಕ್ರಮಿಸಿ, ತನ್ನ ವಿರೋಧಿಗಳನ್ನು ಕ್ರೌರ್ಯದಿಂದ ನಿರ್ನಾಮ ಮಾಡಿದ. ಇವನ 20 ವರ್ಷಗಳ ಆಳ್ವಿಕೆ ಭಯೋತ್ಪಾದನೆಯ ರಕ್ತಪಾತದ ಕಾಲವಾಗಿತ್ತು.

ಆ ವೇಳೆಯಲ್ಲಿ ಪಂಜಾಬ್ ಮತ್ತು ವಾಯವ್ಯ ಪ್ರದೇಶದಲ್ಲಿ ಮಂಗೋಲರ ಭೀತಿ ವಿಶೇಷವಾಗಿತ್ತು. ಅವರು ಒಂದಾದ ಮೇಲೊಂದರಂತೆ ಆಕ್ರಮಣಗಳನ್ನು ಮಾಡಿ ಸೂರೆ ಮತ್ತು ಕೊಳ್ಳೆಯಿಂದ ಹಿಂದಿರುಗುತ್ತಿದ್ದರು. 1307ರಲ್ಲಿ ಅವರ ದಂಡು ದೆಹಲಿಯವರೆಗೂ ಬಂದಿತ್ತು. ಅಲಾವುದ್ದೀನ್ ಸತತವಾಗಿ ಕಾಲುಶತಮಾನಕಾಲ ಹೋರಾಡಿ ಮಂಗೋಲರ ಹಾವಳಿಯನ್ನು ತಡೆಗಟ್ಟಿದ. ಗಡಿನಾಡಿನ ರಕ್ಷಣಾಕಾರ್ಯಗಳನ್ನು ಪುನರ್ವ್ಯವಸ್ಥೆಗೊಳಿಸಿ ತುಘಲಕ್ ಎಂಬ ಸೇನಾನಾಯಕನ ವಶಕ್ಕೆ ಅಲ್ಲಿನ ಕಾವಲುಸೈನ್ಯವನ್ನು ಒಪ್ಪಿಸಿದ. ಮಹಾತ್ವಾಕಾಂಕ್ಷಿಯಾದ ಅಲಾವುದ್ದೀನನಿಗೆ ಒಂದು ಹೊಸ ಮತವನ್ನು ಸ್ಥಾಪಿಸಬೇಕೆಂಬ ಹಾಗೂ ಅಲೆಕ್ಸಾಂಡರನಂತೆ ಪ್ರಪಂಚವನ್ನೇ ಗೆಲ್ಲಬೇಕೆಂಬ ಆಕಾಂಕ್ಷೆಗಳು ಹುಟ್ಟಿದವು. ಅಲ್ಲಾ ಉಲ್ ಮುಲ್ಕ್ ಎಂಬ ತನ್ನ ಆಪ್ತ ಖಾಜಿಯ ಹಿತೋಕ್ತಿಯಿಂದ ಈ ಎರಡು ಅಭಿಲಾಷೆಗಳನ್ನೂ ಕೈಬಿಟ್ಟು ಹಿಂದೂಸ್ಥಾನವನ್ನೆಲ್ಲ ಜಯಿಸಲುದ್ಯುಕ್ತನಾದ. ಮೊದಲು ರಾಜಪುತ್ರ ಸಂಸ್ಥಾನಗಳ ಕಡೆಗೆ ತಿರುಗಿ ಕ್ರೌರ್ಯದಿಂದ ಗುಜರಾತ್, ರಣತಂಬೂರ್ ಮತ್ತು ಮೇವಾರ್ ರಾಜ್ಯಗಳನ್ನು ವಶಪಡಿಸಿಕೊಂಡ. ರಾಣಾ ಕರ್ಣಸಿಂಗನ ರಾಣಿ ಪದ್ಮಿನಿಯನ್ನು ಪಡೆಯಲು ಅಲಾವುದ್ದೀನ್ ಚಿತ್ತೂರನ್ನು ಮುತ್ತಿದನೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ.

1305ರ ವೇಳೆಗೆ ಇಡೀ ಉತ್ತರ ಹಿಂದುಸ್ಥಾನದಲ್ಲಿ ಖಿಲ್ಜಿ ಸಾಮ್ರಾಜ್ಯ ಏರ್ಪಟ್ಟಿತು. ಅನಂತರ ಅಲಾವುದ್ದೀನ್ ರಾಜಕೀಯ ಮತ್ತು ಆರ್ಥಿಕ ಲೋಭದಿಂದ ದಕ್ಷಿಣದ ಕಡೆಗೆ ತನ್ನ ಗಮನ ಹರಿಸಿದ. ದಕ್ಷಿಣ ರಾಜ್ಯಗಳ ಆಕ್ರಮಣಕ್ಕೆ ತನ್ನ ಆಪ್ತಗುಲಾಮನೂ ಪರಾಕ್ರಮಿಯೂ ಆದ ಮಲಿಕ್ ಕಾಫೂರನನ್ನು (ಮಲಿಕ್ ನಾಯಿಬ್) ನೇಮಿಸಿದ. ಈತ ತನ್ನ ಮೊದಲ ದಾಳಿಯಲ್ಲಿ ರಾಜ ರಾಮಚಂದ್ರ ಕ್ರಮವಾಗಿ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿರಲಿಲ್ಲವೆಂಬ ನೆಪದ ಮೇಲೆ ದೇವಗಿರಿಯನ್ನು ಮುತ್ತಿ ಕೊಳ್ಳೆ ಹೊಡೆದ. ಎರಡನೆಯ ದಂಡಯಾತ್ರೆಯಲ್ಲಿ ವಾರಂಗಲ್ಲಿನ ಪ್ರತಾಪರುದ್ರನನ್ನು ಸೋಲಿಸಿದ. 1313ರಲ್ಲಿ ಹೊಯ್ಸಳ 3ನೆಯ ವೀರಬಲ್ಲಾಳ ನನ್ನು ಸೋಲಿಸಿ ದೋರಸಮುದ್ರವನ್ನು ಕೊಳ್ಳೆ ಹೊಡೆದ. ಮಧುರೆ ಹಾಗೂ ರಾಮೇಶ್ವರದ ವರೆಗೂ ದಂಡೆತ್ತಿ ಹೋಗಿ ಪಾಂಡ್ಯರನ್ನು ಸೋಲಿಸಿ ವಿಶೇಷವಾದ ಐಶ್ವರ್ಯವನ್ನು ದೋಚಿದ. ಈ ದಂಡಯಾತ್ರೆಗಳಿಂದ ಸಾವಿರಾರು ಮಂದಿ ಮಡಿದರು, ಅನೇಕ ಪಟ್ಟಣಗಳು ಹಾಗೂ ದೇವಾಲಯಗಳು ನಾಶವಾದವು. ಅಪಾರ ಸಂಪತ್ತು ಸುಲ್ತಾನನ ವಶವಾಯಿತು.

ಅಲಾವುದ್ದೀನ್ ಆಡಳಿತ ವ್ಯವಸ್ಥೆಯನ್ನು ಇಸ್ಲಾಂ ಧರ್ಮದ ಆಧಾರದ ಮೇಲೆ ರೂಪಿಸದೆ ತನ್ನ ಪರಮಾಧಿಕಾರಕ್ಕೆ ಸೂಕ್ತವಾಗುವಂತೆ ಮಾರ್ಪಡಿಸಿಕೊಂಡ. ಆಡಳಿತ, ಸೈನ್ಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಅಗತ್ಯ ವಸ್ತುಗಳ ಮಾರಾಟದ ಮೇಲೆ ಉಗ್ರವಾದ ಹತೋಟಿ ವಿಧಿಸಿದ. ಮಾದಕ ಪದಾರ್ಥಗಳ ಸೇವನೆ, ಜೂಜಾಟ, ಶ್ರೀಮಂತರು ಒಟ್ಟಿಗೆ ಕಲೆಯುವುದು ನ್ಯಾಯಬಾಹಿರವೆಂದು ಘೋಷಿಸಿದ. ತಪ್ಪಿತಸ್ಥರೆಂದು ಕಂಡವರನ್ನು ಕ್ರೂರವಾಗಿ ದಂಡಿಸಿದ. ಹಿಂದುಗಳು ದಂಗೆಯೇಳಬಹುದೆಂಬ ಭೀತಿಯಿಂದ ಅವರ ಮೇಲೆ ಭಾರವಾದ ತೆರಿಗೆಗಳನ್ನು ವಿಧಿಸಿದ. ಮಹಮ್ಮದೀಯರಲ್ಲಿ ಆಡಳಿತ ವಿರುದ್ಧ ಅಸಮಾಧಾನವೂ ಹಿಂದುಗಳಲ್ಲಿ ಕಡುಬಡತನ ಮತ್ತು ಅಸಹಾಯಕತೆಯ ನೋವು ಅಂದಿನ ಸಾಮಾಜಿಕ ಸ್ಥಿತಿಯ ನೈಜ ಪ್ರತಿಬಿಂಬಗಳಾಗಿದ್ದುವು. ಕ್ರೂರಿಯಾದ ಅಲಾವುದ್ದೀನನ ಅಂತ್ಯ ದುಃಖಮಯವಾಗಿತ್ತು. ಅತಿಭೋಗದಿಂದ ಅವನ ಆರೋಗ್ಯ ಕೆಟ್ಟಿತ್ತು. ಅರಮನೆಯಲ್ಲಿ ಗೃಹಕಲಹಗಳುದ್ಭವಿಸಿ ದಂಗೆಗಳಾದವು. ಕೊನೆಗೆ ಮಲಿಕ್ ಕಾಫೂರ್ ಅಲಾವುದ್ದೀನನನ್ನು ಕೊಲೆಮಾಡಿ ಸಿಂಹಾಸನವೇರಿದ. ಆದರೆ ಒಂದು ತಿಂಗಳಲ್ಲೇ ಕಾಫೂರನ ಕೊಲೆಯಾಗಿ ಅಲಾವುದ್ದೀನನ ಮಗ ಕುತುಬ್ ಉದ್ದೀನ್ 1316ರಲ್ಲಿ ಮುಬಾರಕ್ ಎಂಬ ಬಿರುದಿನಿಂದ ಸುಲ್ತಾನನಾದ. (ಜಿ.ಆರ್.ಆರ್.)

**ಅವಂತೀ ದೇಶ :** ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಕೋಸಲ, ವತ್ಸ ಮತ್ತು ಮಗಧರಾಜ್ಯಗಳ ಜೊತೆಗೆ ಪಶ್ಚಿಮ ಭಾರತದಲ್ಲಿದ್ದ ಒಂದು ಪ್ರಮುಖ ರಾಜ್ಯ. ಆ ಕಾಲಕ್ಕೆ ಭಾರತದಲ್ಲಿ ಅನೇಕ ಚಿಕ್ಕ ಮತ್ತು ದೊಡ್ಡ ರಾಜ್ಯಗಳೂ ಗಣರಾಜ್ಯಗಳೂ ಇದ್ದು ರಾಜಕೀಯ ದೃಷ್ಟಿಯಿಂದ ಅದು ಅಂದಿನ ಗ್ರೀಸ್ ದೇಶವನ್ನು ಹೋಲುತ್ತಿತ್ತು. ಆ ಕಾಲದ ವಿಷಯಗಳನ್ನು ನಾವು ಜೈನ ಮತ್ತು ಬೌದ್ಧ ಗ್ರಂಥಗಳಿಂದ ತಿಳಿಯಬಹುದು.

ಅವಂತೀ ಈಗಿನ ಮಾಳವ, ನಿಮಾರ್ ಮತ್ತು ಮಧ್ಯಪ್ರದೇಶದ ನೆರೆಯಲ್ಲಿರುವ ಪ್ರದೇಶಗಳನ್ನೊಳಗೊಂಡಿತ್ತು. ರಾಜಧಾನಿಯಾದ ಉಜ್ಜಯಿನಿಯನ್ನು ಅಚ್ಯುತಗಾಮಿಯೆಂಬ ರಾಜ ಕಟ್ಟಿದ. ಅದು ಬೌದ್ಧಧರ್ಮದ ಕೇಂದ್ರಗಳಲ್ಲೊಂದಾಗಿದ್ದು ಮಹಾತಸೇನ, ಸೋಣ, ಅಭಯಕುಮಾರ ಮುಂತಾದ ಬೌದ್ಧಧರ್ಮದ ಅನುಯಾಯಿಗಳ ತವರೂರಾಗಿತ್ತು.

ಅವಂತಿ 6ನೆಯ ಶತಮಾನದ ಆದಿಯಲ್ಲಿ ಭರತನ ವಂಶಕ್ಕೆ ಸೇರಿದ ಏಳು ಮಂದಿ ಸಮಕಾಲೀನ ರಾಜರಲ್ಲಿ ಒಬ್ಬನಾದ ವಿಸಾಭುವಿನ ಆಡಳಿತಕ್ಕೆ ಒಳಪಟ್ಟಿತು. ತರುವಾಯ ಪುಲಿಕನೆಂಬುವನು ಸ್ವಾಮಿಯನ್ನು ಕೊಂದು ಮಗನಾದ ಚಂಡ ಪ್ರದ್ಯೋತ ಮಹಾಸೇನನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ. ಆತ ಗೌತಮ ಬುದ್ಧನ ಸಮಕಾಲೀನನಾಗಿದ್ದು, ಬಹು ಬಲಾಢ್ಯ ರಾಜನಾಗಿದ್ದ. ಅವನ ಕಾಲದಲ್ಲಿ ಅವಂತಿ ನೆರೆಹೊರೆಯ ರಾಜ್ಯಗಳಾದ ವತ್ಸ, ಮಗಧ ಮತ್ತು ಕೋಸಲಗಳೊಂದಿಗೆ ವೈರಭಾವದಿಂದಿತ್ತು. ವತ್ಸರಾಜನಾದ ಉದಯನ ತನ್ನ ಕಡುವೈರಿಯಾಗಿದ್ದರೂ ಪ್ರದ್ಯೋತ ಅವನ ಮೇಲೆ ದಂಡೆತ್ತಿ ಹೋಗದೆ ಉಪಾಯದಿಂದ ಅವನನ್ನು ಸೆರೆಹಿಡಿದ. ತರುವಾಯ ಅವನಿಂದ ಆನೆಗಳನ್ನು ಪಳಗಿಸುವ ವಿದ್ಯೆಯನ್ನು ಕಲಿಯಲು ತನ್ನ ಮಗಳಾದ ವಾಸವದತ್ತೆಯನ್ನು ನಿಯಮಿಸಿದ. ಆದರೆ ಕೆಲದಿನಗಳ ತರುವಾಯ ಅವರಿಬ್ಬರೂ ಪ್ರೇಮಿಗಳಾಗಿ ತಪ್ಪಿಸಿಕೊಂಡು ಓಡಿಹೋಗಿ ವಿವಾಹವಾದರು. ಈ ಕಥೆ ಬಹು ಪ್ರಸಿದ್ಧವಾಗಿದ್ದು ಬೃಹತ್ಕಥೆಯಲ್ಲಿ ಕಂಡುಬರುತ್ತದೆಯಲ್ಲದೆ, ಭಾಸಕವಿ ಈ ವಿಷಯವನ್ನಾಧರಿಸಿ ಎರಡು ಸೊಗಸಾದ ನಾಟಕಗಳನ್ನು ಬರೆದಿದ್ದಾನೆ. ಮಗಧರಾಜನಾದ ಅಜಾತಶತ್ರು ಸಹ ಪ್ರದ್ಯೋತ ತನ್ನ ರಾಜ್ಯದ ಮೇಲೆ ದಂಡೆತ್ತಿ ಬರಬಹುದೆಂದು ಶಂಕಿಸಿ ರಾಜಧಾನಿಯಾದ ರಾಜಗೃಹದ ಕೋಟೆಯನ್ನು ಬಲಪಡಿಸಿದ. ಪುರಾಣಗಳ ಪ್ರಕಾರ ಪ್ರದ್ಯೋತ ತನ್ನ ನೆರೆಹೊರೆಯ ರಾಜರನ್ನು ಅಂಕಿತದಲ್ಲಿಟ್ಟುಕೊಂಡಿದ್ದ. ಆದರೆ ಅವನು ಕ್ರೂರಿಯೂ ರಾಜನೀತಿಬಾಹಿರನೂ ಆಗಿದ್ದ.

ಪ್ರದ್ಯೋತ ಸು. 23 ವರ್ಷಗಳ ಕಾಲ ರಾಜ್ಯವಾಳಿದ. ಅವನ ತರುವಾಯ ಪಾಲಕ, ವಿಸಾಖಯುಪ, ಆರ್ಯಕ ಮತ್ತು ನದಿವರ್ಧನರು ಅನುಕ್ರಮವಾಗಿ 24, 50, 21 ಮತ್ತು 20 ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಕೊನೆಯ ರಾಜ ಶಿಶುನಾಗನಿಂದ ಸೋಲಿಸಲ್ಪಟ್ಟು ಅವಂತಿ ಮಗಧರಾಜ್ಯದಲ್ಲಿ ಲೀನವಾಯಿತು. (ಪಿ.ಎಂ.ಯು.ಎಸ್.)

**ಅವಂತೀ ನಗರ :** ಪುರಾಣಪ್ರಸಿದ್ಧವಾದ ಮುಕ್ತಿದಾಯಕ ಕ್ಷೇತ್ರ. ಈಗಿನ ಉಜ್ಜಯಿನೀ ನಗರವೇ ಇದೆಂದು ನಂಬಿಕೆ. ಇಲ್ಲಿನ ಹೆಂಗಳೆಯರು ಕಾಮಕೇಳಿ ಚತುರೆಯರೆಂದು ಬಾಲರಾಮಾಯಣ ಹೇಳುತ್ತದೆ. ಅವಂತೀನಾಥನಾದ ಉಜ್ಜಯಿನೀಮಹಾಕಾಲನ ದೇವಾಲಯ ಪುರಾಣಪ್ರಸಿದ್ಧವಾದುದು. ಅವಂತಿ ದೇಶವೆಂದೂ ಅದರಲ್ಲಿ ಉಜ್ಜಯಿನಿ ನಗರವೆಂದೂ ಇನ್ನೊಂದು ಕಲ್ಪನೆಯಿದೆ. ಮಾಳವ ದೇಶವೇ ಅವಂತಿಯೆಂದೂ ಹೇಳುವುದುಂಟು. ಇದಿರುವುದು ನರ್ಮದಾನದಿಯ ದಕ್ಷಿಣಕ್ಕೆ. ಇಲ್ಲಿಯೇ ಕೃಷ್ಣಬಲರಾಮರ ವಿದ್ಯಾಭ್ಯಾಸ ನಡೆದದ್ದು. ಅವರ ಗುರುವಾದ ಸಾಂದೀಪಿನಿಯ ಆಶ್ರಮ ಇದ್ದುದೂ ಇಲ್ಲಿಯೇ. ಮಹಾಭಾರತದ ಕಾಲದಿಂದ ಇದು ಪ್ರಸಿದ್ಧ. ಇಲ್ಲಿ ವಿಂದ–ಅನುವಿಂದ ಎನ್ನುವ ಇಬ್ಬರು ಸೋದರರು ರಾಜ್ಯವಾಳುತ್ತಿದ್ದರು. ಧರ್ಮರಾಜ ರಾಜಸೂಯಯಾಗವನ್ನು ಮಾಡುವ ಸಂದರ್ಭದಲ್ಲಿ ಸಹದೇವ ಇವರನ್ನು ಗೆದ್ದು ಕಪ್ಪಕಾಣಿಕೆಗಳನ್ನು ಪಡೆದ. ಶ್ರೀವಿಷ್ಣು ಕುಶಗಳಿದ್ದ ಈ ಸ್ಥಳದಲ್ಲಿಯೇ ಬ್ರಹ್ಮನ ಪ್ರಾರ್ಥನೆಯನ್ನು ಮನ್ನಿಸಿ ನೆಲೆಸಿದನಾಗಿ ಇದಕ್ಕೆ ಕುಶಸ್ಥಲಿ ಎನ್ನುವ ಹೆಸರಾಯಿತು. ಇದನ್ನು ಕನಕಶೃಂಗ, ವಿಶಾಲಾ, ಮಹಾಕಾಲವನ, ಪದ್ಮಾವತಿ ಎಂದೂ ಪುರಾಣಗಳಲ್ಲಿ ಕರೆದಿದ್ದಾರೆ. (ಎಸ್.ಕೆ.ಆರ್.)

**ಅವಂತೀಪುರ :** ಕಾಶ್ಮೀರದಲ್ಲಿ ಶ್ರೀನಗರದಿಂದ ಸು. 24ಕಿಮೀ ಆಗ್ನೇಯಕ್ಕೆ ಝೀಲಮ್ ನದಿಯ ಬಲದಂಡೆಯ ಮೇಲೆ ಇರುವ ಈ ಊರು ಕಾಶ್ಮೀರದ ಉತ್ಪಾಲ ವಂಶದ ಅವಂತಿವರ್ಮನಿಂದ (856–83) ಸ್ಥಾಪಿತವಾಯಿತು. ಈಗ ಇದರ ಹೆಸರು ವಂತಿಪೋರ್. ಇಲ್ಲಿ ಅವಂತೀಸ್ವಾಮಿ ಮತ್ತು ಅವಂತೀಶ್ವರ ದೇವಾಲಯಗಳಿವೆ. ಇವು ಬಹಳ ಶಿಥಿಲವಾಗಿದ್ದರೂ ಕಾಶ್ಮೀರದ ಉತ್ಪಾಲ ವಾಸ್ತುಶಿಲ್ಪಸಂಪ್ರದಾಯದ ಉತ್ತಮ ಉದಾಹರಣೆಗಳಾಗಿವೆ. ಅವಂತೀಸ್ವಾಮಿ ಗುಡಿ ವಿಷ್ಣುದೇವಾಲಯ. ಚತುರಸ್ರಾಕಾರದ ದೊಡ್ಡ ಪ್ರಾಕಾರದ ಮಧ್ಯೆ ಎತ್ತರದ ಜಗಲಿಯ ಮೇಲೆ ಮುಖ್ಯ ಗರ್ಭಗೃಹವೂ ಅದರ ನಾಲ್ಕು ಮೂಲೆಗಳಲ್ಲಿ ಸಣ್ಣ ಸಣ್ಣ ಉಪದೇವತೆಗಳ ಗುಡಿಗಳೂ ಇದ್ದು, ಇದು ಪಂಚಾಯತನ ರೀತಿಯ ಕಟ್ಟಡವಾಗಿದೆ. ಪ್ರಾಕಾರದ ಪಶ್ಚಿಮ ದಿಕ್ಕಿನಲ್ಲಿ ಮಹಾದ್ವಾರವಿದೆ. ದೇವಾಲಯದ ಗೋಡೆಗಳ ಮೇಲೆ ಸುಂದರ ಶಿಲ್ಪಗಳಿವೆ. ಅವಂತೀಶ್ವರದೇವಾಲಯವೂ ಸುಮಾರು ಇದೇ ನಮೂನೆಯಲ್ಲೇ ಇದೆ. ಈ ಎರಡು ದೇವಾಲಯಗಳಲ್ಲೂ ಗ್ರೀಕ್ ಮತ್ತು ಸಸೆನೀಯನ್ ವಾಸ್ತುಶೈಲಿಯ ಪ್ರಭಾವ ಗಮನಾರ್ಹವಾಗಿ ಕಾಣುತ್ತದೆ. (ಎಸ್.ಎನ್.)

**ಅವಂತಿಸುಂದರೀ ಕಥಾ :** ಚಿಕ್ಕ ದಂಡಿ ಎಂಬ ಸಂಸ್ಕೃತ ಕವಿ ಬರೆದನೆನ್ನಲಾದ ಗದ್ಯ ಕಾವ್ಯ. 1924ರಲ್ಲಿ ಎಂ. ಆರ್. ಕವಿ ಎಂಬುವರು ಬೆಳಕಿಗೆ ತಂದರು. ದಂಡಿಯದೆಂದು ಊಹಿಸಲಾಗಿದೆ. ಕೈ ಬರೆಹದ ಪ್ರತಿ ಹುಳುಹತ್ತಿ ಜೀರ್ಣವಾಗಿದೆ. ಅಚ್ಚು ಮಾಡಿದರೆ 25 ಪುಟಗಳಷ್ಟಾಗಬಹುದು. ಇದರಲ್ಲಿ ಕಥಾಸಾರವೆಂಬ ಕೆಲವು ಶ್ಲೋಕಗಳೂ ಇವೆ. ಇದರಿಂದ ಕೆಲವು ಹೊಸ ವಿಚಾರಗಳು ತಿಳಿದುಬಂದಿವೆ. ಕವಿಯ ವಂಶಾವಳಿ, ದಂಡಿಯ ಪೂರ್ವದ ಕೆಲವು ಕವಿಗಳ ಹೆಸರುಗಳು ಇಲ್ಲಿ ಉಕ್ತವಾಗಿವೆ. ಈ ಕಥೆಯನ್ನು ನಂಬುವುದಾದರೆ ದಂಡಿ ಭಾರವಿಯ ಮರಿಮೊಮ್ಮಗನಾಗುತ್ತಾನೆ. ಕೌಶಿಕಗೋತ್ರದ ಒಂದು ಬ್ರಾಹ್ಮಣ ಮನೆತನದವರು ಮೂಲತಃ ಆನಂದಪುರ ನಿವಾಸಿಗಳಿದ್ದು ಅಲ್ಲಿಂದ ಅಚಲಪುರಕ್ಕೆ ಬಂದು ನೆಲೆಸಿದರು. ನಾರಾಯಣನ ಮಗ ದಾಮೋದರ. ಕಿರಾತಾರ್ಜುನೀಯ ಕರ್ತೃ ಭಾರವಿಯ ಮಗ ಮನೋರಥ. ಅವನ ಮಗ ವೀರದತ್ತ. ವೀರದತ್ತ ಮತ್ತು ಗೌರಿಯರ ಮಗ ದಂಡಿ. ಭಾರವಿ ಗಂಗರಾಜ ದುರ್ವಿನೀತನ ಮಿತ್ರನೆಂದೂ ಆಮೇಲೆ ಪಲ್ಲವರಾಜ ಕಾಂಚಿಯ ಅರಸು ಸಿಂಹವಿಷ್ಣುವಿನ ಆಸ್ಥಾನದಲ್ಲಿದ್ದನೆಂದೂ ತಿಳಿದಿದೆ. ಚಿಕ್ಕಂದಿನಲ್ಲಿ ತಾಯಿತಂದೆಗಳನ್ನು ಕಳೆದುಕೊಂಡು, ಭಾರತದ ಉದ್ದಕ್ಕೂ ತಿರುಗಾಡಿ ಕೊನೆಗೆ ತನ್ನ ಪೂರ್ವಜರಿಗೆ ಆಶ್ರಯವನ್ನಿತ್ತ ಪಲ್ಲವ ರಾಜಾಸ್ಥಾನಕ್ಕೆ ಬಂದನೆಂದು ತಿಳಿಯುತ್ತದೆ. ಒಂದು ದಿನ ಮಹಾಮಲ್ಲಪುರದಲ್ಲಿರುವ ಗುಡಿಯಲ್ಲಿ ತ್ರಿವಿಕ್ರಮ ಮೂರ್ತಿಯ ತೋಳೊಂದು ಮುರಿದಂತೆ ಕಂಡಿತು. ಶಿಲ್ಪ ಕಲಾಕುಶಲನಾದ ದಂಡಿ ಪರೀಕ್ಷಿಸುವಾಗ್ಗೆ ಸಮುದ್ರದ ತೆರೆಯೊಡನೆ ಬಂದ ಕಮಲವೊಂದು ಮೂರ್ತಿಯ ಪಾದವನ್ನು ಮುಟ್ಟಲು ಒಬ್ಬ ವಿದ್ಯಾಧರ ಪ್ರತ್ಯಕ್ಷನಾದನಂತೆ. ಈ ಆಶ್ಚರ್ಯವನ್ನು ಕಂಡು ಇದರ ಯಥಾರ್ಥವನ್ನು ತಿಳಿಯಲು ದಂಡಿ ಕಾಂಚಿಗೆ ಬಂದು ತಪಸ್ಸು ಮಾಡಲಾಗಿ ಅವಂತಿಸುಂದರಿಯ ಕಥೆ ಅವನಿಗೆ ಹೊಳೆಯಿತಂತೆ. ಇದು ಕಥೆಗೆ ಪೂರ್ವಭಾವಿಯಾದ ವಿಷಯ. ಈ ವಿಷಯದಲ್ಲಿ ಇನ್ನೂ ಸಂಶೋಧನೆಯಾಗಬೇಕಾಗಿದೆ. ಇದು ಕಳೆದು ಹೋದ ದಶಕುಮಾರಚರಿತದ ಪೂರ್ವಪೀಠಿಕೆಯಾಗಿರಬಹುದೆಂದು ಎಂ. ಆರ್. ಕವಿ ಭಾವಿಸುತ್ತಾರೆ. (ಎ.ಎಲ್.ಎಚ್.)

**ಅವಕಾಶಸಮಾನತೆ, ಶಿಕ್ಷಣದಲ್ಲಿ :** ಶಿಕ್ಷಣಕ್ಷೇತ್ರದಲ್ಲಿ ಜನ್ಮ, ಜಾತಿ, ಸಂಪತ್ತು ಅಥವಾ ಇನ್ನು ಯಾವುದೇ ಕಾರಣಗಳಿಂದ ಯಾವುದೇ ಜನಾಂಗಕ್ಕೆ ಇರುವ ವಿಶೇಷ ಅವಕಾಶ ಅಥವಾ ಅನುಕೂಲತೆಗಳನ್ನು ತೆಗೆದುಹಾಕುವುದೇ ಸಮಾನತಾ ತತ್ತ್ವದ ಮುಖ್ಯ ಉದ್ದೇಶ. ಬುದ್ಧಿಶಕ್ತಿ, ವಿದ್ಯಾರ್ಹತೆ, ಶಕ್ತಿ ಸಾಮರ್ಥ್ಯಗಳು, ಪ್ರತಿಭೆ, ಕ್ರಿಯಾಸಾಮರ್ಥ್ಯ ಈ ದೃಷ್ಟಿಯಿಂದ ಒಬ್ಬೊಬ್ಬರಿಗೂ ವ್ಯತ್ಯಾಸವುಂಟು. ಸಮಾಜದಲ್ಲೂ ಒಬ್ಬೊಬ್ಬನ ಯೋಗ್ಯತೆ, ಆದಾಯ, ವ್ಯವಹಾರಗಳಲ್ಲಿ ಭೇದವಿದೆ. ಆದರೆ ಯಾವುದೇ ಕಾರಣದಿಂದಾಗಲೀ ಶಿಕ್ಷಣಾವಕಾಶಗಳನ್ನು ಏರ್ಪಡಿಸುವಾಗ ವ್ಯಕ್ತಿ ವ್ಯಕ್ತಿಗೆ ಭೇದ ತೋರಿಸಬಾರದು. ಯಾವ ಭೇದಭಾವವನ್ನೂ ಮಾಡದೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯ. ವೈಜ್ಞಾನಿಕ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ರಂಗಗಳಲ್ಲಿ ಸರಿಯಾದ ತರಬೇತಿಯನ್ನು ಕೊಟ್ಟು ಎಲ್ಲರೂ ಸ್ವತಂತ್ರರಾಗಿ ಜೀವನ ನಿರ್ವಹಣೆ ಮಾಡುವಂತಾಗಬೇಕು. ಎಲ್ಲರಿಗೂ ಒಂದೇ ರೀತಿಯ ಅವಕಾಶಗಳನ್ನು ಒದಗಿಸಿಕೊಟ್ಟು, ಒಂದೇ ಪ್ರಕಾರದ ತರಬೇತಿಯನ್ನು ಕೊಟ್ಟು ಎಲ್ಲರನ್ನೂ ಸಿರಿವಂತರನ್ನಾಗಿ, ಸಾಹಿತಿಗಳನ್ನಾಗಿ ಇಲ್ಲವೆ ವಿಜ್ಞಾನಿಗಳನ್ನಾಗಿ ಪರಿವರ್ತಿಸುವುದು ಉದ್ದೇಶವಲ್ಲ. ವಿವಿಧ ಗುಣಧರ್ಮಗಳಿಂದ ತುಂಬಿದ ಮಾನವ ಸಮಾಜದಲ್ಲಿ ಇದು ಸಾಧ್ಯವೂ ಅಲ್ಲ. ಆದರೆ ಯಾವುದೇ ರಂಗದಲ್ಲಿ ಯಾವುದೇ ಕಾರಣಗಳಿಂದ ಮಾನವ–ಮಾನವನಲ್ಲಿ ಭೇದಭಾವವನ್ನು ಕೃತಕರೀತಿಯಲ್ಲಿ ಕಲ್ಪಿಸದೆ, ಅವನ ಆವಶ್ಯಕತೆಗಳನ್ನು ಪೂರೈಸಿ ಅವನ ಹಿತಾಸಕ್ತಿಗಳನ್ನು ರಕ್ಷಿಸುವುದು ಸರ್ಕಾರದ ಮತ್ತು ಸಮಾಜದ ಆದ್ಯಕರ್ತವ್ಯ. ಹಾಗೆಂದ ಮಾತ್ರಕ್ಕೆ ಉನ್ನತ ವ್ಯಾಸಂಗಕ್ಷೇತ್ರದಲ್ಲಿ ಅನರ್ಹರಿಗೂ ಸ್ಥಾನವಿರಬೇಕೆಂದಲ್ಲ. ಅಧಿಕಾರ **(ನೋಡಿ)** ಇದ್ದವನಿಗೆ ಮಾತ್ರ ವಿದ್ಯೆ ಎಂಬುದನ್ನು ನೆನಪಿನಲ್ಲಿಡಬೇಕು. ಇದೊಂದೇ ಶಿಕ್ಷಣಕ್ಷೇತ್ರದಲ್ಲಿ ಅವಕಾಶ ಹಂಚಿಕೆಯ ಧ್ಯೇಯವಾಗಿರಬೇಕು. ಉಳಿದ ಯಾವ ಕಾರಣಕ್ಕಾಗಿಯೂ ಯಾರಿಗೂ ಅದನ್ನು ಇಲ್ಲವೆನ್ನಲಾಗದು.

ಆದ್ದರಿಂದ ಅವರವರ ಯೋಗ್ಯತೆಗನುಗುಣವಾಗಿ, ಅವರ ಗುಣಲಕ್ಷಣ ಮತ್ತು ಒಲವುಗಳು ಪೂರ್ಣವಾಗಿ ಅಭಿವೃದ್ಧಿಗೊಳ್ಳುವಂತೆ ಎಲ್ಲರಿಗೂ ಸಾಕಷ್ಟು ಸರಿಯಾದ ಅವಕಾಶಗಳನ್ನು ಇಲ್ಲವೆ ಅನುಕೂಲತೆಗಳನ್ನು ಒದಗಿಸುವುದೇ ಇದರಲ್ಲಿ ಅಡಗಿರುವ ಮುಖ್ಯ ತತ್ತ್ವ. (ಎಸ್.ಬಿ.ಕೆ.)

**ಅವಚ್ಛೇದಕಾಂಶಗಳು :** ಉಕ್ತಿಗಳ ವಿಶ್ಲೇಷಣೆಯಲ್ಲಿ ಬಳಸುವ ಮೂಲ ಘಟಕಾಂಶಗಳು (ಡಿಸ್ಟಿಂಕ್ಟಿವ್ ಫೀಚರ್ಸ್).

ಯಾವ ಉಕ್ತಿಯನ್ನು ವಿಶ್ಲೇಷಿಸಬೇಕಾದರೂ ಧ್ವನಿಗಳ ಹಾಗೂ ವ್ಯಾಕರಣ ರೂಪಗಳ ಮಟ್ಟಗಳೆರಡರ ಮೇಲೂ ಭಾಷಾವಿಜ್ಞಾನಿಯ ದೃಷ್ಟಿಯಿರಬೇಕು. ಸ್ವರ ವ್ಯಂಜನ ಸಂಕೇತಗಳನ್ನೊಳಗೊಂಡ ವರ್ಣಮಾಲೆಯ ನೆರವಿನಿಂದ ಆ ಉಕ್ತಿಯನ್ನು ಬರೆದರೆ, ಅದು ಮೂಲ ಧ್ವನಿಘಟಕಗಳ ಸರಣಿ ಎಂದು ಪರಿಗಣಿತವಾದಂತಾಗುತ್ತದೆ. ಧ್ವನಿಮಾಶಾಸ್ತ್ರ ಬಳಸುವ ವಿಶ್ಲೇಷಣೆ ಸೂಕ್ಷ್ಮತರವಾದಂತೆಲ್ಲ ಧ್ವನಿಮಾಗಳನ್ನೂ ಮತ್ತಷ್ಟು ಸಣ್ಣ ಘಟಕಗಳನ್ನಾಗಿ ಒಡೆಯಲು ಸಾಧ್ಯವಿದೆ ಎಂಬುದನ್ನು ಭಾಷಾವಿಜ್ಞಾನಿಗಳು ಕಂಡುಕೊಂಡರು. ಉದಾ: ಕನ್ನಡದ ಮ್ ಎಂಬ ಧ್ವನಿಮಾ ಓಷ್ಠ್ಯ, ನಾಸಿಕ್ಯ ಇತ್ಯಾದಿಯಾಗಿ ವರ್ಗೀಕರಣಗೊಳ್ಳಿದೆ ಓಷ್ಠ್ಯತ್ವ, ನಾಸಿಕ್ಯತ್ವ ಮುಂತಾದ ಧ್ವನ್ಯಂಶಗಳ ಒಂದು ಗ್ರಂಥಿಯೆಂದೂ ಕನ್ನಡದ ಪ್, ಬ್ ಮುಂತಾದ ಧ್ವನಿಮಾಗಳು ಇದೇ ರೀತಿಯ, ಆದರೆ ಬೇರೆ ಬೇರೆ ರೀತಿಯಲ್ಲಿ ಜೋಡಣೆಗೊಂಡ ಧ್ವನ್ಯಂಶಗಳ ಗ್ರಂಥಿಗಳೆಂದೂ ಪರಿಗಣಿತವಾಗುವುದರಲ್ಲೂ ಔಚಿತ್ಯವುಂಟು. ಆದುದರಿಂದ, ಉಕ್ತಿಗಳನ್ನು ಧ್ವನಿಗಳ ಹಾಗೂ ಧ್ವನಿಮಾಗಳ ದೃಷ್ಟಿಯಿಂದ ವಿಶ್ಲೇಷಿಸುವಾಗ, ಧ್ವನಿಮಾಗಳಿಗಿಂತಲೂ ಹೆಚ್ಚಾಗಿ ಅವಚ್ಛೇದಕಾಂಶಗಳನ್ನೇ ಮೂಲ ಘಟಕಗಳನ್ನಾಗಿ ಪರಿಗಣಿಸುವುದು ಈಚೀಚೆಗೆ ರೂಢಿಗೆ ಬರುತ್ತಿದೆ.

ಅವಚ್ಛೇದಕಾಂಶಗಳ ಬಗ್ಗೆ ಈಗ ವಾದವಿವಾದಗಳು ನಡೆಯುತ್ತಿವೆ. ವಾದಗ್ರಸ್ತವಾಗಿರುವ ವಿಷಯಗಳಲ್ಲಿ ಮುಖ್ಯವಾದುದು ಇದು: ಅವಚ್ಛೇದಕಾಂಶಗಳನ್ನು ಯಾವ ಆಧಾರದ ಮೇಲೆ ನಿರ್ಧರಿಸಬೇಕು? ಭಾಷಾ ಧ್ವನಿಗಳನ್ನು ಉತ್ಪತ್ತಿ ಮಾಡುವ ಉಚ್ಚಾರಣಾ ಯಂತ್ರದ ಆಧಾರದ ಮೇಲೋ? ಓಷ್ಠ್ಯ, ನಾಸಿಕ್ಯ ಮುಂತಾಗಿ ಧ್ವನಿಗಳನ್ನು ವರ್ಗೀಕರಿಸುವ ಮೊದಲ ವಿಧಾನದ ಪರವಾಗಿ ಹೀಗೆ ವಾದಿಸಬಹುದು: ಈ ರೀತಿಯ ವರ್ಗೀಕರಣ ಬಹಳ ದಿನಗಳಿಂದಲೂ ಸುಪರಿಚಿತವಾಗಿದ್ದು, ಬಳಸುವುದಕ್ಕೂ ಭಾಷೆಗಳನ್ನು ಕಲಿಸುವುದಕ್ಕೂ ವ್ಯವಹಾರಕ್ಕೂ ಸುಲಭ. ಎರಡನೆಯ ವಿಧಾನದ ಪರವಾದ ವಾದ ಹೀಗೆ: ಇತರರು ಕೇಳಲೆಂದೇ ನಾವು ಮಾತಾಡುವುದರಿಂದ, ಕೇಳುಗನ ದೃಷ್ಟಿಯಿಂದ ಈ ವಿಧಾನ ಹೆಚ್ಚು ಸೂಕ್ತ. ಈ ರೀತಿಯ ವರ್ಗೀಕರಣ ಹೆಚ್ಚು ವೈಜ್ಞಾನಿಕವಾದುದು ಎಂದು ತೋರುತ್ತದೆ. ಈ ಸಂಬಂಧವಾದ ಭೌತವಿಜ್ಞಾನದ ವಿಶ್ಲೇಷಣೆಗೆ ಬೆಲೆ ಬರುವುದು ಶಬ್ದಗ್ರಹಣಕ್ಕೆ ಸಂಬಂಧಿಸಿದ ಮನೋವಿಜ್ಞಾನದ ಸಂಪರ್ಕ ಒದಗಿದಾಗ ಮತ್ತು ಶಬ್ದಗ್ರಹಣವೂ ಶಬ್ದೋತ್ಪತ್ತಿಯೂ ನಿಕಟಸಂಬಂಧವುಳ್ಳವುಗಳು ಎಂಬುದನ್ನು ಗಮನಿಸಿದಾಗ. ಆದ್ದರಿಂದ ಇವೆರಡು ವಿಧಾನಗಳಿಂದಲೂ ಭಾಷಾವಿಜ್ಞಾನಿಗಳಿಗೆ ಪ್ರಯೋಜನವುಂಟೆಂದು ಹೇಳಬಹುದು. ಶಬ್ದಶಕ್ತಿ ಭಿನ್ನಭಿನ್ನ ಕಂಪನ ವೇಗಗಳಲ್ಲಿ ಹೇಗೆ ವಿತರಣೆಯಾಗುತ್ತದೆ ಎಂಬುದರ ಆಧಾರದ ಮೇಲೆ ಅವಚ್ಛೇದಕಾಂಶಗಳನ್ನು ಇಂಥಿಂಥ ಉಚ್ಚಾರಣಾತ್ಮಕ ಅಂಶಗಳಿಗೆ ಇಂಥಿಂಥ ಶಾಬ್ದಿಕ (ಅಕೌಸ್ಟಿಕ್) ಅಂಶಗಳ ತಾಳೆಯಾಗುತ್ತದೆ ಎಂದು ಸಾಕಷ್ಟು ಸುಲಭವಾಗಿ ಹೇಳಬಹುದು. (ಎ.ಆರ್.ಕೆ.)

**ಅವತಂಸ :** ಒಂದು ಕರ್ಣಾಭರಣ ಅವತಂಸವೆಂದರೆ ಕರ್ಣಪೂರವೆಂದಾಗುವುದು. ಕಿವಿಯಲ್ಲಿ ಮಾತ್ರ ಧರಿಸುವ ಆಭರಣವಿದು. ಇಲ್ಲಿ ತಾಳೆ ಹೂ, ಕಮಲ, ಕನ್ನೈದಿಲೆ, ಪಾರಿಜಾತ, ಶಿರೀಷ, ಅಶೋಕ ಮೊದಲಾದ ಪುಷ್ಪಗಳ ಬಳಕೆಯಾಗುತ್ತಿತ್ತು. ಅಂದರೆ

ಇದು ಹೂವಿನ ತೊಡವು. ಅಗಲಹೂವಾದರೆ ಒಂದೇ ಹೂವನ್ನು ಧರಿಸುತ್ತಿದ್ದರು. ಸಣ್ಣವಾದರೆ ಹೂಗೊಂಚಲನ್ನೇ ಧರಿಸುತ್ತಿದ್ದರು ಪುಷ್ಪಗಳನ್ನು ಧರಿಸುತ್ತಿದ್ದ ರೀತಿಯಲ್ಲೇ ಕಿವಿಯ ತುದಿಯಲ್ಲಿ ದಪ್ಪ ಮುತ್ತುಗಳ ಮೊಗ್ಗನ್ನೂ ಧರಿಸುತ್ತಿದ್ದರು. ಚಿನ್ನದ ಸುರುಳಿಯನ್ನೂ ತಾಳೆಯ ಗರಿಯಂತೆ ಉಪಯೋಗಿಸುತ್ತಿದ್ದರು. (ಎಸ್.ಎನ್.ಕೆ.)

**ಅವತಾರ :** ಎಂದರೆ ದೇವರು ಭೂಮಿಗೆ ಇಳಿದು ಬರುವುದು. ಹರಿವಂಶದ ಪ್ರಕಾರ ಇದಕ್ಕೆ ಪ್ರಾದುರ್ಭಾವವೆಂದು ಹೆಸರು. ನಿಗೂಢ ಹಾಗೂ ಅವ್ಯಕ್ತವಾದದ್ದು ವ್ಯಕ್ತವಾಗುವುದು ಎಂದು ಇದಕ್ಕೆ ಅರ್ಥ. ಪಕ್ಷಿ, ಮೃಗ, ಮನುಷ್ಯ ರೂಪಗಳಲ್ಲಿ ಹುಟ್ಟಿ ಬಂದು ದೇವರು ಉದ್ಧಾರದ ಕೆಲಸಗಳನ್ನು ಮಾಡುತ್ತಾನೆಂಬುದು ಈ ಕಲ್ಪನೆಯ ಸಾರಾಂಶ. ಹಿಂದೂಧರ್ಮದಲ್ಲಿ ಈ ಕಲ್ಪನೆಗೆ ಪ್ರಾಶಸ್ತ್ಯವಿದೆ. ಇತಿಹಾಸ ಪುರಾಣಗಳಲ್ಲಿ, ರಾಮ ಕೃಷ್ಣಾದಿ ಅವತಾರಗಳಲ್ಲಿ ನಂಬಿಕೆಯುಳ್ಳ ವೈದಿಕ ಪಂಥಗಳಲ್ಲಿ ಈ ಭಾವನೆ ಪ್ರಧಾನಸ್ಥಾನ ಪಡೆದಿದೆ. ಭಗವದ್ಗೀತೆ, ಹರಿವಂಶಗಳಲ್ಲಿ ಉತ್ತಮ ನಿದರ್ಶನಗಳನ್ನೂ ಕಾಣಬಹುದು. ಇದು ಶಿವಾದಿ ಸಕಲ ದೇವತೆಗಳ ವಿಷಯಕ್ಕೂ ಅನ್ವಯಿಸುತ್ತದೆ.

ಅಚಿಂತ್ಯಾತ್ಮಕವಾದ ಭಗವಂತ ವೈಕುಂಠದಲ್ಲಿರುತ್ತಾನಾದರೂ ಭೂಲೋಕಕ್ಕೆ ಭಕ್ತಾದಿಗಳ ಅನುಗ್ರಹಕ್ಕಾಗಿ ಅವತರಿಸಿ ಬರುತ್ತಾನೆ. ಧರ್ಮಕ್ಕೆ ಗ್ಲಾನಿ ಸಂಭವಿಸಿದಾಗ, ಅಧರ್ಮವನ್ನು ಮೂಲೋತ್ಪಾಟನೆ ಮಾಡಲು, ಧರ್ಮವನ್ನು ಪುನರುಜ್ಜೀವನಗೊಳಿಸಲು ಆತ ಅವತರಿಸುತ್ತಾನೆ (ಗೀತೆ). ಸಾಧುಗಳ ಪರಿತ್ರಾಣಕ್ಕಾಗಿ, ದುಷ್ಕರ್ಮಿಗಳ ವಿನಾಶಕ್ಕಾಗಿ, ಧರ್ಮ ಸಂಸ್ಥಾಪನಾರ್ಥವಾಗಿ ಯುಗಯುಗದಲ್ಲೂ ಹುಟ್ಟಿಬರುತ್ತಾನೆ (ಗೀತೆ).

ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ , ಬುದ್ಧ ಮತ್ತು ಕಲ್ಕಿ ಇವು ವಿಷ್ಣುವಿನ ದಶ ಅವತಾರಗಳು. ರಾಮಾವತಾರ, ಕೃಷ್ಣಾವತಾರಗಳು ಹೆಚ್ಚು ಖ್ಯಾತವಾಗಿವೆ. ಈ ಒಂದೊಂದು ಅವತಾರದಲ್ಲೂ ದೇವರು ಹೇಗೆ ಅಧರ್ಮವನ್ನು ತಡೆದು ಧರ್ಮವನ್ನು ಊರ್ಜಿತಗೊಳಿಸಿದನೆಂಬ ವಿಷಯ ಸೊಗಸಾಗಿ ನಿರೂಪಣೆಗೊಂಡಿದೆ.

ಈ ಅವತಾರಗಳು ನೇರವಾಗಿ ದೇವರೇ ತಾಳುವ ರೂಪಗಳು. ಇವಲ್ಲದೆ ಕೆಲವು ಅವತಾರಗಳು ಅಂಶಾವತಾರಗಳೆನಿಸಿಕೊಳ್ಳುತ್ತವೆ. ಕೆಲವು ಅವತಾರಗಳನ್ನು ದೇವಾಂಶಸಂಭೂತವೆಂದು ಕರೆಯಲಾಗಿದೆ. ಹನುಮಂತ ವಾಯುದೇವರ ಅಂಶ.

ಅವತಾರದ ಕಲ್ಪನೆ ಭಾರತೀಯರ ಮನಸ್ಸಿನಲ್ಲಿ ಎಷ್ಟರಮಟ್ಟಿಗೆ ರೂಢಿಸಲ್ಪಟ್ಟಿದೆ ಎಂದರೆ ಯಾರಲ್ಲಿ ವಿಶೇಷವಾದ ದೈವೀಗುಣಗಳನ್ನು ಕಾಣುತ್ತಾರೆಯೋ ಅವರನ್ನು ಜನ ಅವತಾರ ಪುರುಷರೆಂದು ನಂಬುತ್ತಾರೆ. ಅನೇಕ ಸಾಧುಸಂತರನ್ನು, ಆಚಾರ್ಯ ಮಹಾನುಭಾವರನ್ನು ದೇವರ ಅವತಾರಗಳೆಂದೂ ಅಂಶಪುರುಷರೆಂದೂ ನಂಬುವುದು ವಾಡಿಕೆಯಾಗಿದೆ.

ವಿಷ್ಣು ತಾನು ಅವತಾರ ಮಾಡುವುದಲ್ಲದೆ ತನ್ನ ಪರಿವಾರದವರನ್ನೂ ತನ್ನೊಡನೆ ಅವತಾರ ಮಾಡಿಸುತ್ತಾನೆ ಎಂಬುದು ಇನ್ನೊಂದು ನಂಬಿಕೆ. ಲಕ್ಷ್ಮಿ ರಾಮಾವತಾರದಲ್ಲಿ ಸೀತೆಯಾಗಿ ಹುಟ್ಟುತ್ತಾಳೆ. ಶ್ರೀಕೃಷ್ಣನಲ್ಲಿ ಅನುರಕ್ತರಾದ ಗೋಪಿಕೆಯರು ರಾಮಾವತಾರದ ಋಷಿಗಳು ಎಂದು ಹೇಳಲ್ಪಟ್ಟಿದೆ.

ಶ್ರೀರಾಮಾನುಜರು ಆದಿಶೇಷನ ಅವತಾರವೆಂದು ಶ್ರೀವೈಷ್ಣವರು ನಂಬುತ್ತಾರೆ.

ವೈಷ್ಣವಧರ್ಮದಲ್ಲಿ ಈ ಅವತಾರಗಳ ವಿಗ್ರಹಗಳನ್ನು ಪೂಜಿಸುವ ವಾಡಿಕೆಯಿದೆ. ಈ ವಿಗ್ರಹಗಳನ್ನು ಅರ್ಚಾವತಾರವೆಂದು ಪಾಂಚರಾತ್ರಾಗಮಗಳಲ್ಲಿ ಕರೆದಿದೆ. ಭಗವಂತನ ಅವತಾರಗಳಲ್ಲಿ ಅರ್ಚಾವತಾರ ಅತಿ ಸ್ಥೂಲವಾದದ್ದು. ಇಂದ್ರಿಯಗಳಿಗೆ ಇಷ್ಟಪಟ್ಟಾಗ ಗೋಚರವಾಗಬಲ್ಲ ಅವತಾರ ಇದು. ಭಗವಂತನ ಸೌಲಭ್ಯ ಭಕ್ತ ಪರಾಧೀನತೆಯನ್ನು ಇದು ಸ್ಪಷ್ಟಪಡಿಸುತ್ತದೆಂದು ಇದಕ್ಕೆ ಸಂಬಂಧಪಟ್ಟ ಶಾಸ್ತ್ರಗಳು ವಿವರಿಸುತ್ತವೆ. ಅರ್ಚಾವತಾರದ ಪ್ರಯೋಜನಗಳನ್ನು ಮೂರು ವಿಧವಾಗಿ ವರ್ಣಿಸಿದೆ. ಅವು ರುಚಿಜನಕತ್ವ, ಶುಭಾಶ್ರಯತ್ವ, ಸೌಲಭ್ಯ. ರುಚಿಜನಕತ್ವ ಎಂದರೆ ಭಗವಂತನ ಕಡೆಗೆ ಮನಸ್ಸನ್ನು ಸ್ಥಿರಗೊಳಿಸಲು ಸಹಾಯ ಮಾಡುವ ಬಿಂಬ. ಸೌಲಭ್ಯ ಅಂದರೆ ಅದೃಶ್ಯನೂ ಅತಿಸೂಕ್ಷ್ಮನೂ ಆದ ದೇವರನ್ನು ತಮ್ಮ ಸಮೀಪಕ್ಕೆ ಬರಮಾಡಿಕೊಳ್ಳುವ ಸಾಧನ. ನಾವು ಪೂಜಿಸುವ ಈ ಅರ್ಚಾಮೂರ್ತಿಗಳು ಪರಮಾತ್ಮನ ಪ್ರತೀಕಗಳು ಮಾತ್ರ, ಇವುಗಳ ಪೂಜೆಯನ್ನು ಪ್ರತೀಕೋಪಾಸನೆ ಎಂದು ಕರೆದಿದೆ. ಪ್ರತಿಮೆಗಳ ಸ್ವರೂಪ, ಪ್ರಮಾಣ, ಲಾಸ್ಯ, ವಿನ್ಯಾಸಗಳು ಆಯಾ ದೇವತೆಗಳಿಗೆ ನಿರ್ದಿಷ್ಟವಾಗಿವೆ.

ಶೈವ, ವೀರಶೈವರಲ್ಲಿ ಕೂಡ ನಂದಿ, ಭೃಂಗಿ, ಸ್ಕಂದ, ವೀರಭದ್ರ, ಪಾರ್ವತಿ ಮೊದಲಾದವರು ಭೂಮಿಯಲ್ಲಿ ಅವತರಿಸಿದಂತೆ ಕಥೆಗಳಿವೆ. ಉದಾಹರಣೆಗೆ, ಬಸವೇಶ್ವರ ನಂದಿಯ, ಸಿದ್ಧರಾಮ ಭೃಂಗಿಯ, ಅಕ್ಕಮಹಾದೇವಿ ಪಾರ್ವತಿಯ, ಮಾಚಿದೇವ ವೀರಭದ್ರನ, ಚೆನ್ನಬಸವ ಷಣ್ಮುಖನ ಅವತಾರವೆಂದು ವೀರಶೈವಪುರಾಣಗಳಲ್ಲಿ ಹೇಳಿದೆ. (ಎಂ.ವೈ.)

**ಅವದಾನಗಳು :** ಬೌದ್ಧರ ಸಂಸ್ಕೃತ ಸಾಹಿತ್ಯದಲ್ಲಿನ ಒಂದು ಪ್ರಕಾರ. ಅವದಾನ (ಪಾಳಿಯಲ್ಲಿ ಅಪದಾನ) ಎಂದರೆ ಅದ್ಭುತ ಕಾರ್ಯವೆಂದರ್ಥ. ಯಾವುದಾದರೂ ಕೆಲಸದಿಂದ ಧರ್ಮದ ಹೆಚ್ಚಳ ಪ್ರಕಟವಾದರೆ, ನೀತಿಯ ಅಥವಾ ಸಂಯಮದ ಹಿರಿಮೆ ವ್ಯಕ್ತವಾದರೆ ಅದು ಅವದಾನವೆನಿಸಿಕೊಳ್ಳುತ್ತದೆ. ಇದು ಬೌದ್ಧ ವಾಙ್ಮಯದಲ್ಲಿ ಕಥೆಗಳ ರೂಪ ತಳೆಯುತ್ತದೆ. ಇಂಥ ವೀರ್ಯದ್ಯೋತಕ, ಧರ್ಮ ಪ್ರಸಕ್ತ ಕಥೆಗಳು ವಿನಯಪಿಟಕದಲ್ಲೂ ಸೂತ್ರಪಿಟಕದಲ್ಲೂ ಇವೆ. ಇಲ್ಲಿ ಕಥೆಗಳೂ ಉಪದೇಶಗಳ ಕೆಲಸ ಮಾಡುತ್ತವೆ. ಇಂಥ ಕಥೆಗಳನ್ನು ಮುಂದಿನ ಬೌದ್ಧ ಸಂಸ್ಕೃತ ಸಾಹಿತ್ಯದಲ್ಲಿ ಗುಚ್ಛಗಳಾಗಿ ಸಂಗ್ರಹಿಸಿದರು. ಇದಕ್ಕೆ ಅವದಾನ ವಾಙ್ಮಯವೆಂದು ಹೆಸರು. ಇದು ಹೀನಯಾನ ಮಹಾಯಾನಗಳಿಗೆ ಸಾಧಾರಣವಾದದ್ದು.

ಸಾಮಾನ್ಯವಾಗಿ ಅವದಾನಗಳಲ್ಲಿ ಪೂರ್ವಕಥೆ ಅಥವಾ ಸಂದರ್ಭ (ಅತೀ ವಸ್ತು), ಈಗಿನ ವೃತ್ತಾಂತ (ಪ್ರತ್ಯುತ್ಪನ್ನ ವಸ್ತು) ಮತ್ತು ತಾತ್ಪರ್ಯಗಳೆಂಬ (ಸಮಾಧಾನ) ಮೂರು ವಿಭಾಗಗಳಿರುತ್ತವೆ. ಇಲ್ಲಿನ ಕಥಾನಾಯಕ ಬೋಧಿಸತ್ವನಾಗಿದ್ದರೆ ಅವದಾನ ಜಾತಕದಂತೆಯೇ ಇರುತ್ತದೆ. ಬುದ್ಧನೇ ಹೇಳಿದಂತೆ ಈ ಅವದಾನಗಳು ಉಳಿದಿವೆ. ತಾತ್ಪರ್ಯವಿಭಾಗದಲ್ಲಿ ಬುದ್ಧ ಈ ಪ್ರಸಂಗದಿಂದ ಸಿದ್ಧವಾಗುವ ನೀತಿಯನ್ನು ವಿವರಿಸುತ್ತಾನೆ. ಕೆಲವೆಡೆ ನೀತಿನಿರೂಪಣೆಗೆ ಬದಲಾಗಿ ನಡೆದ ಕರ್ಮಗಳಿಗೆ ಮುಂದೆ ಒದಗುವ ಫಲವನ್ನು ಹೇಳುವುದೂ ಉಂಟು. ಹೀಗೆ ಭವಿಷ್ಯವನ್ನು ಹೇಳುವ ಅವದಾನಗಳಿಗೆ ವ್ಯಾಕರಣವೆಂದೂ ಹೆಸರಿದೆ. ಇಲ್ಲಿ ವ್ಯಾಕರಣವೆಂದರೆ ವಿವರಣೆ.

ಅವದಾನಗಳಲ್ಲಿ ಅವದಾನಶತಕವೆಂಬುದು ಅತಿ ಪ್ರಾಚೀನವಾದ ನೂರು ಕಥೆಗಳ ಸಂಗ್ರಹ. 3ನೆಯ ಶತಮಾನದ ಪೂರ್ವಾರ್ಧದಲ್ಲೇ ಚೀನಿ ಭಾಷೆಗೆ ಅನುವಾದಿಸಲ್ಪಟ್ಟ ಈ ಕಥಾಗುಚ್ಛ ಹೀನಯಾನ ಸಂಪ್ರದಾಯಕ್ಕೆ ಸೇರಿದಂತೆ ತೋರುತ್ತದೆ. ಮೊದಲ 10 ಕಥೆಗಳ ವರ್ಗ ಬುದ್ಧನಾಗುವ ಅಥವಾ ಪ್ರತ್ಯೇಕಬುದ್ಧನಾಗುವ ಬಗೆ ಹೇಗೆಂದು ಹೇಳುತ್ತದೆ. ಉಳಿದವು ಜಾತಕ ಕಥೆಗಳು. 5ನೆಯ ವರ್ಗದಲ್ಲಿ ಭೂತಪ್ರೇತಗಳಿಗೆ ಸಂಬಂಧಿಸಿದ ಕಥೆಗಳಿವೆ. ಕರ್ಮಶತಕವೆಂಬುದು ಇನ್ನೊಂದು ಪ್ರಾಚೀನ ಕಥಾಸಂಗ್ರಹ. ಇಂದು ಇದು ಟಿಬೆಟನ್ ಭಾಷೆಯಲ್ಲಿ ಮಾತ್ರ ಉಪಲಬ್ಧವಿದೆ. ದಿವ್ಯಾವದಾನ (ನೋಡಿ) ಮತ್ತೊಂದು ಪ್ರಸಿದ್ಧವಾದ ಗ್ರಂಥ. ದ್ವಾವಿಂಶತ್ಯವದಾನ (ಇಪ್ಪತ್ತೆರಡು ಅವದಾನಗಳು) ಅವದಾನಶತಕದಿಂದಲೇ ಬಹುಮಟ್ಟಿಗೆ ಪ್ರಸಂಗಗಳನ್ನು ಆಯ್ದುಕೊಂಡು ಸಿದ್ಧವಾದ ಸಂಗ್ರಹ. ಇಲ್ಲಿ ಉಪಗುಪ್ತ, ಅಶೋಕರ ಸಂವಾದದಿಂದ ಆರಂಭವಾಗುವ ನಿರೂಪಣೆ ಶಾಕ್ಯಮುನಿ, ಮೈತ್ರೇಯರ ಸಂವಾದಕ್ಕೆ ತಿರುಗುತ್ತದೆ. ಪ್ರಚಲಿತವಾದ ಸಂಸ್ಕೃತದಲ್ಲಿ ರಚಿತವಾದ ಈ ಗದ್ಯಗ್ರಂಥದಲ್ಲಿ ಮಧ್ಯೆ ಮಧ್ಯೆ ಶ್ಲೋಕಗಳನ್ನೂ ಪೋಣಿಸಿದ್ದಾರೆ. ಭದ್ರಕಲ್ಪಾವದಾನದಲ್ಲಿ (ಒಳ್ಳೆಯ ಕಾಲದ ಕಥೆಗಳು) ಮೂವತ್ತನಾಲ್ಕು ಕಥೆಗಳಿವೆ; ಇಲ್ಲೂ ಅಶೋಕನಿಗೆ ಉಪಗುಪ್ತ ಹೇಳುವಂತೆ ಕಥೆಗಳನ್ನು ಪದ್ಯದಲ್ಲಿ ಬರೆದಿಟ್ಟಿದ್ದಾರೆ.

ಕಾವ್ಯದಲ್ಲಿ ಬಂದಿರುವ ಅವದಾನ ಮಾಲೆಗಳು ಪ್ರಸಿದ್ಧವಾಗಿವೆ. ಕಲ್ಪದ್ರುಮಾವದಾನ ಮಾಲೆ, ರತ್ನಾವದಾನಮಾಲೆ, ಅಶೋಕಾವದಾನಮಾಲೆ–ಇವು ನಿದರ್ಶನಗಳು. ಪುರಾಣಗಳ ಸ್ವರೂಪ ತಳೆದಿರುವ ಈ ಗ್ರಂಥಗಳಲ್ಲಿ ಉಪಗುಪ್ತ ಅಶೋಕ ಚಕ್ರವರ್ತಿಗೆ ಹೇಳಿದಂತೆ ಇರುವುದು ಸ್ವಾರಸ್ಯವಾಗಿದೆ. ಇವು ಮೂರು ಮಹಾಯಾನ ಸಂಪ್ರದಾಯಕ್ಕೆ ಸೇರಿದವು. ಪುರಾಣದಲ್ಲಿರುವಂತೆ ಮಾಹಾತ್ಮ್ಯ, ವ್ರತ, ಹಬ್ಬ, ವ್ಯವಹಾರ ಧರ್ಮಗಳನ್ನು ಮಾತ್ರ ಹೇಳುವ ಅವದಾನಗಳೂ ಇವೆ. ವ್ರತಾವದಾನಮಾಲೆ, ವಿಚಿತ್ರ ಕರ್ಣಿಕಾವದಾನ–ಇವು ನಿದರ್ಶನಗಳು.

1052ರಲ್ಲಿ ಕ್ಷೇಮೇಂದ್ರ ಅವದಾನಕಲ್ಪಲತೆಯೆಂಬ ಗ್ರಂಥವನ್ನು ರಚಿಸಿದ. ಹಳೆಯ ಅವದಾನ ಸಂಗ್ರಹಗಳಿಂದ ಆಯ್ದುಕೊಂಡ 107 ಕಥೆಗಳನ್ನು ಉತ್ತಮ ಕಾವ್ಯಶೈಲಿಯಲ್ಲಿ ಮೂಡಿಸಿರುವ ಈ ಗ್ರಂಥ ಟಿಬೆಟ್ ದೇಶದಲ್ಲಿ ಪ್ರಸಿದ್ಧವಾಗಿದೆ. ಕ್ಷೇಮೇಂದ್ರ ಬೌದ್ಧಭಿಕ್ಷುವಲ್ಲವಾದುದರಿಂದ ಈ ಗ್ರಂಥವನ್ನು ನಿಷ್ಪಕ್ಷವಾಗಿ ಕಾಣುವ ಲಾಮಾಗಳು ಇಲ್ಲದೆ ಇಲ್ಲ. ಟಿಬೆಟನ್ ಭಾಷೆಯಲ್ಲಿ ಸುಮಾಗಧಾವದಾನವೆಂಬ ಒಂದೇ ಕಥೆಯ ಗ್ರಂಥವಿದೆ. ಶ್ರಾವಸ್ತಿಯ ಅನಾಥಪಿಂಡಿಕಶ್ರೇಷ್ಠಿಯ ಮಗಳಾದ ಸುಮಾಗಧೆಯೆಂಬ ಹುಡುಗಿ ತನ್ನ ಗಂಡನ ಮನಸ್ಸನ್ನು ಬೌದ್ಧಧರ್ಮಕ್ಕೆ ತಿರುಗಿಸಿದ ಮನೋಹರ ಕಥೆಯಿದು. (ಎಸ್.ಕೆ.ಆರ್.)

**ಅವಧ :** ಗಂಗಾ ಯಮುನಾ ನದಿಗಳ ನಡುವಿನ ಪ್ರದೇಶ. ಔದ್ ಅಥವಾ ಅಯೋಧ್ಯೆ ಇಂದಿನ ಉತ್ತರ ಪ್ರದೇಶದ ಒಂದು ಭಾಗ. ಪ್ರಾಚೀನ ಭಾರತದಲ್ಲಿ ಕೋಸಲವೆಂಬ ಹೆಸರಿತ್ತು. ರಾಜಧಾನಿ ಅಯೋಧ್ಯೆ (**ನೋಡಿ– ಅಯೋಧ್ಯೆ**). 1857ರ ಬಂಡಾಯದಲ್ಲಿ ಹೆಸರು ಪಡೆದ ಸಂಸ್ಥಾನವಿದು. ಮೊಗಲರ ಅವನತಿಯ ಕಾಲದಲ್ಲಿ ಸ್ವತಂತ್ರ ರಾಜ್ಯವಾಗಿ ನವಾಬರ ಅಧೀನವಾಯಿತು. ಇವರ ಕಾಲದಲ್ಲಿ ಷಿಯ ಪಂಥ ಊರ್ಜಿತವಾಯಿತು. ಸಾದತ್‍ಖಾನ್, ಸಫ್ದರ್‍ಜಂಗ್, ಸೂಜಾಉದ್ದೌಲರು ಪ್ರಸಿದ್ಧ ನವಾಬರು. ದಿಲ್ಲಿ ಸಾಮ್ರಾಟನ ವಜೀರನಾಗಿದ್ದ ನಿಜಾಂ ಉಲ್ ಮುಲ್ಕನ ಮರಣಾನಂತರ ಸಫ್ದರ್‍ಜಂಗ್ ಸಾಮ್ರಾಟನ ಮೊದಲನೆಯ ವಜೀರನಾದ. ಅವನ ಕಾಲದಲ್ಲಿ ಸಂಪತ್ತು ತುಂಬಿ ತುಳುಕುತ್ತಿತ್ತು. ಹಿಂದೂ ಮುಸಲ್ಮಾನರು ರಾಜ್ಯದಲ್ಲಿ ಸಮಾನಾಧಿಕಾರ ಉಳ್ಳವರಾಗಿದ್ದರು. ಸೂಜಾಉದ್ದೌಲನ ಕಾಲದಲ್ಲಿ ಇಂಗ್ಲಿಷರು ರಾಜ್ಯ ವ್ಯವಹಾರದಲ್ಲಿ ಪ್ರವೇಶ ಮಾಡಿದರು. ಅವನ ತರುವಾಯ ಅಸಾಫ್ ಉದ್ದೌಲನೊಡನೆ ಹೊಸ ಒಪ್ಪಂದ ಮಾಡಿಕೊಂಡು ಮೂರು ಲಕ್ಷ ಉತ್ಪನ್ನವುಳ್ಳ ಪ್ರಾಂತ್ಯವನ್ನು ಕಂಪನಿ ಸರಕಾರಕ್ಕೆ ತೆಗೆದುಕೊಂಡ. ವಾರನ್ ಹೇಸ್ಟಿಂಗ್ಸ್ ಅವಧದ ಬೇಗಮ್ಮರನ್ನೂ ಚೈತ್‍ಸಿಂಗನನ್ನೂ ಸುಲಿದು, ಅವರ ಸಂಪತ್ತನ್ನು ದೋಚಿಕೊಂಡನು. ಅಸಾಫ್ ಉದ್ದೌಲನ

ಮರಣಾನಂತರ ಇಂಗ್ಲಿಷರು ಉತ್ತರಾಧಿಕಾರದ ಪ್ರಶ್ನೆಯಲ್ಲೂ ಕೈಹಾಕಿದರು. ತಮಗೆ ನಿಷ್ಠಾವಂತರಾದವರನ್ನು ನೇಮಿಸಿದರು. ವಜೀರ ಅಲಿಯನ್ನು ಕಿತ್ತುಹಾಕಿ ಸಾದತ್ ಅಲಿಯನ್ನು ಸಿಂಹಾಸನದ ಮೇಲೆ ಕೂಡಿದರು. ಇದಕ್ಕಾಗಿ ಸಾದತ್ ಅಲಿ 13 ಲಕ್ಷ ರೂಪಾಯಿಗಳನ್ನು ಕಾಣಿಕೆಯಾಗಿ ಕೊಟ್ಟ. ಇಂಗ್ಲಿಷರ ಮಿತ್ರತ್ವವನ್ನು ಸ್ಥಿರಗೊಳಿಸಲು ಬ್ರಿಟಿಷ್ ಸೈನ್ಯದ ಖರ್ಚಿಗಾಗಿ 76 ಲಕ್ಷ ರೂಪಾಯಿಗಳನ್ನು ಕಂಪನಿ ಸರ್ಕಾರಕ್ಕೆ ಕೊಡಬೇಕಾಗಿ ಬಂತು. ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಹೇರಿದ. ಹಣ ಕೊಡಲಾರದೆ ಹೋದುದರಿಂದ ಸು. $1^1/_2$ಕೋಟಿ ಉತ್ಪನ್ನವುಳ್ಳ ರಾಜ್ಯಭಾಗ ಇಂಗ್ಲಿಷರ ಕೈವಶವಾಯಿತು. ಸಾದತ್ ಅಲಿಯ ತರುವಾಯ ಗಾಜಿ ಉದ್ದೀನ್ ಹೈದರ್ ನವಾಬನಾದ. ಮತ್ತೆ ಹೊಸ ಒಪ್ಪಂದ, ಹೊಸ ಕರಾರುಗಳು ಏರ್ಪಟ್ಟುವು. 1827ರಲ್ಲಿ ನಾಸೀರ್ ಉದ್ದೀನ್ ನವಾಬನಾದ. ವಿಷಯ ಲೋಲುಪನಾಗಿದ್ದ ಇವನ ತರುವಾಯ ನಿಜವಾದ ವಾರಸುದಾರನಾದ ಮುನ್ನಾಜಾನನಿಗೆ ಸಿಂಹಾಸನ ಸಿಗಬೇಕಾಗಿತ್ತು. ಆದರೆ ಖಾನಜಹಾನ್‍ನಲ್ಲಿ ವಿಶ್ವಾಸವನ್ನಿಟ್ಟಿದ್ದ ನಾಸೀರ್ ಉದ್ದೀನ್ ಅವನಿಗೆ ಪಟ್ಟಸಿಗಬೇಕೆಂದು ಬ್ರಿಟಿಷ್ ರೆಸಿಡೆಂಟನಿಗೆ ತಿಳಿಸಿದ್ದ. ಸಮಯ ನಿರೀಕ್ಷಿಸುತ್ತಿದ್ದ ಲಾರ್ಡ್ ಆಕ್ಲೆಂಡ್ ಅವನಿಗೆ ಸಿಂಹಾಸನ ದೊರಕಿಸಿಕೊಟ್ಟು ಹೊಸ ಒಪ್ಪಂದ ಮಾಡಿಕೊಂಡ. ನವಾಬ ಬ್ರಿಟಿಷ್ ರೆಸಿಡೆಂಟನ ಅನುಮತಿಯಿಂದ ಆಡಳಿತವನ್ನು ಸಾಗಿಸಬೇಕು. ಸೈನ್ಯದ ಖರ್ಚಿಗಾಗಿ ಪ್ರತಿವರ್ಷ 16 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಒಪ್ಪಂದವಾಯಿತು. ಬೇಗಮ್ ತನ್ನ ಮಗ ಮುನ್ನಾಜಾನನ ಪಟ್ಟದ ಸಲುವಾಗಿ ಹೋರಾಡಿ ಸೋತಳು. ಇವನ ಅನಂತರ ಬಂದ ಅಜಮದಲೀಷಹ, ವಾಜೀದಲೀಷಹ ವಿಷಯ ಲೋಲುಪರು, ಆಡಳಿತದ ಬಗ್ಗೆ ಉದಾಸೀನರು. ಇದರಿಂದ ರಾಜ್ಯದಲ್ಲಿ ಅರಾಜಕತೆ ತಲೆದೋರಿತು. ರಾಜ್ಯವನ್ನು ಕಂಪನಿಯ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಧ್ಯೇಯ ಇಂಗ್ಲಿಷರಿಗಿತ್ತು. ಅವಧದ ಭೌಗೋಳಿಕ ಸ್ಥಾನ, ಸಾಮ್ರಾಜ್ಯದ ವಿಸ್ತರಣೆ, ಇದಕ್ಕೆ ಮುಖ್ಯ ಕಾರಣವಾಯಿತು. ಡಾಲ್‍ಹೌಸಿ ಅವಧವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದ. ಇದರಂತೆ 1856 ಫೆಬ್ರವರಿ 4ಕ್ಕೆ ಔದ್ ರಾಜ್ಯ ಕಂಪನಿ ಸರ್ಕಾರದ ಸಾಮ್ರಾಜ್ಯದಲ್ಲಿ ಸೇರಿತು. ನವಾಬ ಪ್ರತಿವರ್ಷ 12 ಲಕ್ಷ ರೂಪಾಯಿ ವಿಶ್ರಾಂತಿ ಧನ ತೆಗೆದುಕೊಂಡು ಜೀವಿಸಬೇಕೆಂದು ಒಪ್ಪಂದವಾಯಿತು. ಇದಕ್ಕೆ ಒಪ್ಪದ್ದರಿಂದ ನವಾಬನನ್ನು ಫೋರ್ಟ್ ವಿಲಿಯಂ ಕೋಟೆಯಲ್ಲಿ ಬಂಧಿಸಲಾಯಿತು. (ಎಸ್.ಕೆ.ಕೆ.)

**ಅವಧಾನ :** ಗಮನ ಕೇಂದ್ರೀಕರಣಕ್ಕೆ ಈ ಹೆಸರಿದೆ (ಅಟೆನ್‍ಷನ್). ಪ್ರಜ್ಞಾವಸ್ಥೆಯಲ್ಲಿ ಮನಸ್ಸು ಎದುರಿನ ಎಲ್ಲ ವಿಷಯಗಳ ಕಡೆಗೂ ಹರಿದಿರುತ್ತದಾದರೂ ಯಾವುದೋ ಉದ್ದಿಷ್ಟ ವಿಷಯದಲ್ಲಿ ಮಾತ್ರ ವಿಶಿಷ್ಟವಾಗಿ ಕೆಲಸ ಮಾಡುತ್ತಿರುತ್ತದೆ. ಉಳಿದೆಲ್ಲ ವಿಷಯಗಳಲ್ಲಿ ಅದು ಅಷ್ಟು ಸ್ಪಷ್ಟವಾಗಿ ಗಮನ ಹರಿಸುತ್ತಿರುವುದಿಲ್ಲ. ಗಮನದ ತೀವ್ರತೆಗೆ ತಕ್ಕಂತೆ ಅರಿವಿನ ತೀವ್ರತೆಯೂ ಹೆಚ್ಚು ಕಡಿಮೆಯಾಗುತ್ತದೆ. ನೆನಪಿಗೂ ಅವಧಾನವೇ ಕಾರಣ. ಅವಧಾನದಿಂದ ಕಲಿತದ್ದು ಜ್ಞಾಪಕದಲ್ಲಿ ನಿಲ್ಲುತ್ತದೆ. ಎಲ್ಲ ಇಂದ್ರಿಯ ಶಕ್ತಿಗಳನ್ನೂ ಏಕೀಭವಿಸುವಂತೆ ಮಾಡಿ ಪ್ರಕೃತ ವಿಷಯದತ್ತ ಮಾತ್ರ ಉಪಯೋಗಿಸಿದಲ್ಲಿ ಅವಧಾನ ಅತಿ ತೀವ್ರವಾಗುತ್ತದೆ. ಇದನ್ನೇ ಚಿತ್ತೈಕಾಗ್ರತೆ ಎನ್ನುವುದು. ಮನಸ್ಸು ಗುರಿಯನ್ನಲ್ಲದೆ ಬೇರೆಯದನ್ನು ಯೋಚಿಸಬಾರದು. ಕಣ್ಣು, ಕಿವಿ, ನಾಲಗೆ ಇತ್ಯಾದಿಗಳು ಅದಕ್ಕೆ ಸಹಕಾರಿಗಳಾಗಬೇಕು.

ಅವಧಾನ ನಮ್ಮ ವರ್ತನೆಯ ಮತ್ತು ಜಾಗೃದವಸ್ಥೆಯ ಒಂದು ಸಾಮಾನ್ಯ ಗುಣವಿಶೇಷವಾಗಿದೆ. ಅವಧಾನವಿಡುವುದು ಎಂದರೆ, ಕಾರ್ಯೋನ್ಮುಖ ಸ್ಥಿತಿಯನ್ನು ಹೊಂದುವುದು, ಕೆಲವು ವಸ್ತುಗಳನ್ನು ಗ್ರಹಿಸಲು, ಕೆಲವು ಕೆಲಸಗಳನ್ನು ನಡೆಸಲು ಸಿದ್ಧವಾಗುವುದು–ಎಂದು ಸಂಕ್ಷಿಪ್ತವಾಗಿ ಹೇಳಬಹುದು. ವ್ಯಕ್ತಿನಿಷ್ಠೆ ಮತ್ತು ವಸ್ತುನಿಷ್ಠೆ ಎಂದು ಅವಧಾನದಲ್ಲಿ ಎರಡು ಬಗೆ. ವ್ಯಕ್ತಿನಿಷ್ಠವಾಗಿ ಹೇಳುವುದಾದರೆ ನಾಭಿಗೆ (ಫೋಕಸ್) ಮತ್ತು ಎಲ್ಲೆಗೆ (ಮಾರ್ಜಿನ್) ಹೊಂದಿಕೊಂಡಂತೆ ಜಾಗೃದವಸ್ಥೆಯ ಏರ್ಪಾಡು ಎನ್ನಬಹುದು. ಅವಧಾನದಲ್ಲಿ ನಾಭಿ ಜಾಗೃದವಸ್ಥೆಯ ಒಂದು ಭಾಗ. ಆದ್ದರಿಂದಲೇ ಅವಧಾನ ಜಾಗೃದವಸ್ಥೆಯ ಆಯ್ದುಕೊಂಡ ಕಾರ್ಯ ಎನ್ನುತ್ತಾರೆ. ವಸ್ತುನಿಷ್ಠವಾಗಿ ಅವಧಾನ ವರ್ತನೆಯ ಒಂದು ರೂಪ. ಅಂದರೆ, ಒಂದು ಸನ್ನಿವೇಶಕ್ಕೆ ಅಥವಾ ಪರಿಸರಕ್ಕೆ ಹೊಂದಿಕೊಳ್ಳುವಿಕೆ. ಈ ಹೊಂದಾಣಿಕೆಯಲ್ಲಿ ರಿಸೆಪ್ಟರ್ ಹೊಂದಾಣಿಕೆಗಳು ಮತ್ತು ಶಾರೀರಿಕ ಭಂಗಿಯ (ಪಾಸ್ಚುರಲ್) ಹೊಂದಾಣಿಕೆಗಳಿವೆ. ಅಲ್ಲದೆ ಅವಧಾನ ಸ್ನಾಯುಗಳಲ್ಲಿ ಬಿಗಿತವನ್ನು ಹುಟ್ಟಿಸುತ್ತದೆ. ಕಣ್ಣುಗಳಲ್ಲಿ ವಿಶೇಷ ಬಳಕೆಯುಳ್ಳ ಮತ್ತು ಸ್ಪಷ್ಟದೃಷ್ಟಿಗೆ ಅಗತ್ಯವಾದ ಯವದ (ಲೆನ್ಸ್) ವ್ಯವಸ್ಥೆ, ಆಘ್ರಾಣಿಸುವಿಕೆ ಮತ್ತು ಕತ್ತನ್ನು ತಿರುಗಿಸುವಿಕೆ ಮುಂತಾದ ಪ್ರತಿಕ್ರಿಯೆಗಳು ರಿಸೆಪ್ಟರ್ ಹೊಂದಾಣಿಕೆಗಳಿಗೆ ಉದಾಹರಣೆಗಳಾಗಿವೆ. ಬಾಗಿ ನಿಂತು ಇಲಿಯ ಮೇಲೆ ಎರಗಲು ಸಿದ್ಧವಾಗಿರುವ ಬೆಕ್ಕಿನ ಆ ಒಂದು ಚಿತ್ರ ಶಾರೀರಿಕ ಭಂಗಿಯ ಹೊಂದಾಣಿಕೆಯನ್ನು ವ್ಯಕ್ತಪಡಿಸುತ್ತದೆ. ಯಾವುದೇ ಶಾರೀರಿಕ ಭಂಗಿಯ ಬಿಗಿತ ಸ್ನಾಯುಗಳ ಬಿಗಿತವನ್ನು ಒಳಗೊಂಡಿರುತ್ತದೆ.

ಅವಧಾನದಲ್ಲಿ ಮೂರು ರೀತಿಯನ್ನು ನಾವು ಕಾಣಬಹುದು:

1. ಅನುದ್ದೇಶಿತ ಅವಧಾನ; 2. ಉದ್ದೇಶಿತ ಅವಧಾನ; 3. ರೂಢಿಯ ಅವಧಾನ.

ದೊಡ್ಡ ಶಬ್ದ, ಪ್ರಕಾಶಮಾನವಾದ ಬೆಳಕಿನ ಹೊಳಪು, ತೀವ್ರತರವಾದ ವಿದ್ಯುತ್‍ಸಂಪರ್ಕ ಮುಂತಾದ ತೀಕ್ಷ್ಣವಾದ ಹಾಗೂ ಅನಿರೀಕ್ಷಿತವಾದ ಕ್ರಿಯೆಗಳಿಗೆ ಅಥವಾ ಪ್ರಚೋದನೆಗಳಿಗೆ ನಾವು ಥಟ್ಟನೆ ಅವಧಾನವನ್ನು ಅತ್ತ ಹರಿಸಿದಾಗಲೆಲ್ಲ, ಅದನ್ನು ಅನುದ್ದೇಶಿತ ಅವಧಾನವೆಂದು ಕರೆಯಬಹುದು. ಈ ರೀತಿಯ ಅವಧಾನಗಳಲ್ಲಿ ಪ್ರಚೋದನೆಗಳು ಅಥವಾ ಸನ್ನಿವೇಶಗಳು ವ್ಯಕ್ತಿ ಅವುಗಳನ್ನು ಸ್ವೀಕರಿಸಲು ಕಾರ್ಯೋನ್ಮುಖ ಸ್ಥಿತಿಯಲ್ಲಿರಲಿ ಅಥವಾ ಇಲ್ಲದಿರಲಿ ತಾವೇ ತಾವಾಗಿ ಸಂಭವಿಸುತ್ತಿರುತ್ತವೆ.

ವ್ಯಕ್ತಿ ಮನಃಪೂರ್ವಕವಾಗಿ ನೋಡುವಾಗ, ಕೇಳುವಾಗ, ಅವಧಾನಿಸಲು ಸುದೀರ್ಘ ಪ್ರಯತ್ನ ಮಾಡುವಾಗ, ಅಂಥದನ್ನು ಉದ್ದೇಶಿತ ಅವಧಾನ ಎನ್ನಬಹುದು. ಇಲ್ಲಿ ಪ್ರೇರಣಾಪೂರ್ವಕವಾದ ಪ್ರಭಾವೀ ಹೇತುಗಳು ಪ್ರಮುಖಪಾತ್ರ ವಹಿಸುತ್ತವೆ; ಅಲ್ಲದೆ ಅಡೆತಡೆಗಳು ಹಿಡಿತದಲ್ಲಿರುತ್ತವೆ. ಅವಧಾನ ಉದ್ದೇಶಪೂರ್ವಕವಾಗಿಯೇ ಪ್ರಸ್ತುತ ಕಾರ್ಯದ ಕಡೆ ಹರಿಯುತ್ತದೆ.

ಮತ್ತೆ ಕೆಲವು ರೀತಿಯ ಪ್ರಚೋದನೆಗಳಿವೆ. ಅವುಗಳತ್ತ ವ್ಯಕ್ತಿ ಅವಧಾನ ನೀಡುತ್ತಾನೆ. ಇದಕ್ಕೆ ಆತನ ಆಸಕ್ತಿ , ಸಾಮಾನ್ಯ ಅಭ್ಯಾಸ, ಮನಸ್ಸಿನ ನಿಲುವುಗಳೇ ಕಾರಣಗಳು. ಇಂಥ ಅವಧಾನವನ್ನು ರೂಢಿಯ ಅವಧಾನವೆಂದು ಕರೆಯಬಹುದು. ಆಂತರಿಕ ಸ್ಥಿತಿಗಳಾಗಿದ್ದು, ಬಲಯುತವಾದ ಹಸಿವು, ಲೈಂಗಿಕ ಮುಂತಾದ ದೈಹಿಕ ಪ್ರೇರಣೆಗಳೂ ರೂಢಿಯ ಅವಧಾನಕ್ಕೆ ಕಾರಣಗಳಾಗಿವೆ.

ಅವಧಾನವನ್ನು ವಸ್ತುನಿಷ್ಠವಾದ, ವ್ಯಕ್ತಿನಿಷ್ಠವಾದ ಪ್ರಭಾವೀ ಹೇತುಗಳಿಂದ ನಿರ್ಣಯಿಸಬಹುದು. ಅವುಗಳನ್ನೇ ಅವಧಾನದ ಸ್ಥಿತಿಗಳೆಂದು, ನಿರ್ಣಾಯಕಗಳೆಂದು ತಿಳಿಯಬಹುದು. ಅವಧಾನವನ್ನು ಪೂರ್ಣವಾಗಿ ವಸ್ತುವಿನಲ್ಲಿ ಅಂತರ್ಜಾತವಾದ ಗುಣವೈಶಿಷ್ಟ್ಯಗಳಿಂದ, ಮತ್ತಿತರ ವಿಶಿಷ್ಟ ಸ್ವಭಾವದಿಂದ ನಿರ್ಣಯಿಸಿದರೆ, ಅವುಗಳನ್ನು ವಸ್ತುನಿಷ್ಠವಾದ ಪ್ರಭಾವೀ ಹೇತುಗಳೆಂದು ಪರಿಗಣಿಸುತ್ತಾರೆ. ವ್ಯಕ್ತಿಯ ಆಸಕ್ತಿ, ರೂಢಿಗಳು, ಮನಸ್ಸಿನ ಸ್ಥಿತಿ, ನಿಲುವುಗಳು–ಈ ವ್ಯಕ್ತಿನಿಷ್ಠವಾದ ಪ್ರಭಾವೀ ಹೇತುಗಳಿಂದಲೂ ಒಬ್ಬಾತನ ಅವಧಾನವನ್ನು ನಿರ್ಣಯಿಸಬಹುದು.

ಆಕಾರ, ತೀವ್ರತೆ, ಪುನರಾವರ್ತನೆ, ಚಲನೆ, ಬದಲಾವಣೆ, ಸುವ್ಯವಸ್ಥಿತ ರೂಪ ಮತ್ತು ನವ್ಯತೆ–ಇವುಗಳು ಪ್ರಮುಖವಾದ ವಸ್ತುನಿಷ್ಠ ಪ್ರಭಾವೀ ಹೇತುಗಳಾಗಿವೆ. ಪ್ರಚೋದನೆಯ ತೀವ್ರತೆ ಅಥವಾ ಬಲ, ಚಲನೆಯಲ್ಲಿರುವ ಪ್ರಚೋದನೆಗಳು–ಮತ್ತು ಪುನರಾವರ್ತನೆಗೊಳ್ಳುವ ಪ್ರಚೋದನೆಗಳು–ಇವು ನಮ್ಮ ಅವಧಾನವನ್ನು ಸೆಳೆಯುತ್ತವೆ. ದೊಡ್ಡ ಧ್ವನಿಯ ಪರಿಣಾಮಗಳು, ಪ್ರಕಾಶಮಾನವಾದ ದೀಪಗಳು ಮತ್ತು ವ್ಯಾಪಕವಾದ ಚಲನೆ, ಪುನರಾವರ್ತನೆಯುಳ್ಳ ಚಿಹ್ನೆಗಳು ಮುಂತಾದ ಮೇಲಿನ ವಿಷಯಗಳನ್ನು ಜಾಹೀರಾತುಗಳಲ್ಲಿ ಸುಸ್ಪಷ್ಟವಾಗಿ ಕಾಣಬಹುದು. ತೀವ್ರತೆ ಅಥವಾ ಪ್ರಚೋದನೆ ಸ್ಥಗಿತವಾಗುವುದು–ಇಂಥ ಪ್ರಚೋದನೆಯ ಬದಲಾವಣೆಗಳು ನಮ್ಮ ಅವಧಾನವನ್ನು ಸೆಳೆಯುತ್ತವೆ. ಒಂದು ನಿರ್ದಿಷ್ಟವಾದ ಮಾದರಿಯುಳ್ಳವು ಇಲ್ಲವೆ ತಾಳಬದ್ಧವಾಗಿ ಪ್ರವಹಿಸುವಂಥವು, ಬೇರೆ ವಸ್ತುಗಳಿಗಿಂತ ಹೆಚ್ಚಾಗಿ ನಮ್ಮ ಅವಧಾನವನ್ನು ಆಕರ್ಷಿಸಬಹುದು. ಯಾವುದೇ ಅಪರಿಚಿತವಾದದ್ದು, ಅಪೂರ್ವವಾದದ್ದು ಮತ್ತು ನವ್ಯವಾದದ್ದು ನಿರ್ವಿಕಾರವಾಗಿ ನಮ್ಮ ಅವಧಾನವನ್ನು ಸೆಳೆಯುತ್ತದೆ. ವಸ್ತುಗಳು ತಮ್ಮ ದೊಡ್ಡಗಾತ್ರದಿಂದಾಗಲಿ ತಮ್ಮ ವ್ಯಾಪಕತೆಯಿಂದಾಗಲಿ, ಬಹುಮಟ್ಟಿಗೆ ಅವಧಾನವನ್ನು ಆಕರ್ಷಿಸುವ ಸಂಭವವುಂಟು.

ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಗಳೂ ನಮ್ಮ ಅವಧಾನವನ್ನು ನಿರ್ಣಯಿಸುತ್ತವೆ. ಬೇರೆಯ ವಸ್ತುಗಳಿಗಿಂತ ಹೆಚ್ಚಾಗಿ, ಒಬ್ಬ ಹಸಿದ ವ್ಯಕ್ತಿ ತಿನ್ನುವ ಪದಾರ್ಥಗಳತ್ತ ತನ್ನ ಅವಧಾನವನ್ನು ಹರಿಸುವ ಸಂಭವವೇ ಹೆಚ್ಚು. ವ್ಯಕ್ತಿ ಕೋಪದ ಸ್ಥಿತಿಯಲ್ಲಿರುವಾಗ ಒಂದು ಸಣ್ಣ ಕಿರುಕುಳವೂ ಅಥವಾ ಒಂದು ಸಣ್ಣ ಪೀಡನೆಯೂ ಬಹು ಬೇಗ ಅವನ ಗಮನಕ್ಕೆ ಬಂದು ಅವಧಾನ ಅತ್ತ ಹರಿಯುತ್ತದೆ. ನಮ್ಮಲ್ಲಿರುವ ಆಳವಾದ ಪ್ರೇಮ, ಪ್ರೇರಣೆಗಳು (ಮೋಟಿವೇಷನ್ಸ್) ಆಂತರಿಕ ಒತ್ತಡಗಳು, ಆಸಕ್ತಿ ಹಾಗೂ ಅಭ್ಯಾಸಗಳು ನಮ್ಮ ಅವಧಾನವನ್ನು ಆಕರ್ಷಿಸುವುದರಲ್ಲಿ ಪ್ರಧಾನಪಾತ್ರ ವಹಿಸುತ್ತವೆ. ನಿದ್ರಿಸುತ್ತಿರುವ ಮಾತೆಯೋರ್ವಳಿಗೆ ಹೊರಗಡೆಯ ಗದ್ದಲದಿಂದ ನಿದ್ರೆಗೆ ಭಂಗ ಬರದಿರಬಹುದು; ಆದರೆ ಆಕೆಯ ಕಾಯಿಲೆಯ ಮಗುವಿನ ಕ್ಷೀಣವಾದ ನೋವಿನ ರೋದನದಿಂದ ಒಂದೇ ಬಾರಿಗೆ ಆ ತಾಯಿಯ ಅವಧಾನ ಜಾಗೃತಗೊಂಡು ಆಕೆ ಎಚ್ಚರಗೊಳ್ಳಬಹುದು. ಇವೆಲ್ಲ ವ್ಯಕ್ತಿನಿಷ್ಠ ಅವಧಾನಕ್ಕೆ ಉದಾಹರಣೆಗಳಾಗಿವೆ.

ನಮ್ಮ ಅಧ್ಯಯನದ ಅನುಕೂಲಕ್ಕಾಗಿ ಅವಧಾನದ ಸ್ಥಿತಿಗತಿಗಳನ್ನು ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ ಪ್ರಭಾವಿ ಹೇತುಗಳೆಂದು ವಿಭಾಗ ಮಾಡಿಕೊಳ್ಳುತ್ತೇವೆ. ಆದರೆ ಯಾವುದೇ ಒಂದು ನಿಶ್ಚಿತ ಸಂದರ್ಭದಲ್ಲಿ ಈ ರೀತಿಯ ಸೂಕ್ಷ್ಮಭೇದಗಳನ್ನು ಮಾಡಲು ಸಾಧ್ಯವಾಗದಿರಬಹುದು.

ಅವಧಾನ ಏಕಪ್ರಕಾರವಾಗಿರುವುದಿಲ್ಲ. ಅಲ್ಲದೆ ಯಾವುದೇ ದೀರ್ಘಾವಧಿಯವರೆಗೆ ಏಕಾಗ್ರಗೊಳಿಸಲೂ ಆಗುವುದಿಲ್ಲ. ಇದು ಒಂದು ವಸ್ತುವಿನಿಂದ ಮತ್ತೊಂದು ವಸ್ತುವಿಗೆ ಬೇಗ ಬೇಗನೆ ಬದಲಾವಣೆಗೊಳ್ಳುವ ಪ್ರವೃತ್ತಿಯನ್ನು ಹೊಂದಿದೆ. ಈ ಅವಧಾನದ

ಬದಲಾವಣೆಯನ್ನು ಅವಧಾನದ ತೂಗುಯ್ಯಾಲೆ ಎನ್ನುತ್ತಾರೆ. ನಾವು ಒಂದು ವಸ್ತುವಿನ ಮೇಲೆ ಅವಧಾನವನ್ನು ಏಕಾಗ್ರಗೊಳಿಸಿದಾಗ, ಒಂದು ನಿರ್ದಿಷ್ಟ ಕಾಲದ ಅನಂತರ ಅವಧಾನ ಅದೇ ವಸ್ತುವಿನ ಒಂದು ಭಾಗದಿಂದ ಮತ್ತೊಂದು ಭಾಗದತ್ತ ಹರಿಯುತ್ತದೆ. ಸಾಮಾನ್ಯವಾಗಿ ಪ್ರತಿ 5 ಇಲ್ಲವೆ 6 ಸೆಕೆಂಡಿಗೊಮ್ಮೆ ಅವಧಾನ ಬದಲಾಗುತ್ತಿರುತ್ತದೆ. ಹೆಚ್ಚೆಂದರೆ 25 ಸೆಕೆಂಡುಗಳು ಅವಧಾನವನ್ನು ಬದಲಿಸದೆ ಇದ್ದ ನಿದರ್ಶನಗಳಿವೆ. ಅವಧಾನದ ಕಾಲಾವಧಿ ವ್ಯಕ್ತಿಯಿಂದ ವ್ಯಕ್ತಿಗೆ, ವಸ್ತುವಿನ ಸಂಕೀರ್ಣತೆಯಿಂದ ಮತ್ತು ವ್ಯಕ್ತಿಯ ಮನೋನಿಲುವುಗಳಿಂದ ಬದಲಾವಣೆ ಹೊಂದುತ್ತಿರುತ್ತದೆ. ತೂಗಾಡುವ ಅವಧಾನ ಸುಪ್ರಸಿದ್ಧ ವಿಷಯ.

ಎರಡು ಕಾರ್ಯಗಳ ನಡುವೆ ಅವಧಾನದ ವಿಭಜನೆಯ ಸಾಧ್ಯತೆ ಅವಧಾನದ ಗಮನಾರ್ಹವಾದ ವೈಶಿಷ್ಟ್ಯವೆನಿಸಿದೆ. ಜೂಲಿಯಸ್ ಸೀಸರ್ ಬೇರೆ ಬೇರೆ ಪತ್ರ ಪ್ರತಿಮಾಡುವವರಿಗೆ ಒಂದೇಕಾಲದಲ್ಲಿ ಬೇರೆ ಬೇರೆ ಪತ್ರಗಳನ್ನು ಬರೆಸುತ್ತಿದ್ದ. ಆತ ಮೊದಲನೆಯ ಪತ್ರ ಪ್ರತಿಮಾಡುವವನಿಗೆ ಮೊದಲ ವಾಕ್ಯವನ್ನು ಹೇಳುತ್ತಿದ್ದ; ತತ್‌ಕ್ಷಣವೇ ಆತನ ಗಮನ ಎರಡನೆಯ ಪತ್ರ ಪ್ರತಿಮಾಡುವವನತ್ತ ಹರಿಯುತ್ತಿತ್ತು; ಕೂಡಲೇ ಆತನಿಗೂ ಒಂದು ವಾಕ್ಯವನ್ನು ಹೇಳುತ್ತಿದ್ದ; ಹೀಗೆಯೇ ಉಳಿದ ಪತ್ರ ಪ್ರತಿಕಾರರಿಗೆ ಒಂದೊಂದು ಸಾಲು ಬರೆಸುತ್ತಿದ್ದ. ಮತ್ತೆ ಮೊದಲನೆಯ ಪತ್ರಕ್ಕೆ ಗಮನ ಹರಿಸುತ್ತಿದ್ದ. ಹೀಗೆ ಮಾಡುವಾಗ ಆತ ಎಂದೂ ಗೊಂದಲಕ್ಕೆ ಒಳಗಾಗುತ್ತಿರಲಿಲ್ಲ. ಇಲ್ಲಿ ವಿವಿಧ ಕಾರ್ಯಗಳನ್ನು ಏಕಕಾಲದಲ್ಲಿ ನಡೆಸಲು ಬೇಕಾಗುವ ಸಾಕಷ್ಟು ವ್ಯಾಪಕವಾದ ಅವಧಾನ ಕಂಡುಬರುತ್ತದೆ. ನಿರ್ಣಾಯಕವಾಗಿ ಹೇಳುವುದಾದರೆ ಅವಧಾನದ ವಿಭಜನೆ ದುಸ್ಸಾಧ್ಯ. ಬೇರೆ ಬೇರೆ ಪತ್ರ ಪ್ರತಿಮಾಡುವವರಿಗೆ ಬೇರೆ ಬೇರೆ ಪತ್ರವನ್ನು ಒಂದೇ ಸಮಯದಲ್ಲಿ ಹೇಳಿ ಬರೆಸುವ ಶಕ್ತಿಗೆ, ಅವಧಾನದ ವಿಭಜನೆಗಿಂತ ಹೆಚ್ಚಾಗಿ, ತೀವ್ರವಾಗಿ ತೂಗಾಡುವ ಅವಧಾನದ ಸೌಲಭ್ಯವೇ ಕಾರಣವೆನಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಜನರು ಮಾತನಾಡುತ್ತಲೇ ಕಸೂತಿ ಮುಂತಾದ ಕರಕೌಶಲ ಕೆಲಸಗಳಲ್ಲಿ ನಿರತರಾಗಿರುವುದನ್ನು ನಾವು ಕಾಣುತ್ತೇವೆ. ಇದರ ಅರ್ಥ ಏಕಕಾಲದಲ್ಲಿ ಎರಡು ಕಾರ್ಯಗಳ ಕಡೆ ಅವಧಾನ ಹರಿಸಲ್ಪಟ್ಟಿದೆ ಎಂದಲ್ಲ. ಅನೇಕ ವೇಳೆ ಕಸೂತಿ ಮುಂತಾದ ಕರಕೌಶಲ ಕೆಲಸಗಳಲ್ಲಿ ಅವಧಾನ ಕೇಂದ್ರಿಕೃತವಾಗಿರುವುದೇ ಇಲ್ಲ; ಅದು ಸ್ವಯಂಚಾಲಿತ ಕ್ರಿಯೆಯಾಗಿರುತ್ತದೆ; ಹಾಗೂ ಮಾತನಾಡುವ ಕ್ರಿಯೆ ಅವಧಾನದ ಸಹಾಯದಿಂದ ಮುಂದುವರಿಯುತ್ತಿರುತ್ತದೆ.

ಅವಧಾನಕ್ಕೆ ಸಂಬಂಧಿಸಿದ ಮತ್ತೊಂದು ಮುಖ್ಯವಾದ ಕುತೂಹಲಕಾರಿಯಾದ ಸಮಸ್ಯೆಯೆಂದರೆ ಅವಧಾನದ ಚಾಂಚಲ್ಯ, ಭ್ರಮಣೆ ಅಥವಾ ಅವಧಾನದ ವೈಕಲ್ಯ. ಅವಧಾನದಲ್ಲಿ ಉಂಟಾಗುವ ಭ್ರಮಣೆಯ ಪರಿಣಾಮ ಗಮನಾರ್ಹವಾದ ಪ್ರಾಮುಖ್ಯ ಹೊಂದಿದೆ. ಈ ಚಾಂಚಲ್ಯ ಕಾರ್ಯಕೌಶಲದ ನಾಶಕ್ಕೆ ಅಥವಾ ಅದರ ಅಪ್ರಯೋಜಕತೆಗೆ ಕಾರಣವಾಗಬಹುದು; ಮತ್ತು ಅವಧಾನದ ಏಕಾಗ್ರತೆಗೆ ಭಂಗ ತರಬಹುದು. ಆದರೆ ಪ್ರಯೋಗಶಾಲೆಯ ಆಧಾರಗಳು ವಿರುದ್ಧ ಫಲಿತಾಂಶಗಳನ್ನು ಕೊಟ್ಟಿವೆ. ಕೆಲವು ನಿದರ್ಶನಗಳಲ್ಲಿ ಅವಧಾನ ಭ್ರಮಣೆ ಪ್ರತಿಕೂಲ ಪರಿಣಾಮವನ್ನು ಬೀರಿದೆ. ಮತ್ತೆ ಕೆಲವು ನಿದರ್ಶನಗಳಲ್ಲಿ ಅದರ ಪ್ರಭಾವದಿಂದ ಉತ್ತಮ ಕಾರ್ಯ ನಡೆದಿದೆ. ಇಂಥ ಸಂದರ್ಭಗಳಲ್ಲಿ ಅದು ಉತ್ತೇಜಕವಾಗಿ ವರ್ತಿಸಿ ಕಾರ್ಯಕ್ಕೆ ಹೆಚ್ಚಿನ ಅವಧಾನವನ್ನು ದೊರಕಿಸಿಕೊಡಬಹುದು. ಕೆಲವು ವ್ಯಕ್ತಿಗಳ ಅಭಿಪ್ರಾಯದಂತೆ ಅವಧಾನವನ್ನು ಕದಲಿಸಲು ಕನಿಷ್ಠದರ್ಜೆಯ ಶಬ್ದ ಅಥವಾ ಮಾತಷ್ಟೇ ಸಾಕು. ಮತ್ತೆ ಕೆಲವರಿಗೆ ತುಂಬ ನಿಶ್ಶಬ್ದವಾಗಿದ್ದರೂ ಕೆಲಸಮಾಡುವ ಉತ್ತೇಜಕಶಕ್ತಿಯ ಅಭಾವವಿರುವುದು ಕಂಡುಬರುತ್ತದೆ. ಅವಧಾನ ಭ್ರಮಣೆ ಹಿಂಸಾಮಯವಾಗಿಯೂ ಅನಿಯತವಾಗಿಯೂ ಸಂಭವಿಸುತ್ತಿದ್ದರೆ, ಇದರ ಪರಿಣಾಮ ಅವಧಾನೋತ್ಕರ್ಷವಾಗಿ ಕಂಡುಬರುತ್ತದೆ. ಇಂಥ ಸನ್ನಿವೇಶಗಳಲ್ಲಿ ಚಿತ್ತಭ್ರಮಣೆಯನ್ನು ನಿವಾರಿಸಿಕೊಂಡು ಹೋಗಲು ಹೆಚ್ಚಿನ ಶಕ್ತಿವ್ಯಯದ ಅಗತ್ಯ ಕಂಡುಬರುತ್ತದೆ. ಅವಧಾನ ಭ್ರಮಣೆಯ ಪರಿಣಾಮ ಬಹುಮಟ್ಟಿಗೆ ವ್ಯಕ್ತಿಯ ಉದ್ವೇಗಕಾರಕ ಪ್ರತಿಕ್ರಿಯೆಗಳನ್ನೂ ಆತನ ಮನೋನಿಲುವುಗಳನ್ನೂ ಅವಲಂಬಿಸಿರುತ್ತದೆ. ಒಂದು ವೇಳೆ ಈ ಭ್ರಮಣೆ ತನ್ನ ಪಾಲಿಗೆ ಹಾನಿಕರವೆಂದು ವ್ಯಕ್ತಿ ಭಾವಿಸುವುದಾದರೆ, ಅದರಿಂದಾಗಿ ಆತನ ಕಾರ್ಯಗಳು ಕೆಡಬಹುದು. ಕೋಪ, ಭಯ, ಬೇಸರ, ಆಯಾಸ, ಪ್ರಿಯವಾದ ಆಲೋಚನೆಗಳು ಮುಂತಾದ ಆಂತರಿಕ ಚಾಂಚಲ್ಯ ಕಾರಣಗಳು ದಿನನಿತ್ಯದ ಬಾಹ್ಯ ಕಾರಣಗಳಿಗಿಂತ ಹೆಚ್ಚಾಗಿ ನಮ್ಮ ಕೆಲಸ ಕಾರ್ಯಗಳಲ್ಲಿ ಪರಿಣಾಮವನ್ನುಂಟುಮಾಡುತ್ತವೆ. ಇಂಥ ಚಾಂಚಲ್ಯಗಳ ಸ್ವಭಾವ, ಪರಿಣಾಮವನ್ನು ಕುರಿತು ಮನೋವಿಜ್ಞಾನಿಗಳು ಪ್ರಾಯೋಗಿಕವಾಗಿ ಅಧ್ಯಯನ ನಡೆಸಿದ್ದಾರೆ.

ಒಂದು ಗುಂಪಿನ ವಿದ್ಯಾರ್ಥಿಗಳಿಗೆ ಯಾವುದಾದರೊಂದು ಪದ್ಯವನ್ನು ಕೊಟ್ಟು, ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವಂತೆ ಅಥವಾ ಯಾವುದಾದರೂ ಗಣಿತಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಮಾಡುವಂತೆ ಹೇಳಿ, ನಿಶ್ಶಬ್ದವಾದ ವಾತಾವರಣವನ್ನೂ ಗೊಂದಲಮಯವಾದ ವಾತಾವರಣವನ್ನೂ ಕಲ್ಪಿಸಿ ಅವರ ಚಟುವಟಿಕೆಗಳನ್ನು ಗಮನಿಸುವುದು. ಈ ಎರಡು ವಾತಾವರಣಗಳಲ್ಲಿನ ಪ್ರಯೋಗಗಳಲ್ಲಿನ ಫಲಿತಾಂಶವನ್ನು ತೌಲನಿಕವಾಗಿ ನೋಡಿದಾಗ, ಹೆಚ್ಚು ಪ್ರಯೋಗಗಳಲ್ಲಿ ವ್ಯಕ್ತಿಗಳ ಒಟ್ಟು ಕಾರ್ಯಚಟುವಟಿಕೆಯಲ್ಲಿ, ಚಾಂಚಲ್ಯಗಳ ಪರಿಣಾಮ ಅಲ್ಪವೆಂದೂ ಮತ್ತೆ ಕೆಲವು ಸಂದರ್ಭಗಳಲ್ಲಿ ಗಮನಾರ್ಹವೆಂದೂ ಕಂಡುಬಂದಿದೆ.

ಅವಧಾನದ ವ್ಯಾಪ್ತಿ (ಸ್ಪ್ಯಾನ್) ಅತ್ಯಂತ ಮುಖ್ಯವಾದ ವಿಷಯ. ಒಂದೇ ಒಂದು ನೋಟದಲ್ಲಿ ಎಷ್ಟು ವಸ್ತುಗಳನ್ನು ಅವಧಾನಮಾಡಬಹುದೋ ಅದನ್ನು ಅವಧಾನದ ವ್ಯಾಪ್ತಿ ಎನ್ನುತ್ತಾರೆ. ಒಂದೇ ಒಂದು ಅವಧಾನ ಕ್ರಿಯೆಯಲ್ಲಿ ಎಷ್ಟು ವಿಭಿನ್ನವಾದ ಅಂಕೆಗಳನ್ನು ಅಥವಾ ಅಕ್ಷರಗಳನ್ನು ಗ್ರಹಿಸಬಹುದು? ಈ ಅವಧಾನ ವ್ಯಾಪ್ತಿಯನ್ನು ಟ್ಯಾಚಿಸ್ಟೋಸ್ಕೋಪ್ ಎಂಬ ಉಪಕರಣದ ಸಹಾಯದಿಂದ ನಿರ್ಣಯಿಸಬಹುದು. ಈ ಉಪಕರಣದ ಮೂಲಕ ಅಕ್ಷರಗಳು, ಚುಕ್ಕೆಗಳು, ರೇಖೆಗಳು ಅಥವಾ ಸಂಖ್ಯೆಗಳನ್ನು ಪ್ರದರ್ಶಿಸಲಾಗುವುದು. ಅನಂತರ ಪರೀಕ್ಷಾರ್ಥಿ ತಾನು ನೋಡಿದ ಅಥವಾ ಗ್ರಹಿಸಿದ ಅಂಶಗಳನ್ನು ವರದಿಮಾಡುತ್ತಾನೆ. ಮೇಲಿನ ಉಪಕರಣದಲ್ಲಿ ವಿಷಯಗಳನ್ನು ಪ್ರದರ್ಶಿಸುವ ಕಾಲಾವಧಿಯು ಬಹು ಅತ್ಯಲ್ಪ. ಅದನ್ನು 1/100ರಿಂದ 1/5 ಸೆಕೆಂಡುಗಳವರೆಗೆ ಬದಲಾಯಿಸಬಹುದು. ಒಂದೇ ಒಂದು ನೋಟದಲ್ಲಿ ನಾಲ್ಕು ಅಥವಾ ಐದು ಸಂಖ್ಯೆಯನ್ನೊ ಅಥವಾ ಅಕ್ಷರವನ್ನೊ ಅವಧಾನ ಮಾಡಬಹುದೆಂದು ನಿರ್ಣಯಿಸಿದ್ದಾರೆ. ಯಾವಾಗ ಅಕ್ಷರಗಳು ಅರ್ಥದಿಂದ ಕೂಡಿದ ಪದವಾಗಿರುತ್ತವೋ ಆಗ ಒಂದೇ ಒಂದು ಅವಧಾನಕ್ರಿಯೆಯಲ್ಲಿ ಹತ್ತು ಅಥವಾ ಹತ್ತಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದಗಳನ್ನು ಗ್ರಹಿಸಬಹುದು. ವ್ಯಕ್ತಿಯ ಮನಸ್ಸಿನ ನಿಲುವು ಮತ್ತು ಆಸಕ್ತಿಗಳು ಅವಧಾನವ್ಯಾಪನೆಯ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ತೀಕ್ಷ್ಣವಾದ ಅವಲೋಕನ, ದೃಷ್ಟಿಯ ಚಟುವಟಿಕೆ, ಜ್ಞಾಪಕ ಶಕ್ತಿ, ಓದುವ ಸಾಮರ್ಥ್ಯದಲ್ಲಿರುವ ಶೀಘ್ರತೆ, ಗ್ರಹಣಶಕ್ತಿ ಮತ್ತು ವ್ಯಕ್ತಿಯ ಬುದ್ಧಿಶಕ್ತಿಯ ಮಟ್ಟ ಇವುಗಳೆಲ್ಲವೂ ಅವಧಾನದ ವ್ಯಾಪ್ತಿಯ ಮೇಲೆ ಪ್ರಭಾವ ಬೀರುತ್ತವೆ. (ಎಚ್.ಡಿ.ವಿ.)

**ಶಿಕ್ಷಣ ಕ್ಷೇತ್ರದಲ್ಲಿ :** ಅವಧಾನದ ಸ್ಥಾನ ದೊಡ್ಡದು. ಮಕ್ಕಳಲ್ಲಿ ಅದು ಇಲ್ಲದಲ್ಲಿ ಕಲಿಕೆ ಕುಂಟುತ್ತದೆ. ವಿಷಯವನ್ನೋ ವಸ್ತುವನ್ನೋ ನಿರ್ದಿಷ್ಟವಾಗಿ ಸ್ಪಷ್ಟಪಡಿಸಿ ಮನಸ್ಸಿಗೆ ನಾಟುವಂತೆ ಮಾಡುವುದು ಅವಧಾನದ ಕೆಲಸ. ಅದರಿಂದ ಮನಸ್ಸಿನ ದಕ್ಷತೆ ಹೆಚ್ಚುತ್ತದೆ. ಕಲಿಕೆ ಸರಾಗವೂ ಪರಿಣಾಮಕಾರಿಯೂ ಆಗುತ್ತದೆ. ಸ್ವಭಾವಜನ್ಯ ಆಸಕ್ತಿಯಿಂದಾಗಿ ಅವಧಾನ ಸ್ವಾಭಾವಿಕವಾಗಿ ಕಂಡುಬರುತ್ತದೆ. ಕುತೂಹಲ, ರಚನೆಯ ಚಮತ್ಕಾರ, ಸಂಘಜೀವನ, ಆತ್ಮರಕ್ಷಣೆ, ಆಟ, ಸಂಗ್ರಹಣೆ, ಕೈಕೆಲಸ, ಸಾಹಸ ಮುಂತಾದ ಸಹಜಪ್ರವೃತ್ತಿಗಳಿದ್ದಲ್ಲಿ ಮಕ್ಕಳು ತೀವ್ರವಾದ ಅವಧಾನವನ್ನು ತೋರುತ್ತಾರೆ. ಇವುಗಳನ್ನು ಶಿಕ್ಷಣದಲ್ಲಿ ಅಳವಡಿಸಿದಲ್ಲಿ ಕಲಿಕೆ ಹಸನಾಗುತ್ತದೆ. ಆದರೆ ಸಹಜವಾದ ಆಸಕ್ತಿಯನ್ನು ಕುದುರಿಸದ ಮನೆಯ ಅಥವಾ ಶಾಲೆಯ ಪಾಠಗಳು ಉದ್ದನೆಯ ಬರೆವಣಿಗೆ, ಲೆಕ್ಕ ಮಾಡುವುದು, ಚರಿತ್ರೆ ಉರು ಹಾಕುವುದು– ಇತ್ಯಾದಿಗಳಲ್ಲಿ ಮಕ್ಕಳ ಗಮನ ಸಹಜವಾಗಿ ಹರಿಯದು. ಒತ್ತಾಯಪೂರ್ವಕವಾಗಿ ಅದನ್ನು ಕುದುರಿಸಬೇಕಾಗುತ್ತದೆ. ಪ್ರಾರಂಭದಲ್ಲಿ ಇದು ಕಷ್ಟದ ಕೆಲಸವಾಗಿ ತೋರಬಹುದು. ಆದರೆ ಶಾಸ್ತ್ರವಿಚಾರಗಳ ಮೂಲಾಂಶಗಳನ್ನು ಮನದಟ್ಟು ಮಾಡುವವರೆಗೆ ಅವಧಾನವನ್ನು ಉಳಿಸಿಕೊಂಡಲ್ಲಿ ಅನಂತರ ಕುತೂಹಲ ಕೆರಳಿ ಅವಧಾನ ಸಹಜವಾಗಿ ಏರ್ಪಡುತ್ತದೆ. ಓದುವ ಮಗುವಿನ ಸುತ್ತ ಆಟದ ಸನ್ನಿವೇಶ ಏರ್ಪಡದಂತೆ ನೋಡಿಕೊಳ್ಳಬೇಕು. ಏಕೆಂದರೆ ಸನ್ನಿವೇಶ ಚಿತ್ತಚಾಂಚಲ್ಯಕ್ಕೆ ಪ್ರಬಲ ಕಾರಣವಾಗಬಹುದು. ಅವಧಾನ ಹೆಚ್ಚಬೇಕಾದರೆ ಸುಲಭವಾಗಿ ಗಮನ ಸೆಳೆಯುವ ಅವಕಾಶಗಳಿಂದ ದೂರವಿರಬೇಕಾದ್ದು ಅಗತ್ಯ. ವೈವಿಧ್ಯ, ನಿರ್ದಿಷ್ಟತೆ, ಉತ್ತೇಜನದ ತೀಕ್ಷ್ಣತೆ, ಪುನರಾವರ್ತನೆ, ಆಸಕ್ತಿ ಇವೆಲ್ಲ ಅವಧಾನವನ್ನು ಹೆಚ್ಚಿಸುವ ಸಾಧನಗಳು. ಇವುಗಳಲ್ಲಿ ಅತಿ ಮುಖ್ಯವಾದ್ದು ಆಸಕ್ತಿ. ಮೆಗ್ಡುಗಲ್ ಹೇಳಿರುವಂತೆ ಆಸಕ್ತಿ ಅವಧಾನದ ಸ್ಥಾವರರೂಪ; ಅವಧಾನ ಆಸಕ್ತಿಯ ಕ್ರಿಯಾರೂಪ. ಆಸಕ್ತಿ ಕಾರ್ಯ ರೂಪಕ್ಕೆ ಬರುವುದೇ ಅವಧಾನ. ನಮ್ಮ ಆಸಕ್ತಿಗಳು ಹುಟ್ಟುಗುಣಗಳಿಂದ ಪ್ರಾರಂಭವಾಗಿ ಅನುಭವ, ಪೂರ್ವಾರ್ಜಿತ ಸ್ನೇಹಸಂಪರ್ಕಗಳು, ಸಾಮಾಜಿಕ ಅಗತ್ಯಗಳು, ಸನ್ನಿವೇಶ– ಇವುಗಳಿಂದ ಪೋಷಿತವಾಗಿ ಹೊಸ ಹೊಸ ಆಸಕ್ತಿಗಳಾಗಿ ಪರಿಣಾಮಗೊಳ್ಳುತ್ತವೆ. ಅಂದರೆ ನಮ್ಮ ಸಂಸ್ಕಾರಗಳಿಂದ ಆಸಕ್ತಿಗಳು ಬೆಳೆಯುತ್ತವೆ. ಆರ್ಜಿತ ಆಸಕ್ತಿ ವಿಸ್ತರಿಸಿ ಬೆಳೆದಂತೆಲ್ಲ ಅವಧಾನ ಹೆಚ್ಚುತ್ತದೆ. ಅದರಿಂದ ದಕ್ಷತೆ ಹೆಚ್ಚು. ನಮ್ಮ ಆಲೋಚನೆಗಳೂ ಕೆಲಸಗಳೂ ಹೆಚ್ಚು ಸಮರ್ಪಕವಾಗುತ್ತವೆ. (ಸಿ.ಆರ್.)

**ಜೀವನದಲ್ಲಿ ಅವಧಾನ :** ಆಸಕ್ತಿಗಳಿಗೆ ತಕ್ಕಂತೆ ಅವಧಾನ, ಅವಧಾನಕ್ಕೆ ತಕ್ಕಂತೆ ಅರಿವು. ಆದ್ದರಿಂದ ಜೀವನದಲ್ಲಿ ವ್ಯಕ್ತಿ ಉತ್ತಮ ಆಸಕ್ತಿಗಳನ್ನು ರೂಢಿಸಿಕೊಳ್ಳಬೇಕು. ಜ್ಞಾನ, ವಿಜ್ಞಾನ, ಸಂಗೀತ, ಸಾಹಿತ್ಯ, ವ್ಯಾಸಂಗ, ಉಪಯೋಗಕಾರಿ ಕೆಲಸಗಳು–ಇವುಗಳಲ್ಲಿ ನಮ್ಮ ಅವಧಾನವೇರ್ಪಡಬೇಕು. ಕವಾಯಿತಿಗೆ ಮುನ್ನ ಸೈನಿಕ 'ಸಾವಧಾನ' ಸ್ಥಿತಿಯಲ್ಲಿರುವಂತೆ ಜೀವನದಲ್ಲಿ ಸತ್ಕಾರ್ಯಗಳನ್ನು ಕೈಗೊಳ್ಳುವಾಗಲೆಲ್ಲ ಮನಸ್ಸು, ದೇಹ ಅವಧಾನಸ್ಥಿತಿಯಲ್ಲಿರಬೇಕು. ಹಾಗಾದರೆ ದೊಡ್ಡ ಸಾಧನೆಗಳು ಸಾಧ್ಯವಾಗುತ್ತವೆ. *

**ಅವಧಿ, ಕಾಲ :** ಅವಧಿ ಅಥವಾ ಕಾಲಕ್ಕೆ ಚಿತ್ತೈಕಾಗ್ರತೆ (ಕಾನ್ಸನ್‌ಟ್ರೇಷನ್), ಒಂದು ಕೆಲಸಕ್ಕೆ ಅಗತ್ಯವಾದ ಕ್ಲುಪ್ತವಾದ ವೇಳೆ, ನಮ್ಮ ಗಮನಕ್ಕೆ ಒಳಪಟ್ಟ ಸುತ್ತಮುತ್ತ ಅಥವಾ ಆವರಣ ಎಂಬ ಹಲವು ಅರ್ಥಗಳಿವೆ. ಒಂದು ಕ್ರಿಯೆ ಆರಂಭವಾಗಿ ಮುಕ್ತಾಯಗೊಳ್ಳುವ

ವೇಳೆಯೇ ಕಾಲವೆಂಬ ಅರ್ಥ ಇಲ್ಲಿ ಪ್ರಸಕ್ತವಾದದ್ದು, ಏಕಘನವಾದ ವೇಳೆಯೇ ಕಾಲವೆಂಬುದು ಬರ್ಗ್‌ಸನ್ನನ ತತ್ತ್ವ. ಈ ವೇಳೆಯನ್ನು ಆತ ಕಾಲದ ಚಪ್ಪಡಿ ಎಂದು ವರ್ಣಿಸಿರುತ್ತಾನೆ. ಆ ವೇಳೆ ಚಿಕ್ಕದಾಗಿರಬಹುದು ಇಲ್ಲವೆ ನಿಶ್ಚಯದ ಕ್ರಿಯೆಯನ್ನೆಲ್ಲ ಒಟ್ಟಿಗೆ ಒಳಗೊಳ್ಳುವಷ್ಟು ವಿಶಾಲವಾಗಿರಬಹುದು. ಆದರೆ ಅದು ವಿಘಟಿತವಾಗಿರದ ಏಕ ಘನರೂಪ.

ಬರ್ಗ್‌ಸನ್ ಅಂಗೀಕರಿಸಿರುವ ಕಾಲ ಅನಂತವಾಗಿ ವಿಭಜಿಸಬಹುದಾದ ಕ್ಷಣಗಳಿಂದ ಕೂಡಿದ್ದಲ್ಲ ; ಹಾಗೆ ವಿಭಜಿಸಿದರೆ ಕಾಲವನ್ನು ಹಾಳುಮಾಡಿದಂತಾಗುತ್ತದೆ. ಹಿಂದಿನವರು ಕಾಲವನ್ನು ಆ ರೀತಿಯಾಗಿ ಬಗೆದಿದ್ದರು. ಅದರಿಂದ ಕಾಲ ಎರಡು ಅನವಸ್ಥೆಗಳಿಗೆ (ಇನ್‌ಸ್ಟೆಬಿಲಿಟಿ) ಎಡೆಕೊಟ್ಟಿತ್ತು. ಹಿಂದೆ ಹಿಂದೆ ಸರಿಯುತ್ತ ಕೊನೆಮುಟ್ಟದ ಕ್ಷಣಗಳ ಅನವಸ್ಥೆ ಒಂದು. ಮುಂದೆ ಮುಂದೆ ಸರಿಯುತ್ತ ಕೊನೆ ಮುಟ್ಟದ ಕ್ಷಣಗಳ ಅನವಸ್ಥೆ ಇನ್ನೊಂದು. ಹೀಗೆ ಕಾಲದ ಭಾವನೆ ಅನವಸ್ಥೆಗೆ ಎಡೆ ಕೊಟ್ಟದ್ದಕ್ಕೆ ಕಾರಣ. ಕಾಲವನ್ನು ಆಕಾಶದಂತೆ ಭಾವಿಸಿ ಅನಂತ ಬಿಂದುಗಳಾಗಿ ವಿಭಾಗ ಮಾಡಲು ಪ್ರಯತ್ನಿಸಿದ್ದು. ಗಡಿಯಾರದ ಸೆಕೆಂಡುಗಳನ್ನೂ ಮಿನಿಟುಗಳನ್ನೂ ಎಣಿಸಿ ಒಂದು ಅವಧಿಯನ್ನು ನಿರ್ಧರಿಸುವುದು ವಾಡಿಕೆಯಾಗಿದೆ. ಹೀಗೆ ಕಾಲವನ್ನು ಕ್ಷಣಗಳಾಗಿ ಒಡೆದು ಅವುಗಳನ್ನು ಎಣಿಸಿ ಕೂಡಿಸಿ ಕಾಲದ ಸ್ವರೂಪವನ್ನು ತಿಳಿಯಲೆತ್ನಿಸಿದಾಗ ಗಡಿಯಾರದ ಮುಳ್ಳು ಎಷ್ಟು ದೂರವನ್ನು ಮುಟ್ಟಿದೆಯೋ ಆ ದೂರದಿಂದ ಅವಧಿಯನ್ನು ಅಳೆಯುತ್ತೇವೆ. ಹೀಗೆ ಮಾಡಿದಾಗ ನಾವು ಅಳೆಯುವುದು ದೇಶವಾಗಿ ಪರಿವರ್ತನೆಯಾದ ಕಾಲ (ಸ್ಪೇಸಿಯಲಿಸ್ಟ್ ಟೈಮ್), ಯಾಂತ್ರಿಕವಾದ ಕಾಲ, ಜೀವಂತವಾದ ಕಾಲವಲ್ಲ.

ಕಾಲದ ಸ್ವರೂಪವನ್ನು ನಾವು ಅದರ ಹೊರಗೆ ನಿಂತು ಬುದ್ಧಿಯಿಂದ ತಿಳಿಯಲಾಗುವುದಿಲ್ಲ; ಅದನ್ನು ಕಣಗಳಾಗಿ ಒಡೆದು ಗ್ರಹಿಸುವುದಕ್ಕಾಗುವುದಿಲ್ಲ; ಅದರ ಒಳಹೊಕ್ಕು ಅಂತರ್ಬೋಧದಿಂದ (ಇಂಟ್ಯೂಷನ್) ಮಾತ್ರ ಅದನ್ನು ಗ್ರಹಿಸುವುದು ಸಾಧ್ಯ. ಒಂದು ಪದ್ಯವನ್ನು ಅಕ್ಷರಗಳನ್ನಾಗಿ ಒಡೆದು ಎಣಿಸಿ, ಈ ಪದ್ಯ ಐನೂರು ಅಕ್ಷರಗಳ ಸಮೂಹವೆಂದು ತಿಳಿದರೆ ಪದ್ಯದ ಸ್ವರೂಪ ಅರ್ಥವಾಗುತ್ತದೆಯೇ? ಅದು ಅದರ ಅರ್ಥವಾಗುವುದಾದರೆ ಪದ್ಯದ ಸ್ವರೂಪದ ಮಿಥ್ಯಾಭಾವನೆಯಾಗುವುದಿಲ್ಲವೇ? ಹಾಗೆಯೇ ಅವಧಿಯನ್ನೂ ಬಿಡಿಬಿಡಿಯಾದ ಕ್ಷಣಗಳ ಮೊತ್ತವೆಂದು ಭಾವಿಸಿದರೆ ಅದು ಮಿಥ್ಯಾಭಾವನೆಯಾಗುತ್ತದೆ.

ಈ ಮಿಥ್ಯಾಭಾವನೆಯಿಂದ ಉಪಯೋಗವಿಲ್ಲದೆ ಇಲ್ಲ. ವ್ಯಾವಹಾರಿಕ ಉಪಯೋಗವಿದೆ. ಆದರೆ ಅದು ಪಾರಮಾರ್ಥಿಕ ಸತ್ಯವಲ್ಲ. ಒಂದು ಕುದುರೆಯ ಅಥವಾ ಮನುಷ್ಯನ ಓಟವನ್ನು ಕ್ಯಾಮರಾ ಮೂಲಕ ಒಂದು ಸುರುಳಿಯ ಮೇಲೆ ಹಲವು ಬಿಡಿ ಬಿಡಿ ಚಿತ್ರಗಳಾಗಿ ಗ್ರಹಿಸಿ, ಅದನ್ನು ಸುತ್ತು ಯಂತ್ರಕ್ಕೆ ಸೇರಿಸಿ ತಿರುಗಿಸಿದಾಗ ನಮಗೆ ಓಟದ ತೋರಿಕೆಯುಂಟಾಗುತ್ತದೆ. ಇಂಥ ತೋರಿಕೆಯ ಚಿತ್ರ ಉಪಯೋಗದಲ್ಲಿದೆ. ಆದರೆ ಅದು ಪಾರಮಾರ್ಥಿಕ ಸತ್ಯವೆಂದು ತಿಳಿದರೆ ಅದು ಒಂದು ಭ್ರಮೆಯಾಗುತ್ತದೆ.

ಬರ್ಗ್‌ಸನ್ನನ ಕಾಲತತ್ತ್ವದಲ್ಲಿದ್ದ ಸತ್ಯಾಂಶವನ್ನು ಗ್ರಹಿಸಿ ಐನ್‌ಸ್ಟೈನ್ ಅದನ್ನು ಮಾರ್ಪಡಿಸಿರುತ್ತಾನೆ. ಕಾಲ ಬಿಟ್ಟು ದೇಶವಿಲ್ಲ, ದೇಶ ಬಿಟ್ಟು ಕಾಲವಿಲ್ಲ; ನಿಜವಾಗಿರುವುದು ಅವಿಭಾಜ್ಯವಾದ ದೇಶ–ಕಾಲ. ದೇಶ–ಕಾಲ ಸಾತತ್ಯವೇ ಸರಿಯಾದ ವರ್ಣನೆ. ದೇಶ ಕೇವಲ ನಿತ್ರಾಣವಾದ, ಖಾಲಿಯಾದ ವಿಷಯವಲ್ಲ. ಅದಕ್ಕೆ ಬಾಗು ಇದೆ, ವಕ್ರತೆ ಇದೆ, ಸ್ಥಿತಿಸ್ಥಾಪಕತ್ವವಿದೆ. ಆ ವಕ್ರತೆಗೆ ಕಾಲ ಕಾರಣ. ಆ ವಕ್ರತೆಯೇ ಕಾಲ. ಕಾಲ ಬರ್ಗ್‌ಸನ್ ತಿಳಿದಿದ್ದಂತೆ ಕಾಲ ಕೇವಲ ಚಲನೆಯಲ್ಲ. ಅದು ಹೆಪ್ಪುಗಟ್ಟುವ ಚಲನೆ. ವೇಳೆಯನ್ನು ಆತ ಕಾಲದ ಚಪ್ಪಡಿ ಎಂದು ಹೇಳಿದಾಗ ಆ ಲಕ್ಷಣದಲ್ಲಿ ದೇಶದ ಅಂಶ ಸ್ಪಷ್ಟವಾಗಿ ಕಾಣಿಸುತ್ತದೆ.
(ಜಿ.ಎಚ್.)

**ಅವಧಿಮೀರಿದ ಸಾಲ :** ವಿಧಿಸಿರುವ ಅವಧಿ ಮುಕ್ತಾಯಗೊಂಡು ನ್ಯಾಯಾಲಯ ಮತ್ತೊಂದು ಅವಧಿಯನ್ನು ಪುನಃ ವಿಧಿಸಲಾಗದಂತಿರುವ ಸಾಲಕ್ಕೆ ಈ ಹೆಸರಿದೆ (ಬಾರ್ಡ್ ಡೆಟ್ಸ್). ನ್ಯಾಯರೀತ್ಯ ಸಾಲವನ್ನು ಹಿಂತಿರುಗಿಪಡೆಯಬೇಕಾದಲ್ಲಿ ಹೂಡುವ ಯಾವುದೇ ಮೊಕದ್ದಮೆ ಅಥವಾ ನಡೆವಳಿಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ರೂಪುಗೊಳ್ಳಬೇಕಾಗುತ್ತದೆ. ಈ ಅವಧಿ ನಿರ್ಧಾರ 1963ರ ಪರಿಮಿತಿ ಕಾನೂನಿನ (ಲಿಮಿಟೇಷನ್ ಆ್ಯಕ್ಟ್) ರೀತ್ಯ ಏರ್ಪಡಿಸುತ್ತದೆ. ಈ ಕಾನೂನು 1908ರ ಭಾರತೀಯ ಪರಿಮಿತಿ ಕಾನೂನಿಗೆ (ಇಂಡಿಯನ್ ಲಿಮಿಟೇಷನ್ ಆ್ಯಕ್ಟ್) ಬದಲು ಆದದ್ದು. ಸಾಲಗಳಲ್ಲಿ ಹಲವು ವಿಧ: ಮಾರಾಟಗೊಂಡ ಪದಾರ್ಥಗಳ ಮೇಲಿನ ಹಣವನ್ನು ನೀಡದಿರುವುದು, ಕೂಲಿ ಮತ್ತು ಸಂಬಳದಲ್ಲಿನ ಬಾಕಿ, ನಿಯೋಗಿಮೇಲಿನ ಮೂಲಧನದ ಸಾಲಗಳು, ಹಣದ ಮೇಲಿನ ನಿಯೋಗಿ ಸಾಲಗಳು, ಹಿಂತಿರುಗಿಸದಿರುವ ಸಾಲಗಳು, ಕೊಟ್ಟ ಮಾತನ್ನು ಉಳಿಸಿಕೊಳ್ಳದ ಕಾರಣ ಆಗುವ ಕ್ಷತಿಪೂರೈಕೆ, ವಾಯಿದೆಯ ದಿನದಂದು ಹುಂಡಿ ಅಥವಾ ವಾಗ್ದಾನ ಪತ್ರವನ್ನು ಮಾನ್ಯ ಮಾಡದಿರುವುದು–ಇತ್ಯಾದಿ. ಪರಿಮಿತಿಯ ಅವಧಿಯನ್ನು ಪರಿಮಿತಿ ಕಾನೂನು ಸಾಮಾನ್ಯವಾಗಿ 3 ವರ್ಷಗಳೆಂದು ನಿಗದಿ ಮಾಡಿದೆ. ಇಲ್ಲಿ ಕೇವಲ ಅವಧಿ ಮಾತ್ರ ಮುಖ್ಯವಾಗಿರದೆ, 3 ವರ್ಷದ ಅವಧಿ ಪ್ರಾರಂಭವಾಗುವ ವೇಳೆಯೂ ಮುಖ್ಯ. ಅವಧಿ ಪ್ರಾರಂಭವಾಗುವ ವೇಳೆಯ ವಿಚಾರವಾಗಿ ಈ ಕಾನೂನಿನ ಕೊನೆಯಲ್ಲಿ ವಿವರಣೆಯನ್ನೀಯಲಾಗಿದೆ.

ಸಾಲಗಾರ ತಾನು ಸಾಲ ತೀರಿಸುವ ಅವಧಿ ಮುಕ್ತಾಯಗೊಳ್ಳುವ ಮೊದಲೇ ಸಾಲ ತೀರಿಸುವ ಅವಧಿಯನ್ನು ನವೀಕರಿಸಿಕೊಂಡಿದ್ದು, ಅಂಥವನು ಸಾಲ ತೆಗೆದುಕೊಂಡಿದ್ದಕ್ಕೆ ಬರೆವಣಿಗೆಯ ರೂಪದಲ್ಲಿ ನೀಡಿರುವ ಸ್ವೀಕಾರ ಪತ್ರವನ್ನು ನ್ಯಾಯಾಲಯದ ಮುಂದೆ ಅವನ ವಿರುದ್ಧ ಮೊಕದ್ದಮೆ ಹೂಡಲು ಹಾಜರುಪಡಿಸಿದರೆ, ಸಾಲಗಾರನಿಗೆ ನವೀಕರಿಸಿಕೊಂಡ ದಿನದಿಂದ ಒಂದು ಹೊಸ ಪರಿಮಿತಿಯ ಅವಧಿಯನ್ನು ನೀಡಲಾಗುತ್ತದೆ. ಇದೇ ರೀತಿ, ನಿಗದಿ ಮಾಡಿರುವ ಅವಧಿ ಮುಗಿಯುವುದರೊಳಗಾಗಿ ಸಾಲಗಾರ ಮೂಲಧನದ ಅಥವಾ ಬಡ್ಡಿ ಪಾವತಿಯನ್ನು ಭಾಗಶಃ ಮಾಡಿದ್ದರೆ, ಒಂದು ಹೊಸ ಪರಿಮಿತಿಯ ಅವಧಿಯನ್ನು ಪಾವತಿ ಮಾಡಿದ ದಿನದಿಂದ ಗೊತ್ತು ಮಾಡಲಾಗುತ್ತದೆ.

ಒಟ್ಟಿನಲ್ಲಿ ಬಾಕಿ ಇರುವ ಯಾವುದೇ ಆರ್ಥಿಕ ವ್ಯವಹಾರದಲ್ಲೂ ಸೂಕ್ತ ಕ್ರಮ ಜರುಗಿಸುವುದರಲ್ಲಿ ಎಚ್ಚರಿಕೆ ವಹಿಸಬೇಕಾದುದು ಅವಶ್ಯ. ಹೀಗಾಗದಿದ್ದ ಪಕ್ಷಕ್ಕೆ ಸಾಲ ಅವಧಿಮೀರಿದ ಸಾಲವಾಗಿ ಪರಿಣಮಿಸುತ್ತದೆ.
(ಜಿ.ಕೆ.ಎ.)

**ಅವಧೀ :** ಹಿಂದಿಯ ಒಂದು ಉಪಭಾಷೆ, ಉತ್ತರಪ್ರದೇಶದ ಮಧ್ಯಭಾಗದ ಜನರ ಮಾತೃಭಾಷೆ. ಅಲಹಾಬಾದ್ ಮತ್ತು ಲಖನೌ ಪಟ್ಟಣಗಳಲ್ಲಿ ಈ ಭಾಷೆಯನ್ನು ಆಡುವವರು ಇದ್ದಾರೆ. ಇದು ಪಶ್ಚಿಮ ಹಿಂದಿಯ ಬ್ರಜ್ ಮತ್ತು ಬಿಹಾರೀಯ ಭೋಜ್‌ಪುರಿ ಭಾಷೆಗಳ ಮಧ್ಯಸ್ಥ ಭಾಷೆ. ಇದಕ್ಕೆ ಸ್ವಲ್ಪ ಭಿನ್ನವಾಗಿರುವುದೇ ಮಧ್ಯಪ್ರದೇಶದ ದಕ್ಷಿಣದಲ್ಲಿ ಆಡುವ ಬಾಘೇಲೀ ಭಾಷೆ. ಬಘೇಲಿಯ ದಕ್ಷಿಣ ಮತ್ತು ಪೂರ್ವಕ್ಕಿರುವ ಛತ್ತೀಸ್‌ಗಡೀ ಭಾಷೆಯೊಡನೆ ಅವಧೀ ಪೂರ್ವ ಹಿಂದಿಯ ಇಡೀ ವರ್ಗವನ್ನು ರೂಪಿಸುತ್ತದೆ.

ಚಾರಿತ್ರಿಕವಾಗಿ ಅರ್ಧಮಾಗಧೀ ಪ್ರಾಕೃತಭಾಷೆ ಅವಧೀ ಭಾಷೆಯ ಮೂಲವೆನ್ನಬಹುದು. ಏಕೆಂದರೆ ಇದು ಕ್ರಮವಾಗಿ ಸೌರಸೇನಿ ಮತ್ತು ಮಾಗಧೀ ಪ್ರಾಕೃತ ಭಾಷೆಗಳ ಮೂಲವನ್ನುಳ್ಳ ಬ್ರಜ್ ಮತ್ತು ಬಿಹಾರೀ ಭಾಷೆಗಳ ನಡುವೆ ಇದೆ. ರಚನಾದೃಷ್ಟಿಯಿಂದ ಇದು ಹಿಂದೂಸ್ತಾನಿ ಭಾಷೆಗಿಂತ ಭಿನ್ನವಾಗಿದೆ. ಇದರಲ್ಲಿ ಭವಿಷ್ಯತ್ಕಾಲಗಳು ಪೂರ್ಣವಾಗಿ ಭಿನ್ನವಾಗಿದ್ದು, ಸಹಾಯಕ ಕ್ರಿಯಾಪದವೂ ಬಹುಮಟ್ಟಿಗೆ ಭಿನ್ನವಾಗಿದೆ.

ಅವಧೀ ಭಾಷೆಯ ಅತ್ಯಂತ ಪ್ರಸಿದ್ಧ ಕೃತಿಯೆಂದರೆ ತುಲಸೀದಾಸರ ರಾಮಚರಿತಮಾನಸ. ಇದನ್ನು ವಿಶ್ವಸಾಹಿತ್ಯದ ಶ್ರೇಷ್ಠಕೃತಿಗಳಲ್ಲೊಂದೆಂದು ಪರಿಗಣಿಸಲಾಗಿದೆ.
(ಎಸ್.ಬಿ.ಆರ್.)

**ಅವಧೂತ :** ವರ್ಣಾಶ್ರಮ ಧರ್ಮಗಳನ್ನು ತ್ಯಜಿಸಿ, ಪರಮಾತ್ಮ ಧ್ಯಾನಾಸಕ್ತನಾದ ಯೋಗಿ. ಇವರಲ್ಲಿ ನಾಲ್ಕು ಬಗೆ. ಗೃಹಸ್ಥಾಶ್ರಮಿಯಾಗಿದ್ದುಕೊಂಡೇ ಬ್ರಹ್ಮಮಂತ್ರವನ್ನು ಉಪಾಸನೆ ಮಾಡುವವ ಗಾರ್ಹಸ್ಥ್ಯಾವಧೂತ, ಅಭಿಷೇಕವಿಧಿಯಿಂದ ಸಂಸ್ಕೃತನಾದ ಶೈವಸನ್ಯಾಸಿ ಶೈವಾವಧೂತ, ಬ್ರಹ್ಮೋಪಾಸಕನಾದವ ಬ್ರಹ್ಮಾವಧೂತ. ಶೈವಾವಧೂತರಿಗೆ ಪೈತೃಕಾದಿ ಸರ್ವಕರ್ಮಗಳಲ್ಲಿ ಅಧಿಕಾರವಿಲ್ಲ. ನಾಲ್ಕನೆಯವ ಹಂಸಾವಧೂತ. ಯಾವ ವಿಧವಾದ ಜಾತಿ ಲಾಂಛನವೂ ಇಲ್ಲದೆ ಶೋಕ ಮೋಹ ವರ್ಜಿತನಾಗಿ, ಯಾವ ವಿಧಿ ನಿಷೇಧಗಳಿಗೂ ಬದ್ಧನಾಗದೆ, ಯಾವ ಉದ್ಯಮವೂ ಇಲ್ಲದೆ, ಸಂಕಲ್ಪರಹಿತನಾಗಿ ಪ್ರಾರಬ್ಧಗಳನ್ನು ಅನುಭವಿಸುತ್ತ ಸಂತುಷ್ಟಚಿತ್ತನಾಗಿ ದೇಶಾಟನೆ ಮಾಡುವುದೇ ಈತನ ಕಾರ್ಯ.
(ಎಸ್.ಎನ್.ಕೆ.)

**ಅವಧೂತಗೀತೆ :** ಶಿವಮೊಗ್ಗ ಜಿಲ್ಲೆಯ ಕ್ಯಾಸನೂರಿನಲ್ಲಿ 1430ರಲ್ಲಿ ಮಠಾಧಿಪತಿ ಯಾಗಿದ್ದ ಸಪ್ತಕಾವ್ಯದ ಗುರುಬಸವ ಎಂಬ ಕವಿಯ ಕೃತಿ. ಇದರಲ್ಲಿ ವೈರಾಗ್ಯಬೋಧಕವಾದ 101 ಚೌಪದಿಗಳಿವೆ. ಆದಿಯಲ್ಲಿ ಬಸವೇಶ್ವರನ ಸ್ತೋತ್ರವಿದೆ. ಕೊನೆಯಲ್ಲಿ ಅವಧೂತ ಲಕ್ಷಣಗಳನ್ನು ಹೇಳಲಾಗಿದೆ.
(ಬಿ.ಎಸ್.)

**ಅವಮೂಲ್ಯನ¹ :** ಒಂದು ವಸ್ತು ಅಥವಾ ಆಸ್ತಿ ಹಳೆಯದಾಗುವುದು, ನಶಿಸುವುದು, ಮಾರುಕಟ್ಟೆ ಬೆಲೆ ಕುಗ್ಗುವುದು ಆಸ್ತಿ ನಷ್ಟವಾಗುವುದು ಅಥವಾ ಅದರ ಮೌಲ್ಯ ಕುಗ್ಗುವುದು. ಇಂಥ ಕ್ರಿಯೆಗೆ ಅವಮೂಲ್ಯನ, ಮೌಲ್ಯಹ್ರಾಸ, ಅಪಮೌಲ್ಯ (ಡಿಪ್ರಿಷಿಯೇಷನ್) ಎಂಬ ಹೆಸರುಗಳಿವೆ.

ಲಾಭಗಳಿಕೆಯ ಸಾಮರ್ಥ್ಯ ಕುಗ್ಗಿದಾಗ ಎಲ್ಲ ಆಸ್ತಿಗಳೂ ಅವಮೂಲ್ಯನಕ್ಕೆ ಗುರಿಯಾಗುತ್ತವೆ. ಸಾಮಾನ್ಯವಾಗಿ ಆಸ್ತಿಯನ್ನು ಬಳಸಬಹುದಾದ ಕಾಲ, ರಿಪೇರಿ ಮತ್ತು ಹೊಸ ಸಾಧನಗಳ ಸೇರಿಕೆ, ಆಸ್ತಿಯ ಮೂಲಬೆಲೆ–ಇವುಗಳಂತೆಯೇ ಇದೂ ಉದ್ದಿಮೆ ವೆಚ್ಚಗಳಲ್ಲಿ ಒಂದಾಗಿದೆ.

ಪ್ರತಿವರ್ಷ ಮೂಲಬೆಲೆಯ ಗೊತ್ತಾದ ಸೇಕಡವಾರು ಭಾಗ ಹಣವನ್ನು ಅದು ನಶಿಸುವ ಲೆಕ್ಕದ ಮೇಲೆ ಕಳೆಯುವುದು ಇಲ್ಲವೇ ವರ್ಷಕ್ಕೆ ಇಷ್ಟೆಂದು ಎಣಿಕೆ ಹಾಕುವುದು. ಇಲ್ಲವೇ ವರ್ಷಂಪ್ರತಿ ಅವಮೂಲ್ಯನ ನಿಧಿಯನ್ನು ಕೂಡಿಸುವುದು – ಈ ರೀತಿ ಆಸ್ತಿಯ ಅವಮೂಲ್ಯನವನ್ನು ಎದುರಿಸಬೇಕಾಗುತ್ತದೆ.
(ವಿ.ಕೆ.ಎಸ್.)

**ಅವಮೂಲ್ಯನ² :** ಒಂದು ರಾಷ್ಟ್ರದ ಹಣದ ಮೌಲ್ಯದ ವಿಷಯದಲ್ಲೂ ಅವಮೂಲ್ಯನ (ಡಿವ್ಯಾಲ್ಯುಯೇಷನ್) ಸಂಭವಿಸಬಹುದು. ಅಂದರೆ ಒಂದು ಚಾಲ್ತಿ ಹಣದ ಬಾಹ್ಯಮೌಲ್ಯವನ್ನು ವಿದೇಶಿ ಚಾಲ್ತಿ ಹಣದಲ್ಲಿ ಇಲ್ಲವೆ ಸ್ವರ್ಣದಲ್ಲಿ ಅಧಿಕೃತವಾಗಿ ತಗ್ಗಿಸುವುದೇ ಅವಮೂಲ್ಯನ, ಉದಾಹರಣೆಗಾಗಿ, ಭಾರತ 1966ರ ಜೂನ್ 6 ರಂದು ತನ್ನ ಚಾಲ್ತಿ ಹಣವಾದ ರೂಪಾಯಿ

ಯನ್ನು ಅಮೆರಿಕದ ಡಾಲರು ಮತ್ತು ಇಂಗ್ಲೆಂಡಿನ ಸ್ಟರ್ಲಿಂಗಿನಲ್ಲಿ ಅವಮೂಲ್ಯನ ಮಾಡಿತು. ಅಂದರೆ ಅವಮೂಲ್ಯನದ ಮೊದಲು ಭಾರತದ 4.76 ರೂ.ಗಳಿಂದ ಅಮೆರಿಕದ ಒಂದು ಡಾಲರನ್ನು ಇಲ್ಲವೆ 13.33 ರೂಪಾಯಿಗಳು ಇಂಗ್ಲೆಂಡಿನ ಒಂದು ಪೌಂಡು ಸ್ಟರ್ಲಿಂಗನ್ನು ಕೊಂಡುಕೊಳ್ಳಲಾಗುತ್ತಿತ್ತು. ಅವಮೂಲ್ಯನದ ತರುವಾಯ ಒಂದು ಡಾಲರನ್ನು ಕೊಂಡುಕೊಳ್ಳಲು ಭಾರತ 7.5೦ ರೂಪಾಯಿಗಳನ್ನು ಇಲ್ಲವೆ ಒಂದು ಪೌಂಡನ್ನು ಕೊಂಡು ಕೊಳ್ಳಲು 21 ರೂಪಾಯಿಗಳನ್ನು ತೆರಬೇಕು.

ಅವಮೂಲ್ಯನದ ಮೊದಲು ರೂಪಾಯಿಯ ಬಾಹ್ಯಮೌಲ್ಯ 0.186621 ಗ್ರಾಂ ಸ್ವರ್ಣಕ್ಕೆ ಸಮಾನವಾಗಿತ್ತು. ಅವಮೂಲ್ಯನದಿಂದಾಗಿ, ಬಾಹ್ಯಮೌಲ್ಯವನ್ನು 0.118161 ಗ್ರಾಂ ಸ್ವರ್ಣಕ್ಕೆ ಸ್ವೀಕರಿಸಲಾಯಿತು. ಅಂದರೆ ಅವಮೂಲ್ಯನದ ಮೊದಲು ನೂರು ರೂಪಾಯಿಗಳ ಬಾಹ್ಯಮೌಲ್ಯ 18.66 ಗ್ರಾಂ ಸ್ವರ್ಣಕ್ಕೆ ಸಮಾನವಾಗಿತ್ತು. ಆದ್ದರಿಂದ ರೂಪಾಯಿ ಹಾಗೂ ಸ್ವರ್ಣಮೌಲ್ಯ ಪ್ರಮಾಣದಲ್ಲಿ ರೂಪಾಯಿಯ ಮೌಲ್ಯ ಶೇ.36.5 ತಗ್ಗಿತು.

ಅವಮೂಲ್ಯನದ ತರುವಾಯ ಅಮೆರಿಕಕ್ಕೆ ಇಲ್ಲವೆ ಇಂಗ್ಲೆಂಡಿಗೆ ರೂಪಾಯಿ ಶೇ.36.5 ಅಗ್ಗವಾದವು ಎಂದರ್ಥ. ಅಂದರೆ ಭಾರತದ ನಿರ್ಯಾತಗಳು (ರಫ್ತು : ಎಕ್ಸ್‌ಪೋರ್ಟ್) ಅಮೆರಿಕಕ್ಕೆ ಇಲ್ಲವೆ ಇಂಗ್ಲೆಂಡಿಗೆ ಶೇ.36.5 ಅಗ್ಗವಾದವು ಎಂದರ್ಥ. ಭಾರತಕ್ಕೆ ಡಾಲರು ಇಲ್ಲವೆ ಪೌಂಡ್ ಸ್ಟರ್ಲಿಂಗ್ ಶೇ.57.5 ರಷ್ಟು ತುಟ್ಟಿಯಾದವು. ಅಂದರೆ ಭಾರತಕ್ಕೆ ಆಯಾತಗಳು (ಇಂಪೋರ್ಟ್ಸ್) ಶೇ.57.5ರಷ್ಟು ತುಟ್ಟಿಯಾದವು ಎಂದರ್ಥ. ಆದ್ದರಿಂದ ಒಂದು ದೇಶದ ಚಾಲ್ತಿಹಣದ ಅವಮೂಲ್ಯನ ಇನ್ನೊಂದು ದೇಶದ ಚಾಲ್ತಿಹಣದ ಅತಿಮೌಲ್ಯಕ್ಕೆ ಸಮಾನವಾದುದಲ್ಲ.

ಅನೇಕ ದೇಶಗಳು ತಮ್ಮ ಚಾಲ್ತಿಹಣಗಳ ಅವಮೂಲ್ಯನವನ್ನು ಆಗಾಗ ಬೇರೆ ಬೇರೆ ಕಾರಣಗಳಿಗಾಗಿ ಮಾಡುತ್ತ ಬಂದಿವೆ. ಇವುಗಳಲ್ಲಿ ಮುಖ್ಯವಾದವು ಫ್ರಾನ್ಸ್, ರಷ್ಯ, ಜರ್ಮನಿ, ಇಟಲಿ, ಪೋಲೆಂಡ್, ಹಂಗರಿ, ಆಸ್ಟ್ರಿಯ, ರೊಮೇನಿಯ, ಗ್ರೀಸ್, ಪೋರ್ಚುಗಲ್, ಅರ್ಜೆಂಟೈನ, ಬೆಲ್ಜಿಯಂ, ಬಲ್ಗೇರಿಯ, ಫಿನ್‌ಲೆಂಡ್, ಇಂಗ್ಲೆಂಡ್, ಯೂಗೋಸ್ಲೋವಾಕಿಯ, ಚೆಕೊಸ್ಲೋವೇಕಿಯ, ಭಾರತ ಮುಂತಾದವು. ಆದರೆ ಒಂದನೆಯ ಮಹಾಯುದ್ಧದ ಪೂರ್ವದಲ್ಲಿ ವಿದೇಶಿ ತೆರಿಗೆಯ ಸಮತೋಲನದಲ್ಲಿರುವ ಕೊರೆಯನ್ನು ಸರಿಪಡಿಸಲು ಅವಮೂಲ್ಯನ ಉತ್ಕೃಷ್ಟ ನೀತಿಯೆಂದು ಪರಿಗಣಿಸಲಾಗಲಿಲ್ಲ. ಇದು ಬಳಕೆಗೆ ಬಂದುದು ಒಂದನೆಯ ಮಹಾಯುದ್ಧದ ಅನಂತರ. ಅನೇಕ ದೇಶಗಳು ಪ್ರತಿಕೂಲ ವಿದೇಶಿತೆರಿಗೆಯ ಸಮತೋಲನಕ್ಕೊಳಗಾದರೂ ಈ ಶತಮಾನದ ನಾಲ್ಕನೆಯ ದಶಕದ ತನಕ ಅವಮೂಲ್ಯನವನ್ನು ಕಾರ್ಯಗತ ಮಾಡಿರಲಿಲ್ಲ. ವಿದೇಶಿ ತೆರಿಗೆಯ ಸಮತೋಲನವನ್ನು (ಡಿಸ್‌ಈಕ್ವಿಲಿಬ್ರಿಯಂ) ಎದುರಿಸುತ್ತಿರುವ ಇಂಗ್ಲೆಂಡ್ 1949ರಲ್ಲಿ ತನ್ನ ಚಾಲ್ತಿ ಹಣ ಪೌಂಡು ಸ್ಟರ್ಲಿಂಗನ್ನು ಅವಮೌಲ್ಯನಗೊಳಿಸಿತು. ಜೊತೆಗೆ ಇತರ 19 ಚಾಲ್ತಿಹಣಗಳ ಅವಮೌಲ್ಯನವೂ ಆಯಿತು. ಅವುಗಳಲ್ಲಿ ಭಾರತದ ರೂಪಾಯಿಯೂ ಒಂದು. ಕೆಲವು ವೇಳೆ ಕೆಲವು ದೇಶಗಳು ಹೆಚ್ಚಿನ ಆರ್ಥಿಕ ನೆರವನ್ನು ತಮ್ಮ ಆರ್ಥಿಕ ಏಳಿಗೆಗಾಗಿ ಬರಮಾಡಿಕೊಳ್ಳಲು ಚಾಲ್ತಿಹಣಗಳ ಅವಮೂಲ್ಯನ ಮಾಡುತ್ತವೆ. ಉದಾ: ಗ್ರೀಸ್ ದೇಶ ತನ್ನ ಚಾಲ್ತಿಹಣ ಡ್ರ್ಯಾಕ್ಮವನ್ನು 1953ರಲ್ಲಿ, ಮೆಕ್ಸಿಕೊ ತನ್ನ ಚಾಲ್ತಿಹಣ ಪೆಸೊವನ್ನು 1954ರಲ್ಲಿ, ಸ್ಪೇನ್ ತನ್ನ ಚಾಲ್ತಿಹಣ ಫೆಸೆಟಾವನ್ನು 1959ರಲ್ಲಿ ಅವಮೂಲ್ಯನ ಮಾಡಿದವು. 1966ರಲ್ಲಿ ಭಾರತ ರೂಪಾಯಿಯ ಅವಮೂಲ್ಯನ ಮಾಡುವ ಉದ್ದೇಶ ಇದೇ ಆಗಿತ್ತು.

ಒಂದು ದೇಶದ ಧಾರಣೆ ಅತಿಯಾಗಿ ಏರುತ್ತಿದ್ದರೆ, ಆ ದೇಶದ ಚಾಲ್ತಿಹಣದ ಮೌಲ್ಯ ಇಳಿಯುತ್ತದೆ. ಆ ದೇಶದ ಧಾರಣೆ ಏರಿದಂತೆ, ಇನ್ನಿತರ ದೇಶಗಳ ಧಾರಣೆ ಏರಿದರೆ, ಇನ್ನಿತರ ದೇಶಗಳ ಚಾಲ್ತಿಹಣವನ್ನು ಕೊಂಡುಕೊಳ್ಳುವುದು ಕಷ್ಟವಲ್ಲ. ಆದರೆ ಒಂದು ದೇಶದ ಧಾರಣೆ ಅತಿಯಾಗಿ ಏರುತ್ತಿದ್ದರೆ, ಆ ದೇಶ ಇತರ ದೇಶಗಳ ಚಾಲ್ತಿಹಣವನ್ನು ಕೊಂಡುಕೊಳ್ಳಲು ಹೆಚ್ಚಿನ ಹಣವನ್ನು ತೆರಬೇಕು. ಇದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಆ ದೇಶದ ನಿರ್ಯಾತಗಳು ತುಟ್ಟಿಯಾಗುತ್ತವೆ. ಅದರಿಂದಾಗಿ ಅವು ತಮ್ಮ ಸ್ಪರ್ಧಾತ್ಮಕ ಗುಣಗಳನ್ನು ಕಳೆದುಕೊಳ್ಳುತ್ತವೆ. ಹೀಗಾದಾಗ ಆ ದೇಶಗಳ ಆಯಾತಗಳು (ಇಂಪೋರ್ಟ್ಸ್) ಹೆಚ್ಚಾದರೆ, ಆ ದೇಶಕ್ಕೆ ಇತರ ದೇಶಗಳು ತೆರಬೇಕಾದ ಹಣಕ್ಕಿಂತ, ಅದು ಬೇರೆ ದೇಶಗಳಿಗೆ ಕೊಡುವ ಹಣ ಹೆಚ್ಚಾಗುತ್ತದೆ. ಇನ್ನಿತರ ಬಾಬುಗಳಿಂದ ಬರುವ ಗಳಿಕೆ ಈ ಅಂತರವನ್ನು ಸರಿಪಡಿಸದಿದ್ದರೆ, ಆ ದೇಶದ ವಿದೇಶಿ ತೆರಿಗೆಯಲ್ಲಿ ಸಮತೋಲನವಿರುವುದಿಲ್ಲ; ಅದರಲ್ಲಿ ಕೊರೆ ಹುಟ್ಟುತ್ತದೆ. ಇದನ್ನು ಸರಿಪಡಿಸಲೋಸುಗ ಅಂತಾರಾಷ್ಟ್ರೀಯ ದ್ರವ್ಯನಿಧಿ ಆಗಾಗ ಅಲ್ಪಾವಧಿ ನೆರವು ನೀಡಿದರೂ ಅಷ್ಟು ಪ್ರಯೋಜನವಾಗುವುದಿಲ್ಲ. ಇಂಥ ಸ್ಥಿತಿ ಆ ದೇಶದ ಆರ್ಥಿಕ ಏಳಿಗೆಗೆ ಅಹಿತ. ಆದ್ದರಿಂದ ಇದನ್ನು ಸರಿಪಡಿಸಬೇಕು. ಇದನ್ನು ನಿರ್ಯಾತಗಳನ್ನು ಹಿಗ್ಗಿಸಿ, ಆಯಾತಗಳನ್ನು ಕುಗ್ಗಿಸಿ ಸರಿಪಡಿಸಬಹುದು; ಇಲ್ಲವೆ ಆ ದೇಶದ ಚಾಲ್ತಿಹಣದ ಬಾಹ್ಯಮೌಲ್ಯವನ್ನು ಬೇರೆ ದೇಶಗಳ ಚಾಲ್ತಿಹಣಗಳಲ್ಲಿ ಇಲ್ಲವೆ ಸ್ವರ್ಣದಲ್ಲಿ ಅಧಿಕೃತವಾಗಿ ತಗ್ಗಿಸುವುದರಿಂದಲೂ ಸಾಧ್ಯ.

ಅವಮೂಲ್ಯನ ಮಾಡಿದ ದೇಶ ತನ್ನ ನಿರ್ಯಾತಗಳ ಧಾರಣೆಯನ್ನು ಅವಮೌಲ್ಯನದಿಂದ ಇಳಿಸಿದರೂ ಅವುಗಳಿಗೆ ಅನುಕೂಲ ಗಿರಾಕಿ ಇರುತ್ತದೆಂದು ಹೇಳಲಾಗುವುದಿಲ್ಲ; ಏಕೆಂದರೆ, ಇದು ವಿದೇಶೀ ಗ್ರಾಹಕರ ಮಾನಸಿಕ ಪ್ರವೃತ್ತಿ, ಅವರ ಆಯದ ಸ್ಥಿತಿ, ರಾಜಕೀಯ ನೀತಿ ಧೋರಣೆಗಳು ಇತ್ಯಾದಿ ಅಂಶಗಳನ್ನು ಅವಲಂಬಿಸಿದೆ. ಈ ದೇಶದ ಜೊತೆಯಲ್ಲಿ ಇತರ ದೇಶಗಳೂ ತಮ್ಮ ಹಣವನ್ನು ಅವಮೌಲ್ಯನಗೊಳಿಸಿ ರಫ್ತು ವಿಚಾರದಲ್ಲಿ ಪೈಪೋಟಿ ನಡೆಸುವುವೋ ಎನ್ನುವ ಅಂಶವೂ ಮುಖ್ಯ. ಅವಮೌಲ್ಯನದಿಂದ ಅದೃಶ್ಯ ನಿರ್ಯಾತಗಳು ತುಂಬ ಹೆಚ್ಚುವುವೆಂದು ತಿಳಿಯುವುದು; ಅವಮೂಲ್ಯನ ಮಾಡಿದ ದೇಶಕ್ಕೆ ಹೆಚ್ಚು ಹೆಚ್ಚು ವಿದೇಶೀಯರು ಪ್ರವಾಸ ಕೈಗೊಳ್ಳುವರೆಂದು ಬಗೆಯುವುದು; ವಿದೇಶೀ ಖಾಸಗಿ ಬಂಡವಾಳ ಹೂಡಿಕೆ ಹೆಚ್ಚುವುದೆಂದು ಗ್ರಹಿಸುವುದು– ಇವುಗಳೆಲ್ಲ ಯಶಸ್ವಿಯಾಗಬೇಕಾದರೆ ಅವಮೂಲ್ಯನ ಮಾಡಿದ ದೇಶದ ಆರ್ಥಿಕ ಆಯವ್ಯಯ ಮತ್ತು ರಾಜಕೀಯ ನೀತಿ, ಚಟುವಟಿಕೆಗಳು ಯಥೋಚಿತವಾಗಿರಬೇಕಾಗುತ್ತದೆ. ಈ ವಿಷಯಗಳನ್ನು ಸೂಕ್ಷ್ಮವಾಗಿ ವಿವೇಚಿಸಿ ಅವಮೂಲ್ಯನ ಮಾಡಿದಾಗ ಪರಿಸ್ಥಿತಿ ಅನುಕೂಲವಿದ್ದರೆ, ಅವಮೂಲ್ಯನದಿಂದ ನಿರ್ಯಾತ ಧಾರಣೆ ಇಳಿದು ನಿರ್ಯಾತಗಳ ಗಿರಾಕಿ ವಿದೇಶೀ ಮಾರುಕಟ್ಟೆಗಳಲ್ಲಿ ಹೆಚ್ಚುತ್ತದೆ. ಗಿರಾಕಿ ಹೆಚ್ಚಿದಂತೆ, ಅದೇ ಪ್ರಮಾಣದಲ್ಲಿ ನಿರ್ಯಾತ ಸರಕುಗಳನ್ನು ಸರಬರಾಜು ಮಾಡಿದರೆ ವಿದೇಶಿವಿನಿಮಯದ ಗಳಿಕೆಯೂ ಹೆಚ್ಚುತ್ತದೆ. ವಿದೇಶೀ ತೆರಿಗೆಯ ಸಮತೋಲನದಲ್ಲಿರುವ ಕೊರೆ, ಶಿಲ್ಕು ತಗ್ಗುತ್ತದೆ. ಕ್ರಮೇಣ ಮೂಲಭೂತ ಸಮತೋಲ ಸರಿಹೋಗುತ್ತದೆ.

ಬೇಡಿಕೆಗನುಗುಣವಾಗಿ ನಿರ್ಯಾತಗಳ ಸರಬರಾಯಿಯನ್ನು ಹೆಚ್ಚಿಸಬೇಕಾದರೆ ನಿರ್ಯಾತಗಳ ಉತ್ಪತ್ತಿಯನ್ನು ಹೆಚ್ಚಿಸಬೇಕಾಗುತ್ತದೆ. ಇದಕ್ಕೆ ದೇಶದ ಉತ್ಪತ್ತಿಕಾರಕ ಸಂಪನ್ಮೂಲಗಳ ಹೆಚ್ಚಿನ ಬಳಕೆ ಅಗತ್ಯ. ಇದು ಹೊಸ ಹೊಸ ಉದ್ಯೋಗಾವಕಾಶಗಳನ್ನು ನಿರ್ಮಿಸುವುದು, ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುವುದು, ಜನರ ಜೀವನಮಟ್ಟವನ್ನು ಉತ್ತಮಪಡಿಸುವುದು– ಇಂಥ ಯೋಜನೆಗಳಿಂದ ಆರ್ಥಿಕ ಏಳಿಗೆ ಸಾಧ್ಯ. ಇದಕ್ಕೆ ಜನ ಮತ್ತು ಸರ್ಕಾರದ ಪ್ರೋತ್ಸಾಹ, ಪ್ರಾಮಾಣಿಕತೆಗಳು ಅಗತ್ಯ. ದೇಶದ ಆಯವ್ಯಯ, ವಾಣಿಜ್ಯ, ಕಾರ್ಮಿಕ ಮತ್ತು ಕೃಷಿ ನೀತಿಗಳು ಈ ಗುರಿಸಾಧನೆಗೆ ಸಹಾಯಕಗಳಾಗಬೇಕು. ದೇಶದಲ್ಲಿ ಆರ್ಥಿಕ ಅಸ್ತಿಮಿತತೆ ಇರಬಾರದು. ಧಾರಣೆ ಮತ್ತು ವೆಚ್ಚಗಳ ಸ್ಥಿತಿ ಕನಿಷ್ಠಪಕ್ಷ ಅವಮೂಲ್ಯನ ಮಾಡಿದ ಕಾಲಾವಧಿಯಲ್ಲಿದ್ದಂತೆ ಇರಲೇಬೇಕು. ಧಾರಣೆ ವೆಚ್ಚಗಳು ಏರುತ್ತಿದ್ದರೆ, ನಿರ್ಯಾತಗಳ ಉತ್ಪಾದನಾ ವೆಚ್ಚಗಳೂ ಏರುತ್ತವೆ. ಈ ರೀತಿ ವೆಚ್ಚಗಳು ಏರಿದರೆ, ನಿರ್ಯಾತಗಳ ಧಾರಣೆ ಅವಮೂಲ್ಯನದಿಂದಾಗಿ, ಅವಮೂಲ್ಯನ ಮಾರುಕಟ್ಟೆಗಳಲ್ಲಿ ನಷ್ಟವಾಗುವುದು. ವೆಚ್ಚಗಳು ಗಳಿಸುವ ವಿದೇಶೀ ವಿನಿಮಯವನ್ನು ತಿಂದುಹಾಕುವುವು. ಮೇಲಾಗಿ, ಅವಮೂಲ್ಯನಗೊಂಡ ಚಾಲ್ತಿಹಣದ ವಿಷಯದಲ್ಲಿ ವಿದೇಶಗಳ ವಿಶ್ವಾಸ ಶಿಥಿಲಗೊಳ್ಳುವುದು ಸಹಜ. ಇದರಿಂದ ನಿರ್ಯಾತ ವ್ಯಾಪಾರಕ್ಕೆ ಉತ್ತೇಜನ ಕಡಿಮೆಯಾಗಬಹುದು. ಆದ್ದರಿಂದ ಅವಮೂಲ್ಯನದ ತರುವಾಯ ನಿರ್ಯಾತ ವಸ್ತುಗಳ ಉತ್ಪಾದನೆ ರಾಷ್ಟ್ರೀಯ ಪ್ರಶ್ನೆಯಷ್ಟೇ ಅಲ್ಲ, ಅಂತಾರಾಷ್ಟ್ರೀಯ ಪ್ರಶ್ನೆಯೂ ಆಗಬೇಕು. ನಿರ್ಯಾತ ಆರ್ಥಿಕ ಪ್ರಗತಿಯ ಯಂತ್ರವಾಗಬೇಕು.

ಅವಮೂಲ್ಯನ ಆದಕೂಡಲೇ ಅವಮೂಲ್ಯನ ಮಾಡಿದ ದೇಶದ ವರ್ತಕರು ಚಾಲ್ತಿಹಣದ ಆಂತರಿಕಮೂಲ್ಯ ಇಳಿದಿದೆ ಎಂಬ ಹುಸಿ ವಾದವನ್ನು ಗ್ರಾಹಕರಿಗೆ ಮನಗಾಣಿಸಿ, ಹೆಚ್ಚು ಹೆಚ್ಚು ಧಾರಣೆಗಳಿಗೆ ಸರಕುಗಳನ್ನು ಮಾರಿ, ಅತಿ ಹೆಚ್ಚು ಲಾಭ ಪಡೆಯಬಹುದು. ಆದರೆ ಅವಮೂಲ್ಯನದಿಂದ ಚಾಲ್ತಿಹಣದ ಬಾಹ್ಯಮೌಲ್ಯದ ತಗ್ಗುವಿಕೆ ಮಾತ್ರ ಆಗುತ್ತದೆ. ವರ್ತಕರು ಮಾರುವ ಸರಕುಗಳಲ್ಲಿ ಆಯಾತ ಅಂಶವಿದ್ದರೆ ಮಾತ್ರ ಅವು ತುಟ್ಟಿಯಾಗುವ ಕಾರಣ, ಅವಮೂಲ್ಯನದ ಅನಂತರ ಸರಕುಗಳ ಧಾರಣೆ ಏರುತ್ತದೆ. ಅವಮೂಲ್ಯನ ಮಾಡಿದ ದೇಶಕ್ಕೆ ಆಯಾತಗಳು ತುಂಬ ಆವಶ್ಯಕ ಮತ್ತು ಅತ್ಯಗತ್ಯ. ಸರಕು ಮತ್ತು ಸೇವೆಗಳನ್ನು ಒಳಗೊಂಡಿದ್ದರೆ ಅವಮೂಲ್ಯನ ಅವುಗಳ ಆಯಾತಗಳನ್ನು ವಾಸ್ತವಿಕವಾಗಿ ತಗ್ಗಿಸದು. ಅವಮೂಲ್ಯನ ಮಾಡಿದ ದೇಶ ತುಂಬ ಹೆಚ್ಚಾಗಿ ಆಯಾತಗಳನ್ನು ಅವಲಂಬಿಸಿದ್ದರೆ, ಅವಮೂಲ್ಯನದ ನಿರ್ಯಾತಗುಣಗಳು ಅದರ ಆಯಾತ ಅವಗುಣಗಳಲ್ಲಿ ಹೂತುಹೋಗುವುವು. ಅಧಿಕ ಆಯಾತಗಳು ಅವಮೂಲ್ಯನ ಮಾಡಿದ ದೇಶದಲ್ಲಿ ಇದ್ದರೆ ಸ್ಥಿತಿ ಇನ್ನೂ ಹದಗೆಡುತ್ತದೆ. ಒಟ್ಟು ಸರಬರಾಯಿಗಿಂತ ಗಿರಾಕಿಗಳು ಹೆಚ್ಚುತ್ತ ಹೋದರೆ ಧಾರಣೆ ಏರುತ್ತದೆ; ಹಣದ ಮೌಲ್ಯ ಇಳಿಯುತ್ತದೆ. ಇದನ್ನೇ ಸ್ಫೀತಿ, ಹಣದುಬ್ಬರ, ಹಣಬಾಹುಳ್ಯ ಎಂದು ಹೇಳುವರು. ಧಾರಣೆ ಏರುತ್ತದೆಂದು ವೇತನಗಳನ್ನು ಅನಿವಾರ್ಯವಾಗಿ ಏರಿಸುವುದು. ಧಾರಣೆ ವೇತನಗಳು ಏರುತ್ತವೆಂದು ಉತ್ಪಾದನೆಯ ವೆಚ್ಚ ಏರುವುದು; ಇದರಿಂದಾಗಿ ಮತ್ತೆ ಧಾರಣೆ ಏರುವುದು– ಈ ರೀತಿಯ ಹಣದುಬ್ಬರದ ಆವರ್ತನ ಶ್ರೀಸಾಮಾನ್ಯರ ಬದುಕನ್ನು ಕಷ್ಟಕ್ಕೀಡುಮಾಡುವುದು. ಆಗ ಅವಮೂಲ್ಯನ ಹಣದುಬ್ಬರದ ಪ್ರಭಾವವನ್ನು ಹೆಚ್ಚಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಅಂತಾರಾಷ್ಟ್ರೀಯ ಆಯಾತ ನಿರ್ಯಾತ ವ್ಯವಹಾರ ಬಹು ಕಷ್ಟದ್ದಾಗಿ, ದೇಶ ನಷ್ಟಕ್ಕೊಳಗಾಗಬೇಕಾಗುತ್ತದೆ.

ಅವಮೂಲ್ಯನ ಫಲಕಾರಿಯಾಗಬೇಕಾದರೆ ದೇಶದಲ್ಲಿ ನಗದುಹಣ ಅಧಿಕವಾಗಿರಬಾರದು. ನಿರ್ಯಾತಗಳಿಗೆ ಅನುಕೂಲ ಮೂಲ್ಯ ಸಾಪೇಕ್ಷತೆ ಇರಬೇಕು. ಅವಮೂಲ್ಯನದ ತರುವಾಯ ಆಯದ ಮಟ್ಟ ಬದಲಾಗಬಾರದು. ಮೊದಲೇ ಹುಟ್ಟಿದ ವಿದೇಶಿ ತೆರಿಗೆಗಳ

ಸಮತೋಲದಲ್ಲಿರುವ ಕೊರೆಯನ್ನು ತುಂಬಲು ಮತ್ತು ವಿಸ್ತಾರ ಆಯ ನೀತಿಯಿಂದ ಮುಂದೆ ಹುಟ್ಟುವ ಈ ಕೊರೆಯನ್ನು ತುಂಬುವುದೇ ಅವಮೂಲ್ಯನದ ಉದ್ದೇಶವಾದರೆ, ಎಷ್ಟೇ ಅನುಕೂಲಮೌಲ್ಯ ಸಾಪೇಕ್ಷಸ್ಥಿತಿ ಇದ್ದರೂ ಖಂಡಿತವಾಗಿ ವಿಫಲವಾಗುವುದು. ಅವಮೂಲ್ಯನವನ್ನು ಆಶ್ರಯಿಸುವ ಪೂರ್ವದಲ್ಲಿ ದೇಶದ ವೆಚ್ಚದಲ್ಲಿ ತಗ್ಗುವಿಕೆ ಅತ್ಯಗತ್ಯ. ಅವಮೂಲ್ಯನದ ತರುವಾಯವಾದರೂ ಈ ವೆಚ್ಚ ಇಳಿಯಲೇಬೇಕು. ಇಲ್ಲದಿದ್ದರೆ ಹಣದುಬ್ಬರ ಇಲ್ಲದಂತೆ ಮಾಡಲು ಸಾಧ್ಯವೇ ಇಲ್ಲ. ಅವಮೂಲ್ಯನದ ತರುವಾಯ ಹಣದುಬ್ಬರ ಮುಂದುವರೆದರೆ, ಅವಮೂಲ್ಯನ ದೇಶದಲ್ಲಿರುವ ಹಣದುಬ್ಬರ ಪ್ರಭಾವವನ್ನು ಕುಂಠಿತ ಗೊಳಿಸದು; ಅರ್ಥವ್ಯವಸ್ಥೆಯ ಬಾಹ್ಯವಲಯದ ಮೇಲಾದ ಹಣದುಬ್ಬರದ ಆಘಾತವನ್ನು ನಿವಾರಿಸುವ ಬದಲು ಉದ್ರೇಕಿಸುವುದು. ಆದ್ದರಿಂದ ಅವಮೂಲ್ಯನ ಮಾಡಿದಾಗ ದೇಶದ ಉತ್ಪತ್ತಿಕಾರಕ ಸಂಪನ್ಮೂಲಗಳ ಹೆಚ್ಚಿನ ಪ್ರಾಯೋಗಿಕ ಉಪಯೋಗಕ್ಕನುಗುಣವಾದ ವೆಚ್ಚಗಳ ಹೊಂದಾಣಿಕೆ ಅತ್ಯಗತ್ಯ. (ಡಿ.ಎನ್.ಆರ್.)

**ಅವಯವ :** ವೈದ್ಯವಿಜ್ಞಾನದ ಪ್ರಕಾರ ದೇಹದ ಮೇಲುಭಾಗದಲ್ಲಿರುವ ಹೆಗಲು, ತೋಳು, ಮುಂದೋಳು, ಮಣಿಕಟ್ಟು, ಕೈ (ಹಸ್ತ–ಬೆರಳುಗಳು ಅಂಗೈ ಕೂಡಿರುವ ಭಾಗ) ಮತ್ತು ದೇಹದ ಕೆಳಭಾಗದಲ್ಲಿರುವ ಸೊಂಟಭಾಗ, ತೊಡೆ, ಕಾಲು, (ಮೊಣಕಾಲು ಹರಡುಗಳ ನಡುವಣ ಭಾಗ), ಹರಡು ಪಾದ– ಇದಕ್ಕೆ ಈ ಹೆಸರಿದೆ. ಇವು ಚಲನಾಂಗಗಳು.

ಆಡುಮಾತಿನಲ್ಲಿ ಕೈಕಾಲುಗಳನ್ನು ಅವಯವ ಎನ್ನುತ್ತೇವೆ. ಅವಯವ ಪದಕ್ಕೆ ಬೇರೆ ಅರ್ಥಗಳೂ ಇವೆ: ಯಾವುದಾದರೂ ಒಂದು ವಸ್ತುವಿನ ಕೊನೆಯ ಭಾಗ; ಒಂದು ರಚನೆಯುಳ್ಳ ಅವಯವದಂಥ ಭಾಗ; ಮರದ ಮುಖ್ಯ ಕೊಂಬೆ; ಪರ್ವತ ಸಾಲಿನ ಒಂದು ಚಾಚು; ಯಾವುದಾದರೂ ಒಂದು ಸಾಧನ ಸಲಕರಣೆಯ ಕೈಕಾಲುಗಳಂಥ ಭಾಗ ಇತ್ಯಾದಿ. *

**ಅವಯವ ಶೇಷಗಳು :** ಕ್ಷೀಣವಾದ ನಿಷ್ಪ್ರಯೋಜಕ ಅವಯವಗಳು (ವೆಸ್ಟೀಜಿಯಲ್ ಆರ್ಗನ್ಸ್). ಶೇಷಾಂಗಗಳೆಂದೂ ಕರೆಯುವರು. ಸಾಮಾನ್ಯವಾಗಿ ಇವುಗಳಿಗೆ ಯಾವುದೇ ನಿರ್ದಿಷ್ಟ ಕಾರ್ಯ ಇರುವುದಿಲ್ಲ.

ಪ್ರಾಣಿಗಳಲ್ಲಿ ಬಾಹ್ಯಸ್ಥಿತಿಗನುಗುಣವಾಗಿ ಅವುಗಳ ಜೀವನಕ್ರಮವೂ ಜೀವನಕ್ರಮಕ್ಕನುಗುಣವಾಗಿ ಅವುಗಳ ದೇಹರಚನೆಯೂ ಇರುವುವು. ಬಾಹ್ಯ ಪರಿಸ್ಥಿತಿಯಲ್ಲಿ ಸ್ಥಿರರೂಪದ ಬದಲಾವಣೆಗಳುಂಟಾದರೆ, ಅದರ ಪರಿಣಾಮ ಜೀವನಕ್ರಮ, ದೇಹರಚನೆಗಳ ಮೇಲೂ ಆಗಿ ಅವುಗಳಲ್ಲಿ ಮಾರ್ಪಾಟುಗಳಾಗುವುವು. ಒಂದು ವೇಳೆ ಹೀಗೆ ಆಗದಿದ್ದರೆ, ಪ್ರಾಣಿಗಳು ನಿರ್ವಂಶ (ಎಕ್ಸ್‌ಟಿಂ) ಆಗುವುವು. ಆದರೆ ಎಷ್ಟೋ ಪ್ರಾಣಿಗಳು ಬದಲಾದ ಪರಿಸ್ಥಿತಿಗನುಸಾರವಾಗಿ ತಮ್ಮ ಅಂಗಗಳನ್ನು ರೂಪಾಂತರಿಸಿಕೊಳ್ಳುವುವು. ಈ ಘಟನೆಯಲ್ಲಿ ಕೆಲವು ಅಂಗಗಳು ನಿರುಪಯುಕ್ತವಾಗುವುದುಂಟು. ಹೀಗೆ ನಿರುಪಯುಕ್ತಾಂಗಗಳು ರೂಪಾಂತರ ಹೊಂದಿ ಬೇರೆ ಕಾರ್ಯಗಳನ್ನು ನಿರ್ವಹಿಸದಿದ್ದರೆ, ಅವುಗಳ ಬೆಳವಣಿಗೆ ಕಾಲಕ್ರಮೇಣ ಕಡಿಮೆಯಾಗುತ್ತ ಹೋಗಿ, ಅಂತ್ಯದಲ್ಲಿ ಅದೃಶ್ಯವಾಗುವುದು. ಆದ್ದರಿಂದ ಅವಯವ ಶೇಷಗಳು ಬೇರೆ ಏನೂ ಇರದೆ ಒಂದಾನೊಂದು ಕಾಲದಲ್ಲಿ ಇತರ ಅವಯವಗಳಂತೆ ಸಾಮಾನ್ಯ ಅವಯವಗಳಾಗಿದ್ದು, ಕಾಲಮಾನ, ಪರಿಸ್ಥಿತಿಗನುಗುಣವಾಗಿ ಮಾರ್ಪಾಟು ಹೊಂದದೆ, ಕ್ರಮೇಣ ಕ್ಷೀಣವಾಗುತ್ತ ಹೋಗಿ, ವಿನಾಶದ ಅಂತಿಮ ಘಟ್ಟ ಮುಟ್ಟಿರುವ ಅಂಗಗಳ ಗುರುತುಗಳು ಮಾತ್ರವೆಂದು ಊಹಿಸಬಹುದು.

ಉದಾಹರಣೆಗೆ, ಕುದುರೆಯ ಕಟ್ಟು ಮೂಳೆ (ಸ್ಪ್ಲಿಂಟ್ ಬೋನ್) ಶೇಷಾವಸ್ಥೆಯಲ್ಲಿದ್ದ ಅಂಗವಾಗಿದೆ. ಕುದುರೆಯ ಪೂರ್ವಜರಲ್ಲಿ 5 ಕಾಲ್ಬೆರಳುಗಳು ಇದ್ದವೆಂದು ಪಳೆಯುಳಿಕೆಗಳ ಆಧಾರದಿಂದ ಗೊತ್ತಾಗಿದೆ. ಓಡುವ ಸ್ವಭಾವಕ್ಕನುಗುಣವಾಗಿ, 1, 2, 4 ಮತ್ತು 5 ನೆಯ ಕಾಲ್ಬೆರಳುಗಳು ಮಾಯವಾಗಿ, ಕೇವಲ 3 ನೆಯ ಬೆರಳು ಉಳಿದು ಖುರವಾಗಿ ಮಾರ್ಪಾಟು ಹೊಂದಿರುವುದರಿಂದ ಖುರದ ಅಕ್ಕಪಕ್ಕದಲ್ಲಿದ್ದ ಕಟ್ಟುಮೂಳೆಗಳು, 2 ಮತ್ತು 4 ನೆಯ ಕಾಲ್ಬೆರಳುಗಳ ಶೇಷಾಂಗಗಳಾಗಿರುವುವು.

ಇದರಂತೆ ಕೀವಿ ಎಂಬ ಪಕ್ಷಿಯ ರೆಕ್ಕೆಗಳು ಕೂಡ ಶೇಷಾವಸ್ಥೆಯ ಅವಯವಗಳೇ. ಇವು ಇದ್ದ ನಡುಗಡ್ಡೆಗಳಲ್ಲಿ ವೈರಿಗಳು ಇರದಿದ್ದರಿಂದ, ಇವುಗಳಿಗೆ ಹಾರಾಡುವ ಆವಶ್ಯಕತೆ ಬೀಳಲಿಲ್ಲ. ಆದ್ದರಿಂದ ರೆಕ್ಕೆಗಳು ಅನವಶ್ಯಕ ಅವಯವಗಳಾಗಿ ಪರಿಣಮಿಸಿ ಕಾಲಾಂತರದಲ್ಲಿ ಶೇಷಾವಸ್ಥೆಹೊಂದಿದ ಅಂಗಗಳಾದುವೆಂದು ತರ್ಕಿಸಬಹುದು. ಇದೇ ಪ್ರಕಾರ ಹೆಬ್ಬಾವುಗಳ ಹಿಂಗಾಲು, ತಿಮಿಂಗಲಗಳ ಕಟಿಚಕ್ರ (ಪೆಲ್ವಿಕ್ ಗರ್ಡಲ್) ಮತ್ತು ಹಿಂಗಾಲಿನ ಕಾಲುಗಳ ಎಲುಬುಗಳ ಶೇಷಾಂಗಕ್ಕೆ ಉದಾಹರಣೆಗಳನ್ನು ಕೊಡಬಹುದು.

ಎಲ್ಲ ಪ್ರಾಣಿಗಳಲ್ಲೂ ಒಂದಿಲ್ಲೊಂದು ಅವಯವ ಶೇಷಗಳು ಇದ್ದೇ ಇರುವುವು. ಮನುಷ್ಯನ ಶರೀರದಲ್ಲಿಯೇ 150 ಕ್ಕಿಂತ ಹೆಚ್ಚು ಅವಯವ ಶೇಷಗಳನ್ನು ಗುರುತಿಸಬಹುದು. ಅಪೆಂಡಿಕ್ಸ್, ವಕ್ಷಸ್ಥಳ, ಹುಬ್ಬುಗಳ ಮೇಲಿರುವ ಕೂದಲುಗಳು, ಮೂರನೆಯ ಕಣ್ಣು ರೆಪ್ಪೆ, ಪುಚ್ಛ ಮಣಿ ಮೂಳೆಗಳು (ಕಾಕ್ಸಿಕ್ಸ್) (ಕೊಸಿಜಿಯಲ್ ಬೋನ್ಸ್) ಕಿವಿಯ ಸ್ನಾಯುಗಳು ಮುಂತಾದವು ಸಹಜವಾಗಿ ಕಂಡುಬರುವ ಹಲವಾರು ದೃಷ್ಟಾಂತಗಳು.

ಅಪೆಂಡಿಕ್ಸ್ ವಿಶೇಷವಾಗಿ ಸಸ್ಯಾಹಾರಿಗಳಲ್ಲಿ ಉಪಯುಕ್ತ ಅಂಗವಾಗಿದ್ದು, ಮನುಷ್ಯನಲ್ಲಿ ಅವಯವ ಶೇಷವಾಗಿರುವುದು. ವಕ್ಷಸ್ಥಳ, ಹುಬ್ಬುಗಳ ಮೇಲಿರುವ ಕೂದಲುಗಳು ಇಡೀ ಶರೀರದ ಮೇಲಿದ್ದ ಕೂದಲುಗಳ ಶೇಷಗಳು. ಪುಚ್ಛ ಮಣಿ ಮೂಳೆಗಳು ಒಂದಾನೊಂದು ಕಾಲದಲ್ಲಿದ್ದ ಬಾಲದ ಗುರುತೆಂದೂ ಕಿವಿಯ ಸ್ನಾಯುಗಳು ಕಿವಿ ಅಲ್ಲಾಡಿಸುವುದಕ್ಕೆ ಉಪಯುಕ್ತವಾಗಿದ್ದ ಸ್ನಾಯುಗಳ ಶೇಷಗಳೆಂದೂ ಉದಾಹರಣೆಗಳು.

ಪ್ರಾಣಿಶಾಸ್ತ್ರಕ್ಕೆ ಅವಯವ ಶೇಷಗಳ ಜ್ಞಾನ ಒಂದು ಮಹತ್ತ್ವದ ಅಂಗವಾಗಿದೆ. ಅವಯವ ಶೇಷಗಳ ಪರಿಚಯದ ಮೂಲಕ ಭಿನ್ನ ಭಿನ್ನ ಪ್ರಾಣಿಗಳಲ್ಲಿರುವ ಸಂಬಂಧವನ್ನು ಕಂಡುಹಿಡಿದು, ಅವುಗಳ ವಿಕಾಸ ಹೇಗೆ ಆಯಿತೆಂಬುದನ್ನು ಗುರುತಿಸಬಹುದು, ಶೇಷಗಳ ಅತ್ಯಧಿಕ ಮಹತ್ತ್ವ ಜೀವವಿಕಾಸವಾದಕ್ಕಿರಬಹುದು. ಇವು ವಿಕಾಸವಾದಕ್ಕೆ ಶಾಸ್ತ್ರೀಯ ಆಧಾರಗಳೆಂದು ಪರಿಗಣಿತವಾಗಿವೆ. ವಿವಿಧ ಜಾತಿಯ ಪ್ರಾಣಿಗಳು ಹೇಗೆ ಉಂಟಾದವು ಎಂಬುದಕ್ಕೆ ಎಷ್ಟೋ ವಾದಗ ಉಂಟು. ಇವುಗಳಲ್ಲಿ ಒಂದು ವಾದ ವಿಶಿಷ್ಟ ನಿರ್ಮಾಣವಾದ. ಅದು ತಿಳಿಸುವಂತೆ ದೈವೀಕ ಪ್ರೇರಣೆಯಿಂದ, ಭಿನ್ನ ಭಿನ್ನ ಜಾತಿಯ ಪ್ರಾಣಿಗಳು ಹುಟ್ಟಿರುವುದರಿಂದ ಅವುಗಳಲ್ಲಿ ಯಾವ ಸಂಬಂಧ ಇರುವುದಿಲ್ಲ. ಇದಕ್ಕೆ ಪ್ರತಿಯಾಗಿ ಪ್ರಾಣಿಗಳು ಕಾಲ, ದೇಶ, ಪರಿಸರಕ್ಕನುಸಾರವಾಗಿ ರೂಪಾಂತರ ಹೊಂದಿ ವಿವಿಧ ಪ್ರಭೇದಗಳಾಗಿರುವುವೆಂದು ಊಹಿಸಬಹುದು. ಆದ್ದರಿಂದ ಜೀವವಿಕಾಸವಾದದ ಪ್ರಕಾರ ಈಗಿರುವ ವಿವಿಧ ಜಾತಿಗಳು ಒಂದಕ್ಕೊಂದು ಸಂಬಂಧಪಟ್ಟಿರುವುದೆಂದು ಗೊತ್ತಾಗಿದೆ. ಈ ತಿಳಿವಳಿಕೆಯನ್ನು ಸಿದ್ಧಪಡಿಸುವು ದಕ್ಕೆ ಅವಯವ ಶೇಷಗಳು ಒಳ್ಳೆಯ ನಿದರ್ಶಕಗಳು. ಆದರೆ ಅವಯವ ಶೇಷಗಳ ಅಸ್ತಿತ್ವಕ್ಕೆ ಯಾವುದೇ ವಿಶಿಷ್ಟ ನಿರ್ಮಾಣವಾದದ ಕಾರಣವನ್ನು ಕೊಡಲಿಕ್ಕೆ ಬರುವುದಿಲ್ಲ. (ಬಿ.ವೈ.ಎಂ.ಜಿ.)

**ಅವರೆ :** ಲೆಗ್ಯೂಮಿನೋಸೀ (ಫ್ಯಾಬೇಸೀ) ಕುಟುಂಬದ ಪ್ಯಾಪಿಲಿಯೊನೇಸೀ (ಫ್ಯಾಬಾಯ್ಡೀ) ಉಪಕುಟುಂಬಕ್ಕೆ ಸೇರಿದ ಪ್ರಸಿದ್ಧ ತರಕಾರಿ ಸಸ್ಯ (ಹೈಯಾಸಿಂತ್ ಬೀನ್, ಬೋನವಿಸ್ಟ್). ವೈಜ್ಞಾನಿಕ ಹೆಸರು ಲ್ಯಾಬ್‌ಲ್ಯಾಬ್ ಪರ್‌ಪ್ಯೂರಿಯಸ್. ಡಾಲಿಕಾಸ್ ಲ್ಯಾಬ್‌ಲ್ಯಾಬ್ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಇದು ಆಫ್ರಿಕದ ಉಷ್ಣಪ್ರದೇಶದ ಮೂಲದ್ದು. ವ್ಯಾಪಕವಾಗಿ ಇದರ ಕೃಷಿ ಉಂಟು. ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಇದರ ಬಳಕೆ ಹೆಚ್ಚು ಪರಿಚಿತ. ಇದರ ಕಾಳು ತುಂಬ ರುಚಿಕರ ಹಾಗೂ ಜನಪ್ರಿಯ ತರಕಾರಿ ಸೊಪ್ಪು ಒಳ್ಳೆಯ ಗೊಬ್ಬರ ಹಾಗೂ ದನಗಳ ಮೇವು. ಸಾಮಾನ್ಯವಾಗಿ ಹೊಲಗಳಲ್ಲಿ ಬೆಳೆಸಲಾಗುತ್ತದೆ. ಸು.60 ಸೆಂಮೀ ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ಮೂರು ಕಿರು ಎಲೆಗಳುಳ್ಳ ಸಂಯುಕ್ತ ಮಾದರಿಯವು. ಅವರೆಕಾಯಿಯ ಎಳೆಯ ಕಾಳುಗಳನ್ನು ತರಕಾರಿಯಾಗಿ ಉಪಯೋಗಿಸಲಾಗುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ನೈಟ್ರೋಜನ್, ಅನ್ನಾಂಗ 'ಬಿ' ಮತ್ತು 'ಸಿ' ಹಾಗೂ ಲವಣಾಂಶಗಳು.

ಮಣ್ಣು : ಇದನ್ನು ನೀರು ಬಸಿದು ಹೋಗುವಂತಹ ಎಲ್ಲಾ ತರಹದ ಮಣ್ಣುಗಳಲ್ಲಿ ಬೆಳೆಯಬಹುದು

ಕಾಲ : ವರ್ಷದಲ್ಲಿ ಈ ಬೆಳೆಯನ್ನು ಎರಡು ಬಾರಿ ಬೆಳೆಯಬಹುದಾದರೂ ಇದನ್ನು ಡಿಸೆಂಬರ್–ಜನವರಿ ತಿಂಗಳಲ್ಲಿ ಬೆಳೆಯುವುದೇ ಹೆಚ್ಚು.

ತಳಿಗಳು : 1. ಹೆಬ್ಬಾಳ ಅವರೆ– 3: ಈ ತಳಿಯನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಎಳೆಯ ಕಾಯಿಗಳು ಬಿತ್ತಿದ 70–75 ದಿವಸಗಳಲ್ಲಿ ಕೊಯ್ಲಿಗೆ ಬರುತ್ತದೆ. ಈ ತಳಿ ವರ್ಷದ ಯಾವುದೇ ಕಾಲದಲ್ಲಿ ಬೆಳೆಯಬಹುದು.

2. ಅರ್ಕಾ ಜಯ್ : ಈ ತಳಿಯನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಅಭಿವೃದ್ಧಿಪಡಿಸಿದೆ. ಗಿಡಗಳು ಗಿಡ್ಡವಾಗಿದ್ದು ಪೊದೆಯಾಕಾರದಲ್ಲಿ ಬೆಳೆಯುತ್ತವೆ. ವರ್ಷದ ಕಾಲದಲ್ಲಿಯೂ ಬೆಳೆಯಬಹುದು. ಹೂವುಗಳು ನೇರಳೆ ಬಣ್ಣವನ್ನು ಹೊಂದಿರುತ್ತವೆ. ಕಾಯಿಯು ಉದ್ದವಾಗಿದ್ದು, ತಿಳಿ ಹಸಿರು ಬಣ್ಣವನ್ನು ಹೊಂದಿದ್ದು ಬಾಗಿರುತ್ತದೆ. ನಾರಿನ ಅಂಶ ಇರುವುದು ಕಾಯಿಗಳು ಒಳ್ಳೆಯ ಅಡಿಗೆ ಗುಣಗಳನ್ನು ಹೊಂದಿವೆ. ಈ ತಳಿಗೆ ಕಡಿಮೆ ತೇವಾಂಶ ತಡೆದುಕೊಳ್ಳುವ ಶಕ್ತಿ ಇದೆ. ಬೆಳೆಯ ಅವಧಿ 75 ದಿವಸಗಳು. ಒಂದು ಹೆಕ್ಟೇರಿಗೆ 12 ಟನ್ ಇಳುವರಿ ಪಡೆಯಬಹುದು.

3. ಅರ್ಕಾ ವಿಜಯ್ : ಈ ತಳಿಯನ್ನು ಎಲ್ಲ ಕಾಲದಲ್ಲೂ ಬೆಳೆಯಬಹುದಾಗಿದೆ. ಕಾಯಿ. ಈ ತರಕಾರಿಯಾಗಿ ಉಪಯೋಗಿಸಬಹುದಾದ ತಳಿಯಾಗಿದ್ದು, ಹೂವುಗಳು ಬಿಳಿ ಬಣ್ಣದಿಂದ ಕೂಡಿವೆ. ಕಾಯಿಗಳು ಕಡು ಹಸಿರು ಬಣ್ಣದಿಂದ ಕೂಡಿದ್ದು ಪ್ರತಿ ಹೆಕ್ಟೇರಿಗೆ 50 ದಿನಗಳಲ್ಲಿ ಟನ್ ಇಳುವರಿ ಕೊಡಬಲ್ಲದು.

| ಬೇಸಾಯ ಸಾಮಗ್ರಿಗಳು | ಪ್ರತಿ ಹೆಕ್ಟೇರಿಗೆ |
|---|---|
| 1. ಬೀಜಗಳು | 30–37.5 ಕಿ.ಗ್ರಾಂ. |
| 2. ಕೊಟ್ಟಿಗೆ ಗೊಬ್ಬರ | 15–20 ಟನ್ |
| 3. ರಸಾಯನಿಕ ಗೊಬ್ಬರಗಳು ಸಾರಜನಕ | 25 ಕಿ.ಗ್ರಾಂ |
| ರಂಜಕ | 50 ಕಿ.ಗ್ರಾಂ |
| ಪೊಟ್ಯಾಷ್ | 25 ಕಿ.ಗ್ರಾಂ |

**ಬೇಸಾಯ ಕ್ರಮಗಳು :** ಭೂಮಿಯನ್ನು ಹದ ಮಾಡಿದ ಅನಂತರ 45 ಸೆಂ.ಮೀ ಅಂತರದಲ್ಲಿ ಬೋದು ಮತ್ತು ಸಾಲುಗಳನ್ನು ಸೇರಿಸಬೇಕು. ಶಿಫಾರಸ್ಸು ಮಾಡಿದ ಪೂರ್ಣ ಪ್ರಮಾಣದ ಕೊಟ್ಟಿಗೆ ಗೊಬ್ಬರ, ರಸಾಯನಿಕ ಗೊಬ್ಬರಗಳನ್ನು ಸಾಲುಗಳಲ್ಲಿ ಹಾಕಿ ಚೆನ್ನಾಗಿ ಮಣ್ಣಿನಲ್ಲಿ ಬೆರಸಬೇಕು. ನಂತರ ಸಾಲುಗಳನ್ನು ಬೀಜದಿಂದ ಕಣಕ್ಕೆ 15 ಸೆಂ.ಮೀ ಅಂತರವಿರುವಂತೆ ಬಿತ್ತನೆ ಮಾಡಬೇಕು.

ನೀರು ಮತ್ತು ಅಂತರ ಬೇಸಾಯ ಮಣ್ಣು ಮತ್ತು ಹವಾಮಾನಕ್ಕನುಗುಣವಾಗಿ 3–4 ದಿವಸಗಳಿಗೊಮ್ಮೆ ನೀರನ್ನು ಹಾಯಿಸಬೇಕು ಹಾಗೂ ಭೂಮಿಯನ್ನು ಕಳೆ ರಹಿತವಾಗಿಡಬೇಕು.

ಸಸ್ಯ ಸಂರಕ್ಷಣೆ ಕೀಟಗಳು : ಕಾಯಿ ಕೊರೆಯುವ ಹುಳು ಮತ್ತು ಸಸ್ಯ ಹೇನು.

**ರೋಗಗಳು :** ಯಾವ ಮುಖ್ಯವಾದ ರೋಗಗಳೂ ಈ ಬೆಳೆಗೆ ಬರುವುದಿಲ್ಲ.

ಹತೋಟಿ ವಿಧಾನ : ಸಸ್ಯ ಹೇನುಗಳು ಹತೋಟಿಗೆ 1.7 ಮಿ.ಲೀ. ಡೈಮಿಥೊಯೇಟ್ ಅನ್ನು 1 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಕಾಯಿ ಕೊರೆಯುವ ಕೀಟವನ್ನು ಹತೋಟಿ ಮಾಡಲು ಹೂ ಬಿಡುವ ಸಮಯದಲ್ಲಿ 4 ಗ್ರಾಂ. ಕರ್ಬಾರಿಲ್ 1 ಲೀಟರ್ ನೀರನ್ನು ಬೆರೆಸಿ ಸಿಂಪಡಿಸಬೇಕಾಗುತ್ತದೆ. ಪ್ರತಿ ಹೆಕ್ಟೇರಿಗೆ 500 ಲೀಟರ್ ಸಿಂಪರಣಾ ದ್ರಾವಣ ಬೇಕಾಗುತ್ತದೆ. 15 ದಿವಸಗಳ ಅಂತರದಲ್ಲಿ 2 ಬಾರಿ ಸಿಂಪಡಿಸಬೇಕು. ಅಥವಾ ಪ್ರತಿ ಹೆಕ್ಟೇರ್‌ಗೆ 25 ಕಿ.ಗ್ರಾಂ ಕಾರ್ಬಾರಿಲ್ ಶೇ.25 ಧೂಳು ಅಥವಾ 25 ಕಿ.ಗ್ರಾಂ ಫೆನ್ವಲರೇಟ್ ಶೇ3ರ ಧೂಳು ಅಥವಾ 25 ಕಿ.ಗ್ರಾಂ ಮೆಲಾಥಿಯನ್ ಶೇ. 5ರ ಧೂಳನ್ನು ಹೂ ಬಿಡುವ ಸಮಯದಲ್ಲಿ 15 ದಿವಸಗಳ ಅಂತರದಲ್ಲಿ 2 ಬಾರಿ ಸಿಂಪಡಿಸಬೇಕು.

**ಕೊಯ್ಲು ಮತ್ತು ಇಳುವರಿ :** ತರಕಾರಿಗೆ ಎಳೆಯ ಕಾಯಿಗಳನ್ನು ಕೀಳಬೇಕು. ಕಾಯಿಗಳನ್ನು 3–4 ದಿವಸಗಳ ಅಂತರದಲ್ಲಿ ಕುಯಿಲು ಮಾಡಬೇಕು. ಪ್ರತಿ ಹೆಕ್ಟೇರಿಗೆ 6000–8000 ಕಿ.ಗ್ರಾಗಳಷ್ಟು ಹಸುರು ಕಾಯಿಗಳ ಇಳುವರಿಯನ್ನು ಪಡೆಯಬಹುದು.*

**ಅವಲೋಕಿತೇಶ್ವರ :** ಅಮಿತಾಭನೆಂಬ ಧ್ಯಾನಿಬುದ್ಧನ ಸತ್ತ್ವದಿಂದ ಹುಟ್ಟಿ ಬಂದ ಬೋಧಿಸತ್ತ್ವನಿಗೆ ಈ ಹೆಸರಿದೆ. ಮಹಾಯಾನ ಬೌದ್ಧರ ನಂಬಿಕೆಯಂತೆ ಧ್ಯಾನಿಬುದ್ಧರು ತಮ್ಮ ಸತ್ತ್ವಗಳಿಂದ ಇಂಥ ಜಿನಪುತ್ರರನ್ನು ಅಥವಾ ಬೋಧಿಸತ್ತ್ವರನ್ನು ಉತ್ಪಾದಿಸುತ್ತಾರೆ. ಜಗತ್ತನ್ನು ಕರುಣೆಯಿಂದ ಕಾಣುವವನು ಎಂಬುದು ಅವಲೋಕಿತೇಶ್ವರ ಎಂಬ ಪದದ ಅರ್ಥ. ಇದು ಅಮಿತಾಭನ ಸಂಭೋಗಕಾಯ. ಇದರ ವರ್ತನೆಯಿಂದಲೇ ಜಗತ್ತಿನಲ್ಲಿ ಗೌತಮ ಬುದ್ಧ ಶಾಕ್ಯಮುನಿಯಾಗಿ ಅವತರಿಸುವನೆಂದೂ ಕಲ್ಪನೆ. ಅವಲೋಕಿತೇಶ್ವರನ ಶಕ್ತಿಯಾಗಿ ಶ್ವೇತತಾರಾ ಎಂಬ ಸ್ತ್ರೀ ಬುದ್ಧ ರೂಪವುಂಟು. ಚೀನದಲ್ಲಿ ಮತ್ತು ಜಪಾನಿನಲ್ಲಿ ಕುಆನ್–ಯಿನ್ ಅಥವಾ ಕ್ವನ್ನೋನ್ ಎಂಬ ಅಭಿಧಾನದಿಂದ ಪ್ರಚಲಿತವಾಗಿರುವ ಕರುಣಾಧಿದೇವತೆ ಈ ಶ್ವೇತ ತಾರೆಯೇ. ಸದ್ಧರ್ಮಪುಂಡರೀಕವೆಂಬ ಗ್ರಂಥದ ಒಂದು ಪರಿಚ್ಛೇದವಾದ ಕಾರಂಡ ವ್ಯೂಹದಲ್ಲಿ ಅವಲೋಕಿತೇಶ್ವರನ ವರ್ಣನೆ ನಿರೂಪಣೆಗಳಿವೆ. 4ನೆಯ ಶತಮಾನದಿಂದ ಈ ದೇವತೆಯ ಕಲ್ಪನೆಯೂ ಶಿಲ್ಪದಲ್ಲಿ ಚಿತ್ರಣವೂ ಬಂದಿದೆ.

ಅವಲೋಕಿತೇಶ್ವರನ ಮುಖ್ಯ ರಸವೇ ಕರುಣೆ; ಅವನ ಬೆರಳುಗಳಿಂದ ಹರಿದ ನದಿಗಳು ನರಕದ ಬೆಂಕಿಯನ್ನೆಲ್ಲ ಆರಿಸಿ ಶೀತಲಗೊಳಿಸುತ್ತವೆಂದೂ ಅವನ ಪ್ರತಾಪದಿಂದ ನರಕದ ನಿಯಾಮಕರಾದ ಕ್ರೂರಗಣಗಳೆಲ್ಲ ಬೆದರಿ ಓಡುತ್ತವೆಂದೂ ನಂಬಿಕೆಯಿದೆ. ಪಾಪಿ ಜನರನ್ನು ಉದ್ಧಾರಮಾಡುವ ಸಲುವಾಗಿಯೇ ಅವತರಿಸಿದ ಬೋಧಿಸತ್ತ್ವ ಇವನೆಂದೂ ಇದಕ್ಕಾಗಿಯೇ ಓಂ ಮಣಿಪದ್ಮೇಹಂ ಎಂಬ ಮಂತ್ರವನ್ನು ಧರೆಗೆ ಇಳಿಸಿದನೆಂದೂ ಟಿಬೆಟ್ ಜನರು ನಂಬುತ್ತಾರೆ. ಜಗತ್ತಿನ ಎಲ್ಲ ಪ್ರಾಣಿಗಳನ್ನೂ ಉದ್ಧರಿಸುತ್ತೇನೆ; ಈ ಪ್ರತಿಜ್ಞೆ ಸುಳ್ಳಾದರೆ ನನ್ನ ತಲೆ ಸೀಳಿಹೋಗಲಿ ಎಂಬುದು ಅವಲೋಕಿತೇಶ್ವರ ಶಪಥವಂತೆ. ಕನ್ನಡ ನಾಡಿನಲ್ಲಿ ಕೂಡ ಲೋಕೇಶ್ವರನೆಂಬ ಹೆಸರಿನಿಂದ ಈ ದೇವತೆ ಪೂಜೆಗೊಳ್ಳುತ್ತಿದ್ದ. ಮಂಗಳೂರಿನ ಕದರಿಯಲ್ಲಿರುವ ದೇವಸ್ಥಾನ ಈ ದೇವತೆಯದೇ. (ಎಸ್.ಕೆ.ಆರ್.)

**ಅವಶ್ಯ ಪ್ರತಿಜ್ಞೆ :** ಅಗತ್ಯವಾದ ಲಕ್ಷಣಗಳ ಆಧಾರದಮೇಲೆ ಇದು ಇಂಥದೇ ಆಗಿದೆ ಎಂದು ನಿರ್ಧರಿಸುವ ಬಗೆಗೆ ಈ ಹೆಸರಿದೆ (ಅಪೋಡಿಕ್ಟಿಕ್ ಪ್ರಾಪೊಸಿಷನ್). ಪ್ರತಿಜ್ಞೆಗಳಲ್ಲಿ ಮೂರು ಬಗೆ. ಇದು ಹೀಗೆ ಇದೆ ಎಂಬುದು ಮೊದಲನೆಯದು. ನಮಗೆ ಪರಿಚಿತವಾದ ಹಸುವನ್ನು ನೋಡಿ ಇದು ಹಸು ಎಂದು ಎಲ್ಲರೂ ಹೇಳುತ್ತೇವೆ. ಆ ವಿಚಾರದಲ್ಲಿ ಯಾವ ಸಂಶಯವೂ ಇಲ್ಲ. ಆದರೆ ವಿಲಾಯತಿಯಿಂದ ಬಂದ ಹಸುವನ್ನು ನೋಡಿದಾಗ ಅದು ನಾಡಹಸುವಿಗಿಂತ ಕೆಲವು ವಿಧದಲ್ಲಿ ಬೇರೆಯಾಗಿರುವುದರಿಂದಲೂ ನಾಡಹಸುವನ್ನು ಕೆಲವು ಅಂಶಗಳಲ್ಲಿ ಹೋಲುವುದರಿಂದಲೂ ಇದು ಹಸುವಿರಬಹುದು ಎಂದು ಹೇಳುತ್ತೇವೆ. ಏಕೆಂದರೆ ಆ ಪ್ರಾಣಿ ಹಸು ಎಂದು ನಮಗೆ ಖಚಿತವಲ್ಲ. ಆದರೆ ಅದನ್ನು ಪರೀಕ್ಷಿಸಿ ಹಸುವಿಗೆ ಅಗತ್ಯವಾದ ಸೀಳು ಗೊರಸು ಮತ್ತು ಗಂಗೆದೊಗಲು ಈ ಪ್ರಾಣಿಗೂ ಇರುವುದರಿಂದ ಇದು ಹಸುವಾಗಿ ಇರಲೇಬೇಕು ಎಂದು ನಿರ್ಧರಿಸುತ್ತೇವೆ. ಅಗತ್ಯವಾದ ಲಕ್ಷಣದ ಆಧಾರದ ಮೇಲೆ ನಿರ್ಧರಿಸಿದ ಈ ಮೂರನೆಯ ಬಗೆಯ ಪ್ರತಿಜ್ಞೆಯೇ ಅವಶ್ಯ ಪ್ರತಿಜ್ಞೆ. ಈ ಮೂರು ಬಗೆಯ ಪ್ರತಿಜ್ಞೆಗಳನ್ನೂ ವಿಶದಪಡಿಸಿದವ ಇಮ್ಯಾನ್ಯುಅಲ್ ಕ್ಯಾಂಟ್. (ಜಿ.ಎಚ್.)

**ಅವಸರದ ಪಡೆ :** ಒಂದು ವಿಶಿಷ್ಟ ಉದ್ದೇಶದಿಂದ ಪರದೇಶಕ್ಕೆ ಯುದ್ಧಕ್ಕಾಗಿ ಕಳುಹಿಸಿದ ಸೇನಾಬಲ (ಎಕ್ಸ್‌ಪೆಡಿಷನರಿ ಫೋರ್ಸ್). ಒಂದನೆಯ ಮಹಾಯುದ್ಧದಲ್ಲಿ ಬೇರೊಂದು ಯುದ್ಧರಂಗಕ್ಕೆ ಬೇರೊಬ್ಬ ಸೇನಾಪತಿಯ ನೇತೃತ್ವದಲ್ಲಿ ಕಳುಹಿಸಿದ ಸೇನಾಬಲಗಳನ್ನೂ ಇದೇ ಹೆಸರಿನಿಂದ ಕರೆವ ರೂಢಿಯಾಯಿತು. ಉದಾಹರಣೆಗೆ, ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಕ್ಕೆ ಬ್ರಿಟಿಷರು ಸೈನ್ಯಗಳನ್ನು ಕಳಿಹಿಸುವಾಗ ಅವನ್ನು ಬ್ರಿಟಿಷ್ ಎಕ್ಸ್‌ಪೆಡಿಷನರಿ ಫೋರ್ಸ್ ಎಂದು ಕರೆದರು. ರೂಮೆಲ್ ಎಂಬ ಜರ್ಮನ್ ಸೇನಾನಿಯ ಪಡೆಗಳ ಉರವಣೆಯನ್ನು ತಡೆಯುವುದಕ್ಕಾಗಿ ಭಾರತದ ಸೈನ್ಯವನ್ನು ಈಜಿಪ್ಟಿನ ಪಶ್ಚಿಮ ಮರುಭೂಮಿಗೆ ಕಳುಹಿಸಿದಾಗ ಅದನ್ನು ಇಂಡಿಯನ್ ಎಕ್ಸ್‌ಪೆಡಿಷನರಿ ಫೋರ್ಸ್ ಎಂದು ಕರೆದರು. ಹೀಗಿದ್ದರೂ ವಿಶ್ವಸಂಸ್ಥೆಯ (ಯುನೈಟೆಡ್ ನೇಷನ್ಸ್) ನೇತೃತ್ವದಲ್ಲಿ ಕಾಂಗೋ ದೇಶಕ್ಕೆ ಕಳುಹಿಸಿದ ಭಾರತದ ಸೈನ್ಯವನ್ನು ಎಕ್ಸ್‌ಪೆಡಿಷನರಿ ಫೋರ್ಸ್ ಎಂದು ಕರೆಯಲಾಗದು. ಏಕೆಂದರೆ ಅಲ್ಲಿ ಯುದ್ಧಮಾಡಿ ನೆಲವನ್ನು ಗೆದ್ದುಕೊಳ್ಳುವುದು ಅವರ ಕರ್ತವ್ಯವಲ್ಲ. ಯುದ್ಧದಿಂದ ಕ್ಷೋಭೆಗೊಂಡ ಆ ದೇಶಕ್ಕೆ ಶಾಂತಿಯನ್ನು ತಂದು, ಐಕಮತ್ಯವನ್ನು ಸಾಧಿಸುವ ಕಾರ್ಯದಲ್ಲಿ ನೆರವಾಗಲು ಈ ಸೇನಾಬಲ ನಿಯೋಜಿತವಾಗಿತ್ತು, ಆದ್ದರಿಂದ ಶಾಂತಿ, ಸೌಹಾರ್ದ ಸ್ಥಾಪನೆ; ನೂತನ ಕ್ಷೇತ್ರಗಳ, ಮೌಲ್ಯಗಳ ಅನ್ವೇಷಣೆ, ಸಹಾಯಾರ್ಥ ಅಥವಾ ಅನುಕಂಪ ಪ್ರಕಟಣೆಗಾಗಿ ಕಳುಹಿಸುವಿಕೆ ಇವು ಅವಸರದ ಪಡೆಗಳ ವಿಶಿಷ್ಟ ಉದ್ದೇಶವೆನ್ನಬಹುದು. (ಎ.ಎನ್.ಎಸ್.ಎಂ.)

**ಅವಸ್ಥಾತ್ರಯಗಳು, ವಸ್ತುವಿನ :** ಪ್ರಪಂಚದಲ್ಲಿರುವ ವಸ್ತುಗಳು ಘನ, ದ್ರವ, ಅನಿಲರೂಪಗಳಲ್ಲಿವೆ. ಸಾಮಾನ್ಯವಾಗಿ ಉಷ್ಣದ ಪೂರೈಕೆಯಿಂದ ಘನವಸ್ತು ದ್ರವವಾಗಿ ದ್ರವವಸ್ತು ಅನಿಲವಾಗಿ ಮಾರ್ಪಾಡಾಗುವುದು. ಆದರೆ ಕರ್ಪೂರ, ಅಯೊಡೀನ್, ನವಸಾಗರ ಮುಂತಾದ ಘನವಸ್ತುಗಳನ್ನು ಕಾಯಿಸಿದಾಗ ಅವು ನೇರವಾಗಿ ಅನಿಲರೂಪ ಪಡೆಯುತ್ತವೆ.

**ಘನವಸ್ತುಗಳು :** ಒಂದು ಘನವಸ್ತುವಿಗೆ ನಿರ್ದಿಷ್ಟವಾದ ಆಕಾರವಿದೆ. ಈ ಆಕಾರವನ್ನು ವ್ಯತ್ಯಾಸ ಮಾಡಬೇಕಾದರೆ ಅದರ ಮೇಲೆ ಹೆಚ್ಚಾದ ಬಲಪ್ರಯೋಗ ಮಾಡಬೇಕಾಗುತ್ತದೆ. ಇಂಥ ಬಲದ ಪ್ರಮಾಣ ಬೇರೆಬೇರೆ ಘನವಸ್ತುಗಳಿಗೆ ಬೇರೆ ಬೇರೆಯಾಗಿರುತ್ತದೆ. ವಸ್ತುಗಳಲ್ಲಿ ಇರುವ ಅಣು ಮತ್ತು ಪರಮಾಣುಗಳು ಪರಸ್ಪರ ಅತಿ ಹೆಚ್ಚಾದ ಆಕರ್ಷಣಬಲವನ್ನು ಹೊಂದಿರುತ್ತದೆ. ಆದ್ದರಿಂದ ಅವುಗಳ ಸ್ಥಾನಪಲ್ಲಟವನ್ನು ಸುಲಭವಾಗಿ ಮಾಡಲಾಗುವುದಿಲ್ಲ. ಘನವಸ್ತುಗಳನ್ನು ಕ್ಷ–ಕಿರಣಗಳಿಂದ ಪರೀಕ್ಷಿಸಿದರೆ ಈ ತರ್ಕ ಸರಿಯೆಂದು ಗೊತ್ತಾಗುತ್ತದೆ; ಮತ್ತು ಪರಮಾಣುಗಳು ಒಂದು ನಿರ್ದಿಷ್ಟ ಕ್ರಮದಲ್ಲಿ ಕೆಲವು ಸಮತಳಗಳಲ್ಲಿ ಜೋಡಣೆಗೊಂಡಿರುವುದು ಎಂದು ಕಂಡುಬರುತ್ತದೆ. ಈ ಜೋಡಣೆಯನ್ನು ಸ್ವಲ್ಪಮಟ್ಟಿಗೆ ವ್ಯತ್ಯಾಸ ಮಾಡಬೇಕಾದರೂ ಅತಿ ಹೆಚ್ಚಿನ ಬಲಪ್ರಯೋಗ ಆವಶ್ಯಕ. ಸಾಮಾನ್ಯವಾಗಿ ಎಲ್ಲ ಘನಪದಾರ್ಥಗಳೂ ಹರಳಿನ ರೂಪದಲ್ಲಿವೆ. ಇದಕ್ಕೆ ಅಪವಾದ ಗಾಜು, ಮೇಣ ಮುಂತಾದುವು.

ಘನವಸ್ತುವಿಗೆ ಉಷ್ಣವನ್ನು ಪೂರೈಸಿದರೆ ಅದರಲ್ಲಿರುವ ಪರಮಾಣುಗಳ ಸ್ಪಂದನದ ವೇಗ ಮತ್ತು ಶಕ್ತಿ ಹೆಚ್ಚಾಗುವುವು. ಆದರೆ ಈ ಪರಮಾಣುಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸಲು ಅವಕಾಶವಿರುವುದಿಲ್ಲ. ಸ್ಪಂದನದ ರಭಸದಿಂದ ಪರಮಾಣುಗಳ ಪರಸ್ಪರ ಅಂತರ ಹೆಚ್ಚಾಗುವುದು. ಅದ್ದರಿಂದ ವಸ್ತುವಿನ ಗಾತ್ರ ಹಿಗ್ಗುವುದು. ಇದೇ ರೀತಿಯಲ್ಲಿ ವಸ್ತುವಿನ ಉಷ್ಣ ಕಡಿಮೆ ಮಾಡಿದರೆ ಅದರ ಗಾತ್ರ ಕುಗ್ಗುವುದು. ವಸ್ತುವಿನ ಉಷ್ಣತೆಯನ್ನು ಹೆಚ್ಚಿಸುತ್ತ ಹೋದರೆ, ಪರಮಾಣುಗಳ ಸ್ಪಂದನದ ವೇಗ ಅತಿ ಹೆಚ್ಚಾಗಿ, ವಸ್ತುವಿನ ರೂಪದಲ್ಲಿ ವ್ಯತ್ಯಾಸವಾಗಿ ದ್ರವರೂಪಕ್ಕೆ ಬರುವುದು; ಅದು ದ್ರವರೂಪಕ್ಕೆ ತಿರುಗುವುದು. ಈ ಕ್ರಿಯೆಗೆ ಬೇಕಾದ ಉಷ್ಣತೆಯು ಘನವಸ್ತುವಿನ ಸ್ವಭಾವವನ್ನು (ಮೆಲ್ಟಿಂಗ್ ಪಾಯಿಂಟ್) ಅವಲಂಬಿಸಿರುತ್ತದೆ.

ಸಾಮಾನ್ಯವಾಗಿ ಘನರೂಪದಲ್ಲಿರುವ ಎಲ್ಲ ಲೋಹಗಳನ್ನೂ ತಂತಿಯಾಗಿ ಎಳೆಯಬಹುದು ಮತ್ತು ಅತಿ ತೆಳುವಾದ ಹಾಳೆಯಂತೆ ಬಡಿಯಬಹುದು. ಎರಡು ಲೋಹಗಳನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ತೆಗೆದುಕೊಂಡು ಅವನ್ನು ಒಟ್ಟಿಗೆ ಕರಗುವಂತೆ ಕಾಯಿಸಿ ಅನಂತರ ಆರಲು ಬಿಟ್ಟರೆ ಆ ಲೋಹಗಳ ಮಿಶ್ರಣ ಒಂದೇ ಘನವಸ್ತುವಾಗಿ ಪರಿಣಾಮ ಹೊಂದುವುದು. ಹೀಗೆ ದೊರೆತ ಮಿಶ್ರಣ ಲೋಹದ ಕರಗುವ ಉಷ್ಣತೆ ಅದರಲ್ಲಿರುವ ಬಿಡಿ ಲೋಹಗಳ ಕರಗುವ ಉಷ್ಣತೆಗಳಿಗಿಂತ ಬಹಳ ಕಡಿಮೆ. ಇದಕ್ಕೆ ಯುಟೆಕ್ಟಿಕ್ ಅಲಾಯ್ ಅಂದರೆ ಸುಲಭವಾಗಿ ಕರಗುವ ಲೋಹಮಿಶ್ರಣ ಎಂದು ಹೆಸರು. ಶುದ್ಧ ಸತುವಿಗೆ ಸ್ವಲ್ಪ ಸೀಸವನ್ನು ಬೆರೆಸಿದರೆ, ಈ ಮಿಶ್ರಣ ಸತು ಮತ್ತು ಸೀಸ ಇವುಗಳಿಗಿಂತ ಕಡಿಮೆ ಉಷ್ಣತೆಯಲ್ಲಿ ಕರಗುವುದು.

ಘನವಸ್ತು ಕರಗುವ ಉಷ್ಣತೆ ಅದರ ಮೇಲಿನ ಒತ್ತಡದಿಂದ ವ್ಯತ್ಯಾಸ ಹೊಂದುವುದು. ಉದಾ: ಮಂಜುಗಡ್ಡೆಯ ಮೇಲೆ ಒತ್ತಡವನ್ನು ಹೆಚ್ಚಿಸಿದರೆ ಅದರ ಕರಗುವ ಉಷ್ಣತೆ ಕಡಿಮೆಯಾಗಿ, ಗಡ್ಡೆ ಕರಗಿ ನೀರಾಗುವುದು. ಆದರೆ ಸೀಸ, ಕಬ್ಬಿಣ ಇವುಗಳ ಮೇಲೆ ಒತ್ತಡ ಹೆಚ್ಚಾದಾಗ, ಕರಗುವ ಉಷ್ಣತೆ ಹೆಚ್ಚುವುದು. ಘನವಸ್ತು ಕರಗಿದಾಗ ಅದರ ಗಾತ್ರ ವ್ಯತ್ಯಾಸವಾಗುವುದು. ಮಂಜುಗಡ್ಡೆ ಕರಗಿ ನೀರಾದಾಗ ಅದರ ಗಾತ್ರ ಕಡಿಮೆಯಾಗುವುದು. ಆದರೆ ಮೇಣವನ್ನು ಕರಗಿಸಿದರೆ ಅದರ ಗಾತ್ರ ಹೆಚ್ಚಾಗುವುದು.

ಸಾಮಾನ್ಯವಾಗಿ ಎಲ್ಲ ಲೋಹಗಳಲ್ಲೂ ಉಷ್ಣ ಮತ್ತು ವಿದ್ಯುತ್ತು ಸುಲಭವಾಗಿ ಪ್ರವಹಿಸುತ್ತವೆ. ರಬ್ಬರ್, ಗಂಧಕ, ವಲ್ಕನೈಟ್ ಮುಂತಾದವುಗಳು ಉಷ್ಣ ಮತ್ತು ವಿದ್ಯುತ್ತುಗಳ ಪ್ರವಾಹವನ್ನು ನಿರೋಧಿಸುತ್ತವೆ. ಈ ಎರಡು ಗುಂಪುಗಳ ನಡುವೆ ಸೆಮಿಕಂಡಕ್ಟರ್ಸ್ ಎಂಬ ಮೂರನೆಯ ತರಹದ ವಸ್ತುಗಳನ್ನು ಕಂಡುಹಿಡಿದಿದ್ದಾರೆ. ಇವು ವಿದ್ಯುತ್ತನ್ನು ಸುಲಭವಾಗಿ ಪ್ರವಹಿಸಲು ಅವಕಾಶ ಕೊಡುವುದಿಲ್ಲ ಅಥವಾ ಸಂಪೂರ್ಣವಾಗಿ ನಿರೋಧಿಸುವುದೂ ಇಲ್ಲ. ಜರ್ಮೇನಿಯಂ ಅಥವಾ ಸಿಲಿಕಾನ್ ಇವುಗಳಿಗೆ ರಂಜಕ ಆ್ಯಂಟಿಮೊನಿ ಆರ್ಸೆನಿಕ್ ಅಥವಾ ಅಲ್ಯೂಮಿನಿಯಂ, ಬೋರಾನ್, ಇಂಡಿಯಂ ಈ ಧಾತುಗಳಲ್ಲಿ ಒಂದನ್ನು ಅತ್ಯಲ್ಪ ಪ್ರಮಾಣದಲ್ಲಿ ಬೆರೆಸಿ ಹರಳುಗಳನ್ನು ರಚಿಸಿದರೆ ಈ ತೆರನಾದ ಅರೆವಿದ್ಯುದ್ವಾಹಕಗಳು (ಸೆಮಿಕಂಡಕ್ಟರ್) ಉಂಟಾಗುತ್ತವೆ. ಇವುಗಳನ್ನು ಟ್ರಾನ್ಸಿಸ್ಟರ್ ಮೊದಲಾದ ಅನೇಕ ಆಧುನಿಕ ಎಲೆಕ್ಟ್ರಾನಿಕ್ಸ್ ಉಪಕರಣಗಳಲ್ಲಿ ಹೇರಳವಾಗಿ ಉಪಯೋಗಿಸುತ್ತಾರೆ.

**ದ್ರವರೂಪ ವಸ್ತುಗಳು :** ಹಿಂದೆಯೇ ತಿಳಿಸಿದಂತೆ, ಸಾಮಾನ್ಯವಾಗಿ ಎಲ್ಲ ಘನವಸ್ತುಗಳಿಗೆ ಉಷ್ಣವನ್ನು ಪೂರೈಸುತ್ತ ಹೋದರೆ ಅವು ಕರಗಿ ದ್ರವರೂಪವನ್ನು ಹೊಂದುತ್ತವೆ. ಈ ವಸ್ತುಗಳಿಗೆ ನಿರ್ದಿಷ್ಟ ಆಕಾರವಿಲ್ಲ. ಇದನ್ನು ಯಾವ ಪಾತ್ರೆಗೆ ಸುರಿಯುತ್ತೇವೆಯೋ ಆ ಪಾತ್ರೆಯ ಆಕಾರವನ್ನೇ ಇವು ಹೊಂದುವುವು. ದ್ರವದ ಪರಮಾಣುಗಳ ಪರಸ್ಪರ ಆಕರ್ಷಣ ಬಲ ಘನರೂಪದಲ್ಲಿನ ಪರಮಾಣುಗಳ ಆಕರ್ಷಣ ಬಲಕ್ಕಿಂತ ಬಹಳ ಕಡಿಮೆ. ಆ ಅಣುಗಳು ದ್ರವದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ಚಲಿಸುತ್ತವೆ. ಆದರೆ ಇವುಗಳ ಪರಸ್ಪರ ಅಂತರ ಕಡಿಮೆಯಾಗಿರುವುದರಿಂದ, ಯಾವ ಅಣುವೂ ಮತ್ತೊಂದು ಅಣುವಿಗೆ ತಗುಲದೇ ಬಹು ದೂರ ಚಲಿಸಲು ಅವಕಾಶವಿರುವುದಿಲ್ಲ. ದ್ರವದ ಮೇಲ್ಭಾಗದಲ್ಲಿ ಇರುವ ಅಣು ಆವಿಯ ರೂಪದಲ್ಲಿ ದ್ರವದಿಂದ ಹೊರಕ್ಕೆ ಬರಬೇಕಾದರೆ, ಆಕರ್ಷಣ ಬಲದ ವಿರುದ್ಧ ಕೆಲಸ ಮಾಡಬೇಕಾಗುವುದು. ಇದರಿಂದ ಅಣುವಿನ ಶಕ್ತಿ ಕಡಿಮೆಯಾಗುವುದಲ್ಲದೆ, ದ್ರವದ ಅಣುಗಳ ಒಟ್ಟು ಶಕ್ತಿಯೂ ಕುಗ್ಗುವುದು. ದ್ರವದ ಶಕ್ತಿ ಈ ರೀತಿ ಕಡಿಮೆಯಾದರೆ, ಅದರ ಉಷ್ಣತೆ ಇಳಿಮುಖವಾಗುವುದು. ಈ ಅಂಶದ ಆಧಾರದ ಮೇಲೆ ಅತಿ ಸುಲಭವಾಗಿ ಆವಿಯಾಗುವ ಅಮೋನಿಯ ದ್ರವ, ಗಂಧಕದ ಡೈಆಕ್ಸೈಡ್ ದ್ರವ ಮೊದಲಾದವುಗಳನ್ನು ನೀರನ್ನು ಮಂಜುಗಡ್ಡೆಯಾಗಿ ಮಾಡುವ ಯಂತ್ರಗಳಲ್ಲಿ ಬಳಸಿಕೊಳ್ಳುತ್ತಾರೆ.

ಅಣುಗಳ ಪರಸ್ಪರ ಆಕರ್ಷಣ ಶಕ್ತಿಯಿಂದ ದ್ರವದ ಮೇಲ್ಮೈ ಭಾಗದಲ್ಲಿ ಸೆಳೆತ ಉಂಟಾಗುತ್ತದೆ (ಸರ್ಫೇಸ್ ಟೆನ್ಷನ್). ಈ ಕಾರಣದಿಂದ ದ್ರವದ ಬೇರೆ ಬೇರೆ ಪದರಗಳಲ್ಲಿ ಚಲನವನ್ನು ನಿರೋಧಿಸುವ ಬಲಗಳು ಉತ್ಪನ್ನವಾಗುತ್ತವೆ. ಇಂಥ ಬಲಗಳ ಹೆಸರು ಸ್ನಿಗ್ಧತೆ (ವಿಸ್‌ಕಾಸಿಟಿ). ಜೇನು, ಗ್ಲಿಸರಿನ್, ಹರಳೆಣ್ಣೆ ಮುಂತಾದ ದ್ರವಗಳಲ್ಲಿ ಸ್ನಿಗ್ಧತೆ ಹೆಚ್ಚಾಗಿಯೂ ನೀರು, ಆಲ್ಕೊಹಾಲ್, ಈಥರ್ ಮುಂತಾದ ತೆಳು ದ್ರವಗಳಲ್ಲಿ ಕಡಿಮೆ ಯಾಗಿಯೂ ಇರುತ್ತದೆ. ದ್ರವವನ್ನು ಕುದಿಯುವಂತೆ ಕಾಯಿಸಿದಾಗ ಕುದಿಯಲು ಬೇಕಾದ ಉಷ್ಣತೆ ದ್ರವದ ಮೇಲಿನ ಒತ್ತಡದಿಂದ ವ್ಯತ್ಯಾಸವಾಗುವುದು. ಒತ್ತಡ ಕಡಿಮೆಯಾದರೆ, ಕುದಿಯುವ ಉಷ್ಣತೆ ಕಡಿಮೆಯಾಗುವುದು. ಸಮುದ್ರಮಟ್ಟದಲ್ಲಿ ನೀರು 100 ಸೆಂ.ಗ್ರೇನಲ್ಲಿ ಕುದಿಯುವುದು. ಮೈಸೂರು ಸಮುದ್ರಮಟ್ಟಕ್ಕಿಂತ ಸು. 3000[1] ಗಳಷ್ಟು ಮೇಲಿರುವುದರಿಂದ ವಾಯುವಿನ ಒತ್ತಡ ಸಮುದ್ರಮಟ್ಟದಲ್ಲಿನ ಒತ್ತಡಕ್ಕಿಂತ ಕಡಿಮೆಯಾಗಿದೆ. ಇದರಿಂದ ಇಲ್ಲಿ ನೀರು 97 ಸೆಂ.ಗ್ರೇ.ನಲ್ಲಿ ಕುದಿಯುವುದು.

ಕೆಲವು ದ್ರವಗಳು ಹರಳಿನ ರೂಪವನ್ನು ಹೊಂದಿವೆಯೆಂದು ಈಚಿನ ಪರಿಶೋಧನೆಗಳಿಂದ ಗೊತ್ತಾಗಿದೆ. ಇವುಗಳಿಗೆ ದ್ರವ ಸ್ಫಟಿಕಗಳು (ಲಿಕ್ವಿಡ್ ಕ್ರಿಸ್ಟಲ್ಸ್) ಎಂದು ಹೆಸರು *(ನೋಡಿ– ದ್ರವಸ್ಫಟಿಕ).*

**ಅನಿಲ ವಸ್ತುಗಳು :** ಅನಿಲಗಳು ಒತ್ತಡ ಮತ್ತು ಉಷ್ಣದಿಂದ ಅತ್ಯಂತ ಪರಿಣಾಮಕಾರಿಯಾದ ವ್ಯತ್ಯಾಸಗಳನ್ನು ಹೊಂದುತ್ತವೆ. ಈ ವ್ಯತ್ಯಾಸಗಳು ಎಲ್ಲ ಅನಿಲಗಳಿಗೂ ಒಂದೇ ರೀತಿಯಾಗಿರುವುದರಿಂದ, ಇವುಗಳ ರಚನೆ ಸರಳವಾಗಿರಬೇಕೆಂದು ಊಹಿಸಬಹುದು. ಇವುಗಳಿಗೆ ನಿರ್ದಿಷ್ಟ ಆಕಾರವಿಲ್ಲ. ಯಾವ ಪಾತ್ರೆಯಲ್ಲಿ ತುಂಬುತ್ತೇವೆಯೋ ಆ ಪಾತ್ರೆಯನ್ನೆಲ್ಲ ಆಕ್ರಮಿಸಿ ಅದರ ರೂಪವನ್ನೇ ಹೊಂದಿರುತ್ತವೆ. ಅನಿಲದ ಅಣುಗಳ ಪರಸ್ಪರ ಆಕರ್ಷಣ ಬಲ ಅತ್ಯಲ್ಪ. ಆದ್ದರಿಂದ ಇವುಗಳ ಗಾತ್ರವನ್ನು ಸುಲಭವಾಗಿ ಒತ್ತಡದಿಂದ ವ್ಯತ್ಯಾಸ ಮಾಡಬಹುದು. ಅನಿಲದ ಅಣುಗಳ ಚಲನ ವೇಗ ಅದರ ಉಷ್ಣತೆಯನ್ನು ಅವಲಂಬಿಸಿರುತ್ತದೆ.

ಒಂದು ಅನಿಲವನ್ನು ಹೆಚ್ಚು ಒತ್ತಡದ ಕಡೆಯಿಂದ ಕಡಿಮೆ ಒತ್ತಡ ಇರುವ ಕಡೆಗೆ ಪ್ರವಹಿಸಿಸಿದರೆ, ಅದರ ಗಾತ್ರ ಹಿಗ್ಗುವುದು ಮತ್ತು ಉಷ್ಣತೆ ಕಡಿಮೆಯಾಗುವುದು. ಇದಕ್ಕೆ ಜೂಲ್ ಥಾಮ್ಸನ್ ಪರಿಣಾಮ ಎಂದು ಹೆಸರು. ಈ ಪರಿಣಾಮವನ್ನು ಉಪಯೋಗಿಸಿಕೊಂಡು ಗಾಳಿ, ಆಕ್ಸಿಜನ್, ಹೈಡ್ರೊಜನ್, ಹೀಲಿಯಂ ಮುಂತಾದ ಅನಿಲಗಳನ್ನು ದ್ರವರೂಪಕ್ಕೆ ಪರಿವರ್ತಿಸಬಹುದು. ಅನಿಲಗಳೂ ಹೆಚ್ಚಾಗಿ ಒತ್ತಡವನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿರುವುದರಿಂದ ರೈಲು ಮೋಟರು, ಏರೋಪ್ಲೇನ್, ರಾಕೆಟ್ ಇವು ಅತಿವೇಗದಿಂದ ಚಲಿಸಲು ಸಾಧ್ಯವಾಗಿದೆ. ಚಂದ್ರಲೋಕಕ್ಕೆ ಪ್ರಯಾಣ ಮಾಡಿರುವ ಲೂನಾ 15, ಅಪೊಲೊ 11 ಇವುಗಳು ಅತ್ಯಂತ ವೇಗವಾಗಿ ಭೂಮಿಯಿಂದ ಹೊರಚಿಮ್ಮಲು ಅನಿಲದ ಮಹತ್ತರವಾದ ಒತ್ತಡವೇ ಕಾರಣ. (ಎ.ಪಿ.)

**ಅವಸ್ಥಾ ನಿಯಮ :** ಮುಚ್ಚಿದ ಆವರಣದಲ್ಲಿ ಸುಣ್ಣಕಲ್ಲನ್ನು ಕಾಯಿಸಿದಾಗ ಕ್ಯಾಲ್ಸಿಯಂ ಆಕ್ಸೈಡು ಮತ್ತು ಕಾರ್ಬನ್ ಡೈಯಾಕ್ಸೈಡು ಉತ್ಪತ್ತಿಯಾಗುವುವು. ಈ ಕ್ರಿಯೆಯನ್ನು ಕೆಳಕಂಡ ಸಮೀಕರಣದಿಂದ ಸೂಚಿಸಬಹುದು:

$$\underset{(s)}{CaCO3} \leftrightarrows \underset{(s)}{CaO} + \underset{(g)}{CO2}$$

ಕ್ರಿಯೆಯಲ್ಲಿ ಭಾಗಿಗಳಾದ ವಸ್ತುಗಳ ಭೌತಸ್ಥಿತಿಯನ್ನು ಘನರೂಪವಾಗಿದ್ದರೆ s, ಅನಿಲಸ್ಥಿತಿಯಲ್ಲಿದ್ದರೆ g, ದ್ರವವಾಗಿದ್ದರೆ l ಎಂದು ಸೂಚಿಸುವುದು ಪದ್ಧತಿ. ಪ್ರಾರಂಭದಲ್ಲಿ ಮುಂದುವರೆಯುವ ಕ್ರಿಯಾವೇಗ ಹೆಚ್ಚಾಗಿದ್ದು, ಹಿಂಜರಿಯುವ ಕ್ರಿಯಾವೇಗ ಕಡಿಮೆಯಾಗಿರುತ್ತದೆ. ಕಾಲಕ್ರಮದಲ್ಲಿ ಎರಡು ಕ್ರಿಯಾವೇಗಗಳೂ ಸಮನಾಗಿ ರಾಸಾಯನಿಕ ಸಮಸ್ಥಿತಿ ಏರ್ಪಡುತ್ತದೆ. ಪರಿಣಾಮವಾಗಿ ಹಿಮ್ಮರಳುವ ಕ್ರಿಯೆಗಳು ಎಂದೂ ಪೂರ್ಣವಾಗಿ ನಡೆಯುವುದಿಲ್ಲ. ಇಂಥ ಕ್ರಿಯೆಗಳಲ್ಲಿ ಭಾಗಿಗಳಾದ ವಸ್ತುಗಳು ಭಿನ್ನ ಸ್ಥಿತಿಯಲ್ಲಿದ್ದರೆ ಆ ವಸ್ತು ಸಮುದಾಯವನ್ನು ಭಿನ್ನಾಂಶ ಮಂಡಲ (ಹೆಟಿರೊಜೀನಿಯಸ್ ಸಿಸ್ಟಮ್)ಎನ್ನುತ್ತಾರೆ. ವಿವಿಧ ಪ್ರಯೋಗ ಸ್ಥಿತಿಯಲ್ಲಿ ಭಿನ್ನಾಂಶ ಮಂಡಲ ಹೇಗೆ ವರ್ತಿಸುವುದೆಂಬುದನ್ನು ಅವಸ್ಥಾ ನಿಯಮ ಸಾರುತ್ತದೆ. ರಾಸಾಯನಿಕ ಸಮಸ್ಥಿತಿಯಲ್ಲಿರುವ ಭಿನ್ನಾಂಶ ಮಂಡಲದ ಅವಸ್ಥಾಂಕ ಮತ್ತು ಸ್ವಾತಂತ್ರ್ಯಾಂಕಗಳ ಮೊತ್ತ, ಅದರ ಘಟಕಾಂಶ ಮತ್ತು 2ರ ಮೊತ್ತಕ್ಕೆ ಸಮನಾಗಿರುತ್ತದೆ. ಸಾಂಕೇತಿ ಕವಾಗಿ $P+F = C+2$ ಎಂದಾಗುತ್ತದೆ. ಇದೇ ಅವಸ್ಥಾನಿಯಮ. 1876ರಲ್ಲಿ ಪ್ರಸಿದ್ಧ ಅಮೆರಿಕನ್ ವಿಜ್ಞಾನಿಯಾದ ಜೋಸೆಫ್ ವಿಲಾರ್ಡ್‌ಗಿಬ್ಸ್ ಈ ಸೂತ್ರವನ್ನು ರೂಪಿಸಿದ. ನಿರ್ದಿಷ್ಟ ಸಂದರ್ಭಗಳಿಗೆ ಅದನ್ನು ಅನ್ವಯಿಸಿ, ಪರೀಕ್ಷಿಸಿ ನಿಯಮದ ಯಥಾರ್ಥ್ಯವನ್ನು ಶ್ರುತಪಡಿಸಿದ ಕೀರ್ತಿ ರೂಜ್ ಬ್ರೂಮನಿಗೆ ಸಲ್ಲುವುದು. ಉಷ್ಣಚಲನಶಾಸ್ತ್ರದ ಆಧಾರದಿಂದ ಈ ನಿಯಮ ಅನುಮಾನಿತವಾಗಿದೆ. ಇದರ ತಾರ್ಕಿಕ ನಿರೂಪಣೆಯಲ್ಲಿ ವಸ್ತು ರಚನೆಯ ಬಗ್ಗೆ ಯಾವ ಕಲ್ಪನೆಯನ್ನೂ ಬಳಸಿಲ್ಲ. ಇದರಿಂದ ಈ ನಿಯಮಕ್ಕೆ ಅಪವಾದಗಳೇ ಇಲ್ಲ.

ಈಗ ನಿಯಮ ನಿರೂಪಣೆಯಲ್ಲಿ ಉಪಯೋಗಿಸಿರುವ ಸಂಕೇತಗಳನ್ನು ಪರಿಶೀಲಿಸೋಣ. P ಎಂಬುದು ಮಂಡಲದಲ್ಲಿರುವ ಅವಸ್ಥೆಗಳ (ಫೇಸಸ್) ಸಂಖ್ಯೆಯನ್ನು ಸೂಚಿಸುತ್ತದೆ. ಆದುದರಿಂದ ಅದಕ್ಕೆ ಅವಸ್ಥಾಂಕ ಎಂದು ಹೆಸರಾಗಿದೆ. F ಎಂಬುದು ಮಂಡಲಕ್ಕೆ ವರ್ತನಾ ಸ್ವಾತಂತ್ರ್ಯ ಎಷ್ಟರಮಟ್ಟಿಗಿದೆ ಎಂಬುದನ್ನು ನಿರ್ದೇಶಿಸುವುದರಿಂದ ಅದನ್ನು ಸ್ವಾತಂತ್ರ್ಯಾಂಕ (ಡಿಗ್ರೀ ಆಫ್ ಫ್ರೀಡಮ್) ಎನ್ನಲಾಗಿದೆ. ಹಾಗೆಯೇ ಮಂಡಲದಲ್ಲಿರುವ ಸಕ್ರಿಯವಾದ ಅಂಗವಸ್ತುಗಳ ಸಂಖ್ಯೆಯನ್ನು C ಪ್ರತಿನಿಧಿಸುತ್ತದೆ. ಆದುದರಿಂದ ಅದನ್ನು ಘಟಕಾಂಕ ಎಂದು ಕರೆಯುವರು. ಈ ಪದಗಳ ವಿವರವಾದ ಅರ್ಥ ಹೀಗಿದೆ : ಶೋಧನೆಯ ಕಾಲದಲ್ಲಿ ವೀಕ್ಷಣೆಗೆ ಒಳಪಟ್ಟ ಕಾರ್ಯಕ್ಷೇತ್ರವೇ ಮಂಡಲ (ಸಿಸ್ಟಮ್). ಅದಕ್ಕೆ ಹೊರತಾದ ಬಾಹ್ಯಜಗತ್ತೇ ಆವರಣ (ಸರೌಂಡಿಂಗ್ಸ್). ಮಂಡಲದ ವರ್ತನೆಯನ್ನು ತನಿಖೆ ಮಾಡಲು ಸಹಾಯಕವಾದ ಉಪಕರಣಗಳೂ ವೀಕ್ಷಕನಾದ ವಿಜ್ಞಾನಿಯೂ ಆವರಣದಲ್ಲಿರುತ್ತಾರೆ. ಮಂಡಲದಲ್ಲಿ ವಿವಿಧ ಭಾಗಗಳಿರುತ್ತವೆ. ಪ್ರತಿಯೊಂದು ಭಾಗವೂ ಸಮಾನ ಪರಿಮಾಣ ಹೊಂದಿರಬಹುದು, ಭೌತಿಕವಾಗಿ ವ್ಯಕ್ತವಾಗಬಹುದು, ಇಂದ್ರಿಯಾನುಭವಕ್ಕೆ ಸಿಲುಕಬಹುದು. ಭಟ್ಟಿ ಇಳಿಸುವುದು, ಶೋಧಿಸುವುದು ಇತ್ಯಾದಿ ಸುಲಭೋಪಾಯಗಳಿಂದ ಬೇರ್ಪಡಿಸುವಂತಿರಬಹುದು. ಈ ಸಮಸ್ತ ಗುಣಗಳನ್ನೂ ಪಡೆದಿರುವ ಮಂಡಲದ ಪ್ರತಿಯೊಂದು ಭಾಗವೂ ಒಂದು ಅವಸ್ಥೆ ಎನಿಸಿಕೊಳ್ಳುತ್ತದೆ. ಈ ಅವಸ್ಥೆಗಳನ್ನು ಪರಸ್ಪರ ಪ್ರತ್ಯೇಕಿಸುವ ಎಲ್ಲೆಯ ಗೆರೆಗಳಿರುತ್ತವೆ (ಫೇಸ್ ಬೌಂಡರೀಸ್). ಉದಾಹರಣೆಗೆ. ರಾಸಾಯನಿಕ ಸಮಸ್ಥಿತಿಯಲ್ಲಿರುವ ಕೆಳಕಂಡ ಜಲಮಂಡಲದಲ್ಲಿ

ಮಂಜುಗಡ್ಡೆ ⇄ ನೀರು ⇄ ನೀರಾವಿ

ಘನರೂಪದ ಮಂಜುಗಡ್ಡೆ, ದ್ರವರೂಪದ ನೀರು ಮತ್ತು ಅನಿಲಸ್ಥಿತಿಯಲ್ಲಿರುವ ನೀರಾವಿ ಎಂಬ ಮೂರು ಅವಸ್ಥೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಭಿನ್ನ ಸ್ಫಟಿಕಾಕೃತಿಯುಳ್ಳ ಪ್ರತಿಯೊಂದು ಅಂಗವಸ್ತುವನ್ನೂ ಪ್ರತ್ಯೇಕ ಅವಸ್ಥೆಯೆಂದು ಪರಿಗಣಿಸಬೇಕು. ಆದ್ದರಿಂದ

$$\underset{(s)}{CaCO3} \rightleftarrows \underset{(s)}{CaO} + \underset{(g)}{CO2}$$

ಮಂಡಲದಲ್ಲಿ ಕ್ಯಾಲ್ಸಿಯಂ ಕಾರ್ಬೊನೇಟ್ ಮತ್ತು ಕ್ಯಾಲ್ಸಿಯಂ ಆಕ್ಸೈಡ್ ಘನವಸ್ತುಗಳು ಒಂದೊಂದು ಅವಸ್ಥೆಯೆಂದು ಲೆಕ್ಕ ಹಿಡಿದರೆ ಒಟ್ಟು ಮೂರು ಅವಸ್ಥೆಗಳು ಇದ್ದಂತಾಗುತ್ತದೆ. ಪರಸ್ಪರ ಮಿಳಿತವಾಗದೆ, ಬೇರೆ ಬೇರೆ ಪದರಗಳಾಗಿ ನಿಲ್ಲುವ ಎಣ್ಣೆ ಮತ್ತು ನೀರುಗಳ ಮಿಶ್ರಣದಲ್ಲಿ ಪ್ರತಿಯೊಂದು ದ್ರವವೂ ಒಂದು ಅವಸ್ಥೆ. ಪರ್ಯಾಪ್ತ ದ್ರಾವಣದಲ್ಲಿ ಹುಡಿ

ಉಪ್ಪು ವಿಲೀನವಾಗದೆ ಉಳಿದಿದ್ದರೆ, ಶೇಷವಸ್ತು ಮತ್ತು ದ್ರಾವಣಗಳೆಂಬ ಎರಡು ಅವಸ್ಥೆಗಳಿವೆ ಎನ್ನಬೇಕು. ಭಾಗಶಃ ವಿಲೀನವಾಗುವ ದ್ರವಗಳು, ಅವುಗಳ ಸಾಪೇಕ್ಷ ತೂಕಗಳಿಗೆ ಅನುಗುಣವಾಗಿ ಪ್ರತಿಯೊಂದೂ ಅವಸ್ಥೆಯಾಗಬಹುದು ಅಥವಾ ಆಗದಿರಬಹುದು. ನಿದರ್ಶನವಾಗಿ 5% ಕಾರ್ಬಾಲಿಕ್ ಆಮ್ಲವಿರುವ ನೀರು ಮತ್ತು 5% ನೀರಿರುವ ಕಾರ್ಬಾಲಿಕಾಮ್ಲಗಳಲ್ಲಿ ಏಕರೀತಿಯ ಒಂದೇ ಪದರವಿರುವುದರಿಂದ, ಅದರಲ್ಲಿರುವ ಅವಸ್ಥೆ ಒಂದು. ಅದೇ ಸಮಪ್ರಮಾಣ ನೀರು ಮತ್ತು ಕಾರ್ಬಾಲಿಕ್ ಆಮ್ಲವಿರುವ ಮಿಶ್ರಣದಲ್ಲಿ ಎರಡು ಪದರಗಳು ತೋರಿಬರುವುದರಿಂದ, ಅವು ದ್ರಾವಣಗಳೆನಿಸಿಕೊಳ್ಳುವುದರಿಂದ, ಅವುಗಳಲ್ಲಿರುವ ಅವಸ್ಥೆ ಕೇವಲ ಒಂದು. ತಾಮ್ರ ಮತ್ತು ಸತುಗಳಿಂದಾದ ಹಿತ್ತಾಳೆಯಲ್ಲಿರುವ ಲೋಹಗಳನ್ನು ನೇರವಾಗಿ ಗುರುತಿಸಲು ಅಥವಾ ಸುಲಭವಾಗಿ ಬೇರ್ಪಡಿಸಲು ಸಾಧ್ಯವಾಗದಿರುವುದೇ ಇದಕ್ಕೆ ಸಾಕ್ಷಿ.

ಮಂಡಲದಲ್ಲಿರುವ ಪ್ರತಿಯೊಂದು ಅವಸ್ಥೆಯ ರಚನೆಯನ್ನೂ ಈ ರಾಸಾಯನಿಕ ಸಮೀಕರಣಗಳ ರೂಪದಲ್ಲಿ ತಿಳಿಸಲು ಅಗತ್ಯವಾದ ಅಂಗವಸ್ತುಗಳ ಕನಿಷ್ಠ ಸಂಖ್ಯೆಯೇ ಘಟಕಾಂಶ. ನಮಗೆ ಪರಿಚಿತವಾದ ಜಲಮಂಡಲದಲ್ಲಿರುವುದು ಕೇವಲ ಒಂದು ಘಟಕ (ಕಾಂಪೊನೆಂಟ್). ಏಕೆಂದರೆ $H_2O$ ಎಂಬ ಸೂತ್ರದ ಸಹಾಯದಿಂದ ಮಂಜುಗಡ್ಡೆ, ನೀರು ಮತ್ತು ನೀರಾವಿಯ ರಚನೆಯನ್ನು ವಿವರಿಸಬಹುದು. ಕ್ಯಾಲ್ಸಿಯಂ ಕಾರ್ಬೊನೇಟಿನ ಮಂಡಲದ ಪರಿಸ್ಥಿತಿಯೇ ಬೇರೆ. ಅದರಲ್ಲಿರುವ ಅಂಗವಸ್ತುಗಳು ಮೂರು. ಅವುಗಳ ಪೈಕಿ ಯಾವುದಾದರೂ ಎರಡರ ಸಹಾಯದಿಂದ ಪ್ರತಿಯೊಂದು ಅವಸ್ಥೆಯ ರಾಸಯನಿಕ ರಚನೆಯನ್ನು ಬಣ್ಣಿಸಬಹುದು. ಉದಾಹರಣೆಗಾಗಿ $CaO$ ಮತ್ತು $CO_2$ ಇವುಗಳನ್ನು ಆಯ್ದುಕೊಳ್ಳೋಣ.

| ಅವಸ್ಥೆ | | | ಘಟಕಗಳು |
|---|---|---|---|
| $CaCO_3$ (s) | .............. | 1 ಅಣುತೂಕ | CaO+1 ಅಣುತೂಕ $CO_2$ |
| $CaO_{(s)}$ | ........ | 1 ಅಣುತೂಕ | CaO +0 ಅಣುತೂಕ $CO_2$ |
| $CO_{2(g)}$ | ........ | 0 ಅಣುತೂಕ | CaO +1 ಅಣುತೂಕ $CO_2$ |

ಆದ್ದರಿಂದ ಈ ಮಂಡಲದ ಘಟಕಾಂಶ ಎರಡು. ಘಟಕಗಳ ಸಂಖ್ಯೆಯನ್ನು ನಿರ್ಣಯಿಸುವಾಗ, ವಾಸ್ತವವಾಗಿ ನಡೆಯುವ ರಾಸಾಯನಿಕ ಕ್ರಿಯೆಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು. ಉದಾ: ಹೈಡ್ರೊಜನ್, ಆಕ್ಸಿಜನ್ ಮತ್ತು ನೀರಿನ ಸಮುದಾಯವನ್ನು ಘಟಕತ್ರಯ ಮಂಡಲ ಎನ್ನಬೇಕಾಗುತ್ತದೆ; ಏಕೆಂದರೆ ಸಾಮಾನ್ಯ ಉಷ್ಣತೆ, ಸಂಮರ್ದಗಳಲ್ಲಿ ವೇಗವರ್ಧಕದ ಗೈರುಹಾಜರಿಯಲ್ಲಿ

$$H_2 + ½ O_2 \rightarrow H_2 O$$

ರಾಸಾಯನಿಕ ಕ್ರಿಯೆ ನಡೆಯುವ ಸಂಭವ ಬಹಳ (g) (g) (l)ಕಡಿಮೆ. ಆದರೆ ವಿದ್ಯುತ್ ಕಿಡಿ ಹಾಯಿಸಿದರೆ ಘಟಕಗಳ ಸಂಖ್ಯೆ ಎರಡಾಗುವುದು. ಹೈಡ್ರೊಜನ್ ಮತ್ತು ಆಕ್ಸಿಜನ್ನುಗಳ ಪ್ರಮಾಣ ಸರಿಯಾಗಿ 2:1 ಅಣುತೂಕಗಳಾಗಿದ್ದರೆ ಕ್ರಿಯಾಂತ್ಯದಲ್ಲಿ ನೀರು ಮಾತ್ರ ಉಳಿಯುವುದು. ಆಗ ಘಟಕಗಳ ಸಂಖ್ಯೆ ಒಂದಾಗುವುದು. ಈ ಕಾರಣದಿಂದಲೇ ಸಮಪ್ರಮಾಣ ಅಮೋನಿಯಾ ಮತ್ತು ಹೈಡ್ರೊಜನ್ ಕ್ಲೋರೈಡ್ ಅನಿಲಗಳಿರುವ ಮಂಡಲದಲ್ಲಿ ಅಮೋನಿಯ ಕ್ಲೋರೈಡ್ ($NH_4Cl$) ಎಂಬ ಒಂದೇ ಘಟಕವಿರುತ್ತದೆ. ಆದರೆ ಈ ಪರಿವರ್ತಕ ವಸ್ತುಗಳ ಪೈಕಿ ಒಂದರ ಅಂಶ ಹೆಚ್ಚಾಗಿದ್ದು, ಅದು ಕ್ರಿಯಾಂತ್ಯದಲ್ಲಿ ಉಳಿದು ಹೋದರೆ ಆಗ ಎರಡು ಘಟಕಗಳು ಉಂಟಾಗುತ್ತವೆ.



ಜಲಮಂಡಲದ ಅವಸ್ಥಾ ನಕ್ಷೆ

ಅವಸ್ಥೆಗಳ ಸಂಖ್ಯೆಯನ್ನು ಏರುಪೇರು ಮಾಡದೆ, ಉಷ್ಣತೆ ಸಂಮರ್ದ ಇತ್ಯಾದಿ ಎಷ್ಟು ಅಂಶಗಳನ್ನು ಬದಲಾಯಿಸಬಹುದೋ ಆ ಸಂಖ್ಯೆಗೆ ಮಂಡಲದ ಸ್ವಾತಂತ್ರ್ಯಾಂಕ ಎಂದು ಹೆಸರು. ಜಲಮಂಡಲವನ್ನು ಪರೀಕ್ಷಿಸಿದರೆ ಇದರ ಅರ್ಥ ತಿಳಿಯುವುದು. ಉಷ್ಣತೆ ಹೆಚ್ಚಿತೆನ್ನಿ. ಆಗ ಮಂಜುಗಡ್ಡೆ ಕರಗಿ ಹೋಗಬಹುದು ಅಥವಾ ನೀರು ಪೂರ್ಣವಾಗಿ ಆವಿಯಾಗಬಹುದು. ಇದರಿಂದ ಯಾವುದಾದರೂ ಒಂದು ಅವಸ್ಥೆ ನಾಶವಾದಂತಾಗುತ್ತದೆ. ಹಾಗೆಯೇ ಉಷ್ಣತೆ ತಗ್ಗಿದರೆ, ಆವಿ ಸಾಂದ್ರೀಕರಿಸಿ ನೀರಾಗಬಹುದು ಅಥವಾ ನೀರು ಪೂರ್ಣವಾಗಿ ಹೆಪ್ಪುಗಟ್ಟಬಹುದು. ಅಂತೂ ಒಂದು ಅವಸ್ಥೆ ಇಲ್ಲದಂತಾಗುತ್ತದೆ. ಆದುದರಿಂದ, ಮಂಡಲದ ಉಷ್ಣತೆ ವ್ಯತ್ಯಾಸವಾಗುವಂತಿಲ್ಲ. ಈಗ ಸಂಮರ್ದದ ಪರಿಣಾಮವನ್ನು ಗಮನಿಸೋಣ. ಸಂಮರ್ದ ಹೆಚ್ಚಿದರೆ ಆವಿಯೆಲ್ಲ ನೀರಾಗಿ ಸಾಂದ್ರೀಕರಿಸುವುದು. ಇಲ್ಲವೇ ಸಂಮರ್ದದ ಹಿಂಸೆಯಿಂದ ಪಾರಾಗಲು ಮಂಜುಗಡ್ಡೆ ಪೂರಾ ಕರಗಿ ನೀರಾಗುವುದು. ಸಂಮರ್ದ ಇಳಿದರೆ ಮಂಡಲದ ಗಾತ್ರ ಹೆಚ್ಚುತ್ತದೆ. ಇದರ ಲಾಭ ಪಡೆಯಲು, ನೀರು ಹೆಪ್ಪುಗಟ್ಟಿಯೋ ಅಥವಾ ಆವಿಯಾಗಿಯೋ ಮಾಯವಾಗಬಹುದು. ಏನೇ ಆದರೂ ಪ್ರತಿಯೊಂದು ಸಂದರ್ಭದಲ್ಲೂ ಒಂದು ಅವಸ್ಥೆ ಅಳಿಯುತ್ತದೆ. ಆದುದರಿಂದ ಈ ಮಂಡಲಕ್ಕೆ ಸಂಮರ್ದದ ದಿಸೆಯಲ್ಲೂ ಸ್ವಾತಂತ್ರ್ಯವಿಲ್ಲ. ಹೀಗಾಗಿ ಜಲಮಂಡಲಕ್ಕೆ ಯಾವ ದಿಸೆಯಲ್ಲೂ ಕ್ರಿಯಾಸ್ವಾತಂತ್ರ್ಯವಿಲ್ಲದಿರುವುದರಿಂದ ಅದು ಅಚರ (ನಾನ್‌ವೇರಿ ಯಂಟ್). ಅವಸ್ಥಾನಿಯಮದ ಅನ್ವಯದಿಂದಲೂ ಇದೇ ಫಲಿತಾಂಶ ವ್ಯಕ್ತವಾಗುತ್ತದೆ. ಜಲಮಂಡಲ ದಲ್ಲಿರುವ ಅವಸ್ಥೆಗಳು ಮೂರು. ಘಟಕ ಒಂದು. ಆದ್ದರಿಂದ 3+F = 1+2 ಅಂದರೆ F= 0. ಮತ್ತೊಂದು ಸಂದರ್ಭವನ್ನು ವಿವೇಚಿಸೋಣ. ನಿರ್ದಿಷ್ಟ ತೂಕ ಅನಿಲದ ಗಾತ್ರವನ್ನು ಅಪೇಕ್ಷಿತ ಮಟ್ಟಕ್ಕೆ ತರಬೇಕಾದರೆ ಎರಡು ಮಾರ್ಗಗಳಿವೆ. ನಿಯತ ಸಂದರ್ಭಗಳಲ್ಲಿ ಉಷ್ಣತೆಯನ್ನು ವ್ಯತ್ಯಾಸ ಮಾಡುತ್ತ ಹೋಗುವುದು; ಅಥವಾ ಉಷ್ಣತೆಯನ್ನು ಹಿಡಿತದಲ್ಲಿಟ್ಟು, ಸಂಮರ್ದವನ್ನು ಬದಲಾಯಿಸುತ್ತ ಹೋಗುವುದು. ಆದುದರಿಂದ ಈ ಅನಿಲಮಂಡಲಕ್ಕೆ ಎರಡು ದಿಸೆಯಲ್ಲಿ ಕ್ರಿಯಾಸ್ವಾತಂತ್ರ್ಯವಿದೆ. ಅದಕ್ಕಾಗಿ ಅದನ್ನು ದ್ವಿಚರ (ಬೈವೇರಿಯಂಟ್) ಎಂದು ಹೆಸರಿಸಬಹುದು.

ಪರ್ಯಾಪ್ತ ಉಪ್ಪಿನ ದ್ರಾವಣದಲ್ಲಿ ಕೊಂಚ ಉಪ್ಪು ವಿಲೀನವಾಗದೆ ತಳವೂರಿದ್ದರೆ, ಆ ಮಂಡಲಕ್ಕೆ ಉಷ್ಣತೆಯ ದಿಸೆಯಲ್ಲಿ ಮಾತ್ರ ಕ್ರಿಯಾಸ್ವಾತಂತ್ರ್ಯವಿದೆ. ಏಕೆಂದರೆ ಉಷ್ಣತೆಯನ್ನು ನಿಗದಿಗೊಳಿಸಿದ ತತ್‌ಕ್ಷಣ, ಉಪ್ಪಿನ ದ್ರಾವಣತೆ ಮತ್ತು ದ್ರಾವಣದ ಆವಿ ಸಂಮರ್ದಗಳನ್ನು (ವೇಪರ್ ಪ್ರೆಷರ್) ನಿಗದಿಗೊಳಿಸಿದಂತಾಗುತ್ತದೆ. ಆದುದರಿಂದ ಈ ವಸ್ತುವ್ಯೂಹವನ್ನು ಏಕಚರ (ಯೂನಿವೇರಿಯಂಟ್)ಎನ್ನಬಹುದು.

ಉಷ್ಣತೆ, ಸಂಮರ್ದ ಇತ್ಯಾದಿ ಅಂಶಗಳನ್ನು ಬದಲಾಯಿಸಿದಂತೆಲ್ಲ ಮಂಡಲದಲ್ಲಾಗುವ ಬದಲಾವಣೆಗಳನ್ನು ನಕ್ಷೆಯ ಕಾಗದದ ಮೇಲೆ ಮೂಡಿಸಿದರೆ, ಆ ಮಂಡಲದ ಅವಸ್ಥಾ ನಕ್ಷೆ (ಫೇಸ್ ಡಯಾಗ್ರಂ) ದೊರೆಯುವುದು.

ಅದರಲ್ಲಿರುವ ಕ್ಷೇತ್ರಗಳು (ಏರಿಯಾಸ್) ರೇಖೆಗಳು ಮತ್ತು ಮುಕ್ಕೂಟ ಬಿಂದುಗಳು (ಟ್ರಿಪಲ್ ಪಾಯಿಂಟ್ಸ್) ಕ್ರಮವಾಗಿ ದ್ವಿಚರ ಏಕಚರ ಮತ್ತು ಅಚರ ಮಂಡಲಗಳನ್ನು ಪ್ರತಿನಿಧಿಸುತ್ತವೆ.

| **ಜಲಮಂಡಲದ ವರ್ತನೆಯ ಸಂಕ್ಷಿಪ್ತ ವಿವರ** | | |
|---|---|---|
| ನಕ್ಷೆಯ ಪ್ರಕಾರ ಮಂಡಲದ ಹೆಸರು | ಸಮಸ್ಥಿತಿಯಲ್ಲಿ ಪಾಲ್ಗೊಂಡಿರುವ ಅವಸ್ಥೆಗಳ ಸಂಖ್ಯೆ | ಸ್ವಾತಂತ್ರ್ಯಾಂಕ |
| ಕ್ಷೇತ್ರಗಳು<br>AOC — ನೀರು<br>AOB — ನೀರಾವಿ<br>BOC ಮಂಜುಗಡ್ಡೆ | <br>ನೀರು<br>ನೀರಾವಿ | ಎರಡು<br>(F = 1 –1+2)<br>(F = 1 –1+2)<br>(F = 1 –1+2) |
| ರೇಖೆಗಳು<br>OA-–ಆವಿ ರೇಖೆ<br>OB–ಕರ್ಪೂರೀಕರಣ ರೇಖೆ<br>OC—–ದ್ರಾವ್ಯತಾ ರೇಖೆ | ನೀರು ⇆ ನೀರಾವಿ<br>ಮಂಜುಗಡ್ಡೆ ⇆ನೀರಾವಿ<br>ಮಂಜುಗಡ್ಡೆ ⇆ನೀರು | ಒಂದು<br>(F = 1 – 2 + 2)<br>(F = 1 –2 + 2)<br>(F = 1 –2 + 2) |
| ಮುಕ್ಕೂಟ ಬಿಂದುಗಳು<br>o–ಮೂರು ರೇಖೆಗಳು | ಮಂಜು ಗಡ್ಡೆ ⇆ ನೀರು ⇆ನೀರಾವಿ | ಸೊನ್ನೆ<br>( F = 1 – 3 + 2) |

ಲೋಹ ವಿಜ್ಞಾನದ ಪ್ರಗತಿಗೆ, ಜರ್ಮನಿಯ ಸ್ಟ್ಯಾಸ್‌ಫರ್ಟ್ ಲವಣ ನಿಕ್ಷೇಪದ ಸದ್ವಿನಿಯೋಗಕ್ಕೆ, ಕುಂಭಕಲೆ ಮತ್ತು ಖನಿಜವಿಜ್ಞಾನದ ಬೆಳವಣಿಗೆಗೆ ಅವಸ್ಥಾನಿಯಮ ಅಪಾರ ನೆರವು ನೀಡಿದೆ.

(ಎಚ್.ಜಿ.ಎಸ್.)

**ಅವಸ್ಥೆಗಳು :** ಅವಸ್ಥಾತ್ರಯಗಳೆಂದು ಪ್ರಸಿದ್ಧ. ಆತ್ಮನಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಿವೆಯೆಂದು ನಮಗೆ ಮಾಂಡೂಕ್ಯೋಪನಿಷತ್ತು ತಿಳಿಸುತ್ತದೆ. ಗೌಡಪಾದರು ತಮ್ಮ ಕಾರಿಕೆಗಳಲ್ಲಿ ತಮ್ಮದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ಈ ಅವಸ್ಥಾತ್ರಯಗಳ ವಿಶ್ಲೇಷಣೆ ಮಾಡಿದ್ದಾರೆ. ಜಾಗ್ರದವಸ್ಥೆಯಲ್ಲಿ ಆತ್ಮ ಬಾಹ್ಯಪ್ರಜ್ಞೆಯುಳ್ಳವನಾಗಿ ಸ್ಥೂಲವಿಷಯಗಳನ್ನು ಅನುಭವಿಸುತ್ತಾನೆ. ಸ್ವಪ್ನಾವಸ್ಥೆಯಲ್ಲಿ ಅಂತಃಪ್ರಜ್ಞನಾಗಿ ಸೂಕ್ಷ್ಮ ವಿಷಯಗಳನ್ನು ಅನುಭವಿಸುತ್ತಾನೆ. ಸುಷುಪ್ತಿಯಲ್ಲಿ ಬಯಕೆಗಳಾಗಲೀ ಸ್ವಪ್ನಗಳಾಗಲೀ

ಇರುವುದಿಲ್ಲ; ದೃಗ್‌ದೃಶ್ಯಗಳಿಲ್ಲದೆ ಎಲ್ಲವೂ ಒಂದಾಗಿರುತ್ತದೆ. ಈ ಅವಸ್ಥೆಯಲ್ಲಿ ಆತ್ಮ ಪ್ರಜ್ಞಾನಘನನೂ ಆನಂದಮಯನೂ ಆನಂದಭೋಗಿಯೂ ಆಗಿರುತ್ತಾನೆ. ಈ ಮೂರು ಅವಸ್ಥೆಗಳು ಆತ್ಮನ ವೈಶ್ವಾನರ, ತೈಜಸ, ಪ್ರಾಜ್ಞ ಎಂಬ ಮೂರು ಪಾದಗಳಿಗೆ ಹೋಲುತ್ತವೆ. ಆತ್ಮನ ನಾಲ್ಕನೆಯ ಪಾದಕ್ಕೆ ತುರೀಯವೆಂದು ಹೆಸರು. ತುರೀಯದಲ್ಲಿ ಆತ್ಮ ಅಂತಃಪ್ರಜ್ಞನಲ್ಲ, ಬಹಿಃಪ್ರಜ್ಞನಲ್ಲ, ಉಭಯಪ್ರಜ್ಞನಲ್ಲ, ಪ್ರಜ್ಞಾಘನನಲ್ಲ, ಪ್ರಜ್ಞನಲ್ಲ, ಅಪ್ರಜ್ಞನಲ್ಲ – ಇದು ಪಾರಮಾರ್ಥಿಕದ ಆತ್ಮ ಸ್ವರೂಪ.

ಅವಸ್ಥಾತ್ರಯದ ಅನುಭವವೂ ಜಾಗ್ರದವಸ್ಥೆಯಿಂದಲೇ ತಿಳಿದುಬರುತ್ತದೆ. ಸ್ವಪ್ನ ಸುಷುಪ್ತಿಗಳು ಬೇರೆಬೇರೆ ಲಕ್ಷಣಗಳಿಂದ ಕೂಡಿದ ಅವಸ್ಥೆಗಳೆಂದು ಎಚ್ಚರದಲ್ಲಿಯೇ ತಿಳಿಯಬೇಕು. ಮೂರು ಜ್ಞಾತೃಗಳು ಒಂದೇ ಶರೀರದಲ್ಲಿದ್ದರೆ ಸ್ಮೃತಿಜ್ಞಾನದ ಸಂತತಿ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಒಬ್ಬನೇ ಆದ ಜ್ಞಾತೃ ಶರೀರದಲ್ಲಿ ಮೂರು ಬಗೆಯಾಗಿದ್ದಾನೆ. ವೈಶ್ವಾನರ, ತೈಜಸ, ಪ್ರಾಜ್ಞರೆಂದು ಮೇಲುಮೇಲೆ ತೋರುವ ಭೇದ ಅವಸ್ಥಾತ್ರಯದೊಂದಿಗೆ ಉಂಟಾಗಿರುವ ತಾದಾತ್ಮ್ಯದಿಂದ ಸಂಭವಿಸಿದೆ.

ಈಗ ಅವಸ್ಥಾತ್ರಯದ ಅರ್ಥವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಪರೀಕ್ಷಿಸಬಹುದು. ನಿಜವಾಗಿ ನೋಡಿದರೆ ನಮ್ಮ ಎಚ್ಚರ ಎಚ್ಚರವೇ ಅಲ್ಲ; ಸ್ವಪ್ನ ಸುಷುಪ್ತಿಗಳಂತೆ ಇಲ್ಲೂ ಅಜ್ಞಾನದ ಕತ್ತಲು ಕವಿದುಕೊಂಡಿರುವುದು. ತತ್ತ್ವದ ಅಪ್ರತಿಬೋಧ ರೂಪವಾದ, ಅನ್ಯಥಾಗ್ರಹಣರೂಪವಾದ ನಿದ್ರೆಯಿಂದ ಜೀವ ಯಾವಾಗ ಎಚ್ಚರಗೊಳ್ಳುವನೋ ಆಗ ಅವನಿಗೆ ನಿಜವಾದ ಎಚ್ಚರವಾಗುವುದು. ಈ ಅಲೌಕಿಕಾನುಭವದಿಂದ ನೋಡಿದರೆ ಜಾಗ್ರತ್, ಸ್ವಪ್ನ, ಸುಷುಪ್ತಿಗಳೇ ಜೀವಾತ್ಮನ ರಾತ್ರಿಗಳಾಗಿರುತ್ತವೆ. ಶ್ರೀಕೃಷ್ಣನು ಗೀತೆಯಲ್ಲಿ ಹೇಳಿರುವಂತೆ ಪ್ರಾಣಿಗಳಿಗೆಲ್ಲ ಯಾವುದು ರಾತ್ರಿಯೋ ಅದರಲ್ಲಿ ಸಂಯಮಿ ಎಚ್ಚೆತ್ತಿರುತ್ತಾನೆ; ಯಾವುದರಲ್ಲಿ ಪ್ರಾಣಿಗಳು ಎಚ್ಚೆತ್ತಿರುವುವೋ ಅದು ಮುನಿಗೆ ರಾತ್ರಿ. ಪಾರಮಾರ್ಥಿಕ ಪ್ರಬೋಧವೇ ಎಚ್ಚರವಾದರೆ ಸ್ವಪ್ನ ಸುಷುಪ್ತಿಗಳು ಯಾವುವು? ಅನ್ಯಥಾಗ್ರಹಣವೇ ಸ್ವಪ್ನ. ತತ್ತ್ವವನ್ನು ತಿಳಿಯದಿರುವುದೇ ಸುಷುಪ್ತಿ. ತತ್ತ್ವವನ್ನು ತಪ್ಪಾಗಿ ತಿಳಿಯುವುದು ಅನ್ಯಥಾಗ್ರಹಣ; ತತ್ತ್ವವನ್ನು ಅರಿಯದೆ ಇರುವುದು ತತ್ತ್ವಜ್ಞಾನ. ಅನ್ಯಥಾಗ್ರಹಣ ಜಾಗ್ರತ್ ಸ್ವಪ್ನಗಳಿಗೆ ಸಾಮಾನ್ಯವಾದರೆ ತತ್ತ್ವಜ್ಞಾನ ಜಾಗ್ರತ್, ಸ್ವಪ್ನ, ಸುಷುಪ್ತಿಗಳಿಗೂ ಸಾಮಾನ್ಯವಾಗಿರುತ್ತದೆ. ಅಗ್ರಹಣ ಕಾರಣ, ಅನ್ಯಥಾಗ್ರಹಣ ಕಾರ್ಯ. ಹಗ್ಗ ನಮ್ಮ ದೃಷ್ಟಿಗೆ ಬೀಳದಿದ್ದರೆ ಹಾವನ್ನು ನೋಡುತ್ತೇವೆ. ಆತ್ಮಜ್ಞಾನವಿಲ್ಲದಿದ್ದರೆ ದ್ವೈತಪ್ರಪಂಚವನ್ನು ನೋಡುತ್ತೇವೆ. ಅನ್ಯಥಾಗ್ರಹಣ ಜಾಗ್ರತ್ ಸ್ವಪ್ನಗಳಿಗೆ ಸಾಮಾನ್ಯವಾಗಿರುವುದರಿಂದ ಜಾಗ್ರತ್ತೇ ಸ್ವಪ್ನ, ಅವಸ್ವಪ್ನವೇ ಜಾಗ್ರತ್ ಎಂದು ಹೇಳಿದರೆ ತಪ್ಪಾಗಲಾರದು. ವೈಶ್ವಾನರ ತೈಜಸ ಎಂಬ ಪಾದಗಳೆನಿಸಿದ ಆತ್ಮರು ಕಾರ್ಯ ಕಾರಣಗಳಿಂದ ಬದ್ಧರಾಗಿದ್ದರೆ ಪ್ರಾಜ್ಞವೆಂಬ ಪಾದವಾದ ಆತ್ಮ ಕಾರಣದಿಂದ ಮಾತ್ರ ಬದ್ಧನಾಗಿದ್ದಾನೆ. ವೈಶ್ವಾನರ ತೈಜಸರು ಸ್ವಪ್ನ– ಸುಷುಪ್ತಿಗಳಿಂದ ಕೂಡಿರುವರು. ಪಾಜ್ಞ ಸ್ವಪ್ನರಹಿತವಾದ ನಿದ್ರೆಯಿಂದ ಕೂಡಿದ್ದಾನೆ. ದ್ವೈತವನ್ನು ಗ್ರಹಿಸದಿರುವುದು ಪ್ರಾಜ್ಞ ತುರೀಯರಿಗೆ ಸಮಾನವಾಗಿರುತ್ತದೆ. ಆದರೆ ಪ್ರಾಜ್ಞ ತತ್ತ್ವಾಗ್ರಹಣವೆಂಬ ನಿದ್ರೆಯಿಂದ ಕೂಡಿರುತ್ತಾನೆ. ಇದೇ ದ್ವೈತಜ್ಞಾನಕ್ಕೆ ಬೀಜವಾಗಿರುವುದು. ತುರೀಯ ಸರ್ವದೃಕ್–ಸ್ವಭಾವವಾಗಿರುವುದರಿಂದ ಅದರಲ್ಲಿ ಬೀಜನಿದ್ರೆಯಿರುವುದಿಲ್ಲ. ಆದ್ದರಿಂದ ತುರೀಯದಲ್ಲಿ ಕಾರಣಬಂಧ ಇರುವುದಿಲ್ಲ. ಅವಸ್ಥಾತ್ರಯದ ಪರೀಕ್ಷೆಯಿಂದ ಈ ಸಿದ್ಧಾಂತವನ್ನು ಸಾಧಿಸಬಹುದು.

1. ಜಾಗ್ರದವಸ್ಥೆಯಲ್ಲಿ ಸ್ವಪ್ನ–ಸುಷುಪ್ತಿಗಳ ಎಂದರೆ ಅನ್ಯಥಾಗ್ರಹಣ: ಅಗ್ರಹಣಗಳ ಅನುಭವವಾಗುವುದು.

2. ಸ್ವಪ್ನದಲ್ಲಿ ಸುಷುಪ್ತಿಯ ಎಂದರೆ ಅಗ್ರಹಣದ ಅನುಭವವೂ ಇರುವುದು.

3. ಸುಷುಪ್ತಿಯಲ್ಲಿ ಸ್ವಪ್ನರಹಿತವಾದ ನಿದ್ರೆ ಮಾತ್ರ ಉಳಿಯುವುದು. ಅವಿದ್ಯಾರೂಪವಾದ ನಿದ್ರೆ ಸಂಸಾರ ದೆಶೆಯಲ್ಲಿ ಎಡಬಿಡದೆ ಇದ್ದುಕೊಂಡು ಜ್ಞಾನೋದಯವಾದ ಮೇಲೆ ನಾಶವಾಗುವುದು. ಅನಾದಿಮಾಯೆಯಿಂದ ಸುಪ್ತನಾದ ಜೀವ ಯಾವಾಗ ಎಚ್ಚರಗೊಳ್ಳುವನೋ ಆಗ ಅಜವೂ ನಿದ್ರಾ–ಸ್ವಪ್ನರಹಿತವೂ ಆದ ಅದ್ವೈತವನ್ನು ಅರಿತುಕೊಳ್ಳುವನು.

ಗೌಡಪಾದರು ಅವಸ್ಥಾತ್ರಯದ ತಾತ್ಪರ್ಯವನ್ನು ಅಲಾತಶಾಂತಿಪ್ರಕರಣದಲ್ಲಿ ಬೌದ್ಧರ ಯುಕ್ತಿಯನ್ನು ಅನುಸರಿಸಿಕೊಂಡು ಅವರ ಪರಿಭಾಷೆಯಲ್ಲಿಯೇ ಉಪಸಂಹರಿಸಿರುತ್ತಾರೆ. ಜಾಗ್ರತ್, ಸ್ವಪ್ನ, ಸುಷುಪ್ತಿಗಳನ್ನು ಲೌಕಿಕ, ಶುದ್ಧ ಲೌಕಿಕ, ಲೋಕೋತ್ತರಗಳೆಂದು ಕರೆದಿರುತ್ತಾರೆ. ಸ್ಥೂಲವಸ್ತುಗಳ ಅನುಭವದಿಂದ ಕೂಡಿರುವುದು ಲೌಕಿಕ; ಇದನ್ನೇ ಉಪನಿಷತ್ತುಗಳಲ್ಲಿ ಜಾಗ್ರದಾವಸ್ಥೆಯೆಂದು ಹೇಳಿದೆ. ಶುದ್ಧ ಲೌಕಿಕದಲ್ಲಿ ಬಾಹ್ಯವಸ್ತುಗಳಿಲ್ಲದಿದ್ದರೂ ಅವುಗಳ ಅನುಭವವಾಗುತ್ತದೆ; ಇದೇ ಸ್ವಪ್ನಾವಸ್ಥೆ. ಗ್ರಾಹ್ಯಗ್ರಹಣ ವಿಷಯವಿಲ್ಲದಿರುವುದು ಲೋಕೋತ್ತರ ವೆನಿಸುವುದು; ಇದೇ ಎಲ್ಲ ಪ್ರವೃತ್ತಿಗಳಿಗೂ ಕಾರಣವಾದ ಸುಷುಪ್ತಿ. ಈ ಮೂರು ಅವಸ್ಥೆಗಳೇ ಜ್ಞೇಯ; ಇವುಗಳನ್ನು ಅರಿತುಕೊಳ್ಳುವ ಜ್ಞಾನವೇ ಜ್ಞಾನ. ವಿಜ್ಞೇಯವೇ ತುರೀಯವೆಂಬ ಪರಮಾರ್ಥಸತ್ಯ. ದ್ವೈತ ಪ್ರಪಂಚವನ್ನೇ ಯಾವಾಗಲೂ ಅನುಭವಿಸುತ್ತಿರುವ ನಮಗೆ ಅದ್ವಯವಾದ ಪರಮಾರ್ಥಸತ್ಯ ಹೇಗೆ ತಿಳಿದುಬರುತ್ತದೆ? ಪರಮಾರ್ಥಾನುಭವಕ್ಕೆ ಜಾಗ್ರದವಸ್ಥೆಯ ದ್ವೈತಾನುಭವವೇ ನಿಜವಾದ ಅಡಚಣೆ. ಸ್ವಪ್ನಾವಸ್ಥೆಯ ಅನುಭವ ಜಾಗ್ರದವಸ್ಥೆಯಲ್ಲಿ ಹುಸಿಯಾಗಿ ತೋರುವುದೆಂಬುದರಲ್ಲಿ ಸಂಶಯವಿಲ್ಲ; ಆದರೆ ಇದೇ ರೀತಿ ನಮ್ಮ ಜಾಗ್ರದವಸ್ಥೆಯೂ ಹುಸಿಯೆಂದು ಒಪ್ಪಿಕೊಳ್ಳುವುದು ಅಷ್ಟು ಸುಲಭವಲ್ಲ. ಏಕೆಂದರೆ ನಮಗೆ ಯಾವಾಗಲೂ ವೇದ್ಯವಾಗಿರುವ ಜಾಗ್ರದವಸ್ಥೆಯಿಂದಲೇ ಎಲ್ಲವನ್ನೂ ಅಳೆಯುತ್ತೇವೆ ಮತ್ತು ಪರೀಕ್ಷಿಸುತ್ತೇವೆ. ಆದರೆ ಗೌಡಪಾದರಿಗೆ ವ್ಯವಹಾರಜ್ಞಾನವಾಗಲೀ ಸಂಬದ್ಧತೆಯಾಗಲೀ ಅನುರೂಪತೆಯಾಗಲೀ ತತ್ತ್ವಸಮೀಕ್ಷೆಯ ಒರೆಗಲ್ಲಾಗಿಲ್ಲ. ಇತರರು ಒಪ್ಪಲಿ ಒಪ್ಪದಿರಲಿ ತತ್ತ್ವದರ್ಶಿ ತತ್ತ್ವವನ್ನು ಯಥಾರ್ಥವಾಗಿ ಹೇಳಬೇಕು. ಆತ ವ್ಯಾವಹಾರಿಕ ಸತ್ಯತ್ವವನ್ನು ಸಾಪೇಕ್ಷವಾಗಿ ಒಪ್ಪಿಕೊಂಡರೂ ಪಾರಮಾರ್ಥಿಕ ದೃಷ್ಟಿಯಿಂದ ಅದು ಮಿಥ್ಯೆಯೆಂದು ತಿಳಿದಿರುತ್ತಾನೆ.

ಗೌಡಪಾದರು ಜಾಗ್ರದವಸ್ಥೆಯ ಮಿಥ್ಯಾತ್ವವನ್ನು ಸ್ವಪ್ನ ಪ್ರಪಂಚದ ಸಾದೃಶ್ಯದ ಮೂಲಕ ಸಾಧಿಸಿದ್ದಾರೆ. ಸ್ವಪ್ನದಲ್ಲಿ ಕಾಣುವ ದೃಶ್ಯಗಳೆಲ್ಲ ಮಿಥ್ಯೆ. ಅವುಗಳು ನಿಜವಾಗಿದ್ದರೆ ಅವುಗಳ ಸ್ಥಾನ ಕನಸುಗಾಣುವವನ ಶರೀರದಲ್ಲೇ ಇರಬೇಕು ಆದರೆ ಇದು ಅಸಾಧ್ಯ ; ಏಕೆಂದರೆ ಪರ್ವತವೇ ಮೊದಲಾದ ದೊಡ್ಡವಸ್ತುಗಳೂ ನಗರಗಳೂ ಎಷ್ಟು ಸಣ್ಣ ಶರೀರದಲ್ಲಿ ಹೇಗಿರುವುವು? ಕನಸುಗಾಣುವವ ಶರೀರದಿಂದ ಹೊರಗೆ ಹೋಗಿ ವಸ್ತುಗಳನ್ನು ನೋಡುವುದಿಲ್ಲ; ಏಕೆಂದರೆ ಕನಸಿನಲ್ಲಿ ಕಂಡ ಪ್ರದೇಶಕ್ಕೆ ಹೋಗಿದ್ದರೆ ಆತ ಎಚ್ಚರವಾದಾಗ ಅಲ್ಲಿಯೇ ಇರಬೇಕಾಗಿತ್ತು. ಕನಸಿನ ದೃಶ್ಯಗಳು ದೇಶಕಾಲಗಳಿಗೆ ಸಂಬಂಧಿಸಿಲ್ಲದಿರುವುದರಿಂದ ಅವು ಮಿಥ್ಯೆ. ಆದ್ದರಿಂದ ಕನಸಿನಲ್ಲಿ ಓಡಾಡುವ ಶರೀರ ಕೇವಲ ಮನೋಭ್ರಾಂತಿ. ಕನಸುಗಾಣುವವನ ಶರೀರ ಮಲಗಿದ್ದಲ್ಲೇ ಬಿದ್ದಿರುವುದು. ಕನಸಿನ ಶರೀರದಂತೆ ಕನಸಿನಲ್ಲಿ ತೋರುವ ಭಾವನೆಗಳೂ ಕೇವಲ ಕಲ್ಪನೆ. ಅಲ್ಲಿ ರಥಗಳಿಲ್ಲ ಎಂದು ಬೃಹದಾರಣ್ಯಕ ಶ್ರುತಿಯೇ ಹೇಳುತ್ತದೆ.

ಜಾಗ್ರದವಸ್ಥೆ ಸ್ವಪ್ನವನ್ನು ಅನೇಕ ವಿಧಗಳಲ್ಲಿ ಹೋಲುತ್ತದೆ. ಸ್ವಪ್ನದಂತೆಯೇ ಜಾಗ್ರದಾವಸ್ಥೆಯಲ್ಲೂ ವಸ್ತುಗಳನ್ನು ನೋಡುತ್ತೇವೆ ಮತ್ತು ನೋಡಿದ್ದೆಲ್ಲ ಅಸತ್ಯವಾಗಿರುತ್ತದೆ; ಎಂದರೆ ದೃಶ್ಯತ್ವ–ಮಿಥ್ಯತ್ವಗಳೆಂಬ ಎರಡು ಲಕ್ಷಣಗಳು ಜಾಗ್ರತ್ ಸ್ವಪ್ನಗಳಿಗೆ ಸಾಧಾರಣವಾಗಿರುತ್ತವೆ. ಯಾವುದು ಆದಿ ಅಂತ್ಯಗಳಿಲ್ಲವೋ ಅದು ಮಧ್ಯದಲ್ಲೂ ಇಲ್ಲ. ಯಾವುದು ಕಾಲವೆಂಬ ಉಪಾಧಿಗೆ ಒಳಪಟ್ಟಿರುವುದೋ ಅದು ಅಸತ್ಯ. ಸ್ವಪ್ನ ವಸ್ತುಗಳು ಸ್ವಪ್ನದಲ್ಲಿ ಕಾಣಿಸುತ್ತವೆಯೇ ಹೊರತು ಸ್ವಪ್ನಕ್ಕೆ ಮೊದಲಾಗಲೀ ಸ್ವಪ್ನ ಮುಗಿದಮೇಲಾಗಲೀ ಕಾಣುವುದಿಲ್ಲ. ಹಾಗೆಯೇ ಜಾಗ್ರದವಸ್ಥೆಯ ವಿಷಯಗಳು ಜಾಗ್ರದವಸ್ಥೆ ಯಲ್ಲಿ ಮಾತ್ರ ಕಾಣುತ್ತವೆ.

ಜಾಗ್ರದವಸ್ಥೆ ಮಿಥ್ಯೆಯೆಂದು ತೋರಿಸಲು ಸ್ವಪ್ನದ ದೃಷ್ಟಾಂತ ಕೊಟ್ಟದ್ದಾಯಿತು. ಆದರೆ ಮಿಥ್ಯೆಯನ್ನು ಸೂಚಿಸುವ ಕೆಲವು ಅನುಭವಗಳನ್ನು ನಾವು ಜಾಗ್ರದವಸ್ಥೆಯಲ್ಲಿಯೇ ಹೊಂದಬಹುದು. ಹಗ್ಗ, ಹಾವು–ಇವುಗಳ ದೃಷ್ಟಾಂತ ವೇದಾಂತದಲ್ಲಿ ಪ್ರಸಿದ್ಧವಾಗಿದೆ. ಕತ್ತಲೆಯಲ್ಲಿ ಹಗ್ಗ ಹಾವಿನಂತೆಯೇ ಕಾಣುವುದು; ಹಾಗೆಯೇ ಆತ್ಮ ಜೀವಪ್ರಾಣಾದಿ ಭೇದಗಳಿಂದ ಕಲ್ಪಿತನಾಗಿರುತ್ತಾನೆ. ಆಕಾಶದಲ್ಲಿ ವಿಚಿತ್ರವಾದ ದೃಶ್ಯಗಳನ್ನು ಕೆಲವು ಋತುಗಳಲ್ಲಿ ನೋಡಬಹುದು; ನಗರಗಳು, ಪರ್ವತಗಳು, ನದಿಗಳು ಆಕಾಶದಲ್ಲಿ ಕಾಣಿಸಿಕೊಂಡು, ಬಗೆಬಗೆಯ ಬಣ್ಣಗಳಿಂದ ಕೂಡಿ ಒಂದು ಕ್ಷಣದಲ್ಲಿ ಬೇರೆರೂಪಗಳನ್ನು ಹೊಂದುತ್ತವೆ. ಇದೇ ಗಂಧರ್ವ ನಗರ. ಗಂಧರ್ವನಗರ ಎಷ್ಟು ಮಿಥ್ಯೆಯೋ ಅಷ್ಟೇ ಈ ಜಗತ್ತು ಮಿಥ್ಯೆಯೆಂದು ಪಂಡಿತರು ಎಣಿಸುತ್ತಾರೆ. ಅವರು ನಾನಾತ್ವವನ್ನು ನಿಜವೆಂದು ತಿಳಿಯುವುದಿಲ್ಲ. ಗೌಡಪಾದರು ಕೊಟ್ಟಿರುವ ಮತ್ತೊಂದು ಪ್ರಸಿದ್ಧವಾದ ದೃಷ್ಟಾಂತ ಅಲಾತ ಕೊಳ್ಳಿ, ಉರಿಯುವ ಅಲಾತವನ್ನು ತಿರುಗಿಸಿದರೆ ಅದು ಉದ್ದವಾಗಿ ಅಥವಾ ವಕ್ರವಾಗಿ ತೋರುವುದು; ಅದನ್ನು ತಿರುಗಿಸದಿದ್ದರೆ ಯಾವ ಆಭಾಸವೂ ತೋರುವುದಿಲ್ಲ. ಆಭಾಸಗಳು ಅಲಾತದಿಂದ ಹೊರಗೆ ಬರಲಿಲ್ಲ; ಒಳಕ್ಕೂ ಹೋಗಲಿಲ್ಲ. ವಿಜ್ಞಾನ ವಿಷಯದಲ್ಲೂ ಹೀಗೆಯೇ. ವಿಜ್ಞಾನ ಅವಿದ್ಯೆಯಿಂದ ಸ್ಪಂದಿಸಿದಾಗ ಜ್ಞಾನ– ಜ್ಞಾತೃರೂಪಗಳಲ್ಲಿ ತೋರಿಬರುತ್ತದೆ. ಆಭಾಸಗಳು ವಿಜ್ಞಾನದಿಂದ ಹುಟ್ಟಿಲ್ಲ. ವಿಜ್ಞಾನದಲ್ಲಿ ಲಯವನ್ನೂ ಹೊಂದುವುದಿಲ್ಲ. ವಿಜ್ಞಾನ ಅಚಲವೂ ಅಜವೂ ಆಗಿದೆ.

ಆಧ್ಯಾತ್ಮಿಕ ದೃಷ್ಟಿಯಿಂದ ಜಾಗ್ರತ್, ಸ್ವಪ್ನಗಳಿಗೆ ಯಾವ ಭೇದವಿಲ್ಲದಿದ್ದರೂ ವ್ಯಾವಹಾರಿಕ ದೃಷ್ಟಿಯಿಂದ ಅವುಗಳಿಗಿರುವ ಭೇದವನ್ನು ಗೌಡಪಾದರು ನಿರಾಕರಿಸಿಲ್ಲ: 1. ಜಾಗ್ರದವಸ್ಥೆಯ ಅವುಭವಗಳು ಬಾಹ್ಯಪ್ರಪಂಚಕ್ಕೆ ಸೇರಿದುವು. ಜಾಗ್ರದವಸ್ಥೆಯ ದೃಷ್ಟಿಯಿಂದ ಸ್ವಪ್ನ ವಿಷಯಗಳು ಶರೀರದ ಒಳಗಿವೆ, ಸಂವೃತವಾಗಿವೆ. 2. ಸ್ವಪ್ನದಲ್ಲಿ ತೋರಿಕೊಳ್ಳುವ ವಸ್ತುಗಳು ಅವ್ಯಕ್ತವಾಗಿರುವುವು. ಜಾಗ್ರದವಸ್ಥೆಯ ವಸ್ತುಗಳು ಸ್ಫುಟವಾಗಿರುವುವು. 3. ಕನಸಿನ ವಿಷಯಗಳು ಕನಸು ನೋಡುವವನ ಚಿತ್ತ ಕಲ್ಪಿಸುವವರೆಗೆ ಉಳಿಯುತ್ತವೆ. ಆದರೆ ಜಾಗ್ರದವಸ್ಥೆಯ ವಿಷಯಗಳು ದ್ವಯಕಾಲವುಳ್ಳವು ಎಂದರೆ ಎಚ್ಚರವಾದ ಮೇಲೆ ಅದೇ ಇದು ಎಂಬ ಪ್ರತ್ಯಭಿಜ್ಞೆಗೆ (ಅಂದರೆ ನಿದ್ರೆಗೆ ಅಥವಾ ಸ್ವಪ್ನಕ್ಕೆ), ಮೊದಲು ನೋಡಿದ ವಸ್ತುಗಳು ವಿಷಯವಾಗಿರುತ್ತವೆ. ಆದುದರಿಂದ ಜಾಗ್ರತ್– ಸ್ವಪ್ನಗಳಿಗೆ ಭೇದವಿಲ್ಲ.

ತುರೀಯ ನಿಜವಾಗಿ ಯಾವ ಅವಸ್ಥೆಯೂ ಅಲ್ಲ ; ಎಲ್ಲ ಅವಸ್ಥೆಗಳನ್ನೂ ಒಳಗೊಂಡು ಎಲ್ಲ ಅವಸ್ಥೆಗಳಲ್ಲೂ ಒಬ್ಬನೇ ಆತ್ಮನಿರುವನೆಂಬ ಪ್ರತೀತಿಗೆ ಆಧಾರವಾಗಿದೆ. ಇದು ವ್ಯವಹಾರಾತೀತವೂ ಪ್ರಪಂಚೋಪಶಮವೂ ಆಗಿದೆ. (ಎ.ಎಸ್.)

**ಅವಹಟ್ಟ ಭಾಷೆ :** ಮಧ್ಯಕಾಲೀನ ಇಂಡೋ–ಆರ್ಯನ್ ಕೊನೆಯ ಹಂತವಾದ ಅಪಭ್ರಂಶಕ್ಕೆ ಪರ್ಯಾಯನಾಮ. ಈ ಭಾಷೆ ಮತ್ತಷ್ಟು ಪ್ರಾಚೀನ ರೂಪವನ್ನು ಪ್ರತಿನಿಧಿಸುವ ಪ್ರಾಕೃತಗಳಂತಲ್ಲದೆ ಅಪಭ್ರಂಶ ಸಾಹಿತ್ಯ ಸ್ವರೂಪವನ್ನು ಪಡೆದಿತ್ತು. ಪೂರ್ವದಲ್ಲಿ ಗಡಿಯಂಚಿನ ಕೆಲವು ಭೇದಗಳೊಡನೆ ಬಂಗಾಳದಿಂದ ಹಿಡಿದು ಪಶ್ಚಿಮದಲ್ಲಿ ಗುಜರಾತಿನವರೆಗೆ ಈ ಭಾಷೆಯನ್ನು ಬಳಸಲಾಗುತ್ತಿತ್ತು. ಸಂಸ್ಕೃತ ವಿದ್ಯಾವಂತರ ಸಾಹಿತ್ಯ ಭಾಷೆಯಾಗಿದ್ದರೆ ಅಪಭ್ರಂಶ ಅಕ್ಷರಸ್ಥರ (ಅಂತೆಯೇ ಅನಕ್ಷರಸ್ಥರ) ಸಾಹಿತ್ಯ ಭಾಷೆಯಾಗಿತ್ತು. ಅಪಭ್ರಂಶದಲ್ಲಿ ಈ ಸಾಹಿತ್ಯ ಪರಂಪರೆ ಇದ್ದುದರಿಂದಲೇ ಆಧುನಿಕ ಇಂಡೋ–ಆರ್ಯನ್ ಭಾಷೆಗಳ (ಉತ್ತರ ಭಾರತದ ಆಧುನಿಕ ಭಾಷೆಗಳ) ಉಗಮದ ಅನಂತರವೂ ಅದು ಕೊನೆಯುಸಿರನ್ನೆಳೆಯಲಿಲ್ಲ. ಆದರೆ ಈ ಇಂಡೋ–ಆರ್ಯನ್ ಭಾಷೆಗಳ ಶಬ್ದರೂಪಗಳೂ ನುಡಿಗಟ್ಟುಗಳೂ ಈಚಿನ (1000–1500) ಅಪಭ್ರಂಶ ಕೃತಿಗಳಲ್ಲಿ ತಲೆದೋರಿವೆ: ಈ ಮಿಶ್ರ ಸಾಹಿತ್ಯ ಭಾಷೆಯನ್ನೇ ಅವಹಟ್ಟ ಎಂದು ಕೆಲವು ಲೇಖಕರು ಕರೆದಿದ್ದಾರೆ. ಸಂಸ್ಕೃತದ ಅಪಭ್ರಷ್ಟ (ಬಿದ್ದ ಎಂದು ಅರ್ಥ) ಎಂಬ ಶಬ್ದವೇ ಇದಕ್ಕೆ ಮೂಲ. ಅಪಭ್ರಂಶ ಎಂಬುದಕ್ಕೆ ಇದು ಪರ್ಯಾಯ ಶಬ್ದ.

ರಹಸ್ಯ ಧಾರ್ಮಿಕ ಪಂಥಗಳ (ಗೂಢ ಬೌದ್ಧ ಧರ್ಮ ಮತ್ತು ತಾಂತ್ರಿಕ ಶೈವಧರ್ಮ) ಕೆಲವು ಆಚಾರ್ಯರು ಹಾಡುಗಳನ್ನು, ಉಪದೇಶಾತ್ಮಕ ಪದಗಳನ್ನು ಅವಹಟ್ಟ ಭಾಷೆಯಲ್ಲಿ ರಚಿಸಿದ್ದಾರೆ. ಸರಹನ (1000) ದೋಹಾಕೋಶ ಮತ್ತು ಕಹ್ನ (1200 ಕ್ಕಿಂತಲೂ ಹಿಂದೆ) ಮತ್ತು ಪಹುದ ದೋಹಗಳಲ್ಲಿ (1400) ಇವು ಕಂಡುಬರುತ್ತವೆ. ಪ್ರೇಮಚಂದ್ರನ ಪ್ರಾಕೃತ ವ್ಯಾಕರಣದ ಕೊನೆಯ ಅಧ್ಯಾಯದಲ್ಲಿ ಧಾರ್ಮಿಕ ಆಶಯವನ್ನುಳ್ಳ ಹಲವಾರು ಪದ್ಯಗಳು ಉದಾಹೃತವಾಗಿವೆ. 15ನೆಯ ಶತಮಾನದಲ್ಲಿ ರಚಿತವಾದ ಅವಹಟ್ಟ ಛಂದೋರೂಪಗಳ ಸಂಕಲನ ಗ್ರಂಥವಾದ ಪ್ರಾಕೃತ ಪೈಂಗಳದಲ್ಲಿ ನಾನಾ ಪ್ರಕಾರದ ಅವಹಟ್ಟ ಕಾವ್ಯದ ಉತ್ತಮ ಸಂಗ್ರಹ ಕಾಣದೊರೆಯುತ್ತದೆ. ಅವಹಟ್ಟ ಭಾಷೆಯಲ್ಲಿ ರಚಿತವಾದ ಕೊನೆಯ ಪ್ರಮುಖ ಕೃತಿ ವಿದ್ಯಾಪತಿಯ ಕೀರ್ತಿಲತಾ ಚಂಪೂರೂಪದಲ್ಲಿ ಬರೆದ ಇತಿಹಾಸ ಕಾವ್ಯ; ಲೇಖಕ ಮಿಥಿಲಾ ಪ್ರಾಂತ್ಯದ ಪ್ರಖ್ಯಾತನಾದೊಬ್ಬ ಕವಿ (15ನೆಯ ಶತಮಾನ). ಆತ ತನ್ನ ಸಂಸ್ಕೃತ ಭಾಷಾಪಾಂಡಿತ್ಯದಿಂದ ಪ್ರಾಂತೀಯ ಭಾಷೆಯಾದ ಮೈಥಿಲಿಯಲ್ಲಿ ರಚಿಸಿದ್ದ ಗೀತೆಗಳಿಂದಾಗಿ ಅತ್ಯಂತ ಪ್ರಖ್ಯಾತನಾಗಿದ್ದ. (ಎಸ್.)

**ಅವಳಿಗಳು, ಅವಳಿತನ :** ಮಾನವ ಸಂತಾನವರ್ಧನೆಯಲ್ಲಿ ಒಂದು ಹೆರಿಗೆಗೆ ಒಂದು ಮಗು ಸಹಜವಾದದ್ದು. ಕೆಲವು ಬಾರಿ ಒಂದೇ ಗರ್ಭದಲ್ಲಿ ಎರಡು, ಮೂರು, ಕೆಲವೊಮ್ಮೆ ನಾಲ್ಕು ಕೂಸುಗಳೂ ಬೆಳೆಯುವುದು ಉಂಟು (ಆರು ಮಕ್ಕಳು ಒಂದೇ ಹೆರಿಗೆಯಲ್ಲಿ ಜನಿಸಿದ್ದು ಕೂಡ ದಾಖಲಾಗಿದೆ).

ಎರಡು ಮಕ್ಕಳು ಒಂದೇ ಗರ್ಭದಲ್ಲಿ ಬೆಳೆಯುವುದನ್ನು ಅವಳಿ ಎಂದು ಕರೆಯುತ್ತಾರೆ. ಅದರಲ್ಲಿ ಎರಡು ವಿಧ. ಸಾಧಾರಣವಾಗಿ ಹೆಣ್ಣಿನಲ್ಲಿ ಒಂದು ಮಾಸಿಕ ಚಕ್ರದಲ್ಲಿ ಒಂದು ಅಂಡಾಣು ಫಲಿತವಾಗಿ ಯುಗ್ಮಜವಾಗುತ್ತದೆ. ಕೆಲವೊಮ್ಮೆ ಈ ಒಂದೇ ಯುಗ್ಮಜ ಒಂದು ಮಗುವಾಗಿ ಬೆಳೆಯುವ ಬದಲು ಎರಡಾಗಿ ಕವಲೊಡೆದು ಅವಳಿ ಮಕ್ಕಳಾಗುತ್ತವೆ. ಇವುಗಳನ್ನು ಒಂದೇ ಅಂಡಾಣುವಿನ ಅವಳಿ (ಮಾನೋಸೈಗೋಟಿಕ್) ಸಮರೂಪಿ ಎಂದು ಹೆಸರಿದೆ. ಇವು ಒಂದೇ ರೂಪದ, ಒಂದೇ ಲಿಂಗದ ಅವಳಿಗಳಾಗುತ್ತವೆ. ರೂಪ, ಆಕಾರ,




**ಚಿತ್ರ 1. ಅವಳಿ ಕೂಸುಗಳ ಬಗೆಗಳು; ಮೊದಲಿನದು ಒಂದು ಅಂಡಾಣುವಿನದು, ಎರಡನೆಯದು ಈರಂಡಾಣುವಿನದು 1 ಮಾಸು; 2 ಉಲ್ಬ ; 3 ಜರಾಯು**

ಬಣ್ಣ, ಆಂತರಿಕ ಶಕ್ತಿ, ಮನೋಭಾವ ಎಲ್ಲದರಲ್ಲಿಯೂ ಒಂದನ್ನೊಂದು ಹೋಲುತ್ತವೆ. ಮಾಸುವಿನಲ್ಲಿರುವ ರಕ್ತನಾಳಗಳು ಎರಡೂ ಶಿಶುಗಳಿಗೂ ರಕ್ತಪೂರೈಕೆ ಮಾಡುತ್ತವೆ. ತೀರ ಪ್ರಾರಂಭಿಕ ಹಂತದಲ್ಲಿ ಯುಗ್ಮಜವು ಎರಡಾದರೆ, ಪರಿಪೂರ್ಣ ಅವಳಿ ಜವಳಿಗಳು ಬೆಳೆಯುತ್ತವೆ. ಆದರೆ ಬೆಳವಣಿಗೆಯ ವಿವಿಧ ಹಂತ ಪೂರೈಸಿದ ಭ್ರೂಣ ಎರಡಾಗಿ ಸೀಳಿದರೆ ಸಯಾಮಿ ಅವಳಿಗಳು ಆಗುವುವು. ಇವು ತಲೆ, ಎದೆ, ಬೆನ್ನು ಅಥವಾ ಸೊಂಟದ ಬಳಿ ಒಂದನ್ನೊಂದು ಅಂಟಿಕೊಂಡಿರುತ್ತವೆ. ಒಂದು ದೇಹ, ಎರಡು ತಲೆ ಇರುವ ಸಾಧ್ಯತೆಗಳು ಇವೆ. ಕೆಲವೊಮ್ಮೆ ಒಂದು ಅವಳಿಯ ಹೊಟ್ಟೆಯೊಳಗೆ ಇನ್ನೊಂದು ಮಗು ಸೇರಿಹೋಗಿರುವ ಸಾಧ್ಯತೆಯೂ ಇದೆ. ಒಂದು ಮಗು ಬಹಳ ಚೆನ್ನಾಗಿ ಬೆಳೆದು ಮತ್ತೊಂದು ಮಗು ತೆಳುವಾಗಿ ಬೆಳೆಯುವುದೂ ಉಂಟು. ರಕ್ತಸಂಚಾರ ಬಹಳಷ್ಟು ವ್ಯತ್ಯಯವಾದರೆ ಒಂದು ಮಗು ತೀರ ಕೃಶವಾಗಿ ಬರಿಯ ಪಳೆಯುಳಿಕೆ ಮಾತ್ರವಾಗಿರಬಹುದು. ಈ ರೀತಿಯ ಅವಳಿಗಳು ಮಾನವರಲ್ಲಿ ಹೆಚ್ಚು. ಮತ್ತೊಂದು ರೀತಿಯ ಅವಳಿಗಳು ಅಸಮ ರೂಪಿಗಳು. ಎರಡು ಪ್ರತ್ಯೇಕ ಅಂಡಾಣುಗಳು ಒಂದೇ ಮಾಸಿಕ ಚಕ್ರದಲ್ಲಿ ಫಲಿಸುತ್ತವೆ. ಎರಡು ಭ್ರೂಣಗಳು ಗರ್ಭದಲ್ಲಿ ಬೇರೆ ಬೇರೆ ಜಾಗದಲ್ಲಿ ನಾಟಿಯಾಗುತ್ತವೆ. ಮಾಸು, ಗರ್ಭಚೀಲ ಎಲ್ಲವೂ ಪ್ರತಿ ಭ್ರೂಣಕ್ಕೂ ಪ್ರತ್ಯೇಕವಾಗಿರುತ್ತವೆ. ಈ ರೀತಿಯ ಅವಳಿಗಳನ್ನು (ಡೈಸೈಗೋಟಿಕ್) ಎರಡು ಅಂಡಾಣುವಿನವು ಎನ್ನುತ್ತಾರೆ. ಅವಳಿಗಳು ಒಂದನ್ನೊಂದು ಹೋಲುವುದಿಲ್ಲ. ಒಂದು ಹೆಣ್ಣು ಮಗು ಒಂದು ಗಂಡು ಮಗು ಆಗುವುದೂ ಉಂಟು. ಇಲ್ಲಿ ಸಯಾಮಿ ಅವಳಿಗಳಾಗುವ ಸಾಧ್ಯತೆ ಇಲ್ಲ. ಎರಡು ಮಕ್ಕಳ ತೂಕದಲ್ಲಿಯೂ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ. ಮಾಸುವಿನಿಂದ ಪ್ರತ್ಯೇಕವಾಗಿಯೇ ರಕ್ತಪೂರೈಕೆ ಇರುತ್ತದೆ.

**ಚಿತ್ರ 2. ಒಂದುಅಂಡಾಣುವಿನ ಸಯಾಮಿ ಅವಳಿಗಳು**

ಅವಳಿಗಳು ಹುಟ್ಟುವುದು ಅಪರೂಪವಲ್ಲ. ಮದರಾಸಿನ ಎಗ್ಮೋರ್ ಹೆರಿಗೆ ಆಸ್ಪತ್ರೆಯಲ್ಲಿ 25904 ಹೆರಿಗೆಗಳಲ್ಲಿ ಹದಿಮೂರು ಅವಳಿಗಳು ಹುಟ್ಟಿದವು. ಅಂದರೆ 62 ಹೆರಿಗೆಗಳಲ್ಲಿ ಒಂದು. 5 ತ್ರಿವಳಿಗಳು ಹುಟ್ಟಿದವು. ಅವಳಿಗಳಾಗುವ ಸಂಭವ ಒಂದೊಂದು ನಾಡು ಜನಾಂಗಗಳಲ್ಲಿಯೂ ಒಂದೊಂದು ಬಗೆ. ಬಡಗಣ ಯುರೋಪಿನಲ್ಲಿ ಬಲು ಹೆಚ್ಚು. ಮಂಗೋಲತೆರ (ಮಂಗೋಲಾಯ್ಡ್) ಜನರಲ್ಲಿ ತೀರಾ ಕಡಿಮೆ. ಒಂದೇ ಅಂಡಾಣು ಅವಳಿಗಳ ಪೈಕಿ 80 ಹೆರಿಗೆ ಪ್ರಸವಗಳಿಗೆ ಒಂದು ಅವಳಿ ಜನಿಸಿದರೆ, 80x80=6400 ಹೆರಿಗೆಗೆ ಒಂದು ತ್ರಿವಳಿಗಳು ಜನಿಸಬಹುದು, 80x80x80= 512000 ಹೆರಿಗೆಗೆ ಒಂದು ನಾಲ್ವಳಿ ಆಗಬಹುದು (ಸ್ಥೂಲವಾಗಿ ಈ ಅನುಪಾತವನ್ನು ತಜ್ಞರು ಗುರುತಿಸಿದ್ದಾರೆ).

ಗರ್ಭದಲ್ಲಿ ಅವಳಿ ಮಕ್ಕಳ ಇರುವಿಕೆಯನ್ನು ಗುರುತಿಸುವುದು ಹೇಗೆ? ಸಾಧಾರಣ ಎರಡನೆಯ ತಿಂಗಳಲ್ಲಿ ಮಾಡುವ ಶ್ರವಣಾತೀತ ಧ್ವನಿ ತರಂಗ (ಅಲ್ಟ್ರಾಸೋನೋಗ್ರಫಿ) ಪರೀಕ್ಷೆಯಿಂದ ಗುರುತಿಸಬಹುದು. 4–5ನೆಯ ತಿಂಗಳಲ್ಲಿಯಾದರೆ ಗರ್ಭಕೋಶ ಹೆಚ್ಚು ಪ್ರಮಾಣದಲ್ಲಿ ಹಿಗ್ಗಿರುತ್ತದೆ. 7ನೆಯ ತಿಂಗಳ ವೇಳೆಗೆ ತಜ್ಞರ ಕೈಗಳಿಗೆ ಗರ್ಭಕೋಶದಲ್ಲಿರುವ ಶಿಶುಗಳ ಎರಡು ತಲೆಯನ್ನು ಗುರುತಿಸುವುದು ಸಾಧ್ಯ (ಹಿಂದೆ ಎರಡು ಹೃದಯಗಳ ಬಡಿತವನ್ನು ಏಕಕಾಲದಲ್ಲಿ ಇಬ್ಬರು ತಜ್ಞರು ಆಲಿಸಿ ಅವಳಿಗಳ ಇರುವಿಕೆ ದೃಢೀಕರಿಸಬೇಕಾಗಿತ್ತು).

**ತೊಂದರೆಗಳು :** ಮಾನವ ಸೃಷ್ಟಿಕ್ರಿಯೆ ಒಂದು ಮಗುವಿನ ಬೆಳವಣಿಗೆಗೆ, ಹೆರಿಗೆಗೆ ಅತ್ಯಂತ ಸೂಕ್ತವಾಗಿದೆ. ಅವಳಿಗಳು ಹುಟ್ಟುವುದು ಅಪರೂಪವಲ್ಲ. ಆದರೆ ತಾಯಿಗೂ ಮಕ್ಕಳಿಗೂ ಅಪಾಯ ಅಡ್ಡಿ ಆತಂಕಗಳು ಹೆಚ್ಚುತ್ತವೆ. ರಕ್ತಹೀನತೆ, ಏರಿದ ರಕ್ತದೊತ್ತಡ, ಗರ್ಭಜಲ, ಹೆಚ್ಚಾಗಿ ಹೊಟ್ಟೆ ಉಬ್ಬರಿಸುವುದು, ದಿನತುಂಬುವ ಮುನ್ನವೇ ಹೆರಿಗೆ, ಮಧುಮೇಹ ಕಾಯಿಲೆ ಇವೆಲ್ಲ ಬರುವ ಸಾಧ್ಯತೆ ಇದೆ. ಮಕ್ಕಳು ತಲೆ ಮೊದಲಾಗಿ ಇಲ್ಲವೇ ಪೀಠಸ್ಥಾನ ಮೊದಲಾಗಿ ಹೆರಿಗೆಯಾಗದೆ ಇದ್ದರೆ ಶಸ್ತ್ರ ಚಿಕಿತ್ಸೆ ಅಗತ್ಯ ಇದೆ. ಮೊದಲು ಕಾಲುಮುಂದಾಗಿ ಹೆರಿಗೆಯಾದ ಶಿಶುವಿನ ತಲೆಗೆ ಅನಂತರ ಬರುವ ಶಿಶುವಿನ ತಲೆ ಕೊಂಡಿಯಂತೆ ಸಿಕ್ಕಿಕೊಂಡರೆ ಎರಡು ಮಕ್ಕಳ ಹಾಗೂ ತಾಯಿಯ ಜೀವಕ್ಕೂ ಅಪಾಯವಿದೆ. ಅತಿಯಾಗಿ ಗರ್ಭಕೋಶ ಹಿಗ್ಗಿರುವುದರಿಂದ ಹೆರಿಗೆಯಾದ ಮೇಲೆ ಅತಿರಕ್ತಸ್ರಾವ ಸಾಮಾನ್ಯ. ಕೆಲವೊಮ್ಮೆ ಗರ್ಭಕೋಶ ಕುಗ್ಗದೆ ತಾಯಿಯ ಜೀವಕ್ಕೆ ಅಪಾಯಕರ ಸ್ಥಿತಿ ಇದ್ದರೆ ಗರ್ಭಕೋಶವನ್ನೇ ತೆಗೆಯಬೇಕಾಗಬಹುದು. ಅವಳಿಗಳಾಗಲು ಕಾರಣವನ್ನು ಇಂದಿಗೂ ಸಿದ್ಧಪಡಿಸಿಲ್ಲ. ಕೆಲವು ತಲೆಮಾರುಗಳಲ್ಲಿ ಹೆಚ್ಚು ಕಾಣಬಹುದು. ಬಂಜೆತನ ನಿವಾರಣಾ ವಿಧಾನಗಳಿಂದಲೂ

ಅವಳಿಗಳಾಗಬಹುದು. ತಾಯಿಯ ಕಡೆಯ ಅನುವಂಶೀಯತೆಯೂ ಕಾರಣವಾಗಬಹುದು. ಚಾಂಗ್–ಎಂಗ್ ಹೆಸರಿನಲ್ಲಿ ಬಾಳಿದ್ದ ಸಯಾಮಿ ಅವಳಿಗಳು (1811–74) ಹೊಟ್ಟೆಯ ಮೇಲ್ಭಾಗದಲ್ಲಿ ಅಂಟಿಕೊಂಡಿದ್ದರು. ತೀರ ಇತ್ತೀಚೆಗೆ ಹೆಸರಾದ ಇರಾನೀ ಸೋದರಿಯರು ಹಿಂದಲೆಯಲ್ಲಿ ಅಂಟಿಕೊಂಡಿದ್ದರು. ಇಬ್ಬರೂ ಬೇರೆಯಾಗುವ ತವಕದಿಂದ ಅಪಾಯಕಾರಿಯಾದ ಶಸ್ತ್ರಚಿಕಿತ್ಸೆಗೆ ಒಡ್ಡಿಕೊಂಡು ತಾವೆ ಆಹುತಿಯಾದರು.

ಗಂಗಾ, ಜಮುನಾ ಮುಂದಲೆ ಅಂಟಿಕೊಂಡಿದ್ದ ನೇಪಾಳಿ ಸೋದರಿಯರು. ಮೂರೂವರೆ ದಿನಗಳ ಸುದೀರ್ಘ ಶಸ್ತ್ರಚಿಕಿತ್ಸೆಯ ಮೂಲಕ ಇಬ್ಬರನ್ನು ಬೇರ್ಪಡಿಸಲಾಯಿತು.

ತ್ರಿವಳಿ, ನಾಲ್ವಳಿ ಮಕ್ಕಳಾಗುವುದರಲ್ಲಿನ ಅಪಾಯ ಗುರುತಿಸಿ ಇತ್ತೀಚೆಗೆ ಆರೋಗ್ಯವಾಗಿ ಒಂದೇ ಮಗು ಬೆಳೆಯಲಿ ಎಂದು ಉದ್ದೇಶಿಸಿ ಭ್ರೂಣ ಇಳಿಕೆ ಚಿಕಿತ್ಸೆ ಮಾಡಲಾಯಿತು. ಇಲ್ಲಿ ಬೇಡವಾದ ಶಿಶುವಿನ ಹೃದಯ ಬಡಿತವನ್ನು ಸ್ಕ್ಯಾನಿಂಗ್ ಪರೀಕ್ಷೆಯ ಮೂಲಕ ಗುರುತಿಸುತ್ತಾರೆ. ಹೃದಯಕ್ಕೆ ಪೊಟಾಶಿಯಂ ಕ್ಲೋರೈಡ್ ಅನ್ನು ಚುಚ್ಚುಮದ್ದಿನ ಮೂಲಕ ಸ್ಕ್ಯಾನಿಂಗ್ ಮಾಡಿಕೊಂಡೇ ಕರಾರುವಾಕ್ಕಾಗಿ ಕೊಡಲಾಗುತ್ತದೆ. ಆ ಭ್ರೂಣ ಸಾಯುತ್ತದೆ, ಉಳಿಯುವ ಭ್ರೂಣ/ ಪಿಂಡಗೂಸು ಆರೋಗ್ಯವಾಗಿ ಬೆಳೆಯುತ್ತದೆ.

ವ್ಯಕ್ತಿತ್ವ ಬೆಳೆವಣಿಗೆಯಲ್ಲಿ ಪರಿಸರದ ಪಾತ್ರವನ್ನು ಕಂಡುಕೊಳ್ಳಲು ಅವಳಿಗಳನ್ನು ಬಹುವಾಗಿ ಬಳಕೆ ಮಾಡಲಾಗಿದೆ.

*

**ಅವಿಚಾರತತ್ತ್ವ :** ಪ್ರಚಲಿತವಾಗಿರುವ ಕೆಲವು ನಂಬಿಕೆಗಳನ್ನು ವಿಚಾರದ ನಿಯಮಗಳಿಗೆ ಗುರಿಪಡಿಸದೆ, ಆಧಾರಗಳನ್ನು ಪರೀಕ್ಷಿಸದೆ ಅನುಸರಿಸಬೇಕೆಂದು ಒತ್ತಾಯಪಡಿಸುವುದು ಈ ತತ್ತ್ವದ ಸ್ವರೂಪ. ಇದು ಸಾಧಾರಣವಾಗಿ ಮತ ಸಂಬಂಧವುಳ್ಳದ್ದು. ವೇದಗಳನ್ನು ಅಪೌರುಷೇಯವೆಂದು ನಂಬಬೇಕು ಎಂದು ವೈದಿಕಮತ ಒತ್ತಾಯ ಪಡಿಸುತ್ತದೆ. ಹಾಗೆಯೇ ಕ್ರೈಸ್ತಮತ ಆ ಮತದ ಸಿದ್ಧಾಂತಗಳನ್ನು ವಿಚಾರಮಾಡದೆ ಅಂಗೀಕರಿಸಬೇಕೆಂದು ಪ್ರಚಾರ ಮಾಡಿತು. ಮತಪುರುಷರ ವಾಣಿಯನ್ನು ದೈವವಾಣಿ ಎಂದು ಭಾವಿಸಿ ಅವರ ಬಾಯಲ್ಲಿ ಬಂದುದನ್ನು ತರ್ಕಿಸದೆ ಅನುಸರಿಸಬೇಕೆಂದೂ ಮತಧರ್ಮದಲ್ಲಿ ದೇಶಕಾಲಾತೀತವಾದ ಧಾರ್ಮಿಕ ನಂಬಿಕೆಗಳು ಇರುವುದರಿಂದ ಅವುಗಳನ್ನು ವ್ಯತ್ಯಾಸ ಮಾಡುವುದು ಪಾಪಕರವೆಂದೂ ಅವುಗಳಂತೆ ನಡೆಯದೆ ಇರುವುದು ದೈವದ್ರೋಹವೆಂದೂ ಅವಿಚಾರತತ್ತ್ವ ಹೇಳುತ್ತದೆ. ಮತದ ನಂಬಿಕೆಗಳನ್ನು ಪ್ರಶ್ನಿಸಿದವರನ್ನೂ, ಅಂಗೀಕರಿಸದೆ ವಿರೋಧಿಸಿದವರನ್ನು ಕ್ರೂರವಾದ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಹೀಗೆ ಮೂಢ ಜನರ ಮೇಲೆ ಅವಿಚಾರತತ್ತ್ವದ ಪ್ರಭಾವ ಹೆಚ್ಚಿ, ಕೆಲವು ದುಷ್ಟ ಪದ್ಧತಿಗಳು ಮತಧರ್ಮದ ಹೆಸರಿನಲ್ಲಿ ಬೇರೂರಿ ಸಮಾಜದ ಏಳಿಗೆಯನ್ನು ಕುಂಠಿತಗೊಳಿಸಿದ್ದಕ್ಕೂ ಕಾರಣ ಇದೇ. ಗೌತಮ ಬುದ್ಧ ವೈದಿಕಧರ್ಮದ ಕೆಲವು ನಂಬಿಕೆಗಳನ್ನು (ಜಾತಿಪದ್ಧತಿ, ಪ್ರಾಣಿಬಲಿ ಇತ್ಯಾದಿ) ತೊಡೆದುಹಾಕಲು ಪ್ರಯತ್ನಿಸಿ ಹಿಂದೂ ಸಮಾಜದಲ್ಲಿ ಕ್ರಾಂತಿಯನ್ನುಂಟುಮಾಡಿದ. ಅವನ ಮತವನ್ನು ನಾಸ್ತಿಕ ಮತವೆಂದು ಪರಿಗಣಿಸಲಾಯಿತು. ಪಾಶ್ಚಾತ್ಯರಲ್ಲೂ ಕ್ರೈಸ್ತಧರ್ಮದ ಸಿದ್ಧಾಂತಗಳ ಮೇಲೆ ಹೋರಾಟವಾಯಿತು. ಬೇಕನ್ ಎಂಬ ವಿಜ್ಞಾನಿ, ಕ್ಯಾಂಟ್ ಎಂಬ ದಾರ್ಶನಿಕ ಅವಿಚಾರತತ್ತ್ವವನ್ನು ಪ್ರತಿಭಟಿಸಿದರು. ಆದರೆ ಮಾನವನ ವಿಚಾರಶಕ್ತಿಗೂ ಎಲ್ಲೆ ಇದೆ. ಅದನ್ನು ಮೀರಿದ ತತ್ತ್ವಗಳಲ್ಲಿ ನಂಬಿಕೆಯನ್ನು ಕಳೆದುಕೊಂಡರೆ ನಾಸ್ತಿಕತ್ವಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ. ವಿಜ್ಞಾನದ ಬೆಳೆವಣಿಗೆಯಿಂದ ಎಲ್ಲ ಧಾರ್ಮಿಕ ನಂಬಿಕೆಗಳು ಹೋಗಿ ನಾಸ್ತಿಕತ್ವವುಂಟಾಗುವ ಅಪಾಯವಿದೆ. ಇದನ್ನು ತಡೆಗಟ್ಟುವುದೇ ದಾರ್ಶನಿಕರ ಮೇಲೆ ಇರುವ ಹೊಣೆಗಾರಿಕೆ. ಮತಧರ್ಮದ ತಿರುಳನ್ನು ಅದರ ಹೆಸರಿನಲ್ಲಿ ನಡೆದುಬರುವ ಮೂಢನಂಬಿಕೆಗಳಿಂದ ಬೇರ್ಪಡಿಸಿ ದೇಶ ಕಾಲಗಳಿಗನುಸಾರವಾಗಿ ಧರ್ಮವನ್ನು ಪಾಲಿಸಬೇಕು. ಮೂಢನಂಬಿಕೆಗಳನ್ನು ತೊಡೆದುಹಾಕಿ ಜ್ಞಾನ, ಭಕ್ತಿ ಮತ್ತು ಕರ್ಮ ಮಾರ್ಗಗಳಲ್ಲಿ ನಡೆಯಬೇಕೆಂಬುದೇ ಈ ತತ್ತ್ವವನ್ನು ವಿರೋಧಿಸುವ ಹಿಂದೂ ದಾರ್ಶನಿಕರ ಪಾಶ್ಚಾತ್ಯವೈಜ್ಞಾನಿಕ ಪದ್ಧತಿಯ ಮಾರ್ಗವಾದರೂ ಲೋಕ ನಾಸ್ತಿಕತೆಯ ಕಡೆಗೆ ಧಾವಿಸುತ್ತಿರುವಂತೆ ಕಾಣುತ್ತಿದೆ.

(ಎಸ್.ಎಸ್.ಆರ್.)

**ಅವಿಚ್ಛಿನ್ನತೆ :** ಗಣಿತ ಉತ್ಪನ್ನಗಳ (ಮ್ಯಾತಿಮ್ಯಾಟಿಕಲ್ ಫಂಕ್ಷನ್ಸ್) ಒಂದು ಮುಖ್ಯ ಆಧಾರಭೂತ ಗುಣ (ಕಂಟಿನ್ಯೂಯಿಟಿ). ಈ ಅವಿಚ್ಛಿನ್ನತಾ ಗುಣವಿದ್ದರೆ ಉತ್ಪನ್ನ ಸ್ವಾಭಾವಿಕ ಲಕ್ಷಣವುಳ್ಳದ್ದೆಂದೂ ಇಲ್ಲದಿದ್ದರೆ ವಿಕಾರಯುಕ್ತವಾದದ್ದೆಂದೂ ಹೇಳಬಹುದು. ಅವಿಚ್ಛಿನ್ನತೆಯ ಅರ್ಥ ಉತ್ಪನ್ನದ ನಕ್ಷೆಯಿಂದ ಸ್ಪಷ್ಟವಾಗಿ ದೊರಕುತ್ತದೆ. $y = f(x)$ ಎಂಬ ಉತ್ಪನ್ನದ ನಕ್ಷೆ ಎಲ್ಲಿಯೂ ತುಂಡಾಗದೆ ಮೃದು ರೇಖೆಯಾಗಿದ್ದರೆ, ಉತ್ಪನ್ನ ಎಲ್ಲೆಡೆಯಲ್ಲಿಯೂ ಅವಿಚ್ಛಿನ್ನತೆಯಿಂದ ಕೂಡಿರುವುದು. ರೇಖೆ ಅಲ್ಲಲ್ಲೇ ತುಂಡಾಗಿದ್ದರೆ ಆ ಸ್ಥಳಗಳಲ್ಲಿ ಉತ್ಪನ್ನ ವಿಚ್ಛಿನ್ನತೆಯಿಂದ (ಡಿಸ್‌ಕಂಟಿನ್ಯೂಯಿಟಿ) ಕೂಡಿದೆ. ಸ್ವಲ್ಪ ಕೃತ್ರಿಮ ರೂಪದ ಒಂದು ಉದಾಹರಣೆಯಿಂದ ಇದನ್ನು ಸ್ಪಷ್ಟಪಡಿಸಬಹುದು. x ಸಂಖ್ಯೆಯ ಪೂರ್ಣಾಂಕ ಭಾಗ $I(x)$ ಆಗಿರಲಿ. $y = I(x)$ ಎಂಬ ಉತ್ಪನ್ನದ ನಕ್ಷೆ ಎಳೆದರೆ, $0 \le x < 1$ ಆದಾಗ, ರೇಖೆ $y = 0$ ಎಂಬ x-ಅಕ್ಷದ ಭಾಗವಾಗಿಯೂ $1 \le x < 2$ ಆದಾಗ, y=1 ಎಂಬ ಸರಳರೇಖೆಯ ಭಾಗವಾಗಿಯೂ $2 \le x < 3$ ಆದಾಗ, y=2 ಎಂಬ ಸರಳ ರೇಖೆಯ ಭಾಗವಾಗಿಯೂ ಇತ್ಯಾದಿಯಾಗಿ ಮುಂದುವರಿಯುವುದು. ಆದ್ದರಿಂದ x=1,x=2,x=3 ಇತ್ಯಾದಿ ಬೆಲೆಗಳನ್ನು ಹೊಂದಿರುವ ಬಿಂದುಗಳಲ್ಲಿ ನಕ್ಷೆ ಥಟ್ಟನೆ ಮೇಲಕ್ಕೆ ನೆಗೆಯುತ್ತದೆ. ಹೀಗೆ ನಕ್ಷೆ ಒಡೆದ ಚೂರು ಚೂರು ಸರಳರೇಖೆಗಳ ಸಮುದಾಯ. ಈ ಬಿಂದುಗಳ ಹೆಸರು ಉತ್ಪನ್ನದ ವಿಚ್ಛಿನ್ನತೆಯ ಬಿಂದುಗಳು.

ನಕ್ಷೆಯ ಚಿತ್ರದ ಆಧಾರದ ಮೇಲೆಯೇ ಅವಿಚ್ಛಿನ್ನತೆಯ ನಿಖರವಾದ ವ್ಯಾಖ್ಯೆಯನ್ನೀಗ ಕೊಡಬಹುದು : x=a ಒಂದು ದತ್ತಬೆಲೆ. $\varepsilon$ ಎಂಬುದು ಯಾವುದೇ ಧನಸಂಖ್ಯೆ ಇರುವಾಗ ಆಗತಕ್ಕ x ನ ಬೆಲೆಗಳಿಗೆಲ್ಲ ಆಗಿದ್ದರೆ, f(x) ಉತ್ಪನ್ನ a ಬಳಿ ಅವಿಚ್ಛಿನ್ನತೆಯನ್ನು ಪಡೆದಿದೆ.

ಮಿತಿ (ಲಿಮಿಟ್) ವ್ಯಾಖ್ಯೆಯೊಡನೆ ಇದನ್ನು ಸೇರಿಸಿ ಅವಿಚ್ಛಿನ್ನತೆಯ ವ್ಯಾಖ್ಯೆಯನ್ನು ಕೆಳಕೊಂಡಂತೆಯೂ ಬರೆಯಬಹುದು : f(x)

ಉತ್ಪನ್ನ a ಬಳಿ ಅವಿಚ್ಛಿನ್ನತೆಯನ್ನು ಪಡೆಯಲು (i) f(a) ಪರ್ಯಾಪ್ತ (ಫೈನೈಟ್) ಸಂಖ್ಯೆಯಾಗಿರಬೇಕು; ಮತ್ತು

(ii)

ಈ ಗುಣಗಳು a ಬಿಂದುವಿನ ಒಂದು ಪಾರ್ಶ್ವದಲ್ಲಿ ಮಾತ್ರ ಇರುವುದಾದರೆ, ಉತ್ಪನ್ನ ಅರ್ಧ ಅವಿಚ್ಛಿನ್ನತೆಯಿಂದ ಕೂಡಿದೆ ಎನ್ನುತ್ತೇವೆ. ಮೊದಲಿನ ವ್ಯಾಖ್ಯೆಯಲ್ಲಿ, ಆದಾಗ ಆಗಿದ್ದರೆ, a ಬಿಂದುವಿನ ಬಳಿ ಅವಿಚ್ಛಿನ್ನತೆ ಇರುವುದು. ಎರಡನೆಯ ವ್ಯಾಖ್ಯೆಯಲ್ಲಿ, ಇದಕ್ಕೆ ಆವಶ್ಯಕ. ಹೀಗೆಯೇ ಎಡಪಾರ್ಶ್ವದ ಅವಿಚ್ಛಿನ್ನತೆಯನ್ನು ವ್ಯಾಖ್ಯಿಸಬಹುದು. ಬಿಂದುವಿನ ಎರಡೂ ಪಾರ್ಶ್ವಗಳಲ್ಲಿ ಅವಿಚ್ಛಿನ್ನತೆಯಿದ್ದರೆ ಮಾತ್ರ, ಉತ್ಪನ್ನ ಅವಿಚ್ಛಿನ್ನತೆಯ ಗುಣ ಹೊಂದಿರುತ್ತದೆ. $y = I(x)$ ಉತ್ಪನ್ನದ ನಕ್ಷೆಯಲ್ಲಿ x=1, x=2 ಮುಂತಾದ ಸ್ಥಳಗಳಲ್ಲಿ ಉತ್ಪನ್ನಕ್ಕೆ ಎಡಪಾರ್ಶ್ವದಲ್ಲಿ ಅವಿಚ್ಛಿನ್ನತೆ ಇದೆ, ಬಲಪಾರ್ಶ್ವದಲ್ಲಿ ಇಲ್ಲ.

ಒಂದು ದತ್ತ ಬಿಂದುವಿನಲ್ಲಿ ಒಂದು ಅವಿಚ್ಛಿನ್ನತೆಯನ್ನು ವ್ಯಾಖ್ಯಿಸಿರುತ್ತೇವೆ. ಒಂದು ಅಂತರ (a,b ) ಯ ಎಲ್ಲ ಬಿಂದುಗಳಲ್ಲೂ f(x) ಗೆ ಅವಿಚ್ಛಿನ್ನತೆ ಇರುವುದಾದರೆ, f (x) ಉತ್ಪನ್ನ (a,b ) ಅಂತರದಲ್ಲಿ ಅವಿಚ್ಛಿನ್ನತೆಯನ್ನು ಪಡೆದಿರುವುದು ಎನ್ನುತ್ತೇವೆ.

[illegible] ಬೇಕಾದರೆ, (i) f(a) ಪರ್ಯಾಪ್ತ ಸಂಖ್ಯೆಯಾಗಿಲ್ಲದೆ ಇರಬಹುದು, [illegible] f(a) ಅನಂತವಾಗಿರಬಹುದು. ಅಥವಾ f(a) ಗೆ ಬೆಲೆಯೇ ಇಲ್ಲದಿರಬಹುದು. $1+e$ (ii) ಅಥವಾ ಬಲಗಡೆಯ ಮಿತಿಯೂ ಎಡಗಡೆಯ ಮಿತಿಯೂ ಬೇರೆ ಬೇರೆಯಾಗಿರಬಹುದು. f(a) ಅನಂತವಾಗಿದ್ದರೆ ವಿಚ್ಛಿನ್ನತೆ ಮೊದಲನೆಯ ಬಗೆಯದಾಗಿರುತ್ತದೆ ಅಥವಾ ಅದನ್ನು ಅನಂತ ವಿಚ್ಛಿನ್ನತೆ ಎನ್ನುತ್ತೇವೆ. ಉಳಿದ ಸಂದರ್ಭಗಳಲ್ಲಿ ವಿಚ್ಛಿನ್ನತೆ ಎರಡನೆಯ ಬಗೆಯದಾಗಿರುತ್ತದೆ ಎಂದು ಒಟ್ಟಾರೆ ಹೇಳಬಹುದು.

ಉದಾಹರಣೆಗಳು : 1. $f(x) = x \sin(1/x)$, x=o ಆದಾಗ ಇದಕ್ಕೆ ಬೆಲೆ ನಿರ್ಧಾರವಾಗಿಲ್ಲದುದರಿಂದ x=0 ಎಂಬಲ್ಲಿ ಉತ್ಪನ್ನ ವಿಚ್ಛಿನ್ನತೆ ಹೊಂದಿದೆ. ಆದರೆ ಉತ್ಪನ್ನವನ್ನು ಸ್ವಲ್ಪ ವ್ಯತ್ಯಾಸ ಮಾಡಿ $f(x) = x \sin(1/x)$, x≠ ೦ ಆದಾಗ, f(೦) =೦ ಎಂದು ಮಾಡಿದರೆ, ಆಗುತ್ತದೆ. ಆದ್ದರಿಂದ ಉತ್ಪನ್ನ ಈಗ ಎಲ್ಲ ಕಡೆಯೂ ಅವಿಚ್ಛಿನ್ನತೆ ಪಡೆದಿದೆ. ಈ ಕಾರಣದಿಂದ ಮೊದಲನೆಯ ಉತ್ಪನ್ನದಲ್ಲಿ x=೦ ಎಂಬುದನ್ನು ತೆಗೆದುಹಾಕಬಹುದಾದ ವಿಚ್ಛಿನ್ನತೆ (ರಿಮೂವಬಲ್ ಡಿಸ್‌ಕಂಟಿನ್ಯೂಯಿಟಿ) ಎಂದು ಹೇಳುವುದುಂಟು.

2. f(x) = (1/x), x = ೦ ಅನಂತವಿಚ್ಛಿನ್ನತೆಯ ಬಿಂದು.

3. ಮೇಲಿನ ಉತ್ಪನ್ನದಲ್ಲಿ x ಭಾಗಲಬ್ಧ ಸಂಖ್ಯೆಯಾದಾಗ f(x) = 1, ಇಲ್ಲದಿದ್ದರೆ f(x) = ೦. ಈ ಉತ್ಪನ್ನ x ನ ಎಲ್ಲ ಬೆಲೆಗಳಲ್ಲೂ ವಿಚ್ಛಿನ್ನತೆ ಪಡೆದಿದೆ.

4. f(x) = . ಈಗ $\lim_{x \to +0} f(x) = 1$ ; . ಆದ್ದರಿಂದ x = ೦ ವಿಚ್ಛಿನ್ನತೆಯ ಬಿಂದುವಾಗಿದೆ.

ಚಲನಾಂಕ ಅಥವಾ ನಿಷ್ಪನ್ನ (ಡಿಫರೆನ್ಷಿಯಲ್ ಕೋಎಫಿಷಂಟ್; ಡಿರೈವೆಟಿವ್) ಇರಬೇಕಾದರೆ, f(x) ಅವಿಚ್ಛಿನ್ನತೆಯನ್ನು ಪಡೆದಿರಬೇಕು. ವಿಚ್ಛಿನ್ನತೆಯಿದ್ದಲ್ಲಿ ನಿಷ್ಪನ್ನವಿರುವುದಿಲ್ಲ. ಆದರೆ ಅವಿಚ್ಛಿನ್ನತೆಯಿದ್ದ ಮಾತ್ರಕ್ಕೆ ನಿಷ್ಪನ್ನ ಇರುವುದೆಂಬ ನಿಯಮವೇನೂ ಇಲ್ಲ. ಮೇಲೆ ಕೊಟ್ಟಿರುವ $f(x) = x \sin(1/x)$, x o ಆದಾಗ f (೦) = ೦ ಎಂಬ ಉತ್ಪನ್ನ x=೦ ಬಿಂದುವಿನಲ್ಲಿ ಅವಿಚ್ಛಿನ್ನತೆ ಪಡೆದಿದೆ. ಆದರೆ ಈ ಬಿಂದುಗಳ ಬಳಿ ನಿಷ್ಪನ್ನವಿಲ್ಲವೆಂಬುದನ್ನು ಗಮನಿಸಬಹುದು. ಉತ್ಪನ್ನ ನಕ್ಷೆ x =೦ ಬಳಿ ಅನಂತ ಸಂಖ್ಯೆಯ ಆಂದೋಳನಕ್ಕೆ ಸಿಕ್ಕಿ ಮಿತಿಯಲ್ಲಿ ಮೂಲಬಿಂದುವಿಗೆ ಹೋಗಿ ಸೇರುವುದು. ಆದ್ದರಿಂದ ಮೂಲಬಿಂದುವಿನಲ್ಲಿ

ನಿರ್ದಿಷ್ಟವಾದ ಸ್ಪರ್ಶರೇಖೆ ಇಲ್ಲ, ಎಂದರೆ ನಿಷ್ಪನ್ನವಿಲ್ಲ. ಹೀಗಾಗುವುದು ಈ ಒಂದು ಬಿಂದುವಿನಲ್ಲಿ ಮಾತ್ರ. x ನ ಇತರ ಬೆಲೆಗಳಿಗೆ ಏನೊಂದೂ ತೊಡಕೂ ಬರುವುದಿಲ್ಲ; ಅವಿಚ್ಛಿನ್ನತೆ ಮತ್ತು ನಿಷ್ಪನ್ನ ಇವೆ.

ಎಲ್ಲ ಕಡೆಯೂ ಅವಿಚ್ಛಿನ್ನತೆ ಪಡೆದು ಆದರೆ ಎಲ್ಲಿಯೂ ನಿಷ್ಪನ್ನ ಪಡೆಯದ ಒಂದು ಉತ್ಪನ್ನವನ್ನು ವಯರ್‌ಸ್ಟ್ರಾಸ್ ಮೊದಲು ರಚಿಸಿದ.

$$F(x)=\sum_{n=0}^{\infty} a^n \cos(b^n \pi x, 0<a<1 \text{ ಮತ್ತು } ab>1+\frac{\pi \Pi}{2}$$

ಆಗುವಂತೆ b ಒಂದು ವಿಷಮ ಪೂರ್ಣಾಂಕ. ಈ ಉತ್ಪನ್ನಕ್ಕೆ ಮೇಲಿನ ಗುಣವಿದೆ. ಈ ಉತ್ಪನ್ನವನ್ನು ಹೊರಗೆಡವಿದಾಗ ಕ್ರಾಂತಿಕಾರಕವಾದ ಪರಿಣಾಮವಾಗಿ, ಗಣಿತ ಶಾಸ್ತ್ರಜ್ಞರಲ್ಲಿ ಉತ್ಪನ್ನಗಳು ಮತ್ತು ನಕ್ಷೆಗಳನ್ನು ಕುರಿತು ಅನೇಕ ಭಾವನೆಗಳು ತಿದ್ದುಪಡಿ ಹೊಂದಿದುವು. ವಯರ್‌ಸ್ಟ್ರಾಸ್‌ನ ಈ ಉತ್ಪನ್ನಕ್ಕೆ ನಕ್ಷೆಯೇ ಇಲ್ಲ.

ಈ ಉತ್ಪನ್ನವನ್ನು ಕಂಡುಹಿಡಿದ ಅನಂತರ ಇಂಥ ಮತ್ತು ಇನ್ನೂ ಇತರ ರೂಪಗಳುಳ್ಳ ಎಲ್ಲ ವಿಧದಲ್ಲಿಯೂ ಅವಿಚ್ಛಿನ್ನತೆಯನ್ನು ಪಡೆದು ಎಲ್ಲಿಯೂ ನಿಷ್ಪನ್ನವಿಲ್ಲದಿರುವ ಅನೇಕಾನೇಕ ಉತ್ಪನ್ನಗಳನ್ನು ರಚಿಸಿ, ಅವುಗಳ ಗುಣಗಳನ್ನು ವಿಮರ್ಶಿಸಿದ್ದಾರೆ.

ಅವಿಚ್ಛಿನ್ನತೆಯಿರುವ ಉತ್ಪನ್ನಗಳ ಗುಣಗಳು: ಕೆಳಗೆ ನಮೂದಿಸಿರುವ ಗುಣಗಳು ವಿಶ್ಲೇಷಣ ಗಣಿತದ ಅಧ್ಯಯನಕ್ಕೆ ಮೂಲಭೂತವಾಗಿವೆ.

**ಪ್ರಮೇಯ 1:** $(a,b)$ ಎಂಬ ಪರ್ಯಾಪ್ತ ಮತ್ತು ಮುಚ್ಚಿರುವ (ಕ್ಲೋಸ್ಡ್) ಅಂತರದಲ್ಲಿ $f(x)$ ಅವಿಚ್ಛಿನ್ನತೆ ಪಡೆದಿರಲಿ. ε ಯಾವುದೇ ಸಂಖ್ಯೆಯಾದರೆ, ಈ ಅಂತರದ ಯಾವುದೇ ಉಪಅಂತರದಲ್ಲಿ $x_1, x_2$ ಎರಡು ಬಿಂದುಗಳಾದರೆ, $|f(x_1)-f(x_2)|<\varepsilon$ ಎಂಬ ಗುಣವಿರುವಂತೆ ಪರ್ಯಾಪ್ತ ಸಂಖ್ಯೆಯಿರುವ ಉಪ ಅವಧಿಗಳನ್ನು ಪಡೆಯುವುದು ಸಾಧ್ಯ.

**ಪ್ರಮೇಯ 2:** $(a,b)$ ಎಂಬ ಪರ್ಯಾಪ್ತ ಮತ್ತು ಮುಚ್ಚಿರುವ ಅಂತರದಲ್ಲಿ $f(x)$ ಅವಿಚ್ಛಿನ್ನತೆ ಪಡೆದಿದ್ದರೆ, ಈ ಅಂತರದಲ್ಲಿ $f(x)$ಗೆ ಒಂದು ಖಚಿತ ಮೇಲುಗಡಿಯೂ (ಅಪ್ಪರ್ ಬೌಂಡ್) ಒಂದು ಖಚಿತ ಕೆಳಗಡಿಯೂ (ಲೋಯರ್ ಬೌಂಡ್) ಇರುತ್ತವೆ. ಆದ್ದರಿಂದ ಅಂತರದಲ್ಲಿ $f(x)$ ಪರ್ಯಾಪ್ತವಾಗಿದೆ. ಇದು ಮೊದಲನೆಯ ಪ್ರಮೇಯದ ಅನುಮಿತ.

**ಪ್ರಮೇಯ 3:** ಮೇಲೆ ತಿಳಿಸಿರುವ ಸಂಕೇತಗಳಿಂದ, ಯಾವುದೇ ಧನಸಂಖ್ಯೆ å ದತ್ತವಾಗಿದ್ದರೆ, $|x_1-x_2|<\delta$ ಆದಾಗಲೆಲ್ಲ, $|f(x_1)-f(x_2)|<\varepsilon$ ಆಗಿರುವಂತೆ, δ ಎಂಬ ಸಂಖ್ಯೆಯನ್ನು ಪಡೆಯುವುದು ಸಾಧ್ಯ. $x_1, x_2$ ಎಂಬಿವು $(a,b)$ ಅಂತರದ ಎರಡು ಬಿಂದುಗಳು.

ಈ ಗುಣಕ್ಕೆ ಅವಿಚ್ಛಿನ್ನತೆಯ ಏಕಸಮತಾಗುಣ (ಯೂನಿಫಾರ್ಮಿಟಿ) ಎನ್ನುತ್ತೇವೆ. $f(x)$ಗೆ $(a,b)$ ಅಂತರದಲ್ಲಿ ಅವಿಚ್ಛಿನ್ನತೆ ಇದ್ದರೆ ಅದು ಏಕಸಮತಾಗುಣದಿಂದಲೂ ಕೂಡಿರುತ್ತದೆ.

**ಪ್ರಮೇಯ 4:** $(a,b)$ ಎಂಬ ಪರ್ಯಾಪ್ತ ಮುಚ್ಚಿದ ಅಂತರದಲ್ಲಿ ಅವಿಚ್ಛಿನ್ನವಾಗಿರುವ ಉತ್ಪನ್ನ ಈ ಅಂತರದಲ್ಲಿ ಒಮ್ಮೆಯಾದರೂ ಅದರ ಮೇಲುಗಡಿಯ ಬೆಲೆಯನ್ನೂ, ಒಮ್ಮೆಯಾದರೂ ಕೆಳಗಡಿಯ ಬೆಲೆಯನ್ನೂ ಪಡೆಯುತ್ತದೆ.

**ಪ್ರಮೇಯ 5:** ಪರ್ಯಾಪ್ತ ಮುಚ್ಚಿದ ಅಂತರ $(a,b)$ಯಲ್ಲಿ ಅವಿಚ್ಛಿನ್ನವಾಗಿರುವ $f(x)$ ಉತ್ಪನ್ನ ಈ ಅವಧಿಯಲ್ಲಿ $f(a)$ಗೂ $f(b)$ಗೂ ನಡುವೆ ಇರುವ ಯಾವ ಸಂಖ್ಯೆಯನ್ನೇ ಆಗಲಿ ಒಮ್ಮೆಯಾದರೂ ಪಡೆಯುತ್ತದೆ.

ಇದರ ಒಂದು ಅನುಮಿತ ಸಮೀಕರಣ ಸಿದ್ಧಾಂತದಲ್ಲಿ ಬಹುಮುಖ್ಯವಾದುದು.

**ಪ್ರಮೇಯ 6:** $f(a)>0, f(b)<0$ ಆಗಿದ್ದರೆ, ಮೇಲಿನ ನಿಯಮಗಳಿರುವ $f(x)=0$ ಎಂಬ ಸಮೀಕರಣಕ್ಕೆ $(a,b)$ ಅಂತರದಲ್ಲಿ ಕನಿಷ್ಠಪಕ್ಷ ಒಂದು ಮೂಲವಾದರೂ ಇರುತ್ತದೆ. ಒಂದಕ್ಕಿಂತ ಹೆಚ್ಚು ಮೂಲಗಳಿದ್ದರೆ, ಇವು ವಿಷಮ ಸಂಖ್ಯೆಯಲ್ಲಿರುತ್ತವೆ ಎಂದು ತೋರಿಸಬಹುದು.

ಹಿಂದೆಯೇ ತಿಳಿಸಿರುವಂತೆ ನಿಷ್ಪನ್ನವಿರಬೇಕಾದರೆ ಅವಿಚ್ಛಿನ್ನತೆ ಆವಶ್ಯಕವಾದ ಅಥವಾ ಬೇಕಾದ (ನೆಸಸರಿ) ನಿಯಮ. ಚಲನಕಲನಶಾಸ್ತ್ರದ (ಡಿಫರೆನ್ಷಿಯಲ್ ಕ್ಯಾಲ್ಕುಲಸ್) ಬೆಳವಣಿಗೆ ಅವಿಚ್ಛಿನ್ನತಾಗುಣವಿರುವ ಉತ್ಪನ್ನಗಳಿಗೇ ಸೇರಿದ್ದು ಎಂದು ಹೇಳಬೇಕಾದ್ದಿಲ್ಲ. ಇದರ ಜೊತೆಗೆ ಪ್ರಥಮ ನಿಷ್ಪನ್ನದ, ದ್ವಿತೀಯ ನಿಷ್ಪನ್ನದ ಇತ್ಯಾದಿಗಳ ಅವಿಚ್ಛಿನ್ನತೆಯನ್ನು ಸಮಯೋಚಿತವಾಗಿ ಒಪ್ಪಿಕೊಂಡು, ಶಾಸ್ತ್ರ ಬೆಳೆದಿದೆ. ತಳಹದಿಯ ರೂಪದಲ್ಲಿರುವ ಒಂದು ಪ್ರಮೇಯವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

**ರೋಲನ ಪ್ರಮೇಯ:** $(a,b)$ ಎಂಬ ಪರ್ಯಾಪ್ತ ಮತ್ತು ಮುಚ್ಚಿದ ನಂತರದಲ್ಲಿ $f(x)$ ಅವಿಚ್ಛಿನ್ನವಾಗಿದ್ದು ಇದೇ ಅಂತರದಲ್ಲಿ (ಅವಶ್ಯವಿದ್ದರೆ ಅಂತಿಮ ಬಿಂದುಗಳಾದ $a,b,$ಗಳನ್ನು ಬಿಟ್ಟು) $f'(x)$ ಪರ್ಯಾಪ್ತವಾಗಿದ್ದರೆ, ಆಗ ಈ ಅಂತರದಲ್ಲಿ $f'(x)=0$ ಆಗುವ ಹಾಗೆ $x$ಗೆ ಒಂದಾದರೂ ಬೆಲೆಯಿರುತ್ತದೆ.

**ಸಮಾಸಫಲ ಅಥವಾ ಸಮಾಸೀಯ (ಇಂಟೆಗ್ರಲ್):** ಪರ್ಯಾಪ್ತ ಅವಧಿಯಲ್ಲಿ ಪರ್ಯಾಪ್ತ ಉತ್ಪನ್ನವಾದ $f(x)$ಗೆ ಸಮಾಸೀಯವಿರಲು ಎಂದರೆ $\int_a^b f(x)\,dx$ ಇದು ನಿರ್ಧೃತವಾಗಿರಲು, $f(x)$ನ ಅವಿಚ್ಛಿನ್ನತೆ ಸಾಕಾಗುವ (ಸಫಿಷಿಯೆಂಟ್) ಗುಣ ಬೇಕಾಗುವ ಗುಣವಾಗುವುದಿಲ್ಲ. ಅಲ್ಲಲ್ಲೇ ವಿಚ್ಛಿನ್ನತೆಗಳಿದ್ದರೂ ಸಮಾಸೀಯವಿರಲು ಸಾಧ್ಯ.

ಎರಡು ಅಥವಾ ಅನೇಕ ಚರಗಳಿರುವ ಉತ್ಪನ್ನಗಳ ಅವಿಚ್ಛಿನ್ನತೆಯನ್ನು ಮೇಲಿನ ಭಾವನೆಗಳನ್ನೇ ವಿಸ್ತರಿಸಿ ವ್ಯಾಖ್ಯೆ ಮಾಡಬಹುದು.

**ವ್ಯಾಖ್ಯೆ:** ದತ್ತ ಧನಸಂಖ್ಯೆ; ಮತ್ತು ಆಗಿ ಇರುವಂಥ ಎಲ್ಲ x,y ಬೆಲೆಗಳಿಗೂ $|f(x,y)-f(a,b)|<\varepsilon$ ಎಂಬ ಗುಣವಿದ್ದರೆ, $f(x,y)$ ಉತ್ಪನ್ನ $(a,b)$ ಬಿಂದುವಿನಲ್ಲಿ ಅವಿಚ್ಛಿನ್ನತೆ ಪಡೆದಿರುವುದು. ಈ ಗುಣ ಒಂದು ಪ್ರದೇಶ $R$ನ ಎಲ್ಲ ಬಿಂದುಗಳಿಗೂ ಇದ್ದರೆ, $f(x,y)$ ಉತ್ಪನ್ನ $R$ ಪ್ರದೇಶದಲ್ಲಿ ಅವಿಚ್ಛಿನ್ನತೆಯನ್ನು ಪಡೆದಿರುವುದು.

ಮೇಲೆ ವಿವರಿಸಿರುವ 1–5ರವರೆಗಿನ ಪ್ರಮೇಯಗಳನ್ನು ಅದೇ ರೀತಿಯ ವಿಧಾನಗಳಿಂದ ಎರಡು ಅಥವಾ ಹೆಚ್ಚು ಚರಗಳಿರುವ ಉತ್ಪನ್ನಗಳಿಗೆ ವಿಸ್ತರಿಸಬಹುದು. (ಸಿ.ಎನ್.ಎಸ್.)

**ಅವಿದ್ಯೆ :** ವಿದ್ಯೆಯಲ್ಲದ್ದು ಅವಿದ್ಯೆ, ಅಜ್ಞಾನ ಎಂದರೆ ತಿಳಿಯದಿರುವುದು. ತಿಳಿಯದಿರುವುದರಿಂದ ತಪ್ಪು ತಿಳಿವಳಿಕೆ ಹುಟ್ಟುತ್ತದೆ. ಇದು ಸಾಮಾನ್ಯ ಅರ್ಥ. ಅದ್ವೈತದಲ್ಲಿ ಇದಕ್ಕೆ ವಿಶೇಷ ಅರ್ಥವಿದೆ. ಅವಿದ್ಯೆ ಬರಿಯ ಅಜ್ಞಾನವಲ್ಲ, ಈ ಲೋಕಕ್ಕೇ ಕಾರಣಭೂತವಾದುದು. ಅಂದರೆ ಈ ಲೋಕ ಲೋಕಸ್ವರೂಪವಾಗಿ ಇರುವುದು ಇದರ ದೆಸೆಯಿಂದ. ಇದಕ್ಕೆ ಎರಡು ಶಕ್ತಿಗಳಿವೆ. ಸದಾ ಇರುವುದನ್ನು ಮರೆ ಮಾಡುವುದು, ಸದಾ ಇಲ್ಲದ್ದನ್ನು ಇರುವಂತೆ ತೋರಿಸುತ್ತದೆ. ಬ್ರಹ್ಮನ್ ಸಹಾ ಇರುವುದು. ಅವಿದ್ಯೆ ಇದನ್ನು ಮರೆಮಾಡುತ್ತದೆ. ಈ ವಿಶ್ವ ಸದಾ ಬದಲಾವಣೆ ಹೊಂದತಕ್ಕದ್ದು. ಅವಿದ್ಯೆ ಇದನ್ನು ಸದಾ ಇರುವಂತೆ ತೋರಿಸುತ್ತದೆ. ಬ್ರಹ್ಮನ್ ಸದಾ ಇರುವುದು. ಅವಿದ್ಯೆ ಇದನ್ನು ಮರೆಮಾಡುತ್ತದೆ; ಈ ವಿಶ್ವ ಸದಾ ಬದಲಾವಣೆ ಹೊಂದತಕ್ಕದ್ದು. ಅವಿದ್ಯೆ ಇದನ್ನು ಸದಾ ಇರುವಂತೆ ತೋರಿಸುತ್ತದೆ. ಇದಕ್ಕೆ ಮಾಯಾಶಕ್ತಿಯೆಂದು ಹೆಸರು. ಮಾಯೆ ಈಶ್ವರನಲ್ಲಿರುವ, ಈಶ್ವರನಿಗೆ ಸೇರಿದ ಶಕ್ತಿ. ಅದು ಅವನ ಶಕ್ತಿಯೇ ಆದುದರಿಂದ ಅವನನ್ನು ಮೋಸಗೊಳಿಸಲಾರದು. ಈ ಮಾಯಾಶಕ್ತಿಯಿಂದ ಈ ವಿಶ್ವ ಹುಟ್ಟಿದೆ. ವಿಶ್ವವ್ಯಾಪಾರವೆಲ್ಲ ಮಾಯಾಜಾಲದ ಒಂದು ಭಾಗ. ಈ ಮಾಯಾಶಕ್ತಿ ಮೂಲಾವಿದ್ಯೆ. ಇದು ಒಂದಾಗಿದೆ. ಇದು ಅವ್ಯಕ್ತ. ಇದು ವ್ಯಕ್ತವಾಗಿ ಒಂದೊಂದು ವಸ್ತುವಿನಲ್ಲೂ ಮುಖ್ಯವಾಗಿ ಒಂದೊಂದು ವ್ಯಕ್ತಿಯಲ್ಲೂ ಅದಕ್ಕೆ $\varepsilon\ |y-b|<\delta$ ಅದು ಬೇರೆಯಾಗಿ ತೋರುವಂತೆ ನಡೆಸುವುದು–ತೂಲಾವಿದ್ಯೆ. ಮೂಲಾವಿದ್ಯೆ ಈಶ್ವರನನ್ನು ಬಾಧಿಸುವುದಿಲ್ಲ, ಏಕೆಂದರೆ ಅದು ಅವನಲ್ಲಿಯೇ ಅವನಿಗೆ ಅರಿಯದಂತೆ ಇದೆ. ಆದರೆ ಜೀವರಾದ ಮನುಷ್ಯರಿಗೆ ಅದು ಬೇರೆಯಾದದ್ದು. ಅದು ಅವರ ಸಮ್ಮುಖದಲ್ಲಿಲ್ಲ. ಅವರಲ್ಲಿ ಅವಿತುಕೊಂಡು ಅವರ ತಪ್ಪುತಿಳಿವಳಿಕೆಗೆ ಕಾರಣವಾಗಿದೆ. ಅದು ಅವರನ್ನು ಬಾಧಿಸುತ್ತದೆ. ಅದು ಮಾಯಾಸ್ವರೂಪವೆಂದು ತಿಳಿದಾಗ ಅವರ ಬಾಧೆ ಹರಿಯುತ್ತದೆ. (ಜಿ.ಎಚ್.)

**ಅವಿಭಾಜ್ಯದಾಯ :** ಏಕವಾರಸ ಪದ್ಧತಿಯ ದಾಯಕ್ಕೆ ಈ ಹೆಸರಿದೆ. ದಾಯವೆಂದರೆ ಪೂರ್ವಜರಿಂದ ವಾರಸು ಹಕ್ಕಾಗಿ ಬರುವ ಆಸ್ತಿ. ಭಾರತದ ಯಾವುದೇ ಜನದಲ್ಲಾಗಲಿ ಇದು ವಾರಸುದಾರರಲ್ಲಿ ಹಂಚಿ ಹೋಗುವಂಥದು. ಆದರೆ ಇಂಗ್ಲೆಂಡ್‌ನಂಥ ದೇಶಗಳಲ್ಲಿ ದೊಡ್ಡ ಆಸ್ತಿ ಸಂಬಂಧಗಳಲ್ಲಿ ಅರಸೊತ್ತಿಗೆಯ ವಿಷಯದಲ್ಲಿದ್ದಂತೆ ಏಕವಾರಸು ಪದ್ಧತಿಯೇ ಜಾರಿಯಲ್ಲಿದೆ. ಇಂಥ ಅವಿಭಾಜ್ಯದಾಯ ಯಾವುದೇ ಕುಟುಂಬದಲ್ಲಿ ಪೂರ್ವ ಸಂಪ್ರದಾಯಕ್ಕನುಗುಣವಾಗಿ ಬರಬಹುದು. ಇಲ್ಲವೆ ದೊಡ್ಡ ದೊಡ್ಡ ನವಾಬರ, ಜಹಗೀರುದಾರರ ಮನೆತನದಲ್ಲಿ ಆ ಸಂಬಂಧವಾಗಿ ಮಾಡಿದ ಕಾಯಿದೆಯ ಮೂಲಕ ಬರಬಹುದು. ಇದಲ್ಲದೆ ಹಿಂದೆ ಸರ್ಕಾರ ಅಥವಾ ರಾಜಮಹಾರಾಜರು ಕೆಲವು ವ್ಯಕ್ತಿಗಳಿಗೆ ಅವರು ಎಸಗಿದ ಘನತರ ರಾಜಸೇವೆಯನ್ನು ಮನ್ನಿಸಿ ಗೌರವದ ಸ್ಥಾನವನ್ನೂ ದೊಡ್ಡ ಆಸ್ತಿಯನ್ನೂ ಕೊಡುವಾಗ ಆ ಹುದ್ದೆಯ ಗೌರವಕ್ಕೆ ಧಕ್ಕೆ ಬರಬಾರದೆಂದು ಆ ಆಸ್ತಿಯನ್ನು ಏಕವಾರಸು ಪದ್ಧತಿಯ ಷರತ್ತಿನ ಮೇಲೆ ಕೊಡುತ್ತಿದ್ದರು. ಇವು ಷರತ್ತಿಗನುಸಾರವಾಗಿ ಏಕವಾರಸು ಪದ್ಧತಿಯಿಂದ ಅವಿಭಾಜ್ಯವಾಗಿ ವಂಶಪಾರಂಪರ್ಯವಾಗಿ ಅನುಭವಿಸಲ್ಪಡುತ್ತಿದ್ದುವು. ಈಗ ಪ್ರಜಾಪ್ರಭುತ್ವಕ್ಕನುಗುಣವಾಗಿ ಇಂಥ ದೊಡ್ಡ ದೊಡ್ಡ ಜಮೀನ್ದಾರಿಯನ್ನೂ ಇನಾಮು, ಸರಂಜಾಮು, ಜಹಗೀರು, ಪಾಳ್ಯಗಳನ್ನೂ ರದ್ದುಗೊಳಿಸುವ ಕಾಯಿದೆಗಳು ಜಾರಿಯಲ್ಲಿ ಬಂದಿವೆ. ಪೂರ್ವದಿಂದಲೂ ಏಕವಾರಸು ಪದ್ಧತಿಯಿರುವ ಹಿಂದು ಕುಟುಂಬಗಳಲ್ಲಿ 1956ರಿಂದ ಆ ಪದ್ಧತಿ ನಿರ್ನಾಮಗೊಂಡು, ಎಲ್ಲ ಹಿಂದೂಗಳಿಗೆ ಏಕಸ್ವರೂಪದ ವಾರಸುಕಾಯಿದೆ ಜಾರಿಗೆ ಬಂತು. ಅವಿಭಾಜ್ಯ ಆಸ್ತಿಯ ಅನುಭವದಾರ ಮೃತಹೊಂದಿದೊಡನೆ ಅದು ಅವನ ಎಲ್ಲ ವಾರಸುದಾರರಿಗೆ ಹಂಚಿ ಹೋಗುವುದು. ಆ ಕಾಯಿದೆಗೆ ಅಪವಾದ ರೂಪವಾಗಿ 5ನೆಯ ಕಲಮಿನಲ್ಲಿ ಕೆಲವೊಂದು ಆಸ್ತಿಗಳಿಗೆ ಏಕವಾರಸು ಕಾಯಿದೆ ಅನ್ವಯಿಸುವುದಿಲ್ಲವೆಂದು ಸ್ಪಷ್ಟಗೊಳಿಸಿದ್ದಾರೆ. ಅವು ಹೀಗಿವೆ: ಯಾವುದೇ ಸಂಸ್ಥಾನದ

ರಾಜರೊಡನೆ ಭಾರತ ಸರ್ಕಾರ ಮಾಡಿಕೊಂಡ ಒಪ್ಪಂದದ ಕರಾರಿನಂತೆ ಏಕವಾರಸು ಪದ್ಧತಿ ರದ್ದಾಗದ ಆಸ್ತಿಗಳು; ಈ ಕಾಯಿದೆಗಿಂತ ಪೂರ್ವದಲ್ಲಿ ಜಾರಿಗೆ ತಂದ ಕಾಯಿದೆ ಪ್ರಕಾರ ಏಕವಾರಸು ಪದ್ಧತಿಯುಳ್ಳ ಜಮೀನ್ದಾರಿಗಳು; ಮತ್ತು ಕೊಚ್ಚಿನ್ ಮಹಾರಾಜರ ಆಳ್ವಿಕೆಯಲ್ಲಿ ಮೊದಲು ಇದ್ದ ಜಮೀನ್ದಾರಿ ಮತ್ತು ಅರಮನೆಯ ಆಸ್ತಿಗಳು–ಇವು ಹಿಂದೂ ವಾರಸು ಕಾಯಿದೆಯ ಕಕ್ಷೆಯಿಂದ ಹೊರಗಿವೆ.

ಇದರಂತೆ ಜಮೀನ್ದಾರಿ ನಿರ್ಮೂಲನ ಕಾಯಿದೆಗಳಿಂದ ಅಬಾಧಿತವಾಗಿ ಉಳಿದ, ಹಿಂದಿನ ಕಾಯಿದೆಗಳಿಂದ ನಿಯಮಿಸಲ್ಪಟ್ಟ ನವಾಬರ ಜಮೀನ್ದಾರಿ ಮೊದಲಾದುವುಗಳೂ ಅವಿಭಾಜ್ಯದಾಯ ಆಸ್ತಿಗಳಾಗಿಯೇ ಉಳಿದಿವೆ. ಅವಿಭಾಜ್ಯದಾಯದ ಸ್ವರೂಪದ ಬಗ್ಗೆ ಹಿಂದೆ ಅನೇಕ ಪ್ರೀವೀ ಕೌನ್ಸಿಲ್ಲಿನ ನಿರ್ಣಯಗಳು ವಿವರವಾಗಿವೆ. ಅವುಗಳ ಸಾರಾಂಶವೆಂದರೆ ಅವಿಭಾಜ್ಯದಾಯ ಕುಟುಂಬದ ಪೂರ್ವ ಸಂಪ್ರದಾಯದಿಂದ ಉಂಟಾದದ್ದರಿಂದ ಅದರ ವೈಶಿಷ್ಟ್ಯಗಳು ಆ ಕಾಯಿದೆ ಮತ್ತು ಆ ಕೊಡುಗೆಯ ಷರತ್ತುಗಳಿಂದ ನಿರ್ಣಯಿಸಲ್ಪಡತಕ್ಕವು. ಅಂಥ ವಿಶೇಷ ನಿಯಮಗಳಿಲ್ಲವಾದಾಗ ಸಾಧಾರಣ ನಿಯಮಗಳು ಅನ್ವಯಿಸುವುವು. ಆ ಕುಟುಂಬದ ವಿಶಿಷ್ಟ ಸಂಪ್ರದಾಯದಿಂದ ಹಿಂದೂ ಸರ್ವಸಾಧಾರಣ ಕಾಯಿದೆ ಬದಲಾಗ ದಿದ್ದರೆ ಅವಿಭಾಜ್ಯ ಆಸ್ತಿಗಳಿಗೂ ಆ ಕಾಯಿದೆಯನ್ನು ಅವಿಭಾಜ್ಯತೆಗೆ ಸುಸಂಗತವಾಗುವಂತೆ ಅನ್ವಯಿಸತಕ್ಕದ್ದು. ಸರ್ ದೀನಷಾ ಮುಲ್ಲಾ ಅವರು (ಶಿವಪ್ರಸಾದಸಿಂಗ್‌ನ ವಿರುದ್ಧ ಪ್ರಯೋಗ ಕುಮಾರಿದೇವಿ ಕೇಸಿನಲ್ಲಿ) ಅವಿಭಾಜ್ಯ ಆಸ್ತಿಯ ಬಗೆಯ ಕಾಯಿದೆಯನ್ನು ಹಿಂದೂ ಅವಿಭಕ್ತಕುಟುಂಬದ ಕಾಯಿದೆಯೊಡನೆ ಹೋಲಿಸಿ ಈ ರೀತಿ ಹೇಳಿದ್ದಾರೆ. ಅವಿಭಾಜ್ಯತೆ ಮುಖ್ಯವಾಗಿ ಪುರಾತನ ಸಂಪ್ರದಾಯದಿಂದ ಬಂದುದು. ಸಾಧಾರಣ ಅವಿಭಕ್ತ ಕುಟುಂಬದ ಜನರಿಗೆ ಈ ಕೆಳಗಿನ ಹಕ್ಕುಗಳಿವೆ: 1. ಪಾಲು ಕೇಳುವ ಹಕ್ಕು. 2. ಕುಟುಂಬದ ಯಜಮಾನ ಕುಟುಂಬದ ಖರ್ಚಿಗಲ್ಲದೆ ಆ ಆಸ್ತಿಯನ್ನು ಪರಾಧೀನ ಮಾಡದಂತೆ ಅವನನ್ನು ನಿಯಂತ್ರಿಸುವ ಹಕ್ಕು. 3. ಅಶನ ವಸನದ ಹಕ್ಕು. 4. ಮೃತನ ಆಸ್ತಿಯನ್ನು ಉಳಿದವರು ಅವಿಭಕ್ತ ಒಡೆತನದ ಸಂಬಂಧದಿಂದ ಪಡೆಯುವ ಹಕ್ಕು .

ಅವಿಭಾಜ್ಯ ಆಸ್ತಿಗಳಲ್ಲಿ ಪಾಲು ಕೇಳುವ ಹಕ್ಕಾಗಲಿ, ಪರಾಧೀನಗೊಳಿಸುವುದನ್ನು ನಿಯಂತ್ರಿಸುವ ಹಕ್ಕಾಗಲಿ, ಅಶನ ವಸನಗಳ ಹಕ್ಕಾಗಲಿ ಉಳಿಯಲಾರವು. ಏಕೆಂದರೆ ಅವು ಪೂರ್ವಜರ ಆಸ್ತಿಯಿಂದ ಪ್ರಾಪ್ತವಾದುವು. ಅವಿಭಾಜ್ಯ ಆಸ್ತಿಯಲ್ಲಿ ಕುಟುಂಬದ ಉಳಿದವರಿಗೆ ಪಾಲು ಇಲ್ಲದ್ದರಿಂದ ಇವು ದೊರೆಯುವುದಿಲ್ಲ. ಆದರೆ ಹಿಂದೂ ಕಾಯಿದೆಯ ವಿಶಿಷ್ಟ ಸ್ವರೂಪವಾದ ಮೃತರ ಆಸ್ತಿಯನ್ನು ಅವಿಭಕ್ತ ಕುಟುಂಬದಲ್ಲಿ ಉಳಿದವರು ಪಡೆಯುವ ಸರ್ವಸಾಧಾರಣ ಹಕ್ಕು ಮಾತ್ರ ಅವಿಭಾಜ್ಯತೆಗೆ ವಿಸಂಗತವಲ್ಲದ್ದರಿಂದ ಉಳಿಯುವುದು.

ಈ ಮೇಲೆ ಹೇಳಿದ ವೈಶಿಷ್ಟ್ಯಗಳನ್ನು ಸಹ ಆ ಕುಟುಂಬದಲ್ಲಿನ ಪುರಾತನ ಸಂಪ್ರದಾಯ ದಂತೆ ಬದಲಿಸಬಹುದು. ಅವಿಭಾಜ್ಯ ಆಸ್ತಿಯ ಧಾರಕನ ಪುತ್ರ ಪೌತ್ರರಿಗೂ ಅಶನ ವಸನದ ಹಕ್ಕು ಸರ್ವಸಾಧಾರಣವಾಗಿ ಎಲ್ಲ ಕುಟುಂಬಗಳಲ್ಲಿಯೂ ಇದೆ ಎಂಬುದಾಗಿ ನಿರ್ಣಯವಾಗಿದೆ. ಕುಟುಂಬದ ಉಳಿದವರಿಗೆ ಆ ಹಕ್ಕು ಇದೆ. ಅಂಥ ಸಂಪ್ರದಾಯವನ್ನು ಸಿದ್ಧಮಾಡಿದರೆ ಮಾತ್ರ ದೊರೆಯುವುದು. ತದ್ಭಿನ್ನ ಪುರಾತನ ಸಂಪ್ರದಾಯಭಾವದಲ್ಲಿ, ಅವಿಭಾಜ್ಯ ಆಸ್ತಿಯ ವಾರಸು ವಿಷಯದಲ್ಲಿ ಸಹ ಹಿಂದೂಗಳಿಗೆ ಸರ್ವಸಾಧಾರಣ ಹಿಂದೂ ಕಾಯಿದೆಯೂ ಉಳಿದವರಿಗೆ ಅವರವರ ಜಾತೀಯ ಕಾಯಿದೆಯೂ ಅನ್ವಯಿಸು ವುದು. ಆದರೆ ಅವಿಭಾಜ್ಯತ್ವಕ್ಕೆ ಆನುಷಂಗಿಕವಾಗಿ ಒಂದಕ್ಕಿಂತ ಹೆಚ್ಚು ವಾರಸುದಾರರಿದ್ದರೂ ಒಬ್ಬನೇ ವಾರಸುದಾರನಿಗೆ ಅದು ಹೋಗುವುದು. ಹೆಚ್ಚಾಗಿ ಜ್ಯೇಷ್ಠಪುತ್ರನೇ ಆ ವಾರಸುದಾರ. ಜ್ಯೇಷ್ಠಶಾಖೆ ನಷ್ಟವಾದಲ್ಲಿ ಅದರ ಕೆಳಗಿನ ಹಿರಿಯ ಶಾಖೆ, ಅದೂ ನಷ್ಟವಾದಲ್ಲಿ ಅದಕ್ಕೂ ಕೆಳಗಿನ ಶಾಖೆಯ ಸಮೀಪದ ಒಬ್ಬನೇ ವಾರಸುದಾರನಿಗೆ ಆ ಆಸ್ತಿ ಅವಿಭಾಜ್ಯವಾಗಿ ಹೋಗುವುದು. ಅವಿಭಾಜ್ಯ ಆಸ್ತಿ ಪಿತ್ರಾರ್ಜಿತವಿದ್ದರೂ ಅದರ ಉತ್ಪನ್ನ ಆಸ್ತಿಧಾರಕನ ಸ್ವಯಾರ್ಜಿತವೆಂದು ಗಣಿಸಲ್ಪಡುವುದು. ಅಲ್ಲದೆ ಅವನ ಇತರ ಗಳಿಕೆಗಳು ಸ್ವಯಾರ್ಜಿತ. ಆದರೆ ಆತ ಆ ಗಳಿಕೆಗಳನ್ನು ಅವಿಭಾಜ್ಯ ಆಸ್ತಿಯೊಡನೆ ಅಭಿನ್ನವಾಗುವಂತೆ ಸೇರಿಸಿ ಏಕರೂಪದಲ್ಲಿ ಅನುಭವಿಸುತ್ತ ಬಂದರೆ, ಅವಿಭಾಜ್ಯ ಆಸ್ತಿಯಲ್ಲಿ ಏಕತ್ರಗೊಳಿಸುವಂಥ ಇಚ್ಛೆಯನ್ನು ಈ ರೀತಿ ಸ್ಪಷ್ಟಗೊಳಿಸಿದ್ದರೆ ಅವೂ ಅವಿಭಾಜ್ಯತೆಯನ್ನು ಹೊಂದುವುವು. ಇಲ್ಲವಾದರೆ ಸಾಧಾರಣ ಹಿಂದೂ ಕಾಯಿದೆಯ ವಾರಸು ಕ್ರಮದಂತೆ ಅವನ ಅನಂತರದ ವಾರಸುದಾರರಿಗೆ ಅವರ ಸ್ವಂತ ಗಳಿಕೆಗಳು ಹೋಗುವುವು. (ವಿ.ಆರ್.ಬಿ.)

**ಅವಿರುದ್ಧಸ್ತ್ರೀ :** ಹಿಂದು ಧರ್ಮಶಾಸ್ತ್ರದ ಪ್ರಕಾರ, ಪತಿ ಇದ್ದರೂ ಬೇರೊಬ್ಬ ಪುರುಷನಲ್ಲಿ ಅನುರಕ್ತಳಾಗಿ ಅವನೊಬ್ಬನಲ್ಲಿಯೇ ವ್ಯವಹರಿಸುವವಳು. ವೇಶ್ಯೆಯೊಬ್ಬಳು ಒಬ್ಬನೇ ಪುರುಷನೊಂದಿಗೆ ವ್ಯವಹರಿಸುತ್ತಿದ್ದಾಗಲೂ ಆಕೆಗೆ ಈ ಹೆಸರು ಸಲ್ಲುತ್ತದೆ. ವ್ಯವಹಾರವೆಂದಮಾತ್ರಕ್ಕೆ ಆಕೆ ಆತನ ಮನೆಯಲ್ಲಿಯೇ ಬಂದು ಇರಬೇಕೆಂಬ ನಿಯಮವಿಲ್ಲ. ಇಂಥ ಸ್ತ್ರೀಗೆ ಕೆಲವು ಹಕ್ಕು ಬಾಧ್ಯತೆಗಳಿವೆ. ಅವಿರುದ್ಧಸ್ತ್ರೀಗೆ ತಾನೊಲಿದ ಪುರುಷನ ಪಿತ್ರಾರ್ಜಿತ ಸ್ವತ್ತಿನಲ್ಲಿ ಜೀವನಾಂಶಕ್ಕೆ ಯಾವ ವಿಧವಾದ ಹಕ್ಕೂ ಇಲ್ಲ. ಅಲ್ಲದೆ ಅವನ ಜೀವಿತಕಾಲದಲ್ಲಿ ಅವನ ಸ್ವತ್ತಿನಿಂದ ಯಾವ ವಿಧವಾದ ಪರಿಹಾರವೂ ಆಕೆಗೆ ಸಿಗದು. ಒಂದು ವೇಳೆ ಆತ ಸಾಯುವವರೆಗೂ ಆಕೆ ಅವನ ಸಹವಾಸದಲ್ಲೇ ಇದ್ದರೆ ಅವನ ಸ್ವಯಾರ್ಜಿತ ಆಸ್ತಿಯಲ್ಲಿ ಜೀವನಾಂಶ ದೊರೆಯುವುದು. ಇಂಥ ಸ್ತ್ರೀಯಲ್ಲಿ ಹುಟ್ಟುವ ಮಕ್ಕಳಿಗೆ ಯಾವ ಪರಿಹಾರವೂ ಇಲ್ಲ. ಆದರೆ ಆಕೆಯ ಸ್ವಯಾರ್ಜಿತ ಆಸ್ತಿಗೆ ಆ ಮಕ್ಕಳು ವಾರಸುದಾರರು.

ಜೀವನಾಂಶ ಪರಿಹಾರ 1956ರವರೆಗೂ ದೊರೆಯುತ್ತಿದ್ದು ಹಿಂದೂ ಅಡಾಪ್ಷನ್ ಆ್ಯಂಡ್ ಮೇಂಟೆನೆನ್ಸ್ ಆಕ್ಟ್‌ನ ಪ್ರಕಾರ ನಿಂತುಹೋಯಿತು. (ಜಿ.ಆರ್.)

**ಅವಿರೋಧ ನಿಯಮ :** ತರ್ಕಶಾಸ್ತ್ರದ ಮೂಲನಿಯಮಗಳಲ್ಲೊಂದು (ಲಾ ಆಫ್ ಕಾಂಟ್ರಡಿಕ್ಷನ್). ಒಂದು ವಿಷಯವನ್ನು ಕುರಿತು ಒಂದೇ ಕಾಲದಲ್ಲಿ ಇದು ಇದೆಯೆಂದೂ ಇಲ್ಲವೆಂದೂ ಹೇಳಲಾಗುವುದಿಲ್ಲ. ಈ ನಿಯಮಕ್ಕೆ ಅನುಗುಣವಾಗಿ ಮಾತ್ರ ಸರಿಯಾಗಿ ಆಲೋಚಿಸಲು ಸಾಧ್ಯ. ಇದಕ್ಕೆ ವಿರುದ್ಧವಾಗಿ ಆಲೋಚಿಸಲು ಸಾಧ್ಯವಿಲ್ಲ. ಆಲೋಚನೆ ತನ್ನನ್ನೇ ತಾನು ವಿಘಾತಗೊಳಿಸಿಕೊಳ್ಳುತ್ತದೆ. (ಜಿ.ಎಚ್.)

**ಅವಿಸೆನ್ನ :** 980–1037. ಅಬು–ಅಲಿ–ಅಲ್–ಹುಸೇನ್ ಇಬ್ನ್ ಅಬ್ದ್ ಅಲ್ಲಾ ಇಬ್ನ್‌ಸೀನ. ಪರ್ಷಿಯದ ತತ್ತ್ವಜ್ಞಾನಿ, ವೈದ್ಯ. ಇಸ್ಲಾಂ ಪ್ರಪಂಚದಲ್ಲೂ ಲ್ಯಾಟಿನ್ ನಡುಗಾಲ ದಲ್ಲೂ ಹೆಸರಾಗಿದ್ದವ. ಅರಬ್ಬೀ ಭಾಷೆಯಲ್ಲಿ ಈತನ ನಾಮಧೇಯ ಇಬ್ನ್‌ಸೀನ ಎಂದಿದ್ದು, ಯೆಹೂದ್ಯ ಭಾಷೆಯಲ್ಲಿ ಅವೆನ್ ಸೀನ್ ಎಂಬುದಾಗಿ, ತದನಂತರ ಲ್ಯಾಟಿನ್ ಭಾಷೆಯಲ್ಲಿ ಅವಿಸೆನ್ನ ಎಂದು ಪರಿವರ್ತನೆಯಾಯಿತು. 980–81ರಲ್ಲಿ ತುರ್ಕಿಸ್ತಾನದ ಬುಖಾರ ಬಳಿಯ ಖಾರ್ ಮೈತಾನ್ ಎಂಬ ಹಳ್ಳಿಯಲ್ಲಿ ಹುಟ್ಟಿದ. ಚಿಕ್ಕವಯಸ್ಸಿನಲ್ಲಿಯೇ ಮುಸಲ್ಮಾನರ ಪವಿತ್ರಗ್ರಂಥ ಕುರಾನನ್ನು ವಿಶೇಷವಾಗಿ ಅಧ್ಯಯನ ಮಾಡಿದ. ಅನಂತರ ಭಾರತೀಯ ಗಣಿತಶಾಸ್ತ್ರವನ್ನು ವಿಶೇಷವಾಗಿ ಅಭ್ಯಾಸ ಮಾಡಿದ. ಪಾಶ್ಚಾತ್ಯರಿಗೆ ಗಣಿತದಲ್ಲಿ ಸೊನ್ನೆ ಮತ್ತು ಅಂಕಿಗಳ ಸ್ಥಾನವೈಶಿಷ್ಟ್ಯದ ಅರಿವು ಮೊದಲಾದದ್ದು ಈತನ ಮುಖೇನ. ಅವಿಸೆನ್ನ ಮತ್ತು ಅವಿರೊಯಿಜ಼್ ಭಾರತೀಯ ಪ್ರಾಚೀನ ಸಂಸ್ಕೃತಿಗಳನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಟ್ಟರು. ಅವಿಸೆನ್ನ ವೈದ್ಯಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳಲ್ಲಿಯೂ ಪ್ರವೀಣನಾಗಿದ್ದು ಅನೇಕ ಗ್ರಂಥಗಳನ್ನು ಬರೆದಿದ್ದಾನೆ.

ಈತ ಅಲ್ ಫಲಾ ಸಿಫ್ ತತ್ತ್ವಜ್ಞಾನಿಗಳ ಪಂಥಕ್ಕೆ ಸೇರಿದವನಾಗಿದ್ದು ಪಂಥದ ಮುಖ್ಯ ಸಂಸ್ಥಾಪಕರಾದ ಅಲ್‌ಕಿಂಡಿ ಮತ್ತು ಅಲ್ ಫಾರಾಬೀಗಳ ಅನುಯಾಯಿಯಾಗಿದ್ದ. ಈ ಪಂಥದವರು ನವೀನ ಪ್ಲೇಟೊ ತತ್ತ್ವದ ಅಭಿಪ್ರಾಯಗಳನ್ನು ವಿಶೇಷ ಒಪ್ಪುತ್ತಾರೆ. ಅವಿಸೆನ್ನ ಪವಾಡಪುರುಷನೆಂಬ ನಂಬಿಕೆ ಇತ್ತಲ್ಲದೆ ಇವನ ಬಗ್ಗೆ ತುರ್ಕಿ ಭಾಷೆಯಲ್ಲಿ ಅನೇಕ ಕಥೆಗಳಿವೆ.

ತರ್ಕಶಾಸ್ತ್ರ, ಭೌತಶಾಸ್ತ್ರ, ಮನಶ್ಶಾಸ್ತ್ರ, ಅಧ್ಯಾತ್ಮಶಾಸ್ತ್ರ, ಅಧ್ಯಾತ್ಮಯೋಗ ಮತ್ತು ನೀತಿಶಾಸ್ತ್ರಗಳ ಬಗ್ಗೆ ಈತ ಬರೆದಿದ್ದಾನೆ.

ತರ್ಕಶಾಸ್ತ್ರ ಸತ್ಯತೆಯ ಆದರ್ಶ ಧ್ಯೇಯಗಳನ್ನು ಕಂಡುಹಿಡಿಯುವುದಿಲ್ಲವಾದರೂ ಜನಸಾಮಾನ್ಯರು ಆಲೋಚನಾ ಕ್ರಿಯೆಯಲ್ಲಿ ಆಭಾಸಗಳಿಗೀಡಾಗದ ಹಾಗೆ ನೇತ್ಯರ್ಥಕ ರೂಪದಲ್ಲಿ ಸಹಾಯ ಮಾಡುತ್ತದೆಯೆಂದು ಈತ ಹೇಳುತ್ತಾನೆ.

ಭೌತಶಾಸ್ತ್ರದಲ್ಲಿ ಭೌತದ್ರವ್ಯ, ವಸ್ತುವಿನ ನೈಜತತ್ತ್ವ, ಮೂಲಸ್ವರೂಪ ಇತ್ಯಾದಿಗಳನ್ನು ಚರ್ಚಿಸಿದ್ದಾನೆ.

ಮನಶ್ಶಾಸ್ತ್ರದಲ್ಲಿ ಒಂದು ಕ್ರಮಬದ್ಧ ಶ್ರೇಣಿಯಲ್ಲಿ ಸಸ್ಯಸಂಬಂಧವಾದ ಬುದ್ಧಿ, ಪ್ರಾಣಿಸಂಬಂಧವಾದ ಬುದ್ಧಿ ಮತ್ತು ಮನುಷ್ಯ ಸಂಬಂಧವಾದ ವಿವೇಚನಾಯುತವಾದ ಬುದ್ಧಿ ಎಂಬ ಮೂರು ವಿಭಾಗಗಳಲ್ಲಿ ಬುದ್ಧಿಯನ್ನು ವಿವರಿಸುತ್ತಾನೆ.

ಬಹು ಮುಖ್ಯವಾಗಿ ಈತ ತತ್ತ್ವಶಾಸ್ತ್ರದಲ್ಲಿ ಆದಿಕಾರಣ (ಮೂಲಹೇತು), ಅವಶ್ಯಪರ ವಸ್ತು ಮತ್ತು ದೇವ ಈ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತಾನೆ. ಪರಮಾತ್ಮನನ್ನು ಸತ್ಯ, ಶಿವ, ಸುಂದರನೆಂದು ವರ್ಣಿಸುತ್ತಾನೆ.

ಈತ ಕೇವಲ ವಿಚಾರಪರನಾದುದರಿಂದ ನಡತೆ, ನೀತಿಗಳಿಗೆ ಅಷ್ಟಾಗಿ ಪುರಸ್ಕಾರ ಕೊಡಲಿಲ್ಲ. ಈತನಿಗೆ ಮದ್ಯಪಾನ, ಸುಖಾನ್ವೇಷಣೆ ಬಹು ಇಷ್ಟವಾಗಿತ್ತು. ಈತನ ಅಭಿಪ್ರಾಯ ಗಳನ್ನು ಅನೇಕ ಪೌರಸ್ತ್ಯ ಮುಸಲ್ಮಾನರು ಪ್ರತಿಭಟಿಸಿದ್ದಾರೆ. (ಎಸ್.ಆರ್.)

ಅವಿಸೆನ್ನ 18ರ ಹರೆಯಕ್ಕೇ ನುರಿತ ವೈದ್ಯನಾಗಿ ವೈದ್ಯರ ರಾಜಕುಮಾರನೆಂದು ಹೆಸರಾಗಿ, ತತ್ತ್ವಶಾಸ್ತ್ರಗಳ ಅಪಾರ ತಿಳಿವನ್ನು ಪಡೆದಿದ್ದ. ಸಮಾನಿದ್ ಸಾಮ್ರಾಜ್ಯ 999ರಲ್ಲಿ ಅಳಿದ ಮೇಲೆ ತನ್ನೂರು ಬಿಟ್ಟು ಅಲೆದಾಡಿದ. ಸು.1020ರ ಹಮಾದಾನಿನ ವಜೀರನಾಗಿದ್ದ. ತನ್ನ ಕೊನೆಯ 14 ವರ್ಷಗಳೂ ಇಸ್ಫಹಾನಿನ ದೊರೆ ಅಲಾ ಉದ್ದೌಲನೊಂದಿಗೆ ಇದ್ದು, ಅವನು ಹೋದಲ್ಲೆಲ್ಲ ಹಿಂಬಾಲಿಸುತ್ತ ಸೇನೆಯ ಕಾರ್ಯಾಚರಣೆಗಳಲ್ಲೂ ಭಾಗಿಯಾಗಿದ್ದ. ಕೊನೆಗೆ ಹಮದಾನಲ್ಲೇ ಸತ್ತ. ಇವನೊಬ್ಬ ಜಾದೂಗಾರನೆಂದು ಎಷ್ಟೋ ಕಾಲ ಜನ ನಂಬಿದ್ದರು. ಇವನ ನಾಡನುಡಿಯಾದ ಪರ್ಷಿಯದಲ್ಲೂ ಬಹುಪಾಲು ಅರಬ್ಬಿಯಲ್ಲೂ ಇವನು ಬರೆದ 21 ಮಹಾಗ್ರಂಥಗಳು, 24 ಸಣ್ಣ ಗ್ರಂಥಗಳಲ್ಲಿ ಅನೇಕವು ಈಗಲೂ ಉಳಿದಿವೆ. ಇವನಲ್ಲಿ ಕಲಿತವನೊಬ್ಬ ಬರೆದ ಇವನ ಜೀವನ ಚರಿತ್ರೆಯೂ ಇವುಗಳಲ್ಲಿ

ಸೇರಿದೆ. ಬೆಳಕು, ಕಾವು, ಶಕ್ತಿ, ಚಲನೆಗಳಂಥ ಭೌತಿಕ, ರಾಸಾಯನಿಕ ವಿಚಾರಗಳಲ್ಲೂ ಖನಿಜಶಾಸ್ತ್ರದಲ್ಲೂ ಜ್ಯಾಮಿತಿಯಲ್ಲೂ ಅವಿಸೆನ್ನ ಮುನ್ನಡೆದಿದ್ದ. ಈತನ ಗ್ರಂಥಗಳಲ್ಲಿ ಅಲ್ ಕಾನೂನ್ ಫಿಲ್ತಿಬ್ (ವೈದ್ಯ ವಿಜ್ಞಾನ) ಅವಿಸೆನ್ನನನ್ನು ಅಪಾರ ಕೀರ್ತಿಗೇರಿಸಿದ, ದಶಲಕ್ಷ ಪದಗಳಿರುವ ವೈದ್ಯಕ ಮಹಾಗ್ರಂಥ. ಬರೆದಿಟ್ಟಿದ್ದ ಇವನ ಅನುಭವಗಳಲ್ಲಿ ಬಹುಪಾಲು ಇವನ ಅಲೆದಾಟಗಳಲ್ಲಿ ಕಳೆದುಹೋದರೂ ಈ ಕ್ರಮವರಿತ ವಿಶ್ವಕೋಶದಂತಿರುವ ತನ್ನ ವೈದ್ಯಗ್ರಂಥದಲ್ಲಿ ಬಹುಮಟ್ಟಿಗೆ ರೋಮ್ ಸಾಮ್ರಾಜ್ಯದ ಗ್ರೀಕ್ ವೈದ್ಯರ ಸಾಧನೆಗಳನ್ನೂ ಇತರ ಅರಬ್ಬೀ ಗ್ರಂಥಗಳನ್ನೂ ತನ್ನ ಅನುಭವಗಳೊಂದಿಗೆ ಸೇರಿಸಿದ್ದ. ಅಲ್ಲದೆ, ಚರ್ಮರೋಗ ವಿಜ್ಞಾನ, ಅಂಗರಚನಾವಿಜ್ಞಾನ, ಅಂಗಕ್ರಿಯಾವಿಜ್ಞಾನ, ಶಸ್ತ್ರವೈದ್ಯ, ಪ್ರಸೂತಿವಿಜ್ಞಾನ, ಮನೋರೋಗವಿಜ್ಞಾನ, ಔಷಧವಸ್ತು ವಿಜ್ಞಾನಗಳನ್ನೂ ಅಳವಡಿಸಿದ್ದ. ಶಸ್ತ್ರವೈದ್ಯವನ್ನು ವೈದ್ಯದಲ್ಲಿ ಒಂದು ಕಿರಿಯ ವಿಭಾಗವೆಂದು ಈತ ಗಣಿಸಿದ್ದ ರಿಂದ, ಹಲವಾರು ಶತಮಾನಗಳ ಕಾಲ ಆ ದಿಸೆಯ ಮುನ್ನಡೆ ಕುಂಟಿತು. ಈ ಗ್ರಂಥ ಇಸ್ಲಾಂ ಪ್ರಪಂಚದಲ್ಲಿ ಹೆಸರಾಗಿ ಈಗಲೂ ಮಾನ್ಯವಾಗಿದೆ, ಅಧಿಕೃತವಾಗಿದೆ. 6 ಶತಮಾನಗಳ ಕಾಲ ಯುರೋಪಿನ ವಿಶ್ವವಿದ್ಯಾಲಯಗಳಲ್ಲೂ ಇದೇ ಪಠ್ಯಗ್ರಂಥವಾಗಿತ್ತು. ಕ್ರಿಮೋನದ ಗೆರಾರ್ಡ್ 12ನೆಯ ಶತಮಾನದಲ್ಲಿ ಇದನ್ನು ಲ್ಯಾಟಿನ್ನಿಗೆ ಅನುವಾದಿಸಿದ್ದು, 1500ರ ಹೊತ್ತಿಗೆ 15 ಬಾರಿ ಅಚ್ಚಾಗಿತ್ತು. ಬೆಲ್ಲುನೋದ ಆಂಡ್ರಿಯ ಅಲ್ಪಾಗೊ ಹೊಸದಾಗಿ ಮಾಡಿದ ಅನುವಾದ 1527ರಲ್ಲೂ ಅನಂತರವೂ ಅಚ್ಚಾಯಿತು. ಅಚ್ಚಾದ ಅರಬ್ಬೀ ಗ್ರಂಥಗಳಲ್ಲಿ (1593) ಇದು ಎರಡನೆಯದು. ಅವಿಸೆನ್ನನ ಕೃತಿಗಳಲೆಲ್ಲಾ ಈ ಮಹಾಗ್ರಂಥ ಅತ್ಯಂತ ಕೀರ್ತಿಗಳಿಸಿತ್ತು.

(ಎಸ್.ಟಿ.ಪಿ.)

**ಅವಿರೊಯಿಝ್ :** 1126–98. ಸ್ಪೇನಿನ ಅರಬ್ಬೀ ದಾರ್ಶನಿಕ. ಇಬ್ನೆರಷ್ಡ್ ಎಂಬ ಹೆಸರೂ ಉಂಟು. ಖಗೋಳ, ಔಷಧ ಮತ್ತು ನ್ಯಾಯಶಾಸ್ತ್ರದ ಮೇಲೂ ಗ್ರಂಥಗಳನ್ನೂ ರಚಿಸಿದ್ದಾನೆ. ಮೂಲಗ್ರಂಥಗಳು ಅರಬ್ಬೀ ಭಾಷೆಯಲ್ಲಿದ್ದರೂ ಲ್ಯಾಟಿನ್ ಮತ್ತು ಹೀಬ್ರೂಗೆ ಭಾಷಾಂತರವಾಗಿದೆ. ಇಸ್ಲಾಂ ಧರ್ಮವನ್ನು ಕುರಿತು ಬರೆದ ಗ್ರಂಥಗಳೂ ಅರಿಸ್ಟಾಟಲ್‌ನನ್ನು ಕುರಿತು ಬರೆದ ಟಿಪ್ಪಣಿಗಳೂ ಮನನೀಯವಾಗಿವೆ. ಅರಿಸ್ಟಾಟಲನ ವಿಚಾರಗಳನ್ನು ಕ್ಯಾಥೊಲಿಕ್ ಸಿದ್ಧಾಂತಗಳಿಗೆ ಅಳವಡಿಸುವ ಪ್ರಯತ್ನವನ್ನು ಇವನ ಲೇಖನಗಳಲ್ಲಿ ಕಾಣಬಹುದು. ಇವನ ವಿಚಾರಗಳು ಮಧ್ಯಯುಗದ ಯುರೋಪಿನಲ್ಲಿ ಪ್ರಚಲಿತವಾದ ಸಂಪ್ರದಾಯಬದ್ಧ ವಿದ್ಯಾಭ್ಯಾಸ ಹಾಗೂ ಧಾರ್ಮಿಕ ಶಿಕ್ಷಣದ (ಸ್ಕೊಲ್ಯಾಸ್ಟಿಸಿಸಮ್) ಮೇಲೆ ಬಹಳ ಪ್ರಭಾವ ಬೀರಿವೆ. ಆಕ್ವಿನಸ್ ಮತ್ತು ಡಾಂಟೆ ಮುಂತಾದವರು ಇವನ ವಿಚಾರಗಳ ಪ್ರಭಾವಕ್ಕೊಳಗಾಗಿರುವುದು ಸರ್ವವಿದಿತ. ಕಿತಾಬ್ ಅಲ್ ಕುಲ್ ಯಾತ್ (ವಿಶ್ವಗಳ ಪುಸ್ತಕ) ಇವನ ಪ್ರಮುಖ ವೈದ್ಯಕೀಯ ಪುಸ್ತಕ.

(ಎಚ್.ಕೆ.ಆರ್.)

ಸ್ಪೇನಿನ ಕಾರ್ಡೋಬದಲ್ಲಿ ಹುಟ್ಟಿದ ಇವನು ಅವೆಂಜೋಯರ್‌ನ ಶಿಷ್ಯ. ಅವಿಸೆನ್ನನ ಗ್ರಂಥಗಳ ಮೇಲೆ ಟಿಪ್ಪಣಿಗಳನ್ನು ಬರೆದ. ಸಿಡುಬು ಒಂದು ಬಾರಿ ತಗುಲಿದರೆ ಮತ್ತೆ ಬರದೆಂದು ಗಮನಿಸಿದವರಲ್ಲಿ ಇವನೇ ಮೊದಲಿಗ.

*

**ಅವೆಂಜೋಯರ್ :** 1113–62. ಅರಬ್ಬಿಯ ಅಬುಮಾರ್ವಾನ್ ಅಬ್ದುಲ್ ಮಲ್ಲಿಕ್ ಇಬ್ನ್ ಜೋರ್, ತಂದೆಯೂ ತಾತನೂ ವೈದ್ಯರಾಗಿದ್ದ ಹೆಸರಾಂತ ಕುಟುಂಬದ, ಸ್ಪೇನಿನ ಮುಸ್ಲಿಂ ವೈದ್ಯ. ತತ್ತ್ವಜ್ಞಾನಿ ವೈದ್ಯ ಅವಿರೊಯಿಝನ ಸಮಕಾಲೀನನಾಗಿ, ಅವನ ಭಾಷಣಗಳನ್ನು ಕೇಳಿ ಅವನಿಂದಲೇ ವೈದ್ಯ ಕಲಿತ. ಬುದ್ಧಿ ಇಲ್ಲವೇ ಬುದ್ಧಿ ಪ್ರಮಾಣ ತತ್ತ್ವಶಾಲಿಯಾಗಿದ್ದ. ಆಗಿನ ಕಾಲದಲ್ಲಿ ಉನ್ನತಿಗೇರಿದ ಗ್ಯಾಲೆನ್ನನನ್ನು ಎದುರಿಸುವ ಎದೆಗಾರಿಕೆ ತೋರಿದ ಕೆಲವೇ ಮಂದಿಯಲ್ಲಿ ಇವನೊಬ್ಬ. ಬೊಗಳೆ ವೈದ್ಯಗಾರಿಕೆಯನ್ನೂ ಜ್ಯೋತಿಷಿಗಳ ಕುರುಡು ನಂಬಿಕೆಯ ಮದ್ದುಗಳನ್ನೂ ಬಲವಾಗಿ ವಿರೋಧಿಸಿ ತನ್ನ ಬರೆವಣಿಗೆಗಳಲ್ಲಿ ವ್ಯಕ್ತಪಡಿಸಿದ. ಗರ್ಭಕೋಶವನ್ನು ಪೂರ್ತಿ ತೆಗೆದುಹಾಕಲು ಮೊದಲು ಕೈ ಹಾಕಿದ. ಪ್ರಾಣಿಗಳ ಮೇಲೆ ಪ್ರಯೋಗಗಳನ್ನು ನಡೆಸಿದ. ಜಠರದ ಏಡಿಗಂತಿ, ನನ್ನಿಲುಕದ (ಮೀಡಿಯಾಸ್ಟೈನಂ) ಕುರು, ಒಳಗಿವಿ ಕೀವು ಇವನ್ನೆಲ್ಲ ವಿವರಿಸಿದ. ಕಜ್ಜಿಗೆ ಕಾರಣವಾದ ಹುಳುವನ್ನು ಮೊದಲು ಬಣ್ಣಿಸಿದ. ಒಂದು ಹೊತ್ತಗೆಯಲ್ಲಿ (ಅಲ್ ಅಘದಿಯ) ಆಹಾರ, ಮದ್ದುಗಳನ್ನು ವಿವರಿಸಿದ. ಇನ್ನೊಂದರಲ್ಲಿ (ಅಲ್ ಇಕ್ತಿಸಾದ್) ಮಾನಸಿಕ ಬೇನೆ, ಜನಾರೋಗ್ಯವನ್ನು ವಿವರಿಸಿದ. ರೋಗಗಳು, ಚಿಕಿತ್ಸೆ, ಪಥ್ಯ, ಮದ್ದುಗಳ ವಿವರವಿರುವ ಅವನ ಅಲ್‌ಟೆಯಿಸಿರ್ (ಆರೋಗ್ಯದ ಸರಿಪಡಿಸಿಕೆ) ಎಂಬ ಪುಸ್ತಕ ಯೆಹೂದಿ ನುಡಿಗೂ (1260) ಆಮೇಲೆ ಲ್ಯಾಟಿನ್ನಿಗೂ (1280)ಅನುವಾದವಾಗಿ, 17ನೆಯ ಶತಮಾನದ ತನಕ ಜಾರಿಯಲ್ಲಿತ್ತು. ಮಗನೂ ತಂದೆಯ ಶಿಷ್ಯನಾಗಿ ಹಲವಾರು ವೈದ್ಯ ಗ್ರಂಥಗಳನ್ನು ಬರೆದ.

*

**ಅವೆನೇರಿಯಸ್, ರಿಚರ್ಡ್ ಹೆನ್ರಿಕ್ ಲಡ್ವಿಗ್ :** 1843–96. ಜರ್ಮನ್ ದಾರ್ಶನಿಕ. ಜ಼ೂರಿಕ್‌ನಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಪಕನಾಗಿದ್ದ (1877–96). ಈತ ರಚಿಸಿದ ತತ್ತ್ವಶಾಸ್ತ್ರ ಗ್ರಂಥಗಳಲ್ಲಿ ಎರಡು ಲೋಕವಿಖ್ಯಾತವಾಗಿವೆ. ಮೊದಲನೆಯದು ತತ್ತ್ವಶಾಸ್ತ್ರ ಸೂತ್ರಗಳ ಬಗ್ಗೆಯೂ ಎರಡನೆಯದು ತತ್ತ್ವವಿಮರ್ಶೆಯ ಬಗ್ಗೆಯೂ ಇವೆ. ಎರಡನೆಯ ಗ್ರಂಥದಲ್ಲಿ ಈತ ಪ್ರತಿಪಾದಿಸಿರುವ ತತ್ತ್ವಸಾನುಭವ ವಿಮರ್ಶೆ (ಎಂಪಿರಿಯೋ ಕ್ರಿಟಿಸಿಸಂ), ಮನುಷ್ಯನ ಚಿಂತನೆಯಿಂದ ವಿಕಸನಗೊಳ್ಳುವ ಅರಿವು ಹಾಗೂ ಪರಿಸರದ ಮೇಲೆ ನಿರ್ಧಾರವಾಗುವ ಲೌಕಿಕಾನು ಭವ–ಈ ಎರಡನ್ನೂ ಸಮನ್ವಯಗೊಳಿಸಬಹುದು ಎನ್ನುವುದೇ ಈತ ಸೂಚಿಸಿದ ವಿಚಾರಧಾರೆ. ಈ ತತ್ತ್ವ ಲೌಕಿಕವಾದದಿಂದ (ಮೆಟೀರಿಯಲಿಸಮ್) ವಿಭಿನ್ನ ವಾದುದೆಂದು ಹೇಳಲಾಗಿದೆ.

(ಎಚ್.ಕೆ.ಆರ್.)

**ಅವೆಸ್ತ :** ಜರತುಷ್ಟ್ರನ ಅನುಯಾಯಿಗಳು ಬರೆದಿರುವ ಪ್ರಾಚೀನ ಧಾರ್ಮಿಕ ಲೇಖನಗಳ ಸಂಕಲನ. ಆ ಧರ್ಮಾವಲಂಬಿಗಳ ಪೈಕಿ ಅನೇಕರು ಈಗ ಭಾರತದಲ್ಲಿ ಬಾಳುತ್ತಿದ್ದಾರೆ. ಇರಾನ್ ದೇಶ ಅವರ ಹಳೆಯ ತವರು ಮನೆ; ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಪ್ರವಾದಿ ಜರತುಷ್ಟ್ರ ಅಲ್ಲಿ ಜೀವಿಸುತ್ತಿದ್ದು ತನ್ನ ಉಪದೇಶಗಳನ್ನು ಪ್ರಚಾರ ಮಾಡುತ್ತಿದ್ದ. ಪ್ರಥಮತಃ ಅವೆಸ್ತ ಎಂದರೆ ಪವಿತ್ರ ಗ್ರಂಥ ಎಂದು ಅರ್ಥ. ಅದಕ್ಕೆದುರಾಗಿ ಝಂಡ್ ಎಂಬುದು ಆ ಪವಿತ್ರ ಗ್ರಂಥದ ಮೇಲೆ ಪಹ್ಲವಿ ಭಾಷೆಯಲ್ಲಿರುವ ಟೀಕೆ ಮತ್ತು ಟಿಪ್ಪಣಿ. ಎರಡನೆಯದಾಗಿ, ಅವೆಸ್ತ ಎಂಬುದು ಆ ಪವಿತ್ರ ಗ್ರಂಥದಲ್ಲಿ ಪ್ರಯುಕ್ತವಾಗಿರುವ ಭಾಷೆಗೂ ಅನ್ವಯಿಸುತ್ತದೆ.

ಈಗ ಝಂಡ್ ಎಂಬುದು ಅವೆಸ್ತ ಭಾಷೆಯ ಹೆಸರಲ್ಲವೆಂಬುದು ಸ್ಪಷ್ಟ. ಅವೆಸ್ತ ಪದ ಪಹ್ಲವಿಯ ಅವಿಸ್ತಾಕ್ ಅಥವಾ ಅಪಸ್ತಾಕ್ ಎಂಬ ಮೂಲದಿಂದ ಬಂದುದು. ಈ ಮೂಲ ಶಬ್ದ ಉಪಸ್ತಾ ಎಂಬ ಮಾತೃಕೆಯಿಂದ ಹೊರಟಿದೆಯೆನ್ನುವ ಪಕ್ಷದಲ್ಲಿ, ಅದರ ಅರ್ಥ ಆದಿಮ ಅಥವಾ ಅಸಲು ಪ್ರತಿ ಎಂದಾಗುತ್ತದೆ.

ಈ ಶಬ್ದ ಪಹ್ಲವಿಯ ಅಪಸ್ತಾನ್ (ನಂಬಿಕೆ) ಎಂಬ ಪದಕ್ಕೆ ಸಂಬಂಧಿಸಿದೆ ಎಂದು ಸೂಚಿಸುವುದೂ ಉಂಟು; ಹಾಗಾದ ಪಕ್ಷದಲ್ಲಿ ಅದರ ಅರ್ಥ ವಿಶ್ವಾಸಾರ್ಹವಾದ ಅಥವಾ ಯಥಾರ್ಥವಾದ ಏಕಮಾತ್ರ ಗ್ರಂಥ ಎಂದಾಗುತ್ತದೆ.

ಈಗ ಉಪಲಬ್ಧವಾಗಿರುವ ಅವೆಸ್ತ ಒಂದೇ ಒಂದು ಪುಸ್ತಕವಾಗಿಲ್ಲ; ಯಾವುದೋ ಕಾಲದಲ್ಲಿ ಹೇರಳವಾಗಿದ್ದ ಸಾಹಿತ್ಯರಾಶಿಯ ಏಕಾಂಶವೆನಿಸಿರುವ ಹಲವಾರು ಪುಸ್ತಕಗಳ ಸಂಕಲನ. ಪಾರಸಿ ಸಂಪ್ರದಾಯದ ಪ್ರಕಾರ 1000 ಅಧ್ಯಾಯಗಳ 21 ನಾಸ್ಕುಗಳನ್ನು (ಪುಸ್ತಕಗಳನ್ನು) ಒಳಗೊಂಡಿದ್ದ ಮೂಲ ಅವೆಸ್ತ ಪ್ರಮಾಣಾವಳಿ ಮೊದಲು ಅಕಿಮೀನಿಯನ್ ಕಾಲದಲ್ಲಿ ಸ್ಥಿರೀಕೃತವಾಯಿತು. ಅದನ್ನು ದನಗಳ ಚರ್ಮದ ಮೇಲೆ ಬರೆದು ಅದರ ಎರಡು ಪ್ರತಿಗಳನ್ನು ಪರ್ಸಿಪೊಲಿಸ್ ನಗರದ ಪತ್ರಾಗಾರ ಮತ್ತು ಧನಾಗಾರಗಳಲ್ಲಿ ಸುರಕ್ಷಿತವಾಗಿ ಇಡಲಾಗಿತ್ತು. ದುರದೃಷ್ಟವಶಾತ್ ಆ ಪ್ರತಿಗಳೆರಡೂ ಅಲೆಕ್ಸಾಂಡರನ ವಿಜಯಯಾತ್ರೆಯ ಪರಿಣಾಮವಾಗಿ ನಾಶ ಹೊಂದಿದವು. ಅದಾದ ಮೇಲೆ ವೊಲೊಗೋಸಿಸ್ I ಎಂಬ ರಾಜ ಪ್ರಾರಂಭ ಮಾಡಿದ ಉದ್ಯಮವನ್ನು ಜರತುಷ್ಟ್ರನ ಧರ್ಮದಲ್ಲಿ ತುಂಬ ಶ್ರದ್ಧೆಯುಳ್ಳ ಸಸ್ಸೇನಿಯನ್ ರಾಜರು ಮುಂದುವರಿಸುತ್ತ ಪ್ರ.ಶ. 3ನೆಯ ಶತಮಾನದ ಹೊತ್ತಿಗೆ ಬರಹದಲ್ಲಾಗಲೀ ಪುರೋಹಿತರ ನೆನಪಿನಲ್ಲಾಗಲೀ ಉಳಿದಿದ್ದ ಪ್ರಮಾಣಾವಳಿ ಎಲ್ಲವನ್ನೂ ಸಮಗ್ರವಾಗಿ ಪುನರುಜ್ಜೀವನಗೊಳಿಸಲು ಸಮರ್ಥರಾದರು. ಎರಡನೆಯ ಶಾಹಪೂರ್ (4ನೆಯ ಶತಮಾನ) ರಾಜನ ಕಾಲದಲ್ಲಿ ಇದರ ಕಟ್ಟಕಡೆಯ ಪರಿಷ್ಕರಣ ನಡೆದು ಮತಕ್ಕೆ ಸಂಬಂಧಪಡದ ವೈದ್ಯ, ಜ್ಯೋತಿಷ ಮತ್ತು ಭೂಗೋಳಗಳ ವಿಷಯಗಳನ್ನೂ ಒಳಗೊಂಡಿದ್ದ ಸಸ್ಸೇನಿಯನ್ ಪ್ರಮಾಣಾವಳಿ ಒಂದು ಸ್ಥಿರರೂಪಕ್ಕೆ ಬಂತು. ದೀನ್ ಕರ್ದ್ ಎಂಬ 9ನೆಯ ಶತಮಾನದ ಪಹ್ಲವಿ ವಿಶ್ವಕೋಶ, ಈ ಎರಡನೆಯ ಪರಿಷ್ಕರಣದಲ್ಲೂ 21 ನಾಸ್ಕುಗಳಿದ್ದುವೆಂದೂ ಅವುಗಳಲ್ಲಿ 20 ಮೂಲ ಪ್ರಮಾಣಗಳಿಗೆ ಸರಿಹೊಂದುತ್ತಿದ್ದುವೆಂದೂ ತಿಳಿಸುತ್ತದೆ.

ಆದರೆ ಈ ಪುನರುದ್ಧೃತ ಗ್ರಂಥ ಮಹಮ್ಮದೀಯರು ಇರಾನಿನೊಳಕ್ಕೆ ನುಗ್ಗಿದಾಗ ತುಂಬ ಭಂಗಕ್ಕೆ, ಅಲೆಕ್ಸಾಂಡರನ ದಂಡಯಾತ್ರೆಯ ಸಮಯದಲ್ಲಿ ಆದುದಕ್ಕಿಂತಲೂ ಹೆಚ್ಚಾದ ಭಂಗಕ್ಕೆ ಒಳಗಾಯಿತು. ನಾಶಕ್ಕೆ ಪಕ್ಕಾಗದೆ ಶೇಷವುಳಿಯಿತೋ ಅದನ್ನು ಕೆಲವು ಜರತುಷ್ಟ್ರಾನುಯಾಯಿಗಳು, ಎಂದರೆ, ಇರಾನಿನಲ್ಲಿ ಉಳಿದುಕೊಂಡ ಗಾಬ್ರರೂ ಭಾರತದ ಪಶ್ಚಿಮ ತೀರದಲ್ಲಿ ಆಶ್ರಯ ಪಡೆದ ಪಾರಸಿಗಳೂ ಕಾಪಿಟ್ಟುಕೊಂಡರು. ಈಗಿನ ಅವೆಸ್ತ ಈ ಅವಶೇಷಗಳ ತಳಹದಿಯ ಮೇಲೆ ನಿಂತಿದೆ. ಆದುದರಿಂದ ಬಹಳ ಹರಕುಮುರುಕಾಗಿದೆ. ಸಸ್ಸನಿದನ ಪರಿಷ್ಕರಣದ ಮೂರನೆಯ ಒಂದು ಭಾಗ ಮಾತ್ರ ಅದರಲ್ಲಿದೆ ಎಂದು ಊಹಿಸಲಾಗಿದೆ. ಆದರೆ ನಷ್ಟವಾಗಿರುವ ಪರಿಷ್ಕರಣದಲ್ಲಿ ಸಾಮಾನ್ಯವಾಗಿ ಯಾವ ಯಾವ ವಿಷಯಗಳಿದ್ದುವೆಂಬುದು ದೀನ್ ಕರ್ದ್ ಎಂಬ ಗ್ರಂಥದಲ್ಲಿನ ವಿವರಗಳಿಂದ ನಮಗೆ ತಿಳಿದು ಬರುತ್ತದೆ.

ಅವೆಸ್ತದ ಪುಸ್ತಕಗಳನ್ನು ಈ ಮುಂದಿನಂತೆ ವರ್ಗೀಕರಿಸುವುದು ರೂಢಿ : 1. ಗಾಥೆಗಳು 2. ಯಸ್ನ 3. ವೀಸ್ ಪರೆಡ್ 4. ಯಷ್ಟ್‌ಗಳು 5. ವೆಂದಿದಾದ್ ಮತ್ತು 6. ಲಘುಸ್ತುತಿಗಳು ಹಾಗೂ ಅಸಮಗ್ರ ಲೇಖನಗಳು. ಭಾಷೆ ಮತ್ತು ಛಂದಸ್ಸುಗಳ ತಳಹದಿಯ ಮೇಲೆ ಕಟ್ಟಿರುವ ಕಾಲಾನುಕ್ರಮದ ದೃಷ್ಟಿಯಿಂದ ಈ ಗ್ರಂಥಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ: 1. ಗಾಥೆಗಳು, ಯೆಙ್‌ಹೆ ಹಾತಂ ಪ್ರಾರ್ಥನೆ ಹಳೆಯ ಗಾಥೆಯ ಉಪಭಾಷೆಯೊಂದರಲ್ಲಿ ಬರೆದಿರುವ ಒಂದು ಲೇಖನ ಸಮುದಾಯವನ್ನೊಳಗೊಂಡಿರುವ ಯಸ್ನ ಹಾಪ್ತನ್ ಹಾಯಿತಿ 2. ಈಚಿನ ಉಪಭಾಷೆಯೊಂದರಲ್ಲಿ ರಚಿತವಾದ ಕಿರಿಯ ಅವೆಸ್ತ ಎಂಬ ಮಿಕ್ಕ ಭಾಗ.

**1. ಗಾಥೆಗಳು :** ಗಾಥೆಗಳಲ್ಲಿ ಅವೆಸ್ತದ ಅತ್ಯಂತ ಪ್ರಾಚೀನ ಭಾಗಗಳಿವೆ. ಜರತುಷ್ಟ್ರನ ಜೀವಿತಕಾಲಕ್ಕೆ ಅವು ಸಂಬಂಧಿಸಿವೆ. ನೇರ ಆತನ ಬಾಯಿಂದ ಬಂದ ನುಡಿಗಳಿವು. ಈಚಿನ ಅವೆಸ್ತಕ್ಕಿಂತ ಅವು ಭಾಷೆಯಲ್ಲೂ ವಿಷಯಗಳಲ್ಲೂ ಭಿನ್ನವಾಗಿರುವುವಲ್ಲದೆ ಅವನ್ನು ಅರ್ಥಮಾಡಿಕೊಳ್ಳುವುದೂ ಕೊಂಚಮಟ್ಟಿಗೆ ಕಷ್ಟವಾಗಿದೆ. ಜರತುಷ್ಟ್ರನ ದಿವ್ಯದರ್ಶನಗಳನ್ನೂ ಉಪದೇಶಗಳನ್ನೂ ಗಾಥೆಗಳು ಒಳಗೊಂಡಿವೆಯಾದ ಕಾರಣ ಆ ಮತದ ಪ್ರಾಚೀನತಮರೂಪ ನಮಗಲ್ಲಿ ದೊರಕುತ್ತದೆ. ಸತ್ಯವನ್ನರಸುತ್ತ ಜರತುಷ್ಟ್ರ ತನ್ನ ಮನೆಯನ್ನು ಬಿಟ್ಟು ಹೊರಟ ಹತ್ತು ವರ್ಷಗಳಾದ ಮೇಲೆ ಅಹುರಮಜ್ದ ಒಬ್ಬನೇ ಏಕಮಾತ್ರ ದೈವವೆಂಬ ತಿಳಿವಳಿಕೆ ಆತನ ಮನಸ್ಸಿಗೆ ಹೊಳೆಯಿತು. ಈ ದೈವಕ್ಕೆ ಸಹಾಯಕರಾಗಿ ಅಮೇಷ ಸ್ಪೆಂಟಾ ಎಂಬ ಆರು ಮಂದಿಯ ಸಲಹಾಮಂಡಲಿಯಿದೆ. ಆ ಧರ್ಮದ ಮತ್ತೊಂದು ವೈಶಿಷ್ಟ್ಯವೇನೆಂದರೆ, ಅದು ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ಕಾಲ ಹುಟ್ಟಿದಂದಿನಿಂದ ಹೋರಾಟವಿದೆ ಎಂಬ ನೈತಿಕದ್ವೈತ ಮತವನ್ನು ಎತ್ತಿ ಹಿಡಿಯುತ್ತದೆ. ಈ ಹೋರಾಟದಲ್ಲಿ ಮನುಷ್ಯನ ಪಾತ್ರ ಬಹುಮುಖ್ಯವಾದುದೆಂದು ಜರತುಷ್ಟ್ರನ ಅಭಿಪ್ರಾಯ. ಸ್ವತಂತ್ರಕರ್ತನಾಗಿ ಆತ ಯಾವ ಪಕ್ಷವನ್ನು ಹಿಡಿಯಬೇಕೆಂದು ನಿರ್ಣಯಿಸಲು ತಕ್ಕವನಾಗಿದ್ದಾನೆ, ಒಳ್ಳೆಯದರ ಕಡೆಗಿದ್ದುಯ ಕೊಂಡು ಆತ ದೈವಸಾಮ್ರಾಜ್ಯದ ವಿಸ್ತರಣ, ಕೆಟ್ಟದ್ದರ ಮೇಲೆ ಒಳ್ಳೆಯದರ ಅಂತ್ಯವಿಜಯಕ್ಕೂ ನೆರವಾಗಬಲ್ಲ. ಜರತುಷ್ಟ್ರನ ಧರ್ಮ ಪ್ರಾಣಿವಧೆ, ಹೋಮ ಮೊದಲಾದ ಯಜ್ಞಗಳನ್ನು ಬೋಧಿಸುವುದಿಲ್ಲ; ತಪಶ್ಚರ್ಯೆಯನ್ನು ಒಪ್ಪುವುದಿಲ್ಲ; ಅಲ್ಲದೆ ಐಶ್ವರ್ಯ ಸಂಪನ್ನರಾಗಲು ಎಲ್ಲರೂ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತದೆ. ನೆಲವನ್ನು ಉಳುವುದೂ ದನಕರುಗಳನ್ನು ಸಾಕುವುದೂ ಸತ್ಕರ್ಮವೆಂದೂ ಋದ್ಧಿಮೂಲವೆಂದೂ ಸಾರುತ್ತದೆ. ಗಾಥೆಗಳಲ್ಲಿ ಜರತುಷ್ಟ್ರ ಮನುಷ್ಯರೂಪನಾಗಿ ಕಂಡುಬರುತ್ತಾನೆ. ಆತನೊಂದಿಗೆ ಅಹುರಮಜ್ದ ಸ್ನೇಹಿತನೊಂದಿಗೆ ಸ್ನೇಹಿತನು ಹೇಗೋ ಹಾಗೆ ಮಾತಾಡುತ್ತಾನೆ. ಮನುಷ್ಯವರ್ಗಕ್ಕೆ ಸತ್ಯವನ್ನು ತಿಳಿಸಲು ದೇವರು ತನ್ನನ್ನೇ ಆರಿಸಿಕೊಂಡಿದ್ದಾನೆ ಎಂದು ಪ್ರವಾದಿಯ ಅಪ್ರತಿಹತವಾದ ನಂಬುಗೆ. ಆದರೆ ದೇವರ ಸಂದೇಶವನ್ನು ಹರಡುವುದು ಆತನಿಗೆ ಅಷ್ಟು ಸುಲಭವಾದ ಕೆಲಸವಾಗಲಿಲ್ಲ. ಜರತುಷ್ಟ್ರನನ್ನು ಆತನ ಕುಲದವರೇ ಸ್ಥಳದವರೇ ಪಟ್ಟುಹಿಡಿದು ಎದುರಿಸಿದರು. ಆದರೆ ಕಟ್ಟಕಡೆಗೆ ಆತ ಪೂರ್ವ ಇರಾನಿನ ಕವಿ ವಿಷ್ಟಾಸ್ಪ ಎಂಬ ಉದಾರನಾದ ರಾಜಪುತ್ರನನ್ನು ತನ್ನ ಕಡೆಗೆ ಒಲಿಸಿಕೊಳ್ಳುವುದರಲ್ಲಿ ಜಯಶೀಲನಾದ. ಹೀಗೆ ಜರತುಷ್ಟ್ರ ತನ್ನ ಜೀವಿತಾವಧಿಯಲ್ಲೇ ತನ್ನ ಗೆಲವನ್ನು ಕಂಡ.

**2. ಯಸ್ನ :** ಪೂಜಾವಿಧಿಯನ್ನೊಳಗೊಂಡ ಮುಖ್ಯ ಕೃತಿ (ಯಸ್ನ=ಯಜ್ಞ). 72 ಹಾಯಿತಿ (ಅಧ್ಯಾಯ) ಗಳಿವೆ. ಅವುಗಳಲ್ಲಿ ಸಮಸ್ತ ದೇವತೆಗಳನ್ನೂ ಆಹ್ವಾನಿಸುವ ಗೀತೆಗಳೂ ಪ್ರಾರ್ಥನಾಪದ್ಯಗಳೂ ಇವೆ. ಯಾಷ್ಟ್‌ಗಳಲ್ಲಾದರೋ ಒಂದೊಂದು ದೇವತೆಯನ್ನೇ ಪ್ರತ್ಯೇಕವಾಗಿ ಕುರಿತ ಸ್ತೋತ್ರಗಳಿವೆ. ಪೂಜಾಕಲ್ಪದಲ್ಲಿ ಯಜ್ಞದ ನಡುವೆ ಗಾಥೆಗಳನ್ನು ಹಾಡುತ್ತಾರೆ. ಬಗೆಬಗೆಯ ಯಜ಼ತರ ಹೆಸರುಗಳೂ ವಿಶೇಷಣಗಳೂ ಮತ್ತು ಯಜ಼ಮೈದೆ (ಪೂಜಿಸುವೆವು) ಎಂಬ ಪದವೂ ಅನೇಕ ಬಾರಿ ಪುನರಾವರ್ತಿತವಾಗುವುದು ಯಸ್ನದ ವೈಶಿಷ್ಟ್ಯ. ಜರತುಷ್ಟ್ರನಿಗೆ ಹಓಮದ ದಿವ್ಯದರ್ಶನವಾದುದನ್ನು ವರ್ಣಿಸುವ ಮತ್ತು ಹಓಮವನ್ನು ಒಂದು ವನಸ್ಪತಿಯಂತೆಯೂ ಒಂದು ದೇವತೆಯಂತೆಯೂ ಸ್ತುತಿಸುವ ಹಓಮ ಯಷ್ಟ್ ಎಂಬುದು ಯಸ್ನದಲ್ಲಿ (9–11) ಅಂತರ್ಗತವಾಗಿದೆ. ಯಸ್ನಗಳಲ್ಲೂ ಯಷ್ತಗಳಲ್ಲೂ ಇತ್ತೀಚೆಗಿನ ಒಂದು ಸೃಷ್ಟಿ ನಮಗೆ ಕಂಡುಬರುತ್ತದೆ. ಜರತುಷ್ಟ್ರನ ಪರಿಷ್ಕರಣಗಳಿಗೆ ಹಿಂದೆ ಇರಾನಿನಲ್ಲಿ ಪ್ರಚಲಿತವಾಗಿದ್ದ ಮತಾಂಶಗಳಲ್ಲಿ ಕೆಲವಕ್ಕೆ ಇಲ್ಲಿ ಆಸ್ಪದ ದೊರೆತಿದೆ. ಪ್ರಾಚೀನರಾದ ಮಿಥ್ರನಂಥ ದೇವತೆಗಳು; ಜಲ, ಅಗ್ನಿ ಮತ್ತು ಭೂಮಿಯಂಥ ಭೂತಗಳು, ಸಂರಕ್ಷಕರೆನಿಸುವ ಮೃತರ ಆತ್ಮಗಳು ಇದರಲ್ಲಿ ಗೌರವಸ್ಥಾನ ಪಡೆದಿವೆ. ಹಓಮದ ಪೂಜಾವಿಧಿ ಪುನರುದ್ಧೃತವಾಗಿದೆ.

**3. ವೀಸ್ ಪರೆಡ್ :** 24 ಅಧ್ಯಾಯಗಳನ್ನೊಳಗೊಂಡ ಈ ಭಾಗ, ಸಮಸ್ತ ಪ್ರಭುಗಳಿಗೂ ಎಂದರೆ ನಭದ ಹಾಗೂ ನೆಲದ ಸಮಸ್ತ ಭೂತಗಳ ಪ್ರಭುಗಳಿಗೂ ನೀರಿನ ತಳದಲ್ಲಿರುವ ಹಾಗೂ ನೆಲದ ಮೇಲೆ ಜೀವಿಸುವ ಸಮಸ್ತಕ್ಕೂ ಒಡೆಯರಾಗಿರುವರೆಲ್ಲರಿಗೂ ಮತ್ತಿತರರಿಗೂ ಮೊರೆಗೊಡುವ ಗೀತಗಳ ಆಕರವಾಗಿದೆ.

**4. ಯಷ್ಟ್‌ಗಳು :** ಮೂಲ ಪ್ರಮಾಣಗ್ರಂಥದ 14ನೆಯ ನಾಸ್ಕಿಗೆ ಅಪರೂಪವಾಗಿದೆ. ಸಾಮಾನ್ಯವಾಗಿ ಅಷ್ಟಾಕ್ಷರವುಳ್ಳ ಪದ್ಯಗಳ ರೂಪದಲ್ಲಿದೆ. ಅಹುರಮಜ್ದ, ಮಿಥ್ರ , ಹಓಮ, ಅರ್ದ್‌ವೀ, ಸುರಾ, ಅನಾಹಿತಾ, ಸ್ರಓಷಾ ಮತ್ತು ಇತರ ಅನೇಕ ದೇವತೆಗಳ ಗುಣಚರಿತೆಗಳನ್ನು ಕುರಿತ 21 ಸ್ತೋತ್ರಗಳು. ಇವರ ಪೈಕಿ ಕೆಲವರು ವೇದದಲ್ಲಿ ಬರುವ ದೇವತೆಗಳಿಗೆ ಸಮಾನವಾಗಿದ್ದಾರಾದುದರಿಂದ ಇವರನ್ನು ಇಂಡೊ–ಇರಾನಿಯನ್ನರ ಮೂಲ ದೇವತೆಗಳೆಂದು ಹೇಳಬಹುದು. ಆದರೆ ಮಿಕ್ಕವರು ತಾವು ಇರಾನಿಯನ್ನರೇ ಎನ್ನಿಸಿಕೊಳ್ಳುವಷ್ಟು ವೈಲಕ್ಷಣ್ಯವನ್ನು ಪಡೆದಿದ್ದಾರೆ. ಇವುಗಳ ಪೈಕಿ ಕೆಲವು ಸ್ತೋತ್ರಗಳಿಗೆ ಕೆಟ್ಟ ಮಾಟಗಾತಿಯರನ್ನು ಕೊಲ್ಲುವ ಮಾಯಾಶಕ್ತಿಯುಂಟೆಂಬ ನಂಬಿಕೆಯಿದೆ. ಜ್ವರವನ್ನು ಹೋಗಲಾಡಿಸುವುದಕ್ಕೂ ಸಾವು ಹಾಗೂ ವಿಪತ್ತುಗಳನ್ನು ಓಡಿಸುವುದಕ್ಕೂ ಅವು ಸಮರ್ಥವಾಗಿವೆ. ಯಷ್ಟ್‌ಗಳ ಪ್ರಶಸ್ತಿಯನ್ನು ಹೆಚ್ಚಿಸಲು ಅವು ಜರತುಷ್ಟ್ರನಿಗೂ ಅಹುರಮಜ್ದನಿಗೂ ನಡೆದ ಸಂಭಾಷಣೆ ಎಂದು ಭಾವಿಸಲಾಗಿದೆ. ಹಳೆಯ ಪುರಾಣಗಳ ಭಾಗಗಳನ್ನೂ ಫಿರ್ದೂಸಿ ತನ್ನ ಷಹನಾಮ ಎಂಬ ಗ್ರಂಥದಲ್ಲಿ ಸಮಗ್ರರೂಪವನ್ನು ಕೊಟ್ಟಿರುವ ಐತಿಹಾಸಿಕ ಕಥೆಗಳನ್ನೂ ತಮ್ಮಲ್ಲಿ ಕಾಪಿಟ್ಟುಕೊಂಡು ಬಂದಿವೆಯಾದುದರಿಂದ ಯಷ್ಟ್‌ಗಳಿಗೊಂದು ವಿಶಿಷ್ಟವಾದ ಪ್ರಾಮುಖ್ಯವಿದೆ.

**5. ವೆಂದೀದಾದ್ :** ಆಧುನಿಕ ಅವೆಸ್ತದಲ್ಲಿ ಈ ಪುಸ್ತಕವೊಂದೇ ಸಸ್ಸನಿದ್ ಪರಿಷ್ಕರಣದ 19ನೆಯ ನಾಸ್ಕಿಗೆ ಬಹುವಾಗಿ ಸರಿಹೊಂದುತ್ತದೆ. ಅದರ ವೀ–ದಏವೋ–ದಾತ (ದಾನವರನ್ನು ದಮನ ಮಾಡುವ ನೀತಿ) ಎಂಬ ಹೆಸರೇ ಸೂಚಿಸುವಂತೆ, ಮುಖ್ಯವಾಗಿ ಅದೊಂದು ನ್ಯಾಯನಿಬಂಧನೆಗಳ ಗ್ರಂಥ. ಆದರೆ ಪಾರಸಿಕ ಧಾರ್ಮಿಕ ವಿಧಿಗಳಲ್ಲಿ ಅವುಗಳನ್ನು ಯಸ್ನ ಮತ್ತು ಗಾಥೆಗಳ ಜತೆಗೆ ಪಠಿಸುತ್ತಾರೆ. ಅದರಲ್ಲಿ ಸಂಶುದ್ಧಿಯ ಬಗೆಗೆ ಪ್ರಾಚೀನ ಪುರೋಹಿತರ ದೃಷ್ಟಿಗಳೆಂಥವು ಎಂಬುದರ ವಿವರಣೆಯಿದೆ. ಸ್ತ್ರೀ ಪುರುಷರು ಮಾತ್ರವಲ್ಲ, ಮನೆ, ಬೆಂಕಿ ಮತ್ತು ನೀರು ಅಶುದ್ಧವೆಂದು ಅವರೆಣಿಕೆ. ಹೊಡೆದಾಟ, ಒಪ್ಪಂದಗಳನ್ನು ಮುರಿಯುವುದು, ನೀತಿಗೆಟ್ಟು ಒಡಗೂಡುವುದು, ಮೈಯಿಳಿಸಿಕೊಳ್ಳುವುದು ಇತ್ಯಾದಿ ಅನೇಕ ಅನೀತಿಗಳಿಗೆ ಅದು ಶಿಕ್ಷೆಗಳನ್ನು ವಿಧಿಸುತ್ತದೆ. ಆಪಾದನೆಗೊಳಗಾದವನಿಗೆ ಆಗಬೇಕಾದ ಶಿಕ್ಷೆ ಮತ್ತು ಅವನು ತೆರಬೇಕಾದ ದಂಡ ಇವುಗಳು ಅವನ ಸಾಮಾಜಿಕ ಸ್ಥಾನವನ್ನು ಅವಲಂಬಿಸಿರುತ್ತವೆ. ಕುಟುಂಬಜೀವನ, ವ್ಯವಸಾಯ ಮತ್ತು ನಿತ್ಯದ ದುಡಿಮೆ ಇವು ಕೇಡನ್ನು ದುರ್ಬಲಗೊಳಿಸುತ್ತವೆ ಎಂದು ಹೇಳಿ ಅವುಗಳನ್ನು ಅದು ಶ್ಲಾಘಿಸುತ್ತದೆ. ವೆಂದೀದಾದ್ ಎಂಬುದು ಈ ಕಾರಣದಿಂದಾಗಿ ಪ್ರಾಚೀನ ಇರಾನಿಗಳ ನಡೆವಳಿಕೆಗಳ ಮತ್ತು ನಂಬಿಕೆಗಳ ತಿಳಿವಳಿಕೆಗೆ ಬಹುಮುಖ್ಯ ಗ್ರಂಥವಾಗಿದೆ. ನ್ಯಾಯ ನಿಬಂಧನೆಗಳ ಪುಸ್ತಕವಾಗಿರುವುದರ ಜೊತೆಗೆ, ವೆಂದೀದಾದ್ ಸೃಷ್ಟಿಯ ಕಥೆ, ಅಹುರಮಜ್ದ ಈ ಮತವನ್ನು ಯಾರಿಗೆ ಬೋಧಿಸಿದನೋ ಮತ್ತು ಯಾರಿಂದ ಈ ಭೂಮಿ ಮನುಷ್ಯರಿಗೂ ಪಶುಗಳಿಗೂ ವಿಸ್ತೃತವಾಯಿತೋ ಅಂಥ ಯಿಮ ಎಂಬಾತನ ಕಥೆ, ದುರ್ಭರವಾದ ಚಳಿಗಾಲದ ಮತ್ತು ಪ್ರಳಯಪ್ರವಾಹದ ಕಥೆ–ಇವುಗಳನ್ನು ಒಳಗೊಂಡಿದೆ.

**6. ಲಘುಸ್ತುತಿಗಳು :** ಇವಕ್ಕೂ ಮತೀಯ ವಿಧಿಗಳಲ್ಲಿ ಸ್ಥಾನವಿಲ್ಲ. ಜೀವನದ ಕೆಲವು ಘಟನೆಗಳ ಸಂದರ್ಭಗಳಲ್ಲಿ ಅಥವಾ ನಿತ್ಯದ ಕೆಲವು ಸಮಯಗಳಲ್ಲಿ ಪಠಿಸುವಂಥ ಸ್ತುತಿಗಳು ಮತ್ತು ಸೂತ್ರಗಳು–ನೈಷ್‌ಗಳೆಂಬುವು ಇವುಗಳಲ್ಲಿ ಶ್ರೇಷ್ಠತಮವೆನಿಸಿವೆ. ಅವು ಸೂರ್ಯ, ಮಿಥ್ರ, ಚಂದ್ರ, ಜಲ ಮತ್ತು ಅಗ್ನಿ ಇವರನ್ನು ಕುರಿತ ಚಿಕ್ಕ ಸ್ತೋತ್ರಗಳು. ಕೆಲವು ನಿಯತಗಳಿಗೆ ಗಳಲ್ಲಿ ಪ್ರತಿನಿತ್ಯವೂ ಇವುಗಳಲ್ಲಿ ಬಹು ಭಾಗವನ್ನು ಪಠಿಸುತ್ತಾರೆ. ಅಹುರಮಜ್ದ ಮತ್ತು ಇತರ ದೇವತೆಗಳ ಪರವಾದ ಗಾಹ್‌ಗಳೆಂಬ ಸ್ತೋತ್ರಗಳು ದಿನದ ಐದು ಭಾಗಗಳಲ್ಲೂ ಪಠಿಸಲ್ಪಡುತ್ತವೆ. ತಿಂಗಳ 30 ದಿನಗಳಿಗೂ ಅಧಿಪತಿಗಳಾದ ದೇವತೆಗಳನ್ನು ಕುರಿತ ಸ್ತೋತ್ರಗಳಿಗೆ ಸೀರೋಜ಼ಾಗಳೆಂದು ಹೆಸರು. ಆಫ್ರೀನ್‌ಗಾನ್ ಎಂಬುವು ದೇವತೆಯನ್ನೋ ಭೂತವನ್ನೋ ಆಹ್ವಾನಿಸಿ ಹರಕೆಯ ಕಾಣಿಕೆಗಳನ್ನೊಪ್ಪಿಸುವಾಗ ಹೇಳುವ ಹಾರೈಕೆಯ ನುಡಿಗಳು.

ಇವುಗಳ ಜೊತೆಗೆ ನಷ್ಟವಾಗಿರುವ ಅವೆಸ್ತ ಗ್ರಂಥಗಳಿಂದ ಉದ್ಧೃತವಾದ ಕೆಲವು ಪಾಠಗಳು ಪಹ್ಲವೀ ಸಾಹಿತ್ಯದಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ನಿರಂಗಿಸ್ತಾನ್ ಎಂಬ ಮೂರು ಅಧ್ಯಾಯಗಳುಳ್ಳ ಮತಾಗಮಗಳ ಕೃತಿ ಮುಖ್ಯವಾದುದು. ನಷ್ಟವಾಗಿರುವ ಅವೆಸ್ತ ಗ್ರಂಥಗಳಲ್ಲಿನ ಶಬ್ದಗಳ ಮತ್ತು ಶಬ್ದಪುಂಜಗಳ ಪಟ್ಟಿಯನ್ನು ಕೊಟ್ಟಿರುವ ಫ್ರಹರಿಗ್ ಇ ಓಈಮ್ ಏವಕ್ ಎಂಬ ಅವೆಸ್ತ–ಪಹ್ಲವಿ ಅರ್ಥಕೋಶವನ್ನು ಇಲ್ಲಿ ಹೆಸರಿಸಬಹುದು.

ಸಸ್ಸನಿಯನ್ ಕಾಲದಲ್ಲೇ ಅವೆಸ್ತ ದುರ್ಗ್ರಾಹ್ಯವೆನಿಸಿತು. ಆದುದರಿಂದ ಆ ಪಾಠದ ಪಹ್ಲವಿಯ ರೂಪಾಂತರ ಆವಶ್ಯಕವೆನಿಸಿತು. ಸಸ್ಸನಿಯನ್ ಕಾಲದಲ್ಲಿ ಅವೆಸ್ತದ 19 ನಾಸ್ಕಗಳನ್ನೂ ಪಹ್ಲವಿಗೆ ಶಬ್ದಶಃ ಭಾಷಾಂತರಿಸಲಾಯಿತೆಂದು ಹೇಳಲಾಗಿದೆ. ಈ ಅನುವಾದದಲ್ಲಿ ಸಮಸ್ತ ಯಸ್ನಗಳ ಪೈಕಿ ಒಂದೇ ಒಂದು ಮಾತ್ರ, ವೀಸ್ ಪೆರೆಡ್ ವೆಂದೀದಾದ್ ಮತ್ತು ಕೆಲವು ಯಷ್ತಗಳು ಈಗ ಉಪಲಬ್ಧವಾಗಿವೆ. ಈ ಭಾಷಾಂತರವನ್ನು ಸಂಪೂರ್ಣವಾಗಿ ನೆಚ್ಚಿಕೊಂಡರೆ ಅವೆಸ್ತದ ಪರಿಜ್ಞಾನ ಆಗುವುದಿಲ್ಲವಾದರೂ ಅದನ್ನು ಅರ್ಥಮಾಡಿಕೊಳ್ಳಲು ಅನೇಕ ವಿಧದಲ್ಲಿ ಇದು ನೆರವಾಗುವುದೆಂದೆಣಿಸಿ ಇದನ್ನು ಬಿಡದೆ ಪರಾಮರ್ಶಿಸುತ್ತಾರೆ. ಈ ಪಹ್ಲವಿಯ ಅನುವಾದದ ಅನೇಕ ಭಾಗಗಳನ್ನು ಭಾರತದಲ್ಲಿ ವಾಸಮಾಡುವ ಕೆಲವು ಪಾರ್ಸಿಪುರೋಹಿತರು ಸಂಸ್ಕೃತಕ್ಕೆ ಪರಿವರ್ತಿಸಿದ್ದಾರೆ. ಅವರ ಪೈಕಿ ಸು. 12ನೆಯ ಶತಮಾನದದ್ದು. ನೆರ್‌ಯೊಸಂಗ್ ಪ್ರಮುಖ.

ಅವೆಸ್ತದ ಕೈ ಬರೆಹದ ಪ್ರತಿಗಳನ್ನು, ಆ ಲಿಪಿಯ ಗೋಪ್ಯವನ್ನು ಬಿಡಿಸಿ ಆ ಗ್ರಂಥಗಳನ್ನು ಪಾಶ್ಚಾತ್ಯ ಗಮನಕ್ಕೆ ತಂದ ಕೀರ್ತಿ ಆಂಕ್ವೆತಿಲ್ ದುಪೆರ್‍ರಾನ್ ಎಂಬ ಫ್ರೆಂಚ್ ವಿದ್ವಾಂಸನಿಗೆ ಸಲ್ಲುತ್ತದೆ. ಅವನ ತರುವಾಯ ಅನೇಕ ವಿದ್ವಾಂಸರು ಅವೆಸ್ತವನ್ನು ವ್ಯಾಸಂಗ ಮಾಡಿದ್ದಾರೆ. ಅವರ ಪೈಕಿ ಚುಕ್ಕಿಯಂತೆ ಹೊಳೆವ ಬರ್‌ನೂಫ್, ವೆಸ್ಟರ್‌ಗಾರ್ಡ, ಸ್ಪಿಗೆಲ್‌ಗೀಗರ್, ರಾತ್, ಹೌಗ್, ಬಾರ್‌ತೊಲೋಮಿವೆಸ್ಟ್, ಮಿಲ್ಸ್, ಡಾರ್‌ಮೆಸ್ಟರ್ ಮತ್ತು ಗಲ್‌ಡ್‌ನರ್ ಇಂಥ ಹೆಸರುಗಳಿವೆ. ಈ ಪ್ರಾಚೀನ ಗ್ರಂಥಗಳ ವ್ಯಾಸಂಗ ಈಗಲೂ ಬಿರುಸಾಗಿ ನಡೆಯುತ್ತಿದೆ.

(ಎಂ.ಎಂ.ಎ.; ಎಚ್.ಜಿ.ಬಿ.)

**ಅವೆಸ್ತ ಭಾಷೆ :** ಇರಾನಿನ ಅತ್ಯಂತ ಪ್ರಾಚೀನ ಧರ್ಮವಾದ ಜರತುಷ್ಟ್ರ ಧರ್ಮದ ಭಾಷೆ. ಪ್ರಾಚೀನ ಪಾರಸಿಯ ಸಮೀಪಜ್ಞಾತಿಯೂ ಸಂಸ್ಕೃತದ ದೂರಜ್ಞಾತಿಯೂ ಆಗಿದೆ. ಇದು ಮತ್ತು ಪ್ರಾಚೀನ ಪಾರಸಿ ಭಾಷೆಗಳು ಇಂಡೋ ಯುರೋಪಿಯನ್ ಭಾಷಾ ಪಂಗಡದ ಆರ್ಯ ಶಾಖೆಯ ಉಪಶಾಖೆಯಾದ ಇರಾನಿ ಭಾಷೆಯ ಪ್ರಾಚೀನ ಮಜಲಿಗೆ ಸಂಬಂಧಿಸಿವೆ.

ಅವೆಸ್ತ ಸಾಹಿತ್ಯ ಆ ಭಾಷೆಯ ಎರಡು ಐತಿಹಾಸಿಕ ಮಜಲುಗಳನ್ನು ತೋರಿಸುತ್ತದೆ. ಆ ಪ್ರಾಚೀನ ಮಜಲನ್ನು ಗಾಥಿಕ್ ಅವೆಸ್ತ ಎಂದು ಕರೆಯುತ್ತಾರೆ. ಇರಾನಿನ ಪ್ರಾಚೀನ ಪ್ರವಾದಿ ಜರತುಷ್ಟ್ರ (ಪ್ರ.ಶ.ಪೂ. ಸು. 600) ಬರೆದ ಗಾಥೆಗಳ (ಅಥವಾ ಮಂತ್ರಗಳ) ಭಾಷೆ ಇದು. ಅನಂತರದ ಮಜಲನ್ನು ಕಿರಿಯ ಅವೆಸ್ತ ಎಂದು ಕರೆಯುತ್ತಾರೆ. ಇದರಲ್ಲಿ ಜರತುಷ್ಟ್ರನ ಪೂರ್ವ ಮತ್ತು ಉತ್ತರವೆನಿಸುವ ನಾನಾ ಪ್ರಕಾರದ ವಿಷಯಗಳು ಅಡಕವಾಗಿವೆ. ಕಿರಿಯ ಅವೆಸ್ತ ಗ್ರಂಥದ ಭಾಷೆ ಒಂದೇ ರೀತಿಯಾಗಿಲ್ಲ. ಅದರಲ್ಲಿ ಪಹ್ಲವಿಯ (ಇರಾನೀ ಭಾಷೆಯ ನಡುವಣ ಮಜಲು) ವ್ಯಾಪಕ ಮಿಶ್ರಣವನ್ನು ಕಾಣಬಹುದು. ಅನೇಕ ಶತಮಾನಗಳ ವರೆಗೆ ಸಮೃದ್ಧವಾಗಿ ಬೆಳೆಸಲಾಗಿದ್ದು, ಅಲೆಕ್ಸಾಂಡರನ ದಾಳಿಯಿಂದಾಗಿ ವಿನಾಶಕ್ಕೆ ತುತ್ತಾದ ಆ ವ್ಯಾಪಕ ಧಾರ್ಮಿಕಸಾಹಿತ್ಯದ ತುಣುಕು ಮಾತ್ರ ಅವೆಸ್ತ ಸಾಹಿತ್ಯದ ಹೆಸರಿನಲ್ಲಿ ಇಂದು ನಮಗೆ ದೊರೆಯುತ್ತಿದೆ. ಪಹ್ಲವಿಯ ಮಿಶ್ರಣಕ್ಕೆ ಇದೇ ಕಾರಣ. ಸಸ್ಸಾನಿದ್ದರ ಆಳ್ವಿಕೆಯಲ್ಲಿ (3ನೆಯ ಶತಮಾನ) ಮಾಡಿದ ಸಂಕಲನ ಇಂದು ನಮಗೆ ಲಭ್ಯವಾಗಿದೆ. ಅದರಲ್ಲಿ ಬೇರೆ ಬೇರೆ ಕಾಲದಲ್ಲಿ ರಚಿಸಲಾಗಿರುವ ಪಠ್ಯಗಳೂ (ಅಪಸ್ತಕ್) ಪಹ್ಲವಿಯಲ್ಲಿ ಬರೆಯಲಾಗಿರುವ ವ್ಯಾಖ್ಯಾನವೂ (ಝಾದ್) ದೊರೆಯುತ್ತವೆ.

ಸಂಸ್ಕೃತದೊಂದಿಗೆ ಹೋಲಿಸಿದರೆ ಅವೆಸ್ತ ಭಾಷೆಯಲ್ಲಿ ಈ ಪ್ರಮುಖ ಲಕ್ಷಣಗಳು ಕಂಡುಬರುತ್ತವೆ :

1. ಸ್ವರಗಳ ಮಾತ್ರೆಯನ್ನು ಹೆಚ್ಚು ಕಡಿಮೆ ಮಾಡಬಹುದು. 2. ಏಕಸ್ವರೀಕರಣ ಪ್ರವೃತ್ತಿ ಕಾಣಬರುತ್ತದೆಯಾದರೂ ಸಂಯುಕ್ತಸ್ವರಗಳು ಇನ್ನೂ ಏಕಸ್ವರಗಳಾಗಿ ಪರಿಣಮಿಸಿಲ್ಲ, 3. ಘೋಷ ಮಹಾಪ್ರಾಣಗಳು ಘೋಷತ್ವ ಕಳೆದುಕೊಂಡಿವೆ. 4. ಸ್ಪರ್ಶಗಳ ಹಿಂದೆ (ಮೊದಲಿಗೆ ಅಘೋಷಗಳಾಗಿದ್ದು ಅನಂತರ ಘೋಷಗಳಾಗಿರುವುವು) (ಡಿ) ಕಾರ ಅಥವಾ ಊಷ್ಮ ಬಂದಾಗ ಅವು (ಸ್ಪರ್ಶಗಳು) ಊಷ್ಮೀಕೃತವಾಗುತ್ತವೆ. 5. ಸ್ವರಗಳ ನಡುವಣ ಸಕಾರ ಹಕಾರವಾಗುತ್ತದೆ. 6. ಘೋಷ ಊಷ್ಮಗಳು ಉಳಿದುಕೊಂಡಿವೆ. 7. ನಾಮಪದ ಮತ್ತು ಕ್ರಿಯಾಪದಗಳ ದ್ವಿವಚನ ರೂಪಗಳನ್ನು ಅಪರೂಪವಾಗಿ ಬಳಸಲಾಗುತ್ತದೆ. 8. ಚತುರ್ಥೀವಿಭಕ್ತಿ ಶೀಘ್ರವಾಗಿ ಕಣ್ಮರೆಯಾಗುತ್ತಿದೆ. 9. ಪಂಚಮೀವಿಭಕ್ತಿ ಏಕವಚನದಲ್ಲಿ ಎಲ್ಲ ಧಾತುಗಳಿಗೂ ಅತ್ ಪ್ರತ್ಯಯವನ್ನು ಸೇರಿಸಲಾಗುತ್ತದೆ. 10. ಸಪ್ತಮೀ ವಿಭಕ್ತಿಯ ರೂಪಗಳಲ್ಲಿ ಆ ಎನ್ನುವ ಉಪಸರ್ಗವನ್ನು ಅಧಿಕ ಪ್ರತ್ಯಯವಾಗಿ ಬಳಸಲಾಗುತ್ತದೆ. 11. ಅನೇಕ ಐತಿಹಾಸಿಕ ರೂಪಗಳನ್ನು ಅದರಲ್ಲೂ ಸ್ತ್ರೀಲಿಂಗ ನಾಮಪದಾತ್ಮಕ ರೂಪಗಳಲ್ಲಿ ಉಳಿಸಿಕೊಳ್ಳಲಾಗಿದೆ. 12. ಕರ್ತೃ, ಕರ್ಮ, ದ್ವಿವಚನ ರೂಪವಾದ ಔ ಅನ್ನುವುದನ್ನು ಬಳಸುವುದೇ ಇಲ್ಲ. 13. ಸಾಮಾನ್ಯ ಮತ್ತು ಅಪೂರ್ಣ ಭೂತಕಾಲಗಳಲ್ಲಿ ಸಾಮಾನ್ಯವಾಗಿ ಆಗಮವನ್ನು ಬಳಸುವುದಿಲ್ಲ. 14. ವಿಶಿಷ್ಟ ಭವಿಷ್ಯತ್ ರೂಪಗಳಿಲ್ಲ. 15. ಮಧ್ಯಮ ಪುರುಷ ಏಕವಚನಾಂತ್ಯ ಸ ಅನ್ನು ಐತಿಹಾಸಿಕ ರೂಪವನ್ನಾಗಿ ಉಳಿಸಿಕೊಳ್ಳಲಾಗಿದೆ. 16. ದ್ವಿತೀಯಕ ಅಥವಾ ಗೌಣ ಸಾಧಿತ ರೂಪಗಳಲ್ಲಿ ಸಮಾಸಪದ ಸಾಮಾನ್ಯವಾಗಿ ಕಾಣಿಸಿಕೊಳ್ಳುವುದಿಲ್ಲ. 17. ಸಾಮಾನ್ಯವಾಗಿ ಸಮಾನಪದ ಎರಡು ಶಬ್ದ ಘಟಕಗಳಿಗಿಂತ ಹೆಚ್ಚು ದೀರ್ಘವಾಗಿರುವುದಿಲ್ಲ.

ಶಬ್ದಕೋಶದ ವಿಷಯದಲ್ಲಿ ಅವೆಸ್ತ ಭಾಷೆಯ ಒಂದು ವೈಲಕ್ಷಣ್ಯ ಎದ್ದುಕಾಣುವಂಥದು. ದ್ವೈತ ತತ್ತ್ವದ ಪ್ರಭಾವದಿಂದ, ಕಣ್ಣು, ತಲೆ ಅಥವಾ ನೋಟ, ನುಡಿದಾಟ ಇತ್ಯಾದಿ ಸಾಮಾನ್ಯ ವಿಷಯಗಳಿಗೂ ಎರಡು ಬಗೆಯ ಶಬ್ದಗಳಿವೆ. ಅಹುರಮಜ್ದನ ಸೃಷ್ಟಿಗೆ ಸಂಬಂಧಪಡುವಂತೆ ಉಪಯೋಗಿಸಬೇಕಾದವು ಒಂದು ವರ್ಗ. ಅವನ ಪ್ರತಿಸ್ಪರ್ಧಿಯಾದ ಅಂಗ್ರಮೈನ್ಯುವಿನ ಸೃಷ್ಟಿಗೆ ಉಪಯೋಗಿಸಲ್ಪಡಬೇಕಾದಂತಹವು ಮತ್ತೊಂದು ವರ್ಗ.

ಅವೆಸ್ತ ಭಾಷೆ ಪಶ್ಚಿಮ ಇರಾನಿಗೆ ಸಂಬಂಧಿಸಿದ್ದೊ ಅಥವಾ ಪೂರ್ವ ಇರಾನಿನದೊ ಎಂಬುದನ್ನು ನಿಶ್ಚಿತವಾಗಿ ಹೇಳುವಂತಿಲ್ಲ. ಅವೆಸ್ತದಲ್ಲಿ ಕಂಡುಬರುವ ಭೌಗೋಳಿಕ ಸಾಕ್ಷ್ಯ ಪೂರ್ವ ಇರಾನಿನತ್ತ ಕೈ ಮಾಡಿ ತೋರಿಸುತ್ತದೆ. ಈಚೆಗೆ ಈ ಭಾಷೆಗೂ ಖ್ವಾರೆಜ್‍ಮಿಯನ್ ಭಾಷೆಗೂ ಸಂಬಂಧವುಂಟೆಂದು ತೋರಿಸಲು ಭಾಷಾಸಾಕ್ಷ್ಯಗಳನ್ನು ಮುಂದಿಡಲಾಗಿದೆ.

ಮೊದಮೊದಲು ಅದು ಯಾವ ಭಾಗಕ್ಕೇ ಸೇರಿದ್ದಾಗಿರಲಿ ಜರತುಷ್ಟ್ರಮತ ಹರಡಿದ ಮೇಲೆ ಆ ಮತದ ಭಾಷೆಯಾಗಿ ಅವನ ಕಾಲಾನಂತರ ಕೆಲವು ಶತಮಾನಗಳ ಪರ್ಯಂತವಾದರೂ ಸಮಗ್ರ ಇರಾನಿನಲ್ಲಿ ಅದರ ವ್ಯಾಸಂಗ ನಡೆದು ಸಮಸ್ತರಿಗೂ ಅದರ ಪರಿಜ್ಞಾನವಿತ್ತು.

ವ್ಯಾಕರಣ, ಛಂದಸ್ಸು ಹಾಗೂ ವಸ್ತು ಇವುಗಳ ದೃಷ್ಟಿಯಿಂದ ಅವೆಸ್ತ ಮತ್ತು ಸಂಸ್ಕೃತ (ವೈದಿಕ) ಭಾಷೆಗಳಿಗಿರುವ ಗಮನಾರ್ಹವಾದ ಸಾಮ್ಯ ಈ ಕೆಳಕಂಡ ಉದ್ಧರಣ, ಅದರ ಸಂಸ್ಕೃತ ಛಾಯೆ, ಅನುವಾದಗಳಿಂದ ಸ್ಪಷ್ಟವಾಗುತ್ತದೆ.

ತಂ ಅಮವನ್ತಮ್ ಯಜತಮ್
ಶೂರಂ ದಮೋಹು ಸವಿಸ್ತಮ್
ಮಿತ್ರಂ ಯಜ್ಯೈ ಜಾವೋತ್ರಬ್ಯೋ.
[ತಂ ಅಮವನ್ತಮ್ ಯಜತಮ್
ಶೂರಂ ಧಾಮಸು ಸವಿಷ್ಠಮ್
ಮಿತ್ರಂ ಯಜ್ಯೈ ಹೋತ್ರಭ್ಯಾನ್ (=ಹೋತೃಭಿಃ)]
ಆ ಅಮವಂತನನು, ಪೂಜ್ಯನನು
ಶೂರನನು ಭೂಧಾಮದೊಳತಿ ಬಲವಂತನನು
ಮಿತ್ರನನು ಹೋತೃಗಳಿಂದರ್ಚಿಪೆನು. (ಎಸ್.ಎಸ್.; ಎಂ.ಎಂ.ಎ.)

**ಅವೈದಿಕ ದೈವವಾದ :** ಮಾನವನನ್ನು ಸೃಷ್ಟಿಸಿ ಅವನಿಗೆ ವಿಚಾರಶಕ್ತಿಯನ್ನು ಕೊಟ್ಟು ಸೃಷ್ಟಿಕರ್ತ ಜಗತ್ತಿನ ವ್ಯಾಪಾರಗಳ ಬಗ್ಗೆ ಉದಾಸೀನನಾಗಿ ಅದರಿಂದ ದೂರನಾಗಿರುವನೆಂದು ಹೇಳುವ ವಾದ. ಈ ವಾದದಲ್ಲಿ ಸೃಷ್ಟಿಕರ್ತನಿಗೂ ಜಗತ್ತಿಗೂ ಅಂಥ ನಿಕಟಸಂಬಂಧ ಕಾಣುವುದಿಲ್ಲ. ಅರಿಸ್ಟಾಟಲನ ಕಾಲಕ್ಕೆ ಇದು ಅಸ್ಪಷ್ಟವಾಗಿ ರೂಪುಗೊಂಡಿತು. ವಿಚಾರಶಕ್ತಿಗೂ ದೈವಶಕ್ತಿಗೂ ನಿಕಟವಾದ ಸಂಬಂಧವಿದೆಯೆಂದೂ ಪರಮಾತ್ಮನನ್ನು ಅರಿಯುವುದಕ್ಕೆ ತಾರ್ಕಿಕಪದ್ಧತಿ ಅಥವಾ ವಿಚಾರಶಕ್ತಿಯೇ ಪ್ರಧಾನವೆಂದೂ ಧರ್ಮಾಧರ್ಮಗಳ ಪ್ರಶ್ನೆಯನ್ನೂ ಪರಮಾತ್ಮನನ್ನು ಆಧ್ಯಾತ್ಮಿಕವಾಗಿ ಸಾಕ್ಷಾತ್ಕರಿಸಿಕೊಳ್ಳುವ ಅಗತ್ಯವನ್ನೂ ಒಪ್ಪಿಕೊಳ್ಳದೆ ಇದು ದೈವವನ್ನು ಪ್ರತಿಪಾದಿಸುತ್ತದೆ. ಅರಿಸ್ಟಾಟಲನ ಅನಂತರ 17–18ನೆಯ ಶತಮಾನಗಳಲ್ಲೂ ಇದು ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರದಲ್ಲಿತ್ತು. ಆಧ್ಯಾತ್ಮಿಕ ಜೀವನಕ್ಕೆ ಈ ವಾದದಿಂದ ಪ್ರೋತ್ಸಾಹವಿಲ್ಲದೆ ಕ್ರಮೇಣ 19ನೆಯ ಶತಮಾನದ ಹೊತ್ತಿಗೆ ಹಿಂದೆ ಸರಿಯಿತು. ಉದಾಸೀನವಾಗಿ ಜಗತ್ತಿನ ಆಗುಹೋಗುಗಳಲ್ಲಿ ಆಸಕ್ತಿ ವಹಿಸದೆ ಇರುವ ದೈವವನ್ನು ಸ್ಪಿನೋಜ಼ನ ಅನಂತರ ಜರ್ಮನಿಯಲ್ಲಿ ಗಯಟೆ ಮೊದಲಾದವರು ನಿರಾಕರಿಸಿದರು. ಜಗತ್ತಿನ ವಿಕಾಸದ ಅರಿವುಂಟಾದಾಗ ಮಾನವ ಈ ವಿಕಾಸಕ್ಕೆ ದೈವವೇ ಕಾರಣವೆಂದೂ ಸೃಷ್ಟಿಮಾಡಿದ ಅನಂತರ ದೈವ ಸುಮ್ಮನೆ ಕೂಡುವುದಿಲ್ಲವೆಂದೂ ಉದಾಸೀನ ಭಾವವನ್ನು ತಾಳುವುದಿಲ್ಲವೆಂದೂ ಆತ ಭಾವಿಸತೊಡಗಿದ.

ಅವೈದಿಕ ದೈವವಾದದಲ್ಲಿ ಒಂದು ಅಂಶ ಗಮನಾರ್ಹ. ಜಡಜಗತ್ತಿಗೆ ಮೀರಿದ ಅದ್ಭುತ ಶಕ್ತಿ ಒಂದಿದೆ. ಅದಕ್ಕೆ ಮಾನವ ಅಧೀನ ಮತ್ತು ಆರಾಧಕ ಎಂದು ಹೇಳಿ ವಿಶ್ವಾತೀತನಾದ ಸೃಷ್ಟಿಕರ್ತನ ಭಾವನೆ ಬೆಳೆಯಲು ಈ ವಾದ ಸಹಾಯ ಮಾಡಿತು.

ಈ ವಾದದ ದೋಷಗಳು ಸ್ಪಷ್ಟವಾಗಿವೆ. ಜೀವನಿಗೆ ಭಗವದನುಗ್ರಹ ಎಷ್ಟು ಅಗತ್ಯ, ಅದು ಯಾವ ರೀತಿ ಆಗುತ್ತದೆ ಎಂಬ ಪ್ರಶ್ನೆಗಳನ್ನು ಇದು ಎತ್ತುವುದೇ ಇಲ್ಲ. ಆಧ್ಯಾತ್ಮಿಕ, ನೈತಿಕ ಮತ್ತು ಧಾರ್ಮಿಕ ಜೀವನಕ್ಕೂ ಸೃಷ್ಟಿಕರ್ತನಿಗೂ ಸಂಬಂಧವನ್ನು ಹೇಳುವುದಿಲ್ಲ. ಮಾನವನ ಆಂತರಿಕ ಜೀವನಕ್ಕಿಂತಲೂ ಅವನ ವಿಚಾರಶಕ್ತಿಗೆ ಅತಿಯಾದ ಪ್ರಾಧಾನ್ಯ ಕೊಡುತ್ತದೆ. ಅದಲ್ಲದೆ ದೈವದ ಸರ್ವಶಕ್ತಿತ್ವ, ಸರ್ವಜ್ಞತ್ವ ಇತ್ಯಾದಿ ಗುಣಗಳಾವುದನ್ನೂ ಹೇಳುವುದಿಲ್ಲ; ಸೃಷ್ಟಿಕರ್ತನ ಹೊಣೆಗಾರಿಕೆಯನ್ನು ಒಪ್ಪುವುದಿಲ್ಲ. ಮಾನವ ವಿಚಾರಶಕ್ತಿಯನ್ನು ಸಂಪೂರ್ಣವಾಗಿ ಅಧೀನದಲ್ಲಿಟ್ಟುಕೊಳ್ಳಬಲ್ಲನೇ ಅವನ ಇಚ್ಛಾಶಕ್ತಿಗೆ ತಡೆಗಳಿಲ್ಲವೇ–ಎಂಬ ಪ್ರಶ್ನೆಗಳನ್ನು ಪರಿಶೀಲಿಸುವುದಿಲ್ಲ. ಮುಖ್ಯವಾಗಿ ಈ ವಾದ ತರ್ಕದಿಂದಲೇ ಈಶ್ವರನ ಅಸ್ತಿತ್ವವನ್ನು ಸಾಧಿಸುತ್ತದೆ. ಆಧ್ಯಾತ್ಮಿಕ ಜೀವನ, ಮತಾಚಾರ್ಯರ ಶಾಸ್ತ್ರೀಯ ವಚನಗಳು ಇವುಗಳಿಂದ ಈಶ್ವರನ ಅಸ್ತಿತ್ವವನ್ನು ಸಾಧಿಸಬಹುದೆಂಬ ಪ್ರಶ್ನೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಭಾರತೀಯ ದರ್ಶನದಲ್ಲಿ ನ್ಯಾಯವೈಶೇಷಿಕ ಸಿದ್ಧಾಂತದಲ್ಲಿ ವೇದವನ್ನು ಒಪ್ಪಿದ್ದರೂ ಭಗವಂತನನ್ನು ತರ್ಕಮಾರ್ಗವೊಂದರಿಂದಲೇ ಅರಿಯಬಹುದೆಂದು ಹೇಳಲಾಗಿರುವುದರಿಂದ ಅದನ್ನು ಅವೈದಿಕ ದೈವವಾದಕ್ಕೆ ಹೋಲಿಸಬಹುದು (ಆದರೆ ಭಾರತೀಯರು ಇದನ್ನು ಅವೈದಿಕದರ್ಶನವೆಂದು ಗಣಿಸುವುದಿಲ್ಲ. ಅವೈದಿಕ ಎಂಬ ಪದಕ್ಕೆ ಅವರು ಬೇರೆ ಅರ್ಥವನ್ನು ಕೊಟ್ಟಿರುತ್ತಾರೆ). (ಎಸ್.ಎಸ್.ಆರ್.)

**ಅವೊಕ್ಯಾಡೊ :** ಲಾರೇಸೀ ಕುಟುಂಬಕ್ಕೆ ಸೇರಿದ ಹಣ್ಣಿನಸಸ್ಯ. ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಇದಕ್ಕೆ ಅಲಿಗೇಟರ್ ಪೇರ್ ಎಂಬ ಹೆಸರಿದೆ. ಕನ್ನಡದಲ್ಲಿ ಬೆಣ್ಣೆಹಣ್ಣಿನ ಗಿಡ. ಸಸ್ಯವೈಜ್ಞಾನಿಕ ಹೆಸರು ಪರ್ಸಿಯ ಅಮೆರಿಕಾನ.

ಅವೊಕ್ಯಾಡೊ ಸಮಶೀತೋಷ್ಣವಲಯದ ಬೆಳೆ. ಇದರ ಬೇಸಾಯಕ್ಕೆ ಸಮುದ್ರಮಟ್ಟದಿಂದ ಹಿಡಿದು 400–1200 ಮೀ ಎತ್ತರದ ಪ್ರದೇಶ ಉತ್ತಮ. ಹೆಚ್ಚು ಉಷ್ಣತೆಯಿರುವ ಪ್ರದೇಶಗಳಲ್ಲಿ ಅವೊಕ್ಯಾಡೊ ಬೇಸಾಯ ಲಾಭದಾಯಕವಲ್ಲ. ವರ್ಷಪೂರ್ತಿ 45–70 ಸೆಂ.ಮೀ ಮಳೆ ಬೀಳುವ ಪ್ರದೇಶಗಳಲ್ಲಿ ಇದರ ಬೇಸಾಯ ಯಶಸ್ವಿಯಾಗುತ್ತದೆ. ನೀರಿನ ಪೂರೈಕೆ ಧಾರಾಳವಿರಬೇಕು. ಫಲವತ್ತಾದ ಮತ್ತು ಜೌಗಿಲ್ಲದ ಎಲ್ಲ ವಿಧವಾದ ಮಣ್ಣುಗಳಲ್ಲೂ ಬೇಸಾಯ ಮಾಡಬಹುದು. ಮೆಕ್ಕಲು ಮತ್ತು ಮರಳುಮಿಶ್ರಿತವಾದ ಮಣ್ಣು ಇದರ ಬೇಸಾಯಕ್ಕೆ ಅತ್ಯುತ್ತಮ.

ಅವೊಕ್ಯಾಡೊ ಸಸ್ಯಗಳನ್ನು ಲಿಂಗ(ಬೀಜ) ಮತ್ತು ನಿರ್ಲಿಂಗ ರೀತಿಗಳಿಂದ ಬೆಳೆಸಬಹುದು. ಕಣ್ಣುಹಾಕುವುದು, ಕಸಿಮಾಡುವುದು, ಲೇಯರ್ ಮಾಡುವುದು ಮುಂತಾದುವು ನಿರ್ಲಿಂಗ ರೀತಿಯ ವಿಧಾನಗಳು.

ಮುಖ್ಯ ಪ್ರಭೇದವಾದ ಪರ್‍ಸಿಯ ಅಮೆರಿಕಾನ, ಅಲ್ಲದೆ ಪರ್ಸಿಯ ಲಿಯೊಗೈನ ಮತ್ತು ಪರ್ಸಿಯ ಇಂಡಿಕ ಎಂಬವೂ ಈ ಬೇಸಾಯದಲ್ಲಿವೆ. ಕೆಲವು ತಳಿಗಳನ್ನು ಸ್ಥಳೀಯ ಹೆಸರುಗಳಿಂದ ಬೆಳೆಯಲಾಗುತ್ತಿದೆ.



ಸಸಿ ನೆಟ್ಟ 6–7 ವರ್ಷಗಳ ಅನಂತರ ಫಲ ಬಿಡಲು ಪ್ರಾರಂಭಿಸುತ್ತದೆ. ಜನವರಿ ತಿಂಗಳಲ್ಲಿ ಹೂವು ಬಿಟ್ಟು ಅನ್ಯಪರಾಗದಿಂದ ಗರ್ಭಧಾರಣೆಗೊಂಡು ಫಲವನ್ನು ಕೊಡುತ್ತದೆ. ಸಾಮಾನ್ಯವಾಗಿ ಜೂನ್ ಜುಲೈ ತಿಂಗಳಲ್ಲಿ ಹಣ್ಣುಗಳು ಸಿಕ್ಕುತ್ತವೆ. ಹಸಿರು ತಳಿಗಳು ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಫಲವನ್ನು ಕೊಡುತ್ತವೆ.

ಅವೊಕ್ಯಾಡೊ ಇಳುವರಿ ಆಯಾ ಪ್ರಭೇದಗಳನ್ನು ಅನುಸರಿಸಿ ವ್ಯತ್ಯಾಸವಾಗುತ್ತದೆ. ಸಣ್ಣ ಗಾತ್ರದ ಫಲದ ಮರಗಳಲ್ಲಿ ಹಣ್ಣುಗಳ ಸಂಖ್ಯೆ ಹೆಚ್ಚು. ಗುಂಡಾಗಿ ಹಣ್ಣು ಬಿಡುವ ತಳಿಗಳು ಶೀಘ್ರವಾಗಿ ಫಲ ಕೊಡುತ್ತವೆ. ಚೆನ್ನಾಗಿ ಬೇಸಾಯ ಮಾಡಿದ ತೋಟಗಳಲ್ಲಿನ ಮರ 50ರಿಂದ 60 ಹಣ್ಣುಗಳನ್ನು ಕೊಡುತ್ತದೆ. ಇಳುವರಿ ಪ್ರತಿವರ್ಷ ವ್ಯತ್ಯಾಸವಾಗುವುದುಂಟು.

ಅವೊಕ್ಯಾಡೊ ಕೊಲಂಬಸನ ಕಾಲಕ್ಕೆ ಪೂರ್ವದಲ್ಲಿಯೇ ಬೇಸಾಯದಲ್ಲಿತ್ತೆಂದು ಹೇಳಲಾಗಿದೆ. ಮೆಕ್ಸಿಕೊ ಅಥವಾ ದಕ್ಷಿಣ ಅಮೆರಿಕ ಇದರ ತೌರುಭೂಮಿ. 1819ರಲ್ಲಿ ಇದನ್ನು ಬೆಂಗಳೂರಿಗೆ ತಂದರೆನ್ನಲಾಗಿದೆ. ಈಗ ಎಲ್ಲೆಡೆಯಲ್ಲೂ ಅವೊಕ್ಯಾಡೊ ವಾಣಿಜ್ಯದೃಷ್ಟಿಯಿಂದ ಹೆಚ್ಚಿನ ಮಹತ್ತ್ವವನ್ನು ಪಡೆದಿದೆ. ಸೀಬೆಯ ಆಕಾರವುಳ್ಳ ಈ ಹಣ್ಣು ತಿರುಳಿನಿಂದ ತುಂಬಿ ಗಾತ್ರದಲ್ಲಿ ದೊಡ್ಡದಾಗಿ ಇರುತ್ತದೆ. ಹಣ್ಣುಗಳ ಉದ್ದಳತೆ 5–12 ಸೆಂಮೀ ವರೆಗೆ ಇದೆ. ಹಣ್ಣಿನಲ್ಲಿ ಒಂದೇ ಬೀಜವಿರುತ್ತದೆ. ಹಣ್ಣಿನ ಓಟೆಯ ಸುತ್ತಲೂ ಇರುವ ತಿರುಳು ಬೆಣ್ಣೆಯಂತೆ ಸ್ನಿಗ್ಧವಾಗಿದ್ದು ಇದರಲ್ಲಿ ಶೇ.30 ಕೊಬ್ಬಿನಂಶ ಇದೆ. ಪಿಷ್ಟದ ಪ್ರಮಾಣವೂ ಹೆಚ್ಚಾಗಿದೆ. ಅವೊಕ್ಯಾಡೊ ಹಣ್ಣಿನಲ್ಲಿರುವಷ್ಟು ಪ್ರೋಟೀನು ಬೇರಾವ ಹಣ್ಣಿನಲ್ಲಿಯೂ ಇರುವುದಿಲ್ಲ. ಅಲ್ಲದೆ, ಅದರಲ್ಲಿ ಜೀವಸತ್ವಗಳ ಪ್ರಮಾಣವೂ ಗಣನೀಯವಾಗಿದೆ. ಆದ್ದರಿಂದ ಇದು ಮಾನವನಿಗೆ ಬೇಕಾಗುವ ಬಹು ಅಮೂಲ್ಯ ಆಹಾರವಸ್ತು. ಅವೊಕ್ಯಾಡೊ ಹಣ್ಣಿನ ತೊಗಟೆಯೂ ಉಪಯುಕ್ತವೆನಿಸಿದೆ. ಅದರಿಂದ ಸುವಾಸನೆಯ ಎಣ್ಣೆಯನ್ನು ಉತ್ಪಾದಿಸುವರು.

ಪರ್ಸಿಯ ಗ್ರಾಟಿಸಿಮ ಎಂಬುದು ಅಮೆರಿಕದ ಉಷ್ಣವಲಯದ ಪ್ರದೇಶದಲ್ಲೂ, ಭಾರತದಲ್ಲೂ ಹೆಚ್ಚಾಗಿ ಬೆಳೆಯುತ್ತದೆ. ಭಾರತಕ್ಕೆ ಇದನ್ನು ಪೋರ್ಚುಗೀಸರು ಮೊದಲು ತಂದರು. ಹಣ್ಣಿನಲ್ಲಿ ಒಂದೇ ಬೀಜವಿದ್ದು ಹಣ್ಣು ತಿರುಳಿನಿಂದ ತುಂಬಿಕೊಂಡಿರುತ್ತದೆ, ಇದನ್ನು ಕೂಡ ಅಲಿಗೇಟರ್‌ಪೇರ್ ಎಂದೇ ಕರೆಯುವರು. ಪರ್ಸಿಯ ಇಂಡಿಕ ಎಂಬ ಪ್ರಭೇದ ಚಿಕ್ಕದೂ ಬಿರುಸಾದುದೂ ಆಗಿದೆ. ಇದನ್ನು ತೋಟಗಳಲ್ಲಿ ಸೌಂದರ್ಯಕ್ಕಾಗಿ ಬೆಳೆಸುತ್ತಾರೆ. *

**ಅವೊಗ್ಯಾಡ್ರೊ, ಅಮೆಡಿಯೊ :** 1776–1856. ಇಟಲಿ ದೇಶದ ಭೌತವಿಜ್ಞಾನಿ ಮತ್ತು ರಸಾಯನ ವಿಜ್ಞಾನಿ. ಟುರಿನ್ ನಗರದಲ್ಲಿ ಜನಿಸಿದ. ಅದೇ ಊರಿನ ವಿಶ್ವವಿದ್ಯಾನಿಲಯದಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕನಾದ (1834–50). 1811ರಲ್ಲಿ ಒಂದು ಹೊಸ ಊಹೆಯನ್ನು ಮುಂದಿಟ್ಟ: ಪರಮಾಣುಗಳಿಂದ ಅಣುಗಳು ರಚಿತವಾಗುತ್ತವೆಯೆಂದೂ ಈ ಅಣುಗಳು ಪದಾರ್ಥದ ಭೌತಗುಣಗಳಿಗೆ ಮೂಲವೆಂದೂ ಈತ ತಿಳಿಸಿದುದು ರಾಸಾಯನಿಕ ಮತ್ತು ಭೌತವಿಜ್ಞಾನಗಳ ಮುಂದಿನ ಬೆಳವಣಿಗೆಗೆ ಬಹಳ ಸಹಕಾರಿಯಾಯಿತು. ಈತನಿಗೆ ಕಾಂಟೆ ಡಿ ಕ್ವಾರೆಜ್ಞ ಎಂದರೆ ಕ್ವಾರೆಜ್ಞದ ಪ್ರಭು ಎಂಬ ಬಿರುದಿತ್ತು. ಈತ 1856 ಜುಲೈ 9 ರಂದು ನಿಧನನಾದ. (ಟಿ.ಎಸ್.ಎಸ್.)

**ಅವ್ಯಕ್ತ :** ಸಾಂಖ್ಯದರ್ಶನದಲ್ಲಿ ಮೂಲ ಪ್ರಕೃತಿಯ ನಾಮಾಂತರ. ಅದೇ ದರ್ಶನದ ಮುಖ್ಯ ತತ್ತ್ವಗಳಲ್ಲಿ ಒಂದಾದ ಪುರುಷನನ್ನೂ ಚರಕಸಂಹಿತೆ ಅವ್ಯಕ್ತವೆಂದು ಕರೆದಿದೆ. ಸಾಂಖ್ಯಕಾರಿಕದಲ್ಲಿ ಮೂಲಪ್ರಕೃತಿಗೇ ಈ ಹೆಸರು ಕೊಟ್ಟಿದೆಯಲ್ಲದೆ ಪುರುಷನಿಗಲ್ಲ. ಪ್ರಕೃತಿಯ ವ್ಯಕ್ತರೂಪಗಳು 23 : ಮಹತ್ ಇದರ ಮೊದಲನೆಯ ವ್ಯಕ್ತರೂಪ; ಎರಡನೆಯದು ಅಹಂಕಾರ. ಅಹಂಕಾರದಿಂದ ಹುಟ್ಟಿದ ಒಂದು ಶಾಖೆಯ ವ್ಯಕ್ತರೂಪಗಳು ಮನಸ್, ಪಂಚ ಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಇನ್ನೊಂದು ಶಾಖೆಯಿಂದ ಹುಟ್ಟಿದವು ಐದು, ತನ್ಮಾತ್ರಗಳು ಪಂಚ ಭೂತಗಳು. (ಜಿ.ಎಚ್.)

**ಅವ್ಯವಸ್ಥೆ :** ಇಂದಿನ ವಿಶ್ವ ಸುವ್ಯವಸ್ಥಿತವಾದುದೆಂದೂ ಸಾಮಾನ್ಯ ನಿಯಮಗಳಿಗೆ ಒಳಪಟ್ಟಿದೆಯೆಂದೂ ನಿರೂಪಿಸಿ, ವಿಶ್ವಸೃಷ್ಟಿಗೆ ಮುನ್ನ ಇದ್ದ ಸ್ಥಿತಿಯನ್ನು ಸೂಚಿಸುವ ಪದ (ಕೇಯಾಸ್). ವಿಶ್ವದ ಅವ್ಯವಸ್ಥಾಸ್ಥಿತಿ ವಿಶ್ವಶಾಸ್ತ್ರ (ಕಾಸ್ಮಾಲಜಿ) ಮತ್ತು ವಿಶ್ವಸೃಷ್ಟಿವಾದಗಳಿಗೆ ಸಂಬಂಧಪಟ್ಟದ್ದು. ಪೌರಸ್ತ್ಯರೂ ಪಾಶ್ಚಾತ್ಯರೂ ಈ ವಿಷಯವನ್ನು ವಿಶೇಷವಾಗಿ ಜಿಜ್ಞಾಸೆ ಮಾಡಿದ್ದಾರೆ.

ಸಾಮಾನ್ಯವಾಗಿ ಪಾಶ್ಚಾತ್ಯರು ವಿಶ್ವಸೃಷ್ಟಿಯ ಪೂರ್ವದಲ್ಲಿ, ಅವ್ಯವಸ್ಥಿತ ಸ್ಥಿತಿ ಇದ್ದಿತೆನ್ನುತ್ತಾರೆ. ಗ್ರೀಕ್ ಭಾಷೆಯಲ್ಲಿ ಈ ಪದಕ್ಕೆ ಅಗಲವಾಗಿ ಬಾಯಿ ತೆರೆದಿರುವುದು ಎಂಬ ಅರ್ಥವಿದೆ. ಅಂದರೆ ವಿಶ್ವಸೃಷ್ಟಿ ಪೂರ್ವದಲ್ಲಿ ಆಕಳಿಸುವ ಆಕಾಶವಾಗಿ ಆದ್ಯ ಶೂನ್ಯವಿದ್ದಂತೆ ಇದ್ದಿತೆಂದು ಅರ್ಥವಾಗುತ್ತದೆ.

ಸ್ಟೋಯಿಕ್ ಪಂಥದ ತತ್ತ್ವಜ್ಞಾನಿಗಳು ಈ ಅವ್ಯವಸ್ಥಿತಸ್ಥಿತಿಯನ್ನು ಆದಿಜಲ ಸ್ಥಿತಿ ಎನ್ನುತ್ತಾರೆ.

ಫಿನೀಷಿಯದವರು ಆದಿಯ ಅವ್ಯವಸ್ಥಿತ ಸ್ಥಿತಿ ದೈವತ್ವದೊಂದಿಗೆ ಸಮಾಗಮ ಹೊಂದಿದಾಗ ಕಾಮ (ಇಚ್ಛೆ) ಉತ್ಪನ್ನವಾಯಿತೆಂದೂ ತದನಂತರ ಮೋಟ್ ಎಂಬ ಭೌತಜಲ ಮಿಶ್ರಣವುಂಟಾಯಿತೆಂದೂ ಆಮೇಲೆ ಒಂದು ಅಂಡ ಸೃಷ್ಟಿಯಾಯಿತೆಂದೂ ವಿಶ್ವಾಂಡ ಬ್ರಹ್ಮಾಂಡ ಎರಡಾಗಿ ಒಡೆದು ಭೂಲೋಕ ದೇವಲೋಕಗಳು ಸೃಷ್ಟಿಸಲ್ಪಟ್ಟವೆಂದೂ ಅನಿಲದ ಉಷ್ಣಾಂಶದಿಂದ, ಗುಡುಗು ಸಿಡಿಲುಗಳ ದೆಸೆಯಿಂದ ಜೀವಕೋಟಿಗಳು ಆವಿರ್ಭವಿಸಿದುವೆಂದೂ ಹೇಳುತ್ತಾರೆ.

ವೇದಗಳಲ್ಲಿ ಸೃಷ್ಟಿ ಮತ್ತು ಸೃಷ್ಟಿಕರ್ತನ ವಿಚಾರಗಳಿವೆ. ವಿಶ್ವಕರ್ಮ ಸೃಷ್ಟಿಯನ್ನು ಸುಸಜ್ಜಿತಗೊಳಿಸಿದನೆಂದು ಹೇಳಿದೆ. ಅನೇಕ ಸಂದರ್ಭಗಳಲ್ಲಿ ತಮಸ್, ಆಕಾಶ, ಅಸತ್ ಇತ್ಯಾದಿ ಅವ್ಯವಸ್ಥಿತ ಸ್ಥಿತಿಗಳು ಸೃಷ್ಟಿಯ ಮೂಲವೆಂದು ಹೇಳಿದೆ.

ಆದಿಯಲ್ಲಿ ಎಲ್ಲೆಲ್ಲೂ ಪ್ರಳಯರೂಪದ ಜಲವಿದ್ದಿತೆಂದೂ ಈ ಅವ್ಯವಸ್ಥಿತಸ್ಥಿತಿಯನ್ನು ಪರಬ್ರಹ್ಮನೇ ನಿರ್ಮಾಪಿಸಿ ಆ ಜಲದಲ್ಲಿ ತನ್ನ ಅಂಶವನ್ನು ಬಿತ್ತಿ, ಮುಂದೆ ತಾನೇ ಹಿರಣ್ಯಗರ್ಭವೆಂಬ ಒಂದು ಅಂಡವಾಗಿ ಆ ಅಂಡದಿಂದ ಚತುರ್ಮುಖ ಬ್ರಹ್ಮ ಹುಟ್ಟಿ ಅನಂತರ ಸೃಷ್ಟಿಯನ್ನು ಸಾಧಿಸಿದನೆಂದೂ ಹೇಳಿದೆ.

ಪುರುಷಸೂಕ್ತದಲ್ಲಿ ಆದಿಪುರುಷನ ಬಲಿಯಿಂದ (ಯಾಗ ಮಾಡುವುದರಿಂದ) ವಿಶ್ವಸೃಷ್ಟಿಯಾಯಿತೆಂದಿದೆ.

ನಾರದೀಯ ಸೂಕ್ತದಲ್ಲಿ ಎಲ್ಲೆಲ್ಲೂ ದೀರ್ಘ ತಮಸ್, ಅಥವಾ ಗಾಢಾಂಧಕಾರವಿದ್ದಿತೆಂದೂ ಅನಂತ ಶೂನ್ಯವಿದ್ದಿತೆಂದೂ ಇವುಗಳ ನಡುವೆ ಪರಬ್ರಹ್ಮ ಏಕಾಂಗಿಯಾಗಿದ್ದು ತನ್ನ ಸಂಕಲ್ಪ ಮಾತ್ರದಿಂದ ವಿಶ್ವಸೃಷ್ಟಿ ಮಾಡಿದನೆಂದೂ ಇದರ ಮರ್ಮವನ್ನು ಯಾರೂ ತಿಳಿಯಲಸಾಧ್ಯವೆಂದೂ ಉಲ್ಲೇಖಿಸಿದೆ. (ಎಸ್.ಆರ್.)

**ಅವ್ವಾಕುಮ್, ಪೆಟ್ರೊವಿಚ್ :** 1621–1682. ರಷ್ಯನ್ ಬರೆಹಗಾರ. ನಿಕನ್ ಎನ್ನುವ ಮತಾಧಿಕಾರಿ ಆಚರಣೆಗೆ ತಂದ ಮಾರ್ಪಾಡುಗಳನ್ನು ವಿರೋಧಿಸಿದುದರಿಂದ ಇವನನ್ನು ಸೈಬೀರಿಯಕ್ಕೆ ಗಡಿಪಾರು ಮಾಡಿದ್ದಲ್ಲದೆ 1682ರಲ್ಲಿ ಸುಡಲಾಯಿತು. ಇವನ ಪತ್ರಗಳೂ ಆತ್ಮವೃತ್ತವೂ (1670–82) ಸತ್ತ್ವಯುತವಾದ, ತನ್ನ ನಂಬಿಕೆಗಾಗಿ ಯಾವ

ತ್ಯಾಗಕ್ಕಾದರೂ ಸಿದ್ಧವಾದ, ಚೇತನವನ್ನು ಪ್ರತಿಬಿಂಬಿಸುತ್ತವೆ. ಶಕ್ತಯುತವಾದ ಸುಸ್ಪಷ್ಟ ಶೈಲಿ ಇವನದು. ಸಾಹಿತ್ಯದ ಸ್ಲವಾನಿಕ್ ಭಾಷೆಯನ್ನು ತಿರಸ್ಕರಿಸಿ ಬಳಕೆಯಲ್ಲಿದ್ದ ರಷ್ಯನ್ ಭಾಷೆಯನ್ನು ಉಪಯೋಗಿಸಿದವರಲ್ಲಿ ಈತ ಮೊದಲಿಗ. (ಎಲ್.ಎಸ್.ಎಸ್.)

**ಅವ್ವೆಯಾರ್ :** ತಮಿಳುನಾಡಿನ ಪ್ರಸಿದ್ಧ ಕವಯಿತ್ರಿ. ಅವ್ವೆ (ತಮಿಳಿನಲ್ಲಿ ಔವ್ವೈ) ಎಂದರೆ ತಾಯಿ. ಅಮ್ಮೈ ಎಂಬ ಪದವೇ ಅವ್ವೈ ಎಂದು ಮಾರ್ಪಟ್ಟಿರಬೇಕು. ಅವ್ವೈ ಎಂಬುದನ್ನು ನಿಜನಾಮವಾಗಿರಿಸಿಕೊಂಡು ಪಾಣರಜಾತಿಯ ಹೆಂಗಸು ಎಂಬರ್ಥ ಕೊಡುವ ಪಿರಾಟ್ಟಿ ಎಂಬುದನ್ನು ಜೊತೆಮಾಡಿ, ಅವ್ವೈ ಪಿರಾಟ್ಟಿ ಎಂಬ ಪದವೇ ಅವ್ವೈಪಾಟ್ಟಿ ಎಂದಾಯಿತೆಂಬ ಊಹೆಯೂ ಇದೆ. ಮಕ್ಕಳಿಗೆ ಪಾಟ್ಟಿ (ಅಜ್ಜಿ) ಹೇಗೆ ನೀತಿಬೋಧನೆ ಮಾಡುವಳೋ ಹಾಗೆಯೇ, ಅವ್ವೆಯೂ ಜನರಿಗೆ ನೀತಿಬೋಧೆ ಮಾಡಿದುದರಿಂದ ಅವಳಿಗೆ ಅವ್ವೈಪಾಟ್ಟಿ ಎಂಬ ಹೆಸರಾಯಿತೆಂದು ಹೇಳುವವರೂ ಇದ್ದಾರೆ. ಅಂತೂ ತಮಿಳುನಾಡಿನ ಜನಜೀವನದಲ್ಲಿ ಬೆರೆತು, ತಮಿಳಿಗೆ ಸೇವೆ ಸಲ್ಲಿಸಿದವಳು ಅವ್ವೈ ಎಂಬುದು ತಿಳಿದ ವಿಷಯ.

ಅವ್ವೆಯ ಹುಟ್ಟು, ಬೆಳೆವಣಿಗೆ ಮತ್ತು ಜೀವನಕ್ಕೆ ಸಂಬಂಧಿಸಿ ಅನೇಕ ಕಥೆಗಳಿವೆ. ಆದಿ ಎಂಬ ಹೊಲತಿಗೂ, ಭಗವನ್ ಎಂಬ ಬ್ರಾಹ್ಮಣನಿಗೂ ಏಳು ಜನ ಮಕ್ಕಳೆಂದೂ ಅವರಲ್ಲಿ ಅವ್ವೆಯೂ ಒಬ್ಬಳೆಂದೂ ತಿಳಿದುಬರುತ್ತದೆ. ಇವರೆಲ್ಲ ತಮಿಳಿನಲ್ಲಿ ಪ್ರಸಿದ್ಧರಾದ ಕವಿಗಳು; ಒಬ್ಬೊಬ್ಬರು ಒಂದೊಂದು ಜಾತಿಗೆ ಸೇರಿದವರು. ಇದರಿಂದ, ಈ ಕಥೆ ಕೇವಲ ಕಾಲ್ಪನಿಕವೆಂದು ಬೇರೆ ಹೇಳಬೇಕಾಗಿಲ್ಲ. ಸಂಗಂ ಕಾಲದ (2ನೆಯ ಶತಮಾನ) ಹಾಡುಗಳಿಂದ ತಿಳಿದು ಬರುವ ಅವ್ವೆಯಲ್ಲದೆ, ಅನಂತರವೂ ಆ ಹೆಸರಲ್ಲಿ, ಇತರ ಕವಯಿತ್ರಿಯರನೇಕರು ತಮಿಳಿಗೆ ಸೇವೆ ಸಲ್ಲಿಸಿದ್ದಾರೆ. ಸುಂದರಮೂರ್ತಿನಾಯನಾರ್, ಕಂಬರ್ ಹಾಗೂ ಒಟ್ಟಕೂತ್ತರ್–ಇವರ ಕಾಲದಲ್ಲಿ ಪೋರ್ಚುಗೀಸರು ತಮಿಳುನಾಡಿಗೆ ಬಂದ ಅನಂತರದ ಕಾಲದಲ್ಲಿ ಸಹ ಅವ್ವೆ ಎಂಬ ಹೆಸರಿನ ಕವಯಿತ್ರಿಯರು ಇದ್ದರೆಂಬುದು ಅವ್ವೆಯಾರ್ ಎಂಬ ಹೆಸರಿನಲ್ಲಿ ದೊರೆಯುವ ಕವಿತೆಗಳಿಂದ ತಿಳಿದುಬರುತ್ತದೆ. ಹೀಗಾಗಿ ನಿಶ್ಚಿತವಾಗಿ ಅವ್ವೆಯ ಚರಿತ್ರೆಯನ್ನು ಬರೆಯುವುದು ಕಷ್ಟವಾಗುತ್ತದೆ.

ಸಂಗಂ ಕಾಲದ ಅವ್ವೆ: ಸಂಗಂ ಕಾಲದ ಪ್ರಸಿದ್ಧ ಕವಿಗಳಾದ ಕಪಿಲರ್, ಪರಣರ್ ಮುಂತಾದವರ ಸಾಲಿನಲ್ಲಿ ಅವ್ವೆಗೂ ವಿಶಿಷ್ಟ ಸ್ಥಾನವಿದೆ. ಆ ಕಾಲದ ಗ್ರಂಥಗಳಲ್ಲಿ ಪುರನಾನೂರು, ಅಗನಾನೂರು, ನಟ್ರಿಣೈ, ಕುರುಂದೊಗೈ ಎಂಬವುಗಳಲ್ಲಿ ಅವ್ವೆ ಹಾಡಿದ 59 ಪದ್ಯಗಳು ದೊರೆಯುತ್ತವೆ. ಇವುಗಳಲ್ಲೆಲ್ಲ ಕವಿಗಳ ಸ್ವಾಭಿಮಾನ, ಪ್ರಾಪಂಚಿಕ ತತ್ತ್ವ, ಮಾತಿನ ವೈಖರಿ, ಉಪಮಾ ಮುಂತಾದ ಜಾಣ್ನುಡಿ, ಅಲಂಕಾರಗಳಿಂದ ವರ್ಣಿತವಾಗಿವೆ. ರಾಜ್ಯ ನಾಡಾಗಿಯೋ, ಕಾಡಾಗಿಯೋ ಏರುತಗ್ಗುಗಳುಳ್ಳದಾಗಿಯೋ ಇರಬಹುದು. ಆದರೆ ಇದರಿಂದ ಒಂದು ರಾಜ್ಯ ಹಿರಿದೆನಿಸದು. ಉತ್ತಮಗುಣಗಳುಳ್ಳ ಪ್ರಜೆಗಳಿಂದಲೇ ಆ ರಾಜ್ಯಕ್ಕೆ ವೈಶಿಷ್ಟ್ಯ ಬರುತ್ತದೆಂದು ಅವ್ವೆ ನಿತ್ಯ ಸತ್ಯವನ್ನು ನುಡಿದಿದ್ದಾಳೆ.

ಔದಾರ್ಯಕ್ಕೆ ಹೆಸರಾಂತ ಅದಿಯಮಾನ್ ಅವ್ವೆಯನ್ನು ತುಂಬ ಆದರಿಸಿದ. ಅಮೃತ ದಂತೆ ಚಿರಾಯುವಾಗಿ ಮಾಡಬಲ್ಲ ಒಂದು ನೆಲ್ಲಿಕಾಯಿ ಅದಿಯಮಾನನಿಗೆ ಸಿಕ್ಕಿತು. ತಾನದನ್ನು ತಿನ್ನದೆ, ಕವಿಯಾದ ಅವ್ವೆ ಬಹುಕಾಲ ಬಾಳಬೇಕೆಂದು ಬಗೆದು ಅವಳಿಗೆ ಅದನ್ನು ಕೊಟ್ಟು ತಿನ್ನುವಂತೆ ಮಾಡಿ ಸಾಹಿತ್ಯಲೋಕ ಉದ್ಧಾರವಾಗುವಂತೆ ಮಾಡಿದ. ಇದನ್ನು ತಿಳಿದ ಅವ್ವೆ ಅದಿಯಮಾನ್ ಶಿವನಂತೆ ಬಹುಕಾಲ ಬಾಳಲೆಂದು ಹರಸಿ ಅವನ ಪರಾಕ್ರಮವನ್ನೂ ಔದಾರ್ಯವನ್ನೂ ಹಾಡಿದಳು.

ಅದಿಯಮಾನನ ವೈರಿಯಾದ ಕಾಂಚಿಯ ತೊಂಡೈಮಾನನ ಹತ್ತಿರ ಆಕೆ ದೂತ ಕಾರ್ಯಕ್ಕೆ ಹೋದಳು. ತೊಂಡೈಮಾನ್ ತನ್ನ ಆಯುಧಾಗಾರವನ್ನು ಅವ್ವೆಗೆ ತೋರಿಸಿದ. ಅವಳು ತೊಂಡೈಮಾನನ ಆಯುಧಸಂಗ್ರಹವನ್ನು ತೋರಿಕೆಗೆ ಪ್ರಶಂಸಿಸುವಂತೆ ಆದರೆ ನಿಜವಾಗಿ ತೆಗಳುವಂತೆ, ಅದಿಯಮಾನನ ಆಯುಧಸಂಗ್ರಹವನ್ನು ಕುರಿತು ಹೀಗಳೆಯುವಂತೆ ಆದರೆ ನಿಜವಾಗಿ ಹೊಗಳುವಂತೆ ಕವಿತೆಗಳನ್ನು ಹಾಡಿದಳು.

ಅದಿಯಮಾನ್ ರಣರಂಗದಲ್ಲಿ ವೈರಿಯ ಈಟಿಯಿಂದ ಸತ್ತುಬಿದ್ದಾಗ ದುಃಖಭರದಿಂದ, ನಿನ್ನ ಎದೆಯಲ್ಲಿ ನಾಟಿದ ಈಟಿ ನಿನ್ನನ್ನು ಆಶ್ರಯಿಸಿದವರ ಭಿಕ್ಷಾಪಾತ್ರೆಯನ್ನೊಡೆಯಿತು; ನೀನು ಕೊಡುವ ದಾನಗಳನ್ನು ಸ್ವೀಕರಿಸುವವರ ಅಂಗೈಗಳನ್ನು ತೂತುಮಾಡಿತು; ಪರಿವಾರದವರ ಕಣ್ಣು ಬೊಂಬೆಗಳು ಇಂಗಿಹೋಗುವಂತೆಸಗಿತು; ಕವಿಗಳ ನಾಲಗೆಗಳನ್ನು ಹೊಲಿದುಬಿಟ್ಟಿತು–ಎಂದು ದುಃಖಸಂತಪ್ತಳಾಗಿ ಹಾಡಿರುವುದು ಎಂಥ ಕಲ್ಲೆದೆಯನ್ನೂ ಕರಗಿಸುವುದು. *

**ಅನಂತರದ ಅವ್ವೆಯರು :** ಸಂಗಂ ಕಾಲದಲ್ಲಿ ತಮಿಳುನಾಡಿನಲ್ಲಿ ವಿನಾಯಕನ ಪೂಜೆ ಇರಲಿಲ್ಲ. ವಾತಾಪಿಯನ್ನು ಜಯಿಸಿ ಮರಳಿದ ಶಿರತ್ತೊಂಡರ್ (7ನೆಯ ಶತಮಾನ) ಕಾಲಾನಂತರವೇ ವಿನಾಯಕನ ಪೂಜೆ ತಮಿಳುನಾಡಿನಲ್ಲಿ ಆರಂಭವಾಯಿತು. ಅವ್ವೆ ಹಾಡಿದುದೆಂದು ದೊರೆಯುವ ವಿನಾಯಕ ಸ್ತೋತ್ರಗಳು, ವಿನಾಯಕಸ್ತುತಿಯಿಂದ ಆರಂಭವಾಗುವ ಮೂದುರೈ (ಪಾಕ್ಕುಂಡಾಂ), ನಲ್‌ವಳಿ (ಸನ್ಮಾರ್ಗ) ಮುಂತಾದುವುಗಳನ್ನು ಸಂಗಂ ಕಾಲಾನಂತರದ ಅವ್ವೆ ಹಾಡಿದುದೆಂದು ತಿಳಿಯುತ್ತದೆ. ಸುಂದರಮೂರ್ತಿನಾಯನಾರ್ ಕೈಲಾಸಕ್ಕೆ ಹೋಗುವುದಕ್ಕಿಂತ ಮೊದಲೇ ಅವ್ವೆ ಕೈಲಾಸಕ್ಕೆ ಹೋಗುವಂತೆ ವಿನಾಯಕನೇ ದಯೆತೋರಿದನೆಂಬುದರಿಂದ ಅವ್ವೆ ಸುಂದರಮೂರ್ತಿನಾಯನಾರ್‌ಗೆ ಸಮಕಾಲೀನಳೆಂದು ಊಹಿಸಲಡೆಯಿದೆ. ಕಂಬರ್ ಹೊನ್ನಿಗಾಗಿ ಕವಿತಾರಚನೆ ಮಾಡುವಾಗ, ಅವ್ವೆ ಅಂಬಲಿಗಾಗಿ ಕವಿತಾ ರಚನೆ ಮಾಡುತ್ತಾಳೆಂಬ ಮಾತಿನಿಂದ ಅವ್ವೈ ಕಂಬರ್‌ಕವಿಯ ಸಮಕಾಲೀನಳೆಂದು ಊಹಿಸಲೂ ಸಾಧ್ಯವಿದೆ. ವಾನ್‌ಕೋಳಿ ಎಂದರೆ ತುರ್ಕಿಜಾತಿಯ ಕೋಳಿಯ ವಿಷಯ ಮೂದುರೈಯಲ್ಲಿ ಬರುವುದರಿಂದ ತಮಿಳುನಾಡಿನಲ್ಲಿ ಪೋರ್ಚುಗೀಸರು ಬಂದಮೇಲೆಯೇ ತುರ್ಕಿಜಾತಿಯ ಕೋಳಿಯ ಪರಿಚಯ ತಮಿಳರಿಗಾಯ್ತೆಂಬ ಕಾರಣದಿಂದ ಈ ಹಾಡನ್ನು ಹಾಡಿದ ಅವ್ವೆ ಪೋರ್ಚುಗೀಸರು ತಮಿಳುನಾಡಿಗೆ ಬಂದ ಅನಂತರವಿದ್ದವಳೆಂದು ಹೇಳಬಹುದು.

ಗೃಹಸ್ಥಜೀವನದ ಹಿರಿಮೆ, ವ್ಯವಸಾಯದ ಮೇಲ್ಮೆ, ವಿದ್ಯೆಯ ಮಹಿಮೆ, ಮಾನದ ಔನ್ನತ್ಯ, ಉತ್ತಮ ಜೀವನದ ಸಂಪನ್ನತೆಗಳನ್ನೆಲ್ಲ ಅವ್ವೆಯ ಹಾಡುಗಳು ಪ್ರತಿಪಾದಿಸುತ್ತವೆ. ತಮಿಳುನಾಡಿನಲ್ಲಿ ಬಂದ ಪಾರಂಪರ್ಯದ ದೈವಭಕ್ತಿ, ಕೊಲೆ ಮಾಂಸಾಹಾರಗಳಿಲ್ಲದಿರುವಿಕೆ–ಮುಂತಾದ ಗುಣಗಳನ್ನು ಈ ಹಾಡುಗಳಲ್ಲಿ–ಎತ್ತಿ ಹೇಳಿದೆ. ಭೇದವಿಲ್ಲದ ಸಮದೃಷ್ಟಿಯಿಂದಿರ ಬೇಕೆಂದು ಸದ್ಗುಣದತ್ತ ದಾರಿ ತೋರುತ್ತವೆ–ಅವ್ವೆಯ ಹಾಡುಗಳು.

ಮೂದುರೈ, ಅತ್ತಿಚ್ಚೂಡಿ, ನಲ್ವಳಿ, ಕೊಸರೈವೇಂದನ್ ಎಂಬ ನೀತಿಗ್ರಂಥಗಳು ಸನ್ಮಾರ್ಗದಲ್ಲಿ ನಡೆದು ಉತ್ತಮ ಜೀವನವನ್ನು ನಡೆಸುವಂತೆ ಎಳೆಯ ಹೃದಯಗಳನ್ನು ಪ್ರೇರೇಪಿಸುತ್ತವೆ.

ಅವ್ವೆ ಹಾಡಿದುದೆಂದು ಪ್ರಸಿದ್ಧವಾಗಿರುವ ಪಂದನಂದಾದಿ, ಅರುಂದಮಿಳ್ ಮಾಲೈ, ತರಿಶನಪ್ಪತ್ತ್, ನನ್ನೂರ್‌ಕೋವೈ ಮೊದಲಾದ ಗ್ರಂಥಗಳು ಈಗ ದೊರೆಯುವುದಿಲ್ಲ.

ಸಂಗಂ ಕಾಲದ ಅವ್ವೆಯಾಗಲಿ, ಅನಂತರದ ಅವ್ವೆಯಾಗಲಿ, ಮದುವೆಯಾಗಿ ಗೃಹಿಣಿಯಾಗಿ ಬಾಳಿದರೆಂದು ಎಲ್ಲಿಯೂ ತಿಳಿಯುವುದಿಲ್ಲ. ಇವರು ತಮ್ಮ ಜೀವನವನ್ನೆಲ್ಲ ತಮಿಳಿಗಾಗಿ ಸವೆಯಿಸಿ, ಮಂತ್ರದಂಥ ಜ್ಞಾನದೀಪ್ತಿಗಳಾದ ನೀತಿಮಾತುಗಳನ್ನಾಡಿ ಜನಜೀವನವನ್ನು ಸುಗಮಗೊಳಿಸಿದ ಹಿರಿಯ ಕವಯಿತ್ರಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. (ಬಿ.ಎಸ್.ಎನ್.ವಿ.)

**ಅಶೋಕ :** (ಪ್ರ.ಶ.ಪೂ. 273–232). ಭಾರತದ ಇತಿಹಾಸದಲ್ಲಿ ಅಮರನಾಗಿರುವ ಈತ ಬಿಂದುಸಾರನ ಮಗ. ಚಂದ್ರಗುಪ್ತ ಮೌರ್ಯನ ಮೊಮ್ಮಗ. ಬಿಂದುಸಾರನ ಆಳ್ವಿಕೆ ಕೊನೆಗೊಂಡ (ಪ್ರ.ಶ.ಪೂ. 273) ಕೆಲವು ವರ್ಷಗಳ ಅನಂತರ ಪಟ್ಟಕ್ಕೆ ಬಂದ. ಚಕ್ರಾಧಿಪತಿ ಯಾಗುವ ಮೊದಲು ತಕ್ಷಶಿಲ ಮತ್ತು ಉಜ್ಜಯಿನಿಗಳಲ್ಲಿ ರಾಜ್ಯಪಾಲನಾಗಿದ್ದ. ಪಟ್ಟಕ್ಕೆ ಬರಲು ಬಹಳ ಹೋರಾಡಬೇಕಾಯಿತು. ಬಿಂದುಸಾರ ತೀರಿಕೊಂಡ ಮೇಲೆ, ರಾಜ್ಯಕ್ಕಾಗಿ ಮಕ್ಕಳಲ್ಲಿ ಸತತ ಹೋರಾಟ ನಡೆಯಿತು. ಹೋರಾಟದಲ್ಲಿ ಅಶೋಕನಿಗೆ ವಿಜಯ ಲಭಿಸಿತು.

ಶಾಸನಗಳಲ್ಲಿ ಅಶೋಕನನ್ನು ದೇವಾನಾಂಪ್ರಿಯ ಅಂದರೆ ದೇವತೆಗಳಿಗೆ ಪ್ರಿಯನಾದವ ಎಂದು ಸಂಬೋಧಿಸಲಾಗಿದೆ. ಆಶೋಕ ಎಂಬ ಹೆಸರು ಮಸ್ಕಿ ಶಾಸನದಲ್ಲಿ ಕಂಡುಬರುತ್ತದೆ. ಪಿಯದಶಿ ಅಥವಾ ಪ್ರಿಯದರ್ಶಿ ಎಂಬುದು ಅಶೋಕನ ತಂದೆ ಮತ್ತು ತಾತಂದಿರ ಬಿರುದು. ಅಶೋಕನ ಬಗ್ಗೆ ಈ ಸಂಬೋಧನೆಯೂ ಉಂಟು. ಅಶೋಕ ಪಟ್ಟಕ್ಕೆ ಬಂದ ಮೊದಲ ವರ್ಷಗಳ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಇತರ ಪ್ರಭುಗಳಂತೆ ಆತನೂ ರಾಜ್ಯವಿಸ್ತರಣೆಯಲ್ಲಿ ತೊಡಗಿದ್ದನೆಂದು ಹೇಳಲಾಗಿದೆ. ಅನಂತರ ಕೈಗೊಂಡ ಕಳಿಂಗಯುದ್ಧ ಅವನ ಜೀವನದಲ್ಲಿ ಒಂದು ಮಹತ್ತರ ಘಟನೆಯಾಗಿದೆ. ಅಲ್ಲಿ ಕಂಡ ರಕ್ತದ ಕೋಡಿ, ಕೊಲೆ, ಹಿಂಸೆ ಮುಂತಾದ ಘೋರ ಘಟನೆಗಳು ಅಶೋಕನ ಮನಸ್ಸನ್ನು ಬದಲಾಯಿಸಿದ. ದಿಗ್ವಿಜಯಕ್ಕೆ ಬಂದ ದೊರೆ ಧರ್ಮವಿಜಯಿಯಾಗಿ ಹಿಂತಿರುಗಿದ. ಅಂದಿನಿಂದ ಅಶೋಕನ ರಾಜನೀತಿಯಲ್ಲಿ ಅನೇಕ ಬದಲಾವಣೆಗಳಾದವು.

ಕಾಶ್ಮೀರದ ಚರಿತ್ರಕಾರ ಕಲ್ಹಣನ ಪ್ರಕಾರ ಅಶೋಕ ಮೊದಲಿಗೆ ಶಿವಭಕ್ತನಾಗಿದ್ದ. ಕಳಿಂಗ ಯುದ್ಧಾನಂತರ ಆತನ ಮನಸ್ಸು ಬೌದ್ಧ ಮತದತ್ತ ಹರಿಯಿತು. ಅಂದಿನಿಂದ ಆತ ಬುದ್ಧನ ಉಪಾಸಕನಾದ. ಬುದ್ಧಗಯೆಗೆ ತೆರಳಿ ಅಲ್ಲಿನ ಬೌದ್ಧಭಿಕ್ಷುಗಳೊಡನೆ ಸಂಬಂಧ ಬೆಳೆಸಿದ. ಬೌದ್ಧಧರ್ಮದ ಪ್ರಚಾರಕ್ಕಾಗಿ ಬಹಳ ಶ್ರಮಿಸಿದ. ಧಾರ್ಮಿಕ ಪ್ರವಾಸಗಳನ್ನು ಕೈಗೊಂಡು ಧರ್ಮಪ್ರಚಾರ ಮಾಡಿದ. ಬೌದ್ಧ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ. ಬುದ್ಧನ ಜನ್ಮಸ್ಥಳವನ್ನು ಸಂದರ್ಶಿಸಿದ.

ಬೌದ್ಧಧರ್ಮ ಪ್ರಚಾರಕ್ಕಾಗಿ ಅಶೋಕ ಬಹಳ ಶ್ರಮಿಸಿದ. ರಾಜ್ಯದಲ್ಲೆಲ್ಲ ಧರ್ಮಸ್ತಂಭಗಳನ್ನು ನೆಡಿಸಿದ. ಧರ್ಮಮಹಾಮಾತ್ರರೆಂಬ ಅಧಿಕಾರಿಗಳನ್ನು ನೇಮಿಸಿದ. ಜೊತೆಗೆ ರಾಜುಕರು ಮತ್ತು ಪ್ರಾದೇಶಿಕರು ಎಂಬ ಎರಡು ಬಗೆಯ ಅಧಿಕಾರಿಗಳನ್ನು ನೇಮಿಸಿದ. ಭಾರತ ಶಾಸನಗಳ ಪಿತಾಮಹನೆಂದು ಗೌರವಿಸಲ್ಪಟ್ಟಿರುವ ಈತ ದೇಶದ ಎಲ್ಲ ಕಡೆಗಳಲ್ಲಿ ಶಿಲಾಶಾಸನಗಳನ್ನು ನೆಡಿಸಿದ. ಪ್ರಪಂಚದ ಅನೇಕ ಭಾಗಗಳಿಗೆ ಧರ್ಮ ನಿಯೋಗಗಳನ್ನು ಕಳುಹಿಸಿದ. ಅಶೋಕನ ಮಗ ಅಥವಾ ತಮ್ಮನಾದ ಮಹೇಂದ್ರನೇ ಸಿಂಹಳಕ್ಕೆ ಹೋದ

ನಿಯೋಗದ ನಾಯಕನಾಗಿದ್ದ. ತಾನು ಬೌದ್ಧಧರ್ಮಾವಲಂಬಿಯಾಗಿದ್ದರೂ ಅಶೋಕ ಪರಧರ್ಮ ಸಹಿಷ್ಣುವಾಗಿದ್ದ. ಯಾವ ಧರ್ಮವನ್ನೂ ಆತ ನಿಂದಿಸಲಿಲ್ಲ. ಹಿಂದೂ ಧರ್ಮ ಮತ್ತು ಜೈನಧರ್ಮಗಳಿಗೂ ಉತ್ತೇಜನ ನೀಡಿದ. ತಾನು ಮೆಚ್ಚಿ ಅನುಸರಿಸಿದ ಬೌದ್ಧಧರ್ಮವನ್ನು ಎಂದೂ ಇಷ್ಟಕ್ಕೆ ವಿರೋಧವಾಗಿ ಯಾರ ಮೇಲೂ ಹೇರಲಿಲ್ಲ. ನೈತಿಕ ಮಾರ್ಗಗಳನ್ನು ಬಹಳವಾಗಿ ಅನುಮೋದಿಸಿದ. ನೀತಿಯಿಲ್ಲದೆ ಸುಖವನ್ನು ಪಡೆಯುವುದು ಬಹಳ ಕಷ್ಟ ಎಂದು ಶಾಸನಗಳ ಮೂಲಕ ಸಾರಿದ. ಆಧ್ಯಾತ್ಮಿಕ ಅಂತರಾಳ ಜೀವನದ ಉದ್ದೇಶಗಳಲ್ಲಿ ಒಂದಾಗಿರಬೇಕೆಂದು ಹೇಳಿದ ಕೀರ್ತಿ ಅವನದು. ತಾನು ಹೇಳಿದ್ದನ್ನು ನಿತ್ಯ ಜೀವನದಲ್ಲಿ ಮಾಡಿ ತೋರಿಸಿದ ಉದಾತ್ತ ವ್ಯಕ್ತಿ ಆತ. ಅಹಿಂಸೆಯನ್ನು ಬೋಧಿಸಿ ಅದುವೇ ಹಿರಿಯ ಧರ್ಮವೆಂದು ಒತ್ತಿ ಹೇಳಿದ.

ಅಶೋಕ ಮಾಡಿದಷ್ಟು ಜನೋಪಕಾರಿ ಕೆಲಸಗಳನ್ನು ಮಾಡಿದವರು ಚರಿತ್ರೆಯಲ್ಲಿ ಅತಿವಿರಳ. ಅವನ ಪ್ರಾಣಿದಯೆಯಂತೂ ವಿಶ್ವವಿಖ್ಯಾತವಾಗಿದೆ. ರಾಜ್ಯದಲ್ಲೆಲ್ಲ ಸಾಲು ಮರಗಳನ್ನು ನೆಡಿಸಿದ; ವಿಶ್ರಾಂತಿ ಗೃಹಗಳನ್ನು ತೆರೆದ; ಔಷಧಾಲಯಗಳನ್ನು ಕಟ್ಟಿಸಿದ. ದಾನಧರ್ಮಗಳಲ್ಲಂತೂ ಅವನದು ಎತ್ತಿದ ಕೈ. ಬಡವರು, ನಿರ್ಗತಿಕರು, ಅನಾಥರು, ಅಂಗವಿಕಲರು ಮೊದಲಾದವರಿಗೆ ಉದಾರವಾಗಿ ಸಹಾಯ ಮಾಡುತ್ತಿದ್ದ. ಬೇಡಿ ಬಂದ ಜನರಿಗೆ ಕೈತುಂಬ ನೀಡುತ್ತಿದ್ದ. ಅಶೋಕನಷ್ಟು ಜನಾನುರಾಗಿಗಳಾದ ದೊರೆಗಳು ಬಹಳ ಅಪರೂಪ.

ಅಶೋಕ ಚಕ್ರಾಧಿಪತ್ಯ ಯೋನ, ಕಾಂಭೋಜ, ಗಾಂಧಾರದಿಂದ ಹಿಡಿದು ಆಂಧ್ರ ದೇಶದವರೆಗೂ ಬಹು ವಿಸ್ತಾರವಾಗಿ ಹಬ್ಬಿತ್ತು. ಕಾಶ್ಮೀರ ಮತ್ತು ನೇಪಾಲಗಳೂ ಅಶೋಕನ ಅಧೀನದಲ್ಲಿದ್ದುವೆಂದು ಹೇಳಲಾಗಿದೆ. ಉತ್ತರ ಬಂಗಾಲ ಅವನ ರಾಜ್ಯದಲ್ಲಿ ಸೇರಿತ್ತು. ಅವನ ರಾಜ್ಯ ತಮಿಳು ದೇಶದವರೆಗೂ ಹಬ್ಬಿತ್ತು. ಈಚೆಗೆ ಬೆಳಕಿಗೆ ಬಂದಿರುವ ಕೆಲವು ಶಾಸನಗಳ ಪ್ರಕಾರ ಹಿಮಾಲಯದ ಅನೇಕ ಕಣಿವೆ ಪ್ರದೇಶಗಳು ಅಶೋಕನ ಆಳ್ವಿಕೆಗೊಳಪಟ್ಟಿದ್ದುವು.

ಭಾರತದ ಇತಿಹಾಸದಲ್ಲೇ ಏಕೆ, ಇಡೀ ಪ್ರಪಂಚದ ಇತಿಹಾಸದಲ್ಲಿ ಅಶೋಕನಿಗೆ ವಿಶಿಷ್ಟ ಸ್ಥಾನವಿದೆ. ಸಾವಿರಾರು ರಾಜಮಹಾರಾಜರುಗಳ ನಡುವೆ ಅವನು ಅತ್ಯಂತ ಪ್ರಕಾಶಮಾನವಾಗಿ ಶೋಭಿಸುತ್ತಿದ್ದಾನೆ. ಅವನ ಧರ್ಮಸಹಿಷ್ಣುತೆ, ಕಾರ್ಯತತ್ಪರತೆ, ಸೇವೆಯ ಮನೋಭಾವ, ಶಾಂತಿಪ್ರೇಮ–ಇವು ಸದಾಕಾಲವು ಅಚ್ಚಳಿಯದೆ ನಿಂತಿವೆ. ಅಷ್ಟು ದೊಡ್ಡ

ಅಶೋಕನ ಶಿಲ್ಪ (1–2ನೆಯ ಶತಮಾನ), ಸನ್ನತಿ

ಸಾಮ್ರಾಜ್ಯದ ಒಡೆಯನಾಗಿ, ಅದರ ಸೂತ್ರಧಾರಿಯಾಗಿ ಪ್ರಜೆಗಳ ಅಭ್ಯುದಯವನ್ನು ಪಾಲಿಸಿದ ಕೀರ್ತಿ ಅವನದು. ಅಶೋಕ ಚಾಣಾಕ್ಷ ರಾಜಕಾರಣಿಯೂ ಆಗಿದ್ದ. ಅತ್ಯುನ್ನತ ಯೋಧನೂ ಆಗಿದ್ದ. ಹಾಗಿಲ್ಲದಿದ್ದರೆ ಅಷ್ಟು ದೊಡ್ಡ ಸಾಮ್ರಾಜ್ಯವನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತಿತ್ತು.

ಶೈಶವಾವಸ್ಥೆಯಲ್ಲಿದ್ದ ಬೌದ್ಧಧರ್ಮಕ್ಕೆ ಒಂದು ರೂಪುಕೊಟ್ಟು ಅದನ್ನು ವಿಶ್ವಧರ್ಮವನ್ನಾಗಿ ಮಾಡಿದ ಕೀರ್ತಿ ಅಶೋಕನಿಗೆ ಸಲ್ಲುತ್ತದೆ. ತನ್ನ ಪ್ರಜೆಗಳಲ್ಲಿ ಸದ್ಭಾವನೆಗಳನ್ನು ಮೂಡಿಸಿ, ಅವರು ಸತ್ಪ್ರಜೆಗಳಾಗಲು ಆತ ಸದಾ ಶ್ರಮಿಸಿದ. ಮಾನವತೆಯೇ ಮೂರ್ತಿವೆತ್ತಂತಿದ್ದ ಅಶೋಕನ ಹಿರಿಮೆ ಸದಾಕಾಲವೂ ನಿಲ್ಲುವಂಥದು. ಆತ ಕೇವಲ ಭಾರತದ ಇತಿಹಾಸಕ್ಕೆ ಸೇರಿದ ವ್ಯಕ್ತಿಯಲ್ಲ. ಮಾನವ ಕೋಟಿಯ ಪ್ರತಿನಿಧಿಯಾಗಿ, ವಿಶ್ವದ ಇತಿಹಾಸದ ಮೊದಲಿಗರಲ್ಲಿ ಒಬ್ಬನಾಗಿದ್ದಾನೆ. ಭಾರತ ಇತಿಹಾಸದ ಸೀಮಾಪುರುಷ ಅಶೋಕನೆಂದರೆ ಅತಿಶಯವೇನಿಲ್ಲ. (ನೋಡಿ– ಅಶೋಕನ–ಶಾಸನಗಳು) (ಜಿ.ವಿ.)

**ಅಶೋಕ ಚಕ್ರ :** ಪ್ರಾಚ್ಯ ಹಾಗೂ ಪಾಶ್ಚಾತ್ಯ ದೇಶಗಳಲ್ಲಿ ಪ್ರಸಿದ್ಧವಾಗಿರುವ ಈ ಚಕ್ರ ಅಶೋಕ ಮಹಾರಾಜನಿಂದ ಸಾರಾನಾಥದಲ್ಲಿ ನಿರ್ಮಾಣವಾದ ಸ್ಮಾರಕಸ್ತಂಭದ ಸಿಂಹಶೀರ್ಷಿಕೆಯಲ್ಲಿದೆ. ಅಶೋಕ ಸಾರಾನಾಥದ ಸ್ತಂಭವನ್ನು ಚೂನಾರ್ ಪರ್ವತಗಳ ಕಲ್ಲಿನಲ್ಲಿ ಅತ್ಯಂತ ಸುಂದರವಾಗಿ ಕಡೆಸಿ ಸಾರಾನಾಥದಲ್ಲಿ ಸ್ಥಾಪಿಸಿ, ಅದರ ತುದಿಯನ್ನು



ಧರ್ಮ ಚಕ್ರವನ್ನೊಳಗೊಂಡ ಸಿಂಹ ಶೀರ್ಷಿಕೆಯಿಂದಲಂಕರಿಸಿದ. ಅವನ ಆಳ್ವಿಕೆಯ ಅನಂತರ ಶತಮಾನಗಳ ಮೇಲೆ ಭಾರತವನ್ನು ಸಂದರ್ಶಿಸಿದ ಚೀನ ದೇಶದ ಬೌದ್ಧಯಾತ್ರಿಕ ರಾದ ಫಾಹಿಯಾನ್, ಯುವಾನ್‌ಚಾಂಗ್ ಮತ್ತು ಇತ್ಸಿಂಗ್–ಇವರು ಸಾರಾನಾಥದ ಸ್ತಂಭವನ್ನು ನೋಡಿ ವಿಸ್ಮಿತರಾಗಿ, ಈ ಕೃತಿ ದೇವ ಶಿಲ್ಪಿಗಳಿಂದ ನಿರ್ಮಾಣ ವಾಗಿರಬೇಕೆಂದು ಅಭಿಪ್ರಾಯ ಪಟ್ಟರು. ಪಾಶ್ಚಾತ್ಯ ವಿದ್ವಾಂಸ ವಿನ್‌ಸೆಂಟ್ ಸ್ಮಿತ್ ಈ ಸ್ಮಾರಕವನ್ನು ವಿವರಿಸುತ್ತ ಶಿಲ್ಪಕಲೆ ಮೌರ್ಯರ ಕಾಲದಲ್ಲಿ ಸರ್ವೋತ್ಕೃಷ್ಟ ಮಟ್ಟವನ್ನು ಮುಟ್ಟಿತೆಂದೂ ಇಪ್ಪತ್ತನೆಯ ಶತಮಾನದಲ್ಲೂ ಎಣೆಯಿಲ್ಲದ ಶಿಲ್ಪಕಲಾಕೃತಿಯಾಗಿ ಉಳಿದಿದೆಯೆಂದೂ ಅಭಿಪ್ರಾಯ ಪಟ್ಟಿದ್ದಾನೆ. ಪ್ರಾಕ್ತನಶಾಖೆಯ ನಿರ್ದೇಶಕ ಮಾರ್ಷಲ್, ಸಾರಾನಾಥ ಸ್ಮಾರಕ ಪ್ರಾಚೀನ ಭಾರತದ ಶಿಲ್ಪಕಲೆಯ ಅತ್ಯಂತ ಶ್ರೇಷ್ಠವಾದ ಕೃತಿಯೆಂದು ಅಭಿಪ್ರಾಯಪಟ್ಟಿದ್ದಾನೆ. ಬೌದ್ಧಧರ್ಮ ಭಾರತದಲ್ಲಿ ಕ್ಷೀಣಿಸಿದ ಅನಂತರ ಸಾರಾನಾಥ ಪಟ್ಟಣ ಹಾಳಾಯಿತು; ಅಶೋಕನ ಸ್ತಂಭ ಮುರಿದು ಬಿತ್ತು. 18 ಮತ್ತು 19ನೆಯ ಶತಮಾನಗಳಲ್ಲಿ ನಡೆದ ಪ್ರಾಚ್ಯ ಸಂಶೋಧನೆಯ ಕಾಲದಲ್ಲಿ ಸಾರಾನಾಥದ ಅವಶೇಷಗಳು ಬೆಳಕಿಗೆ ಬಂದವು. ಕಂಬ ಮುರಿದು ಬಿದ್ದಾಗ ಚಕ್ರವನ್ನೊಳಗೊಂಡ ಸಿಂಹಶೀರ್ಷ ಸ್ವಲ್ಪಮಟ್ಟಿಗೆ ಹಾನಿಗೊಳಗಾದರೂ ತೀರ ಭಿನ್ನವಾಗದೆ ತನ್ನ ಸೌಂದರ್ಯವನ್ನುಳಿಸಿಕೊಂಡಿದೆ. ಸ್ತಂಭ ಸು. 50 ಅಡಿ ಎತ್ತರವಾಗಿದ್ದಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ಸಿಂಹಶೀರ್ಷದ ಕೆಳಭಾಗದಲ್ಲಿ ಗಂಟೆಯಾಕಾರದ ಒಂದು ಕಮಲಪುಷ್ಪವನ್ನು ಕೆತ್ತಲಾಗಿದೆ. ಇದು 2'ಗಳಷ್ಟು ಎತ್ತರವಾಗಿದೆ. ಅರಳಿದ ಕಮಲ ಹದಿನಾರು ದಳಗಳನ್ನು ಕೆಳಭಾಗಕ್ಕೆ ಒತ್ತಿಹಿಡಿದಂತೆ ಕೆತ್ತಲಾಗಿದೆ. ಗಂಟೆಯ ಆಕಾರದಲ್ಲಿ ಕೆತ್ತಲಾಗಿರುವ ಈ ಕಮಲದ ಮೇಲೆ ಚಕ್ರಾಕಾರವಾಗಿರುವ ಒಂದು ಪೀಠವಿದೆ. ಈ ಪೀಠ ಸುಮಾರು ಒಂದು ಅಡಿ ಎತ್ತರವಾಗಿಯೂ 2 ಅಡಿ 10 ಅಂಗುಲ ಸುತ್ತಳತೆಯಿಂದಲೂ ಕೂಡಿದೆ. ಈ ಪೀಠದಲ್ಲಿ ನಾಲ್ಕು ದಿಕ್ಕಿಗೂ ನಾಲ್ಕು ಚಕ್ರಗಳು ಮತ್ತು ಪ್ರತಿ ಎರಡು ಚಕ್ರಗಳ ಮಧ್ಯೆ ಒಂದೊಂದರಂತೆ ಆನೆ, ವೃಷಭ, ಕುದುರೆ, ಸಿಂಹ–ಈ ನಾಲ್ಕು ಪ್ರಾಣಿಗಳನ್ನು ಕೆತ್ತಲಾಗಿದೆ. ಈ ಪೀಠದ ಮೇಲ್ಭಾಗದಲ್ಲಿ ಒಂದೊಂದು ಚಕ್ರದ ಮೇಲೂ ಒಂದೊಂದು ಸಿಂಹದಂತೆ ನಾಲ್ಕು ದಿಕ್ಕುಗಳಿಗೂ ಮುಖ ಮಾಡಿ, ಬಾಯಿತೆರೆದಿರುವ ನಾಲ್ಕು ಸಿಂಹಗಳು ಬೆನ್ನಿಗೆ ಬೆನ್ನುಕೊಟ್ಟು ನಿಂತಿವೆ. ಪ್ರತಿಯೊಂದು ಸಿಂಹವೂ 3 ಅಡಿ 9 ಅಂಗುಲ ಎತ್ತರವಾಗಿದೆ. ಅಲ್ಲಿ ದೊರಕಿರುವ ಇನ್ನೂ ಕೆಲವು ಅವಶೇಷಗಳ ಆಧಾರದ ಮೇಲೆ ಸಿಂಹಶೀರ್ಷಕ್ಕೆ ಶಿಖರವಾಗಿ ಇನ್ನೊಂದು ದೊಡ್ಡ ಶಿಲಾಚಕ್ರವನ್ನು ನಾಲ್ಕು ಸಿಂಹಗಳ ನಡುವೆ ನೇರವಾಗಿ ನಿಲ್ಲಿಸಲಾಗಿತ್ತೆಂದು ವಿದ್ವಾಂಸರು ನಂಬಿದ್ದಾರೆ. ಪೀಠದಲ್ಲಿ ಕಡೆದಿರುವ ಪ್ರತಿಯೊಂದು ಚಕ್ರದಲ್ಲೂ 24 ಅರಗಳು ಇವೆ. ಮೇಲಿನ ಚಕ್ರದಲ್ಲಿ 32 ಅರಗಳಿದ್ದುವೆಂದು ತಿಳಿದು ಬಂದಿವೆ. ಚಕ್ರ ಸಂಕೇತಸೂಚಕವೆಂದೂ ಅದಕ್ಕೆ ವಿಶಿಷ್ಟವಾದ ಅರ್ಥವಿದೆಯೆಂದೂ ವಿದ್ವಾಂಸರು ನಂಬಿದ್ದಾರೆ. ಮೇಲಿನ ಮಹಾಚಕ್ರದ 32 ಅರಗಳು ಮಹಾಪುರುಷರಾದವರ 32 ಪುರುಷಲಕ್ಷಣಸೂಚಕವೆಂದೂ ಸಿಂಹಪೀಠದಲ್ಲಿನ ಚಕ್ರಗಳ 24 ಅರಗಳು ಕಾಲಗಣನೆಗೆ ಮಾನವಾದ ಸಂವತ್ಸರದ 24 ಪಕ್ಷಗಳನ್ನು ಸೂಚಿಸುವುದೆಂದೂ ಜ್ಞಾನಿಯಾದವ ಸದಾ ಕಾಲದಲ್ಲೂ ಎಚ್ಚರವಾಗಿರಬೇಕೆಂದೂ ಈ ಧರ್ಮಚಕ್ರ ಸದಾ ಜ್ಞಾಪಿಸುತ್ತಿರುತ್ತದೆ ಎಂದೂ ನಂಬಲಾಗಿದೆ. ಧರ್ಮಚಕ್ರಗಳನ್ನೊಳಗೊಂಡ ಪೀಠದ ಮೇಲಿರುವ ಪ್ರಾಣಿಗಳು ಬುದ್ಧದೇವನ ಹಿಂದಿನ ಜನ್ಮಗಳ ಸಂಕೇತವೆಂದು ಬೌದ್ಧಜಾತಕಗಳಿಂದ ತಿಳಿದುಬರುತ್ತದೆ. ಅಲ್ಲದೆ ಭಾರತೀಯ ಸಂಪ್ರದಾಯದಲ್ಲಿ ಚಕ್ರಕ್ಕೆ ಬ್ರಹ್ಮಾಂಡಚಕ್ರ, ಭವ ಚಕ್ರ, ಕಾಲಚಕ್ರ, ಧರ್ಮಚಕ್ರ, ಸುದರ್ಶನಚಕ್ರ ಮುಂತಾದ ಹಲವಾರು ಸಾಂಕೇತಿಕ ನಿರೂಪಣೆಗಳಿವೆ. ಬೌದ್ಧ ಪುರಾಣಗಳಲ್ಲಿ ಧರ್ಮಚಕ್ರಕ್ಕೆ

ಸಂಬಂಧಿಸಿದ ವ್ಯಾಖ್ಯಾನಗಳು ಹೇರಳವಾಗಿ ದೊರೆಯುತ್ತವೆ. ದಿವ್ಯಜ್ಞಾನವನ್ನು ಬುದ್ಧಗಯೆಯ ಬಳಿಯಲ್ಲಿ ಪಡೆದ ಅನಂತರ ಬುದ್ಧ ಧರ್ಮಚಕ್ರವನ್ನು ಪ್ರವರ್ತಿಸುವುದಕ್ಕಾಗಿ ಕಾಶೀನಗರಕ್ಕೆ ಹೋಗುವುದಾಗಿ ಹೇಳಿದನಂತೆ. ಮತ್ತೊಂದು ಸಂದರ್ಭದಲ್ಲಿ ಬುದ್ಧ ಸ್ತ್ರೀಯಾಗಲಿ ಪುರುಷನಾಗಲಿ ಇಂಥ ಯಾನದಿಂದ ನಿರ್ವಾಣದ ಸಮೀಪಕ್ಕೆ ಹೋಗುವವರು ಎಂಬುದಾಗಿ ಧರ್ಮಚಕ್ರದ ರೀತಿಯನ್ನು ಕುರಿತು ಹೇಳಿದನಂತೆ. ಕಳಿಂಗ ರಣರಂಗದ ಭೀಕರ ದೃಶ್ಯವನ್ನು ನೋಡಿದ ಸಾಮ್ರಾಟ್ ಅಶೋಕ ಬಹುವಾಗಿ ಮನನೊಂದ. ಇನ್ನು ಮುಂದೆ ಸಾಮ್ರಾಜ್ಯ ದಾಹಕ್ಕಾಗಿ ಯುದ್ಧ ಮಾಡುವುದಿಲ್ಲವೆಂದು ಸಂಕಲ್ಪ ಮಾಡಿದ. ಸಾಮ್ರಾಜ್ಯವನ್ನು ಅಶೋಕದತ್ತ ಒಯ್ಯಲು ಅದಕ್ಕಾಗಿ ತನ್ನ ಭೋಗ ಭಾಗ್ಯ ಸಂಪತ್ತು ಸರ್ವಸ್ವವನ್ನೂ ತ್ಯಾಗ ಮಾಡಿದ. ಭಗವಾನ್ ಬುದ್ಧನಿಂದ ಪ್ರಸಾರವಾದ ಧರ್ಮಕ್ಕೆ ಶರಣಾದ. ಅದರ ಪ್ರಸಾರಕ್ಕಾಗಿ ಇನ್ನೂ ಅನೇಕ ಕಾರ್ಯಕ್ರಮಗಳ ಜೊತೆಗೆ ಶಿಲಾಶಿಲ್ಪವನ್ನೂ ಧರ್ಮಲಿಪಿಯನ್ನೂ (ಶಾಸನ) ಆಚರಣೆಗೆ ತಂದ.



ಅಶೋಕ ನಿರ್ಮಿತ ಸಾರಾನಾಥ ಶಿಲಾ ಸ್ತಂಭದ ನೆತ್ತಿಯಲ್ಲಿನ ಸಿಂಹಕೂಟ. ಇಲ್ಲಿ ಸಿಂಹಗಳ ಪಾದದಡಿ ಇರುವ ಚಕ್ರವೇ ಭಾರತ ಧ್ವಜವನ್ನಲಂಕರಿಸಿರುವ 24 ಅರೆಗಳ ಅಶೋಕ ಚಕ್ರ. ಸಿಂಹಗಳ ನೆತ್ತಿಯನ್ನಲಂಕರಿಸಿ ಮೂವತ್ತೆರಡು ಅರೆಗಳ ಒಂದು ಮಹಾಚಕ್ರವಿತ್ತೆಂದು ಪ್ರತೀತಿ. ಅದರ ಅವಶೇಷಗಳು ಸಿಕ್ಕಿವೆ. ಇಲ್ಲಿನ ಚಿತ್ರದಲ್ಲಿ ಮಹಾ ಚಕ್ರವನ್ನು ಕಲ್ಪಿಸಿ ಕೊಡಲಾಗಿದೆ

ಸಾರಾನಾಥ ಸ್ಮಾರಕದ ಶಿಲಾಶಿಲ್ಪದಲ್ಲಿರುವ ಧರ್ಮಚಕ್ರವನ್ನು ಭಾರತದ ರಾಷ್ಟ್ರೀಯ ಬಾವುಟಕ್ಕೆ ಅಳವಡಿಸಿಕೊಳ್ಳಲಾಗಿದೆ. ಪಂಡಿತ್ ಜವಹರಲಾಲ್ ನೆಹರು ಭಾರತ ರಾಜ್ಯಾಂಗ ಸಭೆಯ ಧ್ವಜ ವಿಚಾರವನ್ನು ಮಂಡಿಸುತ್ತ ಭಾರತದ ರಾಷ್ಟ್ರಧ್ವಜ ಅಡ್ಡಗಲವಾಗಿದ್ದು, ಕೇಸರಿ, ಬಿಳುಪು, ಹಸುರು ಬಣ್ಣಗಳಿಂದ ಕೂಡಿದ್ದು, ನಡುವಣ ಬಿಳಿಯ ಪಟ್ಟಿಯ ಮಧ್ಯಭಾಗದಲ್ಲಿ ಚರಕದ ಪ್ರತಿನಿಧಿಯಾಗಿ ಒಂದು ಚಕ್ರ ಸಾಗರನೀಲವರ್ಣದಲ್ಲಿ ಇರತಕ್ಕದ್ದು; ಈ ಚಕ್ರದ ರಚನೆ ಸಾರಾನಾಥದ ಅಶೋಕ ಸ್ತಂಭದ ಸಿಂಹಶೀರ್ಷದ ಪೀಠದಲ್ಲಿ ಕಾಣುವ ಚಕ್ರದ ಮಾದರಿಯಾಗಿರತಕ್ಕದ್ದು; ಚಕ್ರದ ಅಡ್ಡಳತೆ ಬಿಳಿಪಟ್ಟಿಯ ಅಗಲದಷ್ಟಿರತಕ್ಕದ್ದು; ಬಾವುಟದ ಅಗಲಕ್ಕೂ ಉದ್ದಕ್ಕೂ 2:3 ಪ್ರಮಾಣ ಇರತಕ್ಕದ್ದು ಎಂಬುದಾಗಿ 1947ರ ಜುಲೈ 22 ರಂದು ಘೋಷಿಸಿದರು.

ಅಶೋಕನ ಕಾಲದಲ್ಲಿ ಭಾರತದಲ್ಲಿ ಮೂಡಿದ್ದ ಐಕ್ಯ, ಶಾಂತಿ, ಸಮೃದ್ಧಿ–ಇವುಗಳು ಅವನ ಆಳ್ವಿಕೆಯ ಮೊದಲಾಗಲೀ ಅನಂತರವಾಗಲೀ ನಮ್ಮ ನಾಡಿನಲ್ಲಿ ಕಾಣಬಂದಿಲ್ಲ. ಸಕಲ ಜೀವಿಗಳ ಕಲ್ಯಾಣವೇ ತನ್ನ ಕರ್ತವ್ಯವೆಂದು ಬಗೆದಿದ್ದವನೆಂದರೆ ಪ್ರಾಚೀನ ಭಾರತದ ಯುಗಪುರುಷ ಅಶೋಕ. ಆಧುನಿಕ ಯುಗದ ಅಹಿಂಸಾ ಅಧ್ವರ್ಯು ಮಹಾತ್ಮ ಗಾಂಧೀಜಿ ಯವರ ನೇತೃತ್ವದಲ್ಲಿ ಸ್ವಾತಂತ್ರ್ಯವನ್ನು ಪಡೆದ ಭಾರತ ಅಶೋಕ ಚಕ್ರವನ್ನು ತನ್ನ ಧ್ವಜಚಿಹ್ನೆಯನ್ನಾಗಿ ಆರಿಸಿಕೊಂಡಿರುವುದು ಅತ್ಯಂತ ಉಚಿತವಾಗಿದೆಯಲ್ಲದೆ ಭಾರತದ ಧ್ಯೇಯ ಸದ್ಧರ್ಮಸ್ಥಾಪನೆ ಎಂಬುದನ್ನು ಈ ಚಿಹ್ನೆ ಸೂಚಿಸುತ್ತದೆ. (ಜಿ.ಆರ್.ಆರ್.)

**ಅಶೋಕನ ಶಾಸನಗಳು :** ಭಾರತದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದವು. ಎಲ್ಲರಿಗೂ ಅರ್ಥವಾಗುವಂತೆ ಅತಿ ಸರಳವಾದ ಭಾಷೆಯಲ್ಲಿ ಧರ್ಮೋಪದೇಶವನ್ನು ಕಲ್ಲುಬಂಡೆಗಳ ಮೇಲೂ ಶಿಲಾಸ್ತಂಭಗಳ ಮೇಲೂ ಗವಿಗಳ ಗೋಡೆಯ ಮೇಲೂ ಆತ ಕೆತ್ತಿಸಿದ್ದಾನೆ. ಈ ಶಾಸನಗಳು ಅಶೋಕ ಚಕ್ರವರ್ತಿಯ ಸ್ವಂತ ಮಾತುಗಳಾಗಿ ಪಾಲಿ ಭಾಷೆಯಲ್ಲಿ, ಅತಿ ಪ್ರಧಾನವಾದ ಮತ್ತು ಜನರ ಕಣ್ಣಿಗೆ ಸುಲಭವಾಗಿ ಗೋಚರಿಸುವ ಪ್ರದೇಶಗಳಲ್ಲಿ ಕೆತ್ತಲ್ಪಟ್ಟಿವೆ. ಅವುಗಳಲ್ಲಿ ಧರ್ಮದ ಸ್ವರೂಪವೂ ಜನರ ನಡವಳಿಕೆಗಾಗಿ ನೀತಿನಿಯಮಗಳೂ ಇವೆ. ಈ ಶಾಸನಗಳು ಯಾವ ನಿಯತವಾದ ಕಾಲಮಾನವನ್ನೂ ಸೂಚಿಸದೆ ಅಶೋಕನ ಆಳ್ವಿಕೆಯ ವರ್ಷಗಳ ಗಣನೆಯನ್ನು ಮಾತ್ರ ಹೇಳುತ್ತವೆ.

ಭಾರತದ ವಾಯವ್ಯದಲ್ಲಿ ಹಿಂದೂಕುಷ್ ಪರ್ವತದಿಂದ ಹಿಡಿದು ಆಫ್ಘಾನಿಸ್ತಾನದ ಕೆಲವು ಭಾಗಗಳು, ಬಲೂಚಿಸ್ತಾನ, ಸಿಂಧೂದೇಶ–ಇವುಗಳನ್ನೊಳಗೊಂಡು ಪೂರ್ವದಲ್ಲಿ ಅಸ್ಸಾಂ ಅಥವಾ ಕಾಮರೂಪದವರೆಗೂ ಹರಡಿರುವ ಉತ್ತರ ಹಿಂದುಸ್ತಾನ ಮತ್ತು ಹಿಮಾಲಯ ಪರ್ವತದಿಂದ ಹಿಡಿದು ಮೈಸೂರು ದೇಶದ ಮೊಳಕಾಲ್ಮೂರುವರೆಗಿರುವ ಪೂರ್ವಪಶ್ಚಿಮ ಸಮುದ್ರಗಳ ಮಧ್ಯಪ್ರದೇಶಗಳಲ್ಲಿ ಅಲ್ಲಲ್ಲೇ ಒಟ್ಟೊಟ್ಟಾಗಿ ಅಥವಾ ಬಿಡಿಬಿಡಿಯಾಗಿ ಈ ಶಿಲಾಲೇಖನಗಳು ದೊರೆತಿವೆ. ಕಾಶ್ಮೀರ, ನೇಪಾಲ, ಕರ್ನಾಟಕ ಮೊದಲಾದ ಅವನ ಸೀಮಾಂತ ದೇಶಗಳಲ್ಲಿ ಶಾಸನಗಳು ದೊರೆತಿವೆ. ಇದುವರೆಗೂ ಅಶೋಕ ಬರೆಸಿರುವ ಒಂದು ನೂರ ಐವತ್ತೈದು ಶಿಲಾಲೇಖಗಳನ್ನು ಕಂಡುಹಿಡಿದು ಅವುಗಳನ್ನು ಪ್ರಕಟಿಸಲಾಗಿದೆ. 1956ರಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿ ಒಂದು ಶಾಸನ ಸಿಕ್ಕಿತು. 1962ರಲ್ಲಿ ಒಂದು ಹೊಸ ಶಾಸನ ದೊರೆತುದಾಗಿ ವರದಿಯಾಗಿತ್ತು. ಕರ್ನಾಟಕದ ಮಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರಗಳಲ್ಲೂ, 1977ರಲ್ಲಿ ಉದೆಗೊಳಂ (ಶಿರುಗುಪ್ಪ, ತಾಲ್ಲೂಕು ಬಳ್ಳಾರಿ, ಜಿಲ್ಲೆ) ಮತ್ತು ನಿಟ್ಟೂರಿನಲ್ಲಿ ಎರಡೆರಡು, 1989–90ರಲ್ಲಿ ಸನ್ನತಿಯಲ್ಲಿ ಕಳಿಂದ ಶಾಸನಗಳ ಪ್ರತಿ ಮತ್ತು 13 ಹಾಗೂ 14 ಹಿರಿ ಬಂಡೆ ಶಾಸನಗಳಿವೆ.

1. ಎರಡು ಗೌಣ ಶಿಲಾಶಾಸನಗಳು (ಪ್ರ.ಶ.ಪೂ. 257). ಮೊದಲನೆಯದರಲ್ಲಿ ಅಶೋಕನ ವೈಯಕ್ತಿಕ ಚರಿತ್ರೆಯೂ ಎರಡನೆಯದರಲ್ಲಿ ಧರ್ಮವೂ ಸಂಗ್ರಹವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಈ ಶಾಸನಗಳು ದೊರಕುವುದು ಸಹಸ್ರಾಂ (ಬಿಹಾರ್), ರೂಪನಾಥ್ (ಮಧ್ಯಪ್ರದೇಶ), ಬೈರಾಟ್ (ರಾಜಪುಟಾಣ), ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರ (ಚಿತ್ರದುರ್ಗ), ಮಸ್ಕಿ (ರಾಯಚೂರು), ಯೆರ್ರಗುಡಿ (ಕರ್ನೂಲು), ಕೊಪ್ಪಳ (ರಾಯಚೂರು)ಗಳಲ್ಲಿ. ಮಸ್ಕಿಶಾಸನವೊಂದೇ ಅಶೋಕನ ಹೆಸರನ್ನು ಹೇಳುತ್ತದೆ. ಇತರ ಶಾಸನಗಳಲ್ಲಿ ಅವನ ಹೆಸರು ಪ್ರಿಯದರ್ಶಿಯೆಂದೇ ಇದೆ.

2. ಪಂಗೊರರಿಯ ಶಾಸನ : 1975–76ರಲ್ಲಿ ಮಧ್ಯಪ್ರದೇಶದ ನಿಹೋರ್ ಜಿಲ್ಲೆಯ ಪಂಗೊರರಿಯದಲ್ಲಿಯ ಅಶೋಕನ ಜಂಡೆಶಾಸನ. ಇಲ್ಲಿ ಎರಡು ಶಾಸನಗಳಿವೆ. ಇವು ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿವೆ. ಮೊದಲನೆಯ ಶಾಸನದಲ್ಲಿ ಮಹಾರಾಜ ಪಿಯದಸಿ (ಪ್ರಿಯದರ್ಶಿ), ಕುಮಾರ (ರಾಜಕುಮಾರ) ಸಂವ. ಮನೆಯ ದೇಸ (ಮಧ್ಯಪ್ರದೇಶ) ದಲ್ಲಿರುವ ಉ(ಬ) ಪುನಿತ ವಿಹಾರಕ್ಕೆ ಯಾತ್ರೆ ಹೋಗುವಾಗ ಧಾರ್ಮಿಕ ಸಂದೇಶವನ್ನು ಮಗನ ಮೂಲಕ ಕಳುಹಿಸುತ್ತಿರುವುದಾಗಿದೆ. ಪ್ರಾರಂಭದಲ್ಲಿ 256 ಎಂಬ ಸಂಖ್ಯೆ ಇದೆ. ಎರಡನೆಯದು ಕಿರುಬಂಡೆಶಾಸನ. ಇದರಲ್ಲಿ ದೇವನಾಂಪಿಯ ಎಂಬ ಉಲ್ಲೇಖವಿದೆ.

3. ಭಾಬ್ರು ಶಾಸನ : ಇಲ್ಲಿ ಬೌದ್ಧ ಗ್ರಂಥಗಳಿಂದ ವಿಪುಲವಾಗಿ ಉದಾಹರಿಸಿರುವುದ ರಿಂದ ಅಶೋಕ ಬೌದ್ಧನಾದನೆಂಬುದಕ್ಕೆ ಆಧಾರವಿದೆ. ಕಾಲ ಲಘು ಶಾಸನಗಳದ್ದೇ.

4. ಹದಿನಾಲ್ಕು ಶಿಲಾಶಾಸನಗಳು : ಇವು ಅಶೋಕನ ರಾಜನೀತಿಯನ್ನೂ ನೀತಿ ಮಾರ್ಗವನ್ನೂ ವಿವರಿಸುತ್ತವೆ. ಕಾಲ ಪ್ರ.ಶ.ಪೂ.257. ಶಾಸನಗಳ ಪ್ರತಿಗಳು ಪೇಷಾವರ್ ಪ್ರಾಂತ್ಯದ ಷಾಬಾಸ್‌ಗಡಿ, ಮನ್‌ಸೇರಾ (ವಾಯವ್ಯಗಡಿ), ಕಾಲ್ಸಿ (ಡೆಹ್ರಾಡೂನ್), ಗಿರ್ನಾರ್ (ಸೌರಾಷ್ಟ್ರ), ಸೋಪಾರ (ಬೊಂಬಾಯಿ), ಧೌಳಿ (ಒರಿಸ್ಸ), ಜೌಗಡ (ಗಂಜಾಂ, ಒರಿಸ್ಸ), ಯರ್ರಗುಡಿ (ಆಂಧ್ರ)ಗಳಲ್ಲಿ ಸಿಕ್ಕಿವೆ.

5. ಕಳಿಂಗ ಶಾಸನಗಳು : ಕಳಿಂಗ ಯುದ್ಧವಾದ ಮೇಲೆ ಅಶೋಕ ಅನುಸರಿಸಿದ ಆಡಳಿತವ್ಯವಸ್ಥೆಯನ್ನು ವರ್ಣಿಸುತ್ತವೆ, ಗಡಿ ಪ್ರದೇಶದಲ್ಲಿ ವಾಸಿಸುವ ಜನರನ್ನು ಹೇಗೆ ನೋಡಿಕೊಳ್ಳಬೇಕೆಂದು ಸೂಚಿಸುತ್ತವೆ. ಇಲ್ಲಿನ ಎರಡು ಶಾಸನಗಳು, ಹನ್ನೆರಡು ಮತ್ತು ಹದಿಮೂರನೆಯ ಶಾಸನಗಳ ಆಜ್ಞೆಗಳ ಬದಲಾಗಿ ಕೆತ್ತಲ್ಪಟ್ಟಿವೆ.

6. ಬಿಹಾರ್ ಪ್ರಾಂತ್ಯದಲ್ಲಿರುವ ಬರಾಬರ್ ಬೆಟ್ಟದ ಗಡಿಗಳಲ್ಲಿನವು. ಗಯಾ ಪಟ್ಟಣಕ್ಕೆ 24ಕಿಮೀ ದೂರದಲ್ಲಿವೆ. ಇಲ್ಲಿ ಮೂರು ಶಾಸನಗಳಿವೆ. ಅಶೋಕ ಅಜೀವಿಕ ಸಾಧುಗಳಿಗೆ ದಾನ ಮಾಡಿದ ವಿಷಯವಿದೆ. ಕಾಲ ಪ್ರ.ಶ.ಪೂ. ಸು. 257–250.

7. ತೆರಾಯ್ ಸ್ತಂಭಶಾಸನಗಳು: ನೇಪಾಲದಲ್ಲಿವೆ. ಒಂದು ಬುದ್ಧನ ಜನ್ಮಸ್ಥಳವಾದ ರುಮಿಂಡೈ ಎಂಬಲ್ಲೂ ಮತ್ತೊಂದು ನಿಗ್ಲಿವ ಎಂಬಲ್ಲೂ ಇವೆ. ಕಾಲ ಸುಮಾರು ಪ್ರ.ಶ.ಪೂ. ಸು. 249. ಈ ಶಾಸನಗಳಲ್ಲಿ ಅಶೋಕ ಪ್ರಾಚೀನ ಬುದ್ಧರಿಗೆ ಭಕ್ತಿಯನ್ನು ಸಲ್ಲಿಸಿದ್ದಾನೆ.



ಚಿತ್ರ 1. ದೆಹಲಿ ತೋಪು ಸ್ತಂಭಶಾಸನ

8. ಏಳು ಸ್ತಂಭಶಿಲಾಶಾಸನಗಳು: ಕಾಲ ಪ್ರ.ಶ.ಪೂ. ಸು. 243–42. ಇವು ಶಿಲಾಶಾಸನಗಳ ಪರಿಶಿಷ್ಟ ಭಾಗಗಳಂತಿದ್ದು ಹಿಂದಿನ ಶಾಸನಗಳ ಬೋಧನೆಯನ್ನು ಒತ್ತಿ ಹೇಳುತ್ತವೆ. ಅತಿ ಮುಖ್ಯವಾದುವು ದೆಹಲಿ, ಅಲಹಾಬಾದ್, ತೌರಿಯ ಅರಾರಜ್, ಲೌರಿಯ ನಂದನಗಡ ಮತ್ತು ರಾಮಪೂರ್ವಗಳಲ್ಲಿ ಇವೆ. ಉಳಿದವು ಇಂದಿನ ಬಿಹಾರದ ಚಂಪಾರಣ್ಯ ಪ್ರದೇಶಗಳಲ್ಲಿವೆ.

9. ನಾಲ್ಕು ಚಿಕ್ಕ ಶಿಲಾಸ್ತಂಭಶಾಸನಗಳು: ಕಾಲ ಪ್ರ.ಶ.ಪೂ. ಸು. 243–32. ಪ್ರತಿಗಳು ಅಲಹಾಬಾದ್, ಸಾಂಚಿ ಮತ್ತು ಸಾರಾನಾಥ್ ಪ್ರದೇಶಗಳಲ್ಲಿವೆ.

ಸಾವಿರಾರು ವರ್ಷಗಳಿಂದಲೂ ಅಶೋಕನ ಧರ್ಮಸಂದೇಶಗಳು ಶಿಲೆಯಲ್ಲಿ ಅಚ್ಚಳಿಯದಂತೆ ನಿಂತಿವೆ. ಇವುಗಳಲ್ಲಿ ಮುಖ್ಯವಾಗಿ ಅಶೋಕ ಕಳಿಂಗದ ಯುದ್ಧವಾದ ಮೇಲೆ ಅನುಭವಿಸಿದ ದುಃಖವೂ ಪಶ್ಚಾತ್ತಾಪವೂ ವರ್ಣಿತವಾಗಿವೆ. ಕೆಲವು ಶಾಸನಗಳು ಸ್ಥಳೀಯ ಅಧಿಕಾರಿಗಳಿಗೆ ಬುದ್ಧಿವಾದ ರೂಪವಾಗಿ ಕರ್ತವ್ಯಪರಿಪಾಲನೆಯನ್ನು ತಿಳಿಸುತ್ತವೆ. ಆದಷ್ಟು ಹೆಚ್ಚು ಶಾಸನಗಳನ್ನು ಕೊರೆಯಿಸಬೇಕೆಂದು ಅಶೋಕನೇ ಆಜ್ಞೆ ಮಾಡಿದ್ದಾನೆ. ತನ್ನ ಮಾತುಗಳನ್ನು ಸರಿಯಾಗಿ ಎಲ್ಲಿ ಲಿಪಿಕಾರರು ಕೊರೆಯುವುದಿಲ್ಲವೋ ಎಂಬ



ಚಿತ್ರ 2. ಅಶೋಕನ ರುಮಿಂದ್ಯೈ ಶಿಲಾಶಾಸನ

ಶಂಕೆಯನ್ನೂ ವ್ಯಕ್ತಪಡಿಸಿದ್ದಾನೆ. 7ನೆಯ ಧರ್ಮಶಾಸನದಲ್ಲಿ ಧರ್ಮವು ಸೂರ್ಯಚಂದ್ರರಿರುವವರೆಗೂ ಶಾಶ್ವತವಾಗಿರಲೆಂದು ಹಾರೈಸಿದ್ದಾನೆ. 4ನೆಯ ಶಿಲಾಶಾಸನದಲ್ಲಿ ಮುಂದಿನ ಪೀಳಿಗೆಗೂ ಧರ್ಮದ ಆವಶ್ಯಕತೆ ಇದೆಯೆಂಬುದನ್ನು ಒತ್ತಿ ಹೇಳಿದ್ದಾನೆ. ನೆರೆಹೊರೆಯ ರಾಷ್ಟ್ರಗಳಲ್ಲೂ ಗಡಿನಾಡಿನ ಜನರಲ್ಲೂ ಐಕ್ಯ, ಶಾಂತಿಗಳನ್ನು ಘೋಷಿಸಿದ್ದಾನೆ. ಚಿಕ್ಕ ಶಿಲಾಶಾಸನಗಳಲ್ಲಿ ಸ್ವತಂತ್ರ ರಾಷ್ಟ್ರದ ಜನರೂ ಧರ್ಮಾಚರಣೆಯನ್ನು ಮಾಡಬೇಕೆಂದು ಹೇಳಿದ್ದಾನೆ. 13ನೆಯ ಶಾಸನದಲ್ಲಿ ಗೆದ್ದ ರಾಜ್ಯದ ಜನರಿಗೆ ಅಭಯವನ್ನು ಇತ್ತಿದ್ದಾನೆ. 12ನೆಯ ಶಾಸನದಲ್ಲಿ ಮತಸಹಿಷ್ಣುತೆಯನ್ನು ಸಾರಿ ಸಾರಾನಾಥ್ ಶಾಸನದಲ್ಲಿ ಭಿಕ್ಷುಗಳು ಪಕ್ಷಛಿದ್ರತೆಯನ್ನು ಬೆಳೆಸಬಾರದೆಂದು ಬುದ್ಧಿ ಹೇಳಿದ್ದಾನೆ. ಕೌಶಾಂಬಿ ಶಾಸನದಲ್ಲಿ ಮಹಾಮಾತ್ರರಿಗೆ ಚಕ್ರವರ್ತಿಯ ಬುದ್ಧಿವಾದವಿದೆ. ಭಾಬ್ರು ಶಾಸನದಲ್ಲಿ ವಿನಯಪಿಟಕದಿಂದ ಭಿಕ್ಷು ಭಿಕ್ಷುಣಿಯರಿಗೆ ಉಪದೇಶವಿದೆ. ಮಾದರಿಗಾಗಿ ಅಶೋಕನ ಒಂದು ಶಿಲಾಶಾಸನದ ಪೂರ್ಣ ಅನುವಾದವನ್ನು ಇಲ್ಲಿ ಕೊಡಲಾಗಿದೆ.

ಅಭಿಷಿಕ್ತನಾಗಿ ಎಂಟು ವರ್ಷಗಳಾದಾಗ ದೇವಾನಾಂಪ್ರಿಯ ಪ್ರಿಯದರ್ಶಿ ರಾಜ ಕಲಿಂಗವನ್ನು ಜಯಿಸಿದ. ಶತಸಹಸ್ರ ಜನರು ಅಲ್ಲಿ ಹತರಾದರು. ಈಗ ಕಲಿಂಗರು ಕೈವಶರಾದ ಅನಂತರ ದೇವಾನಾಂಪ್ರಿಯನ ಧರ್ಮಪಾಲನೆ ಧರ್ಮಕಾಮತೆ ಹಾಗೂ ಧರ್ಮಾನುಶಾಸ್ತಿ ತೀವ್ರವಾದುವು. ಕಲಿಂಗವನ್ನು ಜಯಿಸಿದ್ದಕ್ಕಾಗಿ ದೇವಾನಾಂಪ್ರಿಯ ಶೋಕಿಸುತ್ತಾನೆ. ಏಕೆಂದರೆ ಅದುವರೆಗೂ ಜಯಿಸದೆ ಇದ್ದ ಒಂದು ದೇಶವನ್ನು ಜಯಿಸುವಾಗ ಅಲ್ಲಿ ವಧೆಯೂ ಮರಣವೂ ಸೆರೆಯೂ ನಡೆಯುವುದರಿಂದ ದೇವಾನಾಂಪ್ರಿಯನಿಗೆ ಬಹಳ ವೇದನೆ ಉಂಟಾಗಿದೆ. ಅಲ್ಲದೆ, ಹಿರಿಯರ ಶುಶ್ರೂಷೆ ಮಾತಾಪಿತೃಗಳ ಶುಶ್ರೂಷೆ ಗುರುಶುಶ್ರೂಷೆ ಮಿತ್ರರು ಇಷ್ಟರು ಜ್ಞಾತಿಗಳು ದಾಸರು ಭೃತ್ಯರು ಇವರಲ್ಲಿ ಸಂಪ್ರತಿಪತ್ತಿ ದೃಢಭಕ್ತಿ ಮುಂತಾದುವುಗಳಿಂದ ಕೂಡಿ, ಅಲ್ಲಿ ವಾಸವಾಗಿದ್ದ ಬ್ರಾಹ್ಮಣರಿಗಾಗಲಿ ಶ್ರಮಣರಿಗಾಗಲಿ ಇತರ ಧರ್ಮದವರಿಗಾಗಲಿ ಗೃಹಸ್ಥರಿಗಾಗಲಿ ಗಾಯ ನೋವು ಸಾವು ನಂಟರಿಷ್ಟರ ಅಗಲಿಕೆ ಇವು ಸಂಭವಿಸುವುದರಿಂದ ದೇವಾನಾಂಪ್ರಿಯನಿಗೆ ಇನ್ನೂ ಹೆಚ್ಚಿನ ವೇದನೆ ಉಂಟಾಗಿದೆ. ಅಥವಾ ತಾವು ನೆಮ್ಮದಿಯಿಂದಿದ್ದರೂ ತಾವು ತುಂಬಾ ಸ್ನೇಹದಿಂದ ಪ್ರೀತಿಸುವ ಇಷ್ಟಮಿತ್ರರು, ಪರಿಚಿತರು, ನಂಟರು ಇವರಿಗೆ ಅಪಘಾತಗಳಾದರೆ ಅಂತಹವರು ಆ ಅಪಘಾತ ತಮಗಾದಂತೆಯೇ ಪರಿತಪಿಸುವರು. ಹೀಗೆ, ಆದ ಕಷ್ಟಗಳಲ್ಲಿ ಸರ್ವ ಮನುಷ್ಯರೂ ಭಾಗಿಗಳಾದರೂ ದೇವಾನಾಂಪ್ರಿಯನ ಪಾಲು ಹೆಚ್ಚಿನದು. ಯವನರ ಜನಪದವನ್ನು ಬಿಟ್ಟರೆ, ಬ್ರಾಹ್ಮಣ ಶ್ರಮಣರಿಲ್ಲದ ಜನಪದವೇ ಇಲ್ಲ. ಯಾವುದಾದರೊಂದು ಮತದಲ್ಲಿ ಶ್ರದ್ಧೆ ಇಲ್ಲದ ಮನುಷ್ಯರು ಎಲ್ಲಿಯೂ ಇಲ್ಲ. ಆದ್ದರಿಂದ, ಕಲಿಂಗ ದೇಶದಲ್ಲಿ ಹತರಾದ, ಗಾಯಗೊಂಡ ಜನರ ನೂರರಲ್ಲೊಂದು ಭಾಗವಾಗಲಿ ಸಾವಿರದಲ್ಲೊಂದು ಭಾಗವಾಗಲಿ ಈಗ ಅದೇ ಕಷ್ಟಕ್ಕೊಳಗಾದರೆ ದೇವಾನಾಂಪ್ರಿಯನಿಗೆ ವೇದನೆ ಉಂಟಾಗುತ್ತದೆ. ಯಾರಾದರೂ ಅಪಕಾರ ಮಾಡಿದರೂ ಕೂಡ ಕ್ಷಮ್ಯವಾದದ್ದನ್ನೆಲ್ಲ ಕ್ಷಮಿಸತಕ್ಕದ್ದೆಂದು ದೇವಾನಾಂಪ್ರಿಯನು ಭಾವಿಸುವನು.

ಈಗ ತಾನು ಜಯಿಸಿರುವ ಅಟವೀಜನ ಕೂಡ ತನ್ನಂತೆ ನಡೆಯಲು ತನ್ನಂತೆಯೇ ವಿಚಾರಮಾಡಲು ಅವನು ಪ್ರೇರಿಸುವನು.

ಹೀಗೆ ದೇವಾನಾಂಪ್ರಿಯ ಅನುತಾಪ ಪಡುತ್ತಿದ್ದರೂ ಅವನು ಪ್ರಭಾವಶಾಲಿಯಾದ್ದರಿಂದ ಅವರು ತಮ್ಮ ತಪ್ಪುಗಳಿಗೆ ನಾಚಿ ನಡೆಯಲಿ; ತಪ್ಪು ಮಾಡಿ ಅವರು ಹತರಾಗದಿರಲಿ. ದೇವಾನಾಂಪ್ರಿಯ ಸರ್ವಭೂತಗಳಿಗೂ ಅಕ್ಷತಿಯನ್ನೂ ಸಂಯಮವನ್ನೂ ಸಮಚರ್ಯೆಯನ್ನೂ ಮಾರ್ದವವನ್ನೂ ಇಚ್ಛಿಸುತ್ತಾನೆ.ದೇವಾನಾಂಪ್ರಿಯ ಧರ್ಮವಿಜಯವನ್ನೇ ಮುಖ್ಯವಾದ ವಿಜಯವೆಂದು ಭಾವಿಸುತ್ತಾನೆ. ಇಲ್ಲಿಯೂ ಎಲ್ಲ ಹಂತಗಳಲ್ಲಿಯೂ ಆರುನೂರು ಯೋಜನಗಳವರೆಗೂ, ಅಂತಿಯೋಕ ಎಂಬ ಯವನರಾಜ, ಆ ಅಂತಿಯೋಕನ ಆಚೆ ನಾಲ್ಕು ರಾಜರು–ತುರಮಾಯ(ಟಾಲಮಿ), ಅಂತಿಕಿನಿ (ಆಂಟಿಗೊನಸ್), ಮಕ (ಮಗಸ್), ಅಲಿಕಸುದ(ಅಲೆಕ್ಸಾಂಡರ್) ಕೆಳಗೆ ಚೋಳ ಪಾಂಡ್ಯ ತಾಮ್ರಪರ್ಣಿತನಕ ದೇವಾನಾಂಪ್ರಿಯನಿಗೆ ಈ ಧರ್ಮವಿಜಯ ಮತ್ತೆ ಮತ್ತೆ ದೊರೆತಿದೆ.

ಹಾಗೆಯೇ ಇಲ್ಲಿ ರಾಜವಿಷಯದಲ್ಲೂ ಯವನ ಕಾಂಭೋಜರಲ್ಲೂ ನಭಕ ನಾಭ ಪಂಕ್ತಿಯರಲ್ಲೂ ಭೋಜಪಿಟಿನಿಕರಲ್ಲೂ ಆಂಧ್ರಪುಳಿಂದರಲ್ಲೂ ದೇವಾನಾಂಪ್ರಿಯನ ಧರ್ಮಾನುಶಾಸ್ತಿಯನ್ನು ಅನುಸರಿಸುವರು. ದೇವಾನಾಂಪ್ರಿಯನ ದೂತರು ಹೋಗದ ಕಡೆಗಳಲ್ಲಿ ಕೂಡ ಜನರು ದೇವಾನಾಂಪ್ರಿಯನ ಧರ್ಮವೃತ್ತವನ್ನೂ ವಿಧಾನವನ್ನೂ ಧರ್ಮಾನುಶಾಸ್ತಿಯನ್ನೂ ಕೇಳಿ ಅದನ್ನನುಸರಿಸುತ್ತಿರುವರು; ಮುಂದೆಯೂ ಅನುಸರಿಸುವರು.

ಇದರಿಂದ ಎಲ್ಲ ಕಡೆಗಳಲ್ಲೂ ವಿಜಯ ದೊರೆತಿದೆ. ಈ ವಿಜಯದಿಂದ ಎಲ್ಲ ಕಡೆಗಳಲ್ಲೂ ಪ್ರೀತಿ ಉಂಟಾಗಿದೆ. ಧರ್ಮವಿಜಯದಿಂದ ಪ್ರೀತಿ ಲಭಿಸುತ್ತದೆ. ಹಾಗೆ ಲಭಿಸಿದ ಪ್ರೀತಿ ಸ್ವಲ್ಪವಾದರೂ ಕೂಡ, ಪರದಲ್ಲಿ ಅದರಿಂದ ಮಹತ್ತಾದ ಫಲವುಂಟೆಂದು ದೇವಾನಾಂಪ್ರಿಯ ತಿಳಿದಿರುವನು. ಇದಕ್ಕಾಗಿಯೇ ಈ ಧರ್ಮಲಿಪಿಯನ್ನು ಬರೆಸಿರುವುದು : ನನ್ನ ಪುತ್ರರೂ ಪ್ರಪೌತ್ರರೂ ಹೊಸ ವಿಜಯವನ್ನು ಗಳಿಸಬೇಕೆಂದು ಯೋಚಿಸದಿರಲಿ. ಒಂದು ವೇಳೆ ಅವರಿಗೆ ಹೊಸ ವಿಜಯ ರುಚಿಕರವಾಗಿ ಕಂಡುಬಂದರೂ ಅವರಿಗೆ ಕ್ಷಮೆಯೂ ಲಘುವಾದ ದಂಡನೆಗಳನ್ನು ಕೊಡುವ ಯೋಚನೆಯೂ ರುಚಿಸಲಿ. ಧರ್ಮವಿಜಯವೇ ವಿಜಯವೆಂದು ಅವರು ತಿಳಿಯಲಿ. ಇಹಲೋಕಕ್ಕೂ ಪರಲೋಕಕ್ಕೂ ಅದೇ. ಉಳಿದವುಗಳಲ್ಲಿ ಆಸೆಯನ್ನು ತೊರೆದು ಅವರು ಧರ್ಮರತಿಯನ್ನೇ ಬೆಳೆಸಲಿ. ಇಹ ಲೋಕಕ್ಕೂ ಪರಲೋಕಕ್ಕೂ ಅದೇ!



ಚಿತ್ರ 3. ಬ್ರಾಹ್ಮೀಲಿಪಿ ಶಾಸನ

**ಅಶೋಕನ ಶಾಸನಗಳ ಲಿಪಿ** : ಶಾಸನಗಳೆಲ್ಲ ಬ್ರಾಹ್ಮೀ ಮತ್ತು ಖರೋಷ್ಠಿ ಲಿಪಿಗಳಲ್ಲಿವೆ. ಬ್ರಾಹ್ಮೀ ಬರೆಹವನ್ನು ಎಡಗಡೆಯಿಂದ ಬಲಗಡೆಗೂ ಖರೋಷ್ಠಿಯನ್ನು ಈಗಿನ ಉರ್ದು ಭಾಷೆಯಂತೆ ಬಲದಿಂದ ಎಡಕ್ಕೂ ಓದಬೇಕು. ಷಾಭಾಷ್‌ಗಡಿಯಲ್ಲಿರುವ ಹದಿನಾಲ್ಕು ಶಾಸನಗಳು, ಮನ್ಸೇರಾದಲ್ಲಿರುವ ಒಂದು ಶಾಸನ–ಒಟ್ಟು ಹದಿನೈದು ಶಾಸನಗಳು ಖರೋಷ್ಠಿಲಿಪಿಯಲ್ಲಿವೆ. ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಶಾಸನದ ಕೊನೆಯ ಪಂಕ್ತಿ ಖರೋಷ್ಠಿಯಲ್ಲಿದೆ. 1928–29ರಲ್ಲಿ ರಾವ್ ಬಹದ್ದೂರ್ ದಯಾರಾಮ್ ಸಾಹನಿಯವರು ಪ್ರಕಟಿಸಿರುವ ಶಾಸನದಲ್ಲಿ ಎಂಟು ಪಂಕ್ತಿಗಳು ಖರೋಷ್ಠಿಯಲ್ಲೂ ಉಳಿದ ಹದಿನೈದು ಬ್ರಾಹ್ಮೀ ಲಿಪಿಯಲ್ಲೂ ಇವೆ.

ಈ ಲಿಪಿಗಳ ಮೂಲ ಸರಿಯಾಗಿ ತಿಳಿದುಬಂದಿಲ್ಲ. ಈಗ ಭಾರತದಲ್ಲಿ ಪ್ರಚಾರವಿರುವ ಎಲ್ಲ ಪ್ರಾಂತ್ಯಗಳ ಭಾಷೆಗಳ ಲಿಪಿಗಳಿಗೆಲ್ಲ ಬ್ರಾಹ್ಮೀಲಿಪಿಯೇ ಆಧಾರವೆಂದು ನಿಷ್ಕರ್ಷಿಸಿರುವರು. ಸಿಂಧೂನದೀ ತೀರದ ಹರಪ್ಪ ಮಹೆಂಜೊದಾರೋ ಪ್ರದೇಶಗಳಲ್ಲಿ ಸಿಕ್ಕಿರುವ ಮುದ್ರಿಕೆಗಳ ಲ್ಲಿರುವ ಚಿತ್ರಲಿಪಿಗೂ ಬ್ರಾಹ್ಮೀ ಖರೋಷ್ಠಿ ಲಿಪಿಗಳಿಗೂ ನಡುವಣ (2000 ವರ್ಷಗಳು) ಸಂಬಂಧ ತಿಳಿಸುವ ಯಾವ ಬರೆವಣಿಗೆಯೂ ದೊರೆತಿಲ್ಲ. ಲಿಪಿ ಶಬ್ದ ಪ್ರಯೋಗವನ್ನು ಪಾಣಿನಿ ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಮಾಡಿದ್ದಾನೆ. ಇದು ಪಾರ್ಸಿ ಭಾಷೆಯಿಂದ ಹುಟ್ಟಿದುದೆಂದು ಬೇಲಿ ಎಂಬ ವಿದ್ವಾಂಸ ಅಭಿಪ್ರಾಯ ಪಡುತ್ತಾನೆ.

ಭಾರತದಲ್ಲಿ ಬರೆವಣಿಗೆ ಬೌದ್ಧರ ಕಾಲದಿಂದಲೇ ಪ್ರಚಾರವಾಯಿತೆಂದು ಹೇಳಬಹುದು. ಪ್ರ.ಶ.ಪೂ. 5ನೆಯ ಶತಮಾನದ ಶೀಲಸುತ್ತ ಎಂಬ ಬೌದ್ಧ ಗ್ರಂಥದಲ್ಲಿ ಅಕ್ಖರಿಕ ಎಂಬ ಮಕ್ಕಳ ಆಟದ ವಿಷಯವಿದೆ. ಬುದ್ಧ ಚಿಕ್ಕವನಾಗಿದ್ದಾಗಲೇ ಬರೆವಣಿಗೆ ಕಲಿತನೆಂದು ಲಲಿತವಿಸ್ತಾರ ಎಂಬ ಗ್ರಂಥದಲ್ಲಿ ಹೇಳಿದೆ. ಈ ಗ್ರಂಥದಲ್ಲಿಯೇ ಬ್ರಾಹ್ಮೀಲಿಪಿಯ 64 ಪ್ರಭೇದಗಳು ಹೇಳಲ್ಪಟ್ಟಿವೆ. ಆದರೆ ಅಶೋಕನ ಬ್ರಾಹ್ಮೀಲಿಪಿಯಲ್ಲಿ ಔತ್ತರೇಯ, ದಾಕ್ಷಿಣಾತ್ಯ ಎಂಬ ಭೇದಗಳು ಮಾತ್ರ ಕಾಣುತ್ತವೆ.

**ಶಾಸನಗಳ ಭಾಷೆ :** ಬ್ರಾಹ್ಮೀ ಮತ್ತು ಖರೋಷ್ಠಿ ಲಿಪಿಗಳ ಭಾಷೆ ಪ್ರಾಕೃತ. ಈ ಕಾಲದಲ್ಲಿ ಹುಟ್ಟಿದ ಜೈನ, ಬೌದ್ಧ ಮತ ಗ್ರಂಥಗಳೆಲ್ಲ ಪ್ರಾಕೃತ ಭಾಷೆಯಲ್ಲೇ ಇವೆ. ಅಶೋಕನ ಶಾಸನದ ಭಾಷೆಯನ್ನು ಅರ್ಧಮಾಗಧಿ ಎಂದು ಕರೆಯುವರು. ಭಾರತದ ಎಲ್ಲ ಕಡೆಯಲ್ಲೂ ಪ್ರ.ಶ.ಪೂ. 6ನೆಯ ಶತಮಾನದಿಂದ 3ನೆಯ ಶತಮಾನದವರೆಗೆ ಪ್ರಾಕೃತ ಭಾಷೆ ವ್ಯವಹಾರದಲ್ಲಿತ್ತೆಂದು ಆ ಕಾಲಗಳಲ್ಲಿನ ಶಾಸನಗಳಿಂದ ತಿಳಿಯಬಹುದಾಗಿದೆ.

ಈ ಶಾಸನಗಳನ್ನು ಓದಿ ಅರ್ಥವಿವರಣೆ ಕೊಟ್ಟ ಯಶಸ್ಸು ಜೇಮ್ಸ್ ಪ್ರಿನ್ಸೆಪ್ ಎಂಬ ವಿದ್ವಾಂಸನಿಗೆ ಸಲ್ಲತಕ್ಕದ್ದು. ದೇಶದ ನಾನಾ ಭಾಗಗಳಲ್ಲಿ ದೊರೆತ ಅಶೋಕನ ಶಾಸನಗಳ ಪ್ರತಿಯಿಟ್ಟುಕೊಂಡು ಅವುಗಳಲ್ಲಿ ಬರುವ ಒಂದೇ ವಿಧವಾದ ಚಿಹ್ನೆಗಳನ್ನು ಬೇರೆ ಬರೆದು ಅವುಗಳಿಗೆ ಶಬ್ದಸ್ವರೂಪ ಕೊಟ್ಟು ಕೆಲವು ಶಾಸನಗಳನ್ನು ಪ್ರಕಟಿಸಿದ ಮೇಲೆ ಅದೇ ಮಾರ್ಗವನ್ನನುಸರಿಸಿ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ಆಯಾ ಪ್ರಾಂತ್ಯಗಳಲ್ಲಿ ದೊರೆತ ಶಾಸನಗಳನ್ನು ಓದಿ ಪ್ರಕಟಿಸಿದರು. ಮೈಸೂರು ರಾಜ್ಯದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಸಿದ್ಧಾಪುರದ ಸಮೀಪದಲ್ಲೇ ಇರುವ ಎಮ್ಮೆತಮ್ಮನ ಗುಂಡು ಎಂದು ಕರೆಯುವ ಬಂಡೆಯ ಶಾಸನ, ಅದಕ್ಕೆ ಮೂರು ಮೈಲಿ ದೂರದಲ್ಲಿರುವ ಜಟಿಂಗ ರಾಮೇಶ್ವರ ಬೆಟ್ಟದ ಮೇಲಿನ ಶಾಸನ, ಒಟ್ಟು ಮೂರು ಅಶೋಕನ ಶಾಸನಗಳನ್ನು ಬಿ. ಎಲ್. ರೈಸ್ ಎಪಿಗ್ರಾಫಿಯ ಕರ್ನಾಟಿಕ ಎಂಬ ಕನ್ನಡ ಶಾಸನಗಳ ಗ್ರಂಥದಲ್ಲಿ ಪ್ರಕಟಿಸಿದ್ದಾರೆ. ಅಶೋಕನ ಶಾಸನಗಳು ಮೊದಮೊದಲು ರಾಯಲ್ ಏಷ್ಯಾಟಿಕ್ ಸೊಸೈಟಿಯ ಬಂಗಾಳ, ಬೊಂಬಾಯಿ, ಲಂಡನ್ ಶಾಖೆಗಳ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅನಂತರ ಇಂಡಿಯನ್ ಆ್ಯಂಟಿಕ್ವೆರಿ, ಎಪಿಗ್ರಾಫಿಯ ಇಂಡಿಕ, ಎಪಿಗ್ರಾಫಿಯ ಕರ್ನಾಟಿಕ ಮೊದಲಾದ ಗ್ರಂಥಗಳಲ್ಲಿ ಈ ಶಾಸನಗಳನ್ನು ಓದಿ ಟೀಕೆ ಟಿಪ್ಪಣಿಗಳನ್ನು ಮಾಡಿ ಪ್ರಕಟಿಸಿದ್ದಾರೆ. 1922ರವರೆಗೆ ಸಂಗ್ರಹಿಸಿದ ಅಶೋಕನ ಶಾಸನಗಳನ್ನೆಲ್ಲ ಸಂಗ್ರಹಿಸಿ ಹುಲ್ಷ್ ಎಪಿಗ್ರಾಫಿಯ ಇಂಡಿಕದ ಮೊದಲನೆಯ ಸಂಪುಟದಲ್ಲಿ ಶಾಸನಗಳ ಮೂಲ ರೂಪ, ಅದರ ಇಂಗ್ಲಿಷ್ ಭಾಷಾಂತರ, ಲಿಪಿ, ಭಾಷೆ ಮೊದಲಾದ ವಿಷಯಗಳನ್ನೆಲ್ಲ ವಿಮರ್ಶಾಪೂರ್ವಕವಾಗಿ ವಿವರಿಸಿ ಒಂದು ದೊಡ್ಡ ಉದ್ಗ್ರಂಥವನ್ನು ಪ್ರಕಟಿಸಿದ್ದಾರೆ. (ಆರ್.ಸಿ.; ಆರ್.ಸಿ.ಬಿ.)

**ಅಶೋಕ ಪೈ, ಕೆ.ಎ.:** 1946–. ಪ್ರಸಿದ್ಧ ಚಿಕಿತ್ಸಕ ಮನೋವಿಜ್ಞಾನಿ, ಲೇಖಕ, ಸಮಾಜಸೇವಕ ಹಾಗೂ ಚಲನಚಿತ್ರ ಸಾಹಿತಿ, ನಿರ್ಮಾಪಕ. 1946 ಡಿಸೆಂಬರ್ 30ರಂದು ಶಿವಮೊಗ್ಗದಲ್ಲಿ ಜನಿಸಿದರು. ತಂದೆ ಕಟೀಲು ಅಪ್ಪು ಪೈ, ತಾಯಿ ವಿನೋದಾಬಾಯಿ. ಅಶೋಕ ಪೈ ಅವರ ಆರಂಭಿಕ ಶಿಕ್ಷಣ ಶಿವಮೊಗ್ಗದ ಮೇರಿ ಇಮ್ಯಾಕ್ಯುಲೇಟ್ ಕಾನ್ವೆಂಟ್, ದೇಶೀಯ ವಿದ್ಯಾಶಾಲೆ ಮತ್ತು ಸಹ್ಯಾದ್ರಿ ಕಾಲೇಜುಗಳಲ್ಲಿ ನಡೆಯಿತು. ವೈದ್ಯಕೀಯ ಶಿಕ್ಷಣವನ್ನು ಬೆಳಗಾಂವಿಯ ಜವಾಹರಲಾಲ ನೆಹರು ವೈದ್ಯಕೀಯ ವಿದ್ಯಾಲಯದಲ್ಲಿ ಮುಗಿಸಿದರು. ಚಿಕಿತ್ಸಕ ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ನಿಮ್ಹಾನ್ಸ್‌ನಿಂದ ಪಡೆದರು. ಅನಂತರ ವರ್ತನಾ ವೈದ್ಯಕೀಯ ಸಲಹೆ ಮತ್ತು ಮಾನಸಿಕ ಚಿಕಿತ್ಸೆಯಲ್ಲಿ ಫೆಲೋಶಿಪ್ ಮತ್ತು ಡಿಪ್ಲೊಮೊಗಳನ್ನು ಅಮೆರಿಕದ ಪ್ರತಿಷ್ಠಿತ ಅಂತಾರಾಷ್ಟ್ರೀಯ ಅಕಾಡೆಮಿ ಆಫ್ ಬಿಹೆವಿಯರಲ್ ಮೆಡಿಸನ್ (ಡಲ್ಲಾಸ್) ಸಂಸ್ಥೆಯಿಂದ ಪಡೆದರು. ಜವಾಹರಲಾಲ ನೆಹರು ವೈದ್ಯಕೀಯ ಕಾಲೇಜಿನಲ್ಲಿ ಸೈಕೋ ಫಾರ್ಮಾಕಾಲಜಿ ಅಧ್ಯಾಪಕರಾಗಿ ಕೆಲಕಾಲ ಸೇವೆಸಲ್ಲಿಸಿದರು. ಮಣಿಪಾಲಿನ ಕಸ್ತೂರ ಬಾ ವೈದ್ಯಕೀಯ ವಿದ್ಯಾಲಯದ ಮನೋವೈದ್ಯಕೀಯ ವಿಭಾಗದಲ್ಲಿ ಸಹಪ್ರಾಧ್ಯಾಪಕರಾಗಿ ನೇಮಕಗೊಂಡರು (1974–75). ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಮನೋವೈದ್ಯರಾಗಿ ದುಡಿದರು (1975–79). ಅನಂತರ ಸರ್ಕಾರಿ ಕೆಲಸವನ್ನು ತ್ಯಜಿಸಿ ತಮ್ಮದೇ ಆದ ಮಾನಸ ನರ್ಸಿಂಗ್ ಹೋಂ ಶಿವಮೊಗ್ಗದಲ್ಲಿಯೇ ಪ್ರಾರಂಭಿಸಿದರು. ಇಂದು ಈ ನರ್ಸಿಂಗ್ ಹೋಂ ದಕ್ಷಿಣ ಭಾರತದ ಅತಿ ದೊಡ್ಡ ಮನೋರೋಗ ಚಿಕಿತ್ಸಾ ಕೇಂದ್ರವೆನಿಸಿದ್ದು ಅಂತಾರಾಷ್ಟ್ರೀಯ ಸಲಹಾ ಕೇಂದ್ರವಾಗಿಯೂ ಆಯ್ಕೆಗೊಂಡಿದೆ. ಪೈ ಅವರು ಅಮೆರಿಕದ ಕೊಲರಾಡೋ ವಿಶ್ವವಿದ್ಯಾಲಯದ ಅಂಗಸಂಸ್ಥೆ ಇಂಟರ್ ನ್ಯಾಷನಲ್ ಅಕಾಡೆಮಿ ಆಫ್ ಬಿಹೆವಿಯರಲ್ ಮೆಡಿಸಿನ್ ಕೌನ್ಸಿಲಿಂಗ್ ಅಂಡ್ ಸೈಕೋ ಥೆರಪಿ ಸಂಸ್ಥೆಯ ಅಂತಾರಾಷ್ಟ್ರೀಯ ಪ್ರಾಂತೀಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.



ಇವರು ಕನ್ನಡದಲ್ಲಿ ಮನೋವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ವೈಚಾರಿಕ ಹಾಗೂ ಸೃಜನಶೀಲ ಕೃತಿಗಳನ್ನು ರಚಿಸಿದ್ದಾರೆ. ಮಾನಸ, ನಿಮ್ಮದು ಸಮಸ್ಯೆಯ ಮಗುವೇ, ಉಷಾಕಿರಣ, ಹಾಸ್ಯರಶ್ಮಿ, ಚಿತ್ತ ವಿಚಿತ್ರ, ಮನೋವೈಜ್ಞಾನಿಕ ಸತ್ಯ ಕಥೆಗಳು, ಆಶಾಕಿರಣ, ಮನೋಲೋಕ, ಮಕ್ಕಳ ಮನಸ್ಸು, ಆಘಾತ, ಚಿತ್ತಚೇತನ–ಇವು ಕೆಲವು ಮುಖ್ಯ ಕೃತಿಗಳು. ಮಾನಸ ಚಿತ್ರ ನಿರ್ಮಾಣ ಸಂಸ್ಥೆಯ ಹೆಸರಿನಲ್ಲಿ ಇವರು ಕನ್ನಡ ಚಲನಚಿತ್ರಗಳನ್ನೂ ನಿರ್ಮಿಸಿದ್ದಾರೆ. ಮಾನಸಿಕ ಸಮಸ್ಯೆ ಕುರಿತಂತೆ ವೈಜ್ಞಾನಿಕವಾದ ಬೆಳಕು ಚೆಲ್ಲಿ ಸಮಾಜಕ್ಕೆ ಸಕಾರಾತ್ಮ ಸಂದೇಶ ನೀಡುವುದು ಇವರ ಉದ್ದೇಶ. ಇವರು ನಿರ್ಮಿಸಿದ ಕಾಡಿನ ಬೆಂಕಿ ಮನೋಲೈಂಗಿಕ ಸಮಸ್ಯೆಯನ್ನು ಕುರಿತದ್ದು. ಈ ಚಿತ್ರಕ್ಕೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಲಭಿಸಿದೆ (1988–89). ಮಕ್ಕಳ ಮಾನಸಿಕ ಸಮಸ್ಯೆ ಕುರಿತಂತೆ ನಿರ್ಮಿಸಲಾದ ಉಷಾಕಿರಣ ರಾಜ್ಯ ಪ್ರಶಸ್ತಿಯನ್ನೂ ಪ್ರತಿಷ್ಠಿತ ಫಿಲ್ಮ್‌ಫೇರ್ ಪ್ರಶಸ್ತಿಯನ್ನೂ ಗಳಿಸಿದೆ. ಈ ಚಿತ್ರ ಲಂಡನ್ ಮತ್ತು ಅಮೆರಿಕದಲ್ಲಿ ಜರುಗಿದ ಅಂತಾರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲೂ ಪ್ರದರ್ಶನಗೊಂಡಿತು (1995). ಆಘಾತ ಇವರ ಇನ್ನೊಂದು ಚಿತ್ರ. ಇದಕ್ಕೆ ವಿಶೇಷ ರಾಜ್ಯ ಪ್ರಶಸ್ತಿ ಲಭಿಸಿದೆ. ಇವರು ದೂರದರ್ಶನಕ್ಕಾಗಿ ಹಿಂದಿಯಲ್ಲಿ ಅಂತರಾಳ ಎಂಬ ಧಾರಾವಾಹಿಯನ್ನು ನಿರ್ಮಿಸಿದ್ದಾರೆ.

ವೈದ್ಯಕೀಯ ರಂಗದಲ್ಲಿನ ಇವರ ಸಾಧನೆಗಾಗಿ ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರಕಿವೆ. ಇವುಗಳಲ್ಲಿ ಮುಖ್ಯವಾದವು: ಬೀಚೀ ಪ್ರಶಸ್ತಿ (1988), ಎಸ್.ಜಯರಾಂ ಪ್ರಶಸ್ತಿ (1989–90), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1991), ವಿಶ್ವೇಶ್ವರಯ್ಯ ನವರತ್ನ ಪ್ರಶಸ್ತಿ ಹಾಗೂ ಸಂದೇಶ ಮಾಧ್ಯಮ ಪ್ರಶಸ್ತಿ (1994), ಆರ್ಯಭಟ ಪ್ರಶಸ್ತಿ (1995–97–98), ಅತಿ ವಿಶಿಷ್ಟ ಚಿಕಿತ್ಸಾ ರಾಷ್ಟ್ರೀಯ ಪದಕ (1995), ಡಾ. ಎಚ್. ನರಸಿಂಹಯ್ಯ ಪ್ರಶಸ್ತಿ (1996), ದುಬೈ ಕರ್ನಾಟಕ ಸಂಘದ ಹೊರನಾಡು ಕನ್ನಡಿಗ ಪ್ರಶಸ್ತಿ (1998), ಭಾರತ ಗೌರವ ಸನ್ಮಾನ (1998–99), ವಿದ್ಯಾರತ್ನ ಪ್ರಶಸ್ತಿ (1999), ಪ್ರಕೃತಿ ಪ್ರಶಸ್ತಿ (1999), ಲಂಡನ್ನಿನ ಅಂತಾರಾಷ್ಟ್ರೀಯ ಗೋಲ್ಡ್ ಸ್ಟಾರ್ ಪ್ರಶಸ್ತಿ (1999), ಮುಂಬೈ ಕನ್ನಡ ಪತ್ರಕರ್ತರ ಸಂಘದ ಹೃದಯವಂತ ಪ್ರಶಸ್ತಿ (2002), ಭಾರತೀಯ ಮನೋವೈದ್ಯಕೀಯ ಸಂಘದ ಸುವರ್ಣಮಹೋತ್ಸವ ಪದಕ, 1999ರಲ್ಲಿ ಡಾ.ಬಿ.ಸಿ.ರಾಯ್ ಪ್ರಶಸ್ತಿ ಲಭ್ಯವಾಯಿತು (2002).

ಅಶೋಕ ಪೈ ಅವರು ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯರೂ ಆಗಿದ್ದಾರೆ. ರಜನಿ ಪೈ ಇವರ ಪತ್ನಿ. ಇವರಿಗೆ ಪ್ರೀತಿ ಎಂಬ ಓರ್ವ ಪುತ್ರಿ ಇದ್ದು ಅವರೂ ವೈದ್ಯರಾಗಿದ್ದಾರೆ. *

**ಅಶೋಕ ವೃಕ್ಷ :** ಫ್ಯಾಬೇಸೀ ಕುಟುಂಬ (ಲೆಗ್ಯುಮಿನೋಸೀ), ಸೇರಿದ ಸೀಸಾಲ್ ಪಿನಿಯಾಯ್ಡೀ ಉಪಕುಟುಂಬಕ್ಕೆ ಸೇರಿದ ಮರ. ಸಸ್ಯವೈಜ್ಞಾನಿಕ ಹೆಸರು ಸರಕ ಇಂಡಿಕ. ಉಷ್ಣವಲಯದಲ್ಲಿ ಬೆಳೆಯುತ್ತದೆ. ಉಗಮಸ್ಥಾನದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ತೋಟಗಾರಿಕೆಯನ್ನು ಕುರಿತು ಗ್ರಂಥ ರಚಿಸಿರುವ ಬೇಯಿಲೀ ಎಂಬ ಲೇಖಕನ ಅಭಿಪ್ರಾಯದಲ್ಲಿ ಈ ವೃಕ್ಷ ಭಾರತದ ಮೂಲವಾಸಿ ಎಂದಿದೆ; ಚೆಬ್ಬರ್‌ನ ಪ್ರಕಾರ ಇದು ಅಮೆರಿಕದ ಮೂಲದ್ದು; ಭಾರತೀಯ ಲೇಖಕ ರಾಂಧವಾ ಪ್ರಕಾರ ಇದು ಭಾರತ ಮತ್ತು ಶ್ರೀಲಂಕ ಮೂಲದ್ದು.

ಮರ ಚಿಕ್ಕಗಾತ್ರದ್ದು. ಹರಡಿರುವ ರೆಂಬೆಗಳುಳ್ಳದ್ದು. ಎಲೆಗಳು ಕಿರಿ ಅಗಲದವೂ ಮತ್ತು ಉದ್ದವೂ ಇವೆ. ತೊಟ್ಟುಗಳಿಲ್ಲ, ತುದಿ ಮೊನಚು; ನಿತ್ಯಹಸುರು. ಒಂದು ಎಲೆಯಲ್ಲಿ ಸುಮಾರು 4–6 ಜೊತೆ ಕಿರುಎಲೆಗಳು ಎದುರು ಬದುರಾಗಿ ಇರುತ್ತವೆ. ಎಳೆಯ ಎಲೆಗಳು ಹಳದಿ ಬಣ್ಣಕ್ಕಿದ್ದು ಇಳಿಬಿದ್ದಿರುವುವು. ಕಾಂಡದ ತೊಗಟೆಯ ಬಣ್ಣ ಕಂದು. ಹೂಗೊಂಚಲು ದಪ್ಪ; ಸಣ್ಣಗಾತ್ರದ ಕೊಂಬೆಗಳ ತುದಿಯಲ್ಲಿ ಕಾಣಿಸಿಕೊಳ್ಳುತ್ತವೆ. ಎಳೆಯ ಹೂವಿನ ಬಣ್ಣ ಕಿತ್ತಲೆಯದ್ದು ಮುಂದೆ ಕೆಂಬಣ್ಣಕ್ಕೆ ತಿರುಗುವುದು. ಹಚ್ಚ ಹಸುರು ಎಲೆಗಳ ನಡುವೆ ಕೆಂಪು

ಹೂರಾಶಿಗಳು ಚೆಲುವಾಗಿ ಕಾಣುತ್ತವೆ. ಹೂವು ಪತ್ರದ (ಕ್ಯಾಲಿಕ್ಸ್) ಕೆಳಗೆ ಕೆಂಪಾದ ಉಪಪತ್ರ (ಎಪಿಕೇಲಿಕ್ಸ್) ಇದೆ. ಹೂ ಬಿಡುವ ಕಾಲ ಜನವರಿಯಿಂದ ಮೇ ತಿಂಗಳವರೆಗೆ. ಹೂವಿನಲ್ಲಿ ಮಧುರವಾದ ಸುಗಂಧವೂ ಉಂಟು.

ಬೀಜಗಳನ್ನು ನೆಟ್ಟು ಸಸ್ಯಗಳನ್ನು ಪಡೆಯಬಹುದು. ಎಳೆಯ ಗಿಡಕ್ಕೆ ನೆರಳು ಅಗತ್ಯ. ಬಿಸಿಲು ಹೆಚ್ಚಾಗಿದ್ದರೆ ಗಿಡಗಳು ಮುರುಟಿಕೊಳ್ಳುವುವು.

ಮರದ ತೊಗಟೆಯಲ್ಲಿ ದೊರೆಯುವ ಗ್ಯಾಲಿಕ್ ಆಮ್ಲ ಔಷಧಿಗಳಿಗೆ ಉಪಯೋಗವಾಗುತ್ತದೆ. ಹೂವನ್ನು ಇದೇ ರೀತಿ ಬಳಸುವುದುಂಟು. ಶ್ರೀಲಂಕದಲ್ಲಿ ಈ ಮರವನ್ನು ಮನೆ ಕಟ್ಟುವ ಮರಮುಟ್ಟುಗಳಿಗಾಗಿ ಉಪಯೋಗಿಸುತ್ತಾರೆ. ಹಿಂದೂಗಳೂ ಬೌದ್ಧರೂ ಈ ಮರವನ್ನು ದೇವಾಲಯಗಳ ಸುತ್ತಲೂ ಬೆಳೆಸುವುದುಂಟು. ಇದರ ಹೂಗಳು ಪೂಜೆಗೆ ಒದಗುತ್ತವೆ. ಈ ವೃಕ್ಷವನ್ನು ಇತ್ತೀಚೆಗೆ ಉದ್ಯಾನಗಳಲ್ಲಿ ಅಂದಕ್ಕಾಗಿ ಬೆಳೆಸುತ್ತಾರೆ. ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಅಶೋಕವೃಕ್ಷಕ್ಕೆ ಕೊಟ್ಟಿರುವ ಸ್ಥಾನ ಬಹಳ ಮುಖ್ಯವಾದುದು. ರಾಮಾಯಣ, ಮಹಾಭಾರತ ಕಾಲದಿಂದಲೂ ಜನಪ್ರಿಯ ವೃಕ್ಷ. ಈ ವೃಕ್ಷಗಳಿಂದ ಕೂಡಿದ ವನದಲ್ಲಿ ರಾವಣ ಸೀತೆಯನ್ನು ಅವಿತಿ(ಅಡಗಿಸಿ)ಟ್ಟಿದ್ದನೆಂದು ಹೇಳುತ್ತಾರೆ. ಕಾಳಿದಾಸನ ಕಾಲದಲ್ಲಂತೂ ಈ ಮರಕ್ಕೆ ದೊರೆತ ಗೌರವ ಅಪಾರ. ವಸಂತಕಾಲದಲ್ಲಿ ಒಂದು ನಿಶ್ಚಿತದಿನ ಸುಂದರಿಯೊಬ್ಬಳು ತನ್ನ ಎಡಗಾಲಿನಿಂದ ಮೃದುವಾಗಿ ಅಶೋಕವೃಕ್ಷವನ್ನು ಒದ್ದರೆ ಆ ಮರದಲ್ಲಿ ಗರ್ಭಾಂಕುರವಾಗುತ್ತಿತ್ತೆಂದು ಭೋಜರಾಜನ ಸರಸ್ವತೀ ಕಂಠಾಭರಣ, ಕಾಳಿದಾಸನ ಮಾಲವಿಕಾಗ್ನಿಮಿತ್ರ, ಹರ್ಷನ ರತ್ನಾವಳೀ ಗ್ರಂಥಗಳಲ್ಲಿ ಹೇಳಲಾಗಿದೆ. ಇದನ್ನು ದೋಹದ ಕ್ರಿಯೆಯೆಂದು ಬಣ್ಣಿಸಲಾಗಿದೆ. ಚೈತ್ರ ಶುಕ್ಲ ಅಷ್ಟಮಿಯಂದು ವ್ರತಮಾಡಿ ಅಶೋಕದ ಎಂಟು ಎಲೆಗಳನ್ನು ತಿಂದಲ್ಲಿ ಸ್ತ್ರೀಯರ ಸಂತಾನ ಪ್ರಾಪ್ತಿಯಾಗುವುದೆಂಬ ನಂಬಿಕೆಯಿದೆ.

*

**ಅಶ್ರಗ :** ಒಂದು ಜ್ಯಾಮಿತೀಯ ಆಕೃತಿ (ಪ್ರಿಸ್‍ಮ್). ಎರಡು ಸರ್ವಾಂತರ ಸರ್ವಸಮ ಬಹುಭುಜಗಳು ಇದರ ಆಧಾರ ತಲಗಳು (ಬೇಸಸ್). ಇವುಗಳನ್ನು ಸಮರೂಪವಾಗಿಯೂ (ಸಿಮಿಲರ್ಲಿ) ಪರಸ್ಪರ ಸಮಾನಾಂತರವಾಗಿಯೂ ಭಿನ್ನ ಸಮತಲಗಳಲ್ಲಿ ಇಡಲಾಗಿದೆ.



ಅಶ್ರಗದ ಎರಡು ರೂಪಗಳು

ತಲಗಳ ಅನುರೂಪ ಶೃಂಗಗಳನ್ನು ಸರಳರೇಖೆಗಳಿಂದ ಜೋಡಿಸಿದರೆ ಅಶ್ರಕದ ಫಲಕಗಳು ದೊರೆಯುತ್ತವೆ. ಆದ್ದರಿಂದ ತಲಗಳನ್ನುಳಿದ ಈ ಫಲಕಗಳನ್ನು ಪಾರ್ಶ್ವಫಲಕಗಳೆಂದು ಕರೆಯುವುದುಂಟು. ಪಾರ್ಶ್ವಫಲಕಗಳು ಸಮಾಂತರ ಚತುರ್ಭುಜಗಳು. ಇಂಥ ಎರಡು ಫಲಕಗಳು ಸಂಧಿಸುವ ರೇಖೆ ಅಥವಾ ತಲಗಳ ಅನುರೂಪ ಶೃಂಗಗಳನ್ನು ಜೋಡಿಸುವ ರೇಖೆಯ ಹೆಸರು ಪಾರ್ಶ್ವ ಅಂಚು (ಲ್ಯಾಟರಲ್ ಎಜ್ಟ್).

**ಅಶ್ರಗದ ಎರಡು ರೂಪಗಳು :** ಪಾರ್ಶ್ವ ಅಂಚುಗಳು ಪರಸ್ಪರ ಸಮಾನ ಮತ್ತು ಸಮಾಂತರವಾಗಿದೆ. ತಲಗಳು ತ್ರಿಕೋಣಗಳಾದಾಗ ತ್ರಿಕೋಣೀಯ ಅಶ್ರಗವೂ ಚತುಷ್ಕೋನಗಳಾದಾಗ ಚತುಷ್ಕೋನಾಶ್ರಗವೂ ಇತ್ಯಾದಿ ದೊರೆಯುತ್ತವೆ. ಸಮಾಂತರ ಷಟ್‍ಫಲಕ (ಪ್ಯಾರಲ್ಲಲೇಪೈಪಡ್) ಒಂದು ಅಶ್ರಗ. ಇಲ್ಲಿ ಯಾವುದೇ ಒಂದು ಜೊತೆ

ಎದುರು ಫಲಕಗಳು ತಲಗಳಾಗುತ್ತವೆ. ಒಂದು ಅಶ್ರಗದ ತಲಗಳು ಕ್ರಮಬಹುಭುಜಗಳಾದರೆ (ರೆಗ್ಯುಲರ್ ಪಾಲಿಗನ್ಸ್–ಎಲ್ಲ ಭುಜಗಳೂ ಸಮಾನ, ಎಲ್ಲ ಕೋನಗಳೂ ಸಮಾನ) ಆ ಅಶ್ರಗ ಕ್ರಮಾಶ್ರಗವಾಗುವುದು (ರೆಗ್ಯುಲರ್ ಪ್ರಿಸ್‍ಮ್). ಇದನ್ನು ಪಟ್ಟಕವೆಂದು ಕರೆಯುವುದು ರೂಢಿಯಲ್ಲಿದೆ. ವಿಶೇಷವಾಗಿ ದ್ಯುತಿ ವಿಜ್ಞಾನದಲ್ಲಿ ಕಿರಣ ಪಥವನ್ನು ವಿಚಲಿಸಲು, ಬಿಳಿ ಬೆಳಕನ್ನು ಗೋಚರ ರೋಹಿತವಾಗಿ ಪ್ರಸರಿಸಲು ಅಥವಾ ತಲೆಕೆಳಗಾದ ಪ್ರತಿಬಿಂಬ ಸ್ಥಾಪಿಸಲು ವಿವಿಧ ರೀತಿಯಲ್ಲಿ ತಯಾರಿಸಿದ ಅಶ್ರಗದ ಬಳಕೆ ಇದೆ. (ಬಿ.ಬಿ.ಬಿ)

**ಅಶ್ರಗೀಯೋಕ್ತಿ :** ಭಾಸ್ಕರಾಚಾರ್ಯನ (ಸು. 1150) ಲೀಲಾವತಿ ಗ್ರಂಥದ ಖಾತವ್ಯವಹಾರವೆಂಬ ಅಧ್ಯಾಯದಲ್ಲಿ ಕಂಡುಬರುವ ಒಂದು ಸೂತ್ರ (ಪ್ರಿಸ್‍ಮಾಯ್‍ಡಲ್ ಫಾರ್ಮ್ಯುಲ). ಸೂಚೀಮುಖಾಕೃತಿಯ (ಸಿಲಿಂಡರ್) ಮುಂಡದ (ಫ್ರಸ್ಟಮ್) ಘನಗಾತ್ರಕ್ಕೆ ಭಾಸ್ಕರಾಚಾರ್ಯ ಕೊಟ್ಟಿರುವ ಸೂತ್ರ : ಮುಂಡದ ಮೇಲುಮುಖ ಮತ್ತು ಕೆಳಮುಖಗಳ ಕ್ಷೇತ್ರಫಲಗಳನ್ನೂ ಬಾಹುಗಳ ಮೊತ್ತದಿಂದ ಗುಣಿಸಿ ಬರುವ ಕ್ಷೇತ್ರಫಲವನ್ನೂ ಸೇರಿಸಿ 6 ರಿಂದ ಭಾಗಿಸಿ ಎತ್ತರದಿಂದ ಗುಣಿಸಿದರೆ ಘನಗಾತ್ರ ಬರುತ್ತದೆ (ಲೀಲಾವತಿ ಶ್ಲೋ. 221). ಎಂದರೆ ಮೇಲುಮುಖ ಮತ್ತು ಕೆಳಮುಖಗಳು $a, b, a', b'$ ಭುಜಗಳಿಗಿರುವ ಆಯಾಕೃತಿಗಳಾಗಿದ್ದು, h ಮುಂಡದ ಎತ್ತರವಾಗಿದ್ದರೆ ಮುಂಡದ ಘನಗಾತ್ರ

$$\frac{h}{6}\left[ab + a'b' + (a + a')(b + b')\right]$$

ಇದೇ ಅಶ್ರಗೀಯೋಕ್ತಿ.

ಈ ವಿಷಯ ಬಹಳ ಪ್ರಾಚೀನವಾದ ಚರಿತ್ರೆಯನ್ನೊಳಗೊಂಡಿದೆ. ಪ್ರ.ಶ.ಪೂ ಸು. 1800ರಲ್ಲಿ ಈ ಸೂತ್ರ ಈಜಿಪ್ಟ್ ಗಣಿತಜ್ಞರಿಗೆ ತಿಳಿದಿತ್ತು. ಇದೇ ವಿಚಾರ ಚೀನದೇಶದ ಗಣಿತದಲ್ಲಿಯೂ ಭಾರತದ ಬ್ರಹ್ಮಗುಪ್ತನ ಗ್ರಂಥದಲ್ಲಿಯೂ (628) ಕೊಟ್ಟಿದೆ ಎಂಬ ವಿಚಾರ ಗಮನಿಸಿದರೆ ಆಗಿನ ಕಾಲದಲ್ಲಿಯೂ ದೇಶ ದೇಶಗಳ ನಡುವೆ ವಿಜ್ಞಾನಸಂಪರ್ಕ ಇದ್ದಿರಬಹುದೇ, ಇಲ್ಲವೇ ಪ್ರತಿಯೊಂದು ದೇಶದಲ್ಲೂ ಇಂಥ ವಿಚಾರಗಳನ್ನು ಪ್ರತ್ಯೇಕವಾಗಿ ಕಂಡುಹಿಡಿದರೇ ಎಂದು ಮುಂತಾದ ಪ್ರಶ್ನೆಗಳು ಬರುತ್ತವೆ.

ಭಾಸ್ಕರಾಚಾರ್ಯನ ಉದಾಹರಣೆ ಹೀಗಿದೆ : ಒಂದು ಬಾವಿ ಮೇಲುಗಡೆ 12 ಮೊಳ ಉದ್ದ, 10 ಮೊಳ ಅಗಲವುಳ್ಳದ್ದಾಗಿಯೂ ತಳದಲ್ಲಿ ಇದರ ಅರ್ಧದಷ್ಟೂ ಇದೆ. ಬಾವಿಯ ಆಳ 7 ಮೊಳಗಳಿದ್ದರೆ ಬಾವಿಯನ್ನು ಅಗೆದಾಗ ಎಷ್ಟು ಮಣ್ಣು ಹೊರಬಿದ್ದಿತು?

ಉತ್ತರ $=\frac{7}{6}\left[12 \times 10 + 6 \times 5 + (12 + 6)(10 + 5)\right] = 490$

ಘನಮೊಳಗಳು. (ಸಿ.ಎನ್.ಎಸ್.)

**ಅಶ್ಲೀಲ :** ಕೆಲವು ವಸ್ತು ಅಥವಾ ವಿಷಯಗಳನ್ನು ನೋಡುವುದರಿಂದ, ಕೇಳುವುದರಿಂದ, ಓದುವುದರಿಂದ ಅಪಕ್ವ ಮತ್ತು ಅಪ್ರಬುದ್ಧ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವಾಗಿ ಅನೀತಿಗೆ ಪ್ರಚೋದನೆಯುಂಟಾಗುತ್ತದೋ ಅಂಥ ವಸ್ತು ಅಥವಾ ವಿಷಯ ಅಶ್ಲೀಲ ಎನ್ನಿಸಿಕೊಳ್ಳುತ್ತದೆ. ಅಶ್ಲೀಲವಾದುದನ್ನು ಬರೆಯುವುದು, ಪ್ರಕಟಿಸುವುದು, ಪ್ರದರ್ಶಿಸುವುದು ಶಿಕ್ಷಾರ್ಹವೆಂದು ಪ್ರಪಂಚದ ಎಲ್ಲ ದೇಶಗಳೂ ಶಾಸನ ಮಾಡಿವೆಯಾದರೂ ಯಾವ ದೇಶದ ಶಾಸನದಲ್ಲೂ ಅಶ್ಲೀಲ ಎಂದರೆ ಏನೆಂಬುದನ್ನು ನಿರ್ದಿಷ್ಟವಾಗಿ ಹೇಳಿಲ್ಲ. ನ್ಯಾಯಾಲಯಗಳು ತಮ್ಮ ತೀರ್ಪುಗಳಲ್ಲಿ ಕೊಟ್ಟ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಅಶ್ಲೀಲ ಎಂಬ ಪದದ ಅರ್ಥವನ್ನು ಗ್ರಹಿಸಬಹುದು. ಹಾಗೆಯೇ ನ್ಯಾಯಾಲಯಗಳು ಕೊಟ್ಟ ತೀರ್ಪುಗಳನ್ನು ಅವಲೋಕಿಸಿದರೆ ಅಶ್ಲೀಲ ಎಂಬುದು ಲೈಂಗಿಕ ವಿಚಾರಗಳಿಗೇ ಬಹುಮಟ್ಟಿಗೆ ಸಂಬಂಧಿಸಿರುವುದಾಗಿ ತೋರುತ್ತದೆ. ಕಾಮಪ್ರಚೋದನೆ ಮಾಡುವಂಥ ವಸ್ತು ಅಥವಾ ಸಂಗತಿಗಳಿಗೆ ಬಹುತೇಕ ಅಶ್ಲೀಲ ಎಂಬುದು ಈಗ ಪರಿಮಿತವಾಗಿರುವಂತೆ ಕಾಣುತ್ತದೆ. ಪರಿಣಾಮವಾಗಿ ಅಮೆರಿಕದ ಸಂಯುಕ್ತಸಂಸ್ಥಾನದ ಜಾರ್ಜಿಯ ನ್ಯೂಹ್ಯಾಂಪ್‍ಷೈರ್, ನ್ಯೂಮೆಕ್ಸಿಕೊ ಮತ್ತು ಉತ್ತರ ಕೆರೋಲಿನ–ಈ ನಾಲ್ಕು ರಾಜ್ಯಗಳ ಹೊರತಾಗಿ ಎಲ್ಲ ರಾಜ್ಯ ಸರ್ಕಾರಗಳೂ ಸಂಯುಕ್ತಸಂಸ್ಥಾನದ ಫೆಡರಲ್ ಸರ್ಕಾರವೂ ಸಂತಾನನಿರೋಧಪದ್ಧತಿಗಳನ್ನು ಪ್ರಚುರಪಡಿಸುವುದನ್ನು ಶಾಸನ ಬಾಹಿರವನ್ನಾಗಿ ಮಾಡಿವೆ.

ಒಂದು ವಸ್ತು ಅಥವಾ ವಿಷಯ ಅಶ್ಲೀಲವೇ ಅಲ್ಲವೆ ಎಂಬುದನ್ನು ನಿರ್ಧರಿಸುವಾಗ ಅದು ಯಾರ ಗಮನಕ್ಕೆ ಬರುತ್ತದೆಯೋ ಅವರ ವಯಸ್ಸು, ಮನಸ್ಸು , ಸ್ಥಳ, ಆಚಾರ ವಿಚಾರ, ಜೀವನಪದ್ಧತಿ–ಇವೆಲ್ಲವನ್ನೂ ಪರಿಶೀಲಿಸಬೇಕಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಬಹಿರಂಗವಾಗಿ ಚುಂಬಿಸುವ ಪದ್ಧತಿ ಭಾರತದಲ್ಲಿಲ್ಲ. ಹಾಗೆ ಮಾಡಿದರೆ ಅದು ಅಸಭ್ಯತೆ ಎಂದು ಪರಿಗಣಿಸಿದ್ದಾರೆ. ಒಮ್ಮೊಮ್ಮೆ ಅದು ಅಶ್ಲೀಲದ ಮಟ್ಟಕ್ಕೂ ಹೋಗಬಹುದು. ಚುಂಬಿಸುವಾಗ ನಿಂತ ಭಂಗಿ, ಸ್ಥಳ, ಕಾಲ, ರೀತಿ, ಅಂಗಪ್ರದರ್ಶನ–ಇವೆಲ್ಲವೂ ಸೇರಿ ಅಶ್ಲೀಲ ಎಂದು ಎನ್ನಿಸಿಕೊಳ್ಳಬಹುದು, ಭಾರತೀಯರ ದೃಷ್ಟಿಯಲ್ಲಿ. ಆದರೆ ಪಾಶ್ಚಾತ್ಯದೇಶಗಳಲ್ಲಿ ಬಹಿರಂಗವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಚುಂಬಿಸುವುದು ಸರ್ವಸಾಧಾರಣ ಪದ್ಧತಿಯಾಗಿದೆ. ಹಾಗೆಯೇ ವಯೋಧರ್ಮಕ್ಕನುಗುಣವಾಗಿ ಒಂದು ವಸ್ತು ಅಥವಾ ವಿಷಯ ಅಶ್ಲೀಲವಾಗಬಹುದು, ಆಗದಿರಲೂಬಹುದು. ಯುವಕರಿಗಾಗಲಿ, ಮುದುಕರಿಗಾಗಲಿ

ಯಾವ ವಸ್ತು ಅಥವಾ ವಿಷಯಗಳನ್ನು ಓದುವುದರಿಂದ, ನೋಡುವುದರಿಂದ, ಕೇಳುವುದರಿಂದ ಕಾಮ ಪ್ರಚೋದನೆ ಉಂಟಾಗುತ್ತದೋ, ಹೊಲಸು ಭಾವನೆಗಳು ಉಂಟಾಗುತ್ತವೋ ಅಂಥವು ಅಶ್ಲೀಲ ಎನ್ನಿಸುತ್ತವೆ.

ಆದರೆ ಶಾಸನ ಕೆಲವು ಅಪವಾದಗಳನ್ನು ಒಪ್ಪುತ್ತದೆ. ಪ್ರಾಚೀನ ಕಾವ್ಯ, ವಾಸ್ತುಶಿಲ್ಪ, ಚಿತ್ರಕಲೆ ಹಾಗೂ ಕಲಾಕೃತಿ ಎಂಬ ಹೆಸರಿಗೆ ಅರ್ಹವಾದ ಎಲ್ಲ ಚಿತ್ರ, ಶಿಲ್ಪ, ಬರೆವಣಿಗೆಗಳು ಎಷ್ಟೇ ಲೈಂಗಿಕ ವಿಚಾರಗಳಿಗೆ ಸಂಬಂಧಿಸಿದ್ದರೂ ಅವನ್ನು ಅಶ್ಲೀಲ ಎನ್ನಲಾಗದು. ನಮ್ಮ ಪ್ರಾಚೀನಕವಿಗಳು ತಮ್ಮ ಕಾವ್ಯಗಳಲ್ಲಿ ವರ್ಣಿಸಿರುವ ಶೃಂಗಾರ ಕಲಾಕೃತಿ ಎಂಬ ಕಾರಣದಿಂದ ಅಶ್ಲೀಲ ಅಲ್ಲ. ಹಾಗೆಯೇ ಕೆಲವು ದೇವತಾವಿಗ್ರಹಗಳು, ಮೂರ್ತಿಗಳು, ಚಿತ್ರಗಳು ಹೇಗಿದ್ದರೂ ಅಶ್ಲೀಲ ಎನಿಸುವುದಿಲ್ಲ. ಗೋಮಟೇಶ್ವರ ವಿಗ್ರಹ, ಬೇಲೂರಿನ ಶಿಲಾಬಾಲಿಕೆಯರು, ಶ್ರೀಕೃಷ್ಣಗೋಪಿಯರ ರಾಸಕೇಳಿಯ ಚಿತ್ರಗಳು ಮುಂತಾದವನ್ನು ಅಶ್ಲೀಲ ಎಂದು ಭಾವಿಸಲಾಗಿಲ್ಲ. ಹಾಗೆಯೇ ಕೇವಲ ಲೈಂಗಿಕವಿಚಾರಗಳಿಗೆ ಮೀಸಲಾದ ಶಾಸ್ತ್ರೀಯ ಗ್ರಂಥಗಳು, ಸ್ತ್ರೀ ಪುರುಷರ ಜನನೇಂದ್ರಿಯಗಳನ್ನು ಬಿಡಿ ಬಿಡಿಯಾಗಿ ವಿವರ ವಿವರವಾಗಿ ಬರೆದು, ಚಿತ್ರಿಸಿ, ಪ್ರಕಟಿಸಿ, ಸಾರಿ ಹೇಳಿದರೆ ಅದು ಅಶ್ಲೀಲ ಎನ್ನಿಸುವುದಿಲ್ಲ. ಸುಖಮಯ ದಾಂಪತ್ಯ ಜೀವನಕ್ಕೆ ಬೇಕಾದ ವೈಜ್ಞಾನಿಕ ತಿಳಿವಳಿಕೆಯನ್ನು ಕೊಡುವ ಯಾವ ಬರೆವಣಿಗೆಯೇ ಆಗಲಿ ಅದೆಷ್ಟೇ ಬಿಚ್ಚು ಮಾತಿನಲ್ಲಿ ಬರೆದದ್ದಾದರೂ ಅಶ್ಲೀಲ ಎನ್ನಿಸುವುದಿಲ್ಲ. ಅಶ್ಲೀಲ ಆಗಿದೆಯೇ ಇಲ್ಲವೇ ಎಂಬುದಕ್ಕೆ ಒಂದು ಪರೀಕ್ಷೆಯೆಂದರೆ ಅದು ಅಪವಿತ್ರ ಅಯೋಗ್ಯ, ಅನಾರೋಗ್ಯಕರವಾದ ಕಾಮಪ್ರಚೋದನೆಯನ್ನುಂಟುಮಾಡುತ್ತದೆಯೇ ಇಲ್ಲವೇ ಎಂಬುದೇ ಆಗಿದೆ. (ಕೆ.ಪಿ.)

**ಅಶ್ವಗಂಧ :** ಸೊಲನೇಸೀ ಕುಟುಂಬಕ್ಕೆ ಸೇರಿದ, ಔಷಧೀಯ ಮಹತ್ತ್ವವುಳ್ಳ ಸಸ್ಯ (ಪಿಂಟರ್ ಚೆರ್ರಿ). ಕನ್ನಡದಲ್ಲಿ ಹಿರೇಮದ್ದಿನ ಗಿಡ ಎಂಬ ಹೆಸರೂ ಇದಕ್ಕಿದೆ. ಇದರ ವೈಜ್ಞಾನಿಕ ಹೆಸರು ವಿತಾನಿಯ ಸಾಮ್ನಿಫೆರ. ಸು. 1 ಮೀ ಎತ್ತರಕ್ಕೆ ಬೆಳೆಯುವ ಮೂಲಿಕೆ. ಆಫ್ರಿಕ, ಮೆಡಿಟರೇನಿಯನ್ ಪ್ರದೇಶ ಹಾಗೂ ಭಾರತದಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಅಶ್ವಗಂಧ ಬೆಳೆಯಿಂದ ದೊರೆಯುವ ಆಲ್ಕಲಾಯ್ಡ್‌ಗಳಲ್ಲಿ ಮಿಥಾನಿನ್ ಮತ್ತು ಸಾಮ್ನಿಫೆರಿನ್ ಸಸ್ಯಕ್ಷಾರ ಮುಖ್ಯವಾದುವು. ಆಯುರ್ವೇದ ಹಾಗೂ ಯುನಾನಿ ಔಷಧಿಗಳ ತಯಾರಿಕೆಯಲ್ಲಿ ಇದರ ಬೇರು, ತೊಗಟೆ, ಎಲೆ, ಹಣ್ಣು ಮತ್ತು ಬೀಜಗಳು ಅನೇಕ ರೋಗಗಳ ನಿವಾರಣೆಗೆ ಉಪಯುಕ್ತವಾಗಿವೆ.

ಮಣ್ಣು : ಮರಳು ಮಿಶ್ರಿತ ಗೋಡು ಮಣ್ಣು ಅಥವಾ ಕೆಂಪುಮಣ್ಣು ಈ ಬೆಳೆಗೆ ಉತ್ತಮ. ಮಣ್ಣಿನ ರಸಸಾರ 7.5–8.0 ಇದ್ದು ನೀರು ಬಸಿದು ಹೋಗುವಂತಿರಬೇಕು.

ಹವಾಗುಣ : ಅಶ್ವಗಂಧ ಹಿಂಗಾರಿನಲ್ಲಿ ಬೆಳೆಯಬಹುದಾದ ಬೆಳೆ. ಈ ಬೆಳೆಗೆ ಶುಷ್ಕ ವಾತಾರಣವೂ ಉತ್ತವ. ಬೇರುಗಳ ಬೆಳವಣಿಗೆಗೆ ಒಂದೆರಡು ಬಾರಿ ಮಳೆಯ ಅಗತ್ಯವೂ ಇದೆ. ವಾರ್ಷಿಕ 66–75 ಸೆಂ.ಮೀ ಮಳೆ ಬೀಳುವ ಪ್ರದೇಶಗಳು ಈ ಬೆಳೆಗೆ ಯೋಗ್ಯವಾಗಿರುತ್ತವೆ.

ತಳಿಗಳು : ಜವಾಹರ್ ಅಸ್‌ಗಂಧ್–20 : ಈ ತಳಿ ಬೇರಿನಲ್ಲಿ ಶೇ. 0.27 ರಷ್ಟು ಸಸ್ಯಕ್ಷಾರ ಅಂಶವನ್ನು ಹೊಂದಿದೆ. ಪ್ರತಿ ಹೆಕ್ಟೇರಿಗೆ 639 ಕಿ.ಗ್ರಾಂ ಒಣಗಿದ ಬೇರಿನ ಇಳುವರಿಯನ್ನು ಪಡೆಯಬಹುದು.

ಪೋಷಿತಾ: ಈ ತಳಿಯು ಪ್ರತಿ ಹೆಕ್ಟೇರಿಗೆ 14 ಕ್ವಿಂಟಲ್ ಒಣಗಿದ ಬೇರುಗಳ ಇಳುವರಿಯನ್ನು ಕೊಡುತ್ತದೆ.

ಬೇಸಾಯ ಸಾಮಗ್ರಿಗಳು

| ಕ್ರಸಂ. | ವಿವರ | ಎಕರೆಗೆ | | ಹೆಕ್ಟೇರಿಗೆ |
|---|---|---|---|---|
| 1 | ಬಿತ್ತನೆ ಬೀಜ (ಕಿ.ಗ್ರಾಂ.) | 10–12 | | 25–30 |
| 2 | ಕೊಟ್ಟಿಗೆ ಗೊಬ್ಬರ (ಟನ್) | | ಈ ಬೆಳೆಯನ್ನು ಮಣ್ಣಿನಲ್ಲಿ ಅಳಿದು ಉಳಿದಿರುವ ಫಲವತ್ತತೆಯಲ್ಲೇ ಬೆಳೆಯಲ್ಪಡುವುದರಿಂದ ಕೊಟ್ಟಿಗೆಅಥವಾ ರಸಗೊಬ್ಬರಗಳ ಆವಶ್ಯಕತೆ ಇಲ್ಲ | 30 |
| 3 | ರಾಸಾಯನಿಕ ಗೊಬ್ಬರ ಆವಶ್ಯಕತೆ ಇಲ್ಲ | | | |

**ಬೇಸಾಯ ಕ್ರಮಗಳು**

ನೇರ ಬಿತ್ತನೆ : ರಾಗಿಯನ್ನು ಬಿತ್ತುವಂತೆ ಈ ಬೆಳೆಯ ಬೀಜವನ್ನು ಚೆಲ್ಲಿ (ಆಗಸ್ಟ್ ತಿಂಗಳು) ಬಿತ್ತನೆ ಮಾಡಬಹುದು. ಸಾಮಾನ್ಯವಾಗಿ ಇದನ್ನು ಮಳೆಗಾಲದ ಬೆಳೆಯಾಗಿ ಬೆಳೆಯುವುದರಿಂದ, ಬಿತ್ತನೆ ಮಳೆಯನ್ನು ಅವಲಂಬಿಸುತ್ತದೆ. ಮಣ್ಣಿನಲ್ಲಿ ಸಾಕಷ್ಟು ತೇವವಿದ್ದಾಗ ಬಿತ್ತನೆ ಮಾಡಬೇಕು.

ಸಸಿಗಳ ರಕ್ಷಣೆ : ನೇರವಾಗಿ ಬೀಜ ಬಿತ್ತಿ ಬೆಳೆದ ಗಿಡಗಳನ್ನು 25–30 ದಿನಗಳ ನಂತರ ಸಾಕಷ್ಟು ಅಂತರವಿರುವಂತೆ, ಹೆಚ್ಚುವರಿ ಸಸಿಗಳನ್ನು ಕೀಳಬೇಕು. 25–30 ದಿನಗಳ ಅಂತರದಲ್ಲಿ ಕಳೆ ಕೀಳುವುದರಿಂದ ಕಳೆಗಳನ್ನು ಹತೋಟಿಯಲ್ಲಿಡುವುದು ಸಾಧ್ಯ.

ಸಸ್ಯ ಸಂರಕ್ಷಣೆ

ಕೀಟಗಳು : ಸುರಳಿಹುಳು ನುಸಿ ಮತ್ತು ಕಂಬಳಿ ಹುಳು.

ರೋಗಗಳು : ಬೀಜ ಕೊಳೆತ, ಸಸಿಗಳ ಕೊಳೆಯುವಿಕೆ ಹಾಗೂ ಎಲೆಸೊರಗು ರೋಗ, ನಂಜಾಣುರೋಗ.

ಹತೋಟಿ ಕ್ರಮ : 1. ಬಿತ್ತನೆಗೆ ಮೊದಲು ಪ್ರತಿ ಕಿ.ಗ್ರಾಂ ಬೀಜಕ್ಕೆ 3 ಗ್ರಾಂ ಮ್ಯಾಂಕೊಜೆಬ್ ನಿಂದ ಉಪಚರಿಸಬೇಕು.

2. 30 ದಿನಗಳ ಬೆಳೆಗೆ 1.5 ಮಿ.ಲೀ ಮಾನೊಕ್ರೋಟೋಫಾಸ್ ಮತ್ತು 3 ಗ್ರಾಂ ಮ್ಯಾಂಕೊಜೆಬ್‌ನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಇದೇ ಸಿಂಪರಣೆಯನ್ನು 15 ದಿನಗಳ ಅನಂತರ ಪುನರಾವರ್ತಿಸಬೇಕು.

ಕೊಯ್ಲು ಮತ್ತು ಇಳುವರಿ : ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಮಾರ್ಚ್ ತಿಂಗಳವರೆಗೂ ಮುಂದುವರೆಯುತ್ತದೆ (ಬಿತ್ತನೆಯಾದ 150–170 ದಿನಗಳ ನಂತರ). ಎಲೆಗಳು ಹಣ್ಣಾಗಿ ಒಣಗಿ ಕೆಂಪುಬಣ್ಣಕ್ಕೆ ತಿರುಗಿದಾಗ ಬೆಳೆಯು ಕೊಯ್ಲಿಗೆ ಸಿದ್ಧವಾಗಿರುತ್ತದೆ. ಬೇರುಗಳ ಕೊಯ್ಲಿಗೆ ಪೂರ್ತಿ ಗಿಡವನ್ನೇ ಕಿತ್ತು 1–2 ಸೆಂಮೀ ಎತ್ತರಕ್ಕೆ ಕತ್ತರಿಸಬೇಕು. ಕೆಲವು ವೇಳೆ ಒಣಗಿದ ಗಿಡಗಳಿಂದ ಹಣ್ಣುಗಳನ್ನು ಕಿತ್ತು ಬೀಜಗಳನ್ನು ಸಂಗ್ರಹಿಸಬಹುದು.

ಪ್ರತಿ ಹೆಕ್ಟೇರಿನಿಂದ ಸರಾಸರಿ 400–500 ಕಿ.ಗ್ರಾಂ ಬೇರು ಮತ್ತು 50 ಕಿ.ಗ್ರಾಂ ಬೀಜದ ಇಳುವರಿಯನ್ನು ನಿರೀಕ್ಷಿಸಬಹುದು.

**ಅಶ್ವಘೋಷ :** ಸು. 1ನೆಯ ಶತಮಾನ. ಸಂಸ್ಕೃತ ಸಾಹಿತ್ಯದ ಪ್ರಾಚೀನ ಕವಿ. ಉತ್ತಮ ಕಾವ್ಯಗಳ ಮೂಲಕ ಭಗವಾನ್ ಬುದ್ಧನ ಕರುಣೆ, ಜ್ಞಾನ, ತ್ಯಾಗ ಮತ್ತು ಧರ್ಮವಾಣಿಗಳನ್ನು ಪ್ರಪಂಚಕ್ಕೆ ಸಾರಿದವನು. ಬೌದ್ಧ ದಾರ್ಶನಿಕ ಗ್ರಂಥಕರ್ತೃವಾಗಿ, ನಾಟಕಕಾರನಾಗಿ, ಸಂಸ್ಕೃತ ಮಹಾಕವಿಗಳ ಪರಂಪರೆಯಲ್ಲಿ ಉನ್ನತಸ್ಥಾನವನ್ನು ಪಡೆದಿದ್ದಾನೆ. ಇವರ ರಮಣೀಯ ಕೃತಿಗಳಲ್ಲಿ ಆಕರ್ಷಕ ಶೈಲಿಯನ್ನೂ ಆರ್ಷ ಕಾವ್ಯಗಳ ಸಾಮೀಪ್ಯವನ್ನೂ ಉಕ್ತಿವೈಚಿತ್ರವನ್ನೂ ಗಾನಯೋಗ್ಯವಾದ ಮನೋಹರವಾದ ಪದ್ಯಗಳ ವಿನ್ಯಾಸವನ್ನೂ ಕಾಣಬಹುದು. ಬೌದ್ಧದರ್ಶನದ ಪ್ರಚಾರಕ್ಕೆ ಹೆಸರಾದ ಈ ಕವಿ ನಾಟಕಕಾರನೂ ಆಗಿದ್ದನೆಂಬುದು 1911ರಲ್ಲಿ ಜರ್ಮನ್ ವಿದ್ವಾಂಸ ಲೂಡರ್ಸ್ ಪ್ರಕಟಿಸಿದ ಕೆಲವು ನಾಟಕ ತುಣುಕುಗಳಿಂದ ಕಂಡುಬರುತ್ತದೆ.

ಈತನದೆಂದು ಹೇಳಲಾಗುವ ಗ್ರಂಥಗಳಿವು : 1 ಬುದ್ಧಚರಿತ 2 ಸೌಂದರನಂದ (ಇವೆರಡೂ ಮಹಾಕಾವ್ಯಗಳು). 3 ಸೂತ್ರಾಲಂಕಾರ, ಸ್ವಲ್ಪಭಾಗ ಮಾತ್ರ ಸಂಸ್ಕೃತದಲ್ಲಿದೆ. 4 ಮಹಾಯಾನ ಶ್ರದ್ಧೋತ್ಪಾದ, ಪ್ರಾಚೀನ ಮಹಾಯಾನ ಪಂಥದ ತತ್ತ್ವವಿವರಣೆ. 5 ಗಂಡೀಸ್ತೋತ್ರಗಾಥಾ. ಛಂದೋಬದ್ಧರಚನೆಯಲ್ಲಿ, ಸಂಗೀತಶಾಸ್ತ್ರದಲ್ಲಿ ಈ ಕವಿಯ ಪ್ರಾವೀಣ್ಯ ಕಾಣಬಹುದು. 6 ವಜ್ರಸೂಚೀ. ವರ್ಣಧರ್ಮದ ಮೇಲಿನ ಕಠಿಣ ಹೋರಾಟವನ್ನು ಸೂಚಿಸುವ ಗ್ರಂಥ 7 ಶಾರೀಪುತ್ರಪ್ರಕರಣ, ನಾಟಕದ ಕೆಲವು ಭಾಗಗಳು ಮಾತ್ರ ದೊರೆತಿವೆ.

ಇತರ ಪ್ರಾಚೀನ ಸಂಸ್ಕೃತ ಕವಿಗಳಂತೆ ಅಶ್ವಘೋಷನ ಕಾಲದ ವಿಷಯದಲ್ಲೂ ನಿರ್ಣಾಯಕವಾದ ಅಭಿಪ್ರಾಯಕ್ಕೆ ಬರುವುದು ವಿಮರ್ಶಕರಿಗೆ ಸಾಧ್ಯವಾಗಿಲ್ಲ. ಸ್ಥೂಲವಾಗಿ ಮಾತ್ರ ನಾವು ಕೆಲವು ಅಂಶಗಳನ್ನು ಗಮನಿಸಬಹುದಾಗಿದೆ. ಚೀನ ದೇಶದಲ್ಲಿ ಬಳಕೆಯಲ್ಲಿರುವ ಒಂದು ಪ್ರತೀತಿಯಂತೆ ಅಶ್ವಘೋಷ ಕನಿಷ್ಕನಿಗೆ ಗುರುವಾಗಿದ್ದ. ಕನಿಷ್ಕ 125ರ ವೇಳೆಗೆ ಪೆಷಾವರ್ ನಗರದಲ್ಲಿ ಆಳುತ್ತಿದ್ದ ಸಿಥಿಯನ್ ರಾಜ. ಸಾರಾನಾಥದ ಅಶೋಕಸ್ತಂಭ ಶಾಸನದಲ್ಲಿ ಅಶ್ವಘೋಷ ರಾಜನ ನಿರ್ದೇಶನವಿದೆ. ಬಹುಶಃ ಇದು ಈ ಕವಿಯನ್ನೇ ಕುರಿತಿದ್ದಿರಬಹುದು. ಹಿಂದಿನ ಕಾಲದಲ್ಲಿ ಗುರುಗಳು, ಮಠಾಧಿಪತಿಗಳು, ಜ್ಞಾನಿಗಳು, ಕವಿಗಳು ಮೊದಲಾದ ಸಮಾಜದ ಉನ್ನತ ಪುರುಷರನ್ನು ರಾಜರೆಂದು ಕರೆಯುವುದು ವಾಡಿಕೆಯಲ್ಲಿತ್ತು. ಬೌದ್ಧಗುರುಗಳ ಸಾಲಿನಲ್ಲಿ ಅಶ್ವಘೋಷ ಪಾರ್ಶ್ವನಾದ ಮೇಲೆ ನಾಗಾರ್ಜುನನಿಗಿಂತ ಹಿಂದೆ ಬರುತ್ತಾನೆ. ನಾಗಾರ್ಜುನನ ಕಾಲ 2ನೆಯ ಶತಮಾನದ ಕೊನೆ. ಅಶ್ವಘೋಷನ ನಾಟಕಗಳಲ್ಲಿ ಬರುವ ಪ್ರಾಕೃತದ ಪ್ರಾಚೀನತೆಯಿಂದ ಇವನ ಕಾಲ ಒಂದನೆಯ ಶತಮಾನವೆಂದು ತಿಳಿಯಬಹುದು.

ಇವನ ಗ್ರಂಥಗಳ ಕೊನೆಯಲ್ಲಿ ಬರುವ ಸಮಾಪ್ತಿ ವಾಕ್ಯಗಳಲ್ಲಿ ಕವಿಯ ಜೀವನದ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ತಾಯಿ ಸುವರ್ಣಾಕ್ಷೀ. ಸ್ಥಳ ಸಾಕೇತ. ಇವನನ್ನು ಭಿಕ್ಷು, ಆಚಾರ್ಯ, ಭದಂತ, ಮಹಾಕವಿ, ಮಹಾಪಂಡಿತ, ಮಹಾವಾದಿ ಎಂದು ವಿಶೇಷ ಗೌರವದಿಂದ ಜನ ಕರೆಯುತ್ತಿದ್ದರು. ಹಸಿದು ಎದುರಿಗಿದ್ದ ಆಹಾರವನ್ನು ಮುಟ್ಟದೆ ನಿಂತಿದ್ದ

ಕುದುರೆಗಳು ಇವನ ಧರ್ಮವಾಣಿಯನ್ನು ಲಾಲಿಸಿ ಆಹಾರ ತಿಂದವಂತೆ. ಅದಕ್ಕೇ ಅವನಿಗೆ ಅಶ್ವಘೋಷನೆಂದು ಹೆಸರಾಯಿತಂತೆ. ಜಾತಿಯಲ್ಲಿ ಹುಟ್ಟು ಬ್ರಾಹ್ಮಣನಾಗಿದ್ದು ಮೊದಲು ಬೌದ್ಧಧರ್ಮದ ಸರ್ವಾಸ್ತಿವಾದಕ್ಕೆ ವಾಲಿ ಅನಂತರ ಬುದ್ಧನ ಮೇಲಿನ ಅವ್ಯಾಜನಂಬಿಕೆ ಯಿಂದಲೇ ಉದ್ಧಾರ ಸಾಧ್ಯವೆಂದರಿತು ಮಹಾಯಾನ ಪಂಥದ ಪ್ರಥಮಾಚಾರ್ಯರಲ್ಲಿ ಒಬ್ಬನಾದ. ವೇದ, ಶಾಸ್ತ್ರ, ಪುರಾಣ, ಇತಿಹಾಸ, ರಾಮಾಯಣ, ಮಹಾಭಾರತ–ಇವುಗಳ ಸೂಕ್ಷ್ಮ ಪರಿಚಯ ಇವನಿಗಿತ್ತೆಂದು ಇವನ ಕಾವ್ಯಗಳಿಂದ ತಿಳಿದುಬರುತ್ತದೆ.

**ಬುದ್ಧಚರಿತ :** ಈ ಕಾವ್ಯ ಮೊದಲು 28 ಸರ್ಗಗಳನ್ನು ಒಳಗೊಂಡಿದ್ದು ಚೀನಿ ಭಾಷೆಗೆ ಸು. 420ರಲ್ಲಿ ಧರ್ಮರಕ್ಷನಿಂದ ಅನುವಾದವಾಯಿತು. 8ನೆಯ ಶತಮಾನದಲ್ಲಿ ಟಿಬೆಟನ್ ಭಾಷೆಗೂ ಭಾಷಾಂತರವಾಯಿತು. ಈಗ ಸಂಸ್ಕೃತದಲ್ಲಿ ಉಪಲಬ್ಧವಿರುವುದು 13 ಸರ್ಗಗಳು ಮಾತ್ರ. ಕಳೆದ ಶತಮಾನದಲ್ಲಿ ಅಮೃತಾನಂದ ಎನ್ನುವ ವಿದ್ವಾಂಸ ಇನ್ನೂ ನಾಲ್ಕು ಸರ್ಗಗಳನ್ನು ಪೂರಕವಾಗಿ ರಚಿಸಿದ. ಈ ಕಾವ್ಯದಲ್ಲಿ ಬುದ್ಧನ ಮನೋಜ್ಞವಾದ ಜೀವನ ಮತ್ತು ಜ್ಞಾನೋಪದೇಶ ರಮಣೀಯವಾಗಿ ಚಿತ್ರಿಸಲ್ಪಟ್ಟಿವೆ. ಸರ್ಗಾನುಸಾರ ಕಥೆ ಹೀಗಿದೆ.

ಇಕ್ಷ್ವಾಕು ವಂಶದ, ಶಾಕ್ಯರ ದೊರೆ ಶುದ್ಧೋದನನಿಗೆ ಅಪಗತ ಮಾಯೆಯಾದ ಮಾಯಾದೇವಿ ರಾಣಿ. ಕಪಿಲವಸ್ತು ರಾಜಧಾನಿ. ಒಮ್ಮೆ ಮಾಯಾದೇವಿಗೆ ಸ್ವಪ್ನದಲ್ಲಿ ಶ್ವೇತಗಜವೊಂದು ಹೊಟ್ಟೆಯನ್ನು ಹೊಕ್ಕಂತೆ ಭಾಸವಾಗುತ್ತದೆ. ಇದು ನಿಜವೋ ಎಂಬಂತೆ ಗರ್ಭವತಿಯಾಗುತ್ತಾಳೆ. ಕೆಲವು ದಿನಗಳು ಕಳೆಯಲು, ವನ ವಿಹಾರಕಾಲದಲ್ಲಿ ಲುಂಬಿನೀವನ ದಲ್ಲಿ ಲತಾವಲಂಬಿನಿಯಾಗಿದ್ದಾಗ ಮಾಯಾದೇವಿಯ ಪಾರ್ಶ್ವದಿಂದಲೇ ವೇದನಾರಹಿತವಾಗಿ ಶಿಶುವಿನ ಜನನವಾಗುತ್ತದೆ. ಜನಿಸಿದ ಕೂಡಲೇ ಮಗು ಎರಡು ಹೆಜ್ಜೆ ನಡೆದು ಸಿಂಹವಾಣಿ ಯಿಂದ ಹೀಗೆ ನುಡಿಯುತ್ತದೆ: ಜಗತ್ತಿನ ಒಳಿತಿಗಾಗಿ ಜ್ಞಾನಾರ್ಜನೆಗಾಗಿ ಜನ್ಮ ತಳೆದಿದ್ದೇನೆ ; ನನಗೆ ಇದೇ ಕಡೆಯ ಜನ್ಮ. ಪ್ರಕೃತಿಮಾತೆ ಅದ್ಭುತವಾಗಿ ಆಶ್ಚರ್ಯಜನಕವಾದ ಸಂಗತಿಗಳಿಂದ ಬುದ್ಧ ಜನನವನ್ನು ಸೂಚಿಸುತ್ತಾಳೆ. ತಾಯಿ ತಂದೆಗಳಿಗೆ ಆನಂದ ಮತ್ತು ಭಯ ಏಕಕಾಲದಲ್ಲುಂಟಾಗುತ್ತದೆ. ಬ್ರಾಹ್ಮಣರು ಈ ಶಿಶು ಮಹಾಜ್ಞಾನಿ ಅಥವಾ ಚಕ್ರವರ್ತಿಯಾಗು ವುದು ನಿಜವೆಂದು ಭವಿಷ್ಯ ನುಡಿಯುತ್ತಾರೆ. ಅಷ್ಟರಲ್ಲಿ ತನ್ನ ತಪೋಬಲದಿಂದ ಬುದ್ಧಜನ್ಮವನ್ನರಿತ ಅಸಿತ ಮಹರ್ಷಿ ತನ್ನ ಶೋಕವನ್ನು ನುಂಗಿಕೊಂಡು ಮುದುಕನಾದ ತಾನು ಬುದ್ಧನ ಉಪದೇಶವನ್ನು ಕೇಳುವವರೆಗೆ ಜೀವಿಸಿರುವುದಿಲ್ಲವಲ್ಲ ಎಂದು ಹಲುಬುತ್ತಾನೆ. ಜಗತ್ತಿನ ಮೋಹಾಂಧಕಾರವನ್ನು ನಾಶಗೊಳಿಸುವ ಸೂರ್ಯನೇ ಮಗನಾದರೂ ಮಗ ಎಲ್ಲಿ ಋಷಿಯೇ ಆಗುವನೋ ಎಂದು ಶುದ್ಧೋದನನಿಗೆ ಚಿಂತೆ ಪ್ರಾರಂಭವಾಯಿತು. ಜಾತಕರ್ಮಾದಿಗಳನ್ನು ನೆರವೇರಿಸಿ ಪುರಪ್ರವೇಶ ಮಾಡುತ್ತಾನೆ. ಜನರಿಗೆ ಅತ್ಯುತ್ಸಾಹ ಮತ್ತು ಆನಂದ.

ಕಥೆ ಹೀಗೆ ಮುಂದುವರಿಯುತ್ತದೆ: ದೇಶದಲ್ಲಿ ಸುಭಿಕ್ಷೆ–ರಾಜನ ಸಮೃದ್ಧಿ–ಸರ್ವಾರ್ಥಸಿದ್ಧ ನೆಂದು ಮಗುವಿಗೆ ನಾಮಕರಣ–ಮಾಯಾದೇವಿಯ ಮರಣ–ಮಾಯಾದೇವಿಯ ತಂಗಿಯಿಂದಲೇ ಶಿಶುಪಾಲನೆ–ಬಾಲಕ ಬೆಳೆಯುವುದು–ಯಶೋಧರೆಯೊಂದಿಗೆ ವಿವಾಹ–ರಾಹುಲನೆಂಬ ಪುತ್ರನ ಜನನ–ರಾಜ ಮಗನಿಗೆ ವನವಾಸದ ಚಿಂತೆ ಬರದೇ ಇರಲೆಂದು ಕೇವಲ ಐಹಿಕ ಸುಖದ ವಾತಾವರಣವನ್ನೇ ಕಲ್ಪಿಸುವುದು.

ವಿಹಾರಯಾತ್ರೆ–ಸ್ವರ್ಣರಥದಲ್ಲಿ ಕುಮಾರನ ಮೆರವಣಿಗೆ–ಶುದ್ಧಾತ್ಮರಾದ ದೇವತೆಗಳ ಪ್ರಭಾವದಿಂದ ವೃದ್ಧ, ರೋಗಿ, ಶವ ಇವುಗಳ ನೋಟದಿಂದ ಕುಮಾರನಿಗೆ ಮನಸ್ಸು ಕದಡುವುದು–ಪದ್ಮವನ ಪ್ರವೇಶ.

ಚೆಲುವೆಯರು ತಮ್ಮ ಹಾವ, ಭಾವ, ವಿಲಾಸ, ಲೀಲೆಗಳಿಂದ ಕುಮಾರನನ್ನು ವಶಗೊಳಿಸಲು ಪ್ರಯತ್ನಿಸುವುದು–ಮರಣ ಭಯದಿಂದ ಆವೃತನಾದ ಕುಮಾರನಿಗೆ ಯಾವುದೂ ರುಚಿಸದಿರುವುದು–ಅವರಲ್ಲಿ ಅವನಿಗೆ ಕನಿಕರವೇ ಉಂಟಾಗುವುದು–ಸ್ತ್ರೀಯರೆಲ್ಲ ಮನೋರಥರಾಗುವುದು.

ರಾಜಾಶ್ವ ಕಂಥಕನನ್ನೇರಿ ಮಿತ್ರರೊಡನೆ ಕುಮಾರ ವನಭೂಮಿಯ ದರ್ಶನಕ್ಕಾಗಿ ಹೊರಡುವುದು–ದಾರಿಯಲ್ಲಿ ಒಂದು ನೇರಳೆ ಮರದ ಬುಡದಲ್ಲಿ ವಿಶ್ರಾಂತಿ–ಭಿಕ್ಷುರೂಪದ ಸಂನ್ಯಾಸಿಯ ಆಗಮನ ಮತ್ತು ಸಂಭಾಷಣೆ–ಅವನಂತೆಯೇ ಮೋಕ್ಷಕ್ಕಾಗಿ ಶ್ರಮಿಸಬೇಕೆಂಬ ಇಚ್ಛೆ ಬೇರೂರಿದ್ದು–ತಂದೆಗೆ ವಿಷಯನಿವೇದನೆ–ರಾಜನ ಕಳವಳ–ರಾಜ ಮಗನಿಗೆ ಐಹಿಕ ಭೋಗದ ಆಸೆಯನ್ನು ಹೆಚ್ಚಿಸಲೆತ್ನಿಸಿದುದು–ರಾತ್ರಿ ಛಂದಕನಿಂದ ಕಂಥಕನನ್ನು ತರಿಸಿ ಅದರ ಮೇಲೆ ಪುರದ ಹೊರಕ್ಕೆ ಬಂದು 'ಜನನ ಮರಣಗಳ ಕೊನೆಗಾಣುವವರೆಗೆ ಕಪಿಲವಸ್ತುವನ್ನು ಮತ್ತೆ ನೋಡುವುದಿಲ್ಲ ಎಂದು ಪ್ರತಿಜ್ಞೆ ಮಾಡುವುದು–ಬಲುದೂರ ಪ್ರಯಾಣ.

ಭಾರ್ಗವನ ಆಶ್ರಮ–ಛಂದಕವಿಸರ್ಜನ ರತ್ನಾಭರಣಗಳೊಂದಿಗೆ ತಂದೆಗೆ ಸಂದೇಶ–ಸ್ವರ್ಣಖಡ್ಗದಿಂದ ಕೇಶಪಾಶಗಳನ್ನು ಕತ್ತರಿಸುವುದು–ವ್ಯಾಧನಿಂದ ಕಾಷಾಯ ವಸ್ತ್ರ ಸ್ವೀಕಾರ.

ಮುನಿಗಳ ಸತ್ಕಾರ, ಸಂಭಾಷಣೆ–ತಪಸ್ಸಿನ ಪ್ರಕಾರಗಳ ಜ್ಞಾನ – ಅರಾಡ ಮುನಿ ದರ್ಶನಕ್ಕಾಗಿ ವಿಂಧ್ಯಕ್ಕೆ ಪ್ರಯಾಣ.

ಕಪಿಲವಸ್ತುವಿನಲ್ಲಿ ದುಃಖ–ಅಂತಃಪುರ ಜನರ ವಿಲಾಪ–ಅವನ ವಿಷಯದಲ್ಲಿ ಕೇಳಿದ ಅದ್ಭುತ ಸಂಗತಿಗಳ ಶ್ರವಣದಿಂದ ಎಲ್ಲರಿಗೂ ಸಮಾಧಾನ–ಯಶೋಧರೆಯ ಪ್ರಲಾಪ–ಶೋಕವಿಹ್ವಲನಾದ ರಾಜನನ್ನು ಸಂತೈಸುವುದು.

ಮಂತ್ರಿ ಪುರೋಹಿತರಿಂದ ಕುಮಾರಾನ್ವೇಷಣೆ–ಉಪದೇಶ–ಬೋಧಿಸತ್ತ್ವನಾದ ಕುಮಾರನ ಅಚಲ ನಿರ್ಧಾರ, ತತ್ತ್ವದರ್ಶನದ ವೀರಪ್ರತಿಜ್ಞೆ–ಮಂತ್ರಿ ಪುರೋಹಿತರ ನಿರ್ಗಮನ.

ರಾಜಗೃಹಕ್ಕೆ ಆಗಮನ, ಶ್ರೇಣ್ಯಕುಮಾರದರ್ಶನಕ್ಕಾಗಿ ಗುಡ್ಡದ ಮೇಲಕ್ಕೆ ಬರುವುದು–ಮಗಧ ರಾಜನ ಉಪದೇಶದಿಂದಲೂ ಕುಮಾರ ಕದಲದಿರುವುದು.

ವಿಷಯಗಳ ನಿಂದೆ–ರಾಜ ಕೃತಕೃತ್ಯನಾಗದೆ ಹಿಂತಿರುಗುವುದು.

ಅರಾಡಮುನಿಯಿಂದ ಸಾಂಖ್ಯದರ್ಶನ ತಿಳಿಯುವುದು–ಉದ್ರಕನ ದರ್ಶನಕ್ಕಾಗಿ ಪಯಣ–ಗಯನ ಆಶ್ರಮ–ಪಂಚತಪಸ್ವಿಗಳು–ಆರು ವರ್ಷಗಳ ಸತತಯೋಗಾಭ್ಯಾಸ–ದೇಹದಂಡನೆ–ನಂದಳಿಂದ ಅರ್ಪಿಸಲ್ಪಟ್ಟ ಪಾಯಸ ಸ್ವೀಕಾರ–ಬೋಧಿವೃಕ್ಷದ ಕೆಳಗೆ ಮಂಡನ.

ಮಾರನ ಅನೇಕ ಪ್ರಯತ್ನಗಳು ಮತ್ತು ಸೋಲು–ಧ್ಯಾನಮಗ್ನನಾದ ಕುಮಾರ ಬುದ್ಧತ್ವವನ್ನು ಕೊನೆಯ ಯಾಮದಲ್ಲಿ ಪಡೆಯುವುದು–ಬುದ್ಧನಾದಾಗ ಅರುಣೋದಯವಾಗುವುದು.

ಇಲ್ಲಿಂದ ಮುಂದಿನ ಕಥೆಗೆ ಸಂಸ್ಕೃತ ಮೂಲ ದೊರಕಿಲ್ಲ. ಚೀನಿ ಮತ್ತು ಟಿಬೆಟನ್ ಭಾಷಾಂತರಗಳಲ್ಲಿ ಕಥೆ 28 ಸರ್ಗಗಳವರೆಗೂ ಓಡುತ್ತದೆ. ಇದರಲ್ಲಿ ಬುದ್ಧನ ಧರ್ಮಬೋಧೆ ಅವನ ದೈಹಿಕ ಅವಶೇಷಗಳ ವಿಚಾರವಾಗಿ ನಡೆದ ಕಲಹಗಳು ಮತ್ತು ಅಶೋಕ ಚಕ್ರವರ್ತಿಯ ವೃತ್ತಾಂತ ಇವೆಲ್ಲ ಉಕ್ತವಾಗಿವೆ.

**ಸೌಂದರನಂದ :** 18 ಸರ್ಗಗಳ ಕಾವ್ಯ. ಬಹುಶಃ ಇದೇ ಅಶ್ವಘೋಷನ ಪ್ರಥಮ ಕೃತಿಯಾಗಿರಬಹುದು. ಏಕೆಂದರೆ ಈ ಗ್ರಂಥದ ಯಾವ ಭಾಗದಲ್ಲೂ ಇತರ ಗ್ರಂಥಗಳನ್ನು ಹೆಸರಿಸಿಲ್ಲ.

ಮಹಾವಗ್ಗ ಮತ್ತು ನಿದಾನಕಥಾ ಎಂಬ ಬೌದ್ಧಗ್ರಂಥಗಳಲ್ಲಿ ಬರುವ ಬುದ್ಧನ ಬಲತಮ್ಮ ನಾದ ನಂದನ ಮನಸ್ಸಿಲ್ಲದ ಬೌದ್ಧಧರ್ಮ ಪ್ರವೇಶವೇ ಕಥಾವಸ್ತು. ಈ ವಸ್ತು ರಮಣೀಯವಾಗಿ ಚಿತ್ರಿತವಾಗಿದೆ. ಕಥಾನಾಯಕ ನಂದನಾದರೆ ನಾಯಕಿ ಸುಂದರಿ. ಹೆಸರಿಗೆ ಅನ್ವರ್ಥವಾದ ಲಾವಣ್ಯವತಿ. ಬುದ್ಧನ ಸಂದೇಶ ಶುದ್ಧೋದನನೇ ಮೊದಲಾದ ಪ್ರಮುಖರೆಲ್ಲರಿಗೂ ಮುಟ್ಟಿದ್ದರೂ ಸುಂದರಿಯ ಸೌಂದರ್ಯ ರಾಶಿಯಲ್ಲಿ ತನ್ನನ್ನೇ ಮರೆತಿದ್ದ ನಂದನಿಗೆ ತಲುಪಲಿಲ್ಲ. ತಮ್ಮನನ್ನೇ ಬುದ್ಧಧರ್ಮಕ್ಕೆ ಒಲಿಯುವಂತೆ ಮಾಡದಿದ್ದರೆ ಇತರರೂ ಅವನಂತೆಯೇ ಸುಕೃತವಿಲ್ಲದವರಾದಾರೆಂದು ಬುದ್ಧ ಸಂನ್ಯಾಸದೀಕ್ಷೆ ಕೊಡಲು ಪ್ರಯತ್ನಪಟ್ಟು ಜಯಶೀಲನಾಗುತ್ತಾನೆ. ಇದು ಕಾವ್ಯದ ಮುಖ್ಯಾಂಶ.

**ಸರ್ಗಾನುಸಾರಿಯಾದ ಕಥೆ ಹೀಗಿದೆ :** ಕಪಿಲವಸ್ತು ನಗರ ವರ್ಣನೆ–ಶುದ್ಧೋದನ ರಾಜನ ವರ್ಣನೆ–ಸರ್ವಾರ್ಥಸಿದ್ಧ ಮತ್ತು ನಂದ ಇವರ ಜನನ ವೃತ್ತಾಂತ–ಬುದ್ಧನ ವಿವರವಾದ ವರ್ಣನೆ–ಸುಂದರಿಯ ಲಾವಣ್ಯ–ನಂದ ಸುಂದರಿಯರ ಮಿಲನ–ರಾತ್ರಿ ಚಂದ್ರರಂತೆ ಅವರ ಪ್ರೇಮಜೀವನ–ಅವರ ಸಲ್ಲಾಪಗಳ ಸಂದರ್ಭದಲ್ಲೇ ಭಿಕ್ಷೆಗಾಗಿ ಬುದ್ಧನ ಆಗಮನ–ಭಿಕ್ಷೆ ಇಲ್ಲದೆ ನಿರ್ಗಮನ–ವಿಷಯ ತಿಳಿದ ಅನಂತರ ಸುಂದರಿಯ ಗಂಧಲೇಪ ಒಣಗುವುದರಲ್ಲಿ ಬುದ್ಧನನ್ನು ಕರೆತರುವೆನೆಂದು ನಂದ ಹೊರಡುವುದು–ಮನಸ್ಸಿಲ್ಲದೆ ಇದ್ದ ನಂದನಿಗೆ ಬುದ್ಧನಿಂದ ಸಂನ್ಯಾಸದೀಕ್ಷೆ–ನಂದ ತನ್ನ ಸುಂದರ ಕೇಶವನ್ನು ಕತ್ತರಿಸಿ ಕಾವಿಧಾರಣೆ ಮಾಡುವುದು.

ಸುಂದರಿಯ ದುಃಖ ಮತ್ತು ವಿರಹತಾಪ–ನಂದನಿಗೂ ಸುಂದರಿಯದೇ ಧ್ಯಾನ–ಸಂನ್ಯಾಸ ತೊರೆದು ಮತ್ತೆ ಗೃಹಸ್ಥಕ್ಕೆ ಬರುವುದು–ಅನೇಕರ ಕಥೆಗಳನ್ನು ನಂದ ಬುದ್ಧನಿಗೆ ಅರುಹುವುದು–ಕಾಮಗಳ ಅನಿತ್ಯತೆ, ವೈರಾಗ್ಯದ ಸುಖ ಮತ್ತು ಸ್ತ್ರೀಯರ ಚಾಂಚಲ್ಯ ಕುರಿತ ಬುದ್ಧವಾಣಿ–ಮದದಿಂದ ಕಷ್ಟಕ್ಕೀಡಾದ ಹಿಂದಿನ ವೀರರ ಕಥೆಗಳು–ಆದರೂ ನಂದನ ಮೋಹದ ಮಂಜು ಕರಗದೇ ಇರುವುದು–ಕಾಮಾಂಧನಾದ ನಂದನನ್ನು ಸ್ವರ್ಗಕ್ಕೆ ಒಯ್ಯುತ್ತ ಬುದ್ಧ ದಾರಿಯಲ್ಲಿ ಒಂದು ಕುರೂಪಿಯಾದ ಹೆಣ್ಣು ಕಪಿಯನ್ನು ತೋರಿಸಿ ಸುಂದರಿಗಿಂತ ಚೆನ್ನಲ್ಲವೆ ಎಂದು ಕೇಳುವುದು ಸುಂದರಿಯ ರೂಪವನ್ನೇ ಹೊಗಳಿದ ಗಂಡನಿಗೆ ಮುಂದೆ ಇಂದ್ರ ನಂದನವನದಲ್ಲಿ ಅಪ್ಸರೆಯರ ದರ್ಶನವಾಗುವುದು–ಅಪ್ಸರೆಯರ ಸೌಂದರ್ಯ ಸುಂದರಿಯ ಸೌಂದರ್ಯಕ್ಕಿಂತ ಸಾವಿರಪಾಲು ಹೆಚ್ಚೆಂದು ನಂದ ಒಪ್ಪಿ ಅವರನ್ನು ಪಡೆಯಲು ಬುದ್ಧವಾಕ್ಯದಂತೆ ತಪಸ್ಸಿಗೆ ಸಿದ್ಧನಾಗುವುದು–ಸುಂದರಿಯನ್ನು ಮರೆಯುವುದು–ಆನಂದ ಸ್ವರ್ಗಸುಖದ ಅನಿತ್ಯತೆಯನ್ನು ತಿಳಿಯುವುದು–ಪುಣ್ಯ ಮುಗಿದ ಮೇಲೆ ಮತ್ತೆ ಭೂಮಿಗೇ ಹಿಂತಿರುಗಬೇಕೆಂಬ ಅಂಶದ ವಿವರಣೆ–ನಂದನಿಗೆ ಸಮ್ಯಕ್‌ಜ್ಞಾನ ಪ್ರಾಪ್ತಿಯಾಗುವುದು–ಸ್ತ್ರೀಮೋಹ ಪೂರ್ಣವಾಗಿ ತೊಲಗಿ ಬುದ್ಧನ ಉಪದೇಶಕ್ಕೆ ಸಿದ್ಧನಾಗುವುದು–ನಂದ ಅರ್ಹಂತನಾಗುವುದಲ್ಲದೆ ಇತರರಿಗೂ ಮೋಕ್ಷೋಪದೇಶ ಮಾಡಲು ಕಾತರನಾಗುವುದು.

ಹೀಗೆ ಸೌಂದರನಂದ ಕಾವ್ಯ ಮುಖ್ಯವಾಗಿ ಧರ್ಮಪ್ರಚಾರಕ್ಕೆ ಉತ್ತಮ ಸಾಧನವಾಗಿ ಬೆಳೆದಿದೆ.

ಕವಿಗೆ ವೈದಿಕ ಗ್ರಂಥಗಳು ಮಾತ್ರವೇ ಅಲ್ಲದೆ ರಾಮಾಯಣ, ಭಾರತಗಳ ಮತ್ತು ಸಾಂಖ್ಯ ವೈಶೇಷಿಕ ದರ್ಶನಗಳ ಪರಿಚಯವೂ ಇದ್ದಂತೆ ಕಾಣಬರುವುದು. ಇವನ ಕೃತಿಗಳನ್ನು ಹಿಂದೆ ಸಕಲ ಮತೀಯರೂ ಓದುತ್ತಿದ್ದರಲ್ಲದೆ ಈತ ಕಾಳಿದಾಸಾದಿ ಮಹಾಕವಿಗಳಂತೆ ಜನಮೆಚ್ಚುಗೆ ಪಡೆದಿದ್ದ. (ಜಿ.ಎಸ್.ಆರ್.; ಸಿ.ಕೆ.ವೈ.ಡಿ.)

**ಅಶ್ವತ್ಥ್, ಸಿ.:** 1939–2010 ಸುಗಮ ಸಂಗೀತ ಗಾಯಕ, ಚಲನಚಿತ್ರ ಹಿನ್ನೆಲೆಗಾಯಕ. 1939 ಡಿಸೆಂಬರ್ 29ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಶ್ರೀಧರರಾಮರಾಯ, ತಾಯಿ ಶಾರದಮ್ಮ. ತಂದೆ ತಾಯಿಗಳಿಗೆ ಇವರು ಮೂರನೆಯ ಮಗ. ಇವರ ಸೋದರತ್ತೆಗೆ ವೀಣೆ ನುಡಿಸುವುದರಲ್ಲಿ ಪರಿಶ್ರಮವಿತ್ತು. ಅಣ್ಣಂದಿರಾದ ವಿಶ್ವನಾಥರಾವ್ ಹಾಗೂ ನಾಗರಾಜರಾವ್ ಇವರಿಬ್ಬರಿಗೂ ನಾಟಕ ಹಾಗೂ ಸಂಗೀತದಲ್ಲಿ ಪ್ರವೇಶವಿತ್ತು. ಮನೆಯ ಇಂಥ ವಾತಾವರಣವೇ ಅಶ್ವಥ್ ಅವರು ಕಲಾದೇಗುಲವನ್ನು ಪ್ರವೇಶಿಸಲು ಪ್ರೇರಕಶಕ್ತಿಯಾಗಿ ಕೆಲಸ ಮಾಡಿತು.

ಬಾಲಕನಾಗಿದ್ದಾಗ ಪಿ.ಕಾಳಿಂಗರಾವ್, ಕೆ.ಎಲ್. ಸೈಗಲ್ ಹಾಗೂ ಮಹಮ್ಮದ್ ರಫಿಯವರ ಗಾಯನದಿಂದ ಪ್ರಭಾವಿತರಾದರು. ಮಾಧ್ಯಮಿಕ ಶಾಲೆ, ಪ್ರೌಢಶಾಲೆ ದಿನಗಳಲ್ಲಿ ರಾಮಕೃಷ್ಣಾಶ್ರಮದ ಭಜನೆಗಳಲ್ಲಿ ಭಾಗವಹಿಸುತ್ತಿದ್ದರು. ಕಾಲೇಜು ದಿನಗಳಲ್ಲೇ ಇವರಿಗೆ ಕನ್ನಡ ಕವನಗಳಿಗೆ ಸ್ವರಸಂಯೋಜಿಸುವ ಆಸಕ್ತಿ ಬೆಳೆದಿತ್ತು. ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. ಪದವಿ ಪಡೆದ ಅನಂತರ ಇವರು ಬೆಂಗಳೂರಿನ ಐ.ಟಿ.ಐ. ನಲ್ಲಿ 27 ವರ್ಷಗಳ ಕಾಲ ಕೆಲಸಮಾಡಿ ಎಕ್ಸಿಕ್ಯೂಟಿವ್ ಎಂಜಿನಿಯರ್ ಆಗಿ ನಿವೃತ್ತಿ ಪಡೆದರು. ಇವರಿಗೆ ಸಂಗೀತದಲ್ಲಿ ವಿಶೇಷ ಆಸಕ್ತಿ ಇದ್ದುದರಿಂದ ಏಳು ವರ್ಷಗಳ ಕಾಲ ದೇವಗಿರಿ ಶಂಕರರಾವ್ ಜೋಶಿಯವರ ಬಳಿ ಹಿಂದುಸ್ಥಾನಿ ಸಂಗೀತವನ್ನು ಅಭ್ಯಾಸ ಮಾಡಿದರು.



ಸಂಗೀತ ಸಂಯೋಜಕರಾಗಿ ನಾಟಕ, ಚಲನಚಿತ್ರ, ಸುಗಮಸಂಗೀತ ಈ ಮೂರೂ ಕ್ಷೇತ್ರಗಳಿಗೆ ಅಶ್ವಥ್ ಅವರು ಮಹತ್ತರ ಕೊಡುಗೆ ನೀಡಿದ್ದಾರೆ. ಇವರು ಸಂಯೋಜಕರಾಗಿ ಮೊದಲು ಪರಿಚಯವಾದದ್ದು ನಾಟಕ ಕ್ಷೇತ್ರದ ಮೂಲಕ. ನಟರಂಗ ಹವ್ಯಾಸಿ ನಾಟಕ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ, ಅಲ್ಲಿನ ಎಲ್ಲ ನಾಟಕಗಳಿಗೂ ಇವರು ಸಂಗೀತ ನೀಡಿದರು. ಕುವೆಂಪು ವಿರಚಿತ ಶ್ಮಶಾನಕುರುಕ್ಷೇತ್ರ ನಾಟಕದ ಸಂಗೀತ ಸಂಯೋಜನೆಯ

ನಾಂದಿಯೊಂದಿಗೆ ಅಶ್ವಥ್ ಅವರ ಸಂಗೀತ ಸಂಯೋಜನೆಯ ಕೈಂಕರ್ಯ ಆರಂಭವಾ ಯಿತು. ಲಂಕೇಶರ ಬಿರುಕು ಹಾಗೂ ಗಿರೀಶ್‌ಕಾರ್ನಾಡರ ಹಯವದನ ನಾಟಕಗಳ ಸಂಗೀತವೂ ಇವರಿಗೆ ಯಶಸ್ಸನ್ನು ತಂದುಕೊಟ್ಟಿತು. ಮಾಸ್ತಿಯವರ ಕಾಕನಕೋಟೆ ನಾಟಕದ ಹಾಡುಗಳಂತೂ ಅಶ್ವಥ್ ಅವರ ಹೆಸರನ್ನು ಕನ್ನಡಿಗರ ಮನೆಮನೆಗೂ ಮುಟ್ಟಿಸಿತು. ಈ ಚಿತ್ರದ ಹಾಡಿನ ಧಾಟಿಯನ್ನು ಎಲ್ಲರೂ ಮೆಲುಕು ಹಾಕುವಂತೆ ಮಾಡಿತು. ತುಘಲಕ್, ತಲೆದಂಡ, ನಾಗಮಂಡಲ, ರಕ್ತಾಕ್ಷಿ, ಬಿರುಗಾಳಿ,

ಒಥೆಲೋ, ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್, ಊರುಭಂಗ, ಭೈರವಿ, ಮೃಚ್ಛಕಟಿಕ, ಕಕೇಶಿಯನ್ ಚಾಕ್ ಸರ್ಕಲ್ – ಇವು ಅವರು ಸಂಗೀತ ನೀಡಿದ ಕೆಲವು ಪ್ರಮುಖ ನಾಟಕಗಳು.

ಚಲನಚಿತ್ರಕ್ಷೇತ್ರದಲ್ಲೂ ಇವರ ಕೊಡುಗೆ ಅನುಪಮವಾದುದು. ಕಾಕನಕೋಟೆ ಚಲನಚಿತ್ರಕ್ಕೆ ಇವರು ಸಂಗೀತ ನೀಡಿದರು. ಶಿಶುನಾಳ ಶರೀಫ್, ಮೈಸೂರುಮಲ್ಲಿಗೆ, ಚಿನ್ನಾರಿಮುತ್ತ, ಕೊಟ್ರೇಶಿಕನಸು, ನಾಗಮಂಡಲ ಚಿತ್ರಗಳ ಚಿತ್ರಕಥೆಯಲ್ಲೂ ಪಾಲ್ಗೊಂಡಿದ್ದೊಂದು ವಿಶೇಷ. ಮೊದಮೊದಲು ಎಲ್. ವೈದ್ಯನಾಥನ್ ಹಾಗೂ ಗುಣಸಿಂಗ್ ಅವರ ಜೊತೆ ಸೇರಿ ಸಂಗೀತ ನೀಡುತ್ತಿದ್ದವರು 1986ರ ಅನಂತರ ಸಂಗೀತದ ಸಂಪೂರ್ಣ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡು ಅನೇಕ ಕಲಾವಿದರಿಗೆ ಪ್ರೋತ್ಸಾಹ ನೀಡಿದರು.

ಅಶ್ವಥ್ ಇಲ್ಲಿಯವರೆಗೂ 65ಕ್ಕೂ ಹೆಚ್ಚು ಧ್ವನಿಸುರುಳಿಗಳಿಗೆ ಸ್ವರಸಂಯೋಜಿಸಿ ಹಾಡಿದ್ದಾರೆ ಹಾಗೂ ಹಾಡಿಸಿದ್ದಾರೆ. ದೂರದರ್ಶನ ಗಳಲ್ಲೂ ಪಾಲ್ಗೊಂಡಿದ್ದಾರೆ. ಕಿರುತೆರೆಯಲ್ಲೂ ಇವರು ಸಂಗೀತದ ಛಾಪನ್ನು ಒತ್ತಿದ್ದಾರೆ. ಮಾಯಾಮೃಗ, ಮನ್ವಂತರ, ಗೃಹಭಂಗ, ಮುಕ್ತ ಇತ್ಯಾದಿ ಕಿರುತೆರೆಯ ಧಾರಾವಾಹಿಗಳ ಶೀರ್ಷಿಕೆಗೆ ಇವರು ಹಾಡಿದ್ದು ಮನೆಮಾತಾಗಿದೆ. ಸುಗಮ ಸಂಗೀತ ಮತ್ತು ಸ್ವರ ಮಾಧುರಿ ಕುರಿತು ಇವರು ಎರಡು ಗ್ರಂಥಗಳನ್ನು ರಚಿಸಿದ್ದಾರೆ. ಇವರಿಗೆ ಅನೇಕ ಗೌರವಗಳೂ ಪ್ರಶಸ್ತಿಗಳೂ ದೊರಕಿವೆ. ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಇವರು ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದರು (1998). 1995 ಹಾಗೂ 2000ರದಲ್ಲಿ ಅಮೆರಿಕ ಪ್ರವಾಸ ಮಾಡಿ ಸುಗಮ ಸಂಗೀತ ಪ್ರಚಾರ ಕೈಗೊಂಡರು. ಸ್ಪಂದನ ಹಾಗೂ ಚಿನ್ನಾರಿಮುತ್ತ ಚಿತ್ರಸಂಗೀತಕ್ಕಾಗಿ, ವರ್ಷಋತು ಚಿತ್ರದ ಹಿನ್ನೆಲೆಗಾಯನಕ್ಕಾಗಿ ಇವರಿಗೆ ರಾಜ್ಯಪ್ರಶಸ್ತಿ ದೊರೆಕಿದೆ. ಮೈಸೂರುಮಲ್ಲಿಗೆ ಚಿತ್ರಕ್ಕೆ ಇವರಿಗೆ ಫಿಲ್ಮ್‌ಫೇರ್ ಪ್ರಶಸ್ತಿ ದೊರೆಕಿದೆ.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ (1985), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1986), ಸಂತ ಶಿಶುನಾಳ ಷರೀಫ್ ಪ್ರಶಸ್ತಿ (1998)–ಇವು ಇವರಿಗೆ ದೊರಕಿದ ಕೆಲವು ಮುಖ್ಯ ಪ್ರಶಸ್ತಿಗಳು. (ಎಚ್.ಆರ್.ಎಲ್.)

**ಅಶ್ವತ್ಥ :** ನೋಡಿ – ಅರಳಿಮರ

**ಅಶ್ವತ್ಥ :** 1912–94. ಪ್ರಸಿದ್ಧ ಕಥೆಗಾರರು. ಕೂಡೂಳು ಅಶ್ವತ್ಥ ನಾರಾಯಣರಾಯ ಇವರ ನಿಜನಾಮ. ಅಶ್ವತ್ಥ ಎಂಬ ಕಾವ್ಯನಾಮದಿಂದ ಸಾಹಿತ್ಯಲೋಕದಲ್ಲಿ ಜನಪ್ರಿಯರಾಗಿದ್ದಾರೆ. ಶಿವಮೊಗ್ಗ ಜಿಲ್ಲೆ ಕೂಡೂಳಿನಲ್ಲಿ 1912 ಜೂನ್ 16ರಂದು ಜನಿಸಿದರು. ತಂದೆ ಸೋಮಶೇಖರರಾವ್, ತಾಯಿ ಲಕ್ಷ್ಮೀದೇವಿ. ಈ ದಂಪತಿಗಳಿಗೆ ಅಶ್ವತ್ಥ ಮೂರನೆಯ ಮಗು. ಚಿಕ್ಕಂದಿನಲ್ಲಿಯೆ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆರೈಕೆಯಲ್ಲಿ ಬೆಳೆದರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ತಾಯಿಯ ತವರೂರಾದ ಚಿಕ್ಕಮಗಳೂರು ಜಿಲ್ಲೆಯ ಕೆರೆಗೋಡಿನಲ್ಲಿ ನಡೆಯಿತು. ಪ್ರೌಢಶಾಲಾ ವಿದ್ಯಾಭ್ಯಾಸ ಮೈಸೂರಿನ ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ನಡೆಯಿತು. ಶಾಲೆಯಲ್ಲಿ ಅತ್ಯಂತ ಬುದ್ಧಿವಂತ ಮತ್ತು ಚುರುಕಿನ ವಿದ್ಯಾರ್ಥಿಯಾಗಿದ್ದ ಇವರು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಪ್ರಥಮದರ್ಜೆಯಲ್ಲಿ ಪಾಸುಮಾಡಿದರು (1928). ಅನಂತರ ಆರ್ಥಿಕ ಸಂಕಷ್ಟದ ಕಾರಣದಿಂದ ಒಂದು ವರ್ಷ ಓದು ಮುಂದುವರಿಸಲಾಗಲಿಲ್ಲ. ಅನಂತರ ಪರಿಚಯದವರೊಬ್ಬರ ನೆರವಿನಿಂದ ಕಾಲೇಜು ಸೇರಿ ಎಂಜಿನಿಯರಿಂಗ್ ಪದವಿಯನ್ನು ಪ್ರಥಮ ರ್‍ಯಾಂಕಿನೊಂದಿಗೆ ಪಡೆದರು (1933). ಲಲಿತಮ್ಮ ಎಂಬುವರನ್ನು ವಿವಾಹವಾದರು (1935). ಮೊದಲಿಗೆ ಚಿಕ್ಕಮಗಳೂರಿನಲ್ಲಿ ಸರ್ವೇಯರ್ ಆಗಿ ಉದ್ಯೋಗಕ್ಕೆ ಸೇರಿದರು. ಆಗ ಇವರ ಸಂಬಳ ಕೇವಲ ಐವತ್ತು ರೂಪಾಯಿ. ಅನಂತರ ಎಂಜಿನಿಯರ್ ಹುದ್ದೆ ದೊರೆತು ಸಿಮ್ಲಾಕ್ಕೆ ಹೋದರು (1936). ಕೆಲಸದ ಪರಿಸರ ಇಷ್ಟವಾಗದೆ ಕೆಲವು ಸಮಯದ ಅನಂತರ ಆ ಹುದ್ದೆಗೆ ರಾಜೀನಾಮೆ ನೀಡಿದರು. ಮುಂದೆ ಬನಾರಸ್‌ನಲ್ಲಿ ಮಿಲಿಟರಿ ಎಕ್ಸ್‌ಟೆನ್‌ಷನ್ ಆಫೀಸರ್ ಆಗಿ ನೇಮಕ ಗೊಂಡರು. ಇದೇ ಸಂದರ್ಭದಲ್ಲಿ ಕೋಲ್ಕೊತ್ತದ ಮದನಮೋಹನ ಮಾಳವೀಯರ ವಿದ್ಯಾಸಂಸ್ಥೆ ಇವರ ಕರ್ತವ್ಯನಿಷ್ಠೆಯನ್ನು ಕಂಡು ಇವರನ್ನು ಆಹ್ವಾನಿಸಿತು. ಅಲ್ಲಿ ಎಂಜಿನಿಯರಿಂಗ್ ಅಧ್ಯಾಪಕರಾಗಿ ಹೆಸರು ಗಳಿಸಿದರು. ಇವರ ಶಿಸ್ತುಬದ್ಧ ನಡೆವಳಿಕೆ ಹಾಗೂ ಕರ್ತವ್ಯನಿಷ್ಠೆವಿಗಳನ್ನು ಮದನಮೋಹನ ಮಾಳವೀಯರೂ ಮೆಚ್ಚಿಕೊಂಡಿದ್ದರು. ಸ್ವಯಂ ನಿವೃತ್ತಿಯ ಅನಂತರ ಮೈಸೂರಿನಲ್ಲಿ ನೆಲಸಿ ಸಾಹಿತ್ಯ ಕೃಷಿಯಲ್ಲಿ ತೊಡಗಿದರು. ಒಮ್ಮೆ ವಾಯುಸೇವನೆಗೆ ಹೋಗುವ ಸಂದರ್ಭದಲ್ಲಿ ವಾಹನ ಅಪಘಾತಕ್ಕೊಳಗಾಗಿ ಕಾಲುಮುರಿದುಕೊಂಡು ಗುಣಮುಖವಾಗದೆ 1994 ಜೂನ್ 12ರಂದು ನಿಧನಹೊಂದಿದರು. ಇವರಿಗಿದ್ದ ಒಬ್ಬ ಮಗ ಮುಂಬಯಿಯಲ್ಲಿ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯದಲ್ಲಿ ಉನ್ನತಾಧಿಕಾರಿಯಾಗಿದ್ದು, ಈಗ ನಿವೃತ್ತಿ ಹೊಂದಿದ್ದಾರೆ.

ಅಶ್ವತ್ಥರದು ಒಂದು ವಿಶಿಷ್ಟ ವ್ಯಕ್ತಿತ್ವ. ಅದರಲ್ಲಿ ನಿರೀಶ್ವರ ವಾದಿತನದ, ವಾಸ್ತವತೆಯಲ್ಲಿ ಮಾತ್ರ ನಂಬಿಕೆಯುಳ್ಳ ಛಲದಭಾವ ಕಂಡು ಬರುತ್ತಿತ್ತು. ಪ್ರಚಾರ, ಸಭೆ–ಸಮಾರಂಭ, ಸನ್ಮಾನ ಮೊದಲಾದ ಸಂಗತಿಗಳನ್ನು ಅವರು ನಿರಾಕರಿಸುತ್ತಿದ್ದರು.

ಅಶ್ವತ್ಥರು ತಾವು ಸತ್ತ ಅನಂತರ ತಮ್ಮ ಮನೆಯನ್ನು ರಾಮಕೃಷ್ಣ ಆಶ್ರಮ ವಹಿಸಿಕೊಳ್ಳಬೇಕು ಮಗನಿಗೇನಾದರು ಮನೆ ಬೇಕಾದರೆ ಅದರ ಬೆಲೆಯನ್ನು ಕೊಟ್ಟು ಬಿಡಿಸಿಕೊಳ್ಳತಕ್ಕದ್ದು ಎಂದು ಉಯಿಲು ಬರೆದು ತೀರಿಕೊಂಡಿದ್ದರು. ಅದರಂತೆ ಇವರ ಮಗ ಅನಂತರ ಆ ಮನೆಯನ್ನು ಬೆಲೆಕೊಟ್ಟು ಬಿಡಿಸಿಕೊಂಡರು. ಅಶ್ವತ್ಥರ ಸಾಹಿತ್ಯ ಸೃಷ್ಟಿ ಅಪಾರವಾದುದು. ಇವರು ಸುಮಾರು 180 ಕಥೆಗಳನ್ನು ಬರೆದಿದ್ದಾರೆ. ಈ ಎಲ್ಲ ಕಥೆಗಳು ಹದಿಮೂರು ಕಥಾ ಸಂಕಲನಗಳಲ್ಲಿ ಪ್ರಕಟಗೊಂಡಿವೆ. ದೂರದ ಕಾಳಿಯಲ್ಲಿ (1968), ಅಭಿನಯ ಜಗತ್ತು (1969), ದೀಪಾವಳಿಗೆ (1972), ಅಗ್ನಿಸಾಕ್ಷಿ (1973), ಮಹಾವಿಜಯ (1989), ಯದಾಯದಾಹಿ ಧರ್ಮಸ್ಯ (1990) – ಇವು ಕೆಲವು ಕಥಾಸಂಕಲನಗಳು. ಸಣ್ಣಕಥೆಗಳನ್ನಲ್ಲದೆ ಆರು ಕಾದಂಬರಿ, ಹದಿನೆಂಟು ನಾಟಕ, ಒಂದು ಪ್ರಬಂಧ ಸಂಕಲನ, ಒಂದು ಖಂಡಕಾವ್ಯವನ್ನೂ ಇವರು ರಚಿಸಿದ್ದಾರೆ. ಮುನಿಯನ ಮಾದರಿ (1949), ಮರ್ಯಾದೆ ಮಹಲು (1951), ಬರದ ಸಿರಿ (1965), ಹಂಬಲ (1968), ಅಜ್ಞಾತನ ನಂಜುಂಡಾಯಣ (1983), ರಂಗನಾಯಕಿ (1988) – ಇವು ಕೆಲವು ಕಾದಂಬರಿಗಳು. ಬಲಿ (1955), ನ್ಯಾಯಾಧೀಶ (1965), ಕ್ರಾಂತಿಕಾರಿ (1989), ಹುಚ್ಚ (1989), ಹೆಣ್ಣು (1989)–ಇವು ಇವರ ಕೆಲವು ನಾಟಕಗಳು. ಮಹಾಯುದ್ಧ (1962) ಒಂದು ಖಂಡಕಾವ್ಯ. ಇವರ ಈ ಎಲ್ಲ ಕೃತಿಗಳ ಹಿನ್ನೆಲೆಯಲ್ಲಿ ಬದುಕಿನ ಮೌಲ್ಯಗಳ ಹುಡುಕಾಟವಿದೆ.

ಅಶ್ವತ್ಥರು ಸಮಾಜದಲ್ಲಿ ಕಂಡುಬರುತ್ತಿದ್ದ ಕ್ರೌರ್ಯ, ಅನ್ಯಾಯ, ಅಧರ್ಮ, ದೌರ್ಜನ್ಯಗಳನ್ನು ಖಂಡಿಸುವ ಸಲುವಾಗಿ ತಮ್ಮ ಕಥಾ ಮಾಧ್ಯಮವನ್ನು ಬಳಸಿಕೊಂಡರು. ಸಮಾಜದ ದೀನ ದಲಿತರ, ಶೋಷಣೆಗೊಳಗಾದ ಸ್ತ್ರೀಯರ ಬಗೆಗೆ ಇವರಿಗಿದ್ದ ಪ್ರೀತಿ, ಅನುಕಂಪ ಈ ಕಥೆಗಳ ಮೂಲಕ ಅಭಿವ್ಯಕ್ತಗೊಂಡಿದೆ. ಸಮಾಜಮುಖಿಯಾದ ಚಿಂತನೆ ಇವರ ಸಾಹಿತ್ಯದ ಕೇಂದ್ರ ಆಶಯವಾಗಿ ಅರಳಿರುವುದನ್ನು ಕಾದಂಬರಿಗಳಲ್ಲಿ ನಾವು ಗುರುತಿಸಬಹುದು. ಹಂಬಲ ಇವರ ಮಹತ್ತ್ವಾಕಾಂಕ್ಷೆಯ ಕಾದಂಬರಿ. ಗಾಂಧೀಜಿಯವರ ಗ್ರಾಮ ಸಂಸ್ಕೃತಿಯ ನೆಲೆಯಿಂದ ಬರೆದಂಥದು. ವಾಸ್ತವ ಆದರ್ಶಗಳ ಸಂಘರ್ಷವನ್ನು ಇಲ್ಲಿ ಅತ್ಯಂತ ಆಪ್ತವಾಗಿ ಚಿತ್ರಿಸಲಾಗಿದೆ. ಇವರ ಕೆಲವು ಕಾದಂಬರಿಗಳು ಚಲನಚಿತ್ರಗಳಾಗಿವೆ. (ಜಿ.ಎಸ್.)

**ಅಶ್ವತ್ಥ, ಕೆ.ಎಸ್.:** 1925–2010 ಚಲನಚಿತ್ರ ನಟ. ಪೂರ್ಣ ಹೆಸರು ಕರಗನಹಳ್ಳಿ ಸುಬ್ಬರಾಯ ಅಶ್ವತ್ಥನಾರಾಯಣ. ತಂದೆ ಸುಬ್ಬರಾಯರು ಹೊಳೆನರಸೀಪುರ ತಾಲ್ಲೂಕಿನ ಕರಗನಹಳ್ಳಿಯಲ್ಲಿ ಪುರೋಹಿತರಾಗಿದ್ದರು. ತಾಯಿ ಸಾಕಮ್ಮ. ಅಶ್ವತ್ಥರು ಹುಟ್ಟಿದ್ದು ಮೈಸೂರಿನಲ್ಲಿ. ಇವರನ್ನು ಸಾಕಿದವರು ಸೋದರತ್ತೆ ತಿಪ್ಪಮ್ಮನವರು. ಶಿಕ್ಷಣ ಇಂಟರ್‌ಮೀಡಿಯೆಟ್‌ವರೆಗೆ. ಇವರು 1942ರ ಚಳವಳಿಯಲ್ಲಿ ಭಾಗವಹಿಸಿದ್ದರಿಂದ ಹಾಗೂ ಅದೇಕಾಲಕ್ಕೆ ಸೋದರತ್ತೆ ತಿಪ್ಪಮ್ಮ ತೀರಿ ಕೊಂಡಿದ್ದರಿಂದ ಇವರ ವಿದ್ಯಾಭ್ಯಾಸ ಅಷ್ಟಕ್ಕೇ ನಿಂತಿತು. ಆರ್ಥಿಕ ಅಡಚಣೆಗಳಿಂದಾಗಿ ಪುನಃ ಕಾಲೇಜು ಸೇರಲಾಗಲಿಲ್ಲ. ಪಡಿತರ ಕಾರ್ಯಾಲಯದಲ್ಲಿ ಗುಮಾಸ್ತರೆಂದು ಸೇರಿ (1944) ಅನಂತರ ಫುಡ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಸೇರಿದರು (1947). ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶೀಘ್ರಲಿಪಿಕಾರರಾಗಿಯೂ ಇದ್ದರು. ಸರ್ಕಾರಿ ನೌಕರಿಯಲ್ಲಿ ಇವರು ಇದ್ದುದು ಹತ್ತು ವರ್ಷ. ಇವರು ಬಣ್ಣದ ಜಗತ್ತನ್ನು ಪ್ರವೇಶಿಸಿದ್ದು ಆಕಸ್ಮಿಕ. ಮೈಸೂರು ಆಕಾಶವಾಣಿಯ ಕಲಾವಿದ ಎನ್.ಎಸ್. ವಾಮನರ ಪ್ರೋತ್ಸಾಹದಿಂದ ರೇಡಿಯೋ ಮತ್ತು ರಂಗಭೂಮಿ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಅದೇ ಸಮಯದಲ್ಲಿ ನಾಟಕದಲ್ಲಿ ಆಸಕ್ತಿ ಇರುವ ಸ್ನೇಹಿತರ ಬಳಗ ದೊರಕಿತು. ಹೀಗಾಗಿ ಹವ್ಯಾಸಿ ಕಲಾವಿದರಾದರು. ಇವರು ಅಭಿನಯಿಸಿದ ಮೊದಲ ನಾಟಕ ಆಷಾಢಭೂತಿ. ಮೈಸೂರಿನ ಶಾರದಾವಿಲಾಸ ಕಾಲೇಜಿನ ಡ್ರಿಲ್ ಉಪಾಧ್ಯಾಯರೊಬ್ಬರು ನಿಧನರಾದಾಗ ಅವರ ಕುಟುಂಬದ ಸಹಾಯಾರ್ಥ ಅಭಿನಯಿಸಲಾದ ಪರ್ವತವಾಣಿಯವರ ವಾರ್ಷಿಕೋತ್ಸವ ಎಂಬ ನಾಟಕದಲ್ಲಿ (1954) ಅಶ್ವತ್ಥರ ರಂಗಣ್ಣನ ಪಾತ್ರದ ಅಭಿನಯ ತುಂಬ ಮೆಚ್ಚುಗೆ ಗಳಿಸಿತು. ಈ ನಾಟಕ ವೀಕ್ಷಿಸಿದ ಚಲನಚಿತ್ರ ನಿರ್ದೇಶಕ ಕೆ.ಸುಬ್ರಹ್ಮಣ್ಯ ಅವರು ತಮ್ಮ ಸ್ತ್ರೀರತ್ನ ಚಿತ್ರಕ್ಕೆ ಇವರನ್ನು ಆಯ್ಕೆಮಾಡಿದರು. ಇವರು ಚಿತ್ರರಂಗ ಪ್ರವೇಶಿಸಿದ್ದಕ್ಕೆ ಮನೆಯವರಿಂದ ಪ್ರಬಲ ವಿರೋಧ ಬಂತು. ಆಗ ಕನ್ನಡ ಚಿತ್ರರಂಗ ಆರ್ಥಿಕ ಮುಗ್ಗಟ್ಟನ್ನೆದುರಿಸುತ್ತಿತ್ತು. ಇದರಿಂದ ಇವರನ್ನು ನಂಬಿದ ಸಂಸಾರ ಪ್ರಾರಂಭದ 5–6 ವರ್ಷ ಕಷ್ಟದ ದಾರಿ ತುಳಿಯಬೇಕಾಯಿತು. ಆದ್ದರಿಂದ ಇವರು ಚಲನಚಿತ್ರರಂಗವನ್ನೇ ನಂಬಿಕೊಳ್ಳದೆ ಸಹಕಲಾವಿದರಾದ ರಾಜಕುಮಾರ್, ಜಿ.ವಿ. ಅಯ್ಯರ್, ನರಸಿಂಹರಾಜು ಅವರೊಂದಿಗೆ ಸೇರಿಕೊಂಡು ಕರ್ನಾಟಕದ ಹಲವು ಊರುಗಳಲ್ಲಿ ನಾಟಕಗಳನ್ನಾಡಿದರು.



ಅಶ್ವತ್ಥರು ಇದುವರೆಗೆ ಸುಮಾರು 360ಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಕಿತ್ತೂರುಚೆನ್ನಮ್ಮ, ಗಾಳಿಗೋಪುರ, ನಂದಾದೀಪ, ಮಿಸ್‌ಲೀಲಾವತಿ, ರಾಮಾಂಜನೇಯಯುದ್ಧ, ಬೆಳ್ಳಿಮೋಡ, ಗೃಹಲಕ್ಷ್ಮಿ, ಜೇನುಗೂಡು, ಗೆಜ್ಜೆಪೂಜೆ, ಶರಪಂಜರ, ಒಂದೇ ಬಳ್ಳಿಯ ಹೂಗಳು, ನಾಗರಹಾವು, ಬಂಗಾರದಪಂಜರ, ಉಪಾಸನೆ, ಮಗ ಮೊಮ್ಮಗ, ದೇವರಗುಡಿ, ಒಡಹುಟ್ಟಿದವರು, ದಳವಾಯಿ, ನಕ್ಸಲೈಟ್, ಲಾ ಅಂಡ್ ಆರ್ಡರ್, ಶಬ್ದವೇಧಿ, ಕಿಚ್ಚ. ರಾಜಕುಮಾರ್ ಅವರೊಂದಿಗೆ 90 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನವಜೀವನ ಚಿತ್ರದಲ್ಲಿ ಪಾದ್ರಿ, ಮಿಸ್ ಲೀಲಾವತಿಯಲ್ಲಿ ತಂದೆ, ನಾಗರಹಾವಿನಲ್ಲಿ ಚಾಮಯ್ಯ ಮೇಸ್ಟ್ರು, ಮಂಗಳ ಮುಹೂರ್ತದಲ್ಲಿ ಸೋದರಮಾವ – ಈ ಪಾತ್ರಗಳಲ್ಲಿ ಇವರ ಅಭಿನಯ ಬಹಳ ಮೆಚ್ಚಿಗೆ ಗಳಿಸಿದೆ. ಇವರು ದೂರದರ್ಶನದ ಸ್ವೀಕಾರ, ಸಾಕ್ಷಾತ್ಕಾರ, ಸ್ವಾತಿ ಮುತ್ತು ಮತ್ತು ದುರ್ಗಾ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಮಂಗಳ ಮುಹೂರ್ತ, ನವಜೀವನ, ಮಿಸ್ ಲೀಲಾವತಿ–ಈ ಚಿತ್ರಗಳಲ್ಲಿನ ಇವರ ಅಭಿನಯಕ್ಕಾಗಿ ರಾಷ್ಟ್ರಪತಿಗಳಿಂದ ಬಹುಮಾನವೂ ನಮ್ಮಮಕ್ಕಳು, ಬೆಳ್ಳಿಮೋಡ, ಗೆಜ್ಜೆಪೂಜೆ, ಶರಪಂಜರ, ನಾಗರಹಾವು, ಸಿಪಾಯಿರಾಮು, ಮುತ್ತಿನಹಾರ –ಇವುಗಳಲ್ಲಿನ ಅಭಿನಯಕ್ಕಾಗಿ ರಾಜ್ಯಪ್ರಶಸ್ತಿಯೂ ಲಭಿಸಿದೆ. ಕರುಣೆಯೇ ಕುಟುಂಬದ ಕಣ್ಣು, ಮಾವನ ಮಗಳು, ನಂದಾದೀಪ, ಮನೆಅಳಿಯ, ಒಂದೇ ಬಳ್ಳಿಯ ಹೂಗಳು, ಮನಶ್ಶಾಂತಿ ಮುಂತಾದ ಚಿತ್ರಗಳಲ್ಲಿ ಇವರು ನೀಡಿದ ಅಭಿನಯವನ್ನು ಮೆಚ್ಚಿ ಮದರಾಸಿನ ಚಿತ್ರಪ್ರೇಮಿಗಳ ಸಂಘ ಇವರನ್ನು ಆರು ಬಾರಿ ಗೌರವಿಸಿದೆ. ಕರುಣೆಯೇ ಕುಟುಂಬದ ಕಣ್ಣು ಮತ್ತು ಮಿಸ್ ಲೀಲಾವತಿ ಚಿತ್ರಗಳಲ್ಲಿ ಅಶ್ವತ್ಥರು ನಿರ್ವಹಿಸಿದ ಪಾತ್ರಕ್ಕಾಗಿ ಬೆಂಗಳೂರಿನ ಚಿತ್ರ ಪ್ರೇಮಿಗಳ ಸಂಘ ಇವರನ್ನು ಸನ್ಮಾನಿಸಿದೆ. ಇವರಿಗೆ ರಾಜಕುಮಾರ್ ಪ್ರಶಸ್ತಿ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

ಚಿತ್ರರಂಗ ಪ್ರವೇಶಿಸಿದಂದಿನಿಂದಲೂ ಇಂದಿನವರೆಗೂ ಕನ್ನಡ ಚಿತ್ರಗಳಲ್ಲಿಯೇ ಇವರು ಅಭಿನಯಿಸಿದ್ದಾರೆ. ಶಾಂತಾ ಇವರ ಪತ್ನಿ. ಇವರಿಗೆ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು. ಮಗ ಶಂಕರ ಅಶ್ವತ್ಥ ಚಲನಚಿತ್ರ ಮತ್ತು ದೂರದರ್ಶನ ಧಾರಾವಾಹಿಗಳಲ್ಲಿ ನಟಿಸುತ್ತಿದ್ದಾರೆ. *

**ಅಶ್ವತ್ಥನಾರಾಯಣರಾವ್ :** 1899–1992. ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಪತ್ರಿಕೋದ್ಯಮಿ, ಮಕ್ಕಳ ಜ್ಞಾನಾಭಿವೃದ್ಧಿಗಾಗಿ ಶ್ರಮಿಸಿದ ಶಿಕ್ಷಣ ತಜ್ಞ. ಆಂಧ್ರದ ಮದನಪಲ್ಲಿ ಸಮೀಪದ ಕಾಟೇಪೇರಿ ಎಂಬ ಹಳ್ಳಿಯಲ್ಲಿ 1899 ನವೆಂಬರ್ 7 ರಂದು ಜನಿಸಿದರು. ತಂದೆ ಕೃಷ್ಣರಾಯರು, ತಾಯಿ ನರಸಮ್ಮ. ಇವರದು ಆರ್ಥಿಕವಾಗಿ ಹಿಂದುಳಿದ ಕುಟುಂಬ. ತಂದೆಯ ಅಕಾಲಿಕ ಮರಣ, ಸೋದರಮಾವನ ಆಶ್ರಯಗಳಿಂದಾಗಿ ತನ್ನನ್ನು ಓದಿಸದೆ, ಕೆಲಸಕ್ಕೆ ಸೇರಿಸುವರೆಂಬ ಸುಳಿವು ಸಿಕ್ಕ ತಕ್ಷಣ ತಿರುಪತಿಗೆ ಓಡಿಹೋಗಿ ಸಣ್ಣಪುಟ್ಟ ಕೆಲಸಮಾಡಿಕೊಂಡು ಅಲ್ಲಿಯೇ ಹೈಸ್ಕೂಲ್ ಮುಗಿಸಿ ಮದನಪಲ್ಲಿಗೆ ಪುನರಾಗಮಿಸಿದರು. ಆ್ಯನಿಬೆಸೆಂಟ್ ಸ್ಥಾಪಿಸಿದ ಎಸ್.ಪಿ.ಎನ್.ಇ ಸಂಸ್ಥೆ ನಡೆಸುತ್ತಿದ್ದ ಇಂಟರ್‌ಮೀಡಿಯೆಟ್ ಕಾಲೇಜ್. ಆರ್ಥಿಕ ಅಡಚಣೆ ನಿವಾರಿಸಲು ಪ್ರೈಮರಿ, ಮಿಡ್ಲ್, ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಮನೆಪಾಠ ಮಾಡುತ್ತಿದ್ದರು. ಬೆಸೆಂಟ್ ಕಾಲೇಜ್‌ನಲ್ಲಿ ಭಾರತದ ಸ್ಕೌಟ್ಸ್ ಮೊದಲ ತಂಡ ಆರಂಭವಾದಾಗ ಅಶ್ವತ್ಥನಾರಾಯಣ ಮತ್ತು ಗೆಳೆಯರು ಮೊದಲ ಸೇರಿದ್ದ ಸ್ಕೌಟ್ಸ್ ತಂಡದಿಂದ ಗ್ರಾಮಗಳಲ್ಲಿ ಸಮಾಜಸೇವೆ, ವಯಸ್ಕ ಶಿಕ್ಷಣ ಮತ್ತು ರಚನಾತ್ಮಕ ಕಾರ್ಯಗಳು ನಡೆದವು. ತನ್ಮೂಲಕ ಸಮಾಜಸೇವಾರಂಗಕ್ಕೆ ಇವರು ಪದಾರ್ಪಣೆ ಮಾಡಿದರು. ಮದನಪಲ್ಲಿ ಶಾಲೆಗೆ ಭೇಟಿನೀಡಿದ್ದ ಬೆಸೆಂಟ್‌ರ ಕೃಪಾದೃಷ್ಟಿ ಯುವಕ ಅಶ್ವತ್ಥನಾರಾಯಣರ ಮೇಲೆ ಬಿತ್ತು. ವಿದ್ಯಾಕಾಂಕ್ಷಿ ಯುವಕನಿಗೆ ಶಿಕ್ಷಣದ ಸಂಪೂರ್ಣ ವ್ಯವಸ್ಥೆಯನ್ನೂ ಶಿಕ್ಷಣ ಸಂಸ್ಥೆಯನ್ನೇ ಮಾಡಬೇಕೆಂಬ ಆದೇಶವನ್ನು ನೀಡಿದರು. ಈ ಆದೇಶ ಅಶ್ವತ್ಥನಾರಾಯಣನ ಜ್ಞಾನದಾಹಕ್ಕೆ ತಂಪೆರೆದ ಸಂಜೀವಿನಿಯಾಯಿತು. ಮದನಪಲ್ಲಿಯಲ್ಲಿ ಇಂಟರ್ ಮುಗಿಸಿ, ಆನಿಬೆಸೆಂಟರ ಮದರಾಸಿನ ಅಡೆಯಾರ್ ಕಾಲೇಜಿನಲ್ಲಿ ಪದವೀಧರರಾಗಿ ಪತ್ರಿಕೋದ್ಯಮದಲ್ಲಿ ಆಂಗ್ಲ ಸಾಹಿತ್ಯವನ್ನು ಪ್ರಧಾನವಿಷಯವಾಗಿ ಅಭ್ಯಾಸ ಮಾಡಿದರು. ಕಾಲೇಜಿನ ದಿನಗಳಲ್ಲಿ ಇವರಿಗೆ ಹೆಸರಾಂತ ಕವಿ, ದಾರ್ಶನಿಕ, ಕಲಾವಿಮರ್ಶಕರಾದ ಕಸಿನ್ಸ್ ಅವರ ಸಾಹಚರ್ಯ, ಮಾರ್ಗದರ್ಶನ ಲಭಿಸಿ ಭಾರತೀಯ ಕಲೆ, ಸಂಸ್ಕೃತಿ, ಪರಂಪರೆಗಳ ಅನಾವರಣ ಮಾಡಿದರು.

ಕಸಿನ್ಸ್ ಅವರ ಶಿಫಾರಸಿನ ಮೇಲೆ ಗಣೇಶನ್ ಕಂಪನಿ ಪ್ರಕಾಶನ ಸಂಸ್ಥೆಯಲ್ಲಿ ಪುಸ್ತಕ ಮಾರಾಟ ಪ್ರತಿನಿಧಿಯ ಕೆಲಸ ಪ್ರಾಪ್ತವಾಯಿತು. ಭಾರತೀಯ ಧರ್ಮ, ಕಲೆ, ಸಂಸ್ಕೃತಿ ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಹೆಚ್ಚಾಗಿ ಮಾರಾಟ ಮಾಡುತ್ತಿದ್ದರು. ರಾಜಕೀಯ ಸಭೆ ಸಮಾರಂಭಗಳಲ್ಲಿ ಚುರುಕಿನ ಪ್ರಚಾರದಿಂದ ತೃಪ್ತಿಕರ ಫಲಿತಾಂಶ. ಧಾರಾಳವಾದ ಕಮೀಷನ್. ಮೈಸೂರಿಗೆ ಪ್ರಯಾಣಿಸಿ. ಗಣೇಶನ್ ಕಂಪೆನಿಯಲ್ಲಿ ಸಹ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ ಅಗರಂ ರಂಗಯ್ಯನವರ ಮನೆಯಲ್ಲೇ ಆಶ್ರಯ ಪಡೆದರು. ಮಾರಾಟ ಕಲೆಯನ್ನು ಕರಗತ ಮಾಡಿಕೊಂಡಿದ್ದ ಅಶ್ವತ್ಥನಾರಾಯಣರಾಯರಿಗೆ ಮೈಸೂರಿನಲ್ಲೂ ಯಶಸ್ಸು. ಮೂರುಸಾವಿರದವರೆಗೆ ಕಮೀಷನ್ ದೊರೆಯುತ್ತಿದ್ದರಿಂದ ಸಂಬಳವನ್ನು ನಿರಾಕರಿಸಿದರು.

ಆ ಕಾಲದ ಯುವಜನರಿಗೆ ಇದ್ದಂತೆ, ಅಶ್ವತ್ಥನಾರಾಯಣರಾಯರಿಗೂ ದೇಶದ ಬಗೆಗೆ ಅಪಾರ ಅಭಿಮಾನ. ಆದರ್ಶಗಳ ಬಗೆಗೆ ಮಾತನಾಡದೆ, ಸಾಧನೆ ಮಾಡಿ ತೋರಿಸಬೇಕೆಂಬ ಹಂಬಲವೂ ಪ್ರಬಲವಾಗಿತ್ತು. ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆ ಮಾಡಬೇಕೆಂಬ ಇವರ ಮನೋಭಾವ, ಬೆಸೆಂಟ್ ಮತ್ತು ಕಸಿನ್ಸ್ ಅವರ ಸಂಪರ್ಕದಿಂದ ಬೆಳೆದುಬಂದದ್ದು.

ಈ ಮಧ್ಯೆ 1921–22ರಲ್ಲಿ ಅಶ್ವತ್ಥನಾರಾಯಣರಾಯರಿಗೆ ಬೆಂಗಳೂರಿಗೆ ವರ್ಗಾವಣೆಯಾಗಿತ್ತು. ಆತ್ಮತೃಪ್ತಿಯ ಕೆಲಸ ಮಾಡಬೇಕೆಂದು ಹಂಬಲ ಜಾಗೃತವಾಯಿತು. ತಮ್ಮದೇ ಆದ ಪುಸ್ತಕ ಪ್ರಕಾಶನ ಸಂಸ್ಥೆ ಆರಂಭಿಸಲು ನಿರ್ಧರಿಸಿದರು. ಗುರಿ ಮಕ್ಕಳ ಮನೋವಿಕಾಸಕ್ಕೆ 'ಮಕ್ಕಳ ಪುಸ್ತಕ'; ವಿಶ್ವಕೋಶದ ಮಾದರಿ. 1926–27ರಲ್ಲಿ 50 ಪುಟಗಳ ಕ್ರೌನ್ ಅಷ್ಟದಳ ಆಕಾರದ 50 ಪುಟಗಳ ಪುಸ್ತಕ ಸಿದ್ಧವಾಯಿತು. ಇದಕ್ಕೆ ಎಸ್.ಗರಳಪುರಿ ಶಾಸ್ತ್ರೀ, ಡಿ.ವಿ.ಜಿ, ರಾಜರತ್ನಂ ಮೊದಲಾದ ವಿದ್ವಾಂಸರ ಮಾರ್ಗದರ್ಶನ ಪಡೆದರು.

ರಾಜ್ಯ ಕೈಗಾರಿಕಾ ಇಲಾಖೆ ನಿರ್ದೇಶಕರೂ ಸಾಹಿತಿಗಳೂ ಆದ ಎಸ್.ಜಿ.ಶಾಸ್ತ್ರಿಗಳು ಮಕ್ಕಳ ಪುಸ್ತಕದ ಮೊದಲ ಸಂಚಿಕೆ ನೋಡಿ ನೀನು ಎರಡನೆ ಸಂಚಿಕೆ ಹೊರತರದಿದ್ದರೂ ಪರವಾಗಿಲ್ಲ. ಇದೊಂದೇ ಸಾಕು ನಿನ್ನ ಹೆಸರನ್ನು ಶಾಶ್ವತವಾಗಿ ಉಳಿಸಲು ಎಂದು ಹೇಳಿದ್ದು ಆ ಪ್ರಕಟಣೆಗೆ ಬಂದ ಸಾರ್ವಜನಿಕ ಪ್ರತಿಕ್ರಿಯೆಗಳಿಗೆ ಪ್ರಾತಿನಿಧಿಕವಾಗಿತ್ತು.

ಮುಂದೆ ಮಕ್ಕಳ ಪುಸ್ತಕ ಮೂರು ರೂಪದಲ್ಲಿ ಅವತರಿಸಿತು. ಪ್ರಾಥಮಿಕ ಹಂತದ ಮಕ್ಕಳಿಗೆ, ಸೆಕೆಂಡರಿ ಹಂತದ ವಿದ್ಯಾರ್ಥಿಗಳಿಗೆ, ಮತ್ತು ಹಿರಿಯರಿಗೆ ಹೀಗೆ ಮೂರು ಮುದ್ರಣ 3, 5, 10 ರೂಪಾಯಿಗಳು. ಪ್ರಸಾರ 50,000 ಮುಟ್ಟಿತು. ಮನೆಮನೆಗೆ ಹೋಗಿ ಪ್ರಚಾರಮಾಡಿ ಚಂದಾಸಂಗ್ರಹಿಸುತ್ತಿದ್ದುದು, ಬರವಣಿಗೆ ಅಕ್ಷರ ಜೋಡಣೆ, ಮುದ್ರಣ ಮತ್ತು ಬೀದಿಯಲ್ಲಿ ನಿಂತು ಮಾರಾಟ ಎಲ್ಲ ಅಶ್ವತ್ಥನಾರಾಯಣರದೇ.

ವಿದ್ಯಾರ್ಥಿದೆಸೆಯಿಂದಲೇ ಬೆಳೆದ ರಾಷ್ಟ್ರೀಯಭಾವನೆ ದೇಶಾಭಿಮಾನ, ಸ್ವಾತಂತ್ರ್ಯಾಕಾಂಕ್ಷೆಯ ಪರಿಣಾಮವಾಗಿ 'ನವಜೀವನ' 1927ರಿಂದ ವಾರದ ಪತ್ರಿಕೆಯಾಗಿ ಪ್ರಾರಂಭವಾಗಿ 1928ರಿಂದ ದಿನಪತ್ರಿಕೆಯಾಗಿ ಪ್ರಕಟಣೆಗೊಂಡಿತು. ವೀರಕೇಸರಿ ಸೀತಾರಾಮಶಾಸ್ತ್ರಿಗಳು ದುಡ್ಡಿನ ಅಡಚಣೆಯಿಂದ ಪತ್ರಿಕೆ ನಿಲ್ಲಿಸಿದ್ದರು. ಇಬ್ಬರೂ ಕಟ್ಟಾ ದೇಶಪ್ರೇಮಿಗಳು. ವಿದುರಾಶ್ವತ್ಥ, ಗಣೇಶನ ಗಲಾಟೆ ಮೊದಲಾದ ಪ್ರಸಂಗಗಳು ಸೇರಿದಂತೆ ದಿವಾನರ ಜನವಿರೋಧಿ ಮನೋಭಾವ ನಡವಳಿಕೆಯನ್ನೂ ಖಂಡಿಸುವ, ತಕ್ಷಣವೇ ಜವಾಬ್ದಾರಿ ಸರಕಾರ ರಚಿಸಬೇಕೆಂಬ ಆಗ್ರಹ ಪಡಿಸುವ ಲೇಖನಗಳು ಪ್ರಕಟವಾದವು. ರಾಜದ್ರೋಹದ ಆಪಾದನೆ ಮೇಲೆ ಮೊಕದ್ದಮೆ ಹೂಡಿ, 2 ವರ್ಷ ಜೈಲು ಶಿಕ್ಷೆ ವಿಧಿಸಲಾಯಿತು. ಇದು ಮೊದಲ ರಾಜಕೀಯ ದಾವೆ. ಮುದ್ರಣಾಲಯ ಮುಚ್ಚಿತು. ಅಶ್ವತ್ಥನಾರಾಯಣರಾಯರು ಮತ್ತು ವೀರಕೇಸರಿ ಜೈಲುಸೇರಿದರು. ಈ ಗಲಾಟೆಯ ಫಲವಾಗಿ, ಜವಾಬ್ದಾರಿ ಸರ್ಕಾರದ ಬೇಡಿಕೆಗೆ ಒತ್ತಾಯ ಎಲ್ಲಕಡೆಯಿಂದ ಬರಲಾರಂಭಿಸಿತು. 1926ರಲ್ಲಿ ವಿಶ್ವೇಶ್ವರಯ್ಯ ಅವರ ನೇತೃತ್ವದಲ್ಲಿ ಸಮಿತಿ ಸ್ಥಾಪನೆಗೆ ಚಾಲನೆ ದೊರೆಯಿತು.

'ನವಜೀವನ', ಸರ್ಕಾರದ ಎಲ್ಲ ಬಗೆಯ ಕಿರುಕುಳ ಸಹಿಸಿಕೊಂಡು ಮುನ್ನಡೆಯಿತು. ಪತ್ರಿಕೆ ದಿನಕ್ಕೆ ಎರಡು ಬಾರಿ 11 ಗಂಟೆಗೆ ಮೊದಲ ಸಂಚಿಕೆ. ಸಂಜೆ ಇನ್ನೊಂದು, ಹೀಗೆ ಆರ್ಥಿಕ ಅಡಚಣೆಯೊಡನೆ ಪ್ರಕಟವಾಗುತ್ತಾ ಬೆಳ್ಳಿಹಬ್ಬವನ್ನು ಆಚರಿಸಿಕೊಂಡದ್ದು ಅದರ ಹಿರಿಮೆಯಾಯಿತು. 1942ರ ಚಳವಳಿಯಲ್ಲಿ ಭಾಗವಹಿಸಿ ಅಶ್ವತ್ಥನಾರಾಯಣರು ಸೆರೆಮನೆಗೆ ಹೋದರು. ದೇಶಸೇವೆಯ ಹಂಬಲದ ಈ ವ್ಯಕ್ತಿ, ಬ್ರಿಟಿಷರನ್ನು ಹೊರದಬ್ಬಲು ಕ್ರಾಂತಿಕಾರಿ ಚಟುವಟಿಕೆಗಳಲ್ಲೂ ಭಾಗಿಯಾಗಿದ್ದರು. ಅಶ್ವತ್ಥನಾರಾಯಣರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿ, ರಾಜಕೀಯವಾಗಿ ಮುಂದೆ ಬಂದವರು ಅನೇಕರು. ಅಶ್ವತ್ಥನಾರಾಯಣರನ್ನು ಕಾಂಗ್ರೆಸಿಗರು ರಾಜಕೀಯ ಗುರು ಎಂದರು.

1947ರಲ್ಲಿ ಆರಂಭಿಸಿದ ಬಾಲಮಂದಿರಕ್ಕೆ ಬೆಸೆಂಟ್‌ರ ಪ್ರಭಾವವೂ ಕಾರಣವಾಗಿತ್ತು. ಸರ್ಕಾರದಿಂದ ಸಹಾಯಧನ ಪಡೆಯದೆ ಶಾಲೆ ನಡೆಸಿದರು. ಅದನ್ನು ಮಕ್ಕಳ ಶಿಕ್ಷಣದ ಪ್ರಯೋಗಶಾಲೆಯನ್ನಾಗಿ ಆದರ್ಶಶಾಲೆಯನ್ನಾಗಿ ಮಾಡಿದರು. ಅದು ಇಂದಿಗೂ ನಡೆಯುತ್ತಿದೆ.

ನವಜೀವನ, ಮಕ್ಕಳ ಪುಸ್ತಕದ ಜೊತೆಗೆ ಕಾನೂನು ಪುಸ್ತಕಗಳನ್ನೂ ಮಾರಾಟ ಮಾಡುತ್ತಿದ್ದುದು, ಈಗ ಮಕ್ಕಳ ಪುಸ್ತಕ ಪಬ್ಲಿಕೇಷನ್ಸ್–ಎಂ.ಪಿ.ಪಿ ಎಂಬ ಹೆಸರಿನಲ್ಲಿ ಕಾರ್ಯನಿರತವಾಗಿದೆ.

ಖಾದಿ ಧಾರಿ, ಶಿಸ್ತಿನ ವ್ಯಕ್ತಿ, ಕನಸುನನಸುಗಳೆರಡರಲ್ಲಿಯೂ ದೇಶದ ಬಗೆಗೆ ಚಿಂತನೆಹೊತ್ತ ವ್ಯಕ್ತಿಯಾಗಿದ್ದ ಅಶ್ವತ್ಥನಾರಾಯಣರಾಯರು 1992 ಮೇ 10 ರಂದು ನಿಧನರಾದರು.

(ಎಂ.ಬಿ.ಎಸ್)

**ಅಶ್ವತ್ಥಾಮ :** ಮಹಾಭಾರತದ ಒಬ್ಬ ಪ್ರಸಿದ್ಧ ಪುರುಷ. ತಂದೆ ದ್ರೋಣಾಚಾರ್ಯ, ತಾಯಿ ಕೃಪಿ. ಹಾಲಿಗೆ ಬದಲು ಹಿಟ್ಟಿನ ನೀರನ್ನು ಕುಡಿದ. ಹುಟ್ಟಿದೊಡನೆ ಕುದುರೆಯಂತೆ ಅರಚಿದ್ದರಿಂದ ಈ ಹೆಸರಿಡುವಂತೆ ಅಶರೀರವಾಣಿಯಾಯಿತು. ಯುದ್ಧಭೂಮಿಯಲ್ಲಿ ಅರ್ಜುನನನ್ನು ಸಂಧಿಸಿದ ದ್ರೋಣನಿಗೆ ದಿಕ್ಕು ತೋಚದಂತಾದಾಗ, ಈತ ಅರ್ಜುನನನ್ನು ಎದುರಿಸಿ ದ್ರೋಣನನ್ನು ರಕ್ಷಿಸಿದ. ದ್ರೋಣನ ವಧೆಯಾದ ಮೇಲೆ ದುರ್ಯೋಧನ ಸೇನಾಧಿಪತ್ಯವನ್ನು ಇವನಿಗೆ ಕೊಡದೆ ಕರ್ಣನಿಗೆ ಕೊಟ್ಟ ಸಮಯದಲ್ಲಿ ಕೃಪ ಕರ್ಣನೊಡನೆ ನಡೆಸಿದ ವಾಗ್ವಾದದಲ್ಲಿ ಕೃಪ ಅವಮಾನಿಸಲ್ಪಟ್ಟಾಗ ಈತ ಕರ್ಣನನ್ನು ಕೊಲ್ಲಲು ಹೋದ. ಮಾಹಿಷ್ಮತಿಯ ಅರಸನಾದ ನೀಲರಾಜ, ಘಟೋತ್ಕಚ, ಭೀಮ, ಧೃಷ್ಟದ್ಯುಮ್ನ ಮುಂತಾದವರೊಡನೆ ಯುದ್ಧಮಾಡಿದ. ಪಾಂಡ್ಯ ರಾಜನನ್ನು ಕೊಂದ. ನಾರಾಯಣಾಸ್ತ್ರವನ್ನು ಹೊಂದಿದ್ದ. ಒಮ್ಮೆ ಯುದ್ಧವನ್ನು ಬಿಟ್ಟು ಶಸ್ತ್ರತ್ಯಾಗ ಮಾಡಿ ಓಡಿಹೋದ. ಧರ್ಮರಾಜನಿಂದ ಒಮ್ಮೆ ನಿಂದಿತನಾದ. ಪಾಂಡವರೊಡನೆ ಸಂಧಿಗಾಗಿ ದುರ್ಯೋಧನನನ್ನು ಪ್ರೇರೇಪಿಸಿದ. ದುರ್ಯೋಧನ ಇವನಿಗೆ ಸೇನಾಧಿಪತ್ಯವನ್ನು ವಹಿಸಿದಾಗ ಪಾಂಡವರನ್ನು ಸಂಹರಿಸುತ್ತೇನೆಂದು ಪ್ರತಿಜ್ಞೆ ಮಾಡಿದ. ಗೂಬೆ ಕಾಗೆಗಳನ್ನು ಕೊಂದಹಾಗೆ ಪಾಂಡವರನ್ನು ತಾನೂ ಕೊಲ್ಲಬಹುದೆಂಬ ಆಲೋಚನೆಯನ್ನು ಹೊಂದಿದ್ದ. ಆದರೆ ಅವನ ಶಿಬಿರದ ಬಾಗಿಲಿನಲ್ಲಿಯೇ ಮಹಾಭೂತದ ದರ್ಶನವಾಯಿತು. ಶಿವನನ್ನು ಮೆಚ್ಚಿಸುವುದಕ್ಕಾಗಿ ತನ್ನ ದೇಹವನ್ನು ಅಗ್ನಿಗೆ ಆಹುತಿ ಮಾಡಿ ಶೈವತೇಜಸ್ಸನ್ನು ಗಳಿಸಿದ. ಪಾಂಡವರನ್ನು ಕೊಲ್ಲಲು ಹೋಗಿ ಧೃಷ್ಟದ್ಯುಮ್ನ, ಶಿಖಂಡಿ, ಉಪಪಾಂಡವರನ್ನು ಕೊಂದ. ನಿದ್ರೆಮಾಡುತ್ತಿದ್ದ ಪಾಂಡವರ ಮಕ್ಕಳನ್ನು ಕೊಂದು ಶಿಶುಹತ್ಯೆಯ ದ್ರೋಹಕ್ಕೆ ಈಡಾದ. ದ್ರೌಪದಿಯಿಂದ ಪ್ರೇರಿತನಾದ ಭೀಮ ಇವನನ್ನು ಕೊಲ್ಲಲು ಪ್ರಯತ್ನ ನಡೆಸಿ ವಿಫಲನಾದ. ಅಪಾಂಡವೇಯಾಸ್ತ್ರ ಅಥವಾ ಐಷೀಕಾಸ್ತ್ರ ಎಂದು ಕರೆಸಿಕೊಳ್ಳುತ್ತಿದ್ದ ಬ್ರಹ್ಮಾಸ್ತ್ರವನ್ನು ಪಾಂಡವರ ವಧೆಗಾಗಿ ಬಳಸಿದ. ಕೃಷ್ಣನಿಂದ ಶಪಿಸಲ್ಪಟ್ಟ ಮೇಲೆ ಪಾಂಡವರಿಂದ ಶಿರೋರತ್ನ ನಾಶವಾಯಿತು. ಸಪ್ತಚಿರಂಜೀವಿಗಳಲ್ಲಿ ಇವನೂ ಒಬ್ಬ. ತೀರ್ಥಯಾತ್ರೆಗೆ ಹೊರಟು ನರ್ಮದಾತೀರಕ್ಕೆ ಬಂದಾಗ ಮುನಿಚಯವೊಂದರಿಂದ ಸುಪ್ತಘಾತಕ ಎಂದು ನಿಂದಿತನಾಗಿ ಬದರಿಯಲ್ಲಿ ವ್ಯಾಸನ ಸಲಹೆಯಂತೆ ಸೇತುಸ್ನಾನ ಮಾಡಿದ. ವಿ. ಸೀ. ಅವರ ಅಗ್ರಹ ಮತ್ತು ಏಜಾಕ್ಸ್ ನಾಟಕದ ಭಾವಾನುವಾದವಾದ ಬಿ.ಎಂ.ಶ್ರೀ ಅವರ ಅಶ್ವತ್ಥಾಮನ್–ಇವು ಕನ್ನಡದಲ್ಲಿ ಅಶ್ವತ್ಥಾಮನನ್ನು ಕುರಿತು ಎರಡು ಪ್ರಸಿದ್ಧ ನಾಟಕಗಳು.

2 ಅಶ್ವತ್ಥಾಮ ಎಂಬುದು ಇಂದ್ರವರ್ಮ ಎಂಬ ಮಾಲವ ದೇಶದ ರಾಜನ ಆನೆ. ಮಹಾಭಾರತ ಯುದ್ಧದ 14ನೆಯ ದಿನ ಭೀಮ ಇದನ್ನು ಕೊಲ್ಲುತ್ತಾನೆ. (ಜಿ.ಎಚ್.)

**ಅಶ್ವದಳ :** ಮೊದಮೊದಲು ರಾವುತರ ದಳಕ್ಕೆ ಇದ್ದ ಹೆಸರು (ಕ್ಯಾವಲ್ರಿ). ಕುದುರೆಗಳನ್ನು ಏರಿ ಯುದ್ಧಮಾಡುತ್ತಿದ್ದ ಸವಾರರು ಬಹಳ ಹಿಂದಿನ ಕಾಲದಿಂದಲೂ ಸೈನ್ಯದ ಒಂದು ಅಂಗವಾಗಿದ್ದರು. ಅರ್ಥಶಾಸ್ತ್ರದಲ್ಲಿ ರಥ, ಗಜ, ಅಶ್ವ, ಪದಾತಿ ಎಂಬ ಚತುರಂಗ ಸೇನೆಯ ಉಲ್ಲೇಖವಿದೆ. ಅದಕ್ಕಿಂತ ಪೂರ್ವದಿಂದಲೂ ಅಶ್ವಾರೋಹಣ ಕೌಶಲ್ಯಕ್ಕೆ ಪ್ರಾಶಸ್ತ್ಯವಿದ್ದೇ ಇತ್ತು. ಪುರಾಣಗಳಲ್ಲಿ ಅಶ್ವಾರೋಹಿಗಳು ಹೇಗೆ ಒಬ್ಬರ ಮೇಲೊಬ್ಬರು ನುಗ್ಗಿದರು ಎಂಬ ವರ್ಣನೆ ಇದೆ. ಯುರೋಪ್ ಖಂಡದಲ್ಲೂ ಯೋಧರು ಕುದುರೆ ಏರಿ ಬಿಲ್ಲುಬಾಣಗಳನ್ನು ಹಿಡಿದು ಯುದ್ಧ ಮಾಡುತ್ತಿದ್ದರೆಂಬುದು ಗೊತ್ತಿದ್ದ ಸಂಗತಿ.

ಯೋಧರಲ್ಲಿ ಪ್ರಾಚೀನ ಕಾಲದಿಂದಲೂ ಬಂದ ಎರಡು ಮಾದರಿಗಳೆಂದರೆ ಪದಾತಿಗಳು ಮತ್ತು ಅಶ್ವಾರೋಹಿಗಳು. ಪದಾತಿ ಸೈನ್ಯಕ್ಕೆ ಕೆಲವು ಮಿತಿಗಳುಂಟು. ಆದರೆ ಅಶ್ವದಳ ವೇಗವಾಗಿ ಸಾಗಿ ಯುದ್ಧರಂಗದಲ್ಲಿ ಕಾಳಗಕೊಟ್ಟು, ಪಕ್ಕಕ್ಕೆ ಬೇಗ ತಿರುಗಿ ಚಲಿಸಬಲ್ಲುದು. ಪದಾತಿ ಸೈನ್ಯವಾದರೋ ಅದರ ಪಕ್ಕಗಳಲ್ಲಾಗಲಿ ಹಿಂಭಾಗದಲ್ಲಾಗಲಿ ಶತ್ರು ಆಕ್ರಮಣ ನಡೆಸಿದಾಗ ತುಂಬ ಪೇಚಾಟಕ್ಕೆ ಸಿಕ್ಕಿಕೊಳ್ಳುತ್ತದೆ. ಅದಕ್ಕೆ ವೇಗವಾದ ಚಲನವಲನಗಳಿಲ್ಲ. ಶತ್ರು ಥಟ್ಟನೆ ಎರಗಿದಾಗ ಅದನ್ನು ಕಾಪಾಡುವುದಕ್ಕೆ ಅದರ ಇಕ್ಕೆಲದಲ್ಲೂ ರಾವುತರ ದಳಗಳನ್ನಿರಿಸಬೇಕಾಗುತ್ತದೆ.

ಏಷ್ಯ ಖಂಡದಲ್ಲಿ ಅಶ್ವದಳ ಒಳ್ಳೆ ಅವಸ್ಥೆಯಲ್ಲಿತ್ತು. ಏಷ್ಯನರು ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಗ್ರೀಕರ ಮೇಲೆ ದಾಳಿ ನಡೆಸಿದಾಗ ಗ್ರೀಕರು ಕಕ್ಕಾಬಿಕ್ಕಿಯಾದರು. ಏಷ್ಯಖಂಡದ ಅಶ್ವಾರೋಹಿಗಳನ್ನು ನೋಡಿದ ಮೇಲೆಯೇ ಮ್ಯಾಸಿಡೋನಿನ ಫಿಲಿಪ್ ದೊರೆ ಆತ್ಮಸಂರಕ್ಷಣೆಗೂ ಆಕ್ರಮಣ ಮತ್ತು ವ್ಯೂಹಭೇದನಗಳಿಗೂ ರಾವುತರ ಸೈನ್ಯವನ್ನು ರಚಿಸಿದ. ಆತನ ಮಗ ವಿಖ್ಯಾತನಾದ ಅಲೆಕ್ಸಾಂಡರ್ ತನ್ನ ಅಶ್ವದಳದಿಂದ ಮಹತ್ತ್ವದ ಯುದ್ಧಗಳನ್ನು ನಡೆಸಿದ. ದೃಢಕಾಯರಾದ ಆರುಜನ ಕಾಲಾಳುಗಳಿಗೆ ಒಬ್ಬ ರಾವುತನಂತೆ ಆತ ನಿಯಮಿಸಿದ. ಅಲೆಕ್ಸಾಂಡರನಿಂದೀಚೆಗೆ ಅಶ್ವದಳ ಜಯ ನಿರ್ಣಯಿಸಬಲ್ಲ ಸೇನಾಂಗವಾಯಿತು.

ಪ್ರ.ಶ.ಪೂ. 216ರಲ್ಲಿ ಕಾರ್ಥೇಜಿಯನ್ನರು ಅಶ್ವದಳ ರಹಿತವಾದ ರೋಮನ್ ಜನರೊಂದಿಗೆ ಕಾದಾಡಿ ತಮ್ಮ ರಾಹುತರಿಂದ ಅವರನ್ನು ಸೋಲಿಸಿದರು. ಪ್ರ.ಶ.ಪೂ. 205ರಲ್ಲಿ ಅವರು ಸ್ಕಿಪಿಯೋ ಆಫ್ರಿಕಾನಸ್‌ನೊಡನೆ ಯುದ್ಧಹೂಡಿ ಅವನನ್ನು ಜಯಿಸಿದರು. ಜೂಲಿಯಸ್ ಸೀಜರನ ಕಾಲದಲ್ಲಿ ರೋಮನರು ಯೂಫ್ರೆಟೀಸ್ ನದಿಯನ್ನು ದಾಟಿದಾಗ ಪಾರ್ಥಿಯನ್ನರು ತಮ್ಮ ಹತ್ತಿರ ಬಲವಾದ ರಾಹುತರ ದಳವಿದ್ದ ಕಾರಣ 20,000 ರೋಮನ್ನರನ್ನು ಕೊಂದರು, 10,000 ಜನರನ್ನು ಸೆರೆಹಿಡಿದರು. ಕಾದಾಡಲು ಬಂದ 40,000 ರೋಮನ್ನರಲ್ಲಿ 10,000 ಜನರು ಮಾತ್ರ ಪಲಾಯನ ಮಾಡಲು ಅವಕಾಶವಾಯಿತು. ರೋಮನ್ನರ ಹತ್ತಿರ ನೆಪಕ್ಕೊಂದು ಅಶ್ವದಳವಿದ್ದಿತಾದರೂ ಪಾರ್ಥಿಯನ್ನರ ಹತ್ತಿರ ಕುದುರೆಯೇರಿದ ಬಿಲ್ಲಾಳುಗಳಿದ್ದರು. ಅವರನ್ನು ರಕ್ಷಿಸಿಕೊಂಡು ಸಾಕಷ್ಟು ಸ್ಥೈರ್ಯವನ್ನು ಕೊಡುವುದಕ್ಕಾಗಿ ಘನವಾದ ಅಶ್ವದಳ ಅವರನ್ನು ಹಿಂಬಾಲಿಸಿತ್ತು.

ಏಷ್ಯ ಖಂಡದಲ್ಲಿ ಆಕ್ರಮಣದ ಜೀವಾಳವೇ ಅಶ್ವದಳದ ಕೈಯಲ್ಲಿತ್ತು. 12ನೆಯ ಶತಮಾನದಲ್ಲಿದ್ದ ಚೆಂಗೀಸ್ ಖಾನನ ಅಶ್ವದಳ ಅತ್ಯಂತ ಪ್ರಸಿದ್ಧವಾದದ್ದು. ಸಾಹಸವಂತರೂ ದಣಿವಿಲ್ಲದವರೂ ಆದ ತನ್ನ ಜನವನ್ನು ಆತ ಸಹಸ್ರಾರು ಧೀರ ರಾಹುತರನ್ನಾಗಿ ಪರಿವರ್ತಿಸಿ ಹೋದ ಕಡೆಯಲ್ಲೆಲ್ಲ ವಿಜಯವನ್ನು ಗಳಿಸಿದ. ಏಷ್ಯ ಖಂಡದ ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ ಅನೇಕ ಭಾಗಗಳನ್ನು ಆತ ಆಕ್ರಮಿಸಿಕೊಂಡ. ಅವನ ಕೈಕೆಳಗೆ ಶಿಕ್ಷಣವನ್ನು ಪಡೆದ ಸುಮಾರು ಏಳು ಲಕ್ಷ ಜನ ಅವನು ಹೇಳಿದ ಕಡೆಗೆ ಹೋಗಿ ಜಯಗಳಿಸುತ್ತಿದ್ದರು. ಯಾವನೊಬ್ಬನಾದರೂ ಹಿಮ್ಮೆಟ್ಟಿದ ಪಕ್ಷದಲ್ಲಿ ಆತ ಕೂಡಲೇ ಸಾವಿಗೀಡಾಗಬೇಕಾಗುತ್ತಿದ್ದ. ನನ್ನ ಸೈನ್ಯದ ಒಬ್ಬ ಸಾಮಾನ್ಯ ಸವಾರ ಮಿಕ್ಕವರ ಸೈನ್ಯದ ತುಕಡಿದಾರನಿಗಿಂತಲೂ ಶ್ರೇಷ್ಠ ಎಂದು ಚೆಂಗೀಸ್‌ಖಾನ್ ಹೇಳುತ್ತಿದ್ದನಂತೆ.

ನಮ್ಮ ದೇಶದಲ್ಲಿ ಅಶ್ವಾರೋಹಣ ಕುಶಲತೆ ರಾಜನಿಗಿರಬೇಕಾದ ಗುಣಗಳಲ್ಲಿ ಅತ್ಯುತ್ತಮವೆನಿಸಿತ್ತು. ಯುದ್ಧರಂಗಗಳಲ್ಲಿ ತೆಗೆದುಕೊಂಡು ಹೋಗತಕ್ಕ ಕುದುರೆಗಳಿಗೆ ಹೆಸರಿಟ್ಟು ಕರೆಯುತ್ತಿದ್ದರು. ರಣರಂಗದಲ್ಲೊಂದರಲ್ಲೇ ಅಲ್ಲದೆ ಮೃಗಯಾದಿ ವಿನೋದಗಳಿಗೂ ಕುದುರೆಗಳನ್ನು ಬಳಸುತ್ತಿದ್ದರು. ಈಗ ಪ್ರಪಂಚದ ಎಲ್ಲ ಭಾಗಗಳಲ್ಲೂ ಕಾಣಬರುವ ಪೋಲೋ ಎಂಬ ಆಟ ಭಾರತ ದೇಶದಿಂದ ತುಂಬ ಪುಷ್ಟಿಯನ್ನು ಪಡೆದಿದೆ. ಈ ನವೀನ ಯುಗದಲ್ಲಿ ಅಶ್ವದಳ ಯುದ್ಧರಂಗಕ್ಕಿಳಿದಾಗಲೆಲ್ಲ ಬಹಳ ಯಶಸ್ಸನ್ನು ಗಳಿಸಿದೆ. ಹಡ್ಸನ್ ಹಾರ್ಸ್ ಎಂಬುದು ಇಂಥ ಮತ್ತೊಂದು. ಮೈಸೂರು ಲ್ಯಾನ್ಸರ್ಸ್ ರಾಹುತರು ಭರ್ಜಿಗಳನ್ನು ಹಿಡಿದುಕೊಂಡಿರುತ್ತಿದ್ದರಿಂದ ಈ ದಳಕ್ಕೆ ಈ ಹೆಸರು ಬಂತು–ಅವರ ಖ್ಯಾತಿಯೂ ಇವಕ್ಕೆ ಕಡಿಮೆಯದಲ್ಲ. ನಮ್ಮ ದೇಶದಲ್ಲಿ ಕಂಡುಬರುವ ಶಿವಾಜಿ ಮಹಾರಾಜ ಮತ್ತು ಅನೇಕ ವೀರರ ಅಶ್ವಾರೋಹಿ ವಿಗ್ರಹಗಳು ಅಶ್ವದಳ ತನ್ನ ಉತ್ಕರ್ಷದ ದಿನಗಳಲ್ಲಿ ಮಾಡುತ್ತಿದ್ದ ಮಹತ್ಕಾರ್ಯಗಳ ಸಾಕ್ಷಿಯಾಗಿ ನಿಂತಿವೆ. ಶ್ರೀರಂಗಪಟ್ಟಣ ಮತ್ತು ಮೈಸೂರುಗಳಲ್ಲಿ ಕಣ್ಣಿಗೆ ಬೀಳುವ ಚಿತ್ರಗಳು ಮೈಸೂರು ಲ್ಯಾನ್ಸರಿಗೂ ಮುಂಚಿನ ಅಶ್ವದಳಗಳ ಚಾಕಚಕ್ಯವನ್ನು ನೆನಪಿಗೆ ತರುತ್ತವೆ. ಖಾಸಗಿ ಪಾಗ ಎಂದು ಪ್ರಸಿದ್ಧವಾದ ಪೇಷ್ವೆಗಳ ಸ್ವಂತ ಅಶ್ವದಳ ಬಹು ಶ್ರೇಷ್ಠ ಅಂಗರಕ್ಷಕ ಸೈನ್ಯವೆನಿಸಿತ್ತು. ಹಗುರವಾದ ಉಡುಪುಗಳನ್ನು ಧರಿಸಿದ್ದ ಮರಾಠ ರಾಹುತರು ಶತ್ರುಗಳನ್ನು ತರಬುತ್ತಾ ಒಂದೇ ನಾಗಾಲೋಟದಲ್ಲಿ ಇಡೀ ದೇಶವನ್ನೇ ಆಕ್ರಮಿಸುತ್ತಿದ್ದರು. ಅವರಲ್ಲಿ ಬಾರಗೀರ್ ಮತ್ತು ಸಿಲೇದಾರ್ ಎಂಬ ಎರಡು ವರ್ಗಗಳಿದ್ದುವು. ಬಾರಗೀರರಿಗೆ ಸರ್ಕಾರವಾಗಲಿ ವ್ಯಕ್ತಿಗಳಾಗಲಿ ಕುದುರೆಗಳನ್ನು ಒದಗಿಸುತ್ತಿದ್ದರು. ಸಿಲೇದಾರರು ತಮ್ಮ ಸ್ವಂತ ಖರ್ಚಿನಿಂದ ಕುದುರೆಗಳನ್ನು ಕೊಂಡು ಸಾಕುತ್ತಿದ್ದರು. ಇವರೆಲ್ಲರೂ ಕತ್ತಿ ಅಥವಾ ಭರ್ಜಿ ಮತ್ತು ಗುರಾಣಿಯನ್ನು ಹಿಡಿಯುತ್ತಿದ್ದರು. ಈ ಆಯುಧಗಳ ಪ್ರಯೋಗದಲ್ಲಿ ಇವರು ತುಂಬ ಪಳಗಿದವರಾಗಿದ್ದರು. ಭರ್ಜಿಯಲ್ಲಿ ಸುಶಿಕ್ಷಿತರಾದವರು ಉದ್ದವಾದ ರಿಕಾಪಿಗೆ ಹೆಬ್ಬೆರಳು ತಗುಲುವಂತೆ ಸವಾರಿ ಮಾಡುತ್ತಿದ್ದರು. ಮ್ಯಾಚ್‌ಲಾಕ್ ಎಂಬ ಮದ್ದಿನ ಬತ್ತಿಯ ಕೋವಿಯನ್ನು ಹಿಡಿದವರು ತುಂಬ ಚಿಕ್ಕ ರಿಕಾಪಿನಲ್ಲಿ ಸವಾರಿ ಮಾಡುತ್ತಿದ್ದರು. ಈ ಕೋವಿಯವರು ಎಲ್ಲ ಅಶ್ವದಳಗಳಲ್ಲೂ ಕೆಲಮಂದಿ ಇರುತ್ತಿದ್ದರು. ಅವರು ಮೊಳಕಾಲನ್ನು ಮುಚ್ಚುವಂತೆ ಬಿಗಿ ಚಲ್ಲಣಗಳನ್ನು ತೊಟ್ಟು ಹತ್ತಿಯ ರಸಾಯಿಗಳಿಂದ ಮಾಡಿದ ಕವಚಗಳನ್ನು ಧರಿಸಿ, ನಡುವಿಗೆ ಒಂದು ಪಟ್ಟಿಯನ್ನು ಕಟ್ಟಿ–ಬೆಲ್ಟಿಗಿಂತ ಪಟ್ಟಿಯೇ ಅವರಲ್ಲಿ ಮೇಲೆನಿಸಿತ್ತು–ತಲೆಗೆ ಒಂದು ರುಮಾಲನ್ನು ಸುತ್ತಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ಈ ರುಮಾಲಿನ ಒಂದು ಚುಂಗನ್ನು ಗಡ್ಡದ ಕೆಳಭಾಗಕ್ಕೆ ತಂದು ಗಂಟನ್ನು ಬಿಗಿದು ತಮ್ಮ ರುಮಾಲನ್ನು ಭದ್ರಪಡಿಸಿಕೊಳ್ಳುತ್ತಿದ್ದರು.

ಪರಿಸ್ಥಿತಿ ಹೀಗಿರುವಲ್ಲಿ ಮದ್ದುಗುಂಡುಗಳೂ ಬಂದೂಕುಗಳೂ, ಬಳಕೆಗೆ ಬಂದ ಮೇಲೆ ಕುದುರೆಗಳನ್ನು ಸಂರಕ್ಷಿಸುವ ಬಗೆ ಹೇಗೆಂಬುದು ಬಹಳ ಆತಂಕದ ಪ್ರಶ್ನೆಯಾಯಿತು. ತೆಳ್ಳಗಿರುವ ಲೋಹಫಲಕಗಳು ಅಷ್ಟು ಉಪಯುಕ್ತವಾಗಿರಲಿಲ್ಲ. ಏಕೆಂದರೆ ಗುಂಡುಗಳು ಅವುಗಳನ್ನು ತೂರಿ ಹೋಗುತ್ತಿದ್ದುವು. ಎರಡೂ ಮಹಾಯುದ್ಧಗಳಲ್ಲಿ ಅಶ್ವದಳಗಳನ್ನು ಉಪಯೋಗಿಸಿಕೊಂಡಿದ್ದುದು ಬಹಳ ಕಡಿಮೆ. ಮೊದಲನೆಯ ಮಹಾಯುದ್ಧದಲ್ಲಿ ಬಂದೂಕಿನ ಸವಾರರಿದ್ದರು. ಆದರೆ ಫ್ರಾನ್ಸಿನಲ್ಲಾಗಲಿ, ಜರ್ಮನಿಯಲ್ಲಾಗಲಿ ರಷ್ಯದಲ್ಲಾಗಲಿ ಅವರಿಂದ ಯಾವ ನಿರ್ಣಾಯಕ ಫಲಿತಾಂಶಗಳೂ ದೊರೆಯಲಿಲ್ಲ. ಪ್ಯಾಲಸ್ಟೈನಿನಲ್ಲಿ ಜರುಗಿದ ಪ್ರಳಯರಂಗದಲ್ಲಿ ಲಾರ್ಡ್ ಆಲೆನ್‌ಬಿಯವರು ತುರ್ಕಿದೇಶದ ಸೈನ್ಯವನ್ನು ಕಣಿವೆಕಂದಕಗಳಲ್ಲಿ ಉರುಳುವಂತೆ ಓಡಿಸಿಕೊಂಡು ಹೋಗಲು ಅಶ್ವದಳವನ್ನು ಉಪಯೋಗಿಸಿದಾಗ ಮಾತ್ರ ಅದು ಗೆಲುವನ್ನು ಕಂಡಿತು. ಆದುದರಿಂದ ಸಹಜವಾಗಿಯೇ ಮೊದಲನೆಯ ಮಹಾಯುದ್ಧ ಮುಗಿದಮೇಲೆ ಯುದ್ಧರಂಗದಲ್ಲಿ ಕುದುರೆಗಳನ್ನು ಬಳಸುವುದು ನಿಂತುಹೋಗಿ ಕವಚವನ್ನು ಹೊದಿಸಿದ ರಥಗಳೂ ಟ್ಯಾಂಕುಗಳೂ ಅವುಗಳ ಜಾಗಕ್ಕೆ ಬಂದುವು. ಕವಚವುಳ್ಳ ರಥ (ಆರ್ಮ್‌ರ್ಡ್ ಕಾರ್ಸ್) ಕುದುರೆಗಳಷ್ಟೇ ಚಲನವಲನವುಳ್ಳದ್ದು ಮತ್ತು ಅದಕ್ಕಿಂತ ಉಪಯುಕ್ತವಾದದ್ದು; ಏಕೆಂದರೆ ಶತ್ರುವಿನ ಗುಂಡು ಅದರ ಕವಚದೊಳಗೆ ತೂರಲಾಗುತ್ತಿರಲಿಲ್ಲ. ಆದ ಕಾರಣ ಅವು ಕವಚ ಹೊದಿಸಿದ ರಥಗಳಾಗಿದ್ದರೂ ಕೂಡ ಈ ರೀತಿ ಹುಟ್ಟಿದ್ದರಿಂದ ಅವುಗಳನ್ನೂ ಕ್ಯಾವಲ್ರಿ ಎಂದೇ ಕರೆಯಲಾಗುತ್ತಿದೆ. ಎರಡನೆಯ ಮಹಾಯುದ್ಧದಲ್ಲಿ ಇವುಗಳ ಚಲನಶಕ್ತಿ ಎಷ್ಟು ಚೆನ್ನಾಗಿತ್ತೆಂದರೆ ಜರ್ಮನಿ ದೇಶದ ಕವಚ ರಥಗಳು ಪ್ರಬಲ ರಾಷ್ಟ್ರಗಳಲ್ಲಿ ಮೊದಲ ಪಂಕ್ತಿಗೆ ಸೇರಿದ ಪೋಲೆಂಡ್ ದೇಶವನ್ನು ಕಬಳಿಸಿದುವು. ಇದೇ ಜರ್ಮನ್ ಕ್ಯಾವಲ್ರಿ ಫ್ರಾನ್ಸ್ ದೇಶದ ಪ್ರಖ್ಯಾತ ಮಾಜಿನೋಲೈನ್ ಎಂಬ ದುರ್ಗಮ ಪ್ರದೇಶವನ್ನು ಒಂದು ಕಡೆಗೆ ಬಿಟ್ಟು ಮುನ್ನುಗ್ಗಿತು. ಬರಿಯ ಬಯಲಾದ ಪಶ್ಚಿಮದ ಮರುಳುಕಾಡಿನಲ್ಲಿ ಈ ಹೊಸ ಸಾಧನ ತನಗೆ ತಕ್ಕ ಪ್ರಾಶಸ್ತ್ಯ ಪಡೆಯಿತು. ಶತ್ರು ಸೈನಿಕರು ಮಿತ್ರ ಪಕ್ಷದವರೂ ಬೇಕಾದ ಹಾಗೆ ಇದನ್ನು ಉಪಯೋಗಿಸಿದರು. ನಾರ್ಮಂಡಿಯಿಂದ ರೈನ್ ನದಿಯವರೆಗೆ ಸಂಯುಕ್ತ ರಾಷ್ಟ್ರದವರು ತಮ್ಮ ಕವಚ ರಥಗಳ ಪಡೆಗಳನ್ನು ಶತ್ರುವಿನ ರಾಜ್ಯದೊಳಗೆ ನುಗ್ಗಿಸಿ ಗುಂಡು ಹೊಡೆದು ಕಕ್ಕಾಬಿಕ್ಕಿಯಾಗುವಂತೆ ಮಾಡಿ ಅವರನ್ನು ಸೋಲಿಸಿದರು. ಈ ಯಾಂತ್ರಿಕ ಅಶ್ವದಳ ಯುದ್ಧಮಾಡುವುದಕ್ಕೊಂದಕ್ಕೇ ಅಲ್ಲದೆ ಸ್ಥಳ ಶೋಧನಕ್ಕೂ ಉಪಯುಕ್ತವಾಯಿತು. (ಎ.ಎನ್.ಎಸ್.ಎಂ.)

**ಅಶ್ವಮೇಧ :** ಸಾಮ್ರಾಜ್ಯ ಸ್ಥಾಪನೆ ಮತ್ತು ವಿಸ್ತರಣೆಯ ಪ್ರತೀಕವಾಗಿ ಭಾರತದಲ್ಲಿ ಆಚರಿಸಲಾಗುತ್ತಿದ್ದ ಕಾರ್ಯಕ್ರಮಗಳಲ್ಲಿ ಬಹು ಪ್ರಭಾವಯುತವೂ ಶಾಸ್ತ್ರೋಕ್ತವೂ ಪವಿತ್ರವೂ ಆದ ಒಂದು ಯಾಗ. ಯಾಗಗಳಲ್ಲೆಲ್ಲ ಅತ್ಯುತ್ತಮವಾದದ್ದೆಂಬ ಹೇಳಿಕೆಯೂ ಇದೆ. ದೇವತೃಪ್ತ್ಯರ್ಥವಾಗಿ ನಡೆಸುವ ವೈಭವದ ಸಮಾರಂಭಗಳಲ್ಲಿ ಒಂದು. ಋಗ್ವೇದದಷ್ಟು ಪ್ರಾಚೀನಕಾಲದಲ್ಲೇ ಈ ವಿಶಿಷ್ಟ ಸಮಾರಂಭಕ್ಕಾಗಿ ರಚಿತವಾದ ದೇವರ ಸ್ತೋತ್ರಗಳಿವೆ. ಈ ಮತಪ್ರಕ್ರಿಯೆಗಳಿಗಾಗಿಯೇ ರಚಿತವಾಗಿರುವ ಶತಪಥ ಬ್ರಾಹ್ಮಣ, ತೈತಿರೀಯ ಬ್ರಾಹ್ಮಣ, ಕಾತ್ಯಾಯನನ ಶ್ರೌತಸೂತ್ರಗಳು, ಸಾಂಖ್ಯಾಯಾನ, ಆಪಸ್ತಂಬ, ಆಶ್ವಲಾಯನ ಸೂತ್ರಗಳು–ಇವುಗಳಲ್ಲೂ ಅಶ್ವಮೇಧದ ವರ್ಣನೆಗಳಿವೆ. ಶ್ರೀರಾಮ ಈ ಯಜ್ಞವನ್ನಾಚರಿಸಿದ. ಕೌರವರೊಡನೆ ಯುದ್ಧಮಾಡಿ ಜಯಪಡೆದ ಯುಧಿಷ್ಠಿರ ತಾನು ಮಾಡಿದ ಪಾಪದಿಂದ ಪರಿಶುದ್ಧನಾಗಲು ನಡೆಸಿದ ಅಶ್ವಮೇಧದ ವರ್ಣನೆ ಮಹಾಭಾರತದಲ್ಲಿ ಇದೆ. ಈ ಯಾಗ ಮತ್ತು ಯಾಗಕ್ಕೆ ಸಂಬಂಧಿಸಿದ ಆಖ್ಯಾನಗಳೇ ದೊಡ್ಡ ಕಾವ್ಯಗಳಾಗಿ ಉಳಿದು ಬಂದಿವೆ. ಪರಮಾಧಿಕಾರವನ್ನು ಹೊಂದಿದ್ದ ಸಾರ್ವಭೌಮನೇ ಈ ಅಶ್ವಮೇಧವನ್ನು ನಡೆಸುವ ಅಧಿಕಾರವನ್ನುಳ್ಳವನಾಗಿದ್ದ. ಇದರ ಆಚರಣೆಯಿಂದ ಆ ರಾಜನ ಆಸೆ ಆಕಾಂಕ್ಷೆಗಳು ನೆರವೇರಿ ಆತನ ಸಾಮ್ರಾಜ್ಯ ವಿಸ್ತರಣೆ ಆಗಬೇಕೆಂಬ ಉದ್ದೇಶದಿಂದ ಇದನ್ನು ನಡೆಸಲಾಗುತ್ತಿತ್ತು. ಇದು ಒಂದು ರಾಜ್ಯೋತ್ಸವವಾಗಿದ್ದು ಬಹು ಜನಪ್ರಿಯವಾಗಿತ್ತು. ವಸಂತ ಅಥವಾ ಗ್ರೀಷ್ಮಋತುಗಳಲ್ಲಿ ಪ್ರಾರಂಭವಾಗಿ ಒಂದು ವರ್ಷದ ಅವಧಿಯಲ್ಲಿ ಪೂರ್ತಿಯಾಗುತ್ತಿತ್ತು. ಈ ಯಾಗಕ್ಕೆ ಒಂದು ಉತ್ತಮ ತಳಿಯ ಯಜ್ಞಾಶ್ವವನ್ನು ಆರಿಸಬೇಕಾಗಿತ್ತು. ಆ ಅಶ್ವವನ್ನು ಬಲಿಕಂಬಕ್ಕೆ ಹಗ್ಗದಿಂದ ಕಟ್ಟಿ ಸ್ನಾನ ಮಾಡಿಸಿದ ಮೇಲೆ ಒಂದು ವರ್ಷ ಸ್ವೇಚ್ಛೆಯಾಗಿ ಓಡಾಡಲು ಅದಕ್ಕೆ ಅವಕಾಶ ಕೊಡಲಾಗುತ್ತಿತ್ತು. ಹಿಂದುಗಡೆ ಬೆಂಗಾವಲಿಗಾಗಿ ರಾಜಕುಮಾರರು ಅಧಿಕಾರಿಗಳು ಆಯುಧಪಾಣಿಗಳಾಗಿ ಹೋಗುತ್ತಿದ್ದರು. ಹೀಗೆ ಸ್ವೇಚ್ಛೆಯಾಗಿ ಅಲೆದಾಡುತ್ತಿದ್ದಾಗ ಅದನ್ನು ಅಪಹರಿಸಿಕೊಂಡು ಹೋಗುವ ಪ್ರಯತ್ನಗಳು ನಡೆದು ಘರ್ಷಣೆಗಳಿಗೊ ಯುದ್ಧಗಳಿಗೊ ಆಸ್ಪದ ಕೊಡುತ್ತಿದ್ದುವು. ಅದು ಯಾವ ಯಾವ ರಾಜ್ಯದ ಮೇಲೆ ಹಾಯ್ದು ಹೋಗುತ್ತದೊ ಆ ರಾಜ್ಯದ ರಾಜ ಅಶ್ವಪ್ರಭುವಿನ ಸ್ವಾಮ್ಯವನ್ನು ಒಪ್ಪಿಕೊಂಡು ಕಪ್ಪಕಾಣಿಕೆಗಳನ್ನೊಪ್ಪಿಸಲೇ ಬೇಕಾಗುತ್ತಿತ್ತು. ಹೀಗೆ ಎಲ್ಲ ರಾಜರನ್ನೂ ಗೆದ್ದು ಬಂದ ಮೇಲೆಯೇ ಅಶ್ವಮೇಧ ಯಾಗ ಪ್ರಾರಂಭವಾಗುತ್ತಿತ್ತು. ಈ ಯಾಗದಲ್ಲಿ ಯಶಸ್ವಿಯಾದವನಿಗೆ ಉಳಿದ ರಾಜರೆಲ್ಲ ಅಧೀನರೊ ಸಾಮಂತರೊ ಆಗಬೇಕಾಗುತ್ತಿತ್ತು; ಮತ್ತು ಇವನಿಗೆ ಉಚ್ಚಮಟ್ಟದ ಸ್ವರ್ಗಪ್ರಾಪ್ತಿಯಾಗುತ್ತದೆಂಬ $\theta$ನಂಬಿಕೆಯಿತ್ತು.

ಕುದುರೆ ಈ ರೀತಿ ದೂರಪ್ರದೇಶದಲ್ಲಿ ಅಲೆದಾಡುತ್ತಿದ್ದಾಗ ಯಾಗ ನಡೆಯಬೇಕಾಗಿದ್ದ ಸ್ಥಳದಲ್ಲಿ ದೇವತೆಗಳಿಗೆ ಹವಿಸ್ಸುಗಳನ್ನು ಕೊಡುವ ಉತ್ಸವಗಳು ನಡೆಯುತ್ತಿದ್ದುವು. ಮಂತ್ರಪಠಣಗಳೋ ಸಂಗೀತ ಕೊಳಲುವಾದನಗಳೋ ಆಶುಕವಿತೆಗಳ ವಾಚನಗಳೋ ನಡೆಯುತ್ತಿದ್ದುವು. ಯಜ್ಞಸಮಾರಂಭದ ಅವಧಿ ಮೂರು ದಿನಗಳಿದ್ದು ಯಜ್ಞಪಶುವಿನ ಜೊತೆಗೆ ಅನೇಕಾನೇಕ ಪಶುಗಳು ಬಲಿಯಾಗುತ್ತಿದ್ದವು. ಸೋಮರಸ ಪಾನವೂ ನಡೆಯುತ್ತಿತ್ತು. ಎರಡನೆಯ ದಿನ ಯಜ್ಞಾಶ್ವ ಸ್ವರ್ಣಾಭರಣ ಭೂಷಿತವಾಗಿ ಆ ಯಜ್ಞಪ್ರದೇಶದ ಸುತ್ತ ಪ್ರದಕ್ಷಿಣೆ ಮಾಡಬೇಕಾಗಿತ್ತು. ಆ ಯಜ್ಞಾಶ್ವವನ್ನು ಒಂದು ಹೋತದೊಂದಿಗೆ ಬಲಿಗಂಬಕ್ಕೆ ಕಟ್ಟಲಾಗುತ್ತಿತ್ತು. ಯಜ್ಞಾಶ್ವದ ಮೇಲೆ ಒಂದು ಬಟ್ಟೆಯನ್ನು ಹೊದ್ದಿಸಿ ಅದನ್ನು ಉಸಿರುಕಟ್ಟಿಸಿ ಕೊಲ್ಲಲಾಗುತ್ತಿತ್ತು. ಆಮೇಲೆ ಅದನ್ನು ಜಾಣತನದಿಂದ ಕತ್ತರಿಸಲಾಗುತ್ತಿತ್ತು. ಒಲೆಗಳ ಮೇಲೆ ಆ ಕುದುರೆಯ ಶರೀರ ಭಾಗಗಳನ್ನು ಸುಟ್ಟು ಪ್ರಜಾಪತಿಗೆ ಅರ್ಪಣೆ ಮಾಡಲಾಗುತ್ತಿತ್ತು. ಮೂರನೆಯ ದಿನ ದೊರೆಗೆ ಶುದ್ಧಿಸ್ನಾನವಾಗುತ್ತಿತ್ತು. ಯಜ್ಞನಿರ್ವಾಹಕರಾದ ಪುರೋಹಿತರಿಗೆ ಸಂಭಾವನೆಗಳನ್ನು ಕೊಡಲಾಗುತ್ತಿತ್ತು. ಭಾರತದ ಚರಿತ್ರೆಯಲ್ಲಿ ಸೂರ್ಯಗುಪ್ತ ಚಾಳುಕ್ಯ ರಾಷ್ಟ್ರಕೂಟವಂಶದ ಅನೇಕ ರಾಜರು ಈ ಯಾಗವನ್ನು ಆಚರಿಸಿದ್ದಾರೆ. (**ನೋಡಿ– ಯಜ್ಞಯಾಗ; ಬ್ರಾಹ್ಮಣಗಳು**). (ಕೆ.ಎಸ್.ಡಿ.)

**ಅಶ್ವ ಸಾಮರ್ಥ್ಯ :** ಸಾಮರ್ಥ್ಯವನ್ನು (ಪವರ್) ಅಳೆಯುವ ಏಕಮಾನ (ಹಾರ್ಸ್ ಪವರ್, ಸಂಕೇತ H.P) ಬಲ (ಫೋರ್ಸ್– ಸಂಕೇತ F) ಕಾರ್ಯ ಅಥವಾ ಕೆಲಸ (ವರ್ಕ್–ಸಂಕೇತ W) ಮಾಡುತ್ತದೆ. ಬಲ ಮತ್ತು ಅದರ ಚಲನೆಯ ದಿಕ್ಕಿನಲ್ಲಿ ಬಲಪ್ರಯೋಗಗೊಂಡ ಬಿಂದುವಿನ ಸ್ಥಾನಪಲ್ಲಟ ಇವುಗಳ ಗುಣಲಬ್ಧ ಒಂದು ಬಲ ಮಾಡಿದ ಕೆಲಸ, ಚಿತ್ರದಲ್ಲಿ ಈ ದೂರ $d\cos\theta$ ಆದ್ದರಿಂದ $W= F.\, d\cos$ . ಕೆಲಸವನ್ನು (W) ಮಾಡಬಲ್ಲ ಕ್ಷಮತೆಗೆ ಶಕ್ತಿ (ಎನರ್ಜಿ–ಸಂಕೇತ E) ಎಂದು ಕರೆಯುತ್ತಾರೆ. ಕಾಲದಿಂದ ಭಾಗಿಸಿ ದೊರೆಯುವ ಭಾಗಲಬ್ಧ ಆ ಬಲದ ಸಾಮರ್ಥ್ಯ (ಸಂಕೇತ P). ಆದ್ದರಿಂದ $P=E/T$ ಅಥವಾ $E=PT$. ಕೆಲಸ ನಡೆಯುವ ಕಾಲದರವನ್ನು ಸಾಮರ್ಥ್ಯ ನಿರ್ಧರಿಸುತ್ತದೆ. ಒಂದು ಜೌಲ್ ಕೆಲಸವನ್ನು ಒಂದು ಸೆಕೆಂಡಿನಲ್ಲಿ ಕೆಲಸವ ಮಾಡಬಲ್ಲ ಸಾಮರ್ಥ್ಯ – ಒಂದು ವಾಟ್. 746 ವಾಟ್‌ಗಳು 1 ಅಶ್ವಸಾಮರ್ಥ್ಯಕ್ಕೆ ಸಮ. ಜೇಮ್ಸ್‌ವಾಟ್ ಬಲಿಷ್ಠಕುದುರೆಗಳ ಸಾಮರ್ಥ್ಯವನ್ನು ಪ್ರಾಯೋಗಿಕವಾಗಿ ಪರಿಶೀಲಿಸಿ 1 ಮಿನಿಟಿಗೆ 33000 ಅಡಿ–ಪೌಂಡ್ ಕೆಲಸ (w ಪೌಂಡ್ ತೂಕವನ್ನು ಊರ್ಧ್ವವಾಗಿ a ಅಡಿ ಮೇಲಕ್ಕೆ ಎತ್ತುವಾಗ

ಆಗುವ ಕೆಲಸ awಅಡಿ ಪೌಂಡ್) ಅಥವಾ 1 ಸೆಕೆಂಡಿಗೆ 550 ಅಡಿ–ಪೌಂಡ್ ಕೆಲಸ 1 ಅಶ್ವ ಸಾಮರ್ಥ್ಯಕ್ಕೆ ಸಮವೆಂದು ನಿರ್ಧರಿಸಿ ಸಾಮರ್ಥ್ಯದ ಈ ಏಕಮಾನವನ್ನು ಹೆಸರಿಸಿದ. 154 ಪೌಂಡ್ ಭಾರದ ಒಬ್ಬ ಮನುಷ್ಯ 50 ಅಡಿ ಎತ್ತರದ ಮಹಡಿಯನ್ನು 14 ಸೆಕೆಂಡುಗಳಲ್ಲಿ ಏರಿದರೆ ಅವನ ಅಶ್ವಸಾಮರ್ಥ್ಯ $\frac{154\times 50}{14\times 550} = 1\, hp$ ವಿದ್ಯುಚ್ಛಕ್ತಿಯ




ಮಾನದಲ್ಲಿ 746 ವಾಟ್‌ಗಳೂ ಉಷ್ಣಶಕ್ತಿಯ ಮಾನದಲ್ಲಿ 2545 ಬಿ. ಟಿ. ಯು. ಗಳೂ (ಬ್ರಿಟಿಷ್ ಥರ್ಮಲ್ ಯೂನಿಟ್) 1 ಅಶ್ವ ಸಾಮರ್ಥ್ಯಕ್ಕೆ ಸಮಾನ. ಮೆಟ್ರಿಕ್ ವ್ಯವಸ್ಥೆಯಲ್ಲಿ ಮಿನಿಟಿಗೆ 4500 ಕಿ.ಗ್ರಾಂ–ಮೀಟರ್ 1 ಅಶ್ವಸಾಮರ್ಥ್ಯ ಎಂದು ವ್ಯಾಖ್ಯಿಸಲಾಗಿದೆ. *

**ಅಶ್ವಿನಿ ನಾಚಪ್ಪ:** 1967–. ಪ್ರಸಿದ್ಧ ಓಟಗಾರ್ತಿ. 1967 ಅಕ್ಟೋಬರ್ 21ರಂದು ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಜನಿಸಿದರು. ತಂದೆ–ತಾಯಿ ಮೊದಲು ಮೈಸೂರು ಮತ್ತು ಕೋಲ್ಕತ್ತದಲ್ಲಿದ್ದು ಅನಂತರ ಬೆಂಗಳೂರಿನಲ್ಲಿ ನೆಲಸಿದರು. ಅಶ್ವಿನಿ ಮತ್ತು ಈಕೆಯ ಸಹೋದರಿ ಪುಷ್ಪ ಬಾಲ್ಯದಿಂದಲೂ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸಾಧನೆಯಲ್ಲಿ ತೊಡಗಿದರು. ಓಟಗಾರ್ತಿಯರಾದರು. ಕಠ್ಮಂಡು ವಿನ ದಕ್ಷಿಣ ಏಷ್ಯ ಫೆಡರೇಷನ್ (ಎಸ್‌ಎಎಫ್) ಆಟೋಟಗಳ ಸ್ಪರ್ಧೆಯಲ್ಲಿ ಭಾಗವಹಿಸಿದರು. ಇದು ಇವರು ಭಾಗವಹಿಸಿದ ಮೊದಲನೆಯ ಅಂತಾರಾಷ್ಟ್ರೀಯ ಕ್ರೀಡಾಕೂಟ. ಇದರಲ್ಲಿ ಪುಷ್ಪ 4x400 ಮೀ ರಿಲೇ ಓಟದಲ್ಲಿ ಚಿನ್ನದ ಪದಕವನ್ನೂ ಅಶ್ವಿನಿ 4x100ಮೀ ರಿಲೆಯಲ್ಲಿ ಕಂಚಿನ ಪದಕವನ್ನೂ ಪಡೆದರು. ಅಶ್ವಿನಿ ಅವರ ಭವಿಷ್ಯದಬಗ್ಗೆ ಕ್ರೀಡಾಭಿಮಾನಿಗಳಲ್ಲಿ ಅಪಾರ ಭರವಸೆ ಮೂಡಿತು. ಇವರ ಓಟದ ತೀವ್ರತೆ ಹಾಗೂ ಶೈಲಿ ಅಪೂರ್ವವೆನಿಸಿತ್ತು. ಇದಕ್ಕೆ ಮುನ್ನ 1985ರ ಏಷ್ಯನ್ ಟ್ರ್ಯಾಕ್ ಅಂಡ್ ಫೀಲ್ಡ್ ಮೀಟ್‌ನಲ್ಲಿ 400ಮೀ ಕಂಚಿನ ಪದಕ ಪಡೆದರು. 1986ರ ಅಖಿಲ ಭಾರತ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಇವರು ಪಾಲ್ಗೊಂಡು, 200ಮೀ ಹಾಗೂ 1987ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 100ಮೀ ಓಟಗಳಲ್ಲಿ ಚಿನ್ನದ ಪದಕಗಳನ್ನು ಗಳಿಸಿದರು.

1987ರಲ್ಲಿ ಸಿಂಗಪುರದಲ್ಲಿ ನಡೆದ ಏಷ್ಯನ್ ಟ್ರ್ಯಾಕ್ ಅಂಡ್ ಫೀಲ್ಡ್ ಮೀಟ್‌ನಲ್ಲಿ 100ಮೀ ಓಟದಲ್ಲಿ ಚಿನ್ನದ ಪದಕವನ್ನೂ 200ಮೀ ಓಟದಲ್ಲಿ ಬೆಳ್ಳಿಯ ಪದಕವನ್ನೂ ಗಳಿಸಿ ಭಾರತದ ವೇಗದ ಓಟಗಾರ್ತಿಯರ ಗುಂಪಿಗೆ ಸೇರ್ಪಡೆಗೊಂಡರು. 1989ರ ಎಸ್.ಎ.ಟಿ. ಗೇಮ್ಸ್‌ನಲ್ಲಿ ಇವರು ಇಸ್ಲಾಮಾಬಾದಿನಲ್ಲಿ 2 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡು ಪಿ.ಟಿ.ಉಷಾರವರಿಗೆ ಸರಿಸಾಟಿಯಾದ ಓಟಗಾರ್ತಿ ಎನಿಸಿಕೊಂಡರು.

1991ರಲ್ಲಿ ಕೋಲ್ಕತ್ತದ ಸಾಲ್ಟ್‌ಲೇಕ್ ಸ್ಟೇಡಿಯಮ್‌ನಲ್ಲಿ ಇವರ ಸಾಧನೆ ಅಮೋಘವಾದದ್ದು. ಇವರು ಭಾಗವಹಿಸಿದ ಎಲ್ಲ ಓಟಗಳಲ್ಲಿಯೂ ಚಿನ್ನದ ಪದಕ ಗಳಿಸಿ ತಮ್ಮ ಸಾಧನೆಯನ್ನು ಗಟ್ಟಿಗೊಳಿಸಿಕೊಂಡರು. 100ಮೀ (11.8ಸೆ), 200ಮೀ (24ಸೆ.), 400ಮೀ (53.4ಸೆ.) ಮತ್ತು 4x400ಮೀ ರಿಲೇ ಇದು ಭಾರತದಲ್ಲಿ ಇವರ ದಾಖಲೆ.

ಅಶ್ವಿನಿ ಅವರು ಚಿತ್ರರಂಗವನ್ನೂ ಪ್ರವೇಶಿಸಿದರು. ಓಟಗಾರ್ತಿಯ ಬದುಕನ್ನಾಧರಿಸಿದ ಅಶ್ವಿನಿ ಎಂಬ ತೆಲುಗು ಚಿತ್ರದಲ್ಲಿ ಇವರು ನಾಯಕಿಯ ಪಾತ್ರದಲ್ಲೂ ಅಭಿನಯಿಸಿದರು. ಪ್ರಸ್ತುತ ಇವರು ವಿಜಯಾ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತ ಸರ್ಕಾರ ಇವರಿಗೆ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ (1988). (ಎಸ್.ಆರ್.ಯು.)

**ಅಶ್ವಿನೀ ದೇವತೆಗಳು :** ದೇವತೆಗಳ ವೈದ್ಯರೆಂದೆನಿಸಿರುವ ಇವರಿಗೆ ಅಶ್ವಿನೀ ಕುಮಾರರೆಂದೂ ಹೆಸರಿದೆ. ಸೂರ್ಯಪತ್ನಿಯಾದ ಸಂಜ್ಞಾದೇವಿ ಕುದುರೆಯ ರೂಪ ತಾಳಿದ್ದ ಸಮಯದಲ್ಲಿ ಸೂರ್ಯನಿಂದ ಜನಿಸಿದ ಕಾರಣ, ಅವಳಿಮಕ್ಕಳಾದ ಇವರಿಗೆ ಈ ಹೆಸರು. ಇವರು ಮಹಾರೂಪವಂತರೆಂದು ಮಹಾಭಾರತ, ಭಾಗವತ, ವಿಷ್ಣುಪುರಾಣಗಳು ಹೇಳುತ್ತವೆ. ದೇವತಾ ವರ್ಣವ್ಯವಸ್ಥೆಯಲ್ಲಿ ಇವರು ಶೂದ್ರದೇವತೆಗಳು. ಚ್ಯವನಮುನಿಯ ಪತ್ನಿಯಾದ ಸುಕನ್ಯೆಯ ಪಾತಿವ್ರತ್ಯಕ್ಕೆ ಮೆಚ್ಚಿ ಅವನಿಗೆ ಸೌಂದರ್ಯ, ತಾರುಣ್ಯಗಳನ್ನನುಗ್ರಹಿಸಿ, ಆತನ ಮೂಲಕ ಶರ್ಯಾತಿ ಮಹಾರಾಜ ಮಾಡಿದ ಯಜ್ಞದಲ್ಲಿ ಇತರ ದೇವತೆಗಳಂತೆಯೇ ಇವರೂ ಹವಿರ್ಭಾಗವನ್ನು ಪಡೆದರು ಎಂಬ ಕಥಾಭಾಗ ಪ್ರಸಿದ್ಧವಾಗಿದೆ. ಆಪೋದನೆಂಬ ಧೌಮ್ಯ ಮುನಿಯ ಅಂಧಶಿಷ್ಯನಾದ ಉಪಮನ್ಯು ಇವರನ್ನಾಶ್ರಯಿಸಿ ಮತ್ತೆ ದೃಷ್ಟಿಯನ್ನು ಪಡೆದಿದ್ದು, ಪಾಂಡುಮಹಾರಾಜನ ಎರಡನೆಯ ಹೆಂಡತಿ ಮಾದ್ರಿಯಲ್ಲಿ ನಕುಲ ಸಹದೇವರು ಇವರ ವರಪ್ರಸಾದದಿಂದ ಜನಿಸಿದ ವಿಚಾರ–ಈ ಪ್ರಸಂಗಗಳು ಅಶ್ವಿನೀ ದೇವತೆಗಳ ಮಹಿಮೆಗಳನ್ನು ತಿಳಿಸುತ್ತವೆ. (ಎಸ್.ಕೆ.ಆರ್.)

ಖಗೋಳಶಾಸ್ತ್ರದಲ್ಲಿ ಮೇಷ ರಾಶಿಯ ಪ್ರಥಮ, ದ್ವಿತೀಯ ಮತ್ತು ತೃತೀಯ ನಕ್ಷತ್ರಗಳಿಗೆ ಒಟ್ಟಾಗಿ ಅಶ್ವಿನಿ ಎಂದು ಹೆಸರಿದೆ ( α, β ಮತ್ತು γ ಏರಿಸ್). ಈ ನಕ್ಷತ್ರಗಳ ಪಾಶ್ಚಾತ್ಯನಾಮ ಕ್ರಮವಾಗಿ ಹಾಮಲ್, ಷೆರಟನ್ ಮತ್ತು ಮೆಸಾರ್ತಿಮ್. ಇವುಗಳ ಕಾಂತಿವರ್ಗಗಳು (ಮ್ಯಾಗ್ನಿಟ್ಯೂಡ್ಸ್) ಕ್ರಮವಾಗಿ 2.2, 2.7, 4.9.

**ಅಷೂಲಿಯನ್ ಉದ್ಯಮ :** ಹಳೆಶಿಲಾಯುಗದ ಮೊದಲ ಭಾಗದಲ್ಲಿ ರೂಢಿಯಲ್ಲಿದ್ದ ಶಿಲಾ ಉದ್ಯಮ. ಉತ್ತರ ಫ್ರಾನ್ಸಿನ ಸೇಂಟ್ ಅಷಲ್ ಎಂಬ ಸ್ಥಳದಲ್ಲಿ ಮೊದಲು ಗುರುತಿಸಲ್ಪಟ್ಟಿದ್ದರಿಂದ ಈ ಹೆಸರು ರೂಢಿಗೆ ಬಂದಿದೆ. ಇದಕ್ಕೂ ಪೂರ್ವದ ಅಬೆವಿಲಿಯನ್ ರೀತಿಯಿಂದಲೇ ಬೆಳೆದುಬಂದಿರುವ ಈ ಉದ್ಯಮದಲ್ಲೂ ಕೈ ಕೊಡಲಿಗಳೇ ಮುಖ್ಯ ಉಪಕರಣಗಳು. ಆದರೂ ಅಗಲವಾದ ಅಂಚುಳ್ಳ ಸೀಳುಗೊಡಲಿ (ಕ್ಲೀವರ್), ಹೆರೆಯುವ ಉಪಕರಣಗಳೂ (ಸ್ಕ್ರೇಪರ್ಸ್) ಉಪಯೋಗದಲ್ಲಿದ್ದವು. ಉಪಕರಣ ತಯಾರಿಕೆಯಲ್ಲಿ ಕಲ್ಲಿನ ಸುತ್ತಿಗೆಗಳ ಬದಲು ಮರ ಅಥವಾ ಎಲುಬಿನ ಸುತ್ತಿಗೆಗಳನ್ನು ಉಪಯೋಗಕ್ಕೆ ತಂದುದರಿಂದ, ಉಪಕರಣಗಳು ಹೆಚ್ಚು ನಾಜೂಕಿನವಾಗಿ ನೇರ ಅಂಚುಗಳೊಡನೆ, ನಿರ್ದಿಷ್ಟ ಆಕಾರವನ್ನು ಹೊಂದಿದವಲ್ಲದೆ ತೆಳ್ಳಗೂ ಆಗುತ್ತ ಬಂದುವು. ಉಪಕರಣಗಳನ್ನು ಮಾಡುವುದು ಮೂಲ ಶಿಲೆಯಿಂದ ಎಬ್ಬಿದ ದೊಡ್ಡ ಕಲ್ಲು ಚಕ್ಕೆಗಳಿಂದ. ಅಂಚಿನಲ್ಲಿ ಮೆಟ್ಟಲು ಮೆಟ್ಟಲಾಗಿ ಸಣ್ಣ ಚಕ್ಕೆಗಳನ್ನು ಎಬ್ಬಿಸಿ, ಅಂಚುಗಳನ್ನು ನೇರವಾಗಿ ಹರಿತವಾಗಿ ಮಾಡುವ ಪದ್ಧತಿ ಸಹ ಈ ಕಾಲದಲ್ಲೇ ರೂಢಿಗೆ ಬಂತು. ಈ ಸಂಸ್ಕೃತಿ ಯುರೋಪ್, ಪಶ್ಚಿಮ ಏಷ್ಯ, ಭಾರತ ಮತ್ತು ಆಫ್ರಿಕ ಮುಂತಾದ ಕಡೆ ಕಂಡುಬರುತ್ತದೆ. ಪ್ಲಿಸ್ಟೋಸೀನ್‌ನ ಎರಡನೆಯ ಹಿಮಯುಗದ ಕೊನೆ ಅಥವಾ ಅನಂತರದ ಉಷ್ಣಕಾಲದ ಮೊದಲಲ್ಲಿ ಮಧ್ಯ ಆಫ್ರಿಕದಲ್ಲಿ ಹುಟ್ಟಿದ ಈ ಉದ್ಯಮ ಸು. 300000–100000 ವರ್ಷಗಳ ಪೂರ್ವದಲ್ಲಿ ಪ್ರಚಲಿತವಾಗಿತ್ತು. (ಎಸ್.ಎಂ.)

**ಅಷ್ಟಕಗಳು :** ಬಹಳ ಹಿಂದಿನ ಕಾಲದಿಂದಲೂ ಭಾರತೀಯರಲ್ಲಿ ಬಳಕೆಯಲ್ಲಿರುವ ಎಂಟು ಪದ್ಯಗಳುಳ್ಳ ಶ್ಲೋಕಗುಚ್ಛಗಳು. ಕೆಲವು ವೇಳೆ ಫಲಶ್ರುತಿ ರೂಪವಾದ ಇಲ್ಲವೇ ಕವಿಪರಿಚಯವನ್ನು ಸೂಚಿಸುವ ಒಂದೆರಡು ಶ್ಲೋಕಗಳು ಜೊತೆಗೆ ಸೇರಿರುವುದುಂಟು. ಎಂಟು ಎಂಬ ಸಂಖ್ಯೆಯ ಬಗೆಗೆ ಭಾರತೀಯರಲ್ಲಿ ಒಂದು ಬಗೆಯ ಪವಿತ್ರತಾಭಾವನೆ, ಗೌರವ ಇದೆ. ಆದ್ದರಿಂದಲೇ ನಾಮಜಪ, ಮಂತ್ರಜಪ, ಹೋಮ, ಅರ್ಚನೆ ಮುಂತಾದುವುಗಳಲ್ಲಿ ಎಂಟರಿಂದ ಕೂಡಿದ ಇಪ್ಪತ್ತೆಂಟು, ನೂರೆಂಟು, ಸಾವಿರದೆಂಟು (ಅಷ್ಟವಿಂಶತಿ, ಅಷ್ಟೋತ್ತರಶತ, ಅಷ್ಟೋತ್ತರ ಸಹಸ್ರ) ಮೊದಲಾದ ಸಂಖ್ಯಾಪರಿಮಿತಿಯ ಬಳಕೆಯಿದೆ. ಹಾಗೆಯೇ ಈ ಎಂಟು ಶ್ಲೋಕಗಳ ಪದಗುಚ್ಛದ ಹಿರಿಮೆ.

ಅಷ್ಟಕಗಳೆಲ್ಲವೂ ಸಾಧಾರಣವಾಗಿ ದೇವತಾಸ್ತುತಿ ರೂಪವಾದುವು. ಅನುಷ್ಟುಭ್‌ನಿಂದ ಹಿಡಿದು ಎಲ್ಲ ಛಂದಸ್ಸಿನಲ್ಲಿ ಇವು ರಚಿತವಾಗಿವೆ. ಎಲ್ಲ ದೇವತೆಗಳ ವಿಷಯದಲ್ಲೂ ರಚಿತವಾಗಿವೆ. ವಾಲ್ಮೀಕಿಕೃತವೆಂದು ಹೇಳಲಾದ ಗಂಗಾಷ್ಟಕವೂ ಪ್ರಹ್ಲಾದ ಕೃತವೆನಿಸಿದ ಶ್ರೀಹರ್ಯಷ್ಟಕವೂ ಇವುಗಳಲ್ಲಿ ಪ್ರಾಚೀನತಮವಿರಬಹುದು. ಪುಷ್ಕರಾಷ್ಟಕ, ಪ್ರಯಾಗಾಷ್ಟಕ, ಸರಸ್ವತ್ಯಷ್ಟಕ, ಶೀತಲಾಷ್ಟಕ ಮುಂತಾಗಿ ಹಲವು ಅಷ್ಟಕಗಳು ಪುರಾಣಾಂತರ್ಗತಗಳು. ಎಲ್ಲ ಮತಾಚಾರ್ಯರೂ ತಮ್ಮ ತಮ್ಮ ಇಷ್ಟದೇವತೆಗಳನ್ನು ಕುರಿತು ಅಷ್ಟಕಗಳನ್ನು ರಚಿಸಿದ್ದಾರೆ. ಅಚ್ಯುತಾಷ್ಟಕ, ಅನ್ನಪೂರ್ಣಾಷ್ಟಕ, ಗುರ್ವಾಷ್ಟಕ, ಜಗನ್ನಾಥಾಷ್ಟಕ ಮೊದಲಾಗಿ 20ಕ್ಕೂ ಮೇಲ್ಪಟ್ಟು ಅಷ್ಟಕಗಳು ಶ್ರೀಶಂಕರಾಚಾರ್ಯರ ಹೆಸರಿನಲ್ಲಿ ಬಳಕೆಯಲ್ಲಿವೆ. ವೇದಾಂತಾಚಾರ್ಯ

ರೆಂದು ಪ್ರಖ್ಯಾತರಾದ ವೆಂಕಟನಾಥರೂ ಕಾಮಾಸಿಕ ನೃಸಿಂಹಾಷ್ಟಕ, ಅಷ್ಟಭುಜಾಷ್ಟಕ, ಸುದರ್ಶನಾಷ್ಟಕಗಳನ್ನು ರಚಿಸಿದ್ದಾರೆ. ಕಾಳಿದಾಸಕೃತವೆಂಬ ಗಂಗಾಷ್ಟಕವೊಂದು ರೂಢಿಯಲ್ಲಿವೆ. ಅಗಸ್ತ್ಯಾಷ್ಟಕ, ತಾರಾಷ್ಟಕ, ಶೀತಲಾಷ್ಟಕ, ನರ್ಮದಾಷ್ಟಕ, ಸೂರ್ಯಾಷ್ಟಕ, ಮಹಾಲಕ್ಷ್ಮ್ಯಷ್ಟಕ, ಸುಬ್ರಹ್ಮಣ್ಯಾಷ್ಟಕ ಮುಂತಾದುವು ದಿಗ್ದರ್ಶಕವಾಗಲು ಸಾಕಾಗುವ ಕೆಲವು ಅಷ್ಟಕಗಳು. ಅಂತೂ ಚಿಕ್ಕವಾಗಿ ಚೊಕ್ಕವಾಗಿ ವಿಶಾಲವಾದ ಭಾವಗಳನ್ನು ಸಂಗ್ರಹವಾಗಿ ನಿರೂಪಿಸಿ ನೆನಪಿನಲ್ಲಿಡಲು ಅನುಕೂಲಿಸುವಂತೆ ರಚಿತವಾದ ಅಷ್ಟಕಗಳು ಜನತೆಯ ಆದರಕ್ಕೆ ಪಾತ್ರವಾಗಿವೆ. (ಎಚ್.ಡಿ.)

**ಅಷ್ಟಛಾಪ ಕವಿಗಳು :** ಹಿಂದೀ ಸಾಹಿತ್ಯದಲ್ಲಿ ಎಂಟುಜನ ಕೃಷ್ಣಭಕ್ತರು ಈ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ. ಕುಂಭನದಾಸ, ಸೂರದಾಸ, ಪರಮಾನಂದದಾಸ, ಕೃಷ್ಣದಾಸ ಅಧಿಕಾರಿ, ನಂದದಾಸ, ಚತುರ್ಭುಜದಾಸ, ಗೋವಿಂದಸ್ವಾಮಿ, ಛೀತಸ್ವಾಮಿ. ಇವರಲ್ಲಿ ಮೊದಲಿನ ನಾಲ್ಕು ಕವಿಗಳು ಶ್ರೀವಲ್ಲಭಾಚಾರ್ಯರ (1532–87) ಶಿಷ್ಯರಾಗಿದ್ದರು. ಕೊನೆಯ ನಾಲ್ವರು ಆಚಾರ್ಯ ವಲ್ಲಭರ ಉತ್ತರಾಧಿಕಾರಿ ಗೋಸ್ವಾಮಿವಿಠ್ಠಲನಾಥರ (1527–1692) ಶಿಷ್ಯರು. ಈ ಎಂಟು ಭಕ್ತ ಕವಿಗಳು ಗೋಸ್ವಾಮಿ ವಿಠ್ಠಲನಾಥರ ಸಾನ್ನಿಧ್ಯದಲ್ಲಿ (1606) ಗೋವರ್ಧನಗಿರಿಯ ಮೇಲಿರುವ ಶ್ರೀನಾಥ ಮಂದಿರದಲ್ಲಿ ಕಥಾಕಾಲಕ್ಷೇಪ ಮಾಡುತ್ತಿದ್ದರು. ಅಲ್ಲದೆ ಭಗವದ್‌ಭಕ್ತಿ ವಿಷಯವಾಗಿ ಪದ್ಯ ರಚಿಸುತ್ತಿದ್ದರು. ತಮ್ಮ ಸಂಪ್ರದಾಯದ ಭಕ್ತರೂ ಉತ್ಕೃಷ್ಟ ಕವಿಯೂ ಸಂಗೀತಜ್ಞರೂ ಆಗಿದ್ದ ಗೋಸ್ವಾಮಿವಿಠ್ಠಲನಾಥರು ಈ ಎಂಟು ಕವಿಗಳನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ವ್ರಜಭಾಷೆಗೆ ಸಮೃದ್ಧ ಕಾವ್ಯಭಾಷೆಯ ರೂಪವನ್ನು ಕೊಟ್ಟ ಶ್ರೇಯಸ್ಸು ಈ ಅಷ್ಟಛಾಪಕವಿಗಳಿಗೇ ಸಲ್ಲಬೇಕು. ಈ ಕವಿಗಳ ಕಾವ್ಯದ ಮುಖ್ಯ ವಿಷಯ–ಶ್ರೀಕೃಷ್ಣನ ಭಾವಪೂರ್ಣಲೀಲೆಯ ಚಿತ್ರಣ. ಸೂರದಾಸರು ಭಾಗವತದ ಕಥೆಯನ್ನು ಸಂಪೂರ್ಣವಾಗಿ ಅನುಕರಿಸಿದ್ದರೂ ಶ್ರೀಕೃಷ್ಣನ ಚರಿತ್ರೆಯನ್ನು ತನ್ಮಯತೆಯಿಂದ ಚಿತ್ರಿಸಿದ್ದಾರೆ. ಮಾನವ ಜೀವನದಲ್ಲಿ ಬಾಲ್ಯ ಮತ್ತು ತಾರುಣ್ಯಾವಸ್ಥೆ ಮಾತ್ರ ಆನಂದ ಮತ್ತು ಉಲ್ಲಾಸದ ಕಾಲ. ಆದ್ದರಿಂದ ಈ ಅಷ್ಟಭಕ್ತರು ಶ್ರೀ ಕೃಷ್ಣಜೀವನವನ್ನಾಧರಿಸಿ, ಈ ಎರಡು ಕಾಲಗಳ ಮೇಲೆ ಹೆಚ್ಚು ಬರೆದಿದ್ದಾರೆ. ಸೌಂದರ್ಯ ಮತ್ತು ಪ್ರೇಮದ ರಸಮಯ ಧಾರೆ ಈ ಕವಿಗಳ ಕಾವ್ಯದಲ್ಲಿ ಸಮಾನ ರೂಪದಲ್ಲಿ ಹರಿದಿದೆ. ಆದರೆ ಸೂರದಾಸರ (ನೋಡಿ– ಸೂರದಾಸ) ಕಾವ್ಯದಲ್ಲಿ ಹೃದಯವನ್ನು ಸೆರೆಹಿಡಿಯುವ ಶಕ್ತಿ ಹೆಚ್ಚು. ಅದರಲ್ಲಿ ಸಾರ್ವಜನಿಕ ಪ್ರೇಮಾನುಭೂತಿಯ ಸಜೀವ ಮತ್ತು ರಸಪೂರ್ಣ ಚಿತ್ರಣ ಉಂಟು.

ದಾಸ್ಯ, ವಾತ್ಸಲ್ಯ, ಸಖ್ಯ, ಮಾಧುರ್ಯ ಈ ನಾಲ್ಕು ಭಾವಗಳಿಂದ ಅವರು ಶ್ರೀ ಕೃಷ್ಣನನ್ನು ಆರಾಧಿಸಿದ್ದಾರೆ. ಸೂರದಾಸರು ಈ ನಾಲ್ಕು ಭಾವಗಳಿಗೆ ತಮ್ಮ ಪ್ರೇಮ–ಭಕ್ತಿ ಕಾವ್ಯದಲ್ಲಿ ಪ್ರಾಮುಖ್ಯವನ್ನು ನೀಡಿದ್ದಾರೆ. ಪರಮಾನಂದದಾಸರು ವಾತ್ಸಲ್ಯ, ಸಖ್ಯ ಮತ್ತು ಶಾಂತಭಾವಕ್ಕೆ ಪ್ರಾಶಸ್ತ್ಯವನ್ನಿತ್ತಿದ್ದಾರೆ.

ಅಷ್ಟಛಾಪ ಕವಿಗಳು ಕೇವಲ ಕವಿಗಳಾಗಿರದೆ ಶ್ರೇಷ್ಠ ಸಂಗೀತಗಾರರೂ ಆಗಿದ್ದರು. ಸಂಗೀತ ಅವರ ಆಧ್ಯಾತ್ಮಿಕ ಸಾಧನೆ. ಕೀರ್ತನೆ (ಕಥಾಕಾಲಕ್ಷೇಪ) ಭಕ್ತಿಯ ಒಂದು ಭಾಗ. ಅಷ್ಟಛಾಪ ಕವಿಗಳ ರಚನೆಗಳಲ್ಲಿ ಸಂಗೀತದೊಂದಿಗೆ ಸಾಹಿತ್ಯ ಮತ್ತು ಅಧ್ಯಾತ್ಮ ಇವೆರಡರ ಸಮನ್ವಯವನ್ನು ಕಾಣಬಹುದು. ಅಕ್ಬರ್ ಬಾದಶಹನ ಆಸ್ಥಾನದಲ್ಲಿದ್ದ ಪ್ರಸಿದ್ಧ ಸಂಗೀತಗಾರ ನಾದ ತಾನ್‌ಸೇನ್, **(ನೋಡಿ– ತಾನ್‌ಸೇನ್)** ಬೈಜೂ, ರಾಮದಾಸ, ಮಾನಸಿಂಹ ಇವರು ಅಷ್ಟಛಾಪ ಕವಿಗಳ ಸಮಕಾಲೀನರು. ಆ ಕಾಲದಲ್ಲಿ ಕುಂಭನದಾಸ ಧ್ರುಪದ್‌ವನ್ನೂ ಗೋವಿಂದಸ್ವಾಮಿ ಧಮಾರ್ ರಾಗಗಳನ್ನೂ ಹಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ತಾನ್‌ಸೇನ ಧಮಾರ್ ರಾಗವನ್ನು ಗೋವಿಂದಸ್ವಾಮಿಯಿಂದಲೇ ಕಲಿತನೆಂದು 252–ವೈಷ್ಣವೋಂಕಿ ವಾರ್ತಾ ಎಂಬ ಪುಸ್ತಕದಿಂದ ತಿಳಿಯುತ್ತದೆ.

ಸೂರದಾಸ ಮತ್ತು ಪರಮಾನಂದದಾಸರ ಕಾವ್ಯಗಳಲ್ಲಿ ಪ್ರೇಮ ಸತ್ಯ ಮತ್ತು ಸೌಂದರ್ಯ ಚರಮಸೀಮೆಯನ್ನು ತಲುಪಿವೆ. ಬಾಲಮನೋವಿಜ್ಞಾನ ಮತ್ತು ಮಾತೃಹೃದಯದ ನೈಜಭಾವನೆಯನ್ನು ಚಿತ್ರಿಸಿದವರಲ್ಲಿ ಸೂರದಾಸರು ಅಗ್ರಗಣ್ಯರೆಂದರೆ ಅತಿಶಯೋಕ್ತಿಯಲ್ಲ. ಸೂರದಾಸರ ವಾತ್ಸಲ್ಯ ಮತ್ತು ವಿರಹ ಶಬ್ದಗಳು ಅನುಪಮವಾಗಿವೆ. ಅಷ್ಟಛಾಪ ಕವಿಗಳು ವ್ರಜಭಾಷೆಯಲ್ಲಿ ರಚಿಸಿದ ಕಾವ್ಯಗಳಲ್ಲಿ ಭಾವನೆ, ಸಜೀವತೆ ಮತ್ತು ನೈಜತೆಗಳಿವೆ. ನೈಜಶಬ್ದಚಿತ್ರಣ ಸೂರದಾಸ, ಪರಮಾನಂದದಾಸ, ನಂದದಾಸರ ಕಾವ್ಯಗಳಲ್ಲಿ ಅಧಿಕ. ಅದರೊಂದಿಗೆ ಪ್ರಭಾವಶಾಲಿ ಸಂಗೀತದ ಲಯವೂ ಇದೆ. ಭಾವನಾಪೂರ್ಣಶಬ್ದಗಳನ್ನು ಪ್ರಯೋಗಿಸಿದವರಲ್ಲಿ ನಂದದಾಸ ತುಂಬ ಪ್ರಸಿದ್ಧರು. ಎಲ್ಲ ಅಷ್ಟಛಾಪ ಕವಿಗಳೂ ಭಕ್ತಿಪದ್ಧತಿಯ ದೃಷ್ಟಿಯಲ್ಲಿ ಮತ್ತು ದಾರ್ಶನಿಕ ವಿಚಾರ ಧಾರೆಯ ದೃಷ್ಟಿಯಿಂದ ಶುದ್ಧಾದ್ವೈತವಾದಿಗಳಾಗಿದ್ದರು. ಅವರು ರಚಿಸಿದ ಕೆಲವು ಪ್ರಮುಖ ಕೃತಿಗಳು:

1. ಸೂರದಾಸ : ಸೂರಸಾಗರ ಸೂರಸಾರಾವಳಿ, ಸಾಹಿತ್ಯಲಹರಿ; 2. ಪರಮಾನಂದ ದಾಸ: ಪರಮಾನಂದಸಾಗರ; 3. ಕುಂಭನದಾಸ: ಪದಸಂಗ್ರಹ. 4.ಕೃಷ್ಣದಾಸ: ಪದಸಂಗ್ರಹ 5. ನಂದದಾಸ: ರಸಮಂಜರಿ, ಅನೇಕಾರ್ಥಮಂಜರಿ, ಮಾನಮಂಜರಿ (ಅಥವಾ ನಾಮಮಾಲಾ), ರೂಪಮಂಜರಿ, ವಿರಹಮಂಜರಿ, ಶ್ಯಾಮಸಗಾಯಿ, ದಶಮಸ್ಕಂಧಭಾಷಾ, ಗೋವರ್ಧನಲೀಲಾ, ಸುದಾಮ ಚರಿತ, ರುಕ್ಮಿಣೀಮಂಗಲ, ರಾಸ ಪಂಚಾಧ್ಯಾಯಿ, ಸಿದ್ಧಾಂತ ಪಂಚಾಧ್ಯಾಯಿ, ಭ್ರಮರಗೀತ, ಪದಾವಲಿ 6. ಚತುರ್ಭುಜದಾಸ: ಪದಸಂಗ್ರಹ 7. ಗೋವಿಂದಸ್ವಾಮಿ: ಪದಸಂಗ್ರಹ 8. ಛೀತಸ್ವಾಮಿ: ಪದಸಂಗ್ರಹ. *

**ಅಷ್ಟದಿಕ್ಕುಗಳು :** ಪೂರ್ವ(ಈಸ್ಟ್), ಆಗ್ನೇಯ (ಸೌತ್‌ಈಸ್ಟ್), ದಕ್ಷಿಣ (ಸೌತ್), ನೈಋತ್ಯ (ಸೌತ್‌ವೆಸ್ಟ್), ಪಶ್ಚಿಮ (ವೆಸ್ಟ್), ವಾಯವ್ಯ (ನಾರ್ತ್‌ವೆಸ್ಟ್), ಉತ್ತರ (ನಾರ್ತ್) ಮತ್ತು ಈಶಾನ್ಯ (ನಾರ್ತ್‌ಈಸ್ಟ್). ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ ಮತ್ತು ಈಶ್ವರ ಕ್ರಮವಾಗಿ ಈ ದಿಕ್ಕುಗಳ ಒಡೆಯರೆಂದು ಪುರಾಣ ಹೇಳುತ್ತದೆ. ಆದ್ದರಿಂದ ಇವರನ್ನು ಒಟ್ಟಾಗಿ ಅಷ್ಟದಿಕ್ಪಾಲಕರೆಂದು ಕರೆಯುತ್ತಾರೆ. *

**ಅಷ್ಟಪಾದಿ :** ಮೃದ್ವಂಗಿ (ಮಾಲಸ್ಕ) ವಂಶ, ಶಿರಪಾದಿ (ಸೆಫಲೊಪೊಡ) ವರ್ಗಕ್ಕೆ ಸೇರಿದ ಕಡಲಜೀವಿ (ಅಕ್ಟೋಪಸ್). ಪಾದವು ಶಿರದೊಂದಿಗೆ ಸೇರ್ಪಟ್ಟು 8 ಕರಬಳ್ಳಿಗಳಿರುವು ದರಿಂದ ಅಷ್ಟಪಾದಿ (Octopoda) ಎಂದು ಕರೆಯಲಾಗಿದೆ. ಕರಬಳ್ಳಿಗಳ ಒಳಭಾಗಕ್ಕೆ ಹೀರು ಬಟ್ಟಲುಗಳಿವೆ; ದೇಹವು ದುಂಡಗೆ ಮಾಂಸ ಯುತವಾಗಿದೆ.



ಇವು ಶೀಘ್ರಗಾಮಿ ಗಳು. ಸೂಪರ್ ಸಾನಿಕ್ ಜೆಟ್‌ಗಳಂತೆ ತಮ್ಮ ವಿಶೇಷ ವಾದ ಶರೀರಭಾಗದಲ್ಲಿ ನೀರನ್ನು ಒಳಗೆಳೆದುಕೊಂಡು ಸೈಫನ್ ಎಂಬ ಮತ್ತೊಂದು ವಿಶೇಷ ಅಂಗದಿಂದ ಆ ನೀರನ್ನು ರಭಸದಿಂದ ಹೊರದೂ ಡುತ್ತಾ ಚಲಿಸುತ್ತವೆ.

ರಾಕೆಟ್‌ನಂತೆ ಭಂಗನೆ ನೀರಿನ ಮೇಲ್ಭಾಗಕ್ಕೆ ಏರಬಲ್ಲವು. ಕಡಲ ತಡಿಗಳಲ್ಲಿ ಕರಬಳ್ಳಿಗಳ ಸಹಾಯದಿಂದ ನಡೆಯಬಲ್ಲವು.

ಚುರುಕು ಕಣ್ಣುಗಳಿಂದ ಬೇಟೆಯಾಡುವುವು. ದೈತ್ಯಾಕಾರ. ಬಿಗಿ ಹಿಡಿತದಿಂದ ಬೇಟೆಯಾಡುವುದರಿಂದ ಇವನ್ನು ದೆವ್ವಮೀನು (ಡೆವಿಲ್‌ಫಿಶ್) ಎಂದೂ ಕರೆಯುತ್ತಾರೆ. ಇವುಗಳ ಕಣ್ಣುಗಳು ಕಶೇರುಕ ಕಣ್ಣುಗಳ ರಚನೆಯನ್ನೇ ಹೊಂದಿವೆ. ಇವುಗಳ ಕಣ್ಣಿನ ಪಾಪೆ ಆಯತಾಕಾರದಲ್ಲಿರುವುದರಿಂದ ಹೆಚ್ಚು ಪ್ರಕಾಶದ ಬೆಳಕಿನಲ್ಲಿ ಸಣ್ಣ ಸೀಳಿನಂತೆ ತೆರೆದರೆ ಮಂದ ಬೆಳಕಿನಲ್ಲಿ ಅಗಲವಾಗಿ ತೆರೆಯಬಲ್ಲದು.

ಶತ್ರುಗಳಿಂದ ಪಾರಾಗಲು ಮಂಕು ಕವಿಸುವ ತಂತ್ರವನ್ನು ಹೂಡುತ್ತದೆ. ಅಕ್ಟೋಪಸ್ ಅಥವಾ ಅಷ್ಟಪಾದಿ ತನ್ನನ್ನು ಬೆದರಿಸುವ ಪ್ರಾಣಿ ಎದುರಾದಾಗ ತನ್ನಲ್ಲಿರುವ ವಿಶೇಷ ಮಸಿಗ್ರಂಥಿಯಿಂದ ಕಪ್ಪುಮಸಿಯನ್ನು ಹೊರಸೂಸಿ ಮೋಡದಂತಹ ರಚನೆ ಸೃಷ್ಟಿಸುತ್ತದೆ. ಮೋಸಗೊಂಡ ಶತ್ರು ಅತ್ತಿತ್ತ ಬೆರಗಾಗಿ ನೋಡುವಾಗ ಅದು ಅಲ್ಲಿಂದ ತಪ್ಪಿಸಿಕೊಂಡು $\frac{\sqrt{2}}{3}$ $^{3}$ ಮರೆಯಾಗುತ್ತದೆ.

ಇವು ಅಂಡಜಗಳು. ದ್ರಾಕ್ಷಿ ಹಣ್ಣಿನ ಗೊಂಚಲಿನಂತಿರುವ ಮೊಟ್ಟೆಗಳನ್ನು ಇಡುತ್ತವೆ. ಅಷ್ಟಪಾದಿಯನ್ನು ಆಹಾರವಾಗಿಯೂ ಬಳಸುತ್ತಾರೆ. (ಎಸ್.ಎಸ್.ಎಲ್)

**ಅಷ್ಟಪ್ರಧಾನರು :** ಶಿವಾಜಿ ರೂಪಿಸಿದ ರಾಜ್ಯಾಂಗದ ಅತಿ ಪ್ರಧಾನವಾದ ಅಂಶ. ಅಷ್ಟಪ್ರಧಾನರು ಅಂದರೆ ಎಂಟು ಜನ ಮಂತ್ರಿಗಳು. ಅವರ ಕಾರ್ಯಗಳು ಹೀಗಿವೆ : 1. ಪೇಶ್ವೆ ಅಥವಾ ಮುಖ್ಯಪ್ರಧಾನಿ : ರಾಜ್ಯದ ಸಾಧಾರಣ ವ್ಯವಹಾರಗಳು ಮತ್ತು ರಾಷ್ಟ್ರದ ಹಿತ. 2. ಅಮಾತ್ಯ ಅಥವಾ ಅರ್ಥ ಸಚಿವ : ರಾಜ್ಯದ ಹಣಕಾಸಿನ ಲೆಕ್ಕಪತ್ರಗಳು. 3. ಮಂತ್ರಿ ಅಥವಾ ಮಜಿನಾವಿಸ್ : ರಾಜನ ಮತ್ತು ರಾಜಸಭೆಯ ಮುಖ್ಯ ಕಲಾಪಗಳ ಒಕ್ಕಣೆ. 4. ಸಚಿವ ಅಥವಾ ಸುರ್‌ನಿಸ್ : ರಾಜನ ಪತ್ರವ್ಯವಹಾರಗಳು, ರಾಜ್ಯದ ಆಯವ್ಯಯ. 5. ಸುಮಂತ್ ಅಥವಾ ದಬೀರ್ ಪರದೇಶ ವ್ಯವಹಾರ. 6. ಸೇನಾಪತಿ ಅಥವಾ ಸರ್‌ನೌಬತ್: ಮುಖ್ಯ ಸೈನ್ಯಾಧಿಕಾರಿ. 7. ಪಂಡಿತರಾವ್ ಅಥವಾ ಧನಾಧ್ಯಕ್ಷ : ಮತವಿಷಯ. 8 ನ್ಯಾಯಾಧೀಶ: ಮುಖ್ಯ ನ್ಯಾಯಾಧಿಪತಿ.

ಇವರಲ್ಲಿ ಮೊದಲ ನಾಲ್ಕು ಮಂತ್ರಿಗಳು ರಾಜಸಭೆಯಲ್ಲಿ ಸಿಂಹಾಸನದ ಬಲಭಾಗದಲ್ಲೂ ಉಳಿದವರು ಎಡಭಾಗದಲ್ಲೂ ಕುಳಿತಿರಬೇಕಾಗಿತ್ತು. ನ್ಯಾಯಾಧೀಶ, ಪಂಡಿತರಾವ್ ಇಬ್ಬರ ಹೊರತು ಮಿಕ್ಕ ಮಂತ್ರಿಗಳು ಸೈನ್ಯಾಧಿಕಾರಿಗಳಾಗಿ ಯುದ್ಧಗಳಲ್ಲಿ ಪಾತ್ರವಹಿಸುತ್ತಿದ್ದರು. ಅಷ್ಟಪ್ರಧಾನಿಗಳ ಮಂಡಲದ ವಿಷಯ ಶುಕ್ರನೀತಿಯಲ್ಲಿದೆ. (ಎಚ್.ಜಿ.ಆರ್.)

**ಅಷ್ಟಫಲಕ :** ಎಂಟು ಸಮತಲೀಯ ಬಹುಭುಜಗಳಿಂದ ಆವೃತವಾದ ಘನ (ಅಷ್ಟಮುಖಿ; ಆಕ್ಟಹೆಡ್ರನ್) ಬಹುಭುಜಗಳು ಘನದ ಫಲಕಗಳು. ಫಲಕಗಳು ಸರ್ವಸಮ



ಸಮಭುಜ ತ್ರಿಭುಜಗಳಾದಾಗ ಘನ ಸಮಾಷ್ಟ ಫಲಕವಾಗುವುದು. ಇಂಥ ಘನಕ್ಕೆ 6 ಶೃಂಗಗಳೂ 12 ಅಂಚುಗಳೂ ಇವೆ ; ಒಂದೊಂದು ಶೃಂಗದಲ್ಲೂ ನಾಲ್ಕು ಫಲಕಗಳು ಛೇದಿಸುತ್ತವೆ. ಅಂಚಿನ ಉದ್ದ ಇರುವ a ಒಂದು ಸಮಾಷ್ಟಫಲಕದ ಘನಗಾತ್ರ

(ನೋಡಿ– ಬಹುಫಲಕ). (ಬಿ.ಬಿ.ಬಿ.)

**ಅಷ್ಟಮಹಿಷಿಯರು :** ಕೃಷ್ಣನ ಎಂಟುಮಂದಿ ಹೆಂಡತಿಯರನ್ನು ಹೀಗೆ ಕರೆಯುವುದು ವಾಡಿಕೆ. 1. ಭೀಷ್ಮಕನ ಮಗಳು ರುಕ್ಮಿಣಿ 2. ಸತ್ರಾಜಿತನ ಮಗಳು ಸತ್ಯಭಾಮೆ 3. ಜಾಂಬುವಂತನ ಮಗಳು ಜಾಂಬವತಿ 4. ಶೃತಕೀರ್ತಿಯ ಮಗಳು ಭದ್ರೆ 5. ಸೂರ್ಯನ ಮಗಳು ಕಾಳಿಂದಿ 6. ಜಯತ್ಸೇನನ ಮಗಳು ಮಿತ್ರವಿಂದೆ 7. ನಗ್ನಜಿತನ ಮಗಳು ಸತ್ಯೆ 8. ಮದ್ರರಾಜನ ಮಗಳು ಲಕ್ಷ್ಮಣಿ (ಜಿ.ಎಚ್.)

**ಅಷ್ಟಮಿ :** ತಿಥಿಗಳಲ್ಲಿ ಒಂದು. ಶುಕ್ಲಾಷ್ಟಮಿ, ಕೃಷ್ಣಾಷ್ಟಮಿ ಎಂದು ಎರಡು ವಿಧ. ಅಧಿಕಮಾಸ ಬರುವ ವರ್ಷಗಳಲ್ಲಿ ಎರಡು ಅಷ್ಟಮಿಗಳು ಅಧಿಕ.

ಚೈತ್ರಮಾಸದ ಶುಕ್ಲಾಷ್ಟಮಿಯ ದಿವಸ ಎಂಟು ಅಶೋಕ ಚಿಗುರುಗಳಿಂದ ಕೂಡಿದ ನೀರಿನ ಪಾನ, ಬ್ರಹ್ಮಪುತ್ರಾ ನದಿಯಸ್ನಾನ ಮತ್ತು ಭವಾನಿಯ ದರ್ಶನ ಇವು ಪುಣ್ಯ ಫಲಪ್ರದಗಳು.

ಶ್ರಾವಣಮಾಸದ ಕೃಷ್ಣಾಷ್ಟಮಿಯೇ ಜನ್ಮಾಷ್ಟಮಿ. ಇದು ಕೇವಲಾಷ್ಟಮಿ, ಜಯಂತಿ ಎಂದು ಎರಡು ವಿಧ. ಶ್ರೀಕೃಷ್ಣನ ಜನ್ಮತಿಥಿಯಾದ ಅಷ್ಟಮಿ, ಜನನ ನಕ್ಷತ್ರವಾದ ರೋಹಿಣಿ ಇವು ಒಂದೇ ದಿವಸದಲ್ಲಾಗಲಿ, ಬೇರೆ ಬೇರೆ ದಿವಸದಲ್ಲಾಗಲಿ ಬರಬಹುದು. ಶುದ್ಧವಾದ ಅಷ್ಟಮೀ ತಿಥಿ, ರೋಹಿಣೀ ನಕ್ಷತ್ರ ಈ ಎರಡೂ ಅರ್ಧರಾತ್ರಿಯ ಕಾಲದಲ್ಲಿರುವುದು ಈ ವ್ರತದಲ್ಲಿ ಮುಖ್ಯವಾಗಿ ಗ್ರಾಹ್ಯ. ಈ ದಿವಸ ಉಪವಾಸವಿದ್ದು, ರಾತ್ರಿ ಪರಿವಾರದೊಡನೆ ಶ್ರೀಕೃಷ್ಣನನ್ನು ಪೂಜಿಸಿ ಶಂಖತೀರ್ಥದಿಂದ ಮೊದಲು ಕೃಷ್ಣನಿಗೂ ಬಳಿಕ ರೋಹಿಣೀಸಹಿತ ನಾದ ಚಂದ್ರನಿಗೂ ಪ್ರತ್ಯೇಕವಾಗಿ ಮೂರು ಮೂರು ಸಲ ಅರ್ಘ್ಯಕೊಡಬೇಕು. ವ್ರತಾಂತ್ಯದಲ್ಲಿ ಪಾರಣೆ ವಿಹಿತವಾಗಿದೆ. ಇಂದಿಗೂ ಈ ವ್ರತವನ್ನು ಭಾರತದ ಎಲ್ಲೆಡೆಗಳಲ್ಲೂ ಆಚರಿಸುತ್ತಾರೆ.

ಭಾದ್ರಪದ ಶುಕ್ಲಾಷ್ಟಮಿ ದೂರ್ವಾಷ್ಟಮಿ, ಇದೇ ತಿಂಗಳಿನ ಕೃಷ್ಣಾಷ್ಟಮಿ ಮಧ್ಯಾಷ್ಟಮಿ, ಆಶ್ವಯುಜ ಶುಕ್ಲಾಷ್ಟಮಿ ದುರ್ಗಾಷ್ಟಮಿ, ಮಾರ್ಗಶಿರ ಕೃಷ್ಣಾಷ್ಟಮಿ ಭೈರವಾಷ್ಟಮಿ, ಮಾಘಶುಕ್ಲಾಷ್ಟಮಿ ಭೀಷ್ಮಾಷ್ಟಮಿ. ಮಾರ್ಗಶಿರ ಮಾಸದಿಂದ ನಾಲ್ಕು ತಿಂಗಳಿನ ಕೃಷ್ಣಾಷ್ಟಮಿಗಳು ಅಷ್ಟಕಗಳು. ದೂರ್ವಾಷ್ಟಮಿಯ ದಿವಸ ದೂರ್ವೆಯಿಂದ ಶಂಕರನ ಪೂಜೆ, ದುರ್ಗಾಷ್ಟಮಿಯ ದಿವಸ ದುರ್ಗಿಯ ಪೂಜೆ, ಭೀಷ್ಮಾಷ್ಟಮಿಯ ದಿವಸ ಭೀಷ್ಮನನ್ನುದ್ದೇಶಿಸಿ ತರ್ಪಣ, ಮಧ್ಯಾಷ್ಟಮಿ ಮತ್ತು ಅಷ್ಟಕಗಳಲ್ಲಿ ಪಿತೃಗಳನ್ನುದ್ದೇಶಿಸಿ ಶ್ರಾದ್ಧಮಾಡುವುದು– ಇವು ಅಂದಂದಿನ ವಿಶೇಷ ಕಾರ್ಯಗಳು. (ಎಸ್.ಎನ್.ಕೆ.)

**ಅಷ್ಟಮೂರ್ತಿಗಳು :** ಈಶ್ವರನಿಗೆ ಇರುವ ಎಂಟು ಸ್ವರೂಪಗಳು. ಈಶ್ವರನಿಗೆ ಅಷ್ಟಮೂರ್ತಿಯೆನ್ನುವ ಹೆಸರೂ ಉಂಟು. ಭವ, ಶರ್ವ, ಈಶಾನ, ಪಶುಪತಿ, ಭೀಮ, ಉಗ್ರ, ಮಹಾದೇವ, ರುದ್ರ ಇವರೇ ಶಿವನ ಅಷ್ಟಮೂರ್ತಿಗಳು. ಇವರಿಗೆ ಕ್ರಮವಾಗಿ ಉಷಾ, ಸುಕೇಶೀ, ಶಿವಾ, ಸ್ವಾಹಾ, ದಿಕ್, ದೀಕ್ಷಾ, ರೋಹಿಣಿ, ಸುವರ್ಚಲಾ ಎನ್ನುವ ಶಕ್ತಿಯರೂ ಶುಕ್ರ, ಅಂಗಾರಕ, ಹನೂಮಂತ, ಸ್ಕಂದ, ಸ್ವರ್ಗ, ಸಂತಾನ, ಬುಧ, ಶನಿ ಎನ್ನುವ ಮಕ್ಕಳೂ ಇದ್ದಾರೆ. (ಎಸ್.ಕೆ.ಆರ್.)

**ಅಷ್ಟವಸುಗಳು :** ದಕ್ಷಪ್ರಜಾಪತಿಯ ಮಗಳು ವಸು ಎಂಬಾಕೆಯ ಮಕ್ಕಳು. ಈ ಎಂಟು ವಸುಗಳಿಗೆ ಧರ, ಧ್ರುವ, ಸೋಮ, ಅಹ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ ಎಂಬ ಹೆಸರುಗಳುಂಟು. ಇವರ ವಿಚಾರ ಮಹಾಭಾರತದ ಆದಿಪರ್ವದಲ್ಲಿ ಬರುತ್ತದೆ. ಇವರು ಒಮ್ಮೆ ವಸಿಷ್ಠ ಮಹರ್ಷಿಯ ಆಶ್ರಮದಲ್ಲಿ ಸಂಚರಿಸುತ್ತ, ನಂದಿನೀ ಧೇನುವನ್ನು ಕದ್ದೊಯ್ಯಲು ಹವಣಿಸಿ, ಋಷಿಯಿಂದ ಶಾಪವನ್ನು ಪಡೆದು ಭೂಲೋಕದಲ್ಲಿ ಶಂತನುವಿನ ಹೆಂಡತಿ ಗಂಗೆಯ ಮಕ್ಕಳಾಗಿ ಹುಟ್ಟಿದರು. ಹಿರಿಯವನಾದ ಧರನೇ ಭೀಷ್ಮನಾಗಿ ಜನ್ಮವೆತ್ತಿದ. (ಎಸ್.ಕೆ.ಆರ್.)

**ಅಷ್ಟವೀರಸ್ಥಾನಗಳು :** ಎಂಟು ಶಿವಕ್ಷೇತ್ರಗಳು. ಈ ವೀರಸ್ಥಾನಗಳಲ್ಲಿರುವ ಒಂದೊಂದು ಶಿವನ ವಿಗ್ರಹವೂ ಕಂಸಾಸುರ, ತ್ರಿಪುರಾಸುರ ಮುಂತಾದ ಅಸುರರ ಸಂಹಾರವನ್ನೂ ಕಾಮನನ್ನು ಸುಟ್ಟದ್ದನ್ನೂ ಯಮನನ್ನು ದಂಡಿಸಿದ್ದನ್ನೂ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿ ಹಾಕಿದ್ದನ್ನೂ–ಈ ರೀತಿ ಅವನು ಮಾಡಿದ ಎಂಟು ಬಗೆಯ ವೀರಕಾರ್ಯಗಳನ್ನು ತೋರಿಸುತ್ತದೆ. (ಜಿ.ಎಚ್.)

**ಅಷ್ಟಸಿದ್ಧಿಗಳು :** ಸಿದ್ಧಿಯೆಂದರೆ ಕೆಲಸ ಕೈಗೂಡುವುದು (ಕ್ರಿಯಾಸಿದ್ಧಿ). ಸಾಮಾನ್ಯವಾಗಿ ಈ ಮಾತನ್ನು ಅಲೌಕಿಕವಾಗಿರುವ ಕೌಶಲಗಳನ್ನು ಪಡೆಯುವುದಕ್ಕೆ ಬಳಸುತ್ತಾರೆ. ಸಿದ್ಧಿಯೆಂದರೆ ತುಂಬ ಚಮತ್ಕಾರದ ಅದ್ಭುತಶಕ್ತಿ. ತಪಶ್ಚರ್ಯೆಯಿಂದಲೋ ಮಂತ್ರತಂತ್ರಗಳ ಅನುಸಂಧಾನದಿಂದಲೋ ದೈವಿಕ ಅನುಗ್ರಹದಿಂದಲೋ ಮನುಷ್ಯರು ಪಡೆಯುವ ವಿಶೇಷಸಾಮರ್ಥ್ಯ. ಇದನ್ನು ಎಂಟೆಂದು ಪರಿಗಣಿಸಿದ್ದಾರೆ. ಅಣಿಮಾ (ಅತಿ ಸಣ್ಣ ಆಕಾರವನ್ನು ಪಡೆಯುವುದು), ಮಹಿಮಾ (ಅತಿ ದೊಡ್ಡ ಆಕಾರವನ್ನು ಪಡೆಯುವುದು), ಗರಿಮಾ (ತುಂಬ ಭಾರವಾಗುವುದು), ಲಘಿಮಾ (ತುಂಬ ಹಗುರವಾಗಿ ಗಾಳಿಯಲ್ಲಿ ಹಾರಾಡುವುದು), ಪ್ರಾಪ್ತಿ (ಸಾಮಾನ್ಯವಾಗಿ ಪಡೆಯಲಾರದುದನ್ನು ಪಡೆಯುವುದು), ಪ್ರಾಕಾಮ್ಯ (ಸ್ವಲ್ಪವಾಗಿರುವ ಪದಾರ್ಥವನ್ನು ಹೆಚ್ಚಿಸುವ ಶಕ್ತಿ), ಈಶಿತ್ವ (ಎಲ್ಲ ಸಂದರ್ಭಗಳಲ್ಲಿಯೂ ಒಡೆತನವನ್ನು ಮಾಡಿ ತನ್ನ ಪ್ರಭಾವವನ್ನು ಬೀರುವುದು) ಮತ್ತು ವಶಿತ್ವ (ಇಂದ್ರಿಯಗಳನ್ನು ನಿಯಮನ ಮಾಡಿಕೊಳ್ಳುವುದು) ಇವು ಅಷ್ಟಸಿದ್ಧಿಗಳು. ಯೋಗಮಾರ್ಗದಲ್ಲಿ ಹಠಯೋಗವನ್ನು ಹಿಡಿದವರು ಈ ಸಿದ್ಧಿಗಳನ್ನು ಪಡೆಯುತ್ತಾರೆಂದು ನಂಬಿಕೆ. (ಎಸ್.ಕೆ.ಆರ್.)

**ಅಷ್ಟಾಂಗ ಮಾರ್ಗ :** ಬೌದ್ಧರು ಶಮಥಸಾಧನೆಗಾಗಿ ಅಷ್ಟಾಂಗಯುಕ್ತವಾದ ಮಧ್ಯಮಮಾರ್ಗವನ್ನು ನಿರ್ದೇಶಿಸಿದ್ದಾರೆ. ಗೌತಮಬುದ್ಧನ ಮೊಟ್ಟ ಮೊದಲ ಪ್ರವಚನವಾದ ಧರ್ಮಚಕ್ರಪ್ರವರ್ತನ ಸೂತ್ರದಲ್ಲಿಯೇ ಈ ಎಂಟು ಅಂಗಗಳ ವಿವರಣೆ ಬರುತ್ತದೆ. ಇದನ್ನು ಆರ್ಯ–ಅಷ್ಟಾಂಗಿಕ–ಮಾರ್ಗ (ಅರಿಯೋ ಅಟ್ಠಂಗಿಕೋ ಮಗ್ಗೋ) ಎಂದು ಬುದ್ಧನೇ ಕರೆದಿದ್ದಾನೆ. ಈ ಅಷ್ಟಾಂಗಮಾರ್ಗವೇ ಚಕ್ಷುಕರಣೆ, ಜ್ಞಾನಕರಣೆ ಇದರಿಂದ ಉಪಶಮ, ನಿರ್ವೇದ, ನಿರ್ವಾಣ ಒದಗುತ್ತದೆ ಎಂದು ಬುದ್ಧನ ಆಶ್ವಾಸನೆ. ಅಷ್ಟಾಂಗಮಾರ್ಗದ ಎಂಟು ವಿವರಗಳನ್ನು ಪ್ರಜ್ಞಾಶೀಲ, ಸಮಾಧಿ ಎಂಬ ಮೂರು ವರ್ಗಗಳಲ್ಲಿ ಅಳವಡಿಸಿದ್ದಾರೆ. ಸಮ್ಯಕ್‌ದೃಷ್ಟಿ ಸಮ್ಯಕ್‌ಸಂಕಲ್ಪ ಎರಡೂ ಪ್ರಜ್ಞಾವರ್ಗ; ಸಮ್ಯಕ್‌ವಾಚಾ, ಸಮ್ಯಕ್‌ಕರ್ಮಾಂತ, ಸಮ್ಯಕ್‌ಆಜೀವ ಇವು ಮೂರು ಶೀಲವರ್ಗ; ಸಮ್ಯಕ್‌ವ್ಯಾಯಾಮ, ಸಮ್ಯಕ್‌ಸ್ಮೃತಿ ಮತ್ತು ಸಮ್ಯಕ್‌ಸಮಾಧಿ ಇವು ಮೂರು ಸಮಾಧಿವರ್ಗ, ಇದು ತ್ರಿವಿಧ ಶಿಕ್ಷೆ (ತಿವಿಧಾ ಸಿಕ್ಖಾ) ಎನಿಸಿಕೊಳ್ಳುತ್ತದೆ. ಸಮ್ಯಕ್‌ದೃಷ್ಟಿಯೆನ್ನುವುದು ನಿಜವಾಗಿ ಮಾರ್ಗಾನುಸಂಧಾನದಿಂದ ಬರತಕ್ಕ ಫಲ. ಸಂಸಾರವನ್ನು ಅನಿತ್ಯ, ಅನಾತ್ಮ, ದುಃಖವೆಂದು ಮನದಟ್ಟು ಮಾಡಿಕೊಳ್ಳುವುದು ಸಮ್ಯಕ್‌ದೃಷ್ಟಿ; ಮೋಹ, ದ್ವೇಷ, ರಾಗಗಳಿಂದ ವಿಮುಕ್ತಿ. ಸಮ್ಯಕ್ಸಂಕಲ್ಪವೆಂದರೆ ವಿರಕ್ತಿ (ನೈಷ್ಕರ್ಮ್ಯ ಸಂಕಲ್ಪ), ಶುಭಭಾವನೆಗಳು, ಯಾರಿಗೂ ಕೆಡುಕನ್ನು ಮಾಡದಿರುವ ಸಂಕಲ್ಪ , (ಅವಿಹಿಂಸಾ ಸಂಕಲ್ಪ), ಸಮ್ಯಕ್‌ವಾಚಾ ಎನ್ನುವುದರಲ್ಲಿ ಸುಳ್ಳು , ಚಾಡಿ, ಬಯ್ಯುವುದು, ಹರಟೆ ಮುಂತಾದುವನ್ನು ಬಿಡುವುದು ಸೇರುತ್ತದೆ. ಸಮ್ಯಕ್‌ಕರ್ಮಾಂತವೆಂದರೆ ಕೊಲ್ಲುವುದು, ಕಳವು, ವ್ಯಭಿಚಾರ ಇವುಗಳಿಂದ ದೂರವಾಗಿರುವುದು; ಕರುಣಾ ಪ್ರಮುಖವಾದ ಕೆಲಸಗಳನ್ನು ಮಾಡುವುದು. ಸಮ್ಯಕ್‌ಆಜೀವ ಎನ್ನುವುದರಲ್ಲಿ ಪರರಿಗೆ ಘಾಸಿಯಾಗುವಂಥ ವೃತ್ತಿಗಳನ್ನು ಹಿಡಿಯದಿರುವುದು; ಆಯುಧಗಳನ್ನೂ ಕೊಲೆಗಾಗಿ ಪಶುಗಳನ್ನೂ ಮನುಷ್ಯರನ್ನೂ ಹೆಂಡ ಮುಂತಾದ ಪದಾರ್ಥಗಳನ್ನೂ ವಿಷವನ್ನೂ ಮಾರುವುದು ಇಲ್ಲಿ ನಿಷಿದ್ಧವೆನಿಸಿದೆ; ಅನವದ್ಯವಾದ ಮತ್ತು ತನಗೂ ಇತರರಿಗೂ ಅಹಿತವಾಗದ ಕೆಲಸಗಳನ್ನು ಮಾಡಿ ಹೊಟ್ಟೆ ಹೊರೆದುಕೊಳ್ಳುವುದು.

ಸಮ್ಯಕ್‌ವ್ಯಾಯಾಮವೆಂದರೆ ಅಶುಭ ಭಾವನೆಗಳು ಉಂಟಾಗದಂತೆಯೂ ಶುಭಭಾವನೆಗಳು ಉಂಟಾಗುವಂತೆಯೂ ಮೊದಲೇ ಇರುವ ಅಶುಭಭಾವನೆಗಳು ಹೋಗಿ ಮೊದಲೇ ಇರುವ ಶುಭಭಾವನೆಗಳು ಬೇರೂರುವಂತೆಯೂ ಪ್ರಯತ್ನಮಾಡುವುದು. ಸಮ್ಯಕ್‌ಸ್ಮೃತಿಯಲ್ಲಿ ಕಾಯಾನುಪಶ್ಯನ, ವೇದನಾನುಪಶ್ಯನ, ಚಿತ್ತಾನುಪಶ್ಯನ ಮತ್ತು ಧರ್ಮಾನುಪಶ್ಯನಗಳು ಸೇರುತ್ತವೆ. ಬೌದ್ಧರ ಧ್ಯಾನಪಂಥಕ್ಕೆ ಸ್ಮೃತಿಮಾರ್ಗವೆಂದೇ ಹೆಸರು. ಅನುಪಾನ ಸ್ಮೃತಿ, ಮೈತ್ರೀಸ್ಮೃತಿ, ಚಂಕ್ರಮಣಧ್ಯಾನ ಮುಂತಾದುವು ಸಮ್ಯಕ್‌ಸ್ಮೃತಿಯ ವಿಭಾಗದ ವಿವಿಧ ಪ್ರಕಾರಗಳು. ಸಮ್ಯಕ್‌ಸ್ಮೃತಿ ಬಲಗೊಂಡು ಸಾರ್ಥಕವಾದರೆ ಸಮ್ಯಕ್ ಸಮಾಧಿ ಒದಗುತ್ತದೆ. ಗಾಳಿಯಿಲ್ಲದ ಸ್ಥಳದಲ್ಲಿರುವ ದೀಪ ಅಚಲವಾಗಿ ಉರಿಯುವಂತೆ ಚಿತ್ತ ಸ್ಥಿರವಾಗಿರುವುದು ಸಮಾಧಿಯೆನಿಸಿಕೊಳ್ಳುತ್ತದೆ. (ಎಸ್.ಕೆ.ಆರ್.)

**ಅಷ್ಟಾಂಗ ಯೋಗ :** ಪತಂಜಲಿಯಿಂದ ಪ್ರವೃತ್ತವಾದ ಯೋಗಪದ್ಧತಿ. ಯೋಗವೆಂದರೆ ಚಿತ್ತವೃತ್ತಿನಿರೋಧವೆಂದು ವಿವರಿಸಿ ಯೋಗಸೂತ್ರ ಇದಕ್ಕೆ ಸಾಧನರೂಪವಾಗಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಎಂಟು ಅಂಗಗಳನ್ನು ಎರಡನೆಯ ಅಧ್ಯಾಯವಾದ ಸಾಧನಪಾದದಲ್ಲಿ ಹೇಳಿದೆ. ಅಂಗವೆಂದರೆ ಅಶುದ್ಧವಾದ ಚಿತ್ತಕಲ್ಮಷಗಳು ಹೋಗಿ ವಿವೇಕ ಖ್ಯಾತಿ ಉಂಟಾಗುವುದಕ್ಕೆ ನೆರವಾಗುವ ಸಾಧನವೆಂದೂ ಅದರಿಂದ ಚಿತ್ತದಲ್ಲಿ ಸಾತ್ತ್ವಿಕ ಪರಿಣಾಮರೂಪವಾದ, ನಿರ್ಮಲರೂಪವಾದ ಪ್ರಕಾಶ (ಜ್ಞಾನದೀಪ್ತಿ) ಒದಗುವುದೆಂದೂ ಯೋಗಸೂತ್ರ ಭಾಷ್ಯಕಾರರಾದ ವ್ಯಾಸರು ವಿವರಿಸಿದ್ದಾರೆ. ನಿಷಿದ್ಧಕಾರ್ಯಗಳ ತ್ಯಾಗ ಯಮವೆನಿಸಿಕೊಳ್ಳುತ್ತದೆ. ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಇವು ಯಮ; ಈ ಅಂಗದಲ್ಲಿ ಸೇರಿಬರುತ್ತವೆ. ವಿಹಿತ ಕಾರ್ಯಗಳ ಆಚರಣೆ ನಿಯಮ. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ–ಇವು ನಿಯಮಗಳು. ಆಸನವೆಂದರೆ ನಿಯಮಗಳ ಅಭ್ಯಾಸಕ್ಕೆ ಅನುಕೂಲವಾದ ಸ್ಥಿರಸುಖವಾದ ಭಂಗಿ. ಆಸನಗಳಲ್ಲಿ ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ ಮೊದಲಾದ ವೈವಿಧ್ಯವುಂಟು. ಆಸನಸಿದ್ಧಿಯಾದ ಅನಂತರ ಶ್ವಾಸ–ಪ್ರಶ್ವಾಸಗಳ ಗಮನಾಗಮನಗಳನ್ನು ತಡೆಯುವುದನ್ನು (ಶ್ವಾಸಪ್ರಶ್ವಾಸಯೋರ್ಗತಿವಿಚ್ಛೇದಃ) ಪ್ರಾಣಾಯಾಮವೆಂದು ನಿರ್ದೇಶಿಸಿದ್ದಾರೆ. ಪ್ರಾಣಾಯಾಮದಿಂದ ಶುದ್ಧವಾದ ಚಿತ್ತವನ್ನು ಒಂದೆಡೆ ನಿಲ್ಲಿಸುವುದು ಧಾರಣ. ಪಂಚೇಂದ್ರಿಯಗಳು ತಂತಮ್ಮ ವಿಷಯಗಳಕಡೆ ಒಲಿಯದಂತೆ ತಡೆಹಿಡಿದು, ಧಾರಣದಲ್ಲಿರುವ ಚಿತ್ತದಲ್ಲಿಯೇ ನಿಲ್ಲುವಂತೆ ಮಾಡುವುದು ಪ್ರತ್ಯಾಹಾರ. ಮುಂದಿನದು ಯೋಗಾಂಗ ಧ್ಯಾನ. ಆಧರಣೆಯ ಸ್ಥಳದಲ್ಲಿ ಏಕತಾನತೆಯನ್ನು ಅವಲಂಬಿಸಿ ಚಿತ್ತವನ್ನು ಸ್ಥಿರವಾಗಿ ನಿಲ್ಲಸುವುದೇ

ಧ್ಯಾನ. ಧ್ಯಾನ ಧ್ಯಾನವಸ್ತುವಿನ ಸ್ವರೂಪವನ್ನೇ ಪಡೆದು ಚಿತ್ತದ ಸ್ವರೂಪವನ್ನು ಕಳೆದುಕೊಳ್ಳುವುದು ಸಮಾಧಿ (ತದೇವಾತ್ಮ ಮಾತ್ರ ನಾರ್ಭಾಸಂ ಸ್ವರೂಪಶೂನ್ಯಮಿವ ಸಮಾಧಿಃ). ತಾನು ಧ್ಯಾನಿಸುತ್ತಿದ್ದೇನೆ ಎನ್ನುವುದೂ ಸಮಾಧಿಯಲ್ಲಿ ಮರೆತುಹೋಗುತ್ತದೆ. **(ನೋಡಿ– ಯೋಗ)**

(ಎಸ್.ಕೆ.ಆರ್.)

**ಅಷ್ಟಾಂಶ ಸಂಖ್ಯಾವ್ಯವಸ್ಥೆ :** 8ರ ವಿವಿಧ ಘಾತಗಳ ಸರಳ ಸಂಕಲನದಿಂದ ಸಂಖ್ಯೆಗಳನ್ನು ಬರೆಯುವ ವಿಧಾನ (ಆಕ್ಟಲ್ ನಂಬರ್ ಸಿಸ್ಟಮ್). ಇದರಲ್ಲಿ 0 ಯಿಂದ 7ರವರೆಗಿನ ಎಂಟು ಅಂಕೆಗಳು ಮಾತ್ರ ಇವೆ. ದಶಮಾಂಶ ಪದ್ಧತಿಯ (0ಯಿಂದ 9ರವರೆಗೆ ಹತ್ತು ಅಂಕೆಗಳಿರುವ ರೂಢಿಯ ವಿಧಾನ) 8, ಅಷ್ಟಾಂಶ ಪದ್ಧತಿಯಲ್ಲಿ 10 (ಓದುವ ಕ್ರಮ ಒಂದು ಸೊನ್ನೆ) ಆಗುವುದು.

ದಶಮಾಂಶ ವ್ಯವಸ್ಥೆಯಿಂದ ಅಷ್ಟಾಂಶ ವ್ಯವಸ್ಥೆಗೆ ಪರಿವರ್ತನಗೊಳಿಸುವ ವಿಧಾನಕ್ಕೆ ಕೆಲವು ಉದಾಹರಣೆಗಳು :

| ದಶಮಾಂಶ ವ್ಯವಸ್ಥೆ | | | | ಅಷ್ಟಾಂಶ ವ್ಯವಸ್ಥೆ |
|---|---|---|---|---|
| 5 | = | $5.8^0$ | … | 5 |
| 9 | = | $1.8^1 + 1.8^0$ | … | 11 |
| 16 | = | $2.8^1 + 0.8^0$ | … | 20 |
| 75 | = | $1.8^2 + 1.8^1 + 3.8^0$ | … | 113 |
| 123 | = | $1.8^2 + 7.8^1 + 3.8^0$ | … | 173 |
| 192 | = | $3.8^2 + 0.8^1 + 0.8^0$ | … | 300 |
| 679 | = | $1.8^3 + 2.8^2 + 4.8^1 + 7.8^0$ | … | 1247 |
| 3079 | = | $6.8^3 + 0.8^2 + 0.8^1 + 7.8^0$ | … | 6007 |

ಇತ್ಯಾದಿ.

ಗಣಕಯಂತ್ರಗಳಲ್ಲಿ ಬಳಕೆಯಲ್ಲಿರುವ ದ್ವಯಾಂಶ ವ್ಯವಸ್ಥೆಯಲ್ಲಿ (ಬೈನರಿ ಸಿಸ್ಟಮ್) ಅಂಕೆಗಳ ದೊಡ್ಡ ದೊಡ್ಡ ಸಾಲುಗಳನ್ನು ಸರಳೀಕರಿಸಲು ಅಷ್ಟಾಂಶ ವ್ಯವಸ್ಥೆಯ ಉಪಯೋಗ ಇದೆ

ಅಷ್ಟಾಂಶ ವ್ಯವಸ್ಥೆಯಿಂದ ದಶಮಾಂಶವ್ಯವಸ್ಥೆಗೆ ಪರಿವರ್ತನಗೊಳಿಸುವ ವಿಧಾನಕ್ಕೆ ಕೆಲವು ಉದಾಹರಣೆಗಳು :

| ಅಷ್ಟಾಂಶ ವ್ಯವಸ್ಥೆ | | | | ದಶಮಾಂಶ ವ್ಯವಸ್ಥೆ |
|---|---|---|---|---|
| 7 | = | $7.8^0$ | … | 7 |
| 16 | = | $1.8^1 + 6.8^0$ | … | 14 |
| 32 | = | $3.8^1 + 2.8^0$ | … | 26 |
| 123 | = | $1.8^2 + 2.8^1 + 3.8^0$ | … | 83 |
| 400 | = | $4.8^2 0.8^1 + 0.8^0$ | … | 256 |
| 3147 | = | $3.8^3 + 1.8^2 + 4.8^1 + 7.8^0$ | … | 1639 |

ಇತ್ಯಾದಿ.

ಅಷ್ಟಾಂಶ ವ್ಯವಸ್ಥೆಯಲ್ಲಿ ಸಂಕಲನ ಮತ್ತು ಗುಣಾಕಾರಕ್ಕೆ ಉದಾಹರಣೆಗಳು :

ಸಂಕಲನ

| | 0 | 1 | 2 | 3 | 4 | 5 | 6 | 7 |
|---|---|---|---|---|---|---|---|---|
| 0 | 0 | 1 | 2 | 3 | 4 | 5 | 6 | 7 |
| 1 | 1 | 2 | 3 | 4 | 5 | 6 | 7 | 10 |
| 2 | 2 | 3 | 4 | 5 | 6 | 7 | 10 | 11 |
| 3 | 3 | 4 | 5 | 6 | 7 | 10 | 11 | 12 |
| 4 | 4 | 5 | 6 | 7 | 10 | 11 | 12 | 13 |
| 5 | 5 | 6 | 7 | 10 | 11 | 12 | 13 | 14 |
| 6 | 6 | 7 | 10 | 11 | 12 | 13 | 14 | 15 |
| 7 | 7 | 10 | 11 | 12 | 13 | 14 | 15 | 16 |

ಗುಣಾಕಾರ

| | 0 | 1 | 2 | 3 | 4 | 5 | 6 | 7 |
|---|---|---|---|---|---|---|---|---|
| 0 | 0 | 0 | 0 | 0 | 0 | 0 | 0 | 0 |
| 1 | 0 | 1 | 2 | 3 | 4 | 5 | 6 | 7 |
| 2 | 0 | 2 | 4 | 6 | 10 | 12 | 14 | 16 |
| 3 | 0 | 3 | 6 | 11 | 14 | 17 | 22 | 25 |
| 4 | 0 | 4 | 10 | 14 | 20 | 24 | 30 | 34 |
| 5 | 0 | 5 | 12 | 17 | 24 | 31 | 36 | 43 |
| 6 | 0 | 6 | 14 | 22 | 30 | 36 | 44 | 52 |
| 7 | 0 | 7 | 16 | 25 | 34 | 43 | 52 | 61 |

**ಅಷ್ಟಾದಶ ಉಪಪುರಾಣಗಳು :** ಉಪಪುರಾಣಗಳು ನೂರಕ್ಕೂ ಹೆಚ್ಚಾಗಿವೆ. ಆದರೆ ಅವುಗಳಲ್ಲಿ ಸನತ್ಕುಮಾರೋಕ್ತವಾದ ಆದ್ಯ, ನಾರಸಿಂಹ, ಕುಮಾರಪ್ರೋಕ್ತವಾದ ಸ್ಕಾಂದ, ನಂದೀಶೋಕ್ತವಾದ ಶಿವಧರ್ಮ, ದೂರ್ವಾಸೋಕ್ತವಾದ ಆಶ್ಚರ್ಯ (?), ನಾರದೀಯ, ಕಾಪಿಲ, ವಾಮನ, ಉಶನಸೇರಿತ, ಬ್ರಹ್ಮಾಂಡ, ವಾರುಣ, ಕಾಲಿಕಾ, ಮಾಹೇಶ್ವರ, ಸಾಂಬ, ಸೌರ, ಪರಾಶರೋಕ್ತ, ಮಾರೀಚ, ಮತ್ತು ಭಾರ್ಗವ–ಎಂಬಿವು ಅಷ್ಟಾದಶ ಉಪಪುರಾಣಗಳೆಂದು (ಹದಿನೆಂಟು) ಕೂರ್ಮಪುರಾಣದ ಹೇಳಿಕೆ. ಬೇರೆ ಬೇರೆ ಗ್ರಂಥಗಳು ಬೇರೆ ಬೇರೆ ಹದಿನೆಂಟರ ಪಟ್ಟಿಗಳನ್ನು ಕೊಟ್ಟಿವೆ. ವೈದಿಕಧರ್ಮದ ಪುನರುತ್ಥಾನಕ್ಕಾಗಿ ಸ್ಮಾರ್ತವರ್ಗ ಉಪಪುರಾಣಗಳನ್ನು ಬರೆಯುತ್ತಾ ಹೋಯಿತು. ಉಪಪುರಾಣಗಳು ಮಹಾಪುರಾಣಗಳಿಗೆ ಪೂರಕಗಳೆಂದು ಗಣಿಸಲಾಗಿದ್ದರೂ ಇವುಗಳಲ್ಲೆಷ್ಟೋ ಸ್ವತಂತ್ರವೂ ಸಾಕಷ್ಟು ಪ್ರಾಚೀನವೂ ಆಗಿವೆ. ಮಹಾಪುರಾಣಗಳಲ್ಲಾದಹಾಗೇ ಹಲಕೆಲವು ಉಪಪುರಾಣಗಳಲ್ಲೂ ಕಾಲಕಾಲಕ್ಕೆ ಪ್ರಕ್ಷಿಪ್ತಗಳು ಸೇರುತ್ತ ಬಂದುವು. ಆದರೆ ಇವುಗಳ ಪ್ರಕ್ಷೇಪದ ಸರದಿಗಳೂ ಕಡಿಮೆ, ಸ್ವರೂಪಗಳೂ ಅಷ್ಟು ವಿಜಾತೀಯವಲ್ಲ. ಭಾರತದ ಧರ್ಮ, ಸಂಸ್ಕೃತಿಗಳ ಇತಿಹಾಸದ ಮತ್ತು ಕಳೆದುಹೋದ ಎಷ್ಟೋ ಶಾಸ್ತ್ರಗಳ ಹಾಗೂ ಕಾವ್ಯಗಳ ಪುನಾರಚನೆಯ ದೃಷ್ಟಿಯಿಂದ ಉಪಪುರಾಣಗಳು ಬಹುಮುಖ್ಯ. ಉಪಲಬ್ಧ ಉಪಪುರಾಣಗಳಲ್ಲಿ ಗಣ್ಯವಾದವುಗಳ ರಚನಾಯುಗ ಪ್ರ.ಶ. 650–800ರ ನಡುವೆ ಎನ್ನಬಹುದು. ಉಪಪುರಾಣ ಸಾಹಿತ್ಯದ ಕೆಲವು ಮಾದರಿಗಳು ಹೀಗಿವೆ :

**ಸಾಂಬೋಪಪುರಾಣ :** ಸೌರವರ್ಗಕ್ಕೆ ಸೇರಿದ್ದು. ಮುದ್ರಿತವಾದ ಸುಮಾರು 15 ಉಪಪುರಾಣಗಳಲ್ಲಿ ಒಂದು. ಇದರಲ್ಲಿ 84 ಅಧ್ಯಾಯಗಳಿವೆ. ಸೂರ್ಯವಂದನೆ, ಕುತೂಹಲ ಕರವಾದ ವಿವಿಧ ಕಥೆಗಳು, ಕೃಷ್ಣಪುತ್ರ ಸಾಂಬ ಸೂರ್ಯಾರಾಧಕನಾಗಿ ಪರಿಣಮಿಸಿ, ಸೂರ್ಯವಿಗ್ರಹವನ್ನು ಸಂಸ್ಥಾಪಿಸಿದ ದೊಡ್ಡ ಕಥೆ, ಭೂಮಿ ಮೊದಲಾದ ಮೇಲಿನ ಏಳು ಲೋಕಗಳು, ಮೇರುವಿನ ಅಳತೆ, ಸೂರ್ಯನ ಏಕಚಕ್ರರಥದ ವರ್ಣನೆ, ಮಳೆ, ಚಂದ್ರನ ವರ್ತನೆ, ಸೂರ್ಯಚಂದ್ರಗ್ರಹಣಗಳು, ಸಕಲ, ನಿಷ್ಕಲ ಸೂರ್ಯನ ಆರಾಧಕರಾದ ಮಗ, ಯಾಜಕರು, ಯೋಗಮಾರ್ಗ, ತ್ರೈವಿದ್ಯ, ಸೂರ್ಯಸಿದ್ಧಾಂತಗಳು, ಸೂರ್ಯಲೋಕ ಪ್ರಾಪ್ತಿ, ಸೂರ್ಯ ವಿಗ್ರಹ ಲಕ್ಷಣಗಳು, ಸೂರ್ಯ ದೇವಾಲಯ ನಿರ್ಮಾಣ, ಸಪ್ತವಿಧ ಸೂರ್ಯವಿಗ್ರಹಗಳು, ಸೂರ್ಯವಿಗ್ರಹಪ್ರತಿಷ್ಠೆ, ಧ್ವಜಸ್ತಂಭಗಳು, ಸಾಂವತ್ಸರೀ ಪೂಜೆ, ವಾರ್ಷಿಕ ರಥೋತ್ಸವ, ಗ್ರಹಶಾಂತಿ, ಮಾನಸಪೂಜೋತ್ಸವ, ಇತರ ಅಂತರಿಕ್ಷ ದೇವತೆಗಳು, ಆದಿತ್ಯಹೃದಯ, ಹೋಮ, ಸೂರ್ಯಭಕ್ತ ಲಕ್ಷಣಗಳು, ದ್ವಾದಶದಲಪದ್ಮಮಂಡಲದ ರಚನೆ, ಮಂತ್ರವರ್ಣಗಳ ಅರ್ಥ, ಸದಾಚಾರ, ಸಪ್ತವಿಧಸಪ್ತಮೀ ತಿಥಿಯ ಆಚರಣೆ, 12 ಬಗೆಯ ಶುಕ್ಲಸಪ್ತಮಿಗಳು, ನ್ಯಾಸ, ಮುದ್ರೆಗಳಿಂದ ಕೂಡಿದ ಮಂತ್ರಯುಕ್ತ ಸೂರ್ಯಾರಾಧನೆ, ಅಭಿಚಾರ, ಸಂನ್ಯಾಸವಿಧಿ, ಯೋಗವಿಧಾನ, ಕರ್ಮವಿಪಾಕ, ದಕ್ಷಿಣೆ, ಸೂರ್ಯಸ್ತೋತ್ರಗಳು ಇದರಲ್ಲಿ ಬಂದಿವೆ. ಇದರಲ್ಲಿ ಸೂರ್ಯನೇ ಪರಬ್ರಹ್ಮ. ಆತ ಏಕ, ಅನೇಕ, ತ್ರಿಗೋಣೋಪೇತ, ತ್ರಿಗುಣಾತೀತ, ಕ್ಷೇತ್ರಜ್ಞ, ಕರ್ಮವಿಪಾಕರಹಿತ, ವಿಷಯವಿದೂರ, ವಿಶ್ವಾಂತರ್ಯಾಮಿ, ವಿಶ್ವಪಾಲಕ, ವಿಶ್ವನಿಯಾಮಕ. ಇದು ವಿವಿಧ ಕವಿಗಳಿಂದ ರಚಿತವಾದ ಕೃತಿ. ಇದರ ತಿರುಳು ಪ್ರ.ಶ. 500 ಮತ್ತು 800 ನಡುವಿನದು. ಕೆಲ ಅಧ್ಯಾಯಗಳು ಭವಿಷ್ಯ, ಬ್ರಹ್ಮ, ಸ್ಕಂದ ಮಹಾಪುರಾಣಗಳಿಗೆ ಸಮಾನವೆನ್ನಿಸಿವೆ.

**ಕಾಲಿಕೋಪಪುರಾಣ :** ಇದರಲ್ಲಿ ಶಿವಪತ್ನಿಯಾದ ಪಾರ್ವತಿಯ ಗಿರಿಜಾ, ದೇವೀ, ಭದ್ರಕಾಲೀ, ಕಾಲೀ ರೂಪಗಳ ಮಾಹಾತ್ಮ್ಯವಿದೆ. ಇದರದು ಶಾಕ್ತಪಂಥ. ಬ್ರಹ್ಮ ಸರಸ್ವತಿಯರ ಪ್ರೇಮ, ಶಿವ ಪಾರ್ವತಿಯರ ವಿವಾಹ, ದಕ್ಷಯಜ್ಞ, ಸತೀ ಪ್ರಾಣತ್ಯಾಗ, ಭೈರವ, ಬೇತಾಳರ ಉತ್ಪತ್ತಿ, ದೇವಿಪೂಜಾ ವಿಧಾನ. ರಕ್ತಬಲಿ ಕಾಮರೂಪತೀರ್ಥದ ನದೀ ಪರ್ವತಗಳ, ಕಾಮಾಕ್ಷಿ ದೇವಾಲಯದ ವರ್ಣನೆ ಮುಂತಾದವು ಇದರ ವಿಷಯಗಳು. ಶಾಕ್ತ, ತಾಂತ್ರಿಕ ಪಂಥಗಳ ಆವಾಸದ ಅಸ್ಸಾಮಿನಲ್ಲಿ ಅಥವಾ ಬಂಗಾಲದ ಈಶಾನ್ಯಭಾಗದಲ್ಲಿ ಇದು

ರಚಿತವಾಗಿರಬೇಕು. ವಿವಿಧ ಸಂಶೋಧಕರ ಕಾಲನಿರ್ಣಯ ಈ ಪುರಾಣದ ವಿಷಯದಲ್ಲಿ 700 ರಿಂದ 1200ರ ವರೆಗೆ ಹೋಗುತ್ತದೆ. ಹಳೆಯ ಕಾಲಿಕಾ ಪುರಾಣವೊಂದಿತ್ತೆಂದೂ ಅದು ಸಿಕ್ಕಿಲ್ಲವೆಂದೂ ಕೆಲವರ ಮತ.

**ಕಲ್ಕಿ ಉಪಪುರಾಣ :** ಭಾಗವತ ಮಹಾಪುರಾಣದ ಅನುಬಂಧವೆಂದು ತಾನೇ ಹೇಳಿಕೊಂಡಿದೆ. ಕಲಿಯುಗದ ಅಂತ್ಯದಲ್ಲಿ ವಿಷ್ಣು ಕಲ್ಕಿ ಅವತಾರವನ್ನು ತಾಳಿ ಮಾಡುವ ಮಹತ್ಕಾರ್ಯಗಳನ್ನಿದು ಬಣ್ಣಿಸಿದೆ. ಶಂಭಲಗ್ರಾಮನಿವಾಸಿಗಳಾದ ವಿಷ್ಣುಯಶಸ್ ಮತ್ತು ಸುಮತಿ ಎಂಬ ದಂಪತಿಗಳಿಗೆ ಮಗನಾಗಿ ಕಲ್ಕಿ ಹುಟ್ಟುವನು. ಅವನ ಪರಾಕ್ರಮಗಳಲ್ಲಿ ಬೌದ್ಧರನ್ನೂ ಮ್ಲೇಚ್ಛರನ್ನೂ ಜಯಿಸಿದ್ದು ಅತ್ಯಂತ ಗಣ್ಯ. ಅವತಾರವನ್ನು ಮುಗಿಸಿ ಕಲ್ಕಿ ಸ್ವರ್ಗಾರೋಹಣ ಮಾಡುವುದರ ಉಲ್ಲೇಖವೂ ಇಲ್ಲಿದೆ. ಕಾಲ ಪ್ರ.ಶ. 1800.

**ಪುರೋಷೋತ್ತಮೋಪಪುರಾಣ :** ಒರಿಸ್ಸದಲ್ಲಿಯ ಪುರೀ ಕ್ಷೇತ್ರದ ಪ್ರಶಂಸೆಗೆ ಮೀಸಲಾಗಿದೆ. ಕೃಷ್ಣ, ಬಲರಾಮ, ಸುಭದ್ರೆಯರ ಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನಿದು ಬಿತ್ತರಿಸಿದೆ. ಇದಿನ್ನೂ ಅಮುದ್ರಿತ. ಕಾಲ ಪ್ರ.ಶ. 1200.

**ಬೃಹದ್ಧರ್ಮೋಪಪುರಾಣ :** ಧರ್ಮಮಾಹಾತ್ಮ್ಯವನ್ನು ಹೇಳುವ ಗ್ರಂಥ. ಇಡೀ ಜಗತ್ತು ಶಿವ, ಶಕ್ತಿಯರನ್ನಾಧರಿಸಿದೆ ಎಂಬುದಿದರ ಸಿದ್ಧಾಂತ. ಮಾತಾ, ಪಿತೃ, ಗುರು, ಹಿರಿಯರ ಬಗ್ಗೆ ಮಾಡತಕ್ಕ ಕರ್ತವ್ಯಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಧರ್ಮವ್ಯಾಧನ ಕಥೆ ಬಂದಿದೆ. ಅನಂತರ ತೀರ್ಥಗಳನ್ನು ವರ್ಣಿಸುವಾಗ ರಾಮಕಥೆ, ಮಹಾಭಾರತದ ಪ್ರಶಂಸೆ, ಅದರ ಗಣ್ಯ ಪರ್ವಗಳ ಹೆಸರುಗಳನ್ನೊಳಗೊಂಡ ಪ್ರಾರ್ಥನೆ, ಗಂಗೋತ್ಪತ್ತಿ, ವಿಷ್ಣುವಿನ ಕಪಿಲ, ವಾಲ್ಮೀಕಿ, ವ್ಯಾಸ,ಬುದ್ಧಾವತಾರಗಳು, ಶಿವಕೃತ ವಿಷ್ಣುಸ್ತೋತ್ರ, ಗಂಗಾಧರ್ಮ, ಗಣೇಶೋತ್ಪತ್ತಿ, ವರ್ಣಾಶ್ರಮಧರ್ಮ, ಸ್ತ್ರೀಧರ್ಮ–ಮುಂತಾದುವನ್ನು ಇಲ್ಲಿ ವಿಶದಪಡಿಸಲಾಗಿದೆ. ಇದರ ಭಾಗಗಳು ಮೂರು. ಪ್ರಭುತ್ವವನ್ನು ಇಂದ್ರನಿಂದ, ಶಕ್ತಿಯನ್ನು ಅಗ್ನಿಯಿಂದ, ಕ್ರೌರ್ಯವನ್ನು ಯಮನಿಂದ, ಸುದೈವವನ್ನು ಚಂದ್ರನಿಂದ, ಐಶ್ವರ್ಯವನ್ನು ಕುಬೇರನಿಂದ, ಸೌಜನ್ಯವನ್ನು ಜನಾರ್ದನನಿಂದ ಪಡೆದು ಅವುಗಳ ಸಂಯೋಗದಿಂದ ಬ್ರಹ್ಮ ರಾಜನನ್ನು ಸೃಜಿಸಿದ. ರಾಜನಿಲ್ಲದ ರಾಜ್ಯ ವಿಧವೆಗೆ ಸಮ. ಪ್ರಜಾಪಾಲನೆ ಸಾವಿರ ಅಶ್ವಮೇಧಯಾಗಗಳಿಗೆ ಸರಿ. ನ್ಯಾಯವಾದ ರಾಜ್ಯಭಾರ ನಡೆಸುವುದರಿಂದ ರಾಜನಿಗೆ ಪ್ರಜೆಗಳ ಪುಣ್ಯದಲ್ಲಿ ಆರನೆಯ ಒಂದು ಅಂಶ ಸಿಗುತ್ತದೆ. ಅನೀತಿವಂತನಾದ ಅರಸ ಇದ್ದರೂ ಇಲ್ಲದಂತೆಯೇ. ರಾಜದಂಡದ ಭಯವಿಲ್ಲದಲ್ಲಿ ಪ್ರಜೆಗಳು ಮನಸ್ವಿಯಾಗಿ ನಡೆದುಕೊಳ್ಳವರು. ಜಗತ್ತಿನ ಮೂಲವಾದ ಧರ್ಮವನ್ನು ತ್ರಿಕರಣಪೂರ್ವಕವಾಗಿ ಆಚರಿಸಿ ಪ್ರಚುರಪಡಿಸುವ ಬ್ರಾಹ್ಮಣ ಸರ್ವಾಧಾರ. ಅವನನ್ನೆಂದೂ ನೋಯಿಸಬಾರದು ಎಂಬೀ ವಿಚಾರಗಳು ಬೃಹದ್ಧರ್ಮೋಪಪುರಾಣದಲ್ಲಿ ಗಮನಾರ್ಹವೆನ್ನಿಸಿವೆ.

**ವಿಷ್ಣುಧರ್ಮೋಪಪುರಾಣ :** ವಿಷ್ಣುಧರ್ಮ ಪ್ರತಿಪಾದನೆ ಇದರ ಉದ್ದೇಶ. ಅಧ್ಯಾಯಗಳು 105. ಅಮುದ್ರಿತ. ಶ್ಲೋಕಸಂಖ್ಯೆ 4000ಕ್ಕೂ ಹೆಚ್ಚು. ಪುರಾಣದ ಮುಖ್ಯ ಲಕ್ಷಣಗಳು ಇದರಲ್ಲಿಲ್ಲ. ನಾರಾಯಣ ಸಂತರ್ಪಣರೂಪದ ಕ್ರಿಯಾಯೋಗ, ಅಂಬರೀಷನ ಕಥೆ, ಪ್ರಹ್ಲಾದನ ಕಥೆ, ವಿವಿಧ ವೈಷ್ಣವ ವ್ರತಗಳು, ನರಕ, ದಾನ, ಮೌನಾದಿ ಸಂಯಮ ಸಾಧನಗಳು, ಗಾಯತ್ರೀಪಠಣದಲ್ಲಿ ನಿರತನಾದ ಬ್ರಾಹ್ಮಣನ ಪ್ರಶಂಸೆ, ಬ್ರಾಹ್ಮಣನಿಂದಾಸ್ತುತಿಗಳ ಫಲ, ತಪಸ್, ಸತ್ಯ, ಅನೃತಗಳ ವಿಚಾರ, ಏಕಾದಶೀವ್ರತ, ಉಪವಾಸ, ವರ್ಣಧರ್ಮಪಾಲನ, ಅದರ ತ್ಯಾಗಗಳಿಂದಾಗುವ ಉದ್ಧಾರ, ಅಧಃಪಾತಗಳು, ಅಡಿಯಹಿಂದಿಡದ ವೀರನ ಪ್ರಶಂಸೆ, ಅಹಿಂಸಾವ್ರತ ಮಾಂಸಭಕ್ಷಣತ್ಯಾಗ, ದಂಡನೀತಿ, ವಿಷ್ಣುವಿನ ಕುರಿತಾದ ಭಕ್ತಿ ಮತ್ತು ಅವನ ಅವತಾರ, ಸ್ಮರಣೆ, ನಾಮಜಪ, ಭಕ್ತಲಕ್ಷಣ, ಸುದರ್ಶನ ಶಕ್ತಿ, ದೇವಾಲಯ ರಚನೆ, ವಿಗ್ರಹ ನಿರ್ಮಾಣ,ಆದಿಕಾರಣತ್ವ, ಪಂಜರಸ್ತೋತ್ರ, ಅಷ್ಟಕ, ಸುದರ್ಶನ ಸ್ತೋತ್ರ ಮುಂತಾದ ವಿಷಯಗಳಲ್ಲದೆ ಸ್ವಧರ್ಮಾಚಾರ, ಸದ್ಗುಣ, ಗ್ರಾಮ್ಯಸಂಗ ಮತ್ತು ವಿಧರ್ಮಗಳ ವರ್ಜನ, ಯೋಗ, ಅದ್ವೈತ, ಸಾರಸ್ವತಸ್ತವ, ಕೃಷ್ಣಸ್ತುತಿ, ಪಾಷಂಡನಿಂದೆ, ಕಾಲಮಾನಕ್ರಮ, ಕಲಿಯುಗದ ಪಾಪ, ಪಾಪಪ್ರಶಮನಸ್ತವ–ಮುಂತಾದ ವಿಷಯಗಳನ್ನೂ ಶೌನಕನಿಲ್ಲಿ ಶತಾನೀಕನಿಗೆ ಹೇಳುತ್ತಾನೆ. ಅಗ್ನಿಪುರಾಣ ಈ ವಿಷಯಗಳಲ್ಲಿ ಇದಕ್ಕೆ ಋಣಿ. ಕಾಲ ಪ್ರ.ಶ. 200–300ರ ನಡುವೆ.

**ವಿಷ್ಣುಧರ್ಮೋತ್ತರ ಉಪಪುರಾಣ :** ವಿಶ್ವಕೋಶಲಕ್ಷಣವುಳ್ಳದ್ದು. ಖಂಡಗಳು ಮೂರು. ಇವುಗಳಲ್ಲಿ ವಿವಿಧ ಕಥೆ. ಸೃಷ್ಟಿ ವಿವರಣೆ–ಭೂಗೋಳ, ಖಗೋಳಶಾಸ್ತ್ರ, ಜ್ಯೋತಿಶ್ಶಾಸ್ತ್ರ, ಕಾಲವಿಭಾಗ, ಗ್ರಹನಕ್ಷತ್ರಶಾಂತಿ, ಶಕುನಶಾಸ್ತ್ರ, ರಾಜ ಹಾಗೂ ಋಷಿಗಳ ವಂಶಾವಳಿ, ರೂಢಿ, ಸಂಪ್ರದಾಯ, ತಪ, ಕರ್ಮಫಲ, ವ್ರತ, ಶ್ರಾದ್ಧ, ದಾನಸ್ತುತಿ, ಧರ್ಮ, ರಾಜನೀತಿ, ಯುದ್ಧವಿದ್ಯೆ, ಶರೀರಾವಯವಗಳ ವಿವರ, ಔಷಧ, ಮಾನವರ ಮತ್ತು ಪ್ರಾಣಿಗಳ ಚಿಕಿತ್ಸೆ, ಪಾಕಶಾಸ್ತ್ರ, ಸುಗಂಧದ್ರವ್ಯ ನಿರ್ಮಾಣ, ಉದ್ಯಾನಕೃಷಿ, ನೃತ್ಯ, ಕಂಠದ ಮತ್ತು ಯಂತ್ರದ ಸಂಗೀತಗಳು, ಮೂರ್ತಿ–ವರ್ಣ–ವಾಸ್ತುಶಿಲ್ಪಗಳೂ ವೈಷ್ಣವ ದೇವತಾತತ್ತ್ವ ವಿಜ್ಞಾನ–ಇವು ವಿವೃತವಾಗಿದೆ. ಕಾಲ 628–1000ಗಳ ನಡುವೆ. ಸತ್ಯಧರ್ಮಪರಾಯಣನಾದ ಅರಸನನ್ನಾಯ್ದು ಪ್ರಜೆಗಳವನಿಗೆ ಪಟ್ಟಾಭಿಷೇಕ ಮಾಡಬೇಕು. ರಾಜನ ವ್ರತ ಸುಜನರಕ್ಷಣೆಯೇ. ಅಪಹೃತವಸ್ತುಗಳನ್ನು ಕಳೆದುಕೊಂಡವರಿಗೆ ಕೊಡಿಸುವುದು ಅವನ ಆದ್ಯ ಕರ್ತವ್ಯ. ಸಂಯಮ, ದುರ್ವ್ಯಸನವರ್ಜನ, ಶಾಸ್ತ್ರಜ್ಞತೆ, ಯೋಗ್ಯಭೃತ್ಯಯೋಜಕತ್ವಗಳು ಅವನಲ್ಲಿರಬೇಕಾದ ಗುಣಗಳು. ಪ್ರಜೆಗಳಿಗೆ ಹಿತವಾದದ್ದು ರಾಜನಿಗೆ ಪ್ರಿಯ. ರಾಜನಂತೆ ಪ್ರಜೆಗಳು ಇರುತ್ತಾರೆ. ಉಪೇಕ್ಷೆ, ಮಾಯಾ, ಇಂದ್ರಜಾಲ, ಸಾಮ, ದಾನ, ಭೇದ, ದಂಡ, ಸಪ್ತೋಪಾಯಗಳು, ದಂಡನೆಯಲ್ಲಿ ಸ್ವದೇಶೀಯ–ವಿದೇಶೀಯ ಎಂಬ ಭೇದಗಳು, ವಿದೇಶೀಯ ಅಪರಾಧಿಗಳ ಶಿಕ್ಷೆ ಗುಪ್ತ ಅಥವಾ ಪ್ರಕಟವೆಂಬ ಭೇದಗಳು, ಪ್ರಭು, ಮಂತ್ರ, ಉತ್ಸಾಹ ದಿವ್ಯಶಕ್ತಿಗಳು ರಾಜನಲ್ಲಿರಬೇಕು. ರಾಜ ಶತ್ರುವಿಗೂ ನ್ಯಾಯ ತೋರಿಸಬೇಕು. ಧರ್ಮ ವಿಜಯಿಯೆನ್ನಿಸಬೇಕು–ಎಂಬೀ ಅಂಶಗಳು ವಿಷ್ಣುಧರ್ಮೋತ್ತರದ ರಾಜನೀತಿಯ ಸ್ವರೂಪಕ್ಕೆ ಉಪಲಕ್ಷಣಗಳು. ಇದರ ಹಲವು ಅಧ್ಯಾಯಗಳನ್ನು ಮತ್ಸ್ಯಮಹಾಪುರಾಣ ಎರವಲು ತೆಗೆದುಕೊಂಡಿದೆ. ಕಾಲ ಪ್ರ.ಶ. ಸು. 400–500ರ ನಡುವೆ.

**ನರಸಿಂಹೋಪಪುರಾಣ :** ಪ್ರಾಚೀನ ವೈಷ್ಣವೋಪಪುರಾಣಗಳಲ್ಲಿ ಇದು ಗಣ್ಯ. ವ್ಯಾಸಶಿಷ್ಯ ಲೋಮಹರ್ಷಣಸೂತ ಇದನ್ನು ಪ್ರಯಾಗದಲ್ಲಿ ಭಾರದ್ವಾಜಾದಿ ಋಷಿಗಳಿಗೆ ಹೇಳಿದನೆನ್ನಲಾಗಿದೆ. ನರಸಿಂಹಸ್ತೋತ್ರ, ಸಾಂಖ್ಯಸೃಷ್ಟಿವಿವರಣೆ, ಕಾಲವಿಭಾಗ, ಬ್ರಹ್ಮೋತ್ಪತ್ತಿ, ರುದ್ರಸಂಭವ, ದಕ್ಷದಂಪತೀಸೃಷ್ಟಿ, ಸ್ವಾಯಂಭುವ ಜನನ, ಮರೀಚ್ಯಾದಿ ದಶಋಷಿಗಳ ಹುಟ್ಟು, ಋಷಿಸೃಷ್ಟಿ, ದಕ್ಷಸುತಾ ಸಂತಾನ, ಸಂಸಾರವೃಕ್ಷ ವರ್ಣನೆ, ಮುಕ್ತಿಕರವಾದ ವಿಷ್ಣುಬ್ರಹ್ಮರ ಧ್ಯಾನ, ಅಷ್ಟಾಕ್ಷರೀಜಪ, ಆದಿತ್ಯಾಷ್ಟೋತ್ತರಶತನಾಮ, ಸೂರ್ಯ ಚಂದ್ರ ವಂಶಜರ ಚರಿತ್ರೆ, ತ್ರೈಕಾಲಿಕ ಮನುಗಳು, ಮನ್ವಂತರಗಳು, ಭೂವಿವರಣೆ, ಗುರುಹಿರಿಯರ ಬಗ್ಗೆ ಮಾಡತಕ್ಕ ಕರ್ತವ್ಯ, ಬ್ರಾಹ್ಮಣಪೂಜಾಪ್ರಶಂಸೆ, ನರಸಿಂಹ ದೇವಾಲಯ ರಚನೆ, ಕಲಿಯುಗದ ದುರಾಚಾರಗಳು, ವರ್ಣಾಶ್ರಮಧರ್ಮ, ಸಂನ್ಯಾಸಯೋಗ, ವೈಷ್ಣವ ಪುಣ್ಯಕ್ಷೇತ್ರಗಳ ಪ್ರಶಂಸೆ–ಮುಂತಾದ ವಿವಿಧವಿಷಯಗಳಲ್ಲಿ ಬಂದಿವೆ. ಕಾಲ ಪ್ರ.ಶ. 400–500ರ ನಡುವೆ.

**ಕ್ರಿಯಾಯೋಗಸಾರ ಉಪಪುರಾಣ :** ಸ್ವತಂತ್ರ ಕೃತಿಯಾದರೂ ಪದ್ಮ ಮಹಾಪುರಾಣಕ್ಕೆ ಅನುಬಂಧವೆಂದು ಇದನ್ನು ಕೊಡಲಾಗಿದೆ. ಲಕ್ಷ್ಮೀಪತಿಯ ವಂದನೆ, ಸೃಷ್ಟಿ ವಿವರಣೆ, ಭೂವಿವರಣೆ, ಮಧುಕೈಟಭರ ವಧೆ, ಕ್ರಿಯಾಯೋಗ ಪ್ರಶಂಸೆ, ಗಂಗಾಪ್ರಶಂಸೆ, ಗಂಗಾಯಾತ್ರೆಯ ವಿಧಿ, ವಿಷ್ಣುಪೂಜೆ, ವೈಷ್ಣವ ನಿತ್ಯ ಕರ್ಮ, ಮುದ್ರಾಪ್ರಶಂಸೆ, ವಿಷ್ಣುನೈವೇದ್ಯ, ಏಕಾದಶೀವ್ರತ, ತುಲಸೀಪೂಜೆ, ಧಾತ್ರೀಪ್ರಶಂಸೆ–ಮುಂತಾದುವು ಇದರ ವಿಷಯಗಳು. ಕಾಲ ಪ್ರ.ಶ. 9–10ನೆಯ ಶತಮಾನದ ಅಂತ್ಯ ಮತ್ತು ಹತ್ತನೆಯ ಶತಮಾನದ ಆದಿಗಳ ನಡುವೆ.

**ಆದ್ಯುಪಪುರಾಣ :** ಆದ್ಯುಪಪುರಾಣಗಳೆರಡಿವೆ. ಇವುಗಳಲ್ಲಿ ವೈಷ್ಣವ ಸಂಪ್ರದಾಯದ ಪ್ರಾಚೀನ ಆದ್ಯುಪಪುರಾಣ ಸಿಕ್ಕಿಲ್ಲ. ಅದರಲ್ಲಿ ನಾಲ್ಕು ವರ್ಣಗಳವರಿಗೆ ಯೋಗ್ಯವಾದ ಸ್ಥಳ, ಸಾಂಪ್ರದಾಯಿಕ ಸದಾಚಾರ, ಜನನ, ಮರಣ, ಶುದ್ಧೀಕರಣ, ದಾನ, ವ್ರತ, ಶಕುನ–ಮುಂತಾದ ವಿಷಯಗಳಿದ್ದವೆಂದು ಅನ್ಯಗ್ರಂಥಗಳಿಂದ ತಿಳಿದುಬರುತ್ತದೆ. ಅರ್ವಾಚೀನ ಆದ್ಯುಪಪುರಾಣ ಮುದ್ರಿತವಾಗಿದೆ. ಇದರಲ್ಲಿ ಕೃಷ್ಣಚರಿತಾಮೃತ ವಿಸ್ತಾರವಾಗಿ ಬಂದಿದೆ. ಕಾಲ ಪ್ರ.ಶ. 600.

**ನಾರದೀಯೋಪಪುರಾಣ :** ನಾರದೀಯ ಮಹಾಪುರಾಣ ಮತ್ತು ಬೃಹನ್ನಾರದೀಯ ಉಪಪುರಾಣಗಳಿಂದ ಭಿನ್ನ. ಇದರಲ್ಲಿ ಉದಾತ್ತಚರಿತನೆನ್ನಲಾದ ರುಕ್ಮಾಂಗದರಾಯನ ಕಥೆಯನ್ನು 40 ಅಧ್ಯಾಯಗಳಲ್ಲಿ ಹೇಳಲಾಗಿದೆ.

**ಬ್ರಹ್ಮೋತ್ತರ ಉಪಪುರಾಣ :** ಬ್ರಹ್ಮಮಹಾಪುರಾಣದ ಉತ್ತರಖಂಡ. 3000 ಶ್ಲೋಕಗಳಲ್ಲಿ ಮಾರವಾಡದಲ್ಲಿರುವ ಬಾನಾಸ್ ಅಥವಾ ಬಲಜಾ ಎಂಬ ನದಿಯ ಮಹಾತ್ಮ್ಯವನ್ನು ಬಣ್ಣಿಸುತ್ತದೆ. ಇದು ಬ್ರಹ್ಮಪುರಾಣದಲ್ಲಿ ಪ್ರಕ್ಷಿಪ್ತವಾದ ಗ್ರಂಥ.

**ಸೌರೋಪಪುರಾಣ :** ಕೆಲವೊಮ್ಮೆ ಆದಿತ್ಯಪುರಾಣವೆನ್ನುತ್ತಾರೆ. ಆದರೆ ಇದರಿಂದ ಭಿನ್ನವಾದ ಇನ್ನೊಂದು ಆದಿತ್ಯಪುರಾಣವಿದೆಯೆಂದು ತಿಳಿದುಬಂದಿದೆ. ಇದು ಬ್ರಹ್ಮಮಹಾಪುರಾಣದ ಖಿಲ ಅಥವಾ ಅನುಬಂಧ. ಕಾಲ 1230–50ರ ನಡುವೆ. ಲಿಂಗಪೂಜಾವಿಧಿಯನ್ನು ಹೇಳುತ್ತದೆ. ಇಲ್ಲಿ ಶಿವನೂ ಸೂರ್ಯನೂ ಒಂದೇ. ಕೆಲ ಅಧ್ಯಾಯಗಳಲ್ಲಿ ರಾಜರ ವಂಶಾವಳಿಯನ್ನು ಕೊಡಲಾಗಿದೆ. ಯದುವಂಶಚರಿತೆಯನ್ನು ಹೇಳುವಾಗ ಊರ್ವಶೀ ಕಥೆಯ ಒಂದು ಪಾಠವಿಲ್ಲಿ ಸಿಗುತ್ತದೆ. ವೇದಾಂತದಂತೆ ವಿಶ್ವಾತ್ಮನೆಂದು ಹೇಳಿ, ಸಾಂಖ್ಯಾನುಸಾರವಾಗಿ ಪ್ರಕೃತಿಯನ್ನು ಇದು ಜಗತ್ತಿನ ಉಪಾದಾನಕಾರಣವೆನ್ನುತ್ತದೆ. ಇದರಲ್ಲಿ ಮಧ್ವಸಿದ್ಧಾಂತದ ಖಂಡನೆಗೆ 3 ಅಧ್ಯಾಯಗಳು ಮೀಸಲಾಗಿವೆ. ಇದಲ್ಲದೆ ಪ್ರ.ಶ. 950ರ ಈಚೆಗಿನ ಪಾಶುಪತ ಸಂಪ್ರದಾಯದ ಇನ್ನೊಂದು ಸೌರೋಪಪುರಾಣವೂ ಇದೆ.

**ದೇವೀಭಾಗವತ ಉಪಪುರಾಣ :** ಇದಕ್ಕೆ ದೇವೀಭಾಗವತ, ಶ್ರೀ ಭಗವತೀ ಪುರಾಣವೆಂದು ಎರಡು ಹೆಸರು. ಮೊದಲಿನದರ ಭಾಗಗಳನ್ನು ಅಂಶಗಳೆನ್ನುತ್ತಿದ್ದರು. ಅವನ್ನೀಗ ಸ್ಕಂಧಗಳೆನ್ನುತ್ತಾರೆ. ದೇವಿಯ ಪರಾಕ್ರಮ, ಸ್ತೋತ್ರ, ಪೂಜೆಗಳು ಇದರ ವಸ್ತು. ಕಾಲ ಪ್ರ.ಶ. 7ರಿಂದ 11ನೆಯ ಶತಮಾನದವರೆಗೂ ಹೋಗುತ್ತದೆ.

**ಭವಿಷ್ಯೋತ್ತರ ಉಪಪುರಾಣ :** ಮತ್ಸ್ಯಮಹಾಪುರಾಣದ ಪ್ರಕಾರ ಒಂದು ಉಪಪುರಾಣ. ಕೆಲ ಹಳೆಯ ದಿವ್ಯ ಮಾನುಷ ಕಥೆಗಳೂ ಧರ್ಮಾಚಾರದ ವಿವರಗಳೂ ಇದರ ವಸ್ತು. ಭವಿಷ್ಯಮಹಾಪುರಾಣದ ಅನುಬಂಧ. ಅಸಂಖ್ಯ ಮಾಹಾತ್ಮ್ಯಗಳೂ ಇತರ ಆಧುನಿಕ ಪಠ್ಯಗಳೂ ಭವಿಷ್ಯ ಭವಿಷ್ಯೋತ್ತರಗಳ ಅಂಗಗಳೆಂದುಕೊಳ್ಳುತ್ತವೆ.

**ಶಿವೋಪಪುರಾಣ :** ದೊಡ್ಡ ಉಪಪುರಾಣಗಳಲ್ಲೊಂದು. ಶಿವೋತ್ತಮತ್ವವನ್ನೂ ದಾನಧರ್ಮವನ್ನೂ ಬೋಧಿಸುತ್ತದೆ. ಹಿಂದೆ ಒಂದು ಲಕ್ಷ ಶ್ಲೋಕಗಳಿದ್ದವೆಂದೂ ಆಗ ಇದು ಮಹಾಪುರಾಣವೆನ್ನಿಸಿತ್ತೆಂದೂ ಹೇಳಲಾಗಿದೆ. ಇದರ ವಾಯವೀಯ ಸಂಹಿತೆಯ ಶ್ಲೋಕ ಸಂಖ್ಯೆ ನಾಲ್ಕು ಸಾವಿರ. ಶಿವೋತ್ತಮತ್ವವನ್ನು ಹೇಳುವಾಗ ಇದರಲ್ಲಿ ಶಿವಪೂಜೆ, ಲಿಂಗಪೂಜಾವಿಧಾನ, ಉಪವಾಸ, ಹಬ್ಬ, ಸಹಸ್ರನಾಮಗಳು ಬರುತ್ತವೆ. ಗಾತ್ರ ದೊಡ್ಡದು. ವಸ್ತುಸಂವಿಧಾನದಲ್ಲಿ ಏಕಸೂತ್ರತೆಯಿಲ್ಲ. ಅತಿಶಯೋಕ್ತಿಗಳಿಂದ ಇದು ಭೂಮಿ ಸ್ವರ್ಗಗಳನ್ನು ಬಣ್ಣಿಸುತ್ತದೆಯಲ್ಲದೆ ತಾಂತ್ರಿಕ ಆಚಾರಗಳನ್ನೂ ವಿವರಿಸುತ್ತದೆ.

**ಶಿವಧರ್ಮೋಪಪುರಾಣ :** ಶಿವಧರ್ಮವೆಂಬುದೊಂದು ಉಪ ಪುರಾಣ. ಶಿವಧರ್ಮೋತ್ತರ ಇದರ ಉತ್ತರಭಾಗವೆಂದು ಹೇಳಿಕೊಳ್ಳುತ್ತದೆ. ಶಿವಧರ್ಮೋತ್ತರವನ್ನು 12000 ಶ್ಲೋಕಗಳಲ್ಲಿ ಕುಮಾರ ಅಗಸ್ತ್ಯಋಷಿಗೆ ಹೇಳಿದನಂತೆ. ಅಗಸ್ತ್ಯಋಷಿ ಅದರ ಸಾರವನ್ನು 12 ಅಧ್ಯಾಯಗಳಲ್ಲಿ ಸಂಗ್ರಹಿಸಿದಂತೆ. ಶಿವಧರ್ಮವನ್ನು ಮೊದಲು ಪಾರ್ವತಿ, ಷಣ್ಮುಖ, ನಂದಿಕೇಶ್ವರ ಮತ್ತು ಇತರರಿಗೆ ಶಿವ ಹೇಳಿದನೆಂಬ ಉಲ್ಲೇಖವಿದೆ.

ಏಕಾಮ್ರಪುರಾಣ, ಯುಗಪುರಾಣ, ಗಣೇಶಪುರಾಣ, ಚಂಡಿಕಾಪುರಾಣ, ಸ್ವಲ್ಪ ಮತ್ಸ್ಯಪುರಾಣ ಮುಂತಾದ ಎಷ್ಟೋ ಉಪಪುರಾಣಗಳೂ ಸಿಗುತ್ತವೆ. ಇವುಗಳಲ್ಲದೆ ನಿಬಂಧಾದಿ ಗ್ರಂಥಗಳ ಉಲ್ಲೇಖಗಳಿಂದ ಅನುಪಲಬ್ಧವಾದ ಹಲವು ಉಪಪುರಾಣಗಳ ಹೆಸರುಗಳೂ ಅವುಗಳಲ್ಲಿಯ ಕೆಲ ವಿಷಯಗಳೂ ತಿಳಿದುಬರುತ್ತವೆ. (ಬಿ.ಎಚ್.ಎಸ್.)

**ಅಷ್ಟಾದಶಪುರಾಣಗಳು :** ಭಾರತೀಯ ಸಂಸ್ಕೃತಿಯಲ್ಲಿ ವೇದವಾಙ್ಮಯ ಸೂರ್ಯಮಂಡಲವೆನ್ನಿಸಿದರೆ ಪುರಾಣಗಳು ಗ್ರಹನಕ್ಷತ್ರಗಳೆನ್ನಿಸಿವೆ. ನಾಲ್ಕು ವೇದಗಳಾದ ಬಳಿಕ ಬರುವ ಪುರಾಣ ಸಮುದಾಯ ಐದನೆಯ ವೇದವೆಂದು ಖ್ಯಾತಿವೆತ್ತಿದೆ. ಪುರಾಣ ಜನತಾವೇದ; ವೇದಗಣದಂತೆಯೇ ಪ್ರಾಚೀನ ಪರಂಪರೆಗಳ ಕರಂಡಕ ಮತ್ತು ಪವಿತ್ರ. ಅದರ ವಸ್ತುವೂ ರೀತಿಯೂ ಮಹಾಭಾರತ ಮತ್ತು ಸ್ಮೃತಿಗ್ರಂಥಗಳ ವಸ್ತು, ರೀತಿಗಳನ್ನು ಹೋಲುತ್ತವೆ. ಹಿಂದೂಧರ್ಮದ ಸರ್ವಮುಖಗಳನ್ನೂ ಪ್ರತಿಬಿಂಬಿಸುವ ಹೆಗ್ಗನ್ನಡಿಯೆಂದರೆ ಪುರಾಣಸ್ತೋಮವೇ. ಪುರಾಣಸಂಹಿತೆಗಳಲ್ಲಿ ಹಲವು ವಿಶ್ವಕೋಶಗಳೇ ಆಗಿವೆ; ಅವುಗಳಲ್ಲಿ ಸನಾತನ ಮತಧರ್ಮದ ತತ್ತ್ವಗಳಿವೆ. ತತ್ತ್ವಜ್ಞಾನದ ವಿವಿಧ ವಿವರಣೆಗಳಿವೆ. ಐತಿಹಾಸಿಕ ಸಾಮಗ್ರಿಗಳಿವೆ. ವೈಯಕ್ತಿಕ ಜೀವನದ ಆಚಾರ ನಿಯಮಗಳಿವೆ. ಸಾಮಾಜಿಕ ಹಾಗೂ ರಾಜಕೀಯ ನೀತಿಗಳಿವೆ. ಅಷ್ಟಾದಶವೆಂದು ಪ್ರಸಿದ್ಧವಾದ ಮಹಾಪುರಾಣಗಳಲ್ಲಿರುವ ಶ್ಲೋಕಗಳ ಮೊತ್ತ ನಾಲ್ಕು ಲಕ್ಷಗಳಷ್ಟೆಂದು ಭಾಗವತ ಮಹಾಪುರಾಣದ ಹೇಳಿಕೆ.

ಪುರಾ (ಹಿಂದೆ) ನವಂ (ಹೊಸದು) ಎಂದು ಪುರಾಣಪದದ ವ್ಯುತ್ಪತ್ತಿಯನ್ನು ಹೇಳುವುದೊಂದು ಚಮತ್ಕಾರ. ಪುರಾ (ಹಿಂದಕ್ಕೆ) ನೀಯತೇ (ಒಯ್ಯಲ್ಪಡುತ್ತದೆ) ಎಂಬುದಿನ್ನೊಂದು ನಿರುಕ್ತಿ. ಬ್ರಾಹ್ಮಣ ಗ್ರಂಥಗಳಲ್ಲಿ ಬಳಸಲಾಗಿರುವ ಪುರಾಣವೆಂಬ ಪದಕ್ಕೆ ಕೇವಲ ಹಳೆಯ ಕತೆ ಎಂದಿಷ್ಟೇ ಅರ್ಥ. ಅದು ಇತಿಹಾಸ ಮತ್ತು ನಾರಾಶಂಸಿಗಳ ಸಾಲಿಗೆ ಸೇರಿದ್ದು. ಬಾಯಿಂದ ಬಾಯಿಗೆ ಹರಿದುಬಂದ ಹಳಗತೆಯ ರೂಪದಲ್ಲಿದ್ದ ಪುರಾಣವಸ್ತು ಕೆಲ ಅಂಶಗಳಲ್ಲಿ ವೇದವಾಙ್ಮಯಕ್ಕೂ ಹಿಂದಿನದೆಂದು ಹೇಳುತ್ತಾರೆ. ಆದರೆ ನಮಗೆ ಈಗ ಸಿಗುವ ಪುರಾಣಕೃತಿಗಳು ಸ್ವರೂಪತಃ ವೇದೋತ್ತರಕಾಲೀನ. ಇವು ವಿಶಿಷ್ಟಕೃತಿಗಳೆಂಬ ಸೂಚನೆಯನ್ನು ಛಾಂದೋಗ್ಯೋಪನಿಷತ್ತು ಕೊಟ್ಟಿದೆ. ಇವುಗಳ ಸ್ಪಷ್ಟೋಲ್ಲೇಖ ಸೂತ್ರವಾಙ್ಮಯದಲ್ಲಿದೆ.

ಮಹಾಪುರಾಣ, ಉಪಪುರಾಣಗಳೆರಡರಲ್ಲೂ ಕಂಡುಬರುವ ಐದು ಲಕ್ಷಣಗಳನ್ನು ಪ್ರ.ಶ. 5ನೆಯ ಶತಮಾನದಲ್ಲಿದ್ದ ಅಮರಸಿಂಹನೆಂಬ ಕೋಶಕಾರ ಹೇಳಿರುವುದು ಸುಪ್ರಸಿದ್ಧ: 1. ಸರ್ಗ ಅಥವಾ ಆದಿಸೃಷ್ಟಿಯ ವಿವರಗಳು. 2. ಪ್ರತಿಸರ್ಗ ಅಥವಾ ಪ್ರಳಯ ಮತ್ತು ಪುನಃ ಆದಿಸೃಷ್ಟಿಯ ಅನಂತರ ಮಾಡಲಾದ ಸೃಷ್ಟಿಸಂತಾನದ ವಿವರಗಳು. 3. ವಂಶ ಅಥವಾ ದಿವ್ಯಕುಲ ವಿವರಣೆ 4. ಮನ್ವಂತರ ಅಥವಾ ಹದಿನಾಲ್ಕು ಮನುಗಳ ಕಾಲಾವಧಿಯ ವಿಚಾರ. 5. ವಂಶಾನುಚರಿತ ಅಥವಾ ರಾಜಮಹಾರಾಜರುಗಳ ವಂಶ ವೃಕ್ಷಗಳು. ವಂಶಾನುಚರಿತಕ್ಕೆ ಬದಲಾಗಿ ಭೂಮ್ಯಾದಿಗಳ ಸಂಸ್ಥಾನ ಅಥವಾ ಜಾಗತಿಕ ಭೂಗೋಳ ವಿಜ್ಞಾನವನ್ನು ಐದನೆಯ ಲಕ್ಷಣವೆಂದು ಕೆಲವೆಡೆ ಹೇಳಿದೆ.

ಪ್ರತಿಯೊಂದು ಪುರಾಣದಲ್ಲೂ ಪಂಚಲಕ್ಷಣಗಳಿವೆಯೆಂದು ಹೇಳಬರುವಂತಿಲ್ಲ. ಕೆಲ ಪುರಾಣಗಳಲ್ಲಿ ಇವುಗಳಲ್ಲಿನ ಕೆಲ ಲಕ್ಷಣಗಳಿಲ್ಲ. ಪುರಾಣದ ಮುಖ್ಯ ಗುರಿ ಸಾಮಾನ್ಯವಾಗಿ ಮತ ಧರ್ಮದ ಉಪದೇಶ ಎಂದರೂ ಪೂರ್ಣ ಸರಿಯಾಗದು. ಶುದ್ಧವಾಗಿ ಧಾರ್ಮಿಕವೆನ್ನಿಸುವ ವ್ರತ, ನಿಯಮ, ಉಪವಾಸ, ತಪಸ್ಸು, ಶ್ರಾದ್ಧ, ದಾನ–ಮುಂತಾದ ಸನಾತನ ವಿಷಯಗಳು ಪುರಾಣದಲ್ಲಿರುವುದು ನಿಜ. ಆದರೆ ಇವೂ ಮತಪಂಥಗಳ ವಿಚಾರಗಳೂ ಅನಂತರ ಅದರಲ್ಲಿ ಬಂದು ಸೇರಿಕೊಂಡು ಪಂಚಲಕ್ಷಣಸೀಮೆಯನ್ನು ಅದು ಉಲ್ಲಂಘಿಸುವಂತೆ ಮಾಡಿದೆ. ಇದರ ಫಲವಾಗಿ ಮಹಾಪುರಾಣದ ಲಕ್ಷಣಗಳು ಐದರಿಂದ ಹತ್ತಕ್ಕೇರಿದುವು. 1. ವೃತ್ತಿ ಅಥವಾ ಜೀವನೋಪಾಯ. 2. ರಕ್ಷೆ ದಿವ್ಯಾವತಾರಗಳು. 3. ಮುಕ್ತಿ ಅಥವಾ ಸಂಸಾರಚಕ್ರದಿಂದ ಕೊನೆಯದಾಗಿ ಬಿಡುಗಡೆ ಹೊಂದುವುದು. 4. ಹೇತು ಅಥವಾ ಅವ್ಯಕ್ತ ಜೀವ ವಿಚಾರ. 5. ಬ್ರಹ್ಮವಿಚಾರ ಇಲ್ಲವೆ ಅಪಾಶ್ರಯ ಎಂಬೀ ಐದು ವಿಷಯಗಳನ್ನು ಹಿಂದೆ ಹೇಳಿದ ಐದಕ್ಕೆ ಸೇರಿಸಿದರೆ ದಶಲಕ್ಷಣಗಳಾಗುತ್ತವೆ. ಇನ್ನೊಂದು ಪಾಠದ ಪ್ರಕಾರ ಸರ್ಗ, ವಿಸರ್ಗ, ವೃತ್ತಿ, ರಕ್ಷೆ, ಅಂತರ, ವಂಶ, ವಂಶಾನುಚರಿತ, ಸಂಸ್ಥೆ, ಹೇತು ಮತ್ತು ಅಪಾಶ್ರಯಗಳು ದಶಲಕ್ಷಣಗಳು. ಬ್ರಹ್ಮನ ಐಶ್ವರ್ಯವರ್ಣನೆ, ವಿಷ್ಣುವಿನ ಮಾಹಾತ್ಮ್ಯದ ವಿವರಣೆ, ಸೂರ್ಯ, ರುದ್ರಾದಿಗಳ ಶಕ್ತಿ ವೈಭವದ ಉಲ್ಲೇಖ, ಸೃಷ್ಟಿಸ್ಥಿತಿಲಯಗಳ ನಿರೂಪಣೆ ಮತ್ತು ಚತುರ್ವಿಧ ಪುರಾಷಾರ್ಥಗಳ ಪ್ರತಿಪಾದನೆ ಇವು ಪುರಾಣಪ್ರಪಂಚಕ್ಕೆ ಸೇರುತ್ತವೆಯೆಂದು ಹೇಳಿ ಮತ್ಸ್ಯಪುರಾಣ ಪುರಾಣ ವಿಷಯಗಳ ವೈವಿಧ್ಯವನ್ನು ಹೆಚ್ಚಿಸಿದೆ. ಆದರೆ ಇಷ್ಟಕ್ಕೂ ಪುರಾಣದ ವಿಷಯ ವ್ಯಾಪ್ತಿ ಮುಗಿಯಿತೆನ್ನಲಾಗದು. ಭಾರತ ಮಹಾಭಾರತವಾಗಿ ಬೆಳೆದಂತೆ ಪ್ರತಿಯೊಂದು ಪುರಾಣವೂ ಕಾಲಕಾಲಕ್ಕೆ ಹೊಸ ಹೊಸ ವಿಷಯಗಳನ್ನೊಳಗೊಳ್ಳುತ್ತ, ಹಳೆಯ ವಿಷಯಗಳನ್ನು ಇಟ್ಟುಕೊಳ್ಳುತ್ತ ಅಥವಾ ಕಳೆದುಕೊಳ್ಳುತ್ತ, ಇಲ್ಲವೆ ಬದಲು ಮಾಡಿಕೊಳ್ಳುತ್ತ, ತಿದ್ದಿಕೊಳ್ಳುತ್ತ ಬೆಳೆದುಬಂದ ಗ್ರಂಥವಾಗಿದೆ. ಒಟ್ಟಿನಲ್ಲಿ ಪುರಾಣವೆಂದರೆ ಹಳಗತೆ, ಐತಿಹ್ಯ, ಪರಂಪರೆಯ ಇತಿಹಾಸ ಮುಂತಾದವನ್ನೊಳಗೊಂಡ ಕಥನ ಕವನ. ಪುರಾತನವಾದರೂ ಅತಿಪ್ರಾಚೀನವಲ್ಲದ ಮತ್ತು ಸಾಂಪ್ರದಾಯಿಕ ಹಾಗೂ ಈಚಿನ ಸನಾತನ ಸಂಸ್ಕೃತಿಯ ಪರಂಪರೆಯೇ ಪುರಾಣ.

ಹದಿನೆಂಟು ಪುರಾಣಗಳ ಹೆಸರನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಈ ಶ್ಲೋಕ ನೆರವಾಗುತ್ತದೆ:

ಮದ್ವಯಂ ಭದ್ವಯಂ ಚೈವ ಬ್ರತ್ರಯಂ ವಚತುಷ್ಟಯಂ।
ಅನಾಪಲಿಂಗಕೂಸ್ಕಾನಿ ಪುರಾಣಾನಿ ಪ್ರಚಕ್ಷ್ಯತ್ರೇ॥

ಅಂದರೆ ಮಕಾರಾದಿಯಾಗಿ ಎರಡು 1) ಮತ್ಸ್ಯ ಮತ್ತು 2) ಮಾರ್ಕಂಡೇಯ ಭಕಾರಾದಿಯಾಗಿ ಎರಡು– 3) ಭವಿಷ್ಯ ಮತ್ತು 4) ಭಾಗವತ; ಬ್ರಕಾರಾದಿಯಾಗಿ ಮೂರು– 5) ಬ್ರಹ್ಮಾಂಡ, 6) ಬ್ರಹ್ಮವೈವರ್ತ, ಮತ್ತು 7) ಬ್ರಾಹ್ಮ; ವಕಾರಾದಿಯಾಗಿ ನಾಲ್ಕು– 8) ವಾಮನ, 9) ವರಾಹ, 10) ವಿಷ್ಣು ಮತ್ತು 11) ವಾಯು; 13) ಅಗ್ನಿ, 13) ನಾರದ, 14) ಪದ್ಮ, 15) ಲಿಂಗ, 16) ಗರುಡ, 17) ಕೂರ್ಮ, 18) ಸ್ಕಂದ.

ಸಾಂಪ್ರದಾಯಿಕ ಗಣನೆಯ ಮೇರೆಗೆ ಬ್ರಾಹ್ಮ, ವೈಷ್ಣವ, ವಾಯವ್ಯ, ಭಾಗವತ, ನಾರದೀಯ, ಮಾರ್ಕಂಡೇಯ, ಆಗ್ನೇಯ, ಭವಿಷ್ಯ, ಬ್ರಹ್ಮವೈವರ್ತ, ಮತ್ಸ್ಯ, ವರಾಹ, ಲೈಂಗ, ಸ್ಕಾಂದ, ವಾಮನ, ಕೌರ್ಮ, ಗಾರುಡ ಮತ್ತು ಬ್ರಹ್ಮಾಂಡಗಳೆಂಬುವೇ 18 ಮಹಾಪುರಾಣಗಳು. ಈ ಪಟ್ಟಿಯಲ್ಲಿ ವಾಯವ್ಯಕ್ಕೆ ಬದಲಾಗಿ ದೇವೀಭಾಗವತವನ್ನೂ ಸೇರಿಸಿದ ಪಾಠಾಂತರಗಳಿವೆ. ಆದರಿವು ವಾಸ್ತವಿಕವಾಗಿ ಉಪಪುರಾಣಗಳು. ಹರಿವಂಶವನ್ನೂ ಅಷ್ಟಾದಶಪುರಾಣಗಳ ಜೊತೆಗೆ ಸೇರಿಸುವವರಿದ್ದಾರೆ. ಅದು ಅಷ್ಟೇನೂ ಉಚಿತವಲ್ಲ.

ವಿಷ್ಣುಭಕ್ತರ ದೃಷ್ಟಿಕೋನವನ್ನು ಹಿಡಿದು ವಿಷ್ಣು, ನಾರದ, ಭಾಗವತ, ಗರುಡ, ಪದ್ಮ, ವರಾಹ ಪುರಾಣಗಳನ್ನು ಸಾತ್ವಿಕ ಮಹಾಪುರಾಣಗಳೆಂದೂ ಬ್ರಹ್ಮಾಂಡ, ಬ್ರಹ್ಮವೈವರ್ತ, ಮಾರ್ಕಂಡೇಯ, ಬ್ರಹ್ಮ, ವಾಮನ, ಭವಿಷ್ಯ ಪುರಾಣಗಳನ್ನು ರಾಜಸ ಮಹಾಪುರಾಣಗಳೆಂದು ಮತ್ಸ್ಯ, ಕೂರ್ಮ, ಲಿಂಗ, ಶಿವ, ಅಗ್ನಿ, ಸ್ಕಂದ ಪುರಾಣಗಳನ್ನು ತಾಮಸ ಮಹಾಪುರಾಣಗಳೆಂದೂ ಪದ್ಮಮಹಾಪುರಾಣದಲ್ಲಿ ವರ್ಗೀಕರಿಸಲಾಗಿದೆ. ಸ್ಕಂದಪುರಾಣದ ಪ್ರಕಾರ ಅಷ್ಟಾದಶ ಪುರಾಣಗಳಲ್ಲಿ 10 ಶಿವಮಾಹಾತ್ಮ್ಯವನ್ನೂ 4 ಬ್ರಹ್ಮಮಾಹಾತ್ಮ್ಯವನ್ನೂ ಬಣ್ಣಿಸುತ್ತವೆ. ಉಳಿದೆರಡೆರಡು ಹರಿ, ದೇವಿಯರ ಮಾಹಾತ್ಮ್ಯವನ್ನು ಪ್ರತಿಪಾದಿಸುತ್ತವೆ. ಮತ್ಸ್ಯಪುರಾಣದ ಮೇರೆಗೆ ಅಗ್ನಿ ಸ್ತೋತ್ರ ಪ್ರಧಾನ ಪುರಾಣಗಳು ರಾಜಸ; ಸರಸ್ವತಿ, ಪಿತೃಸ್ತವನ ಪ್ರಧಾನ ಪುರಾಣಗಳು ಸಂಕೀರ್ಣ. ಪಂಚಲಕ್ಷಣದ ಮಾನದಂಡದಂತೆ ವಾಯು, ಬ್ರಹ್ಮಾಂಡ, ಮತ್ಸ್ಯ, ವಿಷ್ಣು, ಮಹಾಪುರಾಣಗಳು ಪ್ರಾಚೀನ; ವಸ್ತುಭೇದವನ್ನು ನಿಕಷವನ್ನಾಗಿ ತೆಗೆದುಕೊಂಡರೆ 18 ಮಹಾಪುರಾಣಗಳು 6 ಗುಂಪುಗಳಲ್ಲಿ ವಿಭಕ್ತವಾಗುತ್ತವೆ : 1. ಗರುಡ, ಅಗ್ನಿ, ನಾರದ ಮಹಾಪುರಾಣಗಳು ಪ್ರಥಮತಃ ವಾಙ್ಮಯ ವಿಶ್ವಕೋಶಗಳು. ಪೌರಾಣಿಕ ವಿಷಯಗಳೊಡನೆ ವೈದ್ಯ, ವ್ಯಾಕರಣ, ನಾಟ್ಯ, ಸಂಗೀತ, ಜ್ಯೋತಿಶ್ಶಾಸ್ತ್ರ ಮುಂತಾದುವುಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಒಳಗೊಂಡಿವೆ. 2. ಪದ್ಮ, ಸ್ಕಂದ, ಭವಿಷ್ಯ ಪುರಾಣಗಳಲ್ಲಿ ತೀರ್ಥ, ವ್ರತಾದಿಗಳ ವರ್ಣನೆಗೆ ಪ್ರಾಶಸ್ತ್ಯವಿದೆ. ಈ ಗುಂಪಿನ ಮೂಲ ಪೌರಾಣಿಕ ವಿಷಯಗಳು ಗುರುತು ಸಿಗದಷ್ಟು ಬದಲಾಗಿ ಹೋಗಿವೆ. ಇದಕ್ಕೆ ಉತ್ತರೋತ್ತರ ಪರಿಷ್ಕರಣಗಳೇ ಕಾರಣವಾಗಿರಬೇಕು. 3. ಬ್ರಹ್ಮ, ಭಾಗವತ, ಬ್ರಹ್ಮವೈವರ್ತ ಪುರಾಣಗಳಲ್ಲಿ ಮೂಲವಿಷಯದ ಆದ್ಯಂತಗಳಲ್ಲಿ ಎರಡು ಸಲ ಹೊಸ ವಿಷಯಗಳನ್ನು ಸೇರಿಸಿದಂತೆ ತೋರುತ್ತದೆ. 4. ಇರುವ ಬ್ರಹ್ಮಾಂಡ ಮತ್ತು ಕಳೆದು ಹೋದ ವಾಯುಪುರಾಣಗಳು ಚತುರ್ಥವರ್ಗ. ಈ ವರ್ಗಕ್ಕೆ ಐತಿಹಾಸಿಕ ಲಕ್ಷಣವಿದೆ. ಈಗ ಹಸ್ತಪ್ರತಿಯಲ್ಲಿರುವುದು ವಾಯುಪುರಾಣದ ಎರಡನೆಯ ಭಾಗದ ಅಂಶವೆಂದೂ ಇದರ ತಿರುಳು ಲುಪ್ತವಾಗಿದೆಯೆಂದೂ ಉಪಲಬ್ಧ

ವಾಯುಪುರಾಣವನ್ನು ಬ್ರಹ್ಮಾಂಡಪುರಾಣದಲ್ಲಿ ಲೀನಮಾಡಬಹುದೆಂದೂ ಕೆಲವರ ಮತ. 5. ಮತಪಂಥಗಳ ಪ್ರಚಾರಕ್ಕೆ ಅಗ್ರಪ್ರಾಶಸ್ತ್ಯವನ್ನೀಯುವ ಲಿಂಗ, ವಾಮನ, ಮಾರ್ಕಂಡೇಯಗಳದ್ದು ಪಂಚಮವರ್ಗ. ಲಿಂಗಪುರಾಣ ಲಿಂಗಪೂಜೆಯನ್ನೂ, ವಾಮನಪುರಾಣ ಶೈವವ್ರತಗಳನ್ನೂ ಮಾರ್ಕಂಡೇಯಪುರಾಣ ದೇವೀ ಮಾಹಾತ್ಮ್ಯವನ್ನೂ ಎತ್ತಿ ಹಿಡಿದಿವೆ. 6. ಮೂಲರೂಪವನ್ನು ಗುರುತಿಸಲು ಅಸಾಧ್ಯವಾಗುವಷ್ಟು ಪರಿಷ್ಕರಣ ಹೊಂದಿದ ವರಾಹ, ಕೂರ್ಮ, ಮತ್ಸ್ಯಪುರಾಣಗಳು ಬಹಳ ಹಳೆಯವೆಂದು ತೋರುತ್ತದೆ. ವಿಷ್ಣುವಿನ ವರಾಹಾವತಾರ ಒಂದನೆಯದರ ಅರೆವಾಸಿಯಷ್ಟನ್ನೂ ಮತ್ಸ್ಯಾವತಾರ ಎರಡನೆಯದರ ಅರ್ಧದಷ್ಟನ್ನೂ ಕೂರ್ಮಾವತಾರ ಎರಡನೆಯದರ ಒಂದನೆಯ ಎಂಟರಷ್ಟನ್ನೂ ಹೇಳಿವೆ.

**ಪುರಾಣಗಳ ಹೇಳಿಕೆಗಳಂತೆ ಪುರಾಣಗಳ ಹುಟ್ಟು ವಿವಿಧ :** ವೇದಗಳನ್ನು ವಿಭಜಿಸಿ ತನ್ನ ನಾಲ್ವರು ಶಿಷ್ಯರಿಗೆ ಹಂಚಿಕೊಟ್ಟ ಮೇಲೆ ವೇದವ್ಯಾಸಋಷಿ ಕತೆ, ಜೀವನವೃತ್ತಾಂತ, ಗೀತ ಮುಂತಾದವುಗಳಿಂದ ಕೂಡಿದ ಪುರಾಣ ಸಂಹಿತೆಯನ್ನು ಮಾಡಿ, ಅದನ್ನು ತನ್ನ ಐದನೆಯ ಶಿಷ್ಯನಾದ ಲೋಮಹರ್ಷಣ ಸೂತನಿಗೆ ಕಲಿಸಿದ. ಆತ ಅದನ್ನು ಆರುಪಾಠಗಳನ್ನಾಗಿ ಮಾಡಿ ಆರುಜನ ಶಿಷ್ಯರಿಗೆ ಹೇಳಿಕೊಟ್ಟ. ಅವರಲ್ಲಿ ಮೂವರು ಮಿಕ್ಕ ಪುರಾಣಾಂಶಗಳನ್ನು ಕಲೆಹಾಕಿದರು–ಎಂಬುದು ವಿಷ್ಣುಪುರಾಣದ ಹೇಳಿಕೆ. ಲೋಮಹರ್ಷಣನ ಷಟ್‌ಸಂಹಿತೆ, ಕಾಶ್ಯಪಸಂಹಿತೆ, ಸಾರ್ವಣಿಕ ಸಂಹಿತೆ ಮತ್ತು ಶಪಾಯನ ಸಂಹಿತೆ ಎಂಬೀ ನಾಲ್ಕನ್ನು ಮೂಲಸಂಹಿತೆಗಳೆಂಬುದು ಸಂಪ್ರದಾಯ. ಈ ಯಾವ ಸಂಹಿತೆಯೂ ಈಗ ಸಿಕ್ಕಿಲ್ಲ. ಸೂತಪುತ್ರ ಉಗ್ರಶ್ರವಸ್ಸನೂ ತನ್ನ ತಂದೆಯಿಂದ ಪುರಾಣಸಂಹಿತೆಯನ್ನು ಕಲಿತನಂತೆ. ವೇದಸಾಕ್ಷಾತ್ಕಾರಕ್ಕೂ ಮೊದಲು ಬ್ರಹ್ಮ ಪುರಾಣಗಳನ್ನು ಸಂಕಲಿಸಿ ಸೂತರ ಕೈಗಿತ್ತನೆಂದೂ ಸೂತರ ಮೂಲಪುರುಷ ಮೊಟ್ಟಮೊದಲು ಬ್ರಹ್ಮ ಮಾಡಿದ ಯಜ್ಞದಲ್ಲಿ ಯೋಗಬಲದಿಂದ ಹುಟ್ಟಿದ ಪೂಜ್ಯ ಬ್ರಾಹ್ಮಣನೆಂದೂ ವಾಯುಪುರಾಣದ ಹೇಳಿಕೆ. ಹೀಗೆ ವಿಷ್ಣುಪುರಾಣದಲ್ಲಿ ನಾಲ್ಕಾಗಿ ವಾಯುಪುರಾಣದಲ್ಲಿ ಹತ್ತಾಗಿ, ಪುರಾಣಸಂಖ್ಯೆ ಕೊನೆಯಲ್ಲಿ ಹದಿನೆಂಟಕ್ಕೇರಿ ಅಲ್ಲೇ ನಿಂತಿತು. ಅಗ್ನಿ, ವಾಯು, ಸೂರ್ಯ ಪುರಾಣಗಳು ಋಕ್. ಯಜಸ್, ಸಾಮವೇದಗಳ ಶಾಖೆಗಳೆಂದೂ ಪುರಾಣಗಳೆಲ್ಲವೂ ಹಾಗೆಯೇ ಬೇರೆ ಬೇರೆ ವೇದಗಳ ಶಾಖೆಗಳಾಗಿಯೇ ಉದಯಿಸಿದುವೆಂದೂ ಕೆಲವರ ಮತ.

ಪುರಾಣಗಳ ಬೆಳವಣಿಗೆಯನ್ನು 3 ಹಂತಗಳಾಗಿ ವಿಂಗಡಿಸಬಹುದು : ವೇದವಾಙ್ಮಯದಲ್ಲಿಯ ಇತಿಹಾಸ, ಗಾಥೆ, ನಾರಾಶಂಸಿ, ವಂಶ, ಆಖ್ಯಾನ ಮುಂತಾದ ಹಳಗತೆಗಳನ್ನಾಧರಿಸಿ ಸೂತ ಸಂಕಲಿಸಿದ ಹಂತ ಮೊದಲನೆಯದು. ಪುರಾಣಗಳ ಇತಿಹಾಸದಲ್ಲಿ ಭಾರತ ಯುದ್ಧವೊಂದು ಗಡಿಗೆರೆ. ಅಂದಿನಿಂದ ಮುಂದಿನ ನಾಲ್ಕು ತಲೆಮಾರುಗಳವರೆಗಿನ ಅರಸರ ಉಲ್ಲೇಖವನ್ನು ಭೂತಕಾಲೀನವೆಂದೂ ಅನಂತರದ ರಾಜರ ಉಲ್ಲೇಖವನ್ನು ಭವಿಷ್ಯಕಾಲೀನವೆಂದೂ ಪರಿಗಣಿಸುವ ರೂಢಿ ಪುರಾಣಗಳಲ್ಲಿ ನೆಲೆನಿಂತಿತು. ಅನಂತರ ಉಪನಿಷತ್ ಯುಗ ಎರಡನೆಯ ಸೋಪಾನ. ಸೃಷ್ಟಿ ವಿಷಯವೂ ಸಾಂಖ್ಯ ಔಪನಿಷದಿಕ ತತ್ತ್ವಪ್ರಣಾಲಿಗಳೂ ಮನ್ವಂತರ ವಿವರಣೆಯೊಂದಿಗೇ ಪುರಾಣವನ್ನು ಸೇರಿಕೊಂಡಿದ್ದು ಈ ಮೆಟ್ಟಲಲ್ಲಿ. ಸೂತ್ರವಾಙ್ಮಯದ ಯುಗ ಪುರಾಣಪರಿವೃದ್ಧಿಯ ಮೂರನೆಯ ಕಾಲಮಾನ. ಆಪಸ್ತಂಬಸೂತ್ರದಲ್ಲಿ ಹೇಳಿದೆ. ವದತೋವ್ಯಾಘಾತವುಳ್ಳ ಭವಿಷ್ಯತ್‌ಪುರಾಣವೆಂಬ ತಲೆಬರಹದಿಂದ ಪುರಾಣವೆಂಬ ಪದದ ಮೂಲಾರ್ಥ ಮಾಯವಾಗಿ ಅದೊಂದು ವಿಶಿಷ್ಟವರ್ಗದ ಗ್ರಂಥಗಳ ಹೆಸರೆನಿಸಿದ್ದು ಸ್ಪಷ್ಟವಾಗುತ್ತದೆ. ಈ ಹಂತದ ಪುರಾಣಗಳೇ ಬಹುಶಃ ಪಂಚಲಕ್ಷಣಗಳ ಅನ್ವಯಕ್ಕೆ ಎಡೆಗೊಟ್ಟಿರಬೇಕು. ಈ ಸಂದರ್ಭದಲ್ಲೇ ಅವುಗಳಲ್ಲಿ ಭಕ್ತಿಗೂ ಭೂ ವಿವರಣೆಗೂ ಸಂಬಂಧಿಸಿದ ವಿಷಯಗಳು ಸೇರಿಕೊಳ್ಳಲಾರಂಭಿಸಿರಬೇಕು. ವರ್ಣ, ಆಶ್ರಮ, ಶ್ರಾದ್ಧ, ದಾನ, ದೀಕ್ಷೆ, ವ್ರತ, ತೀರ್ಥಯಾತ್ರೆ–ಮುಂತಾದ ಮತ ಧಾರ್ಮಿಕ ವಿಷಯಗಳು ಅವನ್ನು ಹೊಕ್ಕಿರಬೇಕು. ಅಂದರೆ ಪ್ರ.ಶ. ಸು. 4ನೆಯ ಶತಮಾನದಷ್ಟು ಹೊತ್ತಿಗೆ ಉಪಲಬ್ಧ ಪುರಾಣಗಳ ರೂಪರಚನೆ ನಿರ್ದಿಷ್ಟವಾಗಿ ಖಚಿತಗೊಂಡು ಪುರಾಣಸಾಹಿತ್ಯದ ವಿಶಿಷ್ಟಶೈಲಿಯ ಮಾದರಿ ಬೆಳಕಿಗೆ ಬಂತೆನ್ನಬಹುದು. ಆಮೇಲೆ ಪ್ರತಿ ತಲೆಮಾರೂ ಪುರಾಣಗಳಿಗೆ ವಿವಿಧ ವಿಷಯಗಳನ್ನು ಸೇರಿಸುತ್ತ ಬಂದಿತು.

ಪುರಾಣಗಳ ಪ್ರಕಾರ ಸೃಷ್ಟಿಯಿರುವುದು ಬ್ರಹ್ಮನ ಹಗಲಿನಲ್ಲಿ. ಆತನ ಹಗಲಿಗೆ 14 ಮನ್ವಂತರಗಳು ಅಥವಾ 423ಕೋಟಿ ಮಾನುಷ ವರ್ಷಗಳು. ಸಾವಿರ ದೇವ ಯುಗದಳಕ್ಕೆ ಸಮಾನ. ಅದೊಂದು ಕಲ್ಪ. ಒಂದೊಂದು ಮನ್ವಂತರಕ್ಕೆ 30 ಕೋಟಿ, 67 ಲಕ್ಷ, 20 ಸಾವಿರ ವರ್ಷಗಳು. ಇಂಥ 14 ಮನ್ವಂತರಗಳೂ 15 ಸಂಧಿಕಾಲಗಳೂ ಬ್ರಹ್ಮನ ಒಂದು ಹಗಲಿಗೆ ಸಮಾನ. ಮನುಷ್ಯರ ಚತುರ್ಯುಗ ಚಕ್ರವೊಂದಕ್ಕೆ ಒಂದು ದೇವ ಅಥವಾ ಮಹಾಯುಗ. ಒಂದು ಮಹಾಯುಗಕ್ಕೆ 43 ಲಕ್ಷ, 20 ಸಾವಿರ ವರ್ಷಗಳು. ಕಲ್ಪಾಂತದಲ್ಲಿ ಮಹಾಪ್ರಳಯ. ಅನಂತರ ಮತ್ತೊಂದು ಕಲ್ಪ ಬ್ರಹ್ಮನ ರಾತ್ರಿ. ಆಗ ವಿಶ್ವವಿಲ್ಲ. ಒಂದೊಂದು ಮನ್ವಂತರ ಮುಗಿದ ಕೂಡಲೆ ಕೆಳವರ್ಗದ ಪ್ರಾಣಿಗಳ ಮತ್ತು ಕೆಳಲೋಕಗಳ ನಾಶವುಂಟಾಗುತ್ತದೆ. ಈ ಅಲ್ಪ ಪ್ರಳಯದಲ್ಲಿ ಋಷಿ. ದೇವತೆಗಳೂ ವಿಶ್ವದ ಮೂಲದ್ರವವೂ ನಾಶಹೊಂದದು. ಪ್ರತಿಸರ್ಗವೆಂಬ ನೈಮಿತ್ತಿಕಮಹಾಪ್ರಲಯ ಕಲ್ಪಕ್ಕೊಂದು; ಆಗ ಸರ್ವನಾಶ. ಮೂಲದ್ರವ್ಯವಾದ ಪ್ರಕೃತಿ ನಷ್ಟಹೊಂದುವ ಈ ಮಹಾಪ್ರಳಯವೊಂದು ಪ್ರಾಕೃತಪ್ರಲಯ. ಇದರಲ್ಲಿ ಸೃಷ್ಟಿಕರ್ತನಾದ ಬ್ರಹ್ಮ ಪರಬ್ರಹ್ಮಲೀನನಾಗುವನು.

ಸಂಧಿಕಾಲರಹಿತವಾದ ಒಂದೊಂದು ಮನ್ವಂತರ 71 ಚತುರ್‌ಯುಗ ಚಕ್ರಗಳಿಗೆ ಸಮವೆಂದು ಮಾಡಿದ್ದು ಅನಂತರದ ವ್ಯವಸ್ಥೆ. ಕೃತ, ತ್ರೇತ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳ ವರ್ಷಸಂಖ್ಯೆ 4:3:2:1 ಎಂಬ ಇಳಿತಾಯದ ಪ್ರಮಾಣದಲ್ಲಿ ನಿಷ್ಪನ್ನವಾದದ್ದೂ ಆಮೇಲಿನ ಕಲ್ಪನೆಯಿಂದಲೇ. ಭಾರತದ ಕುರುಕ್ಷೇತ್ರ ಕದನ ದ್ವಾಪರಾಂತ್ಯದಲ್ಲಿ ನಡೆಯಿತು. ಅನಂತರ ಕಲಿಯುಗಾರಂಭ. ಕೃತದಲ್ಲಿ 7ನೆಯವನಾದ ವೈವಸ್ವತ ಮನುವಿನಿಂದ ಹಿಡಿದು 40 ತಲೆಮಾರುಗಳು ಅಳಿದ ಬಳಿಕ ಹೈಹಯರ ನಾಶದಿಂದ ಆ ಯುಗ ಕೊನೆಗೊಂಡಿತೆಂದೂ ತ್ರೇತೆಯಲ್ಲಿ ಸಗರ ಚಕ್ರವರ್ತಿಯ ಆಳ್ವಿಕೆಯಿಂದ ಆರಂಭಿಸಿ 25 ತಲೆಮಾರುಗಳು ಅದನ್ನು ನಡೆಸಿಕೊಂಡು ಹೋದುವೆಂದೂ ದ್ವಾಪರದಲ್ಲಿ ಚಂದ್ರವಂಶದ 30 ತಲೆಮಾರುಗಳ ಅರಸರು ಆಳಿ ಅಳಿದರೆಂದೂ ಪುರಾಣಗಳಲ್ಲಿ ಹೇಳಿದೆ. ಕುರುಕ್ಷೇತ್ರ ಕದನದ ಕಾಲ ಪ್ರ.ಶ.ಪೂ. 1400 ಎಂದು ಇತಿಹಾಸಜ್ಞರ ಮತ. ಅದಕ್ಕೆ 1800 ವರ್ಷಗಳ ಹಿಂದೆ ಅಥವಾ ಪ್ರ.ಶ.ಪೂ. 3200ರಲ್ಲಿ–ಮಹಾಪ್ರವಾಹದ ಉತ್ತರಕಾಲದಲ್ಲಿ–ಭಾರತದ ಪಾರಂಪರಿಕ ಚರಿತ್ರೆಯ ಕಾಲ ಆರಂಭಿಸಿತೆನ್ನಬಹುದು.

ಪುರಾಣದ ಭೂಗೋಳವಿಜ್ಞಾನ ಬಹಳ ಸ್ವಾರಸ್ಯವಾಗಿದೆ. ಮೇರುಪರ್ವತ ಭೂಲೋಕದ ಮಧ್ಯಸ್ಥಳ. ಸುತ್ತಲೂ ಉಪ್ಪುನೀರಿನ, ಕಬ್ಬಿನ ಹಾಲಿನ, ಹೆಂಡದ, ತುಪ್ಪದ, ಮೊಸರಿನ, ಹಾಲಿನ ಮತ್ತು ಶುದ್ಧವಾದ ನೀರಿನ ಏಳು ಕಡಲುಗಳಿವೆ. ಅವುಗಳಲ್ಲಿ ಒಂದೊಂದರಿಂದ ಪ್ರತ್ಯೇಕವಾಗಿ ಸುತ್ತುವರಿಯಲ್ಪಟ್ಟ ಜಂಬು, ಪ್ಲಕ್ಷ (ಗೋವೇದಕ) ಶಾಲ್ಮಲ, ಕುಶ, ಕ್ರೌಂಚ, ಶಾಕ ಮತ್ತು ಮುಷ್ಕರ ಎಂಬ ಹೆಸರಿನ ಏಳು ದ್ವೀಪರೂಪದ ಖಂಡಗಳಿವೆ. ಭಾರತ ಜಂಬೂದ್ವೀಪದ ಒಂದು ವರ್ಷ ಅಥವಾ ದೇಶ. ಇಂದ್ರದ್ವೀಪ, ಕಶೇರುಮತ್, ತಾಮ್ರವರ್ಣ, ಗಭಸ್ತಿಮತ್, ನಾಗದ್ವೀಪ, ಸೌಮ್ಯ, ಗಾಂಧರ್ವ, ವಾರುಣ, ಕುಮಾರಕ–ಎಂಬೀ ಒಂಬತ್ತು ಪುರಾಣ ಭಾರತದ ಪ್ರಾಂತರಾಜ್ಯಗಳು.

**ಅಷ್ಟಾದಶ ಪುರಾಣಗಳು ಹೀಗಿವೆ :** ಬ್ರಹ್ಮಪುರಾಣ : ಅಷ್ಟಾದಶ ಮಹಾಪುರಾಣಗಳ ಎಲ್ಲ ಪಟ್ಟಿಗಳಲ್ಲೂ ಹತ್ತು ಸಾವಿರ ಶ್ಲೋಕಗಳುಳ್ಳವೆಂದು ಹೆಸರಾದರೂ ನಿಜವಾಗಿ ಸುಮಾರು 7–8 ಸಾವಿರ ಶ್ಲೋಕಗಳನ್ನಷ್ಟೇ ಉಳ್ಳ ಇದು ಆದಿಪುರಾಣವೆಂದು ಹೆಸರಾಗಿದೆ. ಉಪೋದ್ಘಾತದಲ್ಲಿ ಲೋಮಹರ್ಷಣ ಸೂತನ ನೈಮಿಷಾರಣ್ಯಕ್ಕೆ ಹೋದಾಗ ಅಲ್ಲಿದ್ದ ಋಷಿಗಳು ಪ್ರಪಂಚದ ಆದ್ಯಂತಗಳನ್ನು ವಿವರಿಸಲು ಕೇಳಿಕೊಳ್ಳಲಾಗಿ ಸೂತಪುರಾಣಿಕ ಮಾನವಕುಲದ ಮೂಲಪಿತಾಮಹರಲ್ಲಿ ಒಬ್ಬನಾದ ದಕ್ಷನಿಗೆ ಒಮ್ಮೆ ಸೃಷ್ಟಿಕರ್ತನಾದ ಬ್ರಹ್ಮ ಹೇಳಿದ ಬ್ರಹ್ಮಪುರಾಣವನ್ನು ಹೇಳಲು ಒಪ್ಪುತ್ತಾನೆ. ಅವನ ಪುರಾಣ ಪ್ರವಚನದಲ್ಲಿ ಎಲ್ಲ ಪುರಾಣಗಳಿಗೂ ಹೆಚ್ಚು ಕಡಿಮೆ ಸಾಧಾರಣವೆನ್ನಿಸುವ ವಿಶ್ವಸೃಷ್ಟಿ, ಆದಿಮಾನವನಾದ ಮನು ಮತ್ತು ಅವನ ವಂಶಜರ ಹುಟ್ಟು, ದೇವತೆಗಳ ಉತ್ಪತ್ತಿ, ಗಂಧರ್ವಾದಿಗಳ ಉದಯ, ಸೂರ್ಯ, ಚಂದ್ರವಂಶಜರ ರಾಜ ಮಹಾರಾಜರ ಪೀಳಿಗೆಯ ವೃತ್ತಾಂತ, ಭೂವಿಭಾಗ, ಸ್ವರ್ಗ, ನರಕಗಳ ವಿವರ ಬರುತ್ತವೆ. ಪುರಾಣದ ಬಹ್ವಂಶ ತೀರ್ಥ ಮಾಹಾತ್ಮ್ಯವನ್ನು ಹೇಳುತ್ತದೆ. ಒರಿಸ್ಸದ ದೇವಾಲಯ ಮತ್ತು ಸುತ್ತಮುತ್ತಲಿನ ತೀರ್ಥಕ್ಷೇತ್ರಗಳು ಗಣ್ಯವಾಗಿ ವರ್ಣಿಸಲ್ಪಟ್ಟವೆ. ಆದಿತ್ಯೋತ್ಪತ್ತಿ, ಶಿವಪ್ರಿಯವನ, ಉಮಾಜನನ, ಉಮಾವಿವಾಹ, ಶಿವಸ್ತೋತ್ರ, ಕಂಡುಮಹರ್ಷಿಯ ಸ್ತ್ರೀಲೋಲುಪತೆ, ವಿರಾಗ, ಕೃಷ್ಣಲೀಲೆ, ಶ್ರಾದ್ಧನಿಯಮ, ಧಾರ್ಮಿಕ ಜೀವನದ ನೀತಿ, ವರ್ಣಾಶ್ರಮ ಧರ್ಮ, ಸ್ವರ್ಗ, ನರಕ, ವಿಷ್ಣುಪೂಜಾದಿಗಳು–ಇವು ಇದರ ಸಾರ. ಯುಗ, ಪ್ರಲಯ, ಸಾಂಖ್ಯಯೋಗ, ಮೋಕ್ಷೋಪಾಯಗಳ ವಿವೇಚನೆಯೂ ಕೊನೆಯಲ್ಲಿವೆ. ಪ್ರಸ್ತುತ ಪುರಾಣದಲ್ಲಿ ಅತ್ಯಲ್ಪಭಾಗ ಪ್ರಾಚೀನ; ತೀರ್ಥಮಾಹಾತ್ಮ್ಯವಂತೂ ಪ್ರ.ಶ. 13ನೆಯ ಶತಮಾನಕ್ಕಿಂತ ಹಿಂದಿನದೆನ್ನಿಸದು.

**ಪದ್ಮ ಪುರಾಣ :** ಇದಕ್ಕೆ ಸುಪ್ರಸಿದ್ಧವಾದ ಎರಡು ಪಾಠ ಸಂಪ್ರದಾಯಗಳಿವೆ. ಅವುಗಳಲ್ಲಿ ಆದಿ, ಭೂಮಿ, ಬ್ರಹ್ಮ, ಪಾತಾಳ, ಸೃಷ್ಟಿ, ಉತ್ತರಖಂಡಗಳೆಂಬ ಆರು ಭಾಗಗಳುಳ್ಳದ್ದು ಹೆಚ್ಚು ಅರ್ವಾಚೀನ; ಸೃಷ್ಟಿ, ಭೂಮಿ, ಸ್ವರ್ಗ, ಪಾತಾಳ, ಉತ್ತರ ಖಂಡಗಳೆಂಬ ಐದು ಭಾಗಗಳಿರುವ ಬಂಗಾಲಿ ಹಸ್ತಪ್ರತಿಯ ಪಾಠಸಂಪ್ರದಾಯ ಹೆಚ್ಚು ಪ್ರಾಚೀನ. ಈ ಖಂಡಗಳೆಲ್ಲವೂ ಬಹುಶಃ ಬೇರೆ ಬೇರೆ ಕಾಲಾವಧಿಗಳಲ್ಲಿ ಬರೆದ ಪ್ರತ್ಯೇಕ ಕೃತಿಗಳು. ಅನಂತರ ಯಾರೋ ಅವೆಲ್ಲವನ್ನೂ ಸಂಕಲಿಸಿ ಪದ್ಮಪುರಾಣವೆಂಬ ಹೆಸರನ್ನು ಕೊಟ್ಟಿರಬೇಕು. ಏಕೆಂದರೆ, ಅತ್ಯಂತ ಅರ್ವಾಚೀನವೆನ್ನಬಹುದಾದ ಭಾಗವತ ಪುರಾಣದಲ್ಲಿರುವ ಕೆಲ ಅಂಶಗಳಿಗೂ ಇತ್ತೀಚಿನವೆನ್ನಿಸುವ ಅಂಶಗಳಿದರಲ್ಲಿವೆ. ಸೃಷ್ಟಿಕ್ರಮ, ಸೂರ್ಯ ವಂಶದ ರಾಜರ ಅನುಚರಿತ, ಶ್ರಾದ್ಧವಿಚಾರ, ಚಂದ್ರವಂಶದ ರಾಜರ ವೃತ್ತಾಂತ, ದೇವಾಸುರಸಮರ, ಪುಷ್ಕರಸರಸ್ಸಿನ ವರ್ಣನೆ, ದುರ್ಗಾರಾಧನೆಯ ವ್ರತ ಮತ್ತು ಹಬ್ಬಗಳು, ಸೃಷ್ಟಿಯ ಪುನರ್ ವಿವರಣೆ, ವಿಷ್ಣು ಅಸುರಾಂತಕನಾದುದು, ಸ್ಕಂದಜನನ ಮತ್ತು ಸ್ಕಂದವಿವಾಹ, ಸೋಮಶರ್ಮ

ಪ್ರಹ್ಲಾದನಾಗಿ ಹುಟ್ಟಿದ ಕತೆ; ಪವಿತ್ರಸ್ಥಳಗಳಲ್ಲದೆ ತಂದೆ, ಗುರು, ಅಥವಾ ಹೆಂಡತಿಯರು ತೀರ್ಥ ಸ್ವರೂಪವಾದುದರ ನಿದರ್ಶನ; ದೇವಲೋಕದ ವರ್ಣನೆ, ಶಕುಂತಲಾವೃತ್ತಾಂತ, ಊರ್ವಶೀ ಪುರೂರವರ ಕಥೆ, ವರ್ಣಾಶ್ರಮಧರ್ಮ, ವಿಷ್ಣುಪೂಜೆ ನಾಗಲೋಕದ ವಿಸ್ತಾರ, ರಾಮೋಪಾಖ್ಯಾನ, ಋಷ್ಯಶೃಂಗಚರಿತ ತೀರ್ಥಮಾಹಾತ್ಮ್ಯ, ರಾಧಾಕೃಷ್ಣ ಲೀಲೆ, ಸಾಲಿಗ್ರಾಮಪಾವಿತ್ರ್ಯ, ವಿಷ್ಣುವ್ರತ, ವಿಷ್ಣುನಿಯಮ, ವಿಷ್ಣೋತ್ಸವಗಳು, ಭಗವದ್ಗೀತಾಪ್ರಾಶಸ್ತ್ಯ, ವಿಷ್ಣುಸಹಸ್ರನಾಮ ಮೊದಲಾದ ವಿಷಯಗಳಲ್ಲದೆ, ಉತ್ತರ ಖಂಡದ ಬಳಿಕ ಬರುವ ಕ್ರಿಯಾಯೋಗಸಾರವೆಂಬ ಅನುಬಂಧ ವಿಷ್ಣುವಿನ ನಿಜವಾದ ಆರಾಧನೆಗೆ ಧ್ಯಾನಯೋಗಕ್ಕಿಂತ ಕರ್ಮಯೋಗವೇ ಹೆಚ್ಚು ಪ್ರಶಸ್ತವೆಂದು ಬೋಧಿಸಿದೆ. ಇದರ ಪಂಚಖಂಡಗಳ ಒಟ್ಟು ಶ್ಲೋಕಸಂಖ್ಯೆ 48,452. ಇದರ ಇಂದಿನ ರೂಪದ ಕಾಲ ಸು. ಕ್ರಿ.ಶ. 12ನೆಯ ಶತಮಾನವೆನ್ನಬಹುದು.

**ವಿಷ್ಣು ಪುರಾಣ :** ವಿಷ್ಣು ಪ್ರಾಧಾನ್ಯ ನಿರೂಪಣೆ ಇದರ ಉದ್ದೇಶ. ಇದರ ಆರು ಖಂಡಗಳಲ್ಲಿ ವಸಿಷ್ಠನ ಮೊಮ್ಮಗನಾದ ಪರಾಶರ ತನ್ನ ಶಿಷ್ಯನಾದ ಮೈತ್ರೇಯನಿಗೆ ಸೃಷ್ಟ್ಯಾದಿ ವಿವಿಧ ವಿಷಯಗಳನ್ನು ತಿಳಿಸುತ್ತಾನೆ. ಮೊದಲು ವಿಷ್ಣು ಸ್ತುತಿ ಬರುತ್ತದೆ. ಆಮೇಲೆ ಸರ್ವಸಾಧಾರಣವಾದ ಪೌರಾಣಿಕ ರೀತಿಯ ಸೃಷ್ಟಿ ವಿವರಣೆ, ಸಾಂಖ್ಯತತ್ತ್ವ ವಿಚಾರ, ವಿವಿಧ ದೇವದಾನವ ಕಥೆಗಳು, ಹಳೆಯ ರಾಜರ ಮತ್ತು ಋಷಿಗಳ ವೃತ್ತಾಂತಗಳು ಬರುತ್ತದೆ. ಸಮುದ್ರ ಮಥನ, ಲಕ್ಷ್ಮಿಯ ಉದಯ, ಧ್ರುವೋಪಾಖ್ಯಾನ, ಪ್ರಹ್ಲಾದನ ಕತೆ ಮೊದಲಾದುವು ಕತೆಗಳಲ್ಲಿ ಗಣ್ಯ. ಎರಡನೆಯ ಖಂಡದ ಮೊದಲ ಅಧ್ಯಾಯಗಳಲ್ಲಿ ಭೂವಿವರಣೆಯ ಕಲ್ಪನಾವಿಲಾಸ ಕಾವ್ಯಮಯವಾಗಿ ಬಂದಿವೆ. ನಾಗ, ನಾಕ, ನರಕ ಲೋಕಗಳ ವೈಚಿತ್ರ್ಯವನ್ನೂ ಇಲ್ಲಿ ಕಾಣಬಹುದು. ಕಲ್ಪನಾಭೃಂಗದ ಬೆನ್ನೇರಿ ಗುಹ್ಯ, ನಕ್ಷತ್ರ, ಗ್ರಹಲೋಕಗಳಿಗೂ ಹೋಗಬಹುದು. ಒಂದು ತಾತ್ತ್ವಿಕ ಸಂವಾದಕ್ಕೆ ಉಪೋದ್ಘಾತರೂಪವಾಗಿ ಜಡಭರತಮುನಿಯ ಕತೆ, ಋಭು ಮತ್ತು ನಿತಾಘರ ಕತೆ ಬಂದಿದೆ. ಮೂರನೆಯ ಖಂಡದಲ್ಲಿ ಮನು, ಮನ್ವಂತರಗಳ ವಿವರಗಳೂ ಚತುರ್ವೇದ ವಿಚಾರವೂ ಅಷ್ಟಾದಶಪುರಾಣಗಳ ಮತ್ತು ವಿವಿಧ ಶಾಸ್ತ್ರಗಳ ಉಲ್ಲೇಖ ತುಂಬಿದೆ. ಇಷ್ಟಲ್ಲದೆ ಯಮ, ಯಮದೂತರ ಒಂದು ಸುಂದರ ಸಂವಾದ, ವರ್ಣಾಶ್ರಮಧರ್ಮ, ಶ್ರಾದ್ಧಕರ್ಮ, ಜೈನ, ಬೌದ್ಧಮತ ವಿಡಂಬನೆಗಳು ಯಥೇಚ್ಛವಾಗಿವೆ. ನಾಲ್ಕನೆಯ ಖಂಡದಲ್ಲಿ ಪ್ರಸಿದ್ಧ ಪ್ರಾಚೀನ ರಾಜರ ವಂಶಾವಳಿ, ದಕ್ಷ, ಇಳೆ, ಇಕ್ಷ್ವಾಕು, ರೈವತ, ರೇವತಿ, ಯೌವನಾಶ್ವ, ಮಾಂಧಾತೃ, ಸೌಭರಿ, ಪುರೂರವ, ಊರ್ವಶಿ, ಯಯಾತಿ, ರಾಮ, ಪಾಂಡವ, ಕೃಷ್ಣ–ಮುಂತಾದವರ ಕಥೆಗಳು ಮತ್ತು ಮುಂದಿನ ಮಗಧರಾಜರಾದ ಶೈಶುನಾಗ, ನಂದ, ಮೌರ್ಯ, ಸುಂಗ, ಕಾಣ್ವಾಯನ, ಆಂಧ್ರಭೃತ್ಯ, ಮ್ಲೇಚ್ಛ, ಕಲ್ಕಿಗಳ ವೃತ್ತಾಂತಗಳು ನಿವೃತವಾಗಿವೆ. ಐದನೆಯ ಖಂಡದಲ್ಲಿ ಕೃಷ್ಣನ ಜೀವನೇತಿಹಾಸ ವಿಸ್ತಾರವಾಗಿ ವರ್ಣಿತವಾಗಿದೆ. ಕೊನೆಯ ಖಂಡ ಕೃತ, ತ್ರೇತ, ದ್ವಾಪರ, ಕಲಿಯುಗಗಳ ಹಾಗೂ ಪ್ರಳಯದ ವಿವರಗಳಿಂದಲೂ ಸಂಸಾರಚಕ್ರದ ಕ್ಲೇಶಗಳಿಂದಲೂ ಮುಕ್ತಿಯ ಪ್ರಾಶಸ್ತ್ಯದಿಂದಲೂ ಅದಕ್ಕೆ ಅಗತ್ಯವಾದ ಯೋಗದ ವಿವರಣೆಯಿಂದಲೂ ಇಡೀ ಪುರಾಣದ ವಿಷಯಗಳ ಪುನಃಸ್ಮರಣೆ ಮತ್ತು ವಿಷ್ಣುಸ್ತುತಿಗಳಿಂದಲೂ ಕೂಡಿದೆ. ಪುರಾಣದ ಶ್ಲೋಕ ಸಂಖ್ಯೆ 23,000 ಎಂಬ ಹೇಳಿಕೆಯಿದ್ದರೂ ಸದ್ಯ ಕಂಡುಬರುವುದು 7,000 ಶ್ಲೋಕಗಳು ಮಾತ್ರ. ಕಾಲ ಪ್ರ.ಶ. 3ನೆಯ ಶತಮಾನ ಎನ್ನುತ್ತಾರೆ.

ವಿಷ್ಣುಪುರಾಣದ ಸೃಷ್ಟಿಕ್ರಮದ ವಿವರಣೆ ಹೆಚ್ಚು ಸ್ಥೂಲವಾಗಿ ಹೀಗಿದೆ: ವಿಷ್ಣು ಮೊದಲು ಪುರುಷನಾದ. ಅವ್ಯಕ್ತ ವ್ಯಕ್ತ ಮತ್ತು ಕಾಲಗಳು ಅವನ ಆಮೇಲಿನ ಮೂರು ಆವಿರ್ಭಾವಗಳು. ಅವ್ಯಕ್ತ, ಪ್ರಕೃತಿ ಅಥವಾ ಪ್ರಧಾನ ಎಂಬುದು ಸದಸದಾತ್ಮಕ ಮತ್ತು ತ್ರಿಗುಣಯುಕ್ತ. ಪುರುಷ, ಪ್ರಕೃತಿಗಳನ್ನು ಸೃಷ್ಟಿಕಾಲದಲ್ಲಿ ಕೂಡಿಸುವ ಮತ್ತು ಲಯಕಾಲದಲ್ಲಿ ಬಿಡಿಸುವ ಕಾಲದ ಅಸ್ತಿತ್ವ ವಾಸ್ತವಿಕ ಮತ್ತು ಅನಾದಿ. ಬ್ರಹ್ಮನುವಿಷ್ಣುವಿನ ವ್ಯಕ್ತರೂಪ. ಮೂಲಕಾರಣನಾದ ವಿಷ್ಣು ಶುದ್ಧ ಅಸ್ತಿತ್ವದ ರೂಪದಲ್ಲಿರುವುದರಿಂದ ವಾಸುದೇವ ಎನ್ನಿಸುತ್ತಾನೆ. ಎಲ್ಲವೂ ವಿಷ್ಣುವೇ, ಎಲ್ಲದಕ್ಕೂ ಅವನೇ ಒಡೆಯ. ಸೃಷ್ಟಿಕಾಲದಲ್ಲಿ ಕೋಭ್ಯರೆನ್ನಿಸುವ ಪುರುಷ ಪ್ರಕೃತಿಗಳೂ ಸ್ವಸಂಕಲ್ಪದಿಂದ ಆಗ ಅವರಲ್ಲಿ ಹೋಗುವ ಕ್ಷೋಭನೂ ಅವನೇ ಆಗಿದ್ದಾನೆ. ಪ್ರಕೃತಿಯಿಂದ ಮಹತ್ತು ಹುಟ್ಟಿ ಆವೃತವಾಗುತ್ತದೆ. ಆವರಣ ಬಲದಿಂದ ಅದು ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ವಿಧವಾಗಿ ವಿಂಗಡಗೊಳ್ಳುತ್ತದೆ. ತ್ರಿವಿಧವಾದ ಈ ಮಹತ್‌ತತ್ತ್ವದಿಂದ ವೈಕಾರಿಕ, ತೈಜಸ ಭೂತಾದಿ ಎಂಬ ಮೂರು ಬಗೆಯ ಅಹಂಕಾರಗಳು ಉದಯಿಸುತ್ತವೆ. ಮಹತ್ತಿನಿಂದ ಆವೃತವಾದ ಭೂತಾದ್ಯಹಂಕಾರದಿಂದ ಶಬ್ದತನ್ಮಾತ್ರವೂ ಅದರಿಂದ ಆಕಾಶವೂ ಜನಿಸುತ್ತವೆ. ಭೂತಾದಿಯಿಂದ ಆವೃತವಾಗಿ ಆ ಮೂಲಕ ಶಬ್ದತನ್ಮಾತ್ರದಿಂದ ಭಿನ್ನವಾದ ಆಕಾಶ ಸ್ಪರ್ಶತನ್ಮಾತ್ರವನ್ನೂ ಅದು ವಾಯುವನ್ನೂ ಹೊಡೆಯುತ್ತವೆ. ಇದೇ ಮೇರೆಗೆ ವಾಯುವಿನಿಂದ ರೂಪ (ಬಣ್ಣ) ತನ್ಮಾತ್ರ, ಅದರಿಂದ ಜ್ಯೋತಿಯಿ (ಕಾವು, ಬೆಳಕು), ಜ್ಯೋತಿಯಿಂದ ರಸತನ್ಮಾತ್ರ, ಅದರಿಂದ ಜಲ, ಜಲದಿಂದ ಗಂಧತನ್ಮಾತ್ರ, ಗಂಧತನ್ಮಾತ್ರದಿಂದ ಭೂಮಿ (ಮಣ್ಣು) ಉಂಟಾದುವು. ತೈಜಸಾಹಂಕಾರದಿಂದ ಕರ್ಮ, ಜ್ಞಾನೇಂದ್ರಿಯಗಳ ದಶಕವೂ ವೈಕಾರಿಕಾಹಂಕಾರದಿಂದ ಮನಸ್ಸೂ (ಮನ+ಬುದ್ಧಿ+ಅಹಂಕಾರ+ಚಿತ್ತ) ಉದಯಿಸುತ್ತವೆ. ಜಗತ್ತನ್ನು ಹೊರಗಿನಿಂದ ಜಲ, ಅಗ್ನಿ, ವಾಯು, ಆಕಾರ, ಭೂತಾದಿ ಮಹದವ್ಯಕ್ತಗಳು ಅನುಕ್ರಮವಾಗಿ ಸುತ್ತುವರಿದಿವೆ. ಜಗತ್ತು ಅಥವಾ ಪ್ರಪಂಚವೆಂದರೆ ತೈಜಸಾಹಂಕಾರದಿಂದ ಹುಟ್ಟಿದ ದಶೇಂದ್ರಿಯ, ಮನ, ಪಂಚತನ್ಮಾತ್ರ, ಅಹಂಕಾರ ಮತ್ತು ಮಹತ್ತುಗಳ ಏಕೀಕೃತವೂ ಸಮನ್ವಿತವೂ ಆದ ಚರಾಚರಾತ್ಮಕ ಮೊಟ್ಟೆ. ಈ ಮೊಟ್ಟೆಯ ವಿಕಸಿತರೂಪವೇ ವಿಷ್ಣುವಿನ ಶರೀರವೆನ್ನಿಸುವ ಬ್ರಹ್ಮ. ಬ್ರಹ್ಮ–ವಿಷ್ಣು–ರುದ್ರಾತ್ಮಕನಾಗಿ ವಿಷ್ಣು ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳನ್ನು ನಡೆಸುತ್ತಾನೆ. ಅಂದರೆ ಆತ ಆದಿಕಾರಣನಾದ ಪರಬ್ರಹ್ಮ. ಈ ಬಗೆಯ ಸಾಂಖ್ಯವಿಚಾರಗಳು ವಿಷ್ಣುಪುರಾಣದಲ್ಲಿವೆ.

**ವಾಯು ಪುರಾಣ :** ಶ್ಲೋಕ ಸಂಖ್ಯೆ 24,000 ಎಂಬ ಹೇಳಿಕೆಯಿದ್ದರೂ ಮುದ್ರಿತಪ್ರತಿಯ ಸಂಖ್ಯೆ 12,000 ಮಾತ್ರ. ಇದು ಬಹುಶಃ ಪುರಾಣದ ಒಂದನೆಯ ಖಂಡದಷ್ಟೇ ಆಗಿರಬೇಕು. ಅನುಕ್ರಮಣಿಕೆಗಳ ಕಾಲದಲ್ಲಿ ದೇವಾದಿ ಮಾಹಾತ್ಮ್ಯಗಳು ಇದಕ್ಕೆ ಸೇರಿದ್ದವೆಂದು ತೋರುತ್ತದೆ. ಇದು ಎಲ್ಲ ಪುರಾಣಗಳಿಗಿಂತ ಹೆಚ್ಚು ಪ್ರಾಚೀನವೆಂದು ನಂಬಲಾಗಿದೆ. ವಾಯು ಬ್ರಹ್ಮಾಂಡಗಳೆರಡೂ ವಾಯುಪ್ರೋಕ್ತ ಪುರಾಣಗಳಾದುದರಿಂದ ಇವು ಮೊದಲು ಒಂದೇ ಕೃತಿಯಾಗಿದ್ದುವೆಂದು ಪಾರ್ಗಿಟರ್‌ನ ಮತ. ಮಹಾಭಾರತ, ಹರಿವಂಶಗಳು ವಾಯುಪುರಾಣವನ್ನು ಉಲ್ಲೇಖಿಸುತ್ತವೆ, ಶ್ಲೋಕಗಳನ್ನು ಉದ್ಧರಿಸುತ್ತವೆ. ಪ್ರಶ. 4ನೆಯ ಶತಮಾನದ ಗುಪ್ತಚಕ್ರವರ್ತಿಗಳ ಆಳ್ವಿಕೆ ಇಲ್ಲಿ ವರ್ಣಿತವಾಗಿದೆ. ಆದುದರಿಂದ ಪ್ರಾಚೀನತಮವಾದ ಮೂಲವಾಯು ಪುರಾಣದ ಕಾಲ ಯಾವುದೇ ಆದರೂ ಅದರ ಇಂದಿನ ರೂಪದ ಬಹುಭಾಗ ಪ್ರ.ಶ. ಸು. 5ನೆಯ ಶತಮಾನದ್ದೆಂದು ವಿಂಟರ್‌ನಿಟ್ಜನ ಅಭಿಪ್ರಾಯ. ಜನತ್‌ಸೃಷ್ಟಿ ವಂಶವೃಕ್ಷ ಮುಂತಾದ ಪ್ರಾಚೀನ ಪೌರಾಣಿಕ ವಿಷಯಗಳೂ ಶಿವೋತ್ಕರ್ಷವನ್ನು ಸಾಧಿಸುವ ಕತೆಗಳೂ ಜಗತ್ಪ್ರಳಯವೂ ಯೋಗಮಾರ್ಗ ಪ್ರಶಂಸೆಯೂ ಶಿವಪುರ ವರ್ಣನ, ವಿಷ್ಣುಪ್ರಭಾವ, ಶ್ರಾದ್ಧ, ಗೀತಾಲಂಕಾರ, ಗಯಾ ಮಾಹಾತ್ಮ್ಯಗಳೂ ಈ ಪುರಾಣದ ಮುಖ್ಯಾಂಶಗಳು. ಇದಕ್ಕೆ ಸೇರಿದವೆಂದು ಹೇಳಲಾಗುವ ಇನ್ನೂ ಎಷ್ಟೋ ಸ್ತೋತ್ರಗಳೂ ಮಾಹಾತ್ಮ್ಯಗಳೂ ಕರ್ಮವಿಧಿಗ್ರಂಥಗಳೂ ದೊರಕುತ್ತವೆ. ಪ್ರಸ್ತುತ ವಾಯುಪುರಾಣದಲ್ಲಿರುವ ಪ್ರಾಚೀನ ಭಾಗಗಳ ಕಾಲ ಪ್ರ.ಶ. 200 ಅಥವಾ ಅದಕ್ಕೂ ಹಿಂದೆ ಹೋಗಬಹುದು.

ವಾಯುಪುರಾಣ ದೇವರಲ್ಲಿಯ ಸೃಷ್ಟಿಮಾಡುವ ಪ್ರವೃತ್ತಿಯ ಮೂಲಕಾರಣವನ್ನು ಅಪ್ರಮೇಯವೆನ್ನುತ್ತದೆಯಲ್ಲದೆ, ಅದನ್ನು ಬ್ರಹ್ಮ, ಪ್ರಧಾನ, ಪ್ರಕೃತಿ, ಪ್ರಕೃತಿ–ಪ್ರಸೂತಿ, ಆತ್ಮ, ಗುಹ, ಯೋನಿ, ಚಕ್ಷುಸ್, ಕ್ಷೇತ್ರ, ಅಮೃತ, ಅಕ್ಷರ, ಶುಕ್ರ, ತಪಸ್, ಸತ್ಯ ಅಥವಾ ಅತಿಪ್ರಕಾಶ ಎಂದೂ ಕರೆಯುತ್ತದೆ, ಅದು ಲೋಕಪಿತಾಮಹನಾದ ಎರಡನೆಯ ಪುರುಷನನ್ನು ಸುತ್ತುವರಿದಿರುತ್ತದೆ. ಕಾಲಸಂಪರ್ಕ ಮತ್ತು ರಜಃ ಪ್ರಾಧಾನ್ಯಗಳಿಂದ ಕ್ಷೇತ್ರಜ್ಞನಿಗೆ ಸಂಬಂಧಿಸಿದ ಎಂಟು ಪರಿವರ್ತನಗಳಾಗುತ್ತವೆ. ಪ್ರಕೃತಿ ಮೂಲತಃ ಇಂದ್ರಿಯಗ್ರಾಹ್ಯ ಗುಣಗಳುಳ್ಳದ್ದಲ್ಲ; ಸತ್ತ್ವಾದಿಗುಣತ್ರಯದಿಂದ ಕೂಡಿದ್ದು; ಕಾಲಾತೀತ ಮತ್ತು ಅಜ್ಞೇಯ. ತನ್ನ ಮೂಲಸ್ವರೂಪವಾದ ಗುಣತ್ರಯ ಸಾಮ್ಯಾವಸ್ಥೆಯಲ್ಲದು ತಮೋರೂಪದಿಂದ ಎಲ್ಲವನ್ನೂ ಆವರಿಸಿತ್ತು. ಸೃಷ್ಟಿಕಾಲದಲ್ಲಿ ಅದಕ್ಕೆ ಕ್ಷೇತ್ರಜ್ಞ ಸಂಪರ್ಕವುಂಟಾಗಿ ಅದರಿಂದ ಮಹತ್ತತ್ತ್ವ ಹುಟ್ಟಿತು. ಈ ಮಹತ್ತನ್ನು ಮನಸ್, ಮತಿ, ಬ್ರಹ್ಮ, ಪೂರ್, ಬುದ್ಧಿ, ಖ್ಯಾತಿ, ಈಶ್ವರ, ಚಿತಿ, ಪ್ರಜ್ಞೆ, ಸ್ಮೃತಿ, ಸಂವಿತ್, ವಿಪುರ ಎಂಬ ಹೆಸರುಗಳಿಂದ ಕರೆಯುತ್ತಾರೆ. ಸತ್ತ್ವಪ್ರಧಾನವೂ ಶುದ್ಧಾಸ್ತಿತ್ವ ಸ್ವರೂಪವುಳ್ಳದ್ದೂ ಆದ ಮಹತ್ತು ಸೃಜಿಸುವ ಇಚ್ಛೆಯುಂಟಾದಾಗ ಧರ್ಮಾಧರ್ಮಾದಿ ಪದಾರ್ಥಗಳನ್ನು ನಿರ್ಮಿಸುತ್ತದೆ. ಇಡೀ ವಿಶ್ವದ ಚರಾಚರಗಳೆಲ್ಲವೂ ಮಹತ್ತ್ವದ ಪರಿಣಾಮಗಳು. ಕ್ಷೇತ್ರ, ಕ್ಷೇತ್ರಜ್ಞರಲ್ಲಿ ಅದೇ ಜ್ಞಾತೃ. ಕ್ಷೇತ್ರಜ್ಞನೇ ಬ್ರಹ್ಮ, ಹಿರಣ್ಯ ಗರ್ಭ. ಗುಣತ್ರಯದ ಸಹಕಾರದಿಂದಾಗಿ ಮೊಟ್ಟೆಯಿಂದ ಆತ ಹುಟ್ಟಿದವ. ಪ್ರತಿ ಪ್ರಳಯದಲ್ಲೂ ಬ್ರಹ್ಮನ ಶರೀರ ನಾಶವಾಗುತ್ತದೆ. ಮೊಟ್ಟೆಯ ರೂಪದ ಬ್ರಹ್ಮಾಂಡ ಜಲ, ಪ್ರಕಾಶ, ಉಷ್ಣತೆ, ವಾಯು, ಆಕಾಶ, ಭೂತಾದಿ, ಮಹತ್ ಮತ್ತು ಅವ್ಯಕ್ತಗಳಿಂದ ಆವೃತವಾಗಿದೆ.

ವಾಯು ಮತ್ತು ಬ್ರಹ್ಮಾಂಡ ಪುರಾಣಗಳ ಪ್ರಕಾರ ಸೃಷ್ಟಿಯ ಆ ಆದಿಕಾಲದಲ್ಲಿ ಬ್ರಹ್ಮ ಸಾತ್ತ್ವಿಕ, ರಾಜಸ, ಸಾತ್ತ್ವಿಕ ರಾಜಸ, ಮತ್ತು ತಾಮಸಿಕ ಎಂಬ ನಾಲ್ಕು ಬಗೆಗಳ ಮನುಷ್ಯರನ್ನು ತನ್ನ ಬಾಯಿ, ಎದೆ, ತೊಡೆ ಮತ್ತು ಪಾದಗಳಿಂದ ಹುಟ್ಟಿಸಿದನೆಂದೂ ಅವರೆಲ್ಲರೂ ಮೇಲು–ಕೀಳೆಂಬ ಭೇದವಿಲ್ಲದೆ ಸಮಾನರಾಗಿ ಬಾಳುತ್ತಿದ್ದರೆಂದೂ ಅವರಲ್ಲಾಗ ವರ್ಣಾಶ್ರಮ ಭೇದಗಳಿರಲಿಲ್ಲವೆಂದೂ ಚಳಿಬಿಸಿಲುಗಳ ಅಂಜಿಕೆಯಿಲ್ಲದೆ, ಮನೆ–ಮಠಗಳನ್ನಾಶ್ರಯಿಸದೆ ದಿವ್ಯ ಜೀವನ ನಡೆಸುತ್ತಿದ್ದರೆಂದೂ ತಿಳಿಯುತ್ತದೆ. ತಮ್ಮ ದಿವ್ಯತೆಯನ್ನವರು ಕಳೆದುಕೊಂಡು ಮರ್ತ್ಯರಾದಾಗ ತಮ್ಮ ಕರ್ಮಕ್ಕೆ ತಕ್ಕಂತೆ ಮುಂದೆ ಜನ್ಮಗಳನ್ನು ಪಡೆದು, ಹಿಂದಿನದಕ್ಕೆ ವ್ಯತಿರಿಕ್ತವಾದ ಸ್ಥಿತಿಗಿಳಿದರು. ವರ್ಣ ಜಾತಿಗಳ ಮತ್ತು ರಾಜಾಧಿಕಾರದ ಅಗತ್ಯವುಂಟಾಗಲು ಮಾನವರು ಭ್ರಮಿಷ್ಠರಾಗಿ, ಪಾಪಮಾಡಿ, ದಿನೇ ದಿನೇ ಅಧಃಪತನ ಹೊಂದುತ್ತ ಹೋದುದೇ ಕಾರಣವೆಂದು ಉಕ್ತಪುರಾಣಗಳ ಮತ. ಕೃತಯುಗದಿಂದ ಕಲಿಯುಗದವರೆಗೆ ಧರ್ಮ ಕ್ಷೀಣವಾಗುತ್ತ ಹೋದ ಹಾಗೆ ಅದನ್ನು ಅರ್ಜಿಸುವ ವಿಧಾನಗಳ ಬಿಗಿಯೂ ಕಡಿಮೆಯಾಗುತ್ತದೆ, ರಾಜಾಧಿಕಾರ ದೇವಾಧಿಕಾರಕ್ಕೆ ಸರಿದೊರೆಯಾಗುತ್ತದೆ; ಪ್ರಭು ಪ್ರಜೆಗಳಿಬ್ಬರೂ ಪರಸ್ಪರರ ಬಗ್ಗೆ ಮಾಡಬೇಕಾದ ಕರ್ತವ್ಯಗಳನ್ನು ಮಾಡದಿದ್ದರೆ

ದಂಡನೀಯವಾಗುತ್ತಾರೆ–ಎಂಬೀ ಅಂಶಗಳನ್ನೂ ವಿಷ್ಣು ಭಾಗವತ, ಮಾರ್ಕಂಡೇಯ ಪುರಾಣಗಳಂತೆಯೇ ಇವೂ ಪ್ರತಿಪಾದಿಸಿವೆ. ಸರ್ವರೂ ಧರ್ಮಾಧೀನರೆಂಬ ಸ್ಮೃತಿಪರಂಪರೆಗಿದು ಸಮ್ಮತ.

**ಭಾಗವತ ಪುರಾಣ :** ವಿಷ್ಣು ಮಹಾಪುರಾಣದಂತೆಯೇ ಭಾಗವತವೂ ವಿಷ್ಣುವಿನ ಮೇಲ್ಮೆಯನ್ನು ಹೇಳ ಹೊರಟದ್ದು. ಇದರಷ್ಟು ಸುಪ್ರಸಿದ್ಧವಾದ ಮಹಾಪುರಾಣವಿನ್ನೊಂದಿಲ್ಲ. ಯುರೋಪಿನಲ್ಲಿ ಸಂಪಾದಿಸಿ ಅನುವಾದಿಸಲಾದ ಮೊಟ್ಟ ಮೊದಲ ಪುರಾಣವಿದು. ಆದರೆ ಇದು ಅರ್ವಾಚೀನ ಗ್ರಂಥ. ವಿಷ್ಣುಪುರಾಣವನ್ನು ಬಹಳವಾಗಿ ಅವಲಂಬಿಸಿದೆ. ಹೀಗಿದ್ದರೂ ಈ ಪುರಾಣ ಪ್ರಾಚೀನಾಂಶಗಳನ್ನು ಬಹಳಮಟ್ಟಿಗೆ ಬಳಸಿಕೊಂಡಿದೆ. ಪುರಾಣ ಸಾಹಿತ್ಯದಲ್ಲಿ ಇದೊಂದೇ ಏಕಸೂತ್ರತೆ, ಸಾಹಿತ್ಯಸೌಂದರ್ಯಗಳಿಂದ ಕೂಡಿರುವ ಕೃತಿ. ಇದರ ಸ್ಕಂಧಗಳು (ಅಥವಾ ಖಂಡ) 12. ಶ್ಲೋಕಗಳ ಮೊತ್ತ 18000. ಅಲ್ಪಸ್ವಲ್ಪ ಭಿನ್ನವಾದರೂ ಇದರ ಸೃಷ್ಟಿಕಥೆಗಳು ಪುರಾಣವನ್ನೇ ಹೆಚ್ಚಾಗಿ ಹೋಲುತ್ತವೆ. ವಿಷ್ಣುವಿನ ವರಾಹಾವತಾರದ ಕಥೆ ವಿಸ್ತಾರವಾಗಿ ಬಂದಿದೆ. ಮೂರನೆಯ ಸ್ಕಂಧದ ಕೊನೆಯಲ್ಲಿ ವಿಷ್ಣುವಿನ ಅವತಾರವೆಂದು ಹೇಳಲಾದ ಸಾಂಖ್ಯದರ್ಶನದ ಮೂಲಾಚಾರ್ಯನೆನ್ನಿಸಿರುವ ಕಪಿಲಮುನಿಯ ಬಾಯಿಯಿಂದ ಯೋಗಶಾಸ್ತ್ರವನ್ನು ಸುದೀರ್ಘವಾಗಿ ಹೇಳಿಸಲಾಗಿದೆ. ಪ್ರ.ಶ. 12ನೆಯ ಶತಮಾನದಲ್ಲಿದ್ದ ಜಯದೇವನ ಗೀತಗೋವಿಂದದಲ್ಲಿರುವಂತೆ ಇಲ್ಲಿ ಗೌತಮಬುದ್ಧ ವಿಷ್ಣುವಿನ ಬೌದ್ಧಾವತಾರವಾಗಿದ್ದಾನೆ. ಹಿಂದಿನ ಪರಂಪರೆಯಂತೆ ತುಲಸೀಪತಿಯಾದ ಜಲಂಧರನ ಸಂಹಾರಕ್ಕಾಗಿ ಆಕಾಶ, ಪಾತಾಳಗಳನ್ನೊಂದು ಮಾಡುವಂತೆ ನಗ್ನಮೂರ್ತಿಯಾಗಿ ತುಲಸಿಯೆದುರು ನಿಂತ ವಿಷ್ಣುವಿನದು ಬೌದ್ಧಾವತಾರ. ಭಾಗವತದಲ್ಲಿ ವಿಷ್ಣು ಪ್ರಭಾವವನ್ನು ಹೇಳುವ ಧ್ರುವ, ಪ್ರಹ್ಲಾದಾದಿ ವಿಷ್ಣುಭಕ್ತರ ಕಥೆಗಳೂ ಭಗವದ್ಗೀತೆಯ ಕೆಲಶ್ಲೋಕಗಳೂ ಶಕುಂತಲೋಪಾಖ್ಯಾನವೂ ಬಂದಿರುತ್ತವೆ. ಅಲ್ಲದೆ, ಹರಿವಂಶ, ವಿಷ್ಣು ಪುರಾಣಗಳಲ್ಲಿರುವುದ ಕ್ಕಿಂತಲೂ ಹೆಚ್ಚು ವಿವರಗಳಿಂದ ಕೃಷ್ಣಚರಿತಾಮೃತ ಇದರ ಹತ್ತನೆಯ ಸ್ಕಂಧದಲ್ಲಿ ಬಂದಿದೆ. ಇದರಲ್ಲಿರುವ ಕೃಷ್ಣ ಗೋಪಿಯರ ಪ್ರೇಮದೃಶ್ಯಗಳು ಜನಪ್ರಿಯವಾಗಿವೆ. ಯಾದವರ ನಾಶವೂ ಕೃಷ್ಣನ ನಿರ್ಯಾಣವೂ ಕಲಿಯುಗದ ಭವಿಷ್ಯವೂ ಪ್ರಳಯವೂ ಕೊನೆಯ ಭಾಗಗಳಲ್ಲಿ ಬಂದಿವೆ.

ಭಾಗವತದ ಹೇಳಿಕೆಯಂತೆ ರಾಜನಿಲ್ಲದ ರಾಜ್ಯ ಅರಾಜಕ. ರಾಜನಲ್ಲಿ ವಿಷ್ಣುವಿನ ಅಂಶವಿದೆ. ಅವನ ಶಕ್ತಿ ಅತಿಮಾನುಷ. ಪ್ರಜೆಗಳು ಅವನಿಗೆ ವಿಧೇಯರಾಗಿರಬೇಕು. ಅವರು ತೆರುವ ಕರಕಂದಾಯಗಳಿಗೆ ಪ್ರತಿಯಾಗಿ ಆತ ಅವರ ವಿತ್ತಜೀವಿತಗಳನ್ನು ಕಾಪಾಡಬೇಕು. ದುರಾಡಳಿತವೆಸಗಿದ ವೇಣರಾಜ ಋಷಿಶಾಪದಿಂದ ಸತ್ತ. ಅವನಾದ ಬಳಿಕ ಪಟ್ಟಕ್ಕೆ ಬಂದ ಪೃಥು ಯೋಗ್ಯವಾಗಿ ರಾಜ್ಯಭಾರ ಮಾಡಿ, ಸ್ವಧರ್ಮಶಿಕ್ಷಣವನ್ನು ಪ್ರಜೆಗಳಿಗೀಯದೆ ಅವರಿಂದ ತೆರಿಗೆ ವಸೂಲು ಮಾಡುವ ಅರಸ ಅವರ ಪಾಪಗಳಿಗೆ ಬಾಧ್ಯನಾಗಿ ತನ್ನ ಮಹತ್ತ್ವವನ್ನು ಕಳೆದುಕೊಳ್ಳುವನೆಂದು ಸಾರಿದ ಈ ಅಂಶವನ್ನೂ ಭಾಗವತ ಉಲ್ಲೇಖಿಸಿದೆ.

**ನಾರದೀಯ ಪುರಾಣ :** ಉಪಲಬ್ಧವಾಗಿರುವ ಕೆಲವೇ ಶ್ಲೋಕಗಳನ್ನುಳಿದು ಮಿಕ್ಕ ಇಡೀ ಬೃಹನ್ನಾರದೀಯ ಉಪಪುರಾಣವನ್ನು ಗರ್ಭೀಕರಿಸಿಕೊಂಡಿದೆ. 25000 ಶ್ಲೋಕಗಳಿದ್ದು ವೆಂದೂ ನಾರದ ಧರ್ಮವಿಧಿಗಳನ್ನೂ, ಬೃಹತ್ ಕಲ್ಪವನ್ನೂ ಅದರಲ್ಲಿ ಹೇಳಿದ್ದನೆಂದೂ ಮತ್ಸ್ಯಪುರಾಣ ನಿರ್ದೇಶಿಸುತ್ತದೆ. ಪ್ರಸ್ತುತ ಪುರಾಣದಲ್ಲಿ ಕೇವಲ 3,600 ಶ್ಲೋಕಗಳಿವೆ. ಬೃಹತ್‌ಕಲ್ಪದ ಪ್ರಸ್ತಾವವಿಲ್ಲ. ಇದರಲ್ಲಿ ನಾರದ ವಕ್ತಾರನಲ್ಲ, ಶ್ರೋತಾರ. ವೈಷ್ಣವಮತಾಚಾರ ಗಣ್ಯವಾಗಿರುವ ಇದರಲ್ಲಿ ನಾರದ ಸನತ್ಕುಮಾರರ ಸಂವಾದವೊಂದರ ಮೂಲಕ ವಿಷ್ಣುವಿನ ಭಕ್ತಿ, ವ್ರತ, ಉತ್ಸವಗಳನ್ನು ವಿವರಿಸಲಾಗಿದೆ. ತಾಂತ್ರಿಕರನ್ನೂ ಬೌದ್ಧರನ್ನೂ ಇಲ್ಲಿ ಪಾಷಂಡ ರೆಂದು ಕರೆಯಲಾಗಿದೆ. ಪಾಪ ಹಾಗೂ ಪಾಪಿಗಳಿಗೆ ಸಿಗುವ ನರಕಶಿಕ್ಷೆಗಳ ವರ್ಣನೆಯಲ್ಲದೆ ವರ್ಣಾಶ್ರಮಧರ್ಮ, ಶ್ರಾದ್ಧಕಲ್ಪ, ಪ್ರಾಯಶ್ಚಿತ್ತ, ಸಂಸಾರ, ಕ್ಲೇಶ, ಮೋಕ್ಷ, ಯೋಗ, ವಿಷ್ಣುಭಕ್ತಿ ಪ್ರಶಂಸೆಗಳಿಂದ ತುಂಬಿದ ಇದರ ರಚನಾ ಕಾಲ 750–900ರ ನಡುವೆ ಎನ್ನಬಹುದು. ಪೂರ್ವೋತ್ತರ ಭಾಗಗಳೆಂದು ವಿಭಕ್ತವಾಗಿರುವ ನಾರದೀಯರ ಪೂರ್ವಭಾಗದ 4 ಉಪಪರ್ವಗಳಲ್ಲಿ ಮೊದಲನೆಯದು ಸಂಪೂರ್ಣವಾಗಿ ಬೃಹನ್ನಾರದೀಯ. ಸನತ್ಕುಮಾರ ನಾರದನಿಗೆ 3ನೆಯ ಉಪ ವಿಭಾಗದಲ್ಲಿ ಉಪದೇಶಿಸಿದರೆ, 1, 2, 4ನೆಯ ಉಪವಿಭಾಗಗಳಲ್ಲಿ ಸನಕ, ಸನಂದನ, ಸನಾತನರು ವಿವಿಧ ವಿಷಯಗಳನ್ನು ವಿವರಿಸಿದ್ದಾರೆ.

ಈ ಪುರಾಣದ ಪ್ರಕಾರ ನಾರಾಯಣ ವಿಶ್ವದ ಮೂಲಸತ್ಯ, ಆದಿಕಾರಣ. ಅವನು ಬ್ರಹ್ಮ, ವಿಷ್ಣು, ರುದ್ರರನ್ನು ಸೃಷ್ಟಿ, ಸ್ಥಿತಿ, ಲಯಗಳ ನಿರ್ವಹಣಕ್ಕಾಗಿ ತನ್ನ ಅಂಶದಿಂದ ಹುಟ್ಟಿಸುತ್ತಾನೆ. ನಾರಾಯಣನೂ ಮಹಾವಿಷ್ಣುವೂ ಅಭಿನ್ನರು. ಈತನ ಸೃಷ್ಟಿಶಕ್ತಿ ಸದಸದಾತ್ಮಕ, ವಿದ್ಯಾವಿದ್ಯಾತ್ಮಕ. ಮಹಾವಿಷ್ಣುವೂ ವಿಶ್ವವೂ ಭಿನ್ನವೆಂದು ತೋರುವುದು ಮಾನವರ ಅವಿದ್ಯೆಯ ದೆಸೆಯಿಂದ. ಜ್ಞಾತೃಜ್ಞೇಯಗಳಲ್ಲಿಯ ಭೇದವಳಿದು ಅವೆರಡರ ಏಕತತ್ತ್ವ ಗೋಚರವಾಗುವುದು ವಿದ್ಯಾಬಲದಿಂದ. ಅಥವಾ ಅದೇ ವಿದ್ಯೆ. ಹರಿಯೂ ಅವನ ಶಕ್ತಿಯೂ ವಿಶ್ವವ್ಯಾಪ್ತಿಗಳು, ಅವಿನಾಭಾವಿಗಳು. ಶಕ್ತಿಯದು ವ್ಯಕ್ತಾವ್ಯಕ್ತ ಸ್ವರೂಪ. ಪ್ರಕೃತಿ, ಪುರುಷ, ಕಾಲಗಳು ಅದರ ಪ್ರಥಮಾವಿರ್ಭಾವಗಳು. ಪುರುಷಸಾನ್ನಿಧ್ಯದಿಂದ ಕ್ಷುಬ್ಧವಾದ ಪ್ರಕೃತಿ ಮಹತ್ತನ್ನೂ ಮಹತ್ತು ಆಮೇಲೆ ಬುದ್ಧಿಯನ್ನೂ ಬುದ್ಧಿ ಅಹಂಕಾರವನ್ನೂ ಪಡೆಯುತ್ತವೆ. ವಾಸುದೇವ ಅಥವಾ ಮಹಾವಿಷ್ಣು ಜ್ಞಾನಗಮ್ಯ ಇಲ್ಲದೆ ಕರ್ಮಗಮ್ಯ. ಅವನನ್ನು ಹೊಂದಿ ದಾಗಲೇ ಕ್ಲೇಶತ್ರಯ ನಷ್ಟವಾಗುತ್ತದೆ. ಯೋಗವೆಂದರೆ ಬ್ರಹ್ಮನಲ್ಲಿ ಲಯಹೊಂದುವುದು. ಮನಸ್ಸನ್ನು ವಿಷಯಗಳಿಂದ ಹಿಂದಿರುಗಿಸಿ, ಆತ್ಮನಲ್ಲಿ ಲೀನಗೊಳಿಸಿ, ಬ್ರಹ್ಮನಲ್ಲಿ ಕೊನೆಯದಾಗಿ ಲಯವಾಗುವುದು– ಇದು ಜೀವಿ ಗಳಿಸಬಹುದಾದ ವ್ಯಕ್ತಿಯ ಲಕ್ಷಣ. ಈ ಎಲ್ಲವಕ್ಕೂ ಭಕ್ತಿ ಅಥವಾ ಶ್ರದ್ಧೆ ಅತ್ಯಾವಶ್ಯಕ.

**ಮಾರ್ಕಂಡೇಯ ಪುರಾಣ :** ಹಳೆಯ ಮಹಾಪುರಾಣಗಳಲ್ಲೊಂದು. ಪ್ರ.ಶ.ಪೂ. 2ನೆಯ ಶತಮಾನದ ಆದಿಭಾಗದಲ್ಲಿ ಇದರ ಪ್ರಾಚೀನವೆನ್ನಿಸುವ ಮೂಲಭಾಗದ ರಚನೆಯಾಯಿತು. ಪ್ರಸ್ತುತ ಪುರಾಣದಲ್ಲಿ ಅರ್ವಾಚೀನ ಅಂಶಗಳೆಷ್ಟೋ ಇವೆ. ಏಕಸೂತ್ರತೆ ಇಲ್ಲವೇ ಇಲ್ಲ. ಮಾರ್ಕಂಡೇಯ ಮುನಿ ನಿತ್ಯತರುಣ. ಆತ ತನ್ನ ಶಿಷ್ಯನಾದ ಕ್ರೌಷ್ಟುಕಿಗೆ ವಿಶ್ವಸೃಷ್ಟಿ, ಯುಗಮಾನ, ವಂಶಾವಳಿ–ಮುಂತಾದ ಶುದ್ಧ ಪೌರಾಣಿಕಾಂಶಗಳನ್ನು ಅರುಹುವ ಭಾಗವನ್ನು ಪ್ರಾಚೀನವೆನ್ನಬಹುದು. ವಿಷ್ಣು, ಶಿವರಿಗಿಲ್ಲಿ ಪ್ರಧಾನ್ಯವಿಲ್ಲ. ಇಂದ್ರ, ಬ್ರಹ್ಮ, ಅಗ್ನಿ, ಸೂರ್ಯಾದಿ ವೈದಿಕ ದೇವತೆಗಳಿಗಿಲ್ಲಿ ಅಗ್ರಸ್ಥಾನ. ವ್ಯಾಸಶಿಷ್ಯನಾದ ಜೈಮಿನಿ ಮಹಾಭಾರತದಲ್ಲಿಯ ನಾಲ್ಕು ಸಮಸ್ಯೆಗಳಿಗೆ ಉತ್ತರ ಪಡೆಯುತ್ತಾನೆ. ದ್ರೌಪದಿ ಪಂಚಪಾಂಡವರ ಪತ್ನಿಯಾದುದು ಹೇಗೆಂಬುದು ಮೊದಲ ಪ್ರಶ್ನೆ. ಅವಳ ಪಂಚಪುತ್ರರು ಕೌಮಾರ ದಶೆಯಲ್ಲೇ ಹತರಾದುದೇಕೆಂದು ಕೊನೆಯ ಪ್ರಶ್ನೆ. ಕೊನೆಯ ಪ್ರಶ್ನೆಯನ್ನು ಉತ್ತರಿಸುವ ಸಂದರ್ಭದಲ್ಲಿ, ಹರಿಶ್ಚಂದ್ರನನ್ನು ಕ್ರೂರವಾಗಿ ನಡೆಸಿಕೊಂಡ ಬಗ್ಗೆ ಐವರು ವಿಶ್ವೇದೇವರು ವಿಶ್ವಾಮಿತ್ರನನ್ನು ತಪ್ಪಿತಸ್ಥನೆಂದಾಗ ಆತ ಅವರನ್ನು ಮನುಷ್ಯರಾಗಿ ಜನಿಸಿರಿ ಎಂದು ಶಪಿಸಿದನೆಂದೂ ಶಾಪವಿಮೋಚನೆ ಬೇಗ ಆಗಲೆಂದು ಕೌಮಾರದಶೆಯಲ್ಲೇ ಸಾಯುವಂತೆ ಆತ ಅವರಿಗೆ ಅನುಗ್ರಹಿಸಿದನೆಂದೂ ಹೇಳುವ ಪ್ರಕರಣ ಹರಿಶ್ಚಂದ್ರ ರಾಜನ ಹೃದಯವಿದ್ರಾವಕ ಕಥೆಗೆಡೆಮಾಡಿಕೊಡುತ್ತದೆ. ಆಮೇಲೆ ತಂದೆಮಕ್ಕಳ ಸಂವಾದವೊಂದು ಬರುತ್ತದೆ. ಮಹಾಭಾರತದಲ್ಲಿ ಬರುವ ಮೇಧಾವಿ ಮತ್ತು ಅವನ ತಂದೆ–ಇವರಿಬ್ಬರ ಸಂವಾದವನ್ನೇ ಇಲ್ಲಿ ಮತ್ತೂ ವಿಸ್ತರಿಸಿ ಹೇಳಲಾಗಿದೆ. ಅಲ್ಲಿಯ ಮೇಧಾವಿ ಇಲ್ಲಿ ಜಡ ಎನ್ನಿಸಿಕೊಂಡ ವಿವೇಕಿಯಾದ ಮಗನಾಗಿದ್ದಾನೆ. ಬ್ರಾಹ್ಮಣ್ಯದ ಪವಿತ್ರಜೀವನದ ಆದರ್ಶವನ್ನು ತನ್ನೆದುರಿಟ್ಟ ತಂದೆಗೆ ಅದನ್ನು ಖಂಡಿಸಿ, ಸಂಸಾರದಿಂದ ಮುಕ್ತಿ ಹೊಂದುವುದೊಂದೇ ಪರಮಧರ್ಮ–ಎಂದು ಈತ ಬೋಧಿಸುವ ಸಂದರ್ಭದಲ್ಲಿ ಅತ್ಯಂತ ಹೃದಯಂಗಮವಾದ ವಿಪಶ್ಚಿನ್ ಮಹಾರಾಜನ ಕಥೆ ಬಂದಿವೆ. ಇದರಲ್ಲಿ ಪಾಪಿಗಳಿಗೆ ವಿಧಿಸುವ ವಿವಿಧ ಶಿಕ್ಷೆಗಳ ವರ್ಣನೆಯಿದೆ. ಆ ಬಳಿಕೆ ಅಷ್ಟೇನೂ ಸ್ವಾರಸ್ಯವಿಲ್ಲದ ಅನಸೂಯಾ ವೃತ್ತಾಂತವೂ ಶುದ್ಧವಾದ ನೀತಿಕಥೆಗಳೂ ಗೃಹಸ್ಥಧರ್ಮ, ಶ್ರಾದ್ಧ ಉತ್ಸವ, ಯೋಗ ಮುಂತಾದ ವಿಷಯಗಳೂ ಪ್ರ.ಶ. 6ನೆಯ ಶತಮಾನದೊಳಗೇ ಪ್ರಕ್ಷಿಪ್ತವಾಗಿರಬಹುದಾದ ದೇವೀಮಾಹಾತ್ಮ್ಯವೂ ವಿವೃತವಾಗಿವೆ.

ಜ್ಞಾನದ ಮೂಲಕ ಅಜ್ಞಾನ ಅಳಿಯುವುದನ್ನು ಯೋಗವೆನ್ನಲಾಗಿದೆ. ಬಂಧ ವಿಮೋಚನೆ ಎಂದರೆ ಇದರ ಪ್ರಕಾರ ಬ್ರಹ್ಮನಲ್ಲಿ ಒಂದಾಗುವುದು ಮತ್ತು ಪ್ರಕೃತಿಯ ಗುಣತ್ರಯದಿಂದ ಪ್ರತ್ಯೇಕವಾಗುವುದು. ಚಿತ್ತವೃತ್ತಿನಿರೋಧವನ್ನೇ ಯೋಗವೆಂದು ಲಕ್ಷಣಿಸಿಲ್ಲ. ವಾಸುದೇವನಿಲ್ಲಿ ಪರಬ್ರಹ್ಮ. ಅವನ ಸರ್ಜನೇಚ್ಛೆ ಕಾಲದಿಂದ ಪ್ರಧಾನ–ಪುರುಷರನ್ನು ತನ್ನೊಳಗಿಂದ ಪ್ರತ್ಯೇಕಿಸಿ ತೆಗೆದು ಒಂದುಗೂಡಿಸಿದ್ದರಿಂದ ಮಹತ್ತೂ ಮಹತ್ತಿನಿಂದ ಅಹಂಕಾರವೂ ಅಹಂಕಾರದಿಂದ ಸತ್ತ್ವ, ರಜಸ್, ತಮಸ್ಸುಗಳೂ ಉದಯಿಸಿದವು. ಅನಂತರ ತಮಸ್ಸಿನಿಂದ ಪಂಚತನ್ಮಾತ್ರ, ಪಂಚಭೂತಗಳೂ ರಜಸ್ಸಿನಿಂದ ದಶೇಂದ್ರಿಯಗಳು, ಬುದ್ಧಿಯೂ ಹುಟ್ಟಿದುವು. ವಾಸುದೇವ ಸರ್ವಾಂತರ್ಯಾಮಿ ಮತ್ತು ಸರ್ವಾತೀತ. ಸರ್ವದುಃಖಗಳೂ ಸಂಗಜನ್ಯ, ಸಂಗತ್ಯಾಗದಿಂದ ಮಹತ್ತ್ವಳಿದಾಗ ನಿಜ ಸುಖ ಹಸ್ತಗತವಾಗುತ್ತದೆ. ಮೋಕ್ಷಾನುಕೂಲವಾದುದೇ ನಿಜವಾದ ಜ್ಞಾನ. ಮಿಕ್ಕಿದ್ದೆಲ್ಲ ಅಜ್ಞಾನ.

ವಿಷ್ಣು ಪುರಾಣದಂತೆ ಮಾರ್ಕಂಡೇಯ ಪುರಾಣವೂ ಪ್ರಜೆಗಳನ್ನು ಚೆನ್ನಾಗಿ ಪಾಲಿಸುವ ಅರಸನಿಗೆ ಅವರ ಪುಣ್ಯಭಾಗ ಸಲ್ಲುವುದೆನ್ನುತ್ತದೆ. ದುಷ್ಟದಮನ, ಶಿಷ್ಟಪಾಲನಗಳಲ್ಲಿ ನಿತ್ಯನಿರತನಾದ ದೊರೆಗೆ ಶಿಷ್ಟಾರ್ಜಿತ ಪುಣ್ಯದ ಆರನೆಯ ಒಂದು ಅಂಶ ಲಭಿಸುತ್ತದೆ. ಶಿಷ್ಟರನ್ನು ರಕ್ಷಿಸದಿದ್ದಲ್ಲಿ ದುಷ್ಟರ ಎಲ್ಲ ಪಾಪಗಳೂ ಅವನಿಗಂಟಿಕೊಳ್ಳುತ್ತವೆ ಎಂಬ ಅಂಶವನ್ನು ಮರುತ್ತರಾಯನಿಗೆ ಅವನ ಅಜ್ಜಿ ಹೇಳುವ ಸಂದರ್ಭ ಸ್ವಾರಸ್ಯವಾಗಿದೆ. ಕ್ಷತ್ರಿಯನಾದ ಮನುಷ್ಯ ಸಪ್ತದುರ್ವ್ಯಸನಗಳನ್ನು ಬಿಟ್ಟು, ಅನುಕ್ರಮವಾಗಿ ಮೊದಲು ತನ್ನನ್ನು, ಆಮೇಲೆ ತನ್ನ ಮಂತ್ರಿಗಳನ್ನು, ಬಳಿಕ ತನ್ನ ಸೇವಕ ಅಥವಾ ನೌಕರರನ್ನು, ಅನಂತರ ತನ್ನ ಪ್ರಜೆಗಳನ್ನು ಮತ್ತು ಕೊನೆಯಲ್ಲಿ ತನ್ನ ಹಗೆಗಳನ್ನು ನಿಯಂತ್ರಿಸಿದರೆ ಮಾತ್ರ ಯಶಸ್ವಿಯಾಗಬಲ್ಲನೆಂದು ರಾಣಿಯಾದ ಮದಾಲಸೆ ತನ್ನ ಮಗನಿಗಿಲ್ಲಿ ಉಪದೇಶಿಸುವುದು ಬಹಳ ಮಾರ್ಮಿಕವಾದ ರಾಜಶಿಕ್ಷಣಸೂತ್ರ . ಇದರ ಆಧುನಿಕ ಸ್ವರೂಪದ ಕಾಲ ಪ್ರ.ಶ. 8ನೆಯ ಶತಮಾನ. ಶ್ಲೋಕ ಸಂಖ್ಯೆ 9000.

**ಆಗ್ನೇಯ ಮಹಾಪುರಾಣ :** ಪ್ರ.ಶ. 7ನೆಯ ಶತಮಾನಕ್ಕಿಂತ ಈಚಿನದು. ಇದರ ಅಲಂಕಾರಶಾಸ್ತ್ರ ವಿಭಾಗ ಪ್ರ.ಶ. 900ರ ಬಳಿಕ ಇದರಲ್ಲಿ ಕ್ರಮಶಃ ಪ್ರಕ್ಷಿಪ್ತವಾದುದು ವಸಿಷ್ಠನಿಗೆ ಅಗ್ನಿ ಹೇಳಿದ್ದರಿಂದ ಪುರಾಣಕ್ಕೆ ಈ ಹೆಸರು. ಪುರಾಣಗಳ ವಿಶ್ವಕೋಶ ಸ್ವರೂಪಕ್ಕಿದು

ಪರಮಾದರ್ಶ. ಇದರಲ್ಲಿ ವಿಷ್ಣುವಿನ ಅವತಾರಗಳು ಉಕ್ತವಾಗಿವೆ. ರಾಮಕೃಷ್ಣರ ಕತೆಗಳನ್ನು ರಾಮಾಯಣ, ಮಹಾಭಾರತ, ಹರಿವಂಶಗಳಲ್ಲಿರುವಂತೆಯೇ ಹೇಳಲಾಗಿದೆ. ದ್ವಾದಶಸಹಸೀ ಸ್ತೋತ್ರವಿಲ್ಲಿದೆ. ಹೀಗಿದ್ದರೂ ಅಗ್ನಿಪುರಾಣ ಒಟ್ಟಿನಲ್ಲಿ ಶಿವನಿಗೇ ಹೆಚ್ಚಿನ ಗುರುತ್ವವನ್ನು ಕೊಟ್ಟಿದೆ. ಲಿಂಗ, ದುರ್ಗಾರಾಧನೆಗಳ ಯೋಗಮಾರ್ಗಬೋಧನವಲ್ಲದೆ, ತಾಂತ್ರಿಕಕೃತ್ಯ, ಮೂರ್ತಿಶಿಲ್ಪ, ವಿಗ್ರಹಪ್ರತಿಷ್ಠೆ, ಗಣೇಶಪೂಜೆ, ಸೂರ್ಯೋಪಾಸನೆ, ಮರಣ, ಪುನರ್ಜನ್ಮ, ಯೋಗ, ಗೀತಾತತ್ತ್ವ, ಯಮಗೀತೆ ಮುಂತಾದ ವಿಷಯಗಳ ಜೊತೆಗೇ ಪೌರಾಣಿಕ ವಿಷಯಗಳಾದ ಸೃಷ್ಟಿವಿಚಾರ, ವಂಶಾನುಚರಿತ, ಭೂವಿವರಣೆಗಳೂ ಅಗ್ನಿಪುರಾಣಾಂತರ್ಗತ. ಭೂಗೋಲಶಾಸ್ತ್ರ, ಖಗೋಳಶಾಸ್ತ್ರ, ಜ್ಯೋತಿಶಶಾಸ್ತ್ರ, ವಿವಾಹಧರ್ಮ, ಉತ್ತರಕ್ರಿಯೆ, ಶಕುನಶಾಸ್ತ್ರ, ವಾಸ್ತುಶಿಲ್ಪ, ಜೀವನಾಚಾರ, ರಾಜನೀತಿ, ಯುದ್ಧಕಲೆ, ಯಾಜ್ಞವಲ್ಕ್ಯಸ್ಮೃತಿಗನು ಗುಣವಾದ ಧರ್ಮ ವಿವರಣೆ, ವೈದ್ಯಶಾಸ್ತ್ರ, ಛಂದಶಾಶಸ್ತ್ರ, ಅಲಂಕಾರಶಾಸ್ತ್ರ, ವ್ಯಾಕರಣಶಾಸ್ತ್ರ ಮತ್ತು ಶಬ್ದಕೋಶಗಳ ವಿಷಯಗಳಿಗೆ ಬೇರೆ ಬೇರೆ ವಿಭಾಗಗಳು ಮೀಸಲಾಗಿವೆ. ಈ ಪುರಾಣದ ಹೊರಗಿರುವ ಎಷ್ಟೋ ಮಾಹಾತ್ಮ್ಯಗಳನ್ನೂ ಅಗ್ನಿಪುರಾಣೋಕ್ತವೆನ್ನುವ ರೂಢಿಯಿದೆ. ಶ್ಲೋಕಸಂಖ್ಯೆ ಸುಮಾರು 15400 ಎಂಬುದು ರೂಢಿ. 11500ಕ್ಕಂತೂ ಕಡಿಮೆ ಇಲ್ಲ. ಪ್ರಸ್ತುತ ಮಹಾಪುರಾಣಾಂತರ್ಗತವಾದ ಅಲಂಕಾರ ಶಾಸ್ತ್ರಾಂಶಗಳು ಹೀಗಿವೆ : ಶಾಸ್ತ್ರ-ಕಾವ್ಯಗಳೆಂದು ವಾಙ್ಮಯವೆರಡು ವಿಧ. ಶಾಸ್ತ್ರ ಶಬ್ದಪ್ರಧಾನ ಮತ್ತು ಇತಿಹಾಸನಿಷ್ಠ. ವೇದ ಅಥವಾ ಲೋಕಮೂಲವಾದುದು ಕಾವ್ಯ. ಅದು ಅಭಿಧಾಪ್ರಧಾನ, ಸ್ಫುಟಾಲಂಕಾರಯುಕ್ತ, ಸಗುಣ ಮತ್ತು ನಿರ್ದುಷ್ಟ. ರಸಸಿದ್ಧಿಯುಳ್ಳ ನಾದದಲ್ಲಿ ಅದರ ಹುಟ್ಟು. ಗದ್ಯ, ಪದ್ಯ ಮಿಶ್ರ ಎಂದು ತ್ರಿವಿಧ. ಪಾದವಿಲ್ಲದ ಪದಸಂತತಿ ಗದ್ಯ. ಚತುಷ್ಪಾದವುಳ್ಳದ್ದು ಪದ್ಯ. ಅದರ ಛಂದಸ್ಸು ವೃತ್ತ, ಜಾತಿ ಎಂದು ದ್ವಿವಿಧ. ಧ್ವನಿ, ವರ್ಣ, ಪದ, ವಾಕ್ಯಗಳು ವಾಙ್ಮಯದ ಚತುರಂಗಗಳು. ಇಷ್ಟವಾದ ಅರ್ಥವನ್ನು ವ್ಯವಚ್ಛೇದಿಸಿ ಹೇಳುವ ಪದಾವಳಿಯೇ ವಾಕ್ಯ. ಮಿಶ್ರಕಾವ್ಯಗಳಲ್ಲಿ ಚಂಪೂಕಾವ್ಯ ಶ್ರವ್ಯ, ನಾಟಕ (ರೂಪಕ) ಕಾವ್ಯದೃಶ್ಯ. ಚೂರ್ಣಕ, ಉತ್ಕಲಿಕೆ ಮತ್ತು ವೃತ್ತಗಂಧಿ ಎಂಬ ಹೆಸರಿನವು ಗದ್ಯಪ್ರಕಾರಗಳು. ಆಖ್ಯಾಯಿಕೆ, ಕಥೆ, ಖಂಡಕಥೆ, ಪರಿಕಥೆ ಮತ್ತು ಕಥಾನಿಕೆ ಎಂಬೀ ಐದು ಗದ್ಯಕಾವ್ಯದ ಮಾದರಿಗಳು. ಮಹಾಕಾವ್ಯ, ಕಲಾಪ, ಪರ್ಯಾಬಂಧ, ವಿಶೇಷಕ, ಕುಲಕ, ಮುಕ್ತಕ, ಕೋಷ ಎಂಬೀ ಏಳು ಪದಕಾವ್ಯದ ಮಾದರಿಗಳು.

ಪ್ರಕರಣ, ಡಿಮ, ಈಹಾಮೃಗ, ಸಮವಕಾರ, ಪ್ರಹಸನ, ವ್ಯಾಯೋಗ, ಭಾಣ, ವೀಥಿ, ಅಂಕ, ಕ್ರೋಟಕ, ನಾಟಕ, ಸಟ್ಟಕ, ಶಿಲ್ಪಕ, ಕರ್ಣೆ, ಏಕ, ದುರ್ಮಲ್ಲಿಕೆ, ಪ್ರಸ್ಥಾನ, ಭಾಣಿಕೆ, ಆಭಾಣಿ, ಗೋಷ್ಠಿ, ಹಲ್ಲೀಶಕ, ಕಾವ್ಯ, ಶ್ರೀಗದಿತ, ನಾಟ್ಯರಾಸಕ, ರಾಸಕ, ಉಲ್ಲಾಪ್ಯಕ, ಪ್ರೇಕ್ಷಣ-ಎಂದು ನಾಟಕ 27 ವಿಧ. ನಾಟಕದ ಪೂರ್ವಭಾಗ ಪೂರ್ವರಂಗ. ಅದರ ಅಂಗಗಳು 32. ಉತ್ತರ ಭಾಗದ ಅಂಗಗಳಾದ ನಾಂದಿ, ಸೂತ್ರಧಾರ, ನಟಿ, ಆಮುಖ, ವಸ್ತು, ಅರ್ಥಪ್ರಕೃತಿ, ಕಾರ್ಯಾವಸ್ಥೆ, ಸಂಧಿಗಳು-ಇವು ಅನಂತರ ಬರುತ್ತವೆ. ಆಮೇಲೆ ರಸನಿಷ್ಪತ್ತಿ ವಿಚಾರ : ಪರಬ್ರಹ್ಮನಿಗಿರುವ ಪ್ರಕೃತಿಸಹಜವಾದ ಆನಂದ ಆಗೀಗ ಆವಿರ್ಭವಿಸುತ್ತದೆ. ಅಂಥ ಆನಂದಾಭಿವ್ಯಕ್ತಿಯೊಂದು ಚೈತನ್ಯಚಮತ್ಕಾರ. ಅದೇ ರಸ. ಅಹಂಕಾರ ರಸದ ಪ್ರಥಮ ಪರಿಣಾಮ. ಅದರಿಂದ ಅಭಿಮಾನದ ವಿಕಾಸ. ಮೂರು ಲೋಕಗಳೂ ಅಭಿಮಾನದಲ್ಲಿ ಸಮಾಪ್ತ. ಅಭಿಮಾನದಿಂದ ರತಿ ಅಥವಾ ರಾಗ ಹುಟ್ಟುತ್ತದೆ. ಅದು ಪರಿಪುಷ್ಟವಾದಾಗ ಶೃಂಗಾರವೆನ್ನಿಸುತ್ತದೆ. ಶೃಂಗಾರಾದಿ ನವರಸಗಳು ಈ ಆದಿಶೃಂಗಾರದ ಪ್ರಭೇದಗಳು. ಅವು ತಮ್ಮ ತಮ್ಮ ಸ್ಥಾಯಿಗಳಿಂದ ವ್ಯಕ್ತವಾಗುತ್ತವೆ. ಅವುಗಳಲ್ಲಿ ಶೃಂಗಾರ, ವೀರ, ರೌದ್ರ, ಬೀಭತ್ಸಗಳು ಮೂಲಭೂತವಾದಂಥವು. ಅವುಗಳಿಂದ ಅನುಕ್ರಮವಾಗಿ ಹಾಸ್ಯ, ಅದ್ಭುತ, ಕರುಣ, ಭಯಾನಕ, ಈ ರಸಗಳು ನಿಷ್ಪನ್ನವಾಗುತ್ತವೆ. ರಸವಿಲ್ಲದ ಮಾತು ತ್ಯಾಗವಿಲ್ಲದ ಐಶ್ವರ್ಯದಂತೆ ವ್ಯರ್ಥ. ಕವಿ ಶೃಂಗಾರಿಯಾದರೆ ಜಗತ್ತೆಲ್ಲ ರಸಮಯ; ಆತ ರಾಗರಹಿತನಾದರೆ ಪ್ರಪಂಚವೆಲ್ಲ ನೀರಸವಾದೀತು. ಭಾವವಿಲ್ಲದ ರಸವಿಲ್ಲ, ರಸವಿಲ್ಲದ ಭಾವವಿಲ್ಲ. ಸ್ಥಾಯಿಗಳ ಮೂಲಕ ಭಾವಗಳು ರಸಿಕ ರಸಗಳನ್ನು ಭಾವಿಸುವಂತೆ ಮಾಡುತ್ತವೆ. ರಸಗಳು ರಸಿಕನಿಂದ ಭಾವ್ಯ. ಸ್ಥಾಯಿಗಳು ಒಂಬತ್ತು. ಅನುಭಾವಗಳು ಎಂಟು. ಅನುಭಾವಗಳು ವ್ಯಭಿಚಾರಶೀಲ, ನಿರ್ವೇದಾದಿ, ಉನ್ಮಾದಾಂತವಾದ ಸಂಚಾರೀಭಾವಗಳು ಕೂಡ ವ್ಯಭಿಚಾರಿಗಳೇ.

ಪ್ರಿಯರಲ್ಲಿ ಉಂಟಾಗುವ ಸುಖಾನುಭವ ರತಿ. ಹರ್ಷಾದಿಗಳಿಂದ ಮನಸ್ಸು ಅರಳುವುದು ಹಾಸ. ಯಮಾದಿಗಳನ್ನು ನೋಡುವುದರಿಂದ ಉಂಟಾಗುವ ಚಿತ್ತವೈಕ್ಲವ್ಯ ಭಯ. ನಿಂದ್ಯ, ದುರ್ಭಗಪದಾರ್ಥಗಳಲ್ಲಿ ನಮಗುಂಟಾಗುವುದು ಜುಗುಪ್ಸಾಭಾವ. ಪದಾರ್ಥಗಳ ಅತಿಶಯವನ್ನು ಕಂಡು ಚಿತ್ತವಿಸ್ತೃತಿಯುಂಟಾಗುವುದು ವಿಸ್ಮಯ. ಇಷ್ಟವಾದ ವ್ಯಕ್ತಿ, ವಸ್ತುಗಳು ನಾಶದಿಂದ ಮನೋವೈಕ್ಲವ್ಯವುಂಟಾದರದು ಶೋಕ. ಪ್ರತಿಕೂಲಕಾರಿಗಳ ಬಗ್ಗೆ ತೀಕ್ಷ್ಣಭಾವ ವೇಳುವುದು ಕ್ರೋಧ ಪುರುಷಾರ್ಥ ಸಮಾಪ್ತಿಗಾಗಿ ಹೊರಟವರಲ್ಲಿ ಉದಯವಾಗುವುದು ಉತ್ಸಾಹಭಾವ.

ವಿಭಾವಗಳೆರಡು. ನಾಯಕರ ಮಾದರಿಗಳು ನಾಲ್ಕು. ಅವರಲ್ಲಿಯ ಒಂದೊಂದು ಮಾದರಿಯಲ್ಲಿ ಅನುಕೂಲಾದಿ ಒಳಭೇದಗಳು ನಾಲ್ಕು. ನಾಯಕನ ಅನುಯಾಯಿಗಳದ್ದು ಮೂರು ಮಾದರಿ. ನಾಯಿಕೆಯರದು 3-4 ನಮೂನೆ. ವ್ಯಭಿಚಾರಶೀಲವುಳ್ಳ ವಿಶಿಷ್ಟ ಅನುಭಾವಗಳೆನ್ನಿಸುವ ಆರಂಭ ಅಥವಾ ವ್ಯಾಪಾರಗಳು ಮಾನಸ, ವಾಚಿಕ, ಬೌದ್ಧಿಕ ಮತ್ತು ಶಾರೀರಿಕ ಎಂಬುದಾಗಿ ನಾಲ್ಕು ವಿಧ. ಪುರುಷನ ಮಾನಸಾರಂಭಗಳು ಎಂಟು. ಸ್ತ್ರೀಯವು ಹನ್ನೆರಡು. ಸ್ತ್ರೀಪುರುಷರ ವಾಗಾರಂಭಗಳು 12. ರೀತಿ, ವೃತ್ತಿ, ಪ್ರವೃತ್ತಿಗಳು ಬೌದ್ಧಿಕ ಆರಂಭಗಳು. ವೈದರ್ಭ್ಯಾದಿ ರೀತಿಗಳು ನಾಲ್ಕು. ಭಾರತ್ಯಾದಿ ವೃತ್ತಿಗಳು ನಾಲ್ಕು. ಪ್ರವೃತ್ತಿಗಳು ಹಲವು. ಅಂಗ, ಪ್ರತ್ಯಂಗಗಳ ಕರ್ಮಗಳೂ ಚೇಷ್ಟಾವಿಶೇಷಗಳೂ ಶರೀರಾರಂಭ ಗಳು. ಅಂಗಗಳು 6, ಪ್ರತ್ಯಂಗಗಳು 8, ಅಂಗ, ಪ್ರತ್ಯಂಗ ಚೇಷ್ಟೆಗಳು 12. ಚೇಷ್ಟಾವಿಶೇಷಗಳು ಸ್ತ್ರೀಗೆ ಮಾತ್ರ. ಅಂಗಪ್ರತ್ಯಂಗಕರ್ಮಗಳು ಸ್ತ್ರೀಪುರುಷರಿಗೆ ಸಾಧಾರಣ. ಅಭಿನಯಗಳು ನಾಲ್ಕು : ಸ್ತಂಭಾದಿ ಸಾತ್ತ್ವಿಕ, ವಾಗಾರಂಭರೂಪದ ವಾಚಿಕ, ಶರೀರಾರಂಭರೂಪದ ಆಂಗಿಕ, ಬುದ್ಧ್ಯಾರಂಭ ರೂಪದ ಆಹಾರ್ಯ.

**ಶಬ್ದಾಲಂಕಾರವರ್ಗಗಳು 9 :** ಛಾಯೆ, ಮುದ್ರೆ, ಉಕ್ತಿ, ಯುಕ್ತಿ, ಗುಂಫನೆ, ವಾಕೋವಾಕ್ಯ, ಅನುಪ್ರಾಸ ಯಮಕಗಳು, ಚಿತ್ರ, ಸಮಸ್ಯೆ ಎಂದು ಅರ್ಥಾಲಂಕಾರವರ್ಗಗಳು 8 : ಸ್ವರೂಪ, ಸಾದೃಶ್ಯ, ಉತ್ಪ್ರೇಕ್ಷೆ, ಅತಿಶಯ, ವಿಭಾವನೆ, ವಿರೋಧ, ಹೇತು, ಸಮ- ಎಂಬ ತತ್ತ್ವಗಳನ್ನವು ಆಧರಿಸಿವೆ. ಸಮವೆಂಬ ತತ್ತ್ವದ 6 ಉಪವಿಭಾಗಗಳು ಉಭಯಾಲಂಕಾರವರ್ಗಗಳೆನ್ನಿಸುತ್ತವೆ : ಪ್ರಶಸ್ತಿ, ಕಾಂತಿ, ಔಚಿತ್ಯ, ಸಂಕ್ಷೇಪ, ಯಾವದರ್ಥತೆ, ಅಭಿವ್ಯಕ್ತಿ-ಎಂದು. ಸಾಮಾನ್ಯ ಮತ್ತು ವೈಶೇಷಿಕ ಎಂದು ಕಾವ್ಯಗುಣಗಳ ವರ್ಷಗಳೆರಡು. ಸಾಮಾನ್ಯ ಶಬ್ದಗುಣಗಳು ಆರು. ಸಾಮಾನ್ಯ ಅರ್ಥಗುಣಗಳು ಆರು ಮತ್ತು ಉಭಯಗುಣಗಳು ಆರು. ವೈಶೇಷಿಕ ಗುಣಗಳು ಆಯಾ ಕೃತಿಗೆ ವಿಶಿಷ್ಟ. ದೋಷಗಳು ಮೂರು ಮುಖ್ಯ ಆಶ್ರಯಗಳನ್ನಾಧರಿಸಿವೆ. ವಕ್ತೃ, ವಾಚಕ, ವಾಚ್ಯ-ಎಂದು.

ಅಗ್ನಿಪುರಾಣ ತನ್ನ ಅಲಂಕಾರ ವಿಭಾಗದಲ್ಲಿ ಹೆಚ್ಚಾಗಿ ಭರತ, ಭಾಮಹ, ದಂಡಿಗಳ ಗ್ರಂಥಗಳನ್ನಾಧರಿಸಿದೆ. ಇದರ ಪ್ರಕಾರ ಆಕ್ಷೇಪ ವ್ಯಾಪಾರದಲ್ಲಿ ಧ್ವನಿ ಅಡಕವಾಗುತ್ತದೆ. ಸಮವೆಂಬ ಅರ್ಥಾಲಂಕಾರದ ಕೊನೆಯ ಪ್ರಭೇದವಾದ ಪ್ರಕಟತತ್ತ್ವವೆಂಬ ಉಭಯಾಲಂಕಾರ ವನ್ನು ಅಭಿವ್ಯಕ್ತಿ ಎಂದು ಕರೆದು ಶ್ರುತಿ, ಆಕ್ಷೇಪಗಳು ಅಭಿವ್ಯಕ್ತಿಯ ಉಪವಿಭಾಗಗಳೆಂದು ಸಾರುತ್ತದೆ. ಇದರ ಪರಿಭಾಷೆಯಂತೆ ಶ್ರುತಿಯಲ್ಲಿ ಅಭಿಧಾ, ಲಕ್ಷಣಾ ವ್ಯಾಪಾರಗಳು ಅಡಕವಾಗುತ್ತವೆ : ಆಕ್ಷೇಪವೆಂದರೆ ಧ್ವನಿ ಅಥವಾ ವ್ಯಂಜನಾವ್ಯಾಪಾರ. ಈ ದೃಷ್ಟಿಯಿಂದ ಅಲಂಕಾರ ವ್ಯಾಪಕವೂ ಧ್ವನಿವ್ಯಾಪ್ಯವೂ ಆಗುತ್ತದೆ. ಧ್ವನಿ ಅಲಂಕಾರದ ಜಾತಿಗೆ ಸೇರಿದ ಒಂದು ಅಂಗ ಎನ್ನಿಸುತ್ತದೆ. ವಿವಿಧ ಅಲಂಕರಣವ್ಯಾಪಾರಗಳಲ್ಲಿ ಧ್ವನನ ವ್ಯಾಪಾರವೂ ಒಂದೆಂದಾಗುತ್ತದೆ.

**ಭವಿಷ್ಯ ಪುರಾಣ :** ಮುಂದಾಗುವುದನ್ನು ಹೇಳ ಹೊರಟದ್ದು, ಉಪಲಬ್ಧ ಪ್ರತಿ ಆಪಸ್ತಂಬೀಯ ಧರ್ಮಶಾಸ್ತ್ರ ಹೇಳಿದ ಹಳೆಯ ಭವಿಷ್ಯ ಪುರಾಣವಲ್ಲ. ಇದರಲ್ಲಿಯ ಸೃಷ್ಟಿವಿವರಣೆ ಮನುಸ್ಮೃತಿಯಿಂದ ಬಳಸಿಕೊಂಡಿದೆ. ಬಹುಭಾಗ ಬ್ರಾಹ್ಮಣರ ವೈದಿಕಕರ್ಮಗಳನ್ನೂ ಹಬ್ಬ ಹರಿದಿನಗಳನ್ನೂ ವಿವರಿಸುತ್ತದೆ. ಕೆಲವೇ ಕತೆಗಳಿವೆ. ನಾಗಪಂಚಮಿಯ ವರ್ಣನೆ ಹಾವುಗಳ ಕತೆಗಳಿಗೆ ಅವಕಾಶವಿತ್ತಿದೆ. ಈ ಪುರಾಣದಲ್ಲಿ ಜರತುಷ್ಟ್ರಮತದ ಸೂರ್ಯ, ಅಗ್ನಿಗಳ ಉಪಾಸನೆಗೆ ಸಂಬಂಧಿಸಿದ ಶಾಕದ್ವೀಪಸ್ಥ ಸೂರ್ಯಾರಾಧನೆಯ ವಿಷಯ ಬಂದಿದೆ. ಶಾಕದ್ವೀಪದ ನಿವಾಸಿಗಳು ಸಿಥಿಯನ್ನರಾಗಿರಬಹುದೆಂದು ಊಹಿಸಲಾಗಿದೆ.

ಭವಿಷ್ಯಪುರಾಣ ತನ್ನ ಬಾಯಿ, ತೋಳು, ತೊಡೆ, ಪಾದಗಳಿಂದ ಬ್ರಹ್ಮ ಇಡೀ ಸೃಷ್ಟಿಯನ್ನು ಕಾಪಾಡುವ ಸಲುವಾಗಿ ಬ್ರಾಹ್ಮಣಾದಿ ನಾಲ್ಕು ಜಾತಿಗಳನ್ನು ನಿರ್ಮಿಸಿದನೆಂದೂ ಅವುಗಳ ಉದ್ಯೋಗಗಳನ್ನು ಆಯಾ ಜಾತಿಗಳ ಸ್ವಭಾವ ಸಹಜ ಗುಣಗಳಿಗೂ ಕೃತ್ಯಗಳಿಗೂ ಅನುಗುಣವಾಗಿ ವಿಂಗಡಿಸಿ ನಿರ್ದೇಶಿಸಿದನೆಂದೂ ಹೇಳುತ್ತದೆ. ಇದರ ಮುಖ್ಯ ದೇವತೆ ಶಿವ. ಪರಂಪರೆಯ ಪ್ರಕಾರ ಶ್ಲೋಕಸಂಖ್ಯೆ 14500 ಎಂದಿದ್ದರೂ ವಾಸ್ತವಿಕವಾಗಿರುವುದು 7,000 ಭವಿಷ್ಯೋತ್ತರ ಪುರಾಣ ಇದರ ಅಂಗವೆಂದು ತಿಳಿದು ಅದರ 7,000 ಶ್ಲೋಕಗಳನ್ನೂ ಸೇರಿಸಿದರೆ ಒಟ್ಟು 14,000 ಶ್ಲೋಕಗಳಾಗುತ್ತವೆ. ಪ್ರಸ್ತುತ ಪುರಾಣ ಸಾಂಬಪುರಾಣದಿಂದ ಕೆಲ ಅಧ್ಯಾಯಗಳನ್ನು ತೆಗೆದುಕೊಂಡಿರುವುದರಿಂದ ಇದರ ಕಾಲ ಪ್ರ.ಶ. 600-950ರ ನಡುವೆ ಎನ್ನಬಹುದು. ಆಪಸ್ತಂಬ ಧರ್ಮಸೂತ್ರ, ಈ ಪುರಾಣವನ್ನು ಹೆಸರಿಸಿರುವುದರಿಂದ ಇದರ ಮೂಲ ರೂಪದ ಕಾಲ ಪ್ರ.ಶ.ಪೂ. 3ನೆಯ ಶತಮಾನ ಎನ್ನಬಹುದು.

**ಬ್ರಹ್ಮವೈವರ್ತಪುರಾಣ :** ಇದನ್ನು ಬ್ರಹ್ಮಕೈವರ್ತಪುರಾಣವೆಂದೂ ಹೇಳುತ್ತಾರೆ. ದಕ್ಷಿಣ ಭಾರತದಲ್ಲಿ ಇದರ ಎರಡನೆಯ ಹೆಸರು ಪ್ರಸಿದ್ಧ. ಇವರು ಬ್ರಹ್ಮಖಂಡ ಕೃಷ್ಣಾತ್ಮಕನಾದ ಬ್ರಹ್ಮನ ಉತ್ಪತ್ತಿಯನ್ನು ಹೇಳುತ್ತದೆ. ನಾರದನ ಬಗೆಗೆ ಅನೇಕ ಕಥೆಗಳು ಬಂದಿವೆ. 16ನೆಯ ಅಧ್ಯಾಯದಲ್ಲಿ ವೈದ್ಯಕೀಯ ವಿಷಯದ ಪ್ರಸ್ತಾಪವಿದೆ. ಪ್ರಕೃತಿ ಖಂಡದಲ್ಲಿ ಜಗತ್ತಿನ ಮೂಲದ್ರವ್ಯವಾದ ಪ್ರಕೃತಿ ದುರ್ಗೆ, ಲಕ್ಷ್ಮಿ, ಸರಸ್ವತಿ, ಸಾವಿತ್ರಿ, ರಾಧೆ-ಎಂಬ ಐದು

ಅವತಾರಗಳನ್ನು ಕೃಷ್ಣನ ಅಪ್ಪಣೆಯ ಮೇರೆಗೆ ತಾಳಿದ ಸಂಗತಿಯಿದೆ. ಗಣೇಶಖಂಡ ಅತಿ ಪ್ರಾಚೀನ ಕಾಲದಲ್ಲಿ ಅಜ್ಞಾತನಾಗಿದ್ದ ಮತ್ತು ಅರ್ವಾಚೀನಕಾಲದಲ್ಲಿ ಅತಿ ಜನಪ್ರಿಯನಾದ ಗಜಮುಖ ಗಣಪನ ಕಥೆಗಳನ್ನು ಹೇಳಿದೆ. ಒಂದು ವಿಚಿತ್ರರೀತಿಯಿಂದ ಗಣೇಶನನ್ನಿಲ್ಲಿ ಕೃಷ್ಣನ ಒಂದು ಅವತಾರವೆಂದು ಹೇಳಲಾಗಿದೆ. ಕೊನೆಯದಾದ ಕೃಷ್ಣಜನ್ಮಖಂಡ ಕೃಷ್ಣನ ಹುಟ್ಟಿನಿಂದ ಹಿಡಿದು ಅವನ ಇಡೀ ಜೀವನ ವೃತ್ತಾಂತವನ್ನು ತಿಳಿಸುತ್ತದೆ. ಅವನು ಮಾಡಿದ ಯುದ್ಧಗಳ ಹಾಗೂ ಗೋಪಿಯರೊಡನೆ ನಡೆಸಿದ ಪ್ರಣಯ ಪ್ರಕರಣಗಳ ವಿವರಗಳಿಲ್ಲಿವೆ. ಇಡೀ ಪುರಾಣದ ಮುಖ್ಯೋದ್ದೇಶ ಕೃಷ್ಣ ರಾಧೆಯರ ವಿಲಾಸವನ್ನು ಬಣ್ಣಿಸುವುದರಲ್ಲಿ ಮುಗಿಯುತ್ತದೆ. ಇಲ್ಲಿ ಇರುವುದು ಹರಿಸರ್ವೋತ್ತಮ ವಾದವಲ್ಲ, ಕೃಷ್ಣ ಸರ್ವೋತ್ತಮ ವಾದ. ಒಟ್ಟಿನಲ್ಲಿ ಅಷ್ಟು ಉತ್ತಮ ಸಾಹಿತ್ಯವೆನ್ನಿಸದ ಈ ಪುರಾಣದಲ್ಲಿ ಅನೇಕ ಮಾಹಾತ್ಮ್ಯಗಳು ತುಂಬಿಕೊಂಡಿವೆ. ಬ್ರಹ್ಮವೈವರ್ತಪುರಾಣವನ್ನು ಸಾವರ್ಣಿ ನಾರದನಿಗೆ ಹೇಳಿದನೆಂದೂ ಶ್ಲೋಕಸಂಖ್ಯೆ 18,000 ಎಂದೂ ಪ್ರಸಿದ್ಧಿ. ಆದರೆ ವಾಸ್ತವಿಕವಾಗಿ ಶ್ಲೋಕಗಳು ಇನ್ನೂ ಹೆಚ್ಚಾಗಿವೆ. ಬ್ರಹ್ಮ, ಗರುಡ ಪುರಾಣಗಳಂತೆಯೇ ಇದೂ ಮೂಲಸ್ವರೂಪವನ್ನು ಕಳೆದುಕೊಂಡು ಅರ್ವಾಚೀನ ಕಾಲದಲ್ಲಿ ಪುನಾರಚಿತವಾದ ಪುರಾಣ. ಕೃಷ್ಣ ರಾಧೆಯರ ನಿತ್ಯದಾಂಪತ್ಯವನ್ನೂ ಕೃಷ್ಣನ ಪರಬ್ರಹ್ಮತ್ವವನ್ನೂ ಪ್ರ.ಶ. 12ನೆಯ ಶತಮಾನದಲ್ಲಿದ್ದ ನಿಂಬಾರ್ಕ ಮೊಟ್ಟಮೊದಲಬಾರಿಗೆ ಹೇಳಿರುವುದರಿಂದ ಇದರ ಕಾಲ ಅದರಿಂದ ಇತ್ತೀಚಿನದೆನ್ನಬಹುದು. ರಾಧೆಯನ್ನು ಕೃಷ್ಣಶಕ್ತಿಯೆಂದು ಆರಾಧಿಸುವ ರಾಧಾವಲ್ಲಭೀಯ ಪಂಥವಂತೂ ಪ್ರ.ಶ. 16ನೆಯ ಶತಮಾನದಲ್ಲಿ ಉದಯವಾದದ್ದು. ಆದ್ದರಿಂದ ಪ್ರಸ್ತುತ ಪುರಾಣದ ಕಾಲ 16ನೆಯ ಶತಮಾನಕ್ಕೆ ಸಮೀಪವರ್ತಿಯಾಗಿರುವುದು ಸುಲಭೋಹ್ಯ.

**ಲಿಂಗಮಹಾಪುರಾಣ :** ಶಿವನ ವಿವಿಧ ರೂಪಗಳ–ಹೆಚ್ಚಾಗಿ ಲಿಂಗರೂಪದ – ಪೂಜೆಯನ್ನು ಮುಖ್ಯವಾಗಿ ವಿವರಿಸುತ್ತದೆ. ದೇವದಾರುವನಕ್ಕೊಮ್ಮೆ ಶಿವ ಹೋದಾಗ ಅವನನ್ನು ಕಂಡು ಅಲ್ಲಿದ್ದ ಋಷಿಪತ್ನಿಯರು ಮರುಳಾದರು. ಆಗ ಲಿಂಗವಾಗೆಂದು ಶಿವನಿಗೆ ಋಷಿಗಳು ಶಾಪಕೊಟ್ಟರು. ಶಿವನಿಗಿಲ್ಲಿ 28 ಅವತಾರಗಳನ್ನು ಹೇಳಲಾಗಿದೆ. ತಂತ್ರಗಳ ಪ್ರಭಾವ ಈ ಪುರಾಣದ ಮೇಲೆ ಬಿದ್ದಿರುವುದನ್ನು ಕೆಲವೆಡೆ ಕಾಣಬಹುದು. ಒಟ್ಟಿನಲ್ಲಿ ಇದು ಅಷ್ಟೇನೂ ಪ್ರಾಚೀನ ಪುರಾಣವಲ್ಲ. ಪ್ರ.ಶ. 8ನೆಯ ಶತಮಾನಕ್ಕೂ ಈಚಿನದು. ಶ್ಲೋಕಸಂಖ್ಯೆ 11000. ಬಲ್ಲಾಳಸೇನನ ಪ್ರಕಾರ ಮತ್ಸ್ಯಪುರಾಣದಲ್ಲಿರುವ ಗಾತ್ರವನ್ನು ಹೆಚ್ಚಿಸಲಾಯಿತು. ಇದರಲ್ಲಿ ಕಥನವಸ್ತುಗಳಿಲ್ಲ, ಕರ್ಮಕಾಂಡದ ಅಂಶಗಳು ತುಂಬಿಕೊಂಡಿವೆ.

**ವರಾಹ ಮಹಾಪುರಾಣ :** ವಿಷ್ಣು ವರಾಹಾವತಾರವನ್ನು ತಾಳಿ ಭೂದೇವಿಯನ್ನು ಉದ್ಧರಿಸುವ ಅಂಶವನ್ನು ಹೇಳುತ್ತದೆ. ಇದರಲ್ಲಿ ಸೃಷ್ಟಿಕ್ರಮ, ವಂಶ ವೃಕ್ಷಗಳ ವಿಷಯಗಳು ಬಂದಿದ್ದರೂ ಒಟ್ಟಿನಲ್ಲಿ ಇದು ವಿಷ್ಣುವಿನ ಸ್ತೋತ್ರ, ಪ್ರಾರ್ಥನೆ, ಪೂಜೆ ಪುರಸ್ಕಾರಗಳ ಬಗೆಯನ್ನು ಹೇಳಲು ಮೀಸಲಾದ ಪುರಾಣ. ಹೀಗಿದ್ದರೂ ಇದರಲ್ಲಿ ಶಿವ, ದುರ್ಗೆಯರ ಕಥೆಗಳಿವೆ. ಮಾತೃದೇವತೆಗಳ ಹಾಗೂ ಇತರ ಸ್ತ್ರೀದೇವತೆಗಳ ವಿಸ್ತಾರವನ್ನು ಅನೇಕ ಅಧ್ಯಾಯಗಳಲ್ಲಿ ವಿಶದಪಡಿಸಲಾಗಿದೆ. ಗಣೇಶೋತ್ಪತ್ತಿ, ಗಣೇಶಸ್ತೋತ್ರಗಳೂ ಇಲ್ಲಿವೆ. ಇಷ್ಟೇ ಅಲ್ಲ, ಶ್ರಾದ್ಧ, ಪ್ರಾಯಶ್ಚಿತ್ತ, ದೇವತಾಮೂರ್ತಿ ಪ್ರತಿಷ್ಠೆ, ಮಥುರಾಮಾಹಾತ್ಮ್ಯಗಳೂ, ನಚಿಕೇತ ವೃತ್ತಾಂತ. ಸ್ವರ್ಗ, ನರಕವರ್ಣನೆ ಮುಂತಾದವೂ ಪುರಾಣಕಕ್ಷೆಯಲ್ಲಿ ಬಂದಿವೆ. ಶ್ಲೋಕಸಂಖ್ಯೆ 24000ವೆಂದು ಪ್ರಸಿದ್ಧಿಯಿದ್ದರೂ ವಾಸ್ತವಿಕವಾಗಿ ಇದರಲ್ಲಿ 10000ಕ್ಕಿಂತ ಬಹಳ ಹೆಚ್ಚಾಗಿಲ್ಲ. ಪ್ರ.ಶ. 8ನೆಯ ಶತಮಾನದಲ್ಲಿದ್ದ ಇದರ ಮೂಲ ಸ್ವರೂಪ ಅನುಪಲಬ್ಧ. ಸದ್ಯದ ಸ್ವರೂಪದ ಕಾಲ ಪ್ರ.ಶ. 12ನೆಯ ಶತಮಾನದ ಆದಿಭಾಗವೆನ್ನಬಹುದು. ಇದು ಮೂಲದ ಕೆಲ ಅಧ್ಯಾಯಗಳನ್ನೊಳಗೊಂಡಿದೆ.

**ಸ್ಕಂದಪುರಾಣ :** ಸ್ಕಂದಪ್ರೋಕ್ತವಾದುದು. ಶೈವತತ್ತ್ವಗಳಿದರಲ್ಲಿವೆ. ಈ ಹೆಸರಿನ ಪ್ರಾಚೀನಪುರಾಣವೀಗ ಅನುಪಲಬ್ಧ. ಸ್ಕಂದಪುರಾಣದ ಸಂಹಿತೆಗಳೆಂದೂ ಖಂಡಗಳೆಂದೂ ಹೇಳಿಕೊಳ್ಳುವ ಅನೇಕ ಕೃತಿಗಳಿದ್ದರೂ ಸ್ಕಂದಪುರಾಣವೆಂಬ ಹೆಸರುಳ್ಳ ಉಪಲಬ್ಧ ಪ್ರಾಚೀನಪ್ರತಿಯಲ್ಲಿ ಅವುಗಳಲ್ಲಾವುದೂ ಅಡಕವಾಗಿಲ್ಲ. ಇದರ ಪ್ರಾಚೀನ ಮೂಲದಲ್ಲಿ 81800 ಶ್ಲೋಕಗಳಿದ್ದುವೆಂದು ಹೇಳಿಕೆ. ಅದರ ಅಭಾವದಲ್ಲಿ ಅದಕ್ಕೀ ಉಪಲಬ್ಧ ಪ್ರತಿ ಎಲ್ಲ ಅಂಶಗಳಲ್ಲೂ ಸರಿಯಾಗಿ ಹೊಂದುತ್ತದೆಂದು ಹೇಳಲು ಸಾಧ್ಯವಿಲ್ಲ. ಸ್ಕಂದಪುರಾಣಕ್ಕೆ ಸೇರಿದುವೆಂದು ಹೇಳಿಕೊಳ್ಳುವ ಎಲ್ಲ ಕೃತಿಗಳ ಶ್ಲೋಕಗಳನ್ನೂ ಸೇರಿಸಿದರೆ 81800ಕ್ಕೂ ಹೆಚ್ಚು ಶ್ಲೋಕಗಳಾಗುತ್ತವೆ. ಉಪಲಬ್ಧ ಪ್ರತಿಯಲ್ಲಿ ಶಿವ, ಅಂಧಕಾಸುರರ ಯುದ್ಧಗಳೂ ನರಕ, ಸಂಸಾರ, ಯೋಗಗಳ ವಿವರಗಳೂ ಬಂದಿದ್ದರೂ ಪುರಾಣ ಪಂಚಲಕ್ಷಣಗಳು ಕಂಡುಬರುವುದಿಲ್ಲ. ಇದಕ್ಕೆ ಆರು ಸಂಹಿತೆಗಳು : ಸನತ್‌ಕುಮಾರೀಯ, ಸೂತ, ಬ್ರಾಹ್ಮೀ, ವೈಷ್ಣವೀ, ಶಾಂಕರೀ, ಸೌರಿ ಸಂಹಿತೆಗಳೆಂದು. ಸನತ್ಕುಮಾರೀಯಸಂಹಿತೆ ಕಾಶಿಯ ಪವಿತ್ರಸ್ಥಳಗಳು ಮತ್ತು ಇತರ ಶೈವಕಥೆಗಳನ್ನು ಹೇಳುತ್ತದೆ. ಸೂತಸಂಹಿತೆಯಲ್ಲಿ ಶಿವಪೂಜೆ, ಯೋಗ, ವರ್ಣಾಶ್ರಮಧರ್ಮ, ಮೋಕ್ಷೋಪಾಯ, ವೈದಿಕಕರ್ಮ. ಧ್ಯಾನಯಜ್ಞ, ಜ್ಞಾನಯಜ್ಞ ಮತ್ತು ಶಿವಭಕ್ತಿಗಳನ್ನು ಪ್ರತಿಪಾದಿಸಲಾಗಿದೆ. ಶೈವ, ಬ್ರಹ್ಮಗೀತೆ, ವೇದಾಂತಪರವಾದ ಸೂತಗೀತೆಗಳೂ ಇವೆ. ಸೌರಸಂಹಿತೆಯಲ್ಲಿ ಸೃಷ್ಟಿಯ ವಿವರಗಳನ್ನು ಸೂರ್ಯ ಯಾಜ್ಞವಲ್ಕ್ಯನಿಗೆ ಹೇಳಿದ ಬಗೆಯಿದೆ. ಶಾಂಕರ ಸಂಹಿತೆಯನ್ನು ಅಗಸ್ತ್ಯಸಂಹಿತೆಯೆಂದೂ ಹೇಳುತ್ತಾರೆ. ಏಕೆಂದರೆ ಅದನ್ನು ಸ್ಕಂದ ಅಗಸ್ತ್ಯನಿಗೆ ಹೇಳಿದನೆಂದು ನಂಬಿಕೆ. ರಾಮಾವತಾರಿಯಾದ ವಿಷ್ಣುವಿನ ಆರಾಧನೆಯನ್ನು ಹೇಳುವ ಅಗಸ್ತ್ಯಸಂಹಿತೆ ಇದೇಯೋ ಬೇರೆಯೋ ಎಂಬುದು ಸಂಶಯಾಸ್ಪದ. ಕಾಶಿಪಟ್ಟಣದ ಮತ್ತು ಅದರ ಸುತ್ತಮುತ್ತಲಿನ ಶಿವದೇವಾಲಯಗಳ ವಿಸ್ತಾರವನ್ನು ಹೇಳುವ ಸುಪ್ರಸಿದ್ಧ ಕಾಶೀಖಂಡವಿಲ್ಲಿದೆ. ಇಲ್ಲೇ ಗಂಗಾಸಹಸ್ರನಾಮವೂ ಬಂದಿದೆ. ಕಾಶೀಖಂಡವೊಂದರ ಶ್ಲೋಕಸಂಖ್ಯೆಯೇ 15,000. ಉತ್ಕಲಖಂಡವನ್ನೂ ಸ್ಕಂದಪುರಾಣದ ಭಾಗವೆಂದು ಹೇಳುವುದುಂಟು. ಕಾಲ 7ನೆಯ ಶತಮಾನ.

**ವಾಮನ ಪುರಾಣ :** ವಿಷ್ಣುವಿನ ವಾಮನಾವತಾರ ಇದರ ಆರಂಭ ವಸ್ತು. ಪುರಾಣ ಪಂಚಲಕ್ಷಣಸಂಪನ್ನವಾಗಿಲ್ಲ. ಹಲವಾರು ಅಧ್ಯಾಯಗಳು ವಿಷ್ಣುವಿನ ಅವತಾರಗಳನ್ನು ವಿವರಿಸುತ್ತವೆ. ಒಂದೆಡೆ ಲಿಂಗಪೂಜೆಯೂ ಮತ್ತೊಂದೆಡೆ ಉಮಾಶಿವರ ವಿವಾಹ, ಗಣೇಶ, ಸ್ಕಂದರ ಉತ್ಪತ್ತಿ ಮುಂತಾದ ಸಂಗತಿಗಳೂ ಬಿತ್ತರಿಸಲ್ಪಟ್ಟಿವೆ. ಶ್ಲೋಕಸಂಖ್ಯೆ ಸುಮಾರು 7,000; ಇದರಲ್ಲಿ 10,000 ಶ್ಲೋಕಗಳಿದ್ದುವೆಂದು ಹಳೆಯ ಪ್ರಸಿದ್ಧಿ, ಕಾಲ ಸುಮಾರು 16ನೆಯ ಶತಮಾನ. ಪಂಚಲಕ್ಷಣಗಳಿಂದ ಕೂಡಿದ್ದಾಗಿರಬಹುದಾದ ಇದರ ಪ್ರಾಚೀನ ಮೂಲ ಎಲ್ಲಿಯೂ ಸಿಕ್ಕಿಲ್ಲ. ಉಪಲಬ್ಧ ಪ್ರತಿ ವಿಷ್ಣು ಶಿವರಿಗೆ ಸಮಾನಪ್ರಾಧಾನ್ಯವನ್ನೀಯುತ್ತದೆ.

**ಕೂರ್ಮಪುರಾಣ :** ಇದರಲ್ಲಿ ಬ್ರಾಹ್ಮೀ, ಭಾಗವತೀ, ಸೌರೀ ಮತ್ತು ವೈಷ್ಣವೀ ಎಂಬ ನಾಲ್ಕು ಸಂಹಿತೆಗಳಿವೆ ಎಂದು ಪುರಾಣವೇ ಹೇಳಿದರೂ ಲಭ್ಯವಾಗಿರುವುದು ಮೊದಲನೆಯ ಸಂಹಿತೆಯೊಂದೇ. ಸಮುದ್ರಮಥನ ಸಂದರ್ಭದಲ್ಲಿ ಮಂದರಗಿರಿಯನ್ನು ಹೊತ್ತ ವಿಷ್ಣುವಿನ ಕೂರ್ಮಾವತಾರದ ಸ್ತೋತ್ರದೊಂದಿಗೆ ಪ್ರಸ್ತುತ ಪುರಾಣ ಆರಂಭವಾಗುತ್ತದೆ. ಆಗ ಕಡಲಿಂದೆದ್ದು ಬಂದ ಲಕ್ಷ್ಮಿ ವಿಷ್ಣುಪತ್ನಿಯಾಗುತ್ತಾಳೆ. ಇಂದ್ರದ್ಯುಮ್ನನೆಂಬ ದೊರೆ ಬ್ರಾಹ್ಮಣನಾಗಿ ಜನಿಸಿ, ಲಕ್ಷ್ಮಿಯಿಂದ ಉಪದೇಶಪಡೆದು, ಸರ್ವಚರಾಚರಗಳ ಸರ್ಗ, ಸ್ಥಿತಿ, ಪ್ರಲಯ ಕಾರಣನೆಂದು ಆರಾಧಿಸಿ, ಕೂರ್ಮಾವತಾರದ ಮೂಲಕ ಕೂರ್ಮಪುರಾಣವನ್ನು ಅರಿತುಕೊಳ್ಳುತ್ತಾನೆ. ಹರಸರ್ವೋತ್ತಮತ್ವವನ್ನೂ ತ್ರಿಮೂರ್ತಿಗಳ ಐಕ್ಯವನ್ನೂ ಪ್ರಸ್ತುತಪುರಾಣ ಪ್ರತಿಪಾದಿಸುತ್ತದೆ. ಹರನ ಶಕ್ತಿಯ 8,000 ಹೆಸರುಗಳಿಲ್ಲಿ ಬಂದಿವೆ. ಹರಿಹರರೊಂದು, ಲಕ್ಷ್ಮೀ ಪಾರ್ವತಿಯರೊಂದು ಎಂದು ಹೇಳಿದರೂ ವಿಷ್ಣುವಿನ ಅವತಾರವೆನ್ನಿಸಿದ ಕೃಷ್ಣ ತನ್ನ ಪತ್ನಿಯಾದ ಜಾಂಬವತಿಯಲ್ಲಿ ಮಗನನ್ನು ಪಡೆಯಬೇಕಾದರೆ ಕಠಿನ ತಪವನ್ನೆಸಗಿ, ಶಿವಾನುಗ್ರಹವನ್ನು ಪಡೆಯಬೇಕಾಯಿತು–ಎಂದು ಹೇಳಿರುವುದು ಹರ ಪಕ್ಷಪಾತಕ್ಕೆ ಪ್ರಮಾಣ. ಕೂರ್ಮಪುರಾಣ ಪಂಚಲಕ್ಷಣಗಳಿಂದ ಕೂಡಿದೆ. ವಿಷ್ಣುವಿನ ಕೆಲ ಅವತಾರಗಳನ್ನಿಲ್ಲಿ ಹೇಳಿದರೂ ಒಂದು ಇಡೀ ಅಧ್ಯಾಯ ಶಿವಾವತಾರಗಳ ವರ್ಣನೆಗೇ ಮುಡಿಪಾಗಿದೆ. ಕಾಶೀ ಪ್ರಯಾಗ ಮಾಹಾತ್ಮ್ಯಗಳಲ್ಲದೆ, ಭಗವದ್ಗೀತೆಗೆ ಸರಿದೊರೆಯಾದ ಈಶ್ವರಗೀತೆಯೂ ಬಂದಿರುವುದು ಈ ಪುರಾಣದ ವೈಶಿಷ್ಟ್ಯ. ಅನಂತರ ವ್ಯಾಸಗೀತೆ, ಪ್ರಾಯಶ್ಚಿತ ವಿಧಿ, ಪಾತಿವ್ರತ್ಯಪ್ರಶಂಸೆ ಮುಂತಾದ ವಿಷಯಗಳು ಬರುತ್ತವೆ. ರಾಮಾಯಣದಲ್ಲಿಲ್ಲದ ಸೀತಾವೃತ್ತಾಂತವೊಂದಿಲ್ಲಿ ಪಾತಿವ್ರತ್ಯ ಮಾಹಾತ್ಮ್ಯವನ್ನು ನಿದರ್ಶಿಸುತ್ತದೆ. ಇಲ್ಲಿ ರಾವಣನ ಕೈಯಿಂದ ಸೀತೆಯನ್ನು ಅಗ್ನಿಯೇ ಬಿಡಿಸಿ ಕಾಪಾಡುತ್ತಾನೆ. ಇದರಲ್ಲಿ 17,000, ಶ್ಲೋಕಗಳಿದ್ದವೆಂದು ಪ್ರಸಿದ್ಧಿ; 6,000 ಶ್ಲೋಕಗಳನ್ನು ಮಾತ್ರ ಉಪಲಬ್ಧ ಪ್ರತಿಯಲ್ಲಿ ಕಾಣಬಹುದು. ಇದರ ಏಳನೆಯ ಅಧ್ಯಾಯದಲ್ಲಿ ಬರುವ ಸೃಷ್ಟಿ ವಿವರಣೆ ವ್ಯಾಹತವಾಗಿರುವುದರಿಂದ ಒಂದಕ್ಕಿಂತ ಹೆಚ್ಚು ಪೌರಾಣಿಕರ ಕೈವಾಡದಿಂದ ಇದು ರಚಿತವಾಯಿತೆಂಬುದನ್ನು ನಿರ್ಧರಿಸಬಹುದು. ಮಹಾಭಾರತದ ಸೃಷ್ಟಿ ವಿವರಣೆಯನ್ನು ಪ್ರಸ್ತುತ ಪುರಾಣ ಸ್ಪಷ್ಟವಾಗಿ ಅನುಸರಿಸಿರುವುದರಿಂದಲೂ ಮತ್ಸ್ಯಪುರಾಣಕ್ಕೆ ಗೊತ್ತಿಲ್ಲದಿದ್ದ ಮಹಾಪುರಾಣಗಳ ಹದಿನೆಂಟನ್ನಿದು ಉಲ್ಲೇಖಿಸುವುದರಿಂದಲೂ ಇದರ ಪ್ರಸ್ತುತರೂಪದ ಕಾಲ ಪ್ರ.ಶ. 650ಕ್ಕೂ ಈಚಿನದೆನ್ನಬಹುದು.

ಕೂರ್ಮಪುರಾಣದ ಪ್ರಕಾರ ದೇವರು ಅವ್ಯಕ್ತ, ಅಜ್ಞೇಯ, ನಿತ್ಯ, ಜಗತ್ಕಾರಣ, ಸದಸದಾತ್ಮಕ, ಪ್ರಕೃತಿಯಿಂದ ಅಭಿನ್ನ, ಸರ್ವನಿರ್ದೇಶಕ, ಗುಣತ್ರಯದ ಸಾಮ್ಯಾವಸ್ಥೆಯಲ್ಲಿದವ ಪರಬ್ರಹ್ಮ, ಪುರುಷಗರ್ಭ. ಇದು ಅವನ ಪ್ರಾಕೃತಪ್ರಲಯ ಸ್ಥಿತಿ. ಇಲ್ಲಿಂದ ಮುಂದೆ ಅವನು ಪ್ರಕೃತಿ, ಪುರುಷರಲ್ಲಿ ದೇವತ್ವಪ್ರಕಟಣೆಗಾಗಿ ಪ್ರವೇಶಿಸಿದಾಗ ಜಗತ್ಸೃಷ್ಟಿಗಾರಂಭ. ದೇವರು ಪ್ರಕೃತಿಯಾಗಿ ನಡೆದುಕೊಳ್ಳುವುದೆಂದರೆ ಸಂಕೋಚ ವಿಕಾಸಶೀಲನಾಗುವುದೆಂದರ್ಥ. ಪ್ರಧಾನ ಪುರುಷಾತ್ಮಕವಾದ ಮಹತ್ ಕಾರಣವೆಂಬುದು ಅವನ ಆದ್ಯಸೃಷ್ಟಿ. ಅದರಿಂದ ಮಹತ್, ಆತ್ಮ, ಮತಿ, ಬ್ರಹ್ಮ, ಪ್ರಬುದ್ಧಿ, ಖ್ಯಾತಿ, ಈಶ್ವರ, ಪ್ರಜ್ಞೆ, ಧೃತಿ, ಸ್ಮೃತಿ, ಅಥವಾ ಸಂವಿತ್ ಎಂಬ ಪದಾರ್ಥ ಹುಟ್ಟುತ್ತದೆ. ಹೀಗೆ ವಿವಿಧ ನಾಮಗಳುಳ್ಳ ಈ ಮಹತ್ತಿನಿಂದ ವೈಕಾರಿಕ, ತೈಜಸ ಮತ್ತು ಭೂತಾದಿ ಎಂಬ ಅಹಂಕಾರತ್ರಯ ಉದಯಿಸುತ್ತದೆ. ಈ ತ್ರಿವಿಧಾಹಂಕಾರಕ್ಕೆ ಅಭಿಮಾನ, ಕರ್ತ, ಮಂತ, ಆತ್ಮ, ಎಂಬ ಹೆಸರುಗಳಿವೆ.

**ಮತ್ಸ್ಯ ಪುರಾಣ :** ಸಲಕ್ಷಣವಾದ ಪ್ರಾಚೀನ ಮಹಾಪುರಾಣ. ಮತ್ಸ್ಯಾವತಾರ ತಾಳಿ ವಿಷ್ಣು ಮನುವನ್ನು ಪ್ರಲಯಪ್ರವಾಹದಿಂದ ಉದ್ಧರಿಸುವ ವೃತ್ತಾಂತದಿಂದ ಪುರಾಣಾರಂಭ. ಮನುವಿನ ಹಡಗನ್ನು ಮತ್ಸ್ಯ ಎಳೆದೊಯ್ಯುವಾಗ ಅವನಿಗೂ ಮನುವಿಗೂ ನಡೆದ

ಸಂವಾದವೇ ಮತ್ಸ್ಯಪುರಾಣ. ಸೃಷ್ಟಿ, ವಂಶವೃಕ್ಷ, ಶ್ರಾದ್ಧ, ಭೂ, ಖಗೋಲಗಳ ವಿಷಯ, ಆಂಧ್ರಾದಿ ವಿವಿಧ ದೇಶಗಳ ಅರಸರ ಆಳಿಕೆ. ಯಯಾತಿ ವೃತ್ತಾಂತ, ಸಾವಿತ್ರಿಯ ಕಥೆ ಮತ್ತು ವಿಷ್ಣುವಿನ ಅವತಾರಗಳು ಪ್ರಸ್ತುತ ಪುರಾಣದ ವಸ್ತು ಪ್ರಪಂಚದಲ್ಲಿ ಗಣ್ಯ. ಯಯಾತಿ ವೃತ್ತಾಂತ ಮುಂತಾದುವು ಮಹಾಭಾರತ ಹರಿವಂಶಗಳಲ್ಲಿರುವಂತೆಯೇ ಇವೆ. ವಿವಿಧವ್ರತಗಳು, ಪ್ರಯೋಗಮಾಹಾತ್ಮ್ಯ, ವಾರಾಣಸೀಮಾಹಾತ್ಮ್ಯ, ನರ್ಮದಾಮಾಹಾತ್ಮ್ಯ, ರಾಜಧರ್ಮ, ಶಕುನಶಾಸ್ತ್ರ, ಗೃಹಾರಂಭಕರ್ಮ, ವಿಗ್ರಹಪ್ರತಿಷ್ಠೆ, ದೇವಾಲಯ, ಅರಮನೆಗಳ ರಚನೆ, ಷೋಡಶದಾನ ಮುಂತಾದ ವಿಷಯಗಳು ಇದರಲ್ಲಿ ಆಮೇಲಾದ ಪ್ರಕ್ಷೇಪಗಳು. ವೈಷ್ಣವ, ಶೈವ ಸಮಪ್ರಾಧಾನ್ಯವನ್ನಿದರಲ್ಲಿ ಕಾಣಬಹುದು. ಶ್ಲೋಕಸಂಖ್ಯೆ 15,000; ಪ್ರಸ್ತುತರೂಪದ ಕಾಲ ಪ್ರ.ಶ. 550–650 ನಡುವೆ. ಈ ಪುರಾಣ ತನ್ನ ಅಲಭ್ಯವಾದ ಮೂಲಸ್ವರೂಪದಲ್ಲಿ ವಾಯು, ಬ್ರಹ್ಮಾಂಡ ಪುರಾಣಗಳಷ್ಟೇ ಪ್ರಾಚೀನ. ವಿಷ್ಣು ಹಾಗೂ ಪದ್ಮ ಪುರಾಣಗಳಿಗೂ ಇದಕ್ಕೂ ಸಾಧಾರಣವೆನ್ನಿಸುವ ಎಷ್ಟೋ ಅಧ್ಯಾಯಗಳಿವೆ. ಮೂಲದ ದೃಷ್ಟಿಯಿಂದ ಇದರ ಪ್ರಸ್ತುತ ರೂಪ ಉಕ್ತಪುರಾಣಗಳಿಗೆ ಋಣಿಯೋ ಅವೇ ಇದಕ್ಕೆ ಋಣಿಯೋ ಗೊತ್ತಿಲ್ಲ. ಕೂರ್ಮ, ಲಿಂಗ ಪುರಾಣಗಳಂತೆ ಇದು ಮತಾಚಾರಮಯವಾಗಿಲ್ಲ.

ಬ್ರಹ್ಮಪುರಾಣವನ್ನು ಮೊದಲು ನೆನೆದು, ಅನಂತರ ವೇದಗಳನ್ನು ತನ್ನ ಬಾಯಿಯಿಂದ ಹೊರಗೆಡಹಿದ ಎನ್ನುತ್ತದೆ ಮತ್ಸ್ಯಮಹಾಪುರಾಣ. ಇದರ ಪ್ರಕಾರ ಸರ್ವಚರಾಚರಗಳ ರಕ್ಷಣೆಗಾಗಿ ದಂಡನೆಯನ್ನು ಕೈಗೊಳ್ಳಲೆಂದು ಸ್ವಯಂಭುವಾದ ಬ್ರಹ್ಮ ದೇವತೆಗಳ ಅಂಶಗಳಿಂದ ರಾಜನನ್ನು ಸೃಜಿಸಿದ. ಆದುದರಿಂದ ರಾಜನನ್ನು ಯಾರೂ ಎದುರು ನಿಂತು ನೋಡಲಾರರು. ಆತ ಮಾನವರಲ್ಲಿ ಸೂರ್ಯ. ಆತ ದುಷ್ಟನಾದರೆ ಪ್ರಜೆಗಳೆಲ್ಲರೂ ದುಷ್ಟರಾಗುತ್ತಾರೆ. ಹೆಚ್ಚುಕಡಿಮೆಗೆಡೆಗೊಡದಂತೆ ದೊರೆ ದಂಡಶಕ್ತಿಯನ್ನು ನಿರ್ಭಯದಿಂದ ಬಳಸಿದರೆ ಮಾತ್ರ ಪ್ರಜೆಗಳು ದುರ್ಮಾರ್ಗಿಗಳಾಗುವುದಿಲ್ಲ. ಧರ್ಮರೂಪದ ದಂಡಶಕ್ತಿಯಿರುವುದು ಬಲಿಷ್ಠರು ದುರ್ಬಲರನ್ನು ಶೋಷಿಸದಂತೆ ನೋಡಿಕೊಳ್ಳಲೆಂದು. ಇಡೀ ರಾಜ್ಯಕ್ಕೆ ರಾಜನು ನಿಯಮಿಸುವ ನೌಕರರೇ ಆಧಾರ. ಧರ್ಮಜ್ಞರ ಸಲಹೆಯಂತೆಯೇ ಆತ ಆಡಳಿತ ನಡೆಸಬೇಕು–ಎಂಬುದು ಪ್ರಸ್ತುತಪುರಾಣದ ರಾಜಧರ್ಮದ ಮುಖ್ಯಾಂಶ.

**ಗರುಡ ಪುರಾಣ :** ಗರುಡ ಮಹಾಪುರಾಣವೊಂದು ಸಂಪೂರ್ಣ ವೈಷ್ಣವಪುರಾಣ. ಗರುಡನಿಗಿದನ್ನು ಮೊದಲು ವಿಷ್ಣು ಹೇಳಿದನೆಂದೂ ಆ ಬಳಿಕ ಗರುಡ ಇದನ್ನು ಕಶ್ಯಪಮುನಿಗೆ ಹೇಳಿದನೆಂದೂ ಆದುದುರಿಂದ ಇದಕ್ಕೀ ನಾಮಧೇಯ ಬಂದಿತೆಂದೂ ಉಲ್ಲೇಖಿಸಲಾಗಿದೆ. ಸೃಷ್ಟಿಕ್ರಮ, ಯುಗಚಕ್ರ, ವಂಶಾವಳಿ ಮುಂತಾದ ಪೌರಾಣಿಕ ವಿಷಯಗಳೊಟ್ಟಿಗೇ ವಿಷ್ಣುಪೂಜೆ, ವೈಷ್ಣವ ಧರ್ಮಕರ್ಮ, ಪವಿತ್ರಸ್ಥಳ, ಪಂಚಬ್ರಹ್ಮದೇವತಾರ್ಚನೆ ಮುಂತಾದ ವಿಷಯಗಳೂ ಇದರಲ್ಲಿವೆ. ಕೆಲಮಟ್ಟಿಗಿದು ಅಗ್ನಿಪುರಾಣದಂತೆಯೇ ವಿಶ್ವಕೋಶ ಲಕ್ಷಣವುಳ್ಳದ್ದು. ಇದರಲ್ಲಿ ರಾಮಾಯಣ, ಮಹಾಭಾರತ, ಹರಿವಂಶಗಳ ಕತೆಗಳಲ್ಲದೆ, ಸೃಷ್ಟಿವಿವರಣೆ, ಖಗೋಲವಿಚಾರ, ಜ್ಯೋತಿಶಾಸ್ತ್ರದ ಅಂಶ, ಶಕುನಶಾಸ್ತ್ರ, ಸಾಮುದ್ರಿಕ ಶಾಸ್ತ್ರ, ರತ್ನಪರೀಕ್ಷೆ, ರಾಜನೀತಿ, ಯಾಜ್ಞವಲ್ಕ್ಯ ಸ್ಮೃತಿಗನುಗುಣವಾದ ಧರ್ಮವಿವೇಕ ಮೊದಲಾದ ನಾನಾ ಜ್ಞಾನಾಂಗಗಳು ತುಂಬಿಕೊಂಡಿದೆ. ಈ ಪುರಾಣದ ಉತ್ತರಖಂಡವನ್ನು ಎರಡನೆಯ ಭಾಗ ಅಥವಾ ಪ್ರೇತಕಲ್ಪ ಎನ್ನುತ್ತಾರೆ. ಪ್ರೇತಕಲ್ಪದಲ್ಲಿ ಸತ್ತಮೇಲೆ ಜೀವಾತ್ಮನಿಗೊದಗುವ ಗತಿ, ಕರ್ಮ,ಪುನರ್ಜನ್ಮ, ಮೋಕ್ಷ, ಸಂಸಾರಬೀಜವಾಗಿರುವ ಆಸೆ, ಮರಣಶಕುನ ಯಮಲೋಕಮಾರ್ಗ, ಪ್ರೇತಗಳ ಗತಿ, ನರಕಹಿಂಸೆ, ಸ್ವಪ್ನ, ಅಪಶಕುನಗಳನ್ನುಂಟು ಮಾಡುವ ಪ್ರೇತಗಳು, ಮರಣಪೂರ್ವದ ಕರ್ಮ, ಸಾಯುತ್ತಿರುವ ಮತ್ತು ಸತ್ತವರ ಬಗ್ಗೆ ಮಾಡತಕ್ಕ ಕರ್ಮ, ಉತ್ತರಕ್ರಿಯೆ, ಪಿತೃಪೂಜೆ, ಸತೀವಿಧಿ, ಗಯಾಮಾಹಾತ್ಮ್ಯ ಇತ್ಯಾದಿ ವಿವಿಧ ವಿಷಯಗಳ ವಿವರಗಳಿವೆ. ಈ ಪುರಾಣದ ಪ್ರಾಚೀನ ಮೂಲದ ಕಾಲ ಪ್ರ.ಶ. 3–4ನೆಯ ಶತಮಾನವಾಗಿರಬಹುದಾದರೂ ಸದ್ಯದ ರೂಪದ ಅವಧಿ ಪ್ರ.ಶ. 10ನೆಯ ಶತಮಾನಕ್ಕಿಂತ ಹಿಂದಿನದಲ್ಲವೆಂದು ತರ್ಕಿಸಲಾಗಿದೆ.

ಬ್ರಹ್ಮನ ಬಾಯಿಗಳಿಂದ ಹೊರಬಿದ್ದ ವೇದಗಳಲ್ಲಿ ಹೇಳಿದ ಕರ್ಮಗಳನ್ನು ಮಾಡಲಾರದವ ಸ್ಮೃತಿ ಹೇಳಿದ ಕರ್ಮಗಳನ್ನಾದರೂ ಮಾಡಬೇಕು. ಅದೂ ಆಗದವ ನಡೆದುಬಂದ ಸದಾಚಾರವನ್ನು ಹಿಡಿಯಬೇಕು. ರಾಜನಿಲ್ಲದ ರಾಜ್ಯದಲ್ಲಿ ಇರಬಾರದು. ರಾಜ ವಿಷ್ಣುವಿನ ಮಾನಸಪುತ್ರ. ಆತ ಪ್ರಜೆಗಳನ್ನು ಮಕ್ಕಳಂತೆ ಪಾಲಿಸಬೇಕು. ಅವನ ಆಳಿಕೆ ಸತ್ಯ, ನ್ಯಾಯಬದ್ಧವಾಗಿರಬೇಕು. ಇಂಥ ಶೀಲವುಳ್ಳ ದೊರೆ ಜಗತ್ತಿಗೆ ಭೂಷಣಪ್ರಾಯ, ದುರ್ಬಲನಿಗಿರುವ ಮಹಾಬಲ–ಎಂದು ಮುಂತಾಗಿ ಗರುಡಮಹಾಪುರಾಣ ಬೋಧಿಸುತ್ತದೆ. ಗರುಡ ಪುರಾಣದ ಸಾರವನ್ನು ಮಿಕ್ಕ ಪುರಾಣಗಳ ಅಂಶದೊಂದಿಗೆ ಸಾರೋದ್ಧಾರ ಎಂಬ ಹೆಸರಿನಲ್ಲಿ ನೌನಿಧಿರಾಮನೆಂಬಾತ ಸಂಗ್ರಹಿಸಿರುವುದಿಲ್ಲಿ ಸ್ಮರಣೀಯ.

**ಬ್ರಹ್ಮಾಂಡ ಪುರಾಣ :** ವಾಯು ಮಹಾಪುರಾಣದ ಹಳೆಯ ಪಾಠವೆಂದು ಅನುಮಾನಿಸಲಾಗಿದೆ. ಏಕೆಂದರೆ ಇದನ್ನು ವಾಯವೀಯ ಬ್ರಹ್ಮಾಂಡ ಎಂದು ಕರೆದಿದೆ, ಕೂರ್ಮಮಹಾಪುರಾಣ. ಮತ್ಸ್ಯಪುರಾಣದ ಪ್ರಕಾರ ಇದನ್ನು ಹೇಳಿದವನು ಬ್ರಹ್ಮ. ಈ ಹೆಸರಿನ 12,200 ಶ್ಲೋಕಗಳುಳ್ಳ ಪ್ರಾಚೀನಮಹಾಪುರಾಣ ಕಳೆದುಹೋಗಿರಬೇಕು. ಏಕೆಂದರೆ ಉಪಲಬ್ಧ ಪ್ರತಿಯಲ್ಲಿ ಕೇವಲ ಮಾಹಾತ್ಮ್ಯಗಳೂ ಸ್ತೋತ್ರಗಳೂ ಉಪಾಖ್ಯಾನಗಳೂ ಇವೆ. ಪಾರ್ಗಿಟರ್‌ಗೆ ದೊರೆತ ಇದರ ಹಸ್ತಪ್ರತಿಯೊಂದರಲ್ಲಿಯ ಪೂರ್ವಾರ್ಧ ವಾಯುಪುರಾಣಕ್ಕೆ ಸಂಪೂರ್ಣ ಸಮವಾಗಿದೆ. ಉತ್ತರಾರ್ಧದಲ್ಲಿ ಲಲಿತಾದೇವಿಯ ಆರಾಧನೆಯನ್ನೂ ತಾಂತ್ರಿಕಕೃತ್ಯ ವಿಧಾನಗಳಿಗನುಗುಣವಾಗಿ ವಿವರಿಸಲಾಗಿದೆ. ಬಲಿದ್ವೀಪದಲ್ಲಿ ಸ್ಥಳೀಯ ಶಿವಭಕ್ತರಿಗೆ ಬ್ರಹ್ಮಾಂಡ ಮಹಾಪುರಾಣವೊಂದೇ ಮಹಾಧರ್ಮಗ್ರಂಥವಾಗಿದೆ. ಅಧ್ಯಾತ್ಮರಾಮಾಯಣವನ್ನು ಇದರ ಅಂಗವೆಂದು ಗಣಿಸುತ್ತಾರೆ. ಇದರಲ್ಲಿ ಅದ್ವೈತತತ್ತ್ವಗಳ ಮತ್ತು ರಾಮಭಕ್ತಿಯ ಉಪದೇಶವಿದೆ. ಅಧ್ಯಾತ್ಮರಾಮಾಯಣವಿಡೀ ಉಮಾಶಿವರ ಸಂವಾದದ ರೂಪದಲ್ಲಿದೆ. ಇದರಲ್ಲಿ ಆದಿಯಿಂದ ಅಂತ್ಯದವರೆಗೆ ರಾಮ ಪರಮಾತ್ಮನಾದ ವಿಷ್ಣು, ಅಪಹೃತೆಯಾದ ಸೀತೆ ಮಾಯೆ. ಅಗ್ನಿಪ್ರವೇಶದ ಬಳಿಕ ಬರುವ ಸೀತೆ ವಿಷ್ಣುಪತ್ನಿಯಾದ ಲಕ್ಷ್ಮೀದೇವಿ ಅಥವಾ ಪ್ರಕೃತಿ. ಪ್ರಸ್ತುತ ಪುರಾಣದಲ್ಲಿ ಬರುವ ರಾಮಹೃದಯ ಮತ್ತು ರಾಮಗೀತೆಗಳನ್ನು ರಾಮಭಕ್ತರೆಲ್ಲರೂ ಕಲಿತು ಪಠಿಸುತ್ತಾರೆ. ಇದೇ ಪುರಾಣದ ಭಾಗವೆಂದು ಹೇಳಲಾಗುವ ನಚಿಕೇತೋಪಾಖ್ಯಾನ ಸುಂದರವಾಗಿರುವ ಪ್ರಾಚೀನ ನಚಿಕೇತಕಥೆಯ ಒಂದು ವಿಕೃತರೂಪ. ಇದರ ಪ್ರಾಚೀನಮೂಲ ವಾಯುಪುರಾಣದ ಪ್ರಾಚೀನಮೂಲರೂಪದಷ್ಟೇ ಹಳೆಯದಾಗಿರಬಹುದಾದರೂ ಮರಾಠಿಕವಿ ಏಕನಾಥನ ಹೇಳಿಕೆಯ ಪ್ರಕಾರ ಇದರ ಪ್ರಸ್ತುತ ರೂಪದ ಕಾಲ ಹೆಚ್ಚು ಕಡಿಮೆ ವಾಯುಪುರಾಣದ ಆಧುನಿಕರೂಪದ ಕಾಲಕ್ಕೆ ಸರಿಸಮವಾದೀತು ಎಂದು ಊಹಿಸಬಹುದು.

ಬ್ರಹ್ಮಾಂಡವೆಂಬ ಪದ ಪರಂಪರಾಗತ. ಬ್ರಾಹ್ಮಣ ಮತ್ತು ಉಪನಿಷತ್ತುಗಳಲ್ಲಿ ವಿಶ್ವದ ಹುಟ್ಟು ಚಿನ್ನದ ಮೊಟ್ಟೆಯಿಂದ ಎನ್ನಲಾಗಿದೆ. ಬ್ರಹ್ಮ ಅಥವಾ ಬ್ರಹ್ಮರೂಪಿಯಾದ ವಿಷ್ಣು ಇಡೀ ವಿಶ್ವವನ್ನು ಗರ್ಭೀಕರಿಸಿಕೊಂಡಿದ್ದ ಚಿನ್ನದ ಮೊಟ್ಟೆಯಲ್ಲಿ ವಾಸಿಸಿದ್ದನೆಂದೂ ಅವನ ಇಚ್ಛೆಯಂತೆ ಅದರಿಂದ ವಿಶ್ವ ಆವಿರ್ಭವಿಸಿತೆಂದೂ ಮನುಸ್ಮೃತಿ ಮತ್ತು ವಿಷ್ಣು ಹಾಗೂ ವಾಯು ಪುರಾಣಗಳು ವರ್ಣಿಸಿರುವುದನ್ನಿಲ್ಲಿ ಸ್ಮರಣೀಯ. (ಬಿ.ಎಚ್.ಎಸ್.)

**ಅಷ್ಟಾದಶ ವರ್ಣನೆಗಳು :** ಮಹಾಕಾವ್ಯದ ಅಂಗಗಳು ಎಂದು ಪ್ರಸಿದ್ಧವಾಗಿರುವ ನಗರ, ಅರ್ಣವ, ಶೈಲ, ಋತು, ಚಂದ್ರೋದಯ, ಸೂರ್ಯೋದಯ, ವನವಿಹಾರ, ಜಲಕ್ರೀಡೆ, ಮಧುಪಾನವಿನೋದ, ಸುರತೋತ್ಸವ, ವಿಯೋಗ, ವಿವಾಹ, ಕುಮಾರಜನನ, ಮಂತ್ರಾಲೋಚನೆ, ದೂತಕಾರ್ಯ, ವಿಜಯಯಾತ್ರೆ, ಯುದ್ಧ, ನಾಯಕನ ವಿಜಯ–ಎಂಬ ವರ್ಣನೀಯ ವಿಷಯಗಳನ್ನು ಅಷ್ಟಾದಶ ವರ್ಣನೆಗಳೆಂದು ವ್ಯವಹರಿಸುವುದು ರೂಢಿಯಾಗಿದೆ. ಇವನ್ನು ಕಾವ್ಯಸ್ಥಾನಗಳೆಂದೂ ಸ್ಥಲಗಳೆಂದೂ ವರ್ಣಕಗಳೆಂದೂ ಲಾಕ್ಷಣಿಕರು ಬೇರೆ ಬೇರೆಯಾಗಿ ಕರೆದಿರುವುದುಂಟು.

ಪ್ರಾಚೀನ ಸಂಸ್ಕೃತ ಆಲಂಕಾರಿಕನಾದ ದಂಡಿ (ಸು. 7 ಅಥವಾ 8ನೆಯ ಶತಮಾನ) ಕಾವ್ಯಾದರ್ಶವೆಂಬ ತನ್ನ ಅಲಂಕಾರ ಶಾಸ್ತ್ರಗ್ರಂಥದಲ್ಲಿ ಸರ್ಗಬಂಧ ಅಥವಾ ಮಹಾಕಾವ್ಯದ ವರ್ಣನಾಂಗಗಳಾಗಿ ಮೊದಲಬಾರಿಗೆ ನಿರೂಪಿಸಿರುತ್ತಾನೆ. ಅಂದಿನಿಂದ ಸಂಸ್ಕೃತದಲ್ಲೂ ದೇಶಭಾಷೆಗಳಲ್ಲೂ ಅಲಂಕಾರಿಕರು ಮಹಾಕಾವ್ಯಲಕ್ಷಣವನ್ನು ಕುರಿತ ತಮ್ಮ ವಿವರಣೆಗಳಲ್ಲಿ ಅವುಗಳಲ್ಲಿ ಎಲ್ಲವನ್ನೋ ಕೆಲವನ್ನೋ ಉಲ್ಲೇಖಿಸಿರುತ್ತಾರೆ. ರುದ್ರಟನ (ಸು. 850) ಕಾವ್ಯಾನುಶಾಸನ, ಭೋಜದೇವನ (ಸು. 1005–54) ಸರಸ್ವತೀ ಕಂಠಾಭರಣ, ಹೇಮಚಂದ್ರನ (1088–1172) ಕಾವ್ಯಾನುಶಾಸನ, ವಾಗ್ಭಟನ (ಸು.1150ರಿಂದೀಚೆ) ಕಾವ್ಯಾನುಶಾಸನ, ಅಮರಚಂದ್ರಸೂರಿ ಮತ್ತು ಅರಿಸಿಂಹಕೃತವಾದ (13ನೆಯ ಶತಮಾನ)ಕಾವ್ಯ ಕಲ್ಪಲತಾ ಅಥವಾ ಕವಿಶಿಕ್ಷಾ, ವಿಶ್ವನಾಥನ (1300–84) ಸಾಹಿತ್ಯದರ್ಪಣ, ವಿದ್ಯಾನಾಥನ (14ನೆಯ ಶತಮಾನದ ಮೊದಲ ಪಾದ) ಪ್ರತಾಪರುದ್ರ ಯಶೋಭೂಷಣ, ಕೇಶವಮಿಶ್ರಕೃತವಾದ (16ನೆಯ ಶತಮಾನದ ಉತ್ತರಾರ್ಧ) ಅಲಂಕಾರ ಶೇಖರ, ಶ್ರೀಕೃಷ್ಣಕವಿಯ (1600ರಿಂದೀಚೆ) ಮಂದಾರ ಮಕರಂದ ಚಂಪೂ, ನರಸಿಂಹಕವಿಯ (18ನೆಯ ಶತಮಾನ) ನಂಜರಾಜ ಯಶೋಭೂಷಣ, ಕಾಂತಿಚಂದ್ರ ವಿದ್ಯಾರತ್ನನ (19ನೆಯ ಶತಮಾನ) ಕಾವ್ಯ ದೀಪಿಕಾ–ಈ ಕೆಲವು ಅಲಂಕಾರ ಶಾಸ್ತ್ರ ಗ್ರಂಥಗಳಲ್ಲೂ ವಿಶ್ವಕೋಶದಂತೆ ವಿಷಯ ಸಂಗ್ರಹವನ್ನುಳ್ಳ ಅಗ್ನಿಪುರಾಣ (ಸು. 11ನೆಯ ಶತಮಾನ), ಕೆಳದಿ ಬಸವರಾಜನ ಶಿವತತ್ತ್ವರತ್ನಾಕರ–ಇಂಥ ಕೆಲವು ಕೃತಿಗಳಲ್ಲೂ ದಂಡಿ ನಿರೂಪಿಸಿರುವ ವರ್ಣನೆಗಳನ್ನು ಯಥಾವತ್ತಾಗಿಯೂ ಯಥೋಚಿತವಾಗಿಯೂ ಮಹಾಕಾವ್ಯದ ಉಪಯುಕ್ತಾಂಗಗಳಾಗಿ ಮತ್ತೆ ಮತ್ತೆ ನಿರೂಪಿಸಿರುವುದು ಕಂಡುಬರುತ್ತದೆ. ಹೀಗೆಯೇ ಕನ್ನಡದಲ್ಲಿ ಶ್ರೀ ವಿಜಯನ ಕವಿರಾಜಮಾರ್ಗ (ಸು. 850), ನಾಗವರ್ಮIIನ ಕಾವ್ಯಾವಲೋಕನ, ಉದಯಾದಿತ್ಯನ ಉದಯಾದಿತ್ಯಲಂಕಾರ (ಸು. 1150), ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ (ಸು. 1240), ಮಾಧವನ ಮಾಧವಾಲಂಕಾರ (ಸು. 1500), ಮಂಗರಾಜನ ಅಭಿನವಾಭಿದಾನಂ (1398), ನಿಜಗುಣ ಶಿವಯೋಗಿಯ ವಿವೇಕಚಿಂತಾಮಣಿ (ಸು. 1500)–ಈ ಕೆಲವು ಅಲಂಕಾರ ಮತ್ತು ಅಲಂಕಾರೇತರ ಗ್ರಂಥಗಳಲ್ಲೂ ಅಷ್ಟಾದಶವರ್ಣನೆಗಳ ವಿವರಣೆ ಬರುತ್ತದೆ.

ಸಂಸ್ಕೃತದಲ್ಲಾಗಲಿ ಕನ್ನಡದಲ್ಲಾಗಲಿ ಲಾಕ್ಷಣಿಕರೂ ಇತರರೂ ದಂಡಿಯ ಕಾವ್ಯಾದರ್ಶದಲ್ಲಿ ಸಾಮಾನ್ಯವೂ ಪ್ರಾತಿನಿಧಿಕವೂ ಆಗಿ ಹೇಳಿರುವ ಕೆಲವು ವರ್ಣನೆಗಳನ್ನೇ ಶಾಸ್ತ್ರನಿಯಮಾನುಸಾರವಾಗಿ ಗತಾನುಗತಿಕವಾಗಿ ಉಲ್ಲೇಖಿಸುತ್ತ ಹೋದುದರಿಂದ ಅಷ್ಟಾದಶವರ್ಣನೆಯೆಂಬುದು ಮಹಾಕಾವ್ಯದ ಒಂದು ಪ್ರಸ್ಥಾನವಾಗಿ ರೂಢಿಗೆ ಬಂತು.

ವಿಷ್ಣುಧರ್ಮೋತ್ತರಪುರಾಣ (ಸು. 5 ಅಥವಾ 6ನೆಯ ಶತಮಾನ) ಮತ್ತು ಭಾಮಹನ ಕಾವ್ಯಾಲಂಕಾರ (ಸು. 6ಅಥವಾ 7ನೆಯ ಶತಮಾನ)–ಇವುಗಳಲ್ಲಿ ಮಹಾಕಾವ್ಯದ ರಾಜನೈತಿಕ ಸಾರಸಾಮಗ್ರಿಯೂ ಇತಿವೃತ್ತದ ಹಂದರವೂ ಆದ ಮಂತ್ರ ದೂತ ಪ್ರಯಾಣ ಆಜಿ ನಾಯಕಾಭ್ಯುದಯ ಎಂಬ ಐದು ಅಂಗಗಳು ಮಹಾಕಾವ್ಯದಲ್ಲಿ ಆವಶ್ಯಕಾಂಗಗಳಾಗಿ ಉಕ್ತವಾಗಿವೆ. ಭಾರವಿ ಹಾಕಿದ ಸಂಪ್ರದಾಯವನ್ನು ನೋಡಿಕೊಂಡೇ ಭಾಮಹಾದಿಗಳು ಮಂತ್ರದೂತಾದಿಗಳನ್ನು ಮಹಾಕಾವ್ಯದ ಮುಖ್ಯಾಂಗಗಳಾಗಿ ಪರಿಗಣಿಸಿದರೆಂದು ಕೆಲವರು ಭಾವಿಸಿದ್ದಾರೆ. ಇವು ಒಳಕೊಳ್ಳುವಂತೆ ದಂಡಿ ವರ್ಣನೀಯ ವಿಷಯಗಳ ವಿವರಗಳನ್ನು ಬೆಳೆಸಿದ್ದಾನೆ. ದಂಡಿಗೆ ಅನಂತರದಲ್ಲಿ ರುದ್ರಟ, ಹೇಮಚಂದ್ರ, ಅಮರಚಂದ್ರಸೂರಿ, ಕೇಶವಮಿತ್ರ ಮೊದಲಾದವರು ಸ್ವತಂತ್ರಿಸಿ ವರ್ಣನಾಂಗಗಳನ್ನೂ ಅದರ ಉಪಾಂಗಗಳನ್ನೂ ಬಿಡಿಬಿಡಿಸಿ ಬೆಳೆಸಿರುತ್ತಾರೆ. ಮಹಾಕಾವ್ಯವೆಂದರೆ ಅಷ್ಟಾದಶವರ್ಣನೆಗಳಿಂದ ರಚಿತವಾದುದು ಎಂದು ಅಭಿಪ್ರಾಯವಾಗುವಂತೆ ಅದಕ್ಕೆ ಪ್ರಾಶಸ್ತ್ಯಕೊಟ್ಟಿರುವುದು ಹಲವರು ಆಲಂಕಾರಿಕರಲ್ಲಿ ಕಾಣುತ್ತದೆ. ವಿದ್ಯಾನಾಥ ಕವಿರಾಜಮಾರ್ಗಕಾರ ಮೊದಲಾದವರಲ್ಲಿ ಇದನ್ನು ಗಮನಿಸಬಹುದು. ಪೂರ್ವೋಕ್ತವಾದ ನಗರಾರ್ಣವಾದಿ ಅಂಗಗಳಲ್ಲಿ ಕೆಲವು ನ್ಯೂನವಾಗಿದ್ದರೂ ಮಹಾಕಾವ್ಯತ್ವಕ್ಕೆ ದೋಷವಿಲ್ಲವೆಂದೂ ಕವಿ ವರ್ಣಿಸಿರುವಷ್ಟು ಅಂಗಗಳೇ ತಮ್ಮ ಕಾವ್ಯಗುಣಗಳಿಂದ ಕಾವ್ಯಜ್ಞರನ್ನು ಸಂತೋಷಪಡಿಸುವಂತಿದ್ದರೆ ಸಾಕೆಂದೂ ದಂಡಿಯೇ ಅಭಿಪ್ರಾಯ ಪಟ್ಟಿರುತ್ತಾನೆ. ಇದನ್ನು ಮೊದಮೊದಲಿನ ಕೆಲವು ಲಾಕ್ಷಣಿಕರು ಒಪ್ಪಿದ್ದಾರೆ. ಹೇಮಚಂದ್ರನ ಕಾವ್ಯಾನುಶಾಸನದಲ್ಲಿ ನಗರಾರ್ಣವಾದಿ ವರ್ಣನೆಗಳನ್ನು ಕಾವ್ಯದಲ್ಲಿ ಕಡ್ಡಾಯವಾಗಿ ಅಥವಾ ವಿಕಲ್ಪವಾಗಿ ಬಳಸುವುದರ ಬಗೆಗೆ ವಿಚಾರ ನಡೆದಿದೆ; ಔಚಿತ್ಯದೃಷ್ಟಿಯನ್ನು ವಿಮರ್ಶಿಸಿದೆ. ವರ್ಣನೆಗಳ ಸಂಖ್ಯೆಗಾಗಲಿ ಸರಣಿಗಾಗಲಿ ಭಂಗವಾಗದ ಹಾಗೆ ಅವುಗಳನ್ನು ಮಹಾಕಾವ್ಯದಲ್ಲಿ ವರ್ಣಿಸತಕ್ಕದ್ದೆಂದು ಗಣ್ಯರಾದ ಶಾಸ್ತ್ರಕಾರರು ಯಾರೂ ಸಾಮಾನ್ಯವಾಗಿ ವಿಧಿಸಲಿಲ್ಲ. ಕಾವ್ಯ ಮೈಗೊಳ್ಳುವುದು ಕಥೆಯಿಂದ; ಕಥೆ ವರ್ಣನೆಗಳ ಪರಿಪೋಷಣೆಯಿಂದ; ವರ್ಣನಾಂಗಗಳು ಕಥಾರೀತಿ ಮತ್ತು ಕಥೆಯ ಆವಶ್ಯಕತೆಗೆ ಅನುಗುಣವಾಗಿ ಸಹಜವಾಗಿ ವರ್ಣಿತವಾಗಿದ್ದರೆ ಕಾವ್ಯದ ಸೊಬಗು ಹೆಚ್ಚುತ್ತದೆ–ಎನ್ನುವುದೇ ಪ್ರಸಿದ್ಧವಾದ ಆಲಂಕಾರಿಕರ ಅಭಿಪ್ರಾಯ. ಭೋಜನು ಸರಸ್ವತೀಕಂಠಾಭರಣದಲ್ಲಿ ರೂಢಿಯ 18 ವರ್ಣನೆಗಳು ಕಾವ್ಯದಲ್ಲಿ ರಸಪೋಷಕವಾಗಿ ಬಳಸಲ್ಪಡುತ್ತವೆಯೆಂದಿದ್ದಾನೆ; ಆ ಮೂಲಕವಾಗಿ ಆತ ಕಾವ್ಯಸ್ಥಾನಗಳಲ್ಲಿ ರಸಪ್ರಾಧಾನ್ಯವನ್ನು ಒತ್ತಿ ಹೇಳಿದ್ದಾನೆ. ಸಂಸ್ಕೃತದಲ್ಲಾಗಲಿ ಕನ್ನಡದಲ್ಲಾಗಲಿ ಉತ್ತಮ ಮಹಾಕಾವ್ಯಗಳು ಅಷ್ಟಾದಶವರ್ಣನಾತ್ಮಕವಾಗಿ ಕಟ್ಟಿದವುಗಳಲ್ಲ. ಅವುಗಳಲ್ಲಿ ಅಷ್ಟಾದಶವರ್ಣನೆಗಳು ಕವಿಯಿಷ್ಟದಂತೆ ಸಂದರ್ಭೋಚಿತವಾಗಿ ಸ್ವಲ್ಪ ಹೆಚ್ಚೋ ಕಡಿಮೆಯೋ ಆಗಿ ಪ್ರಾಶಸ್ತ್ಯ ಪಡೆದು ವರ್ಣಿತವಾಗಿರುತ್ತವೆ. ಕಥೆ ಪಾತ್ರ ರಸ ಮೊದಲಾದವುಗಳಲ್ಲಿ ಔಚಿತ್ಯದೃಷ್ಟಿಯನ್ನು ಮೀರಿ, ಅವನ್ನು ಮರೆಸಿಬಿಡುವ ಮಟ್ಟಿಗೆ ವರ್ಣನೆಗಳ ಹಾವಳಿ ಹೆಚ್ಚಾದಾಗ, ಅಂಥ ಮಹಾಕಾವ್ಯಗಳಲ್ಲಿ ಕವಿ ಅಷ್ಟಾದಶ ವರ್ಣನೆಗಳ ಕೋಟಲೆಗೆ ಒಳಗಾಗಿ ಕೃತಕವಾದ ಕಾವ್ಯಮಾರ್ಗವನ್ನು ಹಿಡಿದಿದ್ದಾನೆಂದು ಹೇಳಬಹುದು. ಇದಕ್ಕೆ ಸಂಸ್ಕೃತದಲ್ಲೂ ಕನ್ನಡದಲ್ಲೂ ಇತರ ದೇಶ ಭಾಷೆಗಳಲ್ಲೂ ಬೇಕಾದ ಹಾಗೆ ನಿದರ್ಶನಗಳಿವೆ. (ಟಿ.ವಿ.ವಿ.)

**ಅಷ್ಟಾವಧಾನ :** ಅಷ್ಟ (ಎಂಟು) ಅವಧಾನ (ಆಲಿಸುವುದು) ಎಂಬ ಪದಗಳು ಸೇರಿ ಅಷ್ಟಾವಧಾನ ಎಂದಾಗಿದೆ. ಎಂಟು ಕಡೆಗಳಿಂದ ಕೇಳಿಬರುವ ಮಾತು ಮುಂತಾದವನ್ನು ಏಕಕಾಲದಲ್ಲಿ ಗ್ರಹಿಸುವ ಸಾಮರ್ಥ್ಯ, ಪ್ರತಿಭೆ, ಸ್ಮರಣಶಕ್ತಿಗಳಿಂದ ರೂಪುಗೊಳ್ಳುತ್ತದೆ. ಭಾರತೀಯ ಶಿಕ್ಷಣಸಂಪ್ರದಾಯದಲ್ಲಿ ಕಲಾತ್ಮಕವಾದ ಒಂದು ವಿದ್ಯೆ. 64 ಕಲೆಗಳಲ್ಲಿ ಒಂದೆಂದು ಪರಿಗಣಿಸಿರುವ ಸಂದರ್ಭಗಳುಂಟು. ಇದರೊಡನೆ ಕಂಡುಬರುವ ಶತಾವಧಾನ, ಸಮಸ್ತಾವಧಾನ–ಇವು ಇತರ ಬಗೆಗಳು. ಈ ವಿದ್ಯೆಯ ಅಭ್ಯಾಸ, ಪ್ರದರ್ಶನಗಳು ಇಂದಿಗೂ ಪ್ರಚಲಿತವಾಗಿವೆ. ಇದರಲ್ಲಿ ಪರಿಣತರಾದವರನ್ನು ಅಷ್ಟಾವಧಾನಿಗಳೆಂದು ಕರೆಯುತ್ತಾರೆ, ಹಾಗೆಯೇ ಶತಾವಧಾನದಲ್ಲಿ ನಿಷ್ಣಾತರು ಶತಾವಧಾನಿಗಳು. ಇದಕ್ಕೆ ಸಂಬಂಧಪಟ್ಟಂತೆ ಶತಾವಧಾನಿ ವೇಮೂರಿ ಶ್ರೀರಾಮಾಶಾಸ್ತ್ರಿಗಳಿಂದ ವಿರಚಿತವಾಗಿರುವ ಅವಧಾನವಿಧಾನವೆಂಬ ಗ್ರಂಥ ಪ್ರಸಿದ್ಧವಾಗಿದೆ. (ಬಿ.ಕೆ.ಎಸ್.)

**ಅಷ್ಟಾವರಣ :** ವೀರಶೈವದರ್ಶನದಲ್ಲಿ ಇವನ್ನು ಕ್ರಿಯಾಪ್ರಧಾನವಾದ ಮೋಕ್ಷೋಪಾಯಗಳೆಂದು ಭಾವಿಸಲಾಗಿದೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷ, ಮಂತ್ರ–ಇವು ಬಹಿರಂಗ ಅಷ್ಟಾವರಣಗಳು. ಇವುಗಳಲ್ಲಿ ಮೊದಲ ಮೂರು ಪೂಜ್ಯವಾದುವು. ಅನಂತರದ ಮೂರು ಪೂಜಾಸಾಧನವಾದುವು. ಕೊನೆಯ ಎರಡು ಪೂಜಾಪರಿಣಾಮಗಳು. ಆಚಾರ, ಆನಂದ, ಅನುಭವ, ಆಪ್ಯಾಯನ, ಚಿದ್ರಸ, ಚಿದ್‍ಭಸ್ಮ, ಜ್ಞಾನಪ್ರಕಾಶ, ನಾದಮಂತ್ರ ಎಂಬಿವು ಅಂತರಂಗ ಅಷ್ಟಾವರಣಗಳೆನಿಸಿವೆ. ಬಹಿರಂಗ ಅಷ್ಟಾವರಣಗಳು ಸ್ಥೂಲದೇಹಕ್ಕೂ ಅಂತರಂಗ ಅಷ್ಟಾವರಣಗಳು ಸೂಕ್ಷ್ಮಶರೀರಕ್ಕೂ ಸಂಬಂಧಪಟ್ಟವುಗಳೆಂದು ಅನುಭಾವಿಗಳು ಹೇಳಿದ್ದಾರೆ. (ಬಿ.ಎಸ್.)

**ಅಷ್ಟಾಹ್ನಿಕ ಪರ್ವ :** ಜೈನ ಹಬ್ಬಗಳಲ್ಲೊಂದು. ಈ ಹಬ್ಬವನ್ನು ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳ ಶುಕ್ಲಪಕ್ಷ ಅಷ್ಟಮಿಯಿಂದ ಹುಣ್ಣಿಮೆಯವರೆಗೆ ಆಚರಿಸಲಾಗುವುದು. ಇದಕ್ಕೊಂದು ಸಾಂಪ್ರದಾಯಿಕ ನಂಬುಗೆಯ ಹಿನ್ನೆಲೆಯಿದೆ. ಈ ಭೂಮಿಯಲ್ಲಿರುವ ದ್ವೀಪಗಳಲ್ಲಿ ಎಂಟನೆಯ ನಂದೀಶ್ವರ ದ್ವೀಪದಲ್ಲಿಯ 52 ಜಿನಾಲಯಗಳ ಪೂಜೆಯನ್ನು ಸ್ವರ್ಗವಾಸಿ ದೇವತೆಗಳು ಮಾತ್ರ ಮಾಡಲು ಸಾಧ್ಯ. ಇದು ಮಾನವರು ಆ ಸಮಯದಲ್ಲಿ ಆಚರಿಸುವ ಹಬ್ಬವಾಗಿದೆ. (ಎ.ಎಸ್.)

**ಅಷ್ಟೋತ್ತರ :** ನೂರೆಂಟು ನಾಮಗಳಿಂದ ದೇವರನ್ನು ಸ್ತುತಿಸುವುದನ್ನು ಈ ಹೆಸರಿನಿಂದ ಕರೆಯುತ್ತೇವೆ. ಅಷ್ಟೋತ್ತರ ಎಂದರೆ ಎಂಟು ಅಧಿಕ ಎಂದು ಮಾತ್ರ ಅರ್ಥವಾಗುತ್ತದೆ. ಆದರೆ ಇದರ ತಾತ್ಪರ್ಯ ಎಂಟು ಅಧಿಕವಾದ ನೂರು ಎಂದು. ಅಷ್ಟೋತ್ತರ ಎನ್ನುವುದು ಅಷ್ಟೋತ್ತರ ಶತನಾಮಾವಳಿ ಎಂಬುದರ ಹ್ರಸ್ವರೂಪ. ಈ ನಾಮಗಳ ಸ್ವರೂಪವನ್ನು ತಾತ್ತ್ವಿಕವಾಗಿ ಕಂಡ ಮಹರ್ಷಿಗಳು ಅವನ್ನು ಶ್ಲೋಕರೂಪದಲ್ಲಿ ರಚಿಸಿ ಉಳಿದವರಿಗೂ ಅವುಗಳ ಪ್ರಯೋಜನ ಲಭಿಸಲಿ ಎಂಬ ಅಭಿಪ್ರಾಯದಿಂದ ಅವನ್ನು ಪುರಾಣಾದಿಗಳಲ್ಲಿ ತಿಳಿಸಿರುತ್ತಾರೆ. ಈ ನಾಮಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಓಂಕಾರದೊಡನೆ ಹೇಳಿ ಪುಷ್ಪಾದಿಗಳಿಂದ ಅರ್ಚಿಸುತ್ತಾರೆ. ಶ್ಲೋಕರೂಪದಿಂದಲೂ ಅಷ್ಟೋತ್ತರವನ್ನು ಕೆಲವರು ನಿತ್ಯವೂ ಪಠಿಸುವುದುಂಟು. ಆದರೂ ಇದರ ಬಳಕೆ ಅರ್ಚನೆಯಲ್ಲೇ ಅಧಿಕ. ಪ್ರತಿಯೊಂದು ವ್ರತದಲ್ಲೂ ಆಯಾ ವ್ರತಾಂಗವಾಗಿ ಒಂದೊಂದು ಅಷ್ಟೋತ್ತರಪೂಜೆ ಇದ್ದೇ ಇರುತ್ತದೆ.

ಸಾಮಾನ್ಯವಾಗಿ ಶೈವಪುರಾಣಗಳಲ್ಲಿ ಶೈವದೇವತಾ ಅಷ್ಟೋತ್ತರಗಳನ್ನೂ ವೈಷ್ಣವ ಪುರಾಣಗಳಲ್ಲಿ ವೈಷ್ಣವದೇವತಾ ಅಷ್ಟೋತ್ತರಗಳನ್ನೂ ಕಾಣಬಹುದು. ದೇವತಾರ್ಚನೆಗಾಗಿಯೇ ಮೀಸಲಾಗಿರುವ ಅಷ್ಟೋತ್ತರ ಕಾಲಕ್ರಮದಲ್ಲಿ ಇತರ ಪೂಜೆಗಳಲ್ಲೂ ರೂಪುಗೊಂಡಿದೆ. ಕೃಷ್ಣಾಷ್ಟೋತ್ತರ, ಲಕ್ಷ್ಮೀಅಷ್ಟೋತ್ತರ, ರಾಮಾಷ್ಟೋತ್ತರ, ಶಿವಾಷ್ಟೋತ್ತರ, ಭೈರವಾಷ್ಟೋತ್ತರ, ಗಣಪತಿಅಷ್ಟೋತ್ತರ, ನವಗ್ರಹಅಷ್ಟೋತ್ತರ–ಹೀಗೆಯೇ ಇನ್ನೂ ಅನೇಕ ಅಷ್ಟೋತ್ತರಗಳಿವೆ.

ಪ್ರತಿ ಅಷ್ಟೋತ್ತರದ ಆರಂಭದಲ್ಲೂ ಋಷಿ, ಛಂದಸ್ಸು, ದೇವತೆಗಳ ವಿವರವಿರುತ್ತದೆ. ಬಳಿಕ ನಿರ್ದಿಷ್ಟ ದೇವತೆಯ ಧ್ಯಾನಶ್ಲೋಕ, ಕೊನೆಯಲ್ಲಿ ಫಲಶ್ರುತಿ ಇರುತ್ತದೆ. ಅಷ್ಟೋತ್ತರನಾಮಗಳನ್ನು ಹೇಳಿ ದೇವತಾರ್ಚನೆಮಾಡುವುದರಿಂದ ಅಥವಾ ಆ ನಾಮಗಳನ್ನು ಉಚ್ಚರಿಸಿದ ಮಾತ್ರದಿಂದ ಪಾತಕಗಳು ನಶಿಸಿ ಅಭೀಷ್ಟಗಳು ಫಲಿಸುತ್ತವೆ ಎಂದು ಫಲಶ್ರುತಿ ತಿಳಿಸುತ್ತದೆ. (ಎಸ್.ಎನ್.ಕೆ.)

**ಅಸಂಗ :** 375–450. ಯೋಗಾಚಾರವೆಂಬ ಬೌದ್ಧಸಂಪ್ರದಾಯದ ಪ್ರವರ್ತಕ. ಈತ ಭಾರತದ ವಾಯವ್ಯಪ್ರದೇಶದ ಪುರುಷಪುರ (ಪೇಷಾವರ್) ಎಂಬಲ್ಲಿನ ಕೌಶಿಕಗೋತ್ರದ ಬ್ರಾಹ್ಮಣ. ಇವನ ತಮ್ಮ ವಸುಬಂಧುವೂ ಪ್ರಖ್ಯಾತನಾದ ಯೋಗಾಚಾರ ದಾರ್ಶನಿಕ. ಮೊದಲಿಗೆ ಸರ್ವಾಸ್ತಿವಾದ ಪಂಥದ ಅನುಯಾಯಿಯಾಗಿದ್ದು, ಮಹಾಯಾನದಲ್ಲಿದ್ದ ಶುಷ್ಕಬೌದ್ಧಿಕ ಪ್ರಾಮುಖ್ಯದಿಂದ ಬೇಸರಗೊಂಡು ಸಮಾಧಿ–ಯೋಗ–ಧ್ಯಾನಗಳಿಗೆ ಪ್ರಾಧಾನ್ಯಕೊಡುವ ಸಲುವಾಗಿ ಹೊಸದೊಂದು ಶಾಖೆಯನ್ನೇ ಆರಂಭಿಸಿದ. ತುಷಿತ ಸ್ವರ್ಗದಲ್ಲಿ ಭವಿಷ್ಯದ್ಬುದ್ಧನಾದ ಮೈತ್ರೇಯನೇ ಅಸಂಗನಿಗೆ ಹಲವಾರು ಆಗಮಗಳನ್ನೂ ಕಾಣಿಸಿದನೆಂಬ ಶ್ರದ್ಧೆ 4 ಅಥವಾ 5ನೆಯ ಶತಮಾನಗಳಲ್ಲಿ ಬಲವಾಗಿತ್ತು. ವಾಸ್ತವವಾಗಿ ಅಸಂಗ ಮೈತ್ರೇಯನಾಥನೆಂಬ ಐತಿಹಾಸಿಕ ಗುರುವಿನ ಶಿಷ್ಯನಾಗಿದ್ದ. ಈ ಗುರುವಿನ ವಿಚಾರ ಹೆಚ್ಚಾಗಿ ತಿಳಿದುಬಂದಿಲ್ಲ. ಆತ ಅಸಂಗನಿಗೆ ಕಾಣಿಸಿದನೆಂದು ಹೇಳಲಾದ ಯೋಗಾಚಾರ ಭೂಮಿಶಾಸ್ತ್ರದ ಒಂದು ಪರಿಚ್ಛೇದವಾದ ಬೋಧಿಸತ್ವಭೂಮಿ ಮಾತ್ರ ಸಂಸ್ಕೃತದಲ್ಲಿ ಉಳಿದುಬಂದಿದೆ. ಈ ಗ್ರಂಥ ಅಸಂಗನದೇ ಎಂದು ಟಿಬೆಟ್ ಸಂಪ್ರದಾಯ ಹೇಳುತ್ತದೆ. ಅಸಂಗನ ಗ್ರಂಥಗಳೆಲ್ಲ ಚೀನಿ ಭಾಷೆಯ ಪರಿವರ್ತನೆಗಳಲ್ಲಿ, ಟಿಬೆಟ್ ದೇಶದ ತಾನ್‍ಜೂರ್ ಸಂಗ್ರಹದಲ್ಲಿ ಉಪಲಬ್ಧವಿವೆ. ಅವನ ಮಹಾಯಾನ ಸಂಪರಿಗ್ರಹವೆಂಬ ಗ್ರಂಥವನ್ನು ಸಂಸ್ಕೃತ ಭಾಷೆಯಿಂದ ಪರಮಾರ್ಥ (499–569) ಚೀನಿ ಭಾಷೆಗೆ ಅನುವಾದ ಮಾಡಿದ್ದಾನೆ; ಅವನ ಇನ್ನೊಂದು ಗ್ರಂಥವಾದ ಮಹಾಯಾನಾಭಿಧರ್ಮ ಸಂಗೀತಿಶಾಸ್ತ್ರವನ್ನು ಯುವಾನ್‍ಚಾಂಗ್ 625ರಲ್ಲಿ ಚೀನಿಭಾಷೆಗೆ ಪರಿವರ್ತಿಸಿದ. ವಜ್ರಚ್ಛೇದಿಕಾ ಎಂಬ ಗ್ರಂಥಕ್ಕೆ ಅಸಂಗ ಬರೆದ ಭಾಷ್ಯವನ್ನು ಧರ್ಮಗುಪ್ತವೆಂಬ ಭಿಕ್ಷು (590–616) ಚೀನಿ ಭಾಷೆಗೆ ಅನುವಾದ ಮಾಡಿದ್ದಾನೆ. ಆತ ಅಸಂಗನ ಪಾಂಡಿತ್ಯವನ್ನೂ ಹೊಗಳಿದ್ದಾನೆ; ಅದರಲ್ಲಿ ಅಸಂಗನ ಜೀವಿತಕ್ರಮವೂ ನಿರೂಪಿತವಾಗಿದೆ. ವಸುಬಂಧುವಿನ ಮತಪರಿವರ್ತನೆಗೆ ಅಸಂಗನೇ ಕಾರಣನೆಂದು ಈ ಗ್ರಂಥದಿಂದ ತಿಳಿಯುತ್ತದೆ. (ಎಸ್.ಕೆ.ಆರ್.)

**ಅಸಗ :** ಪೂರ್ವಸೂರಿ ಕವಿ. ಇವನನ್ನು ಪೊನ್ನನಿಂದ ಆರಂಭಿಸಿ ಮುಂದಿನ ಹಲವಾರು ಕನ್ನಡಕವಿಗಳು ಮುಕ್ತಕಂಠದಿಂದ ಹೊಗಳಿದ್ದಾರೆ. ಕೇಶಿರಾಜನಂಥ ಲಾಕ್ಷಣಿಕ ಇವನ ಪದ್ಯಗಳನ್ನು ಲಕ್ಷ್ಯಗಳಾಗಿ ತೆಗೆದುಕೊಂಡಿರುವುದಾಗಿ ಹೇಳಿಕೊಂಡಿದ್ದಾನೆ. ಈತ

ಕನ್ನಡದಲ್ಲಿ ಕರ್ಣಾಟ ಕುಮಾರಸಂಭವ ಎಂಬ ಕೃತಿಯನ್ನು ರಚಿಸಿರುವುದಾಗಿ ಜಯಕೀರ್ತಿ ಹೇಳುತ್ತಾನೆ. ಆದರೂ ಇವನ ಈ ಕೃತಿಯಾಗಲಿ ಅಥವಾ ಕನ್ನಡದಲ್ಲಿ ಬರೆದಿದ್ದರೆ, ಆ ಇತರ ಕೃತಿಗಳಾಗಲಿ ಲಭ್ಯವಾಗಿಲ್ಲ.

ವರ್ಧಮಾನ ಮಹಾವೀರ ತೀರ್ಥಂಕರನ ಜೀವನವನ್ನು ವಸ್ತುವಾಗಿ ಉಳ್ಳ ವರ್ಧಮಾನ ಚರಿತ ಮತ್ತು ಶಾಂತಿನಾಥ ತೀರ್ಥಂಕರನ ಜೀವನವನ್ನು ನಿರೂಪಿಸುವ ಶಾಂತಿಪುರಾಣ ಎಂಬ ಅವನ ಸಂಸ್ಕೃತಕೃತಿಗಳು ದೊರಕಿವೆ. ಈ ಸಂಸ್ಕೃತಕವಿ ಅಸಗನೂ ಕನ್ನಡಕವಿ ಅಸಗನೂ ಅಭಿನ್ನರು ಎಂದು ಹೆಸರಿನ ಹೋಲಿಕೆಯಿಂದ ನಂಬಬಹುದಾಗಿದೆ.

ವರ್ಧಮಾನಚರಿತವನ್ನು ಸಂವತ್ಸರ 910ರಲ್ಲಿ ಬರೆದುದಾಗಿ ಕವಿ ಹೇಳಿಕೊಂಡಿದ್ದಾನೆ. ಈ ಕೃತಿಯನ್ನು ಬರೆದಮೇಲೆ ಶಾಂತಿಪುರಾಣವನ್ನು ಬರೆದಿರುವುದರಿಂದಲೂ ಈ ಶಾಂತಿ ಪುರಾಣವನ್ನೂ ಇತರ ಕೃತಿಗಳನ್ನೂ ನೋಡಿರಬಹುದಾದ ಪೊನ್ನ ತನ್ನ ಕನ್ನಡ ಶಾಂತಿಪುರಾಣವನ್ನು ಸು. 950ರಲ್ಲಿ ರಚಿಸಿರುವುದರಿಂದಲೂ ಈ ತೇದಿಗಿಂತ ಹಿಂದೆಯೇ ಅಸಗ ಸಾಕಷ್ಟು ಪ್ರಸಿದ್ಧನಾಗಿರಬೇಕು. ಆದ್ದರಿಂದ ಸಂವತ್ಸರ 910 ಎಂಬುದು ಶಾಲಿವಾಹನವಲ್ಲ, ವಿಕ್ರಮ ಸಂವತ್ಸರ ಎಂದು ಆ.ನೇ.ಉಪಾಧ್ಯೆ ಅವರು ಸಕಾರಣವಾಗಿ ಊಹಿಸಿ, ವರ್ಧಮಾನ ಚರಿತದ ರಚನೆಯ ಕಾಲ ಪ್ರ.ಶ. 853 ಎಂದು ತೀರ್ಮಾನಿಸಿದ್ದಾರೆ.

ವರ್ಧಮಾನಚರಿತ ಮತ್ತು ಶಾಂತಿಪುರಾಣಗಳಲ್ಲಿ ಕವಿ ತನ್ನ ಸ್ವಂತ ವಿಷಯಗಳನ್ನು ಹೇಳಿಕೊಂಡಿದ್ದಾನೆ. ಪಟುಮತಿ ಅವನ ತಂದೆ. ವೈರೆತಿ ಅವನ ತಾಯಿ. ಇಬ್ಬರೂ ನಿಷ್ಠಾವಂತ ಜೈನರು. ಶಬ್ದ ಸಮಯಾರ್ಣವಪಾರಂಗತನಾಗಿದ್ದ ನಾಗನಂದ್ಯಾಚಾರ್ಯ ಅಸಗನ ಗುರು. ಪ್ರ.ಶ. 853ರಲ್ಲಿ ಭಾವಕೀರ್ತಿಮುನಿಯ ಸಾನ್ನಿಧ್ಯದಲ್ಲಿ ವರ್ಧಮಾನಚರಿತವನ್ನು ಕವಿ ಬರೆದು ಮುಗಿಸಿದ. ಈ ಕೃತಿರಚನೆಗೆ ಕಾರಣಕರ್ತಳಾದವಳು ಮೌದ್ಗಲ್ಯ (ಮಾಂದ್ಗಲ್ಯ) ಪರ್ವತದ ತುದಿಯಲ್ಲಿ ವಾಸವಾಗಿದ್ದ ಸಂಪತ್ ಎಂಬ ಶ್ರಾವಕಿ (ಈ ಪರ್ವತ ಯಾವುದು ಎಂಬುದಿನ್ನೂ ನಿರ್ಧಾರವಾಗಬೇಕಾಗಿದೆ). ಬಳಿಕ ಆತ ಚೋಡಳ ದೇಶಕ್ಕೆ ಬಂದು ಅಲ್ಲಿ ಶ್ರೀನಾಥನ ಸಾಮ್ರಾಜ್ಯದಲ್ಲಿ ವಿರಲಾ ಎಂಬ ಪಟ್ಟಣದಲ್ಲಿ ಜೈನಧರ್ಮಸಂಬಂಧಿಯಾದ ಎಂಟು ಕೃತಿಗಳನ್ನು ರಚಿಸಿದ. ಅಸಗನಿಗೆ ಜಿನಾಪ ಎಂಬ ಹೆಸರಿನ ಮಿತ್ರನಿದ್ದ. ಈತ ಬ್ರಾಹ್ಮಣನಾದರೂ ಜೈನಧರ್ಮದಲ್ಲಿ ಆಸಕ್ತನಾಗಿದ್ದ (ಬಹುಶಃ ಆತ ಜೈನಬ್ರಾಹ್ಮಣ). ತನಗೆ ದೀರ್ಘ ಕೃತಿಯೊಂದನ್ನು ರಚಿಸಲು ಆತ್ಮವಿಶ್ವಾಸ ಸಾಲದೆ ಹೋಗಿದ್ದರೂ ತನ್ನ ಗೆಳೆಯನಿಗೆ ಪುರಾಣಗಳ ವಿಷಯದಲ್ಲಿ ಇದ್ದ ಶ್ರದ್ಧೆಯ ಫಲವಾಗಿ ಅಸಗ ಶಾಂತಿಪುರಾಣವನ್ನು ರಚಿಸಿದ. ಇವನ ವರ್ಧಮಾನಚರಿತವನ್ನು ಧವಲನೆಂಬ ಅಪಭ್ರಂಶ ಕವಿ ತನ್ನ ಹರಿವಂಶ ಪುರಾಣದಲ್ಲಿ ಪ್ರಶಂಸಿಸಿದ್ದಾನೆ. ವರ್ಧಮಾನಚರಿತಕ್ಕೆ ಸುಮಾರು 17ನೆಯ ಶತಮಾನಕ್ಕೆ ಸೇರಿದ ಒಂದು ಟೀಕೆಯಿದೆ.

ಮೇಲೆ ಹೇಳಿದಂತೆ ಅಸಗ ಆ ಎರಡು ಸಂಸ್ಕೃತ ಕಾವ್ಯಗಳನ್ನಲ್ಲದೆ ಇನ್ನೂ ಎಂಟು ಕೃತಿಗಳನ್ನು ರಚಿಸಿದ್ದಾನೆ. ಅವು ಯಾವ ಭಾಷೆಯಲ್ಲಿವೆಯೋ ತಿಳಿಯದು.

ಪೊನ್ನ ತನ್ನ ಶಾಂತಿಪುರಾಣದಲ್ಲಿ ತಾನು ಕನ್ನಡಗವಿತೆಯಲ್ಲಿ ಅಸಗನಿಗಿಂತ ನೂರ್ಮಡಿ ಎಂದು ಹೇಳಿಕೊಂಡಿದ್ದಾನೆ. ದುರ್ಗಸಿಂಹ ಮತ್ತು ನಯಸೇನರು ಅಸಗನ ದೇಸಿಯನ್ನು ಕೊಂಡಾಡಿದ್ದಾರೆ. ವರ್ಧಮಾನಪುರಾಣದ ಕರ್ತೃ ಆಚಣ್ಣ (ಸು. 1195) ಇವನನ್ನು ಸ್ಮರಿಸಿದ್ದಾನೆ. ಬ್ರಹ್ಮಶಿವ (ಸು. 1180) ಪೊನ್ನ ಪಂಪರ ಸಾಲಲ್ಲಿ ಹೇಳಿರುವ ರಜಕ ಯಾರೂ ಅಲ್ಲ, ಅಸಗನೇ. ಕೇಶಿರಾಜ (ಸು. 1260) ತನ್ನ ಶಬ್ದಮಣಿದರ್ಪಣದಲ್ಲಿ ಅಸಗನಿಂದಲೂ ಭಾಷಾಪ್ರಯೋಗಗಳನ್ನು ತೆಗೆದುಕೊಂಡಿರುವುದಾಗಿ ಹೇಳಿಕೊಂಡಿದ್ದಾನೆ.

ಇಷ್ಟಾದರೂ ಅಸಗ ಕನ್ನಡದಲ್ಲಿ ಬರೆದದ್ದೇನು ಎಂಬುದು ಮಾತ್ರ ತಿಳಿದುಬಂದಿಲ್ಲ. ಜಯಕೀರ್ತಿ ತನ್ನ ಛಂದೋನುಶಾಸನದ ಏಳನೆಯ ಅಧಿಕಾರದಲ್ಲಿ ಸಮಾನಾಕ್ಷರ (ದೊರೆಯಕ್ಕರ) ಎಂಬ ಅಂಶವೃತ್ತ ಅಸಗನ ಕರ್ಣಾಟ ಕುಮಾರಸಂಭವದಲ್ಲಿ ಬಳಕೆಯಾಗಿದೆ ಎಂದು ಹೇಳುತ್ತಾನೆ. (ಅಸಗಾಖ್ಯ ಕವಿನಾ ಪ್ರತಿಪಾದಿತಂ ನನು ಕರ್ಣಾಟ ಕುಮಾರಸಂಭವ ಕಾವ್ಯೇ). ಹಾಗೆಯೇ ಛಂದೋವತಂಸ ಎಂಬ ಇನ್ನೊಂದು ಅಂಶವೃತ್ತ ಕುಮಾರಸಂಭವ ಮುಂತಾದ ಕಾವ್ಯಗಳಲ್ಲಿದೆ ಎನ್ನುತ್ತಾನೆ (ಛಂದೋವತಂಸ ನಾಮೇತಿ ಚತುಷ್ಪದಿಕಾ ಸಂದೃಷ್ಟಾಸೌ ಕುಮಾರಸಂಭವಾದೌ). ಇದರಿಂದ ಕೊನೆಗೂ ಅಸಗನ ಕನ್ನಡ ಕೃತಿಯೊಂದರ ಹೆಸರು ದೊರೆತಂತಾಯಿತು.

ಆದರೆ ಆ ಕಾವ್ಯದ ಸ್ವರೂಪವೇನೋ ತಿಳಿಯದು. ಹೆಸರನ್ನು ನೋಡಿದರೆ ನಮಗೆ ಸಹಜವಾಗಿ ಸಂಸ್ಕೃತಕವಿ ಕಾಳಿದಾಸನ ಕುಮಾರಸಂಭವ ಜ್ಞಾಪಕಕ್ಕೆ ಬರುತ್ತದೆ. ಇದು ಅದರ ಅನುವಾದವಿರಬಹುದೇ? ನಮಗೆ ತಿಳಿದಮಟ್ಟಿಗೆ ಯಾವ ಪ್ರಾಚೀನ ಕನ್ನಡ ಕವಿಯೂ ಸಂಸ್ಕೃತ ಕೃತಿಯೊಂದನ್ನು ಅದು ಇರುವಂತೆಯೇ ಅನುವಾದಿಸಿಲ್ಲ. ಹಾಗಾದರೆ ಇದು ಅದರ ರೂಪಾಂತರವೇ ಇರಬಹುದು. ಆದರೆ ಎಂಥ ರೂಪಾಂತರ? ತಿಳಿಯದು. ಅದರ ವಸ್ತು ಶಿವಪಾರ್ವತಿಯರ ವಿವಾಹಕ್ಕೆ ಸಂಬಂಧಿಸಿದ್ದು ಎಂದು ಭಾವಿಸಲು ಅಭ್ಯಂತರವಿಲ್ಲ.

ಎರಡನೆಯ ನಾಗವರ್ಮನ (ಸು. 1145) ಕಾವ್ಯಾವಲೋಕನದಲ್ಲಿ ಶಿವ ಪಾರ್ವತಿಯರಿಗೆ ಸಂಬಂಧಿಸಿದ ಸುಮಾರು ಹದಿಮೂರು ಪದ್ಯಗಳಿವೆ. ಮಲ್ಲಿಕಾರ್ಜುನನ (ಸು. 1245) ಸೂಕ್ತಿ ಸುಧಾರ್ಣವದಲ್ಲಿ ಶಿವಶಿವೆಯರನ್ನು ಕುರಿತ ಕೆಲವು ಪದ್ಯಗಳಿವೆ. ಕೇಶಿರಾಜನ ಶಬ್ದಮಣಿ ದರ್ಪಣದಲ್ಲೂ ಅವರನ್ನು ಕುರಿತ ಪದ್ಯಗಳು ಪದ್ಯಖಂಡಗಳು ಇವೆ. ಇವೆಲ್ಲವೂ ಅಲ್ಲದಿದ್ದರೂ ಕೆಲವಾದರೂ ಅಸಗನ ಕರ್ಣಾಟ ಕುಮಾರಸಂಭವ ಕಾವ್ಯಕ್ಕೆ ಸೇರಿದ ಪದ್ಯಗಳಿರಬಹುದು ಎಂದು ವಿದ್ವಾಂಸರು ಊಹೆ ಮಾಡಿದ್ದಾರೆ. ಆದರೆ ಅಲ್ಲಿ ಒಂದು ಮಾತನ್ನು ಹೇಳುವುದು ಆವಶ್ಯಕ. ಆ ಪದ್ಯಗಳನ್ನು ಬರೆದ ಕವಿ ಒಬ್ಬನೇ ಆಗಿದ್ದರೆ ಅವನಿಗೆ ಶಿವನಲ್ಲಿ ಅಪಾರವಾದ ಗೌರವ, ಭಕ್ತಿಭಾವನೆಗಳಿವೆ. ಕಾವ್ಯಾವಲೋಕನದಲ್ಲಿ ಶಿವ ಮತ್ತು ಪಾರ್ವತಿಯರಿಗೆ ಇಂದ್ರ ನಮಸ್ಕಾರ ಮಾಡಿದುದರ ವರ್ಣನೆಯನ್ನಾಗಲಿ, ಶಿವ ನಮ್ಮನ್ನು ಕರುಣಿಸಲಿ ಎಂಬ ಪ್ರಾರ್ಥನಾ ಪದ್ಯವನ್ನಾಗಲಿ ನೋಡಬಹುದು. ಅರ್ಧನಾರೀಶ್ವರನ ವರ್ಣನೆಯಲ್ಲಿ ವ್ಯಂಗ್ಯ ಕುಚೋದ್ಯಗಳ ಸುಳಿವೂ ಇಲ್ಲ. ಮತ್ತು ಎಲ್ಲಿಯೂ ಜೈನಧರ್ಮದ ಛಾಯೆಯೂ ಕಂಡುಬರುವುದಿಲ್ಲ. ಅಲ್ಲಿ ಧ್ವನಿತವಾಗಿರುವ ಕಥೆ ಎಲ್ಲರಿಗೂ ಪರಿಚಿತವಾದ ಶಿವಪಾರ್ವತಿಯರ ವಿವಾಹ. ಜೈನನಾದ ಅಸಗ ಹೀಗೆ, ಇಷ್ಟು ಅಪಾರ ಭಕ್ತಿಯಿಂದ ಅನ್ಯದೈವವೊಂದರ ಕತೆಯನ್ನು ರಚಿಸಲು ಸಾಧ್ಯವೇ ಎಂಬ ಸಂದೇಹವೂ ಮೂಡದಿರದು. ಏಕೆ ಸಾಧ್ಯವಿಲ್ಲ ಎಂದು ಉತ್ತರವನ್ನು ಕೊಡಲೂ ಸಾಧ್ಯ. ಆ ಪದ್ಯಗಳು ಅಸಗನವು ಇರಬಹುದೇ ಎಂದು ಊಹಿಸುವಾಗ ಮೇಲಿನ ಸಂಗತಿ ಮನಸ್ಸಿನಲ್ಲಿದ್ದರೆ ಒಳ್ಳೆಯದು. ಒಟ್ಟಿನಲ್ಲಿ ಈತನ ಕನ್ನಡ ಕೃತಿಗಳು ದೊರೆಯುವವರೆಗೂ ಇವನ ವಿಷಯವಾಗಿ ಹೆಚ್ಚೇನನ್ನೂ ಹೇಳಲಾಗುವುದಿಲ್ಲ. (ಎಂ.ಪಿ.)

**ಅಸತ್ :** ಸತ್ ಎಂಬ ಪದಕ್ಕೆ ವಿರುದ್ಧವಾದುದು. ಸತ್ ಎಂಬ ಪದವನ್ನು ಅನೇಕ ಅರ್ಥಗಳಲ್ಲಿ ಉಪಯೋಗಿಸಿರುವಂತೆಯೇ ಅಸತ್ ಎಂಬ ಪದವನ್ನೂ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಲಾಗಿದೆ. ಸತ್ ಎಂದರೆ ಇರುವುದು ಎಂಬುದು ಒಂದು ಅರ್ಥ. ಅಸತ್ ಎಂದರೆ ಇಲ್ಲದಿರುವುದು (ಋಗ್ವೇದ). ಸತ್ ಎಂಬ ಪದವನ್ನು ಸತ್ಯವಾದದ್ದು ಎಂಬ ಅರ್ಥದಲ್ಲೂ ಉಪಯೋಗಿಸುವುದುಂಟು. ಹಾಗೆಯೇ ಅಸತ್ ಎಂಬ ಪದ ಅಸತ್ಯವಾದದ್ದು ಎಂಬ ಅರ್ಥದಲ್ಲೂ ಉಪಯೋಗದಲ್ಲಿದೆ (ಋಗ್ವೇದ). ಸತ್ ಎಂಬ ಪದವನ್ನು ಒಳ್ಳೆಯದು, ಮಂಗಳಕರವಾದದ್ದು ಎಂಬ ಮೂರನೆಯ ಅರ್ಥದಲ್ಲಿ ಉಪಯೋಗಿಸಿರುವಂತೆಯೇ ಅಸತ್ ಪದವನ್ನು ಅನಿಷ್ಟವಾದದ್ದು, ಕೆಟ್ಟದ್ದು ಎಂಬ ಅರ್ಥದಲ್ಲೂ ಉಪಯೋಗಿಸಿದೆ (ರಘುವಂಶ). ಪಾಶ್ಚಾತ್ಯ ಆಧುನಿಕ ತಾತ್ತ್ವಿಕರು ಸಾಮಾನ್ಯವಾಗಿ ಸತ್ಯ ಮುಂತಾದುವು ವಾಸ್ತವ ವಿಷಯಗಳಲ್ಲಿ ಕೇವಲ ಧ್ಯೇಯಗಳು ಎಂದು ಭಾವಿಸುತ್ತಾರೆ. ಒಳ್ಳೆಯದೇ ಸತ್. ಅದೇ ವಾಸ್ತವವಾದದ್ದು. ಕೆಟ್ಟದ್ದು, ಅರೂಪವಾದದ್ದು ಚಿರಸ್ಥಾಯಿಯಾಗಿ ನಿಲ್ಲತಕ್ಕದಲ್ಲ; ವಿನಾಶ ಹೊಂದತಕ್ಕದ್ದು–ಎಂದು ಪ್ಲೇಟೊ ಭಾವಿಸಿರುತ್ತಾನೆ. ಸಾಮಾನ್ಯವಾಗಿ ಭಾರತೀಯತಾತ್ತ್ವಿಕರೂ ಅದೇ ರೀತಿಯಾಗಿ ಭಾವಿಸಿರುತ್ತಾರೆ. ಅಸತ್ಯವಾದ, ಅಮಂಗಳಕರ ವಾದ, ದುಃಖಕರವಾದ ಈ ಸಂಸಾರ ಅಸ್ಥಿರ ಮತ್ತು ಅಂತ್ಯಗೊಳ್ಳುವಂಥಾದ್ದು ಎಂದು ಅವರು ಭಾವಿಸಿರುವುದರಿಂದ ಯಾವ ಭಾರತೀಯ ದರ್ಶನವೂ ನಿರಾಶಾವಾದವಲ್ಲವೆಂದು ಎಂ. ಹಿರಿಯಣ್ಣನವರು ಹೇಳಿದ್ದಾರೆ.

ಅಸತ್ ಮತ್ತು ಸತ್ ಎಂಬ ವಿಷಯಗಳನ್ನು ಕುರಿತು ಭಾರತೀಯ ದಾರ್ಶನಿಕರ ಭಾವನೆಗಳು ಭಿನ್ನವಾಗಿವೆ. ಇವುಗಳಿಗೆ ಅನುಸಾರವಾಗಿ ಅದರ ಕಾರ್ಯಕಾರಣ ವಾದಗಳೂ ಭಿನ್ನವಾಗಿವೆ. ವೈಶೇಷಿಕರು ಅಸತ್ಕಾರ್ಯವಾದಿಗಳು. ಕಾರಣದಲ್ಲಿ ಇಲ್ಲದ್ದು, ಕಾರ್ಯರೂಪದಲ್ಲಿ ಹೊಸದಾಗಿ ಹುಟ್ಟುತ್ತದೆ ಎಂಬುದು ಅವರ ವಾದ. ಸಾಂಖ್ಯರು ಸತ್ಕಾರ್ಯವಾದಿಗಳು. ಕಾರಣದಲ್ಲಿ ಅವ್ಯಕ್ತವಾದ ಇರುವುದೇ ಕಾರ್ಯದಲ್ಲಿ ವ್ಯಕ್ತ ರೂಪದಲ್ಲಿ ವಿಕಾಸ ಹೊಂದುತ್ತದೆ ಎಂಬುದು ಅವರ ವಾದ (ನೋಡಿ– ಕಾರ್ಯಕಾರಣಭಾವ).

ಹಾಗೆಯೇ ಇರವಿನ ವಿಚಾರವಾಗಿ ಬೆಳೆದಿರುವ ಭಿನ್ನಾಭಿಪ್ರಾಯಗಳಿಗನುಗುಣವಾಗಿ ಜ್ಞಾನಮೀಮಾಂಸೆಯ ಸತ್ಯ ಮತ್ತು ಅಸತ್ಯ ವಿಚಾರಗಳಲ್ಲಿ ಭಿನ್ನವಾದಗಳಿವೆ. (ನೋಡಿ– ಜ್ಞಾನಮೀಮಾಂಸೆ)

ಸತ್ ಎಂಬುದನ್ನು ಜ್ಞಾನವಿಷಯಕ್ಕೆ ಸಂಬಂಧಿಸಿದಂತೆ ಪಾರಮಾರ್ಥಿಕಸತ್ತಾ, ವ್ಯಾವಹಾರಿಕಸತ್ತಾ, ಪ್ರಾತಿಭಾಸಿಕಸತ್ತಾ ಎಂದು ಅದ್ವೈತಿಗಳು ಮೂರು ವಿಧವಾಗಿ ವಿಂಗಡಿಸಿರುತ್ತಾರೆ. ಇವುಗಳಲ್ಲಿ ಪಾರಮಾರ್ಥಿಕಸತ್ತಾ ಚಿರಸ್ಥಿರವಾದ ಸತ್; ವ್ಯಾವಹಾರಿಕಸತ್ತಾ ಸದಸತ್‌ವಿಲಕ್ಷಣವಾದದ್ದು; ಪ್ರಾತಿಭಾಸಿಕಸತ್ತಾ ಕ್ಷಣಿಕವಾದದು. ಸಂಪೂರ್ಣವಾಗಿ ವಿನಾಶಹೊಂದುವುದು ಅಸತ್ **(ನೋಡಿ: ಅದ್ವೈತ)**. (ಆರ್.ಎಸ್.)

**ಅಸತ್ಕಾರ್ಯವಾದ :** ಕಾರ್ಯ ಕಾರಣಗಳ ಪರಸ್ಪರ ಸಂಬಂಧವನ್ನು ಕುರಿತ ವಾದಗಳಲ್ಲಿ ಒಂದು. ಕಾರ್ಯ ಮತ್ತು ಕಾರಣಗಳಿಗೆ ಇರುವ ಸಂಬಂಧ ಎಂಥದು ಎಂಬುದು ತತ್ತ್ವಶಾಸ್ತ್ರದ ಒಂದು ಮುಖ್ಯಪ್ರಶ್ನೆ. ಕಾರಣದಲ್ಲಿ ಅವ್ಯಕ್ತವಾಗಿ ಇದ್ದುದೇ ಕಾರ್ಯವಾಗಿ ವ್ಯಕ್ತವಾಗುತ್ತದೆ ಎಂಬುದು ಒಂದು ಉತ್ತರ. ಹೀಗೆ ಉತ್ತರ ಕೊಡುವವರು ಸತ್ಕಾರ್ಯವಾದಿಗಳು. ಸಾಂಖ್ಯರು ಸತ್ಕಾರ್ಯ ವಾದಿಗಳು. ಕಾರಣ ಕಾರ್ಯದಲ್ಲಿಲ್ಲ, ಅದು ಹೊಸದಾಗಿ ಹುಟ್ಟಿದ್ದು, ಆದ್ದರಿಂದ ಕಾರ್ಯ ಕಾರಣದಿಂದ ತೀರಭಿನ್ನ ಎಂಬುದು ಇನ್ನೊಂದು ಉತ್ತರ. ಹೀಗೆ ಉತ್ತರ ಕೊಡುವವರು ಅಸತ್ಕಾರ್ಯ ವಾದಿಗಳು. ವೈಶೇಷಿಕರು ಅಸತ್ಕಾರ್ಯ ವಾದಿಗಳು. ಕಾರ್ಯ ಕಾರಣಾಂತರಗಳಿಂದ ಭಿನ್ನ ಮತ್ತು ಅದು ಹೊಸದಾಗಿ

ಉದ್ಭವಿಸಿದ್ದು ಎಂಬುದರಿಂದ ಈ ವಾದವನ್ನು ಆರಂಭವಾದವೆಂದೂ ಕರೆಯುವುದುಂಟು. ವೈಶೇಷಿಕದಾರ್ಶನಿಕರೂ ಅಸತ್ಕಾರ್ಯವಾದಿಗಳು. ಉದಾಹರಣೆಗಾಗಿ, ದಾರ ಮತ್ತು ಬಟ್ಟೆ ಈ ಎರಡು ವಸ್ತುಗಳನ್ನು ತೆಗೆದುಕೊಳ್ಳೋಣ. ದಾರ ಬಟ್ಟೆಗೆ ಕಾರಣ. ಬಟ್ಟೆ ದಾರದಿಂದ ಹುಟ್ಟಿದ ಕಾರ್ಯ. ಏಕೆಂದರೆ ದಾರವಿಲ್ಲದೆ ಬಟ್ಟೆ ಇಲ್ಲ, ಬಟ್ಟೆ ಇದ್ದ ಕಡೆಗಳಲ್ಲೆಲ್ಲ ದಾರವಿದೆ. ದಾರ ಬಟ್ಟೆಗೆ ಕಾರಣ ಎಂಬ ವಿಚಾರದಲ್ಲಿ ಸತ್ಕಾರ್ಯವಾದಿಗಳಿಗೂ ಅಸತ್ಕಾರ್ಯ ವಾದಿಗಳಿಗೂ ಭಿನ್ನಾಭಿಪ್ರಾಯವಿಲ್ಲ. ಇಬ್ಬರೂ ಬಟ್ಟೆಗೆ ದಾರ ಕಾರಣವೆಂದು ಒಪ್ಪುತ್ತಾರೆ. ಸತ್ಕಾರ್ಯವಾದಿಗಳು ಬಟ್ಟೆ ದಾರದಿಂದ ಭಿನ್ನವಿಲ್ಲ, ಅದು ದಾರದ ಒಂದು ಪರಿಣಾಮ ಎನ್ನುತ್ತಾರೆ. ಕಾರಣವಾದ ದಾರದಲ್ಲಿ ಬಟ್ಟೆಯಾಗುವ ಪರಿಣಾಮಶಕ್ತಿ ಇಲ್ಲದಿದ್ದರೆ, ಆ ಶಕ್ತಿ ಕಾರಣಕ್ಕೆ ಆಂತರಿಕವಾಗಿಲ್ಲದಿದ್ದರೆ, ಅದು ಬಟ್ಟೆಯಾಗಲಾರದು. ಕಾರ್ಯ ಕಾರಣಕ್ಕೆ ಬಾಹಿರವಾಗಿದ್ದ ಪಕ್ಷದಲ್ಲಿ ಈ ಕಾರ್ಯಕ್ಕೆ ಇದೇ ಕಾರಣವಿರಬೇಕೆಂಬ ಅಗತ್ಯವಿರುವುದಿಲ್ಲ; ಹಾಗಿದ್ದರೆ ಯಾವುದರಿಂದ ಯಾವುದಾದರೂ ಆಗಬಹುದು. ಮರಳಿನಿಂದ ದಾರವೂ ಗಾಳಿಯಿಂದ ಗಡಿಗೆಯೂ ಆಗಬಹುದು. ಇದು ಸಾಧ್ಯವಿಲ್ಲವೆಂಬುದು ಅನುಭವಸಿದ್ಧ. ಆದ್ದರಿಂದ ಕಾರ್ಯ ಕಾರಣಕ್ಕೆ ಬಾಹಿರ ಮತ್ತು ಭಿನ್ನ ಎಂಬುದು ಅನುಭವಕ್ಕೆ ವಿರೋಧವಾಗಿದೆ. ಇದಕ್ಕೆ ಪ್ರತಿಯಾಗಿ ಅಸತ್ಕಾರ್ಯವಾದಿಗಳು ಕಾರ್ಯ ಕಾರಣದಿಂದ ಬೇರೆಯಲ್ಲ ಎಂಬುದೂ ಅನುಭವಸಿದ್ಧವೆಂದು ವಾದಿಸುತ್ತಾರೆ. ಕಾರ್ಯವೂ ಕಾರಣದಲ್ಲಿ ಇದ್ದುದೇ ಆದ ಪಕ್ಷದಲ್ಲಿ, ಕಾರ್ಯ ಕಾರಣದಲ್ಲಿ ಅಡಗಿದ್ದ ಪಕ್ಷದಲ್ಲಿ, ಕಾರ್ಯದಲ್ಲಿರುವ ಗುಣ ಮತ್ತು ಕ್ರಿಯೆಗಳು ಕಾರಣದಲ್ಲೂ ಇದ್ದಿರಬೇಕು. ಬಟ್ಟೆಯನ್ನು ಉಡುತ್ತೇವೆ, ಗಡಿಗೆಯಲ್ಲಿ ನೀರು ತುಂಬಿತರುತ್ತೇವೆ. ಬಟ್ಟೆಗೆ ಕಾರಣವಾದ ದಾರವನ್ನು ಉಡಲಾಗುವುದೋ? ಗಡಿಗೆಗೆ ಕಾರಣವಾದ ಮಣ್ಣಿನಿಂದ ನೀರು ತುಂಬಿ ತರಲು ಸಾಧ್ಯವೋ ? ಆದ್ದರಿಂದ ಕಾರ್ಯ ಕಾರಣದಿಂದ ಬೇರೆಯಾಗಿದ್ದರೇನೆ ಅದು ನಮ್ಮ ಜೀವನದ ಎಲ್ಲ ವ್ಯವಹಾರಗಳಿಗೂ ಸಂಗತವಾಗಿರುವುದು. ಮಾಧ್ವದಾರ್ಶನಿಕರು ಈ ಎರಡು ವಾದಗಳಲ್ಲೂ ಸ್ವಲ್ಪಮಟ್ಟಿಗೆ ಸತ್ಯವಿದೆ, ಸ್ವಲ್ಪಮಟ್ಟಿಗೆ ಮಿಥ್ಯಾಂಶವಿದೆ ಎಂದು ತೋರಿಸಿರುತ್ತಾರೆ. ದಾರದಿಂದ ಬಟ್ಟೆ ಏರ್ಪಟ್ಟಾಗ ದಾರಕ್ಕೂ ಬಟ್ಟೆಗೂ ಭೇದವಿಲ್ಲ. ದಾರ ಬಟ್ಟೆಗೆ ಆಂತರಿಕ, ಬಟ್ಟೆ ದಾರಕ್ಕೆ ಆಂತರಿಕ. ಆದರೆ ಬಟ್ಟೆಯಾಗುವುದಕ್ಕೆ ಮುಂಚೆ ಅಥವಾ ಬಟ್ಟೆಯಿಂದ ಎಲ್ಲ ದಾರದ ಎಳೆಗಳನ್ನೂ ಎಳೆದು ಹಾಕಿದಾಗ ಆ ಅವಸ್ಥೆಯಲ್ಲಿ ದಾರವೇ ಬೇರೆ ಬಟ್ಟೆಯೇ ಬೇರೆ, ಇದು ಭೇದಾಭೇದಿಗಳ ವಾದ. (ಜಿ.ಎಚ್.)

**ಅಸನ್‌ಸಾಲ್ :** ಪಶ್ಚಿಮಬಂಗಾಲದ ಬರ್ದವಾನ್ ಜಿಲ್ಲೆಯ, ದಾಮೋದರ್ ನದೀಕಣಿವೆಯಲ್ಲಿರುವ ಒಂದು ನಗರ. ರಾಣಿಗಂಜ್ ಕಲ್ಲಿದ್ದಲು ಗಣಿಗಳ ಹತ್ತಿರ, ಪೂರ್ವರೈಲ್ವೆಯಲ್ಲಿ, ಕೋಲ್ಕತದಿಂದ 212 ಕಿಮೀ ದೂರದಲ್ಲಿದೆ. ವಿಸ್ತೀರ್ಣ10.4 ಚ.ಕಿಮೀ. ಜನಸಂಖ್ಯೆ 4,75,439 (2001). ಗ್ರಾಂಡ್ ಟ್ರಂಕ್ ರಸ್ತೆ ನಗರದ ಪೂರ್ವದಿಂದ ಪಶ್ಚಿಮಕ್ಕೆ ಹಾದುಹೋಗುತ್ತದೆ. ಇದೊಂದು ಕೈಗಾರಿಕಾನಗರ, ಕಲ್ಲಿದ್ದಲಿನ ಮಾರಾಟ ಕೇಂದ್ರ, ಮುಖ್ಯರೈಲ್ವೆ ನಿಲ್ದಾಣ. ಇಲ್ಲಿ ಇದು ರೈಲ್ವೆ ಕಾಲೊನಿ ಮತ್ತು ಕಾರ್ಯಾಗಾರಗಳಿವೆ. ಉಪನಗರವಾದ ಜಿಕೆ ನಗರದಲ್ಲಿ ದೊಡ್ಡ ಅಲ್ಯೂಮಿನಿಯಂ ಕಾರ್ಖಾನೆ ಇದೆ. ದೊಡ್ಡ ದೊಡ್ಡ ಕಬ್ಬಿಣದ ಕುಲುಮೆಗಳಿವೆ. ರಾಸಾಯನಿಕ ಹಾಗೂ ತಾಂತ್ರಿಕ ವಸ್ತುಗಳನ್ನು ಉತ್ಪಾದಿಸುತ್ತಾರೆ. (ಕೆ.ಎನ್.ಪಿ.)

**ಅಸಫ್ ಝಾ I :** 1670–1748. ಔರಂಗಜೇಬನ ಪ್ರಮುಖ ದಳಪತಿಯಾಗಿದ್ದ ತುರಾನವಂಶದ ಘಯಾಸುದ್ದೀನ್‌ನ ಮಗ, ದಖನ್ನಿನ ನಿಜಾಮವಂಶದ ಮೂಲಪುರುಷ. ತಂದೆಯಂತೆ ಇವನೂ ಯುದ್ಧಕಲೆಯಲ್ಲಿ ಪರಿಣಿತನಾಗಿ ಔರಂಗಜೇಬನಿಂದ ಗೌರವಿಸಲ್ಪಟ್ಟ. ಹೀಗೆ ಪ್ರಭಾವವನ್ನು ಹೆಚ್ಚಿಸಿಕೊಂಡು 1713ರಲ್ಲಿ ಔರಂಗಜೇಬನ ವಂಶಿಕನಾದ ಫರುಖ್ ಶಿಯಾರ್‌ನಿಗೆ ಸಹಾಯಮಾಡಿ ಅವನ ವಿಜಯಕ್ಕೆ ಮುಖ್ಯ ಕಾರಣನೆನಿಸಿದ. ಇದರಿಂದ ಇವನಿಗೆ ಔರಂಗಾಬಾದ್ ಸೇರಿದಂತೆ ದಕ್ಷಿಣಾಪಥದ ಆರು ಪ್ರಾಂತ್ಯಗಳೂ ಬಳುವಳಿಯಾಗಿ ಬಂದುವು. ನಿಜಾಮ್–ಉಲ್–ಮುಲ್ಕ್ ಎಂಬ ಬಿರುದೂ ದೊರಕಿತು. ಆದರೆ ಮಾರನೆಯ ವರ್ಷವೇ ಈ ಸುಬಾಗಳು ಇವನ ಕೈಬಿಟ್ಟುಹೋದುವು. ಕೋಪಗೊಂಡ ನಿಜಾಮ ಮುರಾದಾಬಾದನ್ನು ಸೇರಿದ. ಆದರೆ ದಿಲ್ಲಿಯ ಸಾಮ್ರಾಟನ ಅಪ್ಪಣೆಯ ಮೇರೆಗೆ ಅಲ್ಲಿಂದಲೂ ಇವನನ್ನು ಕರೆತರಲಾಯಿತು. ಕೊನೆಗೆ 1719ರಲ್ಲಿ ಈತ ಮಾಳ್ವದೇಶದ ಅಧಿಕಾರಿಯಾಗಿ ನೇಮಕಗೊಂಡ. ನಿಜಾಮ ದಖನ್ನಿನ ಗಣ್ಯಾಧಿಕಾರಿಯಾಗಬೇಕೆಂಬ ಆಶಯದಿಂದ, ಸಾಮ್ರಾಟನ ಅಪ್ಪಣೆಯನ್ನೂ ಲೆಕ್ಕಿಸದೆ ನರ್ಮದಾನದಿಯನ್ನು ದಾಟಿ ಅಸೀರ್‌ಘರ್ ಮತ್ತು ಬುರ್ಹಾನ್‌ಪುರಗಳನ್ನು ಆಕ್ರಮಿಸಿಕೊಂಡ. ಹೀಗೆಯೇ ಬಿಟ್ಟರೆ ತೊಂದರೆಯುಂಟಾಗಬಹುದೆಂದು ಸಾಮ್ರಾಟ ಇವನನ್ನು 1722ರಲ್ಲಿ ತನ್ನ ವಜೀರನನ್ನಾಗಿ ನೇಮಿಸಿದ. ಪರಿಸ್ಥಿತಿಗಳು ಸರಿಬಾರದ್ದರಿಂದ ನಿಜಾಮ ಗುಜರಾತಿನ ಸರ್ವಾಧಿಕಾರಿಯಾದ (1724). ಹೈದರಾಬಾದಿಗೆ ಬಂದು ಮುಬಾರಿಸ್‌ಖಾನನನ್ನು ಸೋಲಿಸಿ ದಖನ್ ಪ್ರದೇಶವನ್ನು ತನ್ನ ವಶಮಾಡಿಕೊಂಡ. ಇದೇ ನಿಜಾಮರ ವಂಶಕ್ಕೆ ತಳಹದಿಯಾಯಿತು. ಮರಾಠರು ಸುಲ್ತಾನನ ಮೇಲೆ ಯುದ್ಧಮಾಡಲು ಹವಣಿಸಿದಾಗ, ಸುಲ್ತಾನನಿಗೆ ನಿಜಾಮನ ಆವಶ್ಯಕತೆ ತಲೆದೋರಿತು. ಕೂಡಲೇ ಅವನನ್ನು ದೆಹಲಿಗೆ ಬರಮಾಡಿ ಬಿರುದು ಬಾವಲಿಗಳನ್ನು ಕೊಟ್ಟು, ಮರಾಠರ ಮೇಲೆ ಯುದ್ಧಮಾಡಲು ಪ್ರೋತ್ಸಾಹಿಸಿದ. ಭೂಪಾಲಿನಲ್ಲಿ ನಡೆದ ಯುದ್ಧದಲ್ಲಿ ನಿಜಾಮ ಸೋತ (1730). ಗೋಲ್ಕೊಂಡದಿಂದ ಆರ್ಕಾಟಿಗೆ ಹೋಗಿ ಅನ್ವರುದ್ದೀನ್‌ಖಾನನನ್ನು ಅಲ್ಲಿಯ ಸರ್ವಾಧಿಕಾರಿಯನ್ನಾಗಿ ನಿಯಮಿಸಿದ (1743). ಮುರಾರಿರಾಯನಿಂದ ತಿರುಚಿನಾಪಳ್ಳಿಯನ್ನು ವಶಪಡಿಸಿಕೊಂಡ. ಇವೆಲ್ಲವನ್ನೂ ಗಮನಿಸಿದ ಬ್ರಿಟಿಷ್ ಮತ್ತು ಫ್ರೆಂಚ್ ವ್ಯಾಪಾರಿಗಳು ಇವನೇ ದಕ್ಷಿಣ ಭಾರತದ ಅತಿ ಪ್ರಬಲರಾಜನೆಂದು ಪರಿಗಣಿಸಿ ಕಾಣಿಕೆಗಳನ್ನು ಕಳುಹಿಸಿದರು. ಕಡಪ, ಕರ್ನೂಲು, ರಾಜಮಹೇಂದ್ರಿಗಳೂ ಇವನ ಆಳ್ವಿಕೆಗೆ ಸೇರಿದವು. ಇದರಿಂದ ಇವನ ಪ್ರಭಾವ ಹೆಚ್ಚಿತು. (ಎಚ್.ಜಿ.ಬಿ.)

**ಅಸಫ್ ಝಾ II :** ಅಸಫ್ ಝಾ Iನ ಮರಣಾನಂತರ ರಾಜನಾದ ಅವನ ಮಗ ಸಲಾಬತ್‌ಖಾನನ ತಮ್ಮ. ನಿಜಾಮ್ ಎಂದು ಹೆಸರು. ಸಲಾಬತ್‌ಖಾನ್ ಇವನನ್ನು 1759ರಲ್ಲಿ ರಾಜ್ಯದ ಮುಖ್ಯಾಧಿಕಾರಿಯನ್ನಾಗಿ ನಿಯಮಿಸಿದ. ಮುಂದಿನ ವರ್ಷವೇ ಮರಾಠೆಯ ಸದಾಶಿವರಾಯನೊಡನೆ ನಡೆದ ಯುದ್ಧದಲ್ಲಿ ಉದ್ಗೀರ್ ಎಂಬಲ್ಲಿ ನಿಜಾಮ್ ಸೋತ. ಅವಮಾನಿತನಾಗಿ ಮತ್ತೆ 1762ರಲ್ಲಿ ಮರಾಠರ ಮೇಲೆ ಕಾದಿ, ಸೋತು ಪುಣೆಯ ಸಮೀಪದ ಉರುಳಿ ಎಂಬಲ್ಲಿಂದ ಓಡಿಹೋದ. ಬಿದರೆ ರಾಜ್ಯಕ್ಕೆ ಬಂದು 1762ರಲ್ಲಿ ಸಹೋದರ ಸಲಾಬತ್‌ಖಾನನನ್ನು ಸೆರೆಯಲ್ಲಿಟ್ಟು ತಾನೇ ರಾಜನಾದ. ಮೊಗಲ್ ಸಾಮ್ರಾಟ ಷಾ ಆಲಮ್ ಇವನಿಗೆ ನಿಜಾಮ್–ಉಲ್–ಮುಲ್ಕ್ ಎರಡನೆಯ ಅಸಫ್ ಝಾ ಎಂಬ ಬಿರುದನ್ನು ದಯಪಾಲಿಸಿದ. ಸ್ವಲ್ಪ ಕಾಲದವರೆಗೆ ಮರಾಠರ ಸ್ನೇಹಿತನಾಗೂ ಅನಂತರ ಹೈದರನ ಪಕ್ಷವನ್ನು ವಹಿಸಿಯೂ ತನ್ನ ರಾಜ್ಯವಿಸ್ತರಣೆಗೆ ಹೊಂಚು ಹಾಕುತ್ತಿದ್ದ. 1795ರಲ್ಲಿ ಇವನಿಗೂ ಮರಾಠರಿಗೂ ಖರ್ಡ ಎಂಬಲ್ಲಿ ಆದ ಯುದ್ಧದಲ್ಲಿ ಈತ ಸೋತು ಮೂರು ವರ್ಷಗಳಲ್ಲಿ ಐದುಕೋಟಿ ರೂಪಾಯಿಗಳನ್ನು ಕೊಡುವುದಾಗಿಯೂ ದೌಲತಾಬಾದ್ ಕೋಟೆಯನ್ನು ಬಿಟ್ಟುಕೊಡುವುದಾಗಿಯೂ ಒಪ್ಪಂದವನ್ನು ಮಾಡಿಕೊಂಡನಾದರೂ ಅದನ್ನು ಪಾಲಿಸಲಿಲ್ಲ. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಇಂಗ್ಲಿಷರು ಮತ್ತು ಮರಾಠರೊಡನೆ ಟಿಪ್ಪುಸುಲ್ತಾನನ ಮೇಲೆ 1799ರಲ್ಲಿ ದಂಡೆತ್ತಿಹೋದ. ಟಿಪ್ಪುವಿನ ಮರಣಾನಂತರ ಕಾರ್ನ್‌ವಾಲೀಸ್ ಈಶಾನ್ಯದ ಕೆಲವು ಭಾಗಗಳನ್ನು ನಿಜಾಮನಿಗೆ ಬಳುವಳಿಯಾಗಿ ಕೊಟ್ಟ. 1800ರಲ್ಲಿ ಬ್ರಿಟಿಷರಿಗೆ ಕೊಡಬೇಕಾದ ವಾರ್ಷಿಕ ಕಾಣಿಕೆಯನ್ನು ಕೊಡಲಿಲ್ಲವೆಂಬ ಕಾರಣದಿಂದ ರಾಜ್ಯದ ಕೆಲವು ಭಾಗಗಳು ಬ್ರಿಟಿಷರ ರಾಜ್ಯಕ್ಕೆ ಸೇರಿಹೋದವು. ಯುದ್ಧಗಳಿಂದ ಬೇಸತ್ತು ವೃದ್ಧನಾಗಿದ್ದ ನಿಜಾಮ್ 1802ರಲ್ಲಿ ಮರಣ ಹೊಂದಿದ. (ಎಚ್.ಜಿ.ಬಿ.)

**ಅಸಮತೆ, ಆರ್ಥಿಕ :** ಬಡವ ಬಲ್ಲಿದ ಎಂಬ ವ್ಯಾವಹಾರಿಕ ಭೇದದ ಹಿಂದಿರುವ ಶಾಸ್ತ್ರೀಯ ಅಭಿಪ್ರಾಯ (ಇನ್‌ಈಕ್ವಾಲಿಟಿ). ಇವೆರಡು ಹಂತಗಳ ನಡುವೆ ಈಚೆಗೆ ಮಧ್ಯಮವರ್ಗವೆಂಬ ಮೂರನೆಯ ಹಂತವನ್ನು ನಿರ್ಮಿಸಲಾಗಿದೆ. ಇರುವ ಆಸ್ತಿ, ಗಳಿಸಿದ ಸಂಪಾದನೆ, ಬರುವ ಸಂಬಳ ಆದಾಯಗಳ ಮೇಲೆ ಈ ಬಗೆಯ ವರ್ಗೀಕರಣ ಮಾಡಲಾಗಿದೆ. ಆರ್ಥಿಕ ಅಸಮತೆಯ ಮೂಲಭೂತ ಕಾರಣಗಳ ಮತ್ತು ಅವುಗಳ ನಿವಾರಣೆಯ ಬಗ್ಗೆ ಶಾಸ್ತ್ರೀಯ ಅಧ್ಯಯನ ನಡೆದಿದೆ. ಇದರ ಪ್ರಕಾರ ಸರ್ಕಾರದ ನೀತಿ ಧೋರಣೆಗಳೇ ಅಸಮತೆಗೆ ಕಾರಣ. ಆದ್ದರಿಂದ ಅವುಗಳನ್ನು ಸಮರ್ಪಕವಾಗಿ ಮಾರ್ಪಡಿಸುವುದರಿಂದ ಅಸಮತೆಯನ್ನು ನಿವಾರಿಸಬಹುದೆಂದು ಒಂದು ಪಕ್ಷದವರ ವಾದ. ದೇಶದಲ್ಲಿ ಖಾಸಗಿ ಉದ್ಯಮಗಳು ಬೆಳೆಯುವಂತೆ ಸರ್ಕಾರ ಪರಿಸ್ಥಿತಿ ನಿರ್ಮಿಸಿದರೆ ಈ ಉದ್ಯಮಗಳನ್ನು ನಿಯಂತ್ರಿಸುವ ಉದ್ದಿಮೆಗಾರರು ಅತಿ ಶ್ರೀಮಂತರಾಗುತ್ತಾರೆ; ಕಾರ್ಮಿಕರು ಮುಂತಾದವರು ಬಡವರಾಗುತ್ತಾರೆ; ಹೀಗೆ ಅಸಮತೆ ತೀವ್ರವಾಗುತ್ತದೆ. ಆದ್ದರಿಂದ ಖಾಸಗಿ ಉದ್ಯಮಗಳೇ ಇರಬಾರದೆಂದು ಕೆಲವರು ವಾದಿಸಿದರೆ ಇತರರು ಅವು ಇರಲಿ, ಆದರೆ ಅವುಗಳ ಒಡೆಯರು ಅತಿ ಶ್ರೀಮಂತರಾಗದಂತೆ ಸಾಕಷ್ಟು ಅಧಿಕ ಪ್ರಮಾಣದ ತೆರಿಗೆ ವಿಧಿಸಬೇಕು, ಕಾರ್ಮಿಕರಿಗೆ ಒಡೆಯರು ಲಾಭದ ಒಂದಂಶವನ್ನು ಬೋನಸ್ ಆಗಿ ಹಂಚಬೇಕು. ಈ ಕ್ರಮದಿಂದ ಅಸಮತೆ ನಿವಾರಿಸಬೇಕು ಎಂದು ತರ್ಕಿಸುತ್ತಾರೆ.

ಬಂಡವಾಳಶಾಹಿ ರಾಷ್ಟ್ರದಲ್ಲಿ ಮಧ್ಯಮ ಮತ್ತು ಕೆಳವರ್ಗದ ಜನರ, ಕೂಲಿ ಜನರ, ಕೆಲಸಗಾರರ ಶೋಷಣೆ ನಡೆಯುತ್ತಿದೆ ಎಂದು ಇನ್ನೊಂದು ವಾದವಿದೆ. ಶ್ರೀಮಂತ ವರ್ಗ ವ್ಯವಸಾಯ ಮತ್ತು ವ್ಯಾಪಾರೋದ್ಯಮಗಳನ್ನು ತನ್ನದನ್ನಾಗಿ ಮಾಡಿಕೊಂಡಿರುವುದೇ ಅಧಿಕಪ್ರಮಾಣದಲ್ಲಿ ಜನತೆಯ ಬಡತನಕ್ಕೆ ಕಾರಣವೆನ್ನುವವರೂ ಇದ್ದಾರೆ. ಮಾರ್ಕ್ಸ್, ಏಂಜೆಲ್ಸ್, ಲೆನಿನ್ ಮೊದಲಾದವರ ಸಮತಾವಾದ ಬಂಡವಾಳಶಾಹಿ ರಾಷ್ಟ್ರಗಳ ವಿರುದ್ಧ ವಾದುದೇ ಆಗಿದೆ. ಆರ್ಥಿಕ ಸಮತೆ ಏರ್ಪಡಬೇಕಾದರೆ ಸರ್ಕಾರ ಜನತಾಮೂಲವಾಗಬೇಕು; ಉದ್ಯಮಗಳು ದುಡಿಯುವ ಜನರ ಕೈಯಲ್ಲಿರಬೇಕು; ಸಾರ್ವಜನಿಕ ಸಂಪತ್ತು ಸರಿಯಾಗಿ ಹಂಚಿಕೆ ಆಗಬೇಕು; ವ್ಯಕ್ತಿಯಾಗಲಿ ಯಾವ ಒಂದು ಪಂಗಡವಾಗಲಿ ಅತಿ ಶ್ರೀಮಂತವಾಗಲು ಅವಕಾಶವಿರಬಾರದು–ಇದು ಮತವಾದಿಗಳ ಮತ್ತು ಕಮ್ಯೂನಿಸ್ಟರ ವಾದ.

ವಾದ ಏನೇ ಇರಲಿ, ಅಸಮತೆ ಇರಬಾರದೆಂದು ಎಲ್ಲ ರಾಷ್ಟ್ರಗಳೂ ಘೋಷಿಸುತ್ತಿವೆ; ಇದರ ನಿರ್ಮೂಲನಕ್ಕಾಗಿ ಕಾಯಿದೆ ಸಿದ್ಧಪಡಿಸುತ್ತಿವೆ; ತೆರಿಗೆಗಳನ್ನು ವಿಧಿಸುತ್ತಿವೆ; ಬಡಜನತೆಗೆ ಸೌಕರ್ಯಗಳನ್ನು ಒದಗಿಸುತ್ತಿವೆ.

ತಾತ್ತ್ವಿಕವಾಗಿ ಅಸಮತೆಯನ್ನು ವಿವೇಚಿಸಿದರೆ ಸಂಪತ್ತು ಎಂಬ ಪದದ ಮೂಲಕ್ಕೆ ನಾವು ಹೋಗಬೇಕಾಗುತ್ತದೆ. ಹುಟ್ಟಿದ ಸ್ಥಳ ಕಾಲಗಳ ಕಾರಣದಿಂದ, ಬೆಳೆದ ಪರಿಸರದ ಪ್ರಭಾವದಿಂದ, ಒದಗಿದ ಸಂದರ್ಭಗಳಿಂದ, ಮೇಲಾಗಿ ವ್ಯಕ್ತಿಯ ಸ್ವಭಾವದಿಂದ ವ್ಯಕ್ತಿವ್ಯಕ್ತಿಗಳಲ್ಲಿ ಭಿನ್ನತೆ ಬರುವುದು. ಇದರಿಂದ ಅವರಲ್ಲಿ ಕೆಲಸಮಾಡುವ, ತನ್ಮೂಲಕ ಸಂಪತ್ತುಗಳಿಸುವ ಶಕ್ತಿಯಲ್ಲಿ ಭಿನ್ನತೆ ತಲೆದೋರುವುದು. ಹೀಗೆ ಆರ್ಥಿಕ ಅಸಮತೆ ಮನುಷ್ಯನೊಂದಿಗೆ ಸಹಜವಾಗಿ ಹುಟ್ಟಿ ಬೆಳೆದಿರುವ ಗುಣ. ಮಿತಿಯೊಳಗೆ ಇದು ಬೆಳೆದರೆ ವ್ಯಕ್ತಿ ವ್ಯಕ್ತಿ, ರಾಷ್ಟ್ರ ರಾಷ್ಟ್ರಗಳೊಳಗೆ ಆರೋಗ್ಯಕರ ಸ್ಪರ್ಧೆ ಹುಟ್ಟಿ ಸರ್ವರ ಕಲ್ಯಾಣವಾಗುವುದು. ಮಿತಿ ಮೀರದಂತೆ (ತನ್ಮೂಲಕ ಹಿಂದುಳಿದವರ ಶೋಷಣೆ ಆಗದಂತೆ) ಎಚ್ಚರ ವಹಿಸಬೇಕಾದದ್ದು ಸಮಾಜದ ಕರ್ತವ್ಯ. ಶಕ್ತಿಯ ದುಡಿಮೆಗೆ ಸಮಾನಾವಕಾಶಗಳನ್ನೂ ಯೋಗ್ಯ ಪರಿಸರವನ್ನೂ ಕಲ್ಪಿಸಿಕೊಡಬೇಕಾದುದು ಸಮಾಜದ ಕರ್ತವ್ಯ. *

**ಅಸಮನಿಟ್ಟು (ಅಬಿಂದುಕತೆ) :** ವಕ್ರಾಕೃತಿ ದರ್ಪಣ, ಮಸೂರ ಅಥವಾ ಮಸೂರ ವ್ಯವಸ್ಥೆಯಲ್ಲಿನ ದೋಷದಿಂದಾಗಿ ಬಿಂದುವಿನ ಪ್ರತಿಬಿಂಬ ಬಿಂದುವಾಗಿ ಕಾಣಿಸದೆ ಹರಡಿಕೊಂಡಂತೆ ಭಾಸವಾಗುವ ದೋಷ. (ಅಸ್ಟಿಗ್ಮ್ಯಾಟಿಸಮ್) ಕಣ್ಣಿನ ಮಸೂರದಲ್ಲಿಯೇ ಈ ದೋಷ ಕಾಣಿಸಿಕೊಳ್ಳಬಹುದು. ಅಕ್ಷಿಪಟಲದ (ರೆಟಿನಾ) ವಕ್ರತೆ ಅಸಮವಾಗಿದ್ದರೆ ಒಂದು ಬಿಂದುವಿನ ಪ್ರತಿಬಿಂಬ ಎರಡು ಸಣ್ಣ ಗೆರೆಗಳಂತೆ ಕಾಣಿಸುತ್ತದೆ. ಇದನ್ನು ಅಸಮದೃಷ್ಟಿ, ಕೋಚುದೃಷ್ಟಿ ಎಂದೂ ಕರೆಯುತ್ತಾರೆ. ನಕ್ಷತ್ರಗಳನ್ನು ನೋಡಿದಾಗ ಹೊಳೆಯುವ ಬಿಂದುಗಳಿಗೆ ಬದಲಾಗಿ ಅದರಿಂದ ಕಿರಣಗಳು ಹೊರಟಂತೆ ಕಂಡರೆ ಅಸಮದೃಷ್ಟಿ ಇರಬಹುದೆಂದು ಊಹಿಸಬಹುದು. ನೇತ್ರ ವೈದ್ಯರು ಸಿಲಿಂಡ್ರಿಕಲ್ (ಉರುಳೆಯಾಕಾರದ) ಮಸೂರವನ್ನು ಈ ದೋಷ ನಿವಾರಿಸಲು ಬಳಸುತ್ತಾರೆ. ಛಾಯಾಚಿತ್ರಗ್ರಾಹಿಗಳು ಅಬಿಂದುಕತಾ ವಿಹೀನ ಮಸೂರ ಅಳವಡಿಸಿದ ಕ್ಯಾಮರಾ ಬಳಸುತ್ತಾರೆ. *

**ಅಸಮಪಾದ ಪದ್ಯ :** ಪ್ರಗಾಥ (ಓಡ್) ಇದಕ್ಕೆ ಒಳ್ಳೆಯ ಉದಾಹರಣೆ. ಪದ್ಯದಲ್ಲಿ ಸಾಲುಗಳ ಸಂಖ್ಯೆ ಇಷ್ಟೇ ಇರಬೇಕು ಎಂಬ ಸಂಪ್ರದಾಯವನ್ನು ಮುರಿದಂತೆ, ಪ್ರತಿಸಾಲಿನ ಪ್ರಮಾಣ ಒಂದೇ ಆಗಿರಬೇಕೆಂಬ ಸಂಪ್ರದಾಯವನ್ನೂ ಇಲ್ಲಿ ಮುರಿಯಲಾಗಿದೆ. ನಾಲ್ಕೊ ಐದೊ ಆರೊ ಗಣಗಳುಳ್ಳ ಪಂಕ್ತಿಯನ್ನು ವ್ಯತ್ಯಾಸಕ್ಕೆ ಅವಕಾಶ ಕೊಡದೆ ತಿರುತಿರುಗಿ ಉಪಯೋಗಿಸುವುದೇ ಪ್ರಾಚೀನಕವಿಗಳ ವಾಡಿಕೆ. ನೀಳ ಕಾವ್ಯವೆಲ್ಲ ಅದೇ ರೀತಿ ರಚಿತವಾಗುತ್ತಿತ್ತು. ಆದರೆ ಪ್ರಗಾಥದಲ್ಲಿ ಪಂಕ್ತಿಗಳು ಅಸಮವಾಗುತ್ತಿದ್ದುವು. ಹತ್ತೆಂಟು ಸಾಲುಗಳು ವೃತ್ತದ ಕೆಲವು ಸಾಲುಗಳು ವಿಭಿನ್ನವಾಗಿರುತ್ತಿದ್ದುವು. ವೃತ್ತಗಳ ರಚನೆಯಾದರೂ ಒಂದೇ ಮಾದರಿಯನ್ನು ಅನುಸರಿಸಬೇಕಾಗಿತ್ತು. ಸಾಲುಗಳು ಉದ್ದದಲ್ಲಿ ವ್ಯತ್ಯಸ್ತವಾಗಿದ್ದರೂ ಭಾವ ಅರ್ಥಗಳ ತೂಕದಲ್ಲೂ ಪ್ರಭಾವದಲ್ಲೂ ಹೆಚ್ಚು ಕಡಿಮೆ ಹತ್ತಿರ ಹತ್ತಿರ ಇರುತ್ತಿದ್ದುವು.

ಆಮೇಲೆ ಬಂದ ಕವಿಗಳಿಗೂ ಅಸಮಪಾದತ್ವ ಆವಶ್ಯಕವಾಯಿತು. ಆಧುನಿಕ ಕವಿತೆಯಲ್ಲಿ ಅದು ವಿಪುಲವಾಗಿದೆ. ಎಂದರೆ, ಮನಸ್ಸಿಗೆ ಬಂದಂತೆ ಅದನ್ನು ಬಳಸತಕ್ಕದ್ದಲ್ಲ; ಅರ್ಥ, ರಾಗ ಕಾವ್ಯೋದ್ದೇಶಗಳಿಗೆ ಅನುಗುಣವಾಗಿ ಇರತಕ್ಕದ್ದು.

ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದಲ್ಲೂ ಈ ಮಾರ್ಪಾಟು ಕಾಲಕಾಲಕ್ಕೆ ಕಂಡುಬಂದಿದೆ. ಆಧುನಿಕ ಕಾವ್ಯಗಳಲ್ಲಂತೂ ಅಸಮವಾದ ರಚನೆ ವಿಪುಲವಾಗಿ ಕಂಡುಬಂದಿದೆ.

(ಎಸ್.ವಿ.ಆರ್.)

**ಅಸಮಪ್ರಸರಣ :** ಖನಿಜಗಳನ್ನು ದೃಗ್ವಿಜ್ಞಾನದ ಪ್ರಕಾರ ಸಮಪ್ರಸಾರಿಕ, ಅಸಮಪ್ರಸಾರಿಕ ಎಂದು ಎರಡು ವರ್ಗಗಳಾಗಿ ವಿಂಗಡಿಸಬಹುದು. ಸಮಪ್ರಸಾರಿಕ ಖನಿಜಗಳಲ್ಲಿ ಹಾಯ್ದು ಹೋಗುವ ಬೆಳಕಿನ ಕಿರಣಗಳು ಎಲ್ಲ ದೆಸೆಗಳಲ್ಲೂ ಸ್ಫಟಿಕಾಕ್ಷಗಳ ಸಮತೆಯಿಂದ ಒಂದೇ ವೇಗದಲ್ಲಿ ಚಲಿಸುತ್ತವೆ. ಆದರೆ ಅಸಮಪ್ರಸಾರಿಕ ಖನಿಜಗಳಲ್ಲಿ ಸ್ಫಟಿಕಾಕ್ಷಗಳ ಅಸಮತೆಯಿಂದ ಎಲ್ಲ ದೆಸೆಗಳಲ್ಲೂ ಒಂದೇ ವೇಗಗತಿಯಿಂದ ಚಲಿಸುವುದಿಲ್ಲ. ಬೆಳಕಿನ ಕಿರಣಗಳು ದ್ವಿವಕ್ರೀಕರಣವಾಗುವುದೇ (ಡಬಲ್ ರಿಫ್ರ್ಯಾಕ್ಷನ್) ಇದಕ್ಕೆ ಮುಖ್ಯ ಕಾರಣ. ಇದೇ ಅಸಮಪ್ರಸರಣ (ಅನಿಸ್‌ಟ್ರಾಪಿಸಂ), ಚತುಷ್ಕೋನೀಯ (ಟೆಟ್ರಾಗೋನಲ್) ಮತ್ತು ಷಟ್ಕೋನೀಯ (ಹೆಕ್ಸಾಗೋನಲ್) ವರ್ಗಗಳಲ್ಲಿ ಸ್ಫಟಿಕಾಕಾರಗೊಳ್ಳುವ ಜಿರ್‌ಕಾನ್, ಕ್ವಾರ್ಟ್ಸ್ (ಬೆಣಚು) ಮುಂತಾದ ಖನಿಜಗಳಲ್ಲಿ ಬೆಳಕಿನ ಕಿರಣಗಳ ವೇಗ ಕೆಲವು ದೆಸೆಗಳಲ್ಲಿ ವ್ಯತ್ಯಾಸವಿದ್ದರೂ, ಶೀರ್ಷಾಕ್ಷದ ಕಡೆ ಮಾತ್ರ ಎರಡು ಕಿರಣಗಳು ಒಂದೇ ವೇಗಗತಿಯಲ್ಲಿರುತ್ತವೆ. ಈ ಅಕ್ಷವನ್ನು ದೃಗಕ್ಷ (ಆಪ್‌ಟಿಕ್ ಆ್ಯಕ್ಸಿಸ್) ಎನ್ನುತ್ತಾರೆ. ಒಂದೇ ದೃಗಕ್ಷವಿರುವವುಗಳೇ ಏಕ ಅಕ್ಷೀಯ (ಯೂನಿ ಆ್ಯಕ್ಸಿಯಲ್) ಖನಿಜಗಳು. ಆರ್ಥೋರಾಂಬಿಕ್, ಮಾನೊಕ್ಲಿನಿಕ್ ಮತ್ತು ಟ್ರೈಕ್ಲಿನಿಕ್ ವರ್ಗಗಳಲ್ಲಿ ಸ್ಫಟಿಕಾಕಾರಗೊಳ್ಳುವ ಬೆರೈಟ್, ಜಿಪ್ಸಂ, ಪ್ಲೇಜಿಯಾಕ್ಲೇಸ್, ಫೆಲ್ಡ್‌ಸ್ಪಾರ್ ಮುಂತಾದ ಖನಿಜಗಳಲ್ಲಿ ಹಾಯ್ದುಹೋಗುವ ಬೆಳಕಿನ ಅಕ್ಷಗಳ ಕಿರಣಗಳು ಎಲ್ಲ ದೆಸೆಗಳಲ್ಲೂ ಒಂದೇ ವೇಗಗತಿಯಲ್ಲಿರುವುದಿಲ್ಲ. ಆದರೆ ಎರಡು ಅಕ್ಷಗಳ ದೆಸೆಯಲ್ಲಿ ಮಾತ್ರ ಎರಡು ಕಿರಣಗಳು ಒಂದೇ ವೇಗದಲ್ಲಿ ಚಲಿಸುತ್ತವೆ. ಈ ಎರಡು ದೃಗಕ್ಷಗಳಿರುವವುಗಳೇ ದ್ವಿಅಕ್ಷೀಯ (ಬೈ ಆ್ಯಕ್ಸಿಯಲ್) ಖನಿಜಗಳು. (ಎಂ.ಎನ್.ವಿ.)

**ಅಸಮೀಕರಣ :** ತಾಳೆಮಾಡುವಂಥ ಸಮೀಕರಣದಿಂದ ಗಣಿತ ಸಂಕೇತಗಳನ್ನು ಸಂಬಂಧಿಸಲು ಸಾಧ್ಯವಾಗದಾಗ ಅದನ್ನು ಸಾಂಕೇತಿಕವಾಗಿ ತಿಳಿಸುವ ವಿಧಾನ (ಇನ್‌ಈಕ್ವಾಲಿಟಿ). ಎರಡು ಪ್ರಮಾಣಗಳಲ್ಲಿ ಯಾವುದು ದೊಡ್ಡದು, ಯಾವುದು ಚಿಕ್ಕದು ಎಂದು ಖಚಿತವಾಗಿ ಹೇಳಲು ಅಸಮತ್ ಚಿಹ್ನೆಗಳನ್ನು ಬಳಸಲಾಗುವುದು. ಉದಾಹರಣೆಗೆ : a ಯು b ಗಿಂತ ದೊಡ್ಡದು ಎನ್ನುವುದು $a>b$, ಹಾಗೆಯೇ b ಯು a ಗಿಂತ ಚಿಕ್ಕದು ಎಂದು ಸೂಚಿಸಲು $b<a$ ಎಂದು ಬರೆಯಲಾಗುತ್ತದೆ. ಅಸಮೀಕರಣ ಅಥವಾ ಅಸಮತಾ ಚಿಹ್ನೆಗಳನ್ನು ಸಮತಾ ಚಿಹ್ನೆ (=) ಯೊಂದಿಗೆ $\geq$ ಅಥವಾ $\leq$ ಎಂದು ಜೊತೆಗೂಡಿಸುವುದೂ ಉಂಟು. *

**ಅಸಲುಕಂತು :** ಸಾಲ ಬೇಗ ತೀರುವ ವಿಧಗಳಲ್ಲಿ ಒಂದು (ಅಮಾರ್ಟೈಸೇಷನ್). ಇದರ ಪ್ರಕಾರ ಸಾಲಗಾರ ಮರುಪಾವತಿ ಮಾಡುವ ಪ್ರತಿ ಕಂತಿನಲ್ಲೂ ಆ ತಿಂಗಳಿನ ಬಡ್ಡಿಯ ಜೊತೆ ಅಸಲಿನ ಸ್ವಲ್ಪ ಭಾಗವೂ ಸೇರಿರುತ್ತದೆ. ಸಾಲದ ಕಾಲಾವಧಿ, ಬಡ್ಡಿ ದರ ಇವುಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಪ್ರತಿ ವರ್ಷಕ್ಕೂ ಎಷ್ಟು ಕಂತುಗಳನ್ನು ಸಾಲಗಾರ ಕಟ್ಟಬೇಕೆಂಬುದು ಮೊದಲೇ ನಿರ್ಧಾರವಾಗುತ್ತದೆ. ಸಾಮಾನ್ಯವಾಗಿ ಕಂತುಗಳು ಒಂದೇ ಮೊತ್ತದವು. ಸಾಲಗಾರನ ಅನುಕೂಲಕ್ಕೆಂದು ವರ್ಷದ ಕಂತನ್ನು ಹನ್ನೆರಡು ತಿಂಗಳಿಗೆ ಹಂಚಿಕೆ ಮಾಡಲೂಬಹುದು. ಪ್ರತಿ ತಿಂಗಳ ಕಂತು ಕೈಗೆ ಬಂದ ಕೂಡಲೇ ಸಾಲ ಕೊಟ್ಟಿರುವ ಸಂಸ್ಥೆ ತನಗೆ ಬರಬೇಕಾದ ಬಡ್ಡಿಯನ್ನು ತೆಗೆದುಕೊಂಡು ಉಳಿದುದನ್ನು ಅಸಲಿಗೆ ಜಮಾ ಮಾಡಿಕೊಳ್ಳುತ್ತದೆ. ಅಂದರೆ, ಪ್ರತಿ ಕಂತಿನಲ್ಲಿ ಅಸಲಿಗೆ ಮತ್ತು ಬಡ್ಡಿಗೆ ಹಣ ಸಂದಾಯವಾಗುವುದು. ಅಸಲು ಕಾಲಕ್ರಮೇಣ ತೀರುತ್ತ ಬಂದಂತೆ, ಬಡ್ಡಿಯ ಹಣವೂ ಕಡಿಮೆಯಾಗುತ್ತ ಬರುವುದು. ಇದರಿಂದ ಅಸಲಿಗೆ ಸೇರುವ ಮೊತ್ತ ಹೆಚ್ಚಿ ಸಾಲ ಬೇಗ ತೀರುವುದು. ಸಾಮಾನ್ಯವಾಗಿ ಬ್ಯಾಂಕುಗಳಿಂದಲೂ ಸಹಕಾರ ಸಂಘಗಳಿಂದಲೂ ತೆಗೆದುಕೊಳ್ಳುವ ಸಾಲವನ್ನು ಈ ಕ್ರಮದಲ್ಲಿ ತೀರಿಸುವ ಏರ್ಪಾಟು ಜಾರಿಯಲ್ಲಿದೆ.

ಅಸಲುಕಂತಿನ ತತ್ತ್ವವನ್ನು ಸಾಲಪತ್ರಗಳ ಮೇಲಿನ ಹೆಚ್ಚುವರಿ (ಪ್ರೀಮಿಯಂ) ಅಥವಾ ಇಳಿವರಿಯನ್ನು (ಡಿಸ್‌ಕೌಂಟ್) ತೊಡೆದು ಹಾಕಲು ಉಪಯೋಗಿಸಲಾಗುತ್ತದೆ. ಒಂದು ಸಾಲಪತ್ರವನ್ನು ಅದರ ಮುಖಬೆಲೆಗಿಂತ ಹೆಚ್ಚಿನ ಬೆಲೆಗೆ ಕೊಂಡು, ಸಾಲಪತ್ರದ ಕಾಲಾವಧಿಯ ಅನಂತರ ಮುಖಬೆಲೆಯ ಹಣವನ್ನು ಪಡೆದರೆ, ಪತ್ರಕೊಂಡವನಿಗೆ ಪತ್ರದ ಹೆಚ್ಚುವರಿಗೆ ಸಮವಾದಷ್ಟು ನಷ್ಟವುಂಟಾಗುತ್ತದೆ. ಸಾಲಪತ್ರದ ಮುಖಬೆಲೆಗಿಂತ ಕಡಿಮೆಬೆಲೆ ಕೊಟ್ಟು ಪತ್ರದ ಕಾಲಾವಧಿಯ ಅನಂತರ ಪತ್ರದ ಮುಖಬೆಲೆಯನ್ನು ಪಡೆದರೆ, ಪತ್ರ ಕೊಂಡವನಿಗೆ ಪತ್ರದ ಇಳಿವರಿಗೆ ಸಮನಾದ ಲಾಭವುಂಟಾಗುತ್ತದೆ. ಹೆಚ್ಚುವರಿ ಕೊಟ್ಟು ಪತ್ರದ ಮುಖಬೆಲೆಯನ್ನು ಪಡೆಯುವುದರಿಂದಾಗುವ ನಷ್ಟವನ್ನು ಹೀಗೆ ಸರಿಪಡಿಸಬಹುದು: ಹೆಚ್ಚುವರಿಯ ಹಣಕ್ಕೆ ಸಮನಾದ ಮೊತ್ತವನ್ನು ಪತ್ರದ ಕಾಲಾವಧಿಯಲ್ಲಿ ಪ್ರತಿ ವರ್ಷಕ್ಕೂ ಕಂತುಗಳಾಗಿ ವಿಭಜಿಸಲಾಗುವುದು. ಆಯಾ ವರ್ಷದ ಸಂಪಾದನೆಯಲ್ಲಿ, ಕಂತು ಹಣವನ್ನು ಸಾಲಪತ್ರದ ಹೆಚ್ಚುವರಿ ನಷ್ಟಕ್ಕೆ ಕಟ್ಟುತ್ತ ಹೋಗಲಾಗುವುದು. ಇದೇ ಪ್ರಕಾರ ಸಾಲಪತ್ರವನ್ನು ಇಳಿವರಿಯಲ್ಲಿ ಕೊಂಡು, ಸಾಲಪತ್ರದ ಮುಖಬೆಲೆಯನ್ನು ಪಡೆದಾಗ ಬರುವ ಲಾಭವನ್ನು ಪತ್ರದ ಮುಖಬೆಲೆಗೆ ಸರಿತೂಗಿಸುವ ಏರ್ಪಾಟು ಮಾಡಬಹುದು. ಇಳಿವರಿಯ ಮೊತ್ತಕ್ಕೆ ಸಮನಾದ ಮೊತ್ತವನ್ನು ಪತ್ರದ ಕಾಲಾವಧಿಗನುಗುಣವಾಗಿ ಕಂತುಗಳಾಗಿ ವಿಭಜಿಸಿ, ಪ್ರತಿ ವರ್ಷದ ಕಂತು ಹಣವನ್ನು ಸಾಲಪತ್ರದ ಲೆಕ್ಕಕ್ಕೆ ಜಮಾ ಮಾಡಲಾಗುವುದು.

ಅಸಲುಕಂತಿನತತ್ತ್ವವನ್ನು ಸಾಲಪತ್ರಗಳನ್ನು ನೀಡುವ ಸಂಸ್ಥೆ ಹೇಗೆ ಅನುಸರಿಸುತ್ತದೆಂಬುದಕ್ಕೆ ಒಂದು ಉದಾಹರಣೆ: ಒಂದು ಕೂಡುಬಂಡವಾಳಸಂಸ್ಥೆ ರೂ. 10,000 (ಶೇ. 4 ಬಡ್ಡಿ) ಸಾಲಪತ್ರಗಳನ್ನು ಪತ್ರದ ಮುಖಬೆಲೆಯ ಶೇ. 90ಕ್ಕೆ ಮಾರಾಟ ಮಾಡುವುದು. ಇದರಿಂದ ಸಂಸ್ಥೆಗೆ ರೂ. 1,000 ಇಳಿವರಿ ನಷ್ಟವಾಯಿತು. ಇದರ ಪರಿಣಾಮವಾಗಿ ಸಂಸ್ಥೆಯ ಜವಾಬ್ದಾರಿಗಳ ಮೊತ್ತದಲ್ಲಿ ರೂ. 1,000ದಷ್ಟು ಹೆಚ್ಚಾದುದಲ್ಲದೆ, ಅದರ ಆಸ್ತಿಗಳ ಲೆಕ್ಕದಲ್ಲಿ ರೂ. 9,000 ಹೆಚ್ಚಾಯಿತು. ಈ ಎರಡು ಮೊಬಲಗುಗಳ ನಡುವೆ ಇರುವ ರೂ. 1,000 ವ್ಯತ್ಯಾಸವೇ ಸಾಲಪತ್ರದ ಇಳಿವರಿ. ಈ ಇಳಿವರಿ ಲೆಕ್ಕವನ್ನು ಸಂಸ್ಥೆ ಆಸ್ತಿ ಜವಾಬ್ದಾರಿ ಪಟ್ಟಿಯಲ್ಲಿ ಆಸ್ತಿಗಳ ಲೆಕ್ಕಕ್ಕೆ ಸೇರಿಸುವುದು. ಸಂಸ್ಥೆಯ ಆಸ್ತಿಗಳ ಪತ್ರದ ಬೆಲೆಗೆ ಸಮವಾದ ಆಸ್ತಿ ಸೇರಬೇಕಾದುದರಿಂದ ಇಳಿವರಿ ಮೊತ್ತವಾದ ರೂ. 1,000ವನ್ನು ಆಸ್ತಿಗಳ ಲೆಕ್ಕಕ್ಕೆ ಸೇರಿಸಬೇಕು. ಈ ಕಾರಣಕ್ಕಾಗಿ ಸಂಸ್ಥೆ ರೂ. 1,000ವನ್ನು ಪ್ರತಿ ವರ್ಷಕ್ಕೆ ಕಂತುಗಳಾಗಿ ವಿಭಜಿಸಿ, ಪತ್ರದ ಕಾಲಾವಧಿಯಲ್ಲಿ ಇಳಿವರಿ ಲೆಕ್ಕಕ್ಕೆ ಸೇರಿಸಿ ಇಳಿವರಿ ಲೆಕ್ಕವನ್ನು ಕಾಲಕ್ರಮೇಣ ವಜಾ ಮಾಡುತ್ತದೆ. (ಪಿ.ಎಸ್.ಎನ್.)

**ಅಸಹಕಾರ :** ಸರ್ಕಾರದ ವಿರುದ್ಧ ಜನತೆ ತನ್ನ ಅಸಮ್ಮತಿ, ವಿರೋಧ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸುವ ಒಂದು ವಿಧಾನ. ಇದು ಸಕ್ರಮವಿರಬಹುದು; ಅಕ್ರಮವೆನಿಸಿಕೊಳ್ಳಬಹುದು. ಒಂದು ಶಾಸನಕ್ಕೆ, ಒಂದು ಕ್ಷೇತ್ರಕ್ಕೆ ಮೀಸಲಾಗಿರಬಹುದು ಅಥವಾ ಸರ್ಕಾರವನ್ನಷ್ಟೇ ಮಾರ್ಪಡಿಸುವ ಕ್ರಮವಾಗಿಯೂ ಇದನ್ನು ಬಳಸಿಕೊಳ್ಳಬಹುದು.

ಜನ ತಮ್ಮ ಸಹಕಾರವನ್ನು ನಿರಾಕರಿಸಿ, ಸರ್ಕಾರವನ್ನು ದಾರಿಗೆ ತರಬಹುದು ಎಂಬ ತತ್ತ್ವವನ್ನು ಥೋರೋ, ಟಾಲ್‌ಸ್ಟಾಯ್, ರಸ್ಕಿನ್ ಮೊದಲಾದವರು ಪ್ರತಿಪಾದಿಸಿದರು. ಈ ಸಿದ್ಧಾಂತವನ್ನೇ ಆಧಾರವಾಗಿಟ್ಟುಕೊಂಡು ಭಾರತದಲ್ಲಿ ಮಹಾತ್ಮಾ ಗಾಂಧಿ ಅದನ್ನು ಅನೇಕ ಸನ್ನಿವೇಶಗಳಲ್ಲಿ ಬೃಹತ್‌ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತಂದರು. ಸತ್ಯಯುತ, ಅಹಿಂಸಾತ್ಮಕ ಪ್ರತಿಭಟನೆ ಸತ್ಯಾಗ್ರಹ ಎನಿಸಿಕೊಂಡಿತು.

ಅಮೆರಿಕದ ಅರಾಜಕತಾವಾದಿ ಬೆಂಜಮಿನ್ ಟಕರ್ ಅಸಹಕಾರದ ಹೋರಾಟವನ್ನು ಈ ರೀತಿ ಸಮರ್ಥಿಸುತ್ತಾನೆ. ಒಂದು ರಾಜ್ಯದ ಐದನೆಯ ಒಂದು ಭಾಗದ ಜನ ತೆರಿಗೆ ಕೊಡಲು ನಿರಾಕರಿಸಿದರೆ ಉಳಿದ ನಾಲ್ಕುಭಾಗದ ಪ್ರಜೆಗಳು ತೆರಿಗೆ ಕೊಡಲು ಸಮ್ಮತಿಸಿ ತೆರಿಗೆ ತೆತ್ತರೂ ಆ ಹಣವೆಲ್ಲ ತೆರಿಗೆ ವಸೂಲಿಗಾಗಿಯೇ ವೆಚ್ಚವಾಗಿ ಹೋಗುತ್ತದೆ. ಹಿಂಸಾತ್ಮಕ ಚಳವಳಿಯನ್ನು ಸರ್ಕಾರ ಸದೆಬಡಿಯಬಲ್ಲದು. ಆದರೆ ಅಹಿಂಸಾತ್ಮಕ ಹೋರಾಟವನ್ನು ತುಳಿದುಹಾಕುವುದು ಅಸಾಧ್ಯ.

ಪ್ಯಾಸಿಫಿಸಂ ಅಥವಾ ಯುದ್ಧವಿರೋಧ, ಶಾಂತಿಯುತ ಕಾನೂನುಭಂಗ (ಸಿವಿಲ್ ಡಿಸ್‌ಒಬೀಡಿಯನ್ಸ್) ಕಾನೂನು ಕಟ್ಟಳೆಗಳನ್ನು ವಿಧಿಪೂರ್ವಕ ವಿರೋಧಿಸುವುದು; ಸಾತ್ತ್ವಿಕ ವಿರೋಧ (ಪ್ಯಾಸಿವ್ ರೆಸಿಸ್ಟೆನ್ಸ್), ಅಸಹಕಾರ (ನಾನ್–ಕೋಆಪರೇಷನ್) ಇವು ಅಸಹಕಾರ ಚಳವಳಿಯ ವಿವಿಧ ರೂಪಾಂತರಗಳು.

ನೈತಿಕ ಕಾರಣಗಳಿಗಾಗಿ ಯುದ್ಧವನ್ನು ವಿರೋಧಿಸುವುದು ಯುದ್ಧವಿರೋಧಿಯ ಮುಖ್ಯಧ್ಯೇಯ. ಆತ ತನಗೆ ಏನೇ ವಿಪತ್ತು ಬಂದರೂ ಯುದ್ಧೋದ್ಯಮದಲ್ಲಿ ಸಹಕರಿಸನು; ಸಿಪಾಯಿಯಾಗಿ ದುಡಿಯನು. ಕೇವಲ ತಟಸ್ಥನಾಗಿರುವುದರಲ್ಲಿ ಆತ ಸಮಾಧಾನ ಪಡೆಯುವನು; ಇಲ್ಲವೆ ಯುದ್ಧವನ್ನು ಹೂಡುವನು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಸುಮಾರು 16,000 ಯುದ್ಧ ವಿರೋಧಿಗಳಿದ್ದರು. ಎರಡನೆಯ ಮಹಾಯುದ್ಧದಲ್ಲಿ ಮಾರ್ಚ್ 1940ರವರೆಗೆ ಇವರ ಸಂಖ್ಯೆ 26,681 ಇದ್ದಿತು. ತತ್ತ್ವಜ್ಞಾನಿ ಬರ್ಟ್ರಂಡ್ ರಸಲ್, ವಿಜ್ಞಾನಿ ಹಕ್ಸ್‌ಲಿ, ರಾಜಕಾರಣಿ ಫೆನ್ನರ್ ಬ್ರಾಕ್‌ವೆ ಮೊದಲಾದ ಮೇಧಾವಿಗಳು ಯುದ್ಧದಲ್ಲಿ ಭಾಗವಹಿಸಲು ನಿರಾಕರಿಸಿ ಸೆರೆಮನೆ ಸೇರಿದರು. ಈಗ ಅನೇಕ ದೇಶಗಳಲ್ಲಿ ಯುದ್ಧವಿರೋಧಿ ಸಂಸ್ಥೆಗಳಿವೆ.

ಧರ್ಮವಿರುದ್ಧ, ನೀತಿವಿರುದ್ಧ, ಅಪ್ರಿಯವಾದ ಅಥವಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಶಾಸನವನ್ನು ಶಾಂತಿಯುತ ಕ್ರಮಗಳಿಂದ ವಿರೋಧಿಸುವುದೇ ಶಾಂತಿಯುತ ಕಾನೂನುಭಂಗ ಚಳವಳಿ. ಅಪ್ರಿಯವಾದ ಶಾಸನವನ್ನು ಉದ್ದೇಶ ಪೂರ್ವಕವಾಗಿ ಧಿಕ್ಕರಿಸಿ ನ್ಯಾಯಾಲಯದ ವಿಚಾರಣೆಗೆ ಅದನ್ನು ಒಳಪಡಿಸುವುದೂ ಒಂದು ಕ್ರಮ. ಅಪ್ರಿಯ ಶಾಸನವನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರತಿಭಟಿಸಿ, ನ್ಯಾಯಾಲಯ ವಿಧಿಸುವ ಶಿಕ್ಷೆಯನ್ನು ಸ್ವಾಗತಿಸಿ ಅನುಭವಿಸುವುದು ಮತ್ತೊಂದು ಕ್ರಮ.

1902ರಲ್ಲಿ ಇಂಗ್ಲೆಂಡಿನಲ್ಲಿ ಶಿಕ್ಷಣಶುಲ್ಕವನ್ನು ಪ್ರತಿಭಟಿಸಲು ನಡೆದ ಸಾತ್ತ್ವಿಕ ವಿರೋಧಚಳವಳಿಯಲ್ಲಿ ಭಾಗವಹಿಸಲು 60,000 ಜನ ಸಿದ್ಧರಾಗಿದ್ದು 254 ಜನ ಸೆರೆಮನೆ ಸೇರಿದರು. 18ನೆಯ ಶತಮಾನದಲ್ಲಿ ಹಂಗರಿಯ ಜನ ಡೀಕನ ಮುಂದಾಳತ್ವದಲ್ಲಿ ಆಸ್ಟ್ರಿಯ ಚಕ್ರವರ್ತಿ ಹಂಗರಿಯಲ್ಲಿ ಮಂತ್ರಿಮಂಡಲ ಸ್ಥಾಪಿಸಲು ಕೈಗೊಂಡ ಕ್ರಮವನ್ನು ಸಾತ್ತ್ವಿಕವಿರೋಧದಿಂದ ಪ್ರತಿಭಟಿಸಿದರು. 1857ರಲ್ಲಿ ಹಂಗರಿ ಪೂರ್ಣಸ್ವಾತಂತ್ರ್ಯ ಪಡೆಯಿತು. 1919ರಲ್ಲಿ ಈಜಿಪ್ಟ್ ಜಗಲೂಲ್‌ಪಾಷಾನ ನೇತೃತ್ವದಲ್ಲಿ ಬ್ರಿಟನ್ ವಿರುದ್ಧ ಅಸಹಕಾರ ಚಳವಳಿಹೂಡಿ ಸ್ವಾತಂತ್ರ್ಯ ಗಳಿಸಿತು. 1910ರಿಂದ ಒಂಬತ್ತು ವರ್ಷಗಳ ಕಾಲ ಕೊರಿಯ ಸಾತ್ತ್ವಿಕ ವಿರೋಧಚಳವಳಿ ಹೂಡಿ ಜಪಾನಿನಿಂದ ಸ್ವಾತಂತ್ರ್ಯವನ್ನು ಗಳಿಸಿತು. 1923ರಲ್ಲಿ ಮಹಾಯುದ್ಧದ ತರುವಾಯ ಫ್ರೆಂಚರು ಜರ್ಮನಿಗೆ ಸೇರಿದ ರ್‍ಹೂರ್ ಕೈಗಾರಿಕಾ ಪ್ರದೇಶವನ್ನು ವಶಪಡಿಸಿಕೊಂಡರು. ಇದರಿಂದ ಕೋಪಗೊಂಡ ಜರ್ಮನ್‌ಸರ್ಕಾರ ಫ್ರೆಂಚ್‌ಸರ್ಕಾರದ ವಿರುದ್ಧ ಸಾತ್ತ್ವಿಕ ವಿರೋಧ ಚಳವಳಿ ಹೂಡಿ ಫ್ರೆಂಚರಿಗೆ ಒಂದು ಟನ್ ಕಲ್ಲಿದ್ದಲು ಸಹ ದೊರೆಯದಂತೆ ಮಾಡಿತು. 1925ರಲ್ಲಿ ಚಳವಳಿಯಿಂದ ಬೇಸತ್ತ ಫ್ರೆಂಚ್ ಸರ್ಕಾರ ತನ್ನ ಸೇನಾಬಲವನ್ನು ಹಿಂದಕ್ಕೆ ಕರೆಸಿಕೊಂಡು ಜರ್ಮನಿಯೊಡನೆ ಒಪ್ಪಂದಮಾಡಿಕೊಂಡಿತು. ಒಂದು ಸರ್ಕಾರ ಮತ್ತೊಂದು ಸರ್ಕಾರವನ್ನು ಸಾತ್ತ್ವಿಕ ವಿರೋಧ ಚಳವಳಿ ನಡೆಸಿ ತಮ್ಮ ಗುರಿ ಸಾಧಿಸಿಕೊಂಡಿತು. ಇವು ಚರಿತ್ರಾರ್ಹವಾದ ಕೆಲವು ನಿದರ್ಶನಗಳು.

ಈ ವಿಧಾನಗಳೆಲ್ಲ ಒಂದಾಗಿ ತೋರಿದರೂ ಸತ್ಯ, ಶಾಂತಿ, ಅಹಿಂಸೆ, ಆತ್ಮಬಲ– ಇವುಗಳ ಆಧಾರವಾದ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹ ತತ್ತ್ವಶಃ ಪ್ರತ್ಯೇಕವಾದುದು.
**(ನೋಡಿ– ಸತ್ಯಾಗ್ರಹ)** (ವಿ.ಎಸ್.ಎನ್.)

**ಅಸರ್‌ಬೈಜಾನ್ :** ನೈಋತ್ಯ ಏಷ್ಯ ಮತ್ತು ಯುರೋಪ್‌ನಲ್ಲಿರುವ ಒಂದು ಸ್ವತಂತ್ರ ಗಣರಾಜ್ಯ. ರಷ್ಯಕ್ಕೆ ಸೇರಿದ್ದ ಇದು 1991ರಲ್ಲಿ ಸ್ವತಂತ್ರವಾಯಿತು. ಯುರೋಪಿಯನ್ ರಷ್ಯದ ಅತ್ಯಂತ ದಕ್ಷಿಣಭಾಗದಲ್ಲಿದೆ. (ಉತ್ತರ ಅಕ್ಷಾಂಶ $39^0$ ಮತ್ತು $42^0$). ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರ, ದಕ್ಷಿಣದಲ್ಲಿ ಇರಾನ್, ಮತ್ತು ಟರ್ಕಿ,ಪಶ್ಚಿಮದಲ್ಲಿ ಆರ್ಮೀನಿಯನ್ ಗಣರಾಜ್ಯ, ಉತ್ತರದಲ್ಲಿ ಜಾರ್ಜಿಯ ಮತ್ತು ರಷ್ಯ ಗಣರಾಜ್ಯಗಳಿವೆ. ಉತ್ತರ ದಕ್ಷಿಣವಾಗಿ 385 ಕಿಮೀ ಪೂರ್ವ ಪಶ್ಚಿಮವಾಗಿ 475 ಕಿಮೀ ಇರುವ ಇದರ ಒಟ್ಟು ವಿಸ್ತೀರ್ಣ 86,600 ಚ.ಕಿಮೀ.

ಅಸರ್‌ಬೈಜಾನಿನ ಮೇಲ್ಮೈ ಲಕ್ಷಣ ಮೂರು ಮುಖ್ಯ ಸ್ವಾಭಾವಿಕ ವಿಭಾಗಗಳಿಂದ ಕೂಡಿದೆ– ಉತ್ತರದ ಕಕಾಸಸ್, ಕೇಂದ್ರದ ಶುಷ್ಕ ಸ್ಟೆಪ್ಪಿ ಮೈದಾನ ಮತ್ತು ನೈಋತ್ಯದ ಉಪ ಕಕಾಸಸ್‌ನ ಉನ್ನತ ಭಾಗ. ದೇಶದ ಶೇ.20 ಭಾಗ ತಗ್ಗು ಪ್ರದೇಶವಾಗಿದೆ. ಕೇಂದ್ರದ ಮೈದಾನದಲ್ಲಿ ಕುರಾ ನದಿಹರಿಯುತ್ತದೆ. ಅರಾಸ್ ಎಂಬುದು ಅದರ ಪ್ರಮುಖ ನದಿ. ಅರೆ ಮರುಭೂಮಿಯ ವಾಯುಗುಣ. ಬೇಸಗೆ ಅತಿ ಶಾಖವಾಗಿದ್ದು ಚಳಿಗಾಲವು ತಂಪಾಗಿರುತ್ತದೆ. ಗೋದಿ, ಹತ್ತಿ, ಬಾರ್ಲಿ, ಓಟ್ಸ್, ಸಕ್ಕರೆಗಡ್ಡೆ, ಆಲೂಗಡ್ಡೆ, ಬಾದಾಮಿ, ಹುಳಿಹಣ್ಣು ಮತ್ತು ದ್ರಾಕ್ಷಿಗಳು ಪ್ರಮುಖ ಕೃಷಿ ಉತ್ಪನ್ನಗಳು. ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲಗಳು ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನ ಹೊಂದಿವೆ. ಬಾಕು ಪ್ರಸಿದ್ಧ ತೈಲ ಶುದ್ಧೀಕರಣ ಕೇಂದ್ರ. ಸಮೀಪದಲ್ಲಿ ರಾಸಾಯನಿಕ ಕೈಗಾರಿಕೆಗಳಿವೆ. ಅಲ್ಯೂಮಿನಿಯಮ್ ಉತ್ಪಾದನೆಯಾಗುತ್ತದೆ. ಆಹಾರ ಪದಾರ್ಥಗಳ ಸಂಸ್ಕರಣೆ, ಜವಳಿ ಮತ್ತು ಜಮಖಾನಗಳ ತಯಾರಿಕಾ ಉದ್ಯಮಗಳು ಮುಖ್ಯವಾದವು.

ಇಲ್ಲಿನ ಜನಸಂಖ್ಯೆ 8,176,000 (2002). ಇವರಲ್ಲಿ ಬಹಳಷ್ಟು ಟರ್ಕಿ ಮೂಲದವರು, ಶೇ.80 ಮುಸಲ್ಮಾನ, ತಲಾ ಶೇ.8ರಷ್ಟು ರಷ್ಯನ್ನರು ಮತ್ತು ಆರ್ಮೀನರು. ಜನಸಂಖ್ಯೆಯಲ್ಲಿ ಶೇ.52 ಭಾಗ ಗ್ರಾಮೀಣರು. ಜನಸಾಂದ್ರತೆ ಪ್ರತಿ ಚ.ಕಿಮೀಗೆ 94.4 ಜನರು. ಬಾಕು ರಾಜಧಾನಿ, ಮುಖ್ಯನಗರ, ವಾಣಿಜ್ಯ ಮತ್ತು ವಿದ್ಯಾಕೇಂದ್ರ. ಇದರ ಜನಸಂಖ್ಯೆ 1,713,300 (2002) ಇಲ್ಲೊಂದು ವಿಶ್ವವಿದ್ಯಾನಿಲಯವಿದೆ. ಕಚ್ಚಾತೈಲ, ಸ್ವಾಭಾವಿಕ ಅನಿಲ, ರಾಸಾಯನಿಕ ವಸ್ತುಗಳು, ಮತ್ತು ರಫ್ತಾಗುತ್ತವೆ. ರಾಷ್ಟ್ರೀಯ ಆದಾಯದಲ್ಲಿ ಶೇ.80 ಭಾಗ ಹತ್ತಿ ತೈಲ ಉತ್ಪನ್ನಗಳಿಂದ ದೊರೆಯುತ್ತದೆ. ಆಹಾರ ಪದಾರ್ಥ ಮತ್ತು ಯಂತ್ರೋಪಕರಣಗಳು ಆಮದಾಗುತ್ತವೆ. (ಎಸ್.ಎನ್.1.)

**ಅಸಾಧಾರಣ ಮಕ್ಕಳು :** ಮಾನಸಿಕವಾಗಿ ಅಥವಾ ದೈಹಿಕವಾಗಿ ಹುಟ್ಟಿನಿಂದ ಅಥವಾ ಅನಂತರದ ಕಾರಣದಿಂದ ವೈಕಲ್ಯ ಹೊಂದಿದ ಮಕ್ಕಳು, ಅಂದರೆ ಸಾಧಾರಣ ಮಕ್ಕಳಿಗಿಂತ ಮನಸ್ಸು ಮತ್ತು ಅಂಗಗಳಲ್ಲಿ ಭಿನ್ನವಾಗಿರುವವರು (ಟೆಪಿಕಲ್ ಚಿಲ್ಡ್ರನ್ಸ್); ಮಾನಸಿಕ ವೈಕಲ್ಯವಿರುವ ಮಕ್ಕಳಿಗೆ ರೂಢಿಯಲ್ಲಿ ಈ ಹೆಸರಿದೆ. ಬುದ್ಧಿಶಕ್ತಿಯಲ್ಲಿರುವ ವ್ಯತ್ಯಾಸಗಳನ್ನು ಮಾನಸಿಕ ಪರೀಕ್ಷೆಗಳಿಂದ ನಿರ್ಣಯಿಸಬಹುದು. ಸಾಧಾರಣ ಮಕ್ಕಳ ಐ. ಕ್ಯೂ. 100 ಆಗಿದ್ದರೆ ಮಾನಸಿಕ ವೈಕಲ್ಯವಿರುವ ಅಂದರೆ ಅಸಾಧಾರಣ ಮಕ್ಕಳ ಐ. ಕ್ಯೂ. ಎಪ್ಪತ್ತಕ್ಕಿಂತ ಕಡಿಮೆ ಅಥವಾ 140ಕ್ಕಿಂತ ಹೆಚ್ಚು (ಇವರು ಅತಿಬುದ್ಧಿವಂತರು) ಇರುವುದು. ಅಸಾಧಾರಣ ಮಕ್ಕಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. 1. ಐ. ಕ್ಯೂ. 50–70ರವರೆಗೆ ಇರುವ ಮಕ್ಕಳು. ಇವರಿಗೆ ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಲು ಸಾಧ್ಯವಿದೆ. ಇದಕ್ಕಿಂತ ಹೆಚ್ಚು ಮಟ್ಟದ ವಿದ್ಯಾಭ್ಯಾಸ ಸಾಧ್ಯವಾಗದು. ಇವರಿಗೆ ಪ್ರತ್ಯೇಕ ತರಗತಿಗಳಲ್ಲಿ ಶಿಕ್ಷಣವಿತ್ತರೆ ಅವರ ಕಲಿಯುವಿಕೆ ಚೆನ್ನಾಗಿ ಮುಂದುವರಿಯುವುದು. ಇಂಥವರು ಅಕ್ಷರಸ್ಥರಾಗುವರೇ ವಿನಾ ವಿದ್ಯಾವಂತರಾಗಲಾರರು. ಸಮಾಜದಲ್ಲಿ ಸಾಧಾರಣವಾದ ಕೆಲಸಗಳನ್ನು ಮಾಡಿ ತಮ್ಮ ಜೀವನೋಪಾಯವನ್ನು ಗಳಿಸುವರು. 2. ಐ. ಕ್ಯೂ 30–50 ರವರೆಗೆ ಇರುವ ಮಕ್ಕಳು. ಅಕ್ಷರಾಭ್ಯಾಸವನ್ನು ಮಾಡಲು ಸಹ ಸಾಧ್ಯವಿಲ್ಲ. ಇವರಿಗೆ ಪ್ರತ್ಯೇಕ ಶಾಲೆಗಳಲ್ಲಿ ತಕ್ಕ ತರಬೇತನ್ನು ಪಡೆದಿರುವ ಉಪಾಧ್ಯಾಯರ ಮೂಲಕ ಅತಿ ಸುಲಭವಾದ ಕೆಲಸಕಾರ್ಯಗಳನ್ನು ಮಾಡುವುದನ್ನೂ ತಮ್ಮ ನಿತ್ಯ ಕಾರ್ಯಗಳನ್ನು ಮಾಡುವುದನ್ನೂ ಕಲಿಸಬಹುದು. 3. ಐ. ಕ್ಯೂ. 30ಕ್ಕಿಂತ ಕಡಿಮೆ ಇರುವ ಮಕ್ಕಳು. ಇವರಿಗೆ ಏನನ್ನು ಮಾಡಲೂ ಸಾಧ್ಯವಿಲ್ಲ. ಇವರನ್ನು ಪ್ರತ್ಯೇಕ ಸಂಸ್ಥೆಗಳಲ್ಲಿ ಇಟ್ಟು ರಕ್ಷಿಸ ಬೇಕಾಗುವುದು. 4. ಅತಿ ಬುದ್ಧಿವಂತ ಮಕ್ಕಳು (ಐ. ಕ್ಯೂ. 140 ಕ್ಕಿಂತ ಹೆಚ್ಚು). ಇವರಿಗೂ ಪ್ರತ್ಯೇಕವಾದ ತರಬೇತನ್ನು ಕೊಡಬೇಕಾಗುವುದು. ಸಾಧಾರಣ ಶಾಲೆಗಳಲ್ಲಿ ಇವರ ಬುದ್ಧಿಶಕ್ತಿಗೆ ಸಾಕಾಗುವಷ್ಟು ಅವಕಾಶಗಳಿರುವುದಿಲ್ಲ; ಶಿಕ್ಷಣಸೌಲಭ್ಯಗಳೂ ಇರುವುದಿಲ್ಲ.

ಭಾವಜೀವನದಲ್ಲಿ ಸರಿಯಾದ ಬೆಳೆವಣಿಗೆಯನ್ನು ಹೊಂದದಿರುವ ಮಕ್ಕಳು ಅನೇಕ ವರ್ತನಾಸಮಸ್ಯೆಗಳಿಗೆ ತುತ್ತಾಗುವರು. ಮನೆಯಿಂದ ಓಡಿಹೋಗುವುದು, ಅತಿ ಹೆಚ್ಚಾಗಿ ಕೋಪಗೊಳ್ಳುವುದು, ಹೆಬ್ಬೆಟ್ಟನ್ನು ಚೀಪುತ್ತ ಒಂದು ಮೂಲೆಯಲ್ಲಿ ಕುಳಿತುಕೊಳ್ಳುವುದು, ಹಾಸಿಗೆಯಲ್ಲಿ ಮೂತ್ರವಿಸರ್ಜಿಸಿಕೊಳ್ಳುವುದು, ತೊದಲು ಮಾತನ್ನು ಆಡುವುದು ಮುಂತಾದುವು ವರ್ತನಾಸಮಸ್ಯೆಗಳು. ಇವು ಉಂಟಾಗುವುದಕ್ಕೆ ತಂದೆತಾಯಿಗಳೂ, ಕುಟುಂಬದ ವಾತಾವರಣವೂ ಕಾರಣ. ಕೆಲ ತಂದೆ ತಾಯಿಗಳು ಮಕ್ಕಳನ್ನು ಅತಿ ಮುದ್ದಿನಿಂದ ಬೆಳೆಸಿ, ಅವರ ಭಾವಜೀವನದಲ್ಲಿ ವೈಪರೀತ್ಯವನ್ನು ಉಂಟುಮಾಡುವರು. ಹೀಗೆಯೇ ಮಕ್ಕಳನ್ನು ಪ್ರೀತಿಯಿಂದ ನೋಡದೆ ತಿರಸ್ಕರಿಸಿದಾಗಲೂ ಭಾವಜೀವನ ಸರಿಯಾಗಿರುವುದಿಲ್ಲ. ಅಣ್ಣತಮ್ಮಂದಿರಲ್ಲಿ ಅಥವಾ ಅಕ್ಕ ತಂಗಿಯರಲ್ಲಿ ಅತಿ ಹೆಚ್ಚಾದ ದ್ವೇಷ ಭಾವಜೀವನದ

ವೈಪರೀತ್ಯವನ್ನು ಉಂಟುಮಾಡುವುದು. ಮಲತಾಯಿಯ ದ್ವೇಷವೂ ಇಂಥ ವರ್ತನೆಗೆ ಕಾರಣವಾಗಬಹುದು. ಇದರ ಪರಿಣಾಮ ವಿದ್ಯಾಭ್ಯಾಸದ ಮೇಲೂ ಆಗಬಹುದು. ಓದುವುದರಲ್ಲಿ ಉಂಟಾಗುವ ಕಷ್ಟ ಇಂಥ ಭಾವಜೀವನದ ವೈಪರೀತ್ಯದಿಂದ ಉಂಟಾಗಬಹುದು. ತಂದೆ ತಾಯಿಗಳು ಇಂಥ ಮಕ್ಕಳನ್ನು ವರ್ತಾನಾಚಿಕಿತ್ಸಾಲಯಗಳಿಗೆ ಕರೆದುಕೊಂಡು ಹೋಗಿ, ಅವರಿಗೆ ತಕ್ಕ ಚಿಕಿತ್ಸೆಯನ್ನು ಮಾಡಿಸುವುದಲ್ಲದೆ ತಮ್ಮ ವರ್ತನೆಯಲ್ಲೂ ಅಗತ್ಯ ಬದಲಾವಣೆ ಮಾಡಿಕೊಳ್ಳಬೇಕು. ಸಾಮಾಜಿಕ ವರ್ತನೆಯಲ್ಲಿ ವೈಪರೀತ್ಯ ಅಸಾಧಾರಣವರ್ತನೆಗೆ ಕಾರಣವಾಗಬಹುದು. ಮಕ್ಕಳು ಸಾಮಾಜಿಕ ನಿಯಮಗಳನ್ನು ತಿರಸ್ಕರಿಸಿ ಸುಳ್ಳುಹೇಳುವುದು, ಕಳ್ಳತನಮಾಡುವುದು, ಮನೆಯಿಂದ ಓಡಿಹೋಗುವುದು ಮುಂತಾದ ಅಪರಾಧಗಳಲ್ಲಿ ತೊಡಗುವರು. 16–18 ವರ್ಷಗಳಿಗೆ ಮೇಲ್ಪಟ್ಟ ವ್ಯಕ್ತಿಗಳು ಇಂಥ ಕಾರ್ಯಗಳನ್ನು ಮಾಡಿದರೆ ಅವರನ್ನು ಪೋಲೀಸರು ಹಿಡಿದು ನ್ಯಾಯಸ್ಥಾನದ ಮೂಲಕ ಶಿಕ್ಷೆಗೆ ಗುರಿಪಡಿಸುವರು. ಇದೇ ಕಾರ್ಯಗಳನ್ನು 16 ವರ್ಷದೊಳಗಿರುವ ಮಕ್ಕಳು ಮಾಡಿದರೆ, ಅವರ ಶಿಕ್ಷಣ ಸರಿಯಾಗಿಲ್ಲವೆಂದು ಅವರನ್ನು ಪ್ರತ್ಯೇಕ ಶಾಲೆಗಳಿಗೆ ಕಳುಹಿಸಿ ಅವರಿಗೆ ತಕ್ಕ ತರಬೇತನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡುವುದು. ಇಂಥ ಮಕ್ಕಳಿಗೆ ಪ್ರತ್ಯೇಕ ಪೋಲೀಸರನ್ನೂ ನ್ಯಾಯಾಧೀಶರನ್ನೂ ಸಮಾಜ ಸೇವಕರನ್ನೂ ಕೆಲವು ದೇಶಗಳಲ್ಲಿ ನಿಯಮಿಸಿರುವರು. (ಬಿ.ಕೆ.)

**ಅಸಾಹಿ ಶಿಂಭೂನ್ :** ಜಪಾನ್ ದೇಶದ ಅತ್ಯಂತ ಜನಪ್ರಿಯ ಪತ್ರಿಕೆಗಳಲ್ಲೊಂದು. ಅಸಾಹಿ ಶಿಂಭೂನ್ ಎಂದರೆ ಉದಯ ಭಾಸ್ಕರ ಪತ್ರಿಕೆ ಎಂದು ಅರ್ಥ. ವಿಶೇಷ ಲೇಖನ ಪ್ರಕಟಣೆಗಳಲ್ಲಿ, ತಾಂತ್ರಿಕ ಬೆಳವಣಿಗೆಯಲ್ಲಿ ಇದು ಅತ್ಯಂತ ಮಹತ್ತ್ವದ್ದಾಗಿದೆ. ಪಾಶ್ಚಾತ್ಯ ದೇಶಗಳಿಂದ ತರಿಸಿಕೊಳ್ಳುವ ವಸ್ತುಗಳ ಬಗ್ಗೆ ಮಾಹಿತಿನೀಡಲು ಕೆಲವು ವ್ಯಾಪಾರಿಗಳು ಒಸಾಕ ನಗರದಲ್ಲಿ ಈ ಪತ್ರಿಕೆಯನ್ನು ಸ್ಥಾಪಿಸಿದರು (1879). ಕೆಲವು ಕಾಲದ ಮೇಲೆ ರಾಜಕಾರಣವನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಪಣತೊಟ್ಟು ಈ ಪತ್ರಿಕೆಯನ್ನು ಟೋಕಿಯೊ ನಗರಕ್ಕೆ ವರ್ಗಾಯಿಸಲಾಯಿತು.

ಈ ಪತ್ರಿಕೆ ಜಪಾನ್ ದೇಶದ ದಿನಪತ್ರಿಕೆಗಳಲ್ಲೆಲ್ಲ ಅಗ್ರಸ್ಥಾನ ಪಡೆದಿದೆ. ಇದರಲ್ಲಿ ಮುಖ್ಯವಾಗಿ ಪಾಂಡಿತ್ಯಪೂರ್ಣವಾದ ಚರ್ಚೆಗಳ ಪ್ರಕಟಣೆ, ಧಾರಾವಾಹಿ ಕಾದಂಬರಿ, ವಿನೂತನವಾದ ವಿಶೇಷ ಲೇಖನಗಳು, ಓದುಗರಿಗೆ ಸಲಹೆಗಳು, ಗೃಹಕೃತ್ಯಕ್ಕೆ ಸಂಬಂಧಪಟ್ಟ ಬರವಣಿಗೆಗಳು, ವಿಚಾರಾತ್ಮಕವಾದ ಸಂಪಾದಕೀಯ ಲೇಖನಗಳು–ಮುಂತಾದ ಶಿಕ್ಷಣಪ್ರಧಾನವಾದ, ಮನರಂಜನೆಯ, ಗಂಭೀರ ಮನೋಭಾವದ ಲೇಖನಗಳು ಪ್ರಕಟವಾಗುತ್ತವೆ. ಇದರ ಓದುಗರು ಎಲ್ಲ ವರ್ಗಕ್ಕೂ ಸೇರಿದವರಾಗಿದ್ದರೂ ಶ್ರಮಜೀವಿಗಳು, ಗೃಹಿಣಿಯರು ಮತ್ತು ಮಧ್ಯಮವರ್ಗದ ಜನ ಹೆಚ್ಚಾಗಿ ಓದುತ್ತಾರೆ.

ದೇಶದ ಅತ್ಯಂತ ದೊಡ್ಡ ಪತ್ರಿಕಾಲಯವನ್ನು ಹೊಂದಿರುವ ಈ ಪತ್ರಿಕೆಯ ಕಚೇರಿಯಲ್ಲಿ ಎರಡುಸಾವಿರಕ್ಕೂ ಹೆಚ್ಚು ಜನ ಸಂಪಾದಕೀಯ ಶಾಖೆಯಲ್ಲಿ ಕೆಲಸ ಮಾಡುತ್ತಾರೆ.

ಟೋಕಿಯೊ ಮತ್ತು ಇತರ ಕೇಂದ್ರಗಳಿಂದ ಪ್ರಕಟವಾಗುವ ಜಪಾನಿ ಭಾಷೆಯ ಈ ಪತ್ರಿಕೆಗೆ, ಅತ್ಯಂತ ಹೆಚ್ಚಿನ ಪ್ರಸಾರವಿದೆ. ಟೋಕಿಯೊದಿಂದ ಇಂಗ್ಲಿಷ್ ಭಾಷೆಯಲ್ಲೂ ಪ್ರಕಟವಾಗುತ್ತದೆ. ಪ್ರಪಂಚದಾದ್ಯಂತ ಬಾತ್ಮೀದಾರರನ್ನು ಹೊಂದಿದೆ. ಜೊತೆಗೆ 20 ಅಂತಾರಾಷ್ಟ್ರೀಯ ಸುದ್ದಿಸಂಸ್ಥೆಗಳಿಂದಲೂ ಸುದ್ದಿ ಪಡೆಯುತ್ತದೆ. ಅಂತಾರಾಷ್ಟ್ರೀಯ ಸುದ್ದಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತದೆ. ಪತ್ರಿಕೆಗಳನ್ನು ಹಂಚಲು ಅನೇಕ ವಿಮಾನಗಳನ್ನೂ ಹೆಲಿಕಾಪ್ಟರುಗಳನ್ನೂ ಬಳಸಲಾಗುತ್ತದೆ.

ವ್ಯಾಪಾರೋದ್ದೇಶಗಳಿಗಾಗಿ ಪ್ರಾರಂಭವಾಗಿ, ರಾಜಕೀಯ ಕ್ಷೇತ್ರಕ್ಕಿಳಿದು, ಸರ್ಕಾರದ ಟೀಕಾಕಾರನಾಗಿ, ಕೆಲಕಾಲ ತಾಟಸ್ಥ್ಯದಿಂದಿದ್ದ ಈ ಪತ್ರಿಕೆ ಈಗ ಸ್ವತಂತ್ರ ಧೋರಣೆಯ, ಗಂಭೀರ ಸ್ವಭಾವದ, ಜನಪ್ರಿಯ ಪತ್ರಿಕೆಯಾಗಿದೆ. (ಎನ್.ಕೆ.)

**ಅಸಿಕ್ನಿ :** ದಕ್ಷಬ್ರಹ್ಮನ ಹೆಂಡತಿ. ವೀರಿಣಿ ಎಂದೂ ಹೆಸರು. ಅಘಮರ್ಷಣ ತೀರ್ಥದಲ್ಲಿ ತಪಶ್ಚರ್ಯೆಯಲ್ಲಿದ್ದಾಗ ಈಕೆಯನ್ನು ವಿಷ್ಣುವಿನ ನೆರವಿನಿಂದ ಮದುವೆಯಾದ. ಈಕೆಯ ತಂದೆ ಪಂಚಜನಬ್ರಹ್ಮ. 62 ಜನ ಮಕ್ಕಳು. ಹರ್ಯಶ್ವ, ಶಬಲಾಶ್ವ ಮುಖ್ಯರು. (ಎಸ್.ಕೆ.ಆರ್.)

**ಅಸಿಟನಿಲೈಡ್ :** ರಾಸಾಯನಿಕ ಆಂಟಿಫೆಬ್ರಿನ್ (ಜ್ವರಹಾರಿ). ಅನಿಲೀನಿನೊಂದಿಗೆ ಗ್ಲೇಸಿಯಲ್ ಅಸಿಟಿಕ್ಆಮ್ಲ ವರ್ತಿಸಿದಾಗ ಬರುವ ಉತ್ಪನ್ನ. 1886ರಲ್ಲಿ ತಯಾರಾಗಿ, 75 ವರ್ಷಗಳ ಕಾಲ ಜ್ವರಹಾರಿ, ನೋವಳಿಕವಾಗಿ ಹಲವಾರು ಪೇಟೆ ಮದ್ದುಗಳಲ್ಲಿ ಬಳಕೆಯಲ್ಲಿತ್ತು. ಜ್ವರವನ್ನು ಇಳಿಸುವುದೇ ಹೊರತು ಇದು ಜ್ವರದ ಕಾರಣವನ್ನು ಕಳೆಯದು. ಕರುಳಿನ ಹುಳುಗಳನ್ನು ಕಳೆಯಲು ನ್ಯಾಫ್ಥಲೀನ್ ಕೊಡಲೋಸುಗ, ಗೊತ್ತಿರದೆ ಕೈತಪ್ಪಾಗಿ ಅಸಿಟನಿಲೈಡನ್ನು ಜ್ವರವಿದ್ದ ರೋಗಿಗೆ ಕೊಟ್ಟಾಗ, ಅವನ ಜ್ವರ ಇಳಿದುದು ಸೋಜಿಗವೆನಿಸಿತ್ತು. ಇದರ ಸೇವನೆಯಿಂದ ಮೈಯಲ್ಲಿ ತುಸುಪಾಲು ವಿಷಕರವಾದ ಅನಿಲೀನಾಗುವುದರಿಂದ ಇದು ಒಳ್ಳೆಯದಲ್ಲ. ಮೇಲಿಂದ ಮೇಲೆ ಸೇವಿಸುತ್ತಿದ್ದಲ್ಲಿ ಆಕ್ಸಿಜನ್ ಹೊರುವ ಬಲ ರಕ್ತದಲ್ಲಿ ಕುಂದಿ ಓಕರಿಕೆ, ವಾಂತಿ, ಕುಟ್ಟುಸಿರು, ಜವಗುಂಡಿಗೆ, ಕಡುಬೆವರಿಕೆ ಉಂಟಾಗಿ ತುಟಿ ಉಗುರು ಮೈ ನೀಲಿಗಟ್ಟಿ ಸುಸ್ತಾಗಿ ಬೀಳಿಸುವುದು. ಈ ಮದ್ದಿಗೆ ಒಗ್ಗದವರಲ್ಲಿ ತುರುಚೆದದ್ದು (ಅರ್ಟಿಕೇರಿಯ). ಜ್ವರಗಳಂಥ ತೊಂದರೆ ಆಗಬಹುದು. ಆದ್ದರಿಂದ ಆ್ಯಸ್ಪಿರಿನ್ನಿಗಿಂತಲೂ ಚೆನ್ನಾಗಿ ನೋವು ಕಳೆವಂತಿದ್ದರೂ, ಇದರ ಬಳಕೆ ಒಳ್ಳೆಯದಲ್ಲ. ಇದನ್ನೀಗ ನೋವು ಕಳೆವ ಫಿನಸೆಟಿನ್ನಿನ ಇನ್ನೂ ವಿಷಕರ ಮದ್ದೆಂದು ಗಣಿಸಬಹುದು. ಬಿಳಿಯ ಹರಳುಗಳು ಇಲ್ಲವೇ ಪುಡಿಯಾಗಿರುವ ಅಸಿಟನಿಲೈಡಿನ ರಾಸಾಯನಿಕ ಸೂತ್ರಸಂಕೇತ $C_6H_5.NH.CO.CH_3$. $115^0$ ಸೆಂ. ಮಟ್ಟದಲ್ಲಿ ಕರಗಿ $305°$ ಸೆಂ. ಮಟ್ಟದಲ್ಲಿ ಕುದಿಯುತ್ತದೆ. ನೀರು, ಈಥರ್,ಮದ್ಯಸಾರಗಳಲ್ಲಿ ಕರಗುವುದು. (ಡಿ.ಎಸ್.ಎಸ್.)

**ಅಸಿಟಲೀನ್ :** ಒಂದು ಹೈಡ್ರೊಕಾರ್ಬನ್. ತ್ರಿಬಂಧಗಳಿರುವ (ಟ್ರಿಪಲ್ ಬಾಂಡ್) ಅಪರ್ಯಾಪ್ತ (ಅನ್‍ಸ್ಯಾಚುರೇಟೆಡ್) ಹೈಡ್ರೊಕಾರ್ಬನ್‍ಗಳಲ್ಲಿ ಅತ್ಯಂತ ವಿರಳ ಹೈಡ್ರೊಕಾರ್ಬನ್. ಅಣುಸೂತ್ರ $C_2H_2$. ಅಣುರಚನೆ CH≡CH. ಇದು ಬಣ್ಣವಿಲ್ಲದ ಅನಿಲ. ಸಾಂದ್ರತೆ ಗಾಳಿಗಿಂತ ಸ್ವಲ್ಪ ಮಾತ್ರ ಕಡಿಮೆ. ಶುದ್ಧ ಅಸಿಟಲೀನ್‍ಗೆ ಒಂದು ಲಘು ಮತ್ತು ವಿಶಿಷ್ಟ ವಾಸನೆ ಇದೆ. ಆದರೆ ಸಾಮಾನ್ಯವಾಗಿ ಅದನ್ನು ಕ್ಯಾಲ್ಸಿಯಂ ಕಾರ್ಬೈಡಿನಿಂದ ತಯಾರಿಸುವಾಗ ಅದರೊಂದಿಗೆ ಫಾಸ್ಫೀನ್, ಮೊದಲಾದ ಕಲ್ಮಷಗಳಿರುವುದರಿಂದ ಅದರ ವಾಸನೆ ಬಹು ಕೆಟ್ಟದಾಗಿರುವುದು. ನೀರಿನಲ್ಲಿ ಅಸಿಟಲೀನ್ ಸ್ವಲ್ಪಮಟ್ಟಿಗೆ ವಿಲೀನವಾಗುವುದು. ಆದರೆ ಅಸಿಟೋನ್‍ನಲ್ಲಿ ಬಹುವಾಗಿ ವಿಲೀನವಾಗುವುದು. ಸಾಮಾನ್ಯ ಉಷ್ಣತೆಯಲ್ಲಿ ಹನ್ನೆರಡು ವಾಯುಭಾರ ಸಂಮರ್ದ ಹಾಕಿದರೆ ಒಂದು ಮಿಲಿಲೀಟರ್ ಅಸಿಟೋನ್‍ನಲ್ಲಿ ಮುನ್ನೂರು ಮಿಲಿಲೀಟರ್ ಅಸಿಟಲೀನ್ ವಿಲೀನವಾಗುವುದು.

ವಾಣಿಜ್ಯ ಉದ್ದೇಶಗಳಿಗಾಗಿ ಅಸಿಟಲೀನನ್ನು ಸಿಲಿಂಡರುಗಳಲ್ಲಿ ತುಂಬಿ ಮಾರುವರು. ಆದರೆ ಅಧಿಕಸಂಮರ್ದದಲ್ಲಿ ಅದು ದ್ರವೀಕೃತವಾಗುವುದರಿಂದಲೂ ದ್ರವ ಅಸಿಟಲೀನ್ ಆಸ್ಫೋಟಿಸುವ ಸಂಭವ ಹೆಚ್ಚಾಗಿರುವುದರಿಂದಲೂ ಅಸಿಟಲೀನನ್ನು ಅಸಿಟೋನ್ ದ್ರವದಲ್ಲಿ ವಿಲೀನಗೊಳಿಸಿ ಆ ದ್ರಾವಣವನ್ನು ಸಿಲಿಂಡರುಗಳಲ್ಲಿ ತುಂಬಿ ಮಾರುಕಟ್ಟೆಗೆ ಕಳಿಸುತ್ತಾರೆ.

1892ರಲ್ಲಿ ಮೋರ್‌ಹೆಡ್ ಮತ್ತು ವಿಲ್ಸನ್‍ರವರು ವಿದ್ಯುತ್ಕುಲುಮೆಯಲ್ಲಿ ಕ್ಯಾಲ್ಸಿಯಂ ಕಾರ್ಬೈಡನ್ನು ತಯಾರಿಸುವುದನ್ನು ಕಂಡುಹಿಡಿದಂದಿನಿಂದ ಅಸಿಟಲೀನಿನ ಔದ್ಯೋಗಿಕ ಬಳಕೆಗೆ ಹೆಚ್ಚಿನ ಪ್ರೋದನೆ ಸಿಕ್ಕಿದೆ. ಕ್ಯಾಲ್ಸಿಯಂ ಕಾರ್ಬೈಡಿನ ಮೇಲೆ ನೀರಿನ ವರ್ತನೆಯಿಂದ ಅಸಿಟಲೀನ್ ಉತ್ಪತ್ತಿಯಾಗುತ್ತದೆ.

$$CaC_2+2H_2O \rightarrow Ca(OH)_2+C_2H_2$$

ಅಸಿಟಲೀನ್ ತಯಾರಿಕೆಗೆ ಬಳಸುತ್ತಿರುವ ವಿಧಾನಗಳಲ್ಲಿ ಈಗಲೂ ಈ ವಿಧಾನವೇ ಹೆಚ್ಚು ಬಳಕೆಯಲ್ಲಿದೆ. ಬಗೆಬಗೆಯ ಅಸಿಟಲೀನ್ ಉತ್ಪಾದಕ ಉಪಕರಣಗಳು ಬಳಕೆಯಲ್ಲಿವೆ. ಒಂದು ಬಗೆಯ ಉಪಕರಣದಲ್ಲಿ ಕ್ಯಾಲ್ಸಿಯಂ ಕಾರ್ಬೈಡನ್ನು ಒಬ್ಬೆ ಒಬ್ಬೆಯಾಗಿ ನೀರಿನ ತೊಟ್ಟಿಗೆ ಬೀಳಿಸುವ ವ್ಯವಸ್ಥೆಯಿದೆ. ಇನ್ನೊಂದು ಬಗೆಯ ಉತ್ಪಾದಕ ವಿಧಾನದಲ್ಲಿ ದೊಡ್ಡ ಪಾತ್ರೆಯಲ್ಲಿರುವ ಕ್ಯಾಲ್ಸಿಯಂ ಕಾರ್ಬೈಡಿಗೆ ನೀರನ್ನು ನಿಯಂತ್ರಿಸಿ ತೊಟ್ಟಿಕ್ಕಿಸುವ ವ್ಯವಸ್ಥೆಯಿದೆ. ಈ ಎರಡನೆಯ ಬಗೆಯಲ್ಲಿ ಅಸಿಟಲೀನ್ ಉತ್ಪಾದನೆಯ ದರವನ್ನು ನಿಯಂತ್ರಿಸುವುದು ಸುಲಭ. ಆದರೆ ಕ್ಯಾಲ್ಸಿಯಂ ಕಾರ್ಬೈಡ್ ರಾಶಿಯಲ್ಲಿ ಸ್ಥಳೀಯವಾಗಿ ರಾಸಾಯನಿಕಕ್ರಿಯೆಯಿಂದ ಅಧಿಕ ಉಷ್ಣ ಉತ್ಪತ್ತಿಮಾಡುವುದು ಅನಪೇಕ್ಷಣೀಯವೆಂದು ಗಣಿಸಲಾಗಿದೆ. ಮತ್ತೊಂದು ಬಗೆಯ ಉತ್ಪಾದಕ ವಿಧಾನದಲ್ಲಿ ಕ್ಯಾಲ್ಸಿಯಂ ಕಾರ್ಬೈಡ್ ಮತ್ತು ನೀರುಗಳೆರಡರ ಮೊತ್ತಗಳನ್ನೂ ನಿಯಂತ್ರಿಸಿ ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಬದಲು ಕ್ಯಾಲ್ಸಿಯಂ ಆಕ್ಸೈಡ್ ಉತ್ಪತ್ತಿಯಾಗುವಂತೆ ಮಾಡುತ್ತಾರೆ.

$$CaC_2+H_2O \rightarrow CaO+C_2H_2$$

ಶುಷ್ಕ ವಿಧಾನವೆಂದು ಕರೆಸಿಕೊಳ್ಳುವ ಈ ವಿಧಾನದಲ್ಲಿ ಉತ್ಪತ್ತಿಯಾಗುವ ಕ್ಯಾಲ್ಸಿಯಂ ಆಕ್ಸೈಡನ್ನು ಪುನಃ ಕ್ಯಾಲ್ಸಿಯಂ ಕಾರ್ಬೈಡು ತಯಾರಿಕೆಗೆ ಉಪಯೋಗಿಸಬಹುದು.

ಕ್ಯಾಲ್ಸಿಯಂ ಕಾರ್ಬೈಡು ವಿಧಾನವೇ ಈಗಲೂ ಅತ್ಯಂತ ಹೆಚ್ಚಾಗಿ ಬಳಕೆಯಲ್ಲಿರುವುದಾದರೂ ನೈಸರ್ಗಿಕ ಅನಿಲಗಳಿಂದ ಅಸಿಟಲೀನ್ ತಯಾರಿಸುವ ವಿಧಾನಗಳು ಈಚೆಗೆ ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿವೆ.

ಪೆಟ್ರೋಲಿಯಂ ಮತ್ತು ನಿಸರ್ಗಾನಿಲಗಳಲ್ಲಿ ದೊರಕುವ ಹೈಡ್ರೊಕಾರ್ಬನ್ನುಗಳನ್ನು ವಿದ್ಯುಚ್ಚಾಪದ (ಎಲೆಕ್ಟ್ರಿಕ್ ಆರ್ಕ್) ಸಹಾಯದಿಂದ ಇಲ್ಲವೆ ಅಧಿಕ ಉಷ್ಣತೆಯಿಂದ ವಿಭಜಿಸಿ ಅಸಿಟಲೀನ್ ಒಳಗೊಂಡ ಅನಿಲ ಮಿಶ್ರಣಗಳನ್ನು ಉತ್ಪತ್ತಿ ಮಾಡಿ ಆ ಮಿಶ್ರಣದಿಂದ ಅಸಿಟಲೀನ್ ಬೇರ್ಪಡಿಸಿ ಶುದ್ಧೀಕರಿಸುವ ಹಲವಾರು ವಿಧಾನಗಳು ಬಳಕೆಗೆ ಬರುತ್ತಿವೆ. ಒಂದು ವಿಧಾನದಲ್ಲಿ ಮೀಥೇನ್ ಅನಿಲದ ಅಪೂರ್ಣದಹನದಿಂದ ಅಸಿಟಲೀನ್ ತಯಾರಿಸುತ್ತಾರೆ.

ರಾಸಾಯನಿಕ ಉದ್ಯಮಗಳಲ್ಲಿ ಬಳಕೆ : ಸಾರಗುಂದಿಸಿದ ಸಲ್ಫ್ಯೂರಿಕ್ ಆಮ್ಲದ ದ್ರಾವಣದಲ್ಲಿ ಮರ್ಕ್ಯುರಿಕ್ ಸಲ್ಫೇಟನ್ನು ವೇಗವರ್ಧಕವಾಗಿ ಉಪಯೋಗಿಸಿದಾಗ ಅಸಿಟಲೀನ್ ನೀರಿನೊಂದಿಗೆ ವರ್ತಿಸಿ ಅಸಿಟಾಲ್ಡಿಹೈಡ್ ಕೊಡುತ್ತದೆ.

$$CH \equiv CH+H_2O \rightarrow CH_3.CHO$$

ಅಸಿಟಾಲ್ಡಿಹೈಡ್ ಉಪಯೋಗಿಸಿ ಅಸಿಟಿಕ್‌ಆಮ್ಲ, ಈಥೈಲ್ ಅಸಿಟೇಟ್, ಅಸಿಟೋನ್ ಮುಂತಾಗಿ ಹಲವಾರು ಮುಖ್ಯ ಸಾವಯವ ರಾಸಾಯನಿಕಗಳನ್ನು ತಯಾರಿಸಬಹುದು.

ಕ್ಲೋರೀನ್ ವರ್ತನೆಯಿಂದ ಅಸಿಟಲೀನನ್ನು ಅಸಿಟಲೀನ್ ಟೆಟ್ರಕ್ಲೋರೈಡ್ ಆಗಿ ಪರಿವರ್ತಿಸಬಹುದು.

$CH{\equiv}CH+2Cl_2 \rightarrow CHCl_2.\ CHCl_2.$

ಇದು ಅತ್ಯಂತ ಉಪಯುಕ್ತ ಸಾವಯವ ದ್ರಾವಣ.

ಕೆಲವು ತಾಮ್ರದ ಲವಣಗಳನ್ನು ವೇಗವರ್ಧಕಗಳಾಗಿ ಉಪಯೋಗಿಸಿ ಅಸಿಟಲೀನನ್ನು ವಿನೈಲ್ ಅಸಿಟಲೀನ್ ಆಗಿ ಪರಿವರ್ತಿಸಬಹುದು. ಈ ಸಂಯುಕ್ತ ಹೈಡ್ರೊಜನ್ ಕ್ಲೋರೈಡಿನೊಂದಿಗೆ ವರ್ತಿಸಿ ಕ್ಲೋರೋಪ್ರೀನ್ ಕೊಡುತ್ತದೆ.

$2CH{\equiv}CH \rightarrow CH_2 = CH{-}C{\equiv}CH$

$CH_2{=}\ CH{-}C{\equiv}CH{+}HCl \rightarrow CH_2\ {=}CH{-}HCl{=}\ CH_2$

ಕೃತಕ ರಬ್ಬರ್ ತಯಾರಿಕೆಯಲ್ಲಿ ಕ್ಲೋರೋಪ್ರೀನನ್ನು ವಿಶೇಷವಾಗಿ ಬಳಸುತ್ತಾರೆ.

ಅಲ್ಲದೆ ಅಸಿಟಲೀನ್ ಮತ್ತು ಹೈಡ್ರೊಜನ್ ಕ್ಲೋರೈಡುಗಳ ವರ್ತನೆಯಿಂದ ವಿನೈಲ್ ಕ್ಲೋರೈಡನ್ನೂ ಅಸಿಟಲೀನ್ ಮತ್ತು ಅಸಿಟಿಕ್ ಆಮ್ಲಗಳ ವರ್ತನೆಯಿಂದ ವಿನೈಲ್ ಅಸಿಟೇಟನ್ನೂ ತಯಾರಿಸುತ್ತಾರೆ. ಈ ಎರಡು ಸಂಯುಕ್ತಗಳು ಪ್ಲಾಸ್ಟಿಕ್‌ಗಳ ತಯಾರಿಕೆಯಲ್ಲಿ ಅತ್ಯಂತ ಉಪಯುಕ್ತವಾದುವು.

$CH{\equiv}CH{+}HCl \rightarrow CH_2{=}CHCl$

$CH{\equiv}CH{+}CH_3\ .COOH \rightarrow CH_2{=}CH{-}OOC{-}CH_3$

ಮೇಲೆ ಹೇಳಿದ ಸಂಯುಕ್ತಗಳೇ ಅಲ್ಲದೆ ಬ್ಯೂಟಡಯೀನ್, ಪ್ರೊಪಾರ್ಜಿಲ್ ಆಲ್ಕೋಹಾಲ್, ಅಲೈಲ್ ಆಲ್ಕೋಹಾಲ್, ವಿನೈಲ್ ಅಮೀನ್‌ಗಳು, ವಿನೈಲ್ ಫೀನಾಲ್‌ಗಳು– ಇವು ಅಸಿಟಲೀನ್‌ನಿಂದ ತಯಾರಿಸುವ ಇತರ ಕೆಲವು ಉಪಯುಕ್ತ ರಾಸಾಯನಿಕ ಸಂಯುಕ್ತಗಳು.

**ಅಸಿಟಲೀನ್ ದೀಪ :** ಅಸಿಟಲೀನನ್ನು ಗಾಳಿಯಲ್ಲಿ ಉರಿಸಿದಾಗ ಅತ್ಯಂತ ಪ್ರಕಾಶಮಾನವಾದ ಬೆಳಕು ಬರುತ್ತದೆ. ಈ ಗುಣವನ್ನುಪಯೋಗಿಸಿಕೊಂಡು, ವಿಶೇಷರೀತಿಯಲ್ಲಿ ತಯಾರಿಸಿದ ಅಸಿಟಲೀನ್ ದೀಪಗಳನ್ನು ನಿರ್ಮಿಸಿದ್ದಾರೆ. ಈಗ ವಿದ್ಯುದ್ದೀಪಗಳು ವಿಶೇಷವಾಗಿ ಬಳಕೆಗೆ ಬಂದಿರುವುದರಿಂದ ಅಸಿಟಲೀನ್ ದೀಪಗಳು ಹಿಂದೆ ಬಿದ್ದಿವೆ. ಆದರೂ ಜರೂರು ಸಂದರ್ಭಗಳಲ್ಲಿ ಮತ್ತು ಸ್ಥಳದಿಂದ ಸ್ಥಳಕ್ಕೆ ಸುಲಭವಾಗಿ ಒಯ್ಯಬಹುದಾದಂಥ ದೀಪಗಳು ಬೇಕಾದಾಗ ಈಗಲೂ ಅಸಿಟಲೀನ್ ದೀಪವೇ ಜನಪ್ರಿಯವಾಗಿದೆ, ಕ್ಯಾಲ್ಸಿಯಂ ಕಾರ್ಬೈಡ್ ಮೇಲೆ ನೀರನ್ನು ತೊಟ್ಟಿಕ್ಕಿಸುವ ಪುಟ್ಟ ಅಸಿಟಲೀನ್ ಉತ್ಪಾದಕದೊಂದಿಗೆ ಅದನ್ನು ಉರಿಸುವ ಉಪಕರಣವನ್ನೂ ಸೇರಿಸಿ ಅಡಕವಾಗಿರುವ ಅಸಿಟಲೀನ್ ದೀಪಗಳನ್ನು ತಯಾರಿಸುತ್ತಾರೆ.

ಆಕ್ಸಿಜನ್ನಿನಲ್ಲಿ ಅಸಿಟಲೀನ್ ದಹಿಸಿದಾಗ ಒಂದು ಮಿಲಿಲೀಟರ್ ಅಸಿಟಲೀನ್‌ಗೆ 192.3 ಕ್ಯಾಲೊರಿಯಷ್ಟು ಉಷ್ಣ ಉತ್ಪತ್ತಿಯಾಗುತ್ತದೆ. ಇದನ್ನು ಉಪಯೋಗಿಸಿಕೊಂಡು ಆಕ್ಸಿ–ಅಸಿಟಲೀನ್ ಜ್ವಾಲೆ ಎಂಬ ಸು. 3300 ಸೆಂ. ಗ್ರೇ. ಉಷ್ಣತೆಯ ಜ್ವಾಲೆಯನ್ನು ಉತ್ಪತ್ತಿ ಮಾಡಬಹುದು. ಈ ಜ್ವಾಲೆಯನ್ನು ಲೋಹಗಳನ್ನು ಬೆಸೆಯಲು, ಕತ್ತರಿಸಲು ಉಪಯೋಗಿಸುತ್ತಾರೆ. (ಜಿ.ಆರ್.ಎಲ್.)

**ಅಸಿಟಾಲ್‌ಗಳು :** ಅಸಿಟಾಲ್‌ಗಳು ಆಲ್ಡಿಹೈಡ್‌ಗಳಿಂದ ( R-CHO) ಉತ್ಪತ್ತಿಯಾದ ರಾಸಾಯನಿಕ ಸಂಯುಕ್ತಗಳು. ಅವುಗಳ ಸಾಮಾನ್ಯ ಸೂತ್ರ



ಸೂತ್ರದಲ್ಲಿ $R, R_1$ ಮತ್ತು $R_2$ ಎಂಬುವು ಆಲ್ಕೈಲ್ ರ್‍ಯಾಡಿಕಲ್‌ಗಳು. ಶುಷ್ಕ ಆಮ್ಲ ಅಥವಾ ಲವಣಗಳ ಸಂಪರ್ಕದಲ್ಲಿ ಆಲ್ಡಿಹೈಡುಗಳು ಆಲ್ಕೊಹಾಲಿನೊಡನೆ ವರ್ತಿಸಿ ಮೊದಲು ಹೆಮಿ ಅಸಿಟಾಲನ್ನು ಆಮೇಲೆ ಅಸಿಟಾಲನ್ನು ಕೊಡುತ್ತವೆ.



ಪಾದರಸದ ಸಂಯುಕ್ತಗಳ ಸಂಪರ್ಕದಲ್ಲಿ ಆಲ್ಕೊ ಹಾಲುಗಳು ಅಸಿಟಲೀನ್‌ನೊಡನೆ ಸಂಯೋಜಿಸಿದಾಗ ಅಸಿಟಾಲ್ ಉತ್ಪತ್ತಿಯಾಗುವುದು. ಆಲ್ಕೋಹಾಲ್‌ಗಳನ್ನು ಉತ್ಕರ್ಷಿಸಿದಾಗಲೂ, ಆಲ್ಕೋಹಾಲ್ ಮತ್ತು ಉತ್ಪತ್ತಿಯಾದ ಆಲ್ಡಿಹೈಡ್ ಕೂಡಿ ಅಸಿಟಾಲ್ ಉತ್ಪತ್ತಿಯಾಗುವುದು. ದುರ್ಬಲ ಆಮ್ಲೀಯ ಅಮೋನಿಯಂ ನೈಟ್ರೇಟ್ ಸಂಯುಕ್ತದ ಸಂಪರ್ಕದಲ್ಲಿ ಶುಷ್ಕ ಈಥೈಲ್ ಆರ್ಥೋಫಾರ್ಮೇಟ್ (I) ಶುಷ್ಕ ಅಕ್ರೊಲೀನ್ (II) ನೊಡನೆ ವರ್ತಿಸಿ ಅಕ್ರೊಲೀನ್ ಡೈ ಈಥೈಲ್ ಅಸಿಟಾಲ್ ಶೇ.73 ರಷ್ಟು ಉತ್ಪತ್ತಿಯಾಗುತ್ತದೆ. ಶುಷ್ಕ ಆಮ್ಲದ ಸಂಪರ್ಕದಲ್ಲಿ ಆಲ್ಡಿಹೈಡ್ (R-CHO) ಗ್ಲೈಕಾಲ್‌ನೊಡನೆ ವರ್ತಿಸಿ ಸೈಕ್ಲಿಕ್ ಅಸಿಟಾಲ್ ಉತ್ಪತ್ತಿಯಾಗುವುದು.



(R-CHo) ಗ್ಲೈಕಾಲ್‌ನೊಡನೆ ವರ್ತಿಸಿ ಸೈಕ್ಲಿಕ್ ಅಸಿಟಾಲ್ ಉತ್ಪತ್ತಿಯಾಗುವುದು



ಬೆಂಜಾಲ್ಡಿಹೈಡ್ (IV) ಮತ್ತು ಗ್ಲಿಸರೀನ್ (III) ಇವುಗಳ ಮಿಶ್ರಣವನ್ನು ಕಾಯಿಸಿದರೆ ಅಥವಾ ಮಿಶ್ರಣವನ್ನು ತಂಪುಮಾಡಿ ಶುಷ್ಕ ಹೈಡ್ರೊಜನ್ ಕ್ಲೋರೈಡ್‌ನೊಡನೆ ವರ್ತಿಸುವಂತೆ ಮಾಡಿದರೆ ಅಸಿಟಾಲ್ ತರಹ ಸಂಯುಕ್ತ (V) ಉಂಟಾಗುವುದು. ಇದರಿಂದ ಗ್ಲಿಸರೀನ್ ಅಣುವಿನಲ್ಲಿರುವ $\alpha, \alpha^1$ ಹೈಡ್ರಾಕ್ಸಿಲ್ ರ್‍ಯಾಡಿಕಲ್‌ಗಳಿಗೆ ರಕ್ಷಣೆ ನೀಡಿ $\beta$– ಹೈಡ್ರಾಕ್ಸಿಲ್ ರ್‍ಯಾಡಿಕಲ್‌ನಿಂದ ಎಸ್ಟರನ್ನು ಪಡೆಯಬಹುದು.



III IV V

ನೀರಿನಲ್ಲಿ ವಿಲೀನವಾಗದ, ಆವಿಯಾಗುವ ಅಸಿಟಾಲ್ ದ್ರವ ಕ್ಷಾರಗಳ ಸಂಪರ್ಕದಲ್ಲಿ ಸ್ಥಿರವಾಗಿರುವುದು. ಅಂದರೆ ಯಾವ ಬದಲಾವಣೆಯೂ ಆಗುವುದಿಲ್ಲ.

ಆಲ್ಡಿಹೈಡ್ ಸಂಯಕ್ತದಲ್ಲಿ ಎರಡು ಅಥವಾ ಮೂರು ಪಟುವಾದ ಗುಂಪುಗಳಿದ್ದರೆ ಆಲ್ಡಿಹೈಡ್ (–CHO) ಗುಂಪನ್ನು ಅಸಿಟಾಲನ್ನಾಗಿ ಪರಿವರ್ತಿಸುವುದರಿಂದ ಬೇರೆ ಬೇರೆ ರಾಸಾಯನಿಕ ಕ್ರಿಯೆಗಳಲ್ಲಿ ಅಸಿಟಾಲ್ ರಕ್ಷಣಾ ಕವಚದಲ್ಲಿ ಆಲ್ಡಿಹೈಡ್ ಗುಂಪು ಸುರಕ್ಷಿತವಾಗಿರುವುದು. (ಜ.ವಿ.ಸಿ.)

**ಅಸಿಟಿಕ್ ಆಮ್ಲ :** ಇಥನೋಯಿಕ್ ಆಮ್ಲವೆಂಬ ಹೆಸರಿನಿಂದಲೂ ಪರಿಚಿತವಿರುವ ಇದು ಫ್ಯಾಟಿ ಆಮ್ಲಗಳ ಗುಂಪಿಗೆ ಸೇರಿದೆ. ಈ ಆಮ್ಲ ಪೂರ್ವಿಕರಿಗೆ ಗೊತ್ತಿತ್ತು. ಹಿಂದೆ ರೋಮ್ ನಗರದಲ್ಲಿ ಮುತ್ತುಗಳನ್ನು ವಿನೆಗರ್‌ನಲ್ಲಿ (ದುರ್ಬಲ ಅಸಿಟಿಕ್ ಆಮ್ಲ) ವಿಲೀನಗೊಳಿಸಿ ಅದನ್ನು ಸೇವಿಸಿ ಕ್ಲಿಯೋಪಾತ್ರ ಸಂತೋಷಪಡುತ್ತಿದ್ದಳೆಂದು ಪ್ಲಿನಿ ಬರೆವಣಿಗೆಯಿಂದ ತಿಳಿದುಬರುವುದು. ಕೆಟ್ಟುಹೋದ ದ್ರಾಕ್ಷಾರಸದ ಉತ್ಕರ್ಷಣದಿಂದ ಈ ಆಮ್ಲವನ್ನು ಪಡೆಯುವುದು ಅವರಿಗೆ ಗೊತ್ತಿತ್ತು. ದ್ರಾಕ್ಷಾರಸದ ಉತ್ಕರ್ಷಣದಿಂದ ಉಂಟಾದ ಆಮ್ಲ ದುರ್ಬಲವಾಗಿಯೂ ಲವಣಗಳಿಂದ ಕೂಡಿರುವ ಕೆಂಪು ದ್ರವವಾಗಿಯೂ ಇರುತ್ತಿತ್ತು. ಈ ಅಶುದ್ಧ ಆಮ್ಲವನ್ನು ವಿನೆಗರ್ ಎಂದು ಕರೆಯುತ್ತಿದ್ದರು. ವಿನೆಗರ್‌ನಲ್ಲಿ ಶೇ.6–10 ಅಸಿಟಿಕ್ ಆಮ್ಲವಿರುವುದು. ಈ ಆಮ್ಲ ಹಾಗೆಯೇ n––ಹೆಕ್ಸೈಲ್ ಮತ್ತು n––ಆಕ್ಟೈಲ್ ಆಲ್ಕೋಹಾಲುಗಳು ಎಸ್ಟರ್ ರೂಪದಲ್ಲಿ ಹೆರಾಕ್ಲಿಯಮ್ ಜೈಗಾಂಟಿಯಮ್ ಮತ್ತು ಹೆರಾಕ್ಲಿಯಮ್ ಸ್ಪೊಂಡೈಲಿಯಮ್ ಗಿಡಗಳ ಬೀಜ ಮತ್ತು ಹಣ್ಣುಗಳಲ್ಲಿ ಕ್ರಮವಾಗಿ ಇರುವುದೆಂದು ತಿಳಿದುಬಂದಿದೆ. ಬೆವರಿನಲ್ಲಿಯೂ ಇದು ಲೇಶ ಇದೆ. 18ನೆಯ ಶತಮಾನದ ಅಂತ್ಯದಲ್ಲಿ ಎ. ಎಲ್. ಲೆವಾಯಿಸಿಯರ್ ಆಲ್ಕೋಹಾಲಿನಿಂದ ವಿನೆಗರ್‌ಅನ್ನು ತಯಾರಿಸುವುದಕ್ಕೆ ಗಾಳಿ ಅತ್ಯವಶ್ಯವೆಂದು ತೋರಿಸಿದ. ಜೆ. ಬಿ. ಎ. ಡ್ಯೂಮಾಸ್ ಎಂಬಾತ 1830ರಲ್ಲಿ ಅಸಿಟಿಕ್‌ಆಮ್ಲವನ್ನು ಟ್ರೈಕ್ಲೋರೊ ಅಸಿಟಿಕ್ ಆಮ್ಲವನ್ನಾಗಿ ಪರಿವರ್ತಿಸಿದ. ಮೆಲ್‌ಸೆನ್ಸ್ ಎಂಬ ಮತ್ತೊಬ್ಬ ವಿಜ್ಞಾನಿ ಟ್ರೈಕ್ಲೋರೊ ಅಸಿಟಿಕ್‌ಆಮ್ಲವನ್ನು ಸೋಡಿಯಂ ಅಮಾಲ್ಗಮ್‌ನಿಂದ ಅಪಕರ್ಷಿಸಿ ಅಸಿಟಿಕ್ ಆಮ್ಲವನ್ನು ಪಡೆದ (1842). ಎಚ್. ಕೋಲ್ಬೆ ಎಂಬಾತ ಮೂಲವಸ್ತುಗಳಿಂದ ಟ್ರೈಕ್ಲೋರೊ ಅಸಿಟಿಕ್‌ಆಮ್ಲವನ್ನು ತಯಾರಿಸಿ ಅಸಿಟಿಕ್ ಆಮ್ಲದ ಅಣುರಚನೆಯನ್ನು ಸಿದ್ಧಪಡಿಸುವುದಕ್ಕೆ ನೆರವಾದ (1843). ವಿಧ್ವಂಸಕ ಬಟ್ಟಿ ಇಳಿಸುವ ಕ್ರಮದಿಂದ (ಡಿಸ್ಟ್ರಕ್ಟಿವ್ ಡಿಸ್‌ಟಿಲೇಷನ್) ಕಟ್ಟಿಗೆ ಹಲವಾರು ಸಂಯುಕ್ತಗಳನ್ನು ಕೊಡುವುದೆಂದು ಹಿಂದಿನವರು ಗಮನಿಸಿದ್ದರು (1661). ಬಾಯಿಲ್‌ನು ಅವುಗಳಲ್ಲಿರುವ

ಒಂದು ದ್ರವ್ಯವಸ್ತುವನ್ನು ಕಂಡುಹಿಡಿದು ಅದಕ್ಕೆ ವುಡ್‌ಸ್ಪಿರಿಟ್ ಎಂದು ಹೆಸರಿಟ್ಟ. ಜರ್ಮನ್ ವಿಜ್ಞಾನಿ ಗ್ಲಾಬರ್, ಉತ್ಪತ್ತಿಯಾದ ಇಂಗಾಲದ ಸಂಯುಕ್ತಗಳಲ್ಲಿ ವಿನೆಗರ್ ಎಂಬ ಸಂಯುಕ್ತ ಮುಖ್ಯವಾದುದು ಎಂದು ತೋರಿಸಿದ (1658). ಟೈಲರ್ ವುಡ್‌ಸ್ಪಿರಿಟ್ ಆಲ್ಕೋಹಾಲೆಂದೂ (1812) ಫ್ರಾನ್ಸಿನ ಡ್ಯೂಮಾಸಸ್ ಅದನ್ನು ಮೀಥೈಲ್ ಆಲ್ಕೋಹಾಲೆಂದೂ (1834) ಗುರುತಿಸಿದರು. ಕೋಲ್‌ಟಾರ್ ಎಣ್ಣೆಯ ಸಂಯುಕ್ತಗಳು ಬಳಕೆಗೆ ಬಂದಮೇಲೆ, ಕಟ್ಟಿಗೆಯ ವಿಧ್ವಂಸಕ ಬಟ್ಟಿಯಿಂದ ಬರುವ ಸಂಯುಕ್ತಗಳಲ್ಲಿ ಅಸಿಟಿಕ್ ಆಮ್ಲ, ಮೀಥೈಲ್ ಆಲ್ಕೋಹಾಲ್ ಮತ್ತು ಅಸಿಟೋನ್ ಈ ಮೂರು ಸಂಯುಕ್ತಗಳು ಬಹಳ ಮುಖ್ಯ. $250^0$–$400^0$ ಸೆಂ. ಅಂತರದಲ್ಲಿ ತಾಂಡವಾಳದ ಪಾತ್ರೆಗಳಲ್ಲಿ ಕಟ್ಟಿಗೆಗಳನ್ನು ಇಟ್ಟು ಗಾಳಿಯ ಸಂಪರ್ಕವಿಲ್ಲದೆ ಕಾಯಿಸಿದಾಗ ನಾಲ್ಕು ಬಗೆಯ ವಸ್ತುಗಳು ಬರುವುವು: 1 ವುಡ್‌ಗ್ಯಾಸ್; 2 ನೀರು



ಅಸಿಟಿಕ್ ಆಮ್ಲ ತಯಾರಿಕೆ : ಮೂರು ಪಾತ್ರೆಗಳ ವ್ಯವಸ್ಥೆ

ಮಿಶ್ರದ್ರವ (ಪೈರೊಲಿಗ್ನಿಯಸ್ ಆಮ್ಲ);3 ವುಡ್‌ಟಾರು; ಮತ್ತು 4 ವುಡ್‌ಶೇಷ. ಇವುಗಳಲ್ಲಿ ಮುಖ್ಯವಾದುದು ನೀರು ಮಿಶ್ರದ್ರವವಾದ ಪೈರೊಲಿಗ್ನಿಯಸ್ ಆಮ್ಲ. ಈ ಆಮ್ಲದಲ್ಲಿ ಶೇ.9–10 ರಷ್ಟು ಅಸಿಟಿಕ್ ಆಮ್ಲ, ಶೇ.1–2 ರಷ್ಟು ಮೀಥೈಲ್ ಆಲ್ಕೋಹಾಲು ಮತ್ತು ಶೇ.0.1–0.5 ರಷ್ಟು ಅಸಿಟೋನ್ ಇರುವುವು.

ಚಿತ್ರದಲ್ಲಿ ತೋರಿಸಿದ ಮೂರು ಪಾತ್ರೆಗಳ ಜೋಡಣೆಯಲ್ಲಿ ಪೈರೊಲಿಗ್ನಿಯಸ್ ಆಮ್ಲವನ್ನು, ನೀರಾವಿಯನ್ನು ಸಿಂಬಿಯ ಮೂಲಕ ಹಾಯಿಸಿ ಕಾಯಿಸಿದಾಗ, ಆಮ್ಲದಲ್ಲಿರುವ ಅಸಿಟಿಕ್ ಆಮ್ಲ, ಮೀಥೈಲ್ ಆಲ್ಕೋಹಾಲ್ ಮತ್ತು ಅಸಿಟೋನ್ ಇವು ಆವಿಯಾಗುತ್ತವೆ. ಆವಿಯನ್ನು ಅರಳಿದ ಸುಣ್ಣ ಇರುವ ಒಂದೇ ತೆರನಾದ ಎರಡು ಪಾತ್ರೆಗಳ ಮೂಲಕ ಹಾಯಿಸುವರು. ಪೈರೊಲಿಗ್ನಿಯಸ್ ಆಮ್ಲದಲ್ಲಿರುವ ಟಾರು ಕೆಳಗೆ ಉಳಿದು ಕವಾಟದ ಮೂಲಕ ಹರಿದು ಕೆಳಗಡೆ ಇರುವ ಪಾತ್ರೆಯಲ್ಲಿ ಶೇಖರವಾಗುವುದು. ಎರಡು ಪಾತ್ರೆಗಳಲ್ಲಿರುವ ಅರಳಿದ ಸುಣ್ಣ ಅಸಿಟಿಕ್‌ಆಮ್ಲ ವರ್ತಿಸಿ ಆವಿಯಾಗದ ಕ್ಯಾಲ್ಸಿಯಂ ಅಸಿಟೇಟ್ ಸಂಯುಕ್ತ ಉಂಟಾಗುವುದು. ನೀರಾವಿಯನ್ನು ಈ ಎರಡು ಪಾತ್ರೆಗಳ ಮೂಲಕ ಹಾಯಿಸಿದಾಗ ಅಸಿಟೋನ್ ಮತ್ತು ಮೀಥೈಲ್ ಆಲ್ಕೋಹಾಲ್ ಆವಿಯಾಗಿ ಕ್ಯಾಲ್ಸಿಯಂ ಅಸಿಟೇಟ್ ಹಾಗೆಯೇ ಉಳಿಯುವುದು. ಇದನ್ನು ಇನ್ನೆರಡು ಕವಾಟಗಳ ಮೂಲಕ ಹರಿಸಿ ಪಾತ್ರೆಯಲ್ಲಿ ಶೇಖರಿಸಿ ದೊಡ್ಡ ಬೇಸಿನ್‌ನಲ್ಲಿ ಸಾಂದ್ರೀಕರಿಸುವರು. ಶೇ.80ರಷ್ಟು ಪ್ರಬಲ ದ್ರಾವಣ ಉಂಟಾಗುವುದು. ಗಂಧಕಾಮ್ಲ ಕ್ಯಾಲ್ಸಿಯಂ ಅಸಿಟೇಟ್‌ನಲ್ಲಿರುವ ಆಮ್ಲವನ್ನು ಬಿಡುಗಡೆ ಮಾಡುವುದು.

$$\begin{matrix} CH_3COO \\ CH_3COO \end{matrix} \Big> \left[ Ca + SO_4 \right] H_2 \longrightarrow 2CH_3COOH + CaSO_4$$

ಶೇ.70–75 ರಷ್ಟು ಅಸಿಟಿಕ್ ಆಮ್ಲ ಉಂಟಾಗುವುದು. ಶುದ್ಧ ಆಮ್ಲ ಬೇಕಾದರೆ ಉತ್ಪತ್ತಿಯಾದ ಆಮ್ಲವನ್ನು ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿ ತಟಸ್ಥೀಕರಿಸಿ, ಸೋಡಿಯಂ ಅಸಿಟೇಟ್ ದ್ರಾವಣವನ್ನು ಸಾಂದ್ರೀಕರಿಸಿ, ಸೋಡಿಯಂ ಅಸಿಟೇಟ್ ಹರಳುಗಳನ್ನು ಪ್ರಬಲ ಗಂಧಕಾಮ್ಲದೊಡನೆ ಬಟ್ಟಿ ಇಳಿಸಿದಾಗ ಗ್ಲೇಷಿಯಲ್ ಅಸಿಟಿಕ್ ಆಮ್ಲ ಉತ್ಪತ್ತಿಯಾಗುವುದು.

ಶೇ.12–15 ರಷ್ಟು ಆಲ್ಕೋಹಾಲ್ ಇರುವ ಹುಳಿ ಹಿಡಿದ ಕಷಾಯ (ಫರ್‌ಮೆಂಟೆಡ್ ಲಿಕ್ಕರ್) ಬ್ಯಾಕ್ಟೀರಿಯ ಅಸಿಟೈಜೀವಾಣುಗಳ ಸಂಪರ್ಕದಲ್ಲಿ ಗಾಳಿಯೊಡನೆ ವರ್ತಿಸಿ ಅಸಿಟಿಕ್ ಆಮ್ಲವನ್ನು ಕೊಡುವುದು.

$CH_3.\ CH_2.OH + O_2 \rightarrow CH_3.\ COOH + H_2O$. ಕ್ವಿಕ್ ವಿನೆಗರ್ ವಿಧಾನದಲ್ಲಿ ಅಸಿಟಿಕ್ ಫಂಗಸ್ ಅಥವಾ ಬ್ಯಾಕ್ಟೀರಿಯಂ ಅಸಿಟೈ ಜೀವಾಣುಗಳ ಸಂಪರ್ಕದಲ್ಲಿ ದುರ್ಬಲ ಆಲ್ಕೋಹಾಲನ್ನು ತೊಟ್ಟು ತೊಟ್ಟಾಗಿ ಮರದ ಸಿಪ್ಪೆಗಳ ಮೇಲೆ ಬೀಳುವಂತೆ ಮಾಡಿ, ಗಾಳಿಯನ್ನು ಅದರ ಮೂಲಕ ಹಾಯಿಸಿದಾಗ ಆಲ್ಕೋಹಾಲ್ ಉತ್ಕರ್ಷಣ ಹೊಂದಿ ಅಸಿಟಿಕ್ ಆಮ್ಲ ಬರುವುದು. ಆಲ್ಕೋಹಾಲ್ ಉತ್ಕರ್ಷಣ ಹೊಂದಿದಾಗ ಉಷ್ಣತೆ ಉತ್ಪತ್ತಿಯಾಗಿ 35 ಸೆಂ. ಗ್ರೇ. ಮಟ್ಟದಲ್ಲಿರುವುದು. ಜೀವಾಣುಗಳು ಬೆಳೆಯುವುದಕ್ಕೆ ಈ ಉಷ್ಣತೆ ಅತ್ಯಂತ ಅನುಕೂಲವಾಗಿರುವುದು. ದುರ್ಬಲ ದ್ರಾವಣದಲ್ಲಿ ಶೇ.10 ರಷ್ಟು ಅಸಿಟಿಕ್ ಆಮ್ಲವಿರುವುದು. ಈ ರೀತಿ ಆಗಲು ಹತ್ತು ದಿವಸಗಳಾಗುತ್ತವೆ.

ಇತ್ತೀಚೆಗೆ ಆಮ್ಲವನ್ನು ಅಸಿಟಲೀನ್‌ನಿಂದ ತಯಾರಿಸುವರು. ಅಸಿಟಲೀನ್ ಅನಿಲವನ್ನು ಪಾದರಸದ ಸಲ್ಫೇಟ್ ಇರುವ ದುರ್ಬಲ ಗಂಧಕಾಮ್ಲದ ಮೂಲಕ ಹಾಯಿಸಿದರೆ ಅಸಿಟಾಲ್ಡಿಹೈಡ್ ಉತ್ಪತ್ತಿಯಾಗುವುದು. ಈ ಆಲ್ಡಿಹೈಡಿನ ಆವಿಯನ್ನೂ ಗಾಳಿಯನ್ನೂ ಮಿಶ್ರಮಾಡಿ 60 ಸೆಂ.ಗ್ರೇ ಉಷ್ಣತೆಯಲ್ಲಿ ಮ್ಯಾಂಗನೀಸ್ ಅಸಿಟೇಟಿನ ಮೇಲೆ ಹಾಯಿಸಿದಾಗ ಆಲ್ಡಿಹೈಡ್ ಉತ್ಕರ್ಷಣ ಹೊಂದಿ ಅಸಿಟಿಕ್ ಆಮ್ಲ ಉತ್ಪತ್ತಿಯಾಗುವುದು.

$$CH \equiv CH_2O \rightarrow CH_3.CHO$$

$$2CH_3.CHO + O_2 \rightarrow 2CH_3.COOH$$

16.6° ಸೆಂ.ಗ್ರೇ. ಉಷ್ಣತೆಯಲ್ಲಿ ಕರಗುವ, 118° ಸೆಂ.ಗ್ರೇ ಉಷ್ಣತೆಯಲ್ಲಿ ಕುದಿಯುವ ಅನ್‌ಹೈಡ್ರಸ್ ಆಮ್ಲವನ್ನು ಗ್ಲೇಷಿಯಲ್ ಅಸಿಟಿಕ್ ಆಮ್ಲ ಎನ್ನುವರು. ಪಾಶ್ಚಿಮಾತ್ಯ ದೇಶಗಳಲ್ಲಿ ಚಳಿಗಾಲ ಬಂದಾಗ ಪ್ರಯೋಗಶಾಲೆಗಳಲ್ಲಿ ಈ ಆಮ್ಲ ಮಂಜುಗಡ್ಡೆಯಂಥ ಹರಳಾಕೃತಿಯನ್ನು ಹೊಂದಿರುವ ಕಾರಣ ಗ್ಲೇಷಿಯಲ್ ಅಸಿಟಿಕ್‌ಆಮ್ಲ ಎಂದು ಹೆಸರುಂಟಾಯಿತು. ಈ ಆಮ್ಲದಲ್ಲಿ ತೇವಾಂಶವಿದ್ದರೆ ಅದರ ಕುದಿಯುವ ಬಿಂದು ಕಡಿಮೆಯಾಗುವುದು. ಇದು ಜಲಾಕರ್ಷಕ. ಈಥರ್, ಆಲ್ಕೋಹಾಲ್ ಮತ್ತು ನೀರು ಇವುಗಳಲ್ಲಿ ಎಲ್ಲ ಪ್ರಮಾಣಗಳಲ್ಲಿ ಬೆರೆಯುವುದು, ಇದು ನೀರಿನಲ್ಲಿ ವಿಲೀನವಾದಾಗ ಉಷ್ಣತೆ ಉತ್ಪತ್ತಿಯಾಗಿ, ಗಾತ್ರದಲ್ಲಿ ಕುಗ್ಗಿ ಮತ್ತೆ ಹಿಗ್ಗುವುದು. ಈ ಆಮ್ಲ ಗಂಧಕ, ಅಯೋಡಿನ್ ರಂಜಕ ಮತ್ತು ಇಂಗಾಲದ ಸಂಯುಕ್ತಗಳನ್ನು ವಿಲೀನಗೊಳಿಸುವುದು. ಇದು ಚರ್ಮದ ಮೇಲೆ ಬಿದ್ದಾಗ ತೀವ್ರ ನೋವುಂಟುಮಾಡುವ ಗಾಯಗಳಾಗುತ್ತವೆ. ಇದು ಏಕಪ್ರತ್ಯಾಮ್ಲೀಯ ಆಮ್ಲ. ಅಯೋಡಿನ್ ಸಂಪರ್ಕದಲ್ಲಿ ಕ್ಲೋರೀನ್ ಅಸಿಟಿಕ್‌ಆಮ್ಲದೊಡನೆ ವರ್ತಿಸಿದಾಗ ಕ್ಲೋರೋ ಅಸಿಟಿಕ್‌ಆಮ್ಲಗಳು ಉಂಟಾಗುವುವು. ಕ್ಷಾರ, ಆಕ್ಸೈಡ್ ಮತ್ತು ಕಾರ್ಬೊನೇಟ್ ಇವುಗಳೊಡನೆ ವರ್ತಿಸಿ ಅಸಿಟೇಟ್ ಲವಣಗಳನ್ನು ಕೊಡುವುದು. ಆಲ್ಕೋಹಾಲಿಗೆ ಸ್ವಲ್ಪ ದುರ್ಬಲ ಗಂಧಕಾಮ್ಲವನ್ನು ಸೇರಿಸಿ ಅಸಿಟಿಕ್ ಆಮ್ಲದೊಡನೆ ಕಾಯಿಸಿದಾಗ ಸುವಾಸನೆಯುಳ್ಳ ಎಸ್ಟರ್ ಉತ್ಪತ್ತಿಯಾಗುವುದು.

ಆರ್ಸೆನಿಕ್ ಆಕ್ಸೈಡಿನೊಡನೆ ಇದನ್ನು ಕಾಯಿಸುವುದರಿಂದ ಘಾಟುವಾಸನೆಯುಳ್ಳ ವಿಷ ಸಂಯುಕ್ತ ಕ್ಯಾಕೊಡಿಲ್ ಆಕ್ಸೈಡ್ ಉಂಟಾಗುವುದು. ಅಸಿಟಿಕ್ ಆಮ್ಲದ ಆವಿಯನ್ನು ಮ್ಯಾಂಗನೀಸ್ ಆಕ್ಸೈಡಿನ ಮೇಲೆ 300 ಸೆಂ.ಗ್ರೇ ಉಷ್ಣತೆಯಲ್ಲಿ ಹಾಯಿಸಿದಾಗ ಅಸಿಟೋನ್ ಉಂಟಾಗುವುದು.

ಈ ಆಮ್ಲದ ಎರಡು ಬಗೆಯ ಲವಣಗಳಿವೆ : 1. ಕರಗುವ ನಾರ್ಮಲ್ ಅಸಿಟೇಟ್‌ಗಳು. 2 ಕರಗದ ಪ್ರತ್ಯಾಮ್ಲೀಯ ಅಸಿಟೇಟ್‌ಗಳು. ಸಾಮಾನ್ಯ ಅಸಿಟೇಟುಗಳಲ್ಲಿ ಮುಖ್ಯವಾದುವು ಸೋಡಿಯಂ ಅಸಿಟೇಟ್, ಸೀಸದ ಅಸಿಟೇಟ್. ಪ್ರತ್ಯಾಮ್ಲೀಯ ಅಸಿಟೇಟುಗಳಲ್ಲಿ ಮುಖ್ಯವಾದುವು ತಾಮ್ರದ ಅಸಿಟೇಟ್, ಫೆರಿಕ್ ಅಸಿಟೇಟ್, ಅಲ್ಯೂಮಿನಿಯಂ ಅಸಿಟೇಟ್ ಮತ್ತು ಕ್ರೋಮಿಯಂ ಅಸಿಟೇಟ್. ತಾಮ್ರದ ಅಸಿಟೇಟನ್ನು ವರ್ಡಿಗ್ರಿಸ್ ಎನ್ನುವರು. ನಾರ್ಮಲ್ ಫೆರಿಕ್ ಅಸಿಟೇಟ್ ಕಾಯಿಸಿದಾಗ ಕೆಂಪುವತ್ತರವುಳ್ಳ ಪ್ರತ್ಯಾಮ್ಲೀಯ ಫೆರಿಕ್ ಅಸಿಟೇಟ್ ಉಂಟಾಗುವುದು. ಪ್ರತ್ಯಾಮ್ಲೀಯ ಅಸಿಟೇಟುಗಳನ್ನು ಬಟ್ಟೆಗೆ ಬಣ್ಣ ಹಾಕುವಾಗ ಮಾರ್ಡಂಟ್ ಆಗಿ ಉಪಯೋಗಿಸುವರು.

ಕಾಲಿನ ಆಣಿಯನ್ನು ತೆಗೆಯಲು ಗ್ಲೇಷಿಯಲ್ ಆಮ್ಲವನ್ನು ಉಪಯೋಗಿಸುವರು. ದುರ್ಬಲ ಆಮ್ಲ ಅಥವಾ ವಿನೆಗರನ್ನು ಜ್ವರ ಬಂದಾಗ ಚರ್ಮಕ್ಕೆ ಸವರಿದರೆ ತಂಪು ಮಾಡುವುದು. ಔಷಧಿಯಾಗಿ ಸೇವನೆಗೆ ಒಳ್ಳೆಯ ಗುಣಗಳನ್ನು ಪಡೆದಿಲ್ಲವಾದರೂ ಶೇ.5ರಷ್ಟು ಆಮ್ಲವನ್ನು ಅಡಿಗಡಿಗೆ ತೆಗೆದುಕೊಂಡರೆ ದೇಹದ ತೂಕ ತಗ್ಗಿಸುವುದೆಂದು ಹೇಳುವರು. ಪೊಟಾಸಿಯಂ ಅಸಿಟೇಟ್ ರಕ್ತದಲ್ಲಿ ಕಾರ್ಬನೇಟಾಗಿ ಉತ್ಕರ್ಷಿಸಲ್ಪಡುವುದರಿಂದ ರಕ್ತದಲ್ಲಿ ಕ್ಷಾರೀಯ ಸ್ವಭಾವವನ್ನು ಹೆಚ್ಚಿಸುವುದಕ್ಕಾಗಲಿ ಅಥವಾ ಮೂತ್ರದ ಆಮ್ಲತೆಯನ್ನು ಕುಗ್ಗಿಸುವುದಕ್ಕಾಗಲಿ ಪೊಟಾಸಿಯಂ ಅಸಿಟೇಟನ್ನು ಔಷಧಿಯಾಗಿ ಕೊಡುವರು. ಆಹಾರದ ಅಂಶಗಳಿಂದ ಕಾರ್ಬೊಹೈಡ್ರೇಟ್‌ಗಳು ಮತ್ತು ಕೊಬ್ಬುಗಳು ದೇಹದಲ್ಲಿ ರಾಸಾಯನಿಕ ಕ್ರಿಯೆಗೊಳಪಟ್ಟಾಗ, ಕೋಶಗಳಲ್ಲಿ ಅಸಿಟಿಕ್ ಆಮ್ಲ ಅಸಿಟೈಲ್ ಕೊ ಎನ್‌ಜೈಮ್ A ಎಂಬ ರೂಪದಲ್ಲಿ ಉತ್ಪತ್ತಿಯಾಗುವುದು. ಮೂತ್ರದಲ್ಲಿ ಆಲ್ಬುಮಿನ್ ಎಂಬ ಪ್ರೋಟೀನನ್ನು ಕಂಡುಹಿಡಿಯಲು ಈ ಸಾಮಾನ್ಯ ಆಮ್ಲವನ್ನು ಬಳಸುವರು. ನಾಲ್ಕು ಅಥವಾ ಐದು ಮಿ.ಲೀ. ಲೀಟರುಗಳಷ್ಟು ಶೋಧಿಸಿದ ಮೂತ್ರವನ್ನು ಪ್ರನಾಳದಲ್ಲಿ ತೆಗೆದುಕೊಂಡು ಕಾಯಿಸಬೇಕು. ಮೂತ್ರದಲ್ಲಿ ಆಲ್ಬುಮಿನ್ ಇದ್ದರೆ ಮಾಸಲು ಬಿಳುಪು ಬರುವುದು. ಈ ಬಣ್ಣ ಮೂತ್ರದ ಫಾಸ್ಫೇಟ್‌ಗಳಿಂದಲೂ ಬರುವುದು. ಐದಾರು ತೊಟ್ಟು ಶೇ.5–10 ರಷ್ಟು ಅಸಿಟಿಕ್ ಆಮ್ಲವನ್ನು ಮೂತ್ರಕ್ಕೆ ಸೇರಿಸಿ ಕುದಿಸಿದಾಗ ಫಾಸ್ಫೇಟಿದ್ದರೆ ವಿಲೀನವಾಗುವುದು.

ಅಲ್ಬುಮಿನ್ ಇದ್ದರೆ ಬಿಳುಪಾಗಿಯೇ ಉಳಿಯುವುದು. ಇಲ್ಲದಿದ್ದರೆ ಮೂತ್ರ ಮೊದಲಿನ ಬಣ್ಣವನ್ನೇ ಹೊಂದಿರುವುದು. ಅತಿ ದುರ್ಬಲ ಆಮ್ಲವನ್ನು ಕೆಮ್ಮಿನ ಔಷಧಿಯಲ್ಲಿ ಕೆಲವು ವೇಳೆ ಬಳಸುವರು. ಸಾಮಾನ್ಯವಾಗಿ ಉತ್ಕರ್ಷಣ ಮತ್ತು ಅಪಕರ್ಷಣಕಾರಿಗಳಿಗೆ ಬಗ್ಗದ ಈ ಆಮ್ಲವನ್ನು ರಾಸಾಯನಿಕ ಕ್ರಿಯೆಗಳಲ್ಲಿ ದ್ರವ ವಸ್ತುವನ್ನಾಗಿ ಬಳಸುವರು. ರಬ್ಬರ್ ದ್ರವವನ್ನು ಗಟ್ಟಿ ಮಾಡುವುದಕ್ಕೆ, ಪ್ಲಾಸ್ಟಿಕ್ಕು, ಔಷಧಿಗಳು, ಬಣ್ಣಗಳು, ಕ್ರಿಮಿನಾಶಕಗಳು, ಫೋಟೋಗ್ರಾಫಿಕ್ ಫಿಲ್ಮ್ ಮತ್ತು ರೆಯಾನ್ ತಯಾರಿಕೆಯಲ್ಲಿ ಬೇಕಾಗುವ ಸೆಲ್ಯುಲೋಸ್ ಅಸಿಟೇಟ್ ತಯಾರಿಕೆಯಲ್ಲಿ, ಅಸಿಟೋನ್, ಅಸಿಟೇಟ್, ಎಸ್ಟರ್ ಇವುಗಳ ತಯಾರಿಕೆಯಲ್ಲಿ ಇದನ್ನು ಉಪಯೋಗಿಸುವರು. (ಜಿ.ವಿ.ಪಿ.)

**ಅಸಿಟೋನ್ :** ಆ್ಯಲಿಫ್ಯಾಟಿಕ್ ಕೀಟೋನುಗಳಲ್ಲಿ ಇದು ಮೊದಲನೆಯದು. ಇದರ ಸೂತ್ರ $CH_3COCH_3$. ಎರಡು ಮಿಥೈಲ್ ಗುಂಪುಗಳು ಕಾರ್ಬನಿಲ್ ಅಥವಾ ಕೀಟೋ ಗುಂಪಿಗೆ ಸೇರಿವೆ. ಇದು ರಕ್ತದಲ್ಲಿ ಮತ್ತು ಸಾಮಾನ್ಯ ಮೂತ್ರದಲ್ಲಿ ಲೇಶಮಾತ್ರ ಇರುವುದೆಂದು ತಿಳಿದಿದೆ. ಸಿಹಿಮೂತ್ರ ರೋಗದಿಂದ (ಡಯಾಬಿಟೀಸ್ ಮೆಲಿಟಸ್) ನರಳುವವರ ಮೂತ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಸಿಟೋನು ಇರುವುದು. ಹದಗೆಟ್ಟ ಮೆಟಬಾಲಿಸಂನಲ್ಲಿ ಉತ್ಪತ್ತಿಯಾದ ಸಂಯುಕ್ತಗಳು ಸಂಪೂರ್ಣವಾಗಿ ಉತ್ಕರ್ಷಣ ಹೊಂದದೆ ಕೀಟೋನು ಉತ್ಪತ್ತಿಯಾಗಿ ರಕ್ತ ಮತ್ತು ಮೂತ್ರಗಳಲ್ಲಿ ಶೇಖರವಾಗುವುವು. ಹೀಗೆ ಕೀಟೋನು ಶೇಖರವಾಗುವ ಸ್ಥಿತಿಗೆ ಕೀಟೋನೂರಿಯ ಎಂದು ಹೇಳುವರು. ಇವುಗಳಲ್ಲಿ ಅಸಿಟೊ ಅಸಿಟಿಕ್ ಆಮ್ಲ, β– ಹೈಡ್ರಾಕ್ಸಿ ಬ್ಯೂಟರಿಕ್ ಆಮ್ಲ ಮುಂತಾದವುಗಳು ಇರುವುವು. ಕಟ್ಟಿಗೆ, ಸೆಲ್ಯುಲೋಸು ಮತ್ತು ಸಕ್ಕರೆ ಇವುಗಳ ವಿಧ್ವಂಸಕ ಬಟ್ಟಿಯಿಂದ ಉತ್ಪತ್ತಿಯಾಗುವ ಸಂಯುಕ್ತಗಳಲ್ಲಿ ಇದೂ ಒಂದು. ಅಶುದ್ಧ ವುಡ್‌ಸ್ಪಿರಿಟ್ ಎಂಬ ಮೀಥೈಲ್ ಆಲ್ಕೋಹಾಲಿನಲ್ಲಿ ಇದು ಇದೆ. ಭಿನ್ನಾಂಕ ಬಟ್ಟಿಯಿಂದ (ಫ್ರಾಕ್ಷನಲ್ ಡಿಸ್ಟಿಲೇಷನ್) ವುಡ್‌ಸ್ಪಿರಿಟ್‌ನಿಂದ ಅಸಿಟೋನನ್ನು ಹೆಚ್ಚು ಪ್ರಮಾಣಗಳಲ್ಲಿ ಪಡೆಯಬಹುದು. ಕ್ಯಾಲ್ಸಿಯಂ ಅಸಿಟೇಟಿನ ಶುಷ್ಕ ಬಟ್ಟಿಯಿಂದಲೂ ಅಸಿಟೋನನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯುವರು. ಒತ್ತರಿಸಿದ ಬೇರಿಯಂ ಕಾರ್ಬನೇಟ್ ಮತ್ತು ಪ್ಯೂಮೀಸ್ ಕಲ್ಲು ಇವುಗಳ ಮಿಶ್ರಣವಿರುವ ತಿರುಗುವ ಕಬ್ಬಿಣದ ಉರುಳೆಯನ್ನು (ಸಿಲಿಂಡರ್) $50^0$–$60^0$ ಸೆ. ಉಷ್ಣತೆಯಲ್ಲಿ ಕಾಯಿಸಿ ಇದರ ಮೂಲಕ ಅಸಿಟಿಕ್ ಆಮ್ಲದ ಆವಿಯನ್ನು ಹಾಯಿಸಿದಾಗ ಅಸಿಟೋನು, ನೀರು ಉಂಟಾಗುವುವು. ಅಸಿಟೋನು, ನೀರು ಮತ್ತು ಉಳಿದ ಅಸಿಟಿಕ್ ಆಮ್ಲ ಇವುಗಳ ಆವಿಯನ್ನು ತಂಪು ಮಾಡುವ ಪಾತ್ರೆಯಲ್ಲಿ ಹಾಯಿಸಿದರೆ ಅಸಿಟಿಕ್ ಆಮ್ಲ, ನೀರು ತಂಪಾಗಿ ಶೇಖರವಾಗುವುವು. ಇನ್ನೂ ಆವಿ ರೂಪದಲ್ಲಿರುವ ಅಸಿಟೋನು ಇನ್ನೊಂದು ಪಾತ್ರೆಗೆ ಹಾಯಿಸಿ ತಂಪು ಮಾಡಿದರೆ ಅಸಿಟೋನ್ ದ್ರವ ಉಂಟಾಗುವುದು. ಸೋಡಿಯಂ ಬೈಸಲ್ಫೈಟನ್ನು ಬಳಸಿ ಅಸಿಟೋನನ್ನು ಶುದ್ಧೀಕರಿಸಬಹುದು. ಉತ್ತರ ಅಮೆರಿಕದಲ್ಲಿ ಬೆಂಜೀನು ಮಾತ್ರ ಪ್ರೊಪಿಲೀನ್ ಇವುಗಳಿಂದ ಶೇ.60ರಷ್ಟು ಫೀನಾಲನ್ನು ತಯಾರಿಸುವಾಗ ಶೇ.30ರಷ್ಟು ಉಪಸಂಯುಕ್ತವಾಗಿ ಅಸಿಟೋನ್ ಉತ್ಪತ್ತಿಯಾಗುವುದು. ಫಾಸ್ಫಾರಿಕ್ ಆಮ್ಲದ ಸಂಪರ್ಕದಲ್ಲಿ ಬೆಂಜೀನು ಮತ್ತು ಪ್ರೊಪಿಲೀನ್ ಸಂಯೋಜಿಸಿ ಕ್ಯುಮೀನ್ ಬರುವುದು. ಇದನ್ನು ಉತ್ಕರ್ಷಿಸಿ ದುರ್ಬಲ ಗಂಧಕಾಮ್ಲದ ಸಂಪರ್ಕದಲ್ಲಿ ಕೆಳಗಿನ ಉಷ್ಣತೆಯ ಮಟ್ಟದಲ್ಲಿ ಬೆಚ್ಚಗೆ ಮಾಡಿದಾಗ ಫೀನಾಲ್ ಮತ್ತು ಅಸಿಟೋನ್ ಉತ್ಪತ್ತಿಯಾಗುವುವು.



ಕಟ್ಟಿಗೆಯ ವಿಧ್ವಂಸಕ ಬಟ್ಟಿಯಿಂದ ಬರುವ ಪೈರೊಲಿಗ್ನಿಯಸ್ ಆಮ್ಲದಲ್ಲಿ 0.5%ರಷ್ಟು ಅಸಿಟೋನು ಇರುವುದು. ಮೊದಲು ಅಸಿಟಿಕ್ ಆಮ್ಲವನ್ನು ಬೇರ್ಪಡಿಸಿ ಅಸಿಟೋನು ಮತ್ತು ಮೀಥೈಲ್ ಆಲ್ಕೋಹಾಲ್ ಇವುಗಳನ್ನು ಭಿನ್ನಾಂಕ ಬಟ್ಟಿಯಿಂದ ಬೇರ್ಪಡಿಸುವರು. ಒಂದನೆಯ ಮಹಾಯುದ್ಧದ ಸಮಯದಲ್ಲಿ ಮುಸುಕಿನಜೋಳ, ಆಲೂಗಡ್ಡೆ ಇವುಗಳನ್ನು ಫರ್ನ್‌ಬ್ಯಾಕ್ ಬ್ಯಾಸಿಲಸ್ ಸಹಾಯದಿಂದ $30^0$–$35^0$ ಸೆ. ಉಷ್ಣತೆಯಲ್ಲಿ ಅನರೋಬಿಕ್ ರೀತಿಯಲ್ಲಿ (ಆಕ್ಸಿಜನ್ನಿನ ಸಹಾಯವಿಲ್ಲದೆ ಹುಳಿ ಹಿಡಿಯುವುದು) ಹುಳಿ ಹಿಡಿಸಿದಾಗ n–ಬ್ಯೂಟೈಲ್ ಆಲ್ಕೋಹಾಲ್, ಈಥೈಲ್ ಆಲ್ಕೋಹಾಲ್ ಮತ್ತು ಅಸಿಟೋನು ಇವುಗಳು ಕ್ರಮವಾಗಿ 6:1:3ರ ಪ್ರಮಾಣದಲ್ಲಿ ಉತ್ಪತ್ತಿಯಾದುವು.

1911ರಲ್ಲಿ ವೈಸ್‌ಮನ್ ಎಂಬಾತ ಕಂಡುಹಿಡಿದ ವಿಧಾನದಿಂದ ಭಾರತದಲ್ಲಿ ಸಿ ಅಸಿಟೊ ಬ್ಯೂಟೈಲಿಕಮ್‌ನಿಂದ ಕಾಟಿಬೆಲ್ಲವನ್ನು ಹುಳಿ ಹಿಡಿಸಿ n–ಬ್ಯೂಟೈಲ್ ಆಲ್ಕೋಹಾಲ್ ಮತ್ತು ಅಸಿಟೋನು ಇವುಗಳನ್ನು ಉತ್ಪತ್ತಿಮಾಡಿ ಬೇರ್ಪಡಿಸುವರು. $400^0$ ಸೆ. ನಲ್ಲಿ ಸತುವಿನ ಆಕ್ಸೈಡ್‌ನ ಮೇಲೆ ಅಸಿಟಿಲೀನ್ ಮತ್ತು ನೀರಾವಿಗಳನ್ನು ಹಾಯಿಸಿದಾಗ ಅಸಿಟೋನು ಉಂಟಾಗುವುದು. ಮರ್ಕ್ಯೂರಿಕ್ ಲವಣಗಳ ಸಂಪರ್ಕದಲ್ಲಿ ಮೀಥೈಲ್ ಅಸಿಟಿಲೀನ್ ನೀರಿನೊಡನೆ ವರ್ತಿಸಿ ಅಸಿಟೋನನ್ನು ಕೊಡುವುದು.

$$CH_3 - C \equiv CH + H_20 \xrightarrow{HgSO_4} CH_3 - CO - CH_3$$

56.1° ಸೆ. ಉಷ್ಣತೆಯಲ್ಲಿ ಕುದಿಯುವ ಬಣ್ಣರಹಿತ ದ್ರವ. ಸ್ವಲ್ಪ ಆರೋಮ್ಯಾಟಿಕ್ ವಾಸನೆಯನ್ನು ಹೊಂದಿರುವುದು. ನೀರು, ಆಲ್ಕೋಹಾಲ್ ಮತ್ತು ಈಥರ್ ಇವುಗಳಲ್ಲಿ ಎಲ್ಲ ಪ್ರಮಾಣಗಳಲ್ಲಿಯೂ ವಿಲೀನವಾಗುವುದು. ಇದರ ಸಾಪೇಕ್ಷ ಸಾಂದ್ರತೆ ಶೇ.0.7915. 10 ಮೀಥೈಲ್ ಆಲ್ಕೋಹಾಲಿನಲ್ಲಿ ಇದು ನಿಯತವಾಗಿ ಕುದಿಯುವ ಮಿಶ್ರಣ (ಕಾನ್ಸ್‌ಟೆಂಟ್ ಬಾಯ್ಲಿಂಗ್ ಮಿಕ್ಸ್‌ಚರ್). ಇದನ್ನು ಮೀಥೈಲ್ ಆಲ್ಕೋಹಾಲಿನಿಂದ ಬೇರ್ಪಡಿಸುವುದು ಸ್ವಲ್ಪ ಕಷ್ಟ. ಅಸಿಟೋನು ಹೈಡ್ರೊಜನ್ ಸಯನೈಡಿನೊಡನೆ ವರ್ತಿಸಿ ಅಸಿಟೋನ್ ಸಯನೊ ಹೈಡ್ರಿನ್‌ನನ್ನು ಕೊಡುವುದು. ಅದೇ ರೀತಿ ಸೋಡಿಯಂ ಬೈಸಲ್ಫೇಟ್ ನೊಡನೆ ವರ್ತಿಸಿ ಬಿಳಿಘನ ಅಸಿಟೋನ್ ಸೋಡಿಯಂ ಬೈಸಲ್ಫೇಟ್ ಉಂಟಾಗುವುದು. ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿ ಅಸಿಟೋನು ಕ್ಲೋರಿನ್‌ನೊಡನೆ ವರ್ತಿಸಿ ಕ್ಲೋರೊಫಾರಂ ಅನ್ನು ಕೊಡುವುದು. ಇದೇ ರೀತಿ ಬ್ರೋಮೊಫಾರಂ ಮತ್ತು ಅಯಡೊಫಾರಂ ಅನ್ನು ತಯಾರಿಸಬಹುದು. ಅಸಿಟೋನನ್ನು ಪ್ಲಾಟಿನಂ ಮತ್ತು ಹೈಡ್ರೋಜನ್ ಸಮರ್ಪಕದಲ್ಲಿ ಅಪಕರ್ಷಿಸಿದಾಗ ಐಸೊಪ್ರೊಪೈಲ್ ಆಲ್ಕೋಹಾಲ್ ಉಂಟಾಗುವುದು. ಆದರೆ ಸೋಡಿಯಂ ಅಮಾಲ್ಗಮ್ಮಿನ ಸಂಪರ್ಕದಲ್ಲಿ ಪಿನ್‌ಕಾಲ್ ಉಂಟಾಗುವುದು.



ಆಲ್ಡಿಹೈಡು ಆಲ್ಕೋಹಾಲಿನೊಡನೆ ವರ್ತಿಸುವ ಹಾಗೆ ಅಸಿಟೋನು ವರ್ತಿಸುವುದಿಲ್ಲ. ಆದರೆ ಥಯೊ ಆಲ್ಕೋಹಾಲಿನೊಡನೆ ವರ್ತಿಸಿ ಥಯೊಕಿಟಾಲ್ ಕೊಡುವುದು.



ಹೈಡ್ರಾಕ್ಸಿಲಮೀನ್, ಫಿನೈಲ್ ಹೈಡ್ರಜೀನ್ ಇವುಗಳೊಡನೆ ಅಸಿಟೋನ್ ವರ್ತಿಸಿ ಕ್ರಮವಾಗಿ ಅಸಿಟೋನಾಕ್ಸಿವ್ ಮತ್ತು ಅಸಿಟೋನ್ ಫೀನೈಲ್ ಹೈಡ್ರಜೋನ್ ಘನ ಸಂಯುಕ್ತಗಳನ್ನು ಕೊಡುವುದು. ಈ ಘನಸಂಯುಕ್ತಗಳಿಗೆ ನಿರ್ದಿಷ್ಟ ಕರಗುವ ಬಿಂದುಗಳಿರುವುದರಿಂದ ಅಸಿಟೋನನ್ನು ಗುರುತಿಸಬಹುದು. ಆಲ್ಡಿಹೈಡಿನ ಹಾಗೆ ಇದು ಪೊಲಿಮರೈಸ್ (ಸಂಘಟಿತ ಅಣುಗಳಿಂದ ದೊಡ್ಡ ಅಣುವಾಗುವ ಸ್ಥಿತಿಗೆ ಪೊಲಿಮರೈಸೇಷನ್ ಎಂದು ಹೆಸರು) ಆಗುವುದಿಲ್ಲ. ಆಲ್ಡಿಹೈಡನ್ನು ಉತ್ಕರ್ಷಿಸಿದಾಗ ಆಲ್ಡಿಹೈಡು ಛಿದ್ರವಾಗದೆ ಸಮಾನ ಇಂಗಾಲದ ಪರಮಾಣುಗಳುಳ್ಳ ಆಮ್ಲ ಉತ್ಪತ್ತಿಯಾಗುವುದು. ಆದರೆ ಕೀಟೋನ್‌ಗಳು ಉತ್ಕರ್ಷಿಸಿದಾಗ ಛಿದ್ರವಾಗಿ ಕಡಿಮೆ ಸಂಖ್ಯೆಯ ಇಂಗಾಲದ ಪರಮಾಣುಗಳುಳ್ಳ ಆಮ್ಲ ಉಂಟಾಗುವುದು. ಅಲ್ಯೂಮಿನಿಯಮ್ ಟರ್ಷರಿ ಬ್ಯೂಟಾಕ್ಸೈಡ್, ಸೆಕೆಂಡರಿ ಆಲ್ಕೋಹಾಲ್ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಅಸಿಟೋನ್ ಇವುಗಳ ಮಿಶ್ರಣವನ್ನು ಕಾಯಿಸಿದಾಗ ಆಲ್ಕೋಹಾಲ್ ಉತ್ಕರ್ಷಣ ಹೊಂದಿ ಕೀಟೋನ್ ಆಗುವುದು. ಸೆಕೆಂಡರಿ ಆಲ್ಕೋಹಾಲಿನ ಎರಡು ಹೈಡ್ರೋಜನ್ನಿನ ಪರಮಾಣುಗಳು ಅಸಿಟೋನನ್ನು ಕೂಡಿಕೊಂಡು ಐಸೊಪ್ರೊಪೈಲ್ ಆಲ್ಕೋಹಾಲಾಗಿ ಪರಿವರ್ತಿತವಾಗುವುದು. ಇದಕ್ಕೆ ಅದನ್ನು ಕಂಡುಹಿಡಿದ (1937) ವಿಜ್ಞಾನಿಯ ಹೆಸರಿನಿಂದ ಓಪೆನಾಯರ್ ರಾಸಾಯನಿಕ ಕ್ರಿಯೆಯೆಂದು ಹೇಳುತ್ತಾರೆ.



ಸೆಕೆಂಡರಿ ಆಲ್ಕೋಹಾಲಿನ ಅಣುಗಳ ಇಂಗಾಲಗಳು ಅಪರ್ಯಾಪ್ತ ಅಥವಾ ಅಪೂರ್ತವಾಗಿದ್ದರೂ ತೊಂದರೆ ಇಲ್ಲದೆ ಆಲ್ಕೋಹಾಲನ್ನು ಉತ್ಕರ್ಷಿಸಿ ಕೀಟೋನನ್ನು ಪಡೆಯಬಹುದು. ಶುಷ್ಕ ಹೈಡ್ರೊಜನ್ ಸಂಪರ್ಕದಲ್ಲಿ ಎರಡು ಅಸಿಟೋನ್ ಅಣುಗಳು ವರ್ತಿಸಿ ಮೆಸಿಟೈಲ್ ಆಕ್ಸೈಡನ್ನು ಕೊಡುವುವು. ಇದು ಸಂಯುಕ್ತ ಆಕ್ಸೈಡ ಅಲ್ಲ; ಹಾಗೆಂದು ತಪ್ಪಾಗಿ ಕರೆಯುವರು. ಸರಿಯಾದ ಹೆಸರು α, β ಅಪರ್ಯಾಪ್ತ ಕೀಟೋನ್.

$$\begin{matrix}CH_3\\CH_3\end{matrix}\rangle C = \boxed{O + H_2}\,CH.CO.CH_3 \xrightarrow[-H_2O]{Hcl} \begin{matrix}CH_3\\CH_3\end{matrix}\rangle C = CH\text{-}CO\text{-}CH_3$$

ಮೆಸಿಟೈಲ್ ಆಕ್ಸೈಡ್

$131^0$ ಸೆ. ಉಷ್ಣತೆಯಲ್ಲಿ ಕುದಿಯುವ ಈ ಬಣ್ಣರಹಿತ ಆಕ್ಸೈಡಿಗೆ ಪೆಪರ್‌ಮಿಂಟಿನ ವಾಸನೆ ಇದೆ. ಮೂರು ಅಸಿಟೋನು ಅಣುಗಳು ಕೂಡಿ ಫೋರಾನ್ ಎಂಬ ಸಂಯುಕ್ತ ವಸ್ತುವನ್ನು ಕೊಡುವುದು. ಈ ಸಂಯುಕ್ತ ವಸ್ತು ಮತ್ತು ಕ್ಯಾಂಫರ್ ಇವುಗಳಲ್ಲಿ ಸಂಘಟಿತ ಮೂಲವಸ್ತುಗಳ ಪರಮಾಣುಗಳ ಪ್ರಮಾಣ [ಎಂಪಿರಿಕಲ್ ಫಾರ್ಮುಲ] ಒಂದೇ ಆಗಿರುವುದರಿಂದ [Cam PHOR+acetONE=PHORONE] ಫೋರೋನ್ ಎಂದು ಕರೆಯುವರು. ಬೇರಿಯಮ್ ಹೈಡ್ರಾಕ್ಸೈಡಿನ ಸಂಪರ್ಕದಲ್ಲಿ ಅಸಿಟೋನನ್ನು ಕಾಯಿಸಿದಾಗ ಎರಡು ಅಸಿಟೋನ್ ಅಣುಗಳು ಕೂಡಿ $166^0$ ಸೆ. ಉಷ್ಣತೆಯಲ್ಲಿ ಕುದಿಯುವ ಡೈ ಅಸಿಟೋನ್ ಆಲ್ಕೋಹಾಲ್ ಉಂಟಾಗುವುದು.

$$\begin{matrix}CH_3\\CH_3\end{matrix}\rangle C = O + CH_3\text{-}CO\text{-}CH_3 \xrightarrow{Ba(OH)_2} (CH_3)_2\overset{OH}{C}\text{-}CH_2\text{-}CO.CH_3$$

ಷಿಫ್ಸ್ ದ್ರಾವಣ, ಫೆಲಿಂಗ್ ದ್ರಾವಣ ಮತ್ತು ಟಾಲೆನ್ ದ್ರಾವಣಗಳೊಡನೆ ಅಸಿಟೋನ್ ವರ್ತಿಸುವುದಿಲ್ಲ. ಷಿಫ್ಸ್ ದ್ರಾವಣ, ಫೆಲಿಂಗ್ ದ್ರಾವಣ ಟಾಲೆನ್ ದ್ರಾವಣ ಸೋಡಿಯಂ ನೈಟ್ರೋಪ್ರಸ್ಸೈಡಿನೊಡನೆ ವರ್ತಿಸಿ ಮಾಸಲು ಊದಾ ಬಣ್ಣವನ್ನು ಕೊಡುವುದು.

ಅಯನೋನ್ ಪರಿಮಳ ವಸ್ತುವಿನ ತಯಾರಿಕೆಯಲ್ಲಿ ಇದನ್ನು ಬಳಸುವರು. ಮತ್ತು ನಿದ್ರೆ ಬರಿಸುವ ಸಲ್ಫೋನಾಲ್ ಸಂಯುಕ್ತದ ತಯಾರಿಕೆಯಲ್ಲಿಯೂ ಉಪಯೋಗಿಸುವರು. ಕಾರ್ಡೈಟ್ ಎಂಬ ಹೊಗೆ ಆಡದ ಸಿಡಿಮದ್ದಿನ ತಯಾರಿಕೆಯಲ್ಲಿ, ಛಿದ್ರವಾಗದ ಪ್ಲಾಸ್ಟಿಕ್ ಆದ ಮಿಥೈಲ್ ಮಿಥಾ ಅಕ್ರಿಲೇಟ್ ಪ್ಲಾಸ್ಟಿಕ್‌ನ [ಪ್ಲೆಕ್ಸಿಗ್ಲಾಸ್] ತಯಾರಿಕೆಯಲ್ಲಿ ಉಪಯೋಗಿಸುವರು. ಪ್ರಯಾಣ ಕಾಲದಲ್ಲಿ ಉಂಟಾಗುವ ದೈಹಿಕ ಆಯಾಸವನ್ನು [ಮೋಷನ್ ಸಿಕ್‌ನೆಸ್] ತಡೆಯಲು ಉಪಯೋಗಿಸುವ ಕ್ಲೋರೋಟೋನ್ ತಯಾರಿಕೆಯಲ್ಲಿ ಸಹ ಉಪಯೋಗಿಸುವರು.

ಸೆಲುಲಾಯ್ಡ್ ಪ್ಲಾಸ್ಟಿಕ್‌ನಲ್ಲಿ, ಕೃತಕ ರೇಷ್ಮೆ ತಯಾರಿಕೆಯಲ್ಲಿ ವಿಲೀನಗೊಳಿಸುವ ದ್ರವವಾಗಿ (ಸಾಲ್‌ವೆಂಟ್) ಅಸಿಟೋನನ್ನು ಉಪಯೋಗಿಸುವರು.

$$\begin{matrix}CH_3\\CH_3\end{matrix}\rangle C = O + H.C.C1_3 \xrightarrow[\text{(ಘನ)}]{KOH} \begin{matrix}CH_3 & & OH\\ & C & \\ CH_3 & & C.C1_3\end{matrix}$$

ಕ್ಲೋರೋಫಾರಂ ಕ್ಲೋರೋಟೋನ್

ಅಸಿಟಿಲೀನ್ ಆಸ್ಫೋಟಕ ಸಂಯುಕ್ತವನ್ನು ಉರುಳೆಗಳಲ್ಲಿ ಸಾಗಿಸಲು ಅಸಿಟೋನನ್ನು ದ್ರಾವ್ಯವಾಗಿ ಉಪಯೋಗಿಸುವರು. ಕೃತಕ ನೀಲಿ ತಯಾರಿಕೆಯಲ್ಲಿ ಇದನ್ನು ಬಳಸುವರು. ಉಸಿರು ಕಟ್ಟಿದಾಗ ಡೈಸ್ಪೋನಿಯ ಇದನ್ನು ಆಗಾಗ ಬಳಸುವರು. (ಜಿ.ವಿ.ಪಿ.)

**ಅಸಿನ್ಯಾಫ್ಥೀನ್ :** ಬಿಳಿ ಬಣ್ಣದ ಸೂಜಿ ರೂಪದ ಹರಳಿನ ಇಂಗಾಲದ ಒಂದು ಸಂಯುಕ್ತ. ಇದು $95^0$ ಸೆಂ.ಗ್ರೇ ನಲ್ಲಿ ಕರಗುವುದು ಮತ್ತು $278^0$ ಸೆಂ. ಗ್ರೇ ನಲ್ಲಿ ಕುದಿಯುವುದು. ಈ ಸಂಯುಕ್ತವನ್ನು $260^0$ $-270^0$ ಸೆಂ. ಗ್ರೇನ ಅಂತರದಲ್ಲಿ ಕುದಿಯುವ ಕೋಲ್‌ಟಾರ್ ಎಣ್ಣೆಯಿಂದ ಎಂ.ಪಿ.ಇ.ಬರ್ಥೆಲಾಟ್ ಎಂಬಾತ ಪ್ರತ್ಯೇಕಿಸಿದ. ಬಾರ್ಡೆ ಎಂಬ ಮತ್ತೊಬ್ಬ ವಿಜ್ಞಾನಿ $\alpha$–$\beta$ ಥೈಲ್ ನ್ಯಾಫ್‌ಲೀನ್ ಸಂಯುಕ್ತದಿಂದ ಅಸಿನ್ಯಾಫ್ಥೀನ್ ಸಂಯುಕ್ತವನ್ನು ತಯಾರಿಸಿದ. ನ್ಯಾಫ್ಥಲಿಕ್ ಅನ್‌ಹೈಡ್ರೈಡನ್ನು ಅಪಕರ್ಷಿಸಿ, ಡೈಬ್ರೋಮೈಡನ್ನಾಗಿ ಪರಿವರ್ತಿಸಿದ ಮೇಲೆ, ಈ ಡೈಬ್ರೋಮೈಡು ಫಿನೈಲ್ ಲೀಥಿಯಂನೊಡನೆ ವರ್ತಿಸಿದಾಗಲೂ ಅಸಿನ್ಯಾಫ್ಥೀನ್ ಉತ್ಪತ್ತಿಯಾಗುವುದು.




ಪಿಕ್ರಿಕ್ ಆಮ್ಲದೊಡನೆ ನ್ಯಾಫ್ಥಲೀನ್ ಸಂಕೀರ್ಣ[ಕಾಂಪ್ಲೆಕ್ಸ್] ಸಂಯುಕ್ತವನ್ನು ಕೊಡುವ ಹಾಗೆ ಅಸಿನ್ಯಾಫ್ಥೀನ್ ಸಂಯುಕ್ತವೂ ಕೂಡ ಪಿಕ್ರಿಕ್ ಆಮ್ಲದೊಡನೆ, $162^0$ ಸೆಂ.ಗ್ರೇನಲ್ಲಿ ಕರಗುವ ಕಿತ್ತಲೆಬಣ್ಣದ ಅಸಿನ್ಯಾಫ್ಥೀನ್ ಪಿಕ್ರೇಟನ್ನ ಕೊಡುವುದು ಅಸಿನ್ಯಾಫ್ಥೀನ್ ಪಿಕ್ರೇಟನ್ನು ಕೊಡುವುದು ಅಸಿನ್ಯಾಫ್ಥೀನ್ ಸಂಯುಕ್ತವನ್ನು ಶುದ್ಧೀಕರಿಸುವುದರಲ್ಲಿಯೂ ಮತ್ತು ಗುರುತಿಸುವುದರಲ್ಲಿಯೂ ಈ ಪಿಕ್ರೇಟು ಬಹಳ ಉಪಯುಕ್ತವಾಗಿರುವುದು. ಬೇಗ ಸ್ಫಟಿಕೀಕರಿಸುವ ಗುಣವನ್ನೂ, ಹೆಚ್ಚಿನ ಕರಗುವಿಕೆಯ ಉಷ್ಣವನ್ನೂ ಮತ್ತು ಅತಿ ಕಡಿಮೆ ವಿಲೀನವಾಗುವ ಗುಣವನ್ನೂ ಈ ಪಿಕ್ರೇಟುಗಳು ಹೊಂದಿರುವ ಕಾರಣ, ಅಸಿನ್ಯಾಫ್ಥೀನ್ ಪಿಕ್ರೇಟನ್ನು ಮಿಶ್ರಣಗಳಿಂದ ಬೇರ್ಪಡಿಸಲು ಅನುಕೂಲವಾಗಿರುವುದು. ಹೀಗೆ ಬೇರ್ಪಡಿಸಿ ಶುದ್ಧಗೊಳಿಸಿದ ಈ ಪಿಕ್ರೇಟಿನ ಈಥರ್ ದ್ರಾವಣಕ್ಕೆ ಅಮೋನಿಯಂ ಹೈಡ್ರಾಕ್ಸೈಡನ್ನು ಹಾಕಿದಾಗ ಅಸಿನ್ಯಾಫ್ಥೀನ್ ಪುನರುತ್ಪತ್ತಿಯಾಗುವುದು.

ವ್ಯಾಟ್ ವರ್ಣದ್ರವ್ಯಗಳ ತಯಾರಿಕೆಯಲ್ಲಿ ಬೇಕಾಗುವ ಅಸಿನ್ಯಾಫ್ಥಕ್ವಿನೋನ್ ಸಂಯುಕ್ತದ ತಯಾರಿಕೆಯಲ್ಲಿ ಇದನ್ನು ಉಪಯೋಗಿಸುವರು. (ಜಿ.ವಿ.ಪಿ.)

**ಅಸಿಲಿಡೇ :** ಡಿಪ್ಟೆರ ಉಪವರ್ಗದ ಒಂದು ಕುಟುಂಬ. ರೂಢನಾಮ ದರೋಡೆ ನೊಣ; ಈ ನೊಣಗಳು ಕೆಚ್ಚೆದೆಯಿಂದ ಇತರ ಕೀಟಗಳ ರಕ್ತವನ್ನು ಹೀರುವುದರಿಂದ ಈ ಹೆಸರು. ಕೊಡತಿ ಹುಳುಗಳನ್ನು ಮುತ್ತಿ ನಾಶಮಾಡುತ್ತವೆ. ರೋಮಗಳ ಹೊದಿಕೆಯಿರುವ ದೊಡ್ಡ ದೇಹ. ಸುಮಾರು 1" ಉದ್ದ, ಬಣ್ಣ ಹಳದಿ; ಕೆಂಬಣ್ಣದ ದಪ್ಪ ಕಾಲುಗಳ ಮೇಲೆ ಕೂದಲಿನಂಥ ರಚನೆಗಳು; ಹೊಟ್ಟೆಯ ಕೆಳಭಾಗ ಕಪ್ಪು; ರೆಕ್ಕೆಗಳು ದೊಡ್ಡದಾಗಿವೆ, ಬಣ್ಣ ಕಂದು. ಈ ನೊಣದ ಮರಿಗಳು ತೇವದ ಭೂಮಿಯಲ್ಲಿ ವಾಸಮಾಡುತ್ತವೆ; ಇತರ ಜೀವಿಗಳನ್ನು ಕೊಂದು ತಿನ್ನುತ್ತವೆ. ಅಮೆರಿಕದ ಟ್ರಾನ್ಸ್‌ಪೇವಿಯ ಎಪಿಪೊರ ಎಂಬ ಪ್ರಭೇದ ಜೇನುನೊಣಗಳನ್ನೇ ತಿಂದು ಬದುಕುವುದು. (ಪಿ.ಎ.ಆರ್.)

**ಅಸೀರ್‌ಘರ್ :** ಮಧ್ಯಕಾಲೀನ ಭಾರತದ ಪ್ರಸಿದ್ಧ ಕೋಟೆ. ತಪತೀ ನದಿಯ ಬಳಿ ಸಾತ್ಪುರ ಪರ್ವತಶ್ರೇಣಿಯ ಮಧ್ಯಭಾಗದಲ್ಲಿದೆ. ಪಕ್ಕದ್ದೇ ಬರ್ಹಾಂಪುರ. ಇವುಗಳ ಪಕ್ಕದಲ್ಲಿದ್ದ ಖಾನದೇಶದ ದೊರೆ ನಾಸಿರ್ ಬರ್ಹಾಮ್ ಪಟ್ಟಣವನ್ನು ಅಭಿವೃದ್ಧಿಗೊಳಿಸಿ (1400) ಅಸೀರ್‌ಘರ್ ಅನ್ನು ಗೆದ್ದ. ಮುಂದೆ ಅಕ್ಬರನ ಕಣ್ಣು ಈ ಕೋಟೆಯಮೇಲೆ ಬಿತ್ತು. ಅದನ್ನು ವಶಪಡಿಸಿಕೊಳ್ಳಲು ಆತ ಬಹು ಸಾಹಸ ಮಾಡಿ ಖಾನದೇಶದ ಅಂದಿನ ದೊರೆ ಬಹದ್ದೂರ್ ಫರೂಕಿಯನ್ನು ಸೆರೆಹಿಡಿದು 1601 ರಲ್ಲಿ ವಶಪಡಿಸಿಕೊಂಡ.

ಈ ಪ್ರಖ್ಯಾತ ಕೋಟೆಯನ್ನು 18ನೆಯ ಶತಮಾನದ ಎರಡನೆಯ ದಶಕದಲ್ಲಿ ನಿಜಾಮ್–ಉಲ್–ಮುಲ್ಕನು ಮುತ್ತಿ ಮೊಗಲ ಪಕ್ಷದ ಸಯದ್ ಸೋದರರಿಂದ ಕಿತ್ತುಕೊಂಡ. 1756ರಲ್ಲಿ ಇದು ಮತ್ತೆ ನಿಜಾಮ ಸಲಬತ್‌ಜಂಗನ ವಶವಾಯಿತು. ಅನಂತರ 1760ರಲ್ಲಿ ಮರಾಠರಿಗೂ ಹೈದರಾಬಾದಿನವರಿಗೂ ನಡೆದ ಯುದ್ಧದ ಪರಿಣಾಮವಾಗಿ ಕೋಟೆ ಮರಾಠರ ವಶವಾಯಿತು. ಎರಡನೆಯ ಆಂಗ್ಲ–ಮರಾಠ ಯುದ್ಧಾನಂತರ ಕೋಟೆ ಇಂಗ್ಲಿಷರ ವಶವಾಯಿತು (1803). ಹೀಗೆ ಈ ಕೋಟೆಯ ಹಿಂದೆ 500 ವರ್ಷಗಳ ಚರಿತ್ರೆ ಅಡಗಿದೆ. (ಬಿ.ಕೆ.ಪಿ.)

**ಅಸುತೋಷ ಮುಖರ್ಜಿ :** 1864–1924. ಭಾರತೀಯ ಸಂಸ್ಕೃತಿಯ ಉಚ್ಚತಮ ಪ್ರತೀಕವಾಗಿದ್ದು ಉದ್ದಾಮ ಪಂಡಿತ, ದಕ್ಷ ಆಡಳಿತಗಾರ, ಸಮರ್ಥ ಉಪಕುಲಪತಿ ಎಂದು ಖ್ಯಾತಿ ಪಡೆದವರು. ಧರ್ಮಶ್ರದ್ಧೆಯನ್ನು ಹೊಂದಿದ್ದ ಬಂಗಾಲಿ ಬ್ರಾಹ್ಮಣ ವಿದ್ಯಾವಂತ ಕುಟುಂಬವೊಂದರಲ್ಲಿ ಜನಿಸಿದರು. ಬಾಲ್ಯದಲ್ಲೇ ಅಸಾಧಾರಣ ಪ್ರತಿಭೆಯನ್ನು ತೋರಿ ಕಲ್ಕತ್ತದ ಬಿ.ಎ. ಡಿಗ್ರಿ ಪಡೆದು ಮರುವರ್ಷವೇ ಗಣಿತ ಶಾಸ್ತ್ರ ತೆಗೆದುಕೊಂಡು ಎಂ.ಎ. ಪರೀಕ್ಷೆಯಲ್ಲಿ ಉಚ್ಚಸ್ಥಾನ ಗಳಿಸಿದರು (1884). ಸಂಸ್ಕೃತದಲ್ಲೂ ಪಾಂಡಿತ್ಯ ಗಳಿಸಿದರು. 1888ರಲ್ಲಿ ವಕೀಲಿವೃತ್ತಿಯನ್ನು ಪ್ರಾರಂಭಿಸಿದರು. 1889 ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಸದಸ್ಯರಾದರು. 1894ರಲ್ಲಿ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿ ಗಳಿಸಿದರು. 1899 ಮತ್ತು 1901ರಲ್ಲಿ ಬಂಗಾಲ ಶಾಸನ ಸಭೆಯ ಸದಸ್ಯರಾಗಿ ಆರಿಸಲ್ಪಟ್ಟರು. ಪಾಂಡಿತ್ಯ, ಕರ್ತವ್ಯನಿಷ್ಠೆಗಳನ್ನು ಕಂಡ ಸರ್ಕಾರ ಅವರಿನ್ನೂ 40 ವರ್ಷದವರಾಗಿದ್ದಾಗಲೇ ಕೋಲ್ಕತ್ತ ಶ್ರೇಷ್ಠನ್ಯಾಯಾಲದ ನ್ಯಾಯಾಧಿಪತಿಯನ್ನಾಗಿ ನೇಮಿಸಿತು. 19 ವರ್ಷಕಾಲ ಈ ಪೀಠವನ್ನಲಂಕರಿಸಿ ಅತ್ಯಂತ ಸಮರ್ಥ ಮತ್ತು ನ್ಯಾಯನಿಷ್ಠ ನ್ಯಾಯಾಧೀಶರೆಂದು ಹೆಸರುಗಳಿಸಿದರು. 1906ರಲ್ಲಿ



ಕಲ್ಕತ್ತ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಆರಿಸಲ್ಪಟ್ಟು ಎಂಟು ವರ್ಷ ಅದರ ಪ್ರಗತಿಗಾಗಿ ದುಡಿದರು. 1921–22ರಲ್ಲೂ ಅದೇ ಹುದ್ದೆಗೆ ಆರಿಸಲ್ಪಟ್ಟರು. 1902ರಲ್ಲಿ ಸ್ಥಾಪಿತವಾಗಿದ್ದ ವಿಶ್ವವಿದ್ಯಾಲಯಗಳ ನಿಯೋಗ ಆ ವಿದ್ಯಾಲಯಗಳ ಮೇಲೆ ಆಡಳಿತದ ಹತೋಟಿಯಿರಬೇಕೆಂದು ಮನವಿ ಮಾಡಿತ್ತು. ಇದು 1904ರಲ್ಲಿ ಕಾನೂನಾಗಿ ಹೊರಬಂತು. ವಿಶ್ವವಿದ್ಯಾಲಯ ಸರ್ಕಾರಿ ಹತೋಟಿಗೊಳಪಟ್ಟಿರಕೂಡದೆಂದು ಅಸುತೋಷರು ಕಾನೂನನ್ನು ಕಟುವಾಗಿ ವಿರೋಧಿಸಿದರು. ಸಿ. ವಿ. ರಾಮನ್ ಮುಂತಾದ ಪ್ರತಿಭಾವಂತ ಪ್ರಾಧ್ಯಾಪಕರನ್ನು ನೇಮಿಸಿಕೊಂಡು ಅವರಿಗೆಉತ್ತೇಜನಕೊಟ್ಟರು. ಅವರ ಆಡಳಿತದಲ್ಲಿ ಕಲ್ಕತ್ತ ವಿಶ್ವವಿದ್ಯಾಲಯ ನಾನಾಮುಖವಾಗಿ ಪ್ರಗತಿಹೊಂದಿತು.

**ಅಸುರ :** 1 ರಾಕ್ಷಸ. ಬ್ರಹ್ಮನ ಸೊಂಟದ ಪ್ರದೇಶದಿಂದ ಜನಿಸಿದ ಇವರು ಆತನೊಡನೆಯೇ ಕ್ರೀಡಿಸಲು ಹೋದಾಗ ಅವನು ತಾಳಲಾರದೆ ವಿಷ್ಣುವನ್ನು ಮೊರೆಹೊಕ್ಕು ಸಲಹೆ ಪಡೆದು, ಅದರಂತೆ ದೇಹತ್ಯಾಗ ಮಾಡಿ ದಿವ್ಯಸೌಂದರ್ಯವತಿಯಾದ ಹೆಣ್ಣೊಂದು ಆ ದೇಹದಿಂದ  ಸೃಷ್ಟಿಗೊಂಡಿತು. ಅಸುರರು ಅವಳನ್ನು ಪಡೆದು ತೆರಳಿದರು, ಭೂಮಿಯಲ್ಲಿ ರಾಜರಾಗಿ ಹುಟ್ಟಿದರು.

2. ಅನಾರ್ಯ. ಪುರಾತನ ಭಾರತೀಯರನ್ನು ಹೀಗೆ ಗುರುತಿಸುತ್ತಿದ್ದರು. ಅಹುರ ಎಂಬ ಪದ ಜರುತುಷ್ಟ್ರರಲ್ಲಿ ಪವಿತ್ರಾತ್ಮ ಎಂದು ಕರೆಸಿಕೊಳ್ಳುತ್ತಿದ್ದಂತೆ ಋಗ್ವೇದದಲ್ಲಿ ಅಸುರ ಎಂಬ ಪದವೂ ಕಾಣಸಿಗುತ್ತದೆ. ವರುಣ, ಅಗ್ನಿ, ಮಿತ್ರ, ಇಂದ್ರ ಮತ್ತು ಇತರ ಪ್ರಮುಖ ದೇವತೆಗಳು ಈ ಹೆಸರಿನಿಂದ ಕರೆಯಲ್ಪಡುತ್ತಿದ್ದ ಕಾಲವೊಂದಿತ್ತು. ಋಗ್ವೇದದ ಅನಂತರದ ಕಾಲಗಳಲ್ಲಿ ಮತ್ತು ಆರ್ಯರಿಗೆ ವಿರುದ್ಧವಾದ ಅಥರ್ವವೇದದಲ್ಲಿಯೂ ಕೂಡ ಈ ಪದ ಶುದ್ಧ ವಿರುದ್ಧಾರ್ಥವನ್ನು ಪಡೆದಿದೆ. ಟೈಟನ್ ಎಂಬ ಗ್ರೀಕ್ ಪುರಾಣದ ದೈತ್ಯ ದೇವತೆಗಳಿಗೆ ವೈರಿಯಾಗಿದ್ದುಕೊಂಡು ಅವರ ತ್ಯಾಗಗಳ ಕಾರಣದಿಂದ ಯಾವಾಗಲೂ ಅವರಿಗೆ ತೊಂದರೆ ಕೊಡುತ್ತಿದ್ದುದರ ಸೂಚ್ಯಾರ್ಥವನ್ನೂ ಈ ಪದ ಹೊಂದಿದೆ. ಅಸುರರು ಲೋಹಗೆಲಸಗಳಲ್ಲಿ ಪರಿಣತಿಹೊಂದಿದ್ದರು. ಇವರು ಮಂತ್ರಶಕ್ತಿಯನ್ನು ಹೊಂದಿದ್ದವರೆಂದು ಹೇಳುತ್ತಿದ್ದರು.

ಈ ಹೆಸರಿನ ಬಗ್ಗೆ ಅನೇಕ ಅಭಿಪ್ರಾಯಗಳು ಇವೆ. ಅಸ್ಸೀರಿಯನ್ನರ ದೇವರಾದ ಅಶುರ್ ಎಂಬುದರಿಂದ ಈ ಪದ ಬಂದಿರಬೇಕೆಂದು ಕೆಲವರು ಹೇಳುತ್ತಾರೆ. ಭಾರತದಲ್ಲಿ ಆರ್ಯರು ಅಸ್ಸೀರಿಯನ್ನರ ವೈರಿಗಳಾಗಿದ್ದರೆಂದು ತಿಳಿದುಬರುತ್ತದೆ. ಸುರಾ ಎಂಬ ಮದ್ಯವನ್ನು ಆರ್ಯರು ಹೆಚ್ಚು ಹೆಚ್ಚಾಗಿ ಕುಡಿಯುತ್ತಿದ್ದರೆಂದೂ ಇದನ್ನು ಕುಡಿಯದ ಅನಾರ್ಯರನ್ನು ಅ–ಸುರಾ ಎಂದು ಕರೆದರೆಂದೂ ಮತ್ತೆ ಕೆಲವರು ಹೇಳುತ್ತಾರೆ. ಬ್ರಹ್ಮನ ಉಸಿರಾಡುವಿಕೆ ಅಸು ಎನ್ನಿಸಿಕೊಳ್ಳುತಿದ್ದಿತೆಂದು ನಂಬುವ ಕೆಲವರು ಆ ಅಸುವೇ ಜೀವಿರೂಪ ಪಡೆದು ಅಸುರ ಎಂದಾಗಿದೆ ಎಂದೂ ಹೇಳುತ್ತಾರೆ. ಸುರಾ ಎಂಬ ಪದದ ವಿರುದ್ಧಾರ್ಥವನ್ನೂ ಕೊಡುವುದರಿಂದ ಈ ಪ್ರಯೋಗ ಸ್ವರ್ಗದಲ್ಲಿ ನೆಲೆಸಿರುವ ಕೆಳವರ್ಗದ ದೇವತೆಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಈ ಪದ ದೇವರಿಲ್ಲದ ವ್ಯಕ್ತಿ ಎಂದೂ ದೇವರಿಲ್ಲ ಎಂದೂ ಅರ್ಥೈಸುತ್ತದೆ. ಭಾರತದಲ್ಲೇ ನೆಲೆಸಿರುವ ಕೊಲೆರಿಯನ್ನರಿಗೆ ಇವರು ಹೋಲುತ್ತಾರೆಂದು ಆಧಾರಪೂರ್ವಕವಾಗಿ ಹೇಳಬಹುದಾದರೆ ಛೋಟಾ ನಾಗಪುರದ ಕೊಲೆರಿಯನ್ ವರ್ಗದವರು ಈಗಲೂ ಅಸುರ್ ಎಂದೇ ಕರೆಯಲ್ಪಡುವುದು ಗಮನಾರ್ಹ.

ಈ ಪದ ಅನಾರ್ಯರ ಇನ್ನೆರಡು ವರ್ಗಗಳಾದ ದಾನವ ಮತ್ತು ದೈತ್ಯರು ಎಂಬುವುಗಳಿಂದಲೂ ಸೂಚಿತವಾಗುತ್ತದೆ. ಪೌರಾಣಿಕವಾಗಿ ದಾನವರು ಕಶ್ಯಪ ಋಷಿಯ ದೈತ್ಯಶಿಶುಗಳು ಎನ್ನಿಸಿಕೊಳ್ಳುತ್ತಾರೆ. ದೈತ್ಯರು ಎಂಬುವರು ದಿತಿ ಎಂಬ ದೇವತೆಯಲ್ಲಿ ಕಶ್ಯಪ ಋಷಿಯಿಂದ ಜನಿಸಿದವರು. ದೈತ್ಯರೂ ದಾನವರೂ ಸಮುದ್ರದಂಥ ಭಯಂಕರ ರಾಕ್ಷಸರು ಎಂದು ಕೆಲವು ಸಲ ಹೇಳುತ್ತಾರೆ. ಚಂದ್ರಲೋಕದಿಂದ ಬಂದ ಅರ್ವನ್ ಎಂಬ ರೆಕ್ಕೆಯುಳ್ಳ ಯುದ್ಧಾಶ್ವಗಳು ದೈತ್ಯರವಾಗಿದ್ದುವು.

ಅಸುರರ ಉಪಕಥೆಗಳಿಂದಲೂ ಅವರು ದೇವತೆಗಳೊಡನೆ ನಡೆಸಿಧ ಹೋರಾಟಗಳಿಂದಲೂ ಹಿಂದೂ ಪುರಾಣಗಳು ತುಂಬಿಹೋಗಿವೆ. ವೇದಗಳ ಕಾಲದಲ್ಲಿ ಇಂದ್ರನಿಂದಲೂ ಮಹಾಕಾವ್ಯಗಳ ಕಾಲದಲ್ಲಿ ರಾಮ ಮತ್ತು ಕೃಷ್ಣರಿಂದಲೂ ಇವರು ವಿರೋಧಿಸಲ್ಪಡುತ್ತಿದ್ದರು. ಹಿಂದೂ ಪುರಾಣಗಳಲ್ಲಿ ಚಿತ್ರಿಸಿರುವಂತೆ ಅಸುರ ಚರಿತ್ರೆಯಲ್ಲೇ ಸಹಜ ಕ್ರಾಂತಿಯನ್ನುಂಟು ಮಾಡಿದಂಥ ಪ್ರಮುಖರು ಇವರು : ಅಂಧಕ, ಜಯ ಮತ್ತು ವಿಜಯ, ಕಾಲನೇಮಿ, ಕೇಶಿ, ಮಧು, ಮಹಿಷ, ಮಾಯ, ನಮುಚಿ, ನಿಕುಂಭ, ಶಂಬರ, ವೈಶ್ವಾನರ, ವೃತ್ರ. *

**ಅಸೆಂಟ್ ಆಫ್ ಎಫ್ 6, ದಿ :** ಇಂಗ್ಲಿಷ್ ನಾಟಕಕಾರರಾದ ಡಬ್ಲ್ಯು. ಎಚ್. ಆಡನ್ ಮತ್ತು ಸಿ. ಇಷರ್‌ವುಡ್ ಬರೆದ ಖ್ಯಾತ ಪ್ರತೀಕನಾಟಕ. ಇಂಗ್ಲೆಂಡಿಗೆ ಸೇರಿದ ವಸಾಹತು ಸೂಡೋಲ್ಯಾಂಡಿನ ಗಡಿಯಲ್ಲಿನ ಬೆಟ್ಟಸಾಲಿನ ಅತಿ ಎತ್ತರದ ಶಿಖರ ಎಫ್ 6 ಅನ್ನು ಹತ್ತಿದವರಿಗೆ ಸುತ್ತುಮುತ್ತಲಿನ ಪ್ರದೇಶವೆಲ್ಲ ದೊರಕುವುದೆಂಬುದು ನಂಬಿಕೆ. ಇದನ್ನು ಹತ್ತಲು ಇಂಗ್ಲೆಂಡಿನವರಿಗೂ ಆಸ್‌ಟ್ನಿಯಾದವರಿಗೂ (ಕಲ್ಪಿತ ಹೆಸರು) ಸ್ಪರ್ಧೆ. ಮೈಕಲ್ ರ್‍ಯಾನ್‌ಸಮ್ ಎನ್ನುವ ಸಾಹಸಿಗನಿಗೆ ಈ ಕಾರ್ಯವನ್ನು ಕೈಗೊಳ್ಳುವ ಮನಸ್ಸಿರುವುದಿಲ್ಲ. ಅವನ ಸೋದರ ಜೇಮ್ಸ್, ನಾಡಿನ ಮಹಿಳೆಯರ ಪರವಾಗಿ ಇಸಬೆಲ್, ಅವನ ತಾಯಿ ಎಲ್ಲರೂ ಇದನ್ನು ಕೈಗೊಳ್ಳುವಂತೆ ಪ್ರೇರೇಪಿಸುತ್ತಾರೆ. ಹೀಗೆ ಪ್ರೇರೇಪಿತನಾಗಿ ಅವನೂ ನಾಲ್ವರು ಜೊತೆಗಾರರೂ ಈ ಸಾಹಸವನ್ನು ಕೈಗೊಳ್ಳುತ್ತಾರೆ. ಜೊತೆಯವರಲ್ಲಿ ಮೂವರು ಸಾಯುತ್ತಾರೆ. ಆಸ್‌ಟ್ನಿಯಾದವರಿಗಿಂತ ಮೊದಲೆ ರ್‍ಯಾನ್‌ಸಮ್ ಶಿಖರದ ಮೇಲೆ ಕಾಲಿಡುತ್ತಾನೆ. ನಾಡೆಲ್ಲ ಸಂಭ್ರಮಪಡುತ್ತಿರುವಾಗಲೆ ಶಿಖರದ ಕೋಡುಬಂಡೆಯ ಮೇಲೆ ಸತ್ತುಬೀಳುತ್ತಾನೆ. ಆ ಶಿಖರದ ಅಸೆಂಟ್–ಏರುವಿಕೆ–ಒಂದು ಬಗೆಯ ಅನ್ವೇಷಣೆ. ರ್‍ಯಾನ್‌ಸಮ್‌ಗೆ ಕಡೆಯ ಗಳಿಗೆಯಲ್ಲಿ ಈ ಅನ್ವೇಷಣೆಯ ಫಲ–ಆತ್ಮಜ್ಞಾನ–ದೊರೆಯುತ್ತದೆ. ಹಲವು ಆಹುತಿಗಳನ್ನು ತೆಗೆದುಕೊಂಡ ಭೂತವು ಸ್ವಾಭಿಮಾನ ಎನ್ನುವುದರ ಅರಿವಾಗುತ್ತದೆ. ಶಿಖರದ ಆರೋಹಣ ಆತ್ಮಸಂಯಮದ ಸಂಕೇತ. ಅಧಿಕಾರದ ಹಂಬಲ, ಅಂತಾರಾಷ್ಟ್ರೀಯ ಪರಿಸ್ಥಿತಿ ಎಲ್ಲವೂ ಈ ಪ್ರಯತ್ನಕ್ಕೆ ಕಾರಣ. ಈ ಯಾತ್ರೆಯು ಸುಪ್ತ ಪ್ರಜ್ಞೆಯೊಳಕ್ಕೆ ಪ್ರಯಾಣವೂ ಆಗುತ್ತದೆ. ರಂಗಭೂಮಿಯ ಅಕ್ಕಪಕ್ಕದಲ್ಲಿರುವವನಿಗೆ ಆಕಾಶವಾಣಿಯು ಏನು ನಡೆಯುತ್ತಿದೆ ಎನ್ನುವುದನ್ನು ಬಿತ್ತರಮಾಡುತ್ತದೆ. ನಾಯಕನು ಉದ್ಧಾರಕನಾಗಿ ಬಲಿದಾನ ಮಾಡುತ್ತಾನೆ. ಕೃತಿಯಲ್ಲಿ ರಾಜಕೀಯ ಮತ್ತು ಸಾಮಾಜಿಕ ಅರ್ಥಗಳೂ ಧ್ವನಿತವಾಗುತ್ತವೆ. ಎ ದಂಪತಿಗಳ ಚಿತ್ರ ಆಧುನಿಕ ನಾಗರಿಕಜೀವನ, ಆಡಳಿತವ್ಯವಸ್ಥೆ ಇವು ಜನಸಾಮಾನ್ಯಕ್ಕೆ ತಂದಿತ್ತ ಬರಡುಜೀವನವನ್ನು ಪ್ರತಿಬಿಂಬಿಸುತ್ತದೆ. (ಎಲ್.ಎಸ್.ಎಸ್.)

**ಅಸೋಸಿಯೇಟೆಡ್ ಪ್ರೆಸ್ ಆಫ್ ಅಮೆರಿಕ :** ವಾರ್ತೆಗಳನ್ನು ಸಂಗ್ರಹಿಸಿ ಪತ್ರಿಕೆಗಳಿಗೂ ಇತರ ಸಮೂಹದ ಸಂಪರ್ಕ ವ್ಯವಸ್ಥೆಗಳಿಗೂ ಹಂಚುವ ಪ್ರಪಂಚದ ಸಹಕಾರಿ ವಾರ್ತಾ ಸಂಸ್ಥೆಗಳಲ್ಲಿ ಅತ್ಯಂತ ದೊಡ್ಡದು. ಅಮೆರಿಕದ ಅನೇಕ ವಾರ್ತಾವಿತರಣ ಸಂಸ್ಥೆಗಳ ಸಡಿಲ ಒಕ್ಕೂಟದಲ್ಲಿ ಒಂದಾಗಿದ್ದ ವೆಸ್ಟರ್ನ್ ಅಸೋಸಿಯೇಟೆಡ್ ಪ್ರೆಸ್ ಸುದ್ದಿಗಳ ಹಂಚಿಕೆ ಕೇವಲ ನ್ಯೂಯಾರ್ಕ್‌ನ ಪತ್ರಿಕೆಗಳಿಗೆ ಪರಿಮಿತವಾಗಿದೆಯೆಂಬ ಭಾವನೆಯಿಂದ ಹೊರಬಂದು, 1892ರಲ್ಲಿ ಅಸೋಸಿಯೇಟೆಡ್ ಪ್ರೆಸ್ ಎಂಬ ಹೆಸರಿನಿಂದ ಕೆಲಸಮಾಡತೊಡಗಿತು. ಪ್ರಾರಂಭದಲ್ಲಿ ಯುರೋಪಿನ ಮತ್ತು ಕಾಮನ್‌ವೆಲ್ತ್‌ನ ಸುದ್ದಿಗಳಿಗಾಗಿ ರಾಯಿಟರ್ಸ್ ಹಾಗೂ ಇತರ ಸುದ್ದಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. 1934ರಲ್ಲಿ ವಿದೇಶ ವಾರ್ತೆಗಳಿಗೆ ಸ್ವಂತವಾದ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಆರಂಭಿಸಿತು. ಅಮೆರಿಕದಿಂದ ಯುರೋಪಿಗೆ ತಂತಿ ಸಂಪರ್ಕಗಳನ್ನು ಗುತ್ತಿಗೆಗೆ ಪಡೆಯಿತು. ಈಗ ಪ್ರಪಂಚದ ಎಲ್ಲ ಮುಖ್ಯ ಸ್ಥಳಗಳಲ್ಲೂ ಈ ಸಂಸ್ಥೆಯ ಅಂಗ ಕಚೇರಿಗಳಿವೆ, ಇಲ್ಲವೆ ಪ್ರತಿನಿಧಿಗಳಿದ್ದಾರೆ; ಟೆಲಿಪ್ರಿಂಟರುಗಳ ವ್ಯವಸ್ಥೆಯಿದೆ. 1935ರಲ್ಲಿ ಟೆಲಿಗ್ರಾಫ್ ತಂತಿಗಳ ಮೂಲಕ ವಿದ್ಯುತ್ ಪ್ರೇರಣೆಗಳಿಂದ ಛಾಯಾಚಿತ್ರಗಳನ್ನು ಪ್ರಕ್ಷೇಪಿಸುವ ಕಾರ್ಯ ಆರಂಭವಾಯಿತು. ಸಂಸ್ಥೆಯ ಪ್ರಚಲಿತ ಆಯವ್ಯಯ ವರ್ಷಕ್ಕೆ 33,000,000 ಡಾಲರುಗಳಿಗೂ ಹೆಚ್ಚು. ಸು. 7,000 ಪತ್ರಿಕೆಗಳು ಈ ಸಂಸ್ಥೆಯ ಸುದ್ದಿಗಳಿಗೂ ಸು. 5,000 ಪತ್ರಿಕೆಗಳು ಛಾಯಾಚಿತ್ರಗಳಿಗೂ ಚಂದಾದಾರರಾಗಿವೆ. (ಕೆ.ಎಸ್.ಆರ್.ಎಂ.)

**ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯ :** ಭಾರತೀಯರೇ ಸ್ಥಾಪಿಸಿದ ಪ್ರಪ್ರಥಮ ಸುದ್ದಿ ಸಂಸ್ಥೆ (ಎಪಿಐ). ಭಾರತೀಯರು ತಾವೇ ತಮ್ಮ ಸ್ವಂತ ಸುದ್ದಿಸಂಸ್ಥೆಯನ್ನು ಸ್ಥಾಪಿಸುವ ಆಲೋಚನೆ ಮಾಡಿದುದರ ಫಲವಾಗಿ, ಕಲ್ಕತ್ತ ಮತ್ತು ಸಿಮ್ಲಾ ನಗರಗಳಲ್ಲಿ ವಿಶೇಷ ಸುದ್ದಿಗಾರನಾಗಿ ಕೆಲಸ ಮಾಡುತ್ತಿದ್ದ ನುರಿತ ಪತ್ರಿಕೋದ್ಯಮಿ ಕೆ. ಸಿ. ರಾಯ್ ಈ ಸುದ್ದಿ ಸಂಸ್ಥೆಯನ್ನು ಸ್ಥಾಪಿಸಿ ಕೀರ್ತಿಗಳಿಸಿದ. ರಾಯ್ ವಿದೇಶೀ ಸುದ್ದಿಸಂಸ್ಥೆಗಳು ಕೆಲಸಮಾಡುವ ರೀತಿಯನ್ನು ಅಭ್ಯಾಸಮಾಡಿ, ತಂತಿ ಸುದ್ದಿಗಳನ್ನು ಸುಲಭಬೆಲೆಗೆ ಹೇಗೆ ಒದಗಿಸಬೇಕೆಂಬ ಬಗ್ಗೆ ಆಲೋಚನೆಮಾಡಿದ. 1910ನೆಯ ಇಸವಿಯಲ್ಲಿ ಕಲ್ಕತ್ತ ನಗರದಲ್ಲಿ ಕೇಂದ್ರ ಕಚೇರಿ ತೆರೆಯಲಾಯಿತು. ಮದರಾಸ್, ಬೊಂಬಾಯಿ ನಗರಗಳಲ್ಲಿ ಉಪ ಶಾಖೆಗಳೇರ್ಪಟ್ಟುವು. ರಾಯ್‌ನ ಪ್ರಯತ್ನ ಮತ್ತು ಪ್ರಭಾವದ ಕಾರಣವಾಗಿ ಭಾರತದ (ಅಂಚೆ) ತಂತಿಯ ಕಾನೂನು ತಿದ್ದುಪಡಿಯಾಗಿ, ಪತ್ರಿಕೆಗಳಿಗೆ ಸುದ್ದಿಗಳನ್ನು ಕಳುಹಿಸುವ ತಂತಿಗಳಿಗೆ ಕೊಡುವ ಬೆಲೆಯ ದರವನ್ನು ಇಳಿಸಲಾಯಿತು. ಇದರಿಂದ ದೇಶದಾದ್ಯಂತ ಸುಲಭ ಖರ್ಚಿನಲ್ಲಿ, ಬಹುಬೇಗ ಸುದ್ದಿ ಸಮಾಚಾರಗಳನ್ನು ತಲುಪಿಸುವ ಏರ್ಪಾಡಾಯಿತು. ವ್ಯವಸ್ಥಾಪಕ ಸಂಚಾಲಕನಾಗಿ ರಾಯ್ ಈ ಸುದ್ದಿಸಂಸ್ಥೆಯನ್ನು ಶ್ರದ್ಧೆಯ ದುಡಿಮೆಯಿಂದ ಜನಪ್ರಿಯವನ್ನಾಗಿ ಮಾಡಿದ. (ಎಸ್.ಕೆ.)

**ಅಸ್ಗ್ರಿಮ್‌ಸನ್, ಐಸ್ಟೀನ್ :** 14ನೆಯ ಶತಮಾನದ ನಾರ್ವೆ ದೇಶದ ಕವಿ. ಆ ಕಾಲಾವಧಿಯಲ್ಲಿ ನಾರ್ವೆಯ ಸಾಹಿತ್ಯ ತೀರಾ ಕ್ಷೀಣದೆಸೆಗಿಳಿದಿತ್ತು. ಆಗ ರಚಿತವಾದ ಕೆಲವೇ ಕೃತಿಗಳಲ್ಲಿ ಹೆಸರಿಸಬಹುದಾದುವೆಂದರೆ ಸನ್ಯಾಸಿ ಐಸ್ಟೀನ್‌ನ ಲಿಲ್ಜಾ. ಧಾರ್ಮಿಕವಸ್ತುವನ್ನುಳ್ಳ ಈ ಕವನದಲ್ಲಿ ಅಭಿವ್ಯಕ್ತವಾಗಿರುವ ಲೇಖಕನ ಸೃಜನಶಕ್ತಿ ಮತ್ತು ವ್ಯಕ್ತಿತ್ವಗಳು ವಿಶಿಷ್ಟವೂ ಅಸಾಧಾರಣವೂ ಆಗಿವೆ. (ಎಂ.ಆರ್.)

**ಅಸ್ಟ್ರಲೋಪಿತಕಸ್ :** 4–20 ಲಕ್ಷ ವರ್ಷಗಳ ಹಿಂದೆ ಪ್ಲೀಯಿಸ್ಟೊಸೀನ್ ಮೊದಲ ಭಾಗದಲ್ಲಿ ದಕ್ಷಿಣ ಮತ್ತು ಪೂರ್ವ ಆಫ್ರಿಕದ ಬಯಲುಗಳಲ್ಲಿ ಹರಡಿದ್ದ ಒಂದು ವಾನರ ಜಾತಿ. ಈ ಪ್ರದೇಶದ ಹಲವಾರು ಸುಣ್ಣಕಲ್ಲು ಗುಹೆಗಳಲ್ಲಿ ಇದರ ಪಳೆಯುಳಿಕೆಗಳು

ದೊರೆತಿವೆ. ಇತರ ಕಪಿಗಳಂತಲ್ಲದೆ, ಇದು ಮನುಷ್ಯನ ರೀತಿಯ ದ್ವಿಪಾದ ಚಾರಿ. ತಲೆಬುರುಡೆಯ ಮಾಟ, ಹಲ್ಲಿನ ಜೋಡಣೆ ಮುಂತಾದ ಇತರ ವಿಷಯಗಳಲ್ಲೂ ಇದು ನರಜಾತಿಗೆ ಸಮೀಪದಲ್ಲಿರುವುದರಿಂದ ಇದನ್ನು ಸಮೀಪನರನೆಂದೂ ಪ್ರಾಕ್ತನಶಾಸ್ತ್ರಜ್ಞರು ಕರೆಯುತ್ತಾರೆ. ಈ ಸಂತತಿಯ ಕಪಿಗಳು ಬಹುಸಾಮಾನ್ಯತರದ ಒರಟು ಶಿಲೋಪಕರಣ ಗಳನ್ನು ಉಪಯೋಗಿ ಸುತ್ತಿದ್ದಿರಬಹುದೆಂದು ಎಡ್ವರ್ಡ್ ಲೀಕಿಯವರ ಸಂಶೋಧನೆ ಗಳಿಂದ ಗೊತ್ತಾಗಿದೆ. ನಿಜಮಾನವನ ವಿಕಾಸದಲ್ಲಿ ಈ ಜಾತಿ ಒಂದು ಮಧ್ಯಘಟ್ಟವೋ ಅಥವಾ ವಿಕಾಸ ಕಾಂಡದಿಂದ ಒಡೆದು ಮಧ್ಯದಲ್ಲೇ ಅಳಿದುಹೋದ ಒಂದು ಕವಲೋ ಎಂಬುದು ಇನ್ನೂ ಅನಿರ್ದಿಷ್ಟ

ಮೊಟ್ಟಮೊದಲು ಡಾರ್ಟ್ 1924ರಲ್ಲಿ ಬೆಕುವಾನ ಲ್ಯಾಂಡ್‌ನಲ್ಲಿನ (ಆಫ್ರಿಕ) ಟಾಂಗ್ಸ್ ಸುಣ್ಣಕಲ್ಲಿನಲ್ಲಿ ಈ ಗುಂಪಿಗೆ ಸೇರಿದ ತಲೆ ಬುರುಡೆಯ ಪಳೆಯುಳಿಕೆಯನ್ನು ಕಂಡುಹಿಡಿದರು. ಅದಕ್ಕೆ ಅವರು ಅಸ್ಟ್ರಲೋಪಿತಕಸ್ ಎಂದು ನಾಮಕರಣ ಮಾಡಿದರು. 1936–51ರಲ್ಲಿ ರಾಬರ್ಟ್ ಬ್ರೂಂ ಟ್ರಾನ್ಸ್‌ವಾಲ್‌ನಲ್ಲಿ ಕೆಲವು ತಲೆಬುರುಡೆ ಗಳನ್ನು ಕಂಡುಹಿಡಿದರು. ಎಡ್ವರ್ಡ್ ಮತ್ತು ಮೇರಿಲೀಕಿಯವರು ಟಾಂಗ ನೀಕದ ಓಲ್ಡುವೆ ಕಣಿವೆಯಲ್ಲಿ 1956ರಲ್ಲಿ ಕಂಡುಹಿಡಿದ ಜಿಂಜಾಂತ್ರಪಸ್ ತಲೆಬುರುಡೆಯೂ ಇದೇ ಗುಂಪಿಗೆ ಸೇರಿದುದೆಂದು ಅನೇಕ ವಿಜ್ಞಾನಿಗಳ ಅಭಿಪ್ರಾಯ.

ಮಿದುಳು 600–700 ಕ್ಯೂಬಿಕ್ ಸೆಂಮೀ ಇದ್ದಾಗ್ಯೂ (ಬಾಲವಿಲ್ಲದ ಮಂಗಗಳಿಗೆ ಇಷ್ಟೇ ಇದೆ) ಜಿಂಜಾಂತ್ರಪಸ್ ಕಲ್ಲಿನ ಉಪಕರಣಗಳನ್ನು ಮಾಡುವ ಶಕ್ತಿಯನ್ನು ಹೊಂದಿತ್ತು. ಲೀಕಿಯವರು ಇದರ ತಲೆಬುರುಡೆಯ ಪಳೆಯುಳಿಕೆಯ ಜೊತೆಯಲ್ಲಿ ಸಿಕ್ಕಿದ ಕಲ್ಲಿನ ಉಪಕರಣಗಳನ್ನು ಶೇಖರಿಸಿದರು. ಅಸ್ಟ್ರಲೋಪಿತಕಸ್ ಗುಂಪು ಮೈದಾನದಲ್ಲಿ ಮರವನ್ನು ತ್ಯಜಿಸಿ ಮಾನವನಂತೆ ಎರಡು ಕಾಲುಗಳ ಮೇಲೆ ನೆಟ್ಟಗೆ ನಡೆಯುತ್ತಿದ್ದುದರಿಂದ ಅವು ತಮ್ಮ ಆಹಾರಕ್ಕಾಗಿ ಬ್ಯಾಬೂನ್, ಮೊಲ ಮೊದಲಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದುವು. (ಎಸ್.ಎಂ.)

**ಅಸ್ಟ್ರೊಕ್ಯಾರಿಯಮ್ :** ಅರಕೇಸಿ ಕುಟುಂಬದ ಬ್ಯಾಕ್ಟರಿಡೆ ಜಾತಿಯ ಸುಂದರವಾದ ಮರ. ಗ್ರೀಕ್ ಭಾಷೆಯಲ್ಲಿ ಅಸ್ಟ್ರೋನ್ ಎಂದರೆ ನಕ್ಷತ್ರ; ಕ್ಯಾರಿಯೋನ್ ಎಂದರೆ ಬೀಜ ಎಂದರ್ಥ. ಸಸ್ಯಗಳ ಬೀಜಗಳ ಮೇಲೆ ನಕ್ಷತ್ರದ ಗುರುತು ಇರುವುದರಿಂದ ಹೆಸರು ಅನ್ವರ್ಥಕವಾಗಿದೆ. ಈ ಜಾತಿಯಲ್ಲಿ ಮಧ್ಯಮ ಎತ್ತರದಿಂದ ಗಿಡ್ಡಸಸ್ಯಗಳವರೆಗೂ ಉಂಟು. ಕೆಲವು ಗಿಡ್ಡಜಾತಿ ಸಸ್ಯಗಳನ್ನು ಕುಂಡಗಳಲ್ಲಿ ಬೆಳೆಸಿ ಮನೆಗಳ ಮುಂದೆ ಅಲಂಕಾರ ಸಸ್ಯಗಳಾಗಿ ಬೆಳೆ ಇಡುತ್ತಾರೆ.

ಅಸ್ಟ್ರೊಕ್ಯಾರಿಯಮ್ ಜಾತಿಯಲ್ಲಿ 40 ಪ್ರಭೇದಗಳಿವೆ. ಇವುಗಳ ಎಲೆ ತುದಿಯಲ್ಲಿವೆ. ಭರ್ಜಿಯಾಕಾರವಾಗಿ ಲಂಬಾಗ್ರತುದಿಯನ್ನು ಹೊಂದಿವೆ. ತಳಭಾಗದ ಬಿಳಿಯ ಗರಿಗಳು ಬೀಸಣಿಗೆಯಾಕಾರದಲ್ಲಿವೆ. ಹೂಗೊಂಚಲನ್ನು ಬಿಟ್ಟು ಮಿಕ್ಕ ಎಲ್ಲ ಭಾಗಗಳಲ್ಲೂ ಮುಳ್ಳು ಇರುತ್ತವೆ. ಹೂಗೊಂಚಲ ಕವಚ ಇಬ್ಭಾಗವಾಗಿದೆ. ಹೂಗೊಂಚಲು ಬುಡದಲ್ಲಿ ದಪ್ಪವಾಗಿದ್ದು ತುದಿಯ ಕಡೆಗೆ ಹೋದಂತೆ ಸಣ್ಣವಾಗುವ ಸ್ಪೆಡಿಕ್ಸ್ ಮಾದರಿಯಲ್ಲಿದೆ. ಲಿಂಗ ಪ್ರತ್ಯೇಕ. ಗಂಡು ಹೂಗಳು ಹೆಣ್ಣು ಹೂಗಳಿಗಿಂತ ಸಂಖ್ಯೆಯಲ್ಲಿ ಅಧಿಕವಾಗಿರುತ್ತವೆ.

ಅಸ್ಟ್ರೊಕ್ಯಾರಿಯಮ್ ಮುರು ಮುರು: ಈ ಪ್ರಭೇದದ ಸಸ್ಯ ಸು. 12'–16' ಎತ್ತರ ಬೆಳೆಯುತ್ತದೆ. ಇದರ ಗರಿಗಳು ಸು. 12' ಯಷ್ಟು ಉದ್ದವಾಗಿ ಭರ್ಜಿಯಾಕಾರವಾಗಿರುತ್ತವೆ. ಮೇಲುಭಾಗ ಹಸಿರಾಗಿಯೂ ತಳಭಾಗ ಬಿಳುಪಾಗಿಯೂ ಇರುತ್ತವೆ. ಸಸ್ಯದ ಮೇಲೆ 1y' ಉದ್ದವಾದ ಮುಳ್ಳು ಇದೆ. ಇದು ಬ್ರೆಜಿಲ್ ದೇಶದ ಮೂಲವಾಸಿ.

ಅಸ್ಟ್ರೊಕ್ಯಾರಿಯಮ್ ಅರ್ಜೆನ್‌ಷಿಯಮ್ ಎಂಬುದು ಇನ್ನೊಂದು ಪ್ರಭೇದ. ಇದರ ಗರಿಯ ತೊಟ್ಟು ಮತ್ತು ಕಿರುಗರಿಗಳ ತಳಭಾಗ ಬಿಳಿಯ ಧೂಳಿನಿಂದ ಕೂಡಿವೆ. ಗರಿ ಕಮಾನಿನಂತೆ ಬಾಗಿದೆ. ಗರಿ ತೊಟ್ಟುಗಳಲ್ಲಿ ಅಸಂಖ್ಯಾತ ಕಪ್ಪುಬಣ್ಣದ ಮುಳ್ಳುಗಳಿವೆ. ಇದರ ಉಗಮಸ್ಥಾನ ಕೊಲಂಬಿಯ ದೇಶ.

ಅಸ್ಟ್ರೊಕ್ಯಾರಿಯಮ್ ಮೆಕ್ಸಿಕ್ಯಾನಮ್ ಎಂಬುದು ಮತ್ತೊಂದು ಪ್ರಭೇದ. ಇದು 4'–6' ಎತ್ತರ ಬೆಳೆಯುತ್ತದೆ. ಇದರ ಕಾಂಡ ಕೊಳವೆಯಾಕಾರವಾಗಿದ್ದು ಅದರ ಮೇಲೆ ಎರಡು ತುದಿಯಿರುವ ಮುಳ್ಳುಗಳು ಇವೆ. ಗರಿತೊಟ್ಟುಗಳಿಗೆ ನಾಲ್ಕು ಮುಖಗಳಿವೆ. ಇದರಲ್ಲಿ ಒತ್ತಾಗಿ ಹಿಂದಕ್ಕೆ ಬಾಗಿದ ಕಪ್ಪುಮುಳ್ಳುಗಳು ಇರುತ್ತವೆ. ಕಿರುಗರಿಗಳು 1y' ಉದ್ದ 1' ಅಗಲವಾಗಿ ಪರ್ಯಾಯವಾಗಿ ಜೋಡಣೆಯಾಗಿವೆ. ಅವು ನೀಳಾಕಾರವಾಗಿದ್ದು ಮೊನಚು ತುದಿಯನ್ನು ಹೊಂದಿವೆ. ಅವುಗಳ ಬಿಳಿಯ ತಳಭಾಗದ ಅಂಚುಗಳಲ್ಲಿ ಉದುರುವ ಕಪ್ಪುಮುಳ್ಳುಗಳು ಇವೆ. ಇದು ಮೆಕ್ಸಿಕೊ ದೇಶದ ಮೂಲವಾಸಿಯಾದ್ದರಿಂದ ಇದಕ್ಕೆ ಅಸ್ಟ್ರೊಕ್ಯಾರಿಯಮ್ ಮೆಕ್ಸಿಕ್ಯಾನಮ್ ಎಂಬ ಹೆಸರು ಬಂದಿದೆ. **ನೋಡಿ: ಪಾಮ್ಸ್.** (ಡಿ.ಎಂ.)

**ಅಸ್ತಿತ್ವವಾದ :** 20ನೆಯ ಶತಮಾನದ ಪಾಶ್ಚಾತ್ಯ ಚಿಂತನೆಗಳ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವ ಬೀರಿರುವ ವಾದ (ಎಕ್ಸಿಸ್ಟೆನ್ಷಿಯಲಿಸಂ). ಇದು ಮನುಷ್ಯನ ಸಾಂಪ್ರದಾಯಿಕ, ನೈತಿಕ ಮತ್ತು ಆಧ್ಯಾತ್ಮಿಕ ಚೌಕಟ್ಟನ್ನೇ ಚೂರು ಚೂರು ಮಾಡಿದೆ; ಅಸ್ತಿತ್ವವಾದದ ಪ್ರತಿಪಾದಕರಲ್ಲಿ ಕ್ರೈಸ್ತಧರ್ಮದಲ್ಲಿ ನಂಬಿಕೆಯುಳ್ಳವರೂ ನಿರೀಶ್ವರವಾದಿಗಳೂ ಮಾರ್ಕ್ಸ್‌ವಾದಿಗಳೂ ಇದ್ದಾರೆ. ತತ್ತ್ವಶಾಸ್ತ್ರದ ಕ್ಲಾಸಿಕಲ್ ಸಂಪ್ರದಾಯದಿಂದಲೂ ಆಧುನಿಕ ವಿಶ್ಲೇಷಣಾತ್ಮಕ ವಿಚಾರಧಾರೆಯಿಂದಲೂ ಬೇರೆಯಾಗಿರುವ ಅಸ್ತಿತ್ವವನ್ನು ಕುರಿತ ಇದು ಒಂದು ಕ್ರಮಬದ್ಧವಾದ ಶಾಸ್ತ್ರ ಎನ್ನುವುದಕ್ಕಿಂತ, ಒಂದು ದೃಷ್ಟಿಕೋನ ಎನ್ನಬಹುದು ಎಂದು ಇದನ್ನು ಶಾಸ್ತ್ರವಾಗಿಸಲು ಇಚ್ಛಿಸದ ಅಸ್ತಿತ್ವವಾದಿಗಳು ಹೇಳುತ್ತಾರೆ.

ಕ್ರೈಸ್ತ ಅಸ್ತಿತ್ವವಾದ ಡೆನ್ಮಾರ್ಕಿನ ಸೊರೆನ್‌ಕೀರ್ಕೆಗಾರ್ಡ್‌ನಿಂದ (1813–55) ಪ್ರತಿಪಾದಿತವಾಯಿತು. ಇವನೇ ಅಸ್ತಿತ್ವ ಎನ್ನುವ ಪದಕ್ಕೆ ಅಸ್ತಿತ್ವವಾದದ ಎಲ್ಲ ವಿಶೇಷಾರ್ಥಗಳೂ ಬರುವಂತೆ ಪ್ರಥಮವಾಗಿ ಪಾರಿಭಾಷಿಕ ಪದವಾಗಿ ಬಳಸಿದವನು. ಇಂಗ್ಲಿಷಿನ ಎಕ್ಸಿಸ್ಟೆನ್ಷಿಯಲಿಸಂ ಎಂಬ ಪದ ಜರ್ಮನ್ ಭಾಷೆಯ ಎಕ್ಸಿಸ್ಟೆನ್ಜ್ ಫಿಲಾಸಫಿ ಎಂಬುದಕ್ಕೆ ಸಮಾನಾರ್ಥಕವಾಗಿ ಬಳಕೆಯಾಯಿತು. ಎಕ್ಸಿಸ್ಟೆನ್ಜ್ ತತ್ತ್ವಶಾಸ್ತ್ರದಲ್ಲಿ ಪಾರಿಭಾಷಿಕ ಪದವಾಗಿ ಒಂದನೆಯ ಮಹಾಯುದ್ಧದ ಅನಂತರ ಜರ್ಮನಿಯಲ್ಲಿ ಪ್ರಯೋಗವಾಗಲು ಪ್ರಾರಂಭವಾಯಿತು. ಸಾಮಾನ್ಯಾರ್ಥದಲ್ಲಿ ಮನುಷ್ಯ, ಪ್ರಾಣಿ, ವಸ್ತು–ಇವುಗಳ ಇರುವಿಕೆಯನ್ನು ಸೂಚಿಸಲು ಅಸ್ತಿತ್ವ ಎಂಬ ಪದ ಬಳಸುತ್ತೇವೆ. ಆದರೆ ಅಸ್ತಿತ್ವವಾದದ ಅರ್ಥದಲ್ಲಿ, ಮನುಷ್ಯ ಮಾತ್ರ ಅಸ್ತಿತ್ವ ಉಳ್ಳವನು: ಇಲ್ಲಿ ಈ ಪದ, ವ್ಯಕ್ತಿ ಅನನ್ಯ, ಮತ್ತು ಅವನನ್ನು ಶಾಸ್ತ್ರೀಯವಾಗಿ ತತ್ತ್ವಶಾಸ್ತ್ರದ ರೀತಿಯಲ್ಲಾಗಲಿ ವೈಜ್ಞಾನಿಕವಾಗಿಯೇ ಆಗಲಿ ವಿಶ್ಲೇಷಿಸಿ ವಿವರಿಸಲು ಸಾಧ್ಯವಿಲ್ಲ; ಅವನು ಆರಿಸಿಕೊಳ್ಳುವ ಮತ್ತು ಚಿಂತನೆ ಮಾಡುವ, ಪರಿಭಾವಿಸುವ ಶಕ್ತಿಯುಳ್ಳ ಜೀವಿ; ಅವನು ಸ್ವತಂತ್ರ, ಆದ್ದರಿಂದಲೇ ಅಸುಖಿ; ಅವನ ಭವಿಷ್ಯ ಅವನ ಸ್ವತಂತ್ರ ಆಯ್ಕೆಯ ಮೇಲೆ ನಿರೂಪಿತವಾಗುವಂಥದ್ದಾದ್ದರಿಂದ ಅದು ತರ್ಕರೀತಿಯ ವರ್ಗೀಕರಣಕ್ಕೆ ನಿಲುಕುವಂಥದ್ದಲ್ಲ; ಅಲ್ಲದೆ ಕೇವಲ ಪ್ರಪಂಚವನ್ನು ಪರಿಭಾವಿಸುವುದರಲ್ಲಿಯೇ ಕಾಲಕಳೆವ ವ್ಯಕ್ತಿ ಯಾವ ಒಂದು ನಿರ್ಧಾರಿತ ಕಾರ್ಯವನ್ನೂ ಮಾಡಲಾರ–ಇತ್ಯಾದಿ ವಿಶೇಷಾರ್ಥಗಳಲ್ಲಿ ಬಳಕೆಯಾಗುತ್ತದೆ.

ಕೀರ್ಕೆಗಾರ್ಡ್ ತನ್ನ ಕನ್‌ಕ್ಲೂಡಿಂಗ್ ಅನ್‌ಸೈಂಟಿಫಿಕ್ ಪೋಸ್ಟ್‌ಸ್ಕ್ರಿಪ್ಟ್‌ನಲ್ಲಿ (1846) ಹೆಗೆಲ್‌ನ ಪ್ರಪಂಚವೊಂದು ಕ್ರಮಬದ್ಧವಾದ ವ್ಯವಸ್ಥಿತ ಸ್ಥಿತಿ, ಸತ್ಯವೇ ವ್ಯವಸ್ಥಿತ ಕ್ರಮ, ವ್ಯವಸ್ಥಿತ ಕ್ರಮವೇ ಸತ್ಯ, ಎಂಬ ವಾದ ದುರಹಂಕಾರದಿಂದ ಕೂಡಿದ್ದಷ್ಟೇ ಅಲ್ಲ, ಹಾಸ್ಯಸ್ಪದ ವಾದದ್ದೂ ಹೌದು ಎಂದು ಹೇಳುತ್ತಾನೆ. ಕೀರ್ಕೆಗಾರ್ಡ್‌ನ ಪ್ರಕಾರ ಈ ಅಸಂಬದ್ಧ ಪ್ರಪಂಚದಲ್ಲಿ ಯಾವ ವ್ಯಕ್ತಿಯೂ ತನ್ನ ಸ್ಥಾನವೇನೆಂದು ತಿಳಿಯಲಾರ; ಅವನ ಕರ್ತವ್ಯವೇನೆಂದು ನಿರ್ದಿಷ್ಟವಾಗಿ ಅರಿಯಲಾರ; ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಎಷ್ಟು ಸಾಧ್ಯವೋ ಅಷ್ಟು ಆರಿಸಿಕೊಳ್ಳುವ ಕೆಲಸ ಮಾಡಬೇಕಾಗುತ್ತದೆ. ದೇವರ ಸಮ್ಮುಖದಲ್ಲಿ ಅವನು ಒಂದನ್ನು ಆರಿಸಿಕೊಳ್ಳಲೇಬೇಕು. ಆದರೆ ಆ ಆಯ್ಕೆ ಅವನಿಗೆ ಮುಕ್ತಿ ತರಬಹುದು ಅಥವಾ ಅವನನ್ನು ನರಶಿಕ್ಷೆಗೆ ಗುರಿ ಮಾಡಬಹುದು. ಅದು ಅವನ ಅರಿವಿಗೆ ಬರದೇ ಇರುವ ವಿಷಯ. ಕೀರ್ಕೆಗಾರ್ಡ್‌ನ ಪ್ರಕಾರ ಈ ಒಂದು ಆಧ್ಯಾತ್ಮಿಕ ಆಯ್ಕೆಯಲ್ಲಿ ಒಂದು ವಿಶಿಷ್ಟತೆಯಿದೆ. ಏಕಾಕಿತನವಿದೆ; ಇದು ಸಮನಾದ ಪರಿಸ್ಥಿತಿಗಳಲ್ಲಿ ಬಹುಶಃ ಎಲ್ಲರೂ ಒಂದೇ ರೀತಿ ನಡೆದುಕೊಳ್ಳುವಂಥ ನೈತಿಕ ಕ್ಷೇತ್ರದಲ್ಲಿ ಇಲ್ಲದಿರುವಂಥದು. ಅಸ್ವಸ್ಥತೆಯೇ ಒಬ್ಬ ಕ್ರೈಸ್ತನ ಸ್ವಾಭಾವಿಕ ಸ್ಥಿತಿ ಎಂದು ಕೀರ್ಕೆಗಾರ್ಡ್ ಹೇಳುತ್ತಾನೆ. (ಸ್ಟೇಜಸ್ ಆನ್ ಲೈಫ್ಸ್ ವೇ, 1845).

ಸತ್ಯ ಆಂತರಿಕವಾಗಿ ಕಂಡುಕೊಳ್ಳುವಂಥದು, ಅಂದರೆ ಯಾರೇ ಆಗಲಿ ತಾನು ಏನೇ ಮಾಡಿದರೂ, ಅದು ವ್ಯಕ್ತ್ಯತೀತ ಸತ್ಯದ ಅನ್ವೇಷಣೆಯಾದರೂ ಅದಕ್ಕೆ ಒಂದು ಬೆಲೆ ಬರುವಂಥದ್ದು. ಅದನ್ನು ಅವನು ಯಾವ ರೀತಿ ನಿಶ್ಚಯಿಸಿದ ಮತ್ತು ನಿರ್ಧಾರ ಮಾಡಿದ ಎಂಬ ವ್ಯಕ್ತಿಗತ ಕ್ರಿಯೆಯ ಮೂಲಕವಾಗಿ ಎನ್ನುತ್ತಾನೆ; ಆದ್ದರಿಂದ ದೇವರ ಸಾಕ್ಷಾತ್ಕಾರವನ್ನು ಅಮೂರ್ತ ನಿದರ್ಶನದ ಮೂಲಕ ಪಡೆಯಲು ಸಾಧ್ಯವಿಲ್ಲ; ಧರ್ಮಶ್ರದ್ಧೆ ಎನ್ನುವಂಥದ್ದು ಆಂತರಂಗಿಕವಾದ ಆಯ್ಕೆ; ಕಲೆ, ವಿಜ್ಞಾನ, ಚರಿತ್ರೆ ಇವು ಯಾರ ಜೀವನದ ಭಾಗವಾಗಿವೆಯೋ ಅವರ ಜೀವನದ ಸಂದರ್ಭದಲ್ಲಿ ಅವಕ್ಕೆ ಬೆಲೆ ಬರುತ್ತದೆ. ಅರ್ಥ ಜ್ಞಾನದಲ್ಲಿ ಮಾನವರು ಆಯ್ಕೆಮಾಡಿಕೊಂಡಂಥ ನಿರ್ಧಾರಗಳನ್ನು ಅವರ ಜೀವನ ಒಳಗೊಂಡಿರುತ್ತದೆ; ಆದ್ದರಿಂದ ಮನುಷ್ಯ ಆತಂಕ ಸ್ಥಿತಿಯಲ್ಲಿದ್ದು ಆತ ಕ್ರೈಸ್ತ ಆಗಿದ್ದರೆ, ನಿರಾಶೆಯ ಮೂಲಕ ಹಾದು ಹೋಗಬೇಕಾಗುತ್ತದೆ. ಕೀರ್ಕೆಗಾರ್ಡ್ ಬರೆದ ಕಾಲದಲ್ಲಿ

ಸುಸಂಘಟಿತವಾದ ಚರ್ಚ್ ಭದ್ರವಾಗಿಯೂ ತಳವೂರಿತ್ತು; ಆದ್ದರಿಂದ ಅವನು ಪ್ರಾಪಂಚಿಕ ಕ್ರೈಸ್ತ ಅನುವರ್ತನೆಯ ವಿರುದ್ಧ, ಕ್ರೈಸ್ತರ ವಿರುದ್ಧ ಹೋರಾಡಿದ; ಬದುಕಿನ ಇರುವನ್ನು ಕುರಿತ ತಾತ್ತ್ವಿಕ ಚಿಂತನೆಯನ್ನು ವಸ್ತುನಿಷ್ಠೆಯಿಂದ ಆತ್ಮನಿಷ್ಠೆಗೆ ತಿರುಗಿಸಲು ಯತ್ನಿಸಿದ. ಕೀರ್ಕೆಗಾರ್ಡನಿಗೆ ಅಸ್ತಿತ್ವವೆನ್ನುವುದು ನಿರಂತರ ಹೋರಾಟ. ಅವನಿಗೆ ಅತಿ ಹೆಚ್ಚಿನ ರಾಗಭಾವ (ಪ್ಯಾಷನ್) ಅಂದರೆ ಶ್ರದ್ಧೆ. ಇದು ತಾರ್ಕಿಕ ನಿರ್ಣಯಗಳಿಗಿಂತ ಆಂತರಿಕ ಪ್ರೇರಣೆಯ ಮೇಲೆ ನಿಲ್ಲುತ್ತದೆ. ಒಂದು ವಿಷಯ ಬಾಹ್ಯದೃಷ್ಟಿಗೆ ಅಸಂಬದ್ಧವೆಂದು ಕಂಡರೂ ಆಂತರಿಕ ಪ್ರೇರಣೆ ಇದೇ ಸರಿ ಎಂದಾಗ ಅದರಂತೆಯೇ ನಡೆಯಬೇಕೆನ್ನುವುದು ಅವನ ವಾದ.

20ನೆಯ ಶತಮಾನದ ಅಸ್ತಿತ್ವವನ್ನು ಕುರಿತ ತಾತ್ವಿಕಚಿಂತನೆಗಳ ಮೂಲ ಕಾರ್ಲ್‌ಯಾಸ್ಪರ್ಸ್‌ನ (1883) ಬರೆವಣಿಗೆಗಳಲ್ಲಿದೆ. ಅವನ ಪ್ರಕಾರ 20ನೆಯ ಶತಮಾನದಲ್ಲಿ ವ್ಯಕ್ತಿವಿಶಿಷ್ಟತೆಗೆ ಅಪಾಯಕಾರಿಯಾದದ್ದು ಕ್ರೈಸ್ತರಲ್ಲ; ಆಧುನಿಕ ಔದ್ಯೋಗಿಕ ವಿಜ್ಞಾನದ ತಳಹದಿಯ ಮೇಲೆ ಅತ್ಯಂತ ಸಮರ್ಪಕವಾಗಿ, ಸಂಘಟಿತವಾಗಿ ನಿಂತಿರುವ ಸಮಾಜವ್ಯವಸ್ಥೆ (ಮ್ಯಾನ್ ಇನ್ ದಿ ಮಾಡರ್ನ್ ಏಜ್). ಯಾಸ್ಪರ್ಸ್ ಹೆಚ್ಚಾಗಿ ದೇವರನ್ನು ಕುರಿತು ಮಾತಾಡದೆ ಅತೀತವನ್ನು ಕುರಿತು ಮಾತಾಡುತ್ತಾನೆ. ನಮ್ಮ ಜ್ಞಾನದ ಅಪರಿಪೂರ್ಣತೆ ಮತ್ತು ನಮ್ಮ ಶಕ್ತಿಯ ಪರಿಮಿತಿ ತಿಳಿಯಲಸಾಧ್ಯವಾದ ಅಸ್ತಿತ್ವದ ಇರವನ್ನು ಸೂಚಿಸುತ್ತದೆ (ಫಿಲಸಾಫಿಕ್, ಸಂಪುಟ iii). ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕೆನ್ನುವುದಕ್ಕೆ, ಯಾವ ಪರಂಪರಾನುಗತವಾಗಿ ಬಂದ ಜ್ಞಾನವೂ ಸಹಾಯಕವಾಗಲಾರದು; ಅದು ವಸ್ತುಗಳ ಮೂಲತತ್ತ್ವವನ್ನು ವಿಚಾರಮಾಡುವ ಶಾಸ್ತ್ರಕ್ಕೆ ನಿಲುಕದಂಥದ್ದು; ಸ್ವಾತಂತ್ರ್ಯ ವಸ್ತುನಿಷ್ಠ ಜ್ಞಾನಕ್ಕೆ. ಅತೀತವಾದದ್ದು, ವೈಯಕ್ತಿಕವಾದದ್ದು; ಅದನ್ನು ತೀಕ್ಷ್ಣ ಪರಿಭಾವನೆಗೆ ಒಳಪಡಿಸಬಹುದು; ಆದರೆ ಅದು ವೈಜ್ಞಾನಿಕ ವಿಶ್ಲೇಷಣೆಗೆ ಗುರಿಪಡಿಸಲು ಸಾಧ್ಯವಿಲ್ಲದ್ದು– ಹೀಗೆ ಸಾತಂತ್ರ್ಯದ ವಿವೇಚನೆ ಮಾಡುತ್ತಾ ವ್ಯಕ್ತಿಯ ಆಂತರಂಗಿಕ ಅನುಭವದ ಮೇಲೆ ದೇವರ ಅಸ್ತಿತ್ವವನ್ನು ಪುನಃ ಶೋಧಿಸುವ ನಿಲುವಿನತ್ತ ಮುಂದುವರಿಯುತ್ತಾನೆ.

ಅನಂತರದ ಅಸ್ತಿತ್ವವಾದಿಗಳ ಮೇಲೆ ಹೆಚ್ಚಿನ ಪ್ರಭಾವಬೀರಿದ ವ್ಯಕ್ತಿ ಮಾರ್ಟಿನ್ ಹೀಡೆಗರ್; ಈತ ಎಡ್‌ಮಂಡ್ ಹುಸರೆಲ್‌ನ ಶಿಷ್ಯ ಮತ್ತು ಫಿನೊಮಿನಾಲಜಿಯ ಆದ್ಯ ಪ್ರವರ್ತಕ. ತತ್ತ್ವಶಾಸ್ತ್ರಜ್ಞರು ಬಾಹ್ಯವಸ್ತುಗಳಿಂದ ಆಂತರಂಗಿಕ ಅನುಭವಗಳ ಕಡೆ ಹೊರಳಬೇಕು ಎಂದು ಹುಸರಲ್ ಹೇಳಿದ; ಏಕೆಂದರೆ ಆಂತರಂಗಿಕ ಅನುಭವಗಳೇ ಬಾಹ್ಯಪ್ರಪಂಚದ ಅರಿವಿಗೆ, ಅದರ ಪರಿಭಾವನೆಗೆ ಮೂಲ. ಹೀಡೆಗರ್ ಈ ವಾದವನ್ನೇ ಮುಂದುವರಿಸುತ್ತಾನೆ; ಮನುಷ್ಯ ಸಹಾನುಭೂತಿರಹಿತ ಪ್ರಪಂಚದಲ್ಲಿ ಉದ್ದೇಶಗಳನ್ನು ಸಾಧಿಸಲು ಯತ್ನಿಸುತ್ತ ಕೊನೆಗೆ ಅನಿವಾರ್ಯವಾದ ಸಾವಿನಲ್ಲಿ ಶೂನ್ಯವಾಗುತ್ತಾನೆ; ಅವನು ಜ್ಞೇಯಪ್ರಾಧಾನ್ಯವಾದ ಸಾಂಪ್ರದಾಯಿಕ ಸರ್ವಸಾಮಾನ್ಯ ಅಂಶಗಳಲ್ಲಿ ಬದುಕುತ್ತ ತನಗೆ ಬರಲಿರುವ ಅಳಿವನ್ನು ಮರೆತುಬಿಡುತ್ತಾನೆ; ಆದರೆ ತನಗೆ ಬರುವ ಅನಿವಾರ್ಯ ಸಾವಿನ ಪರಿವೆಯಲ್ಲಿ ಆತ ಬದುಕಿದರೆ ಆತ ಆತ್ಮವಂಚನೆಯಿಂದ (ಬ್ಯಾಡ್‌ಫೇತ್) ದೂರವಾಗುತ್ತಾನೆ. ಇವನ ಆಲೋಚನೆಗಳ ಮೂಲ ಕೀರ್ಕೆಗಾರ್ಡ್‌ನಲ್ಲಿದ್ದು, ಜಾನ್‌ಪಾಲ್ ಸಾರ್ತ್ರನಲ್ಲಿ ಮುಂದುವರಿದಿರುವುದನ್ನು ಕಾಣಬಹುದು.

ಜಾನ್ ಪಾಲ್ ಸಾರ್ತ್ರ (1905—), ತನ್ನ ಬೀಯಿಂಗ್ ಅಂಡ್ ನತಿಂಗ್‌ನೆಸ್ ಪುಸ್ತಕದಲ್ಲಿ (1943) ನಾಸ್ತಿಕ ಅಸ್ತಿತ್ವವಾದದ ಕೂಲಂಕಷ ವಿವೇಚನೆ ಮಾಡಿದ್ದಾನೆ. ಈ ಗ್ರಂಥದ ಮೂಲಕ, ತನ್ನ ಕಾದಂಬರಿಗಳು ನಾಟಕಗಳು ವಿಮರ್ಶೆಗಳ ಮೂಲಕ, ಅಸ್ತಿತ್ವವಾದವನ್ನು 20ನೆಯ ಶತಮಾನದ ಅತ್ಯಂತ ಪ್ರಭಾವೀಶಕ್ತಿಯನ್ನಾಗಿ ಮಾಡಿದ. ಸಾರ್ತ್ರನ ಪ್ರಕಾರ ಇರವು ಸತ್ತ್ವಕ್ಕಿಂತ ಮೊದಲು; ಮನುಷ್ಯ ತನ್ನ ಕಾರ್ಯಗಳಿಗೆ ತಾನೇ ಜವಾಬ್ದಾರ: ತಾನೇನಾಗಬೇಕೆಂದು ಆರಿಸಿಕೊಳ್ಳಲು ಮನುಷ್ಯ ಸ್ವತಂತ್ರ; ಈ ಸ್ವಾತಂತ್ರ್ಯ ವರವೂ ಹೌದು ಶಾಪವೂ ಹೌದು. ಮನುಷ್ಯನಿಗೆ ಆಧಾರವಾಗಿ ಯಾವ ಹೊರಗಿನ ಮೌಲ್ಯಗಳೂ ಇಲ್ಲ. ವ್ಯಕ್ತಿ ತನ್ನ ಅನಂತ ಜವಾಬ್ದಾರಿಗಳೊಂದಿಗೆ ಈ ಪ್ರಪಂಚಕ್ಕೆ ಬಂದವನು. ಯಾರ ನೆರವೂ ಅವನಿಗಿಲ್ಲ. ಪೂರ್ವನಿರ್ಮಿತ ಮೌಲ್ಯಗಳಾವುವನ್ನೂ ಒಪ್ಪದೆ ತನ್ನ ಅದೃಷ್ಟವನ್ನು ತಾನೇ ನಿರ್ಮಿಸಿಕೊಳ್ಳುವಂಥ ಪರಿಸ್ಥಿತಿ ಅವನದು; ಈ ಇರವು ವ್ಯಕ್ತಿನಿಷ್ಠವಾದದು. ಇದು ಸತ್ತ್ವಕ್ಕಿಂತ ಮೊದಲು ಇರುವಂಥದು. ಮನುಷ್ಯ ಸಂಪೂರ್ಣವಾಗಿ ಅಂಧಕಾರಮಯವಾದ ಮತ್ತು ಭಿನ್ನವಾದ ಅರ್ಥರಹಿತ ವಿಶ್ವದಲ್ಲಿ ಬರುತ್ತಾನೆ; ತನ್ನ ಅಲೌಕಿಕ ಪ್ರಜ್ಞೆಯಿಂದ ನಿಯಂಟ್ ಅದನ್ನು ಬದುಕಲು ಅರ್ಹವಾದ ಕ್ಷೇತ್ರವನ್ನಾಗಿ ಮಾಡುತ್ತಾನೆ. ಈ ಪ್ರಪಂಚದ ಅರ್ಥ ಅಥವಾ ಯಾವ ಮೌಲ್ಯವಾಗಲಿ ಅಸ್ತಿತ್ವದ ಆಯ್ಕೆಯಿಂದ ಬರುತ್ತದೆ. ತನ್ನ ಪರಿಸ್ಥಿತಿಗೆ ವ್ಯಕ್ತಿ ತಾನೇ ಜವಾಬ್ದಾರನಾಗುತ್ತಾನೆ. ವ್ಯಕ್ತಿಗಿರುವ ಈ ಒಂದು ಭಯಂಕರವಾದ ಆಯ್ಕೆಮಾಡಿ ಕೊಳ್ಳುವ ಸ್ವಾತಂತ್ರ್ಯ ಹೆದರಿಕೆಯನ್ನುಂಟುಮಾಡುವಂಥದು. ತನ್ನ ಪ್ರಪಂಚವನ್ನು ತಾನೇ ಆರಿಸಿಕೊಳ್ಳಬೇಕಾದ ಆವಶ್ಯಕ ಪರಿಸ್ಥಿತಿ ಅಸಂಬದ್ಧತೆಯ, ನಿರಾಶೆಯ ಅನುಭವ ತರುತ್ತದೆ. ಯಾವ ಮೌಲ್ಯಗಳನ್ನಾರಿಸಿಕೊಳ್ಳಬೇಕು? ಇರುವ ತತ್ತ್ವಶಾಸ್ತ್ರಗಳು ತಾತ್ತ್ವಿಕ ಪಂಗಡಗಳು ಧಾರ್ಮಿಕ ನಂಬಿಕೆಗಳು ಮಧ್ಯಮ ವರ್ಗದ ನೈತಿಕ ದೃಷ್ಟಿ–ಇವುಗಳು ವ್ಯಕ್ತಿ ಸ್ವಾತಂತ್ರ್ಯದಿಂದ, ಕರ್ತವ್ಯದಿಂದ, ತಾನೇ ಮೌಲ್ಯಗಳನ್ನು ಕಂಡುಕೊಳ್ಳುವ ಜವಾಬ್ದಾರಿಯಿಂದ, ವ್ಯಕ್ತಿ ತಪ್ಪಿಸಿಕೊಳ್ಳುವ ಸಾಧನೆಗಳಾಗಿ ಪರಿಣಮಿಸುತ್ತವೆ; ವ್ಯಕ್ತಿಯನ್ನು ಆತ್ಮವಂಚನೆ ಎಂಬ ಪಾಪಕ್ಕೆ ಗುರಿ ಮಾಡುತ್ತವೆ. ಈ ಒಂದು ನಿಸ್ಸಹಾಯಕ ಅನಿರ್ಧಾರದಿಂದ ಒಂದು ಸ್ವತಂತ್ರವಾದ ನಿರ್ದಿಷ್ಟ ಆಯ್ಕೆಮಾಡಿ ಅದರಲ್ಲಿ ತೊಡಗುವುದರ ಮೂಲಕ, ತಪ್ಪಿಸಿಕೊಳ್ಳಲು ಸಾಧ್ಯ. ಈ ತೊಡಗುವಿಕೆ ಅನ್ಯವ್ಯಕ್ತಿಯ ಸ್ವಾತಂತ್ರ್ಯದ ಬಗ್ಗೆ ಅರಿವನ್ನು ಮೂಡಿಸುವುದರ ಮೂಲಕ ವ್ಯಕ್ತಿಯ ಅಸ್ತಿತ್ವಕ್ಕೆ ಒಂದು ರೂಪ ತಂದುಕೊಡುತ್ತದೆ. ದೇವರ ಇರುವಿಕೆಯನ್ನು ಸಾರ್ತ್ರ ಅಲ್ಲಗಳೆದರೂ ದೇವರ ಸ್ಥಾನದಲ್ಲಿ ಮನುಷ್ಯನನ್ನು ಕೂರಿಸಲು ಒಪ್ಪುವುದಿಲ್ಲ.

ಸಾರ್ತ್ರನ ನಾಸಿಯಾ ಕಾದಂಬರಿಯಲ್ಲಿ ಬರುವ ಜುಗುಪ್ಸೆ ಮನುಷ್ಯನ ಇರುವಿಕೆಯ ಜುಗುಪ್ಸೆಯೇ ಆಗಿದೆ. ಮನುಷ್ಯ ತನ್ನ ಅಸ್ತಿತ್ವವನ್ನು ಜುಗುಪ್ಸೆಯ ಮೂಲಕ ಎದುರಿಸುವುದು ಅದನ್ನು ಎದುರಿಸದೆ ಇರುವುದಕ್ಕಿಂತ ಉತ್ತಮವಾದದ್ದು. ಸಾರ್ತ್ರ ಮತ್ತು ಅವನ ತಲೆಮಾರಿನ ಜನಗಳಿಗೆ ಪ್ರತಿರೋಧ ಅಸ್ತಿತ್ವದ ಜುಗುಪ್ಸೆಯಿಂದ ವೀರತ್ವಕ್ಕೆ ತಿರುಗಲು ಕಾರಣವಾಯಿತು. ಅದು ಕಾರ್ಯಪ್ರವೃತ್ತರಾಗಲು ಕರೆಯಾಗಿ ಪರಿಣಮಿಸಿತು: ಆಗ ಪ್ರತಿವ್ಯಕ್ತಿಯೂ ತಮ್ಮನ್ನು ಆಕ್ರಮಿಸಿದ್ದ ಜರ್ಮನರ ವಿರುದ್ಧ ಸ್ವಾತಂತ್ರ್ಯವನ್ನು ಕಂಡುಕೊಂಡ. ಈ ಸ್ವಾತಂತ್ರ್ಯವನ್ನು ಯಾರೂ ವ್ಯಕ್ತಿಯಿಂದ ಕಸಿದುಕೊಳ್ಳಲಾರರು. ಪ್ರಜ್ಞೆಯನ್ನೂ ಅವನಿಂದ ಕಸಿದುಕೊಂಡಾಗ ಅವನ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಹುದಷ್ಟೆ; ಇದು ವ್ಯಕ್ತಿಗೆ ಸ್ವಾಭಿಮಾನವನ್ನು ಕೊಡುವುದರ ಜೊತೆಗೆ ಅವನು ಮನುಷ್ಯನಾದದ್ದಕ್ಕೆ ಅರ್ಥವನ್ನೂ ತಂದುಕೊಡುತ್ತದೆ. ಇದು ತತ್ತ್ವಶಾಸ್ತ್ರಕ್ಕೆ ಹೊಸದೇನಲ್ಲ; ಡೇ ಕಾರ್ಟ್‌ನ ಸಿಸಮೇಟಿಕ್ ಡೌಟ್‌ನಲ್ಲಿ ಆಗಲೇ ಬಂದಿರುವಂಥದು; ಸಾರ್ತ್ರನಿಗೆ ಡೇ ಕಾರ್ಟ್ ಬೌದ್ಧಿಕ ನಾಯಕ. ಜರ್ಮನರ ವಿರುದ್ಧದ ಚಳವಳಿಯ ಸಂದರ್ಭದಲ್ಲಿ ಡೇ ಕಾರ್ಟ್‌ನ ತತ್ತ್ವ ಸಾರ್ತ್ರನಿಗೆ ಇನ್ನೂ ಅರ್ಥಪೂರ್ಣವಾಗಿ ಕಂಡಿತು. ಡೇ ಕಾರ್ಟ್ ತನಗೆ ಒಪ್ಪಿತ ವಾದದ್ದನ್ನು ಒಪ್ಪುವಂತೆ ಒತ್ತಾಯಿಸುವ ಕಾಲ್ಪನಿಕ ಭೂತದ ಬಗ್ಗೆ ನೇತಿ ಎಂದರೆ, ಇಲ್ಲಿ ಚಳವಳಿಗಾರ ಸಾರ್ತ್ರ ಅಕ್ರಮಿಗಳ ಅಧಿಕಾರಕ್ಕೆ ಪ್ರತಿಭಟಿಸಿ ನೇತಿ ಎಂದ.

ಸಾರ್ತ್ರ ತೊಡಗುವಿಕೆಯ ಸಿದ್ಧಾಂತವನ್ನು ಮುಂದಿಟ್ಟರೂ ಫ್ರಾಯ್ಡ್ ಮತ್ತು ಮಾರ್ಕ್ಸ್ ಸಿದ್ಧಾಂತಗಳನ್ನು ಅವುಗಳ ಪೂರ್ವನಿರ್ಣಾಯಕವಾದಕ್ಕಾಗಿ ವಿರೋಧಿಸಿದ; ಹಾಗೇ ತೀವ್ರ ಸುಧಾರಣಾವಾದಿಗಳನ್ನೂ ಅವರ (ರ್‍ಯಾಡಿಕಲ್ಸ್) ಅತಿ ಸರಳಗೊಳಿಸಲಾದ ನೈತಿಕತತ್ತ್ವಗಳಿಗಾಗಿ ವಿರೋಧಿಸಿದ; ಹಾಗೇ ಅವರಿಂದ ತಾನೂ ಟೀಕೆಗೊಳಗಾದ.

ರೋಮನ್ ಕೆಥೊಲಿಕ್ ಅಸ್ತಿತ್ವವಾದದ ಮಾರ್ಸೆಲ್ (1889–) ಕೇವಲ ಅಮೂರ್ತ ತತ್ತ್ವಗಳನ್ನು ಮೇಲೆತ್ತಿ ಹಿಡಿಯುವುದರಿಂದಾಗುವ ನೈತಿಕ ಪರಿಣಾಮಗಳನ್ನು ಕುರಿತು ಹೇಳಿದ. ರಷ್ಯದ ಸಾಂಪ್ರದಾಯಿಕ ಕ್ರೈಸ್ತಧರ್ಮದ ಅಸ್ತಿತ್ವವಾದವನ್ನು ಪ್ರತಿಪಾದಿಸಿದವರು, ನಿಕೋಲಾಯ್ ಅಲೆಗ್ಸಾಂಡ್ರೊವಿಚ್ ಬರ್ಡ್ಯೇವ್ ಮತ್ತು ಎಲ್ ಶಿಷ್ಟಾಫ್. ಯಹೂದಿ ಅಸ್ತಿತ್ವವಾದದ ಪ್ರತಿಪಾದಕ ಮಾರ್ಟಿನ್ ಬೂಬರ್. (ಎಚ್.ಎಂ.ಸಿ.)

**ಅಸ್ತಿಭಾರ :** ಮನೆ, ಸೇತುವೆ, ನೀರಾವರಿ ಕಟ್ಟೆ ಮುಂತಾದ ರಚನೆಗಳ (ಸ್ಟ್ರಕ್‌ಚರ್ಸ್) ಭಾರವನ್ನು ತಳದ ವಸ್ತುಗಳಿಗೆ (ನೆಲ, ಕಲ್ಲು) ವರ್ಗಾಯಿಸುವ ಮತ್ತು ಆಯಾ ಕಟ್ಟಡದ ಅಂಗವಾಗಿರುವ ರಚನೆಗೆ (ಫೌಂಡೇಷನ್) ಅಡಿಹಾಯವೆಂದೂ ತಳಪಾಯವೆಂದೂ ಹೆಸರಿದೆ. ಕಟ್ಟಡದ ರಚನೆ ಅಸ್ತಿಭಾರದಿಂದ ತೊಡಗಿ ಮೇಲಕ್ಕೂ ಮುಂದುವರಿಯುವುದು; ಆದರೆ ಕಟ್ಟಡದ ಸಂವಿಧಾನವನ್ನು (ಡಿಸೈನ್) ಮೇಲಿನಿಂದ ಅದರ ಭಾಗಗಳ ಮೇಲೆ ಬರುವ ಭಾರವನ್ನು ಧಾರಾಳವಾಗಿ ಹೊರುವಷ್ಟು ಭದ್ರವಾಗಿ ಮಾಡಬೇಕು. ಅಸ್ತಿಭಾರ ಈ ಎಲ್ಲ ಹೊರೆಗಳನ್ನು ಹೊರುವಂತಿರಬೇಕು.

ಅಸ್ತಿಭಾರದ ಮೇಲೆ ಬೀಳುವ ಭಾರವನ್ನು ನಿಶ್ಚಲ ಭಾರ (ಡೆಡ್‌ಲೋಡ್) ಮತ್ತು ಚಲ ಭಾರ (ಲಿವ್‌ಲೋಡ್) ಎಂದು ಎರಡು ಭಾಗ ಮಾಡಬಹುದು. ಒಂದು ಸೇತುವೆಯ ಕಲ್ಲಿನ ಕಂಬಗಳು ಮತ್ತು ಕಮಾನಿನ ಭಾರ ನಿಶ್ಚಲ. ಅದರ ಮೇಲೆ ಓಡಾಡುವ ಜನರ ಮತ್ತು ವಾಹನಗಳ ಭಾರ ಚಲ. ಇವುಗಳಲ್ಲಿ ನಿಶ್ಚಲ ಭಾರವನ್ನು ಸುಲಭವಾಗಿ ಲೆಕ್ಕ ಹಾಕಬಹುದು. ಆದರೆ ಚಲ ಭಾರ ಕಟ್ಟಡದ ಉಪಯೋಗಕ್ಕೆ ಅನುಸಾರವಾಗಿ ಕಾಲಕಾಲಕ್ಕೂ ವ್ಯತ್ಯಾಸವಾಗುತ್ತದೆ. ಗಾಳಿಯ ಹೊಡೆತ, ಮಂಜು ಇವು ಕೆಲವು ಕಾಲಗಳಲ್ಲಿ ಇರುವುದೇ ಇಲ್ಲ. ಇನ್ನು ಕೆಲವು ಕಾಲಗಳಲ್ಲಿ ಪರಮಾವಧಿಯನ್ನು ಮುಟ್ಟುತ್ತವೆ. ಸೇತುವೆಗಳ ಮೇಲೆ ತಿರುಗಾಡುವ ಜನ ಮತ್ತು ವಾಹನಗಳ ಭಾರ ಅನಿಶ್ಚಿತವಾಗಿ ಕಾಲ ಕಾಲಕ್ಕೂ ಬದಲಾಗುತ್ತದೆ.

ಒಂದು ಕಟ್ಟಡದಲ್ಲಿ ಭೂಮಿಯ ಮಟ್ಟದ ಕೆಳಗಿರುವ ಕಲ್ಲುಕಟ್ಟಡವನ್ನೂ ಬುಡದ ಕಾಂಕ್ರೀಟನ್ನೂ ಇವು ನಿಂತಿರುವ ನೈಸರ್ಗಿಕವಾದ ಕಲ್ಲು ಇಲ್ಲವೆ ಮಣ್ಣನ್ನೂ ಎರಡನ್ನೂ ರೂಢಿಯಲ್ಲಿ ಅಸ್ತಿಭಾರವೆಂದೇ ಕರೆಯುತ್ತಾರೆ. ಅಸ್ತಿಭಾರದಕಟ್ಟಡ ಮೇಲುಕಟ್ಟಡದ ಭಾರವನ್ನು ನೆಲದ ಇಲ್ಲವೆ ಹೊಳೆಯ ತಳದ ಕೆಳಗಡೆ ಮೇಲಿನ ಭಾರವನ್ನೆಲ್ಲಾ ವಿಕಾರವಾಗದೆ ಹೊರಬಲ್ಲ ಅಸ್ತಿಭಾರಕ್ಕೆ ಸಾಗಿಸುತ್ತವೆ. ಎಲ್ಲ ಅಸ್ತಿಭಾರಗಳಿಗೂ ಒಂದೇ ವಿಧವಾಗಿ ಭಾರವನ್ನು ಹೊರುವ ಸಾಮರ್ಥ್ಯವಿರುವುದಿಲ್ಲ. ಭಾರ ಅದರ ಮೇಲೆ ಬಿದ್ದಾಗ ಗಟ್ಟಿಬಂಡೆಯ ಹೊರತು ಉಳಿದ ಅಸ್ತಿಭಾರಗಳೆಲ್ಲ ಹೆಚ್ಚಾಗಿಯೋ ಕಡಿಮೆಯಾಗಿಯೋ ಕುಗ್ಗುತ್ತವೆ.

ಒಂದೊಂದು ಅಸ್ತಿಭಾರವೂ ಅದು ಕುಗ್ಗದ ಹಾಗೆ ಹೊರಬಹುದಾದ ಒತ್ತಡದಲ್ಲಿ ಮೇಲಿನ ಭಾರವನ್ನು ಸಾಗಿಸುವುದೇ ಅಸ್ತಿಭಾರದ ಉದ್ದೇಶ. ಅಸ್ತಿಭಾರದ ಕಟ್ಟಡಗಳನ್ನು ಹರಡಿದ ಅಸ್ತಿಭಾರಗಳುಳ್ಳವು ಮತ್ತು ಆಳವಾದ ಅಸ್ತಿ ಭಾರಗಳುಳ್ಳವು ಎಂದು ವಿಂಗಡಿಸಬಹುದು. ಹರಡಿದ ಅಸ್ತಿಭಾರಗಳು ಭೂಮಿಯ ಮಟ್ಟದಿಂದ ಬಹಳ ಆಳವಾಗಿರುವುದಿಲ್ಲ. ಅಸ್ತಿಭಾರ ಒಂದು ಚದರಮೀಟರಿನ ಮೇಲೆ ಸುರಕ್ಷಿತವಾಗಿ ಹೊರಬಹುದಾದ ಭಾರಕ್ಕೆ ಅನುಗುಣವಾಗಿರುತ್ತದೆ. ಆಳವಾದ ಅಸ್ತಿಭಾರಗಳಲ್ಲಿ ಚದರ ಅಳತೆ ಕಡಿಮೆ. ಒಂದು ಚದರಮೀಟರ್ ಮೇಲೆ ಹೆಚ್ಚಿಗೆ ಭಾರವನ್ನು ಹೊರಬಲ್ಲ ಸಿಮೆಂಟ್ ಕಾಂಕ್ರೀಟ್ ಮೊದಲಾದ ಸಾಮಗ್ರಿಗಳನ್ನು ಉಪಯೋಗಿಸಿ ಹೆಚ್ಚಿಗೆ ಭಾರ ತಡೆಯುವಂತೆ ಮಾಡುತ್ತಾರೆ. ಗ್ರಿಲ್ಲೇಜ್ ಅಸ್ತಿಭಾರಗಳಲ್ಲಿ ಅಸ್ತಿಭಾರದ ಕಾಂಕ್ರೀಟಿನಲ್ಲಿ ಉಕ್ಕಿನ ಗರ್ಡರುಗಳನ್ನು ಹುದುಗಿಸಿರುತ್ತಾರೆ. ಆಗ ಕಾಂಕ್ರೀಟಿನ ದಪ್ಪವನ್ನು ಕಡಿಮೆಮಾಡಬಹುದು. ಅಥವಾ ಉಕ್ಕಿನ ಗರ್ಡರುಗಳನ್ನು ಎರಡು ವರಸೆಗಳಲ್ಲಿ ಒಂದರ ಕೆಳಗೆ ಇನ್ನೊಂದು ವರಸೆಯನ್ನು ಸಮಕೋನ ವಾಗಿಟ್ಟು ಎಲ್ಲವನ್ನೂ ಸಿಮೆಂಟ್ ಕಾಂಕ್ರೀಟಿನಿಂದ ಮುಚ್ಚಬಹುದು. ಉಕ್ಕಿನ ಗ್ರಿಲ್ಲೇಜಿಗೆ ಬದಲಾಗಿ ಪ್ರಬಲಿತ ಕಾಂಕ್ರೀಟನ್ನು ಹಾಕಬಹುದು. ಬಗೆಬಗೆಯ ದಸಿಗಳನ್ನು (ಪೈಲ್ಸ್) ನೆಲದಲ್ಲಿ ಹೂಳಬಹುದು. ಅಸ್ತಿಭಾರದ ಮಟ್ಟಗಳಲ್ಲಿ ಅಗಲದಲ್ಲಿ ಬದಲಾವಣೆಗಳನ್ನು ಮೆಟ್ಟಲು ಮೆಟ್ಟಲಾಗಿ ಮಾಡಬೇಕು.

ಅಸ್ತಿಭಾರಗಳನ್ನು ವ್ಯಾವಹಾರಿಕವಾಗಿ ಕೆಳಗೆಕಂಡಂತೆ ವರ್ಗೀಕರಣ ಮಾಡಬಹುದು:–

**1. ಬಂಡೆ :** ಕೆಲವು ಪ್ರದೇಶಗಳಲ್ಲಿ ಕಲ್ಲುಬಂಡೆಗಳು ನೆಲದಮೇಲೆ ಎದ್ದು ಕಾಣುತ್ತವೆ. ಇನ್ನು ಕೆಲವು ಕಡೆ ಕೊಂಚ ಆಳವಾಗಿ ಅಗೆದಾಗ ಕಲ್ಲು ಸಿಕ್ಕಬಹುದು. ಗಟ್ಟಿಯಾದ ಬಂಡೆಗಿಂತ ಉತ್ತಮವಾದ ಅಸ್ತಿಭಾರ ಇನ್ನೊಂದಿಲ್ಲ. ಅಗ್ನಿಶಿಲೆಗಳು, ದಪ್ಪವಾದ ಸುಣ್ಣಕಲ್ಲು ಮತ್ತು ಮರಳುಕಲ್ಲು ಚದರಡಿಗೆ 15 ಟನ್ ಭಾರವನ್ನು ಧಾರಾಳವಾಗಿ ಹೊರಬಲ್ಲವು. ಆದರೆ ಮೆದುವಾದ ಕಲ್ಲಿನ ಮೇಲೆ 8 ಟನ್ನಿನ ಮೇಲೆ ಭಾರವನ್ನು ಹಾಕತಕ್ಕದ್ದಲ್ಲ. ಕಲ್ಲುಬಂಡೆಯೇ ಶಿಥಿಲವಾಗಿ ಗ್ರಾವೆಲ್, ಮರಳು, ಮಣ್ಣು, ಗೋಡು–ಇತ್ಯಾದಿ ಪ್ರಭೇದಗಳಾಗುತ್ತದೆ.

**2. ಗ್ರಾವೆಲ್ :** ಇದು ನೀರಿನಲ್ಲಿ ನವೆದುಹೋದ ಬಂಡೆಯ ಪುಡಿ. ಇದರ ಅಳತೆ ಯಲ್ಲಿ ಹೆಚ್ಚಿನ ವ್ಯತ್ಯಾಸಗಳಿರುತ್ತವೆ. ಒತ್ತಾಗಿ ಒಟ್ಟುಗೂಡಿದ ಗ್ರಾವೆಲ್ ಭದ್ರವಾದ ತಳದ ಮೇಲೆ ಇದ್ದರೆ ಚದರ ಅಡಿಗೆ 4 ಟನ್ ಭಾರವನ್ನು ತಡೆಯಬಲ್ಲದು.

**3. ಮರಳು :** 6 ಮಿಮಿ.ಗೂ ಕಡಿಮೆ ಅಳತೆಯ ಸಣ್ಣ ಕಲ್ಲಿನ ಕಣಗಳಿಗೆ ಮರಳು ಎನ್ನುತ್ತಾರೆ. ಮರಳಿನ ಅಸ್ತಿಭಾರ ಹರಿಯುವ ನೀರಿನಲ್ಲಿ ನಿಲ್ಲಬೇಕಾದರೆ ಅದು ಪಕ್ಕದಲ್ಲಿ ಜಾರಿಹೋಗದ ಹಾಗೆ ರಕ್ಷಣೆ ಬೇಕು. ಯಾವ ದಿಕ್ಕಿನಲ್ಲಿಯೂ ಹೊರಕ್ಕೆ ಹೋಗದ ಹಾಗೆ ನಿರ್ಬಂಧಿತವಾಗಿರುವ ಮರಳು ಚದರ ಅಡಿಗೆ 2 ರಿಂದ 4 ಟನ್ ಭಾರವನ್ನು ಹೊರಬಲ್ಲದು.

**4. ಮಣ್ಣು :** ಇದರ ಗುಣಗಳು ಮಣ್ಣಿನ ರಚನೆಗೆ ಅನುಗುಣವಾಗಿರುತ್ತವೆ. ಜೇಡಿಮಣ್ಣು ಜಿಗುಟಾಗಿರುತ್ತದೆ. ಮರಳು ಜಿಗುಟನ್ನು ತಗ್ಗಿಸುತ್ತದೆ. ನೀರು ಬಿದ್ದಾಗ ಅದು ಮೇಣದ ಹಾಗಾಗುತ್ತದೆ. ಜಿಗುಟು ವ್ಯತ್ಯಾಸವಾದ ಹಾಗೆ ಅದರ ಸಲೆ ಅಳತೆಯೂ ವ್ಯತ್ಯಾಸವಾಗುತ್ತದೆ. ಅದಕ್ಕಾಗಿ ಜಿಗುಟು ಮಣ್ಣಿನ ತೇವವನ್ನು ಒಂದೇ ತಗ್ಗಿನ ಮಟ್ಟದಲ್ಲಿಡಬೇಕು. ಅದಕ್ಕೆ ನೀರಿನ ಸಂಪರ್ಕವಿರಲೇಬಾರದು. ಇರಬಹುದಾದ ನೀರನ್ನು ಕಾಲುವೆಯ ಮೂಲಕ ಹೊರಕ್ಕೆ ಸಾಗಿಸಬೇಕು. ಈ ಅಸ್ತಿಭಾರಗಳು ನೆಲಮಟ್ಟದಿಂದ 1.20ಮೀ ಆಳದಲ್ಲಿರಬೇಕು. ಮಣ್ಣಿನ ಅಸ್ತಿಭಾರದ ಮೇಲೆ ಚದರಡಿಗೆ 2 ಟನ್ನುಗಳಿಗಿಂತ ಹೆಚ್ಚಿನ ಭಾರವನ್ನು ಹಾಕತಕ್ಕದ್ದಲ್ಲ.

**5. ಗೋಡು :** (ಸಿಲ್ಟ್) ಹಿಂದೆ ಯಾವಾಗಲೋ ಅಗೆದ ಗುಂಡಿಗಳನ್ನು ತುಂಬಿದಾಗ ಅನೇಕ ವರ್ಷಗಳವರೆಗೂ ತುಂಬಿದ ಮಣ್ಣು ಕುಗ್ಗುತ್ತಲೇ ಇರುತ್ತದೆ. ಅಂಥ ಕಡೆಗಳಲ್ಲಿ ಕಟ್ಟುವಾಗ ಹಳೆಯ ನೆಲದ ಮಟ್ಟದವರೆಗೂ ಅಗೆಯಬೇಕು. ತಗ್ಗಾಗಿರುವ ಮೆದುವಾಗಿರುವ ಮಣ್ಣಿನ ಮೇಲೆ ಭಾರವನ್ನು ಒಂದೇ ಸಮವಾಗಿ ಹರಡುವ ಹಾಗೆ ಮರದ ಅಥವಾ ಪ್ರಬಲಿತ ಕಾಂಕ್ರೀಟಿನ ತೆಪ್ಪಗಳನ್ನು (ರ್‍ಯಾಫ್ಟ್) ಕಟ್ಟಬೇಕಾಗುತ್ತದೆ. ಆಗ ತೆಪ್ಪದ ಕೆಳಗಿನ ಮಣ್ಣು ಒಂದೇ ಸಮವಾಗಿ ಕೊಂಚವೇ ಕುಗ್ಗುತ್ತದೆ.

ಈ ಸಾಮಗ್ರಿಗಳು ಬೆರೆತಿರುವ ಅಸ್ತಿಭಾರಗಳಲ್ಲಿ ಕಟ್ಟಡದ ಸ್ವಭಾವ ಮತ್ತು ತಳಪಾಯದ ಮೇಲೆ ಬೀಳುವ ಭಾರ–ಇವನ್ನು ನೋಡಿ ನಿರ್ಣಯಿಸಬೇಕು.

ಕೆಲವು ಅಸ್ತಿಭಾರಗಳಿಗೆ ಪಕ್ಕಗಳಲ್ಲಿ ಆಶ್ರಯಬೇಕಾಗಬಹುದು. ಮಣ್ಣು ಮತ್ತು ಮೆದುವಾದ ಕಲ್ಲು ಲಂಬವಾಗಿ ನಿಂತರೆ ಶಿಥಿಲವಾಗುತ್ತವೆ. ಆಸರೆಗೋಡೆಗಳನ್ನು (ರೀಟೆಯೆನಿಂಗ್ ವಾಲ್ಸ್) ಕಟ್ಟಿ ಇದನ್ನು ರಕ್ಷಿಸಬೇಕು. ನೆಲದ ಅಡಿಯಲ್ಲಿರುವ ನೀರಿನ ಪ್ರವಾಹಗಳನ್ನು ಕೆಳಗಾಲುವೆಗಳಲ್ಲಿ ಸಾಗಿಸಬೇಕು. ಅಂತರ್ಜಲದ ಮಟ್ಟ ಏರುತ್ತಲೂ ಇಳಿಯುತ್ತಲೂ ಇರುವ ಕಡೆಗಳಲ್ಲಿ ನೆಲಮಾಳಿಗೆಗಳನ್ನು ಹೊರಗಿನ ನೀರಿನ ಒತ್ತಡವನ್ನು ತಡೆಯುವಂತೆಯೂ ನೀರು ಒಳಗೆ ನುಗ್ಗದಂತೆಯೂ ಕಲ್ಲಿನ ಗೋಡೆಗಳನ್ನು ಕಟ್ಟಬೇಕು.

**ಅಸ್ತಿಭಾರದ ಸಾಮರ್ಥ್ಯ :** ಮುಖ್ಯವಾದ ಕಟ್ಟಡವೊಂದರ ಅಸ್ತಿಭಾರವನ್ನು ನಿರ್ಣಯಿಸುವು ದಕ್ಕೆ ಮುಂಚೆ ಆ ಜಾಗದಲ್ಲಿ ಒಂದು ಪ್ರಾಯೋಗಿಕ ಗುಂಡಿಯನ್ನು (ಟ್ರಯಲ್ ಪಿಟ್) ತೋಡಿಯೋ ಯಂತ್ರಗಳಿಂದ ಆಳವಾಗಿ ಕೊರೆದೋ ಒಳಗಿನ ಸಾಮಗ್ರಿಯನ್ನು ಹೊರಕ್ಕೆ ತಂದು ಪರಿಶೀಲಿಸಬೇಕು. ಅನುಭವದಿಂದಲೂ ಪ್ರಯೋಗಗಳಿಂದಲೂ ಅಸ್ತಿಭಾರ ಚದರ ಮೀಟರಿಗೆ ಎಷ್ಟು ಭಾರವನ್ನು ಹೊರಬಲ್ಲದೆಂದು ಗೊತ್ತುಮಾಡಬೇಕು.

**ಕಟ್ಟಡಗಳ ಅಸ್ತಿಭಾರಗಳು :** ಈಗಿನ ಕಟ್ಟಡಗಳ ಅಸ್ತಿಭಾರದಲ್ಲಿ ಕಾಂಕ್ರೀಟನ್ನು ಹಾಕುವುದೇ ರೂಢಿ. ಕಟ್ಟಡದ ಮತ್ತು ಅದರ ಒಳಗಡೆ ಇರುವ ಯಂತ್ರ ಮೊದಲಾದುವುಗಳ ಭಾರವನ್ನು ಹೊರುವ ಹಾಗೂ ಕಟ್ಟಡಕ್ಕೆ ಎದುರಾಗಿ ಬೀಸುವ ಗಾಳಿಯ ಬಲವನ್ನು ತಡೆಯುವಂತೆಯೂ ಇರುವಷ್ಟು ಗಟ್ಟಿಯಾದ ಮಣ್ಣು ಇಲ್ಲವೆ ಬಂಡೆ ಸಿಕ್ಕುವವರೆಗೂ ಅಸ್ತಿಭಾರವನ್ನು ಇಳಿಸಬೇಕು. ಅಸ್ತಿಭಾರದ ಸ್ವಭಾವವನ್ನು ಪರಿಶೀಲಿಸಿ ಅದು ಸುರಕ್ಷಿತವಾಗಿ ಚದರ ಮೀಟರಿನ ಮೇಲೆ ಎಷ್ಟು ಭಾರವನ್ನು ಹೊರಬಲ್ಲುದು ಎಂದು ಲೆಕ್ಕ ಹಾಕಬೇಕು. ಏಕೆಂದರೆ ಇದಕ್ಕಿಂತ ಹೆಚ್ಚಿನ ಭಾರ ಮೇಲೆ ಬಿದ್ದರೆ ನೆಲ ಕುಗ್ಗಿ, ಕಟ್ಟಡದ ಗೋಡೆಗಳಲ್ಲಿ ಬಿರುಕುಗಳು ಕಾಣಿಸಿಕೊಳ್ಳುತ್ತವೆ.

**ಭಾರಗಳು :** ಕಟ್ಟಡದ ಭಾರವನ್ನು ಎಲ್ಲ ಗೋಡೆಗಳೂ ಕಂಬಗಳೂ ಹೊರಬೇಕು. ಅದಕ್ಕಾಗಿ ಪ್ರತಿಯೊಂದು ಭಾಗವೂ ಅದರ ಮೇಲೆ ಬರುವಷ್ಟು ಭಾರವನ್ನು ತಡೆಯುವಷ್ಟು ಬಲವಾಗಿರಬೇಕು. ಕಟ್ಟಡಗಳ ಮೇಲೆ ಬರುವ ಭಾರಗಳು ಮೂರು ಬಗೆಯಾಗಿರುತ್ತವೆ.

**1 ಕಟ್ಟಡದ ಭಾರ ನಿಶ್ಚಲ ಭಾರ :** ಈ ಭಾಗಗಳ ಪ್ರಮಾಣವೆಷ್ಟು, ಹೇಗೆ ಹಂಚಿರುತ್ತವೆ; ಕಟ್ಟಡದ ಒಂದೊಂದು ಭಾಗದ ಮೇಲೂ ಯಾವ ಪರಿಣಾಮವನ್ನುಂಟುಮಾಡುತ್ತವೆ ಎಂದು ಇಂಜಿನಿಯರು ಲೆಕ್ಕ ಹಾಕಬೇಕು.

2 ಕಟ್ಟಡದ ಒಳಗಡೆ ಇರತಕ್ಕ ಕುರ್ಚಿ, ಮೇಜು, ಯಂತ್ರ, ತಿರುಗಾಡುವ ಜನ, ಪಾಠಶಾಲೆಗಳಲ್ಲಿ ಹುಡಗರ ಭಾರ, ಮಳಿಗೆಗಳಲ್ಲಿ

ತುಂಬಿರುವ ಸಾಮಾನು, ಕಾರ್ಖಾನೆಗಳಲ್ಲಿ ಯಂತ್ರಗಳು–ಇವುಗಳ ಭಾರ ಚಲಭಾರ. ಯಂತ್ರಾಲಯಗಳಲ್ಲಿ ತಿರುಗುತ್ತಿರುವ ಯಂತ್ರಗಳ ಕಂಪನವೇ (ವೈಬ್ರೇಷನ್) ಈ ಭಾರದ ಬಹುಭಾಗವಾಗುತ್ತದೆ. ಗಡಂಗುಗಳಲ್ಲಿ ಒಂದೊಂದು ಮಹಡಿಯಲ್ಲೂ ಕೂಡಿರುವ ಸಾಮಾನಿನ ಭಾರವನ್ನು ಲೆಕ್ಕ ಹಾಕಿ ಅದಕ್ಕೆ ಸರಿಯಾಗಿ ಮಹಡಿಯನ್ನು ಬಲವಾಗಿ ಕಟ್ಟಬೇಕು.


(a) ಚಿತ್ರ 1.

ನಿಶ್ಚಲ ಮತ್ತು ಚಲಭಾರಗಳು ಕಟ್ಟಡದ ತಳದ ಕಡೆಗೆ ಇಳಿದ ಹಾಗೆ ಹೆಚ್ಚಾಗುತ್ತಾ ಹೋಗುತ್ತವೆ. ಭಾರವನ್ನು ಹೊರತಕ್ಕ ಗೋಡೆಗಳನ್ನೂ ಕಂಬಗಳನ್ನೂ ಅದಕ್ಕೆ ಸರಿಯಾಗಿ ದಪ್ಪವಾಗಿ ಮಾಡಬೇಕು. ಸಾಮಾನ್ಯವಾದ ವಾಸದಮನೆಗಳಿಗೆ ಒಳ್ಳೆಯ ಅಸ್ತಿಭಾರ ದೊರೆಯ ಬೇಕಾದರೆ ಬಹಳ ಆಳವಾಗಿ ಅಗೆಯಬೇಕಾದ್ದು ಅನಾವಶ್ಯಕ. ಇದಕ್ಕಾಗಿ ಒಂದೊಂದು ಮಣ್ಣೂ ಕುಸಿಯದ ಹಾಗೆ ಚದರಮೀಟರಿಗೆ ಎಷ್ಟು ಟನ್ನುಗಳನ್ನು ಹೊರಬಲ್ಲುದೆಂದು ಪ್ರಾಯೋಗಿಕವಾಗಿ ಪರೀಕ್ಷೆಮಾಡಬೇಕು. ಒಂದು ಮಣ್ಣು ಚದರಮೀಟರಿನ ಮೇಲೆ 22 ಟನ್ನುಗಳನ್ನು ಹೊರುವುದೆಂದು ಇಟ್ಟುಕೊಳ್ಳೋಣ. ಅದರ ಮೇಲೆ ಕಟ್ಟಬೇಕಾಗಿರುವ ಮನೆಯ ಗೋಡೆ ಒಂದು ಮೀಟರ್ ಉದ್ದದ ಮೇಲೆ ನಿಶ್ಚಲ ಮತ್ತು ಚಲಭಾರಗಳೂ ಸೇರಿ ಅಸ್ತಿಭಾರದ ಮೇಲೆ 26 ಟನ್ನುಗಳ ಭಾರವನ್ನು ತಂದರೆ ಅಸ್ತಿಭಾರದ ಅಗಲವನ್ನು 0.9492ಮೀ. ಹೆಚ್ಚಿಸಬೇಕು. ಇದು ತಳದ ಕಾಂಕ್ರೀಟಿನ ಅಗಲ. ಗೋಡೆಯ $1\,{}^{1}/_{2}$ 'ಯ ಅಗಲವನ್ನು ಅಸ್ತಿಭಾರದಲ್ಲಿ ಕ್ರಮವಾಗಿ 121.6ಸೆಂಮೀ ಯವರೆಗೂ ಹೆಚ್ಚಿಸಬೇಕು.

ಬಯಲಿನಲ್ಲಿ ಕಟ್ಟಿರುವ ಎತ್ತರವಾದ ಕಟ್ಟಡಗಳಲ್ಲಿ ಗಾಳಿಯ ಹೊಡೆತವನ್ನು ಮುಖ್ಯವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಬಿರುಗಾಳಿ ಕಟ್ಟಡದ ಹೊರ ಗೋಡೆಗಳ ಮೇಲೆ ಗಾಳಿಬೀಸುವ ದಿಕ್ಕಿನಲ್ಲಿ ಒತ್ತುತ್ತದೆ. ಎದುರುಗಡೆಯ ಗೋಡೆಗಳನ್ನು ಹೀರಿ ಎಳೆಯುತ್ತದೆ. ಆಗ ಎದುರು ಗೋಡೆಯ ಹೊರಭಾಗದಲ್ಲಿ ಒತ್ತಡ ಕಟ್ಟಡದ ಒಳಗಡೆ ಇರುವುದಕ್ಕಿಂತ ಕಡಿಮೆಯಾಗಿರುತ್ತದೆ. ಕೊಂಚಮಟ್ಟಿಗೆ ನಿರ್ವಾತಸ್ಥಿತಿಯ ಪರಿಣಾಮವಾಗಿ ಒಳ ಗೋಡೆ ಹೊರಗಡೆಗೆ ಉರುಳಿಕೊಳ್ಳಬಹುದು.

ಹೆಚ್ಚು ಇಳಿಕಲಿರುವ ಚಾವಣಿಯ ಮೇಲೆಯೂ ಗಾಳಿ ಒತ್ತಬಹುದು. ಆದರೆ ಇಳಿಜಾರು ಕಡಿಮೆಯಾಗಿದ್ದರೆ ಗಾಳಿ ಮೇಲಕ್ಕೆ ಏರಿ ಅದರ ತಲೆಯ ಮೇಲೆ ಹೋಗಿ ಗೋಡೆಯನ್ನೇ ಆಚೆಗೆ ತಳ್ಳುವ ಹಾಗೆ ಹೀರಬಹುದು. ಬಹಳ ಎತ್ತರವಾದ ಗುಡ್ಡಗಳ ಮೇಲೂ ಸಮುದ್ರತೀರದ ಲ್ಲಿಯೂ ಕಟ್ಟಡವನ್ನು ಮಗುಚಿ ಬೀಳಿಸುವಷ್ಟು ಗಾಳಿ ಬೀಸಬಹುದು. ಕೆಲವು ವೇಳೆ ಅಸ್ತಿಭಾರ ಭದ್ರವಾಗಿರದೇ ಇದ್ದರೆ ಹಗುರವಾದ ಕಟ್ಟಡವನ್ನು ಮೇಲಕ್ಕೆ ಎತ್ತಬಹುದು. ಮಟ್ಟವಾದ ಸಮತಲದ ಮೇಲೆ ಗಾಳಿಯ ಒತ್ತಡ ಗುಂಡಾದ ಭಾಗದ ಮೇಲಿನದಕ್ಕಿಂತ ಹೆಚ್ಚಾಗಿರುತ್ತದೆ. ಉದಾಹರಣೆಗಾಗಿ, ಒಂದು ಹೊಗೆಗೂಡು ಚಚ್ಚೌಕವಾಗಿದ್ದು ಒಂದು ಮುಖದಲ್ಲಿ ಗಾಳಿ ಬೀಸುತ್ತಾ ಅದರ ಮೇಲಿನ ಗಾಳಿಯ ಒತ್ತಡ ಅದೇ ಅಳತೆಯ ಗುಂಡಾದ ಹೊಗೆಯ ಗೂಡಿನ ಮೇಲೆ ಬರುವ ಒತ್ತಡದ ಒಂದೂವರೆಯಷ್ಟಿರುತ್ತದೆ. ಒಂದು ಕಟ್ಟಡದಲ್ಲಿ ಕೊನೆಯ ಗೋಡೆಗಳೂ ಅಡ್ಡಗೋಡೆಗಳೂ ಗಾಳಿಯ ರಭಸದ ಬಹುಭಾಗವನ್ನು ತಡೆಯುತ್ತವೆ. ಒಳಗಡೆ ಅಡ್ಡಗೋಡೆಗಳೇ ಇಲ್ಲದೆ ಹೊರಗಡೆ ಕಂಬಗಳ ನಡುವೆ ಹಗುರವಾದ

ಪುಟೀಪುಗಳಿದ್ದರೆ ಗಾಳಿ ಬೀಸುವ ದಿಕ್ಕಿನಲ್ಲಿರುವ ಕಂಬಗಳು ಗಾಳಿಯ ರಭಸವನ್ನೆಲ್ಲ ತಡೆಯಬೇಕಾಗುತ್ತದೆ. ಆದರೆ ಕೆಳಗಡೆ ಇರುವ ಕಾಂಕ್ರೀಟಿನ ನೆಲ ಈ ರಭಸದ ಒಂದು ಭಾಗವನ್ನು ಆಚೆಯ ಕಡೆಗೆ ಸಾಗಿಸುತ್ತದೆ.

**ಕಾಂಕ್ರೀಟಿನ ಅಸ್ತಿಭಾರಗಳಲ್ಲಿ ಅನೇಕ ನಮೂನೆಗಳಿವೆ :** 1 ಒಂದೊಂದು ಕಂಬಕ್ಕೂ ಪ್ರತ್ಯೇಕವಾದ ಅಸ್ತಿಭಾರವಿರಬಹುದು; 2 ಎರಡುಮೂರು ಕಂಬಗಳಿಗೂ ಸಾಲಾಗಿ ಒಂದೇ ಅಸ್ತಿಭಾರವಿರಬಹುದು; 3 ಚಚ್ಚೌಕವಾದ ನಾಲ್ಕು ಕಂಬಗಳ ಕೆಳಗೂ ಒಂದೇ ಚಪ್ಪಡಿಯನ್ನು ಹಾಕಬಹುದು; 4 ನೆಲದ ಕೆಳಗಡೆ ದಸಿಗಳನ್ನು ಹೂಳಬಹುದು ; 5 ಸೇತುವೆಗಳ ಕಂಬಗಳ ಅಸ್ತಿಭಾರಗಳಲ್ಲಿ ಕೇಸನ್ ಮುಂತಾದ ವಿಶಿಷ್ಟ ಅಸ್ತಿಭಾರಗಳನ್ನು (ಕನ್ನಂಬಾಡಿ ಮೊದಲಾದ) ಕಲ್ಲಿನ ಕಟ್ಟೆಗಳಲ್ಲಿ ಗಟ್ಟಿಕಲ್ಲಿನ ಮೇಲೆ ಕಾಂಕ್ರೀಟಿನ ಅಸ್ತಿಭಾರಗಳನ್ನೂ ಉಪಯೋಗಿಸಬಹುದು.

**ಅಂಡರ್ ಪಿನ್ನಿಂಗ್ :** ಮುಂಬಯಿ ಮೊದಲಾದ ನಗರಗಳಲ್ಲಿ ಹೊಸ ಕಟ್ಟಡದ ಅಸ್ತಿಭಾರವನ್ನು ತೆಗೆಯುವಾಗ ಅದು ಪಕ್ಕದಲ್ಲಿರುವ ಹಳೆಯ ಕಟ್ಟಡದ ಅಸ್ತಿಭಾರಕ್ಕಿಂತಲೂ ಕೆಳಗಡೆ ಹೋದರೆ ಹಳೆಯ ಮನೆ ಬೀಳದ ಹಾಗೆ ಅದರ ಅಸ್ತಿಭಾರದ ಕೆಳಗೆ ಆಧಾರಗಳನ್ನು ಕೊಡಬೇಕಾಗುತ್ತದೆ. ಇದಕ್ಕೆ ಅಂಡರ್ ಪಿನ್ನಿಂಗ್ ಎನ್ನುತ್ತಾರೆ. ಹಳೆಯ ಮನೆಗಳಿರುವ ಕಡೆ ಹೊಸ ಸೌಧಗಳನ್ನು ಕಟ್ಟುವಾಗ ಈ ಕೆಲಸವನ್ನು ಮೊದಲು ಮಾಡಬೇಕಾಗುತ್ತದೆ. ಪೂರ್ವಭಾವಿಯಾಗಿ ಪರೀಕ್ಷೆಮಾಡಿದ ದಸಿಗಳನ್ನು ಹಳೆಯ ಅಸ್ತಿಭಾರದ ಕೆಳಗೆ ಅಗೆದು ಕೂರಿಸಿ, ಅವು ಎಲ್ಲ ಹಳೆಯ ಕಟ್ಟಡದ ಎಲ್ಲ ಭಾರವನ್ನೂ ಹೊರುವಂತೆ ಅಂಡರ್‌ಪಿನ್ ಮಾಡುತ್ತಾರೆ. ಮೊದಲು ಹಳೆಯ ಕಟ್ಟಡದ ಕೆಳಗಡೆ ಕೆಲವು ಅಡಿಗಳ ಉದ್ದವಾಗಿ ಅಗೆದು 32.9–48.2 ಸೆಂಮೀ ವ್ಯಾಸದ ಉಕ್ಕಿನ ಕೊಳಾಯಿಗಳನ್ನು ಹೊಸ ಅಸ್ತಿಭಾರದೊಳಗೆ ದಸಿಗಳ ಹಾಗೆ ಹೊಡೆಯುತ್ತಾರೆ. ಕೊನೆಯಲ್ಲಿ ಲಂಬವಾದ ಕೊಳಾಯಿಗಳಲ್ಲಿ ಕಾಂಕ್ರೀಟ್‌ನ್ನು ತುಂಬಿದಾಗ ಪಕ್ಕ ದಸಿಗಳಂತೆ ಕೆಲಸ ಮಾಡುತ್ತವೆ. ಈ ಕೊಳಾಯಿಗಳನ್ನು ಆಗಲೇ ಭಾರವನ್ನು ಹೊತ್ತಿರುವ ಅಸ್ತಿಭಾರದ ಕೆಳಗಡೆ ಇಳಿಸುವುದು ಸುಲಭವಲ್ಲ. ಹೆಚ್ಚಿನ ಒತ್ತಡದ ಫೋರ್ಸ್‌ಪಂಪಿನ ಬಲದಿಂದ ಕೆಲಸ ಮಾಡುವ ಬಲಿಷ್ಠವಾದ ನೀರಿನ ಒತ್ತಡದ ಜಾಕುಗಳು ಲಂಬವಾದ ಕೊಳಾಯಿಗಳನ್ನು ಹೊಸ ಅಸ್ತಿಭಾರದ ಕೆಳಗೆ ಕಷ್ಟಪಟ್ಟು ತಳ್ಳುತ್ತವೆ. ಕೆಳಗಡೆ ಗಟ್ಟಿಯಾದ ಅಸ್ತಿಭಾರ ಸಿಗುವವರೆಗೂ ಬೇರೆ ಕೊಳಾಯಿಗಳನ್ನು ಸೇರಿಸಿ ಜಾಕುಗಳಿಂದ ಕೆಳಕ್ಕೆ ತಳ್ಳುತ್ತಾರೆ. ಆಮೇಲೆ ಕೊಳಾಯಿಗಳೊಳಕ್ಕೆ ಕಾಂಕ್ರೀಟನ್ನು ತುಂಬುತ್ತಾರೆ. ಈಗ ಹಳೆಯ ಅಸ್ತಿಭಾರಕ್ಕೂ ದಸಿಯತಲೆಗೂ ನಡುವಿನ ಜಾಗದಲ್ಲಿ ಉಕ್ಕಿನ ಗರ್ಡರುಗಳನ್ನು ಜಾಕುಗಳ ಸಹಾಯದಿಂದ ಬಿಗಿಯಾಗಿ ಜೋಡಿಸಿ ತೂಕವೆಲ್ಲ ದಸಿಗಳ ಮೇಲೆ ಬೀಳುವಂತೆ ಮಾಡುತ್ತಾರೆ. ಕೊನೆಯಲ್ಲಿ ಗರ್ಡರುಗಳು ದಸಿಗಳ ತಲೆಗಳು ಎಲ್ಲವನ್ನೂ ಹಳೆಯ ಅಸ್ತಿಭಾರದಿಂದ ಹೊಸ ಅಸ್ತಿಭಾರದ ಮಟ್ಟದವರೆಗೂ ಕಾಂಕ್ರೀಟಿನಿಂದ ಮುಚ್ಚಿ ಅಸ್ತಿಭಾರ ಏಕರೂಪವಾಗುವಂತೆ ಮಾಡುತ್ತಾರೆ.



(b) ಚಿತ್ರ 2.

ಈ ಅಂಡರ್ ಪಿನ್ನಿಂಗಿನಲ್ಲಿ ಹಳೆಯ ಅಸ್ತಿಭಾರದ ಕೆಳಗೆ ಆಸರೆಗಳನ್ನು ಕೊಡುವಾಗ ಮೇಲೆ ನಿಂತಿರುವ ಕಟ್ಟಡ ಕುಸಿಯದಂತೆ ನೋಡಿಕೊಳ್ಳುವುದೇ ದೊಡ್ಡ ಸಮಸ್ಯೆ. ಮೊದಲು ಕಾಂಕ್ರೀಟಿನ ಕೆಳಗಡೆ ಕೊಂಚದೂರ ಸಾಕಷ್ಟು ಗಟ್ಟಿಯಾದ ನೆಲದವರೆಗೂ ಅಗೆದು, ಉಕ್ಕಿನ ಗರ್ಡರುಗಳಿಂದ ಆಸರೆಗಳನ್ನು ಕೊಟ್ಟು ಅಸ್ತಿಭಾರದ ಎರಡು ಕಡೆಗಳಲ್ಲಿಯೂ ಮರದ ಕಂಬಗಳಿಂದ ಆಧಾರವನ್ನು ಕೊಡುತ್ತಾರೆ. ಕಂಬದ ಮೇಲುಭಾಗಕ್ಕೂ ಗರ್ಡರಿನ

ಕೆಳಭಾಗಕ್ಕೂ ನಡುವೆ ಬಿಗಿಯಾಗಿ ಅವುಗಳನ್ನು ಹೊಡೆಯುತ್ತಾರೆ. ಆಮೇಲೆ ಅಗಲ ವನ್ನು ಸಿಮೆಂಟ್ ಗಾರೆಯಿಂದ ಕಟ್ಟಿದ ಇಟ್ಟಿಗೆಯ ಕಟ್ಟಡದಿಂದ ಹೆಚ್ಚಿಸಿ ಮೇಲುಗಡೆ ಹಳೆಯ ಗೋಡೆಯನ್ನು ಅಗಲವಾಗಿ ಮಾಡುತ್ತಾರೆ. ಹಳೆಯ ಅಸ್ತಿಭಾರದ ಕಾಂಕ್ರೀಟಿಗೂ ಹೊಸ ಇಟ್ಟಿಗೆಯ ಗೋಡೆಗೂ ನಡುವೆ ಬಿಗಿಯಾಗಿ ಆಪುಗಳನ್ನು ಕೊಡುತ್ತಾರೆ. ಹೊಸ ಕೆಲಸ ಭಾರವನ್ನು ಹೊರುವಷ್ಟು ಬಲವಾದ ಮೇಲೆ ಪಕ್ಕದ ಭಾಗಗಳನ್ನು ಇದೇ ರೀತಿ ಬಲಪಡಿಸುತ್ತ ಹೋಗುತ್ತಾರೆ.

**ದಸಿಯ ತಳಪಾಯ :** ನವ ಶಿಲಾಯುಗದ ಕಾಲದಿಂದಲೂ ವಾಸದ ಮನೆಗಳ ಆಧಾರಕ್ಕಾಗಿ ದಸಿಗಳನ್ನು ನೆಲದಲ್ಲಿ ಹೂಳುವ ಪದ್ಧತಿ ಬಳಕೆಯಲ್ಲಿದೆ. ಸಾವಿರಾರು ವರ್ಷಗಳ ಹಿಂದೆ ಸ್ವಿಟ್ಜರ್ಲೆಂಡಿನಲ್ಲಿ ಜಿನೋವ ಸರೋವರದ ತಳದಲ್ಲಿ ಭಾರಿ ಮರದ ದಸಿಗಳನ್ನು ಹೊಡೆದು ನೀರಿನ ಮಟ್ಟದ ಮೇಲೆ ಮನೆಗಳನ್ನು ಕಟ್ಟುತ್ತಿದ್ದರು. ಕೆಲವು ಕಡೆ ಮೇಲೆ ಕಟ್ಟಿದ ಮನೆಗಳೇ ಇಲ್ಲ. ನೀರಿನ ಕೆಳಗಡೆ ದಸಿಗಳು ಮಾತ್ರ ಇವೆ.

ಇದಕ್ಕೆ ಕಾರಣವೇನೆಂದರೆ ನೀರಿನೊಳಗೆ ಯಾವಾಗಲೂ ಇರುವ ಮರವೂ ನೀರನ್ನು ಮುಟ್ಟದೆ ಇರುವ ಮರವೂ ಚೆನ್ನಾಗಿ ಬಾಳಿಕೆ ಬರುತ್ತವೆ. ರೋಮನ್ನರು ತಮ್ಮ ಕಟ್ಟಡಗಳ ತಳಪಾಯದಲ್ಲಿ ದಸಿಗಳನ್ನು ಭಾರವಾದ ಕೊಡತಿಗಳಿಂದ ಹೊಡೆದು ಕೆಳಕ್ಕೆ ಇಳಿಸುತ್ತಿದ್ದರು. ಈಗ ಆವಿಯ ಸುತ್ತಿಗೆಯನ್ನು ಉಪಯೋಗಿಸುತ್ತಿದ್ದೇವೆ. ರೋಮನ್ನರು ಜೌಗುನೆಲದ ಮೇಲಿನ ಮನೆಗಳ ತಳದಲ್ಲಿ ಮಾತ್ರ ದಸಿಗಳನ್ನು ಉಪಯೋಗಿಸುತ್ತಿದ್ದರು. ಈಗ ಅತಿಭಾರವಾದ ಕಟ್ಟಡಗಳನ್ನು ಹೊತ್ತು ನಿಲ್ಲುವುದಕ್ಕಾಗಿ ಅಸ್ತಿಭಾರದಲ್ಲಿ ಈ ರೀತಿಯ ವಿಶೇಷ ಆಸರೆಗಳನ್ನು ಕೊಡುವುದು ವಾಡಿಕೆಯಾಗುತ್ತಿದೆ.

ಕಟ್ಟಡಗಳ ಅಸ್ತಿಭಾರಗಳನ್ನು ನೆಲದ ಮಟ್ಟದ ಕೆಳಗಡೆ ಹರಡಿ ಮೇಲಿನಿಂದ ಬರುವ ಭಾರವನ್ನು ಭೂಮಿ ತಡೆಯುವಂತೆ ಮಾಡುವುದು ರೂಢಿ. ಆದರೆ ಭಾರಗಳು ನೆಲ ತಡೆಯಲಾರದಷ್ಟು ಇದ್ದಾಗ ಅಸ್ತಿಭಾರವನ್ನು ಕಲ್ಲಿನ ಬಂಡೆ ಸಿಕ್ಕುವವರೆಗೂ ಇಳಿಸಬೇಕಾಗುತ್ತದೆ. ಇದಕ್ಕೆ ಖರ್ಚು ಹೆಚ್ಚಾಗುವುದಲ್ಲದೇ ಕೆಲವು ಕಡೆ ಸುಮಾರಾದ ಆಳದಲ್ಲಿ ಬಂಡೆಯೇ ದೊರಕದೆ ಇರಬಹುದು. ಅಂಥ ಸನ್ನಿವೇಶಗಳಲ್ಲಿ ಮರದ ದಸಿಗಳನ್ನು ಹಿಂದಿನಿಂದಲೂ ಉಪಯೋಗಿಸುತ್ತಿದ್ದರು. ದಸಿಗಳಲ್ಲಿ ಎರಡು ನಮೂನೆಗಳಿವೆ. ಒಂದರಲ್ಲಿ ದಸಿ ತಲೆಯ ಮೇಲೆ ಕಂಬ ಭಾರವನ್ನು ಹೊರುವ ಹಾಗೆ ಹೊರುತ್ತದೆ. ಇನ್ನೊಂದರಲ್ಲಿ ದಸಿಗೂ ಭೂಮಿಗೂ ಇರುವ ಘರ್ಷಣೆಯ (ಫ್ರಿಕ್ಷನ್) ಬಲದಿಂದ ಭಾರವನ್ನು ಹೊರುತ್ತದೆ.

ಒಂದು ಕಟ್ಟಡದ ಅಸ್ತಿಭಾರದಲ್ಲಿ ದಸಿಗಳನ್ನು ಉಪಯೋಗಿಸುವ ಉದ್ದೇಶಗಳು ಮುಖ್ಯವಾಗಿ ನಾಲ್ಕು : 1 ನೆಲವನ್ನು ಗಟ್ಟಿ ಮಾಡುವುದು: 2 ಮಟ್ಟವಾದ ಒತ್ತಡವನ್ನು ತಡೆಯುವುದು; 3 ಒಂದು ಆವರಣವನ್ನು ಸುತ್ತುಗಟ್ಟುವುದು; 4 ಲಂಬವಾದ (ವರ್ಟಿಕಲ್) ಭಾರವನ್ನು ಹೊರುವುದು. ಈ ಉದ್ದೇಶಗಳಿಗೆ ಹೊಂದುವ ಹಾಗೆ ದಸಿಗಳನ್ನು ಆಯ್ಕೆಮಾಡುತ್ತಾರೆ. ಆವರಣವನ್ನು ಸುತ್ತುಗಟ್ಟುವುದಕ್ಕೆ ಚಪ್ಪಟೆಯಾದ ಉಕ್ಕಿನ ತಗಡಿನ ದಸಿಗಳು ಬೇಕಾಗುತ್ತವೆ. ಉಳಿದ ಉದ್ದೇಶಗಳಿಗೆ (i) ಗುಂಡಾದ, (ii) ಚಚ್ಚೌಕವಾದ, ಅಥವಾ (iii) ಎಂಟು ಮೂಲೆಯ ದಸಿಗಳು ಸರಿಹೋಗುತ್ತವೆ. ಹೆಚ್ಚಾಗಿ ಸುದ್ದೆ ಮಣ್ಣಿರುವ ನೆಲದಲ್ಲಿ ಹತ್ತಿರ ಹತ್ತಿರವಾಗಿ ಗಿಡ್ಡವಾದ ದಸಿಗಳನ್ನು ಹೂಳಿ, ಆಮೇಲೆ ದಸಿಗಳನ್ನು ಒಂದೊಂದಾಗಿ ಹೊರಕ್ಕೆ ತೆಗೆದು ಕುಳಿಗಳಲ್ಲಿ ಶುಭ್ರವಾದ ಮರಳನ್ನು ತುಂಬಿ ದಮ್ಮಸ್ಸು ಮಾಡಿದರೆ ಮೇಲೆ ಹೆಚ್ಚು ಹೊರೆಯನ್ನು ಹಾಕಬಹುದು. ಇವನ್ನು ಮರಳಿನ ದಸಿಗಳೆನ್ನುತ್ತಾರೆ.

ನೆಲದ ಪರೀಕ್ಷೆಗಾಗಿ ದಸಿಗಳನ್ನು ಸಾಧಾರಣ ಕೊಡತಿಯಿಂದಲೋ ಆವಿಯ ಕೊಡತಿಯಿಂದಲೋ ಹೊಡೆಯುವಾಗ ಕೊನೆಯ ಏಟಿನಿಂದ ದಸಿ ನೆಲದೊಳಕ್ಕೆ ಎಷ್ಟು ಇಳಿಯುವುದೆಂದು ನೋಡಿ, ಇಂಜಿನಿಯರುಗಳು ಆ ದಸಿಗಳ ಮೇಲೆ ಎಷ್ಟು ಭಾರವನ್ನು ಸುರಕ್ಷಿತವಾಗಿ ಹೇರಬಹುದೆಂದು ತೀರ್ಮಾನಿಸುತ್ತಾರೆ.

ಕೆಲವು ವೇಳೆ ಕಡಲಿನ ಅಡ್ಡಕಟ್ಟು, ಬಂದರು ಕಟ್ಟೆ, ಕಮಾನಿನ ಸೇತುವೆಯ ಗುದ್ದುಗಂಬ ಇಂಥ ಸನ್ನಿವೇಶಗಳಲ್ಲಿ ದಸಿಗಳ ಮಟ್ಟವಾದ ಒತ್ತಡವನ್ನು ಎದುರಿಸಬೇಕಾಗುತ್ತದೆ. ಆಗ ಇಂಜಿನಿಯರು ತನ್ನ ಅನುಭವದ ಮೇಲೆ ಮುಂದುವರಿಯಬೇಕಾಗುತ್ತದೆ. ಅಲ್ಲಿ ಪಕ್ಕದ ದಸಿಗಳನ್ನು ಜೊತೆಗೂಡಿಸಬಹುದು. ದಸಿಗಳ ತಲೆಗಳನ್ನು ಮೇಲುಗಡೆ ನೆಲಮಟ್ಟದಲ್ಲಿ ಕಾಂಕ್ರೀಟಿನ ಚಪ್ಪಡಿಯಲ್ಲಿ ಮುಚ್ಚಬಹುದು. ಕೆಲವು ವೇಳೆ ದಸಿಗಳನ್ನೇ ಓರೆಯಾಗಿ ಹೊಡೆಯಬಹುದು.

ಸೇತುವೆಗಳ ಕಂಬಗಳಿಗೆ ಅಸ್ತಿಭಾರವನ್ನು ಹಾಕುವಾಗ ಸುತ್ತಲ ಆವರಣದಲ್ಲಿ ಒಂದಕ್ಕೆ ಒಂದು ಹೊಂದಿಕೊಂಡಿರುವ ಉಕ್ಕಿನ ತಗಡಿನ ದಸಿಗಳನ್ನು ಲಂಬವಾಗಿ ನೆಡುತ್ತಾರೆ. ಇದರಿಂದ ಆವರಣದ ಒಳಗೆ ಬರುವ ಹೊಳೆಯ ನೀರು ಕಡಿಮೆಯಾಗುತ್ತದೆ. ಕೊಂಚ ನೀರು ಜಿನುಗಿದರೂ ಪಂಪುಗಳಿಂದ ಸುಲಭವಾಗಿ ಎತ್ತಿ ಹೊಳೆಗೆ ಸಾಗಿಸಬಹುದು.

ಲಂಬವಾದ ಭಾರಗಳನ್ನು ಹೊರಬೇಕಾದ ದಸಿಗಳು ಮುಖ್ಯವಾಗಿ ನಾಲ್ಕು ಬಗೆಯಾಗಿವೆ: (i) ಸಾದಾ ದಸಿಗಳನ್ನು ಮರ, ಕಾಂಕ್ರೀಟ್ ಇವುಗಳಿಂದ ಮಾಡುತ್ತಾರೆ. ಮೇಲುಗಡೆ ಮಣ್ಣು ಮೆತುವಾಗಿದ್ದು, ಕೆಳಗಡೆ ಕೊಂಚ ಗಟ್ಟಿಯಾಗಿರುವ ಕಡೆ ಈ ದಸಿಗಳನ್ನು ಉಪಯೋಗಿಸಬಹುದು. ಕೆಳಗಡೆ ದಸಿ ಇಳಿಯದಷ್ಟು ನೆಲ ಗಟ್ಟಿಯಾಗಿದ್ದರೆ ದಸಿಗಳು ಕಂಬಗಳಂತೆ ಭಾರಗಳನ್ನು ಹೊರುತ್ತವೆ. (ii) ದಸಿಯ ತಳ ಸುಮಾರಾಗಿ ಗಟ್ಟಿಯಾದ ಪದರವನ್ನು ಮುಟ್ಟಿದರೆ ಕಾಂಕ್ರೀಟಿನಿಂದ ಮಾಡಿದ ಪೀಠದ ದಸಿಗಳನ್ನು (ಪೆಡಸ್ಟಲ್) ಉಪಯೋಗಿಸಬಹುದು. (iii) ದಸಿಗಳು ನೆಲದಲ್ಲಿ ಹೆಚ್ಚಾಗಿ ಇಳಿಯದೆ ಹೋದರೆ ಕೆಳಗಡೆ ತಿರುಪಿನ ಅಂಚನ್ನು ಜೋಡಿಸಿ ಕ್ಯಾಪ್ಸ್ಟನ್ನಿನಿಂದ ತಿರುಗಿಸಬಹುದು. ಈ ದಸಿಗಳನ್ನೂ ತಟ್ಟೆಯಮಾದರಿಯ ತಳದ ದಸಿಗಳನ್ನೂ ಇಳಿಸುವುದಕ್ಕೆ ನೀರಿನ ಧಾರಾ ನಳಿಯಿಂದ ತುಂಬ ಉಪಯೋಗವಾಗುತ್ತದೆ. (iv) ಮೆದುವಾದ ನೆಲದಲ್ಲಿ ಸಾದಾ ದಸಿಗೆ ನಾಲ್ಕು ಉದ್ದವಾದ ಮರದ ತುಂಡುಗಳನ್ನು ಬೋಲ್ಟುಗಳಿಂದ ಜೋಡಿಸಿ ಘರ್ಷಣೆಯ ಬಲದಿಂದ ಹೆಚ್ಚು ಭಾರವನ್ನು ಹೊರುವ ಹಾಗೆ ಮಾಡಬಹುದು.

ಒಂದು ದಸಿ ಹೊರಬಹುದಾದ ಭಾರ ದಸಿಯ ಬಲದ ಮೇಲಲ್ಲ, ಅದು ಹೊಕ್ಕಿರುವ ಒಳನೆಲದ ಬಲದ ಮೇಲೆ ನಿರ್ಣಯವಾಗುತ್ತದೆ. ಆದ್ದರಿಂದ ದಸಿಯ ಅಸ್ತಿಭಾರದ ವಿಜ್ಞಾನ ಮಣ್ಣಿನ ಗುಣಗಳ ಮೇಲೆ ನಿಂತಿದೆ.

ಮೇಲೆ ಬರುವ ಕಟ್ಟಡದ ಭಾರ ಅಸ್ತಿಭಾರದಲ್ಲಿ ಅಗೆದಾಗ ಸುಮಾರಾದ ಆಳದಲ್ಲಿ ಭೂಮಿ ಹೊರಲಾರದಷ್ಟು ಹೆಚ್ಚಾಗಿದ್ದಾಗ ದಸಿಗಳನ್ನು ಉಪಯೋಗಿಸುತ್ತಾರೆ. ಸಮುದ್ರತೀರದಲ್ಲಿ ಕಂಬಗಳು, ಬಂದರು ಕಟ್ಟೆಗಳು, ಹಡಗು ಕಟ್ಟೆಗಳು ಇವನ್ನು ಕಟ್ಟುವಾಗ ದಸಿಗಳು

ಅವಶ್ಯವಾಗುತ್ತವೆ. ಅವುಗಳನ್ನು ಮರ, ಪ್ರಬಲಿತ ಕಾಂಕ್ರೀಟ್ ಇಲ್ಲವೆ ಉಕ್ಕಿನಿಂದ ಮಾಡಬಹುದು. ಪೂರ್ವದಲ್ಲಿ ಮರವನ್ನೇ ಉಪಯೋಗಿಸುತ್ತಿದ್ದರು. ಈಚೆಗೆ ದೊಡ್ಡಕಟ್ಟಡಗಳಿಗೆ ಪ್ರಬಲಿತ ಕಾಂಕ್ರೀಟ್ ಮತ್ತು ಉಕ್ಕನ್ನು ಮಾತ್ರ ಬಳಸುತ್ತಾರೆ. ನೆಲದೊಳಕ್ಕೆ ಹೊಳುವ ತಿರುಪಿನ ದಸಿಗಳಿಗೆ ತಾಂಡವಾಳ ಬಳಸಬಹುದು. ಪ್ರಬಲಿತ ಕಾಂಕ್ರೀಟಿನ ದಸಿಗಳನ್ನು ಚಚ್ಚೌಕವಾಗಿ ಇಲ್ಲವೆ ಎಂಟು ಮೂಲೆಗಳಲ್ಲಿ ಮೇಲಿನಿಂದ ಹೊಡೆಯುವ ಏಟುಗಳನ್ನು ತಡೆದುಕೊಂಡು ನೆಲದೊಳಕ್ಕೆ ಇಳಿಯುವಂತೆ ಉಕ್ಕನ್ನು ಹುದುಗಿಸಿ, ಪೂರ್ವಭಾವಿಯಾಗಿ ತಯಾರಿಸಿಟ್ಟು ಬೇಕಾದಾಗ ಉಪಯೋಗಿಸುತ್ತಾರೆ. ಉಕ್ಕಿನ ದಸಿಗಳು ಗುಂಡಾಗಿರಬಹುದು, ಉರುಳೆಗಳ ಹಾಗಿರಬಹುದು ಇಲ್ಲವೆ ವಿಶೇಷ ಆಕಾರಗಳಲ್ಲಿರಬಹುದು. 30ಮೀ ಉದ್ದದ ದಸಿಗಳೂ ಬಳಕೆಯಲ್ಲಿವೆ. ಆದರೆ ಸಾಮಾನ್ಯವಾಗಿ ದಸಿಗಳ ಉದ್ದ 10–20ಮೀ ವರೆಗೆ ಹೋಗುತ್ತದೆ.

**ಕಾಂಕ್ರೀಟಿನ ದಸಿಗಳು :** ನೆಲದೊಳಕ್ಕೆ ಅಸ್ತಿಭಾರದಲ್ಲಿ ಹೊಡೆದ ಕಾಂಕ್ರಿಟಿನ ದಪ್ಪವಾದ ಕಂಬಕ್ಕೆ ದಸಿಯೆನ್ನುತ್ತಾರೆ. ಕಂಬಗಳನ್ನು ಕಟ್ಟುವುದಕ್ಕಿಂತ ಈ ಕ್ರಮದಲ್ಲಿ ಖರ್ಚು ಕಡಿಮೆಯಾಗುತ್ತದೆ. ಸಾಮಾನ್ಯವಾಗಿ ಸೇತುವೆಯ ಗುದ್ದುಗಂಬಗಳ ಕೆಳಗೂ ಮನೆಯ ಕಂಬಗಳ ಕೆಳಗೂ ಕೇಂದ್ರೀಕೃತವಾದ ಭಾರಗಳನ್ನು ಹೊರುವುದಕ್ಕಾಗಿ ದಸಿಗಳನ್ನು ಹೊಡೆಯುವುದೇ ಹೆಚ್ಚು. ಇವುಗಳನ್ನು ಕೊನೆಯ ಗಟ್ಟಿಯಾದ ಪದರವನ್ನು ಮುಟ್ಟುವವರೆಗೂ ಹೊಡೆದರೆ ಭಾರವನ್ನು ಹೊರುವ (ಬೇರಿಂಗ್) ದಸಿಗಳೆಂದೂ, ದಸಿಗಳ ಪಕ್ಕಗಳ ಘರ್ಷಣೆ ಸಾಕಷ್ಟು ಪ್ರತಿಕ್ರಿಯೆಯನ್ನು ಒದಗಿಸಿದರೆ ಘರ್ಷಣೆಯ ದಸಿಗಳೆಂದೂ ಕರೆಯುತ್ತಾರೆ. ಮೇಲಿನಿಂದ ಬರುವ ಭಾರವನ್ನು ಸಮವಾಗಿ ಹಂಚುವುದಕ್ಕಾಗಿ ದಸಿಗಳ ತಲೆಗಳ ಮೇಲೆ ಮರದ ಚೌಕಟ್ಟುಗಳನ್ನೋ ಕಾಂಕ್ರೀಟುಗಳನ್ನೋ ಹರಡುತ್ತಾರೆ.

ಇವುಗಳನ್ನು ಪೂರ್ವಭಾವಿಯಾಗಿ ಬೇರೆಕಡೆ ತಯಾರಿಸಬಹುದು. ಇಲ್ಲವೆ ಸ್ಥಳದಲ್ಲಿಯೇ ಎರಕ ಹೊಯ್ಯಬಹುದು. ಮೊದಲನೆಯ ನಮೂನೆಯಲ್ಲಿ ಒಳಗಡೆ ಉಕ್ಕಿನ ಕಂಬಗಳನ್ನಿಟ್ಟು ಭದ್ರಪಡಿಸುತ್ತಾರೆ. ಪ್ರಬಲಿತ ಕಾಂಕ್ರೀಟಿನ (ರೀಇನ್‌ಫೋರ್ಸ್‌ಡ್) ಒತ್ತು ಬಲ ಹೆಚ್ಚು. ಕೊನೆಗಳನ್ನು ಕೊಡತಿಗಳಿಂದ ಬಡಿದು ನೆಲದಲ್ಲಿ ಇಳಿಸುವಾಗ ಆ ತ್ರಾಸವನ್ನು ತಡೆದುಕೊಳ್ಳುತ್ತದೆ. ಪಕ್ಕಗಳಲ್ಲಿ ಬಗ್ಗುವುದಕ್ಕೆ ಅವಕಾಶವನ್ನೂ ಕೊಡುವುದಿಲ್ಲ. ದಸಿಗಳು ನೆಲದೊಳಕ್ಕೆ ಇಳಿಯುವ ಕೊನೆಗಳಲ್ಲಿ ಉಕ್ಕನ್ನೋ ತಾಂಡವಾಳವನ್ನೋ ಹೊದಿಸಿರುತ್ತಾರೆ. ಈಗಲಂತೂ ಬೇಗ ಗಟ್ಟಿಯಾಗುವ ಸಿಮೆಂಟ್ ಬಂದಿರುವುದರಿಂದ ಕೆಲವೇ ದಿನಗಳಲ್ಲಿ ದಸಿಗಳನ್ನು ಎರಕಹೊಯ್ದು ನೆಲದೊಳಕ್ಕೆ ಇಳಿಸಬಹುದು.

ಸ್ಥಳದಲ್ಲಿಯೇ ಎರಕ ಹೊಯ್ದ ದಸಿಗಳಲ್ಲಿ ಕೆಲವು ವಿಶೇಷ ಅನುಕೂಲತೆಗಳಿವೆ. ಬೇರೆ ಕಡೆ ಎರಕಹೊಯ್ದು ಸಾಗಿಸುವ ತೊಂದರೆ ತಪ್ಪುತ್ತದೆ. ದಸಿಗಳನ್ನು ತಯಾರಿಸಿದ ಮೇಲೆ ಬೇಗ ಭಾರವನ್ನು ಹೇರಬಹುದು. ಇದರಲ್ಲಿ ಅನೇಕ ನಮೂನೆಗಳಿವೆ: (I) ಕೆಳಕ್ಕೆ ಹೋಗುತ್ತ ಕ್ರಮೇಣ ಸಣ್ಣದಾಗುವ ಕೊಳವಿಯನ್ನು ಮೊದಲು ಹೊಡೆದು ಆಮೇಲೆ ಅದನ್ನು ಮೇಲಕ್ಕೆ ಎತ್ತಿ, ಆ ಜಾಗದಲ್ಲಿ ಕಾಂಕ್ರೀಟನ್ನು ತುಂಬುತ್ತಾರೆ ಅಥವಾ ಒಂದು ಉರುಳೆ (ಸಿಲಿಂಡರ್) ಆಕಾರದ ಸರಳನ್ನೂ (ಮ್ಯಾಂಡ್ರೆಲ್) ಅದರ ಹೊರಗಡೆ ಒಂದು ಕವಚವನ್ನೂ (ಶೀತ್) ಹೊಡೆದು ಆಮೇಲೆ ಸರಳನ್ನು ಹೊರಕ್ಕೆ ಎಳೆದು ಆ ಜಾಗದಲ್ಲಿ ಸಿಮೆಂಟ್ ಕಾಂಕ್ರೀಟನ್ನು ತುಂಬಬಹುದು. (ii) ಸಾಮಾನ್ಯವಾದ ಕೊಳವಿಗೆ ತಳದಲ್ಲಿ ಚೂಪಾದ ಲೋಹದ ರಕ್ಷಣೆಯನ್ನು ಕೊಟ್ಟು, ಅದನ್ನು ನೆಲದಲ್ಲಿ ಸಾಕಷ್ಟು ಆಳವಾಗಿ ಹೊಡೆದ ಮೇಲೆ ಕೊಳವಿಯನ್ನು ಕ್ರಮಕ್ರಮವಾಗಿ ಮೇಲಕ್ಕೆ ಎತ್ತಿ ಕಾಂಕ್ರೀಟನ್ನು ತುಂಬುತ್ತ ಹೋಗಬಹುದು. ಅವಶ್ಯವಾದ ಕಡೆ ಒಳಗೆ ಉಕ್ಕಿನ ಚೌಕಟ್ಟನ್ನಿಟ್ಟು ಭದ್ರ ಕಾಂಕ್ರೀಟನ್ನು ತುಂಬಬಹುದು. (iii) ಈ ಕೊಳವಿಗಳ ತಳವನ್ನು ಅಗಲವಾಗಿ ಮಾಡಿ ಹೆಚ್ಚು ಭಾರವನ್ನು ಹೊರುವಂತೆ ಮಾಡಬಹುದು. (iv) ದೊಡ್ಡ ಕಬ್ಬಿಣದ ಕೊಳವಿಗಳನ್ನು ನೆಲದೊಳಕ್ಕೆ ಇಳಿಸಿ ಅವುಗಳೊಳಗಿನಿಂದ ಮಣ್ಣನ್ನು ತೆಗೆದು ಆ ಜಾಗದಲ್ಲಿ ಕಾಂಕ್ರೀಟನ್ನು ತುಂಬಬಹುದು.

ದಸಿಗಳನ್ನು ಎರಡು ಸಮಕೋನವಾದ ಅಕ್ಷಗಳ ಮೇಲೆ ಒಂದು ದಸಿಗೂ ಇನ್ನೊಂದಕ್ಕೂ ಇರಬೇಕಾದ ಅಂತರವನ್ನು ಮಣ್ಣಿನ ಗುಣಕ್ಕೆ ಅನುಗುಣವಾಗಿ ಒಂದೊಂದು ಸಂದರ್ಭಗಳಲ್ಲಿಯೂ ಗೊತ್ತುಮಾಡಬೇಕು.

ದಸಿಗಳನ್ನು ಹೊಡೆಯುವ ಸಾಧನಗಳು: ಇವು ದಸಿಗಳ ತಲೆಗಳ ಮೇಲೆ ಒಂದಾದಮೇಲೊಂದು ಸುತ್ತಿಗೆಯ ಏಟುಗಳನ್ನು ಕೊಟ್ಟು ಅವನ್ನು ನೆಲದೊಳಕ್ಕೆ ಇಳಿಸುತ್ತವೆ. ಹಳೆಯ ನಮೂನೆಯಲ್ಲಿ ಒಂದು ದಸಿಯ ಚೌಕಟ್ಟು, ಸುತ್ತಿಗೆ ಮತ್ತು ಎತ್ತುಯಂತ್ರವನ್ನು (ವಿಂಚ್) ಉಪಯೋಗಿಸುತ್ತಿದ್ದರು. ಈಚೆಗೆ ಕೂಡತಿಯನ್ನು ಒಂದು ಕ್ರೇನಿನಿಂದ ತೂಗು ಹಾಕಿ ಸ್ವಯಂಚಲಿಯಾಗಿ ಏಟುಗಳನ್ನು ಕೊಡುವುದು ಸಾಧ್ಯವಾಗಿದೆ. ಕೊಡತಿಯನ್ನೂ ದಸಿಯನ್ನೂ ಎತ್ತುವ ಯಂತ್ರವನ್ನೂ ವಿದ್ಯುಚ್ಛಕ್ತಿಯಿಂದ ನಡೆಸುತ್ತಾರೆ. ದಸಿಯ ಚೌಕಟ್ಟುಗಳನ್ನು ಉಕ್ಕಿನಿಂದ 6ಮೀ 30ಮೀ ಎತ್ತರದವರೆಗೂ ತಯಾರಿಸುತ್ತಾರೆ. ಚೌಕಟ್ಟುಗಳನ್ನು ಚಕ್ರಗಳ ಮೇಲೋ ರೋಲರುಗಳ ಮೇಲೋ ಬೇಕಾದ ಸ್ಥಳಕ್ಕೆ ಒಯ್ಯಬಹುದು. ಇಲ್ಲವೆ ದೋಣಿಗಳ ಮೇಲೆ ಹೊಳೆಯಲ್ಲಿರುವ ಯಾವ ಜಾಗಕ್ಕೆ ಬೇಕಾದರೂ ಸಾಗಿಸಬಹುದು. ಸಮುದ್ರದೊಳಕ್ಕೆ ಚಾಚಿಕೊಂಡಿರುವ ಏರಿಗಳನ್ನು ಕಟ್ಟುವುದಕ್ಕೆ ವಿಶೇಷವಾದ ಚಾಚುತೊಲೆಯ (ಕ್ಯಾಂಟಿಲಿವರ್) ಚೌಕಟ್ಟುಗಳಿವೆ.

ದಸಿಯ ಕೊಡತಿಗಳು ವಿದ್ಯುತ್ತಿನಿಂದ ನಡೆಯುವ ಎತ್ತುಯಂತ್ರದಿಂದ ವೇಗವಾಗಿ ಕೆಳಕ್ಕೆ ಇಳಿಯುವ ಭಾರಗಳಂತಿರುತ್ತವೆ. ಸ್ವಯಂಚಲಿಯಾದ ದ್ವಿಮುಖವಾಗಿ ಕೆಲಸ ಮಾಡುವ ಕೊಡತಿಗಳಲ್ಲಿ ಆವಿ ಇಲ್ಲವೆ ಸಂಮರ್ದಿತ ಗಾಳಿಯಿಂದ ಕೊಡತಿ ಮೇಲಕ್ಕೆ ಹೋಗಿ ವೇಗವಾಗಿ ದಸಿಯ ತಲೆಯ ಮೇಲೆ ಒಂದಾದ ಮೇಲೊಂದು ಬಲವಾದ ಏಟುಗಳನ್ನು ಕೊಡುತ್ತದೆ. ಅರ್ಧ ಸ್ವಯಂಚಲಿಯಾದ ಏಕಮುಖವಾದ ಕೊಡತಿಯಲ್ಲಿ ಯಂತ್ರ ಕೊಡತಿಯನ್ನು ಮೇಲಕ್ಕೆ ಎತ್ತುತ್ತದೆ. ಆಮೇಲೆ ಅದು ತನ್ನ ಭಾರದಿಂದ ಕೆಳಕ್ಕೆ ಬಿದ್ದು ದಸಿಯ ಮೇಲೆ ಏಟನ್ನು ಕೊಡುತ್ತದೆ. ಆಗ ಯಂತ್ರ ಅದನ್ನು ಮೇಲಕ್ಕೆ ಎತ್ತುತ್ತದೆ. ತಿರುಗಿ ದಸಿಯ ಮೇಲೆ ಏಟು ಬೀಳುತ್ತದೆ.

**ತಗಡಿನ ದಸಿಗಳು (ಶೀಟ್ ಪೈಲ್ಸ್) :** ಇವನ್ನು ಮರದಿಂದಲೋ ಪ್ರಬಲಿತ ಕಾಂಕ್ರೀಟಿನಿಂದಲೋ ಚಚ್ಚೌಕವಾಗಿ ಮಾಡಬಹುದು. ಇಲ್ಲವೆ ಉಕ್ಕಿನಲ್ಲಿ ಒಂದಕ್ಕೊಂದು ಸೇರಿಕೊಳ್ಳುವ ಹಾಗೆ ಮಾಡಬಹುದು. ಆಗ ಪಕ್ಕದ ದಸಿಗಳೆಲ್ಲ ಅಖಂಡವಾಗಿದ್ದಂತೆ ಭಾರವನ್ನು ಹೊರುತ್ತವೆ. ನೀರಿನ ತಳದಲ್ಲಿ ಸೇತುವೆಗಳು, ಕಟ್ಟೆಗಳು ಇವುಗಳ ಅಸ್ತಿಭಾರದಲ್ಲಿ ತಾತ್ಕಾಲಿಕವಾದ ಹದಿಕಟ್ಟೆಗಳನ್ನು (ಕಾಫರ್ ಡ್ಯಾಮ್ಸ್) ಕಟ್ಟುವುದರಲ್ಲಿ ದಸಿಗಳಿಂದ ಉಪಯೋಗ ಹೆಚ್ಚು. ಈ ರೀತಿಯ ದಸಿಗಳನ್ನು ಬಲಿಷ್ಠವಾಗಿ ಕಟ್ಟುವುದು ಸಾಧ್ಯವಾದಾಗ ಇದರೊಳಕ್ಕೆ ನೀರು ನುಗ್ಗದೆ ಇರುವುದರಿಂದ ಹಡಗು ಕಟ್ಟೆಗಳ ಗೋಡೆಗಳನ್ನೂ ಜಲಾಶಯದ ಕಟ್ಟೆಗಳು ಮತ್ತು ಅಣೆಕಟ್ಟುಗಳ ಬಳಿ ನೀರು ಒಳಗೆ ಬರದಂಥ ಗೋಡೆಗಳನ್ನೂ ಕಟ್ಟಲು ಉಪಯೋಗಿಸುತ್ತಿದ್ದಾರೆ.

**ವಿಶಿಷ್ಟ ಅಸ್ತಿಭಾರಗಳು :** ದೊಡ್ಡ ಸೇತುವೆಗಳ ಕಂಬಗಳು. ಹಡಗುಕಟ್ಟೆಯ ಗೋಡೆಗಳು ಮತ್ತು ಬಂದರುಗಳಲ್ಲಿ ಹೆಚ್ಚು ಭಾರವನ್ನು ಹೊರುವುದಕ್ಕಾಗಿ ವಿಶಿಷ್ಟ ಅಸ್ತಿಭಾರಗಳು ಬೇಕಾಗುತ್ತವೆ. ಇವುಗಳನ್ನು ಅಗೆಯುವಾಗ ಲಂಬವಾದ ಪಕ್ಕಗಳನ್ನು ತಡೆಯಲು ತಾತ್ಕಾಲಿಕವಾಗಿ ಆಸರೆಗಳು ಬೇಕಾಗುತ್ತವೆ.

**ತೆರೆದ ಕೇಸನ್:** ಇದು ತಳ ಮತ್ತು ಮುಚ್ಚಳ ಇಲ್ಲದ ದೊಡ್ಡ ಉರುಳೆ(ಸಿಲಿಂಡರ್). ಇದನ್ನು ಕಂಬದ ಅಸ್ತಿಭಾರದಲ್ಲಿಟ್ಟು ಮಣ್ಣನ್ನು ಒಳಗಿನಿಂದ ಯಂತ್ರಗಳಲ್ಲಿ ತೋಡಿ ಕೆಳಕ್ಕೆ ಇಳಿಸುತ್ತಾರೆ. ನೀರನ್ನು ಪಂಪುಮಾಡಿ ಉರುಳೆಗಳು ಸಾಕಷ್ಟು ಇಳಿದಮೇಲೆ ಅದನ್ನು ಅಲ್ಲಿಯೇ ಬಿಟ್ಟು ಒಳಗಡೆ ಕಾಂಕ್ರೀಟನ್ನು ತುಂಬಿ ಕಂಬಗಳನ್ನು ಕಟ್ಟುತ್ತಾರೆ. ಈ ಕೇಸನ್ನುಗಳನ್ನು ಉಕ್ಕಿಗೆ ಬದಲಾಗಿ ಪ್ರಬಲಿತ ಕಾಂಕ್ರೀಟಿನಿಂದಲೂ ಮಾಡಬಹುದು.

**ಸಂಮರ್ದಿತ ಗಾಳಿಯ ಪೆಟ್ಟಿಗೆ:** ವರ್ತುಳಾಕಾರವಾಗಿ 20ಮೀ ವ್ಯಾಸದವರೆಗೂ ಇರುತ್ತದೆ. ಇದನ್ನು ಹುಸಿ ಮಣ್ಣಿರುವ ಸನ್ನಿವೇಶಗಳಲ್ಲಿ ಇನ್ನು ಯಾವ ಉಪಾಯವೂ ಸಾಧ್ಯವಾಗದೆ ಇದ್ದಾಗ ಉಪಯೋಗಿಸುತ್ತಾರೆ. ಈ ಪೆಟ್ಟಿಗೆಗೆ ತಳವಿಲ್ಲ; ಮುಚ್ಚಳವಿರುತ್ತದೆ. ಒಳಕ್ಕೆ ಗಾಳಿ ಹೋಗುವ ಹಾಗಿರುವುದಿಲ್ಲ. ನೆಲದ ಒಳಕ್ಕೆ ಇಳಿಯುವ ಹಾಗೆ ತಳದ ಅಂಚು ಚೂಪಾಗಿರುತ್ತದೆ. ಪೆಟ್ಟಿಗೆಯನ್ನು ಸೇತುವೆಯ ಕಂಬದ ಜಾಗಕ್ಕೆ ಜಂಗಲ್‌ಗಳಲ್ಲಿ ತರುತ್ತಾರೆ. ಸ್ಥಳದಲ್ಲಿ ಇಟ್ಟು ಗಾಳಿಯನ್ನು ಪೆಟ್ಟಿಗೆಯೊಳಕ್ಕೆ ಪಂಪು ಮಾಡಿ ನೀರನ್ನು ಹೊರದೂಡುತ್ತಾರೆ. ಒಂದು ಕವಾಟದಿಂದ (ಏರ್‌ಲಾಕ್) ಆಳುಗಳನ್ನು ಒಳಕ್ಕೆ ಬಿಡುತ್ತಾರೆ. ಕವಾಟದಲ್ಲಿ ಎರಡು ಭದ್ರವಾದ ಬಾಗಿಲುಗಳಿರುತ್ತವೆ. ಹಿಂದುಗಡೆಯ ಬಾಗಿಲನ್ನು ಮುಚ್ಚಿ ಮುಂದುಗಡೆಯದನ್ನು ಮುಚ್ಚುವ ಮೊದಲು ಮಧ್ಯಕ್ಕೆ ಆಳುಗಳನ್ನು ಬಿಡುತ್ತಾರೆ. ಆಮೇಲೆ ಮುಂದಿನ ಬಾಗಿಲನ್ನು ಮುಚ್ಚಿ ಹಿಂದಿನದನ್ನು ತೆರೆದು ಪೆಟ್ಟಿಗೆಯೊಳಕ್ಕೆ ಇಳಿಸುತ್ತಾರೆ. ಆಗ ಒಳಗಡೆ ಇರುವ ಸಂಮರ್ದಿತ ಗಾಳಿ ಹೊರಕ್ಕೆ ಹೋಗಲು ಅವಕಾಶವಾಗುವುದಿಲ್ಲ, ಪೆಟ್ಟಿಗೆಯೊಳಗಿನ ಮಣ್ಣನ್ನು ಆಳುಗಳು ಅಗೆದು ಬಕೆಟ್ಟುಗಳಲ್ಲಿ ತುಂಬಿ ರಾಟೆಗಳ ಮೂಲಕ ಹೊರಕ್ಕೆ ಸಾಗಿಸುತ್ತಾರೆ. ಇನ್ನೊಂದು ಕವಾಟದಿಂದ ಮಣ್ಣು ಹೊರಕ್ಕೆ ಹೋಗುತ್ತದೆ. ಪೆಟ್ಟಿಗೆ ಹುಸಿಮಣ್ಣಿನಲ್ಲಿ ಇಳಿಯುತ್ತದೆ. ಪೆಟ್ಟಿಗೆ ಇಳಿದ ಹಾಗೆ ನೀರನ್ನು ಹೊರಕ್ಕೆ ತಳ್ಳಿ ಆಳುಗಳು ಅಗೆಯಲು ಅವಕಾಶವಾಗುವುದಕ್ಕೆ ಗಾಳಿಯ ಒತ್ತಡ ಹೆಚ್ಚಾಗಬೇಕಾಗುತ್ತದೆ.

ಪೆಟ್ಟಿಗೆಯ ಮುಚ್ಚಳವನ್ನು ಉಕ್ಕಿನ ತಗಡುಗಳಿಂದ ಮಾಡಿರುತ್ತಾರೆ. ಸುಮಾರಾಗಿ ಪೆಟ್ಟಿಗೆ ಇಳಿದಮೇಲೆ ಅದರ ಮೇಲೆಯೇ ಅಸ್ತಿಭಾರದ ಕೆಲಸ ಪ್ರಾರಂಭವಾಗುತ್ತದೆ. ಕೆಳಗೆ ಆಳುಗಳು ಮಣ್ಣನ್ನು ತೋಡುತ್ತಲೇ ಇರುತ್ತಾರೆ. ಆಗ ಪೆಟ್ಟಿಗೆ ವೇಗವಾಗಿ ಕೆಳಕ್ಕೆ ಇಳಿಯುತ್ತದೆ. ಕೆಳಗೆ ಬಂಡೆ ಸಿಕ್ಕುವವರೆಗೂ ಪೆಟ್ಟಿಗೆ ಇಳಿದ ಮೇಲೆ ಅದನ್ನು ಒರಟಾಗಿ ಕಡಿದು ತೊಳೆದು ಸಿದ್ಧಪಡಿಸುತ್ತಾರೆ. ಒಳಗೆ ಕಾಂಕ್ರೀಟನ್ನು ತುಂಬಿ ಪೆಟ್ಟಿಗೆಯನ್ನು ಅಲ್ಲಿಯೇ ಬಿಟ್ಟು ಆಳುಗಳು ಮೇಲಕ್ಕೆ ಬರುತ್ತಾರೆ. ಪೆಟ್ಟಿಗೆ ಅಸ್ತಿಭಾರದಲ್ಲಿ ಸೇರಿಹೋಗುತ್ತದೆ.

**ಹದಿಕಟ್ಟೆ :** ಇದು ಸಾಮಾನ್ಯವಾಗಿ ನೀರಿನಿಂದ ಮುಚ್ಚಿರುವ ಹೊಳೆಯ ತಳದಂಥ ಪ್ರದೇಶಗಳಲ್ಲಿ ಒಂದು ಜಾಗವನ್ನು ಆವರಿಸಿರುವ ಕಟ್ಟೆ (ಕಾಫರ್ ಡ್ಯಾಂ). ಒಂದು ನದಿಯ ಮೇಲೆ ಕಲ್ಲುಗಾರೆಯ ಕಟ್ಟೆಯನ್ನೋ ಸೇತುವೆಯನ್ನೋ ಕಟ್ಟಬೇಕಾದಾಗ ಅಸ್ತಿಭಾರವನ್ನು

ಹಾಕಲು ಅಲ್ಲಿ ಒಂದು ಆವರಣವನ್ನು ಕಟ್ಟಿ ಒಳಗಿನಿಂದ ನೀರನ್ನು ಪಂಪುಗಳಿಂದ ಎತ್ತುತ್ತಾರೆ. ಈ ಆವರಣಕ್ಕೆ ಹದಿಕಟ್ಟೆಯೆಂದು ಹೆಸರು. ಇದರ ದೆಸೆಯಿಂದ ಹೊಸದಾಗಿ ನೀರು ಆವರಣದೊಳಗೆ ಬಂದಹಾಗೆಲ್ಲ ಒಳಗಿನ ನೀರನ್ನು ಎತ್ತಿದಮೇಲೆ ನೆಲದಲ್ಲಿ ಅಗೆಯಲು ಪ್ರಾರಂಭಿಸುತ್ತಾರೆ. ಇದನ್ನು ಹಡಗು ಕಟ್ಟೆಗಳು, ನಾಲೆಯ ಮಟ್ಟ ಬದಲಾವಣೆಯ ಕಟ್ಟೆಗಳು, ವಿದ್ಯುದಾಗಾರಗಳಲ್ಲಿನ ನಾಲೆಗಳು–ಇಂಥ ಕಡೆಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಾರೆ.

ಹದಿಕಟ್ಟೆಯೂ ಆವರಣದ ತಳವೂ ನೀರಿನ ಒತ್ತಡದಿಂದ ಬಿರಿಯದ ಹಾಗೆ ಗಟ್ಟಿಯಾಗಿರಬೇಕು. ಸಾಮಾನ್ಯವಾಗಿ ಆವರಣದಲ್ಲಿ ನೀರೇ ಇಲ್ಲದಹಾಗೆ ಮಾಡುವುದು ರೂಢಿಯಿಲ್ಲ. ಅದಕ್ಕೆ ಖರ್ಚು ಹೆಚ್ಚಾಗುತ್ತದೆ. ಒಳಗೆ ಬರುವ ನೀರನ್ನು ಸುಮಾರಾಗಿ ಕಡಿಮೆಮಾಡಿದರೆ ಸಾಕು. ಇದ್ದ ನೀರನ್ನು ತಗ್ಗಾದ ಗುಂಡಿಗಳಿಗೆ ಸಾಗಿಸಿ ಒಂದೇ ಸಮನಾಗಿ ಪಂಪು ಮಾಡಬಹುದು.

ನೀರಿನ ಆಳ ಹೆಚ್ಚಾಗಿಲ್ಲದೆ ಪ್ರವಾಹ ಸುಮಾರಾಗಿರುವ ಕಡೆಗಳಲ್ಲಿ ಜಿಗುಟುಮಣ್ಣಿನ ಕಟ್ಟೆಗಳನ್ನು ತಾತ್ಕಾಲಿಕವಾಗಿ ಕಟ್ಟಬಹುದು. ಅಥವಾ ಮರಳಿನಿಂದ ತುಂಬಿ ಹೊಲೆದ ಗೋಣಿಚೀಲಗಳನ್ನಿಟ್ಟು, ಚೀಲಗಳ ಸಂದುಗಳಲ್ಲಿ ಜೇಡಿಮಣ್ಣನ್ನು ತುಂಬಬಹುದು. ಆದರೆ ಹೊಳೆಗಳಲ್ಲಿ ಇಷ್ಟು ಸರಳವಾದ ಕಟ್ಟೆಗಳು ಸಾಕಾಗುವುದಿಲ್ಲ.

ಸಣ್ಣ ಸೇತುವೆಗಳಲ್ಲಿ ಒಂದರ ಪಕ್ಕದಲ್ಲೊಂದು ಮರದ ದಸಿಗಳನ್ನು ಎರಡು ಸಾಲುಗಳಲ್ಲಿ ಹೂಡಿ, ಮೇಲುಗಡೆ ಬಿಗಿಯಾಗಿ ಕಟ್ಟಿ ಎರಡು ಸಾಲು ದಸಿಗಳ ನಡುವೆ ಜೇಡಿಮಣ್ಣನ್ನು ತುಂಬುವುದು ಒಂದು ಕ್ರಮ. ಮರದ ದಸಿಗಳಿಗೆ ಬದಲಾಗಿ ದೊಡ್ಡ ಸೇತುವೆಗಳಲ್ಲಿ ಒಂದಕ್ಕೊಂದು ತೊಡರಿಕೊಳ್ಳುವ ಉಕ್ಕಿನ ತಗಡಿನ ದಸಿಗಳನ್ನು ನಿಲ್ಲಿಸಬಹುದು. ಈ ದಸಿಗಳು ಪಾಯವನ್ನು ಹಾಕಬೇಕಾಗಿರುವ ಕಂಬದ ಜಾಗವನ್ನು ಸುತ್ತುವರಿಯುತ್ತವೆ. ಆಗ ಹೊರಗಿನಿಂದ ನೀರು ಆವರಣದೊಳಕ್ಕೆ ಬರುವುದಿಲ್ಲ. ಪಂಪುಗಳಿಂದ ಒಳಗಿನ ನೀರನ್ನು ಎತ್ತಬಹುದು. ಹದಿಕಟ್ಟೆಗಳು ಹೊರಗಡೆಯಿಂದ ಅವುಗಳ ಮೇಲೆ ಬೀಳುವ ಒತ್ತಡವನ್ನು ತಡೆಯುವಷ್ಟು ಬಲವಾಗಿರಬೇಕು.

ಹಡಗುಕಟ್ಟೆಗಳಲ್ಲಿ (ಡಾಕ್ಸ್) ಆವರಣ ದೊಡ್ಡದಾಗಬೇಕಾದಾಗ ನೀರನೊಳಗೆ ಸುತ್ತಲೂ ಮಣ್ಣಿನ ಏರಿಯನ್ನು ಹಾಕಿ ಅದರ ಮಧ್ಯದಲ್ಲಿ ಉಕ್ಕಿನ ತಗಡಿನ ದಸಿಗಳನ್ನು ಹೊಡೆದು ನೀರು ಜಿನುಗುವುದನ್ನು ನಿಲ್ಲಿಸಬೇಕಾಗುತ್ತದೆ.

ನದಿಯ ತಳದಲ್ಲಿ ಕೇವಲ ಮರಳೇ ಇದ್ದರೆ ಅಸ್ತಿಭಾರದ ಕೆಲಸ ಕಷ್ಟವಾಗುತ್ತದೆ. ಖರ್ಚು ಶ್ರಮವೂ ಹೆಚ್ಚಾಗುತ್ತವೆ. ಹಡಗುಕಟ್ಟೆಗಳಲ್ಲಿ ಹಾಕಿದಹಾಗೆ ಸುತ್ತಲೂ ಮಣ್ಣಿನ ಏರಿಯನ್ನು ಹಾಕಿ ಉಕ್ಕಿನ ದಸಿಗಳನ್ನು ನಿಲ್ಲಿಸಿ ಒಳಗಿನ ಆವರಣದಿಂದ ನೀರನ್ನು ಎತ್ತಬೇಕಾಗುತ್ತದೆ.

ನೀರಾವರಿ ಜಲಾಶಯದ ಕಟ್ಟೆಗಳನ್ನು ಕಟ್ಟುವಾಗ ಹಿಂದುಗಡೆ ನೀರಿನ ಆಳ ಹೆಚ್ಚಾಗಿರುತ್ತದೆ. ಉಕ್ಕಿನ ತಗಡಿನ ದಸಿಗಳಿಗೆ ಈ ಒತ್ತಡವನ್ನು ತಡೆಯುವುದು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ತಾತ್ಕಾಲಿಕವಾಗಿ ಬಂದೋಬಸ್ತಾದ ಕಲ್ಲುಗಾರೆಯ ಗೋಡೆಯನ್ನು ಕಲ್ಲಿನ ಅಸ್ತಿಭಾರದ ಮೇಲೆ ಪರಮಾವಧಿ ನೀರಿನ ಆಳದ ಒತ್ತಡವನ್ನು ತಡೆಯುವಷ್ಟು ಅಗಲವಾಗಿ ಕಟ್ಟಿ ಮೇಲಕ್ಕೆ ಎತ್ತುತ್ತಾರೆ. ಈ ಹದಿಕಟ್ಟೆಯ ಕೆಲಸವನ್ನು ಬಟ್ಟಬೇಸಗೆಯಲ್ಲಿ ಕೈಗೊಳ್ಳುವುದು ಅನುಕೂಲ. ಈ ಹದಿಕಟ್ಟೆಯನ್ನು ಕಟ್ಟುವುದಕ್ಕೇ ಪೂರ್ವಸಿದ್ಧತೆಗಳು ಬೇಕಾಗುತ್ತವೆ. ಹದಿಕಟ್ಟೆಗಾಗಿ ಆರಿಸಿದ ಜಾಗದ ಮೇಲುಗಡೆ ಹೊಳೆಯ ತಳದಲ್ಲಿ ಮರಳು ಚೀಲಗಳನ್ನು ಸಾಕಷ್ಟು ಅಗಲವಾಗಿ ಇಟ್ಟು, ನಡುವಿನ ಸಂದುಗಳಲ್ಲಿ ಜೇಡಿಮಣ್ಣನ್ನು ತುಂಬಿ, ಬೇಸಗೆಯಲ್ಲಿ ಬರುವ ನೀರನ್ನು ಯಾವುದಾದರೂ ಒಂದು ಪಕ್ಕಕ್ಕೆ ಅಂದರೆ ಆಗಲೇ ಕಟ್ಟಿರಬಹುದಾದ ಕಲ್ಲುಗಾರೆಯ ಕಟ್ಟೆಗೋ ಅಥವಾ ಕೆಳನದಿಗೋ ಸಾಗಿಸಬೇಕು. ಈ ಸಿದ್ಧತೆಗಳಾದ ಮೇಲೆ ಹದಿಕಟ್ಟೆಯ ಅಸ್ತಿಭಾರದಲ್ಲಿ ಕಲ್ಲಿನ ತಳಹದಿ ಸಿಕ್ಕುವವರೆಗೂ ಅಗೆದು ಸುರ್ಕಿಕಾಂಕ್ರೀಟನ್ನು ತುಂಬಿ, ಹದಿಕಟ್ಟೆಯ ಗೋಡೆಯನ್ನು ಎತ್ತಿ ಜೊತೆಗೆ ಎರಡು ಪಕ್ಕಗಳಲ್ಲಿಯೂ ಆ ಗೋಡೆಯನ್ನೇ ನದಿ ಹರಿಯುವ ದಿಕ್ಕಿನಲ್ಲಿ ಸಮಕೋನವಾಗಿ ಮೇಲಿನ ಮಟ್ಟದವರೆಗೂ ಎತ್ತಬೇಕಾಗುತ್ತದೆ. ಇಷ್ಟೇ ಅಲ್ಲದೆ ಕಟ್ಟೆಯ ಆ ಮಟ್ಟದ ಅಗಲದ ಆಚೆಗೆ ಆವರಣದ ಕೆಳಭಾಗದಲ್ಲಿ ತಗ್ಗಾದ ತಾತ್ಕಾಲಿಕವಾದ ಕಲ್ಲುಗಾರೆಯ ಗೋಡೆಯನ್ನು ಕಲ್ಲುಗಾರೆಯ ಅಕ್ಷಕ್ಕೆ ಸಮಾನಾಂತರವಾಗಿ ಕಟ್ಟಿ, ಅದು ಹೊಳೆಯ ತಳದ ಮೇಲಕ್ಕೆ ಒಂದೂವರೆ ಮೀಟರು ಎತ್ತರದವರೆಗೂ ಬಂದ ಮೇಲೆ ಅದರ ಮೇಲುಗಡೆಯೂ ಮರಳಿನ ಚೀಲಗಳನ್ನಿಟ್ಟು, ಸಂದುಗಳಲ್ಲಿ ಜಿಗುಟಾದ ಜೇಡಿಮಣ್ಣನ್ನು ತುಂಬಿದರೆ ಸಾಕಾಗಬಹುದು. ಈಗ ಹದಿಕಟ್ಟೆಯ ಆವರಣ ಸಿದ್ಧವಾದ ಹಾಗಾಯಿತು. ಹೀಗೆ ನಿರ್ಮಿತವಾದ ಗುಂಡಿಯಿಂದ ವಿದ್ಯುತ್ತಿನ ಪಂಪುಗಳನ್ನು ಹೂಡಿ, ಹಗಲೂ ರಾತ್ರಿ ನೀರನ್ನು ಎತ್ತಿ ಕೆಳಗಿನ ಕಟ್ಟೆಯ ಆಚೆಗೆ ಸಾಗಿಸಬೇಕು. ನೆಲ ಕಾಣುವ ಹಾಗಾದ ಮೇಲೆ ಅಗೆಯುವುದನ್ನು ಪ್ರಾರಂಭಿಸಿ ಅಗೆದ ಮಣ್ಣನ್ನು ಹೊರಕ್ಕೆ ಸಾಗಿಸಬಹುದು. ರಾತ್ರಿಯಲ್ಲಿ ಕೂಡಿಹಾಕಿಕೊಂಡ ನೀರನ್ನು ಪಂಪು ಮಾಡಿ ಬೆಳಗಾಗುವ ವೇಳೆಗೆ ಮತ್ತೆ ನೆಲ ಕಾಣುವಂತೆ ಅಣಿಮಾಡಬೇಕು. ಕೆಳಗಡೆ ಬಂಡೆ ಸಿಕ್ಕಿದಾಗ ಕುಳಿಗಳನ್ನು ತೋಡಿ ಡೈನಮೈಟಿನಿಂದ ಕಲ್ಲನ್ನು ಸಿಡಿಸಿ, ಕಲ್ಲಿನ ಚೂರುಗಳನ್ನು ಎತ್ತಿ ಹಾಕಬೇಕು. ನೀರಿನಲ್ಲಿ ಸಿಡಿಮದ್ದನ್ನು ಉಪಯೋಗಿಸುವಾಗ ಬಿಳಿಯ ಬತ್ತಿಯನ್ನು (ವೈಟ್ ಫ್ಯೂಸ್ ಕಾಯ್ಲ್) ಬಳಸಬೇಕು. ಹೀಗೆ ಗಟ್ಟಿಯಾದ ಬಂಡೆ ಸಿಕ್ಕುವವರೆಗೂ ಅಗೆತವನ್ನೂ ಮುಂದುವರಿಸಬೇಕು.

ಆಮೇಲೆ ಅಸ್ತಿಭಾರವನ್ನು ಶುಭ್ರವಾಗಿ ನೀರಿನ ಹೋಸ್‌ಕೊಳವಿಗಳನ್ನು ಉಪಯೋಗಿಸಿ ತೊಳೆದು ನೀರಿಗೆ ಸಿಮೆಂಟನ್ನು ಕಲಸಿ ಅದನ್ನು ಅಸ್ತಿಭಾರದ ಮೇಲೆ ಎಲ್ಲ ಭಾಗಗಳಲ್ಲಿಯೂ ಎರಚಿ ಅದರ ಮೇಲೆ ಕಾಂಕ್ರೀಟನ್ನು ಹಾಕಬಹುದು. ಸಾಮಾನ್ಯವಾಗಿ ಕೊಂಚ ಸಿಮೆಂಟನ್ನು ಬೆರೆಸಿದ ಸುರ್ಕಿಕಾಂಕ್ರೀಟನ್ನು ಹಾಕಿದರೆ ಸಾಕು. ಕಟ್ಟೆ ಬಹಳ ಎತ್ತರವಾಗಿದ್ದರೆ ಒಂದು ಭಾಗ ಸಿಮೆಂಟ್, ಎರಡು ಜಲ್ಲಿ, ನಾಲ್ಕು ಮರಳನ್ನು ಬೆರೆಸಿದ ಸಿಮೆಂಟ್ ಕಾಂಕ್ರೀಟನ್ನು ಅಸ್ತಿಭಾರದಲ್ಲಿ ಹಾಕಬೇಕು. ಇಲ್ಲಿಗೆ ಕಟ್ಟೆಯ ಅಸ್ತಿಭಾರ ಮುಗಿದಂತೆ. ಅದರ ಮೇಲೆ ಕಟ್ಟೆಯ ಕಲ್ಲುಗಾರೆಯ ಕೆಲಸವನ್ನು ಪ್ರಾರಂಭಿಸಬಹುದು. (ಎಚ್.ಸಿ.ಕೆ.)

**ಅಸ್ತ್ರಗಳು :** ಪ್ರಾಚೀನ ಭಾರತದ ಯುದ್ಧಗಳಲ್ಲಿ ಸೈನಿಕರು ಉಪಯೋಗಿಸುತ್ತಿದ್ದ ಆಯುಧಗಳು. ಚರಿತ್ರೆಯ ಕಾಲಕ್ಕಿಂತ ಪೂರ್ವದಲ್ಲಿ ಬಳಕೆಯಲ್ಲಿದ್ದ ಆಯುಧಗಳ ವಿಷಯ ತಿಳಿಯಬೇಕಾದರೆ ಅದಕ್ಕೆ ರಾಮಾಯಣ, ಮಹಾಭಾರತ ಮತ್ತು ಇತಿಹಾಸಗಳೇ ನಮಗಿರತಕ್ಕ ಆಧಾರ. ಈ ಅಸ್ತ್ರಗಳು ಆ ಕಾಲದ ನಮ್ಮ ಪೂರ್ವಜರಿಗೆ ಪರಿಚಿತವಾಗಿದ್ದುವೆಂದು ಸಾಧಿಸಬೇಕಾದರೆ ಆ ಮಹಾಕಾವ್ಯಗಳೂ ಪ್ರಾಚೀನಗ್ರಂಥಗಳೂ ವಾಸ್ತವಿಕ ಸಂಗತಿಗಳನ್ನೇ ತಿಳಿಸುತ್ತವೆಯೆಂದು ಸಾಧಿಸಬೇಕಾದ ಆವಶ್ಯಕತೆಯೇನಿಲ್ಲ. ಅವು ಚಾರಿತ್ರಿಕ ವಿಷಯಗಳನ್ನು ಪ್ರತಿಪಾದಿಸಬಹುದು ಅಥವಾ ಇಲ್ಲದಿರಬಹುದು: ಅವುಗಳಲ್ಲಿ ಆಯುಧಗಳ ವಿಚಾರ ಬಂದಿದೆ ಎಂಬುದಷ್ಟೇ ನಮ್ಮ ಉದ್ದೇಶಕ್ಕೆ ಸಾಕು. ಆ ಮಹಾಕಾವ್ಯಗಳು ರಚಿತವಾಗುವುದಕ್ಕೆ ಮೊದಲೇ ಈ ಆಯುಧಗಳು ಬೆಳಕಿಗೆ ಬಂದಿರಲೇಬೇಕು. ಹಾಗಿಲ್ಲದಿದ್ದಲ್ಲಿ ಯಾವ ಗ್ರಂಥಕರ್ತೃವಾಗಲಿ ತನ್ನ ಗ್ರಂಥಗಳಲ್ಲೂ ಕಥೆಗಳಲ್ಲೂ ಯೋಧರು ಬಳಸುತ್ತಿದ್ದ ಆಯುಧಗಳ ವಿವರಗಳನ್ನು ಕೊಡುತ್ತಿರಲಿಲ್ಲ. ಅವನು ಎಷ್ಟೇ ಭಾವನಾಪ್ರಧಾನವಾದ ಲೇಖಕನಾಗಿದ್ದರೂ ತನ್ನ ಗ್ರಂಥದಲ್ಲಿ ಅವುಗಳ ವಿಷಯಗಳನ್ನು ಬರೆಯುತ್ತಿರಲಿಲ್ಲ.

ಪರಶುರಾಮ ಪರಶುವನ್ನು ಎಂದರೆ ತನ್ನ ಗಂಡುಗೊಡಲಿಯನ್ನು ಯಾವಾಗಲೂ ಬಳಿಯಲ್ಲಿಟ್ಟುಕೊಂಡಿರುತ್ತಿದ್ದನಂತೆ. ಶ್ರೀಕೃಷ್ಣ ತನ್ನ ಚಕ್ರದಿಂದ ಶತ್ರುಗಳನ್ನು ವಧಿಸುತ್ತಿದ್ದ. ಅರ್ಜುನ ಸುವರ್ಣದ ವಜ್ರಕವಚವನ್ನು ಧರಿಸುತ್ತಿದ್ದನಂತೆ. ಕ್ರೀಡಾಸ್ಪರ್ಧೆಗಳಲ್ಲಿ ಅರ್ಜುನ ಕತ್ತಿಯಿಂದಲೂ ಬಿಲ್ಲಿನಿಂದಲೂ ವಿಸ್ಮಯಕರವಾದ ಕೈಚಳಕವನ್ನು ಪ್ರದರ್ಶಿಸುತ್ತಿದ್ದನಂತೆ. ತನ್ನ ರಥ ರಭಸದಿಂದ ಧಾವಿಸುತ್ತಿದ್ದಂತೆಯೇ ಆತ ಒಂದು ಕೋಣದ ಕೊಂಬಿನ ಟೊಳ್ಳಿನೊಳಗೆ 21 ಬಾಣಗಳನ್ನು ಬಿಟ್ಟನೆಂದೂ ಪ್ರತೀತಿ ಇದೆ. ಚಕ್ರದಂಥ ತನ್ನ ಸುತ್ತುಬಳೆಯನ್ನು ಎಸೆಯುವುದರಲ್ಲಿ ಅವನು ಒಮ್ಮೆಯಾದರೂ ಗುರಿತಪ್ಪಲಿಲ್ಲ. ಪದಾತಿ ಸೈನ್ಯದವರು ಈಟಿಗಳನ್ನು ಅಗಲಗತ್ತಿಗಳನ್ನು ಹೊಂದಿರುತ್ತಿದ್ದರು ಎಂದು ಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿದೆ.

ಬೆಂಕಿಯನ್ನುಗುಳುವ ಅಗ್ನ್ಯಸ್ತ್ರಗಳು ಬಹು ಪ್ರಾಚೀನಕಾಲದಲ್ಲೇ ಜನರಿಗೆ ತಿಳಿದಿದ್ದುವು. ಅತ್ಯಂತ ಸಮರ್ಪಕವಾದ ಎಲ್ಲ ಆಧಾರಗಳನ್ನೂ ಪರಿಶೀಲಿಸಿ, ಸರ್ ಎಚ್. ಎಲಿಯಟ್ ಎಂಬ ಪ್ರಸಿದ್ಧ ಪಾಶ್ಚಾತ್ಯ ವಿಮರ್ಶಕ ಪ್ರಾಚೀನ ಭಾರತೀಯರಿಗೆ ಈ ಅಗ್ನ್ಯಸ್ತ್ರಗಳು ತಿಳಿದಿದ್ದವೆಂದು ಹೇಳಿದ್ದಾನೆ ಆ ಬಾಣಗಳು ತುದಿಯಿಂದ ಕಿಡಿಗಳನ್ನು ಕಾರುತ್ತಿದ್ದವು. ಅವುಗಳನ್ನು ಒಂದು ಬೊಂಬಿನಿಂದ ಹಾರಿಸುತ್ತಿದ್ದರು. ಸಿಡಿಮದ್ದು, ಗಂಧಕ ಅಥವಾ ಪೆಟ್ಲುಪ್ಪಿನಿಂದ ತಯಾರಿಸಿದ ಮಿಶ್ರವಸ್ತುವಿನ ತಯಾರಿಕೆಯ ವಿಧಾನ ಬಹುಶ: ಚರಿತ್ರೆಗೆ ಪೂರ್ವದ ಕಾಲಕ್ಕೆ ಅವಶೇಷವಾಗಿ ಹೋಗಿರಬೇಕು.

ಮನುವಿನ ಕಾಲಕ್ಕೆಲ್ಲ ಕಬ್ಬಿಣ ಬಳಕೆಗೆ ಬಂದಿತ್ತು. ಬೆತ್ತದಿಂದ ತಯಾರಿಸಿದ ಬಿಲ್ಲುಗಳೂ ತುದಿಯಲ್ಲಿ ಕಬ್ಬಿಣದ ಕೂರಲಗುಳ್ಳ ಬಾಣಗಳೂ ಭಾರತೀಯರ ಬಳಿ ಇದ್ದುವೆಂದು ಗ್ರೀಕ್ ಚರಿತ್ರಕಾರ ಹಿರೋಡಾಟಸ್ ತಿಳಿಸಿದ್ದಾನೆ. ಅಲೆಕ್ಸಾಂಡರನ ದಂಡಯಾತ್ರೆಯ ಕಾಲಕ್ಕೆ ಭಾರತೀಯರು ಕೂರಲಗಿನ ಬಾಣಗಳಿಂದಲೂ ಗುರಾಣಿಗಳಿಂದಲೂ ಸನ್ನದ್ಧರಾಗಿ ಗ್ರೀಕರನ್ನು ಎದುರಿಸಿದ ವಿಷಯವನ್ನು ಚರಿತ್ರೆಯಲ್ಲಿ ಓದಿದ್ದೇವೆ.

ಸಾಂಚಿಯ ಅರೆಯುಬ್ಬು ಕೆತ್ತನೆಯ ಶಿಲ್ಪಕಲಾಕೃತಿಗಳಲ್ಲಿ ಕಾಲಾಳುಗಳ ಕೈಯಲ್ಲಿ ಬಿಲ್ಲುಗಳಿರುವುದನ್ನೂ ನೋಡಬಹುದು. ಭಿಲ್ಸಾತೋಪಿನ ಶಿಲ್ಪದಲ್ಲಿ ಬಿಲ್ಲು ಬಾಣ, ಕಠಾರಿ, ಖಡ್ಗ, ತ್ರಿಕೋಣಾಕಾರದ ತುದಿಯ ಈಟಿ, ಕೊಡಲಿ, ಕವಣೆ, ಗಂಡುಗೊಡಲಿ ಮತ್ತು ತ್ರಿಶೂಲಗಳಿವೆ. ಇವುಗಳನ್ನೇ ಉದಯಗಿರಿಯ ಶಿಲ್ಪಕಲಾಕೃತಿಗಲ್ಲೂ ನೋಡಬಹುದು. ಅಲ್ಲಿನ ಬಾಣಗಳು $3^{1}$–$5^{1}$ ಗಳಷ್ಟು ಉದ್ದವಾಗಿವೆ. ಅವುಗಳಲ್ಲಿ ಕೆಲವು ಮಂದಿ ಯೋಧರು ಬಾಣಗಳಿಗೆ ಬದಲಾಗಿ ತುದಿಯಲ್ಲಿ ಕಚ್ಚುಗಳನ್ನು ಕೆತ್ತಿರುವ ಆಯುಧಗಳನ್ನು ಉಪಯೋಗಿಸುವುದನ್ನು ಕಾಣಬಹುದು. ಕೆಲವು ಮಂದಿ ರಾವುತರ ಬಳಿ ಎರಡು ಈಟಿಗಳಿವೆ. ಅವು ಸೌನಿಯವೆಂಬ ಹೆಸರಿನ ಈಟಿಗಳಂತಿವೆ. ಕೆಲವರ ಗುರಾಣಿಗಳು $2^{1}$ $3^{1}$ ಉದ್ದವಾಗಿಯೂ $1.5^{1}$ ಅಗಲವಾಗಿಯೂ ಇವೆ. ಅವು ಯೋಧನನ್ನು ತಲೆಯಿಂದ ಮೊಣಕಾಲವರೆಗೆ ರಕ್ಷಿಸಲು ಸಹಾಯಕವಾಗಿವೆ. ಇನ್ನು ಕೆಲವು ರಾವುತರ ಗುರಾಣಿಗಳು ಸುಮಾರು $2^{1}$ ಉದ್ದವಾದ ಗಂಟೆಯ ಆಕಾರದಲ್ಲಿವೆ; ಅವುಗಳ ತಲಭಾಗ ದುಂಡಾಗಿದೆ.

ಸಿದ್ಧಾರ್ಥ ಬೇರೆ ಯಾರೂ ಹೆದೆಯೇರಿಸುವುದಕ್ಕೇ ಆಗದಿದ್ದ ಬಿಲ್ಲಿಗೆ ಹೆದೆಯೇರಿಸುತ್ತಿದ್ದನಂತೆ ಮತ್ತು ಅದರಿಂದ ಬಹುದೂರದಲ್ಲಿರುವ ಕಬ್ಬಿಣದ ಲಕ್ಷ್ಯಗಳನ್ನು ಭೇದಿಸುತ್ತಿದ್ದನಂತೆ. ಅವನ ಬಾಣಪ್ರಯೋಗದಿಂದ ಚಿಲುಮೆ ಉಕ್ಕಿದ ವಿಚಾರವನ್ನು ಫಾಹಿಯಾನ್ ತನ್ನ ಗ್ರಂಥದಲ್ಲಿ ತಿಳಿಸಿದ್ದಾನೆ.

ಒರಿಸ್ಸದಲ್ಲಿರುವ ಪ್ರ.ಶ.ಪೂ. 700ರ ಒಂದು ಪರ್ವತ ಕಂದರದಲ್ಲಿ ಯುದ್ಧ ನಿರೂಪಕ ಶಿಲ್ಪಕಲೆಯನ್ನು ನೋಡಬಹುದು. ಅದರಲ್ಲಿನ ಯೋಧರ ಬಳಿ ಕತ್ತಿಗಳೂ ದೀರ್ಘ ಚತುರಸ್ರಾಕಾರದ ಗುರಾಣಿಗಳೂ ಪುರುಷಪ್ರಮಾಣದಲ್ಲಿ ಮೂರನೇ ಎರಡರಷ್ಟು ಉದ್ದದ ಬಿಲ್ಲೂ ಇರುವುದನ್ನು ನೋಡಬಹುದು. ಅಜಂತದ ಚಿತ್ರಕಲೆಯಲ್ಲಿ (16ನೆಯ ಗುಹೆ) ಯೋಧರ ಬಳಿ ಕುಕ್ರಿಯಂಥ ಸಣ್ಣ ಕತ್ತಿಯೂ ಕೆತ್ತನೆ ಮಾಡಿದ ಗುರಾಣಿಯೂ ಕಂಡುಬರುತ್ತವೆ. ಭುವನೇಶ್ವರದ ಕಲಾಕೃತಿಗಳಲ್ಲಿ (ಪ್ರ.ಶ. 650) ಖಡ್ಗಧಾರಿಗಳೂ ಬಿಲ್ಲುಗಾರರೂ ಪದಾತಿ ಸೈನ್ಯದವರೂ ರಾವುತರೂ ನಿರೂಪಿತರಾಗಿದ್ದಾರೆ. ರಾಜಪುತಾನದ ಜೈನ ಶಿಲ್ಪಕಲಾಕೃತಿಗಳಲ್ಲಿನ ವೀರಯೋಧರು ಕತ್ತಿ, ಕಠಾರಿಗಳನ್ನು ಧರಿಸಿರುವುದನ್ನೂ ಅವುಗಳ ಹಿಡಿಗಳಿಗೆ ಕವಚಗಳಿರುವುದನ್ನೂ ಕಾಣಬಹುದು (**ನೋಡಿ– ಶಸ್ತ್ರಾಸ್ತ್ರಗಳು**) (ಜೆ.ಬಿ.ಎಂ.)

**ಅಸ್ಥಿಕವಚದ ಮೀನುಗಳು :** ಆದಿ ಮೀನುಗಳ ಗುಂಪಿಗೆ ಸೇರಿದ ಜಲಚರಗಳು (ಆಸ್‌ಟ್ರಾಕೊಡರ್ಮ). ಇವುಗಳ ಪಳೆಯುಳಿಕೆಗಳು ಜೀವಿಗಳ ಇತಿಹಾಸದ ಪ್ರಾಚೀನ ಜೀವಕಲ್ಪದ ಸೈಲೂರಿಯನ್ ಮತ್ತು ಡೆವೋನಿಯನ್ ಯುಗಗಳ ವೈಶಿಷ್ಟ್ಯಗಳಾಗಿವೆ. ಪ್ರಾಚೀನ ಕಶೇರುಕ ಪ್ರಾಣಿಗಳಲ್ಲೆಲ್ಲ ಈ ಜೀವಿಗಳ ಪಳೆಯುಳಿಕೆಗಳು ಉತ್ತಮಸ್ಥಿತಿಯಲ್ಲಿ ಉಳಿದುಕೊಂಡು ಬಂದಿವೆ. ನಿರ್ದಿಷ್ಟವಾದ ಬೆನ್ನು ಹುರಿಗಳು ಇಲ್ಲದಿದ್ದ ಈ ಜಲಚರಗಳ ರಚನೆಯ ಆಧಾರದ ಮೇಲೆ ಅವನ್ನು ಅಸ್ಥಿಕವಚದ ಮೀನುಗಳೆಂದು ಕರೆಯುತ್ತಾರೆ. ಆದರೆ ಆ ಮೀನುಗಳು ಈಗಿನವುಗಳಂತೆ ಇರಲಿಲ್ಲ. ಮೀನಿನಾಕಾರದ ಶರೀರ, ಬಾಲ ಮತ್ತು ಜಡವಾದ ಎಲುಬಿನ ಕವಚವುಳ್ಳ ತಲೆಯ ಭಾಗಗಳನ್ನು ಹೊಂದಿರುವ ವಿಜಾತೀಯ ಪ್ರಾಣಿಗಳಾಗಿದ್ದವು. ಕೆಲವು ಮೀನುಗಳಲ್ಲಿ ಸಾಕಷ್ಟು ಸ್ಪಷ್ಟವಾದ ಬೆನ್ನುಹುರಿ ರೂಪುಗೊಂಡಿತ್ತು. ಈ ಗುಂಪಿಗೆ ಸೇರಿದ ಮತ್ತೆ ಕೆಲವು ಮೀನುಗಳಲ್ಲಿ ತಲೆಯ ಮೇಲ್ಭಾಗ ಮಾತ್ರ ಎಲುಬಿನ ಕವಚವನ್ನು ಹೊಂದಿ, ಒಳದೇಹದಲ್ಲಿ ಮೃದ್ವಸ್ಥಿ ಇತ್ತು. ಪಕ್ಕೆಯ ಮತ್ತು ಕೆಳಬದಿಯ ಈಜುರೆಕ್ಕೆಗಳ ಬದಲು ವಿಚಿತ್ರಾಕಾರದ ಜೋಡಿಮುಳ್ಳಿನಂಥ ಅಥವಾ ರೆಕ್ಕೆಯಂಥ ಪದರುಗಳು ಕಿವಿರುಗಳ ಹಿಂಭಾಗದಲ್ಲಿದ್ದುವು. ದವಡೆರಹಿತವಾದ ಬಾಯಿ ತಲೆಯ ಮುಂತುದಿಯಲ್ಲಿತ್ತು. ತಲೆಯ ಮೇಲ್ಭಾಗದ ನಡುವಿನಲ್ಲಿ ಒಂಟಿ ಮೂಗಿನ ಹೊಳ್ಳೆ ಇತ್ತು. ದೇಹದ ಮೇಲೆ ಚರ್ಮಕ್ಕೆ ಸಂಬಂಧಿಸಿದಂತೆ ಅನೇಕ ತಗಡು ಪಟ್ಟಿಯಾಕಾರದ (ಪ್ಲಕಾಯಿಡ್) ಹುರುಪೆಗಳಿದ್ದವು. ಈ ರೀತಿಯ ಅಸ್ಥಿಕವಚದಿಂದಾವೃತವಾದ ದೇಹ ಸಂಶೋಧಕರಲ್ಲಿ ಆಶ್ಚರ್ಯ ಹುಟ್ಟಿಸಿತ್ತು. ಇದಕ್ಕೆ ವಿಜ್ಞಾನಿಗಳ ಊಹೆಯೇನೆಂದರೆ ಅಂದಿನ ಕಾಲದಲ್ಲಿ ಈ ಮೀನುಗಳೊಂದಿಗೆ ಜೀವಿಸಿದ್ದ ಚೇಳಿನಂತಿದ್ದ ಯುಪ್ಟೆರಿಡ್ ಜಾತಿಯ ಜಂಟಿಪದಿಗಳಿಂದ ರಕ್ಷಣೆಗಾಗಿ ಈ ರೀತಿ ಅಸ್ಥಿಕವಚಗಳನ್ನು ಹೊಂದಿರಬಹುದೆಂಬುದು.

ಸಮುದ್ರದ ಕೊಲ್ಲಿ ಅಥವಾ ತಿಳಿನೀರಿನ ನದೀಮುಖಗಳೇ ಇವುಗಳ ವಾಸಸ್ಥಾನಗಳಾಗಿದ್ದುವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ವೈವಿಧ್ಯದಿಂದ ಕೂಡಿ ವಿಕಾಸ ಹೊಂದಿದ್ದ ಈ ಮೀನುಗಳ ಸಮುದಾಯಗಳು ಡೆವೋನಿಯನ್ ಯುಗದಲ್ಲಿ ಹೇರಳವಾಗಿದ್ದುವು.

ಈ ವಿಚಿತ್ರ ಮೀನುಗಳ ಸಂತತಿ ಕ್ರಮೇಣ ಕ್ಷೀಣಿಸಿ ಡೆವೋನಿಯನ್ ಯುಗದ ಅಂತ್ಯದಲ್ಲಿ ಪೂರ್ಣವಾಗಿ ಅಳಿದುಹೋದುದು ಮೀನುಗಳ ಇತಿಹಾಸದಲ್ಲೇ ಒಂದು ಮುಖ್ಯ ಘಟನೆ. ಈ ವಿಚಿತ್ರ ಜಲಚರಗಳ ಪಳೆಯುಳಿಕೆಗಳು ಮೀನುಗಳ ಇತಿಹಾಸದ ಕುರುಹುಗಳನ್ನು ತೋರಿಸುವುದೇ ಅಲ್ಲದೆ ಇವು ಕಶೇರುಕ ಪ್ರಾಣಿವರ್ಗದ ಪೂರ್ವಜರ ಹತ್ತಿರ ಸಂಬಂಧಿಗಳೆಂದು ಸೂಚಿಸುತ್ತವೆ.

ಕಿಫಲಾಸ್ಪಿಸ್ ಎಂಬುದು ಈ ಮೀನುಗಳಲ್ಲೆಲ್ಲ ಉತ್ತಮ ಉದಾಹರಣೆ. ಇದರ ಪಳೆಯುಳಿಕೆಗಳು ಈಗಿನ ಮೀನಿನ ವಿಶೇಷ ಗುಣಗಳನ್ನು ತೋರಿಸುತ್ತವೆ. ಇದರ ಬಾಲದ ಮತ್ತು ಬೆನ್ನಿನ ರೆಕ್ಕೆಗಳು ಸೊರ ಮೀನಿನಲ್ಲಿರುವಂತೆ ಇದ್ದುವು; ತಲೆಯ ಮೇಲೆ ಮಂದವಾದ ಅಸ್ಥಿಕವಚವಿತ್ತು. ದೇಹದ ಮುಂಭಾಗದಲ್ಲಿ ಅಡ್ಡಲಾಗಿ ಹುರುಪೆಗಳು ಪಟ್ಟೆಗಳಂತಿದ್ದುವು. ಟೆರಾಸ್‌ಪಿಸ್ ಮತ್ತು ಸೆಫಾಲಾಸ್‌ಪಿಸ್ ಎಂಬುವು ತಿಳಿನೀರಿನ ಸರೋವರ ಅಥವಾ ಸಮುದ್ರದ ತಳಭಾಗದ ಶಾಂತ ವಾತಾವರಣಕ್ಕೆ ಹೊಂದಿಕೊಂಡಿದ್ದುವು. ಬಾತ್ರಿಯೊಲೆಪಿಸ್ ಎಂಬುದು ಡೆವೋನಿಯನ್ ಯುಗದ ಅಂತ್ಯದಲ್ಲಿದ್ದು ಸಾಮಾನ್ಯ ಮೀನಿನ ಅನೇಕ ಗುಣಗಳನ್ನು ಹೊಂದಿತ್ತು. ದೇಹದ ಮೇಲ್ಭಾಗದಲ್ಲಿ ಸಾಲು ಸಾಲಾಗಿ ಎಲುಬಿನ ಡಟ್ಟೆಗಳಂತಿರುವ ಹರುಪೆಗಳಿದ್ದುವು. ಈ ಮೀನು ತಿಳಿನೀರಿನ ಸರೋವರ ಅಥವಾ ಕೆರೆಗಳಲ್ಲಿ ವಾಸಿಸುತ್ತಿತ್ತು. (ಆರ್.ಎಲ್.)

**ಅಸ್ಥಿಪಂಜರ :** **ನೋಡಿ– ಎಲುಗಟ್ಟು**

**ಅಸ್ಥಿಮತ್ಸ್ಯಗಳು :** ಈಗ ಜೀವಂತವಾಗಿರುವ ಬಹುಸಂಖ್ಯಾತ ಮೂಳೆ ಮೀನುಗಳ ನ್ನೊಳಗೊಂಡ ಗುಂಪು (ಆಸ್‌ಟಿಯಿಕ್‌ತೆಸ್). ಇವುಗಳ ಉಗಮ ಭೂವಿಜ್ಞಾನ ಇತಿಹಾಸದಲ್ಲೇ ಆಕಸ್ಮಿಕ. ಸೈಲೂರಿಯನ್ ಕಾಲದಲ್ಲಿ ಈ ಗುಂಪಿನ ಸುಳಿವೇ ಕಂಡಿಲ್ಲ. ಡೆವೋನಿಯನ್ ಕಾಲದ ಪೂರ್ವಾರ್ಧದಲ್ಲಿ ಕೇವಲ ಕೆಲವು ಭಿನ್ನ ಭಿನ್ನ ಅವಶೇಷಗಳು ಮಾತ್ರ ಗೋಚರಿಸಿವೆ. ಇವು ಎಲ್ಯಾಸ್ಮೊ ಬ್ರಾಂಕೈ ವರ್ಗಕ್ಕಿಂತ ಹಿಂದಿನವು. ಬಹುಶಃ ಆಸ್ಟ್ರಾಕೊಡರ್ಮಿ ಬುಡಕಟ್ಟಿನಿಂದ ಇವುಗಳ ಉಗಮವಾಗಿದ್ದಿರಬಹುದು. ಇವು ಸಿಹಿನೀರಿನೆಡೆಯಿಂದ ಎಂದರೆ, ನದಿ, ಜೌಗು ಹಾಗೂ ಹೊಂಡಗಳಿಂದ ಬಂದುವು. ಮಧ್ಯ ಡೆವೋನಿಯನ್ ಕಾಲಕ್ಕೆ ಕ್ರಾಸೋಪ್ಟೆರಿಜಿಯೈ, ಡಿಪ್ನಾಯ್ ಮತ್ತು ಆಕ್ಟಿನೊಟೆರಿಜಿಯೈ ಎಂಬ ಮೂರು ಬೃಹತ್ ಗುಂಪುಗಳಾಗಿ ವಿಕಾಸಗೊಂಡವು.

ಇವುಗಳಲ್ಲಿ ಬಹುಪಾಲು ಮೀನುಗಳು ಮೃದುವಾದ ಸೈಕ್ಲಾಯಿಡ್ ಮತ್ತೆ ಕೆಲವು ಗ್ಯಾನಾಯಿಡ್ ಹುರುಪೆಗಳನ್ನು ಹೊಂದಿವೆ. ಅಸ್ಥಿಪಂಜರ ಎಲುಬಿನಿಂದ ಗಡುಸಾಗಿದೆ. ಬಾಯಿ ತುದಿಯಲ್ಲಿದೆ. ಬಾಲದ ಈಜುರೆಕ್ಕೆ ಡಿಫಿ ಅಥವಾ ಹೋಮೊಸೆರ್ಕಲ್ ರೀತಿಯವು. ಈಜುರೆಕ್ಕೆಯ ಕದಿರುಗಳು ಮೂಳೆಯಿಂದಾದವುಗಳು. ಕಿವಿರು ಕವಚ ಕಿವಿರು ರಂಧ್ರಗಳನ್ನು ಮುಚ್ಚುತ್ತದೆ. ಕಿವಿರುಗಳ ಮಧ್ಯ ತಡಿಕೆ ಕಿರಿದು; ಕಿವಿರುಗಳಲ್ಲಿ ತಂತುಗಳಿವೆ. ಕೆಳದವಡೆಯಲ್ಲಿ ಅನೇಕ ಮೂಳೆಗಳಿವೆ. ಈಜು ಬುರುಡೆ (ಏರ್ ಬ್ಲಾಡರ್) ಇರುವುದು ಸಾಮಾನ್ಯ. ಗಾಳಿಯ ಕೋಶಗಳಿವೆ. ಅಂಡಾಶಯನಾಳಗಳು ಅಂಡಾಶಯಕ್ಕೆ ನೇರ ಸಂಪರ್ಕ ಹೊಂದಿವೆ. ದೇಹದ ಹೊರಗೆ ನೀರಿನಲ್ಲಿ ಮೊಟ್ಟೆಗಳು ಗರ್ಭಕಟ್ಟುತ್ತವೆ. ಆಸ್ಟಿಯಿಕ್ತಿಸ್ ಮೀನುಗಳಲ್ಲಿ ಕೊಯನಿಕ್ತಿಸ್ ಮತ್ತು ಅಕ್‌ಟಿನೋಪಟೆರಿಗೈ ಎಂಬ ಎರಡು ಉಪವರ್ಗಗಳುಂಟು.



ಮೀನಿನ ವಿಕಾಸವನ್ನು ಸೂಚಿಸುವ ವಿವಿಧ ಹಂತಗಳು
1) ಅಗ್‌ನಾತಾ (ದವಡೆಯಿಲ್ಲದ ಮೀನುಗಳು) 2) ಪ್ಲಾಕೊಡರ್ಮ (ಮೊದಲ ದವಡೆ ಮೀನು)
3) ಕಾಂಡ್ರಿಕ್‌ಥೈಸ್ (ಷಾರ್ಕ್ ಮಾದರಿಯ ಮೀನುಗಳು) 4) ಆಸ್ಟಿಯಿಕ್‌ತಿಸ್ (ಅಸ್ಥಿಮತ್ಸ್ಯಗಳು)
5) ಸೈಕ್ಲೊಸ್ಟೊಮೆಟ (ಲ್ಯಾಂಪ್ರಿಗಳು ಮತ್ತು ಹಾಗ್ ಮೀನುಗಳು)

ಕೊಯನಿಕ್ತಿಸ್ ಮೀನುಗಳ ಶ್ವಾಸಕೋಶದ ಉಸಿರಾಡುವಿಕೆಗೆ ಸಂಬಂಧಿಸಿರುವ ಒಳನಾಸಿಕ ರಂಧ್ರಗಳನ್ನು ಹೊಂದಿವೆ. ಈ ಗುಂಪಿನಿಂದ ದ್ವಿಚರಪ್ರಾಣಿಗಳು ವಿಕಸಿಸಿವೆ. ಯಾವ ಕಾಲದಲ್ಲಿಯೂ ಹೆಚ್ಚಿನ ಪ್ರಸಾರ ಪಡೆಯಲ್ಲಿಲ್ಲ. ಇತ್ತೀಚೆಗೆ ಕಂಡುಹಿಡಿಯಲ್ಪಟ್ಟ ಸೀಲೂಕ್ಯಾಂತ್ ಜಾತಿಯ ಲ್ಯಾಟಿಮೆರಿಯ ಮತ್ತು ಡಿಪ್ನಾಯ್ ಗುಂಪಿನ ಕೆಲವು ಪ್ರಭೇದಗಳಿಗೆ ಮಾತ್ರ ಒಳಪಟ್ಟಿವೆ. ಈ ಮೀನುಗಳು ಡೆವೋನಿಯನ್ ಕಾಲದಿಂದ ಕೇವಲ ಅಲ್ಪಬದಲಾವಣೆಯಿಂದ ಉಳಿದು ಬಂದ ಅವಶಿಷ್ಟ ಗುಂಪು. ಡೆವೋನಿಯನ್ ಕಾಲದಲ್ಲಿ ಕ್ರಾಸೊಪ್‌ಟೆರಿಗೈ ಮೀನುಗಳು ವಿಶೇಷವಾಗಿದ್ದುದುಂಟು. ಅವು ಕಾಸ್ಮಾಯಿಡ್ ಬಗೆಯ ಹುರುಪೆಗಳನ್ನು ಹೊಂದಿದ್ದವು. ಅವಕ್ಕೆ ಸ್ಪೈರಕಲ್ ಮತ್ತು ಪೈನಿಯಲ್ ರಂಧ್ರ ಇದ್ದವು. ಚಕ್ರವ್ಯೂಹ ರಚನೆಯ ಹಲ್ಲುಗಳಿದ್ದವು. ಈಜುರೆಕ್ಕೆಯ ಬುಡದಲ್ಲಿ ಮಾಂಸಭರಿತವಾದ ಭಾಗವಿದ್ದು, ಅದು ಎಲುಬಿನ ಪಂಜರದಿಂದ ದೃಢತೆ ಹೊಂದಿದೆ. ಮೊದಲ ಕ್ರಾಸಾಪ್ಟೆರಿಜಿಯೈ ಮೀನುಗಳು ಮಾಂಸಾಹಾರಿಗಳು ಮತ್ತು ಸಿಹಿ ನೀರಿನ ವಾಸಿಗಳು. ನೀರು ಬತ್ತಿದ್ದ ಕಾಲದಲ್ಲಿ ಗಾಳಿಯ ಉಸಿರಾಡುವಿಕೆಗೆ ಒಳನಾಸಿಕ ರಂಧ್ರಗಳು ಬಹುಶಃ ಸಹಾಯವಾಗಿದ್ದಿರಬಹುದು. ಕ್ರಾಸಾಪ್ಟೆರಿಜಿಯನ್‌ಗಳ ಒಂದು ವಿಭಾಗವಾದ ಸೀಲೊಕ್ಯಾಂತಿನಿಗಳು ಸಮುದ್ರಜೀವನವನ್ನು ಅವಲಂಬಿಸಿದವು. ಇತ್ತೀಚೆಗೆ ಕಂಡುಹಿಡಿದಿರುವ ಲ್ಯಾಮಿಟೇರಿಯ ಜೀವಂತಲುಪ್ತ ಜೀವಿಗಳ ರೀತಿಯಲ್ಲಿವೆಯೆನ್ನಬಹುದು. ಡೆವೋನಿಯನ್ ಮತ್ತು ಕಾರ್ಬಾನಿಫೆರಸ್ ಕಾಲಗಳಲ್ಲಿ ಕಾಣಿಸಿದ ಆಸ್ಟಿಯೊಲೆಪಿಡ್ ಮೀನುಗಳು ವಿಶೇಷವಾಗಿ ಹಿಂದುಳಿದ ಜೀವಿಗಳು. ಆದರೆ ಅವು ಪ್ರಾಚೀನ ದ್ವಿಚರ ಪ್ರಾಣಿಗಳನ್ನು ಹೋಲುತ್ತಿದ್ದವು.

ಕ್ರಾಸೊಪ್ಟೆರಿಜಿಯನ್ ಬುಡದಿಂದ ಡೆವೋನಿಯನ್ ಕಾಲದಲ್ಲಿ ಹೊರಬಂದ ಗುಂಪು ಡಿಪ್ನಾಯ್ ಮೀನುಗಳು. ಇದಕ್ಕೆ ಸೇರಿದ ಮೀನುಗಳು ಕಿವಿರು ಹಾಗೂ ಶ್ವಾಸಕೋಶಗಳನ್ನು ಹೊಂದಿದ್ದು ಜೌಗು ಮತ್ತು ಸಿಹಿ ನೀರಿನಲ್ಲಿ ವಾಸಿಸುತ್ತವೆ. ಡಿಪ್ನಾಯ್ ಮೀನುಗಳು ಈಗಲೂ ಉಳಿದಿದ್ದು ಅವನತಿ ಹೊಂದಿರುವ ಹಾಗೂ ಸಂಕೀರ್ಣತೆ ಪಡೆದ ಮೂರು ಜಾತಿಗಳಾಗಿವೆ. ನಿಯಾಸಿರಟೋಡಸ್, ಲೆಪಿಡೋಸೈರನ್ ಮತ್ತು ಪ್ರೊಟಾಪ್ಟರಸ್ ಇವೇ ಆ ಮೂರು ಜಾತಿಯ ಉದಾಹರಣೆಗಳು ಇವು ಪ್ರಥಮವಾಗಿ ಡೆವೊನಿಯನ್ ಮಧ್ಯಕಾಲದಲ್ಲಿ ಕಾಣಿಸಿಕೊಂಡು ಪರ್ಮಿಯನ್ ಮತ್ತು ಟ್ರೈಯಾಸಿಕ್ ಕಾಲಗಳಲ್ಲಿ ಸ್ವಲ್ಪ ವೃದ್ಧಿಯಾಗಿ ಅನಂತರ

ವಿರಳವಾದವು. ಈ ಮೀನುಗಳು ಈಗ ಕ್ವೀನ್ಸ್‌ಲೆಂಡ್, ದಕ್ಷಿಣ ಅಮೇರಿಕ ಮತ್ತು ಆಫ್ರಿಕಗಳಲ್ಲಿ ಸಿಹಿನೀರುಗಳಲ್ಲಿ ಜೀವಂತವಾಗಿವೆ. ಇದು ಪರಿಮಿತ ಪ್ರಸರಣಕ್ಕೆ ಒಂದು ಉದಾಹರಣೆ. ಆಕ್ಟಿನೋಪೆರಿಗ್ಯೆ ಮೀನುಗಳಲ್ಲಿ ಒಳನಾಸಿಕ ರಂಧ್ರಗಳಿಲ್ಲ. ಇವು ಕದಿರುಳ್ಳ ಈಜುರೆಕ್ಕೆಗಳ ಮೀನುಗಳು. ಜೋಡಿ ಈಜುರೆಕ್ಕೆಗಳ ತಳದಲ್ಲಿ ಮಾಂಸವಿಲ್ಲ. ಈಜುರೆಕ್ಕೆಯ ಪೊರೆಗಳಿಗೆ ಕೊಂಬಿನ (ಹಾರ್ನಿ) ಕದಿರುಗಳು ಆಧಾರವಾಗಿವೆ. ದೇಹದ ಹೊದಿಕೆ ಗ್ಯಾನಾಯಿಡ್ ಬಗೆಯ ಹುರುಪೆಗಳಿಂದ ಕೂಡಿದೆ. ಇದರ ಉಪ್ಪುನೀರಿನ ಪ್ರಭೇದಗಳಲ್ಲಿ ಕಾಡ್, ಸೋಲ್, ಹೆರ್ರಿಂಗ್ ಮತ್ತು ಈಲ್‌ಗಳಲ್ಲದೆ ಇನ್ನಿತರ ಬಗೆಯವೂ ಸೇರಿವೆ. ಇವು ಎಲ್ಲ ದೇಶಗಳ ಸರೋವರ ಮತ್ತು ಹೊಳೆಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಕೆಲವು ವಿಚಿತ್ರವಾದ ಮತ್ತು ಪ್ರಾಚೀನ ಕಾಲದಿಂದ ಉಳಿದು ಬಂದಿರುವ ಸ್ಟರ್ಜನ್ ಗಾರ್‌ಪೈಕ್, ಬೋಫಿನ್ ಹಾಗೂ ಇತರ 20,000ಕ್ಕೂ ಹೆಚ್ಚಾದ ಮೂಳೆಯ ಮೀನುಗಳ ಪ್ರಭೇದಗಳೂ ಸೇರಿವೆ.

ಅತಿ ಹಿಂದಿನಿಂದ ಕಂಡುಬಂದ ಆಕ್ಟಿನೋಪ್ಟೆರಿಜಿಯನ್ ಮೀನುಗಳು ಮಧ್ಯ ಡೆವೋನಿಯನ್ ಕಾಲದ ಸಿಹಿ ನೀರಿನಿಂದ ಬಂದುವಲ್ಲದೆ ಕ್ರಾಸಾಪ್ಟೆರಿಜಿಯನ್ ಮೀನುಗಳಿಗಿಂತ ಬಹು ವಿರಳವಾದವು. ಆದರೆ ಅವು ಈಗ ಸಾಧಾರಣವಾಗಿ ಕಾಣಸಿಗುವ ಮೀನುಗಳು. ಪೇಲಿಯೋಜೋಯಿಕ್ ಕಾಲದಲ್ಲಿಯೇ ಪುನಃ ಸಮುದ್ರಕ್ಕೆ ಪ್ರವೇಶಿಸಿದ್ದುಂಟು. ಟ್ರೈಯಾಸಿಕ್‌ನಲ್ಲಿ ಉಪ್ಪುನೀರಿನ ಒಂದು ಬೃಹತ್ ಪ್ರಸರಣ ಆಯಿತು. ಈಗಿನ ಬಹುಸಂಖ್ಯಾತ ಸಿಹಿನೀರಿನ ಮೂಳೆಯ ಮೀನುಗಳು ನದಿಗಳು ಮತ್ತು ಸರೋವರಗಳಿಗೆ ಮೊದಲ ಮರು ಪ್ರವೇಶದಿಂದ ವಿಕಾಸಗೊಂಡಿವೆ. ಈ ಉಪವರ್ಗ ಕಾಂಡ್ರಾಸ್ಟಿಯೈ, ಹಾಲಾಸ್ಟಿಯೈ ಮತ್ತು ಟೆಲಿಯಾಸ್ಟಿಯೈ ಎಂಬ ಮೂರು ವಿಶೇಷ ಪಂಗಡಗಳಾಗಿ (ಸುಪರ್ ಆರ್ಡರ್ಸ್) ವಿಭಾಗಿಸಲ್ಪಟ್ಟಿವೆ. ಕಾಂಡ್ರಾಸ್ಟಿಯೈ ಮೀನುಗಳು ಪೆಲಿಯೋಜೋಯಿಕ್ ಯುಗದಲ್ಲಿ ಪೆಲಿಯೋನಿಸ್ಕಿಡ್ ಮೀನುಗಳಿಂದ ಪ್ರತಿನಿಧಿಸಲ್ಪಟ್ಟಿವೆ. ಇತರ ಪ್ರಾಣಿಗಳನ್ನು ಕೊಂದು ತಿನ್ನುವ ಸಣ್ಣ ಮೀನುಗಳಿಗೆ ಹೆಟರೋಸರ್ಕಲ್ ರೂಪದ ಬಾಲದ ಈಜುರೆಕ್ಕೆಯೂ ಗ್ಯಾನಾಯಿಡ್ ಹುರುಪೆಗಳೂ ಮೃದ್ವಸ್ಥಿಯಿಂದ ಮಾಡಿದ ಅಸ್ಥಿಪಂಜರವೂ ಇದ್ದುವು. ಅಸಿಪೆನ್ಸರ್ ಸ್ಕಾಫಿರಿಂಕಸ್ ಪೋಲ್ಯೋಡಾನ್, ಕ್ರಾಸೊಫೋಲಿಸ್, ಸೆಫೋರಸ್ ಎಂಬ ಅವನತಮುಖವಾದ ಸಂಕೀರ್ಣತೆ ಹೊಂದಿದ ಐದು ಪ್ರಭೇದಗಳನ್ನುಳಿದು ಮಿಕ್ಕವೆಲ್ಲ ಬಹುವಾಗಿ ಅಳಿದುಹೋದವು. ಹಾಲಾಸ್ಟಿಯೈ ಗುಂಪಿನಲ್ಲಿ ಕದಿರಿನ ಈಜುರೆಕ್ಕೆಗಳುಳ್ಳ ಮೀನುಗಳಿವೆ. ಮೈಮೇಲೆ ಹುರುಪೆಗಳುಳ್ಳ ಮೂಳೆಯ ಒಳ ಅಸ್ಥಿಪಂಜರವುಳ್ಳ ಏಮಿಯ ಮತ್ತು ಲೆಪಿಡಾಸ್ಟಿಯಸ್ ಜಾತಿಗಳು ಈ ಗುಂಪನ್ನು ಪ್ರತಿನಿಧಿಸುತ್ತವೆ. ಮೂಳೆಯ ಮೀನುಗಳ ವಿಕಾಸಕ್ಕೆ ಇವು ಎಡೆ ಕೊಡುವುದರಿಂದ ಪ್ರಾಮುಖ್ಯ ಪಡೆದಿವೆ.

**ಮೂಳೆ ಮೀನುಗಳು :** ಇವು ಆಧುನಿಕ ಕಾಲದ ಮೀನುಗಳು. ಈಗ ಜೀವಂತವಾಗಿರುವ ಶೇ.90 ಭಾಗದಷ್ಟು ಮೀನುಗಳು ಈ ವರ್ಗದಲ್ಲಿವೆ. ಅವು ಬೇಗ ವೃದ್ಧಿಯಾಗಿ ಸಿನೋಜೋಯಿಕ್ ಕಾಲದಲ್ಲಿ ವಿಸ್ತಾರವಾದ ಪ್ರದೇಶಗಳಿಗೆ ಹರಡಿಕೊಂಡವು. ದೇಹದ ರಚನೆಯಲ್ಲಿ ಸಂಕೀರ್ಣತೆಯನ್ನು ತಾಳಿರುವುದಲ್ಲದೆ ಅನೇಕ ಪರಿವರ್ತನೆಗಳನ್ನೂ ಹೊಂದಿದುವು. ಅವು ಸಿಹಿ ನೀರಿನಲ್ಲಿಯೂ ಉಪ್ಪುನೀರಿನಲ್ಲಿಯೂ ಜೌಗುಗಳಲ್ಲಿಯೂ ವಾಸಿಸುತ್ತವೆ. ಈ ಮೀನುಗಳು 35 ಕುಟುಂಬಗಳಲ್ಲಿ ಈಗ ಬದುಕಿರುವ ಮೂಳೆಯಮೀನುಗಳ ಸು. 20,000 ಪ್ರಭೇದಗಳು ಒಳಗೊಂಡಿವೆ. ಮಾನವರನೇಕರು ಆಹಾರಕ್ಕಾಗಿ ಈ ಮೀನುಗಳನ್ನು ಅವಲಂಬಿಸಿರುವರು. ಜೊತೆಗೆ ದೊಡ್ಡ ದೊಡ್ಡ ಕೈಗಾರಿಕೆಗಳು ಈ ಮೂಲಕ ಸ್ಥಾಪಿತವಾಗಿವೆ (**ನೋಡಿ–ಮೀನುಗಳು**). (ಪಿ.ಎ.ಆರ್.)

**ಅಸ್ಪ್ಯಾರಗಸ್ :** ಲಿಲಿಯೇಸೀ ಕುಟುಂಬಕ್ಕೆ ಸೇರಿದ ಸಸ್ಯ. ಆಹಾರವಾಗಿ, ಔಷಧಿಯಾಗಿ ಜನಪ್ರಿಯವಾಗಿದೆ. ಬಳಕೆಯಲ್ಲಿ ಇದಕ್ಕೆ ಶತಾವರಿ, ಮಜ್ಜಿಗೆಗೆಡ್ಡೆಗಿಡ, ಹಲವು ಮಕ್ಕಳ ತಾಯಿ ಎಂಬ ಕನ್ನಡ ಹೆಸರುಗಳಿವೆ. ಇದರ ಕೆಲವು ಪ್ರಭೇದಗಳು ಬಹಳ ಸುಂದರವಾಗಿರುವುದರಿಂದ ಉದ್ಯಾನವನಗಳಲ್ಲಿ ಕುಂಡ ಸಸ್ಯ, ಕಲ್ಲೇರಿ ಸಸ್ಯಗಳಾಗಿಯೂ ಮನೆಯಲ್ಲಿ ಅಲಂಕಾರ ಸಸ್ಯಗಳಾಗಿಯೂ ಬೆಳೆಸುತ್ತಾರೆ. ಕೆಲವು ಅಸ್ಪ್ಯಾರಗಸ್ ಉತ್ತಮ ಆಹಾರಾಂಶಗಳನ್ನು ಪಡೆದಿವೆ. ಇಂಥವುಗಳನ್ನು ದೀರ್ಘಾವಧಿ ತರಕಾರಿ ಸಸ್ಯಗಳಾಗಿ ಬೆಳೆಸಿ ಉಪಯೋಗಿಸುತ್ತಾರೆ.

ಇದರಲ್ಲಿರುವ ಆಹಾರ ಅಂಶಗಳು ಈ ರೀತಿ ಇವೆ : ತೇವಾಂಶ ಶೇ.93; ಜೀವಧಾತುಗಳು ಶೇ.2.2; ಮೇದಸ್ಸು ಶೇ.0.2; ಬೂದಿ ಶೇ.0.6; ಸುಣ್ಣ ಶೇ.0.21; ಶರ್ಕರ ಶೇ.3.9; ನಾರು ಶೇ.0.7; ಸಕ್ಕರೆ ಶೇ.1.3; ಪಿಷ್ಟ ಶೇ.0.4; ಕಬ್ಬಿಣ ಶೇ.0.0012; ಶಕ್ತಿ (ಕೆಲೋರಿಗಳಲ್ಲಿ) 120.

ಅಸ್‌ದ್ಯಾರಗಸ್ ಸಸ್ಯ ಮೆಡಿಟರೇನಿಯನ್ ಮತ್ತು ಏಷ್ಯಮೈನರ್ ದೇಶಗಳ ಮೂಲವಾಸಿ. ಇದರ ಉಪಯೋಗ 2000 ವರ್ಷಗಳಷ್ಟು ಪ್ರಾಚೀನವಾದದ್ದೆನ್ನಲಾಗಿದೆ. ಭಾರತದಲ್ಲಿ ಇದರ ಉಪಯೋಗ ಮತ್ತು ಬೇಸಾಯ ಇತ್ತೀಚೆಗೆ ಹೆಚ್ಚುತ್ತಿದೆ. ಅಸ್ಪ್ಯಾರಗಸ್ ಅಫಿಷಿನ್ಯಾಲಿಸ್ ಎಂಬುದನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಅ. ಅಸ್ಪರ್ಯಾಗೆರಾಯಡೀಸ್, ಅ. ಸ್ಕಂಡನ್ಸ್, ಅ. ಸ್ಪಿಂಗ್ರಿ, ಅ. ಫೈಲಕೆಟಸ್, ಅ.ಕ್ರಿಸ್‌ಪಸ್, ಅ.ಪ್ಲೂಮೋಸಸ್, ಅ.ವಿರೆಗೇಟಸ್ ಮುಂತಾದ ಪ್ರಭೇದಗಳು ಸುಂದರವಾಗಿ ಕಾಣಿಸುವುದರಿಂದ ಅವನ್ನು ಉದ್ಯಾನವನಗಳಲ್ಲಿ ಬೆಳೆಸುತ್ತಾರೆ. ಅಸ್ಪ್ಯಾರಗಸ್ ಸಸ್ಯ ಗುಪ್ತಕಾಂಡದಿಂದ ಬಹುವಾಗಿ ಕವಲೊಡೆದು ಧೃಡಕಾಂಡವನ್ನು ಕೊಡುತ್ತದೆ. ಕಾಂಡ ಕೊಳವೆಯ ಆಕಾರದ್ದು; ಉದ್ದ ಸು. 15 ಸೆಂಮೀ ಹಸುರು ಬಿಳಿಯ ಗೆರೆಗಳನ್ನು ಹೊಂದಿರುತ್ತದೆ. ರೆಂಬೆಗಳು ಬುಡದಿಂದ ತುದಿಯವರೆಗೆ ಇರುತ್ತದೆ. ಎಲೆ ತೊಟ್ಟಿಲ್ಲದೆ ಸಣ್ಣ ಸೂಜಿಯಂತೆ ನೀಳ; ಅದರ ಅಂಚು ನಯ, ತುಸಿ ಮೊನಚು. ಎಳೆಯ ಎಲೆ ಹಸುರು; ಅನಂತರ ಹಳದಿ ಮಿಶ್ರಿತ ಹಸುರು ಆಗುವುದು. ಹೂ ಗೊಂಚಲು ಅಂಬೆಲ್ ಅಥವಾ ಸರಳ ರೆಸಿಮ್ ಮಾದರಿಯಲ್ಲಿರುವುದು. ಕೆಲವು ಸಾರಿ ಒಂಟಿ ಹೂವೂ ಇರುವುದುಂಟು. ಪುಷ್ಪಪಾತ್ರೆಯಲ್ಲಿ 6 ಕೂಡುಭಾಗಗಳಿದ್ದು ಎರಡು ವೃತ್ತಗಳಲ್ಲಿ ಹರಡಿವೆ. ಹೂವು ಗಂಟೆಯಾಕಾರದಲ್ಲಿರುತ್ತದೆ. ಆರು ಕೇಸರಗಳೂ ಮೂರು ಭಾಗಗಳಲ್ಲಿ ಶಲಾಕಾಗ್ರವೂ ಎರಡು ಅಥವಾ ಹೆಚ್ಚು ಅಂಡಗಳನ್ನೊಳಗೊಂಡ ಅಂಡಾಶಯವೂ ಇದೆ. ಫಲ ಬೆರ್ರಿ ಮಾದರಿಯದು.

ಅಸ್ಪ್ಯಾರಗಸ್ ಸಸ್ಯವನ್ನು ಅನೇಕ ವಿಧದ ಮಣ್ಣುಗಳಲ್ಲಿ ಬೆಳೆಯಬಹುದು. ಆದರೆ ಜೌಗನ್ನು ಇದು ಸಹಿಸುವುದಿಲ್ಲ. ಫಲವತ್ತಾಗಿರುವ ಮರಳುಗೋಡು ಮಣ್ಣಿನಲ್ಲಿ ಇದು ಸಮೃದ್ಧಿಯಾಗಿ ಬೆಳೆಯುತ್ತದೆ. ಇದು ದೀರ್ಘಕಾಲದ ಬೆಳೆಯಾದ್ದರಿಂದ ಇದರ ಬೇಸಾಯಕ್ಕೆ ಫಲವತ್ತಾದ ನೆಲವನ್ನೇ ಆರಿಸಬೇಕು. ಮತ್ತು ಅನಂತರವೂ ಅದರ ಸಾರವನ್ನು ಉಳಿಸಿಕೊಳ್ಳುವುದು ಅಪೇಕ್ಷಣೀಯ.

ಅಸ್ಪ್ಯಾರಗಸ್ ಸಸ್ಯ ಹೇರಳವಾಗಿ ಬೀಜ ಬಿಡುವುದರಿಂದ ಇದನ್ನು ಬೀಜಗಳಿಂದ ಸುಲಭವಾಗಿ ವೃದ್ಧಿ ಮಾಡಬಹುದು. ವಸಂತಕಾಲ ಸಸಿ ಬೆಳೆಸಲು ಯೋಗ್ಯಕಾಲ, ಎತ್ತರಿಸಿದ ಪಾತಿಗಳಲ್ಲಿ ಒಂದು ಮೀಟರ್ ಅಂತರದ ಸಾಲುಗಳಲ್ಲಿ ಬೀಜ ನೆಟ್ಟರೆ ಅವು ಸುಮಾರು ಒಂದು ತಿಂಗಳಲ್ಲಿ ಮೊಳಕೆಗೆ ಬರುತ್ತದೆ. ಒಂದು ವರ್ಷದ ಅನಂತರ ಸಸಿಗಳು ಸರಿಯಾಗಿ ಬೇರು ಬಿಟ್ಟು ತೋಟದಲ್ಲಿ ನೆಡಲು ಸಿದ್ಧವಾಗುತ್ತವೆ. ಸರಿಯಾಗಿ ಬೇರು ಬಿಡದ ಸಸಿಗಳು ತೋಟದಲ್ಲಿ ನೆಡಲು ಯೋಗ್ಯವಲ್ಲ.

ಚೆನ್ನಾಗಿ ಉಳುಮೆ ಮಾಡಿ ಬೇಸಾಯ ಮಾಡಿದ ತೋಟದಲ್ಲಿ 2 ಮೀ ಅಂತರದಲ್ಲಿ ಗುಂಡಿಗಳನ್ನು ತೆಗೆದು ಒಂದು ವರ್ಷದ ಸಸಿಗಳನ್ನು ನೆಡುವುದು ರೂಢಿಯಲ್ಲಿದೆ. ನೆಟ್ಟ ಮೂರು ವರ್ಷದ ಅನಂತರ ಬೆಳೆ ಕೊಯ್ಲಿಗೆ ಬಂದು ಯೋಗ್ಯರೀತಿಯಲ್ಲಿ ಕಾಪಾಡಿದರೆ 10 ವರ್ಷಗಳವರೆಗೆ ಮುಂದುವರಿಯುತ್ತದೆ. ಎಳೆಯ ಕುಡಿಗಳನ್ನು ಮಾತ್ರ ಕೊಯ್ಯಬೇಕು. ಬಲಿತ ಕುಡಿಗಳು ತಿನ್ನುವುದಕ್ಕೆ ರುಚಿಯಾಗಿರುವುದಿಲ್ಲ. ಎಕರೆಗೆ 3500 ಕೆ.ಜಿ ಗಳಷ್ಟು ಕುಡಿಗಳು ವರ್ಷಕ್ಕೆ ಸಿಕ್ಕುತ್ತವೆ.

ಅಸ್ಪ್ಯಾರಗಸ್ ಸಸ್ಯ ರೋಗಕೀಟಗಳಿಗೆ ಸುಲಭವಾಗಿ ತುತ್ತಾಗುವುದಿಲ್ಲ. ಆದರೆ ಕೆಲವು ಸಾರಿ ತುಕ್ಕು ಬೂಷ್ಟು ರೋಗವೂ (ರಸ್ಟ್) ಸೊರಗು ರೋಗವೂ (ವಿಲ್ಟ್) ಕಾಣಿಸಿಕೊಳ್ಳುತ್ತವೆ. ಚಿಪ್ಪಿನ ಹುಳುಗಳು, ಸಾವಿರ ಕಾಲು ಕೀಟಗಳು ಇದನ್ನು ಅಪರೂಪಕ್ಕೆ ಕಾಡುವುದುಂಟು. (ಡಿ.ಎಂ.)

**ಅಸ್ಪಿಡಿಸ್ತ್ರ :** ಒಂದು ಸಸ್ಯ. ಗ್ರೀಕ್ ಭಾಷೆಯಲ್ಲಿ ಅಸ್ಪಿಡಿಸ್ತ್ರ ಎಂದರೆ ಗುರಾಣಿ ಎಂದರ್ಥ. ಗುರಾಣಿಯಾಕಾರದ ಕೇಸರಗಳಿರುವುದರಿಂದ ಸಸ್ಯಕ್ಕೆ ಈ ಹೆಸರು ಬಂದಿದೆ. ಇವು ಮನೆಗಳಲ್ಲಿ ಅಲಂಕಾರದ ಎಲೆ ಸಸ್ಯಗಳಾಗಿಯೂ, ಕಲ್ಲೇರಿ ಸಸ್ಯಗಳಾಗಿಯೂ ಪ್ರಸಿದ್ಧವಾಗಿವೆ. ಉದ್ಯಾನವನಗಳಲ್ಲಿಯೂ ಬೆಳೆಸುವರು. ಅಸ್ಪಿಡಿಸ್ತ್ರ ಜಾತಿಯ ಸಸ್ಯ ಎಲೆಗಳ ಕೆಳಗೆ ಸುಂದರವಾಗಿ ಹೂ ಬಿಡುವುದರಿಂದ ನೋಡಲು ಬಹಳ ವಿಚಿತ್ರ. ಈ ಸಸ್ಯ ಉಷ್ಣ ಮತ್ತು ಶೀತವೆರಡನ್ನೂ ಸಹಿಸುವ ಗುಣ ಪಡೆದಿದೆ.

ಅಸ್ಪಿಡಿಸ್ತ್ರ ಜಾತಿಯಲ್ಲಿ ಕಾಂಡವಿಲ್ಲದ 12 ಪ್ರಭೇದಗಳಿವೆ. ಇವುಗಳ ಎಲೆ ಭೂ ಎಲೆ; ಭೂಮಿಯೊಳಗಿನ ಗುಪ್ತ ಕಾಂಡದಿಂದ ಹೊರಟಿರುತ್ತವೆ. ದಪ್ಪ ತೊಟ್ಟಿದೆ. ಭರ್ಜಿಯಾಕಾರ. ತುದಿ ಕಡೆಗೆ ಕಿರಿದಾಗುತ್ತ ಹೋಗಿ ಸಣ್ಣದಾಗಿ ಮುಗಿಯುತ್ತದೆ. ಎಲೆಯ ಅಂಚು ನಯ. ತುದಿ ಮೊನಚು. ಇದು ದಪ್ಪವಾಗಿದ್ದು ಗುಪ್ತಕಾಂಡಕ್ಕೆ ಹರಿಯುವ ಗುಣವುಳ್ಳದ್ದಾಗಿದೆ. ಒಂಟಿ ಹೂವಿನ ಬಣ್ಣ ಕಡುಗೆಂಪು. ಅದು ಎಲೆಯ ತಳಭಾಗದಲ್ಲಿ ನೆಲದ ಮಟ್ಟಕ್ಕಿಂತ ಸ್ವಲ್ಪ ಮೇಲೆ ಇರುವುದನ್ನು ನೋಡಲು ಸೋಜಿಗವಾಗಿ ಕಾಣುತ್ತದೆ. ಪುಷ್ಪಪತ್ರ ಮತ್ತು ದಳ ಸಂಯುಕ್ತ ರೀತಿಯವು. 8 ಕೇಸರಗಳಿರುವ ಹೂ ಕೊಳವೆಗೆ ಅಂಟಿಕೊಂಡಿರುತ್ತವೆ. ತೊಟ್ಟಿಲ್ಲದ ಅಂಡಾಶಯಕ್ಕೆ 4 ಕೋಶಗಳಿವೆ. ಒಂದು ಬೀಜದ, ಒಡೆಯದ ಬೆರ್ರಿ ಮಾದರಿಯ ಹಣ್ಣು. ಅಸ್ಪಿಡಿಸ್ತ್ರ ಲುರಿಡಾ ಎಂಬ ಪ್ರಭೇದ ಹೆಸರುವಾಸಿ ಮತ್ತು ಆಕರ್ಷಕವಾಗಿದೆ. ಇದು ಹೆಚ್ಚಿನ ಬೇಸಾಯದಲ್ಲಿದೆ. ಅಸ್ಪಿಡಿಸ್ತ್ರ ಸಸ್ಯಗಳನ್ನು ಗುಪ್ತಕಾಂಡದ ತುಂಡುಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಇವು ಶೀತೋಷ್ಣಗಳಲ್ಲಿ ಶೀಘ್ರ ವ್ಯತ್ಯಾಸವನ್ನು ತಡೆಯುವ ಶಕ್ತಿ ಪಡೆದಿವೆ. ಸಾಮಾನ್ಯವಾಗಿ ಇವುಗಳನ್ನು ಕುಂಡಗಳಲ್ಲಿ ಬೆಳೆಸುತ್ತಾರೆ. ಫಲವತ್ತಾದ ಗೋಡುಮಣ್ಣಿನಲ್ಲಿ ಇವು ಸಮೃದ್ಧಿಯಾಗಿ ಬೆಳೆಯುತ್ತವೆ. ಅಸ್ಪಿಡಿಸ್ತ್ರ ಸಸ್ಯಗಳನ್ನು ಯಶಸ್ವಿಯಾಗಿ ಬೆಳೆಯಬೇಕಾದರೆ ಮಣ್ಣಿನಲ್ಲಿ ಯಥೇಚ್ಛವಾಗಿ ತೇವಾಂಶವಿರಬೇಕು. ಆದರೆ ಜೌಗನ್ನು ಇವು ಸಹಿಸುವುದಿಲ್ಲ. (ಎಂ.ಎಚ್.ಎಂ.)

**ಅಸ್ಫಟಿಕತೆ :** ಘನಪದಾರ್ಥಕ್ಕೆ ನಿರ್ದಿಷ್ಟ ಜ್ಯಾಮಿತೀಯ ಪ್ರರೂಪಗಳನ್ನು ಪ್ರದರ್ಶಿಸುವ ಸ್ಫಟಿಕಾಕೃತಿ ಇಲ್ಲದಿರುವಿಕೆ. ಅದರ ಅಣು ಪರಮಾಣುಗಳು ಒಂದು ಕ್ರಮದಲ್ಲಿ ಅಳವಡಿಸಿ ಕೊಂಡಿಲ್ಲದಿರುವಿಕೆ. ಮೇಲುನೋಟಕ್ಕೆ ಅಸ್ಫಟಿಕವಾಗಿ ಕಾಣುವ ಪದಾರ್ಥಗಳನ್ನು ಸೂಕ್ಷ್ಮದರ್ಶಕ ದಲ್ಲಿ ನೋಡಿದರೆ ಸಾಮಾನ್ಯವಾಗಿ ಅವು ಅತ್ಯಂತ ಸೂಕ್ಷ್ಮ ಹರಳುಗಳಿಂದ ಕೂಡಿರುತ್ತವೆ. ಅಂದರೆ ಅವು ದ್ರವಗಳೇ ; ದ್ರವಗಳಂತೆ ಸ್ರವಿಸಬಲ್ಲವು – ಆದರೆ ಬಹಳ ನಿಧಾನವಾಗಿ. ಆದುದರಿಂದ ಅಸ್ಫಟಿಕತೆ ಎಂಬುದೇ ಇಲ್ಲವೆಂಬುದು ವಿಜ್ಞಾನಿಗಳ ಸಾಮಾನ್ಯ ನಂಬಿಕೆ. ಆದರೆ ರೈಲಿಯವರು ನಿಜವಾದ ಅಸ್ಫಟಿಕ ಕಾರ್ಬನ್ ತಯಾರಿಸಿದ್ದಾರೆ ಎನ್ನಲಾಗಿದೆ.

(ಜಿ.ಆರ್.ಎಲ್.)

**ಅಸ್ಸಾಂ :** ಭಾರತದ ಈಶಾನ್ಯ ರಾಜ್ಯಗಳಲ್ಲೊಂದು (ಪೂ.ರೇ. $89^0$ 45' – $96^0$. ಉ.ಅ. $22^0$–$28^0$.). ವಿಸ್ತೀರ್ಣ 78,438 ಚ.ಕಿಮೀ. ಜನಸಂಖ್ಯೆ 26,655,528 (2009). ಉತ್ತರದಲ್ಲಿ ಭೂತಾನ್, ಅರುಣಾಚಲಪ್ರದೇಶ್, ಪೂರ್ವಕ್ಕೆ ನಾಗಾಲ್ಯಾಂಡ್, ಮಣಿಪುರ ರಾಜ್ಯಗಳೂ ದಕ್ಷಿಣದಲ್ಲಿ ಮಿಜೊರಾಂ, ತ್ರಿಪುರ ಮತ್ತು ಮೇಘಾಲಯ ರಾಜ್ಯಗಳೂ ಮತ್ತು ಪಶ್ಚಿಮದಲ್ಲಿ ಪಶ್ಚಿಮಬಂಗಾಲ ಮೇರೆಗಳಾಗಿವೆ. ರಾಜ್ಯದ ರಾಜಧಾನಿ ದಿಶ್‌ಪುರ್.

**ಭೂವಿವರಣೆ ಮತ್ತು ವಾಯುಗುಣ :** ಅಸ್ಸಾಂ ರಾಜ್ಯ ಅನೇಕ ಪರ್ವತಗಳಿಂದಲೂ ಬೆಟ್ಟಗಳಿಂದಲೂ ಕೂಡಿದೆ. ಹಿಮಾಲಯ ಪರ್ವತಗಳ ತಪ್ಪಲುಗಳು ಉತ್ತರದಲ್ಲೂ ಗಾರೋ. ಖಾಸಿ, ಜೈಂತಿಯ, ಮಿಕಿರ್ ಮತ್ತು ನಾಗಾ ಬೆಟ್ಟಗಳು ದಕ್ಷಿಣದಲ್ಲೂ ಮೇರೆಯಾಗಿರುವ ಕಿರಿದಾದ ಉದ್ದವಾದ ಬ್ರಹ್ಮಪುತ್ರಾ ನದೀಕಣಿವೆಯಲ್ಲಿ ಈ ರಾಜ್ಯದ ಬಹುಪಾಲು ಜನ ವಾಸಿಸುತ್ತಾರೆ. ರಾಜ್ಯದ ವಾಯುಗುಣ ತಂಪಾಗಿದ್ದು, ಹೆಚ್ಚು ತೇವಾಂಶದಿಂದ ಕೂಡಿದೆ. ಅಧಿಕವಾಗಿಯೂ ಬಹುಕಾಲದವರೆಗೂ ಇರುವ ನೈರುತ್ಯ ಮಳೆ ಪಡೆಯುವ ಪಶ್ಚಿಮದ ಬೆಟ್ಟವನ್ನುಳಿದು, ಅಸ್ಸಾಂ ರಾಜ್ಯ ಅಧಿಕ ಮಳೆ ಪಡೆಯುವ ಭಾಗ (ಸರಾಸರಿ 2,300 ಮಿ ಮೀ). ನವಗಾಂಗ್‌ನ ರಾಜ್ಯದ ಉತ್ತರಮೈದಾನದಲ್ಲಿ 1,300ಮಿಮೀ ಗಳವರೆಗೂ ಚಿರಾಪುಂಜಿಯಲ್ಲಿ 12,000 ಮಿಮೀ ಗಳವರೆಗೂ ಮಳೆಯಾಗುತ್ತದೆ. ಸೆಪ್ಟೆಂಬರ್ ಮಧ್ಯದಿಂದ ಮಾರ್ಚ್‌ವರೆಗೆ ವಾಯುಗುಣ ಹಿತಕರವಾಗಿ ತಂಪಾಗಿರುತ್ತದೆ.

**ನದಿಗಳು :** ರಾಜ್ಯದಲ್ಲಿ ಅನೇಕ ದೊಡ್ಡ ಮತ್ತು ಚಿಕ್ಕ ಸರ್ವಕಾಲಿಕ ನದಿಗಳಿವೆ. ಪ್ರಪಂಚದ ದೊಡ್ಡ ನದಿಗಳಲ್ಲೊಂದಾದ ಬ್ರಹ್ಮಪುತ್ರಾ ನದಿಗೆ ಇಕ್ಕೆಲಗಳಿಂದ ಅನೇಕ ಉಪನದಿಗಳು ಬಂದು ಸೇರುತ್ತವೆ. ಸುಬಾನ್ಸಿರಿ, ಭಾರಾರಿ, ಪಾಗ್ಲಾಡಿಯಾ, ಮಾನಹ್ ಮತ್ತು ಸಂತೋಷ್ ಎಂಬುವು ಉತ್ತರ ದಂಡೆಯಿಂದಲೂ ಬುರ್ಹಿದಿಹಿಂಗ್, ಧಾನ್ಸಿಖಿ, ಕೋಪಿಲಿ, ದೀಗಾರು, ದೂಧ್ನೋಯ್ ಮತ್ತು ಕೃಷ್ಣಾಯಿ ಎಂಬುವು ದಕ್ಷಿಣ ದಂಡೆಯಿಂದಲೂ ಹರಿದುಬರುವ ಕೆಲವು ಮುಖ್ಯ ಉಪನದಿಗಳು. ಇವುಗಳಲ್ಲಿ ಅನೇಕ ನದಿಗಳು ಅನೇಕ



ಕಾಮಾಖ್ಯಾ ದೇವಸ್ಥಾನ

ಜಲಪಾತಗಳ ಮತ್ತು ಚಿಕ್ಕ ಜಲಪಾತಸರಣಿಗಳನ್ನುಳ್ಳ, ವರ್ಷವೆಲ್ಲ ಪ್ರವಾಹದಿಂದ ಹರಿಯುವ ನದಿಗಳು. ಆದ್ದರಿಂದ ಅಸ್ಸಾಂ ರಾಜ್ಯ ಅಧಿಕ ಜಲವಿದ್ಯುಚ್ಛಕ್ತಿಯ ಸಂಪತ್ತನ್ನು ಪಡೆದಿದೆ.

**ಜನವರ್ಗ :** ವಿವಿಧ ಬುಡಕಟ್ಟಿಗೆ ಸೇರಿದ ಜನರುಳ್ಳ ಅಸ್ಸಾಂ ಭಾರತದ ಪ್ರತೀಕವಾಗಿದೆ. ಆಸ್ಟ್ರೋ– ಏಷ್ಯಾಟಿಕ್, ದ್ರಾವಿಡ ಮತ್ತು ಮಂಗೋಲ್ ಬುಡಕಟ್ಟಿಗೆ ಸೇರಿದ ಜನರು ಈ ರಾಜ್ಯದ ಮೂಲನಿವಾಸಿಗಳು. ಕಡಿಮೆ ಸಂಖ್ಯೆಯಲ್ಲಿ ಬಂದ ಆರ್ಯರು, ಸ್ಥಳೀಯ ಜನರೊಂದಿಗೆ ಬೆರೆತು ನೆಲೆಸಿದರು. ಅನಂತರ ಮೊಗಲರ ಕಾಲದಲ್ಲಿ ಸು. 18 ಸಲ ದಂಡೆತ್ತಿ ಬಂದ ಮುಸಲ್ಮಾನರಿಂದ, ಈ ಜನತೆಯಲ್ಲಿ ಟರ್ಕಿ, ಇರಾನಿ ಮತ್ತು ಅರಬ್ಬಿ ಬುಡಕಟ್ಟಿನ ಗುಣಲಕ್ಷಣಗಳು ಬೆಳೆದುವು. ಇಸ್ಲಾಂ ಧರ್ಮ ಹರಡಿತು. ಹೀಗೆ ಪ್ರಸ್ತುತ ಅಸ್ಸಾಮಿ ಜನ ಈ ಎಲ್ಲ ಬಗೆಯ ಸಾಮಾಜಿಕ, ಸಾಂಸ್ಕೃತಿಕ, ಬುಡಕಟ್ಟುಗಳ ಮಿಶ್ರ ಜನಾಂಗದವರಾಗಿದ್ದಾರೆ. ಇತ್ತೀಚೆಗೆ ಛೋಟಾನಾಗಪುರದ ಆದಿವಾಸಿಗಳು ಟೀ ತೋಟಗಳಲ್ಲಿ ಕೆಲಸಗಾರರಾಗಿಯೂ ನೇಪಾಲದ ಪಶುಪಾಲಕರು, ಕೂಲಿಗಾರರಾಗಿಯೂ ಸೈನಿಕರಾಗಿಯೂ ಬಂದು ಇಲ್ಲಿ ನೆಲೆಸಿರುವರು. ಬ್ರಹ್ಮಪುತ್ರಾ ನದಿಯ ಕಣಿವೆಯಲ್ಲಿರುವ ಜನ ಪ್ರಾಂತ್ಯ ಭಾಷೆಯಾದ ಅಸ್ಸಾಮಿಯನ್ನು ಮಾತನಾಡುವರು. ಕಚಾರ್ ಕಣಿವೆಯಲ್ಲಿ ಬಂಗಾಲಿ ಹೆಚ್ಚಾಗಿದೆ. ಬೆಟ್ಟಪ್ರದೇಶದ ನಾಲ್ಕು ಜಿಲ್ಲೆಯ ಜನ ಟಿಬೆಟ್, ಬರ್ಮಿ ಭಾಷೆಗಳಿಗೆ ಸೇರಿದ ಸ್ಥಳೀಯ ಉಪಭಾಷೆಗಳನ್ನಾಡುತ್ತಾರೆ. ಬಹುಪಾಲು ಜನರು ಹಿಂದಿ, ಮುಂಡರಿ, ನೇಪಾಲಿ ಭಾಷೆಗಳನ್ನು ಬಳಸುವರು.

ಟೀ ಎಲೆ ಕೊಯ್ಯುತ್ತಿರುವುದು

ರಾಜ್ಯದಲ್ಲಿ, ಜನಸಂಖ್ಯೆಯ ಶೀಘ್ರ ಬೆಳವಣಿಗೆ ಆಶ್ಚರ್ಯಕರವಾಗಿದೆ. 1901ರಲ್ಲಿ ಕೇವಲ 3.7 ದಶಲಕ್ಷವಿದ್ದ ಜನಸಂಖ್ಯೆ 2001ರ ವೇಳೆಗೆ ಸುಮಾರು ಏಳುಪಟ್ಟು ಹೆಚ್ಚಾಗಿ 26.6 ದಶಲಕ್ಷವಾಗಿದೆ. ಈ ಜನಸಂಖ್ಯೆ ಎರಡನೆ ಮಹಾಯುದ್ಧದ ಅನಂತರ ಅತಿಯಾಗಿ ಹೆಚ್ಚಿದೆ. ಇದಕ್ಕೆ ಪಾಕಿಸ್ತಾನದಿಂದ ಅಧಿಕ ಸಂಖ್ಯೆಯಲ್ಲಿ ಬಂದ ನಿರಾಶ್ರಿತರೂ ಸ್ವಾತಂತ್ರ್ಯಾನಂತರ ದೇಶದ ಇತರ ಭಾಗಗಳಿಂದ ಹೆಚ್ಚು ಸಂಖ್ಯೆಯಲ್ಲಿ ಬಂದ ವಲಸೆಗಾರರೂ ಕಾರಣವೆಂದು ತಿಳಿಯಲಾಗಿದೆ.

**ಸಸ್ಯವರ್ಗ ಮತ್ತು ಪ್ರಾಣಿವರ್ಗ :** ರಾಜ್ಯದ ಸು. ಶೇ. 40 ಪ್ರದೇಶ (4–5 ದಶಲಕ್ಷ ಹೆಕ್ಟೇರುಗಳು)ಕಾಡುಗಳಿಂದ ಕೂಡಿದ್ದರೂ ಕೇವಲ ಶೇ. 12 ಮಾತ್ರ ಸಂರಕ್ಷಣೆಪಡೆದ ಭಾಗವಾಗಿದೆ. ಉಳಿದ ಪ್ರದೇಶದಲ್ಲಿ, ಅನಿರ್ಬಂಧವಾಗಿ ಕಡಿಯುವುದರಿಂದಲೂ ಹೆಚ್ಚಾಗಿ ದನಕರುಗಳನ್ನು ಮೇಯಿಸುವುದರಿಂದಲೂ ವರ್ಗಾವಣೆ ಮಾದರಿ ವ್ಯವಸಾಯದಿಂದಲೂ ಅರಣ್ಯಗಳು ಹಾಳಾಗುತ್ತಿವೆ. ಪ್ರಸಿದ್ಧವಾದ ಸಾಲ, ತೇಗಗಳಲ್ಲದೆ, ವಿವಿಧ ಜಾತಿಯ ಬೆಲೆಬಾಳುವ ವೃಕ್ಷಗಳು. ಬಿದಿರು, ಹುಲ್ಲು ಮತ್ತು ಬೆಲೆಬಾಳುವ ಸಸ್ಯಗಳು ಕಂಡುಬರುತ್ತವೆ.

ಏಷ್ಯದಲ್ಲೆಲ್ಲ ಅಸ್ಸಾಂ ರಾಜ್ಯದ ಪ್ರಾಣಿವರ್ಗ ಹೆಚ್ಚು ವೈವಿಧ್ಯಮಯವಾಗಿದೆ. ಆಫ್ರಿಕವನ್ನು ಬಿಟ್ಟರೆ, ಅಸ್ಸಾಂ ರಾಜ್ಯದಲ್ಲಿರುವಷ್ಟು ವಿವಿಧ ರೀತಿಯ ಪ್ರಾಣಿಗಳು, ಪಕ್ಷಿಗಳು, ಹಾವುಗಳು, ಕ್ರಿಮಿಕೀಟಗಳು ಪ್ರಪಂಚದಲ್ಲಿ ಬೇರೆ ಯಾವ ಪ್ರದೇಶದಲ್ಲೂ ಇಲ್ಲ. ಒಟ್ಟು 5 ರಾಷ್ಟ್ರೀಯ ಉದ್ಯಾನ ಮತ್ತು 11 ವನ್ಯ ಜೀವಿಧಾಮಗಳು ಈ ರಾಜ್ಯದಲ್ಲಿವೆ. ಕಾಜಿರಂಗ ವನ್ಯಮೃಗದ ಸಂಕರಕ್ಷಣಾಕೇಂದ್ರದ ಏಕಖಡ್ಗಮೃಗ (ರ್‍ಹಿನೊ) ಪ್ರಪಂಚದಲ್ಲೆ ಪ್ರಸಿದ್ಧವಾದ ಖಡ್ಗಮೃಗದ ಜಾತಿಗೆ ಸೇರಿದ್ದು. ಈ ರಾಜ್ಯದಲ್ಲಿ ಬಂಗಾಲದ ಹುಲಿ, ಚಿರತೆ, ಕಿರುಬ, ಆನೆ, ಕಾಡೆಮ್ಮೆ, ಕಾಡುಕೋಣ, ಚಿಗರಿ, ಕಡವೆ, ಜಿಂಕೆ, ಉದ್ದಕೊಕ್ಕಿನ ಹಕ್ಕಿಗಳು, ಹೆಬ್ಬಾವು, ನಾಗರಹಾವು– – ಮುಂತಾದುವು ಹೇರಳವಾಗಿವೆ.

**ವ್ಯವಸಾಯ:** ಜನರ ಮುಖ್ಯ ಕಸಬು, ಒಟ್ಟು ಜನಸಂಖ್ಯೆಯ ಸು. ಶೇ. 72 ವ್ಯವಸಾಯಾವಲಂಬಿಗಳು ಬತ್ತ, ಸಾಸಿವೆ, ಕಬ್ಬು, ಆಲೂಗಡ್ಡೆ, ಮೆಕ್ಕೆಜೋಳ, ಹತ್ತಿ ಉರುಟು ಧಾನ್ಯಗಳು, ಇವು ಮುಖ್ಯ ಬೆಳೆಗಳು; ಟೀ, ಸೆಣಬು, ಹತ್ತಿ, ಹೊಗೆಸೊಪ್ಪು–ಇವು ಮುಖ್ಯ ವಾಣಿಜ್ಯ ಬೆಳೆಗಳು. ಕಿತ್ತಲೆ, ಬಾಳೆ, ಅನಾನಸ್, ಅಡಿಕೆ, ತೆಂಗು, ಸೀಬೆ ಮಾವು, ಹಲಸು ಮತ್ತು ಹುಳಿಹಣ್ಣುಗಳು ತೋಟಗಾರಿಕೆ ಬೆಳೆಗಳು ಈ ರಾಜ್ಯ ಸುಮಾರು 2 ದಶಲಕ್ಷ ಟನ್ನುಗಳಷ್ಟು ಬತ್ತವನ್ನು ಉತ್ಪಾದಿಸುವುದು. ಭಾರತದ ವಿಭಜನೆಯ ಅನಂತರ ಸೆಣಬಿನ ಉತ್ಪಾದನೆ ತೀವ್ರವಾಗಿ ಹೆಚ್ಚುತ್ತಿದೆ. ಈ ರಾಜ್ಯವು ದೇಶದ 1/3ರಷ್ಟು, ಎಂದರೆ 1.1 ದಶಲಕ್ಷ ಟನ್ನುಗಳಷ್ಟು, ಸೆಣಬನ್ನು ಉತ್ಪಾದಿಸುತ್ತದೆ. ವರ್ಗಾವಣೆ ಬೇಸಾಯವನ್ನು (ಝೂಮ್) ಸರ್ಕಾರ ನಿಷೇಧಿಸಿದ್ದರೂ ಗುಡ್ಡಗಾಡುಗಳಲ್ಲಿ ಇನ್ನೂ ಅದು ವ್ಯಾಪಕವಾಗಿ ಕಂಡುಬರುವುದು. ಪ್ರತಿವರ್ಷ ನಿಗದಿಮಾಡಿದ ಪರ್ವತಗಳ ಇಳಿಜಾರುಗಳ ಮೇಲಿನ ಕಾಡುಗಳನ್ನು ಕತ್ತರಿಸಿ, ಕುರುಚಲನ್ನು ಸುಟ್ಟು ವ್ಯವಸಾಯ ಮಾಡುವರು. ಅನಂತರ ಆ ಭಾಗಗಳಲ್ಲಿ ಪುನಃ ಕಾಡು ಬೆಳೆಯುವಂತೆ ಹಾಗೂ ಸಾರವತ್ತಾಗುವಂತೆ ಬೀಳುಬಿಡುವರು. ಆದರೆ ಈ ಕ್ರಮದಿಂದ ಸ್ವಾಭಾವಿಕ ಸಸ್ಯವರ್ಗ ಕ್ಷೀಣಿಸುವುದಲ್ಲದೆ ಭೂಮಿಯ ಸಾರ ನಶಿಸುವುದು.

**ಕೈಗಾರಿಕೆಗಳು:** ಅನೇಕ ಸಂಪನ್ಮೂಲಗಳ ಅನುಕೂಲತೆಗಳಿದ್ದರೂ ಕೈಗಾರಿಕೆಗಳು ಅಭಿವೃದ್ಧಿಗೊಂಡಿಲ್ಲ. ಇದಕ್ಕೆ ಸಾರಿಗೆ ಸಂಪರ್ಕಗಳ ಕೊರತೆ, ಮಾರುಕಟ್ಟೆ ಸೌಲಭ್ಯಗಳಿಲ್ಲದಿರುವುದು ಮತ್ತು ಸರಹದ್ದಿನ ಸನ್ನಿವೇಶ-- ಇವು ಕೆಲವು ಕಾರಣಗಳು. ಕೃಷಿ ಆಧಾರಿತ ಕೈಗಾರಿಕೆಗಳು ಸ್ವಲ್ಪ ಅಭಿವೃದ್ಧಿಗೊಂಡಿವೆ. ಟೀಯನ್ನು ಬೆಳೆಯುವುದು ಮತ್ತು ಅದನ್ನು ಮಾರಾಟಕ್ಕಾಗಿ ಸಿದ್ಧಪಡಿಸುವುದು ಬಹು ದೊಡ್ಡ ಕೈಗಾರಿಕೆ. ಇದು ರಾಜ್ಯದಲ್ಲಿ ಮಹತ್ತರ

ಸ್ಥಾನ ಪಡೆದಿದ್ದು ಅಮೂಲ್ಯ ವಿದೇಶೀ ವಿನಿಮಯವನ್ನು ಸಂಪಾದಿಸುವ ಉದ್ಯಮವಾಗಿದೆ. ರಾಜ್ಯದಲ್ಲಿರುವ ಸು. 965 ಪ್ಲಾಂಟೇಷನ್‌ಗಳು 170 ದಶಲಕ್ಷ ಕಿಗ್ರಾಂ ಟೀಯನ್ನು ಉತ್ಪಾದಿಸುವುವು. ಪೆಟ್ರೋಲಿಯಂ ಉತ್ಪಾದನೆ, ಶುದ್ಧೀಕರಣ ಕಾರ್ಯಾಗಾರಗಳು ದಿಗ್ಬಾಯಿ ಮತ್ತು ಗುವಹತಿಯಲ್ಲಿವೆ. ಬಿಹಾರ್ ರಾಜ್ಯದಲ್ಲಿರುವ ಇನ್ನೊಂದು ಶುದ್ಧೀಕರಣ ಕಾರ್ಯಾಗಾರ ಬ್ರಹ್ಮಪುತ್ರಾ ನದಿಯ ಮೇಲ್ಕಣಿವೆಯಲ್ಲಿ ಉತ್ಪಾದಿಸಲಾಗುವ ಎಣ್ಣೆಯನ್ನು ಪೈಪುಗಳ ಮೂಲಕ ಪಡೆಯುತ್ತದೆ. ಪರ್ವತಗಳಿಂದ ಕೂಡಿದ ಗಾರೋ, ಖಾಸಿ, ಮತ್ತು ಜೈಂತಿಯಾ ಜಿಲ್ಲೆಗಳಲ್ಲೂ ಸಿಬ್ಸಾಗರ ಮತ್ತು ಲಾಖಿಂಪುರ ಜಿಲ್ಲೆಗಳಲ್ಲಿ ಕಲ್ಲಿದ್ದಲು ಸಿಗುತ್ತದೆ. ಕಲ್ಲಿದ್ದಲಿನ ಒಟ್ಟು ಉತ್ಪಾದನೆ 7,60,000 ಟನ್ನುಗಳು ಟೀ ಮತ್ತು ಪೆಟ್ರೋಲಿಯಂ ಉದ್ಯಮಗಳಲ್ಲದೆ, ಚಿರಾಪುಂಜಿಯ ಒಂದು ಸಿಮೆಂಟ್ ಕಾರ್ಖಾನೆ, ದೇರ್‌ಗಾಂನ (ಸೀಬ್ ಸಾಗರ್) ಒಂದು ಸಕ್ಕರೆ ಕಾರ್ಖಾನೆ, ನಾಮರೂಪದ (ಲಾಖಿಂಪುರ) ಒಂದು ರಾಸಾಯನಿಕ ಗೊಬ್ಬರ ಕಾರ್ಖಾನೆ ಮತ್ತು ಸಿಲ್‌ಘಾಟ್‌ನ (ನವಗಾಂಗ್) ಒಂದು ಸೆಣಬಿನ ಕಾರ್ಖಾನೆ--ಇವು ಅಸ್ಸಾಮಿನ ಇತರ ಕೈಗಾರಿಕೆಗಳು.

ರಾಜ್ಯದಲ್ಲಿ ಅನೇಕ ಗೃಹಕೈಗಾರಿಕೆಗಳೂ ಇವೆ. ಅವುಗಳಲ್ಲಿ ರೇಷ್ಮೆ ಹುಳುಗಳನ್ನು ಸಾಕುವುದು, ರೇಷ್ಮೆ ಬಟ್ಟೆ ನೇಯುವುದು ಬಹು ಮುಖ್ಯ ಸಹಾಯಕ ಕೈಗಾರಿಕೆಗಳು. ಹಿಪ್ಪುನೇರಳೆಯನ್ನು ಉಪಯೋಗಿಸದ ಎನ್ಡಿ, ಟಸ್ಸಾರ್ ಮತ್ತು ಮುಗ ರೇಷ್ಮೆಗಳು ಈ ರಾಜ್ಯದ ವಿಶೇಷ ಉತ್ಪನ್ನಗಳು. ಬಂಗಾರದ ಬಣ್ಣದ ಮುಗ ರೇಷ್ಮೆಯನ್ನು ಬಟ್ಟೆಗಳಿಗೆ ಮಾತ್ರವಲ್ಲದೆ, ಕುಸುರಿ ಕೆಲಸಕ್ಕೂ ಉಪಯೋಗಿಸಲಾಗುತ್ತದೆ. ಆಕರ್ಷಕವಾದ ತೆಳುಹಳದಿಬಣ್ಣದ ಎನ್ಡಿ ರೇಷ್ಮೆಯನ್ನು ಮೇಲಿನ ಹೊದಿಕೆಗಾಗಿಯೂ ಅಂಗಿ ಮುಂತಾದ ಬಟ್ಟೆಗಳಿಗಾಗಿಯೂ ಉಪಯೋಗಿಸುವರು. ದಂತದ ಕೆಲಸ ಬಿದಿರಿನ ಕೆಲಸ, ಬೆತ್ತದ ಸಾಮಾನುಗಳು, ಕಂಚಿನ ಸಾಮಾನುಗಳ ತಯಾರಿಕೆ-- ಇವು ಇತರ ಗೃಹಕೈಗಾರಿಕೆಗಳು.

**ವಿದ್ಯುಚ್ಛಕ್ತಿ :** ಚಂದ್ರಾಪುರ ಮತ್ತು ನಾಮರೂಪ್ ಥರ್ಮಲ್ ವಿದ್ಯುತ್ ತಯಾರಿಕಾ ಘಟಗಳು ಪ್ರಮುಖ ವಿದ್ಯುಚ್ಛಕ್ತಿ ತಯಾರಿಸುವ ಕೇಂದ್ರಗಳು. ಸಂಚಾರಿ ನೈಸರ್ಗಿಕಾನಿಲ ಟರ್ಬೈನ್ ಘಟಕಗಳು ಮತ್ತು ಮಿನಿ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳೂ ಇವೆ. ಬೊಂಗೈಗಾವ್ ಮತ್ತು ಕರ್ಬಿಲಾಂಗ್ಪಿ ಥರ್ಮಲ್ ವಿದ್ಯುತ್ ಘಟಕಗಳ ನಿರ್ಮಾಣ ಪೂರ್ಣಗೊಂಡಾಗ ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನೆ ಹೆಚ್ಚಾಗುವ ನಿರೀಕ್ಷೆ ಇದೆ. ತಿಪಾಯ್ ಮುಖ್ ಮತ್ತೊಂದು ಯೋಜಿತ ಜಲವಿದ್ಯುತ್ ಯೋಜನೆ.

**ಸಾರಿಗೆ :** ರಾಜ್ಯದಲ್ಲಿ 34,000 ಕಿಮೀ ಉದ್ದ ರಸ್ತೆಗಳಿದ್ದು, ಅವುಗಳಲ್ಲಿ 2,038 ಕಿಮೀ ರಾಷ್ಟ್ರೀಯ ಹೆದ್ದಾರಿಗಳಾಗಿವೆ. ಬಂಗ್ಲಾದೇಶ ಮತ್ತು ಭಾರತಗಡಿಗಳ ನಡುವೆ 160ಕಿಮೀ ಉದ್ದದ ತಂತಿ ಬೇಲಿ ಮತ್ತು 27 ಕಿಮೀ ಗಡಿ ರಸ್ತೆಗಳಿವೆ. ಒಟ್ಟ 2,391 ಕಿ.ಮೀ. ಉದ್ದದ ರೈಲುಮಾರ್ಗಗಳಿವೆ. ಗುವಹಾತಿಯ ಲೋಕೋಪ್ರಿಯ ಗೋಪಿನಾಥ್ ಬೋರ್ಡೊಲೋಯಿ ಅಂತಾರಾಷ್ಟ್ರಿಯವಿಮಾನ ನಿಲ್ದಾಣ, ಸಾಲೋನಿಬರಿ (ತೇಜ್ಪುರ) ಮೋಹಾನ್ಬರಿ (ದಿಬ್ರುಗರ), ಕುಂಭಿಗ್ರಾಮ್ (ಸಿಲ್ಚಾರ್) ರಾವ್‌ರಿಯ (ಜೊರ್ಹಾತ್) ಮತ್ತು ಸಿಲೊನಿಬಾರಿ (ಟ.ಲಖಿಂಪುರ)ಗಳು ಇತರ ವಿಮಾನ ನಿಲ್ದಾಣಗಳು.

**ಪ್ರೇಕ್ಷಣೀಯ ಸ್ಥಳಗಳು :** ಅಜ್ಞಾತಪ್ರದೇಶವಾದರೂ ರಾಜ್ಯದಲ್ಲಿ ಅಲ್ಲಲ್ಲಿ ಕೆಲವು ಪುಣ್ಯಕ್ಷೇತ್ರಗಳೂ ದೇವಸ್ಥಾನಗಳೂ ಸುಂದರದೃಶ್ಯಗಳು ದೇಶವಿದೇಶಗಳಿಂದ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಮಹಾಭಾರತದ ಕಾಲದ ಎರಡು ಪೌರಾಣಿಕ ಪಟ್ಟಣಗಳಾದ, ಪ್ರಾಗ್ಜ್ಯೋತಿಷಪುರ (ಗುವಾಹಟಿ) ಮತ್ತು ಶೋಣಿತಪುರ (ತೇಜಪುರಗಳಲ್ಲಿ) ಹಿಂದೂಗಳ ಪ್ರಾಚೀನ ದೇವಾಲಯಗಳೂ ಕ್ಷೇತ್ರಗಳೂ ಇವೆ. ಗುವಾಹಟಿಯಲ್ಲಿರುವ ಕಾಮಾಖ್ಯಾ ದೇವಸ್ಥಾನ, ಉಮಾನಂದ ಮತ್ತು ನವಗ್ರಹ ದೇವಸ್ಥಾನಗಳು, ವಶಿಷ್ಠಾಶ್ರಮ ಕ್ಷೇತ್ರಗಳೂ ತೇಜಪುರದ ಮಹಾಭೈರವ ದೇವಸ್ಥಾನವೂ ಲೋಹಿತ್ ನದಿಯ ಪರಶುರಾಮ ಕುಂಡವೂ ಭಾರತದ ಎಲ್ಲ ಭಾಗಗಳಿಂದ ಸಾವಿರಾರು ಯಾತ್ರಿಕರನ್ನು ಆಕರ್ಷಿಸುವುವು. ಸಿಬ್‌ಸಾಗರದಲ್ಲಿ ರುವ ಅಹೋಮ್ ರಾಜ್ಯದ ಐತಿಹಾಸಿಕ ಅವಶೇಷಗಳೂ ದೀಮಾಪುರದಲ್ಲಿರುವ ಕಚಾರಿ ರಾಜ್ಯದ ಪ್ರಾಚೀನ ಅವಶೇಷಗಳೂ ಸ್ವತಂತ್ರ ಅಸ್ಸಾಂ ಪ್ರಾಚೀನ ವೈಭವವನ್ನು ಸೂಚಿಸುವುವು.

ಕಾಜಿರಂಗ ಮತ್ತು ಮಾನಸ ವನ್ಯಮೃಗಸಂರಕ್ಷಣಾ ಪ್ರದೇಶಗಳಲ್ಲಿರುವ ಏಕಖಡ್ಗಮೃಗ ಮೊದಲಾದ ಪ್ರಾಣಿಗಳೂ ದಟ್ಟವಾದ ಅರಣ್ಯಗಳೂ ಪ್ರಪಂಚದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ತೋಕ್ಲಾಯ್‌ನಲ್ಲಿರುವ ಪ್ರಾದೇಶಿಕ ಸಂಶೋಧನವೇಧಶಾಲೆ, ಜೋರ್ಹಾತ್‌ನಲ್ಲಿರುವ ಟೀ ಸಂಶೋಧನ ಕೇಂದ್ರ, ಪೆಟ್ರೋಲಿಯಂ ಎಣ್ಣೆಯ ಬಾವಿಗಳು, ಶುದ್ಧೀಕರಣ ಕಾರ್ಯಾಗಾರಗಳು ಅನೇಕ ಪ್ರವಾಸಿಗರನ್ನು ಆಕರ್ಷಿಸುವ ಇತರ ಸ್ಥಳಗಳು.

ವಿದ್ಯಾಭ್ಯಾಸದಲ್ಲಿ ಅಸ್ಸಾಂ ರಾಜ್ಯ ಭಾರತದ ಇತರ ರಾಜ್ಯಗಳಿಗಿಂತ ಹಿಂದುಳಿದಿಲ್ಲ. ಭಾರತದ ಸರಾಸರಿ ಅಕ್ಷರಸ್ಥರ ಸಂಖ್ಯೆ ಶೇ.64.84 ಆದರೆ ಅಸ್ಸಾಮಿನದು ಶೇ.63.25 (2001). ಗುವಾಹಟಿ ಮತ್ತು ದಿಬ್ರೂಗರ್ ನಗರಗಳಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ. ಎರಡು ವೈದ್ಯವಿಜ್ಞಾನದ ಕಾಲೇಜುಗಳು, ಎರಡು ಎಂಜಿನಿಯರಿಂಗ್ ಕಾಲೇಜುಗಳು, ಒಂದು ಪಶುವೈದ್ಯ ಒಂದು ಕೃಷಿ ಕಾಲೇಜು ಇವೆ (ಎಚ್.ಪಿ.ಡಿ.)

**ಅಸ್ಸಾಂ ಖನಿಜತೈಲ ಕ್ಷೇತ್ರಗಳು :** ಅಸ್ಸಾಂ ಪ್ರಾಂತ್ಯದ ನಾಗಾ ಬೆಟ್ಟಗಳ ಮತ್ತು ಸುರ್ಮಕಣಿವೆಯ ಕೆಲವು ಸ್ಥಳಗಳಲ್ಲಿ ಖನಿಜತೈಲ ದೊರೆಯುತ್ತದೆ. 1866ರಲ್ಲಿ ಮಾಕುಂನಾಮ್‌ಡಂಗ್ ಬಳಿ ತೈಲ ದೊರೆಯುವ ಸ್ಥಳದಲ್ಲಿ ಬಾವಿ ಕೊರೆಯಲು ಪ್ರಾರಂಭಿಸಲಾಯಿತು (ಖನಿಜತೈಲವನ್ನು ಪಡೆಯಲು ಬಾವಿಗಳನ್ನು ಬೋರ್‌ವೆಲ್‌ಗಳಂತೆ ಯಂತ್ರದಿಂದ ಕೊರೆಯುತ್ತಾರೆ.) ಇಲ್ಲಿ ಒಂದೆರಡು ಬಾವಿಗಳಲ್ಲಿ ಸ್ವಲ್ಪಮಟ್ಟಿಗೆ ತೈಲಸಿಕ್ಕಿದರೂ ಉತ್ಪತ್ತಿ ಅಷ್ಟು ಆಶಾದಾಯಕವಾಗಿರಲಿಲ್ಲ. ಅನಂತರ ಡಿಗ್‌ಬಾಯ್ ಬಳಿ 1889ರಲ್ಲಿ ಬಾವಿ ಕೊರೆಯಲು ಪ್ರಾರಂಭಿಸಲಾಗಿ, 1890ರಲ್ಲಿ ಮೊತ್ತಮೊದಲಿಗೆ ತೈಲ ಸಿಕ್ಕಿತು. ಇಲ್ಲಿಯೂ ಮೊದಲು ಉತ್ಪತ್ತಿ ಆಶಾದಾಯಕವಾಗದಿದ್ದರೂ, ಕ್ರಮೇಣ ಈ ಕ್ಷೇತ್ರದ ಭೂರಚನೆಯನ್ನು ಚೆನ್ನಾಗಿ ಪರಿಶೀಲಿಸಿ ಅನೇಕ ಹೊಸ ಬಾವಿಗಳನ್ನು ತೆಗೆದಮೇಲೆ ತೈಲ ದೊರೆವ ಪ್ರಮಾಣ ಹೆಚ್ಚಾಗುತ್ತ ಬಂತು. ಅನಂತರ ಈ ಕ್ಷೇತ್ರದ ಅಭಿವೃದ್ಧಿಯಾಗಿ ಡಿಗ್‌ಬಾಯ್‌ನಲ್ಲಿ ಒಂದು ತೈಲಶೋಧನಾಗಾರದ (ಆಯ್ಲ್‌ರಿಫೈನರಿ) ಸ್ಥಾಪನೆಯಾಗಿ ಸು. 60 ವರ್ಷಗಳಿಂದಲೂ ಲಾಭದಾಯಕವಾಗಿ ಕಾರ್ಯ ನಡೆದುಬರುತ್ತಿದೆ.

ನಾಗಾಬೆಟ್ಟಗಳ ಮತ್ತು ಸುರ್ಮಕಣಿವೆಯ ಇತರಭಾಗಗಳಲ್ಲೆಲ್ಲ ಅನೇಕ ವರ್ಷ ಪರ್ಯಂತ ದೀರ್ಘವಾಗಿ ಭೂ ಭೌತಶಾಸ್ತ್ರದ ರೀತ್ಯಾ ಸರ್ವೆ ನಡೆಸಿ ಹಲವು ಸ್ಥಳಗಳಲ್ಲಿ ಲಕ್ಷಾಂತರ ರೂಪಾಯಿ ಖರ್ಚಿನಲ್ಲಿ ಅನೇಕಾನೇಕ ಬಾವಿಗಳನ್ನು ತೋಡಿದರೂ ಸರಿಯಾದ ಪ್ರತಿಫಲ ದೊರೆಯಲಿಲ್ಲ. 1915ರಲ್ಲಿ ಬಾದರ್‌ಪುರ್ ಬಳಿ ಹಾಕಿದ ಬಾವಿಯಲ್ಲಿ ತೈಲವಿರುವ ಸೂಚನೆಗಳು ಕಂಡುಬಂದು ಈ ಕ್ಷೇತ್ರದಲ್ಲಿ 60 ಬಾವಿಗಳನ್ನು ಕೊರೆಯಲಾಯಿತು. ಆದರೆ ಬಾವಿಗಳಲ್ಲಿ ತೈಲ ಕ್ರಮೇಣ ಬತ್ತಿಹೋಗಿ, 1933ರಲ್ಲಿ ಈ ಕ್ಷೇತ್ರವನ್ನು ತ್ಯಜಿಸಬೇಕಾಯಿತು. ಈ ಕ್ಷೇತ್ರದ 18 ವರ್ಷಗಳ ಅವಧಿಯಲ್ಲಿ ಒಟ್ಟು 3,20,000 ಟನ್ ಮಾತ್ರ ತೈಲ ಉತ್ಪತ್ತಿಯಾಗಿ, ಈ ಯೋಜನೆ ಅಷ್ಟಾಗಿ ಲಾಭದಾಯಕವಾಗಿರಲಿಲ್ಲ. ಅನಂತರ ನಾಗಾಬೆಟ್ಟಗಳ ಉತ್ತರದಲ್ಲಿರುವ ಬ್ರಹ್ಮಪುತ್ರಾನದಿಯ ಬಯಲು ಪ್ರದೇಶದಲ್ಲಿ ಭೂಭೌತಶಾಸ್ತ್ರ ರೀತ್ಯಾ (ಜಿಯೊಫಿಸಿಕಲ್)

ಪರಿಶೀಲನೆ ನಡೆಸಲಾಯಿತು. ಈ ಪ್ರದೇಶದಲ್ಲಿ ಮೆಕ್ಕಲುಮಣ್ಣು ಬಹಳ ಮಂದವಾಗಿದ್ದು ತೈಲ ಸಂಯೋಜಿತ ಶಿಲೆಗಳು ಬಹು ಆಳದಲ್ಲಿ ಅಡಕವಾಗಿದ್ದುವು. ಆದುದರಿಂದ ಇಲ್ಲಿಯೂ ನಾಗಾಬೆಟ್ಟ ಪ್ರದೇಶಗಳಂತೆ ಭೂಮೇಲ್ಮಟ್ಟದ ಶಿಲೆಗಳಲ್ಲಿ, ತೈಲದ ಸೂಚನೆಗಳು ಕಂಡುಬರಲಿಲ್ಲ. ಆಳದಲ್ಲಿ ಗುಪ್ತವಾಗಿರುವ ಶಿಲಾಪ್ರಸ್ತರ ರಚನೆಯನ್ನು ಕಂಡುಹಿಡಿಯಲು ಮತ್ತೆ ಭೂಭೌತಶಾಸ್ತ್ರ ರೀತ್ಯಾ ಪರಶೀಲನೆ ಮಾಡಲಾಗಿ, ಅದರಲ್ಲಿ ಕಂಡುಬಂದ ಸೂಚನೆಗಳನ್ನನುಸರಿಸಿ ಬಾವಿಗಳನ್ನು ಕೊರೆದುದರ ಫಲವಾಗಿ ನಾಹರ್‌ಕಟಿಯಾ, ಮೊರಾನ್, ರುದ್ರಸಾಗರ್ ಮತ್ತು ಲಾಕ್ವಾ ಎಂಬ ಸ್ಥಳಗಳಲ್ಲಿ ತೈಲ ಸಿಕ್ಕಿ, ಈ ಕ್ಷೇತ್ರಗಳು ಹೆಸರುವಾಸಿಯಾದವು.

ಅಸ್ಸಾಂ ಪ್ರಾಂತ್ಯದಲ್ಲಿ ತೈಲ ಮುಖ್ಯವಾಗಿ ಮಯೋಸೀನ್ ಕಾಲದ ಟಿಪಂ ಶ್ರೇಣಿಯ ಮರಳುಶಿಲಾಪ್ರಸ್ತರಗಳಲ್ಲೂ ಮತ್ತು ಒಲಿಗೋಸೀನ್ ಕಾಲದ ಬರ್ೈಲ್ ಶ್ರೇಣಿಯ ಮರಳು ಶಿಲೆಗಳಲ್ಲೂ ಸಿಕ್ಕುತ್ತದೆ. ಈ ಶಿಲಾಪದರಗಳು ಮಡಿಕೆಯಾಗಿ, ಎರಡು ಪಾರ್ಶ್ವಗಳಲ್ಲೂ ಪರಸ್ಪರ ವ್ಯತಿರಿಕ್ತವಾದ ಇಳಿಜಾರು ಹೊಂದಿರುವ ಶಿಲಾ ರಚನೆಯಲ್ಲಿ ತೈಲ ಸಂಗ್ರಹವಾಗಿರುತ್ತದೆ. ಈ ಶಿಲಾರಚನೆಯಿರುವ ಪ್ರದೇಶಗಳಲ್ಲಿ ಬಾವಿಯನ್ನು ಕೊರೆದಾಗ ತೈಲ ಇದ್ದಲ್ಲಿ ತನ್ನಷ್ಟಕ್ಕೆ ತಾನೇ ಮೇಲಕ್ಕೆ ಹರಿದು ಬರುತ್ತದೆ; ಕೆಲವು ಸ್ಥಳಗಳಲ್ಲಿ ಒತ್ತಡ ಕಡಿಮೆಯಾಗಿದ್ದು ತೈಲವನ್ನು ಪಂಪುಮಾಡಿ ಮೇಲಕ್ಕೆ ಎತ್ತಬೇಕು. ತೈಲದ ಜತೆ ಅನಿಲವೂ ಸಾಮಾನ್ಯವಾಗಿ ಸೇರಿರುತ್ತದೆ. ಇದನ್ನು ಅನಂತರ ಯಂತ್ರೋಪಕರಣದಿಂದ ಬೇರ್ಪಡಿಸುತ್ತಾರೆ.

**ತೈಲಕ್ಷೇತ್ರಗಳ ವಿವರ : ದಿಗ್ಬಾಯ್ :** ಈ ಸ್ಥಳ ಭಾರತದ ಅತ್ಯಂತ ಈಶಾನ್ಯ ಮೂಲೆಯಲ್ಲಿ ನಾಗಾಬೆಟ್ಟಗಳ ಬುಡದಲ್ಲಿರುವ ಟಿಪಂ ಗುಡ್ಡಸಾಲಿನ ಕೊನೆಯಲ್ಲಿದೆ. ಪ್ರಪಂಚದ ಅತ್ಯಂತ ಹಳೇ ತೈಲಕ್ಷೇತ್ರಗಳ ಪೈಕಿ ದಿಗ್ಬಾಯ್ ಕ್ಷೇತ್ರವೂ ಒಂದು. ಇದು ಅಸ್ಸಾಂ ಆಯಿಲ್ ಕಂಪನಿ ಲಿಮಿಟೆಡ್‌ಗೆ ಸೇರಿದೆ. ಭೂವಿಜ್ಞಾನ ರೀತ್ಯಾ ಈ ಕ್ಷೇತ್ರ ಒಂದು ಉದ್ದವಾದ ಆಂಟಿಕ್ಲೈನ್ ಮೇಲಿದೆ. ಈ ಆಂಟಿಕ್ಲೈನ್ ಸು.13 ಕಿಮೀ ಉದ್ದ ಪ್ರಸರಿಸಿ ಗುಂಭದಂತಿದೆ. ಶಿಲಾಪದರಗಳು ಚೂಪಾಗಿ ಮಡಿಸಲ್ಪಟ್ಟು ಪಾರ್ಶ್ವಗಳು ಅಸಮಾನವಾದ ಇಳಿಜಾರನ್ನು ಹೊಂದಿವೆ. ಉತ್ತರಪಾರ್ಶ್ವ ಕಡಿದಾಗಿ, ನಾಗಾಥ್ರಸ್ಟ್‌ನಿಂದ ಭಂಗವಾಗಿಯೂ ದಕ್ಷಿಣಪಾರ್ಶ್ವ ಸು. $20^0 - 25^0$ ಇಳಿಜಾರಾಗಿಯೂ ಇವೆ. ತೈಲ ಸು.1,000 ಮೀಟರ್ ಮಂದವಾದ ಮರಳುಶಿಲೆಗಳಲ್ಲಿ ಅಡಕವಾಗಿದೆ. ಇಲ್ಲಿನ ಶಿಲೆಗಳು ಟಿಪಂಶ್ರೇಣಿಗೆ ಸೇರಿದವು. ಈ ಕ್ಷೇತ್ರದಲ್ಲಿ 1890ರಲ್ಲೇ ತೈಲ ಸಿಕ್ಕಿದರೂ ಮೊದಲು 30 ವರ್ಷಗಳಲ್ಲಿ ಉತ್ಪತ್ತಿ ಕಡಿಮೆ ಪ್ರಮಾಣದಲ್ಲಿತ್ತು. 1917ರಲ್ಲಿ ಉತ್ಪತ್ತಿಯಾದ 24,000 ಟನ್ ತೈಲ ಈ ವರ್ಷಗಳಲ್ಲಿ ಪಡೆದ ಪರಮಾವಧಿ ವಾರ್ಷಿಕ ಉತ್ಪತ್ತಿಯಾಗಿತ್ತು. ಆಗಿನ ಬಾವಿಗಳು ಹೆಚ್ಚು ಆಳವಿರಲಿಲ್ಲ. ಆಂಟಿಕ್ಲೈನ್‌ನ ಶಿಖರದ ಮೇಲೆ ಎದ್ದು ಕಾಣುವ ಶಿಲಾಪ್ರಸ್ತರಗಳಲ್ಲಿ ಬಾವಿಗಳು ಕೊರೆಯಲ್ಪಟ್ಟಿದ್ದವು. ಅನಂತರ ಭೂರಚನೆಯನ್ನು ಚೆನ್ನಾಗಿ ತಿಳಿದು ಆಳವಾಗಿ ಕೊರೆದಾಗ ತೈಲವುಳ್ಳ ಇತರ ಮರಳು ಶಿಲೆಗಳು ಕಂಡುಬಂದುವು. ಅನಂತರ ನೂರಾರು ಬಾವಿಗಳನ್ನು ಹಾಕಲು ಈ ಕ್ಷೇತ್ರದಲ್ಲಿ ಉತ್ಪತ್ತಿ ಅಧಿಕವಾಗಿ ವರ್ಷೇ ವರ್ಷೇ 2,00,000–2,50,000 ಟನ್ ತೈಲ ಬಂದಿತು. ಸು. 40 ವರ್ಷಗಳಿಂದಲೂ ಈ ವಾರ್ಷಿಕ ಉತ್ಪತ್ತಿ ಬರುತ್ತಿದೆ; 1964ರವರೆಗೆ ಒಟ್ಟು 90,00,000ಟನ್ ತೈಲ ಉತ್ಪತ್ತಿಯಾಗಿದೆ. ಇದುವರೆಗೂ ಹೆಚ್ಚುಕಡಿಮೆ 1,000 ಬಾವಿಗಳು ಕೊರೆಯಲ್ಪಟ್ಟಿವೆ. ಆದರೆ ಬಹುಸಂಖ್ಯಾತ ಬಾವಿಗಳಲ್ಲಿ ತೈಲ ಮುಗಿದು, ಈಗ ಸು. 400 ಬಾವಿಗಳಲ್ಲಿ ಮಾತ್ರ ತೈಲ ದೊರೆಯುತ್ತಿದೆ. ಅವುಗಳ ಪೈಕಿ 30 ಬಾವಿಗಳಲ್ಲೇ ಈಚಿನ ಉತ್ಪತ್ತಿಯ ಬಹುಭಾಗ ದೊರೆಯುತ್ತಿದೆ. ಶಿಲಾ ಪ್ರಸ್ತರಗಳಲ್ಲಿನ ಅನಿಲಗಳ ಒತ್ತಡದಿಂದ ತೈಲ ಬಾವಿಗಳಲ್ಲಿ ನೆಲದಮೇಲಕ್ಕೆ ತಾನಾಗಿ ಉಕ್ಕಿಬರುತ್ತದೆ. ಹಾಗೆ ತಾನಾಗಿ ಉಕ್ಕಿಬರದಿರುವ ಬಾವಿಗಳಿಗೆ ಹೊರಗಿನಿಂದ ಅನಿಲವನ್ನು ಯಂತ್ರಗಳ ಮೂಲಕ ಅಧಿಕ ಸಂಮರ್ದದಲ್ಲಿ ಶಿಲಾಪ್ರಸ್ತರದೊಳಕ್ಕೆ ಕಳುಹಿಸಿದಾಗ ತೈಲ ಮೇಲೆ ಬರುತ್ತದೆ. ಕೆಲವು ಬಾವಿಗಳಲ್ಲಿ ಪಂಪ್ ಮಾಡಿಯೇ ತೈಲವನ್ನು ಮೇಲಕ್ಕೆ ಎತ್ತಬೇಕು. ಒಳ್ಳೆ ಬಾವಿಗಳಲ್ಲಿ ದಿನಕ್ಕೆ 100–150 ಕಿಲೋಲೀಟರ್‌ಗಳಷ್ಟು ತೈಲ ಬರುತ್ತದೆ; ಆದರೆ ಹೆಚ್ಚಿನ ಬಾವಿಗಳಲ್ಲಿ ದೈನಿಕ ಉತ್ಪತ್ತಿ 40 ಕಿ.ಲೀ. ನಷ್ಟು ಇರುತ್ತದೆ.

ಬಾವಿಗಳಿಂದ ಬರುವ ಅಶುದ್ಧ ತೈಲವನ್ನು ಸ್ವಚ್ಛಮಾಡಲು ಅಸ್ಸಾಂ ಆಯಿಲ್ ಕಂಪೆನಿಯವರು ದಿಗ್ಬಾಯ್‌ನಲ್ಲೇ ಒಂದು ಸಂಸ್ಕರಣಾಗಾರಯನ್ನು ಸ್ಥಾಪಿಸಿದ್ದಾರೆ. ಮೊದಲು ಈ ರಿಫೈನರಿಯಲ್ಲಿ ವರ್ಷಕ್ಕೆ 28,000 ಟನ್‌ಗಳಷ್ಟು ತೈಲವನ್ನು ಸ್ವಚ್ಛ ಮಾಡುವುದಕ್ಕಾಗುತ್ತಿತ್ತು. ಆಗ ಇಷ್ಟು ಪ್ರಮಾಣದಲ್ಲಿ ಸಹ ತೈಲ ಸಿಕ್ಕುತ್ತಿರಲಿಲ್ಲ. ಅನಂತರ ತೈಲ ಹೆಚ್ಚು ಹೆಚ್ಚಾಗಿ ಉತ್ಪತ್ತಿಯಾದಂತೆ ಸಂಸ್ಕರಣಾಗಾರದ ಪ್ರಮಾಣ ಹೆಚ್ಚಿಸಲಾಯಿತು. ಮತ್ತು ಸು. 10 ವರ್ಷಗಳಿಂದ ನಾಹರ್‌ಕಟಿಯಾ ಕ್ಷೇತ್ರದಲ್ಲಿ ಉತ್ಪತ್ತಿಯಾಗುವ ತೈಲದಲ್ಲಿ ಸ್ವಲ್ಪಭಾಗವನ್ನು ಕೊಳವೆ ಮೂಲಕ ಸಾಗಿಸಿ ದಿಗ್ಬಾಯ್ ಸಂಸ್ಕರಣಾಗಾರದಲ್ಲಿ ಸ್ವಚ್ಛಮಾಡಲಾಗುತ್ತಿದೆ. ಅಂತೂ ಈಗ ಈ ಸಂಸ್ಕರಣಾಗಾರದಲ್ಲಿ ವರ್ಷಕ್ಕೆ 500,000 ಟನ್‌ಗಳಷ್ಟು ತೈಲ ಶುದ್ಧಿ ಮಾಡುತ್ತಿದ್ದಾರೆ.

ಈಗ ಸು. 60 ವರ್ಷಗಳಿಂದಲೂ ದಿಗ್ಬಾಯ್ ಕ್ಷೇತ್ರ ಮತ್ತು ಸಂಸ್ಕರಣಾಗಾರದಲ್ಲಿ ಅವಿಚ್ಛಿನ್ನವಾಗಿ ಕಾರ್ಯ ನಡೆದು ಬಂದು ದಿಗ್ಬಾಯ್ ಒಂದು ಹೆಸರುವಾಸಿಯಾದ ಪಟ್ಟಣವಾಗಿದೆ. ಅನೇಕ ಬಾವಿಗಳಲ್ಲಿ ಹಿಂದೆ ತೈಲ ಬತ್ತಿದಂತೆ ಕಂಡುಬಂದಿದ್ದರೂ ಇತ್ತೀಚೆಗೆ ಶಿಲೆಗಳಲ್ಲಿ ಬಿರುಕು ಬಿಡಿಸುವುದು (ಫಾರ್‌ಮೇಷನ್ ಫ್ರ್ಯಾಕ್‌ಚರಿಂಗ್) ಅಥವಾ ಅಗ್ನಿಪ್ರವಹಿಸುವುದು (ಫೈರ್‌ಫ್ಲಡಿಂಗ್) ಮುಂತಾದ ನೂತನ ವಿಧಾನಗಳನ್ನು ಪ್ರಯೋಗಿಸಿ ಕೆಲವು ಬಾವಿಗಳನ್ನು ಸಜೀವಗೊಳಿಸಿ ತೈಲ ಪಡೆಯುವ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಈ ಕ್ಷೇತ್ರದಲ್ಲಿ ಉತ್ಪತ್ತಿ ಇನ್ನೂ ಅನೇಕ ವರ್ಷಗಳು ಲಾಭದಾಯಕವಾಗಿ ನಡೆದು ಬರುವ ನಿರೀಕ್ಷೆಯಿದೆ.

**ನಾಹರ್‌ಕಟಿಯಾ :** ಅಸ್ಸಾಂನಲ್ಲಿ ಈಗ ಇದು ಮುಖ್ಯ ಕ್ಷೇತ್ರವಾಗಿದೆ. ಇದು ದಿಗ್ಬಾಯ್‌ಗೆ 40 ಕಿಮೀ ನೈಋತ್ಯಕ್ಕೆ ಬ್ರಹ್ಮಪುತ್ರಾ ಬಯಲಿನಲ್ಲಿ ದಿಹಿಂಗ್‌ನದಿಯ ದಡದಲ್ಲಿದೆ. ಈ ಕ್ಷೇತ್ರ ಅಸ್ಸಾಂ ಆಯಿಲ್ ಕಂಪನಿ ಮತ್ತು ಭಾರತ ಸರ್ಕಾರಗಳ ಸಮಭಾಗವುಳ್ಳ ಆಯಿಲ್ ಇಂಡಿಯ ಲಿಮಿಟೆಡ್ ಕಂಪನಿಗೆ ಸೇರಿದೆ.

ಹಿಮಾಲಯಪರ್ವತ ಮತ್ತು ನಾಗಾಬೆಟ್ಟಗಳ ಮಧ್ಯೆ ಇರುವ ಬ್ರಹ್ಮಪುತ್ರಾ ಬಯಲಿನಲ್ಲಿ ಮೆಕ್ಕಲುಮಣ್ಣು ಸು. 1,000–1,500 ಮೀ ಮಂದವಾಗಿದೆ. ಶಿಲೆಗಳೆಲ್ಲಾ ಈ ಮೆಕ್ಕಲುಮಣ್ಣಿನಿಂದ ಮುಚ್ಚಿಹೋಗಿ ಆಳದಲ್ಲಿ ಗುಪ್ತವಾಗಿವೆ. ಅಸ್ಸಾಂ ಆಯಿಲ್ ಕಂಪನಿಯವರು 1925ರಲ್ಲಿ ಭೂಮ್ಯಾಕರ್ಷಣ ವಿಧಾನ(ಗ್ರ್ಯಾವಿಟೇಷನಲ್ ಸರ್ವೆ) ಪರಿಶೀಲನೆ ನಡೆಸಿದಾಗ ನಾಹರ್‌ಕಟಿಯಾ ಬಳಿ ಶಿಲಾ ರಚನೆ ಉಬ್ಬಾಗಿರುವ ಸೂಚನೆ ಕಂಡುಬಂದಿತು. ಆಗ ಇನ್ನೂ ಭೂಭೌತವಿಜ್ಞಾನದ ಪರಿಶೋಧನೆಗಳು ಬಾಲ್ಯಾವಸ್ಥೆಯಲ್ಲಿದ್ದವು. ಅನಂತರ 1937ರಲ್ಲಿ ಭೂಕಂಪನವಿಧಾನ ಸಮೀಕ್ಷೆ (ಸೀಸ್ಮಿಕ್ ಸರ್ವೆ) ನಡೆಸಿದಾಗ ನಾಹರ್‌ಕಟಿಯಾ ಬಳಿ ಶಿಲಾರಚನೆ ಆಂಟಿಕ್ಲೈನ್‌ನಂತೆ ಇರುವ ಸೂಚನೆ ದೊರಕಿತು. ಈ ರಚನೆ ಸು. 3,000 ಮೀ ಆಳದಲ್ಲಿದೆಯೆಂದು ಅಂದಾಜಾಗಿತ್ತು. ಇಷ್ಟು ಆಳದ ಬಾವಿಯನ್ನು ಕೊರೆಯಲು ಯೋಜನೆ ತಯಾರಿಸುವ ವೇಳೆಗೆ, 1939ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಗಿ, ಕಾರ್ಯ ಕೈಗೊಳ್ಳಲಾಗಲಿಲ್ಲ. ಅನಂತರ 1952ರಲ್ಲಿ ನಾಹರ್‌ಕಟಿಯಾದಲ್ಲಿ ಮೊದಲನೆಯ ಬಾವಿಯನ್ನು ಕೊರೆಯಲು ಪ್ರಾರಂಭವಾಯಿತು; 1953ರಲ್ಲಿ ಈ ಬಾವಿಯಲ್ಲಿ ಸು.2750 ಮೀ ಆಳದಲ್ಲಿ ತೈಲಸಿಕ್ಕಿತು. ತೈಲ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗಿ ಲಾಭದಾಯಕವಾಗಿ ಕಂಡುಬಂದು ಈ ಕ್ಷೇತ್ರದಲ್ಲಿ ಕಾರ್ಯಕ್ರಮ ವಿಸ್ತಾರಗೊಂಡಿತ್ತು. ಇದುವರೆಗೂ 140 ಬಾವಿಗಳನ್ನು ಕೊರೆಯಲಾಗಿದೆ. 8–10 ಬಾವಿಗಳ ವಿನಾ ಬಾಕಿಯವುಗಳಲ್ಲೆಲ್ಲ ತೈಲ ಸಿಕ್ಕಿದೆ; ಕೆಲವು ಬಾವಿಗಳಲ್ಲಿ ಅನಿಲಮಾತ್ರ ಸಿಕ್ಕಿದೆ. ಎಲ್ಲ ಬಾವಿಗಳ ತೈಲ ಮತ್ತು ಅನಿಲ ತಾನಾಗಿಯೇ ಮೇಲಕ್ಕೆ ಹರಿದುಬರುತ್ತದೆ.

ನಾಹರ್‌ಕಟಿಯಾ ಶಿಲಾರಚನೆ ದಿಗ್ಬಾಯ್ ಕ್ಷೇತ್ರದ ಆಂಟಿಕ್ಲೈನ್‌ನಂತೆ ಚೂಪಾಗಿ ಮಡಿಸಲ್ಪಟ್ಟಿಲ್ಲ; ನಾಹರ್‌ಕಟಿಯಾ ಆಂಟಿಕ್ಲೈನ್ ವಿಶಾಲವಾಗಿ, ಹೆಚ್ಚು ಇಳಿಜಾರಿಲ್ಲದೆ ಸಾಮಾನ್ಯವಾಗಿ ಮಟ್ಟಸವಾಗಿದೆ. ತೈಲ ಮುಖ್ಯವಾಗಿ ಬರ್ೈಲ್ ಶ್ರೇಣಿಯ ಶಿಲೆಗಳಲ್ಲಿದೆ. ಈ ಕ್ಷೇತ್ರದ ಶಿಲೆಗಳಲ್ಲಿ ವ್ಯಾಪ್ಯತೆ (ಪರ್ಮಿಯೆಬಿಲಿಟಿ) ದಿಗ್ಬಾಯ್ ಕ್ಷೇತ್ರದ ಶಿಲೆಗಳಲ್ಲಿರುವುದಕ್ಕಿಂತ ಉತ್ತಮವಾಗಿದೆ; ತೈಲವೂ ಅಲ್ಲಿನಷ್ಟು ಮಂದವಾಗಿಲ್ಲ. ಇಲ್ಲಿನ ಕೆಲವು ಬಾವಿಗಳಲ್ಲಿ ದಿನವಹಿ 2,000 ಬ್ಯಾರಲ್ ತೈಲ ಉತ್ಪತ್ತಿಯಾಗುತ್ತದೆ. ಆದರೆ ಬಹುಮಟ್ಟಿನ ಬಾವಿಗಳಲ್ಲಿ ದಿನವಹಿ 300– 700 ಬ್ಯಾರಲ್ ಮಾತ್ರ ಪಡೆಯಬಹುದು. ಬಾವಿಗಳಿಂದ ಉತ್ಪತ್ತಿಯಾದ ತೈಲ ಒಂದೇ ತರಹ ಸಂಯೋಜನೆಯದಲ್ಲ-ಕೊಂಚಭಾಗ ಹೆಚ್ಚು ಮೇಣದಂಶದಿಂದ ಕೂಡಿ ಸಾಪೇಕ್ಷಸಾಂದ್ರತೆ 0.86 ಉಳ್ಳದ್ದಾಗಿರುವುದು. ಇತರ ಭಾಗ ಕಡಿಮೆ ಮೇಣದಂಶದ್ದಾಗಿ, ಸಾಪೇಕ್ಷಸಾಂದ್ರತೆ 0.93 ಇರುತ್ತದೆ. ಒಟ್ಟಿನಲ್ಲಿ ತೈಲದ ಸಂಯೋಜನೆ ಹೆಚ್ಚುಕಡಿಮೆ ದಿಗ್ಬಾಯ್‌ನ ತೈಲದಂತೆಯೇ ಇದೆ. ನಾಹರ್‌ಕಟಿಯಾ ಕ್ಷೇತ್ರದಲ್ಲಿ ಸಾಲಿಯಾನ 25,00,000 –30.00,000 ಟನ್‌ನಷ್ಟು ತೈಲವನ್ನು, ಕನಿಷ್ಠಪಕ್ಷ 20 ವರ್ಷ ಪರ್ಯಂತ ಪಡೆಯಬಹುದೆಂದು ಅಂದಾಜಾಗಿದೆ. ಇದರ ಜೊತೆಗೆ ದಿನವಹಿ 15,00,000 ಘನಮೀಟರ್‌ಗಳು ಅನಿಲವನ್ನೂ ಪಡೆಯಬಹುದು. ಈ ಕ್ಷೇತ್ರದ ಆಡಳಿತಗಳನ್ನು ನಿರ್ವಹಿಸಲು ಸಮೀಪದಲ್ಲಿರುವ ದೂಲಿಯಜಾನ್ ರೈಲು ನಿಲ್ದಾಣದ ಬಳಿ ಒಂದು ಶಿಬಿರ (ಕಾಲೊನಿ) ಸ್ಥಾಪಿತವಾಗಿ ದೂಲಿಯಜಾನ್ ಈಗ ಒಂದು ನವೀನಪಟ್ಟಣವಾಗಿದೆ.

**ಮೊರಾನ್ :** ಈ ಕ್ಷೇತ್ರ ನಾಹರ್‌ಕಟಿಯಾಕ್ಕೆ 40 ಕಿಮೀ ಪಶ್ಚಿಮ–ನೈಋತ್ಯ ಮಧ್ಯಕೋಣದಲ್ಲಿದೆ. ಇಲ್ಲಿ 1956ರಲ್ಲಿ ತೈಲಸಿಕ್ಕಿತು. ಇಲ್ಲಿನ ಆಂಟಿಕ್ಲೈನ್ ನಾಹರ್‌ಕಟಿಯಾದ್ದಕ್ಕಿಂತ 500 ಮೀ. ಹೆಚ್ಚು ಆಳದಲ್ಲಿದೆ. ತೈಲ ನಾಮಸಾಂಗ್ ಶ್ರೇಣಿಯ-ಅಂದರೆ ಟಿಪಂ ಶಿಲೆಗಳ ಕಾಲದ ಅನಂತರ ಸಂಗ್ರಹವಾದ ಮರಳುಶಿಲೆಗಳಲ್ಲಿದೆ. ಇಲ್ಲಿಯೂ ಪ್ರಸ್ತರಭಂಗಗಳು ಹೆಚ್ಚಾಗಿದ್ದು ಶಿಲಾರಚನೆ ಕ್ಲಿಷ್ಟತರವಾಗಿದೆ. ಇದುವರೆಗೆ 29 ಬಾವಿಗಳನ್ನು ತೋಡಲಾಗಿದೆ. ಅವುಗಳ ಪೈಕಿ 7 ಖಾಲಿ; ಬಾಕಿಯವುಗಳಲ್ಲೂ ತೈಲ ಉತ್ಪತ್ತಿ ನಾಹರ್‌ಕಟಿಯಾಕ್ಕಿಂತ ಕಡಿಮೆ. ಇಲ್ಲಿಯೂ ತೈಲ ಎಲ್ಲ ಬಾವಿಗಳಲ್ಲೂ ಮೇಲಕ್ಕೆ ತಾನಾಗಿಯೆ ಉಕ್ಕಿ ಬರುತ್ತಿದೆ. ತೈಲದ ವಸ್ತುರಚನೆ ಹೆಚ್ಚುಕಡಿಮೆ ನಾಹರ್‌ಕಟಿಯಾ ತೈಲದಂತೇ ಇದೆ. ಸಾಪೇಕ್ಷಸಾಂದ್ರತೆ 0.85.

ನಾಹರ್‌ಕಟಿಯಾ ಮತ್ತು ಮೊರಾನ್ ಕ್ಷೇತ್ರಗಳಲ್ಲಿ ಉತ್ಪತ್ತಿಯಾದ ತೈಲವನ್ನು 10" ವ್ಯಾಸವುಳ್ಳ ನಲ್ಲಿಗಳ ಮೂಲಕ ಗುವಾಹಟಿ ಬಳಿ ಸ್ಥಾಪಿಸಿರುವ ನೂನಮತಿ ಶೋಧನಾಗಾರಕ್ಕೂ ಬಿಹಾರ್ ಪ್ರಾಂತ್ಯದಲ್ಲಿ ಸ್ಥಾಪಿಸಿರುವ ಶೋಧನಾಗಾರಕ್ಕೂ ರವಾನಿಸಲ್ಪಟ್ಟು ಪರಿಶುದ್ಧಗೊಳಿಸಿಸ

ಲ್ಪಡುತ್ತದೆ. ಈ ಶೋಧನಾಗಾರಗಳನ್ನು ಭಾರತ ಸರ್ಕಾರ ಸ್ಥಾಪಿಸಿದೆ. ನಾಹರ್‌ಕಟಿಯಾದಿಂದ ಮೊರಾನ್ ಮತ್ತು ನೂನಮತಿ ಮಾರ್ಗವಾಗಿ ಬ್ರಹ್ಮಪುತ್ರಾನದಿ ದಾಟಿ ಬರೌನಿವರೆಗೂ ಸು. 1200 ಕಿಮೀ ಉದ್ದದ ಕೊಳವೆಗಳನ್ನು 45 ಕೋಟಿ ರೂಪಾಯಿ ಖರ್ಚಿನಲ್ಲಿ ಹಾಕಲಾಗಿದೆ. ಬಾವಿಗಳಿಂದ ಬಂದ ತೈಲಗಳನ್ನು ಬೆರೆಸಿ ಅವುಗಳಲ್ಲಿ ಸಮ್ಮಿಳಿತವಾಗಿರುವ ಅನಿಲವನ್ನು ಬೇರ್ಪಡಿಸಿ, ಅನಂತರ ಸ್ವಲ್ಪಮಟ್ಟಿಗೆ ಶಾಖ ಮಾಡಿ ನಲ್ಲಿಯಲ್ಲಿ ಸುಲಭವಾಗಿ ಪ್ರವಹಿಸುವಂತೆ ದ್ರವರೂಪಮಾಡಲು ಯಂತ್ರಗಳನ್ನು ನಾಹರ್‌ಕಟಿಯಾ ಮತ್ತು ಮೊರಾನ್ ಕ್ಷೇತ್ರಗಳಲ್ಲಿ ಸ್ಥಾಪಿಸಿದ್ದಾರೆ. ಇದಲ್ಲದೆ ಈ ಕೊಳವೆಗಳಲ್ಲಿ ಕೆಲವು ಕಡೆ ಯಂತ್ರೋಪಕರಣಗಳಿಂದ ಒತ್ತಡ ಮಾಡಿ ತೈಲ ಅಷ್ಟು ಅಪಾರದೂರ ಸುಸೂತ್ರವಾಗಿ ಸಾಗಿಬರುವಂತೆ ಏರ್ಪಾಡು ಮಾಡಿದ್ದಾರೆ. ಈ ಕ್ಷೇತ್ರಗಳಲ್ಲಿ ಕೆಲವು ಬಾವಿಗಳಲ್ಲಿ ಉತ್ಪತ್ತಿಯಾಗುವ ಅನಿಲ ಮತ್ತು ತೈಲಗಳಲ್ಲಿ ಸಮ್ಮಿಳಿತವಾಗಿದ್ದು ಬೇರ್ಪಡಿಸಿದ ಅನಿಲ–ಇವನ್ನು ಅಸ್ಸಾಂ ಪ್ರಾಂತ್ಯದಲ್ಲೇ ಉಪಯೋಗಿಸುವ ಏರ್ಪಾಡು ಮಾಡಿದ್ದಾರೆ. ಇದರಿಂದ ನಾಮ್‌ರೂಪ್ ಬಳಿ ವಿದ್ಯುಚ್ಛಕ್ತಿ ಪಡೆಯುವ ಕಾರ್ಯಾಗಾರ ಹಾಗೂ ರಾಸಾಯನಿಕ ಗೊಬ್ಬರ ಮತ್ತಿತರ ಸಾಮಗ್ರಿಗಳ ತಯಾರಿಕೆಯಲ್ಲಿ ಕಾರ್ಖಾನೆಗಳು ಸ್ಥಾಪಿತವಾಗಿವೆ.

**ರುದ್ರಸಾಗರ್ :** ಈ ಕ್ಷೇತ್ರ ಮತ್ತು ಈ ಕೆಳಗೆ ನಮೂದಿಸಿರುವ ಲಾಕ್ವಾಕ್ಷೇತ್ರ ಭಾರತ ಸರ್ಕಾರದ ತೈಲ ಮತ್ತು ನೈಸರ್ಗಿಕಾ ಅನಿಲ ನಿಯೋಗಕ್ಕೆ ಸೇರಿವೆ. ರುದ್ರಸಾಗರ್ ಮೊರಾನ್ ಕ್ಷೇತ್ರಕ್ಕೆ 40 ಕಿಮೀ ನೈಋತ್ಯದಲ್ಲಿ, ಶಿಬ್‌ಸಾಗರ್ ಸಮೀಪದಲ್ಲಿದೆ. ಇಲ್ಲಿ ಕೊರೆದ ಮೊದಲನೆಯ ಬಾವಿಯಲ್ಲಿ 1961ರಲ್ಲಿ ತೈಲ ಸಿಕ್ಕಿತು. ತೈಲ ಮುಖ್ಯವಾಗಿ ಬರೈಲ್‌ಶ್ರೇಣಿ ಶಿಲೆಗಳಲ್ಲೂ ಕೊಂಚ ಭಾಗ ಟಿಪಂಶ್ರೇಣಿಯ ಶಿಲೆಗಳಲ್ಲೂ ಸಿಕ್ಕುತ್ತದೆ. ಇಲ್ಲಿನ ಶಿಲಾರಚನೆ ಹೆಚ್ಚು ಇಳಿಜಾರುಗಳಿಲ್ಲದ ಗುಂಭಾಕಾರವಾಗಿದೆ. ಬಾವಿಗಳು ಸು. 3,500ಮೀ. ಆಳದವರೆಗೂ ಕೊರೆಯಲ್ಪಟ್ಟಿವೆ. ಇದುವರೆವಿಗೂ 8 ಬಾವಿಗಳು ಕೊರೆಯಲ್ಪಟ್ಟಿವೆ; ಅವುಗಳಲ್ಲಿ ನಾಲ್ಕರಲ್ಲಿ ತೈಲ ಉತ್ಪತ್ತಿ ನಿಗದಿಯಾಗಿದೆ. ತೈಲ ಸಾಮಾನ್ಯವಾಗಿ ಮೊರಾನ್ ಕ್ಷೇತ್ರದಂತೆ ಇದೆ.

ಭಾರತ ಸರ್ಕಾರದ ತೈಲ ಮತ್ತು ನೈಸರ್ಗಿಕಾ ಅನಿಲ ನಿಯೋಗಕ್ಕೆ ಭೂಭೌತಶಾಸ್ತ್ರ ರೀತ್ಯಾ ಪರಿಶೀಲನೆ ನಡೆಸಿ ರುದ್ರಸಾಗರ್ ಅಲ್ಲದೆ ಇತರ ಕೆಲವು ಸ್ಥಳಗಳಲ್ಲಿ ಆಂಟಿಕ್ಲೈನ್ ಶಿಲಾರಚನೆಗಳನ್ನು ಕಂಡುಹಿಡಿದಿದೆ. ಈ ರಚನೆಗಳ ಪೈಕಿ ಲಾಕ್ವಾ ಎಂಬ ಸ್ಥಳದಲ್ಲಿ ತೈಲ ಸಿಕ್ಕಿದೆ.

**ಲಾಕ್ವಾ :** ಇದು ಮೊರಾನ್‌ಗೆ 20ಕಿಮೀ ದಕ್ಷಿಣ ನೈಋತ್ಯ ಮೂಲೆಯಲ್ಲಿದೆ. ಇಲ್ಲಿನ ಆಂಟಿಕ್ಲೈನ್ ಮೊರಾನ್ ಮತ್ತು ರುದ್ರಸಾಗರ್‌ಗಳ ಶಿಲಾರಚನೆಗಿಂತ ವಿಸ್ತಾರವಾಗಿಯೂ ಹೆಚ್ಚು ಎತ್ತರವುಳ್ಳದ್ದಾಗಿಯೂ ಇದೆ. 1963ರಲ್ಲಿ ತೋಡಿದ ಮೊದಲನೆ ಬಾವಿಯಲ್ಲಿ ತೈಲ ಸಿಕ್ಕಿದೆ. ಟಿಪಂಶ್ರೇಣಿಯ ಅನೇಕ ಮರಳುಶಿಲಾ ಪ್ರಸ್ತರಗಳಿಂದಲೂ ಬರೈಲ್‌ಶ್ರೇಣಿಯ ಅನೇಕ ಮರಳು ಶಿಲಾಪ್ರಸ್ತರಗಳಿಂದಲೂ ತೈಲ ಪಡೆಯಬಹುದೆಂದು ಗೊತ್ತಾಗಿದೆ.

ರುದ್ರಸಾಗರ್ ಮತ್ತು ಲಾಕ್ವಾ ಕ್ಷೇತ್ರಗಳಲ್ಲಿ ಅಭಿವೃದ್ಧಿಕಾರ್ಯ ಇನ್ನೂ ನಡೆಯುತ್ತಿದೆ. ಈ ಕ್ಷೇತ್ರಗಳಲ್ಲಿ ತೈಲ ಉತ್ಪತ್ತಿ ಪ್ರಮಾಣ ನಿಗದಿಮಾಡಲು ಕಾರ್ಯಕ್ರಮಗಳು ಮುಂದುವರಿಯುತ್ತಿವೆ.

ಈ ಮೇಲೆ ವಿವರಿಸಲ್ಪಟ್ಟ ಕ್ಷೇತ್ರಗಳೆಲ್ಲಲ್ಲ ಬ್ರಹ್ಮಪುತ್ರಾ ನದಿಯ ಎಡಪಾರ್ಶ್ವದಲ್ಲಿವೆ. ಬಲಭಾಗದ ಮೆಕ್ಕಲು ಬಯಲಿನಲ್ಲಿ ತೈಲಾನ್ವೇಷಣಕಾರ್ಯ ಇನ್ನೂ ನಡೆದಿಲ್ಲ.

ಆಯಿಲ್‌ಏಷ್ಯ 1993ರಲ್ಲಿ ವರದಿಮಾಡಿದಂತೆ ಲಕ್ವಾದಲ್ಲಿ 670 ಮಿಲಿಯನ್‌ಬ್ಯಾರೆಲ್ ತೈಲ್ಯ, ರುದ್ರಸಾಗರ 335 ಬ್ಯಾರೆಲ್ ತೈಲ, ನಾಹರ್‌ಕಟಿಯಾ 200ಮಿಲಿಯನ್ ಬ್ಯಾರೆಲ್ ತೈಲ ಜೋರಜನ್ 100 ಮಿಲಿಯನ್ ಬ್ಯಾರೆಲ್ ತೈಲ ನಿಕ್ಷೇಪ ಪ್ರಮಾಣವನ್ನು ಹೊಂದಿವೆ.

(ಎಂ.ಬಿ.ಆರ್.)

**ಅಸ್ಸಾಂ ಟ್ರಿಬ್ಯೂನ್ :** ಅಸ್ಸಾಂ ಪ್ರಾಂತ್ಯದ ಪ್ರಮುಖ ಇಂಗ್ಲಿಷ್ ದಿನಪತ್ರಿಕೆ. 9ನೆಯ ಆಗಸ್ಟ್ 1939ರಲ್ಲಿ ಪ್ರಾರಂಭವಾಯಿತು. ಈಗ ಗುವಾಹಟಿ ಹಾಗೂ ದಿಬ್ರುಘಡ್‌ಗಳಿಂದ ಪ್ರಕಟವಾಗುತ್ತಿದೆ. ಸ್ವತಂತ್ರ ನೀತಿಯನ್ನು ಪರಿಪಾಲಿಸಿಕೊಂಡು ಬರುತ್ತಿರುವ ಈ ಜನಪ್ರಿಯ ಪತ್ರಿಕೆಯ ಅಂಗವಾಗಿ 1955ರಲ್ಲಿ ಅಸ್ಸಾಂ ಬಾಣಿ ಎಂಬ ಅಸ್ಸಾಮಿ ಭಾಷೆಯ ದಿನಪತ್ರಿಕೆ ಸ್ಥಾಪಿತವಾಗಿದೆ. ಖಚಿತವಾದ ಸುದ್ದಿಗಳಿಗೆ, ಪ್ರಾಮಾಣಿಕತೆಗೆ ಮತ್ತು ವಿಶೇಷ ಲೇಖನಗಳಿಗೆ ಹೆಸರಾದ ಇದರ ಪ್ರಗತಿಗೆ ಕಾರಣರಾದವರು, ಆಗಿನ ಸಂಪಾದಕ ಎಲ್. ಎಸ್. ಫೂಕನ್. ಮತ್ತು ಈಗಿನ ಸಂಪಾದಕ ಈಗಿಗ ಪ್ರಫುಲ್ಲಗೋವಿಂದ ಬರುವಾ. (ಎನ್.ಕೆ.)

**ಅಸ್ಸಾಂ ಮಿಹಿರ್ :** ಅಸ್ಸಾಮಿ ಭಾಷೆಯಲ್ಲಿ ಪ್ರಕಟವಾದ ಪ್ರಥಮ ಪತ್ರಿಕೆ. ಗುವಾಹಟಿ ನಗರದಿಂದ ಪ್ರಕಟವಾದ ಈ ವಾರಪತ್ರಿಕೆಯ ಪ್ರಥಮ ಸಂಚಿಕೆ 1872ರಲ್ಲಿ ಅಚ್ಚಾಯಿತು. ಸ್ಥಾಪಕ ಚಿನ್ನಾನಂದ ಚೌಧರಿ.

(ಎನ್.ಕೆ.)

**ಅಸ್ಸಾಮಿನ ಇತಿಹಾಸ :** ಭಾರತದ ಇತಿಹಾಸ ಪೂರ್ವಕಾಲದಲ್ಲಿ ಈ ದೇಶಕ್ಕೆ ಪ್ರಾಗ್ಜ್ಯೋತಿಷ ಎಂಬ ಹೆಸರಿತ್ತೆಂದೂ ಅದನ್ನು ಭಗದತ್ತನೆಂಬ ಅರಸು ಆಳುತ್ತಿದ್ದನೆಂದೂ ತಿಳಿದುಬರುತ್ತದೆ. ಮುಂದೆ ಈ ದೇಶಕ್ಕೆ ಕಾಮರೂಪ ಎಂಬ ಹೆಸರು ಬಂತು. ಕ್ರಿಸ್ತಯುಗದ ಆರಂಭದಲ್ಲಿ ಆರ್ಯರು ಇಲ್ಲಿ ಬಂದು ನೆಲೆಸಿದರು. ಪ್ರ.ಶ 4 ರಿಂದ 7 ನೆಯ ಶತಮಾನದ ವರೆಗೆ, ಪುಷ್ಯವರ್ಮನೆಂಬ ರಾಜನ ಸಂತತಿಯವರು ಇಲ್ಲಿ ಆಳಿದರು. ಸ್ವಲ್ಪಕಾಲ ಅವರು ಸಮುದ್ರಗುಪ್ತನ ಮಾಂಡಲೀಕರಾಗಿಯೂ ಇದ್ದರು. ಯೂವಾನ್‌ಚಾಂಗ್ ಪ್ರ.ಶ 640ರಲ್ಲಿ ಈ ರಾಜ್ಯಕ್ಕೆ ಬಂದಿದ್ದ. 13ನೆಯ ಶತಮಾನದಲ್ಲಿ ಮುಸ್ಲಿಮರು ಈ ರಾಜ್ಯದ ಮೇಲೆ ದಾಳಿ ನಡೆಸಿದರು. ಪರ್ವತ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದ ಜನರು ಇಲ್ಲಿನ ಜನರೊಂದಿಗೆ ಈ ಶತಮಾನದವರೆಗೂ ಬೆರೆಯದೇ ಬಯಲು ಪ್ರದೇಶದ ಮೇಲೆ ದಾಳಿ ನಡೆಸುತ್ತಲೇ ಇದ್ದರು. ಬರ್ಮದ ಇರವಾಡಿ ಪ್ರದೇಶದಲ್ಲಿದ್ದ ಅಹೋಂ ಎಂಬ ಜನರಲ್ಲಿ ಕೆಲವರು ಹದಿಮೂರನೆಯ ಶತಮಾನದಲ್ಲಿ ಇಲ್ಲಿ ಬಂದು ನೆಲೆಸಿದರು. ಅವರಿಂದಲೇ ಅಸ್ಸಾಂ ಎಂಬ ಹೆಸರು ಬಂದಿದೆ. ಇವರು ಹಿಂದಿನಿಂದ ವಾಸಮಾಡುತ್ತಿದ್ದ ಕಚಾರಿ, ಕೋಚ್, ಮೇಚ್. ಚೂತಿಯಾ ಮುಂತಾದ ಜನರೊಂದಿಗೆ ಬಹುಕಾಲ ಹೋರಾಡಬೇಕಾಯಿತು.

13ನೆಯ ಶತಮಾನದಲ್ಲಿ ಅಹೋಂ ಜನ ಈ ದೇಶವನ್ನಾಕ್ರಮಿಸಿದ ಮೇಲೆ ಅವರು ಸ್ಥಳೀಯ ಕಚಾರಿಗಳೊಂದಿಗೆ ಹೊಡೆದಾಡಬೇಕಾಯಿತು. ಕಚಾರಿಗಳು ಸೋತು ದಕ್ಷಿಣ ಪ್ರಾಂತ್ಯಕ್ಕೆ ಹೋಗಿ ನೆಲೆಸಿದರು. ಇವರ ರಾಜ್ಯ ಪದ್ಧತಿ ವಿಶಿಷ್ಟ ರೀತಿಯದು. ದೊರೆ ಮತ್ತು ಸಾಮಂತ ಮಂಡಲಿ, ಇವೆರಡಕ್ಕೂ ಅಧಿಕಾರ ಸಮನಾಗಿ ಹಂಚಲ್ಪಟ್ಟಿತ್ತು. ದೊರೆಯ ಆಯ್ಕೆ (ರಾಜವಂಶದವರಲ್ಲಿ ಮಾತ್ರ) ಸಾಮಂತ ಮಂಡಲಿಗೆ ಸೇರಿತ್ತು. ಶೂರರಾದ ಅಹೋಮರು ಮುಸ್ಲಿಮರ ಅನೇಕ ದಾಳಿಗಳನ್ನೆದುರಿಸಿ ಅವರನ್ನು ಹಿಂದಕ್ಕಟ್ಟಿದರು. ಹದಿನೇಳನೆಯ ಶತಮಾನದಲ್ಲಿ ಕೊಂಚಕಾಲ ಮಾತ್ರ ಅಸ್ಸಾಮಿನ ದಕ್ಷಿಣ ಭಾಗವನ್ನು ಮೊಗಲ ಸಾಮ್ರಾಟರಿಗೆ ಬಿಟ್ಟುಕೊಡಬೇಕಾಯಿತು. ಇದೇ ಕಾಲದಲ್ಲೇ ಅಹೋಂ ರಾಜ ರುದ್ರಸಿಂಹ ಹಿಂದೂಮತಾನುಯಾಯಿಯಾದ. ಅವನ ಮಗ ಶಿವಸಿಂಹನ (1714–44) ಕಾಲದಲ್ಲಿ ಹಿಂದೂಮತ ರಾಜ್ಯದ ಪ್ರಧಾನಮತವಾಯಿತು. ಮುಂದೆ ಕೊಂಚಕಾಲ ಅಸ್ಸಾಮಿನ ರಾಜಕೀಯ ಸ್ಥಿತಿ ಹದಗೆಟ್ಟಿತು. ಪರ್ವತ ಪ್ರಾಂತಗಳ ಜನರು ದೇಶದೊಳಗೆ ನುಗ್ಗಿ ಲೂಟಿ, ಕೊಲೆ ನಡೆಸಿದರು; ಇವರ ಹಾವಳಿ ತಡೆಯುವುದಕ್ಕೆ ದೊರೆ ಗೌರೀನಾಥ 1792ರಲ್ಲಿ ಬ್ರಿಟಿಷರ ನೆರವು ಕೋರಬೇಕಾಯಿತು. ಅದೂ ಸರಿಯಾಗಿ ದೊರಕಲಿಲ್ಲ. ರಾಜ್ಯದಲ್ಲೇ ದೊರೆಗೆ ಪ್ರತಿಪಕ್ಷವೊಂದು ಹುಟ್ಟಿತು. ಈ ಪಕ್ಷ ಬರ್ಮೀಯರ ಸಹಾಯ ಕೇಳಿತು. ಅವರು ಬಂದು ಇಡೀ ದೇಶದಲ್ಲಿ ಲೂಟಿ ಕೊಲೆಗಳನ್ನು ನಡೆಸಿ ಹಿಂತಿರುಗಿದರು. ಮುಂದೆ ಅಸ್ಸಾಂ ಬ್ರಿಟಿಷರ ವಶಕ್ಕೆ ಬಂದು, 1874ರಲ್ಲಿ ಚೀಫ್ ಕಮಿಷನರ್ ಪ್ರಾಂತ್ಯವಾಯಿತು. 1919ರಲ್ಲಿ ಗವರ್ನರ್ ಪ್ರಾಂತ್ಯವಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನಿಯರು ಬರ್ಮ (ಮಯನ್ಮಾರ್) ದೇಶವನ್ನು ಸ್ವಾಧೀನಪಡಿಸಿಕೊಂಡ ಮೇಲೆ, ಕೋಹಿಮ ಹತ್ತಿರದ ನಾಗಾಬೆಟ್ಟ ಪ್ರದೇಶ ಬ್ರಿಟಿಷರ ಪ್ರತಿಭಟನೆಯ ಮುಖ್ಯ ಕೇಂದ್ರವಾಯಿತು. ಆ ಸೈನ್ಯಕ್ಕೆ ಸಾಮಾನು ಸರಂಜಾಮು ಸಾಗಾಣಿಕೆ ಅಸ್ಸಾಂ ಮುಖಾಂತರವೇ ಆಗಬೇಕಾಗಿತ್ತು.

1950 ಜನವರಿ 20ರ ಸ್ವತಂತ್ರಭಾರತ ರಾಜ್ಯಾಂಗದ ಪ್ರಕಾರ ಅಸ್ಸಾಂ ಭಾರತದ ಒಂದು ರಾಜ್ಯವಾಗಿದೆ.

**ಅಸ್ಸಾಮಿನ ಪ್ರಾಕ್ತನ ಚರಿತ್ರೆ :** ಅಸ್ಸಾಮಿನಲ್ಲಿ ಇದುವರೆಗೆ ತಿಳಿದಿರುವ ಅತ್ಯಂತ ಪ್ರಾಚೀನ ಪ್ರದೇಶಗಳೆಂದರೆ ಗಾರೋ, ಕಾಚಾರ್, ಮತ್ತು ಖಾಸಿ ಪರ್ವತಪ್ರದೇಶಗಳು, ಬ್ರಹ್ಮಪುತ್ರ ಕಣಿವೆ ಮತ್ತು ಸಾದಿಯ ಗಡಿವಿಭಾಗಗಳಲ್ಲಿ ದೊರಕಿರುವ ನವ ಶಿಲಾಯುಗದ ಉಪಕರಣಗಳು. ಈ ಶಿಲಾಯುಗದ ಬಗ್ಗೆ ವಿಶೇಷ ಅಧ್ಯಯನವನ್ನು ನಡೆಸಿರುವ ಪ್ರೊ. ಅಬ್ದುಲ್ ಹಸನ್‌ದಾನಿ ಇಲ್ಲಿನ ನವ ಶಿಲಾಯುಗದ ಸಂಸ್ಕೃತಿಗಳು ಚೀನ ಮತ್ತು ಆಗ್ನೇಯ ಏಷ್ಯದ ಸಂಸ್ಕೃತಿಗಳ ಬುಡಕಟ್ಟಿಗೆ, ಸೇರಿದವುಗಳೆಂದೂ ಭಾರತದ ಇತರ ಭಾಗಗಳಲ್ಲಿ ಪ್ರಚಲಿತವಾಗಿದ್ದ ನವ ಶಿಲಾಯುಗದ ಸಂಸ್ಕೃತಿಗಳಿಗೂ ಅಸ್ಸಾಮಿನವಕ್ಕೂ ನಿಶ್ಚಿತ ಸಂಬಂಧವೇನೂ ಇಲ್ಲವೆಂದೂ ಸಾಧಿಸಿದ್ದಾರೆ. ಅಲ್ಲದೆ ಈ ಶಿಲಾಯುಧಗಳಲ್ಲಿ ಕೆಲವು ಲೋಹದ ಆಯುಧಗಳ ಮಾದರಿಯಲ್ಲಿ ತಯಾರಿಸಲ್ಪಟ್ಟಿವೆಯೆಂದೂ ಇನ್ನು ಕೆಲವು ಲೋಹದ ತಂತಿ ಅಥವಾ ಉಳಿಯನ್ನು ಉಪಯೋಗಿಸಿಯೇ ಮಾಡಲ್ಪಟ್ಟಿರಬೇಕೆಂದೂ ನಿಷ್ಕರ್ಷಿಸಿ, ಅದೇ ಕಾರಣಗಳಿಂದ ಅಸ್ಸಾಮಿನ ನವ ಶಿಲಾಯುಗದ ಸಂಸ್ಕೃತಿಗಳು ಪ್ರ.ಶ.ಪೂ. 1300 ಅಥವಾ 1200 ಕ್ಕಿಂತ ಈಚಿನವೆಂದು ಅಭಿಪ್ರಾಯಪಟ್ಟಿದ್ದಾರೆ. ಅಸ್ಸಾಮಿನ ನವ ಶಿಲಾಯುಗದ ಸಂಸ್ಕೃತಿಗಳಲ್ಲಿ ಉಪಯೋಗದಲ್ಲಿದ್ದ ಮುಖ್ಯವಾದ ಕೆಲವು ರೀತಿಯ ಆಯುಧಗಳನ್ನು ಮಾಡುವಾಗ ದೊಡ್ಡ ಕಲ್ಲಿನಿಂದ ಚಕ್ಕೆಗಳನ್ನು ತೆಗೆದು, ಅವುಗಳ ಸಾಮಾನ್ಯ ರೂಪವನ್ನು ಸಾಧಿಸಿದ. ಅನಂತರ ಅಲ್ಲಲ್ಲಿ ಕಲ್ಲಿನಿಂದ ಕುಟುಕಿ ಓರೆಕೋರೆಗಳನ್ನು ಸರಿಪಡಿಸಿ, ಕೊನೆಯದಾಗಿ ಉಜ್ಜಿ ನಯಮಾಡುವುದು ಬಳಕೆಯಲ್ಲಿದ್ದ ಸಾಮಾನ್ಯ ವಿಧಾನವಾಗಿತ್ತು. ಈ ಶಿಲೋಪಕರಣಗಳೆಲ್ಲವೂ ಒಂದೇ ಸಾಂಸ್ಕೃತಿಕ ಪರಂಪರೆಗೆ ಸೇರಿದುವಾದರೂ ವಿವಿಧ ಪ್ರದೇಶಗಳಲ್ಲಿ ದೊರಕುವ ಆಯುಧಗಳ ರಚನಾರೀತಿಗಳಲ್ಲಿ ಮತ್ತು ಕಲ್ಲಿನ ಉಪಯೋಗದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ ಸಾದಿಯಗಡಿ ವಿಭಾಗದಲ್ಲಿನ ಆಯುಧಗಳು ಜೇಡ್ ಕಲ್ಲಿನವಾದರೆ, ನಾಗಾಬೆಟ್ಟದವು ಪಟ್ಟೆಗಲ್ಲಿನವು. ಮರಳುಗಲ್ಲು ಮತ್ತು ಪಳೆಯುಳಿಕೆಯ ಮರ ಸಹ ಬಳಕೆಯಲ್ಲಿತ್ತು. ಅಸ್ಸಾಮಿನ ಶಿಲಾಯುಗದ ವಿಷಯದಲ್ಲಿ ಅಲ್ಲಿನ ಆಯುಧಗಳ ಹೊರತು ಇನ್ನೇನೂ ತಿಳಿದಿಲ್ಲ. ಈ ಪೂರ್ವಭಾರತದ

ನವಶಿಲಾಯುಗದ ಸಂಸ್ಕೃತಿಯ ಕರ್ತೃಗಳು ಆಸ್ಟ್ರೋಏಷಿಯಾಟಿಕ್ ಭಾಷೆಯನ್ನಾಡುತ್ತಿದ್ದ ಜನರಿರಬಹುದೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. ಆದರೆ ಇದುವರೆಗೆ ಇದಕ್ಕೆ ಖಚಿತ ಆಧಾರಗಳೇನೂ ದೊರಕಿಲ್ಲ.

ಅಸ್ಸಾಮಿನ ಕೆಲವು ಪ್ರದೇಶಗಳಲ್ಲಿ ಬೃಹತ್ ಶಿಲಾಸಮಾಧಿಗಳು ಬೆಳಕಿಗೆ ಬಂದಿವೆ. ಆದರೆ ಇವುಗಳ ಕಾಲವಾಗಲಿ ಕರ್ತೃಗಳ ವಿಷಯವಾಗಲಿ ಸಂಬಂಧಪಟ್ಟ ಸಂಸ್ಕೃತಿಯ ವಿವರವಾಗಲಿ ಏನೂ ತಿಳಿದಿಲ್ಲ. ಇತ್ತೀಚಿನವರೆಗೂ ಅಲ್ಲಿನ ಕೆಲವು ಆದಿವಾಸಿಗಳು ಬೃಹತ್ ಶಿಲಾಸಮಾಧಿಗಳನ್ನು ನಿರ್ಮಿಸುತ್ತಿದ್ದರೆಂಬುದಕ್ಕೆ ಆಧಾರಗಳಿವೆ.

ಭೂಕಂಪ ಮತ್ತು ಅತಿವೃಷ್ಟಿ ಸಾಮಾನ್ಯವಾಗಿರುವ ಅಸ್ಸಾಮ್ ಪ್ರದೇಶದಲ್ಲಿ ಪ್ರಾಚೀನ ಕಾಲದ ಕಟ್ಟಡಗಳು ಉಳಿದುಬರುವುದು ಅಪೂರ್ವ. ಭಗ್ನಾವಶೇಷಗಳು ಅಲ್ಲಲ್ಲಿ ಇದ್ದಿರಬಹುದಾದರೂ ಅಲ್ಲಿನ ಯಥೇಚ್ಛವಾದ ಸಸ್ಯರಾಶಿ ಇವನ್ನು ಜನರ ದೃಷ್ಟಿಯಿಂದ ಬಹುಬೇಗ ಹುದುಗಿಸಿಬಿಡುತ್ತವೆ. ಅಕಸ್ಮಾತ್ತಾಗಿ ಕೆಲವು ಗುರಿತಿಸಲ್ಪಟ್ಟಿದ್ದರೂ ಈ ಪ್ರದೇಶದಲ್ಲಿ ಸಂಚಾರ ಸೌಲಭ್ಯಗಳು ಕಡಿಮೆಯಿರುವುದರಿಂದ ಇವು ವಿದ್ವಾಂಸರನ್ನು ಆಕರ್ಷಿಸುವುದೂ ಕಡಿಮೆ. ಹೀಗಾಗಿ ಅಸ್ಸಾಮಿನ ವಾಸ್ತುಶಿಲ್ಪದ ಬಗ್ಗೆ ನಮಗೆ ತಿಳಿದಿರುವ ವಿಷಯ ಅತ್ಯಲ್ಪ. ಈಗಿನ ಗುವಾಹಟಿ ಮತ್ತು ತೇಜಪುರ ಊರುಗಳು ಪ್ರಾಚೀನ ಪ್ರಸಿದ್ಧ ಪ್ರಾಗ್ಜ್ಯೋತಿಷಪುರ ಮತ್ತು ಹಾರುಪ್ಪೇಶ್ವರ ಪಟ್ಟಣಗಳ ಮೇಲೆ ಕಟ್ಟಲ್ಪಟ್ಟಿವೆ. ಈಗಲೂ ಈ ಊರುಗಳಲ್ಲಿ ಕಟ್ಟಡಗಳನ್ನು ಕಟ್ಟುವಾಗ ಆ ಪಟ್ಟಣಗಳ ಹಲವಾರು ಅವಶೇಷಗಳು ಬೆಳಕಿಗೆ ಬರುತ್ತಿವೆ. ಗುವಾಹಟಿಯಲ್ಲಿ ಬ್ರಹ್ಮಪುತ್ರಾ ನದಿಯಿಂದ ಅನತಿ ದೂರದಲ್ಲಿ ಕೆಲವು ದೇವತಾಮೂರ್ತಿಗಳು ಬಂಡೆಯ ಮೇಲೆ ಕೆತ್ತಲ್ಪಟ್ಟಿವೆ. ವಿಷ್ಣು, ಸೂರ್ಯ, ಗಣೇಶ, ದುರ್ಗಾದೇವತೆಗಳ ವಿಗ್ರಹಗಳೂ ಕೆಲವು ಪ್ರಾಚೀನ ಕಟ್ಟಡಗಳ ಕಂಬಗಳೂ ಅಲ್ಲಲ್ಲಿನ ಅಗೆತದಲ್ಲಿ ಬೆಳಕಿಗೆ ಬಂದಿದೆ. ಗುವಾಹಟಿಯ ಬಳಿಯ ಊರ್ವಶಿ ದ್ವೀಪದಲ್ಲಿ ಸಹ ಇದೇ ರೀತಿಯ ವಿಗ್ರಹಗಳು ಸಿಕ್ಕಿವೆ. ತೇಜಪುರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯನ್ನು ಕಟ್ಟುವಾಗ, ದೊಡ್ಡ ದೊಡ್ಡ ಕೆತ್ತಿದ ಕಲ್ಲುಗಳು ಸಿಕ್ಕಿದ್ದವು. ಇದರಲ್ಲಿ ಕೆಲವನ್ನು ಅಲ್ಲಿಯ ನಗರ ಸಭೆಯ ಉದ್ಯಾನದಲ್ಲಿ ಇರಿಸಿದ್ದಾರೆ; ಇವುಗಳಲ್ಲಿನ ಒಂದು ಕಂಬ ಕೆಳಭಾಗದಲ್ಲಿ ಹದಿನಾರು ಮುಖದ್ದಾಗಿದ್ದು ಮೇಲ್ಭಾಗದಲ್ಲಿ ಕಲ್ಯಾಣಿ ಚಾಳುಕ್ಯರ ದೇವಾಲಯಗಳ ಕಂಬಗಳಂತೇ ಗುಂಡಗೆ ತಿರುಗಣೆಗಳಲ್ಲಿ ತಿರುಗಿಸಿದ್ದಂತೆ ಇದೆ. ಅದರ ಮೇಲ್ಭಾಗದಲ್ಲಿ ದೇವಾಲಯದ ಮಾದರಿಯ ಕೆತ್ತನೆಯಿದ್ದು ಒಳಗೆ ಲಿಂಗವನ್ನು ತೋರಿಸಿದೆ. ಬಾಗಿಲವಾಡದ ಮೇಲ್ಪಟ್ಟಿಯಾಗಿದ್ದ ಇನ್ನೊಂದು ಕಲ್ಲಿನಲ್ಲಿ ಮಧ್ಯೆ ಸೂರ್ಯಮೂರ್ತಿಯೂ ಪಕ್ಕಗಳಲ್ಲಿ ಬ್ರಹ್ಮ ಮತ್ತು ಶಿವ ವಿಗ್ರಹಗಳೂ ಕೆತ್ತಲ್ಪಟ್ಟಿವೆ. ಈ ವಾಸ್ತುಶಿಲ್ಪದ ಅವಶೇಷಗಳು ಪ್ರ.ಶ. 10ನೆಯ ಶತಮಾನಕ್ಕೆ ಸೇರಿದವು. ಅದೇ ಉದ್ಯಾನದಲ್ಲಿಟ್ಟಿರುವ ಗಜಲಕ್ಷ್ಮಿಯ ಚಿತ್ರವಿರುವ ಕಲ್ಲು ಪ್ರಾಯಶಃ 12ನೆಯ ಶತಮಾನದ ದೇವಾಲಯದ್ದಿರಬಹುದೆಂದು ವಿದ್ವಾಂಸರ ಊಹೆ.

ಅಸ್ಸಾಮಿನ ಅತಿಪ್ರಾಚೀನ ದೇವಾಲಯದ ಉಳಿಕೆಗಳು ತೇಜ್‌ಪುರದ ಬಳಿಯ ದಹ್‌ಪಾರ್ವತೀಯ ಎಂಬ ಗ್ರಾಮದಲ್ಲಿವೆ. ಇಲ್ಲಿದ್ದ ಇಟ್ಟಿಗೆಯ ದೇವಾಲಯ 1897ರ ಭೂಕಂಪದಲ್ಲಿ ಬಿದ್ದುಹೋದುದರಿಂದ, ಅದರಡಿಯಲ್ಲಿ ಸೇರಿಹೋಗಿದ್ದ ಆರನೆಯ ಶತಮಾನದ ಗುಪ್ತಶೈಲಿಯ ಕಟ್ಟಡದ ಭಾಗಗಳು ಬೆಳಕಿಗೆ ಬಂದವು. ಬಾಗಿಲ ಎರಡು ಕಡೆಯ ಕಂಬಗಳಲ್ಲಿ ಗಂಗ, ಯಮುನ ಶಿಲ್ಪಗಳಿವೆ. ಗಣಗಳು ಮತ್ತು ನಾಗನಾಗಿ ವಿಗ್ರಹಗಳನ್ನು ಕೆತ್ತಿರುವ ಕಲ್ಲುಗಳು ಸಹ ಇಲ್ಲಿ ದೊರಕಿವೆ. ಕಾಮರೂಪ ಜಿಲ್ಲೆಯ ಪ್ರಸಿದ್ಧ ಶಾಕ್ತಪೀಠವಾದ ಕಾಮ್ಯಾಖ್ಯದಲ್ಲಿ, ಈಗಿರುವ ದೇವಾಲಯ ಬಹಳ ಇತ್ತೀಚಿನದಾದರೂ 7–8ನೆಯ ಶತಮಾನದ ಕೆಲವು ಶಿಲ್ಪಗಳೂ ಸಿಕ್ಕಿವೆ. ಕಾಮಾಖ್ಯ ಬೆಟ್ಟದಮೇಲೆ ಕಂಡುಬಂದ ಹತ್ತನೆಯ ಶತಮಾನದ ಸರಸ್ವತೀವಿಗ್ರಹ ಒಂದು ಸುಂದರ ಶಿಲ್ಪ. ಈ ಶಿಲ್ಪದಲ್ಲಿ ಬಿಹಾರ ಮತ್ತು ಮಧ್ಯಭಾರತ ಶಿಲ್ಪ ಶೈಲಿಯ ಪ್ರಭಾವ ಸ್ಪಷ್ಟವಾಗಿದೆ.

ತೇಜಪುರದಿಂದ ಪೂರ್ವಕ್ಕೆ ಬಾಮುನಿ ಬೆಟ್ಟದ ಮೇಲೆ ಕಡೆದ ಗ್ರಾನೈಟ್ ಬಂಡೆಗಳಿಂದ ಕಟ್ಟಿದ್ದ ಹಲವು ದೇವಾಲಯಗಳ ಅವಶೇಷಗಳು ಮೂರುಕಡೆಗಳಲ್ಲಿ ಕಂಡುಬಂದಿವೆ. ಇವೆಲ್ಲ ಶೈವ ದೇವಾಲಯಗಳಿಗೆ ಸಂಬಂಧಪಟ್ಟದ್ದವೆಂದೂ ಹೇಳಬಹುದು. ಲಶಿಮಪುರ ಜಿಲ್ಲೆಯ ಪುಲ್ಬಾರಿಯ ಬಳಿ ಸಹ ಹಳೆಯ ದೇವಾಲಯದ ಮುರುಕುಗಳೂ ಒಂದು ಕಲ್ಲಿನ ಕಮಾನೂ ಕೆಲವು ದೇವಮೂರ್ತಿಗಳೂ ಸಿಕ್ಕಿವೆ. ಸಿಬ್ಸಾಗರದಲ್ಲಿಯೂ ಒಂದು ವಿಷ್ಣುದೇವಾಲಯದ ಉಳಿಕೆಗಳಿವೆ. ಆದರೆ ಇವಾವುದರ ಬಗ್ಗೆಯೂ ಹೆಚ್ಚು ವಿಷಯಗಳು ತಿಳಿದಿಲ್ಲ.

ದೀಮಾಪುರದಲ್ಲಿ ಒಂದು ದೊಡ್ಡ ಪಟ್ಟಣದ ಅವಶೇಷಗಳಿವೆ. ಇದು ಪ್ರಶ 1536ರಲ್ಲಿ ಅಹೋಮರ ಆಕ್ರಮಣದವರೆಗೂ ಕಚಾರಿ ದೊರೆಗಳ ರಾಜಧಾನಿಯಾಗಿತ್ತು. ಊರಿನ ಸುತ್ತಲೂ ಕೋಟೆ ಇದ್ದು ಅಲ್ಲಲ್ಲಿ ಭದ್ರವಾಗಿ ಕಟ್ಟಿದ ಹೆಬ್ಬಾಗಿಲುಗಳಿವೆ. ಊರಿನ ಸುತ್ತಳತೆ ಸುಮಾರು 4 ಕಿಮೀ ಗಳು. ಕೋಟೆಯ ಒಳಗೆ, ಪೂರ್ವದ ಬಾಗಿಲಿನಿಂದ ಪ್ರಾರಂಭವಾಗಿ ದಕ್ಷಿಣೋತ್ತರವಾಗಿ ಸಮಾನಾಂತರವಾಗಿ ಹಬ್ಬಿರುವ ಕಂಬಗಳ ಎರಡು ಸಾಲುಗಳಿವೆ. ಇವು ನಾಜೂಕಾಗಿ ಒಂದೇ ಕಲ್ಲಿನಲ್ಲಿ ಕೆತ್ತಲ್ಪಟ್ಟಿದ್ದು ಚದುರಂಗ ಕಾಯಿಗಳಂತೆ ಕಾಣುತ್ತವೆ. ಒಂದೊಂದೂ 1.8 ಮೀ.–2.7 ಮೀ. ಎತ್ತರವಿದ್ದು 0.76 ಮೀ. ದಪ್ಪವಿದೆ. ಇವಲ್ಲದೆ V ಆಕಾರದಲ್ಲಿ ಕೆತ್ತಲ್ಪಟ್ಟಿರುವ ಹಲವಾರು ಕಲ್ಲುಗಳೂ ಇಲ್ಲಿ ನೆಡಲ್ಪಟ್ಟಿವೆ. ಇವುಗಳ ಮೇಲೆ ಬಳ್ಳಿಗಳು ಮತ್ತು ಜ್ಯಾಮಿತಿಯ ಆಕೃತಿಗಳ ಸುಂದರ ಕೆತ್ತನೆಗಳಿವೆ. ಇದೇ ರೀತಿಯ ಕಂಬಗಳೂ ಅದೇ ಪ್ರಾಂತ್ಯದಲ್ಲಿ ಜಮಗುರಿ ರೈಲ್ವೆ ನಿಲ್ದಾಣದಿಂದ ಸುಮಾರು 24 ಕಿಮೀ ದೂರದಲ್ಲಿರುವ, ಕಾಸೋಮರಿ ಪಥಾರ ಎಂಬಲ್ಲೂ ಕಂಡುಬಂದಿವೆ. ಇವುಗಳ ಮೇಲಿರುವ ಕೆತ್ತನೆಗಳು, ಈಗಿನ ನಾಗಾ ಜನರಲ್ಲಿ ಈ ನಮೂನೆಯ ಮರದ ಕಂಬಗಳನ್ನು ಮೃತವೀರರ ಸ್ಮಾರಕವಾಗಿ ನೆಡುವ ಪದ್ಧತಿಯಿರುವುದರಿಂದ, ದೀಮಾಪುರ ಮತ್ತು ಕಾಸೋಮರಿ ಪಥಾರ್‌ನ ಕಂಬಗಳೂ ಆ ಉದ್ದೇಶಕ್ಕಾಗಿಯೇ ನೆಟ್ಟಿರಬಹುದೆಂದು ಊಹಿಸಬಹುದು. ಇತ್ತೀಚಿನವರೆಗೆ ನರಬಲಿಗೆ ಪ್ರಸಿದ್ಧವಾಗಿದ್ದ ಸಾದಿಯಾ ಬಳಿಯ ತಾಮ್ರೇಶ್ವರೀ ದೇವಾಲಯ ಬಹುಶಃ ಈ ಕಾಲದ್ದು. ದೇವಾಲಯದ ಮೇಲ್ಭಾಗ ತಾಮ್ರದ ತಗಡುಗಳಿಂದ ಹೊದಿಸಲ್ಪಟ್ಟಿದೆ. ಇಲ್ಲಿ ಸಿಕ್ಕಿರುವ ಕೆಲವು ಹಾಸು ಹೆಂಚುಗಳಲ್ಲಿನ ಚಿತ್ರಗಳಿಗೂ ದೀಮಾಪುರದ ಕೆತ್ತನೆಗಳಿಗೂ ಸಾಮ್ಯವಿದೆ. ದೀಮಾಪುರದ ಅನಂತರ ಕಚಾರಿ ಅರಸರ ರಾಜಧಾನಿಯಾಗಿದ್ದ ಮೈಬಾಂಗ್‌ನಲ್ಲಿಯೂ ಆ ಕಾಲದ ಕೋಟೆಯ ಗೋಡೆ, ಭಗ್ನ ಕಟ್ಟಡಗಳು ಮತ್ತು ಶಿಲ್ಪಗಳು ಉಳಿದುಬಂದಿವೆ. ಶಾಸ್‌ಪುರ್ ಎಂಬಲ್ಲಿಯೂ ಕಚಾರಿ ದೊರೆಗಳ ಕಾಲದ ಮನೆಗಳು, ಸ್ನಾನಗೃಹ ಮುಂತಾದುವು ಕಂಡುಬಂದಿವೆ. ಇಲ್ಲಿನ ಬಾಗಿಲ ಬಳಿಯೊಂದರ ಶಾಸನ ಅದು ಮೇಘನಾರಾಯಣನ ಕಾಲದಲ್ಲಿ ಕಟ್ಟಲ್ಪಟ್ಟ ವಿಷಯವನ್ನು ತಿಳಿಸುತ್ತದೆ.

ಸಾದಿಯಾದಿಂದ 38 ಕಿಮೀ ದೂರದಲ್ಲಿ ಕೆತ್ತಿದ ಗ್ರಾನೈಟ್ ಬಂಡೆಗಳಿಂದ ಕಟ್ಟಿರುವ ಶಿಶುಪಾಲನ ಮತ್ತು ಭೀಷ್ಮಕನ ಕೋಟೆಗಳು ಬಹುಶಃ ಅಹೋಮ್ ದೊರೆಗಳ ಕಾಲದವು. ಕಾಲಬರಿ ಎಂಬಲ್ಲಿ 1758 ರಲ್ಲಿ ಕಟ್ಟಿದ ವಾಸುದೇವ ದೇವಾಲಯವೂ, 1790ರಲ್ಲಿ ಗೌರಿನಾಥಸಿಂಹನಿಂದ ಕಟ್ಟಲ್ಪಟ್ಟ ಬೋರ್ದೋಲದ ದೇವಾಲಯವೂ ಬಿಷ್‌ನಾತ್‌ನ ಶಿವದೇವಾಲಯವೂ ಅಹೋಮ್ ವಾಸ್ತುಶಿಲ್ಪಕ್ಕೆ ಒಳ್ಳೆಯ ಉದಾಹರಣೆಗಳು. ಕಾಲಬರಿ ದೇವಾಲಯದಲ್ಲಿ ಈ ಕಾಲದ ರಂಗುರಂಗಿನ ಹಾಸುಹೆಂಚುಗಳಿಂದ ನೆಲವನ್ನು ಅಲಂಕರಿಸಿದ್ದಾರೆ. ಕಾಮರೂಪ ಜಿಲ್ಲೆಯ ಹಾಜೋ ಎಂಬಲ್ಲಿ ಇರುವ ಹಯಗ್ರೀವ ಮತ್ತು ಕೇದಾರನಾಥ ದೇವಾಲಯಗಳು, ಘಿಯಾಸುದ್ದೀನನ ಗೋರಿ ಗಮನಾರ್ಹವಾದ ಕಟ್ಟಡಗಳು. ಸಾದಿಯಾದಲ್ಲಿ ಶೇರ್‌ಷಾನ ಶಾಸನವಿರುವ (1542) ಒಂದು ಫಿರಂಗಿ ಇದೆ.

ಅಸ್ಸಾಮಿನ ಶಾಸನಗಳ ಬಗ್ಗೆ ವ್ಯವಸ್ಥಿತ ಅಧ್ಯಯನವೇನೂ ನಡೆದಿಲ್ಲ. ಕಾಮರೂಪ ಜಿಲ್ಲೆಯ ಕಾಮಾಖ್ಯದ ಬಳಿಯ ನೀಲಾಚಲ ಬೆಟ್ಟದ ಮೇಲೆ ಸಿಕ್ಕಿರುವ ಪ್ರ.ಶ 5ನೆಯ ಶತಮಾನದ ಶಾಸನವೇ ಇದುವರೆಗೆ ತಿಳಿದಿರುವಲ್ಲಿ ಹಳೆಯದು. ಪುಷ್ಯವರ್ಮನ ವಂಶದ ಸುರೇಂದ್ರವರ್ಮನ ಈ ಶಾಸನ ಗುಪ್ತಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿದ್ದು, ನೀಲಾಚಲ ಬೆಟ್ಟದಲ್ಲಿ ಬಲಭದ್ರ ಸ್ವಾಮಿಗಾಗಿ ಒಂದು ಗುಹೆಯನ್ನು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಹರ್ಷವರ್ಧನನ ಸಮಕಾಲೀನನಾದ ಭಾಸ್ಕರಶರ್ಮನ ದೊಂಬಿ ತಾಮ್ರಶಾಸನ, (7ನೆಯ ಶತಮಾನ.) ಪ್ರಾಲಂಭನ ವಂಶದ ವನಮಾಲನ ತೇಜ್‌ಪುರ ತಾಮ್ರಶಾಸನ ಮತ್ತು ಬಲವರ್ಮನ ನೌಗಾಂಗ್ ತಾಮ್ರ ಶಾಸನ (10ನೆಯ ಶತಮಾನ) ಅಸ್ಸಾಮಿನ ಪಾಲವಂಶದ ರತ್ನಪಾಲನ ಬಾರ್ಗಾವ್ ಮತ್ತು ಸ್ವಲ್ಕಾಚಿ ತಾಮ್ರಶಾಸನಗಳು (11ನೆಯ ಶತಮಾನ) ಮತ್ತು ಅದೇ ವಂಶದ ಇಂದ್ರಪಾಲನ ಗೌಹತಿ ತಾಮ್ರ ಶಾಸನ (11ನೆಯ ಶತಮಾನ) ಚಾರಿತ್ರಿಕವಾಗಿ ಮುಖ್ಯವಾದ ಕೆಲವು ಶಾಸನಗಳು. ಇವೆಲ್ಲ ಭಾರತದ ಇತರೆಡೆಯ ಶಾಸನಗಳ ರೀತಿಯಲ್ಲಿಯೇ ಇದ್ದು, ಪೂರ್ವಗುಪ್ತಲಿಪಿಯಿಂದ ಬೆಳೆದು ಬಂದ ಬಂಗಾಲೀ ಅಸ್ಸಾಮಿ ಲಿಪಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿವೆ. 1737ರ ಎರಡನೆಯ ರಾಮಸಿಂಹನ ಶತಕ್ ತಾಮ್ರಶಾಸನ ಕಾಚಾರಿ ಅರಸರ ಕಾಲದ ಮುಖ್ಯ ಶಾಸನ. ಅಹೋಂ ದೊರೆಗಳು ಮೊದ ಮೊದಲು ಅಹೋಮ್ ಭಾಷೆ ಮತ್ತು ಲಿಪಿಯಲ್ಲಿಯೇ ತಮ್ಮ ತಾಮ್ರಶಾಸನಗಳನ್ನು ಬರೆಸುತ್ತಿದ್ದರು. ಅನಂತರ ಶಾಸನಗಳು ಅಸ್ಸಾಮಿ ಲಿಪಿಯಲ್ಲಿ ಬರೆಯಲ್ಪಟ್ಟಿವೆ. ಅವುಗಳ ಭಾಷೆ ಭಾಗಶಃ ಸಂಸ್ಕೃತ, ಭಾಗಶಃ ಅಸ್ಸಾಮಿ. 1732ರಲ್ಲಿ ಶಿವಸಿಂಹ ಮತ್ತು ಅವನ ಪತ್ನಿ ಅಂಬಿಕಾಳಿಂದ ಕೊಡಲ್ಪಟ್ಟ ತಾಮ್ರಶಾಸನ. 1775ರ ಲಕ್ಷ್ಮೀಸಿಂಹನ ಶಾಸನ ಮತ್ತು 1792ರ ಗೌರೀನಾಥಸಿಂಹನ ಶಾಸನಗಳು ಅಹೋಮರ ತಾಮ್ರಶಾಸನಗಳಲ್ಲಿ ಮುಖ್ಯವಾದವು. ಅವರ ಶಿಲಾಶಾಸನಗಳು ಸಾಮಾನ್ಯವಾಗಿ ಸಂಸ್ಕೃತ ಭಾಷೆಯಲ್ಲಿವೆ.

ಅಸ್ಸಾಮಿನಲ್ಲಿ ಸಿಕ್ಕಿರುವ ಹೆಚ್ಚು ನಾಣ್ಯಗಳೆಲ್ಲ ಅಹೋಮ್ ರಾಜರ ಕಾಲಕ್ಕೆ ಸೇರಿದುವು. ಮೊದಲ ಅಹೋಮ್ ನಾಣ್ಯಗಳ ಬರೆಹ ಅಹೋಮ್ ಲಿಪಿ ಮತ್ತು ಭಾಷೆಯಲ್ಲಿಯೇ ಇರುತ್ತಿದ್ದವು. ಅನಂತರದವುಗಳಲ್ಲಿ ಅಸ್ಸಾಮಿ, ಬಂಗಾಲಿ ಲಿಪಿಗಳಲ್ಲಿ ಸಂಸ್ಕೃತದ ಬರೆಹವಿರುತ್ತದೆ. ಅಹೋಮರ ನಾಣ್ಯಗಳೆಲ್ಲ ಸಾಮಾನ್ಯವಾಗಿ ಬೆಳ್ಳಿಯವು. ಚಿನ್ನವೂ ಸಹ ಅಪೂರ್ವವಾಗಿ ಉಪಯೋಗಿಸಲ್ಪಡುತ್ತಿತ್ತು. ಹೆಚ್ಚಿನ ನಾಣ್ಯಗಳು ಅಷ್ಟಭುಜಾಕೃತಿಯಲ್ಲಿದ್ದು, ಮುಂಭಾಗದಲ್ಲಿ ರಾಜದುಂಬಿಯ ಸ್ವರೂಪದಲ್ಲಿ ಶಿವನ ಅಥವಾ ಇತರ ಹಿಂದೂ ದೇವರ ಪಾದವನ್ನು ಚುಂಬಿಸುತ್ತಿರುವ ಚಿತ್ರವನ್ನು ಹೊಂದಿವೆ. ಇವುಗಳ ಮೇಲೆ ರಾಜನ ಹೆಸರು ಮತ್ತು ಶಕ ಗಣನೆಯಲ್ಲಿ ನಾಣ್ಯದ ಅಚ್ಚಿನ ವರ್ಷ ನಮೂದಿಸಲ್ಪಟ್ಟಿವೆ. ನಾಣ್ಯಗಳ ತೂಕ 4.2 ಗ್ರೇನ್‌ನಿಂದ 176.7 ಗ್ರೇನ್‌ವರೆಗೆ ವಿವಿಧಮಾನಗಳಲ್ಲಿ ದೊರೆಯುತ್ತವೆ. ವೃತ್ತಾಕಾರದ ನಾಣ್ಯಗಳೂ ಪ್ರಮಥೇಶ್ವರೀ ಮತ್ತು ರಾಜೇಶ್ವರಸಿಂಹನ ಪಾರಸಿ ಬರೆಹವುಳ್ಳ ಚೌಕನೆಯ ನಾಣ್ಯಗಳೂ ಕೆಲವು ಅಪೂರ್ವವಾದವು. ಈಚೆಗೆ ಕಚಾರಿ ಅರಸರ ಕೆಲವು ನಾಣ್ಯಗಳು ಬೆಳಕಿಗೆ ಬಂದಿವೆ.

(ಎಸ್.ಎಸ್.)

**ಅಸ್ಸಾಮಿಯಾ :** ಅಸ್ಸಾಮಿ ಭಾಷಾಪತ್ರಿಕೆಗಳಲ್ಲಿ ಪ್ರಭಾವವನ್ನು ಬೀರಿದ ವಾರಪತ್ರಿಕೆ. ದಿಬ್ರುಘರ್‌ನಲ್ಲಿ 1918ರಲ್ಲಿ ಸ್ಥಾಪಿತವಾಯಿತು. ವಾರಪತ್ರಿಕೆ ಸುಪ್ರಸಿದ್ಧ ಅಸ್ಸಾಮಿ ಕವಿಗಳಾದ ಚಂದ್ರಕುಮಾರ ಅಗರವಾಲಾ ಈ ವಾರಪತ್ರಿಕೆಯನ್ನು ಸ್ಥಾಪಿಸಿ ಅಭಿವೃದ್ಧಿಗೆ ತಂದರು. ಪತ್ರಿಕೆಗೆ ಅನೇಕ ವಿಶೇಷ ಲೇಖನಗಳನ್ನು ಬರೆದು, ಬರೆಯಿಸಿ ಅಸ್ಸಾಮಿ ಓದುಗರಲ್ಲಿ ಅಭಿರುಚಿಯನ್ನುಂಟುಮಾಡಿದರು. ಪತ್ರಿಕೆ ಕೆಲವು ಕಾಲಾನಂತರ ಗುವಾಹಟಿ ನಗರಕ್ಕೆ ಸ್ಥಳಾಂತರಗೊಂಡಿತು. ಅಲ್ಲಿಂದ ಅದರ ಪ್ರಸಾರ ಹೆಚ್ಚಿತು. ಪಾಕ್ಷಿಕಪತ್ರಿಕೆಯಾಗಿ, ದಿನಪತ್ರಿಕೆಯಾಗಿ, ಪುನಃ ವಾರಪತ್ರಿಕೆಯಾಗಿ ಜನಪ್ರಿಯವಾಗಿದ್ದು 1958ರಲ್ಲಿ ನಿಂತುಹೋಯಿತು. ಇದಕ್ಕೆ ಸುಪ್ರಸಿದ್ಧ ಸಾಹಿತಿಗಳೂ ಪತ್ರಿಕೋದ್ಯಮಿಗಳೂ ಆದ ದೇವಕಾಂತ ಬರುವಾ ಕೊನೆಯ ಕೆಲವು ವರ್ಷ ಸಂಪಾದಕರಾಗಿದ್ದರು. (ಎನ್.ಕೆ.)

**ಅಸ್ಸಾಮೀ ಭಾಷೆ :** ಪೀಠಿಕೆ : ಭವ್ಯ ಇತಿಹಾಸವನ್ನುಳ್ಳ ಭಾಷೆಗಳಲ್ಲೊಂದು. ಅಸ್ಸಾಮೀ ಎಂಬುದು ಅಸಮೀಯ ಎಂಬುದರ ಆಂಗ್ಲ ರೂಪ; ಆಕ್ಸಮಿಯ ಎಂಬುದು ಅಸಮೀಯ ಎಂಬುದರ ಉಚ್ಚಾರಣೆ. ಈ ಹೆಸರಿಂದಲೇ ಆ ಪ್ರಾಂತ್ಯದ ಜನರಲ್ಲಿ ಅದು ರೂಢಿಯಾಗಿದೆ. ಭಾರತದ ಸಂವಿಧಾನದಲ್ಲಿ ಅಧಿಕೃತವಾಗಿ ಅಂಗೀಕೃತವಾಗಿರುವ 22 ರಾಷ್ಟ್ರೀಯ ಭಾಷೆಗಳಲ್ಲಿ ಇದು ಕೂಡ ಒಂದಾಗಿದೆ. ಇದು ಅತ್ಯಂತ ಪೂರ್ವದಿಕ್ಕಿಗಿರುವ ಅಸ್ಸಾಂ ಪ್ರಾಂತ್ಯದಲ್ಲಿ, ಮುಖ್ಯವಾಗಿ ಪೂರ್ವದಿಕ್ಕಿಗೆ ಉತ್ತರ ಲಖಿಮ್‌ಪುರ್, ಪಶ್ಚಿಮ ದಿಕ್ಕಿಗೆ ಗೋಯಲ್‌ಪಾರ ಇವನ್ನೊಳಗೊಂಡ ವಿಸ್ತಾರವಾದ ಪ್ರದೇಶವನ್ನು ವ್ಯಾಪಿಸಿದ ಬ್ರಹ್ಮಪುತ್ರ ಕಣಿವೆಯ ಜಿಲ್ಲೆಗಳಲ್ಲಿ, ಇದು ಜನರ ಆಡುಮಾತಾಗಿದೆ. 13,0796,96 ಜನರ (1951) ಮಾತೃಭಾಷೆ. ಅಲ್ಲದೆ ಹೆಚ್ಚು ಸಂಖ್ಯೆಯ ಇತರ ಪ್ರಾಂತ್ಯವಾಸಿಗಳು ದ್ವಿತೀಯ ಭಾಷೆಯಾಗಿ ಇದನ್ನು ಮಾತನಾಡುತ್ತಾರೆ; ಅರ್ಥಮಾಡಿಕೊಳ್ಳುತ್ತಾರೆ.

ಅಸ್ಸಾಮಿಭಾಷೆ ಸುತ್ತಲೂ ಪ್ರಸಿದ್ಧವಾದ ಸಿನೋ ಟಿಬೆಟನ್ ಮತ್ತು ಥಾಯ್–ಕಡೆ ಭಾಷಾ ಪರಿವಾರದಿಂದ ಆವೃತವಾಗಿದ್ದು ನಡುವೆ ಆಸ್ಟ್ರಿಕ್ ಭಾಷೆಯಾದ ಖಾಸಿ ಭಾಷಿಕವಾಗಿ ಒಂದು ಸಣ್ಣ ದ್ವೀಪವನ್ನು ರಚಿಸಿಕೊಂಡಿದೆ. ಅದು ಮಾಗಧಿ ಪ್ರಾಕೃತ ಮತ್ತು ಅದರ ಅಪಭ್ರಂಶ ಉಪಭಾಷೆಗಳಿಂದ–ಭಾರತದ ಈಶಾನ್ಯ ದಿಕ್ಕಿನ ಎಲ್ಲ ಪ್ರಮುಖ ಆರ್ಯನ್ ಭಾಷೆಗಳಿಗೆ (ಎಂದರೆ, ಅಸ್ಸಾಮಿ, ಬಂಗಾಲಿ, ಒರಿಯ ಮತ್ತು ಬಿಹರಿ ಉಪಭಾಷೆಗಳು) ನಿಕಟತಮ ಮೂಲವಾಗಿದ್ದವುಗಳಿಂದ–ಉತ್ಪನ್ನವಾದ ಇಂಡೋ ಆರ್ಯನ್ ಭಾಷೆ. ಎಸ್.ಕೆ. ಚಟರ್ಜಿಯವರ ಪ್ರಕಾರ, ಮಾಗಧೀ ಪ್ರಾಕೃತ ರಾಢಾ, ವಂಗ, ವಾರೇಂದ್ರ, ಮತ್ತು ಕಾಮರೂಪ–ಎಂಬ ನಾಲ್ಕು ಅಪಭ್ರಂಶ ಉಪಭಾಷಾವರ್ಗಗಳಿಗೆ ಜನ್ಮ ಕೊಟ್ಟಿದೆ ಹಾಗೂ ಕಾಮರೂಪ ಉಪಭಾಷಾ ವರ್ಗದಿಂದ ಉತ್ತರ ಬಂಗಾಳದ ಮತ್ತು ಅಸ್ಸಾಮಿನ ಭಾಷೆ ರೂಪಗೊಂಡಿದೆಯೆಂಬದಾಗಿ ತಿಳಿಯುವುದು. ಪ್ರಾಚೀನ ಕಾಲದಲ್ಲಿ ಉತ್ತರ ಬಂಗಾಳ ಮತ್ತು ಅಸ್ಸಾಮಿನ ಭಾಷೆ ಏಕ ಉಪಭಾಷಾವರ್ಗವಾಗಿತ್ತು. ಈಗ ಉತ್ತರ ಬಂಗಾಲದಲ್ಲಿರುವ ಕೂಛ್‌ಬಿಹಾರಿನ ಕೂಛ ದೊರೆಗಳು ಅಸ್ಸಾಮಿ ಭಾಷೆ ಸಾಹಿತ್ಯಗಳನ್ನು ಪೋಷಿಸಿದರು. ವಾಸ್ತವವಾಗಿ ಅಸ್ಸಾಮಿ ಸಾಹಿತ್ಯ 15–16ನೆಯ ಶತಮಾನಗಳಲ್ಲಿ, ಮಹಾರಾಜ ನರನಾರಾಯಣ ಮತ್ತು ಚಿಲಾರಾಯರ ಆಶ್ರಯದಲ್ಲಿ, ತನ್ನ ಉಚ್ಛ್ರಾಯ ದೆಸೆಯನ್ನು ಮುಟ್ಟಿತು. ಕಳೆದ ಶತಮಾನದಲ್ಲಿ ಉತ್ತರ ಬಂಗಾಲದ ಭಾಷೆ ಅದರ ಪ್ರಬಲ ನೆರೆಭಾಷೆಯಾದ ಬಂಗಾಲಿಯಿಂದ ಬಲುಮಟ್ಟಿಗೆ ಪ್ರಭಾವಿತವಾಯಿತು. ಆ ಪ್ರದೇಶ ರಾಜಕೀಯವಾಗಿ ಬಂಗಾಲದೊಡನೆ ಬೆರೆತುಹೋದ ಮೇಲೆ ಬದಲಾವಣೆಯ ಕಾರ್ಯ ತ್ವರೆಗೊಂಡಿತು.

ಪ್ರಾಚೀನ ಉಲ್ಲೇಖಗಳು ಮತ್ತು ಉದಾಹರಣೆಗಳು : ಪ್ರಸಿದ್ಧ ಚೀನ ಯಾತ್ರಿಕನಾದ ಯುವಾನ್‌ಚಾಂಗ್ ಪ್ರ.ಶ. 643ರಲ್ಲಿ, ಕುಮಾರ ಭಾಸ್ಕರವರ್ಮನ ಆಡಳಿತಕಾಲದಲ್ಲಿ, ಇಂದಿನ ಅಸ್ಸಾಮಿಗೆ ಪ್ರಾಚೀನ ಕಾಲದ ಹೆಸರಾಗಿರುವ ಕಾಮರೂಪಕ್ಕೆ ಭೇಟಿ ಕೊಟ್ಟಿದ್ದ. ಆತ ಆ ನಾಡಿನ ಭಾಷೆ ಮಧ್ಯಭಾರತದ ಭಾಷೆಗಿಂತ ಸ್ವಲ್ಪಮಟ್ಟಿಗೆ ಬೇರೆಯೆಂಬುದಾಗಿ ಉಲ್ಲೇಖಿಸಿರುತ್ತಾರೆ. ಕಾಮರೂಪ ಪ್ರ.ಶ. 200ರಿಂದ ಪ್ರ.ಶ. 200ರ ಅವಧಿಯಲ್ಲಿ ಆರ್ಯೀಕೃತವಾಗಿತ್ತು. ಕುಮಾರ ಭಾಸ್ಕರವರ್ಮ ಸಂಸ್ಕೃತವಿದ್ಯೆ ಮತ್ತು ಸಂಸ್ಕೃತಿಗಳಿಗೆ ಪೋಷಣೆಯಿತ್ತ ಹಿಂದೂ ದೊರೆ. ಆದ್ದರಿಂದ, 7ನೆಯ ಶತಮಾನದ ಹೊತ್ತಿಗೆ ಬಂಗಾಲದವರೆಗೆ ವಿಸ್ತರಿಸಿದ್ದ ಕುಮಾರನ ರಾಜ್ಯ ಆರ್ಯಜನರಿಂದ ತುಂಬಿದ್ದುದಾಗಿರಬೇಕು ಮತ್ತು ಅವರು ತಮ್ಮ ಹೆಚ್ಚುಗಾರಿಕೆಯಿಂದಾಗಿ ಆರ್ಯನ್ ಭಾಷೆಯನ್ನು ಬೆಳೆಸಿರಬೇಕು ಎಂದು ಹೇಳಬಹುದು. ಚೀನ ಯಾತ್ರಿಕ ಮಧ್ಯಭಾರತದಲ್ಲಿರುವುದಕ್ಕಿಂತ ಸ್ವಲ್ಪಮಟ್ಟಿಗೆ ಬೇರೆಯಾದ–ಎಂಬುದಾಗಿ ಹೇಳಿರುವುದನ್ನು ನೋಡಿದರೆ ಆತ ಪೂರ್ವದ ಅಪಭ್ರಂಶ ಉಪಭಾಷೆಯ ಸ್ವತಂತ್ರವಾದ ಬೆಳವಣಿಗೆಯನ್ನು ಗಮನಿಸಿರಬೇಕು. ಇದೇ ಅಸ್ಸಾಮಿಯಾಗಿ ಮುಂದೆ ರೂಪುಗೊಂಡಿತು. ಅಸ್ಸಾಮಿ ಭಾಷೆ ದೇಶದ ಇತರ ಎಲ್ಲ ಸೋದರಿ ಭಾಷೆಗಳಿಂದ ತೀರ ಪ್ರತ್ಯೇಕವಾದ ವಿಶಿಷ್ಟ ರೂಪರಚನೆಗಳಿಂದ ಕಂಡು ಬರುವ ಹಾಗೆ ಧ್ವನ್ಯಾತ್ಮಕ ರೂಪಾತ್ಮಕ ಮತ್ತು ಪದಕೋಶಾತ್ಮಕ ಶಾಖೆಗಳೆಲ್ಲದರಲ್ಲೂ ಬೇಕಾದಷ್ಟು ಬದಲಾವಣೆಗಳನ್ನು ಅಂಗೀಕರಿಸಿದೆ. ಈ ಹೊಸ ಬದಲಾವಣೆ ಅಥವಾ ವೈಲಕ್ಷಣ್ಯಗಳು ಆರ್ಯ ಮತ್ತು ಆರ್ಯೇತರ ಭಾಷಾಜನ ಒಂದೇ ಒಕ್ಕೂಟದ ಒಂದೇ ಭಾಷಾಮಾಧ್ಯಮದ (ಎಂದರೆ ಅಸ್ಸಾಮಿ) ದೆಸೆಯಿಂದಾಗಿ ಬೆರೆತು ಹೋದುದರ ಫಲವೆನ್ನಬಹುದು. ಈ ಬೆಸುಗೆ ಬಹಳ ಹಿಂದೆಯೇ ಆಯಿತೆಂಬುದಕ್ಕೆ ಹುಯೆನ್‌ತ್ಸಾಂಗ್ ಈ ಭಾಷೆಯ ಬಗೆಗೆ ಆಡಿರುವ ಮಾತುಗಳು ಸಾಕ್ಷ್ಯವಾಗಿವೆ. ಆರ್ಯನ್ ಭಾಷೆ ಆರ್ಯೇತರ ಜನರ ಮೇಲೆ ಹೇರಲ್ಪಟ್ಟಿತು. ಅವರು ಅದನ್ನು ಅತಿ ಹಿಂದಿನ ಕಾಲದಿಂದಲೂ ಬಹುಭಾಷೀಯ ಪೂರ್ವಭಾರತವೆಲ್ಲಕ್ಕೂ ಒಂದು ರಾಷ್ಟ್ರಭಾಷೆಯಾಗಿ ಒಪ್ಪಿಕೊಂಡರು. ಅದಕ್ಕೆ ಅನುಗುಣವಾದ ಸಂಗತಿಗಳಿಂದಲೂ ವೈಶಿಷ್ಟ್ಯದಿಂದಲೂ ಅದನ್ನು ಹಾಗೆ ರೂಪಿಸಿದರು. ಅಹೋಮ್ ದೊರೆಗಳ ಮೂಲಕವಾಗಿ 15–16ನೆಯ ಶತಮಾನಗಳ ಅವಧಿಯಲ್ಲಿ ಗುಡ್ಡಗಾಡಿನ ಪ್ರದೇಶದಲ್ಲಿ ಬಹುಭಾಗವನ್ನು ವ್ಯಾಪಿಸಿದ್ದ ಅಹೋಮ್ ರಾಜ್ಯ ಒಗ್ಗಟ್ಟಿಗಾಗಿ ಅಸ್ಸಾಮಿಯನ್ನು ಪ್ರಾಂತ್ಯಭಾಷೆಯನ್ನಾಗಿ ಒಪ್ಪಿಕೊಂಡಿದ್ದು, ಷಾನ್ ವಿಜೇತರು 300 ವರ್ಷಗಳ ಕಾಲದ ಆಡಳಿತದ ಅನುಭವದಿಂದ ಇಂದಿನ ಹೆಸರಾದ ಅಸ್ಸಾಂ ಎಂಬುದನ್ನು ರಾಜ್ಯಕ್ಕೆ ಕೊಟ್ಟದ್ದು–ಮೇಲಿನ ಮಾತಿಗೆ ಪೋಷಕವಾದ ಪ್ರಬಲ ಆಧಾರವಾಗಿದೆ.

5ನೆಯ ಶತಮಾನದಿಂದೀಚೆಗೆ ಲಿಖಿತವಾಗಿರುವ ಪ್ರಾಚೀನ ಅಸ್ಸಾಂ ದೊರೆಗಳ ತಾಮ್ರ ಶಾಸನಗಳು ಸಂಸ್ಕೃತದಲ್ಲಿ ಬರೆಯಲಾಗಿದ್ದರೂ ಆ ಕಾಲದ ಅಸ್ಸಾಮೀ ಭಾಷೆಯ ಕೆಲವು ಧ್ವನ್ಯಾತ್ಮಕ ಲಕ್ಷಣಗಳ ಬಗೆಗೆ ಸ್ಪಷ್ಟವಾದ ಸೂಚನೆಗಳನ್ನು ಕೊಡುತ್ತವೆ. ಆ ಲಕ್ಷಣಗಳು ಇಂದಿನ ಭಾಷೆಯವರೆಗೆ ಉಳಿದುಕೊಂಡು ಬಂದಿವೆ. ಆ ತಾಮ್ರ ಶಾಸನಗಳಲ್ಲಿ ಲಿಪಿಕಾರರ ಅಕ್ಷರ ವಿನ್ಯಾಸದ (ಕಾಗುಣಿತದ) ತಪ್ಪುಗಳಿಗೆ ಆಡುಮಾತಿನ ಸ್ವರಮೈತ್ರಿ ಕಾರಣವಾಗಿ, ಅದು ಸಂಸ್ಕೃತ ಭಾಷೆಯನ್ನು ಕೂಡ ವಿಕೃತಗೊಳಿಸಿದೆ. ಈಗ ಸಂಸ್ಕೃತದ ಎಲ್ಲ ಊಷ್ಮಗಳನ್ನು ಕಂಠ್ಯಗಳಾಗಿ ಉಚ್ಚರಿಸುವುದಕ್ಕೆ ಶ–ಷ–ಸ ಗಳನ್ನು ತೋರಿದಂತೆ ಬರೆಯುವ ಅಕ್ಷರವಿನ್ಯಾಸ ಭ್ರಾಂತಿಯ ನಿದರ್ಶನವೇ ಸಾಕು. ಹೀಗೆಯೇ ಸಂಸ್ಕೃತ ದಂತ್ಯ ಮತ್ತು ಮೂರ್ಧನ್ಯ ಸ್ಪರ್ಶಗಳ ವರ್ತ್ಸ್ಯಕರಣ ಮತ್ತು ತಾಲವ್ಯ ಮತ್ತು ಅನುಘರ್ಷಶ್ರೇಣಿಗಳ ವರ್ತ್ಸ್ಯಕರಣ ಮತ್ತು ಊಷ್ಮೀಕರಣ–ಇವುಗಳ ವಿಚಾರದಲ್ಲೂ ಇದು ಕಂಡುಬರುತ್ತದೆ.

ಇದು ಏನೇ ಇರಲಿ, ಅಸ್ಸಾಮಿಯ ಪ್ರಾಚೀನತಮ ಉದಾಹರಣೆ ಚಾರ್ಯ ಎನ್ನುವ ಹೆಸರಿಂದ ಸುಪರಿಚಿತರಾಗಿರುವ ಬೌದ್ಧಮತೀಯ ಸಿದ್ಧಾಚಾರ್ಯರು ರಚಿಸಿರುವಂಥ ಅನುಭಾವೀ ದೋಹಾಗಳನ್ನು ಮೊದಲು ಕಂಡುಹಿಡಿದು ನೇಪಾಲದಿಂದ ಭಾರತಕ್ಕೆ ತಂದವರು ಮಹಾಮಹೋಪಧ್ಯಾಯ ಹರಪ್ರಸಾದ ಶಾಸ್ತ್ರಿಗಳು. ಇವನ್ನು ರಚಿಸಿದವರು ಪೂರ್ವಭಾರತದ ಬೇರೆ ಬೇರೆ ಭಾಗಗಳಿಗೆ ಸೇರಿದ 84 ಜನ ಸಿದ್ಧರು. ಇವರಲ್ಲಿ ಕೆಲವರು ಕಾಮರೂಪಕ್ಕೆ ಸೇರಿದವರೆಂಬುದಾಗಿ ಜಿ. ತುಚ್ಚಿ ಮೊದಲಾದ ತಜ್ಞರು ನಿಶ್ಚಿತವಾಗಿ ಗುರುತಿಸಿದ್ದಾರೆ. ಪಿ. ಸಿ. ಬಾಗ್ಚಿಯವರ ಪ್ರಕಾರ ಈ ದೋಹಾಗಳು 8 ರಿಂದ 10ನೆಯ ಶತಮಾನದ ನಡುವೆ ರಚಿತವಾದವು.

ದೋಹಾಗಳ ಭಾಷೆ ಈಚಿನ ಅಪಭ್ರಂಶ. ಆದ್ದರಿಂದ ನವೀನ ಇಂಡೋ–ಆರ್ಯನ್ ಭಾಷೆಗಳ ಬೆಳವಣಿಗೆಯ ಕಾಲವನ್ನು ಅದು ತೋರಿಸುತ್ತದೆ. ಅಲ್ಲಿಯ ಕೆಲವು ಧ್ವನ್ಯಾತ್ಮಕ ಮತ್ತು ರೂಪಾತ್ಮಕ ಲಕ್ಷಣಗಳು ಒಂದು ಮಾದರಿಯ ಅಸ್ಸಾಮಿ ಭಾಷೆಯವೆಂದೇ ಗುರುತಿಸಲ್ಪಟ್ಟಿವೆ. ಅವು ಶತಮಾನಗಳ ಕಾಲ ಸಾಗಿ ಇಂದಿನ ಜನಭಾಷೆಯವರೆಗೆ ಉಳಿದುಕೊಂಡು ಬಂದಿವೆ. ಕೆಲವು ನುಡಿಗಟ್ಟನಂಥ ಮಾತುಗಳು ಅಸ್ಸಾಮೀಯರಲ್ಲಿ ಇಂದಿಗೂ ತುಂಬಾ ಬಳಕೆಯವಾಗಿವೆ. ಭಾಷಿಕವಾದ ಲಕ್ಷಣಗಳಿರಲಿ, ದೋಹಾ ಎಂಬ ಸಾಹಿತ್ಯ ಪ್ರಕಾರ ಕೂಡ, ಆರಂಭ ಕಾಲದ ವೈಷ್ಣವ ಕವಿಗಳ ರಚನೆಯಾದ ಬಾರ್‌ಗೀತ್ ಎಂಬ ದಿವ್ಯಗೀತೆಗೆ ಪೂರ್ವಭಾವಿರೂಪವೇ ಆಗಿದೆ.

ಆದರೆ ನಿಶ್ಚಿತವಾಗಿ ಅಸ್ಸಾಮಿ ಭಾಷೆಯದೆಂದು ಹೇಳಬಹುದಾದ ಪ್ರಾಚೀನತಮ ಸಾಹಿತ್ಯ ಕೃತಿಯೆಂದರೆ, 13ನೆಯ ಶತಮಾನದ ಉತ್ತರಾರ್ಧದಲ್ಲಿ ರಚಿತವಾದ ಹೇಮಾ ಸರಸ್ವತಿಯ ಪ್ರಹ್ಲಾದ ಚರಿತ. ಈ ಲಘುಕಾವ್ಯದ ಭಾಷೆ ಇನ್ನೂ ಅದರ ಅಪಭ್ರಂಶ ಮಾತೆಯ ಪೋಷಣೆಯಲ್ಲೇ ಬೆಳೆದು ಬಂದಿರುವ ಹಾಗೆ ತೋರುತ್ತದೆ. 14ನೆಯ ಶತಮಾನದಿಂದೀಚೆಗೆ ಆಧುನಿಕ ಕಾಲದವರೆಗೆ ಅಸ್ಸಾಮಿ ಸಾಹಿತ್ಯ ನಿರಂತರವಾಗಿ ಹರಿದುಕೊಂಡು ಬಂದಿದೆ. ಗದ್ಯರಚನೆ 16ನೆಯ ಶತಮಾನದಲ್ಲಿ ಪ್ರಸಿದ್ಧ ವೈಷ್ಣವಸುಧಾರಕನಾದ ಶ್ರೀ ಶಂಕರದೇವನ ಏಕಾಂಕ ನಾಟಕಗಳಲ್ಲಿ ಮೊದಲ ಬಾರಿಗೆ ಬಳಕೆಗೆ ಬಂತು. ಅದರ ಮುಂದಿನ ಶತಮಾನದಲ್ಲಿ ವೈಕುಂಠನಾಥ ಭಟ್ಟಾಚಾರ್ಯ ಕವಿರತ್ನನ ಕೈಯಲ್ಲಿ, ಆತನ ಉತ್ಕೃಷ್ಟ ಗದ್ಯಶೈಲಿಯ ಸಮಗ್ರ ಭಾಗವತ ಪುರಾಣಾನುವಾದ ಮತ್ತು ಗೀತಾನುವಾದಗಳಲ್ಲಿ ಅದು ಅಭಿವೃದ್ಧಿಗೆ ಬಂತು. 17ನೆಯ ಶತಮಾನದಲ್ಲಿದ್ದ ವೈಷ್ಣವಗುರುಗಳ ಗದ್ಯಾತ್ಮಕ ಜೀವನ ಚರಿತ್ರೆಯಾಗಿರುವ ಕಥಾ ಗುರುಚರಿತ ಮತ್ತು ಬುರಂಜಿಗಳೆಂಬ ಹೆಸರಿನಿಂದ ಹೆಚ್ಚು ಪರಿಚಿತವಾಗಿರುವ ಚಾರಿತ್ರಿಕ ರಚನೆಗಳು ಪ್ರಾಚೀನ ಅಸ್ಸಾಮೀ ಗದ್ಯಕೃತಿಗಳ ಹೆಮ್ಮೆಯ ಭಂಡಾರಕ್ಕೆ ನಿದರ್ಶನಗಳಾಗಿವೆ.

ಉಪಭಾಷೆಗಳು ಮತ್ತು ಉಪಭಾಷಾ ವಿಭೇದಗಳು : ಅಸ್ಸಾಮಿನ ಭಾಷಿಕನಕ್ಷೆಯಲ್ಲಿ ಉಪಭಾಷಿಕವಾಗಿ ಎರಡು ವಿಭಾಗಗಳನ್ನು ಗುರುತಿಸಬಹುದು. ಒಂದು, ನೌಗಾಂಗ್ ಜಿಲ್ಲೆಯ ತನಕ ಪೂರ್ವ ದಿಕ್ಕಿನ ಜಿಲ್ಲೆಗಳನ್ನೆಲ್ಲ ವ್ಯಾಪಿಸಿದ ಪೂರ್ವ ಅಸ್ಸಾಮಿ, ಇನ್ನೊಂದು ನೌಗಾಂಗಿನ ಪಶ್ಚಿಮಾರ್ಧದಿಂದ ಆರಂಭವಾಗಿ ಗೋಯಲ್‌ಪುರ ಜಿಲ್ಲೆಯತನಕ ವ್ಯಾಪಿಸಿರುವ

ಪಶ್ಚಿಮ ಅಸ್ಸಾಮಿ. ತನ್ನ ಪ್ರದೇಶದಲ್ಲಿ ಹೆಚ್ಚಿನ ಏಕರೂಪತೆಯನ್ನು ಹೊಂದಿರುವ ಪೂರ್ವ ಅಸ್ಸಾಮಿ ಶಿಷ್ಟಭಾಷೆಯಾಗಿ ಪರಿಗಣಿತವಾಗಿದೆ; ಆಧುನಿಕ ಸಾಹಿತ್ಯದ ಮಾಧ್ಯಮವಾಗಿದೆ.

ಪಶ್ಚಿಮ ಅಸ್ಸಾಮಿನ ಇನ್ನೂ ಹಲವು ಉಪಭಾಷೆಗಳಾಗಿ ವಿಭಜನೆಗೊಂಡಿದೆ; ಬ್ರಹ್ಮಪುತ್ರಾ ನದಿಯ ದಕ್ಷಿಣ ದಡದ ಜನ ಆಡುವ ಉಪಭಾಷೆಯಾದ ದಕ್ಷಿಣ ಕಾಮರೂಪಿ ಕೆಲಮಟ್ಟಿಗೆ ಏಕರೂಪತೆಯನ್ನುಳ್ಳದ್ದಾಗಿದೆ. ಆದರೆ ಉತ್ತರ ಕಾಮರೂಪಿ ಎರಡು ಉಪವಿಭಾಗಗಳಿಂದ ಕೂಡಿದ್ದಾಗಿದೆ. ಒಂದು ಪೂರ್ವ ಕಾಮರೂಪಿ ಉಪಭಾಷೆ, ಇನ್ನೊಂದು ಪಶ್ಚಿಮ ಕಾಮರೂಪಿ ಉಪಭಾಷೆ. ಮೊದಲನೆಯದು ಸಮಗ್ರ ಈಶಾನ್ಯ ಕಾಮರೂಪ ಮತ್ತು ದರ್‍ರಾಂಗ್ ನೌಗಾಂಗ್ ಜಿಲ್ಲೆಗಳ ಪಶ್ಚಿಮದ ಸೆರಗು–ಇವುಗಳ ಉಪಭಾಷೆಯನ್ನು ಒಳಗೊಳ್ಳುತ್ತದೆ. ಎರಡನೆಯದು, ಬರ್‌ಪೇಟ ಕೇಂದ್ರವಾಗಿರುವ ವಾಯುವ್ಯ ಕಾಮರೂಪದ ಉಪಭಾಷೆ.

ಇದೇ ರೀತಿಯಲ್ಲಿ, ಅತ್ಯಂತ ಪಶ್ಚಿಮಕ್ಕಿರುವ ಗೋಯಲ್‌ಪಾರ ಜಿಲ್ಲೆಯ ಉಪಭಾಷೆ ಕೂಡ ಏಕರೂಪವಾಗಿಲ್ಲ. ಆ ಜಿಲ್ಲೆಯ ಪೂರ್ವಭಾಗಗಳಲ್ಲಿರುವ ಉಪಭಾಷೆ ಕಾಮರೂಪಿ ಯೊಡನೆ ಸ್ವಲ್ಪಮಟ್ಟಿಗೆ ಸಂಬಂಧವನ್ನು ತೋರುತ್ತದೆ. ಆದರೆ ಪಶ್ಚಿಮ ಗೋಯಲ್‌ಪಾರದ ಉಪಭಾಷೆಗಳು ತಮ್ಮ ಸುತ್ತುಮುತ್ತಿನ ಬಂಗಾಳಿ ರಾಜ್‌ಬಂಶೀ ಮತ್ತು ಗಾರೋ ಉಪಭಾಷೆಗಳ ಪ್ರಭಾವಕ್ಕೆ ಒಳಗಾಗಿರುವುದರಿಂದ ಬಲುಮಟ್ಟಿಗೆ ಬೇರೆಯಾಗಿ ತೋರುತ್ತವೆ.

ಪ್ರಾಚೀನ ಅಸ್ಸಾಮಿಯಲ್ಲಿ ಇಡೀ ಪ್ರಾಂತ್ಯದಲ್ಲಿ ಒಂದೇ ಒಂದು ಉಪಭಾಷೆ–ಪಶ್ಚಿಮ ಅಸ್ಸಾಮಿ ಉಪಭಾಷೆ–ಪ್ರಚಲಿತವಾಗಿದ್ದಂತೆ ತೋರುತ್ತದೆ. ಸಮಗ್ರ ಪ್ರಾಚೀನ ಸಾಹಿತ್ಯ, ಪದ್ಯಾತ್ಮಕವಾಗಿರಲಿ, ಗದ್ಯಾತ್ಮಕವಾಗಿರಲಿ, ವೈಷ್ಣವ ಕವಿಗಳ ರಚನೆಗಳಾಗಿರಲಿ, ಚಾರಿತ್ರಿಕ ರಚನೆಗಳಾಗಿರಲಿ, ಅವೆಲ್ಲ ಈ ಉಪಭಾಷೆಯಲ್ಲೇ ಇವೆ.

ಇಂದಿನ ಶಿಷ್ಟಸಾಹಿತ್ಯಕ ಭಾಷೆ 19ನೆಯ ಶತಮಾನದ ಮಧ್ಯ ಭಾಗದಲ್ಲಿ ವಿಕಾಸಗೊಂಡಿತೆಂದು ಹೇಳಬಹುದು. ಇದು ಆದದ್ದು ಅಮೆರಿಕದ ಬ್ಯಾಪ್ಟಿಸ್ಟ್ ಮಿಷನ್. ಪ್ರಥಮವಾಗಿ ಮುದ್ರಣಾಲಯವನ್ನು ಸ್ಥಾಪಿಸಿದುದು (1836), ಪತ್ರಿಕೆಯೊಂದನ್ನು ಪ್ರಕಟಿಸಲು ಆರಂಭಿಸಿದುದು (1846), ಎರಡನೆಯ ಅಸ್ಸಾಮಿ ವ್ಯಾಕರಣವನ್ನು ಮತ್ತು ಮೊದಲನೆಯ ಅಸ್ಸಾಮಿ ನಿಘಂಟನ್ನು ಮುದ್ರಿಸಿದದ್ದು (1846 ಮತ್ತು 1867), ಹೊಸ ಅಸ್ಸಾಮಿ ಸಾಹಿತ್ಯ ಸೃಷ್ಟಿಗೆ ಪ್ರೋತ್ಸಾಹಕ ವಾತಾವರಣವನ್ನು ನಿರ್ಮಿಸಿದುದು–ಈ ಪ್ರಯತ್ನಗಳಿಂದ. ಇವನ್ನೆಲ್ಲಾ ಅವರು ಪೂರ್ವ ಅಸ್ಸಾಮ್‌ನಲ್ಲಿ, ಅಸ್ಸಾಮ್ ಪ್ರಾಂತ್ಯದಲ್ಲಿಯ ತಮ್ಮ ಚಟುವಟಿಕೆಗಳಿಗೆ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡ ಶಿಬಸಾಗರ್ ಜಿಲ್ಲೆಯ ಉಪಭಾಷೆಯಲ್ಲಿ ಮಾಡಿದರು. ಹೀಗೆ ಅವರು ಅಸ್ಸಾಮ್‌ನಲ್ಲಿ ಈಗ ಶಿಷ್ಟರೂಪವಾಗಿ ಅಂಗಿಕೃತವಾಗಿರುವ ಆಧುನಿಕ ಅಸ್ಸಾಮೀ ಸಾಹಿತ್ಯಿಕ ಭಾಷೆಗೆ ಅಡಿಪಾಯ ಹಾಕಿದರು.

ಜನರಲ್ಲಿ ವಿದ್ಯಾಭ್ಯಾಸದ ವ್ಯಾಪಕತೆ, ಪಶ್ಚಿಮ ಅಸ್ಸಾಂ ಜಿಲ್ಲೆಗಳಲ್ಲಿ ವಿದ್ಯಾವಂತ ಜನರ ಸಂಖ್ಯೆ ಬೆಳೆದದ್ದು–ಇವು ಕಾರಣವಾಗಿ ಪಶ್ಚಿಮ ಅಸ್ಸಾಮೀ ರೂಪಗಳು ಕೂಡ ಶಿಷ್ಟಸಾಹಿತ್ಯಕ ಶೈಲಿಯಲ್ಲಿ ನುಸುಳಿಕೊಂಡು ಬಂದಿವೆ. ಆದ್ದರಿಂದ ಅಸ್ಸಾಮೀಯ ಅಧಿಕೃತ ವ್ಯಾಕರಣಗಳಲ್ಲಿ ಜೊತೆಜೊತೆಗೆ ಎರಡೂ ಉಪಭಾಷೆಗಳನ್ನು ತೋರಿಸಿದೆ.

ಪ್ರಮುಖ ಉಪಭಾಷಾವರ್ಗಗಳಾದ ಪೂರ್ವ ಮತ್ತು ಪಶ್ಚಿಮ ಅಸ್ಸಾಮಿಗಳೆರಡೂ ಬಲುಮಟ್ಟಿಗೆ ಧ್ವನ್ಯಾತ್ಮಕ ರೂಪಾತ್ಮಕ ಮತ್ತು ಪದಕೋಶಾತ್ಮಕ–ಈ ಎಲ್ಲ ಕ್ಷೇತ್ರಗಳಲ್ಲೂ ಖಚಿತವಾದ ವಿಭಿನ್ನತೆಯನ್ನು ತೋರಿಸುತ್ತವೆ. ಪರಿಣಾಮವಾಗಿ ಎರಡು ಭಾಷಾವರ್ಗಗಳ ಜನ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದೇ ಕಷ್ಟ. ಆದರೆ ಪಶ್ಚಿಮ ಅಸ್ಸಾಮಿನ ಉಪಭಾಷೆಗಳಲ್ಲಿಯ ವಿಭಿನ್ನತೆ ಮುಖ್ಯವಾಗಿ ಧ್ವನಿಮಾ ಶಾಸ್ತ್ರ(ನಿರ್ದಿಷ್ಟವಾಗಿ ಹೇಳುವುದಾದರೆ ಸ್ವರಲಹರಿ) ಮತ್ತು ವಿರಳವಾಗಿ ಪದಕೋಶ ಇವುಗಳಿಗೆ ಸಂಬಂಧಪಟ್ಟಿರುತ್ತದೆ.

ಧ್ವನ್ಯಾತ್ಮಕ : (1) ಪೂರ್ವ ಅಸ್ಸಾಮಿಯಲ್ಲಿ ಮಧ್ಯ ಬಲಾಘಾತವಿರುತ್ತಿದ್ದರೆ, ಪಶ್ಚಿಮ ಅಸ್ಸಾಮೀಯಲ್ಲಿ ಪ್ರಬಲವಾದ ಆದ್ಯ ಬಲಾಘಾತ ಇರುತ್ತದೆ. ಇದರ ಪರಿಣಾಮವಾಗಿ ಎರಡನೆಯದರಲ್ಲಿ ಪದಗಳು ವಿರೂಪಗೊಳ್ಳುತ್ತವೆ. (ಅ) ಬಲಾಘಾತಯುಕ್ತ ವರ್ಣದ ಪರದಲ್ಲಿ ಬರುವ ಸ್ವರ ಹೋಗಿ ವ್ಯಂಜನಗುಚ್ಛಗಳು ರೂಪುಗೊಳ್ಳುತ್ತವೆ. ಉದಾ : ನೀನು (ಮರ್ಯಾದಾಪುರ) ಮಾಡುವೆ–ಕರಿಬ → ಕ್ರಬ; ಕುಂಬಳ–ಕೊಮೊರ→ಕುಮ್ರ, ಇತ್ಯಾದಿ; ಅಥವಾ ಸಂಯುಕ್ತ ಸ್ವರಗಳೊ ತ್ರಿಸಂಯುಕ್ತ ಸ್ವರಗಳೊ ಆಗಿ ಉಳಿದುಕೊಳ್ಳುತ್ತವೆ. ಉದಾ : ಉಳುವವನು–ಹಲೋವ→ಹೌಲ; ಒಂದು ಅಂಕಿತನಾಮ–ರತಿಯ →ರೈತ; ಸಾಧು–ಕೆವಲಿಯ→ಕೆಉಇ→, ಇತ್ಯಾದಿ. (ಆ) ಅಂತ್ಯ ಸಂಯುಕ್ತ ಸ್ವರಗಳು ಮೂಲಸ್ವರಗಳಾಗುತ್ತವೆ. ಉದಾ : ರಾಣಿ–ಮದೈ→ಮದೆ; ಬೇಡಿಕೆ–ಕಬೌ→ಕಬೆ, ಇತ್ಯಾದಿ.

(2) ಪೂರ್ವ ಅಸ್ಸಾಮಿಯಲ್ಲಿರುವ ಉಚ್ಚತರ ಮಧ್ಯಸ್ವರಗಳಿಗೆ ಪ್ರತಿಯಾಗಿ ಪಶ್ಚಿಮ ಅಸ್ಸಾಮಿಯಲ್ಲಿ ಉಚ್ಚಸ್ವರಗಳೇ ವಿಶೇಷ. ಹಾಗೆಯೇ ಅಲ್ಲಿಯ ನಿಮ್ನತರ–ಮಧ್ಯಸ್ವರಗಳಿಗೆ ಪ್ರತಿಯಾಗಿ ಇಲ್ಲಿ ನಿಮ್ನ ಸ್ವರಗಳಿರುತ್ತವೆ. ಉದಾ : ಬಟ್ಟೆ–ಕಪೊರ್‌ಲಕಪುರ್; ಬೆಲೆ–ಮೊಲ್→ಮುಲ್; ನಿಂಬೆ –ನೆಮು→ನಿಮು; ಅವನು ಮಾಡಿದ್ದಾನೆ–ಕರಿಸೆ →ಕರಿಸಿ.

(3) ಪೂರ್ವ ಅಸ್ಸಾಮಿಯ ನಿಮ್ನತರ–ಮಧ್ಯಾಗ್ರ /ε/ ದ ಸ್ಥಾನದಲ್ಲಿ ಪಶ್ಚಿಮ ಅಸ್ಸಾಮಿಯಲ್ಲಿ ಉಚ್ಚತರ ನಿಮ್ನಾಗ್ರ /χ/ ( ಇಂಗ್ಲೀಷಿನ ' ಬ್ಯಾಂಕ್' ನಲ್ಲಿರುವಂತೆ) ಬರುತ್ತದೆ.

(4) ಪೂರ್ವ ಅಸ್ಸಾಮಿ ಮಹಾಪ್ರಾಣಗಳನ್ನು ತೇಲಿಸುವುದರ ಕಡೆಗೆ ಒಲಿದರೆ, ಪಶ್ಚಿಮ ಅಸ್ಸಾಮಿ ಉಪಭಾಷೆಗಳಲ್ಲಿ ಮಹಾಪ್ರಾಣಗಳೇ ಅತಿ ಪ್ರಬಲ. ಅಕ್ಕ ಪಕ್ಕದ ವರ್ಣಗಳೊಡನೆ ಎರಡು ಮಹಾಪ್ರಾಣ ಸ್ಪರ್ಶಗಳು ಬರುವುದು ಪೂರ್ವ ಅಸ್ಸಾಮಿಯಲ್ಲಿ ತೀರ ವಿರಳ (ಇದುವರೆಗೆ ಅಂಥ ಒಂದೇ ಒಂದು ತದ್ಭವ ಶಬ್ದವನ್ನು ಗುರುತಿಸಲು ಸಾಧ್ಯವಾಗಿದೆ). ಆದರೆ ಪಶ್ಚಿಮ ಅಸ್ಸಾಮಿಯಲ್ಲಿ ಅದು ತೀರ ಸಾಮಾನ್ಯ. ಉದಾ : ನೀರಿನ ಮಡಕೆ–ಘಗರಿ →ಘಘ್ರಿ ; ಟೊಳ್ಳು–ಫೊಪೊಲ → ಫಫ್ಲ.

(5) ಎರಡೂ ಉಪಭಾಷಾವರ್ಗಗಳ ಸ್ವರಲಹರಿಯ ವಿನ್ಯಾಸಗಳು ಬೇರೆಬೇರೆ.

(6) ಪೂರ್ವದ ಉಪಭಾಷೆಯ ಮಾತಿನ ವೇಗ ನಿಧಾನವಾದದ್ದು, ಪಶ್ಚಿಮದ ಉಪಭಾಷೆಗಳದು ತೀವ್ರ ಮತ್ತು ರಭಸವಾದದ್ದು.

ಆಕೃತಿಮಾತ್ಮಕ : (1) ನಾಮವಾಚಕಗಳ ವಿಭಕ್ತಿರೂಪದಲ್ಲಿ ದ್ವಿತೀಯ ಮತ್ತು ಚತುರ್ಥಿ ವಿಭಕ್ತಿಗಳು ಪಶ್ಚಿಮ ಅಸ್ಸಾಮಿಯಲ್ಲಿ ಒಂದಾಗಿರುತ್ತವೆ.

(2) ಕಾಲ ಮತ್ತು ಸ್ಥಾನಗಳ ಸರ್ವನಾಮ ಸಾಧಿತಗಳು ಎರಡು ಭಾಷಾವರ್ಗಗಳಲ್ಲೂ ಬೇರೆ ಬೇರೆಯೇ ಆಗಿವೆ. ಉದಾ : ಪೂರ್ವ ಅಸ್ಸಾಮಿ ಎಲ್ಲಿ–ಕತ್, ಎಲ್ಲಿ (ಸಂಬಂಧಸೂಚಕ)–ಜ಼ತ್, ಅಲ್ಲಿ–ತತ್; ಇಲ್ಲಿ–ಅತ್. ಇವುಗಳಿಗೆ ಪಶ್ಚಿಮ ಅಸ್ಸಾಮಿಯಲ್ಲಿ ಕ್ರಮವಾಗಿ ಕಹೇಂ~ಕಹಾಂಯ್, ಜ಼ಹೇಂ~ಜಹಾಂಯ್ ಇತ್ಯಾದಿ ಮಾತುಗಳಿವೆ.

(3) ಬಹುವಚನ ಅಕೃತಿಮಾಗಳು ಕೂಡ ಬೇರೆ ಬೇರೆಯೇ. ಉದಾ: ಪೂರ್ವ ಅಸ್ಸಾಮಿಯ– ಬೊರ್, –ಬಿಲಕ್ ಎಂಬುವುಗಳಿಗೆ ಪಶ್ಚಿಮ ಅಸ್ಸಾಮೀಯ ಉಪಭಾಷಾ ವರ್ಗ–ಗಿಲ, –ಗಿಲನ್, –ಗಿಲಕ್ ಇತ್ಯಾದಿಗಳನ್ನು ಬಳಸುತ್ತದೆ.

(4) ಕ್ರಿಯಾಪದಗಳ ಕ್ರಿಯಾರೂಪದಲ್ಲಿ ವರ್ತಮಾನಕಾಲಕ್ಕೆ ಮಧ್ಯಮ ಪುರುಷ ಸಾಮಾನ್ಯದ ಅಂತ್ಯ ಪ್ರತ್ಯಯ ಪೂರ್ವ ಅಸ್ಸಾಮಿಯಲ್ಲಿ –ಅ ಮತ್ತು ಪಶ್ಚಿಮ ಅಸ್ಸಾಮಿಯಲ್ಲಿ –ಅಹ್. ಉದಾ : ನೀನು (ಸಾಮಾನ್ಯ) ತಿನ್ನುತ್ತಿದ್ದೀಯೆ–ತಯ್‌ಖಇಸ → ತಂಯ್ ಖಇಹಸ್, ಇತ್ಯಾದಿ. ಭೂತಕಾಲಕ್ಕೆ ಪ್ರಥಮಪುರುಷದ ಅಂತ್ಯಪ್ರತ್ಯಯ ಪೂರ್ವ ಅಸ್ಸಾಮಿಯಲ್ಲಿ –ಎ ಮತ್ತು ಪಶ್ಚಿಮ ಅಸ್ಸಾಮಿಯಲ್ಲಿ –ಅ ಅಥವಾ ಅಕ್ ಉದಾ : ಅವನು ಮಾಡಿದನು–ಕರಿಲೆ→ಕರಿಲ ಅಥವಾ ಕರಿಲಕ್ ಅಥವಾ ಕಲ್ಲಕ್ ಇತ್ಯಾದಿ.

(5) ಕ್ರಿಯಾರ್ಥಕ ಪರಸರ್ಗಗಳು ಕೂಡ ಎರಡು ಭಾಷಾವರ್ಗಗಳಿಗೂ ಬೇರೆ ಬೇರೆಯೇ.

ಪದಕೋಶ : ಎರಡು ಭಾಷಾವರ್ಗಗಳ ಉಪಭಾಷೆಗಳೂ ಸಮಗ್ರ ನಾಮಪದಗಳ ರಾಶಿಯಲ್ಲಿ ಶೇಕಡ ಸ್ವಲ್ಪಭಾಗ ಹೊರತಾಗಿ, ಸಮಾನ ಸಂದರ್ಭಗಳಲ್ಲಿ ತೀರ ವಿಭಿನ್ನವಾದ ಪದಗಳನ್ನು ಬಳಸುತ್ತವೆ. ನಿದರ್ಶನಾರ್ಥವಾಗಿ ಕೆಲವು ಉದಾಹರಣೆಗಳನ್ನು ಹೇಳಬಹುದಾದರೆ, ಪೂರ್ವ ಅಸ್ಸಾಮಿಯ ಬಾವಿ – ಕುವ, ಟವೆಲ್ –ಗಮೊಸ, ಬಾರುಕೋಲು –ಅಸರಿ, ತಂಬಾಕು –ಧಪತ್ ಇವುಗಳಿಗೆ ಪಶ್ಚಿಮ ಅಸ್ಸಾಮಿಯಲ್ಲಿ ಕ್ರಮವಾಗಿ ಲಹಣ್ಣ, ಪಲಿ, ಲರು, ತಜ್ಜು ಎಂಬ ಶಬ್ಧಗಳು ಕಂಡುಬರುತ್ತವೆ.

ಅಸ್ಸಾಮಿಭಾಷೆಯ ಸಂಕ್ಷಿಪ್ತ ರಚನಾತ್ಮಕ ನಕ್ಷೆ : ಧ್ವನಿಮಾವಿಜ್ಞಾನ : ಅಸ್ಸಾಮಿಯ ಧ್ವನಿಮಾಗಳಲ್ಲಿ 23 ವ್ಯಂಜನಗಳು ಮತ್ತು 8 ಸ್ವರಗಳು ಇವೆ.

ವ್ಯಂಜನಗಳು

| | | ದ್ವಯೋಷ್ಠ್ಯ | ವರ್ತ್ಸ್ಯ | ತಾಲವ್ಯ | | ಕಂಠ್ಯಕಾಕಲ್ಯ | | |
|---|---|---|---|---|---|---|---|---|
| ಸ್ಪರ್ಶಗಳು | ಅಲ್ಪಪ್ರಾಣ | ಪ್ | ಬ್ | ತ್ | ದ್ | ಕ್ | ಗ್ | |
| | ಮಹಾಪ್ರಾಣ | ಫ್ | ಭ್ | ಥ್ | ಧ್ | ಖ್ | ಘ್ | |
| ಘರ್ಷಗಳು | | | | ಸ್ | ಜ಼್ | x | | ಹ್ |
| ಅನುನಾಸಿಕಗಳು | | | ಮ್ | | ನ್ | | ಙ್ | |
| ಪಾರ್ಶ್ವಿಕಗಳು | | | | | ಲ್ | | | |
| ಲುಂಠಿತ | | | | | ರ್ | | | |
| ಅರ್ಧಸ್ವರಗಳು | | | ವ್ | | | ಯ್ | | |

ಸ್ವರಗಳು

| | | ಅಗ್ರ | ಕೇಂದ್ರೀಯ | ಪಶ್ಚ |
|---|---|---|---|---|
| ಉಚ್ಚ | ... | ಇ | | ಉ |
| ಉಚ್ಚತರ–ಮಧ್ಯ | ... | ಎ | | ಒ |
| ನಿಮ್ನತರ–ಮಧ್ಯ | ... | e | | ’ |
| ನಿಮ್ನ | | | ಅ | a |

**ವ್ಯಂಜನಗಳು :** ಧ್ವನಿಮಾಗಳ ವಿತರಣೆ. /ಙ ವ ಯ/ ಹೊರತಾಗಿ ಉಳಿದ ಎಲ್ಲ ವ್ಯಂಜನಗಳೂ ಪದಾದಿಯಲ್ಲಿ ಸ್ವರ ಪೂರ್ವವಾಗಿ, ಮತ್ತು /ಪ ಟ ಕ ಬ ದ ಗ ಭ ಧ ಖ ಮ ನ ಸ ಜ಼ ಹ/ ಇವು ಪದದಾದಿಯಲ್ಲಿ ವ್ಯಂಜನಪೂರ್ವವಾಗಿ ಬರುತ್ತವೆ.

ಎಲ್ಲ ವ್ಯಂಜನಗಳೂ ಪದ ಮಧ್ಯದಲ್ಲಿ ಮತ್ತು ಕೊನೆಯಲ್ಲಿ ಸ್ವರಗಳ ಬಳಿಕ ಬರುತ್ತವೆ. / ಪ ಟ ದ ಧ ಸ ಝ ಹ/ ಧ್ವನಿಮಾಗಳು ಪದದ ಕೊನೆಯಲ್ಲಿ ಸಂಸ್ವನಿತವ್ಯಂಜನಗಳ ಬಳಿಕ ಬರುತ್ತವೆ.

ಮಹಾಪ್ರಾಣ ಸ್ಪರ್ಶಗಳು ಅಂತಿಮವಾಗಿ ಬರುವುದು ಹೆಚ್ಚಾಗಿಲ್ಲ. ಅಘೋಷ ಧ್ವನಿಗಳು ಘೋಷಧ್ವನಿಗಳಿಗಿಂತ ಕಡಿಮೆ ಕಾಣಿಸಿಕೊಳ್ಳುತ್ತವೆ. ಎರಡು ಮಹಾಪ್ರಾಣ ಸ್ಪರ್ಶಗಳು ಒಂದೇ ಪದದಲ್ಲಿ–ವಿಶೇಷವಾಗಿ ತದ್ಭವಗಳಲ್ಲಿ–ಪರಸ್ಪರವಾಗಿ ಒಂದರ ಬಳಿಕ ಒಂದು ಬರುವುದು. ಅಥವಾ ಸ್ವರ–ವ್ಯಂಜನ ಕೂಡಿ ಬರುವುದು (ಸ್ವರ ಎಂದರೆ ಸ್ವರ ಮತ್ತು ಸ್ವರಗುಚ್ಛಗಳು, ವ್ಯಂಜನ ಎಂದರೆ ವ್ಯಂಜನ ಮತ್ತು ವ್ಯಂಜನಗುಚ್ಛಗಳು –ಎರಡೂ ಆಗಬಹುದು) ಶಿಷ್ಟವ್ಯವಹಾರಿಕದಲ್ಲಿ ತೀರ ವಿರಳ.

ಮುಖ್ಯ ಪರಿಸರಣಾತ್ಮಕ ವಿಭಿನ್ನ ರೂಪಗಳು : (1) ಸ್ವರಪೂರ್ವವಾಗಿ ಮತ್ತು / ಯ/ ಪರವಾಗಿ ಬಂದಾಗ; ಈ ಪರಿಸರದಲ್ಲಿ ಬರೆದಿರುವ /ಜ್ ವ್ x ಹ್/ ಇವುಗಳ ಹೊರತಾಗಿ ಉಳಿದೆಲ್ಲ ವ್ಯಂಜನಗಳೂ ಅರ್ಧ ದೀರ್ಘ ಸಂಸ್ವನಗಳನ್ನು, ಮಹಾಪ್ರಾಣಗಳು ಅವುಗಳ ಸ್ಪರ್ಶಾಂಶವನ್ನು ಸ್ವಲ್ಪ ದೀರ್ಘ ಮಾಡಿಕೊಳ್ಳುತ್ತವೆ.

(2) ಸ್ವರಪೂರ್ವವೂ /ರ್/ ಕಾರ ಪೂರ್ವದಲ್ಲೂ ಸ್ವರ ಪರದಲ್ಲಿಯೂ ಇದ್ದಾಗ.

(3) /ರ್/ ಕಾರ ಪೂರ್ವದಲ್ಲೂ ಸ್ವರ ಪರದಲ್ಲಿಯೂ ಇದ್ದಾಗ. (2) ಮತ್ತು (3) ಎರಡರ ವ್ಯಂಜನಗಳಲ್ಲಿ ಅರ್ಧ ದೀರ್ಘಸಂಸ್ವಗಳು ದೀರ್ಘರಹಿತ ಸಮಸ್ವನಗಳೊಡನೆ ಸ್ವಚ್ಛಂದ ಪರಿವರ್ತನೆಯಲ್ಲಿರುತ್ತವೆ. (2) ನೆಯ ಪರಿಸರದಲ್ಲಿ /ತ್ ಥ್ ದ್ ಧ್ ನ್ ಲ್/ ಧ್ವನಿಮಾಗಳು ಸ್ವಲ್ಪಮಟ್ಟಿಗೆ ಮೂರ್ಧನ್ಯಗಳಾಗಿರುತ್ತವೆ.

(4) ಅಂತಿಮವಾಗಿ.

(ಅ) ಊಷ್ಮಧ್ವನಿಗಳು ಹೆಚ್ಚು ಕಡಿಮೆ ದೀರ್ಘತರವಾಗಿರುತ್ತದೆ.

(ಆ) ಮಹಾಪ್ರಾಣಗಳು/ಫ್ ಭ್/ದ್ವಯೋಷ್ಠ್ಯವಾದ /ϕ/ ಮತ್ತು ಘೋಷಿತವಾದ [β] ಗಳಾಗಿ ಊಷ್ಮೀಕೃತವಾಗುತ್ತದೆ. ಕೆಲವು ಉಪಭಾಷೆಗಳಲ್ಲಿ/ಖ್/ಕೂಡ ಕಂಠ್ಯ–ಅಘೋಷ–ಊಷ್ಮಧ್ವನಿ [χ] ಆಗಿ ಎಚ್ಚರವಾಗುವ ಪ್ರವೃತ್ತಿ ತೋರುತ್ತದೆ.

**ಸ್ವರಗಳು**

ಎಂಟು ಸ್ವರಗಳಲ್ಲಿ ಎಲ್ಲವೂ ಅನುನಾಸಿಕತ್ವದ ಧ್ವನಿವಾಗಳೊಡನೆ ಅನುನಾಸಿಕೀಯವಾಗಬಹುದು. ದೀರ್ಘತೆ ಧ್ವನಿಮೀಯವಲ್ಲ. ಪಶ್ಚಿಮ ಅಸ್ಸಾಮೀಯ ಉಪಭಾಷೆಗಳಲ್ಲಿ ಉಚ್ಚತರ ನಿಮ್ನಾಗ್ರವಾದ (χ) ಶಿಷ್ಟ ವ್ಯವಹಾರಿಕದ ನಿಮ್ನತರಾಗ್ರ /ε/ ವನ್ನು ಬದಲಿಸಿ ತಾನು ಬರುತ್ತದೆ.

**ವಿತರಣೆ :** ಸ್ವರಗಳ ವಿತರಣೆ ಕೆಲಮಟ್ಟಿಗೆ ವಿಲಕ್ಷಣವಾದುದು. ಎಂಟು ಸ್ವರಗಳು ಈ ರೀತಿಯ ವಿತರಣೆಯನ್ನು ತೋರಿಸುತ್ತವೆ : (1) /ಇ ಉ / ಸ್ವರಗಳು ಪರವರ್ಣದ ಆದಿಯಲ್ಲಿ ಬರದೆ ಇದ್ದಾಗ, ಸಂವೃತವರ್ಣಗಳಲ್ಲೂ ವಿವೃತವರ್ಣಗಳಲ್ಲೂ ಎಂಟು ರೀತಿಯ ವಿರೋಧಗಳು (ಕಾಂಟ್ರಾಸ್ಟ್) ಕಾಣಬಹುದು. (2) ಅನುನಾಸಿಕಗಳು ಅಥವಾ ಅನುನಾಸಿಕೀಯವಲ್ಲದ ಯಾವುದೇ ಒಂದು ವ್ಯಂಜನ ನಡುವೆ ಬರುವ /ಇ/ಕಾರಾದಿಯಾದ ವರ್ಣ ಪರದಲ್ಲಿದ್ದಾಗ ವಿವೃತವರ್ಣಗಳಲ್ಲಿ ಆರು ರೀತಿಯ ವಿರೋಧಗಳು ಕಾಣಬಹುದು. (3) ಯಾವುದಾದರೂ ವ್ಯಂಜನ /ಉ/ಕಾರ ಸಹಿತವಾಗಿ ಬಂದರೂ ರಹಿತವಾಗಿದ್ದರೂ ವಿವೃತವರ್ಣಗಳಲ್ಲಿ ಐದು ರೀತಿಯ ವಿರೋಧಗಳನ್ನು ಕಾಣಬಹುದು.

**ಮುಖ್ಯ ಪರಿಸರಣಾತ್ಮಕ ವಿಭಿನ್ನರೂಪಗಳು :**

(1) ಎಲ್ಲ ಸ್ವರಗಳು ವರ್ಗೀಯ ಅನುನಾಸಿಕಗಳಾದ /ಮ ನ್ ಙ್/ಗಳಿಗೆ ಅಥವಾ ಪೂರ್ವದಲ್ಲಿಯ ಅನುನಾಸಿಕೀಕೃತ ಸ್ವರದೊಡಗೂಡಿದ /ಹ್/ಗೆ ಪೂರ್ವದಲ್ಲಿ ಬಂದಾಗ ಅನುನಾಸಿಕಗಳಾಗಿತ್ತವೆ. ಮತ್ತು ಸ್ವರಗುಚ್ಛಗಳಲ್ಲಿ ಅನುನಾಸಿಕೀಕೃತ (ಧ್ವನಿಮೀಯ) ಸ್ವರಗಳು ಪೂರ್ವದಲ್ಲಿಯೋ ಪರದಲ್ಲಿಯೋ ಬಂದಾಗ ಕೂಡ ಅವು ಅನುನಾಸಿಕಗಳಾಗುತ್ತವೆ.

(2) /ಇ/ ಹೊರತಾಗಿ ಎಲ್ಲ ಸ್ವರಗಳೂ /ಯ್/ ಸ್ವರಶ್ರುತಿಯನ್ನು ಅನುಸರಿಸುತ್ತವೆ; ಪರದಲ್ಲಿಯ ವ್ಯಂಜನಗುಚ್ಛದ ಕೊನೆಯ ಧ್ವನಿ /ಯ/ ಆಗಿದ್ದರೆ ಹಾಗೆ ಆಗುತ್ತದೆ.

(3) ವ್ಯಂಜನಗುಚ್ಛವೊಂದರಲ್ಲಿ /ರ್/ಕಾರಪೂರ್ವವಾಗಿ ಬಂದಾಗ, ಅಗ್ರ ಮತ್ತು ಪಶ್ಚ ಸ್ವರಗಳು ಸ್ವಲ್ಪಮಟ್ಟಿಗೆ ಕೇಂದ್ರೀಯವಾಗಿರುತ್ತವೆ ; ನಿಮ್ನ ಕೇಂದ್ರೀಯಸ್ವರ/ಅ/ ಸ್ವಲ್ಪಮಟ್ಟಿಗೆ ಉದಾತ್ತಸ್ವರವಾಗಿರುತ್ತದೆ.

(4) ಉದ್ಗಾರದ ಆದಿಸ್ವರಗಳು ಕೆಲವೊಮ್ಮೆ ಸ್ವಲ್ಪಮಟ್ಟಿಗೆ ಕಾಕಲ್ಯೀಕೃತವಾಗಿರುತ್ತವೆ.

(5) ಎಲ್ಲ ಸ್ವರಗಳೂ ಒಂದು ಪದದಲ್ಲಿ ಎಲ್ಲೆಲ್ಲಿ ಬರುತ್ತವೆ ಎಂಬ ಸ್ಥಾನಕ್ಕೆ ಅನುಗುಣವಾಗಿ ಸಂಸ್ವನೀಯಗಳಾದ ಬೇರೆ ಬೇರೆ ಪ್ರಮಾಣದ ದೀರ್ಘತೆಗಳನ್ನು ಪಡೆದಿರುತ್ತವೆ.

**ಧ್ವನಿಮಾವಿಜ್ಞಾನವನ್ನು ಕುರಿತು ಒಂದು ಚಾರಿತ್ರಿಕ ಟಿಪ್ಪಣಿ :**

ಅಸ್ಸಾಮಿ ವ್ಯಂಜನಾತ್ಮಕ ಬೆಳೆವಣಿಗೆಯ ಚರಿತ್ರೆ ಪ್ರಾಚೀನ ಇಂಡೋ ಆರ್ಯನ್ ಪದ್ಧತಿಯ ಧ್ವನಿಮೀಯ ಐಕ್ಯದ ಚರಿತ್ರೆಯೇ ಆಗಿದೆ. ಇದು ಅಸ್ಸಾಮಿ ಭಾಷೆಯಲ್ಲಿ, ದೇಶದ ಸಮಾನ ಉತ್ಪತ್ತಿ ಮೂಲಸಂಬಂಧಿಗಳಾದ ಭಾಷೆಗಳನ್ನೇ ಪ್ರತ್ಯೇಕಿಸುವ ವಿಶಿಷ್ಟ ಲಕ್ಷಣವಾಗಿದೆ. ಧ್ವನಿಮಾ ಪಟ್ಟಿಕೆಯಿಂದ, ಪ್ರಾಚಿನ ಇಂಡೋ ಆರ್ಯನ್ ಭಾಷೆಯ ಮೂರು ಮುಖ್ಯ ಶ್ರೇಣಿಗಳಲ್ಲಿ–ದಂತ್ಯ ಮೂರ್ಧನ್ಯ ಮತ್ತು ತಾಲವ್ಯಗಳು–ಈ ಭಾಷೆಯ ಕೊರತೆಯಿರುವುದು ಸ್ಪಷ್ಟವಾಗಿ ಕಾಣುತ್ತದೆ. ದಂತ್ಯ ಮತ್ತು ಮೂರ್ಧನ್ಯ ಸ್ಪರ್ಶಗಳು ಅಸ್ಸಾಮೀಯ ವರ್ತ್ಸ್ಯ ಸ್ಪರ್ಶಗಳಲ್ಲಿ ಐಕ್ಯಗೊಂಡಿವೆ. ತಾಲವ್ಯ ಅನುಘರ್ಷಗಳು /ಚ್, ಛ್/ ಮತ್ತು ಜ್, ಝ್/ಗಳು ಕ್ರಮವಾಗಿ ವರ್ತ್ಸ್ಯ /ಸ್/ ಮತ್ತು /ಜ್/ಗಳಾಗಿ ಐಕ್ಯವಾಗಿವೆ. ಮತ್ತು ಊಷ್ಮೀಕೃತವಾಗಿವೆ. /ಶ್, ಷ್/ ಮತ್ತು /ಸ್/ ಈ ಮೂರು ಊಷ್ಮಗಳು ತಮ್ಮ ಉಚಿತವಾದ ಉಚ್ಚಾರಣೆಯನ್ನು ಕಳೆದುಕೊಂಡು ಆದ್ಯತವಾಗಿ ಕಂಠ್ಯ–ಅಘೋಷ /χ/ ವಾಗಿಯೂ ಅನ್ಯತ್ರ ಘೋಷಕಾಕಲ್ಯ /ಹ್/ವೂ ಆಗಿದೆ.

ಸ್ವರಗಳ ವಿಚಾರದಲ್ಲಿ ಧ್ವನಿಮೀಯ ವಿಚ್ಛೇದನವಿದೆ. ಉದಾಹರಣೆಗೆ, ಪ್ರಾಚೀನ ಇಂಡೋ– ಆರ್ಯನ್ ಎ ಮತ್ತು ಅ ಇವು ಕ್ರಮವಾಗಿ /εe/ ಮತ್ತು /χρ/ ಇವನ್ನು ಉಂಟುಮಾಡಿವೆ.

ದಂತ್ಯ ಮತ್ತು ಮೂರ್ಧನ್ಯ ಧ್ವನಿಮಾಗಳು ಬಿದ್ದು ಹೋಗುವಿಕೆ, ಮತ್ತು ವರ್ತ್ಸ್ಯಗಳೊಡನೆ ಬೆರೆತು ಹೋಗುವಿಕೆ–ಈ ವೈಲಕ್ಷಣ್ಯಕ್ಕೆ ಇಡೀ ಅಸ್ಸಾಮಿಭಾಷಾಪ್ರದೇಶವನ್ನು ಸುತ್ತುವರಿದಿರುವ ಟಿಬೆಟೋ–ಬರ್ಮನ್ ಭಾಷೆಗಳ ಮತ್ತು ಉಪಭಾಷೆಗಳ ಪ್ರಭಾವವೇ ಕಾರಣವೆಂದು ತಿಳಿಯಲಾಗಿದೆ.

**ಆಕೃತಿಮಾ ವಿಜ್ಞಾನ :** ಅಸ್ಸಾಮಿಯಲ್ಲಿ ಆಕೃತಿಮಾತ್ಮಕ ರೂಪಗಳ ಮೂರು ವರ್ಗಗಳಿವೆ.

(i) ನಾಮಪದಗಳೂ ಸೇರಿದ ನಾಮವಾಚಕಗಳು, ಸರ್ವನಾಮಗಳು ಮತ್ತು ಗುಣವಾಚಕಗಳು.

(ii) ಕ್ರಿಯಾರ್ಥಕಗಳು.

(iii) ಅವ್ಯಯಗಳು.

**ನಾಮವಾಚಕಗಳು :** ಗುಣವಾಚಕಗಳು ಮತ್ತು ಸರ್ವನಾಮಗಳು ನಾಮವಾಚಕಗಳ ಉಪವರ್ಗಗಳು. ಅನುಬಂಧಗಳಂತೆ ಗುಣವಾಚಕಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವುದಿಲ್ಲ. ಹೋಲಿಕೆಯಲ್ಲೂ ವಿಭಕ್ತಿ ರೂಪವಿಲ್ಲ. ಅದನ್ನು ಕೆಲವು ವರ್ಣನಾತ್ಮಕ ಶಬ್ದಗಳಿಂದ ವ್ಯಕ್ತಗೊಳಿಸುವುದಾಗುತ್ತದೆ.

**ಸರ್ವನಾಮಗಳು ಐದು ವಿಭಕ್ತಿ ಪ್ರತ್ಯಗಳಲ್ಲಿ ನಡೆಯುತ್ತವೆ :** ಪ್ರಥಮಾ, ದ್ವಿತೀಯಾ, ಚತುರ್ಥಿ, ಷಷ್ಠೀ ಮತ್ತು ಸಪ್ತಮೀ ವಿಭಕ್ತಿಗಳು. ತೃತಿಯ, ಮತ್ತು ಪಂಚಮೀ ವಿಭಕ್ತಿಗಳು ಕ್ರಮವಾಗಿ [ಎ] ಮತ್ತು [ಪರ] ಎಂಬ ವಾಕ್ಯಾತ್ಮಕ ಪಶ್ಚಸರ್ಗಗಳಿಂದ ವ್ಯಕ್ತವಾಗುತ್ತಿದ್ದು, ಅವು ಷಷ್ಠೀ ವಿಭಕ್ತಿರೂಪಗಳನ್ನು ಅನುಸರಿಸುತ್ತವೆ.

ನಾಮಪದಗಳು ಇನ್ನೂ ಎರಡು ಉಪವರ್ಗಗಳಾಗಿ ವಿಭಜಿತವಾಗುತ್ತವೆ. ಸಂಬಂಧ ನಾಮಪದಗಳು ಮತ್ತು ಸಾಧಾರಣನಾಮಪದಗಳು.

ಸಂಬಂಧ ನಾಮಪದಗಳು ಎರಡು ವಿಭಕ್ತಿ ರೂಪಗಳನ್ನುಳ್ಳ ಪದಗಳ ಒಂದು ಚಿಕ್ಕ ವರ್ಗ: (i) ಪುರುಷವಾಚಕ ಸಂಬಂಧ ವಿಭಕ್ತಿ ಪ್ರತ್ಯಯಗಳು (ii) ವಿಭಕ್ತಿ ಪ್ರತ್ಯಯಗಳು.

ಪುರುಷವಾಚಕ ಸಂಬಂಧಗಳನ್ನು ಹೇಳುವ ಪೂರ್ತಿವರ್ಗ (ಮಿತ್ರರನ್ನು ಉದ್ದೇಶಿಸಿ ಹೇಳುವ x ckhi, ಮಿತ ಇತ್ಯಾದಿ ಪದಗಳೂ ಸೇರಿ) ಈ ಪದಗಳ ವರ್ಗವನ್ನು ರೂಪಿಸುತ್ತದೆ.

ಸಂಬಂಧವಾಚಕ ನಾಮಪದಗಳಲ್ಲಿ, ನಾಲ್ಕು ಪುರುಷಗಳಿಗೆ ವಿಭಕ್ತಿ ಕಾರ್ಯಗಳು ನಡೆಯುತ್ತವೆ.

| | | |
|---|---|---|
| (1) | ಉತ್ತಮ ಪುರುಷ : | [ಅ ಇ ~ϕ] |
| (2) | ಮಧ್ಯಮ ಪುರಷ (ಮರ್ಯಾದಾಪುರ) | [ಅರ್] |
| (3) | ಮಧ್ಯಮ ಪುರುಷ (ಸಾಧಾರಣ) : | [ಅರ್] |
| (4) | ಪ್ರಥಮ ಪುರುಷ: | [ಅಕ್] |

ಉದಾಹರಣೆಗಳು : ಮೊಮಯ್, ನನ್ನ ಸೋದರಮಾವ.

ಮೊಮಯರ, ನಿನ್ನ (ಮರ್ಯಾದಾಪರ) ಸೋದರಮಾವ.

ಮೊಮಯರ್, ನಿನ್ನ (ಸಾಧಾರಣ) ಸೋದರಮಾವ.

ಮೊಮಯಕ್, ಅವನ ಸೋದರಮಾವ, ಇತ್ಯಾದಿ.

ಪುರುಷವಾಚಕ ಸಂಬಂಧಗಳಿಗೆ ಈ ವಿಭಕ್ತಿ ಪ್ರತ್ಯಯಗಳು ಸೇರುವುದು ಆರ್ಯಭಾಷೆಗಳ ಮಟ್ಟಿಗೆ ಹೇಳುವುದಾದರೆ ಒಂದು ವಿಲಕ್ಷಣವಾದ ವೈಚಿತ್ರ್ಯ. ಆರ್ಯೇತರ ಆಸ್ಟ್ರಿಕ್ ಮೂಲಗಳಿಂದ ಅದು ಬಂದಿದೆ. ಈ ನಾಮಪದಗಳ ವರ್ಗಗಳಿಗೆ ಸಾಧಾರಣ ವರ್ಗದ ನಾಮಪದಗಳಲ್ಲಿ ಯಾವುದೇ ಆಗಿರಲಿ ಹೇಗೆ ವಿಭಕ್ತಿ ಪ್ರತ್ಯಯಗಳು ಹತ್ತುತ್ತವೆಯೋ ಇವಕ್ಕೂ ಹತ್ತುತ್ತವೆ.

**ವಿಭಕ್ತಿಗಳು :** ನಾಮಪದಗಳಿಗೆ ಆರು ವಿಭಕ್ತಿಗಳಿವೆ : (i) ನಿರಪೇಕ್ಷ (ii) ಪ್ರಥಮಾ ವಿಭಕ್ತಿ [ಎ] (iii)ದ್ವಿತೀಯಾವಿಭಕ್ತಿ [ak] (iv) ಚತುರ್ಥೀ ವಿಭಕ್ತಿ [abi] (v) ಷಷ್ಠೀ ವಿಭಕ್ತಿ [ar] (vi) ಸಪ್ತಮೀ ವಿಭಕ್ತಿ [at] ನಿರಪೇಕ್ಷ ವಿಭಕ್ತಿಗೆ ಆಕೃತಿಮಾ ಇಲ್ಲ; ಅದು ಕರ್ತೃವಾಗಿಯೋ ಇಲ್ಲ ಕರ್ಮವಾಗಿಯೋ ವಾಕ್ಯಾತ್ಮಕವಾಗಿ ಬಳಸಲ್ಪಡುತ್ತದೆ. ದ್ವಿತೀಯ, ಚತುರ್ಥೀ ಮತ್ತು ಷಷ್ಠೀ, ಸಪ್ತಮೀ ಆಕೃತಿಮಾಗಳು ಸ್ವರಾಂತ್ಯವಾಗಿರುವ ನಾಮಪದಗಳಿಗೆ ಸೇರಿದಾಗ ತಮ್ಮ ಸ್ವರಗಳನ್ನು ಕಳೆದುಕೊಳ್ಳುತ್ತವೆ.

ತೃತೀಯಾ ಮತ್ತು ಪಂಚಮೀ ವಿಭಕ್ತಿಗಳು ಸರ್ವನಾಮಗಳಂತೆ ಇದೇ ವಾಕ್ಯಾತ್ಮಕ ಪಶ್ಚಸರ್ಗಗಳಿಂದ ವ್ಯಕ್ತವಾಗುತ್ತವೆ.

**ವಚನ ಮತ್ತು ಲಿಂಗ :** ಅಸ್ಸಾಮೀಯಲ್ಲಿ ವ್ಯಾಕರಣಾತ್ಮಕ ವಚನಗಳಾಗಲಿ ಲಿಂಗಗಳಾಗಲಿ ಇಲ್ಲ. ಶಿಷ್ಟ ವ್ಯಾವಹಾರಿಕದಲಿೀ—ಬೊರ್,—ಬಿಲಕ್ ಮತ್ತು ಹಂತ್ ಎಂಬ ಅಂತ್ಯ ಪ್ರತ್ಯಯಗಳನ್ನು ಸೇರಿಸುವುದರಿಂದ ಬಹುವಚನತ್ವ ವ್ಯಕ್ತವಾಗುತ್ತದೆ. ನಪುಂಸಕಲಿಂಗ —ಅ,—E,—ಅನಿ, ಮತುÛ—ರಿ ಇಂಥ ಸಾಧಿತರೂಪಗಳಿಂದ ಇಲ್ಲವೆ m x t a (ಪುಂ.,) ಮತ್ತು ಮಯ್‌ಕಿ ಅಥವಾ ಮತಿ (ಸ್ತ್ರೀ) ಎಂಬ ವರ್ಣಾತ್ಮಕ ಶಬ್ದಗಳಿಂದ ವ್ಯಕ್ತವಾಗುತ್ತದೆ.

**ಪಶ್ಚಾತ್ತ್ರಯಿ ಮತ್ತು ಸಂಖ್ಯಾವಾಚಿ ನಿಶ್ಚಿತಾರ್ಥಗಳು :**

ಅಸ್ಸಾಮೀ ಭಾಷೆಯ ಇನ್ನೊಂದು ಬಹು ಮುಖ್ಯವಾದ ಪ್ರತ್ಯೇಕವಾದ ವೈಲಕ್ಷಣ್ಯವೆಂದರೆ, ಪಶ್ಚಾಶ್ರಯಿ ಮತ್ತು ಸಂಖ್ಯಾವಾಚಿ ನಿಶ್ಚಿತಾರ್ಥಗಳ ಬಳಕೆ. ಪಶ್ಚಾಶ್ರಯಿಗಳು ತಾವು ಸೇರುವ ನಾಮವಾಚಕಗಳ ಸ್ವರೂಪ ಆಕೃತಿ ಮತ್ತು ರಚನೆ ಇವುಗಳನ್ನು ವ್ಯಕ್ತಪಡಿಸುವ ರೂಪಗಳು. ಅಸ್ಸಾಮೀಯಲ್ಲಿ ಅವುಗಳನ್ನು ವರ್ಗವಿಭಜಕಗಳೆಂಬುದಾಗಿ ಕರೆಯಲಾಗದು; ಏಕೆಂದರೆ ಅವು ನಾಮಪದಗಳನ್ನು ನಿರ್ದಿಷ್ಟ ಗುಂಪುಗಳಾಗಿಯೊ ವರ್ಗಗಳಾಗಿಯೊ ವರ್ಗೀಕರಣ ಮಾಡುವುದಿಲ್ಲ. ಸಂಖ್ಯಾವಾಚಿ ನಿಶ್ಚಿತಾರ್ಥಕಗಳು ಸಂಖ್ಯಾಪೂರ್ವವಾಗಿ ಬರುವ ಪಶ್ಚಾಶ್ರಯಿಗಳು. ಸಂಖ್ಯಾವಾಚಿ ನಿಶ್ಚಿತಾರ್ಥಗಳು ಸ್ವತಂತ್ರರೂಪಗಳು, ಆದರೆ ಪಶ್ಚಾಶ್ರಯಿಗಳು ಹಾಗಲ್ಲ. ಈ ರೂಪಗಳು ಮನುಷ್ಯರಲ್ಲಿ ಮತ್ತು ವಸ್ತುಗಳಲ್ಲಿ ನಿಶ್ಚಿತತೆಯನ್ನು ವ್ಯಕ್ತಪಡಿಸುತ್ತವೆ. ಆದ್ದರಿಂದ ಇಂಗ್ಲಿಷಿನ ಉಪಪದಗಳಂತೆ ಇವುಗಳನ್ನು ಗಣಿಸಬೇಕು.

ಬಹುಮುಖ್ಯ ನಿಶ್ಚಿತಾರ್ಥಕಗಳಿಗೆ ಕೆಲವು ಉದಾಹರಣೆಗಳನ್ನು ಈ ಕೆಳಗೆ ಕೊಟ್ಟಿದೆ:

(i)—ತೊ : ಮನುಷ್ಯನನ್ನು (ಸಾಧಾರಣ) ಸೇರಿಸಿಕೊಂಡು ಪುಂ ವಾಚಕಗಳಿಗೆ ಪರದಲ್ಲಿ ಸೇರಿಸುವುದು ಉದಾ: ಮನುಷ್ಯ –ಮನುಹ್‌ತೊ; ನಾಯಿ–ಕುಕುರ್‌ತೊ; ಹಾಗೆಯೇ ವೃತ್ತ ಮತ್ತು ಊರ್ಧ್ವಾಕೃತಿಯ ವಸ್ತುಗಳಿಗೂ–ತೊ ಸೇರಿಸಲಾಗುತ್ತದೆ. ಉದಾ : ಮನೆ–ಘರ್‌ತೊ; ಬೆಟ್ಟ–ಪಹರ್‌ತೊ ಇತ್ಯಾದಿ.

(ii)—ಖನ್ : ಚಪ್ಪಟೆಯಾಗಿರುವ, ಅಗಲ ಮತ್ತು ಉದ್ದವಾಗಿರುವ ವಸ್ತುಗಳಿಗೆ ಸೇರಿಸುವುದು. ಉದಾ: ಬಟ್ಟೆಯ ಚೂರು—ಕಪೊರ್‌ಖನ್; ಹೊಳೆ–ನಯಿಖನ್; ಪುಸ್ತಕ –ಕಿತಪ್ ಖನ್ ; ಹಾಗೂ ಸಂಸಾರ–ಘರ್‌ಖನ್ ; ಇತ್ಯಾದಿ.

(iii)—ದಲ್ : ಉರುಟಾದುದು ಮತ್ತು ಉದ್ದವಾದುದು ಆಗಿರುವುದಕ್ಕೆ ಸೇರಿಸುವುದು. ಉದಾ: ಪೆನ್ಸಿಲ್ಲು–ಪೆನ್ಸಿಲ್‌ದಲ್ ; ಹಗ್ಗ–z,dridal ; ಮರದ ದಿಮ್ಮಿ—ಕಥ್‌ದಲ್.

ಸಂಖ್ಯಾವಾಚಿ ನಿಶ್ಚಿತಾರ್ಥಕಗಳಿಗೆ ಉದಾಹರಣೆಗಳು : ಒಂದು ಪುಸ್ತಕ (ಅನಿಶ್ಚಿತ) ಎಖನ್ ಕಿತಪ್ ಅಥವಾ ಕಿತಪ್ ಎಖನ್; ಇಬ್ಬರು ಹೆಂಗಸರು ಅಥವಾ ಆ ಇಬ್ಬರು ಹೆಂಗಸರು–ದುಗರಕಿ ತಿರೊತ ದುಗರಕಿ; (ಎರಡು ಸಾವಿರ ರೂಪಾಯಿಗಳು ಅಥವಾ ಆ ಎರಡು ಸಾವಿರ ರೂಪಾಯಿಗಳು –ದುಹಜ಼ರ್ ತಕ ಅಥವಾ ತಕದುಹಜ಼ರ್), ಇತ್ಯಾದಿ. ಈ ಮೇಲಿನ ಉದಾಹರಣೆಗಳಿಂದ ಸಂಖ್ಯಾವಾಚಿ ನಿಶ್ಚಿತಾರ್ಥಕ ನಾಮಪದಕ್ಕೆ ಪೂರ್ವವಾಗಿ ಬಂದಾಗ ಉಕ್ತವಾದ ಸಂಖ್ಯೆ ಅಥವಾ ಪರಿಮಾಣದ ನಿಶ್ಚಿತತೆಯನ್ನು ಹೇಳುತ್ತದೆ.

ಕ್ರಿಯಾರ್ಥಕ ರೂಪಗಳು : ಕ್ರಿಯಾರ್ಥಕಗಳಲ್ಲಿ ಸಮಾಪಕ ಮತ್ತು ಅಸಮಾಪಕ ಕ್ರಿಯಾಪದಗಳಿಗೆ ಪ್ರತ್ಯಯಗಳು ಹತ್ತುತ್ತವೆ. ಎಲ್ಲ ಸಮಾಪಕ ಕ್ರಿಯಾಪದಗಳಿಗೂ ನಾಲ್ಕು ಪುರುಷಗಳಲ್ಲೂ ಪ್ರತ್ಯಯಗಳುಂಟು; ಅಸಮಾಪಕ ಕ್ರಿಯಾಪದಗಳಿಗೆ ಪುರುಷವಾಚಕ ಪ್ರತ್ಯಯಗಳಿಲ್ಲ.

ಸಮಾಪಕ ಕ್ರಿಯಾಪದಗಳು : ಪುರುಷಗಳು : ಉತ್ತಮ ಪುರುಷದ ಅಕೃತಿಮಾ [MO]ಇದಕ್ಕೆ ಭಿನ್ನರೂಪವಾಗಿ [ಮ] ಇದು ಕೂಡ ಬರುತ್ತದೆ. ಎರಡು ಮಧ್ಯಮ ಪುರುಷಗಳಿವೆ. ಮರ್ಯಾದಾಪರ [ಅ] ಮತ್ತು ಸಾಧಾರಣ. [α] ಇವು ಆಕೃತಿಮಾತ್ಮಕವಾಗಿ [√] ಮತ್ತು [ಇ] ಎಂಬ ಭಿನ್ನರೂಪಗಳನ್ನು ಪಡೆದಿವೆ. ಪ್ರಥಮ ಪುರುಷದ ಆಕೃತಿಮಾ [ಎ] ಇದಕ್ಕೆ ಭಿನ್ನರೂಪಗಳು [√]ಮತ್ತು [α].

ಕಾಲಗಳು ಮತ್ತು ಕ್ರಿಯಾಭಾವಗಳು : [ಇಸ್] ಅಪೂರ್ಣಕಾಲಕ್ಕೆ, [ಇಲ್] ಭೂತಕಾಲಕ್ಕೆ [ಇಬ್]

ಭವಿಷ್ಯತ್ ಕಾಲಕ್ಕೆ–ಹೀಗೆ ಮೂರು ಕಾಲವಾಚಕ ಆಕೃತಿಮಾಗಳಿವೆ. ಕೊನೆಯೆರಡು ಆಕೃತಿಮಾಗಳು ಸ್ವರಾಂತ್ಯವಾದ ಮೂಲರೂಪಗಳಿಗೆ ತಮ್ಮ ಸ್ವರಗಳನ್ನು ಕಳೆದುಕೊಳ್ಳುತ್ತವೆ.

ಪುರುಷವಾಚಕ ಪ್ರತ್ಯಯಾತ್ಮಕ ಆಕೃತಿಮಾಗಳು ಮೂಲಕ್ರಿಯಾರೂಪ ಮತ್ತು ಕಾಲವಾಚಕ ಆಕೃತಿಮಾಗಳಿಂದಾದ ಧಾತುಗಳಿಗೆ ಸೇರುತ್ತವೆ. ಮೂಲಕ್ರಿಯಾರೂಪವೇ ವರ್ತಮಾನಕಾಲದ ಧಾತು. ಉದಾ : ಮಾಡು – ಕರ್; ನಾನು ಮಾಡುತ್ತೇನೆ–ಕರೊಂ; ನೀನು (ಮರ್ಯಾದಾಪರ) ಮಾಡುತ್ತೀಯೆ– ಕರ; (ಅವನು, ಇತ್ಯಾದಿ) ಮಾಡುತ್ತಾನೆ–ಕರೆ ಇತ್ಯಾದಿ. ಮೂಲರೂಪ ಮತ್ತು [ಇಸ್] ವರ್ತಮಾನಕಾಲದ ಅಪೂರ್ಣಧಾತುವನ್ನು ಹೇಳುತ್ತದೆ. ಉದಾ: ನಾನು ಮಾಡುತ್ತಿದ್ದೇನೆ ಅಥವಾ ನಾನು ಮಾಡುತ್ತಾ ಇದ್ದೇನೆ–ಕರಿಸೊಂ; ನೀನು (ಮರ್ಯಾದಾಪರ) ಮಾಡುತ್ತಿರುವೆ ಅಥವಾ ನೀನು ಮಾಡುತ್ತಾ ಇದ್ದೀಯೆ–ಕರಿಲ, ಇತ್ಯಾದಿ.

ಭೂತಕಾಲದ ಧಾತು [ಇಲ್] ಇಂದ ಆಗುತ್ತದೆ. ಉದಾ : ನಾನು ಮಾಡಿದೆನು–ಕರಿಲೊಂ; ನೀನು (ಮರ್ಯಾದಾಪರ) ಮಾಡಿದೆ–ಕರಿಲ ಇತ್ಯಾದಿ.

ಭೂತಕಾಲದ ಅಪೂರ್ಣ ಧಾತುವಿನಲ್ಲಿ [ಇಸ್] ಎಂಬುದು [ಇಲ್] ಗೆ ಪೂರ್ವದಲ್ಲಿ ಬರುತ್ತದೆ. ಉದಾ : ನಾನು ಮಾಡುತ್ತಿದ್ದೆ ಅಥವಾ ಮಾಡುತ್ತಾ ಇದ್ದೆ– ಕರಿಸಿಲೋಂ ; ನೀನು (ಮರ್ಯಾದಾಪರ) ಮಾಡುತ್ತಿದ್ದೆ ಅಥವಾ ನೀನು ಮಾಡುತ್ತಾ ಇದ್ದೆ, ಇತ್ಯಾದಿ.

ಭವಿಷ್ಯತ್ ಕಾಲದ ಧಾತು ಮೂಲರೂಪ ಮತ್ತು [ಇಬ್] ಕೂಡಿ ಆಗುತ್ತದೆ. ಉದಾ: ನಾನು ಮಾಡುವೆನು– ಕರಿಮ್ ; ನೀನು (ಮರ್ಯಾದಾಪರ) ಮಾಡುವೆ ಕರಿಬ, ಇತ್ಯಾದಿ.

ಭವಿಷ್ಯತ್‌ಕಾಲದ ಅಪೂರ್ವ ಪ್ರತ್ಯಯಗಳಿಲ್ಲ.

ವರ್ತಮಾನಕಾಲಿಕಧಾತು ಆಜ್ಞಾಸೂಚಕ (ವಿಧ್ಯರ್ಥ) ಧಾತುವಿನ ಕೆಲಸವನ್ನೂ ಮಾಡುತ್ತದೆ. ಆಜ್ಞಾಸೂಚಕ ಮಧ್ಯಮಪುರುಷ ಸಾಧಾರಣಕ್ಕೆ ಆಕೃತಿಯಾ ಇಲ್ಲ. ಉದಾ: ನೀನು (ಸಾಧಾರಣ) ಮಾಡು–ತರ್ ಕರ್; ನೀನು (ಮರ್ಯಾದಾಪರ) ಮಾಡು–ತುಮಿ ಕರ. ಇಂಗ್ಲಿಷಿನಲ್ಲಿರುವ ಹಾಗಲ್ಲದೆ, ಅಸ್ಸಾಮಿಯಲ್ಲಿ ಕರ್ತೃವೂ ಐಚ್ಛಿಕವಾಗಿ ಆಜ್ಞಾವಾಚಕದಲ್ಲಿ ವ್ಯಕ್ತವಾಗುತ್ತದೆ.

ಅಸಮಾಪಕ ಕ್ರಿಯಾಪದಗಳು. ಈ ಕೆಳಗಿನವು ಅಸಮಾಪಕ ಕ್ರಿಯಾಪದಗಳು.

(i) [ಇ] ಮತ್ತು [ಎ] ಗಳಲ್ಲಿ ಸಮುಚ್ಚಯಗಳು.

(ii) [o]ನಲ್ಲಿ ಅಸಮಾಪಕ ಕ್ರಿಯಾಪದಗಳು.

(iii) [C]ನಲ್ಲಿ ಭೂತಕಾಲಿಕ ಕೃದಂತಗಳು.

ಅರ್ಥಕ್ಕೆ ಅನುಗುಣವಾಗಿ ಬರುವ [ಇ] ರುಪದಲ್ಲಿ ಸಮುಚ್ಚಯ ಮತ್ತು [ಅ] ರೂಪದ ಭೂತಕೃದಂತ ಇವು ವರ್ತಮಾನ ಕಾಲದ ಧಾತುವಿಗೆ (ಎಂದರೆ ಮೂಲಧಾತುವಿಗೆ) ಅಂತ್ಯಪ್ರತ್ಯಯವಾಗಿ ಬರುತ್ತದೆ. ಉದಾ : ಮಾಡು –ಕರ್ ; ಮಾಡಿದ ಮತ್ತು ಮಾಡುತ್ತ–ಕರಿ, ಮಾಡಿದ್ದು ಅಥವಾ ಮಾಡುತ್ತಿದ್ದುದು ಕರ, ಇತ್ಯಾದಿ.

ಸಮುಚ್ಚಯದ [ಎ] ಯನ್ನು ಭೂತಕಾಲಿಕ ಧಾತುರೂಪ [ಇಲ್]ಗೆ ಮತ್ತು ವರ್ತಮಾನ ಕಾಲಿಕ ಕೃದಂತ ಧಾತುರೂಪಗೆ ಸೇರಿಸಬಹುದು.

ಉದಾ : (ಅದು) ಮಾಡಿದ್ದಾರೆ–ಕರಿಲೆ; ಮಾಡುತ್ತಿರುವಾಗ –ಕರೊಂತೆ, ಇತ್ಯಾದಿ.

ಅಸಮಾಪಕ [o] ಪ್ರತ್ಯಯ ಭವಿಷ್ಯತ್ ಧಾತುರುಪಗಳನ್ನು ತೆಗೆದುಕೊಳ್ಳುತ್ತದೆ; ಪರಿಣಾಮವಾಗಿ ಬಂದ ರೂಪಕ್ಕೆ ನಿರಪೇಕ್ಷ ಚತುರ್ಥೀ ಪಂಚಮೀ ಮತ್ತು ಷಷ್ಠೀ ವಿಭಕ್ತಿಗಳು ಹತ್ತಬಹುದು.

ನಿಷೇದಾತ್ಮಕ : ನಿಷೇಧಾತ್ಮಕ ಪ್ರತ್ಯಯಗಳು ನಿಷೇಧಾತ್ಮಕ ಆಕೃತಿಮಾ [ನೆ] ಯನ್ನು ಈಗಾಗಲೇ ಪ್ರತ್ಯಯ ಹಚ್ಚಿದ ರೂಪಗಳಿಗೆ ಮೊದಲು ಸೇರಿಸುವುದರಿಂದ ಬರುತ್ತವೆ. ಆಕೃತಿಮಾ [ನೆ] ಯಲ್ಲಿಯ ಸ್ವರ ಸ್ವರಾದಿಯಾದ ರೂಪದ ಮೊದಲಲ್ಲಿಯೇ ನಷ್ಟವಾಗುತ್ತದೆ. ಮತ್ತು ಕ್ರಿಯಾರೂಪದ ವ್ಯಂಜನದ ಆದಿಯ ಮೊದಲ ಸ್ವರದೊಡನೆ ಸ್ವರಮೈತ್ರಿಯನ್ನು ಪಡೆಯುತ್ತದೆ; ಆದರೆ ಆ ಸ್ಥಾನದಲ್ಲಿ ವ್ಯಂಜನ [ಅ] ಸ್ವರವನ್ನು ಆದಿಯಲ್ಲಿ ಪಡಿದಿದ್ದರೆ ಈ ಸ್ವರಮೈತ್ರಿ ಉಂಟಾಗದೆ ಹಾಗೆಯೇ ಉಳಿಯುತ್ತದೆ.

ಉದಾ : ನಾನು ಮಾಡೆನು-nokoro~; ನಾನು ಮಾಡಲಿಲ್ಲ — ನಕರಿಲೊಂ; ನಾನು ನೋಡೆನು–ನದುಖೋಂ; (ಅದು) ಕೇಳಲ್ಪಡದಿದ್ದರೆ–ನುಕುನಿಲೆ; ನೀನು (ಮರ್ಯಾದಾಪರ) ಕೊಡೆ–ನಿಡಿಲ; ಆದರೆ ಸ್ವರಮೈತ್ರಿಯಿಲ್ಲದುದು. ನಾನು ತಿಂದೆನಿಲ್ಲ–ನಖಿಲೊಂ ಅಥವಾ ನೆಖಿಲೊಂ ಇತ್ಯಾದಿ.

ಮಧ್ಯಮ ಪುರುಷಗಳಲ್ಲಿಯ ಭವಿಷ್ಯತ್‌ಕಾಲದ ನಿಷೇಧಾತ್ಮಕ ವಿಧ್ಯರ್ಥಕ ನಿಷೇಧಾತ್ಮಕವನ್ನು ವ್ಯಕ್ತಪಡಿಸುತ್ತದೆ.

**ಕರ್ಮಣಿ ಪ್ರಯೋಗ :** ವಿಶ್ಲೇಷಣಾತ್ಮಕವಾಗಿ ಇದನ್ನು ವ್ಯಕ್ತಪಡಿಸಲಾಗುತ್ತದೆ. ಆದಾಗ್ಯೂ ಪ್ರತ್ಯಯ ಹಚ್ಚಿದ ಕರ್ಮಣಿ ಪ್ರಯೋಗಗಳ ಅವಶೇಷಗಳು ಕೆಲವು ನುಡಿ ಕಟ್ಟಿನ ಉಕ್ತಿಗಳಲ್ಲಿ [ಇ] ಮತ್ತು [ಎ] ಎಂಬ ರೂಪಗಳಲ್ಲಿ ಕಾಣುತ್ತವೆ.

ಕಾರಾಣಾರ್ಥಕಗಳು ಪ್ರಾತಿಪದಿಕಗಳು ಇತ್ಯಾದಿಗಳು ನಿಷ್ಪನ್ನ ಮೂಲಕ್ರಿಯಾರೂಪಗಳು ಮತ್ತು ಮೇಲ್ಕಂಡ ಪ್ರತ್ಯಯಗಳು ಕ್ರಮವಾಗಿ ಅವುಗಳಿಗೆ ಹತ್ತಬಹುದು.

**ಪದಕ್ರಮ :** ಸಾಮಾನ್ಯವಾಗಿ ಒಂದು ಉಚ್ಚರಿತ ಪದಕ್ರಮ ಕರ್ತೃಪದದಿಂದ ಆರಂಭವಾಗುತ್ತದೆ. ಇದಾದ ಮೇಲೆ ಕರ್ಮಪದವಿದ್ದು, ಅಸಮಾಪಕ ಕ್ರಿಯಾಪದದಿಂದ ಕೊನೆಯಾಗುತ್ತದೆ. ಕರ್ತೃ, ಕರ್ಮ ಮತ್ತು ಅಸಮಾಪಕ ಕ್ರಿಯಾಪದಗಳಿಗೆ ಪೂರ್ವದಲ್ಲಿ ಅವುಗಳ ಅನುಬಂಧಗಳು ಬಂದಿರುತ್ತವೆ. ಈ ಸಾಮಾನ್ಯ ಪದಕ್ರಮ ಅವಧಾರಣಾತ್ಮಕ ಉಕ್ತಿಗಳಲ್ಲಿ ಅವಧಾರಣೆಯ ಸ್ವರೂಪಕ್ಕೆ ಅನುಗುಣವಾಗಿ ಬದಲಾಗುವುದು ಉಂಟು.

**ಪದಕೋಶ :** ಅಸ್ಸಾಮಿ ಪದಗಳಲ್ಲಿ ಶೇಕಡ ಅತಿ ಹೆಚ್ಚಿನ ಪಾಲು ತದ್ಭವಗಳಾಗಿರುತ್ತವೆ. ಈ ತದ್ಭವಗಳು ಸಂಸ್ಕೃತದಿಂದ ಪ್ರಾಕೃತ ಮತ್ತು ಅಪಭ್ರಂಶ ಘಟ್ಟಗಳ ಮೂಲಕವಾಗಿ ನಿಷ್ಪನ್ನವಾದವಾಗಿವೆ. ಇವಲ್ಲದೆ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲೇ ತತ್ಸಮಗಳೂ ಅರ್ಧತತ್ಸಮಗಳೂ ದೇಶ್ಯಶಬ್ದಗಳೂ ಕಂಡುಬರುತ್ತವೆ. ಅಸ್ಸಾಮಿ ಒಂದು ಸ್ವೀಕರಣ ಭಾಷೆ. ಅದು ತನ್ನ ಪದಕೋಶವನ್ನು ಅಸ್ಸಾಮಿನಲ್ಲಿ ಅದರ ಸುತ್ತಮುತ್ತಲೂ ಮಾತನಾಡುವ ಎಲ್ಲ ಆರ್ಯೇತರ

ಗುಡ್ಡಗಾಡಿನ ಭಾಷೆಗಳಿಂದಲೂ ಉಪಭಾಷೆಗಳಿಂದಲೂ ಸಾಮಾನ್ಯವಾಗಿ ಪದಗಳನ್ನು ಸೇರಿಸಿಕೊಳ್ಳುವುದರಿಂದ ಬೆಳೆಸಿಕೊಂಡಿದೆ. ಬೇರೆ ನವೀನ ಇಂಡೋ ಆರ್ಯನ್ ಭಾಷೆಗಳು, ಅದರಲ್ಲೂ ಹಿಂದಿ ಮತ್ತು ಹಿಂದಿಯ ಮೂಲಕವಾಗಿ ಪರ್ಷಿಯನ್ ಅರಬ್ಬೀ ಮೊದಲಾದ ಇನ್ನಿತರ ಎಷ್ಟೋ ಭಾಷೆಗಳು ಕೂಡ ಈ ಕೆಲಸದಲ್ಲಿ ಕೆಲಮಟ್ಟಿಗೆ ನೆರವಾಗಿವೆ. ಇನ್ನು ಇಂಗ್ಲಿಷ್ ಪೋರ್ಚುಗೀಸ್ ಮೊದಲಾದ ಯುರೋಪಿಯನ್ ಭಾಷೆಗಳೂ ಹೀಗೆಯೇ ನೆರವಾಗಿವೆ. ಕೆಲವು ಸ್ವೀಕೃತ ಪದಗಳು ಗುರುತು ಸಿಗದ ಮಟ್ಟಿಗೆ ಭಾಷೆಗೆ ಸಹಜವಾಗಿ ಹೊಂದಿಕೊಂಡು ಬಿಟ್ಟಿವೆ. ಜ್ಞಾನಪ್ರಸಾರ ಮತ್ತು ಅನ್ಯದೇಶಗಳ ಸಂಬಂಧದಿಂದಾಗಿ ಪದಗಳು ಅನ್ಯಭಾಷೆಗಳಿಂದ ಸಾಮಾನ್ಯವಾಗಿ ಪ್ರತಿದಿನವೂ ಭಾಷೆಯೊಳಗೆ ನುಸುಳಿಕೊಳ್ಳುತ್ತಿವೆ, ಭಾಷೆಯ ಸತ್ತ್ವವನ್ನು ಬೆಳೆಸುತ್ತಿವೆ.

**ಅನುಲೇಖನದ (ಆರ್ಥೊಗ್ರಫಿ) ಮೇಲೆ ಒಂದು ಟಿಪ್ಪಣಿ** : ಇಂದಿನ ಅಸ್ಸಾಮಿ ಅನುಲೇಖನ (ಅಕ್ಷರ ಸಂಯೋಜನ) ಎರಡು ಅಕ್ಷರಗಳ ಹೊರತು ಬಂಗಾಲಿ ಭಾಷೆಗೆ ಸಮಾನವಾಗಿದೆ. ಅಸ್ಸಾಮಿ/ರ/ಕಾರದ ಸಂಕೇತ ಬಂಗಾಲಿಯ ಹಾಗಲ್ಲದೆ, ಮಧ್ಯದಲ್ಲಿ ಒಂದು ರೇಖೆಯನ್ನೊಳಗೊಂಡಿದೆ. /ವ/ಕಾರಕ್ಕೆ ಆದರೆ ಸಂಕೇತದ ಕೆಳಗೆ ರೇಖೆ ಬರುತ್ತದೆ. (ಜಿ.ಎಸ್.ಜಿ.)

**ಅಸ್ಸಾಮೀ ಸಾಹಿತ್ಯ :** ಅಸ್ಸಾಮಿ ಭಾಷೆಯ ಪ್ರಾಚೀನತೆ ಪ್ರಶ. ಏಳನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಅಸ್ಸಾಮಿರಾಜ ಭಾಸ್ಕರವರ್ಮನ ಆಹ್ವಾನದ ಮೇರೆಗೆ ಅಸ್ಸಾಮಿಗೆ ಬಂದ ಯೂವಾನ್‍ಚ್ಯಾಂಗ್ ಕಾಮರೂಪದೇಶದ ವಿವಿಧ ಮುಖಗಳನ್ನು ಕುರಿತು ಪ್ರಸ್ತಾಪಿಸುತ್ತ ಆ ದೇಶದ ಭಾಷೆ ಮಧ್ಯಭಾರತದ ಭಾಷೆಗಿಂತ ಸ್ವಲ್ಪ ಭಿನ್ನವಾಗಿದೆ ಎಂದು ಹೇಳುತ್ತಾನೆ. ಎಂಟು ಮತ್ತು ಹನ್ನೆರಡನೆಯ ಶತಮಾನಗಳ ನಡುವೆ ಜೀವಿಸಿದ್ದ ಬೌದ್ಧಸಿದ್ಧಾಚಾರ್ಯರು ರಚಿಸಿದ ಗೀತೆಗಳಲ್ಲೂ ಸೂತ್ರಗಳಲ್ಲೂ ಪ್ರಥಮತಃ ಮಹಾಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿಯವರಿಂದ ಸಂಕಲಿತವಾದ ದೋಹಾಕೋಶದಲ್ಲೂ ಹಜಾರ್ ಬಛರೇರ್ ಪುರಾನಾ ಬಂಗ್ಲಾಭಾಷೈಬೌಧ ಗಾನ್ ಓ ದೋಹಾ ಎಂಬ ಗ್ರಂಥದಲ್ಲಿ ಗೋಚರಿಸುವ ಚರ್ಯೆ ಅಥವಾ ದೋಹಾಗಳಲ್ಲೂ ಅಸ್ಸಾಮೀ ಭಾಷೆಯ ಪ್ರಾಚೀನ ಮಾದರಿಗಳು ಸಿಕ್ಕುತ್ತವೆ. ಈ ಮಾದರಿಗಳು ಹಿಂದಿನ ಬಂಗಾಲಿಭಾಷೆಯನ್ನು ಮಾತ್ರ ಪ್ರತಿನಿಧಿಸುತ್ತವೆಯೆಂದು ಬಂಗಾಲಿ ವಿದ್ವಾಂಸರು ಪರಿಭಾವಿಸುತ್ತಾರೆ. ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದ್ದೇ ಆದರೆ ಸಂಧ್ಯಾಭಾಷೆಯೆಂದು ಸಾಧಾರಣವಾಗಿ ಕರೆಯಲ್ಪಡುವ ಅವರ ಭಾಷೆ ಮಾಗಧೀ ಅಪಭ್ರಂಶದ ಕಟ್ಟಕಡೆಯ ರೂಪವನ್ನು ಪ್ರತಿನಿಧಿಸುತ್ತದೆ ಎಂಬುದೂ ಆ ಕಾರಣದಿಂದ ಬಂಗಾಲಿ, ಅಸ್ಸಾಮಿ, ಒರಿಯ ಎಂಬ ಆಧುನಿಕ ಇಂಡೋ ಆರ್ಯನ್ ಭಾಷೆಗಳ ಪ್ರಾಚ್ಯಪಂಗಡದ ಪ್ರಾಪ್ರಾಚೀನ ರೂಪಗಳನ್ನು ಇದು ಬಹುಮಟ್ಟಿಗೆ ಒಳಗೊಂಡಿದೆಯೆಂಬುದೂ ವಿಶದವಾಗುತ್ತದೆ. ಈ ಗೀತಗಳಲ್ಲಿ ಗೋಚರಿಸುವ ಕೆಲವು ಧ್ವನಿ ವಿಶೇಷಗಳೂ ಶಬ್ದರಚನಾಕ್ರಮಗಳೂ ಎಲ್ಲೂ ಲೋಪ ಹೊಂದದೆ ಆಧುನಿಕ ಅಸ್ಸಾಮಿ ಭಾಷೆಗೆ ಇಳಿದುಬಂದಿವೆ.

**ಪ್ರಾಚೀನ ಸಾಹಿತ್ಯ :** ಹದಿಮೂರನೆಯ ಶತಮಾನದ ಅಂತ್ಯಭಾಗದಲ್ಲಿ ಆಳುತ್ತಿದ್ದನೆಂದು ಭಾವಿಸಲಾದ ಕಮತಾ (ಪಶ್ಚಿಮ ಅಸ್ಸಾಂ) ರಾಜ ದುರ್ಲಭ ನಾರಾಯಣನ ಆಸ್ಥಾನದಲ್ಲಿ ಅಸ್ಸಾಮಿ ಭಾಷೆಯ ವ್ಯವಸಾಯ ನಡೆಯಿತು. ರಾಜಾಸ್ಥಾನದ ಬಹುಪ್ರಾಚೀನ ಕವಿ ಹರಿಹರ ವಿಪ್ರನೆಂಬಾತ. ಆತನ ಮುಖ್ಯ ಕೃತಿಗಳಾವುವೆಂದರೆ, ಬಭ್ರುಬಾಹನೇರ್ ಯುದ್ಧ ಮತ್ತು ಲವಕುಸಾರ್ ಯುದ್ಧ; ಈ ಕೃತಿಗಳ ಕಥಾವಸ್ತು ಜೈಮಿನಿ ಭಾರತದ್ದು.

ಹರಿಹರನ ಸಮಕಾಲೀನನಾದ ಹೇಮಸರಸ್ವತಿ ಪ್ರಹ್ಲಾದ ಚರಿತವನ್ನು ಬರೆದ. ತಾನು ಈ ಕಥೆಯನ್ನು ವಾಮನಪುರಾಣದಿಂದ ತೆಗೆದುಕೊಂಡಿರುವುದಾಗಿ ಹೇಮಸರಸ್ವತಿ ಹೇಳಿಕೊಂಡಿದ್ದರೂ ಕಥೆ ಹೇಳುವುದರಲ್ಲಿ ಈತ ಸ್ವಾತಂತ್ರ್ಯವನ್ನು ವಹಿಸಿದ್ದಾನೆ. ಈತನ ಕಥನರೀತಿ ಆಕರ್ಷಕವಾಗಿಲ್ಲ; ಶುದ್ಧಪದಗಳ ಪ್ರಯೋಗಕ್ಕೂ ಈತ ಆಸೆಪಟ್ಟಂತೆ ಕಂಡುಬರುವುದಿಲ್ಲ; ಆದರೆ ಈತನ ಕೃತಿ ಭಕ್ತಿಯಿಂದ ಪ್ರೇರಿತವಾಗಿದೆ. ಎರಡನೆಯ ಕೃತಿ ಹರಗೌರಿವಿಲಾಸ ಮೊದಲನೆಯದಕ್ಕಿಂತ ದೊಡ್ಡದು. ಇದರಲ್ಲಿ 900 ಪದ್ಯಗಳಿವೆ; ವಸ್ತುವನ್ನು ಪುರಾಣಗಳಿಂದಲೂ ನಾಡಿನ ಜನಪದ ಕತೆಗಳಿಂದಲೂ ಆರಿಸಿಕೊಂಡಿದ್ದಾನೆ. ಯೋಗಾಭ್ಯಾಸದ ಮೇಲೆ ಕೆಲವು ಪದ್ಯಗಳಿದ್ದರೂ ಈ ದೊಡ್ಡ ಜನಪ್ರಿಯ ಗ್ರಂಥ ಜನಸಾಮಾನ್ಯರ ಸಾಧಾರಣ ತೃಷೆಗೆ ಮಾತ್ರ ವಸ್ತುವನ್ನೊದಗಿಸುವಂಥದಾಗಿದೆ.

ಇದೇ ಕಾಲದಲ್ಲಿ ಈಗಿನ ನೌಗಾಂಗ್ ಜಿಲ್ಲೆಯ ಪ್ರದೇಶದಲ್ಲಿ ಕಚರಿ ದೊರೆಗಳ ಆಸರೆಯಲ್ಲಿ ಮತ್ತೊಂದು ವಿದ್ಯಾಕೇಂದ್ರ ಪ್ರವರ್ಧಮಾನಕ್ಕೆ ಬಂದಿತ್ತು. ಇಲ್ಲಿ ಕಚರಿ ರಾಜ ಮಹಾಮಾಣಿಕ್ಯನ (ಸುಮಾರು ಹದಿನಾಲ್ಕನೆಯ ಶತಮಾನ) ಪ್ರೋತ್ಸಾಹದ ಮೇರೆಗೆ ವೈಷ್ಣವ ಕವಿಗಳ ಪೈಕಿ ಅತಿ ಶ್ರೇಷ್ಠನಾದ ಮಾಧವಕಂದಳಿ ಸಂಸ್ಕೃತದ ರಾಮಾಯಣ ಮಹಾಕಾವ್ಯವನ್ನು ಸಮಗ್ರವಾಗಿ ಅಸ್ಸಾಮಿಭಾಷೆಗೆ ಪರಿವರ್ತಿಸುವ ಮಹತ್ಕಾರ್ಯವನ್ನು ಕೈಗೊಂಡ. ಈತ ಆಸ್ಥಾನಕವಿ. ಕವಿರಾಜಕಂದಳಿ ಎಂಬ ಅನ್ವರ್ಥವಾದ ಬಿರುದಿನಿಂದ ಖ್ಯಾತನಾದ ಈತ. ದೊಡ್ಡ ಸಂಸ್ಕೃತ ವಿದ್ವಾಂಸ. ಆ ಕಾಲದ ಇತರ ಪ್ರಖ್ಯಾತ ಕವಿಗಳಂತಲ್ಲದೆ ಈತ ತನ್ನನ್ನು ಕುರಿತು ಯಾವ ಮಾತನ್ನೂ ಹೇಳಿಕೊಂಡಿಲ್ಲ. ಕೃತಿಗಳಲ್ಲಿ ತನ್ನ ಆತ್ಮಕಥೆಯ ಯಾವ ಭಾಗವನ್ನಾಗಲಿ ತೂರಿಸಿಲ್ಲ. ಮುಂದಿನ ಶತವಾನದಲ್ಲಿ ಅಸ್ಸಾಮೀಸಾಹಿತ್ಯಕ್ಕೆ ಮಹಾಸ್ಫೂರ್ತಿಯನ್ನು ಕೊಟ್ಟ ಶಂಕರದೇವ ಈತನನ್ನು ತುಂಬ ಗೌರವದಿಂದ ಕಾಣುತ್ತಿದ್ದ ಮತ್ತು ಈತನ ಮನೋಹರವೂ ಭಾವಪೂರ್ಣವೂ ಆದ ರಾಮಾಯಣದ ಭಾಷಾಂತರಕ್ಕೆ ಮಾರುಹೋಗಿದ್ದ. ಮಾಧವಕಂದಳಿ ಈ ರಾಮಾಯಣದಲ್ಲಿ ತನ್ನ ಆಸ್ತಿಯಾಗಿ ಬಿಟ್ಟುಹೋದ ಶ್ರೀಮಂತವೂ ಸುಂದರವೂ ಆದ ಶೈಲಿ ಶಂಕರದೇವನ ಮೇಲೂ ಆತನ ಮುಂದಿನ ಪೀಳಿಗೆಯ ಮೇಲೂ ಮಹಾಪ್ರಭಾವವನ್ನು ಬೀರಿತು.

ಮನಸಾದೇವಿ ಎಂಬ ಹೆಸರಿನಿಂದ ಸರ್ಪವನ್ನು ಪೂಜಿಸುವ ಸಂಪ್ರದಾಯ ಅಸ್ಸಾಮ್‍ನಲ್ಲಿ ಬಹು ಹಿಂದಿನಿಂದಲೂ ಇದೆ. ಇದು ಮೊದಲಿಗೆ ಆರ್ಯೇತರರಿಂದ ಬಂದುದಾಗಿದ್ದು ಕ್ರಮೇಣ ಆರ್ಯ ಆಚರಣೆಗಳಲ್ಲಿ ಒಂದಾಗಿ ಸೇರಿ ಹೋಯಿತು. ಈ ಪೂಜಾವಿಧಿಗೆ ಸಂಬಂಧಿಸಿದಂತೆ ಆಕೆಯ ಮಾಹಾತ್ಮ್ಯವನ್ನು ಸಾರುವ ಕಥನಕವನಗಳ ಪರಂಪರೆಯೊಂದು ಹುಟ್ಟಿತು. ಈಗಲೂ ಜನ ಅದನ್ನು ಹಾಡುತ್ತಾರೆ.

**ವೈಷ್ಣವ ಸಾಹಿತ್ಯ :** ಹದಿನಾಲ್ಕು ಮತ್ತು ಹದಿನೈದನೆಯ ಶತಮಾನಗಳಲ್ಲಿ ಭಾರತದ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಒಂದು ಕ್ರಾಂತಿ ನಡೆಯಿತು. ಭಾಗವತ ಪುರಾಣೋಕ್ತವಾದ ಭಕ್ತಿಯ ಉದಾರಪಂಥದ ತಳಹದಿಯ ಮೇಲೆ ಒಂದು ಹೊಸ ಧರ್ಮ ಪ್ರತಿಷ್ಠಾಪಿತವಾಯಿತು. ಮಹಾಸಮರ್ಥರಾದ ಬಹುಮಂದಿ ಸಾಧುಸಂತರು ಅನೇಕ ಪ್ರಾಂತಗಳಲ್ಲಿ ಉದಿಸಿ ಸಂಸ್ಕೃತಪುರಾಣಗಳನ್ನು ದೇಶಭಾಷೆಗಳಿಗೆ ಪರಿವರ್ತಿಸುವುದರ ಮೂಲಕ ಈ ಹೊಸಧರ್ಮವನ್ನು ಹರಡಿದರು. ಅಸ್ಸಾಮಿನಲ್ಲಿ ಬಹುಗುಣ ಭೂಷಿತನೂ ಯುಗಪುರುಷನೂ ಆದ ಶಂಕರದೇವ (1449–1569) ಎಂಬ ಕಾಯಸ್ಥ ಜಾತಿಯ ಸಾಧುಕವಿ ಜನಿಸಿ ಆ ದೇಶದ ಜನರ ಕಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಜೀವನವನ್ನು ಶಾಶ್ವತವಾಗಿ ನಿರೂಪಿಸಿದ.

ಶಾಂಕರ ಚಳವಳಿ ದೂರಗಾಮಿಯಾದ ಧಾರ್ಮಿಕ ಹಾಗೂ ಸಾಮಾಜಿಕ ಪರಿಣಾಮವನ್ನು ಜನರಲ್ಲಿ ಉಂಟುಮಾಡಿತು. ಅದು ಅಸ್ಸಾಮಿನ ಪಾಂಡಿತ್ಯ ಮತ್ತು ಸಾಹಿತ್ಯಗಳಿಗೆ ತುಂಬ ಸ್ಫೂರ್ತಿಯನ್ನು ಕೊಟ್ಟಿತು. ತಾನು ದೊಡ್ಡ ಸಂಸ್ಕೃತ ಪಂಡಿತನಾಗಿದ್ದರೂ ಶಂಕರದೇವ ಪ್ರಧಾನವಾಗಿ ಅಸ್ಸಾಮಿ ಭಾಷೆಯಲ್ಲೇ ಬರೆದ. ಸಂಸ್ಕೃತದ ಜ್ಞಾನಭಂಡಾರವನ್ನು ಅವಿದ್ಯಾವಂತ ಜನರ ಮುಂದೆ ತೆರೆದಿಡುವುದೇ ಆತನ ಆಶಯವಾಗಿತ್ತು. ಆತ ತನ್ನ ಮತವನ್ನು ಹರಡುವುದಕ್ಕಾಗಿ ಅನೇಕ ಗ್ರಂಥಗಳನ್ನೂ ಭಾಷ್ಯಗಳನ್ನೂ ಭಾಷಾಂತರಗಳನ್ನೂ ರಚಿಸಿದ. ಆತ ಮುಟ್ಟಿದ್ದೆಲ್ಲ ಬಂಗಾರವಾಯಿತು. ಈ ಲೇಖನಗಳು ವ್ಯವಹಾರೋಪಯುಕ್ತವೂ ಆಗಿದ್ದುವು. ಇವುಗಳನ್ನು ಎಡೆಬಿಡದೆ ನೋಡಿಕೊಂಡು ತಮ್ಮ ಕರ್ತವ್ಯಗಳನ್ನು ಜನರು ಕ್ರಮಪಡಿಸಿಕೊಳ್ಳುತ್ತಿದ್ದರು. ಈತನ ಪ್ರತಿಭೆ ಬಹುಮುಖವಾದುದು. ಈತ ಪದ್ಯಗಳನ್ನೂ ಗೀತೆಗಳನ್ನೂ ನಾಟಕಗಳನ್ನೂ ರಚಿಸಿದ್ದಾನೆ.

ಚಿರಸ್ಮರಣೀಯವಾದ ಜನಪ್ರಿಯ ಪುರಾಣ ಕಥೆಗಳ ಚೌಕಟ್ಟಿನಲ್ಲಿ ವೇದಾಂತ ದರ್ಶನದ ಸಾರಸರ್ವಸ್ವವನ್ನು ಬಟ್ಟಿಯಿಳಿಸಿರುವ ಭಾಗವತ ಗ್ರಂಥದಿಂದ ಶಂಕರದೇವ ತನ್ನ ಸ್ಫೂರ್ತಿಯನ್ನು ಮುಖ್ಯವಾಗಿ ಪಡೆದ. ಆದಕಾರಣ ಈ ಗ್ರಂಥವನ್ನು ಅಸ್ಸಾಮಿ ಭಾಷೆಗೆ ಪರಿವರ್ತಿಸಲು ಮೊದಲು ಪ್ರಯತ್ನ ನಡೆಯಿತು. ಪ್ರೌಢ ಭಾಷೆಯ ಉದ್ದಾಮ ಶೈಲಿಯಲ್ಲಿ ರಚಿತವಾದ ಪವಿತ್ರ ಗ್ರಂಥವೊಂದನ್ನು ದೇಶೀಯ ಭಾಷೆಯೊಂದಕ್ಕೆ ಪರಿವರ್ತಿಸುವ ಯತ್ನ ಬಹು ದಿಟ್ಟ ಹಾಗೂ ಅಸಾಧಾರಣವಾದ ಕೆಲಸವಾಗಿತ್ತು. ಭಾಗವತವನ್ನು ಓದಿ, ಬೋಧಿಸಿ, ಅನುವಾದ ಮಾಡಿದುದಕ್ಕೆ ಬ್ರಾಹ್ಮಣರು ದೊರೆ ನಾರಾಯಣನ ಮುಂದೆ ಶಂಕರದೇವನನ್ನು ದೂರಿದರಂತೆ.

ಶಂಕರದೇವನ ಎರಡನೆಯ ಯಶಸ್ವೀ ಸಾಹಿತ್ಯ ಗ್ರಂಥ–ಕೀರ್ತನ. ಇದು ಇಂದಿಗೂ ಪ್ರತಿಯೊಬ್ಬ ಅಸ್ಸಾಮಿಯ ಹೃದಯವನ್ನು ಉದಾರ ಭಕ್ತಿಭಾವದಿಂದ ತುಂಬಿ ಉನ್ನತಿಗೇರಿಸುತ್ತದೆ. ಉತ್ತರಭಾರತದಲ್ಲಿ ತುಳಸೀದಾಸನ ರಾಮಚರಿತಮಾನಸವನ್ನು ಯಾವ ಪೂಜ್ಯ ಭಾವದಿಂದ ಜನರು ಕಾಣುತ್ತಿದ್ದಾರೋ ಅದೇ ಪೂಜ್ಯಭಾವದಿಂದಲೇ ಅಸ್ಸಾಮಿ ಜನರು ಈ ಗ್ರಂಥವನ್ನು ಕಾಣುತ್ತಿದ್ದಾರೆ. ಈ ಗ್ರಂಥದ ಸಂಚೀಪತ್ರಗಳ ಹಸ್ತಲಿಖಿತ ಪ್ರತಿಯೋ ಇಲ್ಲವೇ ಅಚ್ಚಾದ ಪ್ರತಿಯೋ ಇಲ್ಲದ ಹಿಂದೂ ಮನೆ ಅಸ್ಸಾಮಿನಲ್ಲಿಲ್ಲ; ಹಬ್ಬದ ವೇಳೆಯಲ್ಲಾಗಲಿ ರೋಗರುಜಿನಗಳ ವೇಳೆಯಲ್ಲಾಗಲಿ ಈ ಗ್ರಂಥದ ಕೆಲವು ಕೀರ್ತನೆಗಳನ್ನು ಹಾಡದ ಜನರಿಲ್ಲ.

ಶಂಕರದೇವ ಅಸ್ಸಾಮಿ ಸಾಹಿತ್ಯದ ಇನ್ನೆರಡು ಶಾಖೆಗಳಲ್ಲಿ ಮಾರ್ಗ ದರ್ಶಿಯಾಗಿದ್ದಾನಲ್ಲದೆ ಆ ಕ್ಷೇತ್ರಗಳಲ್ಲಿ ತನ್ನ ಕೀರ್ತಿಸ್ತಂಭಗಳನ್ನೂ ನೆಟ್ಟುಹೋಗಿದ್ದಾನೆ. ಆ ಕ್ಷೇತ್ರಗಳಾವುವೆಂದರೆ, ಅಂಕೀಯಾ–ನಾಟ್–ಏಕಾಂಕ ನಾಟಕ, ಮತ್ತು ಬರ್‌ಗೀತ್–ಭಕ್ತಿಗೀತ. ಮುಖ್ಯವಾಗಿ ಇಂದ್ರಿಯ ಮತ್ತು ಬುದ್ಧಿಗಳನ್ನು ತುಷ್ಟಿಗೊಳಿಸಲು ಅಂಕಿಯಾ ನಾಟ್‌ಗಳು ರಚಿತವಾದವು. ವಿದ್ಯಾಭ್ಯಾಸ ಬಹಳವಾಗಿ ನಡೆಯದಿದ್ದ ಮತ್ತು ವಿದ್ಯೆ ಕೇವಲ ಕೆಲವರಿಗೆ ಮಾತ್ರ ಮಿತಗೊಂಡಿದ್ದ ಆ ಕಾಲದಲ್ಲಿ ಅಂಕೀಯಾ ನಾಟಕಗಳು ಜನರ ಬೌದ್ಧಿಕ ಜೀವನವನ್ನು ಕಳೆಗೂಡಿಸಿದುವು. ಈ ನಾಟಕಗಳು ಪ್ರತಿಯೊಬ್ಬರಿಗೂ ಹಿಡಿಸುವಂತಿದ್ದು ಜನಸಾಮಾನ್ಯರಿಗೆ ಬೇಕಾದ ಸಂತೋಷವನ್ನು ಒದಗಿಸುತ್ತಿದ್ದುವು. ಸಂಸ್ಕೃತಿಯನ್ನು ಜನರಲ್ಲಿ ಹರಡುವುದಕ್ಕೆ ಸಹಜ ಮಾಧ್ಯಮವಾಗಿ ಈ ನಾಟಕಗಳು ಜನರ ವಿದ್ಯೆ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಗಾಢಪ್ರಭಾವವನ್ನು ಬೀರಿ ಕೊನೆಗೆ ಒಂದು ರಾಷ್ಟ್ರೀಯ ರಂಗಭೂಮಿಯ ಬೆಳವಣಿಗೆಗೂ

ಸಂಗೀತ ಹಾಗೂ ನರ್ತನಗಳ ಅಭಿವೃದ್ಧಿಗೂ ಹಾದಿ ಹಾಕಿಕೊಟ್ಟವು. ಶಂಕರದೇವನ ನಾಟಕಗಳಲ್ಲಿ ಕಾಳೀಯದಮನ, ಪತ್ನೀಪ್ರಸಾದ, ರಾಸಕ್ರೀಡಾ, ರುಕ್ಮಿಣೀಹರಣ, ಪಾರಿಜಾತ ಹರಣ, ರಾಮವಿಜಯ ಎಂಬುವು ಈಗ ಉಳಿದಿವೆ. ಇವುಗಳಲ್ಲಿ ಪ್ರತಿಯೊಂದರ ಕಥೆಯೂ ಪೂರ್ವನಿರ್ದಿಷ್ಟವಾದುದು. ಮತ್ತು ಮತಪ್ರಚಾರಕ್ಕೋಸ್ಕರ ಪ್ರಯುಕ್ತವಾಗಬೇಕಾದುದು. ಆದುದರಿಂದ ನಾಟಕಕಾರರು ತುಂಬ ಇಕ್ಕಟ್ಟಿನಲ್ಲಿ ತಮ್ಮ ರಚನೆಗಳನ್ನು ಮಾಡಬೇಕಾಗಿತ್ತು. ಶಂಕರದೇವನ ಪ್ರಥಮತಃ ಉಪದೇಶಕ, ಆಮೇಲೆ ಕತೆಗಾರ. ಆದರೂ ಈ ಮಿತಿಗಳಲ್ಲೂ ಆತ ತನ್ನ ಕೆಲವು ಕತೆಗಳಲ್ಲಿ ಹೊಸ ಕ್ಷೇತ್ರಗಳನ್ನು ನಿರ್ಮಿಸಿದ. ಮುಖ್ಯವಾಗಿ ವೈಷ್ಣವ ಮತದ ಪ್ರಚಾರಕ್ಕೆ ಅಂಕಿಯಾ ನಾಟಕಗಳು ಪ್ರಯುಕ್ತವಾದರೂ ಇಂದಿಗೂ ಅಸ್ಸಾಮಿ ಜನರ ಜೀವನದ ಮೇಲೆ ಸ್ಥಿರಪ್ರಭಾವವನ್ನು ಬೀರುತ್ತಿವೆ.

ಕಾವ್ಯಗಳಿಗಿಂತ ಬರ್‌ಗೀತಗಳು ಹೆಚ್ಚು ಕಾವ್ಯಮಯವಾಗಿವೆ. ಕೀರ್ತನ ಆಖ್ಯಾನಗಳಿಗಿಂತಲೂ ಹೆಚ್ಚು ರಾಗಯುಕ್ತವಾಗಿರುತ್ತವೆ. ಸಂಗೀತದಲ್ಲಿ ಜನರ ಪ್ರೀತಿ ಹೆಚ್ಚಾಗಿದ್ದುದರಿಂದಲೂ ಭಕ್ತಿಗೀತೆಗಳು ಅವರಿಗೆ ಹೆಚ್ಚಾಗಿ ಬೇಕಾಗಿದ್ದುದರಿಂದಲೂ ಶಂಕರದೇವ ಅಸ್ಸಾಮಿ ಸಾಹಿತ್ಯದಲ್ಲಿ ಇಂದೂ ಅತ್ಯಂತ ಸುಂದರವಾದ ಸ್ತೋತ್ರಗಳೆನಿಸಿರುವ ಅನೇಕ ಬರ್‌ಗೀತ್‌ಗಳನ್ನು ರಚಿಸಿದ. ಶಂಕರದೇವನ ಬರ್‌ಗೀತ್‌ಗಳ ವಿಷಯ ಪ್ರಧಾನವಾಗಿ ಮತೀಯ ಆಧ್ಯಾತ್ಮಿಕಾನುಭವಗಳು; ಜಗತ್ತಿನ ಹುಟ್ಟುಸಾವುಗಳ ಮೇಲಣ ದಾರ್ಶನಿಕ ಚಿಂತನೆ, ಮರ್ಮಸ್ಪರ್ಶಿಯಾದ ಆತ್ಮಾವಲೋಕನ, ದೇವರಿಗಾಗಿ ಜೀವದ ತಳಮಳ, ಜ್ಞಾನಲಾಭಕ್ಕಾಗಿ ಸ್ವಾಹಂಕಾರ ಖಂಡನೆ, ದೇವರ ಸ್ವರೂಪ, ಆತನಿಗೂ ಮಾನವನಿಗೂ ಇರುವ ಸಂಬಂಧ, ಆತನ ಪರಮ ಕಾರುಣಿಕತ್ವ, ಮಾನವ ಭವದ ಭಾರ, ಮುಕ್ತಿಯ ದಾರಿ–ಮುಂತಾದವು ಹಲವಾರು ಗೀತೆಗಳ ವಸ್ತುಗಳಾಗಿವೆ. ಮಿಕ್ಕವು ಹರಿನಾಮವನ್ನು ಸ್ಮರಿಸಿರಿ, ಗೋವಿಂದನ ಮೇಲೆ ಮನವಿಡಿರಿ, ರಾಮನ ಪಾದದ ಮೇಲೆ ನಿಮ್ಮ ತಲೆಯಿರಿಸಿರಿ, ಐಹಿಕ ಸುಖಗಳ ಭ್ರಾಂತಿಯನ್ನು ತೊರೆಯಿರಿ – ಎಂದು ಮುಂತಾದ ಉಪದೇಶಗಳನ್ನು ಕೊಡುತ್ತವೆ. ಬರ್‌ಗೀತ್‌ಗಳಲ್ಲಿ ಪ್ರತಿಯೊಂದೂ ಗೋವಿಂದ ಚರಣವೇ ಶರಣವೆಂಬ ಮೊರೆಯಿಂದಲೂ ಸಂಕಟಗಳಿಂದ ಪಾರುಗಾಣಿಸೆಂಬ ಬಿನ್ನಪದ ದಿಂದಲೂ ಮುಗಿಯುತ್ತದೆ.

ಶಂಕರದೇವನ ಅತ್ಯುನ್ನತ ಭಾವನೆಗಳನ್ನು ಬರ್‌ಗೀತ್‌ಗಳಲ್ಲಿ ಕಾಣಬಹುದು. ಸರಳವೂ ಮನೋಹರವೂ ಆದ ಭಾಷೆಯಲ್ಲಿ ದಾರ್ಶನಿಕ ತತ್ತ್ವಗಳೂ ಆರ್ದ್ರಭಾವಗಳೂ ಮೇಳೈಸುವಂತೆ ಮಾಡಿ ಕವಿ ಇಲ್ಲಿ ತನ್ನ ಅಸಾಧಾರಣ ಸಾಮರ್ಥ್ಯವನ್ನು ಪ್ರಕಟಿಸಿದ್ದಾನೆ. ಮನಸ್ಸನ್ನು ಸೆರೆಹಿಡಿದು ಸಂತೋಷಗೊಳಿಸುವ ಅನೇಕ ಉಪಮೆಗಳು, ಉತ್ಪ್ರೇಕ್ಷೆಗಳು, ಯಮಕಗಳು ಮತ್ತು ಇತರ ಅಲಂಕಾರಗಳು ಈ ಗೀತಗಳಲ್ಲಿ ತುಂಬಿವೆ. ಬರ್‌ಗೀತಗಳ ಮೇಲೆ ಜನರ ಪ್ರೀತಿ ಬಹುಬೇಗ ಬೆಳೆಯಿತು. ಇಂಥ ಗೀತಗಳನ್ನು ಮುಂದೆ ಬಂದ ಕವಿಗಳು ಅಧಿಕವಾಗಿ ರಚಿಸತೊಡಗಿದರು. ಇವುಗಳಲ್ಲಿ ಅತ್ಯುತ್ತಮವಾದ ರಚನೆಗಳೆಂದರೆ ಸಂಗೀತ ನಿಪುಣನಾಗಿದ್ದ ಕವಿ ವಾಮದೇವನವು.

ಶಂಕರದೇವನ ಪ್ರಿಯ ಶಿಷ್ಯ ಮಾಧವದೇವ ಅಸ್ಸಾಮಿ ವೈಷ್ಣವ ಪ್ರಣಾಳಿಕೆಯಲ್ಲಿ ಎರಡನೆಯ ಮಹಾವ್ಯಕ್ತಿ. ಈ ಮಹಾಪುರುಷನ ಕೃತಿಗಳಿಗೆ ಅಸ್ಸಾಮ್ ಮಾರುಹೋಯಿತು. ಈತ ಆ ಗಗನ ತಲದಲ್ಲಿ ಒಂದು ನವಜ್ಯೋತಿಯನ್ನೇ ಬೆಳಗಿದ. ಲಕ್ಷ್ಮೀಪುರದ ಲೆಟೆಪುಖುಜರೀ ಎಂಬ ಗ್ರಾಮದಲ್ಲಿ ಈತ ಪ್ರ.ಶ. 1492 ರಲ್ಲಿ ಜನಿಸಿದ. ಈತನೊಬ್ಬ ಶಾಕ್ತ, ಆದರೆ ಶಂಕರದೇವನ ಸಂಪರ್ಕವೊದಗಿದ ಕೂಡಲೆ ವೈಷ್ಣವಭಕ್ತಿ ಪಂಥವನ್ನನುಸರಿಸಿದ. ಕಲಾಪೂರ್ಣನಾದ ಮಾಧವದೇವ ಶಂಕರದೇವನ ಆಪ್ತ ಮತ್ತು ನಿಷ್ಠ ಶಿಷ್ಯನಾಗಿ ಆತನನ್ನು ನೆರಳಿನಂತೆ ಅನುಸರಿಸತೊಡಗಿದ. ಈತನ ಮತಪರಿವರ್ತನೆಯಿಂದ ವೈಷ್ಣವ ಮತ ಬಹುಬೇಗ ಹರಡುವಂತಾಯಿತು. ಏಕೆಂದರೆ ಈತನಲ್ಲಿ ಬುದ್ಧಿಸಾಮರ್ಥ್ಯದ ಜೊತೆಗೆ ಸಮಾಜ ಪರಿಷ್ಕಾರಕನಿಗೆ, ಮತಪ್ರವರ್ತಕನಿಗೆ ಬೇಕಾದ ಅನೇಕ ಸದ್ಗುಣಗಳೂ ಇದ್ದವು. ಅಂದಿನ ಸಾಂಪ್ರದಾಯಿಕ ವಿದ್ಯೆಯಲ್ಲಿ ಪಂಡಿತನಾಗಿದ್ದ ಈತ ಸುಮಧುರ ಗಾಯಕನೂ ಆಗಿದ್ದ. ಶಂಕರದೇವನ ಇಷ್ಟಕ್ಕೆ ವಿರೋಧವಾಗಿಯೇ ಮಾಧವದೇವ ಆಮರಣಾಂತ ಬ್ರಹ್ಮಚಾರಿಯಾಗಿದ್ದ. ಆತನ ಈ ನಿಷ್ಠೆ ಕೇವಲೀಯರೆಂಬ ಆಜನ್ಮ ಬ್ರಹ್ಮಚಾರೀ ಪಂಥವೊಂದನ್ನು ಹುಟ್ಟು ಹಾಕಿದ. ಶಂಕರದೇವನ ತರುವಾಯ ಮಠಾಧಿಪತ್ಯ ಈತನಿಗೆ ಸಂದಿತು. ಅನೇಕ ವರ್ಷಗಳ ಕಾಲ ಧನ್ಯಜೀವನ ನಡೆಸಿ ಮಾಧವದೇವ ಕೂಚ್‌ಬಿಹಾರದಲ್ಲಿ ದೈವಾಧೀನನಾದ (ಪ್ರ.ಶ. 1596).

ಅಸ್ಸಾಮಿ ಸ್ತೋತ್ರಸಾಹಿತ್ಯದಲ್ಲಿ ಮಾಧವದೇವ ಅತ್ಯುಚ್ಚಸಿದ್ಧಿಯನ್ನು ತನ್ನ ನಾಮಘೋಷ ಅಥವಾ ಹಜಾರಿಘೋಷ (ಸಾವಿರ ದ್ವಿಪದಿಗಳು) ಎಂಬ ಗ್ರಂಥದಲ್ಲಿ ಪಡೆದ. ಇದನ್ನು ಎಲ್ಲೆಲ್ಲೂ ಅನೇಕ ಜನ ಓದುತ್ತಾರಲ್ಲದೆ ನೆನಪಿನಲ್ಲಿಟ್ಟುಕೊಂಡು ಧಾರ್ಮಿಕಪ್ರವಚನಗಳಲ್ಲಿ ಪ್ರಮಾಣವಾಕ್ಯಗಳಂತೆ ಉದ್ಧರಿಸುತ್ತಾರೆ. ಹೀಗಿರುವುದರಿಂದ ಇದು ನಿಸ್ಸಂದೇಹವಾಗಿ ವೈಷ್ಣವ ಮತಕ್ಕೆ ಒಂದು ಸ್ಥಿರವೂ ಶಾಶ್ವತವೂ ಆದ ಊರುಗೋಲಾಗಿದೆ. ಪಶ್ಚಾತ್ತಾಪ, ಬೇಡಿಕೆ, ಆತ್ಮಸಂಯಮ, ಆತ್ಮಾನುತಾಪ, ದೇವರಲ್ಲಿ ಭಕ್ತಿ, ಶ್ರದ್ಧೆ ಶರಣಾಗತಿಗಳ ಮೌಲ್ಯಪಾರಮ್ಯ–ಇವುಗಳನ್ನು ಕೀರ್ತಿಸುವ ಅನೇಕ ಸ್ತೋತ್ರಗಳು ನಾಮಘೋಷದಲ್ಲಿವೆ. ಪ್ರತಿಯೊಂದು ಸ್ತೋತ್ರದಲ್ಲೂ ಭಾವದ ತೀವ್ರ ಘೋಷವಿದೆ, ಅನಂದೋತ್ಕರ್ಷವಿದೆ. ಅದು ಸಮಸ್ತರ ಮನಸ್ಸನ್ನೂ ಮುಟ್ಟುವಂಥದು. ಇದರ ವಸ್ತು ನೀತಿಬೋಧೆ, ಗೀತೆ ಉಪನಿಷತ್ತುಗಳ ಜೊತೆಗೆ ನಿಲ್ಲುವ ಉದಾತ್ತ ಸಾಹಿತ್ಯ ಇದರದು. ಆಳವಾದ ಭಾವನೆಗಳು, ಕಾಣ್ಕೆಗಳ ಏಕತೆ, ಮಧುರ ವಾಗ್ವಿಲಾಸ ಇವುಗಳಿಂದ ನಾಮಘೋಷ ಒಂದು ಅತ್ಯಂತ ಶ್ರೇಷ್ಠ ಕಲಾಕೃತಿಯಾಗಿ ಪರಿಣಮಿಸಿ ಕವಿಯ ಪ್ರತಿಭೆಗೆ ಚಿರಂತನ ಸಾಕ್ಷಿಯಾಗಿ ನಿಂತಿದೆ.

ತನ್ನ ಬಡ್‌ಗೀತ್‌ಗಳಿಂದ ಮಾಧವದೇವ ಜನರ ಪ್ರೀತಿಯನ್ನು ತುಂಬ ಗಳಿಸಿದ. ಈ ಗಾಢಭಾವದ ಭಕ್ತಿಗಳಲ್ಲಿ ಆತನ ಮತನಿಷ್ಠೆ ಸಂಪೂರ್ಣ ಅಭಿವ್ಯಕ್ತಿ ಪಡೆಯಿತು. ಅನೇಕ ಗೀತಗಳಲ್ಲಿ ಪಶ್ಚಾತ್ತಾಪ, ಪೂರ್ವಾರ್ಜಿತ ಪಾಪಕ್ಕಾಗಿ ದೈನ್ಯ, ಆತ್ಮಾರ್ಪಣ ಭಾವ, ಪ್ರಪತ್ತಿಯೇ ಸರ್ವಪಾತಕನಾಶವೆಂಬ ಬುದ್ಧಿ–ಇವು ಪುಷ್ಪಗಳಿಂದ ಸೌರಭ ಹೇಗೋ ಹಾಗೆ ಸೂಸುತ್ತವೆ. ಇವುಗಳಲ್ಲಿ ಕೆಲವು ಶ್ರೀ ಬಾಲಕೃಷ್ಣನನ್ನೇ ಕೇಂದ್ರ ವ್ಯಕ್ತಿಯಾಗಿಟ್ಟುಕೊಂಡು ಬೃಂದಾವನದ ಸೊಬಗನ್ನು ಶ್ರೀಕೃಷ್ಣನ ಬಾಲ್ಯ ಮತ್ತು ನವತಾರುಣ್ಯಗಳನ್ನು ಬಹು ಸುಂದರವಾಗಿ ವರ್ಣಿಸುತ್ತವೆ. ಸಾಧಾರಣವಾಗಿ ಎಲ್ಲ ಬಾಲಕರಿಗೂ ನವತರುಣರಿಗೂ ಸಹಜವಾಗಿ ಬರುವ ಭಾವಗಳನ್ನೂ ಭಾವನೆಗಳನ್ನೂ ಪ್ರತಿಫಲಿಸುತ್ತವೆ. ಭಾಗವತದ ಪ್ರಕೃತ್ಯತೀತನೂ ಅಸಾಧಾರಣ ವ್ಯಕ್ತಿಯೂ ಆದ ಶ್ರೀಕೃಷ್ಣ ಇಲ್ಲಿ ತುಂಬ ಸರಳನೂ ಮಾನವೀಯನೂ ಆಗಿ ಕಂಗೊಳಿಸುತ್ತಾನೆ. ಪ್ರಕೃತಿಯ ಸೌಂದರ್ಯದೊಡನೆ ಬೆರೆತಿರುವ ಶ್ರೀಕೃಷ್ಣನ ಬಾಲಲೀಲೆಗಳು ಹೆಚ್ಚು ಜೀವಂತವಾಗಿಯೂ ಸಮಂಜಸವಾಗಿಯೂ ಇವೆ. ದಿನಬಳಕೆಯ ಪ್ರಸಂಗಗಳಿಗೂ ಮಾಧವದೇವನ ಮಾಯಾಲೇಖನಿ ಹೊಸ ಬೆರಗೊಂದನ್ನೂ ಹೊಸ ಅರ್ಥ ಮತ್ತು ಹೊಸ ಹರುಷವನ್ನೂ ಎರೆದಿದೆ. ಬಾಲಕೃಷ್ಣನಲ್ಲಿ ಬಾಲ್ಯದ ಅಮರ ಸ್ವಭಾವಗಳು ಎದ್ದುಕಾಣುತ್ತವೆ. ಈ ಕಾಲದ ಮಕ್ಕಳಂತೆ ಬಾಲಕೃಷ್ಣನೂ ಸರಳ; ಆತನ ಮಂದಸ್ಮಿತ ಅಮೃತವನ್ನು ವರ್ಷಿಸುವಂಥದು.

ಭಾಗವತದ ತರುವಾಯ, ವೈಷ್ಣವ ಕವಿಗಳ ಮೇಲೆ ತುಂಬ ಪ್ರಭಾವ ಬೀರಿದ ಮಹಾಕಾವ್ಯವೆಂದರೆ ವೈಷ್ಣವಪ್ರಸ್ಥಾನಗ್ರಂಥವೆಂದು ಪರಿಗಣಿತವಾದ ಮಹಾಭಾರತ. ವೈಷ್ಣವಕವಿಗಳು ಸಹಜವಾಗಿಯೇ ಈ ಗ್ರಂಥವನ್ನು ತಮ್ಮ ಮತ ಪ್ರಚಾರಕ್ಕೆ ಒಂದು ಸಾಧನವನ್ನಾಗಿ ಮಾಡಿಕೊಂಡರು. ಮಹಾಭಾರತದ ಒಂದು ಭಾಗವನ್ನು ಭಾಷಾಂತರಿಸುವ ಕೆಲಸದಲ್ಲೋ, ಅಥವಾ ಅಲ್ಲಿನ ಒಂದು ಕಥೆಯನ್ನು ತೆಗೆದುಕೊಂಡು ಉಪಾಖ್ಯಾನವಾಗಿ ಕತೆ ಹೇಳುವಲ್ಲೋ ಇಲ್ಲವೇ ವೈಷ್ಣವ ಧ್ಯೇಯಗಳಾದ ತ್ಯಾಗ, ಸರಳಜೀವನ, ಭೂತದಯೆ, ದಾನ, ಶ್ರದ್ಧೆ, ಸತ್ಯ, ಯಾತ್ರೆ, ಸಾಧುಸಂತರ ಸಾಹಿತ್ಯಾಧ್ಯಯನ ಮುಂತಾದುವನ್ನು ಜನರ ಮನಸ್ಸಿನಲ್ಲಿ ನೆಡಲೋ ಅನೇಕ ಕವಿಗಳು ತೊಡಗಿದರು. ಮಹಾಭಾರತವನ್ನು ಆಶ್ರಯಿಸಿ ಸಾಹಿತ್ಯವನ್ನು ನಿರ್ಮಿಸಿದ ಕವಿಗಳಲ್ಲಿ ಕವಿ ರಾಮಸರಸ್ವತಿ ಅಗ್ರಗಣ್ಯ. ರಾಮಸರಸ್ವತಿ ಒಬ್ಬ ಮಹಾಕವಿ. ಜನಪ್ರಿಯ ಕವಿ. ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ನರನಾರಾಯಣ ಎಂಬ ರಾಜನ ಆಶ್ರಯಕ್ಕೆ ತನ್ನ ಸಮಕಾಲೀನ ಕವಿಗಳೆಲ್ಲರನ್ನೂ ತಂದು ಅವರ ಸಾಹಿತ್ಯ ಕರ್ಮಗಳನ್ನೆಲ್ಲ ಒಮ್ಮೊಗವಾಗಿ ನಡೆಯುವಂತೆ ಮಾಡಿ ಖ್ಯಾತನಾಗಿದ್ದಾನೆ.

ಮಹಾಭಾರತದ ಭಾಷಾಂತರ ಅಸ್ಸಾಮಿ ಭಾಷೆಯನ್ನು ಬೆಳೆಸಿ ಅದರ ಸಾಹಿತ್ಯಕ್ಕೆ ಜನ ಒಲಿಯುವಂತೆ ಮಾಡಿತು. ಕಟ್ಟು ಕಥೆಗಳು, ಶೃಂಗಾರ ಕಥೆಗಳು, ಪೌರಾಣಿಕ ಕಥೆಗಳು, ಮುಂತಾದ ಚಿನ್ನದ ಗಣಿಗಳನ್ನದು ತೆರೆದು ತೋರಿತು. ಅಸ್ಸಾಮೀ ಭಾಷೆಯ ಆಧುನಿಕ ಸಾಹಿತಿಗಳೂ ಈ ಅಶೋಷ್ಯ ಜ್ಞಾನಾನಂದ ಮೂಲದಿಂದ ತಮ್ಮ ಸ್ಫೂರ್ತಿಯನ್ನು ಪಡೆಯುತ್ತಿದ್ದಾರೆ. ಗ್ರಾಮವಾಸಿಗಳಿಗೆ ಮಹಾಭಾರತ ಮನೋರಂಜಕವಾದ ಕಾವ್ಯ ಮಾತ್ರವಾಗಿರದೆ ಕಾಲಜ್ಞಾನದ ಪ್ರಮಾಣ ಗ್ರಂಥವೂ ಆಗಿದೆ. ಈ ಶಾಸ್ತ್ರ ಜನರ ಧಾರ್ಮಿಕ ಮತ್ತು ನೈತಿಕ ಅವಶ್ಯಕತೆಗಳನ್ನು ಪೂರೈಸಿಕೊಡುವುದಲ್ಲದೆ, ಅರ್ಥ ಕಾಮ ಮೋಕ್ಷ ಪುರುಷಾರ್ಥಗಳನ್ನೂ ಸಾಧಿಸಿ ಕೊಡುತ್ತದೆ ಎಂಬುದಾಗಿ ಶಲ್ಯಪರ್ವ ವಾಸ್ತವವಾಗಿಯೇ ನಿರೂಪಿಸಿದೆ.

ಅಸ್ಸಾಮಿನ ವೈಷ್ಣವಪಂಥ ಅಖಿಲಭಾರತೀಯ ವೈಷ್ಣವ ಪಂಥದ ಒಂದು ಅಂಗವಾಗಿತ್ತು. ಈ ಕಾರಣದಿಂದ ಅದು ಸಾಧಾರಣವಾಗಿ ಎಲ್ಲ ವೈಷ್ಣವರೂ ಅಂಗೀಕರಿಸಿದ ಪವಿತ್ರ ಗ್ರಂಥಗಳನ್ನೇ ತಾನೂ ಅಂಗೀಕರಿಸಿತಲ್ಲದೆ ತನ್ನದೇ ಆದ ದಾರ್ಶನಿಕ ಮತ್ತು ದೈವಶಾಸ್ತ್ರೀಯ ಗ್ರಂಥಗಳನ್ನು ಬೆಳೆಸಿಕೊಳ್ಳಲಿಲ್ಲ. ಅಲ್ಲದೆ, ಅಸ್ಸಾಮ್ ವೈಷ್ಣವಪಂಥ ಭಕ್ತಿ ಮತ್ತು ಶರಣಾಗತಿಗಳನ್ನು ಒತ್ತಿ ಹೇಳುತ್ತಿದ್ದುದರಿಂದ ಮತತತ್ತ್ವಕ್ಕೆ ಸಂಬಂಧಪಟ್ಟ ಗ್ರಂಥಗಳೂ ಹೆಚ್ಚಾಗಿ ಬೆಳೆಯಲು ಅವಕಾಶವಿರಲಿಲ್ಲ. ವೈಷ್ಣವ ತತ್ತ್ವ ಮತ್ತು ದೈವಶಾಸ್ತ್ರಗಳನ್ನು ಕುರಿತ ಕೆಲವು ಸಾರಸಂಗ್ರಹಗಳ ಪೈಕಿ ಶಂಕರದೇವನ ಭಕ್ತಿರತ್ನಾಕರ, ಭಕ್ತಿಪ್ರದೀಪ ಎಂಬವು ಹೆಸರಾದವು. ಭಕ್ತಿರತ್ನಾವಳಿಯ ಜೊತೆಗೆ ಮಾಧವದೇವನ 'ನಾಮಘೋಷ'ವನ್ನೂ ವೈಷ್ಣವ ಸಿದ್ಧಾಂತದ ಪ್ರಮಾಣಗ್ರಂಥವೆಂದು ಭಾವಿಸಲಾಗಿದೆ. ಸಂಸ್ಕೃತದಲ್ಲಿರುವ ಭಟ್ಟದೇವನ ಭಕ್ತಿವಿವೇಕ ಮತ್ತು ಭಕ್ತಿಸಾರಗಳೂ ರಾಮಚರಣ ಠಾಕೂರನ ಭಕ್ತಿರತ್ನ, ನರೋತ್ತಮ ಠಾಕೂರನ ಭಕ್ತಿಪ್ರೇಮಾವಳಿ, ಗೋಪಾಲಮಿಶ್ರನ ಘೋಷಾರತ್ನ ಇವೂ ವಿದ್ವಾಪೂರ್ಣವೂ ಸಪ್ರಮಾಣವೂ ಅದ ವಿಷಯನಿರೂಪಣೆಯ ದೆಸೆಯಿಂದ ಅಸ್ಸಾಮೀ ವೈಷ್ಣವಧರ್ಮದಲ್ಲಿ ಗಣ್ಯಸ್ಥಾನ ಪಡೆದಿವೆ.

ವೈಷ್ಣವ ಲೇಖಕರು ಅಸ್ಸಾಮಿ ದಾರ್ಶನಿಕ ಲೇಖನಗಳಿಗೆ ಕೊಟ್ಟ ಒಂದು ಮುಖ್ಯ ಕೊಡುಗೆಯೆಂದರೆ ಭಗವದ್ಗೀತೆಯ ಮೇಲೆ ಪದ್ಯದಲ್ಲೂ ಗದ್ಯದಲ್ಲೂ ರಚಿಸಿದ ವಿಪುಲ ವ್ಯಾಖ್ಯೆಗಳು. ಶಂಕರದೇವ ಮತ್ತು ಮಾಧವದೇವ ಎಂಬಿಬ್ಬರು ಸಾಧುಗಳು ತಮ್ಮ ಭಕ್ತಿ

ಮುಕ್ತಿ ಮತ್ತು ಅವತಾರ ತತ್ತ್ವಗಳನ್ನು ನಿರೂಪಿಸುವುದಕ್ಕಾಗಿ ಭಗವದ್ಗೀತೆಯ ಹಲವಾರು ಪ್ರಸಂಗೋಚಿತ ಪದ್ಯಗಳನ್ನು ಅಸ್ಸಾಮೀ ಭಾಷೆಗೆ ಭಾಷಾಂತರಿಸಿದರು; ಆದರೆ ಗೀತೆಯನ್ನು ಸಮಗ್ರವಾಗಿ ಭಾಷಾಂತರಿಸಿರುವ ಯಾವೊಂದು ಗ್ರಂಥವೂ ಇರಲಿಲ್ಲ. ಶ್ರೀಧರಸ್ವಾಮಿಯ ವ್ಯಾಖ್ಯಾನವನ್ನು ಅನುಸರಿಸಿ ಈ ಗ್ರಂಥವನ್ನು ಗದ್ಯದಲ್ಲಿ ಸಮಗ್ರವಾಗಿ ಅನುವಾದ ಮಾಡಿದ ಕೆಲಸವನ್ನು ಮೊಟ್ಟಮೊದಲು ಭಟ್ಟದೇವ ಕೈಗೊಂಡ. ಆದರೆ ಇದರ ಪದ್ಯಾನುವಾದವನ್ನು ಕಾಮರೂಪನಿವಾಸಿಯಾದ ಗೋವಿಂದಮಿಶ್ರ ಮಾಡಿದ. ಈ ಭಾಷಾಂತರದಲ್ಲಿ ಕಾವ್ಯಗುಣವೂ ಸಶಕ್ತವಾದ ಭಾಷಾಪ್ರಭುತ್ವವೂ ಎದ್ದುಕಾಣುತ್ತದೆ. ಈತನ ಭಾಷೆ ಸರಳವಾಗಿಯೂ ಚೆನ್ನಾಗಿ ಕಡೆದಂತೆಯೂ ಸುಂದರವಾಗಿಯೂ ನೆನಪಿನಲ್ಲಿಡಲು ಸುಲಭವಾಗಿಯೂ ಇವೆ. ಗೀತೆಯ ಗದ್ಯಭಾಷಾಂತರವನ್ನು ಭಟ್ಟದೇವನೆಂದು ಪ್ರಕೀರ್ತಿತನಾದ ವೈಕುಂಠನಾಥ ಕವಿರತ್ನ ಭಾಗವತ ಭಟ್ಟಾಚಾರ್ಯ (1558 –1638) ಕಥಾಭಾಗವತ ಮತ್ತು ಕಥಾಗೀತಗಳನ್ನು ರಚಿಸಿದ. ಇವೆರಡೂ ಗದ್ಯದಲ್ಲಿವೆ. ಕಥಾಗೀತ ಬಹಳ ಹಿಂದೆಯೇ ರಚಿತವಾದ ಕೃತಿ ಎಂಬುದನ್ನು ಗಮನಿಸಿ ಖ್ಯಾತವಿದ್ವಾಂಸ ಆಚಾರ್ಯ ಪಿ.ಸಿ.ರೇ "ಹದಿನಾರನೆಯ ಶತಮಾನದಲ್ಲಿ ಭಟ್ಟದೇವ ರಚಿಸಿದ ಗದ್ಯಗೀತೆ ಅಂಥ ಬರವಣಿಗೆಗಳ ಪೈಕಿ ಅಸದೃಶವಾಗಿದೆ. ಅದೊಂದು ಅನರ್ಘ್ಯ ರತ್ನ. ಹದಿನಾರನೆಯ ಶತಮಾನದಷ್ಟು ಹಿಂದಿನ ಕಾಲದಲ್ಲೇ ಅಸ್ಸಾಮಿ ಗದ್ಯ, ಪ್ರಾಯಶಃ ಇಂಗ್ಲೆಂಡಿನ ಹೂಕರ್ ಮತ್ತು ಲ್ಯಾಟಿಮರ್‌ರ ಬರೆಹಗಳನ್ನು ಬಿಟ್ಟರೆ, ಪ್ರಪಂಚದ ಮತ್ತಾವ ಸಾಹಿತ್ಯದಲ್ಲೂ ಕಂಡುಬರದ ಮಟ್ಟವನ್ನು ಮುಟ್ಟಿತ್ತು"–ಎಂದಿದ್ದಾನೆ. ಸತ್ರ ಸಂಸ್ಥೆಗಳ ಆಸರೆಯಲ್ಲಿ ವರ್ಧಿಸಿದ ವೈಷ್ಣವ ಧರ್ಮಪ್ರಗತಿಯ ಒಂದು ಕುಡಿಯಂತೆ ಒಡೆದು ಬಂದು ಬೆಳೆದು ಮತ್ತೊಂದು ಮುಖ್ಯ ಸಾಹಿತ್ಯಶಾಖೆ ಯಾವುದೆಂದರೆ ಚರಿತ ಪುಥಿಗಳು, ಭಕ್ತರಿಗೆ ಧಾರ್ಮಿಕ ಭಾವನೆಗಳ ಸ್ಫೂರ್ತಿಯುಂಟಾಗಲೆಂದು ಈಗಲೂ ಈ ಸಂತರ ಜೀವನಚರಿತ್ರೆಗಳನ್ನು ಸಾಮೂಹಿಕ ಪ್ರಾರ್ಥನೆಗಳಾದ ಅನಂತರ ಹೇಳುತ್ತಾರೆ. ಕಥಾಗುರುಚರಿತದ (ಶಂಕರದೇವ ಮತ್ತು ಮಾಧವದೇವರ ಗದ್ಯ ಜೀವನಚರಿತ್ರೆ) ಪ್ರಕಾರ ಈ ಸಂಪ್ರದಾಯವನ್ನು ಮೊದಲು ಆಚರಣೆಗೆ ತಂದವ ಮಾಧವದೇವ. ತನ್ನ ಗುರುವಿನ ಜೀವನಚರಿತ್ರೆಯನ್ನು ಆತ ಪ್ರತಿನಿತ್ಯವೂ ಪಾರಾಯಣ ಮಾಡಿ ಈ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ.

ವೈಷ್ಣವ ಧರ್ಮದ ಪುನರುಜ್ಜೀವನ ಅಸ್ಸಾಮಿ ಸಾಹಿತ್ಯದಲ್ಲಿ ರಾಷ್ಟ್ರೀಯ ಜೀವನದ ಇತರ ಮುಖಗಳಲ್ಲಿ ಹೇಗೋ ಹಾಗೆ, ಒಂದು ಹೊಸ ಯುಗವನ್ನು ತೆರೆಯಿತು. ಅದೊಂದು ವಿಸ್ತಾರವಾದ ಅವಧಿ. ತರುಣ ವಿದ್ಯಾರ್ಥಿಗಳು ವಾರಾಣಸಿಗೆ ತಂಡ ತಂಡದಲ್ಲಿ ಹೋಗಿ, ಶಾಸ್ತ್ರಗಳಲ್ಲಿ ಪರಿಣಿತರಾಗಿ, ನಾಗರಿಕ ಅಭಿರುಚಿಗಳನ್ನು ಪಡೆದು, ಅವುಗಳನ್ನು ತಮ್ಮ ಸ್ವಂತ ದೇಶಗಳಿಗೊಯ್ಯುತ್ತಿದ್ದರು. ಸಾಧುಪುರುಷರ ದರ್ಶನ ಮಾಡಿ ತಮ್ಮ ಮನಃಕ್ಷೇತ್ರವನ್ನು ವಿಸ್ತರಿಸಿಕೊಳ್ಳಲು ಜನ ತೀರ್ಥಯಾತ್ರೆಗಳನ್ನು ಕೈಗೊಳ್ಳುತ್ತಿದ್ದರು. ಅನೇಕ ವೇಳೆ ಅವುಗಳ ಯಾತ್ರೆ ವಿಜಯಯಾತ್ರೆಯಾಗಿ ಪರಿಣಮಿಸುತ್ತಿತ್ತು. ಆ ಕಾಲದಲ್ಲಿ ಎಲ್ಲ ಶ್ರೇಷ್ಠ ಕವಿಗಳಿಗೂ ನಿಯತಗಳಿಗೂ ರಾಜಾಶ್ರಯ ದೊರೆಯುತ್ತಿತ್ತು. ಕೋಚ್ ದೊರೆಗಳು ಕಲೆ ಮತ್ತು ವಿದ್ಯೆಗಳ ಉದಾರ ಪೋಷಕರಾಗಿದ್ದರು. ರಾಮಸರಸ್ವತಿ ನರನಾರಾಯಣ ದೊರೆಯನ್ನು ಕುರಿತು ತನ್ನ ಭಣಿತಗಳಲ್ಲೊಂದರಲ್ಲಿ ಹೇಳಿರುವುದನ್ನು ಓದಿದರೆ ಆ ಕಾಲದ ರಾಜಾಶ್ರಯ ಎಂಥದೆಂಬುದು ಗೊತ್ತಾಗುತ್ತದೆ. ಆತ ಬರೆಯುತ್ತಾನೆ – 'ನನ್ನ ಪ್ರಭುವು ಅಸ್ಸಾಮಿ ಪದ್ಯಗಳಲ್ಲಿ ಮಹಾಭಾರತವನ್ನು ಬರೆಯಲು ನನಗೆ ನಿಯಮಿಸಿದ್ದಾನೆ. ರಾಜಾಸ್ಥಾನದಲ್ಲಿದ್ದ ಎಲ್ಲ ವ್ಯಾಖ್ಯಾನಗಳನ್ನೂ ನನ್ನ ಮುಂದೆ ತೆರೆದಿಟ್ಟಿದ್ದಾನೆ. ಗಾಡಿಗಳ ತುಂಬ ಗ್ರಂಥಗಳನ್ನು ನನ್ನ ಅಂಗಳದಲ್ಲಿ ರಾಶಿಹಾಕಿದ್ದಾನೆ. ಸಾಕಷ್ಟು ಹಣ, ಬಟ್ಟೆ, ಉಡಿಗೆತೊಡಿಗೆಗಳು ಸೇವಕರನ್ನು ಕೊಟ್ಟು ಈ ಕಾರ್ಯವನ್ನು ನಡೆಸಲು ಪ್ರೋತ್ಸಾಹಿಸಿದ್ದಾನೆ.'

ಸುಖಾಫಾನ ಮುಂದಾಳುತನದಲ್ಲಿ ಅಹೋಮ್ ಎಂಬ ಒಂದು ದಾಳಿಕಾರರ ತಂಡ ಈ ದೇಶದ ಪೂರ್ವಭಾಗವನ್ನು ಮೊದಲು ಜಯಿಸಿ (1215) ಸಂಪೂರ್ಣವಾಗಿ ಆರುನೂರು ವರ್ಷಗಳ ಕಾಲ ತನ್ನ ಆಳ್ವಿಕೆ ನಡೆಸಿತು. ಅಹೋಮ್ ಪ್ರಭುತ್ವ ಒಳ್ಳೆಯ ಮತ್ತು ಸಮರ್ಥವಾದ ಆಡಳಿತವನ್ನು ಶತಮಾನಗಳ ಕಾಲ ಅಸ್ಸಾಮಿಗೆ ನಿಸ್ಸಂದೇಹವಾಗಿ ಕೊಟ್ಟಿತು. ಅದು ಮುಸಲ್ಮಾನರ ಅನೇಕ ದಾಳಿಗಳನ್ನು ಎದುರಿಸಿ ದೇಶದಲ್ಲಿ ಶಾಂತಿ ಸುಭಿಕ್ಷ ಮತ್ತು ಸುವ್ಯವಸ್ಥೆಗಳನ್ನು ನೆಲೆಗೊಳಿಸಿತು. ಅಸ್ಸಾಮಿನಲ್ಲಿಯೂ ಗಿರಿಜನ ಸೀಮಾಪ್ರಾಂತಗಳಲ್ಲೂ ಏರ್ಪಟ್ಟಿದ್ದ ಅನೇಕ ಪಾಳೆಯಪಟ್ಟುಗಳನ್ನು ನಿರ್ಮೂಲನ ಮಾಡಿತು. ಈ ಪ್ರಕಾರವಾಗಿ ಭೌಗೋಳಿಕವಾಗಿಯೂ ಒಂದೆನಿಸಿದ ಅಹೋಮ್ ರಾಜ್ಯಭಾರದ ಒಂದು ಪ್ರಧಾನಸಿದ್ಧಿ ಯಾವುದೆಂದರೆ ದೇಶದ ರಾಜಕೀಯ ಐಕ್ಯ. ಇದು ಮುಂದೆ ಸಮಾಜ, ಸಂಸ್ಕೃತಿ, ಮತ್ತು ಭಾಷೆಗಳ ಐಕ್ಯವನ್ನು ಸುಗಮವಾಗಿ ಮಾಡಿತು.

ಇದಾದ ಮೇಲೆ, ಅಹೋಮ್ ರಾಜಗುರು ಗಾರ್‌ಗಾಂವ್, ರಂಗಪುರ, ಜೋರ್‌ಹಾತ್, ಗೌಹಾತಿ ಮತ್ತು ಇತರ ಸ್ಥಳಗಳಲ್ಲಿ ನಿರ್ಮಾಣಮಾಡಿದ ಚಿಕ್ಕ ದೊಡ್ಡನಗರಗಳು ಹೊಸದೊಂದು ನಾಗರಿಕ ಸಂಸ್ಕೃತಿಯನ್ನು ಮೂಡಿಸಿದವು. ಸಿರಿವಂತರೂ ಸೊಗಸುಗಾರರೂ ಆದ ಅಹೋಮ್ ಶ್ರೀಮಂತವರ್ಗದವರೂ ನಗರವಾಸಿಗಳೂ ತಮ್ಮ ಸಭ್ಯ ವರ್ತನೆ, ಸಮಾಜ ಮರ್ಯಾದೆ, ಉಡಿಗೆ ತೊಡಿಗೆ, ಜೀವನಕ್ರಮ ಮತ್ತು ವಿದ್ಯೆಗಳಲ್ಲಿ ತಮ್ಮ ನಾಗರಿಕ ಸಂಸ್ಕೃತಿಯನ್ನು ಪ್ರಕಟಪಡಿಸುತ್ತಿದ್ದರು. ಈ ಹೊಸ ಸಂಸ್ಕೃತಿ ಒಂದೇ ವಿಧವಾದ ಹಳೆಯ ಬದುಕನ್ನು ಬಾಳುತ್ತಿದ್ದ ಸಂಪ್ರದಾಯನಿಷ್ಠರೂ ಜಡರೂ ಆದ ಗ್ರಾಮವಾಸಿಗಳಿಂದ ಇವರನ್ನು ಪ್ರತ್ಯೇಕಿಸಿತು. ಈ ಹೊಸ ನಾಗರಿಕ ಸಮಾಜ, ಚಿಕ್ಕದಾಗಿದ್ದರೂ ಏಕಪ್ರಕಾರವಾಗಿ ಜೀವಿಸುತ್ತಿದ್ದ ಸಮಾಜದ ಜನರ ಕಲ್ಪನಾಶಕ್ತಿಯನ್ನು ಪ್ರಚೋದಿಸಿ ಅವರು ಹೊಸ ಭಾವನೆಗಳನ್ನು ಸ್ವೀಕರಿಸಿ ಲೌಕಿಕ ವಿಷಯಗಳನ್ನು ಅದೇ ದೃಷ್ಟಿಯಿಂದ ನೋಡುವ ಪ್ರವೃತ್ತಿಯನ್ನು ಬೆಳೆಸಿಕೊಂಡು ತಮ್ಮದೇ ಆದ ಸಮಾಜ ಮತ್ತು ಮತಗಳ ಸಣ್ಣಕೂಟಕ್ಕೆ ಅಂಟಿಕೊಳ್ಳದೆ, ಇತರ ಸಂಪರ್ಕವನ್ನು ಹೊಂದಿ ವಿಶಾಲದೃಷ್ಟಿಯನ್ನು ಪಡೆಯುವಂತೆ ಪ್ರೇರೇಪಿಸಿತು. ನಾಗರಿಕ ಸಮಾಜ ಜೀವನದ ಉನ್ನತಸ್ತರಗಳಲ್ಲಿ ಬೆಳಗುವ ಕಲೆ, ಸಾಹಿತ್ಯ, ಸಂಗೀತಾದಿಗಳಲ್ಲಿ ಜನರು ಆಸಕ್ತರಾಗುವಂತೆ ಮಾಡಿತು. ರಾಜರೂ ಮಂತ್ರಿಗಳೂ ಶ್ರೀಮಂತರೂ ಕವಿಗಳಿಗೂ ಲೇಖಕರಿಗೂ ಭೂಮಿಯನ್ನು ಕೊಟ್ಟು ಪೋಷಿಸುತ್ತಿದ್ದರು. ಹೀಗೆ ಆಶ್ರಯ ಪಡೆದ ಕವಿಗಳೂ ಲೇಖಕರೂ ತಮ್ಮ ಕವಿತೆಗಳಲ್ಲಿ ಈ ಆಶ್ರಯದಾತರನ್ನು ಹೊಗಳಿದ್ದಾರೆ. ರಾಜರನ್ನೂ ಶ್ರೀಮಂತರನ್ನೂ ಸ್ತುತಿಸುವ ಕವಿತೆಗಳಲ್ಲಿ ಹೊಸದೊಂದು ಲಕ್ಷಣ ಮೂಡಿತು. ಇದು ಕಾಣಿಸಿಕೊಂಡುದು ಅಹೋಮ್ ರಾಜರ ಉದಾರ ಆಶ್ರಯ ಪಡೆದ ರಾಮಮಿಶ್ರ, ಕವಿರಾಜಚಕ್ರವರ್ತಿ, ರುಚಿನಾಥ ಕಂದಲಿ, ವಿದ್ಯಾಚಂದ್ರ ಕವಿಶೇಖರ ಮುಂತಾದವರ ಪ್ರಭುಗುಣ ಸಂಕೀರ್ತನ ರೂಪವಾದ ಕವಿತೆಗಳಲ್ಲಿ. ಈ ಸ್ತುತಿಕವಿತೆಗಳು ಕೃತಕವಾದ ಸಾಹಿತ್ಯಾಲಂಕಾರಗಳಿಂದ ಮಿರುಗಿ ಕಳಕಳಿಸುತ್ತ ಯಾವ ವರ್ಗದ ಜನಕ್ಕಾಗಿ ಅವು ರಚಿತವಾದುವೋ ಅವರ ಅಭಿರುಚಿಯಂತೆ ರೂಪಿತವಾಗುತ್ತಿದ್ದವು. ಅದರೆ ಅಹೋಮ್ ರಾಜಾಸ್ಥಾನ ವೈಭವೋಪೇತವಾದುದು. ಈ ವೈಭವ ಜನಗಳ ಅಭಿರುಚಿಯನ್ನು ಮಾರ್ಪಡಿಸಿತು. ಆದುದರಿಂದಲೇ ಈ ಕಾಲದ ಕವಿತೆಗಳಲ್ಲಿ ಕೃತಕತೆ ತಲೆದೋರಿದೆ. ವೈಷ್ಣವಯುಗದಲ್ಲಿ ಕವಿತೆ ನೈಜವೂ ಉದಾತ್ತವೂ ಆಗಿತ್ತು. ತಪಸ್ಸು ಮತ್ತು ಅಪರಿಗ್ರಹಗಳನ್ನೇ ಧ್ಯೇಯವಾಗಿಟ್ಟುಕೊಂಡಿದ್ದ ವೈಷ್ಣವ ಸಾಹಿತ್ಯವನ್ನು ವಿಚಾರ ವೈಭವಗಳಿಗೂ ಶೃಂಗಾರ ವಸ್ತುಗಳಿಗೂ ಮಾರುಹೋಗಿದ್ದ ಅಹೋಂ ರಾಜಪರಿವಾರ ಅಡಗಿಸಿತು. ಪ್ರಣಯಕ್ಕೂ ಪ್ರೇಮವಿಲಾಸಕ್ಕೂ ರಾಜಾಸ್ಥಾನ ಆಕರವಾಯಿತು. ರಾಜಕಾರಣಿಗಳು ಭಕ್ತಿಕವಿತೆಗಳಿಂತಲೂ ಹೆಚ್ಚಾಗಿ ಶೃಂಗಾರ ಕವಿತೆಗಳಿಗೇ ಒಲಿದಿದ್ದರು. ಆದುದರಿಂದ ಕವಿಗಳು ಕಾಲ್ಪನಿಕ ಕಥೆಗಳನ್ನು ರಚಿಸಿ ಧಾರ್ಮಿಕ ಕಥೆಗಳಿಗೂ ಕಾಮನಬಿಲ್ಲಿನ ಏಳು ಬಣ್ಣಗಳನ್ನು ಹಚ್ಚುತ್ತಿದ್ದರು. ಪುರಾಣಗಳು ಪ್ರಣಯಕಥೆಗಳ ಗಣಿಗಳಾಗಿದ್ದುದರಿಂದ ಅಹೋಮ್ ಪ್ರಭುಗಳು ಅವುಗಳನ್ನು ಅಸ್ಸಾಮೀ ಭಾಷೆಗೆ ಪರಿವರ್ತಿಸಲು ಕವಿಗಳನ್ನೂ ಲೇಖಕರನ್ನೂ ಪ್ರೋತ್ಸಾಹಿಸುತ್ತಿದ್ದರು. ವೈಷ್ಣವ ಯುಗಕ್ಕೂ ಅಹೋಮ್ ಯುಗಕ್ಕೂ ಇರುವ ಗಮನಾರ್ಹ ವ್ಯತ್ಯಾಸವೆಂದರೆ ಮೊದಲನೆಯದರಲ್ಲಿ ದೇವರು ಕೇಂದ್ರವಸ್ತು; ಎರಡನೆಯದರಲ್ಲಿ ಮನುಷ್ಯ. ಸಾಹಿತ್ಯ ಈಗ ಬೇರೆ ಲೋಕವನ್ನು ಕುರಿತುದಾಗಿರಲಿಲ್ಲ, ಧ್ಯೇಯಪರವೂ ಆಗಿರಲಿಲ್ಲ. ವಾಸ್ತವದತ್ತ ಅದು ಮುಖ ಮಾಡಿತ್ತು. ಕವಿತೆಗಳಲ್ಲೂ ಕಾಲ್ಪನಿಕ ಕಥೆಗಳಲ್ಲೂ ನಿತ್ಯ ಜೀವನದ ಸಾಮಾನ್ಯ ಮನುಷ್ಯರೂ ಸ್ತ್ರೀಯರೂ ಕವಿಯ ಗಮನವನ್ನು ತಮ್ಮತ್ತ ಸೆಳೆದಿದ್ದರು.

ಅಹೋಮ್ ರಾಜಾಸ್ಥಾನದ ಪ್ರಸಂಗಗಳನ್ನು ಚಿತ್ರಿಸುವ ಬುರಂಜೀಗಳಲ್ಲಿ ಅಸ್ಸಾಮಿ ಸಾಹಿತ್ಯದ ಬಹಳ ಹೆಚ್ಚಿನ ಫಸಲು ಗೋಚರಿಸುತ್ತದೆ. ದೊರೆಗಳು, ಸಾಮಂತ ರಾಜರು ಮತ್ತು ರಾಜ್ಯದ ಉನ್ನತಾಧಿಕಾರಿಗಳ ನಿಯಮದ ಮೇರೆಗೆ ಬುರಂಜೀಗಳು ಸಂಕಲಿತವಾಗುತ್ತಿದ್ದವು. ಏಕೆಂದರೆ ಈ ಪ್ರಸಂಗಗಳಿಗೆ ಆಧಾರವಾಗಿರುವ ಸರ್ಕಾರದ ಕಾಗದ ಪತ್ರಗಳನ್ನು ನೋಡಲು ಇವರ ಅನುಮತಿ ಅಗತ್ಯವಾಗಿತ್ತು. ಕಾಗದ ಪತ್ರಗಳು ಯಾವುವೆಂದರೆ, ಮುಖ್ಯವಾಗಿ ಸೈನ್ಯಾಧಿಪತಿಗಳೂ ಗಡಿನಾಡಿನ ರಾಜ್ಯಪಾಲರೂ ಕಾಲಕಾಲಕ್ಕೆ ರಾಜಾಸ್ಥಾನಕ್ಕೆ ಕಳುಹಿಸುತ್ತಿದ್ದ ವರದಿಗಳು, ಪರದೇಶದ ರಾಜರು ಮತ್ತು ಮಿತ್ರರಿಂದ ಬರುವ ಹಾಗೂ ಅವರಿಗೆ ಕಳುಹಿಸುವ ರಾಜಕೀಯ ಪತ್ರಗಳು, ಪ್ರಭುಗಳಿಗೂ ಮಂತ್ರಿಗಳಿಗೂ ಅದರ ಕೊನೆಯ ತೀರ್ಮಾನಕ್ಕಾಗಿ ಕೆಳಗಿನಿಂದ ಕಳಿಸುವ ನ್ಯಾಯ ಮತ್ತು ಆದಾಯಗಳಿಗೆ ಸಂಬಂಧಪಟ್ಟ ಕಾಗದಪತ್ರಗಳು, ರಾಜಾಸ್ಥಾನದ ಸಮಸ್ತ ದೈನಂದಿನ ವ್ಯವಹಾರಗಳನ್ನೂ ಜರುಗಿದ ಕಾರ್ಯಗಳನ್ನೂ ಮುಖ್ಯ ಹೇಳಿಕೆಗಳನ್ನೂ ವಿಶ್ವಾಸಾರ್ಹ ಪ್ರತ್ಯಕ್ಷ ಸಂಗತಿಗಳ ವರದಿಗಳನ್ನೂ ಒಳಗೊಂಡಿರುವ ದಾಖಲೆಗಳು. ಅಸ್ಸಾಮೀ ಸಾಹಿತ್ಯದಲ್ಲಿ ಹಿಂದೆಂದೂ ಕಾಣದ ಸುವರ್ಣಾಧ್ಯಾಯಗಳನ್ನೊಳಗೊಂಡಿದೆ, ಈ ಬುರಂಜೀಗಳು. ಇವುಗಳ ಮೂಲಕವೇ ಆಧುನಿಕ ಅಸ್ಸಾಮೀ ಗದ್ಯ ತನ್ನ ಸಂಪೂರ್ಣ ಸಜ್ಜಿನಲ್ಲಿ ಮೈದೋರುತ್ತದೆ. ಈ ಅಸದೃಶವಾದ ಐತಿಹಾಸಿಕ ಸಾಹಿತ್ಯ ಸಂಗತಿಗಳ ಬಗ್ಗೆ ಸರ್ ಜಿ. ಎ. ಗ್ರಿಯರ್‌ಸನ್ 'ಅಸ್ಸಾಮಿಗಳು ತಮ್ಮ ರಾಷ್ಟ್ರೀಯ ಸಾಹಿತ್ಯದ ವಿಷಯದಲ್ಲಿ ನ್ಯಾಯವಾಗಿಯೇ ತುಂಬ ಅಭಿಮಾನಶಾಲಿಗಳಾಗಿದ್ದಾರೆ. ಭಾರತದ ಎಲ್ಲ ಕಡೆಗಳಲ್ಲೂ ಯಾವ ಕೊರತೆ ಕಾಣುತ್ತದೋ ಆ ಸಾಹಿತ್ಯ ಶಾಖೆಯಲ್ಲೇ ಅಸ್ಸಾಮಿ ಜನರು ಶ್ರೀಮಂತರಾಗಿರುವುದು ಒಂದು ಸೋಜಿಗದ ಸಂಗತಿ. ಐತಿಹಾಸಿಕ ಕೃತಿಗಳಾದ ಬುರಂಜೀಗಳು ಅನೇಕವಾಗಿವೆ; ಇವುಗಳ ಗಾತ್ರ ತುಂಬ ದೊಡ್ಡದು. ಅಸ್ಸಾಮಿ ಗೃಹಸ್ಥನಿಗೆ ಬುರಂಜೀಗಳ ತಿಳುವಳಿಕೆ ಅತ್ಯಾವಶ್ಯಕ' ಎಂದಿದ್ದಾನೆ. ಬುರಂಜೀಗಳ ಸಂಕಲನ ಒಂದು ಪವಿತ್ರಕಾರ್ಯವೆನಿಸಿತ್ತಾದ್ದರಿಂದ ಅದರ ಬರವಣಿಗೆ ಯನ್ನು ದೇವತಾಸ್ತುತಿಯಿಂದ

ಪ್ರಾರಂಭಿಸುವುದು ರೂಢಿಯಾಗಿದೆ. ಸಾಮಾನ್ಯವಾಗಿ ರಾಜ್ಯದ ವ್ಯವಹಾರವನ್ನು ಸಮಗ್ರವಾಗಿ ಬಲ್ಲ ಜನಗಳೇ ಇವನ್ನು ರಚಿಸಲು ತೊಡಗುತ್ತಿದ್ದರು. ಈಗ ಉಪಲಬ್ಧವಾಗಿರುವ ಅನೇಕ ಬುರಂಜೀಗಳನ್ನು ಬರೆದವರು ಸರ್ಕಾರದ ಉನ್ನತಾಧಿಕಾರಿಗ ಳಾಗಿದ್ದವರು. ಆದುದರಿಂದ ಈ ಇತಿಹಾಸಗಳ ಭಾಷೆ ಬಹಳ ಗಂಭೀರವಾಗಿದೆ, ನಾಜೂಕಾಗಿದೆ. ಇವು ವಾಸ್ತವ ಸಂಗತಿಗಳ ವರದಿಗಳಾಗಿರುವುದರಿಂದ ಇವನ್ನು ಭಾವೋದ್ರೇಕ ಗಳಿಲ್ಲದ ನಿರಲಂಕಾರಿಕ ಮಾತುಗಳಲ್ಲಿ ಬರೆಯಲಾಗಿದೆ. ನೇರವೂ ಸರಳವೂ ಅಸಂದಿಗ್ಧವೂ ಆದ ಮಾತುಗಳಲ್ಲಿ ಈ ಗ್ರಂಥಗಳು ಮನೋಹರವಾಗಿ ನಮ್ಮ ಮೆಚ್ಚುಗೆಯನ್ನು ಗಳಿಸುತ್ತವೆ.

ಗದ್ಯದಲ್ಲೋ ಪದ್ಯದಲ್ಲೋ ರಚಿತವಾಗಿರುವ ಮತ್ತೊಂದು ಸಾಹಿತ್ಯ ಪ್ರಕಾರವಿದೆ. ಅದನ್ನು ಸಾಮಾನ್ಯವಾಗಿ ವಂಶಾವಳಿ ಎಂದು ಕರೆಯುತ್ತಾರೆ. ರಾಜರ ವಿವಿಧ ವಂಶಾವಳಿಯ ಚರಿತ್ರೆಯನ್ನು ಉಲ್ಲೇಖಿಸಿರುವುದರ ಜೊತೆಗೆ ವಂಶಾವಳಿಗಳು ಪ್ರಮುಖರಾದ ಶ್ರೀಮಂತರ ಜೀವನಚರಿತ್ರೆ ಮತ್ತು ಪುರೋಭಿವೃದ್ಧಿಗಳನ್ನೂ ನಮೂದಿಸುತ್ತವೆ. ರಾಜರಿಂದ ದತ್ತಿಗಳನ್ನೋ ಅಧಿಕಾರಿಗಳನ್ನೋ ಪಡೆಯುವ ಸಲುವಾಗಿ ಮತ್ತು ಇತರ ಕಾರಣಗಳಿಂದ ಇತರ ಶ್ರೀಮಂತ ವಂಶಗಳ ಚರಿತ್ರೆಯನ್ನು ಬರೆದಿಡುವುದು ಮುಖ್ಯವೆನಿಸಿತು. ಈ ಪ್ರಕಾರವಾಗಿ ಬುರಂಜೀಗಳಲ್ಲಿ ಕಂಡುಬರದ ಸಂಗತಿಗಳನ್ನು ಈ ವಂಶಾವಳಿ ತುಂಬಿಕೊಡುತ್ತದೆ. ಇಂಥ ಒಂದು ವಂಶಾವಳಿ ಹದಿನೆಂಟನೆಯ ಶತಮಾನದ ಉತ್ತರಾರ್ಧದ ಡರ್‍ರಂಗಿನ ಕೋಚ್ ಅರಸ ಸಮುದ್ರನಾರಾಯಣನ ಆಶ್ರಯದಲ್ಲಿದ್ದ ಸೂರ್ಯಖರಿ ದೈವಜ್ಞನಿಂದ ಪದ್ಯದಲ್ಲಿ ರಚಿತವಾದ ಡರ್‍ರಂಗ್–ರಾಜವಂಶಾವಳಿ ಎಂಬುದು. ಈ ಪುಸ್ತಕದ ಮೂಲಪ್ರತಿ ಚಿತ್ರಗಳಿಂದ ಅಲಂಕೃತ ವಾಗಿದೆ. ಇದು ಕೋಚ್ ಪ್ರಭುಗಳ ಪೂರ್ವೇತಿಹಾಸವನ್ನು ತಿಳಿದುಕೊಳ್ಳಬಯಸುವವರಿಗೆ ಅಮೂಲ್ಯವಾದ ಆಕರವಾಗಿದೆ. ಎಂದು ಎಸ್. ಕೆ. ಭೂಯನ್ ಬರೆಯುತ್ತಾನೆ.

ದೊರೆಗಳ ಆಸರೆಯಲ್ಲಿ ಪವಿತ್ರವೂ ಧಾರ್ಮಿಕವೂ ಅಲ್ಲದ ಅನೇಕ ಇತರ ಸಂಸ್ಕೃತ ಗ್ರಂಥಗಳು ಅಸ್ಸಾಮೀ ಗದ್ಯಕ್ಕೆ ಭಾಷಾಂತರಗೊಂಡವು. ಅವು ವೈದ್ಯ, ಜ್ಯೋತಿಷ, ಗಣಿತ, ನೃತ್ಯ ಮತ್ತು ಶಿಲ್ಪಗಳಿಗೆ ಸಂಬಂಧಪಟ್ಟವು. ಈ ಗ್ರಂಥಗಳಲ್ಲಿ ಮೊದಲಬಾರಿಗೆ ಅಸ್ಸಾಮಿ ಗದ್ಯ ಶಾಸ್ತ್ರಲೇಖನ ಒದಗಿಬಂದಿದೆ. ಈ ಬರೆಹಗಳು ಆಧುನಿಕ ವೈಜ್ಞಾನಿಕ ವಿಷಯಗಳನ್ನು ತಿಳಿಸಲು ಪ್ರಯುಕ್ತವಾಗುವ ಗದ್ಯಕ್ಕೆ ಮೇಲುಪಂಕ್ತಿಯಾಗಿವೆ. ಇವುಗಳಲ್ಲಿ ಮುಖ್ಯವಾದುದು ಸುಕುಮಾರ ಬರ್‍ಕಾತ್ ಎಂಬಾತನ ಹಸ್ತಿವಿದ್ಯಾರ್ಣವ ಎಂಬ ಗ್ರಂಥ. ಈ ಸಚಿತ್ರ ಪುಸ್ತಕ ಪ್ರ ಶ. 1754ರಲ್ಲಿ ಶಿವಸಿಂಗ್ ಎಂಬ ಮಹಾರಾಜ ಮತ್ತು ಆತನ ರಾಣಿ ಅಂಬಿಕಾದೇವಿಯರ ಅಪ್ಪಣೆಯ ಮೇರೆಗೆ ರಚಿತವಾಯಿತು.

ವೈದ್ಯಶಾಸ್ತ್ರ ಗ್ರಂಥಗಳ ಜೊತೆಗೆ ಜ್ಯೋತಿಷ ಮತ್ತು ಭವಿಷ್ಯ ವಿಜ್ಞಾನಗಳ ಮೇಲೆ ಸಂಸ್ಕೃತದಲ್ಲೂ ಅಸ್ಸಾಮೀ ಭಾಷೆಯಲ್ಲೂ ಗ್ರಂಥಗಳು ರಚಿತವಾದವು. ಕಾಯಿಲೆಗಳನ್ನುಂಟು ಮಾಡುವ ಗ್ರಹಗತಿಗಳ ಸ್ವಭಾವವನ್ನು ತಿಳಿದುಕೊಳ್ಳುವುದು ಆವಶ್ಯಕವಾದ ಪ್ರಯುಕ್ತ ವೈದ್ಯಶಾಸ್ತ್ರ ಗ್ರಂಥಗಳಲ್ಲೂ ಜ್ಯೋತಿಷದ ಮೇಲಣ ಅಧ್ಯಾಯಗಳು ಸಂಗತವಾಗಿವೆ.

ಕಾಯಿಲೆಯ ಕಾರಣವನ್ನು ತಿಳಿಯುವುದಕ್ಕೂ ಗುಣಪಡಿಸುವುದಕ್ಕೂ ಭವಿಷ್ಯಜ್ಞಾನವನ್ನು ಆಶ್ರಯಿಸಲಾಗಿತ್ತು. ಕಾಯಿಲೆಗಳನ್ನು ಗುಣಪಡಿಸಲು ಮಾಟಮಂತ್ರಗಳನ್ನು ಪ್ರಯೋಗಿಸಲಾ ಗಿತ್ತು. ಕಾಯಿಲೆ ಬರಿಸುವ ಭೂತ ಪ್ರೇತ ಪಿಶಾಚಿಗಳನ್ನು ಬಿಡಿಸಲೂ ಹಾವಿನ ವಿಷವನ್ನಿಳಿಸಲೂ ಕೆಟ್ಟಕನಸುಗಳ ಕೇಡುಗಳನ್ನು ಪರಿಹರಿಸಲೂ ವಿಪತ್ತಿನಿಂದ ಪಾರಾಗಲೂ ಹೊಲಗದ್ದೆಗಳನ್ನು ಹಾಳುಮಾಡುವ ಕ್ರಿಮಿಕೀಟ ಮೃಗಪಕ್ಷಿಗಳನ್ನು ನಾಶಪಡಿಸಲೂ ಮನೆಯ ಏಳಿಗೆ, ದವಸ ಧಾನ್ಯ ಸಮೃದ್ಧಿ ಮತ್ತು ಇತರ ನೂರೊಂದು ಆಕಾಂಕ್ಷೆಗಳಿಗಾಗಿಯೂ ಮಂತ್ರಗಳನ್ನು ಪ್ರಯೋಗಿಸಲಾಗುತ್ತಿತ್ತು. ಅಹೋಮ್ ವೃತ್ತಾಂತಗಳೂ ಮುಸ್ಲಿಂ ಇತಿಹಾಸಲೇಖಕರೂ ವರದಿಗಳೂ ತಿಳಿಸುವ ಹಾಗೆ, ಮಾಟಮಂತ್ರಗಳಿಂದ ಕೆಲವು ಅಧಿಕಾರಿಗಳು ಮರಣಕ್ಕೀಡಾದ ರೆಂಬುದು ಕಂಡುಬರುತ್ತದೆ. ಆಳುವರಸನ ಆಡಳಿತವನ್ನು ಮುರಿಯುವುದಕ್ಕಾಗಿ ಸಂಚು ನಡೆಸಿದವರನ್ನು ನ್ಯಾಯಸ್ಥಾನದಲ್ಲಿ ತನಿಖೆಗೆ ಒಳಪಡಿಸಿದುದನ್ನು ಉಲ್ಲೇಖಿಸುವ ಅಹೋಮ್ ಬುರಂಜೀಯಲ್ಲಿ ಒಬ್ಬನ ಸಾಕ್ಷ್ಯವನ್ನು ಈ ರೀತಿಯಲ್ಲಿ ಬರೆಯಲಾಗಿದೆ: 'ಒಬ್ಬ ಬಗನ ಹತ್ತಿರ ಒಂದು ಹಳೆಯ ಪುಥಿ (ಪುಸ್ತಕ) ಇದೆ. ಅದು ರಾಜನನ್ನೂ ಆತನ ಪ್ರಜೆಗಳನ್ನೂ ಅಡಗಿಸುತ್ತದೆ ಎಂಬ ವಿಷಯ ಯಾರಿಂದಲೋ ತಿಳಿದು ಬಂದಿದೆ.' ಈ ಕಾರಣದಿಂದ, ಮಂತ್ರಗಳ ಮೇಲೆ ಪದ್ಯದಲ್ಲೂ ಗದ್ಯದಲ್ಲೂ ಒಂದು ರಾಶಿ ಬರೆಹಗಳು ರಚಿತವಾಗಿವೆ. ಮಂತ್ರಸಾಹಿತ್ಯದ ಗಾತ್ರ ಮತ್ತು ವೈವಿಧ್ಯಗಳ ಲಕ್ಷಣವನ್ನು ಸ್ಥೂಲಮಟ್ಟಿಗೆ ಈ ಹೆಸರುಗಳಿಂದ ತಿಳಿದುಕೊಳ್ಳಬಹುದು: ಸಾಪರ್–ಧರಣೀ–ಮಂತ್ರ, ಸರ್ವಧಾಕ್ ಮಂತ್ರ, ಕಾಮರತ್ನತಂತ್ರ, ಭೂತರ್‌ಮಂತ್ರ, ಖೇತ್ರಮಂತ್ರ ಈ ಪಟ್ಟಿಯನ್ನು ಸರಾಗವಾಗಿ ಬೆಳೆಸಬಹುದು. ಮಾಟಮಂತ್ರ, ಬೂಟಾಟಿಕೆ, ಒಗಟು ಮುಂತಾದವುಗಳಿಗೆ ಯಾವ ಸಾಹಿತ್ಯಮೌಲ್ಯವೂ ಇಲ್ಲ. ಆದರೆ ಸಮಾಜದ ಅವನತಿ, ಜನರನ್ನು ಮರಳುಮಾಡುವ ಗ್ರಾಮ್ಯ ನಂಬಿಕೆ, ಮತ್ತು ಜನರಲ್ಲಿ ಹರಡಿರುವ ಮೂಢನಂಬಿಕೆ ಇವುಗಳ ಸ್ವರೂಪವನ್ನು ತಿಳಿಸುವ ಈ ಬರೆಹ ಕುತೂಹಲಜನಕವಾಗಿದೆ. ಒಟ್ಟಿನಲ್ಲಿ ಅಹೋಮ್ ಆಳ್ವಿಕೆಯ ಆರುನೂರು ವರ್ಷಗಳಲ್ಲಿ ಜನಜೀವನದ ಎಲ್ಲ ಶಾಖೆಗಳೂ ಬಹು ಬೇಗ ಅಭಿವೃದ್ಧಿ ಹೊಂದಿರುವ ದೃಶ್ಯ ಗೋಚರಿಸುತ್ತದೆ.

ಈ ಹಿಂದೆ ಗಮನಿಸಿದಂತೆ, ಈ ಕಾಲದ ವಿಶೇಷ ಲಕ್ಷಣಗಳಾವುವೆಂದರೆ, ದೇಶ ಭೌಗೋಳಿಕವಾಗಿ ಒಂದು ಕ್ಷೇತ್ರವೆನಿಸಿ ಸಾಮಾಜಿಕವಾಗಿ ಒಂದು ಜನವೆನಿಸಿದುದು, ರಾಜಕೀಯ ಸಂಸ್ಥೆಗಳು ದೃಢವಾಗಿ ನೆಲೆಗೊಂಡುದು, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಪ್ರಕ್ರಮಗಳು ಸುವ್ಯವಸ್ಥಿತವಾದುದು ಮತ್ತು ಕೊನೆಯದಾಗಿ ಒಂದು ಜನಾಂಗ ಉದಿಸಿದುದು. ಮುಘಲರ ಇಸ್ಲಾಂ ಪ್ರವೇಶ, ದೊರೆಗಳ ರಾಜ್ಯವಿಸ್ತರಣೋತ್ಸಾಹ, ಮತ್ತು ನಾಡಿನಲ್ಲಿ ಉಂಟಾದ ಜನಜಾಗೃತಿ ಮುಂತಾದ ಅನೇಕ ಅಂಶಗಳು ಈ ಜನಾಂಗವನ್ನು ಬೆಳೆಸಿವೆ. ಆ ಕಾಲದಲ್ಲಿ ಜನರ ಮನಸ್ಸು ವಿಚಾರಶೀಲವಾಗಿತ್ತಾದುದರಿಂದ ಆ ಮನೋಭಾವ ಆ ಕಾಲದ ಕಲೆ ಮತ್ತು ಸಾಹಿತ್ಯದ ಮೇಲೆ ತನ್ನ ಪ್ರಭಾವ ಬೀರಿ ಜನಜೀವನವನ್ನು ಮಧುರವಾಗಿಸಿತ್ತು.

ಆಗಿನ ಅನೇಕ ಕೈಬರೆಹದ ಪುಸ್ತಕಗಳಿಂದ ಮಾತ್ರ ಆ ಕಾಲದ ಬುದ್ಧಿ ಮತ್ತು ಕಲೆಗಳ ಮೂರ್ತಸ್ವರೂಪವನ್ನು ಅರಿಯಬಹುದು. ಕೈಬರೆಹದ ಪ್ರತಿಗಳ ತಯಾರಿಕೆಗೆ ಕಲಾಸಾಮರ್ಥ್ಯ, ಅಕ್ಷರಸಂಯೋಜನ ಸಾಮರ್ಥ್ಯ ಮತ್ತು ಲೇಖನಕೌಶಲ ಆವಶ್ಯಕವಾಗಿದ್ದವು. ಅವುಗಳ ರಚನೆಯೇ ಆ ಕಾಲದ ಒಂದು ಸಿದ್ಧಿ ಎಂದು ಹೇಳಬಹುದು. ಕೈಬರೆಹದ ಪ್ರತಿಯನ್ನು ತಯಾರಿಸುವುದು ಕಷ್ಟದ ಕೆಲಸ. ಅದಕ್ಕೆ ವಿರಾಮ ಬೇಕು. ಹಣವಿದ್ದ ಹೊರತು ಕೈಬರೆಹದ ಪ್ರತಿಗಳನ್ನು ಬಹಳವಾಗಿ ತಯಾರಿಸುವುದು ಅಸಾಧ್ಯ. ರಾಜಾಸ್ಥಾನದಲ್ಲಿ ತಯಾರಾದ ಪ್ರತಿಯೊಂದು ಕೈಬರೆಹದ ಗ್ರಂಥವೂ ತಮ್ಮ ಅಂದವಾದ ಲಿಪಿಗಳಿಂದಲೂ ಆ ಪದಗಳನ್ನು ಯಾವುದರ ಮೇಲೆ ಬರೆಯುತ್ತಾರೋ ಆ ವಸ್ತುವಿನಿಂದಲೂ ಈಗಲೂ ಅಮೂಲ್ಯವಾದ ಕಲಾನಿಧಿಯೆನಿಸಿದೆ.

ಕೈಬರೆಹದ ಪ್ರತಿಗಳ ಉತ್ಪಾದನೆಯ ಸಂಗಡವೇ ವರ್ಣಚಿತ್ರಗಳ ಕಲೆಯೂ ಬರುತ್ತದೆ ಎಂಬುದನ್ನು ಮರೆಯಬಾರದು. ಆ ಕಾಲದಲ್ಲಿ ಬಹು ಸುಂದರ ಚಿತ್ರಗಳಿಂದ ಅಲಂಕೃತವಾದ ಕೈಬರೆಹದ ಪ್ರತಿಗಳು ಯಾವುವೆಂದರೆ: ಗೀತಗೋವಿಂದ, ಶಂಖಾಸುರವಧ, ಭಾಗವತ, ಡರಂಗ ರಾಜವಂಶಾವಳಿ, ಹಸ್ತಿವಿದ್ಯಾರ್ಣವ ಎಂಬ ಗ್ರಂಥಗಳು. ಕೈಬರೆಹದ ಪ್ರತಿಗಳಲ್ಲಿನ ವರ್ಣಚಿತ್ರಗಳು ಧಾರ್ಮಿಕ ಚಿತ್ರಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅವುಗಳಲ್ಲಿ ರಾಜರು ಮತ್ತು ರಾಜಾಸ್ಥಾನಗಳ ಚಿತ್ರಗಳೂ ಇದ್ದವು.

ಆದರೆ ಸಾಹಿತ್ಯ ಚರಿತ್ರೆಯ ನಿಲುವಿನಲ್ಲಿ ಆ ಕಾಲದ ವಿಶೇಷ ಲಕ್ಷಣಗಳಾವುವೆಂದರೆ: ಗದ್ಯ ಮತ್ತು ಲೌಕಿಕ ಸಾಹಿತ್ಯದ ಬೆಳೆವಣಿಗೆ, ಅದರಲ್ಲೂ ರಾಜರು ಮತ್ತು ಸಾಧುಗಳನ್ನು ಮೇಲೇರಿಸುವ ಪ್ರವೃತ್ತಿ ಮತ್ತು ವೈಜ್ಞಾನಿಕ ಕೌತುಕೋದಯ. ಗದ್ಯದ ಜೊತೆಗೆ ವಿವಿಧ ಉಪಯುಕ್ತ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಆಸಕ್ತಿಯೂ ಸಹಜವಾಗಿಯೇ ಮೂಡಿಬಂತು. ಈ ದಿಸೆಯಲ್ಲಿನ ಪ್ರಗತಿಗೆ ಗಣಿತ ಮತ್ತು ಶಿಲ್ಪಶಾಸ್ತ್ರಗಳ ವ್ಯಾಸಂಗ ಮೊದಲ ಹೆಜ್ಜೆಯಾಯಿತು. ಜ್ಯೋತಿಷದೊಂದಿಗೆ ಖಗೋಳವಿಜ್ಞಾನದ ವ್ಯಾಸಂಗವೂ ನಡೆಯುತ್ತಿತ್ತು. ಜ್ಯೋತಿಷ ಗ್ರಂಥಗಳಲ್ಲಿ ಗ್ರಂಥಕರ್ತರು ಗ್ರಹಗಳ ಗತಿಗಳನ್ನೂ ಪ್ರಕೃತಿ ವ್ಯಾಪಾರಗಳನ್ನೂ ತಮ್ಮ ತಿಳುವಳಿಕೆಯ ಮಿತಿಯಲ್ಲಿ ಶ್ಲಾಘ್ಯವಾಗಿ ವರ್ಣಿಸುತ್ತಿದ್ದರು. ಆಯುರ್ವೇದ ಗ್ರಂಥಗಳಲ್ಲಿ ಔಷಧಕ್ಕೆ ಒದಗುವ ಮೂಲಿಕೆಗಳು ಮತ್ತು ಪ್ರಾಣಿಗಳ ಬಗೆಗೆ ಗೋಚರವಾದ ವಿಷಯಗಳು, ಚಿಕಿತ್ಸಾಕ್ರಮಗಳು ಮತ್ತು ಔಷಧಗಳು ಸೇರಿದ್ದುವು.

ಹೀಗೆ ಅಸ್ಸಾಮಿ ಸಾಹಿತ್ಯಕ್ಷೇತ್ರದ ಪರಾಮರ್ಶೆ ಮಾಡಿದರೆ ಭಾರತದ ಇತರ ಭಾಗಗಳಲ್ಲಿ ಕಾಲಕಾಲಕ್ಕೆ ಕಂಡುಬರುವ ಸ್ಫೂರ್ತಿ, ಉತ್ಸಾಹ, ಪ್ರಚೋದನೆಗಳೊಡನೆ ದೇಸೀಯ ಪ್ರವೃತ್ತಿಗಳೂ ಮಿಳಿತವಾಗಿ ಈ ಸಾಹಿತ್ಯ ಬೆಳೆದಿರುವುದು ಕಂಡುಬರುತ್ತದೆ. (ಬಿ.ಕೆ.ಬಿ.)

**ಅಸ್ಸಾಯ್ ಯುದ್ಧ** : ದಖನ್ನಿನ ಚರಿತ್ರೆಯಲ್ಲಿ ಇಂಗ್ಲಿಷರು ಗಳಿಸಿದ ಪ್ರಸಿದ್ಧ ವಿಜಯಕ್ಕೆ ಸಂಬಂಧಿಸಿದ ಯುದ್ಧ. 1803ರ ಆಗಸ್ಟ್ 12ರಂದು ಔರಂಗಾಬಾದ್‌ಗೆ 72ಕಿಮೀ ದೂರವಿರುವ ಅಸ್ಸಾಯ್‌ನಲ್ಲಿ ವೆಲ್ಲೆಸ್ಲಿ ಮರಾಠರ ಸೈನ್ಯವನ್ನೆದುರಿಸಿ ಗೆದ್ದ. ಪೇಶ್ವೆ ಎರಡನೆಯ ಬಾಜಿರಾಯ ಇಂಗ್ಲಿಷರೊಡನೆ ಮಾಡಿಕೊಂಡ ಬೇಸಿನ್ ಒಪ್ಪಂದ ಮಹಾರಾಷ್ಟ್ರದ ಸ್ವಾತಂತ್ರ್ಯ ವನ್ನು ಹಾಳುಮಾಡಿತೆಂಬ ಕಾರಣದಿಂದ ಒಪ್ಪದ ಮರಾಠರು ದೌಲತ್‌ರಾವ್ ಸಿಂಧ್ಯೆ, ಭೌನ್ಸ್ಲೆಗಳ ನೇತೃತ್ವದಲ್ಲಿ ಯುದ್ಧಕ್ಕೆ ಸಿದ್ಧರಾದರು; ಗಾಯಕವಾಡ ತಟಸ್ಥನಾದ. ಹೋಳ್ಕರ್ ಸಹಾಯ ಮಾಡಲಿಲ್ಲ. ಮರಾಠರ ಸೈನ್ಯ 2,50,000 ಇದ್ದು ಅವರಲ್ಲಿ 40,000 ಮಂದಿ ಫ್ರೆಂಚ್‌ರಿಂದ ತರಬೇತಿ ಪಡೆದವರಾಗಿದ್ದರು. ಆದರೂ ಮರಾಠರಿಗೆ ಸೋಲಾದುದು ಶೋಚನೀಯ. (ಎಚ್.ಜಿ.ಆರ್.)

**ಅಸ್ಸೀರಿಯ** : ಪ್ರಪಂಚದ ಪುರಾತನ ನಾಗರಿಕತೆಗಳ ಕೇಂದ್ರಗಳಲ್ಲೊಂದಾಗಿದ್ದ ಸುಮೇರಿಯದ ಒಂದು ಭಾಗ. ಟೈಗ್ರಿಸ್ ನದಿಯ ದಡದ ಮೇಲಿದ್ದ ಅಷೂರ್ ಎಂಬ ನಗರ ಇದರ ಕೇಂದ್ರವಾಗಿತ್ತು. ಅಸ್ಸೀರಿಯನ್ನರು ದಮಾಸ್ಕಸ್, ಪ್ಯಾಲಸ್ಟೀನ್ ಮತ್ತು ಕೆಳಗಣ ಈಜಿಪ್ಟ್‌ಗಳನ್ನು ವಶಪಡಿಸಿಕೊಂಡು, ತಮ್ಮ ರಾಜ್ಯವನ್ನು ವಿಸ್ತರಿಸಿದರು. ಸೆರಗಾನ್, ಸೆನ್ನಚೆರಬ್ ಮತ್ತು ಅಸುರ್‌ಬನಿಪಾಲ್ ಇಲ್ಲಿಯ ಮುಖ್ಯ ದೊರೆಗಳು. ಇವರು ವ್ಯಾಪಾರ ಮತ್ತು ವಾಣಿಜ್ಯಕ್ಕೆ ಪ್ರಾಧಾನ್ಯ ಕೊಟ್ಟಿದ್ದರು. ಪ್ರಪಂಚದ ನಾನಾ ಭಾಗಗಳಿಂದ ಶಿಲ್ಪಿಗಳನ್ನು ಕರೆಸಿ ನಿನೇವ ಎಂಬಲ್ಲಿ ಸುಂದರವಾದ ಅರಮನೆಗಳನ್ನು ಕಟ್ಟಿಸಿದರು. ಕ್ಯಾಲ್ಡಿಯನ್ನರು ಅಸ್ಸೀರಿಯನ್ನರನ್ನು ಸೋಲಿಸಿ ತಮ್ಮ ಪ್ರಭುತ್ವವನ್ನು ಪ್ರಾರಂಭಿಸಿದರು. (ಜಿ.ವಿ.ಆರ್.)

ಅತ್ಯಂತ ಪುರಾತನ ಮಾನವನ ಅವಶೇಷಗಳಾದ ಆದಿ ಹಳೆಯ ಶಿಲಾಯುಗದ ಮಧ್ಯಕಾಲಕ್ಕೆ ಸೇರಿದ ಅಷೂಲಿಯನ್-ಲೆವಲ್ವಷಿಯನ್ ಹಂತದ ಕೈಗೊಡಲಿಗಳೂ ಚಕ್ಕೆ ಕಲ್ಲಿನ ಉಪಕರಣಗಳೂ ಬಾರ್ದಾಬಲ್ಕ ಎಂಬಲ್ಲಿ ದೊರಕಿವೆ. ಹಜರ್‌ಮರ್ದ್ ಮತ್ತು ಷನಿದಾರ್ ಗುಹೆಗಳ ತಳಪದರಗಳಲ್ಲಿ ದೊರಕುವ ಚಕ್ಕೆ ಕಲ್ಲಿನ ಉಪಕರಣಗಳು ಮುಂದಿನ ಹಂತವಾದ ಲೆವಲ್ವಷಿಯೊ-ಮೌಸ್ತಿರಿಯನ್ ಕೈಗಾರಿಕೆಗಳನ್ನು ಹೋಲುತ್ತವೆ. ಹಜರ್‌ಮರ್ದ್ ಅವಶೇಷಗಳು ಷನಿದಾರ್ ಅವಶೇಷಗಳಿಗಿಂತಲೂ ಹಳೆಯವೆಂದು ಅಲ್ಲಿ ದೊರಕಿದ ಕೈಗೊಡಲಿಗಳ ಆಧಾರದ ಮೇಲೆ ಹೇಳಲಾಗಿದೆ.

ಜಲಯುದ್ಧನೌಕೆ

ಹಜರ್‌ಮರ್ದ್ ಮತ್ತು ಷನಿದಾರ್ ನೆಲೆಗಳ ಮೇಲ್ಪದರಗಳಲ್ಲಿ ದೊರಕಿದ ಕಲ್ಲು ಚಕ್ಕೆಗಳ ಉಪಕರಣಗಳೂ ಸೂಕ್ಷ್ಮ ಶಿಲೋಪಕರಣಗಳೂ ಜರ್ಜಿ ಮತ್ತು ಪಲೆಗಾವ್ರಾ ಎಂಬಲ್ಲೂ ದೊರಕುತ್ತವೆ. ಇವುಗಳ ಆಧಾರದ ಮೇಲೆ ಈ ಜನರು ಸಮಕಾಲೀನ ಯುರೋಪಿನ ಜನರಿಗಿಂತಲೂ ಹೆಚ್ಚು ಮುಂದುವರೆದಿದ್ದರೆಂದು ಹೇಳಲಾಗಿದೆ. ಪ್ಯಾಲಸ್ತೀನಿನ ಶಿಲಾಯುಗದ ಷನಿದಾರ್ ಗುಹೆಯ ಮೇಲ್ಪದರಗಳ ಸಂಸ್ಕೃತಿ ಈ ಪ್ರದೇಶದ ಚಕ್ಕೆ ಕಲ್ಲಿನ ಉಪಕರಣಗಳ ಸಂಸ್ಕೃತಿಗಳಲ್ಲಿ ಹಳೆಯದೆಂದು ಹೇಳಬಹುದು.

ಮಧ್ಯಶಿಲಾಯುಗದ ಅವಶೇಷಗಳು ಷನಿದಾರ್ ಗುಹೆಯ ಮತ್ತು ಜರ್ಜಿಯದ ಮೇಲ್ಪದರಗಳಲ್ಲಿ ದೊರಕಿವೆ. ಇವುಗಳಿಗೂ ಪ್ಯಾಲಸ್ತೀನಿನ ನಟೂಫಿಯನ್ ಸಂಸ್ಕೃತಿಗೂ ಹೋಲಿಕೆಗಳಿದ್ದು, ಈ ಹಂತ ಆಹಾರೋತ್ಪಾದನೆಯ ಕಡೆಗೆ ಒಯ್ಯುವ ಮೊದಲ ಹೆಜ್ಜೆಯಾಗಿತ್ತು.

ನವಶಿಲಾಯುಗದಲ್ಲಿ ಇಲ್ಲಿನ ಮತ್ತು ಸುತ್ತಲಿನ ನೆಲೆಗಳಲ್ಲಿ ಆದಿಮಾನವ ಆಹಾರೋತ್ಪಾದನೆಯ ದಿಕ್ಕಿನಲ್ಲಿ ಹೆಚ್ಚು ಪ್ರಗತಿ ಸಾಧಿಸಿದ. ಕರೀಂಷಾಹಿರ್, ಜಾವಿಷೆಮಿ, ಷನಿದಾರ್ ಮ್ಲಾಫಾತ್-ಮುಂತಾದೆಡೆಗಳಲ್ಲಿ ಈ ಸಂಸ್ಕೃತಿಯ ಅತ್ಯಂತ ಪ್ರಾಚೀನ ಅವಶೇಷಗಳು ದೊರಕಿವೆ. ಕರೀಂಷಾಹಿರ್‌ನ ಆಹಾರೋತ್ಪತ್ತಿಯ ಹಲವು ಮಾಹಿತಿಗಳೂ ಕಲ್ಲುಕಟ್ಟಡದ ಅವಶೇಷಗಳೂ ಪ್ರ.ಶ.ಪೂ. 6000ಕ್ಕೂ ಮೊದಲಿನವು. ಜಾರ್ಮೋ ನೆಲೆಯಲ್ಲಿ ಪ್ರಗತಿದಾಯಕ ಸಂಸ್ಕೃತಿಯ ಅವಶೇಷಗಳಾದ ಕಲ್ಲಿನ ಪಾತ್ರೆಗಳು, ಕಲ್ಲಿನ ಕುಡುಗೋಲು, ಸೂಕ್ಷ್ಮ ಶಿಲೋಪಕರಣಗಳು, ನಯಮಾಡಿದ ಕಲ್ಲಿನ ಉಪಕರಣಗಳು, ಕಟ್ಟಡಗಳ ಅವಶೇಷಗಳು, ಪಳಗಿಸಲ್ಪಟ್ಟ ಕುರಿ ಮೇಕೆ ಹಂದಿಗಳ ಮೂಳೆಗಳು ದೊರೆಯುತ್ತವೆ. ಈ ಸಂಸ್ಕೃತಿಯ ಅಂತ್ಯಕಾಲದಲ್ಲಿ ಮಣ್ಣಿನ ಪಾತ್ರೆಗಳು ಬಳಕೆಗೆ ಬಂದವು. ಗೋದಿ ಮತ್ತು ಬಾರ್ಲಿಗಳನ್ನು ಬೆಳೆಸುತ್ತಿದ್ದರು.

ಪ್ರಗತಿಪರ ನವಶಿಲಾಯುಗದ ಅವಶೇಷಗಳು ಹಸ್ಸುನಾ, ನಿನೆವೆ, ಅರ್ಪಾಚಿಯ, ಗಾವ್ರಾ ಎಂಬೆಡೆಗಳಲ್ಲಿ ದೊರಕುತ್ತವೆ. ವರ್ಣರಂಜಿತ ಮಣ್ಣಿನ ಪಾತ್ರೆಗಳು, ಕಲ್ಲಿನ ಕುಡುಗೋಲು ಮತ್ತಿತರ ವ್ಯವಸಾಯೋಪಕರಣಗಳು, ಹಸಿ ಇಟ್ಟಿಗೆ ಗೋಡೆಗಳ ಮನೆಗಳೂ ಧಾನ್ಯಶೇಖರಣೆಗೆ ಭೂಮಿಯೊಳಗಿನ ಗುಂಡಿಗಳು-ಈ ಸಂಸ್ಕೃತಿಯ ಮುಖ್ಯ ಸಾಧನೆಗಳು. ಮಕ್ಕಳ ಶವಗಳನ್ನು ಮಣ್ಣಿನ ಜಾಡಿಗಳಲ್ಲೂ ವಯಸ್ಕರ ಶವಗಳನ್ನು ಗುಂಡಿಗಳಲ್ಲೂ ಹೂಳುತ್ತಿದ್ದರು. ಬೇಟೆಗಾರಿಕೆಯಿಂದ ಸುಧಾರಿತ ವ್ಯವಸಾಯ ಪದ್ಧತಿಗಳ ಕಡೆಗೆ ಪ್ರಗತಿ ಕಂಡುಬರುತ್ತದೆ. ನೇಯ್ಗೆ ಕೆಲಸದ ಪರಿಚಯವಿತ್ತು. ಮಡಿಕೆ ಕುಡಿಕೆಗಳು ಕೆಂಪು, ಕಂದು ಮತ್ತು ಕಪ್ಪು ಬಣ್ಣಗಳಿಂದ ಚಿತ್ರಿತವಾಗಿರುತ್ತಿದ್ದವು. ಈ ಸಂಸ್ಕೃತಿಯ ಅವಶೇಷಗಳು ಅಸ್ಸೀರಿಯದ ಹಲವೆಡೆಗಳಲ್ಲಿ ಕಂಡುಬಂದಿವೆ. ಮುಂದಿನ ಹಂತವಾದ ತಾಮ್ರ ಶಿಲಾಯುಗದ ಹಲಾಫ್ ಸಂಸ್ಕೃತಿಯಲ್ಲಿ ವರ್ಣಚಿತ್ರಿತ ವಾದ ವಿವಿಧಾಕೃತಿಗಳ ಮಡಕೆಗಳು ಉಪಯೋಗದಲ್ಲಿದ್ದವು. ಕಲ್ಲಿನ ಗುಂಡಿ ಮುದ್ರೆಗಳೂ ಮಣಿಗಳೂ ಸಣ್ಣ ಪಾತ್ರೆಗಳೂ ಬಳಕೆಗೆ ಬಂದವು. ಜನನೇಂದ್ರಿಯಗಳ ನಿರೂಪಣೆಗೆ ಪ್ರಧಾನವಾಗಿದ್ದ ಮಣ್ಣಿನ ಸ್ತ್ರೀಗೊಂಬೆಗಳು ಪ್ರಾಚೀನ ಕಾಲದಲ್ಲಿ ಮಾತೃದೇವತಾ ಪ್ರಧಾನವಾಗಿದ್ದ ಮತೀಯ ಆಚರಣೆಗಳ ಸಂಕೇತಗಳಾಗಿವೆ. ಅನಂತರ ಈ ಪ್ರದೇಶ ದಕ್ಷಿಣ ಇರಾಕಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಯಿತು. ಎರಡನೆಯ ಸಹಸ್ರಮಾನದ ಆರಂಭದಲ್ಲಿ ದಕ್ಷಿಣ ಇರಾಕಿನ ಪ್ರಭಾವದಿಂದ ಅಸ್ಸೀರಿಯದ ಜನ ಚಾರಿತ್ರಿಕ ಘಟ್ಟವನ್ನು ತಲುಪಿದರು. ಆ ವೇಳೆಗೆ ಸಿಮಿಟಿಕ್ ಪಂಗಡದ ಜನ ಇದನ್ನು ಆಕ್ರಮಿಸಿದರು. (ಬಿ.ಕೆ.ಜಿ.)

**ಅಸ್ಸೀರಿಯನ್ನರ ಕಲೆ :** ಚರಿತ್ರೆಯ ಪ್ರಾರಂಭದಲ್ಲಿ ಮೆಸಪೊಟೇಮಿಯದ ನಿಮ್ನ ಪ್ರದೇಶ ಸುಮೇರೋ-ಅಕ್ಕೇಡಿಯನ್ನರ ಸಂಸ್ಕೃತಿಗೆ ಸ್ಥಾನವಾಗಿತ್ತು. ಈ ಪ್ರದೇಶದ ಪೂರ್ವಭಾಗ ಸುಮೇರಿಯನ್ನರಿಗೂ ಉತ್ತರಭಾಗ ಸಿಮಿಟಿಕ್ ವಂಶದ ಅಕ್ಕೇಡಿಯನ್ನರಿಗೂ ಸೇರಿದ್ದುವು. ಕಾಲಕ್ರಮೇಣ ದಕ್ಷಿಣ ಪಥದ ಅಕ್ಕೇಡಿಯನ್ನರನ್ನು ಬ್ಯಾಬಿಲೋನಿಯನರೆಂದೂ ಕ್ಯಾಲ್ಡಿಯನ್ನರೆಂದೂ ವಾಯವ್ಯ ಪಥದಲ್ಲಿದ್ದವರನ್ನು ಅಸ್ಸೀರಿಯನ್ನರೆಂದೂ ಕರೆಯಲಾಯಿತು.

ಅಕ್ಕೆಡ್ ಪ್ರದೇಶದ ರಾಜನಾದ ಸಾರ್‌ಗಾನ್‌ನಿಂದ (ಪ್ರ.ಶ.ಪೂ.2500) ಸುಮೇರಿಯನ್ನರ ಕಡೆಯ ರಾಜನಾದ ಲೂಗಲ್‌ಜಗ್ಗಿಸಿ ಪರಾಭವ ಹೊಂದಿದ ಅನಂತರ ಸಿಮಿಟಿಕ್ ರಾಜವಂಶದ ಆಳ್ವಿಕೆ ಪ್ರಾರಂಭವಾಯಿತು. ಸಿಮಿಟಿಕ್ ಅಕ್ಕೇಡಿಯನ್ನರ ವೈಭವ ಹಮ್ಮುರಾಬಿ ಆಳ್ವಿಕೆಯಲ್ಲಿ ಶಿಖರಕ್ಕೇರಿತು. ಅವನ ಕಾಲದಲ್ಲಿ ಷಿನಾಜೆಗೆ ಬೇಬಿಲನ್ನೆಂದು ಹೆಸರಾಯಿತು. ಹಮ್ಮುರಾಬಿ ಯೂಫ್ರೆಟೀಸ್ ತೀರದ ಮರಿ ಎನ್ನುವ ಪಟ್ಟಣವನ್ನು ಅದರ ಕಡೆಯ ರಾಜನಾದ ಜಿರೀಲಿಂನಿಂದ ಗೆದ್ದು ಅವನ ವಂಶಪಾರಂಪರ್ಯದಲ್ಲಿ ಸಾವಿರಾರು ವರ್ಷಗಳಿಂದ ಹೊಳೆಯುತ್ತಿದ್ದ ಬಣ್ಣಗಳಿಂದ ಶೋಭಾಯಮಾನವಾಗಿ ಚಿತ್ರಿಸಲಾದ ಅರಮನೆಯ ಮತ್ತಿತರ ಕಲಾಕೃತಿಗಳನ್ನು ನಾಶ ಮಾಡಿದ. ಈ ಚಿತ್ರಗಳಲ್ಲಿ ಕೆಲವು ಗೋಡೆಯ ಮೇಲಿನವು (ಮ್ಯುರಲ್ಸ್) ಅಂದರೆ, ಯಜ್ಞಶಾಲೆಗೆ ಕರೆದೊಯ್ಯುವ ಗೂಳಿ, ಜಲ ಮತ್ತು ಅಗ್ನಿಯ ಯಜ್ಞ ಇಷ್ಟಾರ್‌ದೇವಿಯ ರಾಜ್ಯಾಭಿಷೇಕ ಮುಂತಾದುವು (ಇವು ಈಜಿಪ್ಟಿನ ಕಲೆಯನ್ನು ಹೋಲುವುವು). ಪ್ರತಿಮೆಗಳ ಪೈಕಿ, ಎರಡು ಕೊಂಬುಗಳುಳ್ಳ ಶಿರಸ್ತ್ರಾಣವನ್ನು ಧರಿಸಿ ಕೈಯಲ್ಲಿ ಕುಂಭವನ್ನು ಹಿಡಿದಿರುವ ದೇವಿಯ ಸ್ವರೂಪ ಇವೆಲ್ಲವೂ ಮುದ್ದಾಗಿವೆ. ಇವುಗಳಲ್ಲಿ ಚಿತ್ರಗಾರರ ನೈಜತೆ, ಸೌಲಭ್ಯ, ಭಾವದೃಷ್ಟಿ, ರೇಖಾವಿಲಾಸಗಳು ಮನೋಹರವಾಗಿವೆ. ಆದರೆ ಇವೆಲ್ಲವೂ ಯಥಾರ್ಥ ದೃಷ್ಟಿಯಲ್ಲಿಲ್ಲ. ಕೆಲವು ಸುಮೇರರ ಆಧ್ಯಾತ್ಮಕತೆಗೆ ಸಾಂಕೇತಿಕ. ಇದೇ ಕೌಶಲದಿಂದ ಪತಾಕದ ತ್ರಿಕೋಣದ ಕೊನೆಗಳಲ್ಲಿ, ಅದರ ನಾನಾವರ್ಣದ ಫಲಕಗಳಲ್ಲಿ ರಚಿಸಲಾದ ರೂಪಗಳ ವೈಶಿಷ್ಟ್ಯವನ್ನು ಕಾಣಬಹುದು.

ಉತ್ತರ, ವಾಯವ್ಯ, ಈಶಾನ್ಯ ದಿಕ್ಕುಗಳಿಂದ ಬಂದ ಸುತ್ತಮುತ್ತಿನ ಬುಡಕಟ್ಟಿನ ಜನರಿಂದ ಪ್ರ.ಶ.ಪೂ. ಸು. 2000ದಲ್ಲಿ ಬ್ಯಾಬಿಲೋನಿಯ ರಾಜ್ಯಕ್ಕೆ ತೊಂದರೆ ಉಂಟಾಯಿತು-ಹಿಟ್ಟೈಟರಿಂದ (ಪ್ರ.ಶ.ಪೂ.1750), ವಾಯವ್ಯದ ಕಾಶ್ಯೈಟ್ಟರಿಂದ (ಪ್ರ.ಶ.ಪೂ. 1550). ಪ್ರ.ಶ.ಪೂ. 1550-1169ರ ವರೆಗೂ ಬಾಬಿಲೋನಿಯ ಕಾಶ್ಯೈಟ್ಟರ ಆಡಳಿತದಲ್ಲಿದ್ದು ಸು. ಪ್ರ.ಶ.ಪೂ. 1000ದಲ್ಲಿ ಯುದ್ಧದಲ್ಲಿ ಚತುರರಾದ ಅಸ್ಸೀರಿಯನ್ನರ ಆಡಳಿತ ಈಜಿಪ್ಟ್ ಮೇಲೆ ಪ್ರ.ಶ.ಪೂ. 700ರಲ್ಲಿ ಹರಡಿತು. ಬ್ಯಾಬಿಲೋನಿಯದಲ್ಲಿ ಜೇಡಿಮಣ್ಣು ಎಷ್ಟು ಹೇರಳವೋ ಅಸ್ಸೀರಿಯದಲ್ಲಿ ಕಲ್ಲು ಅಷ್ಟು ಹೇರಳವಾಗಿದ್ದು, ಅವರು ದೇವಸ್ಥಾನ (ಜಿಗ್ಗುರಾಟ್) ಅರಮನೆ ಮುಂತಾದ ಕಟ್ಟಡಗಳಲ್ಲಿ, ಅವುಗಳ ಅತ್ಯದ್ಭುತವಾದ ಭಿತ್ತಿಚಿತ್ರಗಳ ಉಬ್ಬಿದ ಶಿಲ್ಪಾಕೃತಿಗಳ ಶೃಂಗಾರದಲ್ಲಿ, ಜೀವನದ ವೈಭವ ಮತ್ತು ಆಡಂಬರದಲ್ಲಿ ತೊಡಗಲು ಅವಕಾಶವಾಯಿತು. ಇದರ ಪರಿಣಾಮ ಅವರ ಆಡಳಿತ ಸಡಿಲಾಗಿ ನಾಶವಾಯಿತು. ಈ ರಾಜ್ಯ ಪರ್ಷಿಯನ್ ರಾಜನಾದ ಸೈರಸ್‌ನಿಂದ ಪರಾಭವ (ಪ್ರ.ಶ.ಪೂ.3-10-538) ಹೊಂದುವವರೆಗೂ ವೈಭವದಿಂದ ಮೆರೆಯಿತು.

ಕಟ್ಟಡದ ನಿರ್ಮಾಣದಲ್ಲಿ, ಅದರ ಅಲಂಕಾರದಲ್ಲಿ, ಅಸ್ಸೀರಿಯನ್ನರು ಸುಮೇರಿಯನ್ನರಿಗಿಂತಲೂ, ದಕ್ಷಿಣ ಅಕ್ಕೇಡಿಯನ್ನರಿಗಿಂತಲೂ ಹೆಚ್ಚಾದ ನೈಪುಣ್ಯವನ್ನು ಸಾಧಿಸಿದರು. ಇವರ ಶೈಲಿ ವಿಶಿಷ್ಟ ರೂಪಗಳನ್ನು ತಾಳಿದ್ದರೂ ಬ್ಯಾಬಿಲೋನಿಯ ಸಂಪ್ರದಾಯಕ್ಕೇ ಹೊಂದಿಕೊಂಡಿದೆ. ಚಿತ್ರಗಳು ಉಚ್ಚಮಟ್ಟದವು. ಇವರು ಅಲಂಕಾರವನ್ನು ಅಂತಃಪುರಗಳಿಗೂ ಮಹಾದ್ವಾರಗಳಿಗೂ ಮಾನಸ್ತಂಭ ಮುಂತಾದ ಸ್ಮಾರಕ ಕಟ್ಟಡಗಳಿಗೂ ಹೆಚ್ಚಾಗಿ ಉಪಯೋಗಿಸಿದರು. ಸುಮೇರ್ ಅಕೇಡಿಯನ್ನರ ಪುರಾಣ, ಇತಿಹಾಸಗಳು ಅವರ ಸಾಂಕೇತಿಕಶಾಸ್ತ್ರದೊಂದಿಗೆ ಯುದ್ಧದ ದೃಶ್ಯಗಳು, ಅರಮನೆಯ ಕ್ರೀಡಾಚಟುವಟಿಕೆಗಳು, ಬೇಟೆ ಮುಂತಾದುವು ಹೇರಳವಾಗಿ ವಿವರಣೆ ಸಹಿತ ಚಿತ್ರಿಸಲಾಯಿತು.

ಪ್ರ.ಶ.ಪೂ. 689ರಲ್ಲಿ ಸೆನ್ನಚರೀಬ್ ಬ್ಯಾಬಿಲೋನಿಯವನ್ನು ನಾಶಮಾಡಿದರು. ಅವನ ತರುವಾಯ ಬಂದ ರಾಜರಾದ ನೇಬೋಫೋಲಾಷ್ಟಾರ್ ಅವನ ಮಗ ಎರಡನೆಯ ನೆಬುಚೆಡ್ನಸರ್ ಇವರುಗಳಿಂದ ಪುನರುಜ್ಜೀವಿತವಾಯಿತು; ತನ್ನ ಕಲಾಔನ್ನತ್ಯವನ್ನು ಪುನಃ ಪಡೆಯಿತು (ಪ್ರ.ಶ.ಪೂ. 605-562). ಬ್ಯಾಬಿಲೋನ್ ಪಟ್ಟಣದ ವೈಶಾಲ್ಯ 24 ಕಿಮೀ ಚತುರಸ್ರ; ಅದರ ತೂಗುದ್ಯಾನಗಳು; ಕಂದಕದ ಗೋಡೆಗಳು 50 ಮೊಳಗಳ ದಪ್ಪ 200 ಮೊಳಗಳ ಎತ್ತರ; ಅದರ ಮರ್ದೂರ್ ದೇವಾಲಯದ ಆವರಣದಲ್ಲಿ ಸುಮೇರರ ದೇವಾಲಯದಂತೆ ನಿರ್ಮಿತವಾದ ಏಳು ಅಂತಸ್ತಿನ ಜಿಗ್ಗುರಾಟ್ ದೇವಾಲಯ; ಅದರ ಪೂರ್ವಕ್ಕೆ ನಿರ್ಮಿಸಲಾದ ಪ್ರದಕ್ಷಿಣೆ ಕೈಸಾಲೆ; ಅದರ ಗೋಡೆಗಳ ಮೇಲೆ ಸುಟ್ಟ ಹೆಂಚುಗಳಿಂದ

ಹಾಸಲಾದ ಹಿನ್ನೆಲೆಯಲ್ಲಿ ಚಿತ್ರಿಸಿದ ಸಿಂಹಗಳ ಶ್ರೇಣಿಗಳು; ಇಷ್ಟಾರ್ ಮಹಾದ್ವಾರದ ಮುಖದಲ್ಲಿ ಘೋರ ಸರ್ಪಾಕೃತಿಗಳಿಂದ ಕೂಡಿದ ಹೋರಿ ರೂಪಾಲಂಕಾರ; ಘನತರವಾದ ಇತರ ದೇವಾಲಯಗಳು, ಅರಮನೆಗಳು, ಮತ್ತು ಅವುಗಳ ಮೇಲ್ಮಟ್ಟದ ಶೃಂಗಾರ–ಇವೆಲ್ಲವೂ ಮರೆಯಲಾಗದ ಬ್ಯಾಬಿಲೋನಿಯ ಅಸ್ಸೀರಿಯನ್ನರ ವೈಭವವನ್ನು ಸಾರುತ್ತವೆ. ಉಪಯೋಗಿಸಿದ ಬಣ್ಣಗಳ ಪೈಕಿ ಮುಖ್ಯವಾದುವು ಆಕಾಶ, ಊದಾ, ಮತ್ತು ಬಿಳಿ ಬಣ್ಣಗಳು. ಈ ಚಿತ್ರಗಳು ಇಂದಿನ ಪೋಸ್ಟರ್ ಚಿತ್ರಗಳಂತೆ ಕಂಡುಬಂದರೂ ಅವುಗಳ ರೇಖಾವಿಲಾಸದ ನೈಜತೆ, ಲಾವಣ್ಯ ಪ್ರಶಂಸನೀಯವಾಗಿವೆ.


ಅಸ್ಸೀರಿಯನ್ನರ ಕಲೆ; ಬಾಣಗಳು ನಾಟಿರುವ ಹೆಣ್ಣುಸಿಂಹದ ಶಿಲ್ಪಕಲಾಚಿತ್ರ

ಅಸ್ಸೀರಿಯನ್ನರ ಕಲೆಯಲ್ಲಿ ಅಂಗಸಂಯೋಗ, ಪರಿಮಾಣ, ವಿವಿಧ ರೂಪಗಳ ವಿವರಣೆ, ಬಣ್ಣಿಸಿದ ರೂಪಗಳಿಗೂ, ಬಣ್ಣಿಸದ ಖಾಲಿಜಾಗಗಳಿಗೂ ಇರುವ ಮಧುರಾತ್ಮಕ ಸಂಬಂಧ, ಉಡುಪುಗಳಲ್ಲಿ, ಒಡವೆಗಳಲ್ಲಿ ಪ್ರತ್ಯೇಕಿಸಲಾದ ರೇಖಾಲಂಕಾರ, ದೈಹಿಕ ವರ್ಣನೆ (ಹಣೆಯ ಸುಕ್ಕುಗಳು, ಹಸ್ತರೇಖೆಗಳು) ಮುಂತಾದುವು ಮನೋಹರವಾಗಿವೆ. ಖಾಲಿ ಜಾಗದಲ್ಲಿ ವಿಷಯಾಂಶಕ್ಕೆ ಸೇರದ ಶೃಂಗಾರ ಅತ್ಯಲ್ಪ. ಇವರ ಕಲಾಧೋರಣೆಯಲ್ಲಿ, ಕೆಲಸದಲ್ಲಿ, ನಿಷ್ಠತೆ, ಘನತೆ ತುಂಬಿದೆ. ಮನುಷ್ಯಾಕೃತಿಗಳಲ್ಲಿ ಮಾಂಸಖಂಡಗಳ ಪಟುತ್ವ ಎದ್ದು ಕಾಣುತ್ತದೆ. ರಾಜರ ಆಕೃತಿಗಳಿಗೆ ಗರುಡನ ಪಕ್ಕೆಗಳನ್ನು ಜೋಡಿಸಿ ಅವುಗಳ ಬೆಡಗನ್ನು ಸಾಂಪ್ರದಾಯಿಕ ಮುದ್ರೆ ಸಹಿತ ರೂಪಿಸಿದ್ದಾರೆ. ನರಸಿಂಹಾವತಾರದ ರೀತಿಯಲ್ಲಿ ಅವರ ದೈವೀಕ ಸ್ವರೂಪ ಮಾನುಷ ಮುಖವನ್ನೂ ಎತ್ತಿನ ಅಥವಾ ಸಿಂಹದ ದೇಹವನ್ನೂ ಗರುಡನ ಪಕ್ಕೆಗಳನ್ನೂ ಕೊಟ್ಟು ರಮಣೀಯವಾಗಿ ಚಿತ್ರಿಸಿದ್ದಾರೆ. ಉಬ್ಬುಕೆತ್ತನೆ ಕೆಲಸದಲ್ಲಿ ಅಸ್ಸೀರಿಯನ್ನರ ಶಿಲ್ಪಾಕೃತಿಗಳು ವಿಶೇಷವಾಗಿ ದುಂಡುದುಂಡಾದುವು ಬಹಳ ಕಡಿಮೆ. ಇವುಗಳಲ್ಲೆಲ್ಲ ಶಕ್ತಿಯುತವಾದ ಒಂದು ರೀತಿಯ ತೀವ್ರತೆ, ಹಿಂಸಾತ್ಮಕದೃಷ್ಟಿ, ಜೀವಕಳೆ, ತುಂಬಿತುಳುಕಾಡುತ್ತಿದ್ದರೂ ಅವು ಈಜಿಪ್ಷಿಯನ್ನರ ಶಿಲ್ಪಗಳಂತೆ ಶಾಂತತೆಯನ್ನಾಗಲೀ ಪ್ರಚಂಡಾಕೃತಿಯನ್ನಾಗಲೀ ಪರಾದೃಷ್ಟಿಯನ್ನಾಗಲೀ ಹೊಂದಿಲ್ಲ. ಗ್ರೀಕರ ಸೂಕ್ಷ್ಮ ಹಸ್ತ ಕೌಶಲ ಅವುಗಳಲ್ಲಿಲ್ಲ. ಅಸ್ಸೀರಿಯನ್ನರ ಅತ್ಯಂತ ದೊಡ್ಡ ಆಕೃತಿ 5 $^1/_2$ ಮೀ ಎತ್ತರ ಮೀರಿಲ್ಲ. ಆದರೆ ಗಾಂಭೀರ್ಯ, ನಿರ್ದಿಷ್ಟ ಭಾವಸಂಪತ್ತು ಅವಕ್ಕಿವೆ. ಅಸ್ಸೀರಿಯನ್ನರ ಅಲಂಕಾರ ಧೋರಣೆಗಳನ್ನು ಗ್ರೀಕರು ಪ್ರಾರಂಭದಲ್ಲಿ ಹೇರಳವಾಗಿ ಉಪಯೋಗಿಸಿಕೊಂಡಿದ್ದಾರೆ. ಗ್ರೀಕರ ಶಿಲ್ಪಾಕೃತಿಗಳು ಉದ್ಯೋಗದಲ್ಲಿ ಹಿರಿಮೆಯನ್ನು ಸಾಧಿಸಿದರೆ, ಅಸ್ಸೀರಿಯನ್ನರ ಶಿಲ್ಪ ಭಾವಸಂಪತ್ತನ್ನು ಹೊಂದಿದೆ. (ಪಿ.ಎಸ್.)

**ಅಹಂಕಾರ :** ಅಹಂ ಎಂದರೆ ನಾನು, ಕಾರ ಎಂದರೆ ಮಾಡುವುದು. ನಾನು ಎಂಬ ಭಾವನೆಯನ್ನು ಹುಟ್ಟಿಸುವ ತತ್ತ್ವಕ್ಕೆ ಸಾಂಖ್ಯದರ್ಶನದಲ್ಲಿ ಅಹಂಕಾರ ಎಂದು ಹೆಸರು. *

**ಅಹಂಭಾವ :** ಫ್ರಾಯಿಡ್‌ನ ಪ್ರಕಾರ ದೈಹಿಕ ಪ್ರೇರಣೆಗಳಾದ (ಇಡ್) ಹಸಿವು, ಬಾಯಾರಿಕೆ, ನಿದ್ರೆ ಮುಂತಾದುವನ್ನು ಒಂದು ಹತೋಟಿಯಲ್ಲಿಡುವ ಅಂಶ (ಈಗೊಯಿಸಂ). ಈ ಹತೋಟಿ ಎರಡು ಬಗೆಯದು. ಸುತ್ತಣ ಕಾಲ, ದೇಶ, ಸಾಮಾಜಿಕ ಪರಿಸರಗಳಿಗೆ ಹೊಂದಿ ನಡೆಯಬೇಕಾದಾಗ ವ್ಯಕ್ತಿ ತನ್ನ ಸಹಜಪ್ರವೃತ್ತಿಗಳ ಮೇಲೆ ಇಡುವ ಹತೋಟಿ ಒಂದು ಬಗೆಯದು. ಉನ್ನತ ಧ್ಯೇಯಾದರ್ಶಗಳ ಪಾಲನೆಗಾಗಿ ಇಟ್ಟುಕೊಳ್ಳಬೇಕಾದ ಹತೋಟಿ ಎರಡನೆಯದು.

ವ್ಯಕ್ತಿತ್ವದಲ್ಲಿನ ಒಂದು ಅಂಶವಾದ ದೈಹಿಕ ಪ್ರೇರಣೆಗಳನ್ನು ಕಾಲದೇಶಗಳ ಪರಿಸ್ಥಿತಿಗಳಿಗೂ ಸಾಮಾಜಿಕ ಕಟ್ಟುನಿಟ್ಟುಗಳಿಗೂ ಅನ್ವಯಿಸಿಕೊಂಡು ಸಫಲವನ್ನಾಗಿ ಮಾಡಿಕೊಳ್ಳಬೇಕಾದರೆ ವ್ಯಕ್ತಿಯಲ್ಲಿ ಅಹಮ್ಮಿನ ಅಂಶ ಬೆಳೆಯಬೇಕು. ಹಾಗಾಗದಿದ್ದರೆ ದೈಹಿಕ ಪ್ರೇರಣೆಗಳಿಗೆ ತುತ್ತಾಗಿ ಬದುಕೇ ಅಸಾಧ್ಯವಾಗಬಹುದು. ಅಂಬೆಗಾಲಿಕ್ಕುವ ಮಗು ಎಣ್ಣೆದೀಪವನ್ನು ನೋಡಿದರೆ ಹರ್ಷದಿಂದ ಹೋಗಿ ಅದನ್ನು ಮುಟ್ಟಲು ಪ್ರಯತ್ನಿಸುವುದು. ಜ್ವಾಲೆಯನ್ನು ಮುಟ್ಟಿ ಕೈಯನ್ನು ಸುಟ್ಟುಕೊಳ್ಳುವುದು. ಒಮ್ಮೆ ಈ ಅನುಭವವಾದ ಮಗು ಜ್ವಾಲೆಯನ್ನು ಇನ್ನೊಂದು ಸಲ ಮುಟ್ಟಲು ಪ್ರಯತ್ನಿಸುವುದಿಲ್ಲ. ಈ ವಿಧವಾಗಿ ಆ ಸಣ್ಣವಯಸ್ಸಿನಲ್ಲಿಯೇ ತನ್ನ ವಾತಾವರಣದಲ್ಲಿರುವ ವಸ್ತುಗಳ ಗುಣಗಳನ್ನು ತಿಳಿದುಕೊಂಡು, ಅದಕ್ಕೆ ತಕ್ಕ ಹಾಗೆ ವರ್ತಿಸುವುದು. ಹೀಗೆಯೆ ತಾಯಿಯ ಕಟ್ಟುನಿಟ್ಟುಗಳನ್ನು ಈ ಸಣ್ಣ ವಯಸ್ಸಿನಲ್ಲೇ ಅರಿತುಕೊಳ್ಳುವುದು. ಮಗುವಿಗೆ ಮೂರು ನಾಲ್ಕು ವರ್ಷಗಳ ವಯಸ್ಸು ಬರುವುದರೊಳಗಾಗಿ ತಾನು, ತನ್ನದು, ತನಗೆ ಎಂಬ ಅಂಶಗಳನ್ನು ಅರಿತುಕೊಳ್ಳುವುದು.

ಇದೂ ಅಲ್ಲದೆ ತಂದೆತಾಯಿಗಳ ಸಾಮಾಜಿಕ ಕಟ್ಟುನಿಟ್ಟುಗಳನ್ನು ಮಗು ಅರ್ಥಮಾಡಿಕೊಳ್ಳುವುದು. ಅವರು ಯಾವುದನ್ನು ಸರಿ, ಯಾವುದನ್ನು ತಪ್ಪು ಎಂದು ಹೇಳುವರೋ ಅದನ್ನು ಆಂತರೀಕರಣಮಾಡಿಕೊಂಡು, ತಾನೇ ಇದು ಒಳ್ಳೆಯದು, ಇದು ಕೆಟ್ಟದ್ದು ಎಂಬುದನ್ನರಿಯುವುದು. ಈ ಅಂಶಕ್ಕೆ ಫ್ರಾಯಿಡ್-ಅಹಮಾದರ್ಶ(ಸೂಪರ್ ಈಗೊ) ಎಂದು ಹೇಳಿದ್ದಾನೆ. ಈ ವಿಧವಾದ ಬಾಹ್ಯ ಆದರ್ಶಗಳನ್ನು ಆಂತರೀಕರಣಮಾಡಿಕೊಳ್ಳುವುದು ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಬಹುಮುಖ್ಯವಾದ ಮೆಟ್ಟಲು. ಈ ಮೆಟ್ಟಲನ್ನು ಸಣ್ಣ ಮಗು ಬಹಳ ಬಹಳ ಬೇಗ ಏರುವುದು. ಸಾಧಾರಣವಾಗಿ ತನ್ನ ನಾಲ್ಕು ಐದನೆಯ ವರ್ಷದಲ್ಲಿ ಈ ವಿಧವಾದ ಆಂತರೀಕರಣವನ್ನು ಮಾಡಿಕೊಳ್ಳುವುದು. ಹೀಗೆ ಮಾಡಿಕೊಳ್ಳದಿರುವವರಲ್ಲಿ ಕೇಡುಗ ಪ್ರವೃತ್ತಿಗಳು ಹತೋಟಿಯಲ್ಲಿರುವುದಿಲ್ಲ. ಇಂಥವರು ಆಡಿದ ಮಾತಿಗೆ ಬೆಲೆ ಕೊಡುವುದಿಲ್ಲ. ಒಪ್ಪಿಕೊಂಡ ಕಾರ್ಯವನ್ನು ಏನೇ ಕಷ್ಟ ಬಂದರೂ ಮಾಡಲೇಬೇಕೆಂಬ ಮನೋಭಾವ ಇವರಲ್ಲಿ ಇರುವುದಿಲ್ಲ. ಆದುದರಿಂದಲೇ ಇಂಥ ವ್ಯಕ್ತಿ ಸಮಾಜದಲ್ಲಿ ಉನ್ನತಸ್ಥಾನವನ್ನು ಪಡೆಯುವುದು ದುರ್ಲಭ. ಅಂಥ ಸ್ಥಾನಗಳನ್ನು ಹೇಗಾದರೂ ಮಾಡಿ ಪಡೆಯಬೇಕೆಂದು ನೂರಾರು ಅಸತ್ಯಗಳನ್ನು ನುಡಿದು, ಅಕ್ರಮ ಕಾರ್ಯಗಳನ್ನು ಮಾಡುವರು.

ಈ ವಿಧವಾಗಿ ಅಹಮಾದರ್ಶವನ್ನು ಪಡೆಯದಿರುವ ವ್ಯಕ್ತಿಗಳು ಸಮಾಜದಲ್ಲಿ ಅಪರಾಧಿಗಳಾಗುವರು ಅಥವಾ ಮನೋರೋಗಿಗಳಾಗುವರು. ಅಂದರೆ ಸಮಾಜದಲ್ಲಿ ಸರಿಯಾಗಿ ಬಾಳಲು ಮಗು ನಾಲ್ಕಾರು ವರ್ಷಗಳು ಬರುವುದರೊಳಗೆ ತನ್ನ ಅಹಂಭಾವಕ್ಕೂ ಅಹಮಾದರ್ಶಕ್ಕೂ ಸರಿಯಾದ ಅಸ್ತಿಭಾರವನ್ನು ಹಾಕಿಕೊಳ್ಳಬೇಕಾಗುವುದು. ಆ ವಯಸ್ಸಿನೊಳಗೆ ಈ ಅಸ್ತಿಭಾರ ಸರಿಯಾಗಿ ರೂಪುಗೊಳ್ಳದಿದ್ದರೆ ವ್ಯಕ್ತಿತ್ವ ಸರಿಯಾಗಿ ಬೆಳೆಯುವುದಿಲ್ಲ.

ಇದಲ್ಲದೆ ವ್ಯಕ್ತಿ ತಾನು ಸಾಯುವವರೆಗೂ ಉನ್ನತ ಆದರ್ಶಗಳನ್ನು ತನ್ನ ಮನಸ್ಸಿನಲ್ಲಿಟ್ಟು ಕೊಂಡು ಅವುಗಳ ಗುರಿಯನ್ನು ಸಾಧಿಸುವುದಕ್ಕೆ ಸತತವಾಗಿ ದುಡಿಯಬೇಕು. ತನ್ನ ವ್ಯಕ್ತಿತ್ವದ ಬೆಳವಣಿಗೆ ಪೂರ್ತಿಯಾಯಿತೆಂದು ಯಾವ ಮಾನವನೂ ಹೇಳಲಸಾಧ್ಯ. ಸತತವಾಗಿ ದುಡಿದ ಹೊರತು ವ್ಯಕ್ತಿತ್ವ ಪೂರ್ಣಗೊಳ್ಳುವುದಿಲ್ಲ.

ಅಹಮಾದರ್ಶವಿದ್ದರೆ ಅಪರಾಧ ಮನೋಭಾವ ಉಂಟಾಗುವುದು. ಇಲ್ಲದಿದ್ದರೆ ತಾನು ಮಾಡಿದ್ದೇ ಸರಿ ಎಂದು ಸಂತೃಪ್ತಿ ಹೆಚ್ಚಿ ಸರಿಯಾದ ವ್ಯಕ್ತಿತ್ವ ಬೆಳೆಯುವುದಿಲ್ಲ. ಯಾವ ಕೆಲಸಮಾಡಬೇಕಾದರೂ ಅದು ಸರಿಯೇ ತಪ್ಪೇ ಎಂದು ವಿವೇಚಿಸಬೇಕು. ಮಾಡಬಾರದ ಕೆಲಸವೆಂದು ತಿಳಿದೂ ಮಾಡಿದರೆ ಅಪರಾಧ ಮನೋಭಾವವುಂಟಾಗುವುದು. ಇಂಥ ವ್ಯಕ್ತಿಗೆ ಅಹಮಾದರ್ಶ ದೃಢವಾಗಿ ಬೇರೂರಿಲ್ಲವೆಂದು ಹೇಳಬಹುದು. ಇದು ಸರಿಯಾಗಿ ಬೇರೂರಿದ್ದರೆ ಒಮ್ಮೆ ಮಾಡಬಾರದ ಕೆಲಸವನ್ನು ಮಾಡಿದರೆ ಪುನಃ ಆ ಕೆಲಸವನ್ನು ಮಾಡಬೇಕೆಂಬ ಬಯಕೆಯನ್ನು ಅವರು ನಿಗ್ರಹಿಸುವರು.

ಈ ವಿಧವಾಗಿ ಕೇವಲ ದೈಹಿಕಪ್ರೇರಣೆಗಳಿಗೆ ಅಧೀನವಾಗಿರುವ ಸಣ್ಣ ಮಗು ಬೆಳೆಯುತ್ತ ಬೆಳೆಯುತ್ತ ಯಥಾರ್ಥಜ್ಞಾನವನ್ನೂ ಪರಿಸರದ ಸಾಮಾಜಿಕ ಕಟ್ಟುನಿಟ್ಟುಗಳನ್ನೂ ಅರಿತು ಆದರ್ಶಗಳನ್ನು ಆಂತರೀಕರಣ ಮಾಡಿಕೊಂಡು ಪರಿಪೂರ್ಣ ವ್ಯಕ್ತಿತ್ವವನ್ನು ಪಡೆಯುವುದು.

**ಕೇಂದ್ರೀಕೃತ ಅಹಂಭಾವ :** ಅಹಂಭಾವ ಬೆಳೆಯದೆ ವ್ಯಕ್ತಿತ್ವದ ಬೆಳವಣಿಗೆ ಅಸಾಧ್ಯವೆಂಬ ಮಾತನ್ನು ಒಪ್ಪಿದರೂ ಅಹಂಭಾವ ಕೇಂದ್ರೀಕೃತವಾದಾಗಿನ (ಈಗೊಸೆಂಟ್ರಿಸಂ) ಅಪಾಯಗಳಿಂದ ವ್ಯಕ್ತಿ ದೂರವಿರಬೇಕಾಗುತ್ತದೆ. ಇತರ ವ್ಯಕ್ತಿಗಳನ್ನು ಗೌರವಿಸದೆ ಅವರೆಲ್ಲರೂ ತನ್ನ ಆಕಾಂಕ್ಷೆಗಳನ್ನು ಈಡೇರಿಸುವುದಕ್ಕೋಸ್ಕರವೇ ಇರುವರೆಂಬ ಮನೋಭಾವವೇ ಕೇಂದ್ರೀಕೃತ ಅಹಂಭಾವ. ಈ ಮನೋಧರ್ಮದ ವ್ಯಕ್ತಿ ತನಗೊದಗುವ ಪ್ರತಿಯೊಂದು ಪರಿಸ್ಥಿತಿಯನ್ನೂ ತನಗೆ ಅನುಕೂಲವೂ ಅಥವಾ ಅನನುಕೂಲವೂ ಎಂಬ ದೃಷ್ಟಿಯಿಂದಲೇ ಕಾಣುವನು. ಎಲ್ಲವನ್ನೂ ತನ್ನ ಸ್ವಾರ್ಥಕ್ಕೋಸ್ಕರವೆಂದೇ ಎಣಿಸುವನು. ಇಂಥ ವ್ಯಕ್ತಿ ತನ್ನ ಕುಟುಂಬಜೀವನದಲ್ಲೂ ಸಾಮಾಜಿಕ ಜೀವನದಲ್ಲಿಯೂ ಅನೇಕ ಕಷ್ಟಗಳಿಗೆ ಗುರಿಯಾಗಿ, ಇತರರಿಗೆ ಹಾನಿಯನ್ನುಂಟುಮಾಡುವನು.

ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಬುದ್ಧಿಪೂರ್ವಕವಾಗಿ ಕೇಂದ್ರಿಕೃತ ಅಹಂಭಾವವನ್ನು ಕಡಿಮೆ ಮಾಡಿಕೊಳ್ಳುವುದು ಹಿತಕರವಾದುದು. ಏಕೆಂದರೆ ಕೇಂದ್ರೀಕೃತ ಅಹಂಭಾವದಿಂದ ಪರಾವಲಂಬನೆ ಮತ್ತು ಸ್ವಾರ್ಥ ಬೆಳೆಯುತ್ತವೆ. ಆದರ್ಶ ಜೀವನದೃಷ್ಟಿಯಿಂದ ಇವು ಸ್ವಾವಲಂಬನೆ ಮತ್ತು ಪರೋಪಕಾರಕ್ಕೆ ಎಡೆಗೊಡಬೇಕು. (ಬಿ.ಕೆ.)

**ಅಹಮದ್[1] :** 1603–1617. ಮೂರನೆಯ ಮಹಮ್ಮದನ ತರುವಾಯ ಪಟ್ಟಕ್ಕೇರಿದಾಗ ಇವನಿಗೆ ಹದಿಮೂರು ವಯಸ್ಸು. ಮಧ್ಯ ಯುರೋಪಿನಲ್ಲೂ ಹರಡಿದ್ದ ತುರ್ಕಿ (ಆಟೊಮನ್) ಸಾಮ್ರಾಜ್ಯದ ಕ್ರೈಸ್ತ ಪ್ರಾಂತಗಳು ಪರಧರ್ಮೀಯರ ಹಿಡಿತದಿಂದ ತಪ್ಪಿಸಿಕೊಳ್ಳಲೆತ್ನಿಸುತ್ತಿದ್ದುವು. ರಾಜ್ಯದಲ್ಲೇ ಅಶಾಂತಿ ವ್ಯಾಪಿಸಿತ್ತು. ರಾಜಧಾನಿಯಾದ ಇಸ್ತಾನ್‌ಬುಲ್‌ನ ಸಿಪಾಯಿಗಳು ದಂಗೆಯೆದ್ದಿದ್ದರು. ಅನಟೋಲಿಯ ಪ್ರಾಂತ್ಯದಲ್ಲಿ ಸೈನಿಕರಲ್ಲಿ ಅಶಾಂತಿ ಹರಡಿತ್ತು. ಲೆಬನಾನ್ ಪ್ರಾಂತ್ಯದಲ್ಲಿ ಫಕ್ರ–ಅಲ್–ದೀನ್ ದಂಗೆ ನಡೆಸಿದ್ದ. ಚಿಕ್ಕ ವಯಸ್ಸಿನವನಾದರೂ ಸುಲ್ತಾನ ಈ ದಂಗೆಗಳನ್ನು ದೃಢನಿಶ್ಚಯದಿಂದ ಅಡಗಿಸಲೆತ್ನಿಸಿದ. ರಾಜಧಾನಿಯಲ್ಲಿ ಭವ್ಯವಾದೊಂದು ಮಸೀದಿ ಕಟ್ಟಿಸಿದ. ಮೆಕ್ಕ, ಮದೀನ ಮುಂತಾದ ಧರ್ಮಕ್ಷೇತ್ರಗಳಿಗೆ ಉದಾರವಾಗಿ ಧನಸಹಾಯ ಮಾಡಿದ. *

**ಅಹಮದ್[2] :** ತುರ್ಕಿ ಸುಲ್ತಾನ್ 1691–95. ಎರಡನೆಯ ಸುಲೇಮಾನನ ತರುವಾಯ ಸುಲ್ತಾನನಾದ. ತುರ್ಕಿಗೆ ಸೇರಿದ್ದ ಕ್ರೈಸ್ತ ದೇಶಗಳನ್ನೆಲ್ಲ ಬಿಡುಗಡೆ ಮಾಡಬೇಕೆಂಬ ಉದ್ದೇಶದಿಂದ ಪೋಲೆಂಡ್, ಆಸ್ಟ್ರಿಯ ಮತ್ತು ವೆನಿಸ್ ರಾಜ್ಯಗಳು ಪವಿತ್ರಕೂಟವೊಂದನ್ನು ಮಾಡಿಕೊಂಡು ತುರ್ಕಿಯ ಮೇಲೆ ಯುದ್ಧ ನಡೆಸಿದವು. ಇವನ ಕಾಲದಲ್ಲಿ ಸ್ಲಾಂಕಮೆನ್ ಎಂಬಲ್ಲಿ ನಡೆದ ಕದನದಲ್ಲಿ ತುರ್ಕಿ ಸೈನ್ಯ ಭಾರಿ ಅಪಜಯ ಹೊಂದಿತು. ಸಮರ್ಥ ವಜೀರ್ ಮುಸ್ತಫ ಕೊಪ್ರೂಲ್ ಯುದ್ಧರಂಗದಲ್ಲಿ ಮಡಿದ. ಹಂಗೆರಿ ತುರ್ಕಿ ಸುಲ್ತಾನರ ಕೈಬಿಟ್ಟಿತು. *

**ಅಹಮದ್[3] :** 1703–1736. ರಷ್ಯದ ಚಕ್ರವರ್ತಿ ಪೀಟರ್ ಮಹಾಶಯ ಸ್ವೀಡನ್ನಿನ ಹನ್ನೆರಡನೆಯ ಚಾರ್ಲ್ಸ್‌ನನ್ನು ಪೊಲ್ಟಾವ ಕಾಳಗದಲ್ಲಿ ಸೋಲಿಸಿದಾಗ ಪರಾಭವ ಹೊಂದಿದ ಚಾರ್ಲ್ಸ್‌ನಿಗೆ ಆಶ್ರಯವಿತ್ತ. ಚಾರ್ಲ್ಸ್‌ನ ಸೂಚನೆಯ ಮೇಲೆ ರಷ್ಯದೊಡನೆ ಯುದ್ಧ ಹೂಡಿದ. ಪರಿಣಾಮವಾಗಿ ಅಸ಼ಾವ್ ತುರ್ಕಿಯ ಸ್ವಾಧೀನಕ್ಕೆ ಬಂತು. ವೆನಿಸ್ ಮತ್ತು ಆಸ್ಟ್ರಿಯಾಗಳೊಡನೆ ಯುದ್ಧ ಪ್ರಾರಂಭವಾಯಿತು. ತುರ್ಕಿಯೊಂದಿಗೆ ಮೈತ್ರಿ ಹೊಂದಿದ್ದ ಇಂಗ್ಲೆಂಡ್ ಮತ್ತು ಫ್ರಾನ್ಸ್ ರಾಜ್ಯಗಳ ಮಧ್ಯಸ್ಥಿಕೆಯಿಂದ ಪಸಾರೋವಿಟ್ಸ್ ಒಪ್ಪಂದವಾಗಿ, ವೆನಿಸ್‌ನಿಂದ ಗೆದ್ದುಕೊಂಡಿದ್ದ ಪ್ರಾಂತ್ಯಗಳು ತುರ್ಕಿಗೆ ಉಳಿದವು. ಆದರೆ ಹಂಗೇರಿ ಮತ್ತು ಸರ್ಬಿಯದ ಒಂದು ಭಾಗವನ್ನು ತುರ್ಕಿ ಬಿಟ್ಟುಕೊಡಬೇಕಾಯಿತು. ಜಾನಿಸ್ಸರೀಸ್ ಎಂಬ ಸುಶಿಕ್ಷಿತ ಸೈನ್ಯದಳದವರು ತುರ್ಕಿಯಲ್ಲಿ ಬೆಳೆಯುತ್ತಿದ್ದ ಹೊಸ ಶ್ರೀಮಂತ ವರ್ಗಕ್ಕೆ ವಿರೋಧವಾಗಿ ದಂಗೆಯದ್ದು ಅಹಮದ್‌ನನ್ನೂ ಪ್ರಮುಖ ಬೆಂಬಲಿಗರನ್ನೂ ಸೆರೆಗೆ ತಳ್ಳಿ ಅವನ ಅಣ್ಣನ ಮಗ ಒಂದನೆಯ ಮಹಮೂದ್‌ನನ್ನು ಸುಲ್ತಾನ ಪದವಿಗೇರಿಸಿದರು. *

**ಅಹಮದ್‌ನಗರ :** ಮಹಾರಾಷ್ಟ್ರದ ಒಂದು ಪ್ರಮುಖ ಜಿಲ್ಲೆ, ಆಡಳಿತಕೇಂದ್ರ ಹಾಗೂ ನಗರ. ಈ ನಗರ ಸೀನಾ ನದಿಯ ದಂಡೆಯ ಮೇಲಿದೆ. ಜನಸಂಖ್ಯೆ 5,80.376 (2001). ಮುಂಬಯಿಗೆ ಈ ನಗರ 350 ಕಿಮೀ ದೂರದಲ್ಲಿದೆ. ಪುಣೆ ವಿಭಾಗದ ಮಿಲಿಟರಿ ಠಾಣ್ಯವಾಗಿದೆ.

ಹತ್ತಿ ಹಾಗೂ ರೇಷ್ಮೆ ವ್ಯಾಪಾರಕ್ಕೆ ಕೇಂದ್ರವೆನಿಸಿದೆ. ಹತ್ತಿಬಟ್ಟೆಯನ್ನು ನೇಯುವ ಮತ್ತು ಬಣ್ಣ ಹಾಕುವ ಗಿರಣಿಗಳುಂಟು.

ಜಿಲ್ಲೆಯಲ್ಲಿ ಮಳೆ ಕಡಿಮೆ. ಬಂಜರು ಭೂಮಿ. ವಿಸ್ತೀರ್ಣ 17,034 ಚ.ಕಿಮೀ. ಜನಸಂಖ್ಯೆ 40,88,077 (2001). ಜಿಲ್ಲೆಯ ಉತ್ತರ ಭಾಗದಲ್ಲಿ ಗೋದಾವರಿ ಹಾಗೂ ಉಪನದಿಗಳಾದ ಪಾರವಾರ ಮತ್ತು ಮೂಲಾ ಹರಿಯುತ್ತವೆ. ಇತರ ನದಿಗಳೆಂದರೆ ಡಾರ್, ಸೇಘಾನಿ, ಭೀಮಾ, ಹಾಗೂ ಗೋರ್. ಹತ್ತಿ, ಗೋದಿ, ದ್ವಿದಳ ಧಾನ್ಯಗಳು ಇಲ್ಲಿಯ ಪ್ರಮುಖ ಬೆಳೆಗಳು. (ಎಂ.ಎಸ್.)

ಅಹಮದ್‌ನಗರದ ಚರಿತ್ರೆ ಸ್ವಾರಸ್ಯಕರವಾಗಿದೆ. ನಿಜಾಮ್‌ಶಾಹಿ ವಂಶದ ಸಂಸ್ಥಾಪಕ ಅಹಮದ್ ನಿಜಾಮ್ ಷಾ ಬಹಮನಿ ಸೈನ್ಯವನ್ನು ಸೋಲಿಸಿ ಪಡೆದ ವಿಜಯದ ಸ್ಮಾರಕವಾಗಿ 1494ರಲ್ಲಿ ಅದೇ ಸ್ಥಳದಲ್ಲಿ ಒಂದು ನಗರ ಸ್ಥಾಪನೆ ಮಾಡಿ ಅದಕ್ಕೆ ಅಹಮದ್ ನಗರ ಎಂದು ಹೆಸರಿಟ್ಟು ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ನಗರ ಬಹು ಬೇಗ ಅಭಿವೃದ್ಧಿಗೆ ಬಂತು. ನಗರದ ಮೇಲೆ ದಂಡೆತ್ತಿ ಬಂದಿದ್ದ ಅನೇಕ ಬಲಿಷ್ಠ ಶತ್ರುಗಳ ಪೈಕಿ ಬಿಜಾಪುರದ ಅಲಿ ಆದಿಲ್ ಷಾ ಮತ್ತು ರಾಮರಾಜ ಮುಖ್ಯರು. ಇವರೂ ನಗರವನ್ನು ಸ್ವಾಧೀನಪಡಿಸಿಕೊಳ್ಳಲಾರದೆ ಸೋಲನ್ನೊಪ್ಪಿಕೊಳ್ಳಬೇಕಾಯಿತು. 1594ರಲ್ಲಿ ಮೊಗಲರ ಸೇನೆಯ ಮೇಲೆ ಚಾಂದ್‌ಬೀಬಿ ಕಾದಾಡಿ ಕೊನೆಗೆ ಒಪ್ಪಂದ ಮಾಡಿಕೊಂಡಳು. ಆದರೆ 1599ರಲ್ಲಿ ನಗರ ಮೊಗಲರ ವಶವಾಯಿತು. ಚಾಂದ್‌ಬೀಬಿ ತನ್ನ ಅಧಿಕಾರಿಗಳಿಂದಲೇ ಕೊಲ್ಲಲ್ಪಟ್ಟಳು. ಔರಂಗಜೇಬ ತನ್ನ ಕೊನೆಯ ದಿನಗಳನ್ನು ಅಲ್ಲಿಯೇ ಕಳೆದ. 1759ರಲ್ಲಿ ಮೊಗಲ ಅಧಿಕಾರಿ ಲಂಚ ಸ್ವೀಕರಿಸಿ ಬಾಲಾಜಿ ಬಾಜೀರಾಯನಿಗೆ ಅಹಮದ್‌ನಗರವನ್ನು ಬಿಟ್ಟುಕೊಟ್ಟ. 1797ರಲ್ಲಿ ಎರಡನೆಯ ಬಾಜೀರಾಯ ತನಗೆ ಸಲ್ಲಿಸಿದ ಸೇವೆಗಾಗಿ ಅದನ್ನು ಸಿಂಧೆಗೆ ಬಿಟ್ಟುಕೊಟ್ಟ. ಆದರೆ ಬೇಸಿನ್ ಒಪ್ಪಂದದ ತರುವಾಯ ಇಂಗ್ಲಿಷರು ಎರಡನೆಯ ಮರಾಠಯುದ್ಧದಲ್ಲಿ ಅಹಮದ್‌ನಗರವನ್ನು ತಮ್ಮ ವಶಕ್ಕೆ ದೊರಕಿಸಿಕೊಂಡು ಮುಂದಣ ಕಾರ್ಯಕ್ಕೆ ಅನುಕೂಲಮಾಡಿಕೊಂಡರು. 1817ರಲ್ಲಿ ಪುಣೆ ಒಪ್ಪಂದದ ಪ್ರಕಾರ ನಗರ ಬ್ರಿಟಿಷರ ವಶವಾಯಿತು. ಹಳೆಯ ಕೋಟೆ, ಮಲಿಕ್ ಅಹಮದ್‌ನ (1490 –1508) ಅರಮನೆ, ಬುರ್ಹಾನ್ ನಿಜಾಮ್ ಷಾನ (1508 –55) ಕಾಲದ ರುಮಿಶಾನ್‌ನ ಮಸೀದಿ, ರುಮಿಶಾನ್‌ನ ಗೋರಿ, ಕಾಲಿಮಸೀದಿ (ಈಗಿನ ಜಿಲ್ಲಾಧಿಕಾರಿಗಳ ಕಛೇರಿ), 1579ರಲ್ಲಿ ಕಟ್ಟಿದ ನ್ಯಾಮತ್‌ಖಾನನ ಅರಮನೆ ಮತ್ತು ಮಸೀದಿಯ ಅವಶೇಷಗಳು, ಒಂದನೆಯ ಮರ್ತಜಾನಿಜಾಮ್ ಷಾನ (1565 – 81) ಕಾಲದ ಸಲಾಬತ್‌ಖಾನನ ಗೋರಿ ಮುಂತಾದ ಅನೇಕ ಪ್ರಾಚೀನ ಕಟ್ಟಡಗಳು ಇಲ್ಲಿವೆ. (ಎಸ್.ಎನ್.)

**ಅಹಮದ್ ಷಾ :** ಈ ಹೆಸರಿನ ಮೂವರು ದೊರೆಗಳು ಭಾರತದ ಚರಿತ್ರೆಯಲ್ಲಿ ಪ್ರಸಿದ್ಧರು. ಮೊದಲನೆಯವ 1748–54ರ ವರೆಗೆ ಆಳಿದ ಮೊಗಲ್ ಚಕ್ರವರ್ತಿ ಮಹಮದ್ ಷಾನ ತರುವಾಯ ಸಿಂಹಾಸನವನ್ನೇರಿದ. ರಾಜ್ಯವಾಳುವುದಕ್ಕೆ ಯಾವ ರೀತಿಯ ಯೋಗ್ಯತೆಯನ್ನೂ ಹೊಂದಿರದಿದ್ದ ಈತ, ದಕ್ಷಿಣದಲ್ಲಿ ಮರಾಠರ ಹಾವಳಿ, ರಾಜಧಾನಿಯಲ್ಲಿ ವಜೀರ್ ಸಿಫ್ದರ್‌ಜಂಗ್‌ನ ಪಿತೂರಿ ಒಳಸಂಚುಗಳು, ಪಶ್ಚಿಮದಲ್ಲಿ ಅಹಮದ್ ಷಾನ ದಾಳಿ, ಲೂಟಿ ಇವೆಲ್ಲವನ್ನೂ ಎದುರಿಸಬೇಕಾಯಿತು. ಹೈದರಾಬಾದಿನ ನಿಜಾಮ ಅಸಫ್ ಝಾನ ಮೊಮ್ಮಗ ಇಮಾದುಲ್ ಮುಲ್ಕ್ 1754ರಲ್ಲಿ ಇವನ ಕಣ್ಣುಗಳನ್ನು ಕೀಳಿಸಿ ಸಿಂಹಾಸನದಿಂದೋಡಿಸಿದ.

ಎರಡನೆಯವ ಬಹಮನಿ ವಂಶದವ. ಈತ ವಿಜಯನಗರದ ಕೋಟೆಯನ್ನು ಮುತ್ತಿ ಜಯಶಾಲಿಯಾದನೆಂದು ಸುಪ್ರಸಿದ್ಧ ಇತಿಹಾಸಕಾರ ಫೆರಿಷ್ಟ ಹೇಳುತ್ತಾನೆ. ಕಾಕತೀಯರ ವಾರಂಗಲ್ಲನ್ನು ಸ್ವಾಧೀನಪಡಿಸಿಕೊಂಡ (1425). ಗುಜರಾತಿನ ಸುಲ್ತಾನನ ಮೇಲೆ ದಾಳಿಮಾಡಿ ಪರಾಭವ ಹೊಂದಿದ. ಅವಿದ್ಯಾವಂತನಾದರೂ ವಿದ್ಯಾಪಕ್ಷಪಾತಿಯಾಗಿದ್ದ.

1411ರಲ್ಲಿ ದೊರೆಯಾದ ಅಹಮದ್ ಷಾ ಗುಜರಾತಿನ ಸ್ಥಾಪಕ. ಸುಮಾರು ಮೂವತ್ತು ವರ್ಷಗಳ ಕಾಲ ಮಾಳವ, ರಾಜಪುಟಾಣ, ಬಹಮನಿ ಸುಲ್ತಾನರುಗಳೊಡನೆ ಹೋರಾಡಿ ರಾಜ್ಯ ವಿಸ್ತರಿಸಿದ. ಇಂದಿನ ಅಹಮದಾಬಾದ್ ಸ್ಥಾಪಿಸಿದ. ಮತಾಂಧನಾದರೂ ಉದಾರಿ ಯೆಂದು ಹೆಸರಾಗಿದ್ದಾನೆ. (ಎಚ್.ಜಿ.ಆರ್.)

**ಅಹಮದ್ ಷಾ ದುರಾನಿ :** ಆಫ್ಘನರಲ್ಲಿ ಅಬ್ದಾಲಿ ಮನೆತನಕ್ಕೆ ಸೇರಿದವ. ಆಫ್ಘಾನಿಸ್ತಾನವನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿ ನಾದಿರ್ ಷಾನಿಗೆ ನೆರವಾದ (1738). 1747ರಲ್ಲಿ ನಾದಿರ್ ಷಾ ಕೊಲೆಯಾದ. ಅನಂತರ ಆಫ್ಘಾನಿಸ್ತಾನದಲ್ಲಿ ದೊರೆಯಾದ ದುರಾನಿ (ದುರ್–ಇ–ದುರಾನ್, ಎಂದರೆ ಮುತ್ತುಗಳಲ್ಲಿ ಶ್ರೇಷ್ಠ) ಎಂಬ ಬಿರುದನ್ನು ಧರಿಸಿ ಸಿಂಹಾಸನವನ್ನೇರಿದ. ಉತ್ತರ ಹಿಂದೂಸ್ತಾನದಲ್ಲಿ ಅನಾಯಕತ್ವ ಹರಡುತ್ತಿದ್ದ ಕಾಲವದು. ಆಗ ಮೊಗಲ್ ಸಾಮ್ರಾಜ್ಯ ಬಲಗುಂದಿ ಇಳಿಗತಿಯಲ್ಲಿ ಸಾಗುತ್ತಿತ್ತು. ಮರಾಠಾ ಸಾಮ್ರಾಜ್ಯ ಉತ್ತರ ಹಿಂದೂಸ್ತಾನದಲ್ಲೂ ವ್ಯಾಪಿಸಿ, ಹರಡಿದಷ್ಟೂ ಶಿಥಿಲತೆ ಎಡೆಮಾಡಿಕೊಟ್ಟಿತು; ರಜಪೂತರ ಕ್ಷಾತ್ರ ಕುಂದಿತ್ತು. ಇದನ್ನು ಕಂಡು ಅಹಮದ್ ಷಾ ಹಿಂದೂಸ್ತಾನಕ್ಕೆ ಅನೇಕ ಬಾರಿ ನುಗ್ಗಿ ಅಲ್ಲಿನ ಸಂಪತ್ತನ್ನು ದೋಚಿಕೊಂಡು ಹಿಂತಿರುಗಿದ. ಮಥುರ, ಬೃಂದಾವನ ಮುಂತಾದ ಅನೇಕ ಪವಿತ್ರ ಕ್ಷೇತ್ರಗಳಿಗೆ ನುಗ್ಗಿ ಗುಡಿಗೋಪುರಗಳನ್ನು ನೆಲಸಮ ಮಾಡಿ, ಅಸಂಖ್ಯಾತ ಹಿಂದೂಗಳನ್ನು ಕೊಂದು ಅಲ್ಲಿನ ಸಂಪತ್ತನ್ನು ಸೂರೆ ಮಾಡಿದ. ಎರಡು ಸಲ (1756, 1760) ದೆಹಲಿಯ ಲೂಟಿ ನಡೆಯಿತು. ಮೂರನೆಯ ಪಾಣಿಪತ್ ಕಾಳಗದಲ್ಲಿ (1761) ಮರಾಠರನ್ನು ಸೋಲಿಸಿ ಅವರ ಅವನತಿಗೆ ಕಾರಣನಾದ. ಭಾರತದ ದಿಗ್ವಿಜಯಗಳಿಂದ ತನ್ನ ನಾಡಿನಲ್ಲಿ ಪ್ರತಿಷ್ಠೆ ಹೆಚ್ಚಿಸಿಕೊಂಡ. ಕಾಂದಹಾರ್, ಪೇಷಾವರ್, ಪಂಜಾಬ್, ಕಾಶ್ಮೀರ್, ಸಿಂಧ್‌ಗಳ ಮೇಲೂ ಇವನ ಅಧಿಕಾರವಿತ್ತು. 1762ರ ಅನಂತರ ಪಂಜಾಬಿನಲ್ಲಿ ಸಿಖ್ಖರು ದಂಗೆಯೆದ್ದು 1767ರ ಹೊತ್ತಿಗೆ ಅವನ ಸೈನಿಕರನ್ನು ಅಲ್ಲಿಂದ ಓಡಿಸಿದರು. ಅನಿವಾರ್ಯವಾಗಿ ಅಹಮದ್ ಷಾ ಪಂಜಾಬನ್ನು ಸಿಕ್ಕರಿಗೆ ಬಿಟ್ಟುಕೊಡಬೇಕಾಯಿತು. ಅವನು ತನ್ನ ನಾಡಿಗೆ ಹಿಂದಿರುಗಿದ ಮೇಲೆ ಅದೇ ಠಾಣೆ ಬಂಗಾಲದಲ್ಲಿ ಕಾಲಿಟ್ಟಿದ್ದ ಬ್ರಿಟಿಷರು ದೇಶದಲ್ಲಿ ವ್ಯಾಪಿಸಲು ಅನುಕೂಲವಾಯಿತು. ಇವನ ವಂಶದವರು ದೋಸ್ತ್ ಮಹಮ್ಮದನ (1863) ಕಾಲದವರೆಗೂ ಆಫ್ಘಾನಿಸ್ತಾನವನ್ನು ಆಳಿದರು. (ಎಚ್.ಜಿ.ಆರ್.)

**ಅಹಮದಾಬಾದ್ :** ಗುಜರಾತಿನ ಒಂದು ಜಿಲ್ಲೆ ಮತ್ತು ಆಡಳಿತ ಕೇಂದ್ರ. ಸಬರ್ಮತಿ ನದಿಯ ಎಡದಂಡೆಯಲ್ಲಿದೆ. ಜಿಲ್ಲಾ ವಿಸ್ತಾರ 8087 ಚ.ಕಿಮೀ. ಜನಸಂಖ್ಯೆ 58,08,519 (2009). ಹಿಂದೂ ಅರಸರ ಕಾಲದಿಂದಲೂ ಅಸ್ತಿತ್ವದಲ್ಲಿದ್ದು 1411ರಲ್ಲಿ ಗುಜರಾತಿನ ಸುಲ್ತಾನ್ ಅಹಮ್ಮದ್ ಷಾ ತನ್ನ ರಾಜಧಾನಿಯಾಗಿ ಮಾಡಿಕೊಂಡಮೇಲೆ ಬಹಳ ಪ್ರಸಿದ್ಧವಾಯಿತು. 15ನೆಯ ಶತಮಾನದ ಆರಂಭದಲ್ಲಿ ಈತ ಅನೇಕ ಕಟ್ಟಡಗಳನ್ನು ಕಟ್ಟಿಸಿದ.

ಇವುಗಳಲ್ಲಿ ಕೋಟೆಯ ಒಳಗಿರುವ ಮಸೀದಿರೆ, ಸಯೀದ್ ಅಲಮ್‌ನ ಗೋರಿ, ಹೈಬತ್‌ಖಾನನ ಗೋರಿ ಮತ್ತು ಜಾಮಿಮಸೀದಿ ಮುಖ್ಯವಾದವು. ಇಲ್ಲಿನ ಮೊದಲ ಕಟ್ಟಡಗಳ ಶೈಲಿಯಲ್ಲಿ ದೆಹಲಿಯ ಫಿರೋಜ್ ಷಾ ತುಘಲಕ್‌ನ ಕಾಲದ ವಾಸ್ತುಶೈಲಿಯ ಪ್ರಭಾವ ಬಹಳವಾಗಿದೆ. ವಿಶಾಲವಾದ ಪ್ರಾಂಗಣದ ಮಧ್ಯೆ ಅನೇಕ ಕಂಬಗಳು, ಕಮಾನುಗಳು ಮತ್ತು ಗುಮ್ಮಟಗಳನ್ನೊಳಗೊಂಡಿರುವ ಜಾಮಿಮಸೀದಿ (1423) ಗುಜರಾತ್ ಪ್ರಾಂತೀಯ

ಶೈಲಿಗೇ ಮುಕುಟಪ್ರಾಯವಾದ ಕೃತಿಯೆಂದು ಪ್ರಸಿದ್ಧವಾಗಿದೆ. ಇದರ ಬಳಿಯೇ ಇರುವ ತೀನ್‌ದರ್ವಾಜಾ ಸಹ ಒಂದು ಉತ್ತಮ ಕಟ್ಟಡ. ಅಹಮದ್ ಷಾನ ಅನಂತರ ಆಳಿದ ಮಹಮದ್ ಷಾನ (1442–51) ಕಾಲದಲ್ಲಿ ಕಟ್ಟಿರುವ ಅಹಮದ್ ಷಾನ ಗೋರಿ, ರಾಣೀ–ಕಾ–ಹುಜ್ರಾ ಎಂಬ ರಾಣಿಯರ ಗೋರಿಗಳು ಸಹ ಇದೇ ವಾಸ್ತುಸಂಪ್ರದಾಯದಲ್ಲಿಯೇ ಇವೆ. ಇದೇ ಶೈಲಿಯ ಇಲ್ಲಿನ ಕುತ್ಬುದ್ದೀನನ ಮಸೀದಿ.

ಅಕ್ಷರಧಾಮ ಮಂದಿರ, ಗಾಂಧಿನಗರ

ಸುಲ್ತಾನ್ ಕುತ್ಬುದ್ದೀನ್‌ನ (1451–58) ಕಾಲಕ್ಕೆ ಸೇರಿದುದು. 1459ರಿಂದ ಸು. 1550ರ ವರೆಗೆ ಇಲ್ಲಿ ಆಳಿದ ಬೇಗರ್‍ಹಾ ಅರಸರ ಕಾಲದಲ್ಲಿ ಇಲ್ಲಿ ಇನ್ನೂ ಪ್ರಬುದ್ಧವಾದ ಪ್ರಾಂತೀಯ ಶೈಲಿಯಲ್ಲಿ ಅನೇಕ ಕಟ್ಟಡಗಳು ಕಟ್ಟಲ್ಪಟ್ಟವು. ಇವುಗಳಲ್ಲಿ ಸಬರ್ಮತಿಯ ಆಚೆಯ ದಡದಲ್ಲಿ ಉಸ್ಮಾನ್‌ಪುರದಲ್ಲಿರುವ ಸಯಿದ್ ಉಸ್ಮಾನ್ ಗೋರಿ (1460), ಮಿಯಾನ್‌ಶಾನ್ ಬೆಷ್ಟಿಯ ಗೋರಿ (1456), ಬೀಬಿ ಅಚುತ್ ಕುಕಿಯ ಗೋರಿ (1472), ಮತ್ತು ಷಾ ಆಲಮ್‌ನ ಗೋರಿ (1475) ಮುಖ್ಯವಾದವು. ಹದಿನಾರನೆಯ ಶತಮಾನದ ಆರಂಭದಲ್ಲಿ ಕಟ್ಟಲಾದ ರಾಣಿ ಸಿಪರಿಯ ಗೋರಿ ಬಹು ನಾಜೂಕಿನ ಕಟ್ಟಡವಾಗಿದ್ದು, ದೊಡ್ಡ ಕಂಬಗಳು ಮತ್ತು ಕಮಾನುಗಳನ್ನು ಒಳಗೊಂಡ ಹಳೆಯ ಮುಸ್ಲಿಂ ವಾಸ್ತುಶೈಲಿಯ ಗಡಸು ಇಲ್ಲಿ ಕಾಣುವುದಿಲ್ಲ.

ಅಹಮ್ಮದ್‌ಷಾನ ಮಸೀದಿ

ಇದೇ ರೀತಿಯಲ್ಲಿ ಇರುವ ಇನ್ನೊಂದು ಸೌಮ್ಯಶೈಲಿಯ ಕಟ್ಟಡ ಸೀದಿ ಸಯಿದ್‌ನ ಮಸೀದಿ (ಸು. 1510–15). ಇಲ್ಲಿರುವ ಸುಂದರವಾದ ಬಳ್ಳಿಗಳನ್ನು ಬಿಡಿಸಿರುವ ಕಲ್ಲಿನ ಜಾಲಂಧ್ರಗಳು ಲೋಕಪ್ರಸಿದ್ಧವಾಗಿವೆ. ರಾಣಿ ರೂಪವತಿಯ ತಾಜಾ (ಸು. 1515), ಇಸಾನ್‌ಪುರ್ ರೌಜಾ (ಸು. 1520), ಮತ್ತು ಷಾ ಆಲಮ್‌ನ ಗೋರಿಯ ಬಳಿ ಇರುವ ಮಸೀದಿ (ಸು. 1550) ಈ ಕಾಲದ ಇತರ ಮುಖ್ಯ ಕಟ್ಟಡಗಳು. ಇವಲ್ಲದೆ ಸಯ್ಯದ್ ಯಾಕೂತ್‌ನ ಮಸೀದಿ, ಮಿಯಾನ್‌ಶಾನ್ ಬೆಷ್ಟಿಯ ಮಸೀದಿ, ಓಜಾ ಬೀಬಿಯ ಗೋರಿ ಗುಮ್ಮಟ ಮಸೀದಿ ಮುಂತಾದ ಇನ್ನೂ ಅನೇಕ ಪ್ರಾಚೀನ ಸ್ಮಾರಕಗಳನ್ನುಳ್ಳ ಅಹಮದಾಬಾದ್ ಗುಜರಾತ್ ಪ್ರಾಂತ್ಯದ ಮುಸ್ಲಿಂ ವಾಸ್ತುಶೈಲಿಯ ಕೇಂದ್ರ. ಇಲ್ಲಿಯ ಕಟ್ಟಡಗಳು ಹಿಂದೂವಾಸ್ತುಶೈಲಿಯ ಹಲವು ಅಂಶಗಳನ್ನು ಇಸ್ಲಾಮೀ ಕಟ್ಟಡಗಳಿಗೆ ಸೊಗಸಾಗಿ ಹೊಂದಿಸಿಕೊಳ್ಳುವ ವೈಶಿಷ್ಟ್ಯವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆ. ಈಗಿನ ಅಹಮದಾಬಾದಿನಲ್ಲಿ ಗುಜರಾತ್ ವಿಶ್ವವಿದ್ಯಾಲಯವೂ ಅದಕ್ಕೆ ಸೇರಿದ ಕಾಲೇಜುಗಳೂ ಇವೆ. ನದಿಯ ಪಶ್ಚಿಮ ದಡದ ಮೇಲಿರುವ ಸಬರಮತಿ ಬಡಾವಣೆ ಮಹಾತ್ಮ ಗಾಂಧಿಯವರ ಆಶ್ರಮವಿದ್ದ ಪ್ರಸಿದ್ಧ ಸ್ಥಳ. (ಎಸ್.ಎನ್.)

**ಅಹಲ್ಯಾಬಾಯಿ ಹೋಳ್ಕರ್ :** ಆಧುನಿಕ ಭಾರತದ ಇತಿಹಾಸದಲ್ಲಿ ಪ್ರಸಿದ್ಧಳಾದ ಮರಾಠ ರಾಣಿಯರಲ್ಲಿ ಒಬ್ಬಳು. ಹೋಳ್ಕರ್‌ವಂಶದ ಮುಲ್ಹಾರ್ ರಾವ್ ಹೋಳ್ಕರನ ಮಗ ಖಂಡೇರಾಯನ ಪತ್ನಿ. ಗಂಡ 1754ರಲ್ಲಿ ಕುಂಭೇರ್ ಮುತ್ತಿಗೆಯಲ್ಲಿ ಸತ್ತಾಗ ಈಕೆಯೇ ರಾಜ್ಯಸೂತ್ರಗಳನ್ನು ವಹಿಸಿದಳು (1754–95). 1767ರಲ್ಲಿ ರಘೋಬ ಐಶ್ವರ್ಯವನ್ನೂ ರಾಜ್ಯವನ್ನೂ ಅಪಹರಿಸಲು ಯತ್ನಿಸಿದಾಗ ಧೃತಿಗೆಡದೆ ಅವನನ್ನು ಎದುರಿಸಿದಳು. ರಘೋಬ ನಾಚಿಕೆಯಿಂದ ಹಿಂದಿರುಗಿದ. ಒಟ್ಟು ಮೂವತ್ತು ವರ್ಷಗಳ ಕಾಲ ರಾಜ್ಯವನ್ನು ಆದರ್ಶ ರೀತಿಯಲ್ಲಿ ಆಳಿದಳು. ಅತ್ಯಂತ ದಕ್ಷತೆಯಿಂದ ಒಳಾಡಳಿತ ಸರ್ಕಾರವನ್ನು ಸ್ಥಾಪಿಸಿ ಶಾಂತಿಯನ್ನು ನೆಲೆಗೊಳಿಸಿದಳು. ಪ್ರಜೆಗಳ ಸೌಖ್ಯಸಾಧನೆಯೇ ಈಕೆಯ ಮುಖ್ಯ ಧ್ಯೇಯವಾಗಿತ್ತು. ಮಾಳವಪ್ರಾಂತ್ಯದಲ್ಲಿ ಎಂದೂ ಕಾಣದಂಥ ಸುಖೀರಾಜ್ಯ ಸ್ಥಾಪನೆ ಮಾಡಿದಳು. ಈಗಿನ ಇಂದೂರು ಪಟ್ಟಣ ಈಕೆಯಿಂದಲೇ ಅಭಿವೃದ್ಧಿಗೆ ಬಂದದ್ದು. ಉದಾರಚರಿತಳೂ ಧರ್ಮಿಷ್ಠಳೂ ಆಗಿ ಧರ್ಮಗ್ರಂಥಗಳ ಅಧ್ಯಯನದಲ್ಲಿ ಹೆಚ್ಚುಕಾಲ ಕಳೆಯುತ್ತಿದ್ದಳು. ಸರ್ ಜಾನ್ ಮ್ಯಾಲ್ಕೋಮ್ ಅತ್ಯಂತ ಪರಿಶುದ್ಧಳಾದ ಅತ್ಯಂತ ಆದರ್ಶಪ್ರಾಯಳಾದ ರಾಜ್ಯಾಡಳಿತಗಾರಳೆಂದು ಈಕೆಯ ಬಗ್ಗೆ ಹೇಳಿದ್ದಾನೆ. (ಎಚ್.ಜಿ.ಆರ್.)

**ಅಹಲ್ಯೆ :** ಪ್ರಾತಃಸ್ಮರಣೀಯರಾದ ಪಂಚಕನ್ಯೆಯರಲ್ಲಿ ಒಬ್ಬಳು. ಗೌತಮನ ಸತಿ. ಮಹಾಪತಿವ್ರತೆಯೆಂದು ಪ್ರಸಿದ್ಧಳಾದವಳು. ತಂದೆ ಮುದ್ಗಲ ಮಹರ್ಷಿ. ಸೋದರ ದಿವೋದಾಸ. ಮಗ ಶತಾನಂದ. ತುಂಬ ರೂಪವತಿಯಾದ ಈಕೆಯನ್ನು ಇಂದ್ರ ಮೋಹಿಸಿ ಗಂಡ ಆಶ್ರಮದಲ್ಲಿಲ್ಲದಾಗ ಅವನ ವೇಷವನ್ನು ಧರಿಸಿ ಅವಳ ಸಂಗವನ್ನು ಬಯಸಿ ಬಂದ. ಈ ವೃತ್ತಾಂತ ಗೌತಮ ಋಷಿಗೆ ತಿಳಿದು ಆಕೆಯನ್ನು ಶಿಲೆಯಾಗೆಂದು ಶಪಿಸಿದ. ಶ್ರೀರಾಮನ ಪಾದಸ್ಪರ್ಶದಿಂದ ಶಾಪ ವಿಮೋಚನೆಯಾಗುವುದೆಂದು ತಿಳಿಸಿದ. ಅಲ್ಲಿಯವರೆಗೂ ಯಾರ ಕಣ್ಣಿಗೂ ಬೀಳದೆ ಪರಿತಪಿಸುತ್ತಿರಬೇಕೆಂದು ಶಾಪವಿತ್ತಂತೆ ರಾಮಾಯಣದಲ್ಲಿ ಹೇಳಿದೆ. ರಾಮದರ್ಶನಾನಂತರ ಶಾಪಮುಕ್ತಳಾದ ಅಹಲ್ಯೆಯನ್ನು ಗೌತಮ ಸ್ವೀಕರಿಸಿದ. ಈ ಕಥೆ ಮಹಾಭಾರತದಲ್ಲೂ ರಾಮಾಯಣದಲ್ಲೂ ಬರುತ್ತದೆ. ಗೌತಮನ ಶಿಷ್ಯನಾದ ಉದಂಕ ಗುರುದಕ್ಷಿಣೆಗಾಗಿ ಅಹಲ್ಯೆಯ ಇಷ್ಟದಂತೆ ಸೌದಾಸರಾಜಪತ್ನಿಯ ಓಲೆಗಳನ್ನು ತಂದುಕೊಟ್ಟ ಕಥೆ ಪ್ರಸಿದ್ಧವಾಗಿದೆ.

ಕನ್ನಡದಲ್ಲಿ ಪು.ತಿ.ನ ಅವರ ಅಹಲ್ಯೆ ಎಂಬುದು ಬಹು ಸುಂದರವಾದ ಗೀತನಾಟಕ. (ಎಸ್.ಕೆ.ಆರ್.)

**ಅಹಾರ್ :** ರಾಜಸ್ತಾನದ ಉದಯಪುರ ಪಟ್ಟಣದ ಅಂಚಿನಲ್ಲಿರುವ ಅಹಾರ್ ನದಿದಡದ ಮೇಲೆ ಇರುವ ಈ ದಿಬ್ಬದಲ್ಲಿ ಪ್ರಾಚೀನ ಸಂಸ್ಕೃತಿಗಳ ಅವಶೇಷಗಳು ಸಿಕ್ಕಿವೆ. ಇಲ್ಲಿ ಪ್ರ.ಶ.ಪೂ. ಸು. 1800 ರಿಂದ 1200ರ ವರೆಗೆ ತಾಮ್ರಯುಗದ ಸಂಸ್ಕೃತಿಯೂ ಪ್ರ.ಶ.ಪೂ .ಸು.500ರಿಂದ ಪ್ರ.ಶ.ಪೂ. ಸು 700 ರ ವರೆಗೆ ಚಾರಿತ್ರಿಕ ಕಾಲದ ಸಂಸ್ಕೃತಿಗಳೂ ಪ್ರಚಲಿತವಾಗಿದ್ದುವೆಂದು ಉತ್ಖನನಗಳಿಂದ ತಿಳಿದುಬಂದಿದೆ. ಅಹಾರ್‌ನ ತಾಮ್ರಯುಗದ ಸಂಸ್ಕೃತಿ ವಿಶಿಷ್ಟ ರೀತಿಯದ್ದಾಗಿದ್ದು, ಅದನ್ನು ಅಹಾರ್‌ನ ಸಂಸ್ಕೃತಿಯೆಂದೇ ಕರೆಯುವ ವಾಡಿಕೆಯಿದೆ. ಭಾರತದ ಸಮಕಾಲೀನ ಸಂಸ್ಕೃತಿಗಳಂತೆ ಬಹಳವಾಗಿ ಶಿಲೋಪಕರಣಗಳನ್ನು ತಾಮ್ರದ ಜೊತೆಯಲ್ಲೇ ಉಪಯೋಗಿಸದಿರುವುದು ಅಹಾರ್ ಸಂಸ್ಕೃತಿಯ ವೈಶಿಷ್ಟ್ಯ. ಅಹಾರ್ ಮತ್ತು ಸುತ್ತುಮುತ್ತಲಿನ ಪ್ರದೇಶದಲ್ಲಿ ತಾಮ್ರ ಸುಲಭವಾಗಿ ಸಿಕ್ಕುತ್ತಿದ್ದುದರಿಂದ ಈ ಜನರಿಗೆ ಕಲ್ಲಿನ ಉಪಕರಣಗಳ ಆವಶ್ಯಕತೆ ಇರದಿರಬಹುದೆಂದೂ ಕೆಲವು ಬಹುಶಃ ತಾಮ್ರವನ್ನು ಗಣಿಗಳಿಂದ ತೆಗೆದು ವಸ್ತುಗಳನ್ನು ತಯಾರುಮಾಡುವುದು ಈ ಜನರ ಮುಖ್ಯ ಕಸಬಾಗಿದ್ದಿರಬಹುದೆಂದೂ ಕೆಲವು ವಿದ್ವಾಂಸರ ಊಹೆ. ಆ ಕಾಲದಲ್ಲಿ ಮನೆಗಳು ಕಲ್ಲಿನ ಪಾಯಗಳ ಮೇಲೆ ಮಣ್ಣಿನಲ್ಲಿ ಕಟ್ಟಲ್ಪಡುತ್ತಿದ್ದವು. ಕೆಲವು ತಡಿಕೆಗೋಡೆಗಳೂ ಕಂಡುಬಂದಿವೆ. ಮನೆಗಳು ಸಾಮಾನ್ಯವಾಗಿ ವಿಶಾಲವಾಗಿದ್ದು, ಒಂದು ದೊಡ್ಡ ಹಜಾರದ ಒಳಗೆ ಹಲವಾರು ಹರಿವೊಲೆಗಳಿರುತ್ತಿದ್ದವು. ಕೆಂಪು ಮತ್ತು ಕಪ್ಪುಹೊಳಪಿನ ಮಡಕೆಗಳು ಆಕಾಲದಲ್ಲಿ ಉಪಯೋಗದಲ್ಲಿದ್ದವು. ಕೆಲವು ಮಡಕೆಗಳ ಮೇಲೆ ಬಿಳಿಯ ಬಣ್ಣದ ನೇರ ಅಥವಾ ಡೊಂಕು ಗೆರೆಗಳು, ಚುಕ್ಕಿಯ ಗೆರೆಗಳು ಮುಂತಾದ ಸಾಮಾನ್ಯ ನಮೂನೆಗಳ ಚಿತ್ರಣ ಇರುತ್ತಿತ್ತು. ಈ ಸಂಸ್ಕೃತಿ ಆಗ್ನೇಯ ರಾಜಸ್ತಾನದ ಬನಾಸ್ ನದೀ ಕಣಿವೆಯಲ್ಲಿ ಹಬ್ಬಿತು.

ಅಹಾರ್ ದಿಬ್ಬದ ಚಾರಿತ್ರಿಕ ಕಾಲದ ಸ್ತರಗಳಲ್ಲಿ ಉತ್ತರ ಭಾರತದ ಕಪ್ಪು ಹೊಳಪಿನ ಮಡಕೆಗಳೂ ರಂಗಮಹಲ್ ರೀತಿಯ ಮಡಕೆಗಳೂ ದೊರಕಿವೆ. (ಎಸ್.ಎನ್.)

**ಅಹಿಂಸೆ :** ಯಾರನ್ನೂ ಯಾವ ವಿಧದಲ್ಲೂ ನೋಯಿಸದೇ ಇರುವುದು. ಇದು ಮಾನವನ ನಡೆನುಡಿಗೆ ಸಂಬಂಧಿಸಿದ ಸದ್ಗುಣ. ಅಹಿಂಸೆ ಭಾರತದ ದರ್ಶನ ಧರ್ಮಶಾಸ್ತ್ರಗಳಲ್ಲಿ ಪ್ರಧಾನ ಸ್ಥಾನ ಪಡೆದಿದೆ. ಇದರ ಪ್ರಪ್ರಥಮ ಉಲ್ಲೇಖ ಛಾಂದೋಗ್ಯ ಉಪನಿಷತ್ತಿನಲ್ಲಿ

ಕಂಡುಬರುತ್ತದೆ. ತಪಸ್ಸು, ದಾನ, ಅರ್ಜನ, ಅಹಿಂಸಾ, ಸತ್ಯ ವಚನ–ಇವು ಯಜ್ಞದಲ್ಲಿ ನೀಡುವ ದಕ್ಷಿಣೆ. ಇದರ ಅಭಿಪ್ರಾಯವೇನೆಂದರೆ ಮಾನವನ ಒಂದು ಇಡೀ ಜೀವನವೇ ಒಂದು ಯಜ್ಞ. ಈ ಯಜ್ಞಕ್ಕೆ ಅಂಗವಾದ ದಕ್ಷಿಣೆ–ತಪಸ್ಸು, ದಾನ, ಋಜುತ್ವ, ಅಹಿಂಸೆ ಮತ್ತು ಸತ್ಯವಚನ. ಇಲ್ಲಿ ಲಕ್ಷಿಸಿರುವ ಆತ್ಮಗುಣಗಳಲ್ಲಿ ಅಹಿಂಸೆ ಒಂದಾಗಿದೆ. ಒಬ್ಬ ಯಾವೂದ್ಯ ಪ್ರವಾದಿ 'ನನಗೆ ಪಶುಯಜ್ಞಕ್ಕಿಂತಲೂ ಕರುಣೆಯೇ ಹೆಚ್ಚು ಇಷ್ಟ' ಎನ್ನುತ್ತಾನೆ. ಮಹಾಭಾರತದ ಶಾಂತಿಪರ್ವ ಮೋಕ್ಷಧರ್ಮದಲ್ಲಿ ಅಹಿಂಸಾಧರ್ಮದ ಸವಿಸ್ತಾರವಾದ ಪ್ರಸ್ತಾಪವಿದೆ. ಅಹಿಂಸೆ ಇಲ್ಲಿ ಧರ್ಮಗಳ ಮೂಲವೆಂದು ಅದು ವರ್ಣಿಸುತ್ತದೆ. ಧರ್ಮಶಾಸ್ತ್ರಗಳೆಲ್ಲವೂ ಅಹಿಂಸೆಯ ಮಹತ್ತ್ವವನ್ನು ಸಾರಿವೆ.

ಜೈನಧರ್ಮವಂತೂ ಅಹಿಂಸಾಪರಮೋಧರ್ಮಃ ಎಂಬುದನ್ನು ಜೈನಧರ್ಮದ ಸಾರವೆಂದು ಹೇಳಿದೆ. ಗೌತಮಬುದ್ಧ ಅಹಿಂಸೆಯಿಂದಲೇ ಹಿಂಸೆಯನ್ನು ಗೆಲ್ಲಬೇಕೆಂದು ಬೋಧಿಸಿದ್ದಾನೆ. ಜೈನಧರ್ಮದ ಆಚಾರಾಂಗ ಸೂತ್ರ ಅಹಿಂಸೆಯನ್ನು ಒಂದು ವ್ರತವೆಂದು ಕರೆದಿದೆ. ಜೈನಯತಿಗಳು ಕೈಗೊಳ್ಳಬೇಕಾದ ವ್ರತದಲ್ಲಿ ಮೊದಲನೆಯದು ಅಹಿಂಸೆ. ಈ ವ್ರತದ ಆಚರಣೆ ಜೈನಧರ್ಮಾನುಯಾಯಿಗಳ ಆಚಾರ, ಅನುಷ್ಠಾನಗಳಲ್ಲಿ ಹೆಣೆದುಕೊಂಡಿದೆ. ಯಾವ ಪ್ರಾಣಿಯನ್ನೂ ಕೊಲ್ಲಬಾರದೆಂಬುದು ಈ ವ್ರತ. ಇದಕ್ಕಾಗಿ ಜೈನಯತಿಗಳು ಬಾಯನ್ನು ಬಟ್ಟೆಯಿಂದ ಮುಚ್ಚಿಕೊಳ್ಳುತ್ತಾರೆ. ಕೈಯಲ್ಲಿ ಒಂದು ಸಣ್ಣ ಕೂರ್ಚವನ್ನು ಹಿಡಿದಿರುತ್ತಾರೆ. ತಾವೆಲ್ಲಾದರೂ ಕುಳಿತುಕೊಳ್ಳಬೇಕಾದಾಗ ಆ ಸ್ಥಳವನ್ನು ಮೆಲ್ಲನೆ ಗುಡಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಜೈನರೆಲ್ಲರೂ ಕತ್ತಲಾಗುವ ಮುನ್ನವೇ ಆಹಾರ ಸೇವನೆ ಮಾಡುತ್ತಾರೆ. ಕತ್ತಲೆಯಲ್ಲಿ ಕಾಣದೆ ಯಾವ ಕ್ರಿಮಿಕೀಟಗಳಿಗಾದರೂ ಹಿಂಸೆಯಾದೀತು ಎಂಬ ಭಯದಿಂದ.

ಅಹಿಂಸೆಯನ್ನು ಸಾಧಾರಣವಾಗಿ ಎಲ್ಲ ಮತಪಂಥಗಳು ಒಂದಲ್ಲ ಒಂದು ರೀತಿಯಲ್ಲಿ ಅಂಗೀಕರಿಸಿವೆ ಎಂದು ಹೇಳಬಹುದು. ಅದನ್ನು ಅನುಷ್ಠಾನದಲ್ಲಿ ತರುವುದು ಕಷ್ಟವಾದರೂ ಅದು ನಾವು ಮುಟ್ಟಬೇಕಾದ ಗುರಿ ಎಂಬುದನ್ನು ಒಪ್ಪುತ್ತವೆ. ಬೌದ್ಧಭಿಕ್ಷುಗಳಿಗೆ ನಿಯಮಿಸಲ್ಪಟ್ಟ ಹತ್ತು ಸಿಖ್ಖಾಪದಾನಿ ಅಂದರೆ ಶಿಕ್ಷಾಪದಗಳಲ್ಲಿ ಅಹಿಂಸೆ ಮೊದಲನೆಯದು. ಅಶೋಕ ಅಹಿಂಸೆಯನ್ನು ತನ್ನ ಮೊದಲನೆಯ ಮತ್ತು ಎರಡನೆಯ ಶಾಸನಗಳ ವಿಷಯವನ್ನಾಗಿ ಮಾಡಿದ್ದಾನೆ. ಇದನ್ನು ಜನರಿಗೆಲ್ಲರಿಗೂ ಬೋಧಿಸುವುದೇ ಅವನ ಉದ್ದೇಶವಾಗಿತ್ತು. ಪ್ರಾಣಿದಯೆಗೆ ಅಶೋಕ ಕೊಟ್ಟ ಪ್ರಾಶಸ್ತ್ಯ ಈ ಅಹಿಂಸಾತತ್ತ್ವದಿಂದ ಹೊರಹೊಮ್ಮಿತು. ಅಹಿಂಸೆಯ ಆಚರಣೆಯ ಒಂದು ಪರಿಣಾಮ ಮಾಂಸಾಹಾರವರ್ಜನೆ ಮತ್ತು ಶಾಕಾಹಾರದ ಅವಲಂಬನೆ. ಭಾರತದಲ್ಲಿ ಶಾಕಾಹಾರಿಗಳ ಸಂಖ್ಯೆ ಎಲ್ಲ ದೇಶಗಳಿಗಿಂತಲೂ ಹೆಚ್ಚು.

ಅಹಿಂಸಾತತ್ತ್ವದ ಅಂಗೀಕಾರದಿಂದ ಯಜ್ಞಯಾಗಾದಿಗಳಲ್ಲಿ ಪಶುವಧೆ ಮಾಡುತ್ತಿದ್ದುದು ತಪ್ಪಿತು.

ಗಾಂಧೀಜಿಯವರ ಮಾತುಗಳಲ್ಲಿ ಅಹಿಂಸೆ ಹಿಮಾಲಯದಷ್ಟೇ ಪುರಾತನವಾದುದು. ಮಾನವ ಪ್ರಾರಂಭದಲ್ಲಿ ಹಿಂಸೆಯಿಂದಲೇ ಜೀವಿಸುತ್ತಿದ್ದ. ಕ್ರಮೇಣ ವ್ಯವಸಾಯ, ನಾಗರಿಕತೆ ಬೆಳೆದಂತೆ ಹಿಂಸಾವೃತ್ತಿಯಿಂದ ಬದುಕುವ ಪ್ರವೃತ್ತಿಯನ್ನು ಕಡಿಮೆಮಾಡಿಕೊಳ್ಳುತ್ತ ಬಂದ.

ಬದುಕು ಅಹಿಂಸೆಯ ಪ್ರತೀಕವಲ್ಲ. ಎಲ್ಲ ಜೀವಜಂತುಗಳು ಹಿಂಸಾತ್ಮಕ ಕ್ರಿಯೆಗಳಿಂದಲೇ ಬದುಕುತ್ತವೆ. ಅಂತೆಯೇ ಮಾನವನ ಶ್ವಾಸೋಚ್ಛ್ವಾಸ ಕ್ರಿಯೆಯಲ್ಲಿ ಸೂಕ್ಷ್ಮಾಣುಗಳು ನಾಶವಾಗುತ್ತವೆ. ಉಸಿರಾಡದೆ ಮನುಷ್ಯ ಬದುಕಲಾರ. ಆದ್ದರಿಂದಲೇ ಅಹಿಂಸಾರಾಧಕ ಪುನರ್ಜನ್ಮದಿಂದ ಮುಕ್ತಿಯನ್ನು ಬಯಸುತ್ತಾನೆ.

ಪಾರಮಾರ್ಥಿಕ ದೃಷ್ಟಿಯಿಂದ ಸಕಲ ಜೀವಜಂತುಗಳೂ ದೈವಾಂಶಸಂಭೂತವಾದುವು. ಎಲ್ಲದರಲ್ಲೂ ಅವಿರ್ಭೂತವಾಗಿರುವುದು ಒಂದೇ ಅವಿಭಾಜ್ಯ ಆತ್ಮ. ಆದ್ದರಿಂದ ಯಾರಿಗೆ ಹಿಂಸೆ ಮಾಡಿದರೂ ಪರಮಾತ್ಮನ ಅಂಶಕ್ಕೆ ಹಿಂಸೆ ಮಾಡಿದಂತೆಯೇ ಆಗುತ್ತದೆ. ಈ ದೃಷ್ಟಿಯಿಂದ ಹಿಂಸೆ ಸಲ್ಲದು.

ಅಹಿಂಸೆಯ ಮಹತ್ತ್ವವನ್ನು ಹಿಂದಿನಿಂದ ಧರ್ಮಶಾಸ್ತ್ರಗಳು ಒತ್ತಿ ಹೇಳುತ್ತ ಬಂದವಾದರೂ ಬುದ್ಧ ಮತ್ತು ಮಹಾತ್ಮ ಗಾಂಧಿಯವರು ಅದು ಸಾಮಾನ್ಯರೂ ತಮ್ಮ ದೈನಂದಿನ ಜೀವನದಲ್ಲಿ ಪಾಲಿಸಬೇಕಾದ ಕರ್ತವ್ಯವೆಂಬುದನ್ನು ಸಾರಿ ಹೇಳಿದರು.

ವಸ್ತುತಃ ಅಹಿಂಸೆಯೆಂದರೆ ಕೊಲ್ಲದೇ ಇರುವುದು ಎಂದು ಮಾತ್ರ ಅರ್ಥವಲ್ಲ. ಕಾಯೇನ, ವಾಚಾ, ಮನಸಾ ಇತರರಿಗೆ ನೋವನ್ನುಂಟುಮಾಡದಿರುವುದು ಅಹಿಂಸೆ. ಕೋಪದಿಂದ ಅಥವಾ ಸ್ವಾರ್ಥಕ್ಕಾಗಿ ಅಥವಾ ನೋವನ್ನುಂಟುಮಾಡುವ ಉದ್ದೇಶದಿಂದ ಪರರಿಗೆ ನೋವನ್ನುಂಟುಮಾಡುವುದು, ಪ್ರಾಣಾಪಹರಣ ಮಾಡುವುದು, ಹಿಂಸೆ ಎನಿಸುತ್ತದೆ. ಇವುಗಳನ್ನು ಮಾಡದಿರುವುದು ಅಹಿಂಸೆ. ಅತಿ ಆತುರ, ಅಸತ್ಯ, ದ್ವೇಷ, ಪರರಿಗೆ ಕೇಡುಬಯಸುವುದು–ಇವು ಅಹಿಂಸಾತತ್ತ್ವಕ್ಕೆ ಲೋಪ ತರುತ್ತವೆ ಎನ್ನುತ್ತಾರೆ ಗಾಂಧಿ.

ಹಿಂಸೆಯ ಮೂಲಕಾರಣ, ಮಹಾತ್ಮಾಗಾಂಧಿಯವರ ಅಭಿಪ್ರಾಯದಲ್ಲಿ, ಸ್ವಾರ್ಥ ಮತ್ತು ಸ್ವಹಿತ. ಸ್ವಹಿತ ಕುರುಡು. ಸ್ವಹಿತರಕ್ಷಣೆಗಾಗಿ ಮನುಷ್ಯ ಹಿಂಸಾಪ್ರವೃತ್ತನಾಗುತ್ತಾನೆ. ಆದ್ದರಿಂದ ನಿಜ ಅಹಿಂಸಾಸಾಧಕ ಸ್ವಾರ್ಥ ತೊರೆಯಬೇಕು.

ಬಹುಕಾಲದವರೆಗೆ ಧಾರ್ಮಿಕ ಮತ್ತು ಪಾರಮಾರ್ಥಿಕ ಕ್ಷೇತ್ರಕ್ಕೆ ಮೀಸಲಾಗಿ ಕೇವಲ ವೈಯಕ್ತಿಕ ಸಾಧನೆಯಾಗಿದ್ದ ಅಹಿಂಸೆಯನ್ನು ಬಹುಜನರಿಂದ ಸಾಮೂಹಿಕವಾಗಿ ಆಚರಿಸಲ್ಪಡಬಹುದಾದ ಶಕ್ತಿಯುತ ಅಸ್ತ್ರವನ್ನಾಗಿ ಪರಿವರ್ತಿಸಿದವರು ಗಾಂಧೀಜಿ.

ಸಮಾಜದಲ್ಲಿ ಶಾಂತಿಯುತ ಸಹಬಾಳ್ವೆ ಬಾಳುತ್ತ, ಈ ಸಹಬಾಳ್ವೆಯ ವ್ಯಾಪ್ತಿಯನ್ನು ವಿಸ್ತೃತಗೊಳಿಸುತ್ತ ಎಲ್ಲ ಭಿನ್ನತೆಗಳನ್ನು ಶಾಂತಿಯುತ ವಿಚಾರವಿನಿಮಯ ಕ್ರಮದಿಂದ ಬಗೆಹರಿಸಿಕೊಳ್ಳುತ್ತ ಹೋಗುವುದು ಅಹಿಂಸಾ ಸಾಧನವೆನಿಸಿಕೊಳ್ಳುತ್ತದೆ.

ಇಚ್ಛಾಪೂರ್ವಕ ಕಷ್ಟಸಹಿಷ್ಣುತೆಯೇ ಚೈತನ್ಯಪೂರ್ಣ ಅಹಿಂಸೆ. ಕೇಡಿಗನ ಇಚ್ಛೆಗೆ ಸೋತು ಮಣಿಯುವುದಲ್ಲ; ದಬ್ಬಾಳಿಕೆಯ ವಿರುದ್ಧ ಇಡೀ ಆತ್ಮವನ್ನೇ ಒಡ್ಡಿ ಹೋರಾಡುವುದು ತಪ್ಪಲ್ಲ.

ಪೂರ್ಣ ಅಹಿಂಸೆಯೆಂದರೆ ಪೂರ್ತಿಯಾಗಿ ಕೆಡುಕು ಮಾಡದಿರುವಿಕೆ. ಎಲ್ಲ ಜೀವರಾಶಿಗಳ ವಿಷಯದಲ್ಲಿ ಅವುಗಳಿಗೆ ಒಳ್ಳೆಯದಾಗಲೆಂದು ಆಶಿಸುವುದು. ಈ ನಿಯಮಕ್ಕೆ ಮನುಷ್ಯ ಮಾತ್ರನಲ್ಲದೆ ಕನಿಷ್ಠವಾದ ಎಲ್ಲ ತಿರ್ಯಗ್ಜಂತುಗಳೂ ಸೇರಿಕೊಳ್ಳುತ್ತವೆ.

ಅಹಿಂಸೆ ಹಿಂಸೆಗಿಂತ ಅಪಾರ ಮೇಲು; ಕ್ಷಮೆ ಶಿಕ್ಷೆಗಿಂತ ಹೆಚ್ಚು ಪೌರುಷಯುಕ್ತ ಎಂದು ಗಾಂಧೀಜಿಯವರ ನಂಬಿಕೆ.

ಮಾನವ ಬುದ್ಧಿಜೀವಿ. ನಾನಾ ಕಾರಣಗಳಿಂದ ಭಿನ್ನತೆ ತಲೆಹಾಕಿದಾಗ ವಿಚಾರ, ಒಡಂಬಡಿಕೆ, ಮಧ್ಯಸ್ಥಿಕೆ, ಇವುಗಳಿಂದ ಸಾಧ್ಯವಾಗದೇ ಹೋದರೆ, ಹಿಂಸೆಯಿಂದ ಬಲಪ್ರಯೋಗದಿಂದ ಸರಿಪಡಿಸಿಕೊಳ್ಳಲು ಪ್ರಯತ್ನಿಸುವುದು ಪುರಾತನ ಕಾಲದಿಂದ ನಡೆದುಬಂದಿದೆ. ಇದು ಮಾನವ ಗುಣಕ್ಕೆ ಸಲ್ಲದು. ವ್ಯಕ್ತಿ, ಸಮಾಜ, ರಾಷ್ಟ್ರ ಇವುಗಳು ಜಗಳ, ದೊಂಬಿ, ಯುದ್ಧಗಳ ಮೂಲಕ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವುದು ಕೆಟ್ಟಮಾರ್ಗ. ಈ ಪಾಶವೀಮಾರ್ಗವನ್ನು ತೊರೆದು ಅಹಿಂಸಾಮಾರ್ಗದಿಂದ ಸರಿಪಡಿಸಿಕೊಳ್ಳಬೇಕೆಂಬ ಪ್ರಯತ್ನಗಳು ಆಗಿಂದಾಗ ಅಲ್ಪ ಸ್ವಲ್ಪ ನಡೆದಿರುತ್ತವೆ. ಚರಿತ್ರಾರ್ಹವಾದ ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಲಾಗಿದೆ.

ರಾಜ್ಯ ನಿಷ್ಠಾವಂತ ಕ್ರೈಸ್ತರ ಪೀಡೆ, ನಿಷ್ಠಾವಂತನಾದ ಕ್ರೈಸ್ತ ರಾಷ್ಟ್ರಕನಲ್ಲ. ರಾಜ್ಯಕ್ಕೆ ಅವನು ಸೇವೆ ಸಲ್ಲಿಸಬೇಕಾಗಿಲ್ಲ ಎಂಬ ಧೋರಣೆಯ ಮೇಲೆ ಆ್ಯನಬ್ಯಾಪ್ಟಿಸ್ ಎಂಬ ಕ್ರೈಸ್ತ ಪಂಗಡದವರು 1527ರಲ್ಲಿ ಸ್ವಿಟ್ಜರ್‌ಲೆಂಡಿನಲ್ಲಿ ಒಂದು ಸಂಘವನ್ನು ಸ್ಥಾಪಿಸಿದರು. 1536ರಲ್ಲಿ ಮೆನೋಸೈಮನ್ಸ್ ಎಂಬುವವನು ಧರ್ಮಾಚರಣೆಗೆ ಸರ್ಕಾರ ಆತಂಕಪಡಿಸಬಾರದೆಂದು ಸರ್ಕಾರವನ್ನು ಪ್ರತಿಭಟಿಸತೊಡಗಿದ. ಮೆನೊನೈಟ್ಸ್, ಸೈಮೊನಿಯನ್ಸ್ ಡಂಕರ್ಸ್ ಮೊದಲಾದ ಕ್ರೈಸ್ತ ಭಕ್ತರು ಸೇನೆಗೆ ಸೇರಬಾರದೆಂದು ತೀರ್ಮಾನಿಸಿ ಅನೇಕ ಕಷ್ಟ ಪರಂಪರೆಗಳಿಗೆ ಗುರಿಯಾದರು. ಅನೇಕರು ಪ್ರಾಣ ತೆತ್ತರು. 1710ರಲ್ಲಿ ಹಲವರು ರಷ್ಯಕ್ಕೂ 1874ರಲ್ಲಿ ಹಲವರು ಅಮೆರಿಕೆಗೂ ಪಲಾಯನ ಮಾಡಿದರು. ರಾಜಕೀಯದಲ್ಲಿ ಭಾಗವಹಿಸಲು ನಿರಾಕರಿಸಿದ ಡಂಕರ್ಸ್ ಅಥವಾ ಜರ್ಮನಿಯ ಬ್ಯಾಪ್ಟಿಸ್ಟರು ದೇಶ ತೊರೆದು 9600 ಕಿಮೀ ದೂರದ ಪೆನ್ಸಿಲ್‌ವೇನಿಯಕ್ಕೆ 1720ರಲ್ಲಿ ಹೊರಟುಹೋದರು.

1660ರಲ್ಲಿ ಜಾರ್ಜ್‌ಫಾಕ್ಸ್ ಎಂಬುವವನು ಕ್ವೇಕರ್ ಸೊಸೈಟಿಯನ್ನು ಸ್ಥಾಪಿಸಿದ. ಪ್ರತಿಯೊಬ್ಬನೂ ತನ್ನ ಹೃದಯದಲ್ಲಿರುವ ಅಂತರ್‌ಜ್ಯೋತಿಯ ಆಣತಿಯಂತೆ ನಡೆದುಕೊಳ್ಳಬೇಕೆಂಬುದು ಈ ಸಂಘದ ಮೂಲ ಸಿದ್ಧಾಂತ. ರಾಜಕೀಯದಲ್ಲಿ ಭಾಗವಹಿಸಲು ಆತಂಕವಿಲ್ಲದಿದ್ದರೂ ಯುದ್ಧದಲ್ಲಿ ಭಾಗವಹಿಸಲು ಈ ಸಂಘ ಒಪ್ಪುತ್ತಿರಲಿಲ್ಲ. ಅಮೆರಿಕದ ಮೂಲನಿವಾಸಿಗಳ ವಿರುದ್ಧ ಶಸ್ತ್ರ ಬಳಸಲು ನಿರಾಕರಿಸಿ ಅನೇಕರು ಸೆರೆಮನೆ ಸೇರಿದರು. ಪೆನ್ಸಿಲ್‌ವೇನಿಯದಲ್ಲಿ ಸೈನ್ಯ ಬಲವಿಲ್ಲದ ಅಹಿಂಸೆಯ ಆಧಾರದ ರಾಜ್ಯ ಸ್ಥಾಪಿಸಿದರು. ದೇಹದ ರಕ್ತಮಾಂಸದಂತೆ ಮೂಲನಿವಾಸಿಗಳೊಡನೆ ಕೂಡಿ ಬಾಳಬೇಕು ಎಂದು ಒಪ್ಪಂದ ಮಾಡಿಕೊಂಡರು. 76 ವರ್ಷಗಳ ಕಾಲ ಅಹಿಂಸಾ ತತ್ತ್ವದ ಆಧಾರದ ಮೇಲೆ ಈ ರಾಜ್ಯ ಶಾಂತಿಯಿಂದ ಬಾಳಿತು. ಅನ್ಯರ ಪ್ರವೇಶದಿಂದ ರಾಜ್ಯ ಒಡೆದು ಹೋದಾಗಲೂ ಮೂಲನಿವಾಸಿಗಳು ಕ್ವೇಕರ್ ಗುಂಪಿಗೆ ಸೇರಿದವರ ಮೇಲೆ ಎಂದಿಗೂ ಕೈ ಎತ್ತಲಿಲ್ಲ.

ಡುಕೊಬಾರ್ಸ್ ಎಂಬುವರು ರಷ್ಯದ ಬುಡಕಟ್ಟಿನ ಜನ. ಪೂರ್ಣ ಶಾಂತಿವಾದಿಗಳು, ಸಸ್ಯಾಹಾರಿಗಳು, ಸನ್ಯಾಸಿಯ ತ್ಯಾಗಜೀವನವನ್ನು ಅನುಸರಿಸುವವರು. ಇವರು ಪ್ರಾಣಿಹಿಂಸೆ ಮತ್ತು ಮಾಂಸಭಕ್ಷಣ ಪಾಪಕರವೆಂದು ದನಗಳನ್ನು ಕಾಡಿಗೆ ಅಟ್ಟಿ ನೇಗಿಲಿಗೆ ಹೆಗಲು ಕೊಟ್ಟು ತಾವೇ ಭೂಮಿ ಉಳುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಸೈನ್ಯದಲ್ಲಿ ಭಾಗವಹಿಸಲು ನಿರಾಕರಿಸಿ ಅನೇಕರು ಚಿತ್ರಹಿಂಸೆಗೆ ಗುರಿಯಾದರು. 1899ರಲ್ಲಿ ಅನೇಕರು ಕೆನಡ ದೇಶಕ್ಕೆ ವಲಸೆಹೋದರು. ಅಲ್ಲಿಯ ಸರ್ಕಾರಕ್ಕೂ ಇವರಿಗೂ ಘರ್ಷಣೆ ಆಗುತ್ತಲೇ ಇತ್ತು.

ಪ್ರ.ಶ.ಪೂ. 250ರಲ್ಲಿ ಅಶೋಕ ಚಕ್ರವರ್ತಿ ಕಳಿಂಗ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಯುದ್ಧಮಾಡಿದ. ಈ ಯುದ್ಧದಲ್ಲಿ ಸಂಭವಿಸಿದ ಅಪಾರ ಪ್ರಾಣಹಾನಿಯಿಂದ ಮನನೊಂದು ಬೌದ್ಧಧರ್ಮ ಸ್ವೀಕರಿಸಿ ಶಾಂತಿದೂತನಾಗಿ, ಅಹಿಂಸೆಯ ಆಧಾರದ ಮೇಲೆ ರಾಜ್ಯಭಾರ ಮಾಡತೊಡಗಿದ.

ಕೇವಲ ಪರಮಾರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ಮೀಸಲಾಗಿದ್ದ ಮತ್ತು ವ್ಯಕ್ತಿಗುಣ ಸಂಜಾತವಾದ ಅಹಿಂಸೆ ಎಂಬುದು ರಾಜಕೀಯ, ಸಾಮಾಜಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಕ್ಷೇತ್ರಗಳಲ್ಲಿ, ಸಾಮೂಹಿಕವಾಗಿ ಆಚರಿಸಲು ಯೋಗ್ಯವಾದ ಅತ್ಯಂತ ಪರಿಣಾಮಕಾರಿ ಅಸ್ತ್ರ ಎಂದು ಜಗತ್ತಿಗೆ ತೋರಿಸಿಕೊಟ್ಟ ಕೀರ್ತಿ ಮಹಾತ್ಮ ಗಾಂಧಿಯಂಥ ವರಿಗೆ ಸಲ್ಲುತ್ತದೆ. 'ನನ್ನ ಅರ್ಧಶತಮಾನದ ಅನುಭವದಲ್ಲಿ ಅಹಿಂಸೆಯಿಂದ ಪರಿಹಾರ ಪಡೆಯಲಾಗದ ಉದಾಹರಣೆಯೇ ಇಲ್ಲ' ಎನ್ನುತ್ತಾರೆ ಗಾಂಧಿ. ಅವರ ಮಾತಿನಲ್ಲೇ ಹೇಳುವುದಾದರೆ 'ಮಾನವನ ಅಧೀನದಲ್ಲಿರುವ ಶಕ್ತಿಗಳಲ್ಲೆಲ್ಲ ಅಹಿಂಸೆ ಪರಮ ಶ್ರೇಷ್ಠವಾದುದು. ಮಾನವನ ಚಾತುರ್ಯದಿಂದ ನಿರ್ಮಿತವಾದ ಮಹಾ ಅಸ್ತ್ರಗಳಲ್ಲೆಲ್ಲಾ ಮಹತ್ತರವಾದುದು.'

(ವಿ.ಎಸ್.ಎನ್.)

**ಅಹಿಚ್ಛತ್ರ :** ಪ್ರಾಚೀನ ಭಾರತದ ಚರಿತ್ರೆಯಲ್ಲಿ ಪ್ರಸಿದ್ಧವಾಗಿದ್ದ ಈ ಪಟ್ಟಣ ಉತ್ತರ ಪ್ರದೇಶದಲ್ಲಿ ಬರೇಲಿಯಿಂದ 32 ಕಿಮೀ ದೂರದಲ್ಲಿರುವ ಇಂದಿನ ರಾಮನಗರ. ಇದು ಉತ್ತರ ಪಾಂಚಾಲ ದೇಶದ ರಾಜಧಾನಿ ಆಗಿತ್ತು. ಪ್ರ.ಶ.ಪೂರ್ವ ಕಾಲದ ಶಾಸನಗಳು ಇದನ್ನು ಅಧಿಛತ್ರವೆಂದು ಹೆಸರಿಸಿವೆ. ಟಾಲಮಿ ಅದಿಸದ್ರವೆಂದಿದ್ದಾನೆ. ಮಹಾಭಾರತಾದಿ ಗ್ರಂಥಗಳಲ್ಲಿ ಅಧಿಕ್ಷೇತ್ರ, ಛತ್ರವತಿ, ಮುಂತಾದ ನಾಮಭೇದದಿಂದಲೂ ಇದು ಕಾಣಿಸಿಕೊಳ್ಳುತ್ತದೆ. ಚೀನಿ ಯಾತ್ರಿಕ ಯೂವಾನ್‍ಚಾಂಗ್ ಅಹಿಚಿತಲೊ ಎಂದು ಇದನ್ನು ನಿರ್ದೇಶಿಸಿದ್ದಾನೆ. ಒಮ್ಮೆ ಇಲ್ಲಿ ನಿದ್ರಿಸುತ್ತಿದ್ದ ಆದಿರಾಜನ ತಲೆಯಮೇಲೆ ಸರ್ಪವೊಂದು ಪ್ರಸರಿಸಿದುದರಿಂದ ಅಹಿಚ್ಛತ್ರವೆಂಬ ಹೆಸರು ಬಂತೆಂದು ಸ್ಥಳೀಯ ದಂತಕಥೆ. ಜೈನ ಬೌದ್ಧ ಸಾಹಿತ್ಯಗಳಲ್ಲಿ ಈ ಕಥೆಯ ಉಲ್ಲೇಖವಿದೆ. ಇಲ್ಲಿ ದೊರೆತ ಮುದ್ರೆಗಳಿಂದ ಇದು ಗುಪ್ತಸಾಮ್ರಾಜ್ಯದ ಭಕ್ತಿಯಾಗಿತ್ತೆಂದು ತೋರುತ್ತದೆ. ಕದಂಬ ಮಯೂರಶರ್ಮ ಈ ನಗರದಿಂದ ಬ್ರಾಹ್ಮಣ ಕುಟುಂಬಗಳನ್ನು ಕರ್ನಾಟಕಕ್ಕೆ ಬರಮಾಡಿಕೊಂಡನೆಂದು ಶಾಸನಗಳಲ್ಲಿ ಉಕ್ತವಾಗಿದೆ. ಗಂಗ ವಿಷ್ಣುಗೋಪ ಈ ನಗರದಲ್ಲಿ ವಾಸವಾಗಿದ್ದು ಇಂದ್ರನ ವರದಿಂದ ಐರಾವತವನ್ನು ಪಡೆದ ಕಥೆ, ಗಂಗವಂಶ ವೃತ್ತಾಂತದಲ್ಲಿ ಬರುತ್ತದೆ. ಪ್ರಾಕ್ತನಶಾಸ್ತ್ರಜ್ಞರು ಇಲ್ಲಿ ಭೂಶೋಧನೆಯನ್ನು ನಡೆಸಿ ಅನೇಕ ಚಾರಿತ್ರಿಕ ವಿಷಯಗಳನ್ನು ಹೊರಗೆಡವಿದ್ದಾರೆ.

ಕ್ಯಾಪ್ಟನ್ ಹಾಜ್ಸನ್ ಇಲ್ಲಿನ ಕೆಲವು ಅವಶೇಷಗಳನ್ನು ಮೊದಲು ನೋಡಿ ವರ್ಣಿಸಿದ. ಕನ್ನಿಂಗ್‍ಹ್ಯಾಮ್ ಮತ್ತು ಫ್ಯೂರರ್ ಇಲ್ಲಿ ಉತ್ಖನನ ನಡೆಸಿದ ಮೇಲೆ, ಭಾರತೀಯ ಪುರಾತತ್ತ್ವ ಸರ್ವೇಕ್ಷಣದವರ ಭೂಶೋಧನೆಯಲ್ಲಿ (1940–44), ಪ್ರ.ಶ.ಪೂ. 300 ಕ್ಕಿಂತಲೂ ಹಿಂದಿನಿಂದ ಪ್ರ.ಶ. 1,100ರ ವರೆಗಿನ, ಅವಿಚ್ಛಿನ್ನವಾಗಿ ವ್ಯಾಪಿಸಿದ ಒಂಬತ್ತು ಸಾಂಸ್ಕೃತಿಕ ಪರಂಪರೆಗಳು ಸ್ಪಷ್ಟವಾಗಿ ಕಂಡುಬಂದಿವೆ. ನೀಲವರ್ಣದ ಚಿತ್ತಾರವನ್ನೊಳಗೊಂಡ ಬೂದುಬಣ್ಣದ, ಅತಿ ಹೊಳಪಿನ ಎತ್ತರ ಭಾರತೀಯ ಕಪ್ಪುಬಣ್ಣದ ಮತ್ತು ಇತರ ವಿವಿಧ ರೀತಿಯ ಮೃತ್‍ಪಾತ್ರೆಗಳು, ಮಣಿಗಳು, ಸುಟ್ಟಮಣ್ಣಿನ ಆಕೃತಿಗಳು, ಸಮದ್ವಿಬಾಹುತ್ರಿಭುಜಾಕೃತಿಯುಳ್ಳ ಕೋಟೆ, ಮಣ್ಣಿನ ಮೂರ್ತಿಗಳುಳ್ಳ ಹಲವು ಸ್ತರಗಳ ಮೇಲೆ ಕಟ್ಟಿದ ದೇವಾಲಯಗಳು, ಪಾಂಚಲ, ಕುಶಾನ, ಅಚ್ಯುತ, ಆದಿವರಾಹ, ವಿಗ್ರಹರಾಜರ ನಾಣ್ಯಗಳೆ ಮುಂತಾದವು ಗಮನಾರ್ಹ.

(ಎ.ಎಸ್.)

**ಅಹುರಮಜ್ದ :** ಜರತುಷ್ಟ್ರ ಅಥವಾ ಮಜ್ದ ಮತದಲ್ಲಿ ಅಹುರ್‌ಮಜ್ದ ಮಂಗಳಕಾರಿಯಾದ ಪರಮಪುರುಷ. ಇವನನ್ನು ಆಶ್ರಯಿಸಿ ಇವನು ಕೊಟ್ಟ ಬಲದಿಂದ ಮಾನವರು ಅಹ್ರಿಮನ್ನನನ್ನು ಜಯಿಸಿ ಉದ್ಧಾರವಾಗುತ್ತಾರೆ, ಅಮರತ್ವ ಪಡೆಯುತ್ತಾರೆ. ಮಜ್ದನಿಗೂ ವೇದದ ವರುಣನಿಗೂ ಸಾಮ್ಯವಿದೆ. **ನೋಡಿ– ಅವೆಸ್ತ**

(ಜಿ.ಎಚ್.)

**ಅಹೋಂ :** ಒಂದನೆಯ ಶತಮಾನದಲ್ಲೇ ಚೀನದ ಯುನಾನ್ ಪ್ರಾಂತ್ಯದಿಂದ ದಕ್ಷಿಣಕ್ಕೆ ವಲಸೆ ಹೊರಟು ಇಂಡೋಚೀನ ಮತ್ತು ಉತ್ತರ ಬರ್ಮ ದೇಶಗಳಲ್ಲಿ ನೆಲೆಸಿದ ಜನ ಸಮುದಾಯ. ಹದಿಮೂರನೆಯ ಶತಮಾನದ ಆದಿಭಾಗದಲ್ಲಿ ಇವರಲ್ಲಿ ಕೆಲವರು ಅಸ್ಸಾಮಿನ ಉತ್ತರ ಭಾಗಕ್ಕೆ ವಲಸೆ ಬಂದರು. ಈ ಜನ ಅಲ್ಲಿ ತಳ ಊರುವುದಕ್ಕೆ ಅಲ್ಲಿನ ಆದಿವಾಸಿಗಳ ಬೋಡೋ ಜನರೊಂದಿಗೆ ಎರಡು ಶತಮಾನಗಳ ಕಾಲ ಹೋರಾಡಬೇಕಾಯಿತು. 16ನೆಯ ಶತಮಾನದ ಹೊತ್ತಿಗೆ ಅಸ್ಸಾಮಿನ ಉತ್ತರ ಭಾಗದಲ್ಲೆಲ್ಲ ಈ ಜನ ಪಸರಿಸಿದ್ದರು. ಇವರಿಂದಲೇ ಅಸ್ಸಾಂ ಎಂಬ ಹೆಸರು ಬಂದಿರುವುದು. ಈ ಜನರ ರಾಜ್ಯಾಡಳಿತದಲ್ಲೊಂದು ವೈಶಿಷ್ಟ್ಯವಿತ್ತು. ದೊರೆ ನಿರಂಕುಶ ಪ್ರಭುವಲ್ಲ; ರಾಜಮನೆತನದಲ್ಲಿ ಅರ್ಹನಾದೊಬ್ಬನನ್ನು ಸಾಮಂತಮಂಡಲಿ ನೇಮಿಸುತ್ತಿತ್ತು. ಧೀರರೂ ಶೂರರು ಆಗಿದ್ದ ಈ ಜನರು ಔರಂಗಜೇಬನ ಕಾಲದಲ್ಲಿ ದಂಡೆತ್ತಿ ಬರಲೆತ್ನಿಸಿದ ಮೊಗಲ ಸೈನ್ಯವನ್ನೇ ಯಶಸ್ವಿಯಾಗಿ ತಡೆಗಟ್ಟಿದರು. 18ನೆಯ ಶತಮಾನ ಕಳೆಯುವ ಹೊತ್ತಿಗೆ ದಕ್ಷಿಣ ಅಸ್ಸಾಮನ್ನೂ ಗೆದ್ದು ಆಳುತ್ತಿದ್ದರು.

ಹಿಂದೂ ಧರ್ಮ, ಸಂಸ್ಕೃತಿಗಳಿಗೆ ಮಾರುಹೋಗಿದ್ದ ಇವರು 1714ರಲ್ಲಿ ವಿಧಿವಿಹಿತವಾಗಿ ಅವುಗಳನ್ನವಲಂಬಿಸಿದರು. ಕ್ರಮೇಣ ತಮ್ಮ ಹಿಂದಿನ ಆಚಾರ ವಿಚಾರಗಳನ್ನು ಮರೆತರು. ತಮ್ಮ ಹಿಂದಿನ ಭಾಷೆಯನ್ನೂ ಮರೆತು, ಬಂಗಾಳೀ ಭಾಷೆಗೆ ಸಂಬಂಧವಿರುವ ಅಸ್ಸಾಮೀ ಭಾಷೆಯನ್ನೂ ಸಾಹಿತ್ಯವನ್ನೂ ಬೆಳೆಸಿದರು. ಈಗ ಇವರು ಎಲ್ಲ ವಿಷಯಗಳಲ್ಲೂ ಭಾರತೀಯರೇ ಆಗಿದ್ದಾರೆ.

*

**ಅಹೋಬಲ :** ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿರುವ ನರಸಿಂಹ ಕ್ಷೇತ್ರಗಳಲ್ಲಿ ಮುಖ್ಯವಾದದ್ದು. ಉಗ್ರನರಸಿಂಹ ದೇವಾಲಯ ಮೇಲಿನ ಬೆಟ್ಟದಲ್ಲಿದೆ. ವಿಗ್ರಹ ಸ್ವಯಂಭುವಾಗಿದ್ದು ದೊಡ್ಡ ಬಂಡೆಯ ಬಿರುಕಿನ ಮೇಲೆ ನಿಂತಿದೆ. ಆ ಬಿರುಕು ಹಿರಣ್ಯಕಶಿಪುವಿನ ಹೊಟ್ಟೆ ಸೀಳಿದ ಚಿಹ್ನೆ. ವಿಗ್ರಹಕ್ಕೆ ಹತ್ತು ಕೈಗಳಿವೆ. ಕೆಳಗಿನ ಬೆಟ್ಟದಲ್ಲಿರುವ ಸೌಮ್ಯನರಸಿಂಹ (ಲಕ್ಷ್ಮೀನರಸಿಂಹ) ಪ್ರಹ್ಲಾದವರದ.

(ಜಿ.ಎಚ್.)

**ಅಹ್ರಿಮನ್ :** ಜರತುಷ್ಟ್ರ ಅಥವಾ ಅಹುರಮಜ್ದನ ಧರ್ಮದಲ್ಲಿ ಅಹುರಮಜ್ದ ಮತ್ತು ಅಹ್ರಿಮನ್ ಎಂಬ ಎರಡು ತತ್ತ್ವಗಳಿವೆ. ಮಜ್ದ ಒಳ್ಳೆಯದಕ್ಕೆಲ್ಲ ಕಾರಣ. ಅಹ್ರಿಮನ್ ಕೆಟ್ಟದ್ದಕ್ಕೆಲ್ಲ ಕಾರಣ. ಇವನಿಗೆ ಅಂಗ್ರಮೈನ್ಯು ಎಂಬ ಇನ್ನೊಂದು ಹೆಸರಿದೆ. ಮಜ್ದನೂ ಮೈನ್ಯುವೂ ಪ್ರಪಂಚದ ಆದಿಯಿಂದ ಪರಸ್ಪರ ವಿರುದ್ಧ ಪರಿಣಾಮಗಳಿಗೆ ಕಾರಣರು. ಅಹುರಮಜ್ದ ಬೆಳಕಿನ ರೂಪ. ಅಹ್ರಿಮನ್ ಪ್ರಪಂಚದ ಉತ್ತರ ದಿಕ್ಕಿನಲ್ಲಿರುವ ಕೊನೆ ಇಲ್ಲದ ಕಗ್ಗತ್ತಲೆಯ ಪಾತಾಳದಿಂದ ಬಂದವ. ಈತನ ರೂಪ ತಮಸ್ಸು. ಈತ ಈ ಲೋಕಕ್ಕೆ ಬಂದ ತರುಣದಲ್ಲಿ ಮೊದಲೇ ಇದ್ದ ಮಜ್ದನನ್ನು ಸಂಧಿಸಿರಲಿಲ್ಲ. ಮಜ್ದ ತನಗಿಂತ ಪ್ರಬಲನೆಂದಾಗಲಿ, ಅವನಿಂದ ತಾನು ಪರಾಜಯ ಹೊಂದುವೆನೆಂದಾಗಲಿ ಮೈನ್ಯುವಿಗೆ ತಿಳಿಯದು. ಮಜ್ದನನ್ನು ಪ್ರತಿಭಟಿಸಬೇಕು, ಅವನ ಅನುಚರರನ್ನು, ಅವರು ಮಾಡಿದ ಎಲ್ಲ ಒಳ್ಳೆಯ ಕೆಲಸಗಳನ್ನೂ ಹಾಳುಮಾಡಬೇಕು ಎಂಬುದೊಂದೇ ಮೈನ್ಯುವಿನ ಸಂಕಲ್ಪ. ತನ್ನ ಹಾಳು ಕೆಲಸಕ್ಕೆ ನೆರವಾಗುವಂತೆ ಅವನು ಪಿಶಾಚಿಗಣವನ್ನು ಸೃಷ್ಟಿಸಿಕೊಂಡ. ಮಜ್ದನ ಅನುಯಾಯಿಗಳಾದ ಮಾನವರಿಂದ ಅಹ್ರಿಮನ್‍ನ ಪರಾಜಯ ಖಂಡಿತ; ಲೋಕೋದ್ಧಾರದ ಕಾಲದಲ್ಲಿ ಇವನೂ ಇವನ ಗಣಗಳು ಮಜ್ದನಿಗೆ ಶರಣಾಗುತ್ತಾರೆ ಎಂಬುದು ಈ ಮತದ ನಿಶ್ಚಲವಾದ ನಂಬಿಕೆ. **ನೋಡಿ– ಜರತುಷ್ಟ್ರ ಧರ್ಮ**

(ಜಿ.ಹೆಚ್.; ಕೆ.ಕೆ.)

**ಅಳಣಾವರ :** ಧಾರವಾಡ ಜಿಲ್ಲೆ ಧಾರವಾಡ ತಾಲ್ಲೂಕಿನ ಒಂದು ಪಟ್ಟಣ. ಧಾರವಾಡ, ಬೆಳಗಾಂವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗಡಿಯಲ್ಲಿದ್ದು ಧಾರವಾಡ ನಗರಕ್ಕೆ ಪಶ್ಚಿಮದಲ್ಲಿ 34 ಕಿಮೀ ದೂರದಲ್ಲಿದೆ. ಸಮುದ್ರಮಟ್ಟಕ್ಕೆ 569ಮೀ ಎತ್ತರದಲ್ಲಿದೆ. ಜನಸಂಖ್ಯೆ 16,286. ಪುಣೆ ಬೆಂಗಳೂರು ರೈಲುಮಾರ್ಗದಲ್ಲಿ ಧಾರವಾಡ ಮತ್ತು ಲೋಂಡಾಗಳ ಮಧ್ಯೆ ಇರುವ ಒಂದು ರೈಲು ಜಂಕ್ಷನ್ ಸ್ಥಳವಾಗಿದೆ. ಇಲ್ಲಿಂದ ದಾಂಡೇಲಿಗೆ ರೈಲುಮಾರ್ಗವಿದೆ. ಗೋವ, ಬೆಳಗಾಂವಿ ಮುಂತಾದೆಡೆಗೆ ರೈಲುಮಾರ್ಗದ ಜೊತೆಗೆ ರಸ್ತೆಗಳೂ ಇದ್ದು ಉತ್ತಮ ಸಾರಿಗೆ ಸಂಪರ್ಕ ಉಂಟು. ಅಳಣಾವರ 1973ರಿಂದ ನಗರಸಭಾಡಳಿತಕ್ಕೆ ಒಳಪಟ್ಟಿದೆ. ಇಲ್ಲಿ ಮರಕೊಯ್ಯುವ ಕಾರ್ಖಾನೆಗಳೂ ಬತ್ತದ ಗಿರಣಿಗಳೂ ಇವೆ. ಸುತ್ತಲ ಗ್ರಾಮಗಳಿಗೆ ಅಳಣಾವರ ಒಂದು ವ್ಯಾಪಾರಕೇಂದ್ರ. ಪ್ರತಿ ಮಂಗಳವಾರ ಸಂತೆ ಸೇರುತ್ತದೆ. ಸುತ್ತಲೂ ಕಾಡುಗಳಿರುವುದರಿಂದ ಮರ ಕೊಯ್ದು ಸಾಗಿಸುವ ಉದ್ಯಮವಿದೆ.

ಅಳಣಾವರದ ಮೂಲ ಹೆಸರು ಅನಿಲಪುರ. ಇಲ್ಲಿ ನಾಲ್ಕು ಶಾಸನಗಳು ದೊರೆತಿವೆ. ಅವುಗಳಲ್ಲಿ 1081ರ ಶಾಸನ ಗೋವ–ಕದಂಬ ವಂಶದ ಗೂವಲ್ಲ ದೇವನದು. ಅಳಣಾವರ ಚಾಳುಕ್ಯ, ರಾಷ್ಟ್ರಕೂಟ, ವಿಜಯನಗರ, ಆದಿಲ್‍ಶಾಹಿ ಮತ್ತು ಕಿತ್ತೂರು ಇವುಗಳ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಇದು 1010ರಲ್ಲಿ ಕದಂಬ ರಾಜ್ಯಪಾಲ ಜಯಕೇಶಿಯ ರಾಜಧಾನಿಯಾಗಿತ್ತು.

(ಎಸ್.ಎಸ್.ಎನ್.)

**ಅಳತೆ, ತೂಕ, ಎಣಿಕೆ :** ವಸ್ತುಗಳ ಅಳತೆ (ಮೆಷರ್), ತೂಕ (ವೇಟ್), ಎಣಿಕೆ (ಕೌಂಟ್) ಮಾನವನ ವ್ಯವಹಾರದಲ್ಲಿ ಅವಿಭಾಜ್ಯ ಅಂಗಗಳು. ಇವುಗಳನ್ನು ಅಭ್ಯಸಿಸುವ ಶಾಸ್ತ್ರದ ಹೆಸರು ಮಾಪನಶಾಸ್ತ್ರ (ಮೆಟರಾಲಜಿ ನೋಡಿ ಮಾಪನಶಾಸ್ತ್ರ). ಈ ವರ್ಷ ಬಿದ್ದ ಮಳೆ ಎಷ್ಟು; ಭೂಮಿಯಿಂದ ಚಂದ್ರನಿಗೆ ದೂರ ಎಷ್ಟು–ಇಲ್ಲಿ ಅಳತೆಯ ಪಾತ್ರವಿದೆ. ಚಂದ್ರನಿಂದ ಮಾನವ ಭೂಮಿಗೆ ತಂದ ಶಿಲೆಯ ಭಾರ ಎಷ್ಟು; ಪೈಲ್ವಾನನ ಭಾರ ಎಷ್ಟು–ಇಲ್ಲಿ ತೂಕದ ಪಾತ್ರವಿದೆ. ಈ ವರ್ಷ ಬಿ.ಎ ಪರೀಕ್ಷೆಗೆ ಕುಳಿತವರೆಷ್ಟು; 1972ರಲ್ಲಿ ಎಷ್ಟು ದಿವಸಗಳಿವೆ–ಇಲ್ಲಿ ಎಣಿಕೆಯ ಪಾತ್ರವಿದೆ. ಅಳತೆ, ತೂಕ, ಎಣಿಕೆ ಇವು ಮೂರಕ್ಕೂ ಅನ್ವಯವಾಗುವ ಮೂರು ಮುಖ್ಯ ಸೂತ್ರಗಳಿವೆ–ಇವೆಲ್ಲವನ್ನೂ ಸಂಖ್ಯೆಯಲ್ಲಿ ಸೂಚಿಸುತ್ತೇವೆ; ಸಂಖ್ಯೆ ಬರೆದ ಮೇಲೆ ಅದರ ಹೆಸರನ್ನು ಅಂದರೆ ಮಾನವನ್ನು ಮುಂದೆ ಬರೆಯುತ್ತೇವೆ; ಹೀಗೆ ತಿಳಿಯುವ ವಸ್ತುವಿನ ಮಾಪನ ಒಂದು ದತ್ತಮೂಲಮಾನದ ಗುಣಕ. ಉದಾಹರಣೆಗೆ, ಭೂಮಿ–ಚಂದ್ರರ ಸರಾಸರಿ ದೂರ 2,39,000 ಮೈಲಿಗಳು ಅಥವಾ 4,03,910 ಕಿಮೀ. ಇಲ್ಲಿ ಮೈಲಿ ಪದ ಅಳತೆಯ ಮಾನ, ದತ್ತಮೂಲಮಾನ ಒಂದು ಮೈಲಿ ಅಥವಾ ಕಿಲೋಮೀಟರ್. ಪೈಲ್ವಾನನ ತೂಕ 100 ಕಿ. ಗ್ರಾಂಗಳು. ಇಲ್ಲಿ ಕಿಲೋಗ್ರಾಂ ಪದ ತೂಕದ ಮಾನ, ದತ್ತಮೂಲಮಾನ ಒಂದು ಕಿಲೋಗ್ರಾಂ. 1972ರ ಅವಧಿ 366 ದಿವಸಗಳು. ಇಲ್ಲಿ ದಿವಸ ಪದ ಎಣಿಕೆಯ ಮಾನ, ದತ್ತಮೂಲಮಾನ ಒಂದು ದಿವಸ.

ಪ್ರಾಚೀನ ಮಾನವನಿಗೆ ಇಂಥ ಸಮಸ್ಯೆಗಳು ಎದುರಾದವು. ಗುಡಿಸಲು ಕಟ್ಟಲು, ಮರ ಕಡಿಯಲು, ಧಾನ್ಯ ವಿನಿಮಯಿಸಲು, ಒಂದು ನೆಲೆಯಿಂದ ಇನ್ನೊಂದು ನೆಲೆಗೆ ನಡೆಯಲು ಅಳತೆ ಮಾಡಬೇಕಾಯಿತು. ಕಲ್ಲುಗಳ, ಮರಗಳ, ಧಾನ್ಯ ರಾಶಿಯ, ಗಾಯಗೊಂಡ ಬಂಧುಮಿತ್ರರ ತೂಕ ತಿಳಿಯಬೇಕಾಯಿತು. ಹೆಂಡಿರು ಮಕ್ಕಳ, ಸೈನಿಕರ, ದನ ಕುದುರೆಗಳ ಎಣಿಕೆ ಹಾಕಬೇಕಾಯಿತು. ಇಲ್ಲೆಲ್ಲ ಪರೋಕ್ಷವಾಗಿ ತಿಳಿದ ಮೂಲಮಾನಗಳಿಂದ ತಿಳಿಯದ

ವಸ್ತುಗಳನ್ನು ಸೂಚಿಸುವುದು ಅನಿವಾರ್ಯ ಮನಸ್ಸಿನ ಸಹಜ ಹರಿಯುವಿಕೆ ಸಮಸ್ಯೆಗಳ ಬಿಡಿಸಿಕೆಯ ಅಥವಾ ಸುಲಭೀಕರಣದ ದಾರಿಯಲ್ಲಿ ಆ ಮೊದಲೇ ಬಳಕೆಗೆ ಬಂದಿದ್ದ ಅಂಕೆಸಂಖ್ಯೆಗಳು ಸಮರ್ಥ ಸೂಚ್ಯಂಕಗಳಾದವು. ಕಾಲ್ನಡಿಗೆಯಿಂದ ಗಮಿಸಿದ ದೂರ, ಬೊಗಸೆ ಹಿಡಿದ ಧಾನ್ಯ, ಗೇಣುಹಾಕಿದ ಉದ್ದ, ದೊಡ್ಡ ಗಾತ್ರದ ಮನುಷ್ಯನ ಅಥವಾ ಮುಂದಾಳಿನ ಎತ್ತರ ಮುಂತಾದವು ಅಳತೆಯ ಮಾನವನ್ನು ಒದಗಿಸಿದವು. ಒಂದು ನಿಯತಗಾತ್ರಕ್ಕೆ ಒಟ್ಟಿದ ಧಾನ್ಯ ರಾಶಿಯ ಭಾರ, ನೈಸರ್ಗಿಕವಾಗಿ ಲಭಿಸಿದ ಸ್ಪಷ್ಟಾಕೃತಿಯ ಕಲ್ಲು ತುಂಡಿನ ಭಾಗ, ಒಬ್ಬ ವ್ಯಕ್ತಿಯ ಭಾರ ಮುಂತಾದವು ತೂಕದ ಮಾನ ನೀಡಿದುವು. ಅಂಕೆಸಂಖ್ಯೆಗಳು ಎಣಿಕೆಗೆ ಸಹಾಯಕಗಳಾದವು. ಆ ದಿವಸಗಳಲ್ಲಿ ಸರಿಸುಮಾರು ಲೆಕ್ಕಾಚಾರ ಸಾಕಾಗುತ್ತಿತ್ತು. ಆದರೆ ಜ್ಞಾನ ಬೆಳೆದಂತೆ ವಿಜ್ಞಾನ ಆಗಮಿಸಿದಂತೆ, ಅಳತೆ, ತೂಕ, ಎಣಿಕೆಗಳು ದೈನಂದಿನ ವ್ಯವಹಾರದಲ್ಲಿಯೂ ವೈಜ್ಞಾನಿಕಾನ್ವೇಷಣೆಯಲ್ಲಿಯೂ ಸಮಾನ ಪ್ರಾಮುಖ್ಯ ಪಡೆದವು; ಹೆಚ್ಚಿನ ನಿಷ್ಕೃಷ್ಟತೆ ಅತ್ಯಾವಶ್ಯಕವಾಯಿತು. ವ್ಯಕ್ತಿ-ವ್ಯಕ್ತಿ, ವ್ಯಕ್ತಿ-ಸಮಾಜ, ವ್ಯಕ್ತಿ ವ್ಯವಹಾರಗಳಲ್ಲಿ ಎಲ್ಲರೂ ಒಪ್ಪಿರುವ, ಸಮಾನಾರ್ಥ ನೀಡುವ, ಬಳಕೆಗೆ ಹಿತಮಿತವಾಗಿರುವ, ರೂಢಿಯಲ್ಲಿ ಬೆಳೆದುಬಂದಿರುವ, ಮಾನದಂಡಗಳನ್ನು ಅವಲಂಬಿಸಿರುವ ಮೂಲಮಾನಗಳು ಅನಿವಾರ್ಯವಾದವು. ಹೀಗೆ ಮೂಲಮಾನಗಳು, ಮಾನದಂಡಗಳು, ಸಾರ್ವತ್ರಿಕ ಬೆಂಬಲ ದಿಂದ ರೂಪುಗೊಂಡವು. ಮುಂದೆ ವ್ಯಾಪಾರ, ವಾಣಿಜ್ಯ, ವೈಜ್ಞಾನಿಕ ಸಂಶೋಧನೆಗಳು ಪ್ರಗತಿಗೊಂಡಂತೆ ಮಾನಗಳ ಏಕರೂಪತೆ ಅವಶ್ಯವಾಯಿತು. ಇಲ್ಲಿ ಸರ್ಕಾರದ ಪ್ರವೇಶ ಕಾಣುತ್ತೇವೆ. ಸರ್ಕಾರ ಶಾಸನರೀತ್ಯ ಮೂಲಮಾನಗಳನ್ನೂ ಮಾನದಂಡಗಳನ್ನೂ ನಿರ್ಧರಿಸಿ ಅವುಗಳ ಬಳಕೆಯನ್ನು ಕಡ್ಡಾಯಗೊಳಿಸಿತು. ಸಾರ್ವಜನಿಕ ವ್ಯವಹಾರಗಳಲ್ಲಿ ಇವನ್ನು ಬಳಸದಿರುವುದು ಶಿಕ್ಷಾರ್ಹ ಅಪರಾಧವೆನಿಸಿತು.

ಮಾಪನಗಳಲ್ಲಿ ಎರಡು ಪ್ರಮುಖ ವ್ಯವಸ್ಥೆಗಳು ಪ್ರಪಂಚದಲ್ಲಿ ಬಳಕೆಯಲ್ಲಿವೆ. ಅಡಿ, ಪೌಂಡ್, ಸೆಕೆಂಡ್ ವ್ಯವಸ್ಥೆ (ಫುಟ್, ಪೌಂಡ್, ಸೆಕೆಂಡ್ ಅಥವಾ ಎಫ್.ಪಿ.ಎಸ್. ಸಿಸ್ಟಮ್). ಮತ್ತು ಸೆಂಟಿಮೀಟರ್, ಗ್ರಾಂ, ಸೆಕೆಂಡ್ ವ್ಯವಸ್ಥೆ, (ಸಿ.ಜಿ.ಎಸ್. ಸಿಸ್ಟಮ್). ಮೊದಲನೆಯದನ್ನು ಬ್ರಿಟಿಷ್ ವ್ಯವಸ್ಥೆಯೆಂದೂ ಎರಡನೆಯದನ್ನು ಫ್ರೆಂಚ್ ಅಥವಾ ಮೆಟ್ರಿಕ್ ವ್ಯವಸ್ಥೆಯೆಂದೂ ಕರೆಯುವುದುಂಟು. ವಸ್ತು ಒಂದೇ ಆದರೂ ಮಾನದಂಡಗಳ ಭಿನ್ನತೆಯಿಂದ ಅದರ ಮೌಲ್ಯಗಳು ಭಿನ್ನವಾಗುತ್ತವೆ. ಪೈಲ್ವಾನನ ತೂಕ 220 ಪೌಂಡ್‌ಗಳು; ಅದು 100 ಕಿಲೋ ಗ್ರಾಂಗಳೂ ಹೌದು. ಇಲ್ಲಿ 2.2 ಪೌಂಡ್‌ಗಳು 1 ಕಿಲೋಗ್ರಾಂಗೆ ಸಮಾನ ಎಂಬುದು ಅಧ್ಯಾಹಾರ. ಆದ್ದರಿಂದ ಭಿನ್ನ ಮಾನದಂಡಗಳಲ್ಲಿ ಸಮಾನತೆ (ಈಕ್ವಿವಲೆನ್ಸ್) ಏರ್ಪಡಿಸಿ ವಿನಿಮಯ ಕೋಷ್ಟಕ (ಎಕ್ಸ್‌ಚೇಂಚ್ ಟೇಬಲ್) ವಿಧಿಸುವುದು ಸರ್ಕಾರದ ಇನ್ನೊಂದು ಹೊಣೆ.

ರೂಢಿಯಲ್ಲಿ ದಾಶಮಿಕ ಸಂಖ್ಯಾವ್ಯವಸ್ಥೆ ಪ್ರಚಲಿತವಾಗಿರುವುದರಿಂದ ಇದರ ನಿಕಟವರ್ತಿಯಾಗಿರುವ ಮೆಟ್ರಿಕ್ (ಮಾಪನ) ವ್ಯವಸ್ಥೆ ವೈಜ್ಞಾನಿಕವಾಗಿ ಹೆಚ್ಚು ಜನಪ್ರಿಯತೆ ಗಳಿಸಿತು. ಮೊದಲು ಎಫ್.ಪಿ.ಎಸ್. ವ್ಯವಸ್ಥೆಯನ್ನು ಅನುಸರಿಸುತ್ತಿದ್ದ ಭಾರತ ಸರ್ಕಾರ ಶಾಸನರೀತ್ಯ (ದಿ ಸ್ಟ್ಯಾಂಡರ್ಡ್ ಮೆಷರ್ಸ್ ಅಂಡ್ ವೇಟ್ಸ್ ಆ್ಯಕ್ಟ್; 1950ರಲ್ಲಿ ಜಾರಿಗೆ ಬಂದಿತು) ಮೆಟ್ರಿಕ್ ವ್ಯವಸ್ಥೆಯನ್ನು 1960ರಲ್ಲಿ ರೂಢಿಗೆ ತಂದಿತು. ಒಂದೆರಡು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ:

| | | | |
|---|---|---|---|
| --- | 1 ಅಂಗುಲ | --- | 2.54 ಸೆಂಮೀ |
| 12 ಅಂ. | 1 ಅಡಿ | 12.0 ಅಂ. | 30.48 ಸೆಂಮೀ |
| 3 ಅ. | 1 ಗಜ | 36.0 ಅಂ. | 91.44 ಸೆಂಮೀ |
| 5.5 ಗ. | 1 ಪೋಲ್ | 16.5 ಅ. | 5.03 ಮೀಟರ್ |
| 4 ಪೋ. | 1 ಚೈನ್ | 22.0 ಗ. | 20.12 ಮೀಟರ್ |
| 10 ಚೈ. | 1 ಫರ್ಲಾಂಗ್ | 220.0 ಗ. | 201.17ಮೀಟರ್ |
| 8 ಫ. | 1 ಮೈಲಿ | 1760.0 ಗ. | 16093 ಕಿಮೀ. |

| **ವಿವರ** | **ಮೆಟ್ರಿಕ್** | | **ಎಫ್.ಪಿ.ಎಸ್.** |
|---|---|---|---|
| ಸರಳಮಾನ | 1 ಮೀಟರ್ | ... | 1.09361 ಗಜ |
| ತೂಕಮಾನ | 1 ಕಿಲೋಗ್ರಾಂ | ... | 2.20462ಪೌಂಡ್ |
| ಕಾಲಮಾನ | 1 ಸೆಕೆಂಡ್ | ... | 1. ಸೆಕೆಂಡ್ |
| ವಿಸ್ತೀರ್ಣಮಾನ | 1 ಚ.ಮೀ/ಸೆಕೆಂಡಿಗೆ | ... | 1.19599 ಚ.ಗಜ |
| | | | 1.30795 ಘ.ಗ. |
| ಘನಗಾತ್ರಮಾನ | 1 ಘ.ಮೀ. | ... | 219.969 ಗ್ಯಾಲನ್ |
| ವೇಗಮಾನ | 1 ಮೀ./ಸೆಕೆಂಡಿಗೆ | ... | 3.28084 ಅ/ಸೆ |
| | | | 2.23694 ಮೈ/ಗಂ |
| ಸಾಂದ್ರತೆಮಾನ | 1 ಕಿ.ಗ್ರಾಂ/ಘ.ಮೀ. | ... | 0.062428ಪೌಂ/ಘ.ಅ. |
| | | | 0.010022 ಪೌಂ/ಘ್ಯಾ. |
| ಸರಳಮಾನ | 1 ಮೀಟರ್ | ... | 1.09361 ಗಜ |
| ಬಲಮಾನ | 1 ನ್ಯೂಟನ್ | ... | 0.224809 ಪೌಂ.ಬಲ |
| ಸಂಮರ್ದಮಾನ | 1 ನ್ಯೂ/ಚ.ಮೀ. | ... | 1,45038 X $10^{-4}$ ಪೌ.ಬ./ಚ.ಇಂ |
| ಶಕ್ತಿಮಾನ | 1 ಜೌಲ್ | ... | 0.737562 ಅ.ಪೌಂ.ಬ. |
| | | | 9.47817 X $10^{-4}$ ಬಿ.ಟಿ.ಯು |
| ಚೈತನ್ಯಮಾನ | 1 ವಾಟ್ | ... | 1.34102 X $01^{-3}$ ಅಶ್ವಶಕ್ತಿ(ಎಚ್.ಪಿ.) |

ಪರಮಾಣುಪ್ರಪಂಚಕ್ಕೆ ಸಾಗಿದಂತೆ ಮಾಪನಮಾನಗಳು ಅನಂತಸೂಕ್ಷ್ಮವಾಗುತ್ತವೆ; ಬೃಹದ್ವಿಶ್ವದೆಡೆಗೆ ಗಮಿಸಿದಂತೆ ಮಾಪನಮಾನಗಳು ಬೃಹತ್ತಾಗಿ ಬೆಳೆಯುತ್ತವೆ. ಆದ್ದರಿಂದ ಇಲ್ಲೆಲ್ಲ ಮಾಪನಾಂಕಗಳು ಒಂದು ಎಣಿಕೆಯ ಮಿತಿಯಲ್ಲಿರಲು ಸಮರ್ಪಕವಾದ ಮಾನದಂಡಗಳನ್ನು ಬಳಸಬೇಕಾಗುವುದು. ಉದಾಹರಣೆಗೆ, ವಿದ್ಯುತ್ಕಾಂತ ತರಂಗಗಳ (ಎಲೆಕ್ಟ್ರೋ ಮ್ಯಾಗ್ನೆಟಿಕ್ ವೇವ್ಸ್) ತರಂಗಮಾನಗಳನ್ನು ಆಂಗ್‌ಸ್ಟ್ರಮ್‌ಗಳಲ್ಲಿಯೂ ನಕ್ಷತ್ರಗಳ ದೂರಗಳನ್ನು ಜ್ಯೋತಿರ್ವರ್ಷಗಳಲ್ಲಿಯೂ ಅಳೆಯಬೇಕು. ಇವುಗಳ ಪರಿಮಾಣಗಳು ಕ್ರಮವಾಗಿ $10^{-8}$ ಸೆಂ.ಮೀ. ಮತ್ತು 946 X $10^{10}$ ಕಿಮೀ. (**ನೋಡಿ-ಕಾಲಮಾನ**)

**ಕರ್ನಾಟಕದಲ್ಲಿ ಪ್ರಚುರವಾಗಿದ್ದ ಕೆಲವು ಮಾಪಕಗಳು**

**ಅಳತೆ**

ದ್ರವ ಧಾನ್ಯಮಾನ

| | | | | | |
|---|---|---|---|---|---|
| 4 ಸೊಲಿಗೆ | ... | 1 ಪಡಿ | 2 ಅಚ್ಚೇರು | ... | 1 ಸೇರು |
| 4 ಪಡಿ | ... | 1 ಬಳ್ಳ | 2 ಮಾನ | ... | 1 ಸೇರು |
| 4 ಬಳ್ಳ | ... | 1 ಕೊಳಗ | 2 ಸೇರು | ... | 1 ಬಳ್ಳ |
| 20 ಕೊಳಗ | ... | 1 ಖಂಡುಗ | 100ಸೇರು | ... | 1 ಪಲ್ಲ |
| 4 ಚಟಾಕು | ... | 1 ಪಾವು | 10 ಸೇರು | ... | 1 ಪರೆ |
| | | 1 ಅಚ್ಚೇರು | 8 ಪರೆ | ... | 1 ಬಟ್ಟಿ |
| 2 ಪಾವು | | 1 ಮಾನ | 15 ಬಟ್ಟಿ | ... | 1 ಗಾಡಿ |

**ದ್ರವಮಾನ**

| | | | | | |
|---|---|---|---|---|---|
| 4 ಸೊಲಿಗೆ | ... | 1 ಸಿದ್ದೆ | 4 ಕುಡುತೆ | ... | 1 ಸೇರು |
| 4 ಸಿದ್ದೆ | ... | 1 ಸೇರು | 6 ಕುಡುತೆ | | |
| 9 ಸೇರು | ... | 1 ಬೇಳೆ | (1 1/2 ಸೇರು) | ... | 1 ಕುತ್ತಿ |

ಧಾನ್ಯಮಾನ

| | | | | | |
|---|---|---|---|---|---|
| 4 ಸಿದ್ದೆ | ... | 1 ಸೇರು | 3ಕಳಸಿಗೆ | | |
| 14ಸೇರು | ... | 1 ಕಳಸಿಗೆ | (42 ಸೇರು) | ... | 1 ಮುಡಿ |

**ತೂಕ**

| | | | | | |
|---|---|---|---|---|---|
| 4 ವೀಸ | | 2 | ಅಡಿಸೇರು | ... | 1 ಪಂಚೇರು |
| 1 ಹಾಗ | ... | 1 ಗುಲಗಂಜಿ | 2 ಪಂಚೇರು | ... | 1 ದಡಿಯ |
| 2 ಹಾಗ | ... | 1 ಅಡ್ಡ | 4 ದಡಿಯ | | |
| 2 ಅಡ್ಡ | ... | 1 ಹಣ | 8 ಪಂಚೇರು | | |
| 9 ಹಣ | ... | 1 ವರಹ | 40 ಸೇರು | | 1 ಮಣ |
| 3 ವರಹ | | | 20 ಮಣ | ... | 1 ಖಂಡಿ |
| $3^1/_2$ ಹಣ | ... | 1 ರೂಪಾಯಿ | | | |
| 1 ರೂಪಾಯಿ | ... | 1 ತೊಲ | 16 ಔನ್ಸ್ | | ಪೌಂಡ್ |
| 1.5 ತೊಲ | ... | 1 ಚಟಾಕು | $3.^1/_2$ ಪೌಂಡ್ | ... | 1 ವೀಸ |
| 3 ತೊಲ | ... | 1 ಅರೆಪಾವು | 8 ವೀಸ | ... | |
| 2 ಅರೆಪಾವು | ... | 1 ಪಾವು | 28 ಪೌಂಡ್ | ... | 1 ಮಣ |
| 2 ಪಾವು | ... | 1 ಅಚ್ಚೇರು | 4 ಮಣ | ... | 1ಹಂಡ್ರಡ್ ವೆಯ್ಟ್ |
| 2 ಅಚ್ಚೇರು | | 1 ಸೇರು | | | |
| 24ರೂಪಾಯಿ | | 20 ಹಂಡ್ರೆಡ್‌ವೆಯ್ಟ್ | | | 1 ಟನ್ (ton) |
| $1^1/_4$ಸೇರು | | 1 ಸವ್ವಾಸೇರು | | | |
| 30 ರೂಪಾಯಿ | | 1,000 ಕಿ.ಗ್ರಾಂ | | | 1 ಮೆ.ಟನ್ (tonne) |
| 2 ಸವ್ವಾಸೇರು | ... | 1 ಅಡಿಸೇರು | | | |

**ಎಣಿಕೆ**

20 ವೀಳ್ಯದೆಲೆ

| | | | | | |
|---|---|---|---|---|---|
| 10 ಬಾಳೆಎಲೆ | | 1 ಕವಳಿಗೆ | 12 ಅಂಗುಲ | ... | 1 ಅಡಿ |
| | | | 9 ಅಂಗುಲ | ... | 1 ಗೇಣು |
| 5 ಕವಳಿಗೆ | ... | 1 ಚೌಕ | 2 ಗೇಣು | ... | 1 ಮೊಳ |
| 2 ಚೌಕ | ... | 1 ಕಟ್ಟು | | | 3 ಅಡಿ |
| | | | 2 ಮೊಳ | ... | 1 ಗಜ |
| 1 ಕಾಣಿ | ... | 1 ಬಿಡಿಗಾಸು | | | |
| | | 1 ದುಗ್ಗಾಣಿ | 2 ಗಜ | ... | 1 ಬಾರು |
| 2 ಕಾಸು | ... | 1/2 ದುಡ್ಡು | 5 ಗಜ | ... | 1 ಪೋಲ್ |
| | | | 220 ಗಜ | ... | 1ಫರ್ಲಾಂಗ್ |
| 3 ಕಾಸು | | 1 ಕಾಲಾಣಿ | | | |
| 1 ಬಿಲ್ಲೆ | | 1 ಮುಕ್ಕಾಲು | | | |
| 4 ಕಾಸು | ... | 1 ದುಡ್ಡು | 8 ಫರ್ಲಾಂಗ್ | ... | 1 ಮೈಲಿ |
| | | 1 ಅರ್ಧಾಣೆ | 3 ಮೈಲಿ | ... | 1 ಹರದಾರಿ |
| 6 ಕಾಸು | ... | 2 ಮುಕ್ಕಾಲು | | | |
| 12 ಕಾಸು | ... | 1 ಆಣೆ | 7.5 ಚ.ಗಜ | | 1 ಆಣಿ |
| | | 1 ಪಾವಲಿ | 16 ಅಣಿ | ... | 1 ಗುಂಟೆ |
| 4 ಆಣೆ | ... | 1 ಹಾಗ | 40 ಗುಂಟೆ | | 1 ಎಕರೆ |
| 2 ಪಾವಲಿ | ... | 1 ಅರ್ಧರೂ. | 640 ಎಕರೆ | | 1 ಚ.ಮೈಲಿ |
| 4 ಪಾವಲಿ | ... | 1 ರೂಪಾಯಿ | | | |

**ಪರಿವರ್ತನ ಕೋಷ್ಟಕ**

| ಕೆಳಗಿನವುಗಳನ್ನು (x) | | ಇವುಗಳಿಗೆ ಪರಿವರ್ತಿಸಲು (y) | | ಇದರಿಂದ ಗುಣಿಸಿ (f) y=fx |
|---|---|---|---|---|
| ಅಡಿ | ... | ಮೀಟರ್ | ... | 0.305 |
| ಅಶ್ವಸಾಮರ್ಥ್ಯ(ಮೆಟ್ರಿಕ್) | ... | ಕಿಲೋವಾಟ್ | ... | 0.736 |
| ಇಂಚು (ಅಂಗುಲ) | ... | ಸೆಂಟಿಮೀಟರ್ | ... | 2.54 |
| ಎಕರೆ | ... | ಚದರ ಮೀಟರ್ | ... | 40.47 |
| ಎಕರೆ | ... | ಅಡಿ | ... | 43.560 |
| ಕಿಲೋಗ್ರಾಂ | ... | ಪೌಂಡು | ... | 2.205 |
| ಕಿಲೋಗ್ರಾಂ | ... | ಸೇರು | ... | 1.072 |
| ಕಿಲೋಮೀಟರ್ | ... | ಮೈಲಿ | ... | 0.621 |
| ಕಿಲೋವಾಟ್ | ... | ಅಶ್ವಸಾಮರ್ಥ್ಯ | ... | 1.341 |
| ಕ್ವಿಂಟಲ್ | ... | ಕಿಲೋಗ್ರಾಂ | ... | 100 |
| ಗಜ | ... | ಮೀಟರ್ | ... | 0.9144 |
| ಗ್ಯಾಲನ್ (ಇಂಪೀರಿಯಲ್) | ... | ಲೀಟರ್ | ... | 4.546 |
| ಗ್ಯಾಲನ್ (ಯು.ಎಸ್.) | ... | ಲೀಟರ್ | ... | 3.785 |
| ಗ್ರಾಮ್ | ... | ಗ್ರೈನ್ | ... | 15.432 |
| ಗ್ರಾಮ್ | ... | ಔನ್ಸ್ | ... | 0.035 |
| ಗ್ರಾಮ್ | ... | ತೊಲ | ... | 0.085 |
| ಗ್ರೈನ್ | ... | ಕ್ಯಾರೆಟ್ (ಮೆಟ್ರಿಕ್) | ... | 0.324 |
| ಗ್ರೈನ್ | ... | ಗ್ರಾಂ | ... | 0.065 |
| ಗ್ರೈನ್ | ... | ಔನ್ಸ್ | ... | 0.002 |
| ಗ್ರೈನ್ | ... | ತೊಲ | ... | 0.006 |
| ಘನ ಅಡಿ | ... | ಘನ ಮೀಟರ್ | ... | 0.028 |
| ಘನ ಅಡಿ | ... | ಗ್ಯಾಲನ್ (ಇಂ) | ... | 6.229 |
| ಘನ ಅಡಿ | ... | ಲೀಟರ್ | ... | 28.316 |
| ಘನ ಸೆಂಟಿಮೀಟರ್ | ... | ಘನ ಇಂಚು | ... | 0.061 |
| ಘನ ಸೆಂಟಿಮೀಟರ್ | ... | ಔನ್ಸ್ (ದ್ರವ) | ... | 0.028 |
| ಘನ ಸೆಂಟಿಮೀಟರ್ | ... | ಲೀಟರ್ | ... | 0.001 |
| ಟನ್ | ... | ಮಣ | ... | 27.222 |
| ಟನ್ | ... | ಮೆಟ್ರಿಕ್ ಟನ್ (Tonne) | ... | 1.016 |
| ತೊಲ | ... | ಔನ್ಸ್ | ... | 0.4114 |
| ತೊಲ | ... | ಗ್ರಾಂ | ... | 11.664 |
| ಪೌಂಡ್ | ... | ಕಿಲೋಗ್ರಾಂ | ... | 0.454 |
| ಪೌಂಡ್ | ... | ಸೇರು | ... | 0.486 |
| ಫರ್ಲಾಂಗ್ | ... | ಮೀಟರ್ | ... | 201.168 |
| ಫ್ಯಾದಂ | ... | ಅಡಿ | ... | 6 |
| ಬುಷಲ್ | ... | ಗ್ಯಾಲನ್ (ಇಂ) | ... | 8 |
| ಬುಷಲ್ | ... | ಲೀಟರ್ | ... | 36.368 |
| ಮಣ | ... | ಮೆಟ್ರಿಕ್‌ಟನ್ | ... | 0.0372 |
| ಮಣ | ... | ಟನ್ | ... | 0.0367 |
| ಮೀಟರ್ | ... | ಇಂಚು | ... | 39.37 |
| ಮೀಟರ್ | ... | ಗಜ | ... | 1.0936 |
| ಮೈಲಿ | ... | ಅಡಿ | ... | 5.280 |
| ಮೈಲಿ | ... | ಕಿಲೋಮೀಟರ್ | ... | 1.609 |
| ರೀಮ್ | ... | ಹಾಳೆ | ... | 500 |
| ಲೀಟರ್ | ... | ಗ್ಯಾಲನ್ (ಇಂ.) | ... | 0.23 |
| ಸೆಂಟಿಗ್ರಾಂ | ... | ಗ್ರೈನ್ | ... | 0.154 |
| ಸೆಂಟಿಮೀಟರ್ | ... | ಇಂಚು | ... | 0.394 |
| ಹಂಡ್ರಡ್‌ವೆಯ್ಟ್ | ... | ಕಿಲೋಗ್ರಾಂ | ... | 50.802 |
| ಹಂಡ್ರಡ್‌ವೆಯ್ಟ್ | ... | ಮಣ | ... | 1.361 |
| ಹಂಡ್ರಡ್‌ವೆಯ್ಟ್ | ... | ಟನ್ | ... | 0.05 |
| ಹಂಡ್ರಡ್‌ವೆಯ್ಟ್ | ... | ಮೆಟ್ರಿಕ್ ಟನ್ | ... | 0.056 |

**ಅಳತೆಯ ಲೋಪಗಳು :** ವಸ್ತುಗಳ (ಅಥವಾ ಬಲಗಳ) ಪರಿಮಾಣಗಳನ್ನು–ಅಂದರೆ ಕ್ಷೇತ್ರಫಲ, ಉದ್ದ, ಘನಗಾತ್ರ, ತೂಕ, ಅಶ್ವಸಾಮರ್ಥ್ಯ, ವೇಗ, ವೇಗವರ್ಧನೆ, ಇತ್ಯಾದಿ–ಒಂದು ಮಾನದಂಡದಿಂದ ಅಳೆಯುವ ಕ್ರಿಯೇ ಅಳತೆ (ಮೆಷರ್‌ಮೆಂಟ್). ಅಳತೆಯಲ್ಲಿ ವಸ್ತು, ಅಳೆಯುವ ಉಪಕರಣ, ಪ್ರಯೋಗಕಾರ ಎಂಬ ಮೂರು ಸ್ಪಷ್ಟ ಅಂಶಗಳಿವೆ. ಪ್ರಯೋಗಕಾರ ಉಪಕರಣವನ್ನು ಬಳಸಿ ವಸ್ತುಗಳ ವಿವರಗಳನ್ನು ಓದುವುದೇ ಅಳತೆ. ಉಪಕರಣದ ಬಳಕೆ ಸರಿಯಾಗಿ ಆಗದಿದ್ದರೆ, ಓದುವಿಕೆಯಲ್ಲಿ ದೋಷವಿದ್ದರೆ, ಉಪಕರಣವೇ ದೋಷಪೂರ್ಣವಾಗಿದ್ದರೆ, ಅಳತೆಯಲ್ಲಿ ದೋಷ (ಎರರ್ ಆಫ್ ಮೆಷರ್‌ಮೆಂಟ್) ಉಂಟಾಗುವುದು. ವಾಸ್ತವಿಕತೆಗೂ ಅಳತೆಯಿಂದ ದೊರೆತ ಬೆಲೆಗೂ ಇರುವ ವ್ಯತ್ಯಾಸ ಅಳತೆಯ ಲೋಪ. ಯಾವ ಪರಿಮಾಣದ ಅಳತೆಯನ್ನೂ ಅತ್ಯಂತ ನಿಖರವಾಗಿದೆಯೆಂದು ಹೇಳುವುದು ಸಾಹಸದ ಮಾತಾದೀತು. ಸಾಮಾನ್ಯ ಅಳತೆಪಟ್ಟಿಯನ್ನು ಉಪಯೋಗಿಸಿ ಒಂದು ಕಡ್ಡಿಯ ಉದ್ದವನ್ನು ಅಳೆದಾಗ ನಮ್ಮ ಅಳತೆಯಲ್ಲಿ ಕೊನೆಯ ಪಕ್ಷ 0.1 ಸೆಂಮೀ.ನಷ್ಟಾದರೂ ದೋಷವಿದ್ದೇ ಇರುತ್ತದೆ. ಕಾರಣವೇನೆಂದರೆ ನಾವು ಉಪಯೋಗಿಸುವ ಅಳತೆಪಟ್ಟಿಯಿಂದ ಅಳೆಯಬಹುದಾದ ಕನಿಷ್ಠದೂರ 0.1 ಸೆಂಮೀ ಮಾತ್ರ. ಉದ್ದದ ಅಳತೆಯ ನಿಖರತೆಯನ್ನು ಹೆಚ್ಚುಮಾಡಲು (ಅಂದರೆ ಅಳತೆಯ ದೋಷವನ್ನು ಕಡಿಮೆ ಮಾಡಲು) ವರ್ನಿಯರ್ ಅಳತೆಪಟ್ಟಿಯನ್ನು ಉಪಯೋಗಿಸುತ್ತಾರೆ; ಇದನ್ನು ಉಪಯೋಗಿಸಿ ಉದ್ದದ ಅಳತೆಯಲ್ಲಿ 0.001 ಸೆಂಮೀ.ನಷ್ಟು ನಿಖರತೆ ಪಡೆಯಬಹುದು. ಸ್ಕ್ರೂಗೇಜ್ ಮತ್ತು ಗೋಳಮಾಪಕಗಳಲ್ಲಿ ಇನ್ನೂ ಹೆಚ್ಚಿನ ನಿಖರತೆ ಪಡೆಯಬಹುದು. ಹೀಗೆಯೇ ಉದ್ದದ ಅಳತೆಯಲ್ಲಿಯೇ ಅಲ್ಲದೆ ಮಿಕ್ಕ ಪರಿಮಾಣಗಳ ಅಳತೆಗಳಲ್ಲೂ (ಉದಾಹರಣೆಗೆ, ಕಾಲ, ಜಡತ್ವ, ಉಷ್ಣತೆ, ವಿದ್ಯುದ್ಬಲ, ವಿದ್ಯುತ್ಪ್ರವಾಹ ಮುಂತಾದವು) ಹೆಚ್ಚು ಹೆಚ್ಚಾಗಿ ನಿಖರತೆಯನ್ನು ಪಡೆಯಲು ಪ್ರಯತ್ನಗಳು ನಡೆದಿವೆ ಮತ್ತು ನಡೆಯುತ್ತಲೂ ಇವೆ.

ಅಳತೆಗಳಲ್ಲಿ ಹೆಚ್ಚು ನಿಖರತೆಯನ್ನು ಏಕೆ ಪಡೆಯಬೇಕು? ಇದರ ಕಾರಣ ಯಾವುದನ್ನು ಏತಕ್ಕಾಗಿ ಅಳೆಯುತ್ತಿದ್ದೇವೆ ಎನ್ನುವುದರಲ್ಲಿದೆ. ಉದಾಹರಣೆಗೆ ಒಂದು ಮನೆಯ ಉದ್ದಳತೆಗಳನ್ನು ಅಳೆಯುವಾಗ ಅದರಲ್ಲಿ 1 ಸೆಂಮೀ ನಷ್ಟು ವ್ಯತ್ಯಾಸ ಬಂದರೂ ತೊಂದರೆಯಿಲ್ಲ; ಅದರೆ ಒಂದು ಕೂದಲಿನ ದಪ್ಪವನ್ನಳೆಯಬೇಕಾದರೆ ನಮ್ಮ ಅಳತೆಯಲ್ಲಿ ಕೊನೆಯ ಪಕ್ಷ 0.0005 ಸೆಂಮೀ ನಷ್ಟು ನಿಖರತೆಯಾದರೂ ಬೇಕೇ ಬೇಕು. ಇನ್ನೊಂದು ಉದಾಹರಣೆಗೆ–ಒಂದು ಕಾರಿನ ವೇಗವನ್ನು ಅಳೆಯುವಾಗ ಅದರಲ್ಲಿ ಸುಮಾರು ಗಂಟೆಗೆ 1 ಮೈಲಿಯಷ್ಟು ವ್ಯತ್ಯಾಸ ಬಂದರೂ ತೊಂದರೆಯಿಲ್ಲ ಆದರೆ ಕ್ಷಿಪಣಿಯ ವೇಗವನ್ನಳೆಯುವಾಗ ಅದರಲ್ಲಿ ಸೆಕೆಂಡಿಗೆ 1/100 ಮೈಲಿಯಷ್ಟು ವ್ಯತ್ಯಾಸವಿದ್ದರೂ ಕ್ಷಿಪಣಿ ತನ್ನ ಗುರಿಯನ್ನು ಹತ್ತಾರು ಮೈಲಿಗಳಷ್ಟು ತಪ್ಪುವ ಸಾಧ್ಯತೆಯಿದೆ. ಒಟ್ಟಿನಲ್ಲಿ ಯಾವುದಾದರೂ ಅಳತೆಯಲ್ಲಿ ಸರಿಯಾದ / ನಿಖರವಾದ ಫಲಿತಾಂಶದಿಂದ ವ್ಯತ್ಯಾಸವಾಗಿದೆಯೋ ಆ ಪರಿಮಾಣವೇ ದೋಷ.

ಅಳತೆಯಲ್ಲಿನ ದೋಷಗಳಿಗೆ ಕಾರಣವನ್ನು ಎರಡು ಭಾಗವಾಗಿ ವಿಂಗಡಿಸಬಹುದು

**ಯಾದೃಚ್ಛಿಕ (ರ್‍ಯಾಂಡಮ್) ದೋಷಗಳು:** ಒಂದು ಪರಿಮಾಣದ ಅಳತೆಯನ್ನು ಹತ್ತಾರು ಸಾರಿ ಮಾಡಿದಾಗ, ಪ್ರತಿಸಾರಿಯೂ ಒಂದೊಂದು ಬೆಲೆಯುಳ್ಳದ್ದಾದರೆ ಅದನ್ನು ಯಾದೃಚ್ಛಿಕ ದೋಷವೆನ್ನುತ್ತಾರೆ. ಯಾದೃಚ್ಛಿಕ ದೋಷಗಳಿಂದಾಗಿ ಅಳೆಯುತ್ತಿರುವ ಬೆಲೆ ಸರಿಯಾದ ಬೆಲೆಗಿಂತ ಕೆಲವು ಸಾರಿ ಹೆಚ್ಚಾಗಿಯೂ ಕೆಲವು ಸಾರಿ ಕಡಿಮೆಯಾಗಿಯೂ ಇರುತ್ತದೆ. ಆದ್ದರಿಂದ ಹಲವರು ಅಳತೆಗಳನ್ನು ಮಾಡಿ ಅವುಗಳ ಸರಾಸರಿಯನ್ನು ತೆಗೆದುಕೊಳ್ಳುವುದರಿಂದ ಯಾದೃಚ್ಛಿಕ ಲೋಪವನ್ನು ಕಡಿಮೆ ಮಾಡಬಹುದು.

**ವ್ಯವಸ್ಥಿತ ದೋಷಗಳು (ಸಿಸ್ಟಮ್ಯಾಟಿಕ್ ಎರರ್ಸ್)** : ಒಂದು ಪ್ರಯೋಗದಲ್ಲಿ ಯಾವುದೇ ಅಳತೆಯನ್ನು ತೆಗೆದುಕೊಳ್ಳುವಾಗ ಪ್ರತಿಸಾರಿ ಅಳೆದಾಗಲೂ ಒಂದೇ ರೀತಿಯಲ್ಲಿ ಉಂಟಾಗುತ್ತಿರುವ ಅಥವಾ ಕ್ರಮಬದ್ಧವಾಗಿ ವ್ಯತ್ಯಾಸವಾಗುತ್ತಿರುವ ದೋಷಕ್ಕೆ ವ್ಯವಸ್ಥಿತ ದೋಷ ಎನ್ನುತ್ತಾರೆ. ಉದಾಹರಣೆಗೆ ಒಂದು ಗಾಜಿನ ಕೊಳವೆಯಲ್ಲಿ ಹೆಚ್ಚುತ್ತಿರುವ ದ್ರವದ ಮಟ್ಟವನ್ನು ಕೊಳವೆಗೆ ಅಂಟಿಸಿರುವ ಮಾಪನದಲ್ಲಿ ಅಳೆಯಬೇಕೆನ್ನಿ. ಈಗ ಕೊಳವೆ ನೆಟ್ಟಗಿಲ್ಲದೆ ಸ್ವಲ್ಪ ವಾಲಿದ್ದರೆ, ಮಟ್ಟ ಹೆಚ್ಚಿದಷ್ಟೂ ನಾವು ತೆಗೆದುಕೊಳ್ಳುವ ಪ್ರತಿ ಅಳತೆಯಲ್ಲಿಯೂ ದೋಷ ಹೆಚ್ಚುತ್ತಲೇ ಇರುತ್ತದೆ. ಯಾವ ಪ್ರಯೋಗದಲ್ಲೇ ಆಗಲಿ ನಾವು ಉಪಯೋಗಿಸುವ ಉಪಕರಣಗಳಲ್ಲಿ ದೋಷವಿದ್ದಲ್ಲಿ ಆ ದೋಷ ನಾವು ತೆಗೆದುಕೊಳ್ಳುವ ಪ್ರತಿ ಅಳತೆಯಲ್ಲಿಯೂ ಇರುತ್ತದೆ. ಅದೂ ಅಲ್ಲದೆ ಒಬ್ಬ ಪ್ರಯೋಗಕಾರ ಒಂದು ರೀತಿಯಲ್ಲಿ ಅಳತೆ ಮಾಡಿದರೆ ಇನ್ನೊಬ್ಬ ಇನ್ನೊಂದು ರೀತಿಯಲ್ಲಿ ಅಳೆಯಬಹುದು. ಇಂಥ ದೋಷವನ್ನು ವೈಯಕ್ತಿಕ ದೋಷ ಎನ್ನುತ್ತಾರೆ.

ಒಂದು ಅತಿಸೂಕ್ಷ್ಮ ತುಲಾಯಂತ್ರವನ್ನು(ತಕ್ಕಡಿ) ಒಂದು ಗಾಜಿನ ಪೆಟ್ಟಿಗೆಯಲ್ಲಿಟ್ಟಿದ್ದೇವೆಂದುಕೊಳ್ಳಿ. ಈಗ ಇದರ ಸುತ್ತಮುತ್ತಲಿನ ಗಾಳಿಯಲ್ಲಿರುವ ಅಣುಗಳು ಯಾದೃಚ್ಛಿಕವಾಗಿ ಸಂಚರಿಸುತ್ತಿರುವುದರಿಂದ ಇವುಗಳು ತುಲಾಯಂತ್ರವನ್ನು ಘರ್ಷಿಸಿ ಅದರಲ್ಲಿ ಅತಿ ಸೂಕ್ಷ್ಮವಾದ ವ್ಯತ್ಯಾಸಗಳನ್ನುಂಟು ಮಾಡುತ್ತಿರುತ್ತವೆ. ಈ ವ್ಯತ್ಯಾಸಗಳು ಅತಿ ಸೂಕ್ಷ್ಮವಾದರೂ ಇವು ನಮ್ಮ ಅಳತೆಗೆ ಒಂದು ಮಿತಿಯನ್ನು ನಿರ್ದೇಶಿಸಿದಂತಾಯಿತು. ಇಂಥ ಯಾದೃಚ್ಛಿಕ ವ್ಯತ್ಯಾಸಗಳನ್ನು ಗದ್ದಲ (ನಾಯ್ಸ್) ಎಂದು ಕರೆಯುತ್ತಾರೆ.

ಅಳತೆಯ ದೋಷದ ಗಣನೆ: ಒಂದು ಪರಿಮಾಣದ ಸರಿಯಾದ ಬೆಲೆ $x_0$ ಮತ್ತು ಅದರ ಅಳೆದ ಬೆಲೆ x ಆಗಿದ್ದರೆ ನಮ್ಮ ಅಳತೆಯಲ್ಲಿನ ದೋಷ eಯನ್ನು $e = x - x_0$ ಎಂದು ಬರೆಯುತ್ತೇವೆ.

$x_0$ ಗಿಂತ x ಹೆಚ್ಚಾಗಿರಬಹುದು ಅಥವಾ ಕಡಿಮೆಯಿರಬಹುದು. ಅಂದರೆ e ಧನಸಂಖ್ಯೆ ಅಥವಾ ಋಣಸಂಖ್ಯೆ ಆಗಬಹುದು.

ಭಿನ್ನಾಂಶ ದೋಷ (ಫ್ರ್ಯಾಕ್‌ಷನಲ್ ಎರರ್), f ಅನ್ನು $f = \frac{e}{x_0} \sim \frac{e}{x}$ ಎಂದು ಬರೆಯುತ್ತೇವೆ. x ಮತ್ತು $x_0$ ಗಳು ಹತ್ತಿರ ಹತ್ತಿರವೇ ಇರುವುದರಿಂದ $f = \frac{e}{x}$ ಎಂದೇ ಬರೆಯಬಹುದು.

ಶೇಕಡ ದೋಷವನ್ನು ಎಂದು ಬರೆಯುತ್ತೇವೆ. ಒಂದು ಕಡ್ಡಿಯ ಉದ್ದದ ಅಳತೆಯನ್ನು ಹತ್ತು ಸಾರಿ ತೆಗೆದುಕೊಂಡಿದ್ದೇವೆಂದುಕೊಳ್ಳೋಣ. ಅವು $x_1, x_2$ ....... $x_{10}$ ಆಗಿರಲಿ. ಅವುಗಳ ಸರಾಸರಿ $\bar{x}$ ಆಗಿದ್ದರೆ

$$\bar{x} = \frac{\sum_{r=1}^{10} x_r}{10} = \frac{\sum_{r=1}^{10}(x_0 + e_r)}{10} = x_0 + \frac{\sum_{r=1}^{10} e_r}{10} = x_0 + e_0$$

ಆದ್ದರಿಂದ $x_0 = \bar{x} - e_0$ ಆಗಿರಲಿ.

$e_1, e_2, \ldots, e_{10}$ಗಳಲ್ಲಿ ಕೆಲವು ಧನಸಂಖ್ಯೆ ಆಗಿದ್ದರೆ ಕೆಲವು ಋಣ ಸಂಖ್ಯೆ ಆಗಿರಬಹುದು. ಆದ್ದರಿಂದ ಅವುಗಳ ಸರಾಸರಿ $e_0$ ಎಲ್ಲ ದೋಷಗಳಿಗಿಂತ ಕಡಿಮೆಯೇ ಆಗಿರುತ್ತದೆ. ಹೆಚ್ಚು ಹೆಚ್ಚು ಅಳತೆಗಳನ್ನು ತೆಗೆದುಕೊಂಡಷ್ಟೂ $e_0$ ಕಡಿಮೆ ಕಡಿಮೆಯಾಗುತ್ತಿರುತ್ತದೆ. ಆದರೆ ಪ್ರತಿ ದೋಷವೂ ನಮಗೆ ತಿಳಿದುದಲ್ಲ. ನಮ್ಮ ಅಳತೆಗಳಲ್ಲಿನ ಅಧಿಕತಮ ಮತ್ತು ಕನಿಷ್ಠತಮ ಬೆಲೆಗಳ ವ್ಯತ್ಯಾಸದ ಅರ್ಧ e ಆಗಿರಲಿ. ಈಗ e, $e_0$ ಗಿಂತ ಹೆಚ್ಚಾಗಿಯೇ ಇರುತ್ತದೆ. ಮತ್ತು e ಧನಸಂಖ್ಯೆ ಆಗಿರಬಹುದು ಅಥವಾ ಋಣಸಂಖ್ಯೆ ಆಗಿರಬಹುದು. ಆದ್ದರಿಂದ ನಾವು $x_0 = \bar{x} \pm e$ ಎಂದು ಬರೆಯಬಹುದು. ಉದಾಹರಣೆಗೆ, ಒಂದು ಸಾಮಾನ್ಯ ಲೋಲಕದ ಪ್ರಯೋಗದಲ್ಲಿ ಪ್ರತಿ 20 ಆಂದೋಳನಗಳಿಗೆ ಆಗುವ ಕಾಲವನ್ನು ಹತ್ತು ಸಾರಿ ಕಂಡುಹಿಡಿದಿದೆ. ಅವು ಈ ರೀತಿಯಿವೆ: 19, 19, 18, 20, 18, 19, 20, 20, 19, 18 ಸೆಕೆಂಡುಗಳು. ಸರಿಯಾದ ಸಮಯ 18 ಮತ್ತು 20 ಸೆಕೆಂಡುಗಳು ಮಧ್ಯೆ ಇದೆಯೆಂದು ಮೇಲಿನ ಅಳತೆಯ ಬೆಲೆಗಳು ತೋರಿಸುತ್ತವೆ. ಇವುಗಳ ಅಧಿಕತಮ ಮತ್ತು ಕನಿಷ್ಠತಮ ಬೆಲೆಗಳ ವ್ಯತ್ಯಾಸ 2 ಸೆಕೆಂಡುಗಳು ಮತ್ತು ಅವುಗಳ ಸರಾಸರಿ 19 ಸೆಕೆಂಡುಗಳು. ಆದ್ದರಿಂದ ನಾವು ಸರಿಯಾದ ಸಮಯ $x_0$ ಯನ್ನು ಈ ರೀತಿ ಬರೆಯಬಹುದು:

$x_0 = (19 \pm 1)$ ಸೆಕೆಂಡುಗಳು.




ಈ ಬೆಲೆಗಳ ಸಂಬಂಧವನ್ನು ಚಿತ್ರ 1 ರಲ್ಲಿ ತೋರಿಸಿದೆ.

ಮೇಲೆ ನಾವು ಅಧಿಕತಮ ಲೋಪವನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದೇವೆ. ನಾವು ತೆಗೆದುಕೊಳ್ಳುವ ಅನೇಕ ಅಳತೆಗಳಲ್ಲಿ ಈ ಅಧಿಕತಮ ಲೋಪವನ್ನೊಳಗೊಂಡ ಅಳತೆಗಳ ಸಂಖ್ಯೆ ಬಹಳ ಕಡಿಮೆ. ಆದ್ದರಿಂದ ನಾವು ತೆಗೆದುಕೊಳ್ಳುವ ಶೇಕಡ ಎಷ್ಟು ಲೋಪದ ವ್ಯಾಪ್ತಿಯೊಳಗೆ ಬರುತ್ತದೆ ಎನ್ನುವುದನ್ನು ತಿಳಿಯುವುದು ಅನುಕೂಲ.

ಒಂದು ಕಡ್ಡಿಯ ಉದ್ದವನ್ನು 100 ಸಾರಿ ಅಳೆಯುತ್ತೇವೆನ್ನೋಣ. ಇವುಗಳಲ್ಲಿ ಎಲ್ಲ ಅಳತೆಗಳೂ ಒಂದೇ ಬೆಲೆಯುಳ್ಳವುಗಳಲ್ಲ. ಕೆಲವು ಅಳತೆಗಳು 100' ಆಗಿದ್ದರೆ ಇನ್ನು ಕೆಲವು 99.5' ಮೀ. ಆಗಿರಬಹುದು. ಇವನ್ನು ಕೆಳಗೆ ಪಟ್ಟಿಮಾಡಿದೆ.

| **ಅಳತೆx** (ಸೆಂ.ಮೀ.) | **ಎಷ್ಟು ಸಾರಿ ಈ ಅಳತೆ ಬಂದಿತು (ಆವೃತ್ತಿ ಸಂಖ್ಯೆ)** $f$ | **ವ್ಯತ್ಯಾಸ (ಡೀವಿಯೇಷನ್)** $d = x - \bar{x}$ | $d^2$ | $fd^2$ | $fx$ |
|---|---|---|---|---|---|
| 98.0 | 3 | –2.0 | 4.00 | 12.00 | 294.00 |
| 98.5 | 9 | –1.5 | 2.25 | 20.25 | 886.5 |
| 99.0 | 8 | –1.0 | 1.00 | 8.00 | 792.00 |
| 99.5 | 10 | –0.5 | 0.25 | 2.5 | 995.0 |
| 100.0 | 32 | 0.0 | 0.00 | 0.00 | 3200.0 |
| 100.5 | 18 | +0.5 | 0.25 | 4.50 | 1809.0 |
| 101.0 | 11 | +1.0 | 1.00 | 11.00 | 1111.0 |
| 101.5 | 4 | +1.5 | 2.25 | 9.00 | 406.0 |
| 102.0 | 5 | +2.0 | 4.00 | 20.00 | 510.0 |
| **ಒಟ್ಟು 900.0** | **100** | – | – | **87.25** | **10003.5** |

ಸರಾಸರಿ $\bar{x} = \frac{\Sigma fx}{\Sigma f} = \frac{10003.5}{100} = 100.035$

ಆದ್ದರಿಂದ $\bar{x} - 100$

x ಗಳ ಸರಾಸರಿ ಪಟ್ಟಿಯಲ್ಲಿ ತೋರಿಸಿರುವಂತೆ $\bar{x} = 100$. ಪ್ರತಿ x ಮತ್ತು $\bar{x}$




ನ ನಡುವೆ ಇರುವ ವ್ಯತ್ಯಾಸವನ್ನು ವ್ಯತ್ಯಸ್ತ (ಡೀವಿಯೇಷನ್) ಎಂದು ಕರೆಯುತ್ತಾರೆ. ಪ್ರತಿ ಅಳೆತೆಯೂ ಎಷ್ಟೆಷ್ಟು ಬಾರಿ ಬರುತ್ತದೆಯೆಂಬುದನ್ನು ಆವೃತ್ತಿ ಸಂಖ್ಯೆ fಎಂದು ಕರೆಯುತ್ತಾರೆ. ಈಗ f ಮತ್ತು $(x - \bar{x})$ ಗಳನ್ನು ಒಂದು ಗ್ರ್ಯಾಫಿನಲ್ಲಿ ಗುರುತು ಮಾಡಿದರೆ ಚಿತ್ರ 2

ರಲ್ಲಿರುವಂತೆ ಕಾಣುತ್ತದೆ. ನಾವು ಅಳತೆಯನ್ನು 100 ಸಾರಿಯಲ್ಲದೆ ಸಾವಿರಾರು ಸಾರಿ ತೆಗೆದುಕೊಂಡು ಗ್ರಾಫಿನಲ್ಲಿ ಗುರುತಿಸಿದರೆ ಅದು ಚಿತ್ರ 2 ರಲ್ಲಿಯ ಮುರಿದ ವಕ್ರರೇಖೆಯನ್ನು ಹೋಲುತ್ತದೆ ಎಂದು ಸುಪ್ರಸಿದ್ಧ ಗಣಿತ ವಿದ್ವಾಂಸ ಕೆ.ಎಫ್. ಗೌಸ್ ತೋರಿಸಿದ್ದಾನೆ. ಈ ವಕ್ರರೇಖೆಯನ್ನು ಗೌಸನ ದೋಷರೇಖೆ (ಗೌಸಿಯನ್ ಎರರ್ ಕರ್ವ್) ಎಂದು ಕರೆಯುತ್ತಾರೆ ಇದರ ಸಮೀಕರಣ ಈ ರೀತಿಯಿದೆ:

$$f = Ae - \frac{1}{2\sigma^2}\left(x - \bar{x}\right)^2$$

ಇದರಲ್ಲಿ Aಯನ್ನು ನ ಆವೃತ್ತ ಸಂಖ್ಯೆ ಮತ್ತು σವನ್ನು ಪ್ರಮಾಣ ವ್ಯತ್ಯಸ್ತ (ಸ್ಟ್ಯಾಂಡರ್ಡ್ ಡೀವಿಯೇಷನ್) ಎಂದು ಕರೆಯುತ್ತಾರೆ.

ನಾವು ತೆಗೆದುಕೊಂಡ ಒಟ್ಟು ಅಳತೆಗಳಲ್ಲಿನ 68.3% ರಷ್ಟು ಅಳತೆಗಳು ಸರಾಸರಿಯಾಗಿ – σ ಮತ್ತು + σ ಇವುಗಳ ಮಧ್ಯೆ ಬರುತ್ತದೆ ಎಂದು ತೋರಿಸಬಹುದು. ಸಾಮಾನ್ಯವಾಗಿ ಅಳತೆಯ ನಿಖರತೆ – σ ಎನ್ನುತ್ತಾರೆ; ಗ್ರಾಫ್ ಎಳೆಯದೆಯೇ σ ನ್ನು ಈ ಕೆಳಗಿನ ಸಮೀಕರಣವನ್ನು ಉಪಯೋಗಿಸಿ ಕಂಡುಹಿಡಿಯಬಹುದು.

$$\sigma^2 = \frac{\sum_{r=1}^{n} f_r d_r^2}{\sum_{r=1}^{n} f_r}$$

ಮೇಲಿನ ಉದಾಹರಣೆಯಲ್ಲಿ

$$\sigma = \frac{87.25}{100} = 0.8725$$

ಅಂದರೆ $\sigma = 0.93$ ಆದ್ದರಿಂದ ಸರಿಯಾದ ಉದ್ದ

$x_0 = (100.00 \pm 0.93)$, ಸೆಂಮೀ (ಕೆ.ಜಿ.)

**ಅಳಲೆ ಮರ :** ಕಾಂಬ್ರಿಟೇಸೀ ಕುಟುಂಬಕ್ಕೆ ಸೇರಿದ ಔಷಧೀಯ ಮಹತ್ತ್ವದ ಮರ. ತಾರೆಮರ, ಮತ್ತಿಮರ, ಕಾಡುಬಾದಾಮಿ ಮರಗಳಿಗೆ ಹತ್ತಿರದ ಸಂಬಂಧಿ. ಸಸ್ಯವೈಜ್ಞಾನಿಕ ಹೆಸರು ಟರ್ಮಿನೇಲಿಯ ಚಬುಲ. ಇದು 25–40 ಮೀಟರ್ ಎತ್ತರ ಬೆಳೆಯುತ್ತದೆ. ರೆಂಬೆ, ಎಲೆ, ಮೊಗ್ಗುಗಳು ಎಳೆಯವಾಗಿರುವಾಗ ಅವುಗಳ ಮೇಲೆ ಕೂದಲುಗಳು ಬೆಳೆದುಕೊಂಡು ಹೊಳೆಯುತ್ತಿರುತ್ತವೆ. ಈ ಮರದ ಹೂಗೊಂಚಲಿನಲ್ಲಿ ತೊಟ್ಟಿಲ್ಲದ ಅನೇಕ ದ್ವಿಲಿಂಗ ಪುಷ್ಪಗಳಿರುತ್ತವೆ. ಅವು ಬಲಿತಮೇಲೆ ಕೂದಲುಗಳು ಉದುರಿ ಹೋಗುತ್ತವೆ. ಇಂಥ ಹೂಗೊಂಚಲಿಗೆ ಸ್ಪೈಕ್ ಅಥವಾ ತೆನೆ ಎಂದು ಹೆಸರು. ಇದು ಬಿಸಿಲಿನಾಸರೆಯ ಮರ. ದೀರ್ಘ ಶುಷ್ಕತೆಯನ್ನೂ ಹಿಮಶೈತ್ಯವನ್ನೂ ಸಹಿಸಬಲ್ಲದು. ಬೆಂಕಿಗೆ ಅಷ್ಟು ಜಾಗ್ರತೆ ಈಡಾಗುವುದಿಲ್ಲ. ಕತ್ತರಿಸಿದ ಮರದಿಂದ ಚಿಗುರು ಚೆನ್ನಾಗಿ ಒಡೆಯುವುದು.

ಒಣಗಿದ ಹಣ್ಣು ಜೀರ್ಣೋತ್ತೇಜಕ, ಜಲವರ್ಧಕ, ವಾತಹಾರಿ ಮತ್ತು ಕಫಹಾರಿ, ಆಮಶಂಕೆ, ಉಬ್ಬಸ, ಕೆಮ್ಮು, ದಮ್ಮು, ಗಂಟಲು ಉರಿ, ದಾಹ, ವಾಂತಿ, ಬಿಕ್ಕಳಿಕೆ, ಹೃದಯಬೇನೆ, ಕಣ್ಣುಬೇನೆ, ಉರಿಮೂತ್ರ, ಪಿತ್ತ ಕೆರಳುವಿಕೆ, ಬಾವು, ರಕ್ತಸೋರುವ ಮೂಲವ್ಯಾಧಿ, ಸನ್ನಿಪಾತ, ತೊನ್ನು, ಕಜ್ಜಿ, ಕಷ್ಟಶ್ವಾಸ, ಮಲಬದ್ಧತೆ, ರಕ್ತಹೀನತೆ, ಚಿತ್ತಭ್ರಮೆ, ಉನ್ಮಾದ ಮೊದಲಾದ ರೋಗಗಳಿಗೆ ಔಷಧಿ ತಯಾರಿಸಲು ಇದನ್ನು ಉಪಯೋಗಿಸುತ್ತಾರೆ.

ಅಳಲೆಕಾಯಿಯನ್ನು ಮಾಗುವ ಮೊದಲು ತಿಂದರೆ ಮಲಕಟ್ಟುತ್ತದೆ. ಇದನ್ನು ಆಮಶಂಕೆ, ಅತಿಸ್ರಾವಕ್ಕೆ ಉಪಯೋಗಿಸಬಹುದು. ಹಣ್ಣನ್ನು ತಿಂದರೆ ಭೇದಿಯಾಗುತ್ತದೆ. ಇದು ಶಕ್ತಿವರ್ಧಕ ಮತ್ತು ವಾತಹಾರಿ. ಗುಲ್ಮ (ಪ್ಲೀಹ) ರೋಗಗಳನ್ನೂ ಗುಣಪಡಿಸುತ್ತದೆ. ಜ್ಞಾಪಕಶಕ್ತಿಯನ್ನೂ ಹೆಚ್ಚಿಸುತ್ತದೆ. ಒಣಗಿದ ಹಣ್ಣನ್ನು ನುಣ್ಣಗೆ ಪುಡಿಮಾಡಿ ಚೂರ್ಣವಾಗಿ ಉಪಯೋಗಿಸುತ್ತಾರೆ. ಹಲ್ಲುಗಳಲ್ಲಿನ ರಕ್ತಸ್ರಾವಕ್ಕೂ ವಸಡುಗಳ ಗಾಯಕ್ಕೂ ಇದು ಗುಣಕಾರಿಯಾಗಿದೆ.

ಹಣ್ಣನ್ನು ಒರಟಾಗಿ ಪುಡಿಮಾಡಿ ಹೊಗೆಬತ್ತಿ ಮಾಡಿ ಸೇದುವುದರಿಂದ ಅಸ್ತಮ ಕೆಮ್ಮು ಕಡಿಮೆಯಾಗುತ್ತದೆ. ಹಣ್ಣಿನ ಕಷಾಯದಿಂದ ಗಾಯ ತೊಳೆದರೆ ರಕ್ತಸ್ರಾವ ನಿಲ್ಲುತ್ತದೆ. ಕಲ್ಲಿನ ಮೇಲೆ ಹಣ್ಣನ್ನು ತೇದು ಗಂಧವನ್ನು ಸುಟ್ಟಗಾಯ, ಹೊಪ್ಪಳೆಗೆ ಹಚ್ಚಿದರೆ ಗುಣವಾಗುತ್ತದೆ. ಒಂದು ರಾತ್ರಿ ಹಣ್ಣನ್ನು ನೆನೆಹಾಕಿ ಆ ನೀರಿನಿಂದ ಕಣ್ಣುತೊಳೆದರೆ ಕಣ್ಣುಗಳಿಗೆ ತಂಪಾಗುತ್ತವೆ. ಜಜ್ಜಿದ ಗಾಯ, ಉರಿಯುವ ಕುರು, ಹುಣ್ಣು ಮೊದಲಾದವುಗಳಿಗೆ ಹಣ್ಣನ್ನು ಪುಡಿಮಾಡಿ ಬೆಣ್ಣೆಯೊಡನೆ ಬೆರೆಸಿ ಹಚ್ಚಿದರೆ ಜಾಗ್ರತೆ ಗುಣವಾಗುತ್ತದೆ. ಅಳಲೆ ಮರದ ತೊಗಟೆಯನ್ನು ಸೇವಿಸಿದರೆ ಹೃದಯ ಶಕ್ತಿ ಹೆಚ್ಚುತ್ತದೆ ಮತ್ತು ಮೂತ್ರಸ್ರಾವವನ್ನು ಅಧಿಕಗೊಳಿಸುತ್ತದೆ. (ಎಚ್.ಎನ್.ಸಿ.; ಎ.ಕೆ.ಎಸ್.)

**ಅಳಸಿಂಗರಾಚಾರ್ಯ ದೇವಶಿಖಾಮಣಿ :** 1877–1940. ಕಳೆದ ತಲೆಮಾರಿನ ಪ್ರಸಿದ್ಧ ಲೇಖಕರು. ಮೇಲುಕೋಟೆಯಲ್ಲಿ ಜನನ. ತಂದೆ ತಿರುಮಲೈ ಅಯ್ಯಂಗಾರ್ಯರು ಅಲ್ಲಿಯ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಹುಟ್ಟೂರಿನಲ್ಲಿದ್ದ ವೇದಾಂತ ಬೋಧಿನಿ ಪಾಠಶಾಲೆಯಲ್ಲಿ ಅಳಸಿಂಗರಾಚಾರ್ಯರು ವ್ಯಾಸಂಗ ಮಾಡಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದರು. ಮೈಸೂರು ಮರಿಮಲ್ಲಪ್ಪ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಇವರು ಮುಂದೆ ಮದರಾಸಿನ ಕ್ರಿಶ್ಚಿಯನ್ ಕಾಲೇಜು ಮತ್ತು ಪ್ರೆಸಿಡೆನ್ಸಿ ಕಾಲೇಜುಗಳಲ್ಲೂ ಶಿಕ್ಷಕರಾಗಿದ್ದರು. ಮದರಾಸು ವಿಶ್ವವಿದ್ಯಾಲಯದ ಕನ್ನಡವ್ಯಾಸಂಗ ಸಮಿತಿಯ ಸದಸ್ಯರಾಗಿಯೂ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು (1932).

ಅಳಸಿಂಗರಾಚಾರ್ಯರು ಚಿಕ್ಕ ವಯಸ್ಸಿನಲ್ಲಿಯೇ ಕಾವ್ಯರಚನೆಯನ್ನು ಪ್ರಾರಂಭಿಸಿದ್ದರು. ಇವರ ಪ್ರಥಮ ಕೃತಿ ಚೆಲ್ವನಾರಾಯಣ ಶತಕಂ ಒಂದು ಪದ್ಯಗ್ರಂಥ. ಇದರ ಶೈಲಿ ವಿಶಿಷ್ಟವಾದುದು. ಶ್ರೀಮದ್ರಾಮಾಯಣ, ಶ್ರೀಮನ್ಮಹಾಭಾರತ, ಶ್ರೀಮದ್ಭಾಗವತ–ಈ ಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಗದ್ಯರೂಪವಾಗಿ ಭಾಷಾಂತರಿಸಿದ್ದಾರೆ. ಸ್ವಪ್ನವಾಸವದತ್ತ, ಪಂಚರಾತ್ರಗಳು ಇವರು ಮಾಡಿರುವ ಇತರ ಅನುವಾದಗಳು. ಘೋರ ಯುರೋಪು ಯುದ್ಧದ ಚರಿತ್ರೆ, ಪೌರನೀತಿ, ಪಂಚಭಾಷಾ ಪ್ರಹಸನ, ಯುದ್ಧದ ಅನುಭವಗಳು–ಇವರ ಇತರ ಕೃತಿಗಳು. ಇವರ ಗದ್ಯಶೈಲಿ ಸರಳವಾಗಿದ್ದು ಆಕರ್ಷಕವಾಗಿದೆ.

ಸರಳಜೀವಿಗಳೂ ವಿನಯಶೀಲರೂ ಆಗಿದ್ದು, ತಮ್ಮ ಪಾಂಡಿತ್ಯ ಮತ್ತು ಪ್ರತಿಭೆಗಳಿಂದ ಸಮಕಾಲೀನರ ಗೌರವಕ್ಕೆ ಪಾತ್ರರಾಗಿದ್ದ ಇವರು 1940 ಡಿಸೆಂಬರ್ 12ರಂದು ನಿಧನರಾದರು. (ಎನ್.ಎ.ಆರ್.)

**ಅಳಿಕೊಳಪು :** ಮೈಯಲ್ಲಿ ಎಲ್ಲಾದರೂ ಒಂದೆಡೆಯ ಊತಕ (ಟಿಷ್ಯೂ) ಸತ್ತರೆ ಅದೇ ಅಳಿಕೊಳಪು (ಗ್ಯಾಂಗ್ರಿನ್). ಕೈಕಾಲುಗಳಲ್ಲಿ ಸಾಮಾನ್ಯವಾದರೂ ಪೆಟ್ಟುಗಳು, ಉರಿತ, ಅನುವಳಿಕೆಗಳಿಂದ (ಡಿಜನರೇಷನ್ಸ್) ಆ ಭಾಗದ ರಕ್ತ ಪೂರೈಕೆಗೆ ಆತಂಕವಾಗಿ ಪುಪ್ಪಿಗೆಟ್ಟು ಹೀಗಾಗುತ್ತದೆ. ಕುರುಗಳು, ಹಿಮಗಚ್ಚು (ಫ್ರಾಸ್ಟ್‌ಬೈಟ್), ಜಜ್ಜುಗಾಯಗಳು, ಸಿಹಿಮೂತ್ರ, ಕ್ಷಯ, ಉಪದಂಶ (ಸಿಫಿಲಿಸ್), ರೇನಾಡನ ರೋಗ, ಕೂಡ್ಗರಣಿನಾಳುರಿತದ ಮುಚ್ಚಿಗೆ (ಬರ್ಜರನ ರೋಗ: ತ್ರಾಂಬೋ ಆಂಜಿಯೈಟಿಸ್ ಆಬ್ಲಿಟರಾನ್ಸ್), ಸೂಕ್ಕಿನ (ಟೈಫಸ್) ಜ್ವರ, ಧಮನಿಪೆಡಸಣೆ (ಆರ್ಟೀರಿಯೋಸ್ಕ್ಲೀರೋಸಿಸ್) ಈ ಬೇನೆಗಳಲ್ಲಿ ಅಳಿಕೊಳಪು ಆಗುವುದು ಸಾಮಾನ್ಯ. ಆಳವಾಗಿ ಸುಟ್ಟಗಾಯ ಆದಾಗಲೂ ತಿಂಗಳುಗಟ್ಟಲೆ ಹಾಸಿಗೆ ಹಿಡಿದಾಗಲೂ (ಕುಂಟುಹುಣ್ಣು; ಬೆಡ್‌ಸೋರ್) ಆಗಬಹುದು. ಸತ್ತಿರುವ ಮೆತ್ತನೆಯ ಭಾಗ ಗೋಚು (ಸ್ಲಫ್), ಸತ್ತಿರುವ ಮೂಳೆ ಚೂರು ಹೊರಚಿಕ (ಸೆಕ್ವೆಸ್ಟ್ರಂ) ಹಾಸಿಗೆ ಹುಣ್ಣು. ಇವನ್ನು ಕಿತ್ತುಹಾಕಿದರೇ ಹುಣ್ಣು ಮಾಯುವುದು. ಅಳಿಕೊಳಪು ಒಣಕಲಾಗಿರಬಹುದು. ಇಲ್ಲವೇ ತೇವಗೂಡಿರಬಹುದು. ಜೊತೆಗೆ ಸೋಂಕು ಹತ್ತಿ ವಿಷವೇರುವುದರಿಂದ, ತೇವಗೂಡಿದ್ದರೆ ಬಲು ಅಪಾಯಕರ. ಕರುಳಲ್ಲೂ ಪುಪ್ಪುಸದಲ್ಲೂ ಹೀಗಾದರೆ ಪ್ರಾಣಕ್ಕೆ ಸಂಚಕಾರ. ಒಣಕಲಾಗಿ ಇರುವುದನ್ನು ತೇವಗೂಡದಂತೆ ನೋಡಿಕೊಳ್ಳುವುದು ಬಲು ಮುಖ್ಯ. ಅನಿಲದ ಅಳಿಕೊಳಪು (ಗ್ಯಾಸ್ ಗ್ಯಾಂಗ್ರಿನ್) ಕ್ಲಾಸ್ಟ್ರಿಡಿಯಂ ಗುಂಪಿನ ಅನಿಲದ ದಂಡಾಣುಜೀವಿಯಿಂದಾದ ಸೋಂಕು. ಗಾಯದ ಆಳದಲ್ಲಿ ಅಮ್ಲಜನಕ ಇಲ್ಲದೆಡೆ ಈ ಸೋಂಕು ಹೆಚ್ಚು, ಅಳಿಕೊಳಪಿನ ಚಿಕಿತ್ಸೆ ಅದರ ಕಾರಣಕ್ಕೆ ತಕ್ಕಂತಿರಬೇಕು. (ಡಿ.ಎಸ್.ಎಸ್.)

**ಅಳಿಗೊಳೆತ :** ರೋಗಶಾಸ್ತ್ರದಲ್ಲಿ, ಆರೋಗ್ಯವಾಗಿರುವ ಭಾಗಗಳ ನಡುವೆ ಒಂದು ಗೊತ್ತಾದೆಡೆಯಲ್ಲಿ ಚಿಕ್ಕದಾಗಿ ಅಂಗಾಂಶ (ಟಿಷ್ಯೂ) ಇಲ್ಲವೇ ಮೂಳೆ ಸತ್ತು ಕೊಳೆತಿರುವುದು (ನೆಕ್ರೋಸಿಸ್). ದೊಡ್ಡ ಭಾಗಗಳಲ್ಲೂ ಗೊತ್ತಾದ ಭಾಗಗಳಲ್ಲೂ ಸತ್ತು ಕೊಳೆತಿದ್ದರೆ ಅಳಿಕೊಳೆಪು ಎನ್ನುವುದು ರೂಢಿ, ಆದರೂ ರಕ್ತದ ಹರವಿಗೆ ತುಸು ಆತಂಕವಾದರೂ ಸಾಯುವ ಮೂಳೆ ಸತ್ತು ಕೊಳೆತಿರುವುದಕ್ಕೇ ಹೆಚ್ಚು ಅನ್ವಯ. ಒಂದೆಡೆಯ ರಕ್ತಪೂರೈಕೆಗೆ ತಡೆ, ಪೆಟ್ಟುಗಳು, ವಿಕಿರಣತೆ, ವಿದ್ಯುತ್ತು, ಹೊರಗಿನ ಇಲ್ಲವೇ ಮೈಯಲ್ಲೇ ಹುಟ್ಟುವ ವಿಷಕಾರಕಗಳು, ಏಕಾಣುಜೀವಿಗಳ ಜೀವವಿಷಗಳು (ಟಾಕ್ಸಿನ್) ಇವೆಲ್ಲ ಕಾರಣಗಳು. ಅಳಿಗೊಳೆತದ ಲಕ್ಷಣಗಳಿಗೆ ಕಾರಣ, ಜೀವಕಣಗಳನ್ನು ತಿಂದು ಕರಗಿಸುವ ಕಿಣ್ವಗಳು (ಎಂಜೈಮುಗಳು). ಕಾರಣಗಳಿಗೆ ತಕ್ಕ ಚಿಕಿತ್ಸೆಯಾಗಿ ಕೊಳೆತಿರುವುದನ್ನು ತೆಗೆದರೆ ಗುಣ. (ಡಿ.ಎಸ್.ಎಸ್.)

**ಅಳಿಯ ಲಿಂಗರಾಜ :** 1823–74. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಚಂಪೂ, ಸಾಂಗತ್ಯ, ಷಟ್ಪದಿ, ಯಕ್ಷಗಾನ, ಶತಕ, ಹಾಡು, ಲಾವಣಿ ಮೊದಲಾಗಿ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಗ್ರಂಥಗಳನ್ನು ರಚಿಸಿದ ಕವಿ. ಮೈಸೂರು ರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಪೋಷಣೆಯಲ್ಲಿ ವಿದ್ಯಾವಂತನಾದವ. ರಾಜರು ದೊಡ್ಡಪುಟ್ಟತಾಯಮ್ಮಣ್ಣಿ, ಚಿಕ್ಕಪುಟ್ಟತಾಯಮ್ಮಣ್ಣಿ ಎಂಬಿಬ್ಬರನ್ನು ಇವನಿಗೆ ಕೊಟ್ಟು ಮದುವೆ ಮಾಡಿದ್ದುದರಿಂದ ಅಳಿಯ ಲಿಂಗರಾಜ ಎಂಬ ಹೆಸರು ಬಂತು. ಈತನ ತಂದೆ ಲಿಂಗರಾಜ, ತಾಯಿ ಕೆಂಪದೇವಾಂಬಿಕೆ. ಉಭಯಕವಿತಾವಿಶಾರದ ಎಂಬುದು ಈತನ ಬಿರುದು. ಈತ ಹರಿಹರ, ರಾಘವಾಂಕ, ದೇವೇಶ್ವರ ನಾಗವರ್ಮ ಮೊದಲಾದ ಪೂರ್ವಕವಿಗಳನ್ನು ಸ್ತುತಿಸಿದ್ದಾನೆ. ಅಂಗದಸಂಧಾನ, ಇಂದ್ರಕೀಲ, ಕುಶಲವರ ಕಥೆ, ಕೃಷ್ಣಬಾಲಲೀಲೆ, ಕೃಷ್ಣಾರ್ಜುನರ ಕಾಳಗ,

ಗಯಚರಿತ್ರ, ಗಿರಿಜಾಕಲ್ಯಾಣ, ಚಂದ್ರಾವಳಿ ಕಥೆ, ಚಂದ್ರಾವಳಿಯ ಜೋಗಿ ಹಾಡು, ಚಿಕ್ಕ ಪಟ್ಟಾಭಿಷೇಕ, ಚೂಡಾಮಣಿ, ಜಲಂಧರ ಕಾಳಗ, ತಾರಕವಧೆ, ದ್ರೌಪದೀ ಸ್ವಯಂವರ, ನರಪತಿಚರಿತೆ, ನಳಕೂಬರವಿಲಾಸ, ನಳಚರಿತ್ರೆ, ಪಂಚವಿಂಶತಿಲೀಲೆ, ಪಾರಿಜಾತಾಪಹರಣ, ಪುತ್ರಕಾಮೇಷ್ಟಿ, ಪ್ರಭಾವತೀ ಪರಿಣಯ, ಬಭ್ರುವಾಹನ ಕಾಳಗ, ಬಾಲಲೀಲೆ, ಮಕರಾಂಕಸೇನ ಕಥೆ, ಮದಾಲಸಾಪರಿಣಯ, ಮಹಾಲಿಂಗಶತಕ, ಮೈರಾವಣ ಕಥೆ, ಮೋಡಿನಾಟಕ, ರಾಮೋದಯಕಥೆ, ರುಕ್ಮಾಂಗದಚರಿತ್ರೆ, ಲಾವಣಿಗಳು, ವನವಾಸರಾಮಾಯಣ, ವಾಲಿ ಸುಗ್ರೀವರ ಕಾಳಗ, ವಿರಾಟಪರ್ವ, ವೀರಭದ್ರಶತಕ, ಶೃಂಗಾರಸಬೊತ್ತೋದಾಹರಣಪದ, ಸೀತಾಕಲ್ಯಾಣ, ಸೀತಾಪಹಾರ, ಸೀತಾಸ್ವಯಂವರ, ಸುಧನ್ವನ ಕಾಳಗ, ಸೇತುಬಂಧ, ಸ್ಯಮಂತಕೋಪಾಖ್ಯಾನ–ಇವು ಈತನ ಕೃತಿಗಳು. ಇವಲ್ಲದೆ ಶಿವಭಕ್ತಿರತ್ನಾಕರ, ಮಹಾಲಿಂಗನಕ್ಷತ್ರಮಾಲಿಕೆ, ಶ್ರೀಕಂಠನಕ್ಷತ್ರಮಾಲಿಕೆ, ವೀರೇಶ ತಾರಾವಳಿ, ಲಂಕಾದಹನ ಎಂಬ ಗ್ರಂಥಗಳನ್ನು ರಚಿಸಿರುವನೆಂದು ಕೆಲವು ವಿದ್ವಾಂಸರ ಅಭಿಪ್ರಾಯ.

ಗಯಚರಿತೆ ಮತ್ತು ನಳಕೂಬರ ವಿಳಾಸಗಳು ಚಂಪೂ ಹಾಗೂ ಯಕ್ಷಗಾನ ರೂಪಗಳಲ್ಲಿ ರಚಿತವಾಗಿವೆ. ನರಪತಿಚರಿತವೆಂಬ ಚಂಪೂ ಒಂದು ಅಲಂಕಾರ ಗ್ರಂಥ. ಪ್ರಭಾವತೀ ಪರಿಣಯ ವಾರ್ಧಕ ಷಟ್ಪದಿಯಲ್ಲೂ ವೀರಭದ್ರಶತಕ ವೃತ್ತರೂಪದಲ್ಲೂ ಮಹಾಲಿಂಗಶತಕ ಕಂದರೂಪದಲ್ಲೂ ಇವೆ. ಉಳಿದವುಗಳಲ್ಲಿ ಹಾಡುಗಳನ್ನೂ ಲಾವಣಿಗಳನ್ನೂ ಬಿಟ್ಟರೆ ಮಿಕ್ಕೆಲ್ಲವೂ ಯಕ್ಷಗಾನ ರೂಪವಾಗಿವೆ. ಈತನ ಕಾವ್ಯರಚನೆ ಬಹುಮುಖವಾಗಿದ್ದರೂ ಅವುಗಳಲ್ಲಿನ ಕಾವ್ಯಮೌಲ್ಯ ಅಷ್ಟೇನೂ ಹಿರಿದಲ್ಲ. (ಬಿ.ಎಸ್.ಎಸ್.)

**ಅಳಿಯ ಸಂತಾನ :** ಆಸ್ತಿಯ ಒಡೆತನದಲ್ಲಿ ಸ್ತ್ರೀಗೆ ಪ್ರಾಧಾನ್ಯ ನೀಡುವ ಒಂದು ಸಾಮಾಜಿಕ ಏರ್ಪಾಡು. ಇದು ದಕ್ಷಿಣ ಕನ್ನಡ ಜಿಲ್ಲೆಯ ಜೈನ ಮತ್ತು ಕೆಲವು ಹಿಂದೂ ಪಂಗಡಗಳಲ್ಲಿ ಬಳಕೆಯಲ್ಲಿರುವ ಪದ್ಧತಿ. ಈ ಪದ್ಧತಿಗೆ ಅನುಗುಣವಾಗಿ ಆಸ್ತಿಯ ಮೇಲಿನ ಹಕ್ಕು ಹೆಣ್ಣುಮಕ್ಕಳ ಸಂತಾನಕ್ಕೇ ಮೀಸಲಾಗಿರುತ್ತದೆ. ಹೀಗಾಗಿ, ಅಳಿಯ ಸಂತಾನ-ಸ್ತ್ರೀಯ ಮಕ್ಕಳು ಮತ್ತು ಆಕೆಯ ಹೆಣ್ಣುಮಕ್ಕಳ ಮಕ್ಕಳು ಮಾತ್ರವೇ ಆಕೆಯ (ಅಂದರೆ ಅಳಿಯ ಸಂತಾನಸ್ತ್ರೀಯ) ಕುಟುಂಬ ಎನ್ನಿಸಿಕೊಳ್ಳುತ್ತಾರೆ. ಗಂಡು ತನ್ನ ತಾಯಿಯ ಕುಟುಂಬದ ಸದಸ್ಯನಾದರೂ ಆತನ ಹೆಂಡತಿ ಮತ್ತು ಮಕ್ಕಳು ಆ ಕುಟುಂಬದ ಸದಸ್ಯರಲ್ಲ. ಮಲಬಾರ್, ಕೊಚ್ಚಿನ್ ಮತ್ತು ತಿರುವಾಂಕೂರ್ ಪ್ರದೇಶಗಳನ್ನೊಳಗೊಂಡಿರುವ ಕೇರಳ ರಾಜ್ಯದಲ್ಲಿ ಪ್ರಚಲಿತವಾಗಿರುವ ಮರುಮಕ್ಕತ್ತಾಯಮ್ ಎಂಬ ಪದ್ಧತಿಯನ್ನು ಅಳಿಯ ಸಂತಾನ ಬಹುಮಟ್ಟಿಗೆ ಹೋಲುತ್ತದೆ. ಆದರೆ ಅಳಿಯ ಸಂತಾನ ಮತ್ತು ಮರುಮಕ್ಕತ್ತಾಯಮ್ ಪದ್ಧತಿಗಳಲ್ಲಿ ಹಲವಾರು ಭೇದಗಳಿವೆ. ಅಳಿಯ ಸಂತಾನದ ಪದ್ಧತಿಯಲ್ಲಿ ಕುಟುಂಬದ ವ್ಯವಸ್ಥೆ ಮತ್ತು ಕುಟುಂಬದ ಆಸ್ತಿಯ ಮೇಲ್ವಿಚಾರಣೆಯ ಹೊಣೆ ಸಾಮಾನ್ಯವಾಗಿ ಆ ಕುಟುಂಬದ ಹಿರಿಯ ಗಂಡು ಅಥವಾ ಹೆಣ್ಣುಮಗಳದೇ ಆಗಿರುತ್ತದೆ. ಮರುಮಕ್ಕತ್ತಾಯಮ್ ಪದ್ಧತಿಯಲ್ಲಿ ಈ ಹೊಣೆ ಹಿರಿಯ ಗಂಡುವ್ಯಕ್ತಿಯದೇ ಆಗಿರುತ್ತದೆ. ಇನ್ನೊಂದು ಸಣ್ಣ ವ್ಯತ್ಯಾಸವೂ ಉಂಟು. ಅಳಿಯ ಸಂತಾನ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿ ಸ್ವಂತ ದುಡಿಮೆಯಿಂದ ತಾನು ಸಂಪಾದಿಸಿದ ಆಸ್ತಿಗಳನ್ನು ಮರಣಶಾಸನದ ಮೂಲಕ ತನ್ನ ಇಚ್ಛೆ ಬಂದಂತೆ ವಿಲೇವಾರಿ ಮಾಡದೆ ಇದ್ದ ಪಕ್ಷದಲ್ಲಿ ಆ ಆಸ್ತಿಗಳೆಲ್ಲ ಆತನ ವಂಶದರಿಗೇ ಸೇರುತ್ತದೆ; ಆದರೆ ಮಲಬಾರಿನಲ್ಲಿ ಇದು ಸಂಪೂರ್ಣ ಕುಟುಂಬದ ಆಸ್ತಿಯಾಗುತ್ತದೆ.

1949ರ ಮದ್ರಾಸ್ ಅಳಿಯ ಸಂತಾನ ಶಾಸನದ ಮೂಲಕ ಅಳಿಯ ಸಂತಾನ ಪದ್ಧತಿಯಲ್ಲಿ ಶಾಸನಬದ್ಧವಾದ ಬದಲಾವಣೆಯನ್ನು ಜಾರಿಗೆ ತರುವವರೆಗೆ, ಕುಟುಂಬದ ಎಲ್ಲ ವಯಸ್ಕ ಸದಸ್ಯರ ಅನುಮತಿ ದೊರೆತ ಹೊರತು, ಕುಟುಂಬದ ಆಸ್ತಿಯನ್ನು ಪಾಲುಮಾಡಲು ಸಾಧ್ಯವಿರಲಿಲ್ಲ. ಎಲ್ಲ ಸಂದರ್ಭಗಳಲ್ಲಿಯೂ ಈ ನಿಯಮವನ್ನು ಪಾಲಿಸಲಾಗುತ್ತಿದ್ದಿತೆಂದು ಹೇಳಲು ಬರುವಂತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯಾಲಯಗಳಲ್ಲಿ ನಡೆದಿರುವ ಸುಮಾರು 1820 ಮೊಕದ್ದಮೆಗಳನ್ನು ಗಮನಿಸಿದರೆ ಮೂಲವ್ಯಕ್ತಿಯ ಸೂತ್ರದ (ಪ್ರಿನ್ಸಿಪಲ್ ಆಫ್ ಪರ್ ಸ್ಟರ್ಪ್ಸ್) ಆಧಾರದ ಮೇಲೆ ಆಸ್ತಿಯನ್ನು ಪಾಲು ಮಾಡುತ್ತಿದ್ದುದು ಕಂಡುಬರುತ್ತದೆ. ಅಂದರೆ, ಒಂದು ಕುಟುಂಬದಲ್ಲಿ ನಾಲ್ವರು ಹೆಣ್ಣುಮಕ್ಕಳು ಇದ್ದು, ಪ್ರತಿಯೊಬ್ಬರಿಗೂ ಅವರವರ ಸಂತಾನ ಅಥವಾ ಶಾಖೆ ಅಥವಾ ಕವರು ಇದ್ದರೆ, ಆ ಒಂದೊಂದು ಉಪವಂಶಕ್ಕೂ ಒಂದು ಭಾಗ ಅಥವಾ ಆ ಪ್ರಸಂಗಕ್ಕನುಗುಣವಾಗಿ ಕಾಲುಭಾಗ ಆಸ್ತಿ ದೊರೆಯುತ್ತಿತ್ತು. ಆದರೆ, ಕಾಲಾಂತರದಲ್ಲಿ ಮಲಬಾರ್ ಪ್ರಾಂತ್ಯಕ್ಕೆ ಸಂಬಂಧಿಸಿದ ಒಂದೊಂದು ಮೊಕದ್ದಮೆಗಳ ವಿಚಾರದಲ್ಲಿ ಮದ್ರಾಸ್ ಹೈಕೋರ್ಟಿನ ತೀರ್ಪಿನ ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ನ್ಯಾಯಾಲಯಗಳೂ ಮಲಬಾರ್ ಪ್ರಾಂತ್ಯದಲ್ಲಿ ಪ್ರಚಲಿತವಾಗಿದ್ದ ಕಾಯಿದೆಗಳನ್ನೇ ಅನುಸರಿಸಬೇಕಾಗಿ ಬಂದಿತು. ಹೀಗಾಗಿ, ಅಳಿಯ ಸಂತಾನ ವ್ಯವಸ್ಥೆಯಲ್ಲಿಯೂ ಆಸ್ತಿಯ ಅವಿಭಾಜ್ಯತ್ವದ ಸೂತ್ರ (ಪ್ರಿನ್ಸಿಪಲ್ ಆಫ್ ಇಂಪಾರ್ಟಿಬಿಲಿಟಿ) ರೂಢಮೂಲವಾಯಿತು. ಆದರೆ ಕುಟುಂಬಗಳು ಅಡ್ಡಾದಿಡ್ಡಿಯಾಗಿ ಬೆಳೆದು ಸಾಮೂಹಿಕ ಜೀವನ ಮತ್ತು ಆಸ್ತಿಯ ಉಪಭೋಗ ಅನನುಕೂಲಕರವಾಗಿ ಪರಿಣಮಿಸಿದಾಗ, ಅಂಥ, ಕುಟುಂಬಗಳ ವಯಸ್ಕ ಸದಸ್ಯರು ಕರಾರು ಅಥವಾ ಒಪ್ಪಂದಗಳನ್ನು ಮಾಡಿಕೊಂಡು ಅನುಕೂಲ ಮತ್ತು ಉಪಭೋಗದ ದೃಷ್ಟಿಯಿಂದ ತಮ್ಮ ಆಸ್ತಿಗಳನ್ನು ಪಾಲುಮಾಡಿಕೊಂಡಂಥ ಅನೇಕ ಉದಾಹರಣೆಗಳು ಕಾಣಬರುತ್ತವೆ.

20ನೆಯ ಶತಮಾನದ ಪ್ರಾರಂಭದಲ್ಲಿ ಮತ್ತು ಅದಕ್ಕೆ ಹಿಂದೆ ಈ ಕುಟುಂಬಗಳ ಉಸ್ತುವಾರಿ ಸಮರ್ಪಕವಾಗಿ ನಡೆಯುತ್ತಿದ್ದಿತು. ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದವರು ದೂರದೃಷ್ಟಿಯಿಂದ ಕೆಲಸಮಾಡುತ್ತಿದ್ದರು. ಮೇಲ್ವಿಚಾರಕರ ನಿಷ್ಠೆಯಿಂದಾಗಿ ಕುಟುಂಬದ ಆಸ್ತಿ ಹೆಚ್ಚಾಗುತ್ತಾ ಹೋಗುತ್ತಿದ್ದಿತು. ಮೇಲ್ವಿಚಾರಕರು ತಾವೇ ಯಜಮಾನರಾಗಿರುತ್ತಿದ್ದರು. ಅಥವಾ ಆಯಾಕಾಲದಲ್ಲಿ ಯಜಮಾನಿಯರಾಗಿರುತ್ತಿದ್ದ ತಮ್ಮ ತಾಯಂದಿರಿಗೊ ಅಥವಾ ಸೋದರಿಯರಿಗೊ ನೆರವಾಗುತ್ತಿದ್ದರು. ಕುಟುಂಬದ ಕಿರಿಯ ಸದಸ್ಯರು ಕೂಡ ಕುಟುಂಬದ ಆಸ್ತಿಯನ್ನು ರೂಢಿಸುವುದರಲ್ಲಿ ನೆರವಾಗುತ್ತಿದ್ದರು. ಆದರೆ ಕಾಲಕಳೆದಂತೆ ಮೇಲ್ವಿಚಾರಕರು ಆ ಕುಟುಂಬದಲ್ಲಿ ವಾಸಿಸುತ್ತಿದ್ದ ತಮ್ಮ ಹೆಂಡತಿ, ಮಕ್ಕಳ ವಿಚಾರದಲ್ಲಿ ಹೆಚ್ಚು ಪ್ರೀತಿ ಮತ್ತು ನಿಷ್ಠೆಯನ್ನು ತೋರತೊಡಗಿದರು. ತಮ್ಮ ಭಾವಮೈದುನ, ಅತ್ತಿಗೆ, ನಾದಿನಿಯರ ವಿಚಾರದಲ್ಲಿ ಉಪೇಕ್ಷೆಯುಂಟಾದುದರ ಪರಿಣಾಮ ಆ ಕುಟುಂಬದ ಸದಸ್ಯರಲ್ಲಿ ತೀವ್ರವಾದ ಅತೃಪ್ತಿ ಬೆಳೆಯತೊಡಗಿತು. ಕಿರಿಯ ಸದಸ್ಯರ ಹಿತವನ್ನು ಉಪೇಕ್ಷಿಸಲಾಯಿತು. ಇಂಥ ಪ್ರಸಂಗಗಳು ಹೆಚ್ಚಾಗತೊಡಗಿದಾಗ, ಕುಟುಂಬದ ಕಿರಿಯ ಸದಸ್ಯರು ತಮ್ಮ ಜೀವನೋಪಾಯಕ್ಕಾಗಿ ನ್ಯಾಯಾಲಯಗಳಿಗೆ ಶರಣು ಹೋಗಬೇಕಾಯಿತು. ಈ ಶತಮಾನದ ಮೊದಲ ವರ್ಷಗಳಲ್ಲಿ ಕುಟುಂಬದ ಮೇಲ್ವಿಚಾರಕ ತಾನೇ ಸರ್ವಾಧಿಕಾರಿಯಾಗಿ ಪರಿಣಮಿಸಿದ. ಅನ್ನ ಬಟ್ಟೆ ಮತ್ತು ವಸತಿಯನ್ನು ಪಡೆದುಕೊಳ್ಳುವುದು ಮಾತ್ರ ಕಿರಿಯ ಸದಸ್ಯರ ಸಾಮಾನ್ಯ ಹಕ್ಕಾಗಿತ್ತು. ತಾವು ಕುಟುಂಬದಿಂದ ಬೇರೆಯಾಗಿ ಜೀವಿಸಲು ಮತ್ತು ಜೀವನೋಪಾಯವನ್ನು ಕೇಳಲು ಕಾರಣಗಳೇನೆಂಬುದನ್ನು ಅವರು ಸರಿಯಾಗಿ ಸಮರ್ಥಿಸಿಕೊಳ್ಳಬೇಕಾಗುತ್ತಿತ್ತು. ಆದರೆ, ಹೆಚ್ಚು ಮುಂದುವರಿದ ಪ್ರಾಂತ್ಯವಾಗಿರುವ ಮಲಬಾರ್ ಪ್ರಾಂತ್ಯಕ್ಕೆ ಸಂಬಂಧಿಸಿದ ಅನೇಕಾನೇಕ ಮೊಕದ್ದಮೆಗಳು ಮದ್ರಾಸ್ ಹೈಕೋರ್ಟಿನ ಮುಂದೆ ಬರತೊಡಗಿದವು. ಮರುಮಕ್ಕತ್ತಾಯಮ್ ನಿಯಮಕ್ಕೊಳಪಟ್ಟಿದ್ದ ಅನೇಕ ನ್ಯಾಯಾಧೀಶರುಗಳೂ ಈ ಮೊಕದ್ದಮೆಗಳಿಗೆ ಹೆಚ್ಚುಹೆಚ್ಚು ಔದಾರ್ಯದಿಂದ ಪುರಸ್ಕಾರ ನೀಡುತ್ತ ಬಂದರು. ಕುಟುಂಬದ ಯಜಮಾನರಂತೆಯೇ ಕುಟುಂಬದ ಕಿರಿಯ ಸದಸ್ಯರುಗಳೂ ಕುಟುಂಬದ ಆಸ್ತಿಗೆ ಒಡೆಯರು ಎಂಬ ನಿಲುವನ್ನು ನ್ಯಾಯಾಲಯಗಳು ತಳೆದುವು. ಮಲಬಾರ್ ಪ್ರಾಂತ್ಯ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೀವನೋಪಾಯಕ್ಕೆ ಸಂಬಂಧಿಸಿದ ಹಾಗೂ ಉಸ್ತುವಾರಿಕೆಯನ್ನು ಸರಿಯಾಗಿ ನೆರವೇರಿಸದೆ ಇರುವಂಥ ಯಜಮಾನನನ್ನು ಅವರ ಸ್ಥಾನದಿಂದ ಕಿತ್ತುಹಾಕಿ, ಆ ಸ್ಥಾನಕ್ಕೆ ಕುಟುಂಬದ ಮತ್ತೊಬ್ಬ ಹಿರಿಯನನ್ನು ಯಜಮಾನನನ್ನಾಗಿ ನೇಮಿಸಬೇಕೆಂಬ ಬೇಡಿಕೆಯ ಮೊಕದ್ದಮೆಗಳು ದಿನನಿತ್ಯದ ಘಟನೆಗಳಾಗಿ ಪರಿಣಮಿಸಿದವು. ಈ ಮೊದಲು ಉಲ್ಲೇಖಿಸಲಾದ 1949ರ ಮದ್ರಾಸ್ ಅಳಿಯ ಸಂತಾನ ಶಾಸನವನ್ನು ಜಾರಿಗೆ ತರುವುದಕ್ಕೆ ಒಂದೆರಡು ದಶಕಗಳ ಹಿಂದೆ ಕುಟುಂಬದ ಆಸ್ತಿಪಾಸ್ತಿ ಮತ್ತು ಮೇಲ್ವಿಚಾರಣೆಯ ವಿಷಯದಲ್ಲಿ ಆ ಕುಟುಂಬಗಳ ಕಿರಿಯ ಸದಸ್ಯರ ಅತೃಪ್ತಿ ಮುಗಿಲು ಮುಟ್ಟಿದುದರ ಪರಿಣಾಮವಾಗಿ ಮದ್ರಾಸ್ ಶಾಸನ ಸಭೆ ಮೇಲ್ಕಂಡ ಶಾಸನವನ್ನು ಜಾರಿಗೆ ತರಬೇಕಾಯಿತು.

ಈ ಶಾಸನ ಮೊಟ್ಟಮೊದಲಬಾರಿಗೆ ಅನಿವಾರ್ಯ ವಿಭಜನೆಯ ತತ್ತ್ವವನ್ನು ಜಾರಿಗೆ ತಂದಿತು. ಈ ಶಾಸನಕ್ಕನುಗುಣವಾಗಿ ಕವರು ಪಾಲು ಅಥವಾ ಉಪವಂಶದ ಪಾಲನ್ನು ನ್ಯಾಯಾಲಯಗಳ ಮುಖಾಂತರ ಪಡೆಯಬಹುದು. ಆದರೆ ಈ ಶಾಸನದ ಮೂಲಕ ವ್ಯಷ್ಟಿಪಾಲನ್ನು ಪಡೆಯಲು ಸಾಧ್ಯವಿಲ್ಲ. 1933ರಲ್ಲಿ ಮದ್ರಾಸ್ ಶಾಸನ ಸಭೆ ಜಾರಿಗೆ ತಂದ ಮರುಮಕ್ಕತ್ತಾಯಮ್ ಶಾಸನ ಮಲಬಾರ್ ಪ್ರಾಂತ್ಯಕ್ಕೆ ಮಾತ್ರ ಅನ್ವಯಿಸುತ್ತಿತ್ತು. ಈ ಶಾಸನಕ್ಕನುಗುಣವಾಗಿ ವ್ಯಷ್ಟಿಪಾಲನ್ನು ಪಡೆದುಕೊಳ್ಳುವುದು ಸಾಧ್ಯವಾಗಿತ್ತು. ಆದರೆ ಅಳಿಯ ಸಂತಾನಶಾಸನದಲ್ಲಿ ಇದನ್ನು ಕವರು ಅಥವಾ ಉಪವಂಶಕ್ಕೆ ಮಾತ್ರ ಅನ್ವಯಿಸಲಾಯಿತು. ಅದರಲ್ಲಿಯೂ ಕವರು ಅಥವಾ ಉಪವಂಶದ ಸದಸ್ಯರಲ್ಲಿ ಬಹುಪಾಲು ಸದಸ್ಯರು ಒಟ್ಟು ಸೇರಿ ಬೇಡಿಕೆಯನ್ನು ಮುಂದುವರಿಸಿದರೆ ಮಾತ್ರ ಆ ಪಾಲನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿತ್ತು. ಯಾವ ರೀತಿಯಲ್ಲಿ ಈ ಪಾಲನ್ನು ಕೊಡಬೇಕೆಂಬುದನ್ನು ಈ ಶಾಸನ ಸ್ಪಷ್ಟಪಡಿಸಿದೆ. ಪಾಲಿನ ಅರ್ಧಭಾಗ ಉಪವಂಶಾನುಗುಣವಾಗಿಯೂ ಉಳಿದರ್ಧವನ್ನು ತಲಾವಾರು ವ್ಯಕ್ತಿ ಸಂಖ್ಯೆಯ ಆಧಾರದ ಮೇಲೆಯೂ ಕೊಡಲಾಗುತ್ತದೆ. ಈ ಹಂಚಿಕೆ ಮೊದಲ ಹದಿನೈದು ವರ್ಷಗಳಿಗೆ ಅನ್ವಯಿಸುತ್ತದೆ. ಅನಂತರ ಉಪವಂಶಾನುಗುಣವಾಗಿಯೇ ವಿಭಜನೆಯಾಗುತ್ತದೆ.

ಮೈಸೂರು ಶಾಸನಸಭೆ 1961ರಲ್ಲಿ ತಿದ್ದುಪಡಿ ವಿಧೇಯಕವೊಂದನ್ನು ಅಂಗೀಕರಿಸಿ ಅಳಿಯಸಂತಾನ ಶಾಸನದ ಈ ಭಾಗವನ್ನು ಅಂದರೆ ಹಂಚಿಕೆಯ ವಿಧಾನಕ್ಕೆ ಸಂಬಂಧಿಸಿದ ಭಾಗವನ್ನು ತಿದ್ದುಪಡಿ ಮಾಡಿತು. ಈ ತಿದ್ದುಪಡಿಗನುಗುಣವಾಗಿ ತಲಾವಾರು ವ್ಯಕ್ತಿಸಂಖ್ಯೆಯ ಆಧಾರದ ಮೇಲೆ ಆಸ್ತಿ ವಿಭಾಗಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಈ ಶಾಸನದ ಸಿಂಧುತ್ವವನ್ನು ಇಂದು ಪ್ರಶ್ನಿಸಲಾಗುತ್ತಿದೆ. ಮೈಸೂರು ಹೈಕೋರ್ಟಿನಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಹಲವಾರು ರಿಟ್–ಅರ್ಜಿಗಳು ವಿಚಾರಣೆಯಲ್ಲಿವೆ.

ಹಳೆಯ ಕಾನೂನಿನ ಮತ್ತೊಂದು ಅಂಶಕ್ಕೆ 1949ರ ಶಾಸನ ತಿದ್ದುಪಡಿಯನ್ನು ತಂದಿತು. ಇದು ಅಳಿಯ ಸಂತಾನವ್ಯಕ್ತಿಗಳ ವಿವಾಹದ ಸಿಂಧುತ್ವಕ್ಕೆ ಸಂಬಂಧಪಟ್ಟಿದ್ದಿತು. 1883ರಲ್ಲಿ ಮದ್ರಾಸ್ ಹೈಕೋರ್ಟ್ ನೀಡಿದ್ದ ಒಂದು ತೀರ್ಮಾನದ ಆಧಾರದ ಮೇಲೆ ಅಂಥ ವಿವಾಹಗಳಿಗೆ ಸಿಂಧುತ್ವವಿಲ್ಲವೆಂದು ಭಾವಿಸಲಾಗಿತ್ತು. ಇದನ್ನು ಸರಿಪಡಿಸಲು 1896ರಲ್ಲಿ ಮಲಬಾರ್ ವಿವಾಹ ಮಸೂದೆಯನ್ನು ಅಂಗೀಕರಿಸಲಾಯಿತು. ಈ ಮಸೂದೆಗನುಗುಣವಾಗಿ ವಿವಾಹಗಳನ್ನು ಅಧಿಕೃತವಾಗಿ ದಾಖಲು ಮಾಡಿಸಬಹುದಾಗಿತ್ತು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೋ ಒಬ್ಬಿಬ್ಬರನ್ನು ಬಿಟ್ಟರೆ ಅಳಿಯಸಂತಾನ ನಿಯಮಕ್ಕೊಳಪಟ್ಟ ಬಹುಮಂದಿ ಈ ವಿಧಾನವನ್ನು ಆಶ್ರಯಿಸಲಾರದೆ ಹೋದರು. ಏಕೆಂದರೆ ಅಳಿಯ ಸಂತಾನ ವ್ಯವಸ್ಥೆಯಲ್ಲಿನ ಸಾಂಪ್ರದಾಯಿಕ ವೈವಾಹಿಕ ವಿಧಿ ಜನತೆಯ ದೃಷ್ಟಿಯಲ್ಲಿ ಮಿತಾಕ್ಷರ ಅಥವಾ ಸಾಮಾನ್ಯ ಹಿಂದೂ ವಿವಾಹವದಷ್ಟೇ ಸಿಂಧುವಾಗಿದ್ದಿತು. 1949ರ ಶಾಸನ ಅಂಥ ವಿವಾಹಗಳೆಲ್ಲವನ್ನೂ ಸಕ್ರಮವಾದುವೆಂದೂ, ಸಿಂಧುತ್ವವುಳ್ಳವೆಂದೂ ಮಾನ್ಯಮಾಡಿತು. ಆದರೆ ಈ ಶಾಸನಕ್ಕನುಗುಣವಾಗಿ ಪತಿ ಅಥವಾ ಪತ್ನಿ ನ್ಯಾಯಾಲಯಕ್ಕೆ ಕೇವಲ ಅರ್ಜಿಯನ್ನು ಸಲ್ಲಿಸಿ ವಿವಾಹವಿಚ್ಛೇದನವನ್ನು ಪಡೆದುಕೊಳ್ಳಬಹುದಾಗಿತ್ತು. ಯಾವುದೇ ಕಾರಣವನ್ನು ಕೊಡಬೇಕಾಗಿರಲಿಲ್ಲ. 1869ರ ಭಾರತೀಯ ವಿವಾಹ ವಿಚ್ಛೇದನ ನಿಯಮ ಅಥವಾ 1955ರ ಹಿಂದೂ ವಿವಾಹ ಶಾಸನದಲ್ಲಿ ಕಾಣದೊರೆಯುವಂತೆ ಕೆಲವು ಸಾಮಾನ್ಯತತ್ತ್ವಗಳಿಗೆ ಒಳಪಟ್ಟ ವಿವಾಹ ಶಾಸನದಲ್ಲಿ ವಿಚ್ಛೇದನಕ್ಕೆ ಅನುಮತಿಯನ್ನೀಯಬೇಕೆಂಬ ಸಿದ್ಧಾಂತಕ್ಕೆ ಈ ಭಾಗ ಅನುಗುಣವಾಗಿಲ್ಲವೆಂದು ಹೇಳಬಹುದು. ಅಂದರೆ ಪರಿತ್ಯಾಗ, ಕ್ರೂರತನ ಅಥವಾ ವ್ಯಭಿಚಾರ ಮೊದಲಾದಂಥ ಕಾರಣಗಳನ್ನು ನ್ಯಾಯಾಲಯ ಎತ್ತಿಹಿಡಿದು ವಿಚ್ಛೇದನಕ್ಕೆ ಅನುಮತಿಯನ್ನು ನೀಡಬೇಕು.

1949ರ ಶಾಸನ ಅಪ್ರಾಪ್ತವಯಸ್ಕರ ಪಾಲನೆ ಪೋಷಣೆಗೂ ಅಂತಿಮ ಇಷ್ಟಪತ್ರವನ್ನು ಬರೆದಿಡದಿರುವಂಥ ಸಂದರ್ಭಗಳಲ್ಲಿ ಮೇಲ್ವಿಚಾರಕ ಸ್ಥಾನವನ್ನು ಭರ್ತಿಮಾಡಲೂ ಅವಕಾಶವನ್ನು ಮಾಡಿಕೊಟ್ಟಿತು. ಈ ದೃಷ್ಟಿಯಿಂದಲೂ, ಹಳೆಯ ಸಾಂಪ್ರದಾಯಿಕ ನಿಯಮಕ್ಕೆ ಈ ಶಾಸನ ತಿದ್ದುಪಡಿಯನ್ನು ತಂದಿತು. ಈ ಮೊದಲು ಬಳಕೆಯಲ್ಲಿದ್ದ ಸಾಂಪ್ರದಾಯಿಕ ನಿಯಮಕ್ಕನುಗುಣವಾಗಿ, ಈ ಮೊದಲೇ ಸ್ಪಷ್ಟಪಡಿಸಿರುವಂತೆ, ಅಳಿಯ ಸಂತಾನ ವ್ಯಕ್ತಿಯ ಸ್ವಯಾರ್ಜಿತ ಆಸ್ತಿ ಆತನ ವಂಶ ಅಥವಾ ಶಾಖೆಗೆ ಸೇರುತ್ತಿತ್ತು. ಆದರೆ ಈ ಶಾಸನದಲ್ಲಿ ಕೆಲವು ನಿಯಮಗಳನ್ನು ರೂಪಿಸಿ ಅಳಿಯ ಸಂತಾನವ್ಯಕ್ತಿಯ ಸ್ವಯಾರ್ಜಿತ ಆಸ್ತಿ ನಿಯಮಗಳಿಗನುಗುಣವಾಗಿ ತಾಯಿ, ಪತ್ನಿ ಮತ್ತು ಮಕ್ಕಳಿಗೆ ಸೇರಬೇಕೆಂದು ಗೊತ್ತುಪಡಿಸಲಾಗಿದೆ. ಕೌಟುಂಬಿಕ ವ್ಯವಹಾರಗಳನ್ನು ನೋಡಿಕೊಳ್ಳಲು, ಲೆಕ್ಕಪತ್ರಗಳನ್ನಿಡಲು ಕುಟುಂಬದ ಸದಸ್ಯರಿಗೆ ಜೀವನೋಪಾಯವನ್ನು ಕಲ್ಪಿಸಲು, ಕುಟುಂಬದ ಆಸ್ತಿ ಪರಭಾರೆಯಾಗದಂತೆ ನೋಡಿಕೊಳ್ಳಲು ಮೇಲ್ವಿಚಾರಕನಿಗೆ ಈ ಶಾಸನ ಅವಕಾಶ ಮಾಡಿಕೊಟ್ಟಿದೆ.

ಅಳಿಯ ಸಂತಾನ ನಿಯಮಕ್ಕೊಳಪಟ್ಟಿರುವ ಜೈನ ಪಂಗಡಗಳ (ಪುರೋಹಿತವರ್ಗಕ್ಕೆ ಸೇರಿದ ಇಂದ್ರರೆಂಬ ವರ್ಗಕ್ಕೆ ಸೇರಿದವರು ಮಿತಾಕ್ಷರ ನಿಯಮಕ್ಕೊಳಪಟ್ಟಿದ್ದಾರೆ) ವಿಚಾರವನ್ನು ತೆಗೆದುಕೊಂಡರೆ, 1929ರಲ್ಲಿ ಅಂಗೀಕರಿಸಲಾದ ಶಾಸನವೊಂದು ಜಾರಿಯಲ್ಲಿದ್ದುದು ಕಂಡುಬರುತ್ತದೆ. ಈ ಶಾಸನಕ್ಕನುಗುಣವಾಗಿ ಕುಟುಂಬದ ಕಟ್ಟಕಡೆಯ ಜೀವಂತ ವ್ಯಕ್ತಿಯ ಅಥವಾ ಅವನ ಕುಟುಂಬದ ಆಸ್ತಿ–ಪಾಸ್ತಿಗಳು, ಮಿತಾಕ್ಷರ ಶಾಸನ ವ್ಯವಸ್ಥೆಯಲ್ಲಾಗುವಂತೆಯೇ ಅವನ ಉತ್ತರಾಧಿಕಾರಿಗಳಿಗೆ ಸೇರುತ್ತವೆ.

1956ರ ಹಿಂದೂ ಉತ್ತರಾಧಿಕಾರ ಶಾಸನ ಅಳಿಯ ಸಂತಾನ ನಿಯಮದಲ್ಲಿ ಮತ್ತೊಂದು ಬದಲಾವಣೆಯನ್ನುಂಟುಮಾಡಿತು. ಅಂತಿಮ ಇಚ್ಛಾಪತ್ರವನ್ನು ಸಿದ್ಧಪಡಿಸದೆ ಅವಿಭಾಜ್ಯ ಅಳಿಯ ಸಂತಾನದ ವ್ಯಕ್ತಿಯೊಬ್ಬ ಸತ್ತರೆ, ಆತನ ಪಾಲು ಉತ್ತರಾಧಿಕಾರಿಗಳಿಗೆ ಸೇರುತ್ತದೆ. ಈ ಸಂಬಂಧದಲ್ಲಿ ಅವನು ಮರಣಶಾಸನವನ್ನು ತಯಾರುಮಾಡಬಹುದು.

ಶಾಸನ ರಚನೆಯಿಂದ ತಿದ್ದುಪಡಿಮಾಡಿ ಪರಿಷ್ಕರಿಸಲಾಗಿರುವ ಅಳಿಯಸಂತಾನ ನಿಯಮದ ಕೆಲವು ಪ್ರಮುಖ ಲಕ್ಷಣಗಳು ಹೀಗಿವೆ. ಕಾಲಾನುಕ್ರಮದಲ್ಲಿ ಅವಿಭಕ್ತ ಕುಟುಂಬಗಳು ಮತ್ತೆ ಮತ್ತೆ ಅಸಂಖ್ಯಾತವಾಗಿ ವಿಭಜಿತವಾಗುತ್ತಾ ಬಂದುದರಿಂದಲೂ ಹಾಗೂ ನಿಯಮದ ವ್ಯಾಪ್ತಿಗೊಳಪಟ್ಟ ವ್ಯಕ್ತಿಗಳು ತಮ್ಮ ಆಸ್ತಿಯನ್ನು ತಮ್ಮ ಹೆಂಡಿರು ಮಕ್ಕಳಿಗೆ ಮತ್ತು ಇತರರಿಗೆ ಬಿಟ್ಟುಕೊಡುವ ಸ್ವಾಭಾವಿಕ ಪ್ರವೃತ್ತಿಯಿಂದಾಗಿಯೂ ಈ ಹಳೆಯ ವ್ಯವಸ್ಥೆ ಶೀಘ್ರವಾಗಿ ಹಿಮ್ಮೆಟ್ಟುತ್ತಿದ್ದು, ಇತರ ಹಿಂದೂವರ್ಗಗಳಿಗೆ ಅನ್ವಯವಾಗುವ ಹಿಂದೂ ಶಾಸನದೊಡನೆ ವಿಲೀನಗೊಳ್ಳುತ್ತಿದೆ. (ಕೆ.ಆರ್.ಕೆ.)

**ಅಳಿಲು :** ಸಾಮಾನ್ಯವಾಗಿ ಗಿಡಮರಗಳಲ್ಲಿ ವಾಸಿಸುವ ಸ್ತನಿ (ಸ್ಕ್ವಿರಲ್). ಇಣಚಿ ಎಂಬ ಹೆಸರೂ ಇದೆ. ವಿವಿಧ ಬಣ್ಣಗಳಲ್ಲಿ ಕಾಣುವ ಇದು ಗಾತ್ರದಲ್ಲಿ ಇಲಿಯಷ್ಟು ಚಿಕ್ಕದೂ ಬೆಕ್ಕಿನಷ್ಟು ದೊಡ್ಡದೂ ಇರಬಹುದು. ಶಕ್ತಿಯುತವಾದ ಸ್ನಾಯುಗಳಿಂದ ಕೂಡಿದ ದೇಹ, ಬಾಗಿಕೊಂಡ ಚೂಪಾದ ನಖ, ದೊಡ್ಡ ಕಣ್ಣು, ದಪ್ಪನಾದ ಕಿವಿ, ಉದ್ದವಾದ ಕೂದಲುಳ್ಳ ಗಡುತರವಾದ ಚಪ್ಪಟೆ ಬಾಲ–ಇವು ಅದರ ಕೆಲವು ಮುಖ್ಯ ಲಕ್ಷಣಗಳು. ಇದು ತನ್ನ ಗೂಡನ್ನು ಕಡ್ಡಿ, ಎಲೆಗಳಿಂದ ಕಟ್ಟುವುದು. ಗಿಡದ ಚಿಗುರು ಎಲೆ, ಬೀಜ, ಹಣ್ಣು, ಇಲಿ, ಪಕ್ಷಿ, ಕೀಟಕದ ತತ್ತಿ–ಇಂಥ ವಸ್ತುಗಳೇ ಇದರ ಆಹಾರ. ಅಳಿಲು ವರ್ಷದಲ್ಲಿ ಒಮ್ಮೆ ಇಲ್ಲವೆ ಎರಡು ಬಾರಿ ಮರಿ ಹಾಕುತ್ತದೆ. ಪ್ರತಿಸಲವೂ ಎರಡರಿಂದ ಆರು ಮರಿಗಳಿರಬಹುದು. ಮರಿಗಳು ಕೂದಲಿಲ್ಲದ, ಕಣ್ಣು ತೆರೆಯದ ಅಸಹಾಯಕ ಪ್ರಾಣಿಗಳಾಗಿರುತ್ತವೆ. ಮರಿ ಓಡಾಡಲು ಶಕ್ತವಾಗುವವರೆಗೆ ತಾಯಿ ಮೊಲೆಯೂಡಿಸಿ ಸಾಕುತ್ತದೆ.

ಮರದ ಒಂದು ಟೊಂಗೆಯಿಂದ ಇನ್ನೊಂದು ಟೊಂಗೆಗೆ ಹಾರಬಲ್ಲ ಅಳಿಲೂ ಇದೆ. ಇದನ್ನು ಹಾರುವ ಅಳಿಲೆಂದೇ ಕರೆಯುತ್ತಾರೆ. ಎರಡೂ ಬದಿಗೆ ಪಸರಿಸಿಕೊಂಡು ಸಡಿಲಾದ ಪ್ಯಾರಾಷೂಟ್‌ನಂಥ ಚರ್ಮವೇ ಇದರ ರೆಕ್ಕೆ. ಅಳಿಲು ಆಸ್ಟ್ರೇಲಿಯ ಮತ್ತು ಮಡಗಾಸ್ಕರಗಳನ್ನು ಬಿಟ್ಟು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ವಾಸಿಸುವುದು. ನಮ್ಮ



ಅಳಿಲು–ವಿವಿಧ ಬಗೆಗಳು : 1 ಭಾರತದ ಅಳಿಲು 2 ಹಾರುವ ಅಳಿಲು 3 ಆಬರ್ಟ್ ಅಳಿಲು

ದೇಶದಲ್ಲಿ ವಾಸಿಸುವ ಅಳಿಲಿನ ಬೆನ್ನ ಮೇಲೆ ಮೂರು ಪಟ್ಟೆಗಳಿರುವುದು ಒಂದು ವೈಶಿಷ್ಟ್ಯ. ಅಳಿಲು ರೋಡೆನ್ಷಿಯ ಉಪವರ್ಗದ ಸ್ಕ್ವಿರಿಡೆ ಎಂಬ ಕುಟುಂಬಕ್ಕೆ ಸೇರಿದೆ. (ಎಸ್.ಬಿ.ಎಂ.)

ಶ್ರೀರಾಮಚಂದ್ರನ ಅನುಯಾಯಿಗಳಾದ ವಾನರರು ಲಂಕೆಗೆ ಸೇತುವೆ ಕಟ್ಟುತ್ತಿದ್ದಾಗ ಒಂದು ಅಳಿಲು ನೀರಿನಲ್ಲಿ ಬೀಳುವುದು, ಮರಳಮೇಲೆ ಹೊರಳುವುದು, ಸೇತುವೆ ಮೇಲೆ ಹೋಗಿ ಮೈ ಕೊಡವಿ ಮರಳ ಕಣ ಉದುರಿಸುವುದು–ಹೀಗೆ ಶ್ರದ್ಧೆ ಭಕ್ತಿಗಳಿಂದ ತನ್ನ ಪಾಲಿನ ಕರ್ತವ್ಯ ನಿರ್ವಹಿಸುತ್ತಿತ್ತು. ಇದನ್ನು ಕಂಡು ಮೆಚ್ಚಿದ ಶ್ರೀರಾಮಚಂದ್ರ ಪ್ರೀತಿ ಕೃತಜ್ಞತೆಗಳಿಂದ ಆಗ ಅಳಿಲಿನ ಬೆನ್ನು ಸವರಿದ. ಅಳಿಲಿನ ಬೆನ್ನ ಮೇಲೆ ಮೂರು ಗೆರೆಗಳು ಬಂದಿವೆಯೆಂದು ಆಸ್ತಿಕರು ನಂಬುತ್ತಾರೆ. ಶ್ರದ್ಧಾ ಭಕ್ತಿಪೂರಿತವಾಗಿ ಘನೋದ್ದೇಶ ಪ್ರದೀಪ್ತವಾಗಿ ನಿರ್ವಹಿಸಿದ ಕ್ರಿಯೆಗೆ ಅಳಿಲ ಸೇವೆ ಎಂದು ಸಾಹಿತ್ಯದಲ್ಲಿ ಪ್ರಯೋಗವಿದೆ. *

**ಅಳಿಲು ಮೀನು :** ಹವಳದ ಗುಡ್ಡಗಳಲ್ಲಿ ವಾಸಿಸುವ ಉಷ್ಣವಲಯದ ಸಮುದ್ರದ ಮೀನು (ಸಿಪಾಯಿ ಮೀನು). ವೈಜ್ಞಾನಿಕ ಹೆಸರು ಸಾರ್ಗೋಸೆಂಟ್ರಾನ್ ಈ ಮೀನುಗಳ ದೇಹದ ಮೇಲೆ ಹೊಳಪಾದ ಕೆಂಪು ಮತ್ತು ಹಳದಿ ಬಣ್ಣಗಳ ಉದ್ದವಾದ ಪಟ್ಟೆಗಳು ಪ್ರಮುಖವಾಗಿ ಕಾಣಬರುತ್ತವೆ. ಇದು ಸುಮಾರು 18 ಸೆಂಮೀ ಉದ್ದ ಬೆಳೆಯುತ್ತದೆ. ಹೋಲೋಸೆಂಟ್ರಿಡೇ ಕುಟುಂಬಕ್ಕೆ ಸೇರಿದ ಈ ಮೀನುಗಳಲ್ಲಿ ಕಿವಿರು ಕವಚ, ಮೂಳೆಯ ಕೆಳಗೆ ಹಿಂಚಾಚಿದಂತೆ ಒಂದು ಬಲವಾದ ಕಂಟಕವಿದೆ. ಬೆನ್ನಿನ ಮೇಲೆ ಎರಡು ಈಜುರೆಕ್ಕೆಗಳಿವೆ. ಬಾಲದ ಈಜು ರೆಕ್ಕೆ ಕವಲೊಡೆದಿದೆ. ದೇಹದ ಮೇಲೆ ಬಿರುಸಾದ ಸುಮಾರು ದೊಡ್ಡ ಹುರುಪೆಗಳಿವೆ. ಮೈಮೇಲಿನ ಪಟ್ಟೆ ಮತ್ತು ದೊಡ್ಡ ಅಳಿಲು ಕಣ್ಣುಗಳಿಂದ ಈ ಮೀನುಗಳಿಗೆ ಅಳಿಲು ಮೀನುಗಳೆಂದು ಹೆಸರು ಬಂದಂತೆ ಕಾಣುತ್ತದೆ.

ಇಂಡೋನೇಷ್ಯ, ಹವಾಯ್ ಮತ್ತು ಪಶ್ಚಿಮ ಇಂಡೀಸ್ ಸುತ್ತಲಿನ ಸಮುದ್ರಗಳಲ್ಲಿ ವಾಸಿಸುವ ಈ ಮೀನುಗಳು ಸು. 70 ಜಾತಿಗಳಿವೆ. (ಸಿ.ಜಿ.ಕೆ.)

**ಅಳಿವೆ :** ನದೀಮುಖಜಭೂಮಿಯಲ್ಲಿ ಸವೆತದಿಂದ ನೆಲ ತಗ್ಗಾಗಿರುವುದರಿಂದಲೋ ಅಥವಾ ಸಮುದ್ರದ ನೀರಿನ ಮಟ್ಟ ಎತ್ತರವಾಗಿರುವುದರಿಂದಲೋ ಸಮುದ್ರದ ನೀರು ನದೀಮುಖದ ಒಳಕ್ಕೆ ಚಾಚುವಂತಿದ್ದರೆ ಅಂಥ ಪ್ರದೇಶವನ್ನು ಅಳಿವೆಯೆಂದು ಕರೆಯುತ್ತಾರೆ. ಇಲ್ಲಿ ಸಿಹಿ ನೀರು ಮಿಶ್ರಣವಾಗುತ್ತದೆ. ನದಿಯ ಸಿಹಿನೀರಿನಲ್ಲಿ ವಿಲೀನಗೊಳ್ಳುವುದರಿಂದ ಸಮುದ್ರ ನೀರಿನ ಲವಣತೆಯ ಸಾಂದ್ರತೆ ಕಡಿಮೆಯಾಗುತ್ತದೆ. ಸಮುದ್ರದಲೆಗಳ ಸವೆತದಿಂದ ಸಂರಕ್ಷಿತವಾಗಿದ್ದ ವಿಶೇಷ ಪರಿಸ್ಥಿತಿಯಲ್ಲಿ ಅಳಿವೆಗಳು ಕೆಸರಿನ ಜವುಗುಗಳಿಂದ ಸುತ್ತುವರಿದಿರುತ್ತವೆ. ಅಳಿವೆಗಳನ್ನು 4 ಉಪವಿಧಗಳಾಗಿ ವಿಂಗಡಿಸಬಹುದು

**1) ಮುಳುಗಿದ ನದಿಕಣಿವೆಗಳು:** ಇವು ಸಮುದ್ರತೀರವು ಮುಳುಗುವುದರಿಂದ ನಿರ್ಮಿತವಾದವು. ಉದಾ: ಚೆಸಾಪೀಕ್ ಅಳಿವೆ.

**2) ಫಿಯೋರ್ಡ್:** ಸಮುದ್ರ ಪ್ರವಾಹದಿಂದ ಮುಳುಗಿದ ಆಳವಾದ ಹಿಮನದಿ ಕಣಿವೆಗಳು. ಇಂತಹವು ಹಿಮಪ್ರವಾಹಿತ ತೀರದಲ್ಲಿ ಕಂಡುಬರುತ್ತವೆ. ಉದಾ: ಬ್ರಿಟಿಷ್ ಕೊಲಂಬಿಯ, ದಕ್ಷಿಣ ಚಿಲಿ, ಸ್ಕಾಟ್ಲೆಂಡ್, ನಾರ್ವೆ.

**3) ಭೂರಚಿತ ಅಳಿವೆಗಳು:** ಇವು ಭೂಚಿಪ್ಪಿನ ಶಿಲಾಸ್ತರ ಮುರಿದು ಬೀಳುವುದರಿಂದ ರಚನೆಯಾದವು.

**4). ಮರಳುದಿಬ್ಬ ಅಳಿವೆಗಳು:** ಇವು ಕೊಲ್ಲಿಯ ಮುಖಭಾಗದಲ್ಲಿ ನಿರ್ಮಿತಗೊಂಡ ಮರಳುದಿಬ್ಬದಿಂದಾದವು. ಭಾರತದ ತಾಪಿ ನದಿ ಅಳಿವೆ ಇದಕ್ಕೆ ಸೂಕ್ತ ಉದಾಹರಣೆ.

ಅಳಿವೆಗಳು ಮೀನುಗಾರಿಕೆ, ಬಂದರು ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಸೂಕ್ತ ಸ್ಥಳಗಳು. (ಎಂ.ಎಸ್.ಎಂ.)

**ಅಳ್ತೇಕರ್, ಎ.ಎಸ್. :** 1898–1960. ಸಂಸ್ಕೃತ, ತತ್ತ್ವಶಾಸ್ತ್ರ, ಇತಿಹಾಸದ ಹೆಸರಾಂತ ವಿದ್ವಾಂಸರು. ಅನಂತ ಸದಾಶಿವ ಅಳ್ತೇಕರ್ ಇವರ ಪೂರ್ಣ ಹೆಸರು ಕೊಲ್ಲಾಪುರ ಜಿಲ್ಲೆಗೆ ಸೇರಿದ ಕಾಗಲ ಇವರ ಸ್ಥಳ. ಮುಂಬೈ ವಿಶ್ವವಿದ್ಯಾಲಯದ ಎಂ.ಎ, ಎಲ್‌ಎಲ್.ಬಿ. ಪರೀಕ್ಷೆಗಳಲ್ಲಿ ಉತ್ತಮ ತರಗತಿಯಲ್ಲಿ ತೇರ್ಗಡೆ ಹೊಂದಿ ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸು. 25 ವರ್ಷಗಳ ಕಾಲ ಭಾರತದ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ಆಚಾರ್ಯರಾಗಿ ಕೆಲಸ ಮಾಡಿದರು. ಮುಂದೆ ಪಾಟ್ನ ವಿಶ್ವವಿದ್ಯಾನಿಲಯದಲ್ಲೂ ಕೆಲಕಾಲ ಇದ್ದರು. ರಾಷ್ಟ್ರಕೂಟರು ಮತ್ತು ಅವರ ಕಾಲವನ್ನು ಕುರಿತು ಇವರು ಬರೆದ ಗ್ರಂಥಕ್ಕೆ ಕಾಶಿಯ ವಿಶ್ವವಿದ್ಯಾನಿಲಯ ಡಿ. ಲಿಟ್. ಪದವಿ ನೀಡಿದೆ (1928).

ಇವರು 20 ಗ್ರಂಥಗಳನ್ನೂ 50ಕ್ಕೂ ಮೇಲ್ಪಟ್ಟು ಸಂಶೋಧನಾತ್ಮಕ ಲೇಖನಗಳನ್ನೂ ಬರೆದದ್ದಲ್ಲದೆ 15 ಶಾಸನಗಳನ್ನೂ ಸಂಪಾದಿಸಿದ್ದಾರೆ. ಇವುಗಳಲ್ಲಿ ಪ್ರಸಿದ್ಧವಾದ ಬಯಾನಾದ ಗುಪ್ತರ ನಾಣ್ಯಗಳನ್ನು ಕುರಿತ ಗ್ರಂಥವೂ ಒಂದು. ಇವರು ವೈಶಾಲಿ ಮತ್ತು ತುಮ್ರಹಾರಗಳಲ್ಲಿ ಉತ್ಖನನಗಳನ್ನು ನಡೆಸಿ ಮಹತ್ತ್ವದ ಶೋಧನೆಗಳನ್ನು ಮಾಡಿದ್ದಾರೆ. (ಎ.ಎಂ.ಎ.)

**ಅಳ್ಳೆಪರೆಯ ರೋಗಗಳು :** ಎದೆಗೂಡಿನ ಪೊಳ್ಳಿನ ಗೋಡೆಯ ಮತ್ತು ವಪೆಯ ಮೇಲಿನ ಒಳವರಿಯಾಗಿಯೂ (ಅಂಗೋಡೆಯದು: ಪೆರೈಟಲ್) ಪುಪ್ಪುಸದ ಬುಡದ ತಾವಿನಲ್ಲಿ ಹಿಮ್ಮಡಿಕೆಯಾಗಿ ಪೂರ್ತಿ ಪುಪ್ಪುಸಕ್ಕೆ ಅಂಟಿದ ಹೊದಿಕೆಯಾಗಿಯೂ (ಒಳಾಂಗದ್ದು: ವಿಸರಲ್) ಉದ್ದಕ್ಕೂ ಒಂದೇ ಸಮನಾಗಿರುವ ಪದರವೇ ಅಳ್ಳೆಪರೆ (ಪ್ಲೂರ). ಪುಪ್ಪುಸ ಅಳ್ಳೆಪರೆಯ ಸಂಬಂಧ, ಮುಚ್ಚಿರುವ ಒಂದು ದೊಡ್ಡ ಚೀಲವನ್ನು ಹಳ್ಳ ಬೀಳುವಂತೆ ತಳ್ಳಿ ಹೊದಿಕೆ ಆದಂತಿದೆ. ಪುಪ್ಪುಸದ ಸುತ್ತಲೂ ಒಂದಕ್ಕೊಂದು ಜಾಗ ಬಿಡದಂತೆ ತಗುಲಿಕೊಂಡಿರುವ ಅಳ್ಳೆಪರೆಯ ಎರಡು ಪದರಗಳೂ ಇವು ಒಂದರ ಮೇಲೊಂದು ನುಣುಪಾಗಿ ಜಾರುವಂತೆ ಮಾಡುವ, ಇವುಗಳ ನಡುವಣ ತುಸು ರಸಿಕೆಯ ದ್ರವವೂ ಇರುತ್ತದೆ. ರೋಗದಿಂದ ಈ ದ್ರವ ಹೆಚ್ಚಿದಾಗ, ಕೀವುಗೂಡಿದಾಗ, ಇಲ್ಲವೇ ಗಾಳಿ ಸೇರಿಕೊಂಡಾಗ ಮಾತ್ರ ಅಳ್ಳೆಪರೆಯ ಚೀಲದ ಪೊಳ್ಳು ಇರುವುದು ಗೊತ್ತಾಗುತ್ತದೆ.

**ಅಳ್ಳೆಪರೆಯುರಿತ :** ಬಹುಮಟ್ಟಿಗೆ ಪುಪ್ಪುಸದ ಎಲ್ಲ ದೊಡ್ಡ ಬೇನೆಗಳೊಂದಿಗೇ ಆಗಿಬರುವ ಅಳ್ಳೆಪರೆಯ ಉರಿತಕ್ಕೆ (ಇನ್‌ಫ್ಲಮೇಷನ್) ಅಳ್ಳೆಪರೆಯುರಿತ (ಪ್ಲೂರಿಸಿ, ಪ್ಲೂರೈಟಿಸ್) ಎಂದಿದೆ. ಇದನ್ನು ಒಣಕಲ ಬಗೆಯದು ಎನ್ನುವುದುಂಟು. ಎದೆಗೂಡಲ್ಲಿ ಎಲ್ಲಿ ನೋವಿದ್ದರೂ ಕೆಲವೇಳೆ ಅಳ್ಳೆಪರೆಯುರಿತವೆಂದು ಜನಸಾಮಾನ್ಯರು ತಪ್ಪಾಗಿ ಹೇಳುವುದುಂಟು. ಅಳ್ಳೆಪರೆಯುರಿತದ ನೋವು ಸಾಮಾನ್ಯವಾಗಿ ಉಸಿರಾಡುವಾಗ ಒಂದು ಗೊತ್ತಾದೆಡೆಯಲ್ಲಿ ಚಳುಕು ಚುರುಕಾಗಿ ಹೊಡೆಯುವುದು. ಉರಿತವೆದ್ದ ಅಳ್ಳೆಪರೆಯಿಂದ ಜಿನುಗಿದ ಸ್ರವಿಕೆ ಗರಣೆಗಟ್ಟಿ ಅಳ್ಳೆಪರೆಯನ್ನು ಒರಟೊರಟಾಗಿಸುತ್ತದೆ. ಸರಾಗವಾಗಿ ಜಾರುತ್ತಿದ್ದ ಅಳ್ಳೆಪರೆ ಪದರಗಳು ಒಂದನ್ನೊಂದು ಉಜ್ಜುವುದರಿಂದ ಕೆರಳಿ ಚಳುಕು ಹುಟ್ಟುವುದು. ಈ ಉಜ್ಜಾಟವನ್ನು ಎದೆಯ ಮೇಲೆ ಮುಟ್ಟಿ ತಿಳಿಯಬಹುದು. ರೋಗಿಗೂ ಗೊತ್ತಾಗುತ್ತದೆ. ಇದರೊಂದಿಗೆ ತುಸು ಜ್ವರ ಕೂಡ ಇರುವುದು. ಪುಪ್ಪುಸದಲ್ಲಿ ಇನ್ನಾವ ಬೇನೆಯೂ ಇಲ್ಲದಲ್ಲಿ, ಇದರ ಸಾಮಾನ್ಯ ಕಾರಣ ಕ್ಷಯ ರೋಗವೇ.

ವಪೆಗೆ ಅಂಟಿರುವ ಅಳ್ಳೆಪರೆಯ ಉರಿತದಲ್ಲಿ ನೋವೂ ಚಳಕೂ ಪಕ್ಕೆಲಬುಗಳ (ರಿಬ್ಸ್) ಕೆಳಗೋ ಹೊಟ್ಟೆಯಲ್ಲೋ ತೋರಬಹುದು. ಉಸಿರಾಡುವಾಗ ನೋವಿರುವ ಪಕ್ಕೆ ಅಲುಗಾಡದಂತೆ ಇರಿಸಲು ವೈದ್ಯ ಪಟ್ಟಿಯನ್ನು ಬಿಗಿಯಾಗಿ ಅಂಟಿಸಬಹುದು. ಕಾರಣಕ್ಕೆ ತಕ್ಕ ಚಿಕಿತ್ಸೆ ಆಗತ್ಯ.

**ಅಳ್ಳೆಪರೆಯ ಸೂಸುಗೆ :** ಕೆಲವೇಳೆ ಅಳ್ಳೆಪರೆಯುರಿತದಿಂದಲೋ ಹರಿಯದೇ ರಕ್ತಗಟ್ಟುವುದರಿಂದಲೋ (ಕಂಜೆಷನ್), ಅಂಗೋಡೆಯ, ಒಳಾಂಗದ ಅಳ್ಳೆಪರೆಗಳ ನಡುವಣ ಪೊಳ್ಳಿನಲ್ಲಿ ವಿಪರೀತ ದ್ರವ ಸೇರುವುದುಂಟು. ಇದೇ ಅಳ್ಳೆಪರೆಯ ಸೂಸುಗೆ (ಎಫ್ಯೂಷನ್). ಒಣಕಲ ಅಳ್ಳೆಪರೆಯುರಿತ ಆಗಿದ್ದವರಲ್ಲಿ ದ್ರವ ಹೀಗೆ ಸೇರಿಕೊಂಡರೆ, ಉಸಿರಾಡಿದಾಗ ಕೆಮ್ಮಿದಾಗ ಬರುವ ಪಕ್ಕೆ ಚಳುಕು ಇಲ್ಲವಾಗುತ್ತದೆ. ರೋಗಿ ಒಳ್ಳೆಯದಾಯಿತೆಂದು ತಪ್ಪಾಗಿ ತಿಳಿಯುವನು. ಈ ದ್ರವ ಒಂದೆರಡು ಲೀಟರುಗಳಷ್ಟಕ್ಕೆ ಏರಿದಾಗ, ಪುಪ್ಪುಸವನ್ನು ಹಿಗ್ಗಲು ಬಿಡದೆ ಉಸಿರಾಟಕ್ಕೆ ಆತಂಕವಾಗಬಹುದು. ದ್ರವ ಹೆಚ್ಚಿದಂತೆಲ್ಲ ಉಸಿರಾಟಕ್ಕೆ ಆತಂಕವಾಗದು. ಆದರೆ ಬಲು ಬೇಗನೆ ತುಸು ದ್ರವ ಸೇರಿದರೂ ಉಸಿರು ಕಟ್ಟಿದಂತಾಗುತ್ತದೆ. ನಿಧಾನವಾಗಿ ಬಹಳ ಸೇರಿಕೊಂಡರೂ ಅಷ್ಟು ಅಡ್ಡಿಯಾಗದಿರಬಹುದು. ರೋಗಿ ಅದಕ್ಕೆ ಒಗ್ಗಿಕೊಳ್ಳುವನು. ದ್ರವ ಸೇರಿಕೊಂಡಂತೆಲ್ಲ ಮೆತ್ತನೆಯ ಪುಪ್ಪುಸ ಮುದುರಿಕೊಳ್ಳುವುದು. ಗುಂಡಿಗೆ, ಮಧ್ಯ ತಡಿಕೆಯನ್ನು ಎದೆಯ ಇನ್ನೊಂದು ಪಕ್ಕಕ್ಕೆ ಈ ದ್ರವ ತಳ್ಳುತ್ತದೆ.

ಎಲ್ಲೋ ಸ್ವಲ್ಪವೇ ದ್ರವ ಸೇರಿಕೊಂಡಿದ್ದರೆ, ಎಕ್ಸ್–ಕಿರಣಗಳ ಪರೀಕ್ಷೆಯಾಗದೆ ಕಂಡುಹಿಡಿಯುವುದು ಕಷ್ಟವಾಗಬಹುದು. ದ್ರವ ತಿಳಿಯಾಗಿ ತಿಳಿ ಹಳದಿಯಾಗಿರುವುದು ಸಾಮಾನ್ಯವಾದರೂ, ಮಬ್ಬಿನಂತೆ ಮಂದವಾಗಿದ್ದು ಕೆಲವೇಳೆ ರಕ್ತದ ತೊಟ್ಟುಗಳೂ ಕಲೆತಿರಬಹುದು. ಒಳಸೇರಿದ ದ್ರವವನ್ನು ಸೂಜಿ ಹಾಕಿ ಹೊರಡಿಸುವ ಸಂದರ್ಭಗಳು ಕೆಲವಿವೆ; ಗುಂಡಿಗೆ, ಪುಪ್ಪುಸಗಳ ಮೇಲೆ ವಿಪರೀತ ಒತ್ತಡ ಬಿದ್ದು ಜೀವಕ್ಕೇ ತೊಂದರೆ; ದ್ರವ ತಾನಾಗಿ ಬಲು ನಿಧಾನವಾಗಿ ತಗ್ಗುತ್ತಿರುವುದು; ಎದೆಗೂಡಿನ ಎರಡು ಪಕ್ಕಗಳಲ್ಲೂ ದ್ರವ ಸೇರಿಕೆ ಅಪರೂಪ. ದ್ರವ ತೆಗೆದು ಹಾಕಿದ ಮೇಲೆ ಪುಪ್ಪುಸಗಳು ಮತ್ತೆ ಎಂದಿನಂತೆ ಇರಿಸಲು ನೆರವಾಗುವಂತೆ ಕೆಲವು ಅಂಗಸಾಧನೆಗಳನ್ನು ಮಾಡಬೇಕಾಗುತ್ತದೆ.

ಪುಪ್ಪುಸಕ್ಕೆ ಹತ್ತಿರುವ ಕ್ಷಯರೋಗ ಅಳ್ಳೆಪರೆಯ ಪೊಳ್ಳಿಗೂ ಹಬ್ಬಿಕೊಳ್ಳುವುದೇ ಅಳ್ಳೆಪರೆಯ ಸೂಸುಗೆಯ ಸಾಮಾನ್ಯ ಕಾರಣ. ಸಾಮಾನ್ಯವಾಗಿ, ಅಂಥ ದ್ರವ ತಿಳಿಯಾಗಿ ತಿಳಿಹಳದಿ ಬಣ್ಣಕ್ಕಿದ್ದು ಸಣ್ಣ ಹಾಲುರಸಕಣಗಳೂ (ಲಿಂಫೋಸೈಟ್ಸ್) ಒಂದಿಷ್ಟು ಕೂಡಿರುತ್ತವೆ. ಇದರಲ್ಲಿ ಕ್ಷಯದ ದಂಡಾಣುಜೀವಿಗಳು ಇದ್ದರೂ ಇರಬಹುದು. ಆದರೆ ಕ್ಷಯರೋಗವನ್ನು ಖಚಿತಪಡಿಸಲೂ ಕೆಲವೇಳೆ ಅಳ್ಳೆಪರೆಯ ಒಂದು ಚೂರನ್ನು ಕೊಯ್ದು ಹೊರತೆಗೆದ ಪರೀಕ್ಷಿಸಬೇಕಾಗುತ್ತದೆ. B-ಅಮೀನೇಸ್ ಕಿಣ್ವದ ಏರಿಕೆಯಿರುವುದನ್ನು ಪರೀಕ್ಷಿಸಬೇಕಾಗುತ್ತದೆ. ಎಷ್ಟೋ ವೇಳೆ ಇದರೊಂದಿಗಿನ ಪುಪ್ಪುಸದ ಕ್ಷಯರೋಗವನ್ನು ಎಂದಿನ ವಿಧಾನಗಳಿಂದ ಕಂಡುಕೊಳ್ಳಬಹುದು. ಪುಪ್ಪುಸದ ಕ್ಷಯಕ್ಕೆ ರಾಸಾಯನಿಕ ರೋಗ ಚಿಕಿತ್ಸೆಯ ಮದ್ದುಗಳಿಂದ ಚಿಕಿತ್ಸೆಯಾದರೆ ಅಳ್ಳೆಪರೆಯ ಸೂಸುಗೆಯ ಚಿಕಿತ್ಸೆಯೂ ನೆರವೇರಿದಂತೆ. ಕ್ಷಯ ರೋಧಕಗಳ ಜೊತೆ ಕಾರ್ಟಿಸೋನ್ ಕೊಟ್ಟು ದ್ರವದ ಒಳಹೀರಿಕೆಯನ್ನು ಪ್ರಚೋದಿಸಬಹುದು ಮತ್ತು ಪರೆಯ ನಾರುಗಟ್ಟಿಕೆಯನ್ನು ಪ್ರತಿಬಂಧಿಸಬಹುದು.

ಪುಪ್ಪುಸುರಿತವೂ (ನ್ಯುಮೋನಿಯ) ಸೇರಿದಂತೆ ಪುಪ್ಪುಸದಲ್ಲಿ ಏಳುವ ತೀವ್ರ (ಅಕ್ಯೂಟ್) ಉರಿತದ ರೋಗಗಳಲ್ಲೂ ಕೆಲವೇಳೆ ಅಳ್ಳೆಪರೆ ನೋವು ಕಾಣಿಸಿಕೊಂಡು, ಒಂದೊಂದು ಬಾರಿ ಅಳ್ಳೆಪರೆಯ ಪೊಳ್ಳಿನಲ್ಲಿ ದ್ರವ ಕೂಡಲೂ ಬಹುದು. ದ್ರವ ಹಾಗೇ ಇಂಗದೆ, ರಕ್ತ, ರಸಿಕೆ, ಕೀವು, ತುಂಬಿ ಗಡುಸುಗಟ್ಟಿದ್ದರೆ, ಸೂಜಿ ಇಲ್ಲವೆ ಕೊಳವೆ ತೂರಿಸಿ ಒಸರಿಕೆಯನ್ನು ತೆಗೆಯಬೇಕಾಗುತ್ತದೆ.

ಗುಂಡಿಗೆಗೆ ಏನಾದರೂ ರೋಗ ಹತ್ತಿರುವಾಗ ಸಾಕಷ್ಟು ಬಲವಾಗಿ ಬಡಿದುಕೊಳ್ಳದಾಗ, ಪುಪ್ಪುಸಗಳಲ್ಲಿ ರಕ್ತದ ಹರಿವು ಕುಂದಿದರೆ, ರಕ್ತಗಟ್ಟಿ ಊದಿದ ಪುಪ್ಪುಸಗಳಿಂದ ಅಳ್ಳೆಪರೆಯ ಪೊಳ್ಳಿನೊಳಕ್ಕೆ ದ್ರವ ಜಿನುಗುತ್ತದೆ. ಹಲವೇಳೆ ಇದಕ್ಕಾಗಿ ಸೋಡಿಯಂ ಸೇವನೆಯನ್ನು ತಗ್ಗಿಸಿ ವಿಶ್ರಾಂತಿಯೊಂದಿಗೆ ಮೂತ್ರಕಾರಿ ಮದ್ದುಗಳನ್ನು ಕೊಡಬೇಕಾಗುವುದು.

**ಎದೆಗೂಡಿನ ಒಳಗೀವು :** ಒಳಗೀವು (ಎಂಪಯೀಮ) ಎನಿಸಿಕೊಳ್ಳುವ ಅಳ್ಳೆಪರೆಯ ಪೊಳ್ಳಿನಲ್ಲಿ ಸೇರಿರುವ ಕೀವಿಗೆ ಸೋಂಕು ಮಿತಿಮೀರಿ ಬಹುಕಾಲ ಇರುವುದೇ ಕಾರಣ. ಎಲ್ಲ ವಯಸ್ಸುಗಳಲ್ಲೂ ಹೀಗಾಗುವುದಾದರೂ ಎಳೆಯ ಮಕ್ಕಳಲ್ಲಿ ಇದು ಸಾಮಾನ್ಯ. ಕೀವು ಹೆಚ್ಚಿದಂತೆಲ್ಲ ಪುಪ್ಪುಸ ಮತ್ತು ಗುಂಡಿಗೆಯನ್ನು ಒತ್ತಿ ಇನ್ನೊಂದು ಪಕ್ಕಕ್ಕೆ ತಳ್ಳಿ ಅವುಗಳ ಕೆಲಸಗಳಿಗೆ ಅಡ್ಡಿಬರುವುದು. ಪುಪ್ಪುಸದ ಹಾಲೆಗಳ (ಲೋಬ್ಸ್) ನಡುವೆ, ಪುಪ್ಪುಸ ವಪೆಗಳ ನಡುವೆ ಕೆಲವೇಳೆ ಕೀವು ಸೇರುತ್ತದೆ. ಅಂಥ ಕೆಲವನ್ನು ಕೂಡ ಪತ್ತೆ ಹಚ್ಚಿ ಹೊರತೆಗೆಯುವುದು ಕಷ್ಟ. ಎದೆಯಲ್ಲಿ ಒಳಗೀವು ಸೇರಿದಾಗ, ಆ ಪಕ್ಕದಲ್ಲಿ ನೋವು ಒಣಕೆಮ್ಮು, ಏದುಸಿರು, ಒಣಚರ್ಮ, ಅಗಾಗ್ಗೆ ಕಡುಬೆವರಿಕೆ, ನಡುಕ, ಏರಿಳಿವ ಜ್ವರ ಬರಬಹುದು. ದಪ್ಪ ಸೂಜಿ ಹಾಕಿದಾಗ ಕೀವು ಇರುವುದು ಗೊತ್ತಾಗುತ್ತದೆ.

ಇದರ ಚಿಕಿತ್ಸೆ ಕಷ್ಟ. ಆಗಾಗ್ಗೆ ಎದೆಗೂಡಿಗೆ ಸೂಜಿಯನ್ನು ಇಲ್ಲವೆ ಕೊಳವೆಯನ್ನು ತೂರಿಸಿಯೇ ಕೆಲವೊಮ್ಮೆ ಶಸ್ತ್ರಕ್ರಿಯೆಯಿಂದಲೋ ಕೀವನ್ನು ಹೊರತೆಗೆಯುತ್ತಿರಬೇಕು. ಸೋಂಕಿಗೆ ಕಾರಣವಾದವುಗಳ ಎದುರಾಗಿ ಏಕಾಣುಜೀವಿಗಳ ವಿರೋಧಕ ಮದ್ದುಗಳನ್ನು ಆರಿಸಿಕೊಂಡು ಕೊಡಲು, ಕೀವಲ್ಲಿರುವ ಏಕಾಣುಜೀವಿಗಳನ್ನು ಖಚಿತವಾಗಿ ಗುರುತಿಸುವ ಪರೀಕ್ಷೆ ಆಗಬೇಕು. ಕೆಲವೇಳೆ ಸೋಂಕು ಹತ್ತಿ ಕೆಟ್ಟಿರುವ ಅಳ್ಳೆಪರೆಯ ದೊಡ್ಡ ಚೂರುಗಳನ್ನೇ ಶಸ್ತ್ರಕ್ರಿಯೆಯಿಂದ ಕಿತ್ತೆಸೆಯಬೇಕಾಗುತ್ತದೆ.

ಚಿಕಿತ್ಸೆ ಮುಗಿದ ಮೇಲೂ ಕೆಲವೇಳೆ ಪುಪ್ಪುಸ ಎಂದಿನ ಆಕಾರ ಗಾತ್ರಗಳಿಗೆ ಹಿಗ್ಗದು. ಇದಕ್ಕಾಗಿ ಬಲವಂತವಾಗಿ ಉಸಿರನ್ನು ಒತ್ತಿ ಹೊರಬಿಡುವುದರಿಂದ ಅನುಕೂಲ. ರೋಗದ ಎಳಸಿನಲ್ಲೇ ಒಂದು ಸೀಸೆಯಿಂದ ಇನ್ನೊಂದಕ್ಕೆ ನೀರನ್ನು ಗಾಜು ಕೊಳವೆ ಮೂಲಕ ಬಾಯಿಂದ ಊದುತ್ತಿದ್ದರೆ ಅನುಕೂಲವಾಗಿ ಕುಸಿದ ಪುಪ್ಪುಸ ಹಿಗ್ಗುವುದು.

**ಅಳ್ಳೆಪರೆಯ ಗಂತಿಗಳು :** ಅಳ್ಳೆಪರೆಯಲ್ಲಿ ಏಳುವ ಗಂತಿಗಳು (ಟ್ಯೂಮರ್ಸ್) ಬಹುಪಾಲು ನಡುಪರೆಗಂತಿಗಳು (ಮೀಸೋ ತೀಲಿಯೋಮಾಸ್). ಇವು ವಿಶೇಷವಾಗಿ, ಅರ್ಬುದ ದಂಥವೋ (ಮೆಲಿಗ್ನೆಂಟ್) ಆಗಿರಬಹುದು; ಒಂದೆಡೆಯಲ್ಲಿ ಮಿತಿಗೊಂಡಿರಬಹುದು; ಅಳ್ಳೆಪರೆಯ ತುಂಬ ಹರಡಿರಬಹುದು. ಮಿನಿದರ್ಶಕದಡಿಯಲ್ಲಿ (ಮೈಕ್ರೋಸ್ಕೋಪ್) ಪರೀಕ್ಷೆ ಮಾಡದೆ ರೋಗನಿದಾನ ಕಷ್ಟ. ಆದ್ದರಿಂದ ಶಸ್ತ್ರಕ್ರಿಯೆಯ ಮೂಲಕ ಅಂಗಾಂಶ ಪರೀಕ್ಷೆ (ಬಯಾಪ್ಸಿ) ಮಾಡಬೇಕಾಗುತ್ತದೆ; ಅಂದರೆ, ಒಂದು ಚೂರನ್ನು ಕೊಯ್ದು ತೆಗೆದು ಪರೀಕ್ಷಿಸಬೇಕು.

ಪುಪ್ಫುಸದಲ್ಲಿ ಏಳುವ : (ಪಂಗುಸಿರ್ನಾಳಜನಿಕ : ಬ್ರಾಂಕೊಜನಿಕ್) ಏಡಿಗಂತಿ (ಕ್ಯಾನ್ಸರ್) ಅಳ್ಳೆಪರೆಗೂ ಹತ್ತುವಂತೆ ಸುತ್ತಂಚಿಗೂ (ಪೆರಿಫೆರಿ) ಹಬ್ಬಿಕೊಂಡು ಸೋಂಕಿನ ಲಕ್ಷಣಗಳನ್ನು ತೋರುವುದು. ಮೈಯಲ್ಲಿ ಇನ್ನೆಲ್ಲೋ ಎದ್ದಿರುವ ಗಂತಿಗಳ ಚೂರುಗಳು ರೋಗ ಕೈಮೀರಿದ ಕೊನೆಗಾಲದಲ್ಲಿ ಮೈಯಲ್ಲೆಲ್ಲ ಹರಡುವಂತೆ ಅಳ್ಳೆಪರೆಯ ಮೇಲೂ ವಿಷಮ ಗಂತಿಯ ಒಳನಾಟುಗಳು (ಇಂಪ್ಲಾಂಟ್) ನೆಲೆಸುವುದು ಸಾಮಾನ್ಯ. ಆಗ ಅಳ್ಳೆಪರೆಯ ಸೂಸುಗೆಯ ದ್ರವ ಸಾಕಷ್ಟು ಕೂಡಿ ರಕ್ತಗೂಡಿರಲೂಬಹುದು. ಎಕ್ಸ್–ಕಿರಣ ಮತ್ತು ಸಿಟಿಸ್ಕ್ಯಾನ್ ಪರೀಕ್ಷೆ, ಕೆಲವೇಳೆ ಅಂಗಾಂಶ ಪರೀಕ್ಷೆಗಳಿಂದ ರೋಗ ಖಚಿತವಾಗುತ್ತದೆ. ಚಿಕಿತ್ಸೆಯಂತೂ ಕಷ್ಟವೇ. ಆದರೂ ಎಕ್ಸ್–ಕಿರಣಗಳ ಇಲ್ಲವೇ ವಿಕಿರಣಪಟು ಸಮಸ್ಥಾನಿಗಳ (ಐಸೊಟೋಪ್ಸ್) ವಿಕಿರಣತೆ, ಗಂತಿಯಣಗಿಕ ಮದ್ದುಗಳನ್ನು ಕೊಡುವುದರಿಂದ ಒಂದಷ್ಟು ಕಾಲ ರೋಗ ಶಮನ ಮಾಡಬಹುದು.

**ಮೇದರಸತುಂಬೆದೆ :** ಕರುಳಿನಿಂದ ಎದೆಗೂಡಿನ ಮೇಲಿನ ದೊಡ್ಡ ಸಿರಗಳಿಗೆ ಮೇದರಸವನ್ನು (ಕೈಲ್) ಸಾಗಿಕ ಹಾಲ್ರಸದ ಕೊಳವೆಯಾದ ಎದೆಗೂಡಿನ ಸಾಗುನಾಳ (ತೊರ್‍ಯಾಸಿಕ್ ಡಕ್ಟ್) ಒಡೆದುಕೊಂಡರೆ ಅಳ್ಳೆಪರೆಯ ಪೊಳ್ಳಿನೊಳಕ್ಕೆ ಮೇದರಸ ಸೋರಿ ತುಂಬಹುದು. ಹೀಗಾಗುವುದೇ ಮೇದರಸತುಂಬೆದೆ (ಕೈಲೋತೊರ್‍ಯಾಕ್ಸ್). ಹಾಲಂತಿರುವ ಕೊಬ್ಬುಗೂಡಿದ ಈ ರಸವನ್ನು ಚೆನ್ನಾಗಿ ಗುರುತಿಸಬಹುದು. ಅಲ್ಲದೆ ಮೇದರಸತುಂಬೆದೆಯ ಬಲು ಸಾಮಾನ್ಯ ಕಾರಣಗಳು ಎರಡು: ಪೆಟ್ಟು ಗಾಯಗಳು; ಎಲ್ಲೋ ಇರುವ ಗಂತಿ ಇನ್ನೆಲ್ಲಿಗೋ ಹರಡುವುದು.

**ರಕ್ತೆದೆಗೂಡು :** ಎದೆಗೂಡಿನ ಗೋಡೆಯಲ್ಲಿನ ದೊಡ್ಡ ರಕ್ತನಾಳಗಳಿಗೆ ಪೆಟ್ಟಾಗುವ ಅಪಾಯಕರ ಗಾಯಗಳಿಂದ ಅಳ್ಳೆಪೊರೆಯ ಪೊಳ್ಳಿನಲ್ಲಿ ರಕ್ತ ಸೇರಿದ್ದಕ್ಕೆ ರಕ್ತೆದೆಗೂಡು (ಹೀಮೋತೊರ್‍ಯಾಕ್ಸ್) ಎಂದಿದೆ. ಗಾಳಿದುಂಬೆದೆಯೊಂದಿಗೆ (ನ್ಯೂಮೋತೊರ್‍ಯಾಕ್ಸ್) ಆಗಿರುವ, ಒಳಾಂಗದ, ಅಂಗೋಡೆಯ ಅಳ್ಳೆಪರೆಗಳ ನಡುವಣ ಅಂಟಿಗೆಗಳ ಒಡೆಬಿರಿತದಿಂದಲೂ ಕೆಲವೇಳೆ ಗೊತ್ತಾಗುವ ಮೊದಲೇ ತೀವ್ರತೇರುವ ಮೂಲಗಾಣದ (ಅಕ್ಕಲ್ಟ್) ರಕ್ತ ಸುರಿಯಬಹುದು. ಹೀಗೆ ಒಳಗೇ ರಕ್ತ ಸುರಿದೂ ಸುರಿದು ರೋಗಿ ಅಪಾರ ರಕ್ತವನ್ನು ಕಳೆದುಕೊಳ್ಳಬಹುದು. ಎದೆಗೂಡಿನಲ್ಲಿನ ಯಾವುದಾದರೂ ರಕ್ತನಾಳ ಒಂದೆಡೆ ಬುಡ್ಡೆಯಂತೆ ಹಿಗ್ಗಿರುವ ಅಗಲುಬ್ಬು (ಅನ್ಯೂರಿಸಂ) ಒಡೆದುಕೊಂಡರೆ ಎದೆಗೂಡಿನ ತುಂಬ ಕೂಡಲೇ ರಕ್ತ ಸುರಿದು ರೋಗಿ ಸಾಯಬಹುದು. ಸೂಜಿ ಹಾಕುವುದರಿಂದಲೂ ಎಕ್ಸ್–ಕಿರಣ ಪರೀಕ್ಷೆಯಿಂದಲೂ ರಕ್ತೆದೆಗೂಡನ್ನು ಪತ್ತೆ ಹಚ್ಚಬಹುದು. ಇದನ್ನು ಗುಣಪಡಿಸಲು ತೆರೆದ ಹೃದಯ ಶಸ್ತ್ರಕ್ರಿಯೆ ಮಾಡಬೇಕಾಗಬಹುದು.

**ತಂತೆದೆಗೂಡು :** ರಕ್ತವನ್ನು ಹೆಪ್ಪುಗಟ್ಟಿಸುವ ವಸ್ತುವಾದ ತಂತುಕ (ಫೈಬ್ರಿನ್) ಅಳ್ಳೆಪರೆ ಪೊಳ್ಳಿನ ದ್ರವದಲ್ಲಿ ಅಪಾರವಾಗಿರಬಹುದು. ಅಳ್ಳೆಪರೆಯ ಮೇಲೆ ತಂತುಕ ಅಂಟಿಕೊಂಡು ಕೊನೆಗೆ ಕಲೆಗಟ್ಟಿದ (ಸ್ಕಾರ್) ಊತಕವಾಗಿ ಗಡುಸುಗಟ್ಟಬಹುದು. ಇದೇ ತಂತೆದೆಗೂಡು (ಫೈಬ್ರೊತೊರ್‍ಯಾಕ್ಸ್) ಕೆಲವು ವೇಳೆ ಪುಪ್ಪುಸದ ಮೇಲ್ತುದಿಯಂಥ ಒಂದು ಭಾಗವನ್ನೊ ಪೂರ್ತಿಯನ್ನೊ ಒಂದು ದಪ್ಪನೆಯ ಹಿಗ್ಗದ ಹೊದಿಕೆಯಲ್ಲಿ ಸುತ್ತುಗಟ್ಟುವಷ್ಟಾಗಿ, ಪುಪ್ಪುಸ ಹಿಗ್ಗಲು ಬಿಡದೆ ಉಸಿರಾಟಕ್ಕೆ ಆತಂಕಿಸಬಹುದು. ಅಳ್ಳೆಪರೆ ಗಡಸುಗಟ್ಟಿರುವೆಡೆ ಪುಪ್ಪುಸ ಮುದುರಿಕೊಂಡು ಎದೆಯಲ್ಲಿ ವಿಕಾರ ಕಾಣುವುದು; ಇದು ಹೆಚ್ಚಿದಾಗ ಬೆನ್ನುಹುರಿಯೂ ಬಾಗಬಹುದು. ಎಲ್ಲರಲ್ಲೂ ಇದನ್ನು ಸರಿಪಡಿಸುವುದಾಗದು. ಆರಿಸಿದ ಕೆಲವು ರೋಗಿಗಳಲ್ಲಿ ಶಸ್ತ್ರಕ್ರಿಯೆಯಿಂದ ಇದನ್ನು ತೆಗೆದುಹಾಕಿದರೆ ಉಸಿರಾಟ ತುಸು ಸರಾಗ ಆಗಬಹುದು. ಅಲ್ಲಲ್ಲಿ ಅಷ್ಟಷ್ಟು ತಂತುಕ ಅಂಟಿರುವುದು ಸಾಮಾನ್ಯವಾದರೂ ಅದು ಲೆಕ್ಕಕ್ಕಿಲ್ಲ. ಇಂಥವು ಕ್ಷಯ ಅಂಟಿ ವಾಸಿಯಾದ ಕಲೆಗಳು. (ಕೆ.ಜಿ.ವೈ.)

ಆ: ವರ್ಣಮಾಲೆಯಲ್ಲಿ ಎರಡನೆಯ ಅಕ್ಷರವಾದ 'ಆ'ಕಾರ ಪ್ರ.ಶ.ಪೂ.3ನೆಯ ಶತಮಾನದ ಅಶೋಕನ ಬ್ರಾಹ್ಮೀಲಿಪಿಯಲ್ಲಿ ಪ್ರತ್ಯೇಕ ರೂಪವನ್ನು ತಾಳದೆ, ಅ ಕಾರಕ್ಕೆ ದೀರ್ಘವನ್ನು ಸೂಚಿಸುವ ಒಂದು ಸಣ್ಣ ರೇಖೆಯನ್ನು ಮಾತ್ರ ಒಳಗೊಂಡಿದೆ. ಈ ರೂಪವೇ ಶಾತವಾಹನ ಕದಂಬ, ಗಂಗ, ಬಾದಾಮಿ ಚಾಳುಕ್ಯರ ಕಾಲಗಳಲ್ಲೂ ಮುಂದುವರೆದಿದೆ. ಈ ಕಾಲದ ರೂಪಗಳಲ್ಲಿ ದೀರ್ಘ ಸೂಚಕ ರೇಖೆ ಡೊಂಕಾಗುತ್ತಾ ಹೋಗಿ ಕೊನೆಗೆ ಹೊಯ್ಸಳ ಕಾಲದಲ್ಲಿ ಒಂದು ಸಣ್ಣ ಕೊಂಡಿಯ ಆಕಾರವನ್ನು ಪಡೆದಿದೆ. ಪ್ರಶ.15 ನೆಯ ಶತಮಾನದ ವಿಜಯನಗರ ಕಾಲದ ಶಾಸನಗಳಲ್ಲಿ ಈ ಕೊಂಡಿ ಅಕ್ಷರಕ್ಕೆ ಸೇರಿಕೊಂಡಿದೆ. ಈ ರೂಪವೇ ಮುಂದಿನ ಶತಮಾನಗಳಲ್ಲಿ ಮುಂದುವರಿದು ಈಗಿನ ಆ ಕಾರವಾಗಿದೆ. ಕನ್ನಡ ವರ್ಣಮಾಲೆಯ ಈ ಎರಡನೆಯ ಅಕ್ಷರ ವಿವೃತ ಮಧ್ಯ ಅಗೋಲ ದೀರ್ಘಸ್ವರವನ್ನು ಸೂಚಿಸುತ್ತದೆ.

ಅಶೋಕ ಪ್ರ.ಶ.ಪೂ. ೩ನೆಯ ಶತಮಾನ
ಸಾತವಾಹನ ಪ್ರ.ಶ. ೨ನೆಯ ಶತಮಾನ
ಕದಂಬ ಪ್ರ.ಶ. ೫ನೆಯ ಶತಮಾನ
ಗಂಗ ಪ್ರ.ಶ. ೬ನೆಯ ಶತಮಾನ
ಬಾದಾಮಿಚಳುಕ್ಯ ಪ್ರ.ಶ. ೬ನೆಯ ಶತಮಾನ
ರಾಷ್ಟ್ರಕೂಟ ಪ್ರ.ಶ. ೯ನೆಯ ಶತಮಾನ
ಕಲ್ಯಾಣಚಾಳುಕ್ಯ ಪ್ರ.ಶ. ೧೧ನೆಯ ಶತಮಾನ
ಹೊಯ್ಸಳ ಪ್ರ.ಶ. ೧೩ನೆಯ ಶತಮಾನ
ವಿಜಯನಗರ ಪ್ರ.ಶ. ೧೫ನೆಯ ಶತಮಾನ
ಮೈಸೂರು ಅರಸರು ಪ್ರ.ಶ. ೧೮ನೆಯ ಶತಮಾನ

**ಆಂಕೋರ್‌ಥಾಮ್ :** ಕಾಂಭೋಜ (ಕಾಂಬೋಡಿಯ) ದೇಶದ ಭವ್ಯ ವಾಸ್ತುಶಿಲ್ಪಗಳ ನಗರ. ಕಾಂಭೋಜದ ಖ್ಮರ್ ಭಾಷೆಯಲ್ಲಿ ಆಂಕೋರ್‌ಥಾಮ್ (ಥೋಮ್) ಎಂದರೆ ಮಹಾನಗರ ಎಂದರ್ಥ. ಪ್ರಸಿದ್ಧ ರಾಜನಾದ 7ನೆಯ ಜಯ ವರ್ಮ ಇದರ ನಿರ್ಮಾಪಕ. ಚಂಪ ರಾಜ್ಯದ ಸೈನ್ಯ ಈ ರಾಜಧಾನಿಯನ್ನು ಹಾಳುಮಾಡಿತ್ತಾದರೂ ಈ ಸ್ಥಳದಲ್ಲಿ ಅಳಿದುಳಿದ ಅವಶೇಷಗಳನ್ನು ಸೇರಿಸಿ ಜಯವರ್ಮ ಇಲ್ಲಿ ಮಹಾನಗ ರವನ್ನು ನಿರ್ಮಿಸಿದ. ಈ ನಗರದ ವಿಸ್ತಾರ 10 ಚ.ಕಿಮೀ. ಕೋಟೆ ಗೋಡೆಯ ಎತ್ತರ ಸು.8 ಮೀ, ಉದ್ದ 12ಕಿಮೀ. ಇದರ ಸುತ್ತಲೂ 100 ಮೀ ಅಗಲದ ಕಂದಕವಿದೆ. ಈ ನಗರಕ್ಕೆ

ವಿಷ್ಣು ದೇವಾಲಯ

20 ಮೀ ಎತ್ತರದ 5 ಮಹಾದ್ವಾರಗಳಿವೆ. ಕಂದಕಕ್ಕೆ ಮಾಡಿದ ಕಿರು ಸೇತುವೆಯ 2 ಬದಿಗಳಲ್ಲಿ ಕಟಾಂಜನಗಳಿವೆ. ಇದರ ಒಂದು ಬದಿಯಲ್ಲಿ 54 ದೇವತೆಗಳು, ಇನ್ನೊಂದು ಬದಿಯಲ್ಲಿ 54 ರಾಕ್ಷಸರು, ವಾಸುಕಿ ಸರ್ಪವನ್ನು ಹಗ್ಗದಂತೆ ಮಾಡಿಕೊಂಡು ಸಮುದ್ರ

ಮಂಥನ ಮಾಡಿದ ಕತೆಯನ್ನು ಚಿತ್ರಿಸಲಾಗಿದೆ. 5 ಮಹಾದ್ವಾರಗಳ ಮೇಲೆ ಅದ್ಭುತವಾದ ಚತುರ್ಮುಖ ಅವಲೋಕಿತೇಶ್ವರ ಬುದ್ಧನ ಭವ್ಯ ಶಿಲ್ಪವಿದೆ. ಕೋಟೆಯೊಳಗೆ ಬಯಾನ್, ಬಫೂನ್ ಮತ್ತು ಫಿಮಿನಿಕ್ ಅರಮನೆ ಸಂಕೀರ್ಣ (ದೇವಲೋಕ) ಹಾಗೂ ಗಜವೇದಿಕೆಗಳಿವೆ. ನಗರದ ಮಧ್ಯದಲ್ಲಿ ಬಯಾನ್ ಎಂದು ಪ್ರಸಿದ್ಧವಾಗಿರುವ ಪರ್ವತ ದೇವಾಲಯವಿದೆ. ಇದರ 3ನೆಯ ಅಂತಸ್ತಿನಲ್ಲಿ ಅವಲೋಕಿತೇಶ್ವರನ 172 ಮುಖವನ್ನು ಬಿಂಬಿಸುವ ಶಿಖರಗಳಿವೆ; ಜೊತೆಗೆ ಸು.1200 ಮೀ ಉದ್ದದ ವರೆಗೆ 1100 ಅಪರೂಪದ ಉಬ್ಬುಶಿಲ್ಪಗಳಿವೆ. ಒಂದನೆಯ ಅಂತಸ್ತಿನಲ್ಲಿ ಗೋಡೆ ಮೇಲೆ 12ನೆಯ ಶತಮಾನದ ಜನಸಾಮಾನ್ಯರ ದೈನಂದಿನ ಜೀವನ ದೃಶ್ಯಗಳನ್ನು

ಬಿಡಿಸಲಾಗಿದೆ. ಆರಂಭದಲ್ಲಿ ಬಯಾನ್ 2 ಅಂತಸ್ತಿನ ಶಿವದೇವಾಲಯವಾಗಿತ್ತು. ಅನಂತರ 2ನೆಯ ಅಂತಸ್ತಿನ ಮೇಲೆ ಅಡ್ಡಾದಿಡ್ಡಿಯಾಗಿ ಬೌದ್ಧಧರ್ಮದ ಮಹಾಯಾನ ಪಂಥದ ಕಟ್ಟಡವನ್ನು ನಿರ್ಮಿಸಲಾಯಿತು. ಅನಂತರ ಹಿಂದುಧರ್ಮ ಮತ್ತೆ ಉನ್ನತ ಸ್ಥಿತಿಗೆ ಬಂದಾಗ 3ನೆಯ ಅಂತಸ್ತಿನ ಬೌದ್ಧಧರ್ಮದ ಶಿಲ್ಪಗಳನ್ನು ಹೂಗೊಂಚಲಾಗಿ ಮಾರ್ಪಡಿಸಲಾಯಿತು. 2ನೆಯ ಅಂತಸ್ತಿನ ಗೋಡೆಯ ಒಳಮೈಯಲ್ಲಿ ಹಿಂದು ಪೌರಾಣಿಕ ಕತೆಗಳನ್ನು ನಿರೂಪಿಸಲಾಗಿದೆ. ಬಫೋನ್ ದೇವಾಲಯವನ್ನು ಮೇರು ಪರ್ವತದಾಕೃತಿಯಂತೆ ನಿರ್ಮಿಸಲಾಗಿದೆ. ಇದನ್ನು 2ನೆಯ ಉದಯಾದಿತ್ಯವರ್ಮನ (1050–66) ಅವಧಿಯಲ್ಲಿ ನಿರ್ಮಿಸಲಾಗಿದೆ. ಇದರ ಮಧ್ಯಭಾಗ 43ಮೀ ಎತ್ತರವಿದೆ. ಇದು ಸುಂದರವಾದ ದ್ವಾರಬಂಧ ಹಾಗೂ ಅಷ್ಟಕೋನ ಕಂಬಗಳಿಂದ ಅಲಂಕೃತವಾಗಿದೆ. ಗರ್ಭಗೃಹದ ಮೇಲಿನ ಶಿಖರ ಉಳಿದಿಲ್ಲ. ಇದರ ಪಶ್ಚಿಮಕ್ಕೆ 40ಮೀ ಉದ್ದದ ಬುದ್ಧನ ಮಹಾಪರಿನಿರ್ವಾಣ ಶಿಲ್ಪವಿದೆ. 5ನೆಯ ಜಯವರ್ಮ (968–1001) ಅರಮನೆ ಸಂಕೀರ್ಣವನ್ನು ಕಟ್ಟಿಸಿದ. ಇದರ ಪೂರ್ವದ ಬದಿಯಲ್ಲಿ ಗಜವೇದಿಕೆ ಇದೆ. ಈ ಆವರಣದೊಳಗೆ ನೂರಾರು ಮರದ ಕಟ್ಟಡಗಳಿದ್ದವು. ಉತ್ತರ ಗೋಡೆಯ ಹತ್ತಿರ ಕೆಂಪುಕಲ್ಲಿನ 2 ಕೊಳಗಳಿವೆ. ಫಿಮಿನಿಕವನ್ನು ರಾಜೇಂದ್ರವರ್ಮ (944–68) ಕಟ್ಟಿಸಿದ. ಇದು 3 ಅಂತಸ್ತಿನ ಮೇರು ಪರ್ವತದಾಕೃತಿಯ ದೇವಾಲಯವಾಗಿದ್ದು ಈಗ ದುಸ್ಥಿತಿಯಲ್ಲಿದೆ. ಉತ್ತರದ ಗೋಡೆ ಬದಿಯಲ್ಲಿ ಪ್ರಿಪಲಿಲೆ ಬೌದ್ಧ ದೇವಾಲಯವಿದೆ. ಇದನ್ನು ನಿರ್ಮಿಸಿದವನು 7ನೆಯ ಜಯವರ್ಮ. ಇದರ ಪೂರ್ವ ಬದಿಗೆ ಶಿಲುಬೆಯಾಕಾರದ ತೆಪ್‌ಪ್ರೆನಮ್ ದೇವಾಲಯವಿದೆ. ಇದರಲ್ಲಿ ಬೌದ್ಧ ಮತ್ತು ಹಿಂದು ದೇವಾಲಯಗಳಿವೆ. 7 ಮೀ ಎತ್ತರದ ಲೆಪರ್‌ಕಿಂಗ್ ವೇದಿಕೆಯ ಮೇಲೆ ಇತ್ತೀಚಿನ ಮೂರ್ತಿಯೊಂದಿದೆ. ಇದು ಆಂಕೋರ್‌ಥಾಮ್ ನಿರ್ಮಿಸಿದ ರಾಜ ಯಶೋವರ್ಮನ ಮೂರ್ತಿ ಎಂಬುದು ಸ್ಥಳೀಯರ ನಂಬಿಕೆ. ಆದರೆ ಇದು ಶಿವನ ಮೂರ್ತಿಯಂತಿದೆ. ಮುಂದಿನ ತಡೆಗೋಡೆಗಳ ಮೇಲೆ ಕುಳಿತ ಭಂಗಿಯ ಅಪ್ಸರೆಯರ, ಸಭಿಕರ, ರಾಜಕುಮಾರರಿಂದ ಒಡಗೂಡಿದ ಕಿರೀಟಧಾರಿ ರಾಜನ ಉಬ್ಬುಶಿಲ್ಪಗಳ 5 ಪಟ್ಟಿಕೆಗಳಿವೆ. 12ನೆಯ ಶತಮಾನದಲ್ಲಿ ನಿರ್ಮಿಸಿದ 350ಮೀ ಉದ್ದದ ಗಜವೇದಿಕೆ ವಾಸ್ತುಶಿಲ್ಪ ಶೈಲಿಯಲ್ಲೂ ಗಾತ್ರದಲ್ಲೂ ಪ್ರಪಂಚವಿಖ್ಯಾತವಾಗಿದೆ. *

**ಆಂಕೋರ್‌ವಾಟ್ :** ಪ್ರಪಂಚದ ಅತ್ಯದ್ಭುತ ಶಿಲ್ಪಕಲಾಮಾದರಿ. ಭಾರತೀಯ ವರ್ತಕರ ಅನವರತ ವ್ಯಾಪಾರ ಉದ್ದೇಶಿತ ಭೇಟಿಗಳಿಂದ ಪ್ರಸಕ್ತಶಕೆ ಪ್ರಾರಂಭವಾಗುವುದಕ್ಕೂ ಮೊದಲು ಈಗಿನ ಕಾಂಬೋಡಿಯ ಪುರಾತನ ಕಾಲದಿಂದ (ಕಾಂಭೋಜ) ಕಂಬೂಜ ದೇಶ ಎಂದು ಕರೆಯಲ್ಪಡುತ್ತಿತ್ತು. ರಾಜಕೀಯ ಪ್ರಭಾವದಿಂದ 1–4ನೆಯ ಶತಮಾನದವರೆಗೂ ಎರಡೂ ಪ್ರದೇಶಗಳಲ್ಲಿ (ಭಾರತ ಮತ್ತು ಕಾಂಬೋಡಿಯ) ಪರಸ್ಪರ ವಿನಿಮಯಗಳು ಅಭಿವೃದ್ಧಿಗೊಂಡವು. ಆದ ಕಾರಣ ಸ್ವಾಭಾವಿಕವಾಗಿ ಭೂಮಾರ್ಗ ಮತ್ತು ಸಮುದ್ರದಿಂದ ಭಾರತೀಯ ಪ್ರಭಾವ ಕಾಂಬೋಡಿಯ ಮತ್ತು ಭಾರತ–ಚೀನ ಗಡಿ ಪ್ರದೇಶದಲ್ಲಿ ಅಭಿವೃದ್ಧಿ ಹೊಂದುತ್ತಿದ್ದ ವಾಸ್ತುಶಿಲ್ಪದ ಮೇಲೆ ಅಗಾಧವಾಗಿ ಆಯಿತು. ಕಾಂಬೋಡಿಯ ದೇಶದ ಸ್ಥಳೀಯ ಖ್ಮರ್ ಶಿಲ್ಪಗಳು ವಿವಿಧ ರೀತಿಯ ಭಾರತೀಯ ಶಿಲ್ಪಶಾಸ್ತ್ರದ ಅಂಶಗಳನ್ನು ಸಮಾಗಮಗೊಳಿಸಿ ಮೂಲಕ್ಕಿಂತ ಶ್ರೇಷ್ಠವಾದ ತಮ್ಮದೇ ಶೈಲಿಯನ್ನು ರೂಢಿಸಿಕೊಂಡರು. ಉದಾಹರಣೆಗೆ ಮಹಾಮೇರು ಪರ್ವತದ ಪರಿಕಲ್ಪನೆ ಭಾರತದಲ್ಲಿ ಪ್ರಾಯಶಃ 9–10ನೆಯ ಶತಮಾನಕ್ಕೂ ಮೊದಲಲ್ಲಿ ಕಂಡುಬರುತ್ತದೆ. ಮಹಾಮೇರು ಕ್ಷೀರ ಸಾಗರದ ಮಧ್ಯ ಇರುವ ದೇವತೆಗಳ ನಿವಾಸವೆಂದು ಹಿಂದಿನಿಂದ ನಂಬಲಾಗಿದೆ. ಈ ಪರ್ವತ ಅಗಾಧ ಗೋಡೆಯಿಂದ ಸುತ್ತುವರೆಯಲ್ಪಟ್ಟಿದೆ ಎನ್ನಲಾಗುತ್ತದೆ. ಈ ಕಲ್ಪನೆಯನ್ನು ಸಮನ್ವಯಗೊಳಿಸಿರುವುದಲ್ಲದೆ, ಸುಂದರವಾಗಿ ದೇವರಾಜ ಪಂಥದಲ್ಲಿ ಸಮನ್ವಯಗೊಂಡು 12ನೆಯ ಶತಮಾನದಲ್ಲಿ ಪ್ರಪಂಚದ ಅತ್ಯದ್ಭುತ ಶಿಲ್ಪಕಲಾಮಾದರಿಯಾಗಿ ಆಂಕೋರ್ ವಾಟ್ ಎಂದು ಪ್ರಖ್ಯಾತವಾಗಿದೆ.

ಎರಡನೆಯ ಸೂರ್ಯವರ್ಮನಿಂದ 1112–1152ರಲ್ಲಿ ಆಂಕೋರ್‌ವಾಟ್ ನಿರ್ಮಿಸಲ್ಪಟ್ಟು ವಿಷ್ಣುವಿಗೆ ಸಮರ್ಪಿಸಲ್ಪಟಿದೆ. ಆಂಕೋರ್ ವಾಟ್ ಸೂರ್ಯವರ್ಮನಿಗೆ ದೇವರಾಜನೆಂಬ ಹೆಸರು ತಂದಿದೆ. ದೇವಾಲಯದ ಸಂಕೀರ್ಣ 200 ಮೀ ಅಗಲದ ಕಂದಕದಿಂದ ಸುತ್ತುವರಿದಿದೆ. ಅಚ್ಚು ಹಾಕಿದ ದೊಡ್ಡ ದೊಡ್ಡ ಮರಳುಗಲ್ಲು ಬಂಡೆಗಳಿಂದ ನಿರ್ಮಿಸಿದ ಮೆಟ್ಟಿಲು ಕಟ್ಟೆಯುಳ್ಳ ಕ್ಷೀರ ಸಾಗರವನ್ನು ಪ್ರತಿಬಿಂಬಿಸಿದೆ. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯಕ್ಕೆ ಪಶ್ಚಿಮ ಭಾಗದಲ್ಲಿ ಕಂದಕವನ್ನು ದಾಟಲು 11.6 ಮೀ ಅಗಲದ ಮರಳುಗಲ್ಲು ಇಟ್ಟಿಗೆಗಳಿಂದ ಹಾಸಲ್ಪಟ್ಟ ಮಣ್ಣು ಕಟ್ಟೆ ದಾರಿಗೆ ನಿರ್ಮಿಸಿರುವ ಸಣ್ಣ ಸೇತುವೆ ಹಾದಿಗೆ ಅಡ್ಡಕಂಬಿಯನ್ನು ಸರ್ಪಾಕೃತಿಗಳಿಂದ ಅಲಂಕರಿಸಿ ಮಧ್ಯೆ ಮಧ್ಯೆ ಸಮಾನಾಂತರದಲ್ಲಿ ಐದು ಅಥವಾ ಏಳು ಹೆಡೆ ಸರ್ಪಗಳನ್ನು (ನಾಗರಗಳನ್ನು)ಕೆತ್ತಲಾಗಿದೆ. ಈ ಹಾದಿ ನಾಲ್ಕನೆಯ ಪ್ರಾಂಗಣದ ಮಹಾದ್ವಾರಕ್ಕೆ ಕೊಂಡೊಯ್ಯುತ್ತದೆ. ನಾಲ್ಕನೆಯ ಪ್ರಾಂಗಣವನ್ನು ಕೆಂಪು ಮರಳುಗಲ್ಲು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಇದು ಮಹಾಮೇರುವನ್ನು ಸುತ್ತುವರಿದ ಹೊರಗೋಡೆಯನ್ನು ಪ್ರತಿನಿಧಿಸುತ್ತದೆ. ಇದು 1025ಮೀx800 ಮೀ ಪ್ರದೇಶವನ್ನು ಆವರಿಸಿದೆ. ನಾಲ್ಕು ಮಹಾದ್ವಾರಗಳ ಪೈಕಿ ಪಶ್ಚಿಮ ದಿಕ್ಕಿನ ಮಹಾದ್ವಾರ ಭವ್ಯವಾಗಿದ್ದು 220ಮೀ ಉದ್ದವಿದೆ.

ಮಹಾದ್ವಾರದ ದ್ವಾರ ಮಂಟಪ ಕೈಸಾಲೆಗೆ ಐದು ಪ್ರವೇಶಗಳಿದ್ದು, ಮಧ್ಯದ್ದು ಎಲ್ಲಕ್ಕಿಂತಲೂ ದೊಡ್ಡದಾಗಿದೆ. ಮಧ್ಯದ ಮೂರು ಪ್ರವೇಶಗಳಿಗೆ ಮುಕುಟ ಪ್ರಾಯವಾಗಿ ಗೋಪುರಗಳಿದ್ದು ಕಟ್ಟಡದ ಮುಂಭಾಗವನ್ನು ಅಪ್ಸರೆಯರ ಉಬ್ಬುಚಿತ್ರ ನಿಖರವಾದ ಉಬ್ಬುಚಿತ್ರಗಳಿಂದ ಸುಂದರವಾಗಿ ಅಲಂಕರಿಸಲಾಗಿದೆ. ಎಲ್ಲ ಪ್ರದೇಶಗಳೂ ಶಿಲುಬೆಯಾಕಾರದ ವಿನ್ಯಾಸ ಹೊಂದಿದ್ದು ಮೆಟ್ಟಿಲುಗಳಿಲ್ಲದ ಕಾರಣ ಆನೆಗಳಿಗೆ ಪ್ರವೇಶದ್ವಾರವಾಗಿದ್ದಿರಬಹುದು.

ಪಶ್ಚಿಮದ ಪ್ರವೇಶ ದ್ವಾರದ ಅನಂತರ 8 ಮೀ ಅಗಲದ ಮಣ್ಣುಕಟ್ಟೆ ಹಾಸುಗಳಲ್ಲಿನ ಹಾದಿ 360 ಮೀ ಉದ್ದವಿದೆ. ಹಾಸುದಾರಿಯ ಎರಡೂ ಪಾರ್ಶ್ವಗಳಲ್ಲಿ ನಿರ್ಮಿಸಿರುವ ಕಟಾಂಜನದ ಸಾಲಿನಲ್ಲಿ, ಸಮಾನಾಂತರದಲ್ಲಿ ಹಾವಿನ ಹೆಡೆಗಳನ್ನು ಕೆತ್ತಲಾಗಿದೆ. ಈ ಸಂಕೀರ್ಣದ ಹಾಸುಹಾದಿಯ ಎರಡೂ ಪಾರ್ಶ್ವದಲ್ಲಿರುವ ಎರಡು ಗ್ರಂಥಾಲಯಗಳು, ಬೃಹದಾಕಾರವಾದ ಬಯಲು ಪ್ರದೇಶ ಮತ್ತು ಅದಕ್ಕೆ ಪೂರ್ವಭಾಗದಲ್ಲಿನ ಚೌಕಾಕಾರದ ಎರಡು ಕೊಳಗಳು ದೇವಾಲಯಕ್ಕೆ ಮೆರಗು ನೀಡುತ್ತವೆ. ಎರಡು ಮತ್ತು ಮೂರನೆಯ ಆವರಣಗಳ ಮಧ್ಯೆ ಮತ್ತೆರಡು ಗ್ರಂಥಾಲಯಗಳಿದ್ದು ಕೊಳರಹಿತವಾಗಿವೆ. ಮೂಲ ದೇವಾಲಯ ಗಳಿದ್ದು ವಿನ್ಯಾಸದ ಪ್ರಕಾರ ಈ ಗ್ರಂಥಾಲಯಗಳು ಪರಿವಾರದೇವತೆಗಳಿಗೆ ನಿರ್ಮಿತವಾಗಿದ್ದ ಚಿಕ್ಕ ಗುಡಿಗಳಾಗಿರಬಹುದು. ಆದರೆ ಬುದ್ಧನಿಗೆ ಪುನಃ ಸಮರ್ಪಿತವಾದಾಗ ಗ್ರಂಥಾಲಯಗಳಾಗಿ ಮಾರ್ಪಟ್ಟಿರಬಹುದು. ಪೂರ್ವಭಾಗದ 4ನೆಯ ಆವರಣದ ಪ್ರಮುಖ ಮಧ್ಯ ಪ್ರವೇಶದ್ವಾರಕ್ಕೆ ಇರುವ ಕಾಲು ಹಾದಿಯಲ್ಲಿ ಕಟಾಂಜನ 3ಮೀ ಎತ್ತರದ ಸರ್ಪಾಕಾರ ಚಿಕ್ಕ, ಕಂಬಗಳ ಸಾಲು ಹೊಂದಿ ಕೊಂಡಿದ್ದು, ಇದು 3ಮೀ ಎತ್ತರದ ವೇದಿಕೆಗೆ ಶಿಲುಬೆಯಾಕಾರದ 4ನೆಯ ಆವರಣದಿಂದ ನೇರವಾಗಿ ಸಂಪರ್ಕವನ್ನು ಕಲ್ಪಿಸುತ್ತದೆ. ವೇದಿಕೆಯ ಮಿಕ್ಕ ಮೂರು ಭಾಗಗಳಲ್ಲಿ ಮೆಟ್ಟಿಲು ಗಳಿವೆ. ಮೆಟ್ಟಿಲುಗಳನ್ನು ರಕ್ಷಿಸುತ್ತಿರುವಂತೆ ಮುದುರಿ ಕುಳಿತ ಸಿಂಹಗಳ ದೃಶ್ಯ, ವೇದಿಕೆಯ ಗಾಂಭೀರ್ಯವನ್ನು ಹೆಚ್ಚಿಸುತ್ತವೆ. ಪ್ರಾಚೀನರು ವೇದಿಕೆಯಂತಿರುವ ಪ್ರದೇಶವನ್ನು ರಂಗಮಂಚದಂತೆ ಉಪಯೋಗಿಸುತ್ತಿದ್ದಿರಬಹುದು. ಇವತ್ತಿಗೂ ಈ ವೇದಿಕೆಯನ್ನು ವಿಶೇಷ ಸಮಾರಂಭಗಳಲ್ಲಿ ಸಾಂಪ್ರದಾಯಿಕ ನೃತ್ಯ–ಸಂಗೀತಗಳಿಗೆ ಉಪಯೋಗಿಸಲಾಗುತ್ತದೆ.

ಮೂರು ಮತ್ತು ನಾಲ್ಕನೆಯ ಆವರಣಗಳ ಮಧ್ಯೆ ಸರ್ಪ ಕಟಾಂಜನಗಳಿದ್ದು, ಭೂಮಿಯಿಂದ ಸು. 3ಮೀ ಎತ್ತರದಲ್ಲಿ ಶಕ್ತಿಯುತ ಬೃಹತ್ ಚೌಕಟ್ಟಿನ ತಳಪಾಯದ ಮೇಲಿದೆ. 3ನೆಯ ಆವರಣ, 4.5ಮೀ ಎತ್ತರದ ಚೌಕಟ್ಟಿನ ತಳಪಾಯದ ಮೇಲೆ ಭವ್ಯವಾಗಿ ನಿಂತಿದೆ. 4ನೆಯ ಆವರಣದಂತೆಯೇ ಮೂರನೆಯ ಆವರಣದ ಪೂರ್ವ ಮತ್ತು ಪಶ್ಚಿಮ ಕೈಸಾಲೆಗಳ ದ್ವಾರ ಮಂಟಪಗಳು 5 ಪ್ರವೇಶದ್ವಾರಗಳು ಪ್ರಾಂಗಣ ಮತ್ತು ಎತ್ತರದ ತೋರಣಗಳಿಂದ ಅಲಂಕರಿಸಲ್ಪಟ್ಟು ಕಣ್ಮನ ಸೆಳೆಯುತ್ತದೆ. ಆದರೆ ಮೂರನೆಯ ಆವರಣ ಪ್ರವೇಶಗಳು ಸ್ವಲ್ಪ ವಿಭಿನ್ನವಾಗಿದ್ದು, ತ್ರಿಕೋಣಾಕಾರ ಗೋಪುರಗಳು ಪ್ರವೇಶದಲ್ಲಿ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಮೂರು ಪ್ರವೇಶಗಳು ಮಾತ್ರ ಇವೆ. 3ನೆಯ ಆವರಣ 250x187 ಮೀ ಆಗಲವಾಗಿದ್ದು ದ್ವಾರಮಂಟಪದ ಹಿಂಭಾಗದ ಗೋಡೆಗಳಲ್ಲಿ ಉಬ್ಬು ಚಿತ್ರಗಳ ಕೈಸಾಲೆಯು ಕೆತ್ತಲಾಗಿದ್ದು 700 ಮೀ ಉದ್ದವಿದೆ. ಪ್ರಾಯಶಃ ಇದು ವಿಶ್ವದ ಆತಿ ಉದ್ದ ಫಲಕಗಳಲ್ಲಿ ಒಂದಾಗಿದೆ. ಎಂಟು ಫಲಕಗಳ ಕೆತ್ತನೆಗಳಲ್ಲಿ ಕೌರವಪಾಂಡವರ ಕುರುಕ್ಷೇತ್ರಯುದ್ಧ, ಎರಡನೆಯ ಸೂರ್ಯವರ್ಮನ ದಿಗ್ವಿಜಯಗಳು, ಸ್ವರ್ಗ ನರಕದ ದೃಶ್ಯಗಳು ದೇವ ಮತ್ತು ಅಸುರರ ಸಮುದ್ರಮಂಥನ, ಬಾಣಾಸುರ ಮತ್ತು ವಿಷ್ಣುವಿನ ನಡುವಣ ಯುದ್ಧ, ಕಾಲನೇಮಿ ಮತ್ತು ದೇವತೆಗಳ ಯುದ್ಧ, ರಾಮ ರಾವಣರ ಯುದ್ಧ ಮೊದಲಾದ ಉಬ್ಬುಶಿಲ್ಪಗಳನ್ನು ಕಾಣ ಬಹುದು ಪ್ರವೇಶದ್ವಾರದ ಎಂಟು ಗೋಡೆಗಳಲ್ಲಿ ಸುಂದರ ಕೆತ್ತನೆ ಕೆಲಸಗಳನ್ನು ಕಾಣಬಹುದು.

2ನೆಯ ಮತ್ತು 3ನೆಯ ಆವರಣ ಮಧ್ಯದ ಚೌಕಪ್ರದೇಶವನ್ನು ಎರಡು ಪರಸ್ಪರ ಕತ್ತರಿಸುವ ಕೈಸಾಲೆಗಳಿಂದ 4 ಭಾಗಗಳಾಗಿ ಮಾಡಲಾಗಿದೆ. ಪ್ರತಿಯೊಂದು ಭಾಗದಲ್ಲೂ ಕೊಳದಂತಿರುವ ಚೌಕಾಕಾರ ಕಟ್ಟಡದ ಪಿಂದು ಭಾಗದಲ್ಲಿ ಚಾಚಿದ ಒಂದು ವೇದಿಕೆ ಇದ್ದು ಒಳಭಾಗಕ್ಕೆ ಚಾಚಿಕೊಂಡಿದೆ. ಈ ಪ್ರದೇಶವನ್ನು ವೇದಶಾಲೆ ಎಂದು ಗುರುತಿಸ

ಬಹುದಾಗಿದೆ. ನಾಲ್ಕು ಕೊಳದಂತಿರುವ ಕಟ್ಟಡಗಳ ಕೊಳಗಳಾಗಿರದೆ ಧಾರ್ಮಿಕ ಅನುಷ್ಠಾನಗಳನ್ನು ನೆರವೇರಿಸುವ ಕಾರ್ಯಕ್ಕೆ ಉಪಯೋಗಿಸಲ್ಪಡುವ ಪ್ರದೇಶಗಳಾಗಿದ್ದು, ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತವೆ. ಇದರ ಸಂಶೋಧನೆ ಅಗತ್ಯವಾಗಿದೆ. 2ನೆಯ ಆವರಣ ಚೌಕಟ್ಟಿನ 7ಮೀ ತಳಪಾಯದ ಮೇಲಿದೆ. ಸುಂದರವಾಗಿ ಕೆತ್ತಿದ ತೋರಣಗಳ ಪ್ರಾಂಗಣದ 4 ಮೂಲೆಯಲ್ಲಿ ಹಂತಹಂತದ ಗೋಪುರಗಳನ್ನು ಹೊಂದಿದ್ದು ಸಾಧಾರಣವಾಗಿದೆ. ಎರಡನೆಯ ಮತ್ತು ಮೊದಲನೆಯ ಆವರಣದ ಮಧ್ಯ ಪ್ರದೇಶವನ್ನು ಹಾಸುಗಲ್ಲಿನಿಂದ ಸಜ್ಜುಗೊಳಿಸಲಾಗಿದೆ.

1ನೆಯ ಆವರಣ 2ನೆಯ ಆವರಣಕ್ಕಿಂತ 13ಮೀ ಎತ್ತರದಲ್ಲಿದ್ದು, ಭೂಮಿಯಿಂದ 27ಮೀ ಎತ್ತರದಲ್ಲಿ ಬೃಹತ್ ಪೀಠದ ಚೌಕಟ್ಟಿನ ಮೇಲೆ ನಿಂತಿದೆ. ನಾಲ್ಕು ಮೂಲೆಯ ಪ್ರವೇಶ ಬಯಲಿನಲ್ಲಿ ಹಂತಹಂತವಾಗಿ ಗೋಪುರಗಳಿದ್ದು 2ನೆಯ ಆವರಣದಂತೆಯೇ ಇದೆ. ಆವರಣದ ಮಧ್ಯದಲ್ಲಿ ದೇವಾಲಯ ಭವ್ಯವಾಗಿದೆ. ದೇವಾಲಯಕ್ಕೆ ನಾಲ್ಕೂ ದಿಕ್ಕಿನಲ್ಲಿ ಪ್ರವೇಶಗಳಿವೆ. ಕಲ್ಪನೆಯಲ್ಲಿ ಇದು ಸರ್ವತೋಭದ್ರ ದೇವಾಲಯದ ವಿಮಾನ. ಮೊದಲನೆಯ ಆವರಣದ ನೆಲದಿಂದ 36ಮೀ ಎತ್ತರದಲ್ಲಿದ್ದು ಭೂಮಿಯಿಂದ 63ಮೀ ಎತ್ತರದಲ್ಲಿದೆ. ನಾಲ್ಕು ಪ್ರವೇಶಗಳು ಮೊದಲನೆ ಆವರಣದ ಪ್ರವೇಶ ಕೈಸಾಲೆಗಳು ದ್ವಾರಮಂಟಪಗಳಿಂದ ಅಕ್ಷಯ ಕೈಸಾಲೆಗಳಿಂದ ಜೋಡಿಸಲಾಗಿದೆ. ಆವರಣ ಮತ್ತು ಮಂದಿರದ ಮಧ್ಯಪ್ರದೇಶವನ್ನು ಮರಳುಗಲ್ಲಿನ ಹಾಸುಗಳಿಂದ ನಿರ್ಮಿಸಲಾಗಿದೆ. ತೋರಣಗಳು ಮತ್ತು ಮಧ್ಯಮಂದಿರ ಗೋಡೆಗಳು ಹಾಗೂ ಶಿಖರದ ಮೇಲಿನ ಕೆತ್ತನೆಯ ಕೆಲಸ ಬಹು ಸೂಕ್ಷ್ಮ ಮತ್ತು ಸೌಂದರ್ಯಯುಕ್ತವಾಗಿವೆ. ಉಳಿದ ಆವರಣಗಳಂತೆಯೇ ತೋರಣಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣ ಕಥೆಗಳನ್ನು ಸುಂದರವಾದ ಕೆತ್ತನೆಯಲ್ಲಿ ನಿರೂಪಿಸಲಾಗಿದೆ.

**ಸಂರಕ್ಷಣೆ :** ಆಂಕೋರ್‌ವಾಟ್ ಶಿಥಿಲಗೊಳ್ಳಲು ಕಾರಣ ನೈಸರ್ಗಿಕ ಪ್ರಕ್ರಿಯೆಗಳು ಹಾಗೂ ಮಾನವ ನಿರ್ಲಕ್ಷ್ಯ. ಕಳೆದ ಶತಮಾನದಲ್ಲಿ ಕಾಂಬೋಡಿಯ ಫ್ರಾನ್ಸ್‌ನ ಅಧೀನದಲ್ಲಿದ್ದ ಕಾರಣ 1930ರಲ್ಲಿ ಆಂಕೋರ್‌ವಾಟನ್ನು ರಕ್ಷಿಸುವ ಪ್ರಯತ್ನ ಪ್ರಾರಂಭಿಸಿದರು. ಫ್ರಾನ್ಸ್‌ನ ಪ್ರಾಕ್ತನ ತಜ್ಞರು 1960ರಲ್ಲಿ ಆಂಕೋರ್ ಎಂಬ ಸಂರಕ್ಷಣಾ ವಿಭಾಗವನ್ನು ತೆರೆಯುವುದರ ಮೂಲಕ ಇವರು ಹೆಚ್ಚಿನ ಕೆಲಸಕ್ಕೆ ಚಾಲನೆ ನೀಡಿದರು. ದುರದೃಷ್ಟವಶಾತ್ ಅಂತರ್ಯುದ್ಧದಿಂದಾಗಿ ಫ್ರಾನ್ಸಿನ ಪ್ರಾಕ್ತನತಜ್ಞ ತಂಡ ಕಾಂಬೋಡಿಯದಿಂದ ಕಾಲ್ತೆಗೆಯಬೇಕಾಯಿತು. 1980ರ ಏಪ್ರಿಲ್‌ನಲ್ಲಿ ರಾಜಕುಮಾರ ನೋರೊಡಾಮ್‌ಸಿಹನೌಕ್ ಆಂಕೋರ್‌ವಾಟನ್ನು ರಕ್ಷಿಸಲು ಪ್ರಪಂಚದ ಎಲ್ಲ ದೇಶದ ಜನರಿಗೆ ಮನವಿ ಮಾಡಿದ. ಭಾರತ ಸರ್ಕಾರ ಈತನ ಮನವಿಯನ್ನು ಪರಿಗಣಿಸಿ 1980 ನವೆಂಬರ್‌ನಲ್ಲಿ ಮೂವರು ಸದಸ್ಯರನ್ನು ಒಳಗೊಂಡ ಒಂದು ತಂಡವನ್ನು ಆಂಕೋರ್‌ವಾಟ್‌ನ ಸಂರಕ್ಷಣೆ ಕಾರ್ಯಕ್ಕೆ ಕಳುಹಿಸಿತು. ಈ ಸಂಬಂಧ ಕಾಂಬೋಡಿಯ ಮತ್ತು ಭಾರತ 1986ರಲ್ಲಿ ಒಂದು ಒಪ್ಪಂದ ಮಾಡಿಕೊಂಡವು. ಭಾರತದ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1986ರ ನವೆಂಬರ್‌ನಲ್ಲಿ ಸಂರಕ್ಷಣೆಯ ಕಾರ್ಯ ಆರಂಭಮಾಡಿ 1993ರ ವರೆಗೆ ಇದನ್ನು ಮುಂದುವರಿಸಿತು.

ಸಂರಕ್ಷಣೆಗೊಳಗಾದ ಭಾಗಗಳೆಂದರೆ ಕಂದಕದ ಕಟ್ಟೆ (120 ಮೀ), ನಾಲ್ಕನೆಯ ಸುತ್ತಿನ ಆವರಣದ ಪಶ್ಚಿಮ ಪ್ರವೇಶದ್ವಾರ, ದಕ್ಷಿಣ ಮತ್ತು ಉತ್ತರ ಗ್ರಂಥಾಲಯ, ರಂಗಮಂಚ, ನಾಗಕಟಾಂಜನ, ಮೂರನೆಯ ಸುತ್ತಿನ ಆವರಣ, ಎರಡನೆಯ ಮತ್ತು ಮೂರನೆಯ ಸುತ್ತಾವರಣದಲ್ಲಿನ ಶಿಲುಬೆಯಾಕಾರದಲ್ಲಿರುವ ಮೊಗಸಾಲೆ, ಒಂದನೆಯ ಮತ್ತು ಎರಡನೆಯ ಸುತ್ತಾವರಣ ಹಾಗೂ ಮುಖ್ಯ ವಿಮಾನ. 3ನೆಯ ಸುತ್ತಿನ ಆವರಣದಲ್ಲಿರುವ ಸುತ್ತಾಲಯದ ದಕ್ಷಿಣ ಭಾಗವನ್ನು ಸಂರಕ್ಷಿಸುವ ಕೆಲಸ ಸವಾಲಿನದಾಗಿತ್ತು. ಇದರ ವೈಶಿಷ್ಟ್ಯ ಗೋಡೆಯ ಮೇಲೆ ಕೆತ್ತಲಾದ ಸಮುದ್ರ ಮಥನ ದೃಶ್ಯದ ಉಬ್ಬುಶಿಲ್ಪ. ಸುತ್ತಾಲಯದ ವಾಸ್ತುಭಾಗಗಳನ್ನು ಕಳಚಿಟ್ಟಿದ್ದ ಫ್ರೆಂಚ್ ಪುರಾತತ್ತ್ವಜ್ಞರು ಇದರ ಅಧಿಷ್ಠಾನ ಭಾಗವನ್ನಷ್ಟೇ ಪುನರ್‌ಜೋಡಿಸುವಲ್ಲಿ ಯಶಸ್ವಿಯಾಗಿದ್ದರು. ಪ್ರತಿಯೊಂದು 800ರಿಂದ 2000 ಕೆಜಿ ತೂಗುವ 2600 ಬಿಡಿ ವಾಸ್ತುಭಾಗಗಳನ್ನು ಸರಿಯಾಗಿ ಜೋಡಿಸಿ ದಕ್ಷಿಣ ಸುತ್ತಾಲಯವನ್ನು ಪೂರ್ಣವಾಗಿ ಪುನರ್‌ನಿರ್ಮಿಸುವುದು ಸಾಹಸವೇ ಆದರೂ ಭಾರತೀಯ ಪುರಾತತ್ತ್ವಜ್ಞರು ಇದನ್ನು ಯಶಸ್ವಿಯಾಗಿ ನಿರ್ವಹಿಸಿದರು. ಇದೇ ಸುತ್ತಾಲಯದ ಮೊಗಸಾಲೆಗಳಿಗೆ ಅರ್ಧ ಕಮಾನಿನಾಕಾರದ ಚಾವಣಿಯಿದ್ದು ಇವುಗಳ ಮೂಲ ರಚನೆಯಲ್ಲಿಯೇ ತಾಂತ್ರಿಕ ದೋಷವಿದ್ದುದು ಸಂರಕ್ಷಣೆಯ ಸಮಯದಲ್ಲಿ ಗಮನಕ್ಕೆ ಬಂದಿತು. ಇದರಿಂದಾಗಿ ಮೊಗಸಾಲೆಯ ಕಂಬಗಳು ತುಸು ವಾಲಿದ್ದು ಕಟ್ಟಡಕ್ಕೆ ಧಕ್ಕೆಯಾಗುವ ಸಾಧ್ಯತೆಯಿತ್ತು. ಇದನ್ನು ಸರಿಪಡಿಸಲು ಚಾವಣಿಗಳಿಗೆ ಭದ್ರವಾದ ತಾತ್ಕಾಲಿಕ ಆಧಾರಗಳನ್ನು ಮೊದಲಿಗೆ ನಿರ್ಮಿಸಲಾಯಿತು. ಅನಂತರ ಮೊಗಸಾಲೆಯ ಕಂಬಗಳನ್ನು ಚಾವಣಿಯಿಂದ ಬೇರ್ಪಡಿಸಿ ನೇರಗೊಳಿಸಲಾಯಿತು. ಚಾವಣಿಯ ಅಡ್ಡತೊಲೆಗಳನ್ನು ಸರಿಯಾದ ಸ್ಥಾನದಲ್ಲಿ ಇರಿಸಿ ಮೂಲ ದೋಷವನ್ನು ನಿವಾರಿಸಲಾಯಿತು. ಅಡ್ಡತೊಲೆಗಳು ಮತ್ತೆ ಸರಿಯಾದಂತೆ ಅವನ್ನು ಸ್ಟೀಲಿನ ಬೆಣೆಗಳಿಂದ ಕೂಡಿಸಲಾಯಿತು. ಈ ದುರಸ್ತಿಯಿಂದಾಗಿ ಚಾವಣಿಯ ತೂಕ ಮೊಗಸಾಲೆಯ ಕಂಬ ಹಾಗೂ ಇತರ ವಾಸ್ತು ಭಾಗಗಳ ಮೇಲೆ ಸರಿಸಮನಾಗಿ ಹರಡುವಂತಾಯಿತು. ಈ ಕಾರ್ಯದಲ್ಲಿ 123 ಕಂಬಗಳು, 123 ಅಡ್ಡ ತೊಲೆ ಹಾಗೂ ಜಂತಿಗಳಲ್ಲದೆ ಚಾವಣಿಯ 456 ಕಲ್ಲುತುಂಡುಗಳನ್ನು ಸಂಪೂರ್ಣವಾಗಿ ಕಳಚಿ ಮತ್ತೆ ಜೋಡಿಸಲಾಯಿತು. ಈ ಆವರಣದ ಈಶಾನ್ಯ ಮೂಲೆಯಲ್ಲಿರುವ ಪ್ರವೇಶ ಮಂಟಪದಲ್ಲಿಯೂ ಸಂರಕ್ಷಣಾ ಕಾರ್ಯ ಕೈಗೊಳ್ಳಲಾಯಿತು. ಪ್ರವೇಶಮಂಟಪಕ್ಕೆ ಮಧ್ಯದಲ್ಲಿ ಸುತ್ತಲೂ ಮುಂಚಾಚಿಕೊಂಡ ಸುಂದರ ಗೋಪುರವಿದ್ದು ಮಂಟಪದ ಎಂಟು ಗೋಡೆಗಳ ಮೇಲೆ ರಾಮಾಯಣ, ಕೃಷ್ಣಲೀಲೆ ಹಾಗೂ ಪುರಾಣಗಳಿಂದಾಯ್ದ ಕಥನಗಳನ್ನು ಉಬ್ಬುಶಿಲ್ಪ ಮಾಧ್ಯಮದಲ್ಲಿ ಅದ್ಭುತವಾಗಿ ಬಿಂಬಿಸಲಾಗಿದೆ. ಮಳೆನೀರಿನ ಸೋರಿಕೆಯಿಂದಾದ ತೀವ್ರ ಸವೆತದಿಂದಾಗಿ ಈ ಸಂಕೀರ್ಣ ಕೆತ್ತನೆಗಳು ಅಂದ ಕಳೆದುಕೊಂಡಿದ್ದವು. ಅಲ್ಲದೆ ಅಲ್ಲಲ್ಲಿ ಚಕ್ಕೆಯೆದ್ದು ಶಿಲ್ಪಗಳು ಹಾಳಾಗಿದ್ದವು. ಗೋಡೆಯ ನಡುವೆ ಹಾಗೂ ದ್ವಾರಬಂಧದ ಸಂದುಗಳಲ್ಲಿ ಗಿಡಮರಗಳ ಕೊಂಬೆ ನುಸುಳಿ ಈ ಭಾಗಗಳಲ್ಲಿ ಬಿರುಕುಗೊಂಡಿದ್ದವು. ಹಾಗಾಗಿ ಇಂತಹ ವಾಸ್ತು ಭಾಗಗಳನ್ನು ಬಿಚ್ಚಿ ಶಿಲ್ಪ-ಕೆತ್ತನೆಗಳ ಮೂಲ ಸೌಂದರ್ಯ-ಸಂಯೋಜನೆಗೆ ಕುಂದುಬಾರದಂತೆ ಎಚ್ಚರಿಕೆ ವಹಿಸಿ ಮತ್ತೆ ರಚಿಸುವುದು ಅನಿವಾರ್ಯವಾಗಿತ್ತು. ದುರಸ್ತಿಯನ್ನು ಪ್ರಾರಂಭಿಸುವ ಮೊದಲು ರಾಸಾಯನಿಕ ಅಥವಾ ಸಿಮೆಂಟಿನ ಗಾರೆಯನ್ನು ಬಳಸಿ ಉಬ್ಬುಶಿಲ್ಪ ದೃಶ್ಯಗಳನ್ನು ಬಲ ಪಡಿಸಲಾಯಿತು. ನಂತರ ಛಾವಣಿ ಹಾಗೂ ತೋರಣದ 348 ಭಾಗಗಳನ್ನು ಬಿಚ್ಚಿ ಕೈಲಾಸವನ್ನೆತ್ತುತ್ತಿರುವ ರಾವಣ ಹಾಗೂ ಮನ್ಮಥನನ್ನು ತನ್ನ ಕೆಂಗಣ್ಣಿನಿಂದ ದಹಿಸುತ್ತಿರುವ ಶಿವನ ಉಬ್ಬುಶಿಲ್ಪ ದೃಶ್ಯಗಳಲ್ಲಿ ಸ್ಥಳದಿಂದ ಸರಿದಿದ್ದ ಭಾಗಗಳನ್ನು ಸರಿಯಾಗಿ ಕೂಡಿಸಲಾಯಿತು. ಅಂತೆಯೇ ವಾಲಿ-ಸಂಹಾರ, ದಕ್ಷಿಣಾಮೂರ್ತಿ ಶಿವ, ಗೋವರ್ಧನಗಿರಿಯನ್ನೆತ್ತಿದ ಕೃಷ್ಣ, ಭಿಕ್ಷಾಟನಾಮೂರ್ತಿ ಮುಂತಾದ ಉಬ್ಬುಶಿಲ್ಪಗಳನ್ನು ಸಂರಕ್ಷಿಸಲಾಯಿತು. ಪ್ರವೇಶ ಮಂಟಪದ ಗೋಡೆಗಳನ್ನು ದುರಸ್ತಿಗೊಳಿಸಿದ ಮೇಲೆ ಚಾವಣಿ ಹಾಗೂ ತೋರಣವನ್ನು ಪುನರ್ ನಿರ್ಮಿಸಲಾಯಿತು. ಮಳೆ ನೀರಿನಿಂದ ಮತ್ತೆ ಧಕ್ಕೆಯೊದಗದಂತೆ ಮಂಟಪದ ಸಂದು ಗೊಂದುಗಳನ್ನು ಮುಚ್ಚಲಾಯಿತು.

ಒಟ್ಟಾರೆ 9000ಕ್ಕೂ ಹೆಚ್ಚು ವಾಸ್ತುಭಾಗಗಳನ್ನು ಭಾರತೀಯ ಪುರಾತತ್ತ್ವಜ್ಞರು ಪುನರ್ಜೋಡಿಸಿದರು. ನೂರಾರು ಕಂಬಗಳನ್ನು ಬಲಗೊಳಿಸಿದ್ದಲ್ಲದೆ ಇಡಿಯ ಸಂಕೀರ್ಣಕ್ಕೆ ಮಳೆಯ ನೀರು ಸೋರದಂತೆ ರಕ್ಷಣೆಯೊದಗಿಸಿದ್ದು ಇವರ ಕೊಡುಗೆ. ಆಂಕೋರ್‌ವಾಟ್‌ನಂತಹ ಅದ್ಭುತ ದೇವಾಲಯದ ಸಂರಕ್ಷಣೆ ಒಂದು ಭಗೀರಥ ಕಾರ್ಯ. ಇದರಲ್ಲಿ ಸು.20000 ನುರಿತ ಕೆಲಸಗಾರರು ಹಾಗೂ ಪರಿಣಿತ ತಜ್ಞರು ಅವಿರತವಾಗಿ ಶ್ರಮಿಸಿದರು.

(ಬಿ.ಎನ್.)

**ಪುರಾತತ್ತ್ವ ನೆಲೆ ನಕಾಶೆ :** ಆಸ್ಟ್ರೇಲಿಯದ ಸಿಡ್ನಿ ವಿಶ್ವವಿದ್ಯಾಲಯ ಹಾಗೂ ಕಾಂಬೋಡಿಯ ಮತ್ತು ಫ್ರಾನ್ಸ್ ದೇಶಗಳ ವಿದ್ವಾಂಸರ ತಂಡ ಆಂಕೋರ್‌ವಾಟ್ ಯೋಜನೆಯ ಅನುಸಾರ ರೆಸ್ಯೊಲ್ಯೂಷನ್ ಗ್ರೌಂಡ್ ಸೆನ್ಸಿಂಗ್ ರೆಡಾರ್ ಎಂಡ್ ಏರಿಯಲ್ ಫೋಟೋಗ್ರಫಿ ವಿಧಾನದಿಂದ ಈ ಪ್ರದೇಶದ ಸರ್ವೇಕ್ಷಣೆ ನಡೆಸಿತು. ಭೂಮಿಯೊಳಗಿನ ಮತ್ತು ಮೇಲಿನ ಲಕ್ಷಣ ಮತ್ತು ಅವಶೇಷಗಳನ್ನು ಅತಿಸೂಕ್ಷ್ಮವಾಗಿ ಗುರುತಿಸಿ ಪ್ರಾಚೀನ ನಗರದ ಒಂದು ವೈಜ್ಞಾನಿಕ ನಕಾಶೆಯನ್ನು ಸಿದ್ಧಪಡಿಸಿತು. ಈ ನಕಾಶೆಯಿಂದ ಪ್ರಸಿದ್ಧ ಆಂಕೋರ್‌ವಾಟ್ ನಿರ್ಮಿತಿಯ ಸುತ್ತಮುತ್ತ ಸು. 30ಚ.ಕಿಮೀ ವಿಸ್ತಾರದ ನಗರದ ಅವಶೇಷಗಳನ್ನು ಗುರುತಿಸಲು ಸಾಧ್ಯವಾಗಿದೆ.

ವಿವಿಧ ಪ್ರಾಚ್ಯವಸ್ತುಗಳು, ಭೂಮಿಯೊಳಗೆ ಹುದುಗಿರುವ 94 ದೇವಾಲಯ ಮತ್ತು ಭೂಮಿಯ ಮೇಲಿನ 74 ದೇವಾಲಯ, ರಸ್ತೆ, ಕಾಲುವೆ ಮುಂತಾದವುಗಳ ಬಗ್ಗೆ ಅಮೂಲ್ಯ ಮಾಹಿತಿಯ ಸಂಗ್ರಹಿಸಲಾಗಿದೆ. ಭೂಮಿಯೊಳಗಿನ ನಿರ್ಮಿತಿಗಳ ಮೇಲೆ ಬೆಳೆದಿರುವ ಸಸ್ಯವರ್ಗ ಮತ್ತು ತೇವೆಯನ್ನು ಅತಿ ಸೂಕ್ಷ್ಮವಾಗಿ ರಡಾರ್ ಗುರುತಿಸಿದೆ. ಸರ್ವೇಕ್ಷಣೆಗೆ ಒಳಪಡಿಸಿದ ಭಾಗವೆಲ್ಲ ದಟ್ಟ ಅರಣ್ಯ ಪ್ರದೇಶವಾಗಿದೆ. ಈ ನಗರ ಪ್ರದೇಶ ಸು.120 ಚ.ಕಿಮೀ ವಿಸ್ತಾರವಾಗಿತ್ತು. ಸು. 10 ಚ.ಕಿಮೀ ಪ್ರದೇಶದಲ್ಲಿ ನಗರವಿದ್ದು, ಅದರ ಸುತ್ತಲೂ ಉಪನಗರಗಳಿದ್ದವು. ಇದರ ಆಗ್ನೇಯ ಮತ್ತು ವಾಯವ್ಯ ದಿಕ್ಕಿನಲ್ಲಿ ನಗರ ವಿಸ್ತರಿಸಿತ್ತೆಂದು ಕಾಣುತ್ತದೆ. ಹೀಗಾಗಿ ಈ ನಗರದ ಸರಹದ್ದನ್ನು ಪೂರ್ಣವಾಗಿ ಗುರುತಿಸಲಾಗಿಲ್ಲ. ಈ ನಗರದಲ್ಲಿ ಸು.5 ಲಕ್ಷ ಜನ ವಾಸಿಸುತ್ತಿದ್ದರೆಂದು ತಜ್ಞರು ಅಂದಾಜು ಮಾಡಿದ್ದಾರೆ.

ಆಂಕೋರ್‌ವಾಟ್ 16ನೆಯ ಶತಮಾನದವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆದರೆ 1860ರ ದಶಕದಲ್ಲಿ ಯುರೋಪಿನ ಅನ್ವೇಷಕರು ಈ ನೆಲೆಯನ್ನು ಪರಿಶೀಲಿಸುವ ಸಮಯದಲ್ಲಿ ದಟ್ಟವಾದ ಅರಣ್ಯದಿಂದ ಮುಚ್ಚಿಹೋಗಿತ್ತು. ನಗರ ದುಃಸ್ಥಿತಿಗೆ ಬರಲು ನಕಾಶೆಯಿಂದ ಮುಖ್ಯಕಾರಣಗಳನ್ನು ಕಂಡುಹಿಡಿಯಲು ಸಾಧ್ಯವಾಗಿದೆ. ಇಲ್ಲಿ ದೊಡ್ಡ ಪ್ರಮಾಣದಲ್ಲಿ ರಚಿಸಿಕೊಂಡ ನೀರು ಪೂರೈಕೆ ವ್ಯವಸ್ಥೆ ಪರಿಸರದ ಮೇಲೆ ಗಣನೀಯವಾಗಿ ದುಷ್ಪರಿಣಾಮ ಬೀರಿತು. ನಕಾಶೆಯಲ್ಲಿ ಕಾಲುವೆಗಳ ನೀರಿನ ಜಾಲ ಸ್ಥಳೀಯ ಪರಿಸರದ ಮೇಲಿನ ಒತ್ತಡದ ಸಾಮರ್ಥ್ಯವನ್ನು ಸೂಚಿಸುತ್ತದೆ. ಸು. 5ಚ.ಕಿಮೀ ಎತ್ತರದ ಪ್ರದೇಶದಿಂದ ನಗರದ ಮಧ್ಯದಲ್ಲಿರುವ ಸಂಗ್ರಹಣಾ ಜಲಾಶಯಕ್ಕೆ ಮತ್ತು ಅಲ್ಲಿಂದ ವ್ಯವಸಾಯದ ಭೂಮಿಗೆ ನೀರು ಪೂರೈಕೆಗಾಗಿ ಕಾಲುವೆ ಮಾಡಲು ಈ ಪ್ರದೇಶದ ಅರಣ್ಯವನ್ನು

ನಾಶಪಡಿಸಿರುವುದು ಸ್ಪಷ್ಟ. ಬತ್ತದ ಕೃಷಿ ಸಾಧ್ಯವಾದದ್ದು ಇಂತಹ ಸುವ್ಯವಸ್ಥಿತವಾದ ನೀರಾವರಿಯಿಂದ. ಆದರೆ ಕಾಲುವೆ ರಚನೆಯಲ್ಲೂ ಕೆಲವು ದೋಷಗಳಿದ್ದವು. ಪರಿಸರಕ್ಕೆ ಉಂಟಾದ ಅತಿಹಾನಿಯಿಂದಾಗಿ ನಗರ ಪಾಳುಬಿದ್ದಿತು ಎನ್ನುವುದು ತಜ್ಞರ ಅಭಿಪ್ರಾಯ.
(ಎ.ಎಸ್.)

**ಆಂಗ್ ಸನ್ :** 1916–47. ಮಯನ್ಮಾರ್‌ದ (ಬರ್ಮ) ಹಿಂದಿನ ರಾಷ್ಟ್ರೀಯ ಮುಖಂಡ. ದೇಶದ ಸ್ವಾತಂತ್ರ್ಯಶಿಲ್ಪಿ. ಈತ ಜನಿಸಿದ್ದು ಮಧ್ಯ ಬರ್ಮದ ಮಾಗ್ವೆ ಜಿಲ್ಲೆಯ ಮಯನ್ಮಾರ್‌ನ ನಟ್‌ಮಾಕ್ ಎಂಬಲ್ಲಿ. 1886ರಲ್ಲಿ ಬರ್ಮವನ್ನು ಬ್ರಿಟನ್ ವಶಪಡಿಸಿಕೊಂಡ ಅನಂತರ ನಡೆದ ಪ್ರತಿಭಟನಾ ಚಳವಳಿಯಲ್ಲಿ ಈತನ ಪೂರ್ವಜರು ಭಾಗವಹಿಸಿ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು. ವಿದ್ಯಾಭ್ಯಾಸ ಕಾಲದಲ್ಲಿ 1936ರಲ್ಲಿ ನಡೆದ ರಂಗೂನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಚಳವಳಿಯ ನಾಯಕತ್ವವನ್ನು ಈತ ವಹಿಸಿದ್ದ. 1938ರಲ್ಲಿ ಪದವಿಯನ್ನು ಪಡೆದ ಅನಂತರ ದೊಬಾಮ ಆಸಿ–ಅಯಾನ್ (ನಾವು ಬರ್ಮಿಯರ ಸಂಸ್ಥೆ) ಎಂಬ ಆಂದೋಳನದಲ್ಲಿ ದುಡಿದು 1939ರಲ್ಲಿ ಅದರ ಪ್ರಧಾನ ಕಾರ್ಯದರ್ಶಿಯಾದ. 1940–41ರಲ್ಲಿ ಈತ ಕೈಗೊಂಡ ಟೋಕಿಯೋ ಗುಪ್ತಪ್ರವಾಸದ ಅನಂತರ ಬರ್ಮದ ಸ್ವಾತಂತ್ರ್ಯಸೇನೆಯ ದಂಡನಾಯಕನಾದ. 1943–45ರಲ್ಲಿ ಬಾ ಮಾವಿನ ಕೈಗೊಂಬೆ ಸರ್ಕಾರದಲ್ಲಿ ಈತ ರಕ್ಷಣಾಸಚಿವನಾಗಿದ್ದ. ಬರ್ಮದ ರಾಷ್ಟ್ರೀಯ ಸೇನೆ ಎಂಬುದಾಗಿ ವ್ಯವಸ್ಥೆ ಗೊಂಡಿದ್ದ ಬರ್ಮದ ಸೇನೆ ಜಪಾನೀಯರಿಗೆ ಸೋತ ಅನಂತರ, ಅವರನ್ನು ಪ್ರತಿಭಟಿಸುವ ಸಲುವಾಗಿ ಸರ್ವಾಧಿಕಾರತತ್ತ್ವದ ವಿರುದ್ಧ ಒಂದು ಸಂಸ್ಥೆಯನ್ನು 1944ರ ಕೊನೆಯಲ್ಲಿ ಸ್ಥಾಪಿಸಿದ. 1945ರಲ್ಲಿ ಆ್ಯಂಟಿ–ಫ್ಯಾಸಿಸ್ಟ್ ಪೀಪಲ್ಸ್ ಲೀಗ್ ಎಂಬ ಸಂಸ್ಥೆಯನ್ನೂ ಪೀಪಲ್ಸ್ ವಾಲಂಟಿಯರ್ ಸಂಸ್ಥೆಯನ್ನೂ ರಾಷ್ಟ್ರದ ಸ್ವಾತಂತ್ರ್ಯದ ಸಲುವಾಗಿಯೇ ಸ್ಥಾಪಿಸಿದ. 1946ರಲ್ಲಿ ಗೌರ್ನರ್‌ನ ಸಲಹಾಮಂಡಲಿಯ ಉಪಾಧ್ಯಕ್ಷನಾದ ಮೇಲೆ ಲಂಡನ್ನಿಗೆ ಭೇಟಿ ನೀಡಿ ಅಲ್ಲಿ ನಡೆದ ಅಟ್ಲೀ–ಆಂಗ್‌ಸನ್ ಒಪ್ಪಂದದಲ್ಲಿ (27 ಜನವರಿ 1947) ಭಾಗವಹಿಸಿದ್ದ. ಇದು ನಡೆದ ಒಂದು ವರ್ಷದೊಳಗೆ ಬರ್ಮಕ್ಕೆ ಸ್ವಾತಂತ್ರ್ಯ ಲಭಿಸಿತು. 1947ರಲ್ಲಿ ಅಲ್ಲಿನ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಈತನ ಪಕ್ಷವೇ ಬಹುಮತಗಳಿಸಿತು. ಇವನ ರಾಜಕೀಯ ವಿರೋಧಿ ಉ ಸಾ ನಡೆಸಿದ ಕೃತ್ರಿಮದಿಂದ ರಂಗೂನಿನ ರಾಜ್ಯಸಭೆ ಸಮಾವೇಶಗೊಳ್ಳುತ್ತಿರುವಾಗಲೇ ಈತನ ಮತ್ತು ಸಹೋದ್ಯೋಗಿಗಳ ಕೊಲೆಯಾಯಿತು.
(ಕೆ.ವಿ.ವಿ.)

**ಆಂಗೀರಸ :** ಮಹರ್ಷಿ ಅಂಗೀರಸನ ಪುತ್ರ. ಈತನೂ ದೇವತೆಗಳ ಪುರೋಹಿತ. ದೇವಗುರುವಾದ ಬೃಹಸ್ಪತಿಯ ತತ್ತ್ವ ನಾಮಾಂತರ ಎಂದೂ ಕೆಲವರ ಅಭಿಪ್ರಾಯ. ಆಂಗೀರಸರಲ್ಲಿ ಮುಖ್ಯರಾದವರು ಮಾರ್ಕಂಡೇಯ, ಬೃಹಸ್ಪತಿ, ಉತತ್ಯ, ದೀರ್ಘತಮಸ್, ಕೃಷ್ಣನ ಗುರುವಾದ ಘೋರ ಮುಂತಾದವರು. ಇವರು ವಂಶಪಾರಂಪರ್ಯವಾಗಿ ವೈಶಾಲಿ ಮತ್ತು ವಿದೇಹ ರಾಜರ ಪುರೋಹಿತರಾಗಿದ್ದರೆಂದು ತಿಳಿದುಬಂದಿದೆ.

ಸಪ್ತರ್ಷಿ ಮಂಡಲ (ಅರ್ಸಾ ಮೇಜರ್) ನಕ್ಷತ್ರಪುಂಜದಲ್ಲಿ ಆಂಗೀರಸ್ಸು ಒಂದು ನಕ್ಷತ್ರ . ಮುರಿದ ಹಿಡಿಯ ಸೌಟಿನ ಆಕಾರದಲ್ಲಿ ಇರುವ ಏಳು ನಕ್ಷತ್ರಗಳ ಈ ಪುಂಜದಲ್ಲಿ ಮೂರನೆಯ ನಕ್ಷತ್ರ..

**ಆಂಗ್ರಿಯ :** ಪಶ್ಚಿಮ ಕರಾವಳಿಯ ಗಡಿರಕ್ಷಣೆಗಾಗಿ ಶಿವಾಜಿ ಸಿದ್ಧಪಡಿಸಿದ ನೌಕಾ ಸೇನೆಯ ಮುಖಂಡ. ರಾಜಾರಾಮನ ಕಾಲದವ. ವಂಶಪಾರಂಪರ್ಯವಾಗಿ ಆಂಗ್ರಿಯ ಮನೆತನದವರ ಮುಖಂಡತ್ವದಲ್ಲೇ ಬೆಳೆದು ಬಂದ ಈ ಸೇನೆ 18ನೆಯ ಶತಮಾನದವರೆಗೆ ಇಂಗ್ಲಿಷರು, ಪೋರ್ಚುಗೀಸರು, ಡಚ್ಚರ ವಿರುದ್ಧ ಹೋರಾಡಿ ಕಾಲಕ್ರಮೇಣ ಆಂಗ್ರಿಯ ಮನೆತನದ ಒಳಜಗಳಗಳಿಂದಾಗಿ ಕ್ಷೀಣಿಸಿ 1920ರ ಹೊತ್ತಿಗೆ ಇಂಗ್ಲಿಷರಿಂದ ನಿರ್ನಾಮವಾಯಿತು.
(ಎಸ್.ಕೆ.ಕೆ.)

**ಆ್ಯಂಗ್‌ಸ್ಟ್ರಮ್, ಆಂಡರ್ಸ್‌ಯೊನಸ್ :** 1814–74. ಸ್ವೀಡನ್ನಿನ ಭೌತವಿಜ್ಞಾನಿ. ಲಗ್ಡ ಎಂಬಲ್ಲಿ 1814 ಆಗಸ್ಟ್ 13ರಂದು ಜನಿಸಿದ. ಉಪ್ಸಾಲ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿ ಅಲ್ಲಿಯ ವಿದ್ಯಾಲಯದಲ್ಲಿಯೆ ಶಿಕ್ಷಕನಾದ (1839) ಮುಂದೆ ಸ್ಟಾಕ್ ಹೋಮ್ ವೇಧಶಾಲೆಯಲ್ಲಿ ಅನುಭವಗಳಿಸಿ ಉಪ್ಸಾಲ ವೇಧಶಾಲೆಯಲ್ಲಿ ವೀಕ್ಷಕನಾದ (1843). ಭೂಮಿಯ ಕಾಂತತ್ವದ ವಿಷಯದಲ್ಲಿ ವಿಶೇಷ ಶೋಧನೆಗಳನ್ನು ನಡೆಸಿದ. 1858ರಲ್ಲಿ ಉಪ್ಸಾಲದಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕನಾದ. ಅದುವರೆಗೂ ಬೇರೆ ಬೇರೆ ವಿಜ್ಞಾನಿಗಳು ವಸ್ತುಗಳ ಉಷ್ಣವಾಹಕತ್ವವನ್ನು (ಥರ್ಮಲ್ ಕಂಡಕ್ಟಿವಿಟಿ) ಕಂಡುಹಿಡಿಯುವುದ ರಲ್ಲಿ ಒಂದಕ್ಕೊಂದಕ್ಕೆ ಸಂಪೂರ್ಣ ಅಸಂಗತಗಳಾದ ಮೌಲ್ಯಗಳು ದೊರೆತಿದ್ದು ಅವ್ಯವಸ್ಥೆಯಿತ್ತು. ಆಂಗ್‌ಸ್ಟ್ರಮ್ ಹೊಸ ಮಾರ್ಗದಿಂದ ಈ ಗುಣವನ್ನು ಅಳೆದು ಸಂಗತವಾದ ಮೌಲ್ಯಗಳು ದೊರೆಯುವುದಕ್ಕೆ ಕಾರಣನಾದ. ಆಗ ಇನ್ನೂ ಶೈಶವಾವಸ್ಥೆಯಲ್ಲಿದ್ದ ರೋಹಿತ ದರ್ಶಕ ಶಾಸ್ತ್ರದಲ್ಲಿಯೂ (ಸ್ಪೆಕ್‌ಟ್ರೋಸ್ಕೊಪಿ) ಇವನು ಮೊದಲಿಗಿಂತ ಹೆಚ್ಚು ನಿಷ್ಕೃಷ್ಟವಾದ ರೀತಿಯಲ್ಲಿ ಸೂರ್ಯನ ರೋಹಿತ ರೇಖೆಗಳ ತರಂಗಮಾನಗಳನ್ನಳೆದು (ವೇವ್‌ಲೆನ್ತ್ಸ್) ನಿರ್ಮಿಸಿದ ಪಟ ಬಹುಕಾಲ ಆದರ್ಶಪ್ರಾಯವಾಗಿತ್ತು. ತರಂಗಮಾನಗಳನ್ನಳೆಯಲು $10^{-8}$ ಸೆಂಮೀ ಎಂಬುದನ್ನು ಏಕಮಾನವಾಗಿಟ್ಟುಕೊಳ್ಳಬೇಕೆಂದು ಇವನೇ ಸೂಚಿಸಿದುದರಿಂದ ಅದಕ್ಕೆ ಆಂಗ್‌ಸ್ಟ್ರಮ್ ಏಕಮಾನವೆಂದೇ ಹೆಸರಾಗಿದೆ. ಸೂರ್ಯನಲ್ಲಿ ಜಲಜನಿಕವಿರುವುದೆಂದೂ ಈತ ಸಾಧಿಸಿದ. 1867ರಲ್ಲಿ ಅರೋರಾ ಬೋರಿಯಾಲಿಸ್ ಬೆಳಕಿನ ರೋಹಿತವನ್ನೂ ಇವನು ಪರೀಕ್ಷಿಸಿ, ಅದರ ಮುಖ್ಯರೇಖೆಯ ತರಂಗದೂರವನ್ನು ಕಂಡುಹಿಡಿದ. ಇವನಿಗೆ 1872ರಲ್ಲಿ ರಾಯಲ್‌ಸೊಸೈಟಿಯ ರುಮ್‌ಫರ್ಡ್ ಪದಕ ಲಭಿಸಿತು. ಈತ 21 ಜೂನ್ 1874ರಂದು ನಿಧನನಾದ.
(ಟಿ.ಎಸ್.ಎಸ್.)

ಆಂಗ್‌ಸ್ಟ್ರಮ್‌ನ ಮಗ ನಟ್‌ಯೋಹನ್ ಆಂಗ್‌ಸ್ಟ್ರಮ್ (1857-1910) ಉಪ್ಸಾಲದ ಲ್ಲಿಯೇ ಭೌತವಿಜ್ಞಾನ ಪ್ರಾಧ್ಯಾಪಕನಾದ (1896). ಸೌರಉಷ್ಣದ ವಿಸ್ತರಣೆ ಮತ್ತು ಭೂಮಿಯ ವಾಯುಮಂಡಲದಿಂದ ಅದರ ಹೀರುವಿಕೆ ಇವುಗಳನ್ನು ಕುರಿತು ಸಂಶೋಧನೆ ನಡೆಸಿದ. ಈ ದಾರಿಯಲ್ಲಿ ಹಲವಾರು ಸೂಕ್ಷ್ಮೋಪಕರಣಗಳನ್ನೂ (ಉದಾ: ಎಲೆಕ್ಟ್ರಿಕ್ ಕಾಂಪೆನ್‌ಸೇಷನ್ ಪೈರ್‌ಹೀಲಿಯೋಮೀಟರ್, 1839, ಅತಿರಕ್ತ ರೋಹಿತದ ಫೋಟೋಸೂಚಕ ಉಪಕರಣ 1895 ಸೂಕ್ಷ್ಮ ವಿಧಾನಗಳನ್ನೂ ಕಂಡುಹಿಡಿದ.
*

**ಆಂಜನೇಯ :** ರಾಮಾಯಣದ ದಿವ್ಯಪಾತ್ರಗಳಲ್ಲೊಂದು. ಪ್ರಸಿದ್ಧ ರಾಮಭಕ್ತ. ತಂದೆ ಕೇಸರಿ ಎಂಬ ಕಪಿನಾಯಕ. ತಾಯಿ ಅಂಜನಾ. ವಾಯುವಿನ ಅಂಶದಿಂದ ಜನಿಸಿದ. ಹುಟ್ಟಿದಾಗಲೇ ಸೂರ್ಯನನ್ನು ಹಣ್ಣೆಂದು ಭ್ರಮಿಸಿ ಹಿಡಿಯಲು ಅಂತರಿಕ್ಷಕ್ಕೆ ಹಾರಿದಾಗ ಇಂದ್ರನ ವಜ್ರಾಯುಧದಿಂದ ಘಾತಿಸಲ್ಪಟ್ಟ. ಆಗ ಒಂದು ಕೆನ್ನೆ ಸೊಟ್ಟಗಾದುದ ರಿಂದಲೇ ಹನುಮಂತ ಎಂಬ ಹೆಸರು ಬಂತು. ಹೀಗೆ ತನ್ನ ಮಗ ಘಾತಿಸಲ್ಪಟ್ಟಿದ್ದ ರಿಂದ ವಾಯು ತನ್ನ ಸಂಚಾರವನ್ನು ನಿಲ್ಲಿಸಿದ. ಇಂದ್ರನೇ ಮೊದಲಾದ ದೇವತೆಗಳು ಆಂಜನೇಯನಿಗೆ ಸ್ವೇಚ್ಛಾಮರಣವನ್ನೂ ವಾಯುವೇಗವನ್ನೂ ವಾಯುಬಲವನ್ನೂ ಅನುಗ್ರಹಿಸಿ ವಾಯುವನ್ನು ಸಂತೈಸಿದರು. ರಾಮ ಸುಗ್ರೀವರ ನಡುವೆ ಸ್ನೇಹ ಬೆಳೆಯುವುದಕ್ಕೆ ಈತ ಕಾರಣನಾದ. ರಾಮನಿಂದ ಮುದ್ರೆಯುಂಗುರವನ್ನು ಪಡೆದು ಸೀತಾನ್ವೇಷಣೆಗಾಗಿ ದಕ್ಷಿಣಕ್ಕೆ ಹೊರಟ. ಸಮುದ್ರ ದಾಟುವ ಮೊದಲು ಜಾಂಬವಂತನಿಂದ ತನ್ನ ಜನ್ಮವೃತ್ತಾಂತ ವನ್ನು ತಿಳಿದು ಸಮುದ್ರವನ್ನು ದಾಟಿ ಸಿಂಹಿಕೆಯೆಂಬ ರಾಕ್ಷಸಿಯನ್ನು ಕೊಂದು, ನಾಗಮಾತೆ ಸುರಸೆಯನ್ನು ಮೆಚ್ಚಿಸಿ, ಮೈನಾಕನಿಂದ ಸತ್ಕೃತನಾದ. ಲಂಕಾಭಿಮಾನಿದೇವತೆಯನ್ನು ನಿಗ್ರಹಿಸಿದ. ರಾವಣನ ಅಂತಃಪುರದಲ್ಲಿ ಹುಡುಕಿ ಅನಂತರ ಅಶೋಕವನದಲ್ಲಿ ಸೀತೆಯನ್ನು ಕಂಡ. ಮುದ್ರೆಯುಂಗುರವನ್ನು ಕೊಟ್ಟು, ಗುರುತಿಗಾಗಿ ಆಕೆಯಿಂದ ಚೂಡಾಮಣಿಯನ್ನು ಪಡೆದು ರಾಮನೊಡನೆ ಮತ್ತೆ ಬರುವುದಾಗಿ ಭರವಸೆ ನೀಡಿದ. ಅಲ್ಲಿಂದ ಹೊರಡುವ ಮುನ್ನ ಅಶೋಕವನವನ್ನು ಹಾಳುಮಾಡಿದ. ತಡೆಯಲು ಬಂದ ರಾಕ್ಷಸರನ್ನು ಕೊಂದ. ರಾವಣನ ಮಗನಾದ ಇಂದ್ರಜಿತುವಿನಿಂದ ಬಂಧಿಯಾಗಿ ಲಂಕೇಶನಾಸ್ಥಾನಕ್ಕೆ ಕರೆದೊಯ್ಯಲ್ಪಟ್ಟ. ಬಾಲದಿಂದ ರಾವಣನ ಸಿಂಹಾಸನಕ್ಕಿಂತಲೂ ಎತ್ತರವಾದ ಆಸನವನ್ನು ರಚಿಸಿಕೊಂಡು ಕುಳಿತ. ತನಗಿಂತ ಎತ್ತರದಲ್ಲಿ ಕುಳಿತ ಈ ಕಪಿಯನ್ನು ಕಂಡು ಸಹಿಸದಾದ ರಾವಣ ಶಿಕ್ಷೆಯಾಗಿ ಬಾಲಕ್ಕೆ ಬೆಂಕಿಹಚ್ಚಿಸಿದರೆ ಅದರಿಂದ ಲಂಕೆಯನ್ನೇ ಸುಟ್ಟ. ವಿಭೀಷಣನನ್ನು ರಾಮನಿಗೆ ಪರಿಚಯಿಸಿದ. ಧೂಮ್ರಾಕ್ಷ ಎಂಬ ರಾಕ್ಷಸನನ್ನು ಕೊಂದ. ಯುದ್ಧದಲ್ಲಿ ಲಕ್ಷ್ಮಣ ಮುಂತಾದವರು ಮೂರ್ಛೆಹೋದಾಗ ಮಹೌಷಧಿಯಿದ್ದ ಸಂಜೀವಿನಿ ಪರ್ವತವನ್ನೇ ಹೊತ್ತು ತಂದ. ಭೀಮನಿಗೆ ವಿಶ್ವರೂಪ ತೋರಿಸಿದ. ಕಲ್ಪಾಂತರದವರೆಗೆ ಭೂಲೋಕದಲ್ಲಿ ಜೀವಿಸಿರಲು ರಾಮನಿಂದ ಅನುಮತಿ ಪಡೆದ.

ಈತ ನೈಷ್ಠಿಕ ಬ್ರಹ್ಮಚಾರಿಯೂ ಅದ್ಭುತ ದೇಹದಾರ್ಢ್ಯವುಳ್ಳವನೂ ಆಗಿದ್ದಾನೆಂಬ ಅಚಲ ನಂಬಿಕೆ ಜನಪದರಲ್ಲಿರುವುದರಿಂದ ಗರಡಿಗಳಲ್ಲಿನ ಏಕೈಕ ಆರಾಧ್ಯದೈವವಾಗಿದ್ದಾನೆ. ಅನೇಕ ಕಡೆ ಶ್ರೀರಾಮನಿಗಿಂತ ಈತನಿಗೇ ಹೆಚ್ಚು ಪ್ರಾಶಸ್ತ್ಯ ಸಿಕ್ಕಿದೆ. ಈತನನ್ನು ಕುರಿತ ಹನುಮ ಜಯಂತಿ ಆಚರಣೆಯಲ್ಲಿದೆ. ಈತ ಮುಂದೆ ದ್ವಾಪರಯುಗದಲ್ಲಿ ಭೀಮನಾಗಿಯೂ ಕಲಿಯುಗದಲ್ಲಿ ವೈಷ್ಣವ ಮತಪ್ರಚಾರಕರಾದ ಮಧ್ವಾಚಾರ್ಯರಾಗಿಯೂ ಜನ್ಮ ತಳೆದನೆಂಬ ನಂಬಿಕೆಯಿದೆ.
*

**ಆ್ಯಂಗ್ಲಿಯೊಲಿರಿ, ಕೆಕೋ :** 1260–1312. ಇಟಲಿಯ ಕವಿ. ಈತನ ಅಷ್ಟಷಟ್ಪದಿಗ ಳಿಂದ (ಸಾನೆಟ್) ಇವನ ಕಷ್ಟಕಾರ್ಪಣ್ಯದ ಚಿತ್ರ ದೊರೆಯುತ್ತದೆ. ಶ್ರೀಮಂತ ಮನೆತನದಲ್ಲಿ ಹುಟ್ಟಿದರೂ ತನ್ನನ್ನು ನಿರ್ಗತಿಕನಂತೆ ಸಾಕಿದ ಜಿಪುಣ ತಂದೆ ತಾಯಿಗಳನ್ನು ತನ್ನ ಕವನಗಳಲ್ಲಿ ಶಪಿಸುತ್ತಾನೆ. ಇವನ ಒರಟು ಶೈಲಿಯ ಕವನಗಳಲ್ಲಿ ಕಟುವಾದ ಹಾಸ್ಯವಿದೆ. ಮಾತಿನಲ್ಲಿ ಚಾತುರ್ಯ, ವಿಡಂಬನೆ ಎದ್ದು ತೋರುತ್ತದೆ. ಮೂರು ಕವನಗಳಲ್ಲಿ ಡಾಂಟೆಯನ್ನು ಅಗೌರವದಿಂದ ಸಂಬೋಧಿಸಿದ್ದಾನೆ.
(ಎಚ್.ಕೆ.ಆರ್.)

**ಆ್ಯಂಗ್ಲೋ–ಜಪಾನ್ ಒಪ್ಪಂದ :** ರಷ್ಯ 19ನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಮಂಚೂರಿಯ ಮತ್ತು ಕೊರಿಯ ದೇಶಗಳ ಆಕ್ರಮಣ ಸಿದ್ಧತೆ ನಡಸಿದ್ದರ ವಿರೋಧವಾಗಿ 1902 ಜನವರಿ 30ರಂದು ಜಪಾನ್, ಇಂಗ್ಲೆಂಡ್ ದೇಶಗಳ ನಡುವೆ ಆದ ಒಪ್ಪಂದ. ರಷ್ಯ ಆ ದೇಶಗಳನ್ನು ಆಕ್ರಮಿಸಿದರೆ ಇಂಗ್ಲೆಂಡ್, ಜಪಾನ್‌ಗಳ ವ್ಯಾಪಾರಕ್ಕೆ ಧಕ್ಕೆಯುಂಟಾಗುತ್ತಿತ್ತು. ದೂರ ಪೌರ್ವಾತ್ಯ ದೇಶಗಳ ವ್ಯಾಪಾರದಲ್ಲಿ ತೆರೆದ ಬಾಗಿಲು

ಅಥವಾ ಅನಿರ್ಬಂಧಿತ ವ್ಯಾಪಾರನೀತಿಯನ್ನು ಪಾಲಿಸುವುದಕ್ಕೆ ಈ ಎರಡೂ ರಾಷ್ಟ್ರಗಳು ಪರಸ್ಪರ ನೆರವಾಗಬೇಕೆಂದು ನಿರ್ಧರಿಸಲಾಯಿತು. ಒಪ್ಪಂದದ ಅವಧಿಯನ್ನು ಆಗಾಗ್ಗೆ ಮುಂದುವರಿಸಿ, ಒಂದನೆಯ ಮಹಾಯುದ್ಧದವರೆಗೂ ಅದು ಇಂಗ್ಲೆಂಡ್–ಜಪಾನ್ ಮೈತ್ರಿಯ ಮೂಲಾಧಾರವಾಗಿರುವಂತೆ ಮಾಡಿಕೊಂಡರು. ಈ ಒಪ್ಪಂದಕ್ಕನುಸಾರವಾಗಿಯೇ ಮಿತ್ರರಾಷ್ಟ್ರಗಳ ಪರವಾಗಿ ಜಪಾನ್ ಒಂದನೆಯ ಮಹಾಯುದ್ಧದಲ್ಲಿ ಪಾತ್ರವಹಿಸಿದ್ದು. ಯುದ್ಧ ಮುಗಿದು ಲೀಗ್ ಆಫ್ ನೇಷನ್ಸ್ ಸ್ಥಾಪಿತವಾದ ಮೇಲೆ, ಈ ದ್ವಿಪಕ್ಷೀಯ ಕರಾರು ಅಸಂಗತವಾದ್ದರಿಂದಲೂ ಇಂಗ್ಲೆಂಡ್, ಫ್ರಾನ್ಸ್, ಜಪಾನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಚತುರ್ರಾಷ್ಟ್ರೀಯ ಪೆಸಿಫಿಕ್ ಒಪ್ಪಂದವನ್ನು ಮಾಡಿಕೊಂಡಿದ್ದರಿಂದಲೂ ಈ ಒಪ್ಪಂದವನ್ನು 1923 ಆಗಸ್ಟ್ 17ರಲ್ಲಿ ರದ್ದುಗೊಳಿಸಲಾಯಿತು. *

**ಆ್ಯಂಗ್ಲೋ ಸ್ಯಾಕ್ಸನ್ ಕ್ರಾನಿಕಲ್ :** ಇಂಗ್ಲೆಂಡಿನ ಅರಸ ಆಲ್‌ಫ್ರೆಡ್‌ನಿಂದ ಪ್ರೇರಿತವಾದ ಕೃತಿಗಳಲ್ಲಿ ಅತ್ಯಂತ ಗಣನೀಯವಾದುದು. ಉಪಲಬ್ಧವಾಗಿರುವ ಕೃತಿಗೆ ಹಲವು ಪಾಠಾಂತರ ಗಳಿವೆ. ಪ್ರಸ್ತುತಶಖದ ಪ್ರಾರಂಭದಿಂದ 12ನೆಯ ಶತಮಾನದ ಮಧ್ಯಭಾಗದವರೆಗೆ ಇಂಗ್ಲೆಂಡಿನಲ್ಲಿ ನಡೆದ ಮುಖ್ಯ ಘಟನೆಗಳ ನಿರೂಪಣೆ ಇದು; ದೇಶಭಾಷೆಯಲ್ಲಿದೆ. ಇದರ ಬೀಜ ಪಶ್ಚಿಮಸ್ಯಾಕ್ಸನ್ ರಾಜಧಾನಿ ವಿಂಚೆಸ್ಟರಿನದು. ಇದರಲ್ಲಿ ಕೆಲವುಸಾರಿ ಬರುವ ಪ್ರಾಚೀನಕಾಲದ ಪ್ರಸ್ತಾಪ ಕ್ರೈಸ್ತಧರ್ಮದ ಮನೋಭಾವಕ್ಕಿಂತ ಭಿನ್ನವಾಗಿದೆ. 892ರವರೆಗಿನ ಭಾಗ ಪ್ರಾಯಶಃ ಆಲ್‌ಫ್ರೆಡ್‌ನ ಮಾರ್ಗದರ್ಶನದಲ್ಲಿ ರಚಿತವಾಯಿತು. ಅಲ್ಲಿಂದ 250 ವರ್ಷಕಾಲ ಎಂದರೆ ಕೊನೆಯ ಇಂಗ್ಲಿಷ್ ರಾಜ ಸತ್ತು ಒಂದು ಶತಮಾನ ಕಳೆಯುವವರೆಗೂ ಬೆಳೆದುಕೊಂಡು ಬಂತು. ಕೆಲವು ಭಾಗಗಳಲ್ಲಿ–ದಕ್ಷಿಣ ಇಂಗ್ಲೆಂಡಿನಲ್ಲಿ ಡೇನರೂಡನೆ 893–97ರ ವರೆಗೆ ನಡೆದ ಕದನಗಳ ವರದಿಯಲ್ಲಿ ಉತ್ಕೃಷ್ಟಸಾಹಿತ್ಯದ ಮಟ್ಟವನ್ನು ಕಾಣಬಹುದು. ಇದು ಇಂಗ್ಲೆಂಡಿನ ವಿಶಿಷ್ಟವೂ ಅಮೂಲ್ಯವೂ ಆದ ಕೃತಿಗಳಲ್ಲಿ ಒಂದು. ಇಂಗ್ಲಿಷ್ ಭಾಷೆಯ ಮೊದಲ ಮಹಾಕೃತಿ. ಪಾಶ್ಚಾತ್ಯ ದೇಶ ಒಂದರಲ್ಲಿ ಅದರ ಭಾಷೆಯಲ್ಲೇ ಬಹುಕಾಲ ನಡೆದುಬಂದ ಮೊದಲ ಚಾರಿತ್ರಿಕ ಕೃತಿ. (ಎಲ್.ಎಸ್.ಎಸ್.)

**ಆ್ಯಂಗ್ಲೋಸ್ಯಾಕ್ಸನರು :** ಬ್ರಿಟನ್ನಿನಲ್ಲಿ ರೋಮನ್ನರ ಆಧಿಪತ್ಯ ಕಳೆದ ಮೇಲೆ, ಜರ್ಮನಿ ಯಿಂದ ಬಂದು ನೆಲಸಿದ ಜನ. ಆಂಗ್ಲರು ಮತ್ತು ಸ್ಯಾಕ್ಸನ್ನರು ಎಂಬ ಎರಡು ಜನಾಂಗದವರ ಮಿಲನದಿಂದ ಆದ ಜನಾಂಗವಿದು. ಇಂಗ್ಲೆಂಡಿನ ಪೂರ್ವ, ಮಧ್ಯ ಮತ್ತು ಉತ್ತರದ ಭಾಗಗಳಲ್ಲಿ ನೆಲೆಸಿ ಆಂಗ್ಲರು ಪೂರ್ವಆಂಗ್ಲಿಯ, ಮರ್ಸಿಯ, ನಾರ್ದಂಬ್ರಿಯ ಮುಂತಾದ ರಾಜ್ಯಗಳನ್ನು ಕಟ್ಟಿಕೊಂಡರು. ಜರ್ಮನಿಯಲ್ಲಿ ಆಂಗ್ಲರ ನೆರೆಯಲ್ಲೆ ಇದ್ದ ಸ್ಯಾಕ್ಸನ್ನರು 5ನೆಯ ಶತಮಾನದಲ್ಲಿ ಇಂಗ್ಲೆಂಡಿಗೆ ಬಂದು ನೆಲೆಸಿ ಸಸೆಕ್ಸ್, ವೆಸೆಕ್ಸ್ ಮತ್ತು ಎಸೆಕ್ಸ್ ಎಂಬ ರಾಜ್ಯಗಳನ್ನು ಕಟ್ಟಿದರು. ಜ್ಯೂಟರು ಬಂದು ಕೆಂಟ್ ಪ್ರಾಂತ್ಯದಲ್ಲಿ ನೆಲಸಿದರು. ಮುಂದೆ ಡೇನರು, ನಾರ್ಮನ್ನರು ಮುಂತಾದವರೂ ಬಂದರು. ಇವರೆಲ್ಲ ಪೂರ್ವದಿಂದಲೂ ಇಂಗ್ಲೆಂಡಿನಲ್ಲಿ ನೆಲಸಿದ್ದ ಕೆಲ್ಟ್‌ಜನರೊಂದಿಗೆ ಬೆರೆತುಹೋದರು. ಮುಂದೆ ಆ್ಯಂಗ್ಲೋಸ್ಯಾಕ್ಸನ್ ಎಂಬ ಹೆಸರು 11ನೆಯ ಶತಮಾನದಲ್ಲಿ ಇಂಗ್ಲೆಂಡಿಗೆ ಬಂದು ರಾಜ್ಯ ಸ್ಥಾಪಿಸಿದ ನಾರ್ಮನ್ನರಿಗೇ ಅಲ್ಲದೆ ಹಿಂದೆ ಇಂಗ್ಲೆಂಡಿನಲ್ಲಿದ್ದ ಎಲ್ಲ ಜನರಿಗೂ ಅನ್ವಯಿಸುವಂತಾಯಿತು. *

**ಆ್ಯಂಜೆಲಸ್ ಸೈಲೀಷಿಯಸ್ :** 1624–77. ಜರ್ಮನಿಯ ಅನುಭಾವಿ ಕವಿ. ಇವನ ನಿಜವಾದ ಹೆಸರು ಯೊಹಾನಸ್ ಷೆಫ್ಲರ್. ವೃತ್ತಿಯಲ್ಲಿ ವೈದ್ಯನಾಗಿದ್ದ ಈತ ರೋಮನ್‌ಕ್ಯಾಥೊಲಿಕನಾಗಿ ಮತಾಂತರಹೊಂದಿದಾಗ ಹೆಸರನ್ನು ಬದಲಾಯಿಸಿಕೊಂಡ. 1661ರಲ್ಲಿ ಮತಬೋಧಕನಾದ. ಇವನ ಎರಡು ಕವನ ಸಂಕಲನಗಳು ಬಹು ಪ್ರಸಿದ್ಧವಾಗಿವೆ: ಡರ್ ಷೆರುಬಿನಿಷೆ ವಾಂಡರ್‌ಸ್ಮನ್ ಮತ್ತು ಹೈಲೀಗ್ ಸೀಲೆನ್‌ಲಸ್ಟ್, ಮೊದಲನೆಯದರಲ್ಲಿ ಅನುಭಾವತತ್ತ್ವ ನಾಡುನುಡಿಯ ರೂಪದಲ್ಲಿ ಉಜ್ವಲವಾಗಿ ನಿರೂಪಿತವಾಗಿದೆ. ಎರಡನೆಯದು ಆಧ್ಯಾತ್ಮಿಕ ಗ್ರಾಮಾಂತರ ಕವನಗಳ ಸಂಕಲನ. ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಮತಗಳ ಕ್ರಾಂತಿ ಮರುಕ್ರಾಂತಿಗಳ ಕಾಲದಲ್ಲಿ ಈ ಕವನಸಂಕಲನಗಳು ಎರಡು ಪಕ್ಷದವರ ಮೇಲೂ ಪ್ರಭಾವವನ್ನು ಬೀರಿವೆ. (ಜೆ.ವಿ.ಎಸ್.)

**ಆ್ಯಂಟ್ ಲಯನ್ :** ಮಿರ್ಮಿಲಿಯಾನಿಡೀ ಕುಟುಂಬಕ್ಕೂ ನ್ಯೂರಾಪ್ಟೆರ ಉಪವರ್ಗಕ್ಕೂ ಸೇರಿದ ಕೀಟ. ಪಿಪೀಲಿಕಾಸಿಂಹ ಅಥವಾ ಮಿರ್ಮಿಲಿಯಾನ್. ಪ್ರೌಢಜೀವಿ ಕೊಡತಿಹುಳುವನ್ನು ಹೋಲುತ್ತದೆ. ಆದರೆ ಗಿಡ್ಡಗಿರುವ ಗದೆಯಾಕಾರದ ಕುಡಿಮೀಸೆಗಳೂ ಕಿರಿದಾದ ರೆಕ್ಕೆಗಳೂ ಇದ್ದು, ಬಾಯಿಯ ಕೊರೆಯುವ ಉಪಾಂಗಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಮರಳುಮಿಶ್ರಿತ ಭೂಮಿಯಲ್ಲಿ ಇವು ಮೊಟ್ಟೆಗಳನ್ನಿಡುತ್ತವೆ. ಲಾರ್ವಗಳಿಗೆ ಚಪ್ಪಟೆಯಾದ ಮೊಟ್ಟೆಯಾಕಾರದ ದೇಹ. ಅಗಲವಾದ ಗುದ್ದಲಿಯಾಕಾರದ ತಲೆ, ತೆಳುವಾದ ಕಾಲುಗಳು ಇರುತ್ತವೆ. ಹೊರಬಂದೊಡನೆ ಲಾರ್ವಗಳು ಆಲಿಕೆಯಾಕಾರದ ಗುಳಿ ತೋಡಿ, ಅದರ ತಳಭಾಗದಲ್ಲಿ ಹುದುಗಿಕೊಂಡು ಹೊರಭಾಗಕ್ಕೆ ದವಡೆಗಳನ್ನು ಮಾತ್ರ ಚಾಚಿರುತ್ತವೆ. ಇರುವೆ ಅಥವಾ ಇತರ ಸಣ್ಣ ಪ್ರಾಣಿಗಳು ಈ ಆಲಿಕೆಗೆ ಅಕಸ್ಮಾತ್ತಾಗಿ ಜಾರಿಬಿದ್ದಾಗ ಅವನ್ನು ಪಿಪೀಲಿಕಾಸಿಂಹ ಹಿಡಿದು ಬಲವಾದ ದವಡೆಗಳ ಸಹಾಯದಿಂದ ಅವುಗಳ ರಸವನ್ನು ಹೀರುತ್ತದೆ. ಮೂರುತಿಂಗಳ ಅನಂತರ ಲಾರ್ವಗಳು ಕೋಶಾವಸ್ಥೆ ತಲುಪುತ್ತವೆ. ಕೋಶಾ ವಸ್ಥೆಯ ಹುಳು ರೇಷ್ಮೆಯಂಥ ಸ್ರಾವದಿಂದ ತನ್ನ ಸುತ್ತ ಗೂಡು ಕಟ್ಟುತ್ತದೆ. (ಪಿ.ಎ.ಆರ್.)

**ಆಂಟಿಗೊನಾನ್ :** ಪಾಲಿಗೊನೇಸೀ ಕುಟುಂಬಕ್ಕೆ ಸೇರಿದ ಸಸ್ಯ. ಉದ್ದವಾಗಿ ಡೊಂಕು ಡೊಂಕಾಗಿ ಹಬ್ಬುವ ಬಳ್ಳಿ. ಗ್ರೀಕ್ ಭಾಷೆಯಲ್ಲಿ ಆಂಟಿಗೊನಾನ್ ಎಂದರೆ ಡೊಂಕು ಡೊಂಕಾಗಿರುವುದು ಎಂದು ಅರ್ಥ. ಇದು ಮಧ್ಯ ಅಮೆರಿಕದ ಮೂಲವಾಸಿ. ಈ ಬಳ್ಳಿಯನ್ನು ಮನೆಯ ಮುಂದೆ ಮತ್ತು ಮನೆಗಳ ಮೇಲೆ ಚಾವಣಿಗಳ ಮೇಲೆ ಅಲಂಕಾರಕ್ಕಾಗಿ ಹಬ್ಬಿಸುತ್ತಾರೆ. ಬಳ್ಳಿಯಲ್ಲಿ ಬಿಡುವ ಹೂಗೊಂಚಲನ್ನು ಬಿಡಿ ಹೂವಾಗಿಯೂ ಪುಷ್ಪಕರಂಡಕದಲ್ಲಿಯೂ ಉಪಯೋಗಿಸುವುದುಂಟು.

ಆಂಟಿಗೊನಾನ್ ಬಳ್ಳಿಯ ಎಲೆ ಹೃದಯಾಕಾರ, ಇಲ್ಲವೆ ಕರಣೆಯಾಕಾರ; ಅಲೆಯಾಕಾರದ ಅಂಚನ್ನು ಮೊನಚಾದ ತುದಿಯನ್ನೂ ಪಡೆದಿದೆ; ಮೇಲುಭಾಗ ಒರಟಾಗಿದೆ; ನಡುದಿಂಡು ಮತ್ತು ನಾಳಗಳು ಎಲೆಯ ಅಲಗಿನ ಮಟ್ಟಕ್ಕಿಂತ ತಗ್ಗಾಗಿ ಇರುತ್ತವೆ. ಅನೇಕ ಸುತ್ತು ಬಳ್ಳಿಗಳನ್ನು (ಟೆಂಡ್ರಿಲ್) ಬೆಳೆಸಿಕೊಂಡು ಆಶ್ರಯಗಳನ್ನು ಹಬ್ಬುತ್ತವೆ. ಕಾರಣಾಂತರ ದಿಂದ ಸಸ್ಯದ ಕಾಂಡ ಸತ್ತುಹೋದರೆ ಗೆಡ್ಡೆ ಬೇರಿನಿಂದ ಮೇಲೆ ಬಂದು ಮೊದಲಿನಂತೆಯೇ ಹಬ್ಬಿಕೊಳ್ಳುತ್ತದೆ. ಹೂಗೊಂಚಲು ಅಂತ್ಯಾರಂಭಿ ಅಥವಾ ಸ್ಪೈಕ್ ಮಾದರಿಯದು. ನಿಬಿಡವಾಗಿ ಹರಡಿರುವ ಹಸುರು ಚಪ್ಪರದ ಮೇಲೆ ಕೆಂಪು ಅಥವಾ ಬಿಳಿ ಬಣ್ಣದ ಹೂಗೊಂಚಲು ಬಹಳ ರಮ್ಯವಾಗಿ ಕಾಣುತ್ತದೆ. ಆಂಟಿಗೊನಾನ್ ಬಳ್ಳಿ ಅಧಿಕವಾಗಿ ಬೀಜಗಳನ್ನು ಕೊಡುತ್ತಿದ್ದು, ಅವುಗಳಿಂದ ವೃದ್ಧಿಮಾಡಬಹುದು.

ಆಂಟಿಗೊನಾನ್ ಲೆಪ್ಟೋಪಸ್ (ಕಾರಲ್ ಕ್ರೀಪರ್, ಕೊರಲಿಟ) ಎಂಬುದು ಪ್ರಸಿದ್ಧವಾದ ಬಗೆ. ಈ ಪ್ರಭೇದದ ಸಸ್ಯದ ಬೇರು ಗೆಡ್ಡೆಯಂತಿರುತ್ತದೆ. ಕಾಂಡ ಸಣ್ಣ ಮತ್ತು ಉದ್ದವಾಗಿದೆ. ಹೂಗೊಂಚಲು 6–16 ಹೂಗಳಿಂದ ಕೂಡಿದ್ದು, ಅಂತ್ಯಾರಂಭಿ ಮಾದರಿಯದು. ಕಡುಗೆಂಪು ಬಣ್ಣದ ಹೂಗಳಿಂದಾಗಿ ಚೆಲುವಾಗಿ ಕಾಣುತ್ತದೆ. ಇದರ ಗೆಡ್ಡೆ ಖಾದ್ಯಯೋಗ್ಯ.

ಆಂಟಿಗೊನಾನ್ ಗ್ವಾಟೆಮಾಲೆನ್ಸ್ ಎಂಬುದು ಇನ್ನೊಂದು. ಇದರ ಕಾಂಡ ಸಣ್ಣ ಮತ್ತು ಕೋಣಾಕಾರ. ಇದರ ಎಲೆಗಳು ಲೆಪ್ಟೋಪಸ್ ಬಗೆಯ ಎಲೆಗಳಿಗಿಂತ ದೊಡ್ಡದು ಮತ್ತು ಇದರ ಹೂಗೊಂಚಲಿನಲ್ಲಿ ಹೆಚ್ಚಿನ ಸಂಖ್ಯೆಯ ಹೂಗಳಿರುತ್ತವೆ. (ಡಿ.ಎಂ.)

**ಆ್ಯಂಟಿಫಾನ್ :** ಪ್ರ.ಶ.ಪೂ. 480–11. ಆ್ಯಟಿಕದ ವಾಗ್ಮಿಗಳಲ್ಲಿ ಮೊದಲನೆಯವ. ಪ್ರ.ಶ.ಪೂ. 411ರ ಅಲ್ಪತಂತ್ರ ಕ್ರಾಂತಿಯಲ್ಲಿ ಭಾಗವಹಿಸಿದನೆಂದು ಮರಣದಂಡನೆಗೆ ಗುರಿಯಾದ. ಈತ ಹಿಂದಿನ ಕಟುಸಂಯಮದ ಶೈಲಿಯ ವಾಗ್ಮಿಗಳ ಪಂಥಕ್ಕೆ ಸೇರಿದವ. ವ್ಯವಹಾರಗಳಲ್ಲಿ ಕಕ್ಷಿಗಾರರೇ ತಮ್ಮ ಪಕ್ಷವನ್ನು ಪ್ರತಿಪಾದಿಸಲು ಭಾಷಣಗಳನ್ನು ಸಿದ್ಧಗೊಳಿಸು ತ್ತಿದ್ದ. ಭಾಷಣ ಕಲೆಯ ಶಿಕ್ಷಕನೂ ಆಗಿದ್ದ. ಥೂಸಿಡಿಡೀಸ ಇವನ ಶಿಷ್ಯ ಎಂದು ಹೇಳುತ್ತಾರೆ. ಕೊಲೆಗಳ ಮೊಕದ್ದಮೆಗಳಿಗೆ ಸಂಬಂಧಿಸಿದ ವಾದಗಳಿಗೆ ವಿಶೇಷವಾಗಿ ಪ್ರಸಿದ್ಧನಾಗಿದ್ದ. (ಕೆ.ಎ.; ಎಲ್.ಎಸ್.ಎಸ್.)

**ಆ್ಯಂಟಿಮನಿ :** ಬೆಳ್ಳಿಯ ಹೊಳಪುಳ್ಳ ಲೋಹ; ವಿಷವಸ್ತು. ಪರಮಾಣು ಸಂಖ್ಯೆ 51, ರಾಸಾಯನಿಕ ಪ್ರತೀಕ Sb, ಪರಮಾಣು ಭಾರ 121.76. ಹಾಗೂ ದ್ರವ್ಯರಾಶಿ 121 (56%) ಮತ್ತು 123 (44%) ಇರುವ ಸಮಸ್ಥಾನಿಗಳಿವೆ. ಆವರ್ತ ಕೋಷ್ಟಕದ ಐದನೆಯ ಗುಂಪಿನಲ್ಲಿದೆ. ಲೋಹದ ಮುಖ್ಯ ಅದಿರು ಸ್ಟಿಬ್ನೈಟ್. ಗ್ರಾಫೈಟ್ ಮೂಸೆಗಳಲ್ಲಿ ಅದಿರನ್ನು ಪೊಟಾಸಿಯಂ ನೈಟ್ರೇಟ್‌ನೊಡನೆ ಕಾಯಿಸಿ, ಬಂದ ಆಕ್ಸೈಡನ್ನು ಇದ್ದಿಲು ಪುಡಿಯೊಡನೆ ಕಾಯಿಸುವುದರಿಂದ ಆ್ಯಂಟಿಮನಿಯನ್ನು ಪಡೆಯಬಹುದು. ಇದು ಬೆಳ್ಳಿಯ ಹೊಳಪುಳ್ಳ ಲೋಹ, ಸಾಪೇಕ್ಷ ಸಾಂದ್ರತೆ 6.7. ಗಾಳಿಯಲ್ಲಿ ಸ್ಥಿರ. ಬಹಳ ಕಾಯಿಸಿದಾಗ ಮಾತ್ರ ಉರಿದು ಆ್ಯಂಟಿಮನಿ ಆಕ್ಸೈಡ್ ಹಬೆಯನ್ನು ಕೊಡುತ್ತದೆ. ಇದು ಸಹ ಅನೇಕ ರೂಪಾಂತರ ಗಳನ್ನು ಹೊಂದಿರುತ್ತದೆ. ದುರ್ಬಲ ಆಮ್ಲಗಳಲ್ಲಿ ಇದು ಕರಗುವುದಿಲ್ಲವಾದರೂ ಪ್ರಬಲ ಆಮ್ಲಗಳೊಡನೆ ಅವುಗಳಿಗನುಸಾರವಾಗಿ ಲವಣಗಳನ್ನು ಕೊಡುತ್ತದೆ. ಇದರ ಇತರ ಗುಣಗಳು ಹೆಚ್ಚು ಕಡಿಮೆ ಆರ್ಸೆನಿಕ್ ಗುಣಗಳಂತೆಯೇ. ವಾಣಿಜ್ಯದಲ್ಲಿ ಇದರ ಹೆಚ್ಚಿನ ಉಪಯೋಗ ಮಿಶ್ರಲೋಹಗಳ ತಯಾರಿಕೆಯಲ್ಲಿ. ಇದರಿಂದ ಉಂಟಾದ ಮಿಶ್ರಲೋಹಗಳು ಕಡಿಮೆ ಉಷ್ಣದಲ್ಲಿ ಕರಗುವುದರಿಂದ ಅವುಗಳನ್ನು ಮುದ್ರಣದ ಮೊಳೆಗಳು, ಎರಕದ ಸಾಮಾನುಗಳು ಇವುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಆ್ಯಂಟಿಮನಿಯ ಮಿಶ್ರಲೋಹಗಳಲ್ಲಿ ಮುಖ್ಯವಾದವುಗಳು: ಬ್ರಿಟಾನಿಯ ಲೋಹ–ಆ್ಯಂಟಿಮನಿ, ಸತುವು ಮತ್ತು ತಾಮ್ರ; ಟೈಪ್‌ಲೋಹ ಸೀಸ, ಆ್ಯಂಟಿಮನಿ ಮತ್ತು ಸತುವು 10. ಇದರ ಒಂದು ಮುಖ್ಯ ಸಂಯುಕ್ತವಾದ ಟಾರ್ಟರ್ ಎಮಿಟಿಕ್ ಅಥವಾ ಪೊಟಾಸಿಯಂ ಆ್ಯಂಟಿಮನೈಲ್ ಟಾರ್ಟ್ರೇಟನ್ನು ಔಷಧವಾಗಿ ಮತ್ತು ಬಟ್ಟೆಗಳಿಗೆ ಬಣ್ಣ ಹಾಕಲು, ಕೈಗಾರಿಕೆಗಳಲ್ಲಿ ಬಳಸುವ ಮಾರ್ಡೆಂಟ್ ಆಗಿ ಉಪಯೋಗಿಸಲಾಗುತ್ತಿದೆ. ಆರ್ಸೆನಿಕ್‌ನಂತೆಯೇ ಮತ್ತೊಂದು ವಿಷವಸ್ತುವಾದ ಆ್ಯಂಟಿಮನಿಯ ಬಳಕೆ ಹಿಂದಿನ ಕಾಲದ ಅರಬ್ಬರಿಗೆ ಪರಿಚಯವಿದ್ದಂತೆ

ತೋರುತ್ತದೆ. ಅರಬ್ಬಿ ಹೆಂಗಸರು ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಸೌಂದರ್ಯವರ್ಧಕ (ಮುಖ್ಯವಾಗಿ ಹುಬ್ಬುಗಳನ್ನು ತಿದ್ದಿ, ಕಪ್ಪಿಡುವ ಸಲುವಾಗಿ) ವಸ್ತುವಾಗಿ ಇದನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಕೆಲವು ದಾಖಲೆಗಳೂ ಇವೆ. (ಎಸ್.ಎ.ಎ.)

**ಆ್ಯಂಟಿಯೋಕ್ :** ಟರ್ಕಿಯ ದಕ್ಷಿಣದಲ್ಲಿ, ಮೆಡಿಟರೇನಿಯನ್ ಸಮುದ್ರತೀರದಿಂದ 30 ಕಿಮೀ ದೂರದಲ್ಲಿರುವ ವಾಣಿಜ್ಯಕೇಂದ್ರ. ಪುರಾತನಕಾಲದಲ್ಲಿ ಪೂರ್ವದ ರಾಣಿ ಎಂದು ಕರೆಯಲ್ಪಟ್ಟ ಈ ನಗರವನ್ನು ಆಧುನಿಕವಾಗಿ 'ಅಂತ್ಯಾಕ್ಯ' ವೆಂದು ಕರೆಯಲಾಗಿದೆ.

ಅಲೆಕ್ಸಾಂಡರನ ಮರಣಾನಂತರ ಪಶ್ಚಿಮ ಏಷ್ಯದ ಕೆಲವು ಭಾಗಗಳನ್ನಾಳಿದ ಸೆಲ್ಯೂಸಿಡ್ ದೊರೆಗಳ ಕಾಲದಲ್ಲಿ ಗ್ರೀಕ್ ಸಂಸ್ಕೃತಿ, ವೈಭವಗಳ ಮತ್ತು ವ್ಯಾಪಾರದ ಅತಿಮುಖ್ಯ ಕೇಂದ್ರಗಳಲ್ಲಿ ಒಂದಾಗಿತ್ತು. ಇಲ್ಲಿಂದ ಗ್ರೀಕ್ ಸಂಸ್ಕೃತಿ ಏಷ್ಯದ ಅನೇಕ ಕಡೆಗಳಿಗೆ ಹರಡಿ ಕೆಲವು ಶತಮಾನಗಳ ಕಾಲ ಉಳಿಯುವಂತಾಯಿತು.

ಇಲ್ಲಿ ಆಲಿವ್ ಎಣ್ಣೆ, ಸಾಬೂನು ತಯಾರಿಕೆ, ಹತ್ತಿ ಬಟ್ಟೆ ಕೈಗಾರಿಕೆ ಹಾಗೂ ಇತರ ಸಂಸ್ಕರಣ ಉದ್ಯಮಗಳಿವೆ. ನಗರಕ್ಕೆ ಸುತ್ತಮುತ್ತಲಿನ ಕೃಷಿವಲಯಗಳಿಂದ ಗೋಧಿ, ಹತ್ತಿ, ದ್ರಾಕ್ಷಿ, ಬತ್ತ, ಆಲಿವ್ಸ್, ತರಕಾರಿ ಮತ್ತು ಹಣ್ಣುಗಳು, ರೇಷ್ಮೆ ಮುಂತಾದವು ಸರಬರಾಜಾಗುತ್ತವೆ. ಅವುಗಳಲ್ಲಿ ಕೆಲವು ಕಚ್ಚಾ ಪದಾರ್ಥಗಳೂ ಮತ್ತು ವ್ಯಾಪಾರದ ಸರಕುಗಳಾಗಿವೆ. *

**ಆ್ಯಂಟಿಯೋಕಸ್ III :** ಪ್ರ.ಶ.ಪೂ. 223ರಲ್ಲಿ ಸೆಲ್ಯೂಸಿಡ್ ರಾಜ್ಯಕ್ಕೆ ದೊರೆಯಾಗಿದ್ದವ. ಸೆಲ್ಯುಕಸ್‌ನ ಆಳ್ವಿಕೆಯಲ್ಲಿದ್ದ ಪ್ರದೇಶಗಳನ್ನೆಲ್ಲ ಪುನಃ ಪಡೆಯಬೇಕೆಂದು ಮೊದಲು ಪೌರ್ವಾತ್ಯದೇಶಗಳಮೇಲೆ ನುಗ್ಗಿ ಪಾರ್ಥಿಯ, ಬ್ಯಾಕ್ಟ್ರಿಯ ಮುಂತಾದ ರಾಜ್ಯಗಳ ದೊರೆಗಳನ್ನೆಲ್ಲ ತನ್ನ ಸಾರ್ವಭೌಮತ್ವಕ್ಕೆ ತಲೆಬಾಗುವಂತೆ ಮಾಡಿದ. ಅನಂತರ ಪಶ್ಚಿಮದ ಕಡೆ ನುಗ್ಗಿ ಈಜಿಪ್ಟಿನ ಸೈನ್ಯವನ್ನು ಸೋಲಿಸಿ ಪ್ಯಾಲಸ್ಟೀನ್ ಪ್ರಾಂತ್ಯವನ್ನು ತನ್ನ ಆಧಿಪತ್ಯಕ್ಕೆ ಸೇರಿಸಿಕೊಂಡ. ಮಗಳಾದ ಕ್ಲಿಯೋಪಾತ್ರಳನ್ನು ಈಜಿಪ್ಟಿನ ದೊರೆ ಐದನೆಯ ಟಾಲಮಿಗೆ ಕೊಟ್ಟು ವಿವಾಹ ಮಾಡಿದ. ಅಲೆಕ್ಸಾಂಡರ್‌ಗೆ ಸೇರಿದ ಗ್ರೀಸ್, ಮ್ಯಾಸಿಡೋನಿಯಗಳನ್ನು ಗೆಲ್ಲಲು ಆಶಿಸಿದ. ಇದೇ ಕಾಲಕ್ಕೆ ರೋಮನ್ನರಿಂದ ಪರಾಭವ ಹೊಂದಿ ಇವನಲ್ಲಿಗೆ ಬಂದಿದ್ದ ಹ್ಯಾನಿಬಾಲ್‌ನ ಪ್ರೇರಣೆಯಂತೆ ಗ್ರೀಸಿನ ಮೇಲೆ ದಂಡೆತ್ತಿಹೋದ. ಆದರೆ ರೋಮನ್ ಪ್ರಜಾಧಿಪತ್ಯದ ಶಕ್ತಿಯನ್ನು ಎದುರಿಸಲಾರದೆ ಥರ್ಮಾಪಲೆ ಮತ್ತು ಮ್ಯಾಗ್ನೀಸಿಯ ಎಂಬ ಕದನಗಳಲ್ಲಿ ಸೋತು, ಏಷ್ಯಮೈನರ್‌ನ ಪಶ್ಚಿಮ ಪ್ರಾಂತ್ಯಗಳನ್ನು ರೋಮನರಿಗೆ ಬಿಟ್ಟುಕೊಟ್ಟ. ಗ್ರೀಕ್ ಮತ್ತು ರೋಮ್ ಚರಿತ್ರಕಾರರು ಇವನನ್ನು ಮಹಾಶಯ ಎಂದು ಕರೆದಿದ್ದಾರೆ. *

**ಆ್ಯಂಟಿರೈನಮ್ :** ಸ್ಕ್ರಾಫ್ಯುಲೇರಿಯೇಸೀ ಕುಟುಂಬಕ್ಕೆ ಸೇರಿದ ಅಲಂಕಾರ ಸಸ್ಯ. ಮಡಿಗಳಲ್ಲಿ, ಕುಂಡಗಳಲ್ಲಿ, ಕುಂಡಗಳ ಅಂಚುಗಳಲ್ಲಿ ಬೆಳೆಸಲು ಯೋಗ್ಯವಾದ ಆಲಂಕಾರಿಕ ವಾರ್ಷಿಕ ಸಸ್ಯ. ಸ್ವಾಭಾವಿಕವಾಗಿ ಬಹುವಾರ್ಷಿಕವಾದರೂ ವಾರ್ಷಿಕ ಸಸ್ಯವೆಂದೇ ಪರಿಗಣಿಸಲ್ಪಟ್ಟಿದೆ. ಬೀಜಗಳಿಂದ ಮಾತ್ರ ಸಸ್ಯವೃದ್ಧಿ. ಹೂಗಳು ಬಹು ಆಕರ್ಷಣೀಯವಾಗಿದ್ದು ಬಿಳಿ, ಕೆಂಪು, ಕಿತ್ತಳೆ, ಕಗ್ಗೆಂಪು, ಕಾರ್‌ಮೈನ್, ಪಾಟಲ ಮುಂತಾದ ಬಣ್ಣಗಳಲ್ಲಿರುತ್ತವೆ.

ಈ ಸಸ್ಯಗಳನ್ನು ಎತ್ತರದವು (75–90 ಸೆಂ.ಮೀ), ಮಧ್ಯಮ (30–45 ಸೆಂ.ಮೀ) ತುಂಡು (15–20 ಸೆಂಮೀ) ಎಂದು ವಿಂಗಡಿಸಬಹುದು. ತುಂಡುಜಾತಿ ರಾಕರಿಗಳಲ್ಲಿ ಬೆಳೆಸಲು ಉಪಯುಕ್ತವಾಗಿವೆಯಾದುದರಿಂದ ಇವುಗಳನ್ನು ರಾಕ್ ಹೈಬ್ರಿಡ್ ಅಥವಾ ಮ್ಯಾಜಿಕ್ ಕಾರ್ಪೆಟ್‌ಗಳೆಂದೂ ಕರೆಯುವುದುಂಟು. ಹಗುರವಾದ ಸಣ್ಣ ಮರಳುಮಿಶ್ರಿತ ಮಣ್ಣಿನಲ್ಲಿ ಇವನ್ನು ಬಹು ಸುಲಭವಾಗಿ ಬೆಳೆಯಬಹುದು. ಬೀಜಗಳು ಬಹು ಸೂಕ್ಷ್ಮವಾದ್ದರಿಂದ 1 ಭಾಗ ಬೀಜವನ್ನು 6 ಭಾಗ ಮರಳಿನ ಜೊತೆಯಲ್ಲಿ ಮಿಶ್ರಮಾಡಿ ಎಲ್ಲ ಕಡೆಗೂ ಹರಡುವಂತೆ ಬಿತ್ತನೆ ಮಾಡಬೇಕು. ಎರಡು ಎಲೆಯ ಸಸ್ಯಗಳನ್ನು ಬೀಜ ತಟ್ಟೆಗಳಲ್ಲಿ ಹರಡುವಂತೆ 5 ಸೆಂ.ಮೀ ಅಂತರಕೊಟ್ಟು ನಾಟಿ ಮಾಡಿ ಪಳಗಿಸಬೇಕು. ಹೀಗೆ ಬೆಳೆದ 7.5 ಸೆಂಮೀ ಉದ್ದ ಸಸ್ಯಗಳನ್ನು ಮಡಿಗಳಲ್ಲಿ 30–45 ಸೆಂಮೀ ಅಂತರ ಕೊಟ್ಟು ನೆಡಬೇಕು. ಕುಂಡಗಳಲ್ಲಿ ಬೆಳೆಸುವುದಾದರೆ ಒಂದೊಂದೇ ಸಸಿಯನ್ನು ಮೊದಲು 15 ಸೆಂಮೀ ಅಳತೆಯ ಕುಂಡಗಳಲ್ಲಿ ಮೊಳೆಯಿಸಿ ಅನಂತರ 20 ಸೆಂಮೀ ಕುಂಡಕ್ಕೆ ಬದಲಾಯಿಸಿ ಬೆಳೆಸಬೇಕು. ಹೆಚ್ಚಿಗೆ ಗೊಬ್ಬರ ಹಾಕಿದರೆ ಗಿಡ ಎತ್ತರವಾಗಿ ಬೆಳೆದು ಹೂಗಳು ಕಡಿಮೆಯಾಗುತ್ತವೆ; ಹೆಚ್ಚಿಗೆ ನೀರು ಹಾಕಿದರೆ ಗಿಡ ಕೊಳೆತು ಸಾಯುತ್ತದೆ. ಬೇರಿನ ಹತ್ತಿರ ಒಣ ವಾತಾವರಣವಿರಬೇಕಾದ್ದರಿಂದ ಮಳೆಗಾಲದ ಅನಂತರ ಬೆಳೆಸುವುದು ಒಳ್ಳೆಯದು. ಕುಡಿ ಜಿಗುಟುತ್ತಿದ್ದರೆ ಕವಲುಗಳು ಹುಲುಸಾಗಿ ಬಂದು ಗಿಡ ಪೊದೆಯಂತೆ ತಳೆಯುತ್ತದೆ. 4 ತಿಂಗಳಲ್ಲಿ ಹೂ ಬಿಡುತ್ತದೆ. ಬಾಡಿಹೋದ ಹೂವಿನ ಗುಚ್ಛಗಳನ್ನು ಕತ್ತರಿಸಿ ತೆಗೆದುಹಾಕಿದರೆ ಎರಡನೆಯ ಸಲ ಕೂಡ ಹೂ ಬಿಡುತ್ತದೆ. (ಕೆ.)

**ಆ್ಯಂಟೆನ :** ವಿದ್ಯುತ್ ಕಾಂತೀಯ ಜಾಲದ ಒಂದು ಅಂಗ (ಗ್ರಾಹಕ ತಂತು). ಮುಖ್ಯವಾಗಿ ಇದು ವಿದ್ಯುತ್‌ಕಾಂತೀಯ ತರಂಗಗಳನ್ನು ಪ್ರಸಾರಮಾಡುತ್ತದೆ ಅಥವಾ ಪ್ರಸಾರವಾದ ತರಂಗಗಳನ್ನು ಗ್ರಹಿಸಿ ಗ್ರಾಹಕರಿಗೆ ತಲುಪಿಸುತ್ತದೆ. ಸಾಮಾನ್ಯವಾಗಿ ಪ್ರಸಾರ ಮಾಡುವ ಆ್ಯಂಟೆನವೇ ತರಂಗಗಳನ್ನೂ ಸ್ವೀಕರಿಸಬಲ್ಲದು. ಆ್ಯಂಟೆನಗಳ ಆಕಾರ ಶಕ್ತಿಗಳು ಅವು ಮಾಡಬೇಕಾದ ಕ್ರಿಯೆಯನ್ನು ಅವಲಂಬಿಸಿವೆ. ಉದಾ: ಟೆಲಿವಿಷನ್ ಪ್ರಸಾರ ಮಾಡುವ ಆ್ಯಂಟೆನಗಳು ಸಾವಿರಾರು ವಾಟ್‌ಗಳಷ್ಟು ಶಕ್ತಿಯನ್ನು ಗ್ರಹಿಸುವ ಮತ್ತು

ತರಂಗಗಳನ್ನು ಎಲ್ಲ ದಿಕ್ಕಿನಲ್ಲೂ ಪ್ರಸರಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಆದ್ದರಿಂದ ಟೆಲಿವಿಷನ್ ಆ್ಯಂಟೆನಗಳನ್ನು ಎತ್ತರವಾದ ಗೋಪುರಗಳ ಮೇಲೆ ನಿರ್ಮಿಸುತ್ತಾರೆ. ಬಹಳ ಹೆಚ್ಚು ತರಂಗಮಾನದ ರೇಡಿಯೊ ತರಂಗಗಳನ್ನು ಪ್ರಸರಿಸುವ ಆ್ಯಂಟೆನಗಳು ಪ್ರಸರಿಸಬೇಕಾದ ತರಂಗಗಳ ಉದ್ದದ 4/l ಭಾಗದಷ್ಟು ಎತ್ತರವಾಗಿರುವ ಲೋಹದ ರಚನೆಗಳಾಗಿವೆ. ಆ್ಯಂಟೆನಗಳು ಸುರುಳಿಯಂತೆ, ಉಂಗುರದಂತೆ, ದ್ವಿಧ್ರುವದಂತೆ, ಕೆಲವೊಮ್ಮೆ ಉದ್ದನೆಯ ತಂತಿಯಂತೆ ಇರುತ್ತವೆ. ಕೆಲವು ವೇಳೆ ನಿರ್ದಿಷ್ಟ ದಿಕ್ಕಿನಲ್ಲಿ ಶಕ್ತಿಯುತವಾದ ತರಂಗಗಳನ್ನು ಕಳುಹಿಸಲು ಅವುಗಳ ಹಿಂದೆ ಪ್ರತಿಫಲಕಗಳನ್ನಿಟ್ಟಿರುತ್ತಾರೆ. ಉದಾ: ವಿಮಾನದ ಅಗೋಚರ ಭೂಸ್ಪರ್ಶದಲ್ಲಿ ಬಳಸುವ ರೇಡಾರ್‌ಗಳಲ್ಲಿ, ಬೃಹದಾಕಾರದ ರೇಡಿಯೋದೂರದರ್ಶಿಗಳಲ್ಲಿ ಬಹಳ ದೂರದವರೆಗೆ ತರಂಗಗಳನ್ನು ಕಳುಹಿಸಲು ದೀರ್ಘತರ ವೃತ್ತಾಕಾರದ ಪ್ರತಿಫಲಕಗಳನ್ನು ಆ್ಯಂಟೆನಗಳ ಹಿಂದೆ ಇಟ್ಟಿರುತ್ತಾರೆ. ಆಧುನಿಕ ಕಾಲದಲ್ಲಿ ಟೆಲಿವಿಷನ್, ರೇಡಿಯೋ ಪ್ರಸಾರ, ಶತ್ರುವಿಮಾನಗಳ ಪತ್ತೆ ಹಚ್ಚುವಿಕೆ, ಮಾನವ ನಿರ್ಮಿತ ಆಕಾಶನೌಕೆ, ಜಲಾಂತರ ನೌಕೆಗಳ ನಿರ್ದೇಶನ ಮುಂತಾದ ಕಾರ್ಯಗಳಲ್ಲಿ ವಿದ್ಯುತ್ಕಾಂತೀಯ ಅಂಗವಾಗಿ ಆ್ಯಂಟೆನ ಹಿರಿದಾದ ಪಾತ್ರವನ್ನು ವಹಿಸುತ್ತದೆ. (ಜಿ.ಎಸ್.)

**ಆ್ಯಂಟೇರಿಯೊ :** ಉತ್ತರ ಅಮೆರಿಕ ಖಂಡದಲ್ಲಿರುವ ಸಿಹಿ ನೀರಿನ ಸರೋವರ. ಪಂಚಮಹಾ ಸರೋವರಗಳಲ್ಲೊಂದು. ಮೊದಲು ಕಂಡವ ಎಟಿನೆ ಬ್ರೂಲ್ (1615). ಅತ್ಯಂತ ಚಿಕ್ಕದಾದರೂ ಆಳದಲ್ಲಿ 3 ನೆಯ ಸ್ಥಾನ ಪಡೆದಿದೆ. 309 ಕಿಮೀ ಉದ್ದ ಮತ್ತು 85 ಕಿಮೀ ಅಗಲವಾಗಿದೆ. ವಿಸ್ತೀರ್ಣ 194.77 ಚಕಿಮೀ. ಸಮುದ್ರಮಟ್ಟದಿಂದ 75 ಮೀ ಎತ್ತರದಲ್ಲಿದೆ. ಅತ್ಯಂತ ಆಳವಾದ ಭಾಗ 237 ಮೀ ಅಂದರೆ ಸಮುದ್ರಮಟ್ಟಕ್ಕಿಂತ 75 ಸೆಂಮೀ. ಆಳ. ಜಲಾನಯನ ಕ್ಷೇತ್ರ ಸು. 90,132 ಚಕಿಮೀ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸರಾಸರಿ 30' ಮಳೆಯಾಗುವುದು.

ಈ ಸರೋವರದ ನ್ಯೂಯಾರ್ಕ್ ಮತ್ತು ಆ್ಯಂಟೇರಿಯೊ ಪ್ರಾಂತ್ಯಗಳ ಮಧ್ಯೆ ಇದೆ. ಉತ್ತರಕ್ಕೆ ಹೋದಂತೆಲ್ಲ ಎತ್ತರ ಹೆಚ್ಚಾಗಿ ಮೈದಾನ ವಿಶಾಲವಾಗುತ್ತದೆ. ದಕ್ಷಿಣದಲ್ಲಿ ಸು. 13 ಕಿಮೀ ದೂರದಲ್ಲಿ ನಯಾಗರ ಗುಡ್ಡವಿದೆ. ಈ ಮಧ್ಯ ಭಾಗದಲ್ಲಿ ವಿಶೇಷವಾಗಿ ಹಣ್ಣು ಬೆಳೆಯುತ್ತಾರೆ. ಈ ಸರೋವರಕ್ಕೆ ನಯಾಗರ, ಜೆನಿಸೀ, ಆಸ್‌ವಿಗೊ, ಬ್ಲಾಕ್ ಮತ್ತು ಟ್ರೆಂಟ್ ಎಂಬ ನದಿಗಳು ಬಂದು ಸೇರುತ್ತವೆ. ಈರಿ ಮತ್ತು ಆಂಟೇರಿಯೊ ಸರೋವರಗಳನ್ನು 44 ಕಿಮೀ ಉದ್ದವಿರುವ ವೆಲ್‌ಲ್ಯಾಂಡ್ ಕಾಲುವೆ ಸೇರಿಸಿದೆ. ಸರೋವರಕ್ಕೂ ಸೇಂಟ್ ಲಾರೆನ್ಸ್ ನದಿಗೂ ಸಂಪರ್ಕವಿರುವುದರಿಂದ ಹೆಚ್ಚಾಗಿ ಬಂದ ನೀರು ಆ ನದಿಯ ಮೂಲಕ ಹಾದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ.

ಈ ಸರೋವರದಲ್ಲಿ ದ್ವೀಪಗಳಿಲ್ಲ. ಸರೋವರದ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟುವುದಿಲ್ಲವಾದರೂ ದಡದಲ್ಲಿರುವ ರೇವುಪಟ್ಟಣಗಳಲ್ಲಿ ಹೆಪ್ಪುಗಟ್ಟುತ್ತದೆ. ಇದರ ದಡದಲ್ಲಿರುವ ಮುಖ್ಯವಾದ ರೇವುಪಟ್ಟಣಗಳು:ಕಿಂಗಸ್ಟನ್, ಟೊರಾಂಟೊ, ಹ್ಯಾಮಿಲ್ಟನ್. ಜಲಮಾರ್ಗದಿಂದ ವಸ್ತುಸಾಗಾಣಿಕೆ ಅಷ್ಟು ಹೆಚ್ಚಾಗಿಲ್ಲ. ಕಲ್ಲಿದ್ದಲನ್ನು ಹೆಚ್ಚಾಗಿ ಸಾಗಿಸುವರು. (ಎಸ್.ಎನ್.)

**ಆ್ಯಂಟೇರಿಯೋ :** ಕೆನಡದ ಒಂದು ಮುಖ್ಯ ಪ್ರಾಂತ್ಯ. ವಿಸ್ತೀರ್ಣದಲ್ಲಿ ಎರಡನೆಯದು. $42^{o}$–$57^{o}$ ಉತ್ತರ ಅಕ್ಷಾಂಶ $70^{o}$ 30' ಯಿಂದ $95^{o}$ ಪಶ್ಚಿಮ ರೇಖಾಂಶ. ವಿಸ್ತೀರ್ಣ 1,068,580 ಚ.ಮೀ ದಕ್ಷಿಣೋತ್ತರದ ಉದ್ದ ಸು. 1680 ಕಿಮೀ ಪೂರ್ವ ಪಶ್ಚಿಮದ ಅಗಲ ಸುಮಾರು 1600 ಕಿ.ಮೀ. ಪೂರ್ವದಲ್ಲಿ ಕ್ವಿಬೆಕ್, ಪಶ್ಚಿಮದಲ್ಲಿ ಮಾನಿಟೊಬಾ, ದಕ್ಷಿಣದಲ್ಲಿ ನ್ಯೂಯಾರ್ಕ್, ಓಹಿಯೋ ಮತ್ತು ಮಿಚಿಗನ್, ಉತ್ತರದಲ್ಲಿ ಹಡ್‌ಸನ್ ಮತ್ತು ಜೇಮ್ಸ್ ಕೊಲ್ಲಿಗಳಿವೆ. ಜನಸಂಖ್ಯೆ 11,874,400 (2001). ರಾಜಧಾನಿ ಟೊರಾಂಟೊ. ಜನಸಂಖ್ಯೆ 2,481,494.

**ಮೇಲ್ಮೈಲಕ್ಷಣ :** ಎರಡು ಸ್ವಾಭಾವಿಕ ಪ್ರದೇಶಗಳಿವೆ: ಲಾರೇಷಿಯನ್ ಪ್ರಸ್ಥಭೂಮಿ ಮತ್ತು ಒಳನಾಡಿ ತಗ್ಗುಮೈದಾನ. ಮೊದಲನೆಯದು ಪ್ರೀಕೇಂಬ್ರಿಯನ್ ಯುಗದ ಶಿಲೆಗಳಿಂದ ರಚನೆಯಾಗಿದ್ದು ವಿಶಾಲವೂ ಮತ್ತು ಸಾಧಾರಣ ಇಳಿಜಾರುಳ್ಳದ್ದು. ಸರಾಸರಿ ಎತ್ತರ 300ಮೀ

ಓಗಿಡಾಕಿ ಪರ್ವತ ಇಲ್ಲಿನ ಉನ್ನತ ಭಾಗ (665 ಮೀ) ಈ ಪ್ರದೇಶದ ಬಹಳಷ್ಟು ಭಾಗ ಅರಣ್ಯಗಳಿಂದಾವೃತವಾಗಿದೆ. ಅನೇಕಾನೇಕ ಸರೋವರಗಳಿವೆ. ಅಲ್ಲಲ್ಲಿ ಫಲವತ್ತಾದ ಜೇಡಿಮಣ್ಣಿನ ಪ್ರದೇಶಗಳಿವೆ. ಆ್ಯಂಟೇರಿಯೋದ ಬಹಳಷ್ಟು ಖನಿಜ ನಿಕ್ಷೇಪಗಳು ಇಲ್ಲಿ ಕಂಡು ಬರುತ್ತವೆ. ಗಣಿಗಾರಿಕೆ ಪ್ರಮುಖ ವೃತ್ತಿ. ಜೊತೆಗೆ ಮರಕಡಿಯುವ ಮತ್ತು ಕೊಯ್ಯುವ ವೃತ್ತಿಯೂ ಅಷ್ಟೇ ಮುಖ್ಯ. ಎರಡನೇ ಒಳನಾಡಿನ ತಗ್ಗುಪ್ರದೇಶವು ಆಗ್ನೇಯದಲ್ಲಿ ಆ್ಯಂಟೇರಿಯೋ ಮತ್ತು ಈರಿ ಸರೋವರಗಳು ಮತ್ತು ವಾಯವ್ಯದಲ್ಲಿ ಹುರಾನ್ ಸರೋವರಗಳಿಂದ ಸುತ್ತುವರಿದಿದೆ. ಅಪಾರವಾದ ಕಚ್ಚಾ ಪದಾರ್ಥಗಳ ಸರಬರಾಜು, ಜಲವಿದ್ಯುತ್ ಪೂರೈಕೆ, ಉತ್ತಮ ಸಾರಿಗೆ ಮತ್ತು ನುರಿತ ಕಾರ್ಮಿಕರು ದೊರೆಯುವುದರಿಂದ ಅತ್ಯಂತ ಪ್ರಮುಖ ಕೈಗಾರಿಕಾ ಪ್ರದೇಶ. ಇದನ್ನು ಕೆನಡದ ಕೈಗಾರಿಕಾ ಹೃದಯಭಾಗ ವೆಂತಲೇ ಕರೆಯುವರು. ಕೃಷಿಯೂ ಹೆಚ್ಚು ಪ್ರಗತಿಗೊಂಡಿದೆ. ಬೃಹನ್ನಗರಗಳಿವೆ. ನಯಾಗರ ಜಲಪಾತದಂತಹ ಅನೇಕ ಪ್ರವಾಸಿತಾಣಗಳಿವೆ. ಆದ್ದರಿಂದ ಅತ್ಯಂತ ಜನಭರಿತವಾದ ಪ್ರಾಂತ್ಯವಾಗಿದೆ.

**ನದಿ ಮತ್ತು ಸರೋವರಗಳು :** ಸೇಂಟ್ ಲಾರೆನ್ಸ ಬಟಾವ (1115 ಕಿಮೀ) ರೈನಿ ಅಭಿತಿಬಿ, ನೆಲ್ಸನ್ ಮುಂತಾದ ನದಿಗಳಿವೆ. ಅವು ಜಲವಿದ್ಯುಚ್ಛಕ್ತಿ ತಯಾರಿಕೆ ಮತ್ತು ಜಲಸಂಚಾರಕ್ಕೆ ಬಹುಉಪಯುಕ್ತ. ಸುಪೀರಿಯರ್, ಹುರಾನ್, ಈರಿ ಮತ್ತು ಆ್ಯಂಟೇರಿಯೋ ಸರೋವರಗಳು ಸಂಚಾರ ಸೌಲಭ್ಯ ಮತ್ತು ಪ್ರವಾಸಿ ತಾಣಗಳ ಅಭಿವೃದ್ಧಿಗೆ ಅನುಕೂಲಕರ.

ವಾಯುಗುಣ: ಖಂಡಾಂತರ ವಾಯುಗುಣ. ಉತ್ತರ ಆ್ಯಂಟೇರಿಯೋದಲ್ಲಿ ದೀರ್ಘ ಶೀತ ಚಳಿಗಾಲ ಮತ್ತು ಅಲ್ಪಾವಧಿ ಬೇಸಗೆ, ದಕ್ಷಿಣದಲ್ಲಿ ಸಮಶೀತೋಷ್ಣ ವಾಯುಗುಣವಿದೆ. ವರ್ಷವೆಲ್ಲ ಉತ್ತಮ ಮಳೆಯಾಗುತ್ತದೆ.

**ಸಸ್ಯವರ್ಗ :** ಪ್ರಾಂತ್ಯದ 3/4 ಭಾಗ ಸಮೃದ್ಧ ಅರಣ್ಯದಿಂದಾವೃತ. ಅರಣ್ಯ ಸಂರಕ್ಷಣೆ ಅತ್ಯುತ್ತಮ. ಹೀಗಾಗಿ ಅರಣ್ಯ ಆಧರಿತ ಉದ್ಯಮಗಳು ವ್ಯಾಪಕ ಮತ್ತು ಲಾಭದಾಯಕ. ವಿವಿಧ ಪ್ರಾಣಿಗಳು ಅರಣ್ಯಗಳಲ್ಲಿ ಬದುಕುತ್ತಿವೆ. ಅದರಲ್ಲೂ ತುಪ್ಪಳವಿರುವ ಪ್ರಾಣಿಗಳೆ ಹೆಚ್ಚು. ವನ್ಯಜೀವಿ ಸಂರಕ್ಷಣೆಗೂ ಆದ್ಯತೆಯಿದೆ. ಮೀನುಗಾರಿಕೆ ಗೌಣವಾದುದು. ತುಪ್ಪಳ ಭರಿತ ಚರ್ಮದ ಉತ್ಪಾದನೆಯಲ್ಲಿ ಖ್ಯಾತಿಯಿದೆ.

**ಖನಿಜಸಂಪತ್ತು :** ಕೆನಡದಲ್ಲೆ ಅತಿಹೆಚ್ಚು ಖನಿಜಗಳನ್ನು ಉತ್ಪಾದಿಸುವ ಪ್ರಾಂತ್ಯ; ಪ್ರಪಂಚದಲ್ಲೇ ಅತಿ ಹೆಚ್ಚು ಉತ್ಪಾದನೆಯಾಗುತ್ತದೆ. ಯುರೇನಿಯಂ, ತಾಮ್ರ, ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತು ಟೆಲ್ಲೂರಿಯಮ್ ಇತರ ಪ್ರಮುಖ ಖನಿಜಗಳು.

**ಕೈಗಾರಿಕೆ :** ಕೆನಡದ ಅರ್ಧಕ್ಕಿಂತಲೂ ಹೆಚ್ಚು ಮೌಲ್ಯದ ಕೈಗಾರಿಕಾ ಉತ್ಪನ್ನಗಳು ಆ್ಯಂಟೇರಿಯೋದಿಂದ ಪೂರೈಕೆ. ಹೆಚ್ಚು ಉದ್ಯಮ ಕೇಂದ್ರಗಳು ದಕ್ಷಿಣದಲ್ಲಿ ಕೇಂದ್ರೀಕೃತವಾಗಿವೆ. ಪ್ರಮುಖ ಕೈಗಾರಿಕೆಗಳೆಂದರೆ; ರಬ್ಬರ್ ಟೈರ್ ಮತ್ತು ಟ್ಯೂಬ್; ವಾಹನಗಳ ತಯಾರಿಕೆ, ವಾಹನ ಬಿಡಿಭಾಗಗಳು, ವಿದ್ಯುದುಪಕರಣ ಕಬ್ಬಿಣ ಮತ್ತು ಉಕ್ಕು, ಮಾಂಸ ಸಂಸ್ಕರಣ, ಹಣ್ಣು ಮತ್ತು ತರಕಾರಿ ಸಂಸ್ಕರಣ, ಮುದ್ರಣ ಸಾಮಗ್ರಿ, ರಾಸಾಯನಿಕ ವಸ್ತು, ಕಾಗದತಯಾರಿಕೆ, ಪ್ಲಾಸ್ಟಿಕ್, ಗಿರಿಣಿ ವಸ್ತುಗಳು, ಕೃಷಿ ಉಪಕರಣ ಇತ್ಯಾದಿ.

ಪ್ರವಾಸೋದ್ಯಮವೂ ಆ್ಯಂಟೇರಿಯೋದ ಪ್ರಮುಖ ಆದಾಯದ ಮೂಲ. ಇದಕ್ಕೆ ಉತ್ತಮ ಸಾರಿಗೆ–ಸಂಪರ್ಕ ಮಾಧ್ಯಮದ ಅಭಿವೃದ್ಧಿ ಮೂಲ ಸೌಲಭ್ಯಗಳು, ಪ್ರಕೃತಿ ಹಾಗೂ ಸರ್ಕಾರದ ಉತ್ತೇಜನಗಳು ಇದಕ್ಕೆ ಮುಖ್ಯ ಕಾರಣ. (ಪಿ.ಮು)

**ಆ್ಯಂಟೊನೈನ್ ಸಾಮ್ರಾಟರು :** ಪ್ರ.ಶ. 96–180ರವರೆಗೆ ರೋಮ್ ಸಾಮ್ರಾಜ್ಯವನ್ನಾಳಿದ ಐವರು ಚಕ್ರವರ್ತಿಗಳಿಗೆ(ಫೈವ್ ಗುಡ್ ಎಂಪರರ್ಸ್) ಈ ಹೆಸರು ಬಂದಿದೆ. ಈ ಕಾಲಕ್ಕೆ ಮುಂಚೆ ಆಳಿದ ಫ್ಲೇವಿಯನ್ ಸಾಮ್ರಾಟರ ಕಾಲದಲ್ಲಿ ಉತ್ತಮ ಆಡಳಿತ ವ್ಯವಸ್ಥೆ ರೂಪುಗೊಂಡಿತು. ಆ ಸಾಮ್ರಾಟರ ಸೆನೆಟ್ ಸಭೆಯ ಗೌರವಸ್ಥಾನಕ್ಕೆ ಕುಂದುಬಾರದಂತೆ ನೋಡಿಕೊಂಡು ಸೈನ್ಯದ ಪ್ರಾಬಲ್ಯವನ್ನು ಬಹುಮಟ್ಟಿಗೆ ತಗ್ಗಿಸಿದರು. ಕೊಂಚ ಕೊಂಚವಾಗಿ ಚಕ್ರವರ್ತಿಗಳ ನಿರಂಕುಶ ಪ್ರವೃತ್ತಿ ಬೆಳೆಯುತ್ತಿದ್ದರೂ ಅವರ ಸಮರ್ಥ ಆಡಳಿತದಿಂದ ಜನ ತೃಪ್ತರಾಗಿದ್ದರು. ಈ ಪರಿಸ್ಥಿತಿಯನ್ನರಿತು, ಒಂದು ಶತಮಾನಕಾಲ ಆಳಿದ ಆ್ಯಂಟೊನೈನ್ ಸಾಮ್ರಾಟರು ಅವರ ನೀತಿಯನ್ನು ಮುಂದುವರಿಸಿ ರಾಜ್ಯದಲ್ಲಿ ಶಾಂತಿ ಸುಭಿಕ್ಷಗಳನ್ನೇರ್ಪಡಿಸಿದ್ದರು. ಈ ಕಾಲವನ್ನು ಕೆಲವರು ರೋಮನ್ ಸಾಮ್ರಾಜ್ಯದ ಸುವರ್ಣಯುಗವೆಂದೂ ಕರೆದಿದ್ದಾರೆ.

ಚಕ್ರವರ್ತಿ ನರ್ವ (96–98) ಸೆನೆಟ್ ಮತ್ತು ಸೈನ್ಯವೆರಡರ ಮೆಚ್ಚುಗೆಯನ್ನೂ ಸಂಪಾದಿಸಿದ. ರಾಜ್ಯದಲ್ಲಿ ದಾರಿದ್ರ್ಯ ನಿವಾರಣೆಗಾಗಿ ಸಣ್ಣ ರೈತರ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ, ಜನಸಂಖ್ಯಾ ಪ್ರಮಾಣವನ್ನು ಹೆಚ್ಚಿಸುವುದಕ್ಕಾಗಿ ಆತ ಅನುಸರಿಸಿದ ನೀತಿಯಿಂದ ಪ್ರಜಾನುರಾಗವನ್ನೂ ಗಳಿಸಿದ. ಅವನಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಸಮರ್ಥ ಸೇನಾನಾಯಕನೂ ಉತ್ತರ ಜರ್ಮನಿಯ ಪ್ರಾಂತ್ಯಾಧಿಪತಿಯೂ ಆಗಿದ್ದ ಟ್ರೇಜನ್ ಎಂಬುವನನ್ನು ದತ್ತು ತೆಗೆದುಕೊಂಡು ಸಹಪ್ರಭುವನ್ನಾಗಿ ನೇಮಿಸಿದ. ಇದರಿಂದ ರಾಜಸಂತತಿಯವರೇ ದೊರೆಯಾಗಬೇಕೆಂಬ ನಿಯಮ ಸಡಿಲಿಸಿತು. ಚಕ್ರಾಧಿಪತ್ಯದ ಯಾವ ಪ್ರಾಂತ್ಯದವರಾದರೂ ಸಾಮ್ರಾಟರಾಗಬಹುದೆಂಬ ಸಂಪ್ರದಾಯ ಪ್ರಾರಂಭವಾಯಿತು. ಟ್ರೇಜನ್ 98ರಲ್ಲಿ ಸಾಮ್ರಾಟನಾದ. ಈತ ತಮ್ಮ ರಾಜ್ಯಕ್ಕೆ ನಿರಂತರ ಕಿರುಕುಳ ಕೊಡುತ್ತಿದ್ದ ಡೇಸಿಯನ್ನರನ್ನಡಗಿಸಿ ಡೇಸಿಯ ಎಂಬ ಹೊಸ ಪ್ರಾಂತ್ಯವನ್ನು ನಿರ್ಮಿಸಿದ. ಇತರ ಗಡಿ ಪ್ರದೇಶಗಳಲ್ಲಿ ದಂಗೆಯೆದ್ದಿದ್ದ ಪಾರ್ಥಿಯನ್ನರು ಯೆಹೂದ್ಯರು ಮೊದಲಾದವರ ಹಾವಳಿಯನ್ನಡಗಿಸಿದ. 19 ವರ್ಷದ ಆಳ್ವಿಕೆಯೆಲ್ಲ ಯುದ್ಧದಲ್ಲೇ ಕಳೆದರೂ ಆತ ಆಡಳಿತವನ್ನು ಕಡೆಗಣಿಸಲಿಲ್ಲ. ತಪ್ಪು ಮಾಡಿದ ಪ್ರಾಂತ್ಯಾಧಿಪತಿಗಳಿಗೂ ನಿರ್ದಾಕ್ಷಿಣ್ಯವಾಗಿ ಶಿಕ್ಷೆಯಾಗುತ್ತಿತ್ತು. ರೋಮ್ ನಗರದಲ್ಲಿ ಭವ್ಯವಾದ ಅರಮನೆಗಳನ್ನೂ ರಮ್ಯವಾದ ಉದ್ಯಾನವನಗಳನ್ನೂ ನಿರ್ಮಿಸಲಾಯಿತು. ವಿಶಾಲವಾದ ರಸ್ತೆಗಳು, ಸೇತುವೆಗಳು, ನೀರಾವರಿ ಕಾಲುವೆಗಳು, ವ್ಯಾಪಾರಕ್ಕನುಕೂಲವಾದ ರೇವುಗಳು ನಿರ್ಮಿತವಾದವು. ಭವ್ಯವಾದ ಫೋರಂ ಟ್ರೇಜನ್ ಎಂಬ ಸಾರ್ವಜನಿಕ ಸಭಾಭವನವೊಂದು ನಿರ್ಮಾಣವಾಯಿತು. ದೊರೆ ಕ್ರೈಸ್ತರ ವಿಷಯದಲ್ಲಿ ಕ್ರೌರ್ಯದಿಂದ ವರ್ತಿಸಿದರೂ ಆಡಳಿತ ನೀತಿ ಸೌಮ್ಯವಾಗಿತ್ತು. 117ರಲ್ಲಿ ಆತ ನಿಧನನಾದ. ಕೊಂಚಕಾಲದಲ್ಲೇ ಅವನ ಸಂಬಂಧಿ ಹೇಡ್ರಿಯನ್‌ನನ್ನು ಚಕ್ರವರ್ತಿಯನ್ನಾಗಿ ಸೈನ್ಯವೇ ಚುನಾಯಿಸಿತು. ಈತ ಟ್ರೇಜನ್‌ನ ಜೊತೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ ನುರಿತ ಯೋಧ. ಸಾಮ್ರಾಜ್ಯದ ಸರಹದ್ದು ಭಾಗಗಳಲ್ಲಿ ತಲೆದೋರಿದ ದಂಗೆಗಳೆಲ್ಲವನ್ನೂ ಅಡಗಿಸಿದ್ದಲ್ಲದೆ, ದೊಡ್ಡ ಪ್ರವಾಸ ಕೈಗೊಂಡು ಎಲ್ಲ ಪ್ರಾಂತ್ಯಗಳಿಗೂ ಭೇಟಿಯಿತ್ತ. ಇವನ ಕಾಲವೂ ಹೆಚ್ಚಾಗಿ ರಣರಂಗದಲ್ಲೇ ಕಳೆದರೂ ದಕ್ಷ ಆಡಳಿತವನ್ನೂ ಮುಂದುವರಿಸಿದ. ವಿದ್ಯಾಪಕ್ಷಪಾತಿಯೂ ಕಲಾಭಿರುಚಿಯುಳ್ಳವನೂ ಆಗಿದ್ದುದರಿಂದ ಭವ್ಯವಾದ ಹೊಸ ಕಟ್ಟಡಗಳನ್ನು ನಿರ್ಮಿಸಿದ. ಗ್ರೀಕ್ ಸಾಹಿತ್ಯದಲ್ಲಿ ಅಭಿರುಚಿ ಹೊಂದಿದ್ದು, ಅದನ್ನು ಹರಡಲು ಪ್ರೋತ್ಸಾಹ ನೀಡಿದ. 134ರಲ್ಲಿ ನಿಧನನಾದ

ಇವನ ತರುವಾಯ ಅನುಕ್ರಮವಾಗಿ ಆಳಿದ ಆ್ಯಂಟೊನೈಸ್ ಪಯಸ್ ಮತ್ತು ಮಾರ್ಕಸ್ ಅರೇಲಿಯಸ್ **(ನೋಡಿ)** ಇಬ್ಬರೂ ಖ್ಯಾತ ಪರಂಪರೆಗನುಗುಣವಾಗಿ ರಾಜ್ಯಭಾರ ಮಾಡಿ ದೇಶದ ಕೀರ್ತಿಯನ್ನು ಹೆಚ್ಚಿಸಿದರು. *

**ಆ್ಯಂಟೊನೈನಸ್ ಪಯಸ್ :** ರೋಮನ್ ಚಕ್ರಾಧಿಪತಿ (138–61); ಪ್ರಸಿದ್ಧ ಶ್ರೀಮಂತ ಮನೆತನಕ್ಕೆ ಸೇರಿದ್ದ ಈತ ಪ್ರತಿಭಾಸಂಪನ್ನತೆಯಿಂದ ಹೇಡ್ರಿಯನ್ ದೊರೆಯ ದಂಡಾಧಿಪತಿಯಾದ (120). ಇಟಲಿಯ ನ್ಯಾಯಾಂಗದ ಆಡಳಿತವನ್ನು ಕೆಲಕಾಲ ನಡೆಸಿದ. ಏಷ್ಯದ ಪ್ರಾಂತ್ಯಾಧಿಕಾರಿಯಾಗಿಯೂ ಇದ್ದ. ಅನಂತರ ಚಕ್ರವರ್ತಿಯ ಆಪ್ತ ಸಲಹೆಗಾರನಾದ. 138 ರಲ್ಲಿ ಇವನೇ ಸಾಮ್ರಾಟನೆಂದು ಹೇಡ್ರಿಯನ್ ಘೋಷಿಸಿದ. ಈ ಘೋಷಣೆ ಹೊರಟ ಸ್ವಲ್ಪ ಕಾಲದ ಮೇಲೆ ಹೇಡ್ರಿಯನ್ ಮರಣ ಹೊಂದಿದ.

ಸಾಮ್ರಾಟನಾಗಿದ್ದ 23 ವರ್ಷಗಳಲ್ಲಿ ರಾಜ್ಯ ಒಟ್ಟಿನಲ್ಲಿ ಶಾಂತಿಯಿಂದಿತ್ತು. ಬ್ರಿಟಿಷ್ ದ್ವೀಪಗಳು, ಜರ್ಮನಿ ಮುಂತಾದ ಸರಹದ್ದು ಪ್ರದೇಶಗಳಲ್ಲಿ ಕೆಲವು ಗಲಭೆಗಳಾದವು. ಅವುಗಳನ್ನಡಗಿಸುವುದಕ್ಕೆ ಸರಹದ್ದು ರಕ್ಷಣಾಪಡೆಗಳಿಂದಲೇ ಸಾಧ್ಯವಾಯಿತು. ಹೇಡ್ರಿಯನ್‌ನಂತೆ ಆಗಿಂದಾಗ್ಗೆ ಸಾಮ್ರಾಜ್ಯದಲ್ಲಿ ಸ್ವತಃ ತಿರುಗುವ ಹವ್ಯಾಸವನ್ನು ಬಿಟ್ಟು ರೋಮ್‌ನಲ್ಲೇ ನಿಂತು ಸಮರ್ಥ ಸಲಹೆಗಾರರ ಸಹಾಯದಿಂದ ದೂರ ಪ್ರಾಂತ್ಯಗಳ ಮೇಲ್ವಿಚಾರಣೆ ನಡೆಸುತ್ತಿದ್ದ. ಇದರಿಂದ ನ್ಯಾಯಾಂಗದಲ್ಲಿ ಅನೇಕ ಜನೋಪಯುಕ್ತ ಸುಧಾರಣೆಗಳನ್ನು ಮಾಡಲು ಸಾಧ್ಯವಾಯಿತು; ಅನೇಕ ಕ್ರೂರ ಶಿಕ್ಷಾಕ್ರಮಗಳು ರದ್ದಾದವು. ಜನಸಾಮಾನ್ಯರ ಜೀವನವನ್ನು ಸುಧಾರಿಸುವ ಪ್ರಯತ್ನ ನಡೆಯಿತು. ಅದಕ್ಕಾಗಿ ಹಣವನ್ನು ಹೇರಳವಾಗಿ ವ್ಯಯಮಾಡಲಾಯಿತು. ಪಯಸ್ ಎಂಬುದು ಇವನ ನಿಜವಾದ ಹೆಸರಲ್ಲ. ಧರ್ಮಶ್ರದ್ಧೆಯನ್ನೇ ಜೀವನದ ಉಸಿರಾಗಿ ಮಾಡಿಕೊಂಡಿದ್ದ ಇವನಿಗೆ ಪ್ರಜೆಗಳು ತಮ್ಮ ಕೃತಜ್ಞತಾಸೂಚಕವಾಗಿ ಕೊಟ್ಟ ಬಿರುದು. ಏಲಿಯಸ್ ಅರಿಸ್ಟಿಡೀಸ್ ಎಂಬ ಪ್ರಸಿದ್ಧ ವಾಗ್ಮಿ ಒಂದು ಸಲ ಮಾಡಿದ ಚಕ್ರವರ್ತಿಯ ಗುಣಗಾನ ಇಟಲಿಯ ಇಡೀ ಜನತೆಯನ್ನೇ ರೋಮಾಂಚನಗೊಳಿಸಿತಂತೆ. *

**ಆ್ಯಂಟೋನಿಯಸ್ ಗಯಸ್ :** ಪ್ರ.ಶ.ಪೂ. 1ನೆಯ ಶತಮಾನದಲ್ಲಿ ರೋಮನ್ ಗಣರಾಜ್ಯದಲ್ಲೇ ಅತ್ಯುತ್ತಮ ವಾಕ್ಪಟುವೆಂದು ಹೆಸರು ಪಡೆದಿದ್ದ ಮಾರ್ಕಸ್ ಆ್ಯಂಟೋನಿಯಸ್‌ನ ಮಗ. ಸಿಸಿರೋನ ಜೊತೆ ದಂಡಾಧಿಕಾರಿಯಾಗಿಯೂ (ಪ್ರ.ಶ.ಪೂ 66) ಮೂರು ವರ್ಷಗಳ ಅನಂತರ ರಾಜನ ಸಲಹೆಗಾರನಾಗಿಯೂ ಕೆಲಸ ಮಾಡಿದ. ಪ್ರ.ಶ.ಪೂ. 62ರಲ್ಲಿ ಇವನನ್ನು ಮ್ಯಾಸಿಡೋನಿಯದ ಆಡಳಿತಾಧಿಕಾರಿಯಾಗಿ ನೇಮಿಸಿದರು. ಎರಡು ವರ್ಷ ಅಲ್ಲಿದ್ದು ಹಿಂತಿರುಗಿದ ಮೇಲೆ, ನ್ಯಾಯವಿರುದ್ಧವಾಗಿ ಜನರಿಂದ ಸುಲಿಗೆ ನಡೆಸಿದನೆಂಬ ಆಪಾದನೆ ಹೊರಿಸಿ ವಿಚಾರಣೆಗೊಳಪಡಿಸಿದರು. ಸಿಸಿರೋ ಇವನ ಪರ ವಾದಿಸಿದರೂ ತಪ್ಪಿತಸ್ಥನೆಂದು ತೀರ್ಮಾನವಾಗಿ ಗಡಿಪಾರು ಮಾಡಿದರು. ಜೂಲಿಯಸ್ ಸೀಸ಼ರ್ ಇವನನ್ನು ಹಿಂದಕ್ಕೆ ಕರೆಸಿಕೊಂಡಂತೆ ತೋರುತ್ತದೆ; ಏಕೆಂದರೆ ಪ್ರ.ಶ.ಪೂ. 42ರಲ್ಲಿ ಈತ ಜನಗಣತಿ ಮತ್ತು ಪ್ರಜೆಗಳ ರೀತಿನೀತಿಗಳನ್ನು ನೋಡಿಕೊಳ್ಳುವ ಅಧಿಕಾರಿಯಾಗಿ (ಸೆನ್ಸಾರ್) ಕೆಲಸ ಮಾಡುತ್ತಿದ್ದ. *

**ಆ್ಯಂಟೋನಿಯಸ್ ಮಾರ್ಕಸ್ :** ಪ್ರ.ಶ.ಪೂ. 83 –30. ಜೂಲಿಯಸ್ ಸೀಸರನ ಕಾಲದಲ್ಲಿ ಅವನ ಆತ್ಮೀಯ ಸ್ನೇಹಿತನಾಗಿದ್ದು ಅನಂತರ ರೋಮ್ ರಾಜ್ಯದ ಸರ್ವಾಧಿಕಾರಿಗಳಲ್ಲೊಬ್ಬನಾಗಿ ಕೊಂಚಕಾಲ ಅಧಿಕಾರ ಮೆರೆಸಿ, ಅನಂತರ ವಿಷಯಲೋಲು ಪತೆಯಿಂದ ಪ್ರಾಣವನ್ನು ಕಳೆದುಕೊಂಡವನು. ಈತ ಷೇಕ್ಸ್‌ಪಿಯರ್‌ನ ಎರಡು ನಾಟಕಗಳಲ್ಲಿ ಚಿರಸ್ಮರಣೀಯನಾಗಿದ್ದಾನೆ. ರಾಜಕೀಯದಲ್ಲಿ ಈತ ಮುಂದೆ ಬಂದದ್ದು ಸೀಸರನ ಸಹಾಯ ದಿಂದ. ಸೀಸರನ ಕೊಲೆಯಾದ ಮೇಲೆ (ಪ್ರ.ಶ.ಪೂ. 44) ಆಕ್ಟೇವಿಯಸ್‌ನ ಜೊತೆಗೂಡಿ ಕೊಂಡು ರೋಮ್ ರಾಜ್ಯದ ನಾಯಕತ್ರಯರಲ್ಲೊಬ್ಬನಾದ. ಆಕ್ಟೇವಿಯಸ್‌ನ ತಂಗಿಯನ್ನು ಮದುವೆಯಾದ. ಕೊಂಚಕಾಲ ವೈರಿಗಳನ್ನಡಗಿಸುವ ಕಾರ್ಯದಲ್ಲಿ ನಿರತನಾಗಿದ್ದು ಅನಂತರ ಸಾಮ್ರಾಜ್ಯದ ಏಷ್ಯ ಪ್ರಾಂತ್ಯಗಳಿಗೆ ಅಧಿಪತಿಯಾದ. ಈ ಕಾಲಕ್ಕೆ ಮುಂಚೆಯೇ ಈಜಿಪ್ಟಿನ ಕ್ಲಿಯೋಪಾತ್ರಳನ್ನು ಕಂಡು ಅವಳ ಸೌಂದರ್ಯ ಮೋಹಕತೆಗಳಿಗೆ ಮಾರುಹೋಗಿದ್ದ. ಅವಳ ಜೊತೆ ಅಲೆಕ್ಸಾಂಡ್ರಿಯದಲ್ಲಿ ನಿಂತು ತನ್ನ ಪ್ರಾಂತ್ಯವನ್ನಾಳತೊಡಗಿದ. ಇದರಿಂದ ಆಗಸ್ಟಸ್‌ಗೂ ಇವನಿಗೂ ವೈರವುಂಟಾಗಿ ಒಳಯುದ್ಧ ಪ್ರಾರಂಭವಾಯಿತು. ಆ್ಯಕ್ಟಿಯಂ ನೌಕಾಕದನದಲ್ಲಿ ಆಗಸ್ಟಸ್ ಇವನನ್ನು ಸೋಲಿಸಿ ಅಟ್ಟಿಸಿಕೊಂಡು ಹೋದ. ಸೆರೆಸಿಗುವುದು ಖಚಿತವೆಂದು ತಿಳಿದಾಗ ಈತ ಆತ್ಮಹತ್ಯೆ ಮಾಡಿಕೊಂಡ. *

**ಆ್ಯಂಟ್ವರ್ಪ್ :** ಬೆಲ್ಜಿಯಮ್ಮಿನ ಎರಡನೆಯ ದೊಡ್ಡ ನಗರ. ಜನಸಂಖ್ಯೆ 4,46,500 (2000). ಉತ್ತರ ಸಮುದ್ರದಿಂದ 88 ಕಿಮೀ ದೂರದಲ್ಲಿ ದೊಡ್ಡ ಮೆಕ್ಕಲು ಮಣ್ಣಿನ ಸಮತಲ ಪ್ರದೇಶದಲ್ಲಿದೆ. ಶೆಲ್ಡ್ ನದಿಯ ಇಕ್ಕೆಲಗಳಲ್ಲೂ ವ್ಯಾಪಿಸಿದ್ದು ಬೆಲ್ಜಿಯಮ್‌ನ ಮುಖ್ಯ ಬಂದರು ಹಾಗೂ ಮುಖ್ಯ ವಾಣಿಜ್ಯ ಕೇಂದ್ರವಾಗಿದೆ. ಪಟ್ಟಣದ ಎರಡು ಭಾಗಗಳಿಗೂ ಸುರಂಗ ಸಂಪರ್ಕವಿದೆ. ವ್ಯಾಪಕವಾದ ಇಲ್ಲಿನ ರೈಲು ಮತ್ತು ಜಲಮಾರ್ಗಗಳು ಫ್ರಾನ್ಸ್, ರೈನ್‌ಲ್ಯಾಂಡ್ ಮತ್ತು ಬೆಲ್ಜಿಯಮ್‌ನ ವ್ಯಾಪಾರಕ್ಕೆ ಅನುಕೂಲವಾಗಿವೆ. ರಾಸಾಯನಿಕ ವಸ್ತುಗಳು, ಕಾರುಗಳು, ಹಡಗು ಕಟ್ಟುವಿಕೆ, ಸಕ್ಕರೆ, ಎಣ್ಣೆ ಶುದ್ಧೀಕರಣ ಇವೇ ಮುಂತಾದವು ಇಲ್ಲಿನ ಮುಖ್ಯ ಕೈಗಾರಿಕೆಗಳು. ವಜ್ರ ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಇದು ಪ್ರಪಂಚದ ಪ್ರಮುಖ ಕೇಂದ್ರವಾಗಿದೆ. ಪ್ರಾಚೀನ ಕಲೆ ಮತ್ತು ವಸ್ತುಸಂಗ್ರಹಾಲಯಗಳು ಬಹುಕಾಲದಿಂದ ಪ್ರಸಿದ್ಧವಾಗಿವೆ. (ಪಿ.ಡಿ.ಎಂ.)

**ಆ್ಯಂಟ್ಸನ್‌ಗ್ರೂಬರ್, ಲೂಟ್‌ವಿಕ್ :** 1839 –89. ಆಸ್ಟ್ರಿಯದ ನಾಟಕಕಾರ. ರಂಗಮಂದಿರದ ಬಗ್ಗೆ ಸ್ಪಷ್ಟವಾದ ತಿಳಿವಳಿಕೆಯನ್ನು ಹೊಂದಿದ್ದು ನೂತನ ಸೃಷ್ಟಿಯಲ್ಲಿ ಶ್ರೇಷ್ಠವಾದ ಶಕ್ತಿಯನ್ನು ತೋರಿದ್ದಾನೆ. ನಾಟಕಗಳನ್ನಲ್ಲದೆ ಬೇಸಾಯಗಾರರ ಜೀವನದ ಬಗ್ಗೆ ಅನೇಕ ಕಥೆಗಳನ್ನೂ ಬರೆದಿದ್ದಾನೆ. ರೈತನನ್ನು ಆದರ್ಶಮಾನವನನ್ನಾಗಿ ಚಿತ್ರಿಸದೆ ಅವನ ಬಾಳಿನ ನೈಜಚಿತ್ರವನ್ನು ನೀಡಿದ್ದಾನೆ. ಜರ್ಮನ್ ಸಾಹಿತ್ಯದಲ್ಲಿ ಆ ಬಳಿಕ ರೂಪುಗೊಂಡ ವಾಸ್ತವತೆಗೆ ಈತನನ್ನು ಒಂದು ದೃಷ್ಟಿಯಿಂದ ಮೊದಲಿಗನೆನ್ನಬಹುದು. ಇವನ ಕೃತಿಗಳು ಜಾನಪದ ಮೂಲದಿಂದ ಹೊಮ್ಮಿದುವು.

ನಾಟಕಗಳಲ್ಲಿ ಬರುವ ಎಲ್ಲ ಹಳ್ಳಿಗಳ ಪಾತ್ರಗಳೂ ಪ್ರಾಮಾಣಿಕ ಚಿತ್ರಗಳು. ಆಗಂತುಕವಾದ ಯಾವ ಭಾವ, ಭಾಷೆಗಳನ್ನೂ ನಾಟಕಕಾರ ಅವರ ಮೇಲೆ ಹೊರಿಸಿಲ್ಲ. ಗ್ರಾಮಗಳ ಗುಡಿಸಲುಗಳ ಸುಖ ದುಃಖಗಳನ್ನು ಉನ್ನತ ಜೀವನದ ಆನಂದ ದುರಂತಗಳ ಮಟ್ಟಕ್ಕೆ ಏರಿಸಿರುವುದು ನಾಟಕಕಾರನ ಹೆಚ್ಚಳ. ಇವನ ಶ್ರೇಷ್ಠ ನಾಟಕಗಳಲ್ಲಿ ಹರಿತವಾದ ಮಾನಸಿಕ ಅವಲೋಕನ ಮತ್ತು ವಾಸ್ತವಿಕತೆಗಳನ್ನು ಕಾಣಬಹುದು. ನೀತಿಬೋಧಕ ಉದ್ದೇಶವೂ ಉಂಟು. ಡರ್ ಸ್ಪರ್ನ್‌ಸ್ವೀನ್ ಹಾಫ್(1885) ಇವನ ಸ್ವೋಪಜ್ಞತೆಯನ್ನು ಉತ್ತಮವಾಗಿ ತೋರಿಸುವ ಕೃತಿ. ದಾಸ್ ವರ್ಟೆಗೆಬೊ ಎಂಬುದು ಇವನ ಕೃತಿಗಳಲ್ಲಿ ಬಹು ನೈಸರ್ಗಿಕವಾದುದೆಂದು ಪ್ರಸಿದ್ಧವಾಗಿದೆ. (ಜಿ.ವಿ.ಎಸ್.; ಎಚ್.ಕೆ.ಆರ್.)

**ಆ್ಯಂಡರ್‌ಸನ್, ಕಾರ್ಲ್ ಡೇವಿಡ್ :** 1905–91. ಅಮೆರಿಕ ಸಂಯುಕ್ತಸಂಸ್ಥಾನಗಳ ಭೌತವಿಜ್ಞಾನಿ. ನ್ಯೂಯಾರ್ಕ್‌ನಲ್ಲಿ ಜನಿಸಿದ. ಕ್ಯಾಲಿಫೋರ್ನಿಯದ ತಂತ್ರಜ್ಞಾನ ಸಂಸ್ಥೆಯಲ್ಲಿ (ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ವಿದ್ಯಾಭ್ಯಾಸ ಮಾಡಿ 1930ರಲ್ಲಿ ಪದವೀಧರನಾದ. ಕೆಲವು ಕಾಲದ ಮೇಲೆ ಅದೇ ವಿದ್ಯಾಲಯದಲ್ಲಿ ಪ್ರಾಧ್ಯಾಪಕನಾದ. ವಿಶ್ವಕಿರಣಗಳ (ಕಾಸ್ಮಿಕ್ ರೇಸ್) ಸಂಶೋಧನೆಯಲ್ಲಿ ನಿರತನಾದ ಇವನು 1932ರಲ್ಲಿ ಪಾಸಿಟ್ರಾನ್ ಎಂಬ ಸೂಕ್ಷ್ಮ ಧನ ವಿದ್ಯುತ್ಕಣವನ್ನು ಕಂಡುಹಿಡಿದ. ಇದು ಎಲೆಕ್ಟ್ರಾನ್ ಎಂಬ ಋಣ ವಿದ್ಯುತ್ಕಣದ ಪ್ರತಿಯೋಗಿ. ಡಿರಾಕ್ ಆ ಮೊದಲೇ ವಿವರಿಸಿದ ತತ್ತ್ವದ ಪ್ರಕಾರ ಇಂಥ ಕಣ ಇರಬೇಕಿತ್ತು. ಅದನ್ನು ಪ್ರಾಯೋಗಿಕವಾಗಿ ಸಾಧಿಸಿದ ಹಿರಿಮೆ ಇವನದು. ಈ ಶೋಧನೆಗಾಗಿ 1936ರ ನೊಬೆಲ್ ಭೌತವಿಜ್ಞಾನ ಪಾರಿತೋಷಕವನ್ನು ಈತನಿಗೂ ವಿಕ್ಟರ್‌ಹೆಸ್ ಎಂಬಾತನಿಗೂ ಹಂಚಲಾಯಿತು. ಮೆಸಾನ್ ಕಣದ (ಎಲೆಕ್ಟ್ರಾನ್ ಮತ್ತು ಪ್ರೋಟಾನ್‌ಗಳ ಮಧ್ಯಸ್ಥವಾದ ಭಾರವನ್ನು ಹೊಂದಿದ) ಶೋಧನೆಯಲ್ಲಿಯೂ ಈತನ ಪಾತ್ರ ಮುಖ್ಯವಾದುದೇ. ನೆಡರ್ ಮೇಯರ್ ಎಂಬಾತ ಇವನ ಸಂಶೋಧನೆಗಳಲ್ಲಿ ಸಹಕಾರಿಯಾಗಿದ್ದ. (ಟಿ.ಎಸ್.ಎಸ್.)

**ಆ್ಯಂಡರ್‌ಸನ್, ಡ್ಯಾನ್ :** 1888–1920. ಸ್ವೀಡಿಷ್ ಕಾದಂಬರಿಕಾರ ಮತ್ತು ಕವಿ. ಡಾಲ್ರಾನಾ ಎಂಬ ಸ್ಥಳದಲ್ಲಿ ಇದ್ದಲು ಮಾಡಿ ಮಾರಿ ಜೀವನ ಸಾಗಿಸುತ್ತಿದ್ದ. ಸ್ವೀಡನ್ನಿನ ಅರಣ್ಯಪ್ರಾಂತ್ಯದ ಇದ್ದಲು ತಯಾರಿಕೆಗಾರರ ಕಡು ಕಷ್ಟಮಯವಾದ ಜೀವನವನ್ನು ಚಿತ್ರಿಸುವ ಕಾದಂಬರಿಗಳನ್ನೂ ಸಣ್ಣಕಥೆಗಳನ್ನೂ ರಚಿಸಿದ್ದಾನೆ. ಆದರೆ ಅವನ ಅತ್ಯಂತ ಆತ್ಮೀಯವಾದ ಕೃತಿಗಳು ಅವನ ಕವಿತೆಗಳು. ಆಧುನಿಕ ಜಗತ್ತಿನ ಪ್ರಭಾವಗಳ ಪರಿಣಾಮವಾಗಿ ಹದಗೆಟ್ಟ ಅವನ ಮನಸ್ಸು, ನೆಮ್ಮದಿಗಾಗಿ ಪಡುವ ಪಾಡು ಈ ಕವನಗಳ ಮುಖ್ಯ ವಿಷಯ. ಈ ತೆರದ ಚಿತ್ತಕ್ಷೋಭೆ, ಒಂಟಿತನ, ಭೀತಿಗಳು ಪ್ರಪಂಚದ ಮಹಾಯುದ್ಧಗಳೆರಡರ ನಡುವಣ ಅವಧಿಯ ಹಲವು ಸ್ವೀಡಿಷ್ ಕವಿಗಳಲ್ಲಿ ಕಂಡುಬರುತ್ತದೆ. ಇವನು ರಚಿಸಿದ ಪ್ರಮುಖ ಕಾದಂಬರಿಗಳಲ್ಲಿ ದತ್ರಿ ಹೆಮ್ಲೊಸ (1918) ಮತ್ತು ಡೇವಿಡ್ ರ್‍ಯಾಮ್ಸ್ ಆರ್ವ್ (1919) ಸೇರಿವೆ. ಅವನ ಕಾವ್ಯದ ಪ್ರಾಮುಖ್ಯದ ಬಗ್ಗೆ ಲೋಕದ ಗಮನ ಹರಿದದ್ದು ಅವನ ಸಾವಿನ ಅನಂತರ. ಆತನ ಆಯ್ದ ಕವನಗಳ ಅನುವಾದಿತ ಸಂಕಲನವೊಂದು ಡಿ.ಎ. ಚಾರ್‌ಕೋಲ್ ಬರ್ನರ್ಸ್ ಬ್ಯಾಲಡ್ಸ್ 1942 ರಲ್ಲಿ ನ್ಯೂಯಾರ್ಕ್‌ನಲ್ಲಿ ಪ್ರಕಟವಾಯಿತು. (ಆರ್.ಆರ್.)

**ಆ್ಯಂಡರ್‌ಸನ್, ಮ್ಯಾಕ್ಸ್‌ವೆಲ್ :** 1888–1959. ಅಮೆರಿಕದ ನಾಟಕಕಾರ. ಶಾಲಾ ಅಧ್ಯಾಪಕನಾಗಿ ಕೆಲಸ ಮಾಡಿ ಅನಂತರ ನಾನಾ ಪತ್ರಿಕೆಗಳಲ್ಲಿ ಕೆಲಸ ಮಾಡಿದ. ಸ್ಯಾಟರ್‌ಡೇಸ್ ಚಿಲ್ಡ್ರನ್ (1927), ಗಾಡ್ಸ್ ಆಫ್ ಲೈಟ್ನಿಂಗ್ (1928). ವಾಸ್ತವಿಕ ಗದ್ಯನಾಟಕಗಳು (ಉದಾ: ವಾಟ್ ಪ್ರೈಸ್ ಗ್ಲೋರಿ) ಚಾರಿತ್ರಿಕ ಪದ್ಯನಾಟಕಗಳು (ಉದಾ: ಎಲಿಜಬೆತ್ ದಿ ಕ್ವೀನ್) ಆಧುನಿಕ ಆವರಣವಿರುವ ಪದ್ಯನಾಟಕಗಳು (ಉದಾ: ವಿನ್ಟರ್‌ಸೆಟ್)–ಇವನ್ನು ರಚಿಸಿದ್ದಾನೆ. ಅವನ ನಾಟಕಗಳ ಅತ್ಯಂತ ಯಶಸ್ವಿ ರಂಗ ಪ್ರಯೋಗಗಳು 20ನೆಯ ಶತಮಾನದ 30 ಹಾಗೂ 40 ದಶಕಗಳಲ್ಲಿ ನಡೆದಂಥವು: ಎಲಿಜಬೆತ್ ದ ಕ್ವೀನ್ (1930), ನೈಟ್ ಓವರ್ ಟಾವೊಸ್ (1932), ಮೇರಿ ಆಫ್ ಸ್ಕಾಟ್ಲಂಡ್ (1933), ವಿಂಗ್ಲೆಸ್ ವಿಕ್ಟರಿ (1937) ಮುಂತಾದುವು. 1932ರಲ್ಲಿ ರಚಿತವಾದ ಅವನ ಬೋತ್ ಯುಅರ್ ಹೌಸಸ್ ನಾಟಕಕ್ಕೆ ಪುಲಿಟ್ಜರ್ ಪ್ರಶಸ್ತಿ ಲಭ್ಯವಾಯಿತು. (ಎಂ.ಕೆ.ಎನ್.)

**ಆ್ಯಂಡರ್‌ಸನ್, ಷರ್‌ವುಡ್ :** 1876–1941. ಅಮೆರಿಕದ ಕವಿ, ಕಾದಂಬರಿಕಾರ ಮತ್ತು ಕಥೆಗಾರ. ಸ್ಪ್ಯಾನಿಷ್ ಅಮೆರಿಕನ್ ಯುದ್ಧದಲ್ಲಿ ಪಾಲುಗೊಂಡು ಅನಂತರ ಕೆಲಕಾಲ ಬಣ್ಣದ ಕಾರ್ಖಾನೆಯೊಂದರ ವ್ಯವಸ್ಥಾಪಕನಾಗಿ ಕೆಲಸ ಮಾಡಿದ. ವಿಂಡಿ ಮೆಕ್‌ಫರ್ಸನ್ಸ್ ಸನ್ (1916), ಮಾರ್ಚಿಂಗ್ ಮೆನ್ (1917) ಮೊದಲಾದ ಕಾದಂಬರಿಗಳನ್ನು ಬರೆದರೂ ವೈನ್ಸ್‌ಬರ್ಗ್ ಓಹಿಯೊ (1919)ಎಂಬ ಕಥಾಸಂಕಲನ ಪ್ರಕಟವಾದ ಮೇಲೆ ಪ್ರಸಿದ್ಧನಾದ. ಪೂರ್ ವೈಟ್ (1920), ಡಾರ್ಕ್ ಲಾಫ್ಟರ್ ಲ್ಯಾಂಗೇಟರ್ (1925), ಪರ್ ಹ್ಯಾಪ್ಸ್ ವಿಮೆನ್ (1931) ಮೊದಲಾದ ಕಾದಂಬರಿಗಳು ಯಂತ್ರಗಳ ಆಗಮನದಿಂದ ನಗರ ಜೀವನದ ನೈರ್ಮಲ್ಯ ಕದಡಿದುದನ್ನೂ ಅವುಗಳನ್ನು ಅವಲಂಬಿಸಿ ಬಿಳಿಯರ ಬದುಕು ಸತ್ವಹೀನವಾಗುತ್ತಿರುವುದನ್ನು ಅವುಗಳಿಂದ ಪಾರಾಗುವ ಬಗೆ ಯಾವುದೆಂಬುದನ್ನೂ ಚಿತ್ರಿಸುತ್ತವೆ. ದಿ ಟ್ರಯಪರ್ ಆಫ್ ದಿ ಎಗ್ (ಟ್ರೈಯಪತ್ ಆಫ್ ದಿ ಎಗ್) (1921), ಹಾರ್ಸಸ್ ಅಂಡ್ ಮೆನ್ (1923), ಡೆತ್ ಇನ್ ದಿ ವುಡ್ಸ್ (1933)– ಇವು ಈತನ ಕೆಲವು ಕಥಾ ಸಂಗ್ರಹಗಳು. ಹೋಮ್‌ಟೌನ್ ಎಂಬ ಪ್ರಬಂಧ ಸಂಕಲನ ಇವನ ಮರಣಾನಂತರ ಪ್ರಕಟವಾಯಿತು. *

**ಆ್ಯಂಡರ್‌ಸನ್, ಹ್ಯಾನ್ಸ್ ಕ್ರಿಶ್ಚಿಯನ್ :** 1805–75. ಡೆನ್ಮಾರ್ಕಿನ ಸಾಹಿತಿ; ಪ್ರಪಂಚ ಪ್ರಸಿದ್ಧ ಮಕ್ಕಳಕಥೆಗಳ ಲೇಖಕ. ಹುಟ್ಟಿದ್ದು ಓಡೆನ್ಸ್‌ನಲ್ಲಿ. ತಂದೆ ಕಡುಬಡವನಾದ ಮೋಚಿ. 11ನೆಯ ವರ್ಷದಲ್ಲಿ ತಂದೆಯನ್ನು ಕಳೆದುಕೊಂಡ. ವಿದ್ಯೆಯ ಅಭಾವದಿಂದ ಬೇರೆ ಯಾವ ವೃತ್ತಿಯನ್ನೂ ಕೈಗೊಳ್ಳಲಾರದೆ 1819ರಲ್ಲಿ ಕೋಪೆನ್‌ಹೇಗನ್ ನಗರಕ್ಕೆ ಹೋದ. ನಟನೂ ಹಾಡುಗಾ ರನೂ ಆಗಬೇಕೆಂಬ ಉದ್ದೇಶ. ಕೆಲಕಾಲ ಕಷ್ಟಕಾರ್ಪಣ್ಯ ಮತ್ತು ಹಸಿವಿನ ಮಧ್ಯೆ ಕಾಲ ಕಳೆದ ಮೇಲೆ ಒಬ್ಬಿಬ್ಬರು ಪ್ರಭಾವ ಶಾಲಿಗಳಾದ ಸ್ನೇಹಿತರ ಸಹಾಯ ಲಭಿಸಿತು. ಆದರೆ ಅಷ್ಟೇನೂ ಆಕರ್ಷಕ ವಲ್ಲದ ಆತನ ಅಂಗಭಂಗಿ ಅವನು ರಂಗ ಭೂಮಿಯ ಮೇಲೆ ಯಶಸ್ವಿ ಯಾಗಲು ಅಡ್ಡಿಯಾಯಿತು. ಕಂಠವೂ ಒಡೆದದ್ದರಿಂದ ಸುಶ್ರಾವ್ಯವಾಗಿ ಹಾಡುವುದೂ ಅಸಾಧ್ಯ ವಾಯಿತು.

ಆಗ ರಾಜಾಶ್ರಯದಲ್ಲಿದ್ದ ರಾಯಲ್ ಥಿಯೇಟರ್ ಎಂಬ ಸಂಸ್ಥೆಯ ನಿರ್ದೇಶಕ ಜೊನಾಸ್ ಕಾಲಿನ್ ಅವನ ಲೇಖನ ಸಾಮರ್ಥ್ಯವನ್ನು ಗಮನಿಸಿ, ಅರಸನ ಅನುಮತಿ ಪಡೆದು ಅಸ್ಲೇಗಲ್ ಗ್ರಾಮರ್ ಸ್ಕೂಲ್ ಎಂಬ ಸಂಸ್ಥೆಗೆ ಸೇರಿಸಿದ. 1829ರಲ್ಲಿ ವಿದ್ಯಾಭ್ಯಾಸ ಪೂರೈಸಿ ಪ್ರವಾಸ ಸಾಹಿತ್ಯದ ಜಾತಿಗೆ ತನ್ನ ಮೊಟ್ಟಮೊದಲ ಪುಸ್ತಕ ಬರೆದ. ಮೊದಲ ಕವನ

ಸಂಕಲನ ಹೊರಬಿದ್ದುದೂ ಅದೇ ಕಾಲದಲ್ಲೇ. ಅನಂತರ ಯುರೋಪಿನ ಹಲವು ದೇಶಗಳಲ್ಲಿ ಪ್ರವಾಸ ಮಾಡಿದ. ಇಂಗ್ಲೆಂಡಿಗೂ ಹೋಗಿ ಕಾದಂಬರಿಕಾರ ಡಿಕನ್ಸನ ಗೆಳೆತನ ಗಳಿಸಿದ. ಒಂದು ನಾಟಕವನ್ನೂ ಕೆಲವು ಕಾದಂಬರಿಗಳನ್ನೂ ರಚಿಸಿದ. ನಾಟಕ ಜನಪ್ರಿಯವಾಗಲಿಲ್ಲ. ಕಾದಂಬರಿಗಳು ಸುಮಾರಾಗಿ ಜನಪ್ರಿಯವಾದವು. ಕೆಲವು ಉತ್ತಮ ಕವಿತೆಗಳನ್ನೂ ರಚಿಸಿದ. ಅವನ ಅತ್ಯಂತ ಪ್ರಸಿದ್ಧ ಕೃತಿಗಳೆಂದರೆ ಅವನು ಬರೆದ ಮಕ್ಕಳ ಕಥೆಗಳು. ಹೊರಬಿದ್ದ ಹೊಸತರಲ್ಲಿ ಅಷ್ಟೇನೂ ಮನ್ನಣೆ ಪಡೆಯದ ಈ ಬರೆಹಗಳು ಕಾಲಕ್ರಮೇಣ ಅವನ ಶಾಶ್ವತಕೀರ್ತಿಗೆ ಆಧಾರಗಳಾದವು. 1835–37ರಲ್ಲಿ ಸಣ್ಣ ಹೊತ್ತಗೆಗಳ ರೂಪದಲ್ಲಿ ಬರತೊಡಗಿದ ಈ ಕಥೆಗಳು 1848ರ ಅನಂತರ ಜನರ ಗಮನವನ್ನು ಸಂಪೂರ್ಣವಾಗಿ ಸೆರೆಹಿಡಿದವು. ಜಗತ್ತಿನ ಅನೇಕ ಭಾಷೆಗಳಲ್ಲಿ ಅನುವಾದವಾಗಿರುವ ಅವು ಮಕ್ಕಳ ಮನಸ್ಸನ್ನು ಸೂರೆಗೊಳ್ಳುತ್ತಿವೆ. ಆದರೆ ದೊಡ್ಡವರಿಗೂ ಹಿಡಿಸುವ ನೀತಿಬೋಧನೆ ಮೊದಲಾದ ಗುಣಗಳು ಅವುಗಳಲ್ಲಿ ಅಡಕವಾಗಿವೆ. ಇವುಗಳಿಂದ ವಿಶ್ವವಿಖ್ಯಾತನಾದ ಕವಿಯ ಸ್ಮಾರಕವಾಗಿ ಡೆನ್ಮಾರ್ಕಿನ ಜನ ಕೋಪೆನ್ ನಗರದಲ್ಲಿ ಅವನ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ. ಅವನ ಜೀವನದ ಪ್ರಮುಖ ಸಂಗತಿಗಳು ಅವನ ಆತ್ಮಕಥೆಯಲ್ಲಿ ದೊರೆಯುತ್ತವೆ.

ದಿ ಅಗ್ಲಿ ಡಕ್‍ಲಿಂಗ್, ದ ಬ್ರೇವ್ ಟಿನ್ ಸೋಲ್ಜರ್, ದ ಲಿಟ್ಲ್ ಮರ್‌ಮೇಡ್ ಮತ್ತು ದ ರೆಡ್ ಷೂಸ್‌ನಂಥ ಕಥೆಗಳು ಪ್ರಪಂಚದ ಎಲ್ಲ ದೇಶಗಳ ಮಕ್ಕಳ ಮನಸ್ಸನ್ನು ಸೂರೆಮಾಡಿವೆ.

ಈತನ ಕಥೆಗಳಲ್ಲಿ ಕೆಲವನ್ನು ಎಂ. ರಾಮರಾವ್ ಮತ್ತು ಜಿ. ಪಿ. ರಾಜರತ್ನಂ ಕನ್ನಡಿಸಿ ಚಕ್ರವರ್ತಿಯ ಕೋಗಿಲೆ ಮತ್ತು ಲೋಹವರಾಹ ಎಂಬ ತಮ್ಮ ಸಂಕಲನಗಳಲ್ಲಿ ಪ್ರಕಟಿಸಿದ್ದಾರೆ. (ಎಂ.ಆರ್.; ಜೆ.ಎಸ್.ಪಿ., ಎಲ್.ಎಸ್.ಎಸ್.)

**ಆ್ಯಂಡಲೂಸೈಟ್ :** ಒಂದು ಖನಿಜ. ಇದರ ಹರಳುಗಳನ್ನು ಮೊಟ್ಟಮೊದಲಿಗೆ ಸ್ಪೇನ್ ದೇಶದ ಆ್ಯಂಡಲೂಸಿಯ ಎಂಬಲ್ಲಿ ಗುರುತಿಸಿದ ಕಾರಣ ಖನಿಜಕ್ಕೆ ಈ ಹೆಸರು. ಇದು ಆರ್ಥೊರಾಂಬಿಕ್ ವರ್ಗದ ಹರಳುಗಳಾಗಿ ದೊರೆಯುತ್ತದೆ. ಬಹುಮಟ್ಟಿಗೆ ನೀಳಫಲಕಗಳಂತೆ ಅಥವಾ ಚಚ್ಚೌಕಾಕಾರದ ಹರಳುಗಳಾಗಿ ಶಿಲೆಗಳಲ್ಲಿ ಹುದುಗಿರುತ್ತದೆ. ಹಲವು ವೇಳೆ ಅಸ್ಪಷ್ಟಾಕೃತಿಯ ಕಣಗಳ ಮುದ್ದೆ ಇಲ್ಲವೆ ಸ್ತಂಭಾಕೃತಿಯನ್ನು ತೋರ್ಪಡಿಸುವುದುಂಟು. ಇದರ ರಾಸಾಯನಿಕ ಸಂಕೇತ $Al_2SiO_2$, ಅಲ್ಯೂಮಿನಿಯಂ ಸಿಲಿಕೇಟ್, ಬಣ್ಣದಲ್ಲಿ ಬಿಳುಪು, ಗುಲಾಬಿ ಕೆಂಪು, ಬಾಡುಕೆಂಪು (ಫ್ಲೆಶ್‌ರೆಡ್) ಊದಾ, ಬೂದು, ಕೆಂಗಂದು ಮತ್ತು ಹಿಪ್ಪೆ ಹಸುರು, ಬಣ್ಣವಿಲ್ಲದ ಒರೆಗಾಜಿನ ಹೊಳಪು, ಪಾರದರ್ಶಕದಿಂದ ಅಪಾರದರ್ಶಕ; ಬಹುಮಟ್ಟಿಗೆ ಮಿತಪಾರದರ್ಶಕ. ಉತ್ತಮ ದರ್ಜೆಯ ಸೀಳುಗಳು, ಅಸಮ ಅಥವಾ ಅಸ್ಪಷ್ಟ ಬಿರಿತ. ಸುಲಭವಾಗಿ ಪುಡಿಪುಡಿಯಾಗುವ ಸ್ವಭಾವ. ಕಾಠಿಣ್ಯ 7.5. ಹೀಗಾಗಿ ಚಾಕುವಿನ ಅಲುಗಿನಿಂದಲೂ ಗೀರಲು ಸಾಧ್ಯವಿಲ್ಲ. 1400°, ಸೆಂ.ಗ್ರೇ ಉಷ್ಣತೆಯಲ್ಲಿ ಈ ಖನಿಜ ಮಲೈಟ್ ಮತ್ತು ಸಿಲಿಕ ಆಗಿ ಮಾರ್ಪಡುತ್ತದೆ.

ಆ್ಯಂಡಲೂಸೈಟ್‌ನಲ್ಲಿ ಚಯಾಸ್ಟೊಲೈಟ್ ಅಥವಾ ಮ್ಯಾಕ್ಲ್ ಮತ್ತು ವಿರಿಡೈನ್ ಎಂಬ ವಿಧಗಳಿವೆ. ಚಯಾಸ್ಟೊಲೈಟ್ ಹರಳುಗಳು ಗಾತ್ರದಲ್ಲಿ ದೊಡ್ಡದಾಗಿದ್ದು ತಮ್ಮ ಒಳರಚನೆಯಲ್ಲಿ ಅಸಂಖ್ಯಾತ ಸೂಕ್ಷ್ಮ ಇಂಗಾಲದ ಕಣಗಳನ್ನು ಹೊಂದಿರುತ್ತವೆ. ಈ ಕಣಗಳು ವಿಶಿಷ್ಟವಾದ ರೀತಿಯಲ್ಲಿ ಹುದುಗಿರುವ ಕಾರಣ ಹರಳುಗಳನ್ನು ಅಡ್ಡ ಕತ್ತರಿಸಿದಾಗ ಮನೋಹರವಾದ ಆಕೃತಿಗಳನ್ನು ನೋಡಬಹುದು. ಈ ಖನಿಜ ಬಹುಮಟ್ಟಿಗೆ ಸಂಪರ್ಕ ರೂಪಾಂತರಕ್ಕೊಳಗಾದ ಜೇಡುಶಿಲೆಗಳಲ್ಲೂ ಅಲ್ಲದೆ ಬೃಹತ್ ರೂಪಾಂತರಕ್ಕೊಳಗಾದ ನೈಸ್ ಮತ್ತು ಮೈಕಾ ಪದರು ಶಿಲೆಗಳಲ್ಲೂ ಮತ್ತು ಅಗ್ನಿಶಿಲೆಯಾದ ಪೆಗ್ಮಟೈಟ್‌ನಲ್ಲೂ ದೊರೆಯುತ್ತದೆ. ಉತ್ತಮದರ್ಜೆಯ ಪಾರದರ್ಶಕ ಹರಳುಗಳನ್ನು ಜವಾಹಿರಿಯಲ್ಲೂ ಮತ್ತು ಸಾಮಾನ್ಯ ಖನಿಜವನ್ನು ಸ್ಪಾರ್ಕ್‌ಪ್ಲಗ್‌ಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. (ಬಿ.ವಿ.ಜಿ.)

**ಆ್ಯಂಡಿಸೈಟ್ :** ಅಗ್ನಿಶಿಲೆಗಳ ಸಮುದಾಯದಲ್ಲಿ ಜ್ವಾಲಾಮುಖಜ ಶಿಲೆಯ (ವಾಲ್ಕ್ಯಾನಿಕ್ ರಾಕ್ಸ್) ವಿಭಾಗಕ್ಕೆ ಸೇರಿದ ಒಂದು ಶಿಲೆ. ಶಿಲಾರಸ ಜ್ವಾಲಾಮುಖಿ ಅಥವಾ ಭೂಮಿಯ ಬಿರುಕುಗಳ ಮೂಲಕ ಭೂಮಿಯ ಮೇಲ್ಭಾಗದಲ್ಲಿ ಹೊರಹೊಮ್ಮಿ ಘನಿಸುವುದರಿಂದ ಉಂಟಾಗುವ ಬಹಿಸ್ಸರಣ ಶಿಲೆಗಳ ವರ್ಗಕ್ಕೆ ಸೇರಿದ ಈ ಶಿಲೆಯ ಒಳರಚನೆ ಸಾಮಾನ್ಯವಾಗಿ ಪಾರ್ ಫಿರಿಟಿಕ್ ಆಗಿದೆ. ಇವುಗಳಲ್ಲಿ ಫೆಲ್ಡ್‌ಸ್ಪಾರ್ ಮತ್ತು ಇತರ ಖನಿಜಗಳು ದೊಡ್ಡ ಹರಳುಗಳಾಗಿ ದೊರೆಯುತ್ತವೆ. ಈ ದೊಡ್ಡ ಹರಳುಗಳು ಬಹಳ



ಸೂಕ್ಷ್ಮವಾದ ಇತರ ಖನಿಜಗಳಲ್ಲಿ ಅಥವಾ ಗಾಜಿನಲ್ಲಿ ಎದ್ದುಕಾಣುತ್ತವೆ. ಗಾಜು ಅಧಿಕ ಪ್ರಮಾಣದಲ್ಲಿ ಇರುವ ಶಿಲೆಗಳನ್ನು ವಿಟ್ರೊ ಅಥವಾ ಹಯಲೊ ಆ್ಯಂಡಿಸೈಟ್‌ಗಳೆಂದೂ ಕರೆಯುತ್ತಾರೆ. ರಾಸಾಯನಿಕ ವಸ್ತುಗಳ ರಚನೆ ಮತ್ತು ಖನಿಜ ಸಂಯೋಗದ ಆಧಾರದ ಮೇಲೆ ಈ ಶಿಲೆಯನ್ನು ಮಧ್ಯವರ್ತಿ ಶಿಲೆ (ಇಂಟರ್ಮೀಡಿಯಟ್ ಟೈಪ್ ಆಫ್ ರಾಕ್) ಎಂದು ಕರೆ ಯುತ್ತಾರೆ. ರಾಸಾಯನಿಕ ವಸ್ತು ರಚನೆ ಮೇಲೆ ಈ ಶಿಲೆಯಲ್ಲಿ ಸಿಲಿಕಾ ಪ್ರಮಾಣ ಶೇ.55–65ವರೆಗೆ ಇರುತ್ತದೆ. ಇದರ ಖನಿಜ ಸಂಯೋಜನೆ ಯಲ್ಲಿ ಸೋಡಾ ಮತ್ತು ಲೈಮ್ ಫೆಲ್ಡ್‌ಸ್ಪಾರ್ ಖನಿಜಗಳು ಅಧಿಕ ಪ್ರಮಾಣದಲ್ಲಿರುತ್ತವೆ. ಕೆಲವುವೇಳೆ ಆಲ್ಕಲಿ ಫೆಲ್ಡ್‌ಸ್ಪಾರ್ ಅಲ್ಪ ಪ್ರಮಾಣದಲ್ಲಿರುತ್ತದೆ. ಬೆಣಚುಕಲ್ಲು ಸಾಮಾನ್ಯವಾಗಿ ಕಣ್ಣಿಗೆ ಕಾಣುವ ಕಣಗಳ ರೂಪದಲ್ಲಿ ಸಿಕ್ಕದಿದ್ದರೂ ಗಾಜಿನ ಒಳ ರಚನೆಯಲ್ಲಿ ಅಡಗಿಕೊಂಡಿರುತ್ತದೆ. ಇತರ ಖನಿಜಗಳು ಫೆರೊ ಮೆಗ್ನೀಸಿಯಂ ಖನಿಜ ರೂಪಗಳಾದ ಬಯೋಟೈಟ್, ಹಾರ್ನ್‌ಬ್ಲೆಂಡ್, ಆಗೈಟ್, ಎನ್‌ಸ್ಟಟೈಟ್ ಅಥವಾ ಹೈಪರ್‌ಸ್ತೀನ್‌ಗಳಿಂದ ಕೂಡಿರುತ್ತದೆ.

ಜ್ವಾಲಾಮುಖಿ ಶಿಲೆಗಳಲ್ಲೆಲ್ಲ, ಬಸಾಲ್ಟ್ ಶಿಲೆಯಾದ ಮೇಲೆ ಆ್ಯಂಡಿಸೈಟ್ ಶಿಲೆ ಅಧಿಕ ಪ್ರಮಾಣದಲ್ಲಿ ಭೂಮಿಯ ಪದರದಲ್ಲಿ ಸಿಗುತ್ತದೆ. ಇದು ಮಡಿಕೆ ಪರ್ವತಶ್ರೇಣಿಗಳೊಂದಿಗೆ (ಫೋಲ್ಡೆಡ್ ಮೌಂಟನ್ ಟ್ರೈನ್ಸ್) ಕೂಡಿರುತ್ತದೆ. ಆ್ಯಂಡಿಸೈಟ್ ಮತ್ತು ಬಸಾಲ್ಟ್ ಇವೆರಡೂ ಜ್ವಾಲಾಮುಖಿ ಶಿಲೆಗಳು ಎಂಬ ಒಂದು ಮುಖ್ಯ ಶಿಲಾ ಸಮುದಾಯಕ್ಕೆ ಸೇರಿವೆ. ಆ್ಯಂಡಿಸೈಟ್ ಶಿಲೆಯಲ್ಲಿ ಎಂಟನೆಯ ಐದು ಭಾಗದಷ್ಟು ಫಿಲ್‌ಸಿಕ್ ಖನಿಜಗಳಿದ್ದರೆ ಬಸಾಲ್ಟ್ ಶಿಲೆಯಲ್ಲಿ ಅದು ಅರ್ಧ ಭಾಗದಷ್ಟಿರುತ್ತದೆ. ಆ್ಯಂಡಿಸೈಟ್ ಶಿಲೆಗಳಲ್ಲಿ ಪೆಸಿಫಿಕ್ ಮಹಾಸಾಗರದ ಚೌಕಟ್ಟಿನಲ್ಲಿರುವ ಹೈಪರ್‌ಸ್ತೀನ್ ಖನಿಜವಿದೆ. ಭೂ ಚರಿತ್ರೆಯಲ್ಲಿ ನಾನಾ ಕಾಲಗಳಲ್ಲಿ ಉದ್ಭವಿಸುವ ಈ ಶಿಲೆ, ಮುಖ್ಯವಾಗಿ ಹಂಗರಿ, ಬಾಲ್ಕನ್, ಕಾಕಸಸ್, ಪರ್ಷಿಯ ದೇಶಗಳಲ್ಲಿ ಸಿಕ್ಕುವ ಶಿಲೆ, ಆಲ್ಪ್ಸ್, ಹಿಮಾಲಯ ಪರ್ವತಶ್ರೇಣಿಗಳ ಭೂಕಾಲಕ್ಕೆ ಸೇರಿದೆ. ಬಹಳ ಹಳೆಯ ಭೂಚರಿತ್ರೆಯ ಯುಗದ ಶಿಲೆಗಳು ಸ್ಕಾಟ್ಲೆಂಡ್, ವೇಲ್ಸ್ ಮತ್ತು ಲೇಕ್ ಡಿಸ್ಟ್ರಿಕ್ಟ್‌ಗಳಲ್ಲಿ ಸಿಕ್ಕುತ್ತವೆ. (ಐ.ಆರ್.ವಿ.)

**ಆ್ಯಂಡೀಸ್ :** ಈ ಬೃಹತ್ ಪರ್ವತವನ್ನು ಸ್ಪ್ಯಾನಿಷ್ ಭಾಷೆಯಲ್ಲಿ ಕಾರ್ಡಿಲ್ಲೆರಾ ಡಿ ಲಾಸ್ ಆ್ಯಂಡೀಸ್ ಎಂದು ಕರೆಯುತ್ತಾರೆ. ಪನಾಮಾ ಜಲಸಂಧಿಯಿಂದ ಟೆಯರಾ–ಡೆಲ್–ಫ್ಯೂಗೊವರೆಗೆ ದಕ್ಷಿಣ ಅಮೆರಿಕದ ಪಶ್ಚಿಮತೀರಕ್ಕೆ ಹೊಂದಿಕೊಂಡಂತೆ ಸು.6400 ಕಿಮೀ ದೂರ ಹಬ್ಬಿದೆ. ಎತ್ತರದಲ್ಲಿ ಇದು ಹಿಮಾಲಯಕ್ಕೆ ಎರಡನೆಯದು. ಆಕಾಂಕಾಗ್ವ 6,857ಮೀ ಪಶ್ಚಿಮಾರ್ಧಗೋಳದಲ್ಲೇ ಅತಿ ದೊಡ್ಡ ಶಿಖರವೆನಿಸಿಕೊಂಡಿದ್ದು ಈಚಿನ

ಆ್ಯಂಡೀಸ್ ಪರ್ವತಶ್ರೇಣಿ

ಶೋಧನೆಗಳಿಂದ ಆ ಕೀರ್ತಿ ಓಜೋಸ್ ಡಿ ಸಲ್ಯಾಡೊ ಶಿಖರಕ್ಕೆ ಸಂದಿದೆ. ಈ ಪರ್ವತದಲ್ಲಿ ಕೋಟೊಪಾಕ್ಸಿ, ಚಿಂಬೊರಾಸೊ, ಈಕ್ವೆಡಾರ್, ಇಲ್ಲಾಂಪು, ಈಯೇಮಾನೀ, ಆಕಾಂಕಾಗ್ವ ಮುಂತಾದ ಅಗ್ನಿಪರ್ವತಗಳಿವೆ. ಇವೆಲ್ಲವೂ ಸಮುದ್ರಮಟ್ಟದಿಂದ 6,000 ಮೀ ಎತ್ತರದಲ್ಲಿವೆ. ಪರ್ವತಶ್ರೇಣಿಗಳ ಮಧ್ಯೆ ಬೊಲಿವಿಯದಲ್ಲಿ ಆಲ್ಟಿಪ್ಲಾನೊ ಪ್ರಸ್ಥಭೂಮಿಯಿದೆ. ಪೆರು, ಈಕ್ವೆಡಾರ್ ಮತ್ತು ಕೊಲಂಬಿಯಗಳಲ್ಲಿ ಆಂಡೀಸ್‌ನ ಎರಡು ಮೂರು ಸಮಾನಾಂತರ ಶ್ರೇಣಿಗಳು ಆಳವಾದ ನದೀ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿವೆ. ಆಂಡೀಸ್ ಪರ್ವತಗಳು ವೆನಿಜ್ವೆಲದಲ್ಲಿ ನೈಋತ್ಯಕ್ಕೆ ತಿರುಗುವುದಕ್ಕೆ ಮುಂಚೆ ಕೆರಿಬಿಯನ್ ಸಮುದ್ರ ತೀರಕ್ಕೆ ಸಮಾನಾಂತರವಾಗಿವೆ. ಅನಂತರ ಕೊಲಂಬಿಯವನ್ನು ಪ್ರವೇಶಿಸುತ್ತವೆ. ಅಲ್ಲಿ ಮೂರು ಪ್ರತ್ಯೇಕ ಶ್ರೇಣಿಗಳಾಗಿ ರೂಪುಗೊಳ್ಳುತ್ತವೆ. ಕಾಕಾ ಮತ್ತು ಮ್ಯಾಗ್ಡಲೀನ್ ನದಿಗಳು ಪ್ರತ್ಯೇಕಿಸುತ್ತಿವೆ. ಪಶ್ಚಿಮ ಶ್ರೇಣಿಗೆ ಕಾರ್ಡಿಲ್ಲೆರಾ ಆಕ್ಸಿಡೆಂಟಲ್ ಎಂದು ಕರೆಯಲಾಗಿದ್ದು, ಅದು ಪನಾಮ ಭೂಕಂಠದವರೆಗೆ ಹಬ್ಬಿದೆ. ಕೇಂದ್ರದ ಶ್ರೇಣಿ ಕೆರಿಬಿಯನ್ ತೀರದವರೆಗೆ ವಿಸ್ತರಿಸಿದ್ದು

ಅದನ್ನು ಕಾರ್ಡಿಲ್ಲೆರಾ ಸೆಂಟ್ರಲ್ ಎನ್ನುವರು. ವೆನಿಜ್ವೆಲಾದ ಮಾರಕೈ ಬೊಸರೋವರದವರೆಗೆ ವಿಸ್ತರಿಸಿರುವ ಶ್ರೇಣಿಗೆ ಕಾರ್ಡಿಲ್ಲೆ ರಾ–ಡಿ–ಮೆರಿಡವೆಂದು ಹೆಸರಿಸಲಾಗಿದೆ. ಆ್ಯಂಡೀಸ್ ಈಕ್ವೆಡಾರ್ ಮೂಲಕ ದಕ್ಷಿಣಕ್ಕೆ ಪೆರುವಿನಲ್ಲಿ ಮುಂದುವರಿಯುತ್ತವೆ. ಅಲ್ಲೊಂದು ಹುವಾಸ್ಕಾರನ್ ಎಂಬ ಎತ್ತರದ ಶಿಖರ (6,768 ಮೀ)ವಿದೆ. ಬೋವಿಯದಲ್ಲಿಯೂ ಎರಡು ಶ್ರೇಣಿಗಳಾಗಿ ಮುಂದುವರಿಯುತ್ತವೆ. ಅವುಗಳ ನಡುವೆ ಆಲ್ಟಿಪ್ಲಾನೊ ಭೂಭಾಗವಿದೆ. ಚಿಲಿ ಮತ್ತು ಅರ್ಜೆಂಟೈನಗಳ ಗಡಿ ಪ್ರದೇಶಗಳಲ್ಲಿ ಸಂಕೀರ್ಣತೆಯಿಂದ ಮುಂದುವರಿದು, ದಕ್ಷಿಣ ಚಿಲಿಯ ಭಾಗದಲ್ಲಿ ಸಮುದ್ರಗಳಲ್ಲಿ ವಿಲೀನಗೊಂಡು ಹಲವು ದ್ವೀಪಗಳ ಸೃಷ್ಟಿಗೆ ಕಾರಣವಾಗಿವೆ. ಆ್ಯಂಡೀಸ್ ಪರ್ವತಗಳು ದಕ್ಷಿಣ ಅಮೆರಿಕೆಯ ಹಲವು ನದಿ ವ್ಯವಸ್ಥೆಗಳಿಂದ ಉಗಮ ಸ್ಥಾನವಾಗಿದೆ. ಉದಾ: ಓರಿನೋಕೊ, ಅಮೇಜಾನ್, ಪಿಲ್ಕೊಮಾಯೊ ಇತ್ಯಾದಿ. ಈ ಪರ್ವತದ ಅಗಾಧವಾದ ಮೇಲ್ಮೈಲಕ್ಷಣದಿಂದ ಪೂರ್ವ–ಪಶ್ಚಿಮ ಪ್ರದೇಶಗಳ ಸಂಪರ್ಕ ಕಷ್ಟಕರವಾಗಿದೆ. ದಕ್ಷಿಣದಲ್ಲಿ ಮಾತ್ರ ಅರ್ಜೆಂಟೈನದಿಂದ ಚಿಲಿಗೆ ಪರ್ವತದ ಮುಖಾಂತರ ಒಂದು ರೈಲುಮಾರ್ಗ ಹಾದುಹೋಗುವುದು. 16ನೆಯ ಶತಮಾನದಲ್ಲಿ ಆ್ಯಂಡೀಸ್ ಪರ್ವತದ ಖನಿಜ ಸಂಪತ್ತು ಸ್ಪೇನಿನವರನ್ನು ಆಕರ್ಷಿಸಿತು. ಇಂದು ಈ ಪರ್ವತಭಾಗದಿಂದ ತಾಮ್ರ, ಸೀಸ, ತವರ, ಪ್ಲ್ಯಾಟಿನಂ ಮತ್ತು ಬೆಳ್ಳಿ ಅಧಿಕ ಪ್ರಮಾಣದಲ್ಲಿ ರಫ್ತಾಗುತ್ತವೆ. ಆ್ಯಂಡೀಸ್ ಗಣರಾಜ್ಯಗಳಲ್ಲಿ ಸೀರಾಡಿವಾಸ್ಕೊ, ಪೊಟೋಸಿ, ಚುಕ್ವಿಕಾಮಟಾ ಗಣಿಗಳು ಮುಖ್ಯವಾದುವು. ಲಾಪಾಜ್ (12,0001$^{1}$), ಕ್ವಿಟೊ (9,400$^{1}$) ಮುಖ್ಯಪಟ್ಟಣಗಳು. ಟಿಟಕಾಕ ಸರೋವರ (12,500') ನೌಕಾಯಾನಕ್ಕೆ ಉಪಯುಕ್ತವಾಗಿದೆ. ಇಂಥ ನಾಗರಿಕತೆಗೆ ಪ್ರಸಿದ್ಧಿ ಪಡೆದ ಪೆರುವಿನ ಆ್ಯಂಡೀಸ್, ಆರ್ಜೆಂಟೈನ, ಚಿಲಿಗಳ ಆ್ಯಂಡೀಸ್ ಪರ್ವತ ಪ್ರದೇಶದ ಸುಂದರ ಪ್ರಕೃತಿ ದೃಶ್ಯಗಳು ಅಧಿಕ ಸಂಖ್ಯೆಯ ಪ್ರವಾಸಿಗರನ್ನು ಆಕರ್ಷಿಸುತ್ತವೆ. (ಎಂ.ಎಸ್.ಪಿ.ಎಮ್.)

**ಆ್ಯಂಡೊಸಿಡೀಸ್ :**ಪ್ರ.ಶ.ಪೂ. ಸು. 440–390. ಅಥೆನ್ಸ್‌ನ ವಾಗ್ಮಿ, ರಾಜಕಾರಿಣಿ. ಆ್ಯಟಿಕ್‌ನ ಹತ್ತು ಮಂದಿ ಪ್ರಸಿದ್ಧರಲ್ಲೊಬ್ಬ. ಹರ್ಮಿ ದೇವತೆಯ ಅಂಗಚ್ಛೇದನದ ಸಂಬಂಧವಾಗಿ ವಿಚಾರಣೆಗೆ ಒಳಗಾದವರಲ್ಲಿ ಒಬ್ಬ. ಅಪಮಾನದ ಅಥವಾ ದೇಶ ಭ್ರಷ್ಟತೆಯ ದಂಡವನ್ನು ವಿಧಿಸಲಾಯಿತು. ಇವನ ಭಾಷಣಗಳಲ್ಲಿ ಮೂರು ಉಳಿದು ಬಂದಿವೆ. ಅಥೆನ್ಸ್‌ಗೆ ಹಿಂದಿರುಗಲು ಅಪ್ಪಣೆ ಬೇಡುವ––ನಿರರ್ಥಕವಾದ––ಭಾಷಣ ಒಂದು (ಪ್ರ.ಶ.ಪೂ. 410), ಎರಡನೆಯದು ತನ್ನ ಮೇಲೆ ಹೊರಿಸಿದ ಒಂದು ಆಪಾದನೆಗೆ ಉತ್ತರವಾಗಿ ರಹಸ್ಯಕರ್ಮಗಳನ್ನು ಕುರಿತ ಭಾಷಣ ಇನ್ನೊಂದು (ಪ್ರ.ಶ.ಪೂ. 399) ಮತ್ತು ಸ್ಪಾರ್ಟದೊಂದಿಗೆ ಶಾಂತಿಮಾಡಿಕೊಳ್ಳುವುದನ್ನು ಸಮರ್ಥಿಸಿದ ರಾಜಕೀಯ ಭಾಷಣ ಮೂರನೆಯದು. ಇವನ ವಾಗ್ಮಿತೆಯಲ್ಲಿ ಸುಶಿಕ್ಷಿತನ ನಯವಿರಲಿಲ್ಲ. ಆದರೆ ಬುದ್ಧಿವಂತಿಕೆಯಿಂದ ಮನಮುಟ್ಟುವಂತೆ ಸಹಜವಾಗಿ ಈತ ಮಾತನಾಡಬಲ್ಲನಾಗಿದ್ದನಾದರೂ ಮನವೊಪ್ಪುವಂಥ ಮಾತುಗಾರನೇನಲ್ಲ. *

**ಆ್ಯಂಡ್ರಾನಿಕಸ್ ಲಿವಿಅಸ್ :** ಪ್ರ.ಶ.ಪೂ. 284–204. ಗ್ರೀಕ್ ನಾಟಕಕಾರ, ನಟ, ನಿರ್ದೇಶಕ. ಟಾರೆಂಟಮ್ ಪಟ್ಟಣದ ನಿವಾಸಿ. ಆ ಪಟ್ಟಣ ರೋಮನ್ನರಿಗೆ ವಶವಾದಾಗ ಗುಲಾಮನಾಗಿ ರೋಮಿಗೆ ಬಂದ. ಅಲ್ಲಿ ತನ್ನ ಧಣಿಯ ಮಕ್ಕಳಿಗೆ ಗ್ರೀಕನ್ನೂ ಲ್ಯಾಟಿನ್ನನ್ನೂ ಕಲಿಸುತ್ತಿದ್ದು, ಕೆಲ ಕಾಲಾನಂತರ ಸ್ವಾತಂತ್ರ್ಯ ಪಡೆದುಕೊಂಡ. ಮಧ್ಯವಯಸ್ಸಿನಿಂದ ಆಯುರಂತ್ಯದ ವರೆಗೂ ಎಂದರೆ 30 ವರ್ಷಕ್ಕೂ ಮೀರಿ ಸಾಹಿತ್ಯಸೇವೆಯಲ್ಲಿ ನಿರತನಾಗಿದ್ದ. ಮುಖ್ಯವಾಗಿ ಗ್ರೀಕ್ ರೂಪಕಗಳನ್ನು ಲ್ಯಾಟಿನ್ನಿಗೆ ಭಾಷಾಂತರ ಮಾಡುವುದೇ ಅವನ ಕೆಲಸವಾಯಿತು. ಅವನ ಒಂಬತ್ತು ಗಂಭೀರನಾಟಕಗಳೂ ನಾಮಾವಶೇಷವಾಗಿವೆ; ಈಜಿಸ್ತಸ್, ಏಜಾಕ್ಸ್, ಹರ್ಮಿಯನಿ ಇತ್ಯಾದಿ ಅಂಕಿತಗಳನ್ನು ನೋಡಿದರೆ ಆ ನಾಟಕಗಳು ಹೇಗಿದ್ದವೆಂದು ಕೊಂಚ ಊಹಿಸಬಹುದು. ಮೂರು ಹರ್ಷನಾಟಕಗಳ ತುಣುಕುಗಳು ಉಪಲಬ್ಧವಾಗಿವೆ. ಕವಿಶಕ್ತಿಯನ್ನು ಖಚಿತವಾಗಿ ಅಳೆಯುವುದಕ್ಕೆ ಆಸ್ಪದವಿಲ್ಲದಿದ್ದರೂ ಲಭ್ಯವಾಗಿರುವ ಅವನ ವಚನಗಳನ್ನು ಪರಿಶೀಲಿಸಿದರೆ ಸಿಸಿರೊನ ಅಭಿಪ್ರಾಯವನ್ನು ಸಮರ್ಥಿಸಬೇಕಾಗುತ್ತದೆ: ಆ್ಯಂಡ್ರಾನಿಕಸ್ಸನ ನಾಟಕಗಳು ಎರಡನೇ ಸಾರಿ ಓದುವುದಕ್ಕೆ ಅರ್ಹವಲ್ಲ.

ಅದು ಹೇಗಾದರೂ ಇರಲಿ, ವಿಶಿಷ್ಟವಾದೊಂದು ಗೌರವಕ್ಕೆ ಆ್ಯಂಡ್ರಾನಿಕಸ್ ಹಕ್ಕುದಾರ. ವಿದ್ವಾಂಸ ಡಬ್ಲ್ಯು.ವೈ.ಸೆಲ್ಲರ್ ವರ್ಣಿಸಿರುವಂತೆ ಆ್ಯಂಡ್ರಾನಿಕಸ್ ರೋಮನ್ ಜನರಿಗೆ ಉಪಾಧ್ಯಾಯನಾದ; ಅವರ ಸಾಹಿತ್ಯಕ್ಕೆ ಜನಕನಾಗಲಿಲ್ಲ. ಕಾರ್ತೇಜಿನೊಡನಾದ ಘೋರಸಂಗ್ರಾಮ ಮುಗಿದಾಗ ಪ್ರ.ಶ.ಪೂ.240ರಲ್ಲಿ, ಉಲ್ಲಾಸಗೊಂಡ ರೋಮನ್ನರು ಮಹೋತ್ಸವವನ್ನು ಏರ್ಪಡಿಸಿದರು. ಅದರ ಅಂಗವಾಗಿ ಆ್ಯಂಡ್ರಾನಿಕಸ್ ಗ್ರೀಕ್ ಮಾದರಿಯ ಒಂದು ಗಂಭೀರನಾಟಕವನ್ನೂ ಒಂದು ಹರ್ಷನಾಟಕವನ್ನೂ ರಚಿಸಿ, ತಾನೇ ಒಬ್ಬ ನಟನಾಗಿ ಅವನ್ನು ಪ್ರದರ್ಶಿಸಿದ. ಅದೊಂದು ದೊಡ್ಡ ಸಾಂಸ್ಕೃತಿಕ ಘಟನೆಯಾಗಿತ್ತು. ರೋಮನ್ ಸಂಸ್ಕೃತಿಯ ಚರಿತ್ರೆಯಲ್ಲಿ ಪ್ರ.ಶ.ಪೂ. 240 ಒಂದು ಪ್ರಧಾನ ವರ್ಷ. ರೋಮನ್ನರು ಕ್ರಮಬದ್ಧವಾದ ನಾಟಕವನ್ನು ಕಂಡದ್ದು ಆಗಲೇ. ನಡೆನುಡಿಯಲ್ಲಿ ಒರಟೊರಟಾಗಿ ಸಾಹಿತ್ಯ ಕಲೆಯಲ್ಲಿ ಹಿಂದಿದ್ದ ಅವರಿಗೆ, ಉಚ್ಚಮಟ್ಟ ಮುಟ್ಟಿದ್ದ ಗ್ರೀಕರ ಮೇಲ್ಪಂಕ್ತಿ ದೊರೆತದ್ದು ಅವರ ಪುಣ್ಯವಿಶೇಷ. ಅಲ್ಲಿಂದ ಮುಂದೆ ರೋಮನ್ನರ ಮೇಲೆ ಗ್ರೀಕರ ಪ್ರಭಾವ ಹೆಚ್ಚಾಯಿತು. ಹೋಮರನ ಭವ್ಯಕಾವ್ಯ ಒಡಿಸ್ಸಿಯನ್ನೂ ಆ್ಯಂಡ್ರಾನಿಕಸ್ ತರ್ಜುಮೆ ಮಾಡಿಕೊಟ್ಟ. ಅದು ಇನ್ನೂರು ಇನ್ನೂರೈವತ್ತು ವರ್ಷ ಶಾಲೆಯ ಪಠ್ಯಪುಸ್ತಕವಾಗಿತ್ತು. ಪ್ರ.ಶ.ಪೂ. 207ರಲ್ಲಿ ಗಾನ–ನರ್ತನಕ್ಕೆ ಯುಕ್ತವಾದ ದೇಶಭಕ್ತಿಯ ಪ್ರಗಾಥವನ್ನು ರಚಿಸುವ ಭಾರ ಅವನಮೇಲೆ ಬಿತ್ತು. ಅದರ ಫಲವಾಗಿಯೊ ಅಥವಾ ಇನ್ನೊಂದು ಪ್ರಗಾಥದ ಫಲವಾಗಿಯೊ ಕವಿಸಂಘಕ್ಕೆ ಅಧ್ಯಕ್ಷನಾಗುವ ಸೌಭಾಗ್ಯ ಅವನಿಗೆ ದಕ್ಕಿತು. (ಎಚ್.ಸಿ.ಕೆ.)

**ಆ್ಯಂಡ್ರಿಯ, ಪೆಲೇಡಿಯೊ :** 1508–80. ಇಟಲಿಯ ಶಿಲ್ಪಿ. ರೋಮಿನ ಪ್ರಾಚೀನ ಕಟ್ಟಡಗಳನ್ನು ಅಧ್ಯಯನ ಮಾಡಿ ತನ್ನ ಊರಾದ ವಿಸೆನ್‌ಸಾದಲ್ಲಿ ಶ್ರೀಮಂತರಿಗಾಗಿ ಅನೇಕ ಸುಂದರ ಕಟ್ಟಡಗಳನ್ನೂ ವೆನಿಸ್ ಪಟ್ಟಣದಲ್ಲಿ ಎರಡು ಚರ್ಚುಗಳನ್ನೂ ಕಟ್ಟಿದ. ವಾಸ್ತುಶಿಲ್ಪದ ಮೇಲೆ ಈತ ಬರೆದ (1570) ಗ್ರಂಥ ಯುರೋಪಿನ ವಾಸ್ತುಶಿಲ್ಪದ ಮೇಲೆ ವಿಶೇಷ ಪ್ರಭಾವ ಬೀರಿದೆ. ಈತ ಸರಕಟ್ಟು (ಟ್ರಸ್) ಎಂಬ ಹೊಸ ಮಾದರಿ ಚಾವಣಿಯನ್ನು ರೂಪಿಸಿದ. ಸರಕಟ್ಟಿನ ಮೇಲೆ ಬರುವ ಒಟ್ಟು ಸ್ಥಿರ ಮತ್ತು ಚರಭಾರಗಳನ್ನು ಕಂಡುಹಿಡಿದ. ಆದರೆ ಗಣಿತ, ಭೌತವಿಜ್ಞಾನಗಳ ನೆರವಿಲ್ಲದ್ದರಿಂದ ಸರಕಟ್ಟಿನ ಒಂದೊಂದು ಅಂಗದಲ್ಲೂ ಒತ್ತಡ ಅಥವಾ ಎಳೆತದ ತ್ರಾಸವನ್ನು ತಾತ್ತ್ವಿಕ ವಿಶ್ಲೇಷಣದಿಂದ ಲೆಕ್ಕಹಾಕಲು ಆಗ ಸಾಧ್ಯವಾಗಲಿಲ್ಲ. (ಎಚ್.ಸಿ.ಕೆ.)

**ಆ್ಯಂಡ್ರಿಸ್, ಸ್ಟೀಫನ್ :** 1906 . ಜರ್ಮನ್ ಕಾದಂಬರಿಕಾರ. 20ನೆಯ ಶತಮಾನದ ಅತ್ಯಂತ ಸತ್ತ್ವಶಾಲಿ ಜರ್ಮನ್ ಲೇಖಕರಲ್ಲಿ ಒಬ್ಬ. ಯಾವ ಒಂದು ಮತದ ಪ್ರತಿಪಾದನೆಯೂ ಇವನ ಉದ್ದೇಶವಲ್ಲದಿದ್ದರೂ ಇವನ ಬರೆಹಗಳಲ್ಲಿ ಒಂದು ದರ್ಶನ ಕಂಡುಬರುತ್ತದೆ. ಜಗತ್ತಿನ ಆಕರ್ಷಣೆಗಳ ಹಿಂದೆ ಒಂದು ನೈತಿಕ ವ್ಯವಸ್ಥೆಯಿದೆ; ಆಕಸ್ಮಿಕಗಳೆಂದು ತೋರುವ ಜೀವನದ ಘಟನೆಗಳಲ್ಲಿ ಸೂತ್ರಧಾರಿಯಾದ ದೈವಿಕಶಕ್ತಿಯೊಂದರ ಕೈವಾಡವಿದೆ; ಅವುಗಳ ಮೂಲಕ ನಮ್ಮನ್ನು ಮೇಲುಮೇಲಕ್ಕೆ ಕರೆದೊಯ್ಯುವುದೇ ದೇವರ ಉದ್ದೇಶ ಎಂಬುದು ಸ್ಟೀಫನ್ನನ ಅಭಿಪ್ರಾಯ. ವಾರ್ ಸಿಂಡ್ ಯುಟೋಪಿಯ (1942) ಅವನ ಕಾದಂಬರಿಗಳಲ್ಲೆಲ್ಲ ಅತ್ಯಂತ ಪ್ರಖ್ಯಾತವಾದುದು. ಸ್ಪೇನಿನ ಅಂತರ್ಯುದ್ಧದ ಫಲವಾಗಿ ತಲೆಯೆತ್ತಿದ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳು ಅದರ ಕಥೆಯ ಹಿನ್ನೆಲೆಯನ್ನು ಒದಗಿಸುತ್ತವೆ. ಸೈನ್ಯಕ್ಕೆ ಸೇರಿ ಆ ಯುದ್ಧದಲ್ಲಿ ಹೋರಾಡಿದ್ದ ಸನ್ಯಾಸಿಯೊಬ್ಬ ಯುದ್ಧ ಕೈದಿಯಾಗಿ ತಾನು ಬಿಟ್ಟುಹೋದ ಮಠಕ್ಕೇ ಕಳುಹಿಸಲ್ಪಡುತ್ತಾನೆ. ಅಲ್ಲಿ ಅವನಿಗೆ ನಿಜವಾದ ನೆಮ್ಮದಿಯ ಅನುಭವವಾಗುತ್ತದೆ. ನೀತಿತತ್ತ್ವಗಳು ಹಾಗೂ ಪ್ರಾಪಂಚಿಕ ಪ್ರಲೋಭನೆಗಳ ನಡುವಣ ಘರ್ಷಣೆ ಅವನ ಇತರ ಕೆಲವು ಕಾದಂಬರಿಗಳಲ್ಲೂ ಪ್ರತಿಪಾದಿತವಾಗಿದೆ. ವರ್ಣರಂಜಿತವಾದ ಜಗತ್ತು ಮತ್ತು ವೈವಿಧ್ಯಮಯವಾದ ಪಾತ್ರಸಂಕುಲ ಸ್ಟೀಫನ್ನನ ಕಾದಂಬರಿಗಳ ವೈಶಿಷ್ಟ್ಯ. (ಎಂ.ಆರ್.)

**ಆ್ಯಂಡ್ರೂಸ್, ಥಾಮಸ್ :** 1813–85. ಐರ್ಲೆಂಡಿನ ರಸಾಯನವಿಜ್ಞಾನಿ. ಗ್ಲಾಸ್ಗೊ, ಪ್ಯಾರಿಸ್‌ಗಳಲ್ಲಿ ರಸಾಯನವಿಜ್ಞಾನವನ್ನೂ ಎಡಿನ್‌ಬರೊದಲ್ಲಿ ವೈದ್ಯವಿಜ್ಞಾನವನ್ನೂ ಅಧ್ಯಯನ ಮಾಡಿದ. ಜನ್ಮಸ್ಥಳವಾದ ಬೆಲ್‌ಫಾಸ್ಟ್‌ನಲ್ಲೇ 1849–79ರ ವರೆಗೆ ರಸಾಯನವಿಜ್ಞಾನದ ಪ್ರಾಧ್ಯಾಪಕನಾಗಿದ್ದ. ಭೌತವಿಜ್ಞಾನದ ಒಂದು ಪ್ರಮುಖಭಾಗವಾದ ಅನಿಲದ್ರವೀಕರಣವನ್ನು ವಿಶೇಷವಾಗಿ ಅಧ್ಯಯಿಸಿದ. ಓಝೋನ್ ಅನಿಲ ಮತ್ತು ರಾಸಾಯನಿಕ ದಹನದಿಂದ ಉತ್ಪತ್ತಿಯಾಗುವ ಉಷ್ಣದ ಬಗ್ಗೆ ಹೆಚ್ಚಿನ ಕೆಲಸಮಾಡಿದ. *

**ಆ್ಯಂಡ್ರೂಸ್, ಸಿ. ಎಫ್. :** 1871–1940. ಗಾಂಧೀಜಿ, ಠಾಕೂರರ ಸಮಕಾಲೀನ ದೇಶಭಕ್ತ, ದೀನಬಂಧು ಎಂಬ ಜನಪ್ರಶಸ್ತಿಗೆ ಪಾತ್ರರಾದವರು. ಇಂಗ್ಲೆಂಡಿನ ಕಾರ್ಲೈಲ್‌ನಲ್ಲಿ ಜನನ. ಕೇಂಬ್ರಿಜ್‌ನಲ್ಲಿ ವಿದ್ಯಾಭ್ಯಾಸ. ಭಾರತಕ್ಕೆ ಪ್ರಥಮಬಾರಿ ಕಾಲಿಟ್ಟದ್ದು 20 ಮಾರ್ಚ್ 1904ರಂದು. ಈ ಸಂದರ್ಭವನ್ನು ಇವರು ತಮ್ಮ ಎರಡನೆಯ ಜನ್ಮ ಎಂದು ಕರೆದಿದ್ದಾರೆ.



ಆ್ಯಂಡ್ರೂಸ್‌ರವರ ಜೀವನದ ಮೇಲೆ ಪ್ರಭಾವ ಬೀರಿದ ಭಾರತೀಯರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಮೊದಲನೆಯವರೆಂದು ಹೇಳಬಹುದು. ಆ್ಯಂಡ್ರೂಸರು ಗೋಖಲೆಯವರ ಆದೇಶ, ಆಶೀರ್ವಾದಗಳನ್ನು ಪಡೆದು ದಕ್ಷಿಣ ಆಫ್ರಿಕ, ಫಿಜಿ ದ್ವೀಪಗಳು, ಬ್ರಿಟಿಷ್ ಗಯಾನ ಮೊದಲಾದ ಪ್ರದೇಶಗಳಿಗೆ ಭೇಟಿ ಇತ್ತು ಆ ಪ್ರದೇಶಗಳಲ್ಲಿನ ರಬ್ಬರ್ ಮತ್ತಿತರ ಪ್ಲಾಂಟೇಷನ್‌ಗಳಲ್ಲಿ ಹೆಚ್ಚು ಕಡಿಮೆ ಗುಲಾಮಗಿರಿಯಲ್ಲಿ ನರಳುತ್ತಿದ್ದ ಭಾರತೀಯ ಕೂಲಿಗಾರರ ನೆರವಿಗೆ ಧಾವಿಸಿದರು. ಅನ್ಯಾಯ, ದಬ್ಬಾಳಿಕೆಗಳ ವಿರುದ್ಧವಾಗಿ ಯಶಸ್ವಿಯಾಗಿ

ಹೋರಾಟ ನಡೆಸಿದರು. ಆ್ಯಂಡ್ರೂಸರ ಜೀವನದ ಮೇಲೆ ಹೆಚ್ಚು ಪ್ರಭಾವ ಬೀರಿದ ಮತ್ತೊಬ್ಬ ಭಾರತೀಯರೆಂದರೆ ರವೀಂದ್ರನಾಥ ಠಾಕೂರ್ ಅವರು. ಠಾಕೂರರ ವಿಷಯದಲ್ಲಿ ಆ್ಯಂಡ್ರೂಸರ ಗೌರವ ಅಪಾರವಾದ್ದರಿಂದ ಅವರನ್ನು ಗುರುದೇವ ಎಂದು ಕರೆದರು. ಆ್ಯಂಡ್ರೂಸರ ಜೀವನದಲ್ಲಿ ಗಾಂಧೀಜಿಯವರ ಪಾತ್ರವೂ ಉಲ್ಲೇಖಾರ್ಹ. ಅಹಿಂಸೆ ಮತ್ತು ಸತ್ಯಾಗ್ರಹ ಇವೆರಡ ಇಬ್ಬರೂ ಒಪ್ಪಿದ ಮತ್ತು ಅನುಸರಿಸಿದ ತತ್ತ್ವಗಳು. 1934ರಲ್ಲಿ ತಲೆದೋರಿದ ಬಿಹಾರದ ಭೂಕಂಪ, ಅದರ ಬೆನ್ನು ಹತ್ತಿಬಂದ ಮಹಾಕ್ಷಾಮ ಇವುಗಳ ನಿವಾರಣೆಗೆ ಕೈಗೊಂಡ ಕಾರ್ಯಕ್ರಮಗಳು ಇವರು ಮಾನವೀಯತೆಗೂ ನಿಸ್ವಾರ್ಥ ಸೇವಾಬುದ್ಧಿಗೂ ಅತ್ಯುತ್ಕೃಷ್ಟ ಸಾಕ್ಷಿಗಳು. ಆದ್ದರಿಂದಲೇ ಗಾಂಧೀಜಿ ಇವರನ್ನು ದೀನಬಂಧು ಎಂದು ಕರೆದರು. ಇಷ್ಟೇ ಅಲ್ಲದೆ, ಭಾರತೀಯರಲ್ಲಿ ತಲೆತಲಾಂತರದಿಂದ ಬೇರೂರಿದ್ದ ಅಸ್ಪೃಶ್ಯತೆ, ಬಾಲ್ಯ ವಿವಾಹ ಮೊದಲಾದ ಸಾಮಾಜಿಕ ರೋಗಗಳ ವಿರುದ್ಧ ಒಂದು ಕಡೆ, ಬಡತನದ ಶೋಷಣೆ ಮತ್ತು ದಾಸ್ಯದಲ್ಲಿ ನರಳುತ್ತಿದ್ದ ಭಾರತೀಯರ ಉನ್ನತಿಗಾಗಿ ಇನ್ನೊಂದು ಕಡೆ ಆ್ಯಂಡ್ರೂಸರು ಸದಾ ದುಡಿದು ಭಾರತೀಯರಿಂದ ಭಾರತಮಿತ್ರ ಎಂಬ ಹೆಮ್ಮೆಯ ಬಿರುದನ್ನು ಸಂಪಾದಿಸಿ ದರು. ಇಂಗ್ಲೆಂಡಿನಲ್ಲಿ ಜನಿಸಿದರೂ ಭಾರತದ ಜೀವನದಲ್ಲಿ ಸಂಪೂರ್ಣವಾಗಿ ಬೆರೆತು ಇಂಗ್ಲೆಂಡಿನ ಉತ್ತಮ ರೀತಿನೀತಿಗಳನ್ನು ಭಾರತದ ವಾತಾವರಣ ದಲ್ಲಿ ಸಮಾವೇಶಗೊಳಿಸಿ ದರು. ಇವರ 36 ವರ್ಷಗಳ ತ್ಯಾಗಮಯ ಜೀವನ ಭಾರತದಲ್ಲಿ ಭಾರತಕ್ಕಾಗಿ ವಿನಿಯೋಗವಾ ಯಿತಲ್ಲದೆ ಇವರು ಭಾರತ ಭೂಮಿಯಲ್ಲೇ ಅಸುನೀಗಿದರು.

(ಎಚ್.ಆರ್.ಆರ್.)

**ಆ್ಯಂಡ್ರೇಡ್, ಎಡ್ವರ್ಡ್ ನೆವಿಲ್ ದ ಕಾಸ್ಟ :** ಇಂಗ್ಲೆಂಡಿನ ಭೌತವಿಜ್ಞಾನಿ. ಲಂಡನ್, ಹೈಡೆಲ್‌ಬರ್ಗ್, ಕೇಂಬ್ರಿಜ್ ಮತ್ತು ಮ್ಯಾಂಚೆಸ್ಟರ್‌ಗಳಲ್ಲಿ ಶಿಕ್ಷಣ ಪಡೆದು, ವೂಲ್‌ಪಿಚ್‌ನಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕನಾದ. 1928ರಲ್ಲಿ ಲಂಡನ್ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕನಾಗಿ ಸೇರಿದ. 1935ರಲ್ಲಿ ಈತನಿಗೆ ಎಫ್.ಆರ್.ಎಸ್. ಗೌರವ ದೊರಕಿತು. ಪರಮಾಣು ರಚನೆಗೆ ಸಂಬಂಧಿಸಿದಂತೆ ಈತ ಮಾಡಿದ ಕೆಲಸ ಇವನಿಗೆ ಖ್ಯಾತಿಯನ್ನು ತಂದಿದೆ. 1950ರಲ್ಲಿ ರಾಯಲ್ ಇನ್‌ಸ್ಟಿಟ್ಯೂಟ್ ಮತ್ತು ಡೇವಿ–ಫ್ಯಾರಡೆ ಪ್ರಯೋಗಶಾಲೆಯ ನಿರ್ದೇಶಕನಾದ. ದಿ ಸ್ಟ್ರಕ್ಚರ್ ಆಫ್ ದಿ ಆ್ಯಟಂ ಮುಂತಾದ ಪುಸ್ತಕಗಳನ್ನು ಬರೆದಿದ್ದಾನೆ.

**ಆ್ಯಂಡ್ರಾಮಿಡ :** ಗ್ರೀಕ್ ಪುರಾಣದಲ್ಲಿ ಇಥಿಯೋಪಿಯದ ರಾಜಕುಮಾರಿ; ಆಕಾಶದಲ್ಲಿ ಒಂದು ನಕ್ಷತ್ರಪುಂಜದ (ಕಾನ್‌ಸ್ಟಲೇಷನ್) ಮತ್ತು ಅದೇ ವಲಯದಲ್ಲಿರುವ ಸುಪ್ರಸಿದ್ಧ ನೆಬ್ಯುಲದ ಹೆಸರು. ಪುರಾಣದ ಪ್ರಕಾರ ಈಕೆಯ ತಾಯಿ ಕೆಶ್ಶಿಯೋಪಿಯ (ನೋಡಿ– ಕೆಶ್ಶಿಯೋಪಿಯ). ತನ್ನ ಸೌಂದರ್ಯದಿಂದ ಮತ್ತಳಾಗಿ ಸಮುದ್ರರಾಜನ ಮಗಳಂದಿರಾದ ನೀರೇಯ್ಡ್ ಸಹೋದರಿಯರಿಗಿಂತಲೂ ತಾನು ಸುಂದರಿ ಎಂದು ಘೋಷಿಸಿದಳು. ಈ ಅಪಮಾನದ ಸೇಡು ತೀರಿಸಲು ಸಮುದ್ರರಾಜ ಪೋಸಿಡನ್ ಪ್ರಳಯ ಸಮುದ್ರತರಂಗಗಳಿಂದ ಇಥಿಯೋಪಿಯವನ್ನು ನಾಶಮಾಡತೊಡಗಿದ ಮತ್ತು ಸಿಟಸ್ ಹೆಸರಿನ ಭೀಕರ ಪ್ರಾಣಿಯನ್ನು ರಾಜ್ಯದ ಮೇಲೆ ಎರಗಲು ಅಟ್ಟಿದ. ಆ್ಯಂಡ್ರಾಮಿಡಳ ತಂದೆ ಸಿಫಿಯಸ್ ರಾಜ ಈ




ಉತ್ಪಾತಪರಂಪರೆಯಿಂದ ಕಂಗೆಟ್ಟು ಪರಿಹಾರಾರ್ಥ ಝಿಯನ್ ಅವಮ್ಮಾಮ್‌ನ ದಿವ್ಯವಾಣಿಯ ಮೊರೆಹೊಕ್ಕ. ಅದರ ಆದೇಶದ ಪ್ರಕಾರ ಆ್ಯಂಡ್ರಾಮಿಡಳನ್ನು ಸರಪಳಿಗಳಿಂದ ಬಂಧಿಸಿ ಸಿಟಸ್‌ಗೆ ಬಲಿಯಾಗಿ ಒಪ್ಪಿಸಿದ. ದುಃಖಾರ್ತ ಆ್ಯಂಡ್ರಾಮಿಡಳ ಹಲುಬುವಿಕೆ, ಅದೇ ವೇಳೆಯಲ್ಲಿ ಗಗನಗಾಮಿಯಾಗಿದ್ದ ಸುಂದರ ವೀರ ಪರ್ಸಿಯಸ್‌ನ (ನೋಡಿ) ಗಮನವನ್ನು ಆ ಕಡೆಗೆ ಸೆಳೆಯಿತು. ಆ್ಯಂಡ್ರಾಮಿಡಳಲ್ಲಿ ಪ್ರೇಮಪರವಶನಾದ ಪರ್ಸಿಯಸ್ ಆಕೆಯೊಡನೆ ವಿವಾಹವಾಗಲು ಸಿಫಿಯಸ್‌ನ ಅನುಮತಿ ಪಡೆದು ಕ್ರೂರಪ್ರಾಣಿ ಸಿಟಸ್ ಅನ್ನು ಸಂಹರಿಸಿದ. ಮುಂದೆ ಆ್ಯಂಡ್ರಾಮಿಡ ಪರ್ಸಿಯಸ್‌ರ ವಿವಾಹ ನೆರವೇರಿತು.

ಈ ನಾಟಕದ ಪಾತ್ರಧಾರಿಗಳಾದ ಆ್ಯಂಡ್ರಾಮಿಡ, ಕೆಶ್ಶಿಯೋಪಿಯ, ಸಿಫಿಯಸ್, ಸಿಟಸ್, ಪರ್ಸಿಯಸ್ ಇದರ ಹೆಸರುಗಳನ್ನು ಆಕಾಶದ ವಿವಿಧ ನಕ್ಷತ್ರಪುಂಜಗಳಿಗೆ ನೀಡಲಾಗಿದೆ. ಆ್ಯಂಡ್ರಾಮಿಡ ನಕ್ಷತ್ರಪುಂಜ ಉತ್ತರಾಕಾಶದಲ್ಲಿ ಪರ್ಸಿಯಸ್ ಮತ್ತು ಕೆಶ್ಶಿಯೋಪಿಯ ಪುಂಜಗಳ ನಡುವೆ ಇದೆ. ಇದರಲ್ಲಿ ಹೆಸರಿಸುವಂಥ ಪ್ರಕಾಶಮಾನ ಬಿಡಿ ನಕ್ಷತ್ರಗಳಿಲ್ಲ. ಆದರೆ ಇದೇ ವಲಯದಲ್ಲಿ ಅತಿ ದೂರದಲ್ಲಿರುವ ನೆಬ್ಯುಲಕ್ಕೆ ಆ್ಯಂಡ್ರಾಮಿಡ ನೆಬ್ಯುಲವೆಂದೇ ಹೆಸರು. ಆಕಾಶದಲ್ಲಿ ಬರಿಗಣ್ಣಿಗೆ ಕಾಣಿಸುವ ಪರಮಾವಧಿ ದೂರದ ಮಿತಿ ಈ ನೆಬ್ಯುಲ. ಮಸಕುಬೆಳಕಿನ ಮಚ್ಚೆಯಂತೆ ತೋರುವ ಇದರ ದೂರ ಸು. 2,000,000 ಜ್ಯೋತಿರ್ವರ್ಷಗಳು. ಚಾರ್ಲ್ಸ್ ಮೆಸ್ಸಿಯರ್‌ನ ಆಕಾಶಕಾಯಗಳ ಪಟ್ಟಿಯಲ್ಲಿ ಆ್ಯಂಡ್ರಾಮಿಡ ನೆಬ್ಯುಲದ ಸ್ಥಾನ ಸೂಚ್ಯಂಕ 31 ಆಗಿದ್ದುದರಿಂದ ಈ ನೆಬ್ಯುಲವನ್ನು M 31 ಎಂದೇ ಕರೆಯುವುದು ರೂಢಿಯಾಗಿದೆ. M 31 ಆವರ್ತಿಸುತ್ತಿದೆ. ಇದರ ಆಕಾರ ಸುರುಳಿಯಂತೆ. ಇದರಲ್ಲಿ ಸು. 100 ಬಿಲಿಯನ್ (1 ಬಿ=1 ಮಿಲಿಯನ್ ಮಿಲಿಯನ್) ನಕ್ಷತ್ರಗಳಿರಬಹುದೆಂದು ಅಂದಾಜು. ಒಂದರಿಂದ ಇನ್ನೊಂದು ದೂರವಾಗಿ ಧಾವಿಸುತ್ತಿರುವ ಆಕಾಶದಲ್ಲಿ ಇತರ ಎಲ್ಲ ಬ್ರಹ್ಮಾಂಡಗಳಿಗಿಂತ (ನಕ್ಷತ್ರ, ನೆಬ್ಯುಲ ಮುಂತಾದ ಆಕಾಶಕಾಯಗಳ ಮಹಾಸಮುದಾಯ ಬ್ರಹ್ಮಾಂಡ-ಗ್ಯಾಲಕ್ಸಿ) ಭಿನ್ನವಾಗಿ M 31 ಮಾತ್ರ ಸೌರವ್ಯೂಹದೆಡೆಗೆ ಚಲಿಸುತ್ತಿದೆ. 100ಕ್ಕಿಂತಲೂ ಹೆಚ್ಚು ನೋವಾಗಳನ್ನು M 31 ರಲ್ಲಿ ಗುರುತಿಸಲಾಗಿದೆ. ಈ ನೆಬ್ಯುಲ ರೇಡಿಯೊ ತರಂಗೋತ್ಪಾದನ ಕೇಂದ್ರವೂ ಹೌದು.

**ಆಂಡಯ್ಯ :** ಸು. 1217. ಜೈನಕವಿ. ಕಬ್ಬಿಗರ ಕಾವಂ ಎಂಬ ಚಂಪೂಕಾವ್ಯದ ಕರ್ತೃ. ಇದರಲ್ಲಿ ನಡುನಡುವೆ ಬರುವ ಸಣ್ಣ ಸಣ್ಣ ಗದ್ಯ ಖಂಡಗಳ ಜೊತೆಗೆ ವೃತ್ತಗಳೂ ಕಂದಗಳೂ ಕೂಡಿ ಒಟ್ಟು 272 ಪದ್ಯಗಳಿವೆ.

ಕನ್ನಡ ಸಾಹಿತ್ಯದಲ್ಲಿ ಕಬ್ಬಿಗರ ಕಾವಂ ಒಂದು ವಿಶಿಷ್ಟ ಕೃತಿ. ಸಂಸ್ಕೃತದ ಸಹಾಯವನ್ನು ಪಡೆಯದೆ ಕೇವಲ ತದ್ಭವ ಪದಗಳನ್ನೂ ದೇಸೀ ನುಡಿಗಳನ್ನೂ ಬಳಸಿಕೊಂಡು ಈ ಕೃತಿಯನ್ನು ರಚಿಸಲಾಗಿದೆ. ಇಲ್ಲಿ ಬರುವ ಶಿವ–ಮನ್ಮಥರ ಕಥೆಯ ಎಳೆ ನಮ್ಮ ಪುರಾಣಗಳಲ್ಲಿ ದೊರೆಯುವಂಥದೇ. ಆದರೆ ಕವಿ ಮಾಡಿಕೊಂಡ ಮಾರ್ಪಾಟು ಬೇರ್ಪಾಟುಗಳಿಂದ ಒಂದು ರೀತಿಯ ನವ್ಯತೆ ಇದಕ್ಕೆ ಒದಗಿದೆ. ಈ ಕೃತಿಯನ್ನು ಸೂಕ್ಷ್ಮವಾಗಿ ನೋಡಿದವರಿಗೆ ಕಾಮದೇವ ಎಂಬ ಹೆಸರಿನ ಒಬ್ಬ ಕದಂಬ ದೊರೆಯನ್ನು ಪುರಾಣಕಥೆಯ ಕಾಮದೇವ ನೊಡನೆ ಏಕೀಭವಿಸಿ ಸಮಕಾಲೀನ ಚರಿತ್ರೆಯ ಘಟನೆಗಳನ್ನು ಸೂಚಿಸಿರುವುದು ತಿಳಿಯುತ್ತದೆ. ಸ್ಮರತತ್ತ್ವ, ಶಿವತತ್ತ್ವ, ಜಿನತತ್ತ್ವಗಳು ಒಂದಕ್ಕಿಂತ ಒಂದು ಮಿಗಿಲು ಎಂಬ ಒಂದು ದರ್ಶನ ಧ್ವನಿ ಈ ಕಾವ್ಯದಲ್ಲಿ ಇದೆ ಎಂದು ಹೇಳುತ್ತಾರೆ. ವಸ್ತು ಪಾತ್ರ ರಸ ಇವುಗಳ ಆವಿಷ್ಕಾರದಲ್ಲಿ ಒಂದು ವಿನೂತನವಾದ ಚಿತ್ರಶಕ್ತಿ ಕಾಣಬರುತ್ತದೆ. ಕನ್ನಡ ನಾಡುನುಡಿಗಳ ಸಂಬಂಧದ ಪ್ರೀತ್ಯಾದರಗಳ ರಮ್ಯ ಪ್ರಕಾಶದಿಂದ ಈ ಕೃತಿ ದೀಪ್ತವಾಗಿದೆ. ಈ ಎಲ್ಲ ಗುಣಗಳಿಂದಾಗಿ ಕಬ್ಬಿಗರ ಕಾವಂ ಎಂಬುದು ಕನ್ನಡ ಸಾಹಿತ್ಯದಲ್ಲೇ ವಿಶಿಷ್ಟಕೃತಿಯಾಗಿದೆ.

ಧರ್ಮಶ್ರದ್ಧೆ, ನೀತಿ ನಿಷ್ಠೆ, ದೈವ ಭಕ್ತಿ, ಕಾವ್ಯ–ಶಾಸ್ತ್ರ ವಿನೋದಾದಿ ಗುಣಗಳಿಗೆ ಕವಿಯ ಮನೆತನ ಹೆಸರಾದದ್ದು. ಅವನಲ್ಲಿ ಈ ಸದ್ಗುಣಗಳೆಲ್ಲವೂ ರಕ್ತಗತವಾಗಿ ಬೆಳೆದು ಬಂದಿದ್ದವು. ತವರು ನೆಲ, ತಾಯಿನುಡಿ, ಬಳಿಯದೈವ – ಈ ಮೂರನ್ನು ಕುರಿತು ಈ ಕವಿಯ ಒಲವು ಅಪಾರ. ಕವಿ ಬನವಾಸಿಯ ಪ್ರಾಂತ್ಯದಲ್ಲಿದ್ದಿರಬೇಕು. ರಾಜಾಶ್ರಯವಿದ್ದುದಾ ದರೆ ಅದು 1180–1217ರ ಅವಧಿಯಲ್ಲಿ ಆಳಿದ ಕದಂಬ ದೊರೆ ಕಾಮದೇವನದ್ದೇ.

ಆಂಡಯ್ಯ ತನ್ನ ಕೃತಿಗೆ ಕಾವನ ಗೆಲ್ಲಂ (ಮದನ ವಿಜಯ, ಕಾಮದೇವನ ವಿಜಯ ಎಂದು ಅರ್ಥ) ನಾಮಕರಣ ಮಾಡಿದ್ದಾನೆ. ಇದರ ಇನ್ನೊಂದು ಹೆಸರಾದ ಕಬ್ಬಿಗರ ಕಾವಂ ಎಂಬುದು (ಸಂಸ್ಕೃತದ ಸಹಾಯವಿಲ್ಲದೆ ಅಚ್ಚ ಕನ್ನಡದಲ್ಲಿ ಬರೆದು ಕವಿಗಳನ್ನು ಕಾಪಾಡಿದವನು ಎಂಬ ಅರ್ಥ) ಕಾರಣಾಂತರಗಳಿಂದ ತಲೆಮಾರುಗಳಿಂದ ಸಂಪ್ರದಾಯ ವಶವಾಗಿ ಬಹು ಜನಪ್ರಿಯವಾಗಿ ನೆಲೆ ನಿಂತ ಹೆಸರು ಎಂದು ವಿದ್ವಾಂಸರು ಈಚೆಗೆ ನಿರ್ಣಯಿಸಿದ್ದಾರೆ.

ಕಥಾಸಾರ ಸ್ಥೂಲವಾಗಿ ಹೀಗಿದೆ: ಪೂವಿನ ಪೊಳಲಿನ ನನೆವಿಲ್ಲನೆಂಬ ದೊರೆ ಕನಸಿನಲ್ಲಿ ಕಂಡ ಅಪ್ಸರೆಯನ್ನೇ ಎಚ್ಚತ್ತು ವನವಿಹಾರದಲ್ಲಿ ಕಂಡಾಗ ಆಕೆ ಹೇಳಿದ ಕಥೆಯಿಂದ ತನ್ನ ನಿಜಸ್ಥಿತಿಯನ್ನು ಅರಿಯುತ್ತಾನೆ. ಆಕೆ ಹೇಳಿದ ಆ ಕಥೆ ಹೀಗಿದೆ: ಕಂಪಿನಪೊಳಲಿನ ಕರ್ವುವಿಲ್ಲನಿಗೆ ತನ್ನ ಪರಿವಾರದ ಚಂದ್ರನನ್ನು ಶಿವ ಕದ್ದೊಯ್ದನೆಂಬ ಸುದ್ದಿ ಬರುತ್ತದೆ. ಚಂದ್ರನ ಬಿಡುಗಡೆಗಾಗಿ ಕರ್ವುವಿಲ್ಲ ಕಳುಹಿಸಿದ ತಂಗಾಳಿಯ ದೌತ್ಯ ವಿಫಲವಾಗುತ್ತದೆ. ಕರ್ವುವಿಲ್ಲ ಸೇನಾಸಹಿತನಾಗಿ ಶಿವನ ಮೇಲೆ ಏರಿ ಹೋಗುವಾಗ ದಾರಿಯಲ್ಲಿ ಕಂಡ ಸವಣನೊಬ್ಬನಿಗೆ ಕೈಮುಗಿದು ಸಾಗುತ್ತಾನೆ. ಕರ್ವುವಿಲ್ಲನ ಸೇನೆ ವೀರಭದ್ರನ ನಾಯಕತ್ವದಲ್ಲಿ ಹೋರಿದ ಶಿವಸೇನೆಯನ್ನು ಸೋಲಿಸುತ್ತದೆ. ಕಡೆಗೆ ಶಿವನಿಗೂ ಕರ್ವುವಿಲ್ಲನಿಗೂ ಯುದ್ಧವಾಗಿ ಕರ್ವುವಿಲ್ಲನ ಅಂಬಿನಿಂದ ಶಿವನು ಅರೆವೆಣ್ಣಾಗುತ್ತಾನೆ. ಶಿವನ ಶಾಪದಿಂದ ಕರ್ವುವಿಲ್ಲನಿಗೆ ಪತ್ನಿಯ ಅಗಲಿಕೆಯುಂಟಾಗಿ ತನ್ನರಿವೇ ತನಗೆ ಮರೆತುಹೋಗುವಂಥ ಸ್ಥಿತಿ ಒದಗುತ್ತದೆ. ಈ ಕಥೆ ಹೇಳಿದ ಅಪ್ಸರೆ ನನೆವಿಲ್ಲನೇ ಕರ್ವುವಿಲ್ಲನೆಂಬುದನ್ನೂ ತಿಳಿಸಿ ಶಾಪವಿಮೋಚನೆ

ಯಾದುದನ್ನೂ ನಿರೂಪಿಸಿ ಮತ್ತೆ ಮಾಯವಾಗುತ್ತಾಳೆ. ನನೆವಿಲ್ಲನಾಗಿದ್ದ ಕರ್ವುವಿಲ್ಲ ತನ್ನಸತಿ ಇಚ್ಛೆಗಾರ್ತಿಯನ್ನು ಕೂಡಿ ಸುಖದಿಂದಿರುತ್ತಾನೆ. ಸೊಗವಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇಟಲಾಱರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕಬ್ಬಿಗರದು ಮಾತನಾಡಿದವೊಲಂದವನಾಳ್ದಿರೆ ಬಲ್ಲು ನೆಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ ಎಂದು ತಮತಮಗೆ ಬಲ್ಲವರೆಂದೊಡೆನಾನವರ ಬಯಕೆಯಂ ಸಲಿಸುವೆನಿನ್ನೆಂದಚ್ಚಗನ್ನಡಂ ಬಿಗಿವೊಂದಿರೆ ಕಬ್ಬಿಗರ ಕಾವನೊಲವಿಂದೊರೆದೆ ಎಂದು ಹೇಳಿ ಆಂಡಯ್ಯ ತನ್ನ ಕಾವ್ಯಕ್ಕೆ ಪ್ರೇರಣೆ ಹೇಗೆ ಬಂದಿತೆಂಬುದನ್ನು ತಿಳಿಸಿದ್ದಾನೆ. ದೇಸೆ ಪೊದಟ್ಟುದೆ, ಕೊಂಕು ತೀವೆ ತಾನು ಕಾವ್ಯವನ್ನು ಬರೆವುದಾಗಿ ಹೇಳಿದ್ದಾನೆ.

ಪಲವು ನಾಲಗೆಯುಳ್ಳವಂ ಬಗೆವೊಡೆಂದುಬಣ್ಣಿಸಲ್ಕಾಱನ್ ಆ ನೆಲನಂ ಮತ್ತಿನ ಮಾನಿಸರ್ ಪೊಗಳಲ್ ಏನಂ ಬಲ್ಲರ್....ಕನ್ನಡಮೆನಿಪ್ಪಾನಾಡು ಚಲ್ವಾಯ್ತು ಮೆಲ್ಲೆಲರಿಂಪೂತ ಕೊಳಂಗಳಿಂ ಕಾಲೂರ್ಗಳಿಂ ಕೆಯ್ಗಳಿಂ– ಹೀಗೆಂಬುದಾಗಿ ಪ್ರಾರಂಭಮಾಡಿ ಕವಿ ತನ್ನ ನಾಡುನುಡಿಗಳನ್ನು ವಿಪುಲವಾಗಿ ಬಣ್ಣಿಸಿದ್ದಾನೆ. ಆಂಡಯ್ಯನ ತವರುನೆಲದ ತವರುನುಡಿಯ ಕವಡರಿಯದ ಮಮತೆ ಕಾವ್ಯದ ಉದ್ದಕ್ಕೂ ಕಂಡುಬಂದು ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತದೆ. (ಎಸ್.ವಿ.ಪಿ.)

**ಆಂಡಾಳ್ :** ಸು. 8–9ನೆಯ ಶತಮಾನ. ಶ್ರೀ ವೈಷ್ಣವ ಪಂಥದ ತಮಿಳುನಾಡಿನ ಹನ್ನೆರಡು ಆಳ್ವಾರರಲ್ಲಿ ಏಕೈಕ ಸ್ತ್ರೀ ಆಳ್ವಾರ್; ಸಂತಳು. ಕಾಲ ರಾಮಾನುಜಾಚಾರ್ಯರಿಗೆ ಪೂರ್ವದಲ್ಲಿ ಶ್ರೀ ವಿಲ್ಲಿಪುತ್ತೂರಿನಲ್ಲಿ ಅಯೋನಿಜೆಯಾಗಿ ತುಳಸೀವನದಲ್ಲಿ ಅವತರಿಸಿ ದವಳು. ಮತ್ತೊಬ್ಬ ಆಳ್ವಾರರಾದ ಪೆರಿಯಾಳ್ವಾರ್ ಅಥವಾ ವಿಷ್ಣುಚಿತ್ತರೆಂಬ ಸಂತರು ಇವಳನ್ನು ಸಾಕಿ ಸಲಹಿದರು. ಗೋದಾ ಎಂದೂ ಈಕೆಯನ್ನು ಕರೆಯುತ್ತಿದ್ದರು. ಈಕೆ ತನ್ನ ಪ್ರೇಮವನ್ನು ಶ್ರೀರಂಗದ ರಂಗನಾಥ ಭಗವಂತನಲ್ಲಿ ನೆಟ್ಟಳು. ಅವನನ್ನೇ ತನ್ನ ಪತಿಯೆಂದು ಅಂಗೀಕರಿಸಿ ಯಾವ ನರನನ್ನೂ ಮದುವೆಯಾಗುವುದಿಲ್ಲವೆಂದು ಹಟ ಹಿಡಿದಳು. ಶ್ರೀರಂಗದ ರಂಗನಾಥನಿಗೇ ಇವಳನ್ನು ಮದುವೆ ಮಾಡಿಕೊಟ್ಟರು. ಈಕೆ ತನ್ನ ಭಗವತ್ಪ್ರೇಮವನ್ನು ಎರಡು ಸುಂದರವಾದ ತಮಿಳು ಪ್ರಬಂಧಗಳಲ್ಲಿ ಹೊರಸೂಸಿದ್ದಾಳೆ. ತಾನು ಮುಡಿದ ಹೂವನ್ನೇ ಭಗವಂತನಿಗೆ ಭಕ್ತಿಯಿಂದ ಆಂಡಾಳ್ ಅರ್ಪಿಸುತ್ತಿದ್ದುದರಿಂದ ಕೊಟ್ಟಿ ಕುಡುತ್ತ ನಾಚ್ಚಿಯಾರ್ ಎಂದು ಆಕೆ ಪ್ರಸಿದ್ಧಳಾದಳು. ಒಂದು ಪ್ರಬಂಧದ ಹೆಸರು ತಿರುಪ್ಪಾವೈ. ಮತ್ತೊಂದರ ಹೆಸರು ನಾಚ್ಚಿಯಾರ್ ತಿರುಮೊಳಿ. ಇವರೆಡು ಕಾವ್ಯಗಳಲ್ಲೂ ಕಾಮವೆಂಬ ಕಬ್ಬಿಣ ಭಕ್ತಿಯ ರಸವಿದ್ಯೆಯಿಂದ ಹೇಗೆ ಪ್ರೇಮವಾಗಿ ಪರಿಣಮಿಸಿತೆಂಬ ಪವಾಡವನ್ನು ಕಾಣುತ್ತೇವೆ. ಇಂದಿಗೂ ಶ್ರೀ ವೈಷ್ಣವ ಪಂಥದ ಅನುಯಾಯಿಗಳು ದೇವಸ್ಥಾನ ಗಳಲ್ಲಿ ಆಂಡಾಳನ್ನು ವಿಗ್ರಹರೂಪದಲ್ಲಿ ಪೂಜಿಸುತ್ತಾರೆ. ಮಾರ್ಗಶೀರ್ಷಮಾಸದ 30 ದಿನಗಳೂ ಈಕೆಯ ತಿರುಪ್ಪಾವೈ ಹಾಡನ್ನು ಹೇಳಿಕೊಂಡು ಭಜನೆ, ಕೀರ್ತನೆ ಮಾಡುವ ಪದ್ಧತಿ ಇಂದಿಗೂ ನಡೆದುಬರುತ್ತಿದೆ. (ಎಂ.ವೈ.)

**ಆ್ಯಂತೋಸಯನಿನ್‌ಗಳು :** ನೈಸರ್ಗಿಕ ಸಸ್ಯಜನ್ಯ ವರ್ಣದ್ರವ್ಯಗಳು. ರಾಸಾಯನಿಕ ವಾಗಿ ಗ್ಲೈಕೊಸೈಡುಗಳೆಂಬ ವರ್ಗಕ್ಕೆ ಸೇರಿದ ಸಂಯುಕ್ತಗಳು. ಇವುಗಳಲ್ಲಿ ಸಕ್ಕರೆಯ ಭಾಗವೊಂದಿರುತ್ತದೆ.ಉಳಿದ ಭಾಗವೇ ಬಣ್ಣವನ್ನುಂಟುಮಾಡಲು ಕಾರಣ. ಆ್ಯಂತೋಸಯನಿನ್ ಗಳು ಸಸ್ಯದ ಜೀವರಸದಲ್ಲಿದ್ದುಕೊಂಡು, ಹೂಗಳ ವರ್ಣವೈವಿಧ್ಯಕ್ಕೆ ಮುಖ್ಯವಾಗಿ ಕೆಂಪು, ನೀಲಿ ಮತ್ತು ನೇರಳೆ ಬಣ್ಣಗಳು ಮತ್ತು ಅವುಗಳ ಎಲ್ಲ–ಛಾಯೆಗಳಿಗೆ ಕಾರಣವಾಗಿವೆ. ವಿಲ್‌ಸ್ಟೆಟರ್ ಮತ್ತು ಸಹೋದ್ಯೋಗಿಗಳ ನಿರಂತರ ಶ್ರಮದಿಂದ ಕೆಳಕಂಡ ಅಂಶಗಳು ಸ್ಥಿರಪಟ್ಟಿವೆ : i ಹೂಗಳಲ್ಲಿ ತೋರಿಬರುವ ಎಲ್ಲ ಬಣ್ಣಗಳಿಗೂ ಮತ್ತು ಅವುಗಳ ಛಾಯೆಗಳಿಗೂ ಕೆಲವು ಸಂಯುಕ್ತಗಳು ಮಾತ್ರ ಕಾರಣ; ii. ಈ ವರ್ಣಕಾರಕ ಸಂಯುಕ್ತಗಳಲ್ಲಿ ಇರುವ ಇಂಗಾಲದ ಚೌಕಟ್ಟು ಒಂದೇ ಆಗಿರುತ್ತದೆ; iii ಆ ಚೌಕಟ್ಟಿನಲ್ಲಿ ನಿರ್ದಿಷ್ಟಸ್ಥಾನಗಳಲ್ಲಿರುವ ಗುಂಪುಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ. ಆ್ಯಂತೋಸಯನಿನ್‌ಗಳು ಆಂಫೊಟೆರಿಕ್ ವಸ್ತುಗಳಾದ್ದರಿಂದ ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಸ್ವಭಾವಗಳೆರಡನ್ನೂ ಪ್ರದರ್ಶಿಸುತ್ತವೆ. ಸಾಮಾನ್ಯವಾಗಿ ಅವುಗಳ ಆಮ್ಲೀಯ ಲವಣಗಳು ಕೆಂಪಾಗಿಯೂ ಲೋಹ ಲವಣಗಳು ನೀಲಿಯಾಗಿಯೂ ಮತ್ತು ತಟಸ್ಥ ವಾತಾವರಣವಿರುವ ದ್ರಾವಣದಲ್ಲಿ ನೇರಳೆ ಬಣ್ಣವನ್ನೂ ಹೊಂದಿರುತ್ತವೆ.

ಆ್ಯಂತೋಸಯನಿನ್‌ಗಳಲ್ಲಿರುವ ಸಕ್ಕರೆಯ ಭಾಗ ಸಾಮಾನ್ಯವಾಗಿ ಗ್ಲೂಕೋಸ್, ಗ್ಯಾಲಕ್ಟೋಸ್ ಅಥವಾ ರ್‍ಯಾಮ್ನೋಸ್ ಆಗಿರುತ್ತದೆ. ಕೆಲವು ವರ್ಣದ್ರವ್ಯಗಳಲ್ಲಿ ಆಮ್ಲೀಯ ಭಾಗವೂ ಇರುವುದುಂಟು. ಆ್ಯಂತೋಸಯನಿನ್‌ಗಳಲ್ಲಿರುವ ಆಮ್ಲಗಳೆಂದರೆ, ಮೆಲೋನಿಕ್, ಪ್ಯಾರಾಹೈಡ್ರಾಕ್ಸಿ ಬೆಂಜೋಯಿಕ್, ಪ್ಯಾರಾಹೈಡ್ರಾಕ್ಸಿ ಸಿನಮಿಕ್ ಮತ್ತು ಪ್ಯಾರಾಕುಮರಿಕ್ ಆಮ್ಲಗಳು. ಆಮ್ಲೀಯ ಭಾಗ ಫೀನಾಲಿಕ್ ಹೈಡ್ರಾಕ್ಸಿಲ್ ಗುಂಪಿಗೆ ಅಥವಾ ಸಕ್ಕರೆಯ ಭಾಗಕ್ಕೆ ಜೋಡಣೆಯಾಗಿರುತ್ತದೆ. ಆ್ಯಂತೋಸಯನಿನ್‌ಗಳನ್ನು ಬೇರ್ಪಡಿಸದೆ ಅವುಗಳನ್ನು ಗುರುತಿಸಲು, ರಾಬಿನ್‌ಸನ್ ಅನೇಕ ಗುಣ ಪರೀಕ್ಷಾ ಪ್ರಯೋಗಗಳನ್ನು ಬಳಕೆಗೆ ತಂದಿದ್ದಾನೆ. ಅವು ಹೀಗಿವೆ: i. ಅಲ್ಪ ಪ್ರಮಾಣದ ಫೆರಿಕ್ ಕ್ಲೋರೈಡ್ ಇರುವ ಸೋಡಿಯಂ ಅಸಿಟೇಟಿನ ಸಮಕ್ಷಮದಲ್ಲಿ, ಅಮೈಲ್ ಆಲ್ಕೋಹಾಲ್‌ನಲ್ಲಿ ವರ್ಣದ್ರವ್ಯವನ್ನು ವಿಲೀನ ಮಾಡಿದರೆ, ಸಯನಿಡಿನ್ ನೀಲಿ ಬಣ್ಣವನ್ನೂ ಡೆಲ್ಫಿನಿಡಿನ್ ಅದಕ್ಕಿಂತ ತಿಳಿಯಾದ ನೀಲಿ ಬಣ್ಣವನ್ನೂ ಕೊಡುತ್ತವೆ. ಇತರ ಸಂದರ್ಭಗಳಲ್ಲಿ ಇನ್ನೂ ಮಾಸಲು ನೀಲಿ ಬರಬಹುದು. ಅಥವಾ ಬಣ್ಣವೇ ಬಾರದಿರಬಹುದು; ii. ವರ್ಣದ್ರವ್ಯ ವನ್ನು ಇನ್ನೂ ದುರ್ಬಲ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿ ವಿಲೀನಗೊಳಿಸಿ ಗಾಳಿಯೊಡನೆ ಕುಲುಕಿದಾಗ ಡೆಲ್ಫಿನಿಡಿನ್ ಮಾತ್ರ ಬಣ್ಣ ಕಳೆದುಕೊಳ್ಳುವುದು; iii. ವರ್ಣವಿವರಣಾ ತಂತ್ರವನ್ನು (ಕ್ರೊಮಟಾಗ್ರಫಿ) ಉಪಯೋಗಿಸುವುದೂ ರೂಢಿಯಲ್ಲಿದೆ; iv. ಆ್ಯಂತೋಸಯನಿನ್‌ಗಳ ರೋಹಿತ 5000–5500 ಆ. ಪರಿಮಿತಿಯಲ್ಲಿ ಒಂದೇ ತೆರನಾಗಿರುತ್ತದೆ. ಆದರೆ ಕೆಲವು ಆ್ಯಂತೋಸಯನಿನ್‌ಗಳ ದ್ರಾವಣಕ್ಕೆ ಅಲ್ಯೂಮಿನಿಯಂ ಕ್ಲೋರೈಡ್ ಸೇರಿಸಿದಾಗ, ಅವುಗಳ ಪರಮಾವಧಿ ಹೀರಿಕೆಯ ಎಲ್ಲೆ (ಅಬ್ಸಾರ್ಪ್‌ಷನ್ ಮ್ಯಾಕ್ಸಿಮಮ್) ಸ್ಥಳಾಂತರಗೊಳ್ಳುವುದೆಂದು ಗೈಸ್‌ಮನ್ ಮತ್ತು ಸಂಗಡಿಗರು ತೋರಿಸಿಕೊಟ್ಟಿದ್ದಾರೆ. 3′:4′ ಸ್ಥಾನಗಳಲ್ಲಿ ಬಿಡಿ ಹೈಡ್ರಾಕ್ಸಿಲ್ ಗುಂಪುಗಳನ್ನು ಹೊಂದಿರುವ ಆಂತೋಸಯನಿನ್‌ಗಳ ವರ್ಣಪಟಲದಲ್ಲಿ ಮಾತ್ರ ಈ ಸ್ಥಳಾಂತರ ವ್ಯಕ್ತವಾಗುತ್ತದೆ. ಆದ್ದರಿಂದ ಈ ಫಲಿತಾಂಶ ಆ್ಯಂತೋಸಯನಿನ್‌ಗಳ ಮಿಶ್ರಣದ ವಿಶ್ಲೇಷಣೆಯಲ್ಲಿ ಸಹಕಾರಿಯಾಗಬಹುದು.

ಆ್ಯಂತೋಸಯನಿನ್‌ಗಳೆಲ್ಲವೂ 3:5:7 ಟ್ರೈಹೈಡ್ರಾಕ್ಸಿ ಫ್ಲ್ಯಾವಿಲಿಯಂ ಕ್ಲೋರೈಡಿನಿಂದ ಆದುವುಗಳು.




(ಫ್ಲ್ಯಾವಿಲಿಯಂ ಕ್ಲೋರೈಡ್)

**ಕೆಲವು ಮುಖ್ಯವಾದ ಆ್ಯಂತೋಸಯನಿನ್‌ಗಳನ್ನು ಕೆಳಗೆ ಪಟ್ಟಿ ಮಾಡಿದೆ.**

| ಸಂಕ್ಷಿಪ್ತ ನಾಮ | ರಾಸಾಯನಿಕ ನಾಮ | ಪ್ರಸರಣ |
|---|---|---|
| ಪೆಲಾರ್ಗೋನಿಡಿನ್ | 3:4′:5:7 ಟೆಟ್ರ ಹೈಡ್ರಾಕ್ಸಿ ಫ್ಲ್ಯಾವಿಲಿಯಂ ಕ್ಲೋರೈಡ್ | ಕಿತ್ತಳೆ ಮತ್ತು ಕೇಸರಿ ಬಣ್ಣಗಳ ಹೂಗಳಲ್ಲಿ |
| ಸಯನಿಡಿನ್ | 3:3′:4′:5:7 ಪೆಂಟ ಹೈಡ್ರಾಕ್ಸಿ ಫ್ಲ್ಯಾವಿಲಿಯಂ ಕ್ಲೋರೈಡ್ | ಕಡುಗೆಂಪು ಮತ್ತು ನೀಲಿ ಮಿಶ್ರಿತ ಕೆಂಪು ಹೂಗಳಲ್ಲಿ ಉದಾ: ಕೆಂಪು ಗುಲಾಬಿ |
| ಡೆಲ್ಫಿನಿಡಿನ್ | 3:3′:4:5:5′:7 ಹೆಕ್ಸ ಹೈಡ್ರಾಕ್ಸಿ ಫ್ಲ್ಯಾವಿಲಿಯಂ ಕ್ಲೋರೈಡ್ | ನೇರಳೆ ಮತ್ತು ನೀಲಿ ಬಣ್ಣದ ಹೂಗಳಲ್ಲಿ |
| ಪಿಯೊನಿಡಿನ್ | 3:4′:5:7 ಟೆಟ್ರ ಹೈಡ್ರಾಕ್ಸಿ 3′–ಮೀಥಾಕ್ಸಿ ಫ್ಲ್ಯಾವಿಲಿಯಂ ಕ್ಲೋರೈಡ್ | ಸಯನಿಡಿನ್ ವರ್ಗಕ್ಕಿಂತ ತಿಳಿ ನೀಲಿ ಬಣ್ಣವಿರುವ ಹೂಗಳಲ್ಲಿ |
| ಮ್ಯಾಲ್ವಿಡಿನ್ (ಸಿರಿಂಜಿಡಿನ್) | 3:4′:5:7 ಟೆಟ್ರ ಹೈಡ್ರಾಕ್ಸಿ 3′:5′: ಡೈಮೀಥಾಕ್ಸಿ ಫ್ಲ್ಯಾವಿಲಿಯಂ ಕ್ಲೋರೈಡ್ | ಡೆಲ್ಫಿನಿಡಿನ್ ವರ್ಗಕ್ಕಿಂತ ತಿಳಿ ನೀಲಿ ಬಣ್ಣದ ಹೂಗಳಲ್ಲಿ |
| ಹಿರ್ಸೂಟಿಡಿನ್ | 3:4′:5 ಟ್ರೈ ಹೈಡ್ರಾಕ್ಸಿ 3′:5′:7 ಟ್ರೈಮೀಥಾಕ್ಸಿ ಫ್ಲ್ಯಾವಿಲಿಯಂ ಕ್ಲೋರೈಡ್ | ಪ್ರಿಮ್ಯೂಲ ಹಿರ್ಸೂಟ ಜಾತಿಯ ಹೂಗಳಲ್ಲಿ |

**ಆ್ಯಂತೋಸಯನಿನ್‌ಗಳ ರಚನಾವಿನ್ಯಾಸ ನಿರ್ಣಯ :** ಆ್ಯಂತೋಸಯನಿನ್‌ಗೆ ಹೈಡ್ರೊಕ್ಲೋರಿಕ್ ಆಮ್ಲವನ್ನು ಸೇರಿಸಿದರೆ, ಅದರಲ್ಲಿರುವ ಆ್ಯಂತೋಸಯನಿಡಿನ್ ಅದರ ಕ್ಲೋರೈಡ್ ಆಗುವುದು. ಇದನ್ನು ಅನಂತರ ಬೇರ್ಪಡಿಸಲಾಗುವುದು. ರೂಢಿಯಲ್ಲಿರುವ ವಿಶ್ಲೇಷಣಾ ವಿಧಾನಗಳಿಂದ ಅಣುವಿನಲ್ಲಿರುವ ಹೈಡ್ರಾಕ್ಸಿಲ್ (-OH). ಮತ್ತು ಮೀಥಾಕ್ಸಿಲ್ ($-OCH_3$) ಗುಂಪುಗಳ ಸಂಖ್ಯೆಯನ್ನು ನಿರ್ಧರಿಸುವರು). ಅನಂತರ ಶೇ.10 ಪ್ರಬಲತೆಯ ಬೇರಿಯಂ ಹೈಡ್ರಾಕ್ಸೈಡ್ ದ್ರಾವಣ ಅಥವಾ ಹೈಡ್ರೊಜನ್ನಿನ ಸಂಪರ್ಕದಲ್ಲಿ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದೊಡನೆ ಆ್ಯಂತೋಸಯನಿನ್ನನ್ನು ಕುದಿಸಲಾಗುವುದು.

ಉತ್ಪನ್ನವಸ್ತುಗಳನ್ನು ಪರಿಶೀಲಿಸಿದರೆ ಮೂಲಾಣುವಿನ ರಚನಾವಿನ್ಯಾಸದ ಚಿತ್ರ ಮೂಡುವುದು. ಉದಾಹರಣೆಗೆ, ಸಯನಿಡಿನ್ ಕ್ಲೋರೈಡ್, ಫ್ಲೊರೊಗ್ಲೂಸಿನಾಲ್ ಮತ್ತು ಪ್ರೋಟೊ ಕ್ಯಾಟಚೂಯಿಕ್ ಆಮ್ಲಗಳನ್ನು ಕೊಡುವುದು. ಶೇಷಾಂಶ ಸಕ್ಕರೆಯ ಭಾಗ ಮೂಲಾಣುವಿನಲ್ಲಿ




ಆ್ಯಂತೋಸಯನಿಡಿನ್ನಿನ ಯಾವ ಸ್ಥಾನಗಳಲ್ಲಿ ಜೋಡಣೆಯಾಗಿದೆ ಎಂಬುದನ್ನು ಅನಂತರ ತೀರ್ಮಾನಿಸಲಾಗುವುದು.

ಆ್ಯಂತೋಸಯನಿನನ್ನು ಡೈಮೀಥೈಲ್ ಸಲ್ಫೇಟ್ ಮತ್ತು ಸೋಡಿಯಂ ಹೈಡ್ರಾಕ್ಸೈಡಿನ ಮಿಶ್ರಣದ ವರ್ತನೆಗೆ ಒಳಪಡಿಸಿದರೆ, ಬಿಡಿ ಹೈಡ್ರಾಕ್ಸಿಲ್ ಗುಂಪುಗಳು ಮೀಥಾಕ್ಸಿಲ್ ಗುಂಪುಗಳಾಗುತ್ತವೆ. ಫಲಿತವಸ್ತುವಿಗೆ ಹೈಡ್ರೊಕ್ಲೋರಿಕ್ ಆಮ್ಲವನ್ನು ಹಾಕಿದರೆ, ಸಕ್ಕರೆಯ ಭಾಗಗಳು ಬೇರ್ಪಡುತ್ತವೆ. ಅನಂತರ ಶೇಷವಸ್ತುವನ್ನು ಜಲಜನಕದ ವಾತಾವರಣದಲ್ಲಿ ಬೇರಿಯಂ ಹೈಡ್ರಾಕ್ಸೈಡ್ ದ್ರಾವಣದ ವರ್ತನೆಗೆ ಗುರಿಪಡಿಸಬೇಕು. ಇದರಿಂದಾಗಿ ದೊರೆತ




ವಸ್ತುಗಳಲ್ಲಿ, ಎಲ್ಲೆಲ್ಲಿ ಬಿಡಿ ಹೈಡ್ರಾಕ್ಸಿಲ್ ಗುಂಪುಗಳು ಇರುತ್ತವೆಯೋ, ಅಲ್ಲೆಲ್ಲ ಸಕ್ಕರೆಯ ಅಣುಗಳು ಇದ್ದಿರಬೇಕೆಂದು ಊಹಿಸಲಾಗುವುದು.

ಆ್ಯಂತೋಸಯನಿನ್ ಅಣುವಿನಲ್ಲಿ ಗ್ಲೂಕೋಸ್ ಭಾಗ ಸಾಮಾನ್ಯವಾಗಿ 3 ಅಥವಾ 3:5 ಸ್ಥಾನಗಳಲ್ಲಿ ಇರುವುದು ಕಂಡುಬಂದಿದೆ. ಆ್ಯಂತೋಸಯನಿನ್ನಿನ ಸಂಯೋಜನಾಕಾರ್ಯ ಮುಂದುವರಿಯುತ್ತಿದೆ. ಆ್ಯಂತೋಸಯನಿಡಿನ್‌ಗಳನ್ನು ಸಂಯೋಜಿಸಲು ರಾಬಿನ್‌ಸನ್ ಹಲವು ಸಾರ್ವತ್ರಿಕ ವಿಧಾನಗಳನ್ನು ಅನುಷ್ಠಾನಕ್ಕೆ ತಂದಿದ್ದಾನೆ. ಆ ಕ್ರಿಯೆಗಳ ಮೂಲಸ್ವರೂಪ ಹೀಗಿದೆ: ಈಥೈಲ್ ಅಸಿಟೇಟ್ ದ್ರಾವಣದಲ್ಲಿ ಆರ್ಥೊ ಹೈಡ್ರಾಕ್ಸಿ ಬೆಂಜಾಲ್ಡಿಹೈಡ್ ಮತ್ತು ಅಸಿಟೋಫಿನೋನ್ ವರ್ತಿಸಲು ಬಿಟ್ಟು, ಅನಂತರ ಹೈಡ್ರೊಜನ್ ಕ್ಲೋರೈಡ್ ಅನಿಲದಿಂದ ದ್ರಾವಣವನ್ನು ಪರ್ಯಾಪ್ತಗೊಳಿಸಲಾಗುವುದು. ನಿರ್ದಿಷ್ಟ ಸ್ಥಾನಗಳಲ್ಲಿ, ಬೇಕಾದ ಗುಂಪುಗಳನ್ನು ಹೊಂದಿರುವ ಬೆಂಜಾಲ್ಡಿಹೈಡ್ ಮತ್ತು ಅಸಿಟೊಫೀನೋನನ್ನು ಒಟ್ಟೊಗೂಡಿಸಿ, ಬೇಕಾದಂಥ ಆ್ಯಂತೋಸಯನನಿನ್‌ಗಳನ್ನು ಸಂಯೋಜಿಸಬಹುದು. (ಎಚ್.ಜಿ.ಎಸ್.)

**ಆ್ಯಂಥೊಜೋವ :** ಕುಟುಕುಕಣವಂತ (ಸೀಲೆಂಟರೇಟ) ವಂಶಕ್ಕೆ ಸೇರಿದ ಒಂದು ಮುಖ್ಯವರ್ಗ. ಈ ವರ್ಗಕ್ಕೆ ಸೇರಿದ ಪ್ರಾಣಿಗಳು ಪಾಲಿಪ್ ಅವಸ್ಥೆಯಲ್ಲಿಯೇ ಇರುತ್ತವೆ. ಆ್ಯಂಥೊಜೋವದ ಗ್ಯಾಸ್ಟ್ರೊವ್ಯಾಸ್ಕ್ಯುಲರ್ ಅವಕಾಶ ನೀಳ ಗೋಡೆಗಳ ಬೆಳವಣಿಗೆಯಿಂದಾಗಿ ನಾನಾ ಭಾಗಗಳಾಗಿ ವಿಭಾಗವಾಗಿವೆ. ಗೋಡೆಗಳಿಗೆ ಮೀಸೆಂಟರಿಗಳು ಎಂದು ಹೆಸರು. ಈ ಜೀವಿಗಳು ಬಾಹ್ಯ ನೋಟಕ್ಕೆ ತ್ರಿಜ್ಯ ಸೌಷ್ಠವವನ್ನು ಹೊಂದಿದಂತೆ ಕಂಡುಬಂದರೂ ಆಂತರಿಕವಾಗಿ ಸಮಪಾರ್ಶ್ವ ಸೌಷ್ಠವ ವನ್ನು ಹೊಂದಿದೆ. ಜೀವಿಗಳ ಶರೀರ ಕೊಳವೆಯಂತೆ ದುಂಡಗಿದ್ದು ಎರಡು ತುದಿಗಳನ್ನು ಹೊಂದಿದೆ. ನೆಲಕ್ಕಂಟಿ ರುವ ಭಾಗವನ್ನು ಬುಡವೆಂದೂ ಮುಂಭಾಗವನ್ನು ತುದಿಯೆಂದೂ ಕರೆಯುತ್ತಾರೆ. ತುದಿ ತಟ್ಟೆಯಂತೆ ದುಂಡಗೆ ಅಗಲವಾಗಿದೆ. ಇದರ ಮಧ್ಯಭಾಗದಲ್ಲಿ ಉದ್ದವಾದ ರಂಧ್ರ ದಂತಿರುವ ಬಾಯಿ ಇದೆ. ಈ ತಟ್ಟೆಯಂಥ ಮುಂತುದಿಯ ಮೇಲೆ ಟೆಂಟಕಲ್‌ಗಳು ದಳಗಳಂತೆ ಜೋಡಿಸಿಕೊಂಡಿವೆ. ಆದ್ದರಿಂದ ಇವನ್ನು ಕಡಲ ಕುಸುಮ ಎಂದು ಕರೆಯುತ್ತಾರೆ. ಟೆಂಟಕಲ್‌ಗಳ ಒಳಗೆ ಟೊಳ್ಳು. ಅವುಗಳ ಒಳ ಅವಕಾಶ ಗ್ಯಾಸ್ಟ್ರೊವ್ಯಾಸ್ಕ್ಯುಲರ್ ಅವಕಾಶವನ್ನು ಸಂಧಿಸುತ್ತದೆ. ಈ ಜೀವಿಗಳ ಜನನಾಂಗಗಳು ಮೀಸೆಂಟರಿಯ ಗೋಡೆಗೆ ಅಂಟಿಕೊಂಡಿವೆ. ಬಾಯಿಯಿಂದ ಒಳಭಾಗಕ್ಕಿರುವ ಭಾಗವನ್ನು ಸ್ಟೊಮೋಡಿಯಂ ಎಂದು ಕರೆಯುತ್ತಾರೆ. ಬಾಯಿಯ ಒಂದು ಭಾಗದಲ್ಲಿ ದುಂಡಗಿರುವ ಸೈಫನೋಗ್ಲಿಫ್ ಎಂಬ ಭಾಗವಿದೆ. ಇದು ಶಿಲಿಕೆಗಳಿಂದ ಆವೃತವಾಗಿದೆ. ನೀರು ಇದರಿಂದ ಶರೀರದೊಳಕ್ಕೆ ಪ್ರವಹಿಸು ತ್ತದೆ. ಇನ್ನುಳಿದ ಬಾಯಿ ರಂಧ್ರದಿಂದ ನೀರು ಹೊರಹೋಗುತ್ತದೆ. ಇದರಿಂ ದಾಗಿ ಒಂದೇ ಸಮನೆ ನೀರು ಒಳಕ್ಕೆ ಮತ್ತು ಹೊರಕ್ಕೆ ಪ್ರವಾಹ ರೂಪದಲ್ಲಿ ಹರಿಯುವುದನ್ನು ಕಾಣಬಹುದು.

ಆ್ಯಂಥೊಜೋವ; ಅಡ್ಡ ಸೀಳಿಕೆ

ಆಲ್ಸಿಯೋನಿಯಂ

ಆ್ಯಂಥೊಜೋವ ಜೀವನಚಕ್ರ ದಲ್ಲಿ ಮೆಡುಸಾ ಜೀವಿಗಳಾಗಲಿ ಅಥವಾ ಮೆಡುಸಾ ಹಂತವಾಗಲಿ ಕಂಡುಬರುವುದಿಲ್ಲ. ಆ್ಯಂಥೊಜೋವ ಗಳನ್ನು ಬಿಟ್ಟರೆ ಸ್ಟೊಮೋಡಿಯಂ ಅಥವಾ ಫ್ಯಾರಿಂಕ್ಸ್ ಭಾಗವನ್ನು ಹೊಂದಿರುವ ಸೀಲೆಂಟರೇಟಗಳು ಇಲ್ಲವೇ ಇಲ್ಲ. ಆ್ಯಂಥೊಜೋವ ವರ್ಗಕ್ಕೆ ಕಡಲ ಅನಿಮನಿಗಳು, ಕಡಲ ಲೇಖನಿ, ಕಡಲದ ಬೀಸಣಿಗೆ, ಹವಳ ಮುಂತಾದ ಪ್ರಾಣಿಗಳನ್ನು ಸೇರಿಸಲಾಗಿದೆ. ಈ ವರ್ಗದ ಪ್ರಾಣಿಗಳೆಲ್ಲವೂ ಸಂಪೂರ್ಣವಾಗಿ ಸಮುದ್ರಜೀವಿಗಳು. ಸಸ್ಯಗಳಂತೆ ನೆಲಕ್ಕಾಗಲೀ, ಬಂಡೆಗಳಿಗಾಗಲೀ ಅಂಟಿಕೊಂಡು ಬೆಳೆಯುತ್ತವೆ. ಇವುಗಳಿಗೆ ಚಲನಶಕ್ತಿ ಇಲ್ಲವೆಂದೇ ಹೇಳಬಹುದು. ಒಂಟಿಯಾಗಿ ಅಥವಾ ಗುಂಪು ಜೀವಿಗಳಾಗಿ ವಾಸ. ಕೆಲವು ಯಾವ ಗಟ್ಟಿ ಹೊರಕವಚವಿಲ್ಲದೇ ಮೃದುವಾಗಿ ದಿಗಂಬರವಾಗಿಯೇ ಉಳಿದಿವೆ. ಮತ್ತೆ ಕೆಲವು

ಅತ್ಯಂತ ಗಟ್ಟಿಯಾದ ರಕ್ಷಾ ಕವಚಗಳನ್ನು ಹೊಂದಿದ್ದು ಅವುಗಳೊಳಗೆ ವಾಸಿಸುವುವು. ಇಂಥ ಕವಚಗಳು ಶರೀರದ ಹೊರಗೆ ಅಥವಾ ಒಳಗೆ ಇರಬಹುದು. ಇವುಗಳಲ್ಲಿರುವ ಮೀಸೊಗ್ಲಿಯ ಎಂಬ ವಸ್ತುವಿನಲ್ಲಿ ಅಮೀಬ ರೀತಿಯ ಜೀವಕೋಶಗಳಿವೆ. ಸ್ನಾಯುಕೋಶ ಗಳ ಬೆಳವಣಿಗೆಯೂ ಕೂಡ ಇವುಗಳಲ್ಲುಂಟು. ಇದರಿಂದಾಗಿ ಇವು ಹಿಗ್ಗುವ ಮತ್ತು

ಕುಗ್ಗುವ ಶಕ್ತಿಯನ್ನು ಹೊಂದಿವೆ. ಇವುಗಳ ಟೆಂಟಕಲ್‌ಗಳಲ್ಲಿ ನೆಮಟೋಸಿಸ್ಟ್‌ಗಳೆಂಬ ಕೋಶಗಳು ತುಂಬಿವೆ. ಇವನ್ನು ಕುಟುಕುಕೋಶಗಳೆಂದು ಕರೆಯುತ್ತಾರೆ. ಈ ಕೋಶಗಳು ಜೀವಿಗಳಿಗೆ  ರಕ್ಷಣೆಯನ್ನೊದಗಿಸುತ್ತವೆ ಮತ್ತು ಆಹಾರ ಗಳಿಕೆಯನ್ನು ಸಾಧ್ಯವಾಗಿಸುತ್ತವೆ.

ಆ್ಯಂಥೊಜೋವ

ಆ್ಯಂಥೊಜೋವವನ್ನು ಅತ್ಯಂತ ವಿಶಾಲವಾದ ಎರಡು ಉಪವರ್ಗಗಳಾಗಿ ಹೀಗೆ ವಿಂಗಡಿಸಲಾಗಿದೆ:

1. ಆಲ್‌ಸಿಯೊನೇರಿಯ ಅಥವಾ ಆಕ್ಟೊಕೊರೇಲಿಯ, ಉದಾಹರಣೆಗಳು – ಕಡಲ ಕುಸುಮ, ಮಿದುಳು ಹವಳ, ನಾಯಿಕೊಡೆ ಹವಳ, ನಕ್ಷತ್ರ ಹವಳ, ಜಿಂಕೆಕೊಂಬು ಹವಳ.
2. ಜುಆಂಥೇರಿಯ ಅಥವಾ ಹೆಕ್ಸಾ ಕೊರೇಲಿಯ. ಉದಾಹರಣೆಗಳು –ಸಮುದ್ರದ ಬೀಸಣಿಗೆ, ಸಮುದ್ರದ ಪೆನ್, ಟ್ಯುಬಿಫೇರಾ, ಆಲ್ಸಿಯೇನಿಯಂ, ಕೇರಾಲಿಯಂ ರುಬ್ರಮ್(ಒಡವೆಗಳಲ್ಲಿ ಬಳಸುವ ಬೆಲೆಬಾಳುವ ಹವಳ.

**ಆ್ಯಂಥ್ರಸೀನ್ ಮತ್ತು ಫೀನಾಂಥ್ರಿನ್ :** ಒಂದೇ ಅಣುಸೂತ್ರವುಳ್ಳ ($C_{14}H_{10}$) ಎರಡು ಆರೋಮ್ಯಾಟಿಕ್ ಹೈಡ್ರೊಕಾರ್ಬನ್ನುಗಳು. ಇವೆರಡೂ ಕಲ್ಲಿದ್ದಲು ಟಾರಿನಲ್ಲಿ ದೊರೆಯುತ್ತವೆ. ಟಾರನ್ನು ಆಂಶಿಕವಾಗಿ ಬಟ್ಟಿ ಇಳಿಸುವಾಗ $300^{o}$ ಸೆಂ.ಗ್ರೇಯಿಂದ $400^{o}$ ಸೆಂ.ಗ್ರೇ ವರೆಗಿನ ಅವಧಿಯಲ್ಲಿ ಶೇಖರಿಸುವ ಭಾಗದಿಂದ ಇವನ್ನು ತೆಗೆಯುತ್ತಾರೆ.

ಆ್ಯಂಥ್ರಸೀನ್ ವರ್ಣರಹಿತ ಘನಪದಾರ್ಥ; ಸಾಮಾನ್ಯ ಬೆಳಕನ್ನು ಹೀರಿ ನೀಲಿ ಬಣ್ಣದ ಪ್ರತಿದೀಪ್ತಿಯನ್ನು ಹೊರಸೂಸುತ್ತದೆ. ಅಶುದ್ಧತೆಯ ಕಾರಣ ಸಾಮಾನ್ಯವಾಗಿ ಇದಕ್ಕೆ ನಸು ಹಳದಿ ಬಣ್ಣವಿರುವುದುಂಟು. ಇದರ ದ್ರವಿಸುವ ಬಿಂದು $216^{o}$ ಸೆಂ.ಗ್ರೇ ನೀರಿನಲ್ಲಿ ಅದ್ರಾವ್ಯ; ಆಲ್ಕೊಹಾಲ್ ಮತ್ತು ಈಥರ್‌ಗಳಲ್ಲಿ ಸ್ವಲ್ಪಮಟ್ಟಿಗೆ ವಿಲೀನವಾಗುತ್ತದೆ; ಬಿಸಿಯಾದ




ಆಂಥ್ರಸೀನ್

ಬೆಂಜೀನಿನಲ್ಲಿ ದ್ರಾವ್ಯ. ಉತ್ಕರ್ಷಣ ಕಾರಿಗಳೊಂದಿಗೆ (ಉದಾ: ಸೋಡಿಯಂ ಡೈ ಕ್ರೊಮೇಟ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣ) ವರ್ತಿಸಿದಾಗ ಆ್ಯಂಥ್ರಕ್ವಿನೋನ್ ಆಗುತ್ತದೆ.

ಕ್ಲೋರೀನ್ ಮತ್ತು ಬ್ರೊಮೀನ್ ಗಳು ಕಡಿಮೆ ಉಷ್ಣತೆಯಲ್ಲಿ ($250^{o}$ ಸೆಂ.ಗ್ರೇ ಕೆಳಗೆ) ಉತ್ಕರ್ಷಣಕಾರಿಗ ಳಾಗಿ ವರ್ತಿಸುತ್ತವೆ; ಹೆಚ್ಚಿನ ಉಷ್ಣತೆ ಯಲ್ಲಿ 9.10 ಡೈಕ್ಲೋರೊ ಅಥವಾ 9.10 ಡೈ ಬ್ರೋಮೋ ಆ್ಯಂಥ್ರಸೀನುಗ ಳನ್ನೂ ಕೊಡುತ್ತವೆ. ಸಲ್ಫ್ಯೂರಿಕ್ ಆಮ್ಲ ವಿವಿಧ ಸಲ್ಫೋನಿಕ್ ಆಮ್ಲಗ ಳನ್ನೂ ನೈಟ್ರಿಕಾಮ್ಲ ವಿವಿಧ ನೈಟ್ರೋ ಆಂಥ್ರಸೀನುಗಳನ್ನೂ ಕೊಡುತ್ತದೆ.




ಆಂಥ್ರ ಕ್ವಿನೋನ್

ಪಿಕ್ರಿಕ್ ಆಮ್ಲದೊಡನೆ ವರ್ತಿಸಿದಾಗ ಆ್ಯಂಥ್ರಸೀನ್ ಪಿಕ್ರೇಟಿನ ಕೆಂಪು ಹರಳುಗಳು ಉತ್ಪತ್ತಿಯಾಗುತ್ತವೆ. ಈ ಕ್ರಿಯೆಯನ್ನು, ಆ್ಯಂಥ್ರಸೀನನ್ನು ಗುರುತಿಸಲು ಉಪಯೋಗಿಸುವುದುಂಟು. ಆ್ಯಂಥ್ರಸೀನ್‌ನ ಜನ್ಯಪದಾರ್ಥಗಳಲ್ಲಿ, ಮುಖ್ಯವಾಗಿ ಆ್ಯಂಥ್ರಕ್ವಿನೋನ್ ವರ್ಣದ್ರವ್ಯಗಳ ತಯಾರಿಕೆಯಲ್ಲಿ ಉಪಯೋಗ ಪಡೆದಿದೆ. ಫೀನಾಂಥ್ರೀನ್ ವರ್ಣರಹಿತ ಘನಪದಾರ್ಥ. ಇದರ ಬೆಂಜೀನ್ ದ್ರಾವಣ ನೀಲಿ ಪ್ರತಿದೀಪ್ತಿಯನ್ನು ಹೊರಸೂಸುತ್ತದೆ. ಇದರ ದ್ರವಿಸುವ




ಫೀನಾಂಥ್ರೀನ್




ಫೀನಾಂಥ್ರಕ್ವಿನೋನ್

ಬಿಂದು $99^{o}$ ಸೆಂ.ಗ್ರೇ. ಉತ್ಕರ್ಷಣಕಾರಿಗಳೊಂದಿಗೆ ವರ್ತಿಸಿದಾಗ ಫೀನಾಂಥ್ರಕ್ವಿನೊನ್ ಉಂಟಾಗುತ್ತದೆ.

ಸಲ್ಫ್ಯೂರಿಕ್ ಆಮ್ಲ ಮತ್ತು ನೈಟ್ರಿಕ್ ಆಮ್ಲ ಆ್ಯಂಥ್ರಸೀನ್‌ನೊಂದಿಗೆ ವರ್ತಿಸಿ ದಂತೆಯೇ ಹ್ಯಾಲೋಜನ್‌ಗಳೂ ವರ್ತಿಸುತ್ತವೆ. ಮಾರ್ಫೀನ್ ಮೊದಲಾದ ಅಫೀಮಿನ ಆಲ್ಕಲಾಯ್ಡ್‌ಗಳು ಮತ್ತು ಕೊಲೆಸ್ಟೆರಾಲ್ ಮೊದಲಾದ ಸ್ಟೀರಾಯ್ಡ್‌ಗಳು, ಅಣುರಚನೆಯಲ್ಲಿ ಫೀನಾಂಥ್ರೀನ್ ಬಳಗಕ್ಕೆ ಸೇರಿದವು. (ಜೆ.ಆರ್.ಎಲ್.)

**ಆ್ಯಂಥ್ರಸೈಟ್ :** ಕಲ್ಲಿದ್ದಲಿನಲ್ಲಿ ಒಂದು ವಿಧ. ಕಲ್ಲಿದ್ದಲಿನ ಇತರ ವಿಧಗಳು ಸೀಟ್, ಅಗ್ನೈಟ್, ಕ್ಯಾನಲ್ ಕಲ್ಲಿದ್ದಲು ಮತ್ತು ಬಿಟುಮಿನಸ್ ಕಲ್ಲಿದ್ದಲು. ಆ್ಯಂಥ್ರಸೈಟ್ ಇವುಗಳಲ್ಲೆಲ್ಲ ಅತ್ಯಂತ ಶ್ರೇಷ್ಠ ದರ್ಜೆಯದು. ಇದರ ದಹನ ಪ್ರಮಾಣ (ಫ್ಯೂಯೆಲ್ ರೇಷಿಯೊ) 12 ಕ್ಕೂ ಹೆಚ್ಚು; ಕ್ಯಾಲೊರಿಫಿಕ್ ಗುಣ 14,500–15,000 ಬಿ.ಟಿ.ಯು; ಕಾರ್ಬನ್ ಅಂಶ ಶೇ.93 –95 ರಷ್ಟು; ಮತ್ತು ಅನಿಲರೂಪದ ದಹನ ವಸ್ತುಗಳು ಶೇ.3–5 ರಷ್ಟು. ಈ ವಿಶೇಷಗುಣಗಳನ್ನು ಹೊಂದಿರುವ ಕಾರಣ ಇದನ್ನು ಅತ್ಯಂತ ಉತ್ತಮ ದರ್ಜೆಯ ಕಲ್ಲಿದ್ದಲೆಂದು ಪರಿಗಣಿಸಲಾಗಿದೆ.

ಬಣ್ಣದಲ್ಲಿ ಅಚ್ಚಗಪ್ಪು ಅಥವಾ ನಸ್ಯದ ಬಣ್ಣದ ಛಾಯೆಯುಳ್ಳ ಕಪ್ಪು. ಹಲವು ಬಾರಿ, ಬೆಳಕಿಗೆ ಹಿಡಿದಾಗ ಬಣ್ಣ ಬಣ್ಣಗಳಿಂದ ಮಿನುಗುವುದೂ ಉಂಟು. ಒರೆ ಕಪ್ಪು. ಮುಟ್ಟಿದಾಗ ಬೆರಳಿಗೆ ಅಂಟುವುದಿಲ್ಲ. ಫಳಫಳನೆ ಹೊಳೆಯುತ್ತದೆ. ಛಿದ್ರವಾದ ಭಾಗಗಳಲ್ಲಿ ಕಪ್ಪೆಚಿಪ್ಪಿನಂಥ ಗುರುತುಗಳು, ಹಲವು ವೇಳೆ ಅಸ್ಪಷ್ಟ ಗುರುತುಗಳು ಕಾಣುತ್ತವೆ. ಕಾಠಿಣ್ಯ 0.5–2.5. ಅಂದರೆ ಉಗುರಿನಿಂದ ಅಥವಾ ಸೂಜಿಯಿಂದ ಸುಲಭವಾಗಿ ಗೀರಿ ಗುರುತಿಸಬಹುದು. ಸಾಪೇಕ್ಷ ಸಾಂದ್ರತೆ 1.32–1.7.

ಇದರ ರಾಸಾಯನಿಕ ಸಂಯೋಜನೆ ಬಹುಮಟ್ಟಿಗೆ ಕಾರ್ಬನ್ ಶೇ.95. ಇದರೊಡನೆ ಇತರ ಧಾತುಗಳಾದ ಜಲಜನಕ, ಆಮ್ಲಜನಕ ಮತ್ತು ಸಾರಜನಕ ಬಹು ಅಲ್ಪ ಪ್ರಮಾಣದಲ್ಲಿರುತ್ತವೆ. ಇದನ್ನು ಉರಿಸಬೇಕಾದರೆ ಕೊಂಚ ಕಷ್ಟ ಜ್ವಾಲೆ ಅಷ್ಟು ದೊಡ್ಡದಾಗಿರದೆ ಸಣ್ಣದಾಗಿದ್ದು ಬಹುಕಾಲ ಉರಿಯುತ್ತದೆ. ಹೆಚ್ಚು ಉಷ್ಣವನ್ನೂ ಒದಗಿಸುತ್ತದೆ.

ಕಲ್ಲಿದ್ದಲು ಗಣಿಗಳಲ್ಲಿ ಇತರ ಕಡಿಮೆ ದರ್ಜೆಯವು ಕ್ರಮೇಣ ಈ ಉತ್ತಮ ಬಗೆಯ ಕಲ್ಲಿದ್ದಲಾಗಿ ಮಾರ್ಪಾಟ್ಟಿರುವುದನ್ನು ಅನೇಕ ವೇಳೆ ಗುರುತಿಸಬಹುದು. ಕಲ್ಲಿದ್ದಲನ್ನು ಹೊಂದಿರುವ ಶಿಲಾಪದರ ಹೆಚ್ಚಿನ ಉಷ್ಣ ಮತ್ತು ಒತ್ತಡಗಳಿಗೆ ಒಳಗಾದ ಭಾಗಗಳಲ್ಲಿ ಈ ಮಾರ್ಪಾಡನ್ನು ಕಾಣಬಹುದು. ಹಲವು ಬಾರಿ ಹೀಗಾಗದೆ ಭೂಮಿಯ ಆಳದಲ್ಲಿ ಹುದುಗುವ ಮೊದಲೇ ಸಸ್ಯಸಂಬಂಧವಾದ ವಸ್ತುಗಳು ಕಲ್ಲಿದ್ದಲಾಗಿ ಮಾರ್ಪಾಟ್ಟಿರಬಹುದು.

ಆ್ಯಂಥ್ರಸೈಟನ್ನು ಹೆಚ್ಚು ಉಷ್ಣೋತ್ಪತ್ತಿಮಾಡಲು ಬಳಸುತ್ತಾರೆ. ಹೊಗೆ ಬೇಡವಾದ ಯಂತ್ರೋಪಕರಣಗಳಲ್ಲಿಯೂ ಇದರ ಉಪಯೋಗವಿದೆ.

ಇದು ಮುಖ್ಯವಾಗಿ ಅಮೆರಿಕದ ಪೆನ್ಸಿಲ್‌ವೇನಿಯ, ಇಂಗ್ಲೆಂಡಿನ ದಕ್ಷಿಣ ವೇಲ್ಸ್, ಫ್ರಾನ್ಸ್, ಜರ್ಮನಿಯ ಸ್ಯಾಕ್ಸನಿ ಮತ್ತು ರಷ್ಯದ ಕಲ್ಲಿದ್ದಲಿನ ಗಣಿಗಳಲ್ಲಿ ದೊರೆಯುತ್ತದೆ. ಪೆನ್ಸಿಲ್‌ವೇನಿಯದ ಆ್ಯಂಥ್ರಸೈಟ್‌ನಲ್ಲಿ ಶೇ. 85–95 ರಷ್ಟು, ರಷ್ಯದಲ್ಲಿ ದೊರೆಯುವ ನಮೂನೆಯಲ್ಲಿ ಶೇ.94ರಷ್ಟು ಕಾರ್ಬನ್ ಅಂಶವಿದ್ದು ಅದು ಅತ್ಯಂತ ಉತ್ತಮ ದರ್ಜೆಯವೆಂದು ಪರಿಗಣಿತವಾಗಿವೆ. ನಮ್ಮ ದೇಶದ ಕಲ್ಲಿದ್ದಲಿನ ಗಣಿಗಳಲ್ಲಿ ಕೊಂಚಮಟ್ಟಿಗೆ ಆ್ಯಂಥ್ರಸೈಟ್ ಕಂಡುಬಂದಿದೆ. (ಬಿ.ವಿ.ಜಿ.)

**ಆಂದೋಲನ :** ಒಂದು ವಿಶಿಷ್ಟ ಸ್ವಭಾವದ ನಿಯತಕಾಲಿಕ ಚಲನೆ (ಆಸಿಲೇಷನ್). ಮುಕ್ತವಾಗಿ ತೂಗುಹಾಕಲಾದ ವಸ್ತು ಎರಡು ಸ್ಥಿರ ಬಿಂದುಗಳ ನಡುವೆ ಉಯ್ಯಾಲಾಡುವುದು. ಗೊತ್ತಾದ ಪಥದ ಮೇಲೆ ಹಿಂದೆ ಮುಂದೆ ಚಲಿಸುತ್ತಿರುವ ಒಂದು ಕಣ (ಪಾರ್ಟಿಕಲ್) ಪಥದ ಮೇಲಿನ ಒಂದು ಬಿಂದುವಿನ ಮೂಲಕ ಒಂದೇ ದಿಶೆಯಲ್ಲಿ ಅನುಕ್ರಮವಾಗಿ ಎರಡು ಸಲ ಸಾಗುವ ಘಟನೆ. ಉಯ್ಯಾಲೆಯ ಓಲಾಟ, ತೊಟ್ಟಿಲಿನ ತೂಗಾಟ, ಗಾಳಿ ಬೀಸಿದಾಗ ತೂಗುದೀಪದ ತೊನೆದಾಟ, ಲೋಲಕದ ಚಲನೆ – ಇವು ಆಂದೋಲನಕ್ಕೆ ಕೆಲವು ಸ್ಥೂಲ ಉದಾಹರಣೆಗಳು. ಜಡವಸ್ತುಗಳಲ್ಲಿ ಪ್ರತಿ ಅಣುವಿನಲ್ಲೂ ಪರಮಾಣುಗಳು ತಮ್ಮ ಸ್ಥಾನಗಳಲ್ಲಿ ಆಂದೋಲಿಸುತ್ತಿರುವುವು.

ಸರಳಸಂಗತ ಚಲನೆ (ಸಿಂಪಲ್ ಹಾರ್ಮಾನಿಕ್ ಮೋಷನ್) : ಸರಳ ರೇಖೆಯ ಮೇಲಿನ ಸ್ಥಿರಬಿಂದುವಿನತ್ತ ದೂರಕ್ಕೆ ಅನುಲೋಮಾನುಪಾತೀಯವಾಗಿ ಆಕರ್ಷಿತವಾಗುವ ಕಣದ ಸರಿತ. ವೃತ್ತ ಪರಿಧಿಯಲ್ಲಿ ಏಕವೇಗದಿಂದ ಚಲಿಸುತ್ತಿರುವ ಬಿಂದುವಿನ ಪ್ರಕ್ಷೇಪ ಆ ವೃತ್ತದ ಯಾವುದೇ ವ್ಯಾಸದ ಮೇಲೆ ಸರಿಯುವ ಬಗೆ.

ಚಿತ್ರದಲ್ಲಿ $O$ ಸ್ಥಿರಬಿಂದು, $P$ ಚರಬಿಂದು ಮತ್ತು $OA = OA' = a \quad OP = x$ ಆಗಿರಲಿ. ಹಾಗಿದ್ದಾಗ

ಎಂಬುದು ಈ ಚಲನೆಯ ಅವಕಲ ಸಮೀಕರಣ. ಇದರ ಪರಿಹಾರ

ಇಲ್ಲಿ $\mu$ ಆಕರ್ಷಣ ಸ್ಥಿರಾಂಕ, $a$ ಆಂದೋಲನ ಪಾರ.

ಸಾಮಾನ್ಯ ಲೋಲಕ : ಭಾರವಾದ ಒಂದು ಗುಂಡನ್ನು ಹಗುರ, ಮೃದು ಮತ್ತು ಹಿಗ್ಗದ (ಲೈಟ್, ಸ್ಮೂತ್ ಆಂಡ್ ಇನ್‌ಎಕ್ಸ್‌ಟೆನ್ಸಿಬಲ್) ದಾರದ ಒಂದು ತುದಿಗೆ ಪೋಣಿಸಿದೆ; ಅದರ ಇನ್ನೊಂದು ತುದಿಯನ್ನು ಒಂದು ಆಧಾರಕ್ಕೆ (0) ಕಟ್ಟಿದೆ. ಇದೇ ಸಾಮಾನ್ಯ ಲೋಲಕ (ಸಿಂಪಲ್ ಪೆಂಡ್ಯುಲಂ). ನಿಶ್ಚಲ ಸ್ಥಿತಿಯಲ್ಲಿ ದಾರ ಊರ್ಧ್ವವಾಗಿ 0B ಸ್ಥಾನದಲ್ಲಿರುವುದು.

ಈಗ ದಾರ ಸಡಿಲವಾಗದಂತೆ ಗುಂಡನ್ನು A ವರೆಗೆ ಎಳೆದು ಕೈಬಿಟ್ಟರೆ ಲೋಲಕ 0 ಕೇಂದ್ರದಿಂದ ಅತ್ತ ಇತ್ತ ಅನಿರ್ಬಂಧಿತವಾಗಿ ತೂಗಾಡುತ್ತದೆ. ಆದರ್ಶ ಲೋಲಕದಲ್ಲಿ ಆಂದೋಲನ ಕೋನ ಕಿರಿದು, ದಾರದ ರಾಶಿ ನಗಣ್ಯ. ಲೋಲಕದ ರಾಶಿ ಒಂದು ಬಿಂದುವಿನಲ್ಲಿ ಕೇಂದ್ರೀಕೃತ. ಇಂಥ ಲೋಲಕದ ಒಂದು ಪೂರ್ಣ ಆಂದೋಲನ ಕಾಲ



ಗೆ ಸಮ. ಇಲ್ಲಿ $l$ ದಾರದ ಉದ್ದ, $g$ ಗುರುತ್ವ ವೇಗೋತ್ಕರ್ಷ. ಬೇರೆಬೇರೆ ಉದ್ದ ದಾರದ ಲೋಲಕಗಳನ್ನು ತೆಗೆದುಕೊಂಡು ಅವುಗಳ ಅವಧಿಗಳನ್ನು ಪ್ರಾಯೋಗಿಕವಾಗಿ ಗುಣಿಸಿದರೆ ಆ ಸ್ಥಳದಲ್ಲಿ g (ಗುರುತ್ವಾಕರ್ಷಣೆ) ಬೆಲೆಯನ್ನು ನಿರ್ಣಯಿಸಬಹುದು. ಕಾಲವನ್ನು ಅಳೆಯಲು ಬಳಸುವ ಗಡಿಯಾರಗಳ ರಚನೆಯ ಹಿನ್ನೆಲೆಯಲ್ಲಿ ಲೋಲಕದ ತತ್ತ್ವವಿದೆ. ಲೋಲಕದ ಈ ವೈಶಿಷ್ಟ್ಯವನ್ನು ಗೆಲಿಲಿಯೊ ಗಮನಿಸಿದ್ದ. ವೈದ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದ (1583) ಆತ ಇಗರ್ಜಿಯಲ್ಲಿ ಪ್ರಾರ್ಥನೆಗೆ ಹೋಗಿದ್ದಾಗ ಗಾಳಿಯಿಂದ ತೊನೆದಾಡುತ್ತಿದ್ದ ತೂಗುದೀಪಗಳ ಚಲನೆಯನ್ನು ನೋಡಿದ. ಅಲುಗಾಟದ ವಿಸ್ತಾರಗಳು ಗಾಳಿ ಬೀಸಿದಂತೆ ಹೆಚ್ಚಾದರೂ ಒಂದೊಂದು ತೂಗುದೀಪದ ಅವಧಿಯೂ ಸ್ಥಿರವಾಗಿತ್ತೆಂದು ಅವನಿಗೆ ಅನ್ನಿಸಿತು. ತನ್ನ ದೇಹದ ನಾಡಿಯ ಮಿಡಿತದೊಡನೆ ಅಲುಗಾಟಗಳ ಅವಧಿಗಳನ್ನು ಹೊಂದಿಸಿ ನೋಡಿ ತನ್ನ ಊಹೆ ನಿಜವೆಂದು ಖಚಿತಪಡಿಸಿಕೊಂಡ. ಮನೆಯಲ್ಲಿ ಹೋಗಿ ಪ್ರಯೋಗ ಮಾಡಿ ನೋಡಿದಾಗ ಲೋಲಕದ ಉದ್ದದ ವರ್ಗಮೂಲದ ಅನುಪಾತದಲ್ಲಿ ಅವಧಿ ಇದೆ ಎಂದು ಅವನಿಗೆ ತಿಳಿಯಿತು. ಇದಕ್ಕೆ ತಾರ್ಕಿಕ ವಿವರ ನೀಡಿದವನು ಕ್ರಿಶ್ಚಿಯನ್ ಹಾಯ್ಗನ್ಸ್ (1629 – 95).

ಸರಳಸಂಗತ ಆಂದೋಲನದ ಇತರ ಉದಾಹರಣೆಗಳು : ಹೂಕ್‌ನ ನಿಯಮದ ಪ್ರಕಾರ ಹಿಗ್ಗುವ ಸ್ಪ್ರಿಂಗ್ ತುದಿಗೆ ಪೋಣಿಸಿದ ಗುಂಡಿನ ಊರ್ಧ್ವಚಲನೆ; ಸಂಯುಕ್ತ ಲೋಲಕ (ಕಾಂಪೌಂಡ್ ಪೆಂಡ್ಯುಲಂ). ಭೂಮಿಯ ಮೇಲೆ ಎತ್ತರದಿಂದ ಒಂದು ಗುಂಡನ್ನು ಕೈಬಿಟ್ಟೆವೆಂದು ಭಾವಿಸೋಣ. ಅದು ಭೂತಲಕ್ಕೆ ಏರುತ್ತಿರುವ ವೇಗದಿಂದ ಬಂದು ಬಡಿಯುತ್ತದೆ. ಹೀಗೆ ಬಡಿಯುವ ಸ್ಥಳದ ಮೂಲಕ ಸಾಗುವ ಭೂಮಿವ್ಯಾಸದ ಸ್ಥಾನದಲ್ಲಿ ಒಂದು ಸುರಂಗ ತೋಡಲಾಗಿದೆ ಎಂದು ಭಾವಿಸೋಣ. ಅದರೊಳಗೆ ಸಾಗಿದ ಗುಂಡು ಭೂತಳವನ್ನು ವ್ಯಾಸದ ವಿರುದ್ಧ ಕೊನೆಯಲ್ಲಿ ತ್ಯಜಿಸಿ (ಅಲ್ಲಿ) ಮೇಲೇರಲು ತೊಡಗುವುದು. ಹೀಗೆ ಹಾರಿದ ಗುಂಡು ಪ್ರಾರಂಭದಲ್ಲಿ ಭೂಮಿಯ ಒಂದು ಪಾರ್ಶ್ವದಲ್ಲಿ ಎಷ್ಟು ಎತ್ತರದಿಂದ ಬೀಳಲು ಪ್ರಾರಂಭಿಸಿತ್ತೋ ಅಷ್ಟು ಎತ್ತರದವರೆಗೆ ಸಾಗಿ ಅಲ್ಲಿಂದ ಹಿಂದೆ ಬೀಳತೊಡಗುವುದು. ಈ ಪ್ರಕಾರ ಹಿಂದಿನ ಚಲನೆಯ ಪುನರಾವರ್ತನೆ ನಿರಂತರವಾಗಿ ಮುಂದುವರಿಯುತ್ತದೆ. ಭೂಗರ್ಭದೊಳಗೆ ಗುಂಡಿನ ಚಲನೆ ಸರಳಸಂಗತ ಆಂದೋಲನಕ್ಕೆ ಒಂದು ಉದಾಹರಣೆ.

**ಆಂದೋಲನ ಮತ್ತು ತರಂಗಗಳು :** ವಸ್ತು ಮಾಧ್ಯಮದಲ್ಲಿ ಅಥವಾ ಆಕಾಶದಲ್ಲಿ ಬಿಂದುವಿನಿಂದ ಸ್ಥಳೀಯ ಆಂದೋಲನಗಳ ಪುಂಖಾನುಪುಂಖ ಪ್ರಸರಣಗಳೇ ತರಂಗಗಳು (ವೇವ್ಸ್). ನಿಶ್ಚಲ ಕೊಳಕ್ಕೆ ಕಲ್ಲು ಎಸೆದಾಗ ಅದು ತಗುಲಿದ ಜಾಗ ಕೇಂದ್ರವಾಗಿರುವಂತೆ ಪುಂಖಾನುಪುಂಖವಾಗಿ ನೀರಿನ ಮೇಲೆ ಉಬ್ಬುತ್ತ ಸಾಗುವ ವರ್ತುಲ ತರಂಗಗಳು; ಶ್ರುತಿ ಕವೆಯನ್ನು (ಟ್ಯೂನಿಂಗ್ ಫೋರ್ಕ್) ಬಡಿದಾಗ ಅಥವಾ ಬಿಗಿಯಾದ ತಂತಿಯನ್ನು ಮೀಟಿದಾಗ ಆ ಬಿಂದು ಕೇಂದ್ರವಾಗಿರುವಂತೆ ಪುಂಖಾನುಪುಂಖವಾಗಿ ಗಾಳಿಯಲ್ಲಿ ಉಬ್ಬುತ್ತ ಸಾಗುವ ತರಂಗ ಗೋಳಗಳು (ಶಬ್ದ) ಉದಾಹರಣೆಗಳು. ಕ್ಷ–ಕಿರಣಗಳು, ಬೆಳಕು (ಗೋಚರ ಮತ್ತು ಅಗೋಚರ), ರೇಡಿಯೊ ಮತ್ತು ರೇಡಾರ್ ಇವು ವಿದ್ಯುತ್ಕಾಂತ ತರಂಗಗಳಿಗೆ (ಎಲೆಕ್ಟ್ರೋಮ್ಯಾಗ್ನೆಟಿಕ್ ವೇವ್ಸ್) ಉದಾಹರಣೆಗಳು. ತರಂಗಗಳ ಗುಣಲಕ್ಷಣಗಳಿಗೆ ನೋಡಿ–ತರಂಗಗಳು. ಎರಡು ಸರಳಸಂಗತ ಆಂದೋಲನಗಳ ಸಂಯೋಜನೆ : ಪರಸ್ಪರ ಲಂಬವಾಗಿರುವ ಮತ್ತು ಒಂದೇ ಅವಧಿ ಇರುವ ಎರಡು ಸರಳಸಂಗತ ಆಂದೋಲನಗಳನ್ನು ಈ ಕೆಳಗಿನ ಸಮೀಕರಣಗಳಿಂದ ಸೂಚಿಸಬಹುದು:



$$X = a\cos\omega t$$

$$Y = b\cos(\omega t + \varepsilon)$$

ಇವೆರಡರ ಸಂಯೋಜನೆಯನ್ನು (ಎಂದರೆ ಒಂದು ಕಣಕ್ಕೆ [illegible] ಚಲನೆಗಳು [illegible] ಇದ್ದರೆ ಅದರ ಫಲಿತ ಚಲನೆಯ ರೂಪ) ನೀಡುವ ಸಮೀಕರಣ :

[illegible]

ಆದ್ದರಿಂದ ಕಣದ ಫಲಿತಪಥ ಸಾಮಾನ್ಯವಾಗಿ ದೀರ್ಘವೃತ್ತ (ಎಲಿಪ್ಸ್). ವಿಶೇಷ ಸಂದರ್ಭದಲ್ಲಿ ($\varepsilon$=0 ಆದಾಗ, ಉದಾಹರಣೆ ಎರಡು ಚಲನೆಗಳ ಪ್ರಾರಂಭಕಾಲ ಒಂದೇ ಆದಾಗ) ಫಲಿತಪಥ:

$$\frac{x^2}{a^2} - \frac{2xy}{ab} + \frac{y^2}{b^2} = 0$$ ಅಥವಾ $$\frac{x}{a} - \frac{y}{b} = 0$$ ಎಂಬ ಮೂಲಬಿಂದುವಿನ (ಆಕರ್ಷಣ ಕೇಂದ್ರದ ) ಮೂಲಕ ಸಾಗುವ ಮತ್ತು $b/a$ ಓಟವಾಗಿರುವ (ಗ್ರೇಡಿಯಂಟ್) ಇರುವ ಸರಳರೇಖೆ.

ಪರಸ್ಪರ ಲಂಬವಾಗಿರುವ ಸರಳಸಂಗತ ಆಂದೋಲನಗಳ ಅವಧಿಗಳು ಬೇರೆ ಬೇರೆ ಆದಾಗ ಅವುಗಳ ಸಂಯೋಜನೆ ಫಲಿತಪಥ ನಿರ್ಧರಿಸುವುದು ಸುಲಭವಲ್ಲ. ವಿಶೇಷ ಸಂದರ್ಭದಲ್ಲಿ, ಸರಿಸುಮಾರು ಫಲಿತಪಥಗಳನ್ನು ತಿಳಿಯಬಹುದು.

**ಆಂದೋಲನ ಮತ್ತು ಶಬ್ದ :** ಶಬ್ದದ (ಸೌಂಡ್) ಉತ್ಪತ್ತಿಗೆ ಆಂದೋಲನವೇ ಕಾರಣ. ಒಂದು ತಂಬೂರಿಯ ತಂತಿಯನ್ನು ಮೀಟಿದಾಗ ನಾದ ಹೊರಹೊಮ್ಮುತ್ತದೆ. ಆಗ ತಂತಿಯನ್ನು ಸ್ಪರ್ಶಿಸಿದರೆ ಅದರ ಆಂದೋಲನದ ಅರಿವಾಗುವುದು. ತಂತಿಯ ಆಂದೋಲನ ಕಡಿಮೆಯಾದಂತೆ ನಾದವೂ ತಗ್ಗಿ ಹೋಗುತ್ತದೆ. **(ನೋಡಿ– ಶಬ್ದ)**

**ವಿದ್ಯುತ್ ಆಂದೋಲನ :** ಒಂದು ವಾಹಕದಲ್ಲಿ (ಕಂಡಕ್ಟರ್) ವಿದ್ಯುತ್ ಪ್ರವಾಹ ಹರಿಯಲು ಎಲೆಕ್ಟ್ರಾನುಗಳ (ಋಣವಿದ್ಯುತ್ಕಣಗಳ) ಚಲನೆಯೇ ಕಾರಣ. ಎಲೆಕ್ಟ್ರಾನುಗಳು ವಾಹಕದಲ್ಲಿ ಆಂದೋಲಿಸಿದರೆ ಪರ್ಯಾಯ ವಿದ್ಯುತ್ ಪ್ರವಾಹ (ಆಲ್ಟರ್ನೇಟಿಂಗ್ ಕರೆಂಟ್) ಏರ್ಪಡುವುದು. ಇಂಥ ವಿದ್ಯುತ್ ಪ್ರವಾಹಗಳ ಉತ್ಪತ್ತಿಗಾಗಿ ವಿಶೇಷವಾದ ವಿದ್ಯುನ್ಮಂಡಲಗಳನ್ನು (ಎಲೆಕ್ಟ್ರಿಕಲ್ ಸರ್ಕ್ಯೂಟ್ಸ್ ) ರಚಿಸುತ್ತಾರೆ. (ಎ.ಆರ್.)

**ಪರಮಾಣು ಮತ್ತು ಆಂದೋಲನ :** ಶಕಲ ಬಲವಿಜ್ಞಾನದ (ಕ್ವಾಂಟಂ ಮೆಕ್ಯಾನಿಕ್ಸ್) ಪ್ರಕಾರ ಒಂದು ಪರಮಾಣುವಿನ ಕಂಪನಸಂಖ್ಯೆ v ಆಗಿದ್ದರೆ ಆ ಆಂದೋಳನಕಾರಕ ಶಕ್ತಿ E ತುಣುಕುಗಳಾಗಿ ಅಥವಾ ಶಕಲಗಳಾಗಿ ಇರಬಲ್ಲದು ಎಂದು ತಿಳಿದಿದೆ. ಇಲ್ಲಿ

$E=h_{\nu}$ h. ಪ್ಲಾಂಕನ ಸ್ಥಿರಾಂಕ. ಪರಮಾಣು 1 ಸೆಕೆಂಡಿಗೆ 10 ಮಿಲಿಯನ್ ಸಲ ಕಂಪಿಸುತ್ತಿದ್ದರೆ ($\nu$ = ಸೆಕೆಂಡ್‌ಗೆ $10^7$/) h ಬೆಲೆ 6.62 X $10^{-27}$ ಅರ್ಗ್–ಸೆಕೆಂಡು ಆಗಿರುವುದರಿಂದ

$E$= 6.62x $10^{-27}$ x $10^{7}$ = 6.62 x $10^{-20}$ ಅರ್ಗ್‌ಗಳು.

ಒಂದು ಹೂ ಎಸಳು ಗುರುತ್ವಾಕರ್ಷಣೆಯಿಂದ 1 ಸೆಂಮೀ ಊರ್ಧ್ವವಾಗಿ ಬೀಳುವಾಗ ಸಂಪಾದಿಸಿದ ಶಕ್ತಿ ಸು. 1 ಅರ್ಗ್ ಎಂದರೆ Eಯ ಬೆಲೆ ಎಷ್ಟು ಸೂಕ್ಷ್ಮವಾಗಿದೆ ಎಂದು ಸುಲಭವಾಗಿ ಗ್ರಹಿಸಬಹುದು. ಒಂದೊಂದು ಪರಮಾಣುವಿನ ಆಂದೋಲನ ಮತ್ತು ಅದಕ್ಕೆ ಕಾರಣವಾದ ಶಕ್ತಿ ಅತ್ಯಂತ ಸೂಕ್ಷ್ಮವಾಗಿದ್ದರೂ ವಸ್ತುವಿನಲ್ಲಿ ಅವುಗಳ ಸಂಯುಕ್ತ ಫಲ ವಿದ್ಯುತ್ ಪ್ರವಾಹವನ್ನು ನಿರೋಧಿಸಲು ಸಾಕಷ್ಟು ಇದೆ. ಈ ನಿರೋಧ (ಪರಮಾಣುಗಳ ಆಂದೋಲನ) ವಸ್ತುವಿನ ಉಷ್ಣತೆಯನ್ನು (ಟೆಂಪರೇಚರ್) ಅವಲಂಬಿಸಿದೆ. ಆದ್ದರಿಂದ ಅತಿ ಶೈತ್ಯ ಭೌತಶಾಸ್ತ್ರದಲ್ಲಿ ಪರಮಾಣು ಆಂದೋಲನವನ್ನು ಕನಿಷ್ಠ ಮಿತಿಗೆ ತಗ್ಗಿಸಿ ವಸ್ತುವಿನ ವಿದ್ಯುತ್‌ರೋಧವನ್ನು ಕಡಿಮೆ ಮಾಡಬಹುದೇ ಎಂಬುದರ ಬಗ್ಗೆ ಸಂಶೋಧನೆ ನಡೆದಿದೆ. *

**ಆಂದೋಲನಲೇಖಕ :** ಕಾಲಕಾಲಕ್ಕೆ ವಿದ್ಯುತ್ಪ್ರವಾಹ ಬದಲಾಗುವುದನ್ನು ನೋಡಿ ಅಳತೆ ಮಾಡುವ ಉಪಕರಣ ಆಂದೋಲನದರ್ಶಕ (ಆಸಿಲೋಸ್ಕೋಪ್). ಪರ್ಯಾಯ ವಿದ್ಯುತ್ತಿನ ಅಥವಾ ಇತರ ದೋಲಕ ವಿದ್ಯುತ್ ಬಲದ ತರಂಗ ರೂಪಗಳನ್ನು ವಕ್ರರೇಖೆಯ ರೂಪದಲ್ಲಿ ದಾಖಲಿಸುವ ಉಪಕರಣ ಆಂದೋಲನಲೇಖಕ (ಆಸಿಲೋಗ್ರಾಫ್). ಈ ಬದಲಾವಣೆಗಳು ಪರ್ಯಾಯ ವಿದ್ಯುತ್ಪ್ರವಾಹಗಳ ಹಾಗೆ ಪುನರಾವರ್ತನೆಯಾಗಬಹುದು. ಆಗ ಬರುವ ಎಲ್ಲ ತರಂಗಗಳೂ ಒಂದೇ ಸಮವಾಗಿರುತ್ತವೆ. ಈ ತರಂಗದ ರೂಪವನ್ನು ನಿರ್ದೇಶಿಸಲು ಎರಡು ಕ್ರಮಗಳಿವೆ. ಒಂದು ತರಂಗದ ರೂಪ. ಇನ್ನೊಂದು ಆಂದೋಲನ ಕ್ರಮ. ಚಕ್ರೀಯವಾದ (ಸೈಕ್ಲಿಕ್) ವ್ಯತ್ಯಾಸಗಳು ಉಂಟಾದಾಗ ಮೊದಲನೆಯ ಕ್ರಮವನ್ನು ಅನುಸರಿಸಬಹುದು. ಆದರೆ ಆಂದೋಲನ ಮಾಪನದ ಕ್ರಮವನ್ನು ಎಲ್ಲ ಉದ್ದೇಶಗಳಿಗೂ ಬಳಸಬಹುದು. ಅದಕ್ಕಾಗಿ ಇದು ಸಾಮಾನ್ಯವಾಗಿ ಬಳಕೆಯಲ್ಲಿದೆ.

ಜೂಬರ್ಟ್ ಅವರು ಮೊಟ್ಟಮೊದಲು ಉಪಯೋಗಿಸಿದ ಸ್ಪರ್ಶ (ಕಾಂಟ್ಯಾಕ್ಟ್) ಕ್ರಮದಲ್ಲಿ ಒಂದು ಆವರ್ತಕ್ಕೆ ಒಂದುಸಾರಿ ಸ್ಥಿರ ವಿದ್ಯುತ್ತಿನ ವೋಲ್ಟ್ ಮೀಟರಿಗೆ ಒಂದು ಕ್ಷಣಕಾಲ ಸಂಬಂಧ ಏರ್ಪಡುತ್ತದೆ. ಇದರಿಂದ ಆ ಕ್ಷಣದ ವಿದ್ಯುದ್ವಿಭವವನ್ನು ತಿಳಿಯಬಹುದು. ಸ್ಪರ್ಶ ಸ್ಥಳವನ್ನು ಬದಲಾಯಿಸಿದ ಹಾಗೂ ಇತರ ವಿದ್ಯುದ್ವಿಭವಗಳನ್ನು (ವೋಲ್ಟೇಜಸ್) ಅಳತೆಮಾಡಿ $\chi$ ಅಕ್ಷದ ಮೇಲೆ ಕೆಲವನ್ನೂ $\gamma$ ಅಕ್ಷದ ಮೇಲೆ ಈ ಕ್ಷಣಿಕ ವಿದ್ಯುದ್ವಿಭವಗಳನ್ನೂ ಗುರುತು ಮಾಡಿ , ತರಂಗವನ್ನು ಸಂಪೂರ್ಣವಾಗಿ ತೋರಿಸಬಹುದು.



ಚಿತ್ರ 1. ಜೂಬರ್ಟನ ಸ್ಪರ್ಶಕ್ರಮ

ಚಿತ್ರ 1 ರಿಂದ ಈ ಕ್ರಮ ತಿಳಿಯುತ್ತದೆ. D ಗಟ್ಟಿಯಾದ ಅವಾಹಕದಿಂದ ಪ್ರತ್ಯೇಕಿಸಿದ ಒಂದು ಬಿಲ್ಲೆ. ಅದನ್ನು ಪರ್ಯಾಯ ವಿದ್ಯುಜ್ಜನಕದ (ಆಲ್ಟರ್ನೇಟರ್) ಅಚ್ಚಿನ ಮೇಲೆ ಜೋಡಿಸಿರಬಹುದು. ಇಲ್ಲವೆ ಅದನ್ನು ಸಮಕಾಲಿಕವಾಗಿ (ಸಿಂಕ್ರೊನಸ್‌ಲಿ) ಓಡಿಸಬಹುದು. ಅದರ ಮಧ್ಯದಲ್ಲಿ ಒಂದು ಸಣ್ಣ ಲೋಹದ ಉಂಗುರವಿದೆ. ಅದರ ಮೇಲೆ ಒಂದು ಬ್ರಷ್ P ನಿಂತಿದೆ. ಇದೇ ಉಂಗುರಕ್ಕೆ ಚಕ್ರದೊಂದಿಗೆ ತಿರುಗುವ C ಎಂಬ ಲೋಹದ ಬಡಿಗೆಯನ್ನು ಖಾಯಂ ಆಗಿ ಜೋಡಿಸಿರುತ್ತಾರೆ. $P_1$ ಎಂಬ ಇನ್ನೊಂದು ಬ್ರಷ್ ಚಕ್ರದ ಒಂದು ಪರಿಭ್ರಮಣೆಗೆ ಒಂದು ಸಲ ಒಂದು ಕ್ಷಣ ಕಾಲ C ಯೊಂದಿಗೆ ಸೇರುತ್ತದೆ. ಈ ಸಂಪರ್ಕವಾದಾಗ Vಎಂಬ ಸ್ಥಾಯೀವಿದ್ಯುತ್ತಿನ ವೋಲ್ಟ್‌ಮಾಪಕ ವಿದ್ಯುತ್‌ಜನಕದ ಕೊನೆಗಳಿಗೆ ಸಂಬಂಧವನ್ನು ಪಡೆದು ಆ ಕ್ಷಣದ ವಿದ್ಯುದ್ವಿಭವವನ್ನು ಗುರುತುಮಾಡುತ್ತದೆ. P ಬ್ರಷ್ ಅನ್ನು S ಅಳತೆ ಪಟ್ಟಿಯ ಸುತ್ತ ಚಲಿಸುವುದರಿಂದ ಬೇರೆ ಕ್ಷಣಿಕ ವಿದ್ಯುದ್ಬಲಗಳನ್ನು ಗುರುತುಮಾಡಿ ಅವುಗಳಿಂದ ಒಂದು ತರಂಗದ ಆಕಾರವನ್ನು ಪಡೆಯಬಹುದು. ಈ ಕ್ರಮವನ್ನು ತೊಡಕಾದ ತರಂಗಗಳ ಆಕಾರಗಳಲ್ಲಿ ಸ್ವರಮೇಳವನ್ನು (ಹಾರ್ಮನೀಸ್) ಪ್ರತ್ಯೇಕಿಸಲು ಉಪಯೋಗಿಸುತ್ತಾರೆ. ಮೇಲಿನ ಕ್ರಮದಲ್ಲಿ ಹಾಸ್ಪಿಟಲಿಯರ್ ಮಾಡಿದ ಮಾರ್ಪಾಡಿನಲ್ಲಿ ತರಂಗದ ಆಕಾರವನ್ನು ಸುತ್ತುತ್ತಿರುವ ಮದ್ದಲೆಯ (ಡ್ರಂ) ಹೊರಭಾಗದಲ್ಲಿ ಗುರುತು ಮಾಡಬಹುದು. ಈ ಮದ್ದಲೆಯನ್ನೂ ಸ್ಪರ್ಶಕಾರಿಯನ್ನೂ (ಕಾಂಟ್ಯಾಕ್ಟ್ ಮೇಕರ್) ಒಂದು ಸಣ್ಣ ಸಮಕಾಲಿಕ ಮೋಟಾರು ಓಡಿಸುತ್ತದೆ. ಈ ಮೋಟಾರಿಗೆ ಪರೀಕ್ಷೆ ಮಾಡುತ್ತಿರುವ ಆಕಾರದಿಂದ ಶಕ್ತಿ ಒದಗುತ್ತದೆ. ಸಂಯೋಜನೆ ಮಾಡುವ ಬ್ರಷ್‌ಗಳು ವಿದ್ಯುಚ್ಚಾಲಕ ಬಲ (ಇ.ಎಂ.ಎಫ್.) ತರಂಗಕ್ಕೆ ಸಂಬಂಧಿಸಿದಂತೆ ಒಂದೇ ಸಮವಾಗಿ ಸ್ಥಾನ ಪಲ್ಲಟವಾಗುವ ಜಾಗವನ್ನು ನಿಧಾನವಾಗಿ ಬದಲಾಯಿಸಿ ಭ್ರಮಿಸುತ್ತಿರುವ ಮದ್ದಲೆಗೆ ಅಂಟಿಸಿರುವ ಕಾಗದದ ಮೇಲೆ ತಗಲಿಸಿರುವ ಲೇಖನಿಯ ಸ್ಥಾನ ಯಾವುದಾದರೂ ಒಂದು ಕ್ಷಣದಲ್ಲಿ ಆಗ ಇರುವ ವಿದ್ಯುಚ್ಚಾಲಕ ಬಲದ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ವಿದ್ಯುತ್ಪ್ರವಾಹಗಳ ಅಥವಾ ವಿದ್ಯುದ್ವಿಭವಗಳ ಅಲೆಗಳ ಕರಾರುವಾಕ್ಕಾದ ಆಕಾರಗಳನ್ನು ಒಡೆಯಲು ಉಪಯೋಗಿಸುವ ಆಂದೋಲನಮಾಪಕಗಳು ಪ್ರವಾಹ ವಿದ್ಯುನ್ಮಾಪಕಗಳ (ಗ್ಯಾಲ್ವನಾ ಮೀಟರ್ಸ್) ತತ್ತ್ವದ ಮೇಲೆ ಕೆಲಸ ಮಾಡುತ್ತದೆ. ಇವು ವಿದ್ಯುತ್ಪ್ರವಾಹದ ಅಥವಾ ವಿದ್ಯುದ್ವಿಭವದ ಅತಿಶೀಘ್ರವಾದ ಬದಲಾವಣೆಗಳನ್ನು ಅನುಸರಿಸಿ ಇವನ್ನು ಕಣ್ಣಿನಿಂದ ನೋಡುವುದಕ್ಕಾಗಲಿ ಛಾಯಾಚಿತ್ರಗಳನ್ನು ತೆಗೆಯುವುದಕ್ಕಾಗಲಿ, ಒಂದು ಪರದೆಯ ಮೇಲೆ ತೋರಿಸುತ್ತವೆ. ಇವುಗಳಲ್ಲಿ ಚಲಿಸುವ ಸುರುಳಿ, ಚಲಿಸುವ ಕಬ್ಬಿಣ, ಕಾದ ತಂತಿ, ಸ್ಥಿರ ವಿದ್ಯುತ್ ಮತ್ತು ಅಧೋವಾಟ ಕಿರಣ ಮೊದಲಾದ ಅನೇಕ ಮಾದರಿಗಳಿವೆ. ಕೊನೆಯದು ಒಂದು ಹೊರತಾಗಿ ಉಳಿದವುಗಳೆಲ್ಲ ಒಂದೇ ಸಾಮಾನ್ಯವಾದ ಏರ್ಪಾಡಿರುತ್ತದೆ. ಚಲಿಸುವ ಕ್ರಮದಲ್ಲಿ ವಿದ್ಯುತ್ ಅಥವಾ ವಿದ್ಯುದ್ವಿಭವ ಹರಿದಾಗ ಸೂಜಿ ತಿರುಗುತ್ತದೆ. ದೃಷ್ಟಿಯ ಪದ್ಧತಿಯಲ್ಲಿ (ಆಪ್ಟಿಕಲ್ ಸಿಸ್ಟಂ) ಈ ಚಲನೆಗಳು ಫೋಟೊ ಪಟಲದ ಮೇಲೆ ಪುನರಾವೃತ್ತಿಯಾಗುತ್ತವೆ. ಶೀಘ್ರವಾದ ಬದಲಾವಣೆಗೆ ಕೂಡಲೆ ಪ್ರತಿಕ್ರಿಯೆಯನ್ನು ತೋರಿಸಲು ಚಲಿಸುವ ಉಪಕರಣದ ನೈಸರ್ಗಿಕ ಆವರ್ತನೆಯ ಕಾಲ ಪರೀಕ್ಷೆ ಮಾಡುವ ವಿದ್ಯುತ್ತಿನ ಆವರ್ತನೆಯ ಕಾಲಕ್ಕಿಂತ ಚಿಕ್ಕದಾಗಿರಬೇಕು. ಚಲಿಸುವ ಉಪಕರಣಕ್ಕೆ ಒಂದು ಕನ್ನಡಿಯನ್ನು ಜೋಡಿಸಿದರೆ ಪಕ್ಕದ ಬಾಗುಗಳು ಒಂದು ಕನ್ನಡಿಯಿಂದ ಈ ದಿಕ್ಕಿಗೆ ಸಮಕೋನದಲ್ಲಿ ಒಂದು ಚಲನೆಯನ್ನು ಕೊಟ್ಟು ಚುಕ್ಕಿ ಒಂದು ವಕ್ರ ರೇಖೆಯಲ್ಲಿ ಸುತ್ತುತ್ತದೆಯೆಂದು ತೋರಿಸ ಬಹುದು. ಬೆಳಕಿನ ಚುಕ್ಕಿ ಸಮಕಾಲದಲ್ಲಿ ಸಮವಾದ ದೂರ ಬಾಗುವ ಹಾಗೆ ಮಾಡಿ ಬರುವ ವಕ್ರರೇಖೆ ಕಾಲಕ್ಕೂ ದೂರಕ್ಕೂ ಇರುವ ಸಂಬಂಧವನ್ನು ತಂತಾನೆ ತೋರಿಸುವ ಹಾಗೆ ಮಾಡ ಬಹುದು. ಒಂದು ಸಣ್ಣ ಸಮಕಾಲಿಕವಾದ (ಸಿಂಕ್ರೊನಸ್) ಮೋಟಾರಿನಿಂದ ಓಡುವ ಚಾಚುಭಾಗ (ಕ್ಯಾಮ್) ಕನ್ನಡಿ 1 $^1/_2$ ಆವರ್ತಗಳಲ್ಲಿ ಮುಂದಕ್ಕೆ ಚಲನೆಯನ್ನು ಕೊಟ್ಟು ಮುಂದಿನ $^1/_2$ ಆವರ್ತದಲ್ಲಿ ಸ್ವಸ್ಥಾನಕ್ಕೆ ತಿರುಗಿ ಬರುತ್ತದೆ. ಈ ಕಾಲದಲ್ಲಿ ಒಂದು ತಿರುಗುವ ಬಾಗಿಲಿನಿಂದ ಬೆಳಕನ್ನು ಛೇದಿಸುತ್ತಾರೆ. ಡಡೆಲ್ ಚಲಿಸುವ ಸುರಳಿಯ ಆಂದೋಲನ ಲೇಖಕ : ಚಿತ್ರ 3 ರಿಂದ ಅದರ ತತ್ತ್ವ ತಿಳಿಯಬಹುದು, ಫಾಸ್ಫರ್ ಕಂಚಿನ ಕುಣಿಕೆಯೇ ಚಲಿಸುವ ಭಾಗ. ಇದನ್ನು ಪ್ರಬಲವಾದ ಕಾಂತಕ್ಷೇತ್ರದಲ್ಲಿ ಇಟ್ಟಿರುತ್ತಾರೆ. ಈ ಕ್ಷೇತ್ರವನ್ನು ಸಾದಾ ಕಾಂತದಿಂದಾಗಲಿ ವಿದ್ಯುತ್ಕಾಂತ ದಿಂದಾಗಲಿ (ಎಲೆಕ್ಟ್ರೋ ಮ್ಯಾಗ್ನೆಟ್) ಉತ್ಪತ್ತಿ ಮಾಡಬಹುದು. ಫಾಸ್ಫರ್ ಕಂಚಿನ ಕುಣಿಕೆಯ ಮಧ್ಯದಲ್ಲಿ ಒಂದು ಸಣ್ಣ ಹಗುರವಾದ ಕನ್ನಡಿ ಅಂಟಿಸಿದೆ. ಕುಣಿಕೆಯ ಎರಡು ಭಾಗಗಳಿಗೆ ಮಧ್ಯೆ ಒಂದು ಮೆದುವಾದ ಕಬ್ಬಿಣದ ತುಂಡನ್ನೂ, ಕನ್ನಡಿಯನ್ನು ಬಿಟ್ಟು ಇಟ್ಟಿದೆ. ವಿದ್ಯುತ್ಪ್ರವಾಹ ಕುಣಿಕೆಯ (ಲೂಪ್) ಮೂಲಕ ಹರಿದಾಗ ಒಂದು ಭಾಗ ಒಳಕ್ಕೂ ಇನ್ನೊಂದು ಹೊರಕ್ಕೂ ಚಲಿಸಲು ಪ್ರಾರಂಭವಾಗಿ ಅದು ಪಕ್ಕಕ್ಕೆ ಬಾಗುತ್ತದೆ. ವಿದ್ಯುತ್ ಪರ್ಯಾಯವಾದಾಗ (ಆಲ್ಟರ್ನೇಟ್) ಕುಣಿಕೆ ಸ್ಪಂದಿಸುತ್ತದೆ. ಈ ಉಪಕರಣವನ್ನೇ ಎಣ್ಣೆಯಲ್ಲಿ ಮುಳುಗಿಸಿಟ್ಟು ಚಲನೆಯನ್ನು ಕಡಿಮೆ ಮಾಡುತ್ತಾರೆ. ಕಾಂತಕ್ಷೇತ್ರದಲ್ಲಿ ಒಂದೊಂದಕ್ಕೂ ತನ್ನದೇ ಕನ್ನಡಿಯಿರುವ ಎರಡು ಕುಣಿಕೆಗಳನ್ನಿಡುವುದು ರೂಢಿ. ಒಂದೇ ಕಾಲದಲ್ಲಿ ಒಂದು ಜೊತೆ ವಕ್ರರೇಖೆಗಳನ್ನು ಎಳೆದು ಅವುಗಳ ಪುನರಾವರ್ತಸರಣಿಯ ಪ್ರಾವಸ್ಥೆಯ (ಫೇಸ್) ವ್ಯತ್ಯಾಸ ಪತ್ತೆ ಮಾಡಬಹುದು. ಅವುಗಳಿಗೆ ನಡುವೆ ಒಂದು ಕನ್ನಡಿಯನ್ನು ಭದ್ರವಾಗಿ ಇಟ್ಟರೆ ಅದು ಅಲೆಗಳ ರೂಪಗಳನ್ನು ಬರೆದಿಡುವ ಪಟಲದಲ್ಲಿ ಶೂನ್ಯರೇಖೆಯನ್ನು ಒದಗಿಸುತ್ತದೆ. ಈ ಆಂದೋಲನಮಾಪಕಗಳನ್ನು ತಗ್ಗಿನ ವಿದ್ಯುದ್ವಿಭವಗಳಲ್ಲಿಯೂ ಆವೃತ್ತಿ (ಸೆಕೆಂಡಿಗೆ 300 ಆವರ್ತಗಳು) ಇರುವಾಗ ಬಳಸಬಹುದು.



ಚಿತ್ರ 2. ಆಂದೋಲನಲೇಖಕವನ್ನು ನೋಡುವ ಏರ್ಪಾಡು. 1 ಚಾಪ; 2 ಮಸೂರ; 3 ಪಟಲ; 4 ಮಸೂರ; 5 ಸಮಕಾಲಿಕ ಮೋಟಾರ್; 6 ಕ್ಯಾಮ್; 7 ಕನ್ನಡಿ; 8 ಅಪಾರದರ್ಶಕ ಪಟಲ; 9 ಕಂಪಿಸುವ ಕನ್ನಡಿ



ಚಿತ್ರ 3. ಡಡ್ಡೆಲ್ ಆಂದೋಲನಮಾಪಕ 1 ಬ್ರಿಜ್ ಪೀಸ್; 2. ಸ್ಪ್ರಿಂಗ್; 3. ದಂತದ ರಾಟೆ; 4 ಕೊನೆಗಳು

**ಬ್ಲಾಂಡೆಲ್ ಚಲಿಸುವ ಕಬ್ಬಿಣದ ಆಂದೋಲನಲೇಖಕ :** ಹಾಳೆಯಾದ, ಒಂದು ಚೂಪಾಗುತ್ತಾ ಹೋಗುವ ಅಯಸ್ಕಾಂತದ ಧ್ರುವಗಳು ಮತ್ತು ಕಬ್ಬಿಣದ ಸರಳುಗಳಿಂದ ಕೂಡಿದ ಬಲಿಷ್ಠವಾದ ಶಾಶ್ವತವಾದ U ಆಕಾರದ ಕಾಂತ ಅಗತ್ಯವಾದ ಕಾಂತಕ್ಷೇತ್ರವನ್ನು

ಒದಗಿಸುತ್ತದೆ. ನಡುವೆ ಒಂದೋ ಎರಡೋ ಗಾಳಿಯ ಕಂಡಿಗಳಿರುತ್ತವೆ. ತೆಳುವಾದ, ಅಗಲ ಕಡಿಮೆಯಾದ, ಮೆದು ಕಬ್ಬಿಣವನ್ನು ಒಂದೊಂದು ಕಂಡಿಯಲ್ಲಿಯೂ ಇಟ್ಟಿರುತ್ತಾರೆ. ಆಗ ಬಲರೇಖೆಗಳು (ಲೈನ್ಸ್ ಆಫ್ ಫೋರ್ಸ್) ಅಗಲಕ್ಕೆ ಅಡ್ಡಲಾಗಿ ಒಂದು ಕಡೆಯಿಂದ ಇನ್ನೊಂದಕ್ಕೆ ದಾಟುತ್ತವೆ. ಸ್ವಾಭಾವಿಕವಾದ ತಿರುಚುವ ಆವೃತ್ತಿ ಸೆಕೆಂಡಿಗೆ 40,000ದ ವರೆಗೂ ಇರುವಂತೆ ಈ ಪಟ್ಟಿಗಳನ್ನು ಎಳೆತದಲ್ಲಿಟ್ಟಿರುತ್ತಾರೆ. ಕಾಂತಕ್ಷೇತ್ರಕ್ಕೆ ಸಮಕೋನದಲ್ಲಿ ಪಕ್ಕಕ್ಕೆ ಬಾಗಿಸುವ ಶಕ್ತಿಯನ್ನು ಒಂದೊಂದು ಕಂಡಿಯ ಪಕ್ಕಗಳಲ್ಲಿಯೂ ಇರುವ ಚಿಕ್ಕತಂತಿಯ ಸುರುಳಿಗಳು ಒದಗಿಸುತ್ತವೆ. ಪಟ್ಟಿಯ ಮಧ್ಯೆ ಇರುವ ಕನ್ನಡಿ ತಿರುವನ್ನು ಸೂಚಿಸುತ್ತದೆ. ಎಣ್ಣೆಯಲ್ಲಿ ಮುಳುಗಿಸುವುದರಿಂದ ವೇಗ ಮಂದವಾಗುತ್ತದೆ. ಈ ವ್ಯವಸ್ಥೆಯನ್ನು ಚಿತ್ರ 5ರಲ್ಲಿ ತೋರಿಸಿದೆ.



ಚಿತ್ರ 4. ಡಡ್ಡೆಲ್ ಆಂದೋಲನಲೇಖಕ–ದೃಷ್ಟಿಯ ಏರ್ಪಾಡು. 1 ಆಂದೋಲನ ಮಾಪಕ; 2 ಪಟಲ; 3 ಸಮತಲ ಕನ್ನಡಿ; 4 ಕ್ಯಾಮ್; 5 ಬಾಗಿಲು

**ಇರ್ವಿನ್ ಕಾದ ತಂತಿಯ ಆಂದೋಲನಲೇಖಕ :** ಇದು ಉಷ್ಣದ ಮೂಲಕ ನಡೆಯುತ್ತದೆ. ಈ ಉಪಕರಣದಲ್ಲಿ ಅಲೆಯ ರೂಪವನ್ನು ಕಂಡುಹಿಡಿಯಬೇಕಾದ ಪರ್ಯಾಯ ವಿದ್ಯುತ್ತು ಎರಡು ತೆಳುವಾದ ತಂತಿಗಳ ಮೂಲಕ ಹರಿಯುತ್ತದೆ. ಇದರ ಜೊತೆಗೆ ಈ ತಂತಿಗಳಲ್ಲಿ ಒಂದು ಬ್ಯಾಟರಿಯಿಂದ ಅದೇ ದಿಕ್ಕಿನಲ್ಲಿ ಹರಿಯುವ ವಿದ್ಯುತ್ಪ್ರವಾಹಗಳ ಮೊತ್ತವೂ ಇನ್ನೊಂದರಲ್ಲಿ ಆ ಪ್ರವಾಹಗಳ ವ್ಯತ್ಯಾಸವೂ ಹರಿಯುತ್ತದೆ. ಹೀಗೆ ತಂತಿಯ ಒಂದು ಭಾಗ ಮತ್ತೊಂದಕ್ಕಿಂತ ಹೆಚ್ಚಾಗಿ ಕಾದು ಒಂದು ತಂತಿ ಇನ್ನೊಂದಕ್ಕಿಂತ ಹೆಚ್ಚಾಗಿ ಉದ್ದವಾಗಿ, ಅದರ ಪರಿಣಾಮವಾಗಿ ಒಂದು ಕನ್ನಡಿಯನ್ನು ವಾಲಿಸುತ್ತದೆ. ಸಾಮಾನ್ಯವಾದ ರೀತಿಯಲ್ಲಿ ಈ ಕನ್ನಡಿಯಿಂದ ಪ್ರತಿಫಲಿತವಾದ ಬೆಳಕನ್ನು ಒಂದು ಪರದೆಯ ಮೇಲೆ ಕಾಣಬಹುದು. ಅಥವಾ ಅದರ ಛಾಯಾಚಿತ್ರವನ್ನು ತೆಗೆಯಬಹುದು. ಈ ಉಪಕರಣದ ತತ್ತ್ವವನ್ನು ಚಿತ್ರ 6 ರಿಂದ ತಿಳಿಯಬಹುದು. ಇಲ್ಲಿ B ಎನ್ನುವುದು ಬ್ಯಾಟರಿ. S ಎಂಬುವು ಪಟ್ಟಿಗಳು. R ಎಂಬುವು ಒಂದೇ ಬಲದ ರೋಧ ಶಕ್ತಿಗಳು. $T_1$ ಮತ್ತು $T_2$ ಈ ಸಂಬಂಧದ ತಿರುಪುಗಳಿಗೆ ಬದಲಾಯಿಸುವ ವಿದ್ಯುತ್ಪ್ರವಾಹದ ಆಕರವನ್ನು ಸೇರಿಸಿದೆ.




ಚಿತ್ರ 5. ಬ್ಲಾಂಡೆಲ್ ಆಂದೋಲನಲೇಖಕ–1 ಲ್ಯಾಮಿನೇಟೆಡ್ ಪೋಲ್‌ಪೀಸ್; 2 ಕೋರ್; 3 ಕಾಯ್ಲ್; 4 ಗಾಳಿಗೆ ಎಡೆ; 5 ಕಾಂತ

**ಸ್ಥಾಯೀ ವಿದ್ಯುತ್ತಿನ ಆಂದೋಲನ ಲೇಖಕ :** ಹೋ ಮತ್ತು ಕೇಟೋ ಇವರು ನಿರ್ಮಿಸಿದ ಈ ಸಾಧನ ಕಡಿಮೆಯ ಆವೃತ್ತಿಯ ಹೆಚ್ಚಾದ ವಿದ್ಯುದ್ಬಲಕ್ಕೆ ಹೊಂದಿ ಕೊಂಡಿದೆ. ಇದರ ಅನುಕೂಲಗಳು ಹೀಗಿವೆ: ಇದು ಶಕ್ತಿಯನ್ನು ವ್ಯಯಮಾಡುವುದಿಲ್ಲ. ಇದಕ್ಕೆ ಕಿರಿದಾದ ವಿದ್ಯುತ್ಪ್ರವಾಹ ಸಾಕು. ಇದು ವಿದ್ಯುತ್ಕಾಂತ ಕ್ಷೇತ್ರಕ್ಕೆ ಬದಲಾಗಿ ಸ್ಥಾಯೀ ವಿದ್ಯುತ್ ಕ್ಷೇತ್ರದಲ್ಲಿ (ಎಲೆಕ್ಟ್ರೋಸ್ಟಾಟಿಕ್ ಫೀಲ್ಡ್) ತೂಗಾಡುವ ಕಿರಿದಾದ ಜೋಡುಪಟ್ಟಿಯನ್ನು ಉಪಯೋಗಿಸುತ್ತದೆ. ಈ ಸ್ಥಾಯೀ ವಿದ್ಯುತ್ ಕ್ಷೇತ್ರವನ್ನು (ಚಿತ್ರ 7) $F_1$ ಮತ್ತು $F_2$ ಈ ಎರಡು ಲೋಹದ ತಗಡುಗಳಿಗೆ ಪರ್ಯಾಯವಾದ ಒತ್ತಡವನ್ನು ಪ್ರಯೋಗಿಸಿ ಪಡೆಯುತ್ತಾರೆ. ವಿದ್ಯುದ್ವಿಭವ ಕಡಿಮೆಯಿದ್ದಾಗ $F_1$ ಮತ್ತು $F_2$ - ಇವಕ್ಕೆ ನೇರವಾಗಿ ಸಂಬಂಧವನ್ನು ಕಲ್ಪಿಸುತ್ತಾರೆ. ಆದರೆ ಈ ನಮೂನೆಯನ್ನು ಅನುಕೂಲವಾಗಿ ಬಳಸಬಹುದು. ಹೆಚ್ಚಿನ ವಿದ್ಯುದ್ವಿಭವಗಳಲ್ಲಿ C ಎಂಬ ವಿದ್ಯುತ್ ಸಂಗ್ರಾಹಕದಿಂದ (ಕಂಡೆನ್ಸರ್) ವಿದ್ಯುದ್ವಿಭವವನ್ನು ಇಳಿಸುತ್ತಾರೆ. $S_1$ ಮತ್ತು $S_2$ ಇವು ಅವಾಹಕದ ಮೂಲಕ, g, h ಈ ಸ್ಥಳಗಳಲ್ಲಿ ಪ್ರತ್ಯೇಕಿಸಿದ (ಇನ್ಸುಲೇಟೆಡ್) ಕಂಪನ ಮಾಡುವ ಪಟ್ಟಿಗಳು. ಇದನ್ನು g ಎಂಬ ಎಗರುಪಟ್ಟಿ ಯಿಂದ (ಸ್ಪ್ರಿಂಗ್) ಎಳೆತದಲ್ಲಿಟ್ಟು P ಎಂಬ ರಾಟೆಯ ಮೂಲಕ ಹೋಗುವ ರೇಷ್ಮೆಯ ದಾರಕ್ಕೆ ಸೇರಿಸಿರುತ್ತಾರೆ. n ಎಂಬ ತುದಿಯನ್ನು ತಿರುಗಿಸುವುದರಿಂದ ಎಳೆತವನ್ನು ಹೆಚ್ಚು ಕಡಿಮೆ ಮಾಡಬಹುದು. ಈ ಪಟ್ಟಿಗಳನ್ನು ಮತ್ತು e ಬಳಿ 300 ವೋಲ್ಟ್ ವಿದ್ಯುದ್ವಿಭವವನ್ನು ಕೊಡುವ B ಬ್ಯಾಟರಿಗೆ ಜೋಡಿಸಿದೆ. ಹೀಗಾಗಿ ಇವುಗಳಲ್ಲಿ ಎದುರು ದಿಕ್ಕಿನ ವಿದ್ಯುತ್ತು ಹರಿಯುತ್ತದೆ. ಸ್ಥಾಯೀವಿದ್ಯುತ್ ಕ್ಷೇತ್ರದ ತಗಡುಗಳಿಗೆ ಸಂಬಂಧಪಟ್ಟಂತೆ ಪಟ್ಟಿಗಳ ವಿದ್ಯುದ್ವಿಭವವನ್ನು ನಿಷ್ಕರ್ಷೆ ಮಾಡಲು $C_1$ ಮತ್ತು $C_2$ ಎಂಬ ವಿದ್ಯುತ್ ಸಂಗ್ರಾಹಕಗಳನ್ನು ಸೇರಿಸಿದೆ. ಅವೆರಡರ ಸಂಧಿಸ್ಥಾನವಾದ d ಯನ್ನು ವಿದ್ಯುತ್ಕೋಶದ ಮಧ್ಯಭಾಗವಾದ kಗೆ ಜೋಡಿಸಿದೆ. ಈ ಪಟ್ಟಿಗಳಿಗೆ ಒಂದು ಕನ್ನಡಿಯನ್ನು ತಗಲಿಸಿ ಪರಿಶೀಲನೆಗಳನ್ನು $F_1$ ಮತ್ತು $F_2$ ಇವುಗಳಲ್ಲಿರುವ $W_1$ ಮತ್ತು $W_2$ ಎಂಬ ಕಿಟಕಿಗಳ ಮೂಲಕ ಪ್ರತಿಫಲನವಾದ ಬೆಳಕಿನಿಂದ ಮಾಡುತ್ತಾರೆ. $F_1$ ಮತ್ತು $F_2$ ಇವೆರಡಕ್ಕೂ ಮಧ್ಯೆ ಉತ್ಪನ್ನವಾಗುವ ಪರ್ಯಾಯ ಸ್ಥಾಯೀವಿದ್ಯುತ್ ಕ್ಷೇತ್ರದಿಂದ ಈ ಪಟ್ಟಿಗಳು ಕಂಪಿಸುತ್ತವೆ. ಅದಕ್ಕಾಗಿ ಪ್ರಯೋಗಿಸಿದ ವಿದ್ಯುದ್ವಿಭವಗಳನ್ನು ಕರಾರುವಾಕ್ಕಾಗಿ ಅನುಸರಿಸಲು ಕುಣಿಕೆಯ (ಲೂಪ್) ಕಂಪನದ ಕಾಲ ಬಹಳ ಚಿಕ್ಕದಾಗಿರಬೇಕು.




ಚಿತ್ರ 6. ಇರ್ವಿನ್ ಕಾದ ತಂತಿಯ ಆಂದೋಲನಲೇಖಕದ ವಿದ್ಯುನ್ಮಂಡಲ




ಚಿತ್ರ 7. ಸ್ಥಾಯೀವಿದ್ಯುತ್ತಿನ ಆಂದೋಲನಲೇಖಕ

**ಅಧೋವಾಟ ಕಿರಣಗಳ ಆಂದೋಲನ ಲೇಖಕ :** ಇದು ಈಗ ವಿಶೇಷ ಬಳಕೆಯಲ್ಲಿದೆ. ಅದರ ಮೊದಲಿನ ರೂಪದಲ್ಲಿ ಋಣ ವಿದ್ಯುದ್ಧ್ರುವದಿಂದ ಧನ ವಿದ್ಯುದ್ಧ್ರುವಕ್ಕೆ ಅವುಗಳ ಚಲನೆಗೆ ಸಮಕೋನವಾಗಿ ಸರಿಯುವ ವಿದ್ಯುತ್ಕಾಂತ ಕ್ಷೇತ್ರವನ್ನು ಪ್ರಯೋಗಿಸಿ ತಿರುಗಿಸುತ್ತಿದ್ದರು. ಈ ವಿದ್ಯುನ್ಮಾನಗಳಿಗೆ ಜಡತ್ವ (ಇನರ್ಷಿಯ) ಇಲ್ಲ. ಉಪಕರಣವು ನಿರ್ಮಾಣದಲ್ಲಿಯೂ ಕೆಲಸಮಾಡುವ ರೀತಿಯಲ್ಲಿಯೂ ಸರಳವಾಗಿದೆ. ಆದ್ದರಿಂದ ಕ್ಷಣಿಕವಾದ ಹೆಚ್ಚಿನ ಆವೃತ್ತಿಯ (ಫ್ರೀಕ್ವೆನ್ಸಿ) ಘಟನೆಗಳನ್ನು ಪರಿಶೀಲಿಸಲು ಅನುಕೂಲವಾಗಿದೆ.

ಈವಾಗ ಈ ಉಪಕರಣದಲ್ಲಿ ಪೇರು ಹಣ್ಣಿನ ಆಕಾರದ ಗಾಜಿನ ಕೊಳವೆಯ ಅಗಲವಾದ ಭಾಗಕ್ಕೆ ಒಂದು ಮಿಶ್ರಣವನ್ನು ಬಳಿದು ಸ್ಫುರಣವಾಗುವ (ಫ್ಲೂರಸೆಂಟ್) ಪರದೆಯಾಗಿ ಮಾಡುತ್ತಾರೆ. ತಯಾರುಮಾಡುವಾಗಲೇ ಕೊಳವೆಯಿಂದ ಗಾಳಿಯನ್ನೆಲ್ಲ ತೆಗೆದು ಕೊಂಚವೇ ಆರ್ಗಾನ್ ಅನಿಲವನ್ನು ಒಳಕ್ಕೆ ಬಿಡುತ್ತಾರೆ. ಅದರ ಕಿರಿದಾದ ಕೊನೆಯಲ್ಲಿ ಆಕ್ಸೈಡನ್ನು ಬಳಿದ ಟಂಗ್‌ಸ್ಟನ್ನಿನ ತಂತುವಿರುತ್ತದೆ (ಫಿಲಮೆಂಟ್). ಅದರ ಕೊನೆಯನ್ನು ಕೊಳವೆಯ ತಳದಿಂದ ಹೊರಕ್ಕೆ ತಂದಿರುತ್ತದೆ. ಇನ್ನು ಕೊಂಚ ಎತ್ತರದಲ್ಲಿ ಕೊಳವೆಯಲ್ಲಿ ಧನ ವಿದ್ಯುದ್ಧ್ರುವದ ತೆಳ್ಳನೆಯ ದುಂಡು ತಗಡಿರುತ್ತದೆ. ಇದಕ್ಕೂ ತಂತುವಿಗೂ ಮಧ್ಯೆ ಒಂದು ಪರದೆಯಿದೆ. ಈ ಪರದೆ ತಂತುವನ್ನು ಎಲೆಕ್ಟ್ರಾನುಗಳ ಪ್ರವಾಹಕ್ಕೆ ಎದುರಾಗಿ ಬರುತ್ತಿರುವ ಧನ ವಿದ್ಯುತ್ತಿನ ಕಣಗಳ ಪ್ರವಾಹದಿಂದ ರಕ್ಷಿಸುತ್ತದೆ. ಧನ ವಿದ್ಯುತ್ತಿನ ಕೊಳವೆಯ ವಿದ್ಯುತ್ಪ್ರವಾಹ ತಂತುವಿನ ಋಣ ಧ್ರುವಕ್ಕಿಂತ 300 ವೋಲ್ಟುಗಳನ್ನು ಮೀರಿದರೆ ವಿದ್ಯುನ್ಮಾನಗಳ ಪ್ರವಾಹ ಒಂದು ದಿಕ್ಕು ಸಿಕ್ಕಿದ್ದರಿಂದ ಅದರ




ಚಿತ್ರ 8. ಅಧೋವಾಟ ಕಿರಣಗಳ ಆಂದೋಲನಲೇಖಕ. 1 ಭೂಮಿ; 2 ಭೂಮಿ; 3 ಧನವಿದ್ಯುದ್ಧ್ರುವ; 4 ಶೀಲ್ಡ್; 5 ಋಣವಿದ್ಯುದ್ಧ್ರುವ ಅಥವಾ ತಂತು

ಮೂಲಕ ನುಗ್ಗುತ್ತದೆ. ವಿದ್ಯುನ್ಮಾನಗಳು ಧನ ಧ್ರುವದಿಂದ ಕಿರಣಗಳ ಕಡ್ಡಿಯಾಗಿ ಧನ ಧ್ರುವದ ಆಚೆಗೆ ಸ್ವಲ್ಪ ದೂರ ಇಟ್ಟಿರುವ ಓರೆಯಾಗಿ ಮಾಡುವ ಎರಡು ಫಲಕಗಳ ಮಧ್ಯೆ ನುಸಿಯುತ್ತವೆ. ಇನ್ನೊಂದು ಜೊತೆ ಫಲಕಗಳು ಮತ್ತೂ ಸ್ವಲ್ಪ ದೂರವಾಗಿರುತ್ತವೆ. ಈ ಎರಡು ಜೊತೆಗಳ ಸಮತಲಗಳು ಒಂದಕ್ಕೊಂದು ಸಮಕೋನವಾಗಿರುತ್ತವೆ. ಕೊನೆಯಲ್ಲಿ ಋಣ ವಿದ್ಯುತ್ತಿನ ಕಿರಣಗಳ ಕಡ್ಡಿ ಸ್ಫುರಣವಮಾಡುವ ಗುಣವುಳ್ಳ ಪರದೆಯನ್ನು ಮುಟ್ಟಿ ಒಂದು ಪ್ರಕಾಶಮಾನವಾದ ಚುಕ್ಕಿಯನ್ನು ಉಂಟುಮಾಡುತ್ತದೆ.



ಚಿತ್ರ 9. ಆಂದೋಲನಲೇಖಕ ಬಿಂಬಗ್ರಾಹಿ

ಒಂದು ಜೊತೆ ಫಲಕಗಳ ನಡುವೆ ಸ್ಥಾನಶಕ್ತಿಯ ವ್ಯತ್ಯಾಸವನ್ನುಂಟುವಮಾಡಿ ಇನ್ನೊಂದು ಜೊತೆಯ ಸಂಬಂಧವನ್ನು ಕಡಿದರೆ ಪರದೆಯ ಮೇಲಿರುವ ಬೆಳಕಿನ ಚುಕ್ಕಿ ಓರೆಯಾಗುತ್ತದೆ. ಸ್ಥಾನಶಕ್ತಿಯ ವ್ಯತ್ಯಾಸ ಪರ್ಯಾಯ ವಿದ್ಯುತ್ತಿನದಾಗಿದ್ದರೆ ಓರೆಮಾಡುವ ಫಲಕದ ಸ್ಥಾನಕ್ಕೆ ಅನುಗುಣವಾಗಿ ಮಟ್ಟವಾಗಿಯಾಗಲಿ ಇಲ್ಲವೆ ಲಂಬವಾಗಿಯಾಗಲಿ, ಆ ಚುಕ್ಕಿ ಒಂದು ಸರಳರೇಖೆಯ ಮೇಲೆ ಸಂಚರಿಸುತ್ತದೆ. ಒಂದು ಜೊತೆ ಫಲಕಗಳಿಗೆ ಬದಲಾಗಿ ಕೊಳವೆಯ ಹೊರಗಡೆ ಎದುರುಬದುರಾದ ಸ್ಥಾನಗಳಲ್ಲಿ ಎರಡು ತಂತಿಯ ಸುರಳಿಗಳನ್ನಿಟ್ಟು ವಿದ್ಯುನ್ಮಾನಗಳ ಪ್ರವಾಹವನ್ನು ಓರೆಮಾಡಲು ಕಾಂತಕ್ಷೇತ್ರವನ್ನು ಉತ್ಪತ್ತಿಮಾಡುವ ಈ ತಂತಿಯ ಸುರಳಿಗಳ ಮೂಲಕ ವಿದ್ಯುತ್ಪ್ರವಾಹವನ್ನು ಕಳಿಸಿ ಇದೇ ರೀತಿಯ ಭಾಗವನ್ನು ಉಂಟುಮಾಡಬಹುದು.




ಚಿತ್ರ 10. ಆಂದೋಲನಲೇಖ

ಈ ರೇಖೆಯನ್ನು ಕಾಲಕಾಲಕ್ಕೆ ಬದಲಾಗುವ ವ್ಯತ್ಯಾಸಗಳನ್ನು ತೋರಿಸುವ ವಕ್ರರೇಖೆಗೆ ಪರಿವರ್ತನ ಮಾಡಬೇಕಾದರೆ ಒಂದು ಕಾಲದ ಆಧಾರವನ್ನು ಒದಗಿಸುವುದಕ್ಕಾಗಿ ಈ ಪರ್ಯಾಯ ವಿದ್ಯುತ್ತಿಗೆ ಸಮಕೋನವಾದ ಇನ್ನೊಂದು ಬಾಗಿಸುವ ಬಲ ಬೇಕಾಗುತ್ತದೆ. ಇದಕ್ಕಾಗಿ ಓರೆಮಾಡುವ ಎರಡನೆಯ ಜೊತೆ ಫಲಕಗಳಿಗೆ ಒಂದು ನಿಯತವಾದ (ಕಾನ್‌ಸ್ಟೆಂಟ್) ದರದಲ್ಲಿ ವಿದ್ಯುದ್ವಿಭವವನ್ನು ಪ್ರಯೋಗಿಸಬೇಕಾಗುತ್ತದೆ. ಆಗ ಪರ್ಯಾಯವಾಗುವ ಕ್ಷೇತ್ರದಿಂದ ಉದ್ಭವಿಸುವ ಓಲುವೆಯ (ಡಿಫ್ಲೆಕ್ಷನ್) ದಿಕ್ಕಿಗೆ ಸಮಕೋನವಾಗಿರುವ ದಿಕ್ಕಿನಲ್ಲಿ ಚುಕ್ಕಿಯ ಸ್ಥಾನಪಲ್ಲಟ (ಡಿಸ್‌ಪ್ಲೇಸ್ ಮೆಂಟ್) ಏಕರೀತಿಯ ಪ್ರಮಾಣದಲ್ಲಿ ರುತ್ತದೆ. ಆಗ ರೇಖೀಯ (ಲೀನಿಯರ್) ಕಾಲದ ಆಧಾರವುಳ್ಳ ತರಂಗ ಬರುತ್ತದೆ. ಈ ರೀತಿಯಲ್ಲಿ ಸಮಕೋನದಲ್ಲಿರುವ ಸಮಕ್ಷೇತ್ರ ವಿನ್ಯಾಸದಲ್ಲಿ ಹೀಗೆ ಪರ್ಯಾಯವಾದ ತರಂಗದ ಆಕಾರವನ್ನು ಗುರುತು ಮಾಡಬಹುದು. ಬದಲಾಗುತ್ತಿರುವ ಎರಡು ಪರಿಮಾಣಗಳನ್ನು ಒಂದೇ ಕಾಲದಲ್ಲಿ ಪರಿಶೀಲಿಸಬೇಕಾಗಿ ಬಂದಾಗ ಎರಡು ಕಿರಣಗಳ ಜಾಲಗಳ ಅಧೋವಾಟ ಕಿರಣಗಳ ಆಂದೋಲನ ಮಾಪಕವನ್ನು ಉಪಯೋಗಿಸಬಹುದು. ಆದರೆ ಡಡೆಲ್ ಮಾದರಿಯ ಅನೇಕ ಭಾಗಗಳಿರುವ ವಿದ್ಯುತ್ಕಾಂತ ಆಂದೋಲನಮಾಪಕವನ್ನು ಒಂದು ಯಂತ್ರದ ಮೂರು ನಿರ್ದಿಷ್ಟ ನೆಲೆಗಳಲ್ಲಿ ವಿದ್ಯುತ್ಪ್ರವಾಹ ಗಳು ಮತ್ತು ವಿದ್ಯುದ್ವಿಭವಗಳ ಹಾಗೆ ಅನೇಕ ಪರಿಣಾಮಗಳಲ್ಲಿ ಬದಲಾವಣೆಗಳನ್ನು ಪರಿಶೀಲಿಸಲು ಉಪಯೋಗಿಸುತ್ತಾರೆ.

(ಕೆ.ಎನ್.)



ಚಿತ್ರ 11. ಆಂದೋಲನಲೇಖಕ

**ಆಂದ್ರಿಚ್, ಈವೊ :** 1892. ಯುಗೋಸ್ಲಾವಿಯದ ಕಾದಂಬರಿಕಾರ, ಕವಿ, ಕಥೆಗಾರ. ಒಂದನೆಯ ಮಹಾಯುದ್ಧಕ್ಕೆ ಮೊದಲು ಯೂಗೋಸ್ಲಾವಿಯದ ಐಕ್ಯಕ್ಕಾಗಿ ಹೋರಾಡಿದುದರಿಂದ ಆಸ್ಟ್ರಿಯದ ಆಡಳಿತಗಾರರು ಬಂಧನದಲ್ಲಿಟ್ಟರು. ಸ್ವತಂತ್ರ ಯುಗೋಸ್ಲಾವಿಯದಲ್ಲಿ ರಾಯಭಾರಿ ಶಾಖೆಯಲ್ಲಿ ಕೆಲಸ ಮಾಡಿದ. ಎರಡನೆಯ ಮಹಾಯುದ್ಧ, ಯೂಗೋಸ್ಲಾವಿಯದಲ್ಲಿ ಹೊಸ ರಾಜಕೀಯ ಪಂಥದ ಆಡಳಿತದ ಪ್ರತಿಷ್ಠಾಪನೆ – ಇವು ಹಲವು ಸಾಹಿತಿಗಳ ಅಸ್ತಮಾನವನ್ನು ತಂದರೂ ಈತ ನಾಡಿನ ಅತ್ಯಂತ ಪ್ರಭಾವಯುತ, ಸನ್ಮಾನಿತ ಸಾಹಿತಿಗಳಲ್ಲಿ ಒಬ್ಬನಾಗಿ ಉಳಿದ. ಮನುಷ್ಯರ ನೋವಿನಲ್ಲಿ ಗಾಢವಾದ ಅನುಕಂಪ, ನಿಸರ್ಗದ ನಿಗೂಢತೆಯ ಎದುರಿನಲ್ಲಿ ಮನುಷ್ಯನ ಅಲ್ಪತ್ವಗಳು ಇವನ ಕೃತಿಗಳಲ್ಲಿ ಅಭಿವ್ಯಕ್ತಿ ಪಡೆದಿವೆ. ಇವನ ಶೈಲಿ ನಿಷ್ಪಕ್ಷವೂ ಅಡಕವೂ ಆಗಿದೆ. ಬೋಸ್ನಿಯ ರೈತವರ್ಗವನ್ನು ಅಸಾಧಾರಣ ಯಶಸ್ಸಿನಿಂದ, ಕಣ್ಣಿಗೆ ಕಟ್ಟುವ ಹಾಗೆ ಆತ್ಮೀಯವಾಗಿ ಈತ ಚಿತ್ರಿಸಿದ್ದಾನೆ. ಬೊಸ್ನಿಯವನ್ನು ಕುರಿತು ಈತ ಬರೆದಿರುವ ಮೂರು ಭಾಗದ ಕೃತಿಗೆ 1961ರಲ್ಲಿ ನೊಬೆಲ್ ಪ್ರಶಸ್ತಿ ದೊರೆಯಿತು. (ಎಲ್.ಎಸ್.ಎಸ್.)

**ಆಂದ್ರೆಯಾನಿ, ಜೋವನಿ ಬ್ಯಾಟಿಸ್ಟ :** 1578–1652. ಇಟಲಿಯ ನಾಟಕಕಾರ, ನಟ. ಹಲವಾರು ಪ್ರಹಸನಗಳನ್ನು ಬರೆದರೂ ಹೆಸರು ಉಳಿದಿರುವುದು ಬೈಬಲ್ ಕಥೆಯನ್ನು ಅನುಸರಿಸಿ ಬರೆದ, ಅದ್ಭುತ ಕಾಲ್ಪನಿಕ ಪ್ರಹಸನ ಆಡೆಮೋದಿಂದ. ಇದು ಮಿಲ್ಟನ್ ಕವಿಗೆ ತನ್ನ ಮಹಾಕಾವ್ಯ ಪ್ಯಾರಡೈಸ್ ಲಾಸ್ಟ್ ಬರೆಯಲು ಸೂಚನೆಕೊಟ್ಟಿತೆಂದು ಹೇಳಲಾಗಿದೆ.

(ಎಚ್.ಕೆ.ಆರ್.)

**ಆಂಧ್ರಪತ್ರಿಕಾ :** ಪ್ರಸಿದ್ಧ ತೆಲುಗು ಪತ್ರಿಕೆಗಳಲ್ಲೊಂದು. ದೇಶೋದ್ಧಾರಕ ನಾಗೇಶ್ವರರಾವ್ ಪಂತುಲು ಬೊಂಬಾಯಿಯಲ್ಲಿ ವಾರಪತ್ರಿಕೆಯಾಗಿ ಸ್ಥಾಪಿಸಿದರು (1909). ಅನಂತರ ಮದರಾಸಿಗೆ ವರ್ಗಾವಣೆ ಹೊಂದಿ (1914) ಜನ ಪ್ರಿಯ ದಿನಪತ್ರಿಕೆಯಾಯಿತು. ಇದು ಆಂಧ್ರದೇಶದ ಮೊದಲ ಸುವ್ಯವಸ್ಥಿತ ದೈನಂದಿನ ಪತ್ರಿಕೆ. ಆಂಧ್ರ ಪ್ರಾಂತ್ಯ ರಚನೆಯ ಬಗ್ಗೆ ಇದು ತೋರಿದ ಮಧ್ಯಮ ನೀತಿ, ಒಂದನೆಯ ಮಹಾ ಯುದ್ಧ, ಅನಂತರದ ಭಾರತ ರಾಷ್ಟ್ರೀಯ ಚಳವಳಿಯಲ್ಲಿ ಇದು ತೋರಿದ ಧೋರಣೆಗಳಿಂದಾಗಿ ಜನ ಪ್ರಿಯ ರಾಷ್ಟ್ರಪತ್ರಿಕೆ ಎನ್ನಿಸಿಕೊಂಡಿತು. 1969ರಲ್ಲಿ ಆಂಧ್ರಪತ್ರಿಕೆಯು ತನ್ನ ಸ್ವಂತ ಕಚೇರಿಯನ್ನು ದೆಹಲಿಯಲ್ಲಿ ಸ್ಥಾಪಿಸಿತು. ಇದರ ಸ್ವರ್ಣಮಹೋತ್ಸವ 1964ರಲ್ಲಾಯಿತು. ಜೊತೆಪತ್ರಿಕೆಗಳಾಗಿ ವಾರಪತ್ರಿಕೆಯೂ ಭಾರತಿ ಎಂಬ ಮಾಸಿಕವೂ ಜನಮನ್ನಣೆ ಗಳಿಸಿವೆ. ಕೇಂದ್ರ ಕಾರ್ಯಾಲಯ ಹೈದರಾಬಾದ್ ನಲ್ಲಿದೆ. (ಟಿ.ಟಿ.ಎಸ್.)

**ಆಂಧ್ರ ಪ್ರದೇಶ :** ಭಾರತದ ಒಂದು ರಾಜ್ಯ. ದಕ್ಷಿಣದಿಂದ ಮಧ್ಯಭಾರತವನ್ನು ಮುಟ್ಟುವಂತಿರುವ ಈ ರಾಜ್ಯ ಭಾರತದ 965 ಕಿಮೀ ಪೂರ್ವ ತೀರವನ್ನೊಳಗೊಂಡಿದೆ. ಉ.ಅಕ್ಷಾಂಶ $77^0 - 85^0$, ಪೂರ್ವರೇಖಾಂಶ $12^0$–$19^0$ ಯವರೆಗೆ ಹರಡಿರುವ ಈ ರಾಜ್ಯವನ್ನು ಉತ್ತರದಲ್ಲಿ ಒರಿಸ್ಸ, ಛತ್ತೀಸ್‌ಘರ್ ಮತ್ತು ಮಹಾರಾಷ್ಟ್ರ ರಾಜ್ಯಗಳೂ ದಕ್ಷಿಣದಲ್ಲಿ ಕರ್ನಾಟಕ, ತಮಿಳುನಾಡು ರಾಜ್ಯಗಳೂ ಪೂರ್ವದಲ್ಲಿ ಬಂಗಾಲಕೊಲ್ಲಿಯೂ ಪಶ್ಚಿಮದಲ್ಲಿ ಕರ್ನಾಟಕ ರಾಜ್ಯ ಸುತ್ತುವರೆದಿವೆ. 23 ಜಿಲ್ಲೆಗಳನ್ನೂ 210 ನಗರ ಪಟ್ಟಣಗಳನ್ನೂ 28,123 ಗ್ರಾಮಗಳನ್ನೊಳಗೊಂಡ ಈ ರಾಜ್ಯದ ಒಟ್ಟು ವಿಸ್ತೀರ್ಣ 2,75,069 ಚಕಿಮೀ. ಜನಸಂಖ್ಯೆ 7,61,11,243 (2001). ರಾಜಧಾನಿ ಹೈದರಾಬಾದ್.

**ಮೇಲ್ಮೈ ಲಕ್ಷಣಗಳು** : ದಕ್ಷಿಣ ಭಾರತದಲ್ಲಿ ದಖನ್ ಪ್ರಸ್ಥಭೂಮಿಯ ಉತ್ತರ ಪ್ರದೇಶವನ್ನೊಳಗೊಂಡಿರುವ ಈ ರಾಜ್ಯವನ್ನು ಮೂರು ಭಾಗವಾಗಿ ವಿಂಗಡಿಸಬಹುದು. 1 ದಖನ್ ಪ್ರಸ್ಥಭೂಮಿ: ಮಧ್ಯಭಾಗವನ್ನೊಳಗೊಂಡಿದೆ. ಇದನ್ನು ತೆಲಂಗಾಣ ಪ್ರಸ್ಥಭೂಮಿ ಎನ್ನುತ್ತಾರೆ. ಇದು ದಕ್ಷಿಣದಲ್ಲಿ ಚಿತ್ತೂರಿನಿಂದ ಉತ್ತರದಲ್ಲಿ ಅದಿಲಾಬಾದ್‌ವರೆಗೆ ಹಬ್ಬಿದೆ. ದಕ್ಷಿಣಭಾಗದಲ್ಲಿ ಕಿರಿದಾಗಿದ್ದು ಉತ್ತರಕ್ಕೆ ಹೋದಂತೆಲ್ಲ ಅಗಲವಾಗುತ್ತದೆ. 2 ಪೂರ್ವಘಟ್ಟಗಳ ಪ್ರದೇಶ : ಇದು ದಕ್ಷಿಣದಲ್ಲಿ ಶೇಷಾಚಲ (ತಿರುಪತಿ) ಮತ್ತು ಪಾಲ್‌ಕೊಂಡ ಬೆಟ್ಟಗಳಿಂದ ಉತ್ತರದಲ್ಲಿ ಶ್ರೀಕಾಕುಳಂ ಜಿಲ್ಲೆಯ ಉತ್ತರಭಾಗದವರೆಗೆ ಹಬ್ಬಿದೆ. ನಲ್ಲಮಲ ಎಂಬ ಹೆಸರಿನ ಈ ಪೂರ್ವ ಘಟ್ಟಗಳು 430 ಕಿಮೀ ಉದ್ದವಾಗಿ ಸರಾಸರಿ 30 ಕಿಮೀ ಅಗಲವಾಗಿವೆ.

ಇವು ಸಾಧಾರಣವಾಗಿ 900 ರಿಂದ 1,100 ಕಿಮೀ ಎತ್ತರವಾಗಿವೆ. ಈ ಘಟ್ಟಗಳು ದಕ್ಷಿಣದಲ್ಲಿ ನೆಲ್ಲೂರು, ಗುಂಟೂರು ಜಿಲ್ಲೆಗಳಲ್ಲಿ ಒಂದೇ ಸಮನಾಗಿ ಹಬ್ಬಿವೆ. ಉತ್ತರದ ಕಡೆ ಹೋದಂತೆಲ್ಲ ಅಲ್ಲಲ್ಲಿ ಒಡೆದು ಹೋಗಿ ನದಿಗಳ ಪಾತ್ರಕ್ಕೆ ಅವಕಾಶ ಮಾಡಿಕೊಟ್ಟಿವೆ. ದಕ್ಷಿಣದಲ್ಲಿ ಪೆನ್ನಾರ್ ನದಿ ಮಧ್ಯಭಾಗದಲ್ಲಿ ಕೃಷ್ಣಾ ಮತ್ತು ಗೋದಾವರಿ ನದಿಗಳ ಪರ್ವತ ಪಂಕ್ತಿಗಳನ್ನು ಒಡೆದು ಪೂರ್ವಾಭಿಮುಖವಾಗಿ ಹರಿಯುತ್ತದೆ. 3 ಪೂರ್ವತೀರ ಪ್ರದೇಶ : ಪೂರ್ವ ಘಟ್ಟಗಳು ಮತ್ತು ಬಂಗಾಲಕೊಲ್ಲಿಯ ತೀರದ ನಡುವೆ ಸಮುದ್ರ ತೀರ ಮೈದಾನವಿದೆ. ಇದು 100 ರಿಂದ 150 ಕಿಮೀ ಅಗಲವಾಗಿದೆ. ಗೋದಾವರಿ ಈ ತೀರ ಮೈದಾನದಲ್ಲಿ ಎರಡು ಕವಲಾಗಿ ಹರಿದು ಗೌತಮೀ ಗೋದಾವರಿ, ವಸಿಷ್ಠ ಗೋದಾವರಿ ಎಂದು ಹೆಸರು ಪಡೆದು ಏಳು ಪ್ರವಾಹಗಳಾಗಿ ಸಮುದ್ರವನ್ನು ಸೇರುವ ಸ್ವಲ್ಪ ಮುನ್ನ ಮೂರು ಉಪ ಪ್ರವಾಹಗಳಾಗಿ ಹರಿಯುತ್ತದೆ. ಗೋದಾವರಿ ಮತ್ತು ಕೃಷ್ಣಾ ನದಿಗಳ ಮುಖಜ ಭೂಮಿಯಲ್ಲಿ ನೂರಾರು ನೀರಾವರಿ ಕಾಲುವೆ ಉಪ ಕಾಲುವೆಗಳಿವೆ.

| **ಕ್ರಮ ಸಂಖ್ಯೆ** | **ಜಿಲ್ಲೆ<br>ಆಡಳಿತ ಕೇಂದ್ರ** | **ವಿಸ್ತೀರ್ಣ ಚ.ಕಿಮೀ** | **ಜನಸಂಖ್ಯೆ (2001)** |
|---|---|---|---|
| | **ರಾಯಲಸೀಮಾ ಪ್ರಾಂತ್ಯ** | | |
| 1 | ಅನಂತಪುರ<br>ಅನಂತಪುರ | 19,130 | 36,39,304 |
| 2 | ಚಿತ್ತೂರು<br>ಚಿತ್ತೂರು | 15,152 | 37,35,202 |
| 3 | ಕಡಪ<br>ಕಡಪ | 15,359 | 2,573,481 |
| 4 | ಕರ್ನೂಲ್<br>ಕರ್ನೂಲ್ | 17,658 | 3,512,266 |
| | **ಆಂಧ್ರ ಪ್ರಾಂತ್ಯ** | | |
| 5 | ಪೂರ್ವಗೋದಾವರಿ<br>ಕಾಕಿನಾಡ | 10,807 | 4,872,622 |
| 6 | ಗುಂಟೂರು<br>ಗುಂಟೂರು | 11,391 | 4,405,521 |
| 7 | ಕೃಷ್ಣ<br>ಮಚಲಿಪಟ್ಟಣ | 8,734 | 4,218,416 |
| 8 | ನೆಲ್ಲೂರು<br>ನೆಲ್ಲೂರು | 13,076 | 2,659,661 |
| 9 | ಪ್ರಕಾಶಂ<br>ಓಂಗೋಲೆ | 17,626 | 30,54,941 |
| 10 | ಶ್ರೀಕಾಕುಳಂ<br>ಶ್ರೀಕಾಕುಳಂ | 58,037 | 25,28,491 |
| 11 | ವಿಶಾಖಪಟ್ಟಣ<br>ವಿಶಾಖಪಟ್ಟಣ | 11,161 | 37,89,823 |
| 12 | ವಿಜಯನಗರ<br>ವಿಜಯನಗರ | 6,539 | 22,45,103 |
| 13 | ಪಶ್ಚಿಮ ಗೋದಾವರಿ<br>ಎಲ್ಲೂರು | 7,742 | 37,96,144 |
| | **ತೆಲಂಗಾಣ ಪ್ರಾಂತ್ಯ** | | |
| 14 | ಅದಿಲಾಬಾದ್<br>ಅದಿಲಾಬಾದ್ | 16,128 | 24,79,347 |
| 15 | ಹೈದರಾಬಾದ್<br>ಹೈದರಾಬಾದ್ | 217 | 36,86,460 |
| 16 | ಕರೀಂನಗರ್<br>ಕರೀಂನಗರ್ | 11,823 | 34,77,079 |
| 17 | ಕಮ್ಮಮ್<br>ಕಮ್ಮಮ್ | 16,029 | 25,65,412 |
| 18 | ಮಹಬೂಬ್‌ನಗರ್<br>ಮಹಬೂಬ್‌ನಗರ್ | 18,432 | 35,06,876 |
| 19 | ಮೇದಕ್<br>ಸಂಗರೆಡ್ಡಿ | 9,699 | 26,62,296 |
| 20 | ನಾಲ್ಗೊಂಡ<br>ನಾಲ್ಗೊಂಡ | 14,240<br><br>(ನಲಗೊಂಡ) | 32,38,449 |
| 21 | ನಿಜಾಮಾಬಾದ್<br>ನಿಜಾಮಾಬಾದ್ | 7,956 | 23,42,803 |
| 22 | ರಂಗರೆಡ್ಡಿ<br>ಹೈದರಾಬಾದ್ | 7,493 | 35,06,670 |
| 23 | ವಾರಂಗಲ್<br>ವಾರಂಗಲ್ | 12,846 | 32,31,174 |

**ಹವಾಗುಣ** : ಬೇಸಗೆ ಕಾಲದಲ್ಲಿ ರಾಯಲುಸೀಮೆ ಪ್ರದೇಶಗಳು, ತೀರ ಪ್ರದೇಶಗಳಲ್ಲಿ ಬಹಳ ಸೆಕೆಯಾಗಿದ್ದು $95^0$–$110^0$ ವರೆಗೆ ಉಷ್ಣತೆ ಹೊಂದಿರುತ್ತವೆ. ತೆಲಂಗಾಣ ಪ್ರದೇಶದ ಉತ್ತರ ಭಾಗ ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಅಲ್ಲಿ ಸೆಕೆ ಕಡಿಮೆ. ತೀರ ಪ್ರದೇಶಗಳು 2000 ದಿಂದ 2500 ಮಿಮೀ ಮಳೆ ಪಡೆಯುತ್ತವೆ. ರಾಯಲು ಸೀಮೆ ಜಿಲ್ಲೆಗಳಲ್ಲಿ 500 – 800 ಮಿಮೀ. ಮಳೆಯಾದರೆ ಹೆಚ್ಚು. ಉತ್ತರದ ಜಿಲ್ಲೆಗಳಲ್ಲಿ 900 ರಿಂದ 1300 ಮಿಮೀ ಮಳೆಯಾಗುತ್ತದೆ.

**ಕಾಡುಗಳು** : ಆಂಧ್ರ ಪ್ರದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇ.23 ಭಾಗ ಅರಣ್ಯ ಪ್ರದೇಶ. ಇದರಲ್ಲಿ ತೇಗ, ಕರ್ಪೂರ ಮರ, ಗೋಡಂಬಿ, ಕಾಸುರಿನ, ಬಿದಿರು ಮತ್ತು ಮೆದು ಮರಗಳು ಹೆಚ್ಚು ಬೆಳೆಯುತ್ತವೆ. ಪೂರ್ವ ಘಟ್ಟಗಳನ್ನೊಳಗೊಂಡಿರುವ ಈಶಾನ್ಯ ಜಿಲ್ಲೆಗಳಾದ ಶ್ರೀಕಾಕುಳಂ, ವಿಶಾಖಪಟ್ಟಣ, ಗೋದಾವರಿ ಜಿಲ್ಲೆ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ಹೆಚ್ಚು ಕಾಡು ಪ್ರದೇಶಗಳಿವೆ.

**ಖನಿಜಗಳು** : ತೆಲಂಗಾಣ ಭಾಗದ ಉತ್ತರ ಜಿಲ್ಲೆಗಳಲ್ಲಿ ಕಲ್ಲಿದ್ದಲು ಗಣಿಗಳಿವೆ. ಈಶಾನ್ಯದ ಜಿಲ್ಲೆಗಳಾದ ಶ್ರೀಕಾಕುಳಂ ಮತ್ತು ವಿಶಾಖಪಟ್ಟಣ ಜಿಲ್ಲೆಗಳಲ್ಲಿ ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ನೆಲ್ಲೂರು ಜಿಲ್ಲೆಯಲ್ಲಿ ಅಭ್ರಕ, ಹೈದರಾಬಾದ್ ಗುಂಟೂರು ಅದಿಲಾಬಾದ್ ಜಿಲ್ಲೆಗಳಲ್ಲಿ ಸುಣ್ಣಕಲ್ಲು, ಕರ್ನೂಲು ಜಿಲ್ಲೆಯಲ್ಲಿ ಬಾರೈಟಿಸ್, ಕಡಪ ಜಿಲ್ಲೆಯಲ್ಲಿ ಕಲ್ನಾರು ಅದಿರುಗಳು ಹೇರಳವಾಗಿವೆ. ಕಡಪ ಜಿಲ್ಲೆಯ ಕರಿಹಾಸುಕಲ್ಲು ದಕ್ಷಿಣಭಾರತದಲ್ಲಿ ಅತ್ಯಂತ ಪ್ರಸಿದ್ಧ.

**ನೀರಾವರಿ** : ಗೋದಾವರಿ, ಕೃಷ್ಣಾ ಮತ್ತು ಪೆನ್ನಾರ್ ನದಿಗಳ ಮುಖಜ ಭೂಮಿಗಳಲ್ಲಿ ನೀರಾವರಿ ಕಾಲುವೆಗಳು ನೂರಾರು ವರ್ಷಗಳಿಂದ ಬಳಕೆಯಲ್ಲಿವೆ. ಗೋದಾವರಿ ಮುಖಜ ಭೂಮಿಯ ಕಾಲುವೆಗಳಿಂದ 4.45 ಲಕ್ಷ ಹೆಕ್ಟೇರ್ ಜಮೀನು, ಕೃಷ್ಣಾಮುಖಜಭೂಮಿಯ ಪ್ರಕಾಶಂ ಬ್ಯಾರೇಜ್‌ನಿಂದ 4.65 ಲಕ್ಷ ಹೆಕ್ಟೇರ್ ಎಕರೆ ಜಮೀನು, ನಿಜಾಮಸಾಗರದಿಂದ (ಗೋದಾವರಿ ನದಿಯ ಉಪನದಿ ಮಂಜೀರಾ ನದಿಗೆ ಅಣೆಕಟ್ಟು) 2,75,000 ಲಕ್ಷ ಹೆಕ್ಟೇರ್ ಜಮೀನು ಸಾಗುವಳಿಯಲ್ಲಿದೆ. ತುಂಗಭದ್ರ ನದಿಯಿಂದ ಹೊರಡುವ ಕಡಪ ಕರ್ನೂಲು ಕಾಲುವೆಯಿಂದ 2,75,000 ಲಕ್ಷ ಹೆಕ್ಟೇರ್‌ಗೆ ನೀರು ಒದಗಿದೆ. ತುಂಗಭದ್ರ ಅಣೆಕಟ್ಟಿನ ಕೆಳಭಾಗದ ಕಾಲುವೆಗಳ ಮತ್ತು ಹೈಲೆವೆಲ್ ಕಾಲುವೆಗಳಿಂದ 2 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಕರ್ಯ ಒದಗುತ್ತದೆ. ಕೃಷ್ಣಾ ನದಿಗೆ ಅಡ್ಡಲಾಗಿ ಸುಮಾರು 140 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾಗುತ್ತಿರುವ ಅಣೆಕಟ್ಟು ನಾಗಾರ್ಜುನ ಸಾಗರವನ್ನು ನಿರ್ಮಿಸಿ 36 ಲಕ್ಷ ಎಕರೆಗೆ ನೀರೊದಗಿಸುತ್ತದೆ. 1967ರಲ್ಲಿ ಸು. 6 ಲಕ್ಷ ಹೆಕ್ಟೇರ್ ಭೂಮಿಗೆ ನೀರೊದಗಿಸಲಾಗುತ್ತಿತ್ತು. 2000–2001ರಲ್ಲಿ ಎಲ್ಲಾ ಬಗೆಯ ನೀರಾವರಿಯಿಂದ ಒಟ್ಟು 45.28 ಲಕ್ಷ ಹೆಕ್ಟೇರುಗಳು ನೀರಾವರಿಗೆ ಒಳಪಡಿಸಲಾಗಿತ್ತು. ಈಶಾನ್ಯ ಭಾಗದಲ್ಲಿ ಮಚಕುಂಡ ವಿದ್ಯುಚ್ಛಕ್ತಿ ಯೋಜನೆ ಮತ್ತು ದಕ್ಷಿಣದಲ್ಲಿ ತುಂಗಭದ್ರಾ ವಿದ್ಯುತ್ ಯೋಜನೆಗಳಿಂದ ರಾಜ್ಯಕ್ಕೆ ಧಾರಾಳವಾಗಿ ವಿದ್ಯುತ್ ಒದಗುತ್ತದೆ.

**ವ್ಯವಸಾಯ** : ಶೇ.62 ಮಂದಿ ಕೃಷಿಕರು. ಬತ್ತ, ಜೋಳ, ಕಬ್ಬು, ದ್ವಿದಳ ಧಾನ್ಯಗಳು, ನೆಲಗಡಲೆ, ತೆಂಗುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮೆಣಸಿನಕಾಯಿ, ಹರಳು ಬೀಜ, ಹೊಗೆಸೊಪ್ಪು, ಹುಣಸೇಹಣ್ಣು, ಮಾವಿನ ಹಣ್ಣು, ಬೆಳೆಗಳಿಗೆ ಆಂಧ್ರಪ್ರದೇಶ ಪ್ರಖ್ಯಾತವಾಗಿದೆ. ಗುಂಟೂರು ಜಿಲ್ಲೆಯಲ್ಲಿ ಹೊಗೆಸೊಪ್ಪನ್ನು ಹೆಚ್ಚಾಗಿ ಬೆಳೆಸುತ್ತಾರೆ.

**ಕೈಗಾರಿಕೆಗಳು**: ವಿಶಾಖಪಟ್ಟಣದಲ್ಲಿ ಹಡಗುಗಳನ್ನು ನಿರ್ಮಿಸುತ್ತಾರೆ. ಅಲ್ಲಲ್ಲಿ ಹತ್ತಿ ಗಿರಣಿಗಳು ಇವೆ. ಹೈದರಾಬಾದ್ ನಗರದಲ್ಲಿ ಹತ್ತಿ ಗಿರಣಿಗಳು, ಉಕ್ಕಿನ ಫರ್ನಿಚರ್ ಕಾರ್ಖಾನೆ, ಸಿಗರೇಟು ಬೀಡಿ ಕಾರ್ಖಾನೆಗಳು ಇವೆ. ರಾಜಮಹೇಂದ್ರಿ, ಸಿರ್‌ಪೂರ್‌ಗಳಲ್ಲಿ ಕಾಗದ ತಯಾರಿಸುವ ಕಾರ್ಖಾನೆಗಳಿವೆ. ನಿಜಾಮಸಾಗರ ಸಕ್ಕರೆ ಕಾರ್ಖಾನೆ ಭಾರತದಲ್ಲೆ ಬಹು ದೊಡ್ಡ ಸಕ್ಕರೆ ಕಾರ್ಖಾನೆ. ಗೂಡೂರಿನಲ್ಲಿ ಗಾಜು ಮತ್ತು ಗಾಜಿನ ಪದಾರ್ಥ ತಯಾರಿಸುವ ಉದ್ಯಮವಿದೆ. ಸಣ್ಣ ಕೈಗಾರಿಕೆಗಳಲ್ಲಿ ವಾರಂಗಲ್ ಮತ್ತು ಎಲ್ಲೂರಿನ

ರತ್ನಗಂಬಳಿ ಜಮಖಾನಗಳು; ಧರ್ಮಾವರಂ, ನಾರಾಯಣ ಪೇಟೆಗಳ ರೇಷ್ಮೆ ಮತ್ತು ಜರೀ ಸೀರೆಗಳು; ಗದ್ವಾಲ್, ಸಿದ್ದಿಪೇಟೆಗಳ ನೂಲಿನ ಸೀರೆಗಳು, ಬಿದರಿ ಕೆಲಸ, ನಾಜೂಕಿನ ಬಗೆಗಳು; ನರಸಾಪುರದ ಅರಗುಮೆರಗಿನ ವಸ್ತುಗಳು; ಕರೀಂ ನಗರದ ಬೆಳ್ಳಿ ಎಲೆಗಳಿಂದ ಮಾಡಿದ ನಾಜೂಕಿನ ಕೆಲಸ; ನಿರ್ಮಲ, ಕೊಂಡಪಲ್ಲಿ, ನಕ್ಕಪಲ್ಲಿ ಮತ್ತು ತಿರುಪತಿಯ ಬಣ್ಣ ಬಣ್ಣದ ಆಟದ ಸಾಮಾನುಗಳಿಗೆ ಭಾರತದಲ್ಲೂ ವಿದೇಶಗಳಲ್ಲೂ ಬೇಡಿಕೆ ಇದೆ. ತೆಂಗಿನ ಹುರಿ ಮಾಡುವದು, ಚರ್ಮದ ಕೆಲಸಗಳು ಸಾವಿರಾರು ಜನಗಳಿಗೆ ಉದ್ಯೋಗ ಕಲ್ಪಿಸಿವೆ.



31 ಮಾರ್ಚ್ 2002ರಲ್ಲಿ ರಾಜ್ಯದಲ್ಲಿ 3111 ಬಾರಿಯ ಮತ್ತು ಮಧ್ಯಮ ಕೈಗಾರಿಕೆಗಳಿದ್ದು 43,317 ಕೋಟಿ ಬಂಡವಾಳ ಹೂಡಿದ್ದು 8,02,878 ಮಂದಿಗೆ ಉದ್ಯೋಗ ಲಭಿಸಿತ್ತು. ಜೊತೆಗೆ 3,29,444 ಸಣ್ಣ ಕೈಗಾರಿಕೆಗಳಿದ್ದು 28,09,468 ಮಂದಿಗೆ ಉದ್ಯೋಗ ಲಭಿಸಿತ್ತು.

**ಸಂಚಾರ ಸೌಲಭ್ಯಗಳು** : ರಾಜ್ಯದಲ್ಲಿ 4,544 ಕಿಮೀ ರೈಲುಮಾರ್ಗಗಳಿವೆ. ಸಿಕಂದರಾಬಾದ್ ನಗರ ಸೌತ್ ಸೆಂಟ್ರಲ್ ವಲಯದ ಆಡಳಿತಕೇಂದ್ರ. ಹೈದರಾಬಾದಿನ ಬಳಿ ಇರುವ ಬೇಗಂಪೇಟ್ ವಿಮಾನ ನಿಲ್ದಾಣ ವಿಮಾನ ಸಂಚಾರ ಕೇಂದ್ರ. ರಾಜ್ಯದ ಪೂರ್ವ ತೀರದಲ್ಲಿರುವ ವಿಶಾಖಪಟ್ಟಣ, ಕಾಕಿನಾಡ, ಮಚಲಿಪಟ್ಟಣಗಳು ಹಡಗು ನಿಲ್ದಾಣಗಳು. ಮಾರ್ಚ್ 2002ರಲ್ಲಿ ಈ ರಾಜ್ಯದಲ್ಲಿ 4,104 ಕಿ.ಮೀ ರಾಷ್ಟ್ರೀಯ ಹೆದ್ದಾರಿ 60,453 ಕಿಮೀ ರಾಜ್ಯ ಹೆದ್ದಾರಿ, 1,03,814 ಕಿಮೀ ಪಂಚಾಯಿತಿಗೆ ಸೇರಿದ ಮಾರ್ಗಗಳಿದ್ದವು. ಒಟ್ಟು 5095 ಕಿಮೀ ರೈಲುಮಾರ್ಗದಲ್ಲಿ 4,362 ಕಿಮೀ ಬ್ರಾಡ್‌ಗೇಜ್ 686 ಕಿಮೀ ಮೀಟರ್‌ಗೇಜ್ ಉಳಿದದ್ದು ನ್ಯಾರೋಗೇಜ್ ರೈಲುಮಾರ್ಗಗಳಿದ್ದವು. ಹೈದರಾಬಾದಿನಿಂದ ಭಾರತದ ಮತ್ತು ಪ್ರಪಂಚದ ಮುಖ್ಯನಗರಗಳಿಗೆ ವಿಮಾನ ಸಂಪರ್ಕವಿದೆ. ವಿಶಾಖ ಪಟ್ಟಣ, ಕಾಕಿನಾಡ, ಮಚಲಿಪಟ್ಟಣ, ಕಾಳಿಂಗಪಟ್ಟಣ, ವಡರೇವು ಮತ್ತು ಕೃಷ್ಣಪಟ್ಟಣ ಇವು ಮುಖ್ಯ ಬಂದರುಗಳು.

**ಪ್ರೇಕ್ಷಣೀಯ ಸ್ಥಳಗಳು :** ಹೈದರಾಬಾದ್ ಸಂಸ್ಥಾನದ ನಿಜಾಮಶಾಹಿ ಆಡಳಿತ ಕೇಂದ್ರವಾಗಿದ್ದ ಇಲ್ಲಿ ಇಂಡೊ–ಮುಸ್ಲಿಂ ಮತ್ತು ಪಾಶ್ಚಾತ್ಯ ಪರಂಪರೆಯ ಸಮ್ಮಿಳಿತ ಮಾದರಿಯ ಅನೇಕ ಭವ್ಯ ಕಟ್ಟಡಗಳಿವೆ. ಇವುಗಳಲ್ಲಿ ಚಾರ್‌ಮಿನಾರ್, ಬಾರಕಮಾನ್, ಬಾದಶಾಹಿ ಅಷೂರಖಾನಾ, ಮುಷೀರಾಬಾದ್ ಮಸೀದಿ, ಫಲಕ್‌ನುಮಾ ಅರಮನೆಗಳು ಪ್ರಖ್ಯಾತವಾಗಿವೆ. ಈಗಿನ ಕಟ್ಟಡಗಳಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯ ಕಟ್ಟಡಗಳು, ಹೈಕೋರ್ಟ್ ಕಟ್ಟಡಗಳು ಭವ್ಯವಾಗಿವೆ. ಹೆಲ್ತ್ ಮ್ಯೂಸಿಯಂ, ಅಜಂತಾ ಪೆವಿಲಿಯನ್, ಸಾಲಾರ್‌ಜಂಗ್ ಮ್ಯೂಸಿಯಂ ಆಕರ್ಷಕ ಸ್ಥಳಗಳು. ಗೋಲ್ಕೊಂಡ ಕೋಟೆ (ಕುತುಬ್ ಷಾಹಿ ಅರಸರ ಕೋಟೆ, ಅರಮನೆಗಳು), ವಾರಂಗಲ್ (ಕಾಕತೀಯ ರಾಜರು ಕಟ್ಟಿಸಿದ ಪ್ರಸಿದ್ಧ ದೇವಾಲಯಗಳು), ಶ್ರೀಶೈಲ (ಮಲ್ಲಿಕಾರ್ಜುನಲಿಂಗ ದೇವಸ್ಥಾನ), ತಿರುಪತಿ (ವೆಂಕಟೇಶ್ವರ, ಬಾಲಾಜಿ ದೇವಸ್ಥಾನ), ಕಾಳಹಸ್ತಿ, ಸಿಂಹಾಚಲ, ಭದ್ರಾಚಲ, ಲೇಪಾಕ್ಷಿಗಳು ಪ್ರಸಿದ್ಧ ಯಾತ್ರಾಸ್ಥಳಗಳಲ್ಲದೆ ಉತ್ತಮ ಕಲಾಕೃತಿಗಳನ್ನು ಹೊಂದಿವೆ. ಲಕ್ಷಾಂತರ ಯಾತ್ರಾರ್ಥಿಗಳು ಇವನ್ನು ಸಂದರ್ಶಿಸುತ್ತಾರೆ.

**ಸಂಸ್ಕೃತಿ** : ಆಂಧ್ರದ ಭಾಷೆ ತೆಲುಗು, ಬಹು ಮಧುರ. ದಾಕ್ಷಿಣಾತ್ಯ ಸಂಗೀತದ ಶ್ರೀ ತ್ಯಾಗರಾಜರ ಕೀರ್ತನೆಗಳು ತೆಲುಗು ಭಾಷೆಯಲ್ಲಿವೆ. ಆಂಧ್ರದ ಪ್ರತಿ ಊರಿನಲ್ಲೂ ದೇವಸ್ಥಾನದ ರಥೋತ್ಸವ ಗಳು, ಜಾತ್ರೆಗಳು, ಬಹಳ ವಿಜೃಂಭಣೆಯಿಂದ ಜರಗು ತ್ತವೆ. ರೈತಕೋಟಿ ಏರುವಾಕ ಸುಗ್ಗಿಯ ಸಂಭ್ರಮವನ್ನು ಜನಪದ ನೃತ್ಯಗೀತೆಗಳಿಂದಲೂ ಉತ್ಸಾಹ ಭರಿತ ಸಂಪ್ರದಾಯಗಳಿಂದಲೂ ಆಚರಿಸುತ್ತಾರೆ. ಕೂಚುಪುಡಿ ನೃತ್ಯ, ಭಾಗವತ ಸಂಗೀತ– ಸಾಹಿತ್ಯ ಹರಿಕಥೆಗಳು ಆಂಧ್ರದ ವೈಶಿಷ್ಟ್ಯಗಳು. (ಆರ್.ಎಂ.ಆರ್.)

**ಆಂಧ್ರ ಪ್ರದೇಶದ ಚರಿತ್ರೆ :** ಪುರಾಣ ಗ್ರಂಥಗಳ ಪ್ರಕಾರ ಆಂಧ್ರ ಎಂಬುದು ಜಾತಿ ಇಲ್ಲವೇ ಕುಲಸೂಚಕ ವಾದ ಪದ. ಐತರೇಯ ಬ್ರಾಹ್ಮಣದಲ್ಲಿ ಆಂಧ್ರದ ಅತ್ಯಂತ ಪ್ರಾಚೀನ ಉಲ್ಲೇಖವನ್ನು ಕಾಣಬಹುದು. ಕಾಲಕ್ರಮದಲ್ಲಿ ಆಂಧ್ರ ಎಂಬ ಪದಕ್ಕೆ ಭೌಗೋಳಿಕ ಅರ್ಥವ್ಯಾಪ್ತಿಯುಂ ಟಾಗಿ ಆಂಧ್ರರು ವಾಸಮಾಡುವ ದೇಶಕ್ಕೆ ಆಂಧ್ರದೇಶ ವೆಂಬ ಹೆಸರು ಬಂದಿತು. ಆಂಧ್ರದೇಶ ಅಶೋಕನ ಸಾಮ್ರಾಜ್ಯಕ್ಕೆ ಸೇರಿತ್ತೆಂದು ಹೇಳಲು ಯರ‍್ರಗುಡಿ, ಅಮರಾವತಿ ಮುಂತಾದ ಕಡೆಗಳಲ್ಲಿ ಸಿಕ್ಕಿರುವ ಅವನ ಶಾಸನಗಳೇ ಆಧಾರವಾಗಿವೆ. ಅವನ ಶಾಸನವೊಂದರಲ್ಲಿ ರಥಿಕರು, ಭೋಜಕರು, ಪುಳಿಂದು ಮುಂತಾದವ ರೊಡನೆ ಆಂಧ್ರರ ಹೆಸರು ಇದೆ. ಆಕಾಲದಲ್ಲಿ ಆಂಧ್ರರು ದಕ್ಷಿಣಾಪಥದ ಮಧ್ಯ ಮತ್ತು ದಕ್ಷಿಣ ಭಾಗಗಳನ್ನು ಆಳುತ್ತಿದ್ದರೆಂದು ಹೇಳಬಹುದು.

ಖಚಿತವಾದ ಆಂಧ್ರಪ್ರದೇಶದ ಚರಿತ್ರೆ ಸಾತವಾಹನ ರೊಂದಿಗೆ ಪ್ರಾರಂಭವಾಗುತ್ತದೆ. ಸಾತವಾಹನರುಗಳನ್ನು ಪುರಾಣಗಳಲ್ಲಿ ಆಂಧ್ರರು ಮತ್ತು ಆಂಧ್ರಭೃತ್ಯರು ಎಂದು ಕರೆದಿದೆ. ಸಾತವಾಹನರ ಉಗಮದ ವಿಚಾರವಾಗಿ ಖಚಿತವಾದ ಮಾಹಿತಿ ದೊರಕಿಲ್ಲ. ಅಷ್ಟೇ ಅಲ್ಲದೆ ಅವರು ಆಳಿದ ಕಾಲ ಮತ್ತು ವಿವಿಧ ರಾಜರುಗಳ ವಿಚಾರವಾಗಿಯೂ ನಿಖರವಾದ ಚಾರಿತ್ರಿಕ ವಿಷಯಗಳು ಉಪಲಬ್ಧವಾಗಿಲ್ಲ. ಸಾತವಾಹನರ ಮೂಲ ನಿವಾಸಸ್ಥಾನ ಕರ್ನಾಟಕದ ಬಳ್ಳಾರಿ ಜಿಲ್ಲೆಯಾಗಿತ್ತೆಂದೂ ಇಲ್ಲಿಂದ ಅವರು ಆಂಧ್ರ ದೇಶಕ್ಕೆ ವಲಸೆ ಹೋದರೆಂದು ಸಾಮಾನ್ಯವಾಗಿ ಎಲ್ಲ ಚರಿತ್ರಕಾರರೂ ಒಪ್ಪುತ್ತಾರೆ. ಆಂಧ್ರ ದೇಶದಲ್ಲಿ ಮೊಟ್ಟಮೊದಲನೆಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಾತವಾಹನರು ಪ್ರ.ಶ. 230ರಿಂದ ಸು. 450ರವರೆಗೆ ರಾಜ್ಯಭಾರ ಮಾಡಿದರು. ಶ್ರೀಮುಖ ಇವರ ಮೊಟ್ಟಮೊದಲನೆಯ ದೊರೆ. ಅನಂತರ ಇವನ ಸಹೋದರನಾದ ಕನ್ಹ ರಾಜನಾದ (207–189). ಮುಂದಿನ ರಾಜನಾದ ಶ್ರೀ ಸಾತಕರ್ಣಿ ನಾನಾಘಾಟ್ ಎಂಬಲ್ಲಿ ದೊರಕಿರುವ ಶಿಲ್ಪಗಳಲ್ಲಿ ತನ್ನ ರಾಣಿ ನಾಗಕನ್ನಿಕೆಯೊಡನೆ ಚಿತ್ರಿತನಾಗಿದ್ದಾನೆ. ಈತ ಪಶ್ಚಿಮ ಮಾಳ್ವ ದೇಶವನ್ನು ಗೆದ್ದು, ಅಶ್ವಮೇಧವೇ ಮೊದಲಾದ ಅನೇಕ ಯಾಗಗಳನ್ನು ಮಾಡಿದ. ಸ್ವಲ್ಪಕಾಲದ ಅನಂತರ ಆಳಿದ ಎರಡನೆಯ ಸಾತಕರ್ಣಿ 56 ವರ್ಷಗಳ ಕಾಲ ರಾಜನಾಗಿದ್ದ. ಇವನ ರಾಜ್ಯ ಮಧ್ಯಪ್ರದೇಶದವರೆಗೂ ಹರಡಿತ್ತು. ಹದಿನೇಳನೆಯ ಸಾತವಾಹನ ರಾಜನಾದ ಹಾಲ ಸಪ್ತಶತಿ ಎಂಬ ಪ್ರಾಕೃತ ಗ್ರಂಥವನ್ನು ರಚಿಸಿ ಸಾಹಿತ್ಯ ಲೋಕದಲ್ಲಿ ಖ್ಯಾತನಾಗಿದ್ದಾನೆ. ಇದು 700 ಶೃಂಗಾರ ಪದ್ಯಗಳ ಸಂಕಲನ.

ಅನಂತರ ಶಕರು, ಪಹ್ಲವರು, ಯವನರು ಬಲಯುತರಾದುದರಿಂದ ಸಾತವಾಹನರ ಪ್ರಾಬಲ್ಯ ಕಡಿಮೆಯಾಯಿತು. ಗೌತಮಿಪುತ್ರ ಸಾತಕರ್ಣಿ ಎಂಬ (ಪ್ರಶ.80–104) ಸಾತವಾಹನ ರಾಜ ಶಕರು, ಪಹ್ಲವರು ಯವನರನ್ನು ಸೋಲಿಸಿ ಸಾತವಾಹನ ಸಾಮ್ರಾಜ್ಯವನ್ನು ಮತ್ತೆ ಸ್ಥಾಪಿಸಿದ. ಈತ ನಹಪಾನನನ್ನು ಸೋಲಿಸಿದ. ಶಕರಿಂದ ಉತ್ತರ ಮಹಾರಾಷ್ಟ್ರ, ಕೊಂಕಣ, ಸೌರಾಷ್ಟ್ರ, ಮಾಳ್ವ ಮುಂತಾದ ಪ್ರದೇಶಗಳನ್ನು ಕಿತ್ತುಕೊಂಡ. ತಾಯಿಯಾದ ಗೌತಮೀ ಬಲಶ್ರೀ ಕೆತ್ತಿಸಿದ ನಾಸಿಕದ ಶಾಸನದಲ್ಲಿ ಗೌತಮಿಪುತ್ರ ಸಾಧಿಸಿದ ಮಹಾತ್ಕಾರ್ಯಗಳು

ವರ್ಣಿತವಾಗಿವೆ. ಈತ ಸಾತವಾಹನ ಕುಲದಲ್ಲಿಯೇ ಅತ್ಯಂತ ಪ್ರಸಿದ್ಧ ದೊರೆ. ಅನಂತರ ಇವನ ಮಗನಾದ ಪುಲಮಾವಿ ರಾಜನಾದ. ಇವನ ಕಾಲದಲ್ಲಿ ಶಕರು ಅನೇಕ ಭಾಗಗಳನ್ನು ಗೆದ್ದುಕೊಂಡರು. ತರುವಾಯ ಆಳಿದ ಸಾತಕರ್ಣಿ ಕ್ಷತ್ರಪ ರುದ್ರದಾಮನ ಮಗಳನ್ನು ವಿವಾಹವಾದ. ಆದರೂ ರುದ್ರದಾಮ ಕೊಂಕಣ ಮತ್ತು ನರ್ಮದಾ ಪ್ರದೇಶಗಳನ್ನು ಸಾತವಾಹನರಿಂದ ಕಿತ್ತುಕೊಂಡ. ಯಜ್ಞ ಶ್ರೀಸಾತಕರ್ಣಿಯೇ (170–199) ಸಾತವಾಹನರ ಕೊನೆಯ ಪ್ರಸಿದ್ಧ ದೊರೆ. ಈತ ಶಕರಾಜರ ಮೇಲೆ ಯುದ್ಧವನ್ನು ಮಾಡಿ ಅವರಿಂದ ಕೆಲವು ಪ್ರದೇಶಗಳನ್ನು ಕಿತ್ತುಕೊಂಡು, ಹೊಸ ನಮೂನೆಯ ಅನೇಕ ನಾಣ್ಯಗಳನ್ನು ಅಚ್ಚು ಹಾಕಿಸಿದ. ಅನಂತರ ಆಳಿದ ಸಾತವಾಹನ ರಾಜರ ಹೆಸರುಗಳು ಮಾತ್ರ ನಾಣ್ಯಗಳಿಂದ ದೊರಕಿವೆ. ಇವರು ಬಲಶಾಲಿಗಳಲ್ಲದೇ ಇದ್ದುದರಿಂದ, ಇಕ್ಷ್ವಾಕುವಂಶದ ವಾಸಿಷ್ಠೀಪುತ್ರ ಶ್ರೀಶಾಂತಮೂಲನೆಂಬಾತ ನಾಗಾರ್ಜುನಕೊಂಡ ಪ್ರಾಂತ್ಯದಲ್ಲಿ ಇಕ್ಷ್ವಾಕುವಂಶದ ರಾಜ್ಯವನ್ನು ಸ್ಥಾಪಿಸಿದ. ಪ್ರ.ಶ.ಸು. 218ರ ಸಮಯಕ್ಕೆ ಸಾತವಾಹನರ ಸಾಮ್ರಾಜ್ಯದ ಪತನವಾಯಿತು.

ನಾಗಾರ್ಜುನಕೊಂಡ ಪ್ರಾಂತದಲ್ಲಿ ತಲೆ ಎತ್ತಿದ ಇಕ್ಷ್ವಾಕುವಂಶದಲ್ಲಿ ವಾಸಿಷ್ಠೀಪುತ್ರ ಶಾಂತಮೂಲ, ಶ್ರೀ ವೀರಪುರುಷದತ್ತ, ಎರಡನೆಯ ಶಾಂತಮೂಲ ಮತ್ತು ಎರಡನೆಯ ವೀರಪುರುಷದತ್ತರು ಆಳಿದರು. ಇವರ ಆಳ್ವಿಕೆಯಲ್ಲಿ ನಾಗಾರ್ಜುನಕೊಂಡದ ಬಹುಭಾಗದಲ್ಲಿ ಬೌದ್ಧ ಶಿಲ್ಪಗಳು ನಿರ್ಮಿತವಾದವು. ಇವರ ಆಳ್ವಿಕೆ ಪ್ರ.ಶ. 270ರಲ್ಲಿ ಕೊನೆಗೊಂಡಿತು. ಇಕ್ಷ್ವಾಕು ರಾಜರನ್ನು ಸೋಲಿಸಿ ಪಲ್ಲವ ಸಿಂಹವರ್ಮ ಆಂಧ್ರ ದೇಶದ ಬಹುಭಾಗಗಳಲ್ಲಿ ಪಲ್ಲವ ರಾಜ್ಯವನ್ನು ಸ್ಥಾಪಿಸಿದ. ಈತ ಧಾನ್ಯಕಟಕ (ಗುಂಟೂರು) ದಲ್ಲಿ ಒಬ್ಬ ಪ್ರಾಂತಾಧಿಕಾರಿಯನ್ನು ನಿಯಮಿಸಿದ. ಸ್ವಲ್ಪ ಕಾಲದನಂತರ ಬಾದಾಮಿಯ ಚಾಳುಕ್ಯರು ಪಲ್ಲವರ ಪ್ರಾಬಲ್ಯವನ್ನು ಕಡಿಮೆ ಮಾಡಿದರು.

ಗೋದಾವರಿ ಮತ್ತು ಕೃಷ್ಣಾ ನದಿಗಳ ಪ್ರದೇಶ ಬೃಹತ್ಫಲಾಯನ, ಶಾಲಂಕಾಯನ ಮತ್ತು ವಿಷ್ಣುಕುಂಡಿನ್ ವಂಶದ ರಾಜರ ಆಳ್ವಿಕೆಗೆ ಒಳಪಟ್ಟಿತ್ತು. ವಿಷ್ಣುಕುಂಡಿನ್ ವಂಶದ ಅರಸರು ವೆಂಗಿ ರಾಜ್ಯವನ್ನು ಸು. 150 ವರ್ಷಗಳ ಕಾಲ ಆಳಿದರು. ವಿಕ್ರಮೇಂದ್ರ ವರ್ಮ ನಿಂದ ಸ್ಥಾಪಿತವಾದ ಈ ವಂಶದಲ್ಲಿ ಮಾಧವವರ್ಮ ಅತ್ಯಂತ ಪ್ರಸಿದ್ಧ ದೊರೆ. ಇವರೂ ಬಾದಾಮಿಯ ಚಳುಕ್ಯರಿಂದ ಸೋಲಿಸಲ್ಪಟ್ಟರು. ಬಾದಾಮಿಯ ಚಳುಕ್ಯ ದೊರೆ ಎರಡನೆಯ ಪುಲಕೇಶಿ ಆಂಧ್ರ ದೇಶವನ್ನು ಗೆದ್ದು, ತನ್ನ ತಮ್ಮನಾದ ಕುಬ್ಜ ವಿಷ್ಣುವರ್ಧನನ ವಶಕ್ಕೆ ಒಪ್ಪಿಸಿದ. ಇದೇ ಮುಂದೆ ವೆಂಗಿಯ ಚಳುಕ್ಯ ವಂಶವೆಂದು ಪ್ರಸಿದ್ಧವಾಯಿತು. ಸುಮಾರು ಕ್ರಿ.ಶ. 625ರಿಂದ ಆರಂಭವಾದ ಈ ರಾಜ್ಯ ಸು. 450 ವರ್ಷಗಳ ಕಾಲ ಬಾಳಿತು. ಸು. 753 ರಿಂದ 972 ರವರೆಗೆ ಚಳುಕ್ಯರಿಗೂ ರಾಷ್ಟ್ರಕೂಟರಿಗೂ ಸತತ ಕದನಗಳು ನಡೆದವು. ಅನಂತರ ವೆಂಗಿಯ ರಾಜಕೀಯದಲ್ಲಿ ಚೋಳರು ಪ್ರವೇಶಿಸಿದರು. 11ನೆಯ ಶತಮಾನದಿಂದ ಚಳುಕ್ಯ–ಚೋಳರ ಆಳ್ವಿಕೆ ಪ್ರಾರಂಭವಾಯಿತು. ಮಧುರೆಯ ಪಾಂಡ್ಯರು ಬಲಶಾಲಿಗಳಾದ ಮೇಲೆ ಚಳುಕ್ಯ–ಚೋಳರ ಪತನವಾಯಿತು.

ಆಂಧ್ರದೇಶದ ಶ್ರೀಕಾಕುಳಂ, ವಿಶಾಖಪಟ್ಟಣ ಮುಂತಾದ ಕೆಲವು ಜಿಲ್ಲೆಗಳು ಪ್ರಾಚೀನ ಕಾಲದಿಂದ ಕಳಿಂಗ ರಾಜ್ಯದಲ್ಲಿ ಸೇರಿ ಹೋಗಿದ್ದವು. ಕರ್ನಾಟಕದ ಗಂಗವಾಡಿಯಿಂದ ಗಂಗರ ಮನೆತನವೊಂದು ಕಳಿಂಗಕ್ಕೆ ಹೋಗಿ ನೆಲೆಸಿ ಪ್ರಸಿದ್ಧವಾಯಿತು. 5ನೆಯ ಶತಮಾನ ದಿಂದ 15ನೆಯ ಶತಮಾನದವರೆಗೆ ಆಂಧ್ರ ಮತ್ತು ಒರಿಸ್ಸದ ಅನೇಕ ಭಾಗಗಳು ಪೂರ್ವ ಗಂಗರ ರಾಜ್ಯಕ್ಕೆ ಸೇರಿದ್ದವು. ಇವರಲ್ಲಿ ಅನಂತರ ವರ್ಮ ಚೋಡಗಂಗ ಅತ್ಯಂತ ಪ್ರಸಿದ್ಧ.

ಹೀಗೆ ವಿವಿಧ ಭಾಗಗಳಾಗಿ ಹರಿದು ಹಂಚಿ ಹೋಗಿದ್ದ ಆಂಧ್ರ ದೇಶವನ್ನು ಒಂದುಗೂಡಿಸಿ ಎರಡನೆಯ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಕಾಕತೀಯರು. ಓರಂಗಲ್ಲನು ತಮ್ಮ ರಾಜಧಾನಿಯಾಗಿ ಮಾಡಿಕೊಂಡ ಕಾಕತೀಯರ ಕಾಲದಲ್ಲಿ ತೆಲುಗು ಭಾಷೆ, ಸಾಹಿತ್ಯಗಳು ವಿಶೇಷವಾಗಿ ಅಭಿವೃದ್ಧಿ ಹೊಂದಿದುವು. ಕಾಕತೀಯ ರಾಜರಲ್ಲಿ ಗಣಪತಿದೇವ (1198–1262) ಮುಖ್ಯನಾದವ. ತರುವಾಯ ಆಳಿದ ಇವನ ಮಗಳಾದ ರುದ್ರಮದೇವಿ (1262–96) ಭಾರತದ ಚರಿತ್ರೆಯಲ್ಲಿಯೇ ಮುಖ್ಯವಾದ ರಾಣಿಯರಲ್ಲೊಬ್ಬಳು. ಇವಳು ಸಮಕಾಲೀನ ರಾಜರನ್ನು ಸೋಲಿಸಿ ವಿಶಾಲವಾದ ಆಂಧ್ರವನ್ನು ಆಳುತ್ತಿದ್ದಳು. ಮೊಮ್ಮಗ ಪ್ರತಾಪರುದ್ರ (1296–1323) ಅತಿ ಧೈರ್ಯದಿಂದ ಹೋರಾಡಿ ಮುಸ್ಲಿಮರನ್ನು ಮೊದಲು ಸೋಲಿಸಿದನಾದರೂ ಆಂಧ್ರ ಮುಸ್ಲಿಮರ ವಶವಾಯಿತು. ಸ್ವಲ್ಪಕಾಲದಲ್ಲೇ ಆಂಧ್ರರು ಮುಸ್ಲಿಮರ ಪ್ರಭುತ್ವವನ್ನು ಕಿತ್ತೊಗೆಯಲು ಪ್ರಯತ್ನಿಸಿದರಾದರೂ ಸಮರ್ಥ ಸಾಮ್ರಾಜ್ಯವನ್ನು ಕಟ್ಟಲಾರದೆ ಹೋದರು. ಕಾಕತೀಯ ಸಾಮ್ರಾಜ್ಯದ ಪತನಾನಂತರ ಆಂಧ್ರ ಐದು ರಾಜ್ಯಗಳಾಗಿ ವಿಭಾಗವಾಯಿತು. ಕೊಂಡವೀಡು ರೆಡ್ಡಿರಾಜ್ಯ, ರಾಜಮಹೇಂದ್ರಿಯ ರೆಡ್ಡಿರಾಜ್ಯ, ವೆಲಮರಾಜ್ಯ, ಉತ್ತರ ತೆಲಂಗಾಣ ಮತ್ತು ವಿಜಯನಗರ ಸಾಮ್ರಾಜ್ಯ ಇವೇ ಆ ಐದು ರಾಜ್ಯಗಳು. 1325ರಲ್ಲಿ ಸ್ಥಾಪಿತವಾದ ಕೊಂಡವೀಡು ರೆಡ್ಡಿರಾಜ್ಯದಲ್ಲಿ ಪ್ರೋಲಯ, ಅನಪೋತ, ಅನಮೇವ, ಪೆದ್ದಕೋಮಟಿವೇಮ ಮುಂತಾದ ರಾಜರು ಆಳಿದರು. ಕೊನೆಗೆ ಇದು ವಿಜಯನಗರ ರಾಜ್ಯದಲ್ಲಿ ಲೀನವಾಯಿತು.

14ನೆಯ ಶತಮಾನದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದಲ್ಲಿ ಆಂಧ್ರದೇಶ ಮತ್ತೆ ಐಕ್ಯಗೊಂಡಿತು. ವಿಜಯನಗರದ ಉಗಮ ಆಂಧ್ರರಿಂದಲೇ ಆಯಿತು ಎನ್ನುವ ಅಭಿಪ್ರಾಯವೂ ಕೆಲವು ಚರಿತ್ರಕಾರರಿಂದ ಮನ್ನಣೆ ಪಡೆದಿದೆ. 1336–1485 ರವರೆಗೆ ಸಂಗಮ ವಂಶದ ಅರಸುಗಳೂ, 1485–1504ರವರೆಗೆ ಸಾಳವ ಮನೆತನದ ರಾಜರೂ, 1505–1570 ರವರೆಗೆ ತುಳುವ ವಂಶದ ರಾಜರೂ ಅನಂತರ ಅರವೀಡು ಮನೆತನದ ರಾಜರೂ ಆಳಿದರು. ಕೃಷ್ಣದೇವರಾಯ ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ಶ್ರೇಷ್ಠ ದೊರೆಯೆನಿಸಿಕೊಂಡ. ತೆಲಗು ಮತ್ತು ಕನ್ನಡ ಕವಿಗಳಿಗೆ ಆಶ್ರಯದಾತನಾಗಿದ್ದ ಇವನ ಕಾಲದಲ್ಲಿ ತೆಲಗು ಸಂಸ್ಕೃತಿ ಅಭಿವೃದ್ಧಿ ಹೊಂದಿತು. ಸುಲ್ತಾನರಿಗೂ ವಿಜಯನಗರದ ಅರಸುಗಳಿಗೂ ನಡೆದ ರಕ್ಕಸತಂಗಡಿ ಯುದ್ಧದಿಂದ ವಿಜಯನಗರ ಸಾಮ್ರಾಜ್ಯದ ಅವನತಿ ಪ್ರಾರಂಭವಾಯಿತು. **(ನೋಡಿ– ವಿಜಯನಗರ)**

ಈ ಮಧ್ಯದಲ್ಲಿ ಹಸನ್ ಎಂಬುವನಿಂದ ಸ್ಥಾಪಿತವಾದ ಬಹುಮನಿ ರಾಜ್ಯ ಆಂಧ್ರದ ಕೆಲವು ಭಾಗಗಳನ್ನು ವಶಮಾಡಿಕೊಂಡಿತು. ನಾಲ್ಕನೆಯ ಮಹಮ್ಮದ್‍ಷಾ ಎಂಬ ದೊರೆ ತೆಲಂಗಾಣಕ್ಕೆ ಸುಲ್ತಾನ್ ಕುಲಿ ಎಂಬುವನನ್ನು ಪ್ರಾಂತ್ಯಾಧಿಕಾರಿಯನ್ನಾಗಿ ನಿಯಮಿಸಿದ. ಈತ ತಾನೇ ಸ್ವತಂತ್ರನಾಗಿ 1518 ರಿಂದ ಕುತ್ಬ್‍ಷಾಹಿ ರಾಜ್ಯ ಸ್ಥಾಪನೆ ಮಾಡಿದ. ಗೋಲ್ಕೊಂಡ ಇವನ ರಾಜಧಾನಿ. ಇದು ತೆಲಂಗಾಣದ ಎಲ್ಲ ಭಾಗಗಳನ್ನು ಒಳಗೊಂಡಿದ್ದಿತು. 1687ರಲ್ಲಿ ಔರಂಗಜೇಬ ಗೋಲ್ಕೊಂಡಕ್ಕೆ ಮುತ್ತಿಗೆ ಹಾಕಿ ದೊರೆಯಾದ ಅಬುಲ್ ಹಸನ್‍ನನ್ನು ಕೊಲ್ಲಿಸಿದ. ಇದರಿಂದ ಆಂಧ್ರದೇಶ ಮೊಗಲ್ ಆಳ್ವಿಕೆಗೆ ಒಳಪಟ್ಟಿತು. ಈ ಪ್ರಾಂತ್ಯವನ್ನು ನೋಡಿಕೊಳ್ಳುವುದಕ್ಕಾಗಿ ಮೊಗಲರು ಅಸಫ್ ಝಾ ಎಂಬುವನನ್ನು ಪ್ರಾಂತ್ಯಾಧಿಕಾರಿಯಾಗಿ ನಿಯಮಿಸಿ ನಿಜಾಮ–ಉಲ್–ಮುಲ್ಕ್ ಎಂಬ ಬಿರುದನ್ನು ಕೊಟ್ಟರು. ಇವನ ವಂಶದಲ್ಲಿ ನಾಸಿರ್ ಜಂಗ್, ಮುಸಾಫರ್ ಜಂಗ ಮತ್ತು ನಿಜಾಮ ಅಲಿ ಎಂಬ ರಾಜರು ಆಳಿದರು.

17ನೆಯ ಶತಮಾನದಿಂದ ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ಆಂಧ್ರದ ಕರಾವಳಿ ಪ್ರದೇಶಗಳಲ್ಲಿ ವ್ಯಾಪಾರದ ಸೋಗಿನಿಂದ ಕೋಟೆಗಳನ್ನು ಕಟ್ಟಿದರು. ನಿಜಾಮನ ಒಲವು ಕಡಿಮೆಯಾದ ಮೇಲೆ ಅವರು ಅವನಿಂದ ಕೆಲವು ಸರ್ಕಾರ್ ಜಿಲ್ಲೆಗಳನ್ನು ಬಲುವಳಿಯಾಗಿ ಪಡೆದು ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆಗೆ ಕಾರಣರಾದರು. ಮಚಲಿಪಟ್ಟಣ, ಕೊಂಡವೀಡು, ವಿಶಾಖಪಟ್ಟಣ, ಶ್ರೀಕಾಕುಳ, ಗುಂಟೂರು, ರಾಜಮಹೇಂದ್ರಿ ಮುಂತಾದ ಮುಖ್ಯ ರೇವುಪಟ್ಟಣಗಳು ಬ್ರಿಟಿಷರ ವಶವಾದವು. ವಿಜಯನಗರ, ಗುಂಟೂರು, ಮುಂತಾದ ಕಡೆಗಳಲ್ಲಿ ಬ್ರಿಟಿಷರು ಜಮೀನ್ದಾರರನ್ನು ಪ್ರೋತ್ಸಾಹಿಸಿ, ಅವರನ್ನು ತಮ್ಮ ಸ್ವಾಧೀನ ಮಾಡಿಕೊಂಡಿದ್ದರು. ಹೀಗಾಗಿ ಈಸ್ಟ್ ಇಂಡಿಯ ಕಂಪನಿ ಆಂಧ್ರ ದೇಶದ ರಾಜ್ಯಭಾರದಲ್ಲಿ ವಿಶೇಷ ಆಸಕ್ತಿ ವಹಿಸಿ ಜನಾನುರಾಗಿ ಕಾರ್ಯಗಳನ್ನು ಕೈಗೊಂಡಿತು.

ಆಂಧ್ರರು ಭಾರತದ ಸ್ವಾತಂತ್ರ್ಯ ಸಮರದ ಕರೆಗೆ ಓಗೊಟ್ಟು ಒಂದುಗೂಡಿದರು. ವೀರೇಶಲಿಂಗ ಅವರ ಬರೆವಣಿಗೆ ಅದಕ್ಕೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿತು. ನ್ಯಾಪತಿ ಸುಬ್ಬರಾವ್, ರಂಗಯ್ಯನಾಯ್ಡು, ರಮೇಶಂ, ಕೆ.ವಿ.ರೆಡ್ಡಿ, ಮಾಚರ್ಲ ರಾಮಚಂದ್ರ ರಾವ್ ಮುಂತಾದವರು ಆಂಧ್ರದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಬೇರೂರುವಂತೆ ಮಾಡಿದರು. 1918ರಲ್ಲಿ ಆಂಧ್ರದ ಪ್ರದೇಶ ಕಾಂಗ್ರೆಸ್ ಸಮಿತಿ ಸ್ಥಾಪಿತವಾಯಿತು. ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಪ್ರಕಾಶಂ, ವೆಂಕಟಪ್ಪಯ್ಯ, ಪಟ್ಟಾಭಿ ಸೀತರಾಮಯ್ಯ, ಸಾಂಬಮೂರ್ತಿ, ದೇಶೋದ್ಧಾರಕ ನಾಗೇಶ್ವರರಾವ್ ಮೊದಲವರು ಭಾಗವಹಿಸಿದರು. ಭಾರತ ಸ್ವತಂತ್ರವಾದ ಮೇಲೆ ಆಂಧ್ರ ಮದರಾಸು ಪ್ರಾಂತದಲ್ಲಿ ಸೇರಿಹೋಗಿತ್ತು. ಆಂಧ್ರಪ್ರಾಂತ್ಯ ರಚನೆಗೋಸ್ಕರ ಪೊಟ್ಟಿ ಶೀರಾಮುಲು ಉಪವಾಸ ಸತ್ಯಾಗ್ರಹವನ್ನು 2 ಅಕ್ಟೋಬರ್ 1952ರಂದು ಆರಂಭಿಸಿ ಅದೇ ವರ್ಷ ಡಿಸೆಂಬರ್ 15ರಂದು ಮರಣಹೊಂದಿದರು. ಇದರಿಂದ ಆಂಧ್ರದಲ್ಲಿ ರಾಜಕೀಯ ಕ್ರಾಂತಿಯಾಯಿತು. ಪ್ರಧಾನಮಂತ್ರಿ ನೆಹರೂ 1953 ಅಕ್ಟೋಬರ್ 1 ರಂದು ಕರ್ನೂಲಿನಲ್ಲಿ ಆಂಧ್ರಪ್ರದೇಶದ ಆರಂಭೋತ್ಸವವನ್ನು ಮಾಡಿದರು. ಈ ಮಧ್ಯದಲ್ಲಿ ತೆಲಂಗಾಣ ರಾಜ್ಯ ಸ್ವತಂತ್ರ್ಯವಾಗದೇ ನಿಜಾಮರ ಆಳ್ವಿಕೆಗೆ ಸೇರಿತ್ತು. ನಿಜಾಮರು ಸ್ವಾತಂತ್ರ್ಯವನ್ನು ಕೊಡಲು ನಿರಾಕರಿಸಿದುದರಿಂದ, ಭಾರತ ಸರ್ಕಾರ 1948ರಲ್ಲಿ ಪೊಲೀಸ್ ಕಾರ್ಯಾಚರಣೆಯಿಂದ ಹೈದರಾಬಾದ್ ನಗರವನ್ನು ಮತ್ತು ತೆಲಂಗಾಣ ಜಿಲ್ಲೆಗಳನ್ನು ತನ್ನ ವಶಮಾಡಿಕೊಂಡಿತು. 1956ರ ನವೆಂಬರ್ ಒಂದನೆಯ ತಾರೀಖು ಪ್ರಧಾನಿ ನೆಹರೂ ಆಂಧ್ರಪ್ರದೇಶ ಎಂಬ ಪ್ರಾಂತ್ಯವನ್ನು ಆರಂಭಗೊಳಿಸಿದರು. ಈ ಪ್ರಾಂತ್ಯದಲ್ಲಿ ತೆಲಂಗಾಣ, ಆಂಧ್ರ ಜಿಲ್ಲೆಗಳು, ರಾಯಲ ಸೀಮೆ ಮುಂತಾದ ಎಲ್ಲಭಾಗಗಳೂ ಸೇರಿ, ತೆಲುಗುಭಾಷೆ ಮಾತನಾಡುವ ಜನ ಒಂದಾದರು. ಪರಂಪರೆಯಿಂದ ಬಂದ ಆಂಧ್ರ ಎಂಬ ಹೆಸರು ಮುಂದುವರೆದು ಅದು ಆಂಧ್ರಪ್ರದೇಶವಾಯಿತು.

**ಆಂಧ್ರರ ನಾಣ್ಯಗಳು** : ದಕ್ಷಿಣಾಪಥದಲ್ಲಿ ಆಳಿದ ಯಾವ ರಾಜ ಮನೆತನದವರೂ ಆಂಧ್ರರಷ್ಟು ವೈವಿಧ್ಯಪೂರ್ಣ ನಾಣ್ಯಗಳನ್ನು ಅಚ್ಚು ಹಾಕಿಸಲಿಲ್ಲ. ಅಷ್ಟೇ ಅಲ್ಲದೆ ಆಂಧ್ರರ ನಾಣ್ಯಗಳು ಬಹಳ ಹೇರಳವಾಗಿಯೂ ದೊರೆತಿವೆ. ಸಾಮಾನ್ಯವಾಗಿ ಇವರ ನಾಣ್ಯಗಳಲ್ಲಿ

ವಿದೇಶಿ ನಾಣ್ಯ ಶೈಲಿಯ ಪ್ರಭಾವ ಕಾಣಬರುವುದಿಲ್ಲವಲ್ಲದೆ ಅವು ಅಂಥ ಕಲಾತ್ಮಕವಾಗಿಯೂ ಇಲ್ಲ. ಇವರು ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದರೂ ಸೀಸದ ನಾಣ್ಯಗಳೇ ಬಹು ವಿಶೇಷ. ಸಿಂಹ, ಹುಲಿ, ಆನೆ, ಬಿಲ್ಲುಬಾಣ ಮುಂತಾದ ಚಿಹ್ನೆಗಳೂ ಶಾಸನಗಳೂ ಇವರ ನಾಣ್ಯಗಳಲ್ಲಿರುವುದು ಸಾಮಾನ್ಯ.

ಯಾವ ಸಾತವಾಹನ ರಾಜ (ಆಂಧ್ರ) ನಾಣ್ಯಗಳನ್ನು ಮೊಟ್ಟ ಮೊದಲನೆಯದಾಗಿ ಅಚ್ಚು ಹಾಕಿಸಿದ ಎಂದು ಹೇಳುವದು ಕಷ್ಟ. ಸಿರಿ ಸಾತಕರ್ಣಿ ಎಂಬ ಮೂರನೆಯ ರಾಜನದೇ ಈಗ ದೊರಕಿರುವ ಪ್ರಾಚೀನತಮ ಆಂಧ್ರ ನಾಣ್ಯವೆಂದು ಮಾತ್ರ ಹೇಳಬಹುದು. ಅವರ ವಿವಿಧ ನಮೂನೆಯ ನಾಣ್ಯಗಳು ಹೀಗಿವೆ. ಸದವಾಹನ ಎಂಬ ಶಾಸನವುಳ್ಳ ತಾಮ್ರದ ಚೌಕಾಕಾರದ, ಸೀಸದ ವೃತ್ತಾಕಾರದ ನಾಣ್ಯಗಳಲ್ಲಿ ಸೊಂಡಿಲನ್ನು ಮೇಲೆತ್ತಿರುವ ಆನೆ, ಉಜ್ಜಯಿನಿ ಮತ್ತು ಮನುಷ್ಯನ ಚಿಹ್ನೆಗಳಿವೆ. ಪುರಾಣಗಳ ಪ್ರಕಾರ ಮೂರನೆಯ ಸಾತವಾಹನ ದೊರೆಯಾದ ಸಾತಕರ್ಣಿಯ ನಾಣ್ಯಗಳು ಇವು ಎಂದು ಹೇಳಬಹುದು. ಸಿರಿ ಸತಸ ಎಂಬ ಶಾಸನವುಳ್ಳ ನಾಣ್ಯಗಳು ಕೆಲವು ಆನೆಯ ಮತ್ತೆ ಕೆಲವು ಮನುಷ್ಯನ ಚಿತ್ರವನ್ನು ಹೊಂದಿವೆ. ಸಾತಕರ್ಣಿ ಎಂಬ ಶಾಸನವುಳ್ಳ ನಾಣ್ಯಗಳಲ್ಲಿ ಆನೆ, ಸಿಂಹ, ಮನುಷ್ಯ, ವೃಷಭ ಮುಂತಾದ ಚಿತ್ರಗಳೂ ಉಜ್ಜಯಿನಿ, ಪರ್ವತ ಮುಂತಾದ ಚಿಹ್ನೆಗಳೂ ಇವೆ. ಅಪೀಲಕ ಮತ್ತು ಮೇಘಸ್ವಾತಿ ಎಂಬ ರಾಜರ ನಾಣ್ಯಗಳು ಮಧ್ಯಪ್ರದೇಶದಲ್ಲಿ ದೊರಕಿವೆ.

ಸಾತವಾಹನರಲ್ಲಿ ಮುಖ್ಯವಾದ ಗೌತಮಿಪುತ್ರ ಸಾತಕರ್ಣಿ ಅನೇಕ ವಿಧದ ನಾಣ್ಯಗಳನ್ನು ಬಳಕೆಗೆ ತಂದ. ಇವನು ನಹಪಾಣ ಎಂಬ ರಾಜನನ್ನು ಸೋಲಿಸಿ, ಅವನ ಬೆಳ್ಳಿಯ ನಾಣ್ಯಗಳ ಮೇಲೆ ತನ್ನ ಹೆಸರನ್ನೂ ಮತ್ತು ಕೆಲವು ಚಿಹ್ನೆಗಳನ್ನು ಪುನರ್ಮುದ್ರಿಸಿದ. ಇಂಥ ಸು. 13,250 ನಾಣ್ಯಗಳು ಜೋಗಲ್ ತಂಬಿ (ನಾಸಿಕದ ಸಮೀಪ) ಎಂಬಲ್ಲಿ ದೊರಕಿವೆ. ಇವನೇ ಬಳಕೆಗೆ ತಂದ ಬೆಳ್ಳಿಯ ನಾಣ್ಯಗಳಲ್ಲಿ ಬ್ರಾಹ್ಮೀಲಿಪಿಯ ರಾಞೋಗೋತಮೀ ಎಂಬ ಶಾಸನವೂ ಉಜ್ಜಯಿನಿ ಚಿಹ್ನೆಯೂ ಇವೆ. ಇವನ ಮಗ ವಾಸಿಷ್ಠೀಪುತ್ರ ಪುಳಮಾವಿಯ ನಾಣ್ಯಗಳಲ್ಲಿ ರಾಜನ ಚಿತ್ರವೂ ಪುಳಮಾವಿ ಎಂಬ ಶಾಸನವೂ ಉಜ್ಜಯಿನಿ, ಚೈತ್ಯ, ಆನೆ ಮುಂತಾದವು ಇವೆ. ಪುರಾಣಗಳ ಮಾಹಿತಿಯ ಪ್ರಕಾರ ಈ ರಾಜನ ಅನಂತರ ಆಳಿದ ವಾಸಿಷ್ಠೀಪುತ್ರ ಶಿವಶ್ರೀ ಎಂಬ ರಾಜನ ನಾಣ್ಯಗಳು ಆಂಧ್ರದಲ್ಲಿ ದೊರಕಿವೆ. ಯಜ್ಞಶ್ರೀ ಸಾತಕರ್ಣಿಯ ನಾಣ್ಯಗಳಲ್ಲಿ ಸಾಮಾನ್ಯವಾಗಿ ಆನೆ, ಕುದುರೆ, ಪರ್ವತ, ಉಜ್ಜಯಿನಿ ಮುಂತಾದವುಗಳಿರುತ್ತವೆ. ಇವನ ಕೆಲವು ನಾಣ್ಯಗಳಲ್ಲಿ ಹಡಗಿನ ಚಿತ್ರವಿದೆ. ಈ ನಾಣ್ಯಗಳು ಕೋರಮಂಡಲ ತೀರದಲ್ಲೂ ಗುಂಟೂರಿನಲ್ಲೂ ದೊರಕಿವೆ. ಇವುಗಳಲ್ಲಿ ರಾಜರ ಚಿತ್ರ, ಬ್ರಾಹ್ಮೀಲಿಪಿಯಲ್ಲಿ ರಾಞೊ ಗೋತಮೀಪುತಸ ಸಿರಿ ಯಞ ಸಾತಕನಿಸ ಎಂಬ ಶಾಸನ, ಹಿಂಭಾಗದಲ್ಲಿ ಉಜ್ಜಯಿನಿ ಚಿಹ್ನೆ, ನದಿ, ಸೂರ್ಯ, ಮುಂತಾದವುಗಳು ಇವೆ.

ಪುರಾಣ ಗ್ರಂಥಗಳ ಪ್ರಕಾರ ಯಜ್ಞಶ್ರೀ ಸಾತಕರ್ಣಿಯ ಅನಂತರ ಆಳಿದ ವಿಜಯ ಮತ್ತು ಚಂದ್ರಶ್ರೀ ಸಾತಕರ್ಣಿಗಳ ನಾಣ್ಯಗಳು ತರ್ಹಲ ಎಂಬಲ್ಲಿ ದೊರಕಿವೆ. ಇವುಗಳಲ್ಲಿ ಅವರ ಹೆಸರುಗಳೂ ಆನೆ ಮತ್ತಿತರ ಉಜ್ಜಯಿನಿ ಚಿಹ್ನೆಗಳೂ ಇವೆ. ಇದೇ ಸ್ಥಳದಲ್ಲಿ ದೊರಕಿರುವ ನಾಣ್ಯಗಳಲ್ಲಿ ಪುಲಹಮಾವಿ ಎಂಬ ಶಾಸನವುಳ್ಳ ನಾಣ್ಯಗಳು 3ನೆಯ ಪುಳಮಾವಿಯ ನಾಣ್ಯಗಳೆಂದು ಹೇಳಬಹುದು.

ಪುರಾಣಗಳಲ್ಲಿ ಉಲ್ಲೇಖಿತವಾಗದೇ ಇರುವ ಅನೇಕ ಸಾತವಾಹನರ ನಾಣ್ಯಗಳು ದೊರಕಿವೆ. ಈ ಗುಂಪಿನಲ್ಲಿ ಕುಂಭಸಾತಕರ್ಣಿ, ಶಕಸಾತಕರ್ಣಿ, ಕರ್ಣಸಾತಕರ್ಣಿ, ಕೋಸಕೀಪುತ್ರಸಾತಕರ್ಣಿ ಮುಂತಾದ ರಾಜರ ನಾಣ್ಯಗಳು ಗಮನಾರ್ಹವಾದುವು. ಇವು ಸಾತವಾಹನ ನಾಣ್ಯಗಳೆಂದು ಸಾತಕರ್ಣಿ ಎಂಬ ಹೆಸರಿನಿಂದ ಮಾತ್ರ ಹೇಳಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಉತ್ಖನನದಲ್ಲಿ ವಾಸಿಷ್ಠೀಪುತ್ರ ಪುಳಮಾವಿಯ ಮತ್ತು ಸಾತವಾಹನರ ಅಧೀನದಲ್ಲಿ ಆಳುತ್ತಿದ್ದ ರಾಜರ ಅನೇಕ ನಾಣ್ಯಗಳೂ ದೊರಕಿವೆ.

(ಎ.ವಿ.ಎನ್.)

**ಆಂಧ್ರದ ಪ್ರಾಗಿತಿಹಾಸ :** ಗೋದಾವರಿ, ಕೃಷ್ಣಾ, ತುಂಗಭದ್ರ ಮತ್ತು ಉಪನದಿಗಳ ಮತ್ತು ಅಕ್ಕಪಕ್ಕದ ಪ್ರದೇಶಗಳಲ್ಲಿ ಪೂರ್ವಶಿಲಾಯುಗದ ಮಾನವ ನಿರ್ಮಿತ ಕಲ್ಲಿನ ಉಪಕರಣಗಳು ದೊರಕಿವೆ. ಕರ್ನೂಲು, ಗುಂಟೂರು ಅದರಲ್ಲೂ ನಾಗಾರ್ಜುನಕೊಂಡ, ನೆಲ್ಲೂರು ಮುಂತಾದ ಪ್ರದೇಶಗಳಲ್ಲಿ ಪೂರ್ವ ಶಿಲಾಯುಗದ ಕೈಗೊಡಲಿಗಳು, ಚಕ್ಕೆ ಕಲ್ಲಿನ ಉಪಕರಣಗಳು ಹೇರಳವಾಗಿ ದೊರಕಿವೆ ಇವು ಅತ್ಯಂತ ಪುರಾತನ ಕಾಲದಿಂದಲೂ ಇಲ್ಲಿ ಮಾನವ ಆಹಾರ ಸಂಗ್ರಹಣೆ ಮಾಡಿಕೊಂಡು ವಾಸಿಸುತ್ತಿದ್ದನೆಂಬುದಕ್ಕೆ ಸಾಕ್ಷ್ಯವನ್ನೊದಗಿ ಸುತ್ತದೆ. ಈ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಉಂಡೆ ಕಲ್ಲಿನ ಉಪಕರಣಗಳು ದೊರಕುವುದರಿಂದ ಕೈಗೊಡಲಿಗಳ ಸಂಸ್ಕೃತಿಗಿಂತಲೂ ಪ್ರಾಚೀನವಾದ ಒಂದು ಸಂಸ್ಕೃತಿ ಇಲ್ಲಿತ್ತೆಂದು ಹಲವರು ಅಭಿಪ್ರಾಯ ಪಟ್ಟರೂ ಅದು ಕೈಗೊಡಲಿ ಸಂಸ್ಕೃತಿಯ ಅಂಗವೆಂದೇ ಹೇಳಬೇಕಾಗುತ್ತದೆ.

ಮಧ್ಯಶಿಲಾಯುಗದಲ್ಲಿ ಸಣ್ಣ ಚಕ್ಕೆಕಲ್ಲಿನ ಉಪಕರಣಗಳ ಹೊಸ ಸಂಸ್ಕೃತಿಯೊಂದು ಭಾರತದಲ್ಲಿ ತಲೆದೋರಿತು. ಆ ಕಾಲದ ಅವಶೇಷಗಳು ಗುಂಟೂರು, ಕರ್ನೂಲು, ಚಿತ್ತೂರು ಮತ್ತು ಅನಂತಪುರ ಮುಂತಾದ ಕಡೆ ದೊರಕಿ ಮಾನವ ಸಂಸ್ಕೃತಿಯ ಮುನ್ನಡೆಯನ್ನೂ ರೂಪಿಸುತ್ತವೆ. ಆ ಸಂಸ್ಕೃತಿಯಲ್ಲಿ ಒರೆಯುವ ಉಪಕರಣಗಳು, ಕೊರೆಯುವ ಉಪಕರಣಗಳು ಮೊನಚಾದ ಶಿಲೆಗಳ ಉಪಕರಣಗಳು ಹೆಚ್ಚು ಬಳಕೆಯಲ್ಲಿದ್ದವು. ಅನಂತರ ಸೂಕ್ಷ್ಮಶಿಲಾಯುಧ ಸಂಸ್ಕೃತಿಯ ಅವಶೇಷಗಳು ಕರ್ನೂಲು, ಗಿಡ್ಡಲೂರು, ನಾಗಾರ್ಜುನಕೊಂಡ ಮೊದಲಾದ ಅನೇಕ ಪ್ರದೇಶಗಳಲ್ಲಿ ದೊರಕಿವೆ. ಈ ಹಂತವನ್ನು ಪ್ರಶ.ಪೂ.6–3 ಸಾವಿರ ವರ್ಷಗಳಷ್ಟು ಹಿಂದಿನ ಸೂಕ್ಷ್ಮಶಿಲಾಯುಗವೆಂದೂ ತಾಮ್ರ ಶಿಲಾಯುಗಕ್ಕೆ ಸೇರುವ ಫಲಕಗಳೆಂದೂ ವಿಭಾಗಿಸಬಹುದು. ನೇರವಾದ ಫಲಕಗಳು ಅರ್ಧಚಂದ್ರ ಮತ್ತು ಮುಕ್ಕೋಣಾಕೃತಿ ಉಪಕರಣಗಳು, ಒರೆಯುವ ಮತ್ತು ಕೊರೆಯುವ ಉಪಕರಣಗಳು ಮತ್ತು ಒಂದು ಪಕ್ಕವನ್ನು ಮೊಂಡು ಮಾಡಿದ ಫಲಕಗಳು–ಈ ಕಾಲದ ಮುಖ್ಯ ಉಪಕರಣಗಳು.

ನವ ಶಿಲಾಯುಗದ ಆಹಾರೋತ್ಪಾದನೆಯ ಹಂತದ ಅವಶೇಷಗಳು ಅನೇಕ ಪ್ರದೇಶ ಗಳಲ್ಲಿ ದೊರಕಿವೆ. ಗುಂಟೂರು, ನೆಲ್ಲೂರು, ಕಡಪ ಹಾಗೂ ಅನಂತಪುರ ಜಿಲ್ಲೆಗಳಲ್ಲಿ ನಯಮಾಡಿದ ಕೊಡಲಿಗಳೂ ಬಾಚಿಗಳೂ ಮಡಕೆ ಕುಡಿಕೆಗಳೂ ದೊರಕಿರುವುದಲ್ಲದೆ ದನಕರುಗಳ ಸಗಣಿಗಳನ್ನು ಸುಟ್ಟಿದುದರಿಂದ ಉಂಟಾದ ಬೂದಿದಿಬ್ಬಗಳು ಉತ್ನೂರು ಮುಂತಾದ ಅನೇಕ ಕಡೆಗಳಲ್ಲಿ ಕಂಡುಬಂದು ಈ ಜನರ ಪಶುಸಂಗೋಪನ ವೃತ್ತಿಯ ದ್ಯೋತಕವಾಗಿವೆ. ಆಗ ರೂಢಮೂಲವಾದ ವ್ಯವಸಾಯ ಪದ್ಧತಿ ಬಳಕೆಯಲ್ಲಿತ್ತು. ಮುಂದಿನ ತಾಮ್ರಶಿಲಾಯುಗದ ಮಾಹಿತಿಗಳು ಅಲ್ಲಲ್ಲಿ ಕಂಡುಬಂದಿದ್ದರೂ ಅವುಗಳ ವಿಷಯವಾಗಿ ಸ್ಪಷ್ಟವಾಗಿ ಏನೂ ಹೇಳಲಾಗಿಲ್ಲ. ಕಬ್ಬಿಣಯುಗಕ್ಕೆ ಸೇರಿದ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಅವಶೇಷಗಳು ಗೋದಾವರಿ ನದಿಯ ದಕ್ಷಿಣದಲ್ಲಿ ಸಾಮಾನ್ಯವಾಗಿ ಎಲ್ಲೆಡೆಗಳಲ್ಲೂ ಮುಖ್ಯವಾಗಿ ಹೈದರಾಬಾದ್ ಪ್ರದೇಶ, ಗುಂಟೂರು, ಕಡಪ, ಕರ್ನೂಲು, ಅನಂತಪುರ ಮತ್ತು ಚಿತ್ತೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬಂದಿದೆ. ಈ ಕಾಲದಲ್ಲಿ ಮಾನವ ವ್ಯವಸಾಯ ರೀತಿಯನ್ನು ಉತ್ತಮಗೊಳಿಸಿ, ಕಬ್ಬಿಣದ ಉಪಕರಣಗಳನ್ನು ಉಪಯೋಗಿಸು ತ್ತಿದ್ದ. ನಗರೀಕರಣ ಪ್ರಾರಂಭವಾಗಿ ಐತಿಹಾಸಿಕ ತಳಹದಿ ಸ್ಥಾಪಿತವಾಯಿತು. (ಬಿ.ಕೆ.ಜಿ.)

**ಆಂಧ್ರಪ್ರಭ :** ಪ್ರಮುಖ ತೆಲುಗು ದಿನಪತ್ರಿಕೆ. 15 ಆಗಸ್ಟ್ 1938ರಂದು ಮದರಾಸಿನಲ್ಲಿ ಸ್ಥಾಪನೆಯಾಯಿತು. ಪ್ರಾರಂಭ ಸ್ಥಾಪನೆ ಸಂಪಾದಕ ಖಾಸಾ ಸುಬ್ಬರಾವ್. ಈಗ ಇಂಡಿಯನ್ ಎಕ್ಸ್‌ಪ್ರೆಸ್ ಗುಂಪಿನದಾಗಿದೆ. ರಾಮನಾಥ ಗೋಯಂಕರಿಂದ ವಾರಪತ್ರಿಕೆಯಾಗಿತು.



1942ರಲ್ಲಿ ವೆಂಕಟೇಶ್ವರರಾವ್ ಸಂಪಾದಕರಾಗಿ 17 ವರ್ಷಗಳ ಕಾಲ ಇದ್ದು ಪತ್ರಿಕೆಯ ಶೀರ್ಷಿಕೆಗಳು, ಕ್ರಿಯಾಚಿತ್ರಗಳು, ಸುದ್ದಿ ಪ್ರಕಟಣೆ ಮೊದಲಾದವುಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಿದರು. ಅಲ್ಲದೆ ಇದೇ ಗುಂಪಿನ ಭಾನುವಾರದ ಸಂಚಿಕೆ ವರ್ಣರಂಜಿತವಾಗಿದ್ದು ವೈವಿಧ್ಯ ಪೂರ್ಣವಾಗಿದೆ. ಆಂಧ್ರ ಪ್ರಭ ಇಲಸ್ಟ್ರೇಟೆಡ್ ವೀಕ್ಲಿಯೂ ಒಳ್ಳೆಯ ವಾರ ಪತ್ರಿಕೆ ಎನಿಸಿದೆ. ಸುದ್ದಿಸಮಾ ಚಾರ ಸಂಗ್ರಹಣ, ನಿರೂಪಣ, ಪ್ರಚಲಿತ ವಿಷಯಗಳ ಮೇಲಿನ ವಿಶೇಷ ಲೇಖನಗಳು, ಸಂಪಾದಕೀಯ ಗಳಿಂದಾಗಿ ಇವು ಅತ್ಯಧಿಕ ಪ್ರಸಾರವುಳ್ಳ ವಾಗಿವೆ. ಆಂಧ್ರಪ್ರಭಾ ವಾಸವಿ ಕಮ್ಯೂನಿಕೇಷನ್ಸ್ ಸಂಸ್ಥೆಯ ಆಡಳಿತಕ್ಕೆ ಒಳಪಟ್ಟಿದೆ. ಹೈದರಾಬಾದ್ ಕೇಂದ್ರ ಕಾರ್ಯಾಲಯ. ಸಂಪಾದಕರು ಸತೀಶ್ ಚಂದ್ರ ಬೆಂಗಳೂರು, ಚಂದ್ರ. ಹೈದರಾಬಾದ್, ಚೆನ್ನೈ, ವಿಜಯವಾಡ ಮತ್ತು ವಿಶಾಖಪಟ್ಟಣಂ ಕೇಂದ್ರಗಳಿಂದ ಈ ಪತ್ರಿಕೆಯ ಆವೃತ್ತಿಗಳು ಪ್ರಕಟವಾಗುತ್ತಿವೆ. (ಟಿ.ಟಿ.ಎಸ್.)

**ಆಂಧ್ರಭಾಷೆ :** ದ್ರಾವಿಡಭಾಷಾವರ್ಗಕ್ಕೆ ಸೇರಿದ ತೆಲುಗನ್ನು ಆಂಧ್ರಭಾಷೆಯೆಂದು ಕರೆಯುವುದು ಅಷ್ಟು ಸರಿಯಲ್ಲದಿದ್ದರೂ ರೂಢಿಯಲ್ಲಿ ಆ ಹೆಸರೂ ನಿಂತುಬಿಟ್ಟಿದೆ. ಇದಕ್ಕೇನು ಕಾರಣವೆಂದರೆ ಆಂಧ್ರ ಚಕ್ರಾಧಿಪತ್ಯವೂ ತೆಲುಗು ದೇಶವೂ ಸಮಾನವ್ಯಾಪ್ತಿಯುಳ್ಳವಲ್ಲ. ಚಕ್ರಾಧಿಪತ್ಯದ ಒಂದು ಭಾಗವಾದ ಮಹಾರಾಷ್ಟ್ರ ಎಂದಿಗೂ ತೆಲುಗು ದೇಶದ ಒಂದು ಭಾಗವಾಗಲಿಲ್ಲ. ತೆಲುಗು ದೇಶದ ಭಾಗಗಳಾದ ಕಳಿಂಗದ ಮಧ್ಯ ಮತ್ತು ದಕ್ಷಿಣ ಭಾಗಗಳು ಆಂಧ್ರ ಚಕ್ರಾಧಿಪತ್ಯಕ್ಕೆ ಎಂದೂ ಸೇರಿರಲಿಲ್ಲ. ತೆಲುಗು ದೇಶದಲ್ಲಿ ನೂರಾರು ಸಂಸ್ಕೃತ ಮತ್ತು ಪ್ರಾಕೃತಿಕ ಪದಗಳು ಬಳಕೆಯಲ್ಲಿವೆ ಮತ್ತು ಇನ್ನೂ ಹೆಚ್ಚಿನ ಪದಗಳು ತೆಲುಗು ಸಾಹಿತ್ಯದಲ್ಲಿ ಪ್ರಯುಕ್ತವಾಗಿವೆ. ಆದರೆ ಈ ಸಾಲ ತೆಗೆದುಕೊಂಡ ಶಬ್ದಗಳಿಂದ, ಇವು ಎಷ್ಟೇ ಇರಲಿ, ನಾಡಿನಲ್ಲಿ ಎಷ್ಟೇ ಹರಡಲಿ, ಭಾಷಾಬಾಂಧವ್ಯವನ್ನು ನಿರ್ಧರಿಸಲಾಗದು.

ತೆಲುಗು ತೆಲಂಗಾಣದ (ತ್ರಿಲಿಂಗ) ಭಾಷೆ. ಅದು ಈಗಿನ ಆಂಧ್ರಪ್ರದೇಶದ ಭಾಷೆಯಾಗಿರುವುದರಿಂದ ಅದರ ಸ್ಥೂಲ ಪರಿಚಯವನ್ನಿಲ್ಲಿ ಮಾಡಿಕೊಡಲಾಗಿದೆ. ರಾಜಮಹೇಂದ್ರಿಯಲ್ಲಿದ್ದ ಪೂರ್ವ ಚಾಳುಕ್ಯ ವಂಶದ ರಾಜರಾಜ ನರೇಂದ್ರನ (1033–43) ಆಸ್ಥಾನದಲ್ಲಿದ್ದ ನನ್ನಯನ **(ನೋಡಿ– ನನ್ನಯ)** ಕಾಲಕ್ಕೆ ಹಿಂದೆ ತೆಲುಗು ಭಾಷೆ ಹೇಗೆ ಬೆಳೆಯಿತು ಎಂಬ ವಿಷಯವನ್ನು ನಿರೂಪಿಸಲು ನಮಗೆ ತಕ್ಕಷ್ಟು ಆಧಾರಗಳು ದೊರೆತಿಲ್ಲ. ಬೆಜವಾಡದಲ್ಲಿರುವ (ವಿಜಯವಾಡ) ಒಂದು ಕಂಬದಲ್ಲಿ ಕೊರೆದಿರುವ ಯುದ್ಧಮಲ್ಲ ಶಾಸನಮು ಎಂಬ ಶಾಸನ ಮತ್ತು ನನ್ನಯ್ಯನಿಗೆ ಹಿಂದಿನ ಇತರ ಶಾಸನಗಳಲ್ಲಿ ಪದ್ಯಗಳಿವೆ; ಅವುಗಳ ಭಾಷೆ ನನ್ನಯ್ಯ ಬಳಸಿರುವ ಭಾಷೆಯ ಹಾಗೆಯೇ ಇದೆ. ತೆಲುಗು ಭಾಷೆ ಅಥವಾ ಸಾಹಿತ್ಯ ಯಾವಾಗ ಹುಟ್ಟಿತೆಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಅದು 600ರ ಹೊತ್ತಿಗೆ ದ್ರಾವಿಡ ಭಾಷೆಯ ಒಂದು ಪ್ರತ್ಯೇಕ ಶಾಖೆಯಾಗಿ ಇದ್ದಿತೆಂಬುದನ್ನು ಆ ಕಾಲದ ಚೋಳ ಮಹಾರಾಜರ ತೆಲುಗು ಶಾಸನವೊಂದರಿಂದ ನಿರ್ದಿಷ್ಟವಾಗಿ ಹೇಳಬಹುದು.

ನನ್ನಯ್ಯನ ಕಾಲದಿಂದಾಚೆಗೆ ತೆಲುಗು ಭಾಷೆ ಹೇಗೆ ಬೆಳೆಯಿತು ಎಂಬುದಕ್ಕೆ ತಕ್ಕಷ್ಟು ಸಾಕ್ಷ್ಯಗಳಿವೆ. ತಮಿಳಿನಲ್ಲಿ ದ್ರಾವಿಡಾಂಶ ಹೇರಳವಾಗಿ ನಿಂತುಬಿಟ್ಟಿದೆ. ಸಂಸ್ಕೃತ ಅಥವಾ ಪ್ರಾಕೃತದ ಪ್ರಭಾವಕ್ಕೆ ಅದು ಅಷ್ಟಾಗಿ ಈಡಾಗಲಿಲ್ಲ; ಆದರೆ ಇತರ ಮೂರು ದ್ರಾವಿಡ ಭಾಷೆಗಳು ಸಂಸ್ಕೃತ ಮತ್ತು ಪ್ರಾಕೃತ ಶಬ್ದಗಳನ್ನು ಹೇರಳವಾಗಿ ತೆಗೆದುಕೊಂಡಿವೆ. ಮಲೆಯಾಳ ತನ್ನ ದ್ರಾವಿಡಾಂಶದಲ್ಲಿ ಕನ್ನಡ, ತೆಲುಗುಗಳಿಗಿಂತಲೂ ತಮಿಳಿಗೆ ಹೆಚ್ಚು ಸಮೀಪವಾಗಿದೆ. ತೆಲುಗಿಗೂ ಕನ್ನಡಕ್ಕೂ ಸಮಾನಾಂಶಗಳು ಹೆಚ್ಚಾಗಿದ್ದರೂ ತೆಲುಗುಗಿಂತಲೂ ಕನ್ನಡದಲ್ಲಿ ದ್ರಾವಿಡಾಂಶ ಹೆಚ್ಚು. ಈ ಬಾಂಧವ್ಯಗಳು ಮತ್ತು ವ್ಯತ್ಯಾಸಗಳನ್ನು ಈ ಭಾಷೆಗಳು ಬೆಳೆದ ಕ್ಷೇತ್ರಗಳ ಭೌಗೋಳಿಕ ವೈಲಕ್ಷಣಗಳಿಂದಲೂ ಪ್ರಾಚೀನ ಹಾಗೂ ಮಧ್ಯಕಾಲದ ಭಿನ್ನಭಿನ್ನ ರಾಜಕೀಯ ಪರಿಸ್ಥಿತಿಗಳಿಂದಲೂ ಸುಲಭವಾಗಿ ತರ್ಕಿಸಬಹುದು. ತೆಲುಗು ದೇಶ ದಖನ್ನಿನ ಮಧ್ಯಭಾಗದಲ್ಲಿದೆ. ಓಂಡ್ರ ದೇಶದವರು ಈಶಾನ್ಯದಲ್ಲೂ ಮಧ್ಯಪ್ರದೇಶದ ಹಿಂದಿ ಭಾಷೆಯ ಜನರು ಉತ್ತರದಲ್ಲೂ ಮಹಾರಾಷ್ಟ್ರರು ವಾಯವ್ಯದಲ್ಲೂ ಕನ್ನಡಿಗರು ಪಶ್ಚಿಮದಲ್ಲೂ ತಮಿಳರು ದಕ್ಷಿಣದಲ್ಲೂ ಅದನ್ನು ಸುತ್ತುವರಿದಿದ್ದಾರೆ. ದಕ್ಷಿಣಕ್ಕೆ ಪ್ರಸರಿಸುವಾಗ ಆರ್ಯಸಂಸ್ಕೃತಿ ಅನಿವಾರ್ಯವಾಗಿ ಮೊದಲು ತೆಲುಗು ದೇಶವನ್ನು ಹಾಯ್ದೇ ದಕ್ಷಿಣ ತುದಿಯನ್ನು ಮುಟ್ಟಬೇಕು. ಆದುದರಿಂದ ತೆಲುಗುಭಾಷೆ ಮತ್ತು ಸಂಸ್ಕೃತಿಗಳು ಆರ್ಯಭಾಷೆ ಮತ್ತು ಸಂಸ್ಕೃತಿಗಳಿಂದ ದಕ್ಷಿಣದ ಇತರ ಪ್ರದೇಶಗಳಿಗಿಂತ ಹೆಚ್ಚಾಗಿ ಪ್ರಭಾವಿತವಾದವು. ತೆಲುಗಿಗಿರುವ ಮತ್ತೊಂದು ಲಾಭಾಂಶವೇನೆಂದರೆ ಮಿಕ್ಕೆಲ್ಲ ದ್ರಾವಿಡ ಭಾಷೆಗಳಿಗಿಂತಲೂ ತೆಲುಗನ್ನು ಆಡುವ ಜನರೇ ಹೆಚ್ಚು ಮಂದಿ ಇದ್ದಾರೆ. ತನ್ನ ಮೃದು ಮಧುರ ಧ್ವನಿಗೆ ಅದು ಹೆಸರಾಗಿದೆ. ಪಾಶ್ಚಾತ್ಯ ಪ್ರವಾಸಿಗರು ಇದನ್ನು ಪೂರ್ವದ ಇಟ್ಯಾಲಿಯನ್ ಎಂದು ಕರೆದಿದ್ದಾರೆ.

ತೆಲುಗು ಭಾಷೆ ಪ್ರಾಚೀನ ಕಾಲದಲ್ಲಿ ಹೇಗೆ ಬೆಳೆಯಿತು ಎಂಬುದನ್ನು ನಿರೂಪಿಸುವಾಗ ನನ್ನಯ್ಯನಿಗೆ ಪೂರ್ವದ ಕಾಲದ ಒಂದು ವಿಶಿಷ್ಟ ಲಕ್ಷಣವನ್ನು ಗಮನಕ್ಕೆ ತೆಗೆದುಕೊಳ್ಳುವುದು ಆವಶ್ಯಕ. ಇತರ ಭಾಷೆಗಳಲ್ಲಿ ಇನ್ನೂ ಉಳಿದುಕೊಂಡಿರುವ ಗಳ್(ಕಳ್) ಎಂಬ ಬಹುವಚನ ಪ್ರತ್ಯಯದ ಸ್ಥಾನವನ್ನು ನನ್ನಯ್ಯನಿಗೆ ಬಹು ಹಿಂದೆಯೇ–ಲು ಎಂಬುದು ಆಕ್ರಮಿಸಿಕೊಂಡಿತು. ಅದು ಬಹುಕಾಲದಿಂದಲೂ ತೆಲುಗಿನಲ್ಲಿತ್ತೆಂಬುದನ್ನು ತೋರಿಸಲು–ಮ್ರಾ(ನ್)ಕುಲು (ಮರಗಳು); ಕೊಲ(ನ್)ಕುಲು (ಕೊಳಗಲು); ಈಗಲು (ನೊಣಗಳು); ಏನುಗಲು (ಆನೆಗಳು), ಎಲುಕಲು(ಇಲಿಗಳು) ಇತ್ಯಾದಿ ಬಹುವಚನ ರೂಪಗಳು ನಿದರ್ಶನವಾಗಿ ಉಳಿದುಬಂದಿವೆ. ಮುಂದೆ ಬಹುವಚನ ಪ್ರತ್ಯಯ ಲ (ಉ) ಎಂದು ತೆಲುಗರು ಕಂಡುಕೊಂಡಾಗ ಏಕವಚನ ರೂಪಗಳನ್ನು ರಚಿಸಲು ಲು ವನ್ನು ಕಳೆದಿಟ್ಟರು. ಉದಾಹರಣೆಗೆ, ಈಗ, ಏನುಗ, ಎಲುಕ; ತಮಿಳಿನ ಈ ಯಾನ್ಯೆ ಮುಂತಾದುವನ್ನು ನೋಡಬಹುದು.

ತಮಿಳು ಮತ್ತು ಇತರ ದ್ರಾವಿಡ ಭಾಷೆಗಳಲ್ಲಿರುವಂತೆ ತೆಲುಗು ಸಹ ಬಹುವಚನ ದ್ವಿಲಿಂಗ ಪ್ರತ್ಯಯ [ರ(ಉ)] ವನ್ನು ಉಳಿಸಿಕೊಂಡಿದೆ. ಉದಾರಣೆಗೆ, ವಾರು (ಅವರು), ವೀರು (ಇವರು), ಎವರು (ಯಾರು?), ಮೀರು (ನೀವು). ಆದರೆ ಸರ್ವತ್ರ ಹರಡಿರುವ ಲು ವಿನ ಪ್ರಭಾವ ಎಷ್ಟೆಂದರೆ, ಅದಿಲ್ಲದಿದ್ದರೆ ಬಹುವಚನದ ಭಾವ ಸಮಗ್ರವಾಗಿ ಮನಸ್ಸಿಗೆ ತಟ್ಟುವುದಿಲ್ಲ. ಆದುದರಿಂದ ಕಾಲಕ್ರಮದಲ್ಲಿ ವಾರಲು, ವೀರಲು, ಮೀರಲು ಮುಂತಾದವುಗಳು ಬೆಳೆದವು. ಇವು ಇಂಗ್ಲಿಷಿನಲ್ಲಿ ಚಿಲ್ಡ್ರನ್, ಮೆನ್ಸ್, ಡೇಟಾಸ್ ಎಂಬ ಹಾಗಿವೆ. ಕೆಲವು ಸಂದರ್ಭಗಳಲ್ಲಿ ದ್ವಿಲಿಂಗೀ ಬಹುವಚನ ಪ್ರತ್ಯಯದ ಸ್ಥಾನವನ್ನು ಸಹ ಲು ಆಕ್ರಮಿಸುತ್ತದೆ. ಉದಾಹರಣೆಗೆ, ವಾಂಡ್ಲು; ವಾಳ್ಳು (ಅವರು); ಕೂತುಂಡ್ಲು ಕೂತೂಳ್ಳು (ಹೆಣ್ಣು ಮಕ್ಕಳು) ಇತ್ಯಾದಿ.

ಅನೇಕಾಕ್ಷರ ರೂಪಗಳನ್ನು ಮೊಟಕುಗೊಳಿಸಿದ ರೂಪಗಳು ನನ್ನಯ್ಯನ ಕಾಲದಷ್ಟು ಮುಂಚಿನಿಂದಲೇ ತಲೆದೋರುತ್ತದೆ. ಉದಾಹರಣೆಗೆ ಪೂಜಿಂಚಿತೇ? ಎಂಬ ನನ್ನಯ್ಯನ ಪ್ರಯೋಗ ಪೂಜಿಂಚಿತಿವೇ? (ಪೂಜಿಸಿದೆಯಾ) ಎಂಬುದರಿಂದ ಹುಟ್ಟಿದೆ. ಪೂಜಿಂಚಿತಿ ವೇನಿನ್ (ಪೂಜಿಸಿದ್ದೇ ಆದರೆ) ಎಂಬ ದೀರ್ಘರೂಪ ಕ್ರಮೇಣ ಪೂಜಿಂಚಿತಿವೇನಿ ಎಂದಾಗಿ, ಬಳಿಕ ವೇನ್–ವೇ; ತೇನ್–ತೇ ಮುಂತಾದ್ದಾಗಿ ಈಗಿನ ಪೂಜಿಸ್ತೇ ಎಂಬ ರೂಪಕ್ಕಿಳಿದಿದೆ. ಪೂಜಿಂಚಿತೇನ್ ಎಂಬುದಕ್ಕಿಂತ ಹಿಂದಿನ ಶಬ್ದರೂಪಗಳಲ್ಲಿ 'ವಿ' ಎಂಬುದಿದ್ದು ಮಧ್ಯಮ ಪುರುಷದ ಏಕವಚನವನ್ನು ನಿರ್ದೇಶಿಸುತ್ತಿತ್ತು. ಆದರೆ ಆ ತರುವಾಯದ ರೂಪಗಳಲ್ಲಿ 'ವಿ' ಅಳಿದುಹೋಗಿ ಆ ರೂಪ ಎಲ್ಲ ಜನಕ್ಕೂ ಏಕವಚನ ಬಹುವಚನಗಳೆರಡಲ್ಲೂ ಪ್ರಯುಕ್ತವಾಗತೊಡಗಿತು. ಹೀಗೆ ಮಟ್ಟ ಸಮ ಮಾಡುವ ಪ್ರವೃತ್ತಿ ಈ ಮಾತುಗಳಲ್ಲಿ ಕಂಡುಬರುತ್ತದೆ. ಅಂಟಿವೇನಿನ್ ಎಂಬುದರಿಂದ ಅನ್‌ಟೆ (ನೀನು ಹೇಳಿದರೆ); ಐತಿವೇನಿನ್ ಎಂಬುದರಿಂದ ಐತೆ (ನೀನು ಹೀಗಾಗುವುದಾದರೆ) ಇತ್ಯಾದಿ. ಕವಿಗಳು ಈ ಎಲ್ಲ ರೂಪಗಳನ್ನೂ ಛಂದಸ್ಸಿನ ಸೌಕರ್ಯಕ್ಕಾಗಿ ಉಪಯೋಗಿಸುತ್ತಾರೆ.

ಕಾವ್ಯಗಳಲ್ಲೂ ಅವುಗಳನ್ನು ಅನುಸರಿಸಿ ಬರೆದ ವ್ಯಾಕರಣಗಳಲ್ಲೂ ಜನರಾಡುವ ಮಾತಿನಲ್ಲಿ ತೋರಿ ಬರುವ ಬದಲಾವಣೆಗಳು ಕಂಡುಬರುವುದಿಲ್ಲ. ಏಕೆಂದರೆ ಬಹು ಹಿಂದಣ ಕವಿಗಳು ಅನಿವಾರ್ಯವಾಗಿ ತಾವಾಡುತ್ತಿದ್ದ ಭಾಷೆಯನ್ನೇ ತಮ್ಮ ಕಾವ್ಯಗಳಲ್ಲಿ ಬಳಸುತ್ತಿದ್ದರೂ ಮುಂದೆ ಬಂದ ಕವಿಗಳು ಹಿಂದಿನ ಕವಿಗಳ ಭಾಷೆಗೆ ತಮ್ಮ ಕಾಲದ ಆಡುಮಾತಿಗಿಂತಲೂ ಹೆಚ್ಚಿನ ಗಮನವನ್ನು ಕೊಡುತ್ತಿದ್ದರು; ವೈಯಾಕರಣರು ಭಾಷೆ ಒಂದೇ ಸಲಕ್ಕೆ ಸ್ಥಿರರೂಪವನ್ನು ಪಡೆದುಬಿಟ್ಟಿರುವಂತೆ ಭಾವಿಸಿ ಪ್ರಾಚೀನ ಕವಿಗಳ ಪ್ರಯೋಗಗಳನ್ನೇ ಅವಲಂಬಿಸಿ ವ್ಯಾಕರಣ ಸೂತ್ರಗಳನ್ನು ರಚಿಸಿದರು. ಆದರೆ ಕವಿಗಳು ತಿಳಿದೋ ತಿಳಿಯದೆಯೋ ವ್ಯಾಕರಣ ಸೂತ್ರಗಳನ್ನು ಮುರಿಯುತ್ತಿದ್ದರು. ಎಷ್ಟು ಪ್ರಾಚೀನವಾದರೆ ಅಷ್ಟು ಶ್ರೇಷ್ಠ ಎಂಬ ಸೂತ್ರವನ್ನು ಸಂಪ್ರದಾಯನಿಷ್ಠ ಕವಿಗಳೂ ವೈಯಾಕರಣರೂ ಭಾಷಾಕ್ಷೇತ್ರದಲ್ಲೂ ಎತ್ತಿಹಿಡಿದಿದ್ದರು. ಆದರೆ ಕವಿಗಳು ಹಳೆಯ ವ್ಯಾಕರಣಸೂತ್ರಗಳನ್ನು ಬದಿಗೊತ್ತಿ ಜೀವಂತವಾಗಿರುವ ಆಡುಮಾತನ್ನೇ ಬಳಸಲು ಹಿಂಜರಿಯಲಿಲ್ಲ. ಏಕೆಂದರೆ ಅವು ಅವರ ಭಾವಗಳನ್ನು ಪ್ರಕಟಿಸಲು ಹೆಚ್ಚು ಪರಿಣಾಮಕಾರಿಯಾಗಿದ್ದುವಲ್ಲದೆ ಪ್ರಾಚೀನ ಶಬ್ದಗಳಿಗಿಂತಲೂ ಸುಲಭವಾಗಿ ಅರ್ಥವಾಗುತ್ತಿದ್ದವು. ಆದರೆ ಇಂಥ ಕವಿಗಳು ಬಹು ವಿರಳ. ಅವರು ಆಡುಮಾತುಗಳನ್ನು ಎಚ್ಚರದಿಂದಲೂ ಅಂಜಿಕೆಯಿಂದಲೂ ಪ್ರಯೋಗಿಸುತ್ತಿದ್ದರು. ಶಾಸನಗಳು, ಹಾಡುಗಳು, ಶತಕಗಳು ಮತ್ತು ತಮ್ಮ ತತ್ತ್ವಗಳು ಜನಕ್ಕೆ ತಿಳಿದು ಅವು ಅವರಲ್ಲಿ ಹರಡಬೇಕೆಂಬ ಆಸೆಯುಳ್ಳ ಶೈವ ಕವಿಗಳ ದ್ವಿಪದ ಕಾವ್ಯಗಳು ಆಡುಮಾತುಗಳನ್ನು ಅವುಗಳ ರೂಢಿಯ ಅರ್ಥದಲ್ಲೇ ಹೆಚ್ಚಾಗಿ ಬಳಸುತ್ತಿದ್ದರು. 1700–1850ರಲ್ಲಿ ಬೆಳೆದ ಗದ್ಯ ಪ್ರಕಾರ ಕಥೆ, ಪ್ರಬಂಧ, ವ್ಯಾಖ್ಯಾನ, ಪತ್ರಗಳು ಮುಂತಾದ ಎಲ್ಲ ಪ್ರಕಾರಗಳ ಲೇಖನಗಳಿಗೂ ಒದಗಿಬಂತು. ಈ ಗದ್ಯ ಲೇಖನಗಳ ಬಹುಭಾಗವನ್ನು ಪ್ರಚಲಿತ ಭಾಷೆಯಲ್ಲೇ ಬರೆಯಲಾಗುತ್ತಿತ್ತು; ಅದು ತೆಲುಗು ಭಾಷಾಚರಿತ್ರೆಯನ್ನು ವ್ಯಾಸಂಗಿಸಲು ಬಯಸುವವರಿಗೆ ಆ ಭಾಷೆಯ ಬೆಳವಣಿಗೆಗಳನ್ನು ಗುರುತಿಸಲು ಕಾವ್ಯಗಳ ಭಾಷೆಗಿಂತ ಹೆಚ್ಚು ಸಹಕಾರಿಯಾಗಿದೆ. ಈ ಸಂಪ್ರದಾಯವನ್ನು ಸಿ. ಪಿ. ಬ್ರೌನ್ ಪ್ರೋತ್ಸಾಹಿಸಿದ. ತನ್ನ ಇಂಗ್ಲಿಷ್–ತೆಲುಗು, ತೆಲುಗು–ಇಂಗ್ಲಿಷ್ ಶಬ್ದಕೋಶಗಳಲ್ಲಿ ಆತ ಪದಗಳ ಅರ್ಥವನ್ನು ವಿವರಿಸಲು ಪ್ರಚಲಿತ ಭಾಷೆಯನ್ನೇ ಉಪಯೋಗಿಸಿದ. ಆದರೆ ಕಾವ್ಯ ಭಾಷೆಯಲ್ಲಿ ನೀತಿ ಚಂದ್ರಿಕೆ ಎಂಬುದನ್ನು ಬಾಲ ವ್ಯಾಕರಣ ಎಂಬ ವ್ಯಾಕರಣ ಗ್ರಂಥವನ್ನು ಬರೆದ ಪರವಸ್ತು ಚಿನ್ನಯ್ಯಸೂರಿ ಈ ಸಂಪ್ರದಾಯಕ್ಕೆ ತಡೆಹಾಕಿದ. ಆತನ ನೀತಿಚಂದ್ರಿಕೆ ಕೃತಕವಾದ ಭಾಷೆಯಲ್ಲಿ ರಚಿತವಾಗಿದೆ. ಬಳಕೆಯಲ್ಲಿಲ್ಲದ ಆಡಂಬರದ ಪದಗಳು, ಆಲಂಕಾರಿಕ ಶೈಲಿ, ನಯವಾದ ಬಳಸು ಮಾತಿನ ಸಂಸ್ಕೃತ ಪದಗಳ ಸಮಾಸ ಜಾಲಗಳು–ಇವು ಆ ಭಾಷೆಯ ಲಕ್ಷಣ. ಆತನ ವ್ಯಾಕರಣ ಅಸಮಗ್ರವಾಗಿ ಅಸಂಗತವಾಗಿ ಇದ್ದರೂ ಕಾವ್ಯಗಳ ಭಾಷೆಯನ್ನು ಅವಲಂಬಿಸಿ ರಚಿತವಾಗಿತ್ತು. ಆತನ ಕೃತಿಗಳ ಪರಿಣಾಮವಾಗಿ ತೆಲುಗಿನಲ್ಲಿ ಆರೋಗ್ಯಕರವಾದ ಗದ್ಯದ ಮುನ್ನಡೆ ನಿಂತುಹೋಯಿತು. ಸು. 60 ವರ್ಷಗಳವರೆಗೆ ಆತನ ಸಮಕಾಲೀನ ಮತ್ತು ತರುವಾಯ ಬಂದ ತೆಲುಗು ಗದ್ಯಲೇಖಕರು ಯಾರೂ ಆತನ ಕೃತಿಗಳ ಮಾದರಿಗೆ ಎದುರು ಮಾತನ್ನೆತ್ತದೆ ಅನುಸರಿಸಿದರು. ಹೀಗೆ ಈತನ ಶೈಲಿಯನ್ನು ಅನುಕರಿಸುವ ಉತ್ಸಾಹದಲ್ಲಿ ಇವರು ಸಾಮಾನ್ಯ ಪದಗಳನ್ನು ಬಿಟ್ಟು ಹಳೆಯ ಶಬ್ದಗಳನ್ನು ಸಂಸ್ಕೃತ ಸಮಾಸಗಳಿಂದ ತುಂಬಿರುವ ಪದಗಳನ್ನೂ ಉಪಯೋಗಿಸತೊಡಗಿದರು. ಚಿನ್ನಯ್ಯಸೂರಿಯ ನೀತಿಚಂದ್ರಿಕೆ ಅಥವಾ ಅಂಥ ಶೈಲಿಯಲ್ಲಿ ಬರೆದ ಇತರ ಗ್ರಂಥಗಳನ್ನು ಶಾಲಾ ಕೊಠಡಿಗಳಲ್ಲಿ ಮಾತ್ರ ಭಾಸರನ ಭಾಷೆಯಲ್ಲಿರುವ ಭಾಸರನ ಪದ್ಯಗಳನ್ನು ಹೇಗೋ ಹಾಗೆ, ಓದಲು ಏರ್ಪಡಿಸಿದ್ದರೆ, ತೆಲುಗು ವಿದ್ಯಾರ್ಥಿಗಳಿಗಾಗಲಿ ತೆಲುಗು ಬರಹಗಾರರಿಗಾಗಲಿ ಯಾವ ಕೆಡುಕೂ ಆಗುತ್ತಿರಲಿಲ್ಲ. ಆದರೆ ಪಂಡಿತರೂ ವಿದ್ಯಾ ಇಲಾಖೆ ಹಾಗೂ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳೂ ಒಂದು ಹೆಜ್ಜೆ ಮುಂದೆ ಹೋದರು. ಶಾಲೆಗಳಲ್ಲೂ ಆಡುಮಾತನ್ನು ನಿಷೇಧಿಸಿದರು. ಆಡುಮಾತಿನಲ್ಲಿ ತಮ್ಮ ಮನೆಮಾತಿನಲ್ಲಿ ಪ್ರಬಂಧಗಳನ್ನು ಬರೆಯಲು ಮತ್ತು ಪರೀಕ್ಷೆಯ ಪ್ರಶ್ನೆಪತ್ರಿಕೆಗಳಿಗೆ ಉತ್ತರ ಬರೆಯಲು ಅವಕಾಶ ಕೊಡಲಿಲ್ಲ. ಸಾಮಾಜಿಕ ಬದಲಾವಣೆಗಳನ್ನೂ ದಲಿತರ ಉದ್ಧಾರವನ್ನು ಪ್ರತಿಪಾದಿಸುತ್ತಿದ್ದ ವೀರೇಶಲಿಂಗಂ ಪಂತುಲು ಕೂಡ ಮೊದಲು ಚಿನ್ನಯ್ಯಸೂರಿ ಹಾಕಿಕೊಟ್ಟ ಮೇಲು ಪಂಕ್ತಿಯನ್ನೇ ಅನುಸರಿಸಿದರೂ ಆದರೆ ಇಂಥ ಮಾದರಿಯ ನಿರುಪಯೋಗಿತೆಯನ್ನು ಬೇಗನೆ ಅರಿತುಕೊಂಡು ವಿದ್ಯಾರ್ಥಿಗಳಿಗೂ ಸಾಮಾನ್ಯ

ಓದುಗನಿಗೂ ತಿಳಿಯುವಂತೆ ತನ್ನ ಭಾಷೆಯನ್ನು ಸರಳ ಮಾಡಿಕೊಂಡ. ಜೀವಂತ ಭಾಷೆಯ ಸಾಮರ್ಥ್ಯವನ್ನು ಆತ ಗಮನಕ್ಕೆ ತಂದುಕೊಳ್ಳದಿರಲಿಲ್ಲ; ತನ್ನ ಬರೆಹಗಳು ಶಾಲೆ ಕಾಲೇಜುಗಳಿಗಲ್ಲ ಎಂದುಕೊಂಡು ಆತ ತನ್ನ ಸಾಮಾಜಿಕ ನಾಟಕಗಳಲ್ಲೂ ಪ್ರಹಸನಗಳಲ್ಲೂ ಅದನ್ನು ಬಳಸಿದ. ಆದರೆ ಎರಡು ಅಂಶಗಳು ಆತನ ತಿಳಿವಳಿಕೆಗೆ ಬರಲಿಲ್ಲ; ಒಂದು-ಆಗ ಇದ್ದ ವ್ಯಾಕರಣಗಳು ಕಾವ್ಯದ ಭಾಷೆಗೆ ಮಾತ್ರ ಉಪಯುಕ್ತವಾದುವು ಮತ್ತು ಕಾಲಕಾಲಕ್ಕೆ ಮುಂದಿನ ಕವಿಗಳ ಪ್ರಯೋಗಗಳ ದೃಷ್ಟಿಯಿಂದ ಅವನ್ನು ತಿದ್ದಬೇಕು ಎಂಬಂಶ. ಎರಡು-ಜೀವಂತ ಭಾಷೆಗಳು ಯಾವಾಗಲೂ ಚಲಿಸುತ್ತಲೇ ಇವೆ, ಮುಂಬರಿಯುತ್ತಿವೆ, ಬದಲಾಯಿಸುತ್ತಿವೆ, ಅವನ್ನು ವ್ಯಾಕರಣದಿಂದ ಕಟ್ಟಿ ಹಾಕಲಾಗುವುದಿಲ್ಲ. ವ್ಯಾಕರಣಗಳೆಲ್ಲ ಅವನ್ನು ಹಿಂಬಾಲಿಸಬೇಕು ಎಂಬುದು ಮತ್ತೊಂದಂಶ. ತನ್ನ ಆತ್ಮಚರಿತ್ರೆಯಲ್ಲಿ ಹೇಳಿಕೊಳ್ಳುವಂತೆ ಆಧುನಿಕ ತೆಲುಗು ಚಳವಳಿ ಸಾಧುವೆಂಬುದನ್ನು ವೀರೇಶಲಿಂಗಂ ತುಂಬ ತಡವಾಗಿ ಅರಿತುಕೊಂಡ. ಗಿಡುಗು ರಾಮಮೂರ್ತಿ ಮತ್ತು ಗುರಜಾಡ ಅಪ್ಪಾರಾವ್ ಎಂಬವರಿಂದ 1910ರಲ್ಲಿ ಪ್ರೇರಿತವಾದ ಈ ಚಳವಳಿ, ಚಿನ್ನಯ್ಯಸೂರಿ ತಡೆ ಹಾಕುವವರೆಗೂ ನಡೆದುಬಂದಿದ್ದ ಆಡುಮಾತಿನಲ್ಲೇ ತೆಲುಗು ಗದ್ಯವನ್ನು ಬರೆಯಬೇಕೆಂಬ ಪಂಥದವರೊಡನೆ ರಾಮಮೂರ್ತಿ ಹಲವು ವರ್ಷಗಳ ಕಾಲ ಹೋರಾಡಬೇಕಾಯಿತು. 1920ರ ಹೊತ್ತಿಗೆ ಆತ ಜಯಶಾಲಿಯಾದ. ಪತ್ರಿಕಾಕರ್ತರು ಕ್ರಮೇಣ ಜೀವಂತ ಭಾಷೆಯನ್ನೇ ತಮ್ಮ ಸಂಪಾದಕೀಯಗಳಿಗೂ ಇತರ ಲೇಖನಗಳಿಗೂ ಬಳಸತೊಡಗಿದರು. ಸಾವಿರಗಟ್ಟಲೆ ಗ್ರಂಥಗಳು ಜೀವಂತಭಾಷೆಯಲ್ಲೇ 1930-60ರ ಅವಧಿಯಲ್ಲಿ ಪ್ರಕಟವಾಗಿವೆ. ಪದ್ಯದ ಬರವಣಿಗೆಯಲ್ಲಿ ಸಹ, ಆಧುನಿಕ ಕವಿಗಳು ಉಪಯೋಗಿಸುವ ಭಾಷೆಯಲ್ಲಿ ನಿರುಪಯುಕ್ತವಾದ ಹಳೆಯ ಶಬ್ದಗಳಿರುವುದಿಲ್ಲ ಮತ್ತು ಆಧುನಿಕ ಪದಪ್ರಯೋಗಗಳನ್ನೇ ಬಳಸುತ್ತಾರೆ. ಆದರೆ ಹಳೆಯ ಸಂಪ್ರದಾಯವನ್ನು ಅನುಸರಿಸುವ ಕವಿಗಳೂ ಇದ್ದಾರೆ. ಅವರು ಹಳೆಯ ವ್ಯಾಕರಣಗಳ ನಿಯಮಗಳಿಗೆ ಅನುಸಾರವಾಗಿ ಬರೆಯಲೂ ಯತ್ನಿಸುತ್ತಿದ್ದಾರೆ. ಆದರೆ ಹೀಗೆ ಬರೆಯುವುದರಲ್ಲಿ ಅವರು ದೋಷಗಳಿಗೆಡೆಗೊಡುವುದೂ ಅನಿವಾರ್ಯವಾಗಿಯೇ ಆಗುತ್ತಿದೆ. ನನ್ನಯ್ಯನ ಕಾಲದಿಂದಲೂ ಭಾಷೆ ಹೇಗೆ ಬದಲಾಯಿಸುತ್ತ ಬಂದಿದೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ತೆಲುಗಿನಲ್ಲಿ ಕೆಲವು ಸಂಸ್ಕೃತ ಶಬ್ದಗಳಿಗೆ ಬೇರೆ ಅರ್ಥಗಳು ಬಂದಿವೆ. ಉದಾಹರಣೆಗೆ, ಅಭ್ಯಂತರಂ ಎಂಬುದಕ್ಕೆ ಸಂಸ್ಕೃತದಲ್ಲಿ ಒಳಕೋಣೆ ಎಂದು ಅರ್ಥ; ತೆಲುಗಿನಲ್ಲಿ ಇದಕ್ಕೆ ಆಕ್ಷೇಪಣೆ ಎಂಬ ಅರ್ಥ ಬಂದಿದೆ. ಈ ಅರ್ಥದ ಬದಲಾವಣೆ ಹೇಗಾಯಿತೆಂದು ಈಗ ನೋಡೋಣ. ಯಾವನಾದರೊಬ್ಬ ಆಗಂತುಕ ರಹಸ್ಯವಾಗಿ ಮಾತಾಡಲು ಅಪೇಕ್ಷಿಸಿದಾಗ, ಮನೆಯ ಯಜಮಾನ ಆತನನ್ನು ಒಳಕೋಣೆಗೆ ಕರೆದುಕೊಂಡು ಹೋಗುತ್ತಾನೆ. ಮಾತಾಡಲು ಬಂದಾಗ ಯಜಮಾನ ಒಳಕೋಣೆಗೆ ಹೋಗೋಣವೇ ಎಂದು ಕೇಳುತ್ತಾನೆ. ಬಂದವನು, ಏಕೆ, ಬೇಡ ಬೇಡ ಅದು ಆವಶ್ಯಕವಲ್ಲ. ಈ ಮೊಗಸಾಲೆಯಲ್ಲೇ ಹೇಳಬೇಕಾದುದನ್ನು ಹೇಳುತ್ತೇನೆ. ಎನ್ನುತ್ತಾನೆ. ಮುಂದೆ ಇದು ಇಲ್ಲಿಯೇ ಹೇಳಲು ನನ್ನ ಆಕ್ಷೇಪಣೆಯೇನೂ ಇಲ್ಲ ಎಂಬರ್ಥಕ್ಕೆ ತಿರುಗಿತು.

ಪ್ರಾಚೀನತಮ ಕವಿಗಳು ಪ್ರಯೋಗಿಸಿರುವ ಕೆಲವು ತೆಲುಗು ಶಬ್ದಗಳನ್ನು ಈಗಲೂ ಉಪಯೋಗಿಸುತ್ತಾರೆ. ಆದರೆ ಬೇರೆ ಅರ್ಥದಲ್ಲಿ. ಉದಾಹರಣೆಗೆ, ಕಂಪು ಎಂಬುದಕ್ಕೆ ಹಿಂದೆ ಯಾವ ಬಗೆಯ ವಾಸನೆಗಾದರೂ ಪ್ರಯುಕ್ತವಾಗುತ್ತಿತ್ತು, ಮುಂದೆ ಅದಕ್ಕೆ ನಾತ ಎಂಬ ಅರ್ಥ ಬಂದಿದೆ.

ಚೀರೆಲು ಎಂಬುದನ್ನು 13ನೆಯ ಶತಮಾನದ ತಿಕ್ಕನ ರುಮಾಲಿನ ಬಟ್ಟೆ ಎಂಬರ್ಥದಲ್ಲಿ ಪ್ರಯೋಗಿದ ಈಗ ದಕ್ಕೆ ಹೆಂಗಸರ ಸೀರೆ ಎಂಬರ್ಥ ಬಂದಿದೆ. ರೇಪು ಎಂಬುದಕ್ಕೆ ಮೊದಲು ಪ್ರಾತಃಕಾಲ ಎಂಬರ್ಥವಿದ್ದು ಈಗ ನಾಳೆ ಎಂಬರ್ಥ ಬಂದಿದೆ.

ನಡುವಣ ಸ್ವರಗಳನ್ನೋ ಅಕ್ಷರಗಳನ್ನೋ ಬಿಟ್ಟು ಶಬ್ದಗಳನ್ನು ಸಂಕ್ಷೇಪಗೊಳಿಸಲಾಗಿದೆ. ಉದಾಹರಣೆಗೆ, ಚಿಲುಕ>ಚಿಲ್ಕ [ಗಿಳಿ]; ವೊಲಕ>ವೊಲ್ಕ [ಚಿಗುರು]; ಕೊಲಂದಿ>ಕೊಲ(ಂ)ದಿ>ಕೊಲ್ದಿ>ಕೊದ್ದಿ (ಕೆಲವು, ಸ್ವಲ್ಪ); ಚೇಸಿನದಿ>ಚೇಸಿಂದಿ (ಮಾಡಿದುದು); ಮೂಡ್-ಆಗು-ನಾಡು>ಮೂಡ್-ಅವು-ನಾಡು> ಮೂಡೋನಾಡು [ಮೂರನೆಯ ದಿನ]; ಇರುವಡಿ>ಇರುವೈ>ಇರವೈ [ಇಪ್ಪತ್ತು] ಅಂತಯುನು>ಅಂತಾನು>ಅಂತಾ(ಎಲ್ಲ); ಅಂತದನುಕ [ಅಲ್ಲಿಯವರೆಗೆ]> ಅಂತದಾಕ>ಅಂದಾಕ; ವಲುವರು>ವಲುವದು>ವಲದು>ವಲ್ದು>ವದ್ದು [ಬೇಕಾಗಿಲ್ಲ, ಬೇಡ] ವಚ್ಚುಚು>ವಸ್ತು[ಬರುವುದು].

ಕ್ರಿಯಾಪದಗಳಲ್ಲಿ ಕೆಲವು ಸಂಕ್ಷಿಪ್ತರೂಪಗಳನ್ನು ಹೊಂದಿರುವುದು ಕುತೂಹಲಜನಕವಾಗಿದೆ. ಉದಾಹರಣೆಗೆ, ಚೇಯು (ಮಾಡು); ಚೇಯು ಚುಂಡುದುನು (ಮಾಡುತ್ತಾನಾನಿದ್ದೇನೆ) ಎಂಬುದನ್ನು ನನ್ನಯ್ಯ ಬಳಸಿದ್ದಾನೆ. ತರುವಾಯ ಅದು ಚೇಯು-ಚ-ಉಂಡುನು ಎಂದಾಯಿತು. ಕೊನೆಗೆ ಅದರ ಆಧುನಿಕ ರೂಪ ಚೇಸ್ತು ಉಂಡುನು ಎಂದಾಗಿದೆ ಮತ್ತು ಉಂಡುನು ಎಂಬುದು ಉಂಟಾನು ಎಂದಾಗಿದೆ. ಇದೇ ರೀತಿಯಲ್ಲಿ ಚೇಯು-ಚ್-ಉಂಡುದುರು ಮತ್ತು ಚೇಯುಚುಂದ್ರು (ಅವರು ಮಾಡುತ್ತಿದ್ದಾರೆ) ಎಂಬ ರೂಪಗಳನ್ನು ಪ್ರಾಚೀನತಮ ಕವಿಗಳು ಬಳಸುತ್ತಿದ್ದರು. ಇವು ಈ ಚೇಸ್ತೂ ಉಂಟುರು ಎಂದು ತೀರದ ಜಿಲ್ಲೆಗಳಲ್ಲೂ ಚೇಸ್ತುಂಡ್ರು ಎಂದು ತೆಲಂಗಾಣದಲ್ಲೂ ಆಗಿದೆ.

ಚೇಸಿತಿನಿ (ನಾನು ಮಾಡಿದೆ)>ಚೇಸ್ತಿನಿ>ಚೇಸ್ತಿ ಎಂಬುದು ಸೀಡೆಡ್ (ಬಿಟ್ಟು ಕೊಟ್ಟ) ಜಿಲ್ಲೆಗಳಲ್ಲೂ ತೆಲಂಗಾಣದಲ್ಲೂ ಬಳಕೆಯಲ್ಲಿದೆ. ಆದರೆ ತೀರದ ಜಿಲ್ಲೆಗಳಲ್ಲಿ ಕಣ್ಮರೆಯಾಗಿದೆ. ಅದರ ಜಾಗದಲ್ಲಿ ಚೇಸಿ-ನ-ವಾಡನು ಎಂಬುದು ಪುಲ್ಲಿಂಗದಲ್ಲೂ ಚೇಸಿ-ನ-ದಾನನು ಎಂಬುದು ಸ್ತ್ರೀಲಿಂಗದಲ್ಲೂ ಪ್ರಯುಕ್ತವಾಗುತ್ತಿದೆ. ಇವುಗಳು ಕ್ರಮವಾಗಿ ಆಖ್ಯಾತ ಪ್ರತ್ಯಯಗಳನ್ನು ಹಚ್ಚುವುದರಿಂದ ಆದುವಲ್ಲ, ಮಾಡಿದ್ದನ್ನು ಹೇಳಲು ಉಪಯೋಗಿಸುವ ರೂಪಗಳು. ಮೊದಲನೆಯದರ ಪದಶಃ ಅರ್ಥ ಏನೆಂದರೆ ಅದನ್ನು ಮಾಡಿದವನು ನಾನು ಎಂದು. ಎರಡನೆಯದಕ್ಕೆ ಅದನ್ನು ಮಾಡಿದವಳು ನಾನು ಎಂದು. ಇವೆರಡರಲ್ಲಿ ಪ್ರತಿಯೊಂದೂ ಕಾಲಕ್ರಮೇಣ ಬದಲಾಯಿಸಿದೆ. ಚೇಸಿನವಾಡನು>ಚೇಸಿನಾಡನು>ಚೇಸಿನ್‌ಡ ಅಥವಾ ಚೇಸಿನಾನು>ಚೇಶಾನು; ಚೇಸಿನದಾನನು>ಚೇಸಿನದಾನ ಅಥವಾ ಚೇಸಿನಾನು>ಚೇಶಾನು. ಇವೆರಡು ಸಂದರ್ಭಗಳಲ್ಲೂ ಕೊನೆಯ ರೂಪಗಳು ಚೇಸಿನನು ಮತ್ತು ಚೇಶಾನು ಎಂದಾಗಿ ಲಿಂಗಸೂಚಕವಾದ ಯಾವ ಪ್ರತ್ಯಯಗಳನ್ನೂ ಹೊಂದದೆ ಇವೆ. ಹೀಗೆ ಮಟ್ಟಸಮಾಡುವ ಪ್ರಕ್ರಿಯೆಯನ್ನು ಆಧುನಿಕರು ಸಮೀಚೀನವಾದ ವಿಕಾಸವೆಂದೂ ಶುದ್ಧಪದ ಪ್ರಿಯರು ಹಸೆಗೆಟ್ಟ ಬದಲಾವಣೆಯೆಂದೂ ಭಾವಿಸುತ್ತಾರೆ. ಪ್ರಾಚೀನತಮ ಲೇಖಕರು ತಪ್ಪದೆ ಬಳಸುತ್ತಿದ್ದ ಅರ್ಧಾನುಸ್ವಾರ (C) ಮತ್ತು ಶಕಟರೇಫ (ಱ) ಗಳನ್ನು ಆಧುನಿಕರು ಕೈಬಿಟ್ಟಿದ್ದಾರೆ. ಅದನ್ನು ಎಲ್ಲಿ ಉಪಯೋಗಿಸಬೇಕೆಂಬುದನ್ನು ಬರೆಹಗಾರರು ಅರಿತಿದ್ದ ಕಾಲವೊಂದಿತ್ತು. ಏಕೆಂದರೆ ಜನ ಅವನ್ನು ಉಚ್ಚರಿಸುತ್ತಿದ್ದರು. ಕಾಲಕ್ರಮೇಣ ಜನರ ಮಾತಿನ ರೂಢಿ ತೆಲುಗು ದೇಶದ ಅನೇಕ ಭಾಗಗಳಲ್ಲಿ ಅಷ್ಟೋ ಇಷ್ಟೋ ಬದಲಾಯಿಸುತ್ತ ಬಂತು. ನಾಗರಿಕತೆಯಲ್ಲೂ ಮುಂದುವರಿದಿದ್ದ ಮಧ್ಯಭಾಗದ ಜನರಲ್ಲಿ ಮಾತಿನ ಉಚ್ಚಾರಗಳಲ್ಲಿ ವ್ಯತ್ಯಾಸಗಳು ಬೇಗನೆಯೂ ವಿಸ್ತಾರವಾಗಿಯೂ ಹರಡಿದುವು. ದೇಶದ ಕೊನೆ ಮೂಲೆಗಳಲ್ಲಿ ಮಾತ್ರ ಈ ವ್ಯತ್ಯಾಸಗಳು ನಿಧಾನವಾಗಿ ವ್ಯಾಪಿಸಿದವು, ಏಕೆಂದರೆ ಭೌಗೋಳಿಕವಾದ ಅಡಚಣೆಗಳಿಂದ ಆ ಭಾಗದ ಜನರು ಭಾಷೆಯ ಮುಖ್ಯ ಪ್ರವಾಹದ ಸಂಸರ್ಗದಿಂದ ದೂರ ಉಳಿದರು. ನದಿಯಲ್ಲಿ ನೆರೆಯುಕ್ಕಿದಾಗ ನೀರು ಅಕ್ಕಪಕ್ಕದ ಹಳ್ಳ ಕೊಳ್ಳಗಳಿಗೆ ಹರಿದು ಹಿಂಗಿ ಹೋಗುವವರೆಗೂ ಅಥವಾ ಮತ್ತೊಂದು ನೆರೆ ಬಂದಾಗ ಅದರೊಡನೆ ಬೆರೆಯುವವರೆಗೂ ಕೆಲವು ವರ್ಷಗಳ ಕಾಲ ಅಲ್ಲೇ ತಂಗಿರುತ್ತದೆ. ಆದರೆ ನದಿಯ ನೀರು ಮಾತ್ರ ಸತತವಾಗಿ ಬದಲಾಯಿಸುತ್ತಲೇ ಇರುತ್ತದೆ. ಜೀವಂತವಾಗಿರುವ ಭಾಷೆಯ ವಿಚಾರದಲ್ಲೂ ಹೀಗೆಯೇ ಪೂರ್ವದ ಕವಿಗಳು ಉಪಯೋಗಿಸಿರುವ ಹಲವು ಪದಗಳು ನಾಡಿನ ಮಧ್ಯಭಾಗದಲ್ಲಿ ಬಳಕೆಯಲ್ಲಿಲ್ಲದೆ ಹಿಂದೆ ಸರಿದಿವೆ. ಆದರೆ ಕೊನೆಮೂಲೆಗಳಲ್ಲಿ ಅವನ್ನು ಜನ ಇನ್ನೂ ಬಳಸುತ್ತಿದ್ದಾರೆ. ಉದಾಹರಣೆಗೆ: ಕುರು (ಸ್ವಲ್ಪ; ಕೊಂಚ); ಕುರು ಮಾಪು ಪುಟ್ಟಂ (ಸ್ವಲ್ಪ ಕೊಳೆಯಾಗಿರುವ ಬಟ್ಟೆ) ಎಂಬುದು ನನ್ನಯ್ಯನ ಪ್ರಯೋಗ; ಅದು ತೆಲುಗು ದೇಶದ ಮಧ್ಯಭಾಗದಲ್ಲಿ ಕಣ್ಮರೆಯಾಯಿತು; ಆದರೆ ದೇಶದ ಉತ್ತರ ಭಾಗದ ಕೊನೆಯ ಜಿಲ್ಲೆಯ ಹಳ್ಳಿಗಳ ಜನ ಬಳಸುತ್ತಾರೆ.

ಮಿಕ್ಕೆಲ್ಲ ಭಾಷೆಗಳಂತೆಯೇ ತೆಲುಗು ಸಹ ಸ್ವಂತವಾಗೂ ಪರಭಾಷೆಯಿಂದ ಎರವಲು ಪಡೆದೂ ಶಬ್ದಸಂಪತ್ತನ್ನು ಬೆಳೆಸಿಕೊಂಡಿದೆ. ಕೆಲವು ಶಬ್ದಗಳಿಗೆ ಹೊಸ ಅರ್ಥಗಳು ಬಂದಿವೆ. ಕೆಲವಕ್ಕೆ ಮೂಲ ಅರ್ಥದಿಂದ ಉದ್ಭವವಾದ ಮತ್ತೊಂದು ಅರ್ಥ ಪ್ರಾಪ್ತವಾಗಿದೆ. ಉದಾಹರಣೆಗೆ, ಮಾಟ (ಮಾತು) ಎಂಬುದನ್ನು ಮೂಲದ ಅರ್ಥಕ್ಕೆ ಸಮೀಪವಾಗಿಯೋ ಅಥವಾ ದೂರವಾಗಿಯೋ ಇರುವ ಅನೇಕ ಭಾವಗಳನ್ನು ಹೇಳಲು ಉಪಯೋಗಿಸುತ್ತಾರೆ. ಸಿ.ಪಿ. ಬ್ರೌನ್ ಈ ಪದಕ್ಕೆ ಮಾತು (ಪದ) ಮಾತುಗೊಡುವುದು, ಸುದ್ದಿ ಎಂಬ ಅರ್ಥ ಕೊಟ್ಟಿದ್ದಾನೆ. ಅಲ್ಲದೆ ಗಮನಾರ್ಹವಾದ ಉದಾಹರಣೆಗಳನ್ನು ಕೊಟ್ಟಿದ್ದಾನೆ; ಮಾಟಾಡು, ಮಾಟಕಾರಿ (ವಾಚಾಳಿ), ಮಾಟಲಕು ಪಟ್ಟುಕೊಂಟೆ ವಿಡವದು (ಮಾತನಾಡಲು ಮೊದಲು ಮಾಡಿದರೆ ಮುಗಿಸಲೆ ಒಲ್ಲ), ಮಂಚಿ ಮಾಟ (ಒಳ್ಳೆಯದು), ನಾಕು ತುರುಕ ಮಾಟಲು ರಾವು (ನನಗೆ ತುರುಕು ಮಾತು ತಿಳಿಯದು), ವಾಡಿಕಿ ನಾಕು ಮಾಟಲು ಲೇವು (ನನಗೂ ಅವನಿಗೂ ಮಾತಿಲ್ಲ), ಆತನು ಮಾಟ ತಪ್ಪಲೇದು (ಆತ ಕೊಟ್ಟ ಭಾಷೆಯನ್ನು ತಪ್ಪುವುದಿಲ್ಲ), ನಾ ಮಾಟ ವೇರು, ನೀ ಮಾಟ ವೇರು (ನಾನೊಂದು ಹೇಳುತ್ತೇನೆ, ನೀನೊಂದು ಹೇಳುತ್ತೀಯ), ಆಯನ ಮಾಟಕು ಎದುರುಲೇದು (ಆತನ ಮಾತಿಗೆ ಎದುರಿಲ್ಲ), ವೊಕ ಮಾಟ ಯಿಚ್ಚಿಪದಿಮಾಟಲು ತೀಸುಕೊನ್ನಾಡು (ಒಂದು ಮಾತಿಗೆ ಹತ್ತು ಮಾತು ಪಡೆದ), ಆ ಮಾಟ ವಿಂಟೇ ಆಯನ ಯೇಮನುನು? (ಈ ಮಾತು ಕೇಳಿದರೆ ಆತ ಏನೆಂದಾನು?). ಕೆಲವು ಶಬ್ದಗುಚ್ಛಗಳಲ್ಲಿ ಮಾಟ ಎಂಬುದನ್ನು ಭಾಷಾಂತರಿಸುವ ಅವಶ್ಯವಿಲ್ಲ. ಉದಾಹರಣೆಗೆ, ಆಮೆ ತಿರುಗವಸ್ತುನ್ನದನೆ ಮಾಟ ತೆಲಿಸಿ (ಅವಳು ಹಿಂದಿರುಗುತ್ತಾಳೆಂದು ತಿಳಿದು); ಆ ಮಾಟೇಯೆರುಗನು (ಆ ವಿಷಯವೇ ತಿಳಿಯದು); ಇಪ್ಪಟ್ಲೋ ವಾನಿ ಮಾಟ ಸಾಗದು (ಈಗ ಅವನ ಮಾತು ನಡೆಯದು);

ಯೆಂತ ಮಾಟ! (ಎಂಥ ಮಾತು!). ಮಾಟ ಎಂಬುದನ್ನು ಇನ್ನೂ ಹಲವಾರು ಬಗೆಗಳಲ್ಲಿ ಉಪಯೋಗಿಸುತ್ತಾರೆ. ದೇಸೀ ಪ್ರಯೋಗಗಳನ್ನು ಬೆಳೆಸಿರುವ ಇಂಥ ಹಲವಾರು ಪದಗಳಿವೆ. ಶಬ್ದಾರ್ಥ ನಿರ್ವಚನ ಶಾಸ್ತ್ರಕ್ಕೆ ತೆಲುಗು ಭಾಷೆಯಲ್ಲಿ ಒಳ್ಳೆಯ ಅವಕಾಶವಿದೆ.

–ತನಂ (ಸಂಸ್ಕೃತದ ತ್ವಂ ಎಂಬುದರಿಂದ ಪ್ರಾಕೃತದ ಟಣಂ ಎಂಬುದರ ಮೂಲಕ) ಎಂಬ ಪದ ಭಾಷೆಯನ್ನು ಹತ್ತು ಪಡಿ ಸಿರಿವಂತವಾಗಿ ಮಾಡಿದೆ. ಭಾವಾರ್ಥಸೂಚಕ ಪ್ರತ್ಯಯವಾಗಿ ಅದನ್ನು ಶಬ್ದಗಳಿಗೆ ಹಚ್ಚುತ್ತಾರೆ. ಉದಾಹರಣೆಗೆ, ಮಂಚಿತನಂ (ಒಳ್ಳೆಯತನ), ಪೆಂಕೆತನಂ (ಧೃಷ್ಟತನ), ಪೆದ್ದತನಂ (ದೊಡ್ಡತನ), ಪೆತ್ತನಂ (ಮೇಲುಸ್ತುವಾರಿಕೆ), ಪಿರಿಕಿತನಂ (ಹೇಡಿತನ) ಮುಂತಾದುವು.

–ಅರಿಕಮು ಎಂಬುದು ಮತ್ತೊಂದು ಪ್ರತ್ಯಯ. ಇದನ್ನು ಯಾವ ಶಬ್ದಕ್ಕೆ ಹಚ್ಚುತ್ತಾರೋ ಅದರ ಭಾವವನ್ನು ಇದು ದ್ಯೋತಿಸುತ್ತದೆ. ಉದಾಹರಣೆಗೆ, ಇಲ್ಲರಿಕಮು (ಮಾವನ ಮನೆಯಲ್ಲಿ ವಾಸವಿರುವುದು), ಪೇದರಿಕಮು (ಪಾಪರುತನ), ಮೇನರಿಕಮು (ಹೆಂಗಸೊಬ್ಬಳ ಮಗನಿಗೂ ಆಕೆಯ ಅಣ್ಣನ ಮಗಳಿಗೂ ಇರುವ ಬಾಂಧವ್ಯ (ಉದ್ದೇಶವೇನೆಂದರೆ ಇವರಿಬ್ಬರೂ ಮದುವೆ ಮಾಡಿಕೊಳ್ಳಬಹುದು ಎಂಬುದನ್ನು ಸೂಚಿಸುವುದು) ಇತ್ಯಾದಿ.

ಇತರ ಭಾಷೆಗಳಿಂದ ತೆಲುಗು ನೂರಾರು ಶಬ್ದಗಳನ್ನು ತೆಗೆದುಕೊಂಡಿದೆ. ಮೊದಲು ಅದು ಸಂಸ್ಕೃತದಿಂದ ನೇರವಾಗಿಯೂ ಪ್ರಾಕೃತದ ಮೂಲಕವೂ ಅನೇಕ ಶಬ್ದಗಳನ್ನು ತೆಗೆದುಕೊಂಡಿತು; ಸಂಸ್ಕೃತದ ತದ್ಭವಗಳನ್ನು ರೂಪಿಸಿಕೊಂಡಿತು. ಉದಾಹರಣೆಗೆ, ಸಂಸ್ಕೃತದ 'ಮುಖ'ದಿಂದ ಮೊಗಮುಲು, ಮುಗ್ಧಾ ಎಂಬುದರಿಂದ ಮುದ್ದ–(ರಾಲು), ಯುವತಿಯಿಂದ ಉವಿದ; ಅಗ್ನಿಯಿಂದ ಅಗ್ಗಿ ಮುಂತಾದವು.

ಅದು ಸಾಮಾನ್ಯವಾಗಿ ಪ್ರತ್ಯಯರಹಿತ ಶಬ್ದಗಳನ್ನು ತೆಗೆದುಕೊಂಡು ತನ್ನದೇ ಆದ ವಿಭಕ್ತಿ ಮತ್ತು ಆಖ್ಯಾತ ಪ್ರತ್ಯಯಗಳನ್ನು ಸೇರಿಸಿಕೊಳ್ಳುತ್ತದೆ. ಉದಾಹರಣೆಗೆ, ಪುರುಷುಡು, ಪುಷ್ಪಂ, ಗುರುವು, ಸುರಲು, ಜನಿಸ್ತು (ಜನಿಸುವದು), ರಕ್ಷಿಸ್ತು. ಇದಕ್ಕೆ ಕೆಲವು ಅಪವಾದಗಳಿವೆ. ಉದಾಹರಣೆಗೆ, ಮನಸಾ, ಕ್ರಮಶಃ ಅಥವಾ ಕ್ರಮೇಣ ಇತ್ಯಾದಿ.

ಎರವಲು ತೆಗೆದುಕೊಂಡ ಪದಗಳನ್ನು ಜೀರ್ಣಿಸಿಕೊಳ್ಳುವ ವಿಧಾನದಲ್ಲಿ ಒಂದು ವಿಶೇಷಾಂಶ ಗೋಚರಿಸುತ್ತದೆ. ಇಂಗ್ಲಿಷಿನ ರೂಲ್ ಎಂಬ ಶಬ್ದಕ್ಕೆ ಅದರ ಬಹುವಚನ ಪ್ರತ್ಯಯವನ್ನು ಸೇರಿಸಿ ಹೇಳುತ್ತಾರೆ. ನೀಕು ರೂಲ್ಸು ತೆಲುಸನಾ? (ನಿನಗೆ ರೂಲ್ಸು ಗೊತ್ತೇ?) ನೀವು ರೂಳ್ಳುಗೀಯ ಗವಲಾ (ನೀನು ಗೆರೆಗಳನ್ನು ಎಳೆಯ ಬಲ್ಲೆಯಾ). ಮನ್ಸ ಮುಂತಾದ ಶಬ್ದಗಳಲ್ಲಿ ಅಂತ್ಯದಲ್ಲಿರುವ 'ಸ್' ಎಂಬ ಅಕ್ಷರವನ್ನು ಬಹುವಚನ ಪ್ರತ್ಯಯವಾಗಿ ಅಪಾರ್ಥ ಮಾಡಿಕೊಳ್ಳುತ್ತಾರೆ. ಇಂಗ್ಲಿಷ್ ಬಾರದ ಸಾಮಾನ್ಯ ತೆಲುಗ ನಾಕು ಸಮನು ವಚ್ಚಿಂದಿ ಎನ್ನುತ್ತಾನೆ. ಇದನ್ನು ಬಹುವಚನದಲ್ಲಿ ಉಪಯೋಗಿಸುವಾಗ ಸಮನ್‌ಲು ಎಂದು ಪ್ರಯೋಗಿಸುತ್ತಾನೆ. ಇದು ಅರಗಿಸಿಕೊಳ್ಳುವ ವಿಧಾನವನ್ನು ಸೂಚಿಸುತ್ತದೆ.

ಕೆಲವು ಪರಕೀಯ ಶಬ್ದಗಳು ಜನಕ್ಕೆ ಎಷ್ಟು ಪರಿಚಿತವಾಗಿವೆಯೆಂದರೆ ಅವು ತೆಲುಗು ಶಬ್ದಗಳಲ್ಲ ಎಂದು ಅವರಿಗೆ ಹೇಳಿದಾಗ ಅವರು ಅಚ್ಚರಿಗೊಳ್ಳುತ್ತಾರೆ. ಉದಾಹರಣೆಗೆ: ರೈಲು ಬಂಡಿ, ಕಾನಿಸ್ಟೇಬು, ಪೋಸ್ಟ್ ಆಫೀಸು, ಕವರು, ಇಸ್ಕೂಲು, ಕಾಲೇಜಿ, ಇಸ್ಪೇಟು, ಕಳಾವರು, ಕೋರ್ಟು, ಪೋಟು, ಟಿಕೆಟ್ಟು, ಲಾಯರು, ಅಸುಪತ್ರಿ –ಮುಂತಾದುವು.

ತೆಲುಗಿನಲ್ಲಿ ಒಗಟುಗಳೂ ಗಾದೆಗಳೂ ತುಂಬ ಇವೆ. ಇವುಗಳಲ್ಲಿ ತಮ್ಮದೇ ಆದ ಅಂತರಪ್ರಾಸ, ಅಂತ್ಯಪ್ರಾಸ, ಛಂದೋಲಯಗಳು ಮುಂತಾದ ಲಕ್ಷಣಗಳು ಇವೆ. ಪೋರಾನಿ ಪೋಟುಲಕುಪೋತೆ, ರಾರಾನಿ ನಿಂದಲು ರಾಕ ಮಾನವು (ಹೋಗಬಾರದ ಜಾಗಕ್ಕೆ ಹೋದರೆ ನೀನು ನಿಂದೆಗೂ ಅವಮಾನಕ್ಕೂ ಪಾತ್ರನಾಗಬೇಕಾಗುತ್ತದೆ); ಮಾಟಲು ಕೋಟಲು ದಾಟುವಿ; ಕಾಲುಳ್ಳು ಗಡಪ ದಾಟಲೇವು (ಮಾತು ಕೋಟೆಗಳನ್ನು ಒಡೆಯುತ್ತದೆ; ಕಾಲು ಹೊಸಿಲನ್ನೂ ದಾಟುವು– ಬರಿ ಬಾಯಿ ಮಾತಿನವನನ್ನು ಕುರಿತು ಹೀಯಾಳಿಕೆ), ಒಕನಾಡು ವಿಂದು ಒಕನಾಡು ಮಂದು (ಒಂದು ದಿನ ಹಬ್ಬ, ಒಂದು ದಿನ ಮದ್ದು), ತಾನು ವಲಚಿಂದಿ ರಂಭ; ತಾನು ಮುನಿಗಿಂದಿ ಗಂಗ (ತಾನೊಲಿದವಳು ರಂಭೆ; ತಾನು ಮಿಂದುದು ಗಂಗೆ); ತಾಡುಲೇನಿ ಕಟ್ಟು; ಕೋಲಲೇನಿ ಪೆಟ್ಟು (ಹಗ್ಗವಿಲ್ಲದ ಕಟ್ಟು, ಬಾಣವಿಲ್ಲದ ಗುರಿ); ಶುಷ್ಕ ಪ್ರಿಯಾಲು, ಶೂನ್ಯ ಹಸ್ತಾಲು (ಶುಷ್ಕ ಹೊಗಳಿಕೆ, ಶೂನ್ಯ ಹಸ್ತ) ಇತ್ಯಾದಿ.

ಒಗಟೆಗಳೂ ಅಂತರಪ್ರಾಸ, ಅಂತ್ಯಪ್ರಾಸ ಮತ್ತು ಛಂದಸ್ಸುಗಳಿಂದ ನಿಬದ್ಧವಾಗಿವೆ. ಉದಾಹರಣೆಗೆ ತೆಲ್ಲನಿಮಡಿಲೋ ನಲ್ಲನಿವಿತ್ತುಲು; ಚೇತಿತೊತಲ್ಲಿನಾ, ನೋಟಿತೋ ಏರಿನಾಂ (ಬಿಳಿ ಹೊಲದಲ್ಲಿ ಕಪ್ಪು ಬೀಜಗಳನ್ನು ನಮ್ಮ ಕೈಯಿಂದ ಬಿತ್ತಿದೆವು, ಬಾಯಿಂದ ಎತ್ತಿದೆವು)– ಬಿಳಿಯ ಕಾಗದದ ಮೇಲೆ ಕಪ್ಪು ಶಾಯಿಯಿಂದ ಬರೆದು ಆಮೇಲೆ ಅದನ್ನು ಓದುವುದನ್ನು ಕುರಿತ ಒಗಟೆಯಿದು. ದಾನಿ ಭೋಗಂ ರಾಜ ಭೋಗಂ, ದಾನಿ ಪಾಲು ಪೆಂಟಪಾಲು (ಅದರ ಭೋಗ ರಾಜಭೋಗ, ಅದರ ಪಾಲು ತಿಪ್ಪೆ)– ರಾಜನು ಊಟ ಮಾಡಿದ ಬಾಳೆ ಎಲೆಯ ವರ್ಣನೆ ಇದು.

(ಎಸ್.ಜಿ.ವಿ.)

**ಆಂಧ್ರ ಸಾಹಿತ್ಯ :** ತೆಲುಗು ಸಾಹಿತ್ಯ ಚರಿತ್ರೆಯನ್ನು ಹೀಗೆ ವಿಭಾಗಿಸಬಹುದು: 1 ನನ್ನಯನ ಹಿಂದಿನ ಕಾಲ (600–1000). 2 ಪುರಾಣ ಮತ್ತು ಭಾಷಾಂತರಗಳ ಕಾಲ (1000–1500). 3 ಪ್ರಬಂಧಗಳ ಕಾಲ (1500–1750): i. ಕೃಷ್ಣದೇವರಾಯನ ಕಾಲ (1500–1600). ii. ದಕ್ಷಿಣ ಪಂಥದ ಸಾಹಿತ್ಯ (1600–1750). 4 ತರುವಾಯದ ಪ್ರಬಂಧಗಳ ಕಾಲ (1750–1860). 5 ಆಧುನಿಕ ಕಾಲ (1860– 1960): i. ಆಧುನಿಕ ಭಾವಜಾಗೃತಿ (1860–1900). ii. ಆಧುನಿಕ ಸಾಹಿತ್ಯದ ಹೊಸ ಒಲುಮೆಗಳು: (1900–60).

**ನನ್ನಯ್ಯನ ಹಿಂದಿನ ಕಾಲ :** 600–1000. ಕೆಲವು ಶಾಸನಗಳ ಹೊರತು, ಮಿಕ್ಕ ಯಾವ ಸಾಹಿತ್ಯವೂ ನಮ್ಮ ಗೋಚರಕ್ಕೆ ಬಂದಿಲ್ಲ. ಶಾಸನಗಳ ಪೈಕಿ, 600–1000 ಅವಧಿಯ ಶಾಸನಗಳು ತಗುವೋಜ, ಸೀಸ ಮತ್ತು ಮಧ್ಯಾಕ್ಕರ (ಪ್ರಾಯಶಃ ಕನ್ನಡ ಛಂದಸ್ಸುಗಳಿಂದ ತೆಗೆದುಕೊಂಡಿದ್ದಿರಬೇಕು) ಎಂಬ ದೇಸೀ ಛಂದಸ್ಸುಗಳಲ್ಲಿ ರಚಿತವಾದ ಪದ್ಯಗಳಲ್ಲೂ ಇವೆ.

ಜೈನ ಕವಿಗಳಿಂದ ರಚಿತವಾದ ಕೆಲವು ತೆಲುಗು ಪದ್ಯಗಳಿದ್ದು ಜೈನರನ್ನು ಜೈನಮತವನ್ನೂ ನಾಶಗೊಳಿಸಿದುದರ ಫಲವಾಗಿ ಅವೂ ನಾಶಹೊಂದಿದುವೆಂದೂ ಹೇಳಲಾಗಿದೆ. ಇದು ಹೇಗಾದರೂ ಇರಲಿ, ಅಲ್ಪ ಸ್ವಲ್ಪ ಸಾಹಿತ್ಯ ರಚನೆಗಳು ಹಿಂದೆ ಇದ್ದಿರಬೇಕು; ಏಕೆಂದರೆ ಅವು ಇದ್ದಿರದಿದ್ದರೆ ನನ್ನಯ್ಯ ತನ್ನ ತೆಲುಗು ಮಹಾಭಾರತವನ್ನು ಸರ್ವಾಂಗಸುಂದರವಾದ ಶೈಲಿಯಲ್ಲಿ ಇದ್ದಕ್ಕಿದ್ದ ಹಾಗೆಯೇ ರಚಿಸಲಾಗುತ್ತಿರಲಿಲ್ಲ.

**ಪುರಾಣ ಮತ್ತು ಭಾಷಾಂತರಗಳ ಕಾಲ:** 1000–1500. ನಮಗೆ ತಿಳಿದಂತೆ ತೆಲುಗು ಭಾಷೆಯ ಮೊದಲ ಕವಿಯಾದ ನನ್ನಯಭಟ್ಟ (**ನೋಡಿ– ನನ್ನಯ್ಯ**) ರಾಜಮಹೇಂದ್ರಿಯಲ್ಲಿದ್ದ ಪೂರ್ವ ಚಾಳುಕ್ಯವಂಶದ ಅರಸನಾದ ರಾಜರಾಜ ನರೇಂದ್ರನ (1022–1063) ಆಸ್ಥಾನದ ಕವಿಯಾಗಿದ್ದ. ರಾಜನ ಆಶಯದಂತೆ, ಮಹಾಭಾರತದ ಆದಿ, ಸಭಾ ಪರ್ವಗಳನ್ನೂ ಅರಣ್ಯ ಪರ್ವದ ಒಂದು ಭಾಗವನ್ನೂ ರಚಿಸಿದ. ಈತನ ಕೃತಿ ಸಂಸ್ಕೃತ ಮೂಲದ ಸರಳಾನುವಾದವಾಗಿದೆ. ಈತ ಪಂಪನ ಕನ್ನಡ ಕೃತಿಯನ್ನು ನೋಡಿರಬಹುದು. ತನ್ನ ಸ್ನೇಹಿತ ನಾರಾಯಣಭಟ್ಟನ ಉಪಕಾರಸ್ಮರಣೆ ಮಾಡಿದ್ದಾನೆ. ಈ ಉಪಕಾರ ಎಂಥದು ಎಷ್ಟರಮಟ್ಟಿನದು ಎಂಬುದು ನಮಗೆ ತಿಳಿದುಬಂದಿಲ್ಲ. ಈತನ ಕೃತಿ ಅರೆಮುಗಿದಿದೆ. ಪ್ರಾಯಶಃ ಕವಿಯ ಅಕಾಲಿಕ ಮರಣ ಇದಕ್ಕೆ ಕಾರಣವಾಗಿರಬಹುದು. ಈ ಕೃತಿಯನ್ನು ಇನ್ನೂರು ವರ್ಷಗಳ ಆಚೆಗೆ ನೆಲ್ಲೂರಿನ ತಿಕ್ಕನ (1220–1300) ಮುಂದುವರಿಸಿದ. ಆದರೆ ತಿಕ್ಕನ ಅರಣ್ಯಪರ್ವವನ್ನು ಮುಗಿಸದೆ ವಿರಾಟ ಪರ್ವದಿಂದ ಹಿಡಿದು ಮಿಕ್ಕ 15 ಪರ್ವಗಳನ್ನು ಬರೆದು ಮುಗಿಸಿದ. ಅರಣ್ಯಪರ್ವವನ್ನು ಎರ್ರನ (1300–80) ಸಮಾಪ್ತಿಗೊಳಿಸಿದ. ನನ್ನಯ, ತಿಕ್ಕನ ಮತ್ತು ಎರ್ರನ ಎಂಬೀ ಮೂವರು ಕವಿತ್ರಯರೆಂದು ಪ್ರಖ್ಯಾತರಾಗಿದ್ದಾರೆ. ಅವರು ಬಳಸಿರುವ ಭಾಷೆ ಶ್ರೇಷ್ಠವೆಂದು ಪರಿಗಣಿತವಾಗಿದೆ. ತಿಕ್ಕನ ನಿರ್ವಚನೋತ್ತರ ರಾಮಾಯಣಂ ಮತ್ತು ವಿಜಯಸೇನಂ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಮೊದಲನೆಯದು ಉಳಿದುಕೊಂಡಿದೆ, ಎರಡನೆಯದು ನಷ್ಟವಾಗಿದೆ. ಅದರ ಕೆಲವು ಪದ್ಯಗಳು ಮುಂದಿನ ಕಾಲದ ಪ್ರಬಂಧರತ್ನಾಕರ ಎಂಬುದರಲ್ಲಿ ಗೋಚರಿಸುತ್ತವೆ. ಎರ್ರನನೂ ಹರಿವಂಶ ನೃಸಿಂಹಪುರಾಣ ಮತ್ತು ರಾಮಾಯಣಂ ಎಂಬ ಕೃತಿಗಳನ್ನು ರಚಿಸಿದ್ದಾನೆ. ಮೂರನೆಯ ಗ್ರಂಥ ಈಗ ಉಳಿದುಕೊಂಡಿಲ್ಲ. ಎಲ್ಲೋ ಕೆಲವು ಪದ್ಯಗಳು ಹದಿನೆಂಟನೆಯ ಶತಮಾನದ ಕೂಚಿಮಂಚಿ ತಿಮ್ಮ ಕವಿಯ ಸರ್ವಲಕ್ಷಣಸಾರಸಂಗ್ರಹಮು ಎಂಬ ಗ್ರಂಥದಲ್ಲಿ ಸಿಕ್ಕುತ್ತವೆ.

ಈ ಮೂರು ಕವಿಗಳ ಪೈಕಿ ನನ್ನಯ್ಯ ಸಂಸ್ಕೃತ ಶಬ್ದಗಳನ್ನು ವಿಪುಲವಾಗಿ ಬಳಸಿದ. ತಿಕ್ಕನ ತೆಲುಗು ಮಾತುಗಳಿಗೂ ರೀತಿಗಳಿಗೂ ಹೆಚ್ಚು ಪ್ರಾಶಸ್ತ್ಯ ಕೊಟ್ಟ. ಎರ್ರನ ಸಂಸ್ಕೃತ ತೆಲುಗುಗಳೆರಡಕ್ಕೂ ಸಮಪ್ರಾಧಾನ್ಯ ಕೊಟ್ಟ.

ನನ್ನಯನನ್ನು ವಾಗನುಶಾಸನನೆಂದು ಜನ ಕರೆಯುವುದು ವಾಡಿಕೆ. ತಾವರಿತಂತೆ ಆತನೇ ತೆಲುಗಿನ ಮೊದಲ ಕವಿಯಾದುದರಿಂದ ಅಥವಾ ಕೆಲವು ವಿದ್ವಾಂಸರು ಆಂಧ್ರಶಬ್ದ ಚಿಂತಾಮಣಿ ಎಂಬ ಸಂಸ್ಕೃತ ಭಾಷೆಯಲ್ಲಿ ರಚಿತವಾದ ವ್ಯಾಕರಣಗಳನ್ನು ಆತ ಬರೆದನೆಂದು ತಿಳಿದುಕೊಂಡಿದ್ದರಿಂದ ಈ ಬಿರುದು ಆತನಿಗೆ ಬಂದಿರಬಹುದು. ಆದರೆ ಈ ವ್ಯಾಕರಣದಲ್ಲಿನ ಸೂತ್ರಗಳಿಗೂ ನನ್ನಯನ ಪ್ರಯೋಗಗಳಿಗೂ ಅನೇಕ ಕಡೆಗಳಲ್ಲಿ ಸಾಮರಸ್ಯವಿಲ್ಲದಿರುವದರಿಂದ ಅವನ ತರುವಾಯ ಬಂದಿರುವ ಯಾವನೋ ಮತ್ತೊಬ್ಬನಿಂದ ಇದು ರಚಿತವಾಗಿದೆ ಯೆಂಬುದು ಈಗ ಸಿದ್ಧಾಂತವಾಗಿದೆ. ತಿಕ್ಕನನನ್ನು ಕವಿಬ್ರಹ್ಮನೆಂದೂ ಉಭಯಕವಿ ಮಿತ್ರನೆಂದೂ ಕರೆಯುತ್ತಾರೆ. ಎರ್ರನನನ್ನು ಶಿವಭಕ್ತನಾದುದರಿಂದ ಶಂಭುದಾಸನೆಂದೂ ತನ್ನ ಕೃತಿಗಳಲ್ಲಿ, ಅದರಲ್ಲೂ ನೃಸಿಂಹಪುರದಲ್ಲಿ, ಈತ ಕಾವ್ಯ ಕಲೆಗಳನ್ನು ಪ್ರದರ್ಶಿಸುವದರಿಂದ ಪ್ರಬಂಧ ಪರಮೇಶ್ವರನೆಂದೂ ಜನ ಪ್ರೀತಿಯಿಂದ ಕರೆಯುತ್ತಾರೆ.

ಶೈವ ಕವಿಗಳು (1150–1300): ರಾಜರಾಜೇಂದ್ರ ತೀರಿಕೊಂಡಾಗ (1063) ತೆಲುಗು ಸಾಹಿತ್ಯದ ಬೆಳವಣಿಗೆಗೆ ಅಡ್ಡಿತರುವಂಥ ರಾಜಕೀಯ, ಸಾಮಾಜಿಕ ಮತ್ತು ಮತೀಯ ವಿಪ್ಲವಗಳು ಉಂಟಾದವು. ಜೈನಧರ್ಮ ನಾಡಿನಲ್ಲಿರುವವರೆಗೂ ಶೈವರು, ವೈಷ್ಣವರು ಮತ್ತಿತರ ವೈದಿಕಧರ್ಮಾನುಯಾಯಿಗಳೂ ಜೈನರನ್ನೂ ಜೈನಮತವನ್ನು ಎದುರಿಸಲು

ಒಗ್ಗೂಡಿದರು. ಆದರೆ ಸಾಮಾನ್ಯ ಶತ್ರುಕಾಲ್ತೆಗೆದ ಬಳಿಕ ಅವರು ತಮ್ಮತಮ್ಮಲ್ಲೇ ಹೋರಾಡಲು ಮೊದಲು ಮಾಡಿದರು. ಶೈವರು ಪ್ರಬಲಿಸಿದರು ಮತ್ತು ಶಿವಮತವನ್ನು ನಾಡಿನಲ್ಲೆಲ್ಲ ಹರಡಲು ಪ್ರಾರಂಭಿಸಿದರು. ತಾವು ಸಂಸ್ಕೃತದಲ್ಲೂ ತೆಲುಗಿನಲ್ಲೂ ಶ್ರೇಷ್ಠ ಪಂಡಿತರಾಗಿದ್ದರೂ ಕೆಲವರು ಕನ್ನಡದಲ್ಲೂ ಪರಿಶ್ರಮಹೊಂದಿದ್ದರೂ ಜನರ ಮೆಚ್ಚುಗೆಯನ್ನು ಪಡೆಯಲು ಅವರು ಸರಳ ಭಾಷೆಯನ್ನೂ ದೇಸೀ ಛಂದಸ್ಸುಗಳನ್ನೂ ಅವಲಂಬಿಸಿದರು. ಹನ್ನೆರಡನೆಯ ಶತಮಾನದ ಮಧ್ಯಕಾಲದಲ್ಲಿ ಪೂರ್ವ ಗೋದಾವರೀ ಜಿಲ್ಲೆಯ ದಕ್ಷಾರಾಮದಲ್ಲಿ ಜೀವಿಸಿದ್ದ ಮಲ್ಲಿಕಾರ್ಜುನ ಪಂಡಿತ ಪ್ರಥಮ ಶೈವಕವಿ. ಆತ ಶೈವ ಮತಕ್ಕೆ ತೆಲುಗು ಪ್ರದೇಶದಲ್ಲಿ ಒಂದು ಸ್ಥಿರವಾದ ಆಸರೆಯನ್ನು ಕಲ್ಪಿಸಿದ. ಆತನನ್ನು ಲಿಂಗಧಾರೀ ಸಂಸ್ಕೃತಿಯ ಸಂಸ್ಥಾಪಕ ನೆಂದೂ ಕರೆಯುತ್ತಾರೆ. ಆತ ಸಂಸ್ಕೃತದಲ್ಲೂ ತೆಲುಗಿನಲ್ಲೂ ದೊಡ್ಡ ವಿದ್ವಾಂಸ. ಅನೇಕ ಕೃತಿಗಳನ್ನು ರಚಿಸಿದ್ದಾನೆ. ಅವನ ಗ್ರಂಥಗಳೆಲ್ಲ ಶೈವ ಧರ್ಮಕ್ಕೆ ಮೀಸಲಾಗಿವೆ. ಅವುಗಳ ಪೈಕಿ ತುಮ್ಮೆದ ಪದಮುಲು (ತುಂಬಿಯ ಪದಗಳು), ಪ್ರಭಾತ ಪದಮುಲು, ವೆನ್ನೆಲ ಪದಮುಲು (ಬೆಳದಿಂಗಳ ಹಾಡುಗಳು)– ಮುಂತಾದ ತೆಲುಗು ಜನಗಳಿಗೆಂದೇ ಬರೆದ ಜನಪ್ರಿಯ ಕೃತಿಗಳಿವೆ. ಆದರೆ ಅವುಗಳೊಂದೂ ನಮ್ಮ ಪಾಲಿಗೆ ಉಳಿದುಬಂದಿಲ್ಲ. ಈತನ ಅನೇಕ ಕೃತಿಗಳ ಪೈಕಿ ದೇಸೀ ಛಂದಸ್ಸುಗಳಲ್ಲಿ ರಚಿತವಾಗಿರುವ ಶಿವತತ್ತ್ವಸಾರಮು ಎಂಬುದೊಂದು ಮಾತ್ರ ನಮಗೆ ದೊರೆತಿದೆ. ಅದರಲ್ಲಿ 489 ಪದ್ಯಗಳು ಮಾತ್ರ ಈಗ ಉಳಿದಿವೆ. ಈ ಗ್ರಂಥದಲ್ಲಿ ಇನ್ನೆಷ್ಟು ಪದ್ಯಗಳಿದ್ದವೋ ಅದೂ ನಮಗೆ ತಿಳಿದಿಲ್ಲ.

ನನ್ನಿ ಚೋಡ ಎಂಬ ಕವಿ ಕುಮಾರಸಂಭವವನ್ನು ರಚಿಸಿ ಈಶ್ವರನ ಅವತಾರವೆಂದೇ ತಾನು ಯಾರನ್ನು ಭಾವಿಸಿದ್ದನೋ ಆ ಘನವಿದ್ವಾಂಸ ಜಂಗಮ ಮಲ್ಲಿಕಾರ್ಜುನ ಶಿವಯೋಗಿಗೆ ಅದನ್ನು ಅರ್ಪಿಸಿದ. ನನ್ನಿ ಚೋಡನಾಗಲಿ ಆತನ ಕುಮಾರಸಂಭವವಾಗಲಿ ಲೋಕದ ದೃಷ್ಟಿಗೆ ಗೋಚರವಾಗಿಲ್ಲ. ಈ ಗ್ರಂಥವನ್ನು ದಿವಂಗತ ಮಾನವಲ್ಲಿ ರಾಮಕೃಷ್ಣ ಕವಿ 1914ರಲ್ಲಿ ಕಂಡುಹಿಡಿದ. ನನ್ನೆ ಚೋಡನ ಕಾಲದ ವಿಚಾರ ಚರ್ಚೆಗಿಟ್ಟುಕೊಂಡಿದೆ. ಈತ ನನ್ನಯ್ಯನಿಗೆ ಹಿಂದಿನವನೆಂದು ರಾಮಕೃಷ್ಣ ಕವಿ ಭಾವಿಸಿದ್ದ, ಆದರೆ ಅನೇಕ ವಿದ್ವಾಂಸರು ಈತ 12ನೆಯ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದನೆಂದು ಭಾವಿಸುತ್ತಾರೆ. ಈತ ಚೋಡರಾಜ ವಂಶಕ್ಕೆ ಸೇರಿದವನು ಮತ್ತು ತೆಲುಗು ದೇಶದ ಒಂದು ಸಣ್ಣ ಪ್ರಾಂತ್ಯಕ್ಕೆ ಪ್ರಭುವಾಗಿದ್ದವನು. ಕುಮಾರಸಂಭವದಲ್ಲಿ ತನ್ನ ಕಾವ್ಯಕಲಾಪ್ರೌಢಿಮೆಯನ್ನು ಈತ ಮೆರೆಯಿಸುವುದರಿಂದ ಈತನನ್ನು ಕವಿರಾಜಶಿಖಾಮಣಿ ಎಂದು ಜನ ಭಾವಿಸುತ್ತಾರೆ.

ತಾನು ಶೈವನಾಗಿದ್ದರೂ ಶೈವಧರ್ಮವನ್ನು ಹರಡುವುದರಲ್ಲಿ ಈತ ಆಸಕ್ತನಾಗಲಿಲ್ಲ. ಕುಮಾರಸಂಭವ ಒಂದು ಶ್ರೇಷ್ಠ ಪ್ರಬಂಧ. ಈತನ ಕಾಲದ ಮತ್ತು ಮುಂದಿನ ಕಾಲದ ಜನರಿಗೆ ಇಂಥ ಘನಕಾವ್ಯವೊಂದಿದೆ ಎಂಬುದರ ಪರಿವೆಯೂ ಇರಲಿಲ್ಲ. ಇದು ಅವರ ಗಮನಕ್ಕೆ ಬಂದಿದ್ದ ಪಕ್ಷದಲ್ಲಿ ಪ್ರಬಂಧದ ಶೈಲಿ ತನ್ನ ಮುಂಬರಿವಿಗೆ ಕಾಯಬೇಕಾಗಿರಲಿಲ್ಲ. ಕಾವ್ಯಲಾಕ್ಷಣಿಕರು ಪ್ರಬಂಧ ವಿಷಯದಲ್ಲಿ ವಿವರಿಸುವ ಸರ್ವಲಕ್ಷಣಗಳನ್ನೂ ಕುಮಾರಸಂಭವ ಪ್ರದರ್ಶಿಸುತ್ತದೆ. ಕಾವ್ಯದ ವಸ್ತು ಕುಮಾರಸ್ವಾಮಿಯ ಜನನದಲ್ಲಿ ಕೇಂದ್ರೀಕರಿಸಿದೆ. ಸತೀಜನನದಲ್ಲಿ ಪ್ರಾರಂಭವಾಗುವ ಕಥೆ ತಾರಕಾಸುರನ ಸಂಹಾರದಲ್ಲಿ ಮುಗಿಯುತ್ತದೆ. ಕೆಲವು ಪ್ರಸಂಗಗಳನ್ನೂ ವರ್ಣನೆಗಳನ್ನೂ ಈ ಕವಿಯು ಕಾಳಿದಾಸ ಮತ್ತು ಉದ್ಭಟರ ಕುಮಾರಸಂಭವಗಳಿಂದ ಎತ್ತಿಕೊಂಡಿದ್ದಾನೆ ಅಥವಾ ಅವುಗಳನ್ನು ಅವಲಂಬಿಸಿ ಬರೆದಿದ್ದಾನೆ. ಇತರ ಶೈವ ಕವಿಗಳ ಪೈಕಿ, ಇಬ್ಬರು ಪ್ರಧಾನರು. ಯಥಾ ವಾಕ್ಕುಲ ಅನ್ನಮಯನ ಇವರಲ್ಲೊಬ್ಬ. ಈತನ ಕಾಲ (ಸು. 1242). ಈತನೊಬ್ಬ ಶೈವಕವಿ, ಶೈವಧರ್ಮವನ್ನು ನಾಡಿನಲ್ಲಿ ಹರಡಲು ಆಸಕ್ತನಾದವ. ಸರ್ವೇಶ್ವರ ಸ್ತೋತ್ರ ಮತ್ತು ಲೀಲಾನಂದ ಸರ್ವೇಶ್ವರ ಶತಕಗಳೆಂಬ ಗ್ರಂಥಗಳನ್ನು ರಚಿಸಿದ್ದಾನೆ. ಈತನ ಕ್ರತಿಗಳಲ್ಲಿ ಶ್ರೇಷ್ಠ ಕವಿತಾಗುಣಗಳು ಗೋಚರಿಸುತ್ತವೆ. ಮತ್ತೊಬ್ಬ ಕವಿ ವಾರಂಗಲ್ಲಿನ ಪಾಲ್ಕುರಿಕೆ ಸೋಮನ (1250–1300). ಈತನನ್ನು

ಶೈವಾಚಾರಪರಾಯಣನೆಂದೂ ಸಂಸ್ಕೃತ ತೆಲುಗು ಮುಂತಾದವು ಈತನ ಗ್ರಂಥಗಳು. ಸಂಸ್ಕೃತದಲ್ಲಿ ರುದ್ರಭಾಷಂ ಕನ್ನಡಗಳಲ್ಲಿ ಶ್ರೇಷ್ಠವಿದ್ವಾಂಸನೆಂದೂ ವಿಖ್ಯಾತನಾದ ಕವಿಯೆಂದೂ ಭಾವಿಸಲಾಗಿದೆ. ಈತ ಬಹಳ ಗ್ರಂಥಗಳನ್ನು ಬರೆದಿದ್ದಾನೆ. ಬಸವಪುರಾಣಂ, ಪಂಡಿತಾರಾಧ್ಯ ಚರಿತ್ರ, ಅನುಭವಸಾರ, ಚತುರ್ವೇದಸಾರ, ಚೆನ್ನಮಲ್ಲುಸೀಸಮಲು, ವೃಷಾಧಿಪ ಶತಕ ಮತ್ತು ಬಸವೋದಾಹರಣ ಮುಂತಾದವು ಈತನ ಗ್ರಂಥಗಳು. ಸಂಸ್ಕೃತದಲ್ಲಿ ರುದ್ರ ಭಾಷ್ಯಂ ಮುಂತಾದುವನ್ನೂ ಕನ್ನಡದಲ್ಲಿ ಬಸವರಗಡ, ಗಂಗೋತ್ಪತ್ತಿರಗಡ ಮತ್ತು ಸದ್ಗುರುರಗಡ ಮುಂತಾದುವನ್ನೂ ರಚಿಸಿದ್ದಾನೆ, ಈ ಕೃತಿಗಳ ಹೆಸರುಗಳು ಈತನ ತೆಲುಗು ಕಾವ್ಯವಾದ ಬಸವಪುರಾಣದಲ್ಲಿ ಬಂದಿವೆ. ಅವನ ಅನೇಕ ಕೃತಿಗಳ ಪೈಕಿ ಜನಪ್ರಿಯ ದ್ವಿಪದಿಗಳಲ್ಲಿ ರಚಿತವಾದ ಬಸವಪುರಾಣ ಮತ್ತು ಪಂಡಿತಾರಾಧ್ಯಚರಿತ್ರ ಸೇರಿವೆ; ಈ ಗ್ರಂಥಗಳಲ್ಲಿ ತೆಲುಗು ಶಬ್ದಗಳೂ ಅವುಗಳ ದೇಸೀನುಡಿಗಟ್ಟುಗಳೂ ವಿಪುಲವಾಗಿವೆ. ಇವು ಶೈವರಿಂದಲ್ಲದೆ ತೆಲುಗು ಭಾಷಾವಿದ್ವಾಂಸರಿಂದಲೂ ಬಹಳ ಬೆಲೆಯುಳ್ಳ ಗ್ರಂಥಗಳೆಂದು ಪರಿಗಣಿತವಾಗಿವೆ. ಈ ಕಾಲದಲ್ಲಿ ಇಷ್ಟು ಪ್ರಸಿದ್ಧರಲ್ಲದ ಪಿಡುಪರ್ತಿ ಸೋಮನನಂಥ (15 ನೆಯ ಶತಮಾನ) ಕೆಲವು ಕವಿಗಳೂ ಇದ್ದಾರೆ. ಪಿಡುಪರ್ತಿ ಸೋಮನ ಪಾಲ್ಕುರಿಕೆ ಸೋಮನ ದ್ವಿಪದಿಯಲ್ಲಿ ರಚಿಸಿದ್ದ ಬಸವಪುರಾಣವನ್ನು ಪದ್ಯ ಛಂದಸ್ಸಿಗೆ ತಿರುಗಿಸಿ ಬರೆದ. ಪಿಡುಪರ್ತಿ ಸೋಮನ ಅಲ್ಲಮಪ್ರಭುವಿನ ಲೀಲೆಗಳನ್ನು ವರ್ಣಿಸುವ ಪ್ರಭುಲಿಂಗಲೀಲ ಎಂಬುದನ್ನೂ ದ್ವಿಪದಿಯಲ್ಲಿ ರಚಿಸಿದ್ದಾನೆ. ಈ ಕೃತಿಯನ್ನು ಈತನ ಸಹೋದರನ ಮಗ ಬಸವಪ್ಪ ನಿಯತವಾದ ಪದ್ಯಛಂದಸ್ಸಿಗೆ ಪರಿವರ್ತಿಸಿದ್ದಾನೆ.

ಈ ಕಾಲದ ರಾಮಾಯಣ ಕವಿಗಳು: ತಿಕ್ಕನ ವಿರಚಿತ ನಿರ್ವಚನೋತ್ತರ ರಾಮಾಯಣಕ್ಕೆ ಹಿಂದೆ ರಂಗನಾಥ ರಾಮಾಯಣವೆಂಬುದೊಂದಿತ್ತು. ಇದನ್ನು ಯಾರು ಬರೆದರೆಂಬ ವಿಷಯ ಚರ್ಚೆಗಿಟ್ಟುಕೊಂಡಿದೆ. ಹೆಸರೇ ಹೇಳುವ ಹಾಗೆ, ರಂಗನಾಥ ಎಂಬುವನೇ ಇದರ ಕವಿ ಎಂದು ಭಾವಿಸಲಾಗಿದೆ. ಆದರೆ ಆಂತರಿಕ ಸಾಕ್ಷ್ಯಗಳಿಂದ ಗೋನಬುದ್ಧ ರೆಡ್ಡಿ ಇದನ್ನು ರಚಿಸಿದನೆಂದು (1200) ಊಹಿಸಬೇಕಾಗುತ್ತದೆ. ತನ್ನ ಗುರುವಾದ ರಂಗನಾಥನಿಗೆ ಗೌರವವನ್ನು ಸೂಚಿಸುವುದಕ್ಕಾಗಿ ಆತನ ಅಂಕಿತವನ್ನೇ ಈ ಕಾವ್ಯಕ್ಕೆ ಕವಿ ಕೊಟ್ಟನೆಂದು ಹೇಳಲಾಗಿದೆ.

ಇದು ದ್ವಿಪದಿಯಲ್ಲಿ ರಚಿತವಾಯಿತು. ಏಕೆಂದರೆ ಆ ಕಾಲದಲ್ಲಿ ಜನಪ್ರಿಯ ಛಂದಸ್ಸುಗಳಲ್ಲೂ ಸರಳಮಾತಿನಲ್ಲೂ ಕಾವ್ಯಗಳನ್ನು ರಚಿಸಿ ಜನರ ಮೆಚ್ಚುಗೆಯನ್ನು ಗಳಿಸಿ ತಮ್ಮ ತಮ್ಮ ಮತಗಳನ್ನು ಅವರಲ್ಲಿ ಹರಡಬೇಕೆಂಬ ಸ್ಪರ್ಧೆ ಶೈವ ಮತ್ತು ವೈಷ್ಣವ ಕವಿಗಳಲ್ಲಿ ಹಬ್ಬಿತ್ತು. ಆದರೆ ವೈಷ್ಣವ ಪಂಥದ ಇತರ ಕವಿಗಳಲ್ಲನೇಕರು ಕೆಳಮಟ್ಟದಲ್ಲಿ ಕಾವ್ಯ ರಚಿಸ ಬೇಕೆಂಬುದನ್ನು ಒಪ್ಪಲಿಲ್ಲ. ಆದುದರಿಂದ ಈ ದ್ವಿಪದ ರಾಮಾಯಣ ರಚಿತವಾದ ಕೂಡಲೇ ಕ್ರಮಬದ್ಧವಾದ ಪದ್ಯಕಾವ್ಯವೊಂದು ಮೈದೋರಿತು. ಅದರ ಹೆಸರು ಭಾಸ್ಕರ ರಾಮಾಯಣ. ಇದನ್ನು ಒಬ್ಬ ಕವಿ ರಚಿಸಲಿಲ್ಲ; ಒಂದೇ ಮನೆಯವರೋ ಅಥವಾ ಒಂದು ಸಾಹಿತ್ಯ ಪಂಥಕ್ಕೆ ಸೇರಿದವರೋ ಆದ ನಾಲ್ವರು ನಿರ್ಮಿಸಿದರು– 1 ಹುಲಕ್ಕಿಭಾಸ್ಕರ: ಅರಣ್ಯಕಾಂಡ, ಯುದ್ಧ ಕಾಂಡದ ಮೊದಲಭಾಗ; 2 ಮಲ್ಲಿಕಾರ್ಜುನಭಟ್ಟ (ಭಾಸ್ಕರನ ಮಗ); ಬಾಲ, ಕಿಷ್ಕಿಂಧ ಮತ್ತು ಸುಂದರಕಾಂಡಗಳು; 3 ಕುಮಾರ ರುದ್ರದೇವ (ಭಾಸ್ಕರನ ಶಿಷ್ಯ ಮತ್ತು ಸಾಹಿಣಿಮಾರನ ಮಗ); ಅಯೋಧ್ಯಾಕಾಂಡ; 4 ಅಯ್ಯಲಾರ್ಯ (ಭಾಸ್ಕರನ ಸ್ನೇಹಿತ ಮತ್ತು ಸಹೋದ್ಯೋಗಿ): ಯುದ್ಧಕಾಂಡದ ಉತ್ತರಾರ್ಧ. ಈ ಗ್ರಂಥ ಗೊನಬುದ್ಧರೆಡ್ಡಿಯ ಮೊಮ್ಮಗನ ಮಗ ಸಾಹಿಣಿಮಾರನಿಗೆ ಅಂಕಿತವಾಗಿರುವುದೊಂದು ಸೋಜಿಗದ ಸಂಗತಿ. ಗ್ರಂಥಾಂಕಿತಕ್ಕೆ ಸಮ್ಮತಿಸುವಾಗ ಆತ ಎರಡನೆಯ ಪ್ರತಾಪರುದ್ರದೇವನ (1225–1326) ಸಾಮಂತನಾದ ಪಾಳೆಯಗಾರನೊಬ್ಬನ ಅಶ್ವದಳಾಧಿಕಾರಿಯಾಗಿದ್ದ.

ತಿಕ್ಕನ ಸನಯಾಜಿ ವೈಷ್ಣವರಿಗೂ ಶೈವರಿಗೂ ರಾಜಿಮಾಡಿಸುವ ಸಲುವಾಗಿ ತನ್ನ ಮಹಾಭಾರತವನ್ನು ನೆಲ್ಲೂರಿನ ಹರಿಹರನಾಥನಿಗೆ ಅರ್ಪಿಸಿ ಹರಿಹರನಾಥ ಪಂಥವನ್ನು ಮೇಲಕ್ಕೇರಿಸಿದ. ಆದರೆ ಈ ವಿಷಯದಲ್ಲಿ ಆ ಸಂಪೂರ್ಣವಾಗಿ ಜಯಶಾಲಿಯಾಗಲಿಲ್ಲ. ಒಳಗುದಿಗಳು ಮುಂದುವರಿದೇ ಇದ್ದುವು.

ಮೇಲಿನ ನಾಲ್ಕು ಜನ ಕವಿಗಳಲ್ಲಿ ಭಾಸ್ಕರನೇ ಜ್ಯೇಷ್ಠ. ಆ ಕಾರಣದಿಂದಲೇ ಆ ಗ್ರಂಥಕ್ಕೆ ಭಾಸ್ಕರ ರಾಮಾಯಣವೆಂದು ಹೆಸರಾಯಿತು. ಕವಿಗಳೊಂದಿಗೆ ಅದರ ಭಾಷೆ, ಶೈಲಿ ಮತ್ತು ಕಾವ್ಯಗುಣಗಳೂ ವ್ಯತ್ಯಾಸಗೊಂಡಿವೆ. ಭಾಸ್ಕರನ ಅರಣ್ಯಕಾಂಡವೇ ಇವುಗಳಲ್ಲಿ ಶ್ರೇಷ್ಠತಮವಾಗಿದೆ. ಆತನ ಯುದ್ಧಕಾಂಡ ಒಳ್ಳೆಯ ಕಳಕಳಿಸುವ ವರ್ಣನೆಗಳಿಂದ ಕೂಡಿದೆ. ಮಲ್ಲಿಕಾರ್ಜುನನ ಪದ್ಯಗಳು ಶ್ರೀಮಂತವಾದ ಕಾವ್ಯಸೌಂದರ್ಯಗಳನ್ನು ಪ್ರದರ್ಶಿಸುತ್ತವೆ. ಕುಮಾರರುದ್ರನ ಭಾಷೆ ಮಿಕ್ಕೆಲ್ಲದಕ್ಕಿಂತಲೂ ಸರಳವಾಗಿದೆ, ಅಯ್ಯಲಾರ್ಯ ಉಕ್ತಿಯಲ್ಲಿ ಪ್ರೌಢಿಮೆಯನ್ನೂ ಭಾವದಲ್ಲಿ ಘನತೆ ಗಾಂಭೀರ್ಯಗಳನ್ನೂ ಪ್ರದರ್ಶಿಸಿದ್ದಾನೆ. ಒಟ್ಟಿನಲ್ಲಿ ಭಾಸ್ಕರರಾಮಾಯಣ ಒಂದು ಶ್ರೇಷ್ಠಗ್ರಂಥವೆಂದು ಪರಿಗಣಿತವಾಗದೆ.

ಆ ಬಳಿಕ ತೆಲುಗುಸಾಹಿತ್ಯದಲ್ಲಿ 25ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ರಾಮಾಯಣಗಳು ಪ್ರಕಟವಾದುವು. ಈ ದಿನದಲ್ಲೂ ವಿಶ್ವನಾಥ ಸತ್ಯನಾರಾಯಣ ಮತ್ತು ಆತ್ಮಕೂರಿ ಗೋವಿಂದಾಚಾರ್ಯುಲುಗಳಂಥ ಕವಿಗಳು ರಾಮಾಯಣಗಳನ್ನು ರಚಿಸಿದ್ದಾರೆ. ಮೊದಲನೆ ಯವ ರಾಮಾಯಣ ಕಲ್ಪವೃಕ್ಷಂ ಎಂಬುದನ್ನೂ ಎರಡನೆಯವ ಗೋವಿಂದ ರಾಮಾಯಣ ವೆಂಬುದನ್ನೂ ಬರೆದಿದ್ದಾರೆ. ಈಚಿನ ರಾಮಾಯಣಗಳಲ್ಲಿ 14 ನೆಯ ಶತಮಾನದ ಮೊಲ್ಲರಾಮಾಯಣ ಸರಳವೂ ಜನಪ್ರಿಯವೂ ಆಗಿದೆ. ಹತ್ತೊಂಬತ್ತನೆಯ ಶತಮಾನದ ಗೋಪಿನಾಥ ರಾಮಾಯಣ ಗಂಭೀರವಾಗಿದೆ; ವಾವಿಲಕೊಲನು ಸುಬ್ಬರಾಯನ ರಾಮಾಯಣ ವಾಲ್ಮೀಕಿರಾಮಾಯಣದ ಮೂಲಕ್ಕೆ ಹತ್ತಿರವಾಗಿರುವ ಭಾಷಾಂತರ. ಆಂಧ್ರಪ್ರದೇಶದ ರಾಷ್ಟ್ರಕವಿಯಾಗಿದ್ದ ದಿವಂಗತ ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿಯದೂ ಮೂಲಕ್ಕೆ ಸಮೀಪವಾಗಿಯೂ ವಿಶದವಾಗಿಯೂ ಇರುವ ಭಾಷಾಂತರವಾಗಿದೆ.

ಈ ಕಾಲದ ಇತರ ಕವಿಗಳ ಪೈಕಿ ಈ ಕೆಳಗೆ ಕಾಣಿಸಿರುವವರು ಉಲ್ಲೇಖಾರ್ಹರು. ತಿಕ್ಕನನ ಚಿಕ್ಕಪ್ಪನೂ ಕಾದಂಬರಿಯನ್ನು ಪದ್ಯದಲ್ಲಿ ರಚಿಸಿದವನೂ ಆದ ಕೇತನ (1200–1250); ತಿಕ್ಕನನ ಶಿಷ್ಯನೂ ಮಾರ್ಕಂಡೇಯ ಪುರಾಣದ ಕರ್ತೃವೂ ಆದ ಮಾರನ (1295–1326); ಉಷಾಪರಿಣಯಂ, ನರಕಾಸುರವಧ ಮುಂತಾದ ಬಹು ಮನೋಹರವಾದ

ಕಥೆಗಳನ್ನೊಳಗೊಂಡಿರುವ ಉತ್ತರ ಹರಿವಂಶವನ್ನು ರಚಿಸಿರುವ ಮತ್ತು ಆ ಕಾಲದ ಅತ್ಯುತ್ತಮ ಕವಿಗಳಲ್ಲಿ ಒಬ್ಬನೆಂದು ಗಣ್ಯನಾದ ನಾಚನ ಸೋಮನ (ಸು. 1360); ವಸಿಷ್ಠರಾಮಾಯಣ ಮತ್ತು ಪದ್ಮಪುರಾಣಗಳ ಕರ್ತೃ ಮಡಿಕಿ ಸಿಂಗನ (1420) ತನ್ನ ಕವಿತಾಸೌಂದರ್ಯಕ್ಕೆ ಹೆಸರುವೆತ್ತಿರುವ ವಿಕ್ರಮಾರ್ಕಚರಿತದ ಕವಿ ಜಕ್ಕನ (1406–22) ಮನಸೆಳೆದಂಥ ಕಥೆಗಳಿರುವ ಭೋಜರಾಜೀಯಂ ಎಂಬುದನ್ನೂ ರಸಾಭರಣ ಎಂಬ ಅಲಂಕಾರ ಗ್ರಂಥವನ್ನೂ ಛಂದೋದರ್ಪಣವೆಂಬ ಛಂದಸ್ಸುಗಳನ್ನು ಕುರಿತ ಗ್ರಂಥವನ್ನೂ ಬರೆದಿರುವ ಅನಂತಾಮಾತ್ಯ (1430).

ಶ್ರೀನಾಥ (1380–1445) ಮತ್ತು ಬಮ್ಮೆರಪೋತನನನ್ನು (1430–1500) ಕುರಿತು ಒಂದೆರಡು ಮಾತುಗಳನ್ನು ವಿಶೇಷವಾಗಿ ಹೇಳಬೇಕಾಗಿದೆ. ಶ್ರೀನಾಥ ತನ್ನ ವಿದ್ವತ್ಪ್ರೌಢಿಮೆಗೂ ಕವಿತಾಕೌಶಲಕ್ಕೂ ಖ್ಯಾತನಾಗಿದ್ದಾನೆ. ವೇಮರೆಡ್ಡಿಯ (1400–1420) ಕಾಲದಲ್ಲಿ ಈ ಕವಿ ಬಹು ಶ್ರೇಷ್ಠಪದವಿಯನ್ನು ಅಲಂಕರಿಸಿದ್ದ. ಈತ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ದೇಶವಿಖ್ಯಾತನಾದ ಮಹಾವಿದ್ವಾಂಸನೀತ. ಈತನ ಕೃತಿಗಳ ಪೈಕಿ ಶೃಂಗಾರ ನೈಷಧವೆಂಬುದೊಂದು. ಇದು ಶ್ರೀಹರ್ಷನ ನೈಷಧಕಾವ್ಯದ ಸರಳಾನುವಾದ. ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟವೆಂಬ ಪ್ರತೀತಿಯಿದ್ದರೂ ಇದರಲ್ಲಿ ತುಂಬ ಸರಳವೂ ಬಹು ಮನೋಹರವೂ ಆದ ಕೆಲವು ಪದ್ಯಗಳಿವೆ. ಈತನ ಕಾಶೀಖಂಡಂ ಮತ್ತು ಭೀಮೇಶ್ವರ ಪುರಾಣಗಳು ಸಹ ಭಾಷಾಂತರಗಳೇ. ಆದರೆ ಕವಿತಾಗುಣದಲ್ಲಿ ಇವು ಮೂಲಕೃತಿಗಳನ್ನು ಮೀರಿಸಿವೆ. ಹರವಿಲಾಸಂ ಎಂಬುದನ್ನೂ ಈತನ ಅತ್ಯುತ್ತಮ ಕೃತಿಯೆಂದು ಪರಿಗಣಿಸಲಾಗಿದೆ. ದ್ವಿಪದ ಛಂದಸ್ಸಿನಲ್ಲಿರುವ ಈತನ ಪಲ್‌ನಾಟಿ ವೀರಚರಿತ್ರ ಎಂಬ ಜಾನಪದ ಕಥನ ಕವನ ಬಹು ಜನಪ್ರಿಯವಾಗಿದೆ. ಸಾಮಾನ್ಯವಾಗಿ ಈತನ ಕೃತಿಗಳನ್ನೂ ಮುಖ್ಯವಾಗಿ ಈತನ ಶಿವರಾತ್ರಿ ಮಾಹಾತ್ಮ್ಯವೆಂಬುದನ್ನೂ ನೋಡಿದರೆ ಈತ ಶೈವಮತನಿಷ್ಠನಲ್ಲ ಮತ್ತು ಪ್ರಚಾರಕನೂ ಅಲ್ಲ.

ಬಮ್ಮೆರಪೋತನ ಮನಸಾವಾಚಾಕರ್ಮಣಾ ಒಬ್ಬ ನಿಜವಾದ ಭಕ್ತ. ತೆಲುಗು ಸಾಹಿತ್ಯದಲ್ಲಿ ಅತ್ಯಂತ ಜನಪ್ರಿಯವಾದ ಈತನ ಭಾಗವತ ಕವಿತಾ ಕೌಶಲದಲ್ಲೂ ಜಾಣ ನುಡಿಗಳಲ್ಲೂ ಉನ್ನತ ಭಾವನೆಗಳಲ್ಲೂ ಭಕ್ತಿಯ ಧ್ಯೇಯ ನಿಷ್ಠೆಗಳಲ್ಲೂ ಬಹು ಶ್ರೀಮಂತವಾಗಿದೆ. ಆದರೆ ಇಲ್ಲಿನ 12 ಸ್ಕಂಧಗಳನ್ನೂ ಒಬ್ಬನೇ ರಚಿಸಲಿಲ್ಲ. ಅವುಗಳಲ್ಲಿ ಕೆಲವನ್ನು ಈತನ ಶಿಷ್ಯರಾದ ನಾರಯ, ಗಂಗನ, ಸಿಂಗನ ಎಂಬುವರು ರಚಿಸಿದರೂ ಅಧಿಕ ಭಾಗ ಪೋತನನಿಂದ ರಚಿತವಾಗಿದೆ; ಆ ಭಾಗವೇ ಎಲ್ಲಕ್ಕಿಂತ ಉತ್ತಮವಾದ ಭಾಗ. ಅದರಲ್ಲೂ ಧ್ರುವೋಪಾಖ್ಯಾನಂ, ಗಜೇಂದ್ರಮೋಕ್ಷಂ, ಪ್ರಹ್ಲಾದಚರಿತ್ರ, ವಾಮನಚರಿತ್ರ, ರುಕ್ಮಿಣೀಕಲ್ಯಾಣಂ ಎಂಬಿವು ಜನರ ಮೆಚ್ಚುಗೆಯನ್ನು ಬಹಳವಾಗಿ ಪಡೆದಿವೆ. ಕೊನೆಯದನ್ನು ಅನೇಕ ತೆಲುಗು ತರುಣಿಯರು ಮೆಚ್ಚುತ್ತಾರೆ. ಪೋತನ ತನ್ನ ಕೃತಿಯನ್ನು ರಾಮನಿಗೆ ಅರ್ಪಿಸಿದ್ದಾನೆ. ತಾನು ಬಡವನಾಗಿದ್ದರೂ ಶ್ರೀಮಂತ ಅಭಿಮಾನಿಗಳಿಗೆ ಅದನ್ನು ಅರ್ಪಿಸಲು ಆತ ಒಡಂಬಡಲಿಲ್ಲ.

ಅಣ್ಣಮಾಚಾರ್ಯ ತಾಳ್ಲಪಾಕಂ (1485–1503) **(ನೋಡಿ– ಅಣ್ಣಮಾಚಾರ್ಯ, ತಾಳ್ಲಪಾಕಂ)** ಕೀರ್ತನೆಗಳು, ಭಾವಗೀತೆಗಳು ಮತ್ತು ಭಕ್ತಿಗೀತೆಗಳು ಮುಂತಾದುವನ್ನು ರಚಿಸಿ ತೆಲುಗು ಸಾಹಿತ್ಯಕ್ಕೆ ಒಂದು ಹೊಸ ಸಂಪತ್ತನ್ನು ಕೊಟ್ಟಿದ್ದಾನೆ. ಇವೆಲ್ಲವೂ ತಿರುಮಲೆಯ ಶ್ರೀ ವೆಂಕಟೇಶ್ವರನ ಮೇಲೆ ರಚಿತವಾಗಿವೆ. ಈತ ತೆಲುಗಿನಲ್ಲೂ ಸಂಸ್ಕೃತದಲ್ಲೂ ರಚಿಸಿರುವ ಕೀರ್ತನೆಗಳ ಸಂಖ್ಯೆ 32,000 ಎಂದು ಹೇಳಲಾಗಿದೆ.

**3 ಪ್ರಬಂಧಗಳ ಕಾಲ:** 1500–1750. ಇದು ತೆಲುಗು ಸಾಹಿತ್ಯದ ಸ್ವರ್ಣಯುಗ. ಪೂರ್ವಭಾಗವನ್ನು ರಾಯಲಯುಗ ಎಂದು ಕರೆಯುತ್ತಾರೆ. ಏಕೆಂದರೆ, ಆಗ ಕೃಷ್ಣದೇವರಾಯನ **(ನೋಡಿ)** (1503–30) ಆಳ್ವಿಕೆ ಪ್ರಾರಂಭವಾಯಿತು. ಆತನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂದು ಪ್ರಸಿದ್ಧರಾದ ಎಂಟು ಕವಿಗಳಿದ್ದರು. ಅವರಲ್ಲಿ ಒಬ್ಬನಾದ ಪೆದ್ದನನೇ **(ನೋಡಿ– ಅಲ್ಲಸಾನಿ ಪೆದ್ದನ)** ಆಗಿನ ರಾಷ್ಟ್ರಕವಿ. ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಕೃಷ್ಣದೇವರಾಯ ಅತ್ಯಂತ ಶ್ರೀಮಂತನೂ ಸಾಹಿತ್ಯ ಮತ್ತು ಕಲೆಗಳಿಗೆ ಅತ್ಯುದಾರವಾದ ಆಶ್ರಯದಾತನೂ ಆಗಿದ್ದ. ಸ್ವತಃ ಆತ ಘನ ವಿದ್ವಾಂಸ ಮತ್ತು ಕವಿ; ಆಮುಕ್ತಮಾಲ್ಯದ ಎಂಬ ಘನವಾದ ಪ್ರಬಂಧ ಆತ ರಚಿಸಿದ ಕೃತಿ. ಸಂಸ್ಕೃತದಲ್ಲೂ ಆತ ಹಲವು ಗ್ರಂಥಗಳನ್ನು ಬರೆದಿದ್ದನೆಂದು ಹೇಳಲಾಗಿದೆ. ದುರದೃಷ್ಟವಶಾತ್ ಅವುಗಳಲ್ಲಿ ಒಂದೂ ಈಗ ಉಳಿದಿಲ್ಲ. ವಿಷ್ಣುಭಕ್ತಿಯನ್ನು ಉಕ್ಕಿಸುವ ಆತನ ಆಮುಕ್ತಮಾಲ್ಯದ ಎಂಬ ಕಾವ್ಯ ಶ್ರೇಷ್ಠ ಕವಿತೆಯ ವರ್ಗಕ್ಕೆ ಸೇರಿದೆ. ಅದರಲ್ಲಿ ಬರುವ ಕಲ್ಪನೆಗಳೂ ಕವಿಸಮಯಗಳೂ ವಿದ್ವಾಂಸರು ಮೆಚ್ಚುವಂತಿವೆ. ಅಲ್ಲಿ ಗೋಚರಿಸುವ ಪ್ರಕೃತಿ ವರ್ಣನೆಗಳು ಕವಿಯ ಕುಶಲನೋಟವನ್ನೂ ಪ್ರತಿಭಾವಿಲಾಸವನ್ನೂ ಪ್ರದರ್ಶಿಸುತ್ತವೆ. ತೆಲುಗು ಭಾಷೆಯನ್ನು ಕಂಡರೆ ಆತನಿಗೆ ತುಂಬ ಪ್ರೀತಿ. ಆತನ ಕವಿತೆಯೊಂದರಲ್ಲಿ ತೆಲುಗು ಬರುವ ದೇಶಭಾಷಾಲಂದು ತೆಲುಗುಲೇಸ್ಸಾ (ದೇಶ ಭಾಷೆಗಳಲ್ಲೆಲ್ಲ ತೆಲುಗು ಒಳ್ಳೆಯದು) ಎಂಬ ಸಾಲನ್ನು ಅಷ್ಟೇ ಹೆಮ್ಮೆಯಿಂದ ತೆಲುಗರೆಲ್ಲರೂ ಪದೇಪದೇ ಹೇಳುತ್ತಾರೆ. ರಾಷ್ಟ್ರಕವಿ ಅಲ್ಲಸಾನಿ ಪೆದ್ದನ ಸ್ವಾರೋಚಿಷ ಮನುಚರಿತ ಎಂಬುದನ್ನು ಪ್ರಬಂಧದ ರೂಪದಲ್ಲಿ ರಚಿಸಿದ. ತೆಲುಗು ಸಾಹಿತ್ಯದ ಪಂಚ ಮಹಾಕಾವ್ಯಗಳಲ್ಲಿ ಇದು ಅತ್ಯುತ್ತಮವೆಂದು ಪರಿಗಣಿತವಾಗಿದೆ. ಮಿಕ್ಕ ನಾಲ್ಕು ಯಾವುವೆಂದರೆ, ಶ್ರೀನಾಥನ ಶೃಂಗಾರನೈಷಧಂ, ಕೃಷ್ಣದೇವರಾಯನ ಆಮುಕ್ತಮಾಲ್ಯದ, ಭಟ್ಟುಮೂರ್ತಿಯ (ಈತನನ್ನು ರಾಮರಾಜ ಭೂಷಣನೆಂದೂ ಕರೆಯುತ್ತಾರೆ) ವಸುಚರಿತ್ರ ಮತ್ತು ತೆನಾಲಿ ರಾಮಕೃಷ್ಣನ ಪಾಂಡುರಂಗ ಮಾಹಾತ್ಮ್ಯ. ಕೆಲವು ವಿದ್ವಾಂಸರು ಪಿಂಗಳಿಸೂರನ ಕಲಾಪೂರ್ಣೋದಯ ಎಂಬುದನ್ನೂ ಮತ್ತೆ ಕೆಲವರು ಚೇಮಕೂರಿ ವೆಂಕಟ ಕವಿಯ ವಿಜಯವಿಲಾಸಂ ಎಂಬುದನ್ನು ತೆನಾಲಿ ರಾಮಕೃಷ್ಣನ ಪಾಂಡುರಂಗ ಮಹಾತ್ಮ್ಯದ ಬದಲು ಹೇಳುತ್ತಾರೆ. ಇದರಿಂದ ಮೇಲೆ ಹೇಳಿದ ಏಳು ಗ್ರಂಥಗಳೂ ತೆಲುಗು ಸಾಹಿತ್ಯದಲ್ಲಿನ ಅತ್ಯುತ್ತಮ ಗ್ರಂಥಗಳು ಎಂಬುದು ಗೊತ್ತಾಗುತ್ತದೆ. ಮೊದಲೆರಡರ ವಿಷಯವನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ಮಿಕ್ಕವನ್ನು ಯುಕ್ತ ಸಂದರ್ಭದಲ್ಲಿ ಪ್ರಸ್ತಾಪಿಸಲಾಗುತ್ತದೆ.

ಕೃಷ್ಣದೇವರಾಯ ತನ್ನನ್ನು ಆಂಧ್ರಕವಿತಾ ಪಿತಾಮಹ ಅಲ್ಲಸಾನಿ ಪೆದ್ದನಾರ್ಯ ಎಂದು ಸಾಮಾನ್ಯವಾಗಿ ಕರೆಯುತ್ತಿದ್ದನೆಂದು ಪೆದ್ದನ ಹೆಮ್ಮೆಯಿಂದ ತನ್ನೊಂದು ಪದ್ಯದಲ್ಲಿ ಹೇಳಿಕೊಳ್ಳುತ್ತಾನೆ. ಈತನ ಕಾವ್ಯದಲ್ಲಿ ಪಾತ್ರಗಳಿಗೆ ತಕ್ಕ ಭಾಷೆ ಉದ್ದಕ್ಕೂ ಉಚಿತವಾಗಿ ಪ್ರಯುಕ್ತವಾಗಿದೆ. ಅಲಂಕಾರಯುಕ್ತವಾದ ಶೈಲಿಯಿಂದಲೂ ಸಹಜವೂ ಮನಸೆಳೆಯುವಂಥವೂ ಆದ ಪ್ರಸಂಗೋಚಿತ ವರ್ಣನೆಗಳಿಂದಲೂ ರಚಿತವಾಗಿದೆ.

ಪಾರಿಜಾತಾಪಹರಣಂ ಎಂಬ ಕೃತಿಯನ್ನು ರಚಿಸಿದ ನಂದಿತಿಮ್ಮನ, ಕಾಳಹಸ್ತೀಶ್ವರ ಮಾಹಾತ್ಮ್ಯಂ ಎಂಬುದನ್ನು ಬರೆದ ಧೂರ್ಜಟಿ, ರಾಜಶೇಖರಚರಿತ್ರಂ ಎಂಬುದನ್ನು ರಚಿಸಿದ ಮಾದಯಗಾರಿ ಮಲ್ಲನ, ರಾಮಾಭ್ಯುದಯವನ್ನು ಬರೆದ ಅಯ್ಯಲರಾಜು ರಾಮಭದ್ರುಡು, ಪಾಂಡುರಂಗಮಾಹಾತ್ಮ್ಯದ ತೆನಾಲಿರಾಮಕೃಷ್ಣ ಕವಿ, ರಾಧಾಮಾಧವಂ ಎಂಬುದನ್ನು ರಚಿಸಿದ ಚಿಂತಲಪುಡಿ ಯೆಲ್ಲನ ಮತ್ತು ನಿರಂಕುಶೋಪಾಖ್ಯಾನದ ಕರ್ತೃ ಕಂದುಕೂರಿ ರುದ್ರಕವಿ– ಇವರು ಕೃಷ್ಣದೇವರಾಯನ ಆಸ್ಥಾನದ ಅಷ್ಟದಿಗ್ಗಜಗಳು, ವಸುಚರಿತ್ರೆಯನ್ನು ಬರೆದ ಭಟ್ಟುಮೂರ್ತಿ ಅಥವಾ ರಾಮ ರಾಜಭೂಷಣ ಮತ್ತು ಪಿಂಗಲಸೂರನ್ನ ಎಂಬಿಬ್ಬರನ್ನೂ ಅಷ್ಟದಿಗ್ಗಜಗಳ ಪಂಕ್ತಿಗೆ ಸಾಂಪ್ರದಾಯಿಕವಾಗಿ ಸೇರಿಸಿದ್ದರೂ ಐತಿಹಾಸಿಕವಾಗಿ ಅವರು ಕೃಷ್ಣದೇವನ ಕಾಲಕ್ಕೆ ಸೇರಿದವರಲ್ಲ. ಅವರು ಮುಂದಿನ ಕಾಲದ, ಕವಿಗಳು. ಅಷ್ಟಮಹಿಷಿಕಲ್ಯಾಣಂ ಎಂಬುದನ್ನು ರಚಿಸಿದ ತಲ್ಲಪಾಕ ಚಿನ್ನನ್ನ ಕೃಷ್ಣದೇವರಾಯನ ಕಾಲದಲ್ಲಿ ಜೀವಿಸಿದ್ದು ಆತನಿಂದ ಬಹುಮಾನಿತನೂ ಆಗಿದ್ದ. ಆದರೆ ಆತ ಅಷ್ಟದಿಗ್ಗಜಗಳ ಪಂಕ್ತಿಗೆ ಸೇರಲಿಲ್ಲ. ಪ್ರಾಯಶಃ ಶ್ರೇಷ್ಠಕಾವ್ಯವೆನಿಕೊಳ್ಳುವುದಕ್ಕೆ ಆಗ ಯೋಗ್ಯವೆನಿಸದಿದ್ದ ದ್ವಿಪದಿಯಲ್ಲಿ ತನ್ನ ಕಾವ್ಯವನ್ನು ರಚಿಸಿದ್ದರಿಂದ ಅದು ಮಹಾಕಾವ್ಯಗಳ ಪಟ್ಟಿಗೆ ಸೇರದೆ ಹೋಗಿರಬಹುದು.

ಪಿಂಗಳಿ ಸೂರನ (1515–60) ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಮೂರು ಪ್ರಧಾನವಾಗಿವೆ; ತೆಲುಗು ಸಾಹಿತ್ಯದಲ್ಲಿ ನಮಗೆ ತಿಳಿದಿರುವಂತೆ ಪ್ರಥಮ ದ್ವ್ಯರ್ಥಿ ಕಾವ್ಯವಾದ ರಾಘವಪಾಂಡವೀಯಂ (1545) ಉಷಾಪರಿಣಯದಂಥದೇ ಆದ ಕಥಾವಸ್ತುವುಳ್ಳ ಸುಪರಿಷ್ಕೃತ ಪ್ರಬಂಧವಾದ ಪ್ರಭಾವತೀಪರಿಣಯಂ (1547) ಮತ್ತು ತೆಲುಗು ಸಾಹಿತ್ಯದ ಪಂಚಮಹಾಕಾವ್ಯಗಳಲ್ಲಿ ಒಂದು ಎಂದು ಕೆಲವರೆಣಿಸುವ ಕಲಾಪೂರ್ಣೋದಯಂ ಎಂಬ ಪ್ರಖ್ಯಾತ ಪ್ರಬಂಧ. ಇದರ ಓಘ ಪದ್ಯದಲ್ಲಿ ಬರೆದಿರುವ ಒಂದು ಕಾದಂಬರಿಯಂತಿದೆ. ವಸ್ತು ತುಂಬ ಹೊಸದು. ಆದರೆ ಪಾತ್ರಗಳು ಪೌರಾಣಿಕ ಹೆಸರುಗಳನ್ನು ತಳೆದಿವೆ.

ಭಟ್ಟುಮೂರ್ತಿ ಅಥವಾ ರಾಮರಾಜ ಭೂಷಣ ಎಂಬ ಕವಿ (1520 – 85) ಕೃಷ್ಣದೇವರಾಯನ ಅಳಿಯನಾದ ರಾಮರಾಜನ ಆಸ್ಥಾನದಲ್ಲಿದ್ದು ಅನೇಕ ಕಾವ್ಯಗಳನ್ನು ರಚಿಸಿದನೆಂದು ಹೇಳಲಾಗಿದೆ. ಆದರೆ ನಮಗೆ ದೊರೆತಿರುವುದು ಮೂರು ಮಾತ್ರ. 1 ಸರಸಭೂಪಾಲೀಯಂ ಎಂಬ ಉತ್ಕೃಷ್ಟ ಅಲಂಕಾರಶಾಸ್ತ್ರ ಗ್ರಂಥ, 2 ತೆಲುಗು ಪಂಚಮಹಾಕಾವ್ಯಗಳಲ್ಲಿ ಒಂದೆಂದು ಪರಿಗಣಿತವಾದ ವಸುಚರಿತ, 3 ಎರಡನೆಯ ದ್ವ್ಯರ್ಥಿಕಾವ್ಯವಾದ ಹರಿಶ್ಚಂದ್ರನಲೋಪಾಖ್ಯಾನಂ. ಗಂಭೀರವಾದ ಶೈಲಿಗೂ ಘನವಾದ ಉಕ್ತಿಗೂ ಈತನ ಕಾವ್ಯಗಳು ಪ್ರಸಿದ್ಧವಾಗಿವೆ.

**ತೆಲುಗು ಸಾಹಿತ್ಯದ ದಾಕ್ಷಿಣಾತ್ಯ ಪಂಥ** : 1530–1750: ತೆಲುಗು ಸಾಹಿತ್ಯ ತಂಜಾವೂರು, ಮಧುರೈ ಪುದುಕೋಟ ಮತ್ತು ಮೈಸೂರುಗಳಲ್ಲಿ ಆಯಾ ಅರಸರ ಆಶ್ರಯದಲ್ಲಿ ಬೆಳೆಯಿತು. ದಾಕ್ಷಿಣಾತ್ಯ ಪಂಥದ ವಿಶಿಷ್ಟ ಲಕ್ಷಣಗಳಲ್ಲಿ ಈ ಕೆಳಗಿನವು ಗಮನಾರ್ಹವಾಗಿವೆ. ಇಲ್ಲಿನ ಅರಸರಲ್ಲೂ ಅಬ್ರಾಹ್ಮಣರಲ್ಲೂ ಹೆಂಗಸರಲ್ಲೂ ಕವಿಗಳು ಮುಖ್ಯ ತೆಲುಗು ಸೀಮೆಯಲ್ಲಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ದ್ವಿಪದ ಮತ್ತು ಇತರ ದೇಸೀ ಛಂದಸ್ಸುಗಳ ಬಳಕೆ ಇಲ್ಲಿ ಹೆಚ್ಚಾಗಿದೆ; ಜೀವಂತವಾದ ಆಡು ಭಾಷೆಗೆ ಇಲ್ಲಿ ವಿಶೇಷ ಪ್ರಾಶಸ್ತ್ಯ ದೊರೆತಿದೆ. ಸಂಗೀತ, ಹಾಡು ಮತ್ತು ಯಕ್ಷಗಾನಗಳು ಸಾಹಿತ್ಯ ಭಾಗಗಳಾಗಿ ಹೆಚ್ಚು ಪ್ರಾಶಸ್ತ್ಯ ಪಡೆದಿವೆ. ಜನಗಳ ವಿಶೇಷ ಮೆಚ್ಚುಗೆಗೆ ಪಾತ್ರವಾಗಿ ಶೃಂಗಾರ ರಸ ಇಲ್ಲಿ ಮೆರೆಯುತ್ತಿದೆ. ಮನೋಹರವಾದ ಶಬ್ದಗಳಲ್ಲಿ ಹೇಳಿದ್ದಾದರೆ ಸೂಕ್ಷ್ಮಭಾವಗಳಿಗೂ ಜನರು ಅಸಹ್ಯಪಡುತ್ತಿರಲಿಲ್ಲ; ಸಂಗೀತ, ಕಲೆ, ಕಸಬು, ಜೀವನಚರಿತ್ರೆ ಮುಂತಾದ ಜ್ಞಾನವಾಹಿನಿಗಳಾದ ಪುಸ್ತಕಗಳೂ ಇಲ್ಲಿ ರಚಿತವಾಗಿ ಸಾಹಿತ್ಯಕ್ಷೇತ್ರದಲ್ಲಿ ಹೊಸ

ಮಾರ್ಗಗಳನ್ನು ತೆರೆದಿವೆ. ಯಕ್ಷಗಾನಗಳ ಪ್ರವಾಹವೇ ಹೊರಟಿದೆ. ಗದ್ಯಸಾಹಿತ್ಯ ಬೆಳೆದಿದೆ. ತಂಜಾವೂರು ಮಧುರೆ ಪುದುಕೋಟ ಮತ್ತು ಮೈಸೂರಿನ ಕೆಲವು ಶ್ರೇಷ್ಠ ಕವಿಗಳನ್ನೂ ಅವರ ಕೃತಿಗಳನ್ನು ಕುರಿತು ಸಂಕ್ಷಿಪ್ತವಾಗಿ ಕೆಳಗೆ ವಿವರಿಸಲಾಗಿದೆ.

ತಂಜಾವೂರಿನ ನಾಯಕ ಅರಸರಲ್ಲಿ ಸಂಸ್ಕೃತದಲ್ಲಿ ಘನವಿದ್ವಾಂಸನೂ ಸಂಗೀತ ಶಾಸ್ತ್ರಜ್ಞನೂ ಆದ ರಘುನಾಥ (1600–31) ವಾಲ್ಮೀಕಿಚರಿತ್ರೆ ಮತ್ತು ಇತರ ಕಾವ್ಯಗಳನ್ನೂ ಗಜೇಂದ್ರಮೋಕ್ಷ ಮುಂತಾದ ಯಕ್ಷಗಾನಗಳನ್ನೂ ಅಚ್ಯುತಾಭ್ಯುದಯದಂಥ (ತನ್ನ ತಂದೆಯ ಜೀವನಚರಿತ್ರೆ) ದ್ವಿಪದ ಕಾವ್ಯಗಳನ್ನೂ ರಚಿಸಿದ. ಈತನ ಆಸ್ಥಾನದಲ್ಲಿ ನೈಷಧಪಾರಿಜಾತೀಯಂ ಎಂಬ ದ್ವ್ಯರ್ಥಿಕಾವ್ಯವನ್ನು ಬರೆದ ಕೃಷ್ಣಾಧ್ವರಿಯೂ ಶ್ರೇಷ್ಠ ಕಾವ್ಯಗಳೆನಿಸಿದ ವಿಜಯ ವಿಲಾಸಂ ಹಾಗೂ ಸಾರಂಗಧರ ಚರಿತ್ರ ಎಂಬುವನ್ನು ಬರೆದ ಚೆಮಕುರ ವೆಂಕಟರಾಜು ಎಂಬುವರಿದ್ದರು. ಪೌರಾಣಿಕ ಕಥೆಗಳನ್ನು ತೆಗೆದುಕೊಂಡು ಅನೇಕ ಯಕ್ಷಗಾನಗಳನ್ನೂ ರಘುನಾಥನಾಯಕಾಭ್ಯುದಯಂ ಮುಂತಾದ ದ್ವಿಪದ ಕಾವ್ಯಗಳನ್ನೂ ಅನೇಕ ರಗಡೆಗಳನ್ನೂ ಗೇಯಗಳನ್ನೂ ರಚಿಸಿದ್ದಾನೆ ವಿಜಯರಾಘವ (1633–73). ಈತನ ಆಸ್ಥಾನದಲ್ಲಿ ರಾಜಗೋಪಾಲ ವಿಲಾಸಪ್ರಬಂಧಂ ಎಂಬುದನ್ನು ಬರೆದ ಚೆಂಗಲ್ವಕಾಲ ಮತ್ತು ಸಂಸ್ಕೃತ ಪ್ರಾಕೃತ ತೆಲುಗುಗಳಲ್ಲಿ ಒಳ್ಳೆಯ ಪಂಡಿತಳಾಗಿದ್ದು ಅನೇಕ ಕಾವ್ಯಗಳನ್ನೂ ಮನ್ನಾರ್‌ದಾಸವಿಲಾಸಂ ಎಂಬಂಥ ಯಕ್ಷಗಾನಗಳನ್ನೂ ಬರೆದ ರಂಗಾಜಮ್ಮ ಎಂಬ ನಾಯಕಸಾನಿಯೂ ಇದ್ದರು. ನಾಯಕ ಅರಸರಂತೆ ಸಹಜಿ ಮಹಾರಾಜನೂ (1664–1712) ಅನೇಕ ಗ್ರಂಥಗಳನ್ನೂ ವಲ್ಲೀಕಲ್ಯಾಣಂ, ವಿಷ್ಣುಪಲ್ಲಕ್ಕಿಸೇನಾ ಪ್ರಬಂಧಂ ಮುಂತಾದ ಅನೇಕ ಗೇಯನಾಟಕಗಳನ್ನೂ ರಚಿಸಿದ್ದಾನೆ. ಈತ ಘನವಿದ್ವಾಂಸ, ಕವಿ. ತೆಲುಗು ಸಾಹಿತ್ಯವನ್ನು ಚೆನ್ನಾಗಿ ಪೋಷಿಸಿ ಬೆಳೆಸಿದವ. ತುಳಜಾಜೀ (ತುಕ್ಕೋಜಿ) ಮಹಾರಾಜ 1728–36 ಶಿವಕಾಮಸುಂದರೀಪರಿಣಯಂ ಎಂಬುದನ್ನು ರಚಿಸಿದ್ದಾನೆ.

ಮಧುರೆಯ ನಾಯಕ ಅರಸರ ಆಳ್ವಿಕೆಯಲ್ಲಿ (1529–1736) ತೆಲುಗು ಸಾಹಿತ್ಯ ಕಾವ್ಯದೊಂದಿಗೆ ಗದ್ಯವನ್ನೂ ಬೆಳೆಸಿಕೊಂಡು ತನ್ನ ಅಭಿವೃದ್ಧಿಯ ವಿಶೇಷ ಲಕ್ಷಣವನ್ನು ಮೆರೆಸಿತು. ವಿಶ್ವನಾಥನಾಯಕನ ಕಾಲದಲ್ಲಿ (1529–1564) ಸ್ಥಾನಾಪತಿ ರಾಯವಾಚಕಂ ಎಂಬುದನ್ನು ಬರೆದ. ಅದರ ಪೂರ್ವಘಟ್ಟದಲ್ಲಿ ಗದ್ಯದ ಸ್ವರೂಪ ಹೇಗಿರುತ್ತೆಂಬುದಕ್ಕೆ ಇದು ಮಾದರಿಯಾಗಿದೆ ಎನ್ನಬಹುದು. ಘನಕವಿಯೂ ವೀಣಾವಾದಕನೂ ಆದ ಶ್ರೀಕಾಮೇಶ್ವರ ಕವಿ (1623–70) ಸತ್ಯಭಾಮಾ ಸಾಂತ್ವನಂ ಎಂಬುದನ್ನು ಬರೆದ. ಸಾಂತ್ವನಂ ಕಾವ್ಯಶ್ರೇಣಿಯ ಪ್ರಥಮ ಕೃತಿಯಾಗಿದೆ. ಗಣಪವರಪು ವೆಂಕಟಕವಿ (1674) ಪ್ರಬಂಧರಾಜವೆಂಕಟೇಶ್ವರ ವಿಜಯಂ ಎಂಬುದನ್ನು ರಚಿಸಿದ. ಇದು ಈತನ ಗಾಢ ವಿದ್ವತ್ತನ್ನೂ ತೆಲುಗು ಮತ್ತು ಸಂಸ್ಕೃತದಲ್ಲಿ ಈತನ ಭಾಷಾಪ್ರಭುತ್ವವನ್ನೂ ಪ್ರಬಂಧದ ರಚನೆಯಲ್ಲಿ ಬಗೆಬಗೆಯ ಚಮತ್ಕಾರ ಕೌಶಲಗಳನ್ನೂ ತೋರಿಸುತ್ತದೆ. ಸಮುಖಂ ವೆಂಕಟಕೃಷ್ಣಪ್ಪ ಒಳ್ಳೆಯ ಗದ್ಯದಲ್ಲಿ ಜೈಮಿನಿ ಭಾರತವನ್ನೂ ಸಾರಂಗಧರಚರಿತ್ರವನ್ನೂ ಶೃಂಗಾರರಸಭರಿತವಾದ ಅಹಲ್ಯಾ ಸಂಕ್ರಂದನಂ ಎಂಬ ಕಾವ್ಯವನ್ನೂ ರಚಿಸಿದ್ದಾನೆ.

ಪುದುಕೋಟ ಅರಸನ ಕಾಲದಲ್ಲಿ (1682–1839) ರಾಯರಘುನಾಥನ ಪಾರ್ವತೀಪರಿಣಯ ಕವಿತಾ ಕೌಶಲಗಳಿಂದಲೂ ಸ್ವೋಪಜ್ಞವಾದ ವರ್ಣನೆಗಳಿಂದಲೂ ತುಂಬಿರುವ ಕಾವ್ಯವೆಂದು ಪರಿಗಣಿತವಾಗಿದೆ.

ಮೈಸೂರು ಅರಸನ ಕಾಲಕ್ಕೆ ಬಂದರೆ ಚಿಕ್ಕದೇವರಾಯನ ಕಾಲದಲ್ಲಿ (1672–1704) ಕೊರವಂಜಿ ಮಾದರಿಯ ಯಕ್ಷಗಾನಗಳು ಬೆಳೆದವು. 1537ರಲ್ಲಿ ಬೆಂಗಳೂರನ್ನು ಕಟ್ಟಿ ಪ್ರಖ್ಯಾತನಾದ ಪೆದ್ದ ಕೆಂಪೇಗೌಡ ಆಗ ಶಿವಸಮುದ್ರವೆಂಬ ಹೆಸರಾಂತ ಪ್ರಾಂತ್ಯವನ್ನು ಆಳುತ್ತಿದ್ದ (1513–69). ಈತ ಗಂಗಾಗೌರೀ ವಿಲಾಸವೆಂಬ ಒಳ್ಳೆಯ ಯಕ್ಷಗಾನವನ್ನು ರಚಿಸಿದ. ಕಲುವ ವೀರರಾಜು (1680–1750) ಮಹಾಭಾರತವನ್ನು (1730) ಪದ್ಯಗಂಧಿಯಾದ ಗದ್ಯದಲ್ಲಿ ಬರೆದ. ಆತನ ಮಗ ನಂಜರಾಜು ಹಾಲಾಸ್ಯಮಾಹಾತ್ಮ್ಯಂ ಮತ್ತು ಕಾಶೀಮಹಿಮದರ್ಪಣಂ ಎಂಬುದನ್ನು ದೇಸೀ ಗದ್ಯದಲ್ಲಿ ರಚಿಸಿದ. ಬಾಲಸರಸ್ವತಿ ಎಂಬ ಬಿರುದಿನ ಕೋಡೂರಿ ವೆಂಕಟಾಚಲ ಕವಿ (1650– 1700) ಶಿವರಹಸ್ಯಖಂಡಂ ಎಂಬುದನ್ನು ಅಲಂಕಾರಯುಕ್ತವಾದ ಶೈಲಿಯಲ್ಲಿ ಮತ್ತು ಕವಿತೆ ಮಿಂಚುವಂತೆ ರಚಿಸಿದ.

**ಈಚಿನ ಪ್ರಬಂಧಕಾಲ** 1700–1850 : ಮೊಗಲರು ದಕ್ಷಿಣಕ್ಕೆ ದಾಳಿಯಿಡುತ್ತಲೂ ತತ್ಪರಿಣಾಮವಾಗಿ ಸಾಹಿತ್ಯಕ್ಕೆ ಆಸರೆ ತಪ್ಪಿಹೋಗಿ ಅದರ ಕ್ಷೀಣದಶೆ ಪ್ರಾರಂಭವಾಯಿತು. ದೀನರಾಜ ಜನ ಸ್ವಾವಲಂಬನ ತೊರೆದು ದೇವರುಗಳಿಗೆ ಮೊರೆಯಿಡಲು ಪ್ರಾರಂಭಿಸಿದರು. ಈ ಕಾಲದ ಮೂರು ಶತಕಗಳು ತೆಲುಗರ ಅತ್ಯಂತ ಹೀನದಶೆಯನ್ನು ತೋರಿಸುತ್ತವೆ. ನರಸಿಂಹಕವಿ ವಿರಚಿತ (1750) ಭದ್ರಾದ್ರಿರಾಮ ಶತಕಂ ಇದು ಮುಸಲ್ಮಾನರು ಮುತ್ತಿಗೆ ಹಾಕಿ ಊರುಗಳನ್ನು ಕೊಳ್ಳೆಹೊಡೆದು ಭದ್ರಾಚಲದ ದೇವಸ್ಥಾನಗಳನ್ನು ನಾಶಪಡಿಸಲು ಯತ್ನಿಸಿದಾಗ ರಚಿತವಾದುದು. ಕಾಸುಲ ಪುರುಷೋತ್ತಮ ವಿರಚಿತ ಆಂಧ್ರ ನಾಯಕಶತಕಂ ಎಂಬುದು ವಿಜಯವಾಡದ ಹತ್ತಿರವಿರುವ ಶ್ರೀಕಾಕುಳಕ್ಕೆ ಮುಸಲ್ಮಾನರು ಮುತ್ತಿಗೆ ಹಾಕಿ ಅಲ್ಲಿನ ವಿಷ್ಣುದೇವಸ್ಥಾನವನ್ನು ಧ್ವಂಸ ಮಾಡಲು ಯತ್ನಿಸಿದಾಗ ರಚಿತವಾದುದು. ಗೋಗುಲಪಾಟಿ ಕೂರ್ಮನಾಥ ಕವಿ ವಿರಚಿತ ಸಿಂಹಾದ್ರಿನರಸಿಂಹ ಶತಕಂ ಇಂಥದೇ ಒಂದು ಸಂದರ್ಭದಲ್ಲಿ (1725) ರಚಿತವಾದುದು. ಇಲ್ಲಿನ ಆಶ್ಚರ್ಯವೇನೆಂದರೆ ಈ ಮೂರು ಸ್ಥಳಗಳಲ್ಲೂ ಸಂಭವಿಸಬಹುದಾದ ದುರಂತ ತಪ್ಪಿಹೋಯಿತು. ಈ ಹೀನಗಾಲದಲ್ಲಿ ಮೂವರು ಶ್ರೇಷ್ಠಕವಿಗಳು ಕಾಣಿಸಿಕೊಳ್ಳುತ್ತಾರೆ. ಅನೇಕ ಗ್ರಂಥಗಳನ್ನು ರಚಿಸಿರುವ ಕೂಚಿಮಂಚಿ ತಿಮ್ಮಕವಿ ರುಕ್ಮಿಣೀಪರಿಣಯವನ್ನೂ (1716) ತರುವಾಯ ರಸಿಕಜನಮನೋಭಿರಾಮಂ ಮುಂತಾದ ಅನೇಕ ಶೃಂಗಾರರಸದ ಕೃತಿಗಳನ್ನೂ ಮತ್ತು ಅಚ್ಚ ತೆಲುಗಿನಲ್ಲಿ ನೀಲಸುಂದರೀಪರಿಣಯಂ ಎಂಬುದನ್ನೂ ಬರೆದಿದ್ದಾನೆ. ಶಿವಭಕ್ತನಾಗಿ ಈತ ಶಿವಲೀಲಾವಿಲಾಸಂ ಎಂಬುದನ್ನು ರಚಿಸಿದ (1756).

18ನೆಯ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದ ಕಂಕಂಟಿ ಪಾಪರಾಜು ತೆಲುಗು ಸಾಹಿತ್ಯದಲ್ಲಿ ಮಹಾಪ್ರಬಂಧವೆಂದು ಪರಿಗಣಿತವಾದ ಉತ್ತರರಾಮಾಯಣವನ್ನು ಬರೆದ. ಅದಿದಂ ಸೂರ ಕವಿ (1720–85) ಕವಿಜನ ರಂಜನಂ ಎಂಬುದನ್ನು ರಚಿಸಿದ. ಇದರಲ್ಲಿ ಕಂಡುಬರುವ ಕಾವ್ಯಕಲೆ ಭಟ್ಟುಮೂರ್ತಿಯ ಪ್ರಖ್ಯಾತವಾದ ವಸುಚರಿತ್ರದ ಕಾವ್ಯಕಲೆಯಂತೆ ಇರುವುದರಿಂದ ಇದನ್ನು ಪಿಳ್ಳವಸುಚರಿತ್ರವೆಂದು ಕರೆಯುತ್ತಾರೆ. ಈತ ವ್ಯಾಕರಣಕ್ಕೂ ಅಲಂಕಾರ ಶಾಸ್ತ್ರಕ್ಕೂ ಸಂಬಂಧಪಟ್ಟಂತೆ ಕವಿಸಮಸ್ಯಾವಿಚ್ಛೇದಂ, ಚಂದ್ರಲೋಕಂ ಎಂಬೆರಡು ಗ್ರಂಥಗಳನ್ನೂ ಬರೆದಿದ್ದಾನೆ. ಸರ್ವಕಾಮದ ಪರಿಣಯಂ ಎಂಬುದನ್ನು ರಚಿಸಿದ ಶಿಷ್ಟು ಕೃಷ್ಣಮೂರ್ತಿ (1790–1870) ಮತ್ತು ರಾವಣ ದಮ್ಮೀಯಂ ಎಂಬ ದ್ವ್ಯರ್ಥಿಕಾವ್ಯವನ್ನು ರಚಿಸಿದ ಪಿಂಡಿಪೋಲು ಲಕ್ಷ್ಮಣ ಕವಿ ಎಂಬ ಪ್ರತಿಸ್ಪರ್ಧಿಯನ್ನೂ ಈ ಸಂದರ್ಭದಲ್ಲಿ ಹೆಸರಿಸಬಹುದು.

ತೆಲುಗುಸಾಹಿತ್ಯದಲ್ಲಿ ಅನೇಕ ಶತಕಗಳಿದ್ದು ಅವುಗಳಲ್ಲಿ ವೇಮನಶತಕ ವಿಲಕ್ಷಣವಾಗಿದೆ. ಇದರ ಭಾಷೆ ಸರಳ, ಮಾತು ಬಿಗಿ, ಭಾವ ಗಂಭೀರ, ವಿಷ್ಣುವಿನ ಮೇಲಿನ ಕೃಷ್ಣಶತಕ, ರಾಯಣಶತಕಂ, ದಾಶರಥಿಶತಕಂ, ಶಿವನಮೇಲಿನ ವೃಷಾಧಿಪ ಶತಕಂ, ಕಾಲಹಸ್ತೀಶ್ವರ ಶತಕಂ ಮುಂತಾದವುಗಳಲ್ಲದೆ ಇತರ ಶತಕಗಳೂ ಇವೆ.

**ಆಧುನಿಕ ಕಾಲ :** 1850–1960. ಪೋರ್ಚುಗೀಸರು, ಫ್ರೆಂಚರು ಮತ್ತು ಬ್ರಿಟಿಷರು ಈ ದೇಶಕ್ಕೆ ಬಂದು ರೂಢಮೂಲರಾದಾಗ ಭಾರತದಲ್ಲಿ ಆಧುನಿಕ ಭಾವನೆ ಉದಿಸಿತು. ಪರದೇಶೀ ಶಬ್ದಗಳಿಂದ ಭಾಷೆ ಶ್ರೀಮಂತವಾಯಿತು. ಬ್ರಿಟಿಷರು ಮೇಲೇರಿ ಇಂಗ್ಲಿಷಿನ ಮೂಲಕ ವಿದ್ಯಾಭ್ಯಾಸವನ್ನು ನಡೆಸಲೆಳಸಿದುದು, ಇಂಗ್ಲಿಷ್ ಸಾಹಿತ್ಯ ವ್ಯಾಸಂಗ ಮತ್ತು ಪಾಶ್ಚಾತ್ಯ ಭಾವನೆ ವಿಚಾರಗಳೊಡನೆ ನಿಕಟ ಸಂಪರ್ಕ ಏರ್ಪಟ್ಟಿದ್ದು –ಇವುಗಳ ಫಲವಾಗಿ ಆಧುನಿಕ ಸಾಹಿತ್ಯದಲ್ಲಿ ಹೊಸ ಪ್ರವೃತ್ತಿಗಳೆದ್ದು ಮುಂಬರಿದುವು. ವಿಲಿಯಂ ಬ್ರೌನ್, ಕ್ಯಾಂಬೆಲ್ ಮತ್ತು ಸಿ. ಪಿ. ಬ್ರೌನ್ ಎಂಬ ಘನ ವಿದ್ವಾಂಸರು ತೆಲುಗು ಶಬ್ದಕೋಶಗಳನ್ನೂ ಆಧುನಿಕ ಸರಣಿಯಲ್ಲಿ ವ್ಯಾಕರಣಗಳನ್ನೂ ಪ್ರಕಟಿಸಿ ತೆಲುಗು ಭಾಷೆಗೆ ಮಹೋಪಕಾರ ಮಾಡಿದರು. ಕ್ರೈಸ್ತ ಮಿಷನರಿ ಸಂಸ್ಥೆಗಳು ಅಚ್ಚುಕೂಟಗಳನ್ನು ಸ್ಥಾಪಿಸಿದವು. ವಿದ್ಯಾಭ್ಯಾಸವನ್ನು ಕುದುರಿಸಿದವು. ಪುಸ್ತಕಗಳ ಪ್ರಕಟಣೆಗೆ ಪ್ರೋತ್ಸಾಹವಿತ್ತವು. ಸಿ. ಪಿ. ಬ್ರೌನ್ ಹಳೆಯ ಪ್ರೌಢಗ್ರಂಥಗಳನ್ನು ಪ್ರಕಟಿಸಿದನಲ್ಲದೆ ಆಧುನಿಕ ಗದ್ಯ ಸಾಹಿತ್ಯಕ್ಕೂ ಪ್ರೋತ್ಸಾಹ ಕೊಟ್ಟ. ಕೆ.ವೀರೇಶಲಿಂಗಂ ಪಂತುಲು (1847–1919) ತಾನು ಹಳೆಯ ಮಾದರಿಯನ್ನು ಸಂಪೂರ್ಣವಾಗಿ ಬಿಡದಿದ್ದರೂ ಹೊಸ ಪ್ರವೃತ್ತಿಯನ್ನು ಸಂಸ್ಥಾಪಿಸಿದನೆಂಬ ಕೀರ್ತಿಗೆ ಭಾಗಿಯಾಗಿದ್ದಾನೆ. ಕಾದಂಬರಿಗಳು, ಸಣ್ಣ ಕಥೆಗಳು, ನಾಟಕಗಳು, ನಗೆನಾಟಕಗಳು, ಪ್ರಬಂಧಗಳು, ಚಿಕ್ಕ ಪದ್ಯಗಳು, ಸಾಹಿತ್ಯವಿಮರ್ಶೆಗಳು, ಜೀವನಚರಿತ್ರೆಗಳು, ಆತ್ಮಚರಿತ್ರೆ ಮತ್ತು ತೆಲುಗು ಕವಿಗಳ ಚರಿತ್ರೆ–ಇವುಗಳನ್ನೆಲ್ಲ ಮೊದಲು ಬರೆಯಲು ತೊಡಗಿದವನು ಈತನೇ ಎಂದು ಹೇಳಬಹುದು. ಆಧುನಿಕ ತೆಲುಗು ಸಾಹಿತ್ಯದ ಯುಗಕರ್ತನೆಂದು ಈತನನ್ನು ಪರಿಭಾವಿಸಲಾಗಿದೆ. ಇಂಗ್ಲಿಷ್ ಸಾಹಿತ್ಯದಲ್ಲಿನ ಅನೇಕ ಗ್ರಂಥಗಳು, ಅದರಲ್ಲೂ ಮುಖ್ಯವಾಗಿ ಷೇಕ್ಸ್‌ಪಿಯರನ ನಾಟಕಗಳು– ತೆಲುಗಿಗೆ ಪರಿವರ್ತಿತವಾಗಿವೆ. ಕಾಲಕ್ರಮೇಣ ಆಧುನಿಕ ಸರಣಿಯಲ್ಲಿ ಗದ್ಯ ರಚಿತವಾಗತೊಡಗಿತು. 1920ರಿಂದೀಚೆಗೆ ಆಧುನಿಕ ತೆಲುಗು ಚಳವಳಿಯ ಫಲವಾಗಿ ಆಡುಮಾತನ್ನೇ ಎಲ್ಲ ತರದ ಗದ್ಯ ಸಾಹಿತ್ಯಕ್ಕೂ ಬಳಸಲಾಯಿತು.

ಈ ಶತಮಾನದ ಆದಿಭಾಗದಲ್ಲಿ ಕಾವ್ಯಕ್ಷೇತ್ರದಲ್ಲಿ ಹೊಸ ಮಾದರಿಗಳಾದ ಸಣ್ಣ ಕವಿತೆಗಳು, ಭಾವಗೀತೆಗಳು, ಅಂತೆಯೇ ಕಥನಕವನಗಳು, ಶೋಕಗೀತಗಳು, ವಿಕಟಾನುಕರಣಗಳು, ವಿಡಂಬನೆಗಳು, ಆಧ್ಯಾತ್ಮಿಕ ಮತ್ತು ದಾರ್ಶನಿಕ ಕವಿತೆಗಳು ಮುಂತಾದುವು ತಲೆದೋರಿದವು. ಗದ್ಯಕ್ಷೇತ್ರದಲ್ಲಿ ಕಥೆ, ಪ್ರಬಂಧಗಳು, ಸಾಹಿತ್ಯ ವಿಮರ್ಶೆ, ಚರಿತ್ರೆ ಮತ್ತು ರಾಜ್ಯಶಾಸ್ತ್ರಗಳಿಗೆ ಸಂಬಂಧಪಟ್ಟ ಪಠ್ಯಪುಸ್ತಕಗಳು, ವೈಜ್ಞಾನಿಕ ಕೃತಿಗಳು, ಜೀವನಚರಿತ್ರೆಗಳು, ಆತ್ಮಕಥೆಗಳು, ಜ್ಞಾನಪ್ರಸಾರದ ಪುಸ್ತಕಗಳು, ವಿಶ್ವಕೋಶಗಳು, ತೆಲುಗುಕವಿಗಳ ಮತ್ತು ಸಾಹಿತ್ಯದ ಚರಿತ್ರೆ–ಮುಂತಾದವು ಬಂದಿವೆ. 1500ಕ್ಕೂ ಹೆಚ್ಚಿನ ದೊಡ್ಡ ಚಿಕ್ಕ ನಾಟಕಗಳು ಏಕಾಂಕಗಳೂ ರಚಿತವಾಗಿವೆ. ಹರಿಕಥೆಗಳ ಮತ್ತು ಬೊರ್ರ ಕಥೆಗಳ ರಚನೆ ತೆಲುಗುಸಾಹಿತ್ಯದ ವಿಶಿಷ್ಟ ಪ್ರಕಾರವಾಗಿದೆ. ಆಧುನಿಕ ರೀತಿಯಲ್ಲಿ ಮಕ್ಕಳಸಾಹಿತ್ಯ ನಿರ್ಮಾಣ ಪ್ರಾರಂಭವಾಗಿ (1910) ದಿನೇದಿನೇ ಬೆಳೆಯುತ್ತಿದೆ. 1900ರಲ್ಲಿ ತುಂಬ ವಿರಳವಾಗಿದ್ದ ಪತ್ರಿಕಾ ಸಾಹಿತ್ಯ ತುಂಬ ಚೆನ್ನಾಗಿ ಅಭಿವೃದ್ಧಿಸಿದೆ. 1900ರಲ್ಲಿ ಎಲ್ಲೋ ಕೆಲವು ಕವಯತ್ರಿಯರಿದ್ದರು. ಈಗ ಅವರ ಸಂಖ್ಯೆ 150ಕ್ಕೂ ಹೆಚ್ಚಾಗಿದೆ.

ಪ್ರಾಚೀನ ಪ್ರೌಢಕೃತಿಗಳ ಸಂಪ್ರದಾಯವನ್ನು ಸಂಪೂರ್ಣವಾಗಿ ಅಥವಾ ಸಂಪೂರ್ಣವೆನಿಸಬಹುದಾದಷ್ಟು ಮಟ್ಟಿಗೆ ಅನುಸರಿಸಿರುವ ಅತ್ಯುತ್ತಮ ಪ್ರತಿಭಾಸಂಪನ್ನರಾದ ಆಧುನಿಕ ಕವಿಗಳನ್ನು ನೋಡಬಹುದು. ಬಿಲ್ಲೇಶ್ವರೀಯಂ ಮತ್ತು ಮಂಗಳಗಿರಿ ಮಾಹಾತ್ಮ್ಯಂ ಎಂಬ ಕೃತಿಗಳನ್ನು ರಚಿಸಿದ ಕೊಕ್ಕೊಂಡ ವೆಂಕಟರತ್ನಂ (1842–1915) (ಈತ ಸಾಧಾರಣ ಮಾತುಕಥೆಗಳಲ್ಲೂ ಕಾವ್ಯ ಭಾಷೆಯನ್ನೇ ಉಪಯೋಗಿಸುತ್ತಿದ್ದ); ಅನೇಕ ಹಾಡುಗಳನ್ನು ರಚಿಸಿ ದೇವೀ ಭಾಗವತವನ್ನೂ ಇತರ ಸಂಸ್ಕೃತ ನಾಟಕಗಳನ್ನೂ ಭಾಷಾಂತರಿಸಿರುವ ದಾಸು ಶ್ರೀರಾಮುಲು (1846–1908); ಮಹೇಂದ್ರ ವಿಜಯದ ಕರ್ತೃದೇವುಲಪಲ್ಲಿ ಸುಬ್ಬಯ್ಯಶಾಸ್ತ್ರಿ (1854–1909); ತನ್ನ ಭಕ್ತ ಚಿಂತಾಮಣಿ ಎಂಬ ಗ್ರಂಥಕ್ಕೆ ಪ್ರಖ್ಯಾತನಾದ ವದ್ದಡಿ ಸುಬ್ಬರಾಯಡು (1854–1938); ಮಹಾಭಾರತ, ಭಾಗವತ ಮತ್ತು ರಾಮಾಯಣ ಮಹಾಕಾವ್ಯಗಳನ್ನೂ ಮತ್ತು 150ಕ್ಕೂ ಮಿಕ್ಕಿನ ಕೃತಿಗಳನ್ನೂ ರಚಿಸಿರುವ ಎರಡನೆಯ ಆಂಧ್ರ ರಾಷ್ಟ್ರಕವಿಯಾದ ಶ್ರೀಪಾದ ಕೃಷ್ಣಮೂರ್ತಿಶಾಸ್ತ್ರಿ (1866–1960); ಅಷ್ಟಾವಧಾನ, ಶತಾವಧಾನಗಳನ್ನು ಜೊತೆಗೂಡಿ ಪ್ರದರ್ಶಿಸುತ್ತಿದ್ದುದಲ್ಲದೆ, ದೇವೀ ಭಾಗವತಂ, ಬುದ್ಧಚರಿತೆ, ಶ್ರವಣಾನಂದಂ ಮುಂತಾದ ನೂರಕ್ಕೂ ಹೆಚ್ಚಿನ ಕೃತಿಗಳನ್ನು ಜೊತೆಗೂಡಿಯೇ ರಚಿಸಿ ಪ್ರಖ್ಯಾತರಾಗಿದ್ದ ದಿವಾಕರ್ಲ ತಿರುಪತಿ ಶಾಸ್ತ್ರಿ (1871–1919); ಮತ್ತು ಆಂಧ್ರದ ಪ್ರಥಮ ರಾಷ್ಟ್ರಕವಿ ಚಲ್ಲಪಿಲ್ಲ ವೆಂಕಟ ಶಾಸ್ತ್ರಿ (1870–1950) ಎಂಬ ತಿರುಪತಿ ವೆಂಕಟೇಶ್ವರಲು ಅವಳಿಜವಳಿ ಕವಿಗಳು; ಪಾಣಿಗ್ರಹೀತ ಮತ್ತು ಇತರ ಕವಿತೆಗಳನ್ನು ರಚಿಸಿದ ಓಲೇಟಿ ರಾಮಶಾಸ್ತ್ರಿ (1883–1939); ಮತ್ತು ವಿದುಲ ರಾಮಕೃಷ್ಣಶಾಸ್ತ್ರಿ (1889–1919) ಎಂಬ ವೆಂಕಟರಾಮಕೃಷ್ಣ ಅವಳಿಜವಳಿ ಕವಿಗಳು; ಕವಿರಾಜಹಂಸರೆಂದು ಇಬ್ಬರೂ ಪ್ರಖ್ಯಾತರಾಗಿ ಕಾವ್ಯ ಕುಸುಮಾವಳಿ, ಏಕಾಂತಸೇವಾ ಮತ್ತು ರಾಮಾಯಣಂ ಮುಂತಾದ ಕೃತಿಗಳನ್ನು ರಚಿಸಿದ ಬಾಲಂತ್ರಪು ವೆಂಕಟರಾವ್ (1880); ಮತ್ತು ಓಲೇಟಿ ಪಾರ್ವತೀಶಂ (1882–1955); ಎಂಬ ವೆಂಕಟ ಪಾರ್ವತೀಶ್ವರ ಕವುಲು ಎಂದು ಖ್ಯಾತರಾದ ಅವಳಿಜವಳಿ ಕವಿಗಳು; ಪ್ರತಾಪಸಿಂಹ ಚರಿತ ಮುಂತಾದುವನ್ನು ರಚಿಸಿದ ರಾಜಶೇಖರ ಶತಾವಧಾನಿ (1888–1957); ಮತ್ತು ತನ್ನ ನೂತನ ಪುರಾಣಂ ಎಂಬುದಕ್ಕಾಗಿ ಖ್ಯಾತರಾಗಿರುವ ತ್ರಿಪುರನೇನಿ ರಾಮಸ್ವಾಮಿ (1890).

ಉದಾರವೂ ಸ್ವತಂತ್ರವೂ ಆದ ಭಾವನೆಗಳುಳ್ಳ ಆಧುನಿಕ ಕವಿಗಳ ಪೈಕಿ ಒಳ್ಳೆ ಕವಿಗಳೆಂದು ಹೆಸರಾಂತರಾದವರೆಂದರೆ ಗುರಜಾದ ವೆಂಕಟ ಅಪ್ಪಾರಾವ್ (1862–1915). ಕನ್ಯಾಶುಲ್ಕಂ ಎಂಬ ಸಾಮಾಜಿಕ ನಾಟಕ್ಕೂ ಸಣ್ಣ ಕಥೆಗಳಿಗೂ ಪ್ರಖ್ಯಾತನಾದ ಈತ ಜೀವಂತವಾಗಿರುವ ಆಡುಮಾತಿನಲ್ಲಿ ಹೊಸ ಛಂದಸ್ಸುಗಳಲ್ಲಿ ಆಧುನಿಕ ಮಾದರಿಯ ಕವಿತೆಗಳನ್ನೂ ಇತರ ರಚನೆಗಳನ್ನೂ ರಚಿಸಿದನೆಂಬ ಕೀರ್ತಿಗೆ ಭಾಜನನಾಗಿದ್ದಾನೆ. ಕರುಣಾರಸಪರಿಪ್ಲುತವಾದ ಪುತ್ತಡಿ ಬೊಮ್ಮ ಪೂರ್ಣಮ್ಮ ಎಂಬ ಕವಿತೆಯನ್ನೊಳಗೊಂಡಿರುವ ಈತನ ಮುತ್ಯಾಲು ಸರಮುಲು ಮತ್ತು ಇತರ ಸಣ್ಣ ಕವಿತೆಗಳು ತುಂಬ ಜನಪ್ರಿಯವಾಗಿವೆ. ತೃಣಕಂಕಣಂ, ಕಾಷ್ಟಕಮಲ, ತೆನುಗುತೋಟ ಮುಂತಾದ ಅನೇಕ ಭಾವಗೀತೆಗಳನ್ನು ಬರೆದಿರುವ ರಾಯಪ್ರೋಲುಸುಬ್ಬರಾವ್ (1892) ಎಂಬಾತ ಆಧುನಿಕ ತೆಲುಗುಸಾಹಿತ್ಯದಲ್ಲಿ ಭಾವಗೀತೆಯನ್ನು ಸಂಸ್ಥಾಪಿಸಿದನೆಂದು ಭಾವಿಸಲಾಗಿದೆ. ಹೃದಯೇಶ್ವರಿ ವಕುಲಮಾಲ ಮುಂತಾದ ಅನೇಕ ಸಣ್ಣ ಕವಿತೆಗಳನ್ನೂ ಪದ್ಮಾವತೀಚಾರಣಚಕ್ರವರ್ತಿ ಮತ್ತು ಇತರ ಅನೇಕ ಪದ್ಯಮಯ ನಾಟಕಗಳನ್ನು ರಚಿಸಿರುವ ತಲ್ಲವಜ್ಜಲ ಶಿವಶಂಕರಶಾಸ್ತ್ರಿ (1892), ತನ್ನ ಎಂಕಿಪಾಟಲುಗೆ ಪ್ರಖ್ಯಾತನಾದ ನಂದೂರಿ ವೆಂಕಟಸುಬ್ಬರಾವ್ (1895–1957); ಕಿನ್ನರ ಸಾನಿಪಾಟಲು ಮತ್ತು ರಾಮಾಯಣ ಕಲ್ಪವೃಕ್ಷಂ ಮುಂತಾದುವಕ್ಕೆ ಪ್ರಖ್ಯಾತನಾಗಿ ನೂರಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿರುವ ವಿಶ್ವನಾಥಸತ್ಯನಾರಾಯಣ (1895); ಪಾನಶಾಲ, ಕೃಷೀವಲುಡು, ಅಗ್ನಿಪ್ರವೇಶಂ, ಮುಂತಾದುವನ್ನು ಬರೆದಿರುವ ದುವ್ವೂರಿ ರಾಮಿರೆಡ್ಡಿ (1895–1917); ಅಷ್ಟಾವಧಾನ ಕೃಷ್ಣಪಕ್ಷಂ, ಊರ್ವಶಿ ಮತ್ತು ಪ್ರವಾಸಂ ಮುಂತಾದ ಕೃತಿಗಳಿಗೂ ಭಾವಗೀತೆಗಳಿಗೂ ಪ್ರಖ್ಯಾತನಾದ ದೇವುಲಪಲ್ಲಿ ವೆಂಕಟಕೃಷ್ಣಶಾಸ್ತ್ರಿ (1897); ತನ್ನ ಶಿವಭಾರತಕ್ಕೆ ಪ್ರಖ್ಯಾತನಾದ ಗಡಿಯಾರಂ ವೆಂಕಟಶೇಷಶಾಸ್ತ್ರಿ (1897); ತೆಲುಗುರಾಜು ಕೃತುಲು ಎಂಬ ಶೀರ್ಷಿಕೆಯಲ್ಲಿ ಅನೇಕ ಕವಿತೆಗಳನ್ನು ಪ್ರಕಟಿಸಿರುವ ಪೆನುಮಟ್ಸ ಸತ್ಯನಾರಾಯಣ ರಾಜು (1899); ತನ್ನ ಸೌಭದ್ರುನಿ ಪ್ರಣಯಾಯಾತ್ರಾ ಎಂಬುದಕ್ಕೆ ಪ್ರಖ್ಯಾತನಾದ ನಾಯನಿ ಸುಬ್ಬರಾವ್ (1899); ತನ್ನ ಪೆನುಗೊಂಡ ಪಾಟ ಎಂಬುದಕ್ಕೆ ಹೆಸರಾಂತಿರುವ ಕವಿ, ವಿಮರ್ಶಕ ಮತ್ತು ಅನ್ನಮಾಚಾರ್ಯನ ಕೀರ್ತನೆಗಳಿಗೆ ಸ್ವರಪ್ರಸ್ತಾರವನ್ನು ಹಾಕಿರುವ ಸಂಗೀತ ವಿದ್ವಾಂಸ ರಾಳ್ಳಪಲ್ಲಿ ಅನಂತಕೃಷ್ಣಶರ್ಮ (1893); ಅನೇಕ ಭಾವಗೀತೆ ರಚಿಸಿರುವ ಬಸವರಾಜು ಅಪ್ಪಾರಾವ್ (1894–1933); ಫಿರ್‌ದೌಸಿ, ಗಬ್ಬಿಲಂ ಮುಂತಾದವನ್ನು ಬರೆದಿರುವ ಗುರ್‍ರಂ ಜಷುವ (1895); ಭಾಗವತಾವತರಣಂ ಮತ್ತು ದೇವೀ ಭಾಗವತಗಳನ್ನೂ ಅನೇಕ ಕಾದಂಬರಿಗಳನ್ನೂ ಸಣ್ಣ ಕಥೆಗಳನ್ನೂ ರಚಿಸಿರುವ ನೋರಿ ನರಸಿಂಹ ಶಾಸ್ತ್ರಿ (1900); ತನ್ನ ಸ್ವೇಚ್ಛಾಗಾನಂ ಎಂಬುದಕ್ಕೆ ಖ್ಯಾತನಾದ ಮಂಗಿಪುಡಿ ಪುರುಷೋತ್ತಮಶರ್ಮ (1893–1952); ಶಶಿಕಲಾ ಮತ್ತು ಇತರ ಕವಿಗಳ ಜೊತೆಗೆ ನಾರಾಯಣರಾವ್ ಹಿಮಬಿಂದು ಮತ್ತು ಇತರ ಕಾದಂಬರಿಗಳನ್ನೂ ಸಣ್ಣ ಕಥೆಗಳನ್ನೂ ಬರೆದಿರುವ ಅಡವಿಬಾಪಿರಾಜು (1895–1952) ಬೃಂದಾವನಂ, ಪಂಚವಟೀ ಮತ್ತು ಇತರ ಸಣ್ಣ ಕವಿತೆಗಳನ್ನು ರಚಿಸಿರುವ ಮಾಧವಪೆದ್ದಿ ಬುಚ್ಚಿ ಸುಂದರಮ್ ಶಾಸ್ತ್ರಿ (1882–1950); ತನ್ನ ಮಲ್ಲಿಕಾಂಬ ಮತ್ತು ಸೆಲಯೇಲೆಗಾನಂ ಎಂಬುವುಗಳಿಗಾಗಿ ಖ್ಯಾತಿವೆತ್ತಿರುವ ಅಬ್ಬೂರಿ ರಾಮಕೃಷ್ಣರಾವ್ (1896); ತೊಲಕಾರಿ ಮತ್ತು ಸೌಂದರಾನಂದನಂ ಎಂಬ ಕೃತಿಗಳನ್ನು ಒಟ್ಟಿಗೆ ಸೇರಿ ರಚಿಸಿರುವ ಪಿಂಗಳಿ ಲಕ್ಷ್ಮೀಕಾಂತಂ (1894) ಮತ್ತು ಕಾಟೂರಿ ವೆಂಕಟೇಶ್ವರರಾವ್ (1895); ಜಾನಪದ ಗೇಯಗಳಿಗೆ ಪ್ರಖ್ಯಾತನಾದ ಕವಿ ಕೊಂಡಲ ವೆಂಕಟರಾವ್ (1892); ತನ್ನ ಕಾದಂಬರಿಗಳಿಂದಲೂ ಸಣ್ಣಕಥೆಗಳಿಂದಲೂ ಕೀರ್ತಿವೆತ್ತು ಸಣ್ಣಸಣ್ಣ ಕಥನಕವನಗಳನ್ನು ಬರೆದಿರುವ ವೆಲ್ಲೂರಿ ಶಿವರಾಮಶಾಸ್ತ್ರಿ (1892); ದೀಪಾವಳಿ ಮತ್ತು ಇತರ ಸಣ್ಣ ಕವಿತೆಗಳಿಗೆ ಖ್ಯಾತಿವಂತನಾದ ವೇದುಲಸತ್ಯನಾರಾಯಣ ಶಾಸ್ತ್ರಿ (1900)–ಇವರು ಹೆಸರಾಂತರಾದರು.

ಆಧುನಿಕ ತರುಣ ಕವಿಗಳನ್ನು ಹೆಸರಿಸಲು ಸ್ಥಳಾವಕಾಶವಿಲ್ಲ. ಆದರೆ ಶ್ರೀ ಶ್ರೀ, ಆರುದ್ರ, ಸಿ.ನಾರಾಯಣರೆಡ್ಡಿ, ದಾಶರಥಿ, ಪಿಲಕಗಣಪತಿಶಾಸ್ತ್ರಿ, ಜನ್‌ಧ್ಯಾಲ ಪಾಪಯ್ಯಶಾಸ್ತ್ರಿ, ಬೊಡ್ಡುಬಾಪಿರಾಜು, ಬೊಯಿಭೀಮಣ್ಣ, ವಿದ್ವಾನ್ ವಿಶ್ವಂ, ಮಲ್ಲವರಪ ವಿಶ್ವೇಶ್ವರರಾವ್, ಕೋನಕಲ್ಲ ವೆಂಕಟರತ್ನಂ, ನಾರ್ಲ ವೆಂಕಟೇಶ್ವರರಾವ್ ಪೈಡಿಪಾಟಿ ಸುಬ್ಬರಾಮಶಾಸ್ತ್ರಿ, ಆನಿಸೆಟ್ಟಿ ಸುಬ್ಬರಾವ್, ಇಂದ್ರಕಾಂತಿ ಹನುಮಚ್ಛಾಸ್ತ್ರಿ ಮತ್ತು ಇನ್ನೂ ಇತರ ಅನೇಕರು ಮುಂದಕ್ಕೆ ಬರುತ್ತಿದ್ದಾರೆ.

**ನಾಟಕ ಮತ್ತು ಚಿಕ್ಕ ನಾಟಕ:** 1870 ಕ್ಕಿಂತ ಮುಂಚೆ ಯಾವ ನಾಟಕವಾಗಲೀ ಚಿಕ್ಕ ನಾಟಕವಾಗಲೀ ಇರಲಿಲ್ಲವೆಂಬುದು ಸೋಜಿಗದ ಸಂಗತಿ. ಸಂಸ್ಕೃತನಾಟಕಗಳೂ ಕಾವ್ಯವಾಗಿ ಪರಿವರ್ತಿತವಾಗುತ್ತಿದ್ದುವು: ಪಿಳ್ಳಮರ್ರಿ ಪಿನವೀರಭದ್ರ ಎಂಬಾತ 15ನೆಯ ಶತಮಾನದಲ್ಲಿ ಕಾಳಿದಾಸನ ಅಭಿಜ್ಞಾನ ಶಾಕುಂತಲವನ್ನು ದೀರ್ಘಕವನವಾಗಿ ರಚಿಸಿದ; ಕೃಷ್ಣಮಿಶ್ರನಿಂದ ರಚಿತವಾದ ಪರಬೋಧ ಚಂದ್ರೋದಯವೆಂಬ ಮತ್ತೊಂದು ಸಂಸ್ಕೃತ ನಾಟಕವನ್ನು ಇದೇ ರೀತಿಯಲ್ಲಿ ನಂದಿಮಲ್ಲಣ ಮತ್ತು ಘಂಟಾಸಿಂಗಣ ಎಂಬ 15ನೆಯ ಶತಮಾನದ ಅವಳಿಜವಳಿ ಕವಿಗಳು ತೆಲುಗು ಕಾವ್ಯವಾಗಿ ಪರಿವರ್ತಿಸಿದರು. ಆದರೆ ನಾಟಕದ ದಾಹವನ್ನು ನೂರಾರು ಯಕ್ಷಗಾನಗಳು ತಣಿಸುತ್ತಿದ್ದುವು. ನೆಲ್ಲೂರ ಜಿಲ್ಲೆಯ ಕಂದುಕ್ಕೂರಿ ರುದ್ರಕವಿ ಸು. 1808 ರಲ್ಲಿ ಸುಗ್ರೀವ ವಿಜಯವೆಂಬ ಮೊದಲನೆಯ ಯಕ್ಷಗಾನವನ್ನು ರಚಿಸಿದ. ಮುಂದೆ ತಂಜಾವೂರು ಮಧುರೆಗಳಲ್ಲಿ ಅನೇಕ ಯಕ್ಷಗಾನಗಳು ರಚಿತವಾದುವು.

1876ರಲ್ಲಿ ವಾವಿಲಾಲ ವಾಸುದೇವಶಾಸ್ತ್ರಿ ಜೂಲಿಯಸ್ ಸೀಸರ್ ಅನ್ನು ತೆಲುಗಿಗೆ ಭಾಷಾಂತರಿಸಿದ. 1880ರಲ್ಲಿ ಗುರುಜ಼ಾದ ಶ್ರೀರಾಮಮೂರ್ತಿ ಮರ್ಚೆಂಟ್ ಆಫ್ ವೆನಿಸ್ ನಾಟಕದ ಮೊದಲೆರಡು ಅಂಕಗಳನ್ನು ಪರಿವರ್ತಿಸಿದ. ಈತ ಕೆಲವು ಗದ್ಯ ರಚನೆಗಳನ್ನು ನಾಟಕದಲ್ಲಿ ತಂದಿದ್ದಾನೆ. ಆದರೆ ವೀರೇಶಲಿಂಗಂ ಪಂತಲು ಈ ನಾಟಕವನ್ನು ಸಂಪೂರ್ಣವಾಗಿ ಪದ್ಯದಲ್ಲಿ ತೆಲುಗಿಗೆ ಭಾಷಾಂತರಿಸಿದ್ದಾರೆ. ಆ ತರುವಾಯ ಷೇಕ್ಸ್‌ಪಿಯರನ ಹನ್ನೆರಡಕ್ಕೂ ಮಿಕ್ಕ ನಾಟಕಗಳನ್ನು ಭಾಷಾಂತರಿಸಿಯೋ ಅನುವಾದಿಸಿಯೋ ತೆಲುಗಿಗೆ ತಂದುಕೊಳ್ಳಲಾಗಿದೆ. ಇವುಗಳಲ್ಲಿ ಅಧಿಕಸಂಖ್ಯೆಯವನ್ನು ವೀರೇಶಲಿಂಗಂ ರಚಿಸಿದ್ದಾನೆ. ಸಂಸ್ಕೃತದಿಂದ ಒಂದು ನಾಟಕವನ್ನು ಮೊದಲ ಬಾರಿಗೆ ಭಾಷಾಂತರಿಸಿದವನು ಕೊಕ್ಕೊಂದ ವೆಂಕಟರತ್ನಂ; ಆ ನಾಟಕದ ಹೆಸರು ನರಕಾಸುರ ವಿಜಯವ್ಯಾಯೋಗಂ. ಅಭಿಜ್ಞಾನ ಶಾಕುಂತಲ, ರತ್ನಾವಳಿ ಮುಂತಾದ ಸಂಸ್ಕೃತ ನಾಟಕಗಳನ್ನು ಪರಿವರ್ತಿಸಲು ತೊಡಗಿದವರಲ್ಲಿ ವೀರೇಶಲಿಂಗಂ ಎರಡನೆಯವ. ಮುಂದೆ ಹದಿನೈದು ಜನ ವಿದ್ವಾಂಸರು ಶಾಕುಂತಲವನ್ನು ಭಾಷಾಂತರಿಸಿದರು. ಆದರೂ ವೀರೇಶಲಿಂಗಮ್ಮಿನದೇ ಈಗಲೂ ಅತ್ಯುತ್ತಮವಾಗಿ ಉಳಿದಿದೆ. ಕೋರಾಡ ರಾಮಚಂದ್ರ ಕವಿಯ ಮಂಜರೀ ಮಧುಕರೀಯಂ (1860) ಎಂಬುದು ಪ್ರಥಮ ಸ್ವೋಪಜ್ಞ ತೆಲುಗು ನಾಟಕ. ವಾವಿಳೆಲವಾಸುದೇವ ಶಾಸ್ತ್ರಿಯ ನಂದಕರಾಜ್ಯಂ (1880) ಎಂಬುದು ಎರಡನೆಯದು. ವೀರೇಶಲಿಂಗಂನ ಹರಿಶ್ಚಂದ್ರ ಮೂರನೆಯದು. ಆದರೆ ಮೊದಲಿನದು ಮಾತ್ರ ರಂಗದಲ್ಲಿ ಶೋಭಿಸಿ ಜನರ ಮೆಚ್ಚುಗೆ ಪಡೆಯಿತು. 20ನೆಯ ಶತಮಾನದ ಮೊದಲ ಭಾಗದಲ್ಲಿ ಬಲೇಜಪಳ್ಳಿ ಲಕ್ಷ್ಮೀಕಾಂತಂನ ಹರಿಶ್ಚಂದ್ರ ರಂಗದ ಮೇಲೆ ಬರುವವರೆಗೂ ಇದು ಜನರನ್ನು ಆಕರ್ಷಿಸುತ್ತಲೇ ಇತ್ತು. ಸುವ್ಯವಸ್ಥಿತವಾದ ನಾಟಕ ಕಂಪೆನಿಗಳಿಗಾಗಿ ನಾಟಕಗಳನ್ನು ಬರೆಯುತ್ತಿದ್ದವರೆಂದರೆ: ಧರ್ಮಾವರಂ ಕೃಷ್ಣಮಾಚಾರ್ಯ (1853–1913) ಮತ್ತು ಆತನ ಸಮಕಾಲೀನನೂ ಸ್ಪರ್ಧಿಷ್ಣುವೂ ಆದ ಬಳ್ಳಾರಿಯ ಕೋಲಾಚಲಂ ಶ್ರೀನಿವಾಸರಾವ್ ಮೊದಲನೆಯ ಚಿತ್ರ ನಳೀಯಂ ಮುಂತಾದ ಅನೇಕ ಜನಪ್ರಿಯ ನಾಟಕಗಳನ್ನು ಬರೆದ ಮತ್ತು ಪ್ರಥಮವಾಗಿ ವಿಷಾದ ಸಾರಂಗಧರವೆಂಬ ದುರಂತ ನಾಟಕವನ್ನು ಬರೆಯಲು ಯತ್ನಿಸಿದವ ಈತನೇ; ಎರಡನೆಯವ ತನ್ನ ವಿಜಯನಗರ ಸಾಮ್ರಾಜ್ಯಪತನಂ ಮುಂತಾದ ಐತಿಹಾಸಿಕ ನಾಟಕಗಳಿಗೆ ಪ್ರಖ್ಯಾತ. ಕಾಲಕ್ರಮೇಣ ಅನೇಕ ಸ್ವೋಪಜ್ಞನಾಟಕಗಳು ತೆಲುಗಿನಲ್ಲಿ ಮೂಡಿಬಂದುವು. ಚಿಲಕಮರ್ತಿ ಲಕ್ಷ್ಮೀನರಸಿಂಹನ ಗಯೋಪಾಖ್ಯಾನ ಮತ್ತು ಪ್ರಸನ್ನಯಾದವಂ, ಇಚ್ಛಾ ಪುರಪು ಯಜ್ಞನಾರಾಯಣರ

ರಸಪುತ್ರವಿಜಯಂ, ತಿರುಪತಿ ವೆಂಕಟೇಶ್ವರ ಕವಿಗಳ ಪಾಂಡವೋದ್ಯೋಗ ಮತ್ತು ಇತರ ಮಹಾಭಾರತ ನಾಟಕಗಳು, ಪಾನುಗಂಟಿ ಲಕ್ಷ್ಮೀನರಸಿಂಹನ ಪಾದುಕಾ ಪಟ್ಟಾಭಿಷೇಕಂ ಮತ್ತು ಇತರ ನಾಟಕಗಳು– ಈ ಶತಮಾನದ ಪೂರ್ವ ಭಾಗಕ್ಕೆ ಸೇರಿದ ಇವು ಮೂರು ದಶಕಗಳವರೆಗೆ ರಂಗದ ಮೇಲೆ ವಿಜೃಂಭಿಸಿದುವು. ಆದರೆ ಗುರುಜಾದ ಅಪ್ಪಾರಾಯನ ಕನ್ಯಾಶುಲ್ಕ ಎಂಬ ಸಾಮಾಜಿಕ ನಾಟಕ ಮತ್ತು ವೇದಂ ವೆಂಕಟರಾಯಶಾಸ್ತ್ರಿಯ ಪ್ರತಾಪರುದ್ರೀಯಂ ಎಷ್ಟು ಶ್ರೇಷ್ಠವಾಗಿವೆ ಎಂದರೆ, ಅವು 60 ವರ್ಷಗಳಷ್ಟು ಹಿಂದೆ ರಚಿತವಾಗಿದ್ದರೂ ಅವನ್ನು ಈಗಲೂ ರಂಗದಲ್ಲಿ ಆಡಿತೋರುತ್ತಿದ್ದಾರೆ. ಜನವೂ ಮೆಚ್ಚುತ್ತಿದೆ.

ಇತ್ತೀಚಿನ ಕಾಲದಲ್ಲಿ ತುಂಬ ನಾಟಕಗಳ ಪ್ರವಾಹವೇ ಹರಿದಿದೆ. ಆಧುನಿಕ ಯುಗದ ಮಾದರಿಯ ಫಲವೆನಿಸಿರುವ ಮುದ್ದುಕೃಷ್ಣ ಸಾಮಾಜಿಕ ನಾಟಕಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಟೀ ಕಪ್ಪುಲೋ ತುಫಾನು ಮತ್ತು ಭೀಮಾಕಲಾಪಮುಲೋ–ಭಾಮಾಕಲಾಪಮು ಎಂಬವು ರಂಗದ ಮೇಲೆ ಜನರ ಮೆಚ್ಚುಗೆ ಗಳಿಸಿವೆ. ಏಮಿ ಮಗವಾಳ್ಳು ಎಂಬಂಥ ಚಿಕ್ಕ ನಾಟಕಗಳಿಗೆ ಪ್ರಸಿದ್ಧನಾದ ಪಿ. ವಿ. ರಾಜಮನ್ನಾರ್ ತಪ್ಪೆವರದಿ ಎಂಬ ನಾಟಕವನ್ನು ತುಂಬ ವಾಸ್ತವವೆನಿಸುವಂತೆ ಬರೆದ. ರಂಗದಲ್ಲಿ ಇದು ಬೇಗನೆ ಅದರಲ್ಲೂ ಮಹಾಖ್ಯಾತಿವಂತ ನಟನಾದ ರಾಘವಾಚಾರಿ ಇದರ ಮುಖ್ಯ ಪಾತ್ರವನ್ನು ನಟಿಸಿದಾಗ ಬಹು ಜನಪ್ರಿಯವಾಯಿತು. ತೆಲುಗು ನಾಟಕಕ್ಷೇತ್ರದಲ್ಲಿ 500 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಚಿಕ್ಕ ನಾಟಕಗಳೂ ಏಕಾಂತ ನಾಟಕಗಳೂ ರಚಿತವಾಗಿವೆ.

**ಕಾದಂಬರಿ ಮತ್ತು ಸಣ್ಣ ಕಥೆ:** ಕಂದುಕೂರಿ ವೀರೇಶಲಿಂಗಂ ತೆಲುಗಿನಲ್ಲಿ ಪ್ರಥಮ ಕಾದಂಬರಿಕಾರ. ಆತನ ರಾಜಶೇಖರ ಚರಿತ್ರೆ 1878ರಲ್ಲಿ ಪ್ರಕಟವಾಯಿತು. ಅದು ಗೋಲ್ಡ್ ಸ್ಮಿತ್‌ನ ವಿಕಾರ್ ಆಫ್ ವೇಕ್‌ಫೀಲ್ಡ್‌ದ ಅನುವಾದ. ಇದನ್ನು ಹೇಗೆ ಹೊಂದಿಸಿ ಕೊಂಡಿದ್ದಾನೆಂದರೆ ಇದು ತೆಲುಗು ದೇಶದ ಒಂದು ಕಥೆಯಂತೆಯೇ ತೋರುತ್ತದೆ. ಆದ ಕಾರಣ ಇದನ್ನು ಐ. ಆರ್. ಹಚಿನ್‌ಸನ್ 1887ರಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿದ. ಈ ಭಾಷಾಂತರವನ್ನು ಇಂಗ್ಲಿಷ್ ಓದುಗರು ಮೆಚ್ಚಿದ್ದಾರೆ. 1893–98ರಲ್ಲಿ ರಾಜಮಹೇಂದ್ರಿಯಲ್ಲಿ ನಡೆಸಿದ ವಾರ್ಷಿಕ ಸ್ಪರ್ಧೆಗಳ ಫಲವಾಗಿ ಕಾದಂಬರಿಗಳು ಹುಟ್ಟಿಕೊಂಡುವು. ಖಂಡವಲ್ಲಿ ರಾಮಚಂದ್ರುಡು, ಚಿಲಕಮರ್ತಿ ಲಕ್ಷ್ಮೀನರಸಿಂಹಂ ಮತ್ತು ತಲ್ಲಾಪ್ರಗಡ ಸೂರ್ಯನಾರಾಯಣರಾವ್ ಇವರು ತಮ್ಮ ಕಾದಂಬರಿಗಳಿಗಾಗಿ ಪಾರಿತೋಷಕಗಳನ್ನು ಪಡೆದರು. ಗೋಟೇಟಿ ಕನಕರಾಜುವಿನ (1894) ವಿವೇಕ ವಿಜಯಂ, ಟಿ. ರಾಜಗೋಪಾಲರಾಯನ (1895) ತ್ರಿವಿಕ್ರಮವಿಲಾಸಂ, ಕೂನಮಲಿ ಲಕ್ಷ್ಮೀನರಸಯ್ಯನ (1898) ಭಕ್ತಿ ಎಂಬುವು ಚಿಂತಾಮಣಿ ಪಾರಿತೋಷಕವನ್ನು ಪಡೆದ ಇತರ ಕಾದಂಬರಿಗಳು. ರೆಂಟಾಲ ವೆಂಕಟಸುಬ್ಬರಾಯನ ಕೇಸರೀ ವಿಲಾಸಮು (1895) ಎಂಬುದು ಉಲ್ಲೇಖನಾರ್ಹವಾಗಿದೆ.

ತನ್ನ ರಾಮಚಂದ್ರ ವಿಜಯಂ (1894), ಹೇಮಲತಾ (1896), ಅಹಲ್ಯಾಬಾಯಿ (1893), ಕರ್ಪೂರ ಮಂಜರಿ (1898) ಮುಂತಾದ ಕಾದಂಬರಿಗಳಿಗೆ ಮೊಟ್ಟಮೊದಲ ಅತ್ಯುತ್ತಮ ಕಾದಂಬರಿಕಾರನೆಂಬ ಖ್ಯಾತಿಗೆ ಚಿಲಕಮರ್ತಿ ಭಾಗಿಯಾದ. ಆತನ ಸೌಂದರ್ಯ ತಿಲಕ ಎಂಬುದು ರೊಮೇಶದತ್ತನ ಲೇಕ್ ಆಫ್ ಪಾಮ್ಸ್ ಎಂಬುದರ ಭಾಷಾಂತರ.

20ನೆಯ ಶತಮಾನದ ಮೊದಲ ಎರಡು ಅಥವಾ ಮೂರು ದಶಕಗಳಲ್ಲಿ, ಕೆ. ವಿ. ಲಕ್ಷ್ಮಣರಾಯನ ವಿಜ್ಞಾನ ಚಂದ್ರಿಕಾಮಂಡಲಿ ಮದರಾಸು, ಆಂಧ್ರ ಪ್ರಚಾರಿಣೀ ಗ್ರಂಥಮಾಲಾ, ಪೀಠಾಪುರಂ, ಸರಸ್ವತಿ ಗ್ರಂಥಮಂಡಲ, ರಾಜಮಹೇಂದ್ರಿ, ವೇಗುಚುಕ್ಕ ಗ್ರಂಥಮಾಲಾ, ಬರಹಾಂಪುರ್ ಮುಂತಾದ ಸಾಹಿತ್ಯ ಸಂಸ್ಥೆಗಳ ಪ್ರೋತ್ಸಾಹದ ಫಲವಾಗಿ ಅನೇಕ ಕಾದಂಬರಿಗಳು ಹುಟ್ಟಿದುವು. ಭೋಗರಾಜು ನಾರಾಯಣಮೂರ್ತಿಯ ವಿಮಲಾದೇವಿ, ಚಿಲುಕುರಿ ವೀರಭದ್ರರಾಯನ ನಾಯಕುರಾಲು, ಕೇತವರಪು ವೆಂಕಟಶಾಸ್ತ್ರಿಯ ಲಕ್ಷ್ಮೀಪ್ರಸನ್ನಂ ಎಂಬುವು ಆಕಾಲದ ಅತ್ಯುತ್ತಮ ಕಾದಂಬರಿಗಳು. ವಿಶ್ವನಾಥ ಸತ್ಯನಾರಾಯಣನ ವೇಯಿ ಪಾಡಗಲು ಮತ್ತು ಅಡವಿ ಬಾಪಿರಾಜುವಿನ ನಾರಾಯಣರಾವ್ ಎಂಬುವು ಆಂಧ್ರ ವಿಶ್ವವಿದ್ಯಾನಿಲಯದ ಬಹುಮಾನಗಳನ್ನು ಪಡೆದವು (1934). ವುಣ್ಣವ ಲಕ್ಷ್ಮೀನಾರಾಯಣನ ಮಾಲಪಲ್ಲಿ (1921) ಇದುವರೆಗೂ ರಚಿತವಾಗಿರುವ ಸಾಮಾಜಿಕ ಕಾದಂಬರಿಗಳ ಪೈಕಿ ಅತ್ಯುತ್ತಮವಾದುದೆಂದು ಪರಿಗಣಿತವಾಗಿದೆ. ಜಿ.ವಿ.ಕೃಷ್ಣರಾಯನ ಕೀಲುಬೊಮ್ಮಲು, ಟಿ.ಗೋಪಿಚಂದನ ಅಸಮರ್ಥನಿಜೀವಯಾತ್ರ, ಎಸ್.ವಿ.ಸುಬ್ಬರಾಯನ ಚಿವರಕು ಮಿಗಿಲೇದಿ ಮತ್ತು ಪಿ.ಸಾಂಬಶಿವರಾಯನ ಉದಯಕಿರಣಾಲು ಎಂಬವು ಇತ್ತೀಚಿನ ಶ್ರೇಷ್ಠ ಕಾದಂಬರಿಗಳು.

**ಸಣ್ಣಕಥೆ:** ಸ್ವೋಪಜ್ಞ ಸಣ್ಣಕಥೆಗಳನ್ನು ಬರೆಯುವುದರಲ್ಲಿ ಮೊದಲನೆಯವ ಗುರುಜಾಡ ಅಪ್ಪಾರಾವ್. ಆದರೆ ಈ ಕಲೆಯಲ್ಲಿ ಗುಡಿಪಾಟಿ ವೆಂಕಟಾಚಲಂ ಬೇಗನೆ ಆತನನ್ನು ಮೀರಿಸಿದ. ವೆಲ್ಲೂರಿ ಶಿವರಾಮಶಾಸ್ತ್ರಿ, ಚಿಂತಾದೀಕ್ಷಿತುಲು ಮತ್ತು ಇತರ ಅನೇಕ ಸಣ್ಣ ಕಥೆಗಾರರು ಜನಪ್ರಿಯವಾಗಿರುವ ಅನೇಕ ವಸ್ತುಗಳ ಮೇಲೆ ಸಣ್ಣಕಥೆಗಳನ್ನು ರಚಿಸಿದ್ದಾರೆ. ಭಾಮಿಡಿಪತಿ ಕಾಮೇಶ್ವರರಾಯನ ಸಣ್ಣ ನಾಟಕಗಳಂತೆಯೇ ಮುನಿಮಾಣಿಕ್ಯಮ್ಮನ ಕಥೆಗಳು ತಮ್ಮಲ್ಲಿನ ಹಾಸ್ಯಕ್ಕಾಗಿ ತುಂಬ ಜನಪ್ರಿಯವಾಗಿವೆ. ಶ್ರೀಪಾದಸುಬ್ರಮಣ್ಯಶಾಸ್ತ್ರಿಯ ಕಥೆಗಳು ತಮ್ಮ ದೇಸೀ ನುಡಿಗಟ್ಟಿನ ಆಡುಭಾಷೆಗಾಗಿ ಗಮನಾರ್ಹವಾಗಿವೆ. ಮಲ್ಲಾಡಿರಾಮಕೃಷ್ಣಶಾಸ್ತ್ರಿ, ಕೊಡವಟಿಕಂಟಿ ಕುಟುಂಬರಾವ್, ಗೋಪೀಚಂದ್ ಎಂಬುವರು ಈಗಿನ ಕಾಲದ ಶ್ರೇಷ್ಠ ಸಣ್ಣ ಕಥೆಗಾರರು.

ಆಂಧ್ರ ಸಚಿತ್ರ ವಾರಪತ್ರಿಕಾ, ಆಂಧ್ರಪ್ರಭಾ ವಾರಪತ್ರಿಕಾ ಮುಂತಾದ ತೆಲುಗು ಪತ್ರಿಕೆಗಳು ಕ್ರಮಬದ್ಧವಾಗಿ ಸಣ್ಣ ಕಥೆಗಳನ್ನು ಪ್ರಕಟಿಸುತ್ತಿವೆಯಲ್ಲದೆ ಅವುಗಳ ಸಂಖ್ಯೆಯೂ ಹೆಚ್ಚಾಗುತ್ತಲೇ ಇದೆ. ತೆಲುಗು ಸಾಹಿತ್ಯ ಈಗ ಎಲ್ಲ ಕ್ಷೇತ್ರಗಳಲ್ಲೂ ಶ್ರೀಮಂತವಾಗಿದೆ.

(ಎಸ್.ಜಿ.ವಿ.)

**ಆ್ಯಂಪೇರ್ :** ವಿದ್ಯುತ್‌ಪ್ರವಾಹದ ಅಂತಾರಾಷ್ಟ್ರೀಯ (ಎಸ್‌ಐ) ಏಕಮಾನ. ಒಂದು ವಾಹಕದಲ್ಲಿ ಎಲೆಕ್ಟ್ರಾನ್‌ಗಳ ಚಲನೆಯೇ ವಿದ್ಯುತ್‌ಪ್ರವಾಹ. ಇಂಥ ಒಂದು ವಾಹಕದ ಯಾವುದೊಂದು ಭಾಗದಿಂದ $6.3 \times 10^{18}$ ಎಲೆಕ್ಟ್ರಾನ್‌ಗಳು ಒಂದು ಸೆಕೆಂಡಿನಲ್ಲಿ ನಿಷ್ಕ್ರಮಿಸುವಾಗ, ಆಗ ಒಂದು ಆ್ಯಂಪೇರ್ ಪ್ರವಾಹ ಹರಿಯುತ್ತದೆ. ಆ್ಯಂಪೇರ್ ನಲ್ಲಿ ಶುದ್ಧ ಆ್ಯಂಪೇರ್ (ಆ್ಯಬ್ಸಲ್ಯೂಟ್) ಮತ್ತು ಅಂತಾರಾಷ್ಟ್ರೀಯ ಆ್ಯಂಪೇರ್ ಎಂದು ಎರಡು ವಿಧಗಳಿವೆ. ಶುದ್ಧ ಆ್ಯಂಪೇರನ್ನು ಸರಿಯಾಗಿ ಅಳೆಯುವುದು ಕಷ್ಟವಾದುದರಿಂದ, ಅಂತಾರಾಷ್ಟ್ರೀಯ ಆ್ಯಂಪೇರನ್ನು ಬಳಕೆಗೆ ತರಲಾಯಿತು.

ಅಂತಾರಾಷ್ಟ್ರೀಯ ಆ್ಯಂಪೇರ್= 0.99985 ಶುದ್ಧ ಆ್ಯಂಪೇರ್. ಒಂದು ಅಂತಾರಾಷ್ಟ್ರೀಯ ಆ್ಯಂಪೇರನ್ನು ಹೀಗೆ ವಿವರಿಸಬಹುದು: ಸಿಲ್ವರ್ ನೈಟ್ರೇಟ್ ದ್ರಾವಣದ ಸ್ಥಿರ ವಿದ್ಯುತ್ ಪ್ರವಾಹ ಮೂಲಕ ಹರಿದಾಗ, ಬೆಳ್ಳಿ 0.00118 ಗ್ರಾಂ. ಸೆಕೆಂಡ್‌ನಂತೆ ಸೇರಿಕೆಯಾದರೆ ಆ ಪ್ರವಾಹ ಒಂದು ಅಂತಾರಾಷ್ಟ್ರೀಯ ಆ್ಯಂಪೇರ್. ಶುದ್ಧ ಆ್ಯಂಪೇರನ್ನು ಅಳೆಯಲು ಬಲವನ್ನು ಅಳೆಯಬೇಕಾಗುವುದು. ಅದನ್ನು ಎರಡು ವಿಧದಲ್ಲಿ ಅಳೆಯಬಹುದು: 1 ಒಂದು ವಿದ್ಯುತ್–ಸುರುಳಿಯ (ಸಾಲೆನಾಯ್ಡ್) ಮೂಲಕ ಹರಿಯುವ ಪ್ರವಾಹ ತೂಗುಹಾಕಿದ ಅಯಸ್ಕಾಂತದ ಸೂಜಿಯ ಮೇಲೆ ಬೀರುವ ಬಲದಿಂದ. 2 ಮಂಡಲದ (ಸರ್ಕ್ಯೂಟಿನ) ಇನ್ನೊಂದು ಭಾಗದ ಮೇಲೆ ಬೀರುವ ಬಲದಿಂದ. 1946ರಿಂದ ಅಂತಾರಾಷ್ಟ್ರೀಯ ಏಕಮಾನದ ವ್ಯಾಖ್ಯೆ ಹೀಗಿದೆ: ಅನಂತ ಉದ್ದ ಮತ್ತು ನಿರ್ಲಕ್ಷಿಸಬಹುದಾದ ಅಡ್ಡಕೊಯ್ತವಿರುವ ಎರಡು ವಾಹಕಗಳನ್ನು ನಿರ್ವಾತದಲ್ಲಿ ಸಮಾಂತರವಾಗಿ 1 ಮೀ ಅಂತರದಲ್ಲಿಟ್ಟು ಇವುಗಳ ಮೂಲಕ ಹರಿಯಬಿಟ್ಟ ಪ್ರವಾಹ ಆ ವಾಹಕಗಳ ನಡುವೆ ಉತ್ಪಾದಿಸುವ ಬಲ ಮೀಟರ್ ಉದ್ದಕ್ಕೆ $2 \times 10^{-7}$ ನ್ಯೂಟನ್ ಆಗಿದ್ದರೆ ಆ ಪ್ರವಾಹಕ್ಕೆ 1 ಆ್ಯಂಪೇರ್ ಎಂದು ಹೆಸರು. ಫ್ರೆಂಚ್ ಭೌತವಿಜ್ಞಾನಿ ಆಂದ್ರೆ ಮಾರಿ ಆ್ಯಂಪೇರ್ (1775–1836) ಗೌರವಾರ್ಥ ಇದಕ್ಕೆ ಈ ಹೆಸರು. ವಿದ್ಯುತ್‌ಪ್ರವಾಹಗಳನ್ನು ಅಳೆಯುವ ಉಪಕರಣದ ಹೆಸರು ಆ್ಯಂಪೇರ್‌ಮಾಪಕ ಅಥವಾ ಆ್ಯಮೀಟರ್. (ಎಮ್.ಎಚ್.ಡಿ.)

**ಆ್ಯಂಪೇರ್, ಆಂದ್ರೆಮಾರಿ :** 1775–1836. ಫ್ರೆಂಚ್ ಭೌತವಿಜ್ಞಾನಿ. ಲಿಯಾನ್ ಪಟ್ಟಣದ ಬಳಿ ಪಾಲೇಮಿಯೇ ಎಂಬಲ್ಲಿ 1775 ಜನವರಿ 22ರಂದು ಜನಿಸಿದ. ಓದುವುದಕ್ಕೆ ಬರುವ ಮೊದಲೇ ಕಲ್ಲುಚೂರುಗಳನ್ನಿಟ್ಟುಕೊಂಡು ತೊಡಕಾದ ಲೆಕ್ಕಗಳನ್ನು ಮಾಡುತ್ತಿದ್ದನಂತೆ. ತಂದೆಯಿಂದ ಲಕೀನ ಭಾಷೆಯನ್ನು ಕಲಿತು ಅದರ ಮೂಲಕ ಆಯ್ಲರ್ ಮತ್ತು ಬರ್ನೌಲಿ ಎಂಬುವರ ಶಾಸ್ತ್ರ ಲೇಖನಗಳನ್ನೋದಿ 18 ವರ್ಷ ವಯಸ್ಸಾಗುವ ವೇಳೆಗೆ ಗಣಿತವಿಜ್ಞಾನವಲ್ಲದೆ ಚರಿತ್ರೆ, ತತ್ತ್ವಶಾಸ್ತ್ರ, ಜೀವವಿಜ್ಞಾನ ಮೊದಲಾದವುಗಳಲ್ಲೂ ಪ್ರವೀಣನಾದ. ಲಿಯಾನ್‌ನಲ್ಲಿ ಗಣಿತ, ರಸಾಯನವಿಜ್ಞಾನ ಮತ್ತು ಭಾಷೆಗಳನ್ನು ಬೋಧಿಸಿ ಹಣ ಸಂಪಾದಿಸುತ್ತಿದ್ದ (1796). 1799ರಲ್ಲಿ ಈತ ಜೂಲಿಕಾರನ್ ಎಂಬುವಳನ್ನು ಮದುವೆಯಾದ. ಆದರೆ 1804ರಲ್ಲಿ ಆಕೆ ಸತ್ತುಹೋದಳು. 1801ರಲ್ಲಿ ಬೂರ್ಗ್ ಎಂಬಲ್ಲಿ ಭೌತ ಮತ್ತು ರಸಾಯನ ವಿಜ್ಞಾನ ಪ್ರಾಧ್ಯಾಪಕನಾಗಿ, 1804ರಲ್ಲಿ ಲಿಯಾನ್‌ನಲ್ಲಿ ಗಣಿತವಿಜ್ಞಾನ ಪ್ರಾಧ್ಯಾಪಕನಾದ. 1809ರಲ್ಲಿ ಪ್ಯಾರಿಸ್ ನಗರದಲ್ಲಿ ಗಣಿತವಿಜ್ಞಾನ ಪ್ರಾಧ್ಯಾಪಕನಾಗಿ ಎಕೋಲ್ ಪಾಲಿಟೆಕ್ನಿಕ್ ಎಂಬ ಪ್ರಸಿದ್ಧ ಪಾಠಶಾಲೆಯನ್ನು ಸೇರಿದ. 1814ರಲ್ಲಿ ಇನ್‌ಸ್ಟಿಟ್ಯೂಟ್ ಎಂಬ ವಿದ್ವತ್ಸಭೆಯ ಸದಸ್ಯನಾದ. ಭೌತವಿಜ್ಞಾನದಲ್ಲಿ ಈತನ ಮುಖ್ಯ ಪಾತ್ರ ವಿದ್ಯುತ್ಕಾಂತಶಾಸ್ತ್ರವನ್ನು ಬೆಳೆಸಿದುದೇ ಆಗಿದೆ. ವಿದ್ಯುತ್ಪ್ರವಾಹ ಅಯಸ್ಕಾಂತದ ಮೇಲೆ ಬಲಪ್ರಯೋಗ ನಡೆಸುವುದೆಂಬುದನ್ನು 1820 ರಲ್ಲಿ ಅರ್ಸ್ಟೆಡ್ ಕಂಡುಹಿಡಿದ ಸಮಾಚಾರವನ್ನು ಕೇಳಿದೊಡನೆ ಆಂಪೇರ್ ಅದನ್ನು ಗಣಿತವಿಜ್ಞಾನ ರೀತ್ಯಾ ಕೂಲಂಕಷವಾಗಿ ಪರಿಶೀಲಿಸಿ ಒಂದು ವಿದ್ಯುತ್ಪ್ರವಾಹ ಮತ್ತೊಂದರ ಮೇಲೆ ಬಲಪ್ರಯೋಗ ಮಾಡುವಾಗ ಅನುಸರಿಸುವ ನಿಯಮಗಳನ್ನು ಕಂಡುಹಿಡಿದು ವಿದ್ಯುತ್ಕಾಂತಶಾಸ್ತ್ರದ ಮೂಲಪುರುಷನಾದ. ವಿದ್ಯುತ್ಪ್ರವಾಹದ ಬಳಕೆಯ ಏಕಮಾನಕ್ಕೆ ಈತನ ಹೆಸರನ್ನಿಟ್ಟಿರುವುದು ಈ ಕಾರಣದಿಂದಲೇ. ಇವನು ಮಾರಸೇಯ ಪಟ್ಟಣದಲ್ಲಿ 1836 ಜೂನ್ 10ರಂದು ನಿಧನನಾದ. (ಟಿ.ಎಸ್.ಎಸ್.)

**ಆ್ಯಂಫಿಕ್ಟಿಯೋನಿ :** ಪ್ರಾಚೀನ ಗ್ರೀಸಿನಲ್ಲಿ ನಗರರಾಜ್ಯಗಳಿದ್ದ ಕಾಲದಲ್ಲಿ ಪ್ರಮುಖ ದೇವಸ್ಥಾನಗಳ ಸಂರಕ್ಷಣೆಗೋಸ್ಕರ, ಒಂದೊಂದು ಮುಖ್ಯ ದೇವಮಂದಿರದ ಸುತ್ತ ಇದ್ದ ರಾಜ್ಯಗಳು ಸೇರಿ ಏರ್ಪಡಿಸಿಕೊಂಡಿದ್ದ ಒಕ್ಕೂಟಗಳಿಗೆ ಈ ಹೆಸರಿದೆ. ಇವುಗಳ ಪೈಕಿ

ಡೆಲ್ಫಿಯಲ್ಲಿದ್ದ ಅಪೊಲೋ ದೇವಮಂದಿರದ ಪೋಷಣೆಗಾಗಿ ಮಾಡಿಕೊಂಡಿದ್ದ ಒಕ್ಕೂಟ ಪ್ರಸಿದ್ಧವಾಗಿತ್ತು. ದೇವಸ್ಥಾನದ ಆಡಳಿತ, ಬಂದುಹೋಗುವ ಭಕ್ತಾದಿಗಳ ಯೋಗಕ್ಷೇಮ, ಜಾತ್ರೆ ಕಾಲದಲ್ಲಿ ಶಾಂತಿ ರಕ್ಷಣೆ, ಸುತ್ತಮುತ್ತಲಿನ ರಸ್ತೆಗಳ ದುರಸ್ತು ಮುಂತಾದ ಅನೇಕ ಕೆಲಸಗಳನ್ನು ಒಕ್ಕೂಟ ನೋಡಿಕೊಳ್ಳುತ್ತಿತ್ತು. ಕಾಲಕ್ರಮೇಣ ಒಕ್ಕೂಟದ ಸದಸ್ಯ ರಾಜ್ಯಗಳಲ್ಲಿ ರಾಜಕೀಯ ಮೈತ್ರಿ ಬೆಳೆಯಿತು. ಕೇವಲ ನಗರ ರಾಜ್ಯಗಳೇ ಇದ್ದ ಆ ಕಾಲದಲ್ಲಿ ಗ್ರೀಕರೆಲ್ಲ ಒಂದು ಎಂಬ ಭಾವನೆ ಬೆಳೆದು ರಾಷ್ಟ್ರೀಯ ಐಕ್ಯ ಏರ್ಪಡಲು ಅವರ ಭಾಷೆ, ಲಿಪಿಗಳ ಏಕತೆಯೊಂದಿಗೆ ಹೋಮರನಂಥ ಕವಿಗಳ ಕೃತಿಗಳು ಸಹಾಯ ಮಾಡಿದುವಲ್ಲದೆ ಇಂಥ ನೆರೆರಾಜ್ಯಗಳ ಒಕ್ಕೂಟಗಳೂ ನೆರವಾದುವು. *

**ಆ್ಯಂಫೆಟಮೀನ್ :** ಕೇಂದ್ರ ನರಮಂಡಲದ ಮೇಲೆ ಬಹುಮಟ್ಟಿನ ಚೋದಕ ಪ್ರಭಾವವಿರುವ, ಕೃತಕವಾಗಿ ತಯಾರಾದವಲ್ಲಿ ಒಂದಾಗಿ ಬೆಂಜೆಡ್ರಿನ್ ಹೆಸರಿನಲ್ಲಿ ಬಳಕೆಗೆ ಬಂದ ಮದ್ದು. ಇದು ಬಣ್ಣವಿರುವ, ನಿಧಾನವಾಗಿ ಆರಿಹೋಗುವ, ಖಾರದ ರುಚಿಯ, ಸುಲಭವಾಗಿ ಹರಿಯುವ, ನೀರಿನಲ್ಲಿ ತುಸು ಕರಗುವ, ದ್ರವ. ಇದರ ಕುದಿಯುವ ಮಟ್ಟ $200^{o}$ ಸೆಂ.ಗ್ರೇ. ಬಳಕೆಯಲ್ಲಿರುವ ಇದರ ಉತ್ಪನ್ನ ಆ್ಯಂಫ್ಲೆಟಮೀನ್ ಸಲ್ಫೇಟು ವಾಸನೆಯಿರದ ಬಿಳಿ ಪುಡಿ, ನೀರಿನಲ್ಲಿ ಸುಲಭವಾಗಿ ಕರಗುತ್ತದೆ. ನಾಲಗೆಗೆ ತಾಕಿಸಿದರೆ ತುಸು ಕಹಿಯಾಗಿ ಮರಗಟ್ಟಿಸುತ್ತದೆ. ಎಡತಿರುವಿನ (ಲೀವೊರೊಟೇಟರಿ) ಆ್ಯಂಫ್ಲೆಟಮೀನ್ (ಡೆಕ್ಸೆಡ್ರೀನ್) ಇದೇ ಸರಣಿಯದು. ಮಾತ್ರೆಗಳಾಗಿಯೂ ಚುಚ್ಚುಮದ್ದಾಗಿಯೂ ಇವನ್ನು ಕೊಡಬಹುದು.

ಸಾಕಷ್ಟು ಕೊಟ್ಟರೆ ಈ ಮದ್ದುಗಳು ಅರಿವಳಿಕಗಳ, ಮಂಪರಿಕಗಳ, ನಿದ್ದೆಕಾರಿಗಳ, ಮದ್ಯಸಾರದ ಪ್ರಭಾವವನ್ನು ತುಸುಮಟ್ಟಿಗೆ ಇಳಿಸುತ್ತದೆ. ಬಾರ್ಬಿಟ್ಯುರೇಟುಗಳ ವಿಷವೇರಿಕೆ, ಮೊಲ್ಲಾಗರಗಳಲ್ಲೂ ಎಚ್ಚರಗೊಳಿಸಲು ಹುಷಾರಾಗಿ ಬಳಸುವುದರಿಂದ ಅನುಕೂಲವಿದೆ. ಮನೋವ್ಯಾಪಾರಗಳ ಮೇಲೆ ಇವೆಲ್ಲ ಪರಿಣಾಮಕಾರಿಗಳು; ಎಚ್ಚರಗೊಳಿಕೆ, ಮನೋಭಾವದ ಉನ್ನತಿಕೆ, ಆವೇಶ, ಹೆಚ್ಚಿಸಿದ ನೆಚ್ಚಿಕೆ, ಆನಂದ ಹಿಗ್ಗು, ದಣಿವಿನ ಅರಿವು ತಗ್ಗುವಿಕೆ, ಮಾತಾಳಿತನ, ಒಂದೆಡೆ ಮನಸ್ಸಿಡುವುದರ ಹೆಚ್ಚಳ ತೋರುತ್ತದೆ. ಈ ಪರಿಣಾಮಗಳೆಲ್ಲ ರೋಗಿಯ ಮನಸ್ಸು, ಪರಿಸರಗಳನ್ನು ಅನುಸರಿಸುತ್ತವೆ. ಮಕ್ಕಳಲ್ಲಿ ಶಮನಿಕವಾದರೂ ಇವು ದೊಡ್ಡವರಲ್ಲಿ ಚೋದಕ.

ಆ್ಯಂಫ್ಲೆಟಮೀನಿನ ಚೋದಕ ಪ್ರಭಾವ ಹಲವಾರು ಚಿಕಿತ್ಸೆಗಳಲ್ಲಿ ನೆರವಾಗುವುದು. ಸಣ್ಣಪುಟ್ಟ ನರಮಾಂದ್ಯಗಳು, ಕೆಲವೇಳೆ ಇನ್ನೂ ಬಲವಾಗಿ ಮನಗುಂದಿರುವ ಸ್ಥಿತಿಗಳಲ್ಲೂ ರೋಗಲಕ್ಷಣಗಳನ್ನು ಕಳೆವುದು. ಮದ್ಯದ ಚಾಳಿಗರಲ್ಲಿ ಕುಡಿತವನ್ನು ಬಿಟ್ಟುಬಿಡಲು ಮನಸ್ಸಿಗೆ ಧೈರ್ಯಗೊಡುತ್ತವೆ. ತಡೆಯಲಾರದಂತೆ ನಿದ್ದೆಬರಿಸುವ ರೋಗವಾದ ಮಂಪರಸೆಳೆತ (ನಾರ್ಕೊಲೆಪ್ಸಿ) ಚಿಕಿತ್ಸೆಗೂ ಇದು ಅನುಕೂಲಕರ. ಮಿದುಳಿನ ಉರಿತ ಆದ ಮೇಲೆ ಆಗುವ ಬಗೆಯ ಪಾರ್ಕಿನ್ಸನ ಬೇನೆ ಇಲ್ಲವೇ ನಡುಕದ ಜೋಗರಿಕೆಯಲ್ಲಿ (ಪೆರಾಲೆಸಿಸ್ ಅಜಿಟಾನ್ಸ) ಇತರ ಮದ್ದುಗಳೊಂದಿಗೆ ಕೊಟ್ಟು ಸ್ನಾಯುಗಳ ಬಿಗುವನ್ನು ಬಿಡಿಸಬಹುದು. ಊಟದ ಮುಂಚೆ ಆ್ಯಂಫ್ಲೆಟಮೀನನ್ನು ನುಂಗಿದರೆ, ಹಸಿವನ್ನು ಪೂರ್ತಿ ಮಂದಗೊಳಿಸಿ ಮೈತೂಕ ತಗ್ಗಿಸುವುದೆಂದು 1937ರಲ್ಲಿ ಗೊತ್ತಾಯಿತು. ಇದರಿಂದಲೇ ಬೊಜ್ಜು ಕಳೆವ ಆಹಾರದ ಪಥ್ಯದೊಂದಿಗೆ ಇದು ಹೆಚ್ಚಿನ ಬಳಕೆಯಲ್ಲಿದೆ. ಸೇವಿಸಿದಂತೆಲ್ಲ ಬರಬರುತ್ತ ಮದ್ದಿಗೆ ಜಗ್ಗದಂತಾಗುವುದರಿಂದ ಇನ್ನೂ ಹೆಚ್ಚುಹೆಚ್ಚಾಗಿ ನುಂಗಬೇಕಾಗುತ್ತದೆ.

ಬೇಡದ ಪರಿಣಾಮಗಳು ಆ್ಯಂಫ್ಲೆಟಮೀನ್‌ನಿಂದ ಆಗುತ್ತವೆ. ಚೋದನೆ ಮಿತಿಮೀರಿ ಚಡಪಡಿಕೆ, ನಿದ್ದೆಬಾರದಿರುವಿಕೆ, ನಡುಕ, ಬಿಗುಪು, ಕೆರಳು ಇವು ತೀರ ಸಾಮಾನ್ಯ. ಹೊಟ್ಟೆ ನುಲಿದು ಓಕರಿಕೆ, ವಾಂತಿ, ಉಚ್ಚಾಟವೂ ಆಗಬಹುದು, ಕೆಲವೇಳೆ ಪ್ರಾಣ ಕಳೆದುಕೊಳ್ಳಲು ನುಂಗಿದ ಹೆಚ್ಚಿನ ಪ್ರಮಾಣದಿಂದ ಜ್ವರವೇರಿ ಗುಂಡಿಗೆ ಕ್ರಮಗೆಟ್ಟು ಅರಿವು ತಪ್ಪಿ, ಸೆಳವು ಬಂದು ಸುಸ್ತಾಗಿ ಸಾಯಬಹುದು.

ಮುಖ್ಯವಾಗಿ ಮೋಟರು ಬಂಡಿ ಚಾಲಕರು, ಅಂಗಸಾಧಕರು, ಕಲಿವವರು ದಣಿವು, ನಿದ್ದೆಗಳನ್ನು ಕಳೆಯಲು ಆ್ಯಂಫ್ಲೆಟಮೀನನ್ನು ಗೊತ್ತುಗುರಿಯಿಲ್ಲದೆ ಮಿತಿಗೆಟ್ಟು ಬಳಸುವುದುಂಟು. ಇದರಿಂದ ಕೆಲಸಗಾರನಿಗೆ ತನ್ನ ಕೆಲಸಗೆಟ್ಟರೂ ಮನಸ್ಸಿಗೆ ತೃಪ್ತಿಯಾಗಿ ಬೇಗನೆ ಮಾಡುವನು. ಹೊತ್ತು ಎನ್ನುವದು ಬೇಗನೆ ಓಡುತ್ತದೆ. ಆದರೆ ನಿದ್ದೆ ದಣಿವುಗಳನ್ನು ದೂರವಿರಿಸಲು ವೈದ್ಯನ ಸಲಹೆ ಇಲ್ಲದೆ ಇದನ್ನು ಬಳಸುವುದು ಒಳ್ಳೆಯದಲ್ಲ. ಇದನ್ನು ಒಂದೇ ಸಮ ಬಳಸುವುದರಿಂದ ಚಾಳಿ ಹತ್ತುವುದು. ರಕ್ತ ಸುತ್ತಾಟದ ಕೆಡುಕಿನ ಪರಿಣಾಮಗಳಲ್ಲದೆ ಅತಿಯಾಗಿ ದುಡಿಯುವವರಲ್ಲಿ ದಣಿವೆಂದು ಎಚ್ಚರಿಸುವ ಸೂಚನೆಯನ್ನೂ ಕಳೆವುದೇ ಅಪಾಯಗಳು. ಹಾಗೆ ಎಷ್ಟೋ ಮಂದಿ ಸುಸ್ತಾಗಿ ಬಿದ್ದಿದ್ದಾರೆ. ಆದ್ದರಿಂದ ವೈದ್ಯನ ಕಟ್ಟುನಿಟ್ಟಿನ ಮೇಲ್ವಿಚಾರಣೆ ಇಲ್ಲದೆ ಉದ್ದೀಪನಕ್ಕೆ ಹೆಚ್ಚಿನ ಬಲ, ಕೆಲಸ ಮಾಡುವ ಶಕ್ತಿ, ಮದ್ಯಸಾರ ಕುಡಿದಾಗ ಇದರ ಬಳಕೆ ಒಳ್ಳೆಯದಲ್ಲ. ಮೇಲಾಟದ ಪಂದ್ಯಗಾರರಂತೂ ಇದನ್ನು ಮುಟ್ಟಲೇಕೂಡದು. ನಡುಹಗಲು ಕಳೆದ ಮೇಲೆ ಕೊಟ್ಟರೆ ರಾತ್ರಿ ನಿದ್ದೆಗೆಡುತ್ತದೆ. ವೈದ್ಯಪಟುವಿನ ಸೂಚನೆ ಪತ್ರವಿಲ್ಲದೆ ಈ ಮದ್ದನ್ನು ಎಂದಿಗೂ ಕೊಡಬಾರದು. ರಾಸಾಯನಿಕ ರಚನೆ, ವರ್ತನೆಗಳಲ್ಲಿ ಎಫಿಡ್ರಿನ್ ಮತ್ತಿತರ ಅಡ್ರಿನಲೀನದಂಥ ಅನುವೇದನಂಕ (ಸಿಂಪತೋಮೀಮಿಟಿಕ್) ಗುಣಗಳು ಆ್ಯಂಫ್ಲೆಟಮೀನಿಗೆ ಇದೆ. ರಕ್ತನಾಳಗಳನ್ನು ಕುಗ್ಗಿಸುವುದರಿಂದ, ಗೂರಲು (ತೀವ್ರವಾದ ಸೈನಸೈಟಿಸ್) 'ನೆಗಡಿ ಸುರಿತ'ಗಳಲ್ಲಿ ಮೂಗಿನ ಲೋಳೆಪರೆಗಳನ್ನು ಮುಂದುವರಿಸುವುದಕ್ಕಾಗಿ ಅಡ್ರಿನಲೀನ್ ಹಾಗೇ ಆ್ಯಂಫ್ಲೆಟಮೀನ್ ಕೂಡ 1% ಉಸಿರೆಳಕವಾಗಿ (ಇನ್‌ಹೇಲೆಂಟ್) ಇದು ಬಳಕೆಯಲ್ಲಿದೆ. ಬೆಂಜಿಡ್ರೀನ್ ಸೇರಿಸಿದ್ದ ಉಸಿರೆಳೆತಗಳಲ್ಲಿ (ಇನ್‌ಹೇಲರ್ಸ್) ಬೆಂಜಿಡ್ರೀನನ್ನು, ಇದರ ಚಟ ಹತ್ತಿದವರು ಹೊಟ್ಟೆಗೆ ತೆಗೆದುಕೊಳ್ಳುತ್ತಿದ್ದರಿಂದ, ಅದನ್ನು ಈಗ ಬಳಸುತ್ತಿಲ್ಲ. ರಕ್ತನಾಳ ಕುಗ್ಗಿ, ಗುಂಡಿಗೆಯ ಮತ್ತು ಪಂಗುಸಿರ್ನಾಳದ (ಬ್ರಾಂಕಿಯಲ್) ಮೇಲಿನ ವರ್ತನೆಗಳು ಎಪಿಡ್ರೀನಿನಷ್ಟು ಬಲವಾಗಿಲ್ಲ.

ಬಹಳಕಾಲದ ಬಳಕೆಯಿಂದ ಆ್ಯಂಫ್ಲೆಟಮೀನ್ ಚಾಳಿ ಹತ್ತುವುದಾದರೂ ಮಂಪರುಕಾರಿ ಮದ್ದುಗಳಕ್ಕಿಂತ ಕಡಿಮೆ ಮಾರ್ಫೀನ್‌ನಂಥ ಮದ್ದುಗಳ ಸೇವನೆ ನಿಲ್ಲಿಸಿದ ಕೂಡಲೇ ಕಾಣಬರುವ ಕಟ್ಟುನಿಟ್ಟಿನ ರೋಗಲಕ್ಷಣಗಳು ಆ್ಯಂಫ್ಲೆಟಮೀನ್ ಸೇವನೆ ನಿಲ್ಲಿಸಿದಾಗ ಕಾಣವು. ಆದರೂ ನಡುಕ, ನಿತ್ರಾಣ, ಹೊಟ್ಟೆ ತೊಳಸು ಕಾಣಿಸಿಕೊಳ್ಳುತ್ತವೆ. ರೋಗಿಯ ತನ್ನತನದ ಏರುಪೇರುಗಳು ಇದರ ಚಾಳಿಯಲ್ಲಿ ವಿಶಿಷ್ಟ. ಮತ್ತಾವ ಮದ್ದಿನಿಂದಲೂ ಬಿಕ್ಕಳಿಕೆ ನಿಲ್ಲದಿದ್ದರೆ, ನೋವು, ಮುಟ್ಟು, ಪುಟ್ಟಾಮಾಲೆಗಳಲ್ಲೂ (ಪೆಟಿಟ್‌ಮಾಲ್) ಇದನ್ನು ಕೊಡುವುದುಂಟು.

(ಎಸ್.ಕೆ.ಎಚ್.)

**ಆ್ಯಂಫಿಪೋಲಿಸ್ :** ಈಜಿಯನ್ ಸಮುದ್ರದ ಉತ್ತರತೀರದಲ್ಲಿನ ಒಂದು ಪಟ್ಟಣ. ಪ್ರ.ಶ.ಪೂ. 437ರಲ್ಲಿ ಗ್ರೀಕರು ಈ ನಗರವನ್ನೂ ಸ್ವಾಧೀನಪಡಿಸಿಕೊಂಡರು. ಆದರೆ ಪ್ರ.ಶ.ಪೂ.358ರಲ್ಲಿ ಮ್ಯಾಸಿಡೋನಿಯದ ಪ್ರಸಿದ್ಧ ದೊರೆಯಾದ ಫಿಲಿಪ್ಸ್ ಅದನ್ನೂ ಹತ್ತಿರ ಇದ್ದ ಚಿನ್ನದ ಗಣಿಯನ್ನೂ ಗೆದ್ದುಕೊಂಡ. ಮುಂದೆ ರೋಮನ್ ಸಾಮ್ರಾಜ್ಯದ ಕಾಲದಲ್ಲಿ ಅವರ ಪೌರ್ವಾತ್ಯ ಪ್ರಾಂತವೊಂದರ ರಾಜಧಾನಿಯಾಯಿತು. ಇಲ್ಲಿ ಪ್ರಾಚೀನ ರೋಮಿನ ಅನೇಕ ಶಾಸನಗಳು, ನಾಣ್ಯಗಳು, ಕೋಟೆಕೊತ್ತಲಗಳ ಉಳಿಕೆಗಳು ಸಿಕ್ಕಿವೆ. *

**ಆ್ಯಂಫಿಬೋಲ್ :** ಪೈರಾಕ್ಸೀನ್ ಖನಿಜವನ್ನು ಬಹುಮಟ್ಟಿಗೆ ಹೋಲುವ ಮತ್ತೊಂದು ಗುಂಪಿನ ಖನಿಜಗಳು. ಇವು ಕಬ್ಬಿಣ, ಮೆಗ್ನೀಸಿಯಂ, ಕ್ಯಾಲ್ಸಿಯಂ ಮತ್ತು ಅಲ್ಯೂಮಿನಿಯಂಗಳಿಂದ ಕೂಡಿದ ಮೆಟಸಿಲಿಕೇಟ್‌ಗಳು. ಹಲವು ಸಂದರ್ಭಗಳಲ್ಲಿ ಸೋಡಿಯಂ ಅಲ್ಪಸ್ವಲ್ಪ ಪ್ರಮಾಣದಲ್ಲಿರಬಹುದು. ಯಾವ ಖನಿಜದಲ್ಲಿ ಸಿಲಿಕಾನ್ ಮತ್ತು ಬೇಸ್‌ಗಳ ಆಕ್ಸಿಜನ್ನಿನ ಪ್ರಮಾಣ 2:1ರಷ್ಟು ಇರುತ್ತದೋ ಅದನ್ನು ಮೆಟಸಿಲಿಕೇಟ್ ಎನ್ನುತ್ತಾರೆ. ಉದಾ: ಆ್ಯಂಫಿಬೋಲ್ ಗುಂಪಿನ ಟ್ರೆಮೊಲೈಟನಲ್ಲಿ ಹೀಗೆ ಇರುತ್ತದೆ:

| | | |
|---|---|---|
| CaO | 3 MgO | 4 $SiO_2$ |
| ಆಕ್ಸಿಜನ್ | 4 | 8 |
| | 1 | 2 |

ಆ್ಯಂಫಿಬೋಲ್ ಸಾಮಾನ್ಯವಾಗಿ ಮಾನೋಕ್ಲಿನಿಕ್ ಹರಳಿನ ವರ್ಗದ ಖನಿಜ. ಕೆಲವು ಆರ್ಥೊರಾಂಬಿಕ್ ಮತ್ತು ಟ್ರೈಕ್ಲಿನಿಕ್ ವರ್ಗಗಳಲ್ಲೂ ರೂಪುಗೊಳ್ಳುತ್ತವೆ. ಇದರ ಬಣ್ಣ ಕಪ್ಪು ಅಥವಾ ಹಸುರುಗಪ್ಪು. ಹೊಳಪು ಗಾಜಿನಂಥದು. ಕಾಠಿಣ್ಯ –6. ಇದು ಉದ್ದನೆಯ ಹರಳುಗಳಾಗಿ ಅಥವಾ ನೂಲಿನ ಎಳೆಗಳಂತೆ ಕಾಣಿಸಿಕೊಳ್ಳುತ್ತದೆ. ಇದರಲ್ಲಿನ ಸೀಳುಗಳು $56^{o}$ಗಳಲ್ಲಿ ಪರಸ್ಪರ ಛೇದಿಸುತ್ತವೆ. ಇದು ಈ ಗುಂಪಿನ ಖನಿಜಗಳ ಬಹುಮುಖ್ಯ ಗುಣ. ಪರಸ್ಪರ $87^{o}$ಗಳಲ್ಲಿ ಛೇದವಾಗುವಂತೆ ಸೀಳುಗಳುಳ್ಳ ಪೈರಾಕ್ಸೀನ್‌ಗಳಿಂದ ಇವನ್ನು ಬೇರ್ಪಡಿಸಬಹುದು.

ಈ ಗುಂಪಿನ ಮುಖ್ಯ ಬಗೆಗಳು ಕಪ್ಪು ಬಣ್ಣದ ಹಾರನ್‌ಬ್ಲೆಂಡ್, ಹಸುರು ಬಣ್ಣದ ಆಕ್ಟಿನೊಲೈಟ್; ಬಿಳುಪಾದ ಟ್ರೆಮೊಲೈಟ್, ತಿಳಿಹಸುರು ಮತ್ತು ಬಿಳಿಯ ಬಣ್ಣದ ಆಸ್‌ಬೆಸ್ಟಾಸ್ (ಕಲ್ನಾರು).

ಆ್ಯಂಫಿಬೋಲ್ ಅನೇಕ ಶಿಲೆಗಳಲ್ಲಿ ಕಂಡುಬರುತ್ತದೆ. ಮುಖ್ಯವಾಗಿ ರೂಪಾಂತರ ಶಿಲೆಗಳಲ್ಲಿ, ಪದರು ಶಿಲೆಗಳಾಗಿ ಕಂಡುಬರುತ್ತದೆ. ಹಲವು ವೇಳೆ ಗ್ರಾನೈಟ್ ಮೊದಲಾದ ಅಗ್ನಿಶಿಲೆಗಳಲ್ಲೂ ಇರುತ್ತದೆ. (ಎಸ್.ಕೆ.ವಿ.)

**ಆ್ಯಂಫಿಯಾಕ್ಸಸ್ :** ಬ್ರಾಂಕಿಯೊಸ್ಟೋಮ ಅಥವಾ ಲಾನ್ಸೆಲೆಟ್ ಎಂಬ ಹೆಸರಿನ ಈ ಪ್ರಾಣಿ ಸೆಫ್ಯಾಲೊಕಾರ್ಡೇಟ ಎಂಬ ಉಪವಂಶಕ್ಕೆ ಸೇರಿದೆ. ಸಣ್ಣ ಮೀನಿನಾಕಾರದ ಪಾರದರ್ಶಕ ಸಮುದ್ರ ವಾಸಿ. 28 ಪ್ರಭೇದಗಳಿವೆ. ಪ್ರಪಂಚದ ಎಲ್ಲ ಸಮುದ್ರಗಳಲ್ಲೂ ಜೀವಿಸುತ್ತವೆ. ಉದ್ದ ಒಂದು ಅಥವಾ ಎರಡು ಅಂಗುಲದಷ್ಟು. ಸುಲಭವಾಗಿ ಈಜುತ್ತದೆ. ಮರಳಿನಲ್ಲಿ ವೇಗವಾಗಿ ನುಗ್ಗಿ ಮುಂಭಾಗ ಮಾತ್ರ ಮರಳಿನ ಮೇಲೆ ಕಾಣುವಂತೆ ಅವಿತುಕೊಳ್ಳುತ್ತದೆ. ಜೀವಮಾನದ ಹೆಚ್ಚಿಗೆ ಕಾಲವನ್ನು ಸ್ಥಾಯಿಜೀವಿಯಾಗಿ ಕಳೆಯುತ್ತದೆ.

ದೇಹ ಉದ್ದವಾಗಿದೆ. ಎಡಬಲ ಪಕ್ಕಕ್ಕೆ ಚಪ್ಪಟೆಯಾಗಿದ್ದು ಆಕಾರದಲ್ಲಿ ಭರ್ಜಿಯನ್ನು ಹೋಲುತ್ತದೆ. ನಿರ್ದಿಷ್ಟವಾದ ತಲೆ, ದವಡೆಗಳು, ಹೃದಯ, ಜ್ಞಾನೇಂದ್ರಿಯಗಳು, ವಿಶಿಷ್ಟ ರೀತಿಯ ಮೆದುಳು ಇವಾವುವೂ ಇಲ್ಲ. ದೇಹದ ಮುಂದಿನ ತುದಿಯ ಕೆಳ ಭಾಗದಲ್ಲಿರುವ

ಬಾಯಿ ಕುಂಚಿಗೆಯಲ್ಲಿದೆ. ಬಾಯಿ ಕುಂಚಿಗೆಯ ಅಂಚಿನಲ್ಲಿ ಸಣ್ಣ ಸಣ್ಣ ತಂತುಗಳು ಸುತ್ತುಗಟ್ಟಿಕೊಂಡಿವೆ. ಬೆನ್ನು ಈಜುರೆಕ್ಕೆ, ಬಾಲದ ಈಜುರೆಕ್ಕೆ ಮತ್ತು ಆಸನ ದ್ವಾರದವರೆಗೂ ಹರಡಿರುವ ಕೆಳಗಿನ ಈಜು ರೆಕ್ಕೆ ಇವೆ. ದೇಹದ ತಳಭಾಗದ ಉದ್ದಕ್ಕೂ ಏಟ್ರಿಯಂ ದ್ವಾರದವರೆಗೆ ಮೆಟಪ್ಲೂರಲ್ ಮಡಿಕೆಗಳಿವೆ. ಇವುಗಳ ಹಿಂದೆ ಏಟ್ರಿಯಂ ರಂಧ್ರವಿದೆ. ಬಾಲದ ಈಜುರೆಕ್ಕೆಯ ಮುಂಭಾಗದ ಎಡದಲ್ಲಿ ಗುದದ್ವಾರವಿದೆ. ದೇಹದ ಎರಡುಪಕ್ಕಗಳಲ್ಲೂ v–ಆಕಾರದ ಮಯೋಟೋಮ್ ಸ್ನಾಯುಗಳೂ ಅವುಗಳ ಮಧ್ಯೆ ತಡಿಕೆಗಳಂತೆ ಮಯೋಕಾಮೇಟಗಳೂ ಇವೆ. ಸ್ನಾಯುಗಳು ಈಜಲು ಸಹಕರಿಸುತ್ತವೆ. ಜೀವಿಯ ಅಕ್ಷದಲ್ಲಿ ಆಧಾರ ಸ್ತಂಭದಂತಿರುವ ನೋಟೊಕಾರ್ಡ್ (ಬೆನ್ನುಮೂಳೆಗೆ ವಿಕಾಸದ ಮೂಲವೆನಿಸಿದ ಅರ್ಧಮೃದ್ವಸ್ಥಿಯ ಪಟ್ಟಿ) ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ಚಾಚಿದೆ. ನೋಟೊಕಾರ್ಡಿನ ಮೇಲೆ ಉದ್ದಕ್ಕೂ ಟೊಳ್ಳಾದ ನರಬಳ್ಳಿಯಿದೆ. ಇದು ಮುಂದಿನ ತುದಿಯಲ್ಲಿ ಸರಳ ರಚನೆಯ ಮಿದುಳಾಗಿ ರೂಪುಗೊಂಡಿದೆ. ನರಬಳ್ಳಿಯಿಂದ ಅಂತರ್ವಾಹಿ ಮತ್ತು ಬಹಿರ್ವಾಹಿ ನರತಂತುಗಳು ಹೊರಬಂದಿವೆ.

ಬಾಯಿ ಮೂಲಕ ದೇಹಕ್ಕೆ ಹೋಗುವ ನೀರು ಆಹಾರ ಪದಾರ್ಥಗಳನ್ನೂ ಉಸಿರಾಡಲು ಆಕ್ಸಿಜನ್ನನ್ನೂ ಒದಗಿಸುತ್ತದೆ. ಪೀಪಾಯಿ ಆಕಾರದ ಗಂಟಲಿನ ಪಕ್ಕೆಗಳಲ್ಲಿ ಸು. 50–230 ಕಂಡಿಗಳಂತಿರುವ ರಂಧ್ರಗಳಿವೆ. ಕಿವಿರುಗಳ ಮಧ್ಯೆಯಿರುವ ಗಂಟಲಿನ ಅಡ್ಡೆಡೆಗಳಲ್ಲಿ ಕೈಟಿನ್ ಪದಾರ್ಥದ ಸೈನಾಪ್ಟಿಕ್ಯುಲೆ ಎಂಬ ಅಸ್ಥಿಪಂಜರದ ರಚನೆಗಳಿವೆ. ಗಂಟಲೊಳಗಿನ ತಳಭಾಗದ ಉದ್ದಕ್ಕೂ ಶಿಲಕೆ ಮತ್ತು ಗ್ರಂಥಿಗಳಿಂದ ಕೂಡಿದ ಎಂಡೊಸ್ಟೈಲ್ ಇದೆ. ಇದೇ ರೀತಿ ಗಂಟಲಿನ ಮೇಲ್ಭಾಗದ ಉದ್ದಕ್ಕೂ ಒಳಗಡೆ ಶಿಲಕೆಗಳಿಂದ ಕೂಡಿದ ಹೈಪರ್ ಫರಿಂಜಿಲ್ ಎಂಬ ಕಾಲುವೆ ಇದೆ. ಇವೆರಡನ್ನೂ ಸಂಬಂಧಿಸುವಂತೆ ಗಂಟಲಿನ ಮುಂಭಾಗದಲ್ಲಿ ಇಕ್ಕೆಡೆಯಲ್ಲೂ ಒಂದೊಂದು ಶಿಲಕೆಯಿಂದ ಕೂಡಿದ ಪೆರಿಫೆರಿಂಜಲ್ ಕಾಲುವೆಗಳಿವೆ. ಸಮುದ್ರದ ನೀರು ಗಂಟಲಿನೊಳಗೆ ಬಂದಾಗ, ಎಂಡೊಸ್ಟೈಲ್ ಸ್ರವಿಸುವ ಲೋಳೆಯಲ್ಲಿ ಸಣ್ಣ ಜೀವಿಗಳು ಸಿಕ್ಕಿಬೀಳುತ್ತವೆ. ಶಿಲಕೆಗಳು ಅವನ್ನು ಚಟುವಟಿಕೆಯಿಂದ ಮುಂದಕ್ಕೆ ಸಾಗಿಸುತ್ತವೆ. ಅವು ಪೆರಿಫೆರಿಂಜಿಲ್ ಕಾಲುವೆಗಳ ಮಾರ್ಗವಾಗಿ ಎಪಿಫೆರಿಂಜಿಯಲ್ ಕಾಲುವೆಗೆ ಬಂದು ಕೊನೆಗೆ ಅನ್ನನಾಳದಲ್ಲಿ ಬೀಳುತ್ತವೆ.

ಪಿತ್ತಜನಕಾಂಗವನ್ನು ಹೋಲುವ ಹಿಪಾಟಿಕ್ ಸೀಕಂ ಸ್ರವಿಸುವ ದ್ರವ ಆಹಾರವನ್ನು ಜೀರ್ಣಿಸಲು ಸಹಾಯ ಮಾಡುತ್ತದೆ. ದೇಹದಿಂದ ಹೊರಹೋಗುವ ವಸ್ತುವಿನಲ್ಲಿ ಇಂಗಾಲದ ಡೈಆಕ್ಸೈಡ್ ಮತ್ತು ಇತರ ವಿಸರ್ಜನ ವಸ್ತುಗಳಿರುತ್ತವೆ. ಖಚಿತವಾದ ಹೃದಯವಿಲ್ಲದಿದ್ದರೂ ರಕ್ತಪರಿಚಲನೆಯಾಗುತ್ತದೆ. ಇದಕ್ಕೆ ದೇಹದೊಳಗಿರುವ ಲೋಮನಾಳಗಳು ಮತ್ತು ಸಂಕುಚಿತ ಶಕ್ತಿಯುಳ್ಳ ರಕ್ತನಾಳಗಳು ಕಾರಣ. ನೆಫ್ರೀಡಿಯಗಳು ಶುದ್ಧೀಕರಣ ಕ್ರಿಯೆಯನ್ನು ನಡೆಸುತ್ತವೆ.

ಇದು ಏಕಲಿಂಗ ಪ್ರಾಣಿ. ಪ್ರೌಢಜೀವಿಯಲ್ಲಿ 26–33 ಜೊತೆ ಜನನೇಂದ್ರಿಯಗಳಿರುತ್ತವೆ. ಪ್ರಜನನ ಕ್ಷಣಗಳು ಪಕ್ವವಾದಾಗ ಜನನೇಂದ್ರಿಯವನ್ನುಳಿದು ಏಟ್ರಿಯಂಗೆ ಬಿದ್ದು ಅಲ್ಲಿಂದ ದ್ವಾರದ ಮೂಲಕ ಹೊರಬರುತ್ತವೆ. ತತ್ತಿಗಳಿಡುವ ಕಾಲವಾದ ಸಾಯಂಕಾಲ ಮತ್ತು ರಾತ್ರಿವೇಳೆಯಲ್ಲಿ ಇವು ಬಿರುಸಿನಿಂದ ಈಜಾಡುತ್ತವೆ. ಸಮುದ್ರದ ನೀರಿನಲ್ಲಿ ಗರ್ಭಕಟ್ಟಿ ತತ್ತಿಗಳು ಬೆಳೆದು ಒಡೆದು ಲಾರ್ವಗಳಾಗುತ್ತವೆ. ಇವು ಪ್ರೌಢಜೀವಿಗಿಂತ ಹೆಚ್ಚು ಚಟುವಟಿಕೆ ಯಿಂದಿದ್ದು ಈಜುತ್ತ ಕ್ರಮೇಣ ಪ್ರಬುದ್ಧಾವಸ್ಥೆಯನ್ನು ತಲಪುತ್ತವೆ.

ಲಾರ್ವದ ಬಾಯಿ ಎಡಗಡೆಯೂ ಕಿವಿರಿನ ರಂಧ್ರಗಳು ಬಲಗಡೆಯೂ ಇವೆ. ಆದ್ದರಿಂದ ಎಡಬಲಭಾಗಗಳಲ್ಲಿ ಪಾರ್ಶ್ವ ಸಮಾನತೆ ಇಲ್ಲ. ಸುಮಾರು ಮೂರು ತಿಂಗಳುಗಳ ಕಾಲ ಈಜು ಜೀವನ ನಡೆಸಿ ಸಮುದ್ರದ ಆಳ ಸೇರಿ ವಿಶಿಷ್ಟ ರೀತಿಯಲ್ಲಿ ರೂಪ ಪರಿವರ್ತನೆ ಹೊಂದುತ್ತದೆ. ಲಾರ್ವದ ಅವಸ್ಥೆಯಲ್ಲಿ ಕ್ರಮವಾಗಿ ಅಂಗಸಮಷ್ಟಿ ಏರ್ಪಟ್ಟು ಲಾರ್ವ ಪ್ರೌಢಜೀವಿಯಾಗುತ್ತದೆ.

ಈ ಪ್ರಾಣಿಯನ್ನು ದವಡೆಗಳಿಲ್ಲದ ಚಕ್ರಾಸ್ಯಗಳಿಗೆ ಹೋಲಿಸಬಹುದೆಂದೂ ತಲೆರೂಪು ಗೊಂಡಿರುವ ಕಶೇರುಕಗಳ ರಚನೆಗೆ ಇದು ಸಮೀಪದ್ದೆಂದೂ ಗ್ರಿಗೊರಿ ವಾದಿಸುತ್ತಾನೆ. ಕಶೇರುಕಗಳ ವಿಕಾಸಕ್ಕೆ ಈ ಪ್ರಾಣಿ ಮೂಲಭೂತವಾಗಿರಬೇಕೆಂದು ಕೆಲವರು ಊಹಿಸುತ್ತಾರೆ. ಆದ್ದರಿಂದ ಈ ಪ್ರಾಣಿಗಳು ಪ್ರಾಣಿಶಾಸ್ತ್ರಜ್ಞರ ಪರೀಕ್ಷೆಗಳಿಗೆ, ವಿಶೇಷ ಪ್ರಯೋಗಗಳಿಗೆ ಈಡಾಗಿವೆ. ಪೂರ್ತಿ ಬೆಳೆದ ನೋಟೊಕಾರ್ಡ್ ಆಸರೆ ಕಿವಿರು ರಂಧ್ರಗಳು ಮತ್ತು ಕೊಳವೆಯಂಥ ನರದ ಬಳ್ಳಿಯಿರುವುದರಿಂದ ಈ ಪ್ರಾಣಿ ಕಶೇರುಕಗಳ ರಚನೆಯ ಮೂಲ ಸ್ವರೂಪವನ್ನು ಪ್ರತಿನಿಧಿಸುತ್ತದೆ. (ಪಿ.ಎ.ಆರ್.)

**ಆ್ಯಂಫರ :** ಈಜಿಪ್ಟ್, ಗ್ರೀಸ್, ಕ್ರೀಟ್ ಮುಂತಾದ ದೇಶಗಳಲ್ಲಿ ಧಾನ್ಯವನ್ನು, ಮದ್ಯವನ್ನು ಶೇಖರಿಸಲು ಹಿಂದೆ ಬಳಕೆಯಲ್ಲಿದ್ದ ಗುಡಾಣಗಳು. ಇವುಗಳ ಬಾಯ ಇಕ್ಕಡೆಗಳಲ್ಲೂ ಹಿಡಿಗಳಿರುತ್ತವೆ. ರೋಮ್ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ ಮೆಡಿಟರೇನಿಯನ್ ಪ್ರದೇಶದಲ್ಲಿ ತಯಾರಿಸುತ್ತಿದ್ದ ಆ್ಯಂಫೋರಗಳು ಪೂರ್ವ ಆಫ್ರಿಕ, ಪಶ್ಚಿಮ ಏಷ್ಯ ಭಾರತ ಮತ್ತು ಚೀನದಲ್ಲಿ ದೊರ ಕಿದ್ದು ಅಂದಿನ ವಿಶಾಲ ವಾಣಿಜ್ಯ ಸಂಪರ್ಕಗಳ ಬಗ್ಗೆ ಮಾಹಿತಿ ಒದಗಿಸುತ್ತವೆ. (ಎಸ್.ಎನ್.)



**ಆ್ಯಂಬ್ರೋಚಿನಿ, ಎಂಜೆಲೊ :** 1454–94. ಇಟಲಿಯ ಕವಿ. ಮಾನವವಾದಿ, ಭಾಷಾಶಾಸ್ತ್ರಜ್ಞ. ಈತನಿಗೆ ಪಾಲಿಟಿಯಾನೊ ಎಂಬ ಇನ್ನೊಂದು ಹೆಸರಿದೆ. ಇವನ ಆರ್ಫಿಯ ಉತ್ತಮ ಕಾವ್ಯ. ಫ್ಲಾರೆನ್ಸಿನಲ್ಲಿ ತತ್ತ್ವಶಾಸ್ತ್ರ ಮತ್ತು ಸಾಹಿತ್ಯಗಳ ಮೇಲೆ ಈತ ಕೊಟ್ಟ ಉಪನ್ಯಾಸಗಳು ಪ್ರಸಿದ್ಧವಾಗಿವೆ. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಉತ್ಕೃಷ್ಟ ಶೋಕಗೀತೆ, ಪ್ರಗಾಥ, ನಾಟುನುಡಿಗಳನ್ನೂ ಮಾತೃಭಾಷೆಯಲ್ಲಿ ಸುಂದರ ಪ್ರೇಮಗೀತೆಗಳನ್ನೂ ಈತ ರಚಿಸಿದ. (ಎಚ್.ಕೆ.ಆರ್.)

**ಆ್ಯಂಬ್ಲಿಪೋಡ :** ಪುರಾತನ ಕಾಲದ ಏಕಖುರ ಸ್ತನಿ. ಇದರ ಹೆಸರು ಪ್ಯಾಂಟೊಲಾಂಬ್ಡ. ಕುರಿಯ ಗಾತ್ರದ್ದಾಗಿತ್ತು; ಪೇಲಿಯೋಸೀನ್ ಕಾಲದಲ್ಲಿ ಮೊದಲು ಕಾಣಿಸಿಕೊಂಡ ಈ ಪ್ರಾಣಿಗೆ ಮೋಟುಗಾಲು ಮತ್ತು ಅಗಲವಾದ ಪಾದಗಳಿದ್ದುವು. ನಿಧಾನ ವಾದ ನಡಿಗೆಯ ಈ ಪ್ರಾಣಿಗೆ ದೊಡ್ಡ ಕೋರೆದಾಡೆಗಳೂ v– ಆಕಾರದ ಮೊನೆಗಳಿದ್ದ ತ್ರಿಕೋಣಾಕಾರದ ಮೇಲಿನ ದವಡೆ ಹಲ್ಲುಗಳೂ ಇದ್ದುವು.

ಪೇಲಿಯೊಸೀನ್ ಅಂತ್ಯದಲ್ಲಿ ಮತ್ತು ಪ್ರಾಚೀನ ಇಯೊಸೀನ್ ಕಾಲದಲ್ಲಿ ಜೀವಿಸಿದ್ದ ಆ್ಯಂಬ್ಲಿಪೋಡಗಳು ದೈತ್ಯಾಕಾರವುಳ್ಳವುಗಳಾಗಿ ವಿಕಾರರೂಪಿನ ಏಕಖುರ ಸ್ತನಿಗಳಾಗಿದ್ದುವು. ಕಡೆಯ ಪೇಲಿಯೊಸೀನ್ ಕಾಲದಲ್ಲಿ ಸ್ಪರಾಟ್‌ಕೊಲ್ಯಾಂಬ್‌ಡವು ಪಾಂಟೊಲ್ಯಾಂಬ್‌ಡವಿಗಿಂತ 2.5 ಯಷ್ಟು ದೊಡ್ಡದಾಗಿತ್ತು. ಬೇರನ್ನು ಕಿತ್ತು ತಿನ್ನುತ್ತಿದ್ದ ಪ್ರಾಣಿಯಾದುದರಿಂದ ಬೇರೆ ಏಕಖುರ ಸಸ್ತನಿಗಳಲ್ಲಿಲ್ಲದ ಬಲವಾದ ಕೋರೆದಾಡೆಗಳೂ ಉಗುರುಳ್ಳ ಬೆರಳುಗಳೂ ಇದ್ದುವು. ಬೇರಿಲ್ಯಾಂಬ್‌ಡ ಸು 2.75ಮೀ ಎತ್ತರವಿತ್ತು. ಇದಕ್ಕೆ ಅಗಲವಾದ ಶರೀರ, ಭಾರವಾದ ಕಾಲುಗಳು, ಬಾಲ, ಚಿಕ್ಕ ತಲೆಬುರುಡೆ ಮತ್ತು ಸಣ್ಣ ಕೋರೆದಾಡೆ ಇದ್ದುವು.

ಪ್ರಾಚೀನ ಇಯೊಸೀನ್ ಕಾಲದ ಕೋರಿಫೊಡಾನ್ ಎನ್ನುವ ಪ್ರಾಣಿಯ ವ್ಯಾಪ್ತಿ ಉತ್ತರ ಅಮೆರಿಕದಿಂದ ಯುರೋಪಿನವರೆಗೂ ಇತ್ತು. ಇದು ಬೇರಿಲ್ಯಾಂಬ್‌ಡ ಗಾತ್ರವಾದ್ದಾದರೂ ಅನೇಕ ವಿಧಗಳಲ್ಲಿ ಅದಕ್ಕಿಂತ ಬೇರೆಯಾಗಿತ್ತು. ಇದರ ಶರೀರ ಅತಿ ಉದ್ದ, ಬಾಲ ಸಣ್ಣ, ಮುಸುಡಿ ಅಗಲ, ತಲೆಬುರುಡೆ ದೊಡ್ಡದು. 44 ಹಲ್ಲುಗಳಿದ್ದುವು. ಕೋರೆಹಲ್ಲುಗಳು ಉದ್ದವಾಗಿದ್ದುವು. ದವಡೆಯಲ್ಲಿ ಸ್ವಲ್ಪ ಸ್ಥಳ ಬಿಟ್ಟು ಮೃದುವಾದ ಆಹಾರವನ್ನು ತಿನ್ನಲು ಅನುಕೂಲವಾದ ತ್ರಿಕೋಣಾಕಾರದ ದವಡೆ ಹಲ್ಲುಗಳಿದ್ದುವು. ಕಾಲಿನ ಮೂಳೆಗಳು ಒಂದೇ ನೇರದಲ್ಲಿ ಅಳವಡಿಸಲ್ಪಟ್ಟಿದ್ದುವು. ದೇಹದ ಭಾರವನ್ನು ಹೊರಲನುಕೂಲವಾಗುವ ಬಲವಾದ ಮೋಟು ಕಾಲ್ಬೆರಳುಗಳಿದ್ದುವು. ಆದರೆ ಈ ಗುಂಪಿಗೆ ಸೇರಿದ ಇತರ ಪ್ರಾಣಿಗಳಲ್ಲಿ ವ್ಯತ್ಯಾಸವಿತ್ತು. ಕೋರಿಫೊಡಾನ್‌ಗೆ ಟಾಪೀರ್ ಮಾದರಿ ಗೊರಸುಗಳಿದ್ದರೆ ಇದರ ಸಂಬಂಧಿ ಟೈಟನಡಾಯಸ್‌ಗೆ ನೆಲ ಅಗೆಯುವ ಉಗುರುಗಳಿದ್ದುವು. ಉತ್ತರ ಅಮೆರಿಕದ ಆ್ಯಂಬ್ಲಿಪೋಡ ಗಳಲ್ಲಿ ಇದೇ ಕೊನೆಯದು. ಆದರೆ ಏಷ್ಯ ಖಂಡದಲ್ಲಿ ಕೋರಿಫೊಡಾನ್‌ಗೆ ಅತಿ ಸಮೀಪ ಸಂಬಂಧಿಗಳಾದ ಪ್ರಾಣಿಗಳು ಇಯೊಸೀನ್ ಮತ್ತು ಆಲಿಗೊಸೀನ್ ಕಾಲದಲ್ಲಿ ವಾಸಿಸುತ್ತಿದ್ದುವು. ಮಧ್ಯ ಆಲಿಗೊಸೀನ್ ಯುಗದಲ್ಲಿ ಈ ಪ್ರಾಣಿಗಳು ಸಂಪೂರ್ಣ ನಾಶವಾದುವು.

ಉತ್ತರ ಅಮೆರಿಕದ ಆ್ಯಂಬ್ಲಿಪೋಡ ಆದಿಕಾಲದ ಐದು ಬೆರಳುಗಳಿದ್ದ ಸಣ್ಣ ಏಕಪಾದದ ಗೊರಸುಳ್ಳ ಸ್ತನಿ. ಪೆರಿಟೈಕಸ್ ಮತ್ತು ಪ್ಯಾಂಟೊಲಾಂಬ್‌ಡ ಎರಡೂ ಒಂದೇ ಕುಟುಂಬಕ್ಕೆ ಸೇರಿದವು. ಎರಡಕ್ಕೂ 44 ಹಲ್ಲುಗಳಿದ್ದುವು. ಆದರೆ ಮೇಲಿನ ದವಡೆಗಳ ಆಕಾರದಲ್ಲಿ ವ್ಯತ್ಯಾಸವಿತ್ತು. ಪಾಂಟೊಡಾಂಟದಲ್ಲಿ ಪಾಂಟೊಲಾಂಬ್‌ಡಿಡೀ ಬೇರಿಲಾಂಬ್‌ಡಿಡೀ ಮತ್ತು ಕೋರಿಫೊಡಾಂಟಿಡೀ ಕುಟುಂಬಗಳು ಸೇರಿವೆ. ಪಾಂಟೊಲಾಂಬ್‌ಡ ಪೇಲಿಯೊಸೀನ್ ಕಾಲದಲ್ಲಿ ಜೀವಿಸಿದ್ದ ಪ್ರಾಣಿ. ಇದೇ ಕೋರಿಫೊಡಾನ್‌ದ ಉಗಮಕ್ಕೆ ಮೂಲಜೀವಿ.

ಇನ್ಯಾಟೊತೇರಿಯಂ ಎಂಬುದು ಇಯೊಸೀನ್ ಕಾಲದಲ್ಲಿ ಜೀವಿಸಿದ್ದ ಇನ್ನೊಂದು ಪ್ರಾಣಿ. ಇದನ್ನು ಕೆಲವರು ಟಿಮೊಸೆರಸ್ ಇನ್ಯಾಟ ಎಂದು ಬೇರ್ಪಡಿಸಿದ್ದಾರೆ. ಇದಕ್ಕೆ ಐದು ಬೆರಳುಗಳುಳ್ಳ ಕುಳ್ಳ ದಪ್ಪ ಕಂಬದಂಥ ಕಾಲುಗಳಿದ್ದುವು. ಕಿರಿದಾದ ತಲೆಯೂ ಅತಿ ಚಿಕ್ಕ ಮೆದುಳೂ ನೀಳವಾದ ಮುಖವೂ ಇದ್ದುವು. ಖಡ್ಗಮೃಗದಷ್ಟು ದೊಡ್ಡದಾದ ಅದರ ಶರೀರಕ್ಕೆ ಅದರ ಮಿದುಳು ಏನೇನೂ ಸಾಲದು. ತಲೆಯ ಮೇಲೆ ಮೂರು ಚಿಕ್ಕ ಕೊಂಬುಗಳಿ ದ್ದುವು. ಹಿಂಭಾಗದ ಕೊಂಬು ಬೇರೆ ಕೊಂಬುಗಳಿಗಿಂತ ದೊಡ್ಡದಾಗಿತ್ತು. ಬಾಯಲ್ಲಿ 44 ಹಲ್ಲುಗಳಿದ್ದುವು. ಮೇಲಿನ ಕೋರೆದಾಡೆಗಳು ಉದ್ದವಾದ ಕತ್ತಿಯಂತೆ ಆಯುಧದಂತಿದ್ದುವು. ಅವುಗಳನ್ನು ಮುಚ್ಚುವುದಕ್ಕೆ ಎರಡು ಕೆಳದವಡೆಯಲ್ಲೂ ಮಾಂಸದ ಹೊದಿಕೆಯಿತ್ತು.

ಪ್ಯಾಂಟೊಡಾಂಟ ಮತ್ತು ಡೈನೊಸೆರಾಟ ಜಾತಿಗೆ ಸೇರಿದ ಪ್ರಾಣಿಗಳನ್ನು ಕೆಲವು ವೇಳೆ ಆ್ಯಂಬ್ಲಿಪೋಡದ ಗುಂಪಿಗೆ ಸೇರಿಸುವುದುಂಟು. ಆದರೆ ಅವೆರಡು ವರ್ಗಗಳ ಪ್ರಾಣಿಗಳ ಹಲ್ಲಿನ ರಚನೆಯಲ್ಲಿ ವ್ಯತ್ಯಾಸವಿರುವುದರಿಂದ ಅವುಗಳನ್ನು ಬೇರೆ ಮಾಡಲಾಗಿದೆ. ಎರಡೂ ಕಾಂಡೈಲಾರ್ಥಸ್ ಬುಡಕಟ್ಟಿನಿಂದ ಬಂದಿದ್ದರೂ ಕಾಲು ಮತ್ತು ಹಲ್ಲುಗಳ ಆಕಾರ ವ್ಯತ್ಯಾಸದಿಂದ ಅವನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿದೆ.

ಡೈನೊಸೆರಾಟ ಎಂಬುದು ಭಾರವಾದ ಮೋಟುಗಾಲಿನ ದೈತ್ಯಾಕಾರದ ಪ್ರಾಣಿ. ತಲೆಯ ಮೇಲೆ ಮೂರು ಜೊತೆ ಕೊಂಬುಗಳಿದ್ದುವು. ಮೇಲಿನ ದವಡೆ ಹಲ್ಲುಗಳು ಕೋರಿಫೊಡಾನ್ ರೀತಿಯಲ್ಲಿದ್ದರೂ ಮಧ್ಯದಲ್ಲಿ ಎರಡು ಕಟ್ಟೆಗಳಿದ್ದುವು. ಇಯೊಸೀನ್ ಯುಗದ ಕಡೆಯ ದಿನಗಳಲ್ಲಿ ಡೈನೊಸೆರಾಟಗಳ ವಂಶ ಅಳಿದುಹೋಯಿತು. (ಎಸ್.ಎನ್.ಕೆ.)

**ಆ್ಯಂಸ್ಟರ್‌ಡ್ಯಾಮ್ :** 1 ನೆದರ್‌ಲೆಂಡ್ಸಿನ ದೊಡ್ಡ ನಗರ. ಅದರ ರಾಜಧಾನಿ. ರಾಜಧಾನಿಯಾಗಿದ್ದರೂ 48 ಕಿಮೀ ದೂರದಲ್ಲಿರುವ ಹೇಗ್ ನಗರದಲ್ಲಿ ಸರ್ಕಾರದ ಕಚೇರಿಗಳಿವೆ. ಜನಸಂಖ್ಯೆ: 1,002, 868 (2001). ಪ್ರಪಂಚದ ನಾನಾ ದೇಶಗಳೊಡನೆ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡು ಯುರೋಪಿನ ಮುಖ್ಯ ವಾಣಿಜ್ಯ ಕೇಂದ್ರಗಳಲ್ಲೊಂದಾಗಿದೆ. ಉತ್ತರ ಸಮುದ್ರದ ಕಾಲುವೆಯ ಮೂಲಕ ನಾವೆಯ ಅನುಕೂಲತೆ ಹೊಂದಿರುವ ರೇವುಪಟ್ಟಣ. ಉಷ್ಣವಲಯದ ಉತ್ಪನ್ನಗಳಾದ ಕಾಫಿ, ಹೊಗೆಸೊಪ್ಪು, ರಬ್ಬರ್, ಕೋಕೊ, ಗಟ್ಟಿಮರದ ಸಾಮಾನುಗಳು ಇಲ್ಲಿಂದ ರಫ್ತಾಗುತ್ತವೆ. ವಜ್ರಗಳನ್ನು ಕತ್ತರಿಸುವುದಕ್ಕೆ ಮತ್ತು ಹೊಳಪು ನೀಡುವಲ್ಲಿ ಪ್ರಪಂಚದ ಒಂದು ಪ್ರಮುಖ ಕೇಂದ್ರವಾಗಿದೆ. ಮೂಲತಃ ಇದೊಂದು ಸಾಧಾರಣ ಮೀನುಗಾರಿಕಾ ಹಳ್ಳಿಯಾಗಿದ್ದು 1300ರಲ್ಲಿ ಪಟ್ಟಣವೆಂದು ಘೋಷಿಸಲಾಯಿತು. 14 ಮತ್ತು 15ನೆಯ ಶತಮಾನದಲ್ಲಿ ತೀವ್ರಗತಿಯನ್ನು ಹೊಂದಿತು. ಆಂಟ್‌ವಾರ್ಪ್ ಪ್ರಾಮುಖ್ಯತೆ ಕುಂದಿದ 16ನೆಯ ಶತಮಾನದಲ್ಲಿ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಬೆಳೆಯಿತು. 18ನೆಯ ಶತಮಾನದಲ್ಲಿ ಬೆಳವಣಿಗೆ ಕುಂಠಿತವಾದರೂ ಅನಂತರದ ಬೆಳವಣಿಗೆ ನಿರಂತರ. ಎರಡನೆಯ ಮಹಾಯುದ್ಧದ ತರುವಾಯ ಅಂತಾರಾಷ್ಟ್ರೀಯ ಹಣಕಾಸು ಮತ್ತು ವ್ಯಾಪಾರದ ಕೇಂದ್ರವಾಗಿ ಪರಿಣಮಿಸಿತು. ಜೈಡರ್ ಜೀ ಸಮುದ್ರಮಟ್ಟಕ್ಕಿಂತ ತಗ್ಗಾಗಿರುವುದರಿಂದ ನಗರವನ್ನು ಗುಡ್ಡಗಳ ಮೇಲೆ ಕಟ್ಟಲಾಗಿದೆ. ಅದರ ನಾನಾ ಭಾಗಗಳಲ್ಲಿ ಅನೇಕ ಸೇತುವೆಗಳೂ 17 ಮತ್ತು 18ನೆಯ ಶತಮಾನದ ಪ್ರಮುಖ ಕಟ್ಟಡಗಳೂ ಇವೆ. ಈ ನಗರ 1370ರಲ್ಲಿ ಹ್ಯಾನ್ಸಿಯಾಟಿಕ್ ಒಕ್ಕೂಟವನ್ನು ಸೇರಿತು. ಇದು ಸ್ಪಿನೋಜನ ಜನ್ಮಸ್ಥಳ. ರೆಂಬ್ರಾನ್‌ನ ವಾಸಸ್ಥಾನ. ಇಲ್ಲಿ ಒಂದು ವಿಶ್ವವಿದ್ಯಾನಿಲಯವಿದೆ.

2 ಅಮೆರಿಕದ ಸಂಯುಕ್ತಸಂಸ್ಥಾನದ ನ್ಯೂಯಾರ್ಕ್ ಪ್ರಾಂತ್ಯದ ಒಂದು ಪಟ್ಟಣ. ಈರಿ ಮತ್ತು ಆಂಟೇರಿಯೊ ಸರೋವರಗಳ ಕಡೆ ರೈಲು, ರಸ್ತೆಗಳ ಸಂಪರ್ಕವಿದೆ. ಸಮೀಪದಲ್ಲಿ ಮೊಕಾವ್ಕ್ ನದಿ ಹರಿಯುವುದು. ಹೆಚ್ಚಾಗಿ ಹಾಲೆಂಡಿನಿಂದ ವಲಸೆ ಬಂದ ಜನ ವಾಸಿಸುತ್ತಾರೆ.

3. ಹಿಂದೂ ಮಹಾಸಾಗರದ ದಕ್ಷಿಣ ಭಾಗದಲ್ಲಿ ಸೇಂಟ್ ಪಾಲ್ ದ್ವೀಪಕ್ಕೆ ಸಮೀಪದಲ್ಲಿರುವ ಒಂದು ದ್ವೀಪ. ಫ್ರಾನ್ಸಿಗೆ ಸೇರಿದೆ.

*

**ಆಕ್ ಹಕ್ಕಿಗಳು :** ಕರಾಡ್ರಿಯೀ ಫಾರ್ಮೀಸ್ ಗಣದ ಆಲ್ಸಿಡೀ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು. ಗಿಲಿಮೋಟ್ಸ್, ಆಕ್ಲೆಟ್ಸ್, ಪಫಿನ್ ಮುಂತಾದವೂ ಕೂಡ ಈ ಗುಂಪಿಗೆ ಸೇರಿವೆ. ಎಲ್ಲವೂ ಉತ್ತರ ಧ್ರುವದಲ್ಲಿ ಹೇರಳವಾಗಿವೆ. ಚಳಿಗಾಲದಲ್ಲಿ ಹಿಮವನ್ನು ಸಹಿಸಲಾರದೆ ಅಮೆರಿಕದ ಪೂರ್ವ, ಪಶ್ಚಿಮ ಸಮುದ್ರ ತೀರಕ್ಕೆ ವಲಸೆ ಹೋಗುತ್ತವೆ. ನೀರಿನ ಮೇಲೆ ಸೊಗಸಾಗಿ ತೇಲುತ್ತದೆ. ಈಜುತ್ತದೆ, ಸಬ್‌ಮೆರಿನ್‌ಗಳಂತೆ ಬಹಳ ಆಳಕ್ಕೆ ಹೋಗುತ್ತದೆ. ನೀರಿನಲ್ಲಿ ಮುಳುಗಿದಾಗಲೂ ರೆಕ್ಕೆ ಬಡಿಯುತ್ತ ಈಜುತ್ತದೆ. ಸಮುದ್ರತೀರದಲ್ಲಿ ವಾಸಮಾಡುವುದರಿಂದ ಅಲ್ಲಿ ಸಿಗುವ ಮೀನನ್ನೂ ತೇಲುವ ಅನೇಕ ಜಾತಿಯ ಕೀಟಗಳನ್ನೂ ತಿಂದು ಜೀವನ ಸಾಗಿಸುತ್ತದೆ. ಹಿಮದಲ್ಲೂ ಮತ್ತು ಜಲದಲ್ಲೂ ವಾಸಮಾಡುವುದರಿಂದ ಮೈತುಂಬ ದಟ್ಟವಾದ ಪುಕ್ಕಗಳು ಇವೆ. ಎಸ್ಕಿಮೊಗಳು ರೆಡ್ ಇಂಡಿಯನ್ನರಂತೆ ಶರೀರಾಲಂಕಾರಕ್ಕೆ ಇದರ ಪುಕ್ಕಗಳನ್ನು ಬಳಸುತ್ತಾರೆ. ಈ ಜಾತಿಯ ಪಕ್ಷಿಗಳಿಗೆ ಬಹಳ ಬಲವಾದ ರೆಕ್ಕೆಗಳು ಇವೆ. ಕಾಲುಗಳು ಚಿಕ್ಕವಾಗಿ ಶರೀರದ ಹಿಂಭಾಗದಲ್ಲಿ ಇವೆ. ನೆಲದ ಮೇಲೆ ನಿಂತಾಗ ಮನುಷ್ಯ ಕೂತಂತೆ ಕಾಣುತ್ತದೆ. ಪ್ರತಿಯೊಂದು ಕಾಲಿನಲ್ಲೂ ಮೂರು ಬೆರಳುಗಳಿವೆ. ಬೆರಳ ಸಂದಿಯಲ್ಲಿ ಚರ್ಮ ಆವರಿಸಿ ಜಾಲಪಾದವಾಗಿರುವುದರಿಂದ ನೀರನಲ್ಲಿ ಈಜಲು ಅನುಕೂಲ. ಆಕ್ ಹಕ್ಕಿಗಳ ಪುಕ್ಕ ಬಿಳಿ ಮತ್ತು ಕಪ್ಪು. ಕೊಕ್ಕು ಮಾತ್ರ ವಿಚಿತ್ರ. ಇವು ಭೂಮಿಯ ಮೇಲಿದ್ದಾಗ ನೋಡಲು ಬಹು ವಿಕಾರ. ಇವಕ್ಕೆ ಗೂಡು ಕಟ್ಟುವ ಕಲೆ ಬಾರದು. ಆದ್ದರಿಂದ ಮೊಟ್ಟೆ ಇಡುವ ಕಾಲ ಬಂದಾಗ ಸಾವಿರಾರು ಪಕ್ಷಿಗಳು ಸಮುದ್ರತೀರದಲ್ಲಿ ಬಿರುಕುಗಳನ್ನು ಹುಡುಕಿ ಅಲ್ಲಿ ತಮ್ಮ ಮೊಟ್ಟೆ ಇಡುತ್ತವೆ. ಗಿಲಿಮೋಟ್ಸ್ ಉದ್ದ ಇವೆ. ಶರೀರದ ಎಲ್ಲ ಪುಕ್ಕಗಳೂ ಕಪ್ಪಾಗಿದ್ದು ರೆಕ್ಕೆಯಲ್ಲಿ ಬಿಳಿಯ ಮಚ್ಚೆಗಳು ಇವೆ. ಚಳಿಗಾಲದಲ್ಲಿ ಮಾತ್ರ ರೆಕ್ಕೆ ಮತ್ತು ಬಾಲದ ಪುಕ್ಕಗಳು ಕಪ್ಪಾಗಿ ಬೇರೆಲ್ಲ ಪುಕ್ಕಗಳು ಬಿಳಿಯಬಣ್ಣಕ್ಕೆ ತಿರುಗುತ್ತವೆ. ಇವು ಒಂದು ಸಾರಿಗೆ ಎರಡು ಮೊಟ್ಟೆಗಳನ್ನು ಇಡುತ್ತವೆ. ಪಫಿನ್ ಕೂಡ ಉದ್ದವಾಗಿದ್ದು, ಕೆಂಪು ಮಿಶ್ರಿತ ಹಳದಿ ಬಣ್ಣದ ಪುಕ್ಕಗಳನ್ನು ಹೊಂದಿದೆ. ಇದೇ ಗುಂಪಿಗೆ ಸೇರಿದ ಗ್ರೇಟ್ ಆಕ್ ಪಕ್ಷಿಗಳು 1944 ರಿಂದ ಕಾಣದಾಗಿವೆ. ಇವುಗಳ ಅಳಿಯುವಿಕೆಗೆ ಮನುಷ್ಯನ ಮುಂದಾಲೋಚನೆ ಇಲ್ಲದ ಬೇಟೆಯೇ ಕಾರಣ. ಇವು 45ಸೆಂಮೀ ಉದ್ದವಿದ್ದ ಬಹಳ ದೊಡ್ಡದಾದ ಪಕ್ಷಿಗಳು. ಇಷ್ಟು ದೊಡ್ಡ ಪಕ್ಷಿಗಳಿಗೆ ಬಹಳ ಸಣ್ಣ ರೆಕ್ಕೆಗಳಿದ್ದ ಕಾರಣ ಅವು ಹಾರಲಾರದ ಪಕ್ಷಿಗಳಾಗಿದ್ದುವು. ಗಿರಿಜನರು, ನಾಗರಿಕರು, ನಾವಿಕರು ಇವನ್ನು ಹೇರಳವಾಗಿ ಕೊಂದು ತಿನ್ನುತ್ತಿದ್ದರು. ಕೊಲ್ಲುವುದಕ್ಕೆ ಮದ್ದು ಗುಂಡಿನ ಅಗತ್ಯವಿರಲಿಲ್ಲ. ಹಾರಲಾರದ ಇವನ್ನು ದೊಣ್ಣೆಗಳಿಂದ ಹೊಡೆದು ಕೊಲ್ಲುತ್ತಿದ್ದರು. ಈಗ ನಮಗೆ ಉಳಿದಿರುವ ಗ್ರೇಟ್‌ಆಕ್‌ನ ಅವಶೇಷಗಳೆಂದರೆ 80 ಚರ್ಮ, 15 ಮೊಟ್ಟೆಗಳು, 25 ಹಾಗೂ ಹೀಗೂ ಪೂರ್ಣವಾಗಿರು ವಂತೆ ಕಾಣುವ ಪಕ್ಷಿಯ ಉಳಿಕೆಗಳು ಮಾತ್ರ. ಇವನ್ನು ಕೆಲವೇ ಪ್ರಸಿದ್ಧ ವಸ್ತುಸಂಗ್ರಹಾಲ ಯಗಳಲ್ಲಿ ಇಡಲಾಗಿದೆ.



*

**ಆಕಸ್ಮಿಕಗಳ ವಿಮೆ :** ವ್ಯಕ್ತಿಗೆ, ಆಸ್ತಿಪಾಸ್ತಿಗಳಿಗೆ ಒದಗಬಹುದಾದ ಎಲ್ಲ ರೀತಿಯ ಆಕಸ್ಮಿಕಗಳ ಪ್ರತಿಯಾಗಿ ಮಾಡುವ ವಿಮೆ. ಇದರಲ್ಲಿ ಕಾನೂನಿಗೆ ಸಂಬಂಧಿಸಿದ, ಕಾಯಿಲೆಗೆ ಸಂಬಂಧಿಸಿದ ಆಕಸ್ಮಿಕಗಳು ಸೇರುತ್ತವೆ. ಇಲ್ಲಿ ವ್ಯಕ್ತಿಗಳಿಗೂ ವಾಣಿಜ್ಯ ಸಂಸ್ಥೆಗಳಿಗೂ ಸಾಮಾನ್ಯ ಜೀವವಿಮೆಯಿಂದ ಸಿಗುವುದಕ್ಕಿಂತ ಹೆಚ್ಚಿನ ರಕ್ಷಣೆ ಸಿಗುತ್ತದೆ. 18 ಮತ್ತು 19ನೆಯ ಶತಮಾನಗಳಲ್ಲಿ ಇಂಗ್ಲೆಂಡ್ ದೇಶದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಆಕಸ್ಮಿಕಗಳ ವಿಮೆ ರೂಪುಗೊಂಡಿತು. ಆಕಸ್ಮಿಕಗಳ ವಿಮೆಯಲ್ಲಿ ಅನೇಕ ವಿಧಗಳಿವೆ. ಇವುಗಳಿಗೆ ಸಂಬಂಧಪಟ್ಟ ಮೂಲತತ್ತ್ವಗಳು ಒಂದೇ ಆಗಿದ್ದರೂ ರಕ್ಷಣೆ ಕೊಡುವ ರೀತಿ ಮತ್ತು ಉದ್ದೇಶ ಪ್ರತಿ ಕಂಪನಿಗೂ ಬೇರೆ ಬೇರೆಯಾಗಿರುವುದು. ಮುಖ್ಯವಾಗಿ ಆಕಸ್ಮಿಕಗಳ ವಿಮೆ ನಷ್ಟ ಪರಿಹಾರ ರೂಪದ್ದಾಗಿದೆ.

ವ್ಯಕ್ತಿಗೆ ಸಂಬಂಧಿಸಿದಂತೆ ದೇಹಕ್ಕೆ ಊನವಾದಲ್ಲಿ, ಪ್ರಾಣ ಹೋದಲ್ಲಿ ಅದಕ್ಕೆ ತಕ್ಕಂತೆ ನಷ್ಟ ತುಂಬಿಕೊಡುವ, ಚಿಕಿತ್ಸೆ ಮೊದಲಾದ ಖರ್ಚುಗಳನ್ನು ನಿರ್ವಹಿಸುವ ಏರ್ಪಾಟುಗಳಿವೆ. ಜೊತೆಗೆ ಅಮೆರಿಕದಲ್ಲಿ ವ್ಯಕ್ತಿ ಕೊಡಬೇಕಾದ ಸಾಲಸೋಲಗಳನ್ನು ತಕ್ಕಮಟ್ಟಿಗೆ ತೀರಿಸುವ ರೀತಿಯ ವಿಮೆಯೂ ಇದೆ.

ಆಕಸ್ಮಿಕಗಳ ವಿಮೆಯಲ್ಲಿ ಮುಖ್ಯವಾದ ಇತರ ಶಾಖೆ ಅವು ಯಾವುವೆಂದರೆ 1 ಮೋಟರು ವಾಹನಗಳ ವಿಮೆ; 2 ಕನ್ನಗಳ್ಳತನದಿಂದ ಉಂಟಾದುವುಗಳ ವಿಮೆ; 3 ನಂಬಿಕೆ ಹೊಣೆ ವಿಮೆ; 4 ಇತರರಿಗೆ ಉಂಟಾದ ನಷ್ಟ ಪರಿಹಾರ ವಿಮೆ; 5 ಕೈಗಾರಿಕೆ ವಲಸೆಗಾರರ ಪರಿಹಾರ ವಿಮೆ; 6 ಯಂತ್ರಶಿಲ್ಪ ವಿಮೆ; 7 ಶರೀರದ ಆಕಸ್ಮಿಕಗಳ ವಿಮೆ; 8 ಜಾನುವಾರುವಿಮೆ. ಮೋಟರು ವಾಹನಗಳನ್ನು ಕಡ್ಡಾಯವಾಗಿ ವಿಮೆ ಮಾಡುವ ಮಸೂದೆ ಭಾರತದಲ್ಲಿ ಜುಲೈ 1946 ರಲ್ಲಿ ಜಾರಿಗೆ ಬಂತು. ಈ ಮಸೂದೆಯ ಪ್ರಕಾರ ಬೀದಿಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಉಪಯೋಗಿಸುವ ಎಲ್ಲ ವಿಧವಾದ ಮೋಟರು ವಾಹನಗಳೂ ಆಕಸ್ಮಿಕಗಳಿಗೆ ಒಳಗಾದರೆ ಪರಿಹಾರ ಪಡೆಯಬಹುದು. ಅದಕ್ಕಾಗಿ ವಾಹನ ವಿಮೆಯನ್ನು ಕಡ್ಡಾಯ ಮಾಡಲಾಗಿದೆ.

ಮನೆ, ವ್ಯಾಪಾರದ ಅಂಗಡಿ, ಖಜಾನೆ ಮುಂತಾದ ಪ್ರದೇಶಕ್ಕೆ ಅತಿಕ್ರಮ ಪ್ರವೇಶ ಮಾಡಿ ಅಲ್ಲಿರುವ ಪದಾರ್ಥಗಳನ್ನು ಎತ್ತಿಕೊಂಡು ಹೋಗುವುದಕ್ಕೆ ಕನ್ನಗಳ್ಳತನವೆಂದು ಹೆಸರು. ವಾಸಸ್ಥಳಗಳು, ವ್ಯಾಪಾರಕೇಂದ್ರಗಳು, ಬ್ಯಾಂಕುಗಳು, ಅಂಗಡಿಗಳು, ಷೆಡ್ಡುಗಳು, ಗ್ಯಾರೇಜುಗಳು ಈ ಎಲ್ಲ ಸ್ಥಳಗಳಲ್ಲೂ ನಡೆಯುವ ಕನ್ನಗಳ್ಳತನದಿಂದ ಉಂಟಾಗುವ ನಷ್ಟಗಳ ಪರಿಹಾರಕ್ಕೆ ಕನ್ನಗಳ್ಳತನ ವಿಮಾಪತ್ರಗಳನ್ನು ತೆಗೆದುಕೊಳ್ಳಬಹುದು.

ಒಬ್ಬ ಯಜಮಾನನಿಗೆ ಅಥವಾ ಒಂದು ಕೈಗಾರಿಕೆಯ ಮುಖ್ಯಾಧಿಕಾರಿಗೆ ಅವರ ಹತ್ತಿರ ಕೆಲಸ ಮಾಡುವವರ ಅಪ್ರಾಮಾಣಿಕತೆ, ವಿಶ್ವಾಸಘಾತುಕತನ ಇವುಗಳಿಂದ ಉಂಟಾಗುವ ನಷ್ಟಗಳಿಗೆ ಪರಿಹಾರ ಕೊಡುವ ವಿಮೆಗೆ ನಂಬಿಕೆ ಹೊಣೆವಿಮೆ ಎಂದು ಹೆಸರು. ಈ ವಿಧವಾದ ವಿಮೆ ಆಕಸ್ಮಿಕಗಳ ವಿಮೆಯಲ್ಲಿ ಅತ್ಯಂತ ಪುರಾತನವಾದದ್ದು (1840).

ಒಬ್ಬ ಮನುಷ್ಯ ಅಥವಾ ಒಂದು ಸಂಸ್ಥೆ, ಸಂಘ, ಕೂಟ ಇವುಗಳಿಂದ ಇತರರಿಗೆ ಉಂಟಾಗುವ ಆಕಸ್ಮಿಕ ಮತ್ತು ಇತರರ ಸ್ವತ್ತಿಗೆ ಆಗುವ ನಷ್ಟ ಮುಂತಾದುವುಗಳಿಗೆ ಪರಿಹಾರ ದೊರಕುತ್ತದೆ. ಒಬ್ಬ ಜಮೀನುದಾರನ ದನಕರುಗಳು ಮಗ್ಗುಲ ಜಮೀನುಗಳ ಫಸಲನ್ನು ತಿನ್ನುವುದು ಅಥವಾ ನಾಶಮಾಡುವುದು, ಬಂದೂಕ ಮತ್ತು ತುಪಾಕಿ ಉಪಯೋಗಿಸುವುದನ್ನು ಹೇಳಿಕೊಡುವ ಸಂಘದ ಅಚಾತುರ್ಯದಿಂದ ಇತರರಿಗೆ ಆಗುವ ನಷ್ಟಗಳು, ಒಂದು ನಿವಾಸದ ಹೋಟೇಲು ಮಾಲೀಕನ ಮತ್ತು ಅಲ್ಲಿಯ ಕೆಲಸಗಾರರ ಅಸಡ್ಡೆಯಿಂದ ಅಲ್ಲಿ ತಂಗಲು ಬರುವ ಮನುಷ್ಯರಿಗೆ ಉಂಟಾಗುವ ನಷ್ಟಗಳು– ಪಾಶ್ಚಾತ್ಯ ದೇಶಗಳಲ್ಲಿ ಇಂಥ ಅನೇಕ ಸಂದರ್ಭಗಳಲ್ಲಿ ವಿಮೆಯ ರಕ್ಷಣೆ ದೊರೆಯುತ್ತದೆ. ಕೈಗಾರಿಕೆಗಳ ಮುಖ್ಯಸ್ಥರು ಕೆಲಸಗಾರರ ಪರಿಹಾರ ವಿಮೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕೆಂಬ ಕಾನೂನು ಭಾರತದಲ್ಲಿ 1923 ರಲ್ಲಿ ಜಾರಿಗೆ ಬಂತು. ಕೈಗಾರಿಕೆಗಳು, ವಾಣಿಜ್ಯ ಮತ್ತು

ಇತರ ಸ್ಥಳಗಳಲ್ಲಿ ಕೆಲಸ ಮಾಡುವವರಿಗೆ ಕೆಲಸ ಮಾಡುವುದರ ಫಲವಾಗಿ ಆಗುವ ಆಕಸ್ಮಿಕಗಳು, ಕಾಯಿಲೆಗಳು, ಮರಣ ಇವುಗಳಿಗೆ ಪರಿಹಾರವನ್ನು ಕೊಡಲು ಈ ವಿಧವಾದ ವಿಮೆ ಸಹಕಾರಿಯಾಗಿದೆ.

ಆಂಗ್ಲ ದೇಶದಲ್ಲಿ 19ನೆಯ ಶತಮಾನದಲ್ಲಿ ಯಂತ್ರಗಳ ಉಪಯೋಗ ಹೆಚ್ಚಾದುದರಿಂದ ಯಂತ್ರಶಿಲ್ಪ ವಿಮೆ ಪ್ರಾರಂಭವಾಯಿತು. ಉಪಯೋಗಿಸುತ್ತಿರುವಾಗ ಯಂತ್ರಗಳು ಅಕಸ್ಮಾತ್ತಾಗಿ ಮುರಿಯುವುದರಿಂದ ಇತರರ ಶರೀರಕ್ಕೆ ಆಗುವ ಆಕಸ್ಮಿಕಗಳು ಮತ್ತು ಸ್ವತ್ತುಗಳಿಗೆ ಉಂಟಾಗುವ ನಷ್ಟಗಳು– ಇವುಗಳಿಗೆ ಪರಿಹಾರ ಕೊಡುವುದಕ್ಕೆ ಈ ವಿಮೆ ಅನುಕೂಲವಾಗಿದೆ. ಅಂಥ ಸಂದರ್ಭಗಳಲ್ಲಿ ಕೆಲಸಗಾರರಿಗೆ ಆಗುವ ನಷ್ಟವನ್ನಂತೂ ಸಂಸ್ಥೆ ಕೊಡಬೇಕಾದುದು ಅಗತ್ಯ. ಜನಗಳು ಕೆಲಸ ಕಾರ್ಯಗಳಲ್ಲಿ ತೊಡಗಿದಾಗ ಶರೀರಕ್ಕೆ ಆಕಸ್ಮಿಕಗಳು ಸಂಭವಿಸಿ ಪೆಟ್ಟುಬಿದ್ದು ತೊಂದರೆಗೆ ಈಡಾದರೆ ಪರಿಹಾರ ಕೊಡುವ ವಿಮಾ ಒಪ್ಪಂದಕ್ಕೆ ಶರೀರ ಆಕಸ್ಮಿಕಗಳ ವಿಮೆ ಎಂದು ಹೆಸರು. ಜೊತೆಗೆ ರೋಗ ಬಂದು ಕಾಯಿಲೆಯಾದರೆ ಅದಕ್ಕೆ ವೈದ್ಯಕೀಯ ಚಿಕಿತ್ಸೆ ಪಡೆಯಲು ಉಂಟಾಗುವ ಖರ್ಚಿಗೆ ಪರಿಹಾರ ಪಡೆಯಲು ವಿಮೆ ಮಾಡಬಹುದು.

ನಾರ್ವೆ ಮತ್ತು ಡೆನ್ಮಾರ್ಕ್ ದೇಶಗಳಲ್ಲಿ ಜಾನುವಾರು ವಿಮೆಯನ್ನು ಕಡ್ಡಾಯವಾಗಿ ಮಾಡುವ ಪದ್ಧತಿ ವಾಡಿಕೆಯಲ್ಲಿದೆ. ಅವಕ್ಕೆ ಬರುವ ರೋಗಗಳು, ಅವುಗಳ ಮರಣಗಳಿಂದ ಮಾಲೀಕನಿಗೆ ಆಗುವ ನಷ್ಟಗಳಿಗೆ ಪರಿಹಾರ ಕೊಡುವ ವಿಮೆಗೆ ಜಾನುವಾರು ವಿಮೆ ಎಂದು ಹೆಸರು. ಜೀವನ ಸಂಕೀರ್ಣವಾದಷ್ಟೂ ಆಕಸ್ಮಿಕಗಳು ಹೆಚ್ಚುವ ಕಾರಣ ಆಧುನಿಕ ಬೃಹತ್ ನಗರಗಳು ಬೆಳೆದಂತೆಲ್ಲ ಈ ಬಗೆಯ ವಿಮೆಯ ಪ್ರಾಶಸ್ತ್ಯ ಹೆಚ್ಚುತ್ತಿದೆ. (ಜಿ.ಕೆ.)

**ಆಕಳ ತಳಿಗಳು :** ಸಾಮಾನ್ಯ ಬಳಕೆಯಲ್ಲಿದ್ದರೂ ಈ ಪದದ ಖಚಿತ ಅರ್ಥ ಹೇಳುವುದು ಸುಲಭವಲ್ಲ. ಒಂದೇ ತೆರನ, ಇಲ್ಲವೇ ಅದನ್ನು ಬಹುವಾಗಿ ಹೋಲುವ, ಬಹಳ ಕಾಲದಿಂದಲೂ ತಳಿ ಇಳಿಸಿದ, ಅದರ ಕರುಗಳಲ್ಲೂ ತೋರುವ ತಲೆಮಾರಿನ ಲಕ್ಷಣಗಳಿರುವ ಒಂದು ಗೊತ್ತಾದ ಮಾದರಿಯ ಆಕಳಿಗೆ ಹೇಳುವುದು ಸಾಮಾನ್ಯ. ಆದರೆ ಎಷ್ಟೊ ಹಿಂದಿನ ಕಾಲದಿಂದ ಬೆಳೆಸಿದ ತಳಿಗಳಲ್ಲೂ ಇದ್ದಕ್ಕಿದ್ದ ಹಾಗೆ ಆ ತೆರನ ಗೊತ್ತಾದ ಲಕ್ಷಣಗಳು ಇರದವೂ ಹುಟ್ಟುವುದು ಅಪೂರ್ವವಲ್ಲ. ಅಂಥವನ್ನು ತೆಗೆದು ಹಾಕಿದರೆ ತೀರಿತು, ತಳಿಗಳ ಚೊಕ್ಕತೆಗೆ ಊನವಿಲ್ಲ. ತಾಯಿಯಂತೆ ಮಗು ಎಂಬಂತೆ, ತಲತಲಾಂತರಗಳಿಂದಲೂ ತಳಿಕಾರರು ಒಳ್ಳೆಯ ಅಚ್ಚತಳಿಗಳನ್ನು ಬೆಳಸಿ ಉಳಿಸಿಕೊಂಡು ಬಂದಿದ್ದಾರೆ.

ಸಾಕಿದ ಪ್ರಾಣಿಗಳಲ್ಲಿ ಯಾವೊಂದು ಗುಣವೂ ವಿಶೇಷವಾಗಿರದೆ ಸಾಧಾರಣವಾಗಿರುತ್ತದೆ. ತನಗೆ ಬೇಕೆನಿಸಿದ ಹೆಚ್ಚಿನ ಗುಣಲಕ್ಷಣಗಳು ಇರುವಂತೆ ಬೆಳೆಯಲು ತಳಿಯೆತ್ತುವುದು ಸಾಕುವವನ ಕೆಲಸ. ಹೀಗೆ ತಳಿಯೆತ್ತಿ ಸಾಕಿಯೇ ಒಂದೊಂದು ಬಳಕೆಗೂ ಒಂದೊಂದು ವಿಶೇಷವಾಗಿ ಒದಗಿ ನಾಗರಿಕರ ಮನವೊಲಿಸುವ ಹಲವು ತಳಿಗಳು ಬೆಳೆದಿವೆ. ಒಂದೇ ಪ್ರಾಣಿಯಿಂದ ಎಲ್ಲ ತೆರನ ಗುಣಗಳನ್ನೂ ಪಡೆಯಬೇಕೆಂದರೆ ತಳಿ ಮುಂದುವರಿಯದು.

ಕೆಲಸದ ರಾಸುಗಳೇ ಒಂದು ಬಗೆ, ಹೈನಿಕ ಆಕಳೇ ಬೇರೆ, ಮಾಂಸದವೇ ಬೇರೆ, ಒಂದೊಂದರ ಮೈಕಟ್ಟೂ ಬೇರೆಯೇ. ಹೈನಿನ ತಳಿಯ ಆಕಳ ಮೈಯನ್ನು ಮೇಲಿನಿಂದ ನೋಡಿದರೆ, ಬೆನ್ನಿಂದ ಹೊಟ್ಟೆ ಕಡೆಗೂ ಹಿಂಬದಿಯಿಂದ ಮುಂದಕ್ಕೂ ಸಣ್ಣಗಾಗುತ್ತ ಬೆಣೆಯಾಕಾರದಲ್ಲಿ ಇರುವುದು. ತೆಳ್ಳನೆಯ ಮೈಯಲ್ಲಿ ಸ್ನಾಯುಗಳು ತುಂಬಿಕೊಂಡು, ಕೊಬ್ಬು ಹೆಚ್ಚಿರದೆ ಇರುತ್ತವೆ. ಆದರೆ ಮಾಂಸದ ಆಕಳ ಮೈಕಟ್ಟು ಚೆಚ್ಚೌಕನೆಯ ಪೆಟ್ಟಿಗೆಯಂತೆ ಕೊಬ್ಬಿ ತುಂಬಿಕೊಂಡಿರುವುದು.

ಒಳ್ಳೆಯ ತಳಿಯಿಂದ ಆಕಳು ಬೇಗನೆ ಬೆದೆಗೆ ಬರುತ್ತವೆ. ಹೈನಿಕ ತಳಿ ಆಕಳು ಈಗ 24–26 ಮಾಸಗಳಿಗೆಲ್ಲ ಮೊದಲ ಕರು ಹಾಕುತ್ತದೆ. ಭಾರತದವು 28–30 ಮಾಸಗಳಲ್ಲೇ ಬೆದೆಗೆ ಬರುತ್ತವೆ. ಎಲ್ಲಕ್ಕೂ ಹೆಚ್ಚಿನ ಸಾಧನೆ ಹೈನಿನ ತಳಿಗಳದು. ಸಾಕಿದವನಿಗೆ ಬಹಳ ಹಾಲನ್ನು ಅದರಲ್ಲಿ ಹೆಚ್ಚು ಬೆಣ್ಣೆಯನ್ನೂ ಕೊಡುವ ತಳಿಗಳೆದ್ದಿವೆ. ಹಾಲ್‌ಸ್ಟೀನ್ ಆಕಳೆಂದರೆ ಹಾಲು ಸರಬರಾಜಿನ ಯಂತ್ರ ಎನ್ನುವಂತಿದೆ. ಈ ಹಸು ದಿನಕ್ಕೆ 35 – 37 ಲೀ ಹಾಲು ಕೊಡಬಲ್ಲದು. ಮುಂದುವರಿದ ನಾಡುಗಳಲ್ಲಿ ಇದರ ಏಳಿಗೆ ಅಗಾಧವಾಗಿದೆ. ತಲೆಮಾರುಗಳಲ್ಲಿ ಲಕ್ಷಣಗಳು ಸಾಗುವ ಕ್ರಮವನ್ನು ಗ್ರಿಗೋರ್ ಮೆಂಡೆಲ್ ಈಚೆಗೆ ವಿವರಿಸಿದ್ದಾನೆ.

**ಅಚ್ಚ ತಳಿ ಬೆಳವಣಿಗೆ :** ಅನೇಕ ಆಕಳ ತಳಿಗಳೂ ಉಪತಳಿಗಳೂ ಪ್ರಪಂಚದಲ್ಲಿ ಎಲ್ಲೆಲ್ಲೂ ಪ್ರಸಿದ್ಧವಾಗಿವೆ. ಯುರೋಪ್‌ನಲ್ಲೇ 40–50 ವಿಶಿಷ್ಟವಾದ ತಳಿಗಳಿವೆ. ಇಂಗ್ಲೆಂಡು ತೌರಾದ 11 ತಳಿಗಳು ಹೊರದೇಶಗಳಿಗೂ ಹೋಗಿವೆ. ಇಂಗ್ಲೆಂಡಿನಲ್ಲಿ ಹೀಗೆ ಆರಿಸಿದ ತಳಿಗಳ ಬೆಳವಣಿಗೆಯನ್ನು ಜಾರಿಗೆ ತಂದ ರಾಬರ್ಟ್ ಬೇಕ್‌ವೆಲ್ (1770) ಚೆನ್ನಾದ ಹೊಸ ತಳಿಗಳನ್ನು ಸಾಕಿದ್ದಲ್ಲದೆ, ಅವುಗಳ ಪೀಳಿಗೆಯನ್ನು ಪಟ್ಟಿಗಳಲ್ಲಿ ಬರೆದಿಡುತ್ತ ಬಂದ. ಇತರರೂ ಕೆಲವು ಅಚ್ಚ ತಳಿಗಳನ್ನು ಹೀಗೆ ಎಬ್ಬಿಸಿದರು. ಇವರ ವಿಧಾನಗಳೇ ಈಗ ಪ್ರಪಂಚದಲ್ಲಿ ಜಾರಿಯಲ್ಲಿವೆ. ಅಚ್ಚ ತಳಿಗಳಿಗಾಗಿ ಬೇಡಿಕೆಗಳು ಹೆಚ್ಚಿ ಆಯಾ ದೇಶದ ತಳಿಗಳೂ ಉತ್ತಮಗೊಂಡವು.

ಇಂಗ್ಲೆಂಡಿನಲ್ಲಿ ತಳಿಗಳನ್ನು ಬರೆದಿಡುವ ದಾಖಲೆಗಳಲ್ಲಿ ತಳಿಗಳ ಕೆಲವೇ ಗೊತ್ತಾದ ಲಕ್ಷಣಗಳಿರುವ ಎಲ್ಲ ಆಕಳನ್ನೂ ಸೇರಿಸಿಕೊಳ್ಳುತ್ತಿದ್ದರು. ಅಮೆರಿಕದಲ್ಲಿ ಹೀಗಿರಲಿಲ್ಲ. ಆಕಳು ಸಾಕುವವರು ಯಾವಾಗಲೂ ತಳಿಗಳು ಇನ್ನೂ ಚೆನ್ನಾಗುವಂತೆ ಯತ್ನಿಸುತ್ತಿರುವರು. ಒಂದು ಅಚ್ಚ ತಳಿ ಪ್ರಾಣಿ ಚೆನ್ನಾಗಿದ್ದರೆ ಆ ತಳಿ ಇನ್ನೂ ಉತ್ತಮವಾಗಲೂ ಅದೂ ಒಂದು ಪಾತ್ರ ವಹಿಸುತ್ತದೆ. ಒಂದು ತಳಿ ಚೆನ್ನಾಗಿದೆ ಎನ್ನಲು ಅದರ ಕರುಗಳು ಅಷ್ಟೇ ಚೆನ್ನಾಗಿ ಬರುವುದೇ ಮುಖ್ಯ ಕಾರಣ. ದಾಖಲಾದ ತಳಿಗಳಲ್ಲಿ ಕರುವಿಗಾಗಲಿ ಮಾಂಸಕ್ಕಾಗಲಿ ತಕ್ಕನಾದವನೆಂದು ತಿಳಿಯಲು ಹಲವಾರು ಪರೀಕ್ಷೆಗಳಿವೆ.

ಕೇವಲ ಕಣ್ಣರಿಕೆಯ ಅನುಭವದಿಂದ ತಳಿಗಳ ಬೆಳವಣಿಗೆ ನಿರ್ಣಯ ಕಲೆಯಾಗಿದ್ದುದು ಈಚೀಚೆಗೆ ಮೆಂಡೆಲ್ಲನ ತಳಿಸೂತ್ರ ಅಲ್ಲದೆ ಜನಸಂದಣಿಯ ತಳಿಶಾಸ್ತ್ರದ ತತ್ತ್ವಗಳ ವಿಜ್ಞಾನವಾಗುತ್ತಿದೆ.

ಮೊದಮೊದಲು ತಳಿಯೆಬ್ಬಿಸಿದವರು ಇರಿಸಿಕೊಂಡಿದ್ದ ಗೊತ್ತಾದ ಲಕ್ಷಣಗಳ ಹೋರಿ ಮಾದರಿಗಳೂ ಆಮೇಲೆ ತಳಿಯೆಬ್ಬಿಸಲು ಸರಿಯಾದ ಆಕಳನ್ನೆ ಆರಿಸಿಕೊಂಡಿದ್ದೂ ಇಂದಿನ ತಳಿಗಳಿಗೆ ಮುಖ್ಯ ಕಾರಣ ಪ್ರಪಂಚದಲ್ಲಿ ಸಾಮಾನ್ಯ ಆಕಳುಗಳೆಲ್ಲ ಬರಬರುತ್ತ ಉತ್ತಮವಾಗಲು ಕಾರಣ ಅಚ್ಚ ತಳಿಯ ಹೋರಿಗಳನ್ನು ಸಾಮಾನ್ಯ ಹಸುಗಳೊಂದಿಗೆ ಜೊತೆಗೂಡಿಸಿದ್ದು. ಇಲ್ಲೂ ಆಕಳ ಆಯ್ಕೆ ಚೆನ್ನಾಗಿದ್ದು ಒಳ್ಳೆಯ ತಳಿಯ ಹೋರಿ ಸಿಕ್ಕಿದರೆ ಉತ್ತಮ ಫಲ ದೊರೆಯುವುದು.

ಒಂದೊಂದು ತಲೆಮಾರಿಗೂ ಹಲವಾರು ವರ್ಷಗಳು ಹಿಡಿಯುವುದರಿಂದಲೂ ಆಕಳು ಈಯುವುದು ಕಡಿಮೆ ಆಗುವುದರಿಂದಲೂ ಆಕಳ ತಳಿ ಉತ್ತಮಗೊಳ್ಳಲು ಬಹುಮಟ್ಟಿಗೆ ಅತ್ಯುತ್ತಮ ಹೋರಿಗಳನ್ನು ಆರಿಸಲೇಬೇಕು. ಕೃತಕ ಗರ್ಭಾಧಾನ (ಆರ್ಟಿಫಿಷಿಯಲ್ ಇನ್‌ಸೆಮಿನೇಷನ್) ಜಾರಿಗೆ ಬಂದು ಎಲ್ಲೋ ಒಂದೆಡೆ ಇಟ್ಟಿರುವ ಒಂದೇ ಹೋರಿಯಿಂದ ನೂರಾರು ಆಕಳು ಫಲಿಸಿ ಬೇಗನೆ ಉತ್ತಮವಾಗುತ್ತವೆ. ಸಾಮಾನ್ಯವಾಗಿ ಒಂದು ಹೋರಿ ಒಂದು ವರ್ಷದಲ್ಲಿ 30–40 ಆಕಳಿಗೆ ಗರ್ಭಾಧಾನ ಮಾಡಿದರೆ, ಕೃತಕ ವಿಧಾನದಲ್ಲಿ ಸರಾಸರಿ ಸು. 2,000 ಆಕಳಿಗೆ ಮಾಡಬಹುದು. ಅಂಥ ಬೀಜದ ಹೋರಿಯ ತಳಿ ಎಷ್ಟು ಚೆನ್ನಾಗಿ ಇರಬೇಕೆಂದು ಇದರಿಂದ ಗೊತ್ತಾಗುವುದು. ಸರಿಯಾದ ಹೋರಿಯನ್ನು ಆರಿಸುವಾಗ ಹಲವಾರು ಪರೀಕ್ಷೆಗಳನ್ನು ಮಾಡಬಹುದು. ಕರಾವಿಗಾಗಿ ಆಕಳನ್ನು ಪಡೆವಾಗ, ಸರಾಸರಿಯಾಗಿ ಎಷ್ಟು ಬಾರಿ ಹೆಣ್ಣುಗರುಗಳು ಹಾಕುತ್ತವೆಂದು ಲೆಕ್ಕ ಹಾಕುವುದು ಒಂದು ವಿಧಾನ. ಆದರೆ ದನದ ಮಾಂಸಕ್ಕಾಗಿ ಪಡೆವಾಗ ಅನೇಕ ಪರೀಕ್ಷೆಗಳಾಗಬೇಕು. ಕೃತಕ ಗರ್ಭಾಧಾನದಲ್ಲಿ ಹೋರಿಯ ತಳಿಗಿಂತಲೂ ಕರಾವೂ ದೊರಕುವ ಮಾಂಸವೂ ಮುಖ್ಯ.

ಆಕಳಿಗೆ ತೀರ ಹತ್ತಿರದ ಸಂಬಂಧದ ಹೋರಿ ಕೂಡಿಸಿದಾಗ ಕೆಲವೇಳೆ ಬಲು ಒಳ್ಳೆಯ ತಳಿಗಳು ಬಂದರೆ, ಹಲವೇಳೆ ಕೆಡುವುದುಂಟು. ಉತ್ತಮ ತಳಿಗಳನ್ನು ಬಳಸಿ ಬೇಕ್‌ವೆಲ್ ಒಳ್ಳೆಯ ಫಲ ಪಡೆದ; ಅದೇ ಬೇಟ್ಸ್‌ನಿಂದ ಆಗಲಿಲ್ಲ. ಕಳೆದ ಶತಮಾನದಲ್ಲಿ ಅದರ ಸಮನಾದ ಇಲ್ಲವೇ ಇನ್ನೂ ಯೋಗ್ಯವಾದ್ದನ್ನು ಪಡೆವುದು ಕಷ್ಟವಾಗುವಷ್ಟು ಇಲ್ಲವೇ ಅಸಾಧ್ಯವಾಗುವಷ್ಟು ಅತ್ಯುತ್ತಮ ಹೋರಿಯನ್ನು ಬಳಸಿ ಈ ತಳಿ ವಿಧಾನವನ್ನು ತಳಿಗಾರರು ಬಳಸುತ್ತಿರುವರು. ಆಕಳು, ಹೋರಿ ಎರಡರಲ್ಲೂ ಬಲು ಒಳ್ಳೆಯ ಗುಣಲಕ್ಷಣಗಳು ಇದ್ದರೆ ಮಾತ್ರ ಇದನ್ನು ನಡೆಸಿಕೊಂಡು ಬರಬಹುದು. ಚೆನ್ನಾಗಿ ಗೊತ್ತಿರುವ ಎರಡು ಅಥವಾ ಹೆಚ್ಚಿನ ಜಾತಿಗಳನ್ನು ಅಡ್ಡ ಹಾರಿಸಿ ಹೊಸ ತಳಿಗಳನ್ನು ಪಡೆದುದುಂಟು. ಇಲ್ಲಿ ಒಂದೊಂದು ಜಾತಿಯದರ ಒಳ್ಳೆಯ ಗುಣಲಕ್ಷಣಗಳನ್ನೂ ಕೂಡಿಸಿದ ತಳಿಯನ್ನು ಪಡೆಯುವುದು ಇದರ ಮುಖ್ಯ ಉದ್ದೇಶ. ಆದರೆ ಹೀಗೆ ಮಾಡಲು ವರ್ಷಗಳೇ ಹಿಡಿಯುವುದು. ಅಲ್ಲದೆ ಆಕಳ ದೊಡ್ಡ ಮಂದೆಯನ್ನೇ ಸಾಕಿರಬೇಕು. ಪೋಲ್ಡ್ ಹೆರಿಫರ್ಡ್, ಪೋಲ್ಡ್ ಷಾರ್ಟ್‌ಹಾರ್ನ್, ಇತ್ಯಾದಿ ತಳಿಗಳನ್ನು ಪಡೆಯುವಾಗ ಈ ವಿಧಾನವನ್ನೇ ಅನುಸರಿಸಿದೆ. ಮಾಂಸಕ್ಕಾಗಿ ಮಾರಾಟವಾಗುವವನ್ನೂ ಕರಾವಿನ ಆಕಳನ್ನೂ ಪಡೆಯಲು, ಕೆಲವೇಳೆ ಅಚ್ಚ ತಳಿಯ ಹೋರಿಯನ್ನೇ ಇನ್ನೊಂದು ಅಚ್ಚ ತಳಿಯ ಆಕಳಿಗೆ ಕೂಡಿಸುವುದುಂಟು. ಇಂಥ ಜೋಡಿಯಿಂದ ಬಂದ ಅಡ್ಡ ತಳಿಗಳು ಬಲಶಾಲಿಗಳಾಗಿರುತ್ತವೆ. ಒಟ್ಟಿನಲ್ಲಿ ಅಚ್ಚ ತಳಿಯ ಹೋರಿ, ಆಕಳಿಗಿಂತಲೂ ಅಡ್ಡತಳಿಯವು ಇನ್ನೂ ಬಲವಾದವು.

ಬೇರೆ ದೇಶಗಳವು: ಯುರೋಪಿನಲ್ಲಿ ಹಿಂದಿನ ಕಾಲದಿಂದಲೂ ಬೆಳೆಸುತ್ತಿರುವ ತಳಿಗಳ ಲಕ್ಷಣಗಳು ಖಚಿತವಾಗಿ ಗೊತ್ತಾಗಿವೆ. ಫ್ರಾನ್ಸಿನ ಚಾರೋಲೇ, ನಾರ್ಮಂಡಿ ಬೆಲ್ಜಿಯಮ್ಮಿನ ಹಾಲ್‌ಸ್ಟೀನುಗಳು ಮುಂತಾದವು. ಆದರೆ ಮಾಂಸಕ್ಕಾಗಿ ಸಾಕುವ ತಳಿಗಳ ಮೇಲೆ ಬಲು ಪ್ರಭಾವ ಬೀರುವ ಬ್ರಿಟನ್ನಿನವು ಇವಕ್ಕಿಂತ ಮುಖ್ಯವಾದವು. ತಳಿಗಳನ್ನೂ ಮಾಂಸಕ್ಕಾಗೋ ಕರಾವಿಗಾಗೋ ಬೆಳೆಸಬಹುದು. ಮಾಂಸಕ್ಕಾಗಿ ಸಾಕಿದವಲ್ಲಿ, ಷಾರ್ಟ್‌ಹಾರ್ನ್, ಹೆರಿಫರ್ಡ್, ಅಂಗಸ್, ಡೆವಾನ್, ಗ್ಯಾಲೋವೆ, ರೆಡ್‌ಪೋಲ್, ಆಫ್ರಿಕಾಂಡರ್, ಭಾರತದ ಬ್ರಾಹ್ಮಣ ತಳಿಗಳೂ ಇವುಗಳ ಅಡ್ಡ ತಳಿಗಳೂ ಹೆಸರಾಗಿವೆ. ಕರಾವಿಗಾಗಿ ಸಾಕಿದವಲ್ಲಿ ಹಾಲ್‌ಸ್ಟೀನ್–ಫ್ರೀಸಿಯನ್.ಜರ್ಸಿ, ಗ್ವೆರ್ನಸಿ, ಬ್ರೌನ್‌ಸ್ವಿಸ್, ಬ್ರಿಟನ್ನದೇ ಆದ ಅರ್ಯ್‌ಷೈರ್–ಇವು ಲೋಕಪ್ರಸಿದ್ಧ.

ಕೃಷ್ಣಾ ಕಣಿವೆ ತಳಿ

ಕಾಂಗಾಯಾಮ್ ತಳಿ

ಓಂಗೋಲ್ ತಳಿ

ಹಳ್ಳಿಕಾರ್ ತಳಿ

ಡೋನಿ

ಅಮೃತ ಮಹಲ್ ತಳಿ

ಭಾರತ : ಭಾರತದಲ್ಲೂ ಅವುಗಳ ಹುಟ್ಟಿನಲ್ಲೇ ಅನೇಕ ಗೊತ್ತಾದ ಗುಣಲಕ್ಷಣಗಳಿಂದ ಗುರುತು ಸಿಗುವ, ಆಕಳ ತಳಿಗಳು ಹಲವಾರಿವೆ. ಹುಟ್ಟುಗುಣಗಳಲ್ಲಿ ಈ ತಳಿಗಳು ಯುರೋಪಿನವಕ್ಕಿಂತ ಏನೂ ಕಡಿಮೆಯಿಲ್ಲ. ಕೆಲವು ಪಂಗಡದ ಜನ ಕೆಲವು ಸೊಗಸಾದ ತಳಿಗಳನ್ನು ಸಾಕುತ್ತ ಬಂದಿರುವುದರಿಂದ ಇನ್ನೂ ಹಲವರು ಆಕಳ ಸಾಕಣಿಕೆಯನ್ನೇ ಹುಟ್ಟುಕೆಲಸವಾಗಿಟ್ಟುಕೊಂಡು ಚೆನ್ನಾಗಿ, ಒಳ್ಳೆಯ ತಳಿಯನ್ನೇ ಬೆಳೆಸುತ್ತಿರುವುದರಿಂದ ಇದು ಸಾಧ್ಯವಾಗಿದೆ. ಭಾರತದಲ್ಲಿ ನಾಲ್ಕು ಮೂಲ ಪಂಗಡಗಳಿವೆ: ಉತ್ತರದ ದೊಡ್ಡ ಬಿಳಿಯ ಆಕಳು; ತಲೆ ಕೊಂಬುಗಳ ವಿಶೇಷ ಲಕ್ಷಣಗಳಿರುವ ದಕ್ಷಿಣದ ಮೈಸೂರಿನವು; ಪಡುವಣದ ಕಾಠೇವಾಡದ ಗಿರ್ ದನಗಳು; ಭಾರತದಲ್ಲಿ ಎಲ್ಲೆಲ್ಲೂ ಗುಡ್ಡಗಾಡುಗಳಲ್ಲಿ ಇರುವ ಕಪ್ಪು, ಕೆಂಪು, ಬೆರಕೆ ಬಣ್ಣದ ಸಣ್ಣ ದೇಹದವು.

ಮುಂದುವರಿದ ದೇಶಗಳಲ್ಲಿ ಇದ್ದಂತೆ ಭಾರತದಲ್ಲೂ ತಳಿ ಎನ್ನಿಸಿಕೊಳ್ಳುವವು ಇಲ್ಲದಿದ್ದರೂ ಕೆಲವು ಮುಖ್ಯ ತಳಿಗಳ ಲಕ್ಷಣಗಳನ್ನು ಗುರುತಿಸಬಹುದು. ಇಲ್ಲಿನ ದನಗಳ ಬೇರೆ ಬೇರೆ ಬಗೆಗಳ ಮೂಲ ಹೊರಗಿಂದ ದಾಳಿಯಿಟ್ಟ ಜನರ ವಲಸೆಗೆ ಸಂಬಂಧಿಸಿದೆ. ಅವರೊಂದಿಗೆ ಬಂದ ರಾಸುಗಳ ಮಂದೆಗಳು ನಾಡಿನ ಆಗಿನ ತಳಿಗಳೊಂದಿಗೆ ಬೆರೆತು ಹೊಸ ತಳಿಗಳು ಎದ್ದಿರಬೇಕು.

ಉತ್ತರ ಭಾರತದ ಬೂದು, ಬಿಳಿ ಬಣ್ಣದ ರಾಸುಗಳ ಎರಡು ತಂಡಗಳು ಎದ್ದು ಕಾಣುತ್ತವೆ. ಪಡುವಲದ ಕಾಂಕ್ರೇಜಿ ದನ ಒಂದು. ಇದರ ಹಣೆ ಅಗಲ, ಕೊಂಬು ದಪ್ಪ. ಆರ್ಯರು ವಲಸೆ ಬಂದರೆಂಬ ಪಡುವಲದ ಕರಾವಳಿಯ ಮೂಲಕ ಸಿಂಧು, ಗುಜರಾತ್, ರಾಜಪುಟಾಣಗಳಲ್ಲಿ ಈ ತಳಿಯೇ ಹೆಚ್ಚಾಗಿ ಕಾಣುವುದು. ಎರಡನೆಯ ತಂಡದಲ್ಲಿ ಬಿಳಿಯ ಬಣ್ಣದ, ಅಗಲವಿರದ ಹಣೆಯ, ಗಿಡ್ಡ ಕೊಂಬಿನ, ಭಗನಾರಿ, ಹರಿಯಾನ, ರೂತ್, ಗಾವ್ಳೊ, ಓಂಗೋಲ್ ರಾಸುಗಳನ್ನು ಚೆನ್ನಾಗಿ ಗುರುತಿಸಬಹುದು. ಹಾಗೆಯೇ ಮಧ್ಯಪ್ರದೇಶ, ದಕ್ಷಿಣ ಭಾರತಗಳಲ್ಲೂ ಇವು ಅಲ್ಲಲ್ಲಿ ಕಾಣಬರುತ್ತವೆ. ಇವೆರಡು ತಂಡಗಳ ತಳಿಗಳ ಬೆರಕೆ ಅಪೂರ್ವವಲ್ಲ. ರಾಜಪುಟಾಣದ ಮಾಳ್ವಿ ದನಗಳು ಕಾಂಕ್ರೇಜಿಗಳನ್ನು ಹೋಲುತ್ತವೆ. ಬಿಳಿಯ ರಾಸುಗಳಿಗೆ ಕಾಲುಕಂಬ ಎತ್ತರ, ಮೈಕಟ್ಟು ಕಿರಿದು, ತೂಕವು ಅಷ್ಟಿಲ್ಲ. ಬೂದು ಆಕಳು ತೂಕದವು, ಚೆನ್ನಾಗಿ ಕರೆಯುತ್ತವೆ. ಇವೆರಡರ ಅಡ್ಡ ತಳಿಗಳೂ ಚೆನ್ನಾಗಿ ಹಾಲು ಕೊಡುತ್ತವೆ. ಹರಿಯಾನ, ಹಳ್ಳಿಕಾರ್, ಓಂಗೋಲ್ ಆಕಳು ಇಂಥವು. ಇವುಗಳೊಂದಿಗೆ ಕೃಷ್ಣಾಕಣಿವೆಯ ತಳಿ, ಕಾಂಗಯಾಮ್ (ಕೊಯಮತ್ತೂರು ತಳಿ), ಡೋಸಿ (ಹೈದರಾಬಾದ್ ತಳಿ)–ಇವೂ ಹೈನಿಗೆ ಪ್ರಸಿದ್ಧವಾಗಿವೆ.

ಕೊಂಬುಗಳ ತಲೆಗಳ ವಿಶಿಷ್ಟ ಹೆಗ್ಗುರುತಿನವು ಮೈಸೂರು ತಳಿ. ಹಳ್ಳಿಕಾರ್, ಅಮೃತಮಹಲ್ ರಾಸುಗಳಲ್ಲಿ ಇದರ ಲಕ್ಷಣಗಳಿವೆ. ಆಂಧ್ರ, ಮದರಾಸು, ಉತ್ತರ ಕರ್ನಾಟಕಗಳ ರಾಸುಗಳೂ ಅಷ್ಟೆ.

ಕಾಠೇವಾಡದ ದಕ್ಷಿಣದವು ಗಿರ್ ತಳಿದನಗಳು. ಇವು ಕಛ್‌ನಿಂದ ಆಂಧ್ರದ ತನಕ ಹರಡಿಕೊಂಡಿವೆ. ಭಾರತದ ಎಲ್ಲೆಡೆಗಳಲ್ಲೂ ಇರುವ ಸಣ್ಣ ರಾಸುಗಳ ಬಣ್ಣ ಮೈಕಟ್ಟು ಹೀಗೆಯೇ ಅನ್ನುವಂತಿಲ್ಲ ಅಂತೂ ಒಂದೇ ತಳಿಯ ಲಕ್ಷಣಗಳು ಅಷ್ಟಾಗಿಲ್ಲ.

**ಅಮೃತಮಹಲ್** : ಮೈಸೂರು ಸರಕಾರದ ನೆರವಿನಿಂದ ಶಾಸ್ತ್ರೀಯವಾಗಿ ಬೆಳೆಸಿ ಕಾಪಾಡಿರುವ ಹೆಸರಾದ ತಳಿಯಿದು. ಈ ತಳಿಯ ಹೋರಿಯನ್ನು ನಾಡಿನಲ್ಲಿ ಹಂಚಲಾಗಿದೆ. ಆಕಳು ಹೆಚ್ಚಾಗಿ ಹಾಲು ಕರೆಯವು. ಆದರೆ ಎತ್ತುಗಳು ಚುರುಕು, ರೋಷದವು. ದುಡಿಯುವುದಲ್ಲದೆ, ಕಷ್ಟವನ್ನೂ ತಡೆಯಬಲ್ಲವು.

**ಹಳ್ಳಿಕಾರ್** : ಇದು ಸಾಧುವಾದ ಆಕಳು. ಈ ಮೈಸೂರು ತಳಿ ಕರಾವಿಗೆ ಹೆಸರಾಗಿದೆ. ಜೀವಾತುಗಳಿರುವ ಇದರ ಹಾಲು ಹಳದಿಯಾಗಿರುವುದು ಇದರ ವೈಶಿಷ್ಟ್ಯ.

**ಗಿರ್** : ಕಾಠೇವಾಡದ ಗಿರ್ ಕಾಡುಗಳಲ್ಲಿ ಅಲ್ಲಲ್ಲಿ ಈ ತಳಿ ಚೊಕ್ಕವಾಗಿ ಉಳಿದಿವೆ. ಕರುಗಳಲ್ಲಿ ಗಿರ್ ತಳಿಯ ಲಕ್ಷಣ ಚೆನ್ನಾಗಿ ಇಳಿದು ಬಂದಿರುವುದರಿಂದ ದೂರ ದೂರದ ಪ್ರದೇಶಗಳಲ್ಲೂ ಈ ಲಕ್ಷಣಗಳನ್ನು ಗುರುತಿಸಬಹುದು. ಈ ಆಕಳು ಸಾಧು; ಚೆನ್ನಾಗಿ ಹಾಲು ಕೊಡುತ್ತದೆ. ನಿದ್ದೆಗಣ್ಣು, ದೊಡ್ಡ ಹಣೆ, ಒಂದು ತೆರನಾಗಿ ಬಾಗಿದ ಕೊಂಬುಗಳು, ಉದ್ದನೆಯ ಜೋಲುಗಿವಿಗಳು, ಚಿವುಟದಂತಿರುವ ಕಿವಿ ತುದಿಗಳು ಇದರ ಲಕ್ಷಣಗಳು. ಬಿಳಿ, ಕೆಂಪು, ಕಂದು ಮಚ್ಚೆಗಳ ಮೈ. ತೂಕವಾಗಿ ಬಲವಾಗಿರುವ ಎತ್ತು ಮಾಂಸದ ತಳಿ.

**ಕಾಂಕ್ರೇಜ್** : ಕಛ್ ಕೊಲ್ಲಿ, ಸಿಂಧು ಪ್ರಾಂತ್ಯ, ಅಹಮದಾಬಾದು ಈ ಚೊಕ್ಕ ತಳಿಯ ತವರು. ಈ ತಳಿಯನ್ನು ಅಮೆರಿಕದಲ್ಲಿ ಅಲ್ಲಿನವೊಂದಿಗೆ ಕೂಡಿಸಿ ಮಾಂಸದ ಒಳ್ಳೆಯ ತಳಿಗಳನ್ನು ತೆಗೆದಿರುವರು. ಈ ತಳಿಯ ಆಕಳು ಚೆನ್ನಾಗಿ ಹಾಲು ಕೊಡುತ್ತದೆ. ಬಿಳಿ, ಬೂದು ಬಣ್ಣದವೂ ಕಪ್ಪಿನ ಮೇಲಿನ ಬೂದು ಬಣ್ಣದವೂ ಹೇರಳ.

**ಓಂಗೋಲ್** : ಆಂಧ್ರಪ್ರದೇಶದ ನೆಲ್ಲೂರು, ಗುಂಟೂರುಗಳಲ್ಲಿ ಈ ತಳಿ ಹೆಚ್ಚು. ಪುಷ್ಟವಾಗಿ ಬೆಳೆದು ರೋಗಗಳನ್ನು ತಡೆವಂತಿರುತ್ತವೆ. ನಸು ಬಿಳಿಬಣ್ಣದ ಈ ತಳಿಯ ಎತ್ತುಗಳು ಕೆಲಸಕ್ಕೂ ಆಕಳು ಕರಾವಿಗೂ ಹೆಸರಾಗಿವೆ.

**ಹರಿಯಾಣ** : ಹಳೆಯ ಪಂಜಾಬು, ದೆಹಲಿ ಪ್ರದೇಶಗಳ ಈ ತಳಿ ರಾಜಸ್ತಾನ ಪ್ರಾಂತ್ಯದಲ್ಲಿ ಹೆಸರಾಗಿ ಬಳಕೆಯಲ್ಲಿದೆ. ಎತ್ತುಗಳು ದುಡಿಮೆಗೂ ಆಕಳು ಕರಾವಿಗೂ ಚೆನ್ನಾಗಿ ಬರುತ್ತವೆ. ಈ ತಳಿಗಳು ಬೆಳ್ಳಗೆ ಮಾಟವಾಗಿ ಬೆಳೆದು ನೋಡಲು ಅಂದವಾಗಿರುತ್ತವೆ. ಈ ತಳಿಯನ್ನು ಪಂಜಾಬು ಸರಕಾರ ಚೆನ್ನಾಗಿ ಬೆಳೆಸಿದೆ.

**ಸಿಂಧಿ** : ಸಿಂಧೂ ಪ್ರಾಂತ್ಯದ ಗುಡ್ಡದ ಸೀಮೆಯ ತಳಿ. ಇದರ ಬಲು ಚೊಕ್ಕವಾದ ತಂಡಕ್ಕೆ ಲಾಸಬೆಲಾ ಎನ್ನುತ್ತಾರೆ. ಈ ತಳಿಯವು ಹೊಸ ಪರಿಸರಕ್ಕೆ ಚೆನ್ನಾಗಿ ಹೊಂದಿಕೊಂಡು ಕಷ್ಟ ಮತ್ತು ರೋಗಗಳನ್ನು ತಡೆದುಕೊಳ್ಳುತ್ತವೆ. ಕೆಂಪು ಈ ತಳಿಯ ಬಣ್ಣವಾದರೂ ಬೆರಕೆ ಹಳದಿಯಿಂದ ಕರಿ ಕಂದಿನ ತನಕ ಇದರ ಬಣ್ಣ ಇರಬಹುದು. ಮೊಗದ ಮೇಲೆ

ಬಿಳಿ ಗುರುತು. ಮೈಕಟ್ಟು ಬಿಗುವಾಗಿ ಸಮನಾಗಿರುತ್ತವೆ. ಎತ್ತುಗಳು ಸಣ್ಣವಾದರೂ ಬಲವಾದವು. ಯುರೋಪಿನಲ್ಲಿ ಜರ್ಸಿ ತಳಿ ಇರುವಂತೆ, ಭಾರತದಲ್ಲಿ ಹಾಲಿನ ತಳಿಯೆಂದರೆ ಸಿಂಧಿಯೇ. ಹಾಲಿನಲ್ಲಿ ಜಿಡ್ಡೂ ಹೆಚ್ಚು. ಸಾಧುವಾಗಿರುವುದರಿಂದ, ಸಾಕಲೂ ಸುಲಭ. ಈ ತಳಿ ಪರದೇಶಗಳಿಗೂ ಹೋಗಿದೆ.

**ಸಹಿವಾಲ್** : ಪಂಜಾಬಿನ ಮಾಂಟ್ಗೊಮರಿ ಜಿಲ್ಲೆ ಈ ತಳಿಯ ತವರು. ಮುಖ್ಯವಾಗಿ ಇದು ಹಾಲಿನ ತಳಿ. ಸರಿಯಾಗಿ ಬೆಳೆಸಿದರೆ, ವಿಶಿಷ್ಟ ಗುಣಗಳಲ್ಲಿ ಯುರೋಪಿನ ರಾಸುಗಳಿಗೆ ಭಾರತದವು ಕೀಳಲ್ಲವೆಂದು, ಇತ್ತೀಚಿನ ಈ ತಳಿ ಚೆನ್ನಾಗಿ ತೋರಿಸಿಕೊಟ್ಟಿದೆ. ಸಾಧಾರಣವಾಗಿ ಇದರ ಬಣ್ಣ ಕೆಂಪು; ಅಚ್ಚಗೆಂಪಿನವೂ, ಕಂದು ಬಣ್ಣದವೂ ಇರಬಹುದು. ಈ ತಳಿಯ ದಾಖಲೆಗಳನ್ನು ಚೆನ್ನಾಗಿ ಇಟ್ಟಿರುವುದರಿಂದ ತಳಿಯ ಚೊಕ್ಕತೆ ಚೆನ್ನಾಗಿದೆ. (ಡಿ.ಎಸ್.ಎಸ್.)

**ಆಕಾಶ[1]** : ಪಾಶ್ಚಾತ್ಯ ತತ್ತ್ವದಲ್ಲಿ ಭೌತವಸ್ತುವಿಗೆ ಆಶ್ರಯವಾದುದು ಅವಕಾಶ. ಈ ಭಾವನೆ ಗ್ರೀಕ್ ತತ್ತ್ವದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು ಪ್ಲೇಟೋನ ಸಂವಾದಗಳಲ್ಲಿ. ಆತ ಆಕಾಶವನ್ನು ಒಂದು ಸಂಪುಟವೆಂದು (ರಿಸೆಪ್ಟಕಲ್) ಕರೆದಿರುತ್ತಾನೆ. ಅದು ಅಮೂರ್ತವಾದದ್ದು, ಖಾಲಿಯಾದದ್ದು. ಅದನ್ನು ಶೂನ್ಯ (ವಾಯ್ಡ್) ಎಂದೂ ಕರೆದಿರುತ್ತಾನೆ. ಅವನ ತತ್ತ್ವದಲ್ಲಿ ಭಾವನೆಗಳೇ ನಿತ್ಯಸತ್ಯಗಳು. ಅವು ಆಕಾಶಕ್ಕೆ ಅತೀತವಾದುವು. ಆಕಾಶಕ್ಕೆ ಒಳಪಟ್ಟವು ಭೌತವಸ್ತುಗಳು ಮಾತ್ರವೇ.

ಅರಿಸ್ಟಾಟಲ್ ಪ್ಲೇಟೋನ ಈ ಭಾವನೆಯನ್ನು ಅಂಗೀಕರಿಸಲಿಲ್ಲ. ಅವನ ಪ್ರಕಾರ ಆಕಾಶ ನಿರಾಕಾರವಾದ ಶೂನ್ಯವಲ್ಲ. ಅದು ಅನಂತವೂ ಅಲ್ಲ. ಅದು ಮಿತಿ ಉಳ್ಳದ್ದು, ಭೌತವಸ್ತುವನ್ನು ಬಿಟ್ಟು ಆಕಾಶವಿಲ್ಲ. ಆಕಾಶವನ್ನು ಬಿಟ್ಟು ಭೌತವಸ್ತುವೂ ಇಲ್ಲ. ಆಕಾಶವೆಂದರೆ ಭೌತವಸ್ತುವಿನ ಎಲ್ಲೆ, ಆದ್ದರಿಂದ ಅದು ಮಿತಿಯುಳ್ಳದ್ದು, ಅನಂತವಾದುದಲ್ಲ. ಆಕಾಶ ಎಷ್ಟೇ ವಿಸ್ತಾರವಾದದ್ದಾಗಲಿ ಅದಕ್ಕೆ ಮಿತಿ ಇದ್ದೇ ಇದೆ. ಆಕಾಶದಲ್ಲಿರುವ ವಸ್ತುಗಳಿಗೆ ಮಾತ್ರ ಚಲನೆ ಇದೆ. ಈಶ್ವರ ಅಚಲನಾದ್ದರಿಂದ ಅವನು ಆಕಾಶದಲ್ಲಿಲ್ಲ, ಅದರ ಮಿತಿಗೆ ಒಳಪಡುವುದಿಲ್ಲ. ಯುರೋಪಿನ ಮಧ್ಯಯುಗದ ತಾತ್ತ್ವಿಕರು ಅರಿಸ್ಟಾಟಲನ ಭಾವನೆಗಳನ್ನೇ ಒಪ್ಪಿಕೊಂಡರು. ಅವರ ಅಭಿಪ್ರಾಯದಲ್ಲಿ ಆಕಾಶ ಕಾಲಗಳು ಕೇವಲ ಚಿಲ್ಲರೆ ವಿಷಯಗಳು. ಈಶ್ವರನೊಬ್ಬನನ್ನು ಬಿಟ್ಟು ಉಳಿದೆಲ್ಲ ವಿಚಾರಗಳಲ್ಲಿ ಅವರು ಉದಾಸೀನರು.

ಆಕಾಶ ತತ್ತ್ವಕ್ಕೆ ಹೆಚ್ಚು ಪ್ರಾಶಸ್ತ್ಯ ಬಂದದ್ದು ಡೇಕಾರ್ಟ್‌ನ ಕಾಲದಲ್ಲಿ. ರೇಖಾಗಣಿತಕ್ಕೂ ಭೌತವಿಜ್ಞಾನಕ್ಕೂ ಆಕಾಶ ಅತ್ಯಗತ್ಯವಾದ್ದರಿಂದ, ಆ ಶಾಸ್ತ್ರಗಳಿಗೆ ಡೇಕಾರ್ಟ್ ವಿಶೇಷ ಮನ್ನಣೆ ಕೊಟ್ಟಿದ್ದನಾದ್ದರಿಂದ ಆಕಾಶ ತತ್ತ್ವಕ್ಕೆ ಆತ ತನ್ನ ತತ್ತ್ವದಲ್ಲಿ ಸ್ವತಂತ್ರ ಸ್ಥಾನಕೊಟ್ಟ. ಅವನ ಪ್ರಕಾರ ವಿಸ್ತರಣೆ (ಎಕ್ಸ್‌ಟೆನ್‌ಷನ್) ಸ್ವತಂತ್ರವಾದ ಭೌತವಸ್ತುವಿನ ಗುಣ. ಆಲೋಚನೆ ಸ್ವತಂತ್ರವಾದ ಆತ್ಮದ ಗುಣ. ಆತ್ಮ ಮತ್ತು ಭೌತವಸ್ತು ಎರಡೂ ಸ್ವತಂತ್ರ ಮತ್ತು ಪರಸ್ಪರ ವಿರುದ್ಧ ಗುಣಗಳು. ಇದು ದ್ವೈತವಾದ.

ಸ್ಪಿನೋಜ಼ ಈ ದ್ವೈತವಾದವನ್ನು ಖಂಡಿಸಿ, ವಿಸ್ತಾರವೂ ಆಲೋಚನೆಯೂ ಭಿನ್ನ ದ್ರವ್ಯಗಳ ಗುಣಗಳಲ್ಲ, ಅವೆರಡೂ ಒಂದೇ ವಸ್ತುವಿನಲ್ಲಿ ಎಡೆಬಿಡದೆ ಇರುವ ಗುಣಗಳೆಂದು ಸ್ಥಾಪಿಸಿದ. ಈ ಮೂಲಕ ಆತ್ಮಕ್ಕೂ ವಸ್ತುವಿಗೂ ಮಧ್ಯೆ ಇದ್ದ ಕಂದಕವನ್ನು ತೊಡೆದು ಹಾಕಿದ.

ಪರಮ ಅನುಭವವಾದಿಯಾದ ಡೇವಿಡ್ ಹ್ಯೂಮ್, ಆಕಾಶವೆಂಬ ಭಾವನೆಗೆ ವಾಸ್ತವಾನುಭವದ ಆಧಾರವಿಲ್ಲವಾದುದ್ದರಿಂದ ಅದು ನಿಜವಲ್ಲ; ನಿಜವಾದ ಅನುಭವ ತೋರಿಸುವುದು ಇಲ್ಲಿರುವುದು, ಮೇಲಿರುವದು, ಎಡಕ್ಕಿರುವುದು, ಬಲಕ್ಕಿರುವುದು, ಎಂಬ ಪೃಥಕ್ಕಾದ ದಿಕ್ಕುಗಳನ್ನು ಮಾತ್ರವೇ; ಆದ್ದರಿಂದ ಅನಂತವಾದ ಆಕಾಶವೆಂಬುದು ಮಿಥ್ಯಾಭಾವನೆ ಎಂದು ವಾದಿಸಿದ. ಇಮ್ಯಾನ್ಯುಅಲ್ ಕ್ಯಾಂಟ್ ಮನಸ್ಸು ಕೇವಲ ನಿಶ್ಚೇತನವಾದುದೆಂಬ ಹ್ಯೂಮನ ಅಭಿಪ್ರಾಯವನ್ನು ಖಂಡಿಸಿ, ಆಕಾಶ ಕಾಲಗಳು ಮನಸ್ಸಿನ ಆಂತರಿಕಭಾವನೆಗಳೆಂದು ಆಂತರಿಕ ಭಾವನೆಗಳಿಗೆ ಒಳಪಡದ ಮನಸ್ಸು ಯಾವ ಇಂದ್ರಿಯಾಂಶವನ್ನೂ ಸ್ವೀಕರಿಸುವುದಿಲ್ಲ ವೆಂದೂ ಆ ಭಾವನೆಗಳು ಭೌತವಸ್ತುವಿನ ಅರಿವಿಗೆ ಅತ್ಯಗತ್ಯ ಭಾವನೆಗಳೆಂದೂ ತನ್ನ ಮೊದಲ ಗ್ರಂಥದ ಮೊದಲ ಭಾಗವಾದ ಎಸ್ತಟಿಕ್‌ನಲ್ಲಿ ಪ್ರತಿಪಾದಿಸಿದ. ಆದರೆ ಈ ಭಾವನೆ ಗಣಿತ ಮತ್ತು ಭೌತಶಾಸ್ತ್ರಗಳಿಗೆ ಮಾತ್ರ ಅನ್ವಯಮಾಗಬಹುದಾದ ಭಾವನೆಯೇ ಹೊರತು, ಆ ಶಾಸ್ತ್ರಗಳ ಆಚಿನ ಅನುಭವಾತೀತ ಪ್ರಮೇಯಗಳಿಗೆ ಅನ್ವಯವಾಗದೆಂದೂ ಹಾಗೆ ಅತೀಂದ್ರಿಯ ವಸ್ತುಗಳಿಗೆ ಅದನ್ನು ಅನ್ವಯಿಸಿದರೆ ವಿರುದ್ಧಭಾವನೆಗಳಿಗೆ ಎಡೆಗೊಟ್ಟು ವಿಚಾರ ಅಸ್ತವ್ಯಸ್ತವಾಗುತ್ತದೆಯೆಂದೂ ಆ ಗ್ರಂಥದ ಮೂರನೆಯ ಭಾಗವಾದ ಡಯಲೆಕ್ಟಿಕ್‌ನಲ್ಲಿ ಪ್ರತಿಪಾದಿಸಿದ.

ಕಾಲ ಆಕಾಶ ಭಾವನೆಗಳಿಗೆ ಹೆಚ್ಚು ಪ್ರಾಶಸ್ತ್ಯ ಬಂದದ್ದು ಇತ್ತೀಚಿನ ಕಾಲದಲ್ಲಿ, ಕಾಲಕ್ಕೆ ವಿಶೇಷ ಪ್ರಾಶಸ್ತ್ಯ ದೊರೆತದ್ದು ಬರ್ಗ್‌ಸನ್ ತತ್ತ್ವದಲ್ಲಿ. ಕಾಲವೇ 'ಸತ್'ನ ಜೀವನಾಡಿ ಎಂದು ಆತ ಕ್ರಿಯೇಟಿವ್ ಎವಲ್ಯೂಷನ್ ಅಂಡ್ ಟೈಮ್ ಆಂಡ್ ಫ್ರೀ ವಿಲ್ ಎಂಬ ಗ್ರಂಥಗಳಲ್ಲಿ ಪ್ರತಿಪಾದಿಸಿದ. ಆದರೆ ಕಾಲತತ್ತ್ವಕ್ಕೆ ಕೊಟ್ಟ ಪ್ರಾಶಸ್ತ್ಯವನ್ನು ಆತ ಆಕಾಶತತ್ತ್ವಕ್ಕೆ ಕೊಡಲಿಲ್ಲ.

ಕಾಲ ಆಕಾಶಗಳೆರಡಕ್ಕೂ ಸಮಾನ ಪ್ರಾಶಸ್ತ್ಯ ದೊರೆತದ್ದು ತುಂಬ ಈಚಿನ ಕಾಲದಲ್ಲಿ. ಅದಕ್ಕೆ ಕಾರಣನಾದವ ಆಲ್ಬರ್ಟ್ ಐನ್‌ಸ್ಟೈನ್. ಅವನ ಪ್ರಕಾರ ಕಾಲ ಮತ್ತು ಆಕಾಶಗಳು ಪರಸ್ಪರ ಸಾಪೇಕ್ಷವಾದುವು. ವಿಶ್ವದ ಎಲ್ಲ ಘಟನೆಗಳಿಗೂ ಸರಳ ಘಟನೆಗಳಲ್ಲಿ ಸಂಕೀರ್ಣ ಘಟನೆಗಳು. ಅವು ನಾಲ್ಕು ಪರಿಣಾಮಗಳುಳ್ಳ ಘಟನೆಗಳು. ಯಾವ ಒಂದು ಘಟನೆಯನ್ನು ತೆಗೆದುಕೊಂಡರೂ ಅದರಲ್ಲಿ ಆಕಾಶದ ಮೂರು ಪರಿಮಾಣಗಳೂ ಕಾಲದ ಒಂದು ಪರಿಮಾಣವೂ ಅವಿಭಾಜ್ಯವಾಗಿ ಇದ್ದೇ ಇರುತ್ತದೆ. ಹಿಂದಿನ ಕಾಲದಲ್ಲಿ ಕಾಲವನ್ನು ಬಿಟ್ಟು ಆಕಾಶವೆಂಬ ಒಂದು ಖಾಲಿಯಾದ ದ್ರವ್ಯವಿದೆಯೆಂದೂ ಆಕಾಶವನ್ನು ಬಿಟ್ಟು ಕಾಲ ಕೇವಲ ಭಿನ್ನಭಿನ್ನ ಲಕ್ಷಣಗಳ ಸಂತಾನವೆಂದೂ ಬಗೆದಿದ್ದರು. ಈ ಭಾವನೆಗಳು ತತ್ತ್ವಶಾಸ್ತ್ರದಲ್ಲಿ ದುಷ್ಪರಿಣಾಮಕಾರಿಯಾಗಿದ್ದುವು. ಆದರೂ ದುಷ್ಪರಿಣಾಮದಿಂದ ಪಾರಾಗುವಂತೆ ಆಕಾಶ ಕಾಲ ತತ್ತ್ವಗಳನ್ನು ತಾತ್ತ್ವಿಕರು ಯಾರೂ ನಿರೂಪಿಸಲು ಪ್ರಯತ್ನಿಸಲಿಲ್ಲ. ಆದರೆ ಅವು ಭೌತವಿಜ್ಞಾನದ ಮುನ್ನಡೆಗೆ ತಡೆಗಳಾದಾಗ ಭೌತವಿಜ್ಞಾನಿಗಳು ತಾತ್ತ್ವಿಕರಂತೆ ಉದಾಸೀನ ರಾಗಿರಲಿಲ್ಲ. ಆಕಾಶ, ಕಾಲ ಅವಿಭಾಜ್ಯವಾದುವು, ಒಂದಕ್ಕೊಂದು ಸಾಪೇಕ್ಷವಾದುವು ಎಂಬ ಹೊಸ ತತ್ತ್ವವನ್ನು ಕಂಡುಹಿಡಿದು ಆ ಮೂಲಕ ಭೌತವಿಜ್ಞಾನದಲ್ಲಿ ಕ್ಲೇಶಗಳನ್ನು ಪರಿಹರಿಸಿ ಅದರ ಮುನ್ನಡೆಗೆ ಕಾರಣರಾದರು.

ಹೀಗೆ ಭೌತವಿಜ್ಞಾನದಲ್ಲಿ ಆಕಾಶ ಕಾಲಗಳ ಭಾವನೆ ಬೆಳೆದಾಗ ಆ ಭಾವನೆ ತತ್ತ್ವಶಾಸ್ತ್ರಜ್ಞರನ್ನು ಎಚ್ಚರಗೊಳಿಸಿತು. ಆಕಾಶ ಕಾಲಗಳ ಸಾಪೇಕ್ಷ ಭಾವನೆಯನ್ನು ಎಸ್. ಅಲೆಕ್ಸಾಂಡರ್ ತನ್ನ ತತ್ತ್ವದ ಪ್ರಥಮ ತತ್ತ್ವವಾಗಿ ಮಾಡಿಕೊಂಡ ಅವನ ಗ್ರಂಥದ ಹೆಸರು ಸ್ಪೇಸ್ ಟೈಮ್ ಆಂಡ್ ಡೀಟಿ. ಅವನ ತರುವಾಯ ಎ.ಎನ್. ವೈಟ್‌ಹೆಡ್ ದೇಶಕಾಲ ಸಾಪೇಕ್ಷತತ್ತ್ವವನ್ನು ವಿಶಾಲಗೊಳಿಸಿ ಆಕಾಶಕಾಲಗಳಲ್ಲದೆ ವಿಶ್ವದ ಎಲ್ಲವೂ ದೇಹ, ಮನಸ್ಸು, ವಿಶ್ವ ಮತ್ತು ಈಶ್ವರ ಎಲ್ಲವೂ ಸಾಪೇಕ್ಷವಾದುವೆಂದು, ಸಾಪೇಕ್ಷ ತತ್ತ್ವವನ್ನು ಪರತತ್ತ್ವದ ಮುಖ್ಯ ತತ್ತ್ವವನ್ನಾಗಿ ಮಾಡಿಕೊಂಡ. (ಜಿ.ಎಚ್.)

**ಆಕಾಶ[2]** : ಭೂಮಿಯ ಮೇಲೆ ಕವಿಚಿಟ್ಟಂತೆ ಕಾಣುವ ನೀಲವರ್ಣದ ಗೋಳಾರ್ಧ; ಗಗನ, ಬಾನು, ವ್ಯೋಮ, ಖಗೋಳ ಇವು ಪರ್ಯಾಯ ಪದಗಳು (ಸ್ಕೈ, ಹೆವೆನ್, ಫರ್ಮಮೆಂಟ್, ಸೆಲೆಸ್ಟಿಯಲ್ ಸ್ಪಿಯರ್). ಪ್ರತಿಯೊಬ್ಬ ವ್ಯಕ್ತಿಗೂ ಎಲ್ಲಿಯೇ ಯಾವ ಹೊತ್ತಿನಲ್ಲಿಯೇ ನಿಂತು ನೋಡಿದರೂ ತಾನೇ ಈ ಗೋಳದ ಕೇಂದ್ರ ಎಂಬ ಭಾವನೆ ಮೂಡುತ್ತದೆ. ಆಕಾಶದ ಎತ್ತರ ಬಿತ್ತರ ಊಹೆಗೆ ನಿಲುಕದು. ವಸ್ತುಗಳ ದೂರಗಳು ಒಂದು ಮಿತಿಯಲ್ಲಿ ಇರುವವರೆಗೆ ತರತಮ ಅಂತರಗಳನ್ನು ಕಣ್ಣು ಗುರುತಿಸಬಲ್ಲದು. ಅಲ್ಲಿಂದ ಮುಂದೆ ಎಲ್ಲ ವಸ್ತುಗಳೂ ಅತಿ ದೂರದ ಒಂದು ಪರದೆಯ ಮೇಲೆ ಪ್ರಕ್ಷೇಪಿತವಾದಂತೆ ಕಾಣುತ್ತವೆ. ಚಂದ್ರ, ಗ್ರಹಗಳು, ಸೂರ್ಯ, ನಕ್ಷತ್ರಗಳು ಇತ್ಯಾದಿ (ಒಟ್ಟಾಗಿ ಆಕಾಶಕಾಯಗಳು) ಆಕಾಶದ ಮೈಗೆ ಅಂಟಿಕೊಂಡಿರುವಂತೆ ಕಾಣುವುದು ಈ ಕಾರಣದಿಂದ. ಸರಿಸುಮಾರು ಗೋಳಾಕಾರದಲ್ಲಿರುವ ಭೂಮಿಯನ್ನು ಆವರಿಸಿ ವಾಯುಮಂಡಲವಿದೆ. ಇದರಲ್ಲಿ ಬೇರೆ ಬೇರೆ ಎತ್ತರಗಳಲ್ಲಿ ಮೋಡಗಳು ತೇಲುತ್ತಿವೆ; ಅಸಂಖ್ಯಾತ ದೂಳಿನ ಕಣಗಳು, ನೀರಿನ ತೇವ, ಗಾಳಿಯ ಅಣುಗಳು ಲೀನಗೊಂಡು ನಿರಂತರ ಕ್ಷೋಭೆಯಲ್ಲಿವೆ. ಪ್ರತಿಯೊಂದು ಆಕಾಶಕಾಯದ ಬೆಳಕೂ ವಾಯುಮಂಡಲದ ಕವಚ ದಾಟಿ ವೀಕ್ಷಕನೆಡೆಗೆ ಬರಬೇಕು. ಸೂರ್ಯಕಿರಣಗಳು ಹೀಗೆ ಬರುವಾಗ ಅವುಗಳಿಗೂ ವಾಯುಕಣಗಳಿಗೂ ನಡುವೆ ಭೌತಿಕದ ಪ್ರಕ್ರಿಯೆ ಉಂಟಾಗಿ (**ನೋಡಿ– ವಾಯುಮಂಡಲ**) ಕಣಗಳು ನೀಲವರ್ಣವನ್ನು ಚದರಿಸುವುದರಿಂದ ವಾಯುಮಂಡಲಕ್ಕೆ (ಆದ್ದರಿಂದ ಆಕಾಶಕ್ಕೆ) ಈ ಬಣ್ಣ ಬಂದಿದೆ. ವಾಯುಮಂಡಲದ ಮೂಲಕ ಆಕಾಶಕಾಯಗಳನ್ನು ನಾವು ನೋಡುವುದರಿಂದ ಅವೆಲ್ಲವೂ ನೀಲಗೋಳದ ಮೈಗೆ ಅಂಟಿಕೊಂಡಿರುವಂತೆ ಭಾಸವಾಗುವುದು. ಹೀಗೆ ಆಕಾಶ ಎಂಬ ವಸ್ತು ಅಥವಾ ಪದಾರ್ಥ ಇರದಿದ್ದರೂ ಭೂಮಿ ವಾಯುಮಂಡಲಗಳ ಅಸ್ತಿತ್ವದಿಂದಲೂ ಬೆಳಕು ಮತ್ತು ನಮ್ಮ ಕಣ್ಣುಗಳ ರಚನೆಯಿಂದಲೂ ಅದೊಂದು ನೀಲ ಗೋಳಾರ್ಧವಾಗಿ ಭಾಸವಾಗುತ್ತದೆ (**ನೋಡಿ– ಖಗೋಳವಿಜ್ಞಾನ**) *

**ಆಕಾಶ[3]** : ನಮ್ಮನ್ನು ಆವರಿಸಿರುವಂತೆ ಭಾಸವಾಗುವ ಖಗೋಳ ಮತ್ತು ಇದರಾಚೆಗಿನ ಸಮಸ್ತ ಭೌತ ವ್ಯಾಪ್ತಿ (ಸ್ಪೇಸ್), ಈ ಪಾರಿಭಾಷಿಕ ಪದವನ್ನು ವಿವಿಧ ಸಂದರ್ಭಗಳಲ್ಲಿ ವಿಭಿನ್ನ ಅರ್ಥಗಳಿಂದ ಬಳಸುವುದುಂಟು: ಬಿಂದುಗಳ ನಡುವಿನ 'ಆಕಾಶ' ಬಿಂದಿಗೆಯೊಳಗಿನ ಮತ್ತು ಹೊರಗಿನ ಆಕಾಶಗಳು ಭೌತವಿಶ್ವದ ಎಲ್ಲವೂ ಆಕಾಶದೊಳಗಿದೆ, ಯಾವುದೇ ಹೊರಗಿಲ್ಲ ಎಂಬುದು ಸ್ಪಷ್ಟ. *

**ಆಕಾಶಗಂಗೆ** : ವಿಶ್ವದಲ್ಲಿರುವ ಬ್ರಹ್ಮಾಂಡ (ಗ್ಯಾಲಕ್ಸಿ)ಗಳಲ್ಲಿ ಸೂರ್ಯನ ನೆಲೆಯಾದ ಬ್ರಹ್ಮಾಂಡ (ಮಿಲ್ಕಿವೇ). ಸ್ಥಳೀಯ ಬ್ರಹ್ಮಾಂಡ, ಕ್ಷೀರಪಥ, ಬಾಂದೊರೆ ಪರ್ಯಾಯ ಪದಗಳು.

**ವ್ಯಾಪ್ತಿ** : ಬರಿಗಣ್ಣಿನಿಂದ ಆಕಾಶಗಂಗೆಯ ಸ್ವಲ್ಪ ಹರವನ್ನು ನೋಡಬಹುದು. ಆಕಾಶದ ದಕ್ಷಿಣದಿಂದ ಉತ್ತರದ ಕಡೆಗೆ ಪಸರಿಸಿರುವ ಈ ಮಂದ ಪ್ರಕಾಶದ ಬೆಳಕಿನ ಪಟ್ಟಿಯಲ್ಲಿ ಸು. $10^{11}$ ನಕ್ಷತ್ರಗಳು ಇರಬಹುದೆಂದು ಅಂದಾಜು. ಲಘುಶ್ವಾನ (ಕೆನಿಸ್‌ಮೈನರ್),

ಮಹಾವ್ಯಾಧ (ಒರೈಯನ್), ಮಿಥುನ (ಜೆಮಿನಿ), ವೃಷಭ (ಟಾರಸ್), ಆರಿಗಾ, ಪರ್ಸಿಯಸ್, ಕೆಸಿಯೋಪಿಯ, ಆ್ಯಂಡ್ರೊಮಿಡ, ಸಿಫಿಯಸ್, ಸಿಗ್ನಸ್, ಅಕ್ವಿಲಾ, ಧನು (ಸಜಿಟ್ಟೇರಿಯಸ್), ವೃಶ್ಚಿಕ (ಸ್ಕಾರ್ಪಿಯೋ), ಸೆಂಟಾರಸ್, ಕ್ರಕ್ಸ್, ಕರಿನಾ, ವೇಲಾ ಪಪ್ಪಿಸ್, ಮಹಾಶ್ವಾನ (ಕೆನಿಸ್ ಮೇಜರ್) ಮುಂತಾದ ನಕ್ಷತ್ರ ಪುಂಜಗಳನ್ನು ಆಕಾಶಗಂಗೆ ಒಳಗೊಂಡಿದೆ. ಸಿಗ್ನಸ್ ನಕ್ಷತ್ರಪುಂಜದ ಬಳಿ ಆಕಾಶಗಂಗೆಯ ಪ್ರಕಾಶ ಸ್ವಲ್ಪ ಹೆಚ್ಚು. ಅಲ್ಲಿ ಈ ಬೆಳಕಿನ ಹೊನಲು ಎರಡು ಕವಲುಗಳಾಗಿ ಒಡೆದು ಸ್ಕೂಟಮ್ ಮತ್ತು ಓಫಿಯೂಕಸ್ ಪುಂಜಗಳನ್ನು ದಾಟಿ ವೃಶ್ಚಿಕ, ಧನು ರಾಶಿಗಳ ಮೂಲಕ ಒಂದೊಂದು ಕವಲೂ ದಕ್ಷಿಣಕ್ಕೆ ಸಾಗುವುದು. ಆರ್ಗೋ ಮತ್ತು ಸೆಂಟಾರಸ್ (ದಕ್ಷಿಣಾಕಾಶ) ಪುಂಜಗಳ ವಲಯದಲ್ಲಿ ಆಕಾಶ ಗಂಗೆಯ ಪ್ರಕಾಶ ಅಧಿಕತಮ. ವೃಶ್ಚಿಕ ಮತ್ತು ಧನು ರಾಶಿಗಳ ಸಮೀಪ ಇದರ ಅಗಲ ಪರಮಾವಧಿ, ಸು. $40^0$.

ದೂರದರ್ಶಕಗಳ ಮೂಲಕ ನೋಡುವಾಗ ಅಥವಾ ಛಾಯಾಚಿತ್ರ ತೆಗೆದು ಪರೀಶಿಲಿಸು ವಾಗ ಆಕಾಶಗಂಗೆ ಅಸಂಖ್ಯ ಸ್ಪಷ್ಟ ಆದರೆ ಕ್ಷೀಣ ನಕ್ಷತ್ರಗಳಿಂದಲೂ ನೀಹಾರಿಕೆಗ ಳಿಂದಲೂ (ನೆಬ್ಯುಲೇ) ಅಂತರನಾಕ್ಷತ್ರಿಕ ದೂಳು, ಅನಿಲಗಳಿಂದಲೂ ಕೂಡಿದೆ ಎಂದು ತಿಳಿಯಿತು. ದೂಳಿನ ರಾಶಿ ಕೆಲವೆಡೆ ದಟ್ಟವಾಗಿ ಮಳೆ ಮೋಡದಂತೆ ಕಪ್ಪಾಗಿ ವ್ಯಾಪಿಸಿದೆ. ಸಮೀಪದ ನಕ್ಷತ್ರಗಳ ಪ್ರಕಾಶದಿಂದ ಇವುಗಳ ಅಸ್ತಿತ್ವ ತಿಳಿಯಬಹುದು. ಕೆಲವು ನೀಹಾರಿಕೆಗಳ ನಡುವೆ ಬೂದಿಯ ನಡುವಿನ ಕೆಂಡದಂತೆ ನಕ್ಷತ್ರಗಳು ಹುದುಗಿವೆ. ಅಚ್ಚ ಕಪ್ಪುಬಣ್ಣದ ನೀಹಾರಿಕೆಗಳು ನಮ್ಮ ಸಮೀಪ ಇವೆ (ದೂರ 300-1500 ಜ್ಯೋತಿರ್ವರ್ಷಗಳು). ಸು. 5000 ಜ್ಯೋತಿರ್ವರ್ಷ ದೂರದಲ್ಲಿರುವ ಕಪ್ಪು ನೀಹಾರಿಕೆ ಮಹಾವ್ಯಾಧ ಖಡ್ಗದ ಹಿಂದೆ ಇದೆ. ದೂರದರ್ಶಕ ವೀಕ್ಷಣೆಗೆ ಇದು ಹಸುರು ಬಣ್ಣದ ಮೋಡದಂತೆ ಕಾಣುವುದು (ಆ್ಯಂಡ್ರೊಮಿಡ ನೀಹಾರಿಕೆ ಆಕಾಶಗಂಗೆಯ ಅಂಶವಲ್ಲ).



**ಚಿತ್ರ 1. ವೃಶ್ಚಿಕ ಧನೂರಾಶಿಗಳ ಮೂಲಕ ಸಾಗುವ ಆಕಾಶಗಂಗೆ**

**ಆಕಾರ :** ಖಗೋಳವನ್ನು ಪೂರ್ಣ ಸುತ್ತುವರಿದಿರುವ ಆಕಾಶಗಂಗೆಯಲ್ಲಿ ಒಂದು ಕಾಲ್ಪನಿಕ ಮಹಾವೃತ್ತವಿದೆಯೆಂದು ಭಾವಿಸಬಹುದು. ಈ ಮಹಾವೃತ್ತದ ಹೆಸರು ಬ್ರಹ್ಮಾಂಡ ವಿಷುವದ್ವೃತ್ತ (ಗಲ್ಯಾಕ್ಟಿಕ್ ಈಕ್ವೇಟರ್). ಇದರ ಉತ್ತರ ಧ್ರುವದ ನಿರ್ದೇಶಕಗಳು: ವಿಷುವದಂಶ (ರೈಟ್ ಅಸೆನ್ಷನ್) 12 ಗಂ. 40 ಮಿ ಮತ್ತು ಘಂಟಾವೃತ್ತಾಂಶ (ಡೆಕ್ಲಿನೇಷನ್) $28^o$ ಉ. ಖಗೋಳೀಯ (ಸೆಲೆಸ್ಟಿಯಲ್) ಮತ್ತು ಬ್ರಹ್ಮಾಂಡವಿಷುವದ್ವೃತ್ತಗಳು ಅಕ್ವಿಲಾ ಪುಂಜದ ಬಳಿ ಸಂಧಿಸುತ್ತವೆ. ಆಕಾಶಗಂಗೆಯ ಆಕಾರವನ್ನು ಯಾವುದೇ ವಿಧದ ಪ್ರತ್ಯಕ್ಷ ಕ್ರಮದಿಂದ ನಿರ್ಧರಿಸುವುದು ಸಾಧ್ಯವಿಲ್ಲ. ಈ ಮಹಾ ವೈಶಾಲ್ಯದ ಅತ್ಯಲ್ಪಾಂಶ ಸೂರ್ಯ; ಅದರ ಅತ್ಯಲ್ಪಾಂಶ ಭೂಮಿಯ ಮೇಲಿನ ಮಾನವ; ಸಮುದ್ರದೊಳಗಿನ ಕ್ರಿಮಿ ಸಮುದ್ರದ ಆಕಾರ ವಿಸ್ತಾರ ತಿಳಿಯಲು ಮಾಡಿದ ಯತ್ನದಂತೆ. ಅಪ್ರತ್ಯಕ್ಷ ವಿಧಾನಗಳಿಂದ ಇದನ್ನು ನಿರ್ಧರಿಸಲಾಗಿದೆ. ವಿಲಿಯಮ್ ಹರ್ಷೆಲ್ (18ನೆಯ ಶತಮಾನ) ಈ ದಾರಿಯಲ್ಲಿ ಮೊದಲ ಹೆಜ್ಜೆ ಇಟ್ಟ ಖಗೋಳವಿಜ್ಞಾನಿ. ದೂರದರ್ಶಕದಿಂದ ಆಕಾಶದ ವಿವಿಧ ವಲಯದಲ್ಲಿ ಕಾಣುವ ಬಿಡಿ ನಕ್ಷತ್ರಗಳ ಸಂಖ್ಯೆಯನ್ನು ಆತ ಎಣಿಸಿದ. ವಲಯ-ನಕ್ಷತ್ರಸಂಖ್ಯೆ ಕೋಷ್ಟಕ ಸಿದ್ಧಪಡಿಸಿ ಪರಿಶೀಲಿಸಿದಾಗ ನಕ್ಷತ್ರಗಳ ವಿತರಣೆಯಲ್ಲಿ (ಡಿಸ್ಟ್ರಿಬ್ಯೂಷನ್) ಒಂದು ವಿಶೇಷತೆ ಕಂಡ. ಬ್ರಹ್ಮಾಂಡ ವಿಷುವದ್ವೃತ್ತದ ಧ್ರುವಗಳಿಂದ ಆಕಾಶಗಂಗೆಯೆಡೆಗೆ ಸರಿದಂತೆ ನಕ್ಷತ್ರಗಳ ಸಂಖ್ಯೆ ಅತಿಶಯವಾಗಿ ವೃದ್ಧಿಸುತ್ತದೆ; ಮತ್ತು ಇಂಥ ವೃದ್ಧಿ ಉಜ್ವಲ ನಕ್ಷತ್ರಗಳಿಗಿಂತಲೂ ವಿಶೇಷವಾಗಿ ಕ್ಷೀಣ ನಕ್ಷತ್ರಗಳನ್ನು ಕುರಿತು ಗಮನಾರ್ಹವಾಗಿದೆ. ಬರಿಗಣ್ಣಿನಿಂದ ನೋಡುವಾಗ ಸಮಗ್ರ ಆಕಾಶದಲ್ಲಿ ಯಾದೃಚ್ಛಿಕವಾಗಿ ನಕ್ಷತ್ರಗಳನ್ನು ಚೆಲ್ಲಿದಂತೆ ಕಂಡರೂ ದೂರದರ್ಶಕ ವೀಕ್ಷಣೆಯಲ್ಲಿ ಇದರಲ್ಲೂ ಒಂದು ಕ್ರಮ ಇದೆ; ಬ್ರಹ್ಮಾಂಡವಿಷುವದ್ವೃತ್ತದೆಡೆಗೆ ನಕ್ಷತ್ರ ಸಾಂದ್ರತೆಯ ಪ್ರಮಾಣ ನಕ್ಷತ್ರಗಳ ಕಾಂತಿಯ ವಿಲೋಮಾನುಪಾತದಲ್ಲಿ ಎಂದು ತಿಳಿದುಬಂದದ್ದು ಹೊಸ ಅನ್ವೇಷಣೆಗೆ ಪ್ರೇರಣೆ ನೀಡಿತು.

ಅಮೆರಿಕದ ಖಗೋಳವಿಜ್ಞಾನಿ ಸಿಯರ್ನ್, ಬ್ರಹ್ಮಾಂಡ ಅಕ್ಷಾಂಶದ (ಗ್ಯಲ್ಯಾಕ್ಟಿಕ್ ಲ್ಯಾಟಿಟ್ಯೂಡ್) ಬೇರೆ ಬೇರೆ ಬೆಲೆಗಳಲ್ಲಿ ಹೆಚ್ಚು ಹೆಚ್ಚು ಶಕ್ತಿಯುತ ಕ್ಯಾಮರಾಗಳಿಂದ ನಕ್ಷತ್ರಗಳ ಛಾಯಾಚಿತ್ರ ತೆಗೆದು ಒಂದು ಕೋಷ್ಟಕ ತಯಾರಿಸಿದ. ಈ ಕೋಷ್ಟಕ ಮೇಲೆ ವಿವರಿಸಿದ ಆಕಾಶಗಂಗೆಯ ವೈಶಿಷ್ಟ್ಯಕ್ಕೆ ತಾತ್ತ್ವಿಕ ಹಿನ್ನೆಲೆ ಒದಗಿಸಿತು: ಆಕಾಶಗಂಗೆ ನಕ್ಷತ್ರಗಳ ನಿಬಿಡಸಮೂಹ; ಇದರ ಆಕಾರ ಚಪ್ಪಟೆ ತಟ್ಟೆಯಂತಿದೆ; ಸೂರ್ಯ ಇದರಲ್ಲಿ ಒಂದು ಅಂಶ ಎಂದು ದೃಢಪಟ್ಟಿತು.

**ಸೂರ್ಯನ ಸ್ಥಾನ :** ಆಕಾಶಗಂಗೆಯ ಕೇಂದ್ರದಲ್ಲಿ ಸೂರ್ಯ ಇರಬಹುದೆಂದು ಹರ್ಷೆಲ್ ಮೊದಲು ಭಾವಿಸಿದ್ದ. ಆದರೆ ಮುಂದಿನ ವೀಕ್ಷಣೆಗಳು ಸೂರ್ಯನಿಗೆ ಇಂಥ ಅಗ್ರಸ್ಥಾನವೀಯಲು ಯಾವ ಸಮರ್ಥನೆಯನ್ನೂ ಒದಗಿಸಲಿಲ್ಲ. ಧನೂರಾಶಿಯ ಕಡೆಗೆ ವೀಕ್ಷಿಸಿದಾಗ ಆಕಾಶಗಂಗೆಯ ನಕ್ಷತ್ರಗಳು ನಿಬಿಡವಾಗಿವೆ; ವಿರುದ್ಧ ದಿಕ್ಕಿನಲ್ಲಿ (ಅರಿಗಾ ಪುಂಜದೆಡೆಗೆ) ನೋಡಿದಾಗ ಅವು ವಿರಳವಾಗಿವೆ. ಇದರ ಅರ್ಥವಾಗಲು ದೊಡ್ಡ ವರ್ತುಲಾಕಾರದ ಮೈದಾನದ ಕೇಂದ್ರದಲ್ಲಿ ಒಂದು ಆಟ ನಡೆಯುತ್ತಿದೆ ಎಂದು ಭಾವಿಸೋಣ. ಅದನ್ನು ನೋಡಲು ಜನ ಕಿಕ್ಕಿರಿದು ಸೇರಿದ್ದಾರೆ. ಕೇಂದ್ರದಲ್ಲಿ ಅದರ ನಿಬಿಡತೆ ಅತಿ ಹೆಚ್ಚು; ಹೊರಅಂಚಿನಲ್ಲಿ ಅತಿ ವಿರಳ. ಕೇಂದ್ರದಲ್ಲಿ ನಿಂತಿರುವ ಒಬ್ಬ ವ್ಯಕ್ತಿ ಯಾವ ಕಡೆ ನೋಡಿದರೂ ಅವನಿಗೆ ಒಂದೇ ವಿಧವಾದ ಜನಸಂದಣಿ ಕಾಣುವುದು. ಸುಮಾರು ಹೊರಅಂಚಿನ ಸಮೀಪ ನಿಂತವನಿಗೆ ಈ ಅನುಭವ ಆಗುವುದಿಲ್ಲ, ಕೇಂದ್ರದೆಡೆಗೆ ನೋಡಿದಾಗ ಅತಿ ಜನಸಂದಣಿಯನ್ನೂ ಅಂಚಿನೆಡೆಗೆ ತಿರುಗಿದಾಗ ವಿರಳತೆಯನ್ನೂ ಕಾಣುತ್ತಾನೆ. ಸೂರ್ಯನ ಸ್ಥಾನ ಆಕಾಶಗಂಗೆಯ ಸುಮಾರು ಅಂಚಿನೆಡೆ ಇರುವುದರಿಂದ ಮೇಲಿನ ಅನುಭವ ಆಗುವುದು.

ಎರಡು ತಟ್ಟೆಗಳನ್ನು ಒಂದರಮೇಲೆ ಇನ್ನೊಂದನ್ನು ಕವುಚಿಟ್ಟರೆ ದೊರೆಯುವಂಥ ಘನಾಕೃತಿ ಆಕಾಶಗಂಗೆಯದು – ಮಧ್ಯೆ ಉಬ್ಬಿಕೊಂಡಿದೆ ಮಸುರದಂತೆ, ಅಂಚುಗಳಲ್ಲಿ ತೆಳುವಾಗುತ್ತ ಹೋಗುವುದು; ಇದನ್ನು ಆವರಿಸಿ ಸುರುಳಿ ಕೈಗಳಿವೆ. ಆಕಾಶಗಂಗೆಯ ಕೇಂದ್ರ ಧನೂರಾಶಿಯ ದಿಕ್ಕಿನಲ್ಲಿ (ಬ್ರಹ್ಮಾಂಡ ರೇಖಾಂಶ $325^o$) ಇದೆ; ವ್ಯಾಸ ಸು. 1,00,000 ಜ್ಯೋತಿರ್ವರ್ಷಗಳು; ನಡುವಿನ ಉಬ್ಬಿದ ಭಾಗದ ದಪ್ಪ 3,000-4,000 ಜ್ಯೋಕೇಂದ್ರೀಯ ನಿಬಿಡ ನಕ್ಷತ್ರವಲಯದ ದಪ್ಪ 8,000-10,000 ಜ್ಯೋ; ಅಲ್ಲಿಂದ ಮುಂದೆ ನಕ್ಷತ್ರಗಳ ವಿತರಣೆ ವಿರಳವಾಗುತ್ತ, ಅಂಚಿನೆಡೆಗೆ ಸಾಗಿದಂತೆ ತೀರ ತೆಳುವಾಗುತ್ತದೆ. ಕೇಂದ್ರದಿಂದ ಸೂರ್ಯನ ದೂರ 30,000 ಜ್ಯೋತಿರ್ವರ್ಷಗಳು.

**ಆವರ್ತನೆ :** ಆಕಾಶಗಂಗೆ ತನ್ನ ಕೇಂದ್ರದ ಸುತ್ತಲೂ ನಿರಂತರವಾಗಿ ಆವರ್ತಿಸುತ್ತಿದೆ. ಒಂದು ಉಬ್ಬಿದ ತಟ್ಟೆ ತನ್ನ ಕೇಂದ್ರದ ಸುತ್ತಲೂ ಆವರ್ತಿಸುವಾಗ ತಟ್ಟೆಯ ಮೇಲಿನ ವಿವಿಧ ಬಿಂದುಗಳ ಸಾಪೇಕ್ಷ ಸ್ಥಾನಗಳು ಬದಲಾಗುವುದಿಲ್ಲ. ತಟ್ಟೆ ದೃಢವಸ್ತು ಆಗಿರುವುದು ಇದರ ಕಾರಣ. ಆದರೆ ಆಕಾಶಗಂಗೆ ದೃಢವಸ್ತುವಲ್ಲ. ಅಸಂಖ್ಯ ಆಕಾಶಕಾಯಗಳು ಪರಸ್ಪರ ಗುರುತ್ವಾಕರ್ಷಣೆಗಳಿಂದ ಬಂಧಿತವಾಗಿ ಸಡಿಲವಾಗಿ ಜೋಡಣೆಗೊಂಡು ಒಂದೆಡೆ ಕಲೆತಿರುವ ವ್ಯವಸ್ಥೆ. ಇಂಥ ವ್ಯವಸ್ಥೆಯ ಆವರ್ತನೆಯ ನಿಯಮದ ಪ್ರಕಾರ ಎಲ್ಲ ಆಕಾಶಕಾಯಗಳ ಪರಿಭ್ರಮಣೆಯ ದಿಕ್ಕು ಒಂದೇ ಆಗಿದೆ; ಕೇಂದ್ರಸಮೀಪ ಕಾಯಗಳ



**ಚಿತ್ರ 2. ಆಕಾಶಗಂಗೆಯಲ್ಲಿ ಸೂರ್ಯನ ಸ್ಥಾನ**

ಪರಿಭ್ರಮಣವೇಗ ದೂರದವುಗಳಿಗಿಂತ ಅಧಿಕ. ಪ್ರತ್ಯಕ್ಷ ವೀಕ್ಷಣೆಗಳಿಂದ ಮೊದಲನೆಯದು ದೃಢಪಟ್ಟಿದೆ; ನಕ್ಷತ್ರಗಳ ಚಲನೆಯ ದಿಕ್ಕುಗಳು ಧನೂರಾಶಿಯೆಡೆಗೆ (ಆಕಾಶಗಂಗೆಯ ಪ್ರತಿಕೇಂದ್ರ) ಒಲವು ತೋರಿಸಿವೆ ಎಂದು ತಿಳಿದಿದೆ. ಸೂರ್ಯನಿಗೆ ಈ ಚಲನೆಯ ವೇಗ ಸೆಕೆಂಡಿಗೆ 64 ಕಿಮೀಗಳ ವೇಗದಲ್ಲಿ ಆಕಾಶದಲ್ಲಿ ಪರಿಭ್ರಮಿಸುತ್ತಿದೆ. ಒಂದು ಪರಿಭ್ರಮಣೆ ಮುಗಿಸಲು ಸೂರ್ಯನಿಗೆ ಬೇಕಾಗುವ ಅವಧಿ ಸು. $2x10^8$ ವರ್ಷಗಳು. ಈ ಅವಧಿಯನ್ನು ಒಂದು ವಿಶ್ವವರ್ಷ (ಕಾಸ್ಮಿಕ್ ಇಯರ್) ಎಂದು ಕರೆಯುವುದಿದೆ. ಆಕಾಶಗಂಗೆಯ ವಿವಿಧ ಕಾಯಗಳ ಪರಿಭ್ರಮಣವೇಗಗಳ ಗಮನಾರ್ಹ ಅಸಮಮಿತಿ ಇದೆ. ಅಸಮಾಂಗತ್ವವಿದೆ. ಕೇಂದ್ರದ ಸಮೀಪಕಾಯಗಳ ಪರಿಭ್ರಮಣವೇಗ ಕೇಂದ್ರ ದೂರ ಕಾಯವಾದ ಸೂರ್ಯನ ವೇಗಕ್ಕಿಂತ ವಿಶೇಷ ಹೆಚ್ಚೇನೂ ಇಲ್ಲ. ಇದರ ಕಾರಣ ಪ್ರಾಯಶಃ ಆಕಾಶಗಂಗೆಯ

ಸಡಿಲ ಜೋಡಣೆ ಮತ್ತು ಇದರಿಂದ ಉಂಟಾಗುವ ದುರ್ಬಲ ಗುರುತ್ವಾಕರ್ಷಣ ಕ್ಷೇತ್ರ. ಇಂಥ ಕ್ಷೇತ್ರದಲ್ಲಿ ಸೆಕೆಂಡಿಗೆ 322–483 ಕಿಮೀ ವೇಗದಲ್ಲಿ ಪರಿಭ್ರಮಿಸುವ ನಕ್ಷತ್ರಗಳಿದ್ದರೆ ಅವು ಆಕಾಶಗಂಗೆಯ ವಲಯದಿಂದ ಬಿಡುಗಡೆ ಹೊಂದಿ ಹೊರಗಿನ ವಿಶ್ವದಲ್ಲಿ ಮರೆಯಾಗಬಹುದು.

**ದ್ರವ್ಯರಾಶಿ :** ಕೇಂದ್ರದಿಂದ ಸೂರ್ಯನ ಕಕ್ಷೆಯವರೆಗೆ ವ್ಯಾಪಿಸಿರುವ ಆಕಾಶಗಂಗೆಯ ದ್ರವ್ಯರಾಶಿ $1.6x10^{11}$ ಸೂರ್ಯದ್ರವ್ಯರಾಶಿಯಷ್ಟಿದೆ. ಇದರಿಂದ ಹೊರಗಿನ ವಲಯದ ದ್ರವ್ಯರಾಶಿ ಇದಕ್ಕಿಂತ ಕಡಿಮೆ. ಆದ್ದರಿಂದ ಆಕಾಶಗಂಗೆಯ ಒಟ್ಟು ದ್ರವ್ಯರಾಶಿ $2x10^{11}$ ಸೌರರಾಶಿಯಷ್ಟು. ಎಂದು ಅಂದಾಜು ಮಾಡಲಾಗಿದೆ.

ಇತ್ತೀಚಿನ ದಿನಗಳಲ್ಲಿ ಆಕಾಶಗಂಗೆಯ ಹೊರಭಾಗದಲ್ಲಿ ಅದೃಶ್ಯವಸ್ತು ಹೇರಳವಾಗಿರಬಹುದೆಂಬ ವಾದ ಕೇಳಿಬರುತ್ತಿದೆ. ಬ್ರಹ್ಮಾಂಡದ ಆವರ್ತನೆಯನ್ನು ಸಾಧಾರಣ ಭೌತನಿಯಮಗಳಿಂದ ವಿವರಿಸಲಾಗಿರುವುದೇ ಈ ಪರಿಕಲ್ಪನೆಗೆ ಕಾರಣವಾಯಿತು. ಕಪ್ಪು ಎನ್ನುವ ಈ ವಸ್ತು, ಗ್ರಹಗಳು, ನ್ಯೂಟ್ರಾನ್ ನಕ್ಷತ್ರಗಳು, ಕಂದು ಕುಬ್ಜಗಳಿಂದಾಗಿರಬಹುದೇ ಎಂಬ ಊಹೆಯೂ ಇದೆ.

**ಪ್ರಾಯ :** 1940ರಲ್ಲಿ ಬಾಡೆ (1893–1960) ಮಂಡಿಸಿದ ಒಂದು ಸೂಚನೆಯ ಪ್ರಕಾರ ಆಕಾಶಗಂಗೆಯಲ್ಲಿ ಎರಡು ಭಿನ್ನವರ್ಗಗಳ ನಕ್ಷತ್ರಗಳಿವೆ. ಒಂದನೆಯ ವರ್ಗದವು ಹೊರವಲಯದ ಸುರುಳಿ ಕೈಗಳ ಅಂತರನಕ್ಷತ್ರ ಅನಿಲ, ವಿಶ್ವದೂಳು ಮತ್ತು ನೀಲಬಿಳಿ ಬಣ್ಣದ ಮಹಾದೈತ್ಯ ನಕ್ಷತ್ರಗಳು. ಈ ದೈತ್ಯನಕ್ಷತ್ರಗಳು ಒಂಟಿಯಾಗಿ ಅಥವಾ ಗುಂಪುಗುಂಪಾಗಿ ಹರಡಿವೆ. ವಿಶ್ವದ ಪ್ರಾಯದ ಅಳತೆಯಲ್ಲಿ ಇವೆಲ್ಲ ತರುಣ ಕಾಯಗಳು– ಇವುಗಳ ಪ್ರಾಯ ಸು. 10 ಮಿಲಿಯನ್‌ನಿಂದ 100 ಮಿಲಿಯನ್ ವರ್ಷಗಳು. ಇದು ಭೂಮಿ, ಸೂರ್ಯರ ಪ್ರಾಯದ 1/100 ರಷ್ಟು. ಎರಡನೆಯ ವರ್ಗದ ನಕ್ಷತ್ರಗಳಿಗೆ ಹೆಚ್ಚು ಪ್ರಾಯವಾಗಿದೆ. ಇವುಗಳಲ್ಲಿ ಅತ್ಯಧಿಕ ಪ್ರಾಯದವು 10 ಬಿಲಿಯನ್ ವರ್ಷಗಳ ಹಿಂದೆಯೇ ಜನಿಸಿರಬಹುದು. ಆದರೆ ಈ ವರ್ಗದ ಎಲ್ಲ ನಕ್ಷತ್ರಗಳ ವ್ಯಾಪ್ತಿ ಆಕಾಶಗಂಗೆಯ ವಿರಳ ಹೊರವಲಯದಿಂದ ನಿಬಿಡ ಕೇಂದ್ರ ವಲಯದವರೆಗೆ ಇದೆ. ಹೆಚ್ಚಿನವು ಗೋಳಗುಚ್ಛಗಳಲ್ಲಿ ಅಡಕವಾಗಿವೆ.

**ಪ್ರಾಚೀನ ಕಲ್ಪನೆ :** ಕಂಡ ದೃಶ್ಯಕ್ಕೆ ಕಲ್ಪನೆಯ ಮೆರುಗನ್ನು ಪ್ರಾಚೀನ ಮಾನವ ಪೂಸಿದ್ದಾನೆ. ಇಂಥ ಒಂದು ಕಲ್ಪನೆಯ ಪ್ರಕಾರ ವಿಷ್ಣುಪಾದೋದ್ಭವೆ ದೇವಗಂಗೆ ಉತ್ತರದ ಹಿಮವತ್ಪರ್ವತದೆಡೆಗೆ ಹರಿದಿದೆ. ಆದ್ದರಿಂದ ಇದರ ಹೆಸರು ಆಕಾಶಗಂಗೆ. ಅಲ್ಲಿ ಅದು ಭೂಮಿಯ ಹರನ ಜಡೆಯಿಂದ ಇಳಿದಿದೆ. ಹಿಮವತ್ಪರ್ವತದ ಬಣ್ಣವೂ ಬಿಳಿ. ಇನ್ನೊಂದು ಕಲ್ಪನೆಯ ಪ್ರಕಾರ ಆಕಾಶ ದೇವತೆ ಧನೂರಾಶಿಯ ಚಮಚದಿಂದ (ಈ ರಾಶಿಯ ಐದು ಸ್ಪಷ್ಟ ನಕ್ಷತ್ರಗಳು ಚಮಚದ ಆಕಾರ ರಚಿಸುತ್ತವೆ) ಮಗುವಿಗೆ ಹಾಲೂಡಿಸುವಾಗ ಚೆಲ್ಲಿದ ಹಾಲು ಬಾನ ಹಲಗೆಯ ಮೇಲೆ ಪಸರಿಸಿ ಕ್ಷೀರಪಥ ಅಥವಾ ಮಿಲ್ಕೀವೇ ಆಯಿತು ಎಂದಿದೆ (**ನೋಡಿ– ನಕ್ಷತ್ರ ಲೋಕ**). *

**ಆಕಾಶಬಳ್ಳಿ :** ಲಾರೇಸಿ ಕುಟುಂಬಕ್ಕೆ ಸೇರಿದ ಇದು ಒಂದು ವಿಶೇಷ ರೀತಿಯ ಪರೋಪಜೀವಿ. ಕೆಸಿತ ಲಾಂಟಾನ, ಕಳ್ಳಿ ಮುಂತಾದ ಗಿಡಗಳ ಮೇಲೆ ಬದನಿಕೆಯಾಗಿ ಬೆಳೆಯುತ್ತದೆ. 20 ಪ್ರಭೇದಗಳುಂಟು. ಪ್ರಮುಖವಾದುದು ಕೆಸಿತ ಫಿಲಿಫಾರಮಿಸ್, ಕಾಂಡದ ಭಾಗ ಎಲೆಗಳಿಲ್ಲದೆ ಹಸುರಾಗಿದ್ದು ದಾರದಂತಿರುತ್ತದೆ. ಹೂ, ಕಾಯಿ ಮತ್ತು ಹಣ್ಣುಗಳು ಬೇಸಗೆಯಲ್ಲಿ ಹೆಚ್ಚು. ಬಳ್ಳಿ ಆಶ್ರಿತ ಮರವನ್ನು ಸುತ್ತಿಕೊಂಡಿರುತ್ತದೆ. ಅಲ್ಲಲ್ಲಿ ಕೆಲವು ವಿಚಿತ್ರ ರೀತಿಯ ಹೀರು ಬೇರುಗಳಿದ್ದು ಅವು ಕೆಲವು ಎನ್‌ಜೈಮ್‌ಗಳನ್ನು ತಯಾರಿಸುತ್ತವೆ. ಈ ಬೇರುಗಳ ಸಹಾಯದಿಂದ ಬಳ್ಳಿಯ ಬೇರುಗಳು ಆಶ್ರಿತ ಮರವನ್ನು ಪ್ರವೇಶಿಸಿ ಸಸ್ಯನಾಳಗಳೊಡನೆ ಕೂಡಿಕೊಂಡು ನೀರು, ಆಹಾರ ಹಾಗೂ ಇತರ ಲವಣಗಳನ್ನು ಆಶ್ರಿತ ಮರಗಳಿಂದ ಪಡೆಯುತ್ತವೆ.

ಆಶ್ರಯದಾತ ಮರದ ಉತ್ತೇಜನ ದೊರೆತಲ್ಲದೆ ಈ ಬಳ್ಳಿಯ ಬೀಜ ಮೊಳೆಯುವುದಿಲ್ಲ ಎಂಬ ನಂಬಿಕೆ ಇದುವರೆಗೂ ಇತ್ತು. ಆದರೆ ಸಂಶೋಧನೆಗಳಿಂದ ಆಶ್ರಯಮರದ ಸಂಪರ್ಕವಿಲ್ಲದೆಯೇ ಕೃತಕವಾಗಿ ಬೆಳೆಯಬಹುದೆಂದು ಈಗ ತಿಳಿದುಬಂದಿದೆ.

ಹಿಂದಿನ ಕಾಲದಲ್ಲಿ ಆಕಾಶಬಳ್ಳಿಯನ್ನು ತಲೆಯ ಪಟ್ಟಿರೋಗ, ಹುಳು ಹುಪ್ಪಟೆ ಮೊದಲಾದುವನ್ನು ನಿವಾರಿಸಲು ಉಪಯೋಗಿಸುತ್ತಿದ್ದರು. ಭಾರತದಲ್ಲಿ ಈ ಗಿಡದ ಪುಡಿಯನ್ನು ಕಲಸಿ ಕೇಶವರ್ಧಕವಾಗಿ ಉಪಯೋಗಿಸುತ್ತಾರೆ. ಗಿಡದ ಪುಡಿಯನ್ನು ಬೆಣ್ಣೆ ಮತ್ತು ಎಳ್ಳೆಣ್ಣೆಯಲ್ಲಿ ಕಲಸಿ ಹುಣ್ಣುಗಳಿಗೆ ಹಚ್ಚುತ್ತಾರೆ. ಆಫ್ರಿಕಾದ ಟಾಂಗನೀಕದ ನೀಗ್ರೊ ಜನ ಶುಕ್ಲದೋಷ (ಗನೋರಿಯ) ನಿವಾರಿಸಲು, ಮೂತ್ರಸ್ರಾವ ತಡೆಯಲು ಇದನ್ನು ಉಪಯೋಗಿಸುತ್ತಾರೆ.

ಗಿಡದ ಪುಡಿಯಿಂದ ಶಕ್ತಿ ಮತ್ತು ವೀರ್ಯವೃದ್ಧಿಯಾಗುವುದೆಂದು ಸಂಸ್ಕೃತ ವೈದ್ಯ ಗ್ರಂಥದಲ್ಲಿ ಹೇಳಿದೆ. ಒಣಗಿದ ಕಾಂಡದ ಪುಡಿಯನ್ನು ಪಿತ್ತದೋಷ, ಮೂತ್ರರೋಗ, ಅತಿ ಆಮಶಂಕೆ, ಚರ್ಮರೋಗಗಳಿಗೆ ಉಪಯೋಗಿಸುತ್ತಾರೆ. ಮರಟಿಟಸ್ ಗಿಡದ ಕಷಾಯವನ್ನು ಮಕ್ಕಳ ಮೆತುರೋಗಕ್ಕೆ ಉಪಯೋಗಿಸುತ್ತಾರೆ.

ಆಕಾಶಬಳ್ಳಿಯಲ್ಲಿ ಲಾರೋಟಿಟಾನಿನ್ ($C_{19}H_{25}O_4NH_2O$) ಎಂಬ ಸಸ್ಯಕ್ಷಾರ ಇರುತ್ತದೆ. ಇದನ್ನು ಉಪಯೋಗಿಸುವುದರಿಂದ ಮಾಂಸ ಮತ್ತು ನರಗಳ ಸೆಳೆತ ಬರುವುದಲ್ಲದೆ, ಅತಿ ಹೆಚ್ಚಾದಾಗ ಪ್ರಾಣಕ್ಕೂ ಸಂಚಕಾರವಾಗಬಹುದು. ಆದರೆ ಸಸ್ಯದ ಅಂಟು ದ್ರವದಿಂದ ಅನೇಕ ರೋಗಗಳು ವಾಸಿಯಾಗುತ್ತವೆ. ಡುಲಿಸಿಟಾಲ್ ಎಂಬ ಮತ್ತೊಂದು ಕ್ಷಾರವನ್ನೂ ಗಿಡದಿಂದ ತೆಗೆಯುತ್ತಾರೆ. (ಡಿ.ಆರ್.ಎ.)

**ಆಕಾಶ ಮತ್ತು ಕಾಲ :** ಆಕಾಶ ಮತ್ತು ಕಾಲ (ಸ್ಪೇಸ್ ಆ್ಯಂಡ್ ಟೈಂ) ಬಲು ಪ್ರಾಚೀನ ಭಾವನೆಗಳು. ಆಧುನಿಕರು ಇದನ್ನು ದೇಶ ಮತ್ತು ಕಾಲ ಎಂದಿದ್ದಾರೆ. ಒಂದು ನಿರ್ದಿಷ್ಟ ಕಾಲದಲ್ಲಿ ಆಕಾಶದಲ್ಲಿ ಪರಿಗಣಿಸಲಾಗುವ ಒಂದು ಬಿಂದು– ಉದಾಹರಣೆಗೆ ಮಧ್ಯರಾತ್ರಿ 12 ಗಂಟೆಗೆ ನೆತ್ತಿಯ ಮೇಲೆ ಬಂದಿರುವ ಒಂದು ನಕ್ಷತ್ರ–ವಿವರಣೆಗೆ ದೇಶ ಮತ್ತು ಕಾಲದ ವಿವರಣೆ ಅಗತ್ಯ. ವೀಕ್ಷಣೆ ಮಾಡುವ ಸ್ಥಳದಲ್ಲಿರುವ ಒಂದು ಗಡಿಯಾರ ತೋರಿಸುವ ಕಾಲದ ಪ್ರಕಾರ ಒಂದು ನಿರ್ದಿಷ್ಟ ಕ್ಷಣದಲ್ಲಿ ಒಂದು ಬಿಂದುವಿನ ಸ್ಥಾನವನ್ನು ಮೂರು ನಿರ್ದೇಶಕಗಳ ಸಹಾಯದಿಂದ ನಿರ್ಧರಿಸಬಹುದು. ಇವುಗಳನ್ನು ಉಪಯೋಗಿಸಿ ನಾವು ಗುಣಿಸುವ ನಿರ್ದೇಶಕಗಳು; ದೂರ ಮತ್ತು ಕೋನಕ್ಕೆ ಖಚಿತವಾದ ಅರ್ಥ ಇರುವುದು. ಇದೇ ರೀತಿ ಒಂದು ವಿಶಿಷ್ಟ ಕಾಲಮಾನವನ್ನು ನಾವು ಊಹಿಸಿಕೊಂಡಾಗ ಮಾತ್ರ ನಿರ್ದೇಶಕಗಳು ಮತ್ತು ದೂರಗಳು ಸೂಚಿಸುವ ಕಾಲದ ಕ್ಷಣಗಳು ಸ್ಪಷ್ಟವಾಗಿ ರೂಪಿತವಾಗುವುವು. ಭೌತವಿಜ್ಞಾನದಲ್ಲಿ ದೇಶಕ್ಕೆ ವಿಶಿಷ್ಟ ಅರ್ಥವಿದೆ. ನಾಲ್ಕು ಆಯಾಮಗಳ ಸಾತತ್ಯದಲ್ಲಿ ದ್ರವ್ಯ (ಮ್ಯಾಟರ್) ವನ್ನು ಭೌತವಾಗಿ ವಿಸ್ತರಿಸಲು ಸಾಧ್ಯವಾಗುವ ಅವಕಾಶವೇ ದೇಶ. ನ್ಯೂಟೋನಿಯನ್ ಅಥವಾ ಅಭಿಜಾತ ಭೌತವಿಜ್ಞಾನದಲ್ಲಿ ದೇಶ, ಕಾಲ ಮತ್ತು ದ್ರವ್ಯಗಳನ್ನು ಪ್ರತ್ಯೇಕ ಘಟಕಗಳೆಂದು ಪರಿಗಣಿಸಿದೆ.

ಅಭಿಜಾತ ಬಲವಿಜ್ಞಾನದ (ಕ್ಲಾಸಿಕಲ್ ಮೆಕ್ಯಾನಿಕ್ಸ್,) ಸೂತ್ರಗಳು ಸತ್ಯವಾಗಿರುವ ನಿರ್ದೇಶಕ ವ್ಯವಸ್ಥೆಯನ್ನು ಒಂದು ಜಡವ್ಯವಸ್ಥೆ (ಇನರ್ಷಿಯಲ್ ಸಿಸ್ಟಂ) ಎಂದು ಕರೆಯುತ್ತೇವೆ. ಆಗ ನಮಗೆ ಗೆಲಿಲಿಯೋ ಪ್ರತಿಪಾದಿಸಿದ ಸಾಪೇಕ್ಷತಾ ಸಮೀಕರಣಗಳು ದೊರೆಯುತ್ತವೆ. ಬಲವಿಜ್ಞಾನದ ಸೂತ್ರಗಳು ಒಂದು ಜಡವ್ಯವಸ್ಥೆಯಲ್ಲಿ ಸತ್ಯವಾಗಿದ್ದರೆ, ಈ ವ್ಯವಸ್ಥೆಗೆ ಹೊಂದಿದಂತೆ ಸ್ಥಿರವೇಗದಿಂದ ಚಲಿಸುವ ಇನ್ನೊಂದು ನಿರ್ದೇಶಕ ವ್ಯವಸ್ಥೆಯಲ್ಲಿಯೂ ಅವು ಸತ್ಯವಾಗಿರುತ್ತವೆ.

ಯಾವುದೇ ಒಂದು ವಿಶಿಷ್ಟ ಘಟನೆಯ ದೇಶ ಮತ್ತು ಕಾಲಗಳು, S ಮತ್ತು S' ಎನ್ನುವ ಎರಡು ವ್ಯವಸ್ಥೆಗಳಲ್ಲಿ ಕ್ರಮವಾಗಿ (x,y,z,t) ಮತ್ತು (x',y',z',t',) ಆಗಿದ್ದರೆ, ಪರಿವರ್ತನೆಯ ಸಮೀಕರಣಗಳು $x' = x-v_xt$ $y'=y-v_yt$ $z'=z-v_zt$ $t'=t$ ಹೊಂದಿದಂತೆ s' ನ ವೇಗದ ಘಟಕಗಳು ಎಂದಾಗುವುವು. ಇಲ್ಲಿ $(v_x,v_y,v_z)$ ಗಳು Sಗೆ ಹೊಂದಿದಂತೆ ಮತ್ತು S'ನ ವೇಗದ ಘಟಕಗಳು $(v'_x,v'_y,v'_z)$ ಎಂದಾಗುತ್ತವೆ. ಇಂಥ ಪರಿವರ್ತನೆಯನ್ನು ಗೆಲಿಲಿಯೋ ಪರಿವರ್ತನೆ ಎಂದು ಕರೆಯುತ್ತೇವೆ. ಬಲವಿಜ್ಞಾನದ ಸೂತ್ರಗಳು ಈ ಪರಿವರ್ತನೆಯಲ್ಲಿ ಅಚರಗಳು (ಇನ್‌ವೇರಿಯಂಟ್ಸ್) ಎಂದು ಸಾಪೇಕ್ಷತಾ ಸಿದ್ಧಾಂತಪೂರ್ವ ಭೌತವಿಜ್ಞಾನ (ಪ್ರೀರಿಲೆಟಿವಿಸ್ಟಿಕ್ ಫಿಸಿಕ್ಸ್) ದೃಢವಾಗಿ ನಂಬಿದ್ದಿತು. ಆದರೆ ದ್ಯುತಿವಿಜ್ಞಾನಕ್ಕೆ ಮತ್ತು ವಿದ್ಯುತ್ಕಾಂತತೆಗೆ ಸಂಬಂಧಿಸಿದ ಘಟನೆಗಳು ಈ ತತ್ತ್ವವನ್ನು ವಿರೋಧಿಸಿದುವು. ಉದಾಹರಣೆಗೆ, ಈ ತತ್ತ್ವದ ಪ್ರಕಾರ, ಒಂದು ಚಲಿಸುವ ಬೆಳಕಿನ ಉಗಮಸ್ಥಾನದಿಂದ ಪ್ರವಹಿಸುವ ಬೆಳಕು ಒಬ್ಬ ವೀಕ್ಷಕನಿಗೆ ಅದು ತನ್ನೆಡೆಗೆ ಬರುವಾಗ ಅಧಿಕ ವೇಗದಿಂದ ಚಲಿಸಿದಂತೆಯೂ, ಅವನಿಂದ ದೂರ ಹೋದಂತೆ ಕಡಿಮೆ ವೇಗದಿಂದ ಚಲಿಸಿದಂತೆಯೂ ಭಾಸವಾಗಬೇಕು. ಆದರೆ ಪ್ರಯೋಗದ ಪ್ರಕಾರ ಈ ತೀರ್ಮಾನ ತಪ್ಪು. ಬೆಳಕಿನ ವೇಗ ಎಲ್ಲ ನಿರ್ದೇಶಕ ವ್ಯವಸ್ಥೆಗಳಲ್ಲಿಯೂ ಸ್ಥಿರವಾಗಿದೆ, ಮತ್ತು ವೇಗ ಉಗಮ ಸ್ಥಾನದ ಚಲನೆಯ ವೇಗವನ್ನು ಅವಲಂಬಿಸಿಕೊಂಡಿಲ್ಲವೆಂದು ತಿಳಿದಿದೆ.

ಪುನಃ ವಿದ್ಯುತ್ಕಾಂತತೆ ಮತ್ತು ಬೆಳಕಿಗೆ ಸಂಬಂಧಿಸಿದ ತರಂಗಗಳ ಪ್ರಸರಣಕ್ಕೆ ಮಾಧ್ಯಮವಾಗಿ ಈಥರ್ ಎನ್ನುವ ವಿಶ್ವಮಾಧ್ಯಮವನ್ನು ಊಹಿಸಿಕೊಂಡರೆ, ಇದೊಂದು ವಿಶ್ವನಿರ್ದೇಶಕ ಚೌಕಟ್ಟಾಗಿ ವರ್ತಿಸುವುದು, ಇದರ ಸಹಾಯದಿಂದ ನಿರಪೇಕ್ಷ ಚಲನೆಗೆ (ಆ್ಯಬ್ಸಲೂಟ್ ಮೋಷನ್) ಒಂದು ಅರ್ಥವನ್ನು ನೀಡಬಹುದು. ಈ ವಿಶ್ವಚೌಕಟ್ಟಿನಲ್ಲಿ ಬೆಳಕಿನ ವೇಗ ಎಲ್ಲ ದಿಕ್ಕುಗಳಲ್ಲಿಯೂ ಒಂದೇ ಆಗಿರುವುದು. ಆದರೆ ಈ ಚೌಕಟ್ಟಿಗೆ ಹೊಂದಿದಂತೆ ಚಲಿಸುವ ಬೇರೊಂದು ಚೌಕಟ್ಟಿನಲ್ಲಿ ಬೆಳಕಿನ ವೇಗ ನಾವು ಅಳತೆ ಮಾಡುವ ದಿಕ್ಕನ್ನು ಅವಲಂಬಿಸಿ ಹೆಚ್ಚು ಕಡಿಮೆ ಆಗುವುದು. ಈ ತೀರ್ಮಾನ ಸರಿಯೇ ತಪ್ಪೇ ಎಂದು ಇತ್ಯರ್ಥ ಪಡಿಸಲು ಸುಪ್ರಸಿದ್ಧ ಮೈಕೆಲ್ಸನ್–ಮೋರ್ಲೇ ಪ್ರಯೋಗವನ್ನು ರೂಪಿಸಲಾಯಿತು. ಬೆಳಕಿನ ಕಿರಣ ಯಾವುದೇ ದಿಕ್ಕಿನಲ್ಲಿಯೂ ಭೂಮಿಯ ಆವರ್ತನೆ ಹಾಗೂ ಪರಿಭ್ರಮಣೆಗಳ ದಿಕ್ಕುಗಳಲ್ಲಿ ಸಹ, ಒಂದೇ ವೇಗದಲ್ಲಿ ಚಲಿಸುವುದೆಂದು ಇದರಿಂದ ಸ್ಪಷ್ಟವಾಯಿತು. ಹಾಗಾಗಿ : 1. ಈಥರ್ ಸಿದ್ಧಾಂತಕ್ಕೆ ಬೆಂಬಲ ಸಿಕ್ಕಿಲಿಲ್ಲ. 2. ಭೂಮಿಯ ನಿರಪೇಕ್ಷ ಚಲನೆಯನ್ನು ಅಳೆಯಲು ಸಾಧ್ಯವಾಗಲಿಲ್ಲ. ಇದು ಕ್ರೋಡೀಕರಿಸಿದ ಗೆಲಿಲಿಯೋ ಪ್ರಕಾರದ ಸಾಪೇಕ್ಷತಾತತ್ತ್ವವನ್ನು ಸಾಮಾನ್ಯೀಕರಿಸುತ್ತದೆ. ಆದರೆ ವಿದ್ಯುತ್ಕಾಂತತೆಯ

ಮತ್ತು ದ್ಯುತಿ ಸೂತ್ರಗಳು ಗೆಲಿಲಿಯೋ ಪರಿವರ್ತನೆಯನ್ನು ಪಾಲಿಸುವುದಿಲ್ಲ ಎಂದು ನೋಡಿದ್ದೇವೆ. ಆದ್ದರಿಂದ ಈ ಗೆಲಿಲಿಯೋ ಪರಿವರ್ತನೆಯ ಬದಲು ಬೇರೊಂದು ಸಾಮಾನ್ಯ ಸೂತ್ರವನ್ನು ನಾವೀಗ ಹುಡುಕಬೇಕಾಗುವುದು.

ಸಾಪೇಕ್ಷತಾ ಸಿದ್ಧಾಂತದ ತತ್ತ್ವ– ಲೊರೆಂಟ್ಸ್ ಪರಿವರ್ತನೆ: ಸಾಪೇಕ್ಷಸಿದ್ಧಾಂತ ಈ ಕೆಳಗಿನ ಎರಡು ಆಧಾರಭಾವನೆಗಳನ್ನು ಅವಲಂಬಿಸಿದೆ.– 1 ಪರಸ್ಪರ ಏಕಸಮಾನವಾಗಿ ಚಲಿಸುವ ಎಲ್ಲ ನಿರ್ದೇಶಕ ವ್ಯವಸ್ಥೆಗಳಲ್ಲಿಯೂ ಬೆಳಕಿನ ನಿರ್ವಾತ ಪ್ರದೇಶದ ವೇಗ ಒಂದೇ ಆಗಿದೆ. 2 ಪರಸ್ಪರ ಏಕಸಮಾನವಾಗಿ ಚಲಿಸುವ ಎಲ್ಲ ನಿರ್ದೇಶಕ ವ್ಯವಸ್ಥೆಗಳಲ್ಲಿಯೂ ನಿಸರ್ಗದ ಎಲ್ಲ ನಿಯಮಗಳೂ ಒಂದೇ ಆಗಿವೆ.

S ಮತ್ತು S′ ಎನ್ನುವ ಎರಡು ವ್ಯವಸ್ಥೆಗಳ ನಡುವಿನ ಪರಿವರ್ತನೆಯ ಸಮೀಕರಣಗಳು ಈ ಕೆಳಗಿನವು ಎಂದು ತೋರಿಸಬಹುದು–

$$x'=\beta(x-vt),\ y'=y,\ z'=z,\ t'=\beta(t-xv/c^2),\ \beta=(1-v^2/c^2)^{-1/2}$$

c ಬೆಳಕಿನ ವೇಗ.

ಇಲ್ಲಿ S' ವ್ಯವಸ್ಥೆ, S ವ್ಯವಸ್ಥೆಗೆ ಅನುಗುಣವಾಗಿ v ಸ್ಥಿರವೇಗದಿಂದ ಚಲಿಸುತ್ತಿದೆ ಎಂದು ಭಾವಿಸಲಾಗಿದೆ; ಅಲ್ಲದೆ ಸಾಪೇಕ್ಷಚಲನೆಯ ದಿಕ್ಕಿನಲ್ಲಿ x ಅಕ್ಷವಿರುವಂತೆ S ಮತ್ತು S' ಗಳಲ್ಲಿ ನಿರ್ದೇಶಕಾಕ್ಷಗಳನ್ನು ಆರಿಸಿಕೊಳ್ಳಲಾಗಿದೆ. ಈ ಪರಿವರ್ತನೆಯ ಹೆಸರು ಲೊರೆಂಟ್ಸ್ ಪರಿವರ್ತನೆ. $c\to\infty$ ಆದಾಗ ಇದು ಗೆಲಿಲಿಯೋ ಪರಿವರ್ತನೆಗೆ ಸರಳೀಕೃತವಾಗುವುದು ಎಂದು ಸುಲಭವಾಗಿ ನೋಡಬಹುದು. ಚಿರಸಮ್ಮತ ಭಾವನೆಗಳಿಗೂ ಇದಕ್ಕೂ ಇರುವ ವ್ಯತ್ಯಾಸವೆಂದರೆ ಎರಡು ವ್ಯವಸ್ಥೆಗಳಲ್ಲಿನ ಕಾಲಮಾನ ಭಿನ್ನವಾಗಿದೆ; ಒಂದು ವ್ಯವಸ್ಥೆಯಲ್ಲಿ ಏಕಕಾಲಿಕ ಘಟನೆಗಳು ಎಂದು ತಿಳಿಯಲಾಗುವ ಯಾವ ಘಟನೆಗಳೂ ಸಾಮಾನ್ಯವಾಗಿ ಇನ್ನೊಂದು ವ್ಯವಸ್ಥೆಯಲ್ಲಿ ಏಕಕಾಲಿಕವಲ್ಲ.

ಲೊರೆಂಟ್ಸ್ ಪರಿವರ್ತನೆಯ ಪರಿಣಾಮಗಳು: 1 ಫಿಟ್ಸ್‌ಗೆರಾಲ್ಡ್ ಲೊರೆಂಟ್ಸ್ ಸಂಕೋಚನ (ಕಂಟ್ರಾಕ್ಷನ್). $S'$ನಲ್ಲಿ ಸ್ಥಿರವಾಗಿರುವ ಮತ್ತು $l$ ಉದ್ದವಿರುವ ಒಂದು ದಂಡವನ್ನು ಪರಿಶೀಲಿಸಿ. ಅದು $O'x'$ ಗೆ ಸಮಾನಾಂತರವಾಗಿರಲಿ. $x_1, x_2$ ಅದರ ಕೊನೆಗಳನ್ನು ಸೂಚಿಸಲಿ. ಇವೇ ಕೊನೆಗಳು $S$ ನಲ್ಲಿ $t_1, t_2$ ಕಾಲಗಳಲ್ಲಿ $x_1, x_2$ ಆಗಿರಲಿ. ಆಗ, $x_1'=\beta(x_1-vt_1), x_2'=\beta(x_2-vt_2)$

ಈಗ, $S$ನಲ್ಲಿರುವ ವೀಕ್ಷಕದಂಡದ ಉದ್ದ ಅಳೆಯಬೇಕಾದರೆ, $t_2=t_1$ ಎನ್ನುವ ಒಂದು ನಿರ್ದಿಷ್ಟ ಕ್ಷಣದಲ್ಲಿ $x_2-x_1=l$ ಬೆಲೆಯನ್ನು ಕಂಡುಹಿಡಿಯಬೇಕು.

ಆದ್ದರಿಂದ $l=\frac{x_2-x_1}{\beta}=V\sqrt{1-\frac{v^2}{c^2}}$

ಆದ್ದರಿಂದ ಏಕಸಮಾನ ವೇಗ v ಯಿಂದ ಚಲಿಸುವ ಒಂದು ದಂಡದ ಅಥವಾ ಒಂದು ದೃಢ ವಸ್ತುವಿನ ಉದ್ದ ಅದರ ಚಲನೆಯ ದಿಕ್ಕಿನಲ್ಲಿ $\sqrt{1-\frac{v^2}{c^2}}$ ನಷ್ಟು ಸಂಕೋಚನಗೊಂಡಿರುವುದು. ಇದರ ಹೆಸರು ಫಿಟ್ಸ್‌ಗೆರಾಲ್ಡ್‌ಲೊರೆಂಟ್ಸ್ ಸಂಕೋಚನ.

2 ಕಾಲವ್ಯಾಕೋಚನ (ಟೈಂ ಡೈಲೇಷನ್): ವೀಕ್ಷಕನ ನಿರ್ದೇಶಕ ಚೌಕಟ್ಟು ಕುರಿತಂತೆ ಸಾಪೇಕ್ಷವಾಗಿ ನಿಶ್ಚಲ ಸ್ಥಿತಿಯಲ್ಲಿರುವ ಮತ್ತು ಚಲನ ಸ್ಥಿತಿಯಲ್ಲಿರುವ ಎರಡು ಬೇರೆ ಬೇರೆ ನಿರ್ದೇಶಕ ಚೌಕಟ್ಟುಗಳಲ್ಲಿ ಸಂಭವಿಸುವ ಎರಡು ಘಟನೆಗಳ ನಡುವಿನ ಕಾಲಾವಧಿಗಳನ್ನು ಉಭಯ ಸಂದರ್ಭಗಳಲ್ಲಿಯೂ ಅಳೆಯೋಣ. ಆಗ ಎರಡನೇ ಸಂದರ್ಭದ ಕಾಲಾವಧಿ ಮೊದಲನೆಯ ಸಂದರ್ಭಕ್ಕಿಂತ ದೀರ್ಘವಾಗಿರುವಂತೆ ಭಾಸವಾಗುತ್ತದೆ. ಈ ವಿದ್ಯಮಾನವೇ ಕಾಲ ವ್ಯಾಕೋಚನ. ವಿಶೇಷ ಸಾಪೇಕ್ಷತಾ ಸಿದ್ಧಾಂತದಲ್ಲಿ ವಿವರಿಸಿರುವ ಲೊರೆಂಟ್ಸ್ ಪರಿವರ್ತನೆಗಳ ಪರಿಣಾಮದ ರೀತ್ಯಾ ಇದು ಸರಿ. ಇದನ್ನು $t=\frac{t_0}{\sqrt{1-\left(\frac{v}{c^2}\right)^2}}$ ಎಂದು ನಿರೂಪಿಸಬಹುದು. ಇಲ್ಲಿ t=ಚಲನ ಚೌಕಟ್ಟಿನಲ್ಲಿ ಕಾಲ, to =ನಿಶ್ಚಲ ಚೌಕಟ್ಟಿನಲ್ಲಿ ಕಾಲ (v=o), v= ಚೌಕಟ್ಟಿನ ಸಾಪೇಕ್ಷ ವೇಗ. c=ಬೆಳಕಿನ ವೇಗ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಚಲಿಸುವ ಗಡಿಯಾರಗಳು ಮಂದಗತಿಯಿಂದ ಸಾಗುವುವು. ಕಾಲವ್ಯಾಕೋಚನ ಎನ್ನುವ ಈ ಘಟನೆಯೇ ಗಡಿಯಾರದ ವಿರೋಧಾಭಾಸ ಎಂದು ಕರೆಯಲಾಗುವ ವಿಚಿತ್ರ ಸನ್ನಿವೇಶಕ್ಕೆ ಕಾರಣ. ಒಬ್ಬ ಮನುಷ್ಯ ಭೂಮಿಯಿಂದ ಮೇಲಕ್ಕೆ ಹಾರಿ ಆಕಾಶಯಾನ ಮಾಡಿ ಸ್ವಲ್ಪ ಕಾಲಾನಂತರ ಭೂಮಿಗೆ ಮರಳುವನೆಂದು ಭಾವಿಸೋಣ. ಆಗ ಭೂಮಿಯ ಮೇಲಿರುವ ಇನ್ನೊಬ್ಬ ಮನುಷ್ಯನನ್ನು ಕುರಿತು ಮೊದಲಿನವನ ಗಡಿಯಾರ ಮಂದಗತಿಯಿಂದ ಸಾಗಿದೆ. ಇದರ ಅರ್ಥ ಆಕಾಶಯಾನದಿಂದ ಮರಳುವ ಪ್ರಯಾಣಿಕ ಭೂಮಿಯ ಮೇಲೆಯೇ ಇರುವವನಿಗಿಂತ ಕಿರಿಯನಾಗಿರುತ್ತಾನೆ. ಹೀಗೆ ತರುಣರಾಗಿ ಇರಬೇಕೆಂದು ಬಯಸುವವರಿಗೆ ಆಕಾಶಯಾನ ಒಂದು ಉತ್ತಮ ಆಕರ್ಷಣೆ.

3 ರಾಶಿ ಮತ್ತು ಶಕ್ತಿ (ಮಾಸ್ ಅಂಡ್ ಎನರ್ಜಿ): ವಾಸ್ತವಿಕ ರಾಶಿ $m_o$ ಇರುವ ಒಂದು ಕಣಕ್ಕೆ (ಅಂದರೆ ಕಣ ವಿರಾಮ ಸ್ಥಿತಿಯಲ್ಲಿರುವಂಥ ಒಂದು ವ್ಯವಸ್ಥೆಯಲ್ಲಿ ಅದರ ರಾಶಿ $m_o$) $m=m_o\left[1-\frac{v^2}{c^2}\right]^{-\frac{1}{2}}$

ಎಂದೂ ದ್ರವ್ಯರಾಶಿ m ಮತ್ತು ಶಕ್ತಿ E ಗಳು $E=mc^2$ ಎಂಬ ಸಂಬಂಧದಿಂದ ಬಂಧಿತವಾಗಿದೆಯೆಂದೂ ತೋರಿಸಬಹುದು. ಇದು ಐನ್‌ಸ್ಟೈನನ ಸುಪ್ರಸಿದ್ಧ ಸಮೀಕರಣ. ಇದನ್ನು ಅತ್ಯದ್ಭುತವಾಗಿ ತಾಳೆನೋಡಲಾಗಿದೆ. ಶಕ್ತಿಯ ಎಲ್ಲ ವಿಧವಾದ ಬೀಜ ಪರಿವರ್ತನೆಗಳಿಗೂ ಈ ಸಮೀಕರಣ ತಳಹದಿಯಾಗಿದೆ. ಪರಮಾಣು ಬಾಂಬ್ ಇದರ ಒಂದು ನಿದರ್ಶನ.

ಸಾರ್ವತ್ರಿಕ ಸಾಪೇಕ್ಷ ಸಿದ್ಧಾಂತ (ಜನರಲ್ ರಿಲೆಟಿವಿಟಿ): ಎಲ್ಲ ನಿರ್ದೇಶಕ ವ್ಯವಸ್ಥೆಗಳಲ್ಲಿಯೂ ನಿಸರ್ಗದ ಸೂತ್ರಗಳು ಒಂದೇ ಆಗಿವೆ ಎಂದು ಈ ಮೊದಲು ನಾವು ನೋಡಿದ್ದೇವೆ. ಆದರೆ ಜಡ ವ್ಯವಸ್ಥೆ ಎಂದರೆ ಯಾವುದು ಎಂದು ವಿಶದೀಕರಿಸುವಲ್ಲಿ ನಾವು ಹಲವಾರು ತೊಡಕುಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ಭೌತಶಾಸ್ತ್ರದಲ್ಲಿ ನಿರೂಪಿಸುವ ಸೂತ್ರಗಳು ಎಲ್ಲ ನಿರ್ದೇಶಕ ವ್ಯವಸ್ಥೆಗಳಿಗೂ ಸಮರ್ಪಕವಾಗಿ ಅನ್ವಯವಾಗುವಂತೆ ಒಂದು ಪರಿಪೂರ್ಣ ಸಾಪೇಕ್ಷತಾ ಸಿದ್ಧಾಂತ ಇರಬೇಕು; ಮತ್ತು ಜಡ ವ್ಯವಸ್ಥೆಗಳಲ್ಲಿ ಇವು ಹಳೆಯ ಮತ್ತು ಚಿರಪರಿಚಿತ ಸೂತ್ರಗಳಾಗಿ ದೊರೆಯಬೇಕು. ಸಾಮಾನ್ಯ ನಿರ್ದೇಶಕ ವ್ಯವಸ್ಥೆಗಳಿಗೆ ಭೌತಿಕ ಸೂತ್ರಗಳನ್ನು ರೂಪಿಸುವ ಸಮಸ್ಯೆಯನ್ನು ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದಿಂದ ಬಿಡಿಸಲಾಯಿತು. ಇದರ ಪ್ರಕಾರ ಈ ಸಮಸ್ಯೆ ಗುರುತ್ವಾಕರ್ಷಣೆಗೆ ಅತಿ ನಿಕಟವಾಗಿ ಹೊಂದಿಕೊಂಡಿದೆ ಎಂದು ತಿಳಿಯಿತು. ಈ ದಿಕ್ಕಿನಲ್ಲಿ ದೊರೆತ ಒಂದು ಅತಿಮುಖ್ಯ ಸುಳುವೆಂದರೆ ಜಡ ಮತ್ತು ಗುರುತ್ವಾಕರ್ಷಣೆಯ ದ್ರವ್ಯರಾಶಿಗಳ ಸಮಾನತೆ. ಇದರ ಫಲಿತಾಂಶವಾಗಿ ದೇಶ–ಕಾಲ ಇದರ ಜ್ಯಾಮಿತಿಯ ಗುಣಗಳು ಯೂಕ್ಲಿಡನ ಜ್ಯಾಮಿತಿಯನ್ನು ಹೊಂದಿಕೊಂಡಿಲ್ಲ; ಬದಲು ರೀಮಾನಿಯನ್ ಜ್ಯಾಮಿತಿಯನ್ನು ಹೊಂದಿಕೊಂಡಿವೆ ಎಂದು ತಿಳಿಯಿತು. ಯೂಕ್ಲಿಡನ (ಅಥವಾ ಹೆಚ್ಚು ನಿಖರವಾಗಿ ತೋರ್ಕೆಯ ಯೂಕ್ಲಿಡನ) ರೂಪದ ಜ್ಯಾಮಿತೀಯ ಗುಣಗಳಿಂದ ಆಗುವ ಯಾವುದೇ ವಿಚಲನೆಯೂ (ಡೀವಿಯೇಷನ್) ಗುರುತ್ವಾಕರ್ಷಣ ಕ್ಷೇತ್ರವಾಗಿ ತೋರುವುದು. ದೇಶ–ಕಾಲದ ಜ್ಯಾಮಿತೀಯ ಗುಣಗಳು ದ್ರವ್ಯದ (ಮ್ಯಾಟರ್) ವಿತರಣೆ ಮತ್ತು ಚಲನೆಗೆ ಅವಿಭಾಜ್ಯವಾಗಿ ಹೊಂದಿಕೊಂಡಿವೆ. ಈ ಎಣಿಕೆಗಳನ್ನು ಆಧಾರವಾಗಿಟ್ಟುಕೊಂಡು ಐನ್‌ಸ್ಟೈನ್ ತನ್ನ ಗುರುತ್ವಾಕರ್ಷಣೆಯ ಸಮೀಕರಣಗಳನ್ನು ರೂಪಿಸಿದ. ಅವು ದೇಶದ ವಕ್ರತೆಯ ಕೆಲವು ಗುಣಗಳನ್ನು ವಿವರಿಸುವ ಒಂದು ಟೆನ್ಸಾರಿಗೂ ದ್ರವ್ಯವಿತರಣೆ ಮತ್ತು ಅದರ ಚಲನೆಯನ್ನು ವಿವರಿಸುವ ಇನ್ನೊಂದು ಟೆನ್ಸಾರಿಗೂ ಇರುವ ನಿಷ್ಪತ್ತಿಯನ್ನು ನಿರೂಪಿಸುತ್ತವೆ.

ಈ ಸಿದ್ಧಾಂತದಿಂದ ಲಭಿಸಿರುವ ಮೂರು ಮುಖ್ಯ ಫಲಿತಾಂಶಗಳು ಹೀಗಿವೆ:

1. ಒಂದು ಗ್ರಹಪಥದ ಸೂರ್ಯಸಮೀಪ ಬಿಂದುವಿನ ಚಲನೆ: ಸೌರವ್ಯೂಹದ ಒಂದು ಗ್ರಹ ಪ್ರತಿಯೊಂದು ಪರಿಭ್ರಮಣೆಯನ್ನೂ ಪೂರ್ಣಗೊಳಿಸಿದಾಗ ಅದರ ಪುರರವಿ ಬಿಂದುವಿನಲ್ಲಿ (ಪೆರಿಹೆಲಿಯನ್) ಸ್ವಲ್ಪ ಸ್ಥಾನಾಂತರಗೊಂಡಿರುವುದು. ಇದರ ಬೆಲೆ ಎಷ್ಟು ಎಂದು ಈ ಸಿದ್ಧಾಂತದಿಂದ ಗುಣಿಸಬಹುದು. ಬುಧಗ್ರಹದಲ್ಲಿ ಈ ಬೆಲೆ ಒಂದು ಶತಮಾನದಲ್ಲಿ ಸುಮಾರು 43". ವೀಕ್ಷಣೆಗಳಿಂದ ತಿಳಿದು ಬಂದ ಬೆಲೆಗೆ ಇದು ಅತಿ ಸಮೀಪವಾಗಿದೆ.

2. ಒಂದು ಗುರುತ್ವಾಕರ್ಷಣ ಕ್ಷೇತ್ರದಲ್ಲಿ ಬೆಳಕಿನ ಕಿರಣಗಳ ವಿಕ್ಷೇಪಣ (ಡಿಫ್ಲೆಕ್ಷನ್): ಒಂದು ಪ್ರಬಲ ಗುರುತ್ವಾಕರ್ಷಣ ಕ್ಷೇತ್ರದ (ಉದಾಹರಣೆಗೆ ಸೂರ್ಯ) ಸಮೀಪದಲ್ಲಿ ಸಾಗುವಾಗ ಒಂದು ಬೆಳಕಿನ ಕಿರಣ ವಿಕ್ಷೇಪಣಗೊಳ್ಳುವುದು (ಅಥವಾ ಬಗ್ಗುವುದು). ಸೂರ್ಯನ ಕ್ಷೇತ್ರಕ್ಕೆ ಈ ವಿಕ್ಷೇಪದ ಬೆಲೆ ಎಷ್ಟಾಗುವುದೆಂದು ಸಿದ್ಧಾಂತ ಮೊದಲಾಗಿಯೇ ಗುಣಿಸಿ ತಿಳಿಸಿತ್ತು. 1919ರ ಸುಪ್ರಸಿದ್ಧ ಸಂಪೂರ್ಣ ಸೂರ್ಯ ಗ್ರಹಣಕಾಲದ ವೀಕ್ಷಣೆಗಳು ಮತ್ತು ಮುಂದಿನ ವೀಕ್ಷಣೆಗಳು ಈ ಬೆಲೆಯನ್ನು ಸ್ಥಿರಗೊಳಿಸಿವೆ.

3. ಒಂದು ಗುರುತ್ವಾಕರ್ಷಣ ವಲಯದಲ್ಲಿ ರೋಹಿತರೇಗೆಗಳ ರಕ್ತಪಲ್ಲಟ : ಸೂರ್ಯನಲ್ಲಿ ಇಟ್ಟಂಥ ಒಂದು ಪರಮಾಣು (ಸೋಡಿಯಮ್‌ನ ಪರಮಾಣು ಎಂದು ಭಾವಿಸಬಹುದು) ಹೊರಸೂಸುವ ಬೆಳಕಿನ ತರಂಗಮಾನ ಭೂಮಿಯ ಮೇಲೆ ಅದೇ ಪರಮಾಣು ಹೊರಸೂಸುವ ಬೆಳಕಿನ ತರಂಗಮಾನಕ್ಕಿಂತ ಸ್ವಲ್ಪ ಉದ್ದವಾಗಿರುವುದೆಂದು ಸಿದ್ಧಾಂತ ಭವಿಷ್ಯ ನುಡಿಯಿತು. ಮುಂದೆ ವೀಕ್ಷಣೆಯಿಂದ ಇದು ಸರಿ ಎಂದು ತಿಳಿದುಬಂತು. ಬೆಳಕಿನ ಶೋಷಣ ರೋಹಿತದಲ್ಲಿ ಪ್ರಕಟವಾಗುವ ರೇಖೆಗಳೂ ತಮಗೆ ನಿಗದಿಯಾದ ನಿರ್ದಿಷ್ಟ ಸ್ಥಾನಗಳಲ್ಲಿರದೆ ರೋಹಿತದ ಕೆಂಪು ಕೊನೆಯತ್ತ ಏಕಪ್ರಕಾರವಾಗಿ ಸರಿದಿರುವುದು ಪ್ರಯೋಗದಿಂದ ರುಜುವಾತಾಗಿದೆ.

Fe–57ರಂಥ ರೇಡಿಯೊವಿಕಿರಣ ಸಮಸ್ಥಾನಿಗಳು ಭೂಮಿಯ ಗುರುತ್ವಾಕರ್ಷಣ ಕ್ಷೇತ್ರದ ಮೂಲಕ ಹಾಯುವಾಗ ಅವು ಹೊರಸೂಸುವ ನ್ಯೂಕ್ಲಿಯರ್ ಗ್ಯಾಮ ಕಿರಣಗಳ (ನ್ಯೂಕ್ಲಿಯರ್ ಗಾಮ ರೇಸ್) ಆವೃತ್ತಿಯಲ್ಲಿ (ಫ್ರೀಕ್ವೆನ್ಸಿ) ಉಂಟಾಗುವ ವ್ಯತ್ಯಾಸಗಳನ್ನು ಅತಿಸೂಕ್ಷ್ಮವಾಗಿ ಅಳೆಯಲಾಗಿದೆ. ಇಲ್ಲಿಯೂ ಸಿದ್ಧಾಂತದ ಭವಿಷ್ಯವಾಣಿ ಸ್ಥಿರಗೊಂಡಿದೆ ಎಂದು ಹೇಳಬಹುದು. **(ನೋಡಿ– ಸಾಪೇಕ್ಷತಾಸಿದ್ಧಾಂತ)** (ವಿ.ಆರ್.ಟಿ.)

**ಆಕಾಶ ಮತ್ತು ದಿಕ್ :** ಭಾರತೀಯ ತತ್ವಶಾಸ್ತ್ರದ ರೀತ್ಯಾ ಆಕಾಶ ಎಂದರೆ ದೇಶ. ದೇಶವೆಂದರೆ ಯಾವುದೋ ಒಂದು ಭೂಪ್ರದೇಶವನ್ನು ನಿರ್ದೇಶಿಸುವ ಪದವೆಂದು ನಾವು ತಿಳಿದಿರುತ್ತೇವೆ. ಇಲ್ಲಿ ದೇಶಪದ ಹಾಗೆ ಒಂದು ನಿರ್ದಿಷ್ಟವಾದ ಯಾವುದೊಂದು ಭಾಗಕ್ಕೂ ಅನ್ವಯವಾಗುವ ಪದವಲ್ಲ. ಅದು ಎಲ್ಲೆ ಇಲ್ಲದ ವಿಸ್ತಾರ. ಅದು ಅನಂತ ಭೌತವಿಶ್ವಕ್ಕೆ ತಳಹದಿಯಾದದ್ದು. ಈ ಅನಂತ ವಿಸ್ತಾರವೇ ಬ್ರಹ್ಮ ಎಂಬ ಕಲ್ಪನೆ ವೇದಗಳ ಕಾಲದಲ್ಲಿತ್ತು. ಆದರೆ ಉಪನಿಷತ್ತಿನ ತತ್ತ್ವ ಬೆಳೆದಾಗ ದೇಶವೂ ಬ್ರಹ್ಮವೂ ಒಂದೇ ಎಂಬ ಭಾವನೆ ತೇಲಿ ಹೋಯಿತು. ಬ್ರಹ್ಮಕ್ಕೆ ದೇಶವನ್ನು ಆರೋಪಿಸಿದರೆ ಬ್ರಹ್ಮಕ್ಕೆ ವಿಶ್ವಕ್ಕಿರುವ ಉಪಾಧಿಯನ್ನು ವರ್ಗಾಯಿಸಿ ತಪ್ಪು ಭಾವನೆ ಹುಟ್ಟಲು ಅವಕಾಶವಾಗುತ್ತದೆ. ಬ್ರಹ್ಮ ದೇಶದ ಉಪಾಧಿಗೆ ಒಳಪಟ್ಟದ್ದಲ್ಲ. ಉಪನಿಷತ್ತುಗಳ ಕಾಲದ ಅನಂತರ ಆಕಾಶದ ವಿಚಾರವಾಗಿ ಅನೇಕ ಭಾವನೆಗಳು ಹುಟ್ಟಿದುವು. ನ್ಯಾಯವೈಶೇಷಿಕ ತತ್ತ್ವದ ಪ್ರಕಾರ ಆಕಾಶದ ಏಳು ಇರವಿನ ಬಗೆಗಳಲ್ಲಿ ಒಂದು. ದಿಕ್ಕು ಇನ್ನೊಂದು. ಆಕಾಶವೂ ದಿಕ್ಕೂ ಒಂದೇ ಅಲ್ಲ. ದಿಕ್ಕು ಎಂದರೆ ಒಂದು ಪದಾರ್ಥದ ದೇಶಸಂಬಂಧ. ಇದು ಮೇಲೆ, ಕೆಳಗಡೆ, ದೂರ, ಹತ್ತಿರ, ಪೂರ್ವ, ಪಶ್ಚಿಮ, ಎಡ, ಬಲ ಎಂಬ ದಿಕ್ ಸೂಚಕವಾದದ್ದು. ಆಕಾಶ ಶಬ್ದಕ್ಕೆ ಆಶ್ರಯ ಎಂಬ ಅರ್ಥವಿದೆ. ಇದು ಅಲೆಗಳ ಆಶ್ರಯವಾದ ಪಾಶ್ಚಾತ್ಯರ ಈಥರ್ ಎಂಬ ಭಾವನೆಗೆ ಸದೃಶವಾದದ್ದು. ಸಾಂಖ್ಯತತ್ತ್ವ ಆಕಾಶವನ್ನು ಐದು ಭೂತಗಳಲ್ಲಿ ಒಂದೆಂದು ಭಾವಿಸಿದೆ. ಅದ್ವೈತಿಗಳು ಆಕಾಶವನ್ನು ಮಾಯೆಯ ಒಂದು ರೂಪವೆಂದು ಭಾವಿಸಿದ್ದಾರೆ. ಬೌದ್ಧರು ಆಕಾಶವನ್ನು ಕ್ಯಾಂಟ್‌ನಂತೆ ಮಾನಸಿಕ ಕಲ್ಪನೆಯೆಂದು ಭಾವಿಸಿದ್ದಾರೆ. ಜೈನರು ಐದು ಅಜೀವ ವಸ್ತುಗಳಲ್ಲಿ ದೇಶ ಒಂದೆಂದು ಭಾವಿಸಿದ್ದಾರೆ. ಆಕಾಶವನ್ನು ಎರಡಾಗಿ ವಿಭಾಗಿಸಿದ್ದಾರೆ. ಒಂದು ಲೋಕಾಕಾಶ, ಇನ್ನೊಂದು ಅಲೋಕಾಕಾಶ. ಲೋಕದಲ್ಲಿರುವ ಎಲ್ಲ ಬಗೆಯ ಚಲನೆಗೂ ಅವಕಾಶವಾಗಿರುವುದು ಲೋಕಾಕಾಶ. ಲೋಕದ ಹೊರಗಿನ ಆಕಾಶಕ್ಕೆ ಅಲೋಕಾಕಾಶವೆಂದು ಹೆಸರನ್ನು ಕೊಟ್ಟಿರುತ್ತಾರೆ. ಪೂರ್ವ ಮೀಮಾಂಸಕರು ದಿಕ್ಕಿಗೂ ಆಕಾಶಕ್ಕೂ ಇರುವ ಭೇದವನ್ನು ಒಪ್ಪಿರುತ್ತಾರೆ. ವೈಶೇಷಿಕರಂತೆ ದಿಕ್ಕು ಪ್ರತ್ಯಕ್ಷವಾದ ಶಬ್ದವೆಂಬ ಗುಣಕ್ಕೆ ಆಶ್ರಯ ವೆಂದೂ ಇವರು ಒಪ್ಪುವುದಿಲ್ಲ. ದಿಕ್ಕಿನಂತೆ ಪ್ರತ್ಯಕ್ಷಸಿದ್ಧ. ದ್ವೈತವೇದಾಂತಿಗಳು ಆಕಾಶ ಮಾಯಾರೂಪವೆಂಬುವುದನ್ನು ಒಪ್ಪುವುದಿಲ್ಲ. ಅದು ವಾಸ್ತವ ಜ್ಞಾನ ವಿಷಯ. ಕೆಲವರು ಆಕಾಶ ಹುಟ್ಟಿತೆಂದು ಬಗೆಯುತ್ತಾರೆ. ಹುಟ್ಟುವುದು ಭೂತಾಕಾಶ ಮಾತ್ರ. ಅವ್ಯಾಕೃತ ಆಕಾಶಕ್ಕೆ ಹುಟ್ಟಿಲ್ಲ. ಆಕಾಶ ಸಾಕ್ಷಿಪ್ರಮಾಣದಿಂದ ಸಿದ್ಧವಾಗುತ್ತದೆ. ದ್ವೈತಿಗಳು ದಿಕ್ಕು ಆಕಾಶದಿಂದ ಭಿನ್ನವೆಂಬ ಪಕ್ಷವನ್ನು ನಿರಾಕರಿಸಿರುತ್ತಾರೆ. ದಿಕ್ಕು ದೇಶವೇ. (ಜಿ.ಎಚ್.)

**ಆಕಾಶ ಮಲ್ಲಿಗೆ :** ಬಿಗ್ನೋನಿಯೇಸೀ ಕುಟುಂಬಕ್ಕೆ ಸೇರಿದ ಮಿಲಿಂಗ್‌ಟೋನಿಯ ಹಾರ್ಟೆನ್‌ಸಿಸ್ ಎಂಬ ಈ ಗಿಡಕ್ಕೆ ಬಿರಟೆಯ ಮರ ಎಂಬ ಹೆಸರಿದೆ (ಇಂಡಿಯನ್ ಕಾರ್ಕ್‌ಟ್ರೀ) ಇದು ಉದ್ದನೆಯ ಹರವಿನ ಎತ್ತರವಾದ (80') ಮರ. ತೊಗಟೆ ಹಳದಿ ಮಿಶ್ರ ಬೂದು ಬಣ್ಣ. ಬೆಂಡು. ಬರ್ಮ ಮೂಲಸ್ಥಾನ. ಭಾರತದಲ್ಲಿ ಉದ್ಯಾನವನಗಳಲ್ಲಿ ಅಲಂಕಾರಕ್ಕಾಗಿಯೂ ಸಾಲುಮರವಾಗಿಯೂ ಸಾಗುವಳಿ ಮಾಡುತ್ತಾರೆ. ಗಿಡ ಬೇಗ ಬೆಳೆಯುತ್ತದೆ. ತೇವಮಯ ಹಾಗೂ ಬಂಜರು ಪ್ರದೇಶಗಳಲ್ಲೂ ಬೆಳೆಯಬಲ್ಲುದು. ಬೇರು ಹೆಚ್ಚು ಆಳವಾಗಿ ಇಳಿಯುವುದಿಲ್ಲ. ಬೇರುಸಸಿಗಳು ಹೇರಳ. ಪಾತಿಯಲ್ಲಿ ಬೆಳೆದ ಸಸಿಯನ್ನು ನಾಟಿ ಮಾಡಿ ಬೆಳೆಸಬೇಕು. ಬೀಜಗಳಿಂದಲೂ ಮೊಸುಗಳಿಂದಲೂ ಬೆಳೆಸಬಹುದು. ಹೂಗಳು ಹೇರಳವಾಗಿದ್ದು ಬೆಳ್ಳಗೆ ಗಮಗಮಿಸುತ್ತಿರುತ್ತವೆ. ಕಾಯಿ 1.5' ಉದ್ದವಿದ್ದು ಎರಡೂ ತುದಿಯಲ್ಲಿ ಮೊನಚಾಗಿರುತ್ತವೆ. ಬೀಜ ಚಪ್ಪಟೆ. ಚೌಬೀನೆ ಮೃದುವಾಗಿ ಹಳದಿಮಿಶ್ರಿತ ಬಿಳುಪು ಬಣ್ಣದಿಂದ ಕೂಡಿದ್ದು, ಟೀ ಪೆಟ್ಟಿಗೆ, ಮೇಜು ಕುರ್ಚಿ ಇತ್ಯಾದಿಗಳಿಗೆ ಉಪಯುಕ್ತವಾಗಿದೆ. ತೊಗಟೆಯಿಂದ ಬಿರಟೆ ತಯಾರಾಗುತ್ತದೆ. (ಎಂ.ಎಚ್.ಎಂ.)

**ಆಕಾಶವಾಣಿ :** ಕರ್ತೃ ಅದೃಶ್ಯನಾಗಿದ್ದು ಆತನ ವಾಣಿ ಮಾತ್ರ ಕಿವಿಗೆ ಬೀಳುವಂತಿದ್ದರೆ ಅದನ್ನು ಆಕಾಶವಾಣಿ, ಅಶರೀರವಾಣಿ ಎಂದು ಕರೆಯುವುದು ವಾಡಿಕೆ. ಪುರಾಣೇತಿಹಾಸಗ ಳಿಂದ ಈ ಪದ ಬಂದಿದೆ. ಇದನ್ನು ಬ್ರಾಡ್‌ಕ್ಯಾಸ್ಟಿಂಗ್ ಎಂಬ ಅರ್ಥದಲ್ಲಿ ಬಳಸಲಾಗಿದೆ. ಆಲ್ ಇಂಡಿಯ ರೇಡಿಯೊ ಸಂಸ್ಥೆಯ ಬಹುಪಾಲು ಶಾಖೆಗಳು ಇದೇ ಪದವನ್ನು ಬಳಸುತ್ತಿವೆ. ತಮಿಳುನಾಡು ಶಾಖೆ ಮಾತ್ರ ವಾನುಲಿ (ಬಾನುಲಿ) ಎಂಬ ಅಚ್ಚ ದ್ರಾವಿಡ ಪದವನ್ನು ಪರ್ಯಾಯವಾಗಿ ಬಳಸುತ್ತಿದೆ.

ಬ್ರಾಡ್‌ಕ್ಯಾಸ್ಟಿಂಗ್ ಎಂದರೆ ಪ್ರಸರಣ, ಪ್ರಸಾರ ಎಂದರ್ಥ. ರೇಡಿಯೊ ಅಲೆಯ ಮಾಧ್ಯಮದ ಮೂಲಕ ಮಾಹಿತಿ ಪ್ರಸಾರವಾಗುತ್ತದೆ. ಶಬ್ದದ ತರಂಗಗಳು ವಿದ್ಯುತ್ತರಂಗಗಳಾಗಿ ಮಾರ್ಪಡುತ್ತವೆ. ಆಗ ಮೂಲದಲ್ಲಿ ಆಡಿದ ಮಾತು, ಕೊಟ್ಟ ಸಂದೇಶ, ಎಲ್ಲೋ ದೂರದಲ್ಲಿರು ವವರಿಗೆ ತದ್ವತ್ತಾಗಿ ಮುಟ್ಟುತ್ತವೆ. ಸುದ್ದಿ ಸಮಾಚಾರಗಳನ್ನು ಶೀಘ್ರವಾಗಿ ಖಂಡಾಂತರ ರವಾನಿಸಲು ಈ ಕ್ರಮ ಬಹುಕಾಲದಿಂದ ಬಳಕೆಯಲ್ಲಿದೆ. ವಾರ್ತಾ ಸಂಸ್ಥೆಗಳೂ ಸೈನ್ಯ ಇಲಾಖೆಯವರೂ ಶೀಘ್ರವಾಗಿ ಸುದ್ದಿ ಮುಟ್ಟಿಸಲು ಈ ವಿಧಾನವನ್ನು ಆಶ್ರಯಿಸಿದ್ದಾರೆ. ಈ ಪ್ರಸರಣಕ್ಕೂ ತಂತ್ರದಲ್ಲಿ ವ್ಯತ್ಯಾಸವಿಲ್ಲ, ಉದ್ದೇಶದಲ್ಲಿ ಉಂಟು. ಈ ಲೇಖನದಲ್ಲಿ ಬ್ರಾಡ್‌ಕ್ಯಾಸ್ಟಿಂಗ್ ಎಂಬ ಮಾತನ್ನು ಎರಡನೆಯ ಗುಂಪಿನ ಕಾರ್ಯಕ್ರಮಗಳಿಗೆ ಮಾತ್ರ ಅನ್ವಯವಾಗುವಂತೆ ಬಳಸಲಾಗಿದೆ. ಸ್ಥೂಲವಾಗಿ ಪ್ರಸರಣದ ಗುಣಲಕ್ಷಣಗಳು ಹೀಗಿವೆ: ಮನೋರಂಜನೆ, ಸುದ್ದಿ–ಸಮಾಚಾರಗಳು, ಸಂಗೀತ, ವಿದ್ಯೆ ಮೊದಲಾದವುಗಳನ್ನು ಯುಕ್ತ ರೇಡಿಯೋ ಗ್ರಾಹಕಗಳನ್ನುಳ್ಳ ದೂರದ ಶ್ರೋತೃವರ್ಗಕ್ಕೆ ಏಕಕಾಲದಲ್ಲಿ ಕ್ರಮಬದ್ಧವಾಗಿ ಪ್ರಸಾರ ಮಾಡುವುದು. ವಿಷಯ ಕೇವಲ ಶ್ರವಣಗ್ರಾಹ್ಯ ಅಥವಾ ಕೇವಲ ದೃಗ್ಗೋಚರ ಅಥವಾ ಎರಡೂ ಆಗಿರಬಹುದು. ಪ್ರಪಂಚದಲ್ಲಿ ಧ್ವನಿ ಪ್ರಸರಣದ ಪ್ರಾರಂಭ 1920ರಲ್ಲಿ, ಟೆಲಿವಿಷನ್ 1936ರಲ್ಲಿ ಆಯಿತು. ಧ್ವನಿ ಪ್ರಸರಣದ ಪ್ರಸ್ತಾಪವನ್ನು ಮಾತ್ರ ಇಲ್ಲಿ ಮಾಡಲಾಗಿದೆ. ಟೆಲಿವಿಷನ್‌ಗೆ ಪ್ರತ್ಯೇಕ ಲೇಖನವಿದೆ.

ಪ್ರಸಾರಣ ವ್ಯವಸ್ಥೆ ಆಧುನಿಕ ನಾಗರಿಕತೆಯ ಬಹು ಮುಖ್ಯ ಅಂಗ; ಜ್ಞಾನ ಪ್ರಸಾರದ ಅನೇಕ ಸಾಧನಗಳಲ್ಲಿ ಒಂದು. ಖಚಿತವಾದ ಸುದ್ದಿ ಸಮಾಚಾರಗಳು, ಪ್ರಸಿದ್ಧರ ಭಾಷಣಗಳು, ಪ್ರಮುಖ ಕಲಾವಿದರ ಕಾವ್ಯ, ನಾಟಕ, ಸಂಗೀತ, ಇತ್ಯಾದಿಗಳು ಈಗ ಜನಸಾಮಾನ್ಯರಿಗೆ ಸುಲಭವಾಗಿ ಒದಗುತ್ತಿವೆ. ಈ ವಿಷಯದಲ್ಲಿ ವೃತ್ತಪತ್ರಿಕೆಗಳಿಗಿಂತ ಆಕಾಶವಾಣಿ ಮಿಗಿಲೆನಿಸಿದೆ.

**ಬಾನುಲಿ ವಿಕಾಸ :** ಭೂಮಿಯ ಮೇಲೆ ಮಾನವನು ಜನಿಸಿದಂದಿನಿಂದ ಸಂವಹನ ಕ್ರಿಯೆಗೆ ಒಂದು ಸಮರ್ಪಕವಾದ ಮಾಧ್ಯಮದ ಅಗತ್ಯವಿತ್ತೆಂಬುದು ಇತಿಹಾಸದ ಪುಟಗಳು ಪ್ರತಿಪಾದಿಸುವ ಒಂದು ಅಂಶ. ಅಂದಿನಿಂದ ಮಾನವನ ಸುಖ ದುಃಖಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತಹ ಮಾಧ್ಯಮದ ಶೋಧಕ್ಕೆ ಪ್ರಯತ್ನ ಜಾರಿಯಲ್ಲಿತ್ತು. ಈ ಅವ್ಯಾಹತವಾದ ಪ್ರಯತ್ನ, ನಿರಂತರ ಶ್ರಮ, ಕ್ರಮೇಣ ಹಂತ ಹಂತವಾಗಿ ಮಾನವನ ಅನುಭವಗಳನ್ನು ಇತರರಿಗೆ ಸಂವಹಿಸುವ ಕ್ರಿಯೆ ಯಶಸ್ಸನ್ನು ಕಾಣತೊಡಗಿತು. ಅಂತಹ ಸಾವಿರಾರು ವರುಷಗಳ ಪ್ರಯತ್ನದಿಂದಾಗಿ 1539 ರಲ್ಲಿ ಮುದ್ರಣ ಮಾಧ್ಯಮದ ಆವಿಷ್ಕಾರವಾಯಿತು. ಬೂತಾನ್ ವಾಟೋ, ಮೆಕ್ಸಿಕೋ ನಗರದಲ್ಲಿ ಒಂದು ಮುದ್ರಣ ಪ್ರೆಸ್ಸನ್ನು ಸ್ಥಾಪಿಸಿದ.

ಪ್ರಸಾರಕ ಕಾರ್ಯನಿರ್ವಹಿಸುತ್ತಿರುವುದು

ಆದರೆ ಗುಟೆನ್‌ಬರ್ಗ್‌ನ ಆವಿಷ್ಕಾರ ಇಡೀ ಪಾಶ್ಚಿಮಾತ್ಯ ದೇಶಗಳಲ್ಲಿ ಒಂದು ಕ್ರಾಂತಿಯನ್ನೇ ಮಾಡಿತು. ಇದರ ಪರಿಣಾಮವಾಗಿ ವಿಜ್ಞಾನ, ತತ್ವಶಾಸ್ತ್ರ ಹಾಗೂ ಮತಗಳ ವಿಕಾಸ ತ್ವರಿತಗೊಳಿಸಲು ಸಹಾಯಕವಾಯಿತು.

19ನೆಯ ಶತಮಾನ, ಒಂದು ಹೊಸ ವಿಶ್ವದ ಉದಯವನ್ನು ವೀಕ್ಷಿಸುವಲ್ಲಿ ಸಫಲವಾಯಿತು. ಒಂದಾದ ನಂತರ ಮತ್ತೊಂದರಂತೆ ಹೊಸ ಹೊಸ ಆವಿಷ್ಕಾರಗಳಾದವು. ಇದರ ಫಲಶ್ರುತಿಯೆಂಬಂತೆ 24, ಮೇ 1844ರಲ್ಲಿ ಹಠಾತ್ತೆಂಬಂತೆ ದೂರ ಸಂಪರ್ಕ ಉದಯವಾಯಿತು. ಅದೇ ದಿನ ಎಫ್.ಟಿ. ಮಾರಿಸ್ ವಾಟ್ ಹಾತ್ ಗಾಡ್ ರಾಟ್ ಎಂಬ ಸಂದೇಶವನ್ನು 20 ಮೈಲಿಗಳಾಚೆಗಿದ್ದ ಇನ್ನೊಂದು ಸ್ಥಳಕ್ಕೆ ರವಾನಿಸುವಲ್ಲಿ ಯಶಸ್ವಿಯಾದರು. ಅದಾಗಿ ಎರಡು ವರುಷಗಳ ಅನಂತರ ಇಪ್ಪತ್ತು ವರ್ಷದ ಇಟಲಿಯ ಯುವಕ ಗೂಗ್ಲಿಯರ್ಮೋ ಮಾರ್ಕೋನಿ ತನ್ನದೇ ಆದ ಯಂತ್ರವನ್ನು 1895ರಲ್ಲಿ ನಿರ್ಮಿಸಿ, ಸಂದೇಶಗಳನ್ನು ಕಳುಹಿಸುವಲ್ಲಿ ಯಶಸ್ವಿಯಾದ. ಆದರೆ ಕಾಟ್ಲೂರಿನಲ್ಲಿ ಆತನ ಈ ಹೊಸ ತಂತ್ರಜ್ಞಾನಕ್ಕೆ ಬೆಂಬಲ ಸಿಗದಿದ್ದ ಕಾರಣ ತನ್ನ ಕುಟುಂಬ ಹಾಗೂ ಸ್ನೇಹಿತರ ಸಹಾಯದಿಂದ ಇಂಗ್ಲೆಂಡಿಗೆ ಪಯಣಿಸಿದ. ಅಲ್ಲಿ ಆತನ ಕನಸಿನ ಸಾಕ್ಷಾತ್ಕಾರ ಸಾಧ್ಯವಾಗಿ ಮನುಕುಲಕ್ಕೆ ತಂತಿಯಿಲ್ಲದೆ ಸಂದೇಶವನ್ನು ಕಳುಹಿಸಬಹುದಾದ ವ್ಯವಸ್ಥೆಯನ್ನು ಅರ್ಪಿಸಿದನು.

ಈ ವೈರ್‌ಲೆಸ್ ತಂತ್ರಜ್ಞಾನವನ್ನು ಜನಪದ ಪ್ರಸಾರಕ್ಕೆ ಬಳಸಿಕೊಳ್ಳುವ ಅನೇಕ ಪ್ರಯತ್ನಗಳಾದವು. ಅಮೆರಿಕದಲ್ಲಿ 1916ರಲ್ಲಿ ಎಂಜಿನಿಯರ್‌ಗಳು ಮಾಡಿದ ಪ್ರಯೋಗದ ಫಲವಾಗಿ 1920ರಲ್ಲಿ ಇಡೀ ವಿಶ್ವದಲ್ಲೇ ಪ್ರಪ್ರಥಮ ರೇಡಿಯೋ ನಿಲಯ ಪಿಟ್ಸ್‌ಬರ್ಗ್‌ನಲ್ಲಿ ಸ್ಥಾಪನೆಯಾಯಿತು. ಅದೇ ವರ್ಷ ಇಂಗ್ಲೆಂಡಿನ ಚೆಲ್ಮ್ಸ್‌ಫರ್ಡಿನಲ್ಲಿನ ಮಾರ್ಕೋನಿ ಸಂಸ್ಥೆ ಪ್ರಪ್ರಥಮ ಬಾನುಲಿ ಕಾರ್ಯಕ್ರಮವನ್ನು ಪ್ರಸಾರಿಸುವಲ್ಲಿ ಯಶಸ್ವಿಯಾಯಿತು. ಅನಂತರ ಅಂದರೆ 1922ರಲ್ಲಿ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಂಪನಿಯ ಜನನವಾಯಿತು.

**ಭಾರತದಲ್ಲಿ ಬಾನುಲಿಯ ವಿಕಾಸ :** ಇಂತಹ ಪ್ರಯೋಗದ ಪ್ರಯತ್ನದಲ್ಲಿ ಭಾರತ ಬಹಳ ಕಾಲ ಹಿಂದುಳಿಯಲಿಲ್ಲ. 1921ರಲ್ಲಿ ಅಂದಿನ ಭಾರತದ ಆಡಳಿತಗಾರನಾಗಿದ್ದ ಜಾರ್ಜ್ ಲಾಟ್ಸ್‌ರವರ ವಿನಂತಿಯ ಮೇರೆಗೆ ಬಾಂಬೆಯಲ್ಲಿ ಆಯೋಜಿಸಲ್ಪಟ್ಟಿದ್ದ ವಿಶೇಷ

ಸಂಗೀತ ಕಾರ್ಯಕ್ರಮವನ್ನು ಅಂಚೆ ಮತ್ತು ತಂತಿ ಇಲಾಖೆಯವರು ಪುಣೆಗೆ ನೇರ ಪ್ರಸಾರ ಮಾಡಿ ಈತನು ಆ ಕಾರ್ಯಕ್ರಮವನ್ನು ಪುಣೆಯಲ್ಲೇ ಆಲಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದು, ಭಾರತ ಪ್ರಸಾರ ಇತಿಹಾಸದಲ್ಲಿ ಪ್ರಪ್ರಥಮ ಮೈಲಿಗಲ್ಲು.

ಕಲ್ಕತ್ತ ನಗರದಲ್ಲಿ 1923ರಲ್ಲಿ ಸ್ಥಾಪಿತವಾದ ರೇಡಿಯೋ ಕ್ಲಬ್‌ನ ಮುಖಾಂತರ, ಭಾರತದಲ್ಲಿ ಅಮೆರಿಕನ್ನರ ಪ್ರಸಾರ ಸೇವೆ ಪ್ರಾರಂಭವಾಯಿತು. ಜೂನ್ 1924ರಲ್ಲಿ ಭಾರತದ ಕ್ಲಬ್‌ಗಳು ಮುಂಬಯಿ ಹಾಗೂ ಮದ್ರಾಸ್ ನಗರಗಳಲ್ಲಿ ತಲೆ ಎತ್ತಿಕೊಂಡವು. ಹಣಕಾಸಿನ ಮುಗ್ಗಟ್ಟಿನ ಕಾರಣ ಮದ್ರಾಸ್ ಕ್ಲಬ್ ಊರ್ಜಿತವಾಗಲಿಲ್ಲ. ಆದರೆ 23, ಜುಲೈ, 1924ರಂದು ಮುಂಬಯಿಯಿಂದ ಪ್ರತಿದಿನ ಕಾರ್ಯಕ್ರಮ ಪ್ರಸಾರವಾಗಲು ಪ್ರಾರಂಭವಾಯಿತು. ಅದೇ ಸಂವತ್ಸರ ಆಗಸ್ಟ್ 21ರಂದು ಕಲ್ಕತ್ತ ನಗರದ ನಿಲಯ ತನ್ನ ಪ್ರಸಾರ ಸೇವೆ ಪ್ರಾರಂಭಿಸಿತು. ಈ ನಿಲಯಗಳು ಸಾಕಷ್ಟು ಹಣವಿಲ್ಲದ ಕಾರಣ ಮುಚ್ಚಲ್ಪಟ್ಟವು.

ಆದರೆ ಅನೇಕ ರಾಜಕೀಯ ಮುಖಂಡರುಗಳು, ಪ್ರಸಾರ ಸೇವೆಯನ್ನು ಸರ್ಕಾರದ ವತಿಯಿಂದ ಮುಂದುವರಿಸಬೇಕೆಂದು ಕಾರ್ಮಿಕ ಹಾಗೂ ಕೈಗಾರಿಕಾ ಮಂತ್ರಾಲಯಗಳ ಮೇಲೆ ಒತ್ತಡವನ್ನು ತಂದದ್ದು ಪ್ರಸಾರ ಸೇವೆ ಸರ್ಕಾರಿ ಸ್ವಾಮ್ಯದೊಳಗೆ ಬರುವಂತಾಯಿತು. 1 ಏಪ್ರಿಲ್ 1930ರಿಂದ ಪ್ರಸಾರ ಇಲಾಖೆ ನೇರವಾಗಿ ಕಾರ್ಮಿಕ ಹಾಗೂ ಕೈಗಾರಿಕಾ ಖಾತೆಯಡಿಗೆ ವರ್ಗಾವಣೆಯಾಯಿತು. ಇದು ಇಂಡಿಯನ್ ಸ್ಟೇಟ್ ಬ್ರಾಡ್‌ಕ್ಯಾಸ್ಟಿಂಗ್

ಮೈಸೂರು ಅಕಾಶವಾಣಿ

ಸರ್ವಿಸ್ ಎಂದು ಕರೆಯಲ್ಪಟ್ಟಿತು. ಆದರೆ 1930–38ರವರೆಗೆ ಭಾರತೀಯ ಪ್ರಸಾರ ಸೇವೆ ಬಹಳ ಸಂಕಟಗಳನ್ನು ನಿವಾರಿಸುವ ಮೊದಲ ಪ್ರಯತ್ನದಂತೆ ಒ.ಟಿ.ಸಿ.ಯ ಒಮೋನೆಲ್ ಫಿಲೆಡನ್ ಎಂಬುವವರ ಸೇವೆಯನ್ನು ಎರವಲು ಪಡೆದು ಆತನನ್ನು ಭಾರತೀಯ ಪ್ರಸಾರ ಸೇವೆಯ ಕಂಟ್ರೋಲರ್ ಎಂಬ ಹುದ್ದೆಗೆ ನೇಮಿಸಿತು. ಜೂನ್ 1935ರಲ್ಲಿ ಈ ಇಂಡಿಯನ್ ಸ್ಟೇಟ್ ಬ್ರಾಡ್‌ಕ್ಯಾಸ್ಟಿಂಗ್ ಸರ್ವಿಸ್, ಆಲ್ ಇಂಡಿಯ ರೇಡಿಯೋ ಎಂಬ ಹೊಸ ನಾಮಧೇಯ ವನ್ನು ಪಡೆದುಕೊಂಡಿತು. ಸಮಗ್ರ ಭಾರತದ ವ್ಯಾಪ್ತಿಯನ್ನು ಸೂಚಿಸುವಂತಹ ಒಂದು ಹೊಸ ಹೆಸರಿನ ಹುಡುಕಾಟಕ್ಕೆ ಉತ್ತೇಜನ ಕೊಟ್ಟ ಅಂದಿನ ವೈಸ್‌ರಾಯ್ ಲಾರ್ಡ್ ಲಿಂಗ್ ಲೀಭೂರವರ ಈ ಆಲ್ ಇಂಡಿಯ ರೇಡಿಯೋ ಎಂಬ ಹೊಸ ನಾಮಕ್ಕೆ ಭಾಗಿಯಾಯಿತು.

1937ರಲ್ಲಿ ಆಲ್ ಇಂಡಿಯ ರೇಡಿಯೋ ಕಾರ್ಮಿಕರ ಹಾಗೂ ಕೈಗಾರಿಕೆ ಖಾತೆಯಿಂದ ದೂರಸಂಪರ್ಕ ಇಲಾಖೆಗೆ ವರ್ಗಾಯಿಸಲಾಯಿತು. 1941ರಲ್ಲಿ ವಾರ್ತಾ ಮತ್ತು ಕಲೆಗಳ ಖಾತೆ ಎಂಬ ಹೊಸ ವಿಭಾಗವನ್ನು ರಚಿಸಿ ಅದರಲ್ಲಿ ಆಲ್ ಇಂಡಿಯ ರೇಡಿಯೋ ಜಾಲವನ್ನು ವಿಲೀನಗೊಳಿಸಲಾಯಿತು.

ಆಲ್ ಇಂಡಿಯ ರೇಡಿಯೋ ಜಾಲದಲ್ಲಿ ಮೂಲಭೂತವಾಗಿ ಮೀಡಿಯಂ ವೇವ್ ನಿಲಯಗಳನ್ನು ಸ್ಥಾಪಿಸುವ ಉದ್ದೇಶವಿದ್ದು, ಅಲ್ಲಲ್ಲಿ ಷಾರ್ಟ್‌ವೇವ್ ತರಂಗಗಳ ನಿಲಯಗ ಳನ್ನು ಸ್ಥಾಪಿಸುವುದರ ಮೂಲಕ ಬಾನುಲಿಯ ವ್ಯಾಪ್ತಿಯನ್ನು ಹೆಚ್ಚಿಸುವ ಯೋಜನೆ ಸಿದ್ಧವಾಯಿತು. ಅಂತೆಯೇ ಬಾಂಬೆ, ಕಲ್ಕತ್ತ ಹಾಗೂ ಮದರಾಸಿನಲ್ಲಿ ಷಾರ್ಟ್‌ವೇವ್ ನಿಲಯಗಳನ್ನು ಸ್ಥಾಪಿಸಿ ಅವುಗಳ ಮೂಲಕ ಮೂಲೆ ಮೂಲೆಗೂ ಬಾನುಲಿ ತರಂಗಗಳನ್ನು ಕೊಂಡೊಯ್ಯುವ ಸೌಲಭ್ಯವನ್ನು ಗಂಭೀರವಾಗಿ ಪರಿಗಣಿಸಲಾಯಿತು. ಅನೇಕ ರಾಜ ಸಂಸ್ಥಾನಗಳಾಗಿದ್ದ ಬರೋಡ, ಮೈಸೂರು, ತಿರುವನಂತಪುರ, ಔರಂಗಾಬಾದ್ ಮತ್ತು ಹೈದರಾಬಾದ್‌ನಲ್ಲಿ ಖಾಸಗಿ ಬಾನುಲಿ ನಿಲಯಗಳು ಅಷ್ಟರಲ್ಲೇ ಪ್ರಸಾರ ಕಾರ್ಯ ಆರಂಭಿಸಿ ದ್ದವು. ಅಲಹಾಬಾದ್‌ನಲ್ಲಿ ಒಂದು ಖಾಸಗಿ ನಿಲಯ ಪ್ರಾರಂಭವಾಗಿತ್ತು. ಇವೆಲ್ಲ ನಿಲಯಗಳು ಅನಂತರ ಆಲ್ ಇಂಡಿಯಾ ರೇಡಿಯೋ ಜಾಲದಲ್ಲಿ ವಿಲೀನಗೊಂಡವು. ಮೈಸೂರು ನಗರದಲ್ಲಿ ಮನೋವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಎಂ.ವಿ. ಗೋಪಾಲಸ್ವಾಮಿ ಯವರು ತಮ್ಮ ಮನೆಯಲ್ಲೇ ಒಂದು ಖಾಸಗಿ ಬಾನುಲಿ ನಿಲಯವನ್ನು 1935ರಲ್ಲಿ ಪ್ರಾರಂಭಿಸಿ ಅದರಲ್ಲಿ ಕರ್ಣಾಟಕ ಶಾಸ್ತ್ರೀಯ ಸಂಗೀತ, ಉತ್ತಮ ಭಾಷಣಗಳನ್ನು ಪ್ರಸಾರ ಮಾಡುತ್ತಿದ್ದರು. ತಿರುವನಂತಪುರದ ಮಹಾರಾಜರು ಅಲ್ಲಿ 1943ರಲ್ಲಿ ಸ್ಥಾಪಿಸಿದ್ದರು; ಹಾಗೂ ಗ್ವಾಲಿಯರ್ ಮತ್ತು ಬರೋಡಗಳಲ್ಲಿ 1947ಕ್ಕೂ ಮುಂಚೆ ಬಾನುಲಿ ಕ್ಷೇತ್ರಗಳು ಸ್ಥಾಪನೆಯಾಗಿದ್ದವು.

ಸ್ವಾತಂತ್ರ್ಯಪೂರ್ವದಲ್ಲಿ ಅಮೆರಿಕ ಹಾಗೂ ಬ್ರಿಟನ್‌ನಲ್ಲಿ ಷೋಕ್ ಅಪೇರಾಗಳು ಜನಪ್ರಿಯವಾಗಿದ್ದರೂ ಬ್ರಿಟಿಷ್ ಸರ್ಕಾರ ಆಲ್ ಇಂಡಿಯಾ ರೇಡಿಯೋನಲ್ಲಿ ಗಂಭೀರ ಸಾಹಿತ್ಯ, ಶಾಸ್ತ್ರಿಯ ಸಂಗೀತ ಮತ್ತು ಸಂಸ್ಕೃತಿಗೆ ಹೆಚ್ಚಿನ ಒತ್ತು ನೀಡದಿದ್ದದ್ದು ಉತ್ತಮ ಪ್ರತಿಕ್ರಿಯೆ ಅಲ್ಲವೆಂದು ಹೇಳಬಹುದು. ಜನರ ಆಸಕ್ತಿಗಳಿಗೆ ಗಮನ ಸಿಗದಿದ್ದದ್ದು ದುರದೃಷ್ಟಕರ ವೆಂದೇ ಹೇಳಬಹುದು. ಅಂದಿನ ಸರಕಾರದ ಮುಖ್ಯ ಗುರಿ ಕಾನೂನು ಹಾಗೂ ಶಿಸ್ತನ್ನು ಪಾಲಿಸುವವರ ವಿರುದ್ಧವಾಗಿದ್ದರ ಕಾರಣ ಬಾನುಲಿಯನ್ನು ಆ ಕಾರ್ಯಗಳಿಗಾಗಿಯೇ ಹೆಚ್ಚು ಬಳಸಿಕೊಳ್ಳಲಾಯಿತು. ಮಹಾತ್ಮ ಗಾಂಧೀಜಿಯವರು ಅತ್ಯಂತ ಜನಪ್ರಿಯ ನಾಯಕರಾಗಿದ್ದರೂ ಅವರ ಧ್ವನಿಯನ್ನು ಬಾನುಲಿಯಲ್ಲಿ ಪ್ರಸಾರಿಸಿದ್ದು ಬ್ರಿಟಿಷರು ಭಾರತಕ್ಕೆ ಆಡಳಿತವನ್ನು ವರ್ಗಾಯಿಸುವ ತೀರ್ಮಾನವನ್ನು ತಳೆದ ನಂತರವೇ. ಯುದ್ಧ ಕಾಲದಲ್ಲಿ ಆಲ್ ಇಂಡಿಯ ರೇಡಿಯೋ ಯುದ್ಧ ವ್ಯವಸ್ಥೆಯ ಒಂದು ಅಂಗವಾಗಿತ್ತು.

1947ರಲ್ಲಿ ಆಲ್ ಇಂಡಿಯಾ ರೇಡಿಯೋ ಒಂಬತ್ತು ಬಾನುಲಿ ಕೇಂದ್ರಗಳನ್ನು ಹೊಂದಿದ್ದು, ದೇಶ ವಿಭಜನೆಯಾದಾಗ ಲಾಹೋರ್, ಢಾಕಾ ಹಾಗೂ ಪೇಷಾವರ್ ನಿಲಯಗಳು ಪಾಕಿಸ್ತಾನಕ್ಕೆ ಹೋದವು. ಭಾರತದ ಪಾಲಿಗೆ ಬಂದ ಬಾನುಲಿ ನಿಲಯಗಳೆಂದರೆ ದೆಹಲಿ, ಬಾಂಬೆ, ಮದರಾಸ್, ಕಲ್ಕತ್ತ, ತಿರುಚಿ ಮತ್ತು ಲಕ್ನೋ.

ಸ್ವಾತಂತ್ರ್ಯ ಬಂದನಂತರ ಆಲ್ ಇಂಡಿಯ ರೇಡಿಯೋ ವ್ಯವಸ್ಥಿತವಾಗಿ ತನ್ನ ಜಾಲವನ್ನು ವರ್ಧಿಸಿಕೊಳ್ಳುವಂತಹ ಒಂದು ಯೋಜನೆಯನ್ನು ಸಿದ್ಧಪಡಿಸಿತು. ಆ ಯೋಜನೆಯಡಿ ಧಾರವಾಡ, ವಿಜಯವಾಡ, ನಾಗಪುರ, ಅಹಮದಾಬಾದ್, ಶ್ರೀನಗರ ಮತ್ತು ಜಲಂಧರ್‌ಗಳಲ್ಲಿ ಬಾನುಲಿ ನಿಲಯಗಳು ಸ್ಥಾಪನೆಯಾದವು.

ಭಾರತದ ಸಂವಿಧಾನದಡಿಯಲ್ಲಿ ಎಲ್ಲಾ ರಾಜ್ಯ ಸಂಸ್ಥಾನಗಳನ್ನು ತಂದ ನಂತರ ನಮ್ಮ ದೇಶದ ಪ್ರಪ್ರಥಮ ವಾರ್ತಾ ಮತ್ತು ಪ್ರಸಾರ ಮಂತ್ರಿಗಳಾದ ಸರ್ದಾರ್ ವಲ್ಲಭಭಾಯ್ ಪಟೇಲರು 'ಪ್ರಸಾರ'ವನ್ನು ಕೇಂದ್ರ ಪಟ್ಟಿಯಲ್ಲಿ ಸೇರ್ಪಡೆ ಮಾಡಿ, ಇತರ ಎಲ್ಲಾ ಖಾಸಗಿ ಕೇಂದ್ರಗಳನ್ನು ಆಲ್ ಇಂಡಿಯ ರೇಡಿಯೋ ಜಾಲದಡಿಯಲ್ಲಿ ತಂದರು. ಎ.ಐ.ಆರ್. ರಾಷ್ಟ್ರದಲ್ಲೇ ಏಕೈಕ ಪ್ರಸಾರಕವಾಯಿತು.

1950ರ ಆದಿಯಲ್ಲಿ ಕೇವಲ 56 ಲಕ್ಷ ರೇಡಿಯೊ ಸೆಟ್‌ಗಳಿದ್ದವು. ಆದರೆ ಇಂದು 12 ಕೋಟಿಯಷ್ಟು ರೇಡಿಯೊ ಸೆಟ್‌ಗಳಿವೆ. ಆಗ ಪ್ರತಿ ಸಾವಿರ ಜನಸಂಖ್ಯೆಗೆ ಕೇವಲ ಆರೇಳು ರೇಡಿಯೋಗಳಿದ್ದವು. ಆದರೆ ಇಂದು ಪ್ರತಿ ಏಳು ಅಥವಾ ಎಂಟು ಮಂದಿಗೆ ಒಂದು ಸೆಟ್ಟಿರುವುದು ಬಾನುಲಿ ನಮ್ಮ ದೇಶದಲ್ಲಿ ಬೆಳೆದಿರುವ ಪ್ರಮಾಣಕ್ಕೆ ಸಾಕ್ಷಿ.

ರಾಷ್ಟ್ರೀಯ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಬಾನುಲಿ ಪ್ರಸಾರದ ವ್ಯಾಪ್ತಿ ವೃದ್ಧಿಯಾಗುತ್ತಾ ಹೋಯಿತು. ಮೊದಲ ಯೋಜನೆಗೂ ಮುಂಚೆ, ಆಕಾಶವಾಣಿಯ ಪ್ರಾಥಮಿಕ ಸೇವೆಯ ವ್ಯಾಪ್ತಿ ಶೇ. 20ರಷ್ಟು ಜನಸಂಖ್ಯೆಯನ್ನು ಒಳಗೊಂಡಿತ್ತು. ಆದ್ದರಿಂದ ಆಕಾಶವಾಣಿಯ ಪ್ರಪ್ರಥಮ ಧ್ಯೇಯ ಹೆಚ್ಚು ಪ್ರದೇಶ ಹಾಗೂ ಜನಸಂಖ್ಯೆಯನ್ನು ಮುಟ್ಟುವುದಾಗಿತ್ತು. ಈ ನಿಟ್ಟಿನಲ್ಲಿ ಪ್ರತಿಯೊಂದು ಭಾಷಾವಾರು ಪ್ರಾಂತ್ಯದಲ್ಲಿ ಕನಿಷ್ಠ ಒಂದಾದರೂ ಬಾನುಲಿ ನಿಲಯವನ್ನು ಸ್ಥಾಪಿಸುವುದರ ಮೂಲಕ, ಮೂರನೇ ಯೋಜನೆಯ ಹೊತ್ತಿಗೆ ಆಕಾಶವಾಣಿಯ ತರಂಗಗಳು ಶೇ. 52ರಷ್ಟು ಪ್ರದೇಶ ಹಾಗೂ ಶೇ. 70ರಷ್ಟು ಜನಸಂಖ್ಯೆಯನ್ನು ತಲುಪುವಷ್ಟು ಸಾಮರ್ಥ್ಯವನ್ನು ಪಡೆದುಕೊಂಡವು. ನಂತರದ ಮೂರು ವಾರ್ಷಿಕ ಯೋಜನೆಗಳಡಿಯಲ್ಲಿ ಇನ್ನೂ 11 ಮೀಡಿಯಂ ವೇವ್ ನಿಲಯಗಳು ಸೇರ್ಪಡೆಯಾದವು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಬಾಕಿ ಉಳಿದಿದ್ದ ಎಲ್ಲ ಯೋಜನೆಗಳು ಸಂಪೂರ್ಣವಾದವು.

ಆರನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಆದ ಪ್ರಮುಖ ಬೆಳವಣಿಗೆಯೆಂದರೆ ಸ್ಥಳೀಯ ಬಾನುಲಿ ಕೇಂದ್ರಗಳ ಆವಿಷ್ಕಾರ. ಅಂದಿನ ದಿನಗಳಲ್ಲಿ ಸ್ಥಳೀಯ ಕೇಂದ್ರವೆಂಬುದು ಒಂದು ಸತ್ಯ ಕಲ್ಪನೆಯಾಗಿತ್ತು. ಒಂದು ನಿರ್ದಿಷ್ಟ ಪ್ರದೇಶಕ್ಕಷ್ಟೇ ಸೀಮಿತವಾಗುವ ಈ ಕೇಂದ್ರಗಳು ಅಲ್ಲಿಯ ಗ್ರಾಮೀಣ ಅಭಿವೃದ್ಧಿ ಸಂಸ್ಕೃತಿ ಹಾಗೂ ಪರಂಪರೆಗೆ ಹೆಚ್ಚು ಒತ್ತು ಕೊಡುವ ಮೂಲಕ ಸಮಗ್ರ ವಿಕಾಸಕ್ಕೆ ಪೂರಕವಾಗಿರಬಹುದೆಂಬ ಪರಿಕಲ್ಪನೆ ಸ್ಥಳೀಯ ಕೇಂದ್ರಗಳದಾಗಿತ್ತು. ಏಳನೆಯ ಯೋಜನೆಯಲ್ಲಿ ಸ್ಥಳೀಯ ಕೇಂದ್ರಗಳ ವಿಸ್ತರಣೆ ವ್ಯಾಪಕವಾ ದದ್ದು ಹಾಗೂ ದೇಶವಿಡೀ ಈ ರೀತಿಯ ಕೇಂದ್ರಗಳು ಅನುಷ್ಠಾನವಾದದ್ದು ಪ್ರಸಾರ ಇತಿಹಾಸದಲ್ಲಿ ಮತ್ತೊಂದು ದಾಖಲೆಯ ಅಧ್ಯಾಯವೆನಿಸಿತು. ಮೀಡಿಯಂ ವೇವ್‌ನಿಂದ ಎಫ್. ಎಂ. ಕಂಪನಾಂಕಕ್ಕೆ ಮೊರೆ ಹೋದದ್ದು ತಂತ್ರಜ್ಞಾನ ದೃಷ್ಟಿಯಿಂದ ಒಂದು ಮುಖ್ಯ ಘಟ್ಟವೆನ್ನಬಹುದು. ಯಾವುದೇ ಗದ್ದಲವಿಲ್ಲದ ಶ್ರವಣಕ್ಕೆ ಹಿತವಾಗಿ ಮೂಡಿಬರುವ ಧ್ವನಿತರಂಗಗಳು ಕೇಳುಗನ ಕಿವಿಗಳಿಗೆ ಆಪ್ಯಾಯಮಾನವಾಯಿತು. ಒಂದು ರಾಷ್ಟ್ರೀಯ ವಾಹಿನಿ ಪ್ರಾರಂಭವಾದದ್ದು ಆಕಾಶವಾಣಿಗೆ ಇನ್ನೊಂದು ಗರಿ ಮೂಡಿದಂತಾಯಿತು.

ಸ್ಥಳೀಯ ಕೇಂದ್ರಗಳು ಗಾತ್ರದಲ್ಲಿ ಬೆಳೆದವು. ಬಾನುಲಿ ಪ್ರಸಾರ ಇನ್ನೂ ಕಡಿಮೆ ವ್ಯಾಸವುಳ್ಳದ್ದಾಗಿರಬೇಕೆಂಬ ವಾದ ಕೇಳಿಬರುತ್ತಿದೆ. ಈ ರೀತಿ ವಾದಿಸುತ್ತಿರುವವರು 'ಸಮುದಾಯ ಬಾನುಲಿ ಕೇಂದ್ರ' ಎಂಬ ಪರಿಕಲ್ಪನೆಯನ್ನು ಜನಪ್ರಿಯಗೊಳಿಸುವ ಪ್ರಯತ್ನದಲ್ಲಿದ್ದಾರೆ. ಪ್ರತಿ ಐದು ಇಲ್ಲವೆ ಆರು ಹಳ್ಳಿಗಳು ಒಗ್ಗೂಡಿ ತಮ್ಮದೇ ಆದ ಒಂದು ಬಾನುಲಿ ಕೇಂದ್ರವನ್ನು ತಮ್ಮ ಇಚ್ಛೆಗನುಸಾರವಾಗಿ ರೂಪಿಸಿಕೊಂಡು ಜನಪರ ಕಾರ್ಯಕ್ರಮಗಳನ್ನು ಪ್ರಸರಿಸುವ ಒಂದು ಯೋಜನೆ ಇದ್ದು, ಕೆಲವು ಸ್ವಯಂ ಸೇವಾ ಸಂಸ್ಥೆಗಳು ಅನುಷ್ಠಾನಕ್ಕೆ ತರಲು ಸನ್ನದ್ಧವಾಗಿವೆ.

**ಪ್ರಸಾರಣೋದ್ಯಮದ ಚರಿತ್ರೆ :** ಕುತೂಹಲವಿದ್ದ ವಿಲಾಸಿ ಸಂಶೋಧಕರು ಒಂದನೆಯ ಮಹಾಯುದ್ಧಕ್ಕೂ ಮೊದಲೇ ಮೋರ್ಸ್ ಟೆಲಿಗ್ರಫಿಗಿಂತ ಹೆಚ್ಚಾಗಿ ಟೆಲಿಫೋನಿನ ಕ್ಷೇತ್ರದಲ್ಲಿ ಕೆಲಸವನ್ನು ಮುಂದುವರಿಸಿದ್ದರು. ಗ್ರಾಮಫೋನ್ ತಟ್ಟೆಯ ಸಂಗೀತವನ್ನು, ಸುದ್ದಿ ಸಮಾಚಾರಗಳನ್ನು ಪ್ರದೇಶದಿಂದ ಪ್ರದೇಶಕ್ಕೆ ಮುಟ್ಟಿಸುವ ಯಂತ್ರಗಳತ್ತ ಅವರ ಶೋಧನೆ ನಡೆದಿತ್ತು. ಪ್ರಸಾರ ಮಾಡುವುದು, ಮಾಡಿದ ಪ್ರಸಾರವನ್ನು ಸ್ವೀಕರಿಸುವುದು ಇವೆರಡಕ್ಕೂ ಬೇಕಾದ ಸಾಧನಗಳ ದಿಕ್ಕಿನಲ್ಲಿ ಅವರ ಗಮನ ಹರಿದಿತ್ತು. ಕಾಯಿದೆಯಂತೆ ವೈರ್‌ಲೆಸ್ ಅಥವಾ ನಿಸ್ತಂತು ಟೆಲಿಗ್ರಫಿ ನೌಕಾಸೈನ್ಯದ ವಶದಲ್ಲಿತ್ತು. ಇದರೊಂದಿಗೆ ಅನೇಕ ಖಾಸಗಿ ಸಂಸ್ಥೆಗಳ ಪ್ರಸರಣ ಕಾರ್ಯಗಳು ಪ್ರಾರಂಭವಾದಾಗ ಅನುಜ್ಞಾ ಪತ್ರಗಳ (ಲೈಸೆನ್ಸ್) ವಿತರಣೆ, ಶಬ್ದ ತರಂಗದೂರಗಳ (ವೇವ್‌ಲೆನ್ತ್) ನಿಗದಿಗಳ ಬಗ್ಗೆ ಕೆಲಕಾಲ ಗಡಿಬಿಡಿ ಉಂಟಾಯಿತು. ಆದರೂ 1920–24ರ ಸುಮಾರಿನಲ್ಲಿ ಮುಖ್ಯ ರಾಷ್ಟ್ರಗಳಲ್ಲಿ ಪ್ರಸರಣ ಕೇಂದ್ರಗಳು ಸ್ಥಾಪಿತವಾಗಿ 1930ರ ಹೊತ್ತಿಗೆ ಬಹು ರಾಷ್ಟ್ರಗಳಲ್ಲಿ ವ್ಯವಸ್ಥಿತ ಏರ್ಪಾಡುಗಳಾದುವು. 1925ರಲ್ಲಿ ಇದ್ದ 600 ಪ್ರಸರಣ ಕೇಂದ್ರಗಳು 1936ರಲ್ಲಿ 1300ಕ್ಕೆ ಏರಿದವು. 1960ರ ಹೊತ್ತಿಗೆ ಅವುಗಳ ಸಂಖ್ಯೆ 10,000 ಕ್ಕೆ ಏರಿತು.

ಪ್ರಸಾರಣ ವ್ಯವಸ್ಥೆ ಆಯಾ ದೇಶಕ್ಕೆ ಸೇರಿದ್ದಾದರೂ ಅಂತಾರಾಷ್ಟ್ರೀಯವಾಗಿ ಯಾವ ಗೊಂದಲವೂ ಆಗದಂತೆ ನೋಡಿಕೊಳ್ಳಲು ವಾಷಿಂಗ್ಟನ್ನಿನಲ್ಲಿ ಸೇರಿದ (1924) ಅಂತಾರಾಷ್ಟ್ರೀಯ ರೇಡಿಯೊ ಟೆಲಿಗ್ರಾಫ್ ಸಮ್ಮೇಳನವು ಕೆಲವು ರೀತಿ ನೀತಿಗಳನ್ನು ರೂಪಿಸಿತು. ಅನಂತರ 1932, 1938, 1947, 1952ನೆಯ ಇಸವಿಗಳಲ್ಲಿ ಆ ಕಾಯಿದೆಯನ್ನು ಸೂಕ್ತ ರೀತಿಯಲ್ಲಿ ಮಾರ್ಪಾಡಿಸಲಾಯಿತು. ಅಂತಾರಾಷ್ಟ್ರೀಯವಾದ ಕೆಲವು ಪ್ರಸರಣ ವಿಷಯಗಳನ್ನು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುನೆಸ್ಕೊಗೆ ಬಿಡಲಾಯಿತು.

**ಪ್ರಸಾರ ಕೇಂದ್ರಗಳ ವ್ಯವಸ್ಥೆ :** ನಮ್ಮ ದೇಶದಲ್ಲಿ ಪ್ರಸಾರ ಮೂರು ಹಂತದಲ್ಲಾಗುತ್ತಿದೆ. ಒಂದು ರಾಷ್ಟ್ರೀಯ ಮಟ್ಟದ್ದಾದರೆ, ಇನ್ನೊಂದು ಪ್ರಾದೇಶಿಕ ಮಟ್ಟ ಮತ್ತು ಕೊನೆಯದಾಗಿ ಸ್ಥಳೀಯ ಮಟ್ಟ. ಸಮುದಾಯ ಬಾನುಲಿ ಕೇಂದ್ರದ ಕನಸು ನನಸಾದರೆ ಅದು ನಾಲ್ಕನೆಯ ಹಂತವಾಗುವುದು.

ರಾಷ್ಟ್ರೀಯ ಮಟ್ಟದಲ್ಲಿ ಪ್ರಸಾರವೆಂದರೆ, ದೆಹಲಿ ಕೇಂದ್ರದಿಂದ ಪ್ರಸಾರವಾಗಿ ಎಲ್ಲ ಕೇಂದ್ರಗಳು ಅದನ್ನು ಮರುಪ್ರಸಾರ ಮಾಡುವುದೆಂದಾಗುತ್ತದೆ. ಉದಾಹರಣೆಗೆ ರಾಷ್ಟ್ರೀಯ ಸಂಗೀತ, ಭಾಷಣ, ಚರ್ಚೆ, ನಾಟಕ ಮತ್ತು ಅನೇಕ ಇತರೆ ಕಾರ್ಯಕ್ರಮಗಳು ದೆಹಲಿಯಿಂದ ಪ್ರಸಾರವಾಗುವ ಎಲ್ಲ ರಾಷ್ಟ್ರೀಯ ಕಾರ್ಯಕ್ರಮಗಳು ದೆಹಲಿ ಕೇಂದ್ರದಲ್ಲಿ ತಯಾರಾಗಬೇಕೆಂಬುದಿಲ್ಲ. ಇತರೆ ರಾಜ್ಯಗಳು ಈ ರಾಷ್ಟ್ರೀಯ ಜಾಲಕ್ಕೆ ತಮ್ಮ ಕಾರ್ಯಕ್ರಮಗಳನ್ನು ಕಳುಹಿಸಬಹುದು.

ಇನ್ನು ಪ್ರಾದೇಶಿಕ ಮಟ್ಟದಲ್ಲಿ ಎಲ್ಲ ರಾಜ್ಯಗಳಲ್ಲಿ ಅನೇಕ ಬಾನುಲಿ ಕೇಂದ್ರಗಳಿರುತ್ತವೆ. ಪ್ರತಿಯೊಂದು ಬಾನುಲಿ ಕೇಂದ್ರವು ತನ್ನ ಪ್ರದೇಶಕ್ಕನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಪ್ರಸಾರ ಮಾಡುತ್ತವೆ. ಪ್ರತಿಯೊಂದು ನಿಲಯಕ್ಕೂ ತನ್ನದೇ ಆದ ನಿರ್ದಿಷ್ಟ ಗುರಿ ಹಾಗೂ ಸ್ವಾಯತ್ತತೆ ಇವೆ. ಆದಾಗ್ಯೂ ಅನೇಕ ಕಾರ್ಯಗಳು ರಾಜ್ಯಮಟ್ಟದಲ್ಲಿ ಎಲ್ಲ ಕೇಂದ್ರಗಳಿಂದ ಏಕ ಕಾಲಕ್ಕೆ ಪ್ರಸಾರವಾಗುವುದು ಬೆಳೆದು ಬಂದಿರುವ ಒಂದು ಸಂಪ್ರದಾಯ. ಕೆಲವೊಂದು ಕಾರ್ಯಕ್ರಮಗಳನ್ನು ರಾಜ್ಯಮಟ್ಟಪ್ರಸಾರಕ್ಕೆಂದು ಯೋಜಿಸಿ ಅವುಗಳಲ್ಲಿ ಎಲ್ಲ ಪ್ರದೇಶಗಳ ವೈವಿಧ್ಯವನ್ನು ಪೂರೈಸುವ ಪ್ರಸಾರವನ್ನು ರೂಢಿಸಿಕೊಂಡಿರುವ ಒಂದು ವಿಧಾನ. ಇದನ್ನು ಸಮಗ್ರ ಪ್ರಸಾರ ವ್ಯವಸ್ಥೆ ಎಂದು ಕರೆಯುವುದು ವಾಡಿಕೆ (ಇಂಟೆಗ್ರೇಟೆಡ್ ಸಿಸ್ಟಮ್ ಆಫ್ ಬ್ರಾಡ್ ಕಾಸ್ಟಿಂಗ್).

ಸ್ಥಳೀಯ ಕೇಂದ್ರಗಳು ಹೊಸ ಪ್ರಸಾರ ವಿಧಾನವನ್ನು ರೂಢಿಸಿಕೊಂಡಿರುವ ಸ್ಥಳೀಯ ಇತಿಹಾಸ, ಸಂಸ್ಕೃತಿ ಹಾಗೂ ಅಲ್ಲಿಯ ಆಗುಹೋಗುಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂಬ ಗುರಿಯನ್ನಿಟ್ಟುಕೊಂಡು ಅಸ್ತಿತ್ವಕ್ಕೆ ಬಂದವು. ಈ ಕೇಂದ್ರಗಳಲ್ಲಿ ಸ್ಟುಡಿಯೋದಲ್ಲಿ ಧ್ವನಿಮುದ್ರಿತವಾದ ಕಾರ್ಯಕ್ರಮಗಳು ಹೆಚ್ಚಿರಬೇಕು ಎಂಬುದು ಈ ಕೇಂದ್ರಗಳಿಗೆ ನೀಡಿದ ನಿರ್ದಿಷ್ಟ ಸೂಚನೆ. ತನ್ನ ಪ್ರಸಾರವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಗ್ರಾಮಕ್ಕೂ ಧ್ವನಿಗ್ರಾಮವನ್ನು ಒಯ್ದು ಅಲ್ಲಡಗಿರುವ ವಿವಿಧ ಕಲಾವಿದರನ್ನು ಗುರುತಿಸಿ, ಅವರ ಧ್ವನಿ ಮುದ್ರಿಸಿಕೊಂಡು ನಂತರ ಪ್ರಸಾರ ಮಾಡಬೇಕೆಂಬುದು ಸ್ಥಳೀಯ ಕೇಂದ್ರಗಳಿಗಿದ್ದ ಧ್ಯೇಯ. ಇದನ್ನು ಆರ್ಕೆತೆಲಾಗೊ ಅಪ್ರೋಚ್ ಎಂದು ಕರೆಯುತ್ತಾರೆ; 5, ಸೆಪ್ಟೆಂಬರ್ 2000ದವರೆಗೂ ಎರಡೇ ಪ್ರಸಾರಗಳಿದ್ದ ಮೈಸೂರು ನಿಲಯದಿಂದ ಮಧ್ಯಾಹ್ನದ ಪ್ರಸಾರ ಕೂಡ ಪ್ರಾರಂಭವಾಯಿತು. ಇದರಿಂದ ಪ್ರಸಾರದ ಅವಧಿ ಸರಾಸರಿ ದಿನಕ್ಕೆ 12.30 ಘಂಟೆಯಾಯಿತು. ಮಧ್ಯಾಹ್ನದ ಪ್ರಸಾರವಿಲ್ಲ ಎಂಬ ಕೊರಗು ಮೈಸೂರು ಕೇಳುಗರಲ್ಲಿ ಬಹಳಷ್ಟಿತ್ತು. ಈಗ ಆ ಕೊರಗು ನಿವಾರಣೆಯಾದದ್ದು ಸಂತಸದ ಸಂಗತಿ. ಪ್ರಮುಖವಾಗಿ ಕನ್ನಡದ ಕಾರ್ಯಕ್ರಮಗಳು ಹೆಚ್ಚು ಪ್ರಸಾರವಾಗುವುದು ಎಂಟೂವರೆ ಘಂಟೆಗಳಷ್ಟು. ಉಳಿದಂತೆ ಇಂಗ್ಲಿಷ್ ಹಾಗೂ ಹಿಂದೀ ಕಾರ್ಯಕ್ರಮಗಳು. ಉರ್ದು ಹಾಗೂ ಸಂಸ್ಕೃತ ಭಾಷೆಗಳ ಕಾರ್ಯಕ್ರಮಗಳು ಆಗಾಗ ಬಿತ್ತರವಾಗುತ್ತಿವೆ.

ಅತ್ಯಂತ ಜನಪ್ರಿಯ ಕಾರ್ಯಕ್ರಮಗಳೆಂದರೆ ಕರ್ನಾಟಕ ಶಾಸ್ತ್ರೀಯ ಸಂಗೀತ, ಗೀತಾರಾಧನ (ಭಕ್ತಿ ಸಂಗೀತ), ಸಾರ್ವಜನಿಕರ ಕುಂದುಕೊರತೆಯನ್ನೊಳಗೊಂಡ ಡಂಗುರ, ತರಂಗಿಣಿ, ಫೋನ್–ಇನ್, ಚಿಂತನ ಮತ್ತು ಮಾತು–ಮಲ್ಲಿಗೆ (ಕೌಟುಂಬಿಕ ಧಾರಾವಾಹಿ).

**ಆಕಾಶವಾಣಿಗೆ ಸ್ವಾಯತ್ತತೆ :** ಪ್ರಧಾನಮಂತ್ರಿಗಳಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಹಾಗೂ ಅವರ ಸಂಪುಟದಲ್ಲಿ ವಾರ್ತಾ ಮತ್ತು ಪ್ರಸಾರ ಇಲಾಖೆಯ ಮಂತ್ರಿಗಳಾಗಿದ್ದ ಇಂದಿರಾ ಗಾಂಧಿಯವರು ಆಕಾಶವಾಣಿಗೆ ಸ್ವಾಯತ್ತತೆ ಕೊಡಬಹುದೆ, ಯಾವ ರೀತಿಯ ಸ್ವಾಯತ್ತತೆ ಕೊಡಬೇಕು ಎಂಬುದನ್ನು ಪರಿಶೀಲಿಸಲು ಅಶೋಕ್ ಕುಮಾರ್ ಚಂದಾರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ಅದರಲ್ಲಿ ನಾಥಪೈ, ಎಂ.ಎಸ್ ಗುರುಪಾದ ಸ್ವಾಮಿ, ಎಲ್.ಎಂ. ಸಿಂಗ್ವಿ, ಶ್ರೀಮತಿ ಕಮಲ ಚೌಧರಿ, ವಿ.ಸಿ. ಶುಕ್ಲ, ಹಸೀನ್ ಜಹೀರ್, ಅಶೋಕ ಮಿತ್ರ, ಎಂ. ಚಲಪತಿರಾವ್, ಹಜಾರಿ ಪ್ರಸಾದ್ ತ್ರಿವೇದಿ ಮತ್ತು ಮೆಹ್ರ ಮಸಾನಿಯವರುಗಳನ್ನು ಸದಸ್ಯರನ್ನಾಗಿ ನೇಮಿಸಿತು. ಈ ಸಮಿತಿ 18 ಏಪ್ರಿಲ್ 1966ರಲ್ಲಿ ಮಾಡಿದ ಶಿಫಾರಸ್ಸೆಂದರೆ ಆಕಾಶವಾಣಿ ಮತ್ತು ದೂರದರ್ಶನದಂತಹ ಮಾಧ್ಯಮಗಳಿಗೆ ಸ್ವಾಯತ್ತತೆಯ ಅಗತ್ಯವಿರುವುದರಿಂದ, ಅದಕ್ಕಾಗಿ ಒಂದು ಪ್ರತ್ಯೇಕ ನಿಗಮವನ್ನು ಸ್ಥಾಪಿಸುವುದು ಅವುಗಳ ಸೃಜನಶೀಲತೆಯನ್ನು ಕಾಪಾಡಲು ಅಗತ್ಯವಾದ ಒಂದು ಕ್ರಮ ಎಂಬುದು.

ಮತ್ತೊಂದು ಪ್ರಮುಖವಾದ ಶಿಫಾರಸ್ಸೆಂದರೆ ವಿವಿಧ ಭಾರತಿ ಸೇವೆಯನ್ನು ವಾಣಿಜ್ಯ ಕೇಂದ್ರವನ್ನಾಗಿ ಪರಿವರ್ತಿಸಿ, ಅದರಿಂದ ಬರುವ ಆದಾಯವನ್ನು ಆಕಾಶವಾಣಿಯ ಅಭಿವೃದ್ಧಿ ಹಾಗೂ ವಿಸ್ತರಣೆಗೆ ಬಳಸಿಕೊಳ್ಳಬೇಕೆಂಬ ಸೂಚನೆ, ಸ್ವಾಯತ್ತತೆ ಕುರಿತ ಶಿಫಾರಸ್ಸನ್ನು ಕೇಂದ್ರ ಮಂತ್ರಿ ಮಂಡಲ ಅಂಗೀಕರಿಸಿ ಅದರಂತೆ ಅಂತೆಲೇ 1, ನವೆಂಬರ್ 1997ರಿಂದ ವಿವಿಧ ಭಾರತಿಯಲ್ಲಿ ಜಾಹೀರಾತುಗಳು ಪ್ರಾರಂಭವಾದವು.

ಜನತಾ ಪಕ್ಷ ಚುನಾವಣೆಯಲ್ಲಿ ಗೆದ್ದು ಆಡಳಿತದ ಚುಕ್ಕಾಣಿ ಹಿಡಿದನಂತರ ಅಂದಿನ ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿಗಳಾಗಿದ್ದ ಲಾಲ್ ಕೃಷ್ಣ ಅಡ್ವಾಣಿಯವರು ಆಕಾಶವಾಣಿ ಹಾಗೂ ದೂರದರ್ಶನ ಸ್ವಾಯತ್ತ ಸಂಸ್ಥೆಯಾಗಬೇಕೆಂಬ ಒಲವಿನಿಂದ ಶ್ರೀ ಬಿ.ಜಿ ವರ್ಗೀಸ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದರು. ವರ್ಗೀಸ್‌ರಲ್ಲದೆ ಆ ಸಮಿತಿಯಲ್ಲಿದ್ದ ಇತರ ಸದಸ್ಯರೆಂದರೆ ವಿ.ಜಿ. ರಾಜಾಧ್ಯಕ್ಷ, ಮ್ಯಾಲಕಾಮ್ ಆದಿಶೇಷಯ್ಯ, ಟೀಚರ್ ಸರ್ಕಾರ್, ಪಿ.ಎಲ್. ದೇಶಪಾಂಡೆ, ಉಮಾ ಶಂಕರ ಜೋಷಿ, ಎ.ಜಿ. ಮರಾನಿ, ಜೆ.ಡಿ.ಶೇಷಿ, ಪಿ.ಜೆ. ಫರ್ನಾಂಡಿಸ್, ಸಿ.ಆರ್. ಸುಬ್ರಹ್ಮಣ್ಯ, ಈಶ್ವರದಾಸ್ ಅವರು ಕಾರ್ಯದರ್ಶಿಯಾಗಿ ನೇಮಕಗೊಂಡರು. ಕೆಲ ದಿನಗಳ ನಂತರ ಆ ಸಮಿತಿಗೆ ನಯನತಾರಾ ಸೈಗಲ್‌ರವರು ಸದಸ್ಯರಾಗಿ ನೇಮಕಗೊಂಡರು.

ಈ ಸಮಿತಿ ಆಕಾಶವಾಣಿ ಹಾಗೂ ದೂರದರ್ಶನ ಒಂದೇ ದತ್ತಿಯಡಿಯಲ್ಲಿರಬೇಕು. ಆ ದತ್ತಿಯನ್ನು ಆಕಾಶಭಾರತಿ ಅಥವಾ ನ್ಯಾಷನಲ್ ಬ್ರಾಡ್‌ಕ್ಯಾಸ್ಟ್ ಎಂದು ಕರೆಯಬಹುದು. ಈ ಸ್ವಾಯತ್ತ ಸಂಸ್ಥೆಯನ್ನು ಅಧ್ಯಕ್ಷರು ಇತರ ಸದಸ್ಯರೊಂದಿಗೆ ನಿರ್ವಹಿಸಬೇಕು. ಈ ಎಲ್ಲ ಸದಸ್ಯರು ಭಾರತದ ಕಕ್ಷೆಯ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಂದ ಸೂಚಿಸಲ್ಪಟ್ಟು, ಅವುಗಳನ್ನು ರಾಷ್ಟ್ರಪತಿಗಳ ಅನುಮೋದನೆಗೆ ಒಳಪಡಿಸಬೇಕು ಎಂದು ಸ್ಥೂಲವಾಗಿ ಶಿಫಾರಸ್ಸುಗಳನ್ನು ಮಾಡಿತು. ಇದಲ್ಲದೆ ಈ ಸಮಿತಿ ಎಲ್ಲ ವಿದ್ಯಾಸಂಸ್ಥೆಗಳಿಗೂ ಒಂದು ಬಾನುಲಿ ನಿಲಯವನ್ನು ಸ್ಥಾಪಿಸುವುದಕ್ಕೆ, ಅದಕ್ಕೆ ಬೇಕಾದ ರಹದಾರಿಯನ್ನು ಸರ್ಕಾರ ನೀಡಬೇಕೆಂದು ಸೂಚಿಸಿತು.

ಆದರೆ ಸರ್ಕಾರ ಈ ಸೂಚನೆಗಳನ್ನು ತಳ್ಳಿಹಾಕಿತು. ಆಕಾಶವಾಣಿ ಹಾಗೂ ದೂರದರ್ಶನಗಳನ್ನು ಹೇಗೆ ಸ್ವಾಯತ್ತ ನಿಗಮ ಮಾಡಬಹುದು ಎಂಬುದರ ಬದಲಿಗೆ, ಸಮಿತಿಯು ಅದಕ್ಕೂ ಪ್ರತ್ಯೇಕ ಸಂವಿಧಾನಾತ್ಮಕ ಸ್ಥಾನಮಾನವನ್ನು ಕೊಡಬೇಕೆಂದು ಪ್ರತಿಪಾದಿಸಿದೆ. ಆದ್ದರಿಂದ ಸಮಿತಿಯ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಕಾರ್ಯರೂಪಕ್ಕೆ ತರಲು ಸರಕಾರ ಅಸಮರ್ಥವಾಗಿದೆ ಎಂದು ಅಡ್ವಾನಿಯವರು ನಂತರ ಸಮಜಾಯಿಷಿ ನೀಡಿ, ಆ ವರದಿಯನ್ನು ಶೀತಲ ಗೃಹದಲ್ಲಿಟ್ಟರು.

ಇಂದಿರಾಗಾಂಧಿಯವರ ಅನಂತರ ಸರ್ಕಾರ ಡಿಸೆಂಬರ್ 1982ರಲ್ಲಿ ಪಿ.ಸಿ. ಜೋಷಿಯವರ ನೇತೃತ್ವದಲ್ಲಿ ದೂರದರ್ಶನ ಕಾರ್ಯಕ್ರಮಗಳು ಹೇಗಿರಬೇಕೆಂಬುದನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಲು ಒಂದು ಸಮಿತಿಯನ್ನು ನೇಮಿಸಿತು.

ದೂರದರ್ಶನವು ದೇಶದ ಸಾಮಾಜಿಕ ಹಾಗೂ ಆರ್ಥಿಕ ವಿಕಾಸತೆಗೆ, ಹೇಗೆ ಪೂರಕವಾಗಬಲ್ಲದು ಹಾಗೂ ಅದು ಶಿಕ್ಷಣ, ಮಾಹಿತಿ ಹಾಗೂ ಮನರಂಜನೆಗೆ ಹೇಗೆ ಆದ್ಯತೆ ಕೊಡಬೇಕೆಂಬುದು ಈ ಸಮಿತಿಯು ಪರೀಶೀಲಿಸಿದ ಕೆಲವು ಅಂಶಗಳು. ಆದರೆ ಈ ಸಮಿತಿಯೂ ಸರ್ಕಾರದ ಅನುಮೋದನೆ ಪಡೆಯುವಲ್ಲಿ ವಿಫಲವಾಯಿತು.

ಕೆ. ಉಪೇಂದ್ರರವರು ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿಗಳಾದಾಗ ಪ್ರಸಾರ ಭಾರತಿ ಮಸೂದೆಯನ್ನು ಸದನದಲ್ಲಿ ಮಂಡಿಸಿದರು. 29, ಡಿಸೆಂಬರ್ 1989ರಲ್ಲಿ ಈ ಮಸೂದೆಯನ್ನು ಪ್ರಸ್ತಾಪಿಸುತ್ತ ನಿರುತ್ಸಾಹ ಮಾಧ್ಯಮಗಳು ಸರ್ಕಾರದ ಕಪಿಮುಷ್ಟಿಯಿಂದ ಬಿಡುಗಡೆ ಮಾಡಲು ಈ ಮಸೂದೆ ಪಣತೊಟ್ಟಿದೆ ಎಂದರು.

ಈ ಮಸೂದೆಯ ಪ್ರಕಾರ ಪ್ರಸಾರ ಭಾರತಿ ಅಥವಾ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್ ಆಫ್ ಇಂಡಿಯ ಒಂದು ಸ್ವಾಯತ್ತ ಸಂಸ್ಥೆಯಾಗಿ, ಕ್ರಿಯಾಶೀಲವಾಗಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಕಾರ್ಯರೂಪಕ್ಕೆ ತರುವಂಥ ಜವಾಬ್ದಾರಿ, ಪ್ರಸಾರ ಭಾರತಿಯದಾಗಬೇಕೆಂಬುದು. ಅಲ್ಲದೆ ಈ ಸಂಸ್ಥೆ ಸಂಪೂರ್ಣವಾಗಿ ಜನಮತ ಅಭಿವ್ಯಕ್ತಿಗೆ ಮುಡಿಪಾಗಿರಬೇಕೆಂಬುದು. ಈ ಮಸೂದೆ ಸಂಸತ್ತಿನಲ್ಲಿ ಮಂಡನೆಯಾದ ನಂತರ ಅದರಲ್ಲಿ ಅನೇಕ ಬದಲಾವಣೆಗಳನ್ನು ತರಲಾಯಿತು. ಸರ್ಕಾರದ ಹಿಡಿತ ಪ್ರಸಾರ ಭಾರತಿಯ ಮೇಲೆ ಇರಬೇಕೆಂಬುದು ಅನೇಕ ಸಂಸದರ ಅಭಿಪ್ರಾಯವಾಗಿತ್ತು.

ಮಸೂದೆಯ ಅಂತಿಮ ಕರಡಿಗೆ 12 ಸಪ್ಟೆಂಬರ್ 1990ರಂದು ರಾಷ್ಟ್ರಪತಿಗಳ ಅನುಮೋದನೆ ದೊರಕಿತು. ಈ ಮಸೂದೆಯ ಪ್ರಕಾರ ಪ್ರಸಾರ ಭಾರತಿಯ ನಿರ್ವಹಣೆ, ಪ್ರಸಾರ ಭಾರತಿ ಮಂಡಳಿಯದಾಗಿರುತ್ತದೆ ಎಂಬುದನ್ನು ಮಸೂದೆ ಸ್ಪಷ್ಟಪಡಿಸಿತು.

ಪ್ರಸಾರ ಭಾರತಿ ಮಸೂದೆಗೆ ಅನುಮೋದನೆ ದೊರಕಿದ್ದರೂ ಅದರ ಅನುಷ್ಠಾನ ತಕ್ಷಣಕ್ಕೆ ಆಗಲಿಲ್ಲ. 12 ಡಿಸೆಂಬರ್ 1995ರಂದು ಮತ್ತೊಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ಎನ್.ಕೆ.ಸೇನ್ ಗುಪ್ತರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಪ್ರಸಾರ ಭಾರತಿಯಡಿ ಆಕಾಶವಾಣಿ ಹಾಗೂ ದೂರದರ್ಶನಗಳ ಪುನಾರಚನೆ ಹೇಗಾಗಬಹುದು ಮತ್ತು ಅವುಗಳ ಸಿಬ್ಬಂದಿ ಹೇಗಿರಬೇಕೆಂಬ ನಿರ್ದಿಷ್ಟ ಅಂಶಗಳ ಬಗ್ಗೆ ಈ ಸಮಿತಿ ಕೂಲಂಕಷವಾದ ಅಧ್ಯಯನವನ್ನು ಕೈಗೊಂಡಿತು. ಈ ಸಮಿತಿಯಲ್ಲಿದ್ದ ಇತರ ಸದಸ್ಯರೆಂದರೆ ವೇದಲೇಖಾ ಹಾಗೂ ಎಂ.ಆರ್. ನಾರಾಯಣನ್. ಈ ಸಮಿತಿಯು ಪ್ರಸಾರ ಭಾರತಿಯ ನಿರ್ವಹಣೆಗೆ ಅಗತ್ಯವಾದ ಅನೇಕ ರಚನಾತ್ಮಕ ಸಲಹೆಗಳನ್ನು ನೀಡಿತು. ಕೊನೆಗೆ 23, ನವೆಂಬರ್ 1997 ರಂದು ಕೇಂದ್ರ ಸರ್ಕಾರ ಆಕಾಶವಾಣಿ ಮತ್ತು ದೂರದರ್ಶನಗಳ ನಿರ್ವಹಣೆಗಳನ್ನು ಪ್ರಸಾರ ಭಾರತಿಗೆ ಮಂಡಳಿಗೆ ವರ್ಗಾಯಿಸಿತು.

**ಆರ್ಥಿಕ ವ್ಯವಸ್ಥೆ :** ಆಕಾಶವಾಣಿ ಸಂಸ್ಥೆಯನ್ನು ನಡೆಸಲು ಅಪಾರ ಹಣ ಬೇಕು. ಸುಸಜ್ಜಿತ ಸ್ಟುಡಿಯೊ, ಯಂತ್ರೋಪಕರಣಗಳು, ತಜ್ಞರಾದ ತಾಂತ್ರಿಕ ಮತ್ತು ಆಡಳಿತ ಅಧಿಕಾರ ವರ್ಗ ಮತ್ತು ಅವರ ಸಂಬಳ ಸಾರಿಗೆಗಳು, ಕಲಾವಿದರಿಗೆ ಕೊಡಬೇಕಾದ ಸಂಭಾವನೆ – ಇತ್ಯಾದಿ. ಇವಕ್ಕೆಲ್ಲ ಸರಿಯಾಗಿ ಹಣ ಒದಗಿಸದಿದ್ದಲ್ಲಿ ಸಂಸ್ಥೆ ತೃಪ್ತಿಕರವಾಗಿ ನಡೆಯಲಾರದು. ರೇಡಿಯೊ ಗ್ರಾಹಕಗಳನ್ನು ಇಟ್ಟುಕೊಂಡವರಿಂದ ಬರುತ್ತಿದ್ದ ವಾರ್ಷಿಕ ಚಂದಾ ಹಣವನ್ನು ಸಾರ್ವಜನಿಕ ಹಣಕಾಸಿನ ಭಾಗದೊಂದಿಗೆ ಸೇರಿಸಿ ಖರ್ಚನ್ನು ಹಿಂದಿನ ದಿನಗಳಲ್ಲಿ ನಿರ್ವಹಿಸಲಾಗುತ್ತಿತ್ತು. ವ್ಯಾಪಾರೀ ಪ್ರಸರಣ ಕೇಂದ್ರಗಳವರು ಕಾರ್ಯಕ್ರಮಗಳ ಖರ್ಚನ್ನು ವ್ಯಾಪಾರೋದ್ಯಮಿಗಳಿಂದ ಪಡೆದು ಪ್ರತಿ ಕಾರ್ಯಕ್ರಮದ ಕೊನೆಯಲ್ಲೂ ಅದು ಅಂಥ ವ್ಯಾಪಾರ ಸಂಸ್ಥೆಯ ಸಹಾಯದಿಂದ ನೆರವೇರಿತೆಂದು ಹೇಳಿ ತನ್ಮೂಲಕ ಆ ಸಂಸ್ಥೆಗೆ ಜಾಹೀರಾತು ಮಾಡುವ ವ್ಯವಸ್ಥೆಯನ್ನಿಟ್ಟುಕೊಂಡಿದ್ದಾರೆ. ಅಲ್ಲದೆ ಕಾರ್ಯಕ್ರಮದ ಪ್ರಾರಂಭ, ಮಧ್ಯ, ಅಂತ್ಯಗಳಲ್ಲಿ ಎಲ್ಲಿ ಬೇಕಾದರೂ ಜಾಹೀರಾತುಗಳನ್ನು ಪ್ರಕಟಿಸಿ ಅದಕ್ಕೆ ಉಪಯೋಗವಾಗುವ ಪ್ರಸಾರಕಾಲಕ್ಕನುಗುಣವಾಗಿ ಆಯಾ ಉದ್ಯಮ ಸಂಸ್ಥೆಗಳಿಂದ ಶುಲ್ಕ ವಸೂಲು ಮಾಡುವ ವಿಧಾನವೂ ಜಾರಿಯಲ್ಲಿದೆ. ಅಮೆರಿಕೆಯಲ್ಲಿ ಸರ್ಕಾರಿ ಹತೋಟಿ ಕೇವಲ ಪರೋಕ್ಷವಾಗಿದ್ದು ಪ್ರಸರಣವೆಲ್ಲ ಖಾಸಗಿ ಸಂಸ್ಥೆಗಳದ್ದೇ ಆಗಿತ್ತು. ಕೇವಲ ಶೇ.5 ಧಾರ್ಮಿಕ ಮತ್ತು ಅಂಥವೇ ಇತರ ಸಂಸ್ಥೆಗಳಿಂದ ಸಹಾಯ ಪಡೆಯುತ್ತಿದ್ದವು. ಬ್ರಿಟನ್ನಿನಲ್ಲಿ ಪ್ರಸರಣದ ಮೇಲೆ ಪೂರ್ಣ ಹಾಗೂ ನೇರ ಹತೋಟಿ ಉಂಟು. ಪ್ರಸರಣದ ಎಲ್ಲ ಹಂತಗಳನ್ನೂ ಬ್ರಿಟಿಷ್ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್ ಮಾಡುವ ಕ್ರಮ ಅನಂತರ ಜಾರಿಗೆ ಬಂತು. 1954ರ ಸುಧಾರಣೆಯಂತೆ ಟೆಲಿವಿಷನ್ ಕಾಯಿದೆ ಜಾರಿಗೆ ಬಂದ ಮೇಲೆ ಪೂರ್ಣ ಸ್ವತಂತ್ರವಾದ ಟೆಲಿವಿಷನ್ ಸಂಸ್ಥೆ ರೂಪುಗೊಂಡಿತು. ಇದಕ್ಕೆ ಸ್ವಲ್ಪ ಸರ್ಕಾರಿ ಸಹಾಯವಿದೆಯಾದರೂ ಬಹುಪಾಲು ಧನವೆಲ್ಲ ಜಾಹೀರಾತುಗಳಿಂದ ಬರುತ್ತದೆ. ಭಾರತದಲ್ಲಿ ಎ.ಐ.ಆರ್. ಸಂಸ್ಥೆಯನ್ನು ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಶಾಖೆಯೇ ನಿರ್ವಹಿಸುತ್ತಿದೆ. ಈಗ ಪ್ರಸಾರ ಭಾರತಿ ಎಂಬ ಸ್ವಾಯತ್ತ ಸಂಸ್ಥೆ ಇದೆ.

**ಕಾರ್ಯಕ್ರಮಗಳು :** ಸಾಮಾನ್ಯವಾಗಿ ಎರಡು ಬಗೆಯಾಗಿರುತ್ತವೆ. ಜ್ಞಾನ ಮತ್ತು ಸುದ್ದಿ ಪ್ರಸರಣ, ಸಂಗೀತ ಸಾಹಿತ್ಯಾದಿ ಮನೋರಂಜನೆಗಳ ಪ್ರಸರಣ, ಭಾಷಣಗಳು, ಹವಾವರ್ತಮಾನ, ಮಾರುಕಟ್ಟೆಯ ಧಾರಣೆವಾಸಿಗಳು, ಸಾರ್ವಜನಿಕ ಮನವಿಗಳು, ಚರ್ಚಾಗೋಷ್ಠಿಗಳು, ಧಾರ್ಮಿಕ ಕಾರ್ಯಕ್ರಮಗಳು, ವಿಶಿಷ್ಟ ಘಟನೆಗಳ ವರದಿಗಳು_ಇತ್ಯಾದಿ ಮೊದಲ ವರ್ಗಕ್ಕೆ ಸೇರುತ್ತವೆ. ಎರಡನೆಯ ಕಾರ್ಯಕ್ರಮದಲ್ಲಿ ಸಂಗೀತ ಮತ್ತು ನಾಟಕರಂಗಗಳ ಎಲ್ಲ ವೈವಿಧ್ಯಗಳನ್ನೂ ಬಳಸಿಕೊಳ್ಳಲಾಗಿದೆ. ಪ್ರಸರಣ ತಂತ್ರವೆಲ್ಲ ನಿಂತಿರುವುದು ಆಡುವ ಮಾತಿನ ಶಕ್ತಿಯ ಮೇಲೆ. ಅದನ್ನು ಎಲ್ಲ ಬಗೆಯಲ್ಲೂ ಉಪಯೋಗಿಸಿಕೊಂಡು ಸಾರ್ಥಕ ಪರಿಣಾಮ ಪಡೆಯುವ ಕೆಲಸ, ಸಂಶೋಧನೆ, ನಿರಂತರವಾಗಿ ನಡೆಯುತ್ತಿದೆ. ರೇಡಿಯೊ ಪ್ರಸಾರದಲ್ಲಿ ಶ್ರೋತೃ ಏನನ್ನೂ ಕಣ್ಣಿಂದ ನೋಡುವುದಿಲ್ಲ. ಏನಿದ್ದರೂ ಆತ ಕೇವಲ ಕಿವಿಯಿಂದ ಕೇಳಬಲ್ಲ. ಪಂಚೇಂದ್ರಿಯಗಳ ಎಲ್ಲ ಅನುಭವವೂ ಆತನಿಗೆ ಶ್ರವಣೇಂದ್ರಿಯದ ಮೂಲಕವೇ ನಡೆಯಬೇಕು. ಅದಕ್ಕಾಗಿ ಪ್ರಸರಣ ಸಾಹಿತ್ಯಕ್ಕೇ ಬೇರೊಂದು ನಿರೂಪಣ ಕ್ರಮ ಅಗತ್ಯ. ಅದನ್ನು ಈಚೆಗೆ ಒಂದು ಶಾಸ್ತ್ರವನ್ನಾಗಿ, ಒಂದು ಪ್ರತ್ಯೇಕ ಕಲಾಪ್ರಕಾರವಾಗಿ ಬೆಳೆಸಲಾಗಿದೆ.

**ಪ್ರಸರಣ ವಿಧಾನ :** ಇಲ್ಲಿ ಇದರ ಸ್ಥೂಲ ಪರಿಚಯ ಕೊಟ್ಟಿದೆ. ಕಾರ್ಯಕ್ರಮಗಳೆಲ್ಲ ಸಾಮಾನ್ಯವಾಗಿ ಸ್ಟುಡಿಯೊಗಳಲ್ಲಿ ನಡೆಯುತ್ತವೆ. ಸ್ಟುಡಿಯೊ ಒಂದು ಸುಸಜ್ಜಿತ ಶಬ್ದ ಅವಾಹಕ ಕೊಠಡಿ. ಕಲಾವಿದ ಮೈಕ್ರೊಫೋನಿನ (ಶಬ್ದವರ್ಧಕ; ಮೈಕ್) ಮುಂದೆ ನಿಂತು ಹಾಡುತ್ತಾನೆ, ಮಾತನಾಡುತ್ತಾನೆ. ಆ ಶಬ್ದ ಅನಂತರ ನಿಯಂತ್ರಣ ಕೊಠಡಿಗೆ (ಕಂಟ್ರೋಲ್ ರೂಂ) ಹೋಗುತ್ತದೆ. ಅಲ್ಲಿ ಶಬ್ದದ ಏರಿಳಿತವನ್ನು ಸರಿಪಡಿಸಿ, ಕಲಾವಿದನ ಸಹಜವಾದ ಸ್ವರ ನಿಲ್ಲುವಂತೆ ಮಾಡುತ್ತಾರೆ. ಅನಂತರ ಕಾರ್ಯಕ್ರಮ ನೇರವಾಗಿ ಪ್ರಸರಣಕೇಂದ್ರಕ್ಕೆ (ಟ್ರಾನ್ಸ್‌ಮಿಟಿಂಗ್ ಸ್ಟೇಷನ್) ಹೋಗುತ್ತದೆ. ಅಲ್ಲಿ ಶಬ್ದ ನಿಯತ ವಿದ್ಯುತ್ ತರಂಗ ಮಾನವನ್ನು ಪಡೆದು ಪ್ರಸಾರವಾಗುತ್ತದೆ. ಇದು ಸಾಮಾನ್ಯವಾಗಿ ರೂಢಿಯಲ್ಲಿರುವ ಕ್ರಮ. ವಿಶೇಷವಾದ ಸಮಾರಂಭಗಳಾದಾಗ ಪ್ರಸರಣ ಸಂಸ್ಥೆ ಸ್ಥಳಕ್ಕೇ ತಮ್ಮ ಮೈಕ್ ಮೊದಲಾದ ಸಾಧನಗಳನ್ನು ಒಯ್ದು ಅಲ್ಲಿಂದ ನೇರ ಕಾರ್ಯಕ್ರಮಗಳನ್ನು ಕಾಂತೀಯ ಪಟ್ಟಿಗಳ ಮೇಲೆ ಮುದ್ರಿಸಿಕೊಂಡು (ಧ್ವನಿಮುದ್ರಣವೆಂದು ಕರೆಯುತ್ತಾರೆ) ಯುಕ್ತ ಕಾಲದಲ್ಲಿ ಅವುಗಳ ಮರು ಪ್ರಸಾರ ಮಾಡುವ ವಿಧಾನ ಈಗ ಹೆಚ್ಚು ಬಳಕೆಯಲ್ಲಿದೆ.

**ಆಡಳಿತ ವ್ಯವಸ್ಥೆ :** ಪ್ರಸಾರಣ ಖಾಸಗಿ ವ್ಯಾಪಾರಿ ಸಂಸ್ಥೆಯಾದಲ್ಲಿ ಅಂಥವುಗಳ ಧ್ಯೇಯ ಧೋರಣೆಗಳಲ್ಲಿ ವ್ಯತ್ಯಾಸ ಕಂಡುಬರುವುದು ಸಹಜ. ಪ್ರಸಾರ ಮಾಧ್ಯಮಗಳಲ್ಲಿ ಅತಿ ಶಕ್ತಿಯುತವಾದ ಆಕಾಶವಾಣಿ ಪೂರ್ಣ ಖಾಸಗಿಯಾದಲ್ಲಿ ಅನೇಕ ವೇಳೆ ಸರ್ಕಾರದ ರೀತಿನೀತಿಗಳಿಗೆ ಧಕ್ಕೆ ಬರಬಹುದು; ಅದು ಸರ್ಕಾರದ ವಿರುದ್ಧ ರಾಜಕೀಯ ಚಳವಳಿಗಳ ವೇದಿಕೆಯಾಗಬಹುದು; ಜನಜೀವನವನ್ನು ಕಲಕಿ ಉದ್ರಿಕ್ತಗೊಳಿಸುವ ಕೆಲಸ ಅಲ್ಲಿಂದ ಸುಲಭವಾಗಿ ನಡೆಯಬಹುದು. ಸರ್ಕಾರ ನಿರಂಕುಶವಾಗಿದ್ದು ಅದು ಪೂರ್ಣ ಸರ್ಕಾರೀ ಸಂಸ್ಥೆಯಾದಲ್ಲಿ ಆಡಳಿತದ ಧೋರಣೆಯೊಂದು ಹೊರತು ಬೇರಾವುದಕ್ಕೂ ಅಲ್ಲಿ ಸ್ಥಳ ಸಿಗದಿರಬಹುದು. ಈ ಎರಡು ಅತಿರೇಕಗಳನ್ನೂ ತಪ್ಪಿಸಲು ಅನೇಕ ರೀತಿಯ ಪ್ರಯತ್ನ ನಡೆದಿದೆ. ಮುಖ್ಯವಾಗಿ ಎಲ್ಲ ಖಾಸಗಿ ಸಂಸ್ಥೆಗಳ ಮೇಲೂ ಸರ್ಕಾರ ಅವಶ್ಯವಿದ್ದಷ್ಟು ಹತೋಟಿಯನ್ನಿಟ್ಟುಕೊಂಡಿದೆ. (ಅಮೆರಿಕ). ಅದಿಲ್ಲದಲ್ಲಿ ಸರ್ಕಾರ ತನ್ನ ಪರವಾಗಿ ಒಂದು ಸಮಿತಿಯನ್ನು ರಚಿಸಿ ಪ್ರಸಾರಣವನ್ನು ಅದರ ವಶಕ್ಕೆ ಕೊಟ್ಟಿದೆ (ಬ್ರಿಟನ್). ಪ್ರಜಾಪ್ರಭುತ್ವರಾಷ್ಟ್ರ ಪ್ರಸಾರಣವನ್ನು ತನ್ನ ವಶಕ್ಕೆ ಇಟ್ಟುಕೊಂಡಿರುವುದೂ ಉಂಟು (ಭಾರತ). ಆದರೆ ಇಲ್ಲಿ ನಿಯಮಗಳು ವಿಶೇಷ ಬಿಗಿಯಾಗಿರುವುದಿಲ್ಲ. ಪ್ರಚಾರ (ಪಬ್ಲಿಸಿಟಿ) ಮಾಧ್ಯಮಗಳಲ್ಲಿ ಪ್ರಮುಖವಾದ ಪ್ರಸರಣ ಮಾಧ್ಯಮಗಳನ್ನು ಸಮಾಜವಾದಿ ರಾಷ್ಟ್ರಗಳು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿಯೇ ಇಟ್ಟುಕೊಂಡಿರುವುದುಂಟು (ರಷ್ಯ, ಚೀನ). ಒಳ ಆಡಳಿತ ವಿಚಾರದಲ್ಲಿ ಒಂದೊಂದು ಸಂಸ್ಥೆಯೂ ಸಾಮಾನ್ಯವಾಗಿ ಸರಿಯಾದ ಆಡಳಿತಕ್ಕೆ ಬೇಕಾಗುವ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಂಡಿರುತ್ತದಾದರೂ ಕಾರ್ಯಕ್ರಮ ವಿಭಾಗ, ತಾಂತ್ರಿಕ ವಿಭಾಗಗಳು ಕೆಲವು ಸಂಸ್ಥೆಗಳಲ್ಲಿ ಒಂದೇ ಆಡಳಿತಕ್ಕೆ ಒಳಪಟ್ಟಿರುವುದುಂಟು. ಕೆಲವು ಸಂಸ್ಥೆಗಳಲ್ಲಿ ಅವಕ್ಕೆ ಪ್ರತ್ಯೇಕ ಆಡಳಿತವಿದ್ದು ತಾಂತ್ರಿಕ ವಿಭಾಗ ಸರ್ಕಾರದ ಆಡಳಿತದಲ್ಲಿರುವುದುಂಟು.

ಆಡಳಿತ ವ್ಯವಸ್ಥೆ ಯಾವ ಮಾದರಿಯದೇ ಆಗಿರಲಿ ಪ್ರಸರಣದ ಪ್ರಥಮೋದ್ದೇಶ ಸಾಧನೆಯಾಗುವಂತಿರಬೇಕಾದ್ದು ಮುಖ್ಯ. ಶ್ರವಣ ಹಾಗೂ ದೃಶ್ಯ ಮಾಧ್ಯಮವನ್ನು ಬಳಸಿಕೊಂಡು ಜನತೆಯ ಅಭಿರುಚಿಗಳನ್ನು ತಿದ್ದಿ ಅದಕ್ಕೆ ಅಗತ್ಯವಾದ ಜ್ಞಾನ, ಸಾಹಿತ್ಯ, ಮನರಂಜನೆಗಳನ್ನು ಒದಗಿಸುವುದೇ ಪ್ರಸರಣದ ಮುಖ್ಯ ಧ್ಯೇಯ. ಇದು ಜನಸಾಮಾನ್ಯರಿಗೆ, ಬಹುಜನಕ್ಕೆ ಒದಗುವಂತಿರಬೇಕು. ಬಹುಜನಹಿತಾಯ, ಬಹುಜನಸುಖಾಯ ಎಂಬುದು ಭಾರತದ ಪ್ರಸರಣ ಸಂಸ್ಥೆಯ ಧ್ಯೇಯ. ಇಲ್ಲಿ ಹಿತ ಎಂದರೆ ರುಚಿಕರವಾದ್ದು ಮಾತ್ರವಲ್ಲ, ದೇಹ ಮತ್ತು ಮನಸ್ಸನ್ನು ಪೋಷಿಸುವಂಥದೂ ಆಗಿರಬೇಕಾದ್ದು ಅಗತ್ಯ. ಇಲ್ಲಿ ಸುಖ ಎರಡನೆಯದು. ಅಷ್ಟೇ ವಿಶಿಷ್ಟಾರ್ಥವನ್ನುಳ್ಳದ್ದು. ಸಾಮಾನ್ಯ ಕಲ್ಪನೆಯಂತೆ ಹಿತ, ಸುಖಗಳ ದರ್ಜೆ, ಅಷ್ಟು ಮೇಲುಮಟ್ಟದ್ದಲ್ಲ. ಸುಖ ಮತ್ತು ಹಿತಗಳ ಮೌಲ್ಯಗಳನ್ನು ಅವುಗಳ ಅಂತಿಮ ಪರಿಣಾಮಗಳ ಯೋಗ್ಯತೆಯಿಂದ ಅಳೆಯಬೇಕಾಗುತ್ತದೆ. ಕಲಾಕ್ಷೇತ್ರಕ್ಕೆ ಕಾಲಿಡುವಾಗ ಇದರ ವಿವೇಚನೆ ಅಗತ್ಯವೆನಿಸುತ್ತದೆ. ಕಲೆಯಲ್ಲಿ ಉತ್ತಮ ಮಧ್ಯಮ ಅಧಮ ಎಂದು ವರ್ಗೀಕರಿಸುವುದು ಸುಲಭವಲ್ಲ. ಜನತೆಯಲ್ಲಿನ ಸದಭಿರುಚಿಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಹೊತ್ತಿರುವ ಪ್ರಸರಣ ಸಂಸ್ಥೆಗಳು ಆ ಕೆಲಸವನ್ನು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ.

**ಬಿಬಿಸಿ :** ಬ್ರಿಟನ್ನಿನ ಈ ಪ್ರಸಾರಸಂಸ್ಥೆ (ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್) ಹಿಂದೆ ತಿಳಿಸಿರುವಂತೆ 1927ರಲ್ಲಿ ಕಾರ್ಪೊರೇಷನ್ನಿನ ಆಡಳಿತಕ್ಕೊಳಪಟ್ಟಿತು. ಈ ಸಂಸ್ಥೆ ಯಾವ ಸರ್ಕಾರಿ ಅಥವಾ ವ್ಯಾಪಾರಿ ಧೋರಣೆಗೂ ಒಳಪಟ್ಟಿಲ್ಲ. ದೇಶೀಯ ಪ್ರಸಾರಕ್ಕೆ ರೇಡಿಯೊ ಲೈಸೆನ್ಸ್ ಹಣವನ್ನು ಬಳಸಲಾಗುತ್ತದೆ. ವಿದೇಶೀ ಕಾರ್ಯಕ್ರಮಕ್ಕೆ ಸಾರ್ವಜನಿಕ ಹಣಕಾಸಿನಿಂದ ಸಹಾಯ ಒದಗುತ್ತದೆ. ರೇಡಿಯೊ ಮತ್ತು ಟೆಲಿವಿಷನ್–ಎರಡು ಬಗೆಯ ಕಾರ್ಯಕ್ರಮಗಳನ್ನು ಬಿಬಿಸಿ 41 ಭಾಷೆಗಳಲ್ಲಿ ಪ್ರಸಾರಮಾಡುತ್ತದೆ. 1965ರಲ್ಲಿ ರೇಡಿಯೊ ಉಳ್ಳವರ ಸಂಖ್ಯೆ 2.75 ದಶಲಕ್ಷವಿದ್ದರೆ ರೇಡಿಯೊ ಟಿಲಿವಿಷನ್ ಲೈಸೆನ್ಸ್ ಉಳ್ಳವರ ಸಂಖ್ಯೆ 13.5 ದಶಲಕ್ಷವಿತ್ತು. ವಿದೇಶೀ ಪ್ರಸಾರಕ್ಕಾಗಿ 49 ಟ್ರಾನ್ಸ್‌ಮಿಟರ್‌ಗಳನ್ನು ಬಳಸಲಾಗಿದೆ. ಅವುಗಳಲ್ಲಿ ಮೂರು ಅತಿ ದೂರ ಪ್ರದೇಶಗಳಲ್ಲಿವೆ. ಮೂರು ಪ್ರಸಾರ ಜಾಲಗಳಿಂದ ವರ್ಷಕ್ಕೆ ಒಟ್ಟು 22,000 ಗಂಟೆಗಳ ಪ್ರಸಾರಕಾರ್ಯ ಬಿಬಿಸಿಯಿಂದ ನಡೆಯುತ್ತದೆ. 1965–66ರ ಲೆಕ್ಕದಂತೆ ಒಂದು ಗಂಟೆ ಪ್ರಸಾರಕ್ಕೆ ತಗಲುವ ಖರ್ಚು 730 ಪೌಂಡುಗಳು. ಶಾಲಾ ಕಾಲೇಜುಗಳಿಗಾಗಿ ಏರ್ಪಾಡಾಗುವ ಕಾರ್ಯಕ್ರಮ 32,000 ಸಂಸ್ಥೆಗಳಿಗೆ ಮುಟ್ಟುತ್ತದೆ. ಖಚಿತವಾದ ಸುದ್ದಿ ಸಮಾಚಾರಗಳು, ಶ್ರೇಷ್ಠ ಭಾಷಣಗಳು, ಉತ್ತಮ ಕಲೆ ಇವುಗಳನ್ನು ಪ್ರಸಾರಮಾಡಿ ಬಿಬಿಸಿ ಇಡೀ ಜಗತ್ತಿನಲ್ಲಿ ಮಹತ್ತರವಾದ ಸ್ಥಾನವನ್ನು ಗಳಿಸಿದೆ. 1954ರ ವರೆಗೂ ಬಿಬಿಸಿಯೇ ಟೆಲಿವಿಷನ್ ಭಾಗವನ್ನೂ ನೋಡಿಕೊಳ್ಳುತ್ತಿತ್ತು. ಅದೇ ವರ್ಷ ಆ ಭಾಗವನ್ನು ಪ್ರತ್ಯೇಕ ಸ್ವತಂತ್ರ ಸಂಸ್ಥೆಗೆ ವರ್ಗಾಯಿಸಲಾಯಿತು. ಜೊತೆಗೆ ವ್ಯಾಪಾರೀ ಟೆಲಿವಿಷನ್ ಭಾಗವನ್ನು ತೆರೆಯಲಾಯಿತು.

ಇತರ ಪ್ರಮುಖ ಆಕಾಶವಾಣಿ ಸಂಸ್ಥೆಗಳು: ರೇಡಿಯೊ ಗ್ರಾಹಕಗಳ ಉತ್ಪಾದನೆ ಹೆಚ್ಚಿದಂತೆಲ್ಲ, ಅದರಲ್ಲೂ ಒಡನೊಯ್ಯಬಹುದಾದ ಟ್ರಾನ್ಸಿಸ್ಟರ್ ಗ್ರಾಹಕಗಳು ಬಂದಮೇಲೆ ಪ್ರಸರಣಕಾರ್ಯ ಪ್ರಪಂಚದಲ್ಲಿ ಬಹು ವಿಸ್ತಾರಗೊಂಡಿದೆ. ಪ್ರಪಂಚದಲ್ಲಿ 490 ದಶಲಕ್ಷ ಗ್ರಾಹಕಗಳು ಬಳಕೆಯಲ್ಲಿವೆ. ಆಫ್ರಿಕ ಮತ್ತು ಏಷ್ಯದಲ್ಲಿ ಪ್ರತಿ ನೂರು ಮಂದಿಗೆ ಸುಮಾರು 5; ಅಮೆರಿಕ, ಯುರೋಪು, ರಷ್ಯಗಳಲ್ಲಿ 10 ರಿಂದ 73. ಸಮಸಮನಾಗಿ ಟ್ರಾನ್ಸ್‌ಮಿಟರ್‌ಗಳ ಸಂಖ್ಯೆಯೂ ಏರಿದೆ. ಆಫ್ರಿಕದಲ್ಲಿ 140 (1950) ಇದ್ದದ್ದು 870 ಕ್ಕೆ (1960) ಏರಿದೆ. ಅದೇ ಸಮಯದಲ್ಲಿ ಯುರೋಪಿನಲ್ಲಿ 566 ರಿಂದ 1270ಕ್ಕೆ ಏರಿದೆ. ರಷ್ಯದಲ್ಲಿ ಆ ಸಂಖ್ಯೆ ನಾಲ್ಕರಷ್ಟಾಗಿದೆ.

ತಾಂತ್ರಿಕವಾಗಿ ಬಹಳ ಸುಧಾರಣೆಗಳಾಗಿವೆಯಾಗಿ ದೇಶೀಯ ಮತ್ತು ವಿದೇಶೀಯ ಪ್ರಸಾರಗಳಲ್ಲಿದ್ದ ಸಂದಿಗ್ಧತೆ ತಪ್ಪಿದೆ. ಕಮ್ಯೂನಿಕೇಷನ್ ಸ್ಯಾಟಲೈಟುಗಳು ಬಂದುದರಿಂದ ಪ್ರಸರಣ ಮತ್ತು ಟೆಲಿವಿಷನ್ ಕಾರ್ಯಕ್ರಮಗಳು ಅಂತರಿಕ್ಷ ಯುಗಕ್ಕೆ ಪದಾರ್ಪಣ ಮಾಡಿವೆ.

ಟೆಲಿವಿಷನ್ ಕ್ಷೇತ್ರವೂ ದೈತ್ಯಾಕಾರದಲ್ಲಿ ಬೆಳೆದಿದೆ. 1950ರಲ್ಲಿ 11,000,000 ಇದ್ದ ಗ್ರಾಹಕಗಳ ಸಂಖ್ಯೆ 1960ರ ಹೊತ್ತಿಗೆ 160,000,000 ಕ್ಕೆ ಏರಿದೆ. ಇದರ ಪ್ರಮಾಣ ಉತ್ತರ ಅಮೆರಿಕದಲ್ಲಿ ನೂರಕ್ಕೆ 24.5, ಆದರೆ ಆಫ್ರಿಕದಲ್ಲಿ 0.05. ಅದೇ ಸಮಯದಲ್ಲಿ ಟ್ರಾನ್ಸ್‌ಮಿಟರುಗಳ ಸಂಖ್ಯೆ 130 ರಿಂದ 2,380 ಕ್ಕೆ ಏರಿದೆ.

ಅಂತಾರಾಷ್ಟ್ರೀಯವಾಗಿ ಕಾರ್ಯಕ್ರಮ ಸಹಕಾರ ಹೇರಳವಾಗಿ ಬೆಳೆದಿದೆ. ಸಂಪರ್ಕ ಸಾಧನೋಪಗ್ರಹಗಳಿಂದ (ಕಮ್ಯೂನಿಕೇಷನ್ಸ್ ಸ್ಯಾಟಲೈಟ್) ಖಂಡಾಂತರವಾಗಿ ಮಾತು ಮತ್ತು ಚಿತ್ರಗಳನ್ನು ರವಾನಿಸಲಾಗುತ್ತಿದೆ. ಅಂಥ ಮೊದಲ ಸಾಹಸ ಕಲೆ ಪಟ್ಟಣದಿಂದ ಬಿಬಿಸಿ ಪ್ರಸಾರಮಾಡಿದ ಕಾರ್ಯಕ್ರಮದಲ್ಲಿ ಕಾಣುತ್ತದೆ (1950). 1962ರಲ್ಲಿ ಯುರೋಪಿನಿಂದ ಉತ್ತರ ಅಮೆರಿಕಕ್ಕೆ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಯಿತು. ಉಪಗ್ರಹಗಳಿಂದ ಜಪಾನ್, ಯುರೋಪುಗಳ ಮಧ್ಯೆ ಟೆಲಿವಿಷನ್ ಕಾರ್ಯಕ್ರಮ ಪ್ರಸರಣ ಯಶಸ್ವಿಯಾಗಿದೆ.

**ಉತ್ತರ ಅಮೆರಿಕ:** ಸಂಯುಕ್ತ ಸಂಸ್ಥಾನಗಳಲ್ಲಿ ಈಗ ನಾಲ್ಕು ಪ್ರಮುಖ ಸಂಸ್ಥೆಗಳು ಕೆಲಸ ಮಾಡುತ್ತಿದ್ದು ತೀರದಿಂದ ತೀರಕ್ಕೆ ಅವುಗಳ ಉಪಸಂಸ್ಥೆಗಳು ಹರಡಿವೆ. ಅಲ್ಲಿ ಈಗ 214 ಮಿಲಿಯನ್ ರೇಡಿಯೊ ಗ್ರಾಹಕಗಳು 65 ಮಿಲಿಯನ್ ಟೆಲಿವಿಷನ್ ಗ್ರಾಹಕಗಳು ಬಳಕೆಯಲ್ಲಿ ಇವೆ. ಹೊರ ದೇಶಗಳ ಪ್ರಸರಣವನ್ನು ವಾರ್ತಾ ಇಲಾಖೆ ತನ್ನ ವಾಯ್ಸ್ ಆಫ್ ಅಮೆರಿಕ ವಿಭಾಗದಿಂದ 37 ಭಾಷೆಗಳಲ್ಲಿ ನಡೆಸುತ್ತಿದೆ. ವರ್ಣರಂಜಿತ ಚಿತ್ರಪ್ರಸರಣ ಪ್ರಾರಂಭವಾದದ್ದು 1953ರಲ್ಲಿ. ಈಗ ವರ್ಷದಲ್ಲಿ 5,000 ಗಂಟೆಗಳ ಕಾರ್ಯಕ್ರಮ ಪ್ರಸಾರವಾಗುತ್ತಿದೆ. 4 ದಶಲಕ್ಷ ಗ್ರಾಹಕಗಳು ಬಳಕೆಯಲ್ಲಿವೆ. ಕೆನಡದಲ್ಲಿ ಈ ಉದ್ಯಮ ಸರ್ಕಾರಿ ಹಾಗೂ ಖಾಸಗಿ ಆಡಳಿತವನ್ನು ಹೊಂದಿದೆ.

**ರಷ್ಯ :** ರೇಡಿಯೊ ಮತ್ತು ಟೆಲಿವಿಷನ್ ಭಾಗಗಳು ಮಂತ್ರಿಮಂಡಲದ ವಾರ್ತಾ ಇಲಾಖೆಗೆ ಸೇರಿವೆ. ವಾರದಲ್ಲಿ 1,344 ಗಂಟೆಗಳಷ್ಟು ಕಾರ್ಯಕ್ರಮವನ್ನು ವಿದೇಶಿ ಶ್ರೋತೃಗಳಿಗೆ ಒದಗಿಸಲಾಗುತ್ತಿದೆ. ಇದು ಪ್ರಪಂಚದಲ್ಲಿ ಅತಿ ದೊಡ್ಡ ಪ್ರಮಾಣದ ಕಾರ್ಯಕ್ರಮ. ಚೀನ ಇದರಲ್ಲಿ ಎರಡನೆಯದು. ಅನಂತರ ವಾಯ್ಸ್ ಆಫ್ ಅಮೆರಿಕ ಮತ್ತು ಬಿಬಿಸಿಗಳು ಬರುತ್ತವೆ. ರಷ್ಯದಲ್ಲಿ ವೈರ್‌ಲೆಸ್ (ನಿಸ್ತಂತು) ಗ್ರಾಹಕಗಳಿಗಿಂತ ವೈರ್ಡ್ (ಸತಂತು) ಗ್ರಾಹಕಗಳೇ ಹೆಚ್ಚು ಬಳಕೆಯಲ್ಲಿವೆ. ಅವುಗಳ ಪ್ರಮಾಣ 2:1. 1950 ರಿಂದ ಈಚೆಗೆ ಗ್ರಾಹಕಗಳ ಸಂಖ್ಯೆ 13 ಮಿಲಿಯನ್ ನಿಂದ 54 ಮಿಲಿಯನ್‌ಗೆ ಏರಿದೆ. ಟ್ರಾನ್ಸ್‌ಮಿಟರುಗಳ ಸಂಖ್ಯೆ 100 ರಿಂದ 400 ಕ್ಕೆ ಏರಿದೆ. 1960ರಲ್ಲಿ ರಷ್ಯದ ಟೆಲಿವಿಷನ್ ಗ್ರಾಹಕಗಳ ಸಂಖ್ಯೆ 20 ಮಿಲಿಯನ್.

**ಜಪಾನ್ ಮತ್ತು ಚೀನ :** ಲೈಸೆನ್ಸ್ ತೆರಿಗೆಯಿಂದ ನಡೆಯುವ ಜಪಾನ್ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್ ಅಲ್ಲದೆ ಜಪಾನಿನಲ್ಲಿ ಇತರ ವ್ಯಾಪಾರೀ ಪ್ರಸರಣ ಸಂಸ್ಥೆಗಳೂ ಇವೆ. ಚೀನದಲ್ಲಿ ಪ್ರಸಾರ ಸಂಪೂರ್ಣ ಸರ್ಕಾರೀ ಸಂಸ್ಥೆ. ಅಲ್ಲಿನ ಟೆಲಿವಿಷನ್ ಗ್ರಾಹಕಗಳೆಲ್ಲ ಕಾರ್ಮಿಕ ಸಭಾಭವನಗಳಲ್ಲಿವೆ.

**ಭಾರತ :** ದಿ ಇಂಡಿಯನ್ ಬ್ರಾಡ್‌ಕ್ಯಾಸ್ಟಿಂಗ್ ಕಂಪನಿ ಎಂಬ ಖಾಸಗಿಸಂಸ್ಥೆ ಮೊಟ್ಟ ಮೊದಲಿಗೆ ಸುವ್ಯವಸ್ಥಿತವಾದ ಪ್ರಸರಣವನ್ನು 1927 ರಲ್ಲಿ ಬೊಂಬಾಯಿ ಮತ್ತು ಕಲ್ಕತ್ತಗಳಲ್ಲಿ ಪ್ರಾರಂಭಿಸಿತು. ಕಾರಣಾಂತರಗಳಿಂದ ಇದು ಹೆಚ್ಚು ಕಾಲ ನಡೆಯಲಿಲ್ಲ. 1930 ರಲ್ಲಿ ಸಂಸ್ಥೆ ದಿವಾಳಿಯಾಯಿತು. ರೇಡಿಯೋ ಗ್ರಾಹಕಗಳ ಮಾಲೀಕರೂ ಮಾರಾಟಗಾರರೂ ಮಾಡಿದ ಒತ್ತಾಯದ ಫಲವಾಗಿ ಸರ್ಕಾರ ಈ ಕೆಲಸವನ್ನು ಪ್ರಾಯೋಗಿಕವಾಗಿ ಕೆಲಕಾಲ ಮಾಡಿ ನೋಡಲು ನಿರ್ಧರಿಸಿತು. ವಾಣಿಜ್ಯ ಮತ್ತು ಕಾರ್ಮಿಕ ಮಂತ್ರಿಮಂಡಲದ ಅಂಗವಾಗಿ ಪ್ರಸರಣ ಕಾರ್ಯಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯಲಾಯಿತು. ಇಂಡಿಯನ್ ಸ್ಟೇಟ್ ಬ್ರಾಡ್‌ಕಾಸ್ಟಿಂಗ್ ಸರ್ವಿಸ್ ಎಂದಿದ್ದ ಸಂಸ್ಥೆಯ ಹೆಸರನ್ನು 1936ರಲ್ಲಿ ಆಲ್ ಇಂಡಿಯ ರೇಡಿಯೊ ಎಂದು ಬದಲಾಯಿಸಲಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಸಂಸ್ಥೆ ಬಡಾವಣೆ ಹೊಂದಿತು. 1940ರ ಹೊತ್ತಿಗೆ ಒಂಬತ್ತು ಪ್ರಸಾರ ಕೇಂದ್ರಗಳು ಇದ್ದುವು. 1947ರ ವಿಭಜನೆಯ ಹೊತ್ತಿಗೆ ಭಾರತಕ್ಕೆ ಉಳಿದದ್ದು ಆರು ಕೇಂದ್ರಗಳು ಮಾತ್ರ: ದೆಹಲಿ, ಬೊಂಬಾಯಿ, ಕಲ್ಕತ್ತ, ಮದರಾಸ್, ಲಕ್ನೊ, ತಿರುಚಿನಾಪಳ್ಳಿ.

ಆಕಾಶವಾಣಿ ಮತ್ತು ದೂರದರ್ಶನಗಳು ಈಗ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲ, ಪ್ರಸಾರಭಾರತಿ ಎಂಬ ಸ್ವಾಯತ್ತ ಸಂಸ್ಥೆಯ ಅಧೀನದಲ್ಲಿ ಇವು ಕೆಲಸ ನಿರ್ವಹಿಸುತ್ತವೆ. ಕೇಂದ್ರ ಸರ್ಕಾರದ ಹತೋಟಿಯಿಂದ ಈ ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು ಮುಕ್ತಗೊಳಿಸಿ ಅವು ಸ್ವತಂತ್ರವಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಂತೆ ಮಾಡುವ ಉದ್ದೇಶದಿಂದ ಭಾರತ ಸರ್ಕಾರ 1997ರ ನವೆಂಬರ್ ತಿಂಗಳಿನಲ್ಲಿ 'ಪ್ರಸಾರ ಭಾರತಿ' ಎಂಬ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿತು. ಅಧ್ಯಕ್ಷರು, ಕಾರ್ಯನಿರ್ವಾಹಕ ಅಧಿಕಾರಿ, ಹತ್ತು ಸದಸ್ಯರು, ವಾರ್ತಾ ಮತ್ತು ಪ್ರಸಾರ ಮಂತ್ರಾಲಯದ ಪ್ರತಿನಿಧಿ ಹಾಗೂ ಆಕಾಶವಾಣಿ ಮತ್ತು ದೂರದರ್ಶನಗಳ ಸಿಬ್ಬಂದಿ ವರ್ಗದ ಇಬ್ಬರು ಪ್ರತಿನಿಧಿಗಳನ್ನೊಳಗೊಂಡ ಪ್ರಸಾರಭಾರತಿ ಮಂಡಳಿ ಈ ಎರಡೂ ಇಲೆಕ್ಟ್ರಾನಿಕ್ ಮಾಧ್ಯಮಗಳ ಜವಾಬ್ದಾರಿ ಹೊತ್ತಿದೆ.

ಆಕಾಶವಾಣಿ ಅತ್ಯಂತ ವ್ಯಾಪಕವಾದ ಪ್ರಸಾರಜಾಲವನ್ನು ಹೊಂದಿರುವ ಪ್ರಪಂಚದ ಬೃಹತ್ ಸಂಸ್ಥೆಗಳಲ್ಲೊಂದು. ಭಾರತದಲ್ಲಿ 77 ಸ್ಥಳೀಯ ರೇಡಿಯೋ ಕೇಂದ್ರಗಳು, 114 ಪ್ರಾದೇಶಿಕ ಕೇಂದ್ರಗಳು, 14 ಮರುಪ್ರಸಾರಕೇಂದ್ರಗಳು, ವಿವಿಧ ಭಾರತಿ ಮತ್ತು ಸಮುದಾಯ ಕೇಂದ್ರಗಳು ಸೇರಿದಂತೆ ಒಟ್ಟು 213 ರೇಡಿಯೋ ಸ್ಟೇಷನ್‌ಗಳಿವೆ. 335 ಪ್ರೇಷಕಗಳಿವೆ. ದೇಶದ ಒಟ್ಟು ವಿಸ್ತೀರ್ಣದ ಶೇ. 91.37 ಭಾಗವನ್ನು, ಒಟ್ಟು ಜನಸಂಖ್ಯೆಯ ಶೇ. 99.13 ಭಾಗವನ್ನು ಆಕಾಶವಾಣಿಯ ಕಾರ್ಯಕ್ರಮಗಳು ಮುಟ್ಟುತ್ತವೆ. 10ಎಫ್‌ಎಮ್ ಮೆಟ್ರೋ ಕೇಂದ್ರಗಳಿವೆ. 22 ಭಾಷೆಗಳಲ್ಲಿ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ವಿದೇಶಗಳಿಗೆ ಪ್ರಸಾರವಾಗುವ ಕಾರ್ಯಕ್ರಮಗಳು 10 ಭಾರತೀಯ ಭಾಷೆ ಹಾಗೂ 16 ವಿದೇಶಿ ಭಾಷೆಗಳು ಸೇರಿದಂತೆ ಒಟ್ಟು 26 ಭಾಷೆಗಳಲ್ಲಿ ಪ್ರಸಾರವಾಗುತ್ತವೆ. ಭಾರತದಲ್ಲಿ 2001ರ ಜನಗಣತಿಯಂತೆ 13.2 ಕೋಟಿ ರೇಡಿಯೊ ಸೆಟ್‌ಗಳಿದ್ದು ಪ್ರತಿದಿನ ಸರಾಸರಿ 31ಕೋಟಿ ಜನ ಆಕಾಶವಾಣಿಯ ಕಾರ್ಯಕ್ರಮಗಳನ್ನು ಕೇಳುತ್ತಾರೆ. ಕಾರ್ಯಕ್ರಮ ಸಿದ್ಧಪಡಿಸುವ ಸಿಬ್ಬಂದಿಯ ತರಬೇತಿಗಾಗಿ ದೇಶದ ವಿವಿಧ ಭಾಗಗಳಲ್ಲಿ ಏಳು ಸಿಬ್ಬಂದಿ ತರಬೇತಿ ಕೇಂದ್ರಗಳಿವೆ.

ಭಾರತದ ಜನತೆಗೆ ಸಂಪೂರ್ಣವಾದ ಮನರಂಜನೆಯನ್ನು ಒದಗಿಸಲು ಆಕಾಶವಾಣಿಯು 1957ರಲ್ಲಿ ವಿವಿಧ ಭಾರತಿ ಪ್ರಸಾರ ಸೇವೆಯನ್ನು ಆರಂಭಿಸಿತು. ಇಂದು ದೇಶಾದ್ಯಂತ 40 ವಿವಿಧ ಭಾರತಿ ಕೇಂದ್ರಗಳು ಕೆಲಸ ಮಾಡುತ್ತಿವೆ. ಇವುಗಳಲ್ಲಿ 25 ಕೇಂದ್ರಗಳು ಅತ್ಯಾಧುನಿಕವಾದ ಎಫ್‌ಎಂ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿವೆ. 1967ರಿಂದ ವಾಣಿಜ್ಯ ಪ್ರಸಾರ ಸೇವೆಯೂ ಪ್ರಾರಂಭವಾಗಿದೆ.

ಆಕಾಶವಾಣಿ ಪ್ರತಿದಿನವೂ 81 ಭಾಷೆ ಮತ್ತು ಉಪಭಾಷೆಗಳಲ್ಲಿ (ಡಯಲೆಕ್ಟ್) 362 ಬಾರಿ ವಾರ್ತೆಗಳನ್ನು ಪ್ರಸಾರ ಮಾಡುತ್ತದೆ. ಇದರಲ್ಲಿ 84 ಬಾರಿ ರಾಷ್ಟ್ರೀಯಮಟ್ಟದಲ್ಲಿ ಹಾಗೂ 220 ಬಾರಿ ಪ್ರಾದೇಶಿಕ ಮಟ್ಟದಲ್ಲಿ ವಾರ್ತೆಗಳು ಪ್ರಸಾರವಾಗುತ್ತವೆ. ವಿದೇಶೀ ಸೇವೆಯಲ್ಲಿ ವಿವಿಧ ಭಾಷೆಯಲ್ಲಿ 58 ಬಾರಿ ವಾರ್ತೆಗಳು ಪ್ರಸಾರವಾಗುತ್ತವೆ.

**ಟೆಲಿವಿಷನ್:** 1959ರಲ್ಲಿ ಪ್ರಾಯೋಗಿಕವಾಗಿ ಏರ್ಪಾಟಾದ ಟೆಲಿವಿಷನ್ ಕೇಂದ್ರ ವಾರಕ್ಕೆ 21 ಗಂಟೆ ಪ್ರಸರಣ ಕೆಲಸಮಾಡುತ್ತಿದೆ. ವೀಕ್ಷಕರ ಸಂಘಗಳು 217 ಇವೆ. ದೆಹಲಿಯಲ್ಲಿನ ಸಾಮೂಹಿಕ ವೀಕ್ಷಕರ ಕೇಂದ್ರಗಳು 1967 ರಲ್ಲಿ 297ಕ್ಕೆ ಏರಿದೆ. ಅಲ್ಲದೆ 548 ಶಾಲೆಗಳಲ್ಲಿ

ಗ್ರಾಹಕಗಳನ್ನು ಅಳವಡಿಸಲಾಗಿದೆ. 5212 ಗೃಹಗಳಲ್ಲಿ ಗ್ರಾಹಕಗಳಿವೆ. ಮುಂಬಯಿನಲ್ಲೂ ಟೆಲಿವಿಷನ್ ಗ್ರಾಹಕಗಳ ಕಾರ್ಖಾನೆಯೊಂದು ಸ್ಥಾಪಿತವಾಗಿದ್ದು ಅದರಿಂದ ವರ್ಷಂಪ್ರತಿ 1000 ಗ್ರಾಹಕಗಳು ಸಿದ್ಧವಾಗುವ ನಿರೀಕ್ಷೆ ಇದೆ (1969).

**ಕರ್ನಾಟಕದಲ್ಲಿ ಆಕಾಶವಾಣಿ**

**ಎಫ್.ಎಂ.ಕೇಂದ್ರಗಳು :** ಏಳನೆಯ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಅನುಮೋದನೆ ಪಡೆದ ಎಫ್. ಎಂ ಕೇಂದ್ರಗಳ ಪೈಕಿ ಏಳು ಕೇಂದ್ರಗಳು ಕರ್ನಾಟಕ ರಾಜ್ಯಕ್ಕೆ ಸಂದವು. ಏಳೂ ಕೇಂದ್ರಗಳು ಏಕ ಕಾಲಕ್ಕೆ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿದರೂ ಕ್ರಮೇಣ ಒಂದೊಂದೇ ಕೇಂದ್ರಗಳು ಅಸ್ತಿತ್ವಕ್ಕೆ ಬಂದವು. ಅವುಗಳ ಪೈಕಿ ಶೀಘ್ರದಲ್ಲಿ ಪ್ರಸಾರ ಕಾರ್ಯ ಆರಂಭಿಸಿದ ಕೇಂದ್ರಗಳೆಂದರೆ ಹಾಸನ ಹಾಗೂ ಚಿತ್ರದುರ್ಗ.

ಈ ಏಳೂ ಎಫ್.ಎಂ. ಕಂಪನಾಂಕದ ನಿಯಮಗಳಾದರೂ ಅವುಗಳ ಪೈಕಿ ಹಾಸನ ಹಾಗೂ ಮಡಿಕೇರಿ ಸ್ಥಳೀಯವಲ್ಲದ ನಿಲಯಗಳೆಂದೂ ಚಿತ್ರದುರ್ಗ ಹೊಸಪೇಟೆ, ಕಾರವಾರ, ರಾಯಚೂರು ಹಾಗೂ ಬಿಜಾಪುರದ ಕೇಂದ್ರಗಳನ್ನು ಸ್ಥಳೀಯ ಬಾನುಲಿ ಕೇಂದ್ರಗಳೆಂದೂ ಕರೆಯಲ್ಪಟ್ಟವು. ಸ್ಥಳೀಯ ಕೇಂದ್ರಗಳಿಗೆ ಕೆಲವು ವಿನಾಯತಿಗಳನ್ನು ನಕ್ಷೆಯಲ್ಲಿ ತೋರಿದರೂ ಕಾರ್ಯನಿರ್ವಹಣೆಯಲ್ಲಿ ಆ ವಿನಾಯತಿಗಳು ಅಷ್ಟಾಗಿ ಕಂಡುಬರಲಿಲ್ಲ. ದೆಹಲಿ ಕಾರ್ಯಕ್ರಮಗಳ ಮರುಪ್ರಸಾರ ಕಡ್ಡಾಯವಲ್ಲವೆಂದು ಘೋಷಿಸಿದರೂ, ಕ್ರಮೇಣ ಸ್ಥಳೀಯ ಬಾನುಲಿ ಕೇಂದ್ರಗಳು ಇತರ ಕೇಂದ್ರಗಳಂತೆಯೇ ಕಾರ್ಯನಿರ್ವಹಿಸುವಂತಾಯಿತು. ಈ ಎಲ್ಲಾ ಕೇಂದ್ರಗಳು ಮಧ್ಯಾಹ್ನ ಮೂರು ಘಂಟೆಯಿಂದ ಐದು ಘಂಟೆಯವರೆಗೆ ವಿವಿಧ ಭಾರತೀಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. ಬೆಂಗಳೂರು ನಿಲಯದ ಅನೇಕ ಕಾರ್ಯಕ್ರಮಗಳ ಮರುಪ್ರಸಾರ ಮಾಡುತ್ತಿವೆ. ಹೀಗಾಗಿ ಸ್ಥಳೀಯರಿಗೆ ಅವಕಾಶ, ಸ್ಥಳೀಯ ಸಂಸ್ಕೃತಿ, ಇತಿಹಾಸ ಹಾಗೂ ಕಲೆಗಳಿಗೇ ಹೆಚ್ಚು ಅವಕಾಶ. ಹೊರಗಿನ ಕಲಾವಿದರನ್ನು ಪ್ರೋತ್ಸಾಹಿಸದಿರುವುದು ಎಂಬ ತತ್ವಗಳ ನೆಲೆಯಲ್ಲಿಯೇ ಅನೇಕ ಬದಲಾವಣೆಯಾಗುತ್ತಿರುವುದು, ಸ್ಥಳೀಯವೆಂಬ ಮೂಲ ವ್ಯಾಖ್ಯೆಗೆ ಕುಂದು ಬರುವಂತಾಗಿದೆ.

ಆದಾಗ್ಯೂ ಸ್ಥಳೀಯ ಕೇಂದ್ರಗಳು ತಮ್ಮ ಇತಿಮಿತಿಗಳ ಮಧ್ಯೆಯೂ ಒಳ್ಳೆಯ ಕೆಲಸ ಮಾಡುತ್ತಿರುವುದು ಗಮನಾರ್ಹ.

**(i) ಆಕಾಶವಾಣಿ ಹಾಸನ :** ಹಾಸನವೆಂದರೆ ಎಲ್ಲರ ಮನಸ್ಸಿನಲ್ಲಿ ಮೂಡುವುದು ಅಲ್ಲಿನ ಶ್ರೀಮಂತ ಕಲಾ ಪರಂಪರೆ, ಇತಿಹಾಸ ಮತ್ತು ಸಂಸ್ಕೃತಿ. ಇಂತಹ ಸಮಷ್ಟಿಗೆ ಒಂದು ಅಭಿವ್ಯಕ್ತಿ ಮಾಧ್ಯಮದ ಅಗತ್ಯ ಹಿಂದಿನಿಂದಲೇ ಇತ್ತು. ಈ ಆಸೆ ಪೂರೈಸಿದ್ದು 4, ಮೇ 1944ರಂದು. ನಿಲಯವು ಕ್ರಿಯಾಶೀಲವಾದ ಬಹಳ ಅಲ್ಪ ದಿನಗಳಲ್ಲಿಯೇ ಜನಗಳ ಮನಗಳನ್ನು ಗೆದ್ದಿತು. ಇದು ಅಲ್ಲಿನ ಕಾರ್ಯಕ್ರಮಗಳ ಗುಣಮಟ್ಟಕ್ಕೆ ಸಾಕ್ಷಿ. ಸ್ಥಳೀಯ ಜನತೆಯ ಆಶೋತ್ತರಗಳಿಗನುಸಾರವಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಸ್ಥಳೀಯ ಕಾರ್ಯಕ್ರಮಗಳನ್ನು ಧ್ವನಿಮುದ್ರಿಸಿಕೊಂಡು, ಸ್ಥಳೀಯ ಪ್ರಮುಖ ಘಟನೆಗಳ ಬಗ್ಗೆ ಮಾಹಿತಿ ನೀಡಿ ಬಹು ಬೇಗ ಹಾಸನ ಒಂದು ಜನಪ್ರಿಯ ಆಕಾಶವಾಣಿ ನಿಲಯವಾಯಿತು.

ಹೊಸ ನಿಲಯವಾದ್ದರಿಂದ ಬರೆಹಗಾರರನ್ನು ಗುರುತಿಸಿ, ಅವರಿಗೆ ಬಾನುಲಿ ಬರೆವಣಿಗೆಯ ಬಗ್ಗೆ ತರಬೇತಿ ಶಿಬಿರಗಳನ್ನು ನಡೆಸಿ ಅಗತ್ಯವಾದ ಪ್ರಾವೀಣ್ಯವನ್ನು ಹಾಸನ ನಿಲಯ ಬೆಳೆಸಿತು. ಸ್ಥಳೀಯ ಕಲಾವಿದರಿಗೆ ಧ್ವನಿ ಪರೀಕ್ಷೆ ಮಾಡಿ ಅವರನ್ನು ಕಲಾವಿದರನ್ನಾಗಿಸಿದ್ದು, ಇತರ ಕ್ಷೇತ್ರಗಳ ಪರಿಣತರನ್ನು ಬಾನುಲಿಗೆ ತಂದದ್ದು, ಈ ನಿಲಯವು ಮಾಡಿದ ಕೆಲವು ಉತ್ತಮ ಕಾರ್ಯಗಳು. ಇದಲ್ಲದೆ ಅನೇಕ ಜನಪ್ರಿಯ ಧಾರಾವಾಹಿಗಳು ಇಲ್ಲಿಂದ ಪ್ರಸಾರವಾಗಿವೆ. ಇನ್ನು ಕೃಷಿರಂಗ ಕಾರ್ಯಕ್ರಮ ಅತ್ಯಂತ ಜನಪ್ರಿಯ. ಲಕ್ಷಾಂತರ ರೈತರು ಕೃಷಿರಂಗದ ಕಾರ್ಯಕ್ರಮಗಳಿಗೆ ಕಾದು ಅದರಲ್ಲಿ ನೀಡುವ ಮಾಹಿತಿಯನ್ನು ತಮ್ಮ ಜಮೀನಿನಲ್ಲಿ ಪ್ರಯೋಗಿಸಿ, ಲಾಭ ಪಡೆಯುತ್ತಿರುವುದು ವೈಜ್ಞಾನಿಕ ಸಂಶೋಧನೆಯ ಮೂಲಕ ದಾಖಲಾಗಿರುವ ಸಂಗತಿ. ಕೋಟ್ಯಂತರ ರೂಪಾಯಿಗಳ ಲಾಭವನ್ನು, ಹಾಸನದ ರೈತರು ಕೃಷಿ ಕಾರ್ಯಕ್ರಮಗಳ ಮೂಲಕ ಪಡೆಯುತ್ತಿದ್ದಾರೆ.

ಶ್ರವಣಬೆಳಗೊಳದಲ್ಲಿ ನಡೆದ ಮಹಾಮಸ್ತಕಾಭಿಷೇಕ, 1996ರಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನ ಹೀಗೆ ಹಲವಾರು ಪ್ರತಿಷ್ಠಿತ ಕಾರ್ಯಕ್ರಮಗಳನ್ನು ಆಕಾಶವಾಣಿ ಹಾಸನ ತನ್ನ ತರಂಗಗಳ ಮೂಲಕ ರಾಜ್ಯದ ಮೂಲೆ ಮೂಲೆಗೆ ತಲುಪಿಸಿದೆ. ನೂರಕ್ಕೂ ಹೆಚ್ಚಿನ ಕಂತಿನ ಶಿಲ್ಪ ವೈಭವ ಎಂಬ ಸರಣಿಯನ್ನು ಪ್ರಸಾರ ಮಾಡುವುದರ ಮೂಲಕ, ಜಿಲ್ಲೆಯ ಶಿಲ್ಪ ವೈಭವವನ್ನು ಶ್ರೀಸಾಮಾನ್ಯನಿಗೂ ಮುಟ್ಟಿಸಿದ್ದು ಈ ನಿಲಯದ ಗಮನಾರ್ಹ ಸಾಧನೆ.

ಧಾನ್ಯ ಸಂರಕ್ಷಣೆ ಹಾಗೂ ಕಾಫಿ ಕೃಷಿ ಎಂಬ ಸರಣಿಗಳನ್ನು ರೈತರಿಗಾಗಿ ಪ್ರಸಾರ ಮಾಡಿ ಅವುಗಳನ್ನು ಪುಸ್ತಕ ರೂಪದಲ್ಲಿ ತಂದ ಕೀರ್ತಿ ಹಾಸನ ಆಕಾಶವಾಣಿಯದು.

ಆರು ಕಿವ್ಯಾ ಶಕ್ತಿಯುಳ್ಳ ಪ್ರೇಷಕದಿಂದ ಹಾಸನ ನಿಲಯದ ಪ್ರಸಾರವು, ಹಾಸನ ಜಿಲ್ಲೆಯ ಹಾಸನ, ಅರಕಲಗೂಡು, ಆಲೂರು, ಬೇಲೂರು, ಅರಸೀಕೆರೆ, ಸಕಲೇಶಪುರ, ಚನ್ನರಾಯಪಟ್ಟಣ ಹಾಗೂ ಹೊಳೆನರಸೀಪುರ ತಾಲ್ಲೂಕುಗಳನ್ನು ತಲುಪುತ್ತದೆ. ಇದಲ್ಲದೆ ಮಡಿಕೇರಿ ಹಾಗೂ ಸುಳ್ಯದಲ್ಲಿ ಈ ನಿಲಯದ ತರಂಗಗಳು ಸ್ಪಷ್ಟವಾಗಿ ಲಭ್ಯವಿದ್ದು ಅಲ್ಲಿಯ ಜನರು ಹಾಸನದ ಕೆಲವು ಕಾರ್ಯಕ್ರಮಗಳನ್ನು ಆಲಿಸುತ್ತಿದ್ದಾರೆ. ಈ ನಿಲಯದ ವ್ಯಾಪ್ತಿಯಲ್ಲಿ ಬರುವ ಜನಸಂಖ್ಯೆ 14ಲಕ್ಷ. ರೇಡಿಯೋ ಹೊಂದಿರುವ ಕುಟುಂಬಗಳು 2.2ಲಕ್ಷ. ವಿಸ್ತೀರ್ಣ 11.5ಚ.ಕಿಮೀ. ಶೇ.1ರಷ್ಟು ಕೇಳುವಿಕೆ ಎಂದರೆ 10,000 ಕೇಳುಗರು. ಮೂರು ಪ್ರಸಾರಗಳುಳ್ಳ ಹಾಸನ ನಿಲಯ ಪ್ರತಿದಿನ ಸರಾಸರಿ 15 ಘಂಟೆಗಳಷ್ಟು ಕಾಲ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿದೆ. ಕನ್ನಡ ಪ್ರಮುಖ ಪ್ರಸಾರ ಮಾಧ್ಯಮ. ಇಂಗ್ಲಿಷ್, ಹಿಂದಿ, ಸಂಸ್ಕೃತ ಮತ್ತು ಉರ್ದು ಕಾರ್ಯಕ್ರಮಗಳು ಇಲ್ಲಿಂದ ನಿಗದಿತ ಅವಧಿಯಲ್ಲಿ ಬಿತ್ತರಗೊಳ್ಳುತ್ತವೆ. ಕನ್ನಡ ಚಲನಚಿತ್ರ ಗೀತೆ, ಕೃಷಿರಂಗ, ಭಕ್ತಿಸಂಗೀತ (ಸ್ತುತಿ ಮಲ್ಲಿಕಾ), ಚಿಂತನ, ಮಾತು ಮಲ್ಲಿಗೆ, ಯುವವಾಣಿ ಮುಂತಾದವು ಇಲ್ಲಿನ ಜನಪ್ರಿಯ ಕಾರ್ಯಕ್ರಮಗಳು.

**(ii) ಆಕಾಶವಾಣಿ ಚಿತ್ರದುರ್ಗ :** ಕರ್ನಾಟಕ ರಾಜ್ಯದಲ್ಲೇ ಪ್ರಪ್ರಥಮ ಎಫ್.ಎಂ. ನಿಲಯ ಪ್ರಾರಂಭವಾದದ್ದು ಚಿತ್ರದುರ್ಗದಲ್ಲಿ. ಇದು 3 ಮೇ 1991ರಲ್ಲಿ ಪ್ರಸಾರ ಕಾರ್ಯ ಆರಂಭಿಸಿತು. ಚಾರಿತ್ರಿಕವಾಗಿ ಪ್ರಸಿದ್ಧವಾದ ಈ ಜಿಲ್ಲೆಯಲ್ಲಿ ಜನಪದ ಸಂಗೀತ ಸಮೃದ್ಧ. ಅನೇಕ ರಾಷ್ಟ್ರೀಯ ಮೌಲ್ಯಗಳಾದ ದೇಶಭಕ್ತಿ, ತ್ಯಾಗ ಮತ್ತು ಬಲಿದಾನಗಳಿಗೆ ಇಲ್ಲಿಯ ನೆಲ ಹೆಸರುವಾಸಿ. ಅಂತಹ ನೆಲೆಯಲ್ಲಿ ಕಾರ್ಯೋನ್ಮುಖವಾಗಿರುವ ಚಿತ್ರದುರ್ಗ ನಿಲಯ ಒಂದು ಸ್ಥಳೀಯ ಬಾನುಲಿ ನಿಲಯ ಹೇಗಿರಬೇಕೆಂಬುದಕ್ಕೆ ಒಳ್ಳೆಯ ನಿದರ್ಶನವಾಗಿದೆ.

ಸ್ಥಳೀಯ ಜನಗಳು ನಿಲಯಕ್ಕೆ ಅತ್ಯಂತ ಸಮೀಪವರ್ತಿಗಳಾಗಿರಬೇಕು. ಅದರಿಂದಲೇ ಈ ನಿಲಯದ ಕಾರ್ಯಕ್ರಮಗಳು ನಡೆಯಬೇಕೆಂಬ ಸೂತ್ರಕ್ಕೆ ತಕ್ಕಂತೆ, ಚಿತ್ರದುರ್ಗದ ಕೇಳುಗರು ತಮ್ಮದೇ ಆದ ಒಂದು ಒಕ್ಕೂಟವನ್ನು ಸಂಘಟಿಸಿಕೊಂಡು ಚಿತ್ರದುರ್ಗದಿಂದ ಪ್ರಸಾರವಾಗುವ ಕಾರ್ಯಕ್ರಮಗಳನ್ನು ಬಹಳ ಆಸಕ್ತಿಯಿಂದ ಕೇಳಿ, ಅವುಗಳ ಬಗ್ಗೆ ಸಲಹೆ, ಸೂಚನೆಗಳನ್ನು ಕೊಡುವುದಲ್ಲದೆ, ತಮ್ಮದೇ ರೀತಿಯಲ್ಲಿ ನಿಲಯಕ್ಕೆ ಒತ್ತಾಸೆಯಾಗಿ ನಿಂತಿರುವುದು, ಬೇರೆ ಯಾವುದೇ ವಲಯದಲ್ಲಿ ಕಾಣಸಿಗದ ಒಂದು ಅಪರೂಪ ನಿದರ್ಶನ. ಬಾನುಲಿಯ ಶ್ರೋತೃಗಳನ್ನು ಅರಸಿಕೊಂಡು ಹೋಗುವ ಬಾಬಾ ಬಾನುಲಿ ಎಂಬ ಚಿತ್ರದುರ್ಗ ನಿಲಯದ ಕಾರ್ಯಕ್ರಮ ಒಂದು ಹೊಸ ರೀತಿಯ ವಿಶಿಷ್ಟ ಕಾರ್ಯಕ್ರಮ. ಇದರಿಂದ ಶ್ರೋತೃಗಳು ನಿಲಯಕ್ಕೆ ಆತ್ಮೀಯರಾಗುತ್ತಿರುವುದು ನಿಲಯದ ಜನಪ್ರಿಯತೆಗೆ ಇಂಬು ಕೊಟ್ಟಂತಾಗಿದೆ. ಇದು ಜನಪದ ಕಾರ್ಯಕ್ರಮಗಳಿಗೆ ಆದ್ಯತೆ ಕೊಡುತ್ತಿರುವುದು ಇನ್ನೊಂದು ವಿಶೇಷ. ಒಂದು ಜಿಲ್ಲೆಯ ವ್ಯಾಪ್ತಿಯಲ್ಲೇ. ತನ್ನದೇ ಆದ ಮಿತಿಗಳಿದ್ದಾಗ್ಯೂ ಚಿತ್ರದುರ್ಗದ ನಿಲಯ ತುಂಬಾ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಪ್ರಸರಿಸುತ್ತಿದೆ. ಜನಸ್ಪಂದನ, ಸಂಸಾರ ವಿಚಾರ, ಅನುಭವ ಪ್ರಪಂಚ, ಸಾಹಿತ್ಯ, ಲಹರಿ, ವೈದ್ಯರೊಂದಿಗೆ ಭೇಟಿ ಹೀಗೆ ಹಲವಾರು ಸಮಸ್ಯೆಗಳ ಅವಲೋಕನ. ಅವುಗಳಿಗೆ ಸೂಕ್ತ ಪರಿಹಾರ ದೊರಕಿಸಿಕೊಡುವ ಪ್ರಯತ್ನ. ಹೀಗೆ ಸ್ಥಳೀಯ ಕೇಂದ್ರವಾಗಿ ಇದು ಉತ್ತಮ ಕೆಲಸವನ್ನು ಮಾಡುತ್ತಿದೆ.

ಆರು ಕಿವ್ಯಾ ಪ್ರೇಷಕ ಹೊಂದಿರುವುದು ಈ ನಿಲಯದ ವ್ಯಾಪ್ತಿ. ಚಿತ್ರದುರ್ಗ ಜಿಲ್ಲೆಯ ವಲಯದಲ್ಲಿ ಬರುವ ಜನಸಂಖ್ಯೆ 12 ಲಕ್ಷ, ಪ್ರಸಾರವಾಗುವ ಪ್ರದೇಶದ ವಿಸ್ತೀರ್ಣ 11,500 ಚ.ಕಿಮೀ. ಶೇ 1 ರಷ್ಟು ಆಲಿಸುವರೆಂದರೆ ಸಂಖ್ಯಾವಾರು ಸು. 9,000 ಕೇಳುಗರೆಂದರ್ಥ.

ಪ್ರಾರಂಭದಲ್ಲಿ ಏಕ ಪ್ರಸಾರ ಹೊಂದಿದ ಈ ನಿಲಯ, ಕ್ರಮೇಣ ವಿವಿಧ ಭಾರತೀಯ ಕಾರ್ಯಕ್ರಮಗಳನ್ನು ಮರುಪ್ರಸಾರಿಸುವ ಮಧ್ಯಾಹ್ನದ ಪ್ರಸಾರವನ್ನು ಪ್ರಾರಂಭಿಸಿ, ಇತ್ತೀಚೆಗೆ ಬೆಳಗಿನ ಪ್ರಸಾರವನ್ನು ಪ್ರಾರಂಭಿಸಿದ್ದು, ಒಟ್ಟು ಪ್ರಸಾರ ಅವಧಿ ದಿನಕ್ಕೆ ಸರಾಸರಿ ಹದಿನೈದು ಘಂಟೆಗಳಿಗಿಂತ ಹೆಚ್ಚಾಗಿದೆ. ಈ ನಿಲಯದಿಂದ ಕನ್ನಡದ ಕಾರ್ಯಕ್ರಮಗಳೇ ಪ್ರಮುಖವಾಗಿ ಪ್ರಸಾರವಾಗುವುವು.

**(iii) ಆಕಾಶವಾಣಿ ಮಡಿಕೇರಿ :** ಮಡಿಕೇರಿ ಜನರಿಗೆ ವಿದ್ಯುನ್ಮಾನ ಮಾಧ್ಯಮಗಳ ಸಂಪರ್ಕ ಸೇತುವೆ ಇದ್ದಾಗ್ಯೂ ಅದು ಭೌಗೋಳಿಕ ಲಕ್ಷಣಗಳಿಂದ ಯಾವುದೇ ವಿದ್ಯುನ್ಮಾನ ಮಾಧ್ಯಮದ ಸಿಗ್ನಲ್‌ಗಳು ಆ ಪ್ರದೇಶವನ್ನು ಸ್ಪಷ್ಟವಾಗಿ ತಲುಪುತ್ತಿರಲಿಲ್ಲ. ಹೀಗಾಗಿ ಯಾವುದೇ ಮಾಹಿತಿಗಾಗಿ ಅಲ್ಲಿಯ ಜನರು ಮುದ್ರಣ ಮಾಧ್ಯಮವನ್ನಾಶ್ರಯಿಸಬೇಕಿತ್ತು. ಅಂತಹ ಪ್ರದೇಶದ ಜನರಿಗೆ ತಮ್ಮ ನೆಲದಲ್ಲೇ ಒಂದು ಬಾನುಲಿ ನಿಲಯವಿದ್ದರೆ ಎಂದು ಕನಸನ್ನು ಕಾಣುವುದು ಸಹಜವಾದ ಪ್ರಕ್ರಿಯೆಯೆ. ಅಂತಹ ಕನಸು ನನಸಾಗಿದ್ದು 28, ಆಗಸ್ಟ್ 1993ರಂದು. ಆಕಾಶವಾಣಿ ಜಾಲದ ಮಡಿಕೇರಿ ನಿಲಯ, ಅಂದಿನಿಂದ ತನ್ನ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿತು.

ಸಾಕ್ಷರತೆಯ ಮಟ್ಟ ಜಿಲ್ಲೆಯಲ್ಲಿ ಹೆಚ್ಚಾಗಿದ್ದು, ಅಲ್ಲಿ ಮಾಹಿತಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಬೇಡಿಕೆ ಇದ್ದ ಕಾರಣ, ಅದಕ್ಕೆ ಆದ್ಯತೆ ನೀಡಬೇಕಾಯಿತು. ಪ್ರಾರಂಭದಲ್ಲಿ ಸಂಜೆ ಪ್ರಸಾರವಿದ್ದು ಸರಾಸರಿ 5ರಿಂದ 5.30 ಘಂಟೆಗಳಷ್ಟು ಪ್ರಸಾರ ಅವಧಿಯಿರುತ್ತಿತ್ತು. ಕ್ರಮೇಣ ಬೆಳಗಿನ ಪ್ರಸಾರ ಕೂಡ ಪ್ರಾರಂಭವಾಯಿತು. ಏಪ್ರಿಲ್ 1995ರಲ್ಲಿ ಈ ಬೆಳಗಿನ ಪ್ರಸಾರ ಪ್ರಾರಂಭವಾಗಿ ಪ್ರಸಾರ ಅವಧಿ ಇನ್ನೂ ಮೂರು ಘಂಟೆಗಳಷ್ಟು ಅಧಿಕವಾಯಿತು. ಅನಂತರ ಮಧ್ಯಾಹ್ನದ ಪ್ರಸಾರವೂ ಪ್ರಾರಂಭವಾಗಿ, ಒಟ್ಟು ಅವಧಿ 15 ಗಂಟೆಗಳಷ್ಟಾಯಿತು.

ಈ 15 ಗಂಟೆಗಳಲ್ಲಿ ಇತರ ನಿಲಯಗಳ ಮರುಪ್ರಸಾರ ಹೆಚ್ಚು. ಕನ್ನಡ ಭಾಷೆಯಲ್ಲಿ ತಯಾರಾದ ಕಾರ್ಯಕ್ರಮಗಳು ಮುಕ್ಕಾಲು ಪಾಲಾದರೂ ಕೊಡವ ಹಾಗೂ ಮಲೆಯಾಳಂ ಭಾಷೆಗಳ ಕಾರ್ಯಕ್ರಮಗಳೂ ಪ್ರಸಾರವಾಗುತ್ತಿವೆ. 'ಕೊಡವ ಸಿರಿ' ಒಂದು ಜನಪ್ರಿಯ ಕಾರ್ಯಕ್ರಮವಾಗಿದೆ. ಮಲೆಯಾಳಂನ ಭಾವಗೀತೆಗಳು ಇಲ್ಲಿ ಜನಪ್ರಿಯತೆಯನ್ನು ಗಳಿಸಿವೆ. ಮಡಿಕೇರಿ ನಿಲಯದ ಕಾರ್ಯಕ್ರಮಗಳು ದಕ್ಷಿಣ ಕನ್ನಡದ ಕೆಲವು ತಾಲ್ಲೂಕುಗಳಲ್ಲಿ ಮತ್ತು ಕೇರಳದ ಕಾಸರಗೋಡಿನಲ್ಲೂ ಚೆನ್ನಾಗಿ ಕೇಳಿಬರುವುದರಿಂದ ಒಳ್ಳೆಯ ಶ್ರೋತೃವರ್ಗ ಬೆಳೆದಿದೆ.

ಮಡಿಕೇರಿಯಲ್ಲಿ ಇಂಗ್ಲಿಷ್ ವಾರ್ತೆ ಕೇಳುಗರ ಸಂಖ್ಯೆ ಅಪಾರವಾಗಿದೆ. ಇತರ ಜನಪ್ರಿಯ ಕಾರ್ಯಕ್ರಮಗಳೆಂದರೆ ಕನ್ನಡ ಚಿತ್ರಗೀತೆ, ಕೃಷಿರಂಗ, ಯುವವಾಣಿ, ಕೊಡವ ಸಿರಿ.

ಆರು ಕಿವ್ಯಾ ಪ್ರೇಷಕದಿಂದ ಪ್ರಸಾರಿಸುತ್ತಿರುವ ಮಡಿಕೇರಿ ನಿಲಯ, ಕೊಡಗು, ಮಂಗಳೂರಿನ ಕೆಲವು ಭಾಗಗಳನ್ನು ಮೈಸೂರು, ಹಾಸನ ಜಿಲ್ಲೆಗಳ ಕೆಲ ಭಾಗಗಳನ್ನು ಮತ್ತು ಕಾಸರಗೋಡಿನ ಕೆಲ ಭಾಗಗಳನ್ನು ತಲುಪುತ್ತಿದೆ. ಮಡಿಕೇರಿ ವಲಯದಲ್ಲಿರುವ ಜನಸಂಖ್ಯೆ 21.2 ಲಕ್ಷಗಳು. ಪ್ರದೇಶದ ವಿಸ್ತೀರ್ಣ 20,096 ಚ.ಕಿಮೀ. ಮಡಿಕೇರಿ ವಲಯದಲ್ಲಿ ಶೇ. 1ರಷ್ಟು ಕೇಳುವಿಕೆ ಇದೆಯೆಂದರೆ ಸುಮಾರು 10,000 ಕೇಳುಗರಿದ್ದಾರೆ.

**(iv) ಆಕಾಶವಾಣಿ ರಾಯಚೂರು :** ಕರ್ನಾಟಕದ ಹಿಂದುಳಿದ ಜಿಲ್ಲೆಗಳ ಪೈಕಿ ರಾಯಚೂರು ಜಿಲ್ಲೆಯೂ ಒಂದು. ಚಾರಿತ್ರಿಕವಾಗಿ ಪ್ರಸಿದ್ಧವಾದ ರಾಯಚೂರು ಆರ್ಥಿಕ ಹಾಗೂ ಸಾಮಾಜಿಕವಾಗಿ ಬಹಳ ಹಿಂದುಳಿದಿರುವ ಪ್ರದೇಶ. ಶಿಕ್ಷಣ, ಮಾಹಿತಿ ಇಂತಹ ಪ್ರದೇಶದಲ್ಲಿ ಅತ್ಯಗತ್ಯ. ಈ ನಿಟ್ಟಿನಲ್ಲಿ ರಾಯಚೂರು ಜಿಲ್ಲೆಗೊಂದು ಆಕಾಶವಾಣಿ ನಿಲಯ ಬಂದದ್ದು ಅತ್ಯಂತ ಸಮಂಜಸ.

ಆಗಸ್ಟ್ 28, 1993ರಂದು, ರಾಯಚೂರು ನಿಲಯ ತನ್ನ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿತು. ಆರು ಕಿವ್ಯಾ ಪ್ರೇಷಕ ಹೊಂದಿರುವ ಈ ಕೇಂದ್ರದ ಪ್ರಸಾರ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನು ವ್ಯಾಪಿಸಿದೆ. 1, ನವೆಂಬರ್ 1998ರವರೆಗೂ ಕೊಪ್ಪಳ, ರಾಯಚೂರು ಜಿಲ್ಲೆಯ ಒಂದು ಭಾಗವಾಗಿದ್ದು ನಂತರ ಪ್ರತ್ಯೇಕ ಜಿಲ್ಲೆಯಾಗಿ ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗ ತಾಲ್ಲೂಕುಗಳನ್ನೊಳಗೊಂಡಿದೆ. ರಾಯಚೂರು ಕೂಡ ಒಂದು ಸ್ಥಳೀಯ ಬಾನುಲಿ ಕೇಂದ್ರ.

ಇತರ ಸ್ಥಳೀಯ ಕೇಂದ್ರಗಳಂತೆ ತನ್ನ ಜಿಲ್ಲೆಯ ವಿಕಾಸ ಹಾಗೂ ಅಭಿವೃದ್ಧಿಗೆ ಹೆಚ್ಚು ಪ್ರಾಧಾನ್ಯವನ್ನು ರಾಯಚೂರು ನಿಲಯವು ಕೊಡುತ್ತಿದೆ. ಇಲ್ಲಿ ತರಿ ಹಾಗೂ ಖುಷ್ಕಿ ಬೇಸಾಯ ಪದ್ಧತಿಗಳೆರಡೂ ಪ್ರಚಲಿತವಾಗಿರುವುದರಿಂದ, ಎರಡು ವಿಧಾನಗಳಿಗೂ ನಿಲಯದ ಕೃಷಿರಂಗ ಕಾರ್ಯಕ್ರಮ ಹೆಚ್ಚು ಆದ್ಯತೆ ನೀಡುತ್ತಾ ಬಂದಿದೆ. ಎಣ್ಣೆ ಬೀಜ ಹಾಗೂ ಹತ್ತಿ ಬೇಸಾಯ ಕುರಿತಂತೆ ಆಗಿಂದಾಗ್ಗೆ ಕಾರ್ಯಕ್ರಮಗಳು ಬಿತ್ತರವಾಗುತ್ತಿವೆ.

ಪ್ರಾರಂಭದ ದಿನಗಳಲ್ಲಿ ಏಕಮಾತ್ರ ಪ್ರಸಾರ ಹೊಂದಿದ್ದ ರಾಯಚೂರು (ಸಂಜೆ 5 ರಿಂದ 11ರವರೆಗೆ) 5, ಅಕ್ಟೋಬರ್ 1996ರಿಂದ ವಿವಿಧ ಭಾರತಿ ಕಾರ್ಯಕ್ರಮಗಳನ್ನು ಮಧ್ಯಾಹ್ನ 3ರಿಂದ 5ರವರೆಗೆ ಮರುಪ್ರಸಾರ ಮಾಡಿ, ಅನಂತರ ರಾತ್ರಿ 9.15ರವರೆಗೆ ತನ್ನ ನಿಲಯಗಳ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿತ್ತು. ಇಂದು ಮೂರು ಪ್ರಸಾರಗಳುಳ್ಳ ಈ ನಿಲಯದ ಒಟ್ಟು ಪ್ರಸಾರಾವಧಿ ದಿನಕ್ಕೆ ಸರಾಸರಿ 15 ಗಂಟೆಗಳಷ್ಟು.

ರಾಯಚೂರು ನಿಲಯ ಇನ್ನೂ ಶೈಶವಾವಸ್ಥೆಯಲ್ಲಿದ್ದಾಗಲೆ ಅಲ್ಲಿ ತಯಾರಾದ ರಾತ್ರಿಯ ಕೋಗಿಲೆಗಳೆಂಬ ಕಾರ್ಯಕ್ರಮ ರಾಷ್ಟ್ರಮಟ್ಟದಲ್ಲಿ ಪ್ರಶಂಸೆಗಳಿಸಿ, ಸಾರ್ಕ್ ಕಾರ್ಯಕ್ರಮ ಜಾಲದಲ್ಲಿ ಪ್ರಸಾರವಾಯಿತು. ಇದು ರಾಯಚೂರು ನಿಲಯಕ್ಕೆ ಸಂದ ಕೀರ್ತಿ. ಗೌರವ ರೈಲ್ವೇ ಪ್ಲಾಟ್‌ಫಾರಂನಲ್ಲಿ ವಾಸಿಸುವ ಮಕ್ಕಳನ್ನಾಧರಿಸಿ ನಿರ್ಮಿಸಿದ 'ಓಡಿ ಬಂದವರೆಂಬ' ಕಾರ್ಯಕ್ರಮ ರಾಜ್ಯಮಟ್ಟದ ಆಕಾಶವಾಣಿ ಸ್ಪರ್ಧೆಯಲ್ಲಿ ಬಹುಮಾನ ಪಡೆದದ್ದು ರಾಯಚೂರು ನಿಲಯಕ್ಕೆ ಸಿಕ್ಕ ಗೌರವ. ಜನಮತಕ್ಕನುಗುಣವಾಗಿ ಕಾರ್ಯಕ್ರಮಗಳು ಇಲ್ಲಿ ಯೋಜಿತವಾಗುತ್ತಿರುವುದು ಶ್ರೋತೃಗಳೊಡನೆ ನಿಲಯದ ಸಂಪರ್ಕ ನಿಕಟವಾಗಿರುವುದಕ್ಕೆ ಸಾಕ್ಷಿಯಾಗಿದೆ. ಗ್ರಾಮೀಣ ಪ್ರದೇಶಗಳಾಗಿರುವ ಕಾರ್ಯಕ್ರಮ ಕೂಡ, ಗ್ರಾಮಗಳಿಗೆ ಭೇಟಿ ನೀಡಿ ಅಲ್ಲೇ ಧ್ವನಿಮುದ್ರಿಸಿಕೊಂಡು ಪ್ರಸಾರ ಮಾಡುತ್ತಿರುವುದು ಸ್ಥಳೀಯ ಬಾನುಲಿ ಕೇಂದ್ರದ ಸಾಧನೆಯಾಗಿದೆ.

ರಾಯಚೂರು ನಿಲಯದ ಪ್ರಸಾರವ್ಯಾಪ್ತಿ 100 ಕಿವ್ಯಾ ಈ ಪ್ರದೇಶಕ್ಕೊಳಪಡುವ ಜನಸಂಖ್ಯೆ 14 ಲಕ್ಷ. ಶೇ. 1ರಷ್ಟು ಕೇಳುಗರೆಂದರೆ ಸು. 7,000ವೆಂದಾಗುತ್ತದೆ. ಇಲ್ಲಿಂದ ಪ್ರಸಾರವಾಗುವ ಮುಖ್ಯ ಕಾರ್ಯಕ್ರಮಗಳೆಂದರೆ ಯುವವಾಣಿ, ಆರೋಗ್ಯ ಕಾರ್ಯಕ್ರಮಗಳು ಮತ್ತು ಗ್ರಾಮದರ್ಶಿ.

**(v) ಆಕಾಶವಾಣಿ ಹೊಸಪೇಟೆ :** ವಿಜಯನಗರದ ವೈಭವವನ್ನು ಕಂಡ ಹಂಪಿಗೆ ಸಮೀಪದಲ್ಲಿರುವ ಹೊಸಪೇಟೆಯಲ್ಲಿ ಆಕಾಶವಾಣಿಯ ತರಂಗಗಳು ಗಗನವನ್ನು ಚುಂಬಿಸಿದ್ದು 1 ಮೇ 1992ರಂದು. 10 ಕಿವ್ಯಾ ಶಕ್ತಿಯ ಪ್ರೇಷಕದಿಂದ ಪ್ರಸಾರಿಸುತ್ತಿರುವ ಈ ನಿಲಯದ ವ್ಯಾಪ್ತಿಯಲ್ಲಿ ಬಳ್ಳಾರಿ ಜಿಲ್ಲೆ ಹಾಗೂ ನೆರೆ ರಾಜ್ಯವಾದ ಆಂಧ್ರದ ಕೆಲಭಾಗಗಳು ಸೇರಿವೆ. ಸ್ಥಳೀಯ ಕೇಂದ್ರವಾಗಿ ಕಾರ್ಯನಿರತವಾಗಿರುವ ಈ ನಿಲಯದ ವಲಯದಲ್ಲಿ ವಾಸಿಸುತ್ತಿರುವ ಜನಸಂಖ್ಯೆ 19ಲಕ್ಷ. ವಿಸ್ತೀರ್ಣ 15,500ಚ.ಕಿಮೀ. ಪ್ರತಿದಿನ ಹದಿನೈದು ಘಂಟೆಗಳಿಗೂ ಮಿಗಿಲಾಗಿ ಪ್ರಸಾರಿಸುತ್ತಿರುವುದರಲ್ಲಿ ಬೆಂಗಳೂರು ನಿಲಯ ಹಾಗೂ ಮುಂಬೈ ಹಾಗೂ ಬೆಂಗಳೂರಿನ ವಾಣಿಜ್ಯ ವಿಭಾಗವಾದ ವಿವಿಧಭಾರತಿ ಕಾರ್ಯಕ್ರಮಗಳು ಸೇರಿವೆ. ಮರು ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳ ಅವಧಿಯೇ ಅಧಿಕವಾಗಿರುವುದು ಗಮನಾರ್ಹ ಅಂಶ.

ಹೊಸಪೇಟೆ ಆಕಾಶವಾಣಿಯ ನಿಲಯದಲ್ಲಾದಂತಹ ಒಂದು ಪ್ರಯೋಗ ಉಲ್ಲೇಖಾರ್ಹ. ಸ್ಥಳೀಯರ ಬೆಂಬಲದಿಂದ ಸಂಘಗಳನ್ನು ಸ್ಥಾಪಿಸಿ, ಆ ಮೂಲಕ ಆ ವರ್ತುಲದಲ್ಲಿ ಬರುವ ಕೌಶಲಗಳನ್ನು, ಕಲಾವಿದರನ್ನು ಗುರುತಿಸಿ, ಅವರಿಗೆ ಬಾನುಲಿ ಬರವಣಿಗೆ ಹಾಗೂ ಕಾರ್ಯಕ್ರಮ ನಿರ್ವಹಣೆಯಲ್ಲಿ ತರಬೇತಿ ನೀಡಿ ಅವರನ್ನು ಪ್ರಸಾರಕರನ್ನಾಗಿಸಿದ್ದು ಒಂದು ಶ್ಲಾಘನೀಯ ಸಾಧನೆ. ಸಮುದಾಯ ಬಾನುಲಿಯ ಒಂದು ಪರಿಕಲ್ಪನೆಗೆ ಬಹಳ ಸನಿಹವಾದ ಈ ವಿಶೇಷ ಪ್ರಯತ್ನ ಇಂದು ಸಮುದಾಯಯ ಬಾನುಲಿಗಾಗಿ ಶ್ರಮಿಸುತ್ತಿರುವವರಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಅಲ್ಲಿಯ ಪ್ರಾರಂಭವಾದ ನವದಂಪತಿಗಳಿಗೆ ಹೇಳುವ ಶುಭಾಶಯ, ಕುಟುಂಬ ಯೋಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳು, ಇತರ ಸ್ಥಳೀಯ ನಿಲಯಗಳು ಆ ದಿಕ್ಕಿನಲ್ಲಿ ಪ್ರಯತ್ನಿಸುವಂತೆ ಮಾಡಿತು.

ಕನ್ನಡ ವಿಶ್ವವಿದ್ಯಾನಿಲಯಕ್ಕೆ ಈ ನಿಲಯ ಬಹಳ ಹತ್ತಿರವಿರುವುದು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕವಾಗಿ ಅನುಕೂಲಕರವಾಗಿದೆ. ಹೊಸಪೇಟೆ ಪ್ರಸಾರ ಮಾಡುವ ಭಾವಮಾಧುರ್ಯ, ಚಿಂತನ, ಜನಪದ ಸಿರಿ, ಕನ್ನಡ ಚಿತ್ರಗೀತೆಗಳು, ಕತೆಗೊಂದು ಗೀತೆ ಬಹಳ ಜನಪ್ರಿಯವಾಗಿದೆ.

ಉನ್ನತ ಚಾರಿತ್ರಿಕ ಹಿನ್ನಲೆಯಿರುವ ಈ ಜಿಲ್ಲೆಯಲ್ಲಿ ಸ್ಥಳೀಯ ಇತಿಹಾಸ ಹಾಗೂ ಪರಂಪರೆಗೆ ಬಾನುಲಿ ಉತ್ತಮ ಅಭಿವ್ಯಕ್ತಿ ಮಾಧ್ಯಮವಾಗಿದೆ.

**(vi) ಆಕಾಶವಾಣಿ ಕಾರವಾರ :** ಕರ್ನಾಟಕದಲ್ಲಿ ಆರನೆಯ ಎಫ್.ಎಂ. ನಿಲಯವಾಗಿ ಕಾರವಾರ 13 ಫೆಬ್ರವರಿ 1994ರಲ್ಲಿ ಅಸ್ತಿತ್ವಕ್ಕೆ ಬಂತು. ಬಾನುಲಿಯ ಸೇವೆ ಅಲ್ಲಿಯವರೆಗೂ ಧಾರವಾಡ ನಿಲಯದಿಂದ ನಡೆಯುತ್ತಿದ್ದು ಈ ಜಿಲ್ಲೆಗೆ ಒಂದು ಸ್ವತಂತ್ರ ಬಾನುಲಿ ನಿಲಯದ ಅಗತ್ಯವಿತ್ತು. ಈ ನಿಲಯದ ಸುತ್ತ ಪಶ್ಚಿಮ ಘಟ್ಟಗಳು ಆವರಿಸಿಕೊಂಡಿವೆ. ಕಲಾ ಪ್ರಪಂಚದಲ್ಲಿ ಅಷ್ಟು ಗದ್ದಲ ಮಾಡುವ ಈ ಪ್ರದೇಶದಲ್ಲಿ ಕಾರವಾರ ನಿಲಯ ಪ್ರಾರಂಭವಾದ ಅನಂತರ ಉತ್ತಮ ಕಾರ್ಯ ಸಾಧನೆ ಮಾಡಿರುವುದು ವಿಶೇಷತೆ. ಅಲ್ಲಿನ ಜನಪದ ಕತೆಗಳನ್ನು ಹಾಗೂ ಕಲಾವಿದರನ್ನು ಗುರುತಿಸಿ ಅವರನ್ನು ಬಾನುಲಿಗೆ ತಂದಿರುವುದು ಒಂದು ಸಾಧನೆ. ಸ್ಥಳೀಯ ಸಾಹಿತಿಗಳಿಗೂ ಅವಕಾಶ ಮಾಡಿಕೊಟ್ಟು ಅವರ ಸಾಹಿತ್ಯವನ್ನು ಜನತೆಗೊಯ್ಯುವಲ್ಲಿ ಕೂಡ ಈ ನಿಲಯ ಸಮರ್ಥವಾಗಿ ಕಾರ್ಯ ನಿರ್ವಹಿಸಿದೆ. ಅನೇಕ ಮಿತಿಗಳೊಂದಿಗೆ ಪ್ರಸಾರ ಕಾರ್ಯ ನಿರ್ವಹಣೆಯಾಗುತ್ತಿದ್ದಾಗ್ಯೂ ಈ ನಿಲಯ ರಾಷ್ಟ್ರಮಟ್ಟದ ಆಕಾಶವಾಣಿ ವಾರ್ಷಿಕ ಸ್ಪರ್ಧೆಯಲ್ಲಿ 1998ರಲ್ಲಿ ಎರಡು ಕಾರ್ಯಕ್ರಮಗಳಿಗೆ ಮೊದಲನೆಯ ಸ್ಥಾನವನ್ನು ಪಡೆದದ್ದು ಅಪೂರ್ವವಾದ ಸಾಧನೆ.

ಕನ್ನಡ ಚಿತ್ರಗೀತೆ, ಪ್ರದೇಶ ಸಮಾಚಾರ, ಕನ್ನಡದಲ್ಲಿ ವಾರ್ತೆಗಳು, ಭಕ್ತಿಸಂಗೀತ, ಹಿಂದಿ ವಾರ್ತಾ ಸಂಚಿಕೆ, ನಾಟಕ ಇತ್ಯಾದಿಗಳು ಕೇಂದ್ರದಬಹಳ ಜನಪ್ರಿಯವಾದ ಕಾರ್ಯಕ್ರಮಗಳು.

ಇತರ ಸ್ಥಳೀಯ ಕೇಂದ್ರಗಳಂತೆ ಕಾರವಾರ ತನ್ನ ಆರು ಕಿವ್ಯಾ ಪ್ರೇಷಕ ಪ್ರತಿದಿನ ಸರಾಸರಿ 15 ಘಂಟೆಗಳಿಗಿಂತ ಹೆಚ್ಚು ಕಾಲ ಪ್ರಸಾರಮಾಡುತ್ತಿದೆ. ಈ ನಿಲಯದ ವ್ಯಾಪ್ತಿ 4500 ಚ.ಕಿಮೀ ಗಳಾದರೆ ವಲಯದಲ್ಲಿ ವಾಸಿಸುವರ ಸಂಖ್ಯೆ 8,30,000 ಕಾರವಾರ ನಿಲಯದಲ್ಲಿ ಶೇ. 1ರಷ್ಟು ಆಲಿಸುವಿಕೆ ಎಂದರೆ 19,750 ಕೇಳುಗರೆಂಬುದು.

**(vii) ಆಕಾಶವಾಣಿ ಬಿಜಾಪುರ :** ಕರ್ನಾಟಕಕ್ಕೆ ಮಂಜೂರಾದ ಏಳು ಸ್ಥಳೀಯ ನಿಲಯಗಳ ಪೈಕಿ, ಏಳನೆಯ ನಿಲಯವಾಗಿ ಪ್ರಸಾರ ಕಾರ್ಯ ಪ್ರಾರಂಭಿಸಿದ್ದು 18 ಸೆಪ್ಟೆಂಬರ್ 1997ರಂದು. ಈ ನಿಲಯದ ಪ್ರೇಷಕ ಶಕ್ತಿ ಆರು ಕಿವ್ಯಾ ಆಗಿದ್ದು ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಸರಹದ್ದಿನಲ್ಲಿ 29 ಲಕ್ಷ ಜನಸಂಖ್ಯೆಗೆ ಬಾನುಲಿ ತರಂಗಗಳು ಮುಟ್ಟುತ್ತಿವೆ. ಇದರ ವ್ಯಾಪ್ತಿ 11,500 ಚ.ಕಿಮೀ. ಈ ನಿಲಯ ಇನ್ನೂ ತನ್ನದೇ ಆದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿಲ್ಲ. ಆಕಾಶವಾಣಿ ಬೆಂಗಳೂರು ನಿಲಯದಿಂದ ಪ್ರಸಾರವಾಗುವ ಕಾರ್ಯಕ್ರಮಗಳನ್ನು ಬಿಜಾಪುರ ನಿಲಯ ಮರು ಪ್ರಸಾರ ಮಾಡುತ್ತಿದೆ. ಇದಲ್ಲದೆ ಪ್ರತಿದಿನ ಮಧ್ಯಾಹ್ನ ಮೂರರಿಂದ ಐದರವರೆಗೆ ವಿವಿಧ ಭಾರತಿ ಕಾರ್ಯಕ್ರಮಗಳನ್ನು ಪ್ರಸಾರಿಸುತ್ತಿದೆ.

ಬುಡಕಟ್ಟು ಜನಾಂಗದ ಹಾಗೂ ಜನಪದ ಸಂಗೀತ ಈ ಪ್ರದೇಶದಲ್ಲಿ ಸಾಕಷ್ಟು ಶ್ರೀಮಂತವಾಗಿದ್ದು ಸ್ವತಂತ್ರವಾಗಿ ಕಾರ್ಯಕ್ರಮಗಳನ್ನು ಬಿಜಾಪುರ ನಿಲಯ ಬಿತ್ತರಿಸಲು ಪ್ರಾರಂಭ ಮಾಡಿದ ಮೇಲೆ ಈ ಸಂಗೀತಕ್ಕೆ ಅವಕಾಶ ಹಾಗೂ ಅಭಿವ್ಯಕ್ತಿ ಎರಡನ್ನೂ ದೊರಕಿಸಬಹುದು. ಚಾರಿತ್ರಿಕವಾಗಿಯೂ ಹೆಸರುವಾಸಿಯಾದ ಬಿಜಾಪುರ ಇತಿಹಾಸ,

ಅನೇಕ ಬಾನುಲಿ ಕಾರ್ಯಕ್ರಮಗಳಿಗೆ ಉತ್ತಮ ಗ್ರಾಸವಾಗಬಹುದು. ತನ್ನದೇ ಆದ ಕಾರ್ಯಕ್ರಮಗಳ ಉಗಮಕ್ಕೆ ಬಿಜಾಪುರ ಆಕಾಶವಾಣಿ ನಿಲಯ ಚಾತಕಪಕ್ಷಿಯಂತೆ ಕಾಯುತ್ತಿದ್ದು, ಆ ದಿನ ಬಹಳ ಬೇಗನೆ ಬರುವ ನಿರೀಕ್ಷೆಯಿದೆ.

**ಉಪಸಂಹಾರ :** ಎಲ್ಲಾ ಬಾನುಲಿ ಕೇಂದ್ರಗಳಿಂದಲೂ ವಿಶೇಷ ಶ್ರೋತೃ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಇದು ಒಂದೊಂದು ವಿಶಿಷ್ಟ ರೀತಿಯ ಶ್ರೋತೃವರ್ಗವನ್ನು ಉದ್ದೇಶಿಸಿ ಇರುತ್ತದೆ. ಉಳಿದವರು ಇದನ್ನು ಕೇಳಬಾರದು, ಕೇಳುವುದಿಲ್ಲ ಎಂದಲ್ಲ. ಆದರ್ಶ ಕಾರ್ಯಕ್ರಮದ ವ್ಯಾಪ್ತಿ, ಸಂಯೋಜನೆ, ಗುರಿ, ಭಾಗವಹಿಸುವಿಕೆ ಎಲ್ಲವೂ ಆಯಾ ಶ್ರೋತೃವರ್ಗದ ಸ್ವಭಾವ, ಅಗತ್ಯ, ನಿರೀಕ್ಷೆ ಮತ್ತು ಆಕಾಂಕ್ಷೆಗಳನ್ನು ಅವಲಂಬಿಸಿವೆ. ಇಂತಹ ವಿಶೇಷ ಶ್ರೋತೃವರ್ಗಗಳೆಂದರೆ ಯುವಜನಾಂಗ, ಮಹಿಳೆಯರು, ಮಕ್ಕಳು, ಕೃಷಿಕರು, ಕಾರ್ಮಿಕರು ಮತ್ತು ಹಿರಿಯರು.

ಆಕಾಶವಾಣಿಯಿಂದ ಪ್ರಸಾರವಾಗುವ ಕಾರ್ಯಕ್ರಮಗಳು ಭಾಷಣ, ಸಂಭಾಷಣೆ, ಸಂವಾದ, ಚರ್ಚೆ, ರೂಪಕ ಮತ್ತು ನಾಟಕ ರೂಪಗಳಲ್ಲಿರುತ್ತವೆ. ಇದನ್ನು 'ಆಡುಮಾತಿ'ನ ಕಾರ್ಯಕ್ರಮಗಳು ಎಂದು ಕರೆಯುತ್ತೇವೆ (ಸ್ಪೋಕನ್ ವರ್ಡ್). ಉಳಿದಂತೆ ಪ್ರಸಾರವಾಗುವ ಸಂಗೀತಗಳೆಂದರೆ– ಶಾಸ್ತ್ರೀಯ, ಲಘು ಶಾಸ್ತ್ರೀಯ, ಸುಗಮ ಸಂಗೀತ, ಪಾಶ್ಚಾತ್ಯ ಸಂಗೀತ ಹಾಗೂ ಚಿತ್ರ ಸಂಗೀತ.

ಎಲ್ಲ ಕೇಂದ್ರಗಳಲ್ಲೂ ಸಂಗೀತಕ್ಕೆ ಹೆಚ್ಚು ಪ್ರಾಧಾನ್ಯ. ಶೇ. 40ರಷ್ಟು ಪ್ರಸಾರದ ವೇಳೆ ಸಂಗೀತಕ್ಕೆಂದೇ ಮುಡಿಪಾಗಿರುತ್ತದೆ. ಶಾಸ್ತ್ರೀಯ, ಲಘು ಶಾಸ್ತ್ರೀಯ ಮತ್ತು ಸುಗಮ ಸಂಗೀತಕ್ಕೆ ಧ್ವನಿಪರೀಕ್ಷೆ ನಿಗದಿಪಡಿಸಲಾಗಿದೆ. ಆಕಾಶವಾಣಿ ನಿಲಯಗಳಿಂದ ಸಂಗೀತವನ್ನು ಪ್ರಸಾರ ಮಾಡಲಿಚ್ಛಿಸುವ ಎಲ್ಲಾ ಕಲಾವಿದರು ಈ ಧ್ವನಿಪರೀಕ್ಷೆಯಲ್ಲಿ ಉತ್ತೀರ್ಣರಾಗ ಬೇಕಾಗುತ್ತದೆ. ಇದರಲ್ಲಿ ಶ್ರೇಣಿಗಳಿವೆ. ಬಿ ಶ್ರೇಣಿಯಿಂದ ಬಿಹೈ ಟಾಪ್ ರ್‍ಯಾಂಕಿಂಗ್ ಶ್ರೇಣಿಯವರೆಗೂ ಕಲಾವಿದರನ್ನು ವರ್ಗೀಕರಿಸಲಾಗುತ್ತದೆ. ಶ್ರೇಣಿಗನುಸಾರವಾಗಿ ಅವರಿಗೆ ಅವಕಾಶಗಳನ್ನು ನೀಡಲಾಗುತ್ತದೆ.

ಸಂಗೀತಕ್ಕೆ ಧ್ವನಿಪರೀಕ್ಷೆಯಿರುವಂತೆ ನಾಟಕದಲ್ಲಿ ಭಾಗವಹಿಸಲು ಉತ್ಸುಕರಾದ ಕಲಾವಿದರಿಗೂ ಧ್ವನಿಪರೀಕ್ಷೆ ಇರುತ್ತದೆ. ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರು ನಾಟಕಗಳಲ್ಲಿ ಭಾಗವಹಿಸುವ ಅವಕಾಶವನ್ನು ಪಡೆದುಕೊಳ್ಳುತ್ತಾರೆ. ಇಲ್ಲೂ ಬಿ, ಬಿಹೈ.ಎ ಮತ್ತು ಟಾಪ್ ರ್‍ಯಾಂಕಿಂಗ್ ಎಂಬ ಶ್ರೇಣಿಗಳಿವೆ. ಶ್ರೇಣಿಗನುಸಾರವಾಗಿ ಕಲಾವಿದರು ಬಾನುಲಿ ನಾಟಕಗಳಲ್ಲಿ ಭಾಗವಹಿಸಲು ಅವಕಾಶಗಳನ್ನು ಪಡೆದುಕೊಳ್ಳುತ್ತಾರೆ.

ಆಕಾಶವಾಣಿಯು ಸಾಹಿತಿ ಹಾಗೂ ಕಲಾವಿದರಿಗೆ ಒಂದು ಉತ್ತಮ ವೇದಿಕೆಯಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಂಗೀತಗಾರರನ್ನು ಹಾಗೂ ಸಾಹಿತಿಗಳನ್ನು ಗುರುತಿಸಿರುವ ಆಕಾಶವಾಣಿಯ ಸಾಧನೆ ಎಲ್ಲರಿಗೂ ವೇದ್ಯವಾದ ಸಂಗತಿ. ಅನೇಕ ಪ್ರಕಾರಗಳಲ್ಲಿ ಸೃಜನಶೀಲ ಸಾಹಿತ್ಯದ ನಿರ್ಮಿತಿಗೆ, ವಾದ್ಯವೃಂದ ಸಂಯೋಜನೆಗೆ, ಆಕಾಶವಾಣಿ ಮೂಲ ಪ್ರೇರಣೆಯಾಗಿದೆಯೆಂದು ಸಾಹಿತಿಗಳು ಹಾಗೂ ಸಂಗೀತಗಾರರು ಅನೇಕ ಸಂದರ್ಭದಲ್ಲಿ ನೆನೆಪಿಸಿಕೊಂಡಿದ್ದಾರೆ.

ಆಕಾಶವಾಣಿಯಲ್ಲಿ ಧ್ವನಿಪರೀಕ್ಷೆ ನಿರಂತರವಾಗಿ ನಡೆಯುವ ಒಂದು ಪ್ರಕ್ರಿಯೆ. ಹೊಸಹೊಸ ಕಲಾವಿದರನ್ನು ಹುಟ್ಟುಹಾಕುವ ಈ ಪ್ರಯತ್ನದಲ್ಲಿ ಹೊಸ ಕಲಾವಿದರು ಗುರುತಿಸಲ್ಪಟ್ಟು, ಪ್ರಸಾರದಲ್ಲಿ ಹೊಸ ನೀರನ್ನು ತರುವ ಯಶಸ್ಸನ್ನು ಕೊಟ್ಟಿದ್ದಾರೆ.

**ವಿವಿಧ ಭಾರತಿ ವಾಣಿಜ್ಯ ಕೇಂದ್ರ :** ಕರ್ನಾಟಕದಲ್ಲಿ ಎರಡು ವಿವಿಧ ಭಾರತಿ ಕೇಂದ್ರಗಳು ಕೆಲಸ ಮಾಡುತ್ತಿವೆ. ರಾಜಧಾನಿಯಲ್ಲಿರುವ ವಿವಿಧ ಭಾರತಿ ಒಂದು ಸ್ವತಂತ್ರ ಕೇಂದ್ರವಾಗಿ ಕೆಲಸ ಮಾಡುತ್ತಿದ್ದರೆ, ಧಾರವಾಡದಲ್ಲಿನ ಕೇಂದ್ರ ಧಾರವಾಡ ಮುಖ್ಯ ವಾಹಿನಿಯ ಒಂದು ಅಂಗವಾಗಿ ಕಾರ್ಯ ನಿರ್ವಹಿಸುತ್ತದೆ. ವಿವಿಧ ಭಾರತಿಯೆಂದರೆ ವಾಣಿಜ್ಯ ವಾಹಿನಿ. ಇಲ್ಲಿ ಮನರಂಜನೆಗೆ ಹೆಚ್ಚಿನ ಪ್ರಾಧಾನ್ಯ. ಹೀಗಾಗಿ ಎಲ್ಲಾ ಕಾರ್ಯಕ್ರಮಗಳು ವಾಣಿಜ್ಯ ನೀತಿಯ ಮೇರೆಗೆ ರೂಪಿತವಾಗುತ್ತವೆ. ಕರ್ನಾಟಕದ ರಾಜ್ಯದಲ್ಲಿ ನಡೆಯುವ ಎಲ್ಲ ಜಾಹೀರಾತು ವ್ಯವಹಾರಗಳನ್ನು ಬೆಂಗಳೂರಿನ ವಾಣಿಜ್ಯ ವಿಭಾಗ ನಿರ್ವಹಿಸುತ್ತದೆ. ಸಂಗೀತ ಕ್ಷೇತ್ರದಲ್ಲಿ ಅಗ್ರಗಣ್ಯರಾದ ದಿವಂಗತ ವಿ. ದೊರೆಸ್ವಾಮಿ ಅಯ್ಯಂಗಾರ್, ಎಸ್.ಪಿ. ನಟರಾಜನ್, ಶೆಲ್ವಪಿಳ್ಳೆ ಅಯ್ಯಂಗಾರ್, ಆರ್.ಕೆ ಶ್ರೀಕಂಠನ್, ಎಚ್.ಕೆ. ನಾರಾಯಣ ಮುಂತಾದವರು ಆಕಾಶವಾಣಿಯ ಹೆಮ್ಮೆಯ ಆಸ್ತಿಯಾಗಿದ್ದರು. ವಿ.ಸೀ., ಶ್ರೀರಂಗ, ವಸಂತಕವಲಿ ಸ್ಪೋಕನ್ ವರ್ಡ್ ಕಾರ್ಯಕ್ರಮಗಳಿಗೆ ಘನತೆಯನ್ನು ತಂದವರು. ಎಂ.ಟಿ. ಜಯಣ್ಣ ಗ್ರಾಮೀಣ ಪ್ರದೇಶಗಳಲ್ಲಿ ಮನೆಮಾತಾಗಿದ್ದರು. ಹೀಗೆ ಹಲವಾರು ದಿಗ್ಗಜರು ಬೆಂಗಳೂರು ನಿಲಯಕ್ಕೆ ಕಳಶಪ್ರಾಯರಾಗಿದ್ದು ನಿಲಯದ ಕೀರ್ತಿಯನ್ನು ಹೆಚ್ಚಿಸಿದರು.

ಬೆಂಗಳೂರು ನಿಲಯ ಆಕಾಶವಾಣಿ ವಿವಿಧ ಪ್ರಕಾರದ ಕಾರ್ಯಕ್ರಮಗಳಲ್ಲಿ ಹೊಸತನವನ್ನು ತರುವಲ್ಲಿ ಶ್ರಮಿಸಿರುವುದು ನಾಡಿನಾದ್ಯಂತ ಜನಜನಿತವಾದ ಸಂಗತಿ. ನಾಟಕಗಳಲ್ಲಿ ಸಂಗೀತ ಕಾರ್ಯಕ್ರಮಗಳಲ್ಲಿ ಹಾಗೂ ರೂಪಕ ನಿರ್ಮಿತಿಯಲ್ಲಿ ಹೊಸತನವನ್ನು ಮೆರೆದಿದೆ. ಬೆಂಗಳೂರು ನಿಲಯದ ಪ್ರಮುಖ ಕೊಡುಗೆಯೆಂದರೆ ದ್ವಿಮುಖ ಸಂವಹನದ ವ್ಯವಸ್ಥೆಯನ್ನು ಅತ್ಯಂತ ಯಶಸ್ವಿಯಾಗಿಸಿದ್ದು. ದೂರದರ್ಶನದ ಆಕರ್ಷಣೆಗೆ ಒಳಗಾಗಿ ಲಕ್ಷಾಂತರ ಸಂಖ್ಯೆಯಲ್ಲಿ ಕೇಳುಗರು. ದೃಶ್ಯ ಮಾಧ್ಯಮದವರೆಗೆ ವಲಸೆ ಹೋಗುತ್ತಿದ್ದ ಸಂದರ್ಭದಲ್ಲಿ ಅವರನ್ನು ಮತ್ತೆ ಶ್ರವ್ಯ ಮಾಧ್ಯಮದೆಡೆಗೆ ತರುವ 'ನಿಸರ್ಗ ಸಂಪದ' ಒಂದು ಅಪೂರ್ವ ಪ್ರಯತ್ನ. ಪ್ರಕೃತಿ ಶಿಕ್ಷಣ ಹಾಗೂ ಸಾಮಾಜಿಕ ಅರಣ್ಯ ಕುರಿತ ಈ ಸರಣಿ ಕಾರ್ಯಕ್ರಮ 13 ಕಂತುಗಳಲ್ಲಿ ಪ್ರಸಾರವಾಯಿತು. ಇದಕ್ಕೆ ದೊರಕಿದ ಪ್ರತಿಕ್ರಿಯೆ ಅದ್ಭುತ. ಪ್ರಪ್ರಥಮ ಬಾರಿ ಬೆಂಗಳೂರು ಶ್ರೋತೃ ಸಂಶೋಧನಾ ವಿಭಾಗಕ್ಕೆ ಈ ಸರಣಿಯಿಂದಾದ ಪ್ರಭಾವ, ಪರಿಣಾಮಗಳನ್ನು ವ್ಯವಸ್ಥಿತವಾಗಿ ಸಮೀಕ್ಷಿಸಿ ತಯಾರಿಸಿದ ವರದಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮನ್ನಣೆಯನ್ನು ಪಡೆಯಿತು. ಈ ಸರಣಿ ಬಾರಿಸಿದ ಜಯಭೇರಿಯನ್ನು ಗುರುತಿಸಿದ ದೆಹಲಿಯಲ್ಲಿರುವ ಮಹಾ ನಿರ್ದೇಶನಾಲಯ ಇದನ್ನು ಇತರ ರಾಜ್ಯಗಳಲ್ಲಿಯೂ ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಿ ಪ್ರಸಾರ ಮಾಡಬೇಕೆಂಬ ಆದೇಶವನ್ನು ಹೊರಡಿಸಿತು. ಬೇರೆ ಭಾಷೆಗಳಲ್ಲಿ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು. ಈ ಸರಣಿಯಲ್ಲಿನ ಹೊಸತನವೆಂದರೆ ಪೂರ್ವಭಾವಿಯಾಗಿ, ಪ್ರಕರಣೆಗಳ ಮೂಲಕ ಸರಣಿಯ ಬಗ್ಗೆ ತಿಳಿಸಿ, ಆಸಕ್ತ ಶ್ರೋತೃಗಳನ್ನು ನೋಂದಾಯಿಸಿಕೊಂಡರು. 15,000 ಶ್ರೋತೃಗಳು ಕಾರ್ಯಕ್ರಮಕ್ಕೆ ನೋಂದಾಯಿಸಿಕೊಂಡಿದ್ದರಲ್ಲದೆ, ಸರಣಿಯು ಮುಕ್ತಾಯವಾದ ನಂತರ ಕೊಟ್ಟ ಮುಕ್ತ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದವರಿಗೆ ಪ್ರಶ್ನೆಗಳನ್ನು ಬಾನುಲಿ ಮೂಲಕ ಕೊಡಲಾಯಿತು. ಅವುಗಳನ್ನು ಶ್ರೋತೃಗಳು ಬರೆದುಕೊಂಡು, ಉತ್ತರಿಸಿ ಆಕಾಶವಾಣಿಗೆ ಕಳುಹಿಸಬೇಕಿತ್ತು. ಅತಿ ಹೆಚ್ಚು ಅಂಕ ಗಳಿಸಿದ 500 ಶ್ರೋತೃಗಳಿಗೆ ಬಹುಮಾನವನ್ನು ಕೊಡಲಾಯಿತು.

ಬೆಂಗಳೂರಿನಲ್ಲಿ ಪ್ರಾರಂಭವಾದ ಈ ಪರಂಪರೆ ರಾಷ್ಟ್ರಾದ್ಯಂತ ಜನಪ್ರಿಯವಾಯಿತು. ಇದಕ್ಕೂ ಮುಂಚೆ 1977ರಲ್ಲಿ ಎಂ.ಟಿ. ಜಯಣ್ಣನವರು ಕೃಷಿಗೆ ಸಂಬಂಧಿಸಿದಂತೆ ಇಂತಹ ಒಂದು ಕಾರ್ಯಕ್ರಮ ಸರಣಿಯನ್ನು ಮಾಡಿದ್ದು ದಾಖಲೆ. ಆದರೆ ರಾಜ್ಯಾದ್ಯಂತ ಆದಂತಹ ಪ್ರಪ್ರಥಮ ಪ್ರಯೋಗವಿದು. ಶ್ರೀಮತಿ ನಿರ್ಮಲಾ ದೇವಿಯವರು ಪರಿಸರಕ್ಕೆ ಸಂಬಂಧಿಸಿದಂತೆ ಇಂತಹ ಒಂದು ಸರಣಿಯನ್ನು ಮಕ್ಕಳಿಗೆ ಮಾಡಿದ್ದು ಇದೇ ಜಾಡಿನಲ್ಲಿ ಬರುವ ಒಂದು ಉತ್ತಮ ಪ್ರಯೋಗ ಆದರೆ ಟ್ರೆಂಡ್‌ಸೆಟರ್ ಆದದ್ದು 'ನಿಸರ್ಗಸಂಪದ' ಕಾರ್ಯಕ್ರಮ.

ಇಂದಿಗೂ ಬೆಂಗಳೂರಿನ ಆಕಾಶವಾಣಿ, ಈ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಬಾನುಲಿ ಕಾರ್ಯಕ್ರಮಗಳ ಪ್ರಭಾವದ ಬಗ್ಗೆ ಇಲ್ಲಿ ಹೆಚ್ಚಿನ ಅಧ್ಯಯನಗಳು ಆಗಿವೆ.

ನಮ್ಮಲ್ಲಿ ಪ್ರಸಾರವಾಗುವ ಸ್ಪಂದನ, ಫೋನ್–ಇನ್, ಭಾವಗೀತೆ, ಜನಪದ ಸಂಗೀತ, ಶಾಸ್ತ್ರೀಯ ಸಂಗೀತ, ಜನಪ್ರಿಯ ಆರೋಗ್ಯ ಕಾರ್ಯಕ್ರಮಗಳು, ಅದರಲ್ಲೂ 'ರೇಡಿಯೋ ಡಾಕ್ಟರ್' ರಾಜ್ಯಾದ್ಯಂತ ಬಹಳ ಜನಪ್ರಿಯತೆಯನ್ನು ಗಳಿಸಿದೆ. ಈ ನಿಲಯದ ಸೃಜನಾತ್ಮಕತೆ ಎಷ್ಟೆಂದರೆ ಮಹಾ ನಿರ್ದೇಶಕರು "ಬೆಂಗಳೂರು ನಿಲಯದ ಒಂದು ಪ್ರಯೋಗ ಶಾಲೆ ಇದ್ದಂತೆ ಅಲ್ಲಿ ಪ್ರಯೋಗಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಎಂದು ಪ್ರಶಂಸಿಸಿ ಬೇರೆ ನಿಲಯಗಳು ಬೆಂಗಳೂರು ರೂಢಿಸಿಕೊಂಡಿರುವ ತಂತ್ರಗಳನ್ನು ಅಳವಡಿಸಿಕೊಳ್ಳುವರೆಂದು ಸೂಚಿಸಿದ್ದರು.

ಬೆಂಗಳೂರು ಅಧಿಕ ಪ್ರೇಷಕ ಶಕ್ತಿ 18, ಸೆಪ್ಟೆಂಬರ್ 1989ರಂದು ಪಡೆದುಕೊಂಡಿತು. ಇದರಿಂದ (200ಕಿವ್ಯಾ. ಬೆಂಗಳೂರು ನಿಲಯದ ಧ್ವನಿ ತರಂಗಗಳು ಇಡೀ ರಾಜ್ಯವನ್ನಾವರಿಸುವ ಶಕ್ತಿಯನ್ನು ಪಡೆದುಕೊಂಡಿತು. ನಿಲಯದ ವ್ಯಾಪ್ತಿಗೆ ಬರುವ ಪ್ರದೇಶಗಳೆಂದರೆ ಬೆಂಗಳೂರಿನ ಗ್ರಾಮಾಂತರ ಪ್ರದೇಶಗಳು, ಕೋಲಾರ, ತುಮಕೂರು, ಮಂಡ್ಯ, ಹಾಸನ, ಮೈಸೂರು, ನೆರೆ ರಾಜ್ಯದ ಆಂಧ್ರ ತಮಿಳುನಾಡಿನ ಕೆಲವು ಪ್ರದೇಶಗಳು.

ನಿಲಯದ ಪರಿಧಿಯಲ್ಲಿ ಬರುವ ಜನಸಂಖ್ಯೆ ಸುಮಾರುಕೋಟಿ. ಅದರಲ್ಲಿ ರೇಡಿಯೋ ಹೊಂದಿರುವ ಮನೆಗಳ ಸಂಖ್ಯೆ 5 ಲಕ್ಷ. ವಲಯದ ವಿಸ್ತೀರ್ಣ 1,27,900 ಚ.ಕಿಮೀ. ಶೇ. 1ರಷ್ಟು ಆಲಿಸುವಿಕೆ ಎಂದರೆ 2.8ಲಕ್ಷ ಕೇಳುಗರು ಎಂದರ್ಥ.

ಬೆಂಗಳೂರು ನಿಲಯದ ವಿಶೇಷವೆಂದರೆ ಪ್ರತ್ಯೇಕವಾದ ವಿಜ್ಞಾನ ಹಾಗೂ ಕುಟುಂಬ ಕಲ್ಯಾಣ ವಿಭಾಗಗಳಿರುವುದು. ಕಳೆದ ಕೆಲ ವರ್ಷಗಳವರೆಗೂ ಈ ವಿಭಾಗಗಳಿಗೆ ಪರಿಣಿತ ಅಧಿಕಾರಿಗಳಿದ್ದರು. ಆದರೆ ಈಗ ಕಾರ್ಯಕ್ರಮ ನಿರ್ವಾಹಕರೇ ಈ ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದಾರೆ.

ಬೆಂಗಳೂರು ನಿಲಯದ ಪ್ರತಿಷ್ಠಿತ ವಿಭಾಗಗಳೆಂದರೆ ಶಾಸ್ತ್ರೀಯ ಸಂಗೀತ ಹಾಗೂ ಭಾಷಣಗಳದ್ದು. ಸಂಗೀತ ಕ್ಷೇತ್ರದ ಹೆಸರುವಾಸಿಯಾದ ಎಲ್ಲಾ ಕಲಾವಿದರು, ವಿವಿಧ ಕ್ಷೇತ್ರಗಳಲ್ಲಿ ವಿದ್ವಾಂಸರ ಭಾಷಣ, ಸಂದರ್ಶನ ಹಾಗೂ ಚರ್ಚೆಯ ಭಾಗವಹಿಸುವುದು ನಿಲಯದ ಕೀರ್ತಿಯನ್ನು ಹೆಚ್ಚಿಸಿದೆ.

ಆಕಾಶವಾಣಿ ನಿಲಯ ಶಬ್ದಭಂಡಾರದಲ್ಲಿ ಪ್ರಸಿದ್ಧ ಧ್ವನಿ ಮುದ್ರಿಕೆಗಳಿವೆ. ಸಂಗೀತ, ನಾಟಕ, ಭಾಷಣ ಹೀಗೆ ಹತ್ತು ಹಲವಾರು ಪ್ರಕಾರದ ಕಾರ್ಯಕ್ರಮಗಳು ಈ ಭಂಡಾರದಲ್ಲಿ ಲಭ್ಯ. ಭಂಡಾರಕ್ಕೆ ಇಂದಿನ ಗಣ್ಯರ ಧ್ವನಿಮುದ್ರಿಕೆಗಳು ಆಗಿಂದಾಗ ಸೇರ್ಪಡೆಯಾಗುತ್ತಿರುತ್ತವೆ.

ಬೆಂಗಳೂರು ನಿಲಯದಿಂದ ಇತ್ತೀಚೆಗೆ ಪ್ರಸಾರವಾದ ಬೆಳಕಿನಂಗಳ ಎಂಬ ಸೋಪ್‌ಅಪೇರಾ ಎರಡು ವರ್ಷಗಳ ಕಾಲ ಸತತವಾಗಿ ಶ್ರೋತೃಗಳನ್ನು ತಣಿಸಿದ್ದು ಅವರಲ್ಲಿನ ಆಸಕ್ತಿಯು ಸಡಿಲವಾಗದಂತೆ ನೋಡಿಕೊಡಿದ್ದು ಒಂದು ಹೊಸ ದಾಖಲೆ. ಅಂತೆಯೇ ಖ್ಯಾತ ವಚನಕಾರರ ವಚನಗಳನ್ನು ಅಮೃತ ಸಿಂಚನ ಎಂಬ ಶೀರ್ಷಿಕೆಯಡಿಯಲ್ಲಿ ಸು. 190 ವಚನಗಳನ್ನೊಳಗೊಂಡ ಹತ್ತು ಸಿ.ಡಿ.ಗಳನ್ನು ನಿರ್ಮಿಸಿದ್ದು ಮತ್ತೊಂದು ದಾಖಲೆ. ಈ ಸಿ.ಡಿ. ಗಳಿಗೆ ಅಪಾರ ಬೇಡಿಕೆಯಿದ್ದು, ಇವುಗಳನ್ನು ಮಾರುಕಟ್ಟೆಗೆ ತರುವ ಬಗ್ಗೆ ಸಮಾಲೋಚನೆ ನಡೆಯುತ್ತಿದೆ.

ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕವಾಗಿ ಬದಲಾವಣೆಗಳನ್ನು ತರುವಲ್ಲಿ ಪರಿಣಾಮಕಾರಿಯಾದ ಮಾಧ್ಯಮವಾಗಿ ದುಡಿದಿರುವ ಕೀರ್ತಿ ಬೆಂಗಳೂರು ನಿಲಯದ್ದು.

ಮೂರು ಪ್ರಸಾರಗಳುಳ್ಳ ಈ ನಿಲಯದಿಂದ ಪ್ರತಿದಿನ ಸುಮಾರು ಹನ್ನೆರಡೂವರೆ ಗಂಟೆಗಳ ಕಾಲದ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಪ್ರಮುಖವಾಗಿ ಕನ್ನಡ, ನಂತರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಪ್ರಸಾರವಾಗುತ್ತವೆ. ಇದಲ್ಲದೆ ಅಲ್ಪಸಂಖ್ಯಾತರ ಭಾಷೆಗಳಾದ ಉರ್ದು, ಸಂಸ್ಕೃತ, ತಮಿಳು, ತೆಲುಗು ಮತ್ತು ಮಲೆಯಾಳಿ ಭಾಷೆಗಳಲ್ಲಿ ಕೂಡ ನಿಯಮಿತ ಕಾಲಕ್ಕೆ ಕಾರ್ಯಕ್ರಮಗಳು ಬಿತ್ತರವಾಗುತ್ತಿವೆ.

ಈ ನಿಲಯದಿಂದ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳ ಪೈಕಿ ಅತ್ಯಂತ ಜನಪ್ರಿಯ ವಾದುವುಗಳೆಂದರೆ, ಕನ್ನಡ ಚಿತ್ರಗೀತೆ, ಕನ್ನಡದಲ್ಲಿ ವಾರ್ತೆ, ಪ್ರದೇಶ ಸಮಾಚಾರ, ಫೋನ್-ಇನ್, ರೇಡಿಯೋ ಧಾರಾವಾಹಿಗಳು, ಭಕ್ತಿ ಸಂಗೀತ (ಗೀತಾರಾಧನ) ಮತ್ತು ಚಿಂತನ.

**ಆಕಾಶವಾಣಿಯಲ್ಲಿ ಲಭ್ಯವಿರುವ ಮುಖ್ಯ ವಾಹಿನಿಗಳು**

**(ಅ) ವಿವಿಧ ಭಾರತಿ :** 1950ರ ಆದಿಯಲ್ಲಿ ಆಕಾಶವಾಣಿಯಲ್ಲಿ ಚಿತ್ರಗೀತೆಗಳ ಪ್ರಸಾರವನ್ನು ರದ್ದು ಮಾಡಲ್ಪಟ್ಟಿತ್ತು. ಇದಕ್ಕೆ ಪ್ರಮುಖವಾದ ಕಾರಣವೆಂದರೆ ಚಿತ್ರಗೀತೆಗಳು ಮೌಳಿಕವಾಗಿ ಒಳ್ಳೆಯ ಸಂಸ್ಕೃತಿಯನ್ನು ಬಿಂಬಿಸುವಂತಹವಲ್ಲ ಮತ್ತು ಅದು ಬಹಳ ಕಳಪೆ ಸಂಗೀತದ ಪ್ರಕಾರವೆಂಬುದು. ಚಿತ್ರಗೀತೆಗಳು ಇಂದಿನಂತೆ ಅಂದೂ ಬಹಳ ಜನಪ್ರಿಯ ವಾಗಿದ್ದಂತಹ ಒಂದು ಕಾರ್ಯಕ್ರಮ. ಈ ಕ್ರಮದಿಂದಾಗಿ ಅಸಂಖ್ಯಾತ ಶ್ರೋತೃಗಳು ಆಕಾಶವಾಣಿಯನ್ನು ತೊರೆದು ಅಂದಿನ ಸಿಲೋನ್ (ಈಗ ಶ್ರೀಲಂಕ) ನಿಲಯಕ್ಕೆ ಚಿತ್ರಗೀತೆಗಳಿ ಗಾಗಿ ವಲಸೆ ಹೋದರು. ಇದರಿಂದ ಸಿಲೋನ್ ಬಹಳ ಜನಪ್ರಿಯ ವಾಹಿನಿಯಾಯಿತು. ಈ ಜನಪ್ರಿಯತೆಯಿಂದಾಗಿ ಆಕಾಶವಾಣಿ ಜಾಲದ ಪ್ರಾದೇಶಿಕ ನಿಯಮಗಳಿಗೆ ಶ್ರೋತೃಗಳ ಗಾತ್ರ ಇಳಿಮುಖವಾಗತೊಡಗಿತು. ಇದನ್ನು ತಡವಾಗಿ ಮನಗಂಡ ಆಕಾಶವಾಣಿ ಆಡಳಿತಾಧಿ ಕಾರಿಗಳು 2, ಅಕ್ಟೋಬರ್ 1957ರಲ್ಲಿ ಮನರಂಜನೆಗೆ ಮೀಸಲಾದ ವಿವಿಧ ಭಾರತಿ ವಾಹಿನಿಯನ್ನು ಪ್ರಾರಂಭಿಸಿದರು. ವಿವಿಧ ಭಾರತಿ ಪ್ರಸಾರದಲ್ಲಿ ಶೇ.90ರಷ್ಟು ಸಂಗೀತಕ್ಕೆ ಮೀಸಲು. ಅದರಲ್ಲೂ ಶೇ. 60ರಷ್ಟು ಚಿತ್ರಗೀತೆಗಳು, ಭಕ್ತಿ, ಸುಗಮ ಮತ್ತು ಜನಪದ ಸಂಗೀತಗಳೂ ಇದರಲ್ಲಿ ಪ್ರಸಾರವಾಗುತ್ತವೆ. ಆಡುಮಾತಿನ ಕಾರ್ಯಕ್ರಮಗಳು ಈ ವಾಹಿನಿ ಯಲ್ಲಿ ಶೇ. 10 ರಷ್ಟು ಮಾತ್ರ. ಇದು ನಾಟಕ, ಪ್ರಹಸನ, ಸಂದರ್ಶನ ಮುಂತಾದವುಗಳನ್ನು ಒಳಗೊಂಡಿರುತ್ತದೆ.

ವಿವಿಧ ಭಾರತಿಯ ಜನಪ್ರಿಯತೆಯನ್ನು ಮನಗಂಡ ಆಕಾಶವಾಣಿ, 1967 ನವೆಂಬರ್‌ನಿಂದ ಅದರಲ್ಲಿ ಜಾಹೀರಾತು ಪ್ರಸಾರವನ್ನು ಪ್ರಾರಂಭಿಸಿತು. ಅಲ್ಲದೆ ಪ್ರಾದೇಶಿಕ ಮಟ್ಟದಲ್ಲಿ ಅನೇಕ ವಿವಿಧ ಭಾರತಿ ನಿಲಯಗಳನ್ನು ಮೀಡಿಯಂ ವೇವ್‌ನಲ್ಲಿ ಪ್ರಾರಂಭಿಸಿತು. ಅಲ್ಲದೆ ಪ್ರಾದೇಶಿಕ ಮಟ್ಟದಲ್ಲಿ ಅನೇಕ ವಿವಿಧ ಭಾರತಿ ನಿಲಯಗಳನ್ನು ಮೀಡಿಯಂ ವೇವ್‌ನಲ್ಲಿ ಪ್ರಾರಂಭಿಸಿತು. ಪ್ರಾದೇಶಿಕ ಕೇಂದ್ರಗಳು ಸ್ಥಾಪನೆಯದದ್ದು ಪ್ರಾದೇಶಿಕ ಚಿತ್ರಗೀತೆಗಳಿಗೆ ಒಳ್ಳೆಯ ಚಾಲನೆ ದೊರಕಿದಂತಾಯಿತು. ಇಂದು ಒಟ್ಟು 40 ವಿವಿಧ ಭಾರತಿ ವಾಹಿನಿಗಳು ಕಾರ್ಯನಿರತವಾಗಿವೆ.

26 ಜನವರಿ 1985ರಿಂದ ಆಕಾಶವಾಣಿಯ ಮುಖ್ಯವಾಹಿನಿಗಳಲ್ಲಿಯೂ ಜಾಹೀರಾತು ಪ್ರಸಾರವನ್ನು ಪ್ರಾರಂಭಿಸಲಾಯಿತು. ಆ ಜಾಹೀರಾತುಗಳ ನಿರ್ವಹಣೆಯನ್ನು ವಿವಿಧ ಭಾರತಿ ವಾಣಿಜ್ಯ ಕೇಂದ್ರಗಳು ನೋಡಿಕೊಳ್ಳುತ್ತಿವೆ.

(ಆ) ವಿದೇಶಾಂಗ ಪ್ರಸಾರ ಸೇವೆ : ಭಾರತ ಹಾಗೂ ಹೊರಗಿನ ಪ್ರಪಂಚಕ್ಕೆ ಆಕಾಶವಾಣಿಯು ವಿದೇಶಾಂಗ ಪ್ರಸಾರ ಸೇವೆ ಪ್ರಾರಂಭಿಸಿದೆ. ಇಪ್ಪತ್ನಾಲ್ಕು ಭಾಷೆಗಳಲ್ಲಿ ಪ್ರತಿದಿನ 11 ಘಂಟೆಗಳು ವಿದೇಶಾಂಗ ವಿಭಾಗ ಪ್ರಸಾರ ಮಾಡುತ್ತದೆ. ಇಂಗ್ಲಿಷ್, 15 ವಿದೇಶ ಭಾಷೆಗಳು ಹಾಗೂ 8 ವಿವಿಧ ಭಾರತೀಯ ಭಾಷೆಗಳಲ್ಲಿ ಪ್ರಸಾರ ಕಾರ್ಯ ಅಹರ್ನಿಶಿ ನಡೆಯುತ್ತಿದೆ.

ಭಾರತದ ಬಗ್ಗೆ ಅದರ ಬದುಕು, ಚಿಂತನ, ಸಂಸ್ಕೃತಿ ಹಾಗೂ ಪರಂಪರೆಯ ಬಗ್ಗೆ ಹೊರ ಜಗತ್ತಿನಲ್ಲಿರುವವರಿಗೆ ಅರಿವು ಮೂಡಿಸುವುದು ಈ ವಾಹಿನಿಯ ಪ್ರಮುಖ ಉದ್ದೇಶ. ಅನಿವಾಸಿ ಭಾರತೀಯರಿಗಾಗಿ ಉರ್ದು, ಬಂಗಾಲಿ, ಪಂಜಾಬಿ, ಸಿಂಧಿ, ತಮಿಳು, ಕನ್ನಡ, ತೆಲುಗು ಮತ್ತು ಗುಜರಾತಿ ಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ಪ್ರಸಾರಿಸಲಾಗುತ್ತಿದೆ. ಕಾರ್ಯಕ್ರಮಗಳ ವಿನ್ಯಾಸ ಬಗೆಬಗೆಯದಾಗಿರುತ್ತದೆ. ಪ್ರಚಲಿತ ವಿದ್ಯಮಾನಗಳನ್ನು ಕುರಿತ ವಿವರಣೆ, ಸುದ್ದಿ, ಕ್ರೀಡಾವಾರ್ತೆ, ಸಾಹಿತ್ಯ ಹೀಗೆ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಎಲ್ಲ ಬಗೆಯ ಸಂಗೀತ ಪ್ರಸಾರವಾಗುತ್ತದೆ. ಇಂಡಿಯಾ ಕಾಲಿಂಗ್ ಎಂಬ ನಿಯತಕಾಲಿಕೆಯನ್ನು ಈ ವಿಭಾಗ ಹೊರತರುತ್ತದೆ. ಇದನ್ನು ಹೊರದೇಶದ ಶ್ರೋತೃಗಳಿಗೆ ಮುಕ್ತಟೆಯಾಗಿ ಪ್ರಸಾರಮಾಡಲಾಗುವುದು.

**(ಇ) ಸುದ್ದಿ ವಿಭಾಗ :** ಆಕಾಶವಾಣಿಯ ಪ್ರಮುಖ ಕ್ರಿಯೆಗಳಲ್ಲಿ ಒಂದು ಕಾಲಕಾಲಕ್ಕೆ ಸುದ್ದಿಯನ್ನು ಬಿತ್ತರಿಸುವುದು. ಇದನ್ನು ಆಕಾಶವಾಣಿ 1938 ರಿಂದ ಸತತವಾಗಿ ನಿರ್ವಹಿಸುತ್ತಾ ಬಂದಿದೆ. ದೇಶ ಹಾಗೂ ವಿದೇಶಗಳಲ್ಲಿನ ಆಗುಹೋಗುಗಳನ್ನು ಪ್ರಸಾರಿಸುವ ಏಕೈಕ ಬೃಹತ್ ಮಾಧ್ಯಮ ಆಕಾಶವಾಣಿ. ಕೇಂದ್ರ ಸುದ್ದಿ ವಿಭಾಗವು 19 ಭಾಷೆಗಳಲ್ಲಿ ಪ್ರತಿದಿನ 89 ವಾರ್ತಾ ಸಂಚಿಕೆಗಳ್ನು ಬಿತ್ತರಿಸುತ್ತಿದೆ. ಇದಲ್ಲದೆ 41 ಪ್ರಾದೇಶಿಕ ಸುದ್ದಿ ವಿಭಾಗಗಳು, ದಿನಂಪ್ರತಿ 134 ವಾರ್ತಾಂಶಗಳನ್ನು ಹಾಗೂ 7 ವಿದೇಶಿ ವಾರ್ತಾ ಸಂಚಿಕೆಗಳನ್ನು ಬಿತ್ತರಿಸುತ್ತದೆ. ಜೊತೆಗೆ ವಿದೇಶಿ ಕೇಳುಗರಿಗಾಗಿ 24 ಭಾಷೆಗಳಲ್ಲಿಯೂ ಸುದ್ದಿ ವಿಭಾಗ ವಾರ್ತೆಗಳನ್ನು ಪ್ರಸಾರಿಸುತ್ತಿದೆ.

ಇಂಗ್ಲಿಷ್‌ನಲ್ಲಿ ಸ್ಪಾಟ್‌ಲೈಟ್ ಹಾಗೂ ಹಿಂದಿಯಲ್ಲಿ ಮೂಡಿಬರುವ ಪ್ರಸ್ತುತ ವಿಷಯ ಸಮಸ್ಯೆಗಳಿಗೆ ಸ್ಪಂದಿಸುವ ಪ್ರತಿ ದಿನದ ಕಾರ್ಯಕ್ರಮಗಳೆಂದರೆ, ಕರೆಂಟ್ ಅಫೈರ್ಸ್, ಪ್ರತಿ ಭಾನುವರ ಪ್ರಸಾರವಾಗುವ ಕಾರ್ಯಕ್ರಮ. ಇದರಲ್ಲಿ ಸಮಾಜದ ಎಲ್ಲ ವಿಭಾಗದ ಗಣ್ಯ ವ್ಯಕ್ತಿಗಳು ಪಾಲ್ಗೊಂಡು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ ಹಾಗೂ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ.

ಇತ್ತೀಚೆಗೆ ಗಮನಾರ್ಹವಾದ ಬದಲಾವಣೆಗಳೆಂದರೆ, ಬೆಳ್ಳಿಗೆ ಹಾಗೂ ರಾತ್ರಿ ಬಿತ್ತರವಾಗುವ ವಾರ್ತಾ ಸಂಚಿಕೆಗಳಲ್ಲಿ ಕಂಡುಬರುವ ಹೊಸ ಶೈಲಿಯ ಹೆಚ್ಚು ಧ್ವನಿವರದಿ (ವಾಯ್ಸ್‌ಟೆಸ್ಟ್), ರೇಡಿಯೋ ಸೇತುವೆ ಕಾರ್ಯಕ್ರಗಳು (ರೇಡಿಯೊ ಬ್ರಿಡ್ಜ್ ಪ್ರೋಗ್ರಾಮ್). ಕೇಂದ್ರ ಸುದ್ದಿ ವಿಭಾಗ ಹೊಸತನವನ್ನು ತರುವ ಪ್ರಯತ್ನವನ್ನು ನಿರಂತವಾಗಿ ನಡೆಸುತ್ತಿದೆ.

**(ಈ) ರಾಷ್ಟ್ರೀಯ ವಾಹಿನಿ :** 18 ಮೇ 1988ರಂದು ದೆಹಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಿಂದ ರಾಷ್ಟ್ರೀಯ ವಾಹಿನಿ ತನ್ನ ಪ್ರಸಾರವನ್ನು ಪ್ರಾರಂಭಿಸಿತು. ಆಕಾಶವಾಣಿಯ ಅನೇಕ ವರ್ಷಗಳ ಕನಸು ಈ ವಾಹಿನಿಯ ಅನುಷ್ಠಾನದಿಂದ ನನಸಾದಂತಾ ಯಿತು. ಇದು ರಾತ್ರಿ ವೇಳೆಯಲ್ಲಷ್ಟೇ ಪ್ರಸಾರಿಸುವ ಒಂದು ವಾಹಿನಿ. ಇದಕ್ಕೆ ರಾಷ್ಟ್ರೀಯ ವ್ಯಕ್ತಿತ್ವವಿದೆ. ಕಾರಣ ದೇಶದ ಎಲ್ಲ ಮೂಲೆಗಳಿಂದ ಇದು ಕಲಾವಿದರನ್ನು ಗುರುತಿಸಿ ಅವರ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ.

ರಾಷ್ಟ್ರೀಯ ವಾಹಿನಿಯನ್ನು ಅನುಷ್ಠಾನಕ್ಕೆ ತರುವ ಪ್ರಯತ್ನದ ಹಿಂದಿದ್ದ ಮುಖ್ಯ ಉದ್ದೇಶವೆಂದರೆ, ಪ್ರಾದೇಶಿಕ ನಿಲಯಗಳನ್ನು ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಸಾರದಿಂದ ಬಿಡುವು ಮಾಡುವುದು. ಆದರೆ, ಅದು ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಆದರೆ ರಾಷ್ಟ್ರೀಯ ವಾಹಿನಿ ಉತ್ಕೃಷ್ಟ ಮಟ್ಟದ ಹಿಂದೂಸ್ತಾನಿ, ಶಾಸ್ತ್ರೀಯ, ಪಾಶ್ಚಿಮಾತ್ಯ ಸಂಗೀತವನ್ನು ವಿಶೇಷ ವಾರ್ತಾ ಸಂಚಿಕೆಗಳು, ಮುಂತಾದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾ ಬಂದಿದೆ. ನಿದ್ರೆ ಬಾರದಂಥವರಿಗೆ, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರಿಗೆ, ರಾತ್ರಿ ಬಹುದೂರ ಪ್ರಯಾಣಿಸುವ ವಾಹನ ಚಾಲಕರಿಗೆ, ಇದು ಒಂದು ಉಪಯುಕ್ತ ವಾಹಿನಿ. ಈ ಅಧಿಕ ಶಕ್ತಿಯ ಪ್ರಸಾರ ನಾಗಪುರದಲ್ಲಿದೆ. ಈ ವಾಹಿನಿ 1566ಕೆ.ಎಚ್. ಜಾರ್ಜ್ ಅಥವಾ 191-6 ಮೀಟರಿನಲ್ಲಿ ಲಭ್ಯ.

**(ಉ) ಶ್ರೋತೃ ಸಂಶೋಧನೆ :** ಯಾವುದೇ ಮಾಧ್ಯಮ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಬೇಕಾದ ಪ್ರಮುಖ ಸಂಪನ್ಮೂಲವೆಂದರೆ ತನಗಿರುವ ಬಳಕೆದಾರರ ಬಗೆಗಿನ ಮಾಹಿತಿ. ನಿರಂತರವಾಗಿ ಪ್ರಸಾರವಾಗುವ ಅಧ್ಯಯನ ಕಾರ್ಯಕ್ರಮಗಳಿಗೆ ಕೇಳುಗರು ಎಷ್ಟು, ಈ ಕಾರ್ಯಕ್ರಮಗಳ ಬಗ್ಗೆ ಅವರ ಅಭಿಪ್ರಾಯಗಳೇನು, ಹಾಲಿ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳ ಸ್ವರೂಪ ಸರಿಯಾದದ್ದೇ, ಪ್ರಸಾರ ವೇಳೆ, ಅವಧಿ ಬಗೆಗೆ ಕೇಳುಗರ ಅಭಿಪ್ರಾಯಗಳೇನು, ಯಾವ ರೀತಿಯ ವಿಷಯಕ್ಕೆ ಸಂಬಂಧಿಸಿದ ಕಾರ್ಯಕ್ರಮ ಹೆಚ್ಚು ಜನಪ್ರಿಯ, ಕಾರ್ಯಕ್ರಮಗಳಲ್ಲಿ ಅಡಗಿರುವ ಸಂದೇಶಗಳು ಕೇಳುಗರನ್ನು ಮುಟ್ಟಲು ಸಾಧ್ಯವೇ - ಈ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸಂಶೋಧನೆಯನ್ನು ಶ್ರೋತೃ ಸಂಶೋಧನಾ ವಿಭಾಗ ಮಾಡಿಕೊಂಡು ಬಂದಿದೆ. ಆಕಾಶವಾಣಿಯ ಪ್ರಸಾರ, ಶೂನ್ಯ ಸಂದರ್ಭದಲ್ಲಾಗುತ್ತಿಲ್ಲ. ಆದರೆ ವಾಸ್ತವಾಂಶದ ನೆಲೆಯಲ್ಲಾಗುತ್ತಿದೆ ಎಂಬುದನ್ನು ಸಂಶೋಧನಾ ವರದಿಗಳು ಆಗಿಂದಾಗ್ಗೆ ನಿರೂಪಿಸುತ್ತವೆ.

ಪ್ರತಿಯೊಂದು ನಿಲಯವೂ ಅಲ್ಲಿಯ ಕೇಳುಗರಾರು ಅವರ ಬೇಡಿಕೆಗಳೇನು ಯಾವ ರೀತಿಯ ಕಾರ್ಯಕ್ರಮಗಳು ರೂಪಿತವಾಗಬೇಕೆಂಬ ಬೇಡಿಕೆಯನ್ನು ಈ ವಿಭಾಗ ಕಾಲಕಾಲಕ್ಕೆ ಸಮೀಕ್ಷಿಸಿ ಸೂಚಿಸುತ್ತದೆ. ಒಂದು ನಿಲಯದ ಸ್ಥಾಪನೆಗೆ ಪೂರ್ವಭಾವಿಯಾಗಿ ಕೂಡ ಸಮೀಕ್ಷೆ ನಡೆಸಿ, ಅಲ್ಲಿ ಬಾನುಲಿ ನಿಲಯಕ್ಕೆ ಯಾವ ರೀತಿಯ ಪ್ರೋತ್ಸಾಹ ಸಿಗಬಹುದು ಎಂಬುದನ್ನು ನಿರೂಪಿಸಲು ಪ್ರಯತ್ನಿಸುತ್ತದೆ. ಕಾರ್ಯಕ್ರಮ ಹಾಗೂ ಸಂಶೋಧನೆ ಜೊತೆ ಜೊತೆಗಿದ್ದರೆ ಫಲಶ್ರುತಿ ಏನೆಂಬುದಕ್ಕೆ ಕರ್ನಾಟಕ ರಾಜ್ಯದಲ್ಲಾಗಿರುವ ಪ್ರಯೋಗಗಳೇ ಸಾಕ್ಷಿ.

**(ಊ) ರಾಷ್ಟ್ರೀಯ ಕಾರ್ಯಕ್ರಮ :** ಒಂದು ಪ್ರದೇಶದ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಹಾಗೂ ಇತರ ಕಲೆಗಳನ್ನು ಬೇರೆ ಪ್ರದೇಶದ ಕೇಳುಗರಿಗೂ ಪರಿಚಯವಾಗಬೇಕೆಂಬ ಉದ್ದೇಶವನ್ನು ಹೊಂದಿರುವ ರಾಷ್ಟ್ರೀಯ ಕಾರ್ಯಕ್ರಮಗಳಡಿಯಲ್ಲಿ ಸಂಗೀತ, ನಾಟಕ, ಭಾಷಣ ಹಾಗೂ ರೂಪಕ, ನಿರ್ದಿಷ್ಟ ದಿನ ನಿರ್ದಿಷ್ಟ ವೇಳೆಗೆ ದೆಹಲಿ ಕೇಂದ್ರದಿಂದ ಪ್ರಸಾರವಾಗುತ್ತದೆ. ಈ ಕಾರ್ಯಕ್ರಮಗಳನ್ನು ದೇಶದ ಎಲ್ಲಾ ಆಕಾಶವಾಣಿ ಕೇಂದ್ರಗಳು ಮರು ಪ್ರಸಾರ ಮಾಡುತ್ತವೆ. ರೇಡಿಯೋ ಸಂಗೀತ ಸಮ್ಮೇಳನ, ದೇಶದ ಮೂಲೆ ಮೂಲೆಗಳಿಂದ ಖ್ಯಾತ ಸಂಗೀತಗಾರರನ್ನು ಗುರುತಿಸಿ ವಿವಿಧ ರಾಜ್ಯಗಳಲ್ಲಿ ಅವರ ಕಛೇರಿಗಳನ್ನು ಆಯೋಜಿಸಿ ಧ್ವನಿಮುದ್ರಿಸಿಕೊಂಡ ನಂತರ ಇವುಗಳ ಪ್ರಸಾರವನ್ನು ಆಕಾಶವಾಣಿ ಮಾಡುತ್ತಿರುವುದು ಒಂದು ಹೆಮ್ಮೆಯ ವಿಷಯ.

**ಕರ್ನಾಟಕದಲ್ಲಿ ಆಕಾಶವಾಣಿಯ ಉಗಮ ಹಾಗೂ ವಿಕಾಸ :** ತಮ್ಮ ಧ್ವನಿ ಪೆಟ್ಟಿಗೆಯನ್ನುಪಯೋಗಿಸಿಕೊಂಡು ಕಾಲೇಜಿನ ವಿದ್ಯಾರ್ಥಿಗಳಿಗೆ ಮನಶ್ಶಾಸ್ತ್ರದ ಪಾಠ ಹೇಳುತ್ತಿದ್ದ ಎಂ.ವಿ. ಗೋಪಾಲಸ್ವಾಮಿಯವರಿಗೆ ಧ್ವನಿತರಂಗಗಳನ್ನು ಬಳಸಿ ಇಡೀ ಸಮಷ್ಟಿಗೇ ಶಿಕ್ಷಣ ನೀಡಬಹುದೆಂಬ ಆಲೋಚನೆ ಬಂದದ್ದು ಕರ್ನಾಟಕದಲ್ಲಿ (ಅಂದಿನ ಮೈಸೂರು) ಬಾನುಲಿ ಪಾದಾರ್ಪಣೆ ಮಾಡಲಿಕ್ಕೆಂದು ತಮ್ಮ ಮಿತ್ರ ಜಗದೀಶರೊಂದಿಗೆ ಮೈಸೂರು ನಗರಕ್ಕೊಂದು ಬಾನುಲಿ ನಿಲಯವನ್ನು ನೀಡುವ ಅವರ ಕನಸು ಶಬ್ದ ನನಸಾದದ್ದು ಸೌಂಡ್ ರಿಯಾಲಿಟಿ 10 ಸಪ್ಟೆಂಬರ್ 1935ರಂದು.

ವೃತ್ತಪತ್ರಿಕೆಯಲ್ಲಿ ಅಚ್ಚಾಗಿದ್ದ ಜಾಹೀರಾತೊಂದನ್ನು ನೋಡಿದ ಗೊಪಾಲಸ್ವಾಮಿಯವರು ತಮ್ಮ ಗೆಳೆಯ ಜಗದೀಶರೊಂದಿಗೆ 1930ರಲ್ಲಿ ಅದನ್ನು ಖರೀದಿಸಿ, ಪ್ರಾರಂಭಕ್ಕೆ ಸಯ್ಯಾಜಿ ರಾವ್ ರಸ್ತೆಯಲ್ಲಿದ್ದ ಜಗದೀಶರ ಅಂಗಡಿಯಲ್ಲಿ ಅದನ್ನು ಸ್ಥಾಪಿಸಿ, ಪರೀಕ್ಷಾ ಪ್ರಸಾರವನ್ನು ಪ್ರಾರಂಭಿಸಿಯೇಬಿಟ್ಟರು. ಈ ಪ್ರಯೋಗಪ್ರಸಾರ ಯಶಸ್ವಿಯಾಯಿತು. ತದನಂತರ ಅವರು ಫ್ಯಾಕ್ಟರಿ ನಿರ್ಮಿತ ಒಂದು ಪ್ರೇಷಕವನ್ನು ಕೊಂಡು, ಅದನ್ನು ತಮ್ಮ ಮನೆಯಲ್ಲಿಯೇ ಸ್ಥಾಪಿಸಿ, ಅಲ್ಲಿಂದಲೇ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿದರು. ಇದಕ್ಕೆ ತಗುಲಿದ ವೆಚ್ಚವನ್ನೆಲ್ಲ ತಾವೇ ಭರಿಸಿದ್ದು ಗಮನಾರ್ಹವಾದ ವಾಸ್ತವಾಂಶ. 1942ರವರೆಗೂ ಈ ನಿಲಯವನ್ನು ಗೋಪಾಲಸ್ವಾಮಿಯವರೇ ನಡೆಸಿದ್ದು ಅನಂತರ ಅದನ್ನು ಮೈಸೂರು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಆ ವೇಳೆಗೆ ಆಕಾಶವಾಣಿ ವಸ್ತು ಪ್ರದರ್ಶನ ಕಟ್ಟಡಕ್ಕೆ ವರ್ಗಾವಣೆಯಾಗಿತ್ತು. ಆಲ್ ಇಂಡಿಯ ರೇಡಿಯೋಕ್ಕೆ ಆಕಾಶವಾಣಿ ಎಂಬ ನಾಮಧೇಯವನ್ನು ಮೈಸೂರಿನಿಂದಲೇ ಎರವಲು ಪಡೆದದ್ದು. ಈ ನಿಲಯಕ್ಕೆ ಆಕಾಶವಾಣಿ ಎಂಬ ಹೆಸರನ್ನು ಸೂಚಿಸಿದ್ದು ನಾ. ಕಸ್ತೂರಿಯವರ ಮಾತೋಶ್ರೀ ಎಂದು ತಿಳಿದು ಬರುತ್ತದೆ. ಸ್ವಾತಂತ್ರ್ಯ ಬಂದ ಅನಂತರ ಅದರಲ್ಲೂ 1950ರ ಅನಂತರ ಆಲ್ ಇಂಡಿಯಾ ರೇಡಿಯೋವನ್ನು ಆಕಾಶವಾಣಿ ಎಂಬ ಹೆಸರಿನಲ್ಲಿ ಕರೆಯವುದು ವಾಡಿಕೆಯಾಗಿದೆ.

ವಸ್ತು ಪ್ರದರ್ಶನದ ಕಟ್ಟಡದಿಂದ ಆಕಾಶವಾಣಿಯು ವಿ.ವಿ. ಮೊಹಲ್ಲಾದಲ್ಲಿ ಕಟ್ಟಿದ ತನ್ನ ಸ್ವಂತ ಕಟ್ಟಡಕ್ಕೆ ಸ್ಥಳಾಂತರವಾಯಿತು. ಮೈಸೂರು ಸರ್ಕಾರದ ಅಂದಿನ ಮುಖ್ಯಮಂತ್ರಿಗಳು ಪ್ರಸಾರ ಖಾತೆಯನ್ನು ತಾವೇ ವಹಿಸಿಕೊಂಡಿದ್ದರು. ಈ ನಿಲಯದ ನಿರ್ದೇಶಕರು ಹೊರಗಿನವರಾದರೆ ನಿಲಯದ ಆಡಳಿತ ಹಾಗೂ ಕಾರ್ಯಕ್ರಮಗಳ ಮುಖ್ಯಸ್ಥರಾಗಿ ಸಹಾಯ ನಿರ್ದೇಶಕರಿದ್ದರು. ಈ ಹುದ್ದೆಯನ್ನು ಎ.ಎನ್. ಮೂರ್ತಿರಾವ್‌ರವರು ಕೆಲವು ವರ್ಷಗಳು ಅಲಂಕರಿಸಿದ್ದರು. ಅಂದು ನಿಲಯದ ಪ್ರಸಾರ, ಮೀಡಿಯಂ ವೇವ್ ಅಲ್ಲದೆ ಷಾರ್ಟ್ ವೇವ್‌ನಲ್ಲಿಯೂ ಆಗುತ್ತಿದ್ದರಿಂದ, ಪ್ರಸಾರದ ವ್ಯಕ್ತಿ ಬರೀ ಮೈಸೂರು ರಾಜ್ಯಕ್ಕಷ್ಟೇ ಸೀಮಿತವಾಗಿರದೆ ಉತ್ತರ ಭಾರತ ಮತ್ತು ಸಿಲೋನ್, ಬರ್ಮಾ ಪ್ರಾಂತ್ಯಗಳನ್ನು ಮುಟ್ಟುತ್ತಿದ್ದುದ್ದರ ಬಗ್ಗೆ ಖಚಿತವಾದ ದಾಖಲೆಗಳಿದ್ದವು.

ಈ ನಿಲಯದಿಂದ ಸಂಗೀತ, ಭಾಷಣ, ನಾಟಕ, ಚರ್ಚೆ ಕನ್ನಡದಲ್ಲಿ ಪ್ರಸಾರವಾಗುತ್ತಿದ್ದರೆ ಇಂಗ್ಲಿಷ್‌ನಲ್ಲಿ ಕಾರ್ಯಕ್ರಮಗಳು ವಿರಳವಾಗಿ ಪ್ರಸಾರವಾಗುತ್ತಿದ್ದುವು. ಇವಲ್ಲದೆ ದೆಹಲಿಯಿಂದ ಮೂಡಿಬರುತ್ತಿದ್ದ ಇಂಗ್ಲಿಷ್ ವಾರ್ತೆಗಳನ್ನು ಸಹ ಪ್ರಸಾರ ಮಾಡುತ್ತಿತ್ತು. ಹೀಗೆ ಬಾನುಲಿ ಪ್ರಸಾರದ ಪರಂಪರೆಗೆ ಮೈಸೂರು ಆಕಾಶವಾಣಿ ಒಂದು ಒಳ್ಳೆಯ ಅಡಿಪಾಯವನ್ನು ಹಾಕಿತು. ಈ ನಿಲಯ 1 ಏಪ್ರಿಲ್ 1950ರಂದು ಆಲ್ ಇಂಡಿಯ ರೇಡಿಯೋನ ರಾಷ್ಟ್ರವ್ಯಾಪ್ತಿ ಜಾಲದಲ್ಲಿ ವಿಲೀನವಾಯಿತು. ರಾಷ್ಟ್ರೀಯ ಜಾಲದಲ್ಲಿ ವಿಲೀನವಾದ ಅನಂತರ ಮೈಸೂರು ಆಕಾಶವಾಣಿಗೆ ಉಜ್ವಲ ಭವಿಷ್ಯವಿದೆಯೆಂದು ಭಾವಿಸಿದವರಿಗೆ ಭ್ರಮನಿರಸನವಾಗುವಂತೆ ನಿಲಯವನ್ನು 2 ನವೆಂಬರ್ 1955ರಂದು ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಆ ಹೊತ್ತಿಗೆ ಧಾರವಾಡದ ನಿಲಯ ಪ್ರಸಾರ ಕಾರ್ಯ ಪ್ರಾರಂಭಿಸಿ ಐದು ಸಂವತ್ಸರಗಳು ಕಳೆದಿತ್ತು. ಸ್ವಾತಂತ್ರ್ಯಾನಂತರ ಕರ್ನಾಟಕದಲ್ಲಿ ಆಕಾಶವಾಣಿಯ ಜಾಲದಲ್ಲಿ ಸ್ಥಾಪನೆಯಾದ ಪ್ರಪ್ರಥಮ ಬಾನುಲಿ ಕೇಂದ್ರವೆಂದರೆ ಧಾರವಾಡ ನಿಲಯ. 1965ರಲ್ಲಿ ಭದ್ರಾವತಿ ನಿಲಯ ಪ್ರಸಾರ ಕಾರ್ಯ ಪ್ರಾರಂಭಿಸಿದರೆ, ಗುಲ್ಬರ್ಗ ನಿಲಯ 1996ರಲ್ಲಿ ತನ್ನ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿತು. ಮೈಸೂರು ನಿಲಯ ಮತ್ತೆ 1974ರಲ್ಲಿ ಜೀವ ಪಡೆದರೆ, ಮಂಗಳೂರು ನಿಲಯ 1976ರಲ್ಲಿ ಸ್ಥಾಪಿಸಲಾಯಿತು. 1986ರವರೆಗೂ ಗುಲ್ಬರ್ಗ, ಭದ್ರಾವತಿ ಮತ್ತು ಮೈಸೂರು ಬಹುತೇಕ ಮರುಪ್ರಸಾರ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದು, 1986ರ ಅನಂತರ ಸ್ವತಂತ್ರ್ಯ ನಿಲಯಗಳಾಗಿ ತಮ್ಮದೇ ಆದ ಕಾರ್ಯಕ್ರಮಗಳನ್ನು ಹೆಚ್ಚು ಪ್ರಮಾಣದಲ್ಲಿ ಬಿತ್ತರಿಸಲು ಪ್ರಾರಂಭಿಸಿದವು.

ಏಳನೆಯ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಏಳು ಸ್ಥಳೀಯ ಕೇಂದ್ರಗಳು ಎಫ್.ಎಂ ತರಂಗಾಂತರದಲ್ಲಿ ಅಸ್ತಿತ್ವಕ್ಕೆ ಬಂದು ಗ್ರಾಮೀಣ ಅಭಿವೃದ್ಧಿ ಸಂವಹನಕ್ಕೆ ಹೆಚ್ಚಿನ ಚಾಲನೆಯನ್ನು ನೀಡಿದವು. ಇದಲ್ಲದೆ ಎರಡು ವಿವಿಧ ಭಾರತಿ ಕೇಂದ್ರಗಳು ಬೆಂಗಳೂರು ಹಾಗೂ ಧಾರವಾಡಗಳಲ್ಲಿ ಪೂರ್ಣ ಪ್ರಮಾಣದ ಮನರಂಜನೆಯೊಂದಿಗೆ ಜನರನ್ನು ರಂಜಿಸುತ್ತಿವೆ.

ಪ್ರಾದೇಶಿಕ ನಿಲಯಗಳ ಪೈಕಿ ಬೆಂಗಳೂರು ಮತ್ತು ಧಾರವಾಡ ನಿಲಯಗಳು ಅಧಿಕ ಶಕ್ತಿಯ ಪ್ರಸಾರಣಾ ಪ್ರೇಷಕಗಳನ್ನು ಹೊಂದಿದೆ. 200ಕಿವ್ಯಾ ಶಕ್ತಿಯ ಈ ಪ್ರಸಾರದ ತರಂಗ ವ್ಯಾಪ್ತಿ ಇಡೀ ಕರ್ನಾಟಕ ರಾಜ್ಯವಲ್ಲದೆ ನೆರೆ ರಾಜ್ಯಗಳನ್ನು ಮುಟ್ಟುತ್ತಿವೆ.

**ಪ್ರಾದೇಶಿಕ ನಿಲಯಗಳು**

**(ಅ) ಆಕಾಶವಾಣಿ ಬೆಂಗಳೂರು :** ಇದು ಆಕಾಶವಾಣಿ, ಬೆಂಗಳೂರು ಎಂಬ ಉದ್ಘೋಷಣೆ, 5 ನವೆಂಬರ್ 1955ರಂದು ಮೊಳಗಿ ನಿಲಯದ ಪ್ರಸಾರ ಕಾರ್ಯಕ್ಕೆ ನಾಂದಿ ಹಾಡಿತು. ಮೈಸೂರಿನಲ್ಲಿ ಅತ್ಯಲ್ಪ ಶಕ್ತಿಯ ಪ್ರೇಷಕದಿಂದ ಪ್ರಸಾರವಾಗುತ್ತಿದ್ದ ಕಾರ್ಯಕ್ರಮಗಳಿಗೆ ಅಧಿಕ ಶಕ್ತಿಯ ಪ್ರತ್ಯೇಕ ಸಾಮರ್ಥ್ಯ ಪಡೆದಂತಾಯಿತು. ಬೆಂಗಳೂರು ನಿಲಯಕ್ಕೆ ಭವ್ಯ ಇತಿಹಾಸವಿದೆ. ಅನೇಕ ಗಣ್ಯ ವ್ಯಕ್ತಿಗಳು ಆಕಾಶವಾಣಿಯ ಸಿಬ್ಬಂದಿಯಲ್ಲಿ ಸೇರ್ಪಡೆಯಾಗಿದ್ದರು. ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಹಾಗೂ ಸಾಮಾಜಿಕವಾಗಿ ಆಕಾಶವಾಣಿ ಪ್ರಾರಂಭದಿಂದಲೂ ತನ್ನತನವನ್ನು ಪ್ರಸಾರ ಮಾಡಬೇಕಾದರೆ, ಆ ಸಂಸ್ಥೆಯವರು ಒಪ್ಪಂದಕ್ಕೆ ಸಹಿ ಹಾಕಿ ನಂತರ ಜಾಹೀರಾತನ್ನು ಪ್ರಸಾರಕ್ಕೆ ಬಿಡಬೇಕಾಗುತ್ತದೆ. ಪ್ರತಿಯೊಂದು ಜಾಹೀರಾತನ್ನು ಕೇಳಿ ಅದರಲ್ಲೇನಾದರೂ ತಪ್ಪು ಮಾಹಿತಿ, ಇಲ್ಲ ಅನಾಧರಿತ ಪ್ರಸಾರಗಳಿದ್ದಲ್ಲಿ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಲಾಗುತ್ತದೆ. ಅಥವಾ ಅದನ್ನು ಸೂಕ್ತವಾಗಿ ಬದಲಾಯಿಸುವಂತೆ ಆದೇಶ ನೀಡಲಾಗುತ್ತದೆ.

1972ರಲ್ಲಿ ಪ್ರಾರಂಭವಾದ ಪ್ರಾದೇಶಿಕ ವಿವಿಧ ಭಾರತಿ ಸೇವೆ ಕನ್ನಡ ಚಿತ್ರಗೀತೆಗಳಿಗೆ ಉತ್ತಮ ಚಾಲನೆ ನೀಡಿತು. ವಿವಿಧ ಭಾರತಿಯಲ್ಲಿ ಕನ್ನಡ ಚಲನಚಿತ್ರ ಗೀತೆಗಳ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಯಿತು. ನಂದನ, ಬೃಂದಾವನ ಮುಂತಾದ ಚಿತ್ರಗೀತೆಗಳನ್ನಾಧರಿಸಿದ ಕಾರ್ಯಕ್ರಮಗಳನ್ನು ಕೇಳುವುದು ಕೇಳುಗರ ದಿನಚರಿಯಾಯಿತು. ಹಿಂದಿ ಚಿತ್ರಗಳನ್ನಾಧರಿಸಿದ, ಮನ್‌ಚಾಹೆಗೀತ್, ಛಾಯಾಗೀತ್, ಆಪ್ ಕೀ ಫರ್‌ಮಾಹೀಷ್, ಜಯಮಾಲಾ, ಮನೋರಂಜನ್ ಹಾಗೂ ಭೂಲೆ ಬಿಸ್ರೆಗೀತ್ ಜನರಲ್ಲಿ ಅಪಾರ ಜನಪ್ರಿಯತೆಯನ್ನು ಪಡೆಯಿತು. ಟಿ.ವಿ.ಯ ಆಗಮನವಾಗಿದ್ದಾಗ್ಯೂ ಈ ನಿಲಯದ ಜನಪ್ರಿಯತೆಗೆ ರಾಷ್ಟ್ರೀಯ ಧಕ್ಕೆಯಾಗದಿರುವುದು ಅದರ ಜನಪ್ರಿಯತೆಗೆ ಸಾಕ್ಷಿ. ಇಂದಿಗೂ ಈ ಎಲ್ಲಾ ಕಾರ್ಯಕ್ರಮಗಳು ಜನಪ್ರಿಯವಾಗೇ ಉಳಿದಿವೆ.

9 ಡಿಸೆಂಬರ್ 2000ರಂದು ವಿವಿಧ ಭಾರತಿ ಸೇವೆ 10ಕಿವಾ ಎಫ್.ಎಂ ಟ್ರಾನ್ಸ್‌ಮೀಟರ್‌ನಿಂದ ಪ್ರಸಾರವಾಗತೊಡಗಿತು. ಗದ್ದಲರಹಿತ ತರಂಗಗಳು ಮತ್ತು ಸ್ಟೀರಿಯೊ ಪ್ರಸಾರ ವಿವಿಧ ಭಾರತಿಯ ಸಂಗೀತಕ್ಕೆ ಇನ್ನಷ್ಟು ಮೆರುಗನ್ನು ನೀಡಿದೆ. ಪೂರ್ವದಲ್ಲಿ ಈ ತರಂಗಗಳ ಪ್ರಾಪ್ತಿಯಿಲ್ಲದ ಅನೇಕ ಜಿಲ್ಲೆಗಳಿಗೆ, ಈಗ ಈ ತರಂಗಗಳು ತಲುಪುತ್ತಿವೆ. ವಿವಿಧ ಭಾರತಿ ಕಾರ್ಯಕ್ರಮಗಳು ನಮಗೆ ಲಭ್ಯವಿಲ್ಲ ಎಂದು ಕೊರಗುತ್ತಿದ್ದ ಅನೇಕರ ಅಳಲನ್ನು ಎಫ್.ಎಂ ನಿವಾರಿಸಿದೆ.

ಬೆಂಗಳೂರಿನ ಕೇಂದ್ರ 1961 ಹಾಗೂ 92ರಲ್ಲಿ ಉತ್ತಮ ವಾಣಿಜ್ಯ ಕೇಂದ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಆಕಾಶವಾಣಿ ವಾರ್ಷಿಕ ಸ್ಪರ್ಧೆಯಲ್ಲಿ ಪರ್ಯಾಯ ಪಾರಿತೋಷಕವನ್ನು ಪಡೆದಿತ್ತು. ಇಂದಿಗೂ ಮನರಂಜನೆಯ ಜೊತೆ ಜೊತೆಗೆ ಉತ್ತಮ ಸಾಮಾಜಿಕ ಕಳಕಳಿಯಿರುವ ಅನೇಕ ಸರಣಿ ಕಾರ್ಯಕ್ರಮಗಳನ್ನು ಪ್ರಸಾರಿಸುತ್ತಿದೆ.

ಧಾರವಾಡದಲ್ಲಿ ಇದೇ ರೀತಿ ಕನ್ನಡ ಚಿತ್ರಗೀತೆಗಳನ್ನಾಧರಿಸಿದ ಹಾಗೂ ಹಿಂದಿ ಚಿತ್ರಗೀತೆಗಳ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದು ವಿವಿಧ ಭಾರತಿ ಅಲ್ಲಿಯೂ ಜನಪ್ರಿಯವಾಗಿದೆ. ಒಂದು ಕಿ.ವಾ. ಶಕ್ತಿಯ ಪ್ರೇಷಕವಾದ್ದರಿಂದ ಅದರ ತಲುಪುವಿಕೆ ಸು. 30.ಕಿಮೀ.

ಇಂದು ಆಕಾಶವಾಣಿ ಬೆಂಗಳೂರು ಕೇಂದ್ರ 4 ವಾಹಿನಿಗಳ ಮೂಲಕ ತನ್ನ ಕಾರ್ಯಕ್ರಮಗಳನ್ನು ಪ್ರಸಾರಮಾಡುತ್ತದೆ. 200 ಕಿವ್ಯಾ. ಪ್ರೇಷಕದ ಮೂಲಕ ಪ್ರಸಾರವಾಗುವ ಬೆಂಗಳೂರು ಕೇಂದ್ರದ ಪ್ರೈಮರಿ ಚಾನೆಲ್‌ನ ಕಾರ್ಯಕ್ರಮಗಳಲ್ಲಿ ಮಹಿಳೆ, ಮಕ್ಕಳು, ಕೃಷಿಕರು, ಯುವಜನತೆ, ಹಿರಿಯ ನಾಗರಿಕರು, ಕಾರ್ಮಿಕರು ಮುಂತಾದವರಿಗೆ ವಿಶೇಷ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಸಂಗೀತ, ಕ್ರೀಡೆ, ನಾಟಕ, ಚರ್ಚೆ, ಸಂದರ್ಶನ, ವಾರ್ತೆ, ವರದಿ ಮುಂತಾದವುಗಳಿವೆ. 10 ಕಿವ್ಯಾ ಪ್ರೇಷಕದ ಮೂಲಕ ವಿವಿಧ ಭಾರತಿಯು ಮನರಂಜನೆಯ ಕಾರ್ಯಕ್ರಮಗಳನ್ನು ಪ್ರಸಾರಮಾಡುತ್ತದೆ. ಬೆಂಗಳೂರು ಮಹಾನಗರದ

ಕೇಳುಗರಿಗೆ ಅತ್ಯುತ್ತಮ ಗುಣಮಟ್ಟದ ಶುದ್ಧ ಮನರಂಜನೆಯನ್ನು ಎಫ್‌ಎಮ್–ರೈನ್‌ಬೋ ತನ್ನ 10 ಕಿವ್ಯಾ ಪ್ರೇಷಕದ ಮೂಲಕ ಒದಗಿಸುತ್ತದೆ. ಅಮೃತವರ್ಷಿಣಿ ಸಂಪೂರ್ಣವಾಗಿ ಶಾಸ್ತ್ರೀಯ ಸಂಗೀತಕ್ಕೆ ಮೀಸಲಾದ ವಾಹಿನಿ. ಬೆಂಗಳೂರಿಗೆ ಸಮೀಪದ ದೊಡ್ಡಬಳ್ಳಾಪುರದ ಹತ್ತಿರ, ವಿದೇಶೀ ಪ್ರಸಾರಕ್ಕಾಗಿ ಅತಿ ಹೆಚ್ಚಿನ ಸಾಮರ್ಥ್ಯದ ಆರು ಪ್ರೇಷಕಗಳಿವೆ.

**(ಆ) ಆಕಾಶವಾಣಿ ಗುಲ್ಬರ್ಗ :** ಹೈದರಾಬಾದ್ ಕರ್ನಾಟಕ ನಿಜಾಮರ ಆಳ್ವಿಕೆಯಲ್ಲಿದ್ದರೂ ಅಲ್ಲಿನ ಸಾಂಸ್ಕೃತಿಕ ನೆಲೆ ಗಟ್ಟಿಯಾಗಿದ್ದು ಅಲ್ಲಿ ದಾಸರಪದ ಹಾಗೂ ವಚನ ಸಂಗೀತಕ್ಕೆ ಸಿಕ್ಕ ಉತ್ತೇಜನ ಸಾಕ್ಷಿಯಾಗಿದೆ. 11 ನವೆಂಬರ್ 1966ರಂದು ಅಲ್ಲಿನ ಸಾಹಿತ್ಯ, ಲಲಿತಕಲೆ ಹಾಗೂ ಸಂಗೀತಗಳಿಗೆ ಸೂಕ್ತ ಅಭಿವ್ಯಕ್ತಿ ಮಾಧ್ಯಮವನ್ನು ಕಲ್ಪಿಸುವ ಅಭಿಲಾಷೆಯೊಂದಿಗೆ ಗುಲ್ಬರ್ಗ ನಿಲಯವನ್ನು ಸ್ಥಾಪಿಸಲಾಯಿತು.

ಪ್ರಾರಂಭಕ್ಕೆ ಗುಲ್ಬರ್ಗ, ಧಾರವಾಡ ನಿಲಯದ ಮರು ಪ್ರಸಾರ ಕೇಂದ್ರವಾಗಿ ಕಾರ್ಯಾರಂಭ ಮಾಡಿತು. ಒಂದೇ ಪ್ರಸಾರವಿದ್ದ (ಸಂಜೆ) ಈ ನಿಲಯ ಕ್ರಮೇಣ ಪೂರ್ಣ ಪ್ರಮಾಣದ ನಿಲಯವಾಗಿ, ರೂಪುಗೊಂಡಿತು. ಇಂದು ಸುಮಾರು 62 ಲಕ್ಷ ಕೇಳುಗರ ಆಸೆ, ಆಶೋತ್ತರಗಳಿಗೆ ಸ್ಪಂದಿಸುತ್ತಿರುವ ಗುಲ್ಬರ್ಗ ನಿಲಯ ಗುಲ್ಬರ್ಗ, ರಾಯಚೂರು, ಬೀದರ್ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಅಪಾರ ಜನಪ್ರಿಯ.

ಪ್ರಾರಂಭದಲ್ಲಿ ಈ ನಿಲಯದ ಪ್ರಸಾರ 10 ಕಿವ್ಯಾ ಪ್ರೇಷಕದಿಂದಾಗುತ್ತಿದ್ದು ಅದನ್ನು 1998ರಲ್ಲಿ 20 ಕಿಮೀ ಪ್ರದೇಶಕ್ಕೆ ವರ್ಗಾಯಿಸಲಾಯಿತು. ಇದರಿಂದ ನಿಲಯದ ವ್ಯಾಪ್ತಿ ದ್ವಿಗುಣವಾಯಿತು.

ಇತರ ನಿಲಯಗಳಂತೆ, ಈ ನಿಲಯವು ಅನೇಕ ಬಾನುಲಿ ಪಾಠಶಾಲೆಯಂಥ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದೆ. ಸಾಮಾಜಿಕ ಜಾಗೃತಿಯನ್ನು ಮೂಡಿಸುವ ಅನೇಕ ಕಾರ್ಯಕ್ರಮಗಳ ರೂವಾರಿ ಈ ನಿಲಯ. ಅಂತಹ ಕಾರ್ಯಕ್ರಮಗಳ ಪೈಕಿ ಇತ್ತೀಚಿನ ಬಾ ಬಾಲೆ ಶಾಲೆಗೆ ಮತ್ತು ಚಿಗುರಲಿ ಚಿನ್ನದ ಕನಸು ಪ್ರಮುಖವಾದುವು.

ದ್ವಿಮುಖ ನಯನದ ವ್ಯವಸ್ಥೆಯನ್ನು ಈ ನಿಲಯವು ಸಮರ್ಥವಾಗಿ ಬಳಸಿಕೊಂಡು ವೈದ್ಯರೊಂದಿಗೆ ಭೇಟಿ ಹಾಗೂ ಫೋನ್-ಇನ್ ಅಭಿಲಾಷೆ ಕಾರ್ಯಕ್ರಮಗಳನ್ನು ಜನಪ್ರಿಯಗೊಳಿಸಿದೆ.

ಈ ಕೇಂದ್ರದ ಜನಪ್ರಿಯ ಕಾರ್ಯಕ್ರಮಗಳೆಂದರೆ ಕನ್ನಡ ಚಿತ್ರಗೀತೆ, ಕನ್ನಡದಲ್ಲಿ ವಾರ್ತೆ, ಪ್ರದೇಶ ಸಮಾಚಾರ, ಹಲೋ ಅಭಿಲಾಷ, ಹಾಸ್ಯ-ಲಾಸ್ಯ, ಸಂತವಾಣಿ ಮತ್ತು ಚಿಂತನ, ಯುವವಾಣಿ ಕಾರ್ಯಕ್ರಮದ ಮೂಲಕ ಅನೇಕ ಯುವಕ ಯುವತಿಯರನ್ನು ಜೀವನ ಸಂಗಾತಿಗಳನ್ನಾಗಿಸಿದ್ದು ಈ ನಿಲಯ ಸಾಧಿಸಿದ ಒಂದು ಮಹತ್ಕಾರ್ಯ.

ಗುಲ್ಬರ್ಗ ಕೇಂದ್ರದ ವ್ಯಾಪ್ತಿಯಲ್ಲಿರುವ ಬಾನುಲಿ ವಲಯಗಳ ಸಂಖ್ಯೆ ಸು. 21 ಲಕ್ಷ. ನಿಲಯದ ವಲಯದಲ್ಲಿ ಬರುವ ಪ್ರದೇಶದ ವ್ಯಾಸ 120 ಕಿಮೀ. ಒಟ್ಟು ಜನಸಂಖ್ಯೆ 62 ಲಕ್ಷ. ಶೇ. 1 ರಷ್ಟು ಆಲಿಸುವಿಕೆಯೆಂದರೆ ಸು. 40 ಸಾವಿರ ಕೇಳುಗರಾಗುತ್ತಾರೆ.

ಮೂರು ಪ್ರಸಾರಗಳುಳ್ಳ ಈ ನಿಲಯ, ಪ್ರತಿದಿನ ಸರಾಸರಿ ಹನ್ನೆರಡು ಘಂಟೆಗಳ ಕಾಲ ಕಾರ್ಯನಿರತವಾಗಿರುತ್ತದೆ. ಕನ್ನಡಕ್ಕೆ ಹೆಚ್ಚು ಪ್ರಾಧಾನ್ಯವಿರುವ ಈ ನಿಲಯದಿಂದ ಉರ್ದು, ಸಂಸ್ಕೃತ, ಹಿಂದಿ, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳ ಕಾರ್ಯಕ್ರಮಗಳು ನಿಗದಿತ ಅವಧಿಯಲ್ಲಿ ಬಿತ್ತರಗೊಳ್ಳುತ್ತವೆ.

**(ಇ) ಆಕಾಶವಾಣಿ, ಧಾರವಾಡ :** ಕರ್ನಾಟಕ ಸಂಸ್ಕೃತಿ ರಾಜಧಾನಿಯೆಂದೇ ಪ್ರಸಿದ್ಧವಾದ ಧಾರವಾಡದಲ್ಲಿ ಬಾನುಲಿ ತರಂಗಗಳು ಮುಗಿಲನ್ನು ಪಸರಿಸಿದ್ದು, 8 ಜನವರಿ 1950ನೆಯ ಇಸವಿಯಲ್ಲಿ ಸಾಂಸ್ಕೃತಿಕವಾಗಿ ಹಾಗೂ ಶಾಸ್ತ್ರೀಯ ಸಂಗೀತದಲ್ಲಿ ಗಾಢ ಬೇರುಗಳನ್ನು ಹೊಂದಿದ್ದ ಧಾರವಾಡಕ್ಕೆ, ಒಂದು ಅಭಿವ್ಯಕ್ತಿ ಮಾಧ್ಯಮದ ಅಗತ್ಯವಿದ್ದು, ಅದನ್ನು ಆಕಾಶವಾಣಿ ತನ್ನ ನಿಲಯವನ್ನು ಸ್ಥಾಪಿಸುವುದರ ಮೂಲಕ ಆ ಕೊರತೆಯನ್ನು ಪೂರೈಸಿತು.

ಪ್ರಾರಂಭಕ್ಕೆ ಒಂದು ಕಿವ್ಯಾ ಟ್ರಾನ್ಸ್‌ಮೀಟರ್ ಹೊಂದಿದ್ದ ಧಾರವಾಡ, ತನ್ನ ಕಾರ್ಯಕ್ರಮಗಳ ಮೂಲಕ ಜನಮನವನ್ನು ಗೆದ್ದಿತು. ಧಾರವಾಡವೆಂದರೆ ಸಂಗೀತಕ್ಕಷ್ಟೇ ಅಲ್ಲ, ನಾಟಕಕ್ಕೂ ಸೈ ಅನ್ನುವ ಮಾತು ಬಾನುಲಿಯಲ್ಲಿ ಪ್ರಚಲಿತವಾಗಿತ್ತು. ಧಾರವಾಡದಿಂದ ಅತ್ಯುತ್ತಮ ಹಿಂದೂಸ್ತಾನಿ ಸಂಗೀತ ಪ್ರಸಾರವಾಗಿದೆ, ಪ್ರಸಾರವಾಗುತ್ತಿದೆ. ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಪಂಡಿತ್ ಭೀಮಸೇನ್ ಜೋಷಿ, ಗಂಗೂಬಾಯಿ ಹಾನಗಲ್, ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು ಹೀಗೆ ಉತ್ತಮ ಸಂಗೀತಗಾರರ ಬೀಡಾಗಿತ್ತು. ಇಂತಹವರ ಉಪಸ್ಥಿತಿಯಲ್ಲಿ ಧಾರವಾಡ ನಿಲಯ, ಸಂಗೀತದ ಒಳ್ಳೆಯ ಪರಂಪರೆಯನ್ನು ಹುಟ್ಟು ಹಾಕಿ ಇಂದಿಗೂ ಅದನ್ನು ಬಹಳ ಜತನದಿಂದ ಕಾಪಾಡಿಕೊಂಡು ಬಂದಿರುವುದು ಆ ನಿಲಯಕ್ಕೆ ಸಲ್ಲಬೇಕಾದ ಕೀರ್ತಿ.

ಸಾಹಿತ್ಯಕವಾಗಿ ದ.ರಾ. ಬೇಂದ್ರೆ, ಚನ್ನವೀರ ಕಣವಿ, ಕಲಬುರ್ಗಿ, ವಿ.ಕೃ. ಗೋಕಾಕ್, ಎನ್ಕೆ ಮೊದಲಾದ ನಗರದ ಉತ್ತಮ ಸಾಹಿತಿಗಳು ತಮ್ಮ ತಮ್ಮ ಸಾಹಿತ್ಯಿಕ ಸಾಧನೆಗಳಿಂದ ಬಾನುಲಿ ತರಂಗಗಳನ್ನು ಅಲಂಕರಿಸಿದ್ದು ಆ ನಿಲಯಕ್ಕೆ ಸಂದ ಮಹಾಸೇವೆ. ಇಂದಿಗೂ ಧಾರವಾಡ ನಿಲಯ ಅನೇಕ ಸಂಗೀತ ಕಾರ್ಯಕ್ರಮಗಳಿಗೆ ಹೆಸರುವಾಸಿ. ಅಲ್ಲದೆ ಆ ನಿಲಯದ ಅನೇಕ ಕೌಟುಂಬಿಕ ಧಾರವಾಹಿಗಳು, ಕೃಷಿ ಕಾರ್ಯಕ್ರಮಗಳು ಅಪಾರ ಜನಮನ್ನಣೆಯನ್ನು ಗಳಿಸಿದ್ದವು. ಎಚ್.ಕೆ. ರಂಗನಾಥ್, ಎನ್.ಎಸ್. ಕೃಷ್ಣಮೂರ್ತಿ ಮುಂತಾದವರು ಮಾಡಿದ ಪ್ರಯೋಗಗಳು ಇಂದಿಗೂ ಬಾನುಲಿ ಪ್ರಸಾರದಲ್ಲಿ ಹಚ್ಚಹಸಿರಾಗಿ ಉಳಿದಿದೆ.

ಧಾರವಾಡ ನಿಲಯವು ಅಧಿಕ ಪ್ರಸಾರ ಶಕ್ತಿಯುಳ್ಳ 200ಕಿವ್ಯಾ ಪ್ರೇಷಕವನ್ನು ಹೊಂದಿದೆ. ಈ ನಿಲಯ ಧಾರವಾಡ, ಬೆಳಗಾಂವಿ, ಬಿಜಾಪುರ, ಬಳ್ಳಾರಿ, ಉತ್ತರಕನ್ನಡ, ಶಿವಮೊಗ್ಗ, ಚಿತ್ರದುರ್ಗ ಹಾಗೂ ಮಹಾರಾಷ್ಟ್ರ ರಾಜ್ಯದ ಕೆಲವು ಭಾಗಗಳನ್ನು ಮುಟ್ಟುತ್ತಿವೆ. ತನ್ನ ವಲಯದಲ್ಲಿ ಸು.2.2 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು ಸುಮಾರು 26.2 ಲಕ್ಷ ಬಾನುಲಿ ಕುಟುಂಬಗಳನ್ನು ತಲುಪುತ್ತಿವೆ. ವಲಯದ ವಿಸ್ತೀರ್ಣ ದಿನವೇಳೆ 8000 ಚ.ಕಿಮೀ ಗಳಾದರೆ ರಾತ್ರಿಯ ವೇಳೆ ಅದು 75,000 ಚ.ಕಿಮೀ. ಧಾರವಾಡ ನಿಲಯದ ವ್ಯಾಪ್ತಿಯಲ್ಲಿ ಶೇ. 1ರಷ್ಟು ಆಲಿಸುವಿಕೆಯೆಂದರೆ 1.28 ಲಕ್ಷ ಕೇಳುಗರೆಂದಾಗುತ್ತಾರೆ.

ಧಾರವಾಡ ನಿಲಯದ ಪ್ರಸಾರದ ಅವಧಿ ದಿನಕ್ಕೆ ಸರಾಸರಿ 12 ಗಂಟೆ 35 ನಿ.ಗಳೆಂದರೆ, ಅದರಲ್ಲಿ ಪ್ರದೇಶ ಸಮಾಚಾರ, ಕನ್ನಡದಲ್ಲಿ ವಾರ್ತೆ, ಚಿತ್ರಗೀತೆ, ಚಿಂತನ, ನಂದನ (ಭಕ್ತಿ ಗೀತೆಗಳು), ಜನಪದ ಸಂಗೀತ, ರೈತರಿಗೆ ಸಲಹೆ ಇತ್ಯಾದಿಗಳು ಒಳಗೊಂಡಿರುತ್ತವೆ.

**(ಈ) ಆಕಾಶವಾಣಿ ಭದ್ರಾವತಿ :** ಬೆಂಗಳೂರು ನಿಲಯದಿಂದ ಪ್ರಸಾರವಾಗುತ್ತಿದ್ದ ಕಾರ್ಯಕ್ರಮಗಳನ್ನು ಮರು ಪ್ರಸಾರ ಮಾಡುವ ಕೇಂದ್ರವಾಗಿ ಅಸ್ತಿತ್ವಕ್ಕೆ ಬಂದ ಭದ್ರಾವತಿ ನಿಲಯ, 1980ರ ದಶಕದಲ್ಲಿ ಒಂದು ಸ್ವತಂತ್ರ ನಿಲಯವಾಯಿತು. 2 ಫೆಬ್ರುವರಿ 1945ರಿಂದ ಸ್ವತಂತ್ರ ನಿಲಯವಾಗುವವರೆಗೂ ಅಲ್ಲಿಯ ಸ್ವಂತ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದುದು ದಿನಕ್ಕೆ ಬಹಳ ಅಲ್ಪ ಕಾಲ.

ತನ್ನದೇ ಆದ ಸ್ಟುಡಿಯೋಗಳನ್ನು ಪಡೆದ ನಂತರ, ಭದ್ರಾವತಿ ನಿಲಯ ಉತ್ತಮ ಕೆಲಸ ಮಾಡಿದೆ. ಕರ್ನಾಟಕದಲ್ಲೇ ಈ ಮಲೆನಾಡಿನ ಶ್ರೋತೃಗಳು ಬಾನುಲಿಯನ್ನು ಬಹಳ ಪ್ರೀತಿಯಿಂದ ಪೋಷಿಸಿದ್ದಾರೆ. ಭದ್ರಾವತಿ ವಲಯದಲ್ಲಿ ಇತರ ವಲಯಗಳಿಗಿಂತ ಬಾನುಲಿ ಕೇಳುಗರ ಸಂಖ್ಯೆ ಅಧಿಕ ಮತ್ತು ಬಾನುಲಿಯೊಡನೆ ಅವರ ಬಾಂಧವ್ಯ ಅಪೂರ್ವವಾಗಿದ್ದು ಯಾವುದೇ ಸ್ಪರ್ಧಾತ್ಮಕ ಕಾರ್ಯಕ್ರಮದಲ್ಲಿ ಭದ್ರಾವತಿ ಅತಿ ಹೆಚ್ಚು ಬಹುಮಾನಿತ ಶ್ರೋತೃಗಳನ್ನು ಹೊಂದಿರುವುದು ಆ ವಲಯದಲ್ಲಿ ಆಕಾಶವಾಣಿಗಿರುವ ಜನಪ್ರಿಯತೆಗೆ ಸಾಕ್ಷಿ.

ಅಲ್ಲಿಂದ ಪ್ರಸಾರವಾಗುತ್ತಿರುವ ಕೆಲವು ಜನಪ್ರಿಯ ಕಾರ್ಯಕ್ರಮಗಳೆಂದರೆ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ಸ್ಪಂದನ ಕಾರ್ಯಕ್ರಮ. ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸುವ 'ಕೇಳುಗರ ವೇದಿಕೆ' ಹಾಗೂ 'ಆರೋಗ್ಯ ಭಾಗ್ಯ' ಕೇಳುಗರಿಗೆ ವೈದ್ಯಕೀಯ ಸಲಹೆಗಳನ್ನು ನೀಡುವಂತಹ ಕಾರ್ಯಕ್ರಮ. ಅವಲ್ಲದೆ ಅಲ್ಲಿ ದೂರವಾಣಿ ಕಾರ್ಯಕ್ರಮಗಳು ಬಹಳ ಜನಪ್ರಿಯ. ಪ್ರತಿ ಗ್ರಾಮಕ್ಕೂ ಭೇಟಿ ನೀಡಿ, ಅಲ್ಲಿಯ ಯುವಕರನ್ನು ಸಂಘಟಿಸಿ ಗ್ರಾಮಗಳಲ್ಲೇ ವಿವಿಧ ಕಾರ್ಯಕ್ರಮಗಳನ್ನು ಯುವಕರಿಗೆ ಆಯೋಜಿಸಿ ಅವುಗಳನ್ನು ಪ್ರಸಾರ ಮಾಡಿದ ಭದ್ರಾವತಿ ನಿಲಯ, ಯುವವಾಣಿಗೆ ಒಂದು ಭದ್ರ ಬುನಾದಿಯನ್ನು ಹಾಕಿ ಕೊಟ್ಟಿದೆ. ಇಲ್ಲಿಂದ ಪ್ರಸಾರವಾಗುತ್ತಿದ್ದ ರಶ್ಮಿ, ಮಾತುಕತೆ ಮತ್ತು ಕೌಟುಂಬಿಕ ಧಾರಾವಾಹಿಗಳು ಅಪಾರ ಜನಪ್ರಿಯವಾಗಿದ್ದುವು.

ಪ್ರತಿದಿನ ಮೂರು ಪ್ರಸಾರಗಳನ್ನೊಳಗೊಂಡ ಭದ್ರಾವತಿ ನಿಲಯ ಇಂದಿಗೂ ಬೆಂಗಳೂರು ನಿಲಯದ ಅನೇಕ ಕಾರ್ಯಕ್ರಮಗಳನ್ನು ಪ್ರಸಾರಿಸುತ್ತಿದೆ. ತನ್ನ ದಿನದ 12 ಗಂಟೆ 45 ನಿಮಿಷಗಳ ಪ್ರಸಾರ ಅವಧಿಯಲ್ಲಿ ಸುಮಾರು 8 ಗಂಟೆ 50 ನಿಮಿಷಗಳಷ್ಟು ಕಾರ್ಯಕ್ರಮಗಳು ನಿಲಯದಿಂದಲೇ ಪ್ರಸಾರವಾಗುತ್ತಿವೆ. ಉಳಿದ 2 ಗಂಟೆ 50 ನಿಮಿಷಗಳಷ್ಟು ಕಾರ್ಯಕ್ರಮಗಳು ಮರು ಪ್ರಸಾರವಾಗುತ್ತಿವೆ. ಈ ನಿಲಯದ ಪ್ರಮುಖ ಪ್ರಸಾರ ಭಾಷೆ ಕನ್ನಡ. ಪ್ರತಿದಿನ ಸುಮಾರು 9 ಗಂಟೆಗಳಷ್ಟು ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ.

ಭದ್ರಾವತಿ ನಿಲಯ 12ಕಿವ್ಯಾ ಪ್ರೇಷಕ ಶಕ್ತಿಯನ್ನು ಹೊಂದಿದ್ದು ಶಿವಮೊಗ್ಗ, ಶಿಕಾರಿಪುರ, ಸೊರಬ, ತೀರ್ಥಹಳ್ಳಿ, ಸಾಗರ, ಕೊಪ್ಪ, ಭದ್ರಾವತಿ, ಹೊಸನಗರ, ಎನ್.ಆರ್. ಪುರ, ಚಿಕ್ಕಮಗಳೂರು, ಮೂಡಿಗೆರೆ, ತರೀಕೆರೆ ಹಾಗೂ ಶೃಂಗೇರಿ ತಾಲ್ಲೂಕುಗಳಿಗೆ ತನ್ನ ತರಂಗಗಳನ್ನು ತಲುಪಿಸುತ್ತಿರುವ ಪ್ರದೇಶದ ವಿಸ್ತೀರ್ಣ 13,300 ಚ.ಕಿಮೀ.

ಚಿತ್ರಗೀತೆ, ಪ್ರದೇಶ ಸಮಾಚಾರ, ಕನ್ನಡದಲ್ಲಿ ವಾರ್ತೆ, ಫೋನ್-ಇನ್ ಚಿತ್ರಗೀತೆ, ಚಿಂತನ, ಕೃಷಿರಂಗ, ಯುವವಾಣಿ ಮತ್ತು ಕೌಟುಂಬಿಕ ಧಾರಾವಾಹಿ ಅತ್ಯಂತ ಜನಪ್ರಿಯ ಕಾರ್ಯಕ್ರಮಗಳು.

**(ಉ) ಆಕಾಶವಾಣಿ ಮಂಗಳೂರು :** ಮಂಗಳೂರಿನಲ್ಲಿ ಸಮುದ್ರದ ಅಲೆಗಳ ಭೋರ್ಗರೆತವನ್ನು ಮೆಟ್ಟಿನಿಲ್ಲುವಂತೆ ಬಾನುಲಿ ತರಂಗಗಳು 11, ಡಿಸೆಂಬರ್ 1976ರಲ್ಲಿ ಬಿತ್ತರವಾಗತೊಡಗಿದವು. ಮಂಗಳೂರಿಗೊಂದು ತನ್ನದೇ ಆದ ಬಾನುಲಿ ನಿಲಯ ಬೇಕೆಂಬುದು ಅಲ್ಲಿಯ ಜನತೆಯ ಅಭಿಲಾಷೆಯಾಗಿದ್ದು ಅದು 1976ರಲ್ಲಿ ನನಸಾಯಿತು. ಬ್ರಹ್ಮಾವರದಲ್ಲಿ ಅಧಿಕ ಶಕ್ತಿಯ ಪ್ರೇಷಕ ಮತ್ತು ಮಂಗಳೂರು ನಗರದಲ್ಲಿ ಪ್ರೇಷಕ, ಒಂದು ಕಿಮೀ ಟ್ರಾನ್ಸ್‌ಮೀಟರ್ ಪ್ರಸಾರ ಕಾರ್ಯ ಪ್ರಾರಂಭ ಮಾಡಿದವು. ಮಂಗಳೂರು, ಉಡುಪಿ ಮತ್ತು ಕಾಸರಗೋಡನ್ನು ಸ್ವಲ್ಪ ಮಟ್ಟಿಗೆ ತಲುಪುವ ಈ ನಿಲಯ ಸಾಂಸ್ಕೃತಿಕವಾಗಿ

ಮೆರೆದಂತದು. ಈ ನಿಲಯದ ಮಹತ್ಕಾರ್ಯವೆಂದರೆ ತುಳು ಮತ್ತು ಕೊಂಕಣಿಯ ಸಾಹಿತ್ಯಕ್ಕೆ ಚಾಲನೆ ಕೊಟ್ಟದ್ದು. ಈ ಎರಡೂ ಭಾಷೆಗಳ ಸಾಹಿತ್ಯವು ಶ್ರೀಮಂತವಾಗುವುದಕ್ಕೆ ಆಕಾಶವಾಣಿ ಮಂಗಳೂರು ನಿಲಯದ ಕೊಡುಗೆ ಅಪಾರ. ಶಾಸ್ತ್ರೀಯ ಸಂಗೀತದ ಪರಂಪರೆಯನ್ನು ಶ್ರೀಮಂತಗೊಳಿಸಿದ ಕೀರ್ತಿ ಈ ಆಕಾಶವಾಣಿಗೇ ಸಲ್ಲುತ್ತದೆ. ಅಲ್ಲಿಯ ಉಸಿರಾಟ ಯಕ್ಷಗಾನ, ಬಾನುಲಿಯ ಪ್ರಸಾರಗಳಲ್ಲಿ ಇಂದಿಗೂ ಅತ್ಯಂತ ಜನಪ್ರಿಯವಾದಂಥ ಕಾರ್ಯಕ್ರಮ. ಯಕ್ಷಗಾನ, ಭೂತ ಕುಣಿತ, ಮುಂತಾದ ಜನಪದ ಕಲೆಗಳನ್ನು ಪ್ರೋತ್ಸಾಹಿಸುತ್ತಾ ಅವುಗಳನ್ನು ಜತನದಿಂದ ಕಾಪಾಡಿಕೊಂಡು ಬಂದಿದೆ.

ವಿದ್ಯೆಗೆ ಬಿಡಾರವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತಮ ಭಾಷಣಕಾರರಿಗಾಗಲಿ, ಕವಿಗಳಿಗಾಗಲಿ, ಮೇಧಾವಿಗಳಾಗಲಿ, ಕೊರತೆಯಿಲ್ಲ. ತುಳು, ಕನ್ನಡ ಹಾಗೂ ಕೊಂಕಣಿಯಲ್ಲಿ ಅತ್ಯುತ್ತಮ ಭಾಷಣ ಹಾಗೂ ಚರ್ಚೆಗಳು ಪ್ರಸಾರವಾಗಿವೆ. ಇಂದೂ ಆಗುತ್ತಿವೆ. ಶಿವರಾಮ ಕಾರಂತ, ಎಸ್.ಕೆ.ತಿಂಗಳಾಯ, ವೀರೇಂದ್ರ ಹೆಗಡೆ ಮುಂತಾದವರು ಈ ನಿಲಯದಿಂದ ಪ್ರಸಾರ ಮಾಡಿರುವಂಥವರು.

ಮಂಗಳೂರು ನಿಲಯದ ಇತ್ತೀಚಿನ ದಾಖಲೆಯೆಂದರೆ ದ್ವಿಮುಖ ಸಂವಹನ ವಿಧಾನವನ್ನು ಬಳಸಿಕೊಂಡು ಮಾಡುತ್ತಿರುವ ಕಾರ್ಯಕ್ರಮಗಳು. ಸಾಮಾನ್ಯವಾಗಿ ಮಕ್ಕಳು ಹಾಗೂ ಯುವಕರು ಬಾನುಲಿಗೆ ವಿಮುಖರಾಗಿರುವುದು ಅನುಭವದ ಮಾತಾದರೆ, ಮಂಗಳೂರಿನ ನಿಲಯ ಈ ಮಾತಿಗೆ ಅಪವಾದ. ಯುವವಾಣಿಯ ಎಲ್ಲ ಕಾರ್ಯಕ್ರಮಗಳಲ್ಲೂ ಯುವಕರೇ ನೇರವಾಗಿ ಭಾಗವಹಿಸುವಂತಹ ವಿನ್ಯಾಸ ಇಲ್ಲಿಯ ಕಾರ್ಯಕ್ರಮಗಳನ್ನು ಜನಪ್ರಿಯವನ್ನಾಗಿಸಿವೆ. ಮಕ್ಕಳು ತಮಗೆಂದೇ ಪ್ರಸಾರ ಮಾಡುವ ಪುಟ್ಟ–ಪುಟ್ಟಿ ಕಾರ್ಯಕ್ರಮ ದಲ್ಲಿ ಬಹಳ ಸಂಖ್ಯೆಯಲ್ಲಿ ಭಾಗವಹಿಸುವುದು ಒಂದು ಅಪೂರ್ವ ನಿದರ್ಶನ.

ನೂರಕ್ಕೂ ಹೆಚ್ಚು ಟಿ.ವಿ. ವಾಹಿನಿಗಳಿದ್ದಾಗ್ಯೂ ಇಂದಿಗೂ ಶೇ. 52ರಷ್ಟು ಕೇಳುಗರಿರುವ ಕಾರ್ಯಕ್ರಮವೆಂದರೆ ಯಕ್ಷಗಾನ. ಯಕ್ಷಗಾನ ಯಾವುದೇ ಮಾಧ್ಯಮದ ತುಳಿತಕ್ಕೆ ಸಿಕ್ಕಿ ನಲುಗದಿರುವುದು. ಇಡೀ ದಕ್ಷಿಣ ಕರ್ನಾಟಕದಲ್ಲಿ ಈ ಕಲೆ ಇಂದಿಗೂ ಅಷ್ಟೇ ಜೀವಂತವಾಗಿದೆ. ಇದರ ಸಂಪೂರ್ಣ ಪ್ರಯೋಜನವನ್ನು ಆಕಾಶವಾಣಿ ಮಂಗಳೂರು ಪಡೆದುಕೊಂಡಿದೆ.

ಮಂಗಳೂರು ನಿಲಯದಿಂದಾಗುವ ಪ್ರಸಾರದ ಅವಧಿ ದಿನಕ್ಕೆ ಸರಾಸರಿ 10 ಘ. 35 ನಿ. ಪ್ರತಿದಿನ ಮೂರು ಪ್ರಸಾರಗಳು. ಹೆಚ್ಚು ಕಾರ್ಯಕ್ರಮಗಳು ಕನ್ನಡದಲ್ಲೇ ಪ್ರಸಾರವಾಗು ತ್ತವೆ. ಇತರೆ ಭಾಷೆಗಳ ಕಾರ್ಯಕ್ರಮಗಳು–ಅಂದರೆ ಇಂಗ್ಲಿಷ್, ಹಿಂದಿ, ತುಳು, ಕೊಂಕಣಿ ಮತ್ತು ಸಂಸ್ಕೃತ – ಈ ನಿಲಯದಿಂದ ಪ್ರಸಾರವಾಗುತ್ತಿವೆ.

ಮಂಗಳೂರು ನಿಲಯದ ಅತ್ಯಂತ ಜನಪ್ರಿಯ ಕಾರ್ಯಕ್ರಮಗಳೆಂದರೆ ಕನ್ನಡದಲ್ಲಿ ವಾರ್ತೆಗಳು, ಚಲನಚಿತ್ರಗೀತೆ, ಪ್ರದೇಶ ಸಮಾಚಾರ, ಯಕ್ಷಗಾನ, ಚಿಂತನ, ಕೃಷಿರಂಗ, ಸುಗಮ ಸಂಗೀತ, ಯುವವಾಣಿ ಮತ್ತು ಬಾಲವೃಂದ (ಮಕ್ಕಳ ಕಾರ್ಯಕ್ರಮ).

**(ಊ) ಆಕಾಶವಾಣಿ ಮೈಸೂರು :** ಆಕಾಶವಾಣಿ ಮೈಸೂರಿಗೆ ಇಡೀ ರಾಜ್ಯದಲ್ಲೇ ವಿಶಿಷ್ಟವಾದ ಸ್ಥಾನವಿದೆ. ಆಲ್ ಇಂಡಿಯಾ ರೇಡಿಯೋಗೆ ಪರ್ಯಾಯವಾಗಿ ಬಂದ ಆಕಾಶವಾಣಿ ಎಂಬ ನಾಮಧೇಯ ಮೈಸೂರಿನ ಕೊಡುಗೆ. ಎಂ.ವಿ. ಗೋಪಾಲಸ್ವಾಮಿ ಯವರು ಸ್ಥಾಪಿಸಿದ ಆಕಾಶವಾಣಿ ನಿಲಯ ಖಾಸಗಿ ನಿಲಯದಿಂದ ಸ್ಥಾನಿಕ ಸರ್ಕಾರಕ್ಕೆ ವರ್ಗಾವಣೆಯಾಗಿ ಅಲ್ಲಿಂದ ಕೇಂದ್ರ ಸರ್ಕಾರದ ಸಂಸ್ಥೆಗೆ ಸೇರಿದ್ದು ಇತಿಹಾಸದ ಒಂದು ಭಾಗ. ಎ.ಎನ್. ಮೂರ್ತಿರಾಯರು ತಮ್ಮ ಪುಸ್ತಕ ಸಂಜೆಗಣ್ಣಿನ ಹಿನ್ನೋಟದಲ್ಲಿ ತಮ್ಮ ಆಕಾಶವಾಣಿಯ ದಿನಗಳನ್ನು ಬಹಳ ಪ್ರೀತಿಯಿಂದ ನೆನೆದಿದ್ದಾರೆ. ಧ್ವನಿ ಮುದ್ರಣದ ವ್ಯವಸ್ಥೆ ಇಲ್ಲದಿದ್ದ ದಿನಗಳವು. ಎಲ್ಲಾ ನೇರ ಪ್ರಸಾರವಾಗುತ್ತಿದ್ದ ಕಾಲವದು. ಒಂದು ನಾಟಕದ ಪ್ರಸಾರವೆಂದರೆ ಅದಕ್ಕೆ ಬೇಕಾದ ಸಂಗೀತದ ಪರಿಣಾಮ, ಇತರ ಶಬ್ದ ಪರಿಣಾಗಳೆಲ್ಲವು ಸ್ಟುಡಿಯೋದಲ್ಲೆ ಪ್ರಸಾರ ಸಮಯದಲ್ಲೇ ಆಗಬೇಕಾಗುತ್ತಿತ್ತು. ಆದ್ದರಿಂದ ಪೂರ್ವ ಅಭ್ಯಾಸಕ್ಕೆ ಬಹಳ ಆಸ್ಥೆಯಿತ್ತು. ಈ ರೀತಿಯ ಪ್ರಸಾರಕ್ಕಾಗಿ ದುಡಿದವರು ನಿಜಕ್ಕೂ ಪ್ರಾತಃಸ್ಮರಣೀಯ ರೆಂದೇ ಹೇಳಬೇಕು. ಏಕೆಂದರೆ ಪ್ರತಿಯೊಂದು ಕಾರ್ಯಕ್ರಮವೂ ಒಂದು ರೀತಿಯ ಛಾಲೆಂಜ್. ಅವಧಿಗೆ ಅನುಸಾರವಾಗಿ ಒಂದು ತಪ್ಪೂ ಆಗದಂತೆ ಎಚ್ಚರವಹಿಸಿ ನಾಟಕ ನಿರ್ವಹಿಸುತ್ತಿದ್ದ ಅಂದಿನ ಕಲಾವಿದರು ನಿಜಕ್ಕೂ ಮಹಾನ್ ವ್ಯಕ್ತಿಗಳು. ನೇರ ಪ್ರಸಾರದ ವೇಳೆ ತಪ್ಪುಗಳಾದರೂ ಅವನ್ನು ಸಮಯೋಚಿತವಾಗಿ ಸರಿಪಡಿಸಿಕೊಳ್ಳುವ ಚಾಕಚಕ್ಯತೆ ಕೂಡ ಅವರಿಗಿತ್ತು. ಇಂದು ಒಬ್ಬ ವ್ಯಕ್ತಿ ಮೂರು ನಿಮಿಷಕ್ಕೆ ಬೇಕಾದ ಧ್ವನಿ ಮುದ್ರಣಕ್ಕೆ ಮೂವತ್ತು ನಿಮಿಷ ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಅಂತಹ ಸವಾಲುಗಳನ್ನು ಎದುರಿಸಿ ಬೆಳೆದ ಆಕಾಶವಾಣಿ ನಿಲಯ ಹಠಾತ್ತನೆ ಮುಚ್ಚಲ್ಪಟ್ಟದ್ದು ಮೈಸೂರಿನ ನಿಲಯದ ದುರಂತ.

ಮೈಸೂರು ನಿಲಯಕ್ಕೆ ಮತ್ತೆ ಜೀವ ಬಂದದ್ದು ಹದಿನಾಲ್ಕು ವರ್ಷದ ವನವಾಸದ ಅನಂತರ. ಮೈಸೂರು ಎರಡು ಪ್ರಸಾರಗಳನ್ನೊಳಗೊಂಡ ನಿಲಯವಾಗಿ ಕಾರ್ಯ ಪ್ರಾರಂಭಿಸಿತು. ಕ್ರಮೇಣ ತನ್ನದೇ ಆದ ಕಾರ್ಯಕ್ರಮಗಳನ್ನು ರೂಢಿಸಿ ಬಿತ್ತರಿಸಲು ಪ್ರಾರಂಭಿಸಿ ಇಂದು ಮೈಸೂರು ಜನತೆಯಲ್ಲಿ ಉತ್ತಮ ಅಭಿರುಚಿಯನ್ನು ಬೆಳೆಸುವಲ್ಲಿ ಯಶಸ್ವಿಯಾಗಿದೆ. ಧಾರವಾಡದ ಹಾಗೆ ಮೈಸೂರು ನಗರ ಕೂಡ ಸಾಂಸ್ಕೃತಿಕವಾದ ಒಂದು ಜೇನುಗೂಡು. ಅಸಂಖ್ಯಾತ ಸಾಹಿತಿಗಳು, ಉತ್ತಮ ಸಂಗೀತಗಾರರು ಮತ್ತು ಕಲಾವಿದರಿರುವ ನಗರದಲ್ಲಿ ಉತ್ತಮ ಕಾರ್ಯಕ್ರಮಗಳನ್ನು ನಿರ್ಮಿಸುವುದು ಬಹು ಕಷ್ಟದ ಕಾರ್ಯವೇನಲ್ಲ. ಹಿರಿಯ ಸಾಹಿತಿಗಳಾದ ಹಾ.ಮಾ. ನಾಯಕ, ಎಸ್.ಎಲ್. ಭೈರಪ್ಪ, ಎಚ್ಚೆಸ್ಕೆ, ಯು.ಆರ್. ಅನಂತಮೂರ್ತಿ ಇನ್ನು ಹಲವಾರು ಖ್ಯಾತನಾಮರು ಈ ನಿಲಯಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಕುವೆಂಪುರವರು ಮೈಸೂರು ಆಕಾಶವಾಣಿಯನ್ನು ಪ್ರಾರಂಭದ ದಿನದಿಂದಲೂ ನೋಡಿದ್ದ ವರು. ಅವರ ಶ್ರೀರಕ್ಷೆ ಈ ನಿಲಯಕ್ಕೆ ಅವರ ಕೊನೆಯ ದಿನಗಳವರೆಗೂ ಲಭ್ಯವಿತ್ತು. ಡಿ.ಎಲ್. ನರಸಿಂಹಾಚಾರ್, ಎ.ಎನ್. ಮೂರ್ತಿರಾವ್ ಮೊದಲಾದ ವಿದ್ವಾಂಸರು ಈ ನಿಲಯದಿಂದ ಪ್ರಸಾರ ಮಾಡಿದವರು.

ಪ್ರಾದೇಶಿಕ ನಿಲಯಗಳ ಪೈಕಿ ಅತ್ಯಂತ ಕಡಿಮೆ ಪ್ರಸಾರ ಶಕ್ತಿಯುಳ್ಳ ಕೇಂದ್ರ ಮೈಸೂರು ಆಕಾಶವಾಣಿ, ಬಹಳ ಸೀಮಿತ ವ್ಯಾಪ್ತಿಯಿರುವ ಈ ನಿಲಯ, ಎಫ್.ಎಂ. ಕಂಪನಾಂಕದಲ್ಲಿ ತನ್ನ ಪ್ರಸಾರ ಶಕ್ತಿಯನ್ನು ಹಿಗ್ಗಿಸಿಕೊಂಡಿದೆ. ಮೈಸೂರು ನಗರ, ಚಾಮರಾಜನಗರ, ಶ್ರೀರಂಗಪಟ್ಟಣ ಹೀಗೆ ಪ್ರಸಾರ ವಲಯದಲ್ಲಿ ಬರುವ ವಿಸ್ತೀರ್ಣ 12415 ಚ.ಕಿಮೀ. ಜನಸಂಖ್ಯೆ 48 ಲಕ್ಷ. ರೇಡಿಯೋ ಹೊಂದಿರುವ ಕುಟುಂಬಗಳು 10ಲಕ್ಷ. ಶೇ. 1ರಷ್ಟು ಕೇಳುವಿಕೆಯೆಂದರೆ 48,000 ಕೇಳುಗರು.

**ಕರ್ನಾಟಕದಲ್ಲಿ ಆಕಾಶವಾಣಿ ನಿಲಯಗಳು**

(ಉದ್ಘಾಟನೆಯಾದ ದಿನದೊಡನೆ)

| | **ಪ್ರಾದೇಶಿಕ ನಿಲಯಗಳು** | **(ಮೀಡಿಯಂ ವೇವ್)** |
|---|---|---|
| 1. | ಬೆಂಗಳೂರು | 2.11.1955 |
| 2. | ಧಾರವಾಡ | 8.1.1950 |
| 3. | ಭದ್ರಾವತಿ | 7.2.1965 |
| 4. | ಗುಲ್ಬರ್ಗ | 11.11.1966 |
| 5. | ಮಂಗಳೂರು | 11.12.1976 |
| 6. | ಮೈಸೂರು | 14.11.1974 (ನಿಲಯ ಪ್ರಾರಂಭವಾಗಿದ್ದು 10.9.1935) |

**ಎಫ್.ಎಂ. ನಿಲಯಗಳು**

| | | |
|---|---|---|
| 1. | ಹಾಸನ | 04.5.1991 |
| 2. | ಮಡಿಕೇರಿ | 28.8.1993 |
| 3. | ಚಿತ್ರದುರ್ಗ | 03.05.1991 |
| 4. | ರಾಯಚೂರು (ಸ್ಥಳೀಯ) | 28.8.1993 |

**ಕರ್ನಾಟಕದಲ್ಲಿರುವ ಅಧಿಕ ಹಾಗೂ ಕಡಿಮೆ ಪ್ರಸಾರ ಸಾಮರ್ಥ್ಯ ಹೊಂದಿರುವ ಟ್ರಾನ್ಸ್‌ಮೀಟರ್‌ಗಳು**

**ಅಧಿಕ ಪ್ರಸಾರ ಸಾಮರ್ಥ್ಯದ ಟ್ರಾನ್ಸ್‌ಮೀಟರ್‌ಗಳು**

ಬೆಂಗಳೂರು

ಧಾರವಾಡ

ಗುಲ್ಬರ್ಗ

ಶಿವಮೊಗ್ಗ

**ಕಡಿಮೆ ಪ್ರಸಾರ ಸಾಮರ್ಥ್ಯದ ಟ್ರಾನ್ಸ್‌ಮೀಟರ್‌ಗಳು**

ಅರಸೀಕೆರೆ, ಅಥಣಿ, ಬಾಗಲಕೋಟೆ, ಬಂಟ್ವಾಳ, ಬಸವಕಲ್ಯಾಣ, ಬೆಳಗಾಂವಿ, ಬಳ್ಳಾರಿ, ಭಟ್ಕಳ, ಬೀದರ್, ಬಿಜಾಪುರ, ಚಿಕ್ಕಮಗಳೂರು, ಚಿಕ್ಕೋಡಿ, ಚಿತ್ರದುರ್ಗ, ದಾವಣಗೆರೆ, ಗದಗ–ಬೆಟಗೇರಿ, ಗಂಗಾವತಿ, ಗೋಕಾಕ್, ಹರಪನಹಳ್ಳಿ, ಹಾಸನ, ಹತ್ತೀಹಾಳ, ಹೊಳೆನರಸೀಪುರ, ಹೊಸಪೇಟೆ, ಹುನಗುಂದ, ಕಾರವಾರ, ಕೋಲಾರ ಗೋಲ್ಡ್ ಫೀಲ್ಡ್, ಕುಮಟ, ಮಂಡ್ಯ, ಮಂಗಳೂರು, ಮಡಿಕೇರಿ, ಮೂಡಿಗೆರೆ, ಮೈಸೂರು, ಪಾವಗಡ, ಪುತ್ತೂರು, ರಾಯಚೂರು, ರಾಮದುರ್ಗ, ರಾಣೆಬೆನ್ನೂರು, ಸಾಗರ, ಸಂಡೂರು, ಸಿರ್ಸಿ, ತಿಪಟೂರು, ತುಮಕೂರು, ಉಡುಪಿ.

**ಅತಿ ಕಡಿಮೆ ಪ್ರಸಾರ ಸಾಮರ್ಥ್ಯದ ಟ್ರಾನ್ಸ್‌ಮೀಟರ್‌ಗಳು**

ಮಧುಗಿರಿ, ಸುಳ್ಯ, ಸಕಲೇಶಪುರ

(ಎನ್.ಪಿ., ಎಚ್.ಆರ್. ಕೆ.)

**ಆಕೃತಿ ವಿಜ್ಞಾನ :** ಯಾವುದೇ ಭಾಷೆಯ ಆಕೃತಿಮಾಗಳು (ಮಾರ್ಫೀಮ್) ಮತ್ತು ಅವುಗಳ ಜೋಡಣೆ, ಪರಸ್ಪರ ಸಂಬಂಧ ಇತ್ಯಾದಿಗಳನ್ನು ಕುರಿತ ಚರ್ಚೆಯನ್ನೊಳಗೊಂಡ ಭಾಷಾವಿಜ್ಞಾನ ವಿಭಾಗ (ಮಾರ್ಫಾಲಜಿ). ಎಂದರೆ, ಆಕೃತಿಮಾಗಳನ್ನು ಗುರುತಿಸುವಿಕೆ ಮತ್ತು ಅವುಗಳ ವಿಂಗಡನೆಗೆ ಈ ವಿಜ್ಞಾನದ ವಸ್ತು. ಆಕೃತಿ ವಿಜ್ಞಾನ ವ್ಯಾಕರಣದ ಮೊದಲ ಭಾಗ. ಎರಡನೆಯದು ವಾಕ್ಯವಿಜ್ಞಾನ (ಸಿಂಟ್ಯಾಕ್). ಕೆಲವು ವಿದ್ವಾಂಸರು ವ್ಯಾಕರಣ ಮತ್ತು ವಾಕ್ಯವಿಜ್ಞಾನಗಳೆರಡನ್ನೂ ಆಕೃತಿ ವಿಜ್ಞಾನದ ಭಾಗಗಳಾಗಿ ಪರಿಗಣಿಸುತ್ತಾರೆ.

ಹಾಗೆ ಮಾಡಿದಾಗ ಆಕೃತಿ ವಿಜ್ಞಾನವನ್ನು ವ್ಯಾಕರಣದ ಅರ್ಥದಲ್ಲಿ ಬಳಸಿದ್ದಾರೆಂದು ಭಾವಿಸಬಹುದು. ವಾಕ್ಯ ವಿಜ್ಞಾನ ಭಾಗದಲ್ಲಿ ಆಕೃತಿ ವಿಜ್ಞಾನದಲ್ಲಿ ಗುರುತಿಸಲಾದ ಆಕೃತಿಮಾಗಳ ದೊಡ್ಡ ದೊಡ್ಡ ರಚನೆಗಳ ವಿವರಣೆ ಮಾಡುತ್ತಾರೆ. ಹೀಗೆ ಮೊದಲ ಪ್ರಕರಣಗಳ ಫಲಿತಾಂಶಗಳ ಮೇಲೆ ಮೇಲಿನ ಪ್ರಕರಣಗಳನ್ನು ಬೆಳೆಸಿಕೊಂಡು ಹೋಗುತ್ತಾರೆ. ಆದ್ದರಿಂದ ಯಾವುದೇ ಭಾಷೆಯ ಆಕೃತಿ ವಿಜ್ಞಾನವನ್ನು ಕುರಿತು ಮಾತನಾಡುವಾಗ ಆ ಭಾಷೆಯ ಧ್ವನಿವಿಜ್ಞಾನದ (ಫೋನೋಲಜಿ) ಪರಿಚಯವಿದೆಯೆಂದು ಭಾವಿಸಿಕೊಳ್ಳುತ್ತೇವೆ.

ಪ್ರತಿಯೊಂದು ಪ್ರಕರಣದಲ್ಲೂ ಅಲ್ಲಿಗೆ ಸಂಬಂಧಪಟ್ಟಂತೆ ಒಂದು ಮೂಲ ವಸ್ತುವಿರುತ್ತದೆ. ಒಂದಕ್ಕೂ ಹೆಚ್ಚು ಧ್ವನಿ ವಿಶೇಷಾಂಶಗಳಿಂದ ಕೂಡಿದ್ದರೂ ಧ್ವನಿಮಾವನ್ನು ಹೇಗೆ ಧ್ವನಿವಿಜ್ಞಾನದ ಮೂಲವಸ್ತುವೆಂದು ಭಾವಿಸುತ್ತೇವೋ ಹಾಗೆ ಆಕೃತಿಮಾವನ್ನು ಆಕೃತಿವಿಜ್ಞಾನದ ಮೂಲವಸ್ತುವೆಂದು ಭಾವಿಸುತ್ತೇವೆ. ಉದಾಹರಣೆಗೆ, ದ್ ಕನ್ನಡ ಭಾಷೆಯ ಒಂದು ಧ್ವನಿಮಾ, ದನ ಆ ಭಾಷೆಯ ಒಂದು ಆಕೃತಿಮಾದ ಒಂದು ರೂಪ.

ಭಾಷೆಯಲ್ಲಿ ಪದೇಪದೇ ಕಾಣಿಸಿಕೊಳ್ಳುವ, ಆಕೃತಿಗಳೊಡನೆ ವಿಶಿಷ್ಟ ಸಂಬಂಧವುಳ್ಳ, ಧ್ವನಿಮಾಗಳ ಸಂಚಯವನ್ನು ಆಕೃತಿಮಾ ಎನ್ನಲಾಗುತ್ತದೆ. ಆದರೆ ಆ ರೀತಿ ಪದೇಪದೇ ತೋರಿಬರುವ ಸಂಚಯಗಳೆಲ್ಲ ಆಕೃತಿಮಾ ಎನಿಸಿಕೊಳ್ಳಲಾರವು. ಉದಾಹರಣೆಗೆ, ಆನೆ, ಸೋನೆ ಮತ್ತು ಗೊನೆ ಇವುಗಳಲ್ಲಿ ಕಂಡುಬರುವ ನೆ ಆಕೃತಿಮಾವಲ್ಲ. ಆದರೆ ಮನೆತನ, ಕಳ್ಳತನಗಳಲ್ಲಿ ಕಾಣಬರುವ ತನ ಆಕೃತಿಮಾ ಎನಿಸಿಕೊಳ್ಳುತ್ತದೆ. ಬಹುವಾಗಿ ಆಕೃತಿಮಾಗಳು ಅರ್ಥಸಂಬಂಧ ಹೊಂದಿವೆಯೆಂದು ತೋರಿಸಬಹುದಾದರೂ ಧ್ವನಿಮಾಗಳಿಗೆ ಸುಲಭವಾಗಿ ಅರ್ಥ ಕೊಡುವುದು ಸಾಧ್ಯವಿಲ್ಲ. ಆಮೆ, ಆನೆ, ಆಳು ಇವುಗಳಿಗೆ ವ್ಯವಹಾರ ಪ್ರಪಂಚದಲ್ಲಿ ನಿಶ್ಚಿತಾರ್ಥವುಂಟು. ಆದರೆ ಈ ಆಕೃತಿಮಾಗಳಲ್ಲಿರುವ ಮೊದಲ ಧ್ವನಿಮಾಕ್ಕೆ ಏನರ್ಥಕೊಡಬಹುದು?

ಆಕೃತಿವಿಜ್ಞಾನದಲ್ಲಿ ಆಕೃತಿಮಾ ಅತ್ಯಂತ ಸಣ್ಣ ವಿಭಾಗ. ಅದನ್ನು ಇನ್ನೂ ಸಣ್ಣ ವಿಭಾಗವಾಗಿ ಕತ್ತರಿಸಲು ಸಾಧ್ಯವಿಲ್ಲ. ಹಾಗೆ ಮಾಡಿದಲ್ಲಿ ಅರ್ಥ ವ್ಯತ್ಯಾಸವಾದೀತು. ಅರ್ಥ ಬದಲಾಯಿಸದೇ ಅರ್ಥ ಹೊಂದಿದಂತೆ ಸಣ್ಣ ತುಂಡುಗಳಾಗಿ ಮೇಲೆ ಉದಾಹರಿಸಿದ ಆಕೃತಿಮಾಗಳನ್ನು ಕತ್ತರಿಸಲು ಸಾಧ್ಯವಿಲ್ಲ. ಮನೆ ಎಂಬುದು ಒಂದು ಆಕೃತಿಮಾ ಮತ್ತು ಒಟ್ಟಾಗಿ ಅದಕ್ಕೆ ಅರ್ಥವುಂಟು. ಆದರೆ ಮನೆ ಅಥವಾ ಮ ಎಂಬುವುಗಳಿಗೆ ಅರ್ಥವಿದೆಯೆಂದೂ ಮನೆ ಎಂಬುದರ ಅರ್ಥದೊಡನೆ ಸಂಬಂಧವಿದೆಯೆಂದೂ ತೋರಿಸುವುದು ಅಸಾಧ್ಯ. ಮನೆಗಳು ಎಂಬಲ್ಲಿ ಒಂದಕ್ಕೂ ಹೆಚ್ಚಾಗಿ ಆಕೃತಿಮಾಗಳಿದ್ದರೂ ಅರ್ಥವಿದೆ. ಅದನ್ನು ಮನೆ ಮತ್ತು ಗಳು ಎಂದು ಎರಡು ಭಾಗ ಮಾಡಬಹುದು, ಮತ್ತು ಅವುಗಳಿಗೆ ಪ್ರತ್ಯೇಕವಾಗಿ ಅರ್ಥವಿದೆಯೆಂದೂ ಮನೆಗಳು ಎಂಬುದರ ಒಟ್ಟು ಅರ್ಥಕ್ಕೆ ಸಂಬಂಧವಿದೆಯೆಂದೂ ತೋರಿಸಬಹುದು. ಆದ್ದರಿಂದ ಮನೆಗಳು ಎಂಬಲ್ಲಿ ಎರಡು ಆಕೃತಿಮಾಗಳಿವೆ. ಈ ಉದಾಹರಣೆಯಲ್ಲಿ ಕಂಡುಬಂದಂತೆ ಭಾಷೆಯಲ್ಲಿ ಆಕೃತಿಮಾಗಳು ಪರಸ್ಪರ ಸಂಬಂಧ ಹೊಂದಿರುವುವೆಂದು ಸುಲಭವಾಗಿ ನಿರ್ಧರಿಸಬಹುದು.

ಕೆಲವು ವೇಳೆ ಒಂದೇ ಒಂದು ಧ್ವನಿಮಾ ಒಂದು ಆಕೃತಿಮಾವನ್ನು ಪ್ರತಿನಿಧಿಸಬಹುದು. ಆದರೆ ಪ್ರತಿಯೊಂದು ಧ್ವನಿಮಾ ಆಕೃತಿಮಾ ಎನಿಸಿಕೊಳ್ಳಲಾರದು. ಉದಾ: ಆ ಮನೆ, ಆ ಮರಗಳಲ್ಲಿನ ಆ ಎಂಬುದೇ ಒಂದು ಆಕೃತಿಮಾ.

ಆಕೃತಿವಿಜ್ಞಾನದ ವಸ್ತು ವಿಷಯವನ್ನು ಎರಡು ಹಂತಗಳಲ್ಲಿ ಚರ್ಚಿಸುವುದು ಅನುಕೂಲವಾಗಿ ಕಂಡು ಬಂದಿದೆ. 1 ಆಕೃತಿಮಾಗಳ ವಿಶ್ಲೇಷಣೆ ಮತ್ತು ಪದ ಇತ್ಯಾದಿಗಳ ರಚನೆಯಲ್ಲಿ ಅವುಗಳ ಕ್ರಮದ ವಿವರಣೆ (ಪದಶಾಸ್ತ್ರ–ಮಾರ್ಫೆಮಿಕ್ಸ್) ಮತ್ತು 2 ಆಕೃತಿಮಾಗಳಲ್ಲಿ ಧ್ವನಿಮಾಗಳಲ್ಲಿ ಮಾರ್ಪಾಡು (ಸಂಧಿವಿಜ್ಞಾನ–ಮಾರ್ಫೊಫೋನೆಮಿಕ್ಸ್).

ಇಲ್ಲಿ ಕನ್ನಡದಲ್ಲಿನ ಒಂದೆರಡು ಸಂಧಿ ನಿಯಮಗಳನ್ನು ಮಾತ್ರ ಸೂಚಿಸುವುದಾದರೆ: ಳ ದ ಮುಂದಿನ ಲ, ಳ ಕ್ಕೆ ಬದಲಾಯಿಸುತ್ತದೆ. ಉದಾ: ಕೇಳ್ ಮತ್ತು ಲಿ=ಕೇಳಲಿ. ಣ ದನಂತರ ಬರುವ ದ ಯಾವಾಗಲೂ ಡ ರೂಪವನ್ನು ತಾಳುತ್ತದೆ. ಕಣ್ ಮತ್ತು ದ ಕಂಡ. ತ ಹಿಂದಿನ ದ, ತ ವಾಗಿ ಮಾರ್ಪಡುತ್ತದೆ. ಇದ ಮತ್ತು ತ್= ಇತ್ತ್ ಕಂಠ್ಯ ಸ್ಪರ್ಶದ ಹಿಂದಿನ ನ ಐಚ್ಛಿಕವಾಗಿ ಕೆಲವರ ನುಡಿಯಲ್ಲಿ ಙ ರೂಪವಾಗುತ್ತದೆ. ನನಗೆ>ನನ್‌ಗೆ ಅಥವಾ ನಙಗೆ. ಕ್ರಿಯಾಪದದ ಆಕೃತಿವಿಜ್ಞಾನದಲ್ಲಿ, ವಿಶೇಷವಾಗಿ ಭೂತಕಾಲದ ರೂಪಗಳಲ್ಲಿ ಹಲವಾರು ಬಗೆಯ ಸಂಧಿ ನಿಯಮಗಳನ್ನು ಕಾಣಬಹುದು.

ರೂಪ (ಎಕ್ಸ್‌ಪ್ರೆಷನ್) ಮತ್ತು ಅರ್ಥದಲ್ಲಿ (ಕಂಟೆಂಟ್) ಪಾಕ್ಷಿಕ ವ್ಯತ್ಯಾಸ ತೋರಿಸುವ ಜೋಡಿ ನುಡಿಗಳ ಮೂಲಕ ಆಕೃತಿಮಾಗಳನ್ನು ಗುರುತಿಸುವಿಕೆ ನಡೆಯುತ್ತದೆ. ಉದಾ: ಹಸು ಬರುತ್ತೆ, ಹಸುಹೊಡಿ, ಹಸೂನ್‌ಹಾಲು ಮತ್ತು ಹಳ್ಳಿಹಸು ಇವುಗಳನ್ನು ಅದರ ವ್ಯಾಪ್ತಿ (ಡಿಸ್ಟ್ರಿಬ್ಯೂಷನ್) ಎನ್ನಬಹುದು. ಆಕೃತಿಮಾಗಳ ಅರ್ಥವನ್ನು ಅವುಗಳ ವ್ಯಾಪ್ತಿಯ ಮೂಲಕವೇ ತಿಳಿಯಬಹುದು. ಆಕೃತಿಮಾಗಳ ಒಟ್ಟು ಸಾಧ್ಯ ಸಂದರ್ಭಗಳು ಮತ್ತು ಸಾಧ್ಯವಿಲ್ಲದ ಸಂದರ್ಭಗಳೊಡನೆ ಹೋಲಿಕೆಯೇ ಅದರ ವ್ಯಾಪ್ತಿಯೆನಿಸಿಕೊಳ್ಳುತ್ತದೆ.

ಎರಡು ನುಡಿಗಳಲ್ಲಿನ ವ್ಯತ್ಯಾಸವನ್ನು ಸಹಪ್ರತ್ಯಯಗಳ (ಸೂಪರ್ ಫಿಕ್ಸ್) ಮೂಲಕವೂ ತೋರಿಸಬಹುದು. ಉದಾ: $^{3}$ಆಲ್$^{1}$ ಲ$\downarrow$ ಅಲ್ಲ, $^{1}$ಅಲ್$^{3}$ ಲ$\uparrow$ ಅಲ್ಲ?

ಭಾಷೆಯಲ್ಲಿ ಆಕೃತಿಮಾಗಳ ಕ್ರಮದಲ್ಲಿ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯ ಕಂಡುಬಂದರೂ, ನಿರ್ದಿಷ್ಟ ಕ್ರಮದಲ್ಲಿರುವುದನ್ನು ಗಮನಿಸಬಹುದು. ಮನೆಗಳು ಎಂಬಲ್ಲಿ ಮನೆ ಮತ್ತು ಗಳು ಒಂದು ನಿರ್ದಿಷ್ಟ ಕ್ರಮದಲ್ಲಿವೆ. ಈ ಕ್ರಮವನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಮನೆ ಬಾಡಿಗೆ ಮತ್ತು ಬಾಡಿಗೆ ಮನೆ ಎರಡೂ ಈ ಭಾಷೆಯಲ್ಲಿ ಸಾಧ್ಯ ಮತ್ತು ಅರ್ಥದಿಂದ ಕೂಡಿವೆ. ಹಾಗೆಯೇ ನಾಳೆ ನಮ್ ಮನೇಗ್ ಬಾ ಮತ್ತು ಬಾ ನಾಳೆ ನಮ್ ಮನೇಗೆ ಒಪ್ಪಿತವಾಗುವುದಾದರೂ ನಮ್, ನಾಳೆನಮ್‌ಮನೇಗ್‌ಬಾ ಅಂಗೀಕೃತವಾಗುವುದಿಲ್ಲ.

ಆಕೃತಿಮಾಗಳನ್ನು ಹಲವು ಬಗೆಗಳಲ್ಲಿ ವಿಂಗಡಿಸಬಹುದು, ಅನೇಕ ಭಾಷೆಗಳಲ್ಲಿ ಪ್ರಕೃತಿ (ರೂಟ್) ಮತ್ತು ಪ್ರತ್ಯಯ (ಅಫಿಕ್ಸ್) ಎಂಬ ವಿಭಾಗ ಸಾಧ್ಯವೆಂದು ಕಂಡುಬಂದಿದೆ. ಕನ್ನಡದಲ್ಲಿ ಮರ, ಅಣ್ಣ ಮೊದಲ ಬಗೆಯ ಆಕೃತಿಮಾಗಳಿಗೆ ಉದಾಹರಣೆಯಾದರೆ ಬರ್‌ತಾ ಎಂಬಲ್ಲಿ ತಾ ಮತ್ತು ಅಣ್ಣಂದ್ರು ಎಂಬಲ್ಲಿನ ಅಂದ್ರು ಪ್ರತ್ಯಯಗಳು. ಪ್ರತ್ಯಯಗಳಲ್ಲೂ ಅನೇಕ ಬಗೆಗಳುಂಟು. ಪೂರ್ವಪ್ರತ್ಯಯ (ಪ್ರಿಫಿಕ್ಸ್) ಪರಪ್ರತ್ಯಯ (ಸಫಿಕ್ಸ್) ಮತ್ತು ಅಂತಃಪ್ರತ್ಯಯ (ಇನ್‌ಫಿಕ್ಸ್). ಕನ್ನಡದಲ್ಲಿ ಪೂರ್ವಪ್ರತ್ಯಯಗಳು ಹೆಚ್ಚಾಗಿ ತೋರಿಬರುವುದಿಲ್ಲ. ಸಂಸ್ಕೃತದಿಂದ ಬಂದಿರುವ ರೂಪಗಳಲ್ಲಿ ಅಸಾಧ್ಯ ಎನ್ನುವಲ್ಲಿ ಅ ಸುವಾಸನೆ ಎಂಬಲ್ಲಿ ಸು ಪೂರ್ವಪ್ರತ್ಯಯಗಳು. ನಾಮಪದಗಳಲ್ಲಿನ ಬಹುವಚನವಾಚಿ ಪ್ರತ್ಯಯ ಮತ್ತು ಕ್ರಿಯಾಪದದಲ್ಲಿನ ಕಾಲವಾಚಿ ಪ್ರತ್ಯಯ ಪರಪ್ರತ್ಯಯಗಳೆನಿಸಿಕೊಳ್ಳುತ್ತವೆ. ಹಾಗೆ, ಹೀಗೆ ಮತ್ತು ಹೇಗೆ ಎಂಬಲ್ಲಿ ಕಂಡುಬರುವ ಮೊದಲ ಸ್ವರವನ್ನು ಅಂತಃಪ್ರತ್ಯಯಕ್ಕೆ ಉದಾಹರಣೆಯಾಗಿ ಕೊಡಬಹುದು. ಪ್ರತ್ಯಯಗಳು ಯಾವಾಗಲೂ ಪ್ರಕೃತಿಗಳೊಡನೆ ಕೂಡಿಕೊಂಡೇ ತೋರಿಬರುವುದರಿಂದ ಪ್ರಕೃತಿಗಳನ್ನು ಸ್ವತಂತ್ರರೂಪ (ಫ್ರೀಫಾರಂ) ಗಳೆಂದೂ ಪ್ರತ್ಯಯಗಳನ್ನು ಬದ್ಧರೂಪಗಳೆಂದೂ (ಬಾಂಡ್ ಫಾರಂ) ಕರೆಯುವುದುಂಟು.

ಹಲವು ರೀತಿಯ ಪರ ಪ್ರಕ್ರಿಯೆಗಳು (ಟೂಫೋರ್ಲಾಜಿಕಲ್) ಭಾಷೆಯಲ್ಲಿ ಕಂಡುಬರುತ್ತವೆ. ಮೇಲೆ ಸೂಚಿಸಿದಂತೆ ಪ್ರತ್ಯಯಗಳ ಜೋಡಣೆ ಒಂದು ಬಗೆಯ ಪ್ರಕ್ರಿಯೆ. ಮನೆಮನೆ, ಊರೂರು ಇತ್ಯಾದಿಗಳಲ್ಲಿ ಇನ್ನೊಂದು ಬಗೆಯ ಪ್ರಕ್ರಿಯೆ ಕಾಣಬರುತ್ತದೆ. ಇಲ್ಲಿ ಆಕೃತಿಮಾಗಳು ದ್ವಿರುಕ್ತವಾಗಿವೆ. ಪ್ರತ್ಯೇಕತೆಯ ಅರ್ಥ ಸೂಚಿಸುವ ದ್ವಿರುಕ್ತಿಗಳೆಂದು (ರಿಡೂಪ್ಲಿಕೇಷನ್) ಇದನ್ನು ಕರೆಯಬಹುದು. ಮತ್ತೊಂದು ರೀತಿಯ ಪ್ರಕ್ರಿಯೆ ಮನೆಗಿನೆ, ಹುಲಿಗಿಲಿ ಎಂಬ ರೂಪಗಳಲ್ಲಿ ತೋರಿಬರುತ್ತದೆ. ಇವುಗಳನ್ನು ಪ್ರತಿಧ್ವನಿ (ಎಕೊ) ರೂಪಗಳೆನ್ನುತ್ತಾರೆ.

ಬೇರೊಂದು ರೀತಿಯ ವಿಂಗಡಣೆಗಳಲ್ಲಿ ಆಕೃತಿಮಾಗಳನ್ನು ಸರಳ ಸಮ್ಮಿಶ್ರ ಮತ್ತು ಸಂಯುಕ್ತ ರೂಪಗಳಲ್ಲಿ ವಿಂಗಡಿಸಬಹುದು. ಸೊಸೆ, ತಮ್ಮ ಎಂಬ ಆಕೃತಿಮಾಗಳನ್ನು ಸರಳರೂಪಗಳೆಂದು ಕರೆಯುತ್ತೇವೆ. ಸಮ್ಮಿಶ್ರ ರೂಪದಲ್ಲಿ ಒಂದು ಸ್ವತಂತ್ರ ರೂಪ, ಇನ್ನೊಂದು ಬದ್ಧ ರೂಪ. ಹೀಗೆ ಎರಡು ಆಕೃತಿಮಾಗಳಾದರೂ ಇರುತ್ತವೆ. ಉದಾ: ಮನೆಗಳು ಸಂಯುಕ್ತ ರೂಪದಲ್ಲಿ ಎರಡು ಆಕೃತಿಮಾಗಳೂ ಸ್ವತಂತ್ರ ರೂಪಗಳು ದನಕರು, ಹೆಂಡ್ತಿಮಕ್ಕಳು ಈ ಬಗೆಯ ಆಕೃತಿಮಾಗಳು.

ಶಬ್ದಕೋಶದಲ್ಲಿ ಸೇರಿಸಲ್ಪಡುವ ಆಕೃತಿಮಾಗಳು (ಲೆಕ್ಸಿಕಲ್), ಕೇವಲ ವ್ಯಾಕರಣರೂಪಗಳು ಎಂದು ಸಹ ಆಕೃತಿಮಾಗಳ ವಿಂಗಡಣೆ ಸಾಧ್ಯ. ಮನೆ, ಮರ ಇತ್ಯಾದಿ ರೂಪಗಳನ್ನು ಕೋಶದಲ್ಲಿ ಕಾಣಬಹುದು. ಆದರೆಗಳು, ಅಂದ್ರು ಎಂಬ ರೂಪಗಳು ಕೋಶದಲ್ಲಿ ಸೇರಿಸಲ್ಪಡುವುದಿಲ್ಲ. ಒಂದು ಬಗೆಯ ಪ್ರಕ್ರಿಯೆಯನ್ನು ಸೂಚಿಸುವ ಪ್ರತ್ಯಯಗಳೆಂದು ಅವನ್ನು ಗುರುತಿಸಿದರಾಯಿತು.

ಭಾಷಾವಿಜ್ಞಾನಿಗಳು ಆಕೃತಿ (ಅಲೊಮಾರ್ಫ) ಮತ್ತು ಆಕೃತಿಮಾ ಎಂಬ ವ್ಯತ್ಯಾಸ ಮಾಡುತ್ತಾರೆ. ಆಕೃತಿ ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ತೋರಿಬರುವ ಒಂದು ರೂಪ. ಒಂದೇ ಅರ್ಥಮಿತಿ ಹೊಂದಿದ, ಪರಸ್ಪರ ಪೂರಕ ಸಂದರ್ಭಗಳಲ್ಲಿ ಮಾತ್ರ ಕಂಡುಬರುವ ಆಕೃತಿಗಳ ಗುಂಪಿಗೆ ಆಕೃತಿಮಾ ಎಂದು ಕರೆಯುತ್ತೇವೆ. ಒಂದು ಆಕೃತಿಮಾದಲ್ಲಿ ಒಂದು ಮತ್ತು ಹೆಚ್ಚಿನ ಆಕೃತಿಗಳಿರಬಹುದು. 'ಭೂತಕಾಲ'ದ ಆಕೃತಿಮಾದ ಆಕೃತಿಗಳಾದ –ದ, –ತ–ಇದ,–0 (ಶೂನ್ಯ) ಗಳನ್ನು ತಿಂದ, ನಿಂತ, ಮಾಡಿದ, ಮಾಡಿತು ಎಂಬಲ್ಲಿ ಕಾಣಬಹುದು. ಈ ಉದಾಹರಣೆಗಳಲ್ಲಿ ಒಂದು ಆಕೃತಿಯ ಸ್ಥಾನದಲ್ಲಿ ಮತ್ತೊಂದು ಆಕೃತಿ ಬರಲು ಸಾಧ್ಯವಿಲ್ಲ. ಇದರಿಂದಲೇ ಒಂದು ಆಕೃತಿ ಮಿಕ್ಕ ಆಕೃತಿಗಳಿಗೆ ಪೂರಕವಾಗಿದೆ ಎನ್ನುತ್ತೇವೆ.

ಆಕೃತಿಗಳ ನಿರ್ದಿಷ್ಟ ರೂಪಗಳಿಗೆ ಧ್ವನಿಮಾಸಂಬಂಧವಾದ ಕಾರಣ ಅಥವಾ ಆಕೃತಿ ಸಂಬಂಧದ ಕಾರಣಗಳಿರಬಹುದು. ತಿಂದ, ನಿಂತ, ಎಂಬಲ್ಲಿ ತೋರಿಬರುವ ಭಿನ್ನಭಿನ್ನ, ಭೂತಕಾಲದ ಆಕೃತಿಮಾದ, ಆಕೃತಿಗಳು ಅಲ್ಲಿನ ಇತರ ಆಕೃತಿಮಾಗಳ ಸಂಬಂಧದಿಂದೆಂದು ನಿರ್ಧರಿಸಬೇಕು. ಕಾರಣ, ಈ ಆಕೃತಿಗಳು ಸ್ವತಂತ್ರರೂಪವಾದ ಪ್ರಕೃತಿಗಳ ಆರಿಕೆಯ ಮೇಲೆ ನಿರ್ಧಾರಿತವಾಗಿವೆ. ಆದರೆ ಅದೇ ಭೂತಕಾಲದ ಆಕೃತಿಮಾದ ಇನ್ನೊಂದು ಆಕೃತಿ ಡ ಅದರೊಡನಿರುವ ಧ್ವನಿಮಾದಿಂದ ನಿರ್ಧರಿಸಲ್ಪಡುತ್ತದೆ. ಉದಾ: ಕಂಡ.

ತಿಂದ, ನಿಂತ ಈ ಎರಡು ರೂಪಗಳಲ್ಲೂ ಸ್ವತಂತ್ರರೂಪ ನಕಾರಾಂತವಾಗಿದ್ದರೂ ಪ್ರತ್ಯಯ ಒಂದು ಕಡೆ ದ ರೂಪವಾಗಿಯೂ, ಇನ್ನೊಂದುಕಡೆ ತ ರೂಪವಾಗಿಯೂ ಕಂಡುಬರುವುದರಿಂದ ಈ ರೂಪವ್ಯತ್ಯಾಸಕ್ಕೆ ಧ್ವನಿಮಾ ಕಾರಣವಾಗಲಾರದು. ಆಕೃತಿವ್ಯತ್ಯಾಸವೇ

ಕಾರಣ. ಆದರೆ, ಕಂಡ ಎಂಬಲ್ಲಿ ಮೂರ್ಧನ್ಯವಾದ ಣ, ದ ರೂಪವನ್ನು ಮೂರ್ಧನ್ಯವಾದ ಡ ರೂಪಕ್ಕೆ ಹೊಂದಿಸಿಕೊಳ್ಳುತ್ತದೆ. ಈ ಆಕೃತಿಗಳೆಲ್ಲ ಪರಸ್ಪರ ಪೂರಕವಾಗಿರುವುದರಿಂದಲೂ, ಒಂದೇ ಅರ್ಥ ವ್ಯಾಪ್ತಿ ಹೊಂದಿರುವುದರಿಂದಲೂ ಈ ಆಕೃತಿಗಳನ್ನು ಒಂದು ಆಕೃತಿಮಾದಲ್ಲಿ ಅಂತರ್ಗತ ಮಾಡುತ್ತೇವೆ.

ಕಡೆಯದಾಗಿ ಆಕೃತಿಮಾಗಳನ್ನು ಅವುಗಳ ರೂಪ ಅಥವಾ ಕಾರ್ಯಗಳ ಆಧಾರದ ಮೇಲೆ ಎರಡು ಗುಂಪಾಗಿ ವಿಭಾಗಿಸಬಹುದು. ಬಹುವಚನ ಪ್ರತ್ಯಯಗಳನ್ನು ಹೊಂದುವ ಮರ ಮತ್ತು ಮನೆ ಇತ್ಯಾದಿ ಆಕೃತಿಮಾಗಳನ್ನು ಒಂದು ಗುಂಪಿನಲ್ಲಿ ಸೇರಿಸಬಹುದು. ಹಾಗೆಯೇ, ಬರ್‌ತಾನೆ, ನಿಂತ ಎಂಬ ರೂಪಗಳನ್ನು ಇನ್ನೊಂದು ಗುಂಪಿಗೆ ಸೇರಿಸಬಹುದು. ಅನುಕೂಲಕ್ಕಾಗಿ ಮೊದಲ ಗುಂಪನ್ನು ನಾಮಪದಗಳೆಂದು ಎರಡನೆಯ ಗುಂಪನ್ನು ಕ್ರಿಯಾಪದಗಳೆಂದೂ ಕರೆಯಬಹುದು. ಹೀಗೆಯೇ ಆಯಾಯಾ ಭಾಷೆಗಳ ವಿನ್ಯಾಸಕ್ಕೆ ಹೊಂದಿದಂತೆ ಆಕೃತಿಮಾಗಳನ್ನು ವಿವಿಧ ಗುಂಪುಗಳಲ್ಲಿ ವಿಂಗಡಿಸಬಹುದು. (ಎಚ್.ಎಸ್.ಎ.)

**ಆಕೃತೀಯ ವರ್ಗೀಕರಣ :** ಪ್ರಾಗೈತಿಹಾಸಿಕ ಅವಶೇಷಗಳನ್ನು ಅಭ್ಯಸಿಸಲು ಪುರಾತತ್ತ್ವಜ್ಞರು ಉಪಯೋಗಿಸುವ ಒಂದು ವಿಧಾನ (ಟೈಪಾಲಜಿ). ಪ್ರಾಗೈತಿಹಾಸಿಕ ಕಾಲದ ಹಲವಾರು ಆಯುಧಗಳು ಅಥವಾ ಇತರ ಸಲಕರಣೆಗಳು ಸಿಕ್ಕಿ ಅವುಗಳ ಕಾಲ ಉದ್ದೇಶ ಮುಂತಾದ ವಿಷಯಗಳ ಬಗ್ಗೆ ಬೇರೇನೂ ಮಾಹಿತಿ ದೊರೆಯದಿದ್ದಾಗ ಈ ವಿಧಾನ ಅವುಗಳ ಅಧ್ಯಯನಕ್ಕೆ ಒಂದು ಶಾಸ್ತ್ರೀಯ ದೃಷ್ಟಿಯನ್ನು ನೀಡುತ್ತದೆ. ಮೊದಲು ಆಕೃತಿಯಲ್ಲಿಯ ಸಾಮ್ಯ ಅಥವಾ ವ್ಯತ್ಯಾಸದ ಮೇಲೆ ಸಲಕರಣೆಗಳನ್ನು ಹಲವು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಇದರಿಂದ ಯಾವ ಯಾವ ಗುಂಪಿನವು ಯಾವ ಉದ್ದೇಶಕ್ಕಾಗಿ ಮಾಡಲ್ಪಟ್ಟಿರಬಹುದು, ಅವುಗಳ ತಯಾರಿಕೆಗೆ ಆಯಾ ಸಮಾಜದಲ್ಲಿ ಆವಶ್ಯಕತೆಯೇನಿದ್ದಿರ ಬಹುದು ಮುಂತಾದ ವಿಷಯಗಳನ್ನು ಊಹಿಸಲು ಸಾಧ್ಯವಿದೆ. ಅಲ್ಲದೆ ಈ ಗುಂಪುಗಳಲ್ಲೂ ಅವುಗಳಲ್ಲಿನ ಸಲಕರಣೆಗಳ ಒರಟು ಅಥವಾ ನಯಗಾರಿಕೆಯ ಆಧಾರದ ಮೇಲೆ ಹಲವು ಉಪ ಗುಂಪುಗಳಾಗಿ ವಿಂಗಡಿಸಿಕೊಂಡು ಏಕೋದ್ದೇಶಕ್ಕಾಗಿಯೇ ತಯಾರಿಸಿದವುಗಳಲ್ಲೂ ಕಾಲಕಾಲಕ್ಕೆ ವ್ಯತ್ಯಾಸಗಳು ಹೇಗೆ ತಲೆದೋರುತ್ತಿದ್ದುವು ಎಂಬುದನ್ನೂ ಗುರುತಿಸಬಹುದು. (ಎಸ್.ಎನ್.)

**ಆಕೃತೀಯ ಸಂಖ್ಯೆಗಳು :** ಜ್ಯಾಮಿತೀಯ ಆಕೃತಿಗಳಿಗೆ ಹೊಂದುವಂತೆ ಅಳವಡಿಸ ಬಹುದಾದ ಸಂಖ್ಯೆಗಳು (ಫಿಗರೇಟ್ ನಂಬರ್ಸ್). ಜ್ಯಾಮಿತಿಯಲ್ಲಿ ತೀವ್ರಾಸಕ್ತರಾಗಿದ್ದ ಪ್ರಾಚೀನ ಗ್ರೀಕರು ಇಂಥ ಸಂಖ್ಯೆಗಳ ಚಿಂತನೆಯನ್ನೂ ಮಾಡಿದರು. ಸಮತ್ರಿಭುಜ, ಚಚ್ಚೌಕ, ಸಮಪಂಚಭುಜ ಮುಂತಾದ ಆಕೃತಿಗಳಿಗೆ ಸಂಬಂಧಿಸಿದ ಕೆಲವು ಸಂಖ್ಯಾಗಣಗಳನ್ನು (ಸೆಟ್ಸ್ ಆಫ್ ನಂಬರ್ಸ್) ಅವರು ಆಕೃತೀಯ ಅಥವಾ ಬಹುಭುಜೀಯ ಅಥವಾ ಶೃಂಗ ಸಂಖ್ಯೆಗಳೆಂದು ಕರೆದರು.


ಚಿತ್ರ 1.

ಮೊದಲು ತ್ರಿಭುಜೀಯ ಸಂಖ್ಯೆಗಳನ್ನು ಗಮನಿಸೋಣ. ಚಿತ್ರ 1ರಲ್ಲಿ $\Delta\ AB_nC_n$ ಸಮಭುಜ ತ್ರಿಭುಜದ $AB_n$ ಭುಜವನ್ನು $B_1, B_2, B_3 \ldots\ldots, B_{n-1}$ ಬಿಂದುಗಳಲ್ಲಿ n ಸಮಭಾಗಗಳಾಗಿ ವಿಭಾಗಿಸಲಾಗಿದೆ.

ಈ ವಿಭಾಗಬಿಂದುಗಳ ಸಮಾಂತರ a ಆಗಿರಲಿ. $B_1, B_2, \ldots\ldots, B_{n-1}$ ಬಿಂದುಗಳಿಂದ $B_nC_n$ ಗೆ ಸಮಾನಾಂತರವಾಗಿರುವಂತೆ ರೇಖೆಗಳನ್ನೆಳೆದರೆ $\Delta\ AB_1C_1$, $\Delta\ AB_2C_2, \ldots\ldots$, $\Delta\ Ab_nC_n$ ಎಂಬ n ಸಮರೂಪ ತ್ರಿಭುಜಗಳು ಲಭಿಸುತ್ತವೆ. ಇವೆಲ್ಲ ತ್ರಿಭುಜಗಳ ಬಾಹುಗಳ ಮೇಲೂ ಸಮಾಂತರದಲ್ಲಿ ಬಿಂದುಗಳನ್ನು ಗುರುತಿಸಬೇಕು. ಇಂಥ ಬಿಂದುಗಳ ಒಟ್ಟು ಸಂಖ್ಯೆ ($A, B, C_n$ ಶೃಂಗಗಳೂ ಸೇರಿ)

$$1+2+3\ldots\ldots\ldots\ldots+n=\frac{n(n+1)}{2} \qquad \ldots(1)$$

ಇದರಲ್ಲಿ n ಗೆ ಕ್ರಮವಾಗಿ 1,2,3,... ಬೆಲೆಗಳನ್ನು ಆದೇಶಿಸಿದರೆ 1,3,6,10,15,..... ಸಂಖ್ಯೆಗಳು ದೊರೆಯುತ್ತವೆ. ಇವುಗಳಿಗೆ ತ್ರಿಭುಜೀಯ ಸಂಖ್ಯೆಗಳೆಂದು ಹೆಸರು.

ಇದೇ ರೀತಿ ಚಿತ್ರ 2ರಲ್ಲಿರುವ ಬಿಂದುಗಳ ಒಟ್ಟು ಸಂಖ್ಯೆ

$$1+3+5+7+\ldots.+(2n-1)= n^2 -1 \qquad \ldots(2)$$

ಇದರಲ್ಲಿ n ಗೆ ಕ್ರಮವಾಗಿ 1, 2, 3, ...ಬೆಲೆಗಳನ್ನು ಆದೇಶಿಸಿದರೆ 1, 4, 9, 16,..... ಸಂಖ್ಯೆಗಳು ದೊರೆಯುತ್ತವೆ. ಇವುಗಳಿಗೆ ಚೌಕ ಸಂಖ್ಯೆಗಳೆಂದು ಹೆಸರು.

ಚಿತ್ರ 3ರಲ್ಲಿರುವ ಬಿಂದುಗಳ ಒಟ್ಟು ಸಂಖ್ಯೆ

$$1+4+7+10+\ldots+(3n-2)=\frac{n(3n-1)}{2} \qquad \ldots(3)$$

ಇದರಲ್ಲಿ n ಗೆ ಕ್ರಮವಾಗಿ 1,2,3,.....ಬೆಲೆಗಳನ್ನು ಆದೇಶಿಸಿದರೆ

1,5,12,22,.... .... ಎಂಬ ಪಂಚಭುಜೀಯ ಸಂಖ್ಯೆಗಳು ದೊರೆಯುತ್ತವೆ.


ಚಿತ್ರ 2.

ಹೀಗೆಯೇ ಆರು, ಏಳು, ಎಂಟು ಇತ್ಯಾದಿ ಭುಜೀಯ ಸಂಖ್ಯೆಗಳನ್ನು ಪಡೆಯಬಹುದು.

(1), (2), (3) ಸಮಾಂತರ ಶ್ರೇಣಿಗಳಲ್ಲಿ ಸಾಮಾನ್ಯ ವ್ಯತ್ಯಾಸ ಕ್ರಮವಾಗಿ 1,2,3, ಆಗಿವೆ.

ಮೇಲಿನ ಭಾವನೆಯನ್ನು ಸಾಮಾನ್ಯೀಕರಿಸಿದರೆ r– ಭುಜೀಯ n ನೆಯ ಸಂಖ್ಯೆ

$$N_n^r = \quad [2+(n-1)]\,(r-2) = n+(r-2)$$

ಆಕೃತೀಯ ಸಂಖ್ಯೆಗಳಿಗೆ ಕೆಲವು ವಿಶೇಷ ಗುಣಗಳಿವೆ. ಉದಾಹರಣೆಗೆ ಎಂಟು ಭುಜೀಯ ಸಂಖ್ಯೆಗಳಿಗೂ ತ್ರಿಭುಜೀಯ ಸಂಖ್ಯೆಗಳಿಗೂ $N^8_n=n+6N^3_{n-1}$ ಎಂಬ ಸಂಬಂಧವಿದೆ. (ಬಿ.ಎಸ್.ಎಸ್.)

**ಆ್ಯಕ್ಟ್ ಆಫ್ ಸೆಟ್ಲ್‌ಮೆಂಟ್ :** 1701ರಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ $\frac{n(3n-1)}{2}$ಕೃತವಾದ ಬಹುಮುಖ್ಯ ಕಾಯಿದೆ. ಇದರ ಪ್ರಕಾರ, ದೊರೆ ವಿಲಿಯಂಗಾಗಲಿ ವಾರಸುದಾರಳಾಗಿದ್ದ ರಾಜಪುತ್ರಿ ಆ್ಯನ್‌ಳಿಗಾಗಲಿ ಮಕ್ಕಳಾಗದಿದ್ದರೆ ಮೊದಲನೆಯ ಜೇಮ್ಸ್‌ನ ಮೊಮ್ಮಗಳಾದ ಹ್ಯಾನೋವರ್‌ನ ರಾಜಪುತ್ರಿ ಸೋಫಿಯ ಅಥವಾ ಅವಳ ಸಂತತಿಯವರು ಇಂಗ್ಲೆಂಡಿನ ಸಿಂಹಾಸನಕ್ಕೆ ಉತ್ತರಾಧಿಕಾರಿಗಳೆಂದು ತೀರ್ಮಾನವಾಯಿತು. ಇವರು ಪ್ರಾಟೆಸ್ಟಂಟರೇ ಆಗಿರಬೇಕೆಂಬ ನಿಯಮ ಕೂಡ ಅದಕ್ಕೆ ಸೇರಿತ್ತು. ದೊರೆ ಇಂಗ್ಲೆಂಡಿನ ಪ್ರಾಟೆಸ್ಟಂಟ್ ಧರ್ಮಾವಲಂಬಿಯಾಗಿರಬೇಕು. ಅವನು ಪಾರ್ಲಿಮೆಂಟಿನ ಅನುಮತಿಯಿಲ್ಲದೆ ದೇಶದಿಂದ ಹೊರಗೆ ಹೋಗಕೂಡದು. ಹೊರದೇಶಗಳ ರಕ್ಷಣೆಗಾಗಿ ಇಂಗ್ಲೆಂಡಿನ ಸೈನ್ಯವನ್ನು ಉಪಯೋಗಿಸುವುದಕ್ಕೆ ಪಾರ್ಲಿಮೆಂಟಿನ ಅನುಮತಿ ಆವಶ್ಯಕ. ದೊರೆಯಿಂದ ನಿಯಮಿತರಾದ ವರಿಗೆ ಅಥವಾ ವೇತನ ಪಡೆಯುತ್ತಿರುವವರಿಗೆ ಪಾರ್ಲಿಮೆಂಟಿನಲ್ಲಿ ಕುಳಿತುಕೊಳ್ಳಲು ಅಧಿಕಾರವಿಲ್ಲ– ಇವು ಇತರ ಷರತ್ತುಗಳು. ಜಾಕೊಬೈಟ್ ಧರ್ಮೀಯರು (**ನೋಡಿ– ಜ್ಯಾಕೊಬೈಟರು**) ನಡೆಸುತ್ತಿದ್ದ ಒಳಸಂಚುಗಳು, ದೊರೆ ವಿಲಿಯಂಗಾಗಲಿ ಆ್ಯನ್‌ಗಾಗಲಿ ಸಂತಾನವಿಲ್ಲದ್ದು, ವಿಲಿಯಂ ನಡೆಸುತ್ತಿದ್ದ ಹಾಲೆಂಡ್ ಪರ ರಾಜನೀತಿ, ಇವು ಈ ಕಾಯಿದೆ ರಚನೆಗೆ ಮುಖ್ಯ ಕಾರಣಗಳು. (ಜಿ.ಎನ್.ಎಸ್.)

**ಆ್ಯಕ್ಟನ್ ಲಾರ್ಡ್ (ಸರ್ ಜಾನ್ ಎಮೆರಿಚ್ ಎಡ್ವರ್ಡ್ ಡಾಲ್ಬರ್ಗ್):** 1834–1902. 19ನೆಯ ಶತಮಾನದ ಪ್ರಪಂಚದ ಪ್ರಜ್ಞಾಶಾಲಿಗಳಲ್ಲಿ ಅದ್ವಿತೀಯ. ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಆಧುನಿಕ ಇತಿಹಾಸದ ಪ್ರಾಧ್ಯಾಪಕನಾಗಿದ್ದ (1895–1902). ನೇಪಲ್ಸ್‌ನಲ್ಲಿ ಜನಿಸಿ ಪ್ಯಾರಿಸ್, ಮ್ಯೂನಿಚ್, ಎಡಿನ್‌ಬರೊ ವಿಶ್ವವಿದ್ಯಾನಿಲಯಗಳಲ್ಲಿ ಗೌರವಕ್ಕೆ ಭಾಜನನಾದ. ಈತ ಕೇಂಬ್ರಿಜ್ ಮಾಡರ್ನ್ ಹಿಸ್ಟರಿ ಯ ಮೊಟ್ಟಮೊದಲ ಸಂಪಾದಕ (1890–1900). ಸ್ವತಃ ಪತ್ರಿಕೋದ್ಯೋಗಿಯಾಗಿದ್ದ. ಇವನ ಬರೆವಣಿಗೆಗಳು ಇವನ ಪಾಂಡಿತ್ಯವನ್ನೂ ವಿಮರ್ಶನಾ ಶಕ್ತಿಯನ್ನೂ ತೋರಿಸುತ್ತವೆ. ಇವನ ಅಭಿಪ್ರಾಯವನ್ನು ಒಪ್ಪದೆ ಇದ್ದವರೂ ಈತ 19ನೆಯ ಶತಮಾನದ ಪಾಶ್ಚಾತ್ಯ ಸಂಸ್ಕೃತಿಯ ಶ್ರೇಷ್ಠ ಮಾದರಿ ಎಂದು ಗೌರವಿಸುತ್ತಿದ್ದರು. ರಾಜಕೀಯದಲ್ಲಿ ವೈಜ್ಞಾನಿಕ ವಿಚಾರಣೆ ಮತ್ತು ನ್ಯಾಯಪ್ರಮಾಣ ಇರಬೇಕೆಂದು ಈತ ಉಪದೇಶಿಸಿದ. ಈತ ಯಾವುದರಲ್ಲೂ ಪೂರ್ವಗ್ರಹಪೀಡಿತನಾಗಿರಲಿಲ್ಲ. ಇವನ ವಿಷಯಜ್ಞಾನ ಸ್ಪಷ್ಟವಾಗಿರುತ್ತಿತ್ತು. ಆದ್ದರಿಂದ ನ್ಯಾಯಾಧೀಶನಂತೆ ತೀರ್ಮಾನಿಸುತ್ತಿದ್ದ. ರಾಜಕೀಯ ಒಂದು ಆಟವೆಂದೂ ಸತ್ವದ ವಿಚಾರದಲ್ಲಿ ರಮಿಸುವುದು, ಕ್ಷುಲ್ಲಕ ಉದ್ದೇಶ– ಇವು ಈತನ ದೃಷ್ಟಿಯಲ್ಲಿ ದೊಡ್ಡ ಅಪರಾಧ. ಇವನ ಇಂಥ ಉತ್ಕೃಷ್ಟ ಮನೋಭಾವನೆ

ಗ್ಲಾಡ್‌ಸ್ಟನ್‌ನನ್ನೂ ಆಕರ್ಷಿಸಿತು. ಈತ ನಿಷ್ಪಕ್ಷಪಾತ ಪ್ರಜ್ಞಾಶಾಲಿಯಾಗಿ, ಧರ್ಮವಿಚಾರದಲ್ಲಿ ಸತ್ಯಸ್ಥಿತಿಯನ್ನು ತೋರಿಸಿದ್ದಾನೆ. ಮುಖ್ಯವಾಗಿ ನೈತಿಕ ದೃಷ್ಟಿಯನ್ನು ಬೆಳೆಸಬೇಕೆಂದೂ ಜ್ಞಾನ ದುರಭಿಮಾನಕ್ಕೆ ಅವಕಾಶ ಕೊಡಬಾರದೆಂಬುದೂ ಈತನ ಆಶಯ. ಮಾನವನಿಗೆ ಸ್ವಾತಂತ್ರ್ಯ ಮುಖ್ಯವೆಂಬುದೂ ಸಮಾನತೆಗಿಂತ ವ್ಯವಸ್ಥಾಬದ್ಧ ಪ್ರಭುತ್ವ ಒಳ್ಳೆಯದೆಂಬುದೂ ಈತನ ಅಭಿಪ್ರಾಯ. ಬಹುಮತದ ಆಡಳಿತ ನಿರಂಕುಶಾಧಿಕಾರಕ್ಕೆ ಅವಕಾಶ ಕೊಡುವುದೆಂದು ಈತ ಹೇಳಿದ್ದಾನೆ.

ಸುಸಂಸ್ಕೃತನಾಗಿ, ಪಾಂಡಿತ್ಯ ಪಡೆದವನಾಗಿ ವಿಶ್ವಪ್ರಜೆಯಾಗಿ ವ್ಯಾಪಕವಾಗಿ ಪ್ರಯಾಣ ಮಾಡಿದ ಆ್ಯಕ್ಟನ್ ತನ್ನ ಜೀವನದ ಬಹುಕಾಲವನ್ನು ಯುರೋಪ್ ಮತ್ತು ಅಮೆರಿಕ ದೇಶಗಳಲ್ಲಿ ಕಳೆದ. 1859ರಲ್ಲಿ ಬ್ರಿಟನ್ನಿನ ಪಾರ್ಲಿಮೆಂಟಿಗೆ ಚುನಾಯಿತನಾಗಿ ಅದೇ ವರ್ಷ ರೋಮನ್ ಕೆಥೊಲಿಕ್ಕರ ದಿ ರ್‍ಯಾಂಬ್ಲರ್ ಎಂಬ ಮಾಸಪತ್ರಿಕೆಯ ಸಂಪಾದಕನಾದ. ಪೋಪ್ ಪಯಸ್‌ಗೂ ಇವನಿಗೂ ಭಿನ್ನಾಭಿಪ್ರಾಯಗಳುಂಟಾದುದರಿಂದ ಪತ್ರಿಕೆಯ ಸಂಪಾದಕತ್ವವನ್ನು ಬಿಟ್ಟುಬಿಟ್ಟ. ತನ್ನ ಧಾರ್ಮಿಕ ಕಾರ್ಯವನ್ನು ಬದಿಗೊತ್ತಿ ಪೋಪ್ ಲೌಕಿಕ ಅಧಿಕಾರದಲ್ಲಿ ಕೈ ಹಾಕುವುದನ್ನು ಉಗ್ರವಾಗಿ ವಿರೋಧಿಸಿದ. 1869ರಲ್ಲಿ ಗ್ಲಾಡ್‌ಸ್ಟನ್ ಆ್ಯಕ್ಟನ್ನನಿಗೆ ಇಂಗ್ಲೆಂಡಿನ ಹೌಸ್ ಆಫ್ ಲಾರ್ಡ್ಸ್ ಸಭೆಯ ಶ್ರೀಮಂತ ಪದವಿ ಕೊಡಿಸಿದ.

ಲಾರ್ಡ್ ಆ್ಯಕ್ಟನ್ ಸ್ವಾತಂತ್ರ್ಯಪ್ರಿಯ ವ್ಯಕ್ತಿ. ತನ್ನ 44ನೆಯ ವಯಸ್ಸಿನಲ್ಲಿ ಬರೆದ ಡೆಮಾಕ್ರಸಿ ಇನ್ ಯುರೋಪ್ ಎಂಬ ಪ್ರೌಢ ಪ್ರಬಂಧವೂ ಮಾನವ ಸ್ವಾತಂತ್ರ್ಯದ ವಿಷಯವಾಗಿ ಕೊಟ್ಟ ಎರಡು ಉಪನ್ಯಾಸಗಳೂ ಇವನಿಗೆ ಕೀರ್ತಿ ತಂದುವು. ಆಧುನಿಕ ರಾಜ್ಯಗಳಲ್ಲಿ ಕೇಂದ್ರೀಕೃತವಾದ ಅಧಿಕಾರದ ದುಷ್ಪರಿಣಾಮಗಳನ್ನೂ ಪ್ರಜಾಪ್ರಭುತ್ವ ಮತ್ತು ಸಮಷ್ಟಿವಾದದಲ್ಲಿ ಅಡಕವಾಗಿರುವ ಸ್ವಾತಂತ್ರ್ಯದ ಅಪಾಯಗಳನ್ನೂ ಕಂಡು ಜಾತೀಯತೆ ಮತ್ತು ರಾಷ್ಟ್ರೀಯತೆಗಳನ್ನೂ ಖಂಡಿಸಿದ. ಸ್ವಾತಂತ್ರ್ಯತತ್ತ್ವ ಅತಿ ಪ್ರಿಯವಾದ ವಿಷಯವಾಗಿದ್ದುದರಿಂದ ಪ್ರಜಾಪ್ರಭುತ್ವವನ್ನು ಹತೋಟಿಯಲ್ಲಿಟ್ಟುಕೊಳ್ಳದೆ ಹೋದರೆ ಸ್ವಾತಂತ್ರ್ಯ ನಾಶವಾಗುವುದೆಂದು ತಿಳಿಸಿದ. ಅಲ್ಪಸಂಖ್ಯಾತರು ಅನುಭವಿಸುವ ಭದ್ರತೆ ಅಥವಾ ರಕ್ಷಣೆಯ ಪರಿಮಾಣವೇ ಒಂದು ದೇಶದ ಸ್ವಾತಂತ್ರ್ಯ ಪರೀಕ್ಷಾ ಸಾಧನವೆಂದು ಇವನ ಅಭಿಪ್ರಾಯವಾಗಿತ್ತು. ಇತಿಹಾಸದ ಹಾಗೆ ರಾಜಕೀಯ ಅಭಿಪ್ರಾಯದಲ್ಲೂ ನೀತಿನಿಯಮವಿರಬೇಕೆಂಬುದು ಇವನ ವಾದ.

(ಎನ್.ಎಸ್.ಎಚ್.)

**ಆ್ಯಕ್ಟೀನಿಯಂ :** ಆವರ್ತಕೋಷ್ಟಕದ ಏಳನೆಯ ಅಡ್ಡ ಮತ್ತು ಮೂರನೆಯ ಗುಂಪಿನ ವಿಕಿರಣಪಟು ಧಾತು. ಸಂಕೇತ Ac. ಪರಮಾಣು ತೂಕ 227, ಸಾಪೇಕ್ಷ ಪರಮಾಣು ರಾಶಿ 89, ಇದು ಆ್ಯಕ್ಟಿನೈಡ್‌ಗಳೆಂಬ ವಿಶೇಷ ಸಾಮ್ಯಗುಣವಿರುವ 15 ಮೂಲವಸ್ತುಗಳ ಪೈಕಿ ಮೊದಲನೆಯದು. ಆ್ಯಕ್ಟಿನೈಡಿನ ಪರಮಾಣುವಿನ ಎಲೆಕ್ಟ್ರಾನಿಕ್ ವಿನ್ಯಾಸ (Rn)6d $7s^2$. ಅಂದರೆ ಜಡ ಅನಿಲ ರೇಡಾನ್ ಪರಮಾಣುವಿನ ಎಲೆಕ್ಟ್ರಾನಿಕ್ ವಿನ್ಯಾಸದಂಥ ಒಳಭಾಗವೂ 6d ಮತ್ತು 7s ಶಕ್ತಿಮಟ್ಟಗಳಲ್ಲಿ 1 ಮತ್ತು 2 ಇರುವುವು. ಈ ಮೂರೂ ಸಂಯೋಜಕ ಎಲೆಕ್ಟ್ರಾನುಗಳಾಗಿದ್ದು ಇವನ್ನು ಕಳೆದುಕೊಂಡ $AC^{3+}$ ಅಯಾನು ರೇಡಾನ್ ಪರಮಾಣುವಿನ ದೃಢವಿನ್ಯಾಸ ಹೊಂದುವುದು. ಆದ್ದರಿಂದ ಆ್ಯಕ್ಟೀನಿಯಮ್ ಒಂದು ಪ್ರಾರೂಪಿಕ ಮೂಲವಸ್ತು (ಟಿಪಿಕಲ್ ಎಲಿಮೆಂಟ್).

ಯುರೇನಿಯಂ ಖನಿಜವಾದ ಪಿಚ್‌ಬ್ಲೆಂಡ್‌ನಲ್ಲಿ ಆ್ಯಕ್ಟೀನಿಯಮ್ಮನ್ನು 1899ರಲ್ಲಿ ಡಬೈರನ್‌ನೂ 1902ರಲ್ಲಿ ಸ್ವತಂತ್ರವಾಗಿ ಗೀಸಲ್‌ನೂ ಕಂಡುಹಿಡಿದರು. ಒಂದು ಟನ್ ಅದಿರಿನಲ್ಲಿ 0.1 ಮಿಲಿಗ್ರಾಮಿನಷ್ಟು ಆ್ಯಕ್ಟೀನಿಯಂ ದೊರೆಯುವುದು. ವಿಕಿರಣಪಟುತ್ವ (ರೇಡಿಯೊ ಆಕ್ಟಿವಿಟಿ) ಗುಣಹೊಂದಿದ್ದುದರಿಂದ ಈ ಮೂಲ ವಸ್ತುವಿಗೆ ಆ್ಯಕ್ಟೀನಿಯಮ್ ಎಂಬ ಹೆಸರಿಟ್ಟರು.

ಪಿಚ್‌ಬ್ಲೆಂಡ್‌ನಿಂದ ವಿರಳ ಮೃದುಲೋಹ ಸಂಯುಕ್ತಗಳ ತಯಾರಿಕೆಯಲ್ಲಿ ಆ್ಯಕ್ಟಿನಿಯಂ ಇವುಗಳ ಜೊತೆಯಲ್ಲಿ, ವಿಶೇಷವಾಗಿ ಲ್ಯಾಂತನಮ್ ಸಂಯುಕ್ತಗಳ ಜೊತೆಯಲ್ಲಿ ಕೇಂದ್ರೀಕರಿಸುತ್ತವೆ. ಲ್ಯಾಂತನಮ್ ಸಂಯುಕ್ತಗಳಿಂದ ಇದನ್ನು ಬೇರ್ಪಡಿಸುವುದು ದುಸ್ಸಾಧ್ಯ. 1950ಕ್ಕೆ ಮೊದಲು ಶೇ.1–2 ಭಾಗದಷ್ಟು $Ac_2O_3$ ಇರುವ $La_2O_3$ ಅತ್ಯಂತ ಹೆಚ್ಚಿನ ಪ್ರಮಾಣ ಆ್ಯಕ್ಟಿನಿಯಮ್ ಇರುವ ವಸ್ತುವಾಗಿತ್ತು. ಈಚಿನ ವರ್ಷಗಳಲ್ಲಿ ಅಯಾನ್ ವಿನಿಮಯ ವಿಧಾನಗಳಿಂದ ಇದನ್ನು ಶುದ್ಧ ರೂಪದಲ್ಲಿ ಬೇರ್ಪಡಿಸಿರುವರು.

ಇತ್ತೀಚೆಗೆ ಇದನ್ನು ಪರಮಾಣು ಪರಿವರ್ತಕಗಳಲ್ಲಿ (ಪರಮಾಣು ರಿಯಾಕ್ಟರುಗಳು) ಬೀಜ ಪರಿವರ್ತನೆಯ ಮೂಲಕ ಮಿಲಿಗ್ರಾಂ ಪ್ರಮಾಣದಲ್ಲಿ ಪಡೆದಿರುವರು. ಇದಕ್ಕೆ ಸಂಬಂಧಿಸಿದ ನ್ಯೂಕ್ಲಿಯರ್ ಪರಿವರ್ತನೆ ಹೀಗಿದೆ:

$^{226}$Ra+ನ್ಯೂಟ್ರಾನ್$\rightarrow ^{227}$Ra$\rightarrow ^{227}$Ac+$\beta$ ಕಣ.

ರೇಡಿಯಂ ಬ್ರೋಮೈಡಿನ ರೂಪದಲ್ಲಿರುವ ಸುಮಾರು 1 ಗ್ರಾಂ ರೇಡಿಯಂನಿಂದ 1.5 ಮಿ. ಗ್ರಾಂ. ನಷ್ಟು ಶುದ್ಧ ಆ್ಯಕ್ಟಿನಿಯಮ್ ತಯಾರಿಸಬಹುದು. ರೇಡಿಯಮ್ ಮತ್ತು ಇದರ ಜೊತೆಯಲ್ಲಿರುವ ಇತರ ವಿಘಟನ ವಸ್ತುಗಳಿಂದ (ಡಿಸ್‌ಇಂಟಿಗ್ರೇಷನ್ ಪ್ರಾಡಕ್ಟ್ಸ್) ಆ್ಯಕ್ಟಿನಿಯಮ್ ಅನ್ನು ಅಯಾನ್ ವಿನಿಮಯ ವಿಧಾನದಿಂದಾಗಲೀ ಅಥವಾ ಥಿನಾಯಲ್ ಟ್ರೈಫ್ಲೋರೋ ಅಸಿಟೋನ್ ಎಂಬ ದ್ರಾವಕದಿಂದ ಸಾರೀಕರಿಸಿಯಾಗಲೀ (ಎಕ್ಸ್‌ಟ್ರ್ಯಾಕ್ಟಿಂಗ್) ಬೇರ್ಪಡಿಸುವರು. ಈ ರೀತಿಯಾಗಿ ಪಡೆದ ದ್ರಾವಣದಿಂದ ಇದನ್ನು $AcF_3$ ಆಗಿ ಒತ್ತರಿಸಿ, ಶುಷ್ಕ ಫ್ಲೂರೈಡನ್ನು 1108$^o$–1275$^o$ ಸೆಂ.ಗ್ರೇ ಉಷ್ಣತೆಯಲ್ಲಿ ಲಿಥಿಯಮ್ ಆವಿಯಿಂದ ಅಪಕರ್ಷಿಸಿ (ರೆಡ್ಯೂಸ್ಡ್) ಆ್ಯಕ್ಟಿನಿಯಂ ಲೋಹವನ್ನು ಪಡೆಯಬಹುದು.

ಆ್ಯಕ್ಟಿನಿಯಂ ಲೋಹ ಬೆಳ್ಳಿಯಂತೆ ಬಿಳುಪು. ಇದರ ಕರಗುವ ಬಿಂದು 1050$^o$ ಸೆಂ.ಗ್ರೇ ವಿಕಿರಣಪಟುತ್ವದಿಂದಾಗಿ ಕತ್ತಲ್ಲಲ್ಲಿ ಹೊಳೆಯುವುದು. ಲ್ಯಾಂತನಂನಂತೆ ಇದು ತುಂಬ ಪಟುವಾದ ಲೋಹ. ಅದಕ್ಕಿಂತಲೂ ಹೆಚ್ಚು ಧನವಿದ್ಯುದಂಶವಿದೆ. ತೇವವಿರುವ ಗಾಳಿಯಲ್ಲಿ ಇದು ಉತ್ಕರ್ಷಣ ಹೊಂದುವುದು.

ಆ್ಯಕ್ಟಿನಿಯಂ ಮೂರು ಧನ ಸಂಯೋಜನ ಸಾಮರ್ಥ್ಯವನ್ನು ಮಾತ್ರ ಹೊಂದಿರುವುದು. ಆವರ್ತಕೋಷ್ಟಕದಲ್ಲಿ ಇದರ ಸ್ಥಾನದಿಂದ ನಿರೀಕ್ಷಿಸಬಹುದಾದಂತೆ ಇದರ ಸಂಯುಕ್ತಗಳು ಲ್ಯಾಂತನಂ ಸಂಯುಕ್ತಗಳನ್ನು ಹೋಲುವುವು. ಇದರ ಹೈಡ್ರಾಕ್ಸೈಡ್ ಮತ್ತು ಫ್ಲೋರೈಡುಗಳು ಕ್ಷಾರೀಯ ವಸ್ತುಗಳಲ್ಲ. ಇದು ಲ್ಯಾಂತನಂನಂತೆ ಅನೇಕ ಯುಗ್ಮಲವಣಗಳನ್ನು ಕೊಡುವುದು. ಆ್ಯಕ್ಟಿನಿಯಮ್ ಹ್ಯಾಲೈಡುಗಳು, ಆಕ್ಸೈಡ್, ಸಲ್ಫೈಡ್, ಫಾಸ್ಫೇಟ್ ಮುಂತಾದವುಗಳನ್ನು ಘನ ರೂಪದಲ್ಲಿ ಪಡೆಯಬಹುದು. $AcCl_3$ ಅಧಿಕ ಉಷ್ಣತೆಯಲ್ಲಿ ಜಲವಿಶ್ಲೇಷಣ ಹೊಂದಿ AcOCl ಅನ್ನು ಕೊಡುವುದು. $LaCl_3$ ಜಲವಿಶ್ಲೇಷಣ ಹೊಂದಿದಾಗ $La_2O_3$ ಉಂಟಾಗುವುದು. ಲ್ಯಾಂತನಮ್‌ಗಿಂತ ಆಕ್ಟಿನಿಯಂ ಹೆಚ್ಚು ಧನವಿದ್ಯುದಂಶವುಳ್ಳ ಲೋಹ ಎನ್ನುವುದಕ್ಕೆ ಇದೊಂದು ನಿದರ್ಶನ.

ಆ್ಯಕ್ಟಿನಿಯಂ ಒಂದು ವಿಕಿರಣಪಟು ವಸ್ತು. ಇದು $\beta$–ಕಣವನ್ನು ಹೊರಸೂಸಿ ರೇಡಿಯೋ ಆ್ಯಕ್ಟಿನಿಯಂ RdAc ಅನ್ನು ಕೊಡುವುದು. ಇದು $\alpha$ ಕಣವನ್ನು ಹೊರಸೂಸಿ ರೇಡಿಯಂ ಸಮಸ್ಥಾನಿಯಾದ AcX ಅನ್ನೂ, ಇದು ಕಣವನ್ನು ಹೊರಸೂಸಿ ರೇಡಾನ್ ಎಂಬ ಜಡ ಅನಿಲದ ಸಮಸ್ಥಾನಿ ಆದ ಆ್ಯಕ್ಟಿನಾನ್ ಅನ್ನೂ ಅನಂತರ ಇದೇ ರೀತಿಯಲ್ಲಿ ವಿಕಿರಣಪಟು ವಸ್ತುಗಳ ಶ್ರೇಣಿ ಮುಂದುವರಿದು AcA, AcB ಇತ್ಯಾದಿಗಳಾಗಿ ಕೊನೆಯಲ್ಲಿ ವಿಕಿರಣಪಟು ವಸ್ತು ಅಲ್ಲದ ಸೀಸದ ಸಮಸ್ಥಾನಿಯಾದ 207 ಪರಮಾಣು ತೂಕವುಳ್ಳ AcD ಯನ್ನು ಕೊಡುವುದು. ಆ್ಯಕ್ಟಿನಿಯಮ್ ಈ ಶ್ರೇಣಿಯ ಜನಕ ಮೂಲವಸ್ತುವಲ್ಲ; ಶ್ರೇಣಿಯ ಜನಕ ಮೂಲವಸ್ತು $^{235}$U. ಇದು $\alpha$ ಕಣವನ್ನು ಸೂಸಿ $^{231}$Uy ಆಗಿಯೂ ಇದು $\beta$ ಕಣವನ್ನು ಸೂಸಿ $^{231}$Pa ಆಗಿ, ಅನಂತರ $^{231}$Pa $\alpha$ ಕಣವನ್ನು ಹೊರಸೂಸಿ $^{227}$Ac (ಆ್ಯಕ್ಟಿನಿಯಂ) ಆಗಿ ಮೇಲೆ ಹೇಳಿದಂತೆ ವಿಕಿರಣಪಟು ವಸ್ತುಗಳ ಶ್ರೇಣಿ ಮುಂದುವರಿಯುವುದು.

(ಕೆ.ಎಸ್.ಬಿ.)

**ಆಕ್ಟೋಪಸ್ :** (ನೋಡಿ– ಅಷ್ಟಪಾದಿ)

**ಆಕ್ನಾಟನ್ :** ಪ್ರ.ಶ.ಪೂ. 1375 ರಿಂದ 1358 ರವರೆಗೆ ಈಜಿಪ್ಟನ್ನು ಆಳಿದ ಈತ ಮೂರನೆಯ ಅಮೆನ್‌ಹೋತೆಪ್‌ನ ಮಗ–ನಾಲ್ಕನೆಯ ಅಮೆನ್‌ಹೋತೆಪ್. ಪರಂಪರಾಗತವಾದ ಈಜಿಪ್ಟಿನ ಧರ್ಮಕ್ಕೆ ವಿರುದ್ಧವಾಗಿ ನಿಂತು, ತನ್ನದೇ ಆದ ಹೊಸ ಮತವನ್ನು ಜಾರಿಗೆ ತಂದುದು ಇವನ ಮುಖ್ಯ ಸಾಧನೆ. ಅದುವರೆಗಿನ ಈಜಿಪ್ಟಿನ ಧರ್ಮದಲ್ಲಿ ಹಲವಾರು ದೇವತೆಗಳು ಪೂಜಿಸಲ್ಪಡುತ್ತಿದ್ದರು. ಈ ನಂಬಿಕೆಯನ್ನು ಎದುರಿಸಿ ಅಟಾನ್ (ಸೂರ್ಯ) ಒಬ್ಬನೇ ದೇವರು ಎಂಬ ಅದ್ವೈತವಾದವನ್ನು ಪ್ರತಿಷ್ಠಾಪಿಸಿ, ಫಾರೋ(ಈಜಿಪ್ಟಿನ ದೊರೆ) ಅಟಾನನ ಅಂಶ ಎಂದು ಸಾರಿದ. ದೊರೆಯಿಂದಲೇ ಸ್ಥಾಪಿತವಾದ ಈ ನೂತನ ಮತ ಹಳೆಯ ಧಾರ್ಮಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಪ್ರಭಾವೀ ಪುರೋಹಿತಗಣದ ಸ್ಥಾನಕ್ಕೆ ಧಕ್ಕೆ ತಂದಿತು. ಸಹಜವಾಗಿ ಅಲ್ಲಲ್ಲಿ ಆಕ್ನಾಟನ್‌ನ ವಿರುದ್ಧ ಸಂಚುಗಳು ಬೆಳೆದರೂ ಎದೆಗೆಡದೆ, ದೇಶದಲ್ಲೆಲ್ಲ ಹಳೆಯ ಧರ್ಮದ, ಅದರಲ್ಲೂ ಅದುವರೆಗೆ ಪ್ರತಿಷ್ಠಿತ ಸ್ಥಾನದಲ್ಲಿದ್ದ ಅಮೆನ್ ದೇವತೆಗೆ ಸಂಬಂಧಪಟ್ಟ ಕುರುಹುಗಳನ್ನೆಲ್ಲ ನಾಶಮಾಡಲು ಪಣತೊಟ್ಟ. ಈ ದೇವತೆಯ ಹೆಸರಿನ ಅಂಶವಿದ್ದ ತನ್ನ ಹೆಸರನ್ನೇ (ಅಮೆನ್‌ಹೋತೆಪ್) ಆಕ್ನಾಟನ್ (ಸೂರ್ಯ ನೆಲಸಿರುವವ) ಎಂದು ಬದಲಾಯಿಸಿಕೊಂಡ. ಅಮೆನ್ ದೇವತೆಯ ಪ್ರಮುಖ ಕ್ಷೇತ್ರವಾಗಿದ್ದ ಅದುವರೆಗಿನ ಈಜಿಪ್ಟಿನ ರಾಜಧಾನಿ ಥೀಬ್ಸ್‌ನ್ನು ಬಿಟ್ಟು ಹೊಸ ರಾಜಧಾನಿ ಅಖೆತೆಟಾನ್‌ನನ್ನು (ಈಗಿನ ಟೆಲ್–ಎಲ್–ಅಮರ್ನ) ಕಟ್ಟಿಸಿಕೊಂಡ. ನುಬಿಯ, ಸಿರಿಯ ಪ್ರದೇಶದಲ್ಲೂ ಅಟಾನ್ ದೇವರ ಹೆಸರಿನಲ್ಲಿ ಊರುಗಳನ್ನು ಕಟ್ಟಿಸಿದ. ಧಾರ್ಮಿಕವಿಧಿ ವಿಧಾನಗಳಲ್ಲದೆ, ಆ ಕಾಲದ ಕಟ್ಟಡಗಳು ಮತ್ತು ಶಿಲ್ಪಗಳಲ್ಲೂ ಅಟಾನ್‌ಗೆ ಪ್ರಧಾನತೆಯಿರುವಂತೆ ಹೊಸ ಹೊಸ ಬದಲಾವಣೆಗಳನ್ನು ಬಳಕೆಗೆ ತಂದ. ಇಷ್ಟೆಲ್ಲ ಸಾಹಸದ ಅನಂತರವೂ ಇವನ ಮರಣಾನಂತರ ಕೆಲವೇ ದಿನಗಳಲ್ಲಿ ಇವನ ಮಗನ ಕಾಲದಲ್ಲಿ ಈಜಿಪ್ಟ್ ಪುನಃ ಹಳೆಯ ಪದ್ಧತಿಗೇ ಮೊರೆಹೊಕ್ಕಿತು.

ಕಲೆಯ ದೃಷ್ಟಿಯಿಂದಲೂ ಈತನ ಆಳ್ವಿಕೆ ಗಮನಾರ್ಹವಾದುದಾಗಿದೆ. ಇವನ ರಾಣಿಯ ಎದೆಮಟ್ಟದ ಪ್ರತಿಮೆ ವಿಶ್ವವಿಖ್ಯಾತವಾಗಿದೆ.

(ಜಿ.ಎಚ್.; ಎಸ್.ಎನ್.)

**ಆಕ್ರಮಣಕಾರ :** ತನಗೆ ಸ್ವಂತ ಹಕ್ಕಿಲ್ಲದೆ ವ್ಯಕ್ತಿಯ ಮೇಲೆ ಸ್ಥಿರಚರ ಆಸ್ತಿಯಲ್ಲಿ ಕೈ ಎತ್ತುವವ, ಕೈ ಹಾಕುವವ, ಅತಿಕ್ರಮ ಪ್ರವೇಶ ಮಾಡುವವ (ಟ್ರೆಸ್‌ಪಾಸರ್). ಆಕ್ರಮಣ ಅಥವಾ ಅತಿಕ್ರಮದ ವಿವರಗಳಿಗೆ. **(ನೋಡಿ– ಅತಿಕ್ರಮ, ಅಪಕೃತ್ಯ).**

**ಆಕ್ರಾ :** ಆಫ್ರಿಕದ ಪಶ್ಚಿಮ ಭಾಗದಲ್ಲಿ ಕಾಮನ್‌ವೆಲ್ತ್ ಗಣರಾಜ್ಯವೆನಿಸಿಕೊಂಡಿರುವ ಘಾನದ ರಾಜಧಾನಿ, ರೇವು. ಅತಿ ದೊಡ್ಡ ಪಟ್ಟಣ. ಜನಸಂಖ್ಯೆ 1,551,200 (2001). ಹಿಂದೆ ಇದು ಬ್ರಿಟಿಷರ ವಸಾಹತಾಗಿದ್ದ ಗೋಲ್ಡ್‌ಕೋಸ್ಟ್‌ಗೆ ಸೇರಿತ್ತು. ಬ್ರಿಟಿಷರ, ಫ್ರೆಂಚರ ಮತ್ತು ಡಚ್ಚರ ಕೋಟೆಗಳು ಇವೆ. ಇತ್ತೀಚೆಗೆ ರಸ್ತೆ ಮತ್ತು ರೈಲು ಮಾರ್ಗಗಳು ಉತ್ತಮ ಸ್ಥಿತಿಯಲ್ಲಿ ಬೆಳೆದಿರುವುದರಿಂದ ಸಾರಿಗೆ ಅನುಕೂಲತೆ ಈ ಪಟ್ಟಣಕ್ಕೆ ಚೆನ್ನಾಗಿ ದೊರೆತಿದೆ. ಸಾಬೂನು ಮತ್ತು ಕೀಟನಾಶಕ ರಾಸಾಯನಿಕ ವಸ್ತುಗಳ ತಯಾರಿಕೆ ಹೆಚ್ಚಾಗಿ ಬೆಳೆದಿದೆ. ಬಹುವಾಗಿ ಕೊಕೊ ರಫ್ತಾಗುತ್ತದೆ. ಒಂದು ವಿಶ್ವವಿದ್ಯಾನಿಲಯವಿದೆ. (ಎಂ.ಎಸ್.)

ಗಿನಿಖಾರಿಯಲ್ಲಿರುವ ಆಕ್ರಾವನ್ನು 1482ರಲ್ಲಿ ಪೋರ್ಚುಗೀಸರು ಪ್ರವೇಶಿಸಿದಾಗ ಜನರುವಾಸಿಸುತ್ತಿದ್ದರು. 1650–80 ಅವಧಿಯಲ್ಲಿ ಡ್ಯಾನ್ಸ್, ಡಚ್ ಮತ್ತು ಬ್ರಿಟಿಷ್‌ರಿಂದ ಮೂರು ವಾಣಿಜ್ಯ ಬಂದರುಗಳು ನಿರ್ಮಾಣಗೊಂಡವು. ಆದರೆ 1877ರಲ್ಲಿ ಬ್ರಿಟಿಷರು ಆಕ್ರಾವನ್ನು ಗೋಲ್ಡ್‌ಕೋಸ್ಟ್ ಕಾಲೋನಿಯ ರಾಜಧಾನಿಯಾಗಿ ರೂಪಿಸಿದರು. ಘಾನಕ್ಕೆ ಸ್ವಾತಂತ್ರ್ಯ ಬಂದ ಮೇಲೂ (1957) ಇದೇ ಆಡಳಿತ, ಶೈಕ್ಷಣಿಕ ಮತ್ತು ಆರ್ಥಿಕ ಕೇಂದ್ರವಾಗಿ ಮುಂದುವರಿಯಿತು.

**ಆಕ್ಲೆಂಡ್ :** ನ್ಯೂಜಿಲೆಂಡಿನ ಅತಿ ದೊಡ್ಡ ನಗರ. ಉತ್ತರ ದ್ವೀಪದ ಪೂರ್ವ ಕರಾವಳಿಯಲ್ಲಿರುವ ರೇವು ಪಟ್ಟಣ. ಆಧುನಿಕ ಅನುಕೂಲತೆಗಳಿಂದ ಕೂಡಿದ್ದು ನೌಕಾ ಚಟುವಟಿಕೆಗಳ ಮೂಲ ಕ್ಷೇತ್ರವಾಗಿದೆ. ಉತ್ತರ ದಕ್ಷಿಣ ಭಾಗಗಳಲ್ಲಿ ಹುಲ್ಲುಗಾವಲುಗಳಿರುವುದ ರಿಂದ ಹೈನು ಕೈಗಾರಿಕಾ ಕೇಂದ್ರವೂ ಆಗಿದೆ. ಚರ್ಮ ಮತ್ತು ತೊಗಲುಗಳು ರಫ್ತಾಗುತ್ತವೆ. 1865ರಲ್ಲಿ ವೆಲಿಂಗ್‌ಟನ್ ನ್ಯೂಜಿಲೆಂಡಿನ ರಾಜಧಾನಿಯಾಗುವವರೆಗೆ ಇದೇ ದೇಶದ ರಾಜಧಾನಿಯಾಗಿತ್ತು. ವೆಲಿಂಗ್‌ಟನ್ ಮತ್ತು ಉತ್ತರ ದ್ವೀಪದ ಇತರ ಕೇಂದ್ರಗಳೊಡನೆ ರೈಲು ಮತ್ತು ವಿಮಾನ ಸಂಪರ್ಕಗಳೂ ಆಸ್ಟ್ರೇಲಿಯ, ಬ್ರಿಟನ್ ಮತ್ತು ಉತ್ತರ ಅಮೆರಿಕಗಳ ಪೆಸಿಫಿಕ್ ತೀರದೊಡನೆ ಹಡಗು ಹಾಗೂ ವಿಮಾನಗಳೂ ಇವೆ. ಒಂದು ವಿಶ್ವವಿದ್ಯಾನಿಲಯವೂ ಮಾವೊರಿ ಕಲೆಯ ವಸ್ತುಸಂಗ್ರಹಾಲಯವೂ ಇವೆ. ಪ್ರಮುಖ ಕೈಗಾರಿಕಾ ಮತ್ತು ನೌಕಾ ಕೇಂದ್ರ. ಜನಸಂಖ್ಯೆ: ನಗರ 377,382 (2001), ಮೆಟ್ರೊಪ್ರದೇಶ: 1,158,891. (ಎಂ.ಎನ್.ಎಂ.)

**ಆಕ್ಸಾಲಿಕ್ ಆಮ್ಲ :** ಆಕ್ಸಾಲಿಕ್ ವರ್ಗದ ಸಸ್ಯಗಳಲ್ಲಿ ದೊರೆಯುವುದರಿಂದ ಈ ಹೆಸರು ಬಂದಿದೆ. ಸೂತ್ರ $H_2C_2O_4 . 2H_2O$. ಈ ಆಮ್ಲದ ಪೊಟ್ಯಾಸಿಯಂ ಲವಣ ಸಾರೆಲ್ ಮತ್ತು ಬೀಟ್ ಗಿಡಗಳ ಎಲೆಗಳಲ್ಲಿ ದೊರೆಯುತ್ತದೆ. ಕ್ಯಾಲ್ಸಿಯಂ ಲವಣ ಕೆಲವು ವಿಶಿಷ್ಟ ಜಾತಿಯ ಯೂಕಲಿಪ್ಟಸ್ ಗಿಡದ ತೊಗಟೆಯಲ್ಲಿ ಶೇ.20 ರಷ್ಟು ಇದೆ; ಟರ್ಮಿನೇಲಿಯ ಅರ್ಜುನ ಗಿಡದ ತೊಗಟೆಯಲ್ಲಿಯೂ (ಭಾರತದಲ್ಲಿ ಆಕ್ಸಾಲಿಕ್ ಆಮ್ಲವನ್ನು ತಯಾರಿಸುವುದು ಇದರಿಂದಲೇ) ಸಿಕ್ಕುತ್ತದೆ. ಆಮ್ಲದ ಇತರ ಉತ್ಪನ್ನಗಳು ರೋಗಿಗಳ ಮೂತ್ರದಲ್ಲಿ ಕಾಣಬಹುದು.

ವೆನೇಡಿಯಂ ಪೆಂಟಾಕ್ಸೈಡ್ ವೇಗವರ್ಧಕದ ಸಂಪರ್ಕದಲ್ಲಿ ಸಕ್ಕರೆಯನ್ನು ಪ್ರಬಲ ನೈಟ್ರಿಕ್ ಆಮ್ಲದೊಡನೆ ಕಾಯಿಸಿ, ದ್ರಾವಣವನ್ನು ಹಿಂಗಿಸಿ, ಆಕ್ಸಾಲಿಕ್ ಆಮ್ಲವನ್ನು ಪಡೆಯ ಬಹುದು. ಇದು ಪ್ರಯೋಗಶಾಲೆಯ ವಿಧಾನ. ಮರದ ಹೊಟ್ಟನ್ನು (ಗರಗಸದ ಹುಡಿ) ಕಾಸ್ಟಿಕ್ ಕ್ಷಾರಗಳೊಡನೆ 250$^o$ ಸೆಂ.ಗ್ರೇಡಿಗೆ ಕಾಯಿಸಿದರೆ, ಅದರಲ್ಲಿರುವ ಸೆಲ್ಯುಲೋಸು ಸೋಡಿಯಂ ಅಥವಾ ಪೊಟ್ಯಾಸಿಯಂ ಆಕ್ಸಲೇಟುಗಳಿಗಾಗಿ ಉತ್ಕರ್ಷಿತವಾಗುವುದು. ಅದನ್ನು ಬಿಸಿ ನೀರಿನಲ್ಲಿ ವಿಲೀನ ಮಾಡಿ, ಸುಣ್ಣದ ಕೆನೆಯೊಡನೆ ಕುದಿಸಿದರೆ, ಕ್ಯಾಲ್ಸಿಯಂ, ಆಕ್ಸಿಲೇಟು ಒತ್ತರಿಸುವುದು. ಇದನ್ನು ಸಲ್ಫೂರಿಕ್ ಆಮ್ಲದಲ್ಲಿ ವಿಲೀನಗೊಳಿಸಿದರೆ, ಕ್ಯಾಲ್ಸಿಯಂ ಸಲ್ಫೇಟ್ ಒತ್ತರಿಸಿ, ಶೋಧಿತ ದ್ರಾವಣದಲ್ಲಿ ಆಕ್ಸಾಲಿಕ್ ಆಮ್ಲ ಉಳಿಯುವುದು. ಹಿಂಗಿಸಿದರೆ ಸ್ಪಟಿಕೀಕರಿಸುವುದು. 1829ರಲ್ಲಿ ಗೇಲೂಸ್ಯಾಕ್ ಈ ವಿಧಾನವನ್ನು ಕಂಡುಹಿಡಿದ. ಇಂದು ಇದನ್ನು ಕೈಗಾರಿಕೆಯಲ್ಲಿ ಅಷ್ಟಾಗಿ ಬಳಸುವುದಿಲ್ಲ. ಆಧುನಿಕ ಪದ್ಧತಿಯ ಪ್ರಕಾರ 6–10 ವಾಯುಮಂಡಲಗಳ ಒತ್ತಡ ಮತ್ತು 210$^o$ ಸೆಂ.ಗ್ರೇ ಉಷ್ಣತೆಯಲ್ಲಿ ಇಂಗಾಲದ ಮಾನಾಕ್ಸೈಡನ್ನು ಕಾಸ್ಟಿಕ್ ಸೋಡಾದ ಮೇಲೆ ಹಾಯಿಸಿದರೆ ಸೋಡಿಯಂ ಫಾರ್ಮೇಟ್ ಉಂಟಾಗುವುದು. ಇದನ್ನು 390$^o$ ಸೆಂ.ಗ್ರೇಡಿಗೆ ವೇಗವಾಗಿ ಕಾಯಿಸಿದರೆ, ಸೋಡಿಯಂ ಆಕ್ಸಾಲೇಟಿಗೆ ಪರಿವರ್ತಿತವಾಗುವುದು. ಇದರಿಂದ ಆಕ್ಸಲಿಕ್ ಆಮ್ಲವನ್ನು ಮೇಲ್ಕಂಡಂತೆ ಪಡೆಯಬಹುದು.

ಆಕ್ಸಾಲಿಕ್ ಆಮ್ಲ ಅಶ್ರಾಕಾರದ ನಿರ್ವರ್ಣ ಹರಳುಗಳಾಗಿ ಸಂಯೋಜಿತ ಜಲದೊಡನೆ ಸ್ಫಟಿಕೀಕರಿಸುವುದು. ಹರಳುಗಳ ಕರಗುವ ಬಿಂದು 101.5$^o$ ಸೆಂ.ಗ್ರೇ. ಇಂಗಾಲದ ಟೆಟ್ರ ಕ್ಲೋರೈಡಿನೊಂದಿಗೆ ಕಾಯಿಸಿದರೆ ನಿರ್ಜಲಗೊಳ್ಳುವುದು. ಮೊಹರು ಮಾಡಿದ ನಾಳದಲ್ಲಿ ನಿರ್ಜಲಾಮ್ಲವನ್ನು ಕಾಯಿಸಿದರೆ, 189.5$^o$ ಸೆಂಟಿಗ್ರೇಡಿನಲ್ಲಿ ಕರಗುವುದು. ಸುಮಾರು 157$^o$ ಸೆಂಟಿಗ್ರೇಡಿನಲ್ಲಿ ಕರ್ಪೂರೀಕರಿಸುವುದು. ನೀರು ಮತ್ತು ಮದ್ಯಸಾರದಲ್ಲಿ ವಿಶೇಷವಾಗಿಯೂ ಈಥರ್‌ನಲ್ಲಿ ಸ್ವಲ್ಪ ಮಟ್ಟಿಗೂ ದ್ರಾವ್ಯ. ಆಮ್ಲ ಮತ್ತು ಅದರ ದ್ರಾವ್ಯ ಲವಣಗಳು ವಿಷ ವಸ್ತುಗಳು. ನರಮಂಡಲವನ್ನು ನಿಷ್ಕ್ರಿಯಗೊಳಿಸುವುವು. ಆಕ್ಸಾಲಿಕ್ ಆಮ್ಲವಿರುವ ಜೊಂಡನ್ನು ತಿಂದ ದನಗಳು ಸತ್ತಿರುವ ನಿದರ್ಶನಗಳಿವೆ. ಪ್ರಬಲ ಸಲ್ಫ್ಯೂರಿಕ್ ಆಮ್ಲದೊಡನೆ ಕಾಯಿಸಿದಾಗ ಸಮಗಾತ್ರ ಇಂಗಾಲದ ಡಯಾಕ್ಸೈಡ್ ಮತ್ತು ಇಂಗಾಲದ ಮಾನಾಕ್ಸೈಡ್ ಅನಿಲಗಳು ಬಿಡುಗಡೆಯಾಗುವುವು. ಬಿಸಿಯಾದ ದುರ್ಬಲ ಸಲ್ಫ್ಯೂರಿಕ್ ಆಮ್ಲದ ಸಂಪರ್ಕದಲ್ಲಿ ಪೊಟ್ಯಾಸಿಯಂ ಪರ್ಮಾಂಗನೇಟು, ಆಕ್ಸಾಲಿಕ್ ಆಮ್ಲವನ್ನು ಇಂಗಾಲದ ಡಯಾಕ್ಸೈಡ್‌ಗೆ ಉತ್ಕರ್ಷಿಸುತ್ತದೆ. ಈ ಕ್ರಿಯೆ ಪರಿಮಾಣಾತ್ಮಕವಾಗಿ ನಡೆಯುವುದರಿಂದ, ಪರ್ಮಾಂಗನೇಟ್ ದ್ರಾವಣದ ಪ್ರಬಲತೆಯನ್ನು ಪ್ರಮಾಣಿಸಲು ಇದು ಸಹಕಾರಿಯಾಗಿದೆ. ದ್ವಿಪ್ರತ್ಯಾಮ್ಲೀಯ ಆಮ್ಲವಾದುದರಿಂದ, ಸೋಡಿಯಂ ಬೈಆಕ್ಸಲೇಟ್ ಮತ್ತು ಸೋಡಿಯಂ ಆಕ್ಸಲೇಟ್ ಎಂಬ ಎರಡು ಲವಣ ಶ್ರೇಣಿಗಳಿವೆ.

ಆಕ್ಸಲಿಕ್ ಆಮ್ಲದ ಉಪಯೋಗ ಹಲವು. ಬಟ್ಟೆಯ ಮೇಲೆ ಅಚ್ಚುಮಾಡಲು, ವರ್ಣದ್ರವ್ಯ ಸ್ಥಾಪಕವಾಗಿ ಚರ್ಮವನ್ನು ಶುಭ್ರಗೊಳಿಸಲು, ಮೋಟರ್ ವಾಹನದ ರೇಡಿಯೇಟರ್ ನಳಿಗೆಯ ಮೇಲಿರುವ ತುಕ್ಕನ್ನು ತೊಳೆಯಲು, ಈ ಆಮ್ಲವನ್ನು ಉಪಯೋಗಿಸುವರು. ಛಾಯಾಚಿತ್ರಗಳ ಆಕೃತಿಯನ್ನು ಸ್ಪಷ್ಟಪಡಿಸಲು (ಡೆವಲಪ್) ಪೊಟ್ಯಾಸಿಯಂ ಫೆರಸ್ ಆಕ್ಸಲೇಟನ್ನೂ $2\,K_2\,Fe\,(C_2O_4) = 2[\,H_2O]$ ಬಟ್ಟೆಯಿಂದ ಶಾಯಿ ಮತ್ತು ತುಕ್ಕಿನ ಕಲೆಗಳ ನಿವಾರಣೆಗೆ ಮತ್ತು ಹ್ಯಾಟನ್ನು ಮಾಡುವ ಹುಲ್ಲನ್ನು ಚೆಲುವೆ ಮಾಡಲು ಪೊಟ್ಯಾಸಿಯಂ ಕ್ವಾಡ್ರಾಕ್ಸಲೇಟನ್ನೂ $[KHC_2O_4 .\ H_2C_2O_4 .\ 2H_2O]$ ಬಳಸುವರು.

ಒಂದು ಪ್ರನಾಳದಲ್ಲಿ ಆಕ್ಸಾಲಿಕ್ ಆಮ್ಲ ಮತ್ತು ರಿಸಾರ್ಸಿನಾಲ್ ದ್ರಾವಣಗಳ ಮಿಶ್ರಣವನ್ನು ಕಾಯಿಸಿ, ತಣಿಸಿ, ಪ್ರನಾಳದ ಪಾರ್ಶ್ವದಿಂದ ಸಲ್ಫ್ಯೂರಿಕ್ ಆಮ್ಲವನ್ನು ಸೇರಿಸಿದರೆ ದ್ರಾವಣಗಳು ಸಂಧಿಸುವ ಸ್ಥಳದಲ್ಲಿ ನೀಲಿಬಣ್ಣದ ಉಂಗುರಾಕೃತಿ ಏರ್ಪಡುವುದು. ಆಕ್ಸಾಲಿಕಾಮ್ಲವನ್ನು ಗುರುತಿಸುವುದು ಇದೊಂದು ಸೂಕ್ಷ್ಮ ಪರೀಕ್ಷಾ ಪ್ರಯೋಗ. (ಎಚ್.ಜಿ.ಎಸ್)

**ಆಕ್ಸಾಲಿಸ್ :** ಆಕ್ಸಾಲಿಡೇಸೀ ಕುಟುಂಬಕ್ಕೆ ಸೇರಿದ ಸಸ್ಯಜಾತಿ. ಆಕ್ಸಾಲಿಸ್ ಜಾತಿಯ ಸಸ್ಯಗಳು ತೋಟಗಳಲ್ಲಿನ ಬಹು ವಾರ್ಷಿಕ ಕಳೆಗಿಡಗಳು. ಹೂವಿನ ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ, ಮನೆಗಳಲ್ಲಿ ಬೆಳೆಸುತ್ತಾರೆ. ಎಳೆಯ ಗಿಡವನ್ನು ತರಕಾರಿಯಾಗೂ ಸ್ಥಾನೀಯ ಔಷಧವಾಗೂ ಬಳಸುತ್ತಾರೆ. ಇವುಗಳಲ್ಲಿ 500 ಪ್ರಭೇದಗಳಿವೆ. ಕೆಲವಕ್ಕೆ ಕಾಂಡವಿರುವುದಿಲ್ಲ. ಕೆಲವು ಬಳ್ಳಿಗಳಂತೆ ಬೆಳೆಯುತ್ತವೆ. ಎಲೆ ಪರ್ಯಾಯ ಕ್ರಮದಲ್ಲಿ ಜೋಡಣೆಗೊಂಡಿವೆ. ಬೆಳಕಿಲ್ಲದಲ್ಲಿ ಎಲೆಗಳು ಮಡಿಚಿ ಕೊಳ್ಳುತ್ತವೆ. ಹೂ ಅಂಬೆಲ್ ಮಾದರಿಯದು. ವಿವಿಧ ಬಣ್ಣಗಳಲ್ಲಿವೆ. ದ್ವಿಲಿಂಗ ಜಾತಿಯವು. 5 ಪುಷ್ಪ ಪತ್ರಗಳೂ 5 ದಳಗಳೂ 5 ಭಾಗದ ಅಂಡಾಶಯವೂ ಇವೆ. ಫಲ ಕ್ಯಾಪ್ಸೂಲ್ ಮಾದರಿಯದು.



ಆಕ್ಸಾಲಿಸ್ ಸರ್ನುವ

ಆಕ್ಸಾಲಿಸ್ ಬೊವ್ಯೆ, ವೇರಿಯಬಿಲಿಸ್, ಸರ್ನುವ, ಕುಪ್ರಿಯ ಫ್ಲೋರಿಬಂಡ, ಟೆಟ್ರಫಿಲ ಇವು ಹೆಚ್ಚು ಬಳಕೆಯಲ್ಲಿರುವ ಪ್ರಭೇದಗಳು. ಲಶುನಗಳಿಂದ, ಬೀಜಗಳಿಂದ ಸಸ್ಯವೃದ್ಧಿ ಮಾಡಬಹುದು. ಮಳೆಗಾಲದಲ್ಲಿ ಸಸಿ ಬೇಗ ಏಳುತ್ತದೆ. ಇವಕ್ಕೆ ತೇವಾಂಶ ಬೇಕು. ಜೌಗು ಆಗದು. ತಂಪುಕಾಲದಲ್ಲಿ ಹೂ ಬಿಡುತ್ತವೆ. (ಡಿ.ಎಂ.)

**ಆಕ್ಸಿಅಸಿಟಿಲೀನ್ ಜ್ವಾಲೆ :** ಅಸಿಟಿಲೀನ್ ಅನಿಲದ ದಹಿಸುವಿಕೆ ಅತ್ಯಂತ ಉಷ್ಣಜನಕ ಕ್ರಿಯೆ. ಅಸಿಟಿಲೀನ್ ದಹಿಸಿ ಸಂಪೂರ್ಣವಾಗಿ ಇಂಗಾಲದ ಡೈ ಆಕ್ಸೈಡ್ ಮತ್ತು ನೀರನ್ನು ಉತ್ಪತ್ತಿ ಮಾಡುವಾಗ

$$2C_2H_2 + 5\,O_2 \rightarrow 4\,CO_2 + 2\,H_2O$$

ಒಂದು ಗ್ರಾಂ ಅಸಿಟಿಲೀನಿಗೆ 12 ಸಾವಿರ ಕ್ಯಾಲೊರಿಗಳಷ್ಟು ಉಷ್ಣ ಬಿಡುಗಡೆಯಾಗುತ್ತದೆ. ಆಕ್ಸಿಅಸಿಟಿಲೀನ್ ಜ್ವಾಲೆಯಲ್ಲಿ ಈ ದಹನಕ್ರಿಯೆಯನ್ನು ಉಪಯೋಗಿಸಿಕೊಂಡು ಅಧಿಕ ಉಷ್ಣತೆಯಿರುವ ಜ್ವಾಲೆಯನ್ನು ಉತ್ಪತ್ತಿಮಾಡುತ್ತಾರೆ.

ಎರಡು ಸಹಾಕ್ಷೀಯ ನಳಿಗೆಗಳಲ್ಲಿ (ಕೊ– ಆಕ್ಸಿಯಲ್ ಟ್ಯೂಬ್) ಒಳಗಿನ ನಳಿಗೆಯ ಮೂಲಕ ಆಕ್ಸಿಜನ್ನನ್ನೂ ಹೊರಗಿನದರ ಮೂಲಕ ಅಸಿಟಿಲೀನನ್ನೂ ಹಾಯಿಸಿ ಅವೆರಡೂ ಬೆರೆತುಕೊಂಡು ಒಂದು ಸೂಸುಬಾಯಿಯ (ನಾಸಲ್) ಮೂಲಕ ಹೊರಬರುವಂತೆ ಮಾಡಿ ಆ ಅನಿಲಮಿಶ್ರಣವನ್ನು ಉರಿಸುವುದರಿಂದ ಅತ್ಯಧಿಕ ಉಷ್ಣತೆಯುಳ್ಳ ಜ್ವಾಲೆ ಉಂಟಾಗುತ್ತದೆ. ಜ್ವಾಲೆಯ ಉಷ್ಣತೆ 3,000$^o$ ಸೆಂ.ಗ್ರೇ.ನಿಂದ 3,500$^o$ ಸೆಂ.ಗ್ರೇ.ವರೆಗೂ ಇರಬಹುದು. ಈ ಜ್ವಾಲೆಯಲ್ಲಿ ದಹನಕ್ರಿಯೆ ಎರಡು ಹಂತಗಳಲ್ಲಿ ನಡೆಯುತ್ತದೆ. ಸೂಸುಬಾಯಿಯ ಮುಖದ ಬಳಿ ಕಾಣುವ ಪ್ರಕಾಶಮಾನವಾದ ಒಳವಲಯದಲ್ಲಿ ದಹನದ ಮೊದಲನೆಯ ಹಂತ ನಡೆಯುತ್ತದೆ.

$$C_2H_2 + O_2 \rightarrow 2CO + H_2 + 4{,}200 \text{ ಕ್ಯಾ./ಗ್ರಾಂ}$$

ಜ್ವಾಲೆಯ ಹೊರವಲಯದಲ್ಲಿ ದಹನದ ಎರಡನೆಯ ಹಂತ ನಡೆಯುತ್ತದೆ.

$$2CO + H_2 + 1\,{}^1/_2O_2 \rightarrow 2CO_2 + H_2O + 7,800$$ ಕ್ಯಾ./ಗ್ರಾಂ

ಆಕ್ಸಿಅಸಿಟಲೀನ್ ಜ್ವಾಲೆಯನ್ನು ಮೂರು ಬೇರೆ ಬೇರೆ ಬಗೆಯಲ್ಲಿ ಉತ್ಪತ್ತಿ ಮಾಡಿಕೊಂಡು ಬಳಸುವುದುಂಟು. ಆಕ್ಸಿಜನ್ ಪ್ರಮಾಣವನ್ನು ಹೆಚ್ಚು ಮಾಡಿದಾಗ ಜ್ವಾಲೆಯ

**1. ಆಕ್ಸಿಜನ್ ಜ್ವಾಲೆ, 2. ಅಸಿಟಲೀನ್, 3. ಜ್ವಾಲೆ**

ಪ್ರಕಾಶಮಾನವಾದ ಒಳವಲಯ ಮೊಟಕಾಗಿಯೂ ಚೂಪಾಗಿಯೂ ಇದ್ದು ಜ್ವಾಲೆಯ ಉಷ್ಣತೆ ಸಾಮಾನ್ಯ ಜ್ವಾಲೆಗಿಂತ ಅಧಿಕವಾಗಿರುತ್ತದೆ. ಅಂಥ ಜ್ವಾಲೆಯ ಹೆಸರು ಉತ್ಕರ್ಷಕಾರೀ ಆಕ್ಸಿಅಸಿಟಲೀನ್ ಜ್ವಾಲೆ. ಏಕೆಂದರೆ, ಅದರಲ್ಲಿ ಆಕ್ಸಿಜನ್ ಪ್ರಮಾಣ ಹೆಚ್ಚಾಗಿದ್ದು, ಜ್ವಾಲೆಯ ವರ್ತನೆಗೆ ಒಳಗಾಗುವ ಲೋಹಭಾಗಗಳು ಉತ್ಕರ್ಷಣೆ (ಆಕ್ಸಿಡೇಷನ್) ಹೊಂದುತ್ತವೆ.

ಆಕ್ಸಿಜನ್ ಪ್ರಮಾಣ ಕಡಿಮೆ ಇದ್ದು, ಅಸಿಟಲೀನ್ ಪ್ರಮಾಣ ಹೆಚ್ಚಾದಾಗ, ಜ್ವಾಲೆಯ ಒಳವಲಯ ದಪ್ಪವಾಗಿಯೂ ಮೊಂಡಾಗಿಯೂ ಇದ್ದು, ಇಂಥ ಜ್ವಾಲೆಯಲ್ಲಿ ಹೊರ ಒಳ ವಲಯಗಳ ನಡುವೆ ಮೂರನೆಯ ಮಧ್ಯವಲಯ ಒಂದಿರುತ್ತದೆ. ಈ ವಲಯದ ಆಕಾರವನ್ನು ನೋಡಿ ಇದನ್ನು ಗರಿ (ಫೆದರ್) ಎಂದು ಕರೆದಿದ್ದಾರೆ. ಈ ಅಪಕರ್ಷಕಾರೀ ಆಕ್ಸಿಅಸಿಟಲೀನ್



**1 'ಸಮ' ಆಕ್ಸಿ ಅಸಿಟಲೀನ್ ಜ್ವಾಲೆ (ಸಮಪ್ರಮಾಣದಲ್ಲಿ ಅಸಿಟಲೀನ್ ಮತ್ತು ಆಕ್ಸಿಜನ್)**
**2 ಅಪಕರ್ಷಕ ಆಕ್ಸಿ ಅಸಿಟಲೀನ್ ಜ್ವಾಲೆ (ಅಸಿಟಲೀನ್ ಅಧಿಕ ಪ್ರಮಾಣದಲ್ಲಿ)**
**3 ಉತ್ಕರ್ಷಕ ಆಕ್ಸಿ ಅಸಿಟಲೀನ್ ಜ್ವಾಲೆ (ಆಕ್ಸಿಜನ್ ಅಧಿಕ ಪ್ರಮಾಣದಲ್ಲಿ)**

ಜ್ವಾಲೆಯ ಗರಿಯಲ್ಲಿರುವ ಬಿಳಿಗಾವಿಗೆ (ವೈಟ್ ಹಾಟ್) ಕಾದ ಇಂಗಾಲದ ಕಣಗಳು ಕರಗಿದ ಲೋಹದೊಡನೆ ಲೀನವಾಗಿಬಿಡುವುದರಿಂದ ಈ ಜ್ವಾಲೆಯನ್ನು ಕಾರ್ಬನೀಕಾರೀ (ಕಾರ್ಬುರೈಸಿಂಗ್) ಜ್ವಾಲೆ ಎಂದೂ ಕರೆದಿದ್ದಾರೆ. ಸಹಜವಾಗಿಯೇ ಈ ಜ್ವಾಲೆಯ ಉಷ್ಣತೆ ಸಾಮಾನ್ಯ ಜ್ವಾಲೆಗಿಂತ ಕಡಿಮೆ ಇರುತ್ತದೆ. ಈ ಎರಡು ಬಗೆಯ ಆಕ್ಸಿಅಸಿಟಲೀನ್ ಜ್ವಾಲೆಗಳಿಗೂ ಮಧ್ಯ ಸ್ವಭಾವದ ಸಮ ಜ್ವಾಲೆಯಲ್ಲಿ ಆಕ್ಸಿಜನ್ ಅಸಿಟಲೀನ್‌ಗಳ ಪ್ರಮಾಣ ಸಮನಾಗಿರುತ್ತದೆಯೆಂಬುದು ಸ್ಪಷ್ಟ.

ಆಕ್ಸಿಅಸಿಟಲೀನ್ ಜ್ವಾಲೆಯನ್ನು ಬಳಸುವುದು ಮುಖ್ಯವಾಗಿ ಲೋಹ ಭಾಗಗಳನ್ನು ಬೆಸೆಯುವುದಕ್ಕೆ. ಈಚೆಗೆ ಸಾಧಿಸಿರುವ ತಾಂತ್ರಿಕ ಪ್ರಗತಿಯಿಂದಾಗಿ ಈ ಜ್ವಾಲೆಯನ್ನು ನಾನಾಬಗೆಯ ಕಾರ್ಯಗಳಿಗೆ ಬಳಸಲಾಗುತ್ತಿದೆ. ಉಜ್ಜಣಿ (ವೇರ್) ಮತ್ತು ರಾಸಾಯನಿಕ ವರ್ತನೆಗಳಿಗೆ ಒಳಗಾಗಬಹುದಾದ ಯಂತ್ರ ಭಾಗಗಳನ್ನು ರಕ್ಷಿಸಲು ಆ ಭಾಗಗಳಿಗೆ ಅಪಘರ್ಷ ನಿರೋಧಕ (ವೇರ್ ರೆಸಿಸ್ಟಿಂಗ್) ಮತ್ತು ರಾಸಾಯನ ನಿರೋಧಕ ಮಿಶ್ರ ಲೋಹಗಳ ತೆಳುಹೊದಿಕೆ ಕೊಟ್ಟು ಗಡಸು ಮುಖ (ಹಾರ್ಡ್‌ಫೇಸ್) ಒದಗಿಸಲು ಈ ಜ್ವಾಲೆಯನ್ನು ಬಳಸುತ್ತಾರೆ. ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳನ್ನು ನಿರ್ದಿಷ್ಟ ಆಕೃತಿಯಲ್ಲಿ ಕತ್ತರಿಸಬೇಕಾದಾಗ ಮೊನಚಾದ ಆಕ್ಸಿಅಸಿಟಲೀನ್ ಜ್ವಾಲೆಯನ್ನು ಉಪಯೋಗಿಸಿ ಸ್ಥಳೀಯವಾಗಿ ಅಧಿಕ ಉಷ್ಣ ಉಂಟು ಮಾಡಿ ಲೋಹವನ್ನು ಕರಗಿಸಿ ಕತ್ತರಿಸಬೇಕಾದ ಆಕೃತಿಯನ್ನು ಬೇರ್ಪಡಿಸಬಹುದು. ಬಣ್ಣ ಹಾಕಬೇಕಾಗಿರುವ ಉಕ್ಕಿನ ಮೈಮೇಲಿನ ತುಕ್ಕು ತೆಗೆದು ಸ್ವಚ್ಛಗೊಳಿಸುವುದು ಮರದ ಸಾಮಾನುಗಳಿಗೆ ಪ್ರಾಚೀನತೆಯ ತೋರ್ಕೆ ಕೊಡುವುದು, ಮರದ ಮೈಯನ್ನು ಕರಕುಮಾಡಿ ಮರದ ಸಾಮಾನುಗಳನ್ನು ಕಾಪಿಡುವುದು ಇವು ಆಕ್ಸಿಅಸಿಟಲೀನ್ ಜ್ವಾಲೆಯ ಕೆಲವು ಕುತೂಹಲಕಾರೀ ಉಪಯೋಗಗಳು. (ಜಿ.ಆರ್.ಎಲ್.)

**ಆಕ್ಸಿಜನ್ :** ಪ್ರಕೃತಿಯಲ್ಲಿ ಅತ್ಯಧಿಕ ಪ್ರಮಾಣದಲ್ಲಿ ದೊರೆಯುವ ಅನಿಲರೂಪದ ಮೂಲವಸ್ತು. ಇದರ ರಾಸಾಯನಿಕ ಸಂಕೇತ 0, ಪರಮಾಣು ಸಂಖ್ಯೆ 8, ಪರಮಾಣು ತೂಕ 15.9994, ಎಲೆಕ್ಟ್ರಾನ್ ಜೋಡಣೆ 2,6 ಅಥವಾ $[He]\,2s^2\,2p^4$. ಆವರ್ತಕೋಷ್ಟಕದಲ್ಲಿ 6ನೆಯ ಗುಂಪಿಗೆ ಸೇರಿರುವ ಮೂಲವಸ್ತು. ಒಂದು ಅಲೋಹ. ಪ್ರಕೃತಿ ಲಭ್ಯ ಮೂಲವಸ್ತುಗಳ ಭಾರದಲ್ಲಿ ಸುಮಾರು ಅರ್ಧದಷ್ಟು ಇದರದ್ದೇ. ಗಾಳಿಯ ಭಾರದಲ್ಲಿ ಶೇ.21ರಷ್ಟು ಆಕ್ಸಿಜನ್ ಇದೆ. ಹೈಡ್ರೊಜನ್ ಮತ್ತು ಆಕ್ಸಿಜನ್‌ಗಳ ಸಂಯುಕ್ತ ನೀರು. ಗಾಳಿ, ನೀರುಗಳೆರಡೂ ಭೂಮಿಯ ಎಲ್ಲ ಜೀವಿಗಳಿಗೂ ಅತ್ಯವಶ್ಯಕ. ಜೊತೆಗೆ ನಿರವಯವ ರಸಾಯನವಿಜ್ಞಾನದಲ್ಲಿ (ಇನ್‌ಆರ್ಗ್ಯಾನಿಕ್ ಕೆಮಿಸ್ಟ್ರಿ) ಆಕ್ಸಿಜನ್ ಸಂಯುಕ್ತಗಳ ಪಾತ್ರ ಬಹು ಹಿರಿದು. ಬಹುತೇಕ ರಾಸಾಯನಿಕ ಕ್ರಿಯೆಗಳು ನಡೆಯುವುದು ನೀರಿನ ಮಾಧ್ಯಮದಲ್ಲಿಯೇ. ದಹನಕ್ರಿಯೆಗೂ ಆಕ್ಸಿಜನ್ ಅತ್ಯಾವಶ್ಯಕ. ಜೀವಿಗಳ ಉಸಿರಾಟ, ದಹನಕ್ರಿಯೆ ಇವೆಲ್ಲವಕ್ಕೂ ಅಗಾಧ ಪ್ರಮಾಣದಲ್ಲಿ ಆಕ್ಸಿಜನ್ ವಿನಿಯೋಗವಾಗುತ್ತಿದ್ದರೂ ಗಾಳಿಯಲ್ಲಿನ ಇದರ ಅಂಶ ಹೆಚ್ಚು ಕಡಿಮೆ ಒಂದೇ ಮಟ್ಟದಲ್ಲಿ ಇರುತ್ತದೆ. ಕಾರಣ, ಗಿಡ ಮರಗಳ ಎಲೆಗಳ ದ್ಯುತಿಸಂಶ್ಲೇಷಣೆಯಲ್ಲಿ ಆಕ್ಸಿಜನ್ ಹೊರಬೀಳುತ್ತಿರುತ್ತದೆ. ವಾತಾವರಣದಲ್ಲಿ ನೀರಿನ ಆವಿ ಕೂಡ ಸೂರ್ಯನ ಕಿರಣಗಳಲ್ಲಿರುವ ಅತಿನೀಲ ರಶ್ಮಿಗಳಿಂದ ವಿಭಜನೆ ಹೊಂದಿ ಭಾರವಾದ ಆಕ್ಸಿಜನ್ ಗುರುತ್ವಾಕರ್ಷಣೆಯಿಂದ ಗಾಳಿಯಲ್ಲಿಯೇ ಉಳಿದು ಹಗುರವಾದ ಹೈಡ್ರೊಜನ್ ವಾತಾವರಣದ ಮೇಲ್ಪದರದೊಡನೆ ಮಿಲನವಾಗುತ್ತದೆ. ಪ್ರಕೃತಿಯಲ್ಲಿ ದೊರಕುವ ಅನೇಕ ಲೋಹಗಳ ಅಥವಾ ಅಲೋಹಗಳ ಅದಿರುಗಳು ಅಥವಾ ಖನಿಜಗಳು ಆಕ್ಸಿಜನ್ನು ಹೊಂದಿವೆ. ಉದಾಹರಣೆಗೆ ಕಬ್ಬಿಣದ ಅದಿರಾದ ಹೆಮಟೈಟ್ ($Fe_2O_3$), ಅಲ್ಯೂಮಿನಿಯಂ ಅದಿರಾದ ಬಾಕ್ಸೈಟ್ ($Al_2O_3$), ಸುಣ್ಣಕಲ್ಲು ($CaCO_3$), ಮರಳು ಮತ್ತು ಬೆಣಚು ಕಲ್ಲು ($SiO_2$), ಇತರ ಸಿಲಿಕೇಟುಗಳು ಇತ್ಯಾದಿ. ಅಲ್ಲದೆ ಎಲ್ಲ ಪ್ರಾಣಿ ವರ್ಗ, ಸಸ್ಯವರ್ಗಗಳಲ್ಲೂ ಆಕ್ಸಿಜನ್ ಅಂಶವಿದೆ. ಕೊಬ್ಬು, ಪಿಷ್ಟ, ಸಕ್ಕರೆ ಪದಾರ್ಥಗಳು, ಪ್ರೋಟೀನ್ ಎಲ್ಲದರಲ್ಲೂ ಆಕ್ಸಿಜನ್ ಇದೆ.

ಆಕ್ಸಿಜನ್ ಕುರಿತು ಪ್ರಥಮ ಪ್ರಯೋಗ ನಡೆಸಿದವ ಶೀಲೆ. ಆತ ಕೆಲವು ಲೋಹಗಳ ಆಕ್ಸೈಡ್‌ಗಳನ್ನು ಕಾಯಿಸಿ ಉಷ್ಣ ವಿಭಜನೆಯಿಂದ ಒಂದು ಅನಿಲವನ್ನು ತಯಾರಿಸಿದ (1772). ಮುಂದೆ 1774ರಲ್ಲಿ ಅದೇ ವಿಧಾನದಿಂದ ಆದರೆ ಸ್ವತಂತ್ರವಾಗಿ ಜೋಸೆಫ್ ಪ್ರೀಸ್ಟ್ಲಿ ತಯಾರಿಸಿದ. ಆದರೆ ಆ ಅನಿಲ ಒಂದು ಮೂಲ ವಸ್ತು ಎಂದು ನಿರ್ಣಯಿಸಿದಾತ (1775–77) ಲೆವಾಸಿಯೆ. ಪ್ರಮುಖ ಆಮ್ಲಗಳ (Oxys) ಮೂಲವೆಂದು (gene) ಭಾವಿಸಿದ ಅನಿಲಕ್ಕೆ ಆಕ್ಸಿಜನ್ (ಆಮ್ಲಜನಕ) ಎಂದು ಹೆಸರಿತ್ತ. ಆದರೆ ಈ ಕಲ್ಪನೆ ಎಲ್ಲ ಆಮ್ಲಗಳಿಗೂ ಸಮರ್ಥನೀಯವಲ್ಲ ಎಂಬುದು ಈಗ ಅರಿವಾಗಿದೆ. ಪ್ರಕೃತಿಯಲ್ಲಿ ದೊರಕುವ ಆಕ್ಸಿಜನ್ $O^{16}, O^{17}$ ಮತ್ತು $O^{18}$ ಈ ಮೂರು ಸಮಸ್ಥಾನಿಗಳ ಮಿಶ್ರಣ. ಅವುಗಳ ಪರಸ್ಪರ ಪ್ರಮಾಣಾಂಶ, 99.759:0.037:204. ರಸಾಯನವಿಜ್ಞಾನಿಗಳು ಬಹುಕಾಲದವರೆಗೂ ಪ್ರಕೃತಿಮೂಲ ಶುದ್ಧ ಆಕ್ಸಿಜನ್ನಿನ ಪರಮಾಣು ತೂಕ 16.0000 ಎಂದೇ ಆಧಾರವಾಗಿ ಉಪಯೋಗಿಸಿ ಇತರ ಮೂಲವಸ್ತುಗಳ ಪರಮಾಣುಭಾರಗಳನ್ನು ನಿರ್ಧರಿಸಿದ್ದರು. ಆದರೆ ಭೌತವಿಜ್ಞಾನಿಗಳು ಸಮಸ್ಥಾನಿಗೆ ಮಾತ್ರ ಪರಮಾಣುಭಾಗ ಎಂದು ನಿರ್ಣಯಿಸಿ ಅದರ ಆಧಾರದ ಮೇಲೆ ತಮ್ಮದೇ ಆದ ಮತ್ತೊಂದು ಮೂಲವಸ್ತುಗಳ ಪರಮಾಣು ಭಾರಪಟ್ಟಿಯನ್ನು ಸಿದ್ಧಪಡಿಸಿ ಉಪಯೋಗಿಸಲಾರಂಭಿಸಿದರು. ಆದರೆ ಈ ವಿರೋಧಾಭಾಸ ಈಗ ಕೊನೆಗೊಂಡು $C^{12}$ ಸಮಸ್ಥಾನಿಯ ಆಧಾರದ ಮೇಲೆ ಉಳಿದೆಲ್ಲ ಮೂಲವಸ್ತುಗಳ ಪರಮಾಣು ಭಾರವನ್ನು ನಿರ್ಣಯಿಸುವ ಪದ್ಧತಿ ಅಂತಾರಾಷ್ಟ್ರೀಯ ಒಪ್ಪಿಗೆ ಪಡೆದು ಸರ್ವಮಾನ್ಯತೆ ಹೊಂದಿದೆ. ಬಹು ಅಲ್ಪಾಯುಗಳಾದ ಮೂರು ವಿಕಿರಣಶೀಲ ಸಮಸ್ಥಾನೀಯಗಳಿರುವುದೂ ತಿಳಿದುಬಂದಿದೆ: $O^{14}, O^{15}$ ಮತ್ತು $O^{19}$.

**ತಯಾರಿಸುವ ವಿಧಾನ :** ಪ್ರಯೋಗಶಾಲೆಯಲ್ಲಿ ಸಣ್ಣ ಪ್ರಮಾಣದಲ್ಲಿ ಶುದ್ಧ ಆಕ್ಸಿಜನ್ ಅನ್ನು ತಯಾರಿಸಲು ಸಾಮಾನ್ಯವಾಗಿ ಬಳಸುವ ವಿಧಾನವೆಂದರೆ ಪೊಟ್ಯಾಸಿಯಂ ಕ್ಲೋರೇಟ್ ಸಂಯುಕ್ತವನ್ನು ಕಾಯಿಸುವುದು:

$2KClO_3$ (ಘನ) $\rightarrow$ $2KCl$ (ಘನ)$+3O_2$ (ಅನಿಲ).

ಪೊಟ್ಯಾಸಿಯಂ ಕ್ಲೋರೇಟ್‌ನೊಡನೆ ವೇಗವರ್ಧಕಗಳಾದ (ಕ್ಯಾಟಲಿಸ್ಟ್) ಮ್ಯಾಂಗನೀಸ್ ಡೈಆಕ್ಸೈಡ್ ಅಥವಾ ಫೆರಿಕ್ ಆಕ್ಸೈಡ್, ಸಣ್ಣ ಮರಳು ಅಥವಾ ಗಾಜಿನ ಪುಡಿಗಳನ್ನು ಮಿಶ್ರಮಾಡುವುದರಿಂದ ಆಕ್ಸಿಜನ್ ಉತ್ಪತ್ತಿ ಸುಸೂತ್ರವಾಗುವುದು, ಮರ್ಕ್ಯೂರಿಕ್ ಆಕ್ಸೈಡ್, ಬೇರಿಯಂ ಪೆರಾಕ್ಸೈಡ್, ಪೊಟ್ಯಾಸಿಯಂ ಪರ್‌ಮ್ಯಾಂಗನೇಟ್ ಕೆಲವು ಆಕ್ಸಿಜನ್ ಅಂಶ ಹೆಚ್ಚಾಗಿರುವ ಸಂಯುಕ್ತಗಳನ್ನು ಕಾಯಿಸಿದಾಗಲೂ ವಿಭಜನೆ ಹೊಂದಿ ಆಕ್ಸಿಜನ್ ಹೊರಬೀಳುವುದು.

ಕೈಗಾರಿಕಾ ಪ್ರಮಾಣದಲ್ಲಿ ಆಕ್ಸಿಜನ್‌ಅನ್ನು ಉತ್ಪಾದಿಸಲು ಗಾಳಿ ಮತ್ತು ನೀರುಗಳೇ ಮೂಲಾಧಾರ. ಶುದ್ಧೀಕರಿಸಿದ ಗಾಳಿ ಮುಖ್ಯವಾಗಿ ನೈಟ್ರೋಜನ್, ಆಕ್ಸಿಜನ್ ಮತ್ತು ಅಲ್ಪ ಪ್ರಮಾಣದಲ್ಲಿ ಆರ್ಗಾನ್‌ನಂಥ ಕೆಲವು ಉತ್ಕೃಷ್ಟ ವಿರಳ ಅನಿಲಗಳ (ನೋಬಲ್ ಅಥವಾ ರೇರ್ ಗ್ಯಾಸಸ್) ಮಿಶ್ರಣ. ಗಾಳಿಯನ್ನು ದ್ರವೀಕರಿಸಿ ಅನಂತರ ನಿಯಂತ್ರಿತ ರೀತಿಯಲ್ಲಿ ಬಟ್ಟಿ ಇಳಿಸಿದರೆ ನೈಟ್ರೋಜನ್ ಮತ್ತು ಆರ್ಗಾನ್ ಅನಿಲಗಳು ಮೊದಲು ಹೊರಬೀಳುವುವು. ಉಳಿಕೆಯ ಗಾಳಿಯನ್ನು ಮತ್ತೆ ಮತ್ತೆ ನಿಯಂತ್ರಿತ ರೀತಿಯಲ್ಲಿ ಬಟ್ಟಿ ಇಳಿಸುವುದರ ಮೂಲಕ ಶೇ. ಸು. 99.5 ಶುದ್ಧ ಆಕ್ಸಿಜನ್ ಅನ್ನು ಪಡೆಯಬಹುದು. ನೀರಿನಿಂದಲೂ ಬಹುಶುದ್ಧ ಆಕ್ಸಿಜನ್ ಅನ್ನು ವಿದ್ಯುದ್ವಿಭಜನಾ ಕ್ರಮದಿಂದ ಪಡೆಯಬಹುದು. ಶುದ್ಧ ಹೈಡ್ರೊಜನ್ ಸಹ ಈ ವಿಧಾನದಲ್ಲಿ ಹೊರಬೀಳುವ ಮತ್ತೊಂದು ಕೈಗಾರಿಕಾ ಅನಿಲ. ಆದರೆ ಗಾಳಿಯ ಮೂಲದಿಂದ ಪಡೆದ ಆಕ್ಸಿಜನ್‌ಗಿಂತ ವಿದ್ಯುದ್ವಿಭಜನಾ ಕ್ರಮದಿಂದ ಪಡೆದ ಆಕ್ಸಿಜನ್ ಬೆಲೆ ದುಬಾರಿ. ಕೈಗಾರಿಕಾ ಉಪಯೋಗಗಳಿಗೆ ಆಕ್ಸಿಜನ್ನನ್ನು ತಾಮ್ರದ ಥರ್ಮಸ್ ಫ್ಲಾಸ್ಕ್ ಮಾದರಿಯ ಶೇಖರಣಾ ಪಾತ್ರೆಗಳಲ್ಲಿ ದ್ರವ ರೂಪದಲ್ಲಿಯೇ ಅಥವಾ ಉಕ್ಕಿನ ಸಿಲಿಂಡರ್‌ಗಳಲ್ಲಿ ಹೆಚ್ಚಿನ ಒತ್ತಡದಲ್ಲಿ ಶೇಖರಿಸಿ ಸಾಗಿಸುವುದು ಪದ್ಧತಿ.

ಸಾಮಾನ್ಯ ವಾತಾವರಣದ ಉಷ್ಣತೆಯ ಮಟ್ಟದಲ್ಲಿ ಆಕ್ಸಿಜನ್ ಒಂದು ಬಣ್ಣವಿಲ್ಲದ, ವಾಸನೆಯಿಲ್ಲದ, ರುಚಿಯಿಲ್ಲದ ಅನಿಲ. ಅದು – $182^{o}$ ಸೆ. ಗಿಂತ ಕಡಿಮೆ ಉಷ್ಣತೆಯಲ್ಲಿ ದ್ರವರೂಪದಲ್ಲಿರುವುದು. ದ್ರವರೂಪದಲ್ಲಿ ತಿಳಿ ನೀಲಿ ಬಣ್ಣ ಹೊಂದಿರುತ್ತದೆ. – $218.4^{o}$ ಸೆ. ಗಿಂತ ಕಡಿಮೆ ಉಷ್ಣತೆಯಲ್ಲಿ ಘನರೂಪ ಹೊಂದುತ್ತದೆ. ಎಲ್ಲ ಸ್ಥಿತಿಗಳಲ್ಲಿಯೂ ಅಲ್ಪ ಆಯಸ್ಕಾಂತೀಯತೆಯನ್ನು ತೋರಿಸುವುದು. ಅನಿಲರೂಪದಲ್ಲಿ ಸಾಮಾನ್ಯವಾಗಿ ದ್ವಿಪರಮಾಣುಗಳ ಕೂಟದ ಅಣುಗಳಿಂದ ಕೂಡಿರುತ್ತದೆ. ಓಸೋನ್ ($O_3$) ಆಕ್ಸಿಜನ್ನಿನ ಮತ್ತೊಂದು ಸ್ವರೂಪ. ಆಕ್ಸಿಜನ್ ನೀರಿನಲ್ಲಿ ಸ್ವಲ್ಪಮಟ್ಟಿಗೆ ಲೀನವಾಗುವುದು. (ಅಂದರೆ ಸುಮಾರು 100 ಮಿಲಿ ಲೀಟರ್ ನೀರಿನಲ್ಲಿ 2.8 ಮಿಲಿ ಲೀಟರನಷ್ಟು $20^{o}$ ಸೆ. ಉಷ್ಣತೆಯಲ್ಲಿ) ಸಮುದ್ರದ ನೀರಿನಲ್ಲಿ ಆಕ್ಸಿಜನ್‌ನ ಲೀನತೆ ಇನ್ನೂ ಕಡಿಮೆ. ಮೀನುಗಳು ನೀರಿನಲ್ಲಿ ಬದುಕಲು ಈ ಲೀನವಾಗಿರುವ ಆಕ್ಸಿಜನ್ ಅತ್ಯಾವಶ್ಯಕ.

ರಾಸಾಯನಿಕವಾಗಿ ಆಕ್ಸಿಜನ್ ತೀವ್ರ ಪಟುವಾದ ಪದಾರ್ಥ. ರಾಸಾಯನಿಕ ಮೂಲವಸ್ತುಗಳಲ್ಲೆಲ್ಲ ಅತ್ಯಂತ ತೀಕ್ಷ್ಣ ಚಟುವಟಿಕೆಯುಳ್ಳದ್ದೆಂದು ಹೆಸರುವಾಸಿಯಾದ ಫ್ಲೋರೀನ್ ವಿದ್ಯುದೃಣತೆ 4.0 ಎರಡನೆಯ ಸ್ಥಾನ ಆಕ್ಸಿಜನ್ನಿಗೆ, 3.5. ಹೀಲಿಯಂ, ನಿಯಾನ್ ಆರ್ಗಾನ್‌ಗಳ ಹೊರತು ಲೋಹ ಮತ್ತು ಅಲೋಹಗಳಾದಿಯಾಗಿ ಉಳಿದೆಲ್ಲ ಮೂಲವಸ್ತುಗಳೊಡನೆ ಆಕ್ಸಿಜನ್ ಸಂಯೋಗವಾಗುತ್ತದೆ. ಒಂದು ಮೂಲವಸ್ತು ಮತ್ತು ಆಕ್ಸಿಜನ್ ಕೇವಲ ಇವೆರಡರ ಸಂಯುಕ್ತಗಳಿಗೆ ಆಕ್ಸೈಡ್‌ಗಳೆಂದು ಕರೆಯುವುದು ವಾಡಿಕೆ. ಹಾಗೆ ನೋಡಿದಾಗ ನೀರು ಹೈಡ್ರೊಜನ್–ಆಕ್ಸೈಡ್. ಅನೇಕ ಸಂಯುಕ್ತಗಳಲ್ಲಿ ಆಕ್ಸಿಜನ್ ಬಂಧ ಅಥವಾ ಸಂಯೋಗಶಕ್ತಿ ಸಾಮಾನ್ಯವಾಗಿ 2. ಆಕ್ಸಿಜನ್ ನೇರವಾಗಿ ಒಂದು ಮೂಲವಸ್ತುವಿನೊಡನೆ ಸಂಯೋಗಿಸಿದಾಗ ಉತ್ಕರ್ಷಣ (ಆಕ್ಸಿಡೇಷನ್) ಕ್ರಿಯೆ ನಡೆದುದಾಗಿ ಹೇಳುವುದು ವಾಡಿಕೆ. ಅನೇಕ ಮೂಲವಸ್ತುಗಳು ಆಕ್ಸಿಜನ್‌ನೊಡನೆ ಸಾಮಾನ್ಯ ವಾತಾವರಣದ ಉಷ್ಣತೆಯ ಮಟ್ಟದಲ್ಲೇ ನೇರವಾಗಿ ಉತ್ಕರ್ಷಿತವಾಗುವುದಾದರೂ (ಉದಾಹರಣೆಗೆ ಸೋಡಿಯಂ ಗುಂಪಿನ ಲೋಹಗಳು, ಅಲ್ಯೂಮಿನಿಯಂ, ಕಬ್ಬಿಣ ಇತ್ಯಾದಿ) ಇನ್ನುಳಿದವು ಉತ್ಕರ್ಷಿತವಾಗಲು ಉಷ್ಣ ಪೂರೈಕೆಯಾಗಬೇಕು. (ಉದಾ: ಜೆರ್ಮೋನಿಯಂ, ಟಂಗ್‌ಸ್ಟನ್ ಇತ್ಯಾದಿ). ಇತ್ತೀಚೆಗೆ ಉತ್ಕರ್ಷಣ ಎಂಬ ಪದಕ್ಕೆ ಇನ್ನೂ ಹೆಚ್ಚಿನ ವ್ಯಾಪ್ತಿ ಇರುವ ಅರ್ಥ ಕೊಡಲಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಹುದು. ಸೋಡಿಯಂ ಲೋಹ ಆಕ್ಸಿಜನ್‌ನೊಡನೆ ಮೊದಲು ಸೋಡಿಯಂ ಆಕ್ಸೈಡ್ ($Na_2O$) ಸಂಯುಕ್ತವನ್ನು ಕೊಡುತ್ತದೆ. ಮತ್ತಷ್ಟು ಆಕ್ಸಿಜನ್‌ನೊಡನೆ ಸಂಯೋಗಿಸಿ ಸೋಡಿಯಂ ಪೆರಾಕ್ಸೈಡ್ ($Na_2O_2$) ಉತ್ಪತ್ತಿಯಾಗುತ್ತದೆ. ಸೋಡಿಯಂ ಗುಂಪಿನ ಉಳಿದೆಲ್ಲ ಲೋಹಗಳಿಗೂ ಕ್ಯಾಲ್ಸಿಯಂ ಗುಂಪಿನ ಲೋಹಗಳು ಈ ಪೆರಾಕ್ಸೈಡ್‌ಗಳನ್ನು ಆಮ್ಲಗಳೊಡನೆ ಕ್ರಿಯೆಗೊಳಪಡಿಸಿ ಹೈಡ್ರೊಜನ್ ಪೆರಾಕ್ಸೈಡ್ ಪಡೆಯಬಹುದು.

$$BaO_2 \quad + \quad H_2SO_4 \quad \rightarrow \quad BaSO_4 \quad + \quad H_2O_2$$

ಬೇರಿಯಂ ಪೆರಾಕ್ಸೈಡ್ + ಸಲ್ಫ್ಯೂರಿಕ್ ಆಮ್ಲ →ಬೇರಿಯಂಸಲ್ಫೇಟ್ + ಹೈಡ್ರೊಜನ್ ಪೆರಾಕ್ಸೈಡ್ ಲೋಹಗಳ ಆಕ್ಸೈಡ್‌ಗಳು ನೀರಿನಲ್ಲಿ ಲೀನವಾದಾಗ ಕ್ಷಾರಗಳನ್ನೂ ಅದೇ ಲೋಹಗಳ ಆಕ್ಸೈಡ್‌ಗಳ ಆಮ್ಲಗಳನ್ನೂ ಕೊಡುವುವು. ಉದಾಹರಣೆಗೆ–

$$Na_2O + H_2O \rightarrow 2NaOH$$

ಸೋಡಿಯಂ ಆಕ್ಸೈಡ್ + ನೀರು →ಸೋಡಿಯಂ ಹೈಡ್ರಾಕ್ಸೈಡ್

$$SO_3 + H_2O \rightarrow H_2SO_4$$

ಸಲ್ಫರ್ ಟ್ರೈಆಕ್ಸೈಡ್ + ನೀರು →ಸಲ್ಫ್ಯೂರಿಕ್ ಆಮ್ಲ

ಈ ಆಕ್ಸೈಡ್, ಪೆರಾಕ್ಸೈಡ್‌ಗಳಲ್ಲದೆ ಇಂಥ ಅನೇಕ ವಿಧದ ರಾಸಾಯನಿಕ ಸಂಯುಕ್ತಗಳ ಅಣುಗಳಲ್ಲಿಯೂ ಆಕ್ಸಿಜನ್ ಪಾತ್ರಧಾರಿ. ಗಾಳಿಯಲ್ಲಿ ಅಥವಾ ಅನಿಲಗಳ ಮಿಶ್ರಣದಲ್ಲಿನ ಆಕ್ಸಿಜನ್ ಅಂಶವನ್ನು ಅಳೆಯಲು ಆಕ್ಸಿಜನ್ ಅನ್ನು ಪ್ರಬಲವಾಗಿ ಹೀರಿ ತಮ್ಮಲ್ಲಿ ಲೀನ ಮಾಡಿಕೊಳ್ಳುವ ವಿಶಿಷ್ಟ ಲಕ್ಷಣಕಾರಿ ವಸ್ತುಗಳಾದ ಕ್ಷಾರಮಾಧ್ಯಮದಲ್ಲಿ ಪೈರೋಗಾಲೊಲ್, ಅಮೋನಿಯ ಮಾಧ್ಯಮದಲ್ಲಿ ತಾಮ್ರ (1) ಲವಣಗಳು (ಅಮೋನಿಯಕಲ್ ಕ್ಯುಪ್ರಸ್ ಸಾಲ್ಟ್ಸ್) ಇತ್ಯಾದಿಗಳನ್ನು ಉಪಯೋಗಿಸುವರು.

**ಉಪಯೋಗಗಳು :** ಉಕ್ಕು, ಬೀಡುಕಬ್ಬಿಣ, ಅಲ್ಯೂಮಿನಿಯಂ ಮುಂತಾದ ಲೋಹಗಳನ್ನು ಕರಗಿಸುವುದು, ಒಂದಕ್ಕೊಂದನ್ನು ಬೆಸುಗೆ ಮಾಡುವದು (ವೆಲ್ಡಿಂಗ್), ದ್ರವೀಕರಿಸಿ ಕತ್ತರಿಸುವದು ಮುಂತಾದ ಕಾರ್ಯಗಳಲ್ಲಿ ಉನ್ನತಮಟ್ಟದ ಉಷ್ಣದ ಮೂಲವಾಗಿ ಆಕ್ಸಿಜನ್ ಅನ್ನು ಉಪಯೋಗಿಸುವರು. ಆಕ್ಸಿಅಸಿಟಲೀನಿನ ಮಿಶ್ರಣದ ಜ್ವಾಲೆ (**ನೋಡಿ–** ಜ್ವಾಲೆ) $4000^{o}$ ಸೆ. ನಷ್ಟು ಉಷ್ಣತೆಯನ್ನು ಮುಟ್ಟಬಲ್ಲದು. ಹೈಡ್ರೊಜನ್ ಆಕ್ಸಿಜನ್‌ಗಳ ಮಿಶ್ರಣ ಜ್ವಾಲೆಯನ್ನು ಸಮುದ್ರದೊಳಗೆ ಮುಳುಗಡೆಯಾಗಿರುವ ಹಡುಗುಗಳನ್ನು ಕತ್ತರಿಸಿ ಭಾಗ ಭಾಗವಾಗಿ ಮೇಲೆತ್ತಲು ಉಪಯೋಗಿಸುವರು. ಅದನ್ನು ಕೃತಕ ರತ್ನಗಳಾದ ಕೆಂಪು, ನೀಲಿ ಹರಳುಗಳ ತಯಾರಿಕೆಯಲ್ಲಿಯೂ ಉಪಯೋಗಿಸುವರು. ಪೆಟ್ರೋಲಿಯಂ ಎಣ್ಣೆ ಬಾವಿಗಳನ್ನು ಕೊರೆಯುವಾಗ ಹೊರಬೀಳುವ ಅನಿಲವೊಂದು ಇಂಗಾಲ ಹೈಡ್ರೊಜನ್‌ಗಳ ಸಂಯುಕ್ತಗಳನ್ನು (ಹೈಡ್ರೊಕಾರ್ಬನ್ಸ್) ಹೊಂದಿರುತ್ತದೆ. ಆ ಅನಿಲದ ಇಂಗಾಲಾಂಶವನ್ನು ಆಕ್ಸಿಜನ್‌ನೊಂದಿಗೆ ಉತ್ಕರ್ಷಣದಿಂದ ಪ್ರತ್ಯೇಕಿಸಿ ಹೈಡ್ರೊಜನ್ನನ್ನು ಪಡೆಯುವರು. ಹೈಡ್ರೊಜನ್ನನ್ನು ಸೀಮೆಗೊಬ್ಬರ ತಯಾರಿಕೆಗೆ ಮೂಲವಾದ ಅಮೋನಿಯವನ್ನು ಕೈಗಾರಿಕಾ ಪ್ರಮಾಣದಲ್ಲಿ ತಯಾರಿಸಲು ಉಪಯೋಗಿಸುವರು. ಬೀಡು ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಯಲ್ಲಿ ಕುಲುಮೆಯೊಳಕ್ಕೆ ಗಾಳಿಯೊಡನೆ ಅಥವಾ ಅದಕ್ಕೆ ಬದಲು, ಆಕ್ಸಿಜನ್ನನ್ನು ಉಪಯೋಗಿಸುವುದು ಇತ್ತೀಚೆಗೆ ವಾಡಿಕೆಯಾಗುತ್ತಲಿದೆ. ದ್ರವರೂಪದ ಆಕ್ಸಿಜನ್ ಅನ್ನು ರಾಕೆಟ್ ಚಲನೆಯನ್ನೂ ಪ್ರೇರಿಸುವ ಇಂಧನಗಳಲ್ಲಿ ಉಪಯೋಗಿಸುತ್ತಾರೆ. ದ್ರವರೂಪದ ಆಕ್ಸಿಜನ್ ಅನೇಕ ಸಿಡಿಮದ್ದುಗಳ ತಯಾರಿಕೆಯಲ್ಲಿಯೂ ಸಹಾಯಕಾರಿ. ವೈದ್ಯಕೀಯದಲ್ಲಿ ನ್ಯೂಮೋನಿಯ ಅಥವಾ ವಿಷಗಾಳಿ ಸೇವನೆಯಿಂದಾಗುವ ರೋಗಗಳ ಸನ್ನಿವೇಶದಲ್ಲಿಯೂ ಕ್ಷೀಣ ಹೃದಯ ಸಂಬಂಧಿತ ರೋಗಾವಸ್ಥೆಯಲ್ಲಿಯೂ ಆಕ್ಸಿಜನ್ ಅನ್ನು ಕೊಡುವರು. ರಾಸಾಯನಿಕ ಕೈಗಾರಿಕೆಗಳಲ್ಲಿ ಉತ್ಕರ್ಷಣಕಾರಿಯಾಗಿಯೂ ಉಪಯೋಗಿಸುವುದುಂಟು. ಉದಾ: ಸಲ್ಫ್ಯೂರಿಕ್ ಆಮ್ಲ, ನೈಟ್ರಿಕ್ ಆಮ್ಲಗಳ ತಯಾರಿಕೆ ಕಲ್ಲಿದ್ದಲಿನಿಂದ ಅನಿಲರೂಪದ ಇಂಧನಗಳನ್ನು (ವಾಟರ್ ಗ್ಯಾಸ್) ಉತ್ಪಾದಿಸುವ ಕ್ರಮಾನುಸರಣಿಯಲ್ಲಿ ಕಲ್ಲಿದ್ದಲಿನ ಜ್ವಾಲಾ ಉಷ್ಣತೆಯ ಮಟ್ಟವನ್ನು ಕಾಪಾಡಲು ಆಕ್ಸಿಜನ್ ಅನ್ನು ಉಪಯೋಗಿಸುತ್ತಾರೆ.

(ಎನ್.ಎಚ್.ಎಸ್.)

**ಆಕ್ಸಿಟೆಟ್ರಸೈಕ್ಲೀನ್ :** ಅಗಲರೋಹಿತ ಜೀವಿವಿರೋಧಕಗಳ (ಬ್ರಾಡ್ – ಸ್ಪೆಕ್ಟ್ರಂ ಆಂಟಿಬಯೋಟಿಕ್ಸ್) ಗುಂಪಿನ ಮದ್ದುಗಳಲ್ಲಿ ಒಂದು. ಮೊಟ್ಟಮೊದಲು (1950) ಫಿಂಡ್ಲೆ ಮತ್ತು ಸಂಗಡಿಗರು ತಯಾರಿಸಿದರು. ಮದ್ದು ತಯಾರಕರ ವ್ಯಾಪಾರದ ಹೆಸರು ಟೆರಮೈಸಿನ್. ಮೊದಲಿಗೆ ಇದನ್ನು ಮಣ್ಣಲ್ಲಿರುವ ಕಿರಣಣಬೆ ಸ್ಟ್ರೆಪ್ಟೊಮೈಸಿನ್ ರೈಮೋಸಸನ್ನು ತಳಿಯೆಬ್ಬಿಸಿ ಬಂದ ರಸದಿಂದ ಹರಳುಗಳಾಗಿ ತಯಾರಿಸಿದ್ದರೂ ಈಗ ಇದು ಕೃತಕವಾಗೂ ತಯಾರಾಗುತ್ತಿದೆ. ಇದರ ಹೈಡ್ರೊಕ್ಲೋರೈಡು, ಹೈಡ್ರೇಟು ಲವಣಗಳಿಂದ ಗ್ರಾಂ ಬಣ್ಣವೇರದ, ಗ್ರಾಂ ಬಣ್ಣವೇರುವ (ಗ್ರಾಂ–ನೆಗೆಟಿವ್, ಗ್ರಾಂ–ಪಾಸಿಟಿವ್) ಏಕಾಣುಜೀವಿಗಳು, ರಿಕೆಟ್ಸ್ ರೋಗಾಣುಗಳು (ರಿಕೆಟ್ಸಿಯಾಸ್), ಕೆಲವು ದೊಡ್ಡ ವಿಷಕಣಗಳು, ಕೆಲವು ಮುಂಜೀವಿ ಪರೋಪಜೀವಿಗಳೂ ಸಾಯುತ್ತವೆ. ಇಲ್ಲವೇ ಗುಣಿತವಾಗುವುದನ್ನು ಅಣಗಿಸುತ್ತವೆ. ಚಲ್ಲಣದ (ಅಮೀಬಿಕ್) ರಕ್ತಭೇದಿ, ವಿಷಮಶೀತ ಜ್ವರಗಳಲ್ಲೂ ಕೊಡುವುದುಂಟು. ಕ್ಷಯ, ಕುಷ್ಠ, ಬೂಷ್ಟಿನ (ಅಣಬೆ) ರೋಗಗಳಲ್ಲಿ ಕೆಲಸಕ್ಕೆ ಬರದು. ಬಾಯಿ ಮೂಲಕ ಕೊಡುವುದು ಸಾಮಾನ್ಯ; ರಕ್ತನಾಳಾಂತರವಾಗೂ ಒಂದೆಡೆ ಹಚ್ಚುವ ದ್ರಾವಣವಾಗೂ ಕೊಡಬಹುದು. ಯಾವಾಗಲೂ ಕರುಳಲ್ಲಿ ಇದ್ದೇ ಇರುವ ಏಕಾಣುಜೀವಿಗಳನ್ನು ಇದು ಹಾಳುಮಾಡಿ ತೊಂದರೆ ಕೊಡಬಹುದು. ಮಜ್ಜಿಗೆ ಸೇವನೆಯಿಂದ ಇದು ಸರಿಹೋಗುತ್ತದೆ. (ಡಿ.ಎಸ್.ಎಸ್.)

**ಆಕ್ಸೈಡ್ :** ಲೋಹಗಳೂ ಅಲೋಹಗಳೂ ಆಕ್ಸಿಜನ್‌ನೊಂದಿಗೆ ಸೇರಿದಾಗ ಆಕ್ಸೈಡುಗಳು ಉತ್ಪತ್ತಿಯಾಗುತ್ತವೆ. ಆಕ್ಸಿಜನ್ನಿನ ಪ್ರಮಾಣವನ್ನನುಸರಿಸಿ ಒಂದೇ ಲೋಹದ ಅಥವಾ ಅಲೋಹದ ಹಲವು ಆಕ್ಸೈಡುಗಳು ಇರಬಹುದು. ಉದಾಹರಣೆಗೆ ಸಲ್ಫರ್ ಡೈಆಕ್ಸೈಡ್ ($SO_2$),ಸಲ್ಫರ್ ಟ್ರೈ ಆಕ್ಸೈಡ್ ($SO_3$). ನಿಸರ್ಗದಲ್ಲಿ ಹಲವು ಲೋಹಾಲೋಹಗಳ ಆಕ್ಸೈಡುಗಳು ಸಿಗುತ್ತವೆ. ಉದಾಹರಣೆ – ಸಿಲಿಕಾನ್ ಡೈಆಕ್ಸೈಡ್ ($SiO_2$–ಮರಳು).

ಅಲ್ಯೂಮಿನಿಯಂ ಆಕ್ಸೈಡ್ ($Al_2O_3$,) ಕಬ್ಬಿಣದ ಆಕ್ಸೈಡ್ ($FeO_3$-ಕಬ್ಬಿಣದ ಅದುರು), ಇಂಗಾಲಾಮ್ಲ ($CO_2$), ನೀರು ($H_2O$). ಸಾಕಷ್ಟು ಉಷ್ಣ ಮತ್ತು ಆಕ್ಸಿಜನ್‌ನ ಸಂಮರ್ದ ಇದ್ದರೆ ಅನೇಕ ಲೋಹಾಲೋಹಗಳು ಆಕ್ಸೈಡುಗಳಾಗಿ ಮಾರ್ಪಡುತ್ತವೆ. ಜಡ ಸ್ವಭಾವವುಳ್ಳ ಉತ್ಕೃಷ್ಟ ಅನಿಲಗಳು (ನೋಬಲ್ ಗ್ಯಾಸಸ್), ಚಿನ್ನ ಮುಂತಾದುವು ಇದಕ್ಕೆ ಹೊರತು. ನೇರವಾಗಿ ಆಕ್ಸಿಜನ್ನಿನೊಂದಿಗೆ ಕೂಡಿಸುವುದಲ್ಲದೆ, ಕಾರ್ಬೊನೇಟ್, ಹೈಡ್ರಾಕ್ಸೈಡ್ ಮುಂತಾದ ಸಂಯುಕ್ತಗಳನ್ನು ಉಷ್ಣದಿಂದ ವಿಭಜಿಸುವುದರಿಂದಲೂ ಆಕ್ಸೈಡುಗಳನ್ನು ಪಡೆಯಬಹುದು.

$CaCO_3 \rightarrow CaO + CO_2$

ಸುಣ್ಣಕಲ್ಲು ಸುಣ್ಣ

$2Au(OH)_3 \rightarrow Au_2O_3 + 3H_2O$

ಚಿನ್ನದ ಹೈಡ್ರಾಕ್ಸೈಡ್ ಚಿನ್ನದ ಆಕ್ಸೈಡ್

ಅಲೋಹಗಳ ಆಕ್ಸೈಡುಗಳು ನೀರಿನೊಂದಿಗೆ ಕೂಡಿದಾಗ ಆಮ್ಲಗಳು ಲೋಹಗಳ ಆಕ್ಸೈಡುಗಳು ನೀರಿನೊಂದಿಗೆ ಕೂಡಿದಾಗ ಕ್ಷಾರಗಳು ಉತ್ಪತ್ತಿಯಾಗುತ್ತವೆ.

$Na_2O + H_2O \rightarrow 2NaOH$

ಸೋಡಿಯಂ ಆಕ್ಸೈಡ್ ಸೋಡಿಯಂ ಹೈಡ್ರಾಕ್ಸೈಡ್

$SO_3 + H_2O \rightarrow H_2SO_4$

ಸಲ್ಫರ್ ಟ್ರೈ ಆಕ್ಸೈಡ್ ಸಲ್ಫ್ಯೂರಿಕ್ ಆಮ್ಲ (ವೈ.ಎಸ್.ಎಲ್.)

**ಆಕ್ಸೊಲಾಟಲ್ :** ಸಿಹಿನೀರಿನ ತೊರೆ, ಕೊಳಗಳಲ್ಲಿ ವಾಸಿಸುವ ಅಂಬ್ಲಿಸ್ಟೋಮ ಜಾತಿಯ ಉಭಯಜೀವಿ ಸಲಮಾಂಡರಿನ ಲಾರ್ವ ಅಥವಾ ಡಿಂಭ. ರೂಪಾಂತರಣ ಹೊಂದದೇ ಡಿಂಭಾವಸ್ಥೆಯಲ್ಲಿಯೇ ಲೈಂಗಿಕ ಪ್ರೌಢತೆಯನ್ನು ಪಡೆದು ಸಂತಾನೋತ್ಪತ್ತಿ



ಆಕ್ಸೊಲಾಟಲ್

ಮಾಡುವ ಹಂತವೇ ಅಕ್ಸೊಲಾಬಲ್. ಈ ವೈಶಿಷ್ಟ್ಯವನ್ನು ನಿಯೋಟಿನಿ ಅಥವಾ ಪೀಡೋಜೆನಿಸಿಸ್ ಎನ್ನುತ್ತಾರೆ. ಇದರ ದೇಹ ಹಲ್ಲಿಯಂತೆ ಇದ್ದು, ಪುಷ್ಟವಾಗಿದೆ. ಎರಡು ಜೊತೆ ಕಾಲುಗಳು, ಈಜು ಪೊರೆ ಆವರಿಸಿದ ತುಂಡು ಬಾಲ ಹೊಂದಿದೆ. ತಲೆಯು ವಿಶಾಲವಾಗಿದ್ದು ರೆಪ್ಪೆಗಳಿಲ್ಲದ ಕಣ್ಣುಗಳನ್ನು ಹೊಂದಿದೆ. ತಲೆಯ ಹಿಂಭಾಗದಲ್ಲಿ ಮೂರು ಜೊತೆ ಹೊರ ಕಿವಿರುಗಳಿವೆ. ಇವು ಉಸಿರಾಟಕ್ಕೆ ಸಹಾಯ ಮಾಡುತ್ತವೆ. ಅಕ್ಸೊಲಾಬಲ್ ರೂಪ ಪರಿವರ್ತನೆ ಹೊಂದಲು ಥೈರಾಕ್ಸಿನ್ ಎಂಬ ಒಂದು ಚೋದಕ ವಸ್ತುವಿನ ಆವಶ್ಯಕತೆ ಇದೆ. ಅದರ ತಯಾರಿಕೆಗೆ ಅಯೋಡಿನ್ ಅತಿ ಮುಖ್ಯ. ನೀರಿನಲ್ಲಿ ಅಯೋಡಿನ್ ಕೊರತೆ ಇದ್ದಾಗ ಚೋದಕವನ್ನು ಸ್ರವಿಸಲಾಗುವುದಿಲ್ಲ. ಆದ್ದರಿಂದ ಕುಂಠಿತಗೊಂಡ ಡಿಂಭವು ಲೈಂಗಿಕವಾಗಿ ಸಂತಾನೋತ್ಪತ್ತಿ ಮಾಡುತ್ತದೆ. (ಎನ್.ಎಸ್.ಎಲ್.)

**ಆಕ್ಸಿಯಸ್, ಲ್ಯೂಸಿಯಸ್ :** ಪ್ರ.ಶ.ಪೂ. 170 –ಸು. 86. ಸುಪ್ರಸಿದ್ಧ ರೋಮನ್ ಕವಿ. ಈತನಿಗೆ ಆ್ಯಟಿಯಸ್ ಎಂದೂ ಹೆಸರಿದೆ. ಕೆಳಸ್ತರದ ಕುಟುಂಬದವನಾದರೂ ಬಹಳ ಆತ್ಮಪ್ರತ್ಯಯ ಉಳ್ಳವನು. ಪ್ರಖ್ಯಾತ ಹಿರಿಯ ನಾಟಕಕಾರರೊಡನೆ ಹೆದರದೆ ಸ್ಪರ್ಧಿಸಿದ. ರುದ್ರನಾಟಕವೇ ಅಲ್ಲದೆ ವ್ಯಾಕರಣ, ಸಾಹಿತ್ಯವಿಮರ್ಶೆ, ಚರಿತ್ರೆ ಭೂವ್ಯವಸಾಯಗಳನ್ನು ಕುರಿತು ಪದ್ಯಗಳನ್ನು ಬರೆದ. ಲ್ಯಾಟಿನ್ ಭಾಷೆಯನ್ನು ಬಿಗಿ ಮಾಡುವ, ಬಲಗೊಳಿಸುವ ಪ್ರಯತ್ನದಲ್ಲಿ ಇವನೊಬ್ಬ ಮುಂದಾಳು. ಉಪಲಬ್ಧವಾಗಿರುವ ಇವನ ಮಾತುಗಳಲ್ಲಿ (700) ವಾಗ್ಮಿಯ ಕಟ್ಟಾಸಕ್ತಿಯಿದೆ, ಉಪದೇಶಕನ ಘನಗಾಂಭೀರ್ಯವಿದೆ. ಜೊತೆಗೆ ಅಪೂರ್ವವಾದ ರಾಗತೀವ್ರತೆಯೂ ತೋರಿಬರುತ್ತದೆ.

ಇವನ ರುದ್ರನಾಟಕಗಳಲ್ಲಿ 45 ಹೆಸರುಗಳು ಮಾತ್ರ ನಮಗೆ ತಿಳಿದುಬಂದಿವೆ: ಅಂಡ್ರಾಮಿಡ, ಮೀಡಿಯ, ಫಿಲಾಕ್ಟಿಟೀಸ್ ಇತ್ಯಾದಿ. ಟ್ರಾಯಿನ ಉಪಾಖ್ಯಾನಗಳನ್ನು ಕಂಡರೆ ಅವನಿಗೆ ಹೆಚ್ಚು ಅಕ್ಕರೆಯಾದರೂ ರೋಮನರ ಚರಿತ್ರೆಗೆ ಸಂಬಂಧಿಸಿದ ಎರಡು ಗಂಭೀರ ನಾಟಕಗಳನ್ನು ರಚಿಸಿದ್ದಾನೆ. ಪಾತ್ರ ಕೆತ್ತುವಲ್ಲಿಯೂ ಘಟನೆಗಳನ್ನು ನಿರೂಪಿಸುವುದರಲ್ಲಿಯೂ ರೋಮನರ ಕ್ಷಾತ್ರ ತೇಜಸ್ಸು ಎದ್ದು ಕಾಣುವಂತೆ ಮಾಡಿದ್ದಾನೆ. ಅವರಲ್ಲಿ ಮಹದಾಕಾಂಕ್ಷೆ ವೀರಾವೇಶಗಳು ಉಕ್ಕೇರುವಂತೆಯೂ ಕಾರ್ಯಪಟುತ್ವ, ಸಾಮರ್ಥ್ಯಗಳು ಕುದುರುವಂತೆಯೂ ಪ್ರಚೋದಿಸುವುದೇ ಅವನ ಕಾವ್ಯೋದ್ದೇಶ. ಆಳಜೀವನದ ಗ್ರಹಿಕೆ ಅವನಲ್ಲಿತ್ತೆಂದು ಊಹಿಸ ಬಹುದು. ನೋವು ನಷ್ಟಗಳಲ್ಲೂ ಸೌಂದರ್ಯಗಳನ್ನು ಕಂಡು ಅನುಕಂಪವನ್ನು ಆತ ಬೀರಬಲ್ಲವನಾಗಿದ್ದ. ಮನುಷ್ಯ ಮುಖ್ಯವಾಗಿ ಕಾಪಾಡಿಕೊಳ್ಳಬೇಕಾದದ್ದು ಆತ್ಮಗೌರವ ಎಂಬ ಉದಾತ್ತ ತತ್ತ್ವವನ್ನು ಅವನ ಹಲವು ವಚನಗಳು ಒತ್ತಿ ಹೇಳುತ್ತವೆ. ಇನ್ನಾವ ಕವಿಯಲ್ಲೂ ಕಾಣಿಸದ ಪ್ರಕೃತಿಪ್ರೇಮ ಅವನಲ್ಲಿದೆ. ಗ್ರಾಮಾಂತರದಲ್ಲಿ ಬೀಡನ್ನು ಕಟ್ಟಿಕೊಂಡ ರೋಮನ್ ಕವಿತೆಗಳಲ್ಲಿ ಅವನೇ ಮೊದಲಿಗ. ಬಿರುಗಾಳಿ, ತಾರಾಮಂಡಲ, ಸಮುದ್ರದ ಅಲೆಗಳು, ಅರುಣೋದಯ, ದನ ಕಾಯುವುದು, ಉಳುಮೆ ಮುಂತಾದವನ್ನು ಆತ ತಾದಾತ್ಮ್ಯದಿಂದ ಬಣ್ಣಿಸಿದ್ದಾನೆ. ಕೆಲವು ಕಡೆ ವಾಗಾಡಂಬರ, ಶಬ್ದಾಲಂಕಾರ ಕಂಡುಬಂದರೆ ಅದು ಕ್ಷಮಾರ್ಹ.

ಹಿಂದಣ ಕಾಲದ ಕವಿಗಳಿಗೆ ಸಹಜವಾದ ಆತ್ಮತೃಪ್ತಿಯೂ ಬಿಗುಮಾನವೂ ಆಕ್ಸಿಯಸ್‌ನಲ್ಲಿ ಪುಷ್ಕಳವಾಗಿತ್ತು. ಒಂದು ಸಾರಿ ಜೂಲಿಯಸ್ ಸೀಸರ್ ಒಂದು ಕವಿಕೂಟಕ್ಕೆ ಭೇಟಿ ಕೊಟ್ಟ. ಮಹಾಯೋಧನೆಂದು ಎಲ್ಲರೂ ಎದ್ದುನಿಂತು ಅವನಿಗೆ ಮರ್ಯಾದೆ ತೋರಿದರು. ಆಕ್ಸಿಯಸ್ ಒಬ್ಬನೇ ತಾನಿದ್ದ ಪೀಠದಿಂದ ಕದಲಲಿಲ್ಲ. *

**ಆಖ್ಯಾನ :** ರಾಜಮಹಾರಾಜರ ಮತ್ತು ಇತರ ಸುಪ್ರಸಿದ್ಧ ವ್ಯಕ್ತಿಗಳ ಮಹತ್ಕಾರ್ಯಗಳನ್ನು ಒಂದೊಂದಾಗಿ ಹೇಳುವ ಕ್ರಮವಾಗಿದ್ದು ಹಾಗೆಯೇ ಸಂಸ್ಕೃತ ಸಾಹಿತ್ಯದಲ್ಲಿ ಕ್ರಮೇಣ ರೂಪುಗೊಂಡಿರುವ ಕಥೆ ಹೇಳುವ ಒಂದು ಬಗೆ. ಛಂದೋಬದ್ಧವಾಗಿದೆ. ವೇದಗಳ ಕಾಲದಿಂದಲೂ ಬಳಕೆಯಲ್ಲಿದೆ. ನಾಲ್ಕು ವೇದಗಳು ಮತ್ತು ಐದನೆಯದು ಆಖ್ಯಾನವೆಂಬುದಾಗಿ ಮಹಾಭಾರತಾದಿ ಗ್ರಂಥಗಳಲ್ಲಿರುವ ಉಲ್ಲೇಖದಿಂದ ಇದರ ಮಹತ್ವ ಸೂಚಿತವಾಗುತ್ತದೆ. ಅಲಂಕಾರ ಶಾಸ್ತ್ರದಲ್ಲಿ ಕಂಡುಬರುವ ಆಖ್ಯಾಯಿಕಾ ಮುಂತಾದ ಪ್ರಭೇದಗಳಿಗೆ ಆಧಾರವೆಂದು ಕೆಲವು ವಿದ್ವಾಂಸರ ಮತ. (ಟಿ.ಕೆ.ಎಸ್)

**ಆಖ್ಯಾನಕ :** ಆಖ್ಯಾನದ ಒಂದು ರೂಪಾಂತರವಾಗಿರಬಹುದು. ಪ್ರಖ್ಯಾತ ವ್ಯಕ್ತಿಗಳ ಸಾಹಸ ಕಾರ್ಯಗಳು, ಮಹತ್ತ್ವ, ಇದಕ್ಕೆ ಸಂಬಂಧಪಟ್ಟ ಮತ್ತು ಅತಿ ದೀರ್ಘವಲ್ಲದ ಕಥೆ. ಕೇವಲ ಕಾಲ್ಪನಿಕವಾಗಿರದೆ ಐತಿಹಾಸಿಕಾಂಶನ್ನೊಳಗೊಂಡಿರುತ್ತದೆ. ಸಂಸ್ಕೃತದಲ್ಲಿ ಚೂರ್ಣಕವೆಂಬ ಹೆಸರಿನ ಗದ್ಯರಚನೆಗೆ ಸಮಾನವೆಂದು ಕಾದಂಬರಿಕಾರನಾದ ಭಾನುಚಂದ್ರನ ಮತ. (ಬಿ.ಕೆ.ಎಸ್)

ಇಂಗ್ಲಿಷ್ ಭಾಷೆಯ ಅನೆಕ್‌ಡೋಟ್ಸ್ ಪದಕ್ಕೆ ಸಮಾನಾರ್ಥದಲ್ಲಿ ಆಖ್ಯಾನಕ ಪದವನ್ನು ಬಳಸುವುದುಂಟು. ಒಬ್ಬ ವ್ಯಕ್ತಿಯನ್ನು ಕುರಿತು ಆತನ ಪರಿಚಿತರ ವಲಯದಲ್ಲಿ ಪ್ರಚಲಿತವಾಗಿರುವ, ಜನ ಸತ್ಯವೆಂದೇ ನಂಬಿರುವ ಕಥೆ; ಚರಿತ್ರೆಯ ಅಪ್ರಕಟಿತ ವಿವರಗಳು; ಒಬ್ಬ ವ್ಯಕ್ತಿಯ ಜೀವನಚರಿತ್ರೆಗೆ ಸಂಬಂಧಿಸಿದ ಮತ್ತು ಆತನ ಗುಣವೈಶಿಷ್ಟ್ಯವನ್ನು ಸೂಚಿಸುವ, ಅನೇಕ ವೇಳೆ ವಿನೋದ ಪ್ರಧಾನಾಂಶವಾಗಿರುವ ಕರುಬು ಕೊಂಕು ಲೇಶವೂ ಇರದ, ಒಂದು ಪ್ರತ್ಯೇಕ ಘಟನೆಯ ವರದಿ–ಎಂಬೀ ವಿವರಗಳು ಅನೆಕ್‌ಡೋಟ್ ಪದವನ್ನು ಕುರಿತು ದೊರೆಯುತ್ತವೆ.

ಪ್ರಸಿದ್ಧ ವ್ಯಕ್ತಿಗಳ ಆಖ್ಯಾನಕಗಳ ಸಂಕಲನ ಗ್ರಂಥಗಳು ಇಂಗ್ಲಿಷ್ ಸಾಹಿತ್ಯದಲ್ಲಿವೆ. ಆದರೂ ಇದೊಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದಂತಿಲ್ಲ. ಚರಿತ್ರೆ (ಇಲ್ಲಿ ರಾಷ್ಟ್ರ ಪ್ರಧಾನ, ವ್ಯಕ್ತಿ ಗೌಣ), ಜೀವನಚರಿತ್ರೆ ಮತ್ತು ಆತ್ಮಚರಿತ್ರೆ (ಇವೆರಡರಲ್ಲೂ ವ್ಯಕ್ತಿ ಪ್ರಧಾನ) ಎಂಬೀ ಸ್ಪಷ್ಟ ಮೂರು ಸಾಹಿತ್ಯ ಪ್ರಕಾರಗಳಿಂದ ಆಖ್ಯಾನಕಗಳನ್ನು ಉದ್ಧರಿಸಬಹುದು.

ವ್ಯಕ್ತಿಯ ಗುಣವೈಶಿಷ್ಟ್ಯವನ್ನು ಸೂಚಿಸುವ, ಇತರರ ದೃಷ್ಟಿಯಲ್ಲಿ ಅಪೂರ್ವವೂ ಅನಿರೀಕ್ಷಿತವೂ ಆದ ಘಟನೆ ಆಖ್ಯಾನಕ. ಇಲ್ಲಿ ಘಟನೆ ಎಂಬ ಪದವನ್ನು ವಿಶಾಲಾರ್ಥದಲ್ಲಿ– ಮಾತು, ಬರವಣಿಗೆ, ಕೃತಿ, ಅಭಿನಯ ಇತ್ಯಾದಿ ಬಳಸಲಾಗಿದೆ. ಎರಡು ಉದಾಹರಣೆಗಳಿಂದ ಈ ವ್ಯಾಖ್ಯೆಯನ್ನು ಸ್ಪಷ್ಟಪಡಿಸಬಹುದು.

ಕುವೆಂಪು ಅವರು ನಾಗವರ್ಮನ ಕರ್ಣಾಟಕ ಕಾದಂಬರೀ ಸಂಗ್ರಹವನ್ನು ಪಾಠ ಹೇಳುತ್ತಿದ್ದಾರೆ. ಅದರಲ್ಲಿ ಮಹಾಶ್ವೇತೆಗೆ ಸಂಬಂಧಿಸಿದ ಒಂದು ಪದ್ಯವನ್ನು ಸುಮಾರು ಮೂವತ್ತು ನಿಮಿಷಗಳ ಕಾಲ ವಿಶದಪಡಿಸಿದ್ದಾರೆ. ಆಗಲೇ ನಾವು ಕಾವ್ಯದ ಭವ್ಯತೆಯ ಕಡೆಗೆ ಗಮನ ಕೊಟ್ಟದ್ದು. ಆದರೆ ವ್ಯಾಖ್ಯಾನ ಮುಗಿಯುತ್ತಿದ್ದಂತೆ ತರಗತಿಯಲ್ಲಿದ್ದ ನನ್ನ ಸ್ನೇಹಿತ ಒಬ್ಬ ಎದ್ದು ನಿಂತು ಸಾರ್, ನನಗೆ ಚೆನ್ನಾಗಿ ಅರ್ಥವಾಗಲಿಲ್ಲ. ಇನ್ನೊಂದು ಸಾರಿ ಹೇಳಿ. ಎಂದ... ತತ್‌ಕ್ಷಣ ಕುವೆಂಪು ಹೇಳಿದರು ದಂಡಕಾರಣ್ಯಕ್ಕೆ ಎಷ್ಟು ಲಾಂದ್ರ ಹಿಡಿದರೆ ತಾನೆ ಬೆಳಕಾದೀತು.

ನಮ್ಮ ಜನ ಗೂಡ್ಸ್ ಬಂಡಿಗಳ ಹಾಗೆ. ವಿಶ್ವೇಶ್ವರಯ್ಯನವರು ಒಳ್ಳೆಯ ಎಂಜಿನ್ ಹಾಗೆ. ಎಂಜಿನ್ ಬಂಡಿಗಳನ್ನು ಒಂದು ಸಲ ಎಳೆಯಿತು. ಇವು ಜಗ್ಗಲಿಲ್ಲ. ಇನ್ನೊಂದು ಸಲ ಎಳೆಯಿತು. ಇವು ಜಗ್ಗಲಿಲ್ಲ. ಇನ್ನೊಂದು ಸಲ ಎಳೆದಾಗ ಎಂಜಿನ್ನೇ ಕಳಚಿಕೊಂಡು ಹೊರಟೇ ಹೋಯಿತು. ಬಂಡಿಗಳು ಇದ್ದ ಕಡೆಯೇ ಇದ್ದುಬಿಟ್ಟವು: (ಇಷ್ಟು ಕಥೆಯನ್ನು ಹೇಳುವಾಗ ಮುಂದಿನ ವಿಸ್ತರಣ ಕ್ಷಣದಲ್ಲಿ ಮಾಸ್ತಿಯವರಿಗೆ ಹೊಳೆಯಿತಂತೆ)': ಬಂಡಿಗಳು ಯಾಕೆ ಕದಲಲಿಲ್ಲ ಗೊತ್ತೆ? ಎಂಜಿನ್ ಕೊಕ್ಕೆ (ಹುಕ್) ಬಂಡಿಗೆ ಸರಿಯಾಗಿ ತಗಲಿರಲಿಲ್ಲ! ಈ ಕೊಕ್ಕೆ ಯಾವುದು? ಕನ್ನಡಮಾತು. ವಿಶ್ವೇಶ್ವರಯ್ಯನವರು ತಮ್ಮ ಉದ್ದೇಶಗಳನ್ನು, ಧ್ಯೇಯಗಳನ್ನು ಜನಕ್ಕೆ ತಿಳಿಯುವ ಹಾಗೆ ಕನ್ನಡದಲ್ಲಿ ಹೇಳಿ ಜನಸಾಮಾನ್ಯರ ಮನಸ್ಸಿಗೆ ಹತ್ತಿಸಿದ್ದರೆ ಅವರ ಪ್ರಗತಿಯ ಭಾವನೆಗಳಲ್ಲಿ ಜನಗಳು ಭಾಗಿಗಳಾಗುತ್ತಿದ್ದರು. ಆದರೆ

ವಿಶ್ವೇಶ್ವರಯ್ಯನವರ ಭಾವನೆಗಳೆಲ್ಲ ಆಲೋಚನೆಯೆಲ್ಲ ಇಂಗ್ಲಿಷ್‌ನಲ್ಲಿ! ಜನಸಾಮಾನ್ಯಕ್ಕೂ ಅವರಿಗೂ ಬಿಗಿಯಾದ ಸಂಬಂಧವೇ ಏರ್ಪಡಲಿಲ್ಲ. ಆಖ್ಯಾನಕದ ಕೇಂದ್ರವೆಂದರೆ ವ್ಯಕ್ತಿ. ಆದರೆ ಉದ್ದೇಶಪೂರ್ವಕವಾಗಿ ವ್ಯಕ್ತಿ ಅದನ್ನು ಸೃಷ್ಟಿಸುವುದಿಲ್ಲ. ಸಹಜವಾಗಿ ಅವನಿಂದ ಅದು ಸಿಡಿಯುವುದರಿಂದ ಭಾಷಣ, ಬರೆವಣಿಗೆ, ಚಿತ್ರಣ ಮುಂತಾದ ಆತ ಬೇರೆ ಯಾವುದೇ ವಿಧದ ಅಭಿವ್ಯಕ್ತಿಯಲ್ಲಿ ಇಲ್ಲದ ಪರಿಪೂರ್ಣತೆ, ಅನೈಚ್ಛಿಕತೆ ಇದರಲ್ಲಿ ಕಾಣುತ್ತದೆ. ಈ ದೃಷ್ಟಿಯಲ್ಲಿ ವ್ಯಕ್ತಿಯ ಮನಸ್ಸಿನ ಆಳವನ್ನು ಅರಿಯಲು ಆಖ್ಯಾನಕ ಅತ್ಯುಪಯುಕ್ತ.

ಪ್ರಾಮಾಣಿಕವಾಗಿ ನಿರೂಪಣೆಗೊಂಡಿರುವ ಆಖ್ಯಾನಕಗಳ ಅಭ್ಯಾಸ ಸಮಕಾಲೀನ ಚರಿತ್ರೆ, ಜೀವನ ಆತ್ಮಚರಿತ್ರೆಗಳ ನಿಖರತೆಯ ಮೇಲೆ ಬೆಳಕು ಬೀರುವುದು. *

**ಆಖ್ಯಾಯಿಕಾ :** ಸಂಸ್ಕೃತದಲ್ಲಿ ಒಂದು ಬಗೆಯ ಗದ್ಯರಚನೆ; ಕಥಾ ಎಂಬುದು ಮತ್ತೊಂದು. ವಕ್ತ್ರ, ಅಪರವಕ್ತ್ರ ಛಂದಸ್ಸುಗಳಲ್ಲಿ ರಚಿತವಾಗಿರುವ ಕೆಲವು ಶ್ಲೋಕಗಳಿಂದ ಕೂಡಿರುತ್ತದೆ. ರಾಜಾದಿ ಪ್ರಸಿದ್ಧ ವ್ಯಕ್ತಿಗಳ ಮಹತ್ತ್ವದ ವಿಚಾರವನ್ನು ಕುರಿತು ಐತಿಹಾಸಿಕಾಂಶಗಳನ್ನೊಳಗೊಂಡಿರುವಂತೆ ಕವಿನಿರ್ಮಿತವಾದ ಗದ್ಯಕಾವ್ಯ ಶೃಂಗಾರಯುಕ್ತವಾಗಿರುತ್ತದೆ. ಇದರಲ್ಲಿ ನಾಯಕನೇ ತನ್ನ ಚರಿತ್ರೆಗಳನ್ನು ಒಂದೊಂದಾಗಿ ಹೇಳಿಕೊಳ್ಳುತ್ತಾನೆ: ಉಚ್ಛ್ವಾಸವೆಂಬ ಹೆಸರಿನ ಹಲವು ಭಾಗಗಳಿರುತ್ತವೆ. ಇದಕ್ಕೂ ಕಥಾ ಎಂಬುದಕ್ಕೂ ಭೇದವಿಲ್ಲವೆಂದು ಕೆಲವು ಆಲಂಕಾರಿಕರ ಮತ. (ಬಿ.ಕೆ.ಎಸ್.)

**ಆಗಂತುಕ ಮೊಗ್ಗುಗಳು :** ಸಹಜ ಉಗಮಸ್ಥಾನವಾದ ತುದಿಭಾಗ ಅಥವಾ ಕಕ್ಷಗಳಿಂದಲ್ಲದೆ ಇತರ ಸ್ಥಾನಗಳಿಂದ ಕುಡಿಯೊಡೆಯುವಂಥವು (ಅಡ್ವೆಂಟಿಷಸ್ ಬಡ್ಸ್). ಇವು ಕಕ್ಷೇತರ ಸ್ಥಾನಗಳಿಂದ, ಬೇರುಗಳಿಂದ ಎಲೆಗಳಿಂದ ಕುಡಿಯೊಡೆಯುವುದುಂಟು. ಕಕ್ಷೇತರ ಸ್ಥಾನಗಳಿಂದ ಮೂಡುವವನ್ನು ಸ್ತಂಭ–ಪತ್ರ ಮೊಗ್ಗುಗಳೆಂದೂ, ಬೇರುಗಳಿಂದ ಮೂಡುವವನ್ನು ಮೂಲಾಂಕುರ ಮೊಗ್ಗುಗಳೆಂದೂ, ಎಲೆಗಳಿಂದ ಕುಡಿಯೊಡೆಯುವವನ್ನು ಎಲೆಮೊಗ್ಗುಗಳೆಂದೂ ಕರೆಯುತ್ತಾರೆ.

ಗಿಡಮರಗಳ ಪ್ರಮುಖ ರೆಂಬೆಕೊಂಬೆಗಳನ್ನು ಕಡಿದರೆ, ಅವುಗಳಿಂದ ಹೊರಸೂಸುವ ಜೀವದ್ರವ್ಯದಿಂದ ಅನೇಕ ಸುಪ್ತಾವಸ್ಥೆಯ ಮೊಗ್ಗುಗಳೂ ಸಂಪೂರ್ಣ ನವೀನವಾದ ಆಗಂತುಕ ಮೊಗ್ಗುಗಳೂ ಕುಡಿಯೊಡುತ್ತವೆ. ಅನೇಕ ಗಿಡಗಳ ಬೇರುಗಳಿಂದ ಆಗಂತುಕ ಮೊಗ್ಗುಗಳು ಸ್ವಾಭಾವಿಕವಾಗಿಯೇ ಕುಡಿಯೊಡೆಯುತ್ತವೆ. ಕೆಲವು ಮರಗಳನ್ನು ಬುಡಸಹಿತ ಕಡಿದರೆ ನೆಲದೊಳಗಿರುವ ಅವುಗಳ ಬೇರುಗಳಿಂದ ಮೂಲಾಂಕುರ ಆಗಂತುಕ ಮೊಗ್ಗುಗಳು ಮೂಡುತ್ತವೆ. ಉದಾ: ಮರಸೇಬು, ಬಿಲ್ವಪತ್ರೆ, ವ್ಯಾವಸಾಯಿಕ ಬೆಳೆಗಳಾದ ಗೆಣಸು ಇತ್ಯಾದಿಗಳಲ್ಲಿ ಈ ಮೂಲಾಂಕುರ ಆಗಂತುಕ ಮೊಗ್ಗುಗಳನ್ನು ಬೀಜಗಳಿಗೆ ಬದಲಾಗಿ ಉಪಯೋಗಿಸುತ್ತಾರೆ.

ಬ್ರಯೋಫಿಲಂ, ಬಿಗೋನಿಯ, ಜೆಸ್ನೆರಾ, ಗ್ಲಾಕ್ಸಿನೀಯ ಮೊದಲಾದುವುಗಳಲ್ಲಿ ಆಗಂತುಕ ಎಲೆ ಮೊಗ್ಗುಗಳನ್ನು ಕಾಣಬಹುದು. ಬ್ರಯೋಫಿಲಂ ಎಲೆಗಳನ್ನು ನೀರಿನ ಪಸೆಯುಳ್ಳ ಮಣ್ಣಿನಲ್ಲಿ ಹಾಕಿದರೆ ಅವುಗಳಲ್ಲಿನ ಮೊನಚಾದ ಹಲ್ಲುಗಳಿಂದ ಎಳೆಯ ಆಗಂತುಕ ಮೊಗ್ಗುಗಳು ಕುಡಿಯೊಡೆದು ಪುಟ್ಟ ಗಿಡವಾಗಿ ಬೆಳೆಯಬಹುದು. ಬೆಗೋನಿಯ ಎಲೆಗಳಲ್ಲಿ ಗಾಯಗಳನ್ನು ಮಾಡಿದರೆ ಈ ಗಾಯಗಳಿಂದ ಆಗಂತುಕ ಮೊಗ್ಗುಗಳು ಉದ್ಭವಿಸಿ ಚಿಕ್ಕ ಸಸಿಗಳು ರೂಪುಗೊಳ್ಳುವುವು. (ಎಂ.ಜಿ.)

**ಆಗಂತುಕ ವಿಶೇಷಣ :** ಒಂದು ವಸ್ತುವಿನ ಗುಣಲಕ್ಷಣ ನಿರ್ದೇಶನದ ಐದು ವಿಧಗಳಲ್ಲಿ ಕೊನೆಯದು (ಆ್ಯಕ್ಸಿಡೆಂಟ್:ಆ್ಯಕ್ಸಿಡೆನ್ಸ್). ಪ್ರಧಾನ ಜಾತಿ (ಜೀನಸ್) ಉಪಜಾತಿ (ಸ್ಪೀಷೀಸ್), ವೈಲಕ್ಷಣ್ಯ (ಡಿಫರೆನ್ಷಿಯ), ಗುಣ (ಪ್ರೊಪ್ರಿಯಂ) ಇವು ಅನುಕ್ರಮವಾಗಿ ಉಳಿದ ನಾಲ್ಕು. ಈ ಪಾರಿಭಾಷಿಕ ಹೆಸರುಗಳನ್ನು ಮೊದಲಿಗೆ ಕೊಟ್ಟವ ಅರಿಸ್ಟಾಟಲ್.

ಐದನೆಯ ಆಗಂತುಕ ವಿಶೇಷಣಕ್ಕೂ ಉಳಿದ ನಾಲ್ಕಕ್ಕೂ ಇರುವ ವ್ಯತ್ಯಾಸವೇನೆಂದರೆ: ಮೊದಲನೆಯ ನಾಲ್ಕು ಒಂದಲ್ಲ ಒಂದು ರೀತಿಯಲ್ಲಿ ವಸ್ತುವಿಗೆ ಆಂತರಿಕವಾದ ವಿಶೇಷಣಗಳು. ಐದನೆಯದು ವಸ್ತುವಿಗೆ ಬಾಹಿರವಾದದ್ದು, ಅನಗತ್ಯವಾದದ್ದು. ಉದಾಹರಣೆಗೆ ಅವರೆಯನ್ನು ಕುರಿತು; ಇದು ದ್ವಿದಳ ಧಾನ್ಯ ಜಾತಿಗೆ ಸೇರಿದ್ದು. ದ್ವಿದಳ ಧಾನ್ಯದ ಉಪಜಾತಿ, ತೊಗರಿಗಿಂತ ಭಿನ್ನ. ಸಾರಜನಕಾಂಶ ಹೆಚ್ಚು – ಈ ಮುಂತಾದ ವಿಶೇಷಣಗಳು ಅವರೆಗೆ ಆಂತರಿಕ. ಈ ವಿಶೇಷಣಗಳಿಲ್ಲದೆ ಅವರೆ ಇಲ್ಲ. ಆದರೆ ಅವರೆ ಬಿಸ್ಕತ್ ಬಣ್ಣದ್ದು, ಕಂದು ಬಣ್ಣದ್ದು ಎಂಬ–ವಿಶೇಷಣಗಳು ಆಂತರಿಕವಲ್ಲ. ಅವರೆಯಾಗಬೇಕಾದರೆ ಬಿಸ್ಕತ್ ಬಣ್ಣದ್ದೇ ಆಗಿರಬೇಕಾಗಿಲ್ಲ. ಧಾರವಾಡದಲ್ಲಿ ಬೆಳೆದದ್ದು, ಮೈಸೂರಿನಲ್ಲಿ ಬೆಳೆದದ್ದು ಎಂಬುದೂ ಆಗಂತುಕ ವಿಶೇಷಣ. ಏಕೆಂದರೆ ಅವರೇಕಾಳು ಬೆಳೆಯಬೇಕಾದರೆ ಧಾರವಾಡ ಅಥವಾ ಮೈಸೂರು ಪ್ರದೇಶವೇ ಆಗಬೇಕಾಗಿಲ್ಲ. ಮೇಲೆ ಹೇಳಿದ ಆಗಂತುಕ ವಿಶೇಷಣಗಳಲ್ಲಿ ಒಂದು ವ್ಯತ್ಯಾಸವಿದೆ. ಬಿಸ್ಕತ್ ಬಣ್ಣ ಅಥವಾ ಕಂದು ಬಣ್ಣ ಆ ಕಾಳಿನಿಂದ ಪ್ರತ್ಯೇಕಿಸಲಾಗಿದ್ದು. ಆದರೆ ಇದು ಈಗ ಗೋಣಿ ಚೀಲದಲ್ಲಿದ್ದದ್ದು, ಗುಡಾಣದಲ್ಲಿದ್ದದ್ದು ಎಂಬ ವಿಶೇಷಣಗಳು ಆ ಕಾಳಿನಿಂದ ಪ್ರತ್ಯೇಕಿಸಬಹುದಾದವು. ಈ ಎರಡರಲ್ಲಿ ಮೊದಲ ಬಗೆಯ ಆಗಂತುಕ ವಿಶೇಷಣವನ್ನು ಪ್ರತ್ಯೇಕಿಸಲಾಗದ ಆಗಂತುಕ ವಿಶೇಷಣವೆಂದೂ (ಇನ್‌ಸೆಪರಬಲ್ ಆ್ಯಕ್ಸಿಡೆನ್ಸ್), ಎರಡನೆಯ ಬಗೆಯದನ್ನು ಪ್ರತ್ಯೇಕಿಸಬಲ್ಲ ಆಗಂತುಕ ವಿಶೇಷಣವೆಂದೂ ತಾರ್ಕಿಕರು ಕರೆದಿರುತ್ತಾರೆ. (ಜಿ.ಎಚ್.)

**ಆಗಮಗಳು :** ಆಗಮವೆಂದರೆ ಶಾಸ್ತ್ರ ಅಥವಾ ವೇದವೆಂದು ಸಾಮಾನ್ಯಾರ್ಥ. ಭಗವಂತನೇ ನಿರ್ಮಿಸಿರುವನೆಂದು ನಂಬುವ ವಿಶಿಷ್ಟ ಧಾರ್ಮಿಕ ಮೂಲ ಗ್ರಂಥಗಳಿಗೆ ಆಗಮಗಳೆನ್ನುವುದು ಆಯಾ ಸಂಪ್ರದಾಯಗಳ ರೂಢಿ. ಪರಮಾತ್ಮನ ಉಪಾಸನೆಯನ್ನು ಹೇಗೆ ಮಾಡಬೇಕು, ಯಾವ ಆಚಾರದಲ್ಲಿ ನಿಷ್ಠೆಯಿರಬೇಕು, ಯಾವುದು ಪುಣ್ಯ, ಯಾವುದು ಪಾಪ, ಈ ಜಗತ್ತಿನ ಸೃಷ್ಟಿ, ಸ್ಥಿತಿ ಲಯಗಳ ರಹಸ್ಯವೇನು, ಎಂಬ ಪ್ರಶ್ನೆಗಳಿಗೆ ಪರಂಪರಾಗತ ಉತ್ತರಗಳನ್ನು ಪ್ರಮಾಣಬದ್ಧವಾಗಿ ಅರುಹುವ ಪವಿತ್ರಗ್ರಂಥಗಳೇ ಆಗಮಗಳೆನ್ನಬಹುದು. ಋಗ್ವೇದ ಸಂಹಿತೆಯಲ್ಲಿ ಬರುವ ಇಂದ್ರಾಗ್ನಿ ಸ್ತೋತ್ರಗಳ ಕಾಲದಲ್ಲಿ ಒಂದು ರೀತಿಯ ಬಹುದೇವತಾವಾದವೇ ಗೋಚರಿಸುವುದೆಂದು ಆಧುನಿಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅದಾದ ಅನಂತರ ಬರುವ ಬ್ರಾಹ್ಮಣ ಗ್ರಂಥಗಳಲ್ಲಿ ಬಹು ಜಟಿಲವಾದ ಪರಿಷ್ಕೃತ ಯಜ್ಞಗಳ ಪ್ರಕ್ರಿಯೆ ಕಾಣುತ್ತದೆ. ಕಲ್ಪಸೂತ್ರಗಳಲ್ಲೂ ಯಜ್ಞನಿರ್ವಚನಕ್ಕೆ ಪ್ರಾಶಸ್ತ್ಯ. ಉಪನಿಷತ್ತುಗಳಲ್ಲಿ ಮೋಕ್ಷೋಪದೇಶದ ಗುರಿಯಿದ್ದು ಬ್ರಹ್ಮಮೀಮಾಂಸೆ ಬರುತ್ತದೆ. ಇವೆಲ್ಲ ವೈದಿಕ ಸಾಹಿತ್ಯದ ಪ್ರಕಾರಗಳು. ಅಪೌರುಷೇಯ ವೇದ ಸಾಹಿತ್ಯವನ್ನು ವಿಶೇಷ ವಿಪಕ್ಷೆಯಿಲ್ಲದಾಗ ಮಾತ್ರ ಆಗಮ ಇಲ್ಲವೆ ನಿಗಮಗಳೆನ್ನಬಹುದು. ಆದರೆ ವೇದೋತ್ತರ ಕಾಲದ ಶಿವ, ವಿಷ್ಣು, ಶಕ್ತಿ, ಇತ್ಯಾದಿ ಉಪಾಸ್ಯ ದೇವತೆಗಳ ವಿಶಿಷ್ಟೋಪಾಸನೆಯನ್ನು ಕುರಿತ ರಚನೆಗಳಿಗೆ ಮಾತ್ರ ಆಗಮಗಳೆಂದು ಹೇಳುವುದು ಗ್ರಂಥಕಾರರ ರೂಢಿ. ಈ ದೃಷ್ಟಿಯಿಂದ ಉಪಾಸ್ಯ ದೇವತಾ ಭೇದಗಳನ್ನು ಲಕ್ಷ್ಯದಲ್ಲಿಟ್ಟು ಶೈವಾಗಮ, ವೈಷ್ಣವಾಗಮ, ಶಾಕ್ತಾಗಮ, ಜೈನಾಗಮ ಎಂಬ ಮುಖ್ಯ ಶೀರ್ಷಿಕೆಗಳಲ್ಲಿ ಆಗಮಗಳನ್ನು ಇಲ್ಲಿ ವಿವೇಚಿಸಬಹುದು. ಶೈವ, ವೈಷ್ಣವ ಮತ್ತು ಶಾಕ್ತಾಗಮಗಳು ವೈದಿಕವಾದರೆ ಜೈನಾಗಮ ಅವೈದಿಕ. ವೈದಿಕಾಗಮಗಳು ಸೃಷ್ಟಿ ಭಗವಂತನಿಂದಾಯಿತೆಂಬುದನ್ನು ಒಪ್ಪುತ್ತವೆ. ಜೈನಾಗಮ ಒಪ್ಪುವುದಿಲ್ಲ.

ಮಹಾಭಾರತದ ಕಾಲಕ್ಕೆ ಆಗಲೇ ಕೆಲವು ವೈಷ್ಣವಾಗಮಗಳು ಅಸ್ತಿತ್ವದಲ್ಲಿದ್ದವೆಂದು ತಿಳಿಯುತ್ತದೆ. ಏಕಾಂತ ಅಥವಾ ಪಾಂಚರಾತ್ರ ಭಾಗವತ ಪ್ರಕ್ರಿಯೆಗಳು ಅಲ್ಲಲ್ಲಿ ನಿರ್ದಿಷ್ಟವಾಗಿರುವುದರಿಂದ ಒಬ್ಬನೇ ಜಗತ್ತಿನ ಕರ್ತ ಮತ್ತು ಪ್ರಭುವೆನ್ನುವುದು ಎಲ್ಲ ವೈದಿಕಾಗಮಗಳ ಸಮಾನಾಂಶ. ಆಗಮ ತತ್ತ್ವವನ್ನು ಸಾಮಾನ್ಯವಾಗಿ ಏಕದೇವತಾಪಾರಮ್ಯವಾದವೆನ್ನಬಹುದು. ಪರದೈವವು ಶಿವನೆಂದು ಶೈವಾಗಮಗಳು, ವಿಷ್ಣು ಅಥವಾ ನಾರಾಯಣನೆಂದು ವೈಷ್ಣವಾಗಮಗಳೂ ಪರಾಶಕ್ತಿಯೆಂದು ಶಾಕ್ತಾಗಮಗಳೂ ಸಾರುತ್ತವೆ. ಬಂಧನಕ್ಕೆ ಕಾರಣಗಳನ್ನೂ ಮೋಕ್ಷಪ್ರಾಪ್ತಿಗೆ ಉಪಾಯ ಅಥವಾ ಸಾಧನಗಳನ್ನೂ ವಿವೇಚಿಸುತ್ತವೆ. ಉಪಾಸನೆಗೆ ಅಂಗವಾಗಿ ದೇವತಾ ಪ್ರತೀಕಗಳಾದ ಮೂರ್ತಿಗಳು ಹೇಗಿರಬೇಕು, ದೇವಸ್ಥಾನಗಳನ್ನು ಹೇಗೆ ಕಟ್ಟಬೇಕು, ಪರಿವಾರದೇವತೆಗಳು ಯಾರು, ಅವರ ಮೂರ್ತಿಗಳ ಲಕ್ಷಣ ಹಾಗೂ ಪ್ರತಿಷ್ಠಾ ವಿಧಾನಗಳೇನು, ಜಪಯೋಗ್ಯವಾದ ಮಂತ್ರಗಳ ಸ್ವರೂಪ, ಪುರಶ್ಚರಣಕ್ರಮ, ಗುರುಮಹಿಮೆ, ದೀಕ್ಷಾವಿಧಾನಗಳು, ನಿತ್ಯಜೀವನದಲ್ಲಿ ಸಾಧಕನ ಆಚಾರದ ಬಗೆಗೆ ವಿವರಗಳು, ಉಪಾಸನಾಕ್ರಮಗಳು, ಪೂಜಾ ಸಾಮಗ್ರಿಗಳು, ಲಿಂಗ, ಸಾಲಿಗ್ರಾಮ ಇತ್ಯಾದಿಗಳ ಲಕ್ಷಣಗಳು ಇವೇ ಮೊದಲಾಗಿ ಧಾರ್ಮಿಕಾಚರಣೆಗೆ ವಿಶ್ವಕೋಶವೆನಿಸುವಂತೆ ಆಗಮಗ್ರಂಥಗಳ ವಿಷಯ ಬಾಹುಳ್ಯ ಪಸರಿಸಿದೆ. ಪ್ರಾಚೀನ ವೇದಗಳಲ್ಲಿ ದೇವಸ್ಥಾನಗಳ ಇಲ್ಲವೆ ಮೂರ್ತಿಪೂಜೆಯ ಗಂಧವೂ ಇಲ್ಲ. ಆದರೆ ಆಗಮಗಳಲ್ಲಿ ಅವುಗಳದೇ ಪ್ರಾಧಾನ್ಯ. ಇದನ್ನು ಗಮನಿಸಿದ ಆಧುನಿಕ ವಿದ್ವಾಂಸರು ವೇದಪೂರ್ವವಾದ ಆರ್ಯೇತರ ಎಂದರೆ ದ್ರಾವಿಡ ಸಂಸ್ಕೃತಿಗೂ ವೈದಿಕ ಆರ್ಯ ಸಂಸ್ಕೃತಿಗೂ ಸಮ್ಮಿಶ್ರಣವುಂಟಾದುದರ ಪರಿಣಾಮವೇ ಆಗಮಗಳ ಉಗಮಕ್ಕೆ ಮೂಲವೆಂದು ಭಾವಿಸುತ್ತಾರೆ. ವೇದೋತ್ತರ ಕಾಲದಲ್ಲಿ ಭಾರತಕ್ಕೆ ವಲಸೆ ಬಂದ ಶಕ, ಹೂಣ, ಯವನ, ಪಾರಸಿಕ, ಮಗಾ ಮುಂತಾದ ವಿದೇಶಿಯರೂ ಹಿಂದೂ ಧರ್ಮದಲ್ಲಿ ಸೇರ್ಪಡೆಗೊಳ್ಳಲು ಆಗಮೋಕ್ತಧರ್ಮ ಸಹಾಯಕವಾದಂತೆ ತಾನೂ ಕಾಲಕ್ರಮದಲ್ಲಿ ಪರಿವರ್ತನೆಗಳನ್ನು ಪಡೆದುದನ್ನು ನೋಡುತ್ತೇವೆ. ಸೂರ್ಯೋಪಾಸನೆ, ಸ್ಕಂದ ಪೂಜೆಗಳ ವಿಕಾಸದಲ್ಲಿ ವಿದೇಶೀಯ ಪ್ರಭಾವ ಸ್ಪಷ್ಟವಾಗಿದೆ. ವೇದಾಂತದ ಪ್ರಕ್ರಿಯೆಗೂ ಆಗಮೋಕ್ತ ಸಿದ್ಧಾಂತಕ್ಕೂ ತತ್ತ್ವವಿಷಯದಲ್ಲಿ ಸಾಮ್ಯವುಂಟು. ಅದ್ವೈತ, ದ್ವೈತ, ದ್ವೈತಾದ್ವೈತ – ಈ ಮೂರು ವಿಚಾರಧಾರೆಗಳು ಆಗಮದಲ್ಲಿ ಕಾಣುತ್ತಿದ್ದು ಆಚಾರ್ಯತ್ರಯರ ಉದ್ಗ್ರಂಥಗಳಲ್ಲಿ ಉಪನಿಷತ್ತತ್ತ್ವವನ್ನು ಪುನರಾಲೋಚಿಸಲು ಪ್ರೇರಣೆಯನ್ನಿತ್ತಿವೆ. ಒಮ್ಮೊಮ್ಮೆ ವೇದಾಂತಿಗಳು ಆಗಮಗಳನ್ನು ವೇದಬಾಹ್ಯವೆಂದು ದೂರುವುದೂ ಆಗಮಿಕರು ವೇದವನ್ನು ಮೋಕ್ಷೋಪಯೋಗಿಯಲ್ಲದ ಯಜ್ಞವಾದವೆಂದು ತಿರಸ್ಕರಿಸುವುದೂ ಕಾಣಬರುವುದುಂಟು. ಮೋಕ್ಷಸಾಧನೆ ಹಾಗೂ ಸಾಕ್ಷಾತ್ಕಾರಕ್ಕಾಗಿ ಹೊರಟ ಆಗಮಗಳು ಕೆಲವೊಮ್ಮೆ ಹತ್ತಿರದ ದಾರಿಗಳೆಂದು ಉಗ್ರ ಹಾಗೂ ಆಕ್ಷೇಪಾರ್ಹ ಆಚಾರಗಳಿಗೂ ಅವಕಾಶವಿತ್ತಿರುವುದನ್ನು ನೋಡುತ್ತೇವೆ. ಕೆಲವೊಂದು ಶೈವ ಹಾಗೂ ಶಾಕ್ತಮತಗಳಲ್ಲಿ ಕಾಪಾಲಿಕ ಕೌಲ ಇತ್ಯಾದಿ

ಮಾಂಸ, ಮದ್ಯ, ಮತ್ಸ್ಯ, ಮುದ್ರಾ, ಮೈಥುನ ಮುಂತಾದ ವಾಮಾಚಾರಗಳೂ ಘೋರ ನರಬಲಿಯೇ ಮುಂತಾದ ಹಿಂಸಾಚಾರಗಳೂ ಮುಂದಾದ ಕಾರಣ ಸಾಮಾಜಿಕ ಬಹಿಷ್ಕಾರಕ್ಕೂ ಒಳಗಾದವು.

ಮುಖ್ಯವಾಗಿ ವೈದಿಕಾಗಮಗಳಲ್ಲಿ ಶೈವಾಗಮ, ವೈಷ್ಣವಾಗಮ, ಶಾಕ್ತಾಗಮಗಳು ಪ್ರಸಿದ್ಧವಾಗಿವೆ. ಇಂದಿನವರೆಗೂ ಭಾರತದ ವಿವಿಧ ಧರ್ಮಪಂಥಗಳವರಲ್ಲಿ ಅಷ್ಟಿಷ್ಟು ಆಚರಣೆಯಲ್ಲುಳಿದಿವೆ. ಕಾಲದಿಂದ ಕಾಲಕ್ಕೆ ವಿಕಾಸಗೊಂಡು ಪರಿಷ್ಕೃತವಾಗಿವೆ. ತಮಿಳುನಾಡಿನ ಶೈವಸಿದ್ಧಾಂತ, ಕರ್ನಾಟಕದ ವೀರಶೈವಧರ್ಮ, ಕಾಶ್ಮೀರದ ಪ್ರತ್ಯಭಿಜ್ಞಾ ಶಾಸ್ತ್ರ, ಇವು ಶೈವಾಗಮಗಳಿಂದ ಪ್ರೇರಿತವಾದ ಜನಪ್ರಿಯ ಧರ್ಮಗಳು. ಶ್ರೀವೈಷ್ಣವರ ವಿವಿಧ ಸಂಪ್ರದಾಯಗಳಿಗೆ ಪಾಂಚರಾತ್ರಾಗಮಗಳೇ ಮೂಲ. ಹಾಗೆಯೇ ಶ್ರೀವಿದ್ಯಾ ಮುಂತಾದ ಮಂತ್ರೋಪಾಸನಾ ಕ್ರಿಯೆಗಳಿಗೆಲ್ಲ ಶಾಕ್ತಾಗಮಗಳೇ ಆಧಾರ. ಶಂಕರಾದ್ವೈತ ಸಂಪ್ರದಾಯದಲ್ಲೂ ಕೆಲಮಟ್ಟಿಗೆ ಶಾಕ್ತ ಆಗಮಾಚರಣೆ ಸೇರಿಕೊಂಡಿದೆ. ಆದುದರಿಂದ ಪರಿಷ್ಕೃತ ಹಿಂದೂ ಧರ್ಮಕ್ಕೆ ಆಗಮಗಳೇ ಮೊದಲು ಎನ್ನುವಂತಿದೆ. ಆಗಮಗಳಲ್ಲಿ ಕೆಲವು ಕ್ರಿಸ್ತಶಕಾರಂಭದ ವೇಳೆಗೇ ಹುಟ್ಟಿರಬಹುದಾದರೂ ಕ್ರಿ.ಶ. ಎಂಟನೆಯ ಶತಮಾನದವರೆಗೂ ಬೆಳೆಯುತ್ತಿದ್ದಂತೆ ಕಾಣುತ್ತದೆ. ಕಾಲದಿಂದ ಕಾಲಕ್ಕೆ ಅವು ಬೆಳೆದೂ ಇರಬೇಕು. ಕ್ರಿ.ಶ.ಐದನೆಯ ಶತಮಾನದ್ದೆಂದು ಹೇಳಲಾಗಿರುವ ಕಂಚಿ ಕೈಲಾಸನಾಥ ದೇವಾಲಯದಲ್ಲಿ ಪಲ್ಲವ ರಾಜನಾದ ರಾಜಸಿಂಹವರ್ಮ ತಾನು ಇಪ್ಪತ್ತೆಂಟು ಶೈವಾಗಮಗಳ ಭಕ್ತನೆಂದುಕೊಂಡಿರುವ ಶಿಲಾಶಾಸನವಿದೆ. ಕೆಲವು ಆಗಮೋಕ್ತ ಅಂಶಗಳು ವಾಯವೀಯ ಸಂಹಿತೆಯೇ ಮುಂತಾದ ಪುರಾಣಗಳಲ್ಲಿಯೂ ದೊರೆಯುತ್ತವೆ.

ಶೈವಾಗಮಗಳಲ್ಲಿ ಕಾಮಿನಾದಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಾಹಸ್ರಕ, ಅಂಶುಮಾನ ಮತ್ತು ಸುಪ್ರಭ ಈ ಹತ್ತು ಸಾಕ್ಷಾತ್ ಶಿವಪ್ರಣೀತಗಳೆಂದೂ ಮಿಕ್ಕ ಹದಿನೆಂಟು ವಿಜಯ, ನಿಶ್ವಾಸ, ಸ್ವಾಯಂಭುವ ಇತ್ಯಾದಿ–ಅಷ್ಟಾದಶ ರುದ್ರರಿಗೆ ಉಪದಿಷ್ಟವಾದುದರಿಂದ ರೌದ್ರಾಗಮವೆಂದೂ ನಾಮಾಂತರ ಪಡೆದಿವೆ. ಇವೆಲ್ಲವೂ ಇನ್ನೂ ಮುದ್ರಿತವಾಗಿರುವುದಿಲ್ಲ. ಕೆಲವು ಆಗಮಗಳ ಭಾಗಗಳು ಮಾತ್ರ ಸಿಕ್ಕಿವೆ. ಎಷ್ಟೋ ಹಸ್ತಪ್ರತಿಗಳಲ್ಲೇ ಉಳಿದಿವೆ.

ಆಗಮಗಳೆಲ್ಲ ಸಾಮಾನ್ಯವಾಗಿ ನಾಲ್ಕು ಪಾದಗಳಲ್ಲಿ ವಿಭಕ್ತವಾಗಿರುತ್ತವೆ, 1. ವಿದ್ಯಾ ಅಥವಾ ಜ್ಞಾನಪಾದ. 2. ಯೋಗಪಾದ. 3. ಕ್ರಿಯಾಪಾದ. 4. ಚರ್ಯಾಪಾದ. ಕ್ರಿಯಾ ಮತ್ತು ಚರ್ಯಾಪಾದಗಳೇ ಗಾತ್ರದಲ್ಲಿ ವಿಸ್ತೃತವಾಗಿ ದೇವಾಲಯಗಳ ನಿರ್ಮಾಣವಿಧಿ, ಪೂಜಾಕ್ರಮಗಳು, ಮೂರ್ತಿ ಪ್ರತಿಷ್ಠಾವಿಧಾನಗಳು, ಧಾರ್ಮಿಕ ಸಂಪ್ರದಾಯಗಳು ಇವುಗಳ ವಿವರಣೆಗೇ ಮೀಸಲಾಗಿವೆ. ಮಿಕ್ಕ ಜ್ಞಾನ ಹಾಗೂ ಯೋಗಪಾದಗಳಲ್ಲಿ ತಾತ್ತ್ವಿಕ ವಿವೇಚನೆ, ಸೃಷ್ಟಿ ಪ್ರಕ್ರಿಯೆ, ಮೋಕ್ಷ ಸಾಧನೆಗಳ ನಿರ್ದೇಶನಗಳೂ ಮಿಕ್ಕ ವಿಷಯಗಳ ನಡುವೆ ಬರುತ್ತವೆ. ಕಾಮಿಕಾಗಮದ ಜ್ಞಾನಕಾಂಡದ ತತ್ತ್ವನಿರೂಪಣೆಯನ್ನಿಲ್ಲಿ ಸಂಗ್ರಹಿಸಿದೆ:

ಶಿವ ಅನಾದಿ, ಅನಂತ, ಸರ್ವಜ್ಞ ಮತ್ತು ಸರ್ವಶಕ್ತ. ಆತನೇ ಜಗತ್ತಿಗೆ ನಿಮಿತ್ತ ಕಾರಣ. ತನ್ನಲ್ಲಿಯೇ ಅಂತರ್ಗತವಾಗಿರುವ ಶಕ್ತಿ ಚಿದ್ರೂಪನಾದ ಶಿವನಿಗೂ ಅಚಿದ್ರೂಪವಾದ ಸೃಷ್ಟಿಗೂ ಮಧ್ಯವರ್ತಿಯಾದ ತತ್ತ್ವ. ಎಲ್ಲ ಜೀವರುಗಳ ಬಂಧನಕ್ಕೂ ಬಿಡುಗಡೆಗೂ ಈ ಶಕ್ತಿಯೇ ಕಾರಣ. ಇದನ್ನೇ ಮಾಹೇಶ್ವರೀ ಶಕ್ತಿ ಎಂದೂ ಕರೆದಿದ್ದಾರೆ. ಆತ್ಮನನ್ನೂ ಆಣವ, ಮಾಯಾ ಮತ್ತು ಕಾರ್ಮಿಕ ಮಲಗಳೆಂಬ ಮುಪ್ಪುರಿಪಾಶ ಬಂಧಿಸಿದೆ. ಆತ್ಮನ ಆನಂದ ಸ್ವರೂಪವನ್ನು ನಾಶಗೊಳಿಸಿ, ಬಂಧನಕ್ಕೆ ಗುರಿಪಡಿಸಿ, ಅವನನ್ನು ಪಶುವನ್ನಾಗಿ ಮಾಡುತ್ತದೆ ಈ ಪಾಶ. ಶಿವ ತನ್ನ ಅನುಗ್ರಹ ಶಕ್ತಿಯಿಂದ ಈ ಪಾಶವನ್ನು ಕತ್ತರಿಸಿ ಉದ್ಧಾರ ಮಾಡುವ ಪಶುಪತಿ. ಜೀವ ಈ ಪಾಶದಿಂದ ಬಿಡುಗಡೆ ಪಡೆದಾಗಲೇ ಶಿವ ಜೀವರ ಸಾಮರಸ್ಯ ಸಿದ್ಧಿಸುತ್ತದೆ. ಇದೇ ಮೋಕ್ಷ.

ವೈಷ್ಣವಾಗಮಗಳಲ್ಲಿ ಪಾಂಚರಾತ್ರ, ವೈಖಾನಸ ಎಂಬ ಎರಡು ವಿಭಾಗಗಳಿವೆ. ಇಲ್ಲಿ ಆಗಮ ಗ್ರಂಥಗಳಿಗೆ ಪ್ರಾಯಿಕವಾಗಿ ಸಂಹಿತೆಯೆಂಬ ನಾಮಾಂತರವುಂಟು. ಇಲ್ಲಿ ವಿಷ್ಣುವೇ ಪರಮದೈವ. ಭಗವಂತನೇ ಸಾಕ್ಷಾತ್ತಾಗಿ ಅನಂತ, ಗರುಡ, ವಿಷ್ವಕ್ಸೇನ, ಬ್ರಹ್ಮ ಮತ್ತು ಇಂದ್ರನಿಗೆ ಐದು ರಾತ್ರಿಗಳಲ್ಲಿ ಉಪದೇಶಿಸಿದ ಶಾಸ್ತ್ರವೇ ಪಾಂಚರಾತ್ರ ಅಥವಾ ಭಗವಚ್ಛಾಸ್ತ್ರ. ಇದು ನಾರದ, ಸನಕ, ಶಾಂಡಿಲ್ಯಾದಿಗಳಿಂದ ಭೂಲೋಕಕ್ಕೆ ಬಂದು ಪ್ರಚಾರವಾಯಿತೆನ್ನುತ್ತಾರೆ. ಭಗವಂತ ತನ್ನ ಪರರೂಪಿನಿಂದ ವೈಕುಂಠದಲ್ಲಿರುವಂತೆ ಚತುರ್ವ್ಯೂಹನಾಗಿಯೂ ಮೂರ್ತಿಗಳಲ್ಲಿ ಅರ್ಚಾವತಾರನಾಗಿಯೂ ಇರುವನೆಂದು ಹೇಳಿಕೆ. ಕಪಿಂಜಲ ಸಂಹಿತೆ, ವಿಷ್ಣು ಸಂಹಿತೆ, ಹಯಶೀರ್ಷ ಸಂಹಿತೆ, ಶಾಂಡಿಲ್ಯ ಸಂಹಿತೆ ಮುಂತಾದವು ಪ್ರಾಚೀನ ಪಾಂಚರಾತ್ರ ಸಂಹಿತೆಗಳು. ಅಹಿರ್ಬುಧ್ನ್ಯ ಸಂಹಿತೆ, ಜಯಾಖ್ಯ ಸಂಹಿತೆ ಇತ್ಯಾದಿಗಳು ಅಚ್ಚಾಗಿವೆ. ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಸಾಂಖ್ಯದರ್ಶನದ ಅರುವತ್ತು ಪ್ರಮೇಯಗಳು ಷಷ್ಟಿ ತಂತ್ರವೆಂದು ನಿರ್ದಿಷ್ಟವಾಗಿವೆ. ಇವು ಪ್ರಾಚೀನ ಸಾಂಖ್ಯದ ಸ್ವರೂಪವೆಂದು ಭಾವಿಸುವುದುಂಟು. ವೈಖಾನಸ ಸಂಹಿತೆಗಳಲ್ಲಿ ಅತ್ರಿ, ಮರೀಚಿ, ಕಾಶ್ಯಪ, ಭೃಗು ಇವರ ಹೆಸರಿನಿಂದ ಪ್ರಸಿದ್ಧವಾದ ಸಂಹಿತೆಗಳಿವೆ. ತಿರುಮಲೆಯಲ್ಲಿರುವ ಶ್ರೀನಿವಾಸ ದೇವಸ್ಥಾನ ವೈಖಾನಸ ಸಂಪ್ರದಾಯಕ್ಕೆ ಸೇರಿದ್ದು. ದೇವಾಲಯದಲ್ಲಿ ಆಗಮೋಕ್ತವಾಗಿ ವಿಷ್ಣುವಿನ ಅರ್ಚನೆ ಮಾಡಿದರೆ ಅಗ್ನಿಹೋತ್ರ ಫಲವೇ ಬರುವುದೆಂದು ಕಾಶ್ಯಪ ಸಂಹಿತೆ ಹೇಳುತ್ತದೆ. ಭಕ್ತಿಯೇ ಪರಮ ಪುರುಷಾರ್ಥ, ದುಃಖತ್ರಯ ಜಾಲಭೇದಿನಿ, ಸುಖಚಿಂತಾಮಣಿಪ್ರದಾ, ಕೃಷ್ಣಾವೈತರಣೀಯಾನ, ಶುಭಪ್ರದಾ ಎಂದು ಮುಂತಾಗಿ ವರ್ಣಿಸಲ್ಪಟ್ಟಿದೆ. ಭಗವಂತನ ಪರಾತ್ಪರ ರೂಪ ಬ್ರಹ್ಮಾದಿಗಳಿಗೂ ಅಗೋಚರ. ಅದರ ಸ್ಥೂಲ ಅರ್ಚಾವತಾರರೂಪ ಸಕಲ ಮಾನವರಿಗೂ ಗೋಚರ. ಇದು ಭಕ್ತಿಮುಕ್ತಿಪ್ರದವೆನ್ನಲಾಗಿದೆ. ವೈಖಾನಸಾಗಮ ಸೌಮ್ಯವೆಂದೂ ಗ್ರಾಮ, ನಗರ, ಪತ್ತನ ಮುಂತಾದೆಡೆಗಳಲ್ಲಿ ದೇವಾಲಯ ನಿರ್ಮಾಣ ಹಾಗೂ ಪೂಜೆಗೆ ಯೋಗ್ಯವೆಂದೂ ಹೇಳಿ ಪಾಂಚರಾತ್ರಾಗಮ ಆಗ್ನೇಯವಾದ್ದರಿಂದ ನದೀತೀರ, ಅದ್ರಿ, ವನಪ್ರದೇಶಗಳಲ್ಲಿ ಭಗವದಾರಾಧನೆಗೆ ಯೋಗ್ಯವೆಂದೂ ತಿಳಿಸುತ್ತದೆ. ಅಭಿಗಮನ (ದೇವಾಲಯಕ್ಕೆ ಹೋಗುವುದು), ಉಪಾದಾನ(ಪೂಜಾಸಾಮಗ್ರಿಯ ಸಂಗ್ರಹ), ಇಜ್ಯಾ(ಪೂಜೆ), ಸ್ವಾಧ್ಯಾಯ (ವೇದಾಧ್ಯಯನ), ಯೋಗ(ಧ್ಯಾನ)–ಇವು ಆಗಮೋಕ್ತ ನಿತ್ಯವಿಧಿಗಳು.

ಶಂಕರಾಚಾರ್ಯರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ವೇದಾಂತಕ್ಕೆ ಅಸಮ್ಮತವಾದ ಅಂಶಗಳನ್ನು ಶೈವ ಹಾಗೂ ಪಾಂಚರಾತ್ರ ಆಗಮಗಳೆರಡರಲ್ಲೂ ತೋರಿಸಿದರೆ ರಾಮಾನುಜಾಚಾರ್ಯರು ಪಾಂಚರಾತ್ರತತ್ತ್ವವೇ ಬಾದರಾಯಣನಿಗೆ ಅಭಿಮತ ಸಿದ್ಧಾಂತವೆಂದು ಸಾಧಿಸಿದ್ದಾರೆ. ಮಧ್ವಾಚಾರ್ಯರೂ ತಂತ್ರಸಾರಾಗಮವೆಂಬ ಭಾಗವನ್ನು ತಮ್ಮ ಆಧಾರಗ್ರಂಥವಾಗಿ ತಿಳಿಸಿದ್ದಾರೆ. ಯಾಮುನಾಚಾರ್ಯರು ಆಗಮಪ್ರಾಮಾಣ್ಯವೆಂಬ ಗ್ರಂಥವನ್ನೇ ರಚಿಸಿದ್ದಾರೆ. ವೈಷ್ಣವಾಗಮದಲ್ಲಿ ವಿಷ್ಣು ಶಕ್ತಿಯಾದ ಲಕ್ಷ್ಮಿಗೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಲಾಗಿದೆ. ಲಕ್ಷ್ಮೀಸಮೇತನಾದ ನಾರಾಯಣನ ಉಪಾಸನೆಯನ್ನು ವಿಧಿಸಲಾಗಿದೆ.

ಶಾಕ್ತಾಗಮಗಳಲ್ಲಿ ಪರಶಿವನ ಶಕ್ತಿಯೇ ಉಪಾಸ್ಯದೇವತೆ. ತಾತ್ತ್ವಿಕ ವಿಚಾರಗಳಲ್ಲಿ ಶೈವಾಗಮದ ಪ್ರಕ್ರಿಯೆಯೇ ಇಲ್ಲೂ ಅನ್ವಯಿಸುತ್ತದೆ. ದೇಹಾಂತರ್ಗತ ಷಟ್ಚಕ್ರನಿರೂಪಣೆ, ಯೋಗಮಾರ್ಗದಿಂದ ಅಮೃತತ್ವ ಪ್ರಾಪ್ತಿ ಇವು ಎರಡಕ್ಕೂ ಸಮಾನ. ಶಕ್ತಿ ವ್ಯತಿರಿಕ್ತವಾದ ಶಕ್ತಿಮಂತನನ್ನೇ ಇವರು ಒಪ್ಪುವುದಿಲ್ಲ. ಶಕ್ತಿಮಂತ ಅಥವಾ ಶಿವಶಕ್ತಿಯ ಉಪಾಧಿಹೀನ ಪರಮಾವಸ್ಥೆ ಮಾತ್ರವೆಂದು ಇವರ ಅಭಿಪ್ರಾಯ. ಶಕ್ತಿಹೀನ ಶಿವ ಶಿವನೇ ಸರಿಯೆಂಬ ಉಕ್ತಿಗಳೂ ಸಿಕ್ಕುತ್ತವೆ. ಸೌಂದರ್ಯಲಹರೀ ಸ್ತೋತ್ರದಲ್ಲಿ ಶಾಕ್ತ ಪ್ರಕ್ರಿಯೆ, ಬಿಂದು, ತ್ರಿಕೋಣಾದಿ ಶ್ರೀಚಕ್ರ ನಿರೂಪಣೆ, ಷೋಡಷಾಕ್ಷರೀ ಮಹಿಮೆ ಎಲ್ಲವೂ ಬಂದಿದ್ದು ಇದು ಶಂಕರಾಚಾರ್ಯ ವಿರಚಿತವೆಂಬ ಪ್ರತೀತಿಯುಂಟು. ಅಂತರ್ಮುಖ ಚಕ್ರಪೂಜೆ ಸಮಯ ಅಥವಾ ದಕ್ಷಿಣ ಮಾರ್ಗವೆಂದೂ ಬಹಿರ್ಮುಖ ಚಕ್ರಪೂಜೆ ಕಾಲ ಮಾರ್ಗವೆಂದೂ ಶಾಕ್ತರಲ್ಲಿ ಮಾರ್ಗಭೇದಗಳಿವೆ. ಶುಭಾಗಮಗಳ ಸಂಖ್ಯೆ ಐದೆಂದೂ ಕಾಲಾಗಮಗಳು ಅರುವತ್ತುನಾಲ್ಕೆಂದೂ ಹೇಳುವುದುಂಟು. ಶಾಕ್ತ ಆಗಮಗಳಿಗೆ ತಂತ್ರ ವೆಂದೂ ನಾಮಾಂತರವುಂಟು. ಇಂದ್ರಜಾಲ ವಶೀಕರಣಾದಿ ಸಿದ್ಧಿಗಳೂ ಶಾಕ್ತಾಗಮೋಕ್ತ ಗೂಢೋಪಾಸನೆಗಳಿಂದ ಶಕ್ಯವೆಂದು ನಂಬುತ್ತಾರೆ. ಕುಲಾರ್ಣವ ತಂತ್ರ, ಮಹಾನಿರ್ವಾಣ ತಂತ್ರ ಮುಂತಾದವು ಅಚ್ಚಾಗಿವೆ. ಶಿವಾದ್ವೈತದಂತೆ ಇಲ್ಲೂ ತಾತ್ತ್ವಿಕವಾಗಿ ಅದ್ವೈತವೇ ಪರತತ್ತ್ವವೆನ್ನುವ ತಂತ್ರಗಳೇ ಹೆಚ್ಚು, ಅಲ್ಲಲ್ಲಿ ಶಕ್ತಿವಿಶಿಷ್ಟಾದ್ವೈತದ ಛಾಯೆಯೂ ಉಂಟು.

ಜೈನಾಗಮದಲ್ಲಿ ಅರ್ಹಂತರೂ ಸಿದ್ಧರೂ ಆರಾಧ್ಯರು. ಗಣಧರ, ಉಪಾಧ್ಯಾಯ, ಸರ್ವಸಾಧು, ಪರಮೇಷ್ಠಿಗಳೂ, ಗುರುಗಳು ಜಿನಮುಖೋದ್ಭೂತವಾದ ಸ್ಯಾದ್ವಾದವೇ ತತ್ತ್ವ. ಜೈನರ ಪವಿತ್ರ ಆಗಮಗಳು ಅರ್ಧಮಾಗಧೀ ಭಾಷೆಯಲ್ಲಿವೆ; ಜಿನಭಾರತೀ ಪ್ರತಿಷ್ಠೆ ಮತ್ತು ಪೂಜಾಕ್ರಮಗಳು ಸಂಸ್ಕೃತದ ಅಕಲಂಕಸಂಹಿತೆ, ನೇಮಿಚಂದ್ರನ ಪ್ರತಿಷಾತಿಲಕ, ಜಿನಸೇನನ ಆದಿಪುರಾಣ ಮುಂತಾದ ಗ್ರಂಥಗಳಲ್ಲಿ ವರ್ಣಿತವಾಗಿವೆ. ಅನೇಕ ಅಂಗೋಪಾಂಗಗಳಿಂದ ಕೂಡಿರುವ ಜೈನಾಗಮದಲ್ಲಿ ಏಳನೆಯದಾದ ಉಪಾಸಕಾಧ್ಯಾಯನಾಂಗದಲ್ಲಿ ದೇವತಾಪ್ರತಿಷ್ಠೆ, ಪೂಜಾಕಲ್ಪ, ಶ್ರಾವಕಾಚಾರ, ಯತ್ಯಾಚಾರ ಇತ್ಯಾದಿಗಳಿಗೆ ಅವಕಾಶ ದೊರೆತಿದೆ. (ಕೆ.ಕೆ.)

ಆಗಮಗಳಲ್ಲಿ ಶಿಲ್ಪಶಾಸ್ತ್ರಕ್ಕೆ ಸೇರಿದ ಅತಿ ಮುಖ್ಯವೂ ಅತಿ ಪ್ರಾಚೀನವೂ ಆದವುಗಳೆಂದರೆ –– ಮಾನಸಾರಾಗಮ, ಅಂಶುಮದ್ಭೇದಾಗಮ, ಸುಪ್ರಭೇದಾಗಮಗಳು. ಇವುಗಳಲ್ಲಿ ವಾಸ್ತುಶಿಲ್ಪ (ದೇವಾಲಯ ಮತ್ತಿತರ ಕಟ್ಟಡಗಳ ನಿರ್ಮಾಣ), ದೇವತೆಗಳು ಮತ್ತು ಮನುಷ್ಯರು (ಚಕ್ರವರ್ತಿಗಳು, ಮಹಾರಾಜರು, ರಾಜರು, ಮಂಡಲೇಶ್ವರರು) ಉನ್ನತ ಅಂತಸ್ತಿನವರು ಇವರೆಲ್ಲರ ಅಂತಸ್ತುಗಳಿಗೆ ಅನುಗುಣವಾದ ತಾಳಪ್ರಮಾಣ, ವಿಗ್ರಹರಚನೆ, ವಿಗ್ರಹಗಳ ಕೈಯಲ್ಲಿರುವ ಚಿಹ್ನೆಗಳು, ಭಂಗಿಗಳು, ಮುದ್ರೆಗಳು, ಮುಕುಟಗಳು, ದೈವಿಕಾಭರಣಾಲಂಕಾರ, ಕಿರೀಟಗಳ ರಚನೆ, ಜಟಾವಿಧಾನ, ಮುಕುಟಗಳ ವಿಧಾನ, ಕೇಶಾಲಂಕಾರ (ಧಮ್ಮಿಲ್ಲ ಕರಂಡ, ಮುಕುಟ, ಪುಷ್ಪಪಟ್ಟಾ ಮುಂತಾದುವು) ಇವನ್ನು ವಿವರಣೆಸಹಿತ ವರ್ಣಿಸಲಾಗಿದೆ. ಈ ನೇಮಗಳನ್ನು ಅನುಸರಿಸಿ ಇತ್ತೀಚಿನ ಶಿಲ್ಪಶಾಸ್ತ್ರಗಳು ಅಂದರೆ ಕಾಶ್ಯಪಶಿಲ್ಪ, ಭೃಗುಶಿಲ್ಪ, ಮಾಯಾಶಿಲ್ಪ, ಶುಕ್ರನೀತಿಸಾರ, ಬೃಹದ್ದೇಶಿ, ಶಿಲ್ಪರತ್ನ, ಪಾಂಚರಾತ್ರ, ಸಮರಾಂಗಣ ಸೂತ್ರಧಾರಾ, ವೈಖಾನ ಮುಂತಾಗಿ ಒಟ್ಟು 90 ಕೃತಿಗಳು ರಚಿತವಾಗಿವೆ. (ಪಿ.ಎಸ್.)

**ಆಗಮೆಮ್ನಾನ್ :** ಗ್ರೀಕ್ ಪುರಾಣಗಳಲ್ಲಿ ಪ್ರಸಿದ್ಧನಾಗಿರುವ ಮೈಸಿನೀ ದೇಶದ ದೊರೆ. ಮೆನೆಲಾಸ್‌ನ ಸೋದರ. ಟ್ರಾಯ್ ಮೇಲಿನ ಯುದ್ಧದಲ್ಲಿ ಗ್ರೀಕರ ನಾಯಕ. ತಂದೆ ಅಟ್ರಿಯಸ್ (ಕೆಲವರ ಅಭಿಪ್ರಾಯದಲ್ಲಿ ಪ್ಲೀಸ್ಥೆನೀಸ್). ಮೆನೆಲಾಸ್‌ನ ಹೆಂಡತಿಯಾದ ಹೆಲೆನ್ನಳನ್ನು ಟ್ರಾಯ್ ರಾಜ ಪ್ಯಾರಿಸ್ ಅಪಹರಿಸಿಕೊಂಡು ಹೋಗಲಾಗಿ ಆಗಮೆಮ್ನಾನ್ ಸಹೋದರನೊಡನೆ ಟ್ರಾಯ್ ಮೇಲೆ ಯುದ್ಧ ಹೂಡಿದ. ದಂಡೆತ್ತಿ ಹೋಗಬೇಕಾದ ದಿನ ವಿರುದ್ಧ ಮಾರುತಗಳನ್ನೆಬ್ಬಿಸಿದ ಆರ್ಟೆಮಿಸ್ ದೇವತೆಯ ಉಪಶಮನಕ್ಕಾಗಿ ತನ್ನ ಮಗಳಾದ ಇಫಿಜೀನಿಯಳನ್ನು ಬಲಿಕೊಟ್ಟ. ಯುದ್ಧದ ನಡುವೆ ಅಕಿಲೀಸನೊಡನೆ ಮನಸ್ತಾಪ ಬೆಳೆದು ಅವನೊಡನೆ ಹೊಡೆದಾಡಿದ. ಹತ್ತು ವರ್ಷ ನಡೆದ ಘೋರಯುದ್ಧದಲ್ಲಿ ಗೆದ್ದು ಬಂದಿಯಾದ ಕೆಸಾಂಡ್ರಳೊಂದಿಗೆ ಸ್ವದೇಶಕ್ಕೆ ಹಿಂತಿರುಗಿದಾಗ ಅವನ ಹೆಂಡತಿ ಕ್ಲೈಟಮ್ನೆಸ್ಟ್ರ ತನ್ನ ಪ್ರಿಯನೊಂದಿಗೆ ಪಿತೂರಿ ಹೂಡಿ ಆಗಮೆಮ್ನಾನ್‌ನನ್ನು ಕೊಲೆ ಮಾಡಿದಳು. ಆಗಮೆಮ್ನಾನನ ಮಕ್ಕಳು ತಂದೆಯ ಕೊಲೆಗೆ ಸರಿಯಾದ ಪ್ರತೀಕಾರ ಮಾಡಿದ ಕಥೆ ಮುಂದಿನದು. ಈ ಪ್ರಸಂಗ ಹೋಮರನ ಈಲಿಯಡ್ ಮಹಾಕಾವ್ಯದಲ್ಲಿದ್ದು ಮುಂದೆ ರಚನೆಗೊಂಡ ಅನೇಕ ರುದ್ರನಾಟಕಗಳಿಗೆ ವಸ್ತುವಾಗಿದೆ.

**ಆಗರ್ ಪರಿಣಾಮ :** ಅಧಿಕ ಕ್ಷೋಭೆಗೊಂಡ ಪರಮಾಣುವಿನ ಅತ್ಯಂತ ಒಳಕವಚದಲ್ಲಿ ತೆರಪು ಇರುವಾಗ ಒಂದು ಅಥವಾ ಅಧಿಕ ಎಲೆಕ್ಟ್ರಾನ್‌ಗಳು ಉಚ್ಚಾಟನೆಯಾಗುವ ಪ್ರಕ್ರಿಯೆ (ಆಗರ್ ಎಫೆಕ್ಟ್).

ಧಾತು ಒಂದರ ಪರಮಾಣು ಶಕ್ತಿಯುತ ಎಕ್ಸ್–ಕಿರಣ ಅಥವಾ ಗಾಮ ಕಿರಣಗಳನ್ನು ಹೀರಿದಾಗ ಅತ್ಯಂತ ಒಳ ಕವಚದಲ್ಲಿರುವ ಎಲೆಕ್ಟ್ರಾನನ್ನು ಹೊರಹಾಕುತ್ತದೆ. ಆಗ ಉಂಟಾಗುವ ಎಲೆಕ್ಟ್ರಾನ್ ಜಿಗಿತಗಳಿಂದ ವಿಶಿಷ್ಟ ಎಕ್ಸ್ ಕಿರಣಗಳು ಉತ್ಪತ್ತಿಯಾಗುವ ಬದಲು ಒಂದು ಅಥವಾ ಅಧಿಕ ಎಲೆಕ್ಟ್ರಾನ್‌ಗಳು ಉಚ್ಚಾಟನೆಯಾಗುತ್ತವೆ. ಇದನ್ನು ಮೊದಲ ಬಾರಿಗೆ 1925 ರಲ್ಲಿ ಫ್ರಾನ್ಸಿನ ಪಿಯರ್ ಆಗರ್ (1899–1993) ಆವಿಷ್ಕರಿಸಿದ್ದರಿಂದ ಈ ಹೆಸರು.

ಆಗರ್ ಪರಿಣಾಮದ ಅಧ್ಯಯನದಿಂದ ನ್ಯೂಕ್ಲಿಯಸ್, ಧಾತು ಹಾಗೂ ನ್ಯೂಕ್ಲಿಯರ್ ಕ್ರಿಯೆಗಳ ಬಗ್ಗೆ ಅಧಿಕ ಮಾಹಿತಿ ಸಿಗುತ್ತದೆ. (ಎ.ಕೆ.ಟಿ.)

**ಆಗಸ್ಟ್ :** ಜೂಲಿಯನ್ ಕ್ಯಾಲೆಂಡರಿನ 8ನೆಯ ತಿಂಗಳು. ರೋಮ್ ಸಾಮ್ರಾಟರಲ್ಲಿ ಅತ್ಯಂತ ಪ್ರಸಿದ್ಧ ದೊರೆ ಅಗಸ್ಟಸ್‌ನ **(ನೋಡಿ– ಅಗಸ್ಟಸ್ ಆಕ್ಟೇವಿಯಸ್)** ಗೌರವಾರ್ಥ ಈ ಹೆಸರನ್ನಿಡಲಾಗಿದೆ. ಇದಲ್ಲದೆ ಅಗಸ್ಟಸ್‌ನ ಜೀವನದಲ್ಲಿ ನಡೆದ ಪ್ರಮುಖ ಘಟನೆಗಳು ಈ ತಿಂಗಳಲ್ಲಿ ನಡೆದುವೆಂದು ತಿಳಿದುಬಂದಿದೆ. ಜೂಲಿಯನ್ ಕ್ಯಾಲೆಂಡರ್ ರೂಪುಗೊಳ್ಳುವ ಮೊದಲು ಬಳಕೆಯಲ್ಲಿದ್ದ ಕ್ಯಾಲೆಂಡರುಗಳಲ್ಲಿ ಇದನ್ನು 6ನೆಯ ತಿಂಗಳಾಗಿ ಪರಿಗಣಿಸಲಾಗಿದ್ದು ಇದನ್ನು ಸೆಕ್ಸ್‌ಟಿಲೀಸ್ ಎಂದು ಕರೆಯಲಾಗಿತ್ತು. ಈ ತಿಂಗಳಿನಲ್ಲಿ 31 ದಿವಸಗಳದ್ದು, ಮೊದಲನೆಯ ದಿವಸವನ್ನು ಲಾಮಾಸ್ ಡೇ (ಸುಗ್ಗಿ ಹಬ್ಬದ ದಿನ) ಮತ್ತು ಗೂಲ್ ಅಗಸ್ಟಸ್ ಎಂದೂ ಕರೆಯುತ್ತಾರೆ **(ನೋಡಿ– ತಾರೀಕುಪಟ್ಟಿ)**.

**ಆಗಸ್ಟಾ :** ಇಟಲಿಯ ದಕ್ಷಿಣಕ್ಕಿರುವ ಸಿಸಿಲಿದ್ವೀಪದ ಸಿರಾಕ್ಯೂಸ್ ಪ್ರಾಂತ್ಯದ ಒಂದು ಬಂದರು. ಆಗೂಸ್ಟಾ ಎಂದೂ ಕರೆಯುತ್ತಾರೆ. ಇದನ್ನು ಆಗಸ್ಟಸ್ ಎಂಬಾತ ಪ್ರ.ಶ.ಪೂ. 42ರಲ್ಲಿ ನಿರ್ಮಿಸಿದ. 1693ರ ಭೂಕಂಪದಿಂದಲೂ 1943ರ ಎರಡನೆಯ ಮಹಾಯುದ್ಧದಿಂದಲೂ ನಾಶಹೊಂದಿತು. ಹೊಸದಾಗಿ ಊರು ಬೆಳೆದು ನಾವಿಕಪಡೆಯ ನೆಲೆಯಾಗಿದೆ. ಆಲಿವ್ ಎಣ್ಣೆ, ದ್ರಾಕ್ಷಾರಸ, ಹಣ್ಣು, ಮೀನು, ಉಪ್ಪು –ಮುಂತಾದುವುಗಳ ವಾಣಿಜ್ಯ ಕೇಂದ್ರವಾಗಿದೆ. ಜನಸಂಖ್ಯೆ: 33,466 (2001).

ಪ್ರಾಚೀನ ಇಟಲಿಯಲ್ಲಿ ಆಗೂಸ್ಟಾ ಎಂಬ ಹೆಸರಿನ ಅನೇಕ ಪಟ್ಟಣಗಳಿದ್ದವು. ಆಗಸ್ಟಾ ಎಂಬ ಹೆಸರಿನ ಪಟ್ಟಣಗಳು ಅಮೆರಿಕ ಸಂಯುಕ್ತ ಸಂಸ್ಥಾನದ ಜಾರ್ಜಿಯ, ಕಾನ್ಸಾಸ್ ಮತ್ತು ಮೇನ್ ಪ್ರಾಂತ್ಯಗಳಲ್ಲಿವೆ. (ಎ.ಕೆ.)

**ಆಗಸ್ಟೀನ್, ಸೇಂಟ್ :** 354–430. ಉತ್ತರ ಆಫ್ರಿಕದಲ್ಲಿ ಹುಟ್ಟಿ, ಬೆಳೆದು, ಮಿಲಾನ್ ಪಟ್ಟಣದಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದು, ಕ್ರೈಸ್ತ ಸಂತರ ವ್ಯಾಸಂಗದಿಂದ ಸ್ಫೂರ್ತಿಗೊಂಡು ಕ್ರೈಸ್ತಧರ್ಮಾವಲಂಬಿಯಾಗಿ ಆಫ್ರಿಕಕ್ಕೆ ಹಿಂತಿರುಗಿ ಮತಧರ್ಮ ಪ್ರಚಾರದಲ್ಲಿ ನಿರತನಾದ ಒಬ್ಬ ಸಂತ. ತನ್ನ ಸಿಟಿ ಆಫ್ ಗಾಡ್ ಎಂಬ ಗ್ರಂಥದಿಂದ ಜಗತ್ಪ್ರಸಿದ್ಧನಾಗಿದ್ದಾನೆ. ಈತ ಪ್ರಾಚೀನಯುಗ ಮತ್ತು ಮಧ್ಯಯುಗದ ಸಂಕ್ರಾಂತಿ ಪುರುಷನಾಗಿದ್ದಾನೆ. ರೋಮನ್ ಚಕ್ರಾಧಿಪತ್ಯ ಆಗಲೇ ಕ್ರೈಸ್ತ ಧರ್ಮವನ್ನು ಅಂಗೀಕರಿಸಿದ್ದರಿಂದ ರಾಜ್ಯಕ್ಕೂ ಚರ್ಚಿಗೂ ಯಾವ ವಿಧವಾದ ದ್ವೇಷ, ಪೈಪೋಟಿಗಳೂ ಇರಲಿಲ್ಲ. 410ರಲ್ಲಿ ಗಾತ್ ಜನರು ರೋಮ್ ನಗರವನ್ನು ಕೊಳ್ಳೆ ಹೊಡೆದಾಗ ರೋಮ್ ನಗರದ ಪತನ ಪೂರ್ಣವಾಯಿತೆನ್ನಬಹುದು. ಕ್ರೈಸ್ತಧರ್ಮವನ್ನು ಸ್ಥಾಪಿಸಿದ್ದೇ ರೋಮ್ ಚಕ್ರಾಧಿಪತ್ಯದ ಪತನಕ್ಕೆ ಕಾರಣವಾಯಿತೆಂದು ಮೂಢನಂಬಿಕೆಯುಳ್ಳ ಕೆಲವು ಕ್ರೈಸ್ತಧರ್ಮವಿರೋಧಿಗಳು ಆರೋಪಿಸಿದರು. ಈ ಬಗೆಯ ಆರೋಪಣೆಗಳಿಂದ ಉದ್ರೇಕಗೊಂಡ ಆಗಸ್ಟೀನ್ ಇವುಗಳನ್ನು ತಿರಸ್ಕರಿಸುವ ಸಲುವಾಗಿಯೂ ಕ್ರೈಸ್ತ ಧರ್ಮವನ್ನು ರಕ್ಷಿಸುವ ಸಲುವಾಗಿಯೂ ತನ್ನ ಡಿ ಸಿವಿಟಾಸ್ ಡೈ (ಸಿಟಿ ಆಫ್ ಗಾಡ್) ಎಂಬ ಗ್ರಂಥವನ್ನು ರಚಿಸಿದ. ಇದು ಸುಮಾರು 13 ವರ್ಷಗಳ ಸತತ ಪ್ರಯತ್ನದ ಫಲ. ಇದರಲ್ಲಿ ಕರ್ತೃ ಕ್ರೈಸ್ತ ಧರ್ಮವನ್ನು ಸಮರ್ಥಿಸಿರುವುದಲ್ಲದೆ ತನ್ನ ದೇವರಾಜ್ಯ ಸ್ಥಾಪನೆಯನ್ನೂ ಕುರಿತು ತನ್ನ ಅಭಿಪ್ರಾಯಗಳನ್ನು ತಿಳಿಸಿದ್ದಾನೆ.

ಈ ಗ್ರಂಥ 22 ಭಾಗಗಳಿಂದ ಕೂಡಿದೆ. ಮೊದಲನೆಯ 10 ಭಾಗಗಳು ಪಾಷಂಡಿಗಳ (ಪೇಗನ್ಸ್) ದೋಷಾರೋಪಣೆಗಳ ವಿರುದ್ಧ ಕ್ರೈಸ್ತಧರ್ಮರಕ್ಷಣೆಗೂ ಮಿಕ್ಕ 12 ಭಾಗಗಳು ದೇವರಾಜ್ಯ ರಚನೆಗೂ ಸಂಬಂಧಿಸಿವೆ. ನಿಜವಾದ ದೇವರಾಜ್ಯ ಸ್ಥಾಪನೆಗೆ ಅವಕಾಶ ಮಾಡಿಕೊಡಬೇಕಾದರೆ ರೋಮನ್ನರ ಚಕ್ರಾಧಿಪತ್ಯದ ಪತನ ದೈವನಿಯಾಮಕವೇ ಆಗಿರಬೇಕು ಎಂದು ಆಗಸ್ಟೀನ್ ಹೇಳಿದ್ದಾನೆ. ರೋಮನ್ನರ ಚಕ್ರಾಧಿಪತ್ಯದ ವಿನಾಶದಿಂದ ತೆರವಾದ ಸ್ಥಳದಲ್ಲಿ ದೇವರಾಜ್ಯ ಸ್ಥಾಪನೆ ಸಾಧ್ಯವಾಯಿತು. ಮನುಷ್ಯನೇ ತನ್ನ ಪಾಪಕೃತ್ಯಗಳಿಗೆ ಜವಾಬ್ದಾರನೆಂದು ಈತ ನಂಬಿದ್ದರೂ ಹಣೆಬರೆಹದಲ್ಲಿ ಈತನಿಗೆ ಸ್ಥಿರವಾದ ನಂಬಿಕೆಯಿತ್ತು. ಇವನ ವಾದ ಸರಣಿ ಹೀಗೆ: ಎಂಥ ಕೆಡುಕಿನಲ್ಲೂ ಒಂದು ಶುಭಕಾರಕ ಶಕ್ತಿಯಿರುತ್ತದೆ. ಆದುದರಿಂದ ರೋಮ್ ಚಕ್ರಾಧಿಪತ್ಯದ ಪತನದ ಕೆಡುಕಿನಲ್ಲೂ ದೇವರಾಜ್ಯ ಸ್ಥಾಪನೆಯಾಗುವ ಒಂದು ಶುಭ ಚಿಹ್ನೆಯನ್ನು ನೋಡಬಹುದು. ಎಲ್ಲ ರಾಜರೂ ಪ್ರಜೆಗಳೂ ಕ್ರೈಸ್ತ ಧರ್ಮವನ್ನು ಅನುಸರಿಸಬೇಕು. ಆಗ ನಿಜವಾದ ದೇವರಾಜ್ಯ ಸ್ಥಾಪನೆಯಾಗುವುದು.

ಗ್ರಂಥದ ಉಳಿದ 12 ಭಾಗಗಳಲ್ಲಿ ದೇವರಾಜ್ಯದ ರಚನೆಯನ್ನು ನೋಡಬಹುದು. ಅದರ ಬಗ್ಗೆ ಆಗಸ್ಟೀನ್ ಹೀಗೆ ಹೇಳುತ್ತಾನೆ: ಐಹಿಕ ರಾಜ್ಯಗಳು ವಿನಾಶಕ್ಕೆ ಒಳಪಡಬಹುದಾದರೆ ಎಂಥ ಕಷ್ಟಗಳನ್ನಾದರೂ ಸಹಿಸಿಕೊಳ್ಳುವ ಒಂದು ರಾಜ್ಯವಿದೆ. ಇದು ಶಾಶ್ವತ ರಾಜ್ಯ. ಇಂಥ ಒಂದು ಶಾಶ್ವತ ರಾಜ್ಯವೇ ದೇವರಾಜ್ಯ. ಇದನ್ನು ಭೂಲೋಕದಲ್ಲಿರುವ ಕ್ರೈಸ್ತ ಧರ್ಮದಲ್ಲಿ ಪ್ರತ್ಯಕ್ಷವಾಗಿ ನೋಡಬಹುದು. ಐಹಿಕರಾಜ್ಯದೊಡನೆ ಹೋಲಿಸಿದರೆ ದೇವರಾಜ್ಯದಲ್ಲಿ ಅನೇಕ ಸದ್ಗುಣಗಳಿವೆ. ದೇವರಾಜ್ಯ ದೇಶಕಾಲಾತೀತವಾದುದು. ಐಹಿಕರಾಜ್ಯ ದೇವರಾಜ್ಯವೆಂಬ ದ್ವಂದ್ವಗುಣಗಳುಳ್ಳ ಪ್ರಪಂಚದಲ್ಲಿ ನಾವು ಜೀವಿಸಿದ್ದೇವೆ. ಸ್ವಾಭಿಮಾನದ ಮೇಲೆ ಸ್ಥಾಪಿತವಾಗಿರುವ ಐಹಿಕರಾಜ್ಯ ಏಕಪ್ರಕಾರವಾಗಿ ದುಷ್ಕೃತ್ಯಗಳನ್ನೇ ಮಾಡುತ್ತಿರುತ್ತದೆ. ದೈವವಾತ್ಸಲ್ಯದ ಮೇಲೆ ಸ್ಥಾಪಿತವಾಗಿರುವ ದೇವರಾಜ್ಯ ಯಾವಾಗಲೂ ಒಳ್ಳೆಯದನ್ನೇ ಬಯಸುತ್ತದೆ, ಅದಕ್ಕೆ ಉತ್ತೇಜನ ಕೊಡುತ್ತದೆ. ಒಂದು ಅಧಿಕಾರದ ಕಡೆಗೂ ಮತ್ತೊಂದು ನ್ಯಾಯದ ಕಡೆಗೂ ಗಮನ ಕೊಡುತ್ತವೆ. ಕ್ರೈಸ್ತಧರ್ಮ ಒಂದು ವಿಧದಲ್ಲಿ ದೇವರಾಜ್ಯದ ವಾಸ್ತವಿಕ ರೂಪ. ಏಕೆಂದರೆ ದೇವರಾಜ್ಯದ ಲಕ್ಷಣಗಳಾದ ಮನುಷ್ಯರ ಸಮಾಜ ಪಾಪಕರ್ಮಗಳಿಂದ ಕೂಡಿರುವುದರಿಂದ ದುಷ್ಟರನ್ನು ಹತೋಟಿಯಲ್ಲಿಡುವುದಕ್ಕಾಗಿ ಸರ್ಕಾರ ಸ್ಥಾಪಿತವಾಗಿದೆ.

ದೇವರಾಜ್ಯ ಸರ್ವರಿಗೂ ಸೇರಿದ್ದು. ಆದರೆ ಸಿಸಿರೋವಿನ ವಿಶ್ವ ಸಮಾಜದ ಹಾಗೆ ಅಧೋಗತಿಯಿಂದಾಗಿ ಎಲ್ಲರಿಗೂ ಇದರಲ್ಲಿ ಪ್ರವೇಶವಿಲ್ಲ. ದೈವಾನುಗ್ರಹವಿರುವವರು ಮಾತ್ರ ದೇವರಾಜ್ಯದ ಸದಸ್ಯರಾಗಬಹುದು. ದೇವರಾಜ್ಯದ ಸದಸತ್ವಕ್ಕೆ ದೈವಾನುಗ್ರಹವೇ ನಿಜವಾದ ಅರ್ಹತೆ; ಬುಡಕಟ್ಟು, ರಾಜ್ಯ ಅಥವಾ ವರ್ಗಗಳಲ್ಲ. ಸದಸ್ಯರೆಲ್ಲರೂ ವಿಶ್ವದ ನಾನಾ ಭಾಗಗಳಿಂದ ಬಂದಿದ್ದರೂ ದೇವರಲ್ಲಿ ಭಕ್ತಿ ಮತ್ತು ಅಕ್ಕರೆ ಇವರಲ್ಲಿ ಸರ್ವಸಾಮಾನ್ಯವಾಗಿರುವುದರಿಂದ, ಇವರೆಲ್ಲರೂ ಒಂದೇ ಸಮಾಜಕ್ಕೆ ಸೇರಿದವರಾಗಿರುತ್ತಾರೆ. ದೇವರಾಜ್ಯ ನ್ಯಾಯ ಮತ್ತು ಶಾಂತಿ ಎಂಬ ಎರಡು ಮುಖ್ಯವಾದ ಸದ್ಗುಣಗಳನ್ನು ಸಾಧಿಸುವುದು. ಶಿಸ್ತು ಮತ್ತು ಶಿಸ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ನೆರವೇರಿಸುವುದರಲ್ಲಿ ನ್ಯಾಯ ಅಡಕವಾಗಿದೆ. ತನ್ನ ಕರ್ತವ್ಯಗಳನ್ನು ನೆರವೇರಿಸುವವನೇ ಯೋಗ್ಯನಾದ ವ್ಯಕ್ತಿ. ಮನುಷ್ಯ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಐಚ್ಛಿಕ ಹಾಗೂ ದೇವರಾಜ್ಯದ ಗುರಿಯಾಗಬೇಕು.

ಗ್ರೀಕ್ ತತ್ತ್ವಜ್ಞಾನಿಗಳ ಹಾಗೆ ನ್ಯಾಯವೇ ರಾಜ್ಯದ ಆಧಾರ ಸ್ತಂಭವಾಗಿರಬೇಕೆಂಬುದನ್ನು ಆಗಸ್ಟೀನ್ ಒಪ್ಪುವುದಿಲ್ಲ. ಕೆಲವು ರಾಜ್ಯಗಳು ಕ್ರೈಸ್ತ ಧರ್ಮವನ್ನು ಅನುಸರಿಸದೆ ಇರಬಹುದು. ಆದರೆ ಕ್ರೈಸ್ತಧರ್ಮವನ್ನು ಅನುಸರಿಸುವ ರಾಜ್ಯಗಳಲ್ಲಿ ಮಾತ್ರ ನ್ಯಾಯ ದೊರಕುತ್ತದೆ. ಆದುದರಿಂದ ನ್ಯಾಯ ಮತಧರ್ಮದ ಒಂದು ಲಕ್ಷಣವೇ ಹೊರತು ರಾಜ್ಯದ ಲಕ್ಷಣವಲ್ಲ. ರಾಜ್ಯಕ್ಕಿಂತ ಉತ್ಕೃಷ್ಟವಾದ ಅಧಿಕಾರ ಚರ್ಚಿನಲ್ಲಿದೆ. ಮನುಷ್ಯರ ಪಾಪದ ಫಲವೇ ರಾಜ್ಯವೆಂದೂ ಮನುಷ್ಯರ ದುರ್ಗುಣಗಳನ್ನು ಕಡಿಮೆ ಮಾಡುವ ಸಲುವಾಗಿ ರಾಜ್ಯ ದೇವರಿಂದ ನೇಮಿಸಲ್ಪಟ್ಟಿದೆಯೆಂದೂ ಈತ ಹೇಳಿದ್ದಾನೆ. ಇದನ್ನು ನೋಡಿದರೆ ಆಗಸ್ಟೀನ್ ದ್ವಿಮುಖಾಧಿಕಾರ ತತ್ತ್ವವನ್ನು ಪ್ರತಿಪಾದಿಸುವನೆಂಬುದು ವ್ಯಕ್ತವಾಗುತ್ತದೆ. ಐಹಿಕ ಮತ್ತು ಧಾರ್ಮಿಕ ವ್ಯಾಪಾರಗಳಿಗೆ ಅನುಕೂಲವಾಗಿರುವ ಎರಡು ಬಗೆಯ ಅಧಿಕಾರಗಳು ರಾಜ್ಯದಲ್ಲಿವೆ. ಇವುಗಳಿಗೆ ಪ್ರತ್ಯೇಕವಾದ ಕ್ಷೇತ್ರಗಳಿವೆ. ಒಂದು ವೇಳೆ ಇವುಗಳಿಗೆ ತಿಕ್ಕಾಟ ಬಂದರೂ ಅದು ತಾತ್ಕಾಲಿಕವೇ ಹೊರತು ಯಾವಾಗಲೂ ನಿಲ್ಲತಕ್ಕದ್ದಲ್ಲ. ಕೊನೆಯಲ್ಲಿ ಧಾರ್ಮಿಕ ರಾಜ್ಯವೇ ಸ್ಥಿರವಾಗಿ ನಿಲ್ಲುವುದು.

ಆಸ್ತಿಪಾಸ್ತಿಗಳ ವಿಚಾರದಲ್ಲೂ ಈತ ತನ್ನ ಅಭಿಪ್ರಾಯಗಳನ್ನು ತಿಳಿಸಿದ್ದಾನೆ. ಭೂಮಿಯಿಂದ ಬರುವ ಫಲವನ್ನು ದೇವರು ಮಾನವನಿಗೆ ದಯಪಾಲಿಸಿದ್ದಾನೆ. ತನ್ನ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ಮನುಷ್ಯ ಈ ಫಲವನ್ನು ಉಪಯೋಗಿಸಿಕೊಳ್ಳಬಹುದು. ಆದರೆ ತನಗೆ ಎಷ್ಟು ಅವಶ್ಯವೋ ಅಷ್ಟನ್ನು ಮಾತ್ರ ಬಳಸಿಕೊಂಡು ಮಿಕ್ಕಿದ್ದನ್ನು ಸಮಾಜದ

ಉಪಯೋಗಕ್ಕಾಗಿ ಬಿಡಬೇಕು. ಗುಲಾಮಗಿರಿ ಪದ್ಧತಿ ಮನುಷ್ಯನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ. ಮನುಷ್ಯ ಇದನ್ನು ಅನುಭವಿಸಲೇಬೇಕು. ಹೀಗೆಂದು ಗುಲಾಮಗಿರಿ ಪದ್ಧತಿಯನ್ನು ಆಗಸ್ಟೀನ್ ಸಮರ್ಥಿಸಿದ್ದಾನೆ.

ಸಿಟಿ ಆಫ್ ಗಾಡ್ ಗ್ರಂಥ ಮಧ್ಯಯುಗದ ಯುರೋಪಿನ ರಾಜಕೀಯದ ಮೇಲೆ ಅತ್ಯಂತ ಪ್ರಭಾವ ಬೀರಿದ್ದಲ್ಲದೆ ಹೋಲಿ ರೋಮನ್ ಎಂಪೈರ್ ಎಂಬ ದೊಡ್ಡ ಸಂಸ್ಥೆಯೂ ಇದರ ಆಧಾರದ ಮೇಲೆ ಕಟ್ಟಲ್ಪಟ್ಟಿತು. ಮಧ್ಯಯುಗದ ತತ್ತ್ವಜ್ಞಾನಿಗಳೂ ಈ ಗ್ರಂಥದಿಂದ ಸ್ಫೂರ್ತಿ ಪಡೆದು ತಮ್ಮ ರಾಜಕೀಯ ಮತ್ತು ಧಾರ್ಮಿಕ ಅಭಿಪ್ರಾಯಗಳನ್ನು ರೂಪಿಸಿಕೊಂಡರು. (ಎಸ್.ಎಲ್.ಎನ್.)

**ಆಗಾಖಾನ್ :** ಷಿಯ ಮುಸ್ಲಿಮರಲ್ಲಿ ಇಸ್ಮೈಲಿ ಪಂಥದವರ ಧರ್ಮಗುರು. ಈ ಗುರುತನ ವಂಶಪಾರಂಪರ್ಯವಾಗಿ ಬಂದಿದೆ. ಪೈಗಂಬರ್ ಮಹಮ್ಮದನ ಅಳಿಯನಾದ ಅಲಿ ಮತ್ತು ಅವನ ಹೆಂಡತಿ ಫಾತಿಮರ ಸಂತತಿಯವನಾದ ಹಸನ್ ಅಲಿ ಷಾಗೆ (1800–51) ಪರ್ಷಿಯದ ದೊರೆ ಕೊಟ್ಟ ಬಿರುದು ಆಗಾಖಾನ್ ಎಂಬುದು. ಹಸನ್ ಅಲಿಗೂ ಪರ್ಷಿಯದ ದೊರೆಗೂ ವೈಮನಸ್ಯ ಬೆಳೆದು ಆತ ಭಾರತಕ್ಕೆ ಬಂದು ನೆಲೆಸಬೇಕಾಯಿತು. ಮೊದಲು ಆಫ್ಘನ್ ಯುದ್ಧದಲ್ಲಿಯೂ (1839–42) ಮುಂದೆ ಸಿಂಧೂ ಪ್ರಾಂತ್ಯ ವನ್ನು ವಶಪಡಿಸಿ ಕೊಳ್ಳು ವುದರಲ್ಲಿಯೂ ಆತ ಬ್ರಿಟಿಷರಿಗೆ ನೆರವು ನೀಡಿದ್ದರಿಂದ ಅವರು ಅವನಿಗೆ ಹಿಸ್ ಹೈನೆಸ್ ಎಂಬ ಬಿರುದನ್ನೂ ಜೀವನಾಂಶವನ್ನೂ ಕೊಟ್ಟರು.

ಆತನ ಮೊಮ್ಮಗ ಮೂರನೆಯ ಆಗಾಖಾನ್ (1878–1957) ಅಂತಾರಾಷ್ಟ್ರೀಯ ಖ್ಯಾತಿ ಪಡೆದ. ಅವನ ಹೆಸರು ಸುಲ್ತಾನ್ ಸರ್ ಮಹಮ್ಮದ್ ಷಾ. ಬಾಲ್ಯದಿಂದಲೂ ಧಾರ್ಮಿಕ ಶಿಕ್ಷಣವನ್ನಲ್ಲದೆ ಪಾಶ್ಚಾತ್ಯ ಶಿಕ್ಷಣವನ್ನು ಪಡೆದು ತನ್ನ ಅಸಾಧಾರಣ ವ್ಯಕ್ತಿತ್ವದಿಂದ ಇಸ್ಮೈಲಿ ಪಂಥದವರಿಗೆ ಮಾತ್ರ ಅಲ್ಲ, ಭಾರತದ ಇಡಿ ಮುಸ್ಲಿಮರ ಮುಖಂಡನಾಗಿ ನಿಂತು ಅವರ ರಾಜಕೀಯ ಹಕ್ಕುಬಾಧ್ಯತೆಗಳಿಗಾಗಿ ಶ್ರಮಿಸಿದ. ಬ್ರಿಟಿಷ್ ಆಡಳಿತಕ್ಕೆ ಬೆಂಬಲಕೊಡಲು ಅಖಿಲ ಭಾರತ ಮುಸ್ಲಿಮ್ ಸಂಘವನ್ನು ಸ್ಥಾಪಿಸಿದ (1906). 1930ರ ದಶಕದಲ್ಲಿ ಲೀಗ್ ಆಫ್ ನೇಷನ್ಸ್‌ನಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ. 1937ರಲ್ಲಿ ಲೀಗಿನ ಅಧ್ಯಕ್ಷನಾದ. 1930–32ರ ಚಕ್ರಗೋಷ್ಠಿಗಳಲ್ಲಿ ಪರಿಣಾಮಕಾರಿಯಾದ ಪಾತ್ರವಹಿಸಿದ. ನಾನಾ ದೇಶಗಳಲ್ಲಿ ನೆಲೆಸಿದ್ದ ಅವನ ಇಸ್ಮೈಲಿ ಅನುಯಾಯಿಗಳ ಐಹಿಕ ಪುರೋಭಿವೃದ್ಧಿಗಾಗಿ ದುಡಿದ. ಶುದ್ಧತಳಿ ಕುದುರೆಗಳನ್ನು ಸಾಕುವುದರಲ್ಲಿ ಈತ ನಿಷ್ಣಾತನಾಗಿದ್ದ. ಐದು ಬಾರಿ ಈತನ ಕುದುರೆಗಳು ಡರ್ಬಿ ಪಂದ್ಯದಲ್ಲಿ ಗೆದ್ದಿವೆ. 1936ರಲ್ಲಿ ಧರ್ಮಗುರು ಕಾರ್ಯದಿಂದ ನಿವೃತ್ತನಾಗಿ ಮೊಮ್ಮಗನಾದ ಪ್ರಿನ್ಸ್ ಕರೀಂನನ್ನು ಗುರುವನ್ನಾಗಿ (ನಾಲ್ಕನೆಯ ಆಗಾಖಾನ್) ನೇಮಿಸಿದ.*

**ಆಗುಂಬೆ :** ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ನೈಋತ್ಯದಂಚಿನಲ್ಲಿರುವ ಒಂದು ಸ್ಥಳ. ಶಿವಮೊಗ್ಗದಿಂದ ಸು. 80 ಕಿಮೀ ಪಶ್ಚಿಮಕ್ಕೂ ಅರಬ್ಬೀ ಸಮುದ್ರದ ದಕ್ಷಿಣ ಕನ್ನಡ ಜಿಲ್ಲೆಯ ದಡದಿಂದ ಸು. 48 ಕಿಮೀ ಪೂರ್ವಕ್ಕೂ ಇರುವ ಸಹ್ಯಾದ್ರಿಯ ಅತ್ಯುನ್ನತ ಶ್ರೇಣಿಗಳಲ್ಲೊಂದು ($75^0$ 05' ಪೂ. ರೇ. $30^0$ 31' ಉ.ಅ.). ಎತ್ತರ 705ಮೀ. ಪಶ್ಚಿಮದ ತಳದಲ್ಲಿ ಸೋಮೇಶ್ವರ ಎಂಬ ಊರಿದೆ. ಪೂರ್ವದಲ್ಲಿ ಆಗುಂಬೆಯ ಪೇಟೆ ಇದೆ. ಸುತ್ತುಮುತ್ತ ದಟ್ಟವಾದ ಅರಣ್ಯವಿದೆ. ಮಳೆಗಾಲದಲ್ಲಿ ಮೂರು ತಿಂಗಳು ಇಲ್ಲಿ ಸದಾ ಜಡಿಮಳೆ ಬೀಳುತ್ತಿರುತ್ತದೆ (750 ಸೆಂಮೀಗೂ ಹೆಚ್ಚು). ಭಾರತದಲ್ಲಿ ಅಧಿಕ ಮಳೆಬೀಳುವ ಪ್ರದೇಶಗಳಲ್ಲಿ ಇದೂ ಒಂದು. ದಕ್ಷಿಣ ಕನ್ನಡಜಿಲ್ಲೆಗೂ ಮೈಸೂರಿಗೂ ಸಂಪರ್ಕ ಕಲ್ಪಿಸುವ ರಸ್ತೆ ಸುತ್ತಿ ಸುತ್ತಿ ಆಗುಂಬೆ ಬೆಟ್ಟವನ್ನು ಏರುತ್ತದೆ. ಹಾಗೆ ಏರುವ ರಸ್ತೆ ಹತ್ತಾರು ಇಕ್ಕಟ್ಟಾದ ತಿರುವುಗಳಿಂದ (ಹೇರ್‌ಪಿನ್ ಕರ್ವ್ಸ್) ಕೂಡಿದೆ. ದಟ್ಟವಾದ ಕಾಡುಗಳಲ್ಲಿ ಕಡವೆ, ಕಾಡುಕೋಣಗಳು ಹೇರಳವಾಗಿವೆ. ಉಪಯುಕ್ತ ಗಿಡಮರಗಳಲ್ಲದೆ ಬಿದಿರು ದಟ್ಟವಾಗಿದೆ. ಸ್ವಲ್ಪ ಏಲಕ್ಕಿಯನ್ನೂ ಬೆಳೆಯಲಾಗುತ್ತದೆ.

ಮಳೆಗಾಲದಲ್ಲಿ ಸಿಡಿಲು, ಗುಡುಗು, ಮಿಂಚು, ಮಳೆಗಳಿಂದ ಆಗುಂಬೆ ಭಯಂಕರವೆನಿಸುತ್ತದೆ. ದಟ್ಟಕಾಡಿನಿಂದಲೂ ಮಳೆಮೋಡಗಳ ಆವರಣದಿಂದಲೂ ಮಳೆಗಾಲ ಮೂರು ತಿಂಗಳ ಕಾಲ ಇಲ್ಲಿ ಸೂರ್ಯನ ಬಿಸಿಲು ಬೀಳುವುದು ತುಂಬ ಅಪರೂಪ. ಬಿರುಗಾಳಿಗೋ ಜಡಿಮಳೆಗೋ ದಿನವೂ ಒಂದಲ್ಲ ಒಂದು ಭೂತಾಕಾರದ ಮರ ರಸ್ತೆಗೆ ಅಡ್ಡವಾಗಿ ಬಿದ್ದು ವಾಹನ ಸಂಚಾರ ಅಸ್ತವ್ಯಸ್ತವಾಗುತ್ತದೆ. ಇಲ್ಲಿ ತಿರುಗುವ ಬಸ್ಸು ಲಾರಿಗಳು ಸಾಮಾನ್ಯವಾಗಿ ಕೊಡಲಿ ಗರಗಸಗಳನ್ನು ಇಟ್ಟುಕೊಂಡಿರುತ್ತವೆ. ಕರ್ನಾಟಕದ ಅತ್ಯಂತ ದಟ್ಟವಾದ ಅರಣ್ಯಶ್ರೀಯನ್ನು ಇಲ್ಲಿ ನೋಡಬಹುದು. ಘಟ್ಟದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ ಇಲ್ಲಿಯ 60–90 ಮೀ ಎತ್ತರದ ಬಗೆ ಬಗೆಯ ದೈತ್ಯವೃಕ್ಷಗಳು ಯಾವುದೋ ಪಾತಾಳದಿಂದೆದ್ದು ಬಂದವುಗಳಂತೆ ತಮ್ಮ ತಲೆಯನ್ನೆತ್ತಿ ಇಣುಕುತ್ತವೆ. ಇಲ್ಲಿಯ ಪ್ರದೇಶವೆಲ್ಲ ಜಿಗಣೆ ಜಾತಿಯ ಇಂಬುಳ ಎಂಬ ರಕ್ತಹೀರುವ ಕೀಟಗಳಿಂದ ತುಂಬಿದೆ. ತಮ್ಮ ತಾರಸ್ವರದಿಂದ ಕಿವಿಯನ್ನು ಕೊರೆಯುವ ಮರಚಾರಟೆಗಳ ಸಂಗೀತ ಇಲ್ಲಿ ಸರ್ವಸಾಮಾನ್ಯ. ಸಹ್ಯಾದ್ರಿಶ್ರೇಣಿಗಳಿಂದ ಮೇಲಿಂದ ಕೆಳಕ್ಕೆ ಧುಮುಕುವ ಚಿಕ್ಕಚಿಕ್ಕ ಜಲಪಾತಗಳು ಇಲ್ಲಿ ಲೆಕ್ಕವಿಲ್ಲದಷ್ಟಿವೆ. ಅರಣ್ಯದ ಸುಮನೋಹರ ಭಯಂಕರತೆಯನ್ನು ಇಲ್ಲಿ ಅನುಭವಿಸಬಹುದು.

**ಸೂರ್ಯಾಸ್ತಮಾನ:** ಆಗುಂಬೆಯ ಪೇಟೆಯಿಂದ ಸುಮಾರು ಒಂದು ಮೈಲು ಪಶ್ಚಿಮದಲ್ಲಿ ಆಗುಂಬೆಯ ಪ್ರಪಂಚ ಪ್ರಸಿದ್ಧ ಸೂರ್ಯಾಸ್ತಮಾನ ದೃಶ್ಯವನ್ನು ಕಾಣಲು ಬೆಟ್ಟದ ನೆತ್ತಿಯಲ್ಲಿ ಒಂದು ರಂಗಸ್ಥಳವನ್ನು ಮಾಡಿದ್ದಾರೆ. ವರ್ಷವಿಡೀ–ಮಳೆಗಾಲ ಹೊರತು–ಈ ಅದ್ಭುತದೃಶ್ಯವನ್ನು ನೋಡಲು ದೇಶೀಯ, ವಿದೇಶೀಯ ಪ್ರವಾಸಿಗಳು ಇಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಮೋಡವಿಲ್ಲದ ಶುಭ್ರ ಸಂಜೆಗಳಲ್ಲಿ ಸೂರ್ಯಾಸ್ತವನ್ನು ನೋಡಲು ಚೆನ್ನ. ಈ ರಂಗಸ್ಥಳದಿಂದ ಇದ್ದಕ್ಕಿದ್ದಂತೆ ಸುಮಾರು 915 ಮೀ ಪಾತಾಳ ದರ್ಶನ ಮೈನವಿರೇಳಿಸುವಂಥದು. ಕೇವಲ ಆಳ ಮಾತ್ರವಲ್ಲ, ಪಡುಗಡಲ ತಡಿಯವರೆಗಿನ, ಅಲ್ಲಿಂದ ದಿಗಂತದ ಅಂಚಿನವರೆಗಿನ ಸು. 48 ಕಿಮೀ ವಿಸ್ತಾರ ಒಮ್ಮೆಗೇ ಕಣ್ಣುಗಳನ್ನು ತುಂಬುತ್ತದೆ. ಆ ಕ್ಷಣದಲ್ಲಿ ಆಗುವ ಅನುಭವ ಮಾತಿಗೆ ಮೀರಿದುದು, ಮೌನವಾಗಿ ಅನುಭವಿಸುವಂಥದು.

ಸೂರ್ಯಾಸ್ತಮಾನದ ಸುಂದರದೃಶ್ಯವನ್ನು ನೋಡಲು ರಂಗಸ್ಥಳದಲ್ಲಿ ಸಂಜೆಯ ಹೊತ್ತು ಕುಳಿತು ಪ್ರಕೃತಿ ತೋರುವ ವಿವಿಧವೇಷಗಳನ್ನು ಕಾಣಬೇಕು. ನಿಸರ್ಗ ತನ್ನ ನೂರಾರು ಸೀರೆಗಳನ್ನು ಉಟ್ಟು ಕಳಚುತ್ತಿರುತ್ತದೆ. ಅರಬ್ಬೀಸಮುದ್ರದಿಂದ ಹುಟ್ಟಿ ಸಾವಿರಾರು ಬೆಳ್ಳಿಮೋಡಗಳು ಬೆಳ್ಳಿಯ ವಿಮಾನಗಳಂತೆ ತೇಲಿ ಬರುತ್ತಿರುತ್ತವೆ. ಸೂರ್ಯನ ಬಿಸಿಲು ಪ್ರಖರವಾಗಿರುವ ಮಧ್ಯಾಹ್ನದ ಹೊತ್ತು ಸಮುದ್ರದ ಕಡೆಗೆ ನೋಡಬೇಕು. ಸಾವಿರಾರು ಮೈಲು ಅಗಲದ ಪಡುಗಡಲು ಕೇವಲ 5–7 ಸೆಂಮೀ ಅಗಲವಾಗಿ ದಿಗಂತರೇಖೆಯಲ್ಲಿ ಒಂದಾಗುವ ಅದ್ಭುತವನ್ನು ಕಾಣಬಹುದು. ಅಲೆಗಳಿಂದ ಸಂಚಲಿತವಾದ ಸಮುದ್ರ ಏನೋ ಜೀವಂತವಸ್ತು ಅತ್ತಿತ್ತ ಅಲುಗಾಡಿದಂತೆ ಕಾಣುವ ದೃಶ್ಯ ವಿಸ್ಮಯಕರವಾದುದು. ಸಮುದ್ರದಲ್ಲಿ ಓಡಾಡುವ ಬಿಳಿಯ ಹಾಯಿ ಬಿಚ್ಚಿದ ದೊಡ್ಡ ದೊಡ್ಡ ದೋಣಿಗಳನ್ನೂ ಹಡಗುಗಳನ್ನೂ ಕಾಣಬಹುದು.

ಸೂರ್ಯಾಸ್ತಮಾನ ದೃಶ್ಯ

ಸಂಜೆಯ ಹೊತ್ತೋ, ಸೌಂದರ್ಯದ ವಾರಿಧಿಯೇ ನಮ್ಮೆದುರು ನಿಲ್ಲುತ್ತದೆ. ಸೂರ್ಯ ತನ್ನ ಪ್ರಖರತೆಯನ್ನು ಕಳೆದುಕೊಂಡು ಇಳಿಯುತ್ತಿರುವಾಗ ಕ್ಷಣಕ್ಷಣವೂ ಸಮುದ್ರದ ಸುತ್ತುಮುತ್ತಲಿನ ಮೇಘಮಾಲೆ ಬಗೆಬಗೆಯ ಬಣ್ಣವನ್ನು ತಳೆಯುತ್ತದೆ. ಸೂರ್ಯಾಸ್ತಮಾನದ ನಾಟಕವನ್ನಾಡಲು ಪ್ರಕೃತಿ ನಿರ್ಮಿಸಿದ ಮಹಾಪಟವಾಗಿ ಪಶ್ಚಿಮಾಕಾಶ ಚಿತ್ರ ವೈಚಿತ್ರ್ಯಗಳಿಂದ ತುಂಬಿರುತ್ತದೆ. ಸೂರ್ಯ ಇಳಿಯುತ್ತಿರುವಂತೆ ಕಡಲು ಮೊದಮೊದಲು ಹೊಂಬಣ್ಣದ ಹಾಳೆಯಾಗಿದ್ದು, ದಿಗಂತರೇಖೆಗೆ ಹತ್ತಿರವಾದಾಗ ಸಮಸ್ತ ಸಮುದ್ರವಿಸ್ತಾರ ರಕ್ತಾರುಣರೇಖೆಯಾಗುತ್ತದೆ. ಪ್ರಕೃತಿಯ ಸುಂದರದೃಶ್ಯಗಳಲ್ಲಿ ಒಂದಾದ ಸೂರ್ಯಾಸ್ತಮಾನ ಭಾರತದಲ್ಲಿ ಮತ್ತೆಲ್ಲಿಯೂ ಇಷ್ಟು ಸುಂದರವಾಗಿ ಕಾಣಿಸುವುದಿಲ್ಲವಂತೆ. ಸಾವಿರಾರು ಮೈಲು ದೂರದಿಂದ ಆ ಒಂದು ಅಮೃತಗಳಿಗೆಯನ್ನು ಸವಿಯಲಿಕ್ಕಾಗಿ ಪ್ರವಾಸಿಗಳು ಬರುತ್ತಾರೆ. ಬಣ್ಣಬಣ್ಣದ ಮೋಡಗಳು ಆನೆಯ, ಸಿಂಹದ, ವಿವಿಧ ಪ್ರಾಣಿಗಳು ನಮ್ಮ ಕಲ್ಪನೆಗನುಸಾರವಾಗಿ

ಬಗೆಬಗೆಯ ರೂಪಗಳನ್ನು ತಾಳಿ ತಮ್ಮ ಪಾತ್ರಗಳನ್ನು ಅಭಿನಯಿಸಿ ಮರೆಯಾಗುತ್ತವೆ. ಯಾವ ಚಿತ್ರಕಾರನ ಚಿತ್ರವೂ ಈ ನಿಸರ್ಗ ನಿರ್ಮಿತ ಕಲಾಕೃತಿಗೆ ಸರಿದೂಗದು ಎಂದೆನಿಸುತ್ತದೆ. ಸೂರ್ಯ ಮುಳುಗುವ ಕೊನೆಯ ಒಂದು ನಿಮಿಷವಂತೂ ಅಪೂರ್ವ ರಸಗಳಿಗೆ ಎನ್ನಬೇಕು. ಆಗುಂಬೆಯ ಸೂರ್ಯಾಸ್ತಮಾನದ ಸಮಯ ಸೂರ್ಯ ಕವುಚಿಟ್ಟ (ಮುಸುಕಿಟ್ಟ) ಸ್ವರ್ಣ ಕುಂಭಾಕೃತಿಯಾಗಿ, ಅರ್ಧಚಂದ್ರಾಕೃತಿಯಾಗಿ, ಕಟ್ಟಕಡೆಗೆ ಬಿದಿಗೆಯ ಚಂದ್ರಲೇಖೆಯಾಗಿ ತನ್ನ ಕೊನೆಯ ರೂಪದಲ್ಲಿ ಮರೆಯಾಗುವ ಸೌಂದರ್ಯ ನಾಟಕ ದೃಶ್ಯ ಆನಂದದ ಹುಚ್ಚು ಹಿಡಿಸುತ್ತದೆ. ಸಾಯುವುದರೊಳಗೆ ಈ ಒಂದು ಅಮೃತಗಳಿಗೆಯನ್ನು ಕಾಣದೆ ಹೋಗುವವನು ನತದೃಷ್ಟ ಎಂದೆನಿಸುತ್ತದೆ.

ಆಗುಂಬೆ ಜಮದಗ್ನಿ–ರೇಣುಕಾದೇವಿಯರ ಮಗನಾದ ಪರಶುರಾಮನ ಊರು ಎಂಬ ನಂಬಿಕೆ ಇದೆ. ಅವನು ತನ್ನ ತಂದೆಯ ಮರಣಕ್ಕೆ ಕಾರಣನಾದ ಕಾರ್ತವೀರ್ಯಾರ್ಜುನ ನನ್ನು ಈಶ್ವರದತ್ತವಾದ ತನ್ನ ಪರಶುವಿಗೆ ಬಲಿಗೊಟ್ಟು, ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯ ಕುಲವನ್ನೇ ನಿರ್ಮೂಲ ಮಾಡಿದನಂತೆ. ಈ ಕ್ಷತ್ರಿಯಹತ್ಯೆಯ ಪಾಪವನ್ನು ಕಳೆದುಕೊಳ್ಳಲು ಅಶ್ವಮೇಧಯಾಗವನ್ನು ಮಾಡಿ, ಆತ ಸಮಸ್ತ ಭೂಮಿಯನ್ನು ಕಶ್ಯಪ ಋಷಿಗೆ ಧಾರೆಯೆರೆದು ದಾನಕೊಟ್ಟನಂತೆ. ಆಗ ಪರಶುರಾಮನಿಗೆ ಇರಲು ಸ್ಥಳವಿಲ್ಲದೆ ಆಗುಂಬೆಯ ಸಹ್ಯಾದ್ರಿಶಿಖರದಲ್ಲಿ ನಿಂತು ಎದುರುಗಡೆಯ ಸಮುದ್ರಕ್ಕೆ ಈ ಪರಶು ಹೋದಷ್ಟು ದೂರ ತನಗೆ ಸ್ಥಳಕೊಡು ಎಂದು ಪ್ರಾರ್ಥಿಸಿ ತನ್ನ ಕೊಡಲಿಯನ್ನು ಎಸೆದನಂತೆ. ಆಗ ಸಮುದ್ರ ಸಹ್ಯಾದ್ರಿಯಿಂದ ಹಿಂದಕ್ಕೆ ಉರುಳಿತಂತೆ. ಅಂದಿನಿಂದ ಆ ಭಾಗದ ಪಶ್ಚಿಮ ಕರಾವಳಿಯೆಲ್ಲ ಪರಶುರಾಮಕ್ಷೇತ್ರವೆಂದು ಹೆಸರಾಯಿತಂತೆ. ಹೀಗೆ ಪೌರಾಣಿಕವಾಗಿಯೂ ಆಗುಂಬೆಗೆ ಮಹತ್ವವಿದೆ. *

**ಆಗೈಟ್ :** ಪೈರಾಕ್ಸೀನ್ ವರ್ಗದ ಮುಖ್ಯ ಖನಿಜ. ರಾಸಾಯನಿಕ ಸಂಯೋಜನೆ ಯಲ್ಲಿ ಇದು ಕ್ಯಾಲ್ಸಿಯಂ, ಮೆಗ್ನೀಸಿಯಂ, ಕಬ್ಬಿಣ ಮತ್ತು ಅಲ್ಯೂಮಿನಿಯಂ ಸಿಲಿಕೇಟ್. ಈ ಖನಿಜ ಮಾನೊಕ್ಲಿನಿಕ್ ವರ್ಗಕ್ಕೆ ಸೇರಿದ ಹರಳುಗಳಾಗಿ ರೂಪುಗೊಂಡಿರುತ್ತದೆ. ಹರಳುಗಳು ಗಾತ್ರದಲ್ಲಿ ಕೊಂಚ ದಪ್ಪ. ಹಲವು ವೇಳೆ ಮುದ್ದೆಯಾಗಿ, ಮಂದವಾದ ಪದರಗಳೋಪಾದಿಯಲ್ಲಿ ಅಥವಾ ಕಣಗಳ ಮುದ್ದೆಯಾಗಿ ಕಂಡುಬರುವುದೂ ಉಂಟು. ಅವಳಿ ಹರಳುಗಳೂ ಆಗಾಗ ಸಿಗುತ್ತವೆ. ಬಣ್ಣದಲ್ಲಿ ಕಪ್ಪು ಮತ್ತು ಹಸುರು ಮಿಶ್ರಿತ ಕಪ್ಪು. ಒರೆಗೆ ಬಣ್ಣವಿಲ್ಲ, ಹೊಳಪಿನಲ್ಲಿ ಗಾಜಿನಂತೆ ಅಥವಾ ಗೋಂದಿನಂತೆ. ಮಿತಪಾರ ದರ್ಶಕ ಅಥವಾ ಅಪಾರದರ್ಶಕ. ಉತ್ತಮ ಬಗೆಯ, ಸಾಮಾನ್ಯವಾಗಿ ಒಂದೇ ವರ್ಗದ ಪ್ರಿಸ್ಮ್ಯಾಟಿಕ್ ಸೀಳುಗಳು. ಹಲವು ಬಾರಿ ಎರಡು ಬಗೆಯ ಸೀಳುಗಳಿದ್ದು ಪರಸ್ಪರ ಚೌಕಾಕೃತಿಯಲ್ಲಿ ಛೇದಿತವಾಗುತ್ತವೆ. ಕಾಠಿಣ್ಯ 5–6; ಚಾಕುವಿನ ಅಲಗಿನಿಂದ ಕಷ್ಟಪಟ್ಟು ಗೀರಬಹುದು.

ಈ ಖನಿಜದ ಹಸುರು ಬಣ್ಣದ ಬಗೆಯನ್ನು ಡಯಲೇಜ್ ಎನ್ನುತ್ತಾರೆ. ಇದು ಮಿತಪಾರದರ್ಶಕವಾಗಿದ್ದು ಕಂಚಿನಂತೆ ಹೊಳೆಯುತ್ತದೆ. ಆಗೈಟ್ ಬಹುಮಟ್ಟಿಗೆ ಅಗ್ನಿಶಿಲಾವರ್ಗದ ಆ್ಯಂಡಿಸೈಟ್, ಬಸಾಲ್ಟ್, ಡಾಲರೈಟ್ ಗ್ಯಾಬ್ರೋಗಳಲ್ಲೂ ರೂಪಾಂತರ ವರ್ಗಕ್ಕೆ ಸೇರಿದ ನೈಸ್ ಮತ್ತು ಗ್ರ್ಯಾನ್ಯುಲೈಟ್‌ಗಳಲ್ಲೂ ಕಂಡುಬರುತ್ತದೆ. (ಬಿ.ವಿ.ಜ.)

**ಆಗ್ನೇಯ ಏಷ್ಯ :** ಏಷ್ಯದ ಆಗ್ನೇಯ ಭಾಗದ ಪರ್ಯಾಯ ದ್ವೀಪ ಮತ್ತು ದ್ವೀಪ ಸಮೂಹಗಳನ್ನೊಳಗೊಂಡ ಭೂಪ್ರದೇಶ. ದಕ್ಷಿಣಅಕ್ಷಾಂಶ $11^0$ ಮತ್ತು ಉತ್ತರ ಅಕ್ಷಾಂಶ $28^0$ ಹಾಗೂ ಪೂರ್ವರೇಖಾಂಶ $92^0$– $132^0$ ಗಳ ನಡುವೆ ವಿಸ್ತರಿಸಿದೆ. ಉತ್ತರಕ್ಕೆ ಚೀನ, ದಕ್ಷಿಣಕ್ಕೆ ಹಿಂದೂಮಹಾಸಾಗರ, ಪಶ್ಚಿಮಕ್ಕೆ ಬಂಗಾಲಕೊಲ್ಲಿ, ವಾಯವ್ಯಕ್ಕೆ ಭಾರತ, ಥೈಲೆಂಡ್ ಖಾರಿ ಮತ್ತು ದಕ್ಷಿಣ ಚೀನ ಸಮುದ್ರ ಹಾಗೂ ಫಿಲಿಫೈನ್ಸ್‌ನಿಂದಾಚೆಗೆ ಪೆಸಿಫಿಕ್ ಸಾಗರಗಳಿಂದ ಸುತ್ತುವರಿದಿದೆ. ಇದರಲ್ಲಿ 10ದೇಶಗಳು ಸೇರಿವೆ–ಮಯನ್ಮಾರ್, ಥೈಲೆಂಡ್, ಓಸ್, ವಿಯೆಟ್ನಾಂ, ಕಾಂಬೋಡಿಯ, ಮಲೇಷ್ಯ, ಇಂಡೋನೇಷ್ಯ, ಫಿಲಿಫೈನ್ಸ್ ಹಾಗೂ ಚಿಕ್ಕದಾದ ಸಿಂಗಪುರ ಮತ್ತು ಬ್ರುನ್ನೆ (ಬೋರ್ನಿಯೊ ದ್ವೀಪದ ಪಶ್ಚಿಮಭಾಗ). ವಿಸ್ತೀರ್ಣ ಸು. 44,81,800 ಚ.ಕಿಮೀ ಜನಸಂಖ್ಯೆ ಸು. 503.3 ಮಿಲಿಯನ್. ಪ್ರಪಂಚದ ಒಟ್ಟು ವಿಸ್ತೀರ್ಣದಲ್ಲಿ ಶೇ. 3.36 ಮತ್ತು ಜನಸಂಖ್ಯೆಯಲ್ಲಿ ಶೇ. 8.53 ಭಾಗ ಆಗ್ನೇಯ ಏಷ್ಯದಲ್ಲಿದೆ.

**ಮೇಲ್ಮೈ ಲಕ್ಷಣ :** ವೈವಿಧ್ಯಮಯ ಮೇಲ್ಮೈ ಲಕ್ಷಣಗಳನ್ನು 4 ಭಾಗಗಳಾಗಿ ವಿಂಗಡಿಸ ಬಹುದು– 1) ಉತ್ತರ ಮಧ್ಯಪ್ರಸ್ಥಭೂಮಿಗಳು, 2) ಪರ್ವತ ಸ್ತೋಮ, 3) ತಗ್ಗು ಬಯಲುಗಳು, 4) ದ್ವೀಪ ಸ್ತೋಮಗಳು.

1) ಇವು ಇಂಡೊ–ಚೀನದ ಮೂರು ಪ್ರಮುಖ ಪ್ರಸ್ಥಭೂಮಿಗಳನ್ನೊಳಗೊಂಡಿವೆ– ಮಯನ್ಮಾರಿನ ಶಾನ್ ಪ್ರಸ್ಥಭೂಮಿ, ಉತ್ತರ ಥೈಲೆಂಡಿನ ಸಿಯಾಮ್ ಪ್ರಸ್ಥಭೂಮಿ ಮತ್ತು ಲಾವೋಸ್ ಪ್ರಸ್ಥಭೂಮಿ ಇರಾವಾಡಿ ಮತ್ತು ಸಿಟ್ಟಾಂಗ್ ನದೀಕಣಿವೆಗಳ ನಡುವೆ ಬರುವ ಶಾನ್ ಪ್ರಸ್ಥಭೂಮಿಯ ಸರಾಸರಿ ಎತ್ತರ 915 ಮೀ ನೀಸ್ ಮತ್ತು ಸುಣ್ಣ ಕಲ್ಲಿನಿಂದ ರಚನೆಯಾಗಿದೆ. ಸಾಲ್ವೀನ್ ಮತ್ತು ಮೀಕಾಂಗ್ ನದಿಗಳ ನಡುವಣ ಸಿಯಾಮ್, ಪುರಾತನ ಕಠಿಣ ನೀಸ್ ಮತ್ತು ಗ್ರ್ಯಾನೈಟ್ ಶಿಲೆಗಳಿಂದ ರಚನೆ, ಎತ್ತರ 1000–2000 ಮೀ. ಮೀಕಾಂಗ್‌ನ ಉಪನದಿಯಿಂದ ಪ್ರತ್ಯೇಕಗೊಂಡ ಲಾವೋಸ್ ಪ್ರಸ್ಥಭೂಮಿ ಸರಾಸರಿ ಎತ್ತರ 2000–3000ಮೀ.

2) ಉತ್ತರದಿಂದ ದಕ್ಷಿಣಕ್ಕೆ ಹಸ್ತದ ಬೆರಳಾಕೃತಿಯಲ್ಲಿ ಹಲವು ಪರ್ವತಗಳ ಹಂಚಿಕೆಯಿದೆ. ಮಯನ್ಮಾರ್–ಭಾರತಗಳ ನಡುವೆ ಗೋಡೆಯಂತಿರುವ ಅರಕಾನಯೋಮ, ಥೈಲೆಂಡ್–ಮಾಯನ್ಮಾರ್‌ಗಳ ನಡುವಣ ಟೆನಸೆರಿಮ್ ಹಾಗೂ ಲಾವೋಸ್–ವಿಯಟ್ನಾಂಗಳ ನಡುವಣ ಅನ್ನಾಮೈಟ್ ಕಾರ್ಡಿಲೆರ್‌ ಸ್ತೋಮಗಳು ಮುಖ್ಯವಾದವು. ಈ ಮೂರು ಶ್ರೇಣಿಗೆ ಎತ್ತರದ ಶಿಖರಗಳು ಕ್ರಮವಾಗಿ ಮೌಂಟ್ ವಿಕ್ಟೋರಿಯ (3053ಮೀ), ಗುನಾಂಗ್ ತಹನ್ (2790ಮೀ) ಮತ್ತು ಪಾನ್‌ಲಾಯ್ ಲೆಂಗ್ (2710ಮೀ). ಇಂಡೋನೇಷ್ಯ ಮತ್ತು ಫಿಲಿಫೈನ್ಸ್‌ಗಳಲ್ಲಿಯೂ ಜ್ವಾಲಾಮುಖಿ ಖನಿಜ ಪರ್ವತಗಳಿವೆ, ಕೆರಿನ್ಸಿ (3805ಮೀ.). ಲಿಯೂಸರ್ (3381ಮೀ) ಸ್ಲಾಮೆಟ್ (3428ಮೀ) ಮತ್ತು ಕಿನಾಬಾಲು (4101ಮೀ)ಗಳು ಎತ್ತರದ ಶಿಖರಗಳು.

3) ಉತ್ತರ ದಕ್ಷಿಣವಾಗಿ ಅನೇಕ ನದೀಬಯಲುಗಳಿವೆ. ಅವುಗಳಲ್ಲಿ ಮಯನ್ಮಾರ್ ಇರಾವಾಡಿ ಸಿಟ್ಟಾಂಗ್ ಬಯಲು, ಥೈಲೆಂಡಿನ ಮೇನಾಮ್ ಬಯಲು, ವಿಯೆಟ್ನಾಂ, ಕಾಂಬೋಡಿಯ ಮತ್ತು ಥೈಲೆಂಡ್‌ಗಳ ಮೋಕಾಂಗ್ ಹಾಗೂ ವಿಯೆಟ್ನಾಂನ ಕೆಂಪು ನದೀಬಯಲುಗಳು ಪ್ರಮುಖವಾದವು. ಇವುಗಳ ಜೊತೆಗೆ ಹಲವು ಕರಾವಳಿ ಮೈದಾನ ಮತ್ತು ಸಣ್ಣ ನದಿಗಳ ಬಯಲುಗಳೂ ಸಹ ಈ ವಿಭಾಗಕ್ಕೆ ಸೇರುತ್ತವೆ.

4) ಆಗ್ನೇಯ ಏಷ್ಯದಲ್ಲಿ ಅಸಂಖ್ಯಾತ ದ್ವೀಪ ಸಮೂಹಗಳಿದ್ದು, ಅವು ಏಷ್ಯ ಖಂಡದ ಮಾಲೆಯಂತೆ ಗೋಚರಿಸುತ್ತವೆ. ಅವು ದಕ್ಷಿಣ ಚೀನ ಸಮುದ್ರ, ಸೈಯಾಮ್ ಖಾರಿಸುಲು ಸಮುದ್ರ, ಸೆಲೆಬೆಸ್ ಸಮುದ್ರ, ಜಾವ ಸಮುದ್ರ ಇತ್ಯಾದಿಗಳಲ್ಲಿ ಹಂಚಿಕೆಯಾಗಿದ್ದು ಫಲವತ್ತಾದ ಮಣ್ಣು ಕಣಿವೆ ಮತ್ತು ಕಂದರಗಳನ್ನು ಹೊಂದಿವೆ. ಬಹಳಷ್ಟು ಜ್ವಾಲಾಮುಖಿ ಜನ್ಯ ಪರ್ವತಗಳಿವೆ. ಈಗಲೂ ಜ್ವಾಲಾಮುಖಿ ಮತ್ತು ಭೂಕಂಪಗಳು ಆಗಾಗ್ಗೆ ಸಂಭವಿಸಿ ಭೂಸ್ವರೂಪಗಳ ಮೇಲೆ ಪ್ರಭಾವ ಬೀರುತ್ತವೆ. ಜಗತ್ಪ್ರಸಿದ್ಧ ಅಗ್ನಿವೃತ್ತಕ್ಕೆ ಈ ಭಾಗಗಳೂ ಸೇರಿವೆ.

**ನದಿಗಳು :** ಉತ್ತರದ ಉನ್ನತ ಭಾಗಗಳಿಂದ ದಕ್ಷಿಣ ಮತ್ತು ಆಗ್ನೇಯದತ್ತ ತ್ರಿಜ್ಯದಂತೆ ಹರಿಯುವ ಅನುವರ್ತಿ ನದಿ ವ್ಯವಸ್ಥೆಗಳಿವೆ. ಇರಾವಾಡಿ, ಸಿಟ್ಟಾಂಗ್, ಸಾಲ್ವೀನ್. ಮೆನಾಮ್, ಮೇಕಾಂಗ್ ಮತ್ತು ಕೆಂಪುನದಿ ವ್ಯವಸ್ಥೆಗಳು ಆಗ್ನೇಯ ಏಷ್ಯದಲ್ಲಿ ಮುಖ್ಯವಾದವು. ಪೆರಾಕ್, ಕೆಲಾಂಟನ್, ಪಹಂಗ್; ಹಾರಿ, ಪಾಲೆಂಬಾಂಗ್, ಮೆಂದಾವಾಯಿ, ಬಾರಿಟೊ, ಕುಟಾಯಿ, ಕಯಾನ್, ಮತ್ತು ರಾಜಾಂಗ್ ಎಂಬವು ಇತರ ಸಣ್ಣ ನದಿಗಳು.

**ವಾಯುಗುಣ :** ಉಷ್ಣವಲಯದ ಆರ್ದ್ರತಾ ಹಾಗೂ ಮಾನ್ಸೂನ್ ಪ್ರಭಾವಿತ ವಾಯುಗುಣ. ಬಹಳಷ್ಟು ಭಾಗ ಉಷ್ಣ ವಲಯದಲ್ಲಿದ್ದರೂ ಸಾಗರ–ಸಮುದ್ರಗಳಿಂದಾ ವೃತವಾಗಿರುವುದರಿಂದ ಅತಿ ಉಷ್ಣತೆಯಿಲ್ಲ. ಬದಲಾಗಿ ಸಾಗರೀಯ ವಾಯುಗುಣ ಪ್ರಧಾನ ಉನ್ನತ ಭೂಸ್ವರೂಪಗಳೂ ಹವಾಗುಣದ ಮೇಲೆ ಪ್ರಭಾವ ಬೀರುತ್ತವೆ. ಋತುಕಾಲಿಕ

ಉಷ್ಣಾಂಶದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಮಳೆ ಹೆಚ್ಚು. ಬೇಸಗೆಯಲ್ಲಿ $27^0$ ಸೆಲ್ಸಿಯಸ್‌ಗಿಂತಲೂ ಹೆಚ್ಚು ಉಷ್ಣಾಂಶ. ಒಳನಾಡಿನಲ್ಲಿ ಒತ್ತಡ ಕಡಿಮೆ ಹಾಗೂ ನೈಋತ್ಯಮಾನ್ಸೂನ್ ಮಾರುತಗಳು ಪ್ರಬಲ. ಚಳಿಗಾಲದಲ್ಲಿ ಉಷ್ಣಾಂಶದಲ್ಲಿ ಸ್ವಲ್ಪ ಕಡಿಮೆಯಾಗುವುದರಿಂದ ಒಳನಾಡಿನಲ್ಲಿ ಅಧಿಕ ಒತ್ತಡವೇರ್ಪಟ್ಟು ನೈಋತ್ಯ ಮಾನ್ಸೂನ್‌ಗೆ ವಿರುದ್ಧವಾಗಿ ಮಾರುತಗಳು ಬೀಸುತ್ತವೆ. ಸರಾಸರಿ ವಾರ್ಷಿಕ ಮಳೆ 150 ಸೆಂಮೀ. ತೀರಗಳಿಂದ ಒಳನಾಡಿಗೆ ಹೋದಂತೆ ಮಳೆಯ ಪ್ರಮಾಣವು ಕಡಿಮೆಯಾಗುತ್ತದೆ. ಚಳಿಗಾಲಕ್ಕಿಂತ ಬೇಸಗೆಯಲ್ಲಿ ಹೆಚ್ಚು ಕೆಲವೆಡೆ ವರ್ಷವೆಲ್ಲ ಮಳೆ ಬೀಳುವ ಸಾಧ್ಯತೆಯಿದೆ.

**ಸಸ್ಯವರ್ಗ :** ವಾಯುಗುಣ ಮತ್ತು ಭೂಸ್ವರೂಪಗಳು ವೈವಿಧ್ಯಮಯ ಸಸ್ಯವರ್ಗಕ್ಕೆ ಪೂರಕ. ಉಷ್ಣವಲಯದ ಮಳೆ ಕಾಡುಗಳು, ಉಷ್ಣವಲಯದ ಮಾನ್ಸೂನ್ ಮಾದರಿ ಸಸ್ಯವರ್ಗ, ಕುರುಚಲು ಮತ್ತು ಸವನ್ನ ಹುಲ್ಲುಗಾವಲು ಹಾಗೂ ಮಿಶ್ರಣ ಸಸ್ಯವರ್ಗ ಆಗ್ನೇಯ ಏಷ್ಯದಲ್ಲಿ ಕಂಡುಬರುವ ಸಸ್ಯವರ್ಗದ ವಿಧಗಳು. ಮೊದಲ ವರ್ಗ ಸದಾ ಹಸುರಾಗಿದ್ದು ದಟ್ಟವಾದ ಮತ್ತು ಎತ್ತರಕ್ಕೆ ಬೆಳೆಯುವ ವೃಕ್ಷಗಳಿಂದ ಕೂಡಿರುತ್ತದೆ. ಮಹಾಗನಿ, ತೇಗ, ಸಿಂಕೋನ, ಬೀಟೆ, ರಬ್ಬರ್ ಬಿದಿರು ಮುಖ್ಯ ಮರಗಳು. ಮಾನ್ಸೂನ್ ಮಾದರಿ ಸಸ್ಯವರ್ಗದ ಮರ–ಗಿಡಗಳು ಒಣಹವೆಯ ಕಾಲದಲ್ಲಿ ತಮ್ಮ ಎಲೆ ಉದುರಿಸುವ ಗುಣಲಕ್ಷಣವುಳ್ಳವು. ಆದರೂ ಹಲವು ಬೆಲೆಬಾಳುವ ಮರಗಳು ಬೆಳೆಯುತ್ತವೆ. ಇತ್ತೀಚೆಗೆ ಕೃಷಿಕ್ಷೇತ್ರದ ವಿಸ್ತರಣೆಗಾಗಿ ಇಂತಹ ಕಾಡುಗಳನ್ನು ಕಡಿಯಲಾಗಿದೆ.

ಕಂಬುಜ ವಿಷ್ಣು

**ಮಣ್ಣು :** ಅಷ್ಟೊಂದು ಮಣ್ಣಿನ ಪ್ರಕಾರಗಳಿಲ್ಲ. ಅಧಿಕ ಶಾಖ ಮತ್ತು ಮಳೆ ಬೀಳುವ ಕಡೆ ಲ್ಯಾಟರೈಟ್, ಕೆಂಪು ಮತ್ತು ಬೂದುಬಣ್ಣದ ಮಣ್ಣು ಪ್ರಧಾನ. ಅನೇಕ ದ್ವೀಪಗಳಲ್ಲಿ ಜ್ವಾಲಾ ಮುಖಿ ಜನ್ಯ ಫಲವತ್ತಾದ ಮಣ್ಣು ಹಂಚಿಕೆಯಾಗಿದೆ.

**ಕೃಷಿ :** ಜನರ ಮುಖ್ಯ ಕಸಬು. ಪುರಾತನ ವರ್ಗಾವಣೆ ಬೇಸಾಯ ಹಲವು ಭಾಗಗಳಲ್ಲಿ ಇಂದೂ ಮುಂದುವರಿದಿದೆ. ಬೇರೆ ಬೇರೆ ದೇಶಗಳಲ್ಲಿ ವಿವಿಧ ಹೆಸರುಗಳಿಂದ ಇದನ್ನು ಕರೆಯುವರು. ಇತ್ತೀಚೆಗೆ ನೆಡುತೋಪು ಬೇಸಾಯ ಪ್ರಚಲಿತ. ಚಹ, ಕಾಫಿ, ರಬ್ಬರ್, ಕೋಕೊ, ಕಬ್ಬು, ತೆಂಗು ಪ್ರಮುಖ ನೆಡುತೋಪು ಬೆಳೆಗಳು. ಯುರೋಪಿಯನ್ ವಸಾಹತುಗಳ ಕಾಲದಲ್ಲಿ ಪ್ರಾರಂಭ. ಇಂದು ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ. ಎಲ್ಲ ಭೌಗೋಳಿಕಾಂಶಗಳೂ ಪೂರಕ. ಹತ್ತಿ, ಸೆಣಬು, ಮನಿಲಾಹೆಂಪ್‌ನಂತಹ ಕೈಗಾರಿಕಾ ಬೆಳೆಗಳೂ ಕಂಡುಬರುತ್ತವೆ. ಬತ್ತ ಮೆಕ್ಕೆ ಜೋಳಗಳು ಪ್ರಮುಖ ಆಹಾರಧಾನ್ಯಗಳ ಬೆಳೆಗಳು. ತಾಳೆಎಣ್ಣೆ ಮರ ಮತ್ತು ಸಾಂಬಾರ ಪದಾರ್ಥ ಪೂರಕ ಬೆಳೆಗಳನ್ನೂ ಈ ಪ್ರದೇಶಗಳಲ್ಲಿ ಸಾಗುವಳಿ ಮಾಡುವರು.

**ಮೀನುಗಾರಿಕೆ :** ದ್ವೀಪಸ್ತೋಮ ಪ್ರಧಾನ ಆಗ್ನೇಯ ಏಷ್ಯದಲ್ಲಿ ಮೀನುಗಾರಿಕೆಯೂ ಒಂದು ಜನರ ಪ್ರಮುಖ ವೃತ್ತಿ. ಅಕ್ಕಿಯ ಅನಂತರ ಮೀನು ಜನರ ಪ್ರಮುಖ ಆಹಾರ. ಸಾಗರೀಯ ಮೀನುಗಾರಿಕೆಯಲ್ಲದೆ, ಒಳನಾಡಿನ ನದಿ ಕೊಳ ಮತ್ತು ಹೊಂಡಗಳಲ್ಲಿಯೂ ಈ ವೃತ್ತಿ ಚಟುವಟಿಕೆಯಿದೆ. ಈ ದೇಶಗಳ ಮೀನುಗಾರಿಕೆಯ ಅಭಿವೃದ್ಧಿಯಲ್ಲಿ ಆರ್ಥಿಕ ಮತ್ತು ತಾಂತ್ರಿಕ ನೆರವು ಜಪಾನಿನಿಂದ ದೊರೆಯುತ್ತದೆ.

**ಖನಿಜ, ಶಕ್ತಿ ಸಂಪತ್ತು :** ಆಗ್ನೇಯ ಏಷ್ಯದ ಹಲವು ದೇಶಗಳು ಹಲವು ಬಗೆಯ ಖನಿಜ–ಶಕ್ತಿ ಸಂಪನ್ಮೂಲಗಳನ್ನು ಹೊಂದಿದ್ದು, ಆರ್ಥಿಕ ವ್ಯವಸ್ಥೆಯನ್ನು ನಿರ್ಧರಿಸುತ್ತವೆ. ತವರ ಮತ್ತು ಬಾಕ್ಸೈಟ್‌ಗಳ ಉತ್ಪಾದನೆಯಲ್ಲಿ ಮುಂದು. ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್‌ಗಳ ನಿಕ್ಷೇಪವೂ ಅಪಾರ. ಸ್ವಲ್ಪ ಮಟ್ಟಿಗೆ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳೂ ಸಾಕಷ್ಟು ಲಭ್ಯ. ಮಲೇಷ್ಯ, ಇಂಡೋನೇಷ್ಯ ಮತ್ತು ಥೈಲೆಂಡ್‌ಗಳು ಪ್ರಪಂಚದಲ್ಲೇ ಮುಖ್ಯ ತವರ ಉತ್ಪಾದಕ ದೇಶಗಳು. ಬಾಕ್ಸೈಟ್ ಉತ್ಪಾದನೆಗೆ ಇಂಡೋನೇಷ್ಯ ಪ್ರಸಿದ್ಧಿ. ಅದೇ ಕಚ್ಚಾ ತೈಲದ ಉತ್ಪಾದನೆಯಲ್ಲಿ ಇಂಡೋನೇಷ್ಯ ಮತ್ತು ಮಯನ್ಮಾರ್ ಪ್ರಮುಖವಾದವು.

**ಕೈಗಾರಿಕೆಗಳು :** ಕೃಷಿ ಆಧಾರಿತ ಕೈಗಾರಿಕೆಗಳೇ ಹೆಚ್ಚು. ಅರೆಸಿದ್ಧ ವಸ್ತು, ಆಹಾರ ವಸ್ತುಗಳ ಸಂಸ್ಕರಣೆ, ಗೃಹಕೈಗಾರಿಕೆ ಮತ್ತು ಕರಕುಶಲ ಕೈಗಾರಿಕೆಗಳು ಇನ್ನೂ ಪ್ರಧಾನ. ಆದರೆ ಕಬ್ಬಿಣ–ಉಕ್ಕು ಹಾಗೂ ಎಂಜಿನಿಯರಿಂಗ್ ನಂತಹ ಮೂಲ ಕೈಗಾರಿಕೆಗಳು ಗೌಣ. ನಗರ–ಪಟ್ಟಣಗಳಲ್ಲಿ ಹೆಚ್ಚು ಉದ್ಯಮಗಳು ಕೇಂದ್ರೀಕೃತ. ಹತ್ತಿ ಜವಳಿ, ಸಕ್ಕರೆ ಕೈಗಾರಿಕೆ, ಕಾಗದ ತಯಾರಿಕೆ, ಸಿಮೆಂಟ್, ಲೋಹ ಕರಗಿಸುವಿಕೆಗಳು ಪ್ರಮುಖ ಉದ್ಯಮಗಳು. ಉಷ್ಣವಲಯದ ವಾಯುಗುಣದಲ್ಲಿ ಹೆಚ್ಚು ಕಬ್ಬು ಬೆಳೆಯುವುದರಿಂದ ಸಕ್ಕರ ಕೈಗಾರಿಕೆ ಪ್ರಗತಿ ಹೆಚ್ಚು. ರೇಷ್ಮೆಬಟ್ಟೆ, ಅಕ್ಕಿಗಿರಣಿ, ತೈಲಶುದ್ಧೀಕರಣ, ಬುಟ್ಟಿಗಳ ತಯಾರಿಕೆ, ಪಿಂಗಾಣಿ ವಸ್ತುಗಳ ತಯಾರಿಕೆ, ಕೊಬ್ಬರಿ ಎಣ್ಣೆ ಮತ್ತು ಚರ್ಮದ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳೂ ಇವೆ.

**ಸಾರಿಗೆ–ಸಂಪರ್ಕ :** ದೀರ್ಘಕಾಲ ವಸಾಹತುಗಳ ಆಡಳಿತ, ರಾಜಕೀಯ ಅಸ್ಥಿರತೆ, ಬಂಡವಾಳ ಮತ್ತು ತಂತ್ರಜ್ಞಾನಗಳ ಕೊರತೆ ಇತ್ಯಾದಿಗಳಿಂದ ಸಾರಿಗೆ ಅಭಿವೃದ್ಧಿ ಕಡಿಮೆ. ರಸ್ತೆ, ರೈಲು, ವಾಯು ಸಂಚಾರ ಮತ್ತು ಸಮುದ್ರಯಾನಗಳು ಮುಖ್ಯಸಾರಿಗೆ ಮಾಧ್ಯಮಗಳು. ಇಂಡೋನೇಷ್ಯ, ಮಲೇಷ್ಯ ಹಾಗೂ ಫಿಲಿಪೈನ್ಸ್‌ಗಳಲ್ಲಿ ರಸ್ತೆ ಸಾರಿಗೆ ಉತ್ತಮ. ಮಯನ್ಮಾರಿನಲ್ಲಿ ಕಡಿಮೆ. ರೈಲುಸಾರಿಗೆಗೆ ಆದ್ಯತೆ ಕಡಿಮೆ. ಪ್ರತಿದೇಶಗಳೂ ಸಹ ಸ್ವಂತ ವಿಮಾನ ಯಾನ ವ್ಯವಸ್ಥೆ ಹೊಂದಿರುತ್ತವೆ. ಸಮುದ್ರಗಳಲ್ಲಿ ಮಾತ್ರವಲ್ಲದೆ ನದಿಗಳ ಮೂಲಕ ಜಲಸಾರಿಗೆ ಅಭಿವೃದ್ಧಿ ಹೊಂದುತ್ತಿದೆ.

**ವ್ಯಾಪಾರ :** ಪರ್ಯಾಯ ದ್ವೀಪ ಮತ್ತು ದ್ವೀಪ ಸನ್ನಿವೇಶ ಮತ್ತು ಜಲಸಾರಿಗೆ ಸೌಲಭ್ಯಗಳಿಂದಾಗಿ ವಿದೇಶಿ ವ್ಯಾಪಾರಿ ವಿವಿಧ ದೇಶಗಳೊಂದಿಗೆ ಸಾಗುತ್ತದೆ. ಸಿಂಗಪುರ, ಫಿಲಿಫೈನ್ಸ್ ಮತ್ತು ಬ್ರುನ್ಯೈ ಹೆಚ್ಚು ಅಂತಾರಾಷ್ಟ್ರೀಯ ವಹಿವಾಟು ನಡೆಸುವ ದೇಶಗಳು. ಇಂದೊಂದೇ ಸಿಂಗಪುರದ ಆರ್ಥಿಕ ವ್ಯವಸ್ಥೆಯ ಮೂಲಾಧಾರ. ಇದನ್ನು ಪೂರ್ವದ ಹೆಬ್ಬಾಗಿಲು ಎನ್ನುವರು. ಲಾವೋಸ್ ಮತ್ತು ಕಾಂಬೋಡಿಯಗಳಲ್ಲಿ ವ್ಯಾಪಾರದ ಪ್ರಮಾಣ ಅಷ್ಟಕ್ಕಷ್ಟೆ ವ್ಯಾಪಾರದ ಪ್ರಮುಖ ಸರಕುಗಳು–ಕೃಷಿ ಉತ್ಪನ್ನ ಮತ್ತು ಖನಿಜಗಳು ರಬ್ಬರ್, ಅಕ್ಕಿ, ಕಚ್ಚಾ ಹತ್ತಿ, ಸಕ್ಕರೆ, ಬಾಕ್ಸೈಟ್, ತವರ, ಮ್ಯಾಂಗನೀಸ್, ಪೆಟ್ರೋಲಿಯಂ, ತೇಗ, ಸಾಂಬಾರ ಪದಾರ್ಥ, ತೆಂಗು, ತಾಳೆಎಣ್ಣೆ, ಚಹ, ಕಾಫಿ, ಚರ್ಮ ಮತ್ತು ಕಬ್ಬಿಣದ ಅದಿರು ರಫ್ತಾಗುವ ಪ್ರಮುಖ ಸರಕುಗಳು. ಕೈಗಾರಿಕೋತ್ಪನ್ನಗಳು, ರಾಸಾಯನಿಕ ಗೊಬ್ಬರ, ಕಬ್ಬಿಣ ಮತ್ತು ಉಕ್ಕು, ಎಂಜಿನಿಯರಿಂಗ್ ಸರಕು, ರಾಸಾಯನಿಕಗಳು, ವಾಹನಗಳು ಇತ್ಯಾದಿ ಆಮದಾಗುವ ಸರಕುಗಳು. ಆಗ್ನೇಯ ಏಷ್ಯದೊಂದಿಗೆ ಹೆಚ್ಚು ವ್ಯಾಪಾರ ಸಂಬಂಧವುಳ್ಳ ದೇಶಗಳೆಂದರೆ ಬ್ರಿಟನ್, ನೆದರ್ಲೆಂಡ್ಸ್, ಫ್ರಾನ್ಸ್, ಅಮೆರಿಕ ಸಂಯುಕ್ತ ಸಂಸ್ಥಾನ, ಜಪಾನ್, ಆಸ್ಟ್ರೇಲಿಯ, ಭಾರತ, ರಷ್ಯ ಮತ್ತು ಚೀನ.

ಗರುಡ ವಾಹನ ವಿಷ್ಣು – ಬೆಲ್‌ಹನ್ (ಜಾವ)

**ಜನಸಂಖ್ಯೆ :** ಪ್ರಪಂಚದಲ್ಲಿ ಸಾಧಾರಣ ಜನಸಾಂದ್ರತೆಯುಳ್ಳ ಭಾಗ. ಸು. ಜನಸಂಖ್ಯೆ 503.3 ಮಿಲಿಯನ್ (1998). ಪ್ರಪಂಚ ಜನಸಂಖ್ಯೆಯಲ್ಲಿ ಶೇ. 8.5 ಭಾಗ. ಇಂಡೋನೇಷ್ಯ ಜನಭರಿತ ಭಾಗವಾದರೆ ಬ್ರುನ್ಯೆನ್ ಸುಲ್ತಾನೇಟ ವಿರಳಜನ ಸಂಖ್ಯೆವುಳ್ಳದ್ದು. ಸಿಂಗಾಪುರ (5137), ಫಿಲಿಫೈನ್ಸ್ ವಿಯೆಟ್ನಾಂ, ಥೈಲೆಂಡ್ ಮತ್ತು ಇಂಡೋನೇಷ್ಯಗಳಲ್ಲಿ ಜನಸಾಂದ್ರತೆ ಹೆಚ್ಚು. ಇವು ಆಗ್ನೇಯ ಏಷ್ಯದ ಸರಾಸರಿಗಿಂತಲೂ (112 ಚ.ಕಿಮೀ) ಹೆಚ್ಚು ಜನಸಾಂದ್ರತೆ ಹೊಂದಿವೆ. ಲಾವೋಸ್ ಮತ್ತು ಬ್ರುನ್ಯೈಗಳಲ್ಲಿ ಸಾಂದ್ರತೆ ಬಹಳ ಕಡಿಮೆ. ಜನಸಂಖ್ಯೆಯಲ್ಲಿ ಶೇ. 34.5 ರಷ್ಟು ನಗರವಾಸಿ (ಶೇ. 20) ಗಿಂತ ಗ್ರಾಮ ವಾಸಿಗಳೇ ಹೆಚ್ಚು. ಏಷ್ಯದ ಇತರ ದೇಶಗಳಲ್ಲಿ ಇದೇ ಪರಿಸ್ಥಿತಿ ಇದೆ. ಇತ್ತೀಚೆಗೆ ವಲಸೆ ಹೋಗುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹಿಂದೆ ಆಸ್ಟ್ರಲಾಯ್ಡ್ ಜನಾಂಗವೇ ಪ್ರಧಾನವಾಗಿತ್ತು. ಅಲ್ಲಲ್ಲಿ ಬುಡಕಟ್ಟು ಜನರಿದ್ದಾರೆ–ಸೆಮಾಂಗ್, ಬರಾಂಗ್ ಅಕಿತ್, ಅಯೆಟ, ನೀಗ್ರೊ ಇಂದು ಸ್ಥಳೀಯರಲ್ಲಿ ಮಂಗೋಲಿಯನ್ನರ ಸಂಖ್ಯೆ ಹೆಚ್ಚು. ಮಯನ್ಮಾರ್, ಥೈಲೆಂಡ್, ಲಾವೋಸ್ ಮತ್ತು ಕಾಂಬೋಡಿಯಗಳಲ್ಲಿ ಬೌದ್ಧ ಧರ್ಮ ಪ್ರಧಾನ, ಇಂಡೋನೇಷ್ಯ, ಮಲೇಷ್ಯದ ಥೈಲೆಂಡ್ ಮತ್ತು ದಕ್ಷಿಣ ಫಿಲಿಫೈನ್ಸ್‌ಗಳಲ್ಲಿ ಇಸ್ಲಾಮ್ ಧರ್ಮ ಪ್ರಧಾನ. ಅನಿಮಿಸಂ ಮತ್ತು ತಾವೊ ಧರ್ಮವೂ ಕಂಡುಬರುತ್ತದೆ.

**ಭಾಷೆಗಳು :** ಆಗ್ನೇಯ ಏಷ್ಯ ಬಹು ಭಾಷೆಗಳ ಸಂಗ್ರಹಾಲಯವಾಗಿದೆ. ಅವುಗಳ ಪರಸ್ಪರ ಸಂಬಂಧಗಳಂತೂ ಬೆರಗುಗೊಳಿಸುವಂತಿದೆ. ಮಯನ್ಮಾರ್‌ನಲ್ಲೆ 125–140 ಭಾಷೆಗಳಿವೆ. ಇವುಗಳಲ್ಲಿ ವಿಯೆಟ್ನಾಂ, ಕಾಂಬೋಡಿಯ, ಥಾಯ್, ಮಲಯ, ಬರ್ಮ

ಭಾಷೆಗಳು ಅನೇಕ ಶತಮಾನಗಳಷ್ಟು ಪ್ರಾಚೀನವಾಗಿದ್ದು ಶಿಷ್ಟ ಸಾಹಿತ್ಯಕ ಭಾಷೆಗಳಾಗಿವೆ. ಕಾರೆನ್ ಮತ್ತು ಷಾನ್‌ಗಳಂಥ ಕೆಲವು ಬರೆವಣಿಗೆಗೆ ಬಂದು ಕೇವಲ ಒಂದು ಶತಮಾನ ಮಾತ್ರ ಆಗಿದೆ. ಉಳಿದ ಭಾಷೆಗಳ ವಿಷಯದಲ್ಲಿ ತಿಳಿದಿರುವುದು ಬಹು ಸ್ವಲ್ಪ. ಪಾದ್ರಿಗಳಲ್ಲಿ ಕೆಲವರು ಅವಕ್ಕೆ ನಿಘಂಟುಗಳನ್ನು ರಚಿಸಿದ್ದಾರೆ. ಪ್ರವಾಸಿಗಳು, ಅಧಿಕಾರಿಗಳು ಕೆಲವಕ್ಕೆ ಶಬ್ದಭಂಡಾರವನ್ನು ಪಟ್ಟಿ ಮಾಡಿದ್ದಾರೆ. ಉಳಿದವಕ್ಕೆ ಯಾವ ದಾಖಲೆಯೂ ಇಲ್ಲ.

ಇಲ್ಲಿ ಅಸ್ಟ್ರೊನೀಸಿಯನ್ ಅಥವಾ ಮಲೆಯೊ-ಪಾಲಿನೀಸಿಯನ್, ಮಾನ್-ಖ್ಮೆರ್, ಸಿನೊ-ಟಿಬೆಟನ್ ಎಂಬ ಮೂರು ಭಾಷಾ ಕುಟುಂಬಗಳಿವೆ. ಇವಕ್ಕೆ ಸೇರಿದ ಭಾಷೆಗಳ ಅಧ್ಯಯನ ಸಾಕಷ್ಟು ಆದ ಹೊರತು ಆಗ್ನೇಯ ಏಷ್ಯದ ಭಾಷೆಗಳ ವಿಚಾರವಾಗಿ ಖಚಿತವಾಗಿ ಏನನ್ನೂ ಹೇಳಲು ಸಾಧ್ಯವಾಗದು.

**ಚರಿತ್ರೆ :** ಭೌಗೋಳಿಕ ದೃಷ್ಟಿಯಿಂದ ಆಗ್ನೇಯ ಏಷ್ಯ ಅನೇಕ ಸಣ್ಣಸಣ್ಣ ರಾಜ್ಯಗಳನ್ನೂ ದ್ವೀಪಗಳನ್ನೂ ಒಳಗೊಂಡಿದ್ದರೂ ಪ್ರಾಚೀನ ಸಂಸ್ಕೃತಿಯ ದೃಷ್ಟಿಯಿಂದ ಒಂದು ದೇಶವೆಂದು ಪರಿಗಣಿಸಬಹುದು. ಇದರಲ್ಲಿ ಮುಖ್ಯವಾಗಿ ಇಂಡೋನೇಷ್ಯ ಮತ್ತು ಇಂಡೊಚೀನ ಎಂಬ ಎರಡು ಭಾಗಗಳಿವೆ. ಇವುಗಳಲ್ಲಿ ಈಗಿನ ಕಾಂಬೋಡಿಯ, ವಿಯೆಟ್ನಾಮ್, ಥೈಲೆಂಡ್, ಲಾವೋಸ್, ಮಯನ್ಮಾರ್, ಇಂಡೋನೇಷ್ಯ ದೇಶಗಳಿವೆ. (ನೋಡಿ- ಇಂಡೊನೇಷ್ಯ)

ವರಹ ಮೂರ್ತಿ, ಆಂಕೋರ್‌ವಾಟ್ (ಕಂಬುಜ)

ಬಹು ಪ್ರಾಚೀನಕಾಲದಿಂದಲೂ ಆಗ್ನೇಯ ಏಷ್ಯದ ರಾಜ್ಯಗಳು ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೊಳಗಾದವು. ಇದರಿಂದ ಅಲ್ಲಿ ಬಹುಕಾಲ ಈ ಸಂಸ್ಕೃತಿ ನೆಲೆಸಿ ಭಾರತ ಮತ್ತು ಆಗ್ನೇಯ ಏಷ್ಯಗಳ ಸಾಮೀಪ್ಯ ಹೆಚ್ಚಿದೆ. ಫ್ರೆಂಚ್ ಮತ್ತು ಡಚ್ ವಿದ್ವಾಂಸರು ಈ ಸಂಸ್ಕೃತಿಯ ಅಧ್ಯಯನಕ್ಕೆ ತಳಹದಿಯನ್ನು ಹಾಕಿದ್ದಾರೆ. ಅದರಲ್ಲೂ ಸೀಡಸ್, ಕ್ರೋಮ್ ಸ್ಟುಟರ್‌ಹೀಮ್, ವಿನ್‌ಸ್ಟೆಡ್, ಪೆಲಿಯಟ್, ಜಿಲುಸ್ಕಿ, ಹಾರ್ವೆ ಮುಂತಾದ ವಿದ್ವಾಂಸರುಗಳ ಕೊಡುಗೆ ಗಮನಾರ್ಹ.

ಭಾರತೀಯ ಸಂಸ್ಕೃತಿ ಆಗ್ನೇಯ ಏಷ್ಯದಲ್ಲಿ ಯಾವ ರೀತಿ ಹರಡಿತು ಎಂದು ಹೇಳುವುದು ಕಷ್ಟ. ವಿನ್‌ಸ್ಟೆಡ್ ಹೇಳಿರುವಂತೆ ಹಿಂದೂಗಳು ಆಗ್ನೇಯ ಏಷ್ಯಕ್ಕೆ ಹಠಾತ್ತನೆ ಪ್ರಯಾಣ ಮಾಡಲಿಲ್ಲ; ಅವರ ಪ್ರಯಾಣ ಹಿಂಸಾತ್ಮಕಕೃತ್ಯಗಳಿಂದಲೂ ಕೂಡಿರಲಿಲ್ಲ; ಅದು ಶಾಂತಿಯುತವಾಗಿದ್ದುದಲ್ಲದೆ ಕ್ರಮಬದ್ಧವಾಗಿತ್ತು. ಸಂಬಾರ ಪದಾರ್ಥಗಳನ್ನು ಹೊತ್ತು ತಂದ ಹಡಗೊಂದು ಆಗ್ನೇಯ ಏಷ್ಯದ ರೇವುಪಟ್ಟಣದಲ್ಲಿ ಬೀಡು ಬಿಟ್ಟಿತು. ಈ ಹಡಗಿನಲ್ಲಿದ್ದ ವಸ್ತುಗಳು ಮಾರಾಟವಾಗುವವರೆಗೆ ಭಾರತೀಯ ನಾವಿಕರು ಸ್ಥಳೀಯ ಜನಗಳೊಡನೆ ಬೆರೆತರು. ಸಂಸ್ಕೃತ ಭಾಷೆಯನ್ನು ಬಲ್ಲ ಭಾರತೀಯರು ಅಲ್ಲಿಯ ಜನಗಳ ಪ್ರೀತಿ ಮತ್ತು ವಿಶ್ವಾಸಗಳನ್ನು ಗಳಿಸಿಕೊಂಡರು; ಮತ್ತೆ ಕೆಲವರು ಆ ದೇಶದ ಸುಂದರ ಯುವತಿಯರನ್ನು ಮದುವೆಯಾದರು; ಮತ್ತೆ ಕೆಲವರು ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಜನಗಳಿಗೆ ಹೇಳಿದರು. ಅಷ್ಟರಲ್ಲಿಯೇ ಮತ್ತೊಂದು ಹಡಗು ಭಾರತದಿಂದ ಬಂದಿತು. ಈ ರೀತಿ ಆಗ್ನೇಯ ಏಷ್ಯ ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿರಬೇಕು.

ಕೌಂಡಿನ್ಯ, ಅಗಸ್ತ್ಯ ಮುಂತಾದ ಋಷಿಗಳೇ ಆಗ್ನೇಯ ಏಷ್ಯದಲ್ಲಿ ಭಾರತೀಯ ಸಂಸ್ಕೃತಿ ಹರಡಲು ಕಾರಣರಾದರೆಂದು ಶಾಸನಗಳಿಂದ ತಿಳಿಯುತ್ತದೆ. ಭಾರತೀಯ ಧಾರ್ಮಿಕಗ್ರಂಥಗಳ ಪ್ರಕಾರ ಸಮುದ್ರಯಾನ ನಿಷಿದ್ಧಕಾರ್ಯ. ಹಾಗಾದರೂ ಭಾರತೀಯರು ಆಗ್ನೇಯ ಏಷ್ಯಕ್ಕೆ ಹೋಗಲು ಕಾರಣಗಳೇನು ಎಂದು ನೋಡುವುದು ಆವಶ್ಯಕ. ವ್ಯಾಪಾರವೇ ಅತ್ಯಂತ ಪ್ರಮುಖವಾದ ಮತ್ತು ಪ್ರಬಲವಾದ ಕಾರಣವೆಂದು ತೋರುತ್ತದೆ. ಅಲೆಕ್ಸಾಂಡರನ ದಂಡೆಯಾತ್ರೆಯಿಂದಲೂ ಪರ್ಷಿಯನ್ನರ ದಾಳಿಗಳಿಂದಲೂ ಭಾರತೀಯರಿಗೆ ಹೊರದೇಶಗಳಲ್ಲಿ ವ್ಯಾಪಾರ ಮಾಡುವ ಕುತೂಹಲ ಹೆಚ್ಚಾಯಿತು. ಪ್ರಾಚೀನ ಭಾರತೀಯರು ರೋಮ್ ದೇಶದೊಡನೆ ವ್ಯಾಪಾರ ಸಂಪರ್ಕಗಳನ್ನು ಹೊಂದಿದ್ದರು. ಆದರೆ ವೆಸ್‌ಪೆಲಿಸಿಯನ್ ಎಂಬ ಸಾಮ್ರಾಟ ರೋಮ್ ದೇಶಕ್ಕೆ ಆಗುತ್ತಿದ್ದ ನಷ್ಟವನ್ನು ತಪ್ಪಿಸಲು ಚಿನ್ನದ ನಾಣ್ಯಗಳು ಹೊರಕ್ಕೆ ಹೋಗದಂತೆ ತಡೆ ಹಾಕಿದ. ಇದರಿಂದ ಪ್ರಾಚೀನ ಭಾರತೀಯರು ಚಿನ್ನಕ್ಕೋಸ್ಕರ ಬೇರೆ ದೇಶಗಳೊಡನೆ ಸಂಪರ್ಕ ಬೆಳೆಸಬೇಕಾಯಿತು. ಆಗ್ನೇಯ ಏಷ್ಯದ ಕೆಲವು ಭಾಗಗಳು ಸುವರ್ಣಭೂಮಿಯೆಂದು ಖ್ಯಾತಿ ಪಡೆದಿದ್ದುವು. ಆದ್ದರಿಂದ ಭಾರತೀಯರು ಈ ದೇಶಗಳ ಕಡೆಗೆ ತಮ್ಮ ಗಮನ ಹರಿಸಿದರು. ಆಗ್ನೇಯ ಏಷ್ಯಕ್ಕೆ ಹೋದ ಭಾರತೀಯರು ಭಾರತದ ಯಾವ ಪ್ರಾಂತ್ಯದವರು ಎನ್ನುವ ವಿಚಾರದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಇವರು ವಂಗದೇಶದವರೆಂದು ಕೆಲವರು ವಾದಿಸುತ್ತಾರೆ. ಆಗ್ನೇಯ ಏಷ್ಯದ ಶಿಲ್ಪಸಂಪತ್ತನ್ನು ಗಮನಿಸಿದರೆ ಗುಪ್ತರ ಕಾಲದ ಲಕ್ಷಣಗಳು ಅಲ್ಲಿ ವಿಶೇಷವಾಗಿರುವುದು ನಮ್ಮ ಗಮನಕ್ಕೆ ಬರುತ್ತದೆ. ಜಾವ ದ್ವೀಪದ ಶಿಲ್ಪಗಳಲ್ಲಿ ಪಾಲ ಮತ್ತು ಸೇನರ ಕಾಲದ ಶಿಲ್ಪಲಕ್ಷಣಗಳು ವಿಶೇಷವಾಗಿವೆ. ಜಾವದ ಶೈಲೇಂದ್ರರು ಒರಿಸ್ಸದ ಶೈಲೋದ್ಭವರೆಂದೂ ಅವರ ಶಾಸನಗಳ ಲಿಪಿ ನಾಗರೀ ಲಿಪಿಗೆ ಸಮೀಪವಾಗಿರುವುದೆಂದೂ, ಅಲ್ಲದೆ ಬಂಗಾಲ ಆಗ್ನೇಯ ಏಷ್ಯಕ್ಕೆ ಜಲ ಮತ್ತು ಭೂಮಾರ್ಗದಿಂದ ಬಹು ಹತ್ತಿರವಾಗಿರು ವುದರಿಂದ ಬಂಗಾಲದವರೇ ಮೊಟ್ಟಮೊದಲು ಆಗ್ನೇಯ ಏಷ್ಯಕ್ಕೆ ಹೋದರೆಂದೂ ಕೆಲವರ ವಾದ. ಜಾವದ ಹೋಲಿಂಗ್ ಎಂಬುದು ಕಳಿಂಗ ಎಂಬುದರ ರೂಪಾಂತರವೆಂದೂ ತಲೈಂಗ್ ಎಂಬುದು ತೆಲುಂಗ ಎಂಬುದರ ರೂಪಾಂತರವೆಂದೂ ವಿಯೆಟ್ನಾಮ್‌ನ ಡಾಂಗ್‌ಡುವಾಂಗ್‌ನಲ್ಲಿ, ಜಾವದ ಜೆಂಬರ್ ಮತ್ತು ಸೆಲಿಬಿಸ್ ದ್ವೀಪದ ಸೆಂಪಗ ಮುಂತಾದ ಕಡೆಗಳಲ್ಲಿ ದೊರಕಿರುವ ಬುದ್ಧನ ವಿಗ್ರಹಗಳು ಅಮರಾವತಿ ಶಿಲ್ಪಶೈಲಿಗೆ ಸೇರಿರುವುದರಿಂದ, ಆಂಧ್ರದೇಶದಿಂದ ಭಾರತೀಯರು ಆಗ್ನೇಯ ಏಷ್ಯಕ್ಕೆ ಪ್ರಥಮವಾಗಿ ಹೋದರೆಂದೂ ಕೆಲವರು ವಾದಿಸುತ್ತಾರೆ. ಜಾವ ದ್ವೀಪದ ಕೆಲವು ದೇವಾಲಯಗಳು ಚಾಳುಕ್ಯ ವಾಸ್ತುಶೈಲಿಯಲ್ಲಿ ರುವುದರಿಂದ ಕರ್ನಾಟಕದವರೇ ಪ್ರಥಮವಾಗಿ ಆಗ್ನೇಯ ಏಷ್ಯಕ್ಕೆ ಹೋದರೆಂದು ಕೆಲವರ ಅಭಿಪ್ರಾಯ. ಆಗ್ನೇಯ ಏಷ್ಯದ ಅನಾಗರಿಕ ಬುಡಕಟ್ಟಿಗೆ ಸೇರಿದ ಕೆಲವು ಜನಾಂಗಗಳ ಹೆಸರು ಚೋಳ, ಮಲಯಾಳಿ, ಪಾಂಡ್ಯ ಎಂದಿರುವುದರಿಂದಲೂ ಜಾವದ ಶೈಲೇಂದ್ರರು ಮತ್ತು ಪಾಂಡ್ಯರು ಮೀನಲಾಂಛನ ವನ್ನು ಹೊಂದಿರುವುದರಿಂದಲೂ ಆಗ್ನೇಯ ಏಷ್ಯದ ಪ್ರಾಚೀನ ಶಾಸನಗಳ ಲಿಪಿಗೂ ಪಲ್ಲವ ಲಿಪಿಗೂ ಬಹಳ ಹೋಲಿಕೆಗಳಿರುವುದರಿಂದಲೂ ಜಾವದ ಚಂಡಿಕಲಸನ್ ಚಂದಿಗೋ ಮುಂತಾದ ದೇವಾಲಯಗಳು ಮಹಾಬಲಿಪುರದ ರಥಗಳನ್ನು ಬಹುವಾಗಿ ಹೋಲುವುದ ರಿಂದಲೂ ತಮಿಳು ದೇಶವೇ ಆಗ್ನೇಯ ಏಷ್ಯಕ್ಕೆ ಹೋದ ವಲಸೆಗಾರರ ಮೂಲ ನಿವಾಸಸ್ಥಾನವೆಂದೂ ಅನೇಕರು ವಾದಿಸುತ್ತಾರೆ. ಒಟ್ಟಿನಲ್ಲಿ ಬಂಗಾಲದ, ಆಂಧ್ರದ, ಕರ್ನಾಟಕದ ಮತ್ತು ತಮಿಳುನಾಡಿನ ಪ್ರಭಾವಗಳು ಆಗ್ನೇಯ ಏಷ್ಯದ ಪ್ರಾಚೀನ ಸಂಸ್ಕೃತಿಯಲ್ಲಿ ವಿಶೇಷವಾಗಿ ಕಾಣುವುದರಿಂದ, ಭಾರತದ ಎಲ್ಲ ಭಾಗಗಳಿಂದಲೂ ಆಗ್ನೇಯ ಏಷ್ಯಕ್ಕೆ ಜನಗಳು ಹೋಗುತ್ತಿದ್ದರು ಎಂದು ಹೇಳಬಹುದು.

ಆಗ್ನೇಯ ಏಷ್ಯಕ್ಕೂ ಭಾರತಕ್ಕೂ ಸಂಪರ್ಕ ಯಾವಾಗ ಪ್ರಾರಂಭವಾಯಿತು ಎಂದು ನಿರ್ಧರಿಸಲು ಸಾಕಷ್ಟು ಮಾಹಿತಿಗಳು ದೊರಕಿಲ್ಲ. ಅತ್ಯಂತ ಪ್ರಾಚೀನವಾದ ಮಾಹಿತಿ ರಾಮಾಯಣ ಮಹಾಕಾವ್ಯದಲ್ಲಿ ದೊರಕುತ್ತದೆ. ಸೀತೆಯನ್ನು ಹುಡುಕಲು ವಾನರರು ಜಾವ ದ್ವೀಪಕ್ಕೆ, ಸುವರ್ಣ ದ್ವೀಪಗಳಿಗೆ ಹೋಗಬೇಕೆಂದು ಸುಗ್ರೀವ ಆಜ್ಞೆ ಮಾಡಿದ ಉಲ್ಲೇಖದಿಂದ, ರಾಮಾಯಣ ಕಾಲದಲ್ಲಿಯೇ ಭಾರತೀಯರಿಗೆ ಆಗ್ನೇಯ ಏಷ್ಯದ ಪರಿಚಯವಿತ್ತೆಂದು ಗೊತ್ತಾಗುತ್ತದೆ. ಬೌದ್ಧ ಗ್ರಂಥವಾದ ನಿದ್ದೇಸದಲ್ಲಿಯೂ ಜಾತಕ ಕಥೆಗಳಲ್ಲಿಯೂ ಆಗ್ನೇಯ ಏಷ್ಯ ದ್ವೀಪಗಳ ಉಲ್ಲೇಖ ಬರುತ್ತದೆ. ಟಾಲೆಮಿಯ ಭೂಗೋಳ ಗ್ರಂಥದಲ್ಲಿ ಜಾವ ದ್ವೀಪವನ್ನು ಸುವರ್ಣ ದ್ವೀಪವೆಂದು ವರ್ಣಿಸಿರುವುದು ಗಮನಾರ್ಹ.

ಪ್ರ.ಶ. 132ರಲ್ಲಿ ಜಾವ ದ್ವೀಪದಲ್ಲಿ ದೇವವರ್ಮನೆಂಬ ರಾಜನಿದ್ದನೆಂದು ತಿಳಿದುಬರುತ್ತದೆ. ಇವುಗಳಿಂದ ಕ್ರಿಸ್ತನ ಕಾಲಕ್ಕಿಂತ ಮುಂಚೆಯೇ ಆಗ್ನೇಯ ಏಷ್ಯಕ್ಕೂ ಭಾರತಕ್ಕೂ ಸಾಂಸ್ಕೃತಿಕ ಸಂಪರ್ಕವಿತ್ತೆಂದು ಗೊತ್ತಾಗುತ್ತದೆ.

ಅಭಿರಾಜ ಎಂಬ ಕಪಿಲವಸ್ತುವಿನ ರಾಜ ಬರ್ಮದೇಶಕ್ಕೆ ಬಂದು ಆಳಲು ಪ್ರಾರಂಭಿಸಿದನೆಂದು ಪಾಟಲೀಪುತ್ರದಲ್ಲಿ ಪ್ರ.ಶ.ಪೂ. 241ರಲ್ಲಿ ನಡೆದ ಮೂರನೆಯ ಬೌದ್ಧ ಸಮ್ಮೇಳನ ಸೋಣ ಮತ್ತು ಉತ್ತರ ಎಂಬುವವರನ್ನು ಬರ್ಮಕ್ಕೆ ಕಳುಹಿಸಿದ್ದಿತೆಂದೂ ತಿಳಿಯುತ್ತದೆ. ಯುವಾನ್‌ಚಾಂಗ್ ಬರ್ಮದಲ್ಲಿ ದ್ವಾರವತೀ ಎಂಬ ರಾಜ್ಯವನ್ನು ಗುರುತಿಸಿದ್ದಾನೆ. ಇದರ ಪಶ್ಚಿಮಕ್ಕೆ ಶ್ರೀಕ್ಷೇತ್ರ ರಾಜ್ಯವಿತ್ತು. ಇಲ್ಲಿ ಬೌದ್ಧ ಸ್ತೂಪಗಳ ಅವಶೇಷಗಳು ದೊರಕಿವೆ. ಅನಂತರ ಪ್ಯು ರಾಜ್ಯ ಬೆಳೆದು, ಅದರ ನಾಶವಾದ ಅನಂತರ ಅರಿಮರ್ದನಪುರ ಸಾಮ್ರಾಜ್ಯ (ನೋಡಿ- ಅರಿಮರ್ದನಪುರ-ಸಾಮ್ರಾಜ್ಯ) ಸ್ಥಾಪನೆಯಾಯಿತು. ಈ ದೊರೆಗಳಲ್ಲಿ ಅನೋರಥ (1044-72) ಮತ್ತು ಕ್ಯಾನ್ಸಿತ್ಥ (1086-1112) ಮುಖ್ಯರು. ಇವರ ಕಾಲದಲ್ಲಿ ಬೌದ್ಧಧರ್ಮ ಬರ್ಮದಲ್ಲಿ ಚೆನ್ನಾಗಿ ಬೇರೂರಿತು. ಇವರ ಅನಂತರ ನರಥು, ನರಪೈಸಿಥು, ಜಯಥೇಂಕ ಮುಂತಾದವರು ಆಳಿದರು. 1287ರಲ್ಲಿ ಕುಬ್ಲೈಖಾನನ ಮೊಮ್ಮಗನ ನೇತೃತ್ವದಲ್ಲಿ ಮಂಗೋಲ್ ಸೈನ್ಯ ಪಗನ್ ರಾಜ್ಯಕ್ಕೆ ಮುತ್ತಿಗೆ ಹಾಕಿ ಅದನ್ನು ಲೂಟಿಮಾಡಿತು.

ಸಯಾಂ ಅಥವಾ ಥೈಲೆಂಡ್‌ನಲ್ಲಿ 2ನೆಯ ಶತಮಾನಕ್ಕೆ ಸೇರಿದ ಭಾರತೀಯ ಅವಶೇಷಗಳು ದೊರಕಿದ್ದರೂ ಬಲವತ್ತರವಾದ ರಾಜ್ಯ ಸ್ಥಾಪನೆಯಾದುದು 13ನೆಯ ಶತಮಾನದಲ್ಲಿ. ಅದಕ್ಕೆ ಮುಂಚೆ ಇದು ಕಂಬುಜ ಮತ್ತು ಬರ್ಮ ದೇಶಗಳ ಆಳ್ವಿಕೆಗೆ

ಒಳಪಟ್ಟಿತ್ತು. ಕಂಬುಜದ ಏಳನೆಯ ಜಯವರ್ಮನ ಮರಣಾನಂತರ ಇಂದ್ರಾದಿತ್ಯ ಸುಖೋಥೈ ಎಂಬ ರಾಜ್ಯಸ್ಥಾಪನೆ ಮಾಡಿದ. ಇದರಲ್ಲಿ ರಾಮಕಮ್ ಹೆಂಗ್ (1280–1318) ಅತ್ಯಂತ ಮುಖ್ಯನಾದವ. ಈತ ಸುಖೋಥಯದ ಜೊತೆಗೆ ಸಜ್ಜನಾಲಯ ಎಂಬ ಇನ್ನೊಂದು ರಾಜಧಾನಿಯನ್ನು ಸ್ಥಾಪಿಸಿದ. ಈ ರಾಜ್ಯದ ಪತನವಾದ ಅನಂತರ ಅಯುಥಿಯ (ಅಯೋಧ್ಯಾ) ಎಂಬ ಇನ್ನೊಂದು ರಾಜ್ಯ ಸ್ಥಾಪನೆಯಾಯಿತು. ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದ ಇದು ಅಂಥ ಮಹತ್ತರವಾದ ಪಾತ್ರವನ್ನೇನೂ ವಹಿಸಲಿಲ್ಲ.

ಭಾರತದಿಂದ ಪ್ರಯಾಣ ಮಾಡಿದ ಕಂಬು ಸ್ವಾಯಂಭುವ ಶಿವಭಕ್ತನಿಂದ ಸ್ಥಾಪಿತವಾದ ಕಂಬುಜರಾಜ್ಯ ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ವಿಶೇಷವಾಗಿ ಒಳಗಾಯಿತು. ಫೂನಾನ್ ಎಂಬುದು ಇಲ್ಲಿಯ ಮೊಟ್ಟಮೊದಲ ರಾಜ್ಯ. ಕೌಂಡಿನ್ಯನೆಂಬ ಬ್ರಾಹ್ಮಣ ಈ ರಾಜ್ಯದಲ್ಲಿ ಭಾರತೀಯ ಸಂಸ್ಕೃತಿಯನ್ನು ಬಳಕೆಗೆ ತಂದನೆಂದು ಪ್ರತೀತಿ. ಪ್ರ.ಶ. 6ನೆಯ ಶತಮಾನದಿಂದ ಜಯವರ್ಮ, ಶ್ರೇಷ್ಠವರ್ಮ, ಈಶಾನವರ್ಮ ಮುಂತಾದ ರಾಜರುಗಳು ಕಂಬುಜದಲ್ಲಿ ಆಳಿದರು. ಕಂಬುಜದ ಏಳಿಗೆಗೆ ಕಾರಣನಾದವ ಎರಡನೆಯ ಜಯವರ್ಮ (802–54). ಈತ ಶೈವಧರ್ಮಾವಲಂಬಿಯಾಗಿದ್ದು ದೇವರಾಜ ಲಿಂಗದ ಉಪಾಸನೆಯನ್ನು ಪ್ರಾರಂಭಿಸಿದ. ಇಂದ್ರಪುರ, ಹರಿಹರಾಲಯ, ಅಮರೇಂದ್ರಪುರ ಮುಂತಾದ ನಗರಗಳನ್ನು ನಿರ್ಮಿಸಿದ. ಇಂದ್ರವರ್ಮ, ಯಶೋವರ್ಮರು ಆಳಿದ ಅನಂತರ ಎರಡನೆಯ ಸೂರ್ಯವರ್ಮ (1113–50) ರಾಜನಾದ. ಈತ ವಿಶ್ವವಿಖ್ಯಾತವಾದ ಆಂಕೋರ್‌ವಾಟ್ ದೇವಾಲಯವನ್ನು ಸ್ಥಾಪಿಸಿದ. ಇವನ ಕಾಲದಲ್ಲಿ ಸಂಸ್ಕೃತ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. 7ನೆಯ ಜಯವರ್ಮನೇ (1181–01) ಕಂಬುಜರಾಜ್ಯದ ಅತ್ಯಂತ ಸಮರ್ಥ ದೊರೆ. ಈತ ಆಂಕೋರ್ ಥಾಮ್ ದೇವಾಲಯವನ್ನು ನಿರ್ಮಿಸಿದ. ಇವನ ಅನಂತರ ಕಂಬುಜರಾಜ್ಯದ ಅವನತಿ ಪ್ರಾರಂಭವಾಯಿತು. ಆಯುಥಿಯದ ರಾಜ ಕಂಬುಜವನ್ನು ವಶಮಾಡಿಕೊಂಡ.

ಮಲಯ ಪರ್ಯಾಯದ್ವೀಪ ಪ್ರ.ಶ. ಒಂದನೆಯ ಶತಮಾನದಿಂದಲೇ ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿತ್ತು. ಪ್ರಾಚೀನ ಸಾಹಿತ್ಯದಲ್ಲಿ ಈ ದ್ವೀಪಗಳನ್ನು ಸ್ವರ್ಣದ್ವೀಪ ಅಥವಾ ಸುವರ್ಣಭೂಮಿ ಎಂದು ಉಲ್ಲೇಖಿಸಲಾಗಿದೆ. ಮೊಟ್ಟ ಮೊದಲು ಇದು ಬೌದ್ಧಧರ್ಮದ ಕೇಂದ್ರವಾಗಿತ್ತು. ಜಾವದಲ್ಲಿ 5ನೆಯ ಶತಮಾನದಲ್ಲಿ ಗುಣವರ್ಮನ ವಂಶದವರು ರಾಜ್ಯವಾಳುತ್ತಿದ್ದರು. ಇದೇ ಸಮಯದಲ್ಲಿ ಮಧ್ಯ ಜಾವದಲ್ಲಿ ಹೋಲಿಂಗ್ ಅಥವಾ ಕಳಿಂಗ ಎಂಬ ರಾಜ್ಯವಿದ್ದಿತು. ಸುಮಾತ್ರದಲ್ಲಿ ಪ್ರ.ಶ. 4ನೆಯ ಶತಮಾನದಲ್ಲಿ ಶ್ರೀವಿಜಯರಾಜ್ಯ ಸ್ಥಾಪನೆಯಾಗಿತ್ತು. ಬೋರ್ನಿಯೊ ದ್ವೀಪದಲ್ಲಿ ಬಲಯುತವಾದ ರಾಜ್ಯವಿಲ್ಲದಿದ್ದರೂ ಭಾರತೀಯ ಸಂಸ್ಕೃತಿ ವಿಶೇಷವಾಗಿ ಬಳಕೆಯಲ್ಲಿತ್ತು. ಮಲಯೇಷ್ಯದ ಈ ಸಣ್ಣಪುಟ್ಟ ರಾಜರುಗಳನ್ನೆಲ್ಲ ಒಂದುಗೂಡಿಸಿ ಶೈಲೇಂದ್ರಸಾಮ್ರಾಜ್ಯ 8ನೆಯ ಶತಮಾನದಲ್ಲಿ ಬೆಳೆಯಿತು. ಶೈಲೇಂದ್ರರಿಗೂ ಭಾರತದ ಚೋಳರಿಗೂ ಅನೇಕ ನೌಕಾಯುದ್ಧಗಳು ನಡೆದವು. ಚೋಳರಾಜ ರಾಜೇಂದ್ರ 1025ರಲ್ಲಿ ಶೈಲೇಂದ್ರರನ್ನು ಸೋಲಿಸಿ, ಅನೇಕ ಪ್ರದೇಶಗಳನ್ನು ತನ್ನ ವಶಮಾಡಿಕೊಂಡ. ಸ್ವಲ್ಪ ಕಾಲಾನಂತರ ಶೈಲೇಂದ್ರಸಾಮ್ರಾಜ್ಯ ಅವನತಿಯನ್ನು ಹೊಂದಿತು.

ಇತ್ತಕಡೆ ಜಾವ ದ್ವೀಪದಲ್ಲಿ ಪ್ರ.ಶ. 8ನೆಯ ಶತಮಾನದ ಆದಿಭಾಗದಲ್ಲಿ ಮತರಾಂ ರಾಜ್ಯಸ್ಥಾಪನೆಯಾಯಿತು. ಇದು ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟಿತು. ಸಿಂಡಕ್‌ರಾಜನ ಆಶ್ರಯದಲ್ಲಿ ಪೂರ್ವಜಾವ ಬಲಯುತವಾಗಿ ಬೆಳೆಯಿತು. ಈ ವಂಶದ ರಾಜರಲ್ಲಿ ಏರ್ಲಂಗ (1019–49) ಅತಿಮುಖ್ಯ. ಈತ ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಗಳಿಗೆ ವಿಶೇಷ ಪ್ರೋತ್ಸಾಹಕೊಟ್ಟ. ಏರ್ಲಂಗನ ಮರಣಾನಂತರ ರಾಜ್ಯ ಎರಡು ಭಾಗಗಳಾಗಿ ಕಡಿರಿ ಮತ್ತು ಸಿಂಘಸಾರಿ ಎಂಬ ರಾಜ್ಯಗಳಾದವು. ಸಾಹಿತ್ಯದೃಷ್ಟಿಯಿಂದ ಇವು ಬಹು ಮುಖ್ಯವಾದವು. ಈ ರಾಜ್ಯಗಳ ಪತನಾನಂತರ ಮಜಪಹಿತ್ ರಾಜ್ಯ ಪ್ರ.ಶ. ಸು. 1294ರಲ್ಲಿ ಸ್ಥಾಪನೆಯಾಯಿತು. ಕೃತನಗರ, ರಾಜಸನಗರ ಮುಂತಾದ ರಾಜರುಗಳು ಆಳಿದ ಅನಂತರ ಪ್ರ.ಶ. 1447ರ ಸಮಯಕ್ಕೆ ಮಜಪಹಿತ್ ರಾಜ್ಯ ನಾಶವಾಯಿತು. ಇಲ್ಲಿಗೆ ಜಾವದ್ವೀಪದಲ್ಲಿ ಭಾರತೀಯ ಸಂಸ್ಕೃತಿಯ ಅವನತಿಯಾಯಿತು. ಅದರ ಸಮೀಪದಲ್ಲೇ ಇರುವ ಬಲಿದ್ವೀಪದಲ್ಲಿ ಭಾರತೀಯ ಸಂಸ್ಕೃತಿ ಚೆನ್ನಾಗಿ ಅಭಿವೃದ್ಧಿಯಾಗಿತ್ತು. ಆದರೆ ರಾಜಕೀಯ ದೃಷ್ಟಿಯಿಂದ ಬಲವತ್ತರವಾದ ಸಾಮ್ರಾಜ್ಯಗಳಾವುವೂ ಅಲ್ಲಿ ಬೆಳೆಯಲಿಲ್ಲ.

ಚಂಪಾರಾಜ್ಯದಲ್ಲಿ (ವಿಯಟ್ನಾಂ) ಪ್ರ.ಶ. 2ನೆಯ ಶತಮಾನದಿಂದಲೇ ಭಾರತೀಯರು ಬಂದು ನೆಲೆಸಿದ್ದರೆಂದು ಗೊತ್ತಾಗುತ್ತದೆ. ವೊಕಾನ್ಹ್ ಶಾಸನದ ಶ್ರೀಮಾರನ ಮನೆತನದವರು ಭಾರತೀಯರೆಂದು ಚೆನ್ನಾಗಿ ಗೊತ್ತಾಗುತ್ತದೆ. ಪ್ರ.ಶ.380–413ರವರೆಗೆ ಆಳಿದ ಭದ್ರವರ್ಮ ಮುಖ್ಯ ದೊರೆಗಳಲ್ಲೊಬ್ಬ. ಈತ ಭದ್ರೇಶ್ವರ ದೇವಾಲಯವನ್ನು ಸ್ಥಾಪಿಸಿದ. ಸ್ವಲ್ಪಕಾಲಾನಂತರ ಪ್ರ.ಶ.530ರಲ್ಲಿ ರುದ್ರವರ್ಮ ಇನ್ನೊಂದು ರಾಜವಂಶವನ್ನು ಸ್ಥಾಪಿಸಿದ. ಪ್ರ.ಶ.8ನೆಯ ಶತಮಾನದಲ್ಲಿ ಪಾಂಡುರಂಗವಂಶ ಸ್ಥಾಪಿತವಾಯಿತು. ಇದರಲ್ಲಿ ಮುಖ್ಯನಾದವ ಇಂದ್ರವರ್ಮ. ಅನಂತರ ಭೃಗುವಂಶ ಸ್ಥಾಪಿತವಾಯಿತು. ಎರಡನೆಯ ಇಂದ್ರವರ್ಮ (ಪ್ರ.ಶ.854–898) ಇಂದ್ರಪುರವೆಂಬ ಹೊಸನಗರವನ್ನು ಸ್ಥಾಪಿಸಿದ. ಭೃಗುವಂಶದಲ್ಲಿ ಹರಿವರ್ಮ, ಮೂರನೆಯ ಇಂದ್ರವರ್ಮ, ಪರಮೇಶ್ವರವರ್ಮ ಮುಂತಾದವರು ಮುಖ್ಯರು. ಈ ಮಧ್ಯೆ ಅನ್ನಾಂ ರಾಜ್ಯ ಚಂಪಾದ ಮೇಲೆ ಅನೇಕ ದಂಡಯಾತ್ರೆಗಳನ್ನು ನಡೆಸುತ್ತಿತ್ತು. ಇದರಿಂದಾಗಿ ಚಂಪಾರಾಜ್ಯವೂ ಅನ್ನಾಮಿನವರ ಕೈವಶವಾಯಿತು. ಈ ಎಲ್ಲ ರಾಜ್ಯಗಳಲ್ಲೂ ಭಾರತೀಯ ಸಂಸ್ಕೃತಿಯ ಪ್ರಭಾವವನ್ನು ಕಾಣುತ್ತೇವೆ. ವರ್ಣಾಶ್ರಮ ಧರ್ಮಗಳು, ಶೈವ, ವೈಷ್ಣವ ಮತ್ತು ಬೌದ್ಧಧರ್ಮಗಳು ಪ್ರಚಲಿತವಾಗಿದ್ದುವು. ಸಂಸ್ಕೃತಭಾಷೆ ಆಡಳಿತ ಭಾಷೆಯಾಗಿತ್ತು. ನೂರಾರು ಸಂಸ್ಕೃತಶಾಸನಗಳು ಈ ರಾಜ್ಯಗಳಲ್ಲಿ ದೊರಕಿವೆ. ರಾಮಾಯಣ, ಮಹಾಭಾರತ ಮತ್ತು ಇತರ ಕಾವ್ಯಗಳು ಬಹಳ ಜನಪ್ರಿಯವಾಗಿದ್ದುವು. ಮನುಧರ್ಮಶಾಸ್ತ್ರ, ಅರ್ಥಶಾಸ್ತ್ರ ಮುಂತಾದವುಗಳಿಂದ ರಾಜರು ಸ್ಫೂರ್ತಿ ಪಡೆಯುತ್ತಿದ್ದರು. ಅಷ್ಟರಮಟ್ಟಿಗೆ ಭಾರತೀಯ ಸಂಸ್ಕೃತಿ ಈ ದೇಶಗಳಲ್ಲಿ ಚೆನ್ನಾಗಿ ಬೇರೂರಿತ್ತು. (ಎ.ವಿ.ಎನ್.)

ಭಾರತೀಯ ಸಂಸ್ಕೃತಿಯ ಪ್ರಭಾವ ಆಗ್ನೇಯ ಏಷ್ಯದಲ್ಲಿ ಕ್ಷೀಣವಾಗುತ್ತಿದ್ದಂತೆಯೇ ಅದರ ಸ್ಥಾನವನ್ನು ಪ್ರಪಂಚದ ಎರಡು ಮುಖ್ಯ ಮತಗಳೆನಿಸಿದ ಇಸ್ಲಾಂ ಮತ್ತು ಕ್ರೈಸ್ತಧರ್ಮಗಳು ಆಕ್ರಮಿಸಿದುವು. ಆದರೂ ಭಾರತೀಯ ಸಂಸ್ಕೃತಿಯ ಪ್ರಭಾವದಿಂದ ಉಂಟಾದ ಪರಿಣಾಮಗಳು ಪೂರ್ಣವಾಗಿ ಅಳಿಸಿಹೋಗಲು ಸಾಧ್ಯವಾಗಲಿಲ್ಲ. ಜೊತೆಗೆ ಬೌದ್ಧಧರ್ಮದ ಪ್ರಾಬಲ್ಯವೂ ಹೆಚ್ಚಾಯಿತು. ಸಾಮಾನ್ಯವಾಗಿ ಬರ್ಮ, ಥೈಲೆಂಡ್, ಕಾಂಬೋಡಿಯ ಮತ್ತು ವಿಯಟ್ನಾಂಗಳು ಬೌದ್ಧಧರ್ಮವನ್ನು ಅವಲಂಬಿಸಿದುವು. ಬರ್ಮ, ಥೈಲೆಂಡ್‌ಗಳಲ್ಲಿ ಹೀನಯಾನ ಅಥವಾ ಥೇರವಾದ ಪಂಗಡವೂ ಕಾಂಬೋಡಿಯ ಮತ್ತು ವಿಯಟ್ನಾಂಗಳಲ್ಲಿ ಮಹಾಯಾನ ಪಂಗಡವೂ ಪ್ರಮುಖವಾದುವು. ಸು. 1400ರಲ್ಲಿ ಮಲಯದೇಶದ ಪಶ್ಚಿಮತೀರದಲ್ಲಿ ಸ್ಥಾಪಿತವಾದ ಮಲಕ್ಕ ಎಂಬ ವ್ಯಾಪಾರಕೇಂದ್ರ ಆಗ್ನೇಯ ಏಷ್ಯದಲ್ಲಿ ಯುರೋಪಿಯನ್ನರು ಬರುವ ತನಕ ವ್ಯಾಪಾರಕ್ಕಲ್ಲದೆ, ಇಸ್ಲಾಂ ಧರ್ಮದ ಪ್ರಸಾರಕ್ಕೂ ಕೇಂದ್ರವಾಗಿತ್ತು. ಮಲಕ್ಕದಿಂದಲೇ ಇಸ್ಲಾಂಧರ್ಮ ಮಲೇಷ್ಯ, ಇಂಡೋನೇಷ್ಯ ಮತ್ತು ಫಿಲಿಫೈನ್ಸ್‌ನ ದಕ್ಷಿಣದ ಕೆಲವು ದ್ವೀಪಗಳಿಗೆ ಹಬ್ಬಿತು. ಆದರೆ ಕ್ರೈಸ್ತಧರ್ಮವೇ ಫಿಲಿಫೈನ್ಸ್ ದ್ವೀಪಗಳಲ್ಲಿ ಪ್ರಾಮುಖ್ಯವಾಯಿತು.

ಯುರೋಪಿಯನ್ನರು ಆಗ್ನೇಯ ಏಷ್ಯದ ರಾಷ್ಟ್ರಗಳನ್ನು ತಮ್ಮ ವಸಾಹತುಗಳನ್ನಾಗಿ ಮಾಡಿಕೊಳ್ಳುವ ಮುನ್ನ, ಈ ಭಾಗದ ರಾಜಕೀಯ ಇತಿಹಾಸ ಪರಸ್ಪರ ಕದನಗಳಿಂದಲೂ ಆಂತರಿಕ ಒಡಕುಗಳಿಂದಲೂ ತುಂಬಿತ್ತು. ಬರ್ಮೀಯರು, ಬರ್ಮೀಯರಲ್ಲದ ಇತರ ಜನಾಂಗಗಳಾದ ಶಾನ್‌ಕಾಚಿನ್ ಮತ್ತು ಮಾನ್‌ರನ್ನು ಗೆದ್ದು 11ನೆಯ ಶತಮಾನದ ಹೊತ್ತಿಗೆ ಪ್ಯಾಗನ್ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆ ಸಾಮ್ರಾಜ್ಯದ ರಾಜಧಾನಿ ಪ್ಯಾಗನ್ ಪಟ್ಟಣವೇ ಆಗಿತ್ತು. ಆ ಸಾಮ್ರಾಜ್ಯದ ಅವಶೇಷಗಳನ್ನು ಇಂದಿಗೂ ಆ ನಗರದಲ್ಲಿ ನೋಡಬಹುದು. 13ನೆಯ ಶತಮಾನದ ಅನಂತರ ಈ ಸಾಮ್ರಾಜ್ಯ ಅವನತಿಗೊಂಡು, ಮತ್ತೆ 16ನೆಯ ಶತಮಾನದವರೆಗೂ ಬರ್ಮದೇಶ ಮತ್ತೆ ಒಂದಾಗಲಿಲ್ಲ. 16ನೆಯ ಶತಮಾನದಲ್ಲಿ ತೂಂಗೂ ರಾಜಮನೆತನದ ನೇತೃತ್ವದಲ್ಲೂ 18ನೆಯ ಶತಮಾನದಲ್ಲಿ ಅಲಂಗಪಾಂಗು ರಾಜಮನೆತನದ ನೇತೃತ್ವದಲ್ಲೂ ಬರ್ಮ ಸ್ವಲ್ಪಕಾಲ ಉನ್ನತಸ್ಥಿತಿಗೆ ಬಂತು. ಈ ಮನೆತನದ ರಾಜರು ಕೊನೆಕೊನೆಗೆ ಅಶಕ್ತರಾಗಿ ಸುಖಲೋಲುಪರಾಗಿ ಮೂರು ಬರ್ಮಯುದ್ಧಗಳ ಅನಂತರ (1826,1856,1885) ಬ್ರಿಟಿಷರ ವಸಾಹತು ನೀತಿಗೆ 19ನೆಯ ಶತಮಾನದ ಆದಿಯಲ್ಲಿ ಒಳಗಾಗಬೇಕಾಯಿತು. ಕೊನೆಗೆ ಬರ್ಮ ಸಂಪೂರ್ಣವಾಗಿ ಬ್ರಿಟಿಷರ ವಶವಾಯಿತು.

ಸಯಾಂ ಅಥವಾ ಥೈಲೆಂಡಿನ ಇತಿಹಾಸ 13 ಮತ್ತು 14ನೆಯ ಶತಮಾನಗಳಲ್ಲಿ ಸ್ಥಾಪಿತವಾದ ನಗರರಾಜ್ಯಗಳಾದ ಸುಖೋಥಾಯ್ ಮತ್ತು ಚಿಯಾಂಗಮಯ್‌ಗಳಿಂದ ಪ್ರಾರಂಭವಾಗುತ್ತದೆ. ಆದರೆ 1350ರಲ್ಲಿ ಸ್ಥಾಪಿತವಾದ ಅಯುತ್ತಯ ರಾಜಮನೆತನ (1350–1767) ಸಯಾಂನಲ್ಲಲ್ಲದೆ, ಇಡೀ ಆಗ್ನೇಯ ಏಷ್ಯದಲ್ಲಿ ಪ್ರಾಮುಖ್ಯ ಪಡೆಯಿತು. 1767ರಲ್ಲಿ ಬರ್ಮೀಯರ ದಾಳಿಯಿಂದಾಗಿ ಅಯುತ್ತಯ ನಾಶವಾಯಿತು. ಅನಂತರ ಚಕ್ರಿಮನೆತನ ಬ್ಯಾಂಕಾಕ್ ನಗರದಲ್ಲಿ ತನ್ನ ಆಡಳಿತವನ್ನು ಪ್ರಾರಂಭಿಸಿತು (1782). ಈ ರಾಜಮನೆತನದ ಆಶ್ರಯದಲ್ಲಿ ಥೈಲೆಂಡ್ ಹೊಸ ಯುಗವನ್ನು ಕಂಡಿತು. ಆಗ್ನೇಯ ಏಷ್ಯದಲ್ಲೆಲ್ಲ ಥೈಲೆಂಡ್ ಮಾತ್ರ, ಯುರೋಪಿಯನ್ನರ ವಸಾಹತು ನೀತಿಗೆ ಒಳಗಾಗಲಿಲ್ಲ. ಇದಕ್ಕೆ ಕಾರಣ ಚಕ್ರಿಮನೆತನದ ರಾಜರ ಉನ್ನತ ಹಾಗೂ ದಕ್ಷತೆಯ ರಾಜನೀತಿ. ಪಶ್ಚಿಮದಲ್ಲಿ ಬ್ರಿಟಿಷರು, ಪೂರ್ವದಲ್ಲಿ ಫ್ರೆಂಚರು ವಸಾಹತುಗಳನ್ನು ಸ್ಥಾಪಿಸಿದಾಗ, ಚಕ್ರಿಮನೆತನದ ರಾಜರು, ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟುವುದರ ಮೂಲಕ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು.

ಲಾವೋಸ್ ದೇಶದ ಇತಿಹಾಸ ಇತ್ತೀಚೆಗೆ ಪ್ರಾರಂಭವಾಯಿತು. 12ನೆಯ ಶತಮಾನದಲ್ಲಿ ತಲೆಎತ್ತಿದ್ದ ಚಿಕ್ಕ ಚಿಕ್ಕ ರಾಜ್ಯಗಳು, 1353ರ ಹೊತ್ತಿಗೆ ಲಾನ್‌ಗ್ಸಾಂಗ್ ರಾಜಮನೆತನದ ಅಧೀನಕ್ಕೆ ಒಳಗಾಗಿ, ಲುವಾಂಗ್ ಪ್ರಭಾಂಗ್ ನಗರದಿಂದ ತನ್ನ ಆಡಳಿತ ಪ್ರಾರಂಭಿಸಿತು. 18ನೆಯ ಶತಮಾನದ ಹೊತ್ತಿಗೆ ಲಾವೋಸ್‌ದೇಶದಲ್ಲಿ ಮೂರು ರಾಜಮನೆತನಗಳು, ಲುವಾಂಗ್ ಪ್ರಭಾಂಗ್‌ನಲ್ಲಿ, ವಿಯನ್ ಚಿಯನ್‌ನಲ್ಲಿ ಮತ್ತು ದಕ್ಷಿಣದ ಚಂಪಾಸಕ್‌ನಲ್ಲಿ ತಲೆಯೆತ್ತಿದುವು. ಅನಂತರ ಲಾವೋಸ್ ಸ್ವಲ್ಪಕಾಲ ಥೈಲೆಂಡಿನ ಅಧೀನದಲ್ಲಿದ್ದು 19ನೆಯ

ಶತಮಾನದ ಆದಿಭಾಗದಲ್ಲಿ ಫ್ರೆಂಚರ ವಸಾಹತುನೀತಿಗೆ ತುತ್ತಾಯಿತು. ಕಾಂಬೋಡಿಯ 12ನೆಯ ಮತ್ತು 13ನೆಯ ಶತಮಾನಗಳಲ್ಲಿ ಖ್ಮರ್ ಸಾಮ್ರಾಜ್ಯದ ನೇತೃತ್ವದಲ್ಲಿ ಅತ್ಯುನ್ನತ ಸ್ಥಿತಿಗೆ ಬಂದ ಅನಂತರ ಮತ್ತೆ ಅಂಥ ಯುಗವನ್ನು ನೋಡಲೇ ಇಲ್ಲ. ಇದಕ್ಕೆ ಕಾರಣ ಥಾಯ್ ಮತ್ತು ವಿಯಟ್ನಾಮೀಯರ ಪ್ರಾಬಲ್ಯ. 19ನೆಯ ಶತಮಾನದ ಆದಿಭಾಗದಲ್ಲಿ ಕಾಂಬೋಡಿಯ ಫ್ರೆಂಚರ ಅಧೀನಕ್ಕೊಳಗಾಯಿತು.

ವಿಯಟ್ನಮೀಸ್ ಅಥವಾ ಅನ್ನಮೀಸ್ ಜನಾಂಗದ ನಾಗರಿಕತೆಯ ಕೇಂದ್ರ ಕೆಂಪುನದಿಯ ಮುಖಜಭೂಮಿಯಾಗಿತ್ತು. ಈ ಜನಾಂಗದ ಇತಿಹಾಸ ಮುಖ್ಯವಾಗಿ ಉತ್ತರದಿಂದ ದಕ್ಷಿಣಕ್ಕೆ ವಲಸೆ ಬರುವುದೇ ಆಗಿತ್ತು. ಈ ಜನಾಂಗ ಚೀನಿ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿತ್ತು. ಪ್ರ.ಶ.ಪೂ 111–ಪ್ರ.ಶ. 939ರವರೆಗೆ ವಿಯಟ್ನಾಂ ಚೀನದೇಶದ ಅಧೀನದಲ್ಲಿತ್ತು. ಈ ಕಾಲದಲ್ಲಿ ಅನೇಕ ಸಾರಿ ವಿಯಟ್ನಾಂ ಜನರು ಚೀನದ ರಾಜಕೀಯ ಆಡಳಿತದ ವಿರುದ್ಧ ದಂಗೆ ಎದ್ದರು. 1471ರಲ್ಲಿ ದಕ್ಷಿಣಕ್ಕೆ ಒತ್ತರಿಸಿ ಬರುತ್ತಿದ್ದ ವಿಯಟ್ನಮೀಸ್ ಜನಾಂಗ, ಈಗಿನ ದಕ್ಷಿಣ ವಿಯಟ್ನಾಂನಲ್ಲಿದ್ದ ಚಂಪಾರಾಜ್ಯವನ್ನು ನಾಶಮಾಡಿತು. ಅನಂತರ ಮೇಕಾಂಗ್ ನದಿಯ ಮುಖಜಭೂಮಿಯ ಪ್ರದೇಶವನ್ನು ಆಕ್ರಮಿಸಿಕೊಂಡು ಕಾಂಬೋಡಿಯನ್ನರನ್ನು ಅಲ್ಲಿಂದ ಓಡಿಸಿದರು. 18ನೆಯ ಶತಮಾನದ ಮಧ್ಯಭಾಗದಲ್ಲಿ ವಿಯಟ್ನಾಂ ತನ್ನದೇ ಆದ ಒಂದು ಸಾಮ್ರಾಜ್ಯವನ್ನು ಹೊಂದಿತ್ತು. 1857ರಲ್ಲಿ ಪ್ರಾರಂಭವಾದ ಫ್ರೆಂಚರ ಆಕ್ರಮಣ 1883ರಲ್ಲಿ ಮುಕ್ತಾಯವಾಗಿ, ವಿಯಟ್ನಾಂ ಸಂಪೂರ್ಣವಾಗಿ ಅವರ ವಶವಾಯಿತು.

1400ರಲ್ಲಿ ಸ್ಥಾಪಿತವಾದ ಮಲಕ್ಕ ವಾಣಿಜ್ಯಕೇಂದ್ರದಿಂದ ಮಲೇಷ್ಯಯದ ಆಧುನಿಕ ಇತಿಹಾಸ ಪ್ರಾರಂಭವಾಗುತ್ತದೆ. 15 ಮತ್ತು 16ನೆಯ ಶತಮಾನಗಳಲ್ಲಿ ಚಿಕ್ಕ ಚಿಕ್ಕ ಸುಲ್ತಾನ್ ರಾಜ್ಯಗಳು ಮಲಯದ ಅನೇಕ ಭಾಗಗಳಲ್ಲಿ ತಲೆ ಎತ್ತಿದ್ದುವು. 1511ರಲ್ಲಿ ಮಲಕ್ಕ ಪೋರ್ಚ್‌ಗೀಸರ ವಶವಾಯಿತು. ಬ್ರಿಟಿಷರು ಸಿಂಗಪುರವನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು, ಮಲಯದ ಸಣ್ಣಪುಟ್ಟ ರಾಜ್ಯಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡರು. 14ನೆಯ ಶತಮಾನದಲ್ಲಿ ಸ್ಥಾಪಿತವಾದ ಜಾವದ್ವೀಪದ ಮಜಪಾಹಿತ್ ಸಾಮ್ರಾಜ್ಯ ಇಂಡೊನೇಷ್ಯದ ಇತಿಹಾಸದಲ್ಲೇ ಬಹುಪ್ರಸಿದ್ಧವಾದದ್ದು. ಮಜಪಾಹಿತ್ ಹಿಂದೂ ಸಂಸ್ಕೃತಿಯನ್ನು ಅನೇಕ ವಿಷಯಗಳಲ್ಲಿ ಅಳವಡಿಸಿಕೊಂಡಿತ್ತು. ಇದರ ಅವನತಿಯೊಂದಿಗೆ, ಇಸ್ಲಾಂ ಪ್ರಭಾವ ಇಂಡೋನೇಷ್ಯದಲ್ಲಿ ಬೆಳೆದು, ಅನೇಕ ಮುಸ್ಲಿಂ ರಾಜರುಗಳು ಜಾವ ಮತ್ತು ಸುಮಾತ್ರ ದ್ವೀಪಗಳಲ್ಲಿ ಪಾಳೆಪಟ್ಟುಗಳನ್ನು ಕಟ್ಟಿದರು. ಅವುಗಳಲ್ಲಿ ಮತಾರಾಂ ಮತ್ತು ಜೋಗ್ ಜಕಾರ್ತ ರಾಜ್ಯಗಳು ಮುಖ್ಯವಾದುವು. ಬಾಲಿದ್ವೀಪದಲ್ಲಿ ಮಾತ್ರ ಹಿಂದೂಸಂಸ್ಕೃತಿ ಕೊನೆಯವರೆಗೂ ಉಳಿದುಕೊಂಡು ಬಂದಿತು. 16ನೆಯ ಶತಮಾನದಲ್ಲಿ ವ್ಯಾಪಾರಕ್ಕಾಗಿ ಬಂದ ಡಚ್ಚರು, ಜಾವದ್ವೀಪದಿಂದ ಪ್ರಾರಂಭವಾಗಿ, ಇಂಡೋನೇಷ್ಯದ ಎಲ್ಲ ದ್ವೀಪಗಳನ್ನೂ ತಮ್ಮ ವಸಾಹತುಗಳನ್ನಾಗಿ ಮಾಡಿಕೊಂಡರು.

ಪಿಲಿಫೈನ್ಸ್‌ನ ಆಧುನಿಕ ಇತಿಹಾಸ ಸ್ಪ್ಯಾನಿಷರ ಆಡಳಿತದಿಂದ ಪ್ರಾರಂಭವಾಗುತ್ತದೆ. 16ನೆಯ ಶತಮಾನದಲ್ಲಿ ಪ್ರಾರಂಭವಾದ ಇವರ ಆಡಳಿತ 1899ರವರೆಗೆ ಇತ್ತು. ಈ ಕಾಲದಲ್ಲಿ, ಕ್ರೈಸ್ತಧರ್ಮ ಯುರೋಪಿಯನ್ನರ ಸಂಸ್ಕೃತಿ ಪ್ರಭಾವಗಳು, ಪಿಲಿಫೈನ್ಸ್ ಜನಾಂಗದವರ ಮೇಲೆ ಅಚ್ಚೊತ್ತಿದುವು. 1899ರ ಅನಂತರ ಈ ದೇಶ ಅಮೆರಿಕದ ವಸಾಹತಾಯಿತು. ಆಗ್ನೇಯ ಏಷ್ಯದಲ್ಲಿ ಯುರೋಪಿಯನ್ನರ ಮತ್ತು ಅಮೆರಿಕನ್ನರ ಆಗಮನದಿಂದಾಗಿ ಒಂದು ದೊಡ್ಡ ಕ್ರಾಂತಿಯೇ ಈ ಭಾಗದಲ್ಲಿ ವಾಸಮಾಡುವ ವಿವಿಧ ಜನಾಂಗಗಳ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಉಂಟಾಯಿತು. ಆಗ ಪ್ರಾರಂಭವಾದ ಕ್ರಾಂತಿ ಈಗಲೂ ಮುಂದುವರಿಯುತ್ತಲೇ ಇದೆ.

ಯುರೋಪಿಯನ್ನರು 15ನೆಯ ಶತಮಾನದಲ್ಲಿ ಕೊಲಂಬಸ್‌ನಿಂದ ಪ್ರಾರಂಭವಾದ ಅನ್ವೇಷಣೆಯ ಅನಂತರ, ಆಗ್ನೇಯ ಏಷ್ಯದ ದ್ವೀಪಗಳಲ್ಲಿ ದೊರೆಯುವ ಮೆಣಸು, ಏಲಕ್ಕಿ, ಲವಂಗ ಮೊದಲಾದ ಸಾಂಬಾರ ಪದಾರ್ಥಗಳನ್ನು ಹುಡುಕಿಕೊಂಡು ಬಂದರು. ಮೊದಮೊದಲು ವ್ಯಾಪಾರವೇ ಅವರ ಮುಖ್ಯ ಉದ್ದೇಶವಾಗಿತ್ತು. ಹಾಗೆ ಬಂದವರಲ್ಲಿ ಪೋರ್ಚುಗೀಸರು ಮೊದಲಿಗರು. 1511ರಲ್ಲಿ ಅವರು ಮಲಕ್ಕವನ್ನು ಆಕ್ರಮಿಸಿಕೊಂಡು ಆಗ್ನೇಯ ಏಷ್ಯದ ಆಧುನಿಕ ಇತಿಹಾಸವನ್ನು ಪ್ರಾರಂಭಿಸಿದರು. ಅನಂತರ ಡಚ್ಚರು, ಇಂಗ್ಲಿಷರು, ಸ್ಪೇನಿನವರು, ಫ್ರೆಂಚರು, ಅಮೆರಿಕನ್ನರು ಪೋರ್ಚುಗೀಸರ ದಾರಿಯಲ್ಲೇ ಬಂದರು, ವ್ಯಾಪಾರಕ್ಕಾಗಿ ಕೋಟೆಗಳನ್ನು ಕಟ್ಟಿದರು. ಅಲ್ಲಿಂದ ರಾಜಕೀಯದಲ್ಲಿ ಆಸಕ್ತಿಹೊಂದಿ, ಅವನತಿ ಹೊಂದುತ್ತಿದ್ದ ಚಿಕ್ಕ ಪುಟ್ಟ ರಾಜ್ಯಗಳನ್ನು ಕುತಂತ್ರಗಳಿಂದಲೂ ಯುದ್ಧಗಳಿಂದಲೂ ಸೋಲಿಸಿ 19ನೆಯ ಶತಮಾನದ ಹೊತ್ತಿಗೆ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಕ್ರೈಸ್ತಧರ್ಮವೂ ಆಗ್ನೇಯ ಏಷ್ಯಕ್ಕೆ ಬಂತು. ಬರ್ಮ ಮತ್ತು ಮಲಯ ಬ್ರಿಟಿಷರ ವಶವಾದುವು. ಇಂಡೋನೇಷ್ಯ ಡಚ್ಚರ ವಶವಾಯಿತು. ಪಿಲಿಫೈನ್ಸ್ ಸ್ಪೇನಿನ ಅಧೀನದಲ್ಲಿ 1899ರವರೆಗೆ ಇದ್ದು ಅನಂತರ ಸ್ಪ್ಯಾನಿಷ್–ಅಮೆರಿಕನ್ ಯುದ್ಧದ ಪರಿಣಾಮವಾಗಿ, ಅಮೆರಿಕದ ಆಶ್ರಯಕ್ಕೆ ಬಂತು. ಫ್ರೆಂಚರು 19ನೆಯ ಶತಮಾನದ ಹೊತ್ತಿಗೆ, ವಿಯಟ್ನಾಂ, ಕಾಂಬೋಡಿಯ ಮತ್ತು ಲಾವೋಸ್‌ಗಳಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದರು. ಥೈಲೆಂಡ್ ಮಾತ್ರ ಯಾರ ಅಧೀನಕ್ಕೂ ಒಳಗಾಗಲಿಲ್ಲ. ಆಗ್ನೇಯ ಏಷ್ಯದಲ್ಲಿ ಈ ರೀತಿ ಆರಂಭವಾದ ವಸಾಹತುಗಳಿಂದ ಯುರೋಪಿಯನ್ನರಿಗೆ ಮತ್ತು ಅಮೆರಿಕನ್ನರಿಗೆ ಎರಡು ರೀತಿಯ ಉಪಯೋಗವಿತ್ತು. ಒಂದು, ಇವು ಯುರೋಪಿನ ಕೈಗಾರಿಕೆಗಳಿಗೆ, ಕಚ್ಚಾಪದಾರ್ಥಗಳನ್ನು ಒದಗಿಸಿಕೊಡುತ್ತಿದ್ದುವು. ಎರಡು, ಯುರೋಪಿನಲ್ಲಿ ತಯಾರಾದ ಸಿದ್ಧವಸ್ತುಗಳಿಗೆ ಇವು ಮಾರುಕಟ್ಟೆಯಾಗಿದ್ದವು. ಟಿನ್, ರಬ್ಬರ್, ಅಕ್ಕಿ, ಪೆಟ್ರೋಲಿಯಂಗಳಿಗೆ ಆಗ್ನೇಯ ಏಷ್ಯ ಬಹಳ ಪ್ರಾಮುಖ್ಯವಾಗಿತ್ತೆಂಬ ಅಂಶವನ್ನು ಇಲ್ಲಿ ಸ್ಮರಿಸಬಹುದು.

ವಿವಿಧ ಯುರೋಪಿಯನ್ ರಾಷ್ಟ್ರಗಳು ಅನೇಕ ರೀತಿಯ ರಾಜ್ಯಾಡಳಿತ ಕ್ರಮಗಳನ್ನು, ನೀತಿಗಳನ್ನು ತಮ್ಮ ವಸಾಹತುಗಳಲ್ಲಿ ಅನುಸರಿಸಿದರು. ಅವುಗಳ ಪರಿಣಾಮಗಳಲ್ಲಿ ವ್ಯತ್ಯಾಸಗಳಿದ್ದರೂ ಅವರ ವಸಾಹತು ನೀತಿ ದೇಶೀಯ ಜನರಿಗೆ ಅಷ್ಟಾಗಿ ಉಪಯೋಗವಾಗಲಿಲ್ಲ. ಅವರಿಂದ ದೇಶೀಯರಿಗೆ ತೊಂದರೆಯೇ ಹೆಚ್ಚಾಯಿತು. ಯುರೋಪಿಯನ್ನರು ಸ್ಥಾಪಿಸಿದ ಗಣಿಗಳಲ್ಲಿ, ರಬ್ಬರ್ ಮತ್ತು ಕಾಫಿತೋಟಗಳಲ್ಲಿ ದುಡಿಯಲು, ಚೀನೀಯರು ಆಗ್ನೇಯ ಏಷ್ಯದ ರಾಷ್ಟ್ರಗಳಿಗೆ ವಲಸೆಹೋಗಿ, ಅಲ್ಲಿ ನಿಂತು, ಅನೇಕ ಸಾರಿ ಆ ದೇಶಗಳ ಸ್ವಾತಂತ್ರ್ಯಹೋರಾಟದಲ್ಲಿ ಸಮಸ್ಯೆಯಾದರು. ಭಾರತೀಯರು ಮಲಯ ಮತ್ತು ಬರ್ಮದಲ್ಲೂ, ಚೀನೀಯರು ಇಂಡೋ ನೇಷ್ಯ, ಥೈಲೆಂಡ್, ಮಲಯ ಗಳಲ್ಲೂ ಹೆಚ್ಚಾಗಿ ಆಯಾ ದೇಶಗಳ ಜನಾಂಗದ ಸಮಾಜದಲ್ಲಿ ಮುಖ್ಯ ಅಂಶವಾದರು. ಈ ರೀತಿಯ ವಸಾಹತುನೀತಿಯ ವಿರುದ್ಧವಾಗಿ, ಪರಕೀಯರ ಆಡಳಿತದ ಕಷ್ಟ ಪರಂಪರೆಗಳಿಗೆ ಬೇಸತ್ತ ದೇಶೀಯರು, 20ನೆಯ ಶತಮಾನದ ಆದಿಭಾಗದಿಂದ ಸ್ವಾತಂತ್ರ್ಯ ಚಳವಳಿಯನ್ನು ಪ್ರಾರಂಭಮಾಡಿದರು. ಮೊದಮೊದಲು ಈ ಸಂಗ್ರಾಮ ಆಧುನಿಕ ವಿದ್ಯಾಭ್ಯಾಸವನ್ನು ಪರದೇಶಗಳಲ್ಲಿ ಮುಗಿಸಿ ಬಂದ ವಿದ್ಯಾವಂತರಿಂದ ಪ್ರಾರಂಭವಾಗಿ, ಕೊನೆಗೆ ಎರಡನೆಯ ಮಹಾಯುದ್ಧವಾದ ಅನಂತರ ಎಲ್ಲರೂ ಭಾಗವಹಿಸುವಂತಾಯಿತು. ಇಂಡೋನೇಷ್ಯದ ಸುಕಾರ್ನೊ ಮತ್ತು ಮಹಮದ್ ಹಟ್ಟಾ, ಬರ್ಮಾದ ಅಂಗ ಸಾನ್ ಮತ್ತು ಉನೂ, ಪಿಲಿಫೈನ್ಸ್‌ನ ಜೋಸ್ ರಿಜಾಲೆ, ವಿಯಟ್ನಾಂನ ಹೋಚೀಮಿನ್, ಮಲಯಾದ ಟುಂಕು ಅಬ್ದುಲ್ ರಹಮಾನ್ ಆಗ್ನೇಯ ಏಷ್ಯದ ಸ್ವಾತಂತ್ರ್ಯಸಂಗ್ರಾಮದ ಮೂಲಪುರುಷರಲ್ಲಿ ಅಗ್ರಗಣ್ಯರಾದರು. ಈ ಹೋರಾಟಕ್ಕೆ ಜಪಾನೀಯರು ಆಗ್ನೇಯ ಏಷ್ಯವನ್ನು 1942–45ರವರೆಗೆ ಆಕ್ರಮಿಸಿಕೊಂಡ ಕಾಲದಲ್ಲಿ ಅತಿ ಹೆಚ್ಚಿನ ಪ್ರೋತ್ಸಾಹ ದೊರೆಯಿತು ಎನ್ನಬಹುದು. ಜಪಾನೀಯರ ವಿಜಯದಿಂದ, ಯುರೋಪಿಯನ್ನರನ್ನು ಏಷ್ಯನ್ನರು ಗೆಲ್ಲಲು ಸಾಧ್ಯವಿಲ್ಲ ಎಂಬ ನಂಬಿಕೆ ನಶಿಸಿಹೋಯಿತು. ಎರಡನೆಯ ಮಹಾಯುದ್ಧದ ಅನಂತರ ಒಂದೊಂದೇ ರಾಷ್ಟ್ರಗಳು ಸ್ವತಂತ್ರವಾದುವು. 1946ರಲ್ಲಿ ಪಿಲಿಫೈನ್ಸ್ ಅಮೆರಿಕನ್ನರಿಂದ ಸ್ವಾತಂತ್ರ್ಯಗಳಿಸಿತು. 1948ರಲ್ಲಿ ಬರ್ಮ ಬ್ರಿಟಿಷ್‌ರಿಂದಲೂ 1949ರಲ್ಲಿ ಇಂಡೋನೇಷ್ಯ ಡಚ್ಚರಿಂದಲೂ, 1954ರಲ್ಲಿ ವಿಯಟ್ನಾಂ, ಲಾವೋಸ್ ಮತ್ತು ಕಾಂಬೋಡಿಯಗಳು ಫ್ರೆಂಚರಿಂದಲೂ, 1957ರಲ್ಲಿ ಮಲಯ ಬ್ರಿಟಿಷರಿಂದಲೂ ಸ್ವಾತಂತ್ರ್ಯ ಗಳಿಸಿದುವು. ರಾಜಕೀಯ ಸ್ವಾತಂತ್ರ್ಯ ಪಡೆದ ಅನಂತರವೂ ಆಗ್ನೇಯ ಏಷ್ಯದ ದೇಶಗಳು ಹಲವಾರು ಸಮಸ್ಯೆಗಳನ್ನು ಎದುರಿಸ ಬೇಕಾಯಿತು. ಈ ಭಾಗ ಶೀತಲ ಸಮರದ ಒಂದು ಪ್ರಮುಖ ಕೇಂದ್ರವಾಯಿತು. 1954ರಲ್ಲಿ ಏರ್ಪಟ್ಟ ಜಿನೀವ ಒಪ್ಪಂದದ ಪ್ರಕಾರ ವಿಯಟ್ನಾಂ ದೇಶವು ಇಬ್ಭಾಗವಾಯಿತು. ಉತ್ತರ ವಿಯಟ್ನಾಂ ಕಮ್ಯುನಿಸ್ಟರ ಹಿಡಿತಕ್ಕೊಳಗಾಯಿತು. ದಕ್ಷಿಣ ವಿಯೆಟ್ನಾಂ ಅಮೆರಿಕದ ಶಕ್ತಿ ಬಣಕ್ಕೆ ಸೇರಿದ ಪ್ರಜಾಸತ್ತೆಯ ದೇಶವಾಯಿತು. ಅಲ್ಲಿಂದಲೇ ಸಮಸ್ಯೆಯೂ ಆರಂಭವಾಯಿತು. ಉತ್ತರ ವಿಯೆಟ್ನಾಂನ ಜನಪ್ರಿಯ ಕಮ್ಯುನಿಸ್ಟ್ ನಾಯಕ ಹೊ–ಚಿ–ಮಿನ್ಹ್ ಅವರಿಗೆ, ಚೀನ ಹಾಗೂ ರಷ್ಯಗಳ ಹಸ್ತಕ್ಷೇಪದಿಂದಾಗಿ ಈ ಭಾಗದ ಸಮಸ್ಯೆಗಳು ಉಲ್ಬಣಿಸಿದವು. ಈ ವಲಯದಲ್ಲಿ ಕಮ್ಯೂನಿಸಂನ ಪ್ರಭಾವವನ್ನು ತಡೆಯುವ ಉದ್ದೇಶದಿಂದ 1954ರಲ್ಲಿ ಅಮೆರಿಕ ನೇತೃತ್ವದಲ್ಲಿ ಸಿಯಾಟೊ ಎಂಬ ಸೈನಿಕ ಒಕ್ಕೂಟ ಸ್ಥಾಪನೆಯಾಯಿತು. ಪಿಲಿಫೈನ್ಸ್, ಥೈಲೆಂಡ್, ಪಾಕಿಸ್ತಾನ ಮೊದಲಾದ ದೇಶಗಳು ಅದರ ಸದಸ್ಯತ್ವ ಪಡೆದವು. 1955ರಲ್ಲಿ ಇಂಡೋನೇಷ್ಯದ ಬಾಂಡುಂಗ್ ನಗರದಲ್ಲಿ ಏಷ್ಯ ಮತ್ತು ಆಫ್ರಿಕ ದೇಶಗಳ ಪ್ರಥಮ ಸಮ್ಮೇಳನ ಜರುಗಿತು.

20ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಆಗ್ನೇಯ ಏಷ್ಯದ ಪರಿಸ್ಥಿತಿಯಲ್ಲಿ ಕ್ರಮೇಣ ಸುಧಾರಣೆ ಕಂಡು ಬಂದಿತು. ಅಮೆರಿಕ ವಿಯೆಟ್ನಾಂನಿಂದ 1973ರ ವೇಳೆಗೆ ತನ್ನ ಸೈನ್ಯವನ್ನು ಹಿಂತೆಗೆದುಕೊಂಡಿತು. ಅದರ ಫಲವಾಗಿ ದಕ್ಷಿಣ ಮತ್ತು ಉತ್ತರ ವಿಯಟ್ನಾಂಗಳ ನಡುವೆ ನಡೆಯುತ್ತಿದ್ದ ಸುದೀರ್ಘ ಹೋರಾಟ 1975ರಲ್ಲಿ 1976ರಲ್ಲಿ ಎರಡೂ ವಿಯಟ್ನಾಂಗಳು ಒಂದುಗೂಡಿ ಏಕೀಕೃತ ವಿಯೆಟ್ನಾಂ ಸಮಾಜವಾದಿ ಗಣರಾಜ್ಯ ಉದಯಿಸಿತು. ವಿಯೆಟ್ನಾಂ ಮತ್ತು ಅಮೆರಿಕ ನಡುವಿನ ಸಂಬಂಧಗಳು ಸುಧಾರಿಸಿರುವುದ ರಿಂದ ಈ ವಲಯದಲ್ಲಿ ಬಿಗುವು ಕಡಿಮೆಯಾಗಿದೆ. ಕಾಂಬೋಡಿಯದ ಪರಿಸ್ಥಿತಿಯೂ ತಿಳಿಯಾಗಿದೆ. ಈ ಹಿನ್ನೆಲೆಯಲ್ಲಿ ಸಿಯಾಟೊ ಕೂಟವನ್ನು 1977ರಲ್ಲಿ ವಿಸರ್ಜಿಸಲಾಯಿತು. ಈ ವಲಯದ ಬಹುತೇಕ ದೇಶಗಳು ಆರ್ಥಿಕವಾಗಿ ಮುನ್ನಡೆ ಸಾಧಿಸುತ್ತಿವೆ. ಒಟ್ಟಾರೆ ಆಗ್ನೇಯ ಏಷ್ಯದ ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಯಾಗಿದೆ. (ಕೆ.ಎಸ್.ಎಸ್.;ಬಿ.ಪಿ.)

**ವಾಸ್ತುಶಿಲ್ಪ :** ಪ್ರಾಚೀನ ಕಂಬುಜದ ವಾಸ್ತುಶಿಲ್ಪವನ್ನು ಶೈಲಿಯ ದೃಷ್ಟಿಯಿಂದ ಇಂಡೊಶಿಖ್ಮೆರ್ ಮತ್ತು ಖ್ಮೆರ್ ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಇಂಡೋಖ್ಮೆರ್ ಶೈಲಿಯ ವಾಸ್ತುಶಿಲ್ಪದಲ್ಲಿ ವಿಶೇಷವಾಗಿ ಭಾರತೀಯ ಸಂಪ್ರದಾಯಕ್ಕೆ ಸೇರಿದ ವಾಸ್ತುಶಿಲ್ಪದ ನಿರ್ಮಾಣವನ್ನು ಕಾಣುತ್ತೇವೆ. ಖ್ಮೆರ್ ಶೈಲಿಯಲ್ಲಿ ಭಾರತೀಯ

ರಾವಣ ಕೈಲಾಸವನ್ನು ಎತ್ತುತ್ತಿರುವುದು – ಆಂಕೋರ್‌ವಾಟ್ (ಕಂಬುಜ)

ಪ್ರಭಾವ ಕಡಿಮೆಯಾದಂತೆ ತೋರುತ್ತದೆ. ಇಂಡೋಖ್ಮೆರ್ ಶೈಲಿಯ ದೇವಾಲಯವನ್ನು ವ್ಯಾಧಪುರದಲ್ಲಿ ಕಾಣಬಹುದು. ಇಲ್ಲಿಯ ದೇವಾಲಯಗಳು ಸಾಮಾನ್ಯವಾಗಿ ಇಟ್ಟಿಗೆಯಿಂದ ನಿರ್ಮಿತವಾದವುಗಳಾಗಿ ಗುಪ್ತಶೈಲಿಯ ದೇವಾಲಯಗಳನ್ನು ಹೋಲುತ್ತವೆ. ಹಂಚೆ ಎಂಬಲ್ಲಿರುವ ಕಲ್ಲಿನ ದೇವಾಲಯ ಶೈಲಿಯ ದೃಷ್ಟಿಯಿಂದ ಐಹೊಳೆಯ ಲಾಡ್‌ಖಾನ್ ದೇಗುಲಕ್ಕೆ ಸಮೀಪವರ್ತಿಯಾಗಿದೆ. ಪ್ರೆಕುಕ್ ಎಂಬಲ್ಲಿ ದೊರಕಿರುವ ದೇವಾಲಯವಂತೂ ಭಾರತೀಯ ವಾಸ್ತುಸಂಪ್ರದಾಯಕ್ಕೇ ಸೇರಿದುದಾಗಿದೆ. ಇಲ್ಲಿರುವ ಮಕರ ತೋರಣ, ಹಂಸಗಳ ಸಾಲು, ಚೈತ್ಯ ಗವಾಕ್ಷಿಗಳು ಗಮನಾರ್ಹವಾದುವು. ಬಯಾಂಗ್ ಎಂಬಲ್ಲಿರುವಕಲ್ಲಿನ ದೇವಾಲಯ ಅತ್ಯಂತ ಮನೋಹರವಾದ ಕಟ್ಟಡ. ಇದು ಚೌಕನೆಯ ಹಜಾರ ಮತ್ತು ಪದರಗಳುಳ್ಳ ಶಿಖರಗಳನ್ನು ಹೊಂದಿದೆ. ಈ ಪದರಗಳಲ್ಲಿ ಅಲಂಕೃತವಾದ ಲತೆಗಳೂ ಇತರ ಪ್ರಾಣಿಗಳೂ ಶಿಲ್ಪಿತವಾಗಿವೆ. ಈ ದೇವಾಲಯ ಪಲ್ಲವ ಶೈಲಿಯ ಪನಮಲೈ ದೇಗುಲವನ್ನು ಬಹುವಾಗಿ ಹೋಲುತ್ತದೆ. ಇಂಡೋಖ್ಮೆರ್ ಶೈಲಿಯ ಶಿಲ್ಪದಲ್ಲಿ ರಾಜ್‌ಗಿಯಾ ಎಂಬಲ್ಲಿ ದೊರಕಿರುವ ಅವಲೋಕಿತೇಶ್ವರ ವಿಗ್ರಹ ಮುಖ್ಯವಾದುದು. ಈ ವಿಗ್ರಹದ ಕೇಶಾಲಂಕಾರವನ್ನು ಭಾರತದ ಕನ್ಹೇರಿ ಗುಹಾಲಯದಲ್ಲೂ ಕಾಣಬಹುದು. ಪ್ರಸಾತ್ ಅಂದೆತ್‌ನಲ್ಲಿ ಸಿಕ್ಕಿರುವ ಹರಿಹರನ ಶಿಲ್ಪ ಕಂಚಿಯ ಕೈಲಾಸನಾಥ ದೇವಾಲಯದ ಶಿಲ್ಪಗಳನ್ನು ನೆನಪಿಗೆ ತರುತ್ತದೆ.

ಖ್ಮೆರ್ ಶೈಲಿಯ ದೇವಾಲಯಗಳಲ್ಲಿ ಭಾರತೀಯ ಸಂಪ್ರದಾಯದ ಅವನತಿಯನ್ನು ಕಾಣುತ್ತೇವೆ. ಇಲ್ಲಿ ಮಕರತೋರಣಗಳಾಗಲೀ ಚೈತ್ಯ ಗವಾಕ್ಷಿಗಳಾಗಲೀ ದುಂಡನೆಯ ಕಂಬಗಳಾಗಲೀ ಕಾಣಬರುವುದಿಲ್ಲ. ಶಿಖರಗಳ ಬದಲು ಮನುಷ್ಯನ ಮುಖವುಳ್ಳ ಗೋಪುರ ಗಳಿವೆ. ಆದರೆ ಪೌರಾಣಿಕ ಕಥೆಗಳು ಮತ್ತು ಇತರ ಅಲಂಕಾರಗಳು ಭಾರತ ದೇಶದ ಸಂಪ್ರದಾಯಕ್ಕೇ ಸೇರಿದವುಗಳಾಗಿವೆ. ದೇವರಾಜಧರ್ಮ ಖ್ಮೆರ್ ಶೈಲಿಯ ಅನೇಕ ದೇವಾಲಯ ಗಳಿಗೆ ದಾರಿ ಮಾಡಿಕೊಟ್ಟಿತು. ಅಮರೇಂದ್ರಪುರ, ಹರಿಹರಾಲಯ, ಯಶೋಧರಪುರ ಮುಂತಾದುವು ಬೆಳೆದವು. 12ನೆಯ ಶತಮಾನದ ಆಂಕೋರ್ ವಾಟ್ ದೇವಾಲಯ ಖ್ಮೆರ್ ವಾಸ್ತುಶಿಲ್ಪದ ಮಹೋನ್ನತ ಕೃತಿ. ಇಲ್ಲಿ ಎಲ್ಲವೂ ಬೃಹತ್ ಪ್ರಮಾಣದಲ್ಲಿವೆ. ಮೊಟ್ಟಮೊದಲು ಇರುವ ಕಂದಕ ಸು. 182 ಮೀ ಅಗಲವಾಗಿದ್ದು, ಒಂದು ಸುತ್ತುಬಂದರೆ ಸು. 19 ಕಿಮೀಗಳಷ್ಟಾಗುತ್ತದೆ. ಇದರ ಒಳಗೆ ಕೋಟೆಯಿದೆ. ಇದಕ್ಕೆ ಬರಲು ನಾಲ್ಕೂ ದಿಕ್ಕಿನಿಂದ ರಾಜಪಥವಿದೆ. ಮಧ್ಯದಲ್ಲಿ ಎತ್ತರವಾಗಿ ಶಿಖರವೂ, ಅಲ್ಲಿಯೇ ಒಂದು ದೇವಾಲಯವೂ ಇದೆ. ದೇವಾಲಯದ ಗೋಡೆಗಳಲ್ಲಿ ರಾಮಾಯಣ ಮತ್ತು ಇತರ ಪೌರಾಣಿಕ ಕಥೆಗಳು ಚಿತ್ರಿತವಾಗಿವೆ. ಮತ್ತೆ ಕಂಬುಜದಲ್ಲಿ ಈ ರೀತಿಯ ವಾಸ್ತುಶಿಲ್ಪ ನಿರ್ಮಾಣವಾಗಲೇ ಇಲ್ಲ.

ಆಗ್ನೇಯ ಏಷ್ಯದ ವಾಸ್ತುಶಿಲ್ಪಕ್ಕೆ ಜಾವ ದ್ವೀಪದ ಕೊಡುಗೆ ಮಹತ್ತರವಾದದು. ಜಾವದ ದೇವಾಲಯಗಳು ಸಾಮಾನ್ಯವಾಗಿ ಎತ್ತರದ ಆಧಾರಜಗಲಿ, ಚೌಕವಾದ ದೇವಾಲಯ ಮತ್ತು ಶಿಖರ ಚಚ್ಚೌಕವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತ ಬರುತ್ತದೆ. ಗೋಡೆಗಳ ಮೇಲೆ ಅಲಂಕಾರದ ಲತೆಗಳು, ಹೂಗಳು ಇರುತ್ತವೆ. ಕಾಲಮಕರ ಅಥವಾ ಕೀರ್ತಿಮುಖವೂ ಸಾಮಾನ್ಯವಾಗಿ ಕಾಣಬರುತ್ತದೆ. ಇಲ್ಲಿನ ದೇವಾಲಯಗಳಲ್ಲಿ ಕಂಬಗಳು ಇಲ್ಲವೆಂದೇ ಹೇಳಬೇಕು. ಮಧ್ಯ ಜಾವದಲ್ಲಿ 8 ರಿಂದ 11ನೆಯ ಶತಮಾನದವರೆಗೆ ವಿಶೇಷವಾಗಿ ದೇವಾಲಯಗಳು ನಿರ್ಮಿತವಾದವು. ಡಿಯಾಂಗ್ ಪ್ರಸ್ಥಭೂಮಿಯಲ್ಲಿ 8ನೆಯ ಶತಮಾನಕ್ಕೆ ಸೇರಿದ ಅನೇಕ ದೇಗುಲಗಳಿವೆ, ಇಲ್ಲಿ ಮಹಾಭಾರತ ಕಥೆಯ ಶಿಲ್ಪಗಳು, ಈಶ್ವರ, ದುರ್ಗ, ಗಣೇಶ, ವಿಷ್ಣು, ಬ್ರಹ್ಮ ಮುಂತಾದ ದೇವತೆಗಳ ಶಿಲ್ಪಗಳೂ ದೊರಕಿವೆ. ಪ್ರಂಬಾನನ್ ಎಂಬಲ್ಲಿ ದೊರಕಿರುವ ಶಿಲ್ಪಗಳು ಗಮನಾರ್ಹವಾದುವು. ಚಂದಿಕಲಶನ್, ಚಂಡಿಸರಿ, ಚಂಡಿಸೇವು ದೇವಾಲಯಗಳು ಪ್ರಂಬಾನನ್ ಪ್ರದೇಶದ ಮುಖ್ಯದೇವಾಲಯಗಳು. ಕೆಡು ಪ್ರದೇಶದ ದೇವಾಲಯಗಳಲ್ಲಿ ಚಂಡಿವೆಂದುತ್ ಮತ್ತು ಚಂಡಿಪವನ್ ಮುಖ್ಯವಾದುವು. ಇಲ್ಲಿ ಶೈವ, ವೈಷ್ಣವ ಮತ್ತು ಬೌದ್ಧಧರ್ಮದ ಶಿಲ್ಪಗಳನ್ನು ಕಾಣಬಹುದು. ಜಾವದ ಅತ್ಯಂತ ಮಹತ್ತರವಾದ ಕಲಾಕೃತಿಯೆಂದರೆ ಬೋರಬದೂರ್ ದೇವಾಲಯ. ಒಂದು ಸಣ್ಣಬೆಟ್ಟದ ಮೇಲಿದೆ. ಈ ದೇವಾಲಯವು ಪ್ರ.ಶ. 9ನೇ ಶತಮಾನದ ಮಧ್ಯಭಾಗದಲ್ಲಿ ಶೈಲೇಂದ್ರ ಎಂಬ ಬೌದ್ಧ ಅರಸರಿಂದ ನಿರ್ಮಿತವಾಯಿತು. ಯೋಗ್ಯಕರ್ತ ನಗರದ ಸಮೀಪದಲ್ಲಿರುವ ಈ ದೇಗುಲ ಪ್ರಸಿದ್ಧ ತಾಣವಾಗಿದೆ. ಈ ದೇಗುಲಕ್ಕೆ ಒಳಭಾಗವಾಗಲಿ ಅಥವಾ ಮೇಲ್ಚಾವಣಿಯಾಗಲಿ ಇಲ್ಲ. ಈ ಸೌಧದಲ್ಲಿ ಒಂಬತ್ತು ಅಂತಸ್ತುಗಳಿದ್ದು ಅತ್ಯಂತ ಎತ್ತರದ ಅಂತಸ್ತಿನ ಮೇಲೆ ಘಂಟಾಕೃತಿಯ ಸ್ತೂಪವಿದೆ. ಮೊದಲಿನ ಆರು ಅಂತಸ್ತುಗಳು ಚೌಕಾಕಾರದಲ್ಲೂ ಮೇಲಿನ ಮೂರು ಅಂತಸ್ತುಗಳು ವರ್ತುಲಾಕಾರದಲ್ಲೂ ಇವೆ. ವರ್ತುಲಾಕಾರದ ಅಂತಸ್ತುಗಳಲ್ಲಿ ಸುತ್ತಲೂ ಇರುವ ಸಣ್ಣಸ್ತೂಪಗಳಲ್ಲಿ 432 ಬುದ್ಧನ ವಿಗ್ರಹಗಳಿವೆ. ಮೇಲೆ ಹತ್ತಿಹೋಗಲು ನಾಲ್ಕು ದಿಕ್ಕುಗಳಲ್ಲೂ ಮೆಟ್ಟಲುಗಳಿವೆ. ವಾಸ್ತುಶಾಸ್ತ್ರದೃಷ್ಟಿಯಿಂದ ಮಾತ್ರವಲ್ಲದೆ ಶಿಲ್ಪಕಲೆಯ ದೃಷ್ಟಿಯಿಂದಲೂ ಬೋರಬದೂರ್ ಮಹತ್ತರವಾದುದು. ಇಲ್ಲಿ ಕೊನೆಯಪಕ್ಷ 1,500 ಶಿಲ್ಪಫಲಕಗಳಿವೆ. ಅವುಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಪಟ್ಟ ಕಥೆಗಳನ್ನು ಕಾಣಬಹುದು. ಶಿಲ್ಪಕಲಾ ದೃಷ್ಟಿಯಿಂದ ಅತ್ಯಂತ



ಮಂಜುಶ್ರೀ – ಜಾವ

ನಯನಮನೋಹರವಾದ ಕಲಾಕೃತಿಗಳಿವು. ಇವನ್ನು ಬಿಟ್ಟರೆ ಜಾವದಲ್ಲಿ ಲಾರಜಾಂಗ್ರಂಗ್ ಎಂಬಲ್ಲಿ ದೊರಕಿರುವ ದೇವಾಲಯಗಳು ಮುಖ್ಯವಾದುವು. ಇವು ಬೋರಬದೂರ್‌ನಷ್ಟು ಗಾತ್ರದಲ್ಲಿ ದೊಡ್ಡವಲ್ಲದಿದ್ದರೂ ನಿಜಜೀವನಕ್ಕೆ ಅತ್ಯಂತ ಸಮೀಪವಾಗಿವೆ. ಪೂರ್ವ ಜಾವದಲ್ಲಿ ಚಂಡಿಸಿಂಘಸಾರಿ, ಚಂಡಿಕಿಡಲ್, ಚಂಡಿಜಾಗೋ, ಪನರತನ್ ದೇವಾಲಯಗಳು ಮುಖ್ಯವಾದುವು. ಸಿಂಘಸಾರಿಯ ಪ್ರಜ್ಞಾಪಾರಮಿತ, ಬೆಲಹನ್‌ನ ಏರ್ಲಂಗ ಮಹಾರಾಜನ

ಶಿಲ್ಪ, ಸಿಂಪಿಂಗ್‌ನ ಹರಿಹರನ ವಿಗ್ರಹ ಪ್ರಮುಖ ಶಿಲ್ಪಗಳು. ಚಂಪಾ ರಾಜ್ಯದ ವಾಸ್ತುಶಿಲ್ಪವನ್ನು ಮುಖ್ಯವಾಗಿ ಮೈಸನ್, ಡಾಂಗ್‌ಡುವಾಂಗ್, ಮತ್ತು ಪೋ ನಗರಗಳಲ್ಲಿ ಕಾಣಬಹುದು. ಮೈಸನ್ ಮತ್ತು ಪೋ ನಗರ್‌ನ ದೇವಾಲಯಗಳು ಶೈವಧರ್ಮಕ್ಕೆ ಸೇರಿದುವು. ಡಾಂಗ್ ಡುವಾಂಗ್‌ನಲ್ಲಿ ಬೌದ್ಧಧರ್ಮದ ಕಟ್ಟಡಗಳೇ ಹೆಚ್ಚು. ಚಂಪಾ ರಾಜ್ಯದ ದೇವಾಲಯಗಳು ಸಣ್ಣಗಿದ್ದು ಇಟ್ಟಿಗೆಯಿಂದ ಮಾಡಿದುವು. ಶಿಖರಗಳು ಮಹಾಬಲಿಪುರದ ರಥದ ಶಿಖರಗಳನ್ನು ಬಹುವಾಗಿ ಹೋಲುತ್ತವೆ. ಮೈಸನ್ನಿನ ಶಿವ, ಗಣೇಶ, ಸ್ಕಂದ ಮುಂತಾದ ದೇವರ ಶಿಲ್ಪಗಳೂ ಡಾಂಗ್‌ಡು ವಾಂಗ್‌ನ ಲೋಕೇಶ್ವರನ ಶಿಲ್ಪವೂ ಬಹಳ ಉತ್ತಮ ವರ್ಗಕ್ಕೆ ಸೇರಿದುವು.

ಬುದ್ಧ ಸಯಾಂ

ಮಯನ್ಮಾರ್ ದೇಶಕ್ಕೂ ಭಾರತಕ್ಕೂ ಹೆಚ್ಚು ಸಂಪರ್ಕಗಳಿದ್ದುದರಿಂದ, ಅಲ್ಲಿನ ವಾಸ್ತುಶಿಲ್ಪಕಲೆಯಲ್ಲಿ ಭಾರತೀಯ ಸಂಪ್ರದಾಯದ ಪೂರ್ಣ ಪ್ರಭಾವವನ್ನು ಕಾಣುತ್ತೇವೆ. ಬರ್ಮದಲ್ಲಿ ಅತ್ಯಂತ ಮುಖ್ಯವಾದುದು ಆನಂದ ದೇವಾಲಯ. ಇದು ಕ್ಯಾನಜಿತ್ಥ ಎಂಬ ರಾಜನಿಂದ ನಿರ್ಮಿತವಾಯಿತು. ಇದು ಇಟ್ಟಿಗೆಯಿಂದ ಕಟ್ಟಲ್ಪಟ್ಟು ಸುಮಾರು 560 ಚ. ಅ. ವಿಶಾಲವಾಗಿದೆ. ಮಧ್ಯದಲ್ಲಿ ಎತ್ತರವಾದ ಬುದ್ಧನ ವಿಗ್ರಹವಿದೆ. ಷ್ವೇಜಗಾನ್ ದೇವಾಲಯ, ಮಿಂಗಲಜೇದಿ ದೇವಾಲಯ, ಮಹಾಬೋಧಿ ಮುಂತಾದ ದೇವಾಲಯಗಳೂ ಬರ್ಮದಲ್ಲಿ ಮುಖ್ಯವಾದವು.

ಇವಿಷ್ಟೇ ಅಲ್ಲದೆ ಬೋರ್ನಿಯೋದಲ್ಲಿ ದೊರಕಿರುವ ಬುದ್ಧವಿಗ್ರಹಗಳು, ಮಲಯದಲ್ಲಿ ಸಿಕ್ಕಿರುವ ಬುದ್ಧನ ಶಿಲ್ಪಗಳು ಮತ್ತು ಕಂಚಿನ ಪ್ರತಿಮೆಗಳು, ಸೆಲಿಬೆಸ್‌ನಲ್ಲಿ ದೊರಕಿರುವ ಕಂಚಿನ ಬುದ್ಧಪ್ರತಿಮೆ ಮತ್ತು ಬಲಿದ್ವೀಪದ ದೇವಾಲಯಗಳು, ಸುಖೋಥೈ ಜನಗಳಿಂದ ನಿರ್ಮಿತವಾದ ದೇವಾಲಯಗಳು ಆಗ್ನೇಯ ಏಷ್ಯದಲ್ಲಿನ ವಾಸ್ತುಶಿಲ್ಪಕ್ಕೆ ಮುಖ್ಯವಾದುವು. ಇವೆಲ್ಲದರಲ್ಲಿಯೂ ಭಾರತೀಯ ಸಂಸ್ಕೃತಿಯ ಮತ್ತು ವಾಸ್ತುಶಿಲ್ಪದ ಪ್ರಭಾವಗಳನ್ನು ಕಾಣಬಹುದು. (ಎ.ವಿ.ಎನ್.)

**ನೃತ್ಯಸಂಪ್ರದಾಯಗಳು :** ಇಲ್ಲಿನ ಎಲ್ಲ ಭಾಗಗಳ ನೃತ್ಯ ಮತ್ತು ನಾಟಕಗಳೆಲ್ಲಕ್ಕೂ ಕಥೆ ಮತ್ತು ತಂತ್ರದ ವಿಷಯದಲ್ಲಿ ಸಾಧಾರಣವಾದ ಮೂಲವೊಂದುಂಟು. ತಂತ್ರ ಭಾರತೀಯ ನಾಟ್ಯಶಾಸ್ತ್ರವನ್ನವಲಂಬಿಸಿದೆ. ಕಥಾವಸ್ತುಗಳು ರಾಮಾಯಣ ಮತ್ತು ಮಹಾಭಾರತಗಳವು. ವಿಶದವಾಗಿ, ಅವಿನಾಶಿಯಾದ ಸಾಮರ್ಥ್ಯವನ್ನು ಪ್ರದರ್ಶಿಸುತ್ತ, ಈ ಕಲಾಭಿವ್ಯಂಜನೆಯ ಬಾಂಧವ್ಯ ಎಂಥ ರಾಜಕೀಯ ಉಪಪ್ಲವಗಳಲ್ಲೂ ನಾಶಹೊಂದದೆ ಇಲ್ಲಿ ಜೀವಂತವಾಗಿ ವಿಜೃಂಭಿಸುತ್ತಿದೆ. ಮಯನ್ಮಾರ್, ಮಲಯ, ಇಂಡೋನೇಷ್ಯ, ಕಾಂಬೋಡಿಯ, ಲಾವೋಸ್ ಮತ್ತು ಥೈಲೆಂಡಿನ ನೃತ್ಯಸಂಪ್ರದಾಯಗಳಲ್ಲೆಲ್ಲ ಭಾರತೀಯ ಸಂಸ್ಕೃತಿಯ ಮಾದರಿ ಕಂಡುಬರುತ್ತದೆ.

ಬೌದ್ಧಧರ್ಮವನ್ನು ಮುಖ್ಯವಾಗಿ ಅವಲಂಬಿಸಿರುವ ಮಯನ್ಮಾರ್ ದೇಶದಲ್ಲಿ ಪ್ರತಿವರ್ಷವೂ ರಾಮಾಯಣವನ್ನು ಬೌದ್ಧಮಂದಿರದಲ್ಲಿ ಆಡುತ್ತಾರೆ. ನಟರು ಆಯಾಪಾತ್ರಗಳಿಗೆ ತಕ್ಕಂತೆಯೋ ಮೊಗವಾಡಗಳನ್ನು ಧರಿಸಿಯೋ ಕಥೆಯಲ್ಲಿ ಯಾವ ವ್ಯತ್ಯಾಸವನ್ನೂ ಮಾಡದೆ ಆಡಿ ತೋರಿಸುತ್ತಾರೆ. ಮುಸ್ಲಿಮರು ಹೆಚ್ಚಾಗಿರುವ ಮಲಯ ದೇಶದಲ್ಲಿ ಆವೇಶದ ಕುಣಿತವೆಲ್ಲ ಹಿಂದೂ ರೀತಿಯದು. ಆ ಸಮಯಗಳಲ್ಲಿ ಹಿಂದೂ ದೇವತೆ ನಟರ ಮೈಮೇಲೆ ಬರುತ್ತದೆ. ಭಾರತದಿಂದ ಆಗ್ನೇಯ ಏಷ್ಯಕ್ಕೆ ನೃತ್ಯ ಹೊರಟಾಗ ಅಲ್ಲಿ ಅದು ಕೆಲವು ಮಾರ್ಪಾಡುಗಳನ್ನು ಹೊಂದುವುದು ಅನಿವಾರ್ಯವಾಯಿತು. ಈ ಬದಲಾವಣೆಗಳು ಕೌತುಕಾಸ್ಪದವಾಗಿವೆ. ಏಕೆಂದರೆ ಮಹಾಭಾರತ ರಾಮಾಯಣಗಳಿಂದ ಈ ಕಥೆಗಳೆಲ್ಲವನ್ನೂ ಸಂಪೂರ್ಣವಾಗಿ ತೆಗೆದುಕೊಂಡಿದ್ದರೂ ಅವಕ್ಕೆ ಕೆಲವು ಪ್ರಸಂಗಗಳನ್ನೂ ಸೇರಿಸಲಾಗಿದೆ ಮತ್ತು ಮುಖ್ಯ ಪಾತ್ರಗಳ ವ್ಯಕ್ತಿತ್ವದಲ್ಲಿ ಬದಲಾವಣೆ ಮಾಡಲಾಗಿದೆ.

ಈ ದೇಶಗಳ ನೃತ್ಯ ಸಂಪ್ರದಾಯಗಳಲ್ಲಿ ಕಥಕ್ಕಳಿ ತಂತ್ರದ ಪ್ರಭಾವ ಎದ್ದು ಕಾಣುತ್ತದೆ. ಹಸ್ತಗಳ ಮುಖ್ಯ ಭಾಷೆ ಹಾಗೆಯೇ ಉಳಿದಿದೆ. ಈ ನೃತ್ಯೋಪಹಾರ ದೇವರಿಗೇ ಹೊರತು ಮನುಷ್ಯನಿಗಲ್ಲ. ನೃತ್ಯಾಧಿದೇವತೆ ಶಿವ; ನೃತ್ಯಗಳು, ಮುಖ್ಯವಾಗಿ ಬಾಲಿದ್ವೀಪದಲ್ಲಿ, ಸಂಪೂರ್ಣವಾಗಿ ಪೂಜಾಂಗಗಳು. ಇವುಗಳನ್ನು ಸ್ತೋತ್ರರೂಪವಾಗಿಯೂ ದೇವತೆಗಳನ್ನು ಉಪಶಮನಗೊಳಿಸಲೂ ನಡೆಸುತ್ತಾರೆ. ಬಾಲಿಯಲ್ಲಿ ನೃತ್ಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆರೆದಿದೆ. ಪ್ರತಿ ಹಬ್ಬದಲ್ಲೂ ಇದು ಇರುತ್ತದೆ. ಮುಖದಲ್ಲಿ ಯಾವುದೇ ಅಭಿನಯವು ತೋರದಿದ್ದರೂ ನರ್ತಕರು ತಮ್ಮ ಸಮಸ್ತ ಭಾವಗಳನ್ನೂ ಮೈಯಲ್ಲಿ ತೋರುತ್ತಾರೆ. ಗಂಡಸರು ಗಡುಸಾಗಿ ಕುಣಿದರೆ ಹೆಂಗಸರು ಮೆದುವಾಗಿಯೂ ಮಧುರವಾಗಿಯೂ ಚಲಿಸುತ್ತಾರೆ. ಬಾಲಿನಿವಾಸಿಗಳು ತಮ್ಮದೇ ಆದ ವಿಶಿಷ್ಟಶೈಲಿಯನ್ನು ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಬಾರಿಸ್ ಎಂಬುದು ಸಮರ್ಥವಾದ ಯುದ್ಧ ನೃತ್ಯ, ವಾಯೊಂಗ್ ವೊಂಗ್ ಎಂಬುದು ಇಲ್ಲಿಯ ಬಹಳ ಹಳೆಯ ಮಾದರಿಯ ನೃತ್ಯ.

ರಾಮಾಯಣವನ್ನು ಆಧರಿಸಿದ ಕತೆಗಳಲ್ಲಿ ಹಾವುಗಳು, ಹುಲಿಗಳು ಮತ್ತು ಆನೆ ಮೊದಲಾದ ನಗುವುಕ್ಕಿಸುವ ಪ್ರಾಣಿಗಳ ಪಾತ್ರಗಳು ಬರುತ್ತವೆ. ಸಂಸ್ಕೃತದ ಸೂತ್ರಧಾರನ (ವಿದೂಷಕ) ಹಾಗೆ, ಕಥಾನಾಯಕನ ಮಿತ್ರರೂ ಹಾಸ್ಯರಸಕ್ಕೆ ಆಕರರಾಗಿದ್ದಾರೆ. ಪೌರಾಣಿಕ ಕಥೆಗಳಲ್ಲಿ ಅರ್ಜುನನೇ ಅತ್ಯಂತ ಜನಪ್ರಿಯನಾದ ಶೂರ. ಭಾರತೀಯ ಪುರಾಣಗಳಲ್ಲಿನ ಕೃಷ್ಣನಂಥ ಪಾತ್ರವನ್ನು ಆತ ಅಲ್ಲಿ ವಹಿಸುತ್ತಾನೆ.

ಟೋಪಂಗ್ ಕುಣಿತ ಒಂದು ಐತಿಹಾಸಿಕ ನಾಟಕ. ಅದು ಸಂಪೂರ್ಣವಾಗಿ ಬಾಲಿದ್ವೀಪನಿವಾಸಿಗಳಿಂದ ಕಲ್ಪಿತವಾದದ್ದು. ಬಾಲಿ ಜಾವದ ಭಾಗವಾಗಿದ್ದ ಕಾಲದ ಮಡ್‌ಜಪಿತ್ ವಂಶದ ಚರಿತ್ರೆ ಅದರ ಕಥಾವಸ್ತು. ಲೇಗಾಂಗ್ ಎಂಬ ಮಕ್ಕಳಾಡುವ ಕುಣಿತ ಮೊದಲು ದೇವಸ್ಥಾನಗಳಲ್ಲಿ ಕುಣಿಯುತ್ತಿದ್ದ ನೃತ್ಯವಾಗಿತ್ತೆಂದು ಹೇಳಲಾಗಿದೆ.

ಲೇಗಾಂಗ್ ನೃತ್ಯ ಪ್ರಾರಂಭವಾಗುವುದು ಬೀಸಣಿಗೆ ಹಿಡಿದ ಇಬ್ಬರು ನರ್ತಕಿಯರ ಕುಣಿತದಿಂದ. ಅನಂತರ ರಾಣಿಯರ ದರ್ಶನಾಕಾಂಕ್ಷಿಯಾದ ರಾಜನಿಗೆ ಸ್ವಾಗತವಾಗುತ್ತದೆ. ಮಧ್ಯದಲ್ಲಿ ಅಪಶಕುನದ ಹಕ್ಕಿ ಕಾಣಿಸಿಕೊಳ್ಳುತ್ತದೆ. ಆಮೇಲೆ ಯುದ್ಧದಲ್ಲಿ ರಾಜ ಸಾಯುತ್ತಾನೆ. ಕೊನೆಯಲ್ಲಿ ಕಥೆ ಮರೆತು ಹೋಗಿ ನೃತ್ಯವೇ ಪ್ರಧಾನವಾಗುತ್ತದೆ. ಜಾವದಲ್ಲಿ ನೃತ್ಯಕ್ಕೆ ಮುಖ್ಯ ಕೇಂದ್ರಗಳಾವು ದೆಂದರೆ ಸುರಕರ್ತ ಮತ್ತು ಜೋಗ್‌ಜಕಾರ್ತಾ. ಇಲ್ಲಿ ರಾಜಪುತ್ರರು ನರ್ತನಶಾಲೆಗಳನ್ನು ನಡೆಸಿ ಕೊಂಡು ಬರುತ್ತಿದ್ದರು. ಈ ಕಲೆ ಆಳುವ ಪಂಗಡಗಳಿಗೆ ಮಾತ್ರ ಮೀಸಲಾಗಿತ್ತು. ಸುಲ್ತಾನರೇ ನಾಜೂಕಾದ ಉಡುಗೆಗಳ ಮಾದರಿಗಳನ್ನು ಹಾಕಿ ಕೊಡುತ್ತಿದ್ದರು. ರಾಜಕುಮಾರರು, ಅವರಲ್ಲಿ ಮುಖ್ಯವಾಗಿ ಗತಿಸಿದ ಸುಲ್ತಾನರ ತಮ್ಮನಾದ ಪಂಗೆರಾನ್ ಚೆಡ್‌ಜೊಕುಸುವೋ ಎಂಬುವರು, ನೃತ್ಯವನ್ನು ಕಲಿಸುವ ಗುರುಗಳಾಗಿದ್ದರು. ಶೈಲಿ ಅಷ್ಟು ಠೀಕಾಗಿಲ್ಲದಿದ್ದರೂ ಪ್ರತಿಚಲನವೂ ಹೇಳಲಸಾಧ್ಯವೆನ್ನುವಷ್ಟು ನವಿರಾಗಿದೆ. ಇವುಗಳಲ್ಲಿ ಅತ್ಯಂತ ಸುಂದರವಾದುದು ನಾಲ್ಕು ಹೆಣ್ಣು ಹುಡುಗಿಯರು ಕುಣಿಯುವ ಸೆರಿಂಪಿ ಎಂಬ ನೃತ್ಯ. ಇದಕ್ಕೆ ವಿಶಿಷ್ಟವಾದ ಅರ್ಥವೇನೂ ಇಲ್ಲ. ಆದರೆ ಮೆಲುಗಾಳಿಯಲ್ಲಿ ಹೂಗಳು ಬಳುಕಾಡುತ್ತ ಸೂರ್ಯನ ಹೊಳಪಿನ ಕಿರಣಗಳಿಗೆ ತಮ್ಮ ದಳಗಳನ್ನು ತೆರೆಯುವುದನ್ನು ಈ ನೃತ್ಯ ಅನುಕರಣೆಮಾಡುವಂತಿದೆ. ಸೆರಿಂಪಿ ನರ್ತಕಿಯರನ್ನು ಬ್ರಹ್ಮನೇ ನಿರ್ಮಿಸಿದನೆಂದು ಹೇಳುವ ವಾಡಿಕೆ ಇದೆ. ವಾಯೊಂಗ್ ಎಂಬ ಸಾಂಪ್ರದಾಯಿಕ ನೃತ್ಯನಾಟಕ ಬಹಳ ವಿಸ್ತಾರವಾಗಿದೆ. ಇದು ಸಾಮಾನ್ಯವಾಗಿ ಪಾಂಡವ ಕೌರವರ ಯುದ್ಧ ಪ್ರಸಂಗಗಳನ್ನು ಚಿತ್ರಿಸುತ್ತದೆ. ವಾದ್ಯಮೇಳಕ್ಕೆ ಗಮೇಲನ್ ಎಂದು ಹೆಸರು. ಇದು ತುಂಬ ಕೌತುಕಪೂರ್ಣವಾಗಿದೆ. ಇದರಲ್ಲಿ ಮರ ಮತ್ತು ಲೋಹದ ಸೈಲೋಫೋನ್‌ಗಳು, ಜಾಗಟೆಗಳು, ಮದ್ದಲೆಗಳು ಮತ್ತು ತಾಳಗಳು ಇವೆ. ಇವುಗಳನ್ನು ನರ್ತಕರ ಗತಿಗೆ ಸರಿಯಾಗಿ ಬಾರಿಸುತ್ತಾರೆ.

ಜನಪ್ರಿಯವಾದ ಕೆಬ್‌ಯಾರ್ ಎಂಬುದು ಒಬ್ಬನೇ ಕುಣಿಯುವ ಕುಣಿತ. ಇದನ್ನು ರಚಿಸಿದವನು ಹೆಸರಾಂತ ಮೇರಿಯೊ ಎಂಬ ನರ್ತಕ. ಈ ಸುಂದರನೃತ್ಯದಲ್ಲಿ ನರ್ತಿಸುವವ ಸಂಗೀತವನ್ನು ಮುಂದೊಡ್ಡಿ ಕುಣಿತದ ಪೂರ್ತಿ ಕುಳಿತಿರುತ್ತಾನೆ.

ಚೀನದಲ್ಲಿ ಜೀವನದ ಸಮಸ್ಯೆಗಳನ್ನೆಲ್ಲ ರಂಗಮಂದಿರ ರಾಗಮಯವಾಗಿ ಮಾಡುತ್ತದೆ. ಮತ್ತು ಕಥಕ್ಕಳಿಯಲ್ಲಿರುವಂತೆ ಒಳ್ಳೆಯದು ಮತ್ತು ಕೆಡುಕೆಂಬ ಭೇದಗಳು ನಾಟಕೀಯವಾಗಿ ಪ್ರದರ್ಶಿತವಾಗುತ್ತವೆ. ಸಂಗೀತ, ನರ್ತನ ಮತ್ತು ಮೂಕಾಭಿನಯ ಇವುಗಳೇ ರಂಗಸ್ಥಳದ ಮೂಲಾಧಾರ. ಇವುಗಳಲ್ಲಿ ಅಭಿನಯಕ್ಕೆ ಪ್ರಾಮುಖ್ಯ ಹೆಚ್ಚು. ಬಹುಶಃಪೆಕಿನ್ ಗೇಯರೂಪಕಗಳು ಸರಳವಾದ ಜನಪದ ಗೀತೆಗಳಿಂದಲೂ ಹಳ್ಳಿಗಳಲ್ಲಿ ಹಾಡುತ್ತಿದ್ದ ಕಥೆಗಳಿಂದಲೂ ಮೂಡಿ ಬಂದಂಥವು. ಬಳಿಕ ಪ್ರಸಂಗಗಳು ಬಂದುವು. ಕೊನೆಗೆ ಹೇರಳವಾದ ಉಡಿಗೆ ತೊಡಿಗೆಗಳು ಮತ್ತು ತುಂಬ ನಿಯಮಾನುಸಾರವಾದ ಅಭಿನಯ ಬಂದವು. ಇದು ದೀರ್ಘವಾದ ಸಂಸ್ಕರಣ ಕ್ರಮ. ಮಾನವರು ಹಾಡಿಕುಣಿಯಲು ಅಭಿನಯಗಳನ್ನು ಮುದ್ರೆಗಳನ್ನು ಚಲನೆಗಳನ್ನು ಕಲಿಯುತ್ತಾರೆ. ನಾಟಕಗಳೆಲ್ಲ ಐತಿಹಾಸಿಕ ಪ್ರಸಂಗಗಳೇ ಹೊರತು ಬೇರೆಯಲ್ಲ. ಈಗೀಗ ಪ್ರೌಢನಾಟಕಶಾಲೆಗಳನ್ನು ಆಧುನಿಕತೆಗೆ ತಿರುಗಿಸಲು ಪ್ರಯತ್ನಗಳು ನಡೆಯುತ್ತಿವೆ.

ಆಗ್ನೇಯ ಏಷ್ಯ ಮತ್ತು ಚೀನ ದೇಶಗಳಲ್ಲಿ ದೇಗುಲಗಳಲ್ಲೂ ನಾಟ್ಯಮಂದಿರಗಳಲ್ಲೂ ನೃತ್ಯದ ಉತ್ಸಾಹ ಪೂರ್ಣವಾಗಿದೆ; ಜೀವಕಳೆಯಿಂದ ಕೂಡಿದೆ. ಭಾರತೀಯ ಕಲೆಯಿಂದ ಪ್ರಭಾವಿತವಾಗಿದ್ದರೂ ಈ ದೇಶಗಳಲ್ಲಿ ಪ್ರತಿಯೊಂದು ದೇಶವೂ ತನ್ನದೇ ಆದ ಸಂದೇಶವನ್ನು ಜಗತ್ತಿಗೆ ಕೊಡಲು ಮತ್ತು ತನ್ನ ಭಾವಪ್ರತೀಕಗಳನ್ನು ನೃತ್ಯ ಮತ್ತು ನಾಟಕ ಕಲೆಗಳ ಮೂಲಕ ಲೋಕದ ಕಣ್ಣೆದಿರು ನಿಲ್ಲಿಸಲು ಹವಣಿಸುತ್ತಿದೆ. (ಎಂ.ಎಸ್.)

**ಆಗ್ಬರ್ನ್, ಡಬ್ಲ್ಯು. ಎಫ್. :** 1886–1959. ಪ್ರಸಿದ್ಧ ಸಮಾಜಶಾಸ್ತ್ರಜ್ಞ. ಸಂಯುಕ್ತ ಸಂಸ್ಥಾನದ ಜಾರ್ಜಿಯದಲ್ಲಿ ಬಟ್ಲರ್ ಎಂಬಲ್ಲಿ ಹುಟ್ಟಿದ. ವಿದ್ಯಾಭ್ಯಾಸ ಮರ್ಸರ್ ಮತ್ತು ಕೊಲಂಬಿಯ ವಿಶ್ವವಿದ್ಯಾನಿಲಯಗಳಲ್ಲಿ ಜರುಗಿತು. ಮೊದಲು ಪ್ರಿನ್ಸ್‌ಟನ್ ಮತ್ತು ವಾಷಿಂಗ್ಟನ್ ವಿಶ್ವವಿದ್ಯಾನಿಲಯಗಳಲ್ಲಿ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ ಮತ್ತು ಸಮಾಜವಿಜ್ಞಾನಗಳ ಅಧ್ಯಾಪಕನಾಗಿದ್ದ. ಮುಂದೆ ಕೆಲಕಾಲ ಶಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಸಮಾಜವಿಜ್ಞಾನದ ಪ್ರಾಧ್ಯಾಪಕನಾಗಿ ಕೆಲಸಮಾಡಿದ. 1951ರಲ್ಲಿ ನಿವೃತ್ತನಾಗಿ ಪ್ರಪಂಚಪರ್ಯಟನ ಕೈಗೊಂಡು ಹೋದೆಡೆಯೆಲ್ಲ ಪ್ರಾಜ್ಞರಿಂದ ಹೆಚ್ಚು ವಿಷಯ ಸಂಗ್ರಹಿಸಿ ಉಪನ್ಯಾಸಗಳನ್ನು ಕೊಟ್ಟ. ಭಾರತಕ್ಕೆ ಬಂದಿದ್ದಾಗ ಕೊಲ್ಕತ್ತ ಮತ್ತು ದೆಹಲಿ ವಿಶ್ವವಿದ್ಯಾನಿಲಯಗಳಲ್ಲಿ ಅವನ ಉಪನ್ಯಾಸ ನಡೆಯಿತು. ಅಮೆರಿಕ ಸರ್ಕಾರದ ನಾನಾ ಶಾಖೆಗಳಲ್ಲೂ ಸೇವೆ ಸಲ್ಲಿಸಿದ. ಸಮಾಜವಿಜ್ಞಾನಿಗಳು ಸಮಾಜದ ಸ್ಥಿತಿಗತಿಗಳನ್ನು ಮಾತ್ರವೇ ಅಭ್ಯಸಿಸದೆ ಚರಿತ್ರೆ, ರಾಜಕೀಯ, ಸಂಸ್ಕೃತಿ, ಸಂಪ್ರದಾಯಗಳು ಮುಂತಾದ ಎಲ್ಲ ಮುಖಗಳನ್ನೂ ಪರಿಶೀಲಿಸಿದಾಗಲೇ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸಲು ಸಾಧ್ಯವಾಗುತ್ತದೆ ಎಂಬುದು ಅವನ ಅಭಿಪ್ರಾಯ.

**ಆಗ್ರ :** ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾಗಿರುವ ತಾಜ್‌ಮಹಲ್ ಇರುವ ಉತ್ತರ ಪ್ರದೇಶದ ಪ್ರಮುಖನಗರ ಮತ್ತು ಜಿಲ್ಲಾ ಕೇಂದ್ರ (ಉ.ಅ.27$^{0}$.09 ಮತ್ತು 78$^{0}$.02ಪೂ.ರೇ.). ಯಮುನಾ ನದಿಯ ದಡದಲ್ಲಿ ದೆಹಲಿಗೆ 197 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,400,000 (2001). ಅಕ್ಬರ್ ಮಹಾಶಯ ಇದನ್ನು ಊರ್ಜಿತಗೊಳಿಸಿ (1566) ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಇಲ್ಲಿ ಒಂದು ವಿಶ್ವವಿದ್ಯಾನಿಲಯವಿದೆ. ಒಂದು ದೊಡ್ಡ ರೈಲು ಮತ್ತು



ಆಗ್ರ ಕೋಟೆ

ವಿಮಾನ ನಿಲ್ದಾಣ, ವಾಣಿಜ್ಯ ಮತ್ತು ಪ್ರೇಕ್ಷಣೀಯ ಕೇಂದ್ರ. ಹತ್ತಿ ಮತ್ತು ಜವಳಿ ಹಿಟ್ಟಿನ ಗಿರಣಿಗಳಿವೆ. ಕಲಾತ್ಮಕವಾದ ಉಣ್ಣೆಯ ಜಮಖಾನಗಳು ಇಲ್ಲಿಂದ ದೇಶ ವಿದೇಶಗಳಿಗೆ ಹೋಗುತ್ತವೆ. ಚರ್ಮದ ವಸ್ತುಗಳಿಗೂ ಇದು ಪ್ರಸಿದ್ಧ. ಅಮೃತಶಿಲೆಯ ಕೆತ್ತನೆ ಕೆಲಸ, ಬೆಳ್ಳಿಯ ಎಳೆಗಳ ನೇಯ್ಗೆಗಳಿಗೆ ಇದು ಹೆಸರುವಾಸಿ.

ಆಗ್ರ ಜಿಲ್ಲೆ 4027 ಚ.ಕಿಮೀ ವಿಸ್ತಾರವಾಗಿದೆ. ಜನಸಂಖ್ಯೆ 36,11,301 (2001). ಯಮುನಾ ನದಿ ಮತ್ತು ಆಗ್ರ ಕಾಲುವೆಗಳು ಇಲ್ಲಿನ ಅಭಿವೃದ್ಧಿಗೆ ಕಾರಣವಾಗಿವೆ. ಗೋದಿ, ಜವೆಗೋದಿ, ದ್ವಿದಳ ಧಾನ್ಯಗಳು ಹೇರಳವಾಗಿ ಸಾಗುವಳಿಯಾಗುತ್ತದೆ. (ಸಿ.ಕೆ.ಎನ್.)

**ಇಲ್ಲಿನ ಜನರ ಭಾಷೆ ಹಿಂದಿ.** ಆಗ್ರ ನಗರ ಐತಿಹಾಸಿಕವಾಗಿ ಪ್ರಸಿದ್ಧವಾದ ಸ್ಥಳ. ಇಟಾವ, ತೊಯಿಲ್, ಗ್ವಾಲಿಯರ್, ಧೋಲಪುರ ಮೊದಲಾದ ಊರುಗಳ ನಾಯಕರನ್ನು ತನ್ನ ಹತೋಟಿಗೆ ತರಲು ಸಿಕಂದರ್‌ಲೋದಿ 1504ರಲ್ಲಿ ಈ ನಗರವನ್ನು ಕಟ್ಟಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅದಕ್ಕೆ ಒಂದು ಕೋಟೆಯನ್ನೂ ಕಟ್ಟಿಸಿದ. ಮುಂದೆ ಮೊಗಲ ಬಾದಶಹನಾದ ಬಾಬರ್ ಇದನ್ನು ಗೆದ್ದು ಹಳೆಯ ಕೋಟೆಯಲ್ಲಿ ಜಾಮಿಯ ಮಸೀದಿಯನ್ನು ಕಟ್ಟಿಸಿದ. ತರುವಾಯ ಇದು ಅಕ್ಬರ್, ಜಹಾಂಗೀರ್, ಷಹಜಹಾನ್ ಮೊದಲಾದ ಮೊಗಲ ಬಾದಶಹರ ರಾಜಧಾನಿಯಾಗಿತ್ತು. ಅಕ್ಬರ್ ಈ ನಗರದ ಸಮೀಪದಲ್ಲಿ ಸಿಕ್ರಿ ಎಂಬಲ್ಲಿ ಸುಂದರ ಕಲ್ಲಿನ ಕಟ್ಟಡಗಳನ್ನು ಕಟ್ಟಿಸಿದ. ಈ ಕಟ್ಟಡಗಳ ರಚನೆ ಇತಿಹಾಸಪ್ರಸಿದ್ಧವಾದದ್ದು. ಅಕ್ಬರ್ ಇಲ್ಲಿಯೇ ಹಲವು ಕಾಲ ವಾಸಮಾಡಿದ. ಅವನ ಕಾಲದ ಜಹಂಗೀರ್‌ಮಹಲ್ ಹಿಂದೂ ರಾಜನ ಅರಮನೆಯಂತಿದ್ದು ಮೊಗಲ್ ಶೈಲಿಯ ಮೇಲೆ ಆದ ಹಿಂದೂಪ್ರಭಾವಕ್ಕೆ ಸಾಕ್ಷಿಯಾಗಿದೆ.

ಕಲಾಪ್ರೇಮಿಯಾದ ಷಹಜಹಾನ್ ಅಕ್ಬರನ ಕಾಲದ ಕೋಟೆಯನ್ನು ದುರಸ್ತು ಮಾಡಿದ್ದಲ್ಲದೆ ಇಲ್ಲಿ ಸುಂದರ ಕಟ್ಟಡಗಳನ್ನು ಕಟ್ಟಿಸಿದ. ಈತ ಕಟ್ಟಿಸಿದ ಮೋತಿಮಸೀದಿ ಒಂದು ಉತ್ಕೃಷ್ಟ ಕಲಾಕೃತಿ. ತನ್ನ ಹೆಂಡತಿ ಮಮತಾಜಳ ಸ್ಮರಣೆಗಾಗಿ ನಿರ್ಮಿಸಿದ ತಾಜ್‌ಮಹಲ್ (ನೋಡಿ) ಎಂಬ ಶಿಲಾಕೃತಿ ಜಗತ್ತಿನಲ್ಲೇ ಶ್ರೇಷ್ಠ, ಅದ್ಭುತ ಕಲಾಕೃತಿಯಾಗಿದೆ. ಇದಲ್ಲದೆ ತನ್ನ ಹೆಂಡತಿಗಾಗಿ ಕಟ್ಟಿಸಿದ ಶಹಾಬುರ್ಜಿ ಗೋಪುರ, ಜುಮ್ಮಮಸೀದಿ, ದಿವಾನ–ಈ–ಆಮ್, ದಿವಾನ–ಈ–ಖಾಸ್ ಮೊದಲಾದುವು ಈಗಲೂ ಅಚ್ಚಳಿಯದೆ ಕಂಗೊಳಿಸುತ್ತಿವೆ. ಆದ್ದರಿಂದಲೇ ಇದು ಅರಮನೆಗಳ ಆಗರವಾಗಿದೆ. ಆದರೆ ಬಾಬರ್ ಮತ್ತು ಹುಮಾಯೂನರ ಕಾಲದ ಮಸೀದಿಗಳು ಈಗ ಹಾಳಾಗಿವೆ. (ಎ.ವಿ.ಎನ್.; ಎಸ್.ಎಂ.ಎಚ್.)

**ಆಗ್ರಯಣೇಷ್ಟಿ :** ಹೊಲಗಳಲ್ಲಿ ಬೆಳೆದ ಮೊದಲ ಫಲವನ್ನು ಉಪಯೋಗಿಸುವ ಮುನ್ನ ಆಹಿತಾಗ್ನಿಯಾದ ಗೃಹಸ್ಥ ಮಾಡಬೇಕಾದ ಶ್ರೌತಕರ್ಮಕ್ಕೆ ಆಗ್ರಯಣ ಇಷ್ಟಿಯೆಂದು ಹೆಸರು. ಶರದೃತುವಿನಲ್ಲಿ ಬತ್ತ, ವಸಂತದಲ್ಲಿ ಯವ ಇವು ಹೋಮದ್ರವ್ಯಗಳು. ಈ ಕರ್ಮಕ್ಕೆ ಸೋಮನೇ ದೇವತೆ. ಇವು ಬೇರೆ ಬೇರೆ ಋತುಗಳಲ್ಲಿ ಬೇರೆ ಬೇರೆ ದ್ರವ್ಯಗಳಿಂದಲೂ ಬೇರೆ ಬೇರೆ ದೇವತೆಗಳನ್ನುದ್ದೇಶಿಸಿಯೂ ನಡೆಯಬಹುದಾಗಿದೆ. ಈ ಇಷ್ಟಿಗಳೆಲ್ಲ ಪ್ರಾಯಃ ದರ್ಶಪೂರ್ಣಮಾಸದ ವಿಕೃತಿಗಳೇ ಎನ್ನಬಹುದು. (ಕೆ.ಕೆ.)

**ಆಗ್ಸ್‌ಬರ್ಗ್ ಒಕ್ಕೂಟ :** 17ನೆಯ ಶತಮಾನದ ಉತ್ತರಾರ್ಧದಲ್ಲಿ ಯುರೋಪಿನ ಅತ್ಯಂತ ಪ್ರತಿಭಾಶಾಲಿ ದೊರೆಯಾಗಿದ್ದ ಫ್ರಾನ್ಸಿನ ಹದಿನಾಲ್ಕನೆಯ ಲೂಯಿ ಪರಮ ಪ್ರಭುವಾಗಬೇಕೆಂಬ ಆಸೆಯಿಂದ ಮಧ್ಯ ಯುರೋಪಿನ ರಾಷ್ಟ್ರಗಳ ಮೇಲೆ ನುಗ್ಗಬಹುದೆಂಬ ಭಯವುಂಟಾದಾಗ, ಆಸ್ಟ್ರಿಯದ ಚಕ್ರವರ್ತಿ ಮೊದಲನೆಯ ಲಿಯೋಪಾಲ್ಡ್ ಲೂಯಿಯ ಧಾಳಿಯನ್ನೆದುರಿಸುವುದಕ್ಕೆ ಮಧ್ಯ ಯುರೋಪಿನ ರಾಜ್ಯಗಳನ್ನೆಲ್ಲ ಒಟ್ಟುಗೂಡಿಸಿ 1686ರಲ್ಲಿ ಈ ಕೂಟವನ್ನೇರ್ಪಡಿಸಿದ. ಮಧ್ಯ ಯುರೋಪಿನಲ್ಲಿ ತಮಗೂ ಸೇರಿದ್ದ ಪ್ರಾಂತ್ಯಗಳಿದ್ದುದರಿಂದ ಸ್ಪೇನ್ ಮತ್ತು ಸ್ವೀಡನ್ ಕೂಡ ಈ ಒಕ್ಕೂಟಕ್ಕೆ ಸೇರಿದುವು. ಒಕ್ಕೂಟವೇರ್ಪಟ್ಟುದರಿಂದ ಯುದ್ಧವೇನೂ ನಡೆಯಲಿಲ್ಲ. ಎರಡು ವರ್ಷ ಕಳೆದ ಮೇಲೆ ಫ್ರಾನ್ಸಿನ ಸೈನ್ಯಗಳು ಪ್ಯಾಲಟಿನೇಟ್ ಪ್ರಾಂತ್ಯಕ್ಕೆ ನುಗ್ಗಿದಾಗ ಕೆಲವು ರಾಜ್ಯಗಳು ಈ ಒಕ್ಕೂಟವನ್ನು ತ್ಯಜಿಸಿದ್ದುವು. ಇಂಗ್ಲೆಂಡ್, ಸವಾಯ್, ಡಚ್, ನೆದರ್‌ಲೆಂಡ್ಸ್ ಹೊಸದಾಗಿ ಸೇರಿಕೊಂಡುವು. ಆಗ ಈ ಒಕ್ಕೂಟಕ್ಕೆ ಮಹಾರಾಷ್ಟ್ರಕೂಟ (ಗ್ರ್ಯಾಂಡ್ ಅಲೈಯನ್ಸ್) ಎಂದು ಹೆಸರಾಯಿತು. ಮುಂದೆ ನಡೆದ ಯುದ್ಧಕ್ಕೆ ಆಗ್ಸ್‌ಬರ್ಗ್ ಒಕ್ಕೂಟದ ಸಮರ ಎಂದು ಕೆಲವರು ಹೆಸರು ಕೊಟ್ಟಿದ್ದಾರೆ. ಅದನ್ನು ಮಹಾರಾಷ್ಟ್ರಕೂಟ ಸಮರ ಎಂದು ಕರೆಯುವುದು ಹೆಚ್ಚು ಸಮಂಜಸ.

**ಆಚಣ್ಣ :** ಸು. 1195. ವರ್ಧಮಾನಪುರಾಣದ ಕರ್ತೃ. ಶಿಕಾರಿಪುರ 119, 123, 155, 192 ಮತ್ತು ಅರಸೀಕೆರೆ 77ನೆಯ ಶಾಸನಗಳಲ್ಲಿ ಹೊಗಳಿಸಿಕೊಂಡಿರುವ, ವಸುಧೈಕ ಬಾಂಧವನೆಂಬ ಬಿರುದುಳ್ಳ ರೇಚರಸದಂಡನಾಥನ ಆಶ್ರಯದಲ್ಲಿದ್ದ. ಈತನಿಗೆ ಆಚರಾಜ ಎಂಬ ಮತ್ತೊಂದು ಹೆಸರೂ ಇದೆ. ಭಾರದ್ವಾಜ ಗೋತ್ರೋದ್ಭವ. ತಂದೆ ಕೇಶಿರಾಜ, ತಾಯಿ ಮಲ್ಲಾಂಬಿಕೆ. ತಾರೇಶೋಜ್ವಲಕೀರ್ತಿ ಜೈನರುಚಿ ಎಂದು ವಿಶೇಷಿಸಿ ಕೊಂಡಿರುವುದರಿಂದ ಕವಿ ಪ್ರಖ್ಯಾತನೆಂದೂ ಜಿನಮತದಲ್ಲಿ ಬಹು ಶ್ರದ್ಧೆಯುಳ್ಳವನೆಂದೂ ಪರಿಶುದ್ಧವಾದ ಆಚಾರವಂತನೆಂದೂ ಗೊತ್ತಾಗುತ್ತದೆ. ಈತನಿಗೆ ವಾಣೀವಲ್ಲಭನೆಂಬ ಬಿರುದಿತ್ತು.

ವರ್ಧಮಾನಪುರಾಣ 24ನೆಯ ತೀರ್ಥಂಕರನಾದ ಶ್ರೀವರ್ಧಮಾನ ಮಹಾವೀರನ ಪಾವನ ಚರಿತವಾಗಿದೆ. ಇದೊಂದು ಉತ್ತಮ ಚಂಪೂಕಾವ್ಯ, ಮಹಾಪುರಾಣ. ಬಂಧ ಪ್ರೌಢವಾಗಿಯೂ ಸಂಸ್ಕೃತಪದಭೂಯಿಷ್ಠವಾಗಿಯೂ ಇದೆ. ಪ್ರಾಸಯಮಕಾದಿ ಶಬ್ದಾಲಂಕಾರಗಳನ್ನು ಪ್ರಯೋಗಿಸುವುದರಲ್ಲಿ ಆಚಣ್ಣನಿಗೆ ತುಂಬ ಪ್ರೀತಿ. ಶೈಲಿ ನಿರರ್ಗಳವಾಗಿ ಓಡುತ್ತದೆ. ತನ್ನ ಕಾವ್ಯ ಸದಳಂಕಾರದಾಗರಂ, ಉದ್ಧುರಸಭಾವಾನೀಕದೋಕಂ, ಸದರ್ಥದ ಸಾರ್ಥಂ, ವರಶಬ್ದವೃಂದದ ವಿರಾಜನ್ಮಂದಿರಂ, ಮೃದು ಸಂದರ್ಭದ ಗರ್ಭಂ ಎಂದು ಮುಂತಾಗಿ ಹೇಳಿಕೊಂಡಿರುವುದು ಅತಿಶಯೋಕ್ತಿಯಲ್ಲ. ರಸಭಾವಗಳನ್ನು ಮನಮುಟ್ಟುವಂತೆ ವರ್ಣಿಸುವ ಕವಿತಾಸಾಮರ್ಥ್ಯ ಆಚಣ್ಣನಿಗಿತ್ತು. ಅದಕ್ಕೆ ಅನುಕೂಲವಾದ ಶಬ್ದಸಂಪತ್ತಿಯಿತ್ತು. ಸುಂದರ ನುಡಿಗಟ್ಟುಗಳೂ ಸಂದರ್ಭೋಚಿತ ಗಾದೆಯ ಮಾತುಗಳೂ ಆತನ ಶೈಲಿಗೆ ಮೆರುಗು ಕೊಟ್ಟಿವೆ.

ವರ್ಧಮಾನ ಪುರಾಣವನ್ನಲ್ಲದೆ ಶ್ರೀಪಾದಶೀತಿ ಎಂಬ ಸುಮಾರು 94 ಕಂದಗಳಿರುವ ಮತ್ತೊಂದು ಪುಟ್ಟ ಗ್ರಂಥವನ್ನೂ ಆಚಣ್ಣ ರಚಿಸಿದ್ದಾನೆ. ಇದು ಪಂಚಪದಗಳ ಮಹಿಮೆಯನ್ನು ತಿಳಿಸುವ ಒಂದು ಕೃತಿ. ಇದರಲ್ಲಿ ಅರ್ಹಂತ ಸಿದ್ಧ ಸಾಧು ಉಪಾಧ್ಯಾಯ ಆಚಾರ್ಯ–ಇವರ ಮಹಿಮಾವರ್ಣನೆ ಅಡಕವಾಗಿದೆ. (ಎಂ.ಎಂ.)

**ಆಚಯನ :** ಖನಿಜ ಮಿಶ್ರಣದ ಅಂಶಗಳ ಸಾಪೇಕ್ಷ ಸಾಂದ್ರತೆಗಳ ಭಿನ್ನತೆಯಿಂದ ಅವು ಬೇರ್ಪಟ್ಟು ಗುರುತ್ವಾಕರ್ಷಣೆಯಿಂದ ಸ್ಥಳಾಂತರಗೊಳ್ಳುವಿಕೆ (ಪ್ಯಾನಿಂಗ್). ಆದ್ದರಿಂದ ಸಾಪೇಕ್ಷಸಾಂದ್ರತೆ ಅಧಿಕವಾಗಿರುವ ಖನಿಜಾಂಶದ ಮೂಲಸ್ಥಾನ ಗುರ್ತಿಸಲು ಅನ್ವೇಷಕ ಅದರ ನಿಕ್ಷೇಪದಿಂದ ಏರುದಿಕ್ಕಿನಲ್ಲಿ ಸಾಗಬೇಕು. (ಟಿ.ಟಿ.)

**ಆಚರಣೆ :** ಮತಧರ್ಮಗಳಿಗೆ ಸಂಬಂಧಿಸಿದಂತೆ, ಅಗೋಚರ ದೈವಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತ ಬಂದಿರುವ ಮತಾಚಾರಗಳಿಗೆ, ಕರ್ಮವಿಧಿಗಳಿಗೆ ಈ ಹೆಸರಿದೆ (ರಿಚುಅಲ್). ಮತಸಂಬಂಧವಾದ ಆಚಾರ (**ನೋಡಿ– ಆಚಾರ**), ಆಚಾರ್ಯ (**ನೋಡಿ– ಆಚಾರ್ಯ**) ಇವು ಪ್ರತ್ಯೇಕ ವಿಷಯಗಳಾಗಿವೆ. ಮನುಷ್ಯ ಸತ್ತಮೇಲೆ ಅವನಿಗೆ ನಡೆಸುವ ಉತ್ತರ ಕ್ರಿಯಾದಿಗಳೂ ಒಂದು ರೀತಿಯ ಕರ್ಮವೇ. ಅದನ್ನು ಸಂಸ್ಕಾರ ಎನ್ನಲಾಗಿದೆ. ತದನಂತರ ಮೃತರ ಬಗ್ಗೆ ಮಾಡುವ ಶ್ರಾದ್ಧ ಪಿತೃಪಕ್ಷಗಳ ಬಗ್ಗೆ ಪ್ರತ್ಯೇಕವಾಗಿ ಉಲ್ಲೇಖಿಸಲಾಗಿದೆ. ಇಲ್ಲಿ ದೈವೀಸಂಬಂಧವಾದ ಆಚರಣೆಗಳನ್ನು ಮಾತ್ರ ಪರಿಶೀಲಿಸಲಾಗುತ್ತದೆ. ಕ್ರಮವತ್ತಾದ, ವಿಧಿಪೂರ್ವಕವಾದ, ಪರಂಪರಾನುಗತವಾಗಿ ನಡೆದು ಬಂದ ರೀತಿಯಲ್ಲಿ ನಡೆಸುವ ಇಂಥ ಕ್ರಿಯೆಗಳ ಹಿನ್ನೆಲೆಯಲ್ಲಿ ನಂಬಿಕೆ ಆಳವಾಗಿ ಬೇರು ಬಿಟ್ಟಿರುತ್ತದೆ, ಧರ್ಮ ಇದರ ಅಡಿಗಲ್ಲು. ಧಾರ್ಮಿಕ ವಿಧಿಗಳಿಂದ ತಾನು ನಂಬಿದ ಪವಿತ್ರ

ವಸ್ತುಗಳ ಪ್ರೀತಿಯನ್ನು ಸಂಪಾದಿಸಬಹುದು ಎಂದು ಮನುಷ್ಯ ಎಣಿಸುತ್ತಾನೆ. ಇದು ಕ್ರಮವತ್ತಾದ ಆರಾಧನಾಕ್ರಮವೂ ಹೌದು (ನೋಡಿ– ಅರ್ಚನೆ). ಲೌಕಿಕ ಹಿನ್ನೆಲೆಗಳಲ್ಲಿ ಸಂಪ್ರದಾಯನಿಷ್ಠ ರೀತಿಯಲ್ಲಿ ನಡೆಸುವ ಒಂದು ಕ್ರಿಯೆಯೂ ಹೌದು. ನಂಬಿಕೆ ಮತ್ತು ಆಚರಣೆ ಪರಸ್ಪರ ಪೂರಕವಾದರೂ ಅನೇಕ ಸಂದರ್ಭಗಳಲ್ಲಿ ಊಹೆಗೆ ನಿಲುಕದ ರೀತಿಯಲ್ಲಿ ಅವು ತಮ್ಮ ಸಂಬಂಧವನ್ನು ಕಳೆದುಕೊಂಡಿರುತ್ತವೆ. ದೈತ್ಯ ಸಾಧನೆಗಳಿಗೆ ಮಕ್ಕಳನ್ನು ಬಲಿಕೊಡುವ ಒಂದು ಆಚರಣೆ ಐರೋಪ್ಯ ದೇಶಗಳಲ್ಲಿ ಮೊದಲಿಗೆ ಕಂಡುಬರುತ್ತಿತ್ತು. ಅನೇಕ ದೊಡ್ಡ ದೊಡ್ಡ ಕಟ್ಟಡಗಳನ್ನು ಕೆಡವಿ ಅಡಿಪಾಯವನ್ನು ಶೋಧಿಸಿದಾಗ ಎಲುಗೂಡು ದೊರೆತ ಅನೇಕ ನಿದರ್ಶನಗಳಿವೆ. ಆಚರಣೆಗೆ ಪ್ರೇರಕವಾದ ನಂಬಿಕೆ ಸಂಪೂರ್ಣವಾಗಿ ಕಣ್ಮರೆಯಾ ಗಿದೆ. ಹೀಗೆಯೇ ಅಂತ್ಯಸಂಸ್ಕಾರಕ್ಕಾಗಿ ಶವವನ್ನು ಕೊಂಡೊಯ್ಯುವಾಗ ತಲೆಬಾಗುವ ಪದ್ಧತಿ ಪಾಶ್ಚಾತ್ಯರಲ್ಲಿ ಬೆಳೆದುಬಂದಿದೆ. ನಿಜವಾದ ಆಚರಣೆ ಶವವನ್ನು ವಂದಿಸುವುದಲ್ಲ, ಮೊದಲಿಗೆ ಇಂಥ ಮೆರವಣಿಗೆಯ ಮುಂದೆ ಶಿಲುಬೆಯ ಗುರುತನ್ನು ಕೊಂಡೊಯ್ಯುವ ಆಚರಣೆ ಇದ್ದು ಅದಕ್ಕೆ ವಂದಿಸುವ ಪದ್ಧತಿ ಇತ್ತು. ಆ ನಂಬಿಕೆ ಈ ರೂಪದಲ್ಲಿ ಉಳಿದಿದೆ. ಆಚರಣೆ ಮಾತ್ರ ಮರೆತುಹೋಗಿದೆ.

ದೈಹಿಕ ಆವಶ್ಯಕತೆಗಳಿಗನುಗುಣವಾಗಿ ನಡೆಸುವ ನೈಸರ್ಗಿಕ ಕ್ರಿಯೆಗಳು ಆಚರಣೆಗಳಾಗುವುದಿಲ್ಲ. ದೇಹಶುದ್ಧಿಗಾಗಿ ಮೀಯುವುದಕ್ಕೂ ಪವಿತ್ರ ಉದ್ದೇಶಕ್ಕಾಗಿ ಮಾಡುವ ದಿವ್ಯಸ್ನಾನಕ್ಕೂ ಅಂತರವನ್ನು ಗುರುತಿಸಿ ಧಾರ್ಮಿಕ ಆಚರಣೆಯನ್ನು ಸ್ಪಷ್ಟಪಡಿಸಿಕೊಳ್ಳಬಹುದು.

ಆಧುನಿಕ ಮತಗಳು ನಂಬಿಕೆ ಮತ್ತು ಆಚರಣೆಗಳ ಮೇಲೆಯೇ ನಿಂತಿವೆ. ಹಳೆಯ ಮತಗಳಲ್ಲಿ ಪುರಾಣಗಳು, ಐತಿಹ್ಯಗಳು ನಂಬಿಕೆಯ ಸ್ಥಾನದಲ್ಲಿ ನಿಲ್ಲುತ್ತವೆ. ಆಚರಣೆಗಳು ಒಂದು ರೀತಿಯಲ್ಲಿ ಪುರಾಣಗಳ ಹುಟ್ಟಿಗೆ ಮೂಲಕಾರಣವೆನಿಸಿದರೆ, ಅನೇಕ ಪುರಾಣಗಳ ಆಧಾರದ ಮೇಲೆ ಆಚರಣೆಗಳು ಹುಟ್ಟಿಕೊಳ್ಳಲೂಬಹುದು. ವೈಯಕ್ತಿಕವಾಗಿ ನಡೆಸುವ ಆಚರಣೆಗಳು ಕೆಲವಾದರೆ, ಸಾಮೂಹಿಕವಾಗಿ ನಡೆಸುವ ಆಚರಣೆಗಳೂ ಇವೆ. ಧಾರ್ಮಿಕ ಮುಖಂಡರಿಂದ ಪೂಜಾರಿ ಪುರೋಹಿತರಿಂದ ವಂಶಪಾರಂಪರ್ಯವಾದ ಹಕ್ಕನ್ನು ಪಡೆದವರಿಂದ ನಡೆಸುವ ಆಚಾರಗಳೂ ಕೆಲವಿವೆ. ಧಾರ್ಮಿಕ ಪಾವಿತ್ರ್ಯದ ಜೊತೆಗೆ ಅತಿಮಾನುಷ ಶಕ್ತಿಗಳ ಭಯವೂ ಮಿಗಿಲಾದುದೇ. ಆದುದರಿಂದ ಆಚರಣೆಗಳನ್ನು ಅತ್ಯಂತ ಶ್ರದ್ಧೆಯಿಂದ ನಡೆಸಲಾಗುತ್ತದೆ. ನುಡಿಯಲ್ಲಿ ನಡೆಯಲ್ಲಿ ಸಣ್ಣ ತಪ್ಪಾದರೂ ಅನರ್ಥವಾದೀತೆಂಬ ಅಂಜಿಕೆ ಪ್ರತಿಯೊಂದು ಆಚರಣೆಯ ಹಿನ್ನೆಲೆಯಲ್ಲೂ ಇದ್ದೇ ಇರುತ್ತದೆ. ಉಪವಾಸ ವಿರುವುದು, ಮೀಸಲು ವಸ್ತುಗಳನ್ನು ತೆಗೆದಿಡುವುದು, ಹಿಂದಿನಿಂದ ನಡೆದು ಬಂದ ಪದ್ಧತಿಯಲ್ಲಿ ಸ್ವಲ್ಪವೂ ಲೋಪಬರದಂತೆ ಎಚ್ಚರ ವಹಿಸುವುದು, ಸಂಬಂಧಪಟ್ಟ ವ್ಯಕ್ತಿಯಿಂದಲೇ ಕ್ರಿಯೆಗಳನ್ನು ನಡೆಸುವುದು ಈ ಮುಂತಾದ ಕ್ರಮಗಳನ್ನು ಗಮನಿಸಿದಾಗ ಮತದ ಬಾಹ್ಯಾಚರಣೆಗಳಾದ ಇವು ಬದುಕಿನಲ್ಲಿ ಎಷ್ಟು ಪ್ರಮುಖ ಪಾತ್ರವಹಿಸುತ್ತವೆ ಎಂಬುದು ವೇದ್ಯವಾಗುತ್ತದೆ. ವೈಯಕ್ತಿಕವಾಗಿ ನಡೆಸುವ ಧ್ಯಾನ, ತಪಸ್ಸುಗಳೇ ಬೇರೆ. ಇತರರಂತೆ ನಡೆಸುವ ಬಾಹ್ಯವಾದ ಆಚರಣೆಗಳೇ ಬೇರೆ. ದೈವದ ಪ್ರತಿನಿಧಿಗಳು ನಿಂತು ನಡೆಸುವ ಆಚರಣೆಗಳು ಬೇರೆ. ಅನಂತರ ಒಂದೊಂದು ಧರ್ಮಕ್ಕೂ ಮತಕ್ಕೂ ಪಂಥಕ್ಕೂ ಇಂಥ ಹರಿಕಾರರು ಕಾಣಿಸಿಕೊಳ್ಳುತ್ತಾರೆ. ನೀಲಗಾರರು, ಗುಡ್ಡರು, ಗೊಂದಲಿಗರು, ಗೊರವರು, ದಾಸಯ್ಯಗಳು, ಜೋಗಿಗಳು ಹುಟ್ಟಿಕೊಂಡದ್ದು ಹೀಗೆ. ಆಯಾ ದೈವಕ್ಕೆ ಸಂಬಂಧಿಸಿದ ಆಚರಣೆಗಳನ್ನು ಗೊತ್ತಾದ ಭಕ್ತರೇ ನಡೆಸಬೇಕು. ಅದಕ್ಕೆ ಸಂಬಂಧಪಟ್ಟಂಥ ವಿಶಿಷ್ಟ ಸಾಧನ, ಹಾಡು, ಕಥೆ, ಮಂತ್ರಗಳೆಲ್ಲ ಉಂಟು. ದಾಸಯ್ಯನ ಜಾಗಟೆ, ಭವನಾಶಿ, ಶಂಖ, ಗರುಡಗಂಬಗಳು, ಜೋಗಿಯ ಸಿಂಗನಾದ, ಗುಡ್ಡನ ಕಂಸಾಳೆ, ಗೊರವನ ಡಮರುಗ, ಗೊಂದಲಿಗನ ಚೌಡಿಕೆ–ಇವೆಲ್ಲ ಪವಿತ್ರ ವಸ್ತುಗಳು. ಅವರು ನಡೆಸುವ ಆಚರಣೆಯ ಸಾಧನಸಲಕರಣೆಗಳು. ದಾಳಹಾಕುವುದು, ಮಣೆವು ಹಾಕುವುದು, ಗೊಂದಲ ಹಾಕುವುದು, ಕೋಲುಪೂಜುವುದು ಮುಂತಾದುವು ಪವಿತ್ರ ಆಚರಣೆಗಳು.

ವೈಯಕ್ತಿಕವಾಗಿ ನಡೆಸುವ ಆಚರಣೆಗಳಿಗೆ ಈ ಪ್ರತಿನಿಧಿಗಳ ಆವಶ್ಯಕತೆಯಿಲ್ಲ. ಮನೆಯಲ್ಲಿ, ಹೊಲದಲ್ಲಿ ಬಯಲಲ್ಲಿ ನಡೆಸುವ ಕ್ರಿಯೆಗಳಲ್ಲಿ ಧಾರ್ಮಿಕ ವಸ್ತುಗಳನ್ನು ಮಾತ್ರ ಬಳಸಬಹುದು. ಇಂಥ ಸಾಧನಸಲಕರಣೆಗಳು ಸಾಮಾನ್ಯವಾಗಿ ನಿತ್ಯೋಪಯೋಗಕ್ಕೆ ಬಳಸಲು ಬಾರದ ರೀತಿಯಲ್ಲೇ ಸಿದ್ಧವಾದುವು. ಆದರೆ ಕಲಾತ್ಮಕವಾಗಿ ರಚಿತವಾಗಿ ಆಕರ್ಷಕವಾಗಿರಬಹುದು. ಕಂಚಿನ ಕಳಸಗಳೂ ಧೂಪ ದೀಪಾರತಿಯ ಸಾಧನಗಳೂ ಮಂಗಳಾರತಿಯ ತಟ್ಟೆಗಳೂ ಈ ದೃಷ್ಟಿಯಿಂದ ಗಮನಾರ್ಹವಾದುವು.

ಮಾನವಶಾಸ್ತ್ರಜ್ಞರು ಆಚರಣೆಗಳನ್ನು ಮೂರು ಮುಖ್ಯ ವಿಭಾಗಗಳನ್ನಾಗಿ ಮಾಡಿಕೊಳ್ಳುತ್ತಾರೆ: 1 ಧಾರ್ಮಿಕ ಆಚರಣೆ. 2 ಮಾಂತ್ರಿಕ ಆಚರಣೆ. 3 ಮಾಟ, ಮೋಡಿ ಇತ್ಯಾದಿ. ಈ ಮೂರೂ ಬಗೆಗಳು ಒಂದೇ ಸಂಸ್ಕೃತಿಯಲ್ಲಿ ಕಂಡುಬರಬಹುದು. ಜನತೆಯ ಜೀವನದೃಷ್ಟಿ, ನಂಬಿಕೆ, ಆಶೋತ್ತರಗಳು ಸ್ಪಷ್ಟವಾಗಿ ಈ ಆಚರಣೆಗಳಲ್ಲಿ ಕಂಡುಬರುತ್ತವೆ. ಮಾನವನ ಬದುಕಿಗೆ ಸಂಬಂಧಿಸಿದಂತೆ ನಾಲ್ಕು ವರ್ಗಗಳಲ್ಲಿ ಇವುಗಳನ್ನು ವಿಭಾಗಿಸಿಕೊಳ್ಳಬಹುದು: 1 ಮಾನವನ ಬದುಕಿಗೆ ಅವನ ಭಾವಪ್ರಪಂಚಕ್ಕೆ ಸಂಬಂಧಿಸಿದ ಆಚರಣೆಗಳು. 2 ನೈಸರ್ಗಿಕಕ್ರಿಯೆಗಳಿಗೆ ಸಂಬಂಧಿಸಿದ ಆಚರಣೆಗಳು. 3 ಆರ್ಥಿಕಚಟುವಟಿಕೆಗೆ ಸಂಬಂಧಿಸಿದ ಆಚರಣೆಗಳು. 4 ಸಾಮಾಜಿಕ ರಚನೆಗೆ ಸಂಬಂಧಿಸಿದ ಆಚರಣೆಗಳು.

ಮಾನವ ಒಂದೇ ದೈವದ ಕಟ್ಟಿಗೆ ಒಳಗಾಗಬೇಕಾದ ಅಗತ್ಯವಿಲ್ಲ. ದೇವಮಹಾದೇವರುಗಳ ಸಾಲಿನಲ್ಲಿ ಅನೇಕ ಕ್ಷುದ್ರದೇವತೆಗಳನ್ನೂ ಶಕ್ತಿಗಳನ್ನೂ ಅರ್ಚಿಸುವ ಸ್ವಾತಂತ್ರ್ಯ ಅವನಿಗಿದೆ. ಈ ಸಂಬಂಧವಾದ ಅನೇಕ ಆಚರಣೆಗಳನ್ನು ಆತ ನಡೆಸುತ್ತಾನೆ. ಪರಸೇವೆ, ಹರಿಸೇವೆಗಳನ್ನು ಮಾಡುವಂತೆಯೇ ಸಣ್ಣ ಪುಟ್ಟ–ದೇವತೆಗಳ ಹೆಸರಿನಲ್ಲಿ ಅನೇಕ ಆಚರಣೆಗಳನ್ನು ನಡೆಸುತ್ತಾನೆ. ಹರಕೆಯ ಮರಿಗಳನ್ನು ಕಡಿಯುತ್ತಾನೆ. ಮಾನವ ಬಲಿಯೂ ಇದ್ದಿತೆನ್ನುವುದಕ್ಕೆ ಆಧಾರಗಳಿವೆ.

ಮಾನವನ ಬದುಕಿನಲ್ಲಿ ಹುಟ್ಟು, ಪ್ರೌಢಾವಸ್ಥೆ, ಮದುವೆ, ಮರಣಗಳಿಗೆ ಸಂಬಂಧಿಸಿದ ಆಚರಣೆಗಳೂ ಅನೇಕ ಬಗೆಯಲ್ಲಿವೆ. ಬಸುರಿ, ಬಾಣಂತಿಯರಿಗೆ ನಡೆಸುವ ಶಾಸ್ತ್ರಗಳೆಲ್ಲ ಆಚರಣೆಗಳೇ. ಗುಣಿಗಿಕ್ಕುವಶಾಸ್ತ್ರ, ಹೆಸರಿಡುವ ಶಾಸ್ತ್ರಗಳಂತೆಯೇ ಋತುಮತಿಯಾದ ಹೆಣ್ಣು ಮಗಳಿಗೆ ಮಾಡುವ ಗುಡ್ಲುಕೂಡುವ ಶಾಸ್ತ್ರ, ಮದುವೆಯಲ್ಲಿ ನಡೆಯುವ ಶಾಸ್ತ್ರ, ನೀರು ತರುವ ಶಾಸ್ತ್ರ, ಬತ್ತಕುಟ್ಟುವ, ಭೂತ ಉಣ್ಣುವ, ಬಾಗಿಲು ತಡೆಯುವ, ಹೂವಿನ ಚೆಂಡಾಡುವ ಶಾಸ್ತ್ರಗಳೆಲ್ಲ ಬಗೆಬಗೆಯ ಆಚರಣೆಗಳೇ.

ಶವಸಂಸ್ಕಾರಗಳಲ್ಲೂ ಅನೇಕ ಆಚರಣೆಗಳನ್ನು ಕಾಣಬಹುದು. ಹೂಳುವ, ಸುಡುವ, ಕಲ್ಲಿಗೆಸೆಯುವ ಸಂಪ್ರದಾಯಗಳ ಹಿನ್ನೆಲೆಯಲ್ಲಿ ನಡೆಸುವ ಆಚರಣೆಗಳು ಅನೇಕವಾಗಿವೆ. ಮಳೆಯಾಗದಿದ್ದರೆ ಹೂತ ಹೆಣವನ್ನು ಹೊರ ತೆಗೆದು ನಡೆಸುವ ಕ್ರಿಯೆಗಳು, ಸುಟ್ಟಬೂದಿ, ಸತ್ತವರೊಡನೆ ಹೂತ ವಸ್ತ್ರ, ಆಭರಣ, ವಸ್ತುವಿಶೇಷಗಳನ್ನು ಪಡೆಯುವ ಆಚರಣೆಗಳು ಜನಾಂಗದಿಂದ ಜನಾಂಗಕ್ಕೆ ಅನೇಕ ವಿಧವಾಗಿ ಹಬ್ಬಿವೆ.

ಕಾಡುಗೊಲ್ಲರಲ್ಲಿ ಋತುಮತಿಯಾದ ಹೆಣ್ಣುಮಕ್ಕಳನ್ನೂ ಬಾಣಂತಿಯರನ್ನೂ ಹಟ್ಟಿಗೆ ದೂರವಾಗಿ ಬೆಟ್ಟದ ತಪ್ಪಲಲ್ಲಿ ಗುಡಿಸಲುಹಾಕಿ ಬಿಡುವ ಆಚರಣೆ ವಿಚಿತ್ರವಾದುದು. ಅಂಥ ಹೆಣ್ಣಿಗೆ ಊಟವನ್ನು ಕೊಡಬೇಕಾದರೂ ದೊಡ್ಡ ಗಳುವಿನಿಂದ ಒಳಗೆ ನೂಕುವ ಪದ್ಧತಿಯಿದೆ. ಯುರೋಪಿನಲ್ಲಿ ಬಾಣಂತಿ ಗೊತ್ತಾದ ದಿನಗಳಲ್ಲಿ ಚರ್ಚಿಗೆ ಹೋಗಿ ಶುದ್ಧಳಾಗಿ ಬರದಿದ್ದರೆ ಅಪವಿತ್ರಳು. ಆ ಮಧ್ಯೆ ಅನೇಕ ಅನರ್ಥಗಳು ಸಂಭವಿಸಬಹುದು. ಕಿನ್ನರಿಯರು ಬಂದು ಅವಳನ್ನು ಹೊತ್ತುಕೊಂಡು ಹೋಗಬಹುದು. ಹೀಗೆ ಬಿಟ್ಟರೆಂದು ಭಾವಿಸಲಾದ ಅನೇಕ ಸಂದರ್ಭಗಳಲ್ಲಿ ಹಸುಳೆಗಳಿಗೆ ಕ್ರೂರ ಹಿಂಸೆಯನ್ನು ಕೊಟ್ಟು ನ್ಯಾಯಾಲಯಕ್ಕೆ ದೂರುಹೊತ್ತ ಪ್ರಸಂಗಗಳೂ ಇವೆ. ತಾಯಿ ಶುದ್ಧಳಾಗಲು ನಡೆಸುವ ಆಚರಣೆ ಬಹು ಮುಖ್ಯವಾದುದು.

ಮರ, ನೀರು, ಗಾಳಿ, ಆಕಾಶಗಳಲ್ಲಿ ಅನೇಕ ಶಕ್ತಿಗಳಿರಬಹುದು. ಸಾಂಸ್ಕೃತಿಕವೀರರು, ಧಾರ್ಮಿಕಪುರುಷರು, ಮಹಿಮಾವಂತರು, ಪ್ರಾಣಿವಿಶೇಷಗಳು ಅನೇಕ ವ್ಯಕ್ತಿವಿಶೇಷಗಳಿಗೆ ಸಂಬಂಧಿಸಿದಂತೆ ಆಚರಣೆಗಳು ನಡೆಯಬಹುದು. ಬಸವನಪೂಜೆ, ಸೀಗೆಗೌರಿ ಪೂಜೆ, ತಿಂಗಳುಮಾವನ ಪೂಜೆ, ಕೊಂತಿಪೂಜೆಗಳು ವಿಶಿಷ್ಟ ಆಚರಣೆಗಳು. ಧಾರ್ಮಿಕ ಪುರುಷರು, ಕೆಲವು ಪ್ರಭುಗಳು, ಆಹಾರ, ಬದುಕು, ನಿದ್ರೆ, ಲೈಂಗಿಕಕ್ರಿಯೆ ಇವುಗಳಿಗೆ ಸಂಬಂಧಿಸಿದಂತೆ ಕ್ರಮಬದ್ಧ ಆಚರಣೆಗಳಿಗೊಳಪಡುತ್ತಾರೆ. ಕೆಲವರಿಗೆ ಸ್ವಾಭಾವಿಕ ಮರಣ ಇಲ್ಲ. ಕೆಲವರನ್ನು ಉತ್ತರಾಧಿಕಾರಿ ಕ್ರಮದಂತೆ ಕೊಲ್ಲಬಹುದು. ವಂಶಪಾರಂಪರ್ಯವಾಗಿ ನೇಮಕಗೊಂಡ ಕಟುಕರು ಆ ಕಾರ್ಯವನ್ನು ಮಾಡಬಹುದು. ಸಜೀವ ಸಮಾಧಿಯಾದ ಅನೇಕ ಧಾರ್ಮಿಕ ಪುರುಷರ ನಿದರ್ಶನಗಳು ಇಂದಿಗೂ ಇವೆ. ಈ ಕ್ರಿಯೆಗಳ ಹಿನ್ನೆಲೆಯಲ್ಲಿ ವಿಶಿಷ್ಟವಾದ ಆಚರಣೆಗಳಿವೆ.

ಬೇಟೆ, ಮೀನುಗಾರಿಕೆ, ವ್ಯವಸಾಯ, ತೋಟಗಾರಿಕೆ, ಕಟ್ಟಡ, ಯುದ್ಧ, ಕಳ್ಳತನ ಮುಂತಾದವಕ್ಕೆ ಹೊರಡುವ ಸಂದರ್ಭದಲ್ಲೂ ಉತ್ತಮ ಆಚರಣೆಗಳಿವೆ. ಅತಿಮಾನುಷ ಶಕ್ತಿಗಳು ತಮ್ಮ ಕಾರ್ಯದಲ್ಲಿ ಜಯವನ್ನು ಕೊಡಲೆಂದು ಹರಸಿಕೊಳ್ಳುವುದಷ್ಟೇ ಅಲ್ಲದೆ ಉತ್ತಮ ಆಚರಣೆಗಳನ್ನು ನಡೆಸುವ ಪದ್ಧತಿಯೂ ಇದೆ.

ಆಚರಣೆಯ ಸಂದರ್ಭದಲ್ಲಿ ಕತ್ತಿ, ಭಲ್ಲೆ, ಬೆತ್ತ, ತ್ರಿಶೂಲ, ಖಂಡೆಯ (ಕಂಡಾಯ) ಮುಂತಾದ ಗೊತ್ತಾದ ವಸ್ತುಗಳು ಆಯುಧವಿಶೇಷಗಳೂ ಹೌದು, ಆಚರಣೆಯ ಸಾಧನಗಳೂ ಹೌದು. ಅವನ್ನು ಪೂಜಿಸದೆ ಆ ಶಕ್ತಿಯ ಆವಿಷ್ಕಾರವಿಲ್ಲ. ಕಾಡುಗೊಲ್ಲರ ಗಣೆಯನ್ನು ನುಡಿಸಿದಾಗ ವಿಶಿಷ್ಟ ಪೀಠಗಳನ್ನೇರಿದಾಗ ದೇವಿ ಮೈಮೇಲೆ ಆವಾಹನೆಗೊಳ್ಳಬಹುದು, ಮುಖವಾಡಗಳೂ ಈ ಸಂದರ್ಭದಲ್ಲಿ ಬಳಕೆಯಾಗುತ್ತವೆ. ಸಾಮಾನ್ಯವಾಗಿ ಮೂರು ಮುಖವಾಗಿ ನಡೆಯುವ ಆಚರಣೆಯಲ್ಲಿ ಮೂರು ಮಜಲುಗಳನ್ನು ಕಾಣಬಹುದು: 1 ಪ್ರಾರ್ಥನೆ. 2 ಅರ್ಪಣೆ, ಬಲಿ, 3 ದೈಹಿಕ ಸಂಜ್ಞೆಗಳು ಮತ್ತು ಇತರ ಕ್ರಿಯೆಗಳು.

ಹಣ್ಣು ಕಾಯಿ, ಬೇಟೆಯ ವಸ್ತು, ಕಳವಿನ ವಸ್ತು ಮುಂತಾದುವು ದೈವಕ್ಕೆ ಅರ್ಪಿತವಾಗುವ ವಸ್ತುಗಳು. ನಾನಾರೀತಿಯ ನೃತ್ಯಗಳೂ ಆಚರಣೆಗೆ ಸಂಬಂಧಿಸಿದಂತೆ ನಡೆಯಬಹುದು. ಭೂತನೃತ್ಯ, ಸೋಮನಕುಣಿತ, ಪಕ್ಷಿ ಕುಣಿತ, ರಂಗದ ಕುಣಿತ, ವೀರಗಾಸೆ ಕುಣಿತ.

ಲಿಂಗದವೀರರ ಕುಣಿತ. ಗುಡ್ಡರ ಕುಣಿತ, ಗೊರವರ ಕುಣಿತ, ಪೂಜಾಕುಣಿತ, ಕರಗ ಕುಣಿತ – ಇವೆಲ್ಲವೂ ಈ ದೃಷ್ಟಿಯಿಂದ ಗಮನಾರ್ಹ ನೃತ್ಯಗಳು. ಮಾಟ, ಮೋಡಿಗಳು ಸಾಮಾನ್ಯವಾಗಿ ವಿರೋಧಿಗಳನ್ನು ದೃಷ್ಟಿಯಲ್ಲಿಟ್ಟು ನಡೆಸುವ ಆಚರಣೆಗಳು. ಅನೇಕ ಸಂದರ್ಭಗಳಲ್ಲಿ ಮಾಟ ತಿರುಗಿ ಮನೆ ಹಾಳಾದ ಪ್ರಸಂಗಗಳೂ ಇವೆ. ಮಾಟವನ್ನು ಮುರಿಯುವ ಆಚರಣೆಗಳೂ ವಿಶೇಷವಾಗಿವೆ.

ಅನಾರೋಗ್ಯ ಆಕಸ್ಮಿಕ ಮರಣಗಳಿಗೂ ಸಂಬಂಧಿಸಿದಂತೆ ಆಚರಣೆಗಳಿವೆ. ಅನೇಕ ರೋಗಗಳ ರೂಪದಲ್ಲಿ ಕೆಲವು ದೇವತೆಗಳು ಕಾಣಿಸಿಕೊಳ್ಳಬಹುದು. ರೋಗಗಳನ್ನು ತರುವ ಬಗೆ ಮೂರು ತೆರನಾಗಿದೆ:

1 ರೋಗಿಯಿಂದಲೊ, ಅವನ ಬಂಧುವಿನಿಂದಲೊ ಏನೋ ತಪ್ಪು ನಡಾವಳಿಯಾಗಿರಬೇಕು. 2 ಎರಡನೆಯ ವ್ಯಕ್ತಿ ತಾನೇ ದುಷ್ಪಶಕ್ತಿಗಳನ್ನು ಹರಿಯಬಿಟ್ಟಿರಬಹುದು. 3 ಇನ್ನಾವುದೋ ಶಕ್ತಿಯ ಕೈವಾಡವಿರಬಹುದು. ಹರಕೆಯನ್ನೊ ಪೂಜೆಯನ್ನೊ ನಿಲ್ಲಿಸಿರಬಹುದು. ಇಂಥ ಸಂದರ್ಭಗಳಲ್ಲಿ ದೇವತೆಗಳನ್ನು ಬಿಡಿಸಿಕೊಳ್ಳಲು, ಅವರನ್ನು ಸಂತೃಪ್ತಿಗೊಳಿಸಲು ಅನೇಕ ಆಚರಣೆಗಳಿವೆ. ಪ್ಲೇಗಿನಮಾರಿ, ಕಾಲರಾಮಾರಿ, ಸಿಡುಬಿನ ಮಾರಿಯರಿಗೂ ಆಚರಣೆಗಳು ಹುಟ್ಟಿಕೊಂಡಿವೆ.

ಕ್ಷಾಮಡಾಮರಗಳನ್ನು ನಿವಾರಿಸಿಕೊಳ್ಳಲು ಗಡಿಯಿಂದ ಗಡಿಗೆ ಸಾಗಿರುವ ಬರಗಲ್ಲು, ಊರಿನ ಕೊಳೆ ಕಸವನ್ನೆಲ್ಲ ದೂರ ಸಾಗಿಸಲು ಉಡುಗೋಲಜ್ಜಿ–ಹೀಗೆ ಅನೇಕ ಬಗೆಯ ಆಚರಣೆಯನ್ನು ಗುರುತಿಸಬಹುದು.

ಮನೆಕಟ್ಟುವಿಕೆ, ವ್ಯಾಪಾರ, ವ್ಯವಸಾಯ ಮುಂತಾದುವುಗಳಿಗೆ ಅಡಚಣೆಗಳು ಬರದಂತೆ ಅನೇಕ ಆಚರಣೆಗಳನ್ನು ನಡೆಸುತ್ತಾರೆ. ಆರ್ಥಿಕಹಿನ್ನೆಲೆಯ ಆಚರಣೆಗಳೆಂದು ಪರಿಗಣಿಸಲ್ಪಡುವ ಅಪಾರ ಸಂಖ್ಯೆಯ ಕ್ರಿಯೆಗಳು ಈಗಲೂ ಜೀವಂತವಾಗಿವೆ.

ಗೊತ್ತಾದ ದಿವಸಗಳಲ್ಲಿ, ಋತುಗಳಲ್ಲಿ ಬದುಕಿನ ವಿಶಿಷ್ಟ ಘಟ್ಟಗಳಲ್ಲಿ, ರೋಗ, ಭಯ, ಕ್ಷಾಮ ಇತ್ಯಾದಿಗಳ ನಿವಾರಣಾರ್ಥವಾಗಿ, ದೈವಾನುಗ್ರಹಕ್ಕಾಗಿ ನಡೆಯುವ ಆಚರಣೆಗಳ ಶಾಸ್ತ್ರೀಯ ಅಭ್ಯಾಸ ನಾಡಿನಲ್ಲಿ ಇನ್ನೂ ಆಗಬೇಕಾಗಿದೆ. ಹೆಚ್ಚಿನ ವಿವರಗಳಿಗೆ (ನೋಡಿ– ಆದಿವಾಸಿಗಳು, ಅಲೆಮಾರಿಗಳು.) (ಜಿ.ಎಸ್.ಪಿ.)

**ಆಚರಣೆಯ ವಚನ** : ವೀರಶೈವ ಧರ್ಮ ತತ್ತ್ವಗಳನ್ನು ನಿರೂಪಿಸುವ ಗ್ರಂಥ. ಕರ್ತೃ ಸಂಪಾದನೆಯ ಚನ್ನಂಜೇದೇವರು (1530). ಈತ ತೋಂಟದ ಸಿದ್ಧಲಿಂಗೇಶ್ವರನ ಶಿಷ್ಯಪರಂಪರೆಗೆ ಸೇರಿದವ. ಈತನಿಗೆ ಷಟ್‌ಸ್ಥಲ ಚಕ್ರವರ್ತಿ ಎಂಬ ಬಿರುದಿದೆ. ಸಂಬಂಧರ ವಚನ, ಮಿಶ್ರಸ್ತೋತ್ರದ ವಚನ, ಬಸವ ಸ್ತೋತ್ರವಚನ ಎಂಬ ಇತರ ಗ್ರಂಥಗಳನ್ನೂ ಬರೆದಿದ್ದಾನೆ. ಆಚರಣೆಯ ವಚನಗಳ ಸಂಖ್ಯೆ 140. ಇದರಲ್ಲಿ ಇಷ್ಟಲಿಂಗಪೂಜೆ ಕ್ರಿಯಾಪ್ರಧಾನವಾಗಿಯೂ ಪ್ರಾಣಲಿಂಗಪೂಜೆ ಯೋಗಪ್ರಧಾನವಾಗಿಯೂ ಭಾವಲಿಂಗಪೂಜೆ ಧ್ಯಾನಪ್ರಧಾನವಾಗಿಯೂ ಇರುವುದೆಂದು ನಿರೂಪಿತವಾಗಿದೆ. ಇಷ್ಟಲಿಂಗದ ಒಳಭಾಗದಲ್ಲಿ ಪೀಠ ಮತ್ತು ಬಾಣವಿದ್ದು ಮೇಲುಭಾಗದಲ್ಲಿ ಧ್ಯಾನಕ್ಕೆ ಅನುಕೂಲವಾಗುವಂತೆ ಚಿದ್ರಸ (ಕಂತೆ) ಲೇಪನ ಮಾಡಿರುತ್ತಾರೆ. ಪೂಜೆ ಮಾಡುವವನ ಬಿಂಬ ಲಿಂಗದಲ್ಲಿ ಪ್ರತಿಬಿಂಬಿಸಿ, ಶಿವನಲ್ಲಿ ತಾನು ತನ್ನಲ್ಲಿ ಶಿವನಾಗಿ ಶಿವೋಹಂ ಭಾವ ವರ್ಧಿಸುತ್ತದೆ. (ಬಿ.ಎಸ್.)

**ಆಚಾರ** : ಈ ಪದಕ್ಕೆ ನಡತೆ, ಶಿಷ್ಟರೂ ಉತ್ತಮರೂ ಆಚರಿಸುವ ಪದ್ಧತಿ, ಪರಂಪರಾಗತವಾಗಿ ಒದಗಿಬಂದ ನಿಯಮಿತ ನಿತ್ಯಕರ್ಮಗಳು, ಸಂಪ್ರದಾಯ, ಪದ್ಧತಿ, ವಾಡಿಕೆ, ವಿಧ್ಯುಕ್ತಕರ್ಮ ಎಂಬ ಅರ್ಥಗಳಿವೆ. ಸಾಮಾನ್ಯ ಬಳಕೆಯಲ್ಲಿರುವ, ಇದರ ಪಾರಿಭಾಷಿಕ ಅರ್ಥ–ವಾದ, ನಿಯಮಿತ ನಿತ್ಯಕರ್ಮಗಳು ಎಂಬ ವಿವರಣೆಗನುಸಾರವಾಗಿ ಹಿಂದೂಧರ್ಮಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನಿಲ್ಲಿ ಪ್ರಸ್ತಾಪಿಸಲಾಗಿದೆ. ಒಬ್ಬ ವ್ಯಕ್ತಿ ನಂಬುವ ತತ್ತ್ವ, ಸಿದ್ಧಾಂತ, ಮತ ಏನೇ ಇರಲಿ, ಅವನ ಆಚರಣೆ, ಅನುಷ್ಠಾನ, ನಿತ್ಯಜೀವನದಲ್ಲಿ ತನ್ನ ಕೆಲಸಕಾರ್ಯಗಳ ರೀತಿ–ಇವು ಬಹಳ ಮುಖ್ಯ. ಇಂಥ ಆಚರಣೆಯಿಂದಲೇ ಆತ ಧರ್ಮವನ್ನು ರಕ್ಷಿಸಿದಂತೆ ಆಗುವುದು. ಧರ್ಮವನ್ನು ರಕ್ಷಿಸುವವನನ್ನು ಧರ್ಮವು ರಕ್ಷಿಸುವುದೆಂದೂ ಹೇಳಲಾಗಿದೆ (ಧರ್ಮೋ ರಕ್ಷತಿ ರಕ್ಷಿತಃ).

ಆಚಾರ ಇಷ್ಟು ಮುಖ್ಯವಾದುದರಿಂದ ಭಾರತದಲ್ಲಿ ಅತಿ ಪ್ರಾಚೀನ ಕಾಲದಲ್ಲೇ ಇದನ್ನು ನಿಯಮಿಸುವ ಧರ್ಮಶಾಸ್ತ್ರಗಳು ಜನ್ಮತಾಳಿದುವು. ಇವುಗಳನ್ನು ಸ್ಮೃತಿಗಳ ಗುಂಪಿಗೆ ಸೇರಿಸಲಾಯಿತು. ಸ್ಮೃತಿಗಳೆಂದರೆ ಮಾನವನ ಸ್ಮೃತಿಗೆ (ನೆನಪಿಗೆ) ಗೋಚರವಾಗುವ ಪರಂಪರಾನುಗತವಾದ ಕಾರ್ಯಪದ್ಧತಿಗಳನ್ನು ವಿಶದೀಕರಿಸುವ ಗ್ರಂಥಗಳು.

ಈ ಧರ್ಮಶಾಸ್ತ್ರಗಳೂ ಅವುಗಳ ಬಗೆಗೆ ವ್ಯಾಖ್ಯಾನಗಳೂ ವಿವರಣೆಗಳೂ ಪ್ರ.ಶ.ಪೂ. ನಾಲ್ಕನೆಯ ಶತಮಾನದಿಂದ ಇತ್ತೀಚಿನವರೆಗೂ ರಚಿತವಾಗುತ್ತ ಬಂದಿವೆ. ಪಿ. ವಿ. ಕಾಣೆ ತಮ್ಮ ಆರು ಸಂಪುಟಗಳ ಧರ್ಮಶಾಸ್ತ್ರದ ಇತಿಹಾಸ (ಹಿಸ್ಟೊರಿ ಆಫ್ ಧರ್ಮಶಾಸ್ತ್ರ) ಎಂಬ ಬೃಹದ್ಗ್ರಂಥದಲ್ಲಿ ಈ ವಿಪುಲವಾದ ಶಾಸ್ತ್ರಭಂಡಾರವನ್ನು ಕುರಿತು ಬರೆದಿದ್ದಾರೆ. ಮುಖ್ಯವಾದ ಸುಮಾರು ನೂರು ಗ್ರಂಥಗಳ ಸ್ಥೂಲ ಪರಿಚಯ ಮಾಡಿಕೊಟ್ಟಿದ್ದಾರೆ. ಇವುಗಳಲ್ಲಿ ಪುರಾತನಕಾಲಕ್ಕೆ ಸೇರಿದ ಗೌತಮ, ಬೌಧಾಯನ, ಆಪಸ್ತಂಬ, ವಸಿಷ್ಠ, ವಿಷ್ಣು, ಹಾರೀತ, ಮನು, ಯಾಜ್ಞವಲ್ಕ್ಯ, ಪರಾಶರ, ಬೃಹಸ್ಪತಿ, ಕಾತ್ಯಾಯನ, ಅಂಗೀರಸ ಈ ಹೆಸರುಗಳನ್ನು ತಾಳಿದವು ಉಲ್ಲೇಖನೀಯವಾಗಿವೆ. ಇವೇ ಅಲ್ಲದೆ ರಾಮಾಯಣ ಮಹಾಭಾರತಗಳಲ್ಲೂ ಕೆಲವು ಪುರಾಣಗಳಲ್ಲೂ ನಿದರ್ಶನಪೂರ್ವಕವಾಗಿ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳ ಪ್ರಸ್ತಾಪ ಬಂದಿದೆ.

ಮಧ್ಯಕಾಲದಲ್ಲಿದ್ದ ದಾಕ್ಷಿಣಾತ್ಯ ಸ್ಮೃತಿಕಾರರಲ್ಲಿ 13ನೆಯ ಶತಮಾನದಲ್ಲಿ ಯಾದವ ರಾಜ್ಯದಲ್ಲಿದ್ದ ಹೇಮಾದ್ರಿಯೂ 14ನೆಯ ಶತಮಾನದಲ್ಲಿದ್ದ ವಿದ್ಯಾರಣ್ಯರೂ ಪ್ರಮುಖರು.

ಧರ್ಮವನ್ನಾಚರಿಸುವವರಿಗೆ ನಾಲ್ಕು ಪ್ರಮಾಣಗಳೆಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಹೇಳಿದೆ; ಶ್ರುತಿ (ವೇದ), ಸ್ಮೃತಿ, ಸದಾಚಾರಸಂಪನ್ನರಾದವರ ನಡತೆ, ತಮ್ಮ ಅಂತರಾತ್ಮನಿಗೆ ಪ್ರಿಯವಾಗಿರುವ ಮಾರ್ಗ.

ಧರ್ಮಾಚರಣೆಯನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಿ ವಿವರಿಸಿದ್ದಾರೆ: ಆಚಾರ, ವ್ಯವಹಾರ ಮತ್ತು ಪ್ರಾಯಶ್ಚಿತ್ತ.

ಆಚಾರದ ನಿರೂಪಣೆಯಲ್ಲಿ ಸಾಮಾನ್ಯವಾಗಿ ಈ ವಿಷಯಗಳು ಬರುತ್ತವೆ: ಸಂಸ್ಕಾರಗಳು, ಶುದ್ಧೀಕರಣಕರ್ಮಗಳು. ನಾಲ್ಕು ವರ್ಣಗಳವರು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ) ಮತ್ತು ಸಂಕೀರ್ಣಜಾತಿಯವರು ಅನುಸರಿಸಬೇಕಾದ ಕರ್ಮಗಳು, ನಾಲ್ಕು ಆಶ್ರಮಗಳ ಧರ್ಮಗಳು (ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿ) ಅನುಷ್ಠಾನ ಮಾಡಬೇಕಾದ ಕರ್ಮಗಳು; ವಿವಾಹ, ಸ್ತ್ರೀಯರ ಧರ್ಮ, ಆಹಾರನಿಯಮ, ಪಂಚಮಹಾಯಜ್ಞಗಳು (ಬ್ರಹ್ಮ, ದೇವ, ಪಿತೃ, ಮಾನವ ಮತ್ತು ಭೂತ)–ಇವುಗಳ ತೃಪ್ತಿಗೆ ಆಚರಿಸಬೇಕಾದ ಕಾರ್ಯಗಳು, ವ್ರತಗಳು ಮತ್ತು ತೀರ್ಥಕ್ಷೇತ್ರಗಳ ಸಂದರ್ಶನ.

ಕೆಲವು ಸ್ಮೃತಿಗಳಲ್ಲಿ ಈ ಪ್ರಕರಣಕ್ಕೆ ಆಹ್ನಿಕ ಮತ್ತು ಆಚಾರ ಎಂಬ ಹೆಸರಿದೆ. ಆಹ್ನಿಕವೆಂದರೆ ದೈನಂದಿನ ಕರ್ಮ. ಈ ಪ್ರಕರಣದಲ್ಲಿ ಸಾಮಾನ್ಯವಾಗಿ ನಾಲ್ಕು ಆಶ್ರಮದವರು ಅನುಸರಿಸಬೇಕಾದ ನಿತ್ಯಕರ್ಮಗಳ ವಿವರಣೆ ಇದೆ; ಹಾಗೂ ಗೃಹಸ್ಥಾಶ್ರಮವೇ ಎಲ್ಲ ಆಶ್ರಮಗಳಲ್ಲೂ ಶ್ರೇಷ್ಠವೆಂಬ ಹೆಗ್ಗಳಿಕೆಯೂ ಇದೆ. ಏಕೆಂದರೆ ಉಳಿದ ಮೂರು ಆಶ್ರಮಸ್ಥರಿಗೂ ಗೃಹಸ್ಥರೇ ಆಶ್ರಯದಾತರು. ಸಮಾಜಜೀವನದ ಭದ್ರತೆಗೂ ಸ್ವಾಸ್ಥ್ಯಕ್ಕೂ ಅವರೇ ಕಾರಣರಾಗಿರುತ್ತಾರೆ. ಈಗಿನ ಕಾಲದಲ್ಲಿ ವಾನಪ್ರಸ್ಥಾಶ್ರಮ ಪದ್ಧತಿ ಇಲ್ಲವೆಂದೇ ಹೇಳಬೇಕು. ಕೆಲವರು ಸಂನ್ಯಾಸಿಗಳಾಗುತ್ತಾರೆ. ಒಟ್ಟಿನಲ್ಲಿ ಇವರ ಸಂಖ್ಯೆ ಗಣನೀಯವಾಗಿಲ್ಲ. ಬ್ರಹ್ಮಚರ್ಯಾಶ್ರಮದ ವಿಷಯದಲ್ಲೂ ಈ ಮಾತು ಸಲ್ಲುತ್ತದೆ. ಹಿಂದಿನಕಾಲದಲ್ಲಿ ಗುರುಕುಲಗಳಿದ್ದಾಗ ಉಪನಯನ ವಿದ್ಯಾರಂಭದ ದೆಸೆಯಾಗಿತ್ತು. ವಿದ್ಯಮಾನಗಳು ಈಗ ತೀರ ಬದಲಾಯಿಸಿರುವುದರಿಂದ ಸ್ಮೃತಿಕಾರರು ಹೇಳುವ ನಿಯಮಗಳು ಈಗ ಅನ್ವಯವಾಗುವುದಿಲ್ಲ. ಈ ಆಹ್ನಿಕ, ಆಚಾರ ವಿಧಿನಿಷೇಧಗಳ ಇಷ್ಟು ವಿವರವಾದ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಎರಡು ಕಲ್ಪನೆಗಳು ಅಡಕವಾಗಿವೆ: 1 ಲೋಕದಲ್ಲಿ ಜನ್ಮವೆತ್ತಿದ ಮೇಲೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನೂ ಮಾನವ ಸಾಧಿಸಬೇಕು. ಧರ್ಮವೇ ಮೊದಲ ಪುರುಷಾರ್ಥ. ಮೋಕ್ಷವೇ ಅಂತಿಮ ಪುರುಷಾರ್ಥ. ಅರ್ಥ, ಕಾಮಗಳ ಚಟುವಟಿಕೆಗಳು ಧರ್ಮ ಮೋಕ್ಷಗಳಿಗೆ ಅಡ್ಡಿಯಾಗ ಬಾರದು. ವಿಧಿವತ್ತಾಗಿ ಮಂತ್ರಸಹಿತವಾಗಿ ಆಚರಿಸುವ ಎಲ್ಲ ಸಂಸ್ಕಾರಗಳ ಹಾಗೂ ಇತರ ಕರ್ಮಗಳ ಸಂದರ್ಭದಲ್ಲಿ ಚತುರ್ವಿಧ ಪುರುಷಾರ್ಥಸಿದ್ಧಿಯ ಉದ್ದೇಶವನ್ನು ಉಚ್ಚರಿಸುತ್ತಾರೆ. 2 ಮಾನವಜನ್ಮ ಸುಕೃತದಿಂದ ಲಭ್ಯವಾದುದು. ದೇಹ ಪವಿತ್ರವಾದ ಕೊಡುಗೆ. ಇದನ್ನು ಶುಚಿಯಾಗಿಯೂ ದೋಷರಹಿತವಾಗಿಯೂ ಕಾಪಾಡಿ ಭಗವಂತನ ಸೇವೆಗೂ ಅಂತರ್ಯಾಮಿಯಾಗಿರುವುದರಿಂದ, ಅವನ ಆವಾಸಕ್ಕೂ ಯೋಗ್ಯವನ್ನಾಗಿ ಮಾಡಬೇಕು. ಈ ಆಚಾರಗಳು ಬಹುಮಟ್ಟಿಗೆ ಆರೋಗ್ಯರಕ್ಷಣೆಗೂ ಮತ್ತು ಸಾತ್ತ್ವಿಕಜೀವನ ನಡೆಸುವುದಕ್ಕೂ ಅನುವಾಗುತ್ತವೆಂಬುದು ಗಮನಾರ್ಹವಾದ ವಿಷಯ. ಆಚಾರಗಳನ್ನು ಪಾಲಿಸುವುದರಿಂದ ಆಯುಸ್ಸು, ತೇಜ, ಧನವೃದ್ಧಿಯಾಗುತ್ತವೆಂದು ಹೇಳುವ ಮನುಸ್ಮೃತಿಯ ವಾಕ್ಯ ಇದಕ್ಕೆ ಸಾಕ್ಷಿಯಾಗಿದೆ:

ಆಚಾರಾಲ್ಲಭತೇ ಹ್ಯಾಯುರಾಚಾರಾದ್ಧಿರಾಪ್ತಿತಾಃ ಪ್ರಜಾಃ
ಆಚಾರಾದ್ಧನಮಕ್ಷಯ್ಯಾಮಾಚಾರೋಹಂತ್ಯಲಕ್ಷಣಂ (ಮನು IV–156)

ಸೂರ್ಯೋದಯಕ್ಕೆ ಪೂರ್ವದಲ್ಲಿಯೇ ಬ್ರಾಹ್ಮೀಮುಹೂರ್ತದಲ್ಲಿ ಏಳುವುದು, ಪ್ರಾತಃಕಾಲದಲ್ಲಿ ಭಗವಂತನ, ಚಿರಂಜೀವಿಗಳ, ಪಂಚಕನ್ಯೆಯರ ಸ್ಮರಣೆ, ಸ್ತೋತ್ರಾದಿಗಳನ್ನು ಹೇಳುವುದು, ಮಲಮೂತ್ರವಿಸರ್ಜನ, ಮೃತ್ತಿಕಾಶೌಚ, ವಂದನೆ, ಅಗ್ನಿಹೋತ್ರ, ದೇವರಪೂಜೆ, ಭೋಜನ ಇತ್ಯಾದಿಗಳನ್ನು ವಿಸ್ತಾರವಾಗಿ ಅನೇಕ ವಿವರಣೆಗಳೊಂದಿಗೆ ಪ್ರಸ್ತಾಪ ಮಾಡಲಾಗಿದೆ. ಕಾಲಕ್ರಮದಲ್ಲಿ ಅನೇಕ ಆಚಾರಗಳು ರೂಢಿ ತಪ್ಪಿ ಲುಪ್ತವಾಗಿವೆ. ಆದರೆ ನಿತ್ಯಸ್ನಾನ, ಮತಾನುಸಾರ ನಾಮ, ವಿಭೂತಿ ಇತ್ಯಾದಿಗಳ ಧಾರಣೆ, ಆಹಾರನಿಯಮಗಳು ಬಹುಮಟ್ಟಿಗೆ ಸಂಪ್ರದಾಯವಾಗಿ ಉಳಿದುಕೊಂಡು ಹಿಂದುಗಳ ಶುಚಿತ್ವಕ್ಕೂ ಸಾತ್ವಿಕ ಸ್ವಭಾವಕ್ಕೂ ಕಾರಣವಾಗಿವೆ. ಭಾರತೀಯ ಸಮಾಜ ನಾಲ್ಕು ವರ್ಣಗಳಲ್ಲಿ ವಿಭಾಜಿತವಾದದ್ದು. ಈ ವ್ಯವಸ್ಥೆಯ ಬುನಾದಿಯ ಮೇಲೆಯೇ ಧರ್ಮಶಾಸ್ತ್ರಗಳು ರಚಿತವಾಗಿವೆ. ಪ್ರತಿಯೊಂದು

ವರ್ಣಕ್ಕೆ ಸೇರಿದವರ ಆಚಾರಗಳನ್ನೂ ವಿವರಿಸಲಾಗಿದೆ. ಈ ವರ್ಣಗಳ ಮುಖ್ಯ ಕಾರ್ಯಕ್ರಮಗಳು–ವಿದ್ಯೆ, ಆಡಳಿತ, ಆರ್ಥಿಕವ್ಯವಸ್ಥೆ ಮತ್ತು ಈ ಮೂರು ವರ್ಣಗಳವರ ಸೇವೆ–ಹೀಗಿತ್ತು. ಆಯಾ ವರ್ಣದವರು ಪಾಲಿಸಬೇಕಾದ ಕರ್ತವ್ಯಗಳನ್ನು ಕುರಿತು ಹೆಚ್ಚು ಪ್ರಸ್ತಾಪವಿದೆಯೇ ಹೊರತು ಅವರ ಹಕ್ಕು, ಅಧಿಕಾರಗಳ ವಿಷಯದಲ್ಲಿ ಸ್ಮೃತಿಕಾರರು ಗಮನ ಹರಿಸಿಲ್ಲ. ಬಹುಮಟ್ಟಿಗೆ ಈ ಕರ್ಮಗಳು ಆನುವಂಶಿಕವಾಗಿದ್ದುವು. ತನ್ನ ವರ್ಣಧರ್ಮವನ್ನು ಪಾಲಿಸುವುದೇ ತನಗೆ ಶ್ರೇಯಸ್ಕರವೆಂಬ ಭಾವನೆ ಸಾಮಾನ್ಯವಾಗಿತ್ತು. ಆದುದರಿಂದ ಪ್ರತಿಯೊಬ್ಬರ ಗುರಿ ತಕ್ಕಮಟ್ಟಿಗೆ ನಿರ್ದಿಷ್ಟವಾಗಿಯೇ ಇತ್ತು. ವೃತ್ತಿಹೀನತೆ, ಸ್ಪರ್ಧೆ, ಅಸಹಕಾರ ಮನೋಭಾವ–ಇವಕ್ಕೆ ಅವಕಾಶವಿರಲಿಲ್ಲ. ಸಮಾಜ ಏಕದೇಹನ್ಯಾಯವನ್ನನುಸರಿಸಿ ಪರಸ್ಪರ ಅವಲಂಬನದಿಂದ ಬಾಳಬೇಕೆಂಬ ತತ್ತ್ವ ಇದರಲ್ಲೇ ಅಡಕವಾಗಿತ್ತು.

ಕೆಲವುವೇಳೆ, ವಿಶೇಷವಾಗಿ ಆಪತ್ಕಾಲದಲ್ಲಿ, ಒಂದು ವರ್ಣದವರು ಮತ್ತೊಂದು ವರ್ಣದವರ ಕೆಲಸಕಾರ್ಯಗಳನ್ನೂ ಮಾಡಲು ಅವಕಾಶವಿತ್ತು. ಮೊದಲ ಮೂರು ವರ್ಣದವರಿಗೆ ಹೆಚ್ಚಾಗಿ ವಿಧಿನಿಷೇಧಗಳಿದ್ದುವು. ಆದರೆ ಎಲ್ಲ ವರ್ಣದವರಿಗೆ ಅನ್ವಯಿಸುವ ಸತ್ಯ, ಅಹಿಂಸೆ, ಅಸ್ತೇಯ ಮುಂತಾದುವನ್ನು ಶಾಸ್ತ್ರಕಾರರು ಉಲ್ಲೇಖಿಸಿದ್ದಾರೆ. ಉದಾಹರಣೆಗೆ, ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ:

ಇಂದ್ರಿಯಾಣಾಂ ನಿರೋಧೇನ ರಾಗದ್ವೇಷಕ್ಷಯೇಣ ಚ ।
ಅಹಿಂಸಯಾ ಚ ಭೂತಾನಾಮಮೃತತ್ವಾಯ ಕಲ್ಪತೇ ॥

(ಇಂದ್ರಿಯಗಳ ನಿರೋಧದಿಂದಲೂ ರಾಗದ್ವೇಷಗಳ ಕ್ಷಯದಿಂದಲೂ ಅಹಿಂಸೆಯಿಂದಲೂ ಜೀವಿಗಳಿಗೆ ಅಮೃತತ್ವ ಉಂಟಾಗುತ್ತದೆ).

ಅಂತೆಯೇ ಮಹಾಭಾರತದ ಶಾಂತಿಪರ್ವದಲ್ಲಿ ಹೀಗಿದೆ:

ಅಕ್ರೋಧಃ ಸತ್ಯವಚನಂ ಸಂವಿಭಾಗಃ ಕ್ಷಮಾ ತಥಾ
ಪ್ರಜನಃ ಸ್ವರ್ವದಾರೇಷು ಶೌಚಮದ್ರೋಹ ಏವ ಚ
ಆರ್ಜವಂ ಭೃತ್ಯಭರಣಂ ನವೈತೇ ಸಾರ್ವವರ್ಣಿಕಾಃ

(ಕೋಪವನ್ನು ಬಿಡುವುದು, ಸತ್ಯವನ್ನು ನುಡಿಯುವುದು, ನ್ಯಾಯವಾದ ಹಂಚಿಕೆ, ಕ್ಷಮೆ, ವ್ಯಭಿಚಾರ ಮಾಡದಿರುವುದು, ಶುಚಿತ್ವ, ದ್ರೋಹವನ್ನು ಮಾಡದಿರುವುದು, ನೇರವಾದ ನಡತೆ, ಭೃತ್ಯರನ್ನು ರಕ್ಷಿಸುವುದು–ಈ ಒಂಬತ್ತು ನಿಯಮಗಳನ್ನು ಎಲ್ಲ ವರ್ಣದವರೂ ಪಾಲಿಸಬೇಕು.)

ನಾಲ್ಕನೆಯ ವರ್ಣದವರಾದ ಶೂದ್ರರು ಉಳಿದ ಮೂರು ವರ್ಣದವರ ಅಧೀನದಲ್ಲೂ ಆಶ್ರಯದಲ್ಲೂ ಇದ್ದರು. ವೇದಾಧ್ಯಯನ, ವೇದಮಂತ್ರಗಳ ಸಹಿತ ಮಾಡುವ ವೈದಿಕಕರ್ಮ–ಇವಕ್ಕೆ ಅವರಿಗೆ ಅಧಿಕಾರವಿರಲಿಲ್ಲ. ಆದರೂ ಮಹಾಭಾರತ, ರಾಮಾಯಣ, ಭಾಗವತಾದಿ ಪುರಾಣಗಳನ್ನು ಶ್ರವಣಮಾಡಿ ತತ್ತ್ವಗಳನ್ನರಿಯುವ ಅವಕಾಶ ಕಲ್ಪಿಸಲಾಗಿತ್ತು. ವಿಶೇಷವಾಗಿ ಪುರಾಣಗಳ ರಚನೆ ಮತ್ತು ಪ್ರಚಾರ ಇವರನ್ನುದ್ದೇಶಿಸಿಯೇ ಹೀಗೆ ಮಾಡಲಾಗಿತ್ತೆಂದು ಹೇಳಬಹುದು. ತಮ್ಮ ಸ್ವಕರ್ಮಗಳನ್ನು ಆಚರಿಸಿ ಸಿದ್ಧಿಯನ್ನು ಹೊಂದಬಹುದೆಂಬ ಆಶ್ವಾಸನೆಯನ್ನು ಗೀತೆಯಲ್ಲಿ ಕಾಣುತ್ತೇವೆ. ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿ ಲಭತೇ ನರಃ (ಮನುಷ್ಯರು ತಮ್ಮ ತಮ್ಮ ಕರ್ಮಗಳನ್ನು ಮಾಡಿ ಪೂರ್ಣಸಿದ್ಧಿಯನ್ನು ಹೊಂದುವರು). ಮಹಾಭಾರತದಲ್ಲಿನ ವಿದುರನೂ ಧರ್ಮವ್ಯಾಧನೂ ಹೀಗೆ ಸಿದ್ಧಿಯನ್ನು ಪಡೆದರು. ಪೂರ್ತಧರ್ಮ ಅಂದರೆ ಬಾವಿ, ಕೊಳ, ದೇವಸ್ಥಾನ, ಉದ್ಯಾನ ಇವುಗಳನ್ನು ನಿರ್ಮಿಸುವುದು, ಅನ್ನದಾನ ಮಾಡುವುದು ಇದಕ್ಕೆ ಶೂದ್ರನಿಗೆ ಅಧಿಕಾರವಿತ್ತು. ಪಂಚಮಹಾಯಜ್ಞಗಳನ್ನು (ವೇದಮಂತ್ರಗಳಿಲ್ಲದೆ) ಮಾಡುವ ಅಧಿಕಾರವೂ ಇತ್ತು. ಜಪ (ರಾಮನಾಮ, ಶಿವನಾಮ) ಮಾಡುವ ಅವಕಾಶವೂ ಇತ್ತು.

ಶೂದ್ರರು ಕೀಳೆಂಬ ಭಾವನೆ ಬೆಳೆದು ಬಂದುದು ನಿಜ. ಇದು ಜಾತ್ಯಹಂಕಾರಗಳು ಬೆಳೆದುದರ ಫಲವಾಗಿದ್ದು ನಮ್ಮ ಸಮಾಜದ ಅವನತಿಯ ಕುರುಹಾಗಿದೆ. ಇಂಥ ಪರಿಸ್ಥಿತಿಯಲ್ಲೂ ಬ್ರಾಹ್ಮಣವೃತ್ತಿಯನ್ನುಳಿದು ಎಲ್ಲ ವೃತ್ತಿಗಳನ್ನೂ ಅವಲಂಬಿಸಲು ಅವರಿಗೆ ಯಾವ ಅಡ್ಡಿಯೂ ಇರಲಿಲ್ಲ. ಕೆಲವರು ಯೋಧರಾದರು, ರಾಜ್ಯಗಳನ್ನೂ ಕಟ್ಟಿದರು. ಅನೇಕರು ಕೃಷಿ, ಗೋರಕ್ಷಣೆ, ವ್ಯಾಪಾರಗಳಲ್ಲಿ ತೊಡಗಿದರು. ವರ್ಣವ್ಯವಸ್ಥೆಯ ಕಟ್ಟುಗಳು ಕಾಲಕ್ರಮದಲ್ಲಿ ಸಡಿಲವಾಗುತ್ತ ಬಂದುವು.

ಕೆಲವು ಸಂಕೀರ್ಣಜಾತಿಯವರನ್ನು ಮುಟ್ಟಬಾರದೆಂಬ ಅಸ್ಪೃಶ್ಯತೆಯ ಸಂಪ್ರದಾಯವೂ ಆಚಾರಕ್ಕೆ ಸಂಬಂಧಿಸಿದ್ದಾಗಿದೆ. ಇದಕ್ಕೆ ಸ್ಮೃತಿಗಳ ಆಧಾರವಿಲ್ಲವೆಂದು ಕಾಣೆಯವರು ಪ್ರಮಾಣ ಸಹಿತ ನಿರೂಪಿಸಿದ್ದಾರೆ. ಕೇವಲ ಸಂಪ್ರದಾಯವಾಗಿ ಬೆಳೆದು ಬಂದ ಒಂದು ಅಂಧ ಆಚರಣೆಯಾಗಿ ಅಸ್ಪೃಶ್ಯತೆ ರೂಢಿಗೆ ಬಂತೆಂದು ತೋರುತ್ತದೆ. ಇದನ್ನು ಸಡಿಲಗೊಳಿಸಲು ಅನೇಕ ಸುಧಾರಕರು ಹಿಂದಿನ ಕಾಲದಿಂದಲೂ ಶ್ರಮಿಸಿದ್ದಾರೆ. ಮಧ್ಯಕಾಲದಲ್ಲಿ ಭಕ್ತಿಪಂಥಗಳ ಪ್ರವರ್ತಕರು ಈ ಜಾತ್ಯಹಂಭಾವವನ್ನು ನಿರ್ಮೂಲ ಮಾಡುವ ಪ್ರಯತ್ನ ಮಾಡಿದರು. ಈಚೆಗೆ ಮಹಾತ್ಮಾಗಾಂಧಿಯವರು ಇದರ ಬಗ್ಗೆ ಪ್ರಚಂಡವಾದ ಚಳವಳಿ ಹೂಡಿದರು.

ಆಚಾರದಲ್ಲಿ ಸಂಸ್ಕಾರಗಳು ಸೇರುತ್ತವೆ. ಇವು ಜನ್ಮಾರಭ್ಯ ಮರಣಪರ್ಯಂತ ಅನುಷ್ಠಾನ ಮಾಡಬೇಕಾದ ವಿಶೇಷಕರ್ಮಗಳು. ಇವುಗಳ ವಿವರಗಳ ವಿಚಾರದಲ್ಲಿ ಸ್ಮೃತಿಕಾರರಲ್ಲಿ ಏಕಮತವಿಲ್ಲದಿದ್ದರೂ ಸಾಮಾನ್ಯವಾಗಿ ಇವು ಷೋಡಶವೆಂದು ಪರಿಗಣಿಸಲ್ಪಟ್ಟಿವೆ. ಗರ್ಭಾಧಾನ, ನಾಮಕರಣ, ಅನ್ನಪ್ರಾಶನ, ಕರ್ಣವೇಧ, ಉಪನಯನ, ವಿವಾಹ ಇತ್ಯಾದಿಯಾದ ಇವೆಲ್ಲವೂ ಮೊದಲ ಮೂರು ವರ್ಣದವರಿಗೆ ಅನ್ವಯಿಸುವುವು. ಕಾಲದೇಶವರ್ತಮಾನಗಳಿಗನುಸಾರವಾಗಿ ಇವುಗಳ ಆಚರಣೆಯಲ್ಲಿ ಭಿನ್ನತೆ ತಲೆದೋರಿತು. ಪ್ರಸ್ತುತ ಇವುಗಳಲ್ಲಿ ಕೆಲವು ಮಾತ್ರ ರೂಢಿಯಲ್ಲಿವೆ.

ನಾಮಕರಣದ ವಿಷಯದಲ್ಲಿ ದೇವರ, ಗುರುಗಳ, ಅಜ್ಜನ ಹೆಸರಿಡುವುದು ಒಂದು ರೂಢಿ. ಕಿವಿ ಚುಚ್ಚುವುದೂ ಹಾಗೆಯೇ ಒಂದು ಪದ್ಧತಿ. ಉಪನಯನದ ವಿಷಯದಲ್ಲಿ ವಿದ್ಯಮಾನಗಳು ತೀರ ಬದಲಾಗಿವೆ. ವಿವಾಹದ ವಿಷಯದಲ್ಲೂ ದೇಶಾಚಾರಗಳೂ ಕುಲಾಚಾರಗಳೂ ಬೇರೆ ಬೇರೆಯಾಗಿ ವಿವಿಧ ಆಚರಣೆಗಳಿಗೆ ಎಡೆಕೊಟ್ಟಿವೆ. ಶಾಸ್ತ್ರವಿಧಿಗಳಿಗಿಂತ (ವೃದ್ಧ) ಸ್ತ್ರೀಯರ ಅಭೀಷ್ಟಗಳೂ ಆಚರಣೆಗಳೂ ಹೆಚ್ಚು ಪ್ರಾಶಸ್ತ್ಯ ಪಡೆದಿವೆ. ದೇಶಾಚಾರದ ಭಿನ್ನತೆಗೆ ಒಂದು ಉದಾಹರಣೆ: ದಕ್ಷಿಣದೇಶದಲ್ಲಿ ಸೋದರಮಾವ ಅಥವಾ ಸೋದರತ್ತೆಯ ಮಗನನ್ನೊ ಮಗಳನ್ನೊ ಮದುವೆ ಮಾಡಿಕೊಳ್ಳುವುದು ರೂಢಿಗೆ ಬಂದಿದೆ. ಅದೇ ರೀತಿ ಅಕ್ಕನ ಮಗಳನ್ನೂ ಮದುವೆಯಾಗುವ ಪದ್ಧತಿ ಇದೆ. ಸಪಿಂಡ ಸಂಬಂಧಗಳನ್ನೆಲ್ಲ ನಿಷೇಧಿಸಿರುವ ಸ್ಮೃತಿಗಳಿಗೆ ಈ ಪದ್ಧತಿಗಳು ತೀರ ವಿರುದ್ಧವಾಗಿವೆ. ಕುಲಾಚಾರ, ದೇಶಾಚಾರಗಳೇ ಪ್ರಮಾಣವೆಂದು ಸ್ವೀಕರಿಸಲಾಗಿದೆ.

ಪಂಚಮಹಾಯಜ್ಞಗಳನ್ನು ವಿಧ್ಯುಕ್ತವಾಗಿಯೂ ಪ್ರಯತ್ನಪೂರ್ವಕವಾಗಿಯೂ ಆಚರಿಸುವವರು ಇಂದು ವಿರಳ. ಆದರೆ ಈ ಹಿಂದಿನ ಸಂಪ್ರದಾಯಗಳ ಬಲದಿಂದ ತಕ್ಕಮಟ್ಟಿಗೆ ದೈವಭಕ್ತಿಯೂ ಶ್ರಾದ್ಧಾದಿಗಳೂ ಅತಿಥಿಸತ್ಕಾರವೂ ನಮ್ಮ ಸಮಾಜದಲ್ಲಿ ವಿಶಿಷ್ಟಲಕ್ಷಣಗಳಾಗಿ ಉಳಿದಿವೆ.

ವ್ರತಗಳ ಪಾಲನೆಯ ವಿಷಯದಲ್ಲೂ ಈ ಮಾತು ಅನ್ವಯಿಸುತ್ತದೆ. ಗಂಡಸರಿಗಿಂತಲೂ ಸ್ತ್ರೀಯರಲ್ಲಿ ಇವುಗಳ ಬಗೆಗೆ ಶ್ರದ್ಧೆ ತಕ್ಕಮಟ್ಟಿಗೆ ಉಳಿದಿದೆಯೆಂದು ಹೇಳಬಹುದು. ಆಚರಿಸದಿರುವವರಿಗೂ ಇದರ ಬಗೆಗೆ ಆದರ ಉಂಟು. ಈ ವಿಷಯವನ್ನು ಮನುಸ್ಮೃತಿ ಪ್ರಸ್ತಾಪಿಸುತ್ತದೆ:

ಯದಿ ಸ್ತ್ರೀಯವರಜಃ ಶ್ರೇಯಃ ಕಿಂಚಿತ್ಸಮಾಚರೇತ್ ।
ತತ್ಸರ್ವಮಾಚರೇದ್ಯುಕ್ತೋ ಯತ್ರವಾಸ್ಯ ರಮೇನ್ಮನಃ ॥

(ಸ್ತ್ರೀಯರೂ ಶ್ರೇಷ್ಠರಲ್ಲದವರೂ ಆಚರಿಸುವ ಉತ್ತಮ ಆಚರಣೆಗಳನ್ನು–ಅವುಗಳಿಂದ ಮನಸ್ಸಿಗೆ ಸಂತೋಷವಾದರೆ ಎಲ್ಲರೂ ಮೇಲ್ಪಂಕ್ತಿಯಾಗಿಟ್ಟುಕೊಂಡು ಆಚರಿಸಬೇಕು.)

ಸ್ತ್ರೀಧರ್ಮದ ವಿಷಯದಲ್ಲಿ ಸ್ಮೃತಿಗಳು, ಪುರಾಣಗಳು ಬಹಳವಾಗಿ ಹೇಳುತ್ತವೆ. ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ (ಎಲ್ಲಿ ಸ್ತ್ರೀಯರು ಪೂಜ್ಯರಾಗಿದ್ದಾರೋ ಅಲ್ಲಿ ದೇವತೆಗಳು ಸಂತೋಷಗೊಳ್ಳುತ್ತಾರೆ–ಮನುಸ್ಮೃತಿ) ಇವೇ ಮುಂತಾದ ಒಕ್ಕಣೆಗಳಿಂದ ಸ್ತ್ರೀಯರ ವಿಷಯದಲ್ಲಿದ್ದ ಆದರ ವ್ಯಕ್ತವಾಗುತ್ತದೆ.

ತೀರ್ಥಯಾತ್ರೆಗಳನ್ನು ಎಲ್ಲರಿಗೂ ನಿರ್ಬಂಧವಾಗಿ ವಿಧಿಸದಿದ್ದರೂ ಅವುಗಳಲ್ಲಿ ಸಾಮಾನ್ಯ ಜನರ ಆಸಕ್ತಿ ಇಂದಿನವರೆಗೂ ಉಳಿದುಕೊಂಡು ಬಂದಿದೆ.

ಕೆಲವು ಆಚಾರಗಳು ಹೆಸರಿಗೆ ಮಾತ್ರ ಉಳಿದಿದ್ದರೂ ಹಿಂದೂ ಸಮಾಜಕ್ಕೆ ಅವುಗಳಿಂದ ಬಹಳ ಉಪಕಾರವಾಗಿದೆ. ಶುಚಿತ್ವ, ಸಂಯಮ, ಸಂಘಟನೆ, ವಿಪ್ಲವಗಳ ಕಾಲದಲ್ಲೂ ಸಮಾಜ ನುಚ್ಚುನೂರಾಗದಂತೆ ಉಳಿದಿರುವುದು–ಇವಕ್ಕೆ ಆಚಾರಗಳು ತಕ್ಕಮಟ್ಟಿಗೆ ಕಾರಣ. ಅವುಗಳ ಅರ್ಥವಿಲ್ಲದ ಆಚರಣೆಯಿಂದಲೂ ನಿರ್ದಯೆಯ ಮನೋಧರ್ಮದಿಂದಲೂ ಕೇಡುಂಟಾಗಿದೆ. ಅವೇ ಸಮಗ್ರಧರ್ಮವೆಂಬ ಭ್ರಾಂತಿಯೂ ಉಂಟಾಗಿದೆ. ಈ ಕಾರಣಗಳಿಂದ ಆಧುನಿಕ ಕಾಲಕ್ಕೆ ಅನ್ವಯವಾಗುವ ಹೊಸ ಸ್ಮೃತಿಗಳು ನಿರ್ಮಾಣವಾಗಬೇಕೆಂಬ ಸಲಹೆ ಕೆಲವು ವಿಚಾರಪರರಿಂದ ಕೇಳಿಬರುತ್ತಿದೆ. (ಎಸ್.ಆರ್.ಕೆ.)

**ಆಚಾರ ಪದ್ಧತಿ :** ಮತಧರ್ಮಕ್ಕೆ ಸಂಬಂಧಿಸಿದ್ದು ಪರಂಪರೆಯಿಂದ ನಡೆದು ಬಂದಿರುವ ನಡತೆನೀತಿಗಳು. ಕ್ರೈಸ್ತಸಭೆಗಳಲ್ಲಿ ವಿವಿಧವಾದ ಆಚಾರಪದ್ಧತಿಗಳಿವೆ. ಆಲಯದೊಳಗೆ ಶಿಲುಬೆಯನ್ನು ನಿಲ್ಲಿಸುವುದು, ಮೇಣದ ಬತ್ತಿಯ ದೀಪಗಳನ್ನು ಹಚ್ಚುವುದು, ಸಮಯದಲ್ಲಿ ಧೂಪ ಹಾಕುವುದು, ಗಂಟೆ ಬಾರಿಸುವುದು, ಗುರುವಿನ ಉಡುಪನ್ನು ಬದಲಾಯಿಸುವುದು, ಕೈ ತೊಳೆದುಕೊಳ್ಳುವುದು, ಶಿಲುಬೆಗೆ ನಮಸ್ಕಾರ ಮಾಡುವುದು, ಮೊಣಕಾಲೂರುವುದು ಮೊದಲಾದವು ಕೆಲವು ಉದಾಹರಣೆಗಳು, ರೋಮನ್ ಸಭೆಯಲ್ಲಿಯೂ ಸಂಪ್ರದಾಯ ಬದ್ಧರ (ಆರ್ಥೊಡಾಕ್ಸ್) ಸಭೆಯಲ್ಲಿಯೂ ಆಚಾರಪದ್ಧತಿಗಳು ಹೆಚ್ಚಾಗಿವೆ. ಇವಾಂಜಲಿಕಲ್ ಸಭೆಗಳಲ್ಲಿರುವವರಿಗೆ ಇಂಥ ಆಚಾರಗಳಲ್ಲಿ ನಂಬಿಕೆಯಿಲ್ಲ.

**ಆಚಾರ್ಯ :** ಆಚಾರವನ್ನು ತಿಳಿದು, ಉಪದೇಶಿಸಿ, ಅನುಷ್ಠಾನಕ್ಕೆ ತರಬಲ್ಲವ. ಯಜ್ಞದಲ್ಲಿ ಕರ್ಮೋಪದೇಶವನ್ನು ಮಾಡುವವ. ಅಧ್ಯಾತ್ಮವಿದ್ಯಾಗುರು. ತೈತ್ತಿರೀಯೋಪನಿಷತ್ತಿನಲ್ಲಿ ಆಚಾರ್ಯ ದೇವೋ ಭವ ಮುಂತಾದ ಮಾತುಗಳಿಂದ ನಿರ್ದೇಶಗೊಂಡಿದ್ದು ಪೂಜಾರ್ಹನೆ

ನಿಸಿದ್ದಾನೆ. ಮನುಸ್ಮೃತಿಯ ಪ್ರಕಾರ ಶಿಷ್ಯನಿಗೆ ಉಪನಯನ ಮಾಡಿಸಿ, ವೇದವೇದಾಂಗಗಳನ್ನು ಬೋಧಿಸತಕ್ಕವನು. ಯಾವುದಾದರೂ ಒಂದು ಪ್ರಧಾನವಾದ ಮತದ ಅಥವಾ ಧರ್ಮದ ಸ್ಥಾಪಕ. ಶುದ್ಧಪಾಂಡಿತ್ಯ, ದಕ್ಷತೆ, ದಾಕ್ಷಿಣ್ಯ, ಶಿಷ್ಯವಾತ್ಸಲ್ಯ, ಜ್ಞಾನದಾನಸಾಮರ್ಥ್ಯ ಮುಂತಾದ ಗುಣಗಳು ಅವನಲ್ಲಿರಬೇಕೆಂದು ಶಾಸ್ತ್ರಗಳು ಹೇಳುತ್ತವೆ. ಜೈನರಲ್ಲಿ ಪಂಚಪರಮೇಷ್ಠಿಗಳಲ್ಲಿ ಒಬ್ಬ; ಪೂಜಾರ್ಹ. ವೀರಶೈವರಲ್ಲೂ ಪಂಚಾಚಾರ್ಯರ ಆರಾಧನೆ ಇದೆ. ಮಹಾಭಾರತದ ದ್ರೋಣನ ನಾಮಾಂತರ. ಕೆಲವು ವೇಳೆ ಗೌರವಸೂಚಕವಾಗಿ ಅದನ್ನು ಹೆಸರಿನೊಡನೆ ಸೇರಿಸುವುದುಂಟು. (ಬಿ.ಕೆ.ಎಸ್.;ಕೆ.ಕೆ.)

**ಆಚಾರ್ಯ, ಪಾ.ವೆಂ.:** 1915–92. ಗೋಯೆಂಕಾ ಪ್ರಶಸ್ತಿ ಪಡೆದ ಕನ್ನಡದ ಪ್ರಸಿದ್ಧ ಪತ್ರಿಕೋದ್ಯಮಿ, ಸಾಹಿತಿ. ಪಾಡಿಗಾರು ವೆಂಕಟರಮಣ ಆಚಾರ್ಯ ಇವರ ಪೂರ್ಣ ಹೆಸರು. ಇವರು ಉಡುಪಿಯ ಬಡ ಕುಟುಂಬವೊಂದರಲ್ಲಿ 1915 ಫೆಬ್ರವರಿ 6ರಂದು ಜನಿಸಿದರು. ಆಗಿನ ಮೆಟ್ರಿಕ್‌ವರೆಗೆ ಕಲಿತರು. ಆದರೆ ಸಂಸ್ಕೃತವೂ ಸೇರಿದಂತೆ ಅನೇಕ ವಿಷಯಗಳಲ್ಲಿ ಆಸಕ್ತಿ ತಾಳಿ ಓದುವ ಅಭಿರುಚಿ ಬೆಳೆಸಿಕೊಂಡರು. ಪತ್ರಿಕೋದ್ಯಮ ರಂಗ ಇವರನ್ನು ತರುಣ ವಯಸ್ಸಿನಲ್ಲಿಯೆ ಆಕರ್ಷಿಸಿತು. ಉಡುಪಿಯ ಅಂತರಂಗ ಪತ್ರಿಕೆ ಯಲ್ಲಿ ಧಾರವಾಡದ ಜಯ ಕರ್ನಾಟಕದಲ್ಲಿ ಕತೆ ಕವಿತೆಗಳನ್ನು ಬರೆಯತೊಡಗಿದರು. ಆರಂಭದ ಈ ಪತ್ರಿಕಾ ವ್ಯವಸಾಯಕ್ಕೆ ತುಳು ಸಾಹಿತ್ಯದ ಅಧ್ವರ್ಯು ಪಣಿಯಾಡಿ ಯವರ ಮಾರ್ಗದರ್ಶನ ದೊರಕಿತು.

ನೌಕರಿಯನ್ನು ಅರಸಿಕೊಂಡು ಇವರು 1942ರಲ್ಲಿ ಹುಬ್ಬಳ್ಳಿಗೆ ಬಂದರು. ಲೋಕಶಿಕ್ಷಣ ಟ್ರಸ್ಟಿನವರ ಕರ್ಮವೀರ ಸಾಪ್ತಾಹಿಕದಲ್ಲಿ ಸಹಸಂಪಾದಕರಾಗಿ ವೃತ್ತಿಜೀವನ ಆರಂಭಿಸಿದರು. ಲಾಂಗೂಲಾಚಾರ್ಯ ಎಂಬ ಹೆಸರಿನಿಂದ ಪ್ರತಿವಾರವೂ ಓದುಗರೊಡನೆ ಹರಟೆ ಕಾಯಂಕಾಲಂ ಬರೆಯ ತೊಡಗಿದರು. ಈ ಕಾವ್ಯನಾಮ ಕರ್ನಾಟಕದಲ್ಲಿ ಮನೆಮಾತಾಯಿತು. ಇದೇ ಲೋಕಶಿಕ್ಷಣ ಟ್ರಸ್ಟ್‌ನವರು ರೀಡರ್ಸ್ ಡೈಜೆಸ್ಟ್ ಮಾದರಿಯ ಕಸ್ತೂರಿ ಮಾಸಪತ್ರಿಕೆಯನ್ನು ಆರಂಭಿಸಿದಾಗ (1965) ಇವರು ಅದರ ಸಂಪಾದಕರಾದರು. ಸುಮಾರು 18 ವರ್ಷಗಳ ಕಾಲ ಆ ಪತ್ರಿಕೆಯನ್ನು ವಿಶಿಷ್ಟ ರೀತಿಯಿಂದ ನಡೆಸಿಕೊಂಡು ಬಂದರು. ನೂರಾರು ಲೇಖನಗಳನ್ನು ಬರೆದರು. ಸಂಪಾದಕರಾಗಿ ನಿವೃತ್ತರಾದ (1972) ಮೇಲೆ ವೈಚಾರಿಕ ಲೇಖನಗಳನ್ನು ಬರೆಯುವತ್ತ ಮನಗೊಟ್ಟರು. ರಾಜಕೀಯ ವಿಶ್ಲೇಷಣೆಯಲ್ಲಿಯೂ ಇವರು ಪಳಗಿದ್ದರೆನ್ನುವುದಕ್ಕೆ ಸ್ವತಂತ್ರ ಭಾರತ ಎಂಬ ಇವರ ಗ್ರಂಥ ಸಾಕ್ಷಿಯಾಗಿದೆ.

ಇವರು ಪ್ರಥಮತಃ ಖ್ಯಾತ ನಾಮ ಹರಟೆಗಾರರೆಂದೆ ಪ್ರಸಿದ್ಧರು. ಇವರಷ್ಟು ಹರಟೆಗಳನ್ನು ಬರೆದವರು ಕನ್ನಡದಲ್ಲಿ ಕಡಿಮೆ. ಸುಮಾರು 600 ಹರಟೆಗಳನ್ನು, ವಿಡಂಬನೆಗಳನ್ನು ಇವರು ಬರೆದಿದ್ದಾರೆ. ಯಾರದೆ ಮನನೋಯಿಸದಂಥ ವಿಡಂಬನೆಯ ಮೊನಚುಳ್ಳ, ಜೊತೆಗೆ ಇವರ ವಿಸ್ತಾರಿತವಾದ ವಾಚನದ ಹಿನ್ನೆಲೆಯುಳ್ಳ ಹರಟೆಗಳು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯೆನಿಸಿದೆ.

ಆಚಾರ್ಯರು 1992 ಏಪ್ರಿಲ್ 8ರಂದು ನಿಧನರಾದರು. ಇವರ ನಿಧನಾನಂತರ ವಿಶ್ವಸ್ಥ ಸಮಿತಿ ಇವರ ಸಮಗ್ರ ಬರೆವಣಿಗೆಯನ್ನು ಪ್ರಕಟಿಸುವ ಯೋಜನೆಯನ್ನೆತ್ತಿಕೊಂಡು ಶ್ರೀನಿವಾಸ ಹಾವನೂರರ ಸಂಪಾದಕತ್ವದಲ್ಲಿ ಉಡುಪಿಯ ಪರಿಸರದಲ್ಲಿ ಆಯ್ದ ಲಲಿತ ಪ್ರಬಂಧಗಳು, ಇವರೇ ಲಾಂಗೂಲಾಚಾರ್ಯರು, ಬ್ರಾಹ್ಮಣರೇನು ಮಾಡಬೇಕು, ಮತ್ತಿತರ ಚಿಂತನ ಪ್ರಬಂಧಗಳು ಚಿತ್ರ–ವಿಚಿತ್ರ ಈ ಜಗತ್ತು, ಹಿಂದೂ–ಮುಸ್ಲಿಮ್ ಹಾಗೂ ಇತರ ಕತೆಗಳು, ಪಾವೆಂ ಸಮಗ್ರ ಕವನಗಳು, ಲೋಕವಿಖ್ಯಾತರು ತುಳು ಬಯ್ಯ ಮಲ್ಲಿಗೆ –ಈ ಮೊದಲಾದ ಕೃತಿಗಳನ್ನು ಹೊರತರಲಾಗಿದೆ (1999–2002). (ಎಸ್.ಎಚ್.)

**ಆಚಾರ್ಯ, ಎಂ.ಟಿ.ವಿ.:** 1920–92. ಜಲವರ್ಣ ಚಿತ್ರಕಲಾವಿದ. ಚಂದಮಾಮದ ಆಚಾರ್ಯ ಎಂದೇ ಪ್ರಸಿದ್ಧರಾಗಿದ್ದವರು. 1920 ಜುಲೈ 28ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಎಂ.ಟಿ. ನಾರಾಯಣಯ್ಯಂಗಾರ್, ತಾಯಿ ಸಿಂಗಮ್ಮಾಳ್. ತಂದೆ ಶಿರಸ್ತೇದಾರರಾಗಿದ್ದರು. ಇದರಿಂದಾಗಿ ಆಚಾರ್ಯರು ಬಾಲ್ಯದಲ್ಲೆ ಹಲವಾರು ಊರು, ಅಲ್ಲಿಯ ಸುಂದರ ಪರಿಸರಗಳನ್ನು ನೋಡಲು ಸಾಧ್ಯವಾಯಿತು. ಇವರ ಕಲಾಕೃತಿಗಳಿಗೆ ಮೂಲ ಚೇತನ ಪ್ರಕೃತಿ. ಪ್ರಕೃತಿ ಪರಿಸರಗಳೇ ಇವರಲ್ಲಿ ಸುಪ್ತವಾಗಿದ್ದ ಕಲೆಗೆ ಪ್ರೇರಣೆ ನೀಡಿದವು. ಎಸ್.ಎಸ್.ಎಲ್.ಸಿ. ಪಾಸಾಗಿ ಮೈಸೂರಿನ ಶ್ರೀ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಡಿಪ್ಲೊಮಾದಲ್ಲಿ ತೇರ್ಗಡೆಯಾದರು (1940). ಅನಂತರ ಸ್ವತಂತ್ರ ಕಲಾವಿದರಾಗಿ ಜೀವನ ನಿರ್ವಹಣೆ ಪ್ರಾರಂಭಿಸಿದರು. ಜಯಚಾಮರಾಜ ಒಡೆಯರ್ ಆಪ್ತ ಕಾರ್ಯದರ್ಶಿ ಸರ್ ಚಾರಲ್ಸ್ ಟಾಡ್ ಹಂಟ್‌ರವರು ಇವರನ್ನು ಕರೆಯಿಸಿ ಮಹಾರಾಜರ ಗ್ರೀಟಿಂಗ್ ಕಾರ್ಡ್ ರಚಿಸಲು ನೇಮಿಸಿದ್ದು ಇವರ ಪ್ರತಿಭೆಗೆ ನಿದರ್ಶನ.



ಇವರು ಬೆಂಗಳೂರಿನ ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಟ್ರೇಸರ್ ಆಗಿ ನೇಮಕಗೊಂಡಿದ್ದು 1942ರಲ್ಲಿ. ಆಗ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಅಮೆರಿಕನ್ ಅಧಿಕಾರಿಗಳು ಇವರ ಕಲಾಕೃತಿಗಳಿಗೆ ಮಾರು ಹೋಗಿ ಹಲವು ಚಿತ್ರಗಳನ್ನು ಖರೀದಿಸಿದರು. ದಕ್ಷಿಣ ಭಾರತದ ಪ್ರಕೃತಿ ರಮ್ಯ ದೃಶ್ಯಗಳನ್ನು ತಮ್ಮ ಕುಂಚದಿಂದ ಸೆರೆಹಿಡಿದುಕೊಡುವಂತೆ ಆಚಾರ್ಯರನ್ನು ಕೇಳಿಕೊಂಡರು. ಸ್ವತಂತ್ರಜೀವನ ನಡೆಸಬೇಕೆಂಬುದು ಇವರ ಆಸೆಯಾಗಿತ್ತು. ಕೆಲಸಕ್ಕೆ ರಾಜೀನಾಮೆ ನೀಡಿ ಕಲಾಕೃತಿಗಳನ್ನು ರಚಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1945ರಲ್ಲಿ ಖ್ಯಾತ ವಕೀಲ ಹಾಗೂ ನಿವೃತ್ತ ನ್ಯಾಯಾಧೀಶರಾಗಿದ್ದ ಶ್ರೀನಿವಾಸ ಅಯ್ಯಂಗಾರರ ಆಹ್ವಾನದ ಮೇರೆಗೆ ಮದರಾಸು ಸೇರಿದ ಇವರು ಅಲ್ಲಿ ಸ್ವಪ್ರಯತ್ನದಿಂದ ಪ್ರಬುದ್ಧ ಕಲಾವಿದರಾಗಿ ರೂಪುಗೊಂಡರು. ಮದರಾಸಿನಲ್ಲಿದ್ದಾಗ ಚಿತ್ರರಂಗದ ಸಂಪರ್ಕವೂ ಬಂತು. ಕಾರ್ಟೂನ್ ಚಿತ್ರಗಳ ತಯಾರಿಕೆಯಲ್ಲಿ ಸಹಾಯಕರಾಗಿಯೂ ಕೆಲಸ ಮಾಡಿದರು. ಆರು ಭಾಷೆಗಳಲ್ಲಿ ಪ್ರಕಟ ಗೊಳ್ಳುತ್ತಿದ್ದ ಚಂದಮಾಮ ಪತ್ರಿಕೆಯ ಕಲಾ ಸಂಪಾದಕರಾಗಿ ಅದಕ್ಕೊಂದು ರೂಪಕೊಟ್ಟರು (1947). ಚಂದಮಾಮ ಪತ್ರಿಕೆಯ ಮುಖಪುಟಗಳನ್ನು ಮಹಾಭಾರತಮಾಲೆಯ ಚಿತ್ರಗಳು ಅಲಂಕರಿಸಿದುವು (1947–53). ಆಚಾರ್ಯರು ರಚಿಸಿದ ಈ ಚಿತ್ರಗಳು ಜನಮನವನ್ನು ಸೂರೆಗೊಂಡವು. ಕೆಲ ಕಾಲದ ಬಳಿಕ ಇವರು ಚಂದಮಾಮ ತ್ಯಜಿಸಿ ಬೆಂಗಳೂರಿಗೆ ಮರಳಿ ಸ್ವತಂತ್ರ ಸ್ಟುಡಿಯೋ ಪ್ರಾರಂಭಿಸಿದರು. ಅನಂತರ ಮದನಪಲ್ಲಿ ಸಮೀಪ ಋಷಿವ್ಯಾಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಕಲಾಶಿಕ್ಷಕರಾಗಿ ನೇಮಕಗೊಂಡರು.

ಚಂದಮಾಮ ಮಾಲೀಕರಿಂದ ಪುನಃ ಕರೆ ಬಂದಾಗ (1957) ಮದರಾಸಿಗೆ ತೆರಳಿದರು. ಅಲ್ಲಿ 1963ರವರೆಗೂ ಕಾರ್ಯನಿರ್ವಹಿಸಿ ಮಹಾಭಾರತ ಸರಣಿಯ 80 ಕಲಾಕೃತಿಗಳನ್ನು ಪೂರೈಸಿದರು. ಅನಂತರ ತಾಯಿನಾಡು ಪತ್ರಿಕೆ ಬಳಗದ ಪ್ರಧಾನ ಕಲಾವಿದರಾದರು. ಈ ಪತ್ರಿಕಾ ಬಳಗ ಪ್ರಕಟಿಸುತ್ತಿದ್ದ ಗೋಕುಲ, ಕೈಲಾಸ ಪತ್ರಿಕೆಗಳಲ್ಲಿ ಇವರ ಬಹುತೇಕ ಚಿತ್ರಗಳು ಪ್ರಕಟವಾದವು. ವೃತ್ತಿಯಿಂದ ನಿವೃತ್ತರಾದ ಬಳಿಕ (1965) ಬೆಂಗಳೂರಿನಲ್ಲಿ ವಾಣಿಜ್ಯ ಕಲೆಯ ಸ್ಟುಡಿಯೋ ಆರಂಭಿಸಿದರು. ತಾವು ರಚಿಸಿದ ಮಹಾಭಾರತ ಸರಣಿ ಚಿತ್ರಗಳನ್ನು ಪ್ರದರ್ಶಿಸಿದರು. ಆಚಾರ್ಯ ಚಿತ್ರಕಲಾಭವನ ಮತ್ತು ಅಂಚೆ ಶಿಕ್ಷಣ ಆರಂಭಿಸಿದರು. ಭಾರತೀಯ ಕಲೆಯ ಏಕೈಕ ಅಂಚೆ ಶಿಕ್ಷಣ ಪದ್ಧತಿ ಪ್ರಾರಂಭಿಸಿ ಇತಿಹಾಸ ನಿರ್ಮಿಸಿದರು. ಇವರು ರಚಿಸಿದ ಪ್ರಮುಖ ಕಲಾಕೃತಿಗಳಿವು: ಹಳ್ಳಿಯ ಬಡ ಉಪಾಧ್ಯಾಯ, ಸಮುದ್ರ ಗುಪ್ತನ ಆಸ್ಥಾನ, ವಸಂತ ಋತು, ಗದಾಯುದ್ಧ, ಗೃಹಲಕ್ಷ್ಮೀ, ದೀಪಾವಳಿಯ ಅಳಿಯ, ಗೀತೋಪದೇಶ, ಅಂದಿನ ಕೂಳು, ದುಶ್ಶಾಸನ ವಧೆ, ಅಶ್ವತ್ಥಾಮ ಶಿವನಿಂದ ಅಜೇಯ ಖಡ್ಗ ಪಡೆದುದು, ಮುಗ್ಧ ಪ್ರೇಮಿಗಳು, ಬಾಳಿನ ಸಂಜೆ, ಮರಕುಟುಕ, ಭಿಕ್ಷುಕಿ. ಇವರು ಜಲವರ್ಣದಲ್ಲಿಯಷ್ಟೇ ಅಲ್ಲ ನವ್ಯಶೈಲಿಯ ಕಲಾಕೃತಿಗಳನ್ನೂ ರಚಿಸಿದರು. ಅವುಗಳಲ್ಲಿ ಮುಖ್ಯವಾದವು ಮಿನುಗುಗಳು, ಸಂಕೇತಗಳು, ಪ್ರಕೃತಿ ಮತ್ತು ಸೃಷ್ಟಿ.

ಆಚಾರ್ಯರ ಕಲಾಕೃತಿಗಳು ಮೈಸೂರು ಸಂಪ್ರದಾಯಕ್ಕೆ ಅಸ್ತಿತ್ವವನ್ನು ಕಲ್ಪಿಸಿಕೊಟ್ಟವು. ಸಂಯೋಗ ಚಿತ್ರರಚನೆಯಲ್ಲಿ ಒಂದು ಪ್ರಮುಖವಾದ ಸ್ಥಾನವನ್ನು ಇವರು ಗಳಿಸಿಕೊಂಡಿದ್ದರು. ದೇಶ ವಿದೇಶಗಳಲ್ಲಿ ಇವರ ಕಲಾ ಕೃತಿಗಳು ಅನೇಕ ಕಲಾರಸಿಕರ ಕೈಸೇರಿದವು. ಇವರ ಏಕವ್ಯಕ್ತಿ ಚಿತ್ರ ಪ್ರದರ್ಶನ ಕರ್ನಾಟಕದ ಪ್ರಮುಖ ನಗರಗಳಲ್ಲಿ ನಡೆದು ಜನತೆಯ ಪ್ರಶಂಸೆ ಗಳಿಸಿತು. ಕರ್ನಾಟಕದ ಸಾಂಸ್ಕೃತಿಕ ನಿಯೋಗದ ಪ್ರಮುಖರಾಗಿ ಇವರು ರಷ್ಯಕ್ಕೆ ಭೇಟಿ ನೀಡಿದರು (1974). ಇವರ ಕಲಾಸಾಧನೆಗೆ ಹಲವು ಗೌರವ ಪ್ರಶಸ್ತಿಗಳು ದೊರಕಿವೆ. ಇವುಗಳಲ್ಲಿ ಮುಖ್ಯವಾದವು ಮೈಸೂರು ದಸರಾ ಪ್ರದರ್ಶನದ ಸುವರ್ಣ

ಪದಕ (1954), ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1980) ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1989). ಕಲೆ ಮತ್ತು ನಾನು (1985) ಎಂಬ ಪುಸ್ತಕ ಆಚಾರ್ಯರ ಆತ್ಮಕಥಾ ರೂಪದ ಬರೆವಣಿಗೆ. ಇವರು 1992ರಲ್ಲಿ ನಿಧನರಾದರು. (ಆರ್.ಜಿ.ಆರ್.)

**ಆಜಮ್‌ಗಢ :** ಉತ್ತರ ಪ್ರದೇಶದ ಒಂದು ಜಿಲ್ಲೆ ಮತ್ತು ಮುಖ್ಯ ಪಟ್ಟಣ. ಕಾಶಿಯಿಂದ (ವಾರಾಣಸಿ) 85 ಕಿಮೀ ದೂರದಲ್ಲಿದೆ. ಟಾನ್ಸ್ ಉಪನದಿಯ ದಡದಲ್ಲಿರುವುದರಿಂದ ಆಗಾಗ್ಗೆ ಪ್ರವಾಹಕ್ಕೆ ತುತ್ತಾಗುತ್ತದೆ. ಜನಸಾಂದ್ರತೆ ಹೆಚ್ಚು. ಇಲ್ಲಿ ಬಹುಜನ ವ್ಯವಸಾಯದಿಂದ ಜೀವಿಸುತ್ತಾರೆ. 1665ರಲ್ಲಿ ಮೊಗಲರ ಸಾಮಂತ ಆಜಂಖಾನ್ ಈ ನಗರ ಸ್ಥಾಪಿಸಿದ. ಅದಕ್ಕೂ ಪೂರ್ವದಲ್ಲಿ ಈ ಪ್ರದೇಶ ರಜಪೂತರ ವಶದಲ್ಲಿತ್ತು. ಈಗ ಇಲ್ಲಿ ಒಂದು ಪುರಾತನ ಕೋಟೆಯೂ ಒಂದು ಕಲಾಭವನವೂ ಎರಡು ಕಾಲೇಜುಗಳೂ ಇವೆ. ಜಿಲ್ಲೆಯ ವಿಸ್ತೀರ್ಣ. 4054 ಚ.ಕಿಮೀ. ಜನಸಂಖ್ಯೆ: 39,39,916.(2001) (ಎಸ್.ಎಸ್.)

**ಆಝೋ ಸಂಯುಕ್ತಗಳು :** ಆಝೋ ಗುಂಪಿನ (-N=N-) ಸಹಾಯದಿಂದ ಜೋಡಿಸಲ್ಪಟ್ಟ ಎರಡು ಬೆಂಜೀನ್ (ಆರೋಮ್ಯಾಟಿಕ್) ಚಕ್ರಗಳನ್ನುಳ್ಳ ಸಂಯುಕ್ತ ವಸ್ತುಗಳು. ಇವುಗಳ ಬಣ್ಣ ಸಾಮಾನ್ಯವಾಗಿ ಹಳದಿ ಅಥವಾ ಕೆಂಪು. ಸ್ಫಟಿಕಾಕಾರ. ಇವು ಡೈಆಝೋ ಸಂಯುಕ್ತಗಳಿಗಿಂತ ಹೆಚ್ಚು ಸ್ಥಿರ. ಆಸವನ (ಡಿಸ್ಟಿಲೇಷನ್) ಹೊಂದುವಾಗ ವಿಭಜನೆಗೊಳ್ಳುವುದಿಲ್ಲ. ಆಝೋ ಬಣ್ಣಗಳಲ್ಲನೇಕವು ವ್ಯಾವಹಾರಿಕವಾಗಿ ಈ ಗುಂಪಿಗೇ ಸೇರಿವೆ. ಆಝೋ ಸಂಯುಕ್ತಗಳನ್ನು ಸಾಮಾನ್ಯವಾಗಿ ತಯಾರಿಸುವ ಕ್ರಮಗಳು: 1 ಆರೋಮ್ಯಾಟಿಕ್ ನೈಟ್ರೋ ಸಂಯುಕ್ತಗಳನ್ನು ಸೋಡಿಯಂ ರಸಮಿಶ್ರಣದಿಂದ ಅಥವಾ ಪ್ರತ್ಯಾಮ್ಲೀಯ ಸ್ಟಾನಸ್ ಕ್ಲೋರೈಡ್ ದ್ರಾವಣದೊಡನೆ ಅಪಕರ್ಷಿಸುವುದರ ಮೂಲಕ; 2 ಅಜಾಕ್ಸಿ ಸಂಯುಕ್ತಗಳನ್ನು ಕಬ್ಬಿಣದ ಚೂರ್ಣದೊಡನೆ ಅಪಕರ್ಷಿಸುವುದರ ಮೂಲಕ; 3 ಹೈಡ್ರೋಜೋ ಸಂಯುಕ್ತಗಳನ್ನು ಮರ್ಕ್ಯೂರಿಕ್ ಆಕ್ಸೈಡ್ ಅಥವಾ ಸೋಡಿಯಂ ಹೈಪೋಬ್ರೋಮೈಡ್ ಅಥವಾ ಫೆರಿಕ್ ಕ್ಲೋರೈಡ್‌ಗಳಿಂದ ಸಹಜರೀತಿಯಲ್ಲಿ ಉತ್ಕರ್ಷಿಸುವುದರ ಮೂಲಕ; 4 ಡೈಆಝೋ ಸಂಯುಕ್ತಗಳನ್ನು ಆರೋಮ್ಯಾಟಿಕ್ ಅಮೀನ್ ಅಥವಾ ಫೀನಾಲ್‌ಗಳ ಸಂಗಡ ಕೂಡಿಸಿ ಆಝೋ ಬಣ್ಣಗಳನ್ನು ತಯಾರಿಸುವುದರ ಮೂಲಕ.

ಮೇಲೆ ತಿಳಿಸಿದ ನೈಟ್ರೋಸಂಯುಕ್ತಗಳ ಅಪಕರ್ಷಣವನ್ನು ಹಂತ ಹಂತವಾಗಿ ಮುಂದುವರಿಸಿದರೆ. ಈ ಕೆಳಕಂಡ ಸಂಯುಕ್ತಗಳು ಹುಟ್ಟುವುವು:

**1 ಆಝೋಕ್ಸಿ ಬೆಂಜೀನ್:** ನೈಟ್ರೋಬೆಂಜೀನನ್ನು ಮೆಥನಾಲ್‌ನಲ್ಲಿ ವಿಲೀನಗೊಳಿಸಿ ಸೋಡಿಯಂ ಮಿಥಾಕ್ಸೈಡ್‌ನೊಡನೆ ಬಹಳ ಹೊತ್ತು ಕುದಿಸಿದರೆ, ಆಝೋಕ್ಸಿಬೆಂಜೀನ್ ಉತ್ಪತ್ತಿಯಾಗುತ್ತದೆ. ಅನಂತರ ಅದರಲ್ಲಿರುವ ಆಲ್ಕೋಹಾಲ್‌ನ್ನು ನೀರಿನ ಹಬೆಯ ಮೇಲೆ ಕಾಯಿಸಿ ಆಸವನದಿಂದ ತೆಗೆದುಬಿಟ್ಟರೆ ಆಝೋಕ್ಸಿ ಬೆಂಜೀನ್ ತೈಲರೂಪದಲ್ಲಿ ಹೊರಬಂದು, ಕ್ರಮೇಣ ಘನೀಭವಿಸುತ್ತದೆ. ಅನಂತರ ಇದನ್ನು ಪೆಟ್ರೋಲಿಯಂ ಈಥರ್ ಮೊದಲಾದ ದ್ರವಗಳಲ್ಲಿ ವಿಲೀನಗೊಳಿಸಿ ಆರುವುದಕ್ಕೆ ಬಿಟ್ಟರೆ ಶುದ್ಧವಾದ ಸ್ಫಟಿಕಾಕಾರದ ಆಝೋಕ್ಸಿ ಬೆಂಜೀನ್ ದೊರೆಯುತ್ತದೆ.

$$4C_6H_5NO_2 + 3CH_3ONa \rightarrow 2C_6H_5N(O) = N—C_6H_5 + 3HCOONa + 3H_2O$$

ಆಝೋಕ್ಸಿ ಬೆಂಜೀನಿನ ಬಣ್ಣ ತಿಳಿಹಳದಿ. ಇದರ ಕರಗುವ ಬಿಂದು $36^0$ಸೆಂ.ಗ್ರೇ. ಇದು ನೀರಿನಲ್ಲಿ ಕರಗುವುದಿಲ್ಲ. ಸೇಂದ್ರಿಯ ದ್ರವಗಳಾದ ಈಥರ್, ಆಲ್ಕೋಹಾಲ್‌ಗಳಲ್ಲಿ ಕರಗುತ್ತದೆ. ಪ್ರಬಲ ಸಲ್ಫ್ಯೂರಿಕ್ ಆಮ್ಲದ ಜೊತೆಯಲ್ಲಿ ಬಿಸಿಮಾಡಿದರೆ ಪ್ಯಾರ (P) ಹೈಡ್ರಾಕ್ಸಿ ಬೆಂಜೀನ್ ಎಂಬ ಐಸೋಮರ್ ಆಗಿ ಪರಿವರ್ತನೆ ಹೊಂದುತ್ತದೆ.

$$C_6H_5N(O)=N—C_6H_5 \xrightarrow{\text{ಪ್ರಬಲ } H_2SO_4} C_6H_5N=NC_6H_4\,OH$$

**ಆಝೋ ಬೆಂಜೀನ್** ($C_6H_5N=N—C_6H_5$): ಆಝೋಕ್ಸಿ ಬೆಂಜೀನನ್ನು ಅದರ ಪ್ರಮಾಣದ ಮೂರರಷ್ಟು ಕಬ್ಬಿಣದ ಚೂರ್ಣದೊಡನೆ ಆಸವನಗೊಳಿಸಿದರೆ ಆಝೋ ಬೆಂಜೀನ್ ಉತ್ಪತ್ತಿಯಾಗುತ್ತದೆ.

$$C_6H_5N(O)=N\text{-}C_6H_5+Fe \longrightarrow C_6H_5N=NC_6H_5+FeO$$

ಇನ್ನೂ ಸುಲಭ ವಿಧಾನವೆಂದರೆ, ನೈಟ್ರೋ ಬೆಂಜೀನನ್ನು ಸತುವಿನ ಚೂರ್ಣ ಮತ್ತು ಕಾಸ್ಟಿಕ್ ಸೋಡ ಅಥವಾ ಪ್ರತ್ಯಾಮ್ಲೀಯ ಸ್ಟಾನಸ್ ಕ್ಲೋರೈಡ್ ದ್ರಾವಣದೊಡನೆ ಅಪಕರ್ಷಿಸಿ ಆಝೋ ಬೆಂಜೀನನ್ನು ಪಡೆಯಬಹುದು.

$$2C_6H_5NO_2+8H \rightarrow C_6H_5N=NC_6H_5+4H_2O$$

ಇದನ್ನು ಪೆಟ್ರೋಲಿಯಂ ಈಥರ್‌ನಲ್ಲಿ ವಿಲೀನಗೊಳಿಸಿ ಅನಂತರ ಸ್ಫಟಿಕೀಕರಿಸಿ ಶುದ್ಧಿಗೊಳಿಸಬಹುದು. ಇದರ ಬಣ್ಣ ಕಿತ್ತಲೆಗೆಂಪು. ಕರಗುವ ಬಿಂದು $68^0$ ಸೆಂ.ಗ್ರೇ. ಇದು ನೀರಿನಲ್ಲಿ ಕರಗುವುದಿಲ್ಲ. ಈಥರ್, ಆಲ್ಕೋಹಾಲ್ ಮುಂತಾದ ಸೇಂದ್ರಿಯ ದ್ರವಗಳಲ್ಲಿ ಕರಗುತ್ತದೆ. ಇದಕ್ಕೆ ಬಣ್ಣವಿದ್ದರೂ ಸಹ ಇದರಿಂದ ಬಟ್ಟೆಗೆ ಬಣ್ಣ ಬರುವುದಿಲ್ಲ.

**ರಾಸಾಯನಿಕ ಕ್ರಿಯೆಗಳು :** i. ಅಮೋನಿಯಂ ಸಲ್ಫೈಡ್ ಅಥವಾ ಸತುವಿನ ಚೂರ್ಣ ಮತ್ತು ಕಾಸ್ಟಿಕ್ ಸೋಡ ಮಿಶ್ರಣದಿಂದ ಆಝೋ ಬೆಂಜೀನನ್ನು ಅಪಕರ್ಷಿಸಿದರೆ ಹೈಡ್ರಜೋ ಬೆಂಜೀನ್ ದೊರಕುತ್ತದೆ.

$$C_6H_5—N=N.C_6H_5+2H \rightarrow C_6H_5\text{-}NH\text{-}NH\text{-}C_6H_5$$

$$C_6H_5—N=N\text{-}C_6H_5+2H \rightarrow C_6H_5\text{-}NH\text{-}NH\text{-}C_6H_5$$ ಹೈಡ್ರಜೋ ಬೆಂಜೀನ್,

ii.ಸತುವಿನ ಚೂರ್ಣ ಮತ್ತು ಅಸಿಟಿಕ್ ಆಮ್ಲ ಅಥವಾ ಸ್ಟಾನಸ್ ಕ್ಲೋರೈಡ್ ಮತ್ತು ಹೈಡ್ರೊಕ್ಲೋರಿಕ್ ಅಮ್ಲ ಮೊದಲಾದ ಆಮ್ಲಗಳ ಅಪಕರ್ಷಣದಿಂದ ಆಝೋ ಬೆಂಜೀನ್ ಅನಿಲೀನನ್ನು ಕೊಡುತ್ತದೆ.

$$C_6H_5—N=N—C_6H_5+4H \rightarrow 2C_6H_5NH_2$$

ಹೈಡ್ರೋಜನ್ ಪರಾಕ್ಸೈಡ್ ಮತ್ತು ಗೇಸಿಯಸ್ ಅಸಿಟಿಕ್ ಆಮ್ಲ ಮಿಶ್ರಣದಿಂದ ಆಝೋ ಬೆಂಜೀನನ್ನು ಉತ್ಕರ್ಷಿಸಿದರೆ ಆಝೋಕ್ಸಿ ಬೆಂಜೀನ್ ದೊರೆಯುತ್ತದೆ.

$$C_6H_5N=NC_6H_5+O \rightarrow C_6H_5N(O)=N—C_6H_5$$

**ಹೈಡ್ರೋಜೊ ಬೆಂಜೀನ್ :** ($C_6H_5NH—NHC_6H_5$) : ಆಝೋ ಬೆಂಜೀನನ್ನು ಪ್ರತ್ಯಾಮ್ಲೀಯದ ಅಪಕರ್ಷಣದಿಂದ ಅಥವಾ ನೈಟ್ರೋ ಬೆಂಜೀನನ್ನು ಸತುವಿನ ಚೂರ್ಣ ಮತ್ತು ಬಿಸಿ ಸೋಡಿಯಮ್ ಹೈಡ್ರಾಕ್ಸೈಡ್‌ಗಳ ಕ್ರಿಯೆಯಿಂದ ನೇರವಾಗಿ ಅಪಕರ್ಷಿಸಿ ತಯಾರಿಸಬಹುದು. ದ್ರಾವಣ ವರ್ಣರಹಿತವಾಗುವಂತೆ ಕಾಯಿಸಿ ಅನಂತರ ಅದನ್ನು ಸೋಸಿದರೆ ವರ್ಣರಹಿತ, ಸ್ಫಟಿಕರೂಪದ ಹೈಡ್ರೋಜೊ ಬೆಂಜೀನ್ ಉತ್ಪತ್ತಿಯಾಗುತ್ತದೆ. ಇದರ ಕುದಿಯುವ ಬಿಂದು $131^0$ ಸೆಂ.ಗ್ರೇ.

$$C_6H_5—N=N—C_6H_5+2H \rightarrow C_6H_5—NH—NH—C_6H_5$$

**ರಾಸಾಯನಿಕ ಕ್ರಿಯೆಗಳು :** i ಪಾದರಸ ಭಸ್ಮ, ಸೋಡಿಯಂ ಹೈಪೋ ಬ್ರೋಮೈಟ್, ಫೆರಿಕ್ ಕ್ಲೋರೈಡ್‌ಗಳ ಜೊತೆ ಉತ್ಕರ್ಷಣ ಹೊಂದಿದರೆ ಆಝೋ ಬೆಂಜೀನ್ ಉತ್ಪತ್ತಿಯಾಗುತ್ತದೆ. ಇದನ್ನು ಹೊರಗಿನ ಗಾಳಿಗಿಟ್ಟರೆ ನಿಧಾನವಾಗಿ ಉತ್ಕರ್ಷಣೆ ಹೊಂದಿ ಕಿತ್ತಲೆಗೆಂಪಿನ ಬಣ್ಣಕ್ಕೆ ತಿರುಗಿ ಆಝೋ ಬೆಂಜೀನ್ ಆಗಿ ಪರಿವರ್ತಿತವಾಗುತ್ತದೆ.

$$C_6H_5—NH—NH—C_6H_5+O \rightarrow C_6H_5—N=N—C_6H_5+H_2O$$

ii. ಸ್ಟಾನಸ್ ಕ್ಲೋರೈಡ್ ಮತ್ತು ಹೈಡ್ರೊಕ್ಲೋರಿಕ್ ಆಮ್ಲ ಅಥವಾ ಸೋಡಿಯಂ ರಸಮಿಶ್ರಣಗಳಿಂದ ಪ್ರಬಲರೀತಿಯಲ್ಲಿ ಅಪಕರ್ಷಣ ಹೊಂದಿ ಅನಿಲಿನ್ ಉತ್ಪತ್ತಿಯಾಗುತ್ತದೆ.

$$C_6H_5NH—NHC_6H_5+2H \rightarrow 2C_6H_5—NH_2$$

iii. ಹೈಡ್ರಜೊ ಬೆಂಜೀನನ್ನೇ ಕಾಯಿಸಿದರೆ ಆಝೋ ಬೆಂಜೀನ್ ಮತ್ತು ಅನಿಲಿನ್ ಹೊರಬರುತ್ತವೆ. ಈ ಕ್ರಿಯೆಯಲ್ಲಿ ಒಂದು ಹೈಡ್ರಜೊ ಬೆಂಜೀನ್ ಅಣು ತನ್ನ ಎರಡು ಹೈಡ್ರೋಜನ್ ಅಣುಗಳನ್ನು ತೊರೆದು ಮತ್ತೊಂದು ಹೈಡ್ರಜೊ ಅಣುವಿಗೆ ರವಾನಿಸಿಕೊಡುತ್ತದೆ.

$$\begin{matrix} C_6H_5\,NH & HN\text{-}C_6H_5 \\ | & | \\ C_6H_5\,NH & HN\text{-}C_6H_5 \end{matrix} \longrightarrow \begin{matrix} C_6H_5—N \\ \| \\ C_6H_5—N \end{matrix} + \begin{matrix} H_2N\text{-}C_6H_5 \\ \\ H_2N\text{-}C_6H_5 \end{matrix}$$

iv. ಹೈಡ್ರಜೋಬೆಂಜೀನನ್ನು ಸಾಧಾರಣ ಪ್ರಬಲ ಕ್ಲೋರಿಕ್ ಆಮ್ಲದ ಜೊತೆ ಕಾಯಿಸಿದರೆ ಅದರ ಅಣುಗಳ ಅನಂತರ ರಚನೆಯಲ್ಲಿ ಬದಲಾವಣೆ ಕಂಡುಬಂದು ಹೊರಗಿನ ಎರಡು ಬೆಂಜೀನ್ ಚಕ್ರಗಳು ಮೊದಲಿದ್ದ ಸ್ಥಳದಿಂದ ಎದುರಿನ (p) ಸ್ಥಳಕ್ಕೆ ಹೊರಳಿ p-p′ ಡೈಅಮೈನೊಡೈಫೀನೈಲ್ ಅಥವಾ ಬೆಂಜಿಡಿನ್ ಆಗಿ ಪರಿವರ್ತಿಸಿಕೊಳ್ಳುತ್ತದೆ. ಈ ಬದಲಾವಣೆಗೆ ಬೆಂಜಿಡಿನ್ ರೂಪಾಂತರ ಎಂದು ಹೆಸರು.

ಹೈಡ್ರಜೊ ಬೆಂಜೀನಿನ ಎರಡು (p) ಸ್ಥಾನಗಳೂ ತೆರವಾಗಿದ್ದರೆ (H ಮಾತ್ರ ಇದ್ದಾಗ) ಈ ಬಗೆಯ ಪರಿವರ್ತನೆ ಸಾಧ್ಯವಾಗುತ್ತದೆ. ಒಂದೇ ಒಂದು ಸ್ಥಾನ ತೆರವಾಗಿದ್ದರೆ, ಹಿಂದಿನ ಪರಿವರ್ತನೆಯ ಅರ್ಧಭಾಗದ ಪರಿವರ್ತನೆ ಮಾತ್ರ ಸಾಧ್ಯ. ಈ ರೀತಿಯ ಬದಲಾವಣೆಗೆ ಸೆಮಿ ಬೆಂಜಿಡಿನ್ ಅಥವಾ ಸೆಮಿಡಿನ್ ಪರಿವರ್ತನೆ ಎಂದು ಹೆಸರು.



ಆಝೋಬೆಂಜೀನನ್ನು ತವರ ಮತ್ತು ಪ್ರಬಲ ಹೈಡ್ರೋಕ್ಲೋರಿಕ್ ಆಮ್ಲದಿಂದ ಅಪಕರ್ಷಿಸಿ ನೇರವಾಗಿ ಬೆಂಜಿಡಿನನ್ನು ಪಡೆಯಬಹುದು. ಈ ಕ್ರಿಯೆಯಲ್ಲಿ ಮೊದಲು ಉಂಟಾಗುವ ಹೈಡ್ರಜೊ ಬೆಂಜೀನ್ ಅನಂತರ ಬೆಂಜಿಡಿನ್ ಆಗಿ ಪರಿವರ್ತನೆ ಹೊಂದುತ್ತದೆ.

ಬೆಂಜಿಡಿನ್ ವರ್ಣರಹಿತವಾದ, ಸ್ಫಟಿಕರೂಪಿ; ನೀರಿನಲ್ಲಿ ವಿಲೀನವಾಗದ ಸಂಯುಕ್ತ ವಸ್ತು. ಇದರ ಕುದಿಯುವ ಬಿಂದು $127^0$ ಸೆಂ. ಗ್ರೇ. ಆದರೆ ದುರ್ಬಲ ಹೈಡ್ರೊಕ್ಲೋರಿಕ್ ಆಮ್ಲದಲ್ಲಿ ವಿಲೀನವಾಗಿ ಬೆಂಜಿಡಿನ್ ಹೈಡ್ರೊಕ್ಲೋರೈಡ್ ಆಗಿ ಪರಿವರ್ತಿತಗೊಳ್ಳುತ್ತದೆ. ಬೆಂಜಿಡಿನ್ ಉಪಯೋಗ ಮುಖ್ಯವಾಗಿ ಬಣ್ಣಗಳ ತಯಾರಿಕೆಯಲ್ಲಿ ಹೆಚ್ಚು.

**ಆಜ಼ೊ ಬಣ್ಣಗಳು :** ಸಾಮಾನ್ಯವಾಗಿ ನೂಲು ಬಟ್ಟೆಗಳಿಗೆ ಹಾಕಿದ ಬಣ್ಣ ಒಗೆತ, ಬಿಸಿಲುಗಳಿಂದಾಗುವ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಕೆಲವು ಬಣ್ಣವುಳ್ಳ ರಾಸಾಯನಿಕ ದ್ರವ್ಯಗಳು ಬಟ್ಟೆಯ ಮೇಲೆ ಬಿದ್ದರೆ ಅದರ ಬಣ್ಣ ಬಟ್ಟೆಗೆ ಅಂಟಿಕೊಳ್ಳುವುದಿಲ್ಲ. ಉದಾಹರಣೆಗೆ, ಕಿತ್ತಲೆಗೆಂಪು ಬಣ್ಣದ ಆಜ಼ೊ ಬೆಂಜ಼ೀನ್ ನೂಲಿನ ಬಟ್ಟೆಯ ಮೇಲೆ ಬಿದ್ದರೆ ಬಟ್ಟೆಗೆ ಬಣ್ಣ ಅಂಟುವುದಿಲ್ಲ. ಅಲ್ಲದೆ ರಾಸಾಯನಿಕ ದ್ರವ್ಯದ ಬಣ್ಣವೂ ನೂಲಿನ ಎಳೆಗೆ (ಫೈಬರ್) ಅಂಟುವುದಿಲ್ಲ. ಉದಾಹರಣೆಗೆ, ಹಳದಿ ಬಣ್ಣದ ಪಿಕ್ರಿಕ್‌ಆಮ್ಲ ರೇಷ್ಮೆ, ಉಣ್ಣೆ ಎಳೆಗಳ ಮೇಲೆ ಬಣ್ಣ ಶಾಶ್ವತವಾಗಿ ಉಳಿಯುವಂತೆ ಮಾಡುತ್ತದೆ. ಈ ಎಳೆಗಳಿಗೆ ಮತ್ತೆ ಬೇರೆ ಬಣ್ಣಗಳನ್ನು ಕೊಡುವುದು ಸಾಧ್ಯವಾಗುವುದಿಲ್ಲ. ಈಗಿರುವ ಎಲ್ಲ ಬಣ್ಣದ ಸಾಧನಗಳೂ ಆರೋಮ್ಯಾಟಿಕ್ ಸಂಯುಕ್ತಗಳೇ ಆಗಿವೆ. ಇವುಗಳಲ್ಲಿ ಸುಮಾರು 3–8 ಲಕ್ಷ ಸಂಯುಕ್ತಗಳಿದ್ದು ಇವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಆರೋಮ್ಯಾಟಿಕ್ ಬಣ್ಣಗಳೇ ಆಗಿವೆ.

ಸೇಂದ್ರಿಯ ಸಂಯುಕ್ತಗಳ ಬಣ್ಣಗಳಿಗೂ ಅವುಗಳ ಅಂತರ್‌ರಚನೆಗಳಿಗೂ ಇರುವ ಸಂಬಂಧ ಹೆಚ್ಚು ಕುತೂಹಲಕಾರಿಯಾದ ರಾಸಾಯನಿಕ ವಿಷಯ. ರಾಸಾಯನಿಕ ವಸ್ತುಗಳಿಗೆ ಬಣ್ಣವಿರಬೇಕಾದರೆ ಅವುಗಳಲ್ಲಿ ಕೆಲವು ವಿಶಿಷ್ಟ ಗುಂಪುಗಳಿರಬೇಕೆಂದು ಓಲಿವರ್ ವಿಟ್ ಎಂಬಾತ ಕಂಡುಹಿಡಿದ. ಇಂಥ ವರ್ಣಧಾರಿ ಗುಂಪುಗಳನ್ನು ಕ್ರೋಮೋಫೋರ್ ಎಂಬುದಾಗಿ ಕರೆದ. ಸಾಧಾರಣವಾಗಿ ಇವು ಅಸಂತೃಪ್ತ ಗುಂಪುಗಳು.

ಇವು ಮುಖ್ಯ. ಆಜ಼ೊಬೆಂಜ಼ೀನ್‌ನಲ್ಲಿರುವ ಆಜ಼ೊ (—N=N—) ಗುಂಪು ಇಂಥ ಒಂದು ಕ್ರೋಮೋಫೋರವೇ. ಕ್ರೋಮೋಫೋರುಗಳು ಒಂದೇ ರೀತಿಯ ಸಂಯುಕ್ತಗಳಿಗೆ ಬಣ್ಣವನ್ನು ಬೀರುವುದಿಲ್ಲ. ಉದಾಹರಣೆಗೆ, ಬೆಂಜ಼ೀನ್‌ನಲ್ಲಿ ಮೂರು ಕ್ರೋಮೋಫೋರ ಗುಂಪುಗಳಿದ್ದರೂ ಅದು ವರ್ಣರಹಿತ. ಕ್ರೋಮೋಫೋರವನ್ನು ಹೊಂದಿರುವ ಸಂಯುಕ್ತಗಳಿಗೆ ಕ್ರೋಮೋಜೆನ್ ಎಂದು ಹೆಸರು. ಕ್ರೋಮೋಜೆನ್‌ಗೆ ಬಣ್ಣವಿದ್ದರೂ ಇದನ್ನು ಬೇರೆ ವಸ್ತುಗಳಿಗೆ ಬಣ್ಣಹಾಕುವುದಕ್ಕೆ ಉಪಯೋಗಿಸುವುದಿಲ್ಲ. ಕ್ರೊಮೊಫೋರ್ ಜೊತೆಗೆ ಬಣ್ಣವನ್ನು ಹೆಚ್ಚಿಸುವಂಥ ಬೇರೊಂದು ರಾಸಾಯನಿಕ ಗುಂಪು ಅಗತ್ಯ. ಆ ಗುಂಪಿಗೆ ಆಕ್ಸೊಕ್ರೋಮ್ ಎಂದು ಹೆಸರು. ಇವು ತಾವಾಗಿಯೇ ಬಣ್ಣವನ್ನು ಕೊಡುವುದಿಲ್ಲ. ಆದರೆ ಕ್ರೋಮೋಫೋರವನ್ನು ಹೊಂದಿರುವ ಸಂಯುಕ್ತಗಳ ಬಣ್ಣವನ್ನು ಹೆಚ್ಚಿಸುತ್ತವೆ. ಅಲ್ಲದೆ ಬಣ್ಣ ಎಳೆಗಳಿಗೆ ಅಂಟುವಂತೆ ಮಾಡುತ್ತವೆ.—$NH_2$ OH, NHR, $NR_2$, -COOH, $-HSO_4$ ಇತ್ಯಾದಿಗಳೆಲ್ಲ ಮುಖ್ಯವಾದ ಆಕ್ಸೊಕ್ರೋಮ್ ಗುಂಪುಗಳು. ಇವು ಆಮ್ಲ ಇಲ್ಲವೆ ಪ್ರತ್ಯಾಮ್ಲಗಳಾಗಿದ್ದು ಲವಣಜನಕಗಳು. ಎಳೆಯ ಕಡೆಗೆ ಬಣ್ಣ ಆಕರ್ಷಣಗೊಳ್ಳುವಂತೆ ಇವು ಮಾಡುತ್ತವೆ. ಅಲ್ಲದೆ ಬಣ್ಣಗಳಿಗೆ ಆಮ್ಲ ಅಥವಾ ಪ್ರತ್ಯಾಮ್ಲ ಗುಣಗಳನ್ನು ತಂದು ಕೊಡುತ್ತವೆ. ಆಜ಼ೋಬಣ್ಣಗಳು ಹೆಚ್ಚಾಗಿ ಸಲ್ಫ್ಯೂರಿಕ್ ಆಮ್ಲಗಳು. ಆದ್ದರಿಂದ ಇವನ್ನು ಆಮ್ಲ ಬಣ್ಣಗಳೆಂದು ಕರೆಯುತ್ತಾರೆ. p ಅಮೈನೊ ಆಜ಼ೊ ಬೆಂಜ಼ೀನ್ ಮತ್ತು p ಹೈಡ್ರಾಕ್ಸಿ ಆಜ಼ೊ ಬೆಂಜ಼ೀನ್‌ಗಳಲ್ಲಿ ಸಾಮಾನ್ಯವಾಗಿ ಇರುವ ಆಜ಼ೊ ಗುಂಪು ಕ್ರೋಮೋಫೋರ್ ಆಗಿರುವುದರಿಂದ $NH_2$ ಅಥವಾ OHದಂಥ ಆಕ್ಸೊಕ್ರೋಮುಗಳನ್ನು ಇವು ಹೊಂದಿರುತ್ತವೆ. ಬಣ್ಣಗಳನ್ನು ಲೇಪಿಸಬೇಕಾದರೆ ಅವು ನೀರಿನಲ್ಲಿ ಕರಗುವಂತಿರಬೇಕು. ಈ ಕಾರಣದಿಂದಾಗಿ ಬಣ್ಣಗಳನ್ನು ಸಲ್ಫಾನಿಕ್ ಆಮ್ಲಗಳಾಗಿ ಪರಿವರ್ತಿಸಿದ ಅನಂತರ ಪ್ರತ್ಯಾಮ್ಲ ಲವಣಗಳು ನೀರಿನಲ್ಲಿ ಬಹುಬೇಗ ಕರಗುತ್ತವೆ. ಕೃತಕ ಬಣ್ಣಗಳಲ್ಲಿ ಆಜ಼ೊ ಬಣ್ಣಗಳು ಪ್ರಧಾನವಾಗಿದ್ದು, ಅವನ್ನು ನೂಲು, ರೇಷ್ಮೆ, ಉಣ್ಣೆ, ಕಾಗದ ಮೊದಲಾದ ವಸ್ತುಗಳಿಗೆ ಬಣ್ಣಹಾಕಲು ಉಪಯೋಗಿಸುತ್ತಾರೆ. ಬೇಕಾದ ಛಾಯೆಗಳಲ್ಲಿ ಈ ಬಣ್ಣಗಳು ದೊರೆಯುತ್ತವೆ. ಡಯಜ಼ೊನಿಯಮ್ ಲವಣಗಳು (ಪ್ರೈಮರಿ) ಹಾಗೂ (ಸೆಕೆಂಡರಿ) ಆರೋಮ್ಯಾಟಿಕ್ ಅಮೀನ್‌ಗಳ ಸಂಗಡ ಮೊದಲಿನ ಬಣ್ಣವುಳ್ಳ ಡಯಜ಼ೊ ಅಮೈನೋ ಸಂಯುಕ್ತಗಳಾಗುತ್ತವೆ. ಅನಂತರ ಇವು p ಅಮೈನೋ ಆಜ಼ೊ ಬೆಂಜ಼ೀನ್‌ಗಳಾಗಿ ಪರಿವರ್ತಿತವಾಗಬಲ್ಲುವು. ಟರ್ಷಿಯರಿ ಅಮೀನ್‌ಗಳ ಮತ್ತು ಫೀನಾಲ್‌ಗಳ ಜೊತೆ ಡೈಜ಼ೊನಿಯಂ ಲವಣಗಳು ಆಜ಼ೊ ಬಣ್ಣಗಳನ್ನು ತರುತ್ತವೆ. ಈ ರೀತಿಯ ಜೊತೆಗೂಡಣೆಯ ಕ್ರಿಯೆಗೆ ಕಪ್ಲಿಂಗ್ ಎಂದು ಹೆಸರು. ಈ ಕ್ರಿಯೆಗಳಲ್ಲಿ $-NH_2$ ಅಥವಾ —OHಗಳ ಎದುರಿಗಿರುವ (p) ಪ್ಯಾರಾಸ್ಥಾನದಲ್ಲಿ ಹೈಡ್ರೋಜನ್‌ನ ಹೊರತು ಮತ್ತಾವುದೇ ರ್‍ಯಾಡಿಕಲ್ ಇರಕೂಡದು. ಒಂದು ಪಕ್ಷ ಆ ಸ್ಥಾನ ತುಂಬಿದ್ದರೆ ಪಕ್ಕದಲ್ಲಿನ (O) ಆರ್ಥೊ ಸ್ಥಾನದಲ್ಲಿ ಅವಕಾಶವಾದರೆ ಹೊಂದಿಕೊಳ್ಳುತ್ತದೆ. ಆದರೆ ಮೆಟಾ–ಸ್ಥಾನದಲ್ಲಿ ಹೊಂದಿಕೊಳ್ಳುವುದಿಲ್ಲ. ಆರೋಮ್ಯಾಟಿಕ್ ಅಮೈನೋ ಸಂಯುಕ್ತವನ್ನು ಡೈಆಜ಼ೊಟೈಸ್ ಮಾಡಿದ ಅನಂತರ ದೊರೆಯುವ ಡೈಆಜ಼ೊನಿಯಮ್ ಲವಣವನ್ನು ಮಂಜುಗಡ್ಡೆಯಿಂದ ತಂಪಾಗಿಸಿ ನಿಧಾನವಾಗಿ ಫಿನಾಲ್ ಅಥವಾ ಅದರ ಸಲ್ಫಾನಿಕ್ ಆಮ್ಲದ ಪ್ರತ್ಯಾಮ್ಲೀಯ ದ್ರಾವಣಕ್ಕೆ ಸೇರಿದರೆ ಸಂಯೋಜನಕಾರ್ಯ ನಡೆಯುತ್ತದೆ. ಈ ಕ್ರಿಯೆಯಲ್ಲಿ ಸೋಡಾ ಲವಣವನ್ನು ಉಪಯೋಗಿಸಿದ್ದಾದರೆ ಆಜ಼ೊ ಬಣ್ಣ ಹೊರಬರುತ್ತದೆ. ಇದೇ ರೀತಿ ಸ್ವಲ್ಪ ಆಮ್ಲ ಇಲ್ಲವೆ ತಟಸ್ಥ ದ್ರಾವಣದಲ್ಲಿ ಅಥವಾ ಆಲ್ಕೋಹಾಲ್‌ನ ದ್ರಾವಣದಲ್ಲಿ ಅಮೀನ್ ಜೊತೆ ಡೈಆಜ಼ೊನಿಯಮ್ ಲವಣವನ್ನು ಸೇರಿಸಿದರೆ ಸಂಯೋಜನಕಾರ್ಯ ನೆರವೇರುತ್ತದೆ. ಈ ರೀತಿಯಾಗಿ ಆಜ಼ೊ ಬಣ್ಣಗಳು ಸಾಮಾನ್ಯವಾಗಿ ಹಳದಿಬಣ್ಣದಲ್ಲಿರುತ್ತವೆ. ಆಲ್ಕೈಲ್ ಅಥವಾ ಫೀನೈಲ್ ಗುಂಪುಗಳನ್ನು ಕೂಡಿದರೆ ಅಥವಾ ಅದರ ಅಣುತೂಕವನ್ನು ಹೆಚ್ಚಿಸಿದರೆ ಅದರ ಬಣ್ಣ ಕಿತ್ತಲೆ, ಕೆಂಪು ನೇರಳೆ ಅಥವಾ ನೀಲಿ ಬಣ್ಣಕ್ಕೆ ತಿರುಗುತ್ತವೆ. ನ್ಯಾಫ್ಥಲೀನ್‌ನಿಂದ ತಯಾರಾದ ಬಣ್ಣಗಳು ಬಹಳ ಉತ್ಕೃಷ್ಟ. ಬಣ್ಣಗಳಲ್ಲಿನ ಆಜ಼ೊ ಗುಂಪು ಹೆಚ್ಚಾದಂತೆ ಅವುಗಳ ಛಾಯೆಯೂ ಅಧಿಕವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಬಣ್ಣವನ್ನು ನೂಲಿನ ಎಳೆಯ ಮೇಲೆಯೇ ಉತ್ಪಾದಿಸುತ್ತಾರೆ. ನೂಲನ್ನು ಮೊದಲು ಫೀನಾಲ್‌ನ ಪ್ರತ್ಯಾಮ್ಲೀಯ ದ್ರಾವಣದಲ್ಲಿ ಅದ್ದಿ ಹೊರತೆಗೆದು ಒಣಗಿದ ಮೇಲೆ ಅದನ್ನು ಡೈಆಜ಼ೊನಿಯಮ್ ಲವಣದಲ್ಲಿ ಹಾಕಿದಾಗ ನೂಲಿನ ಎಳೆಯ ಮೇಲೆ ಬಣ್ಣ ಅಂಟುತ್ತದೆ. ಆಜ಼ೊ ಬಣ್ಣಗಳು ಅಧಿಕವಾಗಿದ್ದು, ಇವುಗಳಲ್ಲಿ ಹೆಚ್ಚು ಉಪಯುಕ್ತ ಹಾಗೂ ಸ್ಥಿರವಾಗಿ ನಿಲ್ಲುವ ಕೆಲವು ಬಣ್ಣಗಳ ಸೂಕ್ಷ್ಮ ಪರಿಚಯವನ್ನು ಕೆಳಗೆ ಪ್ರಸ್ತಾಪ ಮಾಡಲಾಗಿದೆ.

**ಮಿಥೈಲ್ ಆರೆಂಜ್ :** ಸಲ್ಫಾನಿಲಿಕ್ ಆಮ್ಲವನ್ನು ಡೈಆಜ಼ೊಟೈಸ್ ಮಾಡಿ, ಮಿಥೈಲ್ ಅನಿಲೀನ್ ಜೊತೆ ಸಂಯೋಜಿಸಿದಾಗ ಈ ಬಣ್ಣ ಉತ್ಪತ್ತಿಯಾಗುತ್ತದೆ.

ರೇಷ್ಮೆ ಮತ್ತು ಉಣ್ಣೆ ಬಟ್ಟೆಗೆ ಇದು ಕಿತ್ತಲೆ ಬಣ್ಣವನ್ನು ನೀಡುತ್ತದೆ. ಈ ಬಣ್ಣ ಸ್ಥಿರವಾಗಿ ನಿಲ್ಲುವುದಿಲ್ಲ. ಇದನ್ನು ಆಮ್ಲಪ್ರತ್ಯಾಮ್ಲಗಳ ಗಾತ್ರ ನಿರ್ಧರಣೆಯಲ್ಲಿ ಒಂದು ಸೂಚಕದಂತೆ (ಇಂಡಿಕೇಟರ್) ಬಳಸುತ್ತಾರೆ. ಪ್ರತ್ಯಾಮ್ಲದ ಲವಣದಲ್ಲಿ ಇದರ ಬಣ್ಣ ಹಳದಿ; ಆಮ್ಲದ ಲವಣದಲ್ಲಿ ಕೆಂಪು. ಬಣ್ಣಕ್ಕೆ ಅನುಗುಣವಾಗಿ ಇದರ ಅಣುರಚನೆಯಲ್ಲಿಯೂ ಬದಲಾವಣೆಗಳು ಕಂಡುಬರುತ್ತವೆ.

**ಕ್ರೈಸೋಯ್‌ಡಿನ್ :** ಬೆಂಜ಼ೀನ್ ಡೈಆಜ಼ೊನಿಯಮ್ ಕ್ಲೋರೈಡ್‌ಅನ್ನು ಮೆಟಾ ಫೆನಿಲಿನ್ ಡೈಅಮೀನ್ ಸಂಗಡ ಸಂಯೋಜಿಸಿದರೆ ಈ ಬಣ್ಣ ಲಭಿಸುತ್ತದೆ.

ಇದರ ಹೈಡ್ರೊಕ್ಲೋರೈಡ್ ಸಹಜವಾಗಿ ನೀರಿನಲ್ಲಿ ಕರಗುತ್ತದೆ. ಇದರ ಬಣ್ಣ ಹಳದಿ ಮಿಶ್ರಿತವಾದ ಕೆಂಪು. ರೇಷ್ಮೆ ಮತ್ತು ಉಣ್ಣೆಗೆ ಬಣ್ಣ ಹಾಕಲು ಇದನ್ನು ನೇರವಾಗಿ ಉಪಯೋಗಿಸುತ್ತಾರೆ. ಆದರೆ ವರ್ಣಬಂಧಕಗಳ (ಮಾರ್‌ಡೆಂಟ್) ಮೂಲಕ ಇದನ್ನು ಉಪಯೋಗಿಸಿ ನೂಲಿಗೆ ಬಣ್ಣವನ್ನು ಹಾಕಬೇಕಾಗುತ್ತದೆ.

**ಬಿಸ್ಮಾರ್ಕ್ ಬ್ರೌನ್ :** ಹೈಡ್ರೊಕ್ಲೋರಿಕ್ ಆಮ್ಲದ ದ್ರಾವಣದಲ್ಲಿ ಸ್ವಲ್ಪ ಅಧಿಕವಾಗಿರುವ ಮೆಟಡೈಅಮೀನ್ ಮೇಲೆ ಸಿಟ್ರಿಕ್ ಆಮ್ಲದ ವರ್ತನೆಯಿಂದ ಇದು ತಯಾರಾಗುತ್ತದೆ. ಇದರಲ್ಲಿ ಎರಡು ವಿಭಾಗಗಳುಂಟು.

i ಡೈಅಮೀನಿನ ಒಂದು $-NH_2$ ಗುಂಪು ಡೈಆಜ಼ೊಟೈಸ್ ಹೊಂದಿ ಪರಿವರ್ತಿತವಾದ ಡೈಅಮೀನಿನ ಜೊತೆ ಸಂಯೋಗ ಹೊಂದಿ ಈ ಬಣ್ಣ ತಯಾರಾಗುತ್ತದೆ.



ii ಮೆಟಫೆನಿಲಿನ್ ಡೈಅಮೀನಿನಿಂದ ಎರಡೂ$-NH_2$ ಗುಂಪುಗಳು ಡೈಆಜ಼ೊಟೈಸ್ ಹೊಂದಿದಾಗ ಈ ಬಣ್ಣ ಉಂಟಾಗುತ್ತದೆ.



ಮೇಲಿನ ಎರಡು ಬಗೆಯ ಸಂಯುಕ್ತಗಳ ಹೈಡ್ರೊಕ್ಲೋರಾಯ್ಡ್‌ಗಳ ಮಿಶ್ರಣವೇ ಈ ಬಿಸ್ಮಾರ್ಕ್ ಬಣ್ಣ. ಇದನ್ನು ಚರ್ಮ, ಉಣ್ಣೆ ಮತ್ತು ನೂಲಿಗೆ (ವರ್ಣಬಂಧಕದ ಮೂಲಕ) ಬಣ್ಣ ಹಾಕಲು ಉಪಯೋಗಿಸುತ್ತಾರೆ.

ರಿಸಾರ್ಸಿನ್ ಯೆಲ್ಲೊ: ಸಲ್ಫಾನಿಲಿಕ್ ಆಮ್ಲವನ್ನು ಡೈಆಜ಼ೊಟೈಸ್ ಮಾಡಿದ ಅನಂತರ ರೆಸಾರ್ಸಿನಾಲ್ ಜೊತೆ ಮಿಶ್ರಣ ಮಾಡಿದರೆ ಈ ಬಣ್ಣ ತಯಾರಾಗುತ್ತದೆ.



ಇದು ಬಂಗಾರದ ಬಣ್ಣದಂತಿರುತ್ತದೆ. ರೇಷ್ಮೆಗೆ ಬಣ್ಣ ಹಾಕಲು ಇದನ್ನು ಉಪಯೋಗಿಸುತ್ತಾರೆ.

**ಕಾಂಗೊ ರೆಡ್ :** ಡೈಆಜ಼ೊಟೈಸ್ ಮಾಡಿದ ಬೆಂಜಿಡಿನನ್ನು α–ನ್ಯಾಫ್ಥಾಯಿನಿಕ್ ಆಮ್ಲದ (1 ಅಮ್ಮೆನೊ ನ್ಯಾಫ್ಥಲನ್ 4 ಸಲ್ಫೇನಿಕ್ ಆಮ್ಲ) ಜೊತೆ ಸಂಯೋಜಿಸಿದರೆ ಇದು ತಯಾರಾಗುತ್ತದೆ.



ಇದರ ಬಣ್ಣ ಕರಿಗೆಂಪು. ನೂಲಿಗೆ ಬಣ್ಣ ಹಾಕಲು ಇದನ್ನು ನೇರವಾಗಿ ಉಪಯೋಗಿಸಬಹುದು. ಆಮ್ಲಪ್ರತ್ಯಾಮ್ಲಗಳ ಮಾಪನ ವಿಧಾನದಲ್ಲಿ (ಎಸ್ಟಿಮೇಷನ್) ಇದನ್ನು ಸೂಚಕವಾಗಿ ಉಪಯೋಗಿಸುತ್ತಾರೆ. (ಆರ್.ಪಿ.ಡಿ.)

**ಆಜ್ಞಾಪತ್ರ :** ಕಾಯಿದೆಶಾಸ್ತ್ರದಲ್ಲಿ ಬಳಕೆಯಲ್ಲಿರುವ ಪದ (ವಾರಂಟ್) ಅನುಜ್ಞಾಪತ್ರ, ಅಧಿಪತ್ರ ಎಂಬ ಹೆಸರುಗಳಿವೆ. ವ್ಯಕ್ತಿಯನ್ನು ಹಿಡಿದುತರಲು ಮತ್ತು ವ್ಯಕ್ತಿ ಅಥವಾ ವಸ್ತುವನ್ನು ಕೈವಶಪಡಿಸಿಕೊಂಡು ನ್ಯಾಯಾಲಯದ ಮುಂದೆ ಹಾಜರು ಮಾಡಲು ನ್ಯಾಯಾಲಯ ನೀಡುವ ಆದೇಶವೇ ಆಜ್ಞಾಪತ್ರ.

ಆಜ್ಞಾಪತ್ರದಲ್ಲಿ ಕೈದುಮಾಡಲ್ಪಡಬೇಕಾದ ವ್ಯಕ್ತಿಯ ಹೆಸರು, ಗುರುತು, ವಿಳಾಸ ಇವುಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಯಾರಿಗೆ ಆ ಆಜ್ಞಾಪತ್ರವನ್ನು ಕೊಡಲಾಗಿದೆಯೋ ಆ ಪೊಲೀಸ್ ಅಧಿಕಾರಿಯ ಹೆಸರು, ಗುರುತು, ಹುದ್ದೆ, ವಿಳಾಸಗಳನ್ನು ಕಾಣಿಸಿರಬೇಕು ಹಾಗೂ ಆಜ್ಞಾಪತ್ರವನ್ನು ಕೊಡುವ ನ್ಯಾಯಾಧೀಶರ ಸಹಿ ಇದ್ದು ಅಧಿಕಾರ ಮುದ್ರೆಯೂ ಬಿದ್ದಿರಬೇಕು. ಯಾವ ಅಪರಾಧಕ್ಕಾಗಿ ಇಲ್ಲವೆ ಕಾರಣಗಳಿಗಾಗಿ ಕೈದುಮಾಡಬೇಕು ಎಂಬುದನ್ನು ಅದರಲ್ಲಿ ನಮೂದಿಸಿರಬೇಕು. ಈ ವಿವರಗಳಲ್ಲಿ ಏನಾದರೂ ತಪ್ಪಿದ್ದರೆ ಅದು ಅಕ್ರಮವಾಗುವುದು.

ವ್ಯಕ್ತಿಯನ್ನು ಹಿಡಿದುತರಲು ಕೊಡುವ ಆಜ್ಞಾಪತ್ರ ಜಾಮೀನು ಇರುವುದು ಮತ್ತು ಜಾಮೀನು ಇಲ್ಲದ್ದು ಎಂದು ಎರಡು ಬಗೆ. ಜಾಮೀನು ವಾರಂಟ್ ಕೊಟ್ಟಾಗ ಕೈದುಮಾಡಲ್ಪಡಬೇಕಾದ ಮನುಷ್ಯನನ್ನು ಕೈದು ಮಾಡಬೇಕಾದ ಅಧಿಕಾರಿ, ಆ ವ್ಯಕ್ತಿ ಇಂಥ ದಿನ, ಇಂಥ ವೇಳೆಗೆ, ಇಂಥ ಸ್ಥಳದಲ್ಲಿ, ಇಂಥ ನ್ಯಾಯಾಲಯದಲ್ಲಿ ಹಾಜರಾಗಬೇಕೆಂಬ ಮುಚ್ಚಳಿಕೆಗೆ ಜಾಮೀನುದಾರರಿಂದ ಅಥವಾ ಸ್ವಂತ ಜಾಮೀನಿನಿಂದ ಬರೆಸಿಕೊಂಡು ಆ ವ್ಯಕ್ತಿಯನ್ನು ಹಿಡಿದು ತರದೆ, ಬಿಟ್ಟು ಬರಬಹುದು. ಜಾಮೀನಿಲ್ಲದ ವಾರಂಟ್ ಕೊಟ್ಟಾಗ ಯಾವ ವ್ಯಕ್ತಿಯನ್ನು ಹಿಡಿದು ತರಬೇಕಾಗಿದೆಯೋ ಅಂಥವನನ್ನು ಜೊತೆಯಲ್ಲಿ ಹಿಡಿದುತರಲೇಬೇಕು; ಬಿಟ್ಟುಬರುವ ಅಧಿಕಾರ ಇಲ್ಲ.

ಇಂಥ ಆಜ್ಞಾಪತ್ರದ ಆಧಾರದ ಮೇಲೆ ಪೊಲೀಸ್ ಅಧಿಕಾರಿ ತನ್ನ ಕ್ಷೇತ್ರದಲ್ಲಿ ಅಥವಾ ಇತರ ಕ್ಷೇತ್ರದಲ್ಲಿ ಆ ಪತ್ರ ಎಲ್ಲಿಯವರೆಗೆ ಜಾರಿಯಲ್ಲಿರುವುದೊ ಅಲ್ಲಿಯ ತನಕ ಯಾರನ್ನು ಹಿಡಿದು ತರಬೇಕೊ ಯಾವ ಸ್ಥಳವನ್ನು ಹುಡುಕಬೇಕೊ ಅದರಂತೆ ಮಾಡಬಹುದು. ಆಜ್ಞಾಪತ್ರ ಕೈಯಲ್ಲಿಲ್ಲದೆ ಅಧಿಕಾರ ಚಲಾಯಿಸಲು ಹೋಗಬಾರದು. ಏಕೆಂದರೆ ವ್ಯಕ್ತಿ ಬಯಸಿದಲ್ಲಿ ಪತ್ರವನ್ನು ಅವನಿಗೆ ತೋರಿಸಬೇಕಾಗಬಹುದು. ನಿಯಮಿಸಿದ ಆಜ್ಞೆಯನ್ನು ಈಡೇರಿಸಿದ ಮೇಲೆ ಅಥವಾ ನ್ಯಾಯಾಧೀಶರು ಸೂಚಿಸಿದ ಕಾಲಮೀರಿದ ಮೇಲೆ ಅಥವಾ ನ್ಯಾಯಾಧೀಶರು ಅದನ್ನು ಹಿಂತೆಗೆದುಕೊಂಡರೆ, ಅದರ ಮೇಲೆ ಷರಾ ಬರೆದು, ಯಾವ ನ್ಯಾಯಾಲಯದಿಂದ ಕೊಡಲಾಗಿತ್ತೊ ಆ ನ್ಯಾಯಾಲಯಕ್ಕೆ ಅದನ್ನು ಸಲ್ಲಿಸಬೇಕು. ಅಲ್ಲಿಗೆ ಅದರ ಕೆಲಸ ಮುಗಿಯುತ್ತದೆ.

ಸಿವಿಲ್ ಕಾಯಿದೆಯಲ್ಲೂ ಆಜ್ಞಾಪತ್ರ ಕೊಡುವುದುಂಟು. ಒಬ್ಬ ನಿರ್ದಿಷ್ಟ ವ್ಯಕ್ತಿಯ ಒಂದು ನಿರ್ದಿಷ್ಟ ಕೆಲಸ ಮಾಡುವುದಕ್ಕಾಗಿ ನ್ಯಾಯಾಲಯ ಕೊಡುವ ಆಜ್ಞಾಪತ್ರಗಳಿಗೂ ಈ ಮಾತು ಅನ್ವಯಿಸುತ್ತದೆ. ಆ ಕೆಲಸ ವ್ಯಕ್ತಿಯನ್ನು ಹಿಡಿದು ತರುವುದಾಗಿರಬಹುದು, ಸ್ಥಳಪರೀಕ್ಷೆ ಮಾಡುವುದಾಗಿರಬಹುದು, ನ್ಯಾಯಾಲಯಕ್ಕೆ ಬರಲಾರದವರ ಸಾಕ್ಷ್ಯವನ್ನು ದಾಖಲೆ ಮಾಡಿಕೊಂಡು ಬರುವುದಾಗಿರಬಹುದು. ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಿಸಿದ ಸ್ಥಿರ, ಚರ ಆಸ್ತಿ, ದಸ್ತಾವೇಜು ಮುಂತಾದುವುಗಳನ್ನು ಸ್ವಾಧೀನಪಡಿಸಿಕೊಂಡು ನ್ಯಾಯಾಲಯದ ಅಧೀನಕ್ಕೆ ಒಳಪಡಿಸುವುದಕ್ಕಾಗಿಯೂ ಆಜ್ಞಾಪತ್ರಗಳನ್ನು ಕೊಡುವುದುಂಟು. ಒಮ್ಮೊಮ್ಮೆ ಒಂದು ನಕಾಶೆಯನ್ನು ಬರೆಯಲು, ನಕಲು ಮಾಡಲು ದಸ್ತಾವೇಜನ್ನು ಇಲ್ಲವೇ ಸಾಕ್ಷ್ಯವನ್ನು ಭಾಷಾಂತರಿಸಲು, ಇಲ್ಲವೇ ತಿಳಿಯದಿರುವ ಲಿಪಿ, ಶಾಸನ ಮುಂತಾದುವುಗಳನ್ನು ಪ್ರಾಮಾಣಿಕವಾಗಿ ವಿವರಿಸುವುದಕ್ಕೂ ಆಜ್ಞಾಪತ್ರ ಕೊಡುವ ಅಧಿಕಾರವಿದೆ. ಇಂಥ ಸಂದರ್ಭಗಳಲ್ಲಿ ಅದನ್ನು ಕಮಿಷನ್ ವಾರಂಟ್ ಎಂದು ಕರೆಯುತ್ತಾರೆ.

ಹೀಗೆ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲದೆ, ಸಂವಿಧಾನದ ಪ್ರಕಾರ ನೇಮಕವಾಗಬೇಕಾದ ಉಚ್ಚ ನ್ಯಾಯಾಲಯದ ಮತ್ತು ವರಿಷ್ಠನ್ಯಾಯಾಲಯದ ನ್ಯಾಯಮೂರ್ತಿಗಳ ನೇಮಕದ ಬಗ್ಗೆ ರಾಷ್ಟ್ರಾಧ್ಯಕ್ಷರು ಕೊಡುವ ಆಜ್ಞಾಪತ್ರಕ್ಕೆ ವಾರಂಟ್ ಎಂಬ ವಿಶಿಷ್ಟಪದದ ಪ್ರಯೋಗವಿದೆ. (ಕೆ.ಸಿ.)

**ಆ್ಯಜ್ಟೆಕ್ ಸಂಸ್ಕೃತಿ :** ಸ್ಪೇನ್ ದೇಶದ ಜನರ ಆಗಮನಕ್ಕಿಂತ ಮುಂಚೆ ಮೆಕ್ಸಿಕೊದ ಸಂಸ್ಕೃತಿಗೆ ಅನ್ವಯಿಸುವುದಾದರೂ ರೂಢಿಯಲ್ಲಿ ಆಗ ಅಲ್ಲಿದ್ದ ನಹುವ ಮಾತನಾಡುವ ಟೆನೋಚ್‌ಖಸ್ ಬುಡಕಟ್ಟಿನವರಿಗೆ ವಿಶೇಷವಾಗಿ ಸಂಬಂಧಪಟ್ಟಿದೆ. ಇದು 6000 ವರ್ಷಗಳಷ್ಟು ಪ್ರಾಚೀನ ಸಂಸ್ಕೃತಿ. ಈ ಜನ ಗವಿಯೊಂದರಿಂದ ಹೊರಟು ಅಲ್ಲಲ್ಲಿ ಕದನವಾಡುತ್ತ ತಮ್ಮ ಕಡೆಯ ಹೆಚ್ಚು ಜನರು ಗೆದ್ದವರ ದಾಸ್ಯಕ್ಕೊಳಗಾಗಲು, ಉಳಿದವರು ಮೆಕ್ಸಿಕೊ ಸರೋವರದ ಒಂದು ದ್ವೀಪಕ್ಕೆ ಓಡಿಹೋಗಿ, ಅಲ್ಲಿ ಹಿಂದೆ ನುಡಿದ ಒಂದು ಭವಿಷ್ಯವಾಣಿಯಂತೆ, ಪಾಪಾಸುಕಳ್ಳಿಯ ಮೇಲೆ ಹಾವನ್ನು ತಿನ್ನುತ್ತಿದ್ದ ಗಿಡುಗನ ಶಕುನವನ್ನು ನೋಡಲಾಗಿ ಅಲ್ಲಿಯೇ ನೆಲೆಸಿದರು ಎಂದು ದಂತಕಥೆಯೊಂದು ತಿಳಿಸುತ್ತದೆ. ಇವರು ಕ್ರಮೇಣ ತಮ್ಮ ನೆಲೆಯನ್ನು ವಿಸ್ತರಿಸುತ್ತ ಒಂದು ಪ್ರಭಾವಶಾಲಿಯಾದ ಪ್ರಭುತ್ವವನ್ನು ಕಟ್ಟಿದರು.

ಶವದ ಜಾಡಿ

ದಂಡನಾಯಕನಾಗಿದ್ದ ರಾಜಕುಮಾರನನ್ನೇ ರಾಜನನ್ನಾಗಿ ಆರಿಸುವುದು ಇವರ ರೂಢಿ, ರಾಜನೀತಿ. ಇವರ ಪ್ರಸಿದ್ಧ ರಾಜರುಗಳಲ್ಲಿ ಒಬ್ಬನಾದ ಅಹ್ಯುಟ್ಜಲ್ (1482–1502) ನೀರಿನ ಕಾಲುವೆಗಳನ್ನು ತೆಗೆಸಿ, ಮೆಕ್ಸಿಕೊದ ದೊಡ್ಡ ದೇವಾಲಯವನ್ನು ಕಟ್ಟಿಸಿದ. ಮಂಟೆಝುಮನ ಕಾಲದಲ್ಲಿ ಇವರ ಅಭ್ಯುದಯ ಉನ್ನತ ಶಿಖರಕ್ಕೇರಿತ್ತು. ನಾಲ್ಕು ದಿಕ್ಕಿನಲ್ಲೂ ಒಡ್ಡಿನ ಹಾದಿಗಳಿಂದ ಆವರಿಸಿದ್ದ ಇವರ ನಗರ ಅನೇಕ ಕಾಲುವೆಗಳಿಂದ ಛೇದಿಸಲ್ಪಟ್ಟ ಬಹು ಚತುರ್ಭುಜಾಕೃತಿಗಳಿಂದ ಕೂಡಿದ್ದು, ಮಧ್ಯದಲ್ಲಿ ದೊಡ್ಡ ಪಿರಮಿಡ್ಡಿನ ಮೇಲೆ ಒಂದು ಜೋಡಿ ದೇವಾಲಯ ಹಾಗೂ ಅದರ ಸಮೀಪದಲ್ಲಿದ್ದ ವಾಯುದೇವತೆಯ ದುಂಡು ದೇವಾಲಯಗಳಿಂದ ವಿರಾಜಿಸುತ್ತಿತ್ತು. ಟಿಯೊಪನೊಜ಼ಲ್ಕೊನಲ್ಲಿರುವ ಸುಂದರ ದೇವಾಲಯ ಹಾಗೂ ಮಲಿನಸ್ಕೊನಲ್ಲಿರುವ ಕಮಾನಿನ ಬಾಗಿಲುಳ್ಳ ಒಂದೇ ಕಲ್ಲಿನ ದೇವಾಲಯ ಇವರ ವಾಸ್ತುಶಿಲ್ಪದ ಕುಶಲತೆಗೆ ಉತ್ತಮ ನಿದರ್ಶನಗಳು. ಇವರ ಪಂಚಾಂಗ ಬಹಳ ತೊಡಕಿನದು. 260 ದಿವಸಗಳ ಪವಿತ್ರಕಾಲಮಾನವಲ್ಲದೆ 365 ದಿನಗಳ ಸೌರವರ್ಷಕಾಲಮಾನವೂ ರೂಢಿಯಲ್ಲಿತ್ತು. 52 ಸೌರವರ್ಷಗಳಿಗೊಮ್ಮೆ ಇವೆರಡರ



ಕ್ವೆಟ್ಜಲ್ ಕೋಟಲ್ ದ್ವಿಮುಖ ಸರ್ಪದೇವತೆ

ಮೊದಲ ದಿವಸಗಳು ಒಂದಾಗುತ್ತಿದ್ದವು. ಅಂಥ ದಿವಸಗಳಲ್ಲಿ ಹಿಂದೆ ತಮ್ಮ ದೇವತೆಗಳಿಂದ ಉದ್ಭವಿಸಿದ ಮಹಾ ಅನಿಷ್ಟಗಳಿಂದ ನಾಲ್ಕು ಸಲ ಪ್ರಪಂಚ ಹಾಳಾಯಿತೆಂದೂ ಮುಂದೆಯೂ ಭೂಕಂಪದಿಂದ ಹಾಳಾಗುವುದೆಂದೂ ಇವರ ನಂಬಿಕೆ. ಇವರದ್ದು ಚಿತ್ರಲಿಪಿ. ಯುಕಟಾನ್ ಬರವಣಿಗೆಯೂ ಇವರಿಗೆ ತಿಳಿದಿತ್ತು.

ಇವರು ವಿಶೇಷವಾಗಿ ನಿಸರ್ಗದ ವಿವಿಧ ಶಕ್ತಿಗಳ ಆರಾಧಕರು. ಆದರೆ ಇವರ ಆರಾಧನೆಯ ಆಚರಣೆ ಅತಿ ಅನಾಗರಿಕ, ಅಷ್ಟೇ ಅಲ್ಲ ರಾಕ್ಷಸೀಯ. ತಮ್ಮ ದೇವತೆಗಳ ತೃಪ್ತಿಗೋಸ್ಕರ ವರ್ಷದಲ್ಲೆಲ್ಲ ತುಂಬ ಚಿತ್ರಹಿಂಸೆಯಿಂದ ನರಬಲಿ ಕೊಡುತ್ತಿದ್ದರು. ಹೆಚ್ಚಾಗಿ ಇವರ ದೇವತೆಗಳು ಮಾನವ ಕಲ್ಪನೆಯಲ್ಲೇ ಅತಿ ವಿಚಿತ್ರ ಹಾಗೂ ಭಯಾನಕ ಸ್ವರೂಪವುಳ್ಳವು. ರಕ್ತಬಲಿ ಎಂದರೆ ಅವಕ್ಕೆ ಬಹುಪ್ರಿಯ. ಎಲ್ಲೋ ಒಂದೆರಡು ದೇವತೆಗಳು ಮಾತ್ರ ಉದಾರಿಗಳು, ದಯಾಪರರು. ಇವರು ಯುದ್ಧ ಮಾಡುತ್ತಿದ್ದುದು ಮುಖ್ಯವಾಗಿ ಬಲಿಗ್ರಹಣಕ್ಕೋಸ್ಕರ. ಹುಡುಗರಿಗೆ 15ನೆಯ ವರ್ಷದಿಂದ ಯುದ್ಧ ಶಿಕ್ಷಣಕೊಟ್ಟು 20ನೆಯ ವಯಸ್ಸಿನಲ್ಲಿ ಯುದ್ಧಕ್ಕೆ ಕಳುಹಿಸುತ್ತಿ ದ್ದರು. ಪ್ರತಿಯೊಬ್ಬನೂ ಒಂದು ಬಲಿಯನ್ನು ತರುವ ತನಕ ತಲೆಗೂದಲನ್ನು ಕತ್ತರಿಸುವ ಹಾಗಿರಲಿಲ್ಲ. ವಿಜಯಶಾಲಿಗೆ ಚಿರತೆ ಅಥವಾ ಗಿಡುಗನ ಚರ್ಮವನ್ನು ಧರಿಸುವ ಗೌರವವಿರುತ್ತಿತ್ತು. ಪರಾಜಿತನನ್ನು ಸೈನ್ಯದಿಂದ ತೆಗೆದುಹಾಕಿ ಅವಮಾನಕ್ಕೀಡುಮಾಡುತ್ತಿದ್ದರು.

ಬಲು ಎಚ್ಚರಿಕೆಯಿಂದ ನಿಯಮಬದ್ಧವಾಗಿ ನಡೆಯುತ್ತಿದ್ದ ಇವರ ಸಂತೆಯಮಾಳ ಟ್ಲಟೆಲೊಲ್ಕೊ ಎಂಬಲ್ಲಿತ್ತು. ವಸ್ತ್ರಾಭರಣಗಳಿಗೆ ಖಾಷ್‍ಕಲ್ಲು, ಸಮುದ್ರದ ಚಿಪ್ಪು, ಗರಿ ಮುಂತಾದುವುಗಳನ್ನು ದೂರ ಪ್ರದೇಶಗಳಿಂದ ತರಿಸಿಕೊಳ್ಳುತ್ತಿದ್ದರು. ಉತ್ತಮ ಕಲ್ಲುಗೆಲಸದಲ್ಲೂ ಚಿನ್ನ ಎರಕ ಹುಯ್ಯುವುದರಲ್ಲೂ ಮತ್ತು ವಿವಿಧ ವರ್ಣದ ಗರಿಗಳನ್ನು ಟರ್ಕ್ವಿಯೋಜ್‍ಕಲ್ಲಿನ ಚೂರುಗಳನ್ನು ಜೋಡಿಸುವ ಸುಂದರ ಕಲಾತ್ಮಕ ಕೆಲಸಗಳಲ್ಲೂ ಇಲ್ಲಿನ ಕಾರ್ಮಿಕರು ನಿಪುಣರಾಗಿದ್ದರು.

ಸಂಚಾರ ವ್ಯವಸ್ಥೆ, ಜನಗಣತಿಯ ಕ್ರಮ, ರಾಜನೀತಿ, ನ್ಯಾಯತೀರ್ಮಾನ, ಸಮಾಜದಲ್ಲಿ ಸ್ತ್ರೀಯರ ಸ್ಥಾನ, ಮದುವೆ ಕಟ್ಟಳೆ, ಕಡ್ಡಾಯ ಶಿಕ್ಷಣ ಈ ಮೊದಲಾದುವು ಬಹಳ ಸುಧಾರಿಸಿದ್ದು ಆ ಭಾಗದ ಪ್ರಪಂಚದಲ್ಲೇ ಇವರು ಹೆಚ್ಚಿನ ಮಟ್ಟದ ಸಂಸ್ಕೃತಿಯುಳ್ಳವರಾಗಿದ್ದರು.

ಕೋರ್ಟ್‍ಜ಼್‍ನ ನೇತೃತ್ವದಲ್ಲಿ ಸ್ಪೇನಿನವರ (1519) ಕ್ರೂರ ಆಕ್ರಮಣ ಪ್ರಾರಂಭವಾದ ಮೇಲೆ ಇವರ ನಗರ ಹಾಳಾಯಿತಲ್ಲದೆ ಸಂಸ್ಕೃತಿ ನಾಶಹೊಂದಿತು. (ಜಿ.ವಿ.ಆರ್.; ಎ.ಎಸ್.)

**ಆಟಗಳು :** ವ್ಯಾಯಾಮಾಭ್ಯಾಸಗಳಿಗಿಂತ ಭಿನ್ನವಾಗಿದ್ದು ದೇಹಕ್ಕೂ ಮನಸ್ಸಿಗೂ ಸಾಕಷ್ಟು ಸಾಧನೆ ರಂಜನೆ ಕೊಡುವ ಚಟುವಟಿಕೆಗಳಿಗೆ ಆಟಗಳು ಎನ್ನುತ್ತಾರೆ. ವ್ಯಾಯಾಮಗ ಳಷ್ಟು ಕ್ರಮಬದ್ಧವಾಗಿರದಿದ್ದರೂ ಆಟಗಳಿಂದ ಅಂಗಸಾಧನೆಯಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಮನರಂಜನೆ, ಉಲ್ಲಾಸ, ಹರ್ಷ, ವಿಹಾರ ದೊರೆಯುತ್ತವೆ. ಆಟವಾಡುವ ಗುಣ ನೈಸರ್ಗಿಕವೆನ್ನಲು ಮಕ್ಕಳೂ ಪ್ರಾಣಿಗಳೂ ಸಾಕ್ಷಿ. ನಾಯಿ, ಬೆಕ್ಕು ಮೊದಲಾದುವುಗಳಲ್ಲಿ ತಾಯಿ ಸ್ವಲ್ಪ ಕಾಲ ಮಗುವಿನೊಂದಿಗೆ ಆಟವಾಡುತ್ತದೆ. ಇಂಥ ಚಿಣ್ಣಾಟದಿಂದ ಮರಿಗೆ ಸಂತೋಷವಾಗುತ್ತದೆ. ಕರಡಿಗಳು ಜಾರುಗುಪ್ಪೆ ಆಟವಾಡುವುದನ್ನು ಕಂಡವರಿದ್ದಾರೆ. ಕೋತಿಗಳಲ್ಲಿ ಆಟ, ನೆಗೆತ ಸಾಮಾನ್ಯ. ಪಾರಿವಾಳ ಹಾರುವಾಗ ಲಾಗಹಾಕುವುದು.



ಹರಳುಮಣೆ

ವಿನೋದವಾಗಿ ಅಳಿಲುಗಳು ಜೂಟಾಟವಾಡುತ್ತವೆ. ಹುಚ್ಚೆದ್ದು ಕುಣಿದು ಓಡುವುದು ಕುದುರೆಗೆ ಒಂದು ಆಟ. ಪ್ರಾಣಿಗಳಲ್ಲಿನ ಆಟದ ಮನೋಧರ್ಮದ ಹಿಂದೆ ವಿನೋದಕ್ಕಿಂತ ಹಿರಿದಾದ ಮತ್ತೊಂದು ಉದ್ದೇಶವೂ ಇರುವಂತೆ ತೋರುತ್ತದೆ. ಕೇವಲ ರಂಜನೆಯಾಗಿ ತೋರುವ ಆಟ ಅವಕ್ಕೆ ಜೀವನನಿರ್ವಹಣೆಯಲ್ಲಿ ಪಾಲುಗೊಳ್ಳುವ, ಗೆಲ್ಲುವ ವರಸೆಗಳನ್ನು ಕಲಿಸುತ್ತದೆ. ವಿಚಾರ ಮಾಡಿದರೆ ಮಾನವನಲ್ಲೂ ಅಷ್ಟೆ. ಆಟದಿಂದ ಅಂಗಾಂಗಗಳ ಶಕ್ತಿ ವರ್ಧಿಸುತ್ತದೆ; ಕೈಚಳಕ ಹೆಚ್ಚುತ್ತದೆ. ಬುದ್ಧಿ ಕುದುರುತ್ತದೆ, ಸಮಯಸ್ಫೂರ್ತಿ, ಯುಕ್ತಿ, ಶ್ರಮಸಹಿಷ್ಣುತೆ, ಧೃತಿ, ಮತ್ತೆ ಮತ್ತೆ ಪ್ರಯತ್ನಿಸುವ ಆಕಾಂಕ್ಷೆ, ಸಾಮೂಹಿಕ ನಡೆನುಡಿಗಳು, ಒಗ್ಗಟ್ಟಿನ ಕಾರ್ಯನಿರ್ವಾಹಕ ಮನೋಧರ್ಮ, ಹೊಂದಿನಡೆಯುವ ಗುಣ-ಇವು ಬೆಳೆಯುತ್ತವೆ. ಎಂದಿದ್ದರೂ ಜೀವನ ನಿರ್ವಹಣೆಗೆ ಇವುಗಳ ಅಗತ್ಯವಿದ್ದೇ ಇದೆ (ನೋಡಿ- ಅಂಗ ಸಾಧನೆ).

ವಿಷಯಪ್ರತಿಪಾದನೆಯ ಸೌಲಭ್ಯಕ್ಕಾಗಿ ಆಟಗಳ ಬೃಹತ್ ಕ್ಷೇತ್ರವನ್ನು ಮೂರು ಭಾಗಗಳನ್ನಾಗಿ ಮಾಡಲಾಗಿದೆ. ಒಂದನೆಯದು ಪ್ರಕೃತ ಭಾಗವಾದ ಆಟಗಳು, ಇಲ್ಲಿ ಪ್ರಾಚೀನ ಆಟಗಳು, ಜನಪದ ಆಟಗಳು ಮತ್ತು ಇತರ ಸ್ಥಳೀಯ ಅಥವಾ ಜನಬಳಕೆಯ ಆಟಗಳ ವಿಷಯವಿದೆ. ಎರಡನೆಯ ಭಾಗ ಕ್ರೀಡೆಗಳು (ನೋಡಿ- ಕ್ರೀಡೆಗಳು). ಇಲ್ಲಿ ಕ್ರಿಕೆಟ್, ಫುಟ್‍ಬಾಲ್ ಮೊದಲಾದ ಎಲ್ಲ ಆಟಗಳ ಪಟ್ಟಿ ಇದೆ. ವಿವರಗಳು ಆಯಾ ಆಟದ ಶೀರ್ಷಿಕೆಯ ಕೆಳಗೆ ಬಂದಿವೆ. ಮೂರನೆಯ ಭಾಗದಲ್ಲಿ ಒಂದು ಕಡೆ ವ್ಯಾಯಾಮಕ್ಕೂ ಮತ್ತೊಂದು ಕಡೆ ನೇರ ಪಂದ್ಯಗಳಿಗೂ ಸಂಬಂಧಿಸಿದ ದೈಹಿಕ ಚಟುವಟಿಕೆಗಳಿವೆ.



ಆನೆ-ಕುರಿ-ಆಟ

**ಪ್ರಾಚೀನ ಆಟಗಳು:** ಪ್ರಾಚೀನ ಮಾನವ ಅಲೆಮಾರಿ ಜೀವನ ಮುಗಿಸಿ ನೆಲೆಸುವುದನ್ನು ಅಭ್ಯಸಿಸುವ ಮುನ್ನ ಏನು ಆಟಗಳನ್ನು ಆಡುತ್ತಿದ್ದನೆಂಬುದಕ್ಕೆ ದಾಖಲೆಗಳಿಲ್ಲ. ಅಂತೂ ಅವನಲ್ಲಿ ಕಲಾಭಿರುಚಿ ಇತ್ತು. ಕೈಕೆಲಸದಲ್ಲಿ ಅವನು ಪಳಗಿದ್ದ. ಮಾಡುವ ಕೆಲಸಕಾರ್ಯಗಳಲ್ಲಿ ಕ್ರಮೇಣ ಉತ್ತಮ ಮಾರ್ಪಾಟುಗಳನ್ನು ಮಾಡಲುಪಕ್ರಮಿಸಿದ್ದ ಎಂಬ ಅಂಶ ಅವನು ಬರೆದ ಚಿತ್ರ, ಉಪಯೋಗಿಸುತ್ತಿದ್ದ ಆಯುಧ ಉಪಕರಣ ಇತ್ಯಾದಿಗಳ ಪಳೆಯುಳಿಕೆಗಳಿಂದ ವ್ಯಕ್ತವಾಗುತ್ತದೆ. ಇಷ್ಟೆಲ್ಲ ತಿಳಿವಳಿಕೆಯುಳ್ಳವನು ಆಟಗಳನ್ನು ಆಡುತ್ತಿದ್ದಿರಬೇಕು ಎಂದು ಊಹಿಸಲು ಅವಕಾಶವಿದೆ. ಆಹಾರಾನ್ವೇಷಣೆಗಾಗಿ ಅವನು ಅಗತ್ಯವಾಗಿ ಕೈಗೊಳ್ಳಬೇಕಾಗಿದ್ದ ತಿರುಗಾಟ ಮತ್ತು ಬೇಟೆಯ ವಿಧಾನಗಳಿಂದ ಅವನಿಗೆ ಸಾಕಷ್ಟು ಆಹಾರ ಸಿಕ್ಕಾಗ ತೃಪ್ತಿ ಉಕ್ಕೇರಿದಾಗ ಆತ ಹಾಡಿ ಕುಣಿಯುತ್ತಿದ್ದುದುಂಟು. ಹಾಗೆಯೇ ಆಡಿ ನಲಿದಿರಬೇಕು. ಅವನ ಈ ಉನ್ಮತ್ತ ನೃತ್ಯಗಳಿಂದಲೇ ಸಂಗೀತ, ಕಾವ್ಯ, ನಾಟಕಗಳು ಹುಟ್ಟಿಬಂದುವೆಂದು ಊಹಿಸುತ್ತಾರೆ. ಕ್ರೀಡಾವಿನೋದವೂ ಆಗಲೇ ಹುಟ್ಟಿರಬಹುದು.

ವೇದಗಳಲ್ಲಿ ಆಟಗಳ ಉಲ್ಲೇಖವಿದೆ. ಋಗ್ವೇದದಲ್ಲಿ ಅಕ್ಷವೆಂಬ ಪಗಡೆಯಾಟದ ಹೆಸರಿದೆ. ಪ್ರಸಿದ್ಧವಾದ ಅರವತ್ತನಾಲ್ಕು ವಿದ್ಯೆಗಳಲ್ಲಿ ಕ್ರೀಡೆಗಳೂ ಸೇರಿವೆ. ಜಲಕ್ರೀಡೆ (ವನಕ್ರೀಡೆ), ವೈಹಾಳಿ, ಮಲ್ಲಯುದ್ಧ, ಮೃಗಯಾವಿಹಾರ : (ಬೇಟೆ) ಪಗಡೆ, ಮುಷ್ಟಿಯುದ್ಧ, ಧನುರ್ವಿದ್ಯೆಯೇ ಮೊದಲಾದ ಇತರ ಯುದ್ಧಗಳು, ನೃತ್ಯ, ಲಾಸ್ಯ, ರಾಸಕ್ರೀಡೆ, ಹಲವು ಬಗೆಯ ಚೆಂಡಾಟಗಳು-ಇವುಗಳ ಬಗ್ಗೆ ರಾಮಾಯಣ, ಮಹಾಭಾರತ, ಇತಿಹಾಸಗಳಲ್ಲೂ ಕಾಳಿದಾಸಾದಿ ಮಹಾಕವಿಗಳ ಕೃತಿಗಳಲ್ಲೂ ವರ್ಣನೆಗಳಿವೆ. ಕನ್ನಡ ಸಾಹಿತ್ಯದಲ್ಲೂ ಅಷ್ಟೆ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಮರಕೋತಿ ಆಟದ ವರ್ಣನೆ ಇದೆ. ವಡ್ಡಾರಾಧನೆಯ ಭದ್ರಬಾಹು ಭಟಾರರ ಕಥೆಯಲ್ಲಿ, ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ, ನಂಜುಂಡಕವಿಯ ಕುಮಾರರಾಮಸಾಂಗತ್ಯದಲ್ಲಿ, ನಾರಣಪ್ಪನ ಗದುಗಿನ ಭಾರತದಲ್ಲಿ ಅಚ್ಚಗನ್ನಡದ ಆಟದ ಹೆಸರುಗಳೂ ವರ್ಣನೆಗಳೂ ಇವೆ.

ಪ್ರಾಚೀನ ಗ್ರೀಸಿನಲ್ಲಿ ಅನೇಕಾನೇಕ ಆಟಗಳನ್ನು ಆಡುತ್ತಿದ್ದರು. ಆಟಗಾರರಲ್ಲಿ ಪಂದ್ಯಭಾವನೆ ಉತ್ಕಟವಾಗಿತ್ತು. ಸ್ಪರ್ಧೆಗಳು ರಾಷ್ಟ್ರಮಟ್ಟದಲ್ಲಿ ನಡೆಯುತ್ತಿದ್ದವು. ಲಕ್ಷಾಂತರ ಜನ ಸೇರಿ ಅವುಗಳನ್ನು ವೀಕ್ಷಿಸುತ್ತಿದ್ದರು. ಗೆದ್ದವರನ್ನು ಗೌರವಿಸುತ್ತಿದ್ದರು. ವ್ಯಾಯಾಮ ಮತ್ತು ಆಟಗಳಿಂದ ಅವರ ದೇಹದಾರ್ಢ್ಯ ಮತ್ತು ದೇಹಸೌಂದರ್ಯ ಹೇಗೆ ವರ್ಧಿಸಿದ್ದ ವೆಂಬುದಕ್ಕೆ ಅವರ ಶಿಲ್ಪ ಮತ್ತು ವರ್ಣಕಲೆಗಳು ಸಾಕ್ಷಿ. ಈಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳಲ್ಲಿ ಮುಷ್ಟಿಕಾಳಗ, ಜಟ್ಟಿಕಾಳಗ, ಭಾರ ಎತ್ತುವಿಕೆ, ಓಟದ ಮತ್ತು ರಥದ ಪಂದ್ಯಗಳು-ಇವುಗಳ ವಿಸ್ತೃತ ವರ್ಣನೆಗಳಿವೆ. ಗ್ರೀಕ್ ಸಾಮ್ರಾಜ್ಯದ ಕೊನೆಗಾಲದಲ್ಲಿ, ಅದರ ಅವನತಿಗೆ ಪರಿಹಾರವೇನೆಂದು ಕೇಳಲಾಗಿ ದೇಶದ ಆಟಗಳನ್ನು ಪುನರುಜ್ಜೀವನ ಗೊಳಿಸುವುದೇ ಎಂದು ನಗರದೇವತೆ ಕಣಿ ಹೇಳಿತಂತೆ. ಇಂಥ ಮಾತುಗಳಿಂದ ಅಂದು ಆಟಗಳಿಗೆ ಇದ್ದ ಪ್ರಾಶಸ್ತ್ಯ ಅರಿವಾಗುತ್ತದೆ. ಒಲಂಪಿಯದಲ್ಲಿ ವರ್ಷಾವಧಿ ನಡೆಯುತ್ತಿದ್ದ ಆಟಗಳಂತೂ ಪ್ರಪಂಚಪ್ರಸಿದ್ಧವಾಗಿವೆ (ನೋಡಿ- ಒಲಂಪಿಕ್ ಕ್ರೀಡೆಗಳು). ರೋಮನ್ನರಿಗೆ ಎಲ್ಲಕ್ಕೂ ಸ್ಫೂರ್ತಿ ದೊರೆತದ್ದು ಗ್ರೀಸಿನಿಂದ. ಗ್ರೀಸಿನ ಎಲ್ಲ ಆಟದ ಮಾದರಿಗಳೂ ರೋಮನ್ನರಲ್ಲಿ ಬಳಕೆಗೆ ಬಂದವು. ಅಂದಿನ ರೋಮನ್ ಸರ್ಕಸ್, ಸೈಕಲ್ ಆಟ ಪ್ರದರ್ಶನಗಳು, ರಥಪಂದ್ಯಗಳು ಬಹಳ ಪ್ರಸಿದ್ಧವಾಗಿವೆ.

**ಜನಪದ ಆಟಗಳು:** ಹಲ್ಲು ಬರುತ್ತಿರುವ ಚಿಣ್ಣರಿಂದ ಹಿಡಿದು ಹಲ್ಲುದುರುತ್ತಿರುವ ಅಜ್ಜಂದಿರವರೆಗೂ ಹಿಡಿಸುವ ಬಗೆಬಗೆಯ ಆಟಗಳಿವೆ. ಒಂದೇ ಆಟದಲ್ಲಿ ವೈವಿಧ್ಯವೂ ಇದೆ. ಒಂದೇ ಬಗೆಯ ಆಟಕ್ಕೆ ಒಂದೊಂದು ಹಳ್ಳಿಗಾಡಿನಲ್ಲೂ ಬೇರೆ ಬೇರೆ ಹೆಸರುಗಳಿವೆ.

ಜನಪದ ಆಟಗಳು ತಲತಲಾಂತರದಿಂದ ಜನಸಮುದಾಯದಲ್ಲಿ ಬೆಳೆದಿವೆ. ಅವುಗಳ ಮೂಲವನ್ನು ಹುಡುಕುವುದು ಕಷ್ಟ. ಬೆಳೆದುಬಂದ ಬಗೆಗೆ ಆಧಾರಗಳನ್ನು ಕೊಡುವುದು ಇನ್ನೂ ಕಷ್ಟಕರ. ಎಷ್ಟೋ ಬಗೆಯ ಆಟಗಳು ಚಲಾವಣೆಗೆ ಬಂದು ಮರೆಯಾಗಿ ಹೋಗಿರಬಹುದು. ಸಾಹಿತ್ಯಕ, ಶಾಸ್ತ್ರೀಯ ಅಥವಾ ಚಾರಿತ್ರಿಕ ಗ್ರಂಥಗಳಲ್ಲಿ ವರ್ಣನೆಯ ಅವಕಾಶ ಪಡೆಯದ ಆಟಗಳು ಅವೆಷ್ಟೋ.



ಹುಲಿ-ಕುರಿ ಆಟ

ಭಾರತೀಯ ಜನಪದ ಆಟಗಳ ವೈಶಿಷ್ಟ್ಯ ಮೆಚ್ಚುವಂಥದು. ಅತ್ಯಂತ ಕಡಿಮೆ ಖರ್ಚು, ಅಧಿಕಾಧಿಕ ಪ್ರಯೋಜನ ಅಥವಾ ಸಂತೋಷದ ಲಾಭ. ಇದು ಎಲ್ಲ ಆಟಗಳ ಸಾಮಾನ್ಯ ಗುಣ. ಕೆಲವು ಆಟಗಳಿಗೆ ಆಡುವವರಿದ್ದರೆ ಸಾಕು. ಮತ್ತೆ ಕೆಲವಕ್ಕೆ ಹುಣಸೇಬೀಜ, ಹಾಲಿವಾಣದ ಬೀಜ, ಮೊಳ, ಎರಡು ಮೊಳದುದ್ದ ಕಡ್ಡಿಗಳು, ಗಜ್ಜುಗ, ಆಕಾರಕ್ಕೆ ಹೊಂದುವ ಮಡಕೆಯ ಹೆಂಚಿನ ಅಥವಾ ಬಳಪದ ಕಲ್ಲಿನ ಚೂರುಗಳು (ಗೂಟೆ, ಗೋರ್ಚಿ), ಹಳೆಯ ಹರಕಲು ಬಟ್ಟೆ ಚೂರುಗಳು (ಚೆಂಡಿಗಾಗಿ) ಹಳೆಯ ಹಲಗೆಯ ಪಟ್ಟಿಗಳು (ಗಿಲ್ಲಿ-ದಾಂಡು), ಅಗ್ಗದ ಗಾರೆಯ, ಕಲ್ಲಿನ ಅಥವಾ ಗಾಜಿನ, ಸೀಸದ ಗುಂಡಿಗಳು ಇಷ್ಟೇ ಸಾಕು. ಬಹಳ ಶ್ರೀಮಂತ ಆಟಗಳಾದ ಚದುರಂಗ, ಪಗಡೆಯ ಆಟಗಳಿಗೂ ಐದಾರು ರೂಪಾಯಿಗಳ ಬಂಡವಾಳ ಸಾಕು. ನಿರ್ವಹಣೆ ಬಹಳ ಸುಲಭ. ಮತ್ತೆ ಮತ್ತೆ ಬರುವ ಖರ್ಚಂತೂ ಇಲ್ಲವೇ ಇಲ್ಲವೆನ್ನಬಹುದು.

ಜನಪದ ಆಟಗಳಲ್ಲೂ ಒಳಾಂಗಣ ಮತ್ತು ಹೊರಾಂಗಣ ಆಟಗಳು ಎಂದು ಎರಡು ವಿಧ. ಒಳಾಂಗಣ ಆಟಗಳನ್ನು ಅವರವರ ವಯೋಗುಣ, ಬುದ್ಧಿಮಟ್ಟಕ್ಕೆ ತಕ್ಕಂತೆ ಸ್ತ್ರೀ-ಪುರುಷರೀರ್ವರೂ ಆಡಬಹುದು. ಹೊರಾಂಗಣ ಆಟಗಳಲ್ಲಿ ಕುಂಟೇಬಿಲ್ಲೆ, ಕುಂಟಾಟ, ಕಣ್ಣುಮುಚ್ಚಾಲೆ (ಅವಿತೆ ಗುಮ್ಮನಾಟ), ಕಾಚಿಕೋಲ್ ಬಿಂದೀಕೋಲ್, ಉಪೂಪೆಕಡ್ಡಿ- ಇಂಥ ಆಟಗಳನ್ನು ಹೆಣ್ಣು, ಗಂಡು ಮಕ್ಕಳಿಬ್ಬರೂ ಆಡಬಹುದು. ಗೋಲಿ, ಗಜ್ಜುಗ, ಚಿಣ್ಣಿಕೋಲು, ಚೆಂಡು, ಬುಗುರಿ, ಮರಕೋತಿ, ಕೊಕ್ಕೊ, ತುತು ತುತು (ಹುಡುತುತು, ಗುಡುಗುಡು, ಕಬಡಿ) ಇಂಥ ಆಟಗಳನ್ನು ವಿಶೇಷವಾಗಿ ಗಂಡುಮಕ್ಕಳು ಆಡುತ್ತಾರೆ. ಹೆಣ್ಣು ಗಂಡುಗಳಿಬ್ಬರೂ ಅದರಲ್ಲೂ ತಾರುಣ್ಯದಲ್ಲಿರುವವರು ಒಟ್ಟಿಗೆ ಸೇರಿ ಆಡತಕ್ಕ ಹೊರಾಂಗಣ ಆಟಗಳು ಈ 20ನೆಯ ಶತಮಾನದ ದ್ವಿತೀಯಾರ್ಧದಲ್ಲೂ ಜನಪದ ಜಾಯಮಾನಕ್ಕೆ, ಅದರ ಸಂಸ್ಕೃತಿಯ ಆವರಣಕ್ಕೆ ಒಗ್ಗಿಲ್ಲ. ಒಳಾಂಗಣ ಆಟಗಳಲ್ಲಿ ಸ್ತ್ರೀ-ಪುರುಷರಿಬ್ಬರೂ ಭಾಗವಹಿಸುವುದು ಸುಪರಿಚಿತ. ನೆಂಟರಿಷ್ಟರ, ಒಂದೇ ಮನೆಯವರ ಪಾಲ್ಗೊಳ್ಳುವಿಕೆಗೆ ಇದು ಮಿತಿಗೊಂಡಿದೆ.

**ಒಳಾಂಗಣ ಆಟಗಳು:** 1 ಅಣ್ಣೆಕಲ್ಲು: ಹೆಣ್ಣುಮಕ್ಕಳ ಆಟ. ಇದಕ್ಕೆ ಗಜ್ಜುಗದ ಗಾತ್ರದ ಕಲ್ಲುಗಳು ಬೇಕು. ಇಬ್ಬರು ಅಥವಾ ಹೆಚ್ಚು ಜನ ಆಡಬಹುದು. ಒಬ್ಬೊಬ್ಬರಿಗೆ ಐದೈದು ಕಲ್ಲುಗಳು. ಇದರಲ್ಲಿ ವ್ಯತ್ಯಾಸ ಮಾಡಿಕೊಳ್ಳಬಹುದು. ಎಲ್ಲರ ಕಲ್ಲುಗಳನ್ನೂ ಒಟ್ಟಿಗೆ ಇಟ್ಟು ಯಾರಾದರೊಬ್ಬರು ಆಟ ಪ್ರಾರಂಭಿಸಬೇಕು. ಆಮೇಲೆ ಕುಳಿತಿರುವವರಲ್ಲಿ ಅಪ್ರದಕ್ಷಿಣವಾಗಿ ಆಟ ಮುಂದುವರಿಯುತ್ತದೆ. ಕಲ್ಲುಗಳನ್ನೆಲ್ಲ ಅನುಕೂಲವಾದಷ್ಟು ಎತ್ತರಕ್ಕೆ ಎರಡೂ ಅಂಗೈಗಳಿಂದ ಮೇಲೆಸೆದು ಮುಂಗೈ ಮೇಲೆ ಆಟದ ನಿಬಂಧನೆಯ ಪ್ರಕಾರ ಒಂದೋ ಅಥವಾ ಹೆಚ್ಚೋ ಆತುಕೊಂಡು ಬಾಕಿಯನ್ನು ಕೆಳಗೆ ಬೀಳಬಿಡಬೇಕು. ಕೆಲವು ಬಗೆಯ ಆಟದಲ್ಲಿ ಕೈಮೇಲಾಗಲಿ, ನೆಲದ ಮೇಲಾಗಲಿ ಮೂರು ಕಲ್ಲು ಇರಲವಕಾಶವಿಲ್ಲ. ಆತುಕೊಳ್ಳುವುದರಲ್ಲೂ ವೈವಿಧ್ಯವಿದೆ. ಕಲ್ಲುಗಳನ್ನು ಮಾರ್ಗಮಧ್ಯದಲ್ಲಿ ಮೇಲಿನಿಂದ ಹಿಡಿಯಬೇಕು. ಇದಕ್ಕೆ ಸೆಣಪಿ ಎನ್ನುತ್ತಾರೆ. ಒಂದು ಕಲ್ಲನ್ನು ಮಾತ್ರ ಮುಂಗೈ ಮೇಲೆ ಆತುಕೊಂಡು ಮತ್ತೆ ಅದನ್ನು ಬೀಳಿಸದಂತೆ ಮೇಲೆಸೆದು ಅಂಗೈಯಲ್ಲಿ ಆನಬೇಕು. ಯಾವ ಸಂದರ್ಭದಲ್ಲಿ ಬಿಟ್ಟರೂ ಆಟ ಹೋಯಿತು. ಆತ ಕಲ್ಲನ್ನು ಮತ್ತೆ ಮೇಲೆಸೆದು ಅದು ಕೆಳಗೆ ಬೀಳುವಷ್ಟರಲ್ಲಿ ನೆಲದಲ್ಲಿ ಬಿದ್ದ ಕಲ್ಲುಗಳಲ್ಲಿ ಒಂದನ್ನು ಎತ್ತಿಕೊಂಡು ಮೇಲಿನದನ್ನು ಆನಬೇಕು. ತಪ್ಪಿದರೆ ಆಟ ಹೋಯಿತು. ನೆಲದ ಮೇಲೆ ಇತರ ಕಲ್ಲುಗಳನ್ನು ಅಲ್ಲಾಡಿಸಿದರೂ ಆಟ ಹೋಯಿತು. ಹೀಗೆ ಒಂದು ಕಲ್ಲಿನಿಂದ, ಒಂದೊಂದೇ ಕಲ್ಲಿನಂತೆ ಗೆಲ್ಲುತ್ತ ಒಂದೂ ಸೀಬೀಬಿ. ಎರಡೂ ಗರಡಾಳ, ಮೂರೂ ಮುತ್ತಿನಚೆಂಡು, ನಾಕೂ ನಾಗಪ್ಪ, ಐದೂ ಪಂಚಾಂಗ, ಆರೂ ದಾಳಿಂಬೆ, ಏಳಂಬೇಳೆ, ಎಂಟೂ ರಾಯರ ಗಂಟೆ, ಒಂಬೈನೋಲ್ಗ ಎಂದು ಹೇಳುತ್ತ ಇರುವ ಹತ್ತು ಕಲ್ಲುಗಳನ್ನೂ (ಇಬ್ಬರಿದ್ದರೆ ಒಬ್ಬೊಬ್ಬರಿಗೆ ಐದು ಕಲ್ಲುಗಳಂತೆ) ಗೆದ್ದರೆ ಆಟಗಾರ್ತಿ ಗೆದ್ದಂತಾಯಿತು. ಆಮೇಲೆ ಮುಂದಿನವರ ಆಟ. ಕಲ್ಲಿನ ಸಂಖ್ಯೆಯಲ್ಲಿ, ಆನುವುದರ ಭಂಗಿಯಲ್ಲಿ, ಗೆದ್ದಮೇಲೆ ಸೋತವರಿಗೆ ವಿಧಿಸುವ ಶಿಕ್ಷೆಯಲ್ಲಿ, ಇತರ ನಿಯಮಗಳಲ್ಲಿ ವೈವಿಧ್ಯವಿದೆ.

**2 ಹುಣಿಸೇ ಬೀಜದ ಆಟ:** ಇದಕ್ಕೆ ಸಾಮಾನ್ಯವಾಗಿ ಇಪ್ಪತ್ತು ಇಪ್ಪತ್ತು ಹುಣಿಸೇಬೀಜಗಳು ಬೇಕು. ಹಾಲಿವಾಣದ ಬೀಜಗಳೂ ಆಗಬಹುದು. ಕೆಲವರು ಕವಡೆಗಳನ್ನೂ ಉಪಯೋಗಿಸುತ್ತಾರೆ. ಇಬ್ಬರು ಅಥವಾ ಹೆಚ್ಚು ಜನ ಆಡಬಹುದು. ಬೀಜಗಳನ್ನೆಲ್ಲ ಬೊಗಸೆಯಲ್ಲಿ ಸೇರಿಸಿ ನೆಲದಮೇಲೆ ಚೆಲ್ಲುವುದು. ಆಮೇಲೆ ಒಂದಕ್ಕೊಂದು ತಾಟಿಸುವುದು. ಮತ್ತೊಂದು ಬೀಜ ಅಲ್ಲಾಡಕೂಡದು. ಹೀಗೆ ತಾಟಿಸಿದ ಎರಡು ಬೀಜಗಳನ್ನು ಗೆದ್ದಂತೆ. ಹೀಗೆ ಗುರಿ ತಪ್ಪುವತನಕ ಅಥವಾ ಇತರ ಬೀಜಗಳು ಅಲ್ಲಾಡದಿರುವ ತನಕ ಆಟ ಮುಂದುವರಿಯುತ್ತದೆ. ತಪ್ಪಿದಲ್ಲಿ ಬೇರೆಯವರ ಆಟ. ಎಲ್ಲವನ್ನೂ ಗೆದ್ದ ಮೇಲೆ ತಮ್ಮ ಪಾಲಿಗೆ ಬಂದ ಬೀಜಗಳನ್ನು ಎಣಿಸಿದರೆ ಎಷ್ಟು ಕಡಿಮೆಯಾಗಿದೆಯೋ ಅಷ್ಟೂ ಸೋತಂತೆ. ಹೆಚ್ಚಾಗಿದ್ದರೆ ಅಷ್ಟೂ ಗೆದ್ದಂತೆ. ಮುಂದಿನ ಆಟಕ್ಕೆ ಇಬ್ಬರೂ ಸಮನಾಗಿ ಬೀಜಗಳನ್ನು ಹಾಕಬೇಕು. ಇದರ ಪರಿಣಾಮವಾಗಿ ಆಟದಲ್ಲಿ ಕೊನೆಯಲ್ಲಿ ಯಾರಾದರೂ ಸೋಲಬಹುದು.

**3 ಸರಿಬೆಸ:** ಎಂದರೆ ಸಮ, ವಿಷಮ-ಎಂದರ್ಥ. ಇದನ್ನು ಸಾಮಾನ್ಯವಾಗಿ ಇಬ್ಬರು ಅಡಕೆ ಇಟ್ಟುಕೊಂಡು ಆಡುತ್ತಾರೆ. ಮದುವೆ ಮನೆಗಳಲ್ಲಿ, ಚಪ್ಪರದ ಹಟ್ಟಿಯಲ್ಲಿ, ಕಾಲುಂಗುರ



ಚೌಕಬಾರ ನಾಲ್ಕು ಬೇಳೆ ಆಟ

ಶಾಸ್ತ್ರ ಮಾಡುವಾಗ, ಎಣ್ಣೆ ಅರಿಶಿನ ಹಚ್ಚಿ ವೀಳ್ಯಶಾಸ್ತ್ರ ಮಾಡುವಾಗ, ಲಗ್ನದ ಕಾಲದ ಧಾರಾಮುಹೂರ್ತದಲ್ಲಿ ಮತ್ತು ಊಟಕ್ಕೆ ಕುಳ್ಳಿರಿಸಿದಾಗ ಹಂತಿಯಮೇಲೆ ಎಲೆ ಅಡಿಕೆ ಕೊಡುವುದುಂಟು. ಈ ಸಂದರ್ಭದಲ್ಲಿ ಮಕ್ಕಳು ಸೇರಿ ಆಟವನ್ನು ಅಲ್ಲೇ ಆಡುತ್ತ ಲಲ್ಲೆ ಮಾಡುತ್ತಾರೆ. ಮದುವೆಯ ನಾನಾ ಶಾಸ್ತ್ರಗಳ ಅಂಗವಾಗಿ ಧಾರೆಯಾದ ಮೇಲೆ ಹೆಣ್ಣು ಗಂಡುಗಳು ಈ ಆಟ ಆಡಬೇಕು. ಪುಟ್ಟತಂಗಿಯರೂ ದಂಪತಿಗಳೂ ಸರಿಬೆಸವಾಡಿದರೂ ಎಂಬ ಜಾನಪದ ಗೀತೆಯನ್ನೂ ಮುತ್ತೈದೆಯರು ಹಾಡುತ್ತಾರೆ.

**ಆಟದ ವಿವರ:** ಇಬ್ಬರೂ ತಮ್ಮಲ್ಲಿರುವ ಅಡಕೆಗಳಲ್ಲಿ ಇಷ್ಟ ಬಂದಷ್ಟನ್ನು ಒಂದು ಮುಷ್ಟಿಯಲ್ಲಿ ಅವಿಸಿಟ್ಟುಕೊಂಡು ಸರಿಯೊ ಬೆಸವೂ ಎಂದು ಕೇಳಬೇಕು. ಎದುರಾಳಿ ಊಹಿಸಿ ಸರಿ ಇಲ್ಲವೇ ಬೆಸ ಎನ್ನಬೇಕು. ಎಣಿಸಿ ನೋಡಿದಾಗ ಹೇಳಿದಂತೆ ಸರಿಯೊ

ಬೆಸವೊ ಆಗಿದ್ದರೆ ಹೇಳಿದವರಿಗೆ ಅಷ್ಟು ಅಡಿಕೆಯನ್ನು ಕಟ್ಟಿಕೊಡಬೇಕು. ಇನ್ನು ಆಟ ಬದಲಾವಣೆ. ಮೊದಲು ತೋರಿಸುತ್ತಿದ್ದವರು ಈಗ ಹೇಳಬೇಕು. ಹೀಗೆ ತಮ್ಮಲ್ಲಿರುವ ಅಡಕೆಗಳನ್ನು ಸೋಲುವ ತನಕ ಆಟವಾಡಬಹುದು.

**4 ಉದ್ದಿನಮೂಟೆ ಆಟ:** ಇದಕ್ಕೆ ಆಡುವವರ ಕೈಗಳೇ ಸಾಕು. ಪುಟ್ಟ ಹೆಣ್ಣು ಗಂಡುಮಕ್ಕಳು ಐದಾರು ಜನ ಸೇರಿ ಒಟ್ಟಿಗೆ ತಮ್ಮ ತಮ್ಮ ಎರಡೂ ಕೈ ಮುಷ್ಟಿಗಳನ್ನು ಒಂದರ ಮೇಲೊಂದು ಜೋಡಿಸಿ ಹಿಡಿದುಕೊಳ್ಳಬೇಕು. ಇವೆಲ್ಲವೂ ಮೂಡೆ(ಮೂಟೆ)ಗಳು. ದೊಡ್ಡ ಮಗುವೊಂದು ತನ್ನ ಒಂದು ಕೈ ಮುಷ್ಟಿಯನ್ನು ಮಾತ್ರ ಮೇಲಿಟ್ಟು ಇನ್ನೊಂದು ಕೈ ತೋರು ಬೆರಳಿನಿಂದ ಇದೇನು ಮೂಡೆ, ಇದೇನು ಮೂಡೆ ಎಂದು ಕೇಳಬೇಕು. ಒಂದೊಂದು ಮಗುವೂ ತನ್ನ ಮೂಡೆ ಉದ್ದಿನದೊ, ಹೆಸರಿನದೊ, ಕಡಲೆಯದೊ, ತಡಗುಣಿಯದೊ ಎಂದು ಹೇಳಬೇಕು. ಆಮೇಲೆ ಮೂಡೆಗಳ ಸಾಲಿಗೆ ಎಣ್ಣೆ ಹಚ್ಚಿದಂತೆಯೂ, ಬಿಸಿನೀರು ಹುಯ್ದಂತೆಯೂ, ಸೀಗೆ ಹಾಕಿ ತಿಕ್ಕಿದಂತೆಯೂ ಮತ್ತು ಉಶ್, ಉಶ್, ಉಶ್ ಎಂದು ನೀರು ಹುಯ್ದಂತೆ ನಟಿಸಿ, ಒರಸಿ ಚಿನ್ನದ ಕತ್ತೀಲಿ ಹೊಡೆಯಾನೊ ಬೆಳ್ಳಿ ಕತ್ತೀಲಿ ಹೊಡೆಯಾನೊ ಎಂದು ಹೇಳಿ ಕೈ ಬೀಸುವಷ್ಟರಲ್ಲಿ ಎಲ್ಲರೂ ತಮ್ಮ ಕೈಗಳನ್ನು ಬೆನ್ನ ಹಿಂದೆ ಬಚ್ಚಿಟ್ಟುಕೊಳ್ಳಬೇಕು. ಈಗ ಆಟ ಮತ್ತೊಂದು ಮುಖ್ಯ ತಿರುವಿಗೆ ಬಂದು ನಿಲ್ಲುತ್ತದೆ. ದೊಡ್ಡ ಮಗು ಪ್ರತಿಯೊಬ್ಬರನ್ನೂ ಪ್ರಶ್ನೆ ಕೇಳುತ್ತದೆ.



ಚೌಕಬಾರ ಆರು ಬೇಳೆ ಆಟ

ಕೈಕಾಲೆಲ್ಲ ಎಲ್ಲಿಗೆ ಹೋದೋ ? ಸಂತೆಗೆ ಹೋದೊ, ಸಂತೇನ್ ಕೊಡ್ತು ? ಕಬ್ಬು ಕೊಡ್ತು, ಕಬ್ಬೇನ್ ಮಾಡ್ದೆ ? ತಿಂದು ಸಿಪ್ಪೆ ತಿಪ್ಪೆಗೆ ಹಾಕ್ದೆ, ತಿಪ್ಪೇನ್ ಕೊಡ್ತು ? ಗೊಬ್ಬರ ಕೊಡ್ತು, ಗೊಬ್ಬರ ಏನ್ ಮಾಡ್ದೆ ? ಹೊಲಕ್ಹಾಕ್ದೆ, ಹೊಲ ಏನ್ ಕೊಡ್ತು ? ಹುಲ್ಲು ಕೊಡ್ತು, ಹುಲ್ಲೇನ್ ಮಾಡ್ದೆ ? ಹಸೀಗ್ಹಾಕ್ದೆ, ಹಸೇನ್ ಕೊಡ್ತು ? ಹಾಲು ಕೊಡ್ತು.

ಹೀಗೆ ಪ್ರಶ್ನೆ, ಅದಕ್ಕೆ ಉತ್ತರ. ಒಂದೊಂದು ಮಗುವೂ ಉತ್ತರ ಕೊಡುತ್ತ ಹೋಗಿ ಕೊನೆಗೆ ಯಾವುದೋ ಒಂದು ರಸಸನ್ನಿವೇಶದಲ್ಲಿ ಚಮತ್ಕಾರದ ಉತ್ತರ ಬಂದಾಗ ಎಲ್ಲರೂ ನಗಬೇಕು. ಅಲ್ಲಿಗೆ ಮುಕ್ತಾಯ.

**5. ಹರಳು ಮಣೆ ಆಟ :** ವಿಶೇಷವಾಗಿ ಹೆಣ್ಣುಮಕ್ಕಳ ಆಟ. ಚನ್ನಮಣೆ ಆಟ ಎಂದೂ ಹೆಸರು. ಇದಕ್ಕೆ ಒಂದೊಂದು ಸಾಲಿನಲ್ಲಿ ಏಳು ಏಳು ಪುಟ್ಟ ಬೋಗುಣಿಗಳಂಥ ಎರಡು ಸಾಲುಗುಳಿಗಳುಳ್ಳ ಸುಮಾರು ಐದಾರು ಅಂಗುಲ ಅಗಲ, ಹದಿನೈದು–ಹದಿನಾರು ಅಂಗುಲ ಉದ್ದವುಳ್ಳ ಆಯತಾಕಾರದ ಒಂದು ಮರದ ಮಣೆ ಮತ್ತು ಒಂದು ಗುಳಿಗೆ ಐದರಂತೆ 14×5=70 ಹುಣಸೇಬೀಜ ಬೇಕು. ಒಂದೊಂದು ಕಡೆಗೆ ಒಬ್ಬೊಬ್ಬರಂತೆ ಇಬ್ಬರಾಡುವ ಈ ಆಟದಲ್ಲಿ ಮೊದಲು ಎಲ್ಲ ಮನೆಗಳಿಗೂ (ಗುಳಿ) ಐದೈದರಂತೆ ಹರಳು ತುಂಬಿ ಯಾರಾದರೊಬ್ಬರು ಆಟ ಮೊದಲು ಮಾಡಬೇಕು. ಯಾವುದಾದರೂ ಒಂದು ಮನೆಯ ಐದು ಹರಳನ್ನು ತೆಗೆದುಕೊಂಡು ಮುಂದಿನ ಮನೆಗಳಿಗೆ ಒಂದೊಂದರಂತೆ ಹಾಕಬೇಕು. ಮುಗಿದಾಗ ಮುಂದಿನ ಮನೆಯನ್ನು ಮುರಿದು ಅದಕ್ಕೆ ಹಾಕದೆ ಅದರ ಮುಂದಿನ ಮನೆಗೆ ಹಾಕುತ್ತ ಹೋಗಬೇಕು. ಹೀಗೆ ಹಾಕುವಾಗ ಖಾಲಿಮನೆ ಸಿಕ್ಕಿದರೆ ಅದನ್ನು ಬೆರಳುಗಳಿಂದ ಸವರಿ ಮುಂದಿನ ಮನೆಯ ಬೀಜಗಳನ್ನು ತೆಗೆದಿಟ್ಟುಕೊಳ್ಳಬೇಕು. ಅವು ಗೆದ್ದ ಹರಳು. ಅಲ್ಲಿಗೆ ಒಬ್ಬರ ಆಟ ಮುಗಿಯಿತು. ಮನೆ ಬಿಟ್ಟು ಮನೆಯಲ್ಲಿ ಬೀಜವಿದ್ದರೆ ಎಷ್ಟು ಮನೆಗಳಲ್ಲಿದ್ದರೂ ಸವರಿ ತೆಗೆದುಕೊಳ್ಳಬಹುದು. ಎದುರು ಬದುರು ಮನೆಗಳು ಖಾಲಿಯಿದ್ದರೂ ಹೀಗೆ ಮಾಡಬಹುದು.

ಒಂದು ಮನೆಯಲ್ಲಿ ನಾಲ್ಕು ಹರಳಿದ್ದರೆ ಅದಕ್ಕೆ ಕರುವೆಂದು ಹೆಸರು. ಅದನ್ನು ಆಯಾ ಆಟಗಾರರು ತೆಗೆದಿಟ್ಟುಕೊಳ್ಳಬಹುದು.

ಹೀಗೆ ಕೊನೆಯಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಹರಳಿರುವ ತನಕವೂ ಆಡಬಹುದು. ಕೊನೆಯಲ್ಲಿ ಎಣಿಸಿ ನೋಡಿದಾಗ ಮೂವತ್ತೈದಕ್ಕಿಂತ ಕಡಿಮೆ ಇದ್ದರೆ ಅಷ್ಟೂ ಸೋತಂತೆ. ಹೆಚ್ಚಿದ್ದರೆ ಅಷ್ಟೂ ಗೆದ್ದಂತೆ. ಒಂದು ಮನೆಗೆ ಐದಕ್ಕಿಂತ ಕಡಿಮೆ ಬೀಜ ತುಂಬುವಂತಿಲ್ಲ. ಹೀಗೆ ಕೊನೆಯಲ್ಲಿ ತಮ್ಮ ಕಡೆ ಒಂದು ಮನೆಯನ್ನೂ ತುಂಬಲಾರದಾದಾಗ ಸಂಪೂರ್ಣ ಸೋಲು ಒಬ್ಬರಿಗೆ, ಸಂಪೂರ್ಣ ಗೆಲವು ಮತ್ತೊಬ್ಬರಿಗೆ.

**6 ಆನೆ ಕುರಿ ಆಟ :** ಚಿತ್ರದಲ್ಲಿ ತೋರಿಸುವಂತೆ ಬರೆದುಕೊಂಡು ಇಬ್ಬರಾಡುವ ಆಟ. ಇಂಥ ಮತ್ತು ಚಿತ್ರ 3ರ ರಂಥವನ್ನೂ ಕೆಲವು ಗ್ರಾಮದ ಮಾರಿ ಚಾವಡಿಗಳಲ್ಲಿ, ದೇವಸ್ಥಾನಗಳಲ್ಲಿ, ಮಂಟಪಗಳಲ್ಲಿ ಕೆತ್ತಿರುವುದನ್ನು ಈಗಲೂ ಕಾಣಬಹುದು. ಒಬ್ಬರು ಮೂರು ಆನೆಗಳನ್ನು ವಹಿಸಿಕೊಂಡರೆ ಒಬ್ಬರು ಇಪ್ಪತ್ತು ಕುರಿಗಳನ್ನು ವಹಿಸಿಕೊಳ್ಳಬೇಕು. ಆನೆ ಒಂದು ಕುರಿಯ ಮೇಲೆ ಮಾತ್ರ ನೆಗೆಯಬಲ್ಲದು. ನೆಗೆದರೆ ಆ ಕುರಿ ಆನೆಗೆ ಸೇರುತ್ತದೆ.

ಜಾಗವಿದ್ದರೆ ಒಂದರ ತೆಪ್ಪ ಒಂದನ್ನು ಎಷ್ಟು ಸಾರಿ ಯಾವ ದಿಕ್ಕಿನಲ್ಲಿ ಬೇಕಾದರೂ ನೆಗೆಯಬಹುದು. ಕುರಿ ಆನೆಯ ಮೇಲೆ ನೆಗೆಯಲಾರದು. ಆದರೆ ನೆಗೆಯಲವಕಾಶ ಸಿಗದಂತೆ ಒಂದು ಕುರಿಯ ಮಗ್ಗಲು ಮನೆಯಲ್ಲಿ ಮತ್ತೊಂದು ಕುರಿಯಿರಬೇಕಷ್ಟೆ. ಹೀಗೆ ಆಡುತ್ತ ಆನೆ ನಡೆಯದಂತೆ ಮಾಡಬೇಕು. ಇಲ್ಲವೇ ಕುರಿಗಳು ಆನೆಗೆ ಆಹುತಿಯಾಗಬೇಕು. ನಡೆಸಲು ಮನೆಯಿದ್ದರೆ ನಡೆಸಲೇಬೇಕು. ನಡೆಸಲಾಗದಾದಾಗ ಸಂಬಂಧಪಟ್ಟವರು ಸೋತಂತೆ.

**7 ಹುಲಿ ಕುರಿ ಆಟ :** ಇಬ್ಬರಾಡುವ ಆಟ. ಒಬ್ಬ ಕುರಿ, ಮತ್ತೊಬ್ಬ ಹುಲಿ. ಹದಿನಾರು ಕುರಿಗಳು (ಸಣ್ಣ ಬೀಜಗಳು), ಎರಡು ಹುಲಿಗಳು (ದೊಡ್ಡ ಕಲ್ಲು) ಇರುತ್ತವೆ. ಆಟದ ಪ್ರಾರಂಭದಲ್ಲಿ ಒಳಗಣ ಎಂಟು ಮನೆಗೆ ಎಂಟು ಕುರಿ ಕೂಡಿಸಬೇಕು. ನಡುವೆ ಒಂದು ಹುಲಿ. ಹೊರಚೌಕದ ನಡುಗಟ್ಟಲು ಕುರಿ ಪ್ರಯತ್ನಿಸಬೇಕು. ಆನೆ ಕುರಿ ಆಟದಂತೆ ಹುಲಿಯಾಗಲಿ ಕುರಿಯಾಗಲಿ ಒಂದೇ ಏಟಿಗೆ ಎರಡರ ಮೇಲೆ ದಾಟುವಂತಿಲ್ಲ. ಒಂದೊಂದು ಸಾರಿಗೆ ಒಂದೊಂದರಂತೆ, ಸ್ಥಳವಿದ್ದರೆ ಎಷ್ಟರಮೇಲೆ ಬೇಕಾದರೂ ನೆಗೆಯಬಹುದು. ಹುಲಿ ನೆಗೆದರೆ ಕುರಿ ಸಾಯುತ್ತದೆ. ಹೀಗೆ ಆಡುತ್ತ ಯಾರಾದರೊಬ್ಬರು ಎದುರಿಸಲಾರದ ಸ್ಥಿತಿಗೆ ಬಂದಾಗ ಆಟ ಮುಕ್ತಾಯದ ಘಟ್ಟಕ್ಕೆ ಬರುತ್ತದೆ. ಅಂದರೆ ಹುಲಿಗೆ ನಡೆಯಲು ಜಾಗವಿಲ್ಲದಂತಾಗಬಹುದು. ಇಲ್ಲ ಎಲ್ಲ ಕುರಿಗಳನ್ನೂ ತಿಂದು ಹಾಕಬೇಕು. ಮತ್ತೆ ಮರು ಆಟ.

**8 ಚೌಕಬಾರ :** ನಾಲ್ಕು ಜನ ಅಥವಾ ಇಬ್ಬರೋ ಮೂವರೋ ಆಡಬಹುದಾದ ಆಟ. ಚಿತ್ರ 4 ಮತ್ತು 5 ರಂತೆ ಐದು ಅಥವಾ ಏಳು ಮನೆಗಳ ಚೌಕ ಬರೆದುಕೊಳ್ಳಬೇಕು. ಐದರ ಮನೆಗೆ ನಾಲ್ಕು ಹುಣಸೆಬೇಳೆಗಳು ಅಥವಾ ಕವಡೆಗಳೂ ಏಳರ ಮನೆಗೆ ಆರು ಬೇಕು. ಹೊರಭಾಗದ ಮಧ್ಯದ ಮನೆಗಳು ಕಟ್ಟೆ ಮನೆಗಳು. ಇಲ್ಲಿ ಅಪಾಯವಿಲ್ಲ. ಮಧ್ಯದ ಮನೆ ಹಣ್ಣಿನ ಮನೆ. ಏಳರ ಮನೆ ಆಟದಲ್ಲಿ ಮೂಲೆಮೂಲೆಯ ಶೃಂಗಾಭಿಮುಖ ಮನೆ ಕಟ್ಟೆಮನೆ.

ಈಗ ಯಾರಾದರೊಬ್ಬರು ಆಟ ಪ್ರಾರಂಭಿಸುತ್ತಾರೆ. ಅಲ್ಲಿಂದ ಮುಂದಕ್ಕೆ ಅವರ ಬಲಗಡೆ ಇರುವವರು ಆಡುವುದು ರೂಢಿ. ಹೊರಗಡೆ ಮನೆಗಳಲ್ಲಿ ಒಂದೇ ಕಾಯಿಗೆ ಅವಕಾಶ. ಕಟ್ಟೆಮನೆಗಳಿಗೆ ಈ ನಿಯಮವಿಲ್ಲ. ಬೇಳೆ ಬಿಡುವಾಗ ನಾಲ್ಕು ಅಂಗಾತ ಬಿದ್ದರೆ ಚೌಕವೆನ್ನುತ್ತಾರೆ. ಬೋರಲಾಗಿ ಬಿದ್ದರೆ ಬಾರ ಎನ್ನುತ್ತಾರೆ. ಇದೇ ಪ್ರಾಯಶಃ ಆಟದ ಹೆಸರು. ಪ್ರತಿಯೊಬ್ಬರೂ ನಡೆಸುತ್ತ ಒಂದು ಸುತ್ತು ಬಂದು ತಮ್ಮ ತಮ್ಮ ಮನೆಯ ಹಿಂದಿನ ಮನೆಯ ಮೂಲಕ ಒಳನುಗ್ಗಿ ಈಗ ಪ್ರದಕ್ಷಿಣೆಯಾಗಿ ಅನುಕೂಲವಾದ ರೀತಿಯಲ್ಲಿ ಬೇಳೆ ಬಿದ್ದರೆ ಹಣ್ಣು ಮಾಡುವವರು ಗೆದ್ದಂತೆ. ಕೊನೆಯಲ್ಲಿ ಉಳಿದವರು ಸೋತಂತೆ. ಈ ಆಟದಲ್ಲಿ ಕೆಲವು ನಿಬಂಧನೆಗಳನ್ನು ಮಾಡಿಕೊಳ್ಳುತ್ತಾರೆ. ಕಾಯಿ ಹೊಡೆದರೆ ಕೊಲೆ ಎಂದು ಹೆಸರು. ಕೊಲೆಯಾಗದೆ ಯಾರೂ ಒಳನುಗ್ಗಲು ಅವಕಾಶವಿಲ್ಲ. ಒಂದೇ ಕಾಯನ್ನು ಹೊರಗಡೆಯೇ ಸುತ್ತಿಸುತ್ತಿರಲು ಅವಕಾಶವಿಲ್ಲ. ಎಲ್ಲ ಕಾಯಿಗಳನ್ನು ನಡೆಸಿ ಗತ್ಯಂತರವಿಲ್ಲದಿದ್ದರೆ ಸುತ್ತಿಸಬೇಕು. ಒಂದೇ ಸಮನೆ ಮೂರು ಚೌಕವಾಗಲಿ, ಮೂರು ಬಾರವಾಗಲಿ ಬೀಳಬಾರದು. ಚೌಕ ಅಥವಾ ಬಾರ ಬಿದ್ದಾಗ ಅದರ ಕೈ ಉಂಟು. ಅಂದರೆ ಬೇಳೆ ಬಿಡಲು ಮತ್ತೊಂದು ಅವಕಾಶ. ಬೇಕಿಲ್ಲದಾಗ ಇಂಥ ಕೈ ಬೇಡ ಎನ್ನುವಂತಿಲ್ಲ.

ಒಳಗಡೆ ಎರಡು ಕಾಯಿಗಳನ್ನು ಜೊತೆ ಕಟ್ಟಬಹುದು. ಅದಕ್ಕೆ ತಕ್ಕಂತೆ ಬೇಳೆ ಬೀಳಬೇಕು. ನಡೆಸಿದ ಮೇಲೆ ಅವು ಗಟ್ಟಿ ಜೊತೆ. ಒಂಟಿ ಅದನ್ನು ದಾಟಬಹುದೇ, ಜೊತೆ ಒಂಟಿಯನ್ನು ಹೊಡೆಯಬಹುದೇ, ಜೊತೆಯನ್ನು ಕೀಳಬಹುದೇ ಇತ್ಯಾದಿ ವಿಚಾರಗಳಲ್ಲಿ ಮೊದಲೇ ಒಪ್ಪಂದವಾಗಿರಬೇಕು. ಗೆದ್ದವರೆಲ್ಲ ಆಟದ ಬೇಳೆಗಳನ್ನು ಸರಿ–ಬೆಸ ಆಟದಂತೆ ಕೈಯಲ್ಲಿ ಬಚ್ಚಿಟ್ಟುಕೊಂಡು ಎಷ್ಟು ಎಂದು ಕೇಳಿ, ತಪ್ಪು ಹೇಳಿದರೆ ಅಷ್ಟು ಗುದ್ದು ಎಂದು, ಎಣಿಸಿಕೊಂಡು ಸರಿಯಾಗಿ ಹೇಳಿದರೆ ಬೇಳೆಗಳನ್ನು ಕೊಟ್ಟುಕೊನೆಯಲ್ಲಿ ಅದಷ್ಟು ಗುದ್ದುಗಳನ್ನು ಸೋತವನ ಕೈಮೇಲೆ ಕೊಡಬಹುದು. ಇದಿಲ್ಲದೆಯೇ ಮರು ಆಟ ಪ್ರಾರಂಭಿಸಬಹುದು. ಕೆಲವರು ಎಲ್ಲ ಕಾಯಿಗಳನ್ನೂ ಹಣ್ಣಿನ ಮನೆಯಲ್ಲಿಟ್ಟು ಕಾಯಿಸು ಎಂದು ಹೇಳಿ ಪಕ್ಕದಿಂದ ಸೋತವನ ಕೈಗೆ ಏಟು ಕೊಡುತ್ತಾರೆ. ಪ್ರತಿ ಸಾರಿಯೂ ಒಂದೊಂದು ಕಾಯಿ ಆತನಿಗೆ ದಕ್ಕುತ್ತದೆ. ಏಳರ ಮನೆ ಆಟವೂ ಇದೇ ರೀತಿ. ಎರಡೆರಡು ಮನೆ ಜಾಸ್ತಿ. ಎರಡು ಬೇಳೆ ಜಾಸ್ತಿ. ಎಲ್ಲ ಬೇಳೆಗಳೂ ಅಂಗಾತ ಬಿದ್ದರೆ ಆರು, ಮಗುಚಿಕೊಂಡರೆ ಹನ್ನೆರಡು, ಇಷ್ಟೇ ವ್ಯತ್ಯಾಸ.



ಪಗಡೆಯ ಹಾಸು

**9 ಇಪ್ಪತ್ತರಾಟ :** ಇದು ಇಬ್ಬರು ಅಥವಾ ಹೆಚ್ಚು ಜನ ಆಡುವ ಆಟ. ಇದಕ್ಕೆ ನಾಲ್ಕು ಹುಣಿಸೆ ಬೇಳೆಗಳೋ ಕವಡೆಗಳೋ ಸಾಕು. ಪ್ರತಿಯೊಬ್ಬರೂ ಸರದಿಯಂತೆ ಆಡಬೇಕು. ಯಾರದು ಸರಿಯಾಗಿ ಇಪ್ಪತ್ತಾಗುತ್ತದೋ ಅವರು ಗೆದ್ದಂತೆ. ಕೊನೆಯಲ್ಲಿ ಉಳಿಯುವವರು ಸೋತಂತೆ. ಗೆದ್ದವರು ಸರಿಬೆಸದಾಟದಂತೆ ಬೇಳೆಗಳನ್ನು ಬಚ್ಚಿಟ್ಟುಕೊಂಡು ತೋರಿಸಿ ಆದಷ್ಟು ಗುದ್ದುಗಳನ್ನು ಎಣಿಸಿಕೊಂಡು ಸೋತವನ ಕೈಯನ್ನು ನೆಲದಲ್ಲಿರಿಸಿ ಗುದ್ದಬಹುದು.

**10 ಪಗಡೆ :** ಇದಕ್ಕೆ ಚಿತ್ರದಲ್ಲಿ ತೋರಿಸಿರುವಂತೆ ಕಸೂತಿ ಹಾಕಿದ ಇಲ್ಲವೇ ಬಣ್ಣ ಬಣ್ಣದ ಬಟ್ಟೆಯಲ್ಲಿ ಹೊಲೆದ ಒಂದು ಹಾಸು ಬೇಕು. ಕೆಂಪು, ಕಪ್ಪು, ಹಸಿರು ಮತ್ತು ಹಳದಿಯ ಪುಟ್ಟ ಘಂಟೆಯ ಆಕಾರದ ಕಾಯಿಗಳು ಪ್ರತಿ ಬಣ್ಣಕ್ಕೆ ನಾಲ್ಕರಂತೆ ಹದಿನಾರು ಬೇಕು. ಕೆಂಪು ಕಪ್ಪು ಒಬ್ಬರಿಗೆ. ಹಳದಿ ಹಸಿರು ಒಬ್ಬರಿಗೆ. ದಂತದ ಅಥವಾ ಮೂಳೆಯ ಘನ ಆಯತಾಕಾರದ ಎರಡು ದಾಳಗಳು ಬೇಕು. ಈ ದಾಳಗಳ ನಾಲ್ಕು ಕಡೆಯೂ ಒಂದು, ಮೂರು, ಆರು, ನಾಲ್ಕು ಈ ರೀತಿ ದಪ್ಪ ಚುಕ್ಕಿಗಳಿರುತ್ತವೆ. ದಾಳ ಬೀಳುವುದಕ್ಕೆ ಲೆತ್ತ ಅಥವಾ ಗರ ಎನ್ನುತ್ತಾರೆ. ಎರಡು ದಾಳಗಳಲ್ಲೂ ಒಂದು ಒಂದು ಬಿದ್ದರೆ ದುಗ; ಮೂರು ಮೂರು ಬಿದ್ದರೆ ಇತ್ತಿಗ; ಹೆಚ್ಚೆಂದರೆ ಹನ್ನೆರಡು; ಕಮ್ಮಿ ಎಂದರೆ ದುಗ; ತಮ್ಮ ತಮ್ಮ ಬಣ್ಣದ ಕಾಯಿಗಳನ್ನು ವಿರುದ್ಧ ದಿಕ್ಕಿನ ಮನೆಗಳಲ್ಲಿ ಎರಡೆರಡಾಗಿ, ಬಲಗಡೆ ಮಧ್ಯದ ಕಟ್ಟೆಮನೆಯಲ್ಲಿ ಎರಡು, ಮಧ್ಯದಲ್ಲಿ ಹಣ್ಣಿನ ಮನೆಯಿಂದ (ಕೇಂದ್ರ ದೊಡ್ಡಮನೆ) ಆರು ಮತ್ತು ಏಳನೆಯ ಮನೆಯಲ್ಲಿ ಒಂದೊಂದು ಹೀಗೆ ಇರಬೇಕು. ಈಗ ಯಾರಾದರೊಬ್ಬರು ಆಟ ಪ್ರಾರಂಭಿಸಿ ಗರ ಬೀಳಲು ಅಷ್ಟಕ್ಕೂ ಒಂದೇ ಬಣ್ಣದ ಕಾಯಿ ನಡೆಸಬೇಕು. ಹೀಗೆ ನಡೆಸುತ್ತ ಒಂದು ಪೂರ್ತಿ ಸುತ್ತು ಬಂದು ಮಧ್ಯದ ಮನೆಯಲ್ಲಿ ಒಳನುಗ್ಗಬೇಕು. ಹಣ್ಣಿನ ಕಾಯಿಗೆ ಗುರುತು ಕೆಂಪು ಮನೆಯಲ್ಲಿ ಅದು ಮಲಗಿಕೊಳ್ಳುವುದೇ. ಮೊದಲು ಎಲ್ಲ ಕಾಯಿಗಳನ್ನೂ ಹಣ್ಣು ಮಾಡಿದವರು ಗೆದ್ದರು. ಚೌಕಬಾರದಂತೆ ಈ ಆಟದಲ್ಲೂ ಒಂಟಿ, ಜೊತೆ, ಅವುಗಳನ್ನು ಕಟ್ಟುವುದು, ಕೀಳುವುದು, ನಡೆಸುವುದು, ಹೊಡೆಯುವುದು ಈ ವಿಚಾರದಲ್ಲಿ ಮೊದಲೇ ಅಂಗೀಕರಿಸಿದ ನಿಯಮಗಳಿರುತ್ತವೆ. ಪಗಡೆಯಾಟ ಬಹು ಪ್ರಾಚೀನವಾದುದು.

**11 ಚದುರಂಗ (ಚೆಸ್) :** ಇದು ಜಗತ್ಪ್ರಸಿದ್ಧವಾದ ಆಟ. ಆಟಗಳಲ್ಲೆಲ್ಲ ಬಹು ಬುದ್ಧಿವಂತಿಕೆ ಮತ್ತು ಏಕಾಗ್ರಚಿತ್ತದಿಂದ ಮಾತ್ರ ಆಡಬಹುದಾದ ಆಟ. ಇದಕ್ಕೆ ವಿಶೇಷವಾದ ಒಂದು ಮರದ ಅಥವಾ ರಟ್ಟಿನ ಹಾಸು ಇರುತ್ತದೆ. ಅದರಲ್ಲಿ ಒಂದು ಬಿಟ್ಟು ಒಂದು ಕಪ್ಪು ಮತ್ತು ಹಳದಿಯ ಮನೆಗಳು. ಹನ್ನೆರಡು ಅಂಗುಲ ಚೌಕಟ್ಟಿನಲ್ಲಿ ಸಾಲಿಗೆ ಎಂಟರಂತೆ ಎಂಟು ಸಾಲು ಒಟ್ಟು ಅರುವತ್ತನಾಲ್ಕು ಮನೆಗಳು. ಆಡುವ ಇಬ್ಬರೂ ಹೇಗೆ ಬೇಕಾದರೂ ಎದುರು ಬದುರಾಗಿ ಕುಳಿತುಕೊಳ್ಳಬಹುದು. ಚದುರಂಗವೆಂದರೆ ಸೈನ್ಯದ ನಾಲ್ಕು ಅಂಗಗಳು (ಚತುರ್+ಅಂಗ), ಈ ಆಟದಲ್ಲಿ ಕಪ್ಪು ಮತ್ತು ಬಿಳುಪಿನ ಎರಡು ರಾಜ, ಎರಡು ಮಂತ್ರಿ, ಎರಡು ಒಂಟೆ, ಎರಡು ಕುದುರೆ, ಎರಡು ಆನೆ (ಆನೆಯ ಪಾದ) ಮತ್ತು ಎಂಟೆಂಟರಂತೆ ಹದಿನಾರು ಜನ ಕಾಲಾಳುಗಳು. ಕಪ್ಪು ಕಾಯಿಗಳು ಒಬ್ಬರಿಗೆ, ಬಿಳಿಯ ಕಾಯಿಗಳು ಮತ್ತೊಬ್ಬರಿಗೆ. ನಡೆಸುವ ರೀತಿ: ಈ ಆಟದಲ್ಲಿ ರಾಜ, ಮಂತ್ರಿ ಮೊದಲಾದವರ ಚಲನವಲನ ಮತ್ತು ಆನೆ–ಕುರಿ, ಹುಲಿ–ಕುರಿ ಆಟಗಳಲ್ಲಿ ವಿವರಿಸಿರುವಂತೆ ಮೇಲೆ ಹಾರುವ ರೀತಿಯಲ್ಲಿ ನಾನಾ ನಿಬಂಧನೆಗಳಿವೆ. ತಮ್ಮ ಚದುರಂಗ ಬಲವನ್ನು ಕಳೆದುಕೊಳ್ಳದೆ ಎದುರಾಳಿಯ ಚದುರಂಗ ಬಲವನ್ನು ನಾಶಪಡಿಸುವುದು ಇಲ್ಲವೆ ರಾಜ ಚಲಿಸದಂತೆ ಮಾಡುವುದೇ ಗೆಲ್ಮೆ. ಹೀಗೆ ಮಾಡಲು ಬುದ್ಧಿವಂತ ಆಟಗಾರರಿಗೆ ಮೂರು ಕಾಯಿಗಳೇ ಸಾಕು. ಅಡಿಯ ಹಿಂದಿಡೆ ನಾಕ ಎಂಬ ಉಕ್ತಿ ಈ ಆಟಕ್ಕೆ ಹೇಳಿಸಿಕೊಂಡದ್ದು. ಮೈಯೆಲ್ಲ ಕಣ್ಣಾಗಿ ಮನವೆಲ್ಲ ಕೈಯಾಗಿ ಕಾಯಿ ನಡೆಸಬೇಕು. ನಡೆಸಲಾರದವರೇ ಸೋಲುಣ್ಣುವರು. ವಿವರಗಳಿಗೆ (ನೋಡಿ– ಚದುರಂಗ).

**ಹೊರಾಂಗಣ ಆಟಗಳು :** 1. ಉಪೂಪೆಕಡ್ಡಿ : ಇದು ಪುಟ್ಟ ಮಕ್ಕಳ ಆಟ. ಇಬ್ಬರೇ ಆಟಗಾರರು. ಇದಕ್ಕೆ ಸುಮಾರು ಹತ್ತು ಹನ್ನೆರಡು ಅಂಗುಲದ ಪುಟ್ಟದೊಂದು ಮಣ್ಣಿನ ಅಥವಾ ಮರಳಿನ ಏರಿ ಮತ್ತು ಎರಡಂಗುಲ ಉದ್ದದ ದಬ್ಬಳದಂತೆ ಕಡ್ಡಿ–ಇಷ್ಟಿದ್ದರೆ ಸಾಕು. ಒಂದು ಮಗು ಕಡ್ಡಿಯನ್ನು ಆಚೆ ಈಚೆ ತುದಿಯಲ್ಲಿ ಹೆಬ್ಬೆರಳು ಮತ್ತು ತೋರುಬೆರಳುಗಳ ಮಧ್ಯೆ ಇಟ್ಟುಕೊಂಡು ಮತ್ತೊಂದು ಮಗು ನೋಡುನೋಡುತ್ತಿದ್ದಂತೆಯೇ ಉಪಾಯವಾಗಿ ಏರಿಯನ್ನು ಎರಡು ಕೈಯಲ್ಲೂ ಮುಚ್ಚಿಕೊಂಡು ಆಡಿಸುತ್ತ ಕಡ್ಡಿಯನ್ನು ಬಚ್ಚಿಟ್ಟು ಕಡ್ಡಿ ಎಲ್ಲಿದೆ ಎಂದಾಗ ಮತ್ತೊಂದು ಮಗು ತನ್ನೆರಡು ಕೈಗಳ ಬೆರಳುಗಳನ್ನು ಒಂದಕ್ಕೊಂದು ಹೆಣೆದು ಮುಂಗೈಗಳು ಮೇಲಾಗುವಂತೆ ಕಡ್ಡಿ ಇರಬಹುದಾದ ಜಾಗವನ್ನು ಮುಚ್ಚಿಕೊಳ್ಳುತ್ತದೆ. ಅದನ್ನು ಬಚ್ಚಿಟ್ಟ ಮಗುವಿಗೆ ಗೊತ್ತಿರುವುದರಿಂದ ನಿಜವಾಗಿದ್ದರೆ ಒಪ್ಪಿಕೊಳ್ಳುತ್ತದೆ. ಇಲ್ಲದಿದ್ದರೆ ಆ ಜಾಗ ಬಿಟ್ಟು ಬೇರೆ ಜಾಗದಲ್ಲಿ ತೋರಿಸುತ್ತದೆ. ಇದರ ಮೇಲೆ ಆಟದಲ್ಲಿ ಸೋಲು ಗೆಲುವು. ಹೇಳುವ ಮಗು ಗೆದ್ದರೆ ಅದಕ್ಕೆ ಆಟ; ಸೋತರೆ ಅದರ ಕೈಗೆ ಬೊಗಸೆ ಮಣ್ಣಿತ್ತು ಮಧ್ಯಕ್ಕೆ ಅದಕ್ಕೆ ಅದೇ ಕಡ್ಡಿಯನ್ನು ನೆಟ್ಟು ಅದರ ಕಣ್ಣುಮುಚ್ಚಿಕೊಂಡು ಹತ್ತಾರು ಗಜ ದೂರ ಹೋಗಿ ಅಲ್ಲೆಲ್ಲೋ ಒಂದು ಕಡೆ ಅದನ್ನು ಹಾಕಿಸಿ, ವಾಪಸ್ಸು ಹಾಗೆಯೇ ಕರೆದು ಬಂದು ಮೊದಲಿನ ಸ್ಥಳದಲ್ಲಿ ಮೂರು ಸುತ್ತು ಸುತ್ತಿಸಿ ದಿಗ್ಭ್ರಮೆಯಾಗುವಂತೆ ಮಾಡಿ ಕಣ್ಣು ಬಿಡಿಸುವುದು. ಆ ಮಗು ಈಗ ಹೋಗಿ, ಹುಡುಕಿ ಕಡ್ಡಿ ತರಬೇಕು. ಹುಡುಕಿದರೂ ಸಿಗದಿದ್ದಾಗ ಗೆದ್ದ ಮಗು ನಕ್ಕು, ಚಪ್ಪಾಳೆ ತಟ್ಟಿ ಕಡ್ಡಿ ತೋರಿಸಿಕೊಡುತ್ತದೆ.

**2. ಕಣ್ಣಾಮುಚ್ಚಾಲೆ :** ಇದನ್ನು ಅವಿತೇಗುಮ್ಮನಾಟವೆಂದೂ ಈಚೆಗೆ, ಕಣ್ಣು ಮುಚ್ಚುವ ಅಜ್ಜಿಗೆ ಬದಲಾಗಿ, ಹಿಡಿಯಬೇಕಾದವರು ಒಂದು ಕಡೆ ನಿಂತು, ಗೋಡೆಗೋ ಯಾವುದಕ್ಕೋ ಎದುರಾಗಿ ನಿಂತು ಮುಚ್ಚಿಕೊಂಡಿದ್ದು ಬಚ್ಚಿಟ್ಟುಕೊಂಡಿರುವವರನ್ನು ಕಂಡಾಗ ಕೂಗಿಕೊಳ್ಳುವ ಗುಲ್ಲಾರಿಯೋ ಎಂದೂ ಕರೆಯುವರು. ಇದೊಂದು ಸಾಮೂಹಿಕ ಆಟ. ಒಬ್ಬರು ಹಿಡಿಯುವವರ ಕಣ್ಣು ಮುಚ್ಚಲು ಅಜ್ಜಿ. ಆದ್ದರಿಂದ ಇದಕ್ಕೆ ಕಣ್ಣಾಮುಚ್ಚೆ, ಕಾಡೇಗೂಡು; ಉದ್ದಿನಮೂಡೆ, ಉರುಳೇಹೋಯ್ತು; ಹಾಲೇ ಕಂಬ ಹರಿದೇಹೋಯ್ತು; ನಮ್ಮ ಹಕ್ಕಿ ಬಿಟ್ಟೆನೋ ಬಿಟ್ಟೆ; ನಿಮ್ಮ ಹಕ್ಕಿ ಮುಚ್ಚಿಟ್ಟುಕೊಳ್ಳಿರೋ ಮುಚ್ಚಿಟ್ಟುಕೊಳ್ಳಿ ಎಂದು ಗಟ್ಟಿಯಾಗಿ ಹಾಡಿಕೊಂಡು ಹೇಳಿ ತನ್ನ ಹಕ್ಕಿ ಬಿಡುತ್ತಾಳೆ. ಈ ಹಕ್ಕಿ ಬಚ್ಚಿಟ್ಟುಕೊಂಡಿರುವ ಹಕ್ಕಿಗಳನ್ನು ಹಿಡಿಯಬೇಕು. ಯಾವುದಾದರೂ ಬುದ್ಧಿವಂತ ಕಳ್ಳ ಹಕ್ಕಿ ಇದಕ್ಕೆ ಕಾಣದಂತೆ ಅಜ್ಜಿಯನ್ನು ಬಂದು ಮುಟ್ಟಿಸಿ ಬಿಟ್ಟರೆ, ಮತ್ತೆ ಹಿಡಿಯುತ್ತಿದ್ದ ಹಕ್ಕಿಯೇ ಕಣ್ಣುಮುಚ್ಚಿಸಿಕೊಂಡು ಹಿಡಿಯಬೇಕು. ಇಲ್ಲದೆ ಯಾವುದಾದರೂ ಒಂದು ಗುಪ್ತವಾಗಿದ್ದ ಹಕ್ಕಿಯನ್ನು ಕಂಡುಬಿಟ್ಟರೆ ಹೆಸರು ಹಿಡಿದು ಕೂಗಿ ಕಂಡೆ, ಕಂಡೆ ಎಂದು ಹಿಡಿದರಾಯಿತು. ಆ ಹಕ್ಕಿ ಈಗ ಕಣ್ಣುಮುಚ್ಚಿಕೊಳ್ಳಬೇಕು. ಮಕ್ಕಳು ಓಡೋಡಿ ಬಂದು ಅಜ್ಜಿಯನ್ನು ಮುಟ್ಟುವ ಚಿತ್ರ ಅದ್ಭುತ ರಮಣೀಯ.

**3. ಕುಂಟಾಟ:** ಇದು ಸಾಮಾನ್ಯವಾಗಿ ಚಿಕ್ಕ ಮಕ್ಕಳ ಆಟ. ಆಡುವವರೆಲ್ಲರೂ ಸೇರಿ ಒಂದು ಚೌಕವನ್ನು (ಆಟದ ಅಂಗಣ) ಬರೆದುಕೊಳ್ಳುತ್ತಾರೆ. ಯಾರಾದರೊಬ್ಬರು ಹಿಡಿಯ ಬೇಕು. ಎಲ್ಲರೂ ಸೇರಿ ಒಟ್ಟಿಗೆ ಚಪ್ಪಾಳೆ ಹಾಕಿ ಕೈಯಿಟ್ಟು ತೋರಿಸಿ ಯಾರ ಎರಡು

ಕೈಗಳು ಒಂದರ ಮೇಲೊಂದಿಟ್ಟಾಗ ಭಿನ್ನವಾಗಿರುತ್ತದೋ ಅವರು ಹಿಡಿಯಬೇಕು. ಒಬ್ಬರು ಈ ರೀತಿ ಸಿಕ್ಕುವತನಕ ಚಪ್ಪಾಳೆ ತಟ್ಟುತ್ತಿರುತ್ತಾರೆ. ಸಿಕ್ಕಿದವರು ಕುಂಟುತ್ತ ಕುಂಟುತ್ತ ಚೌಕಟ್ಟಿನೊಳಗೆ ಬಾಕಿಯವರನ್ನು ಹಿಡಿಯಬೇಕು. ಕಾಲು ಬಿಡಕೂಡದು. ಆಯಾಸವಾದಾಗ ಸಮಯಾವಕಾಶ ಕೇಳಬಹುದು. ಮೊದಲು ಸಿಕ್ಕಿಬಿದ್ದವರು ಮುಂದಕ್ಕೆ ಕುಂಟಿಕೊಂಡು ಹಿಡಿಯಬೇಕು. ಎಲ್ಲ ಬಿಟ್ಟು ಹೊರಹೋದವರೂ ಸಿಕ್ಕಿಬಿದ್ದಂತೆ ಭಾವನೆ.

**4. ಕುಂಟುವ ಬಿಲ್ಲೆ :** ಸಾಮಾನ್ಯವಾಗಿ ಹೆಣ್ಣು ಮಕ್ಕಳ ಆಟ. ಚೌಕವಾಗಿ ನಾಲ್ಕು, ಆರು, ಎಂಟು ಹೀಗೆ ತಮಗೆ ಅನುಕೂಲವಾದಂತೆ ಮನೆಗಳನ್ನು ಎರಡು ಸಾಲಾಗಿ ಬರೆದುಕೊಳ್ಳಬೇಕು. ಹೆಂಚಿನ ಅಥವಾ ಮಡಕೆಯ ಚೂರೊಂದನ್ನು ವೃತ್ತಾಕಾರವಾಗಿ ಬಚ್ಚವನ್ನಾಗಿ ಮಾಡಿಕೊಂಡು ಅದನ್ನು ಅನುಕ್ರಮವಾಗಿ ಮೊದಲನೆಯ ಮನೆ, ಎರಡನೆಯ ಮನೆ – ಹೀಗೆ ಇಟ್ಟುಕೊಂಡು ಕುಂಟಬೇಕು. ಈ ಬಚ್ಚವನ್ನು ಹಣೆಯಮೇಲೆ ಇಟ್ಟುಕೊಂಡು ಸರಿಯೋ ಎಂದುಕೊಂಡು ಕಡೆಗೆ ಹೋಗಿ ಮನೆಗಳನ್ನು ನೋಡದೆ ಬಚ್ಚವನ್ನು ಹಿಂದಕ್ಕೆ ಯಾವುದಾದರೊಂದು ಮನೆಗೆ ಸರಿಯಾಗಿ ಬಿದ್ದರೆ ಅದು ಅವರ ಮನೆ. ಮುಂದೆ ಮತ್ತೊಬ್ಬರ ಆಟ. ಮೊದಲು ಆಡಿದಂತೆ ತಾವೂ ಆಡಿದರೆ ಅವರಿಗೂ ಒಂದು ಮನೆ ದಕ್ಕುತ್ತದೆ. ಹೀಗೆ ಮನೆಗಳನ್ನು ಗೆಲ್ಲುತ್ತ ಹೋದಾಗ ಹೆಚ್ಚು ಮನೆ ಗೆದ್ದವರು ಅಥವಾ ಇನ್ನೊಬ್ಬರು ಹೋಗದಂತೆ ಮಾಡಿದವರು ಗೆದ್ದಂತೆ.

**5. ಕಾಚಿಕೋಲ್ ಬಂದಿಕೋಲ್ :** ಇದು ಈಗಿನ ಸಂಗೀತಕುರ್ಚಿ (ಮ್ಯೂಸಿಕಲ್ ಚೇರ್) ಆಟವಿದ್ದಂತೆ. ಆಡುವ ಜನರ ಸಂಖ್ಯೆಗಿಂತ ಒಂದು ಕಡಿಮೆ ಇರುವಷ್ಟು ಕುರ್ಚಿಗಳನ್ನು ವೃತ್ತಾಕಾರವಾಗಿ ಇಟ್ಟು ಅದರ ಮೇಲೆ ಎಲ್ಲರೂ ಕೂಡುತ್ತಾರೆ. ಕುರ್ಚಿ ಇಲ್ಲದವರು ಜಾಗ ಹುಡುಕುತ್ತ ಸುತ್ತು ಹಾಕುತ್ತಿರುತ್ತಾರೆ. ಅವನ ಕಣ್ಣು ತಪ್ಪಿಸಿ ಉಳಿದವರು ತಮ್ಮ ತಮ್ಮ ಸ್ಥಳ ಬದಲಾಯಿಸುತ್ತಿರುತ್ತಾರೆ. ಖಾಲಿ ಕುರ್ಚಿ ಕಂಡೊಡನೆ ಓಡುವವ ಅಲ್ಲಿ ಹೋಗಿ ಕೂತುಬಿಡುತ್ತಾನೆ. ಜಾಗ ಸಿಗದವ ಸೋತು ಸುತ್ತು ತಿರುಗುತ್ತಾನೆ. ಕುರ್ಚಿಯ ಬದಲು ನೆಟ್ಟ ಕಂಬಗಳನ್ನು ಬಳಸಬಹುದು.

**6. ರತ್ತೋ ರತ್ತೋ :** ಇದು ಹೆಣ್ಣು ಮಕ್ಕಳ ಆಟ. ಆಡುವವರೆಲ್ಲ ವೃತ್ತಾಕಾರವಾಗಿ ಒಬ್ಬರಿಗೊಬ್ಬರು ಕೈ ಕಟ್ಟಿಕೊಂಡು ರತ್ತೋ ರತ್ತೋ ರಾಯನ ಮಗಳೇ, ಬಿತ್ತೋ ಬಿತ್ತೋ ಭೀಮನ ಮಗಳೇ, ಹದಿನಾರೆಮ್ಮೆ ಕಾಯಲಾರೆ, ಕರೆಯಲಾರೆ, ಕಾಸಲಾರೆ, ಕುಕ್ಕುರು ಬಸವಿ, ಕೂರು ಬಸವಿ ಎಂದ ಕೂಡಲೇ ಎಲ್ಲರೂ ತತ್‌ಕ್ಷಣವೇ ಕುಳಿತುಕೊಳ್ಳಬೇಕು. ಕೊನೆಯಲ್ಲಿ ಕುಳಿತವಳು ಸೋತಂತೆ. ಈಗ ಅವಳನ್ನು ಮಧ್ಯದಲ್ಲಿ ನಿಲ್ಲಿಸಿಕೊಂಡು, ಉಳಿದವರೆಲ್ಲರೂ ವೃತ್ತಾಕಾರವಾಗಿ ಮೊದಲಿನಂತೆ ಒಬ್ಬರಿಗೊಬ್ಬರು ಕೈ ಕಟ್ಟಿಕೊಂಡು ಮೊದಲು ಹೇಳಿದಂತೆ ಹೇಳುತ್ತ ಸುತ್ತಲೂ ತಿರುಗಬೇಕು. ಕೊನೆಯಲ್ಲಿ ಕೂರು ಬಸವಿ ಎಂದು ಎಲ್ಲರೂ ಅವಳ ತಲೆಯ ಮೇಲೆ ಕೈಯಿಟ್ಟು ಬಲಾತ್ಕಾರವಾಗಿ ಕುಕ್ಕರಿಸುವಂತೆ ಮಾಡುತ್ತಾರೆ. ಇದೇ ಆಟವನ್ನು ಬೇರೆ ರೀತಿಯಲ್ಲೂ ಆಡುತ್ತಾರೆ.

**7. ಟೋಪಿಯಾಟ :** ಸಾಮಾನ್ಯವಾಗಿ ಗಂಡು ಮಕ್ಕಳ ಆಟ. ಶಾಲೆಗಳಲ್ಲಿ ಆಡಿಸುವುದುಂಟು. ಆಡುವವರೆಲ್ಲರೂ ವೃತ್ತಾಕಾರವಾಗಿ ಸುಖಾಸನ ಹಾಕಿಕೊಂಡು ಒಳಮುಖವಾಗಿ ಕುಳಿತುಕೊಳ್ಳಬೇಕು. ಯಾರಾದರೊಬ್ಬರು ತಮ್ಮ ಟೋಪಿಯನ್ನೊ ಅಥವಾ ಹುರಿಯಾಗಿ ಮಾಡಿ ಮಡಿಸಿ ಹಗ್ಗದಂತೆ ಮಾಡಿದ ಟವಲನ್ನೊ ಕೈಯಲ್ಲಿ ಹಿಡಿದುಕೊಂಡು ಕುಳಿತಿರುವವರ ಹಿಂದುಗಡೆ ಕೈಗೆ ನಿಲುಕುವಂತೆ ಅದನ್ನು ಇಡಬೇಕು. ಬೆನ್ನಹಿಂದೆ ಇದೆ ಎನ್ನುವುದು ಅವನಿಗೆ ತಿಳಿದೇ ಇರುವುದಿಲ್ಲ. ಇಟ್ಟವನು ಒಂದು ಸುತ್ತು ಓಡಿಬಂದು ಕೂತವನ ಬೆನ್ನ ಮೇಲೆ ಟೋಪಿಯಿಂದ ಏಟು ಕೊಡಲು ಪ್ರಾರಂಭಿಸುತ್ತಾನೆ. ಏಟು ತಿನ್ನುವವ ಒಂದು ಸುತ್ತು ಓಡಿಬಂದು ತನ್ನ ಜಾಗದಲ್ಲಿ ಕೂಡಬೇಕು. ಆಟ ಮುಂದುವರಿಯುತ್ತದೆ. ಚುರುಕಾದವ ತನ್ನ ಬೆನ್ನ ಹಿಂದಿರುವ ಟೋಪಿಯನ್ನು ಗುರುತಿಸಿ ಕೈಗೆ ತೆಗೆದುಕೊಂಡು ಇಟ್ಟವನನ್ನು ಅಟ್ಟಿಸಿಕೊಂಡು ಹೋಗುತ್ತಾನೆ. ಇಟ್ಟವನು ಹೊಡೆತ ತಿಂದು ಅಥವಾ ಅದರಿಂದ ತಪ್ಪಿಸಿಕೊಂಡು ಒಂದು ಸುತ್ತು ಓಡಿ, ಎದ್ದವನ ಜಾಗದಲ್ಲಿ ಕೂಡಬೇಕು.

**8. ಮರಕೋತಿ ಆಟ :** ಇದಂತೂ ಗಂಡುಮಕ್ಕಳಾಟ. ಆಡುವವರೆಲ್ಲ ಒಂದು ಮರವನ್ನು ಏರಿ ಕೋತಿಗಳಂತೆ ಕುಳಿತುಕೊಳ್ಳುತ್ತಾರೆ. ಹಿಡಿಯುವವನೊಬ್ಬ ಆಮೇಲೆ ಮರವನ್ನೇರಿ ಹಿಡಿಯಬೇಕು. ಆಗ ಪ್ರತಿಯೊಬ್ಬನೂ ಸಿಕ್ಕಂತೆ ರೆಂಬೆಯಿಂದ ರೆಂಬೆಗೆ ಹಾರುತ್ತ ಹೋಗುತ್ತಾನೆ. ಕೋತಿಯಂಥ ಚಟುವಟಿಕೆ, ಮರ ಹತ್ತುವುದರಲ್ಲಿ ನೈಪುಣ್ಯ ಇದ್ದವರಿಗೆ ಮಾತ್ರ ಈ ಆಟ. ಮೊದಲು ಸಿಕ್ಕಿದವನು ಈ ಸಾರಿ ಹಿಡಿಯುವವನಾಗಬೇಕು. ಹೀಗೆ ಆಟ ಮುಂದುವರಿಯುತ್ತದೆ.

**9. ಗೋಲಿಯಾಟ :** ಗಂಡುಮಕ್ಕಳ ಆಟ. ನೆಲದಲ್ಲಿ ಒಂದು ಗುಳಿ ತೋಡಿ (ಬದ್ದು ಮಾಡಿಕೊಂಡು) ಆಡುವುದು ಒಂದು ಬಗೆ. ಎಲ್ಲರೂ ನಿಗದಿಯಾದ ದೂರದಿಂದ ಬದ್ದಿನ ಕಡೆಗೆ ಗೋಲಿಬಿಡಬೇಕು. ಒಂದೇ ಎಸೆತಕ್ಕೆ ಗೋಲಿಯನ್ನು ಬದ್ದಿಗೆ ತುಂಬಿದವರು ಗೆದ್ದಂತೆ. ಹೀಗೆ ಗೋಲಿ ಎಸೆದಾಗ ಬದ್ದಿಗೆ ಅತಿ ಹತ್ತಿರವಿರುವ ಗೋಲಿ ಕುಳ್ಳಿ, ಅತಿ ದೂರವಿರುವ ಗೋಲಿ ಗಟ್ಟಿ. ಒಪ್ಪಂದದಂತೆ ಗಟ್ಟಿ ಗೋಲಿಯವನೋ ಕುಳ್ಳಿ ಗೋಲಿಯವನೋ ಮೊದಲು ಆಡಬೇಕು. ಆತನು ಬದ್ದು ತುಂಬಬೇಕು. ಮತ್ತೆ ಹೊಡೆಯಬೇಕು. ಹೀಗೆ ಆಡುವಾಗ ಎಲ್ಲಿ ತಪ್ಪಿದರೂ ಅವನ ಆಟ ಅಲ್ಲಿಗೆ ನಿಲ್ಲುತ್ತದೆ. ಮತ್ತೆ ಮುಂದಿನ ಕುಳ್ಳಿ ಅಥವಾ ಗಟ್ಟಿ ಗೋಲಿಯವನ ಆಟ. ಹೀಗೆ ಮೊದಲು ಹತ್ತು ಮಾಡಿದವನು ಗೆದ್ದಂತೆ. ಒಬ್ಬ ಹತ್ತು ಮಾಡಿಬಿಟ್ಟರೆ, ಬಾಕಿಯವರ ಲೆಕ್ಕವೆಲ್ಲ ವಜಾ ಆದಂತೆ, ಅವರು ಮತ್ತೆ ಮೊದಲಿನಿಂದ ಆಡಬೇಕು. ಹೀಗೆ ಕೊನೆಯಲ್ಲುಳಿಯುವವನೇ ಸೋತವ.

ಹೀಗೆ ಸೋತವನು ತನ್ನ ಗೋಲಿಯನ್ನು ನಿಗದಿಯಾದ ದೂರದಿಂದ ಬದ್ದಿನ ಕಡೆಗೆ ಎಸೆದು ತುಂಬಲು ಪ್ರಯತ್ನಿಸಬೇಕು. ತುಂಬಿದರೆ ಮೊದಲು ಗೆದ್ದವನಿಗೆ ಆಟ ಕೊಟ್ಟಂತಾಯಿತು, ಮತ್ತೆ ಎರಡನೆಯವನಿಗೆ. ಆದರೆ ಗೋಲಿ ಬದ್ದಿಗೆ ಬೀಳದಿದ್ದರೆ ಗೆದ್ದವನು ಬದ್ದಿನ ಹತ್ತಿರದಿಂದ ಸೋತವನ ಗೋಲಿಯನ್ನು ಹೊಡೆದು ದೂರ ಓಡಿಸುತ್ತಾನೆ. ಅದನ್ನು ಸೋತವನ ಒಪ್ಪಂದದಂತೆ ಬೆರಳುಗಳಿಂದಲೋ ಮೊಳಕೈಯಿಂದಲೋ ದೇಕ (ತಳ್ಳ) ಬೇಕು. ಬದ್ದು ತುಂಬಲು ಯತ್ನಿಸಬೇಕು. ತುಂಬಿದರೆ ಗೆದ್ದ; ಇಲ್ಲದಿದ್ದರೆ ಮತ್ತೆ ಹೊಡೆತ; ಮತ್ತೆ ದೇಕಬೇಕು. ಹೀಗೆ ಸೋತವ ಗೆದ್ದವರೆಲ್ಲರಿಗೂ ಗೋಲಿಯನ್ನು ಬಿಟ್ಟು (ಎಸೆದು) ದೇಕಿ ಬದ್ದು ತುಂಬಿ ಆಟ ಕೊಡಬೇಕು.

ಈ ಆಟದಲ್ಲಿ ಅನೇಕ ಪ್ರಕಾರಗಳಿವೆ. ಎಣಿಕೆಗೆ ಬದಲಾಗಿ ಹೊನ್ನಗನ್ನೆ, ಹೊನಕೆರಡು, ಬಂಗಲಿ, ಬಾಲ ಇತ್ಯಾದಿಯಾಗಿಯೂ ಎಕ್ಕಲ್‌ಗಾಜ, ಡಬ್ಬೀರಾಜ, ತೀನಂ ತಿರ್ಪು– ಹೀಗೆ ನಾಲ್ಕು, ಏಳು ಅಥವಾ ಹತ್ತರತನಕ ಎಣಿಸುತ್ತಾರೆ. ಗೋಲಿಗೆ ಬದಲಾಗಿ ಗುಂಜಿಯನ್ನು (ಗುಂಡನೆಯ ಗೂರ್ಜಿಕಲ್ಲು) ಉಪಯೋಗಿಸುವುದುಂಟು. ಬದ್ದಿಗೆ ಬದಲಾಗಿ ಪುಟ್ಟ ಚೌಕ ಬರೆದು ತಮ್ಮ ತಮ್ಮದಾಗಿ ಒಂದೊಂದು ಗೋಲಿಯನ್ನು ಪಣವಾಗಿಟ್ಟು ದೂರದಿಂದ ಅದನ್ನು ಹೊಡೆದು ಚೌಕದಿಂದ ಆಚೆಗೆ ತಳ್ಳಿ ಗೆದ್ದುಕೊಳ್ಳುವುದು–ಹೀಗೆ ನಿಯಮಗಳನ್ನು ಬದಲಾವಣೆ ಮಾಡಿಕೊಂಡು ಪೆಯಿಂದ ಮುಂತಾಗಿ ಹೆಸರಿಟ್ಟುಕೊಂಡು ಆಡುವುದೂ ಉಂಟು.

**10. ಗಜ್ಜುಗದಾಟ :** ಈ ಆಟಕ್ಕೆ ಹೆಚ್ಚು ಗಜ್ಜುಗಗಳು ಮತ್ತು ಒಂದೊಂದು ಬಚ್ಚ (ಅಥವಾ ಗುಂಜಿ) ಬೇಕು. ಆಯತಾಕಾರವಾಗಿಯೋ ಅಂಡಾಕಾರವಾಗಿಯೋ ಮನೆಯೊಂದನ್ನು ಬರೆದುಕೊಂಡು ಆಡುವವರೆಲ್ಲರೂ ಒಬ್ಬೊಬ್ಬರಿಗೆ ಒಂದೊಂದು ಬಡ್ಡಿ (ಮೂರು ಗಜ್ಜುಗದ ಮೇಲೆ ಒಂದು) ಗಜ್ಜುಗಗಳನ್ನು ಅದರಲ್ಲಿ ಇಡಬೇಕು. ನಿಗದಿಯಾದ ದೂರದಿಂದ ಗಜ್ಜುಗಗಳತ್ತ ಬಚ್ಚ ಎಸೆಯಬೇಕು. ಹೀಗೆ ಎಸೆದಾಗ ಆ ಏಟಿಗೆ ಗಜ್ಜುಗ ಈಚೆಗೆ ಹಾರಿದರೆ ಬಳಿ ಹೊಡೆದಂತಾಯ್ತು. ಎಲ್ಲೆಯ ಗೀರಿನ ಮೇಲೆ ಬಿದ್ದರೆ ಬಿದ್ದಷ್ಟು ಗಜ್ಜುಗಗಳನ್ನು ವಟ್ಟ ಕೊಡಬೇಕು. ಗಜ್ಜುಗ ಅಲುಗಾಡಿದರೆ ಜುಮ್ಮಿ ಮಾಡಿಕೊಂಡಂತೆ. ಅಂಥವನಿಗೂ ಮೊದಲಾಟ ವುಂಟು. ಆದರೆ ಹಳಿ ಹೊಡೆದವನಿದ್ದರೆ ಆತನಿಗೆ ಮೊದಲ ಅವಕಾಶ. ಇಂಥವರು ಯಾರೂ ಇಲ್ಲದಿದ್ದರೆ ಒಪ್ಪಂದದ ಪ್ರಕಾರ ಗಟ್ಟಿ ಅಥವಾ ಕುಳ್ಳಿ ಬಚ್ಚದವರಿಗೆ ಮೊದಲಾಟ. ಹೀಗೆ ಬಚ್ಚದಿಂದ ಹೊಡೆದು ಹೊರ ಹೊರಡಿಸಿದ ಗಜ್ಜುಗಗಳು ಗೆದ್ದವನ ಲಾಭ. ಕಳೆದುಕೊಂಡವನಿಗೆ ನಷ್ಟ ಈ ಆಟದ ನಿಬಂಧನೆಗಳು ಬೇರೆ ಬೇರೆ ಕಡೆ ಬೇರೆ ಬೇರೆಯಾಗಿರುತ್ತವೆ.

**11. ಚೆಂಡಾಟ :** ಇದರಲ್ಲಿ ಅನೇಕ ಆಟಗಳಿವೆ. ಲಗ್ಗೆಚೆಂಡು ಗಂಡು ಮಕ್ಕಳ ಆಟ. ಇದಕ್ಕೆ ಚಪ್ಪಟೆಯಾದ ಸುಮಾರು ಎಂಟು ಹತ್ತು ಅಂಗುಲ ಆಯತಾಕಾರದ ಕಲ್ಲು (ಇದೇ ಲಗ್ಗೆ) ಮತ್ತು ಆಡಲು ಒಂದು ಹಳೇ ಅರಿವೆಯನ್ನು ಪಟ್ಟಿ ಪಟ್ಟಿಯಾಗಿ ಹರಿದು ಸುತ್ತಿ ಬಿಚ್ಚಿಕೊಳ್ಳದಂತೆ ಹೊಲಿದ ಚೆಂಡು–ಇಷ್ಟು ಸಾಕು. ಕಲ್ಲು ಸಿಗದಿದ್ದರೆ ಹೆಂಚಿನ ಅಥವಾ ಒಡೆದ ಮಡಕೆಯ ಚೂರುಗಳನ್ನು ಒಂದರ ಮೇಲೊಂದಿಟ್ಟು ಸುಮಾರು ಐದಾರು ಅಂಗುಲ ಎತ್ತರ ಬರುವಂತೆ ಪೇರಿಸಿದರೂ ಲಗ್ಗೆಯಾಗುತ್ತದೆ. ಆಡುವವರೆಲ್ಲ ಸಮನಾಗಿ ಎರಡು ಗುಂಪಾಗುತ್ತಾರೆ: ಈಗಿನ ಕ್ರಿಕೆಟ್ ಆಟದಂತೆ ಲಗ್ಗೆಗೆ ಹೊಡೆಯುವವರು ಒಂದು ಗುಂಪು. ಲಗ್ಗೆ ಕಾಯ್ದುಕೊಂಡಿದ್ದು ಚೆಂಡೇನಾದರೂ ಪುಟವೆದ್ದು ಬಂದರೆ ಆತುಕೊಳ್ಳುವವರು ಒಂದು ಗುಂಪು. ಪ್ರತಿಯೊಬ್ಬರಿಗೂ ಮೂರು ಅವಕಾಶ. ಅಕಸ್ಮಾತ್ ಚೆಂಡನ್ನು ಆತುಬಿಟ್ಟರೆ ಮೊದಲ ಎಸೆತವಾಗಿದ್ದರೂ ಲಗ್ಗೆ ಬಿದ್ದಿದ್ದರೂ ಆಟ ಹೋಯಿತು. ಮುಂದಿನವನಿಗೆ ಆಟ.

ಲಗ್ಗೆ ಬಿದ್ದು ಚೆಂಡು ಆನಲು ಸಿಗದೆ ಹೋದರೆ ಲಗ್ಗೆ ಬೀಳಿಸಿದ ಪಂಗಡ ಚೆಂಡನ್ನು ಅವಿತಿಟ್ಟುಕೊಳ್ಳುತ್ತಾರೆ. ಯಾರಲ್ಲಿದೆ ಎಂಬುದು ಅವರಿಗೆ ಮಾತ್ರ ಗೊತ್ತು. ಆದರೆ ಪ್ರತಿಯೊಬ್ಬನೂ ಚೆಂಡಿರುವವನಂತೆ ನಟಿಸಿ ಲಗ್ಗೆ ಕಾಯುತ್ತಿದ್ದ ಗುಂಪಿನವರನ್ನು ಹರತೋ ಹರತೋ ಎಂದು ಕೂಗುತ್ತ ಹೊಡೆಯಲು ಅಟ್ಟಿಸಿಕೊಂಡು ಹೋಗುತ್ತಾನೆ. ಚೆಂಡು ಹೊಡೆದು ಯಾರಿಗಾದರೂ ತಗುಲಿದರೆ ಮತ್ತೆ ಅವಿತಿಟ್ಟುಕೊಳ್ಳುವುದು. ತಗುಲದಿದ್ದರೂ ಚೆಂಡಿಲ್ಲದವನನ್ನು ಯಾರಾದರೂ ಮುಟ್ಟಿಸಿಕೊಂಡುಬಿಟ್ಟರೂ ಎಚ್ಚರಿಕೆಯಿಂದ ಮರೆಯಲ್ಲೋಡಿ ಬಂದು ಲಗ್ಗೆಯನ್ನು ಮೊದಲಿದ್ದಂತೆ ಒಡ್ಡಿದರೂ ಗೆದ್ದಂತೆ. ಆಗ ಕಾಯುತ್ತಿದ್ದವರು ಲಗ್ಗೆ ಹೊಡೆದವರಾಗುತ್ತಾರೆ. ಹೊಡೆಯುತ್ತಿದ್ದವರು ಲಗ್ಗೆ ಕಾಯುತ್ತಾರೆ. ಹರತೋ ಎಂದು ಕೂಗಿಕೊಂಡು ಅಟ್ಟಿಸಿಕೊಂಡು ಹೋಗುವುದರಿಂದ ಇದಕ್ಕೆ ಹರತೋ ಚೆಂಡು ಎಂದೂ ಹೆಸರು.

**(i) ಸಿಕ್ಕಿದವರಿಗೆ ಸಿಕ್ಕುಪಾಲು :** ಎರಡು ಪಂಗಡ ಮಾಡಿಕೊಳ್ಳದೆ ಯಾರು ಬೇಕಾದರೂ ಲಗ್ಗೆ ಬೀಳಿಸಿ, ಆಡುವ ಲಗ್ಗೆಚೆಂಡಿನ (ಸಿಕ್ಕಿದವರಿಗೆ ಸೀರುಂಡೆ) ಒಂದು ಪ್ರಭೇದಕ್ಕೆ ಈ ಹೆಸರಿದೆ.

**(ii) ಕುದುರೆಚೆಂಡು :** ಈ ಆಟದಲ್ಲೂ ಎರಡು ಪಂಗಡ, ಇಲ್ಲಿ ಲಗ್ಗೆಗೆ ಬದಲಾಗಿ ಎರಡು ಕಲ್ಲುಗಳ ಮೇಲೆ ಒಂದು ಅಡ್ಡಕಡ್ಡಿ. ನಿಗದಿಯಾದ ದೂರದಿಂದ ಚೆಂಡನ್ನು ಅದರಡಿ ನೇರವಾಗಿ ಎಸೆದು ಕಡ್ಡಿಯನ್ನು ಬೀಳಿಸಬೇಕು. ಬೀಳಿಸದಿದ್ದರೆ ಚೆಂಡನ್ನು ಹೊಡೆಯುತ್ತಿರುವ ಪಂಗಡಕ್ಕೆ ಒಬ್ಬನನ್ನು ಕುದುರೆಯಾಗಿ ಕಳುಹಿಸಬೇಕು. ಆಟದ ವಿವರ ಹೀಗೆ: ಒಂದು ಗುಂಪಿನವರು ಅಡ್ಡಕಡ್ಡಿಯ ಹತ್ತಿರ ನಿಂತುಕೊಂಡು ಒಬ್ಬೊಬ್ಬರೂ ಮೂರು ಮೂರು ಅವಕಾಶದೊಳಗೆ ದಾಂಡಿನಿಂದ (ಇದನ್ನು ಗಾರು ಎಂದೂ ಕರೆಯುತ್ತಾರೆ) ಚೆಂಡನ್ನು ಕಾಯುವವರತ್ತ ಬಾರಿಸಬೇಕು. ದಾಂಡನ್ನು ಒಂದು ಸಾರಿ ಬೀಸಿ ಚೆಂಡಿಗೆ ತಾಗದಿದ್ದರೂ ಆ ಅವಕಾಶ ಮುಗಿದಂತೆ. ಹೊಡೆದೂ ಅದನ್ನು ಎದುರಾಳಿಗಳು ಆತುಕೊಂಡು ಬಿಟ್ಟರೆ ಆಯಿತು. ಇಲ್ಲದಿದ್ದರೆ ಹೊಡೆದ ಚೆಂಡನ್ನು ಹಿಡಿದು ಗುರಿಗೆ ಹೊಡೆದು ಅಡ್ಡಗಡ್ಡಿಯನ್ನು ಬೀಳಿಸಿದರೂ ಅಥವಾ ಅದರಡಿ ಚೆಂಡು ನುಗ್ಗಿಸಿಬಿಟ್ಟರೂ ಹೊಡೆಯುತ್ತಿರುವ ಪಂಗಡದವರಿಗೆ ಒಬ್ಬ ಆಟಗಾರನನ್ನು ಕುದುರೆಯಾಗಿ ಕಳುಹಿಸಬೇಕು. ಹೊಡೆಯುವವರಲ್ಲಿ ಒಬ್ಬ ಅವನ ಬೆನ್ನ ಮೇಲೇರಿ ಕುಳಿತುಕೊಳ್ಳುತ್ತಾನೆ. ಹೀಗೆ ಮತ್ತೆ ಅಡ್ಡಕಡ್ಡಿ ಬೀಳಿಸುವ ತನಕವೂ ಆತ ಕುದುರೆಯಾಗಿರಬೇಕು. ಕೆಲವು ಸಾರಿ ಇಂಥ ಕುದುರೆಗಳ ಸಾಲೇ ಇರುತ್ತದೆ. ಚೆಂಡನ್ನು ಯಶಸ್ವಿಯಾಗಿ ಗುರಿ ಮುಟ್ಟಿಸಿದಾಗ ಈ ಕುದುರೆಗಳು ಸವಾರನನ್ನು ಎತ್ತಿಹಾಕಿ ಓಡುವುದನ್ನು ನೋಡಲು ಮೋಜೆನಿಸುತ್ತದೆ.

ಒಂದು ಪಂಗಡದವರೆಲ್ಲರೂ ಹೊಡೆದು ಮುಗಿಸಿದಮೇಲೆ ಆಟ ಬದಲಾಯಿಸುತ್ತದೆ. ಯಥಾಪ್ರಕಾರ ಆಟ ಮುಂದುವರಿಯುತ್ತದೆ.

**(iii) ಟಾಂಗ್ ಬಿರಾಂಗ್ :** ಚಿಣ್ಣಿಕೋಲಿನ ಆಟದಂತೆ ರೂಲುದೊಣ್ಣೆಯಂತಿರುವ ದಾಂಡಿನಿಂದ ಚಿಣ್ಣಿಗೆ ಬದಲಾಗಿ ಚೆಂಡನ್ನು ಹೊಡೆಯುವುದು. ಆದರೆ ಚೆಂಡನ್ನು ನೆಲದ ಮೇಲಿಡದೆ ಟೌಂಗ್ ಎಂದಾಗ ಯಾವುದಾದರೊಂದು ಪಾದವನ್ನೆತ್ತಿ ಅದರ ಮೇಲಿಟ್ಟುಕೊಂಡು ಎಸೆದು, ಬಿರಾಂಗ್ ಎಂದು ಒಂದು ಮುಂಗೈ ಮೇಲೆ ಮಾಡಿಕೊಂಡು ಹೆಬ್ಬೆರಳು ಮತ್ತು ಮಧ್ಯದ ಎರಡು ಬೆರಳನ್ನೂ ಕೆಳಗೆ ಮಡಿಸಿ ತೋರುಬೆರಳು ಮತ್ತು ಕಿರು ಬೆರಳುಗಳ ಮೇಲೆ ಚೆಂಡನ್ನಿಟ್ಟುಕೊಂಡು ಮೇಲೆಸೆದು, ಮುಷ್ಟಿ ಎಂದುಕೊಂಡು ಒಂದು ಕೈ ಮುಷ್ಟಿಯ ಮೇಲೆ ಚೆಂಡನ್ನಿಟ್ಟುಕೊಂಡು ಎಸೆದು, ಗೌಡ (ಘೋಡಾ?) ಎಂದುಕೊಂಡು ಒಂದು ಮಣಿಕಟ್ಟಿನ ಮೇಲೆ, ಅಂಕಿ ಎಂದುಕೊಂಡು ಕಣ್ಣಿನ ಹುಬ್ಬಿನ ಮೇಲಿಟ್ಟುಕೊಂಡು ಚೆಂಡು ಬೀಳಿಸಿ ಮೇಲಿರುವಂತೆಯೇ ದಾಂಡಿನಿಂದ ಹೊಡೆದು ಅಟ್ಟುತ್ತಾರೆ. ಚೆಂಡನ್ನು ನಿಗದಿಯಾದ ಒಂದು ಬದ್ದುವಿನ ಹತ್ತಿರ ಗುರಿಯಿಟ್ಟು ಎಸೆಯಬೇಕು. ಚಿಣ್ಣಿ ಆಟದಂತೆ ಇಲ್ಲೂ ಚೆಂಡನ್ನು ಹೊಡೆದು ಹಿಮ್ಮೆಟ್ಟಿಸಬಹುದು. ನೆಗೆಯುವಷ್ಟು ದೂರದಲ್ಲಿ ಚೆಂಡು ಬಿದ್ದರೆ ಹೊಡೆಯುವವನ ಆಟ ಆಯಿತು. ಮೇಲೆ ಹೇಳಿದ ಯಾವ ಸ್ಥಾನದಲ್ಲಿ ಹೊಡೆದಾಗಲೂ ಏಟು ತಾಗದಿದ್ದರೂ ಆಡುವವನ ಆಟ ಆಯಿತು. ಗುರಿಯಿಟ್ಟು ಚೆಂಡನ್ನು ಬದ್ದಿನತ್ತ ಹೊಡೆದಾಗ ಬದ್ದಿನಿಂದ ಚೆಂಡಿಗಿರುವ ದೂರವನ್ನು ಚಿಣ್ಣಿ ಆಟದಂತೆ ಅಳೆದು ಎಣಿಸುತ್ತಾರೆ. ಆದರೆ ಟಾಂಗ್‌ಬಿರಾಂಗ್ ಇತ್ಯಾದಿಯಾಗಿ ಏಳರ ತನಕ ಇಷ್ಟು ಆಯಿತು ಎಂದು ಲೆಕ್ಕ ಹಾಕುತ್ತಾರೆ.

**12. ಚಿಣ್ಣಿಕೋಲು :** ಮಕ್ಕಳಲ್ಲಿ ಜನಪ್ರಿಯವಾದ ಆಟ. ಚಿಣ್ಣಿ ಕಣ್ಣಿಗೋ ಮುಖಕ್ಕೋ ಬಡಿದರೆ ಅಪಾಯವೂ ಉಂಟು. ಇದಕ್ಕೆ ಮೇಲೆ ಹೇಳಿದ ಟಾಂಗ್‌ಬಿರಾಂಗಿನಂತೆ ಚೆಂಡು ಬೇಡ. ಬದಲಾಗಿ ಎರಡು ತುದಿಗಳಲ್ಲೂ ಚೂಪು ಮಾಡಿದ ಮುಟ್ಟ ಒಂದು ಒಂದೂವರೆ ಅಂಗುಲ ವ್ಯಾಸದಷ್ಟು ಗಾತ್ರದ ಎರಡು ಮೂರಂಗುಲ ಉದ್ದದ ಮರದ ತುಂಡು ಬೇಕು. ಇದರ ಒಂದು ತುದಿಗೆ ಮೆಲ್ಲಗೆ ಏಟು ಕೊಟ್ಟು ಮೇಲಕ್ಕೆ ಪುಟಿದು ಬರುವಂತೆ ಮಾಡಿ ದಾಂಡಿನಿಂದ ಹೊಡೆಯಬೇಕು.

ಈ ಆಟದಲ್ಲೂ ಎರಡು ಪಂಗಡ. ಹೊಡೆಯುವವರು ಮತ್ತು ಕಾಯುವವರು. ಚೆಂಡಾಟದಂತೆ ಇಲ್ಲೂ ಅನೇಕ ನಿಯಮಗಳು. ಆದರೆ ಬದ್ದಿನಿಂದ ಚಿಣ್ಣಿಗಿರುವ ದೂರವನ್ನು ದಾಂಡಿನಿಂದ ಅಳೆದು ನೂರಾದರೆ ಒಂದು ಬ್ಯಾಂಕು ಎನ್ನುತ್ತಾರೆ. ಈ ಬ್ಯಾಂಕು ನೂರೇ ಆಗಬೇಕಿಲ್ಲ. ಬೇಕಾದರೆ ಒಪ್ಪಂದದ ಪ್ರಕಾರ ಇಳಿಸಬಹುದು. ತಪ್ಪು ಎಣಿಕೆ ಹೇಳಿದರೆ ಆಗಿದ್ದೆಲ್ಲಾ ಉಫುಫ ಆಗಿ ವಜಾ ಆಗಿಬಿಡುತ್ತದೆ. ಚಿಣ್ಣಿ ಹೊಡೆಯುವ ಮೊದಲು ತುರ್‌ದಾಂಡ್ ತುರ್‌ಬದ್, ತುರ್‌ಚೀಪ್, ಕಟ್‌ಕೋಲ್, ರೆಡಿ? ಎಂದು ಕೇಳಿ ಎದುರಾಳಿಗಳು ರೆಡಿ ಎಂದಮೇಲೆ ಹೊಡೆಯುವುದು ವಾಡಿಕೆ. ಇಲ್ಲಿ ರೆಡಿ ಎನ್ನುವ ಮಾತಿನಂತೆ ಟ್ರೂ ಬಿಡ್, ಟ್ರೂ ಚಿಪ್, ಕಟ್ ಮೊದಲಾದ ಇಂಗ್ಲಿಷ್ ಪದಗಳ ಅಪಭ್ರಂಶಗಳೂ ದಾಂಡು, ಕೋಲ್ ಮೊದಲಾದ ಕನ್ನಡ ಶಬ್ದಗಳೂ ಸೇರಿರುವುದು ಗಮನಾರ್ಹವಾಗಿದೆ. ಆಟ ನಮ್ಮದೇ. ಯಾವಾಗಲೋ ಇಂಗ್ಲಿಷ್ ಪರಿಭಾಷೆ ಬಂದು ಸೇರಿಬಿಟ್ಟಿದೆ, ಅಪಭ್ರಂಶವಾಗಿದೆ.

**13. ಕೋಲು ಹಾರಿಸುವ ಆಟ :** ಇದಕ್ಕೆ ಎರಡು ಮೂರಡಿ ಉದ್ದದ ಕೋಲುಗಳು ಬೇಕು. ಆಡುವವರು ಎಷ್ಟು ಬೇಕಾದರೂ ಇರಬಹುದು. ಒಬ್ಬ ಮಾತ್ರ ತನ್ನ ಕೋಲನ್ನು ನೆಲದ ಮೇಲೆ ಇಟ್ಟು ಕಾಯಬೇಕು. ಯಾರೂ ಇದಕ್ಕೆ ಒಪ್ಪದಿದ್ದರೆ ಚಪ್ಪಾಳೆ ಹಾಕಿ, ರತ್ತೋ ರತ್ತೋ ಆಟದಂತೆ ತೀರ್ಮಾನಿಸುತ್ತಾರೆ. ಉಳಿದವರೆಲ್ಲ ತಮ್ಮ ಕೋಲನ್ನು ಒಪ್ಪಂದದಂತೆ ಕಲ್ಲಿನಮೇಲೆ ಊರಿ ಇಟ್ಟುಕೊಂಡಿದ್ದು ಕೋಲು ಕಾಯುತ್ತಿರುವವನ ಕೈಗೆ ಸಿಕ್ಕದಂತೆ ಆತನ ಕೋಲನ್ನು ಹಾರಿಸಿಕೊಂಡು ಹೋಗಬೇಕು. ನೆಲದ ಮೇಲೆ ಕೋಲು ಊರಿದವನನ್ನು ಕಾಯುವವ ಮುಟ್ಟಿದರೆ ಅವನು ಔಟ್ ಆದಂತೆ. ಕಾಯುವವನಿಗೆ ಕೋಲು ಕೊಟ್ಟವನೂ ಸಿಕ್ಕಿಬಿದ್ದ. ಇಲ್ಲದಿದ್ದರೆ ಆತನ ಕೋಲನ್ನು ಸಾಧ್ಯವಾದಷ್ಟು ದೂರ ಹಾರಿಸುತ್ತಾರೆ. ಎಲ್ಲೋ ಒಂದು ಕಡೆ ಆತ ಗೆಲ್ಲುತ್ತಾನೆ. ಆಗ ಅವನು ಮೊದಲು ಹೊರಟ ಸ್ಥಾನವನ್ನು ಕುಂಟಿಕೊಂಡು ಕವಡೆ ಕವಡೆ, ಕಂಚಿನ ಕವಡೆ; ಕವಡೆ ಕವಡೆ ಕಂಚಿನ ಕವಡೆ ಎಂದು ಹೇಳುತ್ತ ಉಸಿರು ಬಿಡದೆ, ಮೂರೇ ಉಸಿರಿನಲ್ಲಿ ತಲುಪಬೇಕು. ಕಾಲೂ ಬಿಡಕೂಡದು. ಇದರಲ್ಲೂ ನಿಯಮಗಳ ವ್ಯತ್ಯಾಸವಿದೆ.

**14. ಬುಗುರಿ :** ಇದಕ್ಕೆ ಮರದ ಬುಗುರಿ ಮತ್ತು ದಾರ ಬೇಕು. ಎಲ್ಲರೂ ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ ಒಂದೇ ಸಾರಿಗೆ ಬುಗುರಿ ಆಡಿಸಬೇಕು. ಆಡುತ್ತಿದ್ದಂತೆಯೇ ಯಾರು ಬುಗುರಿಯನ್ನು ದಾರ ಸುತ್ತಿ ಮೇಲೆಸೆದು ಆನಲು ತಪ್ಪುವನೋ ಆತನೇ ಬದ್ದಿನಲ್ಲಿ ಬುಗುರಿಯಿಡಬೇಕು. ಉಳಿದವರು ನೇರವಾಗಿ ಹೊಡೆದೋ ಅಥವಾ ಆಡುತ್ತಿದ್ದ ಬುಗುರಿಯನ್ನು ಹಾಗೆಯೇ ಬೆರಳುಗಳಿಂದ ಉಪಾಯವಾಗಿ ಎತ್ತಿಯೋ ಅದರ ಮೇಲೆಸೆದು ಅದನ್ನು ಬದ್ದಿನ ಸುತ್ತಣ ವೃತ್ತದಿಂದ ಹೊರಹೊರಡಿಸಬೇಕು. ಅದು ಹೊರಟ ತಕ್ಷಣವೇ ಮಿಂಚಿನ ವೇಗದಲ್ಲಿ ಎಲ್ಲರೂ–ಬುಗುರಿಯಿಟ್ಟಿದ್ದವನೂ–ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ, ಆಡಿಸಿ ಮೇಲೆತ್ತಬೇಕು. ಬುಗುರಿ ಹೊರಡಿಸಿದವನ ಬುಗುರಿ ಇನ್ನೂ ಆಡುತ್ತಿದ್ದರೆ ಅದನ್ನೇ ಅವನು ಮೇಲೆತ್ತಬಹುದು. ಕೊನೆಯಲ್ಲುಳಿದವನೇ ಕಳ್ಳ. ಆಟ ಹೀಗೆ ಮುಂದುವರಿಯುತ್ತದೆ. ಚುರುಕಾದ ಆಟಗಾರರಾದರೆ ಸೋತವನ ಬುಗುರಿಯನ್ನು ಗುನ್ನಹಾಕಿ ಒಡೆದಿಡುತ್ತಾರೆ.

**15. ಕೊಕ್ಕೋ :** ಈ ಆಟಕ್ಕೆ ಆಡುವವರಿದ್ದರೆ ಸಾಕು. ಆಟಗಾರರಲ್ಲಿ ಕೊಕ್ಕು ಕೊಡುವವರು ಮತ್ತು ಹಿಡಿಯುವವರು ನಾಲ್ಕು ಅಥವಾ ಐದೇ ಜನ; ಉಳಿದವರು ಸಿಕ್ಕದಂತೆ ಓಡಾಡುವರು. ಈಚೀಚೆಗೆ ಈ ಆಟ ಪಟ್ಟಣಗಳಲ್ಲೂ ಬಹುಮನ್ನಣೆ ಪಡೆದು ನಿಬಂಧನೆಗಳು ಶಾಸ್ತ್ರೀಯವಾಗಿ ಮಾರ್ಪಟ್ಟು ಅಖಿಲ ಭಾರತೀಯ ಮಟ್ಟಕ್ಕೇರುವಷ್ಟು ಜನಾದರಣೆ ಪಡೆದಿದೆ. ಹಿಡಿಯುವವರು ಸರದಿ ಬದಲಾಯಿಸುವಾಗ ಕುಳಿತಿರುವವರನ್ನು ಕೊಕ್ಕೆಂದು ಕೂಗಿ ಎಬ್ಬಿಸುತ್ತಾರೆ. ಅದಕ್ಕೇ ಈ ಹೆಸರು. ಒಂದೇ ಸಮನೆ ಓಡೋಡಿ ಬಂದು ಹಿಡಿಯಬೇಕಾದವರನ್ನು ಓಡಿಸಿಕೊಂಡು ಸುತ್ತುತ್ತಾ ಕೊಕ್ ಅನ್ನು ಕೊಟ್ಟರೆ ತಾರಿಮೇರಿ ಕೊಕ್ ಎನ್ನುವುದುಂಟು. ಸುಧಾರಿತ ಆಟದಲ್ಲಿ ಕೊನೆಯಲ್ಲಿ ಮೂರಡಿಯ ಮರದ ಕಂಬಗಳಿರುತ್ತವೆ. ಹಳ್ಳಿಗಳಲ್ಲಾದರೋ ಗಟ್ಟಿದೇಹದ ಇಬ್ಬರೂ ಕಂಬಗಳ ಕೆಲಸ ಮಾಡುತ್ತ ಸ್ಥಾಣುಗಳಾಗಿದ್ದು ಆಟ ನೋಡಿ ಸಂತೋಷಪಡುತ್ತಾರೆ. ತಲೆಗೆ ಮಾತ್ರ ಸ್ವಲ್ಪ ತಾಪತ್ರಯ. ಹಿಡಿಯುವ ಆಟಗಾರ ತಲೆಯನ್ನು ಹಿಡಿದು ಕಾರ ತಿರುವುತ್ತಿರುತ್ತಾನೆ.

**16. ಹುಡುತುತು :** ಇದನ್ನು ಚುಡುಗುಡು ಎಂದೂ ತುತುತುತೂ ಎಂದೂ ಕಬಡಿ ಎಂದೂ ಕರೆಯುತ್ತಾರೆ. ಇದರಲ್ಲಿ ಸಮನಾಗಿ ಎರಡು ಗುಂಪು. ಆಟದ ಮೈದಾನವನ್ನು ಎಲ್ಲೆಕಟ್ಟು ಹಾಕಿ ಮಧ್ಯಕ್ಕೆ ಸಮಭಾಗ ಮಾಡುತ್ತಾರೆ. ಯಾವುದಾದರೊಂದು ಕಡೆಯವರಲ್ಲಿ ಯಾರಾದರೊಬ್ಬರು ಉಸಿರು ಕಟ್ಟಿ ಗುಡು ಗುಡು ಎನ್ನುತ್ತ ಮಧ್ಯದ ಗೆರೆ ದಾಟಿ ಎದುರಾಳಿಗಳತ್ತ ಹೋಗಿ, ಅವರ ಹಿಡಿತಕ್ಕೆ ಸಿಗದೆ ಅವರಲ್ಲೊಬ್ಬನನ್ನು ಮುಟ್ಟಿ ಹಿಂತಿರುಗಬೇಕು. ಆಗ ಮುಟ್ಟಿಸಿಕೊಂಡವ ಸೋತನೆಂದು ಅರ್ಥ. ಈ ಯತ್ನದಲ್ಲಿ ಉಸಿರು ಬಿಟ್ಟರೆ, ಸಿಕ್ಕಿಬಿದ್ದರೆ, ಗೆರೆಯನ್ನು ದಾಟಿ ತನ್ನ ಪಾಳೆಯಕ್ಕೆ ಬರದಿದ್ದರೆ ಈತ ಸೋತ. ಯಾರೂ ಸುತ್ತಣ ಗೆರೆಯನ್ನು ದಾಟಿ ಪಾಳೆಯದಿಂದ ಹೊರಗೆ ಹೋಗುವಂತಿಲ್ಲ. ಒಂದು ಕಡೆ ಒಬ್ಬ ಹಿಡಿಯುವ ಪ್ರಯತ್ನ ಮಾಡಿದ ಮೇಲೆ ಇನ್ನೊಂದು ಕಡೆಯವರ ಆಟ. ಹೀಗೆ ಆಟ ಮುಂದುವರಿದು ಕೊನೆಯಲ್ಲಿ ಯಾವುದಾದರೊಂದು ತಂಡ ಗೆಲ್ಲುತ್ತದೆ.

**17. ಕೋಲಾಟ :** ಆಟಗಳಲ್ಲೆಲ್ಲ ಕಲಾತ್ಮಕವೂ ಜನಪ್ರಿಯವೂ ಆದುದೆಂದರೆ ಕೋಲಾಟವೇ ಆಗಿದೆ. ಇದೊಂದು ರಂಜನೀಯ ಪ್ರಕಾರ. ಸುಗ್ಗಿಯ ಕಾಲದಲ್ಲಿ, ಹಬ್ಬಹರಿದಿನಗಳಲ್ಲಿ ಇದನ್ನು ಹೆಚ್ಚಾಗಿ ಆಡುತ್ತಾರೆ. ಇರುಳ ಬೆಳದಿಂಗಳಿನಲ್ಲಿ ಆಟ ಆಡುತ್ತಿದ್ದರೆ, ಕಣ್ಣಿಗೆ ಹಬ್ಬ, ಕಿವಿಗೆ ರಸದೌತಣ. ಹೃದಯದಲ್ಲಿ ಹಿಗ್ಗಿನ ಕಾರಂಜಿ ಪುಟಿಯುತ್ತದೆ. ಮೈ ನವಿರೇಳುತ್ತದೆ. ಹೀಗೆ ಉಲ್ಲಾಸಕರವೂ ಆನಂದದಾಯಕವೂ ಆದ ಕೋಲಾಟ ಆಬಾಲವೃದ್ಧರಾದಿಯಾಗಿ ಸರ್ವರಿಗೂ ಪ್ರಿಯವಾದದ್ದು, ಆಕರ್ಷಕವಾದದ್ದು. ಇದರಲ್ಲಿ ಹುಡುಗರಂತೆ ದೊಡ್ಡವರೂ ಭಾಗವಹಿಸುತ್ತಾರೆ. ಇಲ್ಲಿಯ ಆಟಗಾರರ ಸಾಧನಗಳೆಂದರೆ ಕೋಲುಗಳು. ಕೋಲುಗಳ ಮೂಲಕವೇ ಆಟ ವಿವಿಧ ಭಂಗಿಯಲ್ಲಿ ಸಾಗುವುದರಿಂದ ಇದಕ್ಕೆ ಕೋಲಾಟವೆಂದೇ ಹೆಸರಾಯಿತು. ಕೋಲುಗಳನ್ನು ನೀರಂಜಿ ಮರದಿಂದ ಮಾಡಿರುತ್ತಾರೆ. ಆಟಗಾರರು ಕೋಲು ಕೋಲಣ್ಣ ಕೋಲೆ, ಕೋಲು ರನ್ನದ ಕೋಲೆ ಎಂದು ಮುಂತಾಗಿ ಹೇಳುತ್ತ ಆಟವನ್ನು ಪ್ರಾರಂಭಿಸುವರು. ಈ ಕೋಲಾಟದಲ್ಲಿ ಹಲವಾರು ಒಳಭೇದಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು ಸುತ್ತುಕೋಲು, ಹಾರ್‌ಗುಟುಕು, ಜಡೆಕೋಲು, ಗೀಜಗನ ಕೋಲು, ತೇರುಕೋಲು, ಮನೆಕೋಲು, ಚಿಟುಕಿನ ಕೋಲು, ವಾದದ ಕೋಲು, ಕಾಲು ಸಂಧಿನ

ಕೋಲು, ಕೊರವಂಜಿ ಕೋಲು ಮತ್ತು ಉಯ್ಯಾಲೆ ಕೋಲು. ಹೀಗೆ ವಿವಿಧ ರೂಪದಲ್ಲಿ ಕಾಣಿಸಿಕೊಳ್ಳುವ ಕೋಲಾಟ ಹಳ್ಳಿಯ ಮನರಂಜನೆಯಲ್ಲಿ ಅಗ್ರ ಪಾತ್ರವನ್ನು ವಹಿಸುತ್ತದೆ. ಕೋಲಾಟ ಕೇವಲ ಆಟ ಮಾತ್ರವಾಗಿರದೆ ಕಲೆ ಕೂಡ ಆಗಿದೆ. ಇದರಲ್ಲಿ ಬರುವ ಹಾಡು, ಹಾಡಿಗೆ ತಕ್ಕ ಕುಣಿತ, ಕುಣಿತಕ್ಕೆ ತಕ್ಕ ಕೋಲುಗಳ ಸಪ್ಪಳ–ಇವುಗಳಿಂದಾಗಿ ಆಸ್ವಾದಿಸುವ

ಕೋಲಾಟ

ಹೃದಯದಲ್ಲಿ ಮಹತ್ತಾದ ಪರಿಣಾಮವನ್ನು ಬೀರುತ್ತದೆ. ಹೀಗೆ ಆಟ ಸಂಗೀತ ಮತ್ತು ನರ್ತನ–ಈ ಮೂರರ ಸಮ್ಮಿಲನವಾಗಿರುವ ಕೋಲಾಟ ಜನಪದ ಆಟಗಳಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವುದು ಮಾತ್ರವಲ್ಲದೆ. ಉತ್ಕೃಷ್ಟ ಕಲೆಯೂ ಆಗಿ ಪರಿಣಮಿಸಿದೆ. **(ನೋಡಿ– ಕೋಲಾಟ).**

**18. ಉಯ್ಯಾಲೆಯಾಟ :** ಇದಕ್ಕೆ ಅವಶ್ಯವಾಗಿ ಎಂಟೇ ಜನರಿರಬೇಕು. ಪ್ರಾರಂಭದಲ್ಲಿ ಆ ಎಂಟು ಜನರೂ ವೃತ್ತಾಕಾರದಲ್ಲಿ ನಿಂತು ಕೋಲು ಹುಯ್ಯುತ್ತಿರುತ್ತಾರೆ. ಎಡಕ್ಕೊಮ್ಮೆ ಬಲಕ್ಕೊಮ್ಮೆ ಕೋಲನ್ನು ಕೊಡುತ್ತಿದ್ದ ಸಮಯದಲ್ಲಿ ಉಯ್ಯಾಲೆ ಬಣ್ಣದುಯ್ಯಾಲೆ, ಸಿರಿಗಂಧಕಾಳವ್ವನ ಉಯ್ಯಾಲೆ ಎಂದು ನಾಯಕ ಹಾಡನ್ನು ಪ್ರಾರಂಭಿಸುತ್ತಾರೆ. ಈ ಚರಣಗಳನ್ನು ಪ್ರತಿ ಪದದ ಕೊನೆಯಲ್ಲೂ ಪುನರುಕ್ತ ಗೊಳಿಸುತ್ತಾರೆ ಉಳಿದವರು. ಉಯ್ಯಾಲೆನಾಡೊಳಿ ಉಯ್ಯಾಲೆಪಾಡೊಳ, ಉಯ್ಯಾಲೆ ಸಣ್ಣ ದನಿಯೋಳೆ ಎಂಬ ಮುಂದಿನ ಮತ್ತೆರಡು ಸಾಲುಗಳನ್ನು ಹಾಡುವಾಗ ಆಟಗಾರರು ಮಧ್ಯದಲ್ಲಿ ನಾಲ್ವರು ಎದುರೆದುರಾಗಿ, ಉಳಿದ ನಾಲ್ವರು ಅಕ್ಕಪಕ್ಕದಲ್ಲಿ ನಿಂತು ಕೋಲು ಹುಯ್ಯುತ್ತಾರೆ. ಮುಂದಿನ ಮತ್ತೆರಡು ಸಾಲುಗಳನ್ನು ಉಯ್ಯಾಲೆ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಉಯ್ಯಾಲೆಯಲ್ಲಿ ಕುಳಿತು. ತೂಗಿಸಿಕೊಂಡುದಕ್ಕಿಂತಲೂ ಹೆಚ್ಚಾದ ರಸಾನಂದ ಇದರಲ್ಲುಂಟಾಗುತ್ತದೆ.

ಹೀಗೆ ವಿವಿಧ ರೂಪದಲ್ಲಿ ಕಾಣಿಸಿಕೊಳ್ಳುವ ಕೋಲಾಟ ಹಳ್ಳಿಯ ಮನರಂಜನೆಯಲ್ಲಿ ಅಗ್ರ ಪಾತ್ರವನ್ನು ವಹಿಸುತ್ತದೆ. ಕೋಲಾಟ ಕೇವಲ ಆಟ ಮಾತ್ರವಾಗಿರದೆ ಕಲೆ ಕೂಡ ಆಗಿದೆ. ಇದರಲ್ಲಿ ಬರುವ ಹಾಡು, ಹಾಡಿಗೆ ತಕ್ಕ ಕುಣಿತ, ಕುಣಿತಕ್ಕೆ ತಕ್ಕ ಕೋಲುಗಳ ಸಪ್ಪಳ– ಇವುಗಳಿಂದಾಗಿ ಆಸ್ವಾದಿಸುವ ಹೃದಯದಲ್ಲಿ ಮಹತ್ತಾದ ಪರಿಣಾಮವನ್ನು ಬೀರುತ್ತದೆ. ಹೀಗೆ ಆಟ, ಸಂಗೀತ ಮತ್ತು ನರ್ತನ– ಈ ಮೂರರ ಸಮ್ಮಿಲನವಾಗಿರುವ ಕೋಲಾಟ ಜನಪದ ಆಟಗಳಲ್ಲಿ ಅಗ್ರಪಂಕ್ತಿಯಲ್ಲಿ  ನಿಲ್ಲುವುದು ಮಾತ್ರವಲ್ಲದೆ, ಉತ್ಕೃಷ್ಟ ಕಲೆಯೂ ಆಗಿ ಪರಿಣಮಿಸಿವೆ.

**19. ಬಳೆಗಾಜಿನ ಆಟ :** ಇದರಲ್ಲಿ ಎರಡು ಪಕ್ಷಗಳಿರುತ್ತವೆ. ನೆಲದಲ್ಲಿ ಮೂರು ಗುಳಿಗಳನ್ನು ತೋಡಿಸುತ್ತಾರೆ. ಆಮೇಲೆ ಆಟಗಾರರೆಲ್ಲ ಒಂದೆಡೆ ಸೇರಿ ಕಾಸನ್ನು ಮೇಲಕ್ಕೆಸೆದು ಸೋಲು ಗೆಲುವನ್ನು ನಿರ್ಧರಿಸುತ್ತಾರೆ. ಇದಕ್ಕೆ ಟಾಸ್ ಎಂದು ಹೆಸರು. ಸೋತವರು ಗುಳಿಯಿಂದ ಬಳೆಗಾಜನ್ನು ತೆಗೆಯಬೇಕಾಗುತ್ತದೆ; ಗೆದ್ದವರು ಬಳೆಗಾಜನ್ನು ಹೂತಿಡುವ ಕೆಲಸವನ್ನು ವಹಿಸಬೇಕಾಗುತ್ತದೆ; ಗೆದ್ದವರು ಇರುವ ಮೂರು ಗುಳಿಗಳಲ್ಲಿ ಯಾವುದಾದರೂ ಒಂದಕ್ಕೆ ಬಳೆಚೂರುಗಳನ್ನು ಹಾಕಿ ಮೂರನ್ನೂ ಮಣ್ಣಿನಿಂದ ಮುಚ್ಚಿರುತ್ತಾರೆ. ಆಗ ಸೋತವರು ಬಳೆಗಾಜು ಎಲ್ಲಿದೆ ಎಂದು ಹುಡುಕಬೇಕು. ಅವರು ಮೂರು ಗುಳಿಗಳ ಮೇಲೂ ಕೈಯಾಡಿಸಿ, ಯಾವುದೇ ಒಂದನ್ನು ಗೋರುತ್ತಾರೆ. ಹಾಗೆ ಗುಳಿಯಿಂದ ಮಣ್ಣನ್ನು ಗೋರಿದಾಗ ಅವರಿಗೆ ಬಳೆ ಸಿಕ್ಕಿದರೆ ಅವರು ಗೆದ್ದ ಹಾಗೆ. ಬಳೆ ಸಿಕ್ಕುವುದೇ ಅವರಿಗೆ ಲಾಭ. ಒಂದು ಪಕ್ಷ ಬಳೆ ಸಿಕ್ಕದೆ ಹೋದರೆ ಅವರು ಸೋತಂತೆ. ಆಗ ಗೆದ್ದವರು ಬಳೆಗಳನ್ನು ತೆಗೆದು ತೋರುವರು. ಸೋತವರು ಆ ಬಳೆಗಳು ಎಷ್ಟಿದ್ದವೋ ಅಷ್ಟನ್ನು ಸೇರಿಸಿ ಗೆದ್ದವರಿಗೆ ಕೊಡಬೇಕಾಗುತ್ತದೆ. ಹೀಗೆ ಆಟ ಮುಂದುವರಿಯುತ್ತಿರುತ್ತದೆ. ಇದರಲ್ಲಿ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಇಬ್ಬರೂ ಪಾತ್ರವಹಿಸಬಹುದು. ಈಚೆಗೆ ಈ ಆಟದಲ್ಲಿ ಬಹಳ ಸುಧಾರಣೆಗಳಾಗಿವೆ. ಕೊಕ್ಕೋ ಆಟದಂತೆ ಅನೇಕ ಹೊಸ ನಿಯಮ ನಿಬಂಧನೆಗಳು ಬಂದಿವೆ. ಇದೂ ಬಹಳ ಜನಪ್ರಿಯವಾಗಿ, ಅಖಿಲ ಭಾರತೀಯ ಮನ್ನಣೆ ಪಡೆದಿದೆ.

ಇದೇ ರೀತಿ ಇನ್ನೂ ಸಾಹಸದ ಆಟಗಳಾದ ಕತ್ತಿವರಸೆ, ಪಂಜು ತಿರುಗಿಸುವುದು, ದೊಣ್ಣೆವರಸೆ, ಕುಸ್ತಿ ಇವು ಹಳ್ಳಿಗಾಡಿನ ಮೂಲೆಮೂಲೆಗಳಲ್ಲಿ ಇನ್ನೂ ಕುಟುಕುಜೀವ ಉಳಿಸಿಕೊಂಡಿವೆ. ಸಾಮೂಹಿಕ ನೃತ್ಯಗೀತಗಳಿಂದ ಕೂಡಿದ ಕೋಲಾಟವಂತೂ ಕನ್ನಡನಾಡಿನ ಹೆಮ್ಮೆ. ಹಬ್ಬಗಳಲ್ಲಿ ಪುಟಾಣಿಗಳ ಪಟದ ಹಬ್ಬವೊಂದಿದೆ. ಅತ್ತೆಸೊಸೆಯರು ಒಂದೇ ಹೊಸಲನ್ನು ತುಳಿಯಬಾರದ ಆಷಾಢಮಾಸದ ಪ್ರಥಮೈಕಾದಶಿಯ ದಿನವೇ ಮಕ್ಕಳ ಈ ಮಹೋತ್ಸವದ ದಿನ. ಮಕ್ಕಳ ಹಿಂದೆ ಮುದುಕರೂ ಹೊರಡುವ ರಸಘಳಿಗೆ ಅದು. ನಾಗರಿಕತೆ, ಪಾಶ್ಚಾತ್ಯ ಕ್ರೀಡೆಗಳು, ಪದ್ಧತಿಗಳ ಅನುಕರಣೆ ಜನಪದ ಆಟಗಳಿಗೆ ಕುಠಾರಪ್ರಾಯವಾಗಿವೆ.

**20. ಕಲ್ಲೊ ಮಣ್ಣೊ :** ಹೆಣ್ಣುಮಕ್ಕಳು ಗಂಡುಮಕ್ಕಳು ಯಾರಾದರೂ ಭಾಗವಹಿಸ ಬಹುದಾದ ಈ ಆಟದಲ್ಲಿ ಹಿಡಿಯುವವನೊಬ್ಬ, ಹಿಡಿಸಿಕೊಳ್ಳುವವರು ಹೀಗೆ ಎರಡು ಪಕ್ಷಗಳಿರುತ್ತಾರೆ. ಎಡಗೈ ಹಸ್ತದ ಮೇಲೆ ಬಲಗೈ ಹಸ್ತವನ್ನು ತಾಳ ಹಾಕುವುದರ ಮೂಲಕ ಹಿಡಿಯುವವನ ನಿರ್ಧಾರವಾಗುತ್ತದೆ. ಸೋತ ವ್ಯಕ್ತಿ ಹಿಡಿಯಲು ತೊಡಗಬೇಕಾಗುತ್ತದೆ. ಆಗ ಹಿಡಿಯುವವನು ಉಳಿದವರನ್ನು ಕಲ್ಲೊ ಮಣ್ಣೊ ಎಂದು ಕೇಳುವನು. ಆಗ ಅವರು ಕಲ್ಲು ಅಂದರೆ ಅವರು ಕಲ್ಲಿನ ಮೇಲೆ ನಿಂತಾಗ ಹಿಡಿಯಬೇಕು. ಮಣ್ಣು ಅಂದರೆ, ಅವರು ಮಣ್ಣಿನ ಮೇಲೆ ನಿಂತಾಗ ಹಿಡಿಯಬೇಕು. ಆದರೆ ಅವರು ಅಷ್ಟು ಬೇಗ ಸಿಕ್ಕುವವರಲ್ಲ, ಕಲ್ಲು ಎಂದು ಹೇಳಿ ಮಣ್ಣಿನ ಮೇಲೂ, ಮಣ್ಣು ಎಂದು ಹೇಳಿ ಕಲ್ಲಿನ ಮೇಲೂ ನಿಂತುಕೊಳ್ಳುವರು. ಆದರೆ ಅವರು ಹಾಗೆಯೇ ನಿಂತುಕೊಂಡುಬಿಟ್ಟರೆ ಇವನು ಹಿಡಿಯಲೂ ಆಗುವುದಿಲ್ಲ. ಆಟವೂ ಸಾಗುವುದಿಲ್ಲ, ಆದ್ದರಿಂದ ಅವರು ಆಟ ಕೊಡಬೇಕಾಗುತ್ತದೆ. ಅಂದರೆ ಅವರು ಕಲ್ಲಿಂದ ಮಣ್ಣಿಗೂ ಮಣ್ಣಿಂದ ಕಲ್ಲಿಗೂ ಓಡಾಡುತ್ತಿರುತ್ತಾರೆ. ಆಟ ಕ್ರಿಯಾತ್ಮಕವಾಗಿ ಸಾಗುತ್ತದೆ. ಹಿಡಿಸಿಕೊಳ್ಳುವವರಲ್ಲಿ ಮತ್ತು ಹಿಡಿಯುವವರಲ್ಲಿ ಎಚ್ಚರಿಕೆ ಸದಾ ಇರುತ್ತದೆ. ಅವರ ಹೇಳಿಕೆಗೆ ವಿರುದ್ಧವಾಗಿ ನಿಂತು ಆಗ ಏನಾದರೂ ತತ್‌ಕ್ಷಣ ಈತ ಅವರನ್ನು ಮುಟ್ಟಿಬಿಟ್ಟರೆ ಅವರು ಸೋತುಹೋದಂತೆ. ಆಗ ಹಿಡಿಸಿಕೊಂಡವನು ಹಿಡಿಯಬೇಕಾಗುತ್ತದೆ. ಹಿಡಿಯುತ್ತಿದ್ದವನು ಹಿಡಿಸಿಕೊಳ್ಳುವವರ ಗುಂಪಿಗೆ ಸೇರಿಕೊಳ್ಳುವನು. ಹೀಗೆ ಆಟ ನಿರಂತರವಾಗಿ ರಂಜನೀಯವಾಗಿ ಸಾಗುತ್ತದೆ. ಹೀಗೆ ಆಟವಾಡುವಾಗ ಆಟಗಾರರು ನಿನ್ನ ಕಲ್ಲಿಗೆ ನಾನು ಬಂದೆ, ನಿನ್ನ ಮಣ್ಣಿಗೆ ನಾನು ಬಂದೆ ಎಂದು ಹೇಳುತ್ತ ಆಟವಾಡುತ್ತಾರೆ.

**21 ಸುರುಸುರುಕೆ ಬತ್ತಿ :** ಇದರಲ್ಲಿ ಎರಡು ಪಕ್ಷಗಳಿರುತ್ತವೆ. ಪ್ರತಿ ಪಕ್ಷಕ್ಕೂ ಒಬ್ಬೊಬ್ಬ ಮುಖ್ಯಸ್ಥ ಇರುವನು. ಈ ಎರಡು ಪಕ್ಷಗಳ ಆಟಗಾರರೂ ಎದುರುಬದುರಾಗಿ ಸಮಾನಾಂತರ ವಾಗಿ ಸಾಲಾಗಿ ಕುಳಿತುಕೊಳ್ಳುವರು. ಆಗ ಅವರ ಎರಡು ಕೈಗಳನ್ನೂ ಹಿಂದಕ್ಕೆ ತೆಗೆದು ಎರಡು ಕೈಗಳ ಬೆರಳುಗಳ ಮಧ್ಯೆ ಪರಸ್ಪರ ಸೇರಿಸಿ, ಬೊಗಸೆಯಾಗಿ ಮಾಡಿಕೊಂಡು ಬೆನ್ನಹಿಂದೆ ಕೈಗಳನ್ನು ಬಿಟ್ಟು ಪಕ್ಷಗಳ ಮುಖ್ಯಸ್ಥರು ತಮ್ಮ ಪಕ್ಷದ ಆಟಗಾರರ ಹಿಂದೆ ನಿಂತುಕೊಳ್ಳುವರು. ಆಟವನ್ನು ಮೊದಲು ಯಾರು ಆಡಬೇಕೆಂಬುದನ್ನು ನಾಣ್ಯವನ್ನು ಚಿಮ್ಮಿ ನಿರ್ಧರಿಸುತ್ತಾರೆ. ಆಟದ ಸರದಿ ಬಂದಾಗ, ಪಕ್ಷದ ಮುಖ್ಯಸ್ಥ ಇದ್ದವನು ಒಂದು ಚೂರು ಬಟ್ಟೆಯನ್ನು ತೆಗೆದುಕೊಂಡು, ಅದನ್ನು ಉಂಡೆ ಮಾಡಿ, ತಮ್ಮ ಪಕ್ಷದ ಆಟಗಾರರ ಹಿಂದೆ ಬಿಟ್ಟಿರುವ ಎಲ್ಲ ಕೈಗಳಿಗೂ ಬಟ್ಟೆಯನ್ನು ಇಟ್ಟ ಹಾಗೆ ಮಾಡಿ ಇಡದಂತೆ ನಟಿಸುತ್ತ ಹೋಗುವನು. ಹೀಗೆ ಮಾಡುವಾಗ ಸುರುಸುರುಕೆ ಬತ್ತಿ, ಸೊಂಡಾನೆ ಬತ್ತಿ, ನೋಡಿದವರ ಕಣ್ಣಿಗೆ ಜುಮಜುಮ ಎಂದು ಹೇಳುವನು. ಆ ಬಟ್ಟೆಯ ಬತ್ತಿಯನ್ನು ಕೊನೆಗೆ ಯಾವನೋ ಒಬ್ಬನ ಕೈಲಿ ಬಿಟ್ಟು, ಇನ್ನೊಬ್ಬನ ಕೈಲಿ ಇಟ್ಟಂತೆ ನಟಿಸಿ, ಮತ್ತೆ ಅವರ ಕೈಗಳಿಗೂ ಇಡುವಂತೆ ಓಡಾಡಿ ನಿಂತುಕೊಳ್ಳುವನು. ಆಗ ಟಾಸ್‌ನಲ್ಲಿ ಸೋತವನು ಬಟ್ಟೆಬತ್ತಿ ಯಾರ ಹತ್ತಿರ ಇದೆ ಎಂಬುದನ್ನು ಹೇಳಬೇಕು. ಎರಡು ಪಕ್ಷದ ಸಾಲಿಗೂ ಸುಮಾರು ಐದಾರು ಅಂತರವಿರುವುದರಿಂದ ಇವನು ಯಾರ ಕೈಲಿ ಬತ್ತಿ ಇಟ್ಟನೋ ಹೇಳುವುದು ಕಷ್ಟ. ಸೋತ ಮುಖ್ಯಸ್ಥ ಊಹೆಶಕ್ತಿಯ ಮೇಲೆ ಹಾಗೂ ಬಟ್ಟೆ ಇರುವವನ ಮುಖದ ಭಾವನೆಗಳ ಮೂಲಕ ಕಲ್ಪಿಸಿ ಹೇಳುವನು. ಹಾಗೆ ಅವನು ಹೇಳಿದುದು ಸರಿಯಾದರೆ ಆಟ ಇವರ ಪಕ್ಷಕ್ಕೆ ಬಂದುಬಿಡುತ್ತದೆ. ಆಗ ಎದುರು ಪಕ್ಷದವರು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಆಟ ಅಲ್ಲಿಯೇ ಮುಂದುವರಿಯುತ್ತದೆ.

**22. ಮೊಟ್ಟೆಯಿಕ್ಕುವಾಟ :** ಅನೇಕ ಆಟಗಾರರಿರುವ ಈ ಆಟದಲ್ಲಿ ಎರಡು ಪಕ್ಷಗಳಿರುತ್ತವೆ. ಇವರ ಆಟಕ್ಕೆ ಇಡೀ ಬೀದಿಯೇ ಆಟದ ಭೂಮಿಯಾಗುತ್ತದೆ. ಎರಡು ಪಕ್ಷಗಳ ಆಟಗಾರರೂ ಪರಸ್ಪರ ಪಕ್ಷಗಳಿಗೆ ತಿಳಿಯದ ಹಾಗೆ ಸಂದಿಗೊಂದಿಯಲ್ಲಿ ಮಣ್ಣಿನ ಸಣ್ಣ ಸಣ್ಣ ಗುಪ್ಪೆಗಳನ್ನು ಇಡುತ್ತ ಬರುವರು. ಇವೇ ಮೊಟ್ಟೆಗಳು. ಹೀಗೆ ಅಸಂಖ್ಯಾತ ಮೊಟ್ಟೆಗಳನ್ನು ಇಟ್ಟ ಮೇಲೆ ಮೊಟ್ಟೆ ಇಡುವುದು ಸಾಕು ಎಂದುಕೊಂಡವರು ಗುಡ್‌ಗುಡಾರಿಯೊ ಎಂದು ಕೂಗುವರು. ಆಗ ಇಲ್ಲರೂ ಮೊಟ್ಟೆ ಇಡುವುದನ್ನು ನಿಲ್ಲಿಸಬೇಕು. ನಿಲ್ಲಿಸಿದ ಮೇಲೆ ಒಂದು ಪಕ್ಷದವರು ಮತ್ತೊಂದು ಪಕ್ಷದವರ ಮೊಟ್ಟೆಗಳನ್ನು ಪತ್ತೆ ಹಚ್ಚುವ ಕೆಲಸದಲ್ಲಿ ನಿರತರಾಗುವರು. ಹಾಗೆ ಹುಡುಕಿದ ಮೊಟ್ಟೆಗಳನ್ನು ಎಣಿಕೆ ಮಾಡಿಕೊಳ್ಳುವರು. ಇನ್ನು ಹುಡುಕಲು ಆಗುವುದಿಲ್ಲ

ಎಂದಮೇಲೆ, ಮೊಟ್ಟೆಗಳನ್ನು ಇಟ್ಟವರೇ ಎದುರು ಪಕ್ಷದವರಿಗೆ ತೋರಿಸುವರು. ಅನಂತರ ಎರಡು ಗುಂಪುಗಳು ಒಂದು ಕಡೆ ಸೇರಿ ಒಬ್ಬೊಬ್ಬರದು ಎಷ್ಟು ಮೊಟ್ಟೆಗಳು ಆಗಿವೆ ಎಂದು ನೋಡುತ್ತಾರೆ. ಹೆಚ್ಚು ಸಂಖ್ಯೆಯ ಮೊಟ್ಟೆಗಳಿಂದ ಕಡಿಮೆ ಸಂಖ್ಯೆಯ ಮೊಟ್ಟೆಗಳನ್ನು ಕಳೆದರೆ, ಉಳಿದ ಮೊಟ್ಟೆಗಳ ಗುಂಪಿನವರು ಗೆದ್ದ ಹಾಗೆ. ಸೋತವರು ಬಸ್ಕಿ ಹೊಡೆಯ ಬೇಕಾಗುತ್ತದೆ. ಕೆಲವು ಸಾರಿ ಸಾಲ ತೀರಿಸುವ ವಿಧಾನವನ್ನೂ ಆಟದಲ್ಲಿ ತರಬಹುದು. ಈ ಆಟದಲ್ಲಿ ಚಾಕಚಕ್ಯತೆ ಮುಖ್ಯ ಅಷ್ಟೆ.

**23. ತೆಂಗಿನಕಾಯಿ ಜೂಜು :** ಕೆಲವು ಕಡೆ ಮಾತ್ರ ಪ್ರಚಲಿತವಾಗಿರುವ ಈ ಆಟದಲ್ಲಿ ಒಂದು ರೀತಿಯ ಮೋಜು ಇದೆಯೆಂದೇ ಹೇಳಬೇಕು. ಮಲೆನಾಡು ಪ್ರದೇಶಗಳಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇದರ ಖಯಾಲಿ ಹೆಚ್ಚು. ಕಾಯಿಯನ್ನು ಒಡ್ಡುವವನು ಕಲ್ಲುಗಳನ್ನೂ ಮಾರುತ್ತಾನೆ. ಹೊಡೆಯುವವರು ಆ ಕಲ್ಲುಗಳನ್ನು ಕೊಂಡುಕೊಳ್ಳಬೇಕು. ಕೊಂಡುಕೊಂಡ ಮೇಲೆ ನಿರ್ದಿಷ್ಟವಾದ ದೂರದಿಂದ ಕಾಯಿಗೆ ಕಲ್ಲನ್ನು ಬೀಸಿ ಹೊಡೆಯು ತ್ತಾರೆ. ಮೊದಲ ಏಟಿಗೆ ಕಾಯಿ ಒಡೆದರೆ ಕಾಯಿ ಒಡೆದವರಿಗೆ ಬಿಟ್ಟಿಯಾಗಿ ಸಿಗುತ್ತದೆ. ಹಾಗಾಗದಿದ್ದರೆ, ಮುಂದೆ ಕಾಸಿನ ಎಣಿಕೆ ಪ್ರಾರಂಭವಾಗುತ್ತದೆ. ಹೀಗೆ ಇವರು ಆಟ ಆಡುವಾಗ ಪ್ರೇಕ್ಷಕರು ಕೂಡ ದುಡ್ಡನ್ನು ಕಟ್ಟಿ ಜೂಜಿನಲ್ಲಿ ಸಕ್ರಿಯವಾಗಿ ಭಾಗವಹಿಸುವು ದುಂಟು. ಆಗ ಹೊಡೆಯುವವನಿಗೆ ಒಂದು ರೀತಿ ಹುಮ್ಮಸ್ಸು ಬಂದಿರುತ್ತದೆ. ಆಟ ಬಹು ಮೋಜಿನಿಂದ ಸಾಗುತ್ತದೆ. ಆಟ ಮೋಜಾದರೂ ಇದು ಜೂಜೆಂಬುದನ್ನು ಮರೆಯುವಂತಿಲ್ಲ. ಕಾಯನ್ನು ಒಡ್ಡುವವನು ಬೇಕೆಂತಲೇ ಬೇಗನೆ ಏಟಿಗೆ ಸಿಗದ ಪಿಚ್ಚ ಕಾಯಿಗಳನ್ನು ತರುವುದುಂಟು.

**24. ತ್ರಿರಂಗ :** ಇದು ಇಬ್ಬರೇ ಆಟಗಾರರು ಆಡುವ ಆಟ. ನೆಲದ ಮೇಲೆ ಮನೆಯನ್ನು ಬರೆದು ಆಟಗಾರರಿಬ್ಬರೂ ಎದುರುಬದುರಾಗಿ ಕುಳಿತುಕೊಳ್ಳುತ್ತಾರೆ. ಪ್ರತಿಯೊಬ್ಬನ ಹತ್ತಿರವೂ ಒಂಬತ್ತು ಒಂಬತ್ತು ಕಾಯಿಗಳು ಇರುತ್ತವೆ. ಇವರು ಕಾಯಿ ಇಡಬೇಕಾದರೆ ನೇರ ರೇಖೆಯೇ ಆಗಿರಬೇಕು ಮತ್ತು ಮೂರು ಕೇಂದ್ರಗಳೇ ಇರಬೇಕು. ಸಿಕ್ಕಾಪಟ್ಟೆಯಾಗಿ ಎಲ್ಲೆಂದರಲ್ಲಿ ಕಾಯನ್ನು ಮೂರು ಕೇಂದ್ರಗಳಿರುವ ಒಂದು ನೇರ ರೇಖೆಯಲ್ಲಿ ಒಬ್ಬನೇ ಮೂರು ಕಾಯಿಗಳನ್ನು ಇಟ್ಟುಬಿಟ್ಟರೆ, ಆಗ ಎದುರು ಪಕ್ಷದವನು ಇವನಿಗೆ ಇಂಥ ಅವಕಾಶಮಾಡಿಕೊಡದೆ ಇವನು ಆ ರೇಖೆಯ ಒಂದೋ ಅಥವಾ ಎರಡೋ ಕಾಯನ್ನು ಇಟ್ಟ ಕೂಡಲೇ ಜಾಗರೂಕನಾಗಿ ತನ್ನ ಒಂದು ಕಾಯನ್ನು ಆ ರೇಖೆಯ ಇನ್ನೊಂದು ಕೇಂದ್ರಕ್ಕೆ ಇಟ್ಟುಬಿಡುವನು. ಆಗ ಯಾರ ಕಾಯನ್ನೂ ಯಾರೋ ಹೊಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದೇ ಈ ಆಟದ ವೈಶಿಷ್ಟ್ಯ ಹಾಗೂ ಜೀವಾಳ. ಹೀಗೆ ಯಾರಾದರೊಬ್ಬ ಕಾಯಿಗಳನ್ನು ಕಳೆದುಕೊಳ್ಳುವವರೆಗೆ ಆಟ ನಡೆಯುತ್ತದೆ. ಯಾರೂ ಕಾಯನ್ನು ಹೊಡೆಯಲು ಸಾಧ್ಯವಾಗದೆ ಮನೆಗಳನ್ನು ಕಟ್ಟಿ ನಿಲ್ಲಿಸಿದರೆ ಆಗ ಇಬ್ಬರೂ ತಮ್ಮ ತಮ್ಮ ಕಾಯಿಗಳನ್ನು ಎತ್ತಿಕೊಂಡು ಮೊದಲಿಂದ ಆಟವಾಡುತ್ತಾರೆ. (ಆರ್.ಜಿ.)

**25. ಬಚ್ಚದ ಕಲ್ಲು :** ಆಟಗಾರರು ಬಚ್ಚ ಮತ್ತು ಕಲ್ಲು ಸಾಧನಗಳ ಜೊತೆಯಲ್ಲಿ ಬರಬೇಕು. ಸಿಗರೇಟಿನ ಅಥವಾ ಬೆಂಕಿಪೊಟ್ಟಣದ ಎಲೆಗಳಿಗೆ ಬಚ್ಚ ಎಂದು ಹೆಸರು. ಇವುಗಳಿಗೆ ಟ್ರಿಕ್ಕಿ ಎಂದೂ ಹೆಸರುಂಟು. ಇದರಿಂದ ಈ ಆಟಕ್ಕೆ ಟಿಕ್ಕಿ ಆಟ ಎಂತಲೂ ಕರೆವರು. ಇಲ್ಲಿ ಬಚ್ಚ ಅಥವಾ ಟಿಕ್ಕಿಗಳೇ ಜೂಜಿನ ಎಲೆಗಳು. ಅವುಗಳನ್ನು ಆಟಗಾರರು ಸಂಗ್ರಹಿಸಿಕೊಂಡು ಆಟಕ್ಕೆ ಬರುತ್ತಾರೆ. ಆಟವಾಡುವುದಕ್ಕೆ ಅಗಲಬಾಯುಳ್ಳ ಚಪ್ಪಟೆಕಲ್ಲನ್ನು ತರಬೇಕು. ಹೀಗೆ ಆಟಕ್ಕೆ ಬಂದವರು ಮೊದಲು ವೃತ್ತಾಕಾರದ ಅಂಡವೊಂದನ್ನು ನಿರ್ಮಿಸಿ, ಅದರಲ್ಲಿ ನಿಯತಸಂಖ್ಯೆಯ ಬಚ್ಚಗಳನ್ನು ಹಾಕುತ್ತಾರೆ. ಒಬ್ಬರು ಹಾಕಿದಷ್ಟನ್ನು ಎಲ್ಲರೂ ಹಾಕಬೇಕು. ಹೀಗೆ ಎಲ್ಲರೂ ಹಾಕಿದ ಮೇಲೆ ಎಲ್ಲ ಆಟಗಾರರೂ ನಿಯಮಿತವಾದ ದೂರದಲ್ಲಿ ನಿಂತು ಅಲ್ಲಿಂದ ಬಚ್ಚದ ಕಲ್ಲನ್ನು ಬಿಡುತ್ತಾರೆ. ಹಾಗೆ ಬಿಟ್ಟಾಗ ಕಲ್ಲುಗಳು ಒಂದಕ್ಕೊಂದು ಸ್ಪರ್ಶಿಸಿದರೆ ಅಥವಾ ಪಟ್ಟೆಯೊಳಗೆ ಬಿದ್ದರೆ ಮತ್ತೆ ಎಲ್ಲರೂ ಬಿಡಬೇಕಾಗುತ್ತದೆ. ಅಂಡದ ಹತ್ತಿರದಲ್ಲಿ ಯಾರ ಕಲ್ಲು ಬಿದ್ದಿರುತ್ತದೋ ಅವರು ಮೊದಲು ಆಟವಾಡಬೇಕಾಗುತ್ತದೆ. ಅನಂತರ ಮುಂದಿನ ಹತ್ತಿರದವನು ಹೊಡೆಯುತ್ತಾನೆ. ಹೀಗೆ ಆಟದ ಸರದಿ ಒಬ್ಬರಿಂದ ಒಬ್ಬರಿಗೆ ಬರುತ್ತದೆ. ಆಟ ಬಂದವನು ಬಚ್ಚದ ಕಲ್ಲಿನಿಂದ ಬಚ್ಚಗಳು ಅಂಡದಿಂದ ಹೊರಗೆ ಹಾರುವಂತೆ ಹೊಡೆಯುತ್ತಾನೆ. ಹೊರಗೆ ಹಾರಿದ ಬಚ್ಚಗಳೆಲ್ಲವೂ ಅವನಿಗೆ ಸೇರಿದಂತೆ. ಹೀಗೆ ಆಟವಾಡುತ್ತಿರುವಾಗ ಬಚ್ಚಗಳು ಹೊರಗೆ ಬರದೆ ಹೋದರೆ ಅವನ ಆಟ ಮುಗಿಯುತ್ತದೆ. ಬೇರೊಬ್ಬ ಹೊಡೆಯುತ್ತಾನೆ. ಹೀಗೆ ಸರದಿ ಪ್ರಕಾರ ಬಚ್ಚಗಳೆಲ್ಲ ಅಂಡದಿಂದ ಹೊರಗೆ ತರುವ ತನಕ ಆಟ ಸಾಗುತ್ತದೆ. ಅವರು ಗೆದ್ದ ಬಚ್ಚಗಳನ್ನೆಲ್ಲ ಅವರೇ ಇಟ್ಟುಕೊಳ್ಳುವರು. ಬಚ್ಚಗಳನ್ನೆಲ್ಲ ಗೆದ್ದುಕೊಂಡ ಮೇಲೆ, ಮತ್ತೆ ನಿಗದಿಯಾದ ಬಚ್ಚಗಳನ್ನು ಹಾಕಿ ಆಟ ಪ್ರಾರಂಭಿಸುತ್ತಾರೆ. ಹೀಗೆ ಆಟ ನಿರಂತರವಾಗಿ ಸಾಗುತ್ತದೆ. ಇದರಲ್ಲಿ ಕೈಚಳಕ ಹಾಗೂ ಗುರಿ ಬಹಳ ಮುಖ್ಯ. ನಿಪುಣ ಆಟಗಾರರು ಇದರಲ್ಲಿ ಭಾಗವಹಿಸುವರು.

**26. ಸಿರಿಯುವ ಆಟ :** ಇದಕ್ಕೆ ಕಡೆಯ ಪಕ್ಷ ಇಬ್ಬರಾದರೂ ಆಟಗಾರರು ಇರಬೇಕು. ಹೆಚ್ಚು ಜನ ಇದ್ದಷ್ಟೂ ಅಟದಲ್ಲಿ ಉತ್ಸುಕತೆ ಹೆಚ್ಚುತ್ತದೆ. ಇದರಲ್ಲಿ ಭಾಗವಹಿಸುವವರು ಹುಡುಗರು. ಅವರು ಹೆಚ್ಚು ಸಮರ್ಥರಾಗಿರಬೇಕಾಗುತ್ತದೆ. ಮೊದಲು ಒಂದು ಗೆರೆ ಎಳೆಯುವರು. ಆಟದ ಸ್ಪರ್ಧಿಗಳು ಎಲ್ಲರೂ ಗೆರೆಯ ಮೇಲೆ ಕೈಗಳನ್ನು ಊರಿಕೊಂಡು ಕಾಲುಗಳನ್ನು ಹಿಂದಕ್ಕೆ ನೀಡಿ ಬಗ್ಗುವರು. ಅನಂತರ ಬಲಗಾಲಿಗೆ ಸಮತೂಕದ ಕೋಲೊಂದನ್ನು ಆರಿಸಿಕೊಂಡು, ಹೆಬ್ಬೆರಳು ಮತ್ತು ಉದ್ದನೆಯ ಬೆರಳುಗಳ ನಡುವೆ ಸಿಕ್ಕಿಸಿ, ಅದನ್ನು ರಭಸದಿಂದ ಹಿಂದಿನಿಂದ ಮುಂದಕ್ಕೆ ಎಸೆಯಬೇಕು. ಯಾರದು ಅತಿ ದೂರಕ್ಕೆ ಹೋಗಿರುತ್ತದೋ ಅವರು ಗೆದ್ದ ಹಾಗೆ. ಹೀಗೆ ಒಬ್ಬ ಉಳಿಯುವ ತನಕ ಆಟ ಮುಂದುವರಿಯುತ್ತದೆ. ಆಮೇಲೆ ಪುನಃ ಆಟ ಮೊದಲಿಂದ ಪ್ರಾರಂಭವಾಗುತ್ತದೆ. ಈ ಆಟ ಕೆಲವು ಮಟ್ಟಿಗೆ ಬಟ್ಟೆಯಾಟವನ್ನು ಹೋಲುತ್ತದೆ.

**27. ನರಿಕೊಂತನ ಆಟ :** ಇಲ್ಲಿಯೂ ಕೈ ತಾಳ ಹಾಕುವುದರ ಮೂಲಕ ಪಕ್ಷ ನಿರ್ಧಾರವಾಗುತ್ತದೆ. ನೆಲಕ್ಕೆ ಸುಮಾರು ಕಡ್ಡಿಗಳನ್ನು ನೆಟ್ಟಿರುತ್ತಾರೆ. ಅವುಗಳನ್ನು ಕಾಯುವವನು ಒಬ್ಬ. ಉಳಿದವರೆಲ್ಲ ಕಡ್ಡಿಗಳನ್ನೂ ಕೀಳಲಿಕ್ಕೆ ಪ್ರಯತ್ನಿಸುವರು. ಹೀಗೆ ಕಡ್ಡಿಗಳನ್ನು ಕೀಳಲು ಬಂದಾಗ, ಕಾಯುವವನು ಅವರನ್ನು ಹಿಡಿದರೆ, ಹಿಡಿಸಿಕೊಂಡವರೇ. ಕಡ್ಡಿಗಳನ್ನು ಕಾಯಬೇಕಾಗುತ್ತದೆ. ಕಾಯುವವನು ಹಿಡಿಯಲು ಹೋದಾಗ, ಉಳಿದವರು ಸುಮ್ಮನಿರದೆ ಬೇರೆ ಕಡೆಯಿಂದ ಬಂದು ಕಡ್ಡಿಯನ್ನು ಕೀಳುವರು. ಅಷ್ಟು ಜನರನ್ನೂ ಹೆದರಿಸಿ ಕಡ್ಡಿಗಳನ್ನು ಕಾಯಬೇಕಾಗುತ್ತದೆ.

**28. ಬಟ್ಟೆ ಆಟ :** ಇದಕ್ಕೆ ಕುದುರೆ ಆಟ ಅಥವಾ ಸವಾರಿ ಆಟ ಎಂತಲೂ ಹೆಸರಿದೆ. ಇದರಲ್ಲಿ ಭಾಗವಹಿಸುವವರೆಲ್ಲ ಹುಡುಗರೇ. ಈ ಆಟಕ್ಕೆ ಇಬ್ಬರಿಗಿಂತ ಹೆಚ್ಚು ಮಂದಿ ಆಟಗಾರರಿರಬೇಕು. ಹೆಚ್ಚು ಜನ ಇದ್ದಷ್ಟೂ ಆಟ ರಂಗೇರುತ್ತದೆ. ಮೊದಲು ಆಟಗಾರರು ಎರಡು ಪಕ್ಷಗಳನ್ನು ಮಾಡಿಕೊಳ್ಳುತ್ತಾರೆ. ಪಕ್ಷ ನಿರ್ಧಾರವಾಗುವುದೂ ಒಂದು ವಿಶೇಷ ರೀತಿಯಲ್ಲಿ. ಹೆಚ್ಚು ಜನರಿದ್ದಾಗ ಇಬ್ಬರು ಪ್ರಮುಖರಾಗಿ ನಿರ್ಧಾರವಾಗುತ್ತದೆ. ಆ ಇಬ್ಬರು ಉಳಿದವರನ್ನು ಸಮಭಾಗವಾಗಿ ತಮ್ಮ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ. ಆ ಇಬ್ಬರು ಪ್ರಮುಖರೂ ನಾಣ್ಯ ಚಿಮ್ಮಿ ಯಾರು ಆ ಗುಂಪಿನಿಂದ ಮೊದಲು ತಮ್ಮ ಕಡೆಗೆ ಆರಿಸಿಕೊಳ್ಳಬೇಕೆಂಬ ಸರದಿಯನ್ನು ನಿರ್ಧರಿಸುವರು. ನಾಣ್ಯ ಚಿಮ್ಮಿದಾಗ ಗೆದ್ದವನು ತನಗೆ ಬೇಕಾದವರನ್ನು ಕರೆದು ತನ್ನ ಪಕ್ಷವನ್ನು ಕಟ್ಟಿಕೊಳ್ಳುತ್ತಾನೆ. ಉಳಿದವರು ಇನ್ನೊಬ್ಬನ ಪಕ್ಷಕ್ಕೆ ಸೇರಿಕೊಳ್ಳುತ್ತಾರೆ. ಹೀಗೆ ತೀರ್ಮಾನ ಪಕ್ಷ ನಿರ್ಧಾರವಾದ ಅನಂತರ ಯಾರು ಆಟ ಆಡಬೇಕು, ಯಾರು ಹಿಡಿಯಬೇಕೆಂಬುದನ್ನು ನಾಣ್ಯ ಚಿಮ್ಮಿಕೆಯಿಂದಲೇ ನಿರ್ಧರಿಸು ತ್ತಾರೆ ಅಥವಾ ಪರಸ್ಪರ ಒಪ್ಪಿಗೆಯಿಂದಲೂ ಇದು ನಡೆಯಬಹುದು. ಹೀಗೆ ಮಾಡಿಕೊಂಡ ಮೇಲೆ ಆಟ ಪ್ರಾರಂಭವಾಗುತ್ತದೆ. ಮೊದಲು ಉದ್ದನೆಯ ಗೆರೆಯೊಂದನ್ನು ಎಳೆಯುವರು. ಗೆರೆಯ ಆಚೆ ಈಚೆ ಪಕ್ಷ ಪ್ರತಿಪಕ್ಷಗಳವರು ನಿಂತುಕೊಳ್ಳುವರು. ಆಗ ಗೆದ್ದವರು ಆಟ ಪ್ರಾರಂಭಿಸುವರು. ಆಟದ ಮುಖ್ಯ ಸಾಧನ ಹಗ್ಗ ಹೊಸೆದ ಹಾಗೆ ನುಲಿದಿರುವ ಚೌಕ (ಟವಲ್). ಚೌಕವನ್ನು ನುಲಿದು ಚೂಪಾದ ತುದಿಗೆ ಒಂದು ದಾರ ಕಟ್ಟುವರು. ಆಗ ಗೆದ್ದವರಲ್ಲಿ ಒಬ್ಬ ಬಂದು ಚೌಕದ ಚೂಪಾದ ತುದಿಯನ್ನು ತನ್ನ ಬಲಗಾಲಿನ ಹೆಬ್ಬೆರಳು ಪಕ್ಕದ ಬೆರಳುಗಳ ಮಧ್ಯೆ ಸಿಕ್ಕಿಸಿ, ಗೆರೆಗೆ ಸಮೀಪಿಸಿದಂತೆ ಕೈಗಳೆರಡನ್ನೂ ಊರಿ ರಭಸ ದಿಂದ ಮುಂದಕ್ಕೆ ಎಸೆಯಬೇಕು. ಹಾಗೆ ಎಸೆಯುವಾಗ ಬಟ್ಟೆ ಹಾಕಿದ ಗೆರೆಯಿಂದ ಹೊರಗೆ ಹೋಗದೆ ಒಳಗೆ ಬಿದ್ದರೆ ಅದು ಲೆಕ್ಕಕ್ಕಿಲ್ಲ. ಹಾಗೆ ಅವನಿಗೆ ಮೂರು ಸರದಿಗಳು ಮಾತ್ರ ಇರುತ್ತವೆ. ಆ ಮೂರರಲ್ಲೂ ಎಸೆಯದಿದ್ದರೆ ಅವನು ಹೊರಬಂದು, ಅವರ ಕಡೆಯ ಇನ್ನೊಬ್ಬನಿಗೆ ಆಟವನ್ನು ಬಿಟ್ಟುಕೊಡಬೇಕಾಗುತ್ತದೆ. ಹಾಗಾದರೆ ಅವನು ಎಸೆದಾಗ ಏನಾದರೂ ಎದುರು ಪಕ್ಷದವರು ಅದನ್ನು ಹಿಡಿದುಕೊಂಡರೆ (ನೆಲ ಸೋಕದಂತೆ) ಆಟ ಆಡುವವನು ಔಟಾಗಬೇಕಾಗುತ್ತದೆ. ಹಾಗೆ ಹಿಡಿದುಕೊಳ್ಳದೆ ನೆಲಕ್ಕೆ ಬಿಟ್ಟುಬಿಟ್ಟರೆ ನಿಯತವಾದ ಸಂಖ್ಯೆಯ ತನಕ ಲೆಕ್ಕ ಮಾಡುತ್ತ ಹೋಗುತ್ತಾರೆ. ಆ ಸಂಖ್ಯೆಯನ್ನು ತುಂಬಿಬಿಟ್ಟರೆ, ಕೂಡಲೇ ಸೋತವರು ಒಬ್ಬನನ್ನು ಕುದುರೆ ಕೂರಿಸಬೇಕಾಗುತ್ತದೆ. ಅಂದರೆ ಒಬ್ಬ ಬಗ್ಗುವುದು, ಅವನ ಮೇಲೆ ಗೆದ್ದವನೊಬ್ಬ ಸವಾರಿ ಮಾಡಲು ಕುಳಿತುಕೊಳ್ಳುವನು. ಆಟ ಮಾತ್ರ ಸಾಗುತ್ತಲೇ ಇರುತ್ತದೆ. ಸೋತವರು ಬಟ್ಟೆಯನ್ನು ಹಿಡಿದು ಆಟವಾಡುತ್ತಿದ್ದವನನ್ನು ಔಟ್ ಮಾಡಿಬಿಟ್ಟರೆ ಆಗ ಕುದುರೆ ಕುಳಿತವನು ಮೇಲೆದ್ದು ಮತ್ತೆ ತನ್ನ ಗುಂಪನ್ನು ಸೇರಿಕೊಳ್ಳುತ್ತಾನೆ. ಹೀಗಾಗಿ ಯಾವುದಾದರೂ ಒಂದು ಪಕ್ಷ ಔಟಾಗಿಯೋ ಅಥವಾ ಗೆದ್ದೋ ಆಟವನ್ನು ಮುಕ್ತಾಯಕ್ಕೆ ತರುವರು. ಆಗ ಹಿಡಿಯುತ್ತಿದ್ದ ಪಕ್ಷ ಬಟ್ಟೆ ಎಸೆಯುವುದಕ್ಕೂ ಎಸೆಯುತ್ತಿದ್ದ ಪಕ್ಷ ಹಿಡಿಯುವುದಕ್ಕೂ ನಿಂತುಕೊಳ್ಳುತ್ತದೆ. ಹೀಗೆ ಆಟ ನಿರಂತರವಾಗಿ ಸಾಗುತ್ತದೆ. ಇದು ಬಹಳ ಶ್ರಮದಾಯಕ ಆಟವೆಂದೇ ಹೇಳಬೇಕು.

**29. ಹುಳಸಪ್ಪನಾಟ :** ಕಣ್ಣು ಮುಚ್ಚಿ ತಲೆಗೂದಲನ್ನು ಎಳೆಯುವುದು. ಎಳೆದವರ ಹೆಸರನ್ನು ಹೇಳುವತನಕವೂ ಹುಳಿ ಹಿಂಡೋದು. ಇದಕ್ಕೆ ಹುಳಸಪ್ಪನಾಟ ಎಂದು ಹೆಸರು.

(ಆರ್.ಜಿ.; ಸಿ.ಜಿ.ಪಿ.; ಬಿ.ಎಲ್.ಆರ್.)

**ಆಟರ್ ಬೂಮ್, ಪರ್‌ಡೇನಿಯಲ್ ಅಮೆಡ್ಯೂಸ್ :** 1790–1855. ಸ್ವೀಡನ್ನಿನ ಕವಿ, ತತ್ತ್ವಜ್ಞಾನಿ ಮತ್ತು ಸಾಹಿತ್ಯದ ಚರಿತ್ರಕಾರ. ಹುಟ್ಟಿದ್ದು ಆಸ್ಟರ್‌ಗಾರ್‌ಲಂಡಿನ ಆಸ್ಬೊ ಎಂಬಲ್ಲಿ, ಸತ್ತದ್ದು ಅಪ್ಸಾಲಾದಲ್ಲಿ. 1805–15ರವರೆಗೆ ಅಪ್ಸಾಲಾ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿ, ಅಲ್ಲೇ 1828ರಲ್ಲಿ ಪ್ರಾಧ್ಯಾಪಕನಾದ. ಸ್ವೀಡಿಷ್ ಸಾಹಿತ್ಯದ ರೊಮ್ಯಾಂಟಿಕ್ ಅಥವಾ ರಮ್ಯಮಾರ್ಗದ ಪ್ರವರ್ತಕರಲ್ಲಿ ಇವನೂ ಒಬ್ಬ. ಕ್ರಾಂತಿಕಾರಕವಾದ ನೂತನಸಾಹಿತ್ಯ ಪ್ರಚಾರಕ್ಕೆ ಮೀಸಲಾಗಿದ್ದ ಅರೋರಾ ಎಂಬ ಸಂಸ್ಥೆಗೆ ಇವನು ನಾಯಕನಾಗಿ ಅನೇಕ ಲೇಖಕರಿಗೆ ಮಾರ್ಗದರ್ಶಕನಾಗಿದ್ದ. ಆ ಸಂಸ್ಥೆಯ ಪತ್ರಿಕೆಯಾದ ಫಾಸ್ಫರಸ್‌ನಿಂದ ಅದರೊಡನೆ ಸಂಬಂಧವಿದ್ದವರನೇಕರಿಗೆ ಫಾಸ್ಫರಿಸ್ಟರ್ ಎಂಬ ಹೆಸರು ಬಂದಿದೆ. ಫಾಸ್ಫರಸ್ ಎಂದರೆ ಬೆಳಗಿನ ತಾರೆ ಎಂದರ್ಥ. ಆ ಮಾತು ಈ ಗುಂಪಿನ ಬರೆಹಗಾರರ ರೀತಿನೀತಿಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ. (ಎಂ.ಆರ್.)

**ಆಟಿ ಕಡೆಂಜ :** ತುಳುನಾಡಿನ ಒಂದು ಜನಪದ ಕಲೆ. ತುಳು ಆಟಿ ತಿಂಗಳಲ್ಲಿ (ಕರ್ಕಾಟಕ ಮಾಸ) ಹರಿಜನ ಪಂಗಡಕ್ಕೆ ಸೇರಿದ ನಲ್ಕೆ ಎಂಬ ಪಂಗಡದವರು ಸಣ್ಣ ಹುಡುಗನೊಬ್ಬನಿಗೆ ತಲೆಗೆ ಕಂಗಿನ ಹಾಳೆಯ ಟೊಪ್ಪಿಗೆ ಇಟ್ಟು, ಮುಖಕ್ಕೆ ಬಿಳಿಯ ಬಣ್ಣ

ಆಟಿ ಕಡೆಂಜ ವೇಷಧಾರಿ ಹಾಗೂ ತೆಂಬೆರೆ ವಾದ್ಯ ನುಡಿಸುವಾತ

ಬಳಿದು, ದಡ್ಡಿಯ (ಒಂದು ತರದ ಕಳ್ಳಿ) ನಾರಿನ ಗಡ್ಡ ಮೀಸೆ ಬಿಗಿದು, ಕೆಂಪು ಅರಿವೆಯ ಅಂಗಿ ಚಲ್ಲಣ ತೊಡಿಸಿ, ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲೊಂದು ಓಲೆಗರಿಯ ತತ್ರ (ಛತ್ರ) ಕೊಟ್ಟು ಆಟಿ ಕಡೆಂಜನ ವೇಷ ಹಾಕಿಸುತ್ತಾರೆ. ವೇಷಧಾರಿಯ ಜೊತೆಗಿರುವ ಮತ್ತೊಬ್ಬ ತೆಂಬರೆ ಎಂಬ ಚರ್ಮವಾದ್ಯ ಒಂದನ್ನು ಬಾರಿಸಿ, ಆಟಿ ಕಡೆಂಜನಿಗೆ ಸಂಬಂಧಪಟ್ಟ ಪಾಡ್ದನ ಹಾಡುತ್ತಿರುವಂತೆಯೇ ವೇಷಧಾರಿ ಮೆಲ್ಲನೆ ಕಾಲನ್ನಾಡಿಸುತ್ತ ಕೈಯಲ್ಲಿ ಹಿಡಿದಿರುವ ತತ್ರವನ್ನು ತಿರುಗಿಸುತ್ತ ಹಿಂದು ಮುಂದು ಹೋಗುತ್ತಿರುತ್ತಾನೆ.

ತುಳುವರ ಸಂಪ್ರದಾಯದಂತೆ ಆಟಿ ತಿಂಗಳು ಶುಭ ಶೋಭನಾದಿಗಳು ನಡೆಯದ ಅಶುಭದ ತಿಂಗಳು. ಆಗ ಮನೆಯ ಅಂಗಳಕ್ಕೆ ಬಂದು ಕುಣಿದ ಆಟಿ ಕಡೆಂಜನಿಗೆ ತಡ್ಪೆಯಲ್ಲಿ (ಬತ್ತವನ್ನು ಕೇರುವ ಅಗಲವಾದ ಒಂದು ಸಾಧನ) ಸ್ವಲ್ಪ ಬತ್ತ, ಅಕ್ಕಿ, ಹುಳಿ, ಮೆಣಸು, ಉಪ್ಪು, ಒಂದು ತುಂಡು ಇದ್ದಿಲು, ಸ್ವಲ್ಪ ಅಟ್ಟದ ಮಸಿ–ಇಷ್ಟನ್ನೂ ಇಟ್ಟುಕೊಡುತ್ತಾರೆ. ಅಲ್ಲದೆ ಆತ ಅಂಗಳ ಇಳಿದು ಹೋಗುವಾಗ ಕುರಿನೀರನ್ನು (ಅರಿಸಿನ ಹಾಕಿದ ಬಣ್ಣದ ನೀರು) ಆತನ ಮೇಲೆ ಸಿಂಪಡಿಸುತ್ತಾರೆ. ಹೀಗೆ ಮಾಡಿದರೆ ಮನೆಯ ಅಶುಭ ಕಳೆಯುತ್ತದೆ ಎಂದು ತುಳುನಾಡ ಹಳ್ಳಿಗರ ನಂಬಿಕೆ. (ಎ.ಎಲ್.ಎ.)

**ಆಟೊ ಚಕ್ರವರ್ತಿಗಳು :** ಜರ್ಮನಿಯ ರಾಜರುಗಳಾಗಿದ್ದು ಚಕ್ರವರ್ತಿಗಳಾದ ನಾಲ್ವರ ವಿಷಯವನ್ನಿಲ್ಲಿ ಪ್ರಸ್ತಾಪಿಸಲಾಗಿದೆ.

**ಆಟೊ I:** ಜರ್ಮನಿಯ ದೊರೆ ಒಂದನೆಯ ಹೆನ್ರಿಯ ಮಗ (912–73). 936ರಲ್ಲಿ ಪಟ್ಟಕ್ಕೆ ಬಂದು ತನ್ನ ಸಾಮರ್ಥ್ಯದಿಂದ 962ರಲ್ಲಿ ಇಟಲಿ ಜರ್ಮನಿಗಳೆರಡನ್ನೂ ಒಳಗೊಂಡ ರೋಮನ್ ಚಕ್ರಾಧಿಪತ್ಯದ ಮೊದಲ ಸಾಮ್ರಾಟನಾದ. ಮಹಾಶಯನೆಂಬ ಕೀರ್ತಿಗಳಿಸಿದ. ಜರ್ಮನಿಯ ರಾಜಕೀಯದಲ್ಲಿ ಪೋಪನ ಪ್ರಭಾವವನ್ನು ಕುಗ್ಗಿಸಲು, ರೋಮನ್ ಕೆಥೊಲಿಕ್ ಪುರೋಹಿತವರ್ಗ ತನ್ನ ಅಧೀನದಲ್ಲಿರತಕ್ಕದ್ದೆಂದು ಆಜ್ಞೆ ಮಾಡಿದ. ಆಗಿನ ಕಾಲಕ್ಕೆ ತಕ್ಕಂತೆ ಮತ ವಿಚಾರಗಳಲ್ಲಿ ಗಾಢಭಕ್ತಿ ಅಂಧಶ್ರದ್ಧೆಗಳಿದ್ದವು; ರೋಮನ್ ಕೆಥೊಲಿಕ್ ಧರ್ಮ ಜನರಲ್ಲಿ ಹರಡಿ ನೆಲೆಸುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಕೈಗೊಂಡ. ವಿದ್ರೋಹಿಸಾಮಂತರನ್ನಡಗಿಸಿ ಪೂರ್ವದಿಂದ ದಾಳಿ ನಡೆಸಲೆತ್ನಿಸಿದ್ದ ಮ್ಯಾಗ್ಯಾರರನ್ನು ಹೊಡೆದಟ್ಟಿ ದೇಶದ ಭದ್ರತೆಯನ್ನು ಬಲಪಡಿಸಿದ. ಈತ ಸಮರ್ಥಯೋಧ. ವಿದ್ಯಾಪ್ರೇಮಿ. ವಿದ್ವಾಂಸರನ್ನು ಆಸ್ಥಾನಕ್ಕೆ ಬರಮಾಡಿಕೊಂಡು ಗೌರವಿಸಿದ್ದಲ್ಲದೆ, ವಿದ್ಯಾಪ್ರಸಾರಕ್ಕಾಗಿ ದುಡಿಯುತ್ತಿದ್ದ ತನ್ನ ತಮ್ಮ ಬ್ರೂನೋಗೆ ನೆರವು ನೀಡಿದ.

**ಆಟೊ II:** ಒಂದನೆಯ ಆಟೊ ಮಹಾಶಯನ ಮಗ; (955–83). ತಂದೆ ರೋಮನ್ ಸಾಮ್ರಾಟನಾದಾಗ ಜರ್ಮನಿಗೆ ದೊರೆಯಾದ. ಡೇನರು ಬೊಹಿಮಿಯನ್ನರು ನಡೆಸುತ್ತಿದ್ದ ದಾಳಿಗಳನ್ನು ಅಡಗಿಸಿದ್ದಲ್ಲದೆ ದೇಶದ್ರೋಹಿಗಳಾದ ಸಾಮಂತರನ್ನು ಶಿಕ್ಷಿಸಿದ. 980ರಲ್ಲಿ ರೋಮನ್ ಸಾಮ್ರಾಟನಾದ. ಆಟೊಮನ್ ಸುಲ್ತಾನನ ಬೆಂಬಲದಿಂದ ಅರಬ್ಬರು ಇಟಲಿಗೆ ನುಗ್ಗಿದಾಗ (987) ಕೆಲಬ್ರಿಯ ಎಂಬಲ್ಲಿ ಸೋತು ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಈ ಪರಾಭವದಿಂದಾದ ಅಪಯಶಸ್ಸನ್ನು ತೊಡೆದುಹಾಕಲು ಪುನಃ ಅರಬ್ಬರ ಮೇಲೆ ಯುದ್ಧ ನಡೆಸುವ ಪ್ರಯತ್ನದಲ್ಲಿದ್ದಾಗ ಕಾಲವಾದ.

**ಆಟೊ III:** ಎರಡನೆಯ ಆಟೊನ ಮಗ. (980–1002). ದೊರೆಯಾದಾಗ ಮೂರು ವರ್ಷದವ. ಆದ್ದರಿಂದ ಕೆಲವು ಕಾಲ ಅವನ ತಾಯಿ, ಅನಂತರ ಅವನ ಅಜ್ಜ ರಾಜಪ್ರತಿನಿಧಿಯಾಗಿ (ರೀಜೆಂಟ್) ರಾಜ್ಯದ ಆಡಳಿತ ನಡೆಸಿದರು. ಬವೇರಿಯದ ಡ್ಯೂಕ್ ಆಗಿದ್ದ ಎರಡನೆಯ ಹೆನ್ರಿ ಇವನಿಗೆ ಸಿಂಹಾಸನಕ್ಕೆ ಹಕ್ಕಿಲ್ಲವೆಂಬ ವ್ಯಾಜ್ಯ ಹೂಡಿ ತಾನೇ ರಾಜನಾಗಲು ಮಾಡಿದ ಪ್ರಯತ್ನ ಫಲಿಸಲಿಲ್ಲ. ತುಂಬ ಮೇಧಾವಿ, ವಿದ್ಯಾವಂತ. ಪೋಪನೂ ತನಗೆ ಅನುಕೂಲನಾಗಿರಬೇಕೆಂಬ ಉದ್ದೇಶದಿಂದ ತನ್ನವರನ್ನೇ ಆ ಪದವಿಗೇರಿಸಿದ. ಹಿಂದಿನ ರೋಮನ್ ಸಾಮ್ರಾಜ್ಯದ ವೈಭವ, ಪರಾಕ್ರಮ, ಆಡಳಿತ ನೀತಿಗಳಿಗೆ ಮಾರುಹೋಗಿದ್ದು ತನ್ನ ಸಾಮ್ರಾಜ್ಯವನ್ನೂ ಅದೇ ಮಾದರಿಯಲ್ಲಿ ರೂಪಿಸಲೆತ್ನಿಸಿದ. ಈ ನೀತಿಯಿಂದ ಜರ್ಮನಿ, ಇಟಲಿ ಎರಡು ದೇಶಗಳಲ್ಲೂ ಜನಾನುರಾಗವನ್ನು ಕಳೆದುಕೊಂಡ. ರೊಚ್ಚಿಗೆದ್ದಿದ್ದ ರೋಮ್‌ನ ಪ್ರಜೆಗಳಿಂದ ತಪ್ಪಿಸಿಕೊಂಡು ಪೆಟರ್ನೋಗೆ ಓಡಿಹೋಗಿ ಅಲ್ಲಿ ಕಾಲವಾದ. ಜರ್ಮನರು ಇಟ್ಯಾಲಿಯನ್ನರು ಇಬ್ಬರನ್ನೂ ಒಂದೇ ರಾಜಾಧಿಪತ್ಯಕ್ಕೊಳಪಡಿಸುವುದು ಸಾಧ್ಯವಾಗದ ವಿಷಯ ಎಂಬುದು ಇವನ ಆಳ್ವಿಕೆಯಲ್ಲಿ ಖಚಿತವಾಯಿತು.

**ಆಟೊ IV:** ಸ್ಯಾಕ್ಸೊನಿಯ ಡ್ಯೂಕ್ ಹೆನ್ರಿಯ ಮಗ. (1182–1218). ಇಂಗ್ಲೆಂಡಿನ ದೊರೆ ಎರಡನೆಯ ಹೆನ್ರಿಯ ಮೊಮ್ಮಗ. ಇಂಗ್ಲೆಂಡಿನಲ್ಲೇ ಶಿಕ್ಷಣ ಪಡೆದ. ಅಲ್ಲಿದ್ದಾಗಲೇ ಯುದ್ಧದಲ್ಲಿ ಉತ್ತಮ ಅನುಭವ ಗಳಿಸಿದ. ಸಾಮ್ರಾಟ್ ಪದವಿ ಪಡೆದದ್ದು 1208ರಲ್ಲಿ. ಅನೇಕ ಯುದ್ಧಗಳಲ್ಲಿ ಹೋರಾಡಿ ಇಟಲಿಯ ದಕ್ಷಿಣ ಭಾಗವನ್ನೂ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಜರ್ಮನಿಯಲ್ಲಿ ಶತ್ರುಗಳು ಅವನನ್ನು ಸಿಂಹಾಸನದಿಂದ ಇಳಿಸಲು ಒಳಸಂಚು ನಡೆಸಿದರು. 1214ರಲ್ಲಿ ಫ್ರೆಂಚರಿಂದ ಸೋತ. ಮುಂದೆ ಕಷ್ಟಪರಂಪರೆಗಳು ಬಂದೊದಗಿದವು. ಪೋಪ್ ಇವನನ್ನು ಜಾತಿಯಿಂದ ಹೊರಹಾಕಿದ. ಜರ್ಮನಿಯ ಶ್ರೀಮಂತರು ಇವನಿಗೆ ವಿರೋಧಿಗಳಾದರು. ಫ್ರಾನ್ಸಿನ ದೊರೆ ಎರಡನೆಯ ಫಿಲಿಪ್‌ನಿಂದ ಬೋವೈನ್ ಕದನದಲ್ಲಿ ಪರಾಜಿತನಾಗಿ, ಸಾಮ್ರಾಟ್ ಪದವಿಯನ್ನು ಕಳೆದುಕೊಂಡು ಸ್ಯಾಕ್ಸನಿಗೆ ಹೋಗಿ ತನ್ನ ಕೊನೆಗಾಲವನ್ನು ಕಳೆದ. (ಬಿ.ಎಸ್.ಎ.)

**ಆಟೋ :** ಇಂಗ್ಲಿಷ್ ಭಾಷೆಯಲ್ಲಿ ಒಂದು ಪೂರ್ವ ಪ್ರತ್ಯಯ, ಸ್ವಯಂ ಎಂಬ ಅರ್ಥ. ಉದಾಹರಣೆಗೆ ಆಟೋಬಯಾಗ್ರಫಿ (ಸ್ವಂತಜೀವನ ಚರಿತ್ರೆ ಅಥವಾ ಆತ್ಮಚರಿತ್ರೆ), ಆಟೋಕ್ರ್ಯಾಟ್ (ಸ್ವಂತಸಾಮರ್ಥ್ಯವಂತ ಅಥವಾ ನಿರಂಕುಶಪ್ರಭು), ಆಟೋಮೊಬೈಲ್ (ಸ್ವಯಂಚಾಲಿತ ವಾಹನ) ಇತ್ಯಾದಿ. ಜನ ಬಳಕೆಯಲ್ಲಿ ಒಂದು ಪುಟ್ಟ ಸ್ವಯಂಚಾಲಿತ ವಾಹನ. ಅಂತರ್ದಹನ ಎಂಜಿನ್ನಿನಿಂದ (ನೋಡಿ) ಬಲ ನಿರ್ಮಾಣವಾಗಿ ವಾಹನದ ಚಲನೆ ಸಾಧ್ಯವಾಗುತ್ತದೆ. ಆಟೋ ಮೂರು ಚಕ್ರದ ವಾಹನದ ಹೆಸರು. ಒಬ್ಬ ಚಾಲಕ ಮತ್ತು ಇಬ್ಬರು ಅಥವಾ ಮೂವರು ಪ್ರಯಾಣಿಕರನ್ನು ಇದು ಒಯ್ಯಬಲ್ಲುದು. ಜನಸಂದಣಿಯ ನಡುವೆ ಮೂಲೆ ಮೂಲೆಗಳಿಗೆ ಕ್ಷಿಪ್ರ ವೇಳೆಯಲ್ಲಿ ಕಡಿಮೆ ಬಾಡಿಗೆ ದರದಲ್ಲಿ ಸರಾಗವಾಗಿ ಸಾಗಬಲ್ಲ ಈ ವಾಹನ ನಗರಗಳಲ್ಲಿ ಸರ್ವಜನಪ್ರಿಯ ಸಾರಿಗೆ ಸಾಧನ. ಆದರೆ ಇದು ಕಾರುವ ಹೊಗೆ, ಉಂಟು ಮಾಡುವ ಶಬ್ದ ಕರ್ಣಕಠೋರವೂ ಹೌದು. ಇದರಲ್ಲಿಯೇ ಸ್ವಲ್ಪ ದೊಡ್ಡದೂ ಹೆಚ್ಚು ಅಶ್ವಸಾಮರ್ಥ್ಯವುಳ್ಳದ್ದೂ ಆಗಿರುವ ಟೆಂಪೋ ವಾಹನವನ್ನು ಸರಕು ಸಾಗಾಣಿಕೆಗೆ ಉಪಯೋಗಿಸುತ್ತಾರೆ. *

**ಆಟೋಕ್ಲೇವ್ :** ರಾಸಾಯನಿಕ ಅಥವಾ ಭೌತಕ್ರಿಯಾಪರಿಣಾಮ ಅಥವಾ ಪ್ರಯೋಗ ವರ್ಧನವಾಗಿ ಉಪಯೋಗಿಸಲು ಉಷ್ಣ ಮತ್ತು ಸಂಮರ್ದಗಳನ್ನು ತಡೆದಿಟ್ಟುಕೊಳ್ಳುವಂಥ ಪಾತ್ರೆ (ಯಾಂತ್ರಿಕ ಉಷ್ಣಬಲೋಪಕರಣ).

ಅಡುಗೆಗೆ ಉಪಯೋಗಿಸುವ ಪ್ರೆಷರ್ ಕುಕ್ಕರನ್ನು ಒಂದು ರೀತಿಯ ಆಟೋಕ್ಲೇವ್ ಎಂದೇ ಹೇಳಬಹುದು. ಈ ಬಲಬಂಧಿತ ಪಾತ್ರೆಯನ್ನು ರಾಸಾಯನಿಕ ಮತ್ತು ಇತರ ಕೈಗಾರಿಕೋದ್ಯಮಗಳಲ್ಲಿ ವಿಶೇಷವಾಗಿ ಬಳಸುತ್ತಾರೆ. ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೋಪಕರಣಗಳನ್ನೂ ಸೂಜಿ ಮೊದಲಾದ ಇತರ ಉಪಕರಣಗಳನ್ನೂ ಶುದ್ಧಿಗೊಳಿಸಲು ಈ ಪಾತ್ರೆಯ ಉಪಯೋಗವಿದೆ. ಕ್ರಿಮಿತಜ್ಞರು ಕ್ರಿಮಿಕೀಟಗಳ ಅನುತ್ಪಾದನ ವಾತಾವರಣ ರಚನೆಯಲ್ಲಿ, ಅವುಗಳ ಹರಡುವಿಕೆಯನ್ನು ತಡೆಗಟ್ಟುವಲ್ಲಿ ಮತ್ತು ಕೊಳಚೆ ವಾತಾವರಣ ನಿರ್ಮೂಲನೆಯಲ್ಲಿ ವಿಶೇಷವಾಗಿ ಈ ಶುದ್ಧೀಕರಣ ವಿಧಾನವನ್ನು ಬಳಸುತ್ತಾರೆ. (ಎ.ಎಸ್.ಎ.)

**ಆಟೋಮನ್ ಚಕ್ರಾಧಿಪತ್ಯ :** ತುರ್ಕಿ ಭಾಷೆಯನ್ನಾಡುತ್ತಿದ್ದ ಒಂದು ಜನಾಂಗದ ಸಾಮ್ರಾಜ್ಯ. ಸು. 1300ರಲ್ಲಿ ಸ್ಥಾಪಿತವಾದುದು 1922ರವರೆಗೂ ಉಳಿದು ಬಂದಿತ್ತು. ಇದಕ್ಕೆ ತುರ್ಕಿ ಸಾಮ್ರಾಜ್ಯವೆಂಬ ಹೆಸರೂ ಇದ್ದು ಈಗಿನ ತುರ್ಕಿಸ್ತಾನವನ್ನೂ ಒಳಗೊಂಡ ದೊಡ್ಡ ರಾಷ್ಟ್ರವಾಗಿತ್ತು. ಏಷ್ಯಮೈನರ್ ಇದರ ಕೇಂದ್ರ. ಆಗ ಶಾಸ್ತ್ರಸಮ್ಮತವಾದ ಸಾಂಪ್ರದಾಯಿಕ ಇಸ್ಲಾಂ ಧರ್ಮ ಸಂಪ್ರದಾಯಗಳು ಶಿಥಿಲವಾಗುತ್ತ ಬಂದಿದ್ದವು; ಇಸ್ಲಾಮೀಯರ ನಾಗರಿಕತೆ ಯಲ್ಲೂ ಪ್ರಗತಿಯಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಸ್ಥಾಪಿತವಾದ ಹೊಸ ಸಾಮ್ರಾಜ್ಯ ಕೆಲಮಟ್ಟಿಗೆ ಇಸ್ಲಾಂ ಧರ್ಮ ಸಂಪ್ರದಾಯವನ್ನೇ ಬದಲಾಯಿಸಿತು. ಅಲ್ಲದೆ ಪೌರ್ವಾತ್ಯ ನಾಗರಿಕತೆಯ ಪ್ರಭಾವಕ್ಕೊಳಗಾಗಿ ಹೊಸ ಮಾರ್ಗದಲ್ಲಿ ಮುಂದುವರಿಯಿತು.

ಮಧ್ಯ ಏಷ್ಯದಲ್ಲಿ ಶತಮಾನಗಳ ಕಾಲ ಭವ್ಯವಾದ ಇತಿಹಾಸವನ್ನು ಹೊಂದಿದ್ದ ತುರುಷ್ಕರಲ್ಲಿ ಕೆಲವರು ಪಶ್ಚಿಮದ ಕಡೆ ವಲಸೆ ಹೋಗಿ ಮಧ್ಯಪ್ರಾಚ್ಯಕ್ಕೂ ಬಂದರು. ಅವರಲ್ಲಿ ಮೊದಲನೆಯ ಸುಲ್ತಾನ ಉಸ್ಮಾನ್ I (1281–1325). ಅವನಿಂದಲೇ ಆ ವಂಶದ ಹೆಸರು ಬಂದದ್ದು. ಉಸ್ಮಾನ್ ಎಂಬ ಶಬ್ದವೇ ಆಟೋಮನ್ ಎಂದು ರೂಪಾಂತರ ಹೊಂದಿತು. ಅವನ ಮಗ ಅರ್‌ಹಾನ್ (1328–59). ಇಸ್ತಾಂಬುಲ್‌ಗೆ ಅಭಿಮುಖವಾಗಿ ಬರ್ಸಾವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಅರ್‌ಹಾನನ ಮಗನಾದ ಸುಲೈಮಾನ್ ಗ್ಯಾಲಿಪೋಲಿಯನ್ನು 1358ರಲ್ಲಿ ವಶಪಡಿಸಿಕೊಂಡ ಮೇಲೆ ತುರುಕರಿಗೆ ಮೊಟ್ಟಮೊದಲು ಯುರೋಪಿನಲ್ಲಿ ನೆಲೆಸಲು ಸಾಧ್ಯವಾಯಿತು. ಮುರಾದ್ I (1359–80) ಏಡ್ರಿಯನೋಪಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬೈಜಾಂಟೈನ್ ಸಾಮ್ರಾಜ್ಯ ಇಸ್ತಾನ್‌ಬುಲ್‌ಗೆ ಮಾತ್ರ ಸೀಮಿತವಾಗಿರುವಂತೆ ಮಾಡಿದ. ಸರ್ಬಿಯ ಮತ್ತು ಅದರ ಮಿತ್ರರಾಷ್ಟ್ರಗಳು ಪರಾಜಯ ಹೊಂದಿದುವು. ಇದೇ ಅವರ ಅತ್ಯಂತ ವೈಭವದ ಕಾಲವೆನ್ನ ಬಹುದು. ಅವರ ಸಾಮ್ರಾಜ್ಯ ವಿಸ್ತರಣೆ ಮುಂದುವರಿಯಿತು. ಮಹಮದ್ ಷಾ II (1451–81) ಸುಲ್ತಾನ 1453ರಲ್ಲಿ ಕಾನ್‌ಸ್ಟಾಂಟಿನೋಪಲ್‌ನ್ನೂ ವಶಪಡಿಸಿಕೊಂಡ. ಇವನ ಆಳ್ವಿಕೆಯಲ್ಲಿ ವಿದ್ಯೆಗೆ, ಕಲೆಗೆ, ವಿಶೇಷ ಪ್ರೋತ್ಸಾಹ ದೊರಕಿತು. ಈತ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದ ಕಾನ್‌ಸ್ಟಾಂಟಿನೋಪಲನ್ನು ಭವ್ಯಸೌಧಗಳಿಂದ, ಮಸೀದಿಗಳಿಂದ ಅಲಂಕರಿಸಿದ. ಅವನಿಗೆ ಎಂಟು ವಿದೇಶಿ ಭಾಷೆಗಳ ಪರಿಚಯವಿತ್ತು. ಅಲ್ಲದೆ ತಾನು ಗೆದ್ದ ಪ್ರದೇಶಗಳಲ್ಲಿ ಜನರ ಮತ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ರಕ್ಷಿಸಿದ. ಇವನ ಅತ್ಯಂತ ವೈಭವಯುತವಾದ ಆಳ್ವಿಕೆಯಲ್ಲಿ ತುರ್ಕಿ ಸಾಮ್ರಾಜ್ಯದ ಸರ್ವತೋಮುಖ ಪ್ರಗತಿಯ ಪರಾಕಾಷ್ಠೆಯನ್ನು ಕಾಣಬಹುದು.

ತುರ್ಕರು ಬೆಲ್‌ಗ್ರೇಡನ್ನು 1521ರಲ್ಲಿ ವಶಪಡಿಸಿಕೊಂಡರು. 1522ರಲ್ಲಿ ರೋಡ್ಸ್ ಅವರ ಕೈ ಸೇರಿತು. 1524ರಲ್ಲಿ ಹಂಗರಿಯನ್ನೂ ಗೆದ್ದರು. ಅವರ ಈ ದಾಳಿ ಅಲ್‌ಜೀರಿಯದ ವರೆಗೂ ವ್ಯಾಪಿಸಿತು. ಅಲ್ಲದೆ ಆಫ್ರಿಕದ ಉತ್ತರ ಸಮುದ್ರ ತೀರಪ್ರದೇಶಗಳು ಅವರ ಕೈವಶವಾದುವು. ಆದರೆ ಮುಂದೆ ಬಂದ ಮೂವರು ಸುಲ್ತಾನರ ಕಾಲದಲ್ಲಿ ಈ ಕೀರ್ತಿವೈಭವಗಳು ಕುಂದಿದುವು.

ಅಹಮದ್ IVನ (1648–87) ಕಾಲದಲ್ಲಿ ಅವನತಿ ಕೊನೆಗಂಡು, ಆಟೋಮನ್ ಸಾಮ್ರಾಜ್ಯ ಪುನಶ್ಚೇತನಗೊಂಡಿತು. ಇವನ ಕಾಲದಲ್ಲಿ ಕ್ರೀಟ್, ಪೊಡೋಲಿಯ ಮತ್ತು ಉಕ್ರೇನಿನ ಒಂದು ಭಾಗ ತುರ್ಕರ ಕೈ ಸೇರಿದುವು. ಆದರೆ 1683ರಲ್ಲಿ ವಿಯನ್ನಾದ ಮೇಲೆ ಎರಡನೆಯ ಬಾರಿ ಮುತ್ತಿಗೆ ಹಾಕಿದರೂ ನಿಷ್ಫಲವಾಯಿತು.

ಮುಂದಿನ 150 ವರ್ಷಗಳು ತುರ್ಕಿ ಸಾಮ್ರಾಜ್ಯದ ಇತಿಹಾಸದಲ್ಲಿ ಗಮನಾರ್ಹವಾದುವು. ಏಕೆಂದರೆ ಆ ಸಾಮ್ರಾಜ್ಯ ಬಾಲ್ಕನ್ ರಾಜ್ಯಗಳೊಂದಿಗೆ ನಡೆಸಿದ ಯುದ್ಧಗಳಲ್ಲಿ ಮೇಲಿಂದ ಮೇಲೆ ಜಯಾಪಜಯಗಳನ್ನು ಅನುಭವಿಸಬೇಕಾಯಿತು. ಅಬ್ದುಲ್ ಮಜೀದ್ ಎಂಬುವನ (1839–61) ಕಾಲದಲ್ಲಿ ಈಜಿಪ್ಟಿನ ಮಹಮ್ಮದ್ ಅಲಿ ನಡೆಸಿದ ದಾಳಿಯಿಂದ ಪಾರಾಗಲು ಪಾಶ್ಚಾತ್ಯ ರಾಷ್ಟ್ರಗಳ ನೆರವು ಪಡೆಯಬೇಕಾಯಿತು. 1876ರಲ್ಲಿ ಅಬ್ದುಲ್ ಹಮೀದ್ II ಸುಲ್ತಾನನಾದ. ರಷ್ಯ ತುರ್ಕಿಯ ವಿರುದ್ಧ ಯುದ್ಧ ಘೋಷಿಸಿತು (1877–78). ಈ ಯುದ್ಧ 1878ನೆಯ ಮಾರ್ಚ್‌ನಲ್ಲಾದ ಸ್ಯಾನ್ ಸ್ಟಿಫಾನೊ ಒಪ್ಪಂದದಿಂದ ಕೊನೆಗೊಂಡಿತು. ಒಪ್ಪಂದದ ಷರತ್ತುಗಳು ಇಂಗ್ಲೆಂಡ್ ಆಸ್ಟ್ರಿಯಗಳಿಗೆ ಒಪ್ಪಿಗೆಯಾಗಲಿಲ್ಲ. ಆಗ್ನೇಯ ಯುರೋಪಿನಲ್ಲಿ ಹೊಸದಾಗಿ ನಿರ್ಮಿತವಾದ ಸಣ್ಣ ರಾಜ್ಯಗಳಲ್ಲಿ ರಾಜಕೀಯ ಶಾಂತಿಗೆ ಅನುಕೂಲ ಸಮಾನಬಲತೆ ಏರ್ಪಟ್ಟಿರಲಿಲ್ಲವೆಂದು ಆ ಎರಡು ರಾಷ್ಟ್ರಗಳ ಆಕ್ಷೇಪಣೆ. ಈ ಕೊರತೆಯ ನಿವಾರಣೆಗಾಗಿ ಅದೇ ವರ್ಷದ ಜೂನ್ ಜುಲೈ ತಿಂಗಳುಗಳಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನವೊಂದು ಬರ್ಲಿನ್‌ನಲ್ಲಿ ನಡೆಯಿತು. ಇಲ್ಲಿ ಸ್ಯಾನ್ ಸ್ಟಿಫಾನೊ ಒಪ್ಪಂದ ಪರಿಷ್ಕರಣ ಹೊಂದಿ, ಬರ್ಲಿನ್ ಕೌಲು ಹೊರಬಂದಿತು. ಹೊಸ ಕ್ರೈಸ್ತ ರಾಜ್ಯಗಳು ಕೊಂಚ ಮಾರ್ಪಾಡು ಹೊಂದಿ ಹಾಗೆಯೇ ಉಳಿದುವು. ತುರ್ಕಿ ಮಾತ್ರ ತನ್ನ ಅಧೀನದಲ್ಲಿದ್ದ ಅನೇಕ ಪ್ರಾಂತ್ಯಗಳನ್ನು ಕಳೆದುಕೊಂಡಿತು. ಕ್ರೀಟ್ ದ್ವೀಪವನ್ನು ಸ್ವಾಧೀನಪಡಿಸಿಕೊಳ್ಳಲು 1897ರಲ್ಲಿ ಗ್ರೀಕರು ತುರ್ಕಿಯ ಮೇಲೆ ಯುದ್ಧ ಹೂಡಿದಾಗ, ಸುಲ್ತಾನ್ ಆದಂ ಪಾಷಾ ಅವರನ್ನು ಸೋಲಿಸಿದ್ದಲ್ಲದೆ ಥೆಸಲಿಯನ್ನೂ ವಶಪಡಿಸಿಕೊಂಡ.

1908ರಲ್ಲಿ ಯಂಗ್ ಟರ್ಕ್ಸ್ ಚಳವಳಿ ಪ್ರಾರಂಭವಾದ ಮೇಲೆ ಆಧುನಿಕ ತುರ್ಕಿಯಲ್ಲಿ ಕ್ರಾಂತಿಕಾರಕ ರಾಜಕೀಯ ಘಟನೆಗಳು ಸಂಭವಿಸಿದುವು. ಸುಧಾರಣೆಗಳಿಗೆ, ಪ್ರಜಾಪ್ರಭುತ್ವಕ್ಕೆ ಅನುಕೂಲವಾದ ರಾಜ್ಯವ್ಯವಸ್ಥೆಯನ್ನು ರೂಪಿಸಿ, ಅದಕ್ಕನುಸಾರವಾಗಿ 17ನೆಯ ಡಿಸೆಂಬರ್ 1908ರಲ್ಲಿ ಶಾಸನ ಸಭೆಯೊಂದು ಸೇರಿತು. ಸಂವಿಧಾನಾತ್ಮಕ ಆಡಳಿತ ಪ್ರಾರಂಭವಾಯಿತು. ಒಂದನೆಯ ಮಹಾಯುದ್ಧದಲ್ಲಿ ತುರ್ಕಿದೇಶ ಜರ್ಮನಿಯ ಪರವಾಗಿತ್ತು. ಯುದ್ಧ ಮುಗಿದ ಕೂಡಲೇ ಆಕ್ರಮಣಶೀಲವಾಗಿದ್ದ ಗ್ರೀಕರ ಸೈನ್ಯ ಒಂದು ಇಜ್‌ಮೀರ್‌ನಲ್ಲಿ ನೆಲೆಯೂರಿತು. ಆಗ ದೇಶಪ್ರೇಮಿ ತುರ್ಕಿ ಯುವಕ ತಂಡವೊಂದು ಮುಸ್ತಫ ಕೆಮಾಲ್‌ನ ನೇತೃತ್ವದಲ್ಲಿ ಮುನ್ನುಗ್ಗಿ ಗ್ರೀಕರ ಹಂಚಿಕೆಯನ್ನು ವಿಫಲಗೊಳಿಸಿತು. 20 ಡಿಸೆಂಬರ್ 1920 ರಂದು ತುರ್ಕಿಯ ಪಾರ್ಲಿಮೆಂಟಿನ ನ್ಯಾಷನಲಿಸ್ಟ್ ಪಕ್ಷದ ಸದಸ್ಯರು ಒಂದು ರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದರು. ಆ ಶಾಂತಿ ಒಪ್ಪಂದವನ್ನೇ ಹೊಸ ತುರ್ಕಿಯ ಸ್ವಾತಂತ್ರ್ಯ ಘೋಷಣೆ ದಿನವೆಂದು ಉಲ್ಲೇಖಿಸಲಾಗುತ್ತಿದೆ. 1920ರ ಏಪ್ರಿಲ್‌ನಲ್ಲಿ ಮುಸ್ತಫ ಕೆಮಾಲ್ ಮೊದಲ ರಾಷ್ಟ್ರೀಯ ಸರ್ಕಾರವನ್ನು ಅನಟೋಲಿಯ ಪರ್ವತ ಪ್ರದೇಶದಲ್ಲಿರುವ ಅಂಕಾರಾದಲ್ಲಿ ಸ್ಥಾಪಿಸಿದ (ನೋಡಿ– ಅಟಾಟರ್ಕ್ ಕೆಮಾಲ್). ಗ್ರೀಕರು ತುರ್ಕಿ ದೇಶದೊಳಕ್ಕೆ ನುಗ್ಗಿದರು. ಕೆಮಾಲ್ ಅವರನ್ನು ಹೊಡೆದೋಡಿಸಿದ. ಈ ಯುದ್ಧ 1923ರ ಲಾಸೇನ್ ಶಾಂತಿ ಒಪ್ಪಂದ ದಿಂದ ಕೊನೆಗೊಂಡಿತು. ಪಾಶ್ಚಾತ್ಯ ರಾಷ್ಟ್ರಗಳ ಮಾದರಿಯಲ್ಲಿ ಪ್ರಗತಿಪರ ಪ್ರಜಾಧಿಪತ್ಯ ಸ್ಥಾಪಿತವಾದಾಗ ಆಟೋಮನ್ ಸಾಮ್ರಾಜ್ಯ ಕೊನೆಗೊಂಡಿತು. (ಬಿ.ಎಸ್.ಎ.)

**ಆಟೋಮ್ಯಾಟಿಸಂ :** ಇಚ್ಛೆ ಅಥವಾ ಪ್ರಜ್ಞೆಯ ಸಹಾಯವಿಲ್ಲದೆ, ವಿಚಾರಾಪೇಕ್ಷೆ ಯಿಲ್ಲದೆ, ಅಪ್ರಯತ್ನವಾಗಿ, ತನ್ನಷ್ಟಕ್ಕೆ ತಾನೇ ಅಭ್ಯಾಸಗತವಾಗಿ ಯಂತ್ರ ಸದೃಶವಾಗಿ ನಡೆಯುವ ವ್ಯಾಪಾರದ ಭಾವವನ್ನು ಸೂಚಿಸುವ ಪದ (ಸ್ವಚಲತಾ; ಪ್ರಕೃತಿ ಬೋಧನಾವಾದ; ಸ್ವತಃಕ್ರಿಯಾ).

ಜೀವಿಗಳಲ್ಲಿ ಬಾಹ್ಯಪ್ರಚೋದನೆಯಿಲ್ಲದೆ, ಸಂಕಲ್ಪವಿಲ್ಲದೆ ನಡೆಯುವ ವ್ಯಾಪಾರಗಳಿಗೆ ಆಟೋಮ್ಯಾಟಿಕ್ ಕ್ರಿಯೆ ಎನ್ನುತ್ತಾರೆ. ಪಶು ಪ್ರಾಣಿಗಳು ಕೇವಲ ಪ್ರಕೃತಿ ಚೋದಿಗಳೆಂದು ಶರೀರ ವಿಜ್ಞಾನಿಗಳು ವಾದಿಸುತ್ತಾರೆ. ರಾಸಾಯನಿಕ, ಭೌತಿಕ ಪ್ರಕ್ರಿಯೆಗಳಿಂದ ಸ್ವಯಂ ಚಲನಶಕ್ತಿ, ಪ್ರಚೋದನಶಕ್ತಿಯುಂಟಾಗುತ್ತದೆಂದು ಹೇಳುತ್ತಾರೆ.

ಆದಿಯಲ್ಲಿ ಸಂಕಲ್ಪಾನ್ವಿತವಾದ ಕ್ರಿಯೆಗಳು ಕ್ರಮೇಣ ಅತಿಪುನರಾವೃತ್ತಿಯ ದೆಸೆಯಿಂದ ಬುದ್ಧಿ, ಗಮನ ಇಲ್ಲದೆ ತಾನಾಗಿ ನಡೆಯುವ ರೂಢಿಯ, ಅಭ್ಯಾಸದ ಕೆಲಸಗಳಾಗುತ್ತವೆಂದು ಮನಶ್ಶಾಸ್ತ್ರಜ್ಞರು ವಾದಿಸುತ್ತಾರೆ. ಸಂಕಲ್ಪ, ಪ್ರಜ್ಞೆ ಇವುಗಳ ಆಧಾರವನ್ನುಳ್ಳ ಉದ್ದೇಶಪೂರಿತ ಕ್ರಿಯೆಗಳು ಕ್ರಮೇಣ ಅಸಂಕಲ್ಪಿತ. ಪ್ರಜ್ಞಾವಿಹೀನ ರೂಢಿಕ್ರಿಯೆಗಳಾದಲ್ಲಿ ಈ ಉತ್ತರೋತ್ತರ ಸ್ಥಿತಿಗೆ ಮೂಲ ಆಟೋಮ್ಯಾಟಿಸಂ ಎಂದು ಹೇಳಬಹುದು. ಅವು ಪ್ರಜ್ಞೆಯ ಮಟ್ಟದಿಂದ ನಿಗೂಢಪ್ರಜ್ಞೆಯ ಆಳಕ್ಕೆ ಸಂದಿರುತ್ತವೆ. ಮನೋವ್ಯಾಪಾರಗಳನ್ನು ಕುರಿತ ಶರೀರವಿಜ್ಞಾನ ಭಾಗದಲ್ಲಿ, ಮನೋಭೌತ ಅಥವಾ ಮನಶ್ಶರೀರಶಾಸ್ತ್ರದಲ್ಲಿ ಈ ಪರಿಸ್ಥಿತಿಗೆ ಮನಸ್ಸಿಗೂ ದೇಹಕ್ಕೂ ಇರುವ ಸಾಮಾನ್ಯ ಸಂಬಂಧಗಳ ಸಮಾಂತರತೆ ಎನ್ನುತ್ತಾರೆ. ಉದಾಹರಣೆ: ನಾವು ನಡೆಯುವ, ಓದುವ, ಬರೆಯುವ ಕ್ರಿಯೆಗಳು.

ನೀತಿ ವಿಮರ್ಶೆಯಲ್ಲೂ ಕೆಲವು ಕ್ರಿಯೆಗಳು ಅಪ್ರೇರಿತ ಕ್ರಿಯೆಗಳೇ ಅಥವಾ ಸ್ವಂತ ಇಷ್ಟದಿಂದ ಮಾಡಿದ ಕ್ರಿಯೆಗಳೇ ಎಂಬ ಸಂದಿಗ್ಧ ಪರಿಸ್ಥಿತಿ ಒದಗುತ್ತದೆ. ಅಪ್ರೇರಿತ ಕ್ರಿಯೆಗಳು ನೀತ್ಯತೀತವಾದಂತಹವು.

ಕೆಲವು ವ್ಯಕ್ತಿಗಳಲ್ಲಿ ಅತೀತಸಾಮಾನ್ಯವರ್ತನೆಗಳು (ಸೂಪರ್ ನಾರ್ಮಲ್) ಕಂಡುಬರ ಬಹುದು. ಇಂಥ ಸಂದರ್ಭಗಳಲ್ಲಿ ಅಲ್ಲಿ ಕಂಡುಬರುವ ಆಟೋಮ್ಯಾಟಿಸಂ ಪರಿಸ್ಥಿತಿಗಳಲ್ಲಿ ಪ್ರಕೃತ್ಯತೀತ, ಅತಿಲೌಕಿಕ, ಅದ್ಭುತಕ್ರಿಯೆಗಳನ್ನು ವಿವರಿಸಲು, ವಿಮರ್ಶಿಸಲು, ಭೂತ, ಪ್ರೇತ, ಪಿಶಾಚಿ, ಯಕ್ಷ ಮುಂತಾದವು ಆವೇಶಿಸಿವೆ ಎಂದು ಊಹಿಸಬೇಕಾಗುತ್ತದೆ. ಈ ಅಭೌತಶಕ್ತಿಗಳನ್ನು ಮನಶ್ಶಾಸ್ತ್ರದಲ್ಲಿ ಇತ್ತೀಚೆಗೆ ಹೆಚ್ಚು ವಿಚಾರ ಮಾಡುತ್ತಿದ್ದಾರೆ. (ಎಸ್.ಆರ್.)

**ಆಟ್ವುಡ್, ಜಾರ್ಜ್ :** 1746–1807. ಇಂಗ್ಲೆಂಡಿನ ಗಣಿತವಿಜ್ಞಾನಿ. ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನ ಪಂಡಿತಸದಸ್ಯ ಹಾಗೂ ಉಪಾಧ್ಯಾಯ. ಎಫ್.ಆರ್.ಎಸ್. ಗೌರವವನ್ನು ಪಡೆದವ. ವಸ್ತುಗಳು ಮೇಲಿಂದ ಕೆಳಗೆಬೀಳುವ ಸಂಬಂಧದಲ್ಲಿನ ನಿಯಮಗಳನ್ನು

ತಾಳೆಮಾಡಲು ಬಳಸುವ ಯಂತ್ರಕ್ಕೆ ಇವನ ಹೆಸರನ್ನೇ ಇಡಲಾಗಿದೆ. ಇವನ್ನು ಟ್ರೀಟೈಸ್ ಆನ್ ದಿ ರೆಕ್ಟಿಲೀನಿಯರ್ ಮೋಷನ್ ಅಂಡ್ ರೊಟೇಷನ್ ಆಫ್ ಬಾಡೀಸ್ (1784) ಎಂಬ ಇವನ ಗ್ರಂಥದಲ್ಲಿ ವಿವೇಚಿಸಲಾಗಿದೆ.

*

**ಆಟ್ವೆ, ಥಾಮಸ್** : 1651–85. ಇಂಗ್ಲಿಷ್ ನಾಟಕಕಾರ. 17ನೆಯ ಶತಮಾನದ ದ್ವಿತೀಯಾರ್ಧ ಕಲ್ಪನಾಪ್ರಧಾನವಾದ ರೊಮ್ಯಾಂಟಿಕ್ ಪಂಥದ ದುರಂತನಾಟಕ ಅವನತಿ ಹೊಂದಿ ಸಂಭಾಷಣಾಚಾತುರ್ಯ, ಆಡುಮಾತಿನ ಗದ್ಯಪ್ರಯೋಗ, ಅನೀತಿಜೀವನವನ್ನು ಚಿತ್ರಿಸುವ ಕಥಾವಸ್ತು ಮೊದಲಾದುವುಗಳಿಂದ ಕೂಡಿದ ಸಾಮಾಜಿಕ ಹಾಸ್ಯನಾಟಕ ಜನಪ್ರಿಯವಾಗಿದ್ದ ಕಾಲ. ಆಗ ಹಿಂದಿನ ರೊಮ್ಯಾಂಟಿಕ್ ನಾಟಕದ ಪ್ರತಿನಿಧಿಯಾಗಿ ಕಾಣಿಸಿಕೊಂಡವನು ಆಟ್ವೆ. ಅವನ ಮುಖ್ಯ ನಾಟಕಗಳು ದಿ ಆರ್ಫನ್ (1680) ಮತ್ತು ವೆನಿಸ್ ಪ್ರಿಸರ್ವ್ಡ್ (1682). ಷೇಕ್ಸ್‌ಪಿಯರನ ನಾಟಕಗಳ ಮಟ್ಟಕ್ಕೆ ಏರದಿದ್ದರೂ ಇವುಗಳಲ್ಲಿ ಭಾವತೀವ್ರತೆ, ಕಲ್ಪನಾವೈಶಿಷ್ಟ್ಯ ಮತ್ತು ಇತರ ಕಾವ್ಯಗುಣಗಳು ಬೇಕಾದಷ್ಟಿವೆ. ಇಬ್ಬರು ಸಹೋದರರನ್ನು ಆಕರ್ಷಿಸಿದ ಕನ್ಯೆಯೊಬ್ಬಳ ದಾರುಣ ಕಥೆಯಾದ ದಿ ಆರ್ಫನ್‌ನಲ್ಲಿ ಔಚಿತ್ಯದ ಎಲ್ಲೆಯನ್ನು ಮೀರುವಂತೆ ತೋರಿದರೂ ಸನ್ನಿವೇಶದ ಕಟಕಿ ಪರಿಣಾಮಕಾರಿಯಾಗಿದೆ. ವೆನಿಸ್ ಪ್ರಿಸರ್ವ್ಡ್ ಆ ಕಾಲದ ಅತ್ಯುತ್ತಮ ದುರಂತನಾಟಕವೆಂದು ಪರಿಗಣಿತವಾಗಿದೆ. ಪತ್ನಿಯಲ್ಲಿನ ಪ್ರೇಮ ಮತ್ತು ತನ್ನ ಗುಂಪಿನ ನಿಯತ್ತು ಇವುಗಳ ಘರ್ಷಣೆಗೆ ಸಿಕ್ಕಿ ತೊಳಲುವ ಇಲ್ಲಿನ ಮುಖ್ಯ ಪಾತ್ರ ಹೃದಯಸ್ಪರ್ಶಿಯಾಗಿದೆ. ಆಟ್ವೆಯಲ್ಲಿ ಭಾವತೀವ್ರತೆ ಹೆಚ್ಚು. ಸನ್ನಿವೇಶ ದಿಂದ ಬರಬಹುದಾದ ಕರುಣೆಯನ್ನು ಹಿಂಡಿ ಹಿಂಡಿ ಪ್ರೇಕ್ಷಕನ ಅನುಭವಕ್ಕೆ ನಾಟುವಂತೆ ಮಾಡುವುದೇ ನಾಟಕಕಾರನ ಉದ್ದೇಶ. ಈ ಯುಗದ ನಾಟಕಗಳಲ್ಲಿ ಕಾಣಸಿಗುವ ಕೃತಕತೆ ಇಲ್ಲಿಲ್ಲ. ಪದಗಳ ಆಯ್ಕೆ ಮತ್ತು ಬಳಕೆಯಲ್ಲಿ ಸಹಜತೆಯುಂಟು. ಇವನ ನಾಟಕಗಳು ಹಿರಾಯಿಕ್ ಟ್ರ್ಯಾಜೆಡಿಯಿಂದ ಸೆಂಟಿಮೆಂಟಲ್ ಟ್ರ್ಯಾಜೆಡಿಯತ್ತ ಹೆಜ್ಜೆ ಇಟ್ಟವು. ಇವನ ಕೃತಿಗಳು ಗಂಭೀರನಾಟಕ ಪರಿಣಾಮವನ್ನುಂಟು ಮಾಡುವುದಕ್ಕಿಂತ ಕರುಣಾಜನಕವಾಗಿವೆ. ಆಟ್ವೆ ತನ್ನ ಕಾಲಕ್ಕೆ ಡ್ರೈಡನ್‌ನಿಗೆ ಎರಡನೆಯವನೆನಿಸಿದ ನಾಟಕಕಾರ.

(ಎಲ್.ಎಸ್.ಎಸ್.;ಎಂ.ಆರ್.)

**ಆಡನ್, ವಿಸ್ಟನ್ ಹ್ಯೂ** : 1907–73 ಆಂಗ್ಲಕವಿ ಮತ್ತು ನಾಟಕಕಾರ. ಇವನ ಬರೆವಣಿಗೆಯಲ್ಲಿರುವ ಉತ್ತಮ ಅಂಶಗಳಲ್ಲಿ ಕೆಲವು ಎಲಿಯಟ್‌ನ ಪ್ರಭಾವದಿಂದ ಬಂದಿವೆ. ಇವನ ಕಾವ್ಯದುದ್ದಕ್ಕೂ ಮನೋವಿಜ್ಞಾನದ ಗಾಢಪರಿಚಯ ಕಾಣುತ್ತದೆ. ವೀರ್ಯವತ್ತಾದ ಪದಗಳ ವಿಸ್ತಾರ ಶಬ್ದಭಂಡಾರ ಆಡನ್ನನಿಗೆ ಕರಗತವಾಗಿದೆ. ಶಬ್ದಗಳ ನಾದಗುಣವನ್ನು ವಿಶೇಷವಾಗಿ ಗ್ರಹಿಸಬಲ್ಲ ಸಾಮರ್ಥ್ಯವುಳ್ಳವ. ಕಾವ್ಯವನ್ನು ಆಡುಮಾತಿಗೆ ಹತ್ತಿರ ತರಲು ಪ್ರಯತ್ನಿಸಿ ಈತ ಸಫಲನಾಗಿದ್ದಾನೆ. ಮಾನವನ ಭವಿಷ್ಯದಲ್ಲಿ ಅವನಿಗಿರುವ ದೃಢವಾದ ನಂಬಿಕೆ ಅವನ ಕವನಗಳಲ್ಲಿ ಕಲಾತ್ಮಕವಾಗಿ ಮೂಡಿಬಂದಿದೆ. ಇಂದಿನ ಕಿರಿಯ ಕವಿಗಳಲ್ಲಿ ಬಹುಜನ ಅವನಿಂದ ಪ್ರಭಾವಿತರಾಗಿದ್ದಾರೆ. ಪೊಯಮ್ಸ್ (1930) ಪ್ರಥಮ ಕೃತಿ. ಅನಂತರ ಆರೇಟರ್ಸ್ (1932), ದಿ ಡಾನ್ಸ್ ಆಫ್ ಡೆತ್ (1933) ಪ್ರಕಟವಾದುವು. ಕಡೆ ಕಡೆಯ ರಚನೆಗಳು ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ವಿವರವನ್ನು ಮನೋವಿಜ್ಞಾನದ ಭಾಷೆಯಲ್ಲಿ ತಿಳಿಸುತ್ತವೆ. ಬಹುಶಃ ಸ್ಪೇನ್ (1937) ಅವನ ಶ್ರೇಷ್ಠ ಕವನ. ತನ್ನ ಆಂತರಿಕ ಪ್ರಯತ್ನಗಳಿಂದಾಗಿ ಮಾತ್ರವೇ ಸ್ಪೇನ್ ಸುರಕ್ಷಿತವಾಗಿ ಉಳಿಯಬಲ್ಲುದು, ಸ್ಪೇನಿನ ವಿಧಿಗನುಗುಣ ವಾಗಿ ಜನರ ವ್ಯಕ್ತಿಪ್ರಜ್ಞೆ ಒಂದೇ ಉನ್ನತಿಗೇರುವುದು ಇಲ್ಲವೇ ಕುಸಿಯುವುದು ಎಂಬುದು ಕವನದ ಒಟ್ಟು ಅರ್ಥ. ನ್ಯೂ ಇಯರ್ ಲೆಟರ್ (1941) ಒಂದನೆಯ ಮಹಾಯುದ್ಧದ ಅನಂತರ ಬ್ರಿಟಿಷರ ಕಪಟವನ್ನು ಕುರಿತ ಟೀಕೆ. ಅವನ ಇತರ ಕೃತಿಗಳು–ಸಮ್ ಪೊಯಮ್ಸ್ (1940), ಫಾರ್ ದಿ ಟೈಂ ಬೀಯಿಂಗ್ (1944), ಟೆನಿಸನ್ (1946), ದಿ ಏಜ್ ಆಫ್ ಆ್ಯಂಗ್ಸೈಟಿ (1947), ಆಕ್ಸ್‌ಫರ್ಡ್ ಬುಕ್ ಆಫ್ ಲೈಟ್ ವರ್ಸ್ (1938), ಜರ್ನಿ ಟು ಎ ವಾರ್ (1939).

ಈತ ಕ್ರಿಸ್ಟೋಫರ್ ಷರ್‌ವುಡ್‌ನೊಂದಿಗೆ ದಿ ಡಾಗ್ ಬಿನೀತ್ ದಿ ಸ್ಕಿನ್ (1935), ದಿ ಅಸೆಂಟ್ ಆಫ್ ಎಫ್ ಸಿಕ್ಸ್ (1936), ಆನ್ ದಿ ಫ್ರಾಂಟಿಯರ್ (1938) ಎಂಬ ಉತ್ತಮ ನಾಟಕಗಳನ್ನೂ ರಚಿಸಿದ್ದಾನೆ.

ಆಡನ್ನನ ಕಡೆ ಕಡೆಯ ಕೃತಿಗಳಲ್ಲಿ ತಂತ್ರಕೌಶಲ ತುಂಬ ಬೆಳೆದಿದೆ. ಪ್ರತಿಭೆ ಪಕ್ವಗೊಂಡಿದೆ. ಈ ಕಾಲದ ಬಗೆಬಗೆಯ ಸಮಸ್ಯೆಗಳ ಅರಿವಿನಿಂದ ಮೂಡಿದ ನಿರಾಶೆ ಬಹುಮಟ್ಟಿನ ಕವನಗಳಲ್ಲಿ ಕಂಡುಬಂದರೂ ಮೊದಲಿಗಿಂತ ಹೆಚ್ಚಿನ ಶಾಂತತೆ, ಸ್ತಿಮಿತತೆ, ಎಲ್ಲ ಕೇಡುಗಳಲ್ಲಿ ಆಚೆ ಬೆಳಗುವ ಬದುಕನ್ನು ಕಾಣಬಲ್ಲ ದೃಷ್ಟಿ ವ್ಯಕ್ತವಾಗಿದೆ.

*

**ಆಡಮ್‌ನ ಶಿಖರ** : ಶ್ರೀಲಂಕದಲ್ಲಿ ಕೊಲಂಬೊದಿಂದ 72 ಕಿಮೀ ಪೂರ್ವದಲ್ಲಿದೆ. (ಉ.ಅ. $6^0$ 55'–ಪೂ.ರೇ. $80^0$ 30') ಹಟ್ಟನ್ ಮತ್ತು ರತ್ನಪುರಿ ಮಾರ್ಗವಾಗಿ ತಲುಪಬಹುದು. ಸಮುದ್ರಮಟ್ಟದಿಂದ ಎತ್ತರ 72360', ಅಗಲ 74', ಉದ್ದ 24'. ಇಲ್ಲಿ 5' 4" ಉದ್ದ 2.6" ಅಗಲವಿರುವ ಪಾದಮುದ್ರೆ ಇದೆ. ಇದನ್ನು ಬೌದ್ಧರು, ಮುಸ್ಲಿಮರು, ಹಿಂದೂಗಳು ಕ್ರಮವಾಗಿ ಬುದ್ಧ, ಆಡಮ್, ಶಿವ–ಇವರ ಪಾದವೆಂದು ಪೂಜಿಸುತ್ತಾರೆ. ಬೌದ್ಧರ ವಶದಲ್ಲಿದ್ದು ಪವಿತ್ರ ಯಾತ್ರಾಸ್ಥಳವೆನಿಸಿದೆ.

(ಪಿ.ಜಿ.)

**ಆ್ಯಡಮ್ ಸೇತುವೆ** : ಭಾರತಕ್ಕೂ ಶ್ರೀಲಂಕಕ್ಕೂ ಮಧ್ಯೆ ಸು.36 ಕಿಮೀ ಉದ್ದದ, ಆಳವಿಲ್ಲದ ಸಮುದ್ರದಿಂದ ಸುತ್ತುವರಿಯಲ್ಪಟ್ಟ ಚಿಪ್ಪಿನಂಥ ಮರಳುಗಲ್ಲುಗಳನ್ನೊಳಗೊಂಡಿರುವ ಕಿರಿದಾದ, ಅರ್ಧ ಮುಳುಗಿರುವ ಒಡ್ಡು. ಈ ಪ್ರದೇಶದ ಕೆಲವು ಕಡೆಗಳಲ್ಲಿ ನೀರಿನ ಆಳ 9ಮೀ ಗಳಷ್ಟಿದ್ದು ಅಲ್ಲಲ್ಲೇ ಅನೇಕ ಸಣ್ಣ ಸಣ್ಣ ದ್ವೀಪಗಳೂ ಕಾಣಿಸಿಕೊಂಡಿದೆ. ಇವುಗಳಲ್ಲೊಂ




ದಾಗಿರುವ ಕ್ರುಸಡೈ ದ್ವೀಪ ಪಾಂಬನ್ ದ್ವೀಪದ ಕುಟಿಕಲ್ ತುದಿಯಿಂದ ದಕ್ಷಿಣದಲ್ಲಿದ್ದು ಉಪಯುಕ್ತ ವೈಜ್ಞಾನಿಕ ವೀಕ್ಷಣಾಕೇಂದ್ರವಾಗಿದೆ. ನೀರಿನಿಂದ ಸುತ್ತುವರಿಯಲ್ಪಟ್ಟಿದ್ದರೂ ಸೇತುವೆ ಯಾವುದೇ ದೊಡ್ಡ ದೋಣಿ ಸಂಚಾರಕ್ಕೂ ಯೋಗ್ಯವಲ್ಲ. ಆದ್ದರಿಂದ ಕೊಲಂಬೋ ದಿಂದ ಚೆನ್ನೈಗೆ ಹೋಗುವ ಹಡಗುಗಳು ಶ್ರೀಲಂಕ ದ್ವೀಪದ ಪೂರ್ವ ತೀರವನ್ನು ಬಳಸಬೇಕಾಗುತ್ತದೆ.

ಧನುಷ್ಕೋಟಿಯಲ್ಲಿನ ಭಾರತದ ರೈಲು ಅಂತಿಮ ನಿಲ್ದಾಣ ಮತ್ತು ತಲೈಮನ್ನಾರಿನಲ್ಲಿನ ಶ್ರೀಲಂಕ ಸರಕಾರದ ರೈಲು ಅಂತಿಮ ನಿಲ್ದಾಣಗಳ ನಡುವೆ ರೈಲು ವಿಭಾಗದ ದೋಣಿ ಸಂಚಾರದ ವ್ಯವಸ್ಥೆ ಇದೆ. ತಲೈಮನ್ನಾರ್ ಜಲವಿಭಾಗದ ಒಂದು ಭಾಗವಾಗಿರುವ ಮನ್ನಾರ್ ದ್ವೀಪದಲ್ಲಿದೆ. ಮನ್ನಾರ್ ದ್ವೀಪ ಮತ್ತು ಶ್ರೀಲಂಕದ ಮುಖ್ಯ ಭೂಭಾಗದ ನಡುವೆ ಒಂದು ಕಿರಿದಾದ ಕಾಲುವೆ ಇದೆ. ಇದಕ್ಕೆ ಅಡ್ಡಲಾಗಿ ಒಂದು ರಸ್ತೆ ಮತ್ತು ರೈಲು ಸೇತುವೆಗಳನ್ನು ನಿರ್ಮಿಸಲಾಗಿದೆ. ಈ ಸೇತುವೆಯ ನಿರ್ಮಾಣದಿಂದಾಗಿ ಮನ್ನಾರ್ ಪಟ್ಟಣ ಬೆಳೆಯಲು ಅವಕಾಶವಿದೆ. ಮುಖ್ಯ ದ್ವೀಪದಲ್ಲಿ ರೋಮನ್ನರ ಕಾಲದಲ್ಲಿ ಬಹಳ ಮುಖ್ಯವೆನಿಸಿದ್ದ ಮನ್ತೈ (ಈಗ ಇದನ್ನು ಮನ್‌ಟೋಟಾ ಎನ್ನುತ್ತಾರೆ) ಎಂಬ ಒಂದು ಪುರಾತನ ಬಂದರು ಮತ್ತು ವ್ಯಾಪಾರಸ್ಥಳವಿದೆ. ಪ್ರಸಿದ್ಧ ಹಣ್ಣಿನ ತೀರಪ್ರದೇಶ ಮನ್ನಾರಿನ ದಕ್ಷಿಣ ಭಾಗದಲ್ಲಿದೆ.

ರಾಮನ ಸೈನ್ಯವೆಲ್ಲವೂ ಸಮುದ್ರವನ್ನು ದಾಟಿ, ರಾವಣನೊಡನೆ ಯುದ್ಧಮಾಡಿ ಸೀತೆಯನ್ನು ಅವನಿಂದ ಬಿಡಿಸಿಕೊಂಡು ಬರಲು ಸಹಾಯವಾಗುವಂತೆ ಹನುಮಂತ ಈ ಸೇತುವೆಯನ್ನು ಕಟ್ಟಿಸಿದನೆಂದು ನಂಬಿಕೆ. ಆದ್ದರಿಂದ ಇದಕ್ಕೆ ರಾಮನ ಸೇತುವೆ ಎಂಬ ಹೆಸರಿದೆ. ಇದನ್ನನುಸರಿಸಿ ಶ್ರೀಲಂಕದ ತಲೈಮನ್ನಾರ್‌ವರೆಗೆ ಸೇತುವೆ ನಿರ್ಮಿಸುವ ಯೋಜನೆಯಿದೆ.

(ಕೆ.ಕೆ.; ಪಿ.ಜಿ.)

**ಆ್ಯಡಮ್ ಸ್ಮಿತ್** : 1723–90. ಅರ್ಥಶಾಸ್ತ್ರದ ತಾತನೆಂದೂ ಅರ್ಥಶಾಸ್ತ್ರವನ್ನು ಒಂದು ಪ್ರತ್ಯೇಕ ವಿಜ್ಞಾನಶಾಖೆಯಾಗಿ ರೂಪಿಸಿ, ಅರ್ಥಶಾಸ್ತ್ರದ ಸಂಸ್ಥಾಪಕನೆಂದೂ ಕೀರ್ತಿ ಗಳಿಸಿದವ ಸ್ಕಾಟ್ಲೆಂಡಿನ ಕಿರ್ಕಾಲ್ಡಿ ಎಂಬಲ್ಲಿ ಒಬ್ಬ ಸುಂಕದ ಅಧಿಕಾರಿಯ ಮಗನಾಗಿ ಜನಿಸಿದ. ಗ್ಲಾಸ್ಗೊ ವಿಶ್ವವಿದ್ಯಾನಿಲಯದಲ್ಲಿ ಗಣಿತ ಮತ್ತು ವಿಜ್ಞಾನಗಳನ್ನೋದಿ ತದನಂತರ ಏಳು ವರ್ಷಗಳ ಕಾಲ ಆಕ್ಸ್‌ಫರ್ಡಿನ ಪ್ರಖ್ಯಾತ ಬ್ಯಾಲಿಯಲ್ ಕಾಲೇಜಿನಲ್ಲಿ ವ್ಯಾಸಂಗವನ್ನು ಮುಂದುವರಿಸಿದ. 1748ರಲ್ಲಿ ಎಡಿನ್‌ಬರೋಗೆ ತೆರಳಿ ಅಲ್ಲಿ ಡೇವಿಡ್ ಹ್ಯೂಮ್, ಜಾನ್ ಹ್ಯೂಮ್ ಅವರು ಸದಸ್ಯರಾಗಿದ್ದ ವಿದ್ವನ್ಮಂಡಲಿಯ ಸದಸ್ಯನಾದ. ಈತನ ಕಾರ್ಯಕ್ಷೇತ್ರ ಬಹು ವಿಸ್ತಾರವಾದದ್ದು. 1751ರಲ್ಲಿ ತಾನು ಕಲಿತ ಗ್ಲಾಸ್ಗೊ ವಿಶ್ವವಿದ್ಯಾ ನಿಲಯದಲ್ಲಿ

ಮೊದಲು ತರ್ಕಶಾಸ್ತ್ರದ ಅಧ್ಯಾಪಕನಾಗಿಯೂ ಆಮೇಲೆ ನೀತಿಶಾಸ್ತ್ರದ ಪ್ರಾಧ್ಯಾಪಕನಾಗಿಯೂ ಕೆಲಸ ಮಾಡಿದ. 1759ರಲ್ಲಿ ಪ್ರಥಮ ಗ್ರಂಥ ಥಿಯರಿ ಆಫ್ ಮಾರಲ್ ಸೆಂಟಿಮೆಂಟ್ಸ್ (ನೈತಿಕ ಭಾವನೆಗಳ ಸಿದ್ಧಾಂತ) ಪ್ರಕಟ ವಾಯಿತು. 1763–1766 ಅವಧಿಯಲ್ಲಿ ಡ್ಯೂಕನೊಬ್ಬನಿಗೆ ಸಂಚಾರೀ ಉಪಾಧ್ಯಾಯನೆಂಬ ನೆಪದಲ್ಲಿ ಯುರೋಪನ್ನೆಲ್ಲ ಸುತ್ತಾಡಿ ಈ ಪ್ರವಾಸದಲ್ಲಿ ಮುಂದಿನ ಉದ್ಗ್ರಂಥಕ್ಕೆ ಬೇಕಾದ ಸಾಮಗ್ರಿಯನ್ನು ಸಂಗ್ರಹಿಸುವುದರಲ್ಲಿ ಮಗ್ನನಾಗಿದ್ದುದು ಮಾತ್ರವಲ್ಲದೆ, ಪ್ಯಾರಿಸ್‌ನಲ್ಲಿ ಕ್ವೆಸ್ನೇ, ಟರ್ಗಾಟ್ ಮತ್ತು ನೆಕ್ಕರ್ ಮುಂತಾದ ಸಮಕಾಲೀನ ಅರ್ಥಶಾಸ್ತ್ರಜ್ಞರನ್ನು ಭೇಟಿಯಾದ. 1778ರಲ್ಲಿ ಎಡಿನ್‌ಬರೋದಲ್ಲಿ ಸುಂಕದ ವರಿಷ್ಠಾಧಿಕಾರಿಯಾಗಿ ನೇಮಕಗೊಂಡ. 1787ರಲ್ಲಿ ಗ್ಲಾಸ್ಗೊ ವಿಶ್ವವಿದ್ಯಾನಿಲಯ ಸ್ಮಿತ್‌ಗೆ ರೆಕ್ಟರ್ ಸ್ಥಾನವಿತ್ತು ಗೌರವಿಸಿತು.



ಸ್ಮಿತ್ ತನ್ನ ಗ್ರಂಥಗಳಲ್ಲಿ ಮೂಲಭೂತವಾದ ಅನೇಕ ಸಮಸ್ಯೆಗಳನ್ನು ಎತ್ತಿದ್ದಾನೆ, ಅನೇಕವನ್ನು ಬಿಡಿಸಿದ್ದಾನೆ. ನೈತಿಕ ಭಾವನೆಗಳ ಸಿದ್ಧಾಂತವನ್ನು ಕುರಿತು ಅವನ ಗ್ರಂಥದಲ್ಲಿ ಮಾನವ ವರ್ತನೆಯ ಸ್ವರೂಪದ ಉಲ್ಲೇಖವಿದೆ. ನೈತಿಕ ಹೊಣೆಗಾರಿಕೆಯ ಸ್ಪಷ್ಟಕಲ್ಪನೆ ಕಂಡುಬರದೆ ಹೋದರೂ ಸ್ಮಿತ್ ಪ್ರಸ್ತಾಪಿಸಿದ ಅನುತಾಪ ಮತ್ತು ಅಪಾಕ್ಷಿಕ ಪ್ರೇಕ್ಷಕ ಎಂಬ ಎರಡು ತತ್ತ್ವಗಳು ಸಮಕಾಲೀನ ತತ್ತ್ವಾನ್ವೇಷಣೆಯಲ್ಲಿ ಮನ್ನಣೆ ಪಡೆದಿವೆ. ನ್ಯಾಯಶಾಸ್ತ್ರ ಅಥವಾ ನ್ಯಾಯ, ಪೊಲೀಸ್, ಕಂದಾಯ ಮತ್ತು ಸೈನ್ಯ ಸಜ್ಜಿಕೆಯ ಮೇಲಿನ ಟಿಪ್ಪಣಿಗಳನ್ನೊಳಗೊಂಡ ಗ್ರಂಥದಲ್ಲಿ (ಜೂರಿಸ್‌ಪ್ರೂಡೆನ್ಸ್ ಆರ್ ನೋಟ್ಸ್ ಆನ್ ಜಸ್ಟಿಸ್, ಪೊಲೀಸ್, ರೆವೆನ್ಯು ಅಂಡ್ ಆರಮ್ಸ್) ಬ್ರಿಟನ್ನಿನಲ್ಲಿ ಪ್ರಾಚೀನ ಪಾಳೆಗಾರಿಕೆ ಮತ್ತು ರೋಮನ್ ನ್ಯಾಯಪದ್ಧತಿ ಹೇಗೆ ಪ್ರವರ್ತಿಸುತ್ತಿದ್ದ ಎಂಬ ಬಗ್ಗೆ ಸವಿಸ್ತಾರ ವರ್ಣನೆಯಿದೆ.

ರಾಷ್ಟ್ರಗಳ ಸಂಪತ್ತು ಅಥವಾ ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳನ್ನು ಕುರಿತು ಅಧ್ಯಯನವನ್ನೊಳಗೊಂಡ ಗ್ರಂಥದಲ್ಲಿ (ಇನ್‌ಕ್ವೈರಿ ಇನ್‌ಟು ದಿ ನೇಚರ್ ಅಂಡ್ ಕಾಸಸ್ ಆಫ್ ವೆಲ್ತ್ ಆಫ್ ನೇಷನ್ಸ್) ರಾಜಕೀಯ ಅರ್ಥಶಾಸ್ತ್ರವನ್ನು ಒಂದು ಸುಸಂಬದ್ಧವೂ ಸ್ವತಂತ್ರವೂ ಆದ ವಿಜ್ಞಾನ ಭಾಗವೆಂಬುದಾಗಿ ಸಿದ್ಧಪಡಿಸಲಾಗಿದೆ. ಇದು ಇಂಗ್ಲೆಂಡಿನ ಪಿಟ್, ಫ್ರಾನ್ಸಿನ ನೆಪೋಲಿಯನ್ ದೊರೆ, ಪ್ರಷ್ಯದ ಸ್ಟೀನ್ ಮತ್ತು ಆಸ್ಟ್ರಿಯದ ಗೆಂಟ್ಸ್ ಮುಂತಾದ ಧುರೀಣರ ಮೇಲೆ ಪ್ರಭಾವ ಬೀರಿತು. ಸ್ವಲ್ಪಕಾಲದಲ್ಲಿಯೇ ಇದು ಆರ್ಥಿಕ ಉದಾರವಾದಿಗಳ ಪ್ರಮಾಣಗ್ರಂಥವಾಯಿತು. ಇಂಥ ಪ್ರಚಂಡ ವಿಜಯಕ್ಕೆ (ಅ) ರಾಷ್ಟ್ರಗಳ ಸಂಪತ್ತಿನ ವಾದದಲ್ಲಿ ಅಡಗಿರುವ ಸಾರ್ವತ್ರಿಕ ಸತ್ಯ, (ಆ) ನೈಸರ್ಗಿಕ ಸ್ವಾತಂತ್ರ್ಯದ ಕೈವಾರಿತನ, (ಇ) ವಾದದ ತಳಹದಿಯಲ್ಲಿರುವ ಸರಳ ಮನೋವೈಜ್ಞಾನಿಕತಥ್ಯ–ಇವು ಕಾರಣಗಳು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಾರ್ಥಶೋಧನೆ ಮಾಡುತ್ತಿರುವಾಗಲೇ ದೈವದ ಅದೃಷ್ಟಹಸ್ತದ ಬೆಂಬಲದಿಂದಲೋ ಎಂಬಂತೆ ಸಾರ್ವಜನಿಕ ಮತ್ತು ಸಾಮೂಹಿಕ ಹಿತಸಾಧನೆಯಾಗುವ, ಸ್ವಾರ್ಥದಿಂದಲೇ ಪರಾರ್ಥ ಕೈಗೂಡುವಂಥ ಸಮನ್ವಯ ತತ್ತ್ವಗಳನ್ನೊಳಗೊಂಡ ಬಂಡವಾಳ ಶಾಹಿ ಅರ್ಥ ಸಂಘಟನೆಯ ದೃಶ್ಯವನ್ನು ಸ್ಮಿತ್ ತೋರಿಸಿಕೊಟ್ಟ. ಒಂದು ದೃಷ್ಟಿಯಿಂದ ಔದ್ಯಮಿಕ ಮೂಲಪುರುಷರಿಗೆ ಸ್ಮಿತ್ ಕೃತಜ್ಞತೆಯನ್ನು ಸೂಚಿಸಿದಂತೆ ತೋರಿದರೆ ಇನ್ನೊಂದು ದೃಷ್ಟಿಯಿಂದ ಬರಲಿರುವ ಅರ್ಥಮಂಡಲದ ಭವಿಷ್ಯರೂಪವನ್ನು ಇಲ್ಲಿ ಬಿತ್ತರಿಸಿದಂತೆಯೂ ಭಾಸವಾಗುವುದು. ಆಧುನಿಕ ಅರ್ಥಶಾಸ್ತ್ರ ನಿರಂತರ ಚರ್ಚಿಸುತ್ತಿರುವ ಔದ್ಯಮಿಕ ಉತ್ಪಾದನೆ, ಸಾಪೇಕ್ಷಮೌಲ್ಯ, ವರಮಾನ ವಿತರಣೆ, ಉದ್ಯೋಗ ಉಳಿತಾಯ, ಆರ್ಥಿಕಾಭಿವೃದ್ಧಿ– ಮುಂತಾದ ಪ್ರಮುಖ ತತ್ತ್ವಗಳ ಪ್ರತಿಭಾಪೂರ್ಣ ಮೂಲ ವಿವೇಚನೆ ಈ ಗ್ರಂಥದಲ್ಲಿ ದೊರೆಯುತ್ತದೆ.

ರಾಜಕೀಯ ಪ್ರಸಂಗಗಳ ಮೇಲಿನ ನಿಬಂಧನೆಗಳನ್ನು ಕುರಿತ ಎಸ್ಸೇಸ್ ಆನ್ ಪೊಲಿಟಿಕಲ್ ಸಬ್ಜೆಕ್ಟ್ಸ್ ಅಪರ ವಯಸ್ಸಿನಲ್ಲಿ ಸ್ಮಿತ್ ಪೂರ್ತಿಗೊಳಿಸಬೇಕೆಂದಿದ್ದ ಉದ್ಗ್ರಂಥದ ಒಂದು ಭಾಗ ಮಾತ್ರ ಈ ಹೆಸರಿನಲ್ಲಿ 1795ರಲ್ಲಿ ಅವನ ಮರಣಾನಂತರ ಪ್ರಕಟವಾಯಿತು.

ರಾಷ್ಟ್ರಗಳ ಸಂಪತ್ತನ್ನು ಕುರಿತ ವೆಲ್ತ್ ಆಫ್ ನೇಷನ್ಸ್ ಎಂಬ ಮಹಾಗ್ರಂಥದಲ್ಲಿ ಐದು ಭಾಗಗಳಿವೆ. ಒಂದನೆಯ ಭಾಗದಲ್ಲಿ ಸ್ಮಿತ್ತನ ಪ್ರಖ್ಯಾತ ಶ್ರಮವಿಭಜನೆಯ ತತ್ತ್ವವೂ, ಮೌಲ್ಯ ಮತ್ತು ವಿತರಣೆಯ ಸಿದ್ಧಾಂತಗಳೂ ಅಡಕವಾಗಿವೆ. 'ಜೀವನದ ಸಕಲ ಆವಶ್ಯಕತೆ ಮತ್ತು ಸೌಕರ್ಯಗಳನ್ನು ರಾಷ್ಟ್ರದ ವಾರ್ಷಿಕ ಶ್ರಮದ ಮೊತ್ತವೇ ಮೂಲತಃ ಒದಗಿಸುವುದು'. ಶ್ರಮವೇ ಸಂಪತ್ತಿನ ನಿಜವಾದ ಮೂಲ. ಪ್ರತಿಯೊಬ್ಬನೂ ನೀಡುವ ವೈವಿಧ್ಯಪೂರ್ಣವಾದ ಶ್ರಮ, ಸಹಕಾರಗಳಿಂದ ರಾಷ್ಟ್ರದ ಸಂಪತ್ತು ವರ್ಧಿಸುವುದು. ರಾಷ್ಟ್ರೀಯ ವರಮಾನದ ಉತ್ಪಾದನೆಯನ್ನು ಸುಲಭವೂ ಸಹಜವೂ ಆದ ಆರ್ಥಿಕ ಯತ್ನದಿಂದ ಸಾಧಿಸಬೇಕಾದರೆ ಶ್ರಮವಿಭಜನೆಗೆ ಶರಣು ಹೋಗಬೇಕು. ಏಕೆಂದರೆ (ಅ) ಒಬ್ಬ ಒಂದೇ ಕೆಲಸದಲ್ಲಿ ಮಗ್ನನಾದರೆ ಅವನ ಕೈ ಕುಶಲತೆ ಹೆಚ್ಚುವುದು. (ಆ) ಸಮಯದ ಮಿತವ್ಯಯ ಸಾಧನೆಯಾಗುವುದು. (ಇ) ತಾನು ಮಾಡುತ್ತಿರುವ ವಿಶಿಷ್ಟಕಾರ್ಯಭಾಗದಲ್ಲಿ ಶ್ರಮಿಕ ನೂತನ ಆವಿಷ್ಕಾರಗಳನ್ನೂ ಸುಧಾರಣೆಗಳನ್ನೂ ಯೋಚಿಸಿ ರೂಢಿಸಲು ಶಕ್ತನಾಗುತ್ತಾನೆ. ಆದರೆ ಒಂದು ಉದ್ಯೋಗದಲ್ಲಿ ಎಷ್ಟರಮಟ್ಟಿಗೆ ಶ್ರಮವಿಭಜನೆಯನ್ನು ಅಳವಡಿಸಬಹುದೆನ್ನುವುದು ತಯಾರಿಸಿದ ಸರಕಿಗೆ ಒದಗುವ ಮಾರುಕಟ್ಟೆಯ ವ್ಯಾಪ್ತಿಯನ್ನೂ ಬಂಡವಾಳದ ಒದಗುವಿಕೆಯ ಗಾತ್ರವನ್ನೂ ಅವಲಂಬಿಸಿದೆ. ಮಾರುಕಟ್ಟೆ ವಿಶಾಲವಾದಷ್ಟೂ ಶ್ರಮವಿಭಜನೆಗೆ ಆಸ್ಪದ ಅಧಿಕವಾಗುವುದು. ಎರಡನೆಯ ಭಾಗದಲ್ಲಿ ಬಂಡವಾಳ, ಉಳಿತಾಯ ಮತ್ತು ಹೂಡಿಕೆಗಳ (ಇನ್‌ವೆಸ್ಟ್‌ಮೆಂಟ್) ಪ್ರಸ್ತಾಪವಿದೆ. ಖಾಸಗಿ ಜೀವನದಲ್ಲಿ ಮಿತವ್ಯಯವನ್ನು ಸಾಧಿಸಿದ ವ್ಯಕ್ತಿ ಸ್ಮಿತ್‌ನ ಅಭಿಪ್ರಾಯದಲ್ಲಿ ಒಬ್ಬ ರಾಷ್ಟ್ರಹಿತ ಸಾಧಕನೇ. ಉಳಿತಾಯವೂ ಹೂಡಿಕೆಯೂ ಭಿನ್ನ ಕಾರ್ಯಗಳಲ್ಲ. ಉಳಿತಾಯವೇ ಹೂಡಿಕೆ. ಸುಮಾರು ಒಂದೂವರೆ ಶತಮಾನಗಳ ಕಾಲ ಸ್ಮಿತ್‌ನ ಈ ತತ್ತ್ವ ಪ್ರಭಾವವನ್ನು ಬೀರಲು ಶಕ್ತವಾಯಿತು. ಅರ್ಥಶಾಸ್ತ್ರದ ವಿಚಾರಗಳಲ್ಲಿ ಕ್ಲಾಸಿಕಲ್ ಪದ್ಧತಿಯ ಆರಂಭ ಸ್ಮಿತ್‌ನಿಂದಲೇ ಆಯಿತು. ಮೂರನೆಯ ಭಾಗ ವಿಭಿನ್ನ ರಾಷ್ಟ್ರಗಳಲ್ಲಿ ಸಂಪತ್ತಿನ ಗಾತ್ರ ಹೆಚ್ಚು ಕಡಿಮೆಯಾಗಲು ಕಾರಣಗಳನ್ನು ಸೂಚಿಸುತ್ತದೆ. ಐರೋಪ್ಯ ಆರ್ಥಿಕ ಚರಿತ್ರೆಯಿಂದ ಅನೇಕ ನಿದರ್ಶನಗಳನ್ನು ಎತ್ತಿಕೊಂಡು ಜಮೀನು ಹಿಡುವಳಿ, ವಾರಸಹಕ್ಕು ಮೊದಲಾದ ವಿಷಯಗಳಲ್ಲಿ ಕಾನೂನಿನ ಹಸ್ತಕ್ಷೇಪದ ದುಷ್ಪರಿಣಾಮಗಳನ್ನು ಸ್ಮಿತ್ ವಿವರಿಸಿದ್ದಾನೆ. ನಾಲ್ಕನೆಯ ಭಾಗದಲ್ಲಿ ಬ್ರಿಟನ್ನಿನ ಪ್ರಚಲಿತ ವಾಣಿಜ್ಯ ಧೋರಣೆಗಳ ಚೌಕಟ್ಟಿನಲ್ಲಿ ಮರ್ಕೆಂಟಲಿಸ್ಟ್ ನೀತಿಯನ್ನು ಪುರಸ್ಕರಿಸುವುದರಿಂದ ಒದಗುವ ಹಾನಿಯನ್ನು ಬಿಚ್ಚಿ ತೋರಿಸಿ ಒಳನಾಡಿನ ಸ್ವತಂತ್ರವ್ಯಾಪಾರದ ಮೇಲೆ ಹೇರುವ ನಿರ್ಬಂಧಗಳನ್ನೂ ಗುತ್ತಿಗೆದಾರಿಯನ್ನೂ ಸ್ಮಿತ್ ಖಂಡಿಸಿದ್ದಾನೆ. ಐದನೆಯ ಭಾಗದಲ್ಲಿ ರಾಜನ ಅಥವಾ ರಾಷ್ಟ್ರದ ಆದಾಯದ ಉಲ್ಲೇಖವಿದೆ.

ಆರ್ಥಿಕ ವಿಷಯಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡದಿರುವುದು ಸಮಾಜದ ಹಿತಸಂವರ್ಧನೆಗೆ ಸಾಧಕವೆಂದು ಸ್ಮಿತ್ ವಾದಿಸುತ್ತಾನೆ. ಯಾವ ಕಾಲದ ಯಾವ ಸರಕಾರವನ್ನೇ ನೋಡಿದರೂ ದುಂದು ವೆಚ್ಚವೆಂಬುದು ಸರ್ಕಾರಿ ವ್ಯಯನೀತಿಯಲ್ಲಿ ಸಾಮಾನ್ಯವಾಗಿಬಿಟ್ಟಿದೆ. ಅಲ್ಲದೆ ಒಂದು ಉದ್ಯಮದ ಸೂಕ್ಷ್ಮಪರಿಶೀಲನೆ ಸರ್ಕಾರದ ಸ್ಥೂಲದೃಷ್ಟಿಗೆ ಸಾಧ್ಯವಿಲ್ಲ. ವ್ಯಾಪಾರೋದ್ದಿಮೆಗಳ ಮೇಲಿನ ಹತೋಟಿಯ ಆಡಳಿತವನ್ನು ಸರ್ಕಾರ ಮಾಡಿದರೆ ತನ್ನ ಅಸಮರ್ಥತೆಯನ್ನು ಪ್ರಕಟಿಸಿದಂತಾಗುವುದಷ್ಟೆ. ಆದ್ದರಿಂದ ರಾಷ್ಟ್ರರಕ್ಷಣೆ, ನ್ಯಾಯಪರಿಪಾಲನೆ, ಸಾರ್ವಜನಿಕ ಕಾಮಗಾರಿ ಈ ಮೂರನ್ನೇ ಹೊರತು ಇತರ ಯಾವ ಆರ್ಥಿಕ ವಿಷಯದಲ್ಲಿಯೂ ಸರ್ಕಾರ ಕೈ ಹಾಕಕೂಡದು.

ಆರ್ಥಿಕ ಪ್ರಪಂಚದ ವ್ಯವಹಾರಗಳಲ್ಲಿ ಸ್ಮಿತ್ ನಿಸರ್ಗವಾದವನ್ನು (ನ್ಯಾಚುರಲಿಸಮ್) ನಂಬಿದವ. ವ್ಯಕ್ತಿ ತನ್ನ ಸ್ವಾರ್ಥಸಾಧನೆಯಲ್ಲಿ ಪ್ರವರ್ತಿಸುತ್ತಿರುವ ವೇಳೆಯಲ್ಲಿಯೇ ಅವನಿಗರಿವಿಲ್ಲದಂತೆ ಸಮಾಜದ ಒಳಿತು ಕೈಗೂಡುವಂತೆ ಅದೃಶ್ಯ ಹಸ್ತವೊಂದು ಸದಾ ಕಾರ್ಯತತ್ಪರವಾಗಿರುವಂತೆ ಆತನಿಗೆ ಕಂಡಿತು. ತನಗೆ ಹೆಚ್ಚಾದದ್ದನ್ನು ಇನ್ನೊಬ್ಬರಿಗೆ ಕೊಡುವ, ಅವರಿಂದ ಪಡೆವ, ಕೊಡುಕೊಳೆಯ ಸಹಜಪ್ರವೃತ್ತಿಯೇ ವ್ಯಾಪಾರವಾಯಿತು. ಸರ್ಕಾರ ಮುದ್ರೆ ಒತ್ತುವುದಕ್ಕೆ ಮುನ್ನವೇ ಯಾವುದಾದರೂ ಒಂದು ಪದಾರ್ಥವನ್ನು ವಿನಿಮಯದ ಮಾಧ್ಯಮವನ್ನಾಗಿ ಬಳಸಿ ಮನುಷ್ಯರು ಹಣವನ್ನು ಸೃಷ್ಟಿಸಿಕೊಂಡರು. ವೈಯಕ್ತಿಕ ಹಿತಾನ್ವೇಷಣೆಗಾಗಿ ಮಾಡಿದ ವ್ಯಕ್ತಿಗತ ಉಳಿತಾಯ ಸಾಮಾಜಿಕ ಬಂಡವಾಳದ ರೂಪತಾಳಿತು. ಸರಕುಗಳ ಬೇಡಿಕೆ ಅತಿ ಸಹಜವಾಗಿ ಅವುಗಳ ಪೂರೈಕೆಯೊಡನೆ ಹೊಂದಿಕೆಯಾಗಿ ಸಮತೋಲ ಸ್ಥಿತಿಯನ್ನು ಮುಟ್ಟುವುದು. ಉಳಿತಾಯ ತನ್ನಂತೆ ಫಲಪ್ರದವಾದ ಹೂಡಿಕೆಯ ಕ್ಷೇತ್ರಗಳನ್ನು ಆರಿಸಿಕೊಳ್ಳುವುದು. ಇವು ಸ್ಮಿತ್‌ನನ್ನು ಆರ್ಥಿಕ ಸ್ವಾತಂತ್ರ್ಯದ ಆಚಾರ್ಯ ಪದವಿಗೆ ಏರಿಸಿದ ಸೂತ್ರಗಳು. ತನ್ನ ಕಾಲದಲ್ಲಿ ಬಹು ಪ್ರಚಲಿತವಾಗಿದ್ದು, ದೇಶದ ಆರ್ಥಿಕ ಪದ್ಧತಿಗೆ ಕಾಲ್ತೊಡಕಾಗಿದ್ದ ಮರ್ಕೆಂಟಲಿಸ್ಟ್ ನೀತಿಯನ್ನೂ, ಜಮೀನೊಂದೇ ಸಂಪತ್ತಿನ ಮೂಲವೆಂಬ ಫಿಸಿಯೊ ಕ್ರೆಟಿಕ್ ಪಂಥದವರ ಏಕಪಕ್ಷೀಯ ವಾದವನ್ನೂ ಸ್ಮಿತ್ ತನ್ನ ಸರಣಿಯಿಂದ ಪ್ರತಿಭಟಿಸಿದ.

ಹೊರತೋರಿಕೆಗೆ ಗೊಂದಲಮಯವೆಂದು ತೋರುವ ವ್ಯಾಪಾರವಹಿವಾಟಿನ ಪೈಪೋಟಿ ಯಾವ ಕೇಂದ್ರೀಯ ನಿರ್ದೇಶನವೂ ಇಲ್ಲದೆ ವ್ಯಕ್ತಿಗಳ ಸ್ವತಂತ್ರ ನಿರ್ಣಯಗಳ ಬಲದಿಂದಲೇ ಪ್ರಜೆಯ ಬೇಡಿಕೆಗಳನ್ನು ಪೂರೈಸುತ್ತ ರಾಷ್ಟ್ರದ ಸಂಪತ್ತಿನ ಸಂವರ್ಧನೆಗೆ ನೆರವಾಗುವ ಸುಂದರಚಿತ್ರವನ್ನು ಸ್ಮಿತ್ ತನ್ನ ಗ್ರಂಥದಲ್ಲಿ ಎಲ್ಲರೂ, ಅಂದರೆ ಸ್ಥೂಲವಾಗಿ ಸಮಷ್ಟಿವಾದಿಗಳೂ ಕೂಡ, ಒಪ್ಪುವಂತೆ ಮೂಡಿಸಿದ್ದಾನೆ. (ಕೆ.ಎಸ್.ಎಚ್.)

**ಆ್ಯಡಮ್ಸ್, ಫ್ರಾನ್ಸಿಸ್ ವಿಲಿಯಂ ಲಾಡರ್‌ಡೇಲ್ :** 1862–1893. ಸ್ಕಾಚ್ ವಿಜ್ಞಾನಿ ಲೀತ್ ಆ್ಯಡಮ್ಸನ ಮಗ. ಹುಟ್ಟಿದ್ದು ಮಾಲ್ಟಾ ದ್ವೀಪದಲ್ಲಿ. ಷ್ರೂಷ್‌ಬರಿಯ ಒಂದು ಖಾಸಗಿ ಶಾಲೆಯಲ್ಲೂ ಪ್ಯಾರಿಸ್ಸಿನಲ್ಲೂ ವಿದ್ಯಾಭ್ಯಾಸ ಮಾಡಿ ಇಂಗ್ಲೆಂಡಿನಲ್ಲಿ

ಎರಡು ವರ್ಷ ಉಪಾಧ್ಯಾಯವೃತ್ತಿಯಲ್ಲಿ ತೊಡಗಿದ್ದು ತರುವಾಯ ಸ್ವಲ್ಪಕಾಲ ಕೆನಡದಲ್ಲಿದ್ದು, ಅನಂತರ ಆಸ್ಟ್ರೇಲಿಯಾಕ್ಕೆ ವಲಸೆಹೋಗಿ ನೆಲೆಸಿ, ಸಿಡ್ನಿ ಬುಲೆಟಿನ್ ಎಂಬ ಪತ್ರಿಕೆಯ ಸಂಪಾದಕ ವರ್ಗದಲ್ಲಿ ಕೆಲಸಕ್ಕೆ ಸೇರಿದ. ಅವನ ಕವನಗಳನೇಕ ಆ ಪತ್ರಿಕೆಯಲ್ಲಿ ಬೆಳಕು ಕಂಡವು. ವಾಸಿಯಾಗದಂಥ ಶ್ವಾಸಕೋಶದ ವ್ಯಾಧಿಯೊಂದಕ್ಕೆ ತುತ್ತಾಗಿ, ಸಹಿಸಲಾರದೆ ತನ್ನ ಮೂವತ್ತೊಂದನೆಯ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಂಡ. ಉದ್ದಕ್ಕೂ ಅವನನ್ನು ಪೀಡಿಸುತ್ತಿದ್ದ ಅನಾರೋಗ್ಯವೂ ದಾರಿದ್ರ್ಯವೂ ಅವನ ಕೆಲವು ಕವಿತೆಗಳಲ್ಲಿ ವ್ಯಕ್ತವಾಗಿರುವ ಅತೃಪ್ತಿಯ ಮನೋಭಾವಕ್ಕೆ ಪ್ರೇರಕಗಳು. ಹೆನ್ರಿ ಅಂಡ್ ಅದರ್ ಟೇಲ್ಸ್ (1884), ಲೆಸ್ಟರ್ (1886), ಆಸ್ಟ್ರೇಲಿಯನ್ ಎಸ್ಸೇಸ್ (1886), ಪೊಯೆಟಿಕಲ್ ವರ್ಕ್ಸ್ (1886), ಸಾಂಗ್ಸ್ ಆಫ್ ದಿ ಆರ್ಮಿ ಆಫ್ ದಿ ನೈಟ್ (1888), ಟೈಬೇರಿಯಸ್ (**1894**)–ಇವು ಅವನ ಕೃತಿಗಳು. ಎರಡನೆಯ ಗ್ರಂಥ ಅವನ ಸ್ವಂತ ಜೀವನದ ಆಧಾರದ ಮೇಲೆ ರಚಿತವಾದ ಕಾದಂಬರಿ. ಕೊನೆಯದು ನಾಟಕ, ಪ್ರಕಟವಾದದ್ದು ಮರಣಾನಂತರ.

ಮೊದಲು ಕೇವಲ ವಲಸೆಗಾರರ ಬರೆಹಗಳಿಂದ ತುಂಬಿದ್ದ ಆಸ್ಟ್ರೇಲಿಯದ ಸಾಹಿತ್ಯಕ್ಕೆ ಒಂದು ವಿಶಿಷ್ಟ ರಾಷ್ಟ್ರೀಯತೆಯನ್ನು ನೀಡಿದವರಲ್ಲಿ ಈತ ಒಬ್ಬ. (ಎಂ.ಆರ್.)

**ಆ್ಯಡಮ್ಸ್ ಜಾನ್ :** 1735–1826. ಅಮೆರಿಕದ ಪ್ರಸಿದ್ಧ ಆ್ಯಡಮ್ಸ್ ಮನೆತನದವ. ಪ್ರಖ್ಯಾತ ವಕೀಲನಾಗಿದ್ದು ಅಮೆರಿಕದ ಕ್ರಾಂತಿಯಲ್ಲಿ (1775) ಬಹುಮುಖ್ಯ ಪಾತ್ರವನ್ನು ವಹಿಸಿದ. ಅಮೆರಿಕದ ಸ್ವಾತಂತ್ರ್ಯಕ್ಕಾಗಿ ಹೋರಾಡಿದನಲ್ಲದೆ ಸ್ವಾತಂತ್ರ್ಯ ಪ್ರಣಾಳಿಕೆಗಾಗಿ (ಡಿಕ್ಲೆರೇಷನ್ ಆಫ್ ಇಂಡಿಪೆಂಡೆನ್ಸ್) ಉಗ್ರವಾಗಿ ವಾದಿಸಿದ್ದಲ್ಲದೆ ಅದಕ್ಕೆ ಅನಂತರ ಸಹಿ ಮಾಡಿದ. ಸಂಧಿಸಂಬಂಧಗಳ ಕಾಲದಲ್ಲಿ ಈತ ರಾಯಭಾರಿಯಾಗಿ ಇಂಗ್ಲೆಂಡಿಗೆ ಹೋದ; ಆದರೆ ಸರಹದ್ದು, ಗಡಿನಾಡು ಭಾಗಗಳ ವಾಣಿಜ್ಯಸಮಸ್ಯೆಯನ್ನು ಪರಿಹರಿಸಬೇಕೆಂಬ ತನ್ನ ಉದ್ದಿಷ್ಟ ಕಾರ್ಯದಲ್ಲಿ ಯಶಸ್ವಿಯಾಗಲಿಲ್ಲ. ಕ್ರಾಂತಿಯುದ್ಧದ ಸಂಬಂಧದಲ್ಲಿ ಆಮೂಲಾಗ್ರ ಸುಧಾರಣೆ ಆಗಬೇಕೆಂದು ಒತ್ತಿ ಹೇಳುತ್ತಿದ್ದರೂ ಶ್ರೀಮಂತವರ್ಗಕ್ಕೆ ಸೇರಿದವನಾಗಿಯೇ ಇದ್ದ. ವಾಷಿಂಗ್‌ಟನ್ ಮತ್ತು ಹ್ಯಾಮಿಲ್‌ಟನ್‌ರವರ ಕಾರ್ಯನೀತಿಗೆ ಮನಃಪೂರ್ವಕವಾಗಿ ಬೆಂಬಲ ನೀಡಿದ. ಆದರೂ ಯಾರ ಅಧೀನದಲ್ಲೂ ಇರಲೊಪ್ಪದೆ ಸ್ವೇಚ್ಛಾವಾದಿಯಾಗಿದ್ದ. ಅಧ್ಯಕ್ಷ ವಾಷಿಂಗ್‌ಟನ್ನನ ಆಡಳಿತದಲ್ಲಿ ಉಪಾಧ್ಯಕ್ಷನಾಗಿ (1789–97) ಕೆಲಸ ಮಾಡಿದ. ಅಮೆರಿಕ ಸಂಸ್ಥಾನದ ಎರಡನೆಯ ಅಧ್ಯಕ್ಷನಾಗಿ ಚುನಾಯಿತನಾದ (1797–1801). ಫ್ರಾನ್ಸಿನೊಡನೆ ಯುದ್ಧ ಮಾಡಬೇಕೆಂಬ ನೀತಿಯನ್ನು ವಿರೋಧಿಸಿ ಶಾಂತಿಯನ್ನು ಕಾಪಾಡಿದ (1800). ಅಮೆರಿಕ ಪಾಲಿಸುತ್ತಿದ್ದ ಕಾಯಂ ತಟಸ್ಥರೀತಿ ನೀತಿಗಳಿಗೆ ಬೆಂಬಲವಿತ್ತ. (ಕೆ.ವಿ.ವಿ.)

**ಆ್ಯಡಮ್ಸ್, ಜಾನ್ ಕೌಚ್ :** 1819–1892. ನೆಪ್ಚೂನ್ ಗ್ರಹವನ್ನು ಆವಿಷ್ಕರಿಸಿದ ಗೌರವ ಇವನಿಗೂ ಫ್ರೆಂಚ್ ಖಗೋಳವಿಜ್ಞಾನಿ ಯು.ಜೆ.ಜೆ. ಲೆವೇರಿಯರ್‌ಗೂ (1811–1877) ಸಲ್ಲುತ್ತದೆ. ಕೇಂಬ್ರಿಜ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ (1843) ಈತ ಯುರೇನಸ್ ಗ್ರಹದ ಕಕ್ಷೆಯಲ್ಲಿ ಪ್ರಕಟವಾದ ವಿಚಲನೆಗಳನ್ನು ಗಣಿತಶಾಸ್ತ್ರರೀತ್ಯಾ ವಿವರಿಸಲು ಪ್ರಯತ್ನಿಸಿದ. ಇನ್ನೊಂದು ಗ್ರಹದ ಅಸ್ತಿತ್ವವನ್ನು ಊಹಿಸಿ, ಅದರ ದೂರವನ್ನು ಬಹುಮಟ್ಟಿಗೆ ಬೋಡ್‌ನ ನಿಯಮಕ್ಕನುಸಾರವಾಗಿರುವಂತೆ ಊಹಿಸಿಕೊಂಡು, ಕಾಲ್ಪನಿಕ ಗ್ರಹದ ಸ್ಥಾನ ಮತ್ತು ಜಡತ್ವಗಳನ್ನು ನಿಷ್ಕೃಷ್ಟವಾಗಿ ಗಣನೆ ಮಾಡಿದ. ಆದರೆ ತನ್ನ ನಿರ್ಧಾರಗಳನ್ನು ಆ್ಯಡಮ್ಸ್ ಮುಂಚಿತವಾಗಿ ಪ್ರಕಟಿಸಲಿಲ್ಲ. ಪ್ಯಾರಿಸ್‌ನಲ್ಲಿ ಲೆವೇರಿಯರ್ ಸ್ವತಂತ್ರವಾಗಿ ಪರ್ಯಾಲೋಚಿಸಿ ಹೊಸ ಗ್ರಹದ ಸ್ಥಾನವನ್ನು ನಿರ್ದೇಶಿಸಿದ. ಇವನ ಸಲಹೆಯಂತೆ ಬರ್ಲಿನ್‌ನಲ್ಲಿ ಜೆ.ಜೆಗಾಲ್ ಈ ಗ್ರಹವನ್ನು ವೀಕ್ಷಿಸಿದ (1846). ನೆಪ್ಚೂನ್ ಗ್ರಹಕ್ಕೆ ಸಂಬಂಧಿಸಿದ ಮೊತ್ತಮೊದಲ ಪ್ರಕಟಣೆಯನ್ನು ಲೆವೇರಿಯರ್ ಮಾಡಿದ. ಹೀಗಾಗಿ ಹೊಸ ಗ್ರಹವನ್ನು ಶೋಧಿಸಿದವರಾರು ಎಂಬುದರ ಬಗೆಗೆ ಭಿನ್ನಾಭಿಪ್ರಾಯಗಳು ಇಂಗ್ಲೆಂಡ್ ಮತ್ತು ಫ್ರಾನ್ಸ್‌ನಲ್ಲಿ ತಲೆದೋರಿದುವು. ಆ್ಯಡಮ್ಸ್ ಕೇಂಬ್ರಿಜ್ ವಿಶ್ವವಿದ್ಯಾಲಯದ ಹಿರಿಯ ರ್‍ಯಾಂಗ್ಲರ್ ಆಗಿದ್ದ. (ಬಿ.ಎ.ಎಸ್.)

**ಆ್ಯಡಮ್ಸ್, ಜಾನ್ ಕ್ವಿನ್ಸಿ :** 1767–1848. ಪ್ರಸಿದ್ಧ ಆ್ಯಡಮ್ಸ್ ಮನೆತನದವ. ಅಮೆರಿಕ ಸಂಯುಕ್ತಸಂಸ್ಥಾನದ ಎರಡನೆಯ ರಾಷ್ಟ್ರಾಧ್ಯಕ್ಷ ಜಾನ್ ಆ್ಯಡಮ್ಸ್‌ನ ಮಗ. 1825 ರಿಂದ 1829ರವರೆಗೆ ಅಮೆರಿಕದ ಆರನೆಯ ಅಧ್ಯಕ್ಷನಾಗಿ ಕೆಲಸಮಾಡಿದ. ಬಾಲ್ಯದಿಂದಲೂ ತುಂಬ ಮೇಧಾವಿ. ಹುಡುಗನಾಗಿರುವಾಗಲೇ ತಂದೆಯೊಡನೆ ಯುರೋಪಿನ ನಾನಾ ಕಡೆ ತಿರುಗಿ ಅಪಾರ ಅನುಭವವನ್ನು ಸಂಪಾದಿಸಿದ. ಅನಂತರ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿ ನ್ಯಾಯಶಾಸ್ತ್ರದಲ್ಲೂ ಪ್ರವೀಣನಾದ. ನೆದರ್ಲೆಂಡ್ಸ್, ಲಂಡನ್, ಪೋರ್ಚುಗಲ್, ಜರ್ಮನಿ ಮುಂತಾದ ದೇಶಗಳಲ್ಲಿ ಅಮೆರಿಕದ ಅಧಿಕೃತ ನಿಯೋಗಿಯಾಗಿ (ಮಿನಿಸ್ಟರ್) ಕೆಲಸಮಾಡಿದ. 1806ರಲ್ಲಿ ಮೆಸಾಚುಸೆಟ್ಸ್ ಕ್ಷೇತ್ರದಿಂದ ಸೆನೆಟ್ ಸಭೆಗೆ ಚುನಾಯಿತನಾದ. ಸ್ವತಂತ್ರಪ್ರವೃತ್ತಿ ಮತ್ತು ಪ್ರಾಮಾಣಿಕತೆಯ ಪರಿಣಾಮವಾಗಿ ಪಕ್ಷದವರೊಡನೆ ವಿರೋಧ ಬೆಳೆದುದರ ಪರಿಣಾಮವಾಗಿ ಸದಸ್ಯತ್ವಕ್ಕೆ ರಾಜೀನಾಮೆಯನ್ನಿತ್ತ (1808). 1809ರಲ್ಲಿ ಅವನು ರಷ್ಯದಲ್ಲಿ ಸಂಯುಕ್ತಸಂಸ್ಥಾನದ ನಿಯೋಗಿಯಾದ. ಅದು, ನೆಪೋಲಿಯನ್ ಯುರೋಪ್ ರಾಷ್ಟ್ರಗಳ ಅಸ್ತಿತ್ವವನ್ನೇ ಅಲುಗಾಡಿಸುತ್ತಿದ್ದ ಕಾಲ. ಎಂಥ ರಾಯಭಾರಿಗೂ ಹೊರದೇಶದಲ್ಲಿ ತನ್ನ ನಾಡಿನ ಹಿತವನ್ನು ಕಾಯ್ದುಕೊಳ್ಳುವುದು ಕಷ್ಟವಾಗಿತ್ತು. ಆದರೂ ಈತ ತನ್ನ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ. 1815 ರಿಂದ ಎರಡು ವರ್ಷಕಾಲ ಇಂಗ್ಲೆಂಡಿನಲ್ಲಿ ತನ್ನ ದೇಶದ ಅಧಿಕೃತ ನಿಯೋಗಿಯಾಗಿ ಕಾರ್ಯನಿರ್ವಹಿಸಿದ. 1817ರಲ್ಲಿ ಸಂಯುಕ್ತ ಸಂಸ್ಥಾನದ ಸ್ವದೇಶಾಂಗ ಕಾರ್ಯದರ್ಶಿಯಾದ (ಸೆಕ್ರೆಟರಿ ಆಫ್ ಸ್ಟೇಟ್). ಏಳು ವರ್ಷಕಾಲ ಸಾಮರ್ಥ್ಯದಿಂದ ದೇಶದ ಒಳಾಡಳಿತ ಕಾರ್ಯವನ್ನು ನಿರ್ವಹಿಸಿದ. ಸಂಯುಕ್ತಸಂಸ್ಥಾನ ಮತ್ತು ಅಮೆರಿಕದಲ್ಲಿ ಅದರ ಮಿತ್ರರಾಷ್ಟ್ರಗಳ ವ್ಯವಹಾರಗಳಲ್ಲಿ ಯುರೋಪಿನ ಯಾವ ರಾಷ್ಟ್ರವೂ ಕೈಹಾಕಕೂಡದೆಂಬ ಮನ್ರೊ ನೀತಿಯನ್ನು ರೂಪಿಸಿದವ ಈತನೇ. ರಾಷ್ಟ್ರಾಧ್ಯಕ್ಷನಾಗಿ ವಿರೋಧಪಕ್ಷದವರ ಕಿರುಕುಳದಿಂದ ಯಾವ ಮಹತ್ಕಾರ್ಯವನ್ನು ಸಾಧಿಸುವುದೂ ಅವನಿಂದಾಗಲಿಲ್ಲ. ಅಧ್ಯಕ್ಷ ಪದವಿ ಕೊನೆಗೊಂಡ ಮೇಲೆ 17 ವರ್ಷಕಾಲ (1831–48) ರಾಷ್ಟ್ರದ ಕೆಳಮನೆಯ ಚುನಾಯಿತ ಸದಸ್ಯನಾಗಿ ನಿಂತು ತನ್ನ ವಿಶಾಲ ಅನುಭವ, ಪಾಂಡಿತ್ಯಗಳ ಪ್ರಯೋಜನವನ್ನು ನಾಡಿಗೆ ನೀಡಿದ. ಗುಲಾಮಗಿರಿಯನ್ನು ಕಟುವಾಗಿ ಖಂಡಿಸಿ, ವ್ಯಕ್ತಿಸ್ವಾತಂತ್ರ್ಯಕ್ಕೆ ಬೆಂಬಲಕೊಟ್ಟ, ತನ್ನ ಪ್ರಾಮಾಣಿಕ ಶ್ರದ್ಧೆ ಮತ್ತು ವ್ಯವಹಾರಜ್ಞಾನದಿಂದ ಹಿರಿಯ ರಾಷ್ಟ್ರನಾಯಕನಾಗಿ ಜನತೆಯ ವಿಶ್ವಾಸ ಸಂಪಾದಿಸಿದ.

**ಆ್ಯಡಮ್ಸ್, ರಾಬರ್ಟ್ :** 1791–1875. ಐರ್ಲೆಂಡಿನ ವೈದ್ಯ, ಗುಂಡಿಗೆಯ ಹಲವಾರು ರೋಗಗಳ, ಕೀಲುವಾತದ ಕಟ್ಟುವಾರೆ (ಗೌಟ್) ರೋಗದ ಸಂಶೋಧಕ. ಯುರೋಪಿನಲ್ಲಿ ವೈದ್ಯಕಲಿಕೆ ಮುಂದುವರಿಸಿ ಐರ್ಲೆಂಡಿನ ಹೆಸರಾಂತ ಶಸ್ತ್ರವೈದ್ಯನಾಗಿ 3 ಬಾರಿ ಅವರ ರಾಷ್ಟ್ರೀಯ ಸಂಘದ ಅಧ್ಯಕ್ಷನಾಗಿದ್ದ. ನಾಡಿನಿಧಾನಗೊಂಡು ತತ್ಕಾಲ ತಲೆ ತಿರುಗಿದಂತಾಗಿ ಸುವ ಗುಂಡಿಗೆರೋಗದ ಲಕ್ಷಣಗಳನ್ನು ವಿವರಿಸಿದ (1827). 20 ವರ್ಷಗಳ ಅನಂತರ ಅವನ ಸಂಗಾತಿ ವಿಲಿಯಂ ಸ್ಟೋಕ್ಸ್ ಈ ವಿಚಿತ್ರ ಲಕ್ಷಣಗಳ ರೋಗದೆಡೆಗೆ ಗಮನ ಸೆಳೆದುದರಿಂದ, ಈ ಲಕ್ಷಣಕೂಟಕ್ಕೆ (ಸಿಂಡ್ರೋಮ್) ಆ್ಯಡಮ್ಸ್ ಸ್ಟೋಕ್ಸ್ ಲಕ್ಷಣ ಕೂಟವೆಂದು ಹೆಸರಿದೆ.

**ಆಡಳಿತ :** ಸರ್ಕಾರ ನಡೆಸುವ ಜನಪರ ಚಟುವಟಿಕೆ. ಸರ್ಕಾರದ ಕೆಲಸ ಎರಡು ಬಗೆಯದಾಗಿದೆ. ಒಂದು ನ್ಯಾಯಾಂಗ ರಚನೆ, ಇನ್ನೊಂದು ಆಡಳಿತ ನಿರ್ವಹಣೆ. ಎರಡನೆಯದಕ್ಕೇ ಹೆಚ್ಚು ಪ್ರಾಮುಖ್ಯವಿರುವುದರಿಂದ ಒಂದು ದೇಶದ ಸರ್ಕಾರವನ್ನು ಆಡಳಿತ ಎಂಬ ಮಾತಿನಿಂದಲೇ ಕರೆಯುವ ವಾಡಿಕೆ ಇದೆ. ರಾಜ್ಯಾಂಗ ವಿಧಿನಿಯಮಗಳನ್ನು ಪಾಲಿಸುವ ಯಾವ ರಾಜ್ಯದಲ್ಲೇ ಆಗಲಿ ಆಡಳಿತ ನ್ಯಾಯಾಂಗಕ್ಕನುಸಾರವಾಗಿರಬೇಕಲ್ಲದೆ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಆಡಳಿತ ವರ್ಗ ಪ್ರಜಾಪ್ರತಿನಿಧಿಗಳಿಗೆ ಜವಾಬ್ದಾರವಾಗಿರಬೇಕು. ಏಕೆಂದರೆ ವ್ಯಕ್ತಿಯಂತೆ ಮಂತ್ರಿಗಳೇ ಆದಿಯಾಗಿ ಅಧಿಕಾರ ವರ್ಗದವರು ದುರಾಡಳಿತಕ್ಕೆ ಒಳಗಾಗುವ ಸಂಭವಗಳುಂಟು.

ಮೊದಲು ರಾಜ್ಯಾಂಗದ ರಚನಾಸಭೆ ವಿಹಿತಮಾಡಿದ ಲಿಖಿತ ನ್ಯಾಯಸೂತ್ರಗಳು ರಚಿತವಾಗುತ್ತವೆ; ಈ ಸೂತ್ರಗಳ ಅರ್ಥವಿವರಣೆಗೆ ನ್ಯಾಯಾಂಗವಿದೆ; ಅವುಗಳನ್ನು ಕಾರ್ಯಗತ ಮಾಡಿ ರಾಜ್ಯದ ಪ್ರಗತಿಯನ್ನು ಸಾಧಿಸುವುದು ಆಡಳಿತ ವಿಭಾಗದ ಕೆಲಸ. ಆಡಳಿತ ಒಂದು ಯಂತ್ರದಂತೆ; ಅದರ ಚಾಲಕರು ಆಡಳಿತವರ್ಗ, ಅದೊಂದು ಕ್ರಿಯಾಕ್ಷೇತ್ರ. ಪ್ರಜೆಗಳ ಶಾಂತಿ, ತುಷ್ಟಿ, ಪ್ರಗತಿ ಅದರ ಧ್ಯೇಯ. ಹಿಂದೆ ಎಲ್ಲ ರಾಷ್ಟ್ರಗಳಲ್ಲೂ ರಾಜಪ್ರಭುತ್ವ ವಿದ್ದಾಗ ಆಡಳಿತಕ್ಕೆ ಹೆಚ್ಚು ಪ್ರಾಮುಖ್ಯ ಇರಲಿಲ್ಲ. ಎಲ್ಲವೂ ಹೆಚ್ಚಾಗಿ ಮಂತ್ರಿಯಿಂದ ಅಥವಾ ಮಂತ್ರಿಗಳಿಂದ ನಿಯಂತ್ರಿತವಾಗುತ್ತಿತ್ತು. ರಾಜ ಅಥವಾ ಮಂತ್ರಿ ಹೇಳಿದ್ದೇ ಶಾಸನವಾಗುತ್ತಿತ್ತು. ಅಧಿಕಾರಿಗಳೆಲ್ಲ ಅವರ ಇಚ್ಛೆಗೆ ಅನುಸಾರವಾಗಿ ನಡೆಯಬೇಕಾಗಿತ್ತು. ಇತ್ತೀಚೆಗೆ ಪ್ರಜಾಪ್ರಭುತ್ವದ ವ್ಯಾಪನೆ ಹೆಚ್ಚುತ್ತಿದೆ; ಆಡಳಿತದ ವಿಷಯವಾಗಿ ತನ್ನ ಸ್ಪಷ್ಟ ಅಭಿಪ್ರಾಯವನ್ನು ತಿಳಿಸುವ ಸ್ವಾತಂತ್ರ್ಯ ಪ್ರತಿಯೊಬ್ಬ ಸಾಮಾನ್ಯ ಪ್ರಜೆಗೂ ದೊರಕಿದೆ. ಆದ್ದರಿಂದ, ಆಡಳಿತ ಪ್ರಜಾವಿರೋಧ ವನ್ನು ಕಟ್ಟಿಕೊಳ್ಳದಂತೆ ನಡೆಯಬೇಕು. ಹೀಗೆ ಅದರ ಜವಾಬ್ದಾರಿ ಹೆಚ್ಚಿದೆ. ಆಡಳಿತವನ್ನು ಪ್ರತ್ಯೇಕ ಶಾಸ್ತ್ರವೆಂದೇ ಪರಿಗಣಿಸಿ ಅದರ ಧ್ಯೇಯ, ಸ್ವರೂಪ, ರಚನೆ, ಕಾರ್ಯವಿಧಾನಗಳನ್ನು ನಿರ್ಣಯಿಸುವ ಅಭ್ಯಾಸ ಸುಮಾರು 50–60 ವರ್ಷಗಳಲ್ಲಿ ಹೆಚ್ಚಿದೆ. ಆಡಳಿತಕ್ಕೆ ಸೇರಿದ ಅಧಿಕಾರಿಯೂ ಒಬ್ಬ ಪ್ರಜೆ; ಇತರರಿಗಿರುವಂತೆ ಅವನಿಗೂ ಸಂವಿಧಾನದಲ್ಲೇ ಸ್ಪಷ್ಟಪಡಿಸಿರುವ ಹಕ್ಕುಬಾಧ್ಯತೆಗಳಿವೆ. ಇದು ಮೇಲ್ದರ್ಜೆಯ ಅಧಿಕಾರಿಗೂ ಕೆಳದರ್ಜೆಯವನಿಗೂ ಒಂದೇ ಸಮನಾಗಿ ಅನ್ವಯಿಸುತ್ತದೆ. ಅಧಿಕಾರಿಯನ್ನಾಗಲಿ ಪ್ರಜೆಯನ್ನಾಗಲಿ, ಶಿಕ್ಷಿಸುವುದಾಗಲಿ, ಕೆಲಸದಿಂದ ತೆಗೆದುಹಾಕುವುದಾಗಲಿ, ಈಗ ಏಕಪ್ರಭುತ್ವದ ಕಾಲದಲ್ಲಿದ್ದಷ್ಟು ಸುಲಭಸಾಧ್ಯವಲ್ಲ.

ಒಂದು ದೇಶದ ಆಡಳಿತಯಂತ್ರ ನಡೆಯುವುದು ಸಾರ್ವಜನಿಕ ಹಣದಿಂದ. ಆ ಹಣ ಸದ್ವಿನಿಯೋಗವಾಗಬೇಕು: ಅಂದರೆ ಆಡಳಿತವರ್ಗದವರ ಕಾರ್ಯಗಳಿಂದ ಪ್ರಜೆಗಳ ಹಿತ ಸಾಧಿಸಲ್ಪಡಬೇಕು. ಆದ್ದರಿಂದ ಆಡಳಿತದ ಅನೇಕ ಶಾಖೆಗಳನ್ನು ರಚಿಸುವಾಗ, ಅವುಗಳ ಕಾರ್ಯವಿಧಾನ ಕ್ರಮಗಳನ್ನು ನಿಯಂತ್ರಿಸುವಾಗ, ಕೊಂಚವೂ ಸಾರ್ವಜನಿಕ ಹಣ ಪೋಲಾಗದಂತೆ ನೋಡಿಕೊಳ್ಳುವುದು ಅಗತ್ಯ. ಕನಿಷ್ಠಮೊತ್ತದ ವ್ಯಯದಿಂದ ಅತ್ಯಂತ ಫಲಕಾರಿಕಾರ್ಯ ನಡೆಯುವಂತಾಗಬೇಕು. ಆಡಳಿತದ ಕಾರ್ಯಸಮರ್ಥತೆ ಕಂಡುಬರುವುದು ಇದರಲ್ಲಿ.

ಆಡಳಿತ ಇಡೀ ರಾಷ್ಟ್ರ ಹಿತಕ್ಕೆ ಸಂಬಂಧಿಸಿದ್ದಾದುದರಿಂದ ಅದರ ಕಾರ್ಯವ್ಯಾಪ್ತಿ ವಿಶಾಲವಾಗಿದೆ; ಜನಜೀವನದ ಎಲ್ಲ ಮುಖಗಳಿಗೂ ಸಂಬಂಧಿಸಿದೆ. ಆದ್ದರಿಂದ ಅದನ್ನು ಅನೇಕ ಇಲಾಖೆಗಳಾಗಿ ವಿಂಗಡಿಸಿದ್ದಾರೆ. ಪ್ರತಿಯೊಂದು ಇಲಾಖೆಗೂ ಒಬ್ಬ ಮುಖ್ಯಾಧಿಕಾರಿ; ಆ ಇಲಾಖೆಯ ಕಾರ್ಯಕಲಾಪಗಳನ್ನು ನಿಯಂತ್ರಿಸುವವ ಆತ; ಅವನೇ ಅದರ ಆಗುಹೋಗುಗಳಿಗೆ ಜವಾಬ್ದಾರ. ಅವನ ಅಧೀನದಲ್ಲಿ ನಾನಾ ಮಟ್ಟದ ಅಧಿಕಾರಿಗಳ ಕ್ರಮಬದ್ಧ ಶ್ರೇಣಿಯಿದೆ. ಇವರೆಲ್ಲರಿಗೂ ಅವರವರ ಕಾರ್ಯಗಳನ್ನು ನಿಗದಿಪಡಿಸುತ್ತಾರೆ. ಇವರಲ್ಲಿ ಪ್ರತಿಯೊಬ್ಬನೂ ತನಗೆ ಒಪ್ಪಿಸಿದ ಕಾರ್ಯವನ್ನು ನಿರ್ದಿಷ್ಟಪಡಿಸಿದ ಕಾಲದಲ್ಲಿ ಮಾಡಿ ಮುಗಿಸಬೇಕು. ಹಾಗಿಲ್ಲದಿದ್ದರೆ ಆ ಕಾರ್ಯಕ್ಕೆ ಸಂಬಂಧಿಸಿದ ಇತರ ಶ್ರೇಣಿಗಳಲ್ಲೂ ಕೆಲಸ ಸ್ಥಗಿತವಾಗುತ್ತದೆ. ಆದ್ದರಿಂದ ಅಧಿಕಾರಿಗಳಿಗೆ ಕಾರ್ಯಗಳನ್ನು ಹಂಚುವುದರಲ್ಲಿ, ಅವುಗಳ ನಿರ್ವಹಣೆಯಲ್ಲಿ ಸರಿಯಾದ ಸಂಘಟನೆ ಹೊಂದಿಕೆ ಇರಬೇಕಾದದ್ದು ಅತ್ಯಾವಶ್ಯಕ. ಹೀಗೆಯೇ ಇಲಾಖೆಗಳಲ್ಲೂ ಪರಸ್ಪರ ಹೊಂದಿಕೆಯಿರಬೇಕು; ಏಕೆಂದರೆ ಒಂದು ವಿಷಯ ಅನೇಕ ಇಲಾಖೆಗಳ ಕಾರ್ಯವ್ಯಾಪ್ತಿಗೆ ಒಳಪಟ್ಟಿರಬಹುದು. ಇದಕ್ಕಾಗಿಯೇ ಅನೇಕ ವೇಳೆ ಸರಕಾರವೇ ಎಲ್ಲ ಇಲಾಖೆಗಳ ಉನ್ನತಾಧಿಕಾರಿಗಳ ಸಮ್ಮೇಳನಗಳನ್ನು ಏರ್ಪಡಿಸಿ ಅವುಗಳ ಪರಸ್ಪರ ಸಂಬಂಧ, ಹೊಂದಿಕೆ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಶಾಸಕಾಂಗದ ಪ್ರಾಮುಖ್ಯ ಹೆಚ್ಚು; ಕಾರ್ಯಾಂಗ ಅದಕ್ಕೆ ಅಧೀನವಾಗಿ ಕೆಲಸ ಮಾಡಬೇಕಾಗುತ್ತದೆ. ಆಡಳಿತಯಂತ್ರ ಸರಾಗವಾಗಿ ನಡೆಯಬೇಕಾದರೆ, ಆಡಳಿತದಲ್ಲಿ ಇತರರ ಕೈವಾಡ ಇರಬಾರದು. **ನೋಡಿ– ಆಡಳಿತನಿರ್ವಹಣೆ; ಸಾರ್ವಜನಿಕ ಆಡಳಿತ.**

**ಆಡಳಿತ ಕಾಯಿದೆ, ಆಡಳಿತ ಮಂಡಳಿ :** ಆಡಳಿತಗಾರರ ಅಧಿಕಾರದ ವ್ಯಾಪ್ತಿ ಮತ್ತು ಆಡಳಿತ ವಿಧಾನವನ್ನು ಕುರಿತಾದ ಕಾಯಿದೆಗಳಿಗೆ ಆಡಳಿತ ಕಾಯಿದೆ ಎಂಬ ಹೆಸರಿದೆ. ಇದರಲ್ಲಿ ಅಧಿಕಾರಿಗಳ ಕೆಲವೊಂದು ಕಾರ್ಯನಿರ್ವಹಣೆಯ ಬಗ್ಗೆ ನ್ಯಾಯಾಂಗ ನಡೆಸಬಹುದಾದ ವಿಮರ್ಶೆಯೂ ಸೇರುತ್ತದೆ. ಇಲ್ಲಿ ಆಡಳಿತ ಎಂದರೆ ಸರಕಾರ, ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯಾಲಯಗಳಿಂದ ಭಿನ್ನವಾದದ್ದು. ಆಡಳಿತ ಕಾಯಿದೆಯಲ್ಲಿ ರಾಜ್ಯಾಂಗಕ್ಕೆ ಸಂಬಂಧಿಸಿದ ಶಾಸನರೂಪವಾದ (ಸ್ಟ್ಯಾಚುಟರಿ), ಸಾಮಾನ್ಯ ಕಾಯಿದೆ ರೂಪದ, ಸರ್ಕಾರ ಮಾಡುವ ಕಾಯಿದೆಗಳ ಎಲ್ಲ ಬಗೆಗಳೂ ಸೇರಿವೆ. ಆಡಳಿತ ಕಾಯಿದೆಯ ಬಹು ಭಾಗ ನ್ಯಾಯಾಂಗ ರೂಪಿಸಿದ್ದಾಗಿದೆ. ಇದನ್ನು ಸ್ಥೂಲವಾಗಿ ಮೂರು ಭಾಗ ಮಾಡಬಹುದು. ಒಂದು ಶಾಸನಸಭೆಗಳಿಂದ ಆಡಳಿತ ಭಾಗಕ್ಕೆ ಹಂಚಿಕೆಯಾಗುವ ಅಧಿಕಾರಗಳಿಗೆ ಸಂಬಂಧಿಸಿದ್ದು, ಆಡಳಿತವರ್ಗ ಅಧಿಕಾರವನ್ನು ಚಲಾಯಿಸುವ ವಿಷಯಕ್ಕೆ ಸಂಬಂಧಿಸಿದ್ದು ಎರಡನೆಯದು. ಆಡಳಿತ ವಿಷಯದಲ್ಲಿ ನ್ಯಾಯಾಲಯಗಳು ಮಾಡುವ ವಿಷಯ ಬಹು ಮುಖ್ಯವಾದುದು. ಕಾನೂನು ರಚನೆ, ನ್ಯಾಯತೀರ್ಮಾನ, ತನಿಖೆ, ಮೇಲ್ವಿಚಾರಣೆ, ಅಭಿಯೋಗ (ಪ್ರಾಸಿಕ್ಯೂಷನ್) ಸಲಹೆ ನೀಡಿಕೆ, ನಿರ್ಣಾಯಕ ಘೋಷಣೆ–ಇವು ಅಧಿಕಾರ ಚಲಾವಣೆಯ ಮುಖ್ಯ ಹಂತಗಳು.

ಕಾನೂನು ರಚನೆ, ಆಡಳಿತ ನಿರ್ವಹಣೆ, ತಕರಾರುಗಳ ಪರಿಹಾರ–ಇವು ಕ್ರಮವಾಗಿ ನ್ಯಾಯವಿಧಾಯಕ ಸಭೆ, ಸರ್ಕಾರ ಮತ್ತು ನ್ಯಾಯಾಲಯಗಳ ಕೆಲಸವಾದರೂ ಕಾಲಕ್ರಮೇಣ ಸರಕಾರ ಜಟಿಲವಾದಂತೆಲ್ಲ ಈ ಮೂರು ಕಾರ್ಯಗಳನ್ನು ಸ್ವಲ್ಪವಾಗಿಯೋ, ಹೆಚ್ಚಾಗಿಯೋ ಸರ್ಕಾರವೇ ನಿರ್ವಹಿಸಬೇಕಾದ ಪರಿಸ್ಥಿತಿ ಒದಗಿತು.

ಸರಕಾರದ ಕೆಲಸ ಶಾಂತಿ ಮತ್ತು ಶಿಸ್ತನ್ನು ಕಾಪಾಡುವುದರಲ್ಲಿ ಮುಗಿಯಲಿಲ್ಲ. ವಿಧವಿಧವಾದ ತೆರಿಗೆಗಳನ್ನು ಹೊರಿಸಿ ವಸೂಲು ಮಾಡುವುದು, ವಾಣಿಜ್ಯ ಸಂಸ್ಥೆಗಳನ್ನು ನಡೆಸಲು ಅಪ್ಪಣೆಕೊಡುವುದು, ಲಾರಿಬಸ್ಸುಗಳನ್ನು ಓಡಿಸಲು ಅನುಮತಿ ನೀಡುವುದು, ಯಜಮಾನನ ವಿರುದ್ಧ ನೌಕರರ ರಕ್ಷಣೆ, ವಿದೇಶಗಳಿಂದ ಇಲ್ಲಿಗೆ ಬಂದು ನೆಲೆಸುವವರ ಮೇಲ್ವಿಚಾರಣೆ, ವಿದ್ಯಾಸಂಸ್ಥೆಗಳ ಜವಾಬ್ದಾರಿ ಮುಂತಾದ ಸಹಸ್ರಾರು ಕೆಲಸಗಳು ಸರಕಾರದ ವ್ಯಾಪ್ತಿಯೊಳಗೆ ಬಂದುಬಿಟ್ಟಿವೆ. ಇವನ್ನೆಲ್ಲ ನೋಡಿಕೊಳ್ಳಲು ಅನೇಕಾನೇಕ ಇಲಾಖೆಗಳು ಬೇಕು ಮತ್ತು ಈ ಇಲಾಖೆಗಳನ್ನು ನಡೆಸಲು ನೂರಾರು ಅಧಿಕಾರಿಗಳು ಬೇಕು. ಹಾಗೆ ಅಧಿಕಾರಿಗಳನ್ನು ನೇಮಿಸಿದ ಅನಂತರ ಅವರವರ ಕರ್ತವ್ಯವನ್ನು ವಿವರಿಸಬೇಕು. ಹೀಗೆ ಅವರವರ ಕರ್ತವ್ಯವನ್ನು ವಿವರಿಸಲು ಹೊರಟಾಗಲೇ ಅಧಿಕಾರಿಗಳೂ ಕೂಡ, ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ಕಾನೂನು ರಚಿಸುವ ಮತ್ತು ತೀರ್ಪು ಕೊಡುವ ಕೆಲಸಗಳನ್ನು ಕೈಗೊಳ್ಳಬೇಕಾಗಿದೆ ಎಂಬ ಅಂಶ ಹೊರಬಿದ್ದಿತು. ಆ ರೀತಿ ಅವರು ರಚಿಸಿಕೊಳ್ಳುವ ಕಾನೂನಿಗೆ ಆಡಳಿತ ಕಾಯಿದೆ ಎಂದೂ ತೀರ್ಪು ಕೊಡುವ ಅಧಿಕಾರಿಯನ್ನು ಅಥವಾ ಅಧಿಕಾರಿಗಳನ್ನು ಆಡಳಿತ ಮಂಡಳಿ ಅಥವಾ ನ್ಯಾಯಾಧಿಕರಣ ಎಂದೂ (ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್) ಕರೆದಿದ್ದಾರೆ.

ನ್ಯಾಯವಿಧಾಯಕ ಸಭೆ ಕಾನೂನುಗಳನ್ನು ರಚಿಸಿದರೂ ಅವುಗಳನ್ನು ಜಾರಿಗೆ ತರಲು ಸರಕಾರ ನಿಯಮಗಳನ್ನು ರಚಿಸುತ್ತದೆ. ಈ ನಿಯಮಗಳಿಗೂ ಕಾನೂನಿನ ಅಂತಸ್ತೇ ಇರುತ್ತದೆ. ಜನರು ಕಾನೂನು ಮತ್ತು ನಿಯಮಗಳನ್ನು ಒಟ್ಟುಸೇರಿಸಿ ತಮಗಷ್ಟೇ ಸಂಬಂಧಿಸಿದ ಕಾಯಿದೆ ಎಂಬುದಾಗಿ ಪರಿಗಣಿಸುತ್ತಾರೆ. ಹೀಗಾಗಿ ಈ ನಿಯಮಗಳು ಮತ್ತು ಇದೇರೀತಿ ಸರಕಾರ ನ್ಯಾಯವಿಧಾಯಕ ಸಭೆಯ ಮುಂದೆ ತರದ ಕೆಲವು ಆಜ್ಞೆಗಳು ಆಗಾಗ ಪರಿಣಮಿಸುತ್ತವೆ. ಹಲವು ಖಾಸಗಿ ಸಂಸ್ಥೆಗಳನ್ನು ನಡೆಸುವ ವಿಷಯ ಬಂದಾಗ ಜನರ ವಿರುದ್ಧ ಕೆಲವು ರೀತಿಯ ಕರಗಳನ್ನು ವಿಧಿಸಬೇಕಾದಾಗ ಖಾಸಗಿ ನೌಕರರಿಗೆ ರಕ್ಷಣೆ ಕೊಡಬೇಕಾದ ಪ್ರಸಂಗ ಒದಗಿದಾಗ, ಇತ್ಯಾದಿ ಸಂದರ್ಭಗಳಲ್ಲಿ ಸರಕಾರ ತನ್ನ ಅಧಿಕಾರಿಗಳಿಗೆ ನೀಡುವ ಸೂಚನೆಗಳೆಲ್ಲವೂ ಅವು ಯಾರ ವಿರುದ್ಧ ಇವೆಯೋ ಅವರೆಲ್ಲರ ದೃಷ್ಟಿಯಲ್ಲಿ ಆಡಳಿತ ತನ್ನ ಕಾರ್ಯನಿರ್ವಹಣೆ ಮಾಡುವಾಗ ಜನರ ಅಹವಾಲನ್ನು ಕೇಳಿ ತಾನೇ ತೀರ್ಪು ಕೊಡುತ್ತದೆ. ಇದೇ ಜನರಿಗೆ ಸಿಗುವ ಆಡಳಿತ ಮಂಡಳಿಯ ತೀರ್ಪು.

ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಹಳ್ಳಿಯಲ್ಲಿ ಪಾಳುಬಿದ್ದಿರುವ ಜಮೀನನ್ನು ಕಾನೂನುರೀತ್ಯಾ ಹಂಚಿಕೊಂಡು ವ್ಯವಸಾಯ ಮಾಡಲು ಅನೇಕರು ಅರ್ಜಿಹಾಕಿಕೊಳ್ಳುತ್ತಾರೆ. ಈ ಅರ್ಜಿಗಳನ್ನು ತಹಸೀಲ್‌ದಾರರು ಸ್ವೀಕರಿಸಿ ತಾವೇ ಒಂದು ಆಜ್ಞೆಮಾಡಬಹುದು ಅಥವಾ ಅರ್ಜಿಗಳನ್ನು ತಮ್ಮ ಮೇಲಿನ ಅಸಿಸ್ಟೆಂಟ್ ಕಮೀಷನರ್ ಮುಂದೆ ಇಡಬಹುದು. ಆ ಅಸಿಸ್ಟೆಂಟ್ ಕಮೀಷನರು ಒಂದು ತೀರ್ಪುಕೊಟ್ಟು, ಜಮೀನನ್ನು ಹಲವರಿಗೆ ಹಂಚುವರು (ಇಲ್ಲಿ ಅಸಿಸ್ಟೆಂಟ್ ಕಮೀಷನರನ್ನೇ ಒಂದು ಆಡಳಿತ ಮಂಡಳಿ ಅಥವಾ ಅದರ ಜಾಗದಲ್ಲಿ ಕೆಲಸ ಮಾಡುವ ಅಧಿಕಾರಿ ಎನ್ನಬಹುದು). ಹೀಗಾದ ಹಂಚಿಕೆಯಿಂದ ನೊಂದ ಅರ್ಜಿದಾರರು ಡೆಪ್ಯುಟಿ ಕಮೀಷನರ್ (ಇವರೂ ಆಡಳಿತದ ಒಂದು ಭಾಗ) ಅವರಲ್ಲಿ ಅಪೀಲು ಮಾಡುವರು. ಇವರ ತೀರ್ಪಿನ ವಿರುದ್ಧ ರೆವಿನ್ಯೂ ಕಮೀಷನರ್ ಅಥವಾ ರೆವಿನ್ಯೂ ಟ್ರಿಬ್ಯೂಲ್‌ನಲ್ಲಿ ಒಬ್ಬರು ಅಥವಾ ಹೆಚ್ಚಿಗೆ ಆಡಳಿತ ಶಾಖೆಯ ಅಧಿಕಾರಿಗಳಿರುತ್ತಾರೆ. ಇವರೆಲ್ಲರೂ ತಮ್ಮ ಕೈಲಿರುವ ಕಾಯಿದೆಗಳನ್ನು ಉಪಯೋಗಿಸುವುದರ ಜೊತೆಗೆ ಅವರ ಸ್ವಂತ ವಿವೇಚನೆಗೂ ಬೇಕಾದಷ್ಟು ಅವಕಾಶವಿರುತ್ತದೆ.

ಮೇಲಿನ ರೀತಿಯ ಉದಾಹರಣೆಯಂತೆಯೇ ಇತರ ಕ್ಷೇತ್ರಗಳಿಂದಲೂ ಮಾರಾಟ ತೆರಿಗೆಯ ಮಂಡಳಿ, ಕಾರ್ಮಿಕರಿಗಾಗಿ ಇರುವ ಮಂಡಳಿ, ವಾಹನ ನಡೆಸುವವರಿಗಾಗಿ ಇರುವ ಮಂಡಳಿ ಮುಂತಾದುವನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಈ ಆಡಳಿತಾಂಗ ನ್ಯಾಯಾಧೀಶರ ಕಾರ್ಯವನ್ನು ಕೈಗೊಂಡಾಗ ಪ್ರಜೆಗೆ ಅನಾನುಕೂಲಕ್ಕಿಂತ ಅನುಕೂಲವೇನಾದರೂ ಹೆಚ್ಚಾಯಿತೇ? ಉನ್ನತಮಟ್ಟದ ಆಡಳಿತ ಮಂಡಳಿಯಿಂದಲೂ ತನಗೆ ನ್ಯಾಯ ದೊರಕಲಿಲ್ಲ ಎಂಬುದಾಗಿ ಹೇಳಿಕೊಳ್ಳುವ ಮನುಷ್ಯನಿಗೆ ನ್ಯಾಯಾಲಯಗಳಿಂದ ಏನಾದರೂ ಪರಿಹಾರಕ್ಕೆ ಅವಕಾಶವಿದೆಯೇ?

ಆಡಳಿತಾಂಗದ ಮೂಲಕ ಜನರಿಗೆ ನ್ಯಾಯಸಿಗುವುದರ ಪರವಾಗಿ ಅನೇಕ ಕಾನೂನು ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಮೊದಲನೆಯದಾಗಿ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟ ಕೆಲಸ ಸುಸೂತ್ರವಾಗಿ ನಡೆಯಬೇಕಾದರೆ ಆ ಇಲಾಖೆಯಲ್ಲೇ ವಿಶೇಷ ಪರಿಶ್ರಮ ಪಡೆದ ಅಧಿಕಾರಿಗಳಿರಬೇಕು. ನಮ್ಮ ಮಾಮೂಲಿ ರೀತಿಯ ಸಿವಿಲ್ ಅಥವಾ ಕ್ರಿಮಿನಲ್ ಕೋರ್ಟಿನ ನ್ಯಾಯಾಧೀಶರುಗಳು ಈ ಎಲ್ಲ ಇಲಾಖೆಯ ವಿಷಯಗಳಲ್ಲೂ ಪ್ರಾವೀಣ್ಯ ಪಡೆದಿರುತ್ತಾರೆಂದು ಹೇಳಲು ಸಾಧ್ಯವಿಲ್ಲ. ಎರಡನೆಯದಾಗಿ ಆಡಳಿತ ಮಂಡಳಿಯ ಮುಂದೆ ವಾದ ಪ್ರತಿವಾದಗಳು ನಡೆಯುವಾಗ ವಿಹಿತಕ್ರಮ ಅಷ್ಟಾಗಿರುವುದಿಲ್ಲ; ಅಲ್ಲಿರುವ ಸರಳತೆಯ ಕಾರಣದಿಂದ ಅರ್ಜಿದಾರ ವಕೀಲರ ಸಹಾಯವಿಲ್ಲದೆಯೇ ತನ್ನ ಕಷ್ಟಸುಖಗಳನ್ನು ಹೇಳಿಕೊಳ್ಳಬಹುದು. ಮೂರನೆಯದಾಗಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಕ್ರಮ ಹೆಚ್ಚು ಕಾಲಾವಧಿಯನ್ನು ತೆಗೆದುಕೊಳ್ಳುವಂಥದು ಮತ್ತು ಅನೇಕವೇಳೆ ದುಬಾರಿ. ಆಡಳಿತ ಮಂಡಳಿಯ ಮುಂದೆ ಪ್ರಜೆ ಕಡಿಮೆ ಖರ್ಚಿನಲ್ಲಿ ಮತ್ತು ಕ್ಷಿಪ್ರವಾಗಿ ಬಂದ ತೀರ್ಪನ್ನು ಪಡೆಯಬಹುದು. ಕಡೆಯದಾಗಿ ನಮ್ಮ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳು ಮೊಕದ್ದಮೆಗಳಿಂದ ತುಂಬಿಹೋಗಿರುತ್ತವೆ. ಹೀಗಿರುವಾಗ ಆಡಳಿತಮಂಡಳಿಗಳ ಮುಂದೆ ಬರುವ ವ್ಯಾಜ್ಯಗಳನ್ನೆಲ್ಲ ಈ ಕೋರ್ಟುಗಳಿಗೆ ತಂದಲ್ಲಿ ಕಾರ್ಯನಿರ್ವಹಣೆಯಲ್ಲಿ ನಿಧಾನ ಮತ್ತು ಗಡಿಬಿಡಿಯುಂಟಾಗುವುದು.

ಆಡಳಿತ ಮಂಡಳಿಗಳ ವಿರುದ್ಧ ಇರುವ ವಾದಗಳು ಹೀಗಿವೆ: ವ್ಯಾಜ್ಯಗಳನ್ನು ತೀರ್ಮಾನ ಮಾಡುವುದರಲ್ಲಿ ಆಡಳಿತ ಪ್ರವೇಶಿಸಿದರೆ ನ್ಯಾಯಾಲಯಗಳ ಸ್ಥಾನಮಾನಗಳು ಕುಂದುತ್ತ ಬಂದು ಜನರಿಗೆ ಕಾನೂನಿಂದ ಆಗುವ ಪ್ರಯೋಜನ ಕಡಿಮೆಯಾಗುತ್ತದೆ. ಕಟ್ಟುನಿಟ್ಟಾದ ಕ್ರಮವನ್ನು ನ್ಯಾಯಾಲಯ ಹಾಕಿಕೊಂಡು ಸಮರ್ಥರಾದ ವಕೀಲರು ವಾದಿಸಿದ ಅನಂತರ ಆಗುವ ತೀರ್ಮಾನದ ಗುಣಮಟ್ಟವನ್ನು ಆಡಳಿತ ಮಂಡಳಿ ಮುಟ್ಟಲಾರದು. ಆಡಳಿತಾಂಗದ ಅಧಿಕಾರಿಗಳು ಅನೇಕವೇಳೆ ಸರ್ಕಾರದ ಪರವಾಗಿಯೇ ಪೂರ್ವಕಲ್ಪಿತ ಭಾವನೆಗಳನ್ನು ಹೊಂದಿರುತ್ತಾರೆ. ಅಂಥ ಸಂದರ್ಭದಲ್ಲಿ ಸರಕಾರದ ವಿರುದ್ಧ ಹೊಡೆದಾಡುತ್ತಿರುವ ವ್ಯಕ್ತಿಗೆ ಪೂರ್ಣ ನ್ಯಾಯ ಸಿಗುವ ಬಗೆ ಹೇಗೆ? ಇಲ್ಲಿ ಒಂದು ಉದಾಹರಣೆಯನ್ನು ಕೊಡಬಹುದು: ಮಾರಾಟ ತೆರಿಗೆಯನ್ನು ವಸೂಲು ಮಾಡುವ ಕಾರ್ಯವನ್ನು ಕೈಗೊಂಡಿರುವ ಸರ್ಕಾರದಿಂದ ನೇಮಿತರಾಗಿ ಸರ್ಕಾರದ ವಿರುದ್ಧವೇ ತೀರ್ಪು ಕೊಡಲು ಅವರ ಮನ ಒಪ್ಪುವುದೇ? ಕೊಂಚವಾದರೂ ಅವರ ಮನಸ್ಸು ಸರ್ಕಾರದ ಕಡೆ ವಾಲುವುದಿಲ್ಲವೇ? ಈ ಪ್ರಶ್ನೆಗಳನ್ನು ಅಷ್ಟು ಸುಲಭವಾಗಿ ತಳ್ಳಿ ಹಾಕಿಬಿಡುವುದಕ್ಕಾಗುವುದಿಲ್ಲ.

ಆಡಳಿತ ಕಾಯಿದೆ ಮತ್ತು ಮಂಡಳಿಯ ಪರ ಮತ್ತು ವಿರುದ್ಧ ಇರುವ ಈ ವಾದಗಳನ್ನು ಕಾನೂನು ಶಾಸ್ತ್ರಜ್ಞರು ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ಯುರೋಪು ಮತ್ತು ಅಮೆರಿಕ ದೇಶಗಳಲ್ಲಿ ಹಿಂದಿನ ಮತ್ತು ಈಗಿನ ಶತಮಾನಗಳಲ್ಲಿ ಇವೆಲ್ಲವೂ ಚರ್ಚೆಗೆ ಬಂದು ಅನುಭವದ ಮೇಲೆ ಅಲ್ಲಿಯ ಸರಕಾರಗಳು ಬದಲಾವಣೆಗಳನ್ನು ಮಾಡಿಕೊಂಡಿವೆ. ಅನೇಕರ ಅಭಿಪ್ರಾಯ ಹೀಗಿವೆ:

ಸರಕಾರ ಕಾರ್ಯನಿರ್ವಹಣೆ ಈಗಿನ ಕಾಲದಲ್ಲಿ ಅದರಲ್ಲೂ 20ನೆಯ ಶತಮಾನದ ಉತ್ತರಾರ್ಧದಲ್ಲಿ, ಅತಿ ಹೆಚ್ಚಿನದೂ ಬಹುಮುಖವುಳ್ಳದ್ದೂ ಆಗಿಹೋಗಿದೆ. ಈ ಕಾರಣದಿಂದ ಸರಕಾರದ ಹೆಚ್ಚು ಕೆಲಸಗಳನ್ನು ಅದರ ಮೂರು ಅಂಗಗಳಲ್ಲಿ ಒಂದಾದ ಆಡಳಿತಾಂಗವೇ ವಹಿಸಿಕೊಳ್ಳಬೇಕು. ಹಾಗೆ ವಹಿಸಿಕೊಂಡು ತನ್ನ ಕರ್ತವ್ಯ ನಿರ್ವಹಣೆ ಮಾಡುವಾಗ ಅಧಿಕಾರಿ ಅನೇಕವೇಳೆ ನ್ಯಾಯಾಧೀಶನಂತೆ ವರ್ತಿಸಲೂ ಅವನಿಗೆ ಬೇಕಾದ ನಿಯಮಗಳನ್ನೂ ವಿಶೇಷ ರೀತಿಯ ಆಜ್ಞೆಗಳನ್ನೂ ಸರ್ಕಾರ ಆಗಿಂದಾಗ್ಗೆ ಹೊರಡಿಸುವುದೂ ಅನಿವಾರ್ಯ. ಹೀಗಾಗಿ ಆಡಳಿತ ಕಾಯಿದೆ ಮತ್ತು ಮಂಡಳಿಗಳು ಇರುವುದರಿಂದ ಅನಾನುಕೂಲಕ್ಕಿಂತ ಅನುಕೂಲವೇ ಜಾಸ್ತಿ.

ಆಡಳಿತ ಮಂಡಳಿಗಳ ತೀರ್ಪನ್ನು ಪರಿಶೀಲಿಸಿ ಪುನಃ ತೀರ್ಪನ್ನು ಕೊಡುವ ವ್ಯಾಪ್ತಿಯನ್ನು (ಉನ್ನತಮಟ್ಟದ) ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ಕೊಟ್ಟಿರುತ್ತಾರೆ. ಆಡಳಿತ ಮಂಡಳಿಯ ತೀರ್ಪಿನ ವಿರುದ್ಧ ಅಪೀಲು ಹೋಗಬೇಕೆನ್ನುವವ ಈ ಕೋರ್ಟುಗಳಿಗಾಗಲಿ ಅಥವಾ ಅನೇಕ ವೇಳೆ ಹೈಕೋರ್ಟಿಗಾಗಲಿ ಅರ್ಜಿಕೊಡಬಹುದು. ಹಾಗೆ ಅರ್ಜಿದಾರ ಬಂದಾಗ ಅವನ ಮತ್ತು ವಿರೋಧ ಪಕ್ಷದವನ ಮಾತುಗಳನ್ನು ಕೇಳಿ ಕೋರ್ಟು ತನ್ನದೇ ಆದ ತೀರ್ಪನ್ನು ಕೊಡುತ್ತದೆ. ಆ ರೀತಿ ತೀರ್ಪು ಕೊಡುವಾಗ ಅಧಿಕಾರಿ ಅಥವಾ ಮಂಡಳಿಯ ಸದಸ್ಯರು ಸ್ವಂತ ವಿವೇಚನೆಯ ದುರುಪಯೋಗ ಮಾಡಿಕೊಂಡಿದ್ದಾರೆಯೇ, ಅವರು ತಮ್ಮ ವ್ಯಾಪ್ತಿ ಮೀರಿಹೋಗಿದ್ದಾರೆಯೇ, ಅವರು ಹಾಕಿಕೊಂಡ ಕ್ರಮ ದೋಷಪೂರಿತವಾಗಿದೆಯೇ, ತೀರ್ಪು ಸಂವಿಧಾನದ ಯಾವ ಭಾಗಕ್ಕಾದರೂ ವಿರೋಧವಾಗಿದೆಯೇ, ಅವರ ಮುಂದೆ ಇದ್ದ ರುಜುವಾತು ಅವರು ತೀರ್ಮಾನಕ್ಕೆ ಬರಲು ಸಾಕಾದಷ್ಟಿತ್ತೇ–ಮುಂತಾದ ಅಂಶಗಳನ್ನು ಈ ಉನ್ನತಮಟ್ಟದ ಕೋರ್ಟಿನ ನ್ಯಾಯಾಧೀಶರು ಗಣನೆಗೆ ತೆಗೆದುಕೊಳ್ಳುತ್ತಾರೆ.

ಆಡಳಿತ ಮಂಡಳಿಯ ವಿರುದ್ಧ ಹೈಕೋರ್ಟು ಮುಂತಾದವಕ್ಕೆ ಮೇಲ್ಮನವಿ ಸಲ್ಲಿಸಿದಾಗ ಅಥವಾ ರಿಟ್ ಅರ್ಜಿ ಸಲ್ಲಿಸಿದಾಗ ಸಾಧಾರಣವಾಗಿ ಒಂದು ಪದ್ಧತಿ ಆಚರಣೆಯಲ್ಲಿದೆ. ತಥ್ಯ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಲಿ ಹೇಳಿರುವುದೇ ಕಡೆಯ ಮಾತು. ಕಾನೂನಿನ ಪ್ರಶ್ನೆ ಬಂದಲ್ಲಿ ಮಾತ್ರ ಅದಕ್ಕಿಂತಲೂ ಉನ್ನತಮಟ್ಟದ ಕೋರ್ಟು ವಿಷಯಗಳನ್ನು ಪರಿಶೀಲಿಸುತ್ತದೆ. ಉದಾಹರಣೆಗಾಗಿ, ಒಬ್ಬ ವ್ಯಾಪಾರಿ ಅಟ್ಲಾಸ್ ಅಥವಾ ಭೂಪಟಗಳ ಪುಸ್ತಕಗಳನ್ನು ಮಾರಿದನೇ ಇಲ್ಲವೇ ಎಂಬುದು ತಥ್ಯಪ್ರಶ್ನೆ. ಓದುವ ಪುಸ್ತಕಗಳಿಗೆ ವ್ಯಾಪಾರ ತೆರಿಗೆ ಇಲ್ಲದಿರುವಾಗ ಭೂಪಟಗಳ ಪುಸ್ತಕಗಳಿಗೆ ತೆರಿಗೆಯ ವಿನಾಯಿತಿ ಇರಬೇಕೇ ಬೇಡವೇ ಎಂಬುದು ಕಾನೂನಿನ ಪ್ರಶ್ನೆ (ಅನೇಕವೇಳೆ ದತ್ತಪ್ರಶ್ನೆ ತಥ್ಯಪ್ರಶ್ನೆಯೇ, ಕಾನೂನಿನ ಪ್ರಶ್ನೆಯೇ ಎಂಬುದೇ ಭಾರಿ ಸಮಸ್ಯೆಯಾಗುತ್ತದೆ), ಎಂಬುದರ ಚರ್ಚೆ ಪ್ರಕೃತಕ್ಕೆ ಗೌಣ, ಹೀಗೆ ಕಾನೂನಿನ ಪ್ರಶ್ನೆಗಳನ್ನು ಮಾತ್ರ ಅಪೀಲು ಕೋರ್ಟು ಪರಿಶೀಲಿಸಿ ಹಿಂದಿನ ತೀರ್ಪನ್ನೇ ಕಾಯಂ ಮಾಡಬಹುದು. ಯಾವ ರೀತಿ ಬೇಕಾದರೂ ಅದನ್ನು ಬದಲಾಯಿಸಬಹುದು ಅಥವಾ ಹಲವು ಸೂಚನೆಗಳನ್ನು ಕೊಟ್ಟು ಮತ್ತೆ ಮೊಕದ್ದಮೆಯನ್ನು ಹಿಂದಕ್ಕೆ ಕಳುಹಿಸ ಬಹುದು.

ಒಟ್ಟಿನಲ್ಲಿ ಆಡಳಿತ ಮಂಡಲಿಯ ವಿರುದ್ಧವೂ ಉನ್ನತ ಮಟ್ಟದ ಡಿಸ್ಟ್ರಿಕ್ಟ್ ಕೋರ್ಟು, ಹೈಕೋರ್ಟು, ಸುಪ್ರೀಂ ಕೋರ್ಟುಗಳಿಗೆ ಅಪೀಲು ಹೋಗಲು ಅವಕಾಶವಿರುವುದರಿಂದ ಆಡಳಿತ ಕಾನೂನು ಮತ್ತು ಮಂಡಲಿಯಿಂದ ಆಗಬಹುದಾದ ಅನಾನುಕೂಲಗಳು ಆದಷ್ಟು ಕಡಿಮೆಯಾಗಿವೆ.

*

**ಆಡಳಿತನಿರ್ವಹಣೆ :** ದೇಶದ ಆಡಳಿತ ವ್ಯವಸ್ಥೆಯಲ್ಲಿ (ಮ್ಯಾನೇಜ್‍ಮೆಂಟ್ ಇದಕ್ಕೆ) ಪ್ರಧಾನ ಸ್ಥಾನವಿದೆ. ಯಾವುದೇ ಒಂದು ವ್ಯವಸ್ಥಿತ ಸಂಸ್ಥೆಯಲ್ಲಿ, ಅದು ಖಾಸಗಿ ಯಾಗಿರಲಿ, ಸಾರ್ವಜನಿಕವಾಗಿರಲಿ, ಸರ್ಕಾರದ್ದಾಗಿರಲಿ, ಆಡಳಿತ ನಿರ್ವಹಣೆ ಸುಸೂತ್ರವಾಗಿ ಆಗಬೇಕಾದದ್ದು ಅಗತ್ಯ. ಅದಕ್ಕಾಗಿ ಆಡಳಿತ ನಿರ್ವಹಣೆಯನ್ನು ಒಂದು ಶಾಸ್ತ್ರವನ್ನಾಗಿ ಪರಿಗಣಿಸಿ ಅನೇಕ ವಿಷಯಗಳನ್ನು ಸೂತ್ರೀಕರಿಸಲಾಗಿದೆ. ಅದನ್ನು ಕುರಿತ ಅಧಿಕೃತ ಗ್ರಂಥಗಳೂ ಕೈಪಿಡಿಗಳೂ ಬಂದಿವೆ. ಖಾಸಗಿಯವರೂ ಸರ್ಕಾರವೂ ಅವನ್ನು ಪ್ರಕಟಿಸಿವೆ. ಆಡಳಿತ ನಿರ್ವಹಣೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಪಠ್ಯ ವಿಷಯವಾಗಿರುವುದೂ ಉಂಟು. ಅದರಲ್ಲಿ ತೇರ್ಗಡೆಯಾದವರಿಗೆ ಡಿಪ್ಲೊಮ, ಡಿಗ್ರಿಗಳನ್ನು ಕೊಡುತ್ತಾರಲ್ಲದೆ ಅದನ್ನುಳ್ಳವರನ್ನೇ ಕೆಲಸಕ್ಕೆ ಆರಿಸುತ್ತಾರೆ. ಕೆಲವು ವೇಳೆ ಕೆಲಸದಲ್ಲಿರುವವರಿಗೆ ಈ ವಿಷಯದಲ್ಲಿ ತರಬೇತಿ ಕೊಡುವುದೂ ಉಂಟು. ಖಾಸಗಿ ಉದ್ಯಮ ಕ್ಷೇತ್ರಗಳಲ್ಲಿ ದೊಡ್ಡ ಸಂಸ್ಥೆಗಳ ಆಡಳಿತವನ್ನು ನಿರ್ವಹಿಸುವುದು ನಿಜಕ್ಕೂ ಶ್ರಮಸಾಧ್ಯವಾದ, ಬಹು ಜವಾಬ್ದಾರಿಯ ಕೆಲಸ.

ಆಧುನಿಕ ಸರ್ಕಾರಗಳ ಪ್ರಮಾಣ ಮತ್ತು ಸಂಕೀರ್ಣತೆ ಆಡಳಿತದ ವಿಧಾನದ ಅಗತ್ಯತೆಯನ್ನು ಇನ್ನೂ ಹೆಚ್ಚಿಸಿದೆ. ನಿರ್ವಹಣೆಯ ಜವಾಬ್ದಾರಿಯನ್ನು ಕಡಿಮೆಮಾಡಿ ಕೆಲಸ ಸುಗಮವಾಗುವಂತೆ ಮಾಡಲು ಸರ್ಕಾರ ಅಧಿಕಾರದ, ಕೆಲಸದ, ಹಂಚಿಕೆಯನ್ನು ಮಾಡುತ್ತದೆ (**ನೋಡಿ– ಅಧಿಕಾರಹಂಚಿಕೆ**). ಅಲ್ಲದೆ ಅಧಿಕಾರದ ವಿವಿಧ ದರ್ಜೆಗಳನ್ನು ರೂಪಿಸುತ್ತದೆ (**ನೋಡಿ– ಅಧಿಕಾರದರ್ಜೆ**). ನ್ಯಾಯಾಂಗ ಮತ್ತು ಶಾಸಕಾಂಗಗಳು ಬೇರೆಯಾಗಬೇಕೆಂದು ಹೇಳುವುದರಲ್ಲೂ ಇದೇ ಉದ್ದೇಶವಿದೆ. ಅನಂತರ ಪ್ರತಿ ಅಧಿಕಾರಿಯ ಅಧಿಕಾರವ್ಯಾಪ್ತಿ ಖಚಿತವಾಗಬೇಕಲ್ಲದೆ ತನ್ನ ಮೇಲಿನ ಮತ್ತು ಕೆಳಗಿನ ಆಡಳಿತವರ್ಗದೊಂದಿಗಿನ ಸಮರ್ಪಕ ಸಂಪರ್ಕ ಸಂಯೋಜನೆ–ಇವು ಅಗತ್ಯ. ಇಷ್ಟಾದ ಮೇಲೆ ನ್ಯಾಯಸಂಬಂಧವಾದ ವ್ಯವಹಾರಗಳಲ್ಲಿ ಜನತೆಯ ಹಲವಾರು ಬೇಡಿಕೆಗಳನ್ನೂ ದೂರುಗಳನ್ನೂ ಪರಿಶೀಲಿಸುವಲ್ಲಿ ಕಾಯಿದೆಗಳೇ ನಿರ್ಣಾಯಕಗಳಾಗಬೇಕು. ಅಂಥವೇ ಸಮಸ್ಯೆಗಳನ್ನು ಹಿಂದಿನವರು ಹೇಗೆ ಪರಿಹರಿಸಿದ್ದಾರೆಂಬ ಅಂಶಗಳು ಮೇಲ್ಪಂಕ್ತಿಗಳಾಗಬಹುದು. ಕಾನೂನಿಗೆ ವಿರುದ್ಧವಾದ ಏನನ್ನೂ ಮಾಡಬಾರದೆಂದ ಮಾತ್ರಕ್ಕೆ ಒಂದೊಂದು ವಿಷಯವನ್ನೂ ವರ್ಷಗಟ್ಟಲೆ ಎಳೆದಾಡುವುದು ಸರಿಯಲ್ಲ. ಇದರಿಂದ ವ್ಯಕ್ತಿಗಳಿಗಲ್ಲದೆ ಸರ್ಕಾರಕ್ಕೂ ನಷ್ಟ (**ನೋಡಿ– ಅತಿನಿಯಮ–ಪದ್ಧತಿ**). ಅಧಿಕಾರ ಅಥವಾ ಅದರ ನಿರ್ವಹಣೆ ಇರುವುದು ಜನಪೀಡನೆಗಲ್ಲ. ಅವರ ಅನುಕೂಲಕ್ಕೆ ಮಾತ್ರ. ಅದು ದಾರಿಯೇ ವಿನಾ ಗುರಿಯಲ್ಲ. ತೀರ್ಮಾನ ಮಾಡುವಾಗಲೂ ಪೂರ್ವಾಗ್ರಹ, ಸ್ವಜನ ಪಕ್ಷಪಾತಗಳು ಇರಬಾರದು. ಆದ್ದರಿಂದ ಸಹಾಯಕ ಅಧಿಕಾರವರ್ಗದವರ ಎಲ್ಲ ಸಲಹೆಗಳನ್ನೂ ತೆಗೆದುಕೊಂಡು ಕೊನೆಯ ನಿರ್ಣಯವನ್ನು ಕೊಡಬೇಕಾದ ಮೇಲಧಿಕಾರಿಯ ನ್ಯಾಯಪಕ್ಷಾತೀತವಾಗಿರಬೇಕಾಗುತ್ತದೆ.

ಇನ್ನಾವ ರಾಜ್ಯಪದ್ಧತಿಯಲ್ಲೂ ಕಾಣಬರದ ಒಂದು ಅಂಶ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಇದೆ. ಉನ್ನತ ಆಡಳಿತಗಾರರಾದ ಅಧ್ಯಕ್ಷ, ಉಪಾಧ್ಯಕ್ಷ, ಮಂತ್ರಿಗಳು, ಸಂಸದೀಯ ಸದಸ್ಯರು ಕಾಲಕಾಲಕ್ಕೆ, ಪ್ರತಿ ಐದು ವರ್ಷಗಳಿಗೊಮ್ಮೆ (ಭಾರತದಲ್ಲಿ) ಬದಲಾಗುತ್ತಿರುತ್ತಾರೆ. ಆದರೆ ಆಡಳಿತವರ್ಗ, ಆಡಳಿತ ವಿಧಾನ ಶಾಶ್ವತವಾಗಿರುತ್ತದೆ. ಆದ್ದರಿಂದ ಅದನ್ನು ಸಡಿಲ ಮಾಡಲಾರದು. (ಎಂ.ಕೆ.ಆರ್.)

**ಆಡಳಿತ ನಿರ್ವಾಹಕ ಮಂಡಲಿ :** ಕಾಯಿದೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಹಲವು ವ್ಯಕ್ತಿಗಳ ಮುಖಂಡತ್ವದಲ್ಲಿ ಸರ್ಕಾರದಿಂದ ನಿಯೋಜಿತವಾದುದು (ಅಡ್ಮಿನಿಸ್ಟ್ರೇಟಿವ್ ಬೋರ್ಡ್). ಇಂಗ್ಲೆಂಡ್‍ನಲ್ಲಿ ಬಳಕೆಯಲ್ಲಿದೆ. ಉದಾ: ಸ್ಥಳೀಯ ಸರ್ಕಾರಿ ಮಂಡಲ (1871–1919). ಇಂಥ ನಿಯೋಗಗಳಿಗೆ (ಏಜನ್ಸೀಸ್) ಅಮೆರಿಕದಲ್ಲಿ ಆಡಳಿತ ನಿರ್ವಾಹಕ ಆಯೋಗ (ಕಮಿಷನ್ಸ್) ಎನ್ನುವರು. ಕಠಿಣ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿದು ಸಂಸತ್ತಿಗೆ ಸೂಚಿಸಲೋಸುಗ ಪ್ರಭಾವೀ ವ್ಯಕ್ತಿಗಳನ್ನೊಳ ಗೊಂಡ ಎಷ್ಟೋ ನಿಯೋಗಗಳನ್ನು ಇಂಗ್ಲೆಂಡ್ ಸರ್ಕಾರ ನಿಯಮಿಸಿದ್ದಾಗ್ಯೂ ಅವ್ಯಾವುದಕ್ಕೂ ಕಾರ್ಯನಿರ್ವಹಿಸುವ ಅಧಿಕಾರವಿಲ್ಲ. ಉದಾ: ಪ್ರಜಾಸೇವಾ ಆಯೋಗ ಮತ್ತು ಹಲವು ರಾಜ್ಯಾಯೋಗಗಳು. ಮಂಡಲಿಗೂ ಆಯೋಗಕ್ಕೂ ವ್ಯತ್ಯಾಸವಿಷ್ಟೆ. ಮಂಡಲಿಯಲ್ಲಿಯ ವ್ಯಕ್ತಿಗಳೆಲ್ಲರೂ ಸಮಾನಾಧಿಕಾರವುಳ್ಳವರಾಗಿರುತ್ತಾರಲ್ಲದೆ ಸರ್ಕಾರದ ಕಾರ್ಯಾಂಗದಂತೆ ಕಾರ್ಯವನ್ನು ನಿರ್ವಹಿಸುವ ಅಧಿಕಾರ ಮಂಡಲಿಗಳಿಗುಂಟು. ಆಯೋಗದಲ್ಲಿ ಒಬ್ಬನೇ ವ್ಯಕ್ತಿ ಇರಬಹುದು. (ಉದಾ: ಮಹಾಜನ್ ಆಯೋಗ) ಒಬ್ಬ ವ್ಯಕ್ತಿಯ ಮುಖಂಡತ್ವದಲ್ಲಿ ಸಹಕರಿಸುವ ಅಧಿಕಾರವಿದೆಯೇ ವಿನಾ ಕಾರ್ಯನಿರ್ವಹಿಸುವ ಅಧಿಕಾರವಿಲ್ಲ. ಕಾರ್ಯನಿರ್ವಾಹಕ ಮಂಡಲಿ ಮತ್ತು ಸರ್ಕಾರಿ ಕಾರ್ಪೊರೇಷನ್‍ಗಳಲ್ಲೂ ಭಿನ್ನತೆಯುಂಟು. ಎರಡನೆಯದು ಸ್ವಾಯತ್ತಾಧಿಕಾರವನ್ನು ಪಡೆದ ಸರ್ಕಾರದ ಪ್ರತ್ಯಕ್ಷ ಅಂಗ. ಉದಾ: ಬ್ರಿಟನ್ನಿನ ಆಕಾಶವಾಣಿ (ಬಿ.ಬಿ.ಸಿ.), ಅಮೆರಿಕದ ಟೆನೆಸ್ಸಿ ಕಣಿವೆಯ ಅಧಿಕಾರ ಮಂಡಲಿ. ಒಬ್ಬನೇ ವ್ಯಕ್ತಿ ನಿರ್ವಹಿಸುವಷ್ಟು ಚೆನ್ನಾಗಿ ಒಂದು ಮಂಡಲಿ ಕಾರ್ಯಗಳನ್ನು ನಿರ್ವಹಿಸದಿದ್ದರೂ ಪಕ್ಷಪಂಗಡಗಳ ಸಂಕುಚಿತಭಾವನೆಯನ್ನು ತೊಡೆದು ಹಾಕಿ, ವಿಶಾಲಭಾವನೆಯ ತತ್ತ್ವಗಳನ್ನು ಮುಂದುವರಿಸಬಲ್ಲದು. (ವಿ.ಎಸ್.ಪಿ.)

**ಆಡಳಿತ ಸ್ಥಾನಗಳ ಆರಕ್ಷಣ :** ಹಿಂದುಳಿದ ಜನಾಂಗಗಳ ಏಳಿಗೆಗಾಗಿ ಭಾರತ ಸರ್ಕಾರ ಕೈಗೊಂಡಿರುವ ಯೋಜನೆಗಳಲ್ಲಿ ಇದೂ ಒಂದು. ಈಚಿನ ಜನಗಣತಿಯಂತೆ ಭಾರತದಲ್ಲಿರುವ ಅನುಸೂಚಿತ ಜಾತಿಯ ಅನುಸೂಚಿತ ಪಂಗಡಗಳ ಜನಸಂಖ್ಯೆ 13.82 ಕೋಟಿ (2009). ಇವರು ಆರ್ಥಿಕವಾಗಿ, ಸಾಮಾಜಿಕವಾಗಿ ಬಹು ಹಿಂದುಳಿದ ಜನ. ವಿದ್ಯಾಭ್ಯಾಸದಲ್ಲಾಗಲಿ, ನೌಕರಿ, ಉದ್ಯೋಗಗಳನ್ನು ಪಡೆಯುವುದರಲ್ಲಾಗಲಿ ಇವರು ಇತರರಷ್ಟು ಮುಂದುವರಿದವರಲ್ಲ. ಸಾಮಾನ್ಯವಾಗಿ ಜಾಣನಿಗೆ ಮಾತ್ರ ವಿದ್ಯಾಭ್ಯಾಸದ ಅವಕಾಶವಿರಬೇಕು. ಯೋಗ್ಯತೆ ಉಳ್ಳವನಿಗೆ ಮಾತ್ರ ಉದ್ಯೋಗಾವಕಾಶಗಳಿರಬೇಕು ಎಂಬ ನಿಯಮವನ್ನು ಒಪ್ಪಬಹುದಾದರೂ ಕಾರಣಾಂತರದಿಂದ ಅಷ್ಟು ಜಾಣರಲ್ಲದ ಅನುಸೂಚಿತ ವರ್ಗದವರಿಗೂ ಶಿಕ್ಷಣಕ್ಷೇತ್ರದಲ್ಲಿ ಅವಕಾಶ ಇರಬೇಕಾದದ್ದು ಅಗತ್ಯ. ಇದಕ್ಕಾಗಿ ರಾಜ್ಯ ಸರ್ಕಾರಗಳೂ ಕೇಂದ್ರಸರ್ಕಾರವೂ ಕಾಯಿದೆ ಮಾಡಿ ಜಾಗಗಳನ್ನು ಕಾಯ್ದಿಡುತ್ತವೆ. ಹೀಗೆಯೇ

ಆಡಳಿತಸ್ಥಾನಗಳನ್ನೂ ಅನುಸೂಚಿತ ಜಾತಿಗಳಿಗಾಗಿ ಕಾಯ್ದಿಡಲಾಗಿದೆ. ಅಖಿಲಭಾರತ ಮಟ್ಟದಲ್ಲಿ ಒಟ್ಟಾರೆ ನಡೆಯುವ ಆಯ್ಕೆಯಲ್ಲಿ ಶೇ. 12 $^{1}/_{2}$ ಸ್ಥಳಗಳನ್ನು ಇತರೆಯಾಗಿ ಶೇ.16 ಸ್ಥಳಗಳನ್ನು ಅನುಸೂಚಿತ ಜಾತಿಗಳಿಗಾಗಿಯೂ, ಎರಡೂ ಕಡೆ ಶೇ.5 ಸ್ಥಳಗಳನ್ನು ಅನುಸೂಚಿತ ಪಂಗಡಗಳಿಗೂ ಕಾಯ್ದಿಡಲಾಗಿದೆ. ಇದರ ಜೊತೆಗೆ ವಯಸ್ಸು, ಯೋಗ್ಯತೆಗಳ ವಿಚಾರದಲ್ಲೂ ಈ ಜನಕ್ಕೆ ರಿಯಾಯಿತಿ ಉಂಟು. (ಕೆ.ಎಲ್.)

**ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಷನ್ಸ್ (ಎ.ಬಿ.ಸಿ.) :** ಇದು ಅಖಿಲಭಾರತ ಪತ್ರಿಕಾವೃತ್ತಿಸಂಬಂಧಿ ಸಂಸ್ಥೆಗಳಲ್ಲೊಂದು. ಎ.ಬಿ.ಸಿ. ಎಂದು ಇದರ ಸಂಕ್ಷೇಪರೂಪ. ಪತ್ರಿಕಾಪ್ರಸಾರದ ಅಧಿಕೃತ ಲೆಕ್ಕವನ್ನಿಡುವುದು, ಲೆಕ್ಕ ಪತ್ರಗಳ ಸರಿಯಾದ ತಪಾಸಣೆ ಮಾಡುವುದು, ಅಧಿಕೃತ ಅಂಕಿಅಂಶಗಳನ್ನು ನೀಡುವುದು ಈ ಸಂಸ್ಥೆಯ ಮುಖ್ಯ ಕರ್ತವ್ಯಗಳಾಗಿವೆ. ಈ ಸಂಸ್ಥೆ ಸ್ಥಾಪಿತವಾಗುವ ಮೊದಲು ಇಂಥ ಯಾವ ವಿವರಗಳನ್ನೂ ಕೊಡಲು ಸಾಧ್ಯವಾಗುತ್ತಿರಲಿಲ್ಲ. 1948ರಲ್ಲಿ ಈ ಸಂಸ್ಥೆ ಸ್ಥಾಪಿತವಾದ ಮೇಲೆ ತನ್ನ ಸದಸ್ಯ ಪತ್ರಿಕೆಗಳ ಪ್ರಸಾರ, ಆದಾಯ ಮೊದಲಾದ ವಿವರಗಳನ್ನು ಸಂಗ್ರಹಿಸಲು ಪ್ರಾರಂಭಿಸಿತು. ಈ ಸಂಸ್ಥೆಗೆ ಲಾಭದ ದೃಷ್ಟಿಯಿಲ್ಲ, ಪ್ರಪಂಚದಲ್ಲೆಲ್ಲ ಅಧಿಕೃತ ದಾಖಲೆ ಎಂದು ಸ್ವೀಕರಿಸಲಾಗುವುದು.

ಈ ಸಂಸ್ಥೆಯ ನೀತಿಯನ್ನು ರೂಪಿಸುವ, ವ್ಯವಹಾರಗಳನ್ನು ನಿರ್ವಹಿಸುವ ಕಾರ್ಯಭಾರ ಆಡಳಿತ ಮಂಡಳಿಯ ಪ್ರತಿನಿಧಿಗಳನ್ನು ಜಾಹೀರಾತುದಾರರು, ಪ್ರಕಾಶಕರು, ಜಾಹಿರಾತು ವಿಭಾಗಗಳಿಂದ ಪ್ರತಿ ವರ್ಷವೂ ಚುನಾಯಿಸುತ್ತಾರೆ. ಮಂಡಳಿಯಿಂದ ನೇಮಿತವಾದ ಕಾರ್ಯಕಾರಿ ಸಮಿತಿ ದೈನಂದಿನ ಕೆಲಸವನ್ನು ನಿರ್ವಹಿಸುತ್ತದೆ. ಈ ಆಡಳಿತಮಂಡಳಿ ವರ್ಷಕ್ಕೆ ನಾಲ್ಕು ಬಾರಿ, ಕಾರ್ಯಕಾರಿಸಮಿತಿ ಕನಿಷ್ಠಪಕ್ಷ ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ನೀತಿ ನಿಯಮಗಳಿಗನುಸಾರವಾಗಿ ತನ್ನ ಲೆಕ್ಕಪತ್ರಶೋಧಕನಿಂದ ಸಂಸ್ಥೆ ವಿಧಿಸಿದ ನಿಯಮಾನುಸಾರವಾಗಿ ಪ್ರಸಾರದ ಸಂಪೂರ್ಣ ತನಿಖೆಯನ್ನು ಅರ್ಧವರ್ಷಕ್ಕೊಮ್ಮೆ ಜಾರಿಗೆ ತರಬೇಕು. ಈ ಶೋಧನೆಯಿಂದ ಬಂದ ಅಂಕಿಅಂಶಗಳ ಫಲಿತಾಂಶವನ್ನು ಪ್ರಕಾಶಕರ, ಶೋಧಕರ ಹಸ್ತಾಕ್ಷರದೊಂದಿಗೆ ಸಂಪಾದನ ಅರ್ಹತಾಪತ್ರ ಎಂಬುದಾಗಿ ಸಂಸ್ಥೆಗೆ ಒಪ್ಪಿಸಬೇಕು. ಇದನ್ನು ಕಾರ್ಯಕಾರಿ ಸಮಿತಿ ಪರಿಶೀಲಿಸಿ ಪರಿಗಣಿಸಿದಾಗ ಒಟ್ಟು ಪ್ರಸಾರವನ್ನು ಕುರಿತು ಎ.ಬಿ.ಸಿ. ಪ್ರಮಾಣಪತ್ರ ನೀಡುತ್ತದೆ.

ಒಟ್ಟು ಪ್ರಸಾರದಲ್ಲಿರುವ ಪತ್ರಿಕಾಪ್ರತಿಗಳೆಂದರೆ ನಿಜವಾಗಿಯೂ ಮಾರಾಟ ಮಾಡಿದ ಪ್ರತಿಗಳೆಂದು ಅರ್ಥ. ಎ.ಬಿ.ಸಿ. ತನ್ನ ಶೋಧಕಮಂಡಳಿಯಿಂದ ಯಾವಾಗ ಬೇಕಾದರೂ ತನ್ನ ಸದಸ್ಯರ ಲೆಕ್ಕಪತ್ರವನ್ನು ಶೋಧಿಸುವ ಅಧಿಕಾರ ಹೊಂದಿದೆ. ಎ.ಬಿ.ಸಿ.ಯಿಂದ ಪ್ರಕಾಶಕನಿಗೂ ಜಾಹಿರಾತುದಾರನಿಗೂ ಲಾಭವಿದೆ. ಜಾಹಿರಾತುದಾರನಿಗೆ ಸಂಸ್ಥೆ ಕೊಡುವ ಪ್ರಮಾಣಪತ್ರವೇ ಖಚಿತ ಆಧಾರ. ಇದನ್ನು ಅವಲಂಬಿಸಿಯೇ ಅವನು–ಅಧಿಕ ಪ್ರಸಾರದ ಪತ್ರಿಕೆಗಳನ್ನು ಗುರುತಿಸಿ ಅವಕ್ಕೆ ಮಾತ್ರ ತನ್ನ ಜಾಹೀರಾತುಗಳನ್ನು ಕೊಡುತ್ತಾನೆ.

ಸ್ಥಾಪಿತವಾದಂದಿನಿಂದ ಸಂಸ್ಥೆ ಸಾಕಷ್ಟು ಪ್ರಗತಿ ಸಾಧಿಸಿದೆ. ಇದು ರಾಷ್ಟ್ರೀಯ ಹಾಗೂ ಪ್ರಾಂತೀಯ ಮಹತ್ವವನ್ನುಳ್ಳ ಸುಮಾರು 250 ಸದಸ್ಯರನ್ನು ಹೊಂದಿದೆ. 80 ಪ್ರಮುಖ ಜಾಹೀರಾತುದಾರರೂ ನಿಯತಕಾಲಿಕ ಪತ್ರಿಕೆಗಳೂ ವಿಭಾಗಗಳೂ ಬಹುಶಃ ಪ್ರಮುಖ ದೈನಂದಿನ ಪತ್ರಿಕೆಗಳೂ ವಾರಪತ್ರಿಕೆಗಳೂ ಇದರ ಸದಸ್ಯತ್ವ ಪಡೆದಿವೆ. ಅಲ್ಲದೆ, ಅನೇಕ ಜಿಲ್ಲೆಗಳ 40ಕ್ಕೂ ಹೆಚ್ಚು ನಗರಗಳಲ್ಲಿರುವ ಇಂಗ್ಲಿಷ್ ಪತ್ರಿಕೆಗಳನ್ನೊಳಗೊಂಡ 14 ಭಾಷಾ ಪತ್ರಿಕೆಗಳೂ ಎ.ಬಿ.ಸಿ.ಯ ಸಾಮರ್ಥ್ಯವನ್ನು ಹೆಚ್ಚಿಸಿವೆ. ಶ್ರೀಲಂಕ, ಪಾಕಿಸ್ತಾನಗಳಲ್ಲಿ ಕೂಡ ಇದರ ಸದಸ್ಯ ಪತ್ರಿಕೆಗಳಿವೆ. *

**ಆ್ಯಡಿಸ್ ಆ್ಯಬಬ :** ಇಥಿಯೋಪಿಯದ ರಾಜಧಾನಿ. ಈ ಹೆಸರಿಗೆ ಹೊಸ ಹೂ ಎಂಬ ಅರ್ಥ ಇದೆ. ಮಧ್ಯ ಇಥಿಯೋಪಿಯದ ಎನ್‍ಲೊಟೊ ಪರ್ವತಶ್ರೇಣಿಯ (244 ಮೀ. ಎತ್ತರ) ಇಳಿಜಾರಿನಲ್ಲಿದೆ (ಉ.ಅ.$9^{0}$1’, ಪೂ.ರೇ.$38^{0}$56’). ಹಿತಕರವಾಯುಗುಣ. ಹಗಲು ಬಿಸಿಲು ತಾಪವಿದ್ದರೂ ರಾತ್ರಿ ತಂಪಾಗಿರುತ್ತದೆ. ಜುಲೈನಿಂದ ಸೆಪ್ಟಂಬರ್ ಅವಧಿ ಮಳೆಗಾಲ, ವಾರ್ಷಿಕ ಸರಾಸರಿ ಮಳೆ 120 ಸೆಂಮೀ. ಸ್ಥಾಪನೆ 1887 ರಲ್ಲಿ, ಚಕ್ರವರ್ತಿ ಎರಡನೆಯ ಮೆನಲಿಕ್‍ನಿಂದ. 2 ವರ್ಷಗಳ ಅನಂತರ ರಾಜಧಾನಿಯಾಯಿತು. ಚಕ್ರವರ್ತಿ ನೆಡಿಸಿದ 2,000 ನೀಲಗಿರಿ ವೃಕ್ಷಗಳು ಇಂದಿಗೂ ಇವೆ. ಜನಸಂಖ್ಯೆ 2200183 (2002). ಬಹುಜನರ ಭಾಷೆ ಇಂಗ್ಲಿಷ್. ಇಟಲಿ ಸೈನ್ಯ 1936 ರಲ್ಲಿ ಈ ಪಟ್ಟಣವನ್ನು ವಶಪಡಿಸಿಕೊಂಡಿತು. 1941ರಲ್ಲಿ ಬ್ರಿಟಿಷ್ ಮತ್ತು ಇಥಿಯೋಪಿಯ ಪಡೆಗಳು ವಾಪಸ್ಸು ಪಡೆದುವು. ಇಲ್ಲಿಂದ ಜಿಬೂತಿಗೆ ರೈಲು ಸಂಪರ್ಕವಿದೆ. 19 ಕಿಮೀ. ದೂರದ ಅತೇಕಿ ಸರೋವರದಿಂದ ವಿದ್ಯುತ್‍ಶಕ್ತಿ ಸರಬರಾಜಾಗುತ್ತದೆ. ಕಾಫಿ, ತಂಬಾಕು, ಚರ್ಮ, ಮುಂತಾದುವು ರಫ್ತಾಗುತ್ತವೆ. ಅನೇಕ ಲಘು ಉದ್ದಿಮೆಗಳೂ ಕೈಗಾರಿಕೆಗಳೂ ಇವೆ. ವೈಭವ ಹಾಗೂ ಬೃಹತ್ತಾದ ಎರಡು ಅರಮನೆಗಳಿವೆ. ಜೊತೆಗೆ ರಾಷ್ಟ್ರೀಯ ಗ್ರಂಥಾಲಯ, ಸಂಗ್ರಹಾಲಯ ಕಟ್ಟಡಗಳು ಮತ್ತು ವಿಶ್ವವಿದ್ಯಾನಿಲಯ ಕಟ್ಟಡಗಳಿವೆ. (ಎನ್.ಸಿ.ವಿ.)

**ಆಡು :** ದನ ಕುರಿಗಳ ಹಾಗೆ ಟೊಳ್ಳು ಕೊಂಬಿನ ಸೀಳುಗೊರಸಿನ, ಮೆಲಕು ಹಾಕುವ, ದನದ ಕುಟುಂಬಕ್ಕೆ (ಬೋವಿಡೀ) ಸೇರಿದ ಸ್ತನಿ. ಕ್ಯಾಪ್ರ ಹಿರ್ಕಸ್ ವೈಜ್ಞಾನಿಕನಾಮ. ಇಬೆಕ್ಸ್, ಮಾರ್ಕ್‍ಹಾರ್, ಟಾರ್, ರಾಕಿ ಪರ್ವತದ ಆಡು, ಕಾಡು ಆಡುಗಳೂ ಇದೇ ಜಾತಿಯವು. ಆಡು ಕುರಿಯ ಹತ್ತಿರ ಸಂಬಂಧಿ. ಇವೆರಡಕ್ಕೂ ತೀರ ಹತ್ತಿರದ ಹೋಲಿಕೆಗಳೂ ಕೆಲವು ವ್ಯತ್ಯಾಸಗಳೂ ಇವೆ. ಬಳಕೆಯಲ್ಲಿ ಹೆಣ್ಣು ಆಡನ್ನು ಮೇಕೆಯೆಂದೂ, ಗಂಡನ್ನು ಹೋತವೆಂದೂ ಹೇಳುವುದುಂಟು. ಆಡುಗಳಿಗೆ ಗದ್ದದ ಕೆಳಗಡೆ ಉದ್ದನೆಯ ದಾಡಿ ಇರುತ್ತದೆ: ಹೋತದಲ್ಲಿ ಇದು ಎದ್ದು ಕಾಣುತ್ತದೆ. ಹೋತದಲ್ಲಿ ಅದರಲ್ಲೂ ಬೆದೆ ಹತ್ತುವ ಕಾಲದಲ್ಲಿ ತಡೆಯಲಾಗದ ಹೊಲಸು ನಾತ ಬಡಿಯುವುದು. ಆಡಿನ ಹಣೆ ಉಬ್ಬಿದ್ದರೆ, ಕುರಿಯದು ತಗ್ಗು. ಆಡಿನ ಮೋಟು ಬಾಲ ಎತ್ತಿಕೊಂಡಿರುತ್ತದೆ; ಕುರಿಯದು ಇಳಿಬಿದ್ದಿರುವುದು. ಕುರಿಗಿಂತ ಮೇಕೆ ಚುರುಕು. ತನ್ನ ಮೇವನ್ನು ಆಡು ಚಟುವಟಿಕೆಯಿಂದ ಹುಡುಕಿ ತಿನ್ನುತ್ತದೆ. ಕುರಿ ಹಿಂಡನ್ನು ನಡೆಸಿಕೊಂಡು ಅವು ಒಂದೆಡೆಯಿಂದ ಇನ್ನೊಂದಕ್ಕೆ ಹೋಗುತ್ತಿರುವಂತೆ ಮೇವು ತಿನ್ನುವಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತದೆ. ಕುರಿಯಂತೆ ಮೇಕೆ ಬಿಸಿಲಿಗೆ ಬಳಲುವುದಿಲ್ಲ. ಮೇಕೆ ಇಲ್ಲದಿದ್ದರೆ ಕುರಿ ಹಿಂಡುಗಳನ್ನು ನಡೆಸುವುದು ಕಷ್ಟ. ಇದರಿಂದಲೇ ಕುರಿಗಳ ಮಂದೆಯಲ್ಲಿ ಮೇಕೆ ಇದ್ದೇ ಇರುತ್ತದೆ.

ಆಡುಗಳ ತೌರುಮನೆ ನೈರುತ್ಯ ಏಷ್ಯ. ಇವು ಬಹುವಾಗಿ ಮೂಡಲ ದೇಶಗಳವು. ಪರ್ಷಿಯ ಮೂಲನಿವಾಸ ಆಗಿದ್ದಿರಬಹುದೆಂದು ಪುರಾತನ ದಾಖಲೆಗಳಿವೆ. 8–9 ಸಾವಿರ ವರುಷಗಳ ಹಿಂದೆ ಮಾನವ ಮೊದಲು ಆಡುಗಳನ್ನು ಪಳಗಿಸಿ ತನ್ನ ದಿನಜೀವನದಲ್ಲಿ ಬಳಕೆಗೆ ತಂದಿರಬಹುದು. ಹೀಗೆ ಪಳಗಿಸಿದ ಜಾತಿಗಳಿಂದ ಆಡಿನ ಇಂದಿನ ಅನೇಕ ತಳಿಗಳಾಗಿವೆ. ಕಾಡು ಆಡುಗಳು ಸ್ಪೇನ್ ದೇಶದಿಂದ ಹಿಡಿದು ಮೂಡಲದಲ್ಲಿ ಭಾರತದವರೆಗೆ, ಉತ್ತರದಲ್ಲಿ ಮಂಗೋಲಿಯ, ಸೈಬೀರಿಯ ದೇಶಗಳಲ್ಲಿ ಹರಡಿವೆ. ಮಾರ್ಕ್‍ಹಾರ್ ಕಾಡು ಆಡುಗಳು ಆಫ್ಘಾನಿಸ್ತಾನ, ಪಾಕಿಸ್ತಾನ, ಕಾಶ್ಮೀರ, ಪಡುವಣ ಹಿಮಾಲಯ ಪರ್ವತಶ್ರೇಣಿಗಳಲ್ಲಿ ವಾಸಿಸುತ್ತವೆ. ಈಜಿಪ್ಟ್, ಇಥಿಯೋಪಿಯ, ಅರೇಬಿಯ, ಗ್ರೀಕ್ ದ್ವೀಪಗಳಲ್ಲೂ ಆಡುಗಳು ವನ್ಯ ಜೀವಿಗಳು.

ಸಾಮಾನ್ಯವಾಗಿ ಆಡುಗಳು ಹಳ್ಳತಗ್ಗಿನ ಕಾಡುಗಳ ಪರ್ವತ ಶ್ರೇಣಿಗಳಲ್ಲಿ ವಾಸಿಸುತ್ತವೆ. ಹಳ್ಳತಿಟ್ಟುಗಳು ಇವುಗಳಿಗೆ ಇಷ್ಟ. ಕಡಿದಾದ ಜಾಗ ಇವಕ್ಕೆ ಎಲ್ಲಿಲ್ಲದ ಚುರುಕೂ, ಜಾಣ್ಮೆ ಹುಟ್ಟಿಸುತ್ತದೆ. ಕೆಲವು ಆಡುಗಳು ಕುರುಚಲು ಗಿಡಗಳ ಮೈದಾನ, ತಗ್ಗುಗಳಲ್ಲೂ ಇರುತ್ತವೆ. 5–10 ಆಡುಗಳು ಮಂದೆಯಲ್ಲಿ ಓಡಾಡುತ್ತವೆ. ವಯಸ್ಸಾದ ಮೇಕೆಯೇ ಮಂದೆಯ ಮುಂದಾಳು. ಆಡು ಮುಟ್ಟದ ಸೊಪ್ಪಿಲ್ಲ. ಆಡು ಹೋದ ಕಾಡು ಹಾಳು ಎಂಬ ನಾಣ್ಣುಡಿ ಇದೆ. ಕುರಿಗಳಿಗೆ ಹುಲ್ಲುಗಾವಲುಗಳಲ್ಲಿ ಇರುವುದು ಇಷ್ಟವಾದರೆ, ಆಡುಗಳಿಗೆ ಕುರುಚಲು ಗಿಡಗಳು ಇರುವೆಡೆಗಳಲ್ಲಿ ಗಿಡದಿಂದ ಗಿಡಕ್ಕೆ ಸಾಗುತ್ತ, ಎಳೆಯ ಕುಡಿಗಳನ್ನು ಕುರುಕಿ, ಮರದ ತೊಗಟೆ ಸುಲಿದು ಹಾಳು ಕೆಡವುತ್ತ, ಮೇಯುವುದೆಂದರೆ ಆಡಿಗೆ ಬಲು ಇಷ್ಟ. ಹೀಗೆ ಬೇಸಾಯಗಾರನ ತೋಟಗಾರನ ಶತ್ರು ಆಗಿದ್ದುದರಿಂದಲೇ ಪಾಕಿಸ್ತಾನದಲ್ಲಿ ಆಡುಗಳನ್ನೇ ಒಂದು ರೀತಿಯಲ್ಲಿ ಹೆಸರಿಲ್ಲದಂತೆ ಮಾಡುವ ಯೋಜನೆ ಉಂಟಾಗಿದೆ.

ದನದ ಬಳಗಕ್ಕೆ ಸೇರಿದ ಇತರ ಪ್ರಾಣಿಗಳಂತೆ, ಆಡುಗಳಲ್ಲೂ ಮೇಲ್ದವಡೆಯ ಮುಂದುಗಡೆ ಹಲ್ಲುಗಳಿಲ್ಲ. ಹಲ್ಲುಗಳ ಅಂಕಿ, ಜೋಡಣೆ ಮಾತ್ರ ದನಗಳಲ್ಲಿ ಇದ್ದಂತಿರುವುವು. ಜಠರದಲ್ಲಿ ನಾಲ್ಕು ಚೀಲಗಳಿವೆ. ಮುಂಗಾಲು ಹಿಂಗಾಲುಗಳು ಒಂದೇ ಉದ್ದವಿಲ್ಲ. ಆಡುಗಳು 1.3–1.4 ಮೀ ಉದ್ದವಾಗೂ 0.75–1.0 ಮೀ ಎತ್ತರವಾಗೂ ಬೆಳೆಯಬಹುದು. ಸಾಮಾನ್ಯವಾಗಿ ಮೇಕೆ 50–55 ಕಿಗ್ರಾಂ ಹೋತ 75–120 ಕಿಗ್ರಾಂ ತೂಗುತ್ತದೆ. ಒಂದು ಕೊಂಬು ಸುರುಳಿ ಸುತ್ತಿರುವುದು ಸಾಮಾನ್ಯ. ಕೆಲವು ಆಡುಗಳಲ್ಲಿ ಒಂದು ಕೊಂಬು ಮೀ ಉದ್ದ ಇರುತ್ತದೆ. ಆಡುಗಳು 8–12 ವರ್ಷ ಬದುಕಿರುತ್ತದೆ. 18 ವರ್ಷ ಜೀವಿಸಿದ್ದೂ ಉಂಟು.

ಗರ್ಭಕ್ಕಾಗಿ ಮೈಕಟ್ಟು ಚೆನ್ನಾಗಿ ಬೆಳೆಯಬೇಕಾದ್ದರಿಂದ, ಮೇಕೆಗೆ 15 ಮಾಸಗಳು ಕಳೆದ ಮೇಲೆ ಹೋತ ಕೊಡಿಸಬೇಕು. ಹೋತಕ್ಕೆ ವರ್ಷ ಕಳೆವ ತನಕ ಅಷ್ಟಾಗಿ ಇದಕ್ಕಾಗಿ ಬಳಸಬಾರದು. ಮರಿ ಹಾಕಿದ ಮೇಲೆ ಮೇಕೆ ಯಾವಾಗಲಾದರೂ ಬೆದೆಗೆ ಬರಬಹುದು. ಮಾಗಿಕಾಲದಲ್ಲಿ ಬೆದೆ 3 ದಿನಗಳೂ, ವಸಂತದಲ್ಲಿ 2 ದಿನಗಳೂ ಉಳಿದ ಕಾಲದಲ್ಲಿ ಒಂದು ದಿನವೂ ಇರುತ್ತದೆ. ಬೆದೆಗೆ ಬಂದಾಗ ವಿಪರೀತ ಚಡಪಡಿಸುತ್ತ ಜೋರಾಗಿ ಬಾಲ ಅಲುಗಾಡಿಸುತ್ತ ಒಂದೇ ಸಮನೆ ಅರಚುತ್ತಿರುತ್ತದೆ. ಕರಾವು ಸರ್ರನೆ ಇಳಿಯುತ್ತದೆ. ಹಸಿವುಗೆಟ್ಟು ಮೇವು ಮುಟ್ಟದಿರುವುದು. ಗರ್ಭಕಟ್ಟಿದ 147–154 ದಿನಗಳಾದ ಮೇಲೆ ಮರಿ ಹಾಕುತ್ತದೆ. ಒಂದು ಸಲಕ್ಕೆ ಅವಳಿ ಮರಿಗಳನ್ನು ಈಯುವುದೇ ಸಾಮಾನ್ಯ. ಗಂಡು ಮರಿ 8–12 ತಿಂಗಳುಗಳಲ್ಲಿ ಹರೆಯಕ್ಕೆ ಬರುತ್ತದೆ.

ಪಳಗಿಸಿದ ಆಡುಗಳು ಪ್ರಪಂಚದಲ್ಲಿ ಎಲ್ಲೆಲ್ಲೂ ಹರಡಿವೆ. ಉಳಿದೆಲ್ಲ ಪ್ರಾಣಿಗಳು ಬದುಕಲಾರದ ಎಡೆಗಳಲ್ಲೂ ಆಡನ್ನು ಚೆನ್ನಾಗಿ ಸಾಕಬಹುದು. ಮುಖ್ಯವಾಗಿ ಹಾಲು, ಮಾಂಸ, ಕೂದಲು, ತೊಗಲು, ಗೊಬ್ಬರಗಳಿಗಾಗಿ ಇವನ್ನು ಸಾಕುವರು. ಹಾಲು ಕರೆವ

ಮೇಕೆ ಬಡವನ ಆಕಳು. ಆಕಳನ್ನು ಸಾಕುವುದಕ್ಕಿಂತ ಆಡನ್ನು ಸಾಕುವುದು ಸುಲಭ. ಒಂದು ಸಂಸಾರಕ್ಕೆ ಸಾಕಾಗುವಷ್ಟು ಹಾಲನ್ನು ಒಂದೆರಡು ಮೇಕೆಗಳು ಒದಗಿಸಬಲ್ಲವು. ಆಡಿನ ಹಾಲಿನಿಂದ ಗಟ್ಟಿ ಗಿಣ್ಣು (ಚೀಸ್) ತಯಾರಾಗುತ್ತದೆ. ಅಲ್ಲದೆ, ಬೆಚ್ಚನೆಯ ತುಪ್ಪಟ ಒದಗಿಸಿ, ಗೊಬ್ಬರ ಕೊಟ್ಟು, ಆಮೇಲೆ ಪುಷ್ಟಿಕರ ಮಾಂಸಾಹಾರವಾಗಿ ಕೊನೆಗೆ ನುಣುಪಾದ ತೊಗಲನ್ನು ಕೊಡುವುದರಿಂದ, ಆಡು ಆರ್ಥಿಕವಾಗಿಯೂ ಮಾನವನಿಗೆ ಲಾಭದಾಯಕ. ಠೀವಿಯಿಂದ ಗಂಭೀರವಾಗಿ, ಹೊಸಬರಿಗೂ ಅಂಜದೆ ನಿಟ್ಟಿಸುತ್ತ, ಹೆಜ್ಜೆ ಹಾಕುವ ಹೋತಕ್ಕೆ ಹೋಲಿಸಿ, ಗಂಭೀರವಾಗಿ ಠೀವಿಯಾಗಿ ಇರುವವನಿಗೆ ಈಗಲೂ ಅರಬ್ಬರ ಹೋತನೆಂದು ಕರೆಯುವುದು ರೂಢಿ.

ಹಸುವಿನ ಹಾಲಿಗಿಂತಲೂ ಮೇಕೆ ಹಾಲು ಪುಷ್ಟಿಕರ. ಆಕಳ ಹಾಲನ್ನು ಕುಡಿದ ಮೇಲೆ ಹೊಟ್ಟೆಯಲ್ಲಿ ದಪ್ಪನಾಗಿ ಹೆಪ್ಪುಗಟ್ಟಿ ಕರಗದ ಹಾಲೊಡಕಗಳಾಗುತ್ತದೆ; ಆದರೆ ಆಡಿನ ಹಾಲು ಕತ್ತೆಯ ಹಾಲಿನಂತೆ ತೀರಸಣ್ಣ, ಕರಗುವ ತೆಳುವಾದ ಚಕ್ಕೆಗಳಾಗುತ್ತದೆ. ಹಸುವಿನ ಹಾಲನ್ನು ಅರಗಿಸಿಕೊಳ್ಳಲು 2 ದಿನಗಳು ಹಿಡಿದರೆ, ಮೇಕೆ ಹಾಲು ಒಂದೇ ದಿನದಲ್ಲಿ ಅರಗುವುದು. ಆಡಿನ ಹಾಲಿನ ರಚನೆ, ಅರಗಣೆ ಹೆಂಗಸರ ಹಾಲಿನಂತೆ ಇರುತ್ತವೆ. ಇದರಿಂದಲೇ ಕೂಸಿಗೆ ತಾಯಿ ಹಾಲು ಇಲ್ಲದಾಗ ಆಕಳ ಹಾಲಿಗಿಂತ ಮೇಕೆ ಹಾಲು ಒಳ್ಳೆಯದು. ಇದಕ್ಕಾಗಿ ಯುರೋಪಿನಲ್ಲಿ ಆಡನ್ನು ಹಾಲೂಡಿಸುವ ದಾದಿ ಎನ್ನುವರು. ಹಸುವಿನ ಹಾಲು ಒಗ್ಗದವರಿಗೆ ಇದು ಸರಿಬೀಳಬಹುದು. ಆಕಳ ಹಾಲಿಗಿಂತಲೂ (ಶೇ.3.15) ಆಡಿನ ಹಾಲಿನಲ್ಲಿ (ಶೇ.3.5–5.14) ಕೊಬ್ಬು ಹೆಚ್ಚು. ಆಕಳಿಗೆ ಕ್ಷಯವಿದ್ದರೆ ಅದರ ಹಾಲಿನ ಮೂಲಕ ಜನರಿಗೆ ಹತ್ತಬಹುದು. ಆಡಿಗೆ ಕ್ಷಯ ಹತ್ತದು. ಆಕಳ ಹಾಲು ಆಮ್ಲವಾಗಿದ್ದರೆ, ಆಡಿನದು ಕ್ಷಾರವಾಗಿರುವುದು. ಆಕಳ ಹಾಲಿಗಾಗಿ ಸಾಕಣೆಯ ಖರ್ಚು ದುಬಾರಿ. ಆಡಿನದು ತೀರ ಅಗ್ಗ, ಸುಲಭ. ಬಡವರೂ ಸಾಕುವ ಪ್ರಾಣಿ ಆಡು. ಮೇಕೆಯ ಹಾಲು ಮಹಾತ್ಮ ಗಾಂಧೀಜಿಯವರ ದಿನಬಳಕೆಯ ಅಚ್ಚುಮೆಚ್ಚಿನ ಆಹಾರವಾಗಿತ್ತು. ಅರಬ್ಬೀ ಜನರಿಗೆ ಮೇಕೆಯ ಹಾಲನ್ನು ಬಿಟ್ಟರೆ ಬೇರೆ ಹಾಲೇ ಸಿಗುವುದಿಲ್ಲ. ಅವರ ಒಂದೊಂದು ಸಂಸಾರವೂ ಆಡಿನ ಮಂದೆಯನ್ನು ಸಾಕಿರುತ್ತದೆ. ಭಾರತ, ಚೀನ, ಪಾಕಿಸ್ತಾನ, ಟಿಬೆಟ್, ಯುರೋಪು, ಬ್ರಿಟಿಷ್ ದ್ವೀಪಗಳು, ಅಮೆರಿಕ, ಕೆನಡ ದೇಶಗಳಲ್ಲೂ ಕರಾವಿನ ಆಡುಗಳನ್ನು ಸಾಕುತ್ತಾರೆ.

**ಆಡಿನ ಬಗೆಗಳು :** ನಾಲ್ಕು ಬಗೆಗಳನ್ನು ಗುರುತಿಸಬಹುದು. 1.ನಿಗುರಿದ ಮೋಟು ಕಿವಿಗಳ, ಕೊಂಬಿರದ, ಮಾಂಸದ ತಳಿಯಾದ ಸಾಮಾನ್ಯ ಆಡು. 2. ಉದ್ದವಾಗಿ ಅಗಲಕ್ಕೆ ಜೋಲುಬಿದ್ದ ಕಿವಿಗಳ, ಕರಾವಿನ, ಸಿರಿಯದ, ನುಬಿಯನ್ ಇಲ್ಲವೇ ಈಜಿಪ್ಪಿನ ಆಡು. 3. ಜೋಲು ಕಿವಿಗಳ, ಗುಂಗುರುಗೂದಲ ತುಪ್ಪಳಿನ, ಕುರಿ ಮೊಗದ ಟಿಬೆಟಿನ ಅಂಗೋರ ಆಡು. 4. ಅರೆಬರೆ ಜೋಲುಬಿದ್ದ ಕಿವಿಗಳ, ಮೋಟು ತುಪ್ಪುಳುಗೂದಲ, ಹಿಮಾಲಯ ಪರ್ವತಗಳ ಕಾಶ್ಮೀರಿ ಆಡು.

**ಕರಾವಿನ ಆಡುಗಳು :** ಇವುಗಳ ಲಕ್ಷಣಗಳಿವು: ಅಚ್ಚುಕಟ್ಟಾದ ಉದ್ದನೆಯ ತಲೆಯಲ್ಲಿ ಅಗಲದ ಹಣೆಯಂತೆ ಬರಬರುತ್ತ ಚೂಪಾಗುವ ಮುಸುಡಿ; ತೆಳುವಾಗಿ ಮೋಟಾದ ಚೂಪು ಕೊಂಬುಗಳು; ಹೊಳೆವ ದೊಡ್ಡ ಕಣ್ಣುಗಳು; ಉದ್ದನೆಯ ದಪ್ಪಮೈಕಟ್ಟು; ಚಿಕ್ಕ ಎದೆ; ಚಾಚಿದ ರೊಂಡಿ ಮೂಳೆಗಳು; ಸಡಿಲವಾದ ಮೆದು ಚರ್ಮ; ನುಣುಪಾದ ತೆಳುಗೂದಲು; ದೂರದೂರವಿದ್ದು ಮುಂಬಾಗಿದ ಮೊಲೆ ತೊಟ್ಟುಗಳಿರುವ, ಮುಟ್ಟಲು ಸ್ಪಂಜಿನಂತೆ ಮೆದುವಾದ, ದೊಡ್ಡ ದುಂಡಾದ ಕೆಚ್ಚಲು.

ಕರಾವಿನ ಆಡುಗಳಲ್ಲಿ ಬಗೆಬಗೆಯ ತಳಿಗಳಿವೆ. ಸ್ವಿಸ್ (ಆಲ್ಪೈನ್), ನುಬಿಯನ್ ಆಡುಗಳು ಮುಖ್ಯವಾದವು. ಸ್ವಿಸ್ ಆಡಿಗೆ ಮೊನಚಾದ, ನೇರವಾದ ಕಿವಿಗಳಿರುತ್ತವೆ. ಇಂದಿಗೂ ಹೆಸರಾದ ಹೊಸ ತಳಿಗಳು ಸ್ವಿಸ್ ತಳಿಯಿಂದ ಮೂಡಿವೆ; ಇವುಗಳಲ್ಲಿ ಟಾಗೆನ್‌ಬರ್ಗ್, ಸಾನೆನ್ (ಕಣಿವೆಯ) ತಳಿಗಳು ಹೆಸರಾಗಿವೆ. ಇಂಗ್ಲೆಂಡಿನಲ್ಲಿ ಒಂದು ಸಾನೆನ್ ಆಡು ವರ್ಷಕ್ಕೆ 6400 ಪೌಂಡು ಹಾಲು ಕರೆದ ದಾಖಲೆಯಿದೆ. ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಜನಪ್ರಿಯವಾದ ಟಾಗೆನ್‌ಬರ್ಗ್ ಬಣ್ಣ ಕಪ್ಪು. ಸಾನೆನ್ ಆಡಿನ ಬಣ್ಣ ಬಿಳಿ ಇಲ್ಲವೇ ಹಾಲಿನ ಕೆನೆಯ ಹಳದಿ ಬಿಳುಪು. ಮಾಲ್ಟಾದ ಆಡುಗಳಲ್ಲಿ ಮೂಡಣ ನಾಡುಗಳ ರಕ್ತವಿದೆ. ನುಬಿಯನ್ ಆಡು ಉತ್ತರ ಆಫ್ರಿಕಕ್ಕೆ, ಮುಖ್ಯವಾಗಿ ಈಜಿಪ್ಟಿಗೆ ಸೇರಿದ್ದು. ಎಲ್ಲ ಆಡುಗಳಿಗಿಂತಲೂ ಗಾತ್ರದಲ್ಲಿ ಇದೇ ಭಾರಿ. ಬೆಣ್ಣೆಗಾಗಿನ ಕರಾವಿನಲ್ಲಿ ನುಬಿಯನ್ ತಳಿಯ ಆಡನ್ನು ಮೀರಿಸಿದ್ದು ಇನ್ನೊಂದಿಲ್ಲ. ಇಂಗ್ಲೆಂಡಿನಲ್ಲಿ ಒಂದು ವರ್ಷದಲ್ಲಿ ಇಂಥದೊಂದು 4250 ಪೌಂಡು ಹಾಲು ಕರೆದಿದೆ. ಬೆಣ್ಣೆ ಕೂಡ ಹೆಚ್ಚಾಗಿರುವುದು. ನೀಳವಾಗಿ ಅಗಲವಾಗಿ ಜೋಲು ಬೀಳುವ ಕಿವಿಗಳು ಇದರ ಲಕ್ಷಣ. ಇಸ್ರೇಲ್, ಸಿರಿಯಗಳ ಆಡುಗಳಿಗೆ ದೊಡ್ಡ ಜೋಲು ಕಿವಿಗಳೂ, ಕೂದಲೂ ಇರುತ್ತವೆ. ಇವು ಕಪ್ಪಾಗಿರುವುದೇ ಸಾಮಾನ್ಯ. ನುಬಿಯನ್ ಮತ್ತಿತರ ಜೋಲು ಕಿವಿಗಳ ತಳಿಗಳು ಇಂಗ್ಲೆಂಡಿಗೆ 1850ರಿಂದೀಚೆಗೆ ಬೇರೆ ಬೇರೆ ದಾರಿಗಳಿಂದ ಸಾಗಿಹೋದವು. ಪರ್ಷಿಯದವು, ಭಾರತದವು, ಸಿರಿಯಾದವು ಎಂಬ ಈ ಆಡುಗಳು ಇಂಗ್ಲೆಂಡಿನಲ್ಲಿ ದಾಖಲೆಯಾಗಿರುವ ಆಂಗ್ಲೋ ನುಬಿಯನ್ ಹೊಸ ತಳಿಯ ಹುಟ್ಟಿಗೆ ಕಾರಣವಾಗಿದೆ. ಇದೇ ತಳಿ ಅಮೆರಿಕದಲ್ಲಿ ನುಬಿಯನ್ ಎಂದೇ ಜನರ ಮೆಚ್ಚಿಕೆಯಾಗಿದೆ.

ಗದ್ದಿ, ಮಧ್ಯಪ್ರದೇಶ, ಮಲಬಾರ್, ಕಂಚಿ, ಜಮುನಾಪುರಿ ಗದ್ದಿ, ಗದ್ದಿ ಅಂಗೋರಗಳ ಅಡ್ಡ ತಳಿ–ಸೂರತ್ ಈ ತಳಿಗಳು ಭಾರತದಲ್ಲಿ ಹೆಸರಾದಂತಹವು. ಬಂಗಾಲ, ಯಮುನಾ ನದಿಯ ತೀರಪ್ರದೇಶಗಳಿಂದ ಬಂದ ಜಮುನಾಪುರಿ ಭಾರತದ ಮೇಕೆ ತಳಿಗಳಲ್ಲೆಲ್ಲ ಭಾರಿಯಾದದ್ದು. ಸರಾಸರಿ 45–70 ಕಿಗ್ರಾಂ ತೂಗುತ್ತದೆ. ಸುಲಭವಾಗಿ ಎಲ್ಲೆಡೆ ಒಗ್ಗಿಕೊಳ್ಳುತ್ತದೆ. ಇದರ ಬೆಲೆ ಹೆಚ್ಚು. ಉದ್ದನೆಯ ಗಿಳಿಮೂಗು, ಜೋಲು ಬಿದ್ದ ನೀಳ ಕಿವಿಗಳು, ಈ ತಳಿಯ ಲಕ್ಷಣಗಳು. ಬಿಳಿ, ಕರಿ ಪಟ್ಟೆಗಳಿರುವ ಮೈಬಣ್ಣ. ಒಂದು ಬಾರಿಗೆ ಈಯುವುದು ಒಂದೇ ಮರಿ. ಕರಾವಿನಲ್ಲಿ ಅಷ್ಟು ಹೆಸರಾಗಿಲ್ಲ. ಗುಜರಾತಿನ ಸೂರತ್ ಜಿಲ್ಲೆಯ, ಸಣ್ಣದಾಗಿ ಅಡಕವಾದ ಮೈಯ ಸೂರತಿ ತಳಿ ಅಷ್ಟಿಷ್ಟು ಹಾಲು ಕೊಡುವುದಕ್ಕಾಗಿ ಸಾಕುವುದುಂಟು. ಬಣ್ಣ ಬಿಳಿ, ಕೊಂಬಿಲ್ಲ. ಒಂದು ಬಾರಿಗೆ ಎರಡು, ಮೂರು, ಐದು ಮರಿಗಳನ್ನೂ ಹಾಕುವುದುಂಟು. ದಕ್ಷಿಣ ಭಾರತದ ವಿಶೇಷ ತಳಿ, ಮಲಬಾರ್. ಸಾಧಾರಣ ಮೇಕೆಗಿಂತ ಹೆಚ್ಚು ಹಾಲು ಕೊಡುತ್ತದೆ. ಕರಾವು, ಮಾಂಸಗಳಿಗಾಗಿ ಸಾಕುವ ಇನ್ನೊಂದು ಮೇಕೆ ತಳಿ ಕಂಚಿ.

ನಮ್ಮ ಕಾಶ್ಮೀರಿ, (ತುರ್ಕಿಯ ಅಂಗೋರಾ ಜಿಲ್ಲೆಯ) ಅಂಗೋರಾ ತಳಿಗಳು ಮುಖ್ಯವಾಗಿ ತುಪ್ಪಟಕ್ಕಾಗಿ ಸಾಕುವ ಆಡುಗಳು; ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಅಮೆರಿಕ ಸಂಯುಕ್ತಸಂಸ್ಥಾನಗಳು, ಕೆನಡಗಳಲ್ಲಿ ಅಂಗೋರಾಗಳನ್ನು ಸಾಕುವರು. ಇವು ಹಾಲು ಕರೆಯುವುದು ಕಡಿಮೆ. ಇವು ಒಣ ಹವೆಗೆ ಒಗ್ಗಿದರೂ, ಚಳಿಯನ್ನು ತಡೆಯಬಲ್ಲವು. ಕೊಂಬುಗಳು ಚಪ್ಪಟೆಯಾಗಿ, ಹಿಂಬಾಗಿ, ಸುರುಳಿಯಾಗಿರುತ್ತವೆ. ಕೂದಲು ಅಚ್ಚ ಬಿಳುಪು, ರೇಶಿಮೆಯಷ್ಟು ಮೆತು, ನುಣುಪು; ಮುಕ್ಕಾಲು ಭಾಗ ಕಾಲುಗಳು ಹಾಗೂ ಮೈಯ ತುಂಬ ಗುಂಗುರುಗುಂಗುರಾಗಿ ಬೆಳೆದಿರುತ್ತವೆ. 4"–6" ಉದ್ದ ಬೆಳೆವ ತುಪ್ಪಳವನ್ನು ಆರು ತಿಂಗಳಿಗೊಮ್ಮೆ ಕತ್ತರಿಸಿ ತೆಗೆಯುವರು. ವರ್ಷದ ಕೊನೆಯ ತನಕ ಕತ್ತರಿಸದಿದ್ದರೆ, 8"–12" ಉದ್ದ ಬೆಳೆಯುತ್ತದೆ. ವಸಂತಕಾಲದಲ್ಲಿ ತುಪ್ಪಳವನ್ನು ಕತ್ತರಿಸದಿದ್ದರೆ ಬೇಸಗೆಯಲ್ಲಿ ತಾನಾಗೇ ಉದುರಿಹೋಗುತ್ತದೆ. ಅಂಗೋರಾ ಆಡಿನ ಹೊಳಪಿನ ಕೂದಲ ನೂಲಿಗೆ ಮೊಹೇರ್ ಎಂದು ಹೆಸರು. ಇದರಿಂದ ಬೇಸಗೆಯಲ್ಲಿ ತೊಡುವ ತೆಳುವಾದ ಉಣ್ಣೆಯ ಉಡುಪನ್ನು ತಯಾರಿಸುತ್ತಾರೆ. ನೀಳ ಕೂದಲುಗಳಿಂದ ನಾಟಕ ಶಾಲೆಯ ಚೌರಿ, ಕೃತಕ ತಲೆಗೂದಲು, ಟೋಪಿ ಮುಂತಾದ ವೇಷ, ಅಲಂಕಾರಗಳ ವಸ್ತುಗಳು ತಯಾರಾಗುತ್ತವೆ.

ಕಾಶ್ಮೀರದ ಶಾಲಿಗೆ ಜಗತ್ಪ್ರಸಿದ್ಧ ಕಾಶ್ಮೀರಿ ಆಡು, ಉಣ್ಣೆಯನ್ನು ಒದಗಿಸುವ ಇನ್ನೊಂದು ಬಗೆಯ ಆಡು. ಇದು ಅಂಗೋರಾಕ್ಕಿಂತ ಸಾಮಾನ್ಯ ಆಡನ್ನು ಹೋಲುತ್ತದೆ. ಬೇರೆ ಯಾವ ಆಡುಗಳಲ್ಲೂ ಈ ತಳಿಯ ಸಾಕಣೆ ಕೈಗೂಡಿಲ್ಲ. ಕಾಶ್ಮೀರದಲ್ಲಿ ಹಿಮಾಲಯದ ಇಳಿಜಾರು ತಪ್ಪಲುಗಳಲ್ಲಿ ಕಾಣಬರುತ್ತವೆ. ಅಲ್ಲಿ ಮಾತ್ರ ಇವನ್ನು ಸಾಕಬಹುದು. ಅಂಗೋರಾ ಆಡನ್ನು ಹೋಲುವ, ಇವುಗಳ ಕೂದಲು ಕೆಲಸಕ್ಕೆ ಬಾರದವು; ಅವುಗಳ ಬುಡದಲ್ಲಿ ಬೆಳೆವ ಪಾಷಂ ಎಂಬ ಬಲು ನುಣುಪಿನ ತೆಳುವಾದ ತುಪ್ಪುಳ ಬಲು ಬೆಲೆಯಾದ್ದು. ಈ ಪಾಷಂನಿಂದಲೇ ಬೆಲೆ ಬಾಳುವ ಸುಂದರವಾದ ಕಾಶ್ಮೀರಿ ಶಾಲುಗಳು ತಯಾರಾಗುವುದು. ಒಂದು ವರ್ಷಕ್ಕೆ ಒಂದು ಆಡಿನಿಂದ ದೊರೆವ ಉಣ್ಣೆಯ ಸರಾಸರಿ ತೂಕ ಸುಮಾರು 1 ಕಿಗ್ರಾಂ. ಒಂದು ಸೊಗಸಾದ ಶಾಲನ್ನು ತಯಾರಿಸಲು ಮೂವರು ನೇಯ್ಗೆಯವರಿಗೆ 3 ತಿಂಗಳು ಹಿಡಿಯುತ್ತದೆ.

ಆಡಿನ ತೊಗಲನ್ನು ಹದ ಮಾಡಿ ಜೋಡು, ಕೈಗವುಸು ಮುಂತಾದ ಅನೇಕ ಬಗೆಯ ವಸ್ತುಗಳನ್ನು ತಯಾರಿಸುತ್ತಾರೆ. ಮೊರಾಕೊ ತೊಗಲು ಹೆಸರುವಾಸಿ.

**ಸಾಕಣೆ :** ಆಡನ್ನು ಕಟ್ಟುವೆಡೆ ಚಾವಣಿ, ಗೋಡೆ, ನೆಲಗಳಲ್ಲಿ ಇನಿತೂ ತೇವವಿರಬಾರದು. ಚೆನ್ನಾಗಿ ಗಾಳಿಯಾಡುತ್ತಿದ್ದರೇ ಆಡುಗಳಿಗೆ ಆರೋಗ್ಯ. ಬಿರುಗಾಳಿ ತಂಗಾಳಿ ಬೀಸುವಂತಿರ ಬಾರದು. ಆಡುಗಳು ತಂಗುವ ಜಾಗದಲ್ಲಿ ಕೆಳಗೆ ಒಣಹುಲ್ಲು ಹಾಸಿರಬೇಕು. ಕಟ್ಟುವ ಜಾಗವನ್ನು ಬದಲಾಯಿಸುತ್ತಿದ್ದರೆ, ಹುಳುಗಳು ಹತ್ತವು. ಆಡುಗಳ ಕೊಟ್ಟಿಗೆ ದನಗಳದಷ್ಟು ದೊಡ್ಡದಿರಬೇಕಿಲ್ಲ. ಮೇವೂ ಕಡಿಮೆ. ಕಾಳುಗಳು (ಶೇ.15), ಸೊಪ್ಪು, ಹುಲ್ಲು, ಒಳ್ಳೆಯ ಮೇವು. ಉಪ್ಪು ನೀರು ಸಾಕಷ್ಟು ಕೊಡಬೇಕು.

**ಆಡಿನ ರೋಗಗಳು :** ತೇವ, ಚಳಿಗಳಿಗೆ ಒಡ್ಡಿದಾಗ ಬರುವುದು ಪುಪ್ಪುಸುರಿತ (ನ್ಯುಮೋನಿಯ). ಆಡಿಗೂ ಒಂದು ತೆರನಾದ ಸಿಡುಬು ಹತ್ತುವುದು. ಸೋಂಕು ಹತ್ತಿಸಿ ಮೈಯಿಳಿಸುವ (ಬ್ರೂಸೆಲ ಬೇನೆ, ಬ್ರೂಸೆಲೋಸಿಸ್) ಆಡಿನ ಜ್ವರ. ಉಳಿದವು: ವಿಷಕಣದಿಂದಾ ಗುವ ಕುಂಟುವಂತೆ ಮಾಡುವ ಕಾಲು ಜಿರಸು (ಫುಟ್‌ರಾಟ್); ಕಣ್ಣುನೋವಿನ ಸೋಂಕು; ಅಂಟುರೋಗವಾದ ಆಡುಕಜ್ಜಿ; ಮೈಮೇಲೆ ಕೂರೆಗಳು, ಉಣ್ಣೆಗಳು, ಕರುಳ ಹುಳು, ಲಾಡಿಹುಳು, ಈಲಿ ಚಪ್ಪಟೆಕ್ರಿಮಿ (ಲಿವರ್ ಫ್ಲೂಕ್). (ಕೆ.ಎಂ.ಕೆ.; ಎಚ್.ಆರ್.ಸಿ.)

ಆಡುಗಳಿಗೆ ಬರುವ ಅಂಟುರೋಗಗಳಲ್ಲಿ ಬೊಬ್ಬೆರೋಗ, ದೊಡ್ಡ ರೋಗ, ನೆರಡಿರೋಗ ಮೊದಲಾದವು ಮುಖ್ಯವಾದುವು. ಇವು ಬಹು ಸೂಕ್ಷ್ಮವಾದ ಸಾಂಕ್ರಾಮಿಕ ರೋಗಾಣುಗಳಿಂದ ಬರುತ್ತವೆ. ಸಕಾಲದಲ್ಲಿ ಚುಚ್ಚುಮದ್ದು ಕೊಟ್ಟು ರೋಗ ಬಾರದಂತೆ ತಡೆಯಬಹುದು. ರೋಗ ತಗುಲಿದ ಅನಂತರ ಔಷಧೋಪಚಾರ ಪರಿಣಾಮಕಾರಿಯಲ್ಲ. ಅವಕ್ಕೆ ಬರುವ ಸಾಮಾನ್ಯರೋಗಗಳಲ್ಲಿ ಜೀರ್ಣಾಂಗಗಳಿಗೆ ಸಂಬಂಧಿಸಿದ ಅಜೀರ್ಣ, ಹೊಟ್ಟೆಯುಬ್ಬರ, ಭೇದಿ, ರಕ್ತಭೇದಿ ಮೊದಲಾದವು, ಶ್ವಾಸಕಾಂಗಗಳಿಗೆ ಸಂಬಂಧಪಟ್ಟ

ಕೆಮ್ಮು, ಪುಪ್ಪುಸರೋಗಗಳೂ ಮುಖ್ಯವಾದುವು. ಸಕಾಲದಲ್ಲಿ ಚಿಕಿತ್ಸೆ ಮಾಡುವುದರಿಂದ ಇವು ಗುಣವಾಗುತ್ತವೆ. ಇನ್ನು ಪರೋಪಜೀವಿಗಳಿಂದ ಉಂಟಾಗುವ ಕಾರಲು ರೋಗ ಮತ್ತು ಚರ್ಮರೋಗಗಳನ್ನು ಯುಕ್ತ ಚಿಕಿತ್ಸೆಯಿಂದ ಗುಣಪಡಿಸಿ ಅವುಗಳಿಂದಾಗುವ ಹಾನಿಗಳನ್ನು ತಪ್ಪಿಸಬಹುದು. (ಪಿ.ಎ.)

**ಆಡುಮುಟ್ಟದ ಬಳ್ಳಿ :** ಆಸ್ಕ್ಲಿಪಿಯಡೇಸೀ ಕುಟುಂಬಕ್ಕೆ ಸೇರಿದ ಆಸರೆಗಳ ಮೇಲೆ ಇಲ್ಲವೆ ನೆಲದ ಮೇಲೆ ಹಬ್ಬಿಕೊಂಡು ಬೆಳೆಯುವ ಬಳ್ಳಿ. ಟೈಲೊಫೋರ ಇಂಡಿಕ ಇದರ ವೈಜ್ಞಾನಿಕ ಹೆಸರು. ಇದರ ಎಲೆಗಳು ಎದುರುಬದುರಾಗಿ ಜೋಡಣೆಗೊಂಡಿವೆ. ಕಾಯಿಗಳು ಮೀಸೆಯಾಕಾರದವು. ಕಾಡುಗಿಡ ಇದರ ಎಲೆಗಳನ್ನು ಉಬ್ಬಸ ಆಸ್ತಮ, ಕೆಮ್ಮು ಮುಂತಾದ ರೋಗಚಿಕಿತ್ಸೆಯಲ್ಲಿ ಬಳಸುತ್ತಾರೆ. *

**ಆಡುಸೋಗೆ :** ಅಕ್ಯಾಂತೇಸೀ ಗುಂಪಿಗೆ ಸೇರಿದ ಸಸ್ಯ. ಅಡತೋಡ ಜೈಲ್ಯಾನಿಕ ಇದರ ವೈಜ್ಞಾನಿಕ ಹೆಸರು. ಮಲಬಾರ್‌ನಟ್ ಇದರ ಸಾಮಾನ್ಯ ಇಂಗ್ಲಿಷ್ ಹೆಸರು. ಹಲವಾರು ಕವಲುಗಳು ಮತ್ತು ಗಿಣ್ಣಿನ ಭಾಗದಲ್ಲಿ ಅಭಿಮುಖವಾದ ಎಲೆಗಳನ್ನು ಹೊಂದಿರುವ ಈ ಗಿಡ ಪೊದೆಯಂತೆ ಕಾಣುತ್ತದೆ. ಇದರ ಎಲೆಗಳು ನೀಳ; ಮೇಲ್ತುದಿ ಮತ್ತು ಕೆಳ ತುದಿಗಳು ಚೂಪು; ಅತ್ಯಂತ ಸೂಕ್ಷ್ಮ ರೋಮಗಳಿಂದ ಆವೃತವಾಗಿವೆ. ಬಿಳಿಯ ಬಣ್ಣದ ತೊಟ್ಟಿಲ್ಲದ ಇದರ ಹೂಗಳು ಹೂ ಗೊಂಚಲಲ್ಲಿ ಒತ್ತಾಗಿ ಜೋಡಣೆಗೊಂಡಿದ್ದು ಬ್ರ್ಯಾಕ್ಟ್ ಮತ್ತು ಬ್ರ್ಯಾಕ್ಟಿಯೋಲ್‌ಗಳನ್ನು ಹೊಂದಿರುತ್ತವೆ. ಹೂದಳಗಳು ಕೆಳಭಾಗದಲ್ಲಿ ಕೂಡಿಕೊಂಡಿವೆ; ಮೇಲ್ಭಾಗದಲ್ಲಿ ಇಬ್ಭಾಗವಾಗಿ ಎರಡು ತುಟಿಗಳಂತಿವೆ. ಮೇಲ್ತುಟಿಯಲ್ಲಿ ಎರಡು ದಳಗಳೂ ಕೆಳತುಟಿಯಲ್ಲಿ ಮೂರು ದಳಗಳೂ ಇವೆ. ಪುಷ್ಪದಳಗಳಿಗೆ ಸೇರಿದಂತೆ ಎರಡು ಕೇಸರಗಳಿವೆ. ಅಂಡಾಶಯದಲ್ಲಿ ಕೆಲವೇ ಅಂಡಕಗಳಿವೆ. ಶಲಾಕೆ ಉದ್ದವಾಗಿದ್ದು ಶಲಾಕಾಗ್ರದಲ್ಲಿ ಕೊನೆಗೊಳ್ಳುವುದು. ಆಡುಸೋಗೆ ನಮ್ಮ ದೇಶದಲ್ಲಿ ಸಾಮಾನ್ಯವಾದ ಸಸ್ಯ. ಹಿಮಾಲಯದ ತಪ್ಪಲಿನಲ್ಲಿ ಅಧಿಕವಾಗಿ ಬೆಳೆಯುತ್ತದೆ.

ಈ ಗಿಡದ ಬೇರು, ಕಾಂಡ, ಎಲೆ, ಹೂ ಮತ್ತು ಕಾಯಿಗಳನ್ನು ಔಷಧ ತಯಾರಿಸಲು ಉಪಯೋಗಿಸುವರು. ಇದರ ಬೇರು ಮತ್ತು ಎಲೆಗಳಿಂದ ತಯಾರಿಸಿದ ಕಷಾಯ ನೆಗಡಿ, ಶೀತ, ಕೆಮ್ಮು, ಆಸ್ತಮ ಮತ್ತು ಶ್ವಾಸನಾಳದ ಊತವನ್ನು ಗುಣಪಡಿಸುವುದು. ಆಸ್ತಮವನ್ನು ಕಡಿಮೆ ಮಾಡಲು ಇದರ ಒಣ ಎಲೆಗಳಿಂದ ತಯಾರಿಸಿದ ಚುಟ್ಟ ಮತ್ತು ಸಿಗರೇಟನ್ನು ಸೇದುವರು. ಎಲೆಗಳ ರಸವನ್ನು ಆಮಶಂಕೆ ರಕ್ತಭೇದಿಗಳಿಗೆ ಔಷಧವಾಗಿ ಉಪಯೋಗಿಸುವರು. ಈ ಎಲೆಗಳ ಪೊಲ್ಟೀಸನ್ನು ಮೈ ಕೈ ನೋವು, ಸಂಧಿವಾತ, ಗಾಯಗಳಿಂದಾಗುವ ರಕ್ತಸ್ರಾವ ಮತ್ತು ತಲೆಶೂಲೆ ಖಾಯಿಲೆಗಳಲ್ಲಿ ಲೇಪಿಸುತ್ತಾರೆ. ಎಲೆ, ಬೇರು ಮತ್ತು ಹೂಗಳನ್ನು ಸೇರಿಸಿ ಮಾಡಿದ ಕಹಿಯಾದ ಲೇಪ ಹೊಟ್ಟೆಯಲ್ಲಿರುವ ಜಂತುಹುಳುಗಳನ್ನು ನಾಶಮಾಡುವುದು. ವ್ಯಾಸೀನ್ ಎಂಬ ಕಹಿಯಾದ ಸಾರಜನಕಯುಕ್ತ ಕ್ಷಾರ ಈ ಸಸ್ಯದಲ್ಲಿ ದೊರೆಯುತ್ತದೆ. ಇದನ್ನು ಚುಚ್ಚುಮದ್ದನ್ನಾಗಿ ಉಪಯೋಗಿಸಿದಾಗ ಹೃದಯದ ಮಾಂಸಖಂಡಗಳ ಚಟುವಟಿಕೆ ಕುಂದಿ ರಕ್ತದ ಒತ್ತಡ ಕಡಿಮೆಯಾಗುವುದು. ಈ ಗಿಡದಲ್ಲಿ ವಿಷವಸ್ತು ಇರುವುದರಿಂದ ಆಡು, ಕುರಿ, ದನ, ಕರುಗಳು ಇದನ್ನು ಮೇಯುವುದಿಲ್ಲ. ಇದರ ಎಲೆಗಳಿಂದ ಉತ್ತಮವಾದ ಹಸುರು ಗೊಬ್ಬರವಾಗುವುದು. ಬತ್ತದ ಗದ್ದೆಗಳಲ್ಲಿ ಇದನ್ನು ಬೆಳೆಯುವುದರಿಂದ ಜೊಂಡು ಮತ್ತಿತರ ಕಳೆಗಳ ಬೆಳವಣಿಗೆಯನ್ನು ತಡೆಗಟ್ಟಬಹುದು. ಆಡುಸೋಗೆಯ ಎಲೆಗಳಿಂದ ಕ್ರಿಮಿನಾಶಕ ಮತ್ತು ಶಿಲೀಂಧ್ರನಾಶಕಗಳನ್ನು ತಯಾರಿಸುತ್ತಾರೆ. ಎಲೆಗಳಿಂದ ಬರುವ ಹಳದಿ ಬಣ್ಣವನ್ನು ಬಟ್ಟೆ ಮತ್ತು ಚರ್ಮಕ್ಕೆ ಬಣ್ಣ ಹಾಕಲು ಬಳಸುವರು. ಚೆನ್ನಾಗಿ ಬಲಿತ ಬಾಳೆ, ಮಾವು ಮುಂತಾದ ಹಣ್ಣುಗಳನ್ನು ಆಡುಸೋಗೆಯ ಎಲೆಗಳಲ್ಲಿ ಸುತ್ತಿಟ್ಟರೆ ಜಾಗ್ರತೆಯಾಗಿ ಮಾಗಿ ಆಕರ್ಷಕ ಬಣ್ಣವನ್ನು ಪಡೆಯುತ್ತವೆ; ಹೆಚ್ಚುಕಾಲ ಕೆಡದಂತೆ ಇರುತ್ತವೆ. (ಡಿ.ಪಿ.)

**ಆಡ್ರಿಯನ್, ಎಡ್ಗರ್ ಡಗ್ಲಾಸ್ :** 1889–1977. ಪ್ರಸಿದ್ಧ ವೈದ್ಯ. 1932ರ ಶರೀರಕ್ರಿಯಾಶಾಸ್ತ್ರ ಮತ್ತು ವೈದ್ಯಕೀಯದ ನೊಬೆಲ್ ಪ್ರಶಸ್ತಿಯನ್ನು ಬ್ರಿಟನ್ನಿನ ಮತ್ತೊಬ್ಬ ನರತಜ್ಞ ಷೆರಿಂಗ್‌ಟನ್ ಸರ್ ಚಾರ್ಲ್ಸ್‌ಸ್ಕಾಟ್‌ನೊಂದಿಗೆ ಹಂಚಿಕೊಂಡ. 1915ರಲ್ಲಿ ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದ. ನರಕೋಶಗಳ ಉದ್ರೇಕತೆಯ ಕಾರ್ಯವಿವರಣೆಯನ್ನು ಕೂಲಂಕಷವಾಗಿ ವಿವರಿಸಿರುವ ಕೀರ್ತಿ ಇವನದು. ಮೂರ್ಛೆ ರೋಗ ಮತ್ತು ಮೆದುಳಿಗೆ ಸಂಬಂಧಪಟ್ಟ ಸಂಶೋಧನೆಗಳಿಗೆ ಇವನ ಕೊಡುಗೆ ಹೊಸ ಹಾದಿಯನ್ನು ತೆರೆಯಿತು. 1950 ರಿಂದ 1955 ರವರೆಗೆ ಈತನು ರಾಯಲ್ ಸೊಸೈಟಿಯ ಅಧ್ಯಕ್ಷನಾಗಿದ್ದ. 1942ರಲ್ಲಿ ಆರ್ಡರ್ ಆಫ್ ಮೆರಿಟ್ ಪಾರಿತೋಷಕವನ್ನು ಪಡೆದ. 1955ರಲ್ಲಿ ಬ್ಯಾರೋನಿ ಪದಕ ಲಭಿಸಿದೆ. ನರವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಪ್ರಕಟಣೆಗಳಿವೆ. *

**ಆಡ್ಲರ್, ಆಲ್ಫ್ರೆಡ್ :** 1870–1937. ಆಸ್ಟ್ರಿಯದ ಖ್ಯಾತ ಮನೋವಿಜ್ಞಾನಿ ವಿಯನ್ನ ವಿಶ್ವವಿದ್ಯಾಲಯದಲ್ಲಿ ವೈದ್ಯಶಾಸ್ತ್ರದ ಪದವೀಧರನಾಗಿ (1895) ನೇತ್ರಚಿಕಿತ್ಸಕನಾಗಿ ಸೇವೆ ಸಲ್ಲಿಸುತ್ತಿದ್ದ. ಅನಂತರ ಮಾನಸಿಕ ರೋಗಶಾಸ್ತ್ರದಲ್ಲಿ ಆಸಕ್ತನಾಗಿ ಅದಕ್ಕಾಗಿ ಚಿಕಿತ್ಸಾಲಯವನ್ನು ಆರಂಭಿಸಿದ. ಅನಂತರ, ಅಂದಿಗಾಗಲೆ ಪ್ರಚಾರಕ್ಕೆ ಬಂದಿದ್ದ ಫ್ರಾಯ್ಡ್‌ರ ಮನೋವಿಶ್ಲೇಷಣ ಶಾಸ್ತ್ರದ ಪ್ರಧಾನ ಪ್ರತಿಪಾದಕನಾಗಿ ಆ ಪಂಥವನ್ನು ಬಲಪಡಿಸಿದ. 1907ರಲ್ಲಿ ಆಂಗಿಕ ಊನತೆಯ ತತ್ತ್ವ (ಥಿಯೊರಿ ಆಫ್ ಆರ್ಗ್ಯಾನಿಕ್ ಇನ್‌ಫೀರಿ ಯಾರಿಟಿ) ಎಂಬ ನೂತನ ತತ್ತ್ವವನ್ನು ಪ್ರಕಟಿಸಿದ. 1911ರಲ್ಲಿ ಇವನಿಗೂ ಫ್ರಾಯ್ಡ್‌ನ ಪಂಥದ ವರಿಗೂ ಅಭಿಪ್ರಾಯಭೇದ ತಲೆದೋರಿತು. ಮಾನವನ ಎಲ್ಲ ವರ್ತನೆಗೂ ಲೈಂಗಿಕ ಪ್ರಚೋದ ನೆಯೇ ಮೂಲ ಪ್ರೇರಕವೆಂಬ ತತ್ತ್ವವನ್ನು ಒಪ್ಪದೆ, ಅದಕ್ಕೆ ವೈಯಕ್ತಿಕವಾದ ಇತರ ಉದ್ದೇಶಗಳೂ ಇವೆಯೆಂಬ ವಾದವನ್ನು ಎತ್ತಿಹಿಡಿದು ಆ ಪಂಥದಿಂದ

ಹೊರಬಂದ. ತನ್ನದೇ ಆದ, ವ್ಯಕ್ತಿ ಮನೋವಿಜ್ಞಾನ ಎಂಬ ಹೊಸ ಪಂಥವನ್ನು ಆರಂಭಿಸಿದ. ಅನುವಂಶೀಯವಾಗಿ ಬರುವ ಊನತೆ ಮನಸ್ಸಿನ ರಚನೆ ಮತ್ತು ವ್ಯಾಪಾರಗಳ ಮೇಲೆ ತೀವ್ರ ಪರಿಣಾಮ ಬೀರುವುದೆಂಬ ತತ್ತ್ವವನ್ನು ಪ್ರತಿಪಾದಿಸಿದ.

ಆಡ್ಲರ್ 1920ರಲ್ಲಿ ವಿಯನ್ನದಲ್ಲಿ ನೂತನವಾಗಿ ಆರಂಭವಾದ ಕೈಸರ್ ಫ್ರಾನ್ಸ್ ಜೋಸೆಫ್ ಆಂಬು ಲೇಟೋರಿಯಂ ಎಂಬ ಮನೋ ರೋಗ ಚಿಕಿತ್ಸಾಲಯದ ಪ್ರಧಾನ ಚಿಕಿತ್ಸಕನಾಗಿ ನೇಮಕನಾದ. ಆ ವೇಳೆಗೆ ಆತನ ಕೀರ್ತಿ ಪಾಶ್ಚಾತ್ಯ ಪ್ರಪಂಚದಲ್ಲೆಲ್ಲ ಹರಡಿತ್ತು. 1896ರಲ್ಲಿ ಅಮೆರಿಕದ ಕೊಲಂಬಿಯ ವಿಶ್ವವಿದ್ಯಾಲಯದ ವಿಶೇಷ ಪ್ರಾಧ್ಯಾಪಕನಾಗಿ ಕೆಲಸ ಮಾಡಲು ಒಪ್ಪಿದ. ಅನಂತರ ಪ್ರಪಂಚದ ಬೇರೆ ಬೇರೆ ಕಡೆ ಸಂಚರಿಸಿ ತನ್ನ ಪಂಥವನ್ನು ಪ್ರಚಾರ ಮಾಡಿದ. 1932ರಲ್ಲಿ ನ್ಯೂಯಾರ್ಕಿಗೆ ಹೋಗಿ ನೆಲೆಸಿದ.

ಅದೇ ವರ್ಷ ಲಾಂಗ್ ಐಲೆಂಡ್ ವೈದ್ಯಕೀಯ ಕಾಲೇಜಿನ ವೈದ್ಯಕೀಯ ಮನೋವಿಜ್ಞಾನದ ಪ್ರಾಧ್ಯಾಪಕನಾದ. ಮಾನವ ಸ್ವಭಾವ, ಜೀವವಿಜ್ಞಾನ, ಮಕ್ಕಳ ಶಿಕ್ಷಣ, ಸಾಮಾಜಿಕ ಆಸಕ್ತಿ ಮುಂತಾದವನ್ನು ಕುರಿತು ಈತ ಗ್ರಂಥರಚನೆ ಮಾಡಿದ್ದಾನೆ. ಅವನು ಆರಂಭಿಸಿದ ವ್ಯಕ್ತಿಮನಶ್ಶಾಸ್ತ್ರ ಈಗ ಬಹುವಾಗಿ ಬೆಳೆದು ವೈದ್ಯವೃತ್ತಿಗೆ ನೂತನ ಸೇವಾಕ್ಷೇತ್ರವೊಂದನ್ನು ದೊರಕಿಸಿಕೊಟ್ಟಿದೆ. (ಎನ್.ಎಸ್.ವಿ.)

**ಆಡ್ಲರನ ವ್ಯಕ್ತಿಮನಶ್ಶಾಸ್ತ್ರ :** ವ್ಯಕ್ತಿಮನಶ್ಶಾಸ್ತ್ರದಲ್ಲಿ, ಆಡ್ಲರ್ ಅನೇಕ ಸಿದ್ಧಾಂತಗಳನ್ನು ರೂಪಿಸಿದ್ದಾನೆ. ಇವುಗಳಲ್ಲಿ ಬಹುಪಾಲು ಫ್ರಾಯ್ಡನ ಮೂಲ ಸಿದ್ಧಾಂತಗಳಿಂದ ರೂಪಾಂತರ ಹೊಂದಿರುವುವು ಅಥವಾ ಆತನೊಡನಿದ್ದ ಭಿನ್ನಾಭಿಪ್ರಾಯಗಳಿಗೆ ಸಂಬಂಧಪಟ್ಟಿರುವುವು. ಇವುಗಳಲ್ಲಿ ಬಾಲ್ಯಜೀವನದ ಪ್ರಾಮುಖ್ಯ, ಜೀವನ ವೈಶಿಷ್ಟ್ಯ, ತಾನು ಕೀಳು ಎಂಬ ಮನೋಭಾವ, ಪುರುಷ ಪ್ರತಿಭಟನೆ (ಮ್ಯಾಸ್ಕುಲೈನ್ ಪ್ರೊಟೆಸ್ಟ್) ಮೊದಲಾದವು ಪ್ರಮುಖವಾಗಿವೆ.

ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಶೈಶವ ಜೀವನದ ಪ್ರಾಮುಖ್ಯದ ವಿಚಾರದಲ್ಲಿ, ಫ್ರಾಯ್ಡನ ಅಭಿಪ್ರಾಯವನ್ನು ಆಡ್ಲರ್ ಒಪ್ಪುತ್ತಾನೆ. ಮನುಷ್ಯನ ಮಾನಸಿಕ ಒಲವುಗಳ ಉಗಮವನ್ನು ಶೈಶವ ಜೀವನದಲ್ಲಿ ಕಾಣಬಹುದೆಂದು ಆಡ್ಲರ್ ನಂಬಿದ್ದ. ಅಂತೆಯೇ ಶೈಶವಾವಧಿಯ ವರ್ಷಗಳಲ್ಲಿ, ವ್ಯಕ್ತಿಯ ಭವಿಷ್ಯದ ಅಭಿರುಚಿಗಳು ರೂಪುಗೊಳ್ಳುತ್ತವೆ ಎಂಬುದು ಆತನ ಅಭಿಮತ. ಆದರೆ ಫ್ರಾಯ್ಡನ ಬೆಳವಣಿಗೆ ಹಂತಗಳ ಮೇಲಿನ ಸಿದ್ಧಾಂತವನ್ನು ಆಡ್ಲರ್ ನಿರಾಕರಿಸಿದನಲ್ಲದೆ, ಈಡಿಪಸ್ ಮನೋಭಾವದ ಸರ್ವವ್ಯಾಪಕತೆಯನ್ನು ಅಲ್ಲಗಳೆದ.

ಅನೇಕ ಸಂದರ್ಭಗಳಲ್ಲಿ ಆಡ್ಲರನೇ ಅಭಿಮಾನದಿಂದ ಹೇಳಿಕೊಂಡಿರುವಂತೆ ಆತ ವ್ಯಕ್ತಿಯಲ್ಲಿರುವ ತಾನು ಕೀಳು ಎಂಬ ಮನೋಭಾವದ ಕಲ್ಪನೆಯ ಕರ್ತೃ. ಆತನ ಅಭಿಪ್ರಾಯದಲ್ಲಿ ಅಧಿಕಾರಕ್ಕಾಗಿ ಹೋರಾಟ ಮತ್ತು ಸ್ವಪ್ರತಿಷ್ಠೆಗಳು ಮಾನವನ ವರ್ತನೆಯಲ್ಲಿ

ಪ್ರಮುಖವಾಗಿರುತ್ತವೆಯಲ್ಲದೆ, ಹೆಚ್ಚು ಕಡಿಮೆ, ಪ್ರತಿಯೊಬ್ಬ ವ್ಯಕ್ತಿಯಲ್ಲೂ ಕೀಳು ಮನೋಭಾವನೆಗಳಿರುತ್ತವೆ. ಬಾಲ್ಯದಲ್ಲಿ ದ್ವೇಷ ಅಥವಾ ಅತಿ ಲಾಲನೆಗೆ ತುತ್ತಾದುದರ, ಅಥವಾ ಅಲ್ಪ ಸಂಖ್ಯಾತರ ಗುಂಪಿಗೆ ಸೇರಿದ್ದರೆ ಅಥವಾ ಅತಿ ಸಂಪತ್ತಿನ ಮಧ್ಯೆ ಬೆಳೆದು ದಾರಿ ತಪ್ಪಿದ್ದರೆ ಅಥವಾ ಅಂಗಾಂಗ ವೈಕಲ್ಯದ ಕಾರಣದಿಂದಾಗಿ, ತಾನು ಕೀಳು ಎಂಬ ಮನೋಭಾವ ಆವಿರ್ಭವಿಸುತ್ತದೆ.

ಆಡ್ಲರನ ಪ್ರಕಾರ, ತನಗಿರುವ ಕೀಳು ಮನೋಭಾವನೆಯಿಂದ ವಿಮುಕ್ತಿ ಹೊಂದಲು ವ್ಯಕ್ತಿಗೆ ಪ್ರಬಲೇಚ್ಛೆ ಇರುತ್ತದೆ. ಏಕೆಂದರೆ ಕೀಳು ಮನೋಭಾವಕ್ಕೆ ಶರಣಾಗುವುದು ಸ್ತ್ರೀಗುಣ, ತದ್ವಿರುದ್ಧವಾದುದು ಪುರುಷ ಗುಣ. ಆದುದರಿಂದ ಪುರುಷ ಪ್ರತಿಭಟನೆ ಕ್ಷತಿಪೂರಣ ಪ್ರಕ್ರಿಯೆಯಲ್ಲಿ ಆಗಬಹುದಾದ ಸಾಮಾನ್ಯ ಘಟನೆ. ಪುರುಷರನ್ನು ಪ್ರತಿಭಟಿಸುವ ಮನೋಧರ್ಮ ಹೆಂಗಸರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅದಕ್ಕೆ ಕಾರಣ, ತಾವು ಗಂಡಸರಿಗಿಂತ ಕೀಳು ಎಂಬ ಅವರ ಮನೋಭಾವ.

ಜೀವನದಲ್ಲಿ ಸುರಕ್ಷಿತತೆ ಮತ್ತು ಸಾರ್ಥಕತೆಗಳನ್ನು ಪಡೆಯಲೋಸುಗ ಪುರುಷ ಪ್ರತಿಭಟನೆ ಒಂದು ಸಾಮಾನ್ಯ ಹೋರಾಟವಾಗಿ ಕ್ರಮೇಣ ಪರಿಣಮಿಸುತ್ತದೆ. ಶಿಶು ಹುಟ್ಟುವಾಗ ದುರ್ಬಲವಾಗಿರುತ್ತದೆ. ಈ ಕ್ಷತಿಪೂರಣೆಗಾಗಿ ಮೊದಲ ನಾಲ್ಕು ಐದು ವರ್ಷಗಳಲ್ಲಿ ಒಂದು ಗುರಿ ನಿರ್ಧಾರವಾಗುತ್ತದೆ. ಆ ಗುರಿಯತ್ತ ಅಂದರೆ ಸುರಕ್ಷಿತತೆ, ಅಧಿಕಾರ ಮತ್ತು ಪೂರ್ಣತ್ವಗಳ ಸಾಧನೆಗಾಗಿ ಹೋರಾಟ ನಡೆಯುತ್ತದೆ. ನಮ್ಮನ್ನು ಶಕ್ತಿಯುತ, ಶ್ರೇಷ್ಠ ಹಾಗೂ ಪೂರ್ಣರನ್ನಾಗಿ ಮಾಡುವ ಗುರಿಯತ್ತ ನಾವು ಸತತ ಹೋರಾಟ ನಡೆಸುತ್ತೇವೆ ಎಂಬುದೇ ಆಡ್ಲರನ ದೃಷ್ಟಿ ಕೀಳೆಂಬ ಭಾವನೆಯಿಂದ ವಿಮುಕ್ತಿ ಹೊಂದಲು ಯಾವುದಾದರೂ ಹೊರಗಿನ ಶಕ್ತಿಯ ನೆರವು ಅತ್ಯವಶ್ಯವಾಗಿ ಬೇಕೆಂಬುದು ಆಡ್ಲರನ ಅಭಿಮತ. ಅದರಂತೆ, ಮನೋರೋಗಿಗಳ ಚಿಕಿತ್ಸೆಯಲ್ಲಿ ಪುನರ್ಶಿಕ್ಷಣ ಪ್ರಮುಖ ಮನೋವೈಜ್ಞಾನಿಕ ಸಾಧನವಾಗಬೇಕೆಂದು ಆತ ಪ್ರತಿಪಾದಿಸಿದ.

ತನ್ನ ದುರ್ಬಲತೆಯ ಕ್ಷತಿಪೂರಣೆಗಾಗಿ ಶ್ರೇಷ್ಠತೆಯನ್ನು ಪಡೆಯುವುದರತ್ತ ಸತತ ಹೋರಾಟ ನಡೆಸುವುದನ್ನು ಆಡ್ಲರ್ ಜೀವನವೈಶಿಷ್ಟ್ಯ ಎಂದು ಕರೆದ ಜೀವನವೈಶಿಷ್ಟ್ಯ ಒಬ್ಬನ ವ್ಯಕ್ತಿತ್ವದ ಅಭಿವ್ಯಕ್ತಿ. ಏಕೆಂದರೆ, ಪ್ರತಿಯೊಬ್ಬನೂ ತನಗನುಗುಣವಾದ ವಿಶಿಷ್ಟ ರೀತಿಯಲ್ಲೇ ಶ್ರೇಷ್ಠತೆಯ ಗುರಿಯನ್ನು ಗ್ರಹಿಸುತ್ತಾನೆ. ಹೀಗೆ ಮಗುವಿನ ಪೂರ್ಣ ವರ್ತನೆಯನ್ನು ಜೀವನವೈಶಿಷ್ಟ್ಯ ನಿಯಂತ್ರಿಸುತ್ತದೆ. ಇದು ಒಬ್ಬ ವ್ಯಕ್ತಿಯ ಎಲ್ಲ ವಿಭಾಗಗಳಲ್ಲೂ ಅಂದರೆ, ಪ್ರಬುದ್ಧ ಮತ್ತು ಸುಪ್ತಚೇತನಗಳಲ್ಲಿ, ಆಲೋಚನೆ ಮತ್ತು ಭಾವನೆಗಳಲ್ಲಿ, ಕಾರ್ಯ ಮತ್ತು ವಿರಾಮಗಳಲ್ಲಿ, ಲೈಂಗಿಕ ಮತ್ತು ಸಾಮಾಜಿಕ ಆಸಕ್ತಿಗಳಲ್ಲಿ ವ್ಯಕ್ತವಾಗಿರುವ ವ್ಯಕ್ತಿತ್ವವೈಶಿಷ್ಟ್ಯವನ್ನು ಪ್ರತಿನಿಧಿಸುತ್ತದೆಯಲ್ಲದೆ, ವ್ಯಕ್ತಿಯ ದೈಹಿಕ ಬೆಳವಣಿಗೆಯ ಮೇಲೂ ಶಾಶ್ವತಪ್ರಭಾವವನ್ನು ಬೀರುತ್ತದೆಯೆಂದು ಆಡ್ಲರ್ ನಂಬಿದ್ದ. ದೇಹ ಮತ್ತು ಮನಸ್ಸುಗಳು ಒಂದೇ ಸಮಗ್ರದ ಭಾಗಗಳಾದುದರಿಂದ ಅವೆರಡರಲ್ಲಿ ಸತತ ಹಾಗೂ ಅನ್ಯೋನ್ಯವಾದ ಸಂಬಂಧವಿರುತ್ತದೆ ಎಂಬುದು ಆತನ ಅಭಿಮತ.

ಆಡ್ಲರ್ ಮಾನವರನ್ನು ನಾಲ್ಕು ವಿಧಗಳಾಗಿ ವಿಂಗಡಿಸಿದ್ದಾನೆ : 1 ಇತರರ ಮೇಲೆ ದರ್ಪ ತೋರಿಸಿ, ಸರ್ವಾಧಿಕಾರಿಗಳಂತೆ ವರ್ತಿಸುವವರು. 2 ಪರರನ್ನು ಅವಲಂಬಿಸಿ, ತಮ್ಮ ಜೀವನದ ಹೊಣೆಗಾರಿಕೆಗಳನ್ನು ತಾವೇ ನಿರ್ವಹಿಸಲು ನಿರಾಕರಿಸಿ, ಪರಾವಲಂಬನ ಮಾರ್ಗದಲ್ಲೇ ಜಯವನ್ನು ಅರಸುವವರು. 3 ತಮ್ಮ ಹೊಣೆಗಾರಿಕೆ ಮತ್ತು ಇತರರ ಸಹವಾಸ ಇವೆರಡರಿಂದಲೂ ವಿಮುಖರಾಗುವುದಲ್ಲದೆ, ಅನೇಕ ವೇಳೆ, ಒಂದೇ ಬಾರಿಗೆ ಜೀವನದಿಂದಲೇ ವಿಮುಕ್ತಿ ಹೊಂದುವವರು, ಅಂದರೆ ಆತ್ಮಹತ್ಯೆಯಲ್ಲಿ ತೊಡಗುವವರು. 4 ಇತರರೊಡನೆ ಸಹಕರಿಸಲು ಸಮ್ಮತಿಸಿ ಸಮಾಜಪ್ರಜ್ಞೆಯನನ್ನುಸರಿಸಿ ನಡೆಯುವವರು.

ತೀವ್ರ ಸಂವೇಗಾತ್ಮಕ ರೋಗಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದಿಂದ ಆಡ್ಲರ್ ವಿಮುಖನಾದನೆಂದೇ ಹೇಳಬಹುದು. ಸಮೀಕರಣ ಅಥವಾ ಹೊಂದಾಣಿಕೆಗೆ ಸಂಬಂಧಪಟ್ಟ ಸಮಸ್ಯೆಗಳಿಂದ ನರಳುತ್ತಿದ್ದವರಿಗೆ ಮಾತ್ರ ಆತ ಮಾನಸಿಕ ಚಿಕಿತ್ಸೆ ನಡೆಸುತ್ತಿದ್ದ. ತನ್ನ ಚಿಕಿತ್ಸಾರ್ಥಿಗಳಿಗೆ ಫ್ರಾಯ್ಡ್‌ನಂತೆ ಆತ ಆರಾಮ ಕುರ್ಚಿಯ ಉಪಯೋಗಿಸುತ್ತಿರಲಿಲ್ಲ. ತನ್ನ ರೋಗಿಯ ಪಕ್ಕದಲ್ಲೆ ಕುಳಿತುಕೊಂಡು, ಆರಾಮವಾಗಿ ಮಾತನಾಡುತ್ತ, ರೋಗಿಗೆ ಪುನರ್‌ಶಿಕ್ಷಣ ಕೊಡುವುದರ ಮೂಲಕ, ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದ.

ಆಡ್ಲರ್ ಮಾನವಸ್ವಭಾವವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಅನೇಕ ಉಜ್ವಲ ವೀಕ್ಷಣೆಗಳನ್ನು ಮಾಡಿದ್ದಾನಲ್ಲದೆ, ಉತ್ತಮ ಸಲಹೆಗಳನ್ನೂ ನೀಡಿದ್ದಾನೆ. ಸಹವಾಸಪ್ರಿಯತೆ, ಸ್ವಪ್ರತಿಷ್ಠೆ, ಸುರಕ್ಷಿತತೆ, ಅಹಂ ಮತ್ತು ಸೃಜನಾತ್ಮಕತೆ ಮೊದಲಾದ ಅಭಿಪ್ರಾಯಗಳು ನವೀನ ಮನೋವಿಶ್ಲೇಷಣ ಜ್ಞರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿವೆ. ಆಡ್ಲರನ ವಿಚಾರವಾಗಿ ಗಾರ್ಡನರ್ ಮರ್ಫಿ ಹೇಳಿರುವ ಮಾತುಗಳು ಗಮನಾರ್ಹವಾಗಿವೆ; ಆಡ್ಲರ್ ಮತ್ತು ಅವನ ಪಂಥದಿಂದ ದೊರೆತಿರುವ ಅಹಂ ಸಮಸ್ಯೆಗಳಿಗೆ ಸಂಬಂಧಿಸಿದ ತಥ್ಯಾಂಶಗಳ ಮೊತ್ತ ಅತ್ಯಂತ ಸಂಪದ್ಯುಕ್ತವಾಗಿದೆ. ಸಾಮಾನ್ಯವಾಗಿ ಅವನನ್ನು ತುಚ್ಛೀಕರಿಸಿದ ಮನೋವಿಶ್ಲೇಷಣಜ್ಞರೂ ಉದಾಸೀನ ಮಾಡಿದ ವ್ಯವಹಾರೈಕಬುದ್ಧಿಯ ವೈದ್ಯರು ಇದ್ದ ಕಾಲದಲ್ಲಿ ಅಹಂಸಮಸ್ಯೆಗಳನ್ನು ಸರಳವಾಗಿ ನಿರೂಪಿಸಿದುದಕ್ಕಾಗಿ ಅವರಿಗೆ ನಾವು ಯಾವಾಗಲೂ ಋಣಿಗಳಾಗಿರಬೇಕಾಗಿದೆ. ಲೈಂಗಿಕ ಅಥವಾ ಬೇರೆ ಯಾವುದೇ ಸಮಸ್ಯೆಯಂತೆಯೇ ಅಹಂಸಮಸ್ಯೆಗಳೂ ಪ್ರಮುಖವಾದವುಗಳೆಂಬುದನ್ನು ಸ್ಪಷ್ಟಪಡಿಸಲು ಆಡ್ಲರ್ ಶ್ರಮಿಸಿದ್ದಾನೆ.

ಆಡ್ಲರ್‌ನಲ್ಲಿನ ಪ್ರಬಲಸ್ವತಂತ್ರಮನೋಭಾವ ಮತ್ತು ಜನರಲ್ಲಿ ಆತನಿಗಿದ್ದ ವಾತ್ಸಲ್ಯ, ಅವನಿಗೆ ಅನೇಕ ಶ್ರದ್ಧಾವಂತ ಅನುಯಾಯಿಗಳನ್ನು ಗಳಿಸಿಕೊಟ್ಟವು. ಅವರಲ್ಲಿ ಪ್ರಸಿದ್ಧ ಆಂಗ್ಲಕಾದಂಬರಿಕಾರಳಾದ ಫೈಲಿಸ ಬಾಟೊಮಿ (ಪ್ರೈವೇಟ್ ವರ್ಲ್ಡ್ಸ್ ಎಂಬ ಜಗತ್ಪ್ರಸಿದ್ಧ ಮಾನಸಿಕ ಕಾದಂಬರಿಯ ಕರ್ತೃ) ಒಬ್ಬಳು.

ಮಕ್ಕಳಿಗೆ ಮಾರ್ಗದರ್ಶನ ನೀಡಲು ಆಡ್ಲರ್ ಮತ್ತು ಆತನ ಅನುಯಾಯಿಗಳು ಅನೇಕ ಚಿಕಿತ್ಸಾಲಯವನ್ನು ಸ್ಥಾಪಿಸಿದರು. ಈಗಲೂ ವಿಯನ್ನದಲ್ಲಿ ಅವುಗಳಲ್ಲಿ ಅನೇಕವು ಕಾರ್ಯನಿರತವಾಗಿವೆ.

**ಆಣೆ :** ಪ್ರಮಾಣವಚನ, ಸತ್ಯವೆಂದು ಒಬ್ಬನು ಕೊಟ್ಟ ಹೇಳಿಕೆ. ಈ ಹೇಳಿಕೆಯನ್ನು ದೇವರ ಮುಂದೆ ಕೊಡಬಹುದು. ಇಲ್ಲವೆ ಲೌಕಿಕವಾದ ನ್ಯಾಯಾಲಯದಲ್ಲಿ ನ್ಯಾಯಾಧೀಶನ ಮುಂದೆ ಕೊಡಬಹುದು. ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಮತೀಯ ಸನ್ನಿವೇಶದಲ್ಲಿ ಕೊಟ್ಟ ಹೇಳಿಕೆಯಾಗಿರುತ್ತಿತ್ತು. ಪಾಶ್ಚಾತ್ಯ ದೇಶಗಳಲ್ಲಿ ಕ್ರೈಸ್ತಮತಾಧಿಪತಿಯ ಮುಂದೆ ಪ್ರಮಾಣ ಮಾಡುವುದು ರೂಢಿಯಲ್ಲಿತ್ತು. ಭಾರತದಲ್ಲಿ ದೇವಸ್ಥಾನದಲ್ಲಿ ದೇವರ ಸಮ್ಮುಖದಲ್ಲಿ ಪ್ರಮಾಣ ಮಾಡಿ ಹೇಳಿಕೆಕೊಡುವುದು ರೂಢಿಯಲ್ಲಿತ್ತು. ಪ್ರಮಾಣ ಮಾಡಲು ದೇವಸ್ಥಾನಕ್ಕೆ ಅಗತ್ಯವಾಗಿ ಹೋಗಬೇಕಾಗಿರಲಿಲ್ಲ. ಸೂರ್ಯಚಂದ್ರಾದಿಗಳ ಮುಂದೆ, ಬಹಿರಂಗವಾಗಿ ಎಲ್ಲರ ಮುಂದೆ ಪ್ರಮಾಣ ಮಾಡುವ ಸಂಪ್ರದಾಯವೂ ಆಚರಣೆಯಲ್ಲಿತ್ತು. ಸಂದಿಗ್ಧವಾದ ಲೌಕಿಕವ್ಯವಹಾರಗಳ ವ್ಯಾಜ್ಯಗಳಲ್ಲಿ ವಾದಿಯೋ ಪ್ರತಿವಾದಿಯೋ ಮತಗ್ರಂಥವನ್ನು ಕೈಲಿ ಹಿಡಿದೋ ದೇವರ ಹೆಸರು ಹೇಳಿಯೋ ಪ್ರಮಾಣ ಮಾಡಿದಾಗ ಅದರ ಆಧಾರದ ಮೇಲೆ ವ್ಯಾಜ್ಯವನ್ನು ಇಬ್ಬರಿಗೂ ಅನುಕೂಲವಾಗುವ ರೀತಿಯಲ್ಲಿ ಅಧಿಕಾರಿಗಳು ಪರಿಹರಿಸುತ್ತಿದ್ದುದಕ್ಕೆ ಚರಿತ್ರೆಯಲ್ಲಿ ನಿದರ್ಶನಗಳಿವೆ. ದೈವ, ಮತವಿಚಾರದಲ್ಲಿ ಭಯಭೀತಿ ಇರುವ ತನಕ ಇದು ಒಳ್ಳೆಯ ಮಾರ್ಗವೇ ಆಗಿತ್ತು. ಕೊಟ್ಟ ಮಾತಿಗೆ ತಪ್ಪಬಾರದು, ಅಸತ್ಯವನ್ನು ನುಡಿಯಬಾರದು, ಅನ್ಯಾಯವನ್ನು ಮಾಡಬಾರದು ಎಂಬ ನೈತಿಕ ಭಾವನೆಗಳು ಆಣೆಯ ಹಿಂದೆ ಇದ್ದಂತೆ ತೋರುತ್ತದೆ. ಸೂರ್ಯಚಂದ್ರಾದಿಗಳ ಮುಂದೆ ಪ್ರಮಾಣ ಮಾಡುವುದು ತುಂಬ ಆರ್ಷೇಯ ಪದ್ಧತಿ. ಬೇರೆ ಬೇರೆ ದೇಶಗಳ ಅನಾಗರಿಕ ಸಮಾಜಗಳಲ್ಲೂ ಈ ಪದ್ಧತಿ ರೂಢಿಯಲ್ಲಿದೆ. (ಜಿ.ಎಚ್.)

**ಆತಕೂರು :** ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ದಂತಕಥೆಗಳ ಪ್ರಕಾರ ಇದು ಪ್ರಾಚೀನ ತ್ರಿಪುರಾಪುರಿ. ಇಲ್ಲಿರುವ 949–50ರ ಶಾಸನ ಪ್ರಸಿದ್ಧವಾದುದು. ಚೋಳರ ವಿರುದ್ಧ ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣ ತಕ್ಕೋಲಂ ಎಂಬಲ್ಲಿ ಯುದ್ಧ ನಡೆಸುತ್ತಿದ್ದಾಗ ಅವನ ಜೊತೆಗೆ ಗಂಗ ಬೂತುಗ ಪಾಲ್ಗೊಂಡಿದ್ದ. ಸಗರವಂಶದ ಮಣಲೇರ ಗಂಗ ದೊರೆಯ ಅನುಯಾಯಿ. ಅವನ ಪರಾಕ್ರಮಕ್ಕಾಗಿ ಗಂಗ ಬೂತುಗ ಬಾಳ್ಗಳ್ಚಾಗಿ ಆತಕೂರು ಪ್ರದೇಶವನ್ನು ದಾನವಿತ್ತ. ರಾಷ್ಟ್ರಕೂಟ ದೊರೆಯೂ ಸುಪ್ರೀತನಾಗಿ, ಮಣಲೇರ ಬಯಸಿದ ಕಾಳಿ ಎಂಬ ಹೆಸರಿನ ಬೇಟೆ ನಾಯೊಂದನ್ನು ಕೊಟ್ಟ. ಮುಂದೊಮ್ಮೆ ಬೇಟೆಯ ಸಮಯದಲ್ಲಿ ಈ ನಾಯಿ ದೊಡ್ಡ ಹಂದಿಯೊಡನೆ ಹೋರಾಡಿ ಸತ್ತಿತು. ಆ ನಾಯಿಗೆ ಸಮಾಧಿಕಟ್ಟಿ, ಶಾಸನ ಹಾಕಿಸಿ ಪ್ರತಿದಿನ ಸಮಾಧಿಯ ಪೂಜೆಗೆ ಗೊರವನೊಬ್ಬನನ್ನು ನೇಮಿಸಲಾಯಿತು. ಒಡೆಯ ಮತ್ತು ನಾಯಿಯ ಗಾಢ ಸಂಬಂಧವನ್ನು ಈ ವೀರಗಲ್ಲಿನ ಶಾಸನ ತಿಳಿಸುತ್ತದೆ. ಈಗ ಈ ವೀರಗಲ್ಲು ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿದೆ.

ಈ ಊರಿನಲ್ಲಿ ಚೆಲ್ಲೇಶ್ವರ, ವೀರಭದ್ರ ದೇಗುಲಗಳು ಉಳಿದಿವೆ. ಹತ್ತಾರು ಗುಡಿಗಳು ನಾಶದ ಅಂಚಿನಲ್ಲಿವೆ. ಗ್ರಾಮದ ಎಲ್ಲೆಯಲ್ಲಿ ತಿರುಮಲ, ಅಟ್ಟಮ್ಮ, ಹಾಲಮ್ಮ, ಪಟ್ಟದಲಮ್ಮ, ಮಾರಮ್ಮ, ಯಲ್ಲಮ್ಮ, ಮಂಟೇಸ್ವಾಮಿ ಮತ್ತು ಬೋರೆದೇವರ ಗುಡಿಗಳಿವೆ. ಚಲ್ಲೇಜನಮ್ಮನ ಸಮಾಧಿ, ಹಲವು ಮಾಸ್ತಿಕಲ್ಲುಗಳೂ ಇಲ್ಲಿವೆ. (ಎಚ್.ಎಂ.ಎನ್.ಆರ್.)

**ಆತುಕೂರಿ ಮೊಲ್ಲ :** ಆಂಧ್ರದ ಪ್ರಸಿದ್ಧಳೂ ಆದ್ಯಳೂ ಆದ ಕವಯಿತ್ರಿ. ಆದ ಕುಂಬಾರ ಕುಲಕ್ಕೆ ಸೇರಿದವಳು. ತಂದೆ ಆತುಕೂರಿ ಕೇಶನ ಶೆಟ್ಟಿ. ಗುರು ಲಿಂಗ ಜಂಗಮಾರ್ಚನಪರನಾದ ಶಿವಭಕ್ತ. ಇವಳಿಗೆ ಶ್ರೀಶೈಲಮಲ್ಲಿಕಾರ್ಜುನನ ಮೇಲೆ ಅಪಾರವಾದ ಭಕ್ತಿ. ತನ್ನ ರಾಮಾಯಣ ಮಹಾಕಾವ್ಯದಲ್ಲಿ ಶ್ರೀಶೈಲ ಮಲ್ಲಿಕಾರ್ಜುನನ್ನು ಭಕ್ತಿಪೂರ್ವಕವಾಗಿ ಸ್ತುತಿಸಿದ್ದಾಳೆ.

ಗೋಪವರ ಶ್ರೀಕಂಠಮಲ್ಲೇಶ್ವರನ ಅನುಗ್ರಹದಿಂದ ತನಗೆ ಕವಿತಾಶಕ್ತಿ ಸಿದ್ಧಿಸಿತೆಂದು ಹೇಳಿಕೊಂಡಿದ್ದಾಳೆ. ನೆಲ್ಲೂರು ಮಂಡಲದಲ್ಲಿ ಗೋಪವರ ಎಂಬ ಗ್ರಾಮವಿದೆ. ಈ ಕಾರಣದಿಂದ ಇವಳನ್ನು ನೆಲ್ಲೂರು ಮಂಡಲ ಕವಯಿತ್ರಿ ಎಂದು ಹೇಳಬಹುದು. ಇವಳ ಕಾಲ ಸಂಶಯಾಸ್ಪದವಾಗಿದೆ. ತನ್ನ ಗ್ರಂಥದಲ್ಲಿ ನನ್ನಯ್ಯ ತಿಕ್ಕ, ಭೀಮ, ನಾಚನಸೋಮ,

ರಂಗನಾಥ, ಶ್ರೀನಾಥ ಮತ್ತಿತರ ಮಹಾಕವಿಗಳನ್ನು ಸ್ತುತಿಸಿರುವುದರಿಂದ ಇವಳು ಶ್ರೀನಾಥನ ಅನಂತರದ ಕವಯಿತ್ರಿ ಅಂದರೆ ಕೃಷ್ಣದೇವರಾಯನ ಕಾಲದಲ್ಲಿದ್ದವಳು ಎಂದು ಊಹಿಸಬಹುದು. ಜನ್ಮತಃ ಶಿವಭಕ್ತಳಾದರೂ ಈಕೆಗೆ ರಾಮಕಥೆಯ ಮೇಲೆ ವಿಶೇಷ ಆಸಕ್ತಿ.

ತನಗಿಂತ ಪ್ರಾಚೀನರಾದ ಮಹಾಕವಿಗಳು ತೆಲುಗಿನಲ್ಲಿ ರಾಮಾಯಣವನ್ನು ಬರೆದರೂ ತಾನೂ ರಾಮಕಥೆಯನ್ನು ಬರೆದಳು. ಹಾಗೆ ಬರೆಯುವುದಕ್ಕೆ ಅವಳಿಗೆ ರಾಮನಾಮಸ್ಮರಣ ಜನ್ಮತಾರಕವೆಂಬ ಅಚಲವಿಶ್ವಾಸವಿತ್ತು. ಅಜ್ಞರಿಗೂ ತಜ್ಞರಿಗೂ ಸರ್ವರಿಗೂ ಮುಕ್ತಿ ಭುಕ್ತಿಪ್ರದಾತ ಶ್ರೀರಾಮನೇ ಎಂದು ಅವಳ ನಂಬಿಕೆ. ತಾನು ದೊಡ್ಡ ವಿದ್ಯಾವಂತಳಲ್ಲವೆಂದು ವಿನಯದಿಂದ ತನ್ನ ಗ್ರಂಥದಲ್ಲಿ ಹೇಳಿಕೊಂಡಿರುವಳು. ಜಟಿಲವಾದ ಸಂಸ್ಕೃತಪದಗಳಿಗಿಂತ ಪುಟ್ಟ ಪುಟ್ಟ ತಿಳಿ ತೆಲುಗಿನ ನುಡಿಗಳನ್ನೇ ಇವಳು ಹೆಚ್ಚಾಗಿ ಉಪಯೋಗಿಸಿರುವುದು ಒಂದು ವೈಶಿಷ್ಟ್ಯ. ಹಾಗಲ್ಲದೆ ಇರುವ ಕವಿತ್ವ ಮೂಕ, ಕಿವುಡರಿಗೆ ಪ್ರಿಯವಾಗಬಹುದು ಎಂದು ಅವಳ ಅಭಿಪ್ರಾಯ. ತನ್ನ ಗ್ರಂಥದಲ್ಲಿ ಸಾಕೇತಪುರವನ್ನು ಬಣ್ಣಿಸುವಾಗ ಪ್ರೌಢಿಮೆಯನ್ನೂ ತೋರಿಸಿದ್ದಾಳೆ. ಆ ಪ್ರೌಢಿಮೆ ಶಾಬ್ದಿಕವಲ್ಲ, ಚಮತ್ಕಾರಜನ್ಯ. ಸುಲಭವಾದ ಶ್ಲೇಷಾರ್ಥಗಳನ್ನು ಬಹಳ ಜಾಣ್ಮೆಯಿಂದ ಉಪಯೋಗಿಸಿದ್ದಾಳೆ. ಪ್ರಕೃತಿಯನ್ನು ಮನೋಜ್ಞವಾಗಿ ಬಣ್ಣಿಸಿದ್ದಾಳೆ. ಬಾಹ್ಯ ಸೌಂದರ್ಯವನ್ನಲ್ಲದೆ ಸ್ತ್ರೀಯರ ಸಹಜವಾದ ಸಭ್ಯತಾರುಚಿ ಔಚಿತ್ಯಗಳನ್ನೂ ತನ್ನ ಗ್ರಂಥದಲ್ಲಿ ಸಮಂಜಸವಾಗಿ ತಂದಿದ್ದಾಳೆ. ಇವಳ ರಾಮಾಯಣದಲ್ಲಿ ಮೊದಲು ನಾಲ್ಕು ಕಾಂಡಗಳೂ ಶರವೇಗದಿಂದ ಸಾಗುತ್ತವೆ. ಮಂಥರಾವೃತ್ತಾಂತವನ್ನೇ ಈಕೆ ಪ್ರಸ್ತಾಪಿಸಿಲ್ಲ. ಸೀತಾವಿಯೋಗ ಸಂದರ್ಭದಲ್ಲಿ ರಾಮನ ದುಃಖ ಹೃದಯವಿದ್ರಾವಕವಾಗಿ ಚಿತ್ರಿತವಾಗಿದೆ. ಸುಂದರ, ಯುದ್ಧಕಾಂಡಗಳೂ ತುಸು ವಿಸ್ತಾರವಾಗಿವೆ. ಕಾಲನೇಮಿವೃತ್ತಾಂತ ಸ್ವಲ್ಪ ವಿಸ್ತಾರವಾಗಿದೆ. ಕಾವ್ಯದ ಉದ್ದಕ್ಕೂ ಮೃದು ಮಧುರವಾದ, ಸಂದರ್ಭೋಚಿತವಾದ ಗಾದೆಗಳಿವೆ. ಒಟ್ಟಿನಲ್ಲಿ ಈಕೆಯ ಕಾವ್ಯ ಪಂಡಿತ ಪಾಮರರಿಬ್ಬರಿಗೂ ಪ್ರಿಯವಾಗಿದೆ. (ಬಿ.ಆರ್.)

**ಆತ್ಮ :** ಅನ್ ಧಾತುವಿನಿಂದ ಜನಿಸಿರುವ ಶಬ್ದ. ಅನ್ ಎಂದರೆ ಶ್ವಾಸಿಸು, ಉಸಿರಾಡು ಎಂದರ್ಥ. ಜೀವನದ ಉಸಿರೇ ಆತ್ಮ. ಕ್ರಮೇಣ ಅದಕ್ಕೆ ಜೀವನ, ವ್ಯಕ್ತಿಯ ಅಂತಃಸತ್ತ್ವ, ಜೀವಾತ್ಮ ಎಂಬ ಪ್ರಯೋಗಗಳಿಂದ ಅರ್ಥವೈಶಾಲ್ಯ ಪ್ರಾಪ್ತವಾಗಿದೆ. ಜೀವನ ಪ್ರಾಣ ಮತ್ತು ಪ್ರಜ್ಞೆಯನ್ನೊಳಗೊಂಡು ಆತ್ಮ ಅವನ್ನು ಮೀರಿದ ಅಸ್ತಿತ್ವವನ್ನು ಹೊಂದಿದೆ. ಆದ್ದರಿಂದಲೇ ಅದನ್ನು ನಶಿಸುವ ದೇಹ, ಪ್ರಾಣ, ಮನಸ್ಸು, ಬುದ್ಧಿ ಇವುಗಳಿಂದ ಭಿನ್ನವಾದದ್ದು, ಜನನ ಮರಣ ರಹಿತವಾದದ್ದು, ಎಂದು ತಿಳಿಯಬೇಕು. ಆತ್ಮಜ್ಞಾನ ಲಭಿಸಿದಾಗ ವಿಕಾರಗಳೆಲ್ಲವೂ ಅಳಿಸಿಹೋಗುತ್ತವೆ. ಜೀವನನ್ನು ಚೇತನಗೊಳಿಸಿ, ಬುದ್ಧಿಗೆ ಆಧಾರವಾಗಿರುವ ಸತ್ಯವೇ ಆತ್ಮವಸ್ತು.

ಆತ್ಮದ ಸ್ವರೂಪವನ್ನು ಕುರಿತು ಉಪನಿಷತ್ತುಗಳಲ್ಲಿ ಪ್ರಶ್ನೋತ್ತರಗಳಿವೆ. ಮುಖ್ಯವಾದ ಉಪನಿಷತ್ತುಗಳಂತೂ ಈ ಪ್ರಶ್ನೆಯನ್ನು ಒಂದಲ್ಲ ಒಂದು ರೀತಿ ಚರ್ಚಿಸಿವೆ. ಕಠೋಪನಿಷತ್ತಿನಲ್ಲಿ ಮೃತ್ಯುವಿಂದಾಚೆಗೆ ಆತ್ಮ ಏನಾಗುತ್ತದೆ ಎಂಬ ವಿಚಾರ ನಿರೂಪಣೆಯನ್ನು ನಚಿಕೇತ–ಯಮರ ಸಂವಾದರೂಪದಲ್ಲಿ ಕೊಡಲಾಗಿದೆ. ಜನ್ಮ, ಪುನರ್ಜನ್ಮಗಳನ್ನೂ ವಿಚಾರ ಮಾಡಲಾಗಿದೆ. ಆದ್ದರಿಂದ ಇದನ್ನು ಶವಸಂಸ್ಕಾರ ಕಾಲದಲ್ಲಿ ಪಾರಾಯಣ ಮಾಡುವ ಕ್ರಮವಿದೆ. ಮುಂಡಕೋಪನಿಷತ್ತಿನಲ್ಲಿ ಆತ್ಮಸಾಕ್ಷಾತ್ಕಾರದ ಮಾರ್ಗದರ್ಶನವಿದೆ. ಈಶೋಪನಿಷತ್ತು ಆತ್ಮಜ್ಞಾನದ ಮಹತ್ವವನ್ನು ಎತ್ತಿ ತೋರಿಸಿದೆ. ಛಾಂದೋಗ್ಯಉಪನಿಷತ್ತಿನಲ್ಲಿ ತತ್ತ್ವಮಸಿ ಶ್ವೇತಕೇತೋ ಎಂಬ ಮಹಾವಾಕ್ಯದ ಪ್ರಕರಣದಲ್ಲಿ ಆತ್ಮಜ್ಞಾನದ ವಿವರಣೆ ವಿಸ್ತಾರವಾಗಿಯೂ ಸುಸ್ಪಷ್ಟವಾಗಿಯೂ ಇದೆ. ಮುಂದಿನ ದರ್ಶನಗಳಲ್ಲಿ ಈ ವಾಕ್ಯವನ್ನೇ ಆಧಾರವಾಗಿಟ್ಟುಕೊಂಡು ಆತ್ಮಪರಮಾತ್ಮ ಸಂಬಂಧವನ್ನು ವಿಶದಪಡಿಸುವ ಪ್ರಯತ್ನವಿದೆ. ಬೃಹದಾರಣ್ಯಕೋಪನಿಷತ್ತಿನ ಯಾಜ್ಞವಲ್ಕ್ಯ ಸಂವಾದಗಳಲ್ಲಿ ಆತ್ಮವಿದ್ಯೆಯನ್ನು ಆಮೂಲಾಗ್ರವಾಗಿ ವಿವೇಚಿಸಲಾಗಿದೆ.

ವೇದಗಳಲ್ಲಿ ಆತ್ಮ ದೇಹಾತಿರಿಕ್ತ, ಅಮರ ಎಂಬ ಭಾವನೆ ಇತ್ತು. ಸುಕೃತ ದುಷ್ಕೃತ್ಯಗಳಿಂದ ಆಮುಷ್ಮಿಕಸದ್ಗತಿ ದುರ್ಗತಿಗಳನ್ನು ಆತ್ಮ ಹೊಂದುತ್ತಾನೆಂಬ ಭಾವವಿದೆ. ಉಪನಿಷತ್ತುಗಳ ಕಾಲದಿಂದೀಚೆಗೆ ಬಂದ ದಾರ್ಶನಿಕ ಪದ್ಧತಿಗಳೆಲ್ಲ (ಚಾರ್ವಾಕದರ್ಶನವನ್ನುಳಿದು) ಕರ್ಮಾನುಸಾರ ಆತ್ಮನಿಗೆ ಪುನರ್ಜನ್ಮವಾಗುತ್ತದೆ ಎಂಬ ಕರ್ಮಸಿದ್ಧಾಂತವನ್ನು ದೃಢವಾಗಿ ನಿರೂಪಿಸಲಾಗಿದೆ.

ಆತ್ಮ ದೇಹದಿಂದ ಬೇರೆಯಾದದ್ದು ಎಂಬುದೇ ಭಗವದ್ಗೀತೆಯ 2ನೆಯ ಅಧ್ಯಾಯದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ನೀಡಿದ ಉಪದೇಶ. ಸಾವು ನೋವುಗಳೆಲ್ಲ ದೇಹಕ್ಕೆ ಮಾತ್ರ. ಮನುಷ್ಯ ಜೀರ್ಣವಸ್ತ್ರವನ್ನು ತ್ಯಜಿಸಿ ಹೊಸವಸ್ತ್ರವನ್ನು ಧರಿಸುವಂತೆ ಆತ್ಮ ದೇಹಾಂತರ ಪ್ರಾಪ್ತಿಯನ್ನು ಪಡೆಯುತ್ತಾನೆ. ಆತ್ಮನ ನಿತ್ಯತೆಯನ್ನು ಅರಿತು ದೇಹನಾಶಕ್ಕೆ ದುಃಖಿಸದಿರುವುದೇ ವಿವೇಕಮಾರ್ಗವೆಂದು ವಿಷಾದಕ್ಕೊಳಗಾದ ಅರ್ಜುನನಿಗೆ ಶ್ರೀಕೃಷ್ಣ ಬೋಧಿಸುತ್ತಾನೆ.

ಆತ್ಮನಿಗೂ ಪರಮಾತ್ಮನಿಗೂ (ಬ್ರಹ್ಮನಿಗೂ) ಇರುವ ಸಂಬಂಧವನ್ನು ಉಪನಿಷತ್ತುಗಳು ಚರ್ಚಿಸಿವೆ. ಕೆಲವು ವೇಳೆ ಆತ್ಮಪರಮಾತ್ಮ ಭೇದವನ್ನು ಸೂಚಿಸಿದರೂ ಜೀವಾತ್ಮ ಪರಮಾತ್ಮನಿಗೆ ಅಧೀನ, ಅವನ ಅಂಶ ಮಾತ್ರ, ಅವನಲ್ಲಿಯೇ ಮುಕ್ತಿ ಹೊಂದುವ ಅಸ್ವತಂತ್ರ, ಪರಬ್ರಹ್ಮನನ್ನು ಬಿಟ್ಟರೆ ಅವನಿಗೆ ಅಸ್ತಿತ್ವವೇ ಇಲ್ಲ ಎಂಬ ತತ್ತ್ವವಿದೆ. ಬ್ರಹ್ಮ ಸರ್ವವ್ಯಾಪಕ, ಹಾಗೆಯೇ ಆತ್ಮನಲ್ಲಿಯೂ ಇರುವುದರಿಂದಲೇ ಆತ್ಮನಿಗೆ ಅಮರತ್ವ, ನರನಾರಾಯಣರು ನಿರಂತರ ಒಟ್ಟಾಗಿರುವವರನ್ನೂ ಬ್ರಹ್ಮನಂತೆಯೇ ಆತ್ಮ ನಶ್ವರಪ್ರಪಂಚವನ್ನು ಮೀರಿದವ.

ವೈಶ್ವಾನರ, ತೇಜಸ, ಪ್ರಾಜ್ಞ, ತುರೀಯ ಎಂಬ ನಾಲ್ಕು ರೂಪಗಳಲ್ಲಿ ಆತ್ಮ ಕ್ರಮವಾಗಿ ಜಾಗ್ರತ, ಸ್ವಪ್ನ, ಸುಷುಪ್ತಿ, ನಿರ್ವಿಕಲ್ಪಸಮಾಧಿ ಎಂಬ ಅವಸ್ಥೆಗಳಲ್ಲಿರುತ್ತದೆ. ಹಿಂದೂದರ್ಶನಗಳಲ್ಲಿ ಆತ್ಮವಿಚಾರ ಭಿನ್ನಾಭಿಪ್ರಾಯಕ್ಕೊಳಗಾಗಿದೆ. ಚಾರ್ವಾಕದರ್ಶನದಲ್ಲಿ ಆತ್ಮವನ್ನು ದೇಹದಿಂದ ಬೇರೆ ಎಂದು ಒಪ್ಪಿಲ್ಲ. ಅತ್ಯಂತ ಪರೋಕ್ಷನಾದ, ಅನುಭವಗೋಚರವಲ್ಲದ ಆತ್ಮ, ಪರಮಾತ್ಮ, ಸ್ವರ್ಗ, ನರಕ, ಜನ್ಮ, ಪುನರ್ಜನ್ಮಗಳಿಗೆ ಅದರಲ್ಲಿ ಅವಕಾಶವಿಲ್ಲ. ಆದರೆ ಅಹಂಕಾರಕಾರಕವಾದ ಶಾಶ್ವತವಾದ ಆತ್ಮನನ್ನು ನಿಷೇಧಿಸಿರುವುದರಿಂದ ತನ್ನ ಸುಖಕ್ಕಾಗಿ ಪರರನ್ನು ಹಿಂಸಿಸದೆ ಆದಷ್ಟೂ ಸುಖಪಡಬೇಕೆಂಬ ನೀತಿ ಅದರಲ್ಲಿ ಇದೆ.

ಬೌದ್ಧದರ್ಶನದಲ್ಲಿ ಆತ್ಮ ರೂಪ, ವೇದನಾ, ಸಂಜ್ಞೆ, ಸಂಸ್ಕಾರ, ವಿಜ್ಞಾನ ಎಂಬ ಪಂಚ ಸ್ಕಂದಗಳ ಸಂಘಾತವೇ ಹೊರತು ಶಾಶ್ವತ ವಸ್ತುವಲ್ಲ. ಇದನ್ನು ನೈರಾತ್ಮವಾದವೆನ್ನಲಾಗಿದೆ. ನೈರಾತ್ಮಭಾವನೆಯಿಂದಲೇ ಅಹಂ, ನಾನು ಎಂಬ ಮಹಾ ಮೋಹ ನಿವೃತ್ತಿಯಾಗಿ, ಎಣ್ಣೆತೀರಿಹೋದರೆ ದೀಪ ಆರಿಹೋಗುವಂತೆ, ವಿಜ್ಞಾನವೆಂಬ ಆತ್ಮ ರಾಗವೆಂಬ ಆಶೆ ತೀರಿದಾಗ ನಿರ್ವಾಣವನ್ನು ಪಡೆದು ಶಾಂತಿಯನ್ನು ಹೊಂದುತ್ತದೆಂದು ನಿರೂಪಿಸಲಾಗಿದೆ.

ಸಾಂಖ್ಯದರ್ಶನದಲ್ಲಿ ಚೈತನ್ಯ ಚೇತನ, ಪುರುಷ, ಚಿಚ್ಛಕ್ತಿ ಆತ್ಮ ಮೊದಲಾದ ಪದಗಳು ಒಂದೇ ಅರ್ಥದಲ್ಲಿವೆ. ಆತ್ಮ ಗುಣದೋಷರಹಿತವಾದ ಕನ್ನಡಿಯಂತೆ ನಿರ್ವಿಕಾರ. ಇತರ ದಾರ್ಶನಿಕರು ಆತ್ಮಕ್ಕೆ ಯಾವ ಯಾವ ಸ್ವಭಾವಗಳನ್ನು ಹೇಳುವರೋ ಅವೆಲ್ಲವನ್ನೂ ಬುದ್ಧಿಗೆ ಹೇಳಲಾಗಿದೆ. ಜೀವಾತ್ಮನಿಗೆ ಪ್ರಕೃತಿಪರಿಣಾಮಗಳಾದ, ಮಹತ್, ಅಹಂಕಾರ, ಏಕಾದಶೇಂದ್ರಿಯಗಳು, ಪಂಚತನ್ಮಾತ್ರಗಳು ಎಂಬ ಹದಿನೆಂಟು ತತ್ತ್ವಗಳು ಸೇರಿ ಅಂಗಶರೀರ ಪ್ರಾಪ್ತಿಯಾಗುತ್ತದೆ. ಇದೇ ಸ್ಥೂಲಶರೀರವನ್ನು ಧರಿಸುತ್ತದೆ.

ಜೈನದರ್ಶನದಲ್ಲಿ, ಜೀವ ಜಗತ್ತು ಕರ್ಮ ಅನಾದಿ. ಆತ್ಮನಲ್ಲಿ ಜ್ಞಾನ ಸುಖ ಮೊದಲಾದುವು ಸಹಜವಾಗಿವೆ. ಆತ್ಮಪ್ರಭೆಯೆಂಬ ಜ್ಞಾನಕ್ಕೆ ಕರ್ಮವೆಂಬ ಆವರಣವಿದೆ. ಈ ಆವರಣ ಕ್ಷಯವಾದಾಗ ಸರ್ವಜ್ಞತ್ವ ಉಂಟಾಗಿ ಮೋಕ್ಷಕ್ಕೆ ಕಾರಣವಾಗುತ್ತದೆ.

ಯೋಗದರ್ಶನದಲ್ಲಿ ಜೀವಾತ್ಮವೆಂಬ ಪುರುಷ ಅಸಂಖ್ಯಾತ, ಅಜ, ನಿತ್ಯ, ನಿರ್ಲೇಪ; ಸ್ವಾಭಾವಿಕವಾಗಿ, ನಿರ್ದೋಷನಾಗಿ ಸರ್ವಸಾಕ್ಷಿಯೂ ಚೈತನ್ಯ ಮತ್ತು ಜ್ಞಾನ ಸ್ವರೂಪನೂ ಆಗಿದ್ದಾನೆ. ಅನಾದಿ ಕಾಲದಿಂದಲೂ ಪ್ರಕೃತಿಸಂಬಂಧವಿದ್ದು ಚಿತ್ತವೇ ತಾನೆಂದು ಮನುಷ್ಯ ಭ್ರಾಂತಿಗೊಳ್ಳುವ ಈ ಭ್ರಾಂತಿ ನಿವೃತ್ತಿಯಾದಾಗ ಮೋಕ್ಷ.

ನ್ಯಾಯಶಾಸ್ತ್ರದಲ್ಲಿ ಆತ್ಮ ಮೋಕ್ಷಕ್ಕೆ ಅಧಿಕಾರಿ. ಶರೀರ ಇಂದ್ರಿಯ, ಅರ್ಥ ಬುದ್ಧಿ ಮತ್ತು ಮನಸ್ಸು, ಅವನಿಗೆ ಭೋಗಗಳು, ಭೋಗಸಾಧನೆಗಳು. ದೇಹೇಂದ್ರಿಯಾದಿಗಳೇ ತಾನು ಎಂಬುದೇ ಮೋಹ ಅಹಂಕಾರ; ಇದರ ನಿವೃತ್ತಿಯಿಂದ ಸತ್ಯ ಸಾಕ್ಷಾತ್ಕಾರವಾಗಿ ಮೋಕ್ಷಪ್ರಾಪ್ತಿ. ವೈಶೇಷಿಕರೂ ಆತ್ಮ ಸರ್ವವ್ಯಾಪಿ, ಅಮರ, ಮೋಕ್ಷವೇ ಅದರ ಗುರಿ ಎನ್ನುತ್ತಾರೆ.

ಉತ್ತರಮೀಮಾಂಸ ಅಥವಾ ವೇದಾಂತದಿಂದ ಹುಟ್ಟಿದ ಮತತ್ರಯಗಳಲ್ಲಿ ಮೊದಲನೆಯದಾದ ಅದ್ವೈತ ಸಿದ್ಧಾಂತದಲ್ಲಿ ಆತ್ಮವೂ ಬ್ರಹ್ಮನೂ ಒಂದೇ ಮಾಯೆಯಿಂದ ಭಿನ್ನವಾಗಿ ಕಾಣುತ್ತವೆ. ಸತ್, ಚಿತ್, ಆನಂದಮಯಸ್ವರೂಪನಾದ ಆತ್ಮ ಅಂತಃಕರಣದೊಂದಿಗೆ ಬೆರೆತಿದೆ. ಪರಿಶುದ್ಧ ಜೀವಾತ್ಮ ಸ್ವರೂಪವನ್ನು, ಪರಮಾತ್ಮೈಕ್ಯವನ್ನು ತಿಳಿಯುವುದಕ್ಕೆ ಶಾಸ್ತ್ರಶೋಧನೆ ಆವಶ್ಯಕ. ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ ಎಂಬ ತತ್ತ್ವಪ್ರತಿಪಾದನೆಯಲ್ಲಿ, ಪಾರಮಾರ್ಥವಾಗಿ ಪರಮಾತ್ಮನೇ ಜೀವಾತ್ಮನಾಗಿರುವನೆಂದೂ ಮೋಕ್ಷದಲ್ಲಿ ಪರಮಾತ್ಮನೇ ಜೀವಾತ್ಮನಾಗಿರುವನೆಂದೂ ನದಿಗಳು ಸಮುದ್ರದಲ್ಲಿ ಲೀನವಾಗುವುದನ್ನೂ, ಉಪ್ಪು ನೀರಿನಲ್ಲಿ ಕರಗುವುದನ್ನೂ ಬ್ರಹ್ಮಾತ್ಮೈಕ ತತ್ತ್ವಕ್ಕೆ ದೃಷ್ಟಾಂತವಾಗಿ ಹೇಳುತ್ತಾರೆ.

ಎರಡನೆಯದಾದ ವಿಶಿಷ್ಟಾದ್ವೈತದಲ್ಲಿ ಆತ್ಮರೆಲ್ಲರೂ ಸಮರು. ಆತ್ಮವಸ್ತುವಿಗೆ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವ ಎಂಬ ಸ್ವಭಾವಗಳಿವೆ. ಜೀವಾತ್ಮ ಪರಮಾತ್ಮನಿಂದ ಬೇರೆಯಾದ ಚಿದ್ವಸ್ತುವಾದರೂ ಪರಮಾತ್ಮ ಜೀವನ ಅಂತರ್ಯಾಮಿ, ಜೀವಾತ್ಮನ ಆತ್ಮ. ಸರ್ವವಿಧ ಪಾಶಗಳಿಂದಲೂ ಸಂಸಾರದಿಂದಲೂ ಬಿಡುಗಡೆ ಹೊಂದಿದ ಜೀವ ಮುಕ್ತಿಯಲ್ಲಿ ಭಗವಂತನಲ್ಲಿ ಐಕ್ಯವಾಗದೆ ಸಾರೂಪ್ಯ ಪದವಿ ಹೊಂದಿ ದಿವ್ಯಜ್ಞಾನದಿಂದ ಕೂಡಿ ನಿತ್ಯಪರಿಪೂರ್ಣ ಬ್ರಹ್ಮಸಾಕ್ಷಾತ್ಕಾರದ ಆನಂದವನ್ನು ಅನುಭವಿಸುತ್ತ ಇರುತ್ತಾನೆ. ಮುಕ್ತಿ ಪಡೆದ ಜೀವಾತ್ಮ ಈಶ್ವರನಿಂದ ಸೃಷ್ಟಿಸಲ್ಪಟ್ಟು ವಿವಿಧ ಲೋಕ, ವಿವಿಧ ದೇಹಗಳನ್ನು ಪ್ರವೇಶಿಸಿ, ಲೋಕಕ್ಕೆ ಅಭ್ಯುದಯವನ್ನುಂಟುಮಾಡಲು ಕಾರಣನಾಗಬಹುದೆಂಬ ನಂಬಿಕೆ ಇದೆ.

ದ್ವೈತಮತದಲ್ಲಿ ಜೀವಾತ್ಮ ಪರಮಾತ್ಮರಿಗೆ ಭೇದವಿದೆ. ಜೀವ ಕರ್ಮಾನುಸಾರವಾಗಿ ದೇಹದಲ್ಲಿ ಸುಖದುಃಖಗಳನ್ನನುಭವಿಸಿ, ಸಂಸಾರಬಂಧನಕ್ಕೆ ಕಾರಣವಾದ ಅವಿದ್ಯೆಯಿಂದ ಮುಕ್ತವಾಗಿ, ಸ್ವಾಭಾವಿಕ ಜ್ಞಾನವನ್ನು ಪಡೆದಾಗ, ಮೋಕ್ಷಪದವಿಯಲ್ಲಿ ಹಂತಗಳ ತನ್ನ ಸಾಧನೆ, ಅನುಷ್ಠಾನಗಳಿಗೆ ಅನುಸಾರವಾದ ಪ್ರಮಾಣದಲ್ಲಿ ಆನಂದವನ್ನು ಅನುಭವಿಸುತ್ತದೆ.

ಜೀವ ಜೀವರುಗಳಿಗೆ ಸ್ವಭಾವತಃ ತಾರತಮ್ಯವಿರುವುದಲ್ಲದೆ, ಮೋಕ್ಷಾನುಭವದಲ್ಲೂ ತಾರತಮ್ಯವುಂಟು. ಈ ಮತದ ಪ್ರಕಾರ ಕೆಲವು ಜೀವಾತ್ಮರು ಮುಕ್ತಿಗೆ ಅನರ್ಹರು ಮತ್ತು ನಿತ್ಯಬದ್ಧರು, ನಿತ್ಯ ಸಂಸಾರಿಗಳು. (ಎಸ್.ಎಸ್.ಆರ್.)

**ಆತ್ಮಕಥೆ :** ವ್ಯಕ್ತಿ ತನ್ನ ಜೀವನಚರಿತ್ರೆಯನ್ನು ತಾನೇ ಬರೆದರೆ ಅದನ್ನು ಆತ್ಮಕಥೆ, ಆತ್ಮವೃತ್ತ ಎನ್ನುತ್ತೇವೆ (ಆಟೊಬಯಾಗ್ರಫಿ). ಅದೇ ವ್ಯಕ್ತಿಯ ಚರಿತ್ರೆಯನ್ನು ಬೇರೊಬ್ಬ ಬರೆದಾಗ ಅದನ್ನು ಜೀವನಚರಿತ್ರೆ (ಬಯಾಗ್ರಫಿ). ಎನ್ನುತ್ತೇವೆ ಆತ್ಮಕಥೆ ಸಾಹಿತ್ಯದ ಒಂದು ಪ್ರಮುಖ ಪ್ರಕಾರ. ಪತ್ರಗಳು (ದಿನಚರಿ, ಜರ್ನಲ್‌ಗಳು, ಬಖೈರುಗಳು), ವೈಯಕ್ತಿಕ ಪ್ರಬಂಧಗಳು ಮುಂತಾದುವು ಈ ವರ್ಗಕ್ಕೆ ಸೇರುತ್ತವೆ. ಮಾನವನ ವ್ಯಕ್ತಿತ್ವ ತನ್ನನ್ನು ತಾನು ಚಿರಸ್ಮರಣೀಯ ಮಾಡಿಕೊಳ್ಳುವ ಪ್ರಯತ್ನವನ್ನು ಈ ಬಗೆಯ ಸಾಹಿತ್ಯದಲ್ಲಿ ನಾವು ಕಾಣುತ್ತೇವೆ.

ಭಾರತೀಯರಲ್ಲಿ ಆತ್ಮಕಥೆಗಳಾಗಲಿ ಜೀವನಚರಿತ್ರೆಗಳಾಗಲಿ ಬೆಳೆಯದಿದ್ದುದಕ್ಕೆ ಅವರ ಅಲೌಕಿಕ ಜೀವನೋದ್ದೇಶವೇ ಕಾರಣವೆನ್ನಬಹುದು. ವ್ಯಕ್ತಿಚರಿತ್ರೆ, ರಾಜಮಹಾರಾಜರುಗಳ ಚರಿತ್ರೆ ಅವರಿಗೆ ಗೌಣವೆನಿಸಿತು. ದೇವರ ಮತ್ತು ದೇವತೆಗಳ ಕಡೆಗೆ ಅವರ ಒಲವು ಹೆಚ್ಚಾಗಿದ್ದುದರಿಂದ ಮತಧರ್ಮ ಸಂಬಂಧದ ಸಾಹಿತ್ಯವೇ ಹೇರಳವಾಗಿ ಬೆಳೆಯಿತು. ಅನಂತರ ರಾಮಾಯಣ ಮಹಾಭಾರತಗಳಲ್ಲಿ ಚರಿತ್ರೆಯ ನವುರಾದ ಎಳೆಗಳನ್ನು ಕಾಣುತ್ತೇವೆ. ಪುರಾಣಗಳಲ್ಲಿ ಚರಿತ್ರೆ ಕಲಸಿಹೋಗಿದೆ. ಮುಂದಿನ ಕವಿಗಳು ರಾಜಮಹಾರಾಜರ ಚರಿತ್ರೆಯನ್ನು ಹೇಳುವಾಗಲೂ ತಮ್ಮ ಧಾರ್ಮಿಕ ಕಾವ್ಯಗಳಲ್ಲಿ ಅವನ್ನು ಹಾಸುಹೊಕ್ಕಾಗಿ ಹೆಣೆದುಬಿಟ್ಟರು. ಕಾಳಿದಾಸನ ರಘುವಂಶ ಚರಿತ್ರೆಯಾದರೂ ಕಾವ್ಯವೆಂದೇ ಅದರ ಪ್ರಾಶಸ್ತ್ಯ ಉಳಿದಿದೆ. ಭಾರತೀಯ ಸಾಹಿತ್ಯದಲ್ಲಿ ಚರಿತ್ರೆಯ ರಚನೆ ಪಾಂಕ್ತವಾಗಿ ಪ್ರಾರಂಭವಾದದ್ದು 18, 19ನೆಯ ಶತಮಾನಗಳಲ್ಲಿ; ಜೀವನ ಚರಿತ್ರೆಯಾದರೋ ಇನ್ನೂ ಒಂದು ಶತಮಾನದ ಅನಂತರ ಬೆಳೆಯಿತು. ಈಗ ಆ ಬೆಳೆ ಹುಲುಸಾಗಿ ಅಭಿವೃದ್ಧಿಗೊಂಡಿದೆ.

ಬಹುಮಟ್ಟಿಗೆ ಯುರೋಪ್ ಖಂಡದಲ್ಲಿ ಆತ್ಮಕಥೆಯ ಹುಟ್ಟು ಮತ್ತು ಬೆಳವಣಿಗೆ ಆಗುವುದಕ್ಕೆ ಒಂದು ಕಾರಣ ಕ್ರೈಸ್ತಧರ್ಮದ ಮುಖ್ಯ ಅಂಶಗಳಲ್ಲೊಂದಾದ ಪಾಪನಿವೇದನೆ. ಇದರಿಂದ ಆತ್ಮಪರಿಶೋಧನೆಯ ಸ್ವಭಾವ ಬೆಳೆದು, ಯುರೋಪಿನಲ್ಲಿ ಬಹಳ ಹಿಂದೆಯೇ ಆತ್ಮಚರಿತ್ರಾಂಶವುಳ್ಳ ಅನೇಕ ಕೃತಿಗಳು ಬರೆಯಲ್ಪಟ್ಟವು. ನಮಗೆ ದೊರಕಿರುವ ಗ್ರಂಥಗಳ ಆಧಾರದ ಮೇಲೆ ಪ್ರ.ಶ.ಪೂ. 121–80ರಲ್ಲಿ ಜೀವಿಸಿದ್ದ ಮಾರ್ಕಸ್ ಆರೀಲಿಯಸ್ ಎಂಬ ರಾಜನ ಮೆಡಿಟೇಷನ್ಸ್ ಎಂಬ ಕೃತಿಯೇ ಆತ್ಮಕಥೆಯ ಗುಂಪಿಗೆ ಸೇರಿದ ಬರೆವಣಿಗೆಗಳಲ್ಲಿ ಅತ್ಯಂತ ಹಳೆಯದು. ಮುಂದೆ ಸೆಂಟ್ ಆಗಸ್ಟೀನ್ (345–430) ಬರೆದ ಕನ್‌ಫೆಷನ್ಸ್ ಎಂಬ ಕೃತಿ ಈ ಮಾರ್ಗದಲ್ಲಿ ಒಂದು ಮುಖ್ಯ ಮೈಲಿಗಲ್ಲು. 8ನೆಯ ಶತಮಾನದಲ್ಲಿ ಇಂಗ್ಲೆಂಡಿನ ವೆನರಬಲ್ ಬೀಡ್‌ನ ಕೃತಿಯೊಂದರಲ್ಲಿ ಆತ್ಮಕಥೆಯಿರುವುದನ್ನು ನೋಡುತ್ತೇವೆ. ಇದಾದ ಮೇಲೆ 1573ರಲ್ಲಿ ಬರೆಯಲ್ಪಟ್ಟ ಪೊಯಟಿಕಲ್ ನ್ಯಾರಟಿವ್ ಆಫ್ ಥಾಮಸ್ ಟಸರ್ ಎಂಬ ಗ್ರಂಥ ಬರುವವರೆಗೆ ಆತ್ಮಕಥೆ ಎಂದು ಕರೆಸಿಕೊಳ್ಳಲು ಅರ್ಹವಾದ ಕೃತಿ ಯಾವುದೂ ಬರಲಿಲ್ಲ. ಈ ಸಾಹಿತ್ಯ ಪ್ರಕಾರ 18, 19 ಮತ್ತು 20ನೆಯ ಶತಮಾನಗಳಲ್ಲಿ ಅಧಿಕವಾಗಿ ಬೆಳೆದು ಬಹು ಜನಪ್ರಿಯವಾಗಿದೆ. ಈ ಅವಧಿಯಲ್ಲಿ ಬಂದ ನೂರಾರು ಕೃತಿಗಳಲ್ಲಿ ಫ್ರ್ಯಾಂಕ್ಲಿನ್, ರೂಸೊ, ಎಡ್ಮಂಡ್ ಗಾಸ್, ಮಿಲ್, ಟ್ರೊಲೋಪ್, ಟಾಲ್‌ಸ್ಟಾಯ್, ಡಬ್ಲ್ಯೂ.ಎಚ್. ಡೇವಿಸ್ ಆಸ್ಬರ್ಟ್ ಸಿಟ್‌ವೆಲ್, ಜವಹರಲಾಲ್ ನೆಹರು ಮತ್ತು ಗಾಂಧೀಜಿ ಇವರ ಆತ್ಮಕಥೆಗಳು ಪ್ರಸಿದ್ಧವಾಗಿವೆ.

ಸುಮಾರು 18ನೆಯ ಶತಮಾನದ ಕೊನೆಯವರೆಗೂ ಆತ್ಮಕಥೆಗೆ ಒಂದು ಪ್ರತ್ಯೇಕ ಅಸ್ತಿತ್ವವಿರಲಿಲ್ಲ. ಜೀವನ ಚರಿತ್ರೆಯಲ್ಲಿಯೇ ಅದೂ ಸೇರಿಹೋಗಿತ್ತು. 19ನೆಯ ಶತಮಾನದ ಆದಿಭಾಗದಲ್ಲಿ ಅದಕ್ಕೆ ಪ್ರತ್ಯೇಕ ಅಸ್ತಿತ್ವ ಬಂದಿತು.

ಆತ್ಮಕಥೆಗೂ ಬಖೈರಿಗೂ ಹೆಚ್ಚಿನ ಹೋಲಿಕೆ ಇದ್ದರೂ ಮುಖ್ಯವಾದ ಒಂದು ವ್ಯತ್ಯಾಸವಿದೆ. ಆತ್ಮಕಥೆಯಲ್ಲಿ ಬಹುಮಟ್ಟಿನ ಭಾಗ ಅದರ ನಾಯಕನನ್ನು ಕುರಿತದ್ದಾಗಿರುತ್ತದೆ. ಆದರೆ ಬಖೈರಿನಲ್ಲಿ ಬಹುಭಾಗ ನಾಯಕನ ದೃಷ್ಟಿಗೆ ಬಿದ್ದ ವಿಷಯಗಳನ್ನು ಮತ್ತು ಅವನ ಜೀವನಪಥದಲ್ಲಿ ಬರುವ ಹಲವು ವ್ಯಕ್ತಿಗಳನ್ನು ಕುರಿತದ್ದಾಗಿರುತ್ತದೆ. ಒಬ್ಬ ವ್ಯಕ್ತಿಯ ಆತ್ಮಕಥೆ ಮತ್ತು ಅವನನ್ನು ಕುರಿತು ಇತರರು ಬರೆದ ಜೀವನಚರಿತ್ರೆಗಳ ವಿಷಯ ಒಂದೇ ಆದರೂ ಅದನ್ನು ಚಿತ್ರಿಸುವ ಕ್ರಮದಲ್ಲಿ ವ್ಯತ್ಯಾಸವಿರುತ್ತದೆ. ಆತ್ಮಕಥೆಯಿಂದ ಜೀವನಚರಿತ್ರೆಯನ್ನು ಬರೆಯುವವನಿಗೆ ವಿಷಯ ಸಿಕ್ಕುತ್ತದೆ. ಆದರೆ ಯಾರೂ ಜೀವನಚರಿತ್ರೆಯಿಂದ ಆತ್ಮಕಥೆಯನ್ನು ಬರೆಯಲು ವಿಷಯವನ್ನು ತೆಗೆದುಕೊಳ್ಳುವುದಿಲ್ಲ.

ಆತ್ಮಕಥೆಗಳನ್ನು ಬರೆಯಲು ಹಲವಾರು ಉದ್ದೇಶಗಳಿರುತ್ತವೆ. ಅವುಗಳಲ್ಲಿ ಇವು ಕೆಲವು: ತನ್ನ ಜೀವನದ ಸ್ವಾರಸ್ಯವನ್ನು ಇತರರೊಡನೆ ಹೇಳಿಕೊಂಡರೆ ಅದು ಅವರಿಗೆ ರುಚಿಸಬಹುದು, ಪ್ರಯೋಜನಕಾರಿಯಾಗಬಹುದು ಎಂಬ ಭಾವನೆ. ತಾನು ಮಾಡಿದ ಕೆಲಸಕಾರ್ಯಗಳನ್ನು, ಜೀವನದಲ್ಲಿ ತಾಳಿದ ನಿಲುವನ್ನು ಸಮರ್ಥಿಸಿಕೊಳ್ಳುವುದು, ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು. ತನ್ನ ತೃಪ್ತಿ ಮತ್ತು ಉಪಯೋಗಕ್ಕಾಗಿ ತನ್ನ ಜೀವನವನ್ನು ಒಂದು ದೃಷ್ಟಿಯಿಂದ ನೋಡುವುದು ಮತ್ತು ಅದಕ್ಕೆ ಒಂದು ಕ್ರಮವನ್ನು ಕೊಡುವುದು. ತನ್ನ ವೈಯಕ್ತಿಕ ಜೀವನವನ್ನು ಓದುಗರ ಮುಂದಿಟ್ಟು ಆ ಮೂಲಕ ಪ್ರಚಾರ ಮತ್ತು ಹಣವನ್ನು ಗಳಿಸುವುದು. ಓದುಗರ ಅನುಕಂಪವನ್ನು ಪಡೆಯುವುದು, ಮೆಚ್ಚಿಕೆ ಮತ್ತು ಹೊಗಳಿಕೆಯನ್ನು ಗಳಿಸುವುದು. ತನ್ನ ಜೀವನದ ಸಿಹಿಯಾದ ನೆನಪುಗಳನ್ನು ಮೆಲುಕುಹಾಕುವ ಸಲುವಾಗಿ ಕಹಿ ನೆನಪುಗಳ ಹೊರೆಯನ್ನು ಕಳೆದುಕೊಳ್ಳುವುದಕ್ಕಾಗಿ, ಕಲಾಮಯವಾದ ಜೀವನಚಿತ್ರವನ್ನು ಕೊಡುವುದಕ್ಕಾಗಿ ಬರೆದಿಡುವುದು–ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಹಲವು ಅಂಶಗಳು ಆತ್ಮಕಥೆಯನ್ನು ಬರೆಯಲು ಒಬ್ಬ ವ್ಯಕ್ತಿಯನ್ನು ಪ್ರಚೋದಿಸುತ್ತವೆ.

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಆತ್ಮಕಥೆಯಿದ್ದರೂ ಅದನ್ನು ಕಲಾತ್ಮಕವಾಗಿ ಬರೆಯುವ ಶಕ್ತಿಯಿರುವುದಿಲ್ಲ. ಅಲ್ಲದೆ ಎಲ್ಲರ ಜೀವನವೂ ಸ್ವಾರಸ್ಯದಿಂದ ಕೂಡಿರುವುದಿಲ್ಲ. ಅಂದರೆ ಆತ್ಮಕಥೆಗಾರನ ಜೀವನ ಸ್ವಾರಸ್ಯವುಳ್ಳದ್ದಾಗಿರಬೇಕು, ಅದನ್ನು ಅಚ್ಚುಕಟ್ಟಾಗಿ ಚಿತ್ರಿಸುವ ಭಾಷಾಶೈಲಿಗಳನ್ನು ಅವನು ಹೊಂದಿರಬೇಕು. ಅವನಲ್ಲಿ ವಿಷಯಗಳನ್ನು ವಿಶ್ಲೇಷಿಸುವ, ಸಂಯೋಜಿಸುವ, ಗ್ರಹಿಸುವ ಆತ್ಮಶೋಧನೆ ಮಾಡಿಕೊಳ್ಳುವ ಶಕ್ತಿ ಇರಬೇಕು. ನಿಷ್ಪಕ್ಷಪಾತ, ವಾಸ್ತವಿಕತಾಪ್ರವೃತ್ತಿ, ಅಲಿಪ್ತತೆ, ಕುತೂಹಲ–ಈ ಗುಣಗಳನ್ನು ಅವನು ಹೊಂದಿರಬೇಕು. ಜೀವನದ ಸಾವಿರಾರು ವಿವರಗಳಲ್ಲಿ ಮುಖ್ಯವಾದವುಗಳನ್ನು ಆರಿಸಿಕೊಳ್ಳುವ, ಅವುಗಳಿಗೆ ಸೂಕ್ತ ಪ್ರಾಧಾನ್ಯವನ್ನು ಕೊಡುವ ಶಕ್ತಿಯುಳ್ಳವನೂ ಮತ್ತು ಇಡೀ ಜೀವನವನ್ನು ನೋಡಲು ಯೋಗ್ಯವಾದ ಅರ್ಥವತ್ತಾದ ಒಂದು ದೃಷ್ಟಿಕೋನವನ್ನು ಉಳ್ಳವನೂ ಆಗಿರಬೇಕು.

ಆತ್ಮಕಥೆ ಈಚೀಚೆಗೆ ಬಹಳ ಜನಪ್ರಿಯವಾಗಿದೆ ಮತ್ತು ಹೇರಳವಾಗಿ ಅಂಥ ಪುಸ್ತಕಗಳು ಅಚ್ಚಾಗಿ ಹೊರಬರುತ್ತಿವೆ. ಇದಕ್ಕೆ ಅನೇಕ ಕಾರಣಗಳಿವೆ. ಆತ್ಮಕಥೆಯನ್ನು ಓದುವುದರಿಂದ ಸ್ವಾರಸ್ಯವಾದ ಒಬ್ಬ ವ್ಯಕ್ತಿಯ ಸಂಗ ಸಿಕ್ಕಿದಂತಾಗುತ್ತದೆ. ಅವನು ದೊಡ್ಡ ವ್ಯಕ್ತಿಯಾಗಿದ್ದರೆ ಒಂದು ದೇಶದ ಅಥವಾ ಒಂದು ಕಾಲದ ಚರಿತ್ರೆ ರೂಪಿತವಾಗಲು ಅವನ ಪಾತ್ರವೇನು ಎಂಬುದರ ಅರಿವಾಗುತ್ತದೆ. ದೊಡ್ಡ ದೊಡ್ಡ ವ್ಯಕ್ತಿಗಳ ಮತ್ತು ಘಟನೆಗಳ ಮೇಲೆ ಅವನು ಮಾಡಿರುವ ಟೀಕೆಗಳು ಉಪಯುಕ್ತವಾಗಿರುತ್ತವೆ. ಅವನ ಮನೋವೃತ್ತಿ ಒಂದು ದೇಶದ ಮತ್ತು ಒಂದು ಕಾಲದ ಮನೋವೃತ್ತಿಯನ್ನು ಪ್ರತಿಬಿಂಬಿಸುತ್ತದೆ. ಆತ್ಮಕಥೆಗಾರ ನಿಜವಾದದ್ದನ್ನೇ ಬರೆದಿದ್ದರೆ ಅವನ ಕೃತಿ ಚರಿತ್ರೆಯನ್ನು ಬರೆಯುವವರಿಗೆ ಒಂದು ಆಧಾರಗ್ರಂಥವಾಗುತ್ತದೆ. ಮೇಲಾಗಿ ಆತ್ಮಕಥೆ ಮನುಷ್ಯಸ್ವಭಾವವನ್ನು ಉದಾಹರಿಸುವ ಒಂದು ದಾಖಲೆ. ಆದ್ದರಿಂದಲೇ ಚರಿತ್ರೆಯನ್ನು ಮಹಾಪುರುಷರ ಜೀವನ ಪರಂಪರೆ ಎಂದು ಕರೆದಿದ್ದಾರೆ. ಅದರಂತೆ ಆತ್ಮಕಥೆಗಳು ಅಂದಿನ ಸಾಮಾಜಿಕ ಹಾಗೂ ಸಾಮೂಹಿಕ ರಾಜಕೀಯ ಜೀವನದ ಇತಿಹಾಸವಾಗುತ್ತವೆ.

ಆತ್ಮಕಥೆಗಳಲ್ಲಿ ಅನೇಕ ದೋಷಗಳಿರಬಹುದು. ಸತ್ಯಸಂಧನಲ್ಲದ ಆತ್ಮಕಥೆಗಾರ ವಿಷಯವನ್ನು ಮರೆಮಾಚಬಹುದು. ಇಲ್ಲದ್ದನ್ನು ಸೇರಿಸಬಹುದು. ಇದ್ದದ್ದನ್ನು ವಿರೂಪಮಾಡಬಹುದು ಅಥವಾ ಅತಿಮಾಡಬಹುದು. ಎಲ್ಲ ಆತ್ಮಕಥೆಗಾರರೂ ತಮ್ಮ ವಿಚಾರದಲ್ಲಿ ನಿಷ್ಪಕ್ಷಪಾತಿಗಳಾಗಿರುವುದಿಲ್ಲ, ತಮ್ಮನ್ನು ತಾವೇ ದಂಡಿಸಿಕೊಳ್ಳುವ ಮನೋಭಾವದವರಿರುತ್ತಾರೆ, ಸ್ವಪ್ರತಿಷ್ಠೆಯವರಿರುತ್ತಾರೆ, ವಿಷಯಲೋಲುಪರಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ಆತ್ಮಕಥೆಯನ್ನು ಬರೆಯುವವನ ಭಾವೋದ್ರೇಕದಿಂದ ಅವನ ಕೃತಿ ದೋಷಯುತವಾಗುತ್ತದೆ. ಅವನ ಜೀವನದ ನೈಜಚಿತ್ರ ಸಿಗದೆ ತನ್ನದು ಹೇಗಿರಬೇಕಿತ್ತು ಎಂದು ಅವನು ಆಶಿಸಿದ್ದನೋ ಅಂಥ ಜೀವನ ಚಿತ್ರಿತವಾಗಿರುತ್ತದೆ. ಈ ಸಾಹಿತ್ಯಪ್ರಕಾರದ ಮತ್ತೊಂದು ಅಂತರ್ಗತದೋಷವೆಂದರೆ ಅದರ ಅಪರಿಪೂರ್ಣತೆ. ಇದು ಎಲ್ಲ ಆತ್ಮಕಥೆಗಳಿಗೂ ಅನ್ವಯವಾಗತಕ್ಕ ಮಾತು.

ಆತ್ಮಕಥೆ ಮತ್ತು ಚರಿತ್ರೆಯಲ್ಲಿ ಬಳಸುವ ವಿಧಾನ ಒಂದೇ. ಆತ್ಮಕಥೆಯಲ್ಲಿ ಅದರ ನಾಯಕ ಪ್ರಮುಖನಾಗಿ ಚಿತ್ರಿತನಾಗಿರುತ್ತಾನೆ. ಇತರರು ಮತ್ತು ಇತರ ವಿಷಯಗಳು ಅವನ ವ್ಯಕ್ತಿಚಿತ್ರಣಕ್ಕೆ ಪೋಷಕವಾಗಿ ಬರುತ್ತವೆ. ಈ ದೃಷ್ಟಿಯಿಂದ ನೋಡಿದರೆ ರಾಜಕಾರಣಿಗಳು ಮತ್ತು ಅಧಿಕಾರಿಗಳು ಬರೆದ ತಮ್ಮ ಜೀವನಚಿತ್ರಗಳು ಬಹುಮಟ್ಟಿಗೆ ಬಖೈರುಗಳಾಗಿರುತ್ತವೆ. ಘಟನೆಗಳನ್ನು ರೂಪಿಸುವ ಶಕ್ತಿಸಾಮರ್ಥ್ಯವಿಲ್ಲದವರ ಜೀವನಚಿತ್ರಗಳಲ್ಲಿ ಬಹುಮಟ್ಟಿಗೆ ಇತರ ವ್ಯಕ್ತಿಗಳ ಮತ್ತು ಘಟನೆಗಳ ವರ್ಣನೆಗಳಿರುತ್ತವೆ. ಆತ್ಮಕಥೆಯಲ್ಲಿ ನಾವು ನಿರೀಕ್ಷಿಸುವುದು ವ್ಯಕ್ತಿಯ ಜೀವನದ ವಿವರಗಳನ್ನೇ ಅಲ್ಲದೆ ಕಲಾತ್ಮಕವಾಗಿ ಮತ್ತು ನೈಜವಾಗಿ ರಚಿಸಿದ ಒಬ್ಬ ವ್ಯಕ್ತಿಯ ಜೀವನಚಿತ್ರವನ್ನು. ಆ ಕೃತಿಯನ್ನು ಓದುವಾಗ, ಆ ವ್ಯಕ್ತಿಯ ಸಂಗಡ ಇದ್ದೇವೆ, ಅವನೊಡನೆ ಸಂಭಾಷಣೆ ಮಾಡುತ್ತಿದ್ದೇವೆ, ಅವನು ನಮ್ಮನ್ನು ನಂಬಿ ನಮ್ಮ ಮುಂದೆ ಅವನ ಕಷ್ಟಸುಖಗಳನ್ನು ಆಸೆ ಆಕಾಂಕ್ಷೆಗಳನ್ನು ಸೋಲುಗೆಲುವುಗಳನ್ನು ಮಾನಾಪಮಾನಗಳನ್ನು ತೋಡಿಕೊಳ್ಳುತ್ತಿದ್ದಾನೆ ಎಂಬ ಭಾವನೆ ನಮಗೆ ಬಂದರೆ ಅದು ಉತ್ತಮ ಆತ್ಮಕಥೆಯೆಂದು ಹೇಳಬಹುದು. ಪೂರ್ಣ ಪ್ರಾಮಾಣಿಕತೆ ಆತ್ಮಕಥೆಯ ಸತ್ತ್ವ, ಸ್ವಾರಸ್ಯ. ಕನ್ನಡದಲ್ಲಿ ಆತ್ಮಕಥೆ, ಜೀವನ ಚರಿತ್ರೆ ವಿಪುಲವಾಗಿ ಸೃಷ್ಟಿಯಾಗಿದೆ. (ಎಸ್.ಎನ್.ಎಸ್.)

**ಆತ್ಮತ್ಯಾಗ :** ಸ್ವಾರ್ಥವನ್ನು ಬಿಟ್ಟು ಬಾಳುವುದು. ಸ್ವಾರ್ಥತ್ಯಾಗವೇ ಒಳ್ಳೆಯ ನಡತೆಯ ಅಡಿಗಲ್ಲು ಎಂಬುದಾಗಿ ಕೆಲವು ಮತಮೀಮಾಂಸಕರೂ ಧರ್ಮಮೀಮಾಂಸಕರೂ ರಾಷ್ಟ್ರನೀತಿಶಾಸ್ತ್ರಜ್ಞರೂ ಎಣಿಸಿರುತ್ತಾರೆ. ಕೆಲವು ಕ್ರೈಸ್ತಧರ್ಮ ಮೀಮಾಂಸಕರೂ ಶಿವಶರಣರೂ ಬಹುಶಃ ಎಲ್ಲ ಏಕದೇವತಾವಾದಿಗಳೂ ನಾನು, ನನ್ನದು ಎಂಬ ಭಾವನೆ ಸಂಪೂರ್ಣವಾಗಿ ತ್ಯಜಿಸಿ ಎಲ್ಲವನ್ನೂ ಭಗವಂತನಿಗೆ ಅರ್ಪಿಸಿದಂತೆ ಬಾಳುವುದೇ ಮೋಕ್ಷದ ದಾರಿ ಎಂದು ನಂಬಿರುತ್ತಾರೆ. ಆದರೆ ಆತ್ಮತ್ಯಾಗ ಕೇವಲ ಈ ಏಕದೇವತಾವಾದಿಗಳಿಗೆ ಮೀಸಲಾದದ್ದಲ್ಲ.

ಈಶ್ವರನನ್ನು ಒಪ್ಪದ ಸಾಂಖ್ಯದಾರ್ಶನಿಕರೂ ಅವರಿಗಿಂತ ಮಿಗಿಲಾಗಿ ನೈರಾತ್ಮವಾದಿಗಳಾದ ಬೌದ್ಧರೂ ಆತ್ಮತ್ಯಾಗವೇ ಮೋಕ್ಷದ ಹೆದ್ದಾರಿಯೆಂದು ಭಾವಿಸಿರುತ್ತಾರೆ. ಇವರು ಅಕ್ಷರಶಃ ಆತ್ಮತ್ಯಾಗವಾದಿಗಳು. ಸಾಂಖ್ಯದಾರ್ಶನಿಕರ ಪ್ರಕಾರ ಬುದ್ಧಿ, ಅಹಂಕಾರ, ಮನಸ್ಸು, ಇಂದ್ರಿಯ – ಇವು ನಿಜವಾಗಿ ಪ್ರಕೃತಿಯ ಪರಿಣಾಮಗಳು. ಇವು ಪುರುಷನಿಗೆ ಸೇರಿದಂತಹವು. ಪುರುಷ ಕರ್ತ ಎಂಬುದು ದೊಡ್ಡ ಭ್ರಮೆ. ದುಃಖಕ್ರಮಗಳಲ್ಲಿ ಮುಖ್ಯವಾಗಿ ಆಧ್ಯಾತ್ಮಿಕ ದುಃಖಕ್ಕೆ ಈ ಭ್ರಮೆಯೇ ಕಾರಣ. ಪ್ರಕೃತಿಗಿಂತ ತೀರ ಭಿನ್ನವಾದ ಪುರುಷಕ್ರಿಯಾರಹಿತವಾದ ಕೇವಲ ಸಾಕ್ಷಿರೂಪದ ಚೈತನ್ಯ ಎಂಬುದು ಇವರ ಪರತತ್ತ್ವ. ಪ್ರಕೃತಿಯ ಯಾವ ಪರಿಣಾಮಗಳೂ ಪುರುಷನಿಗೆ ಸೇರಿದುವಲ್ಲ. ಪುರುಷ ಇವುಗಳಿಂದ ತೀರ ಭಿನ್ನ ಎಂಬ ವಿವೇಕ ಹುಟ್ಟಿದಾಗಲೇ ಪುರುಷನಿಗೆ ನಿಜವಾದ ಬಿಡುಗಡೆ. ಸಾಂಖ್ಯರು ನಿಷ್ಕ್ರಿಯ ಪುರುಷನನ್ನಾದರೂ ಒಪ್ಪುತ್ತಾರೆ. ಬೌದ್ಧರಾದರೋ ಈ ನಿಷ್ಕ್ರಿಯ ಪುರುಷನನ್ನೂ ನಿರಾಕರಿಸುತ್ತಾರೆ. ಇವರು ಅಪ್ಪಟ ನೈರಾತ್ಮವಾದಿಗಳು. ಎಲ್ಲ ಬಗೆಯಾದ ಆತ್ಮ ಎಂಬುದು ಶುದ್ಧಾಂಗವಾಗಿ ಮಿಥ್ಯ. ಈ ಭಾವನೆಯನ್ನು ಸಂಪೂರ್ಣವಾಗಿ ಧ್ವಂಸ ಮಾಡುವುದೇ ನಿರ್ವಾಣಕ್ಕೆ ನಿಜವಾದ ದಾರಿ ಎಂದು ವಾದಿಸುತ್ತಾರೆ. ಈ ದರ್ಶನದಲ್ಲಿ ಆತ್ಮತ್ಯಾಗ ಪರಮಾವಧಿಯನ್ನು ಮುಟ್ಟುತ್ತದೆ.

ಪಾಶ್ಚಾತ್ಯ ತಾತ್ತ್ವಿಕರಲ್ಲಿ ಹೆಗೆಲ್ ಮತ್ತು ಅವನ ಅನುಯಾಯಿಗಳ ಆತ್ಮಸಿದ್ಧಿವಾದವನ್ನು ಆತ್ಮತ್ಯಾಗವಾದುದೆಂದು ಪರಿಗಣಿಸಲಾಗಿದೆ. ಹೀಗೆ ಪರಿಗಣಿಸುವವರು, ಆತ್ಮವನ್ನು ಸಾಯಿಸಿ ಉದ್ಧಾರವಾಗು – ಎಂಬ ಹೆಗೆಲ್‌ನ ವಚನವನ್ನು ಒಂದು ಆಧಾರವಾಗಿಯೂ ಅವನ ಸರ್ವಾಧಿಕಾರಿ ರಾಷ್ಟ್ರತತ್ತ್ವವನ್ನು ಇನ್ನೊಂದು ಆಧಾರವಾಗಿಯೂ ಕರೆಯುತ್ತಾರೆ. ಆತ್ಮತ್ಯಾಗವೇ ಪರಮವಲ್ಲ, ರಾಷ್ಟ್ರದ ಕಾಯಿದೆಗೆ ತಲೆಬಾಗಿ ನಡೆಯುವುದೇ ಪರಮಗುರಿಯಲ್ಲ. ಆತ್ಮಲಾಭವೇ ಪರಮಧ್ಯೇಯ. ಆತ್ಮತ್ಯಾಗ ಆತ್ಮಸಿದ್ಧಿಗೆ ಉಪಾಯ. ಹಾಗೆಯೇ ರಾಷ್ಟ್ರದ ಕಾಯಿದೆಗೆ ತಲೆಬಾಗಿ ನಡೆಯುವುದೇ ಅಂತಿಮ ಗುರಿಯಲ್ಲ. ರಾಷ್ಟ್ರದ ನಿಯಮಕ್ಕೆ ವಿಧೇಯನಾಗಿರುವುದರಿಂದ ಆತ್ಮ ವಿಶಾಲಗೊಳ್ಳುತ್ತದೆ, ವಿಕಾಸಗೊಳ್ಳುತ್ತದೆ – ಎಂದು ಹೆಗೆಲ್‌ನ ಇನ್ನೂ ಕೆಲವು ಅನುಯಾಯಿಗಳು (ಉದಾ : ಟಿ. ಎಚ್. ಗ್ರೀನ್) ವಾದಿಸುತ್ತಾರೆ.

ಪ್ರಾಚೀನ ಪಾಶ್ಚಾತ್ಯರಲ್ಲಿ ಪ್ಲೇಟೋನ ವಾದವನ್ನೂ ಆತ್ಮತ್ಯಾಗವಾದವಾಗಿ ಪರಿಗಣಿಸುವುದುಂಟು. ಹೆಣ್ಣು, ಹೊನ್ನು, ಮಣ್ಣು, ಅಧಿಕಾರ ಇವುಗಳ ವೈಯಕ್ತಿಕ ಸ್ವಾಮ್ಯವನ್ನು ಈತ ತಾತ್ತ್ವಿಕರಿಗೆ ನಿಷೇಧಿಸಿರುವುದು ಇವನ ಆತ್ಮತ್ಯಾಗದ ನೇರವಾದ ಪರಿಣಾಮ. ಈ ವಾದವನ್ನು ಅರಿಸ್ಟಾಟಲ್ ತನ್ನ ರಾಷ್ಟ್ರನೀತಿ ಗ್ರಂಥದಲ್ಲೂ ಧರ್ಮಶಾಸ್ತ್ರ ಗ್ರಂಥದಲ್ಲೂ ಖಂಡಿಸಿರುತ್ತಾನೆ. ಆಸ್ತಿಯ ತ್ಯಾಗ, ಕುಟುಂಬ ತ್ಯಾಗ, ಅಧಿಕಾರ ತ್ಯಾಗಗಳನ್ನು ಖಂಡಿಸಿದರೂ ಅರಿಸ್ಟಾಟಲ್ ಸ್ವೇಚ್ಛಾವಾದಿಯಲ್ಲ, ಸುಖವಾದಿಯಲ್ಲ, ಸ್ವಾರ್ಥವಾದಿಯಲ್ಲ. ಆತ ಮಿತವಾದಿ; ಎಲ್ಲದರಲ್ಲೂ ಅತಿಯನ್ನು ಬಿಟ್ಟು ಮಧ್ಯದ ಮಾರ್ಗವನ್ನು ಅನುಸರಿಸುವುದೇ ಸರಿಯಾದ ಧರ್ಮ, ನೀತಿ ಎಂಬುದು ಅವನ ವಾದ.

ಪ್ಲೇಟೋನ ಜೀವನತತ್ತ್ವಕ್ಕೂ ಅರಿಸ್ಟಾಟಲನ ಜೀವನತತ್ತ್ವಕ್ಕೂ ಅಗಾಧವಾದ ಅಂತರ ಕಲ್ಪಿಸುವುದು ಸರಿಯಲ್ಲ. ಆಸ್ತಿ, ಕುಟುಂಬಜೀವನ, ಅಧಿಕಾರಗಳನ್ನು ಎಲ್ಲರೂ ತ್ಯಜಿಸಬೇಕೆಂದು ಪ್ಲೇಟೋನ ಅಭಿಪ್ರಾಯವಲ್ಲ. ಈ ತ್ಯಾಗವನ್ನು ಅವನು ತಾತ್ತ್ವಿಕರಿಗೆ ಮಾತ್ರ ಕ್ಲುಪ್ತಗೊಳಿಸಿರುತ್ತಾನೆ. ಉಳಿದ ಸಾಮಾನ್ಯ ಜನರು ಅರಿಸ್ಟಾಟಲ್‌ನಂತೆಯೇ ಮಿತಜೀವನ ಮಾರ್ಗವನ್ನೂ ಮಧ್ಯದ ನೀತಿಮಾರ್ಗವನ್ನೂ ಅವಲಂಬಿಸಬೇಕೆಂದು ಪ್ಲೇಟೊ ಬೋಧಿಸಿರುತ್ತಾನೆ. ಮಿತಭೋಗ, ಧೈರ್ಯ, ವಿವೇಕ, ನ್ಯಾಯ ಈ ನಾಲ್ಕು ಶೀಲಗಳನ್ನು ಪ್ಲೇಟೊ ಎತ್ತಿ ಹಿಡಿದಿದ್ದಾನೆ. ಅರಿಸ್ಟಾಟಲನ ಮಧ್ಯದ ನೀತಿಮಾರ್ಗತತ್ತ್ವ ಪ್ಲೇಟೋನ ಈ ನಾಲ್ಕು ಶೀಲಗಳಲ್ಲಿ ಅಡಗಿದೆ. ಸ್ವೇಚ್ಛಾ ವಿಹಾರವಾಗಲಿ, ಇಂದ್ರಿಯದಮನವಾಗಲಿ ನಿಜವಾದ ಶೀಲವಲ್ಲ. ಈ ಎರಡನ್ನೂ ಬಿಟ್ಟು ವಿವೇಕದ ಮಿತಭೋಗ ಒಂದು ಸೌಶೀಲ್ಯ. ಹಾಗೆಯೇ ಹೇಡಿತನವನ್ನೂ ಹಟಮಾರಿತನವನ್ನೂ ಬಿಟ್ಟು ಪೂರ್ವಾಪರಗಳನ್ನು ಅರಿತು ದೃಢಸಂಕಲ್ಪದಿಂದ ವರ್ತಿಸುವುದು ನಿಜವಾದ ಧೈರ್ಯ. ಕುರುಡು ನಂಬಿಕೆ ವಿವೇಕವಲ್ಲ. ಹಾಗೆಯೇ ವಿತರ್ಕ ವಿವೇಕವಲ್ಲ. ವಿಮರ್ಶಿಸಿ ನಂಬುವುದು ವಿವೇಕ. ಈ ಮೂರು ಶೀಲಗಳೂ ಒಂದನ್ನು ಬಿಟ್ಟು ಇನ್ನೊಂದಿಲ್ಲ. ಈ ಮೂರರ ಒಕ್ಕಟ್ಟೇ ನ್ಯಾಯಮಾರ್ಗ.

ಸಂನ್ಯಾಸವನ್ನೇ ಆತ್ಮತ್ಯಾಗದ ಜೀವನವೆಂದೂ ನಿಶ್ರೇಯಸವೆಂದೂ ಕುಟುಂಬ ಜೀವನವನ್ನು ಭೋಗಜೀವನವೆಂದೂ ಅಭ್ಯುದಯವೇ ಅದರ ಗುರಿಯೆಂದೂ ಇವೆರಡೂ ಒಂದಕ್ಕೊಂದು ವಿರುದ್ಧವಾದುವೆಂದೂ ಸಾಮಾನ್ಯವಾಗಿ ವರ್ಣಿಸುವುದುಂಟು. ಇವೆರಡೂ ವಿರುದ್ಧವಾಗಿರಬೇಕಾದ್ದಿಲ್ಲ. ಇವೆರಡರಲ್ಲೂ ಸಂಯಮವಿದೆ. ಸಂಯಮವಿಲ್ಲದ ನಡತೆ ಶೀಲವೆನ್ನಿಸಿಕೊಳ್ಳಲಾರದು. ಈ ಎರಡಕ್ಕೂ ವ್ಯತ್ಯಾಸವಿರುವುದು ಸಂಯಮದ ಪ್ರಮಾಣದಲ್ಲಿ ಮಾತ್ರವೇ. **(ಜಿ.ಎಚ್.)**

**ಆತ್ಮನಾಶ :** ದೇಹವೇ ಆತ್ಮವೆಂದು ನಂಬುವವರು ಮರಣ ಸಮಯದಲ್ಲಿ ಆತ್ಮನಾಶವಾಗುತ್ತದೆಂದು ನಂಬುತ್ತಾರೆ. ಮರಣಾನಂತರದ ಸ್ಥಿತಿಗತಿಗಳು ನಿಖರವಾಗಿ ತಿಳಿಯದೆ ಇರುವುದೂ ದೃಗ್ಗೋಚರವಾಗದೆ ಇರುವುದೂ ಇಲ್ಲವೇ ಇಲ್ಲವೆಂದು ಬಗೆಯುವುದೂ ಸಹಜವೇ. ಆತ್ಮ ನಿತ್ಯ, ಅವಿನಾಶಿ ಎನ್ನುವುದು ಪಾಶ್ಚಾತ್ಯರಲ್ಲೂ ಪೌರಸ್ತ್ಯರಲ್ಲೂ ಪ್ರಾಚೀನಕಾಲದಿಂದಲೂ ದೃಢವಾಗಿ ನಿಂತಿರುವ ಕಲ್ಪನೆಯಾದರೂ ಅದನ್ನು ನಿರಾಕರಿಸುವ ಪಕ್ಷಗಳೂ ಇಲ್ಲದೆ ಇಲ್ಲ. ಮರಣಾನಂತರದ ಸ್ಥಿತಿ ಲೌಕಿಕ ವ್ಯವಹಾರಗಳಿಗೆ ಉಪಯುಕ್ತವಾದುದಲ್ಲವೆಂಬ ಕಾರಣದಿಂದ ಆತ್ಮದ ಶಾಶ್ವತತೆಯ ಬಗ್ಗೆ ವಿಚಾರಮಾಡಲು ಇವರು ಒಪ್ಪುವುದಿಲ್ಲ. ನಮ್ಮಲ್ಲಿ ಚಾರ್ವಾಕರ ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ಎನ್ನುವ ನಿಲುವು ಪ್ರಸಿದ್ಧವಾಗಿದೆ. ಪಾಶ್ಚಾತ್ಯರಲ್ಲಿ ಆತ್ಮ ಸಂಕೀರ್ಣ ಸ್ವಭಾವದ್ದೆಂದೂ ಅದು ಕ್ರಮೇಣ ಶಿಥಿಲವಾಗಿ ನಾಶ ಹೊಂದುವುದೆಂದೂ ನಂಬುವ ಜನರಿದ್ದರು. ಇವರಲ್ಲಿ ಪ್ರಮುಖರಾದವರು ಪ್ರಯೋಜನವಾದಿಗಳು (ಯುಟಿಲಿಟೇರಿಯನ್ಸ್). ಬೈಬಲ್ಲಿನ ಹಳೆಯ ಒಡಂಬಡಿಕೆಯ ಅಲ್ಲಲ್ಲಿ ಇದೇ ವಾದದ ಛಾಯೆಯನ್ನು ಕಾಣಬಹುದು. ಇರುವ ಯಾವುದೂ ಆದ್ಯಂತಿಕವಾಗಿ ಧ್ವಂಸವಾಗುವುದು ಸಾಧ್ಯವಿಲ್ಲ ಎನ್ನುವ ವಾದವನ್ನು ಸಂತ ಥಾಮಸ್ ಅಕ್ವಿನಾಸ್ **(ನೋಡಿ– ಅಕ್ವಿನಸ್, ಸೇಂಟ್ ಥಾಮಸ್)** ಮುಂದಿಟ್ಟನಾದರೂ ಭಗವಂತ ತನ್ನ ಸೃಷ್ಟಿಯನ್ನೆಲ್ಲ ಸಂಪೂರ್ಣವಾಗಿ ನಾಶ ಮಾಡಲು ಸಮರ್ಥನೆಂದು ಸೂಚಿಸಿದ. ದೇವರ ಕಾರುಣ್ಯವೇ ಜಗತ್ತಿನಲ್ಲಿ ಸೃಷ್ಟಿಯಾದ ವಸ್ತುಗಳು ಉಳಿಯುವಂತೆ ಮಾಡುವುದು ಎಂದು ಅವನ ವಾದ. ಸ್ಪಿನೋಜ **(ನೋಡಿ)** ಎಂಬ ದಾರ್ಶನಿಕ ಆತ್ಮ ಶರೀರದ ಕಲ್ಪನೆ (ಐಡಿಯ), ಆದುದರಿಂದ ಮರಣದ ವೇಳೆಯಲ್ಲಿ ಆತ್ಮ ಶರೀರದೊಂದಿಗೆ ಸೇರಿ ನಷ್ಟವಾಗಬಹುದೆಂದು ಸೂಚಿಸಿದ. ಹಾಬ್ಸ್, ಲಾಕ್ ಇವರೂ ಆತ್ಮ ನಿತ್ಯವೆಂದು ಒಪ್ಪಿಕೊಳ್ಳಲಿಲ್ಲ. ಜಗತ್ತಿನಲ್ಲಿ ಪಾಪ ಅನಿವಾರ್ಯವಾದರೆ, ಆತ್ಮದ ನಾಶವೂ ಸ್ವತಸ್ಸಿದ್ಧವಾದುದು ಎನ್ನುವ ವಾದವೂ ಅಲ್ಲಲ್ಲಿ ಬೆಳೆಯತೊಡಗಿತು **(ನೋಡಿ– ನಿರ್ವಾಣ)**. **(ಎಸ್.ಕೆ.ಆರ್.)**

**ಆತ್ಮನಿರ್ಣಯಾಧಿಕಾರ :** ರಾಜ್ಯರಚನೆ ಹೇಗಿರಬೇಕೆಂಬುದನ್ನು ಆಯಾ ಜನ ಅಥವಾ ಜನಾಂಗವೇ ನಿರ್ಣಯಿಸತಕ್ಕದ್ದು ಎಂಬ ವಾದ (ಸೆಲ್ಫ್ ಡಿಟರ್ಮಿನೇಷನ್). ಒಂದು ಜನಾಂಗದಲ್ಲಿ ರಾಜಕೀಯ ಪ್ರಜ್ಞೆ ಬೆಳೆದು ರಾಷ್ಟ್ರಾಭಿಮಾನ ಉದಯವಾದಾಗ ಆ ಜನಾಂಗ ಸ್ವತಂತ್ರವಾಗಿ ಬಾಳಲಿಚ್ಛಿಸಿ ತಮ್ಮ ಅಭಿಲಾಷೆಗಳಿಗನುಗುಣವಾದ ರಾಜ್ಯವನ್ನು ಸ್ಥಾಪಿಸಿಕೊಳ್ಳುವುದು ಅಥವಾ ಒಂದು ರಾಜ್ಯದ ಅನೇಕ ಜನಾಂಗಗಳಿಂದ ಕೂಡಿದ ಒಕ್ಕೂಟವಾಗಿದ್ದರೆ ಆಯಾ ಜನಾಂಗಗಳು ತಮ್ಮ ಅಭಿಲಾಷೆಗೆ ತಕ್ಕಂತೆ ಸ್ವಯಮಾಧಿಪತ್ಯಗಳನ್ನು ಸ್ಥಾಪಿಸಲು ಪ್ರಯತ್ನಿಸುವುದು ಆಧುನಿಕ ರಾಷ್ಟ್ರೀಯತೆಯ ಲಕ್ಷಣಗಳಲ್ಲೊಂದು. 19ನೆಯ ಶತಮಾನದ ಮಧ್ಯಭಾಗದಲ್ಲಿ ಜನಾಂಗಗಳ ಈ ಅಭಿಲಾಷೆ ಒಂದು ತತ್ತ್ವರೂಪವನ್ನೇ ಹೊಂದಿ ಪ್ರತಿಯೊಂದು ಜನಾಂಗವೂ ತನ್ನ ರಾಜಕೀಯ ಭವಿಷ್ಯವನ್ನು ಆತ್ಮಸಂಕಲ್ಪದಿಂದಲೇ ನಿರ್ಧರಿಸಬೇಕು ಎಂಬ ವಾದ ಉದ್ಭವಿಸಿತು.

ಪ್ರಸ್ತುತ ರಾಜ್ಯಗಳು ಭಿನ್ನ ಭಿನ್ನ ಜನಾಂಗಗಳಿಂದ ಕೂಡಿಸಲ್ಪಟ್ಟ ಕೃತಕ ಒಕ್ಕೂಟಗಳೆಂದೂ ಇಂಥ ಒಕ್ಕೂಟಗಳಲ್ಲಿ ಸಹಬಾಳ್ವೆ ನಡೆಸಲು ಇಚ್ಛೆಪಡದ ಜನರು ತಮ್ಮ ಜನಾಂಗಗಳ ಆಧಾರದ ಮೇಲೆ ಬೇರೆ ಬೇರೆ ರಾಜ್ಯಗಳನ್ನು ಸ್ಥಾಪಿಸಿಕೊಳ್ಳುವುದು ತಮ್ಮ ಹಕ್ಕೆಂದೂ ಪ್ರತಿಪಾದಿಸಿದ ನಿದರ್ಶನಗಳು ಯುರೋಪ್ ಖಂಡದಲ್ಲಿ ಕಂಡುಬಂದಿವೆ. ಮೊದಲನೆಯ ಮಹಾಯುದ್ಧಾನಂತರ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ವುಡ್‌ರೊ ವಿಲ್ಸನ್ ತನ್ನ ಅನೇಕ ಭಾಷಣಗಳಲ್ಲಿ ಆತ್ಮನಿರ್ಣಯಾಧಿಕಾರ ಕೇವಲ ವಾಕ್ಸರಣಿಯಲ್ಲ, ಇದೊಂದು ಆಜ್ಞಾರ್ಥಕ ತತ್ತ್ವಪ್ರಮಾಣದ ಕಾರ್ಯ; ಇದರ ಅಲಕ್ಷ್ಯತೆ ರಾಜನೀತಿಜ್ಞರ ಗಂಡಾಂತರವಾಗಿ ಪರಿಣಮಿಸೀತು ಎಂದು ಪ್ರತಿಪಾದಿಸಿದ. ಇದರ ಪ್ರಕಾರ ಪ್ರತಿಯೊಂದು ಜನಾಂಗವೂ ಪ್ರತ್ಯೇಕ ರಾಜ್ಯವನ್ನು ಹೊಂದಿರಬೇಕು. ಈ ತತ್ತ್ವವನ್ನನುಸರಿಸಿ ಒಂದನೆಯ ಮಹಾಯುದ್ಧಾನಂತರ ಕೆಲವು ಜನಾಂಗ ರಾಜ್ಯಗಳು ಅಸ್ತಿತ್ವಕ್ಕೆ ಬಂದುವು. ಆದರೆ ಕೆಲವು ರಾಜನೀತಿಜ್ಞರ ಅಭಿಪ್ರಾಯದ ಪ್ರಕಾರ ಆತ್ಮನಿರ್ಣಯಾಧಿಕಾರ ಎರಡು ಕಡೆಯೂ ಹರಿತವಾದ ಅಲುಗುಳ್ಳ ಕತ್ತಿಯಂತೆ. ಈ ಹಕ್ಕನ್ನು ಒಂದು ಸ್ತಿಮಿತದಲ್ಲಿ ಬಹು ಎಚ್ಚರಿಕೆಯಿಂದ ಪ್ರಯೋಗಿಸಬೇಕು. ಹಿಂದೆ ಈ ತತ್ತ್ವ ಜನಾಂಗಗಳ ಸಂಘಟನಾಶಕ್ತಿ ಯಾಗಿತ್ತು. ಆದರೆ ಇತ್ತೀಚೆಗೆ ವಿಭಜನಾಶಕ್ತಿಯಾಗಿ ಪರಿಣಮಿಸಿದೆ. ಆದುದರಿಂದ ಜನಾಂಗಗಳು ಆತ್ಮನಿರ್ಣಯಾಧಿಕಾರವನ್ನು ಚಲಾಯಿಸುವುದರ ಮೂಲಕ ಸಂಸ್ಥಾಪಿಸಲ್ಪಟ್ಟಿರುವ ರಾಜ್ಯಗಳ ವಿಭಜನೆಯನ್ನು ಯಾಚಿಸುವುದು ತಮ್ಮ ಹಕ್ಕಿಗೆ ಮೀರಿದ್ದಾಗಿದೆ. ಈ ತತ್ತ್ವದ ಗುಣಾವಗುಣ ಗಳನ್ನು ತಿಳಿಯಲು, 1918 ಮತ್ತು 1919ರಲ್ಲಿ ಫಿನ್ಲೆಂಡ್ ರಾಜ್ಯದ ಆಲೆಂಡ್‌ದ್ವೀಪದ ನಿವಾಸಿ ಗಳು ತಮ್ಮ ವಿಭಜನೆಯನ್ನು ಆತ್ಮನಿರ್ಣಾಯಾಧಿಕಾರದ ಮೂಲಕ ಸೂಚಿಸಿದ್ದರ ಸಿಂಧುತ್ವವನ್ನು ಲೀಗ್ ಆಫ್ ನೇಷನ್ಸ್ ಕೌನ್ಸಿಲ್ 1920ರಲ್ಲಿ ನ್ಯಾಯತಜ್ಞರ ಸಮಿತಿಗೆ ವಹಿಸಿ ಅವರ ಅಭಿಪ್ರಾಯವನ್ನು ಕೋರಿತು. ಸಮಿತಿ ತನ್ನ ಅಭಿಪ್ರಾಯವನ್ನು ಹೀಗೆ ನೀಡಿತು: ಸಂಸ್ಥಾಪಿಸಲ್ಪಟ್ಟಿ ರುವ ಪ್ರಭುತ್ವದಲ್ಲಿ ಜನಾಂಗಗಳು ಆತ್ಮನಿರ್ಣಯಾಧಿಕಾರದ ಮೂಲಕ ಪ್ರತ್ಯೇಕ ರಾಜ್ಯಗಳನ್ನು ಸ್ಥಾಪಿಸುವ ಹಕ್ಕನ್ನು ಪುಷ್ಟೀಕರಿಸಲು ಅಂತಾರಾಷ್ಟ್ರೀಯ ಕಾನೂನಿನಲ್ಲಿ ಯಾವ ನಿಯಮವೂ ಕಾಣದು. ಸರ್ವಸಾಮಾನ್ಯವಾಗಿ ಒಂದು ರಾಜ್ಯದ ಜನ ತಮ್ಮ ರಾಜಕೀಯ ಭವಿಷ್ಯದ ಬಗ್ಗೆ ಆತ್ಮನಿರ್ಣಯದ ಮೂಲಕವಾಗಲಿ ಅಥವಾ ಬೇರಾವ ರೀತಿಯಲ್ಲಾಗಲಿ ನಿರ್ಧರಿಸುವ ಹಕ್ಕನ್ನು ಪುರಸ್ಕರಿಸುವುದು ಅಥವಾ ತಿರಸ್ಕರಿಸುವುದು ಪರಮಾಧಿಕಾರವನ್ನು ಹೊಂದಿರುವ ಆ ಪ್ರಭುತ್ವಕ್ಕೇ ಸೇರಿದ್ದು. ಆಲೆಂಡ್‌ದ್ವೀಪದ ನಿವಾಸಿಗಳು ಸೂಚಿಸಿರುವ ಆತ್ಮನಿರ್ಣಯದ ಹಕ್ಕನ್ನು ಪುರಸ್ಕರಿಸಿದರೆ ಅದು ಪ್ರಭುತ್ವದ ಶ್ರೇಷ್ಠಪರಮಾಧಿಕಾರದ ಉಲ್ಲಂಘನೆಯಾಗುವುದಲ್ಲದೆ ರಾಜ್ಯಗಳ ಸ್ಥಿರತೆ ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಯ ಭದ್ರತೆಗೆ ಅಪಾಯಕಾರಿಯಾಗುತ್ತದೆ.

**(ಎಂ.ಕೆ.ಎಸ್.)**

**ಆತ್ಮಪ್ರತಿಷ್ಠೆ, ಆತ್ಮಶರಣಾಗತಿ :** ತಾನು ಹೇಳುವುದೇ ಸರಿ, ಮಾಡಿದ್ದೇ ಸರಿ ಎಂದು ವಾದಿಸಿ ತನ್ನ ಶ್ರೇಷ್ಠತೆಯನ್ನು ಸಮರ್ಥಿಸುವ ಗುಣ. ತದ್ವಿರುದ್ಧವಾದದ್ದು ಆತ್ಮಶರಣಾಗತಿ. ಮೃಗಪ್ರಪಂಚದಲ್ಲಿ ಬುದ್ಧಿ, ದೇಹಶಕ್ತಿ ಇವುಗಳಲ್ಲಿ ಮಿಗಿಲಾಗಿರುವ ಪ್ರಾಣಿ ಇತರ ಪ್ರಾಣಿಗಳ ಮೇಲೆ ತನ್ನ ಪ್ರತಿಷ್ಠೆಯನ್ನು ಚಲಾಯಿಸುವುದು ಸಾಮಾನ್ಯ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಸ್ಪೆನ್ಸರ್ ಶ್ರೇಷ್ಠತೆ – ಕನಿಷ್ಠತೆಯ ತತ್ತ್ವವನ್ನು ನಿರೂಪಿಸಿದ.

ಮನಶ್ಶಾಸ್ತ್ರ ಈ ವಿಷಯವನ್ನು ಚೆನ್ನಾಗಿ ವಿಶ್ಲೇಷಿಸಿದೆ. ಆತ್ಮಪ್ರತಿಷ್ಠೆಯುಳ್ಳವ ಸಮಾಜದ ಇತರರ ಮೇಲೆ ತನ್ನ ಪ್ರಭಾವ ಬೀರುವ ಪ್ರವೃತ್ತಿಯವನಾಗಿರುತ್ತಾನೆ. ಅವನಿಗೆ ಆತ್ಮವಿಶ್ವಾಸ ಹೆಚ್ಚು. ಎಲ್ಲದರಲ್ಲೂ ಮೇಲುಗೈಯಾಗಿರಬೇಕೆಂಬುದೇ ಅವನ ಧ್ಯೇಯ. ತನ್ನ ನ್ಯೂನತೆಗಳನ್ನೂ ಆತ ಗುಣಗಳನ್ನಾಗಿ ಮಾರ್ಪಡಿಸಿಕೊಳ್ಳಬಲ್ಲ. ಆ ಗುಣವಿಲ್ಲದವ ಸಾಮಾನ್ಯವಾಗಿ ದುರ್ಬಲ ಮನೋಭಾವದವನಾಗಿರುತ್ತಾನೆ. ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಿಂಜರಿಯುತ್ತಾನಲ್ಲದೆ ಬಹಳ ಸುಲಭವಾಗಿ ಇತರರ ಪ್ರಭಾವಕ್ಕೆ ಒಳಗಾಗುತ್ತಾನೆ. ದೈಹಿಕನ್ಯೂನತೆಗಳು, ಅಪಮಾನಕರ ಪ್ರಸಂಗಗಳಿಗೆ ಸಂಬಂಧಪಟ್ಟ ಭಾವನೆಗಳ ಮರುಕಳಿಕೆ ತನಗಿಂತ ಶ್ರೇಷ್ಠನೆನಿಸಿದವರೊಡನೆ ಹೋಲಿಸಿಕೊಂಡು ಹೀನಾಯಪಟ್ಟುಕೊಳ್ಳುವ ಮನೋಭಾವ – ಇವೇ ಮೊದಲಾದ ಗುಣಗಳಿಂದ ಕೂಡಿರುತ್ತಾನೆ. ಅಲ್ಲದೆ ತನ್ನ ಅಭಿಪ್ರಾಯ ಮತ್ತು ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವುದರಲ್ಲಿ ಅನೇಕ ವೇಳೆ ವಿಫಲನಾಗುತ್ತಾನೆ.

ಜಿ. ಡಬ್ಲ್ಯೂ. ಆಲ್ಪೋರ್ಟ್ ಹೇಳುವಂತೆ, ಪ್ರತಿಯೊಂದು ಸಾಮಾಜಿಕ ಸಂಬಂಧದಲ್ಲೂ ವ್ಯಕ್ತಿಗಳ ಪರಸ್ಪರ ತಿಕ್ಕಾಟವಿದ್ದೇ ಇರುತ್ತದೆ. ಅವರು ಸಂಧಿಸಿದಾಗ ಸಾಮಾನ್ಯವಾಗಿ, ಒಬ್ಬ ಮತ್ತೊಬ್ಬನಿಗೆ ಪೂರ್ಣವಾಗಿಯಾಗಲಿ ಅಥವಾ ಸ್ವಲ್ಪವಾಗಿಯಾಗಲಿ ಶರಣಾಗಲೇಬೇಕು. ಇಂಥ ಸಂದರ್ಭಗಳಲ್ಲಿ ಆ ವ್ಯಕ್ತಿಗಳಲ್ಲಿರುವ ಸಂಬಂಧ ಯಾವ ರೀತಿಯದೇ ಆಗಿರಲಿ – ಮಿತ್ರತ್ವವಾಗಲಿ ಅಥವಾ ಶತ್ರುತ್ವವಾಗಲಿ – ಒಬ್ಬ ಮತ್ತೊಬ್ಬನ ಮೇಲೆ ಪ್ರಭಾವ ಬೀರಿ ವಿಜಯಿ ಎನಿಸಿಕೊಂಡರೆ ಮತ್ತೊಬ್ಬ ಶರಣಾಗಿ ಪರಾಭವಿ ಎನಿಸಿಕೊಳ್ಳುತ್ತಾನೆ. ಒಮ್ಮೆ ಪರಾಭವಿ ಎನಿಸಿಕೊಂಡವ ತನ್ನ ಹಿಡಿತಕ್ಕೆ ಸಿಗುವ ವಿಷಯಕ್ಕೆ ಬಂದಾಗ ತನ್ನ ಹಿರಿಮೆಯನ್ನು ತೋರಿಸಿ, ಮೊದಲು ವಿಜಯಿ ಎನಿಸಿಕೊಂಡವನ ಮೇಲೂ ವಿಜಯವನ್ನು ಗಳಿಸಬಹುದು.

ಈ ಎರಡು ಪ್ರವೃತ್ತಿಗಳಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ನಿರ್ಣಯಿಸುವಾಗ ಎಚ್ಚರಿಕೆಯಿಂದಿರಬೇಕಾಗುತ್ತದೆ. ವ್ಯಕ್ತಿಯ ದೃಷ್ಟಿಯಿಂದ ನೋಡಿದಲ್ಲಿ ಆತ್ಮಪ್ರತಿಷ್ಠೆಯೇ ಸರ್ವದಾ ಉತ್ತಮಗುಣವಾಗಿ ತೋರುತ್ತದೆ. ಏಕೆಂದರೆ ವೈಯಕ್ತಿಕ ಅಭಿವೃದ್ಧಿಗೆ ಅದಕ್ಕಿಂತ ಸುಲಭ ಮಾರ್ಗವಿಲ್ಲ. ಆದರೆ ತಪ್ಪನ್ನೂ ಸರಿಯೆಂದು ವಾದಿಸಿ ಸ್ವಾರ್ಥಸಾಧನೆ ಮಾಡುವುದು ಸಾಮಾಜಿಕವಾಗಿ ದೊಡ್ಡ ಅನ್ಯಾಯ. ನಾವು ಸತ್ಯಕ್ಕೆ ನ್ಯಾಯಕ್ಕೆ ಧರ್ಮಕ್ಕೆ ಪರಾರ್ಥಕ್ಕೆ ಸೋಲಬೇಕು. ಆತ್ಮಪ್ರತಿಷ್ಠೆ ಮಾಡುವ ಅನ್ಯಾಯಕ್ಕೆ ಶರಣಾಗುವ ಗುಣ ಗುಣವೇ ಅಲ್ಲ. ಅದೊಂದು ದೊಡ್ಡ ದೋಷ. ನ್ಯಾಯಕ್ಕೆ ಸೋಲುವಂತೆ ಅನ್ಯಾಯಕ್ಕೆ ಎದುರಾಗಿ ಪ್ರತಿಭಟಿಸಬೇಕಾಗುತ್ತದೆ. ಆದ್ದರಿಂದ ಸಾಮಾಜಿಕ ಹೊಂದಾಣಿಕೆಯ ದೃಷ್ಟಿಯಿಂದ ಈ ಎರಡು ಪ್ರವೃತ್ತಿಗಳ ಹೊಂದಾಣಿಕೆ ಅಗತ್ಯ.

ಆತ್ಮಪ್ರತಿಷ್ಠೆ ಮತ್ತು ಶರಣಾಗತಿಗಳು ಎರಡು ಭಿನ್ನಗುಣಗಳಾಗಿ ತೋರಿದರೂ ಅವು ಒಂದೇ ವ್ಯಕ್ತಿತ್ವ – ವಿನ್ಯಾಸದ ಅವಿಭಾಜ್ಯ ಅಂಗಗಳು. ಅಂದರೆ ಒಂದೇ ಗುಣದ ಎರಡು ಮುಖಗಳು ಎಂದು ಹೇಳಬಹುದು. ಹೀಗೆ ಇವೆರಡೂ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇದ್ದರೂ ಯಾವ ಗುಣ ಹೆಚ್ಚು ಶಕ್ತಿಯುತವಾಗಿದೆ ಎಂಬುದನ್ನು ಅನುಸರಿಸಿ, ಆ ವ್ಯಕ್ತಿಯನ್ನು ವರ್ಗೀಕರಿಸಬೇಕಾಗುತ್ತದೆ.

ಯಾವ ಸಮಾಜದಲ್ಲಾದರೂ ಕೆಲವು ವ್ಯಕ್ತಿಗಳು ಸಾಮಾನ್ಯವಾಗಿ ಹೆಚ್ಚು ಸ್ವಪ್ರತಿಷ್ಠಾವಂತರೆನಿಸಿದ್ದರೆ, ಮತ್ತೆ ಕೆಲವರು ಹೆಚ್ಚಾಗಿ ಶರಣಾಗುವ ಪ್ರವೃತ್ತಿಯವರಾಗಿರುತ್ತಾರೆ. ಉಳಿದವರಲ್ಲಿ ಈ ಎರಡು ಗುಣಗಳೂ ಹೆಚ್ಚು ಕಡಿಮೆ ಸಮಸಮವಾಗಿ ಅಸ್ತಿತ್ವದಲ್ಲಿರುತ್ತವೆ. ವ್ಯಕ್ತಿಯ ಮನೋಭಾವ ಮತ್ತು ಪರಿಸರಗಳನ್ನು ಅನುಸರಿಸಿ ಈ ಗುಣಗಳು ಚಿಕ್ಕಂದಿನಿಂದ ಅಭಿವೃದ್ಧಿ ಹೊಂದುತ್ತ ಹೋಗಿ, ತಾರುಣ್ಯಾವಸ್ಥೆ ಕಳೆಯುವ ವೇಳೆಗಾಗಲೇ ವ್ಯಕ್ತಿತ್ವದಲ್ಲಿ ಚೆನ್ನಾಗಿ ಪ್ರತಿಷ್ಠಿತವಾಗಿರುತ್ತವೆ. ಆ ಕಾಲದಲ್ಲಿ ಅವುಗಳನ್ನು ವೈಜ್ಞಾನಿಕವಿಧಾನದಿಂದ ಅಧ್ಯಯನ ಮಾಡುವುದರ ಮೂಲಕ ಅವುಗಳು ಭವಿಷ್ಯದಲ್ಲಿ ಹೇಗೆ ಪ್ರಕಟವಾಗುತ್ತವೆ ಎಂಬುದನ್ನು ಹೇಳಬಹುದು.

**ಮಾಪನ :** ಪ್ರತಿಷ್ಠೆ, ಶರಣಾಗತಿಗಳು ವ್ಯಕ್ತಿತ್ವವಿನ್ಯಾಸದ ಮೇಲೆ ಬೀರಬಹುದಾದ ಪ್ರಭಾವಕ್ಕೆ ಸಂಬಂಧಪಟ್ಟಂತೆ ಸಂಶೋಧನೆಗಳು ನಡೆದಿವೆ. ಅದಕ್ಕೆ ವಿವಿಧ ವಿಧಾನಗಳನ್ನು ಬಳಸಿದ್ದರೂ ಅಂಶಾವಳಿ ವಿಧಾನವನ್ನು (ಇನ್‌ವೆಂಟರಿ ವಿಧಾನ) ಉಪಯೋಗಿಸಿಕೊಂಡು ನಡೆಸಿರುವ ಸಂಶೋಧನೆಗಳೇ ಹೆಚ್ಚು. ಈ ಒಲವಿಗೆ ಆಲ್ಪೋರ್ಟ್‌ನ ಸಂಶೋಧನೆಯೇ ಪ್ರೇರಕಶಕ್ತಿಯಾಗಿದೆ ಎಂದು ತೋರುತ್ತದೆ.

ಆಲ್ಪೋರ್ಟ್‌ನ ಪ್ರಕಾರ, ಈ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆಗಳು ಮುಖ್ಯವಾಗಿ ಎರಡು ವೈಜ್ಞಾನಿಕ ಊಹೆಗಳನ್ನು ಅವಲಂಬಿಸಿವೆ : 1. ವ್ಯಕ್ತಿತ್ವವಿನ್ಯಾಸಗಳು ಯಾವುದೇ ಜನತೆಯಲ್ಲಾದರೂ ಸಾಮಾನ್ಯವಿತರಣತತ್ತ್ವವನ್ನು ಅನುಸರಿಸುತ್ತವೆ. ಪ್ರತಿಷ್ಠೆ ಮತ್ತು ಶರಣಾಗತಿಗಳ ವಿನ್ಯಾಸವೂ ಕೂಡ ಇದೇ ತತ್ತ್ವವನ್ನು ಅನುಸರಿಸುವುದಾದರೆ ಅದನ್ನು ವೈಜ್ಞಾನಿಕವಾಗಿ ಅಧ್ಯಯನಮಾಡಲು ಹೆಚ್ಚು ಅನುಕೂಲವಾಗುತ್ತದೆ. 2. ಒಬ್ಬ ವ್ಯಕ್ತಿಯ ಜೀವನದಲ್ಲಿ ಬರಬಹುದಾದ ಸಾಮಾಜಿಕ ಸನ್ನಿವೇಶಗಳಲ್ಲಿ ಕೆಲವನ್ನು ನಮೂನಾ ವಿಧಾನದಿಂದ ಆರಿಸಿಕೊಂಡು, ಅವುಗಳನ್ನು ಶಾಬ್ದಿಕ ರೂಪದಲ್ಲಿ ನಿರೂಪಿಸಿ ಅಂಥ ಸನ್ನಿವೇಶಗಳಲ್ಲಿ ಆತ ಸಾಮಾನ್ಯವಾಗಿ ವರ್ತಿಸುವ ರೀತಿಯನ್ನು ಆತನ ಪ್ರತಿಕ್ರಿಯೆಗಳಿಂದ ಸಂಗ್ರಹಿಸಬಹುದು. ಹೀಗೆ ಬಂದ ಉತ್ತರಗಳನ್ನು ಪರಿಮಾಣಾತ್ಮಕ ವಿಧಾನದಿಂದ ವಿಶ್ಲೇಷಿಸಿ ಪಡೆದ ಸೂಚ್ಯಂಕದಿಂದ ಆತನ ಪ್ರತಿಷ್ಠೆ ಅಥವಾ ಶರಣಾಗತಿ ಪ್ರವೃತ್ತಿ ಎಷ್ಟೆಂಬುದನ್ನು ನಿರ್ಧರಿಸಲು ಸಾಧ್ಯ.

**ಆಲ್ಪೋರ್ಟ್‌ನ ಸಮೀಕ್ಷೆ :** ಮೇಲ್ಕಂಡ ಊಹೆಗಳ ಆಧಾರದ ಮೇಲೆ ಆಲ್ಪೋರ್ಟ್ ತನ್ನ ಅಂಶಮಾಲೆಯಾದ ಪ್ರತಿಷ್ಠೆ, ಶರಣಾಗತಿ, ಪ್ರತಿಕ್ರಿಯಾಸಮೀಕ್ಷೆಯನ್ನು ರಚಿಸಿದ. ಈ ಸಮೀಕ್ಷೆ 33 ಸನ್ನಿವೇಶಗಳನ್ನು ಒಳಗೊಂಡಿದೆ. ಇಲ್ಲಿರುವ ಪ್ರತಿಯೊಂದು ಅಂಶವೂ ಯಾವುದಾದರೊಂದು ಜೀವನ ಸನ್ನಿವೇಶವನ್ನು ನಿರೂಪಿಸುತ್ತದೆಯಲ್ಲದೆ, ಆಯಾ ಸನ್ನಿವೇಶದಲ್ಲಿ ವ್ಯಕ್ತಿಗಳು ಸಾಮಾನ್ಯವಾಗಿ ನಡೆದುಕೊಳ್ಳಬಹುದಾದ ಕೆಲವು ವರ್ತನೆಗಳನ್ನೂ ಒಳಗೊಂಡಿದೆ. ಇಂಥ ವರ್ತನೆಗಳು ಒಂದೊಂದು ಅಂಶದಲ್ಲೂ ನಿರೂಪಿತವಾಗಿರುವ ಸನ್ನಿವೇಶದಲ್ಲಿ ತಾನು ಸಾಮಾನ್ಯವಾಗಿ ವರ್ತಿಸುವ ರೀತಿಗನುಗುಣವಾಗಿ ಸೂಚಿತವಾಗಿರುವ ವರ್ತನೆಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಳ್ಳಬೇಕು. ಇದೇ ರೀತಿ ಎಲ್ಲ ಅಂಶಗಳಿಗೂ ಆಯ್ಕೆಗಳನ್ನು ವ್ಯಕ್ತಪಡಿಸಿದ ಅನಂತರ, ನಿರ್ದಿಷ್ಟ ಪ್ರಮಾಣದ ಕೀಲಿಕೈನ ಸಹಾಯದಿಂದ ಆ ಪ್ರತಿಕ್ರಿಯೆಗಳ ಮೌಲ್ಯವನ್ನು ನಿರ್ಧರಿಸಲಾಗುತ್ತದೆ. ಆ ಮೌಲ್ಯಗಳ ಮೊತ್ತವೇ ಪ್ರತಿಷ್ಠೆ, ಶರಣಾಗತಿ ವ್ಯಕ್ತಿತ್ವವಿನ್ಯಾಸದ ಸೂಚ್ಯಂಕ.

ಅಂಶಮಾಲೆಯಲ್ಲಿ ಸ್ತ್ರೀಯರು ಮತ್ತು ಪುರುಷರಿಗೆ ಪ್ರತ್ಯೇಕ ನಿರೂಪಣೆಗಳಿವೆ. ಸ್ತ್ರೀಪುರುಷರಿಗೆ ದೊರೆಯಬಹುದಾದ ಸಾಮಾಜಿಕ ಅವಕಾಶಗಳಲ್ಲಿ ಇರಬಹುದಾದ ವ್ಯತ್ಯಾಸಗಳೇ ಇದಕ್ಕೆ ಕಾರಣ. ವಿವರಗಳನ್ನು ಕೆಳಗಿನ ಕೋಷ್ಟಕದಿಂದ ತಿಳಿಯಬಹುದು.

ಕೋಷ್ಟಕ 1. ಪುರುಷರ ಮತ್ತು ಸ್ತ್ರೀಯರ ಅಂಶಗಳು

| ವಿವರ | ಪುರುಷರು | ಸ್ತ್ರೀಯರು |
|---|---|---|
| ಸನ್ನಿವೇಶಗಳು | 33 | 35 |
| ಅಂಶಗಳು | 41 | 49 |
| ವರ್ತನೆಗಳು | 123 | 140 |

ಈ ಸಮೀಕ್ಷೆಯ ವಿಶ್ವಸನೀಯತೆ ಮತ್ತು ಸಪ್ರಾಮಾಣಿಕತೆಗಳಿಗೆ ಸಂಬಂಧಪಟ್ಟಂತೆ ಅಧ್ಯಯನಗಳು ನಡೆದಿವೆ. ಆಲ್ಪೋರ್ಟ್‌ನ ಅಧ್ಯಯನದ ಪ್ರಕಾರ ಅರ್ಧ – ವಿಭಾಜಿತ ವಿಶ್ವಸನೀಯತಾ ಗುಣಾಂಕ 1.582. ಅದನ್ನು ಸ್ಪಿಯರ್‌ಮನ್ – ಬ್ರೌನ್ ಸೂತ್ರದಿಂದ ಸರಿಪಡಿಸಿದಾಗ 1.737 ಆಗುತ್ತದೆ. ಬ್ರೂಮ್ ಹನ್ನಾ ಮೊದಲಾದವರ ಸಂಶೋಧನೆಗಳಿಂದ ಈ ಸಮೀಕ್ಷೆಯ ವಿಶ್ವಸನೀಯತಾ ಗುಣಾಂಕಗಳ ವ್ಯಾಪ್ತಿ 0.74 ರಿಂದ 0.85ರವರೆಗೆ ಇರುವುದು ತಿಳಿದುಬಂದಿದೆ. ಇದರಿಂದಾಗಿ ಈ ಸಮೀಕ್ಷೆ ಗಣನೀಯ ವಿಶ್ವಸನೀಯತೆಯಿಂದ ಕೂಡಿದೆಯೆಂಬುದು ವ್ಯಕ್ತವಾಗುತ್ತದೆ.

ಈ ಸಮೀಕ್ಷೆಯ ಸಿಂಧುತ್ವವನ್ನು ನಿರ್ಧರಿಸುವುದಕ್ಕೆ ಅತ್ಯಾವಶ್ಯಕವಾದ ಒರೆಗಲ್ಲು ಸಿಗುವುದು ಕಷ್ಟಕರವಾದರೂ ಇದಕ್ಕೆ ಸಂಬಂಧಪಟ್ಟಂತೆ ಕೆಲವು ಅಧ್ಯಯನಗಳು ನಡೆದಿವೆ. ನಿಶ್ಚಯತಾವಿಧಾನವನ್ನು ಉಪಯೋಗಿಸಿಕೊಂಡು ನಡೆಸಿದ ಅಧ್ಯಯನವೊಂದರ ತಥ್ಯಾಂಶಗಳು ಹೀಗಿವೆ.

ಕೋಷ್ಟಕ 2 . ವರ್ಗೀಕರಣ ವಿಧಾನದಿಂದ ಪಡೆದ ಸಿಂಧುತ್ವ ಗುಣಾಂಕಗಳು

| ಕ್ರಮ ಸಂಖ್ಯೆ | ವರ್ಗೀಕರಣ ವಿಧಾನ | ಸಿಂಧುತ್ವ ಗುಣಾಂಕ |
|---|---|---|
| 1. | ಆಲ್ಪೋರ್ಟ್‌ನ ಸಮೀಕ್ಷೆಯ ಪ್ರಾಪ್ತಾಂಕಗಳಿಗೂ ಸ್ವವರ್ಗೀಕರಣ ಮತ್ತು ಪರವರ್ಗೀಕರಣಗಳ ಸಂಯೋಜಿತ ಪ್ರಾಪ್ತಾಂಕಗಳಿಗೂ ಇರುವ ಸಹಸಂಬಂಧ | 586 ± .045 |
| 2. | ಆಲ್ಪೋರ್ಟ್‌ನ ಸಮೀಕ್ಷೆ ಮತ್ತು ಸ್ವವರ್ಗೀಕರಣ ಸಹಸಂಬಂಧ | 833 ± .021 |
| 3. | ಆಲ್ಪೋರ್ಟ್‌ನ ಸಮೀಕ್ಷೆ ಮತ್ತು ಪರವರ್ಗೀಕರಣ ಸಹಸಂಬಂಧ | 459 ± .028 |
| 4. | ಸ್ವವರ್ಗೀಕರಣ ಮತ್ತು ಪರವರ್ಗೀಕರಣಗಳ ಸಹಸಂಬಂಧ | |

ಈ ಸಮೀಕ್ಷೆಯ ಅಂತಃಸ್ಥಾಯಿತ್ವವನ್ನು ಅಧ್ಯಯನಮಾಡಿ, ಪುರುಷರ 21 ಅಂಶಗಳು ಕೊಟ್ಟಿರುವ ವ್ಯಕ್ತಿತ್ವವಿನ್ಯಾಸದ ಸ್ವಭಾವ ನಿರೂಪಣಾಶಕ್ತಿಯಲ್ಲಿ ಶ್ರೇಷ್ಠ ದರ್ಜೆಯವಾಗಿಯೂ 9 ಅಂಶಗಳು ಮಧ್ಯಮ ದರ್ಜೆಯವಾಗಿಯೂ 11 ಅಂಶಗಳು ಕನಿಷ್ಠ ದರ್ಜೆಯವಾಗಿಯೂ ಇವೆಯೆಂದು ನಿರ್ಧರಿಸಲಾಗಿದೆ.

ಆಲ್ಪೋರ್ಟ್‌ನ ಸಮೀಕ್ಷೆಗೂ ಇತರ ವ್ಯಕ್ತಿತ್ವ ಪರೀಕ್ಷೆಗಳಿಗೂ ಇರಬಹುದಾದ ಸಹಸಂಬಂಧದ ಮೇಲೆ ನಡೆದ ಅಧ್ಯಯನಗಳಿಂದ ಕೆಲವು ತಥ್ಯಾಂಶಗಳು ಬೆಳಕಿಗೆ ಬಂದಿವೆ. ಬರ್ನ್‌ರಾಯಿಟರನ ದರ್ಪಮನೋಭಾವಕ್ಕೂ (ಡಾಮಿನೆನ್ಸ್) ಸ್ವಪ್ರತಿಷ್ಠೆಗೂ ಅಧಿಕ ಮಟ್ಟದ ಸಮ ಸಹಸಂಬಂಧವಿದೆ. (ಸಂ ( r ) = – 0.80). ತರ್ಸ್ಟನ್ನನ ವ್ಯಕ್ತಿತ್ವ ಪ್ರಶ್ನಾವಳಿಗೂ ಆಲ್ಪೋರ್ಟ್‌ನ ಪ್ರತಿಷ್ಠೆ, ಶರಣಾಗತಿ ಪ್ರತಿಕ್ರಿಯೆ ಸಮೀಕ್ಷೆಗಳಿಗೂ ಗಣನೀಯ ಪ್ರಮಾಣದ ಸಹಸಂಬಂಧವಿದೆ. ಇದರಂತೆಯೇ ಬಹಿರ್ಮುಖತ್ವ ಅಂತರ್ಮುಖತ್ವ ಮತ್ತು ಪ್ರತಿಷ್ಠೆ, ಸ್ವಶರಣಾಗತಿಗಳಿಗೆ ಸಹಸಂಬಂಧವಿರುವುದು ವ್ಯಕ್ತಪಟ್ಟಿದೆ. ನರರೋಗ ಪ್ರವೃತ್ತಿಗೂ (ನ್ಯೂರೋಟಿಸಿನಂ) ಶರಣಾಗತಿಗೂ ನೇರವಾದ ಸಹಸಂಬಂಧವಿದೆಯೆಂದು ಸ್ಟಾಗ್ನರ್ ತನ್ನ ಅಧ್ಯಯನದಿಂದ ಸಿದ್ಧಪಡಿಸಿದ್ದಾನೆ. ಈ ರೀತಿ ಕೆಲವು ವ್ಯಕ್ತಿತ್ವ ಪರೀಕ್ಷೆಗಳಲ್ಲಿರುವ ಪರಸ್ಪರ ಸಹಸಂಬಂಧಕ್ಕೆ ಅವುಗಳಲ್ಲಿರುವ ಅಂಶಗಳ ಪರಸ್ಪರ ಸಾಮ್ಯವೇ ಕಾರಣವೆಂಬುದು ಕೆಲವರ ಅಭಿಮತ.

ವ್ಯಕ್ತಿತ್ವ ಪರೀಕ್ಷೆಗಳಿಗೆ ಸೂಕ್ತ ಒರೆಗಲ್ಲುಗಳ ಅಭಾವವಿರುವುದರಿಂದ ಅವುಗಳ ಸಿಂಧುತ್ವ ಇಂತಿಷ್ಟೇ ಎಂದು ನಿರ್ಧರಿಸುವುದು ಕಷ್ಟಸಾಧ್ಯ. ಒಂದು ವ್ಯಕ್ತಿತ್ವ ಪರೀಕ್ಷೆಯ ಸಿಂಧುತ್ವವನ್ನು ಅದರ ವಾಸ್ತವಿಕ ಉಪಯೋಗದ ಆಧಾರದ ಮೇಲೆ ನಿರ್ಧರಿಸುವುದು ಸಮಂಜಸವಾಗಿದೆ. ಈ ದೃಷ್ಟಿಯಿಂದ ನೋಡಿದಾಗ ಆಲ್ಪೋರ್ಟ್‌ನ ಸಮೀಕ್ಷೆಗೆ ಗಣನೀಯ ಪ್ರಮಾಣದ ಸಿಂಧುತ್ವವಿದೆಯೆಂದು ಹೇಳಬಹುದು. ಈ ಸಮೀಕ್ಷೆಯನ್ನು ಜೀವನದ ವಿವಿಧ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಲಾಗಿದೆ. ರೋಗನಿದಾನ ಮನಶ್ಶಾಸ್ತ್ರಜ್ಞರು ಮಾನಸಿಕ ಚಿಕಿತ್ಸಾಲಯಗಳಲ್ಲೂ ವಿದ್ಯಾರ್ಥಿ ಉಪಬೋಧಕರು ಶಿಕ್ಷಣ ಕ್ಷೇತ್ರಗಳಲ್ಲೂ, ಔದ್ಯೋಗಿಕ ಮನಶ್ಶಾಸ್ತ್ರಜ್ಞರು ಕೈಗಾರಿಕಾ ಕ್ಷೇತ್ರಗಳಲ್ಲೂ ಉತ್ತಮ ಫಲಿತಾಂಶಗಳನ್ನು ಪಡೆದಿದ್ದಾರೆ.

ಆಲ್ಪೋರ್ಟ್‌ನ ಮತ್ತು ಇತರರ ಅಧ್ಯಯನಗಳಿಂದ ದೊರಕಿದ ಫಲಿತಾಂಶಗಳಿಂದ ಪ್ರತಿಷ್ಠೆ, ಶರಣಾಗತಿ ವ್ಯಕ್ತಿತ್ವ ವಿನ್ಯಾಸವು ಸಾಮಾನ್ಯ ವಿತರಣಾ ನಿಯಮವನ್ನು ಅನುಸರಿಸುತ್ತದೆಯೆಂಬುದು ತಿಳಿದುಬಂದಿದೆ.

**ಕೆಲವು ಕಾರಕಾಂಶಗಳು :** ಇಲ್ಲಿಯವರೆಗೆ ದೊರೆತಿರುವ ಹಲವು ಸಂಶೋಧನೆಗಳ ಫಲಿತಾಂಶಗಳಿಂದ ಕೆಲವು ತಥ್ಯಾಂಶಗಳು ಬೆಳಕಿಗೆ ಬಂದಿವೆ. ವ್ಯಕ್ತಿಯ ಎತ್ತರ ಮತ್ತು ತೂಕಗಳಿಗೂ ಪ್ರತಿಷ್ಠೆಗೂ ಮೇಲ್ಮಟ್ಟದ ಸಮಸಹಸಂಬಂಧವಿದೆ. ವ್ಯಾಪಾರಿಗಳೂ ಕಾರ್ಯನಿರ್ವಾಹಕರೂ ಹೆಚ್ಚು ಪ್ರತಿಷ್ಠಾವಂತರಾಗಿರುತ್ತಾರೆ. ಜನನ ಕ್ರಮಕ್ಕೂ ಪ್ರತಿಷ್ಠೆ, ಶರಣಾಗತಿಗೂ ಸಹಸಂಬಂಧವಿರುವಂತೆ ಕಾಣುತ್ತದೆ. ಹಿರಿಯ ಮಗ ಮತ್ತು ಒಬ್ಬನೇ ಮಗ/ಮಗಳು, ಇವರು ಹೆಚ್ಚು ಪ್ರತಿಷ್ಠಾವಂತರಾಗಿರುತ್ತಾರೆ. ಜನನ ಕ್ರಮದಲ್ಲಿ ಮಧ್ಯಮರು ಮತ್ತು ಕಿರಿಯವರು ಈ ವ್ಯಕ್ತಿತ್ವ ವಿನ್ಯಾಸದಲ್ಲಿ ಸರಾಸರಿಗಿಂತ ಕೆಳದರ್ಜೆಯಲ್ಲಿರುತ್ತಾರೆ. ವಟ್ಸರ್‌ನ ಪ್ರಕಾರ ಪೂರ್ವಾಚಾರಪ್ರಿಯರಾದ ಪುರುಷರೂ ತೀವ್ರಗಾಮಿಗಳಾದ (ರ್ಯಾಡಿಕಲ್) ಸ್ತ್ರೀಯರೂ ಹೆಚ್ಚು ಪ್ರತಿಷ್ಠಾವಂತರಾಗಿರುತ್ತಾರೆ.

ಜರ್‌ಸೀಲ್ಡ್ ಮತ್ತು ಸ್ಟೀವನ್ಸ್‌ನ ಸಂಶೋಧನೆಯಿಂದ ಬುದ್ಧಿಶಕ್ತಿ, ಶೈಕ್ಷಣಿಕ ಸಾಧನೆಗಳಿಗೂ ಪ್ರತಿಷ್ಠೆ, ಶರಣಾಗತಿಗೂ ಸಹಸಂಬಂಧವಿರುವಂತೆ ತಿಳಿದುಬಂದಿಲ್ಲ. ಇದರಂತೆಯೇ ಶೈಕ್ಷಣಿಕ ಹಂತ ಅನುವಂಶೀಯತೆ ಮೊದಲಾದ ಕಾರಕಾಂಶಗಳಿಗೂ ಪ್ರತಿಷ್ಠೆ ಶರಣಾಗತಿಗೂ ಯಾವ ನಿರ್ದಿಷ್ಟ ಸಹಸಂಬಂಧ ಇರುವಂತೆ ಸಿದ್ಧವಾಗಿಲ್ಲ.

**ಧರಣೇಂದ್ರಯ್ಯನವರ ಅಧ್ಯಯನ :** ಪ್ರತಿಷ್ಠೆ, ಶರಣಾಗತಿಗಳ ವ್ಯಕ್ತಿತ್ವ ವಿನ್ಯಾಸ ಸಾಮಾನ್ಯ ವಿತರಣ ನಿಯಮವನ್ನು ಅನುಸರಿಸುತ್ತದೆಯೆಂಬ ಆಲ್ಪೋರ್ಟ್‌ನ ಅಭಿಮತವನ್ನು ಪರಿಶೀಲಿಸುವುದು ಮತ್ತು ಈ ವಿನ್ಯಾಸ ಕಾಲೇಜು ವಿದ್ಯಾರ್ಥಿವೃಂದದಲ್ಲಿ ಯಾವ ರೀತಿ ಕಂಡುಬರುತ್ತದೆ ಎಂಬುದನ್ನು ತಿಳಿಯುವುದು ಈ ಅಧ್ಯಯನದ ಪ್ರಮುಖ ಉದ್ದೇಶಗಳು. ಪ್ರಾಸಂಗಿಕವಾಗಿ, ಮಾನವಸಂಸ್ಕೃತಿಶಾಸ್ತ್ರದ ವಿದ್ಯಾರ್ಥಿಗಳಿಗೂ ವಿಜ್ಞಾನದ ವಿದ್ಯಾರ್ಥಿಗಳಿಗೂ ಈ ವಿನ್ಯಾಸದಲ್ಲಿ ಇರಬಹುದಾದ ವ್ಯತ್ಯಾಸವನ್ನು ಅಂತೆಯೇ, ಈ ವಿನ್ಯಾಸಕ್ಕೂ ಬಾಲ್ಯ, ವಿದ್ಯಾಭ್ಯಾಸ, ತಂದೆ ಅಥವಾ ಪೋಷಕರ ಉದ್ಯೋಗ, ಮುಂದಾಳುತನ ಮೊದಲಾದ ಕಾರಕಾಂಶಗಳಿಗೂ ಇರಬಹುದಾದ ಸಂಬಂಧವನ್ನು ಅಧ್ಯಯನ ಮಾಡಲಾಯಿತು.

ಆಲ್ಪೋರ್ಟ್‌ನ ಪ್ರತಿಷ್ಠೆ, ಶರಣಾಗತಿ ಪ್ರತಿಕ್ರಿಯಾ ಸಮೀಕ್ಷೆಯನ್ನು ಸ್ಥಳೀಯ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಅಳವಡಿಸಿಕೊಳ್ಳಲಾಯಿತು. ಪೂರ್ವಾಧ್ಯಯನದ ಸಹಾಯದಿಂದ ಅಂಶವಿಶ್ಲೇಷಣೆ ಮಾಡಿದ ಅನಂತರ ಮೂಲಸಮೀಕ್ಷೆ ಯಲ್ಲಿದ್ದ 33 ಸನ್ನಿವೇಶಗಳನ್ನು ಸೂಕ್ತ ಮಾರ್ಪಾಡುಗಳಿಂದ 22 ಸನ್ನಿವೇಶಗಳಿಗೆ ಇಳಿಸಲಾಯಿತು. ಪ್ರತಿಯೊಂದು ಅಂಶದಲ್ಲೂ ನಿರೂಪಿತವಾಗಿರುವ ಸನ್ನಿವೇಶದ ಜೊತೆಗೆ, ಸಾಮಾನ್ಯವಾಗಿ ಆ ಸನ್ನಿವೇಶದಲ್ಲಿ ಕಂಡುಬರುವಂಥ 2 ರಿಂದ 4 ವರ್ತನೆಗಳನ್ನು ಮುಂದಿನ ಮಾದರಿಯಲ್ಲಿ ಕೊಡಲಾಗಿದೆ.

ನಿಮ್ಮ ಗೌರವಕ್ಕೆ ಪಾತ್ರರಾದ ಮತ್ತು ನಿಮಗಿಂತ ವಯಸ್ಸಿನಲ್ಲಿ ಹಿರಿಯವರಾದ ಒಬ್ಬರೊಡನೆ ನೀವು ಸಂಭಾಷಣೆ ನಡೆಸುತ್ತಿರುತ್ತೀರಿ. ಯಾವುದೇ ವಿಷಯದಲ್ಲಿ ನಿಮಗೆ ಭಿನ್ನಾಭಿಪ್ರಾಯ ಬರುತ್ತದೆ. ಆಗ ಸಾಮಾನ್ಯವಾಗಿ

(ಅ) ಸಂಭಾಷಣೆಯಲ್ಲಿ ನಿಮ್ಮ ಅಭಿಪ್ರಾಯವನ್ನು ಪ್ರತಿಪಾದಿಸುತ್ತೀರಾ?

(ಆ) ಅವರ ಅಭಿಪ್ರಾಯವನ್ನು ಒಪ್ಪಿಕೊಂಡಂತೆ ನಟಿಸಿದರೂ ಪರೋಕ್ಷವಾಗಿ ನಿಮ್ಮ ಅಭಿಪ್ರಾಯವನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತೀರಾ?

(ಇ) ಅವರ ಅಭಿಪ್ರಾಯವನ್ನು ಮಾತಿನಲ್ಲಿ ಒಪ್ಪಿಕೊಂಡು ಅದನ್ನು ಅಲ್ಲಿಗೇ ಕೈಬಿಡುತ್ತೀರಾ?

ಪರೀಕ್ಷಾರ್ಥಿ ತನ್ನ ಜೀವನಾನುಭವಗಳಿಗೆ ಅನುಗುಣವಾಗಿ ಪ್ರತಿಯೊಂದು ಅಂಶದಲ್ಲೂ ಸೂಚಿತವಾಗಿರುವ ವರ್ತನೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಬೇಕು.

ಈ ಸಮೀಕ್ಷೆಯನ್ನು 336 ಕಾಲೇಜು ವಿದ್ಯಾರ್ಥಿಗಳ ಮೇಲೆ ಪ್ರಯೋಗ ಮಾಡಲಾಯಿತು. ಇದರಿಂದ ದೊರೆತ ಪ್ರಾಪ್ತಾಂಕಗಳ ಪರಿಮಾಣಾತ್ಮಕ ವಿಶ್ಲೇಷಣೆ ನಡೆಸಿದಾಗ ಪ್ರತಿಷ್ಠೆ, ಶರಣಾಗತಿ ವ್ಯಕ್ತಿತ್ವವಿನ್ಯಾಸ ಸಾಮಾನ್ಯ ವಿತರಣ ನಿಯಮವನ್ನು ಅನುಸರಿಸುತ್ತದೆಯೆಂಬ ಆಲ್ಪೋರ್ಟ್‌ನ ಅಭಿಮತ ಸಮಂಜಸವಾಗಿದೆ ಎಂಬುದು ವ್ಯಕ್ತವಾಯಿತು. ಲೇಖಕರು ನಡೆಸಿದ ಅಧ್ಯಯನದಿಂದಾಗಿ ಕೆಳಗೆ ಕೊಟ್ಟಿರುವ ಕೆಲವು ವಿಷಯಗಳ ಪ್ರತಿಪಾದನೆಯಾಗಿದೆ.

1. ಸ್ವಪ್ರತಿಷ್ಠೆ–ಸ್ವಶರಣಾಗತಿ–ವ್ಯಕ್ತಿತ್ವವಿನ್ಯಾಸ, ಕಾಲೇಜು ವಿದ್ಯಾರ್ಥಿವೃಂದದಲ್ಲಿ, ಸಾಮಾನ್ಯ ವಿತರಣ ನಿಯಮಕ್ಕನುಸಾರವಾಗಿ ಪ್ರಕಟಿತವಾಗುತ್ತದೆ.
2. ಮುಖಂಡತ್ವಕ್ಕೂ ಸ್ವಪ್ರತಿಷ್ಠೆಗೂ ಗಣನೀಯ ಪ್ರಮಾಣದ ಸಂಬಂಧವಿದೆ (C.R.=17232).
3. ಬಾಲ್ಯ ವಿದ್ಯಾಭ್ಯಾಸ, ತಂದೆ ಅಥವಾ ಪೋಷಕರ ಉದ್ಯೋಗ ಮೊದಲಾದ ಕಾರಕಾಂಶಗಳು ಈ ವಿನ್ಯಾಸದ ಮೇಲೆ ತಮ್ಮ ಪ್ರಭಾವವನ್ನು ಬೀರುವಂತೆ ಕಂಡುಬರುತ್ತದೆ.
4. ಮಾನವಸಂಸ್ಕೃತಿಶಾಸ್ತ್ರಗಳ ವಿದ್ಯಾರ್ಥಿಗಳಿಗೂ ವಿಜ್ಞಾನದ ವಿದ್ಯಾರ್ಥಿಗಳಿಗೂ ಅಷ್ಟಾಗಿ ವ್ಯತ್ಯಾಸಗಳು ಕಂಡುಬಂದಿಲ್ಲ. ಆದರೂ ಮೊದಲನೆಯ ಗುಂಪಿನವರು, ಎರಡನೆಯವರಿಗಿಂತ ಕೊಂಚ ಹೆಚ್ಚು ಪ್ರತಿಷ್ಠಾವಂತರೆಂದು ಕಾಣುತ್ತದೆ. (ಡಿ.)

**ಆತ್ಮಪ್ರತ್ಯಯ :** ಈ ಪದಕ್ಕೆ ಆತ್ಮಪ್ರತಿಷ್ಠೆ ಎಂಬ ಅರ್ಥಕಲ್ಪನೆಗೂ ಸ್ವಾವಲಂಬನೆ, ಸ್ವತಂತ್ರವಾದ ಆಲೋಚನೆ, ಸ್ವಪ್ರಯತ್ನದಲ್ಲಿ ನಂಬಿಕೆ ಎಂಬ ಅರ್ಥಕಲ್ಪನೆಗೂ ಅವಕಾಶವಿದೆ. ಈ ಭಿನ್ನ ಅರ್ಥಗಳ ಆಧಾರದ ಮೇಲೆ ಭಿನ್ನ ಮತ ತತ್ತ್ವಗಳೂ ಭಿನ್ನ ನೀತಿತತ್ತ್ವಗಳೂ ಭಿನ್ನ ರಾಷ್ಟ್ರತತ್ತ್ವಗಳೂ ಏರ್ಪಟ್ಟಿವೆ. ಈ ಎರಡೂ ವ್ಯಕ್ತಿತ್ವಕ್ಕೆ ಪ್ರಾಶಸ್ತ್ಯ ಕೊಡುತ್ತವೆಯಾದರೂ ನಾವು ಬೆಳೆಸಬೇಕಾದ ವ್ಯಕ್ತಿತ್ತ್ವ ಎಂಥದ್ದು, ಯಾವ ವಿಧವಾದ ವ್ಯಕ್ತಿತ್ವವನ್ನು ಬೆಳೆಸುವುದು ಶ್ರೇಯಸ್ಕರ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಸಂಸಾರದಲ್ಲಿದ್ದು ಸಮಾಜದ ಅಭ್ಯುದಯಕ್ಕಾಗಿ ಶ್ರಮಿಸಿ ತನ್ಮೂಲಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದೇ ನಿಜವಾದ ಆತ್ಮಸಿದ್ಧಿ ಎಂಬುದು ಒಂದು ಮುಖ್ಯ ಪಕ್ಷ. ಈ ಎರಡು ಪಂಥಗಳು ಭಾರತದಲ್ಲೂ ಪಾಶ್ಚಾತ್ಯ ದೇಶಗಳಲ್ಲೂ ಬಹು ಹಿಂದಿನ ಕಾಲದಿಂದ ಬೆಳೆದು ಬಂದಿವೆ. ಅಭ್ಯುದಯ ಮತ್ತು ನಿಶ್ರೇಯಸ (**ನೋಡಿ**) ಒಂದಕ್ಕೊಂದು ವಿರುದ್ಧವಲ್ಲ. ಇವೆರಡರ ಸಮನ್ವಯ ಸಾಧ್ಯ. ಇಂಥ ಸಮನ್ವಯ ದಿಂದಲೇ ನಿಜವಾದ ಆತ್ಮಸಿದ್ಧಿ ಎಂಬುದು ಭಾರತೀಯರಿಗೂ ಪಾಶ್ಚಾತ್ಯರಿಗೂ ಸರ್ವಸಾಧಾರಣವಾದ ಪಂಥ. ಹಾಗೆಯೇ ರಾಜಕೀಯದಲ್ಲೂ ವ್ಯಕ್ತಿಸ್ವಾತಂತ್ರ್ಯವಾದ (ಇಂಡಿವಿಜುಯಲಿಸಂ) ಮತ್ತು ಸಮಾಜವಾದ (ಸೋಷಿಯಲಿಸಂ) ಎಂಬ ಎರಡು ತೀರ ವಿರುದ್ಧ ಪಂಥಗಳೂ ಅವೆರಡನ್ನೂ ಸಮನ್ವಯ ಮಾಡಲೆತ್ನಿಸುವ ಮಧ್ಯಮಾರ್ಗದ ಪಂಥಗಳು ಇವೆ. ಸಮಾಜದ ಭದ್ರತೆ ಎಷ್ಟು ಮುಖ್ಯವೊ ಅದರ ವ್ಯಕ್ತಿಸ್ವಾತಂತ್ರ್ಯವೂ ಅಷ್ಟೇ ಮುಖ್ಯ. ಕೆಲವು ವೇಳೆ ಇವೆರಡಕ್ಕೂ ವಿರೋಧ ಕಂಡುಬಂದರೂ ಇವು ಒಂದಕ್ಕೊಂದು ಪೋಷಕವಾಗಬೇಕೆಂಬುದೇ ಎರಡರ ಗುರಿ. ಆ ಗುರಿಯೇ ಇವೆರಡರ ಬೆಲೆಯನ್ನು ನಿರ್ಧರಿಸುವ ಪ್ರಮಾಣ. (ಜಿ.ಎಚ್.)

**ಆತ್ಮಶುದ್ಧಿ :** ದೇಹಸಂಬಂಧದಿಂದ ಆತ್ಮ ಕಲುಷಿತವಾಗಿದೆ ಎಂದು ಕೆಲವರು ಭಾವಿಸುವುದುಂಟು. ಪರಿಶುದ್ಧವಾದ ಆತ್ಮ ಕಲುಷಿತವಾಗುವುದಕ್ಕೆ ವಾಸನಾರೂಪವಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳು ಕಾರಣ. ವಾಸನಾರೂಪವಾದ ಈ ಪ್ರವೃತ್ತಿಗಳನ್ನು ದಮನಮಾಡಿದಾಗ ಆತ್ಮ ಶುದ್ಧವಾಗುತ್ತದೆ. ಅದಕ್ಕೆ ಬಿಡುಗಡೆಯುಂಟಾಗುತ್ತದೆ ಎಂಬುದು ಕೆಲವು ಮತಗಳ ಮೂಲ ನಂಬಿಕೆ. ಈ ಮತಗಳು ಆತ್ಮಶುದ್ಧಿಗೆ ಸಂನ್ಯಾಸ ಅಗತ್ಯವೆಂದು ಭಾವಿಸಿವೆ. ಪಾಶ್ಚಾತ್ಯ ಕ್ಯಾಥೊಲಿಕ್ ಮತದವರೂ ಭಾರತದ ಜೈನರೂ ಸಂನ್ಯಾಸದ ವಿನಾ ಆತ್ಮಶುದ್ಧಿಗೆ ಬೇರೆ ಮಾರ್ಗವಿಲ್ಲವೆಂದು ಭಾವಿಸಿರುತ್ತಾರೆ. ಇದು ಕೇವಲ ನಿವೃತ್ತಿಮಾರ್ಗ. ಇದಕ್ಕೆ ಪ್ರತಿಯಾದದ್ದು ಕೇವಲ ಪ್ರವೃತ್ತಿಮಾರ್ಗ. ಭಾರತದಲ್ಲೂ ಪಾಶ್ಚಾತ್ಯ ದೇಶಗಳಲ್ಲೂ ಕೇವಲ ಪ್ರವೃತ್ತಿಮಾರ್ಗವನ್ನು ಎತ್ತಿ ಹಿಡಿದಿರುವವರು ಲೋಕಾಯತರು ಮತ್ತು ಭೌತವಾದಿಗಳು.

ಈ ಎರಡು ಕೇವಲ ಮಾರ್ಗಗಳನ್ನು ಬಿಟ್ಟು ಮಧ್ಯಮ ಮಾರ್ಗವನ್ನು ಅವಲಂಬಿಸಿರುವ ತಾತ್ತ್ವಿಕರು ಭಾರತದಲ್ಲೂ ಪಾಶ್ಚಾತ್ಯ ದೇಶಗಳಲ್ಲೂ ಇದ್ದಾರೆ. ಬುದ್ಧನದು ಮಾಧ್ಯಮಿಕ ಮಾರ್ಗ. ಅದು ಧರ್ಮವೊಂದನ್ನೇ ಬಿಡುಗಡೆಯ ಉಪಾಯವೆಂದು ಭಾವಿಸಲಿಲ್ಲ. ಧರ್ಮದಿಂದ ಆತ್ಮದಲ್ಲಿ ಕಶ್ಮಲ ಕೂಡದಂತೆ ತಡೆಯಬಹುದು. ಆದರೆ ಅದೊಂದನ್ನೇ ಅನುಸರಿಸಿದರೆ ಅದು ಶುಷ್ಕಧರ್ಮವಾಗುತ್ತದೆ. ಆತ್ಮಶುದ್ಧಿಯೇ ಜೀವನದ ಅಂತಿಮ ಗುರಿಯಲ್ಲ. ಅದು ಆತ್ಮಶುದ್ಧಿಗೆ ಅಂಗವಾಗದಿದ್ದರೆ ಆತ್ಮ ಬರಡಾಗುತ್ತದೆ, ಮದದಿಂದ ಕೂಡಿದ ದಾನ, ದಯೆಗಳ ಮೂಲಕ ಆಧ್ಯಾತ್ಮಜೀವನ ತುಂಬುಜೀವನವಾಗುತ್ತದೆ. ಆನಂದಮಯ ಜೀವನವಾಗುತ್ತದೆ. ಈ ಜೀವನದಲ್ಲಿ ಆತ್ಮಶುದ್ಧಿ ಆತ್ಮಸಿದ್ಧಿಯಾಗಿ ಮುಂದುವರಿದಿದೆ. ಇದು ಪ್ರವೃತ್ತಿ ನಿವೃತ್ತಿಗಳ ಸಮನ್ವಯ ಮಾರ್ಗ. ಉಪನಿಷತ್ತುಗಳ ಮತ್ತು ಭಗವದ್ಗೀತೆಯ ತತ್ತ್ವಗಳು ಇಂಥ ಸಮನ್ವಯ ತತ್ತ್ವಕ್ಕೆ ಉದಾಹರಣೆಗಳು.(**ಜಿ.ಎಚ್.**)

**ಆತ್ಮಸಾಕ್ಷಾತ್ಕಾರ :** ಹೊರವಸ್ತುಗಳಂತೆ ಆತ್ಮ ಇಂದ್ರಿಯಪ್ರತ್ಯಕ್ಷ ವಿಷಯವಲ್ಲ. ಆದರೂ ನಮಗೆ ಆತ್ಮದ ಅರಿವು ಇದೆ. ಈ ಅರಿವು ಅಹಂಕಾರದಿಂದ ಭಿನ್ನವಾದದ್ದು, ಅತೀತವಾದದ್ದು, ಹೊರವಸ್ತುಗಳಿಂದ ಭಿನ್ನವಾದ ನಾನು ಎಂಬ ವ್ಯಕ್ತಿತ್ವದ ಅರಿವು ಅಹಂಕಾರ. ಆತ್ಮಸಾಕ್ಷಾತ್ಕಾರವಾದರೂ ನಾನು ಎಂಬುದು ಇತರ ವಸ್ತುಗಳಿಗಿಂತ, ಇತರರಿಗಿಂತ ಭಿನ್ನವಲ್ಲ ಎಂದು ತಿಳಿಯುವುದೇ ಆಗಿದೆ ಎಂದರೆ, ಎಲ್ಲ ವಸ್ತುಗಳಿಗೂ ಎಲ್ಲ ವ್ಯಕ್ತಿಗಳಿಗೂ ಸಾಮಾನ್ಯವಾದದ್ದೇ ಆತ್ಮ ಎಂಬ ತಿಳಿವೇ ಆತ್ಮಸಾಕ್ಷಾತ್ಕಾರ. ಇದು ಲೌಕಿಕ ಪ್ರತ್ಯಕ್ಷಕ್ಕಿಂತ ಭಿನ್ನವಾದದ್ದು, ಆದ್ದರಿಂದ ಇದನ್ನು ಅಲೌಕಿಕ ಪ್ರತ್ಯಕ್ಷವೆಂದು ಭಾವಿಸಲಾಗಿದೆ. ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ ಎಂಬ ಮಹಾ ವಾಕ್ಯಗಳಿಂದ ಹುಟ್ಟುವ ಜ್ಞಾನ ಅಲೌಕಿಕಪ್ರತ್ಯಕ್ಷ (**ನೋಡಿ– ಅದ್ವೈತ**). (**ಜಿ.ಎಚ್.**)

**ಆತ್ಮಸಾಕ್ಷಿ :** ಒಳ್ಳೆಯದು, ಕೆಟ್ಟದ್ದು ಎಂಬುದನ್ನು ನಿರ್ಧರಿಸುವ ಆಂತರಿಕ ಪ್ರಮಾಣ. ಆಪ್ತವಚನ ಮತ್ತು ಶಾಸ್ತ್ರಾಧಾರ ಬಾಹ್ಯಪ್ರಮಾಣಗಳು. ಆಪ್ತವೆಂದರೆ ತಂದೆತಾಯಿಯರು, ಗುರುಹಿರಿಯರು, ಪೂರ್ವಾಚಾರ್ಯರು. ಶಾಸ್ತ್ರಗಳೆಂದರೆ ವೇದ, ಕುರಾನು, ಬೈಬಲ್ ಮೊದಲಾದ ಧಾರ್ಮಿಕ ಆಧಾರಗಳು. ಆತ್ಮಸಾಕ್ಷಿ ಈ ರೀತಿ ಬಾಹ್ಯವಲ್ಲ, ಬೇರೆಯವರಿಂದ ನಿಯೋಜಿತವಾದುದಲ್ಲ. ಆಂತರಿಕವಾದುದು, ನಮ್ಮೊಳಗಿನ ಸಾಕ್ಷಿರೂಪವಾದ ಚೇತನದಿಂದಲೇ ಹುಟ್ಟಿಬಂದುದು.

ಆತ್ಮಸಾಕ್ಷಿ ಕೇವಲ ವೈಯಕ್ತಿಕವೇ ಅಥವಾ ಅತೀತವಾದ ಚೇತನದ ಪ್ರತಿಬಿಂಬವೇ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ವೈಷ್ಣವಧರ್ಮ, ಕ್ರೈಸ್ತಧರ್ಮಗಳ ಪ್ರಕಾರ ಆತ್ಮಸಾಕ್ಷಿಯ ವಾಣಿ ಕೇವಲ ವೈಯಕ್ತಿಕವಲ್ಲ; ಅಂತರ್ಯಾಮಿಯಾದ ಭಗವಂತನ ವಾಣಿ; ಭಗವಂತನೇ ನಮ್ಮ ಹೃದಯಾಂತರಾಳದಲ್ಲಿದ್ದು ಯಾವುದು ಧರ್ಮ ಯಾವುದು ಅಧರ್ಮ ಎಂಬುದನ್ನು ಪ್ರಚೋದಿಸುತ್ತಾನೆ. ಯಹೂದಿ ಮತ್ತು ಇಸ್ಲಾಂ ಧರ್ಮಗಳ ಪ್ರಕಾರ ಧರ್ಮಾಧರ್ಮಗಳು ದೇವರ ಆಜ್ಞೆ, ಅದು ಒಬ್ಬ ಪ್ರವಾದಿಯ ಮೂಲಕ ಬಂದು ನಿಯೋಜಿತವಾದದ್ದು; ನಮ್ಮೊಳಗಿನಿಂದ ಪ್ರಚೋದಿತವಾದುದಲ್ಲ; ದೇವರಿಂದ ದತ್ತವಾದದ್ದು. ಪ್ಲೇಟೊ ಮುಂತಾದ ಪ್ರಾಚೀನ ಗ್ರೀಕ್ ತಾತ್ತ್ವಿಕರ ದೃಷ್ಟಿ ಬೇರೆ. ಅಂತರ್ಯಾಮಿಯಾದ ಅಥವಾ ಅತೀತವಾದ ದೇವರಿಂದ ಪ್ರಚೋದಿತವಾದ ನಡವಳಿಕೆಯಲ್ಲ; ದೇವರ ಆಜ್ಞೆಗೆ ವಿಧೇಯವಾದ ನಡತೆಯಲ್ಲ. ವಿಚಾರಚೇತನದಿಂದ ಹುಟ್ಟಿದ ವಿವೇಕವೇ ಅದಕ್ಕೆ ಆಧಾರ. ಈ ವಿಚಾರಚೇತನವನ್ನು ಪ್ಲೇಟೊ ರಥಕ್ಕೆ ಕಟ್ಟಿದ ಕುದುರೆಗಳ ಓಟವನ್ನು ನಿಯಂತ್ರಿಸುವ ಸಾರಥಿಗೆ ಹೋಲಿಸಿರುತ್ತಾನೆ. ಭಗವದ್ಗೀತೆಯಲ್ಲೂ ಇದೇ ಉಪಮಾನವಿದೆ. ಆದರೆ ಅಲ್ಲಿ ಸಾರಥಿ ಕೇವಲ ವೈಚಾರಿಕಬುದ್ಧಿಯವನಲ್ಲ, ಅಂತರ್ಯಾಮಿಯಾದ ಕೃಷ್ಣ ಭಗವಾನ್. (**ಜಿ.ಎಚ್.**)

**ಆತ್ಮಸಾಕ್ಷಿ ಪ್ರಾಮಾಣ್ಯವಾದ :** ನೀತಿಗೆ ಸಂಬಂಧಪಟ್ಟ ಒಂದು ವಾದ. ಮಂಡಿಸಿದವ ಆಂಗ್ಲೇಯ ನೀತಿಶಾಸ್ತ್ರಜ್ಞ ಬಿಷಪ್ ಬಟ್ಲರ್ (1692–1752). ತನ್ನ ಸರ್ಮನ್ಸ್ ಎಂಬ ಗ್ರಂಥದಲ್ಲಿ ಈ ಪದಕ್ಕೆ ಸಮಾನಾರ್ಥಕವಾಗಿ ಈತ ಬಳಸಿದ ಪದ ಕಾನ್‌ಷನ್ಸ್. ಇವನಿಗೆ ಮುಂಚೆ ಷೇಕ್ಸ್‌ಪಿಯರ್ ಮುಂತಾದವರು ಈ ಪದವನ್ನು ಕಾನ್‌ಷಸ್‌ನೆಸ್ ಅಂದರೆ ಪ್ರಜ್ಞೆ ಎಂಬ ಅರ್ಥದಲ್ಲಿ ಬಳಸುತ್ತಿದ್ದರು. ನೀತಿ ನಿಯಮವನ್ನು ಆಜ್ಞಾಪಿಸುವ ಚಿತ್ ಎಂಬ ಅರ್ಥದಲ್ಲಿ ಮೊಟ್ಟಮೊದಲಿಗೆ ಬಳಸಿದವ ಬಟ್ಲರ್. ಆತ್ಮಸಾಕ್ಷಿಯ ವ್ಯಾಪಾರ ಕೇವಲ ಬೌದ್ಧಿಕವಲ್ಲ, ಭಾವನಿಷ್ಟ ಎಂದು ಬಟ್ಲರನ ಅಭಿಮತ. ಕಾನ್‌ಷನ್ಸ್‌ಗೆ ಸಂಬಂಧಪಟ್ಟ ಅವನ ವಿವರಣೆ ಈ ರೀತಿ ಇದೆ: ಹೃದಯದ ಪ್ರೇರಣೆಗಳನ್ನು ವೀಕ್ಷಿಸಿ ಅವುಗಳನ್ನು ಅಂಗೀಕರಿಸುವ, ಅಂಗೀಕರಿಸದಿರುವ ವಿವೇಚನಾಶಕ್ತಿ ಮಾನವರಲ್ಲಿದೆ. ನಮ್ಮೊಳಗೆ ನಡೆಯುವ ಎಲ್ಲ ವರ್ತನೆಗಳನ್ನೂ ಇಷ್ಟಾನಿಷ್ಟಗಳನ್ನೂ ಕಾಮ ಪ್ರೇಮಗಳನ್ನೂ ಅವುಗಳ ತೀವ್ರತೆಯ ಪ್ರಮಾಣವನ್ನೂ ವಿವೇಚಿಸಿ ಮನಸ್ಸು ಒಂದನ್ನು ಸಾಧುವೆಂದು ಒಪ್ಪುತ್ತದೆ; ಇನ್ನೊಂದನ್ನು ಅಸಾಧುವೆಂದು ಅಸಮ್ಮತಿಯನ್ನು ತೋರಿಸುತ್ತದೆ; ಮತ್ತೊಂದರ ಬಗ್ಗೆ ಔದಾಸೀನ್ಯ ತೋರಿಸುತ್ತದೆ. ಹೀಗೆ ತನ್ನ ಹೃದಯದ ಪ್ರೇರಣೆಗಳ, ಮನಃಪಾಕಗಳ, ನಡೆವಳಿಕೆಗಳ ವಿಚಾರದಲ್ಲಿ ಸಮ್ಮತಿಸುವ ಅಸಮ್ಮತಿಸುವ ಆಂತರಿಕ ತತ್ತ್ವವೇ ಆತ್ಮಸಾಕ್ಷಿ. ನಡತೆಯನ್ನು ಪ್ರೇರಿಸುವ ರಾಗಗಳು, ಭಾವಗಳು ಅನೇಕವಿವೆ. ಆದರೆ ಆತ್ಮಸಾಕ್ಷಿಯ ಪ್ರೇರಣೆ ಇವೆಲ್ಲಕ್ಕಿಂತ ಮೇಲಾದುದು; ಸ್ವಭಾವತಃ ಅದು ಮೇಲ್ವಿಚಾರಣೆ ನಡೆಸುವ ನಿಯೋಗಿಸುವ ಅಧಿಕಾರವುಳ್ಳದ್ದು. ವಿಧಾಯಕತ್ವದ ಹಕ್ಕಿರುವಂತೆ ಅದಕ್ಕೆ ವೀರ್ಯವೂ ಇದ್ದಿದ್ದರೆ, ನಿಯಂತ್ರಿಸುವ ಅಧಿಕಾರಕ್ಕೆ ತಕ್ಕಂತೆ ನಿರ್ವಹಣಾ ಸಾಮರ್ಥ್ಯವಿದ್ದಿದ್ದರೆ ಅದು ಲೋಕದ ಮೇಲೆ ಪ್ರಭುತ್ವ ನಡೆಸಬಹುದಾಗಿತ್ತು.

ನಡೆವಳಿಕೆಗಳನ್ನು ಪ್ರಚೋದಿಸುವ ಕೆಲವು ಸ್ವಾಭಾವಿಕ ಶಕ್ತಿಗಳು ಮಾನವನಲ್ಲಿವೆ. ಬಟ್ಲರ್‌ನ ಪ್ರಕಾರ ನಡತೆಯನ್ನು ಪ್ರೇರಿಸುವ ಶಕ್ತಿಗಳಲ್ಲಿ ಸ್ವಾಭಿಮಾನ (ಸೆಲ್ಫ್‌ರೆಸ್ಪೆಕ್ಟ್) ಒಂದು, ದಯಾಪರತೆ (ಬಿನೆವೊಲೆನ್ಸ್) ಎರಡನೆಯದು. ಆದರೆ ಆತ್ಮಸಾಕ್ಷಿಯು ಸ್ವಾಭಿಮಾನ ಮತ್ತು ದಯಾಪರತೆಗಳಿಗಿಂತ ಶ್ರೇಷ್ಠವಾದದ್ದು. ಇದು ಸ್ವಾಭಿಮಾನಕ್ಕಿಂತ ಶ್ರೇಷ್ಠವಾದರೂ ಸ್ವಾಭಿಮಾನದ ಶಕ್ತಿ ಪ್ರಬಲವಾಗಿರಬಹುದು. ಅದು ಆತ್ಮಸಾಕ್ಷಿಯ ಪ್ರೇರಣೆಯನ್ನು ದುರ್ಬಲ ಗೊಳಿಸಬಹುದು. ಅಂಥ ಸಂದರ್ಭಗಳಲ್ಲಿ ಸ್ವಾಭಿಮಾನ, ಕಾಮ, ಕೋಪ, ಮಾತ್ಸರ್ಯಗಳು ಪ್ರಬಲಿಸಿ ಒಬ್ಬ ತಪ್ಪಿ, ಆತ್ಮಸಾಕ್ಷಿಯ ವಾಣಿಯನ್ನು ಉಲ್ಲಂಘಿಸಿ ನಡೆಯಬಹುದು. ಆದ್ದರಿಂದ ಆತ್ಮಸಾಕ್ಷಿ ನ್ಯಾಯವಿಧಾಯಕವೇ ಹೊರತು ಸರ್ವಾಧಿಕಾರಿಯಲ್ಲ. ಒಬ್ಬ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದಾಗ ಆತ್ಮಸಾಕ್ಷಿ ವಿರಮಿಸುವುದಿಲ್ಲ; ಅದು ಒಳಗೇ ಇದ್ದು ಕೆಟ್ಟದ್ದನ್ನು ಮಾಡಿದವನನ್ನು ಕೊರೆಯುತ್ತದೆ. ಹೀಗೆ ಒಳಗಿನ ಕೊರಗುಗಳನ್ನು ಆತ್ಮಸಾಕ್ಷಿಯ ಯಾತನೆಗಳು (ಪ್ಯಾಂಗ್ಸ್ ಆಫ್ ಕಾನ್‌ಷನ್ಸ್) ಎಂದು ಕರೆಯುವುದುಂಟು. ಆತ್ಮಸಾಕ್ಷಿಯ ತಿಳಿವು ಎಂದೆಂದಿಗೂ ತಪ್ಪಲ್ಲ ಎಂಬುದು ಬಟ್ಲರ್‌ನ ಅಭಿಮತ.

ಆತ್ಮಸಾಕ್ಷಿಯ ತಿಳಿವಿನ ಸ್ವರೂಪವೇನು ಎಂಬುದು ಮುಂದಿನ ಪ್ರಶ್ನೆ. ಈ ಪ್ರಶ್ನೆಗೆ ಎರಡು ಉತ್ತರಗಳನ್ನು ಕೊಡಬಹುದು. ಅದು ನೀತಿಯ ನಿಯಮಗಳನ್ನು ನಿಯಂತ್ರಿಸುವ ಪ್ರತಿಭಾನ ಸ್ವಭಾವವುಳ್ಳದ್ದು; ಅದು ಅನಿರ್ವಚನೀಯ ಎಂಬುದು ಒಂದು ಉತ್ತರ. ಅದು ನಿಯಂತ್ರಿಸುವ ನಿಯಮ ಕಾರಣಸಹಿತವಾದ ತಿಳಿವು; ಅದರ ಅಧಿಕಾರ ಕಾರಣ ಚೇತನರೂಪ ವಾದದ್ದು ಎಂಬುದು ಎರಡನೆಯ ಉತ್ತರ. ಮೊದಲನೆಯದನ್ನು ನೈತಿಕ ಸ್ವಯಂಪ್ರಕಾಶವಾದ ವೆಂದೂ ಎರಡನೆಯದನ್ನು ನೈತಿಕ ಕಾರಣಚೇತನವಾದ ಎಂದೂ ಕರೆಯುವುದು ವಾಡಿಕೆ. ಈ ಎರಡು ಬಗೆಯ ಅರಿವುಗಳಲ್ಲಿ ಆತ್ಮಸಾಕ್ಷಿಯ ಅರಿವು ಯಾವ ಬಗೆಯದು ಎಂಬುದನ್ನು ಬಟ್ಲರ್ ಸ್ಪಷ್ಟಪಡಿಸಿಲ್ಲ. ಆದರೆ ಅವನ ಅನಂತರ ಬಂದ ಅವನ ಅನುಯಾಯಿಗಳು ಈ ಎರಡು ವಿಧವಾದ ವಾದಗಳನ್ನೂ ಸ್ಪಷ್ಟವಾಗಿ ಪ್ರತ್ಯೇಕಿಸಿರುತ್ತಾರೆ. ಮೊದಲನೆಯ ಸ್ವಯಂಪ್ರಕಾಶ ವಾದ ಅರ್ಥ ಸಂಕುಚಿತವಾದದ್ದು; ಎರಡನೆಯ ವಾದದ ಅರ್ಥ ವಿಶಾಲವಾದದ್ದು. ಮೊದಲನೆಯ ವಾದದ ಪ್ರಕಾರ ಪ್ರತಿಭಾನದ ತಿಳಿವು ಸ್ವಸಂವೇದ್ಯದರ್ಶನ. ಅದರ ಸಮರ್ಥನೆಗೆ ಕಾರಣ ಕೊಡಬೇಕಾದದ್ದಿಲ್ಲ, ತರ್ಕ ಅನಾವಶ್ಯಕ. ಎರಡನೆಯ ವಾದದ ಪ್ರಕಾರ – ಇದು ಕ್ಯಾಂಟ್, ಕ್ಲಾರ್ಕ್, ವೊಲಾಟ್ಸನ್ನರ ವಾದ ನೀತಿಯ ವಿಚಾರವಾಗಿ ಪ್ರತಿಜ್ಞೆ ಮಾಡುವ ಅರಿವು ಕ್ರಿಯಾ ನಿರ್ದೇಶಕ ಕಾರಣಚೇತನ. ಇದು ಕೇವಲ ದರ್ಶನವಲ್ಲ, ಮನನದಿಂದ ಸ್ಥಿರಪಟ್ಟ ತಿಳಿವು. ಆದರೆ ಈ ಮನನದಿಂದ ಸ್ಥಿರಪಡುವ ತತ್ತ್ವಗಳು ಸ್ವಭಾವಸಿದ್ಧವಾದ ತತ್ತ್ವಗಳಾದ್ದ ರಿಂದ ಅಂತಿಮದಲ್ಲಿ ಅವರ ವಾದವನ್ನೂ ಒಂದು ವಿಶಾಲ ರೀತಿಯ ಸ್ವಸಂವೇದ್ಯವಾದವೇ ಎಂದು ಹೇಳಬಹುದು. ದರ್ಶನವನ್ನು ಸಮರ್ಥಿಸಲು ಉಪಯೋಗಿಸುವ ತತ್ತ್ವಗಳು ಕಾರಣಚೇತನದ ತತ್ತ್ವಗಳಾದರೂ ತಾರ್ಕಿಕ ತತ್ತ್ವಗಳಾದರೂ ಆ ಕಾರಣಚೇತನವಾದ ತತ್ತ್ವಗಳೂ ಕೊನೆಯಲ್ಲಿ ಸ್ವಸಂವೇದ್ಯ ತತ್ತ್ವಗಳೇ ಎಂದು ಭಾವಿಸಬಹುದು.

ಈ ಎರಡು ಬಗೆಯ ವಾದಗಳೂ ಒಂದು ಅಂಶದಲ್ಲಿ ಒಮ್ಮತ ಹೊಂದಿವೆ. ಯಾವುದೊಂದು ಕಾರ್ಯವನ್ನು ಸಾಧು ಅಥವಾ ಅಸಾಧು, ಕರ್ತವ್ಯ ಅಥವಾ ಕರ್ತವ್ಯವಲ್ಲ ಎಂದು ಹೇಳುವಾಗ ಅದರ ಸಾಧುತ್ವ ಅಥವಾ ಅಸಾಧುತ್ವಗಳನ್ನು ಅದರ ಒಳ ಸ್ವಭಾವದಿಂದ ನಿರ್ಧರಿಸಬೇಕೇ ಹೊರತು ಅದರ ಪರಿಣಾಮದಿಂದ ಅಥವಾ ಫಲದಿಂದ ಅಲ್ಲ. ಸತ್ಯವನ್ನು ಹೇಳುವುದು ನಮ್ಮ ಕರ್ತವ್ಯ ಎಂಬುದನ್ನು ಅದು ಸ್ವಭಾವತಃ ಸರಿಯೆಂದು ನಿರ್ಧರಿಸಬೇಕು; ಅದರಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆಯೇ ಅಥವಾ ಅದರಿಂದ ನೆಮ್ಮದಿಯುಂಟಾಗು ತ್ತದೆಯೇ, ಸುಖಪ್ರಾಪ್ತಿಯಾಗುತ್ತದೆಯೇ ಎಂಬುದನ್ನು ವಿಚಾರ ಮಾಡುವುದರಿಂದಲ್ಲ. ಕರ್ತವ್ಯಕ್ಕಾಗಿ ಕರ್ತವ್ಯ ಮಾಡುತ್ತೇವೆಯೇ ಹೊರತು ಅದಕ್ಕೆ ಹೊರತಾದ ಫಲ ನಿರೀಕ್ಷಣೆ ಯಿಂದ ಅಲ್ಲ. ಫಲಿತಾಂಶದಿಂದಲ್ಲ ಎಂಬಂಶದಲ್ಲಿ ಈ ಎರಡು ವಾದದವರದೂ ಏಕಾಭಿಪ್ರಾಯ. ಇವರಿಬ್ಬರೂ ನೈತಿಕಸುಖವಾದಿಗಳನ್ನೂ ಪ್ರಯೋಜನವಾದಿಗಳನ್ನೂ ಪ್ರತಿಭಟಿಸುತ್ತಾರೆ. ಇವರದು ಅನಾಸಕ್ತಿಕರ್ಮವಾದವನ್ನು ಹೋಲುತ್ತದೆ.

ಈ ಸ್ವತಸ್ಸಿದ್ಧ ನೀತಿವಾದವನ್ನು ಆಧುನಿಕ ಪಾಶ್ಚಾತ್ಯ ಶಾಸ್ತ್ರಜ್ಞರು ಅನೇಕ ಬಗೆಯಾಗಿ ವಿಮರ್ಶೆ ಮಾಡಿರುತ್ತಾರೆ.

ಪ್ರತಿಭಾನದಿಂದ ಕರ್ತವ್ಯವನ್ನು ನಿರ್ಧರಿಸುವಾಗ ಅದು ಒಂದು ವಿಶಿಷ್ಟವಾದ ಕಾರ್ಯಕ್ಕೆ ಸಂಬಂಧಿಸಬಹುದು ಅಥವಾ ಒಂದು ಜಾತಿಯ ಕಾರ್ಯಗಳಿಗೆ ಅಥವಾ ಒಂದು ಸಾಮಾನ್ಯ ನಿಯಮಕ್ಕೆ ಸಂಬಂಧಪಡಬಹುದು. ಪ್ರತಿಯೊಂದು ಕರ್ತವ್ಯವೂ ಒಂದು ವಿಶಿಷ್ಟ ಸಂದರ್ಭಕ್ಕೆ ಸಂಬಂಧಪಟ್ಟದ್ದು.

ಸಾಮಾನ್ಯವಾಗಿ ಹಠಾತ್ತಾಗಿ ಒದಗಿದ ಒಂದು ವಿಶಿಷ್ಟವಾದ ಸನ್ನಿವೇಶದಲ್ಲಿ ಕರ್ತವ್ಯ ವೇನೆಂಬುದನ್ನು ನಿರ್ಧರಿಸುವಾಗ ಪೂರ್ವಾಪರಗಳನ್ನು ಯೋಚಿಸುವುದಕ್ಕೆ ಸಮಯವಿರುವು ದಿಲ್ಲ. ಆ ಕೂಡಲೇ ಕರ್ತವ್ಯವನ್ನು ನಿರ್ಧರಿಸಬೇಕಾದಾಗ ಪ್ರತಿಭಾನವನ್ನೇ ಆಶ್ರಯಿಸಬೇಕಾಗು ತ್ತದೆ. ಆ ಕಾಲದಲ್ಲಿ ಮಾಡಿದ ಕೆಲಸವನ್ನು ಸರಿಯೆಂದೇ ತಿಳಿದು ಮಾಡುತ್ತೇವೆ ಎಂಬುದನ್ನು ಒಪ್ಪಬಹುದು. ಆದರೆ ಪ್ರತಿಭಾನವನ್ನು ಆಶ್ರಯಿಸಿ ಮಾಡಿದ ಕಾರ್ಯವಾದ ಮಾತ್ರದಿಂದಲೇ ಅದು ಸರಿಯಾದ ಕಾರ್ಯವೆಂದು ಹೇಳಲಾಗುವುದಿಲ್ಲ. ಅನೇಕ ವೇಳೆ ಅವಸರದಲ್ಲಿ ಸರಿಯೆಂದು ಮಾಡಿದ ಕಾರ್ಯ ಅನಂತರದಲ್ಲಿ ಸರಿಯಲ್ಲವೆಂದು ತೋರಿ ಮಾಡಿದ್ದಕ್ಕೆ ಪಶ್ಚಾತ್ತಾಪಪಡುತ್ತೇವೆ. ಹೀಗೆ ಅನಂತರದಲ್ಲಿ ತೋರಿದ್ದೂ ಸ್ವತಸ್ಸಿದ್ಧವಾದ ಪ್ರತಿಭಾನದಿಂದಲೇ. ಆದರೆ ಆ ಎರಡು ಪ್ರತಿಭಾನಗಳು ಒಂದಕ್ಕೊಂದು ವಿರುದ್ಧವಾಗುತ್ತವೆ. ಪರಸ್ಪರ ವಿರುದ್ಧವಾದವು ಗಳಲ್ಲಿ ಎರಡೂ ಸರಿಯಾಗಲಾರವು. ಇವುಗಳಲ್ಲಿ ಯಾವುದು ಸರಿ ಎಂಬುದನ್ನು ಸ್ವತಸ್ಸಿದ್ಧವಾದ ಪ್ರತಿಭಾನದಿಂದ ನಿರ್ಧರಿಸುವುದಕ್ಕಾಗುವುದಿಲ್ಲ. ಆಗ ಬೇರೆ ಪ್ರಮಾಣವಾದ ಕಾರಣಚೇತನವನ್ನು ಆಶ್ರಯಿಸಬೇಕಾಗುತ್ತದೆ. ಆದ್ದರಿಂದ ಪ್ರತಿಭಾನ ಪ್ರಮಾಣವನ್ನು ಏಕೈಕ ಪ್ರಮಾಣವಾಗಿ ಆಗಲಿ, ಅಂತಿಮ ಪ್ರಮಾಣವಾಗಿ ಆಗಲಿ ನೆಚ್ಚಲಾಗುವುದಿಲ್ಲ.

ಸರಿತಪ್ಪುಗಳನ್ನು ಪ್ರತಿಭಾನದಿಂದ ನಿರ್ಧರಿಸುವುದು ಒಂದು ಜಾತಿಯ ಕಾರ್ಯಗಳಿಗೆ ಸಂಬಂಧಪಟ್ಟದ್ದು, ನೀತಿಯ ಒಂದು ಸಾಮಾನ್ಯ ನಿಯಮಕ್ಕೆ ಒಳಪಟ್ಟದ್ದು ಎಂದು ಹೇಳುವುದು ಇನ್ನೊಂದು ಬಗೆಯ ಪ್ರತಿಭಾನವಾದ. ಯಾವಾಗಲೂ ನಿಜ ಹೇಳಬೇಕು, ಎಂದಿಗೂ ಸುಳ್ಳು ಹೇಳಬಾರದು ಎಂಬ ಸಾಮಾನ್ಯ ನಿಯಮಗಳನ್ನು ಪ್ರತಿಭಾನದಿಂದ ತಿಳಿದು ಅದರ ಪ್ರಕಾರ ಒಂದೊಂದು ಸಂದರ್ಭದಲ್ಲೂ ಕರ್ತವ್ಯವನ್ನು ಮಾಡುತ್ತೇವೆ. ಈ ವಿಧವಾದ ನೈತಿಕ ಪ್ರತಿಭಾನವಾದದಲ್ಲೂ ಲೋಪದೋಷಗಳಿವೆ. ಪ್ರತಿಭಾನದಿಂದ ಬಂದ ಸಾಮಾನ್ಯ ನಿಯಮಗಳ ತಿಳಿವಿನಿಂದ ಹೆಚ್ಚು ಸಂದರ್ಭಗಳಲ್ಲಿ ನಮ್ಮ ನಡತೆ ಸರಿಹೋಗಬಹುದು. ಆದರೆ ಎಲ್ಲ ಸಂದರ್ಭಗಳಲ್ಲೂ ಸರಿ ಹೋಗುತ್ತದೆಯೆಂದು ಹೇಳಲಾಗುವುದಿಲ್ಲ. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಈ ಸಾಮಾನ್ಯ ನಿಯಮಗಳು ಸಂದೇಹಕ್ಕೆ ಎಡೆಗೊಡುತ್ತವೆ. ಒಬ್ಬ ದರೋಡೆಕೋರ ತಾನು ಕೊಲ್ಲಬೇಕೆಂದಿರುವ ವ್ಯಕ್ತಿ ಅಡಗಿಕೊಂಡಿರುವ ಸ್ಥಳವನ್ನು ತೋರಿಸೆಂದು ನಿರ್ಬಂಧಪಡಿಸಿದಾಗ ಅವನ ನಿರ್ಬಂಧಕ್ಕೆ ಒಳಗಾಗಿ ಅವನಿಗೆ ನಿಜವನ್ನು ಹೇಳಬಹುದೋ? ನಿರಪರಾಧಿಯನ್ನು ಉಳಿಸಲು, ಒಬ್ಬ ಯುವತಿಯನ್ನು ಮಾನಹಾನಿ ಯಿಂದ ಕಾಪಾಡಲು ಸುಳ್ಳು ಹೇಳುವುದು ಅನೀತಿಯೋ? ಇಂಥ ಸಂದರ್ಭಗಳಲ್ಲಿ ಪ್ರತಿಭಾನ ತೋರಿಸಿದ ಸಾಮಾನ್ಯ ನಿಯಮವನ್ನು ಅನುಸರಿಸುವುದು ತಪ್ಪಾಗುತ್ತದೆ.

ಅದೂ ಅಲ್ಲದೆ ಈ ಸಾಮಾನ್ಯ ನಿಯಮಗಳು ಸ್ವತಃ ಸಿದ್ಧವಾದ ನಿಯಮಗಳಲ್ಲ. ಸಿಡ್ಜ್‌ವಿಕ್ ಹೇಳುವಂತೆ ಅವು ಲೋಕಾನುಭವದ ಆಧಾರದ ಮೇಲೆ ಅನುಮಾನದಿಂದ ಏರ್ಪಟ್ಟವು. ಪ್ರಾಣ ತೆಗೆಯುವುದು ಸಾಮಾನ್ಯವಾಗಿ ಸಮಾಜದ ಹಿತಕ್ಕೆ ಪ್ರತಿಬಂಧಕ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಕೊಲೆಗಾರನನ್ನು ಗಲ್ಲಿಗೇರಿಸುವುದು ನ್ಯಾಯವೋ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿಗೆ ಅವಕಾಶವಿದೆ. ಕೊಲೆಗಾರನನ್ನು ಗಲ್ಲಿಗೇರಿಸುವುದು ನ್ಯಾಯವಲ್ಲವೆಂದೂ ಆ ಕಾನೂನನ್ನು ರದ್ದುಪಡಿಸಬೇಕೆಂದೂ ಅನೇಕರು ವಾದಿಸಿರುತ್ತಾರೆ. ಕೆಲವು ಪ್ರದೇಶಗಳಲ್ಲಿ ಗಲ್ಲಿಗೇರಿಸುವ ಕಾನೂನನ್ನು ರದ್ದುಪಡಿಸಲಾಗಿದೆ.

ಒಬ್ಬ ತನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ನಿಷ್ಠೆಯಿಂದ ನಡೆದುಕೊಳ್ಳುವುದು ಮೆಚ್ಚತಕ್ಕದ್ದೇ. ಆದರೆ ನಿಷ್ಠೆಯ ನಡವಳಿಕೆ ಅನೇಕವೇಳೆ ತಪ್ಪಿನನಡವಳಿಕೆಯಾಗಿರುತ್ತದೆ. ನಿಷ್ಠಾವಂತನ ಆತ್ಮಸಾಕ್ಷಿ ಕತ್ತೆಯ ಆತ್ಮಸಾಕ್ಷಿಯಾಗಿರಬಹುದು; ಮತಾಂಧನ ಆತ್ಮಸಾಕ್ಷಿಯಾಗಿರಬಹುದು; ಅಥವಾ ಪರಮ ವಿವೇಕಿಯಾದ ಸಾಕ್ರಟೀಸನದಾಗಿರಬಹುದು. ಒಬ್ಬೊಬ್ಬನ ಕರ್ತವ್ಯವೂ ತನ್ನ ಬುದ್ಧಿ, ವಿದ್ಯೆ, ವಿವೇಕ ಒಟ್ಟಿನಲ್ಲಿ ಅವನು ಬೆಳೆಸಿಕೊಂಡಿರುವ ಧ್ಯೇಯರೂಪವಾದ ವ್ಯಕ್ತಿತ್ವಕ್ಕೆ ಸಾಪೇಕ್ಷವಾದದ್ದು. ಆ ಧ್ಯೇಯರೂಪವಾದ ವ್ಯಕ್ತಿತ್ವ ವಿವೇಕಯುತವಾದ ಪಕ್ಷದಲ್ಲಿ ಆತನ ಆತ್ಮಸಾಕ್ಷಿಯ ನಿಯೋಗವೂ ವಿವೇಕಯುತವಾಗಿರುತ್ತದೆ. ಆದ್ದರಿಂದ ಆತ್ಮಸಾಕ್ಷಿಯೇ ಪರಮ ಪ್ರಮಾಣವಾಗಲಾರದು. ಕಾರಣಚೇತನದ ಧ್ಯೇಯವೇ ಅಂತಿಮದ ಒರೆಗಲ್ಲು. ವಿವೇಕಯುತವಾದ ಆತ್ಮಸಿದ್ಧಿಯೇ ನಡತೆಯ ಗುರಿ. ಈ ಆತ್ಮಸಿದ್ಧವಾದ ಆತ್ಮಸಾಕ್ಷಿವಾದಕ್ಕೆ ವಿರುದ್ಧವಾದ ಒಂದು ಪ್ರಬಲವಾದ ನೀತಿಪಂಥ. (ಜಿ.ಎಚ್.)

**ಆತ್ಮಸಾಕ್ಷಿಯ ವಿರೋಧಕರು :** ಆಡಳಿತವೇ ಆಗಲಿ ಸಂಘ ಸಂಸ್ಥೆಗಳೇ ಆಗಲಿ, ವಿಧಿಸುವ ಕಾನೂನುಗಳಲ್ಲಿ, ತರುವ ನಿರ್ಬಂಧಗಳಲ್ಲಿ ತಮ್ಮ ಆತ್ಮಕ್ಕೆ (ಮನಃಸಾಕ್ಷಿಗೆ) ಒಪ್ಪದವುಗಳ ವಿಷಯದಲ್ಲಿ ತಮ್ಮ ವಿರೋಧವಿದೆಯೆಂದು ತಿಳಿಸುವವರು (ಕಾನ್‌ಸೆನ್‌ಷಿಯಸ್ ಅಬ್ಜೆಕ್ಟರ್). ಯುದ್ಧವನ್ನು ಆತ್ಮಸಾಕ್ಷಿಯಾಗಿ ತಾವು ಒಪ್ಪುವುದಿಲ್ಲವೆಂದು ಹೇಳಿ ಕಡ್ಡಾಯವಾದ ಸೈನಿಕ ಸೇವೆಗೆ ಒಪ್ಪದವರನ್ನು ಈ ಹೆಸರಿನಿಂದ ಕರೆಯಲಾಯಿತು.

ಇಂಥವರು ಜನಸಾಮಾನ್ಯರ ಗಮನವನ್ನು ಸೆಳೆದದ್ದು ಒಂದನೆಯ ಮಹಾಯುದ್ಧ ಕಾಲದಲ್ಲಿ. ಆಗ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೆರಿಕ ಸಂಯುಕ್ತಸಂಸ್ಥಾನ ಮುಂತಾದ ದೇಶಗಳಲ್ಲಿ ಕಡ್ಡಾಯ ಸೈನ್ಯ ಸೇವೆ ವಿಧಿಸಲಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನ ಯುರೋಪ್ ದೇಶಗಳ ರಾಜಕೀಯ ಮತ್ತು ಯುದ್ಧಗಳಿಂದ ಅದುವರೆಗೂ ದೂರವಿದ್ದು ಒಂದನೆಯ ಮಹಾಯುದ್ಧದ ಕಾಲದಲ್ಲಿ ವ್ಯಾಪಕ ಯುದ್ಧ ಸನ್ನದ್ಧತೆಗಳಲ್ಲಿ ತೊಡಗಿದ್ದರಿಂದ, ಅಲ್ಲಿ ಅದನ್ನು ಮನಃಸಾಕ್ಷಿಯಾಗಿ ಆಕ್ಷೇಪಿಸುವವರ ಸಂಖ್ಯೆ ಹೆಚ್ಚಾಗಿತ್ತು. ಎರಡನೆಯ ಮಹಾಯುದ್ಧದ ಕಾಲದಲ್ಲೂ ಅಮೆರಿಕದ ಸಾವಿರಾರು ಜನ ಈ ಗುಂಪಿಗೆ ಸೇರಿದ್ದರು.

ಆತ್ಮಸಾಕ್ಷಿಯ ವಿರೋಧದ ಮೂಲ ಧಾರ್ಮಿಕವಾಗಿರಬಹುದು, ರಾಜಕೀಯ ವಾಗಿರಬಹುದು ಇಲ್ಲವೆ ಕೇವಲ ವೈಯಕ್ತಿಕವಾಗಿರಬಹುದು.

ಮೊದಲನೆಯ ವರ್ಗದಲ್ಲಿ ಆ್ಯನಬ್ಯಾಪ್ಟಿಸ್ಟರು, ಮೆನ್ನೊನೈಟರು, ಕ್ವೇಕರರು, ಯೆಹೋವನ ಸಾಕ್ಷಿಗಳು, ಡಂಕರರು – ಮೊದಲಾದ ಧಾರ್ಮಿಕ ಪಂಗಡಗಳು ಸೇರಿವೆ. ಇವೆಲ್ಲ ಸಣ್ಣ ಪಂಗಡಗಳು; ಮಾರ್ಟಿನ್ ಲೂಥರನ ರೀಫಾರ್ಮೇಷನ್ ಚಳವಳಿಗೆ ಸಂಬಂಧಪಟ್ಟವು ಕೆಥೊಲಿಕ್ ಮತಗಳ ಆಧ್ಯಾತ್ಮಿಕ ದಬ್ಬಾಳಿಕೆಯನ್ನು ವಿರೋಧಿಸಿ ಮಾರ್ಟಿನ್ ಲೂಥರ್ ಮನಃಸಾಕ್ಷಿಯ ಮಹತ್ತ್ವವನ್ನು ಎತ್ತಿ ಹಿಡಿದ. 16ನೆಯ ಶತಮಾನದ ಮಧ್ಯದಲ್ಲಿ ಆ್ಯನಬ್ಯಾಪ್ಟಿಸ್ಟರು, ಮೆನ್ನೊನೈಟರು (ಪೋಲೆಂಡ್ ಮತ್ತು ಸುತ್ತಮುತ್ತಲಿನ ದೇಶಗಳ ಆ್ಯನಬ್ಯಾಪ್ಟಿಸ್ಟರು) ಲೂಥರನ ಈ ವಿಚಾರಕ್ಕೆ ಉಗ್ರ ಸ್ವರೂಪ ಕೊಟ್ಟರು. ಮನಃಸಾಕ್ಷಿಯೇ ಧರ್ಮದ ಆಧಾರವಾಗಿದ್ದು, ಮತಗಳು ಯಾವ ತರದ ಕಟ್ಟಳೆಗಳನ್ನೂ ವಿಧಿಸಬಾರದೆಂದು ಪ್ರತಿಪಾದಿಸಿದರು. 18ನೆಯ ಶತಮಾನದಲ್ಲಿ, ಇಂಗ್ಲೆಂಡಿನಲ್ಲಿ ಮೆಥಾಡಿಸ್ಟ್ ಆಂದೋಲನಕ್ಕೆ ಸೇರಿದ ಕ್ವೇಕರರು ಇದೇ ರೀತಿಯಾಗಿ ಮನಸ್ಸಾಕ್ಷಿಯ ಹಿರಿಮೆಯನ್ನು ಪ್ರತಿಪಾದಿಸಿ, ಧಾರ್ಮಿಕ ಗುರುಗಳ, ಪೂಜಾರರ ರೀತಿನಿಯಮಗಳ ಮಾರ್ಗದರ್ಶನ ಮುಖ್ಯವಲ್ಲವೆಂದು ಬೋಧಿಸಿದರು. ಹಾಗೆಯೇ ಇತರ ಪಂಗಡಗಳವರೂ ಮಾಡಿದರು. ಈ ಪಂಗಡಗಳಿಗೆ ಸೇರಿದ ಸಾವಿರಾರು ಜನ ಅಮೆರಿಕದಲ್ಲಿ ಬಹಳ ಕಾಲದಿಂದ ನೆಲೆಸಿದ್ದರು. ಇವರಿಗೆ ಯುದ್ಧದಲ್ಲಿ ನಂಬಿಕೆ ಇರಲಿಲ್ಲವಾದ್ದ ರಿಂದ ಕಡ್ಡಾಯ ಸೇವೆಯನ್ನು ಮನಸ್ಸಾಕ್ಷಿಯಾಗಿ ಆಕ್ಷೇಪಿಸಿದರು.

ಎರಡನೆಯ ವರ್ಗದಲ್ಲಿ ಸಮಾಜವಾದಿಗಳು ಮತ್ತು ಅರಾಜಕತಾವಾದಿಗಳು ಸೇರಿದ್ದರು. ಆ ಯುದ್ಧಗಳು ಬಂಡವಾಳಶಾಹಿ ಸಮಾಜದ ಹಿತರಕ್ಷಣೆಗೆ ವಿರೋಧವಾದುವಾದ್ದರಿಂದ ಅವನ್ನು ಮನಃಸಾಕ್ಷಿಯಾಗಿ ವಿರೋಧಿಸುತ್ತೇವೆಂದು ಅವರು ವಾದಿಸಿದರು. ಮೂರನೆಯ ವರ್ಗದವರ ಬಗ್ಗೆ ನೋಡಿ – ಮನಸ್ಸಾಕ್ಷಿ.

ಅಮೆರಿಕದಲ್ಲಿ ಧರ್ಮದ ಆಧಾರದ ಮೇಲೆ ಮನಸ್ಸಾಕ್ಷಿಯಾಗಿ ಆಕ್ಷೇಪಿಸುವವರಿಗೆ ಕಾಯಿದೆಗಳು ಕೆಲವು ರಿಯಾಯತಿಗಳನ್ನು ಕೊಟ್ಟವು. ಸೈನ್ಯ ಸೇವೆಯನ್ನು ಕಾಳಗ ಸಂಬಂಧಿ ಮತ್ತು ಕಾಳಗೇತರವೆಂದು ವರ್ಗೀಕರಿಸಿ, ಮನಸ್ಸಾಕ್ಷಿಯಾಗಿ ಆಕ್ಷೇಪಿಸುವವರಿಗೆ ಕಾಳಗೇತರ ಸೇವೆಯನ್ನು ಒಪ್ಪಿಸಿದರು (ಕೃಷಿ, ಉದ್ಯೋಗ, ಔಷಧೋಪಚಾರ ಇತ್ಯಾದಿ). ಇತರರಿಗೆ ರಿಯಾಯಿತಿಗಳು ಕಡಿಮೆ ಇದ್ದವು. ರಾಷ್ಟ್ರೀಯ ಹಿತರಕ್ಷಣೆಯ ದೃಷ್ಟಿಯಿಂದ ಯುದ್ಧಸನ್ನಾಹ ದಲ್ಲಿ ಬಾಧೆಗಳನ್ನುಂಟುಮಾಡಿದುದಕ್ಕಾಗಿ ನೂರಾರು ಜನರನ್ನು ಒಂದನೆಯ ಮತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಬಂಧಿಸಲಾಯಿತು. ಆದರೆ ಯುದ್ಧದ ತರುವಾಯ ಅಧಿಕಾಂಶ ಜನರಿಗೆ ರಿಯಾಯತಿ ತೋರಿಸಿ ಬಿಡುಗಡೆ ಮಾಡಲಾಯಿತು (**ನೋಡಿ– ಅಹಿಂಸೆ**). (ಎಸ್.ಎಚ್.)

**ಆತ್ಮಸಿದ್ಧಿ :** ಪಾಶ್ಚಾತ್ಯ ನೀತಿಶಾಸ್ತ್ರದಂತೆ ಒಳ್ಳೆಯ ನಡತೆಯ ಗುರಿಗಳಲ್ಲೊಂದು (ಸೆಲ್ಫ್‌ರಿಯಲೈಸೇಷನ್). ಸಂತೋಷ, ಸೌಖ್ಯ, ಪರಿಪೂರ್ಣತೆಗಳನ್ನು ಗುರಿಗಳೆನ್ನಲಾಗಿದೆ. ಆತ್ಮಸಿದ್ಧಿಯೇ ನೀತಿಯ ಅಂತಿಮಗುರಿ ಎಂಬ ವಾದ ಈಚಿನ ಕಾಲದಲ್ಲಿ ತುಂಬ ಪ್ರಾಮುಖ್ಯ ಪಡೆದಿದೆ. ಆತ್ಮಸಿದ್ಧಿವಾದವನ್ನು ಪ್ರತಿಪಾದಿಸಿದವ ಜರ್ಮನಿಯ ಪ್ರಸಿದ್ಧ ತಾತ್ತ್ವಿಕನಾದ ಹೆಗೆಲ್. ಇವನ ಆಂಗ್ಲೇಯ ಅನುಚರರಲ್ಲಿ ಮುಖ್ಯರಾದವರು ಎಸ್. ಎಚ್. ಬ್ರ್ಯಾಡ್ಲೆ, ಟಿ. ಎಚ್. ಗ್ರೀನ್, ಬಿ. ಬೊಸಾಂಕೆ. ಈ ವಾದ ಮೊಟ್ಟಮೊದಲು ಆಂಗ್ಲಭಾಷೆಯಲ್ಲಿ ನಿರೂಪಣೆ ಯಾದದ್ದು ಬ್ರ್ಯಾಡ್ಲೆಯ ಎಥಿಕಲ್ ಸ್ಟಡೀಸ್ ಎಂಬ ಗ್ರಂಥದಲ್ಲಿ. ಟಿ. ಎಚ್. ಗ್ರೀನ್‌ನ ಪ್ರಾಲಿಗಮೀನ್ ಟು ಎಥಿಕ್ಸ್ ಎಂಬ ಗ್ರಂಥ ಈ ಬಗ್ಗೆ ಒಂದು ಪ್ರಮಾಣಗ್ರಂಥವಾಗಿದೆ.

ಆತ್ಮಸಿದ್ಧಿ ಎಂದರೆ ನಮ್ಮಲ್ಲಿರುವ ಉತ್ತಮೋತ್ತಮ ಆತ್ಮವನ್ನು ಸಾಧಿಸುವುದು. ಪ್ರತಿಯೊಬ್ಬರಲ್ಲೂ ಸ್ವಾರ್ಥ ಮತ್ತು ಪರಾರ್ಥ ಎಂಬ ಅರಿವಿದೆ. ಕೆಲವು ವೇಳೆ ನಾವು ಇತರರ ಹಿತವನ್ನು ಗಮನಿಸದೆ ಇತರರ ಹಿತಕ್ಕೆ ಬಾಧೆಯುಂಟಾಗುವಂತೆ ನಮ್ಮ ಹಿತಕ್ಕಾಗಿಯೇ ಆಶೆಪಟ್ಟು ವರ್ತಿಸುತ್ತೇವೆ. ಇನ್ನು ಕೆಲವು ವೇಳೆ ಹೀಗೆ ವರ್ತಿಸುವುದು ನೀಚವಾದದ್ದು, ಹಾಗೆ ವರ್ತಿಸಿದಾಗ ನಾವು ನೀಚರಾಗಿರುತ್ತೇವೆ, ಉಚ್ಚವಾದುದನ್ನು ಅಲಕ್ಷಿಸುತ್ತೇವೆ ಎಂದು ತಿಳಿದುಕೊಳ್ಳುತ್ತೇವೆ. ಹೀಗೆ ನಮ್ಮಲ್ಲಿ ಉಚ್ಚವಾದದ್ದಕ್ಕೂ ನೀಚವಾದದ್ದಕ್ಕೂ ಹೋರಾಟ ನಡೆಯುತ್ತಿರುತ್ತದೆ. ಇತರರನ್ನು ಬಿಟ್ಟು ನಾನಿಲ್ಲ, ನನ್ನನ್ನು ಬಿಟ್ಟು ಇತರರಿಲ್ಲ. ಇತರರಿಗೆ ಮಂಗಳವಾದುದನ್ನು ಬಿಟ್ಟು ನನಗೆ ಮಂಗಳವಿಲ್ಲ, ನನ್ನ ಮಂಗಳವನ್ನು ಬಿಟ್ಟು ಬೇರೆಯವರ ಮಂಗಳವಿಲ್ಲ. ಸರ್ವಮಂಗಳವೂ ಪ್ರತಿಯೊಬ್ಬರ ಮಂಗಳಕ್ಕೂ ಆಧಾರ. ಅದನ್ನು ಬಿಟ್ಟು ಅದರಿಂದ ಪ್ರತ್ಯೇಕವಾಗಿ ಅದಕ್ಕೆ ಹೊರತಾಗಿ, ಕೇವಲ ಸ್ವಾರ್ಥಪರ ಜೀವನ ಅಸಾಧ್ಯ. ಸ್ವಪರಗಳು ವಿರುದ್ಧವಾದುದಲ್ಲ, ಒಂದನ್ನೊಂದು ಒಳಗೊಂಡಿವೆ. ಅವೆರಡಕ್ಕೂ ಸಮಾನವಾಗಿ ಎರಡನ್ನೂ ಉದ್ಧರಿಸುವ ಆತ್ಮ ಉತ್ತಮ ಆತ್ಮ. ಆ ಆತ್ಮವನ್ನು ಸಾಧಿಸಿಕೊಳ್ಳುವುದೇ ನೀತಿಯ ಗುರಿ.

ಈ ಉತ್ತಮ ಆತ್ಮ ಯಾವುದು, ಎಂಥಾದ್ದು, ಅದು ಸಾಮಾಜಿಕ ಆತ್ಮ ಎಂಬುದು ಈ ಪ್ರಶ್ನೆಗೆ ಮೊದಲನೆಯ ಉತ್ತರ. ನಾವೂ ಇತರರೂ ಒಬ್ಬರು ಇನ್ನೊಬ್ಬರಿಗೆ ಬಾಧಕರಾಗದಂತೆ ನಮ್ಮನ್ನು ನಡೆಸುವುದು ನಮ್ಮೆಲ್ಲರಿಗೂ ಸಾಮಾನ್ಯವಾದ ಸಾಮಾಜಿಕ ಆತ್ಮ. ಸಾಮಾಜಿಕ ಆತ್ಮ ಎಂದರೆ ಪ್ರತಿಯೊಬ್ಬನೂ ಒಂದು ದೇಹ ಪಡೆದಿರುವಂತೆ ಒಂದು ದೊಡ್ಡ ದೇಹ ಪಡೆದಿರುವ ಆತ್ಮವಲ್ಲ ಅದು. ಪರಸ್ಪರ ವಿರೋಧಿಗಳಂತೆ ವರ್ತಿಸದೆ ಸ್ನೇಹಿತರಾಗಿ ವರ್ತಿಸುವಂತೆ ಪ್ರೇರಿಸುವ ಚೈತನ್ಯ ಸಾಮಾಜಿಕ ಚೈತನ್ಯ. ಪ್ರತಿಯೊಬ್ಬನೂ ತನ್ನದೇ ವಿಶಿಷ್ಟವಾದ ಗುಣವನ್ನು ಪಡೆದಿರುತ್ತಾನೆ. ಆ ಗುಣಕ್ಕೆ ವ್ಯತಿರಿಕ್ತವಾಗಿ ಅವನು ನಡೆದರೆ ಅವನ ಆತ್ಮಕ್ಕೆ ಹಾನಿ. ತನ್ನ ಗುಣಕ್ಕನುಸಾರವಾಗಿ ಒಬ್ಬೊಬ್ಬನೂ ಸಮಾಜದಲ್ಲಿ ಒಂದು ಸ್ಥಾನವನ್ನು ಪಡೆದಿರುತ್ತಾನೆ. ಅವನ ಕರ್ತವ್ಯಗಳು ಆ ಸ್ಥಾನಕ್ಕೆ ಅನುಗುಣವಾದುವು, ಸಾಪೇಕ್ಷವಾದುವು. ಒಬ್ಬನಿಗೆ ದೇಹಶಕ್ತಿ, ದುಡಿಮೆಯ ಶಕ್ತಿ, ಬುದ್ಧಿಶಕ್ತಿ ಹೆಚ್ಚಾಗಿಯೂ ವ್ಯವಸ್ಥೆ ಮಾಡಿಕೊಳ್ಳಬಲ್ಲ ಶಕ್ತಿ ಕಡಿಮೆಯಾಗಿಯೂ ಇರುತ್ತದೆ. ಇನ್ನೊಬ್ಬನಿಗೆ ದೇಹಶಕ್ತಿ ಬುದ್ಧಿಶಕ್ತಿ ವ್ಯವಸ್ಥಾಶಕ್ತಿಗಳೆಲ್ಲ ಇರುತ್ತವೆ. ಮತ್ತೊಬ್ಬನಿಗೆ ಪ್ರತಿಭೆ, ಪ್ರಜ್ಞೆ ಹೆಚ್ಚಾಗಿದ್ದು ದುಡಿಮೆಯ ಶಕ್ತಿ ಕಡಿಮೆಯಾಗಿರುತ್ತದೆ. ಮಗದೊಬ್ಬನಿಗೆ ಯಂತ್ರನಿರ್ಮಾಣ, ಕೈಗಾರಿಕೆ, ಕುಶಲವಿದ್ಯೆಯಲ್ಲಿ ನೈಪುಣ್ಯ ಹೆಚ್ಚಾಗಿರುತ್ತದೆ. ತನ್ನ ಶಕ್ತಿಯಲ್ಲಿ ಆಸಕ್ತನಾದವ ತನ್ನ ಮಂಗಳವನ್ನು ಸಾಧಿಸುತ್ತಾನೆ. ಅದರಲ್ಲಿ ಆಸಕ್ತನಾಗದೆ ತನ್ನಲ್ಲಿ ಇಲ್ಲದ ಮತ್ತು ಇತರ ವ್ಯಕ್ತಿಗಳಲ್ಲಿರುವ ಯೋಗ್ಯತೆಯನ್ನು ಗಳಿಸಲು ಆಸಕ್ತನಾದವ ತನಗೂ ಇತರರಿಗೂ ಹಾನಿಕಾರಿಯಾಗುತ್ತಾನೆ. ತನ್ನ ಸ್ವಭಾವಕ್ಕೆ ಹೊಂದಿಕೆಯಾಗುವುದು ಸ್ವಧರ್ಮ. ಹೀಗೆ ಸ್ವಧರ್ಮಕ್ಕನುಗುಣವಾಗಿ ನಡೆದುಕೊಂಡರೆ ಅವನಿಗೂ ಒಳ್ಳೆಯದಾಗುತ್ತದೆ, ಸಮಾಜಕ್ಕೂ ಒಳ್ಳೆಯದಾಗುತ್ತದೆ. ಇಂಥವು ನಿರ್ಮತ್ಸರವಾಗಿ ಶುದ್ಧಾಂತಃಕರಣರಾದ ಧರ್ಮಿಷ್ಠರು ಪೂರ್ವಾಪರಗಳನ್ನೆಲ್ಲ ವಿಮರ್ಶಿಸಿ ನಿರ್ಧರಿಸಿದ ಕರ್ತವ್ಯಗಳು. ಅವುಗಳನ್ನು ಬಿಟ್ಟವನಿಗೆ ಸ್ವಶ್ರೇಯಸ್ಸೂ ತಪ್ಪುತ್ತದೆವೆ, ಪರರ ಶ್ರೇಯಸ್ಸಿಗೂ ತಡೆಯಾಗುತ್ತದೆ. ಸ್ವಧರ್ಮ ಸ್ವಾರ್ಥವಲ್ಲ, ಸಮಾಜಧರ್ಮಕ್ಕೆ ಹೊಂದಿಕೆಯಾದ ಧರ್ಮ. ಸಮಾಜ ನಿರ್ಮಿಸಿದ ನೀತಿನಿಯಮಗಳು (ಕ್ಯಾಂಟ್ ನಿರೂಪಿಸುವಂತೆ) ಕೇವಲ ಆಂತರಿಕ ನಿಯಮವೂ ಅಲ್ಲ. ಸಮಾಜದಲ್ಲಿ ನೀತಿನಿಷ್ಠರೆಂದೂ ತಿಳಿದವರೆಂದೂ ಪ್ರಸಿದ್ಧರಾದವರಿಂದ ನಿರ್ದೇಶಿಸಲ್ಪಟ್ಟು ಧರ್ಮದಲ್ಲಿ ಆಸಕ್ತರಾದ ಜನರಿಂದ ಆಚರಿಸಲ್ಪಟ್ಟು, ಒಟ್ಟಿನಲ್ಲಿ ಅದು ಶ್ರೇಯಸ್ಕರವೆಂಬುದು ಅನುಭವಸಿದ್ಧವಾಗಿ ಸಮಾಜದಿಂದ ಕ್ರಮಕ್ರಮವಾಗಿ ಅಂಗೀಕರಿಸಲ್ಪಟ್ಟು ರೂಪುಗೊಂಡ ನಿಯಮ ಅದು. ಇದು ಬ್ರ್ಯಾಡ್ಲೆಯ ತತ್ತ್ವಸಿದ್ಧಾಂತ.

ಈ ಸಿದ್ಧಾಂತ ಪೂರ್ಣವಾಗಿ ಅಬಾಧಿತವಲ್ಲ. ಸಮಾಜ ಸದಾ ಪ್ರಗತಿಪರವಲ್ಲ. ಒಂದು ಸಮಾಜದ ನೈತಿಕ ಸ್ಥಿತಿ ಒಂದು ಕಾಲದಲ್ಲಿ ಉತ್ತಮವಾಗಿರುತ್ತದೆ. ಇನ್ನೊಂದು ಕಾಲದಲ್ಲಿ ಇಳಿಮುಖವಾಗಿರುತ್ತದೆ. ಗ್ರೀಸಿನ ಸಮಾಜ ಒಂದು ಕಾಲದಲ್ಲಿ ಶಿಖರಕ್ಕೇರಿದ್ದು ಇನ್ನೊಂದು ಕಾಲದಲ್ಲಿ ಅವನತಿಗೆ ಇಳಿಯಿತು. ಹಿಂದೆ ಒಂದು ಕಾಲದಲ್ಲಿ ಅದು ಮುಟ್ಟಿದ್ದ ಮೇಲಂತಸ್ತನ್ನು ಪುನಃ ಅದು ಮುಟ್ಟಲಾಗಲಿಲ್ಲ. ಬ್ಯಾಬಿಲೋನಿಯ, ಅಸ್ಸೀರಿಯ ಮತ್ತು ಈಜಿಪ್ಟ್ ಸಮಾಜಗಳಂತೂ ನಿರ್ನಾಮವಾದುವು. ಸಾಮಾಜಿಕ ನೀತಿನಿಯಮಗಳು ಎಲ್ಲ ಕಾಲದಲ್ಲೂ ಸರಿಯಾದಂತಹವು, ಅಭ್ಯುದಯಪರವಾದಂತಹವು ಎಂದು ಹೇಳಲು ಸಾಧ್ಯವಿಲ್ಲ. ಹಿಂದೆ ಒಂದು ಕಾಲದಲ್ಲಿ ಭಾರತ ಸಮಾಜ ಅತ್ಯಂತ ಶ್ರೇಯಸ್ಕರವೆಂದು ನಿರ್ಮಿಸಿದ, ಬೆಳೆಸಿದ ಧರ್ಮ ಇಂದು ಸರಿಯಾದದ್ದೆಂದು ಅಭ್ಯುದಯಕಾರಿಯೆಂದು ಹೇಳಲಾದೀತೆ? ಹಾಗೆ ಇದ್ದಿದ್ದರೆ ಮಹಾತ್ಮಗಾಂಧಿಯವರ ಆತ್ಮಸಂಶೋಧನೆಗೂ ಭಾರತೀಯ ಸಮಾಜಧರ್ಮದ ವಿಮರ್ಶೆಗೂ ಅಗತ್ಯವೇನಿತ್ತು? ಸಮಾಜದ ಚೈತನ್ಯ ಕಾಲದಿಂದ ಕಾಲಕ್ಕೆ ಅದರಿಂದ ಮೀರಿದ ಪರಮಚೈತನ್ಯದಿಂದ, ಪರಮಾತ್ಮದಿಂದ, ಸ್ಫೂರ್ತಿ ಪಡೆದ ಸಂದೇಶ ಪಡೆದ ಮಹಾತ್ಮರ ವಿಮರ್ಶೆಗೆ ಒಳಪಡಬೇಕಾಗುವುದು. ಆದ್ದರಿಂದ ನೀತಿ ವಿಮರ್ಶಾ ಬುದ್ಧಿಯ ಒರೆಗೆ ಗುರಿಯಾಗಬೇಕಾಗುತ್ತದೆ. ಈ ವಿಮರ್ಶಾಚೈತನ್ಯ ನೀತಿಗೆ ಗುರಿ. ಇದು ಟಿ. ಎಚ್. ಗ್ರೀನ್ ಎಂಬ ಹೆಗೆಲ್‌ನ ಇನ್ನೊಬ್ಬ ಅನುಯಾಯಿಯ ಸಿದ್ಧಾಂತ.

ಮೊದಲನೆಯದು ಸಾಮಾಜಿಕ ಚೈತನ್ಯನೀತಿವಾದ, ಎರಡನೆಯದು ಸ್ವತಂತ್ರನೀತಿ ಚೈತನ್ಯವಾದ. ಬ್ರ್ಯಾಡ್ಲೆ ಮತ್ತು ಗ್ರೀನ್ ಇವರಿಬ್ಬರ ವಾದಗಳು ಹಾಗೆ ತೋರಿದರೂ ಪರಸ್ಪರ ವಿರುದ್ಧವಲ್ಲ. ಒಂದೊಂದು ನೀತಿಗೆ ಅಗತ್ಯವಾದ ಒಂದೊಂದು ಅಂಶವನ್ನು ಒತ್ತಿ ಹೇಳುತ್ತವೆ. ವಿಮರ್ಶಾಬುದ್ಧಿ ಮತ್ತು ಬರ್ಗ್‌ಸನ್ ಹೇಳುವಂತೆ ಆರ್ಷಜ್ಞಾನ ನೀತಿಯ ನೆಲೆಗೆ ಅಂತಿಮ ಆಧಾರಗಳು. ಆದರೆ ಅವು ಪೂರ್ಣವಾಗಿ ಅಬಾಧಿತವಲ್ಲ. ಸಮಾಜಕ್ಕೆ ಅತೀತವಾದ ನೀತಿ ಮೇಲಾದುದು ಎಂದು ಒಬ್ಬ ಘೋಷಿಸಿದಾಗ ಸಮಾಜದಲ್ಲಿ ಗೊಂದಲ ವೇಳುತ್ತದೆ. ತೂಕಡಿಸುವ ಸಮಾಜವನ್ನು ಎಚ್ಚರಗೊಳಿಸಬೇಕಾದಾಗ ಕ್ರಾಂತಿಸ್ಥಿತಿ ಅನಿವಾರ್ಯ. ಅದೇ ಒಂದು ಪ್ರಮಾದವಲ್ಲ. ಆದರೆ ವಿಮರ್ಶಾತ್ಮಕ ಬುದ್ಧಿಜನ್ಯನೀತಿ ವೈಯಕ್ತಿಕ. ಅದು ಸರಿಯಾದುದಾಗಬಹುದು ಅಥವಾ ತಪ್ಪಾದುದಾದರೂ ಆಗಬಹುದು ಅಥವಾ ಅದು ಪೂರ್ಣವಾಗಿ ಸತ್ಯವಾಗದಿರಬಹುದು. ಸಾಮಾಜಿಕ ನೀತಿಯಲ್ಲಿ ಒಂದು ವಿಧದಲ್ಲಿ ಲೋಪ ಬರುವಂತೆ, ವಿಮರ್ಶಾತ್ಮಕ ನೀತಿಯಲ್ಲೂ ಇನ್ನೊಂದು ವಿಧವಾದ ಲೋಪವಿರಬಹುದು. ಅದನ್ನು ಸಮಾಜ ಆಚರಣೆಗೆ ತಂದ ಹೊರತು, ಅದರ ಲೋಪದೋಷಗಳು ವ್ಯಕ್ತವಾಗುವುದಿಲ್ಲ. ಆದ್ದರಿಂದ ವೈಯಕ್ತಿಕ ವಿಮರ್ಶಾನೀತಿ ನಿರುಪಾಧಿಕವೆಂದು ಹೇಳಲು ಸಾಧ್ಯವಿಲ್ಲ. ಆದರೆ ಈಗಿರುವ ಸಾಮಾಜಿಕ ನೀತಿಯೂ ನಿರುಪಾಧಿಕವೆಂದು ಯಾರೂ ಹೇಳಲಾರರು. ಆದ್ದರಿಂದ ಆ ದೋಷಗಳನ್ನು ಹೋಗಲಾಡಿಸುವುದಕ್ಕಾಗಿಯಾದರೂ ನಾವು ವಿಚಾರ ನೀತಿಯನ್ನು ಧೈರ್ಯವಾಗಿ ಅನುಸರಿಸಬೇಕಾಗುತ್ತದೆ. ಮುಂದಾಗುವ ಪರಿಣಾಮವನ್ನು ನೋಡಿಕೊಂಡು ಅಗತ್ಯವಾದರೆ ಅದನ್ನು ಉಚಿತವಾದ ರೀತಿಯಲ್ಲಿ ಮಾರ್ಪಡಿಸಬೇಕಾಗುತ್ತದೆ. ಸರಿಹೋದರೆ ಹೊಸ ವಿಚಾರ ನೀತಿ ಸಾಮಾಜಿಕ ನೀತಿಯಾಗುತ್ತದೆ. ಕಾಲಕ್ರಮದಲ್ಲಿ ಅದೂ ವೈಯಕ್ತಿಕ ವಿಮರ್ಶೆಗೆ ಒಳಪಡಬೇಕಾಗುತ್ತದೆ. ನೈತಿಕ ಜೀವನ ಬದಲಾವಣೆ ಇಲ್ಲದ ಜೀವನವಲ್ಲ. ಯಾವ ಒಂದು ಕಾಲದಲ್ಲಾಗಲಿ ಯಾವುದೊಂದು ಸ್ಥಿತಿಯಲ್ಲಾಗಲಿ ನಮ್ಮ ನೀತಿ ಪರಿಪೂರ್ಣವಲ್ಲ. ಪರಮವೇ ಪರಿಪೂರ್ಣ ಧರ್ಮ. ಆ ಪರಿಪೂರ್ಣತೆಯನ್ನು ನಾವು ಸಮೀಪಿಸುತ್ತಿದ್ದರೂ ಅದನ್ನು ಸಾಧಿಸುವುದರಲ್ಲಿ ನಮ್ಮ ಪ್ರಯತ್ನ ಎಷ್ಟು ಮುಂದೆ ಸಾಗಿಸಿದರೂ ಆ ಪರಮ ಧರ್ಮಕ್ಕೂ ನಾವು ವೈಯಕ್ತಿಕವಾಗಿ ಆಗಲಿ ಸಾಮಾಜಿಕವಾಗಿ ಆಗಲಿ ಧರ್ಮವೆಂದು ತಿಳಿದಿರುವುದಕ್ಕೂ ಅಂತರವಿದ್ದೇ ಇರುತ್ತದೆ. ಆದ್ದರಿಂದ ಯಾವ ಕಾಲದಲ್ಲೇ ಆಗಲಿ ಯಾವುದೊಂದು ನೀತಿಯೇ ಆಗಲಿ ಅದು ಸ್ವಲ್ಪಮಟ್ಟಿಗಾದರೂ ತೋರಿಕೆಯಾಗಿಯೇ ಇರಬೇಕಾಗುತ್ತದೆ. ಆದರೂ ನೀತಿಗಳೆಲ್ಲ ಒಂದೇ ದರ್ಜೆಯವಲ್ಲ. ಸತ್ಯದ ಬೇರೆ ಬೇರೆ ದರ್ಜೆಗಳಿರುವಂತೆಯೇ ನೀತಿಯ ದರ್ಜೆಗಳೂ ಬೇರೆ ಬೇರೆ. ಒಂದು ಇನ್ನೊಂದಕ್ಕಿಂತ ಹೆಚ್ಚು ಸಮರ್ಪಕವಾದದ್ದು; ಅದರ ಮೂಲಕ ನಮ್ಮ ಆತ್ಮ ಹೆಚ್ಚು ವೈಶಾಲ್ಯ ಪಡೆಯುತ್ತದೆ; ವಿಶಾಲವಾದ ಆತ್ಮ ಸಿದ್ಧಿಸುತ್ತದೆ.

ಆತ್ಮಸಿದ್ಧಿಯ ನೀತಿಯನ್ನು ವಿಚಾರ ಮಾಡುವಾಗ ಸಾಮಾನ್ಯವಾಗಿ ಒಂದು ಪ್ರಶ್ನೆ ಹುಟ್ಟುತ್ತದೆ. ಆತ್ಮಸಿದ್ಧಿ ಎಂದರೆ ಆತ್ಮಾರ್ಪಣೆಯೇ ಅಥವಾ ಆತ್ಮ ಪ್ರತಿಷ್ಠೆಯೇ? ತನ್ನನ್ನು ಸಮಾಜಕ್ಕೆ ಅಧೀನಗೊಳಿಸುವುದು ಅಥವಾ ತನ್ನನ್ನು ತನಗಿಂತ ಮೇಲಾದ ಆತ್ಮಕ್ಕೆ ಅರ್ಪಿಸುವುದು ಆತ್ಮಾರ್ಪಣೆ. ಮೊದಲನೆಯ ಅರ್ಥದಲ್ಲಾಗಲಿ ಎರಡನೆಯ ಅರ್ಥದಲ್ಲಾಗಲಿ ನೈತಿಕ ಜೀವನ ಅರ್ಪಣೆಯ ಜೀವನ. ಅಂಥ ಅರ್ಪಣೆ ಇಲ್ಲದೆ ನೈತಿಕ ಜೀವನ ಅಸಾಧ್ಯ. ಸಮಾಜದ ನೀತಿಗಿಂತ ಸ್ವತಂತ್ರವಾದ ನೀತಿಯೇ ಮೇಲು ಎಂದು ತಿಳಿಯುವುದಾಗಲಿ, ತನ್ನ ಆತ್ಮಕ್ಕಿಂತ ಮೇಲಾದ ಆತ್ಮಕ್ಕೆ ವಿಧೇಯವಾಗಿರುವುದರಿಂದ ತನ್ನ ಆತ್ಮಕ್ಕೆ ಚ್ಯುತಿಯುಂಟಾಗುತ್ತಿದೆ ಎಂದು ತಿಳಿಯುವುದಾಗಲಿ, ಸ್ವಪ್ರತಿಷ್ಠೆಯ ನೀತಿಯಾಗುತ್ತದೆ. ಎಷ್ಟೇ ನೀತಿವಂತನಾದರೂ ಸಮಾಜಕ್ಕಿಂತ ತಾನು ಮೇಲು ಎಂಬ ಪ್ರತಿಷ್ಠೆ ಅಸಾಧ್ಯ. ಸಾಮಾಜಿಕ ನೀತಿಯಿಂದ ಭಿನ್ನವಾದ ನೀತಿಯನ್ನು ಅನುಸರಿಸುವಾತ ಅಹಂಕಾರದಿಂದ ವರ್ತಿಸುವುದಿಲ್ಲ, ಸಾಮಾಜಿಕ ಚೈತನ್ಯಕ್ಕಿಂತ ಮೇಲಾದ ಚೈತನ್ಯವಿದೆ ಎಂದು ಭಾವಿಸಿ ಅದಕ್ಕೆ ವಿಧೇಯನಾಗಿ ನಡೆಯುತ್ತಾನೆ. ಆದ್ದರಿಂದ ಅವನ ನಡತೆ ಸಮಾಜಕ್ಕೆ ವಿಧೇಯವಾದುದಲ್ಲವಾದರೂ ಉತ್ತಮ ಆತ್ಮಕ್ಕೆ ವಿಧೇಯವಾದದ್ದು; ಅವನ ನಡತೆಯಲ್ಲಿ ಒಂದು ಬಗೆಯ ಅರ್ಪಣೆ ಇದೆ. ಸಮಾಜಕ್ಕೂ ವಿಧೇಯನಾಗದೆ, ಉತ್ತಮ ಆತ್ಮಕ್ಕೂ ವಿಧೇಯನಾಗದೆ ಸ್ವಪ್ರತಿಷ್ಠೆಯಿಂದ ವರ್ತಿಸುವವ ನೀತಿವಂತನಾಗುವುದು ಅಸಂಭವ. ಅಂಥವನು ನೀತಿಭ್ರಷ್ಟನಾಗುವ ಸಂಭವವೇ ಹೆಚ್ಚು. ಬ್ರ್ಯಾಡ್ಲೆ ಹೇಳುವಂತೆ ತಾನು ಸಮಾಜಕ್ಕಿಂತ ಹೆಚ್ಚು ನೀತಿವಂತನೆಂದು ಅಹಂಭಾವದಿಂದ ನಡೆಯುವಾತ ಅನೀತಿಯ ಪ್ರಪಾತಕ್ಕೆ ಬೀಳುವುದರಲ್ಲಿರುತ್ತಾನೆ. ಸ್ವಪ್ರತಿಷ್ಠೆ ನಿಜವಾದ ಆತ್ಮಸಾಧನೆಯಾಗಲಾರದು. ಆತ್ಮಸಾಧನೆ ಎಂದರೆ ಉತ್ತಮ ಆತ್ಮಕ್ಕೆ ಶರಣನಾಗಿ ನಡೆಯುವುದು. ಇಂಥ ನಡೆವಳಿಕೆ ಪರಿಣಾಮದಲ್ಲಿ ಆತ್ಮಾರ್ಪಣೆಯೇ. ಕೆಳದರ್ಜೆಯ ಆತ್ಮವನ್ನು ಮೇಲಿನ ದರ್ಜೆಯ ಆತ್ಮಕ್ಕೆ ಒಪ್ಪಿಸುವುದು ಆತ್ಮಾರ್ಪಣೆ. ಹಾಗೆ ಮಾಡಿದಾಗ ಅವನ ಕೆಳಗಿನ ದರ್ಜೆಯ ಆತ್ಮ ಅಳಿಯುತ್ತದೆ. ಮೇಲಿನ ದರ್ಜೆಯ ಆತ್ಮ ಏಳುತ್ತದೆ. ಉಳಿಯಲು ಅಳಿ ಎಂದು ಹೆಗೆಲ್ಲನ ಪ್ರಖ್ಯಾತವಾದ ಒಂದು ವಚನವಿದೆ. ಉತ್ತಮಾತ್ಮನಾಗಿ ಬಾಳಲು ಕನಿಷ್ಠಾತ್ಮವನ್ನು ಬಲಿಕೊಡು ಎಂದು ಅದರ ಅರ್ಥ. ಆತ್ಮಸಿದ್ಧಿಯಾದ ಹೊರತು ಆತ್ಮಾರ್ಪಣೆಗೆ ಅರ್ಥವಿಲ್ಲ. ಕೀಳಾದುದನ್ನು ಪಡೆಯಲು ಮೇಲಾದುದನ್ನು ಮೂಢ ಕೂಡ ಬಿಡುವುದಿಲ್ಲ. ಬುದ್ಧಿ ಇರುವಾತ ತೊಗರಿಬೇಳೆಯನ್ನು ಕೊಟ್ಟು ತುಂಬೆಯಸೊಪ್ಪನ್ನು ಕೊಳ್ಳುವುದಿಲ್ಲ; ತುಂಬೆಯಸೊಪ್ಪನ್ನು ಕೊಟ್ಟು ತೊಗರಿಬೇಳೆಯನ್ನು ಪಡೆಯಲು ಸದಾ ಸಿದ್ಧನಾಗಿರುತ್ತಾನೆ.

ಈ ವಿಚಾರದಲ್ಲಿ ನಾವು ಗಮನಿಸಬೇಕಾದ ಒಂದಂಶವಿದೆ. ಸ್ವತಂತ್ರ ವಿಚಾರನೀತಿಪರನಾದವ ಯಾವ ಕಾಲದಲ್ಲೂ ಸಮಾಜದ ನೀತಿಯನ್ನು ಪೂರ್ಣವಾಗಿ ತ್ಯಜಿಸಿ ಎಲ್ಲದರಲ್ಲೂ ತನ್ನದೇ ಆದ ನೀತಿಯನ್ನು ಪೂರ್ಣವಾಗಿ ತ್ಯಜಿಸಿ ಎಲ್ಲದರಲ್ಲೂ ತನ್ನದೇ ಆದ ನೀತಿಯನ್ನು ಅನುಸರಿಸುವುದು ಅಸಂಭವ. ಸಾಮಾನ್ಯವಾಗಿ ಸಮಾಜದ ನೀತಿಗೆ ಪ್ರತಿಯಾಗಿ ನಿಲ್ಲುವವ ಹೆಚ್ಚು ಅಂಶಗಳಲ್ಲಿ ಸಮಾಜ ನೀತಿಯನ್ನು ಅನುಸರಿಸುತ್ತಾನೆ; ಯಾವುದೋ ಒಂದರಲ್ಲಿ ಬೇರೆ ನೀತಿಯನ್ನು ಎತ್ತಿಹಿಡಿಯುತ್ತಾನೆ. ಆದ್ದರಿಂದ ಅವನು ಹೆಚ್ಚುಮಟ್ಟಿಗೆ ಸಮಾಜನೀತಿಗೆ ವಿಧೇಯ, ಸ್ವಲ್ಪಮಟ್ಟಿಗೆ ಮಾತ್ರ ಸ್ವಧ್ಯೇಯವುಳ್ಳವ. ಅಲ್ಲದೆ ಸಮಾಜಕ್ಕೆ ಪ್ರತಿಯಾಗಿ ನಿಲ್ಲುವಾತ ಆ ಸಮಾಜದ, ಸಂಸ್ಕೃತಿಯ ಆಧಾರವಿಲ್ಲದೆ ಅದಕ್ಕೆ ಪ್ರತಿಯಾಗಿ ನಿಲ್ಲುವುದಿಲ್ಲ. ಉದಾಹರಣೆಗಾಗಿ, ಗಾಂಧಿಯವರ ಅಸ್ಪೃಶ್ಯತೆಯ ನೀತಿಯನ್ನು ತೆಗೆದುಕೊಳ್ಳೋಣ. ಯಾವುದರ ಆಧಾರದ ಮೇಲೆ ಜನರು ಅಸ್ಪೃಶ್ಯತೆಯನ್ನು ಅನುಸರಿಸುವರೋ ಅದೇ ಆಧಾರಗಳನ್ನು

ಮಹಾತ್ಮ ಗಾಂಧಿಯವರು ಅದು ಸರಿಯಲ್ಲವೆಂಬುದಕ್ಕೆ ಪ್ರಮಾಣವಾಗಿ ಉದ್ಧರಿಸಿರುತ್ತಾರೆ. ತೀರ ವೈಯಕ್ತಿಕವಾದ ವಾದಗಳು ಅತಿ ವಿರಳ. ಸಮಾಜದ ಹಲ ಕೆಲವರ ಬೆಂಬಲದಿಂದಲೇ ಅಂಥ ವಾದಗಳು ಹುಟ್ಟುವುವು. ಅವು ಸತ್ತ್ವಯುತವಾದರೆ ಸಮಾಜದ ಬೆಂಬಲದಿಂದ ಅವು ಬೆಳೆಯುತ್ತವೆ, ಸಾಮಾಜಿಕ ನೀತಿಯಾಗಿ ಸ್ಥಾಪನೆಯಾಗುತ್ತವೆ. ಮುಖ್ಯವಾಗಿ ವೈಯಕ್ತಿಕ ನೀತಿ ಸತ್ತ್ವಯುತವಾಗಿರಬೇಕು. ಆ ನೀತಿ ಉತ್ತಮಾತ್ಮಕ್ಕೆ ಸಂಗತವಾಗಿ ಸತ್ತ್ವಯುತವಾಗಿದ್ದರೆ, ಈಗಲ್ಲದಿದ್ದರೆ ಸಾವಿರ ವರ್ಷಗಳಾದ ಮೇಲಾದರೂ ಅದು ಎಲ್ಲರ ಮನ್ನಣೆಯನ್ನು ಪಡೆದೇ ಪಡೆಯುತ್ತದೆ.

ಹೆಗೆಲ್‌ನ ಅನುಯಾಯಿಗಳಲ್ಲಿ ಬರ್ನಾಡ್ ಬೊಸಾಂಕೆ ಆತ್ಮಸಿದ್ಧಿಯೆಂದರೆ ಪುರುಷಾರ್ಥಸಿದ್ಧಿ, ರಿಯಲೈಸೇಷನ್ ಆಫ್ ವ್ಯಾಲ್ಯು ಎಂಬ ಹೊಸ ವಾದವನ್ನು ಮಂಡಿಸಿರುತ್ತಾನೆ. ಪುರುಷನಿಲ್ಲದೆ ಪುರುಷಾರ್ಥಸಿದ್ಧಿಯಾಗಲಿ, ಪುರುಷಾರ್ಥವಿಲ್ಲದ ಪುರುಷನಾಗಲಿ ಅಚಿಂತ್ಯ. ಆದರೆ ಇದರಲ್ಲಿ ಹೊಸ ಅಂಶವೇನೆಂದರೆ ಧರ್ಮ ಇತರ ಪುರುಷಾರ್ಥಗಳಿಂದ ಬೇರೆಯಲ್ಲ; ಅವುಗಳಿಗೆ ವಿರುದ್ಧವಲ್ಲ. ಎಲ್ಲ ಪುರುಷಾರ್ಥಗಳ ಸಮನ್ವಯ ಜೀವನದ ಅಂತಿಮ ಧ್ಯೇಯ. ಅದೇ ನೀತಿಯ ಅಂತಿಮ ಗುರಿ. ಬೊಸಾಂಕೆಯ ವಾದಕ್ಕೂ ಭಾರತೀಯ ಅಧ್ಯಾತ್ಮ ದೃಷ್ಟಿಗೂ ಸಾಮ್ಯ ಕಾಣುತ್ತದೆ. (ಜಿ.ಎಚ್.)

**ಆತ್ಮಹತ್ಯೆ :** ಸ್ವಪ್ರೇರಣೆಯಿಂದ ಪ್ರಾಣವನ್ನು ನೀಗುವುದು (ಸೂಸೈಡ್). ಅನೇಕ ಪ್ರಮುಖ ಧರ್ಮಗಳು ಆತ್ಮಹತ್ಯೆಯನ್ನು ದುಷ್ಕರ್ಮ, ಪಾಪ ಎಂದು ಖಂಡಿಸಿವೆ. ಇಸ್ಲಾಂ ಧರ್ಮದಲ್ಲಿ ಇದನ್ನು ನಿಷೇಧಿಸಿದ್ದಾರೆ. ಬೈಬಲ್ಲಿನ ಹಳೆಯ, ಹೊಸ ಒಡಂಬಡಿಕೆಗಳಲ್ಲಿ ಸ್ಪಷ್ಟವಾಗಿ ಟೀಕಿಸಿ ಪ್ರತಿಷೇಧಿಸಿಲ್ಲದಿದ್ದರೂ ಸಂತ ಅಗಸ್ಟೀನ್ ಕಾಲದಿಂದೀಚೆಗೆ ಕ್ರೈಸ್ತಧರ್ಮದವರು ಆತ್ಮಹತ್ಯೆಯನ್ನು ನಿಷೇಧಿಸಿದ್ದಾರೆ. ಅದು ಖೂನಿ, ಕೊಲೆಗಳನ್ನು ಮಾಡಿದಷ್ಟೇ ಪಾಪಕರವೆಂದು ಸಾರಿದ್ದಾರೆ. ಯೆಹೂದ್ಯರ ತಾಲ್ಮೂಡ್ ಎಂಬ ಧರ್ಮಶಾಸ್ತ್ರದಲ್ಲಿ ಆತ್ಮಹತ್ಯೆ ಘೋರ ಪಾಪವೆಂದು ಸಾರಿ, ಆತ್ಮಹತ್ಯೆ ಮಾಡಿಕೊಂಡವನಿಗೆ ಶಾಸ್ತ್ರೋಕ್ತ ಅಂತ್ಯಸಂಸ್ಕಾರವನ್ನು ನಿಷೇಧಿಸಿದೆ. ಬುದ್ಧ ಮಧ್ಯಮಾರ್ಗಾವಲಂಬಿಯಾಗಿ ದೇಹವನ್ನು ದಂಡಿಸುವುದನ್ನು ಖಂಡಿಸುವುದರಿಂದ ಆತ್ಮಹತ್ಯೆಯನ್ನು ನಿಷೇಧಿಸಿದ್ದಾನೆಂದು ತೀರ್ಮಾನಿಸಬಹುದು. ಆದರೆ ಬೌದ್ಧಮತದಲ್ಲಿ ಬೌದ್ಧ ಸಂಘಕ್ಕೋಸ್ಕರ ಪುನರ್ಜನ್ಮತಾಳುವ ಅತಿಶ್ರೇಷ್ಠ ಉದ್ದೇಶಕ್ಕೋಸ್ಕರ ಅತಿ ಮೇಲ್ಮಟ್ಟದ ಬೋಧಿಸತ್ವರು ಆತ್ಮಹತ್ಯೆ ಮಾಡಿಕೊಳ್ಳಲು ಅವಕಾಶವಿದೆ. ಅದು ಜನಸಾಮಾನ್ಯರಿಗೆ ಖಂಡಿತ ಅನ್ವಯಿಸುವುದಿಲ್ಲ. ಇದೇ ರೀತಿಯಲ್ಲಿ ಜೈನಧರ್ಮದಲ್ಲೂ ಅತಿಶ್ರೇಷ್ಠ ಯತಿಗಳು ಅವಸಾನ ಕಾಲದಲ್ಲಿ ಭಿಕ್ಷೆಯನ್ನು ತಿರಸ್ಕರಿಸಿ ಹಸಿವು ಬಾಯಾರಿಕೆಗಳಿಂದ ಬಳಲಿ ದೇಹವನ್ನು ದಂಡಿಸಿ (ಪ್ರಾಯೋಪವೇಶ) ಅಸುವನ್ನು ನೀಗಲು ಅವಕಾಶವಿದೆ. ಇದಕ್ಕೆ ಸಲ್ಲೇಖನಪದ್ಧತಿ ಎಂದು ಹೇಳುತ್ತಾರೆ. ಪಾರ್ಶ್ವ ಮತ್ತು ಅರಿಷ್ಟನೇಮಿ ತೀರ್ಥಂಕರರು ಈ ರೀತಿಯಲ್ಲಿ ಕಾಯೋತ್ಸರ್ಗ ಮಾಡಿದರು. ಈಗಲೂ ಕೆಲವು ಶ್ರೇಷ್ಠ ಜೈನಯತಿಗಳು ಸಲ್ಲೇಖನ ಮಾಡುತ್ತಾರೆ.

ರಿಕ್ತತೆಯಿಂದ ಜುಗುಪ್ಸೆ ಹೊಂದಿದಾಗ ಬ್ರಾಹ್ಮಣನಾದವನು ನೀರು ಗಾಳಿಯನ್ನು ಮಾತ್ರ ಸೇವಿಸಿಕೊಂಡು (ಅನ್ನಾಹಾರವಿಲ್ಲದೆ) ನಿರ್ಜನ ಪ್ರದೇಶದಲ್ಲಿ ಈಶಾನ್ಯ ದಿಕ್ಕಿನ ಕಡೆ ನಡೆದುಕೊಂಡು ಹೋಗುತ್ತ ಕುಸಿದುಬಿದ್ದು ಅಸುನೀಗಿದರೆ ಬ್ರಹ್ಮ ನಿರ್ವಾಣ ಪಡೆಯಬಹುದೆಂದು ಮನುಧರ್ಮಶಾಸ್ತ್ರದಲ್ಲಿ ಹೇಳಿದೆ.

ಅನೇಕ ಮಹಾಯೋಗಿಗಳು ಜೀವಸಮಾಧಿಯನ್ನು ಮಾಡಿಕೊಳ್ಳುತ್ತಾರೆ. ನದೀ ಅಥವಾ ಜಲಪ್ರವೇಶ, ಗುಹಾಪ್ರವೇಶ, ಅಗ್ನಿಪ್ರವೇಶ ಇತ್ಯಾದಿ ಪ್ರಸಂಗಗಳನ್ನು ಮಹಾಯೋಗಿಗಳು, ಮಹಿಮಾವಂತರು ದೇಹವಿಸರ್ಜನೆಗೋಸ್ಕರ ಮಾಡಿದ್ದಾರೆ. ಮಾಡುವುದೂ ಉಂಟು. ನಮ್ಮ ಸಂಸ್ಕೃತಿಯಲ್ಲಿ ಸತೀಪದ್ಧತಿ, (ಸಹಗಮನ, ಜೋಹರ್)ರೂಢಿಯಲ್ಲಿತ್ತು. ರಾಜನ ಜೀವಕ್ಕೆ ಪ್ರತಿಯಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಿದ್ದ ಆಪ್ತ ಸೈನಿಕರನ್ನು ಗರುಡರೆಂದು ಕರೆಯುತ್ತಿದ್ದರು. ರಾಜನ ನಿಧನದ ವಾರ್ತೆಯನ್ನು ಕೇಳುತ್ತಿದ್ದಂತೆ ಗರುಡರು ಸಾಯುತ್ತಿದ್ದ ಕಥೆಗಳು ಭಾರತದ ಇತಿಹಾಸದಲ್ಲಿವೆ.

ಅಂತೂ ಯಾವ ಧರ್ಮವೇ ಆಗಲಿ, ಮತವೇ ಆಗಲಿ ಸಾಮಾನ್ಯ ವ್ಯಾವಹಾರಿಕ ಉದ್ದೇಶಗಳಿಗೋಸ್ಕರ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಖಂಡಿಸದೇ ಇಲ್ಲ. ಹಾಗೆ ಆತ್ಮಹತ್ಯೆ ಮಾಡಿಕೊಂಡವರು ಅಪಮೃತ್ಯುವನ್ನಪ್ಪಿ ಪ್ರೇತರಾಗಿ ಇನ್ನೂ ಕಷ್ಟತರದ ಸ್ಥಿತಿಯಲ್ಲಿ ಬಳಲುತ್ತಾರೆಂದು ಪ್ರತಿಯೊಂದು ಮತವೂ ಸಾರುತ್ತದೆ.

ಸಮಾಜಶಾಸ್ತ್ರಜ್ಞರು ಪ್ರತಿಯೊಂದು ಜನಾಂಗದಲ್ಲಿಯೂ ಇರುವ ಈ ಆತ್ಮಹತ್ಯೆಯ ಸಮಸ್ಯೆಯನ್ನು ಪರಿಶೀಲಿಸಿ ಕೆಲವು ಅನುಮಿತಿಗಳನ್ನು ಕೊಟ್ಟಿದ್ದಾರೆ.

ಜಪಾನ್ ದೇಶದಲ್ಲಿ ಮಿಕಾಡೋನಲ್ಲಿ ರಾಜರು ತಮ್ಮ ಭಕ್ತಿಯನ್ನು ತೋರಿಸಲು ಹೊಟ್ಟೆ ಕುಯ್ದುಕೊಂಡು ಆತ್ಮಹತ್ಯೆ ಮಾಡಿಕೊಂಡ ಹರಕಿರಿ ಪ್ರಸಂಗಗಳೂ ಉಂಟು. ಇದು ಹಿಂದೆ ಬಹು ವಿಶೇಷವಾಗಿತ್ತು. ಈಗ ಕಮ್ಮಿಯಾಗಿದೆ.

ಈಗ ಆತ್ಮಹತ್ಯೆಯನ್ನೂ ಆತ್ಮಹತ್ಯೆಯ ಪ್ರಯತ್ನವನ್ನೂ ನಿಷೇಧಿಸಲಾಗಿದೆ. ಅದಕ್ಕೆ ಸಹಾಯ ಮಾಡಿದವರನ್ನು ಸರ್ಕಾರ ಶಿಕ್ಷಿಸುತ್ತದೆ. ಆದರೆ 17–18ನೆಯ ಶತಮಾನಗಳಲ್ಲಿ, ಇಂಗ್ಲೆಂಡಿನ ಡಾನ್ ಮತ್ತು ಹ್ಯೂಮ್, ಫ್ರಾನ್ಸ್ ದೇಶದ ಮಾಂಟೇನ್ ಮಾಂಟೇಸ್ಕ್ಯೂ, ವೋಲ್ಟೇರ್ ಮತ್ತು ರೂಸೊ, ಇಟಲಿ ದೇಶದ ಬೆಕ್ಕಾರಿಯ ಮುಂತಾದವರು ಆತ್ಮಹತ್ಯೆಯನ್ನು ಧರ್ಮಗಳು ಮತ್ತು ರಾಜ್ಯ ಸರ್ಕಾರಗಳು ಪ್ರತಿಷೇಧಿಸಕೂಡದೆಂದು ವಾದ ಮಾಡಿದರು. ಈಗಲೂ ಅನೇಕರು ಇವರ ಅಭಿಪ್ರಾಯವನ್ನು ಎತ್ತಿ ಹಿಡಿದಿದ್ದಾರೆ. (ಎಸ್.ಆರ್.)

ಕಾಯಿದೆಯ ರೀತ್ಯಾ ವಿವೇಚನೆಯ ವಯಸ್ಸು, ನ್ಯಾಯ ಮತ್ತು ಬುದ್ಧಿಸ್ವಾಸ್ಥ್ಯ ಉಳ್ಳ ವ್ಯಕ್ತಿ ಉದ್ದೇಶಪೂರ್ವಕವಾಗಿ ತನ್ನ ಕ್ರಿಯೆ ಅಥವಾ ನಿಷ್ಕ್ರಿಯೆಯಿಂದ ಅಪಕೃತ್ಯವೆಸಗಿ ಅದರಿಂದ ಸ್ವನಾಶಮಾಡಿಕೊಳ್ಳುವುದೇ ಆತ್ಮಹತ್ಯೆ.

ಆತ್ಮಹತ್ಯೆ ನೈತಿಕ ಮತ್ತು ಧಾರ್ಮಿಕ ದೃಷ್ಟಿಗಳಿಂದ ಮಾತ್ರವೇ ಅಪರಾಧವಲ್ಲ. ಸಾಮಾಜಿಕ ಮತ್ತು ಶಾಸನ ದೃಷ್ಟಿಗಳಿಂದಲೂ ದೋಷಾರ್ಹವಾದುದು. ಸಮಾಜದಲ್ಲಿ ವ್ಯಕ್ತಿಯ ಬೌದ್ಧಿಕ ಮತ್ತು ಶಾರೀರಿಕ ಜೀವನದ ಮೌಲ್ಯ ಕೇವಲ ಅವನ ವ್ಯಷ್ಟಿಸಿದ್ಧಿಗೆ ಸೀಮಿತವಾಗದೇ ಸಮಷ್ಟಿಸಿದ್ಧಿಗೂ ಲಭ್ಯವಾಗಬೇಕೆಂಬ ಲೋಕಹಿತ ದೃಷ್ಟಿಯಿಂದ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಕೊಲೆ ಮಾಡಿದರೆ ಹೇಗೆ ಅವನು ಶಿಕ್ಷಾರ್ಹನಾಗುತ್ತಾನೆಯೋ, ಅದೇ ಪ್ರಕಾರವೇ ತನ್ನನ್ನು ತಾನೇ ಕೊಲೆ ಮಾಡಿಕೊಂಡರೂ ಅವನು ದೋಷಿಯಾಗುತ್ತಾನೆ. ಮಾನಸಿಕ ದೌರ್ಬಲ್ಯ, ಆಶಾಭಂಗ, ದ್ವೇಷ, ಮಾತ್ಸರ್ಯ, ಸೇಡು ಇತ್ಯಾದಿ ಯಾವ ಕಾರಣದಿಂದಲೇ ಆಗಲಿ ಆತ್ಮಹತ್ಯೆ ಮಾಡಿಕೊಂಡರೆ ಅದು ಶಾಸನೋಲ್ಲಂಘನೆಯಾಗುತ್ತದೆ.

ಇಂಗ್ಲೆಂಡಿನಲ್ಲಿ ಆತ್ಮಹತ್ಯಾಶಾಸನ 1961 (ಸೂಯಿಸೈಡ್ ಆ್ಯಕ್ಟ್) ಜಾರಿಗೆ ಬರುವವರೆಗೂ ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯ ಮೃತ ಶರೀರಕ್ಕೆ ಮತ್ತು ಅವನ ಆಸ್ತಿಪಾಸ್ತಿಗಳಿಗೆ ಶಿಕ್ಷಾರ್ಹವಾದ ಕೆಲವು ನಿರ್ಬಂಧ ಕ್ರಮಗಳು ಜಾರಿಯಲ್ಲಿದ್ದವು. ಆದರೆ ಈಗ ಮೇಲಿನ ಶಾಸನದ ಪ್ರಕಾರ ಆತ್ಮಹತ್ಯೆ ಅಥವಾ ಅದರ ಪ್ರಯತ್ನ ಅಪರಾಧವಲ್ಲ. ಆದರೆ ಆತ್ಮಹತ್ಯೆಗೆ ನೆರವಾಗುವ ಮತ್ತು ಪ್ರೋತ್ಸಾಹಿಸುವ ವ್ಯಕ್ತಿ ಕಠಿಣಶಿಕ್ಷೆಗೆ ಗುರಿಯಾಗುತ್ತಾನೆ. ಇಂಡಿಯನ್ ಪೀನಲ್ ಕೋಡ್ ಪ್ರಕಾರ ಸಹ ಆತ್ಮಹತ್ಯೆಗೆ ನೆರವಾಗುವ ಮತ್ತು ದುಷ್ಟಾನುಕೂಲನಾಗುವ ವ್ಯಕ್ತಿ ಶಿಕ್ಷಾರ್ಹ (ಸೆಕ್ಷನ್ 305, 306). ಮೃತಪತಿಯೊಡನೆ ಸಹಗಮನ ಮಾಡಿ ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧಳಾಗಿರುವ ಸ್ತ್ರೀಗೆ ಪ್ರೋತ್ಸಾಹ ಕೊಟ್ಟು ಅವಳ ಕಾರ್ಯಕ್ಕೆ ಅನುವಾಗುವವರೆಲ್ಲರೂ ಶಿಕ್ಷಾರ್ಹರು.

ಆತ್ಮಹತ್ಯೆ ಎಸಗಿಕೊಂಡ ಅಪರಾಧಿ ಮಾನವಶಾಸನದ ವ್ಯಾಪ್ತಿಗೆ ಅತೀತನಾಗಿ ಶಿಕ್ಷೆ ವಿಧಿಸಲು ಅಸಾಧ್ಯವಾದರೂ ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ಸಿದ್ಧತೆಗಳನ್ನು ಮಾಡಿಕೊಂಡು ಅನಂತರ ಪ್ರಯತ್ನ ಮಾಡಿದರೆ ಅದು ಇಂಡಿಯನ್ ಪೀನಲ್ ಕೋಡ್ ಪ್ರಕಾರ (ಸೆಕ್ಷನ್ 309) ಶಿಕ್ಷಾರ್ಹವಾದುದು. ಪೊಲೀಸರಿಂದ ತಪ್ಪಿಸಿಕೊಳ್ಳಲು ಅಪರಾಧಿ ನೀರಿಗೆ ಧುಮುಕಿದರೆ, ವಿಷದ ಸೀಸೆ ಹತ್ತಿರ ಇಟ್ಟುಕೊಂಡ ಮಾತ್ರಕ್ಕೆ, ಗಂಡನ ಹಿಂಸೆಯನ್ನು ಸಹಿಸಲಾರದೆ ವಯಸ್ಕಳಾದ ಹೆಂಡತಿ ಅವನಿಂದ ಪಾರಾಗಲು ಬಾವಿಗೆ ಬಿದ್ದರೆ ಇವು ಯಾವುವೂ ಶಿಕ್ಷಾರ್ಹವಾದ ಆತ್ಮಹತ್ಯಾ ಪ್ರಯತ್ನಗಳೆನಿಸುವುದಿಲ್ಲ. ಆಮರಣಾಂತ ಉಪವಾಸದ ಘೋಷಣೆ ಮಾಡಿ ಅನ್ನಾಹಾರಾದಿಗಳನ್ನು ಸಂಪೂರ್ಣ ವರ್ಜ್ಯಮಾಡಿ ಮೃತ್ಯು ಸನ್ನಿಹಿತವಾದಾಗ, ಆತ್ಮಹತ್ಯೆಯ ಉದ್ದೇಶದಿಂದ ನೀರಿಗೆ ಬೀಳುವುದು ಅಥವಾ ನೇಣುಹಾಕಿಕೊಳ್ಳುವುದು ಇತ್ಯಾದಿ ಪ್ರಯತ್ನ ವಿಫಲವಾಗಿ ಉಳಿಯುವ ವ್ಯಕ್ತಿ ಅಪರಾಧಿ ಎನಿಸಿಕೊಂಡು ಶಿಕ್ಷಾರ್ಹನಾಗುತ್ತಾನೆ. (ಎ.ಎ.)

**ಆತ್ರೇಯ :** ಅತ್ರಿ ಋಷಿಯ ಮಗ. ವಾಮದೇವ ಋಷಿಯ ಶಿಷ್ಯನಾಗಿ ಬ್ರಹ್ಮಜ್ಞಾನವನ್ನು ಪಡೆದ. ಜನಮೇಜಯ ಸರ್ಪಕುಲವನ್ನು ನಾಶಮಾಡಲು ಸರ್ಪಯಾಗವನ್ನು ಮಾಡುವ ಸಮಯದಲ್ಲಿ ಪುರೋಹಿತ ಸೋಮಶ್ರವನಿಗೆ ನೆರವಾದ ಯಜ್ಞ ಸದಸ್ಯರಲ್ಲಿ ಒಬ್ಬ. ವಿದುರನಿಗೆ ಜ್ಞಾನೋಪದೇಶ ಮಾಡಿದ ವೃತ್ತಾಂತ ಭಾಗವತದಲ್ಲಿ ಬರುತ್ತದೆ. (ಎಸ್.ಕೆ.ಆರ್.)

**ಆದಂ, ಈವ್ :** ಕ್ರೈಸ್ತಧರ್ಮದ ಪ್ರಕಾರ ಆದಿ ಮಾತಾಪಿತೃಗಳು. ಹೀಬ್ರೂ ಭಾಷೆಯಲ್ಲಿ ಆದಂ ಎಂದರೆ ಮಾನವ ಜನಾಂಗವೆಂದೂ ಈವ್ ಎಂದರೆ ಜೀವ ಎಂದೂ ಅರ್ಥ. ಈಬ್ರಾನಿಯಲ್ಲಿ ಆದಾಮಾ ಪದದ ಅರ್ಥ ಕೆಂಪು ಮಣ್ಣಿನಿಂದ ಮಾಡಿದ್ದು ಎಂದು. ಮಾನವನ ಶರೀರ ಮಣ್ಣಿನಿಂದ ಮಾಡಲ್ಪಟ್ಟಿದ್ದು ಕೊನೆಗೆ ಮಣ್ಣಿನಲ್ಲೇ ಲೀನವಾಗುತ್ತದೆ. ಇದರಿಂದ ಪ್ರಥಮ ಮಾನವನ ಹೆಸರೂ ಆದಂ ಎಂದಾಗಿದೆ. ದೇವರ ತೋಟದಲ್ಲಿ ದೈವಾದೇಶದ ಪ್ರಕಾರ ಉದ್ಭವಿಸಿದ ಈ ಆದಿ ದಂಪತಿಗಳ ಬಗ್ಗೆ ಜೆನಿಸಿಸ್‌ನಲ್ಲಿ ವಿವರವಾಗಿ ಹೇಳಿದೆ. ಸೇಂಟ್ ಪಾಲನ ಪ್ರಕಾರ ಆದಂ ಮಾನವನ ಪ್ರಾಪಂಚಿಕ ಭಾಗವನ್ನು ನಿರ್ದೇಶಿಸುವವ. ದೇವರ ತೋಟದಲ್ಲಿ ಬೆಳೆದಿದ್ದ ತಿನ್ನಬಾರದ ಹಣ್ಣೊಂದನ್ನು ಹೆಬ್ಬಾವೊಂದರ ಆದೇಶದಂತೆ ಈವ್ ತಿಂದಳು ಮತ್ತು ಆದಂ ಹಣ್ಣನ್ನು ತಿನ್ನಲು ಪ್ರೇರೆಪಿಸಿ ಆತನೂ ತಿಂದ. ಇದರಿಂದ ಅವರೀರ್ವರಿಗೂ ತೋಟ ಬಿಟ್ಟು ತೆರಳಬೇಕಾದ ಶಿಕ್ಷೆ ಒದಗಿತು. ಮಾನವಸೃಷ್ಟಿಗೆ ಸಂಬಂಧಿಸಿದ ಬ್ಯಾಬಿಲೋನಿಯನ್ನರ ಪುರಾಣಕಥೆಗಳನ್ನು ವಿಮರ್ಶಕರು ಆದಂನ ಕಥೆಗೆ ಹೋಲಿಸುತ್ತಾರೆ. ಆದಂನ ಸೃಷ್ಟಿ ಎಲ್ಲಿ ಹೇಗೆ ಆಯಿತೆಂದು ಬೈಬಲ್ಲಿನಲ್ಲಿ ಎಲ್ಲೂ ಖಚಿತವಾಗಿ ಹೇಳಿಲ್ಲ. ಅದರ ದೃಷ್ಟಿಕೋನ ಧಾರ್ಮಿಕ; ವೈಜ್ಞಾನಿಕವಲ್ಲ. ಮನುಷ್ಯ ಮತ್ತು ದೇವರಲ್ಲಿ ಪುನಃ ಸ್ನೇಹ ಸಂಪಾದಿಸಿದುದರಿಂದ ಬೈಬಲ್ಲಿನಲ್ಲಿ ಯೇಸುವಿಗೆ ಎರಡನೆಯ ಆದಂ ಎಂದು ಹೇಳಲಾಗುತ್ತದೆ.

*

**ಆದಯ್ಯ :** ಬಸವಣ್ಣನವರ ಕಾಲದ ವಚನಕಾರ. ಜನ್ಮಸ್ಥಳ ಗುಜರಾತಿನ ದ್ವಾರಕಾನಗರ. ಘೋರದತ್ತ ಮತ್ತು ಪುಣ್ಯವತಿಯರ ಮಗ. ವಂಶವೃತ್ತಿ ವ್ಯಾಪಾರ. ವರ್ತಕರ ಮನೆಯಲ್ಲಿ ಹುಟ್ಟಿ ಬಾಲ್ಯದಲ್ಲಿ ಬಹಳ ಸೂಟಿಯಾಗಿದ್ದುದರಿಂದ ವ್ಯವಹಾರಕುಶಲನಾಗಿ ಬಹುಭಾಷಾವಿಶಾರದನಾದ. ಯುವಕನಾದ ಮೇಲೆ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಕರ್ನಾಟಕದ ಬಹು ಪ್ರಸಿದ್ಧ ಜೈನರ ನಗರಿಯಾದ ಪುಲಿಗೆರೆ ಅಥವಾ ಈಗಿನ ಲಕ್ಷ್ಮೇಶ್ವರಕ್ಕೆ ಬಂದು ಅಲ್ಲಿನ ಜೈನಧರ್ಮಾವಲಂಬಿಯಾದ ಪಾರಿಶೆಟ್ಟಿಯ ಏಕೈಕ ಪುತ್ರಿ ಪದ್ಮಾವತಿಯನ್ನು ಮದುವೆಯಾಗಿ ಸೌರಾಷ್ಟ್ರದ ಸೋಮನಾಥನನ್ನು ತಂದು ಪುಲಿಗೆರೆಯಲ್ಲಿ ಪ್ರತಿಷ್ಠಾಪಿಸಿ (1100) ವೀರಶೈವ ಧರ್ಮವನ್ನು ಮೆರೆದ. ಶೈವಾಚಾರದಲ್ಲಿ ತೊಡಗಿದ್ದವ. ವೀರಶೈವದಲ್ಲಿ ತೊಡಗಿ ಸೋಮನಾಥನಲ್ಲಿದ್ದ ಪರಮನಿಷ್ಠೆಯಿಂದ ಮುಂದೆ ಸೌರಾಷ್ಟ್ರ ಸೋಮೇಶ್ವರ ಎಂಬ ಅಂಕಿತವನ್ನಿಟ್ಟುಕೊಂಡು ಪ್ರಸಿದ್ಧ ವಚನಕಾರನೆನಿಸಿಕೊಂಡ.

ದೊರೆತಿರುವ ಈತನ ವಚನಗಳಲ್ಲಿ ಹೆಚ್ಚು ತತ್ತ್ವನಿರೂಪಣೆಗೆ ಸಂಬಂಧಿಸಿದವು. ಬೆಡಗಿನ ವಚನಗಳನ್ನು ಬಿಟ್ಟರೆ ಉಳಿದ ವಚನಗಳ ಶೈಲಿ ನೇರವಾಗಿದೆ, ಸರಳವಾಗಿದೆ. ಹೊರನಾಡಿನಿಂದ ಬಂದು ಕನ್ನಡವನ್ನು ಕಲಿತು ಕನ್ನಡದಲ್ಲಿ ಹಾಡಿದ ಆದಯ್ಯನ ಹೆಸರು ಕನ್ನಡ ನಾಡಿನ ಜನಮನದಲ್ಲಿ ಆಚಂದ್ರಾರ್ಕವಾಗಿ ಉಳಿಯುತ್ತದೆ. ವೀರಶೈವ ಇತಿಹಾಸ, ತತ್ತ್ವನಿರೂಪಣೆ ಮತ್ತು ಶಿವಾನುಭಾವ ಮಾರ್ಗಗಳಲ್ಲಿ ಚಿರಂತನವಾಗಿರುತ್ತದೆ. ಆದಯ್ಯ ಕಾವ್ಯಗಳಲ್ಲಿ ಪರವಸ್ತುವಿನ ಅಸ್ತಿತ್ವವನ್ನು ಪ್ರಸ್ತಾಪಿಸುವ ಕಟುತರ ನಿಷ್ಠೆಯುಳ್ಳ ಕಲಿಯಾಗಿ ಕಾಣುತ್ತಿದ್ದರೆ ವಚನಗಳಲ್ಲಿ ಮಹಾನುಭಾವಿಯಾಗಿ ಶ್ರೇಷ್ಠನಾದ ಪಂಡಿತನಾಗಿ ಕಂಗೊಳಿಸಿದ್ದಾನೆ.

(ಬಿ.ಎಸ್.ಪಿ.)

**ಆದರ್ಶರಾಜ್ಯ :** ಮಾನವ ಆಡಳಿತವ್ಯವಸ್ಥೆಯಿಂದುಂಟಾಗುವ ಯಾವ ವಿಧವಾದ ಲೋಪದೋಷವೂ ಇಲ್ಲದ ಸರ್ವಲಕ್ಷಣಸಂಪನ್ನವಾದ ಮಾದರಿ ರಾಜ್ಯ (ಯೂಟೋಪಿಯ). ಈ ಲೋಕದಲ್ಲೇ ನಮ್ಮಿಂದ ದೂರ ಬೇರೊಂದೆಡೆಯಲ್ಲಿ ಅಂಥದೊಂದು ರಾಜ್ಯವಿದೆಯೆಂದು ಬಣ್ಣಿಸುವ ಗ್ರಂಥಗಳೂ ಲೇಖನಗಳೂ ಪ್ಲೇಟೊನ ಕಾಲದಿಂದಲೂ ಪ್ರಪಂಚ ಸಾಹಿತ್ಯದಲ್ಲಿ ಸಿಗುತ್ತವೆ. ಆದರ್ಶರಾಜ್ಯದ ಕನಸು ಕಂಡವರು ಬಹುಶಃ ಪ್ಲೇಟೊಗಿಂತ ಹಿಂದೆಯೂ ಇದ್ದಿರಬಹುದು. ಸುಪ್ರಸಿದ್ಧ ನಗರ ಶಿಲ್ಪಿಯಾಗಿದ್ದ ಗ್ರೀಸಿನ ಹಿಪ್ಪೊಡಾಮಸ್ ಎಂಬುವನು ಇಂಥ ಆದರ್ಶರಾಜ್ಯವನ್ನು ಚಿತ್ರಿಸುವ ಅನೇಕ ಪ್ರಬಂಧಗಳನ್ನು ರಚಿಸಿದ್ದನೆಂದು ಅರಿಸ್ಟಾಟಲ್ ತನ್ನ ರಾಜನೀತಿ ಶಾಸ್ತ್ರದಲ್ಲಿ ಹೇಳುತ್ತಾನೆ. ಆದರೆ ಈ ರೀತಿಯ ಗ್ರಂಥರಚನೆಗೆ ಹೆಚ್ಚು ಸ್ಫೂರ್ತಿ ನೀಡಿದವ ಪ್ಲೇಟೊ. ಅವನ ರಿಪಬ್ಲಿಕ್ ಎಂಬ ಉದ್ಗ್ರಂಥ ಇಂಥ ಗ್ರಂಥಗಳ ಸೃಷ್ಟಿಗೆ ನಾಂದಿಯಾಯಿತು. ಈ ಲೋಕದ ಪ್ರತಿಯೊಂದು ವಸ್ತುವಿಗೂ ಉದಾತ್ತವಾದ ಬೇರೊಂದು ಮೂಲವಸ್ತು ಬೇರೊಂದೆಡೆಯಲ್ಲಿದೆ ಎನ್ನುತ್ತಾನೆ. ಪ್ಲೇಟೊ, ಪರಿಪೂರ್ಣವಾದ, ಉತ್ಕೃಷ್ಟವಾದ ಸಮಾಜವೊಂದರ ಆದರ್ಶ ಚಿತ್ರವನ್ನು ರಚಿಸಿದಾಗ ಅದು ಈ ಲೋಕದ, ಈ ಸಮಾಜದ ರಚನೆ ಹೇಗಿರಬೇಕು ಎಂದು ತೋರಿಸಬಲ್ಲುದೆಂದು ಅವನ ಅಭಿಪ್ರಾಯ. ತನ್ನ ಮಹಾಗ್ರಂಥದಲ್ಲಿ ಪ್ಲೇಟೊ ಸಾಮಾನ್ಯ ಜೀವನದ ನಾನಾ ಮುಖಗಳನ್ನು ಚಿತ್ರಿಸುವುದಲ್ಲದೆ, ಧರ್ಮ ನೀತಿ ದರ್ಶನಗಳ ಪರಮಗುರಿಯನ್ನೂ ಚರ್ಚಿಸುತ್ತಾನೆ.

ಪ್ಲೇಟೊನಿಂದ ಸ್ಫೂರ್ತಿ ಪಡೆದವರಲ್ಲಿ 15ನೆಯ ಶತಮಾನದ ಇಂಗ್ಲೆಂಡಿನ ಸರ್ ಥಾಮಸ್ ಮೋರ್ ಮೊದಲನೆಯವ. ಆದರ್ಶರಾಜ್ಯಗಳನ್ನು ವರ್ಣಿಸುವ ಗ್ರಂಥಗಳಿಗೆ ಯೂಟೋಪಿಯನ್ ಸಾಹಿತ್ಯವೆಂದು ಹೆಸರು ಬಂದುದು ಅವನ ಯೂಟೋಪಿಯ ಎಂಬ ಗ್ರಂಥದಿಂದ. ಯೂಟೋಪಿಯ ಎಂಬ ಪದ ಒಂದು ರೀತಿಯ ಶ್ಲೇಷೋಕ್ತಿ. ಒಟೊಪಿಯ ಎಂದರೆ ಇಲ್ಲದ ರಾಜ್ಯವೆಂದೂ ಯೂಟೋಪಿಯ ಎಂದರೆ ಒಳ್ಳೆಯ ರಾಜ್ಯವೆಂದೂ ಅರ್ಥವಾಗುತ್ತದೆ. ಅನೇಕ ಗ್ರಂಥಗಳಲ್ಲಿ ಈ ಎರಡೂ ಬಗೆಯ ರಾಜ್ಯದ ಕಲ್ಪನೆಯಿದೆ.

ಒಂದನೆಯದು, ಪಲಾಯನ ಸೂತ್ರವನ್ನು ಅನುಸರಿಸಿ ಬರೆದ ಆದರ್ಶರಾಜ್ಯದ ಚಿತ್ರ. ಇದರಲ್ಲಿ ಸಾಹಿತಿ ತಾನು ಕಾಣಬಯಸುವ, ಮೋಹಕವಾದ ಕನಸಿನ ಚಿತ್ರವನ್ನು ಕಲ್ಪಿಸುತ್ತಾನೆ. ಇದು ವಾಸ್ತವ ಪ್ರಪಂಚದಿಂದ ದೂರವಾಗಿದ್ದು, ಕೆಲವು ವೇಳೆ ಅಸಾಧ್ಯವಾದ ಆದರ್ಶಗಳಿಂದ ಕೂಡಿರುತ್ತದೆ. ಲೌಕಿಕ ಅನುಭವಕ್ಕೆ ಮೀರಿದ್ದರೂ ಇದು ಚೆಂದ. ಲೋಕ ಹೀಗಿದ್ದರೆ ಎಷ್ಟು ಸುಂದರ ಎನ್ನುವ ಭಾವನೆಯನ್ನು ಹುಟ್ಟಿಸುತ್ತದೆ. ಉದಾಹರಣೆಗೆ, 17ನೆಯ ಶತಮಾನದಲ್ಲಿ ಇಂಗ್ಲೆಂಡಿನ ಫ್ರಾನ್ಸಿಸ್ ಬೇಕನ್ ರಚಿಸಿದ ದಿ ನ್ಯೂ ಅಟ್ಲಾಂಟಿಸ್ ಎಂಬ ಗ್ರಂಥದಲ್ಲಿ ಆದರ್ಶರಾಜ್ಯದ ಸುಂದರ ಕಲ್ಪನೆಯಿದೆ. ಹೊಸ ಪ್ರಪಂಚವನ್ನು ಹುಡುಕಲು ಹೊರಟ ಪ್ರವಾಸಿಗರ ತಂಡ ದ್ವೀಪವೊಂದನ್ನು ತಲುಪಿ, ಅಲ್ಲಿನ ದೊರೆಯಾದ ಸಾಲಮನ್ ರಚಿಸಿರುವ ಸುವ್ಯವಸ್ಥಿತ ಅರಮನೆಯನ್ನು ಸೇರುವರು. ಇಲ್ಲಿ ರಾಜಕಾರಣಿಗಳ ಸುಳಿವಿಲ್ಲ, ಚುನಾವಣೆಗಳಲ್ಲಿ ಗೆದ್ದು ದರ್ಪದಿಂದ ಮೆರೆಯುವ ಜನನಾಯಕರ ಕೋಟಲೆಯಿಲ್ಲ, ರಾಜಕೀಯ ಪಕ್ಷಗಳಿಲ್ಲ, ಭಾಷಣಗಳ ರೋಗವಿಲ್ಲ, ಸುಳ್ಳು, ಅನ್ಯಾಯ ಮತದ್ವೇಷಗಳ ಹೆಸರೇ ಇಲ್ಲ. ಇಲ್ಲಿನ ಜನ ವಿಜ್ಞಾನದ ಪ್ರಗತಿಯನ್ನು ಸಾಧಿಸಬೇಕೆಂಬ ಒಂದೇ ಗುರಿಯತ್ತ ಸಾಗುತ್ತಿದ್ದಾರೆ. ತಾಂತ್ರಿಕರು, ಶಿಲ್ಪಿಗಳು, ವಿಜ್ಞಾನಿಗಳು, ದಾರ್ಶನಿಕರು–ಇವರುಗಳೇ ಈ ದ್ವೀಪದ ಆಡಳಿತಗಾರರು. ಇಲ್ಲಿನ ಸರ್ಕಾರ ಮಾನವನನ್ನು ಬಂಧಿಸುವಂಥ ಕಟ್ಟುಪಾಡುಗಳನ್ನು ರಚಿಸುವ ಹವ್ಯಾಸಕ್ಕೆ ಬೀಳದೆ, ಪ್ರಕೃತಿಯನ್ನು ಹೇಗೆ ಹತೋಟಿಯಲ್ಲಿಟ್ಟು ಮಾನವ ಪ್ರಗತಿಗಾಗಿ ಅಳವಡಿಸಬಹುದು ಎಂಬ ಜಿಜ್ಞಾಸೆಯಲ್ಲೇ ತೊಡಗಿದೆ. ಹೀಗೆ, ವಿಜ್ಞಾನದ ಮುನ್ನಡೆಯ ಮೂಲಕ ಮಾನವಸಮಾಜವನ್ನು ಪರಿಪೂರ್ಣಗೊಳಿಸಿ ಈ ಲೋಕದಲ್ಲೇ ದಿವ್ಯ ಸಮಾಜವೊಂದನ್ನು ಸೃಷ್ಟಿಸಬಹುದೆಂಬ ತನ್ನ ಕನಸನ್ನು ಬೇಕನ್ ಈ ಗ್ರಂಥದಲ್ಲಿ ಚಿತ್ರಿಸಿದ್ದಾನೆ. ಇಂಥ ಅನುಕರಣೀಯವಾದ ಆದರ್ಶಗಳನ್ನುಳ್ಳ ಸಮಾಜಗಳ ಚಿತ್ರಣವನ್ನು ನಾವು ಟೊಮಾಸೋ ಕ್ಯಾಂಪೆನೆಲ್ಲೊನ ದಿ ಸಿಟಿ ಆಫ್ ದಿ ಸನ್ ಗಾಡ್, ಅರ್ಲ್ ಬುಲ್ವರ್ ಲಿಟ್ಟನ್‌ನ ದಿ ಕಮಿಂಗ್ ರೇಸ್ ಮುಂತಾದ ಗ್ರಂಥಗಳಲ್ಲಿ ಕಾಣಬಹುದು. ಈ ಗ್ರಂಥಗಳ ಹೆಸರುಗಳನ್ನು ಪರಿಶೀಲಿಸಿದರೆ ಇವುಗಳಲ್ಲಿ ಅಡಗಿರುವ ಆದರ್ಶರಾಜ್ಯದ ಕಲ್ಪನೆಯ ಅರಿವಾಗದಿರದು.

ಥಾಮಸ್ ಮೋರ್‌ನ ಗ್ರಂಥದ ಶೀರ್ಷಿಕೆಯಲ್ಲಿ (ಯುಟೋಪಿಯ) ಅಡಕವಾಗಿರುವ ಮತ್ತೊಂದು ಭಾವನೆಯೆಂದರೆ, ಸಮಾಜವನ್ನು ಸುವ್ಯವಸ್ಥಿತಗೊಳಿಸುವುದರ ಮೂಲಕ ಪುನರುಜ್ಜೀವನಗೊಳಿಸಬೇಕೆನ್ನುವ ಆದರ್ಶ. ಕೆಲವು ವೇಳೆ ಇಂಥ ಕಾಲ್ಪನಿಕ ಲೋಕದ ಚಿತ್ರದ ಮೂಲಕ ನಾವಿರುವ ಸಮಾಜದ ಲೋಪದೋಷಗಳನ್ನು ವಿಡಂಬನೆ ಮಾಡುವ ಗ್ರಂಥಗಳೂ ಇತ್ತೀಚೆಗೆ ವಿಪುಲವಾಗಿ ಬರುತ್ತಿವೆ. ಸಮಾಜವನ್ನು ಪುನರುಜ್ಜೀವನಗೊಳಿಸಬೇಕೆಂಬ ಆದರ್ಶದಿಂದ ಬರೆದ ಗ್ರಂಥಗಳು 16 ಮತ್ತು 17ನೆಯ ಶತಮಾನದಿಂದೀಚೆಗೆ ಹೆಚ್ಚಾಗಿ ರಚಿತವಾದವು. ಜನರು ಧಾರ್ಮಿಕ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಆ ಕಾಲದಲ್ಲಿ, ಹೊಸ ಹೊಸ ಭೂಭಾಗಗಳನ್ನು ಕಂಡುಹಿಡಿದ ಸಾಹಸಿಗಳು, ಹೊಸ ಖಂಡವೊಂದರಲ್ಲಿ ತಮಗೆ ಬೇಕಾದಂಥ ಸಮಾಜವನ್ನು ರಚಿಸಿಕೊಂಡು ಸುಖದಿಂದಿರಬಹುದೆಂಬ ಕನಸು ನನಸಾಗಲು ಸಾಧ್ಯವೆಂದು ತೋರಿಸಿಕೊಟ್ಟರು. 18ನೆಯ ಶತಮಾನದಲ್ಲಿ ರೂಸೊ, ವಾಲ್ಟೇರ್ ಮುಂತಾದವರ ಆದರ್ಶವಾದದಿಂದ ಚೇತನಗೊಂಡ ಅನೇಕ ಸಾಹಿತಿಗಳು ಇಂಥ ಗ್ರಂಥಗಳನ್ನು ರಚಿಸಿದರು. ಈ ಮಾದರಿಯವಕ್ಕೆ ಥಾಮಸ್ ಮೋರ್‌ನ ಗ್ರಂಥವೇ ಉತ್ತಮ ನಿದರ್ಶನ. ಥಾಮಸ್ ಮೋರ್ ಆ ಶತಮಾನದ ಉದ್ದಾಮ ಲ್ಯಾಟಿನ್ ಪಂಡಿತ, ಸುಪ್ರಸಿದ್ಧ ವಕೀಲ. ಒಂದು ಕಾಲದಲ್ಲಿ ಪಾರ್ಲಿಮೆಂಟಿನ ಸದಸ್ಯನಾಗಿದ್ದ. ತನ್ನ ಗ್ರಂಥವನ್ನು ಮಾತೃಭಾಷೆಯಾದ ಇಂಗ್ಲಿಷಿನಲ್ಲಿ ಬರೆಯದೆ, ಲ್ಯಾಟಿನ್ನಿನಲ್ಲಿ ಬರೆದ. ಪ್ಲೇಟೊನ ರಿಪಬ್ಲಿಕ್ ಗ್ರಂಥದಿಂದಲೂ ಆಗತಾನೇ ಪೋರ್ಚುಗೀಸ್ ಮತ್ತು ಸ್ಪೇನಿನ ನಾವಿಕರು ನಡೆಸಿದ್ದ ಭೂಗೋಳ ಯಾತ್ರೆಯ ಕಥೆಗಳಿಂದಲೂ ಇಟಲಿ ದೇಶದ ಅಮೆರಿಗೊ ವೆಸ್ಪೂಚಿಯ ಸಮುದ್ರಯಾನದ ಸಾಹಸ ಕಥೆಗಳಿಂದಲೂ ಸ್ಫೂರ್ತಿ ಪಡೆದು ಮೋರ್ ತನ್ನ ಗ್ರಂಥವನ್ನು ರಚಿಸಿದ. ಮೋರ್‌ನ ಇಲ್ಲದ ರಾಜ್ಯ ಒಂದು ರೀತಿಯ ಸುಖೀರಾಜ್ಯ. ಯುದ್ಧದಿಂದ ಮಾನವ ಸಮಸ್ಯೆಗಳ ಪರಿಹಾರ ಅಸಾಧ್ಯವೆಂದು ಹೇಳಿ, ಸೈನಿಕರನ್ನು ಕೊಲೆಗಡುಕರೆಂದು ಆತ ಕರೆಯುತ್ತಾನೆ. ಜನ ಚಿನ್ನವನ್ನಾಗಲಿ ಆಸ್ತಿಪಾಸ್ತಿಗಳನ್ನಾಗಲಿ ಕೂಡಿಡುವುದನ್ನು ನಿಷೇಧಿಸುತ್ತಾನೆ. ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯವಾಗಿ ಕೆಲಸವನ್ನು ವಿಧಿಸಬೇಕು; ರಾಜ್ಯದ ಸುಖ ಸಂತೋಷಗಳಲ್ಲಿ ಪ್ರತಿಯೊಬ್ಬನೂ ಸಮಾನ ಹಕ್ಕುದಾರ; ಎಲ್ಲ ಜಾತಿ ಮತದವರಿಗೂ ಸರಿಸಮಾನವಾದ ಹಕ್ಕುಬಾಧ್ಯತೆಗಳಿರಬೇಕು; ಪರಮಸಹಿಷ್ಣುತೆ ರಾಜ್ಯದ ಪರಮ ಗುರಿಯಾಗಬೇಕು; ಕ್ರೈಸ್ತಧರ್ಮದೊಡನೆ ಉಳಿದ ಧರ್ಮಗಳಿಗೂ ಸಮಾನ ಹಕ್ಕಿರಬೇಕು–ಎಂದು ಮೋರ್ ವಾದಿಸುತ್ತಾನೆ. ಹೀಗೆ ಆದರ್ಶಗಳ, ಬೇಕು ಬೇಡಗಳ, ಪಟ್ಟಿಯನ್ನೇ ತನ್ನ ಗ್ರಂಥದಲ್ಲಿ ಕೊಡುತ್ತಾನೆ. ಆದರೆ ಪರಮತಸಹಿಷ್ಣುತೆಯನ್ನೂ ಸರ್ವಧರ್ಮಗಳ ಸಮಾನತೆಯನ್ನೂ ಮುಕ್ತಕಂಠದಿಂದ ಹೊಗಳಿದ ಥಾಮಸ್ ಮೋರ್ ಹತ್ತು ವರ್ಷಗಳ ಅನಂತರ ಪ್ರಾಟೆಸ್ಟೆಂಟರನ್ನು ಪೀಡಿಸುವುದರಲ್ಲಿ ಅಗ್ರಗಾಮಿಯಾದುದೂ ತನ್ನ ಧರ್ಮದ ರಕ್ಷಣೆಗಾಗಿ ಉಗ್ರವಾಗಿ ಹೋರಾಡಿ ತನ್ನ ಪ್ರಾಣವನ್ನೇ ತೆತ್ತುದೂ ಒಂದು ರೀತಿಯ ವಿರೋಧಾಭಾಸವೇ ಸರಿ.

ಆದರ್ಶಗಳು, ತತ್ತ್ವಗಳು ಮತ್ತು ವಾಸ್ತವಿಕ ನಡವಳಿಕೆ – ಇವುಗಳ ನಡುವೆ ಉಂಟಾಗುವ ಇಂಥ ವಿರೋಧಾಭಾಸಗಳನ್ನೂ ಕೆಲವು ಗ್ರಂಥಗಳಲ್ಲಿ ಲೇಖಕರು ಚಿತ್ರಿಸಿದ್ದಾರೆ. ಪ್ರವಾಸಕಥನಗಳ ಮೂಲಕ ಸಮಾಜದ ವಿಡಂಬನೆ ಮಾಡುವ ಪ್ರಯತ್ನವೂ ನಡೆದಿದೆ. ಕೆಲವು ಲೇಖಕರು ತಾವು ಚಿತ್ರಿಸುವ ಆದರ್ಶರಾಜ್ಯದ ಚಿತ್ರ ಕೇವಲ ಕನಸಿನ ಚಿತ್ರವಾಗದೆ, ಅದರ ವಾಸ್ತವಿಕತೆ ಹೆಚ್ಚಲೆಂದು ತಮ್ಮ ಕಲ್ಪನಾರಾಜ್ಯಗಳನ್ನು ಶಿಸ್ತು ಸಂಯಮ ದರ್ಪಗಳಿಂದ ಕೂಡಿದ ಸರ್ವಾಧಿಕಾರ ಪ್ರಭುತ್ವಗಳನ್ನಾಗಿ ಪರಿವರ್ತಿಸಿದ್ದಾರೆ. ಪ್ಲೇಟೊ, ಲುಕಿಂಗ್ ಬ್ಯಾಕ್‌ವರ್ಡ್ (ಸಿಂಹಾವಲೋಕನ) ಎಂಬ ಗ್ರಂಥವನ್ನು ಬರೆದ ಬೆಲೆಮಿ, ವಾಯೇಜ್ ಟು ಐಕೇರಿಯ ಎಂಬ ಗ್ರಂಥವನ್ನು ಬರೆದ ಕ್ಯಾಬೇಟ್ ಮುಂತಾದವರು ಚಿತ್ರಿಸಿರುವ ಆದರ್ಶಸಮಾಜಗಳು ಮಿಲಿಟರಿ ಸರ್ವಾಧಿಕಾರವುಳ್ಳ ಸ್ವರ್ಗಗಳು. ಇವು ನಮ್ಮ ಕಾಲದ ಫ್ಯಾಸಿಸ್ಟ್ ಸರ್ವಾಧಿಕಾರಗಳು ಬಲಪ್ರಯೋಗದಿಂದ ರಕ್ತಪಾತದಿಂದ ಜಾರಿಗೆ ತಂದ ಕೆಲವು ಸ್ವರ್ಗಲೋಕಗಳನ್ನು ಹೋಲುವುದಾದರೆ ಆಶ್ಚರ್ಯವಿಲ್ಲ. ಆದರ್ಶಗಳನ್ನು ಕಲ್ಪನೆಯ ಕನಸಿನ ಪ್ರಪಂಚದಿಂದ ವಾಸ್ತವ ಪ್ರಪಂಚಕ್ಕೆ ತಂದಾಗ ಉಂಟಾಗುವ ವಿರೋಧಾಭಾಸವನ್ನು ಜಾರ್ಜ್ ಆರ್ವೆಲ್‌ರಂಥ ವಾಸ್ತವವಾದಿಗಳೂ ವಿಡಂಬನಕಾರರೂ ತೋರಿಸಿದ್ದಾರೆ.

ಆರ್ವೆಲ್‌ನ ನೈನ್‌ಟೀನ್ ಎಯ್‌ಟಿಫೋರ್ ಮುಂತಾದ ವಿಡಂಬನಾತ್ಮಕ ಕಾದಂಬರಿಗಳಲ್ಲಿ ಆದರ್ಶ ರಾಜ್ಯದ ಕರಾಳ ವಾಸ್ತವಿಕತೆಯ ಪ್ರಜ್ಞೆಯಿದೆ; ಅದನ್ನು ಗೇಲಿ ಮಾಡುವ ಪ್ರಯತ್ನವಿದೆ. ಆದರ್ಶರಾಜ್ಯದ ಕಲ್ಪನೆಯನ್ನು ವಿಡಂಬನೆಯ ಮಾಧ್ಯಮವಾಗಿ ಉಪಯೋಗಿಸಿದವರಲ್ಲಿ ಅರಿಸ್ಟೋಫೆನಿಸ್ ಬಹುಶಃ ಮೊಟ್ಟಮೊದಲನೆಯವ. ಅವನ ಸುಪ್ರಸಿದ್ಧ ಹರ್ಷನಾಟಕಗಳಾದ ದಿ ಬರ್ಡ್ಸ್, ದಿ ಕ್ಲೌಡ್ಸ್ ಮುಂತಾದ ಗ್ರಂಥಗಳಲ್ಲಿ ತನ್ನ ಕಾಲದ ರಾಜಕಾರಣಿಗಳನ್ನೂ ತಾರ್ಕಿಕರನ್ನೂ ಯುದ್ಧಪಿಪಾಸೆಯಿಂದ ಬಳಲುವ ನಾಯಕರನ್ನೂ ತಮಾಷೆ ಮಾಡುತ್ತಾನೆ. ಹಕ್ಕಿಗಳ ರಾಜ್ಯಕ್ಕೆ ಮುಗಿಲಿನ ರಾಜ್ಯವೆಂದು ಹೆಸರಿಟ್ಟಿರುವುದು ಉಚಿತವಾಗಿದೆ. ಅನಂತರ 18ನೆಯ ಶತಮಾನದಲ್ಲಿ ವಿಡಂಬನಸಾಹಿತ್ಯ ಯುರೋಪಿನಲ್ಲಿ ಹೆಚ್ಚು ಜನಪ್ರಿಯವಾಯಿತು. ಇಂಗ್ಲೆಂಡಿನ ಜೊನಾಥನ್ ಸ್ವಿಫ್ಟ್ ತನ್ನ ಗಲಿವರ್ಸ್ ಟ್ರಾವಲ್ಸ್ ಎಂಬ ಗ್ರಂಥದಲ್ಲಿ ಸಮಕಾಲೀನ ರಾಜಕಾರಣಿಗಳನ್ನೂ ಸಾಹಿತಿಗಳನ್ನೂ ವಿಜ್ಞಾನಿಗಳನ್ನೂ ಟೀಕಿಸಿ ಕುಚೋದ್ಯ ಮಾಡುತ್ತಾನೆ. ಗಲಿವರ್ ತನ್ನ ಪ್ರವಾಸ ಕಾಲದಲ್ಲಿ ಆಕಸ್ಮಿಕವಾಗಿ ಭೇಟಿ ಕೊಡುವ ಲಿಲಿಪುಟ್ ನಗರ, ಬ್ರಾಂಬ್‌ಡಿಂಗ್‌ನಾಂಗ್ ನಗರ, ಲೊಗ್ಯಾಡೋ ಪಂಡಿತರ ಸಭೆ, ಹ್ಯೂನಿಮ್ಸ್ ಎಂಬ ಅತಿಮಾನವ ಕುದುರೆಗಳ ರಾಜ್ಯ, ಸ್ಟ್ರಲ್ಡ್‌ಬರ್ಗ್ ಎಂಬ ಕರಾಳ ಮಾನವಪಿಶಾಚಿಗಳ ರಾಜ್ಯ–ಇವೆಲ್ಲವೂ ಆದರ್ಶರಾಜ್ಯದ ಸರ್ವತೋಮುಖವಾದ ಚಿತ್ರಗಳು. ಇಂಥ ವಿಡಂಬನೆಯನ್ನು ನಾವು ಸ್ಯಾಮ್ಯುಯಲ್ ಬಟ್ಲರ್‌ನ ಎರವ್ಹಾನ್, ಆಲ್ಡಸ್ ಹಕ್ಸ್‌ಲಿಯ ಬ್ರೇವ್ ನ್ಯೂವರ್ಲ್ಡ್ ಮತ್ತು ಏಪ್ ಅಂಡ್ ಎಸೆನ್ಸ್ ಮುಂತಾದ ಗ್ರಂಥಗಳಲ್ಲೂ ಕಾಣಬಹುದು. ಎಚ್. ಜಿ. ವೆಲ್ಸ್ ಮುಂತಾದವರು ಬರೆದ ವಿಜ್ಞಾನಪ್ರಪಂಚದ ಕಟ್ಟುಕಥೆಗಳಲ್ಲೂ ಇಂಥ ಆದರ್ಶ ಲೋಕದ ಚಿತ್ರಣವಿದೆ.

ಪ್ರವಾಸಕಥೆ, ಕಟ್ಟುಕಥೆ, ಕಾದಂಬರಿಗಳಲ್ಲಿ ಮಾತ್ರವಲ್ಲದೆ, ರೂಸೊ, ರಾಬರ್ಟ್ ಓವೆನ್, ಏಂಜೆಲ್ಸ್ ಮುಂತಾದವರು ರಾಜನೀತಿ, ಶಿಕ್ಷಣ ಮತ್ತು ಸಮಾಜಶಾಸ್ತ್ರಗಳನ್ನು ಕುರಿತು ಬರೆದ ಗ್ರಂಥಗಳಲ್ಲೂ ಲೇಖನಗಳಲ್ಲೂ ಇಂಥ ರಾಜ್ಯದ ಆದರ್ಶಗಳ ವರ್ಣನೆ, ವಿಡಂಬನೆ, ಟೀಕೆ ಕಂಡುಬರುತ್ತವೆ. ಸೋಷಿಯಲಿಸಮ್–ಯೂಟೋಪಿಯನ್ ಅಂಡ್ ಸೈಂಟಿಫಿಕ್ ಎಂಬ ತನ್ನ ಗ್ರಂಥದಲ್ಲಿ ಏಂಜೆಲ್ಸ್ ಇಲ್ಲದ ರಾಜ್ಯವನ್ನು ಚಿತ್ರಿಸುವ ಆದರ್ಶವಾದಿಗಳನ್ನು ಕೇವಲ ಗಾಳಿಗೋಪುರ ಕಟ್ಟುವ ಮಾತಿನ ಮಲ್ಲರೆಂದು ತೆಗಳುತ್ತಾನೆ.

ಆದರೆ ಆದರ್ಶರಾಜ್ಯವನ್ನು ಚಿತ್ರಿಸುವ ಆದರ್ಶವಾದಿಗಳೆಲ್ಲರೂ ಕೇವಲ ಕೆಲಸಕ್ಕೆ ಬಾರದ ಕನಸುಗಾರರಲ್ಲ. ಅನೇಕರು ಮಾನವಸಮಾಜದ ಕುಂದುಕೊರತೆಗಳನ್ನು ಎತ್ತಿ ತೋರಿಸಿ, ಓರೆಕೋರೆಗಳನ್ನು ತಿದ್ದುವ ಸಮಾಜ ಸುಧಾರಕರಾಗಿದ್ದಾರೆ. ಮನುಷ್ಯನ ಜೀವನಕ್ಕೆ ಇಂದು ವ್ಯವಸ್ಥೆ, ಪ್ರಗತಿಯ ಸಾಧನೆಗಾಗಿ ಒಂದು ಕಾರ್ಯಕ್ರಮ ಇರಬೇಕೆಂದು ಬೆಲಮಿಯ ವಾಯೇಜ್ ಟು ಐಕೇರಿಯ ಮುಂತಾದ ಗ್ರಂಥಗಳು ಸಾರಿವೆ. ವಿಲಿಯಮ್ ಮಾರಿಸ್ ರಚಿಸಿದ ನ್ಯೂಸ್ ಫ್ರಮ್ ನೊವೇರ್ ಎಂಬ ಗ್ರಂಥದಲ್ಲಿ ಹಳ್ಳಿಗಾಡಿನ ಸುಂದರ ಪ್ರಕೃತಿಯ ವರ್ಣನೆಯಿದೆ. ಈ ಗ್ರಂಥದಿಂದ ಸ್ಫೂರ್ತಿ ಹೊಂದಿ ಜೇಮ್ಸ್ ಸಿಲ್ಕ್ ಬಕಿಂಗ್ ಹ್ಯಾಮ್ ಎಂಬಾತ ನ್ಯಾಷನಲ್ ಈವಿಲ್ಸ್ ಅಂಡ್ ಪ್ರಾಕ್ಟಿಕಲ್ ರೆಮಿಡೀಸ್ ಎಂಬ ಪುಸ್ತಕವನ್ನು ಬರೆದು ಆಧುನಿಕ ನಗರನಿರ್ಮಾಪಕರಿಗೊಂದು ಹೊಸ ದಾರಿ ತೋರಿಸಿದ. ಪ್ರತಿ ನಗರವನ್ನೂ ಶುಚಿಯಾಗಿಟ್ಟು, ಪ್ರತಿಯೊಂದು ಕಡೆಯೂ ಸುಂದರ ಉದ್ಯಾನವನಗಳನ್ನು ನಿರ್ಮಿಸಬೇಕೆಂದು ಘೋಷಿಸಿದ. ಇದರಿಂದ ಅಮೆರಿಕದಲ್ಲಿ ದೊಡ್ಡದೊಂದು ಉದ್ಯಾನನಗರಗಳ ಚಳವಳಿ ಪ್ರಾರಂಭವಾಯಿತು. ಹೀಗೆ ಇಲ್ಲದ ರಾಜ್ಯದ ಕನಸನ್ನು ಕಾಣುವ ಅನೇಕ ಆದರ್ಶವಾದಿಗಳು ಲೋಕಕಲ್ಯಾಣಕ್ಕೆ ಸಹಾಯಕರಾಗಿದ್ದಾರೆ. (ಎಚ್.ಕೆ.ಆರ್.; ಎನ್.ಎಸ್.ಎಚ್.)

**ಆದವಾನಿ :** ಬಳ್ಳಾರಿಯ ಈಶಾನ್ಯಕ್ಕೆ 64 ಕಿಮೀ ದೂರದಲ್ಲೂ ಹೈದರಾಬಾದಿನ ಆಗ್ನೇಯಕ್ಕೆ ಸು. 228 ಕಿಮೀ ದೂರದಲ್ಲೂ ಚೆನ್ನೈನಿಂದ 492 ಕಿಮೀ ದೂರದಲ್ಲೂ ಮೊದಲಿಗೆ ಇದು ಬಳ್ಳಾರಿ ಜಿಲ್ಲೆಗೆ ಸೇರಿದ್ದ ತಾಲ್ಲೂಕು ಕೇಂದ್ರವಾಗಿತ್ತು. ಕನ್ನಡ ಪ್ರದೇಶ. ರಾಜ್ಯ ಪುನರ್‌ವಿಂಗಡಣಾ ಸಮಯದಲ್ಲಿ (1956) ಆಂಧ್ರಪ್ರದೇಶಕ್ಕೆ ಸೇರಿತು. ಜನಸಂಖ್ಯೆ ಸು. 1,55,969 (2001). ಚೆನ್ನೈ–ಮುಂಬೈ ರೈಲುಮಾರ್ಗದ ಪ್ರಮುಖ ರೈಲುನಿಲ್ದಾಣ.

ಆದವಾನಿ ವಿಜಯನಗರದರಸರ ಮುಖ್ಯ ಹಾಗೂ ಕೇಂದ್ರಸ್ಥಾನಗಳಲ್ಲಿ ಒಂದಾಗಿತ್ತು. ಅವರ ಕೈತಪ್ಪಿದ ಅನಂತರ 1792ರ ತನಕ ಮುಸಲ್ಮಾನ ಆಳರಸರ ಸ್ವಾಧೀನದಲ್ಲಿತ್ತು. ಟಿಪ್ಪು ಮತ್ತು ಈಸ್ಟ್ ಇಂಡಿಯ ಕಂಪೆನಿಗಳಿಗೆ ನಡೆದ ಒಂದನೆಯ ಮೈಸೂರು ಯುದ್ಧದ ತರುವಾಯ ಇದನ್ನು ಹೈದರಾಬಾದ್ ನಿಜಾಮರ ವಶಕ್ಕೆ ಕೊಡಲಾಯಿತು. ಮತ್ತೆ ನಿಜಾಮ 1800ರಲ್ಲಿ ಬ್ರಿಟಿಷರಿಂದ ಮಿಲಿಟರಿ ಸಹಾಯ ಪಡೆಯಲೋಸುಗ ಇದನ್ನು ಅವರಿಗೆ ಒಪ್ಪಿಸಿದ ಈ ಸ್ಥಳ ಪ್ರಾಚೀನ ವಾಸ್ತುಶಿಲ್ಪ, ಪುರಾತನ ಕೋಟೆಯ ಅವಶೇಷಗಳು, ಸಿದಿ ಮಸೂದ್‌ಖಾನ್ ಕಟ್ಟಿಸಿದ (1680) ಸುಂದರ ಜುಮ್ಮ ಮಸೀದಿ – ಇವುಗಳಿಗೆ ಹೆಸರಾದುದು.

ಈಗ ಇದು ಮುಖ್ಯ ಹತ್ತಿ ವ್ಯಾಪಾರಕೇಂದ್ರ. ಇಲ್ಲಿ ಹತ್ತಿ, ರೇಷ್ಮೆಗಿರಣಿಗಳು ಹಾಗೂ ಪ್ರಯೋಗಾಲಯಗಳಿವೆ. ಇಲ್ಲಿಯ ಜಮಖಾನಗಳು ಹೆಸರುವಾಸಿ. 1867ರಲ್ಲಿ ಪೌರಸಭೆ ಸ್ಥಾಪಿತವಾಯಿತು. ಬೆಟ್ಟದ ಬುಡದಲ್ಲಿರುವ ರಾಮಾಂಜಲ ಚಿಲುಮೆ ವರ್ಷದಲ್ಲಿ ಕೆಲಕಾಲ ಊರಿಗೆ ನೀರನ್ನೊದಗಿಸುತ್ತದೆ. (ಕೆ.ಆರ್.)

**ಆದಾಯ ತೆರಿಗೆ :** ಭಾರತದಲ್ಲಿ ಈಗ ಆದಾಯ ತೆರಿಗೆಯನ್ನು ವಿಧಿಸುತ್ತಿರುವ ಆದಾಯ ತೆರಿಗೆ ಕಾನೂನು 1961, 1962 ಏಪ್ರಿಲ್ 1 ಜಾರಿಗೆ ಬಂದಿದೆ. ಈ ಕಾನೂನು ಕಾಲಕಾಲಕ್ಕೆ ಬದಲಾವಣೆ ಹೊಂದುತ್ತದೆ.

ಓರ್ವ ವ್ಯಕ್ತಿಯ ಆದಾಯ ತೆರಿಗೆಯನ್ನು ಕರ ನಿರ್ಧರಣಾ ವರ್ಷದ (ಅಸೆಸ್‌ಮೆಂಟ್ ಇಯರ್) ಹಿಂದಿನ ವರ್ಷದ (ಪ್ರೀವಿಯಸ್ ಇಯರ್) ಅಂದರೆ 2005–06ರ ವರ್ಷದಲ್ಲಿ ಸಂಪಾದನೆ ಮಾಡಿದ ಆದಾಯಕ್ಕೆ ತೆರಿಗೆಯನ್ನು ಕರ ನಿರ್ಧರಣಾ ವರ್ಷದಲ್ಲಿ ಅಂದರೆ 2006–07ರಲ್ಲಿ ಕಟ್ಟಬೇಕು.

ಆದಾಯ ತೆರಿಗೆ ಕಾನೂನಿನಲ್ಲಿ ತೆರಿಗೆದಾರರನ್ನು ವ್ಯಕ್ತಿ (ಇಂಡಿವಿಜುಯಲ್), ಹಿಂದೂ ಅವಿಭಕ್ತ ಕುಟುಂಬ, ಪಾಲುದಾರಿಕಾ ಸಂಸ್ಥೆ, ಕಂಪನಿಗಳು, ಟ್ರಸ್ಟ್‌ಗಳು, ಸ್ಥಳೀಯ ಸಂಸ್ಥೆ, ವ್ಯಕ್ತಿಗಳ ಗುಂಪು ಎಂದು ಮುಂತಾಗಿ ವಿಭಾಗಿಸಲಾಗಿದೆ.

**ಆದಾಯವನ್ನು 5 ವಿಭಾಗಗಳಾಗಿ ವಿಂಗಡಿಸಲಾಗಿದೆ:**

1. ಸಂಬಳ,
2. ಬಾಡಿಗೆ,
3. ವ್ಯಾಪಾರ ಅಥವಾ ವೃತ್ತಿಯಿಂದ ಬಂದ ಆದಾಯ
4. ಮೂಲಧನ ಲಾಭ (ಕ್ಯಾಪಿಟಲ್ ಗೇನ್)
5. ಇತರೇ ಮೂಲಗಳಿಂದ ಬಂದ ಆದಾಯ

***ಆದಾಯ ತೆರಿಗೆ ವಿನಾಯತಿಗಳು:*** ಕೆಳಕಂಡ ಆದಾಯಗಳಿಗೆ ಆದಾಯ ತೆರಿಗೆ ವಿನಾಯತಿಗಳು ದೊರಕುತ್ತವೆ.

1. ಕೃಷಿಯಿಂದ ಬಂದ ಆದಾಯ, 2. ವ್ಯಕ್ತಿಯು ಹಿಂದೂ ಅವಿಭಕ್ತ ಕುಟುಂಬದಿಂದ ಪಡೆದ ಹಣ, 3. ಪಾಲುದಾರಿಕೆ ಸಂಸ್ಥೆಯಿಂದ ಪಡೆದ ಲಾಭಾಂಶ, 4. ರಜಾ ಪ್ರಯಾಣದಲ್ಲಿ ಪಡೆದ ಭತ್ಯೆ, 5. ಗ್ರಾಚ್ಯೂಟಿ, 6. ಕಮ್ಯೂಟೆಡ್ ಪೆನ್ಷನ್, 7. ನಿವೃತ್ತಿಯ ಸಮಯದಲ್ಲಿ ಸಂಬಳದಾರನು ಪಡೆಯುವ ಹತ್ತು ತಿಂಗಳವರೆಗಿನ ರಜಾ ಸಂಬಳ, 8. ಔದ್ಯೋಗಿಕ ತಂಟೆ ಅಧಿನಿಯಮ 1947ರ ಅಡಿಯಲ್ಲಿ ಪಡೆದ ಯಾವುದೇ ಪರಿಹಾರ, 9. ಭೋಪಾಲ್ ಅನಿಲ ದುರಂತದಲ್ಲಿ ಪಡೆದ ಪರಿಹಾರ, 10. ಸ್ವಯಂ ನಿವೃತ್ತಿ ಯೋಜನೆಯಡಿ ಪಡೆದ ಐದು ಲಕ್ಷದವರೆಗಿನ ಪರಿಹಾರ, 11. ಬಾಡಿಗೆ ಭತ್ಯೆ, 12. ವಿಶೇಷ ಭತ್ಯೆಗಳು, 13. ಆದಾಯ ತೆರಿಗೆ ವಿನಾಯಿತಿ ಪಡೆದ ಬಾಂಡ್‌ಗಳಿಂದ ಪಡೆದ ಬಡ್ಡಿ, 14. ವಿದ್ಯಾರ್ಥಿ ವೇತನ, 15. ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಸದಸ್ಯರು ಪಡೆಯುವ ದಿನಭತ್ಯೆ, 16. ಪರಮವೀರ ಚಕ್ರ , ಮಹಾವೀರ ಚಕ್ರ , ವೀರ ಚಕ್ರ , ಪಡೆದ ವ್ಯಕ್ತಿಗಳು ಪಡೆಯುವ ಮಾಸಾಶನ, 17. ಸ್ಥಳೀಯ ಸಂಸ್ಥೆಗಳ ಆದಾಯ, 18. ಅನುಮತಿ ಪಡೆದ ವೈಜ್ಞಾನಿಕ ಸಂಶೋಧನಾಲಯಗಳ ಆದಾಯ, 19.ಸುದ್ದಿ ಸಂಸ್ಥೆಗಳ ಆದಾಯ, 20. ಖಾದಿ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಗಳ ಆದಾಯ, 21. ವಿಶ್ವವಿದ್ಯಾನಿಲಯಗಳ ಒಂದು ಕೋಟಿಯವರೆಗಿನ ಆದಾಯ, 22. ಕಂಪನಿಗಳಿಂದ ಅಥವಾ ಮ್ಯೂಚ್ಯು ಅಲ್ ಫಂಡ್‌ಗಳಿಂದ ಪಡೆದ ಲಾಭಾಂಶ, 23. ಟ್ರೇಡ್ ಯೂನಿಯನ್‌ಗಳ ಆದಾಯ, 24. ವ್ಯಕ್ತಿಯ ಆದಾಯದೊಂದಿಗೆ ಕಿರಿಯರ (ಮೈನರ್) ಆದಾಯವನ್ನು ಸೇರಿಸಿದಲ್ಲಿ ಒಂದೂವರೆ ಸಾವಿರದವರೆಗಿನ ಆದಾಯ, 25. ಒಂದು ವರ್ಷದ ನಂತರ ಅಧಿಕೃತ ಸ್ಟಾಕ್‌ಎಕ್ಸ್‌ಚೇಂಜ್ ಮೂಲಕ ಮಾರಾಟ ಮಾಡಿದ ಷೇರಿನ ಮೇಲೆ ಬಂದ ಲಾಭಾಂಶ.

ಆದಾಯ ತೆರಿಗೆಯನ್ನು ಲೆಕ್ಕ ಹಾಕುವಾಗ ಆ ವ್ಯಕ್ತಿಯ ಎಲ್ಲಾ ಆದಾಯಗಳನ್ನು ಸೇರಿಸಿ ನಂತರ ರಿಯಾಯತಿಗಳು ಕಳೆದು ಲೆಕ್ಕ ಹಾಕಬೇಕು.

***ಆದಾಯ ತೆರಿಗೆ ರಿಯಾಯತಿಗಳು.*** ಅಧ್ಯಾಯ 6ಎ ಅಡಿಯಲ್ಲಿ ಸೆಕ್ಷನ್ 80ಸಿಯಿಂದ 80ಯು ವರೆಗೆ ದೊರೆಯುವ ರಿಯಾಯಿತಿಗಳು.

**1. ಸೆಕ್ಷನ್ 80ಸಿ:** ಈ ಹಿಂದೆ ಸೆಕ್ಷನ್ 80 ಸಿ ಯ ಅಂತರ್ಗತ ದೊರೆಯುತ್ತಿದ್ದ ರಿಯಾಯಿತಿಗಳನ್ನು 1990ರಿಂದ ಸೆಕ್ಷನ್ 88ರ ಅಡಿ ದೊರೆಯುತ್ತಿತ್ತು. ಪುನಃ 2006–07ರಿಂದ ಈ ರಿಯಾಯಿತಿಯನ್ನು ಸೆಕ್ಷನ್ 80ಸಿಗೆ ವರ್ಗಾಯಿಸಲಾಗಿದೆ.

ಇದರಡಿ ವ್ಯಕ್ತಿಯು ಈ ಕೆಳಕಂಡ ಯೋಜನೆಯಲ್ಲಿ ಹಣ ಹೂಡಿದರೆ ರಿಯಾಯಿತಿ ನೀಡಲಾಗುವುದು. ಜೀವ ವಿಮಾಪಾಲಸಿಯ ಪ್ರೀಮಿಯಂ, ಪ್ರಾವಿಡೆಂಟ್ ಫಂಡ್, ಪಬ್ಲಿಕ್ ಪ್ರಾವಿಡೆಂಟ್ ಫಂಡ್, ಯುಲಿಪ್‌ಗಳಲ್ಲಿ ನಿಯೋಜಿಸುವ ಹಣ, ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೊಟ್ಟ ಶಾಲೆಗೆ ಕಟ್ಟಿದ ಶುಲ್ಕ, ವಾಸಿಸುವ ಮನೆ ಕಟ್ಟಿದಲ್ಲಿ ಅಥವಾ ಗೃಹಸಾಲವನ್ನು ಹಿಂತಿರುಗಿಸಿದಲ್ಲಿ, ರಿಯಾಯತಿ ಸಿಗುತ್ತದೆ.

2. **ಸೆ: 80**ಸಿಸಿಸಿ: ಪೆನ್ಷನ್ ಫಂಡ್‌ಗಳಲ್ಲಿ ವಿನಿಯೋಜಿಸಿದ ಹಣ.

3. **ಸೆ: 80**ಸಿಸಿಡಿ: ಕೇಂದ್ರ ಸರ್ಕಾರದ ಪೆನ್ಷನ್ ಯೋಜನೆಗಳಲ್ಲಿ ವಿನಿಯೋಗಿಸಿದ ಹಣ. ಸೆ: 80ಸಿ, 80ಸಿಸಿಸಿ ಮತ್ತು 80ಸಿಸಿಡಿ ಯಲ್ಲಿ ದೊರಕುವ ಒಟ್ಟು ರಿಯಾಯಿತಿ ಒಂದು ಲಕ್ಷ ರೂಪಾಯಿಗಳು.

4. **ಸೆ: 80ಡಿ:** ಮೆಡಿಕ್ಲೈಮ್ ಪಾಲಿಸಿಯ ಪ್ರೀಮಿಯಂಗೆ ಗರಿಷ್ಠ 10 ಸಾವಿರ ರೂ

**5. ಸೆ: 80 ಡಿಡಿ:** ವ್ಯಕ್ತಿಯ ಹಾಗೂ ಆತನ ದೈಹಿಕವಾಗಿ ಊನಗೊಂಡು ಅವಲಂಬಿತರಾಗಿರುವರ ಕೆಲವು ನಿರ್ದಿಷ್ಟಪಡಿಸಿದ ಖಾಯಿಲೆಗಳಿಗೆ ಖರ್ಚು ಮಾಡಿದಲ್ಲಿ ಗರಿಷ್ಟ 50,000ರೂಗಳವರೆಗೆ

**6. ಸೆ: 80 ಡಿಡಿಬಿ:** ವ್ಯಕ್ತಿಯ ಹಾಗೂ ಆತನ ಅವಲಂಬಿತರ ಕೆಲವು ನಿರ್ದಿಷ್ಟ ಪಡಿಸಿದ ಖಾಯಿಲೆಗಳಿಗೆ ಖರ್ಚು ಮಾಡಿದ್ದಲ್ಲಿ ಗರಿಷ್ಟ 40,000ರೂಗಳವರೆಗೆ

**7. ಸೆ: 80 ಇ:** ವ್ಯಕ್ತಿಯು ತನ್ನ ಉನ್ನತ ಶಿಕ್ಷಣಕ್ಕಾಗಿ ಪಡೆದ ಸಾಲದ ಮೇಲಿನ ಬಡ್ಡಿಯ ಮರುಪಾವತಿ ಮಾಡಿದ ಹಣ

**8. ಸೆ: 80 ಜಿ** ಕೆಲವು ನಿರ್ಧಿಷ್ಟ ಪಡಿಸಿದ ಸಂಸ್ಥೆಗಳಿಗೆ ನೀಡಿದ ದೇಣಿಗೆಗಳಿಗೆ ನಿಯಮಗಳಿಗೊಳಪಟ್ಟು ಶೇ.ದಿಂದ ಶೇ. 100ವರೆಗಿನ ದೇಣಿಗೆಗಳಿಗೆ ವಿನಾಯತಿ ದೊರೆಯುತ್ತದೆ.

**9. ಸೆ: 80 ಜಿಜಿ:** ಮನೆ ಬಾಡಿಗೆ ನೀಡುವ ವ್ಯಾಪಾರಿಗೂ ಹಾಗು ಬಾಡಿಗೆ ಭತ್ಯೆ ಪಡೆಯದ ಉದ್ಯೋಗಿಗಳಿಗೂ ಗರಿಷ್ಠ ತಿಂಗಳಿಗೆ 2,000 ರೂ.ಮಿತಿಯೊಂದಿಗೆ ವಿನಾಯತಿ ದೊರೆಯುತ್ತದೆ.

**ಷೇರು ಬಂಡವಾಳದ ಮೇಲಿನ ವ್ಯವಹಾರಗಳ ಮೇಲಿನ ತೆರಿಗೆ (ಸೆಕ್ಯೂರಿಟಿ ಟ್ರ್ಯಾನ್ಸಾಕ್ಷನ್ ಟ್ಯಾಕ್ಸ್):** ಅಧಿಕೃತ ಸ್ಟಾಕ್‌ಎಕ್ಸ್‌ಚೇಂಜ್‌ಗಳಲ್ಲಿ ನಡೆಸುವ ವ್ಯವಹಾರಗಳಿಗೆ ಈ ತೆರಿಗೆಯನ್ನು ನೀಡಬೇಕು.

ಈ ತೆರಿಗೆಯು ಷೇರನ್ನು ನಿಜವಾಗಿಯೂ ಪಡೆಯದೆ ಆ ದಿನದಲ್ಲೇ ನಡೆಸಿದ ವ್ಯವಹಾರಗಳಿಗೆ ಶೇ: 0.1, ಷೇರನ್ನು ನಿಜವಾಗಿಯೂ ಪಡೆಯದೇ ಆ ದಿನದಲ್ಲೇ ವಾಯಿದೆ ಮೂಲಕ ನಡೆಸಿದ ವ್ಯವಹಾರಗಳಿಗೆ (ಫ್ಯೂಚರ್ ಮತ್ತು ಆಪ್ಷನ್) ಶೇ. 0.0133, ಷೇರನ್ನು ನಿಜವಾಗಿಯೂ ಪಡೆದುಕೊಂಡಲ್ಲಿ ಇದು ಶೇ0.2ರಷ್ಟು ಹಣವನ್ನು ನೀಡಬೇಕಾಗಿದೆ.

ಇದು 2006ನೆಯ ಜೂನ್ 1ರಿಂದ ಇದರ ದರಗಳು ಶೇ:25ರಷ್ಟು ಹೆಚ್ಚಾಗಲಿವೆ ಅಂದರೆ ಶೇ. 0.125 ಶೇ. 0.017 ಶೇ. 0.25

ಈ ತೆರಿಗೆಯನ್ನು ವ್ಯಾಪಾರ ಮತ್ತು ವ್ಯವಹಾರದಡಿಯಲ್ಲಿ ಲಾಭ ತೋರಿಸಿದಾಗ ಆದಾಯತೆರಿಗೆಯ ಸೆ:88ಇ ಅನ್ವಯ ಆದಾಯತೆರಿಗೆ ರಿಯಾಯತಿ ಪಡೆಯಬಹುದು.

**ಸೇವಾ ತೆರಿಗೆ (ಸರ್ವಿಸ್ ಟ್ಯಾಕ್ಸ್):** ಸೇವಾ ತೆರಿಗೆಯು ಒಂದು ಪರೋಕ್ಷ ತೆರಿಗೆಯಾಗಿದ್ದು, ಇದನ್ನು ರಾಜ ಚಲ್ಲಯ್ಯ ಕಮಿಟಿಯ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರವು 1994ರಲ್ಲಿ ಜಾರಿಗೆ ತಂದಿತು. ರಾಷ್ಟ್ರದ ಒಟ್ಟು ಸಮಗ್ರ ಅಂತರ್ದೇಶೀಯ ಉತ್ಪನ್ನ (ಜಿಡಿಪಿ)ದಲ್ಲಿ ಸೇವಾವಲಯದ ಆದಾಯದ ಭಾಗ ಶೇ. 51ರಷ್ಟಿದೆ. ಪ್ರಾರಂಭದಲ್ಲಿ ಕೇವಲ 3 ಸೇವೆಗಳ ಮೇಲೆ ಮಾತ್ರ ಇದ್ದ ತೆರಿಗೆಯು ನಂತರದ ವರ್ಷಗಳಲ್ಲಿ ಇದರ ವ್ಯಾಪ್ತಿಯು ಹೆಚ್ಚುತ್ತಾ ಹೋಗಿದೆ.

2003ರಲ್ಲಿ ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ಸೇವಾತೆರಿಗೆಯನ್ನು 7ನೆಯ ಅನುಸೂಚಿಯಲ್ಲಿ ಕೇಂದ್ರದ ಪಟ್ಟಿಗೆ ಸೇರಿಸಿತು. ಆದರೂ ಸಹ ಸೇವಾತೆರಿಗೆಯನ್ನು 1994ರ ವಿತ್ತೀಯ ಕಾಯಿದೆಯ ಅನ್ವಯ ಹಾಗೂ ನಂತರದ ವರ್ಷಗಳ ವಿತ್ತೀಯ ಕಾಯಿದೆಯ ತಿದ್ದುಪಡಿಗಳೊಂದಿಗೆ ವಿಧಿಸಲಾಗುತ್ತಿದೆ. ಸದ್ಯಕ್ಕೆ ಸೇವಾ ತೆರಿಗೆಯ ನಿರ್ವಹಣೆಯನ್ನು ಕೇಂದ್ರೀಯ ಅಬಕಾರಿ ಇಲಾಖೆಯು ನೋಡಿಕೊಳ್ಳುತ್ತಿದೆ.

**ಸೇವಾ ತೆರಿಗೆದಾರರ ನೋಂದಣಿ:** ಸೇವಾತೆರಿಗೆಯ ವ್ಯಾಪ್ತಿಗೆ ಒಳಪಡುವ ಪ್ರತಿಯೊಬ್ಬ ವ್ಯಕ್ತಿಯು ಅರ್ಜಿ ಸಂಖ್ಯೆ: ST 1 ರಲ್ಲಿ ಸಲ್ಲಿಸಬೇಕು. 30 ದಿನಗಳೊಳಗಾಗಿ ತನ್ನ ವ್ಯಾಪ್ತಿಗೆ ಬರುವ ಕೇಂದ್ರೀಯ ಅಬಕಾರಿ ಇಲಾಖೆಯಲ್ಲಿ ಸಲ್ಲಿಸಬೇಕು. ಹಾಗೂ ಇದಕ್ಕೂ ಮುಂಚೆ ಪ್ರತಿಯೊಬ್ಬ ವ್ಯಕ್ತಿಯು ಆದಾಯತೆರಿಗೆ ಇಲಾಖೆ ನೀಡುವ ಪ್ಯಾನ್ ಸಂಖ್ಯೆ ಇಲ್ಲದಿದ್ದರೆ ಪಡೆಯುವುದು ಆವಶ್ಯಕವಾಗಿದೆ. ಅನಂತರ ಕೇಂದ್ರ ಅಬಕಾರಿ ಇಲಾಖೆಯ ಸೇವಾ ತೆರಿಗೆ ವಿಭಾಗವು 7 ದಿನಗಳೊಳಗಾಗಿ ನೊಂದಣಿ ಸಂಖ್ಯೆ ನೀಡುತ್ತದೆ. 30ದಿನಗಳೊಳಗಾಗಿ ನೊಂದಣಿ ಮಾಡಿರದಿದ್ದರೆ 500ರೂಪಾಯಿಯ ದಂಡವನ್ನು ತೆರಬೇಕಾಗುತ್ತದೆ.

ಇಲಾಖೆಯು ನೀಡಿದ ಈ ನೋಂದಣಿ ಸಂಖ್ಯೆಯನ್ನು ಬೆಲೆಪಟ್ಟಿಯಲ್ಲಿ (ಇನ್ವಾಯ್ಸ್) ನಮೂದಿಸುವುದು ಕಡ್ಡಾಯವಾಗಿದೆ.

**ತೆರಿಗೆ ದರ:** ಪ್ರಾರಂಭದಲ್ಲಿ ಸೇವಾತೆರಿಗೆ ಶೇಕಡ 5 ರಷ್ಟಿದ್ದು ಅನಂತರ 14.5.2002ರಿಂದ 09.09.2004ರ ವರೆಗೂ ಶೇ. 8ಕ್ಕೂ ತದನಂತರ 10.9.2004ರಿಂದ ಶೇ. 10ಕ್ಕೂ ಏರಿಸಲಾಯಿತು. ಜೊತೆಗೆ ಶಿಕ್ಷಣ ತೆರಿಗೆಯಾಗಿ ಶೇ. 2ರ ಅಧಿಭಾರವನ್ನು ಸೇವಾತೆರಿಗೆಯ ಮೇಲೆ 10.9.2004ರಿಂದ ಹೊರಿಸಲಾಯಿತು. 18.4.2006ರಿಂದ ಶೇ 12 ಕ್ಕೆ ಏರಿಸಲಾಗಿದೆ ಜೊತೆಗೆ ಶೇಕಡ 2ರ ಅಧಿಭಾರವನ್ನು ಸೇವಾತೆರಿಗೆಯ ಮೇಲೆ ವಿಧಿಸಲಾಗಿದೆ

**ಸೇವಾತೆರಿಗೆಯಿಂದ ವಿನಾಯಿತಿಗಳು:** ಕರದಾತನು ಸೇವಾತೆರಿಗೆಯ ವ್ಯಾಪ್ತಿಗೆ ಒಳಪಡುವ ಯಾವುದೇ ಸೇವೆಯನ್ನು ಈ ಕೆಳಕಂಡ ವ್ಯಕ್ತಿಗಳಿಗೆ ನೀಡಿದಲ್ಲಿ ಆ ಸೇವೆಗಳಿಗೆ ಸೇವಾತೆರಿಗೆಗಳಿಂದ ವಿನಾಯತಿ ಇದೆ.

1. ವಿಶ್ವಸಂಸ್ಥೆ ಅಥವಾ ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದರೆ
2. ವಿಶೇಷ ಆರ್ಥಿಕ ವಲಯದ ವ್ಯಾಪ್ತಿಗೆ ಬರುವ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದರೆ
3. ಸೇವೆಯೊಂದಿಗೆ ವಸ್ತುಗಳನ್ನು ಮಾರಿದ್ದರೆ ಅವುಗಳಿಗೆ ಸೇವಾತೆರಿಗೆಯಿಂದ ವಿನಾಯಿತಿ ಇದೆ.
4. ಸೇವೆಗಳನ್ನು ವಿದೇಶಕ್ಕೆ ರಫ್ತು ಮಾಡಿದ್ದರೆ
5. ಸೇವೆಗೆ ಪ್ರತಿಫಲವಾಗಿ ಪುನಃಪ್ರೇಷಣ ಸಾಧ್ಯವಿಲ್ಲದ ವಿದೇಶಿ ಹಣದ ರೂಪದಲ್ಲಿ ಪಡೆದರೆ ಅದಕ್ಕೆ ವಿನಾಯತಿ ಇದೆ.

**ತೆರಿಗೆ ಕಟ್ಟಲು ಸಮಯ:** ಏಪ್ರಿಲ್ 5, ಜುಲೈ 5, ಅಕ್ಟೋಬರ್ 5, ಮತ್ತು ಮಾರ್ಚ್ 31ರೊಳಗೆ ಕಟ್ಟಬೇಕು

**ಅರ್ಧವಾರ್ಷಿಕ ವರದಿ:** ಅಕ್ಟೋಬರ್ 25 ಹಾಗೂ ಏಪ್ರಿಲ್ 25ರೊಳಗೆ ಸಲ್ಲಿಸಬೇಕು.

(ಜಿ.ಎಸ್.ಎಸ್.)

**ಆದಾಯ, ಸಾರ್ವಜನಿಕ :** ವರಮಾನ, ಸಲ್ಲಿಕೆ, ಲಾಭ ಮುಂತಾದ ಮೂಲಗಳಿಂದ ಸರ್ಕಾರ ಪಡೆಯುವ ಹಣ (ಪಬ್ಲಿಕ್ ರೆವಿನ್ಯೂ). ರಾಜಸ್ವ ಎಂದೂ ಹೇಳಬಹುದು. ಇಂಥ ಆದಾಯ ಎಲ್ಲ ದೇಶಗಳಲ್ಲೂ ವಸೂಲಾಗುತ್ತಿದೆ, ಇದೇ ಸಾರ್ವಜನಿಕ ಆದಾಯ. ಇಂಥ ಆದಾಯದ ಉತ್ಪತ್ತಿಮೂಲ ಎಲ್ಲ ರಾಷ್ಟ್ರಗಳಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಕೆಲವು ರಾಷ್ಟ್ರಗಳಲ್ಲಿ ಸಾರ್ವಜನಿಕ ಅಥವಾ ಭೂ ಸ್ವತ್ತಿನಿಂದ ಹೆಚ್ಚು ಆದಾಯ ಬರುವುದು. ಉದಾಹರಣೆಗೆ, ರಷ್ಯದೇಶದಲ್ಲಿ ಅರಣ್ಯದಿಂದ ಆದಾಯದ ಹೆಚ್ಚು ಭಾಗ ಕೂಡಿಸಲಾಗುತ್ತಿದೆ. ಇನ್ನೂ ಕೆಲವು ರಾಜ್ಯಗಳ ಆದಾಯ ರೈಲು, ಅಂಚೆ, ತಂತಿ ಇಲಾಖೆಗಳಿಂದ ಬರುತ್ತದೆ. ಹೆಚ್ಚು ಆರ್ಥಿಕ ಪ್ರಗತಿ ಪಡೆದಿರುವ ದೇಶಗಳಲ್ಲಿ, ಆದಾಯವನ್ನು ಬಹುತೇಕ ತೆರಿಗೆಯ ಮೂಲದಿಂದ ಪಡೆಯಲಾಗುತ್ತಿದೆ.

ಸರ್ಕಾರದ ಆದಾಯದಲ್ಲಿ ತೆರಿಗೆ, ಶುಲ್ಕ, ವ್ಯಾವಸಾಯಿಕ ಆದಾಯ ಎಂದು ಮೂರು ಬಗೆ ಇವೆ. ಇವಲ್ಲದೆ, ನೈಸರ್ಗಿಕ ಸಂಪತ್ತಿನಿಂದ, ಸಾಮಂತರ ಕಾಣಿಕೆಯಿಂದ, ಯುದ್ಧದಲ್ಲಿ ಸೋತವರು ಕೊಡುವ ದಂಡ ಮತ್ತು ಪರಿಹಾರಧನದಿಂದ, ಯುದ್ಧಕ್ಕಾಗಿ ಎತ್ತುವ ಚಂದಾಹಣದಿಂದ, ಸರ್ಕಾರ ನಿತ್ಯವ್ಯವಹಾರದಲ್ಲಿ ವಿಧಿಸುವ ದಂಡದಿಂದ ಸರ್ಕಾರದ ಬೊಕ್ಕಸ ತುಂಬುತ್ತದೆ. ಇವೆಲ್ಲ ಸಾರ್ವಜನಿಕ ಆದಾಯ. ಹೀಗೆ ವಸೂಲಾಗುವ ಆದಾಯದಲ್ಲಿ ಸ್ಥಳೀಯ ಸಂಸ್ಥೆಗಳ ಆದಾಯವೂ ಸೇರುವುದು. ಸ್ಥಳೀಯ ಸಂಸ್ಥೆಗಳು ತೆರಿಗೆ ವಿಧಿಸುವುದರಲ್ಲಿ ಪೂರ್ಣ ಸ್ವಾತಂತ್ರ್ಯ ಹೊಂದಿಲ್ಲ. ಅವುಗಳ ಅಧಿಕಾರ ಒಂದು ಪರಿಮಿತಿಗೊಳಪಟ್ಟಿದೆ. ಅನೇಕ ವೇಳೆ ಸ್ಥಳೀಯ ಸಂಸ್ಥೆಗಳು ಸರ್ಕಾರದ ಬೊಕ್ಕಸದಿಂದ ಸಹಾಯದ್ರವ್ಯ ಪಡೆಯುವುವು.

ಸಾರ್ವಜನಿಕ ಆದಾಯವನ್ನು ಕೂಡಿಸುವುದರಲ್ಲಿ ಬಲಾತ್ಕಾರದ ಅಂಶವಿದೆ. ವಿರೋಧಿಸುವವರನ್ನು ಶಾಸನರೀತ್ಯಾ ಶಿಕ್ಷಿಸುವ ಅವಕಾಶವಿದೆ. ಪ್ರಜಾಸಮುದಾಯದಲ್ಲಿ ಎಲ್ಲ ವರ್ಗಗಳಿಗೂ ನ್ಯಾಯ ದೊರೆಯಬೇಕೆಂಬ ಸೂತ್ರದ ಮೇಲೆ ಆದಾಯ ವಸೂಲಾಗಬೇಕು. ಹೀಗೆ ಆದಾಯವನ್ನು ವಸೂಲು ಮಾಡಿ ನಿರ್ವಹಿಸುವವರು ಸಾರ್ವಜನಿಕ ಹಣದ ಅಪವ್ಯಯದ ಬಗ್ಗೆ ವಿಶೇಷ ಎಚ್ಚರಿಕೆ ವಹಿಸಬೇಕು. ಖಾಸಗಿ ವ್ಯಕ್ತಿಯ ದುರ್ವ್ಯಯದ ಪರಿಣಾಮ ಅವನ ಮತ್ತು ಅವನ ಪರಿವಾರದ ಅಥವಾ ಉದ್ಯಮದ ಮೇಲೆ ಮಾತ್ರ ಕರಿನೆರಳು ಹಾಯುವುದು. ಆದರೆ ಸಾರ್ವಜನಿಕ ಹಣದ ದುರುಪಯೋಗ ಇಡೀ ಜನಾಂಗಕ್ಕೆ ಕೇಡನ್ನು ಉಂಟುಮಾಡುವುದು. ಅಪವ್ಯಯ, ಅಜಾಗರೂಕತೆಗಳನ್ನು ಮನ್ನಿಸಲು ಸಾಕಷ್ಟು ನಿಧಿ ಸಂಗ್ರಹವಾಗದಿರುವ ದೇಶಗಳಲ್ಲಿ ಸರ್ಕಾರ ಎಚ್ಚರಿಕೆಯಿಂದಿರಬೇಕಾದುದು ಅಗತ್ಯ.

ಆದಾಯದ ಬಹುಭಾಗ ತೆರಿಗೆಯ ಮೂಲದಿಂದ ವಸೂಲಾಗುವ ಕಡೆ, ತೆರಿಗೆಯಲ್ಲಿ ಸಮಾನತೆ ಇರಬೇಕು. ಅದನ್ನು ಕೊಡುವ ಸಾಮರ್ಥ್ಯ ಆಯಾ ವರ್ಗದ ವ್ಯಕ್ತಿಗಳಲ್ಲಿ ಇರಬೇಕು. ಸಾಮಾನ್ಯವಾಗಿ ಪ್ರಜೆಗಳು ತಾವು ಗಳಿಸುವ ಹಣದ ಮೊತ್ತಕ್ಕನುಗುಣವಾಗಿ ಒಂದು ಭಾಗವನ್ನು ತೆರಿಗೆಯ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕೆಂದು ಅರ್ಥಶಾಸ್ತ್ರದ ಪಿತಾಮಹ ಆ್ಯಡಂ ಸ್ಮಿತ್ ತಿಳಿಸಿದ್ದಾನೆ. ತೆರಿಗೆಯಲ್ಲಿ ಸಾಕಷ್ಟು ನಿಶ್ಚಿತತೆ ಇರಬೇಕು. ತೆರಿಗೆ ಎಷ್ಟು ಕೊಡಬೇಕು, ಯಾವಾಗ ಕೊಡಬೇಕು, ಯಾವ ರೂಪದಲ್ಲಿ ಕೊಡಬೇಕು, ಯಾವ ವಿಭಾಗಕ್ಕೆ ಕೊಡಬೇಕು – ಎಂಬುದನ್ನು ಪ್ರಜೆಗಳಿಗೆ ಸ್ಪಷ್ಟಪಡಿಸಬೇಕು. ಪಾವತಿ ಮಾಡುವ ವಿಧಾನ ಸುಲಭವಾಗಿರಬೇಕು. ವಸೂಲು ಮಾಡುವ ಸಮಯ ಪ್ರಜೆಗಳಿಗೆ ಅನುಕೂಲವಾಗಿರಬೇಕು. ವಸೂಲು ಮಾಡುವ ವೆಚ್ಚ ಮಿತವಾಗಿರಬೇಕು. ಇಂಥ ಮಿತವ್ಯಯಕ್ಕೆ ಇಂಗ್ಲೆಂಡ್ ಆದರ್ಶವಾಗಿದೆ. ಒಂದು ಸಾವಿರ ಪೌಂಡುವರಮಾನ ತೆರಿಗೆ ವಸೂಲು ಮಾಡುವುದಕ್ಕೆ ಅಲ್ಲಿ ಕೇವಲ ಒಂದೂವರೆ ಪೌಂಡು ವೆಚ್ಚವಾಗುತ್ತದೆ. ತೆರಿಗೆದಾರರು ಪ್ರಯಾಸದಿಂದ ತೆರಿಗೆ ಕೊಡುವವರಾದುದರಿಂದ ಭಾರತದಂಥ ದೇಶಗಳಲ್ಲಿ ವಸೂಲಿ ವೆಚ್ಚದಲ್ಲಿ ಎಷ್ಟು ಕಡಿಮೆಯಾದರೆ ಅಷ್ಟೂ ಒಳ್ಳೆಯದು.

ನ್ಯಾಯಾಲಯಕ್ಕೆ ಪ್ರಜೆಗಳು ನ್ಯಾಯತೀರ್ಮಾನಕ್ಕೆ ಹೋಗುವಾಗ, ಶಾಲೆಗಳಲ್ಲಿ ಶಿಕ್ಷಣ ಪಡೆಯುವಾಗ, ಕಚೇರಿಯಲ್ಲಿ ಪತ್ರ ರಿಜಿಸ್ಟರ್ ಮಾಡಿಸುವಾಗ, ಪ್ರಜೆಗಳು ಕೊಡುವ ಹಣವೇ ಶುಲ್ಕ (ಫೀಸು). ತೆರಿಗೆಗೂ ಶುಲ್ಕಕ್ಕೂ ವ್ಯತ್ಯಾಸವಿದೆ. ಪ್ರತ್ಯಕ್ಷ ಲಾಭವಿರಲಿ,

ಇಲ್ಲದೇ ಹೋಗಲಿ, ವಿಧಿಸಿದ ತೆರಿಗೆ ತೆರಲೇಬೇಕು. ಫೀಸಿನ ವಿಷಯ ಹಾಗಲ್ಲ. ನಮಗೆ ಬೇಕಾದಾಗ ಮಾತ್ರ ಕೊಡಬಹುದು. ರೈಲ್ವೆ, ಅಂಚೆ ಇಲಾಖೆ, ನೀರಾವರಿ, ವಿದ್ಯುಚ್ಛಕ್ತಿ, ಇತರ ಇಲಾಖೆ ಮತ್ತು ಯೋಜನೆಗಳು ಸರ್ಕಾರಕ್ಕೆ ಪಾವತಿ ಮಾಡುವ ಸಂಭಾವನೆಗೆ ವ್ಯಾವಸಾಯಿಕ ಆದಾಯ ಎಂದು ಹೆಸರು. ನಗರಸಭೆ, ಜಿಲ್ಲಾಬೋರ್ಡ್, ರೈತರು – ಮುಂತಾದವರಿಗೆ ಕೊಟ್ಟ ಸಾಲದ ಬಡ್ಡಿ, ಸೈನ್ಯದ ಇಲಾಖೆಯಿಂದ ಬರುವ ಹಣ, ಸರ್ಕಾರಿ ವರದಿ ಮತ್ತು ಸ್ಟೇಷನರಿ ಮಾರಾಟದಿಂದ ಬರುವ ಹಣ – ಇವೆಲ್ಲಾ ಆದಾಯದ ಭಾಗಗಳಾಗಿವೆ.

ಸಾರ್ವಜನಿಕ ಆದಾಯದ ಬಾಬುಗಳನ್ನು ಕೆಳಗೆ ಕಂಡಂತೆ ವಿಭಾಗಿಸಬಹುದು ಪ್ರತ್ಯಕ್ಷ ತೆರಿಗೆ – ವರಮಾನ ತೆರಿಗೆ, ತೀರುವೆಯ ಶುಲ್ಕ, ಪರೋಕ್ಷ ತೆರಿಗೆ – ಆಮದು ರಫ್ತು ಸುಂಕ, ಅಬ್ಕಾರಿ, ಮನೋರಂಜನೆ ತೆರಿಗೆ, ವ್ಯಾಪಾರ ತೆರಿಗೆ, ಸ್ಟಾಂಪು ರಿಜಿಸ್ಟ್ರೇಷನ್, ಪೊಲೀಸು, ನ್ಯಾಯ, ಶಿಕ್ಷಣ, ಆರೋಗ್ಯ ಮತ್ತು ಚಿಕಿತ್ಸೆ ಇತ್ಯಾದಿಗಳ ಮೇಲಿನ ಶುಲ್ಕ; ವ್ಯಾವಸಾಯಿಕ ಆದಾಯ – ಟಂಕಸಾಲೆ, ರೈಲ್ವೆ, ಕಾಡು, ನೀರಾವರಿ, ವಿದ್ಯುಚ್ಛಕ್ತಿ, ರಾಷ್ಟ್ರೀಕರಣ ಉದ್ಯಮಗಳು.

ಮನೆಯ ತೆರಿಗೆ ಪ್ರತ್ಯಕ್ಷ ತೆರಿಗೆಯಾದರೆ ಮೇಲಿನದು ಪರೋಕ್ಷ. ಸಾಮಾನ್ಯವಾಗಿ ಸಕ್ಕರೆ, ಪೆಟ್ರೋಲು, ಸೀಮೆ ಎಣ್ಣೆ, ಬಟ್ಟೆ–ಮುಂತಾದ ಅನುಭೋಗ ಸಾಮಗ್ರಿಗಳ ಮೇಲೂ ಮನೋರಂಜನೆ ಇತ್ಯಾದಿ ವ್ಯವಹಾರಗಳ ಮೇಲೂ ವಿಧಿಸಲಾಗುವ ತೆರಿಗೆಗೆ ಪರೋಕ್ಷ ತೆರಿಗೆ ಎಂದು ಹೇಳುವುದು ವಾಡಿಕೆ. ಜನಸಂಖ್ಯೆಯ ಒತ್ತಡ ಮತ್ತು ಬಡತನ ಅಧಿಕವಾಗಿರುವ ದೇಶಗಳಲ್ಲಿ ಪರೋಕ್ಷ ತೆರಿಗೆ ಒಳ್ಳೆಯದು. ಆರ್ಥಿಕ ಪ್ರಗತಿ ಸಾಧಿಸಿರುವ ದೇಶಗಳಲ್ಲಿ ಪ್ರತ್ಯಕ್ಷ ತೆರಿಗೆಗಳು ಹೆಚ್ಚು ಪ್ರಕಾಶಮಾನಕ್ಕೆ ಬರುವುವು.

ವರಮಾನ ತೆರಿಗೆಯ ಆಡಳಿತದಲ್ಲಿ ಹೆಚ್ಚಿನ ಎಚ್ಚರಿಕೆ ಅಗತ್ಯ. ತೆರಿಗೆ ಕಳ್ಳರು, ವಂಚಕರು ಅಲ್ಲಿ ಹೆಚ್ಚು. ಕೃಷಿಯಿಂದ ಬರುವ ವರಮಾನವನ್ನು ತೆರಿಗೆಯ ವ್ಯಾಪ್ತಿಯಿಂದ ಹೊರಗಿಡುವುದು ಒಂದು ದೊಡ್ಡ ದೋಷ. ರಾಷ್ಟ್ರದ ಆರ್ಥಿಕಾಭಿವೃದ್ಧಿ ಯೋಜನೆಗಳಿಗೆ ಅಗತ್ಯವಾದ ಬಂಡವಾಳವನ್ನು ಸರ್ಕಾರ ಪ್ರತ್ಯಕ್ಷ ತೆರಿಗೆಗಳಿಂದ ಕೂಡಿಸಬೇಕೇ ವಿನಾ ಪರೋಕ್ಷ ತೆರಿಗೆಗಳ ಜಾಲವನ್ನು ಹರಡಬಾರದು ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. (ಡಿ.ಕೆ.)

**ಆದಿಕಾಂಡ :** ಬೈಬಲಿನ ಮೊದಲನೆಯ ಪುಸ್ತಕ (ಜೆನೆಸಿಸ್). ಮೂಲ ಗ್ರೀಕ್ ಹಸ್ತಪ್ರತಿಗಳಲ್ಲಿ ಇದನ್ನು ಆದಿ ಸಂಗತಿಗಳ ಗ್ರಂಥ (ಬುಕ್ ಆಫ್ ಆರಿಜಿನ್ಸ್) ಎಂಬುದಾಗಿ ಕರೆದಿದ್ದಾರೆ. ಎರಡು ಮುಖ್ಯ ಭಾಗಗಳಿವೆ: 1. ಅನಾದಿಯ ವಿಚಾರಗಳು : ಸೃಷ್ಟಿಯ ಕಥೆ, ಪಾಪದ ಮೂಲ, ನಾಗರಿಕತೆಯ ಆರಂಭ, ಜಲಪ್ರಳಯ, ಜನರು ಲೋಕದಲ್ಲಿ ಚದರಿ ಹೋದದ್ದು–ಈ ವಿಷಯಗಳು ಆರಂಭದ ಹನ್ನೊಂದು ಅಧ್ಯಾಯಗಳಲ್ಲಿವೆ. 2. ಮೂಲ ಪಿತೃಗಳ ಚರಿತ್ರೆ: ಇದರಲ್ಲಿ ಏಬ್ರಹಾಮ್, ಐಜಾಕ್ ಮತ್ತು ಯಾಕೋಬ್ ಎಂಬ ಮೂವರು ಮೂಲ ಪಿತೃಗಳ ಸಂಗತಿಗಳು ವಿವರಿಸಲ್ಪಟ್ಟಿವೆ. ಪುಸ್ತಕದ ಅಂತ್ಯಭಾಗದಲ್ಲಿ ಯೋಸೇಫನೆಂಬ ಮೂಲ ಪಿತೃವಿನ ಸಂಗತಿ ಇದೆ. ಮಧ್ಯದಲ್ಲಿ ಅನೇಕ ವಂಶಾವಳಿಗಳು ಬರುತ್ತವೆ. ಕೊನೆಗೆ ದೇವರಿಂದ ಆರಿಸಲ್ಪಟ್ಟ ಇಸ್ರೇಲ್ ಜನಾಂಗಕ್ಕೆ ವಿಶೇಷ ಪ್ರಾಧಾನ್ಯವಿದೆ.

ಆದಿಕಾಂಡವನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ ಪಂಡಿತರು ಇದರಲ್ಲಿ ಮುಖ್ಯವಾಗಿ ಎರಡು ಸಂಪ್ರದಾಯಗಳು ಇವೆ ಎಂದು ಹೇಳುತ್ತಾರೆ. ಒಂದರಲ್ಲಿ ದೇವರನ್ನು ಯಾಹು ಎಂದೂ ಇನ್ನೊಂದರಲ್ಲಿ ಎಲೋಹಿಮ್ ಎಂದೂ ಕರೆದಿದ್ದಾರೆ. ಈ ಎರಡು ಸಂಪ್ರದಾಯಗಳೂ ಒಟ್ಟಾಗಿ ಸಂಪಾದಿತವಾಗಿರುವ ಪುಸ್ತಕ ಆದಿಕಾಂಡವಾಗಿದೆ ಎನ್ನುತ್ತಾರೆ. ಕೆಲವರು ಈ ವಾದವನ್ನು ತಿರಸ್ಕರಿಸಿ ಸಂಪ್ರದಾಯ ಬಾಯಿಂದ ಬಾಯಿಗೆ ಬದಲಾಗುವ ರೀತಿಗೆ ವಿಶೇಷ ಪ್ರಾಧಾನ್ಯ ಕೊಟ್ಟುದರಿಂದ ಈಗಿನ ಸ್ವರೂಪ ಬಂದಿತೆಂದು ಹೇಳುತ್ತಾರೆ. (ಎಂ.ಪಿ.ಎಸ್.)

**ಆದಿಗ್ರಂಥ :** ಸಿಖ್ ಧರ್ಮೀಯರ ಪವಿತ್ರ ಧಾರ್ಮಿಕ ಗ್ರಂಥ. ಐದನೆಯ ಗುರುವಾದ ಅರ್ಜನ್ ಮಲ್ (1581–1606) ಧರ್ಮ ತತ್ತ್ವಗಳನ್ನು ಕ್ರೋಡೀಕರಿಸಿ ಎಲ್ಲವನ್ನೂ ಬರೆಸಿಟ್ಟ. ಇದರಲ್ಲಿ ಮೊದಲ ನಾಲ್ಕು ಗುರುಗಳ (ನಾನಕ್, ಅಂಗದ್, ಅಮರ್‌ದಾಸ್, ರಾಮದಾಸ್) ಉಪದೇಶಗಳನ್ನಲ್ಲದೆ, ಜಯದೇವನ ಕಾಲದಿಂದೀಚಿನ ಹಿಂದೂ ಮತ್ತು ಮುಸ್ಲಿಂ ಸಂತರ ಉಪದೇಶಗಳನ್ನೂ ಸೇರಿಸಿದ. ಆಗಲೇ ಸಿಖ್‌ಧರ್ಮ ಪಂಜಾಬಿನಲ್ಲೆಲ್ಲ ವ್ಯಾಪಕವಾಗಿ ಹರಡಿದ್ದು. ಗುರು ತೇಜ್‌ಬಹದ್ದೂರ್‌ನ ಉಪದೇಶಗಳನ್ನು ಅವನ ತರುವಾಯ ಬಂದ ಗೋವಿಂದಸಿಂಗ್ ಆದಿಗ್ರಂಥಕ್ಕೆ ಸೇರಿಸಿದ. ತನ್ನ ತರುವಾಯ ಈ ಗ್ರಂಥವೇ ಗುರುವಿನ ಸ್ಥಾನವನ್ನು ಆಕ್ರಮಿಸುತ್ತದೆ ಎಂದು ಸಾರಿದ. ಗ್ರಂಥದ ಭಾಷೆ ಪಂಜಾಬಿ. ಪಾರಸಿ, ಅರಬ್ಬೀ, ಮರಾಠೀ ಪದಪ್ರಯೋಗಗಳೂ ಇವೆ. ಗ್ರಂಥದ ಮುಖ್ಯ ವಿಷಯವಿಷ್ಟು: ಐಹಿಕ ಕರ್ತವ್ಯಗಳನ್ನು ಕಡೆಗಣಿಸಕೂಡದು. ಜೀವನದಲ್ಲಿ ಉಚ್ಚ ನೈತಿಕಮಟ್ಟವನ್ನು ಹೊಂದಿರಬೇಕು. ಇದು ಮತ್ತು ಜನಸೇವೆ, ಇವೆರಡರಲ್ಲೇ ಜೀವನದ ಸಾರ್ಥಕತೆ. ಮಮಕಾರವನ್ನು ಸಂಪೂರ್ಣವಾಗಿ ಕಳೆದುಕೊಂಡಾಗಲೇ ಜೀವ ದೇವನೊಂದಿಗೆ ಐಕ್ಯ ಹೊಂದುವುದು. (ಕೆ.ಕೆ.; ಎಸ್.ಎಂ.ಎಚ್.)

**ಆದಿಚನ್ನಲೂರು:** ತಮಿಳುನಾಡು ರಾಜ್ಯದ ತುತುಕುಡಿ ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗದ ನೆಲೆ. ತಾಮ್ರಪರ್ಣಿ ನದಿಯ ಬಲದಂಡೆಯ ಮೇಲಿರುವ ಈ ಗೋರಿನೆಲೆ ಜರ್ಮನಿಯ ಜಾಗೋರ್ ಅವರಿಂದ 1876 ರಲ್ಲಿ ಬೆಳಕಿಗೆ ಬಂದಿತು. ಪುರಾತತ್ತ್ವ ಸರ್ವೇಕ್ಷಣ ಸಂಸ್ಥೆಯ ದಕ್ಷಿಣ ವಲಯದ ಮುಖ್ಯಸ್ಥರಾಗಿದ್ದ ಅಲೆಕ್ಸಾಂಡರ್ ಅವರು 1903–04 ರಲ್ಲಿ ಈ ಪ್ರದೇಶದಲ್ಲಿ ವಿಸ್ತೃತ ಶೋಧನೆ ಹಾಗೂ ಆದಿಚನ್ನಲೂರಿನಲ್ಲಿ ಉತ್ಖನನ ನಡೆಸಿದರು.

ಐದು ಬಾಯಿಗಳ ಮಣ್ಣಿನ ಜಾಡಿ

ಈ ನೆಲೆಯಲ್ಲಿ ಗೋರಿಗಳು ಸು.25 ಹೆಕ್ಟೇರಿನಷ್ಟು ಪ್ರದೇಶದಲ್ಲಿ ಹರಡಿವೆ. ಒಂದು ಎಕರೆ ಜಾಗದಲ್ಲಿ ಸು. 1000 ಗೋರಿಗಳಿವೆ. ಇದು ಜವುಗು ನೆಲವಾಗಿದ್ದು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಭೂಮಿಯ ಮೇಲ್ಪದರದ ಕೆಳಗೆ ಜಲ್ಲಿಕಲ್ಲಿನ ಪದರವಿದೆ. ಇದರ ಕೆಳಗಿರುವ ಸವಕಲಾದ ಬೆಣಚುಕಲ್ಲಿನ ಹಾಸಿನಲ್ಲಿ ಗುಂಡಿಗಳನ್ನು ತೋಡಿ ಅಸ್ಥಿಮಡಕೆಗಳನ್ನು ಹೂಳಲಾಗಿದೆ. ಗುಂಡಿಗಳು ಭೂಮಟ್ಟದಿಂದ 203 ಮೀ ಆಳದಲ್ಲಿದೆ. ಕೆಲವೊಂದು ಗುಂಡಿಗಳಲ್ಲಿ ಒಂದರ ಮೇಲೊಂದು ಅಸ್ಥಿಮಡಕೆಗಳು ಇದ್ದುವು. ಅರ್ಧ ಗೋಲಾಕಾರದ ಮುಚ್ಚಳದಿಂದ ಅಸ್ಥಿಮಡಕೆಗಳನ್ನು ಮುಚ್ಚಲಾಗಿದೆ. ಮಡಕೆಗಳ ಒಳಗೆ ಮಣ್ಣನ್ನು ತುಂಬದೆ ಗುಂಡಿಗಳನ್ನು ಮಾತ್ರ ಮಣ್ಣಿನಿಂದ ತುಂಬಲಾಗಿತ್ತು. ಪೂರ್ಣ ಸಮಾಧಿಗಳು ವಿರಳವೆಂದೇ ಹೇಳಬಹುದು. ಕೆಲವೊಂದು ಆಯ್ದ ಅಸ್ಥಿಗಳನ್ನು ಮಾತ್ರ ಇಟ್ಟಿರುವ ಪ್ರಾತಿನಿಧಿಕ ಅಸ್ಥಿಮಡಕೆಗಳು ಅಧಿಕವಾಗಿವೆ. ಅಸ್ಥಿ ಅವಶೇಷಗಳಿಲ್ಲದ, ಬರಿಯ ಕಾಣಿಕೆಗಳನ್ನೊಳಗೊಂಡ ಕೆಲವು ಮಡಕೆಗಳೂ ಇವೆ. ಕೆಲವು ಮಡಕೆಗಳಲ್ಲಿ ಬೂದಿ ಇದ್ದ ಕುರುಹುಗಳಿದ್ದವು. ಸಮಾಧಿ ಕಾಣಿಕೆಗಳನ್ನು ಅಸ್ಥಿಮಡಕೆಯ ಒಳಗೂ ಹೊರಗೂ ಇಡಲಾಗಿದೆ. ಉತ್ಖನನದಿಂದ ಹೊರತೆಗೆದ ಅಸ್ಥಿಮಡಕೆಗಳ ಸಂಖ್ಯೆ ತಿಳಿದಿಲ್ಲ.

ಅಸ್ಥಿ ಮಡಕೆಗಳು ದೊರಕು ಮಣ್ಣಿನಿಂದ ಮಾಡಿದ ಮಂದ ಕೆಂಪು ಬಣ್ಣದ ಜಾಡಿಗಳು, ಅಂಡ ಗೋಲಾಕಾರದಲ್ಲಿರುವ ಈ ಮಡಕೆಗಳಿಗೆ ಬುಡದಲ್ಲಿ ಗೂಟದಂತಿರುವ ಚಾಚು ಇದೆ. ಬಾಯಿಯ ಅಂಚನ್ನು ದುಂಡಗಿನ ದಪ್ಪ ಬಳೆಯಂತೆ ಮಾಡಲಾಗಿದೆ. ಇವು 70 ಸೆಂಮೀ – 1 ಮೀ ಎತ್ತರವಿದ್ದು, ಬಾಯಿಯ ವ್ಯಾಸ 1 ಮೀ ಇದೆ. ಕೆಲವೊಂದರ ಹೊರಮೈ ಮೇಲೆ ಬೆರಳಿನಿಂದ ಗೀರು ಮಾಡಿದ ತ್ರಿಕೋನ ಚಿನ್ಹೆಗಳ ಸಾಲುಗಳಿವೆ. ಕೆಲವೊಂದು ಮಡಕೆಗಳ ಒಳಭಾಗದಲ್ಲಿ ಕೊಕ್ಕೆಗಳಿವೆ. ಮಡಕೆಯೊಳಗೆ ಯಾವುದಾದರೂ ವಸ್ತುವನ್ನು ನೇತುಹಾಕಲು ಇವನ್ನು ಮಾಡಿದ್ದಿರಬೇಕು.

ಮಡಕೆಗಳೊಳಗೆ ಮತ್ತು ಅಪರೂಪವಾಗಿ ಹೊರಗೆ ಇಡಲಾಗಿದ್ದ ಕಬ್ಬಿಣದ ವಸ್ತುಗಳಲ್ಲಿ ಹಲವಾರು ಬಗೆಯ ಆಯುಧಗಳು, ಸಲಕರಣೆಗಳು ಹಾಗೂ ದೀಪಗಳು, ಚಪ್ಪಟೆಯಾದ ಉಳಿ, ತ್ರಿಶೂಲಾಕಾರದ ಭರ್ಜಿ, ಎರಡೂ ಬದಿ ಧಾರೆಯಿರುವ ಕತ್ತಿ, ಅರ್ಧ ಚಂದ್ರಾಕಾರದ ಕತ್ತಿ, ವಿವಿಧ ಬಗೆಯ ಈಟಿಗಳು, ಮುಳ್ಳಿರುವ ಈಟಿ, ಸಣ್ಣ ಕಠಾರಿ, ಚೂರಿ, ಬಾಣದ ಮೊನೆ, ಭರ್ಜಿಯ ಮೊನೆ, ಚಪ್ಪಟೆ ಕೊಡಲಿ, ಸನಿಕೆ, ಮೊಳೆ, ಹಣತೆ, ಪದಕಗಳು, ಗಂಟೆ, ಬಳೆ, ಸಣ್ಣ ಕೊಳವೆಯಾಕಾರದ ಸಣ್ಣ ಡಬ್ಬಿ ಮುಂತಾದವು ಇದ್ದವು.

ಕಂಚಿನ ವೈವಿಧ್ಯ ವಸ್ತುಗಳಲ್ಲಿ ಸರಳವಾದ ಬಟ್ಟಲು, ಜರಡಿಯಂತಹ ಬಟ್ಟಲು, ಸಮತಲದ ತಟ್ಟೆ, ಹೊರಮೈ ಮೇಲೆ ಅಡ್ಡ–ಉದ್ದ ಗೆರೆಗಳಿಂದ ಅಲಂಕೃತವಾದ ಬಟ್ಟಲು, ಪುಟ್ಟ ಜಾಡಿ, ಸಮಾನಾಂತರ ವೃತ್ತಗಳ ವಿನ್ಯಾಸವಿರುವ ವೃತ್ತಾಕಾರದ ಹಲಗೆ, ಸಿಂಬಿ, ದೊಡ್ಡ ಮಡಕೆಗಳ ಕತ್ತಿನ ಭಾಗ, ಕಿರಿದಾದ ಕುತ್ತಿಗೆಯ ಮಡಕೆ, ನಾಲ್ಕು ದಿಕ್ಕಿಗೆ ಮುಖ ಮಾಡಿ ನಿಂತ, ಸುರುಳಿಯಾದ ಕೊಂಬುಗಳಿರುವ ಪುಟ್ಟ ಟಗರುಗಳ ಮೂರ್ತಿಗಳನ್ನು ಬೆಸೆದ ತಟ್ಟೆ, ವಿವಿಧ ನಮೂನೆಯ ಸುಂದರ ಹಿಡಿಕೆಗಳು, ಜಿಂಕೆ, ಹುಂಜ, ಡೊಂಕು ಬಾಲದ ನಾಯಿ, ಉದ್ದ ಸುರುಳಿ ಕೊಂಬಿನ ಎಮ್ಮೆ ಮುಂತಾದವುಗಳ ಚಿಕ್ಕ–ಚಿಕ್ಕ

ಮೂರ್ತಿಗಳು, ಗೆಜ್ಜೆ, ಬಳೆ, ಕಂಠಾಭರಣ ಹೀಗೆ ಅನೇಕ ಕಲಾತ್ಮಕ ವಸ್ತುಗಳಿವೆ. ಸು 20 ಚಿನ್ನದ ಮುಕುಟ ಅಥವಾ ಶಿರೋಮಾಲೆ ಇಲ್ಲಿಯ ಗೋರಿಗಳಿಂದ ಲಭಿಸಿರುವುದು ಗಮನಾರ್ಹ. ಹೆಚ್ಚಿನವು ಅಂಡಾಕಾರದಲ್ಲಿದ್ದು ಮೇಲ್ಮೈಯಲ್ಲಿ ಚುಕ್ಕೆಯ ವಿನ್ಯಾಸಗಳಿವೆ. ತಾಮ್ರದ ಇಂತಹ ವಸ್ತುಗಳು ಸಹ ದೊರೆತಿವೆ.

ಕಾಣಿಕೆಯಾಗಿ ಆಕರ್ಷಿಸುವ ಮಣ್ಣಿನ ಪಾತ್ರೆಗಳಲ್ಲಿ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು ಅಧಿಕ ಸಂಖ್ಯೆಯಲ್ಲಿವೆ. ಉಳಿದವು ಕಪ್ಪು ಬಣ್ಣದ ಮುಚ್ಚಳ ಮತ್ತು ಸಿಂಬಿಗಳು. ಇಲ್ಲಿ ಸಿಕ್ಕ ಪಾತ್ರೆಗಳಲ್ಲಿ ಶೇ.25 ಕ್ಕೆ ಬೇರೆಡೆಗಳಲ್ಲಿಯವುಗಳಿಗೆ ಹೋಲಿಕೆಯಿಲ್ಲ. ಶೇ. 30 ರಷ್ಟು ಮಣ್ಣಿನ ಪಾತ್ರೆಗಳು ಅತಿ ಅಪರೂಪದ ನಮೂನೆಗಳಾಗಿವೆ. 'V' ಆಕಾರದ ಬಟ್ಟಲುಗಳು ಅಪರೂಪದ ಬಗೆಗಳಲ್ಲೊಂದು. ಉಳಿದ ಪಾತ್ರೆಗಳು (ಶೇ. 45) ಸಾಮಾನ್ಯ ಆಕಾರದವು. ಪುಟ್ಟ ಬಟ್ಟಲು, ಗೋಲ ಬಟ್ಟಲು, ಪುಟ್ಟ ಜಾಡಿ, ಅಲಂಕೃತ ಮುಚ್ಚಳಗಳು, ಉದ್ದ ಕತ್ತಿನ ಗೋಲ ಮೈಯ ಮಡಕೆ ಮುಂತಾದವು. ಸುಡಾವೆ ಮಣ್ಣಿನ ಕಿವಿಯ ಓಲೆಗಳು, 'ತಾಳಿ'ಯಂತಹ ವಸ್ತುಗಳು, ಗೋಲ ಮಣಿಗಳು, ಕ್ವಾರ್ಟ್ಜೈಟ್ ಕಲ್ಲಿನ ರುಬ್ಬುಗುಂಡುಗಳು ಇಲ್ಲಿ ದೊರೆತ ಇತರ ವಸ್ತುಗಳಾಗಿವೆ.

ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಚೆನ್ನೈ ವೃತ್ತದ ಪುರಾತತ್ತ್ವ ಸರ್ವೇಕ್ಷಣಾಧಿಕಾರಿ ಟಿ.ಸತ್ಯಮೂರ್ತಿ ನಿರ್ದೇಶನದಲ್ಲಿ ಈ ಗೋರಿಗಳಲ್ಲಿ ಮತ್ತೆ ಉತ್ಖನನ ನಡೆಸಿತು (2004-05). ಆದಿಚನ್ನಲ್ಲೂರು-ಕಲವೋಯ್ ರಸ್ತೆಗೆ ತಾಗಿರುವ ದಿಬ್ಬದ ಪಶ್ಚಿಮ ಇಳಿಜಾರಿನಲ್ಲಿ 60×60 ಮೀ ಪ್ರದೇಶದಲ್ಲಿ ಉತ್ಖನನ ನಡೆಸಿ ಮೂರು ಭಿನ್ನ ಸ್ತರಗಳಲ್ಲಿದ್ದ 165 ಅಸ್ಥಿ ಮಡಕೆಗಳನ್ನು ಹೊರತೆಗೆಯಲಾಯಿತು. ಸ್ತರದ ಆಧಾರದ ಮೇಲೆ ಇವನ್ನು ಮೂರು ಹಂತಗಳಾಗಿ ವಿಂಗಡಿಸಲಾಯಿತು. ಎಲ್ಲಕ್ಕಿಂಥ ಪ್ರಾಚೀನವಾದ 1ನೆಯ ಹಂತದಲ್ಲಿ ಶೇ. 70 ರಷ್ಟು ಅಸ್ಥಿಮಡಕೆಗಳಿದ್ದರೆ, ಮಧ್ಯದ 2ನೆಯ ಹಂತದಲ್ಲಿ ಶೇ. 25 ಹಾಗೂ 3ನೆಯ ಹಂತದಲ್ಲಿ ಶೇ. 5 ರಷ್ಟು ಪ್ರಮಾಣದಲ್ಲಿ ಕಂಡುಬಂದವು.

ಮೊದಲನೆಯ ಹಂತದ ಅಸ್ಥಿಮಡಕೆಗಳು ಎಲ್ಲಕ್ಕಿಂತ ಪುರಾತನವಾದವು. ಇವನ್ನು ಇಳಿಜಾರಾಗಿರುವ ಜಂಬುಕಲ್ಲಿನ ಹಾಸಿನ ಮೇಲೆ ಅಥವ ಈ ಹಾಸಿನೊಳಗೆ ಅಗೆದ ಗುಂಡಿಯಲ್ಲಿ ಇಡಲಾಗಿದೆ. ಎಲ್ಲವೂ ಮಂದಗತಿಯ ತಿಗರಿಯ ಮೇಲೆ ಮಾಡಿದ, ಹೆಚ್ಚು-ಕಡಿಮೆ ಒಂದೇ ಗಾತ್ರದ ಕೆಂಪು ಮಡಕೆಗಳು. ಇವನ್ನು ಒಂದು ಅಥವಾ ವಿಶೇಷವಾಗಿ ಎರಡು ದೊಡ್ಡ ಗಾತ್ರದ ಮುಚ್ಚಳಗಳಿಂದ ಮುಚ್ಚಲಾಗಿದೆ. ಹೆಚ್ಚಿನ ಮಡಕೆಗಳೊಳಗೆ ಪೂರ್ಣ ಅಸ್ಥಿಪಂಜರಗಳಿವೆ. ಶವದ ಕೈಕಾಲುಗಳನ್ನು ಮಡಚಿ ಮಡಕೆಯೊಳಗೆ ಇಡಲಾಗಿದೆ. ಅಸ್ಥಿ ಅವಶೇಷಗಳೊಂದಿಗೆ ಕಬ್ಬಿಣದ ವಸ್ತುಗಳೂ ಇವೆ. ಜೈವಿಕ ವಸ್ತುವಿನಿಂದ ಮಾಡಿದಂತಹ ಮಣಿಗಳೂ ಕೆಲವೊಂದರಲ್ಲಿದ್ದುದು ವಿಶೇಷವಾಗಿದೆ. ಕೆಲವು ಮಡಕೆಗಳ ಒಳಭುಜದ ಮೇಲೆ ಕೊಕ್ಕೆಗಳಿವೆ. ಎರಡನೆಯ ಹಂತದ ವಿಶೇಷವೇನೆಂದರೆ ಇದಕ್ಕೆ ಸೇರುವ ಅಸ್ಥಿಮಡಕೆಗಳು ಕಪ್ಪು-ಕೆಂಪು ದ್ವಿವರ್ಣ ಪ್ರಕಾರದವು. ಈ ಪ್ರಕಾರದ ಮಡಕೆಗಳು ಬೇರೆಡೆಗಳಲ್ಲಿ ಅಸ್ಥಿಪಾತ್ರೆಗಳಾಗಿ ಬಳಕೆಯಾಗಿಲ್ಲ. ಅವರ ಉತ್ಖನನದಲ್ಲೂ ಇಂತಹ ಅಸ್ಥಿಮಡಕೆಗಳು ಸಿಕ್ಕಿರಲಿಲ್ಲ. ಮಂದಗತಿಯ ತಿಗರಿಯ ಮೇಲೆ ಮಾಡಿದ ತೆಳುವಾದ ಮಡಕೆಗಳು ಇವಾಗಿವೆ. ಶೇ. 90 ರಷ್ಟು ಮಡಕೆಗಳು ಪ್ರಾತಿನಿಧಿಕ (ಅಪೂರ್ಣ) ಸಮಾಧಿಗಳು; ಅಸ್ಥಿ ಅವಶೇಷಗಳಲ್ಲಿ ಹಲ್ಲುಗಳು ಹೆಚ್ಚಾಗಿ ಸಂರಕ್ಷಿತವಾಗಿವೆ. ಈ ಹಂತದ ಉಳಿದ ಅಸ್ಥಿ ಮಡಕೆಗಳು ನಯವಾದ ಮಣ್ಣಿನದಾಗಿದ್ದು ಇವುಗಳ ಬಣ್ಣ ಕೆಂಪು. ಈ ಹಂತದಿಂದ ಅತ್ಯಧಿಕ ಕಬ್ಬಿಣದ ಮತ್ತು ತಾಮ್ರದ ವಸ್ತುಗಳು ದೊರಕಿದವು. ಮೂರನೆಯ ಹಂತದಲ್ಲಿ ಕೆಲವೇ ಕೆಲವು ಒಡೆದುಹೋದ ಅಸ್ಥಿಮಡಕೆಗಳಿದ್ದವು. ಇವು ಸಹ ಪ್ರಾತಿನಿಧಿಕ ಸಮಾಧಿಗಳು. ಇವು ನೆರೆಯ ಕಾರಣದಿಂದ ಅಸ್ತವ್ಯಸ್ತವಾಗಿವೆ.

ಒಂದನೆಯ ಮತ್ತು ಎರಡನೆಯ ಹಂತದಲ್ಲಿ ಒಂದೊಂದು ಜೋಡಿ ಸಮಾಧಿಗಳಿದ್ದವು. ಒಂದರಲ್ಲಿ ಸ್ತ್ರೀ ಮತ್ತು ಪುರುಷರ ಅಸ್ಥಿಪಂಜರಗಳಿದ್ದು ಇವು ದಂಪತಿಗಳದ್ದಾಗಿರಬಹುದು, ಕೆಲವೊಂದು ಗುಂಡಿಗಳಲ್ಲಿ ಒಂದಕ್ಕಿಂತ ಹೆಚ್ಚು ಅಸ್ಥಿಮಡಕೆಗಳು ತೋರಿಬಂದವು. ಇಂತಹ ಗುಂಡಿಗಳನ್ನು ಬಹುಕಾಲ ಉಪಯೋಗಿಸಿರುವರೆಂದು ಕಾಣುತ್ತದೆ.

ಅಸ್ಥಿಮಡಕೆಗಳೊಳಗೆ ಸಾದಾಕೆಂಪು, ಹೊಳಗೆಂಪು, ಹೊಳಗಪ್ಪು, ಕಪ್ಪು-ಕೆಂಪು ದ್ವಿವರ್ಣ, ಬಿಳಿ ಚಿತ್ರಿತ ಕಪ್ಪು ಹಾಗೂ ಕಪ್ಪು-ಕೆಂಪು ದ್ವಿವರ್ಣ ಪ್ರಕಾರಗಳ ಮಣ್ಣಿನ ಪಾತ್ರೆಗಳಿವೆ. ಸಣ್ಣ ಮಡಕೆ ಹಾಗೂ ಮುಚ್ಚಳಗಳ ಮೇಲೆ ಬಿಳಿಬಣ್ಣದಲ್ಲಿ ವಿವಿಧ ವಿನ್ಯಾಸಗಳ ಚುಕ್ಕಿ ಚಿತ್ರಿಸಲಾಗಿದೆ. ಈ ವಿಧದ ಅಲಂಕರಣ ಹಳ್ಳೂರು, ಕೊಮಾರನಹಳ್ಳಿ, ಹೆಗ್ಗಡೆಹಳ್ಳಿ (ಕರ್ನಾಟಕ), ಪರುಂಬೈರ್, ಟಿ ಕಲ್ಲುಪಟ್ಟಿ (ತಮಿಳುನಾಡು) ನೆಲೆಗಳ ಪಾತ್ರೆಗಳಲ್ಲಿರುವುದನ್ನು ನೆನಪಿಸಿಕೊಳ್ಳಬಹುದು. ಈ ಪಾತ್ರೆಗಳೊಂದಿಗೆ ಇಟ್ಟಿದ್ದ ಕಬ್ಬಿಣದ ಉಪಕರಣಗಳೆಂದರೆ ಬಾಣ-ಭರ್ಜಿಯ ಮೊನೆ, ಕೊಡಲಿ ಮತ್ತು ಉಳಿಗಳು. ಅವರ ಉತ್ಖನನದಲ್ಲಿ ಸಿಕ್ಕ ಪ್ರಮಾಣದಲ್ಲಿ ತಾಮ್ರದ ಹಾಗೂ ಇತರ ವಿವಿಧ ಪ್ರಶಸ್ತ ವಸ್ತುಗಳು ಇಲ್ಲಿ ಸಿಗಲಿಲ್ಲ. ಒಂದು ಸಮಾಧಿಯಲ್ಲಿ ತಾಮ್ರದ ಉಂಗುರಗಳು ಕಂಡು ಬಂದವು. ಹೊಟ್ಟು, ಕರಕಲಾದ ಬತ್ತ ಮುಂತಾದ ಸಸ್ಯಾವಶೇಷಗಳು, 1 ಮತ್ತು 2ನೆಯ ಹಂತದ ಕೆಲವು ಮಡಕೆಗಳಲ್ಲಿದ್ದವು.

ಅರ್ಧಗೋಲಾಕಾರದ ಮುಚ್ಚಳವೊಂದರ ಹೊರಭಾಗದ ಮೇಲೆ ಕುತೂಹಲಕಾರಿಯಾದ ಒಂದು ಗೀರುಚಿತ್ರವಿದೆ. ಇದು ಯಾವುದೋ ಘಟನೆಯನ್ನು ನಿರೂಪಿಸುವಂತಿದೆ. ಚಿತ್ರದ ಮಧ್ಯದಲ್ಲಿ ಅಗಲ ಮುಖದ, ಸಣ್ಣ ನಡುವಿನ, ತುಂಬಿದೆದೆಯ, ಎರಡೂ ಕೈಗಳನ್ನು ಚಾಚಿರುವ ಸ್ತ್ರೀಯ ಚಿತ್ರವಿದೆ. ಕೈಯಲ್ಲಿ ಅಂಡಾಕಾರದ ಯಾವುದೋ ವಸ್ತುವಿದೆ. ಈ ಚಿತ್ರದ ಎಡ ಭಾಗದಲ್ಲಿ ಜಿಂಕೆಯೂ ಅದರ ಕೆಳಗೆ ಮೊಸಳೆಯೂ ಇವೆ. ಬಲ ಭಾಗದಲ್ಲಿ ಗಿಡದ ಟೊಂಗೆ ಹೋಲುವ ಚಿತ್ರವಿದೆ. ಈ ಗಿಡದ ಮೇಲೆ ಕೊಕ್ಕರೆಯೊಂದು ಕೂತಿದೆ.

ಈ ಜನ ಮಧ್ಯಮ ಕಾಯದವರೂ ದೃಢ ಮೈಕಟ್ಟಿನವರೂ ಆಗಿದ್ದರೆಂಬುದು ಅಸ್ಥಿಪಂಜರಗಳ ವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ಇವರ ಹಲ್ಲುಗಳು ಅಷ್ಟೇನೂ ಸವೆದಿಲ್ಲದಿರುವುದರಿಂದ ಇವರು ಅರೆದು ಬೇಯಿಸಿದ ಸಸ್ಯಾಹಾರವನ್ನು ಸೇವಿಸುತ್ತಿದ್ದಿರಬಹುದು. ಇವರಲ್ಲಿ ಕೆಲವರು ಶೀತ ಸಂಬಂಧಿ ಖಾಯಿಲೆಗಳಿಂದ ಬಳಲುತ್ತಿದ್ದರು.ಈ ಸ್ಥಳ ಪ್ರ.ಶ.ಪೂ. 1750-500 ರವರೆಗೆ ಸ್ಮಶಾನ ಭೂಮಿಯಾಗಿತ್ತು ಎಂಬುದು ಓ.ಎಸ್.ಎಲ್.ಕಾಲನಿರ್ಣಯ ತಂತ್ರದಿಂದ ನಿಗದಿಯಾಗಿದೆ. ಈ ನೆಲೆಯ ಸಮೀಪ ಸಮಕಾಲೀನ ಜನವಸತಿಯ ಕುರುಹುಗಳಿದ್ದುವು. ಇಲ್ಲಿಯ ಉತ್ಖನನದಲ್ಲಿ ಪ್ರಾಯಶಃ ವಸತಿ ಸುತ್ತಲೂ ಇದ್ದ ಪೌಳಿಗೋಡೆಯ ಅವಶೇಷಗಳಿದ್ದುದು ಗಮನಾರ್ಹ. (ಎ.ವಿ.ಎನ್.)

**ಆದಿಚುಂಚನಗಿರಿ :** ಕರ್ನಾಟಕದ ಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಒಂದು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿಗೆ ಸಮೀಪದಲ್ಲಿದೆ. ತ್ರೇತಾಯುಗದಲ್ಲಿ ಸೀತಾನ್ವೇಷಿಗಳಾಗಿ ಬಂದ ರಾಮಲಕ್ಷ್ಮಣರಿಗೆ ಗಜಾರಣ್ಯದ ಕಾವೇರಿ ತೀರದ ಚುಂಚನಕಟ್ಟೆ ಕ್ಷೇತ್ರವನ್ನು ಬಿಟ್ಟುಕೊಟ್ಟು ಪರಮೇಶ್ವರ ಇಲ್ಲಿ ಬಂದು ನೆಲೆಸಿ ಚುಂಚ ಎಂಬ ರಾಕ್ಷಸನನ್ನು ಕೊಂದನಂತೆ. ಚುಂಚನಿಂದ ಇದು ಚುಂಚನಗಿರಿಯೆನಿಸಿದೆ. ಪರಮೇಶ್ವರನಿಂದ ಸ್ಥಾಪಿತವಾದ ಗುರುಪೀಠಗಳಲ್ಲಿ ಆದಿಪೀಠ ಈ ಕ್ಷೇತ್ರದಲ್ಲಿರುವುದರಿಂದ ಇದು ಆದಿಚುಂಚನಗಿರಿಯಾಗಿದೆ.



ಬೆಟ್ಟ ಹಾಗೂ ದೇವಾಲಯ

ನಿಸರ್ಗಸೌಂದರ್ಯಕ್ಕೆ ಹೆಸರಾಗಿರುವ ಚುಂಚನಗಿರಿಯಲ್ಲಿ ಮೊದಲಿಗೆ ದಟ್ಟವಾಗಿ ಬಿದಿರು ಬೆಳೆದಿತ್ತು. ಬೆಳ್ಳೂರಿನ ಪಾಳೆಯಗಾರನ ಮಗುವಿಗೆ ಗಿಣ್ಣಿಲ್ಲದ ಬಿದಿರಿನ ತೊಟ್ಟಿಲು ಬೇಕಾಯಿತು. ಬಿದಿರನ್ನು ಅರಸಿಕೊಂಡು ಮೂವರು ಮೇದರು ಈ ಗಿರಿಗೆ ಬಂದರು. ನಡುಬೆಟ್ಟಕ್ಕೆ ಬಂದು ಗಿಣ್ಣಿಲ್ಲದ ಬಿದಿರೊಂದನ್ನು ಹುಡುಕಿದರು. ಅದನ್ನು ಕಡಿಯಲು ಮಚ್ಚನ್ನು ಬೀಸಿದಾಗ ಚಿಲ್ಲನೆ ರಕ್ತ ಚಿಮ್ಮಿತು; ಹಿಂದಿರುಗಿ ನೋಡದೆ ಹೊರಟುಹೋಗುವಂತೆ ಅಶರೀರವಾಣಿ ಯಾಯಿತು. ಭಯಗೊಂಡ ಮೇದರು ತುಸುದೂರ ಹೋಗಿ, ಕೌತುಕವನ್ನು ತಾಳಲಾರದೆ ಹಿಂದಿರುಗಿ ನೋಡಿದರು, ರಕ್ತಕಾರಿ ಅಲ್ಲಿಯೇ ಸತ್ತುಬಿದ್ದರು. ಅವರು ಸತ್ತುಬಿದ್ದ ಮೇದರ ಗುಡ್ಡ ಬೆಳ್ಳೂರಿನ ಸಮೀಪದ ಅಂಬಲಜೀರಹಳ್ಳಿಯ ಪಕ್ಕದಲ್ಲಿದೆ. ಮೇದರ ತಲೆಗಳೆನ್ನಲಾದ ಮೂರು ಕಲ್ಲಿನ ಮುಂಡಗಳು ಚುಂಚನಗಿರಿಯಲ್ಲಿ ಈಗಲೂ ನೋಡಸಿಗುತ್ತವೆ. ಗಿಣ್ಣಿಲ್ಲದ ಬಿದಿರು, ಮೇದರ ಮಚ್ಚಿನಿಂದ ಕಚ್ಚಾದ ಶಿವಲಿಂಗವನ್ನು ಪ್ರವಾಸಿಗಳು ಈಗಲೂ ಕಾಣಬಹುದು ಎಂದು ಪ್ರತೀತಿ.

ಈ ಐತಿಹ್ಯಗಳ ಜೊತೆಗೆ ಉತ್ತಮ ಸ್ಥಳಪುರಾಣವೂ ಈ ಕ್ಷೇತ್ರಕ್ಕಿದೆ. ಈಶ್ವರ ಕಪಾಲದಿಂದ ಅವತರಿಸಿದ ಸಿದ್ಧಯೋಗಿಯೊಬ್ಬ ತೀರ್ಥಯಾತ್ರೆ ಮಾಡುತ್ತ ಪಾರ್ವತಿ ಪರಮೇಶ್ವರರು ತಪಸ್ಸು ಮಾಡುತ್ತಿದ್ದ ಚುಂಚನಗಿರಿಗೆ ಬಂದ. ಅಲ್ಲಿ ಶಿವ ಆ ಯೋಗಿಗೆ ದರ್ಶನವನ್ನು ನೀಡಿ ತನ್ನ ಅಂಶಯುಕ್ತವಾದ ಪೀಠವೊಂದನ್ನು ಸ್ಥಾಪಿಸಿ ತನ್ನ ಪ್ರತಿನಿಧಿಯಾಗಿ ಆ ಸಿದ್ಧಯೋಗಿಯನ್ನು ಅಲ್ಲಿ ಬಿಟ್ಟ. ತಾನು ಪಂಚಪ್ರಾಣಗಳಿಂದ ಆದಿಗಂಗಾಧರೇಶ್ವರ, ಈಶ್ವರ, ಸೋಮೇಶ್ವರ, ಮಲ್ಲೇಶ್ವರ, ಗವಿಸಿದ್ಧೇಶ್ವರ-ಹೀಗೆ ಪಂಚಲಿಂಗಾಕೃತಿಯಾಗಿ ಸ್ವಯಂ ಉದ್ಭವಿಸಿದ. ಕ್ಷೇತ್ರರಕ್ಷಣೆಗಾಗಿ ಆದಿಶಕ್ತಿರೂಪಳಾದ ಸ್ತಂಭದೇವತೆಯನ್ನೂ ಪರಶಿವನೇ ಸ್ಥಾಪಿಸಿದ ನೆಂದು ಸ್ಥಳಪುರಾಣ ನಿರೂಪಿಸುತ್ತದೆ. ವಿಸ್ತಾರವಾದ ಓಲಗದ ಅರೆಯ ಮೇಲೆ ನಿಂತಿರುವ

ಕಂಬದಮ್ಮ, ಭಕ್ತರ ಅಚ್ಚುಮೆಚ್ಚಿನ ದೇವತೆ. ಬಿಂದು ಸರೋವರದ ಪ್ರಸ್ತಾಪವೂ ಸ್ಥಳಪುರಾಣದಲ್ಲಿಯೇ ಬಂದಿದೆ. ನಡುಬೆಟ್ಟದಲ್ಲಿರುವ ಈ ಆಳವಾದ ಸರೋವರ ಶಿವಜಟೆಯಿಂದ ಚಿಮ್ಮಿದ ಬಿಂದುವೊಂದರಿಂದ ಉಂಟಾದುದು. ಇಲ್ಲಿಂದ ಎಷ್ಟೋ ಅಡಿಗಳ ಎತ್ತರದಲ್ಲಿರುವ ಶ್ರೀ ಗಂಗಾಧರೇಶ್ವರ ದೇವಾಲಯದ ಗರ್ಭಗುಡಿಯ ಲಿಂಗ ಬಟ್ಟಲಿನಿಂದ ಅಭಿಷೇಕಜಲ ಯಾವುದೋ ಗುಪ್ತ ಮಾರ್ಗವಾಗಿ ಈ ಸರೋವರಕ್ಕೆ ಇಳಿದುಬರುವುದೆಂಬ ನಂಬಿಕೆಯೂ ಇದೆ.

ಸಮುದ್ರಮಟ್ಟದಿಂದ 981 ಮೀ ಎತ್ತರದಲ್ಲಿರುವ ಗಿರಿ ಪ್ರಕೃತಿಸೌಂದರ್ಯಕ್ಕೆ ತೌರು. ದಟ್ಟವಾಗಿ ಹಬ್ಬಿನಿಂತಿರುವ ಕಾನನವನ್ನು ಹಾದು ಬೆಟ್ಟವನ್ನು ಏರಿದರೆ ಅನ್ನದಾನಿ ಮಠ ಸಿಕ್ಕುತ್ತದೆ. ಕರ್ನಾಟಕದ ಪ್ರಾಚೀನ ಮಠಗಳಲ್ಲೊಂದಾದ ಅಯ್ಯನಮಠ ಅನ್ನದಾನಕ್ಕೆ ಹೆಸರಾದುದು. ಅರವತ್ತೊಂಬತ್ತಕ್ಕೂ ಹೆಚ್ಚು ಸಂಖ್ಯೆಯ ಗುರುಪರಂಪರೆಯನ್ನು ಪಡೆದ ಈ ಪ್ರಸಿದ್ಧ ಮಠಕ್ಕೆ ನಾಡಿನ ನಾನಾಕಡೆಯ ಭಕ್ತರು ನಡೆದುಕೊಳ್ಳುತ್ತಾರೆ. ಈ ಕ್ಷೇತ್ರವನ್ನು ಕುರಿತ ಜನಪದ ಸಾಹಿತ್ಯವೂ ಅಷ್ಟೇ ವಿಪುಲವಾಗಿದೆ.

ಚುಂಚನಗಿರಿ ಒಂದು ಉತ್ತಮ ಪ್ರವಾಸಿಕ್ಷೇತ್ರ. ಗಿರಿಯ ಒಂದೊಂದು ಮೂಲೆಯಲ್ಲೂ ಅನೇಕ ಅದ್ಭುತಗಳು ನಮಗೆ ಎದುರಾಗುತ್ತವೆ. ಇಲ್ಲಿನ ಗವಿಸಿದ್ಧೇಶ್ವರ ದೇವಾಲಯಕ್ಕೆ ಬಂಡೆಗಳನ್ನೇರಿ ಹೋಗುವುದೊಂದು ಸಾಹಸ. ಇದಕ್ಕಿಂತ ಕಷ್ಟಸಾಧ್ಯವಾದ ಗಿರಿಯ ಎರಡು ಶಿಖರಗಳನ್ನು ಚೋಳೂರು ಕಂಬ, ಗಳಿಗೆಗಲ್ಲು ಎಂದು ಕರೆಯಲಾಗಿದೆ. ಚೋಳರು ಕಟ್ಟಿದ ಗಂಗಾಧರನ ಗುಡಿ ಅಲ್ಲಿಂದ ಕಡಿದಾದ ಬಂಡೆಗಳನ್ನೇರಿ ಬೆಟ್ಟದ ದಕ್ಷಿಣ ತುದಿಯನ್ನು ಮುಟ್ಟಿದರೆ ಚೋಳೂರ ಕಂಬ ಸಿಕ್ಕುತ್ತದೆ. ಜಾತ್ರೆಯ ಸಂದರ್ಭದಲ್ಲಿ ಇಲ್ಲಿ ಹಚ್ಚಿದ ದೀಪ ನಲವತ್ತು ಮೈಲು ದೂರದ ಚೋಳೂರಿನ ಕೊಳದಲ್ಲಿ ಕಾಣುವುದಾಗಿ ಹೇಳುತ್ತಾರೆ. ಇನ್ನೊಂದು ಶಿಖರಗಳಿಗೆ ಸ್ತ್ರೀಯರೂ ವೃದ್ಧರೂ ಹೋಗುವುದು ಅಸಾಧ್ಯ. ಭೀಕರವಾದ ಕಂದಕಗಳಿಂದ ಸುತ್ತುವರಿದ ಕಡಿದಾದ ಕೋಡುಗಲ್ಲಿಗೆ ಹಾಕಿರುವ ಸರಪಣಿಯನ್ನು ಹಿಡಿದು ಹತ್ತುವ ಸಾಹಸ ರೋಮಾಂಚನವನ್ನು ತರುತ್ತದೆ. ಮಕ್ಕಳಾಗದ ಹೆಂಗಸರು ಹರಕೆ ಹೊತ್ತು ಮುಂದೆ ಮಕ್ಕಳಾದರೆ ಬೆನ್ನಿಗೆ ಶಿಶುವನ್ನು ಕಟ್ಟಿಕೊಂಡು ಈ ಶಿಖರವನ್ನು ಹತ್ತಬೇಕು. ಹಾಗೆ ಹತ್ತಿದ ನಿದರ್ಶನಗಳೂ ಇವೆ.

ಗಿರಿಯ ಮಧ್ಯಶಿಖರದಲ್ಲಿ ಕತ್ತಲುಸೋಮೇಶ್ವರ ಲಿಂಗವಿದೆ. ದಟ್ಟವಾದ ಕತ್ತಲು ಕವಿದಿರುವ ಗವಿಯಲ್ಲಿ ಹುಡುಕಿ, ತಡಕಿ ಲಿಂಗದ ದರ್ಶನವನ್ನು ಪಡೆಯಬೇಕು. ಬೆಟ್ಟದ ದಕ್ಷಿಣಕ್ಕಿರುವ ನಾಗರಕಲ್ಲು, ಹೆಡೆಬಿಚ್ಚಿದ ಘೋರ ಸರ್ಪದಂತೆ ಮರದೆತ್ತರಕ್ಕೆ ಬೆಳೆದು ನಿಂತಿದೆ. ಅಲ್ಲಿಗೆ ಸಮೀಪದ ಕೂಡುಬಂಡೆ ಮೂರುಬಾರಿ ಓಗೊಡುತ್ತದೆ. ಮೇದರಗುಡ್ಡದ ಬಳಿಯಲ್ಲಿ ಹಾಕಿದ ಕೂಗು ಸ್ವಚ್ಛವಾಗಿ ಬೆಟ್ಟದ ನೆತ್ತಿಯಿಂದಲೆಲ್ಲೋ ಕೇಳಿಬರುತ್ತದೆ. ಉತ್ತರಭಾಗದ ಹನುಮಾನಕಣಿವೆ ಗಿರಿಯ ಮತ್ತೊಂದು ಪಾರ್ಶ್ವದ ರಮ್ಯನೋಟವನ್ನು ಒದಗಿಸುತ್ತದೆ.

ಚುಂಚನಗಿರಿ ಪವಿತ್ರಕ್ಷೇತ್ರವೆಂತೋ ಅಂತೆಯೇ ಮಠ, ದೇವಾಲಯ, ನಾಗ ಚಾವಡಿ, ಭೈರವನ ಗುಡಿ ಮತ್ತು ನಾನಾ ರೀತಿಯ ನಿಸರ್ಗದ ಅದ್ಭುತಗಳಿಂದ ಕೂಡಿ ಪ್ರೇಕ್ಷಣೀಯ ಸ್ಥಳವೂ ಆಗಿದೆ. ಇಂದು ಇಲ್ಲಿ ಆದಿಚುಂಚನಗಿರಿ ಶ್ರೀಕ್ಷೇತ್ರ ವಿಜೃಂಭಿಸುತ್ತಿದೆ. ಇತ್ತೀಚೆಗೆ ಇಲ್ಲಿ ಮಯೂರ ವನವನ್ನು ಸ್ಥಾಪಿಸುವ ಪ್ರಯತ್ನಗಳು ನಡೆದಿವೆ. (ಜೆ.ಎಸ್.ಪಿ.)

**ಆದಿಜೀವಯುಗ :** ಭೂವಿಜ್ಞಾನದಲ್ಲಿ ಸು. 600 ದಶಲಕ್ಷ ವರ್ಷಗಳಿಂದ 1850 ದಶಲಕ್ಷ ವರ್ಷಗಳವರೆಗಿನ ಹಿಂದಿನಕಾಲ. (ಪ್ರೊಟೆರೊಜೋಯಿಕ್ ಇರ); ಆರ್ಷೇಯ (ಆರ್ಕಿಯನ್) ಮತ್ತು ಪುರಾತನ ಜೀವ ಯುಗಗಳ (ಪೇಲಿಯೊಜೋಯಿಕ್ ಇರ) ನಡುವಿನ ಯುಗ. ಆದಿಜೀವಯುಗ ಕೊನೆಗೊಂಡೊಡನೆ (ಅಂದರೆ ಸು 600 ದಶಲಕ್ಷ ವರ್ಷಗಳ ಹಿಂದೆ) ಪುರಾತನ ಜೀವಯುಗದ ಕೇಂಬ್ರಿಯನ್ ಕಲ್ಪ (ಈಪಾಕ್) ಪ್ರಾರಂಭವಾಯಿತು. ಆಗ ರೂಪುಗೊಂಡ ಶಿಲಾಶ್ರೇಣಿಗಳ ತಳದಲ್ಲಿರುವ ಅಗಾಧ ಶಿಲಾಸಮುದಾಯಕ್ಕೆ ಪ್ರೀ ಕೇಂಬ್ರಿಯನ್ ಶಿಲಾಸಮುದಾಯವೆಂದು ಹೆಸರು. ಇದು ಭೂಮಿಯ ಇತಿಹಾಸ ಕಾಲದ ಸುಮಾರು ಮುಕ್ಕಾಲು ಭಾಗವನ್ನು ನಿರೂಪಿಸುತ್ತದೆ. ಈ

ಶಿಲಾಸಮುದಾಯ ಸಂಪೂರ್ಣವಾಗಿ ಜೀವಾವಶೇಷರಹಿತವಾಗಿದೆ. ಇವುಗಳ ಮೇಲೆ ಸಂಚಯನಗೊಂಡಿರುವ ಶಿಲಾರಾಶಿಗಳಿಂದ ಕಾಲವನ್ನು ಸುಲಭವಾಗಿ ಗುರುತಿಸಬಹುದು. ಪ್ರೀ ಕೇಂಬ್ರಿಯನ್ ಶಿಲಾರಾಶಿಯನ್ನು ಕೆಳಭಾಗ ಮತ್ತು ಮೇಲ್ಭಾಗ ಎಂದು ಎರಡು ಭಾಗಗಳನ್ನಾಗಿ ವಿಭಜಿಸಬಹುದು. ಕೆಳಭಾಗ ಮುಖ್ಯವಾಗಿ ಗ್ರಾನೈಟ್ ಮತ್ತು ನೈಸ್ ಮುಂತಾದ ಅಗ್ನಿಶಿಲೆಗಳಿಂದಲೂ, ರೂಪಾಂತರಪಡೆದ ಜಲಜಶಿಲೆಗಳಿಂದಲೂ ಕೂಡಿದೆ. ಮೇಲಿನ ಬಹುಭಾಗ ಜಲಜಶಿಲೆಗಳಿಂದ ಆಗಿದೆ. ಈ ಜಲಜಶಿಲೆಗಳು ನೊರಜುಶಿಲೆ, ಪೆಂಟಿಶಿಲೆ, ಮರಳುಶಿಲೆ, ಜೇಡು ಶಿಲೆ ಮತ್ತು ಸುಣ್ಣಶಿಲೆಗಳಾಗಿವೆ. ಇವುಗಳಲ್ಲಿ ಪ್ರವಾಹ ಪದರ, ನಕಲ ಪದರ ಮುಂತಾದ ಸಾಗರ ಶಿಲಾರಚನೆಗಳನ್ನು ಕಾಣಬಹುದು. ಈ ಶಿಲಾಸಮುದಾಯಗಳಲ್ಲಿ ಕೆಳಭಾಗಕ್ಕೆ ಆರ್ಷೇಯ ಶಿಲಾಸಮುದಾಯವೆಂದೂ, ಮೇಲ್ಭಾಗಕ್ಕೆ ಪ್ರೀ ಕೇಂಬ್ರಿಯನ್ ಶಿಲಾಸಮುದಾಯವೆಂದೂ ಹೆಸರು. ಇದು ಅಮೆರಿಕ ದೇಶದ ಅಲ್‌ಗಾಂಕಿಯನ್ ಸಮುದಾಯಕ್ಕೆ ಸಮವಾದುದು. ಕಡಪ ಮತ್ತು ವಿಂಧ್ಯ ಶಿಲಾವರ್ಗಗಳು ಈ ಶಿಲಾ ಸಮುದಾಯದ




ಯುಗ ಕಲ್ಪ-ಜೀವವಿಕಾಸ ತೋರಿಸುವ ರೇಖಾಚಿತ್ರ

ನಡುವಿನ ಸ್ತಂಭ ಯುಗಗಳನ್ನೂ ಬಲಗಡೆಯ ಸ್ತಂಭ ಯುಗಗಳಿಗೆ ಹೊಂದಿದಂತೆ ಕಲ್ಪಗಳ ವಿತರಣೆಯನ್ನೂ ಎಡಗಡೆಯ ಸ್ತಂಭ ಯುಗ-ಕಲ್ಪಗಳಿಗೆ ಹೊಂದಿದಂತೆ ಜೀವವಿಕಾಸವನ್ನೂ ಸೂಚಿಸುತ್ತವೆ. ಸ್ತಂಭಗಳ ಶಿಖರ ಆಧುನಿಕ ಕಾಲ. ಕೆಳಗಿಳಿದಂತೆ ಒಂದೊಂದು ಸಂಖ್ಯೆಯೂ ಅಷ್ಟಷ್ಟು ದಶಲಕ್ಷವರ್ಷ ಭೂತಕಾಲವನ್ನು ಸೂಚಿಸುವುದು.

ಭಾಗಗಳು. ಇದು ಆದಿಜೀವಯುಗದ ಶಿಲಾಸಮುದಾಯ. ಆದಿ ಜೀವಯುಗದ ಶಿಲಾಸ್ತೋಮ ಆದರ್ಶ ಜಲಜಶಿಲೆಗಳಿಂದ ಕೂಡಿ ಸಾವಿರಾರು ಅಡಿಗಳಷ್ಟು ಎತ್ತರವಿರುವ ಶಿಲಾಪದರಗಳ ಗುಂಪು. ಇವಕ್ಕೂ ಆರ್ಷೇಯ ಯುಗದ ಶಿಲಾಸಮುದಾಯಗಳಿಗೂ ಮಧ್ಯದಲ್ಲಿ ದೊಡ್ಡ ಅನನುರೂಪತೆ ಇದೆ. ಇದಕ್ಕೆ ಈಪಾರ್ಕೀಯನ್ ಅನನುರೂಪತೆಯೆಂದು ಹೆಸರು. ಈ ಕಾಲದ ಶಿಲಾರಾಶಿಯಲ್ಲಿ ಅನೇಕ ದೊಡ್ಡ ಮತ್ತು ಚಿಕ್ಕ ಅನನುರೂಪತೆಗಳಿವೆ. ಶಿಲಾನಿಕ್ಷೇಪದ ಕಾರ್ಯಗಳು ಅನೇಕ ಬಾರಿ ಪುನರಾವರ್ತಿಸಿರುವುದು ತಿಳಿಯುತ್ತದೆ. ಈ ಯುಗದ ಶಿಲೆಗಳು ವರ್ತಮಾನ ಕಾಲದಲ್ಲಿ ನಡೆಯುತ್ತಿರುವ ಶಿಥಿಲೀಕರಣ ಮತ್ತು ಶಿಲಾಸಂಚಯನ ಕಾರ್ಯಗಳಿಂದಲೇ ರೂಪುಗೊಂಡವು. ಆದರೆ ಇವು ಜೀವಾವಶೇಷ ರಹಿತ. ಈ ಕಾಲದಲ್ಲಿ ಜೀವಿಗಳು ಇದ್ದವು ಎಂಬುದಕ್ಕೆ ಸಹಜವಾದ ಸಾಕ್ಷ್ಯಗಳಿಲ್ಲ. ಆದರೆ ಅಪ್ರತ್ಯಕ್ಷ ಸಾಕ್ಷ್ಯಗಳಿಂದ ಇಂಥ ಜೀವಿಗಳಿದ್ದುವೆಂದು ಪುಷ್ಟೀಕರಿಸಬಹುದು.

ಶಿಲಾನಿಕ್ಷೇಪರಾಶಿಯನ್ನು ವರ್ತಮಾನಕಾಲದ ಭೂ ಇತಿಹಾಸದ ಆದಿಯವರೆಗೆ ಸ್ಥೂಲವಾಗಿ ಅವಲೋಕಿಸಿದರೆ ಜೀವವೃಕ್ಷ ಕೇಂಬ್ರಿಯನ್ ಕಾಲದ ಆದಿಯವರೆಗೆ ನಿರಾತಂಕವಾಗಿ ಬೆಳೆದಿರುವುದನ್ನು ಕಾಣಬಹುದು. ಆದರೆ ಇದಕ್ಕೆ ಹಿಂದಿನ ಕಾಲದಲ್ಲಿ ರೂಪುಗೊಂಡ ಶಿಲೆಗಳಲ್ಲಿ ಜೀವಾವಶೇಷದ ಕುರುಹೇ ಇಲ್ಲ. ಕೇಂಬ್ರಿಯನ್ ಯುಗದ ಪ್ರಾರಂಭದಲ್ಲಿ ಸಿಕ್ಕಿರುವ ಜೀವಾವಶೇಷಗಳು ಜೀವವೃಕ್ಷದ ಪ್ರಾರಂಭ ಕಾಲದವಲ್ಲ ಎಂಬುದು ನಮಗೆ ವ್ಯಕ್ತವಾಗುತ್ತದೆ. ಏಕೆಂದರೆ ಕೇಂಬ್ರಿಯನ್ ಕಾಲದ ಜೀವರಾಶಿ ಬಹು ಮುಂದುವರಿದಿದ್ದು ಬೆನ್ನೆಲುಬಿಲ್ಲದ ಎಲ್ಲ ಪ್ರಾಣಿಗಳಿಂದಲೂ ಪ್ರತಿನಿಧಿಸಲ್ಪಟ್ಟಿದೆ. ಆ ಮಟ್ಟವನ್ನು ಮುಟ್ಟಲು ಜೀವಿ ಬಹುಕಾಲದವರೆಗೆ ಸತತವಾಗಿ ವಿಕಾಸಹೊಂದಿದ ಅನಂತರವೇ ಸಾಧ್ಯ. ಅಂದರೆ ಕೇಂಬ್ರಿಯನ್ ಯುಗದಿಂದ ಈಗಿನವರೆಗೆ ಕಾಲಾವಧಿಯ ಪ್ರಮಾಣ ಎಷ್ಟೇ ಆದರೂ ಜೀವರಾಶಿ ಕೇಂಬ್ರಿಯನ್ ಕಾಲಕ್ಕಿಂತ ಬಹಳ ಮುಂಚಿತವಾಗಿ ಇದ್ದು ಅಧಿಕ ವಿಕಾಸ ಹೊಂದಿರಬೇಕು ಎಂಬುದನ್ನು ಶಾಸ್ತ್ರಜ್ಞರು ನಿರ್ಧರಿಸಿದ್ದಾರೆ.

ಭೂ ಇತಿಹಾಸದ ಅನೇಕ ಘಟನೆಗಳ ವಿಚಾರದಲ್ಲಿ ನಾವು ಅಜ್ಞರು. ಅವುಗಳಲ್ಲಿ ಆದಿಜೀವಿಗಳ ವಿಚಾರದಲ್ಲಿ ನಮ್ಮ ಅಜ್ಞಾನ ಹೆಚ್ಚು. ಆ ಕಾಲದ ಶಿಲಾಪರಂಪರೆಗಳು ಅಂದಿನ ಜೀವಾವಶೇಷಗಳನ್ನು ಕಾದಿರಿಸಲು ಅಸಮರ್ಥವಾಗಿದ್ದುದೇ ಇದಕ್ಕೆ ಕಾರಣ. ಇದಕ್ಕೆ ವಿವರಣೆ ನೀಡಲು ಅನೇಕ ವಿಜ್ಞಾನಿಗಳು ಪ್ರಯತ್ನಿಸಿರುವರು. ಅವುಗಳನ್ನು ಈ ರೀತಿ ವರ್ಗೀಕರಿಸಬಹುದು : 1. ಆದಿ ಸಾಗರ; ಈಗಿನ ಸಾಗರಕ್ಕಿಂತ ಬಹು ಭಿನ್ನವಾಗಿತ್ತು. ಆದ್ದರಿಂದ ಆ ಕಾಲದಲ್ಲಿ ನಿಕ್ಷೇಪಗೊಂಡ ಶಿಲೆಗಳು ಜೀವಾವಶೇಷಗಳನ್ನು ಕಾಪಾಡಿ ಕಾದಿರಿಸಲು ಅಸಮರ್ಥವಾಗಿದ್ದುವು. 2. ಆ ಕಾಲದ ಜೀವರಾಶಿ ಬಹಳ ಪುರಾತನವಾಗಿದ್ದುದರಿಂದ ಅವುಗಳಲ್ಲಿ ಗಟ್ಟಿ ಭಾಗಗಳಿರಲಿಲ್ಲ. ಆದ್ದರಿಂದ ಅವುಗಳ ಅವಶೇಷಗಳು ಶಿಲೆಗಳಲ್ಲಿ ಉಳಿಯಲಿಲ್ಲ. 3. ಆ ಕಾಲದ ಸಾಗರಗಳ ನೀರಿನಲ್ಲಿ ವಿಲೀನಗೊಂಡ ಕ್ಯಾಲ್ಸಿಯಂ ಕಾರ್ಬೊನೇಟ್, ಸಿಲಿಕ ಮತ್ತು ಇತರ ಅಗತ್ಯವಾದ ವಸ್ತುಗಳಿರಲಿಲ್ಲ. ಆದ್ದರಿಂದ ಅಂದಿನ ಜೀವಿಗಳಿಗೆ ಗಟ್ಟಿ ಭಾಗಗಳನ್ನು ರಚಿಸಿಕೊಳ್ಳಲಾಗಲಿಲ್ಲ. 4. ಆದಿಜೀವಯುಗದ ಶಿಲೆಗಳು ಬಹಳ ಪುರಾತನ. ಅವು ಬಹುವಾಗಿ ರೂಪಾಂತರ ಹೊಂದಿ ಒಂದು ಪಕ್ಷ ಅವುಗಳಲ್ಲಿ ಜೀವಾವಶೇಷಗಳಿದ್ದರೂ ಅವೆಲ್ಲ ಈ ಕಾರಣದಿಂದ ನಾಶವಾಗಿ ಹೋಗಿವೆ.

ಈ ವಿವರಣೆಗಳನ್ನು ಪರಿಶೀಲಿಸಬಹುದು. ಆದಿಜೀವಯುಗದ ಶಿಲೆಗಳು ಅವುಗಳ ಅನಂತರ ಸಂಚಯನಗೊಂಡ ಶಿಲೆಗಳಂತೆಯೇ ಸಾಗರಜನಿತ ಶಿಲೆಗಳು. ಇವುಗಳಲ್ಲಿ ಅನೇಕ ಶಿಲೆಗಳು, ಅದರಲ್ಲಿಯೂ ಭಾರತದ ಕಡಪ ಮತ್ತು ವಿಂಧ್ಯ ಕಾಲದ ಶಿಲೆಗಳು ಸೂಕ್ಷ್ಮಕಣ ಶಿಲೆಗಳಾಗಿದ್ದು ಜೀವಾವಶೇಷಗಳನ್ನು ಕಾದಿರಿಸಲು ಬಹಳ ಯೋಗ್ಯವಾಗಿವೆ. ಆದ್ದರಿಂದ ಈ ಕಾಲದ ಶಿಲೆಗಳು ಜೀವಾವಶೇಷಗಳನ್ನು ಕಾದಿರಿಸಲು ಅಸಮರ್ಥವಾದುವು ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇನ್ನು ಆದಿಜೀವಿ ಕಾಲದ ಜೀವಿಗಳ ದೇಹಗಳ ಗಟ್ಟಿ ಭಾಗಗಳನ್ನು ಕುರಿತ ವಾದ. ಈ ಯುಗ ಮುಗಿದೊಡನೆ ಬರುವ ಕೇಂಬ್ರಿಯನ್ ಕಲ್ಪದ ಪ್ರಾರಂಭದಲ್ಲೇ ಜೀವಿಗಳಿಗೆ ಗಟ್ಟಿ ಭಾಗ ಉಂಟಾದದ್ದು ಹೇಗೆ? ಅಂಥ ಸನ್ನಿವೇಶ ಹೇಗೆ ಉಂಟಾಯಿತು? ಈ ಆಕ್ಷೇಪಗಳಿಗೆ ಸಮರ್ಥ ವಿವರಣೆ ಇಲ್ಲ. ಆದ್ದರಿಂದ ಈ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮೂರನೆಯ ವಾದ ಜೀವಾವಶೇಷಗಳು ರೂಪಾಂತರ ಪಡೆದು ನಾಶವಾಗಿವೆ ಎಂದು. ಇದನ್ನು ಎಲ್ಲ ಪ್ರದೇಶದ ಶಿಲಾ ಸಮುದಾಯಕ್ಕೂ ಅನ್ವಯಿಸಲಾಗುವುದಿಲ್ಲ. ಏಕೆಂದರೆ ಭಾರತದ ಕಡಪ ಮತ್ತು ವಿಂಧ್ಯ ಶಿಲಾಸಮುದಾಯಗಳು ಹೆಚ್ಚು ಚಲನೆಗೂ ರೂಪಾಂತರಕ್ಕೂ ಒಳಗಾಗಿಲ್ಲ. ಇವುಗಳಿಂದ ಆದಿಜೀವಯುಗದ ಶಿಲಾಸಮುದಾಯಗಳು ಜೀವಾವಶೇಷರಹಿತವಾಗಿರುವುದು ಒಂದು ದೊಡ್ಡ ಆಶ್ಚರ್ಯಕರ ಸಂಗತಿ. ಈ ಸಮಸ್ಯೆಯನ್ನು ಪರಿಹರಿಸಲು ವಿಜ್ಞಾನಿಗಳಿಗೆ ಇನ್ನೂ ಸಾಧ್ಯವಾಗಿಲ್ಲ.

ಆದರೂ ಆದಿಜೀವಯುಗದಲ್ಲಿ ಜೀವಿಗಳು ಇದ್ದುವೆಂಬುದನ್ನು ಸ್ಥಿರಪಡಿಸುವುದಕ್ಕೆ ನಮಗೆ ಸಾಕಷ್ಟು ಆಧಾರ ದೊರಕಿದೆ. ಅತ್ಯಧಿಕ ಪ್ರಮಾಣದಲ್ಲಿ ಸುಣ್ಣಶಿಲೆ ನಿಕ್ಷೇಪ, ಗ್ರ್ಯಾಫೈಟ್, ಇಂಗಾಲಾಂಶ, ಗ್ಲಾಕೊನೈಟ್ ಪಟ್ಟಿಯಿರುವ ಕಬ್ಬಿಣದ ಅದಿರು ನಿಕ್ಷೇಪ ಮತ್ತು ಲ್ಯಾಟರೈಟ್ ಮುಂತಾದ ನಿಕ್ಷೇಪಗಳು ಜೀವಿಗಳ ಇರವನ್ನು ಸಾರುತ್ತವೆ. ಇವೆಲ್ಲ ಅಪ್ರತ್ಯಕ್ಷ ಪ್ರಮಾಣಗಳು. ಈ ಕಾಲದ ಸುಣ್ಣಶಿಲೆಯಲ್ಲಿ ಕೆಲವು ಭಾಗವಾದರೂ, ಜೀವಿಗಳ, ಅದರಲ್ಲೂ ಆಲ್ಗೇ ಎಂಬ ಸಸ್ಯಗಳ ಕಾರ್ಯಾಚರಣೆಯಿಂದ ಆದಂಥವು ಎಂದು ಕೆಲವರ ವಾದ. ಆದರೆ ಈ ಸುಣ್ಣಶಿಲೆಗಳಲ್ಲಿ ಆಲ್ಗಗಳ (ಶೈವಲಗಳ), ಅವಶೇಷಗಳಿಲ್ಲ. ಆದ್ದರಿಂದ ಅವು ಜೀವಿಗಳ ಕಾರ್ಯಾಚರಣೆಯಿಂದ ಆದಂಥವೋ ಅಥವಾ ರಾಸಾಯನಿಕ ಕ್ರಿಯೆಯಿಂದ ಆದಂಥವೋ ಎಂಬ ಶಂಕೆ ಇನ್ನೂ ವಿಜ್ಞಾನಿಗಳನ್ನು ಕಾಡುತ್ತಿದೆ.

ಗ್ರ್ಯಾಫೈಟ್ ಶಿಲೆ ಬಳ್ಳಿ ಬಳ್ಳಿಯಾಗಿಯೂ ಕಣವಾಗಿಯೂ ಸಿಗುತ್ತದೆ. ಕೆನಡ ದೇಶದ ಭೂವಿಜ್ಞಾನಿ ಜೆ.ಡಬ್ಲ್ಯು.ಡಾಸನ್ ಗ್ರ್ಯಾಫೈಟ್ ಪದರವನ್ನು ಕಾರ್ಬನಿಫೆರಸ್ ಕಾಲದ (ಇಂಗಾಲಯುಗ) ಕಲ್ಲಿದ್ದಲು ಪದರಗಳಿಗೆ ಹೋಲಿಸಿ ಇಷ್ಟು ಪ್ರಮಾಣದ ಇಂಗಾಲಾಂಶ ಜೀವಿಗಳ ಮೂಲಕ ಮಾತ್ರ ಸಾಧ್ಯವೆಂದು ಅಭಿಪ್ರಾಯಪಟ್ಟಿರುವನು. ಆದರೆ ಗ್ರ್ಯಾಫೈಟ್ ಶಿಲೆ ಯಾವುದನ್ನು ತೆಗೆದುಕೊಂಡರೂ ಅದು ಜೀವಿಜನಿತವೆಂದು ನಿಖರವಾಗಿ ಪ್ರತಿಪಾದಿಸಲಾಗುವುದಿಲ್ಲ. ಹಾಗೆಯೇ ಪದರವಿರುವ ಕಬ್ಬಿಣದ ಅದುರು, ಮ್ಯಾಂಗನೀಸ್ ಅದುರು ಮತ್ತು ಲ್ಯಾಟರೈಟ್‌ಗಳೂ ಬ್ಯಾಕ್ಟೀರಿಯ ಜೀವಿಗಳ ಕಾರ್ಯಾಚರಣೆಯಿಂದ ನಿಕ್ಷೇಪಗೊಂಡವೆಂದು ಕೆಲವರ ಅಭಿಪ್ರಾಯ. ಆದರೆ ಯಾವ ನಿಕ್ಷೇಪವೂ ನಿರ್ದಿಷ್ಟವಾಗಿ ಹೀಗೆಯೇ ಆದುದು ಎಂದು ಸಮರ್ಥಿಸಲು ಸಾಧ್ಯವಿಲ್ಲ. ಅವು ರಾಸಾಯನಿಕವಾಗಿಯೂ ರೂಪುಗೊಳ್ಳಲು ಸಾಧ್ಯ.

ಆದಿಜೀವಯುಗದ ಶಿಲಾಸಮೂಹಗಳಲ್ಲಿ ಜೀವಾವಶೇಷಗಳನ್ನು ಹುಡುಕಲು ಕೆಲವು ಭೂವಿಜ್ಞಾನಿಗಳಿಂದ ಬಹಳ ಪ್ರಯತ್ನ ನಡೆದಿದೆ. 1858ರಲ್ಲಿ ಲೋಗಾನ್, ಕೆನಡದ ಲಾರೆನ್ಷಿಯನ್ ನೈಸೆ ಶಿಲೆಯಲ್ಲಿ ಒಂದು ಕುತೂಹಲಕರ ಖನಿಜ ಶೇಖರಣೆಯನ್ನು ಕಂಡುಹಿಡಿದ. ಅದರಲ್ಲಿ ಕ್ಯಾಲ್ಸೈಟ್ ಮತ್ತು ಸರ್‌ಪೆಂಟೈನ್ ಎಂಬ ಖನಿಜಗಳು ಒಂದರಮೇಲೊಂದರಂತೆ ಅನೇಕ ಪಟ್ಟಿಗಳಾಗಿ ನಿಕ್ಷೇಪಗೊಂಡಿದ್ದುವು. ಕ್ಯಾಲ್ಸೈಟ್ ಪ್ರಧಾನವಾಗಿಯೂ ಸರ್‌ಪೆಂಟೈನ್ ಗೂಡುಗಳನ್ನು ತುಂಬಿದಂತಿದ್ದುವು. ಇಂಥ ರಚನೆ ಖನಿಜದಲ್ಲಿರುವುದು ಬಹಳ ವಿರಳ. ಆದುದರಿಂದ ಇದಕ್ಕೆ ಜೀವಿ ಸಂಬಂಧವಿರಬೇಕೆಂದು ಲೋಗನ್ ನಿರ್ಧರಿಸಿದುದಲ್ಲದೆ ಇದಕ್ಕೆ ಒಂದು ಹೊಸ ಹೆಸರನ್ನೂ ಕೊಟ್ಟ (ಇಯೋಜೋವನ್‌ಕೆನಡನ್ಸಿಸ್). ಇದರ ವಿಚಾರವಾಗಿ ಇನ್ನೂ ಹೆಚ್ಚು ವಿವರಗಳನ್ನು ಡಬ್ಲ್ಯು. ಬಿ. ಕಾರ್ಪೆಂಟ್ ವರದಿ ಮಾಡಿದ. ಆದರೆ ಇತರ ವಿದ್ವಾಂಸರು ಇಯೋಜೋವನ್‌ಕೆನಡನ್ಸಿಸ್ ಜೀವಿಜನ್ಯವಾದುದಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಖನಿಜ ಪ್ರಪಂಚದಲ್ಲಿ ಇಯೋಜೋವನ್‌ಕೆನಡನ್ಸಿಸ್‌ನಂಥ ರಚನೆಯಿರುವುದು ಎಲ್ಲೂ ಕಂಡುಬಂದಿಲ್ಲ. ಆದರೆ ಇಷ್ಟು ಚಲನೆಗೂ ರೂಪಾಂತರಕ್ಕೂ ಒಳಗಾದ ಶಿಲಾಸಮೂಹಗಳಲ್ಲಿ ಜೀವಾವಶೇಷಗಳನ್ನು ಕಾದಿರಿಸುವುದೂ ಅಸಂಭವ. ಆದ್ದರಿಂದ ನಿಖರವಾದ ಜೀವಿಸಂಬಂಧ ವಸ್ತುಗಳನ್ನಲ್ಲದೆ ಬೇರಾವುದನ್ನೂ ಅಂಗೀಕರಿಸುವುದು ಸಾಧುವಲ್ಲ.

1885ರಲ್ಲಿ ಜೇಮ್ಸ್ ಹಾಲ್ ಆದಿಜೀವಯುಗದ ಶಿಲೆಗಳಲ್ಲಿ ಎಲೆಕೋಸಿನಂಥ ರಚನೆಯನ್ನು ಪ್ರಾಣಿಯ ಅವಶೇಷವೆಂದು ಅಭಿಪ್ರಾಯಪಟ್ಟು ಅದನ್ನು ಕ್ರಿಪ್ಟೊಜೋವನ್ ಎಂದು ಹೆಸರಿಸಿದ. ಇದೇ ರೀತಿಯ ರಚನೆ ಗ್ರೀನ್‌ಲೆಂಡ್ ಮತ್ತು ಗೋಬಿ ಮರುಭೂಮಿ ಪ್ರದೇಶಗಳಲ್ಲಿ ಇರುವುದು ವರದಿಯಾಗಿದೆ. ಈ ರಚನೆಗಳು ಶೈವಲದ ಅವಶೇಷವೆಂದು ವಾದಿಸಲಾಗಿದೆ. ವಾಲಕಾಟ್ ಈ ಕಾಲದ ಶಿಲಾಸಮುದಾಯಗಳಲ್ಲಿ ಅನೇಕ ರೀತಿಯ ರಚನೆಗಳನ್ನು ವರದಿ ಮಾಡಿದ್ದಾನೆ. ಇತ್ತೀಚೆಗೆ ಭಾರತದ ಕಡಪ ಶಿಲೆಗಳಲ್ಲಿರುವ ಸುಣ್ಣ ಶಿಲೆಗಳಲ್ಲಿ ಎಂ. ಆರ್. ಶ್ರೀನಿವಾಸರಾಯರು ಈ ರೀತಿಯ ರಚನೆಯನ್ನು ವರದಿ ಮಾಡಿದ್ದಾರೆ. ಆದರೆ ಜೀವಕಣ ರಚನೆಗಳು ಇಲ್ಲದಿರುವುದರಿಂದ ಇವುಗಳನ್ನು ಜೀವಾವಶೇಷಗಳೆಂದು ಪರಿಗಣಿಸುವುದು ಬಹಳ ಕಷ್ಟ ಅಲ್ಲದೆ ಪ್ರಯೋಗಶಾಲೆಗಳಲ್ಲಿ ಇದೇ ರೀತಿಯ ರಚನೆಗಳನ್ನು ರಾಸಾಯನಿಕ ವಿಧಾನಗಳಿಂದ ಉತ್ಪತ್ತಿ ಮಾಡಬಹುದೆಂದು ಲೆನಿಗಾಂಗ್ ತೋರಿಸಿದ್ದಾನೆ. ವಿಂಧ್ಯಶಿಲಾಸಮುದಾಯದಲ್ಲಿ ರಾಮಪುರದ ಹತ್ತಿರ ಕೊಂಬು ವಸ್ತುವಿನ ಇಂಗಾಲಾಂಶದ ಅವಶೇಷಗಳನ್ನು ಎಚ್. ಸಿ. ಜೋನ್ಸ್ ವರದಿ ಮಾಡಿದ್ದಾರೆ. ಆದರೆ ಇದನ್ನು ವರ್ಗೀಕರಿಸುವುದು ಬಹಳ ಕಷ್ಟ. ಇವುಗಳ ಜೊತೆಗೆ ಎಂ. ಆರ್. ಸಾಹನೀಯವರು ಕೆಲವು ಹುಳುಗಳ ಜಾಡುಗಳು ಮತ್ತು ಅಚ್ಚನ್ನು ವರದಿ ಮಾಡಿರುತ್ತಾರೆ. ಹೀಗೆ ವಿಂಧ್ಯ ಮತ್ತು ಇತರ ಪ್ರೀ ಕೇಂಬ್ರಿಯನ್ ಕಾಲದಲ್ಲಿ ಜೀವಿಗಳಿದ್ದುವೆಂಬುದಕ್ಕೆ ಅಸ್ಪಷ್ಟ ಅವಶೇಷಗಳೂ ಅಪ್ರತ್ಯಕ್ಷ ಪ್ರಮಾಣಗಳೂ ದೊರೆತಿವೆ ಎಂಬುದರಲ್ಲಿ ಸಂಶಯವಿಲ್ಲ. (ಎಂ.ಆರ್.ಎಸ್.)

**ಆದಿತೀರ್ಥಂಕರ : ನೋಡಿ– ತೀರ್ಥಂಕರರು.**

**ಆದಿತ್ಯ :** ಅಪರಿಮಿತವಾಗಿ ತೋರುವ ಆಕಾಶದ ಒಂದು ಸ್ವರೂಪದ ಆಧಾರದ ಮೇಲೆ ಕಲ್ಪಿತವಾಗಿರುವ ಮತ್ತು ದೇವಮಾತೃ ಎಂದು ಪ್ರಸಿದ್ಧಳಾದ ಅದಿತಿಯ ಪುತ್ರ. ವೇದದ ಕಾಲದಿಂದಲೂ ಅದಿತಿಪುತ್ರರಾದ ಆದಿತ್ಯರ ವಿಚಾರ ಬೆಳೆದು ಬಂದಿದೆ. ಅವರ ಸಂಖ್ಯೆ ಆರರಿಂದ ಹನ್ನೆರಡರವರೆಗೆ ವ್ಯತ್ಯಾಸಗೊಳ್ಳುವುದನ್ನೂ ಅಲ್ಲಲ್ಲಿ ಕಾಣಬಹುದು. ವರ್ಷದ ಹನ್ನೆರಡು ಮಾಸಗಳಲ್ಲಿ ಸೂರ್ಯನನ್ನು ಪ್ರತಿನಿಧಿಸುವ ದ್ವಾದಶಾದಿತ್ಯರ ವಿಚಾರ

ಬ್ರಾಹ್ಮಣಗಳಲ್ಲಿ ಪ್ರತಿಪಾದಿತವಾಗಿದೆ. ಪ್ರಳಯಕಾಲದಲ್ಲಿ ಮಾತ್ರ ಅವರೆಲ್ಲರ ಉದಯವಾಗುವುದೆಂಬ ಪ್ರತೀತಿ ಉಂಟು. ಪ್ರಾರಂಭದಲ್ಲಿ ವರುಣ ದೇವತೆ ಆದಿತ್ಯರಲ್ಲಿ ಪ್ರಮುಖನಾದವ. ಕ್ರಮೇಣ ವಿಶೇಷವಾಗಿ ಸೂರ್ಯನೇ ಆದಿತ್ಯನೆನಿಸಿಕೊಂಡಿದ್ದಾನೆ. (ಬಿ.ಕೆ.ಎಸ್.)

**ಆದಿತ್ಯಸೇನ :** ಗುಪ್ತರಾಜವಂಶದ ಮಾಧವಗುಪ್ತನ ಮಗ. ಮಗಧದಲ್ಲಿದ್ದವ. ಹರ್ಷವರ್ಧನನ ಅನಂತರ ಗುಪ್ತ ರಾಜ್ಯವನ್ನು ಸ್ವತಂತ್ರವಾಗಿಸಿ ಪ್ರಮುಖ ರಾಜ್ಯವನ್ನಾಗಿಸಿದ ನಲ್ಲದೆ ಅಶ್ವಮೇಧಯಾಗವನ್ನೂ ಮಾಡಿದ. ಭೂತಲವನ್ನೆಲ್ಲ ಆಳಿದನೆಂದು ಹೇಳಿಕೊಂಡಿದ್ದಾನೆ. (ಎಂ.ಪಿ.)

**ಆದಿಬುದ್ಧ :** ಲೋಕೋತ್ತರವಾದ ಏಳು ವಿಶ್ವಸ್ಥಿತಿಗಳಿಗೆ ನಿಯಾಮಕನಾದ ಏಕಮೇವಾದ್ವಿತೀಯನಾದ ಈತನ ಕಲ್ಪನೆ ಮಹಾಯಾನ ಬೌದ್ಧರಲ್ಲಿ ತತ್ರಾಪಿ ಟಿಬೆಟ್ ದೇಶದ ಯೌಗತಾಂತ್ರಿಕ ಪಂಥದಲ್ಲಿ ಉಂಟು. ನಗ್ನನಾದ, ನೀಲದೇಹದ, ತಾಪಸಿ ಬುದ್ಧ ತನ್ನ ಚಿತ್ತದಿಂದಲೇ ತನ್ನನ್ನು ಹೀಗೆ ನಿರ್ಮಿಸಿಕೊಂಡನೆಂಬ ನಂಬಿಕೆ ಇದೆ. ಬೋಧಿಯೇ ಮುಖ್ಯ ರಸವಾಗಿ ಉಳ್ಳ ಈ ಆದಿಬುದ್ಧನನ್ನು ವಜ್ರಸತ್ತ್ವವೆಂದೂ ವ್ಯವಹರಿಸುತ್ತಾರೆ. ಐವರು ಧ್ಯಾನಿಬುದ್ಧರನ್ನು ನಿಯಂತ್ರಣ ಮಾಡುವ ಈ ಆದಿ ಬುದ್ಧನಿಗೆ ಸ್ತ್ರೀರೂಪದ ಶಕ್ತಿಯರನ್ನೂ ಸೇರಿಸುತ್ತಾರೆ. (ಎಸ್.ಕೆ.ಆರ್.)

**ಆದಿಬ್ರಹ್ಮಸಮಾಜ :** 19ನೆಯ ಶತಮಾನದ ಆದಿಭಾಗದಲ್ಲೇ ಭಾರತದಲ್ಲಿ ಕಂಡುಬಂದ, ಸುಧಾರಣಾ ಮನಃಪ್ರವೃತ್ತಿಯಿಂದ ಉದ್ಭವಿಸಿದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳಲ್ಲಿ ಮುಖ್ಯವಾದುದು. ರಾಜಾರಾಮ ಮೋಹನರಾಯ್ ಮೂರ್ತಿಪೂಜೆಯನ್ನು ವಿರೋಧಿಸಿ ದೇವರೊಬ್ಬನೇ ಎಂಬ ನಂಬಿಕೆಯನ್ನು ತಳೆದಿದ್ದವರನ್ನೊಳಗೊಂಡ ಬ್ರಹ್ಮಸಭಾ ಸಂಸ್ಥೆಯನ್ನು ಸ್ಥಾಪಿಸಿದರು (1828). ಈ ಭಕ್ತಗೋಷ್ಠಿಗೆಂದು ಒಂದು ಮನೆ ಸಿದ್ಧವಾಯಿತು; ಯಾವ ಮತಾಚರಣೆಯ ಕಾರ್ಯವೂ ನಡೆಯಕೂಡದು ಎಂಬುದು ಆ ಸಭೆಯ ಕಟುನಿಯಮಗಳಲ್ಲೊಂದು. ಇದೇ ಬ್ರಹ್ಮಸಮಾಜದ ಉಗಮವೆಂದು ಅನೇಕರ ಭಾವನೆ. ಇದೇ ಕೊನೆಗೆ ಎರಡಾಗಿ ಒಡೆದಾಗ ಮೂಲ ಸಮಾಜ ಆದಿಬ್ರಹ್ಮ ಸಮಾಜವೆಂದು ಹೆಸರಾಯಿತು. ಆದರೆ ರಾಜಾರಾಮ ಮೋಹನರಾಯ್ ತಾನು ಹಿಂದೂ ಎಂದು ಕೊನೆಯವರೆಗೂ ನಂಬಿದ್ದ; ವಾರಕ್ಕೊಂದು ಸಲ ನಡೆಯುತ್ತಿದ್ದ ಗೋಷ್ಠಿಯಲ್ಲಿ ನಿಷ್ಠಾವಂತ ಬ್ರಾಹ್ಮಣರಿಂದ ವೇದಪಠಣವಾಗುತ್ತಿತ್ತು; ಬ್ರಾಹ್ಮಣೇತರರಿಗೆ ಅವಕಾಶವೂ ಇರಲಿಲ್ಲ.

ರಾಮಮೋಹನರಾಯ್ ಇಂಗ್ಲೆಂಡಿಗೆ ಹೋಗಿ ಅಲ್ಲೇ ಕಾಲವಾದಮೇಲೆ ಈ ಸಭೆ ಕ್ಷೀಣಿಸಿತು. ಆದರೆ 1843ರಲ್ಲಿ ಈ ಸಭೆಗೆ ಸೇರಿದ ದೇವೇಂದ್ರನಾಥ ಠಾಕೂರ್ (ರವೀಂದ್ರನಾಥ್ ಠಾಕೂರರ ತಂದೆ) ಅದಕ್ಕೆ ನವಚೈತನ್ಯವನ್ನಿತ್ತರು. ಅದಕ್ಕೊಂದು ವಿಧಿನಿಯಮ ರಚಿತವಾಯಿತು; ಖಚಿತವಾದ ದೀಕ್ಷಾಕ್ರಮ ಸಿದ್ಧವಾಯಿತು. ತತ್ತ್ವಬೋಧಿನೀಪತ್ರಿಕಾ ಎಂಬ ನಿಯತಕಾಲಿಕ ಪತ್ರಿಕೆಯೊಂದನ್ನು ಪ್ರಕಟಿಸಿ ಸಭೆಯ ಧ್ಯೇಯ ನಿಯಮಗಳನ್ನು ಸಾರ್ವಜನಿಕರಿಗೆ ತಿಳಿಸುವ ಏರ್ಪಾಡಾಯಿತು. ವೇದಗಳು ಅಪೌರುಷೇಯವಾಗಿ ಮಾನವನಿಗೆ ವ್ಯಕ್ತವಾದ ಜ್ಞಾನವೆಂದೂ ಅವೇ ಈ ಸಭೆಯ ಧರ್ಮನೀತಿಗೆ ತಳಹದಿಯೆಂದೂ ಸಾರಲಾಯಿತು. ಆದರೆ ಕೊಂಚಕಾಲದ ಮೇಲೆ ಅಕ್ಷಯಕುಮಾರ ದತ್ತ ಮತ್ತು ಅವನ ಯುವಕ ಅನುಯಾಯಿಗಳು ವೇದವೇ ಋಜುಮಾರ್ಗವೆಂಬ ವಿಷಯದಲ್ಲಿ ಅಸಮಾಧಾನ ತಾಳಿದರು. ಕೇಶವಚಂದ್ರಸೇನ ಈ ಸಮಾಜವನ್ನು ಸೇರಿದ ಮೇಲೆ (1857), ಅವನ ಅಸಾಧಾರಣ ವಾಕ್ಪಟುತ್ವ, ಆವೇಶಪೂರಿತ ಉತ್ಸಾಹಗಳಿಂದ ಬ್ರಹ್ಮಸಮಾಜ ಹೆಚ್ಚು ಜನಾನುರಾಗ ಪಡೆಯಿತು. ಮನುಷ್ಯ ಮಾಡಿದ ತಪ್ಪಿಗೆ ಅನುಗುಣವಾದ ಪರಿತಾಪ, ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಇವು ಹೆಚ್ಚು ಪ್ರಾಮುಖ್ಯ ಪಡೆದವು. ಈ ಹೊಸ ಧರ್ಮವನ್ನು ಸರ್ವವ್ಯಾಪಿಯಾಗುವಂತೆ ಮಾಡಬೇಕೆಂಬ ಧರ್ಮಪ್ರಚಾರಕ ಶ್ರದ್ಧೆ ಸದಸ್ಯರಲ್ಲಿ ಬೆಳೆಯಿತು. ಇದರ ಫಲವಾಗಿ 1865ರಲ್ಲಿ 50ಕ್ಕೂ ಹೆಚ್ಚು ಶಾಖೆಗಳೇರ್ಪಟ್ಟುವು.

ದೇವೇಂದ್ರನಾಥ್ ಠಾಕೂರ್ ಕೇಶವಚಂದ್ರಸೇನನ ಉತ್ಸಾಹ ಕಾರ್ಯತತ್ಪರತೆಗಳನ್ನು ಬಹುವಾಗಿ ಮೆಚ್ಚಿ ಅವನನ್ನು ಸಮಾಜದ ಕಾರ್ಯದರ್ಶಿಯನ್ನಾಗಿ ಮಾಡಿದರು. ಮುಂದೆ ಅವನ ಮತ್ತು ಇತರ ಯುವಕ ಸದಸ್ಯರ ತೀವ್ರ ಪ್ರಗತಿಪರ ಧೋರಣೆ ಠಾಕೂರರಿಗೆ ಸರಿಬೀಳಲಿಲ್ಲ. ಈ ಯುವಕರು ಅಂತರಮತೀಯ ವಿವಾಹಗಳನ್ನೂ ವಿಧವಾವಿವಾಹಗಳನ್ನೂ ನಡೆಸಿದರು; ಜನಿವಾರ ತೊಟ್ಟ ಬ್ರಾಹ್ಮಣರು ಸಭೆಯಲ್ಲಿ ಮಾತನಾಡುವುದನ್ನು ನಿಷೇಧಿಸಿದರು. ಕೊನೆಗೆ ಕೇಶವಚಂದ್ರಸೇನ ಮತ್ತು ಅವನ ಅನುಯಾಯಿಗಳನ್ನು ಸಮಾಜದಿಂದ ತೆಗೆದು ಹಾಕಲಾಯಿತು. ಯುವಕ ತಂಡ ಹೆದರದೆ ತನ್ನದೇ ಆದ ಬ್ರಹ್ಮಸಮಾಜವನ್ನು ಸ್ಥಾಪಿಸಿತು. ದೇವರೊಬ್ಬನೇ, ಮೂರ್ತಿ ಪೂಜೆ ತಪ್ಪು ಎಂದು ದೃಢವಾಗಿ ನಂಬಿದರೂ ಹಿಂದೂ ಸಮಾಜದಿಂದ ಸಂಪೂರ್ಣವಾಗಿ ಸಿಡಿದು ಹೋಗಲು ಇಚ್ಛೆಯಿಲ್ಲದವರು ಮೂಲ ಬ್ರಹ್ಮಸಮಾಜದಲ್ಲೇ ಉಳಿದುಕೊಂಡರು. ಬ್ರಹ್ಮಸಮಾಜದಲ್ಲುದ್ಭವಿಸಿದ ಈ ಭಿನ್ನತೆ, ಬೌದ್ಧರಲ್ಲುಂಟಾದ ಹೀನಯಾನ ಮಹಾಯಾನ ಪಂಥಗಳ ಭಿನ್ನತೆಯಂತಿದೆ. (ಜಿ.ಎಚ್.)

**ಆದಿಭೌತಿಕ :** ಸಾಂಖ್ಯದರ್ಶನದ ಪ್ರಕಾರ ದುಃಖತ್ರಯಗಳಲ್ಲಿ ಒಂದು. ಹೆಸರೇ ಸೂಚಿಸುವಂತೆ ಭೌತಕಾರಣಗಳಿಂದ ಉಂಟಾಗುವ ದುಃಖ **ನೋಡಿ– ದುಃಖತ್ರಯ.** (ಜಿ.ಎಚ್.)

**ಆದಿಮಜನರ ಕಲೆ :** ಆಧುನಿಕ ನಾಗರಿಕತೆಯ ಪ್ರಭಾವಗಳಿಗೆ ಒಳಗಾಗದೆ ಪ್ರಾಕ್ತನ ಕಾಲೀನ ಸಂಸ್ಕೃತಿಗಳ ವಿವಿಧ ಹಂತಗಳಲ್ಲಿ ಜೀವಿಸುತ್ತಿದ್ದ, ಈಗಲೂ ಹಲವೆಡೆ ಜೀವಿಸುತ್ತಿರುವ ಜನರಿಗೆ ಸಂಬಂಧಿಸಿದ್ದು (ಪ್ರಿಮಿಟಿವ್ ಆರ್ಟ್). ಇದಕ್ಕೂ ಹಿಂದೆ ಇದ್ದ ಆದಿಮಾನವರ ಜೀವನ, ಕಲೆಗಳ ಬಗ್ಗೆ ಪ್ರತ್ಯೇಕ ಲೇಖನವಿದೆ (ನೋಡಿ– ಆದಿಮಾನವ–ಕಲೆ). ಆದಿಮಜನರೆಂದರೆ ಮಿತವಾದ, ಪ್ರತ್ಯೇಕವಾದ, ಸಮಾನರೂಪದ, ನಿಕಟವಾದ ಸಂಬಂಧಗಳನ್ನುಳ್ಳ ನಿರಕ್ಷರಸ್ಥ, ಅವಿಧ್ಯುಕ್ತ ಸಾಮಾಜಿಕ ಹತೋಟಿ ಮತ್ತು ಬಲಿಷ್ಠ ಸಾಮಾಜಿಕ ಒಗ್ಗಟ್ಟುಗಳಿಂದ ನಿಯುಕ್ತವಾದ ಸಮಾಜವೆಂದೂ ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಹಾಗೆಂದಮಾತ್ರಕ್ಕೆ ಈ ಜನ ಅನಾಗರಿಕರೆಂದೂ ಅವರ ಕಲೆಗಾರಿಕೆಯಲ್ಲಿ ಉತ್ತಮಾಂಶಗಳಿಲ್ಲವೆಂದೂ ಭಾವಿಸುವುದು ತಪ್ಪು. ಉನ್ನತ ಮಟ್ಟದ ಕಲಾಕೃತಿಗಳಲ್ಲಿ ನಿರ್ಮಿಸಿರುವ ಈ ಸಂಪ್ರದಾಯಗಳಲ್ಲಿ ಕಂಡುಬರುವ ಅವರ ವಿಕೃತ ರೂಪಗಳು ಅವರ ಸಾಂಪ್ರದಾಯಿಕ, ಸಾಂಕೇತಿಕ ಶೈಲಿಗಳ ಪ್ರತೀಕಗಳಾಗಿದ್ದು ಮಹತ್ವದ ವಸ್ತುನಿರೂಪಣೆಗಾಗಿ ಉಪಯೋಗಿಸಿದ ತಂತ್ರಗಳಾಗಿವೆ. ಈ ಕಲಾವಿದರು ಸಾಮಾನ್ಯವಾಗಿ ಸಾಂಪ್ರದಾಯಿಕ ಪದ್ಧತಿಯಲ್ಲಿ ಹಿರಿಯ ಕಲಾವಿದರ ಬಳಿ ಶಿಷ್ಯವೃತ್ತಿ ನಡೆಸಿ ಕಲಾವಿಧಾನಗಳನ್ನು ಕಲಿತಿರುವುದರಿಂದ ಪ್ರತಿಯೊಂದು ಪಂಗಡದ ಆನುವಂಶಿಕ ನಂಬಿಕೆ, ಆಚಾರಗಳೂ ಅವರ ಕಲೆಗಳಲ್ಲಿ ಪ್ರತಿಬಿಂಬಿತವಾಗಿರುತ್ತವೆ. ಸಾಮಾನ್ಯವಾಗಿ ಪ್ರಾಣಿ ಮನುಷ್ಯ ಅಥವಾ ಅವೆರಡರ ಸಂಕೀರ್ಣ ರೂಪಗಳು ಈ ಕಲೆಗೆ ವಸ್ತುವನ್ನೊದಗಿಸಿ, ಮತೀಯ ಅಥವಾ ನಾಟಕೀಯ ದೃಶ್ಯಗಳ ನಿರೂಪಣೆಯೋ ಅಧಿಕಾರ ಅಥವಾ ಗೌರವಸೂಚನೆಯೋ ಈ ಕಲೆಯ ಮುಖ್ಯ ಗುರಿಯಾಗಿದೆ. ಕಲೆಗಾಗಿ ಕಲೆ ಎಂಬ ತತ್ತ್ವ ಈ ಸಂಪ್ರದಾಯಕ್ಕೆ ಅನ್ವಯಿಸುವುದಿಲ್ಲ. ಸಾಮಾಜಿಕ ವಾತಾವರಣದ ನೆರಳಿನಲ್ಲಿ ಕಲೆ ಮಾಡಬೇಕಾದ ನಿಯೋಜಿತ ಕರ್ತವ್ಯಗಳ ಹೊರತಾಗಿ ವಸ್ತು ನಿರೂಪಣೆ ಅಥವಾ ಆಲಂಕರಣಕಾರ್ಯ ಇದರ ಗುರಿಯಲ್ಲ. ಈ ಕಲೆಯ ಪ್ರೌಢಿಮೆಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ ವಿಮರ್ಶಕ ತನ್ನ ದೃಷ್ಟಿಕೋನದಿಂದ ಅದನ್ನು ಅಳೆಯದೆ ಆ ಕಲೆಯ ಸಾಂಸ್ಕೃತಿಕ ಹಿನ್ನೆಲೆ ಮತ್ತು ಅದರ ನಿಯೋಜಿತ ಗುರಿಯ ಆಧಾರದ ಮೇಲೆ ಪರಿಶೀಲಿಸಬೇಕು.

ಈ ಅಂಶಗಳನ್ನೇ ಗಮನದಲ್ಲಿಟ್ಟುಕೊಂಡು ವಿಶ್ವದ ವಿವಿಧ ಆದಿಮಜನಾಂಗಗಳ ಕಲೆಗಳನ್ನಿಲ್ಲಿ ಸಂಕ್ಷೇಪವಾಗಿ ಪರಿಶೀಲಿಸಲಾಗಿದೆ. ಮಾನವನ ಉಗಮಕಾಲದ ಕಲಾಕೃತಿಗಳ ವಿಷಯ ತಿಳಿದುಬಂದಿಲ್ಲ. ಆದರೆ ಆ ಕಾಲಗಳಲ್ಲಿ ಕಲಾಸೃಷ್ಟಿಯಾಗಿಲ್ಲವೆಂದು ಭಾವಿಸಲಾಗದು. ಏಕೆಂದರೆ ಎಲ್ಲಿ ಬುದ್ಧಿಶಕ್ತಿಯ ಕೆಲಸ, ಹೃದಯದ ಉದ್ರೇಕಗಳಿವೆಯೋ ಅಲ್ಲೆಲ್ಲ ಒಂದಲ್ಲ ಒಂದು ರೀತಿಯ ವಿನೋದ, ವಿಹಾರ, ಉದ್ರೇಕ, ಉಕ್ಕು ಇದ್ದೇ ಇದೆ. ಇದು ಆದಿಮ ಜನರಲ್ಲೂ ಅವರ ಹಿಂದಿನವರಲ್ಲೂ ಇದ್ದ ಗುಣ. ಅವರ ಕಲೆ, ಕೈಗಾರಿಕೆಗಳು, ಜೀವನಕ್ರಮಗಳು ಹೇಗಿದ್ದವೆಂದು ಊಹಿಸಲು ನಮಗೆ ದೊರೆತಿರುವ ಪಳೆಯುಳಿಕೆಗಳು ಆಧಾರಗಳನ್ನೊದಗಿಸುತ್ತವೆ. ಜೀವಂತ ಪಳೆಯುಳಿಕೆಗಳಾಗಿ ನಾಗರಿಕ ಪ್ರಪಂಚದಿಂದ ದೂರವಾಗಿ ಜೀವನ ನಡೆಸುತ್ತಿರುವ ಅನೇಕ ಆದಿ, ಆದಿಮ ಜನಪಂಗಡಗಳೂ ಸಾಕಷ್ಟು ಆಧಾರ ಒದಗಿಸುತ್ತವೆ. ಸದ್ಯಕ್ಕೆ ಇಷ್ಟು ಹೇಳಬಹುದು. ಹಲವಾರು ಲಕ್ಷ ವರ್ಷಗಳಷ್ಟು ಹಿಂದೆ ನಿರ್ಮಿತವಾದ ಕೃತಿಗಳು ಅನೇಕ ಪ್ರಕೃತಿನಿಯಮಗಳ ಪ್ರಭಾವದಿಂದ ಅಳಿದುಹೋಗಿರಬಹುದು. ನಮಗೆ ದೊರೆತಿರುವ ಅತ್ಯಂತ ಹಳೆಯ ಕಲೆ ಪೂರ್ವಶಿಲಾಯುಗದ ಅಂತ್ಯಕಾಲದಲ್ಲಿ ಅಂದರೆ ಸುಮಾರು ಪ್ರ.ಶ.ಪೂ. 60,000–10,000 ವರ್ಷಗಳ ಹಿಂದೆ ಯುರೋಪಿನ ಫ್ರಾನ್ಸ್, ಸ್ಪೇನ್ ಮತ್ತು ಅನಂತರದ ಕಾಲಕಾಲಕ್ಕೆ ನಿರ್ದೇಶಿಸಬಹುದಾದ ಉತ್ತರ ಆಫ್ರಿಕ ಪ್ರದೇಶಗಳಿಗೆ ಸೇರಿದ್ದು. ಕೆತ್ತನೆ, ಉಬ್ಬುಶಿಲ್ಪ, ಪ್ರತಿಮಾ ಶಿಲ್ಪ ಮತ್ತು ಬಹಳ ಉತ್ತಮ ದರ್ಜೆಯ ವರ್ಣಚಿತ್ರಗಳಿಂದ ಕೂಡಿದ್ದು ಆ ಕಲೆಯ ಹಲವಾರು ಅಂಶಗಳಲ್ಲಿ ಆಧುನಿಕ ಕಲೆಗಿಂತ ಉತ್ತಮವೆಂದು ಪರಿಗಣಿಸಲ್ಪಡದಿದ್ದರೂ ಕಡೆಯ ಪಕ್ಷ ಅದರ ಸರಿಸಮಾನವೆಂದು ಎಣಿಸಲ್ಪಟ್ಟಿದೆ. ಅರಿಗ್ನೇಷಿಯನ್, ಪೆರಿಗಾರ್ಡಿಯನ್ ಸಂಸ್ಕೃತಿಗಳ ಕಾಲದಲ್ಲಿ ಮೂಳೆ, ದಂತ ಅಥವಾ ಕಲ್ಲುಚಕ್ಕೆಗಳ ಮೇಲೆ ಕೆತ್ತಲಾದ ಉಬ್ಬುಶಿಲ್ಪಗಳು, ಕಲ್ಲು ಅಥವಾ ಜೇಡಿಮಣ್ಣಿನ ಪ್ರತಿಮೆಗಳು ರೂಕ್ಷವಾಗಿದ್ದರೂ ಅಲಂಕಾರಪ್ರಧಾನವಾಗಿವೆ. ಮ್ಯಾಗ್ಡಲೀನಿಯನ್ ಸಂಸ್ಕೃತಿಯ ಕಾಲದಲ್ಲಿ ಪರ್ವತ ಗುಹೆಗಳ ಚಾವಣಿ ಮತ್ತು ಗೋಡೆಗಳ ಮೇಲೆ ವಿವಿಧ ವರ್ಣಗಳಲ್ಲಿ ಚಿತ್ರಿತವಾಗಿರುವ ಪ್ರಾಣಿಗಳ, ಸಾಮೂಹಿಕ ನೃತ್ಯ, ಬೇಟೆ ಮುಂತಾದ ದೃಶ್ಯಗಳ ಕಲೆ ಬಹಳ ಉತ್ತಮ ಕೈಚಳಕದ ನಿದರ್ಶನಗಳಾಗಿದ್ದು ಅಲ್ಲಿ ಆದಿಮಾನವನ ಕಲಾ ಪ್ರೌಢಿಮೆ ಆಧುನಿಕ ಚಿತ್ರಕಾರರ ಮಟ್ಟವನ್ನೂ ಮೀರಿಸಿವೆಯೆಂದರೆ ತಪ್ಪಾಗಲಾರದು. ಉತ್ತರ ಆಫ್ರಿಕ ಮತ್ತು ಸ್ಪೇನಿನ ಸ್ವಲ್ಪ ಈಚಿನ ಕಲೆ ಇಷ್ಟು ಉನ್ನತಮಟ್ಟವನ್ನು

ತಲುಪದಿದ್ದರೂ ಅನೇಕ ನೈಜ, ಸತ್ತ್ವಪೂರ್ಣ, ಜೀವಂತ ದೃಶ್ಯಗಳಲ್ಲಿ ಪ್ರಾಣಿಗಳ ವಿವಿಧ ಭಂಗಿಗಳನ್ನೂ ಮಾನವಜೀವನದ ವಿವಿಧ ಕಾರ್ಯಗಳನ್ನೂ ಅದರಲ್ಲೂ ಬೇಟೆಯ ದೃಶ್ಯಗಳನ್ನೂ ಅಮೋಘವಾಗಿ ರೂಪಿಸಿವೆ.

ಯುರೋಪು ಏಷ್ಯದ ಅನೇಕ ಭಾಗಗಳು ಮತ್ತು ಈಜಿಪ್ಟ್ ಅಕ್ಷರಸ್ಥ ನಾಗರಿಕತೆಗಳನ್ನು ಬೆಳೆಸಿಕೊಂಡು ಪುರೋಗಾಮಿಪಥದಲ್ಲಿ ಮುನ್ನಡೆಯುತ್ತಿದ್ದಾಗ ಆಫ್ರಿಕದ ವಿವಿಧ ಪ್ರದೇಶಗಳು, ಅಮೆರಿಕದ ಭೂಭಾಗ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮತ್ತು ಪಾಲಿನೇಷ್ಯ, ಮೆಲನೇಷ್ಯ ಮತ್ತು ಮೈಕ್ರೋನೇಷ್ಯಗಳೆಂದು ಕರೆಯಲ್ಪಡುವ ಸಮುದ್ರಮಧ್ಯ ಭೂಪ್ರದೇಶಗಳಲ್ಲಿ (ಓಷಿಯಾನಿಯ) ಪ್ರಗತಿದೂರವಾದ ಅಥವಾ ಕ್ರಮೇಣ ಅವನತಿ ಮಾರ್ಗದ ಸಂಸ್ಕೃತಿಗಳ ಹಿಡಿತಕ್ಕೆ ಮಾನವವರ್ಗ ಸಿಕ್ಕಿಬಿದ್ದಿದ್ದುದರಿಂದ ಆ ಸಮಾಜಗಳ ಕಲೆ ಕ್ಷೀಣಿಸುತ್ತಿದ್ದವು.

ಆಫ್ರಿಕದ ದೇಶೀಯ ಜನರ ಕಲೆಗಳು ಅವರ ಮತೀಯ ಅಥವಾ ಸಾಮಾಜಿಕ ಕಲ್ಪನೆಗಳಿಂದ ಹುಟ್ಟಿ, ಶಿಲ್ಪ, ಸಂಗೀತ ಮತ್ತು ನೃತ್ಯ ರೂಪದಲ್ಲಿ ಪ್ರದರ್ಶಿಸಲ್ಪಟ್ಟಿವೆ. ಆಧುನಿಕ ಯುರೋಪಿಯನ್ನರ ಸಂಪರ್ಕಕ್ಕೆ ಬಹಳ ಮೊದಲೇ ದಕ್ಷಿಣ ಮಧ್ಯ ಮತ್ತು ಪೂರ್ವ ಆಫ್ರಿಕದ ಜನ ವಿಪುಲವಾದ, ತಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದ ಸಾಂಪ್ರದಾಯಿಕ ಕಲೆಯನ್ನು ಸೃಷ್ಟಿಸಿದ್ದರು. ಬೇರೆ ಬೇರೆ ಬುಡಕಟ್ಟುಗಳಿಗೆ ಸೇರಿದ್ದರೂ ಆಚಾರ, ವ್ಯವಹಾರ ನಂಬಿಕೆ ಮತ್ತು ಸಾಮಾಜಿಕ ಆಚರಣೆಗಳಲ್ಲಿ ವ್ಯತ್ಯಾಸಗಳಿದ್ದರೂ ಅವರ ಕಲೆಯಲ್ಲಿ ಕೆಲವು ಮೂಲಭೂತ ಸಾಮ್ಯಗಳಿದ್ದು ಅಲ್ಲಿ ಒಂದು ರೀತಿಯ ಐಕ್ಯವನ್ನೂ ವೈಶಿಷ್ಟ್ಯವನ್ನೂ ಕಾಣಬಹುದು. ನೇಯ್ಗೆ, ಕಬ್ಬಿಣದ ಕೆಲಸ, ಬುಟ್ಟಿ ಹೆಣೆಯುವಿಕೆ ಮುಂತಾದ ಕೆಲಸಗಳಲ್ಲಿ ಕಲಾಭಿರುಚಿ ಕಂಡುಬಂದರೂ ಶಿಲ್ಪಕಲೆಯಲ್ಲಿ ಅವರ ವೈಶಿಷ್ಟ್ಯ ಎದ್ದು ಕಾಣುತ್ತದೆ. ಲೋಹಗಳ ಉಪಕರಣಗಳಿಂದ ವ್ಯಕ್ತಿಚಿತ್ರಗಳು, ಮುಖವಾಡಗಳು ಮತ್ತು ಮತಸಂಸ್ಕಾರಗಳಿಗೆ ಬೇಕಾದ ಶಿಲ್ಪಗಳನ್ನು ಮರ, ದಂತ ಅಥವಾ ಜೇಡಿಮಣ್ಣಿನಲ್ಲಿ ಅವರು ಕೆತ್ತಿದ್ದಾರೆ. ಉಬ್ಬುಶಿಲ್ಪ, ಪ್ರತಿಮೆಗಳು ಅಥವಾ ಕೆತ್ತನೆಗಳ ರೂಪದಲ್ಲಿ ನಿರ್ಮಿಸಿ ಅವುಗಳನ್ನು ಬಣ್ಣ, ಶಂಖ, ನಾರು ಅಥವಾ ಮಣಿಗಳಿಂದ ಶೃಂಗರಿಸುತ್ತಿದ್ದರು. ಆಫ್ರಿಕದ ಶಿಲ್ಪಿ ದೀರ್ಘಕಾಲ ಗುರುವಿನ ಕೈಕೆಳಗೆ ಶಿಕ್ಷಣ ಪಡೆದು ತನ್ನ ಕಲಾಸಂಪ್ರದಾಯದಲ್ಲಿ ಕುಶಲಿಯೂ ನಿಷ್ಣಾತನೂ ಆಗಿರುತ್ತಿದ್ದ. ಸಂಪ್ರದಾಯಬದ್ಧನಾಗಿರಬೇಕಾಗಿದ್ದರೂ ತನ್ನ ಪ್ರೌಢಿಮೆಯನ್ನು ಪ್ರದರ್ಶಿಸುವ ಅವಕಾಶವಿದ್ದುದರಿಂದ ಕಲೆಯಲ್ಲಿ ವೈವಿಧ್ಯ ಕಂಡುಬರುತ್ತದೆ. ಮಾನವ ರೂಪವೇ ಮುಖ್ಯವಸ್ತುವಾಗಿದ್ದರೂ ಪ್ರಾಣಿ ಅಥವಾ ಮಿಶ್ರ ಜೀವಿಗಳನ್ನೂ ರೂಪಿಸಲಾಗಿದೆ. ಮತೀಯ, ವ್ಯಾವಹಾರಿಕ, ಸಾಮಾಜಿಕ ಮತ್ತು ರಾಜಕೀಯ ಸಂಬಂಧವಾದ ಆಚರಣೆಗಳಿಂದ ಉಪಯೋಗಿಸಲ್ಪಡುತ್ತಿದ್ದುದರಿಂದ ಈ ಶಿಲ್ಪಗಳಿಗೆ ಬೇಡಿಕೆ ಹೆಚ್ಚಾಗಿತ್ತು. ಮೃತರ ಆತ್ಮಗಳು, ದೇವತೆಗಳು ಮತ್ತು ಅತಿಮಾನವ ಶಕ್ತಿಗಳು ಮಾನವ ಜೀವನದ ಮೇಲೆ ಪ್ರಭಾವ ಬೀರುವುವೆಂಬ ನಂಬಿಕೆ ಬಲವಾಗಿದ್ದು, ಆ ಶಕ್ತಿಗಳನ್ನು ಮಾನವ ರೂಪದಲ್ಲಿ ರೂಪಿಸುವುದಲ್ಲದೆ ಮತೀಯ ಅಥವಾ ಸಂಸ್ಕಾರಗಳ ಆಚರಣೆಯ ಸಂದರ್ಭಗಳಲ್ಲಿ ಆ ಶಕ್ತಿಗಳ ಇರುವಿಕೆಯನ್ನು ಮುಖವಾಡ ಅಥವಾ ಶಿಲ್ಪ ರೂಪದಲ್ಲಿ ತೋರಿಸಲಾಗುತ್ತಿತ್ತು. ಉನ್ನತವರ್ಗದ ವ್ಯಕ್ತಿಗಳ ಉಪಯೋಗಕ್ಕಾಗಿ ಅನೇಕ ಉಪಕರಣಗಳನ್ನು ಕೆತ್ತನೆ ಕೆಲಸದಿಂದ ಕೇವಲ ಸೌಂದರ್ಯೋಪಾಸನೆಯ ದೃಷ್ಟಿಯಿಂದಲೇ ಶೃಂಗರಿಸುತ್ತಿದ್ದುದೂ ಉಂಟು. ಆಫ್ರಿಕದ ವಿವಿಧ ಪ್ರದೇಶಗಳಲ್ಲಿ ಭಿನ್ನ ಶೈಲಿಗಳ ಶಿಲ್ಪಕಲೆ ಬೆಳೆದು ಬಂದರೂ ಅವುಗಳ ಹೊರಲಕ್ಷಣ, ಅಲಂಕಾರವಿಧಾನ, ತಾಂತ್ರಿಕತೆ ಮುಂತಾದ ಅಂಶಗಳಲ್ಲಿ ವ್ಯತ್ಯಾಸ ಕಂಡುಬಂದರೂ ನೈಜ ರೂಪಗಳನ್ನು ಚಿತ್ರಿಸುವುದಕ್ಕಿಂತ ಸಾಂಕೇತಿಕವಾಗಿ, ಆ ಸಂದರ್ಭ ಅಥವಾ ಅದರ ಹಿಂದಿರುವ ಶಕ್ತಿಗಳನ್ನು ರೂಪಿಸುವುದೇ ಆ ಕಲೆಯ ಗುರಿಯಾಗಿರುತ್ತಿತ್ತು. ಆದ್ದರಿಂದ ನೀಗ್ರೋ ಶಿಲ್ಪಗಳು ವ್ಯಕ್ತಿ ಅಥವಾ ಪ್ರಾಣಿಗಳನ್ನು ಹೋಲುವುದಕ್ಕಿಂತ ಪ್ರತಿಯೊಂದು ಶೈಲಿಯೂ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆಯನ್ನೂ ಅದರ ಸತ್ತ್ವವನ್ನೂ ರೂಪಿಸುವ ಮಾಧ್ಯಮವಾಗಿದೆ.

ದಕ್ಷಿಣ ಮತ್ತು ಮಧ್ಯ ಆಫ್ರಿಕದಲ್ಲಿ ಪುರಾತನವಾದ ನೀಗ್ರೋಗಳ ಕೆತ್ತನೆ ಮತ್ತು ವರ್ಣಚಿತ್ರದ ಕೃತಿಗಳು ಪರ್ವತ ಗುಹೆಯಲ್ಲಿ ಕಂಡುಬಂದಿವೆ. ಪ್ರಶ. 19ನೆಯ ಶತಮಾನದಿಂದ ಪ್ರ.ಶ.ಪೂ. ಸಾವಿರಾರು ವರ್ಷಗಳವರೆಗೂ ವ್ಯಾಪ್ತವಾಗಿರುವ ಬುಷ್‌ಮೆನ್ ಪಂಗಡದ ಜನರದೆಂದು ಹೇಳಲಾಗುವ ಈ ವರ್ಣಚಿತ್ರ ಕಲೆಯಲ್ಲಿ ಒಂಟಿ ಪ್ರಾಣಿಗಳ, ಸೂಚ್ಯ ಮನುಷ್ಯರೂಪದ ಚಿತ್ರಗಳೂ ಸಹಜವಾಗಿ ರೂಪಿತವಾಗಿವೆ. ಸಾಧಾರಣವಾಗಿ ಕಪ್ಪು ಅಥವಾ ಕೆಂಪುಗಳಿಂದಲೂ ಹಲವು ಬಾರಿ ಮನೋಹರವಾದ ವಿವಿಧ ಬಣ್ಣಗಳಿಂದಲೂ ಚಿತ್ರಿತವಾದ ಭಿನ್ನ ಕಾಲಗಳ ಚಿತ್ರಗಳು ಪದರ ಪದರಗಳಾಗಿ ಒಂದರ ಮೇಲೊಂದು ಚಿತ್ರಿಸಲ್ಪಟ್ಟಿವೆ. ಈ ಚಿತ್ರಕಲೆ ನೀಗ್ರೋ ಶಿಲ್ಪಕಲೆಯಿಂದ ಬೇರೆಯಾಗಿದ್ದು ಪ್ರಾಗೈತಿಹಾಸಿಕ ಯುರೋಪಿನ ಚಿತ್ರಕಲೆಯೊಂದಿಗೆ ಸಾಮೀಪ್ಯ ಪಡೆದಿದೆ.

ಅಮೆರಿಕದಲ್ಲಿ ಕೊಲಂಬಸ್‌ನ ಪ್ರವೇಶಪೂರ್ವದ ದೇಶೀಯ ಜನಾಂಗಗಳು ವಿಪುಲವಾದ ಕಲಾಕೃತಿಗಳನ್ನು ನಿರ್ಮಿಸಿದ್ದವು. ಉತ್ತರದ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಬೇಟೆಗಾರರು ಮೂಳೆಗಳ ಮೇಲೆ ನಿರ್ಮಿಸಿದ್ದ ಕೆತ್ತನೆಗಳು ಮೆಕ್ಸಿಕೊ ಮತ್ತು ನೈರುತ್ಯ ಅಮೆರಿಕ ಸಂಯುಕ್ತ ಸಂಸ್ಥಾನ ಪ್ರದೇಶಗಳಲ್ಲಿ ದೊರಕಿದ್ದು ಯುರೋಪಿನ ಶಿಲಾಯುಗದ ಅಂತ್ಯಕಾಲದ ಕೃತಿಗಳನ್ನು ಹೋಲುತ್ತವೆ. ಈ ರೀತಿಯ ಮೂಳೆ ಮತ್ತು ದಂತಗಳ ಕೆತ್ತನೆ ಕೆಲಸ ಈ ಜನರಲ್ಲಿ ಮುಂದುವರಿದು ಸು. 2000 ವರ್ಷಗಳ ಹಿಂದಿನ ಬೇರಿಂಗ್ ಮತ್ತು ಚುಕ್ಚಿ ಸಮುದ್ರಪ್ರದೇಶಗಳ ಜನರಿಂದ ನಿರ್ಮಿತವಾದ ತಿರುವಿದ ದಂತದ ದಂಡಗಳ, ಸರಪಳಿಗಳ, ವಿಕೃತವಾದ, ಶವಸಂಸ್ಕಾರಕ್ಕೆ ಸಂಬಂಧಿಸಿದ ಮುಖವಾಡಗಳ ಮತ್ತು ಮಾನವನ ತಲೆಗಳ ಶಿಲ್ಪಗಳಲ್ಲಿ ತಲೆದೋರಿದೆ. ಇವು 19ನೆಯ ಶತಮಾನದ ಎಸ್ಕಿಮೊ ಶಿಲ್ಪಗಳನ್ನು ಹೋಲುತ್ತವೆ. ಉತ್ತರಭಾಗದ ಕಲಾಕೃತಿಗಳು ಸಣ್ಣವಾಗಿದ್ದು ಸಾಂಪ್ರದಾಯಿಕ ಶವಸಂಸ್ಕಾರಕ್ಕೆ ಸಂಬಂಧಿಸಿದ ಮತ್ತು ಆಲಂಕೃತ ಉಪಕರಣಗಳನ್ನೊಳಗೊಂಡಿರುತ್ತಿದ್ದವು. ಇತ್ತೀಚಿನ ಎಸ್ಕಿಮೊಗಳ ಕೆತ್ತನೆಗಳು ನೈಜವಾಗಿಯೂ ವಿವರಣಾತ್ಮಕವಾಗಿಯೂ ಹಾಸ್ಯಪೂರ್ಣವಾಗಿಯೂ ಇವೆ. ಸಾಂಕೇತಿಕ ಮುಖವಾಡಗಳು, ಗರಿಗಳ ಅಥವಾ ಮೂಳೆಯ ಆಭರಣಗಳು ಸರಳವಾಗಿದ್ದು ಭಾವರಹಿತವಾಗಿವೆ. ವಾಯವ್ಯ ಪ್ರದೇಶಗಳಲ್ಲಿ ಪುರಾತನ ಕಲ್ಲಿನ ಶಿಲ್ಪಗಳು ದೊರಕಿವೆ. 18–19 ನೆಯ ಶತಮಾನಗಳಲ್ಲಿ ಮರದ ಶಿಲ್ಪಗಳೂ ಮುಖವಾಡಗಳೂ ಮನೆಗಳ ಕಂಬಗಳೂ ಪ್ರಾಣಿ ಮತ್ತು ಮಾನವ ಚಿತ್ರಗಳೂ ಬಹಳವಾಗಿ ನಿರ್ಮಿತವಾಗಿ, ದಂತ, ತಾಮ್ರ ಮತ್ತು ಬೆಲೆಬಾಳುವ ಕಲ್ಲುಗಳಿಂದ ಅಲಂಕರಿಸಲ್ಪಟ್ಟಿವೆ. ಆಭರಣಗಳು, ಉಡುಪುಗಳು ಮತ್ತು ಮತೀಯ ಆಚರಣೆಗಳಲ್ಲಿ ಉಪಯೋಗಿಸಲ್ಪಡುವ ವಸ್ತುಗಳನ್ನು ಈ ರೀತಿ ಶೃಂಗರಿಸಲಾಗಿದೆ. ಮಾನವಾಕೃತಿಯೂ ನೈಜವಾಗಿ, ಸತ್ತ್ವಪೂರ್ಣವಾಗಿ ರೂಪಿತವಾಗಿದೆ. ಸಾಂಕೇತಿಕ ಮತ್ತು ಮಿಶ್ರಜೀವಿಗಳೂ ಹೆಚ್ಚಾಗಿ ಚಿತ್ರಿತವಾಗಿವೆ. ಪಶ್ಚಿಮ ಪ್ರದೇಶಗಳಲ್ಲಿ ಆದಿಮಜನರ ಕಲಾಕೃತಿಗಳು ಉನ್ನತಮಟ್ಟದ ಶೈಲಿ ಮತ್ತು ತಾಂತ್ರಿಕತೆಯಿಂದ ಕೂಡಿದ್ದು ಬಹಳ ಸೂಕ್ಷ್ಮವೂ ವಿವಿಧ ಬಣ್ಣಗಳಿಂದ ಕೂಡಿದ್ದೂ ಆಗಿವೆ. ಈ ಸಂಪ್ರದಾಯಕ್ಕೆ ಸೇರಿದ ಕೊಳವೆ, ಪಾತ್ರೆ ಮತ್ತು ತಾಯಿತಗಳು ದೊರಕಿವೆ. ವಿವಿಧ ಬಣ್ಣಗಳ ನಾರುಬೇರುಗಳಿಂದ ಅಂದವಾದ ಬುಟ್ಟಿಗಳನ್ನು ಹೆಣೆಯುವುದರಲ್ಲಿ ಇವರು ಅದ್ವಿತೀಯರಾಗಿದ್ದರು. ಗರಿಗಳಿಂದ ಮಾಡಿದ ಅಧಿಕಾರ ದಂಡ, ಶಿರಸ್ತ್ರಾಣಗಳೂ ನಯಮಾಡಿದ ಕಲ್ಲಿನ, ಶಂಖದ ಮತ್ತು ಕೆತ್ತಿದ ಮೂಳೆಯ ಆಭರಣಗಳೂ ಈ ಕಲೆಯ ಉನ್ನತ ಕೃತಿಗಳಾಗಿವೆ. ಪೂರ್ವದ ಕಾಡುಪ್ರದೇಶಗಳ ಜನರು ಉತ್ತಮ ಶಿಲ್ಪಿಗಳಾಗಿದ್ದು ನೈಜ, ಸೂಕ್ಷ್ಮ, ಸಭ್ಯತಾಪೂರ್ಣವಾದ ಕೃತಿಗಳನ್ನು ನಿರ್ಮಿಸಿದ್ದಾರೆ. ಮಧ್ಯದ ಮತ್ತು ಉತ್ತರದ ಅಮೆರಿಕ ಮತ್ತು ಏಷ್ಯ ಪ್ರದೇಶಗಳ ಪ್ರಭಾವಗಳು ಈ ಕಲೆಯಲ್ಲಿ ಕಂಡುಬಂದರೂ ಅವುಗಳೆಲ್ಲವೂ ಸಮ್ಮಿಳಿತಗೊಂಡಿವೆ. 1ನೆಯ ಶತಮಾನದ ಆದಿಭಾಗದಲ್ಲಿ ಶವಸಂಸ್ಕಾರಗಳಿಗೆ ಸೀಮಿತವಾಗಿದ್ದ ಪಿರಮಿಡ್ಡುಗಳನ್ನು 800ರ ಅನಂತರ ದೇವಾಲಯಗಳ ಜಗತಿಗಳಾಗಿ ಉಪಯೋಗಿಸಲಾಯಿತು. ಮಣ್ಣಿನ, ಶಂಖದ ಮತ್ತು ತಾಮ್ರದ ವಸ್ತುಗಳನ್ನು ಹಾವು, ವಿಜಯಸ್ಮಾರಕ ತಲೆ, ಯೋಧ ಮತ್ತಿತರ ಮತೀಯ ಚಿತ್ರಗಳಿಂದ ಆಲಂಕರಿಸಲಾಗುತ್ತಿತ್ತು. ಯುರೋಪಿಯನ್ನರ ಪ್ರಭಾವದ ಅನಂತರ ಈ ಕಲೆ ಅವನತಿಹೊಂದಿತು. ಅಮೆರಿಕದ ವಿಶಾಲ ಮೈದಾನ ಭಾಗಗಳಲ್ಲಿದ್ದ ಅಲೆಮಾರಿ ಜನಾಂಗಗಳಲ್ಲಿ ವಿಭಿನ್ನ ಮತ್ತು ಸತ್ತ್ವಶಾಲಿಯಾದ ಉಡುಪುಗಳು ಮತ್ತಿತರ ಪದಾರ್ಥಗಳು, ಬಾಣಬತ್ತಳಿಕೆಗಳು, ವಿವಿಧ ರೀತಿಯ ಕಸೂತಿ ಮತ್ತು ಬಣ್ಣದ ಕೆಲಸಗಳಿಂದ ಶೃಂಗರಿಸಲ್ಪಡುತ್ತಿದ್ದುವು. ಗಂಡಸರಲ್ಲಿ ಭೂತಗಳ, ಮಾಂತ್ರಿಕರ ಪ್ರಭಾವ ಹೆಚ್ಚಾಗಿದ್ದು ತತ್‌ಸಂಬಂಧವಾದ ಆಲಂಕೃತ ಗುರಾಣಿ, ವ್ರತನಿಯಮಗಳಿಗೆ ಸಂಬಂಧಿಸಿದ ಮತ್ತಿತರ ವಸ್ತುಗಳ ಮೇಲೆ ವರ್ಣರಂಜಿತ ಮಾಂತ್ರಿಕ ದೃಶ್ಯಗಳನ್ನು ಚಿತ್ರಿಸುತ್ತಿದ್ದರು. ಪಕ್ಷಿಗಳ ಗರಿ ಅಥವಾ ಮುಳ್ಳುಹಂದಿಗಳ ಮುಳ್ಳುಗಳಿಂದ ಅಲಂಕೃತವಾದ ಉಡುಪು ಮತ್ತು ಪಾತ್ರೆಗಳು ಕ್ರಮೇಣ ಮಣಿಗಳಿಂದ ಆಲಂಕೃತವಾದ ಯುರೋಪಿಯನ್ನರ ಬಣ್ಣದ ಬಟ್ಟೆ ಮತ್ತು ಉಪಕರಣಗಳಿಗೆ ಎಡೆಮಾಡಿಕೊಟ್ಟವು.

ಮಧ್ಯ ಅಮೆರಿಕದಲ್ಲಿ ಆದಿವಾಸಿಗಳ ಸಂಸ್ಕೃತಿ, ಕಲೆಗಳು ಬಹಳ ಉನ್ನತಮಟ್ಟದ್ದಾಗಿದ್ದುವು. ಅಭಿವೃದ್ಧಿ ಹೊಂದುತ್ತಿದ್ದ ನಗರಗಳೂ ಮತೀಯ ಕೇಂದ್ರಗಳೂ ಕಲೆಗಾರರಿಗೆ ಉತ್ತೇಜನ ನೀಡಿ ಮತೀಯ ಕಾರ್ಯಗಳನ್ನೂ ನಿಯೋಜಿಸುತ್ತಿದ್ದುವು. ಮಧ್ಯ ಅಮೆರಿಕದ ಎಲ್ಲ ಭಾಗಗಳಲ್ಲೂ ಪರಸ್ಪರ ಪ್ರಭಾವಿತ ಕಲಾಶೈಲಿಗಳಿದ್ದರೂ, ಪ್ರಾದೇಶಿಕ ವೈಶಿಷ್ಟ್ಯಗಳೂ ಕಂಡುಬರುತ್ತವೆ. ಮೆಕ್ಸಿಕೊ ಭೂಶಿರ ಮತ್ತು ಕ್ಯಾರಿಬಿಯನ್ ತೀರಪ್ರದೇಶಗಳಲ್ಲಿ ಆಜ್ಟೆಕ್, ಮಾಯ ಮತ್ತು ಪೆರಾಕ್ರುಜ್ ಜನ ಸಾಂಕೇತಿಕತೆ, ಸೂಕ್ಷ್ಮತೆ ಮತ್ತು ನೈಜತೆಗಳಿಂದ ಕೂಡಿದ್ದ ವೈಭವಪೂರ್ಣ ಮತ್ತು ವಿಸ್ತೃತವಾದ ಕಲೆಯನ್ನು ಸೃಷ್ಟಿಸಿದ್ದರು. ಆಲಂಕೃತ ಪಿರಮಿಡ್ಡುಗಳು, ದೇವಾಲಯಗಳು ಮತ್ತು ಅರಮನೆಗಳು ಸುಂದರಶಿಲ್ಪ ಮತ್ತು ವರ್ಣಚಿತ್ರಗಳಿಂದ ಕೂಡಿದ್ದು ದೇವತೆ ಮತ್ತು ಮತೀಯ ನಾಯಕರ ಸ್ಮಾರಕಗಳಾಗಿದ್ದವು. ಬೆಲೆಬಾಳುವ ಕಲ್ಲು, ಮೂಳೆ ಮತ್ತು ಶಂಖಗಳನ್ನು ಕೊರೆದು ದೇವಾಲಯಗಳಿಗೆ ಮುಡಿಪು ಮತ್ತು ಆಭರಣಗಳನ್ನೂ ಮಾಡಿದ್ದರು. ನಯವಾದ ಬಟ್ಟೆ ಅಥವಾ ಕಾಡುಗರಿ ಪುಕ್ಕಗಳ ಉಡುಪುಗಳನ್ನೂ ಮತೀಯ ಸಮಾರಂಭಗಳಲ್ಲಿ ಉಪಯೋಗಿಸುತ್ತಿದ್ದರು. ಮಡಕೆ ಕುಡಿಕೆಗಳ ಮೇಲೆ, ಸಂಕೀರ್ಣ ಪ್ರಾಣಿಗಳ ಚಿತ್ರಗಳನ್ನೂ ಮತೀಯ ದೃಶ್ಯಗಳನ್ನೂ ಸಾಂಕೇತಿಕ ಪ್ರಾಣಿರೂಪದ ಕಾಲು, ಕೈಪಿಡಿಗಳುಳ್ಳ ಪಾತ್ರೆಗಳನ್ನೂ ಸಣ್ಣ ಮತ್ತು ದೊಡ್ಡ ಮಣ್ಣಿನ ಗೊಂಬೆಗಳನ್ನೂ ಹೇರಳವಾಗಿ ನಿರ್ಮಿಸುತ್ತಿದ್ದರು. ಮಧ್ಯ ಅಮೆರಿಕದ ನಡುವಣ ಮೈದಾನಪ್ರದೇಶಗಳಲ್ಲಿ ವಿಭಿನ್ನವಾದ ಶೈಲಿಯೊಂದು ಬೆಳೆದುಬಂದಿತು.

ಓಯಕ್ಸಕ ಮತ್ತು ತಿಯೋಟಿ ಹುವಕನ್‌ಗಳಲ್ಲಿ ಬೃಹತ್ತಾದ ಪಿರಮಿಡ್ಡುಗಳೂ ದೇವಾಲಯಗಳೂ ಕಟ್ಟಲ್ಪಟ್ಟು ಬಿಗಿಯಾದ ಶೈಲಿಯ ದೊಡ್ಡ ಪ್ರತಿಮೆ ಮತ್ತು ವರ್ಣಚಿತ್ರಗಳಿಂದ ಆಲಂಕೃತವಾಗಿದ್ದವು. ಹೊಳೆಯುವ ಬಣ್ಣಗಳು ಆ ಕಟ್ಟಡಗಳ ಭವ್ಯತೆಯನ್ನು ಹೆಚ್ಚಿಸುತ್ತಿದ್ದವು. ತಿಯೋಟಿ ಹುವಕನ್‌ನಲ್ಲಿ ಮುಖವಾಡಗಳೂ ಪ್ರತಿಮೆಗಳೂ ಓಯಕ್ಸಕದಲ್ಲಿ ಜೇಡಿಮಣ್ಣಿನ ಗೊಂಬೆ, ದೇವತಾಕಾರದ ಶವಕುಂಭಗಳೂ ವೈಶಿಷ್ಟ್ಯಪೂರ್ಣವಾಗಿದ್ದವು. 10ನೆಯ ಶತಮಾನದ ಅನಂತರ ವಿಸ್ತಾರ ರಾಜ್ಯಗಳ ಸ್ಥಾಪನೆಯಾಗಿ ಟಾಲ್ಟೆಕ್, ಮಿಕ್ಸ್‌ಟೆಕ್ ಮತ್ತು ಆಜ್ಟೆಕ್ ಪ್ರಭಾವಗಳು ಹಬ್ಬಿದುವು. ಟಾಲ್ಟೆಕ್ ಸಂಸ್ಕೃತಿಯಲ್ಲಿ ಯೋಧ ಸರ್ಪಾಕಾರದ ಸ್ತಂಭಗಳೂ ಚಿರತೆ ಮತ್ತು ಹದ್ದುಗಳ ಭಯಂಕರ ಉಬ್ಬುಶಿಲ್ಪಗಳೂ ವಿಶಿಷ್ಟವಾದರೆ ಮಿಕ್ಸ್‌ಟೆಕ್ ಕಲೆಯಲ್ಲಿ ಶ್ರೀಮಂತ ವರ್ಗಕ್ಕೆ ಪ್ರಾಧಾನ್ಯವಿದ್ದು ಅವರ ಉಪಯೋಗಕ್ಕಾಗಿ ಚಿನ್ನ, ಬೆಳ್ಳಿ ಮತ್ತು ತಾಮ್ರಗಳಿಂದ ಅದ್ಭುತವಾದ ಆಭರಣಗಳೂ ಬೆಲೆಬಾಳುವ ಕಲ್ಲು ಮತ್ತು ಮರದ ವಸ್ತು ಆಯುಧಗಳೂ ನಿರ್ಮಿತವಾದವು. ಆಜ್ಟೆಕ್ ಕಲೆಯಲ್ಲಿ ಭಯಂಕರ ಸರ್ಪ, ದೈತ್ಯ ಅಥವಾ ಮೃತರ ರೂಪದ ದೇವತೆಗಳಿಗೂ ಚಿನ್ನದ, ವಜ್ರದ, ಮರದ ಕೆತ್ತನೆಗಳಿಗೂ, ವರ್ಣ ಬರೆಹಗಳಿಗೂ ಪ್ರಾಮುಖ್ಯವಿತ್ತು.

ಇದೇ ಉನ್ನತಮಟ್ಟವನ್ನು ತೋರುವ ಕಲೆಯ ಅವಶೇಷಗಳು ಪನಾಮ, ಈಕ್ವಡಾರ್ ಮತ್ತು ಕೊಲಂಬಿಯ ಪ್ರದೇಶಗಳಲ್ಲಿ ಕಂಡುಬಂದರೂ ಅದರಲ್ಲಿ ಮಧ್ಯ ಅಥವಾ ದಕ್ಷಿಣ ಅಮೆರಿಕದ ಪ್ರಭಾವ ಅಧಿಕವಾಗಿದೆ. ಕ್ಯಾರಿಬಿಯನ್ ದ್ವೀಪಗಳಲ್ಲಿ 1ನೆಯ ಶತಮಾನದ ಟೈನೊ ಸಂಸ್ಕೃತಿಯ ಕಲೆ ಗಮನಾರ್ಹವಾದುದು. ಈ ಜನರ ಪುರಾತನ ನೃತ್ಯವೇದಿಕೆಗಳೂ ಮತೀಯಜಗತಿಗಳೂ ಮಧ್ಯ ಅಮೆರಿಕದ ಪ್ರಭಾವವನ್ನೂ, ಮಡಕೆ ಕುಡಿಕೆಗಳ ಮೇಲಿನ ಚಿತ್ರಕಲೆ ಕೆತ್ತನೆಗಳು ದಕ್ಷಿಣ ಅಮೆರಿಕದ ಪ್ರಭಾವವನ್ನೂ ತೋರುತ್ತವೆ. ಆದರೆ ಕಲ್ಲು ಕೆತ್ತನೆಯ ಕೃತಿಗಳು ವೈಶಿಷ್ಟ್ಯಪೂರ್ಣ ಪ್ರತ್ಯೇಕತೆಯನ್ನು ತೋರುತ್ತವೆ. ಬೃಹದಾಕಾರದ ನಯಗೊಳಿಸಿದ ಮುಖವಾಡಗಳನ್ನು ಧರಿಸಿ ನಗುತ್ತಿರುವ ಮಾನವ ತಲೆಗಳಾಕಾರದ ಈ ಶಿಲ್ಪಗಳು ಜನರ ಶಕ್ತಿ ಸಾಮರ್ಥ್ಯಗಳ ಮೂಲವೆಂದು ನಂಬಲಾಗಿತ್ತು.

ಮಧ್ಯ ಆಂಡೀಸ್ ಪರ್ವತದ ನೆರಳಿನಲ್ಲಿ ಪೆರು ಮತ್ತು ಬೊಲಿವಿಯ ಪ್ರದೇಶಗಳಲ್ಲಿ ಮಧ್ಯ ಅಮೆರಿಕ ಕಲೆಯಷ್ಟೇ ಉನ್ನತವಾದ ಕಲೆ ಪ್ರ.ಶ.ಪೂ 1ನೆಯ ಶತಮಾನದಿಂದ ಬೆಳೆದುಬಂದಿತು. ಆ ಕಾಲದ ಚಾವಿನ್ ಕಲೆಯಲ್ಲಿ ರೆಕ್ಕೆಗಳಿದ್ದ ಬೆಕ್ಕಿನ ಜಾತಿಯ ದೇವತೆಯ ಚಿತ್ರಗಳು ಮಣ್ಣಿನ ಪಾತ್ರೆಗಳ ಮೇಲೂ ಶಿಲ್ಪರೂಪದಲ್ಲೂ ಆಭರಣಗಳ ರೂಪದಲ್ಲೂ ಪ್ರಾಮುಖ್ಯವಾಗಿವೆ. ಮೋಚಿಕ ಸಂಸ್ಕೃತಿಯಲ್ಲಿ ಮಹೋನ್ನತವಾದ ಮತೀಯ ಸಂಬಂಧವಾದ ಪಾತ್ರೆಗಳ ಮೇಲಿನ ಆಲಂಕಾರಿಕ ಚಿತ್ರಗಳು ಜನಜೀವನರೀತಿಗಳನ್ನು ನಿರೂಪಿಸುತ್ತವೆ. ಚಿನ್ನದ ಆಭರಣಗಳು, ತಾಮ್ರ, ಬೆಳ್ಳಿ ಮತ್ತು ಮರದ ಕೆತ್ತನೆಗಳೂ ಮೋಚಿಕ ಕಲೆಯ ಉತ್ತಮ ಪ್ರತೀಕಗಳಾಗಿವೆ. ಶ್ರೀಮಂತವರ್ಗ, ದೇವಾಲಯ ಮತ್ತು ಅರಮನೆಗಳ ಉಪಯೋಗಕ್ಕೆ ಮೀಸಲಾಗಿದ್ದ ಈ ಕಲೆಯಲ್ಲಿ ಅತ್ಯುತ್ತಮವಾದ ದೇವತೆ ಮತ್ತು ಮತೀಯ ನಾಯಕರ ಭಿತ್ತಿಚಿತ್ರಗಳು ಅಸಾಧಾರಣಕೃತಿಗಳಾಗಿವೆ. ದಕ್ಷಿಣ ತೀರದ ಪರಾಕ ಮತ್ತು ನಾಜ್ಕ ಕಲೆಯಲ್ಲಿ ಉತ್ತಮವಾಗಿ ಚಿತ್ರಿತವಾದ ಮಣ್ಣಿನ ಪಾತ್ರೆಗಳ ಉಡುಗೆ ತೊಡುಗೆಗಳೂ ಗಮನಾರ್ಹವಾಗಿವೆ. ಚಿನ್ನ, ಮರ ಮತ್ತು ಗರಿಗಳಿಂದ ಮಾಡಿದ ವಸ್ತುಗಳನ್ನು ಸಮಾಧಿಗಳಲ್ಲಿ ಕಾಣಿಕೆಗಳಾಗಿ ಅರ್ಪಿಸುತ್ತಿದ್ದರು. ಬೊಲಿವಿಯದ ಪ್ರಸ್ಥಭೂಮಿ ಪ್ರದೇಶದಲ್ಲಿರುವ ಥಿಯಹುವನಕೊದ ವಿಶಾಲ ದೇವಾಲಯ, ಅರಮನೆಯ ಅಂಗಣಗಳಲ್ಲೂ ಮಹಾದ್ವಾರಗಳ ಮೇಲೂ ಮಹತ್ತರವಾದ ಶಿಲ್ಪಗಳೂ ಉಬ್ಬುಶಿಲ್ಪಗಳೂ ನಿರ್ಮಿತವಾಗಿದ್ದು ಮಧ್ಯ ಆಂಡೀಸ್ ಪ್ರದೇಶದಲ್ಲೆಲ್ಲ ಪ್ರಭಾವ ಬೀರಿವೆ. ಚಿಮು ಸಂಸ್ಕೃತಿಯಲ್ಲಿ ಪುನರುಜ್ಜೀವಿತವಾದ ಮೋಚಿಕ ಕಲೆಯ ಮಣ್ಣಿನ ಪಾತ್ರೆ ಮತ್ತು ಚಿನ್ನದ ಕೆತ್ತನೆ ಕೆಲಸಗಳು ಉತ್ತಮ ಕೃತಿಗಳಾಗಿವೆ.

ಅಮೆರಿಕದ ಆದಿಮಜನರ ಸಂಸ್ಕೃತಿ, ಕಲೆಗಳಲ್ಲಿ ಇಂಕ ಜನರ ಸಂಸ್ಕೃತಿ ಕೊನೆಯದು ಮತ್ತು ಉನ್ನತವಾದುದೆಂದರೆ ತಪ್ಪಾಗಲಾರದು. ಉಪಯೋಗಪ್ರಧಾನಶೈಲಿಯಿಂದ ಕೂಡಿದ್ದರೂ ಕಲಾಪ್ರೌಢಿಮೆ ಪಡೆದಿದ್ದ ವಾಸ್ತುಶಿಲ್ಪ, ಮಣ್ಣಿನ ಪಾತ್ರೆಗಳ ನಿರ್ಮಾಣ ಮತ್ತು ಉಡುಗೆ ತೊಡುಗೆಗಳು ಈ ಸಂಸ್ಕೃತಿಯ ವಿಶಿಷ್ಟಕೊಡುಗೆಗಳಾಗಿವೆ. ದಕ್ಷಿಣ ಆಂಡೀಸ್ ಪರ್ವತ ಪ್ರದೇಶಗಳಲ್ಲಿ ಸಾಮಾನ್ಯ ಮಟ್ಟದ ಕಲೆ ಕಂಡುಬಂದರೂ, ಅವರ ಸಮಾಧಿಗಳಲ್ಲಿ ನಿಕ್ಷಿಪ್ತವಾಗಿದ್ದ ವಸ್ತುಗಳು ಜೇಡಿಮಣ್ಣಿನ ಕೊಳವೆಗಳು, ಮೂಳೆಯ ಕೊಳಲುಗಳು, ಬಟ್ಟೆಗಳು, ಉಡುಪುಗಳು ಮತ್ತು ಮಣ್ಣಿನ ಪಾತ್ರೆಗಳು ಕಲಾಪೂರ್ಣವಾಗಿವೆ. ಇತರ ದೇಶಗಳ ಪ್ರಭಾವ ಹೆಚ್ಚಾಗಿದ್ದರೂ ಇಲ್ಲಿನ ಮನುಷ್ಯಾಕಾರದ ವರ್ಣಚಿತ್ರಿತ ಶವಕುಂಭಗಳೂ ತಾಮ್ರ ಮತ್ತು ಕಂಚಿನ ಉಬ್ಬುಶಿಲ್ಪಗಳ ಫಲಕಗಳೂ ಗಮನಾರ್ಹವಾದವು.

ಸಮುದ್ರಮಧ್ಯ ಭೂಪ್ರದೇಶಗಳ ಕಲೆಗಳಲ್ಲಿ ಮತೀಯ ಅಥವಾ ಸಾಮಾಜಿಕ ಗುರಿ ಪ್ರಧಾನವಾಗಿದ್ದು ಸೌಂದರ್ಯೋಪಾಸನೆಗೆ ಅವಕಾಶವಿಲ್ಲವಾಗಿದೆ. ಮಾಂತ್ರಿಕ, ಮತೀಯ ಭಾವನೆಗಳು ಆಸ್ಟ್ರೇಲಿಯ, ಮೆಲನೇಷ್ಯಗಳ ಕಲೆಯಲ್ಲಿ ಪ್ರಬಲವಾಗಿದ್ದು ಪಾಲಿನೇಷ್ಯ, ಮೈಕ್ರೋನೇಷ್ಯ ಪ್ರದೇಶದಲ್ಲಿ ಸಾಮಾಜಿಕ ಉದ್ದೇಶಗಳು ಮೇಲುಗೈ ಪಡೆದಿವೆ. 19ನೆಯ ಶತಮಾನದಲ್ಲಿ ಯುರೋಪಿಯನ್ನರ ಸಂಪರ್ಕದಿಂದ ಲೋಹಗಳ ಉಪಕರಣಗಳು ದೊರಕುವವರೆಗೂ ಶಿಲಾಯುಗ ಸಂಸ್ಕೃತಿ ಹಂತದಲ್ಲಿದ್ದ ಇವರ ಕಲಾ ಪ್ರೌಢಿಮೆ ಅಭಿನಂದನೀಯವಾಗಿದೆ. ಆಫ್ರಿಕದ ನೀಗ್ರೋಗಳು ಶಿಲ್ಪಗಳಲ್ಲಿ ಸಾಂಪ್ರದಾಯಿಕ ಅಂಶಗಳಿಗೆ ಗಮನ ಕೊಟ್ಟರೆ ಇಲ್ಲಿಯ ಕಲೆಗಾರರು ಆಲಂಕಾರ ಭಾಗಕ್ಕೆ ಪ್ರಾಧಾನ್ಯ ಕೊಟ್ಟಿದ್ದಾರೆ. ಈ ಕಲಾ ಸಂಪ್ರದಾಯದಲ್ಲಿ ಉದ್ವೇಗಪೂರ್ಣ ಭಾವನಾಮಯವಾದ ಬಾಹ್ಯರೂಪವಾದ ಚಿತ್ರ ದೃಶ್ಯದ ಪರಿಣಾಮವನ್ನು ಹೆಚ್ಚಿಸುತ್ತದೆ.

ಆಸ್ಟ್ರೇಲಿಯದ ಆದಿಮಜನರ ಕಲೆ ಪುರಾತನ, ಕಾಲ್ಪನಿಕ ಸ್ವಪ್ನಲೋಕದ ಸರ್ವಶಕ್ತವಾದ ದೈವಗಳಿಗೆ ನಿರ್ದೇಶಿತವಾಗಿದೆ. ಕೆಲವು ಬಂಡೆಗಳ ಮೇಲಿನ ವರ್ಣಚಿತ್ರ ಮತ್ತು ರೇಖಾಚಿತ್ರಗಳು ಸಾಮಾಜಿಕವಾಗಿದ್ದರೂ ಮುಖ್ಯ ಕಲಾಕೃತಿಗಳೆಲ್ಲವೂ ಪವಿತ್ರ ಮತೀಯ ವಸ್ತುಗಳನ್ನೇ ರೂಪಿಸುತ್ತವೆ. ವರ್ಣಚಿತ್ರಗಳ ಶೈಲಿಗಳು ಭಿನ್ನವಾಗಿದ್ದು, ಸಣ್ಣ ಜೀವಂತ ಕೃತಿಗಳಿಂದ ಆರಂಭಿಸಿ ಮಹತ್ತರವಾದ ಅತಿಮಾನವರೂಪಗಳ ಚಿತ್ರಣದವರೆಗೂ ವ್ಯಾಪ್ತವಾಗಿವೆ. ಪರ್ವತಗುಹೆಗಳೊಳಗಿನ ಕಲ್ಲುಬಂಡೆಗಳ ಮೇಲಿರುವ ಈ ಕೃತಿಗಳನ್ನು ಉತ್ತರ ಆಫ್ರಿಕ, ಸ್ಪೇನ್‌ಗಳ ಗುಹಾಂತರ್ಗತ ಪ್ರಾಗೈತಿಹಾಸಿಕ ಕಲೆಗೆ ಹೋಲಿಸಲಾಗಿದೆ. ಕ್ಷ-ಕಿರಣ ಶೈಲಿಯಲ್ಲಿ ದೇಹದ ಒಳಭಾಗದ ಅಂಗಗಳನ್ನು ಸೂಚ್ಯವಾಗಿ ಬಾಹ್ಯಗೋಚರವಾಗುವಂತೆ ತೋರಿಸಿರುವುದು ಈ ಕಲೆಯ ವೈಶಿಷ್ಟ್ಯಗಳಲ್ಲೊಂದು. ಸಮುದ್ರ ಮಧ್ಯಭೂಭಾಗಗಳ ಇತರ ಪ್ರದೇಶಗಳಲ್ಲಿರುವ ವರ್ಣಚಿತ್ರ ತಂತ್ರ ಮತ್ತು ಮಾಧ್ಯಮಗಳು ಆಸ್ಟ್ರೇಲಿಯದಲ್ಲಿ ಬಳಕೆಯಲ್ಲಿದ್ದರೂ ಅವುಗಳಲ್ಲಿ ಹಲವಾರು ಪ್ರಾದೇಶಿಕ ವೈಪರೀತ್ಯಗಳು ಇದ್ದವು. ಮರ, ಜೇಡಿಮಣ್ಣು ಮತ್ತು ಮೇಣದ ಕಂಡರಿಸಿದ ಗೊಂಬೆಗಳು ವಿರಳವಾದರೂ ಕೆತ್ತಿದ ಮತ್ತು ಬಣ್ಣ ಹಾಕಿದ ಸ್ಮಾರಕ ಸ್ತಂಭಗಳು ಗುಂಪುಗುಂಪಾಗಿ ಮೇಲ್ವಿಲ್ ದ್ವೀಪದ ಶ್ಮಶಾನಭೂಮಿಯಲ್ಲಿ ಕಂಡುಬರುತ್ತವೆ. ಮರದಕಾಂಡ ಮತ್ತು ಭೂಮಿಯ ಮೇಲ್ಭಾಗದಲ್ಲಿ ಕೊರೆಯಲಾದ ಸಾಂಕೇತಿಕ ಪ್ರಾಣಿಸಂಬಂಧಸೂಚಕ ನಕ್ಷೆಗಳು (ಟೋಟೆಮಿಕ್ ಡಿಸೈನ್ಸ್) ಅವರ ಆಯುಧಗಳ ಮೇಲಣ ಕೆತ್ತನೆಗಳ ಮಾದರಿಯಲ್ಲಿದ್ದ ಏಕಕೇಂದ್ರವೃತ್ತ, ಸುರುಳಿಯಾಕಾರ, ಕುಣಿಕೆ ಅಥವಾ ಡೊಂಕಾದ ಗೆರೆಗಳ ರೂಪವನ್ನು ಹೊಂದಿವೆ.

ನ್ಯೂಗಿನಿಯಲ್ಲಿ ಕೇಂದ್ರೀಕೃತವಾಗಿರುವ ಮೆಲನೇಷ್ಯದ ಕಲೆ ಅವರ ವ್ರತನಿಯಮಗಳ ಅಂಗವಾಗಿ ಬೆಳೆದ ಸಾಂಪ್ರದಾಯಿಕ ಜೀವನದೊಂದಿಗೆ ನಿಕಟಸಂಪರ್ಕ ಹೊಂದಿದೆ. ಅಲ್ಲಿನ ಅನೇಕ ಕಲಾಶೈಲಿಗಳಲ್ಲಿ ಸೆಪಿಕ್ ನದೀತೀರದ ಕಲೆ ಪ್ರಮುಖವಾಗಿದ್ದು ವೈವಿಧ್ಯ ಮತ್ತು ವಿಪುಲತೆಯಿಂದ ಕೂಡಿದೆ. ಈ ಕಲೆಯಲ್ಲಿ ಪೂರ್ವಿಕರ ಗೊಂಬೆಗಳು, ಮತೀಯವಾದ ಕೊಳಲುಗಳು, ಮರದ ಕೆತ್ತನೆಯ ಕಾಲುಮಣೆಗಳು, ಗುರಾಣಿಗಳು, ಡಮರುಗಗಳು ಮುಂತಾದ ವಸ್ತುಗಳನ್ನು ವೈವಿಧ್ಯಪೂರ್ಣವಾಗಿಯೂ ಮನೋಹರವಾಗಿಯೂ ನಿರ್ಮಿಸಲಾಗಿದೆ. ಶಿಲ್ಪಗಳಲ್ಲಿ, ಚೂಪಾಕಾರದ ತಲೆ, ಪ್ರಮುಖವಾದ ಮೂಗು ಮತ್ತು ಲಂಬಿತದೇಹ–ಈ ಲಕ್ಷಣಗಳು ಗಮನಾರ್ಹವಾಗಿವೆ. ಬಣ್ಣ ಹಾಕಿರುವುದಕ್ಕೂ ಮುಖದ ರೂಪುರೇಖೆಗಳಿಗೂ ಹೊಂದಿಕೆಯಿಲ್ಲದಿರುವುದರಿಂದ, ಕೆತ್ತನೆ ಮತ್ತು ಚಿತ್ರಕಾರ್ಯಗಳ ನಡುವೆ ಒಂದು ರೀತಿಯ ಬಿರುಸು ಕಂಡುಬರುತ್ತದೆ. ಇಂಥ ಚಿತ್ರಗಳನ್ನು ಮುಟ್ಟುವುದರಿಂದ ನಾಯಕರಿಗೆ ವಾಚಾಳತನ ಬರುವುದೆಂಬ ನಂಬಿಕೆ ಇತ್ತು. ಸ್ಮಾರಕಫಲಕಗಳು ಮತ್ತು ಮರದ ಮುಖವಾಡಗಳು ಈ ಶೈಲಿಯ ಕಲಾಕೃತಿಗಳಲ್ಲಿ ಮುಖ್ಯವಾದುವು. ನ್ಯೂ ಐರ್ಲೆಂಡಿನಲ್ಲಿನ ಕಲೆ ಮೆಲನೇಷ್ಯದ ಕಲೆಗಳಲ್ಲಿ ಶ್ರೇಷ್ಠವಾದದ್ದು. ಮೃತರ ಸ್ಮಾರಕಾರ್ಥವಾಗಿ ನಡೆಸುವ ಮಲಗನ್ ಹಬ್ಬಕ್ಕೋಸ್ಕರ ಸಿದ್ಧಗೊಳಿಸುವ ಕೆತ್ತನೆಗಳು ಬಹಳ ವ್ಯಾಪ್ತವಾದುವು. ಅದಕ್ಕೋಸ್ಕರ ನಿರ್ಮಿತವಾದ ಆವರಣದಲ್ಲಿ ಆರು ತಿಂಗಳಿಗೂ ಹೆಚ್ಚು ಕಾಲ ಅನೇಕ ಶಿಲ್ಪಿಗಳು ಕೆಲಸ ಮಾಡಿ ಸ್ಮಾರಕಫಲಕಗಳು, ಶಿಲೆಗಳಿಂದ ಕೂಡಿದ ಮುಖವಾಡಗಳು ಮತ್ತು ಎತ್ತರವಾದ ಸ್ಮಾರಕ ಸ್ತಂಭಗಳನ್ನು ಕಡೆಯುತ್ತಿದ್ದರು. ಅನಂತರ ಈ ಕೃತಿಗಳನ್ನೆಲ್ಲ ಪ್ರದರ್ಶಿಸುತ್ತಿದ್ದರು. ಈ ಶಿಲ್ಪಗಳ ಮೇಲೆ ಕಂಡುಬರುವ ಹಂದಿ, ಮೊಸಳೆ, ಪಕ್ಷಿಗಳು ಮತೀಯ ಸಂಕೇತಗಳಾಗಿದ್ದವು. ಈ ಕೆತ್ತನೆ ಮತ್ತು ಮುಖವಾಡಗಳಿಗೆ ಬಣ್ಣಗಳನ್ನು ಹಾಕುತ್ತಿದ್ದುದಲ್ಲದೆ ಕಣ್ಣುಗಳನ್ನು ಕಪ್ಪೆಚಿಪ್ಪುಗಳಿಂದ ತೋರಿಸುತ್ತಿದ್ದರು. ನ್ಯೂಬ್ರಿಟನ್ ದ್ವೀಪದಲ್ಲಿ ವಿಶಿಷ್ಟವಾದ ಮುಖವಾಡಗಳನ್ನೂ ನ್ಯೂಕೆಲೆಡೋನಿಯದಲ್ಲಿ ದ್ವಾರಸ್ತಂಭ ಮತ್ತು ಸಮುದ್ರಶಕ್ತಿಗಳ ಮುಖವಾಡಗಳನ್ನೂ ಸಾಲಮನ್ ದ್ವೀಪಗಳಲ್ಲಿ ಶಂಖಗಳಿಂದ ಆಲಂಕೃತವಾದ ಗೊಂಬೆಗಳು ಮತ್ತು ದೋಣಿಗಳಿಗೆ ಜೋಡಿಸಿದ ಗೊಂಬೆಗಳ ತಲೆಗಳನ್ನೂ ವಿಶಿಷ್ಟವಾದ ಕಲಾಕೃತಿಗಳೆಂದು ಪರಿಗಣಿಸಬಹುದು.

ಪಾಲಿನೇಷ್ಯದ ದ್ವೀಪಗಳಲ್ಲಿ ಜ್ಯಾಮಿತೀಯ ನಕಾಶೆಗಳನ್ನು ಕೆತ್ತುವ ಕಲೆ ರೂಢಿಯಲ್ಲಿತ್ತು. ಈ ನಕಾಶೆಗಳನ್ನು ಕೊಡಲಿ ಮತ್ತು ದೋಣಿಯ ಹುಟ್ಟುಗಳ ಮೇಲೆ ಕೆತ್ತಿರುತ್ತಿದ್ದರು. ಕೆಲವು ಸಲ ಅವರ ತಪಾ ಉಡುಗೆಗಳ ಮೇಲೂ ಬಿಡಿಸುತ್ತಿದ್ದರು. ಕುಕ್ ಮತ್ತು ಆಸ್ಟ್ರಲ್ ದ್ವೀಪಗಳಲ್ಲಿ ಕೊಡಲಿ, ಹುಟ್ಟು ಮತ್ತು ಭರ್ಜಿಗಳು ಉಪಯೋಗಿಸಲಾಗದಷ್ಟು ದೊಡ್ಡದಾಗಿದ್ದು ಈ ನಕಾಶೆಗಳಿಂದ ಆಲಂಕರಿಸಲ್ಪಟ್ಟಿರುತ್ತಿದ್ದವು. ಬಹಳ ಅಂದವಾಗಿ ರೇಖಾಚಿತ್ರಗಳಿಂದ ಆಲಂಕೃತವಾದ ಈ ವಸ್ತುಗಳು ಉತ್ತಮ ಕಲಾಕೃತಿಗಳೆಂದು ಪರಿಗಣಿಸಲ್ಪಟ್ಟಿವೆ. ಮಧ್ಯ ಪಾಲಿನೇಷ್ಯದಲ್ಲಿ ಶಿಲ್ಪಗಳು ನಿರ್ಮಿತವಾದರೂ ಮೆಲನೇಷ್ಯ ಪ್ರದೇಶಗಳಲ್ಲಿರುವಂತೆ ಹೇರಳವಾಗಿರಲಿಲ್ಲ. ಕುಕ್ ದ್ವೀಪನಿವಾಸಿಗಳು ದೇವತೆಗಳನ್ನು ಈ ರೀತಿ ಕಡೆಯುತ್ತಿದ್ದರು. ಮಾರ್ಕ್ವಿಸ್ ದ್ವೀಪದ ಕಲೆ ಪ್ರಗತಿಪರವಾಗಿದ್ದು, ಹೆಚ್ಚಾಗಿ ಒಂದು ಸಾಂಕೇತಿಕವಾದ

ಮಾನವತಲೆಯ ಚಿತ್ರವನ್ನು ತಲೆಪಟ್ಟಿ, ಮೂಳೆಯ ಕಿವಿಯುಂಗುರ, ನೇತಾಡುವ ಹಾರ ಮತ್ತು ದಂಡೆಗಳ ಮೇಲೆ ಮೂಡಿಸಿರುತ್ತಿದ್ದರು. ಮರ ಮತ್ತು ಕಲ್ಲಿನ ಸಣ್ಣ ಮತ್ತು ದೊಡ್ಡ ಪ್ರತಿಮೆಗಳನ್ನು ಮಾಡಿದರೂ ಒಂದೇ ರೀತಿಯ ಆಲಂಕೃತಶೈಲಿಯನ್ನು ಅನುಸರಿಸುತ್ತಿದ್ದುದರಿಂದ, ಏಕರೂಪತೆ ಮತ್ತು ಹೊಸ ವಿಧಾನಗಳಿಲ್ಲದಿರುವುದು ಈ ಕಲೆಯ ಮುಖ್ಯ ಲಕ್ಷಣಗಳಾಗಿವೆ. ನ್ಯೂಜಿಲೆಂಡಿನ ಮಾವೊರಿಜನರ ಕಲೆ ವಿಸ್ತೃತವಾಗಿದ್ದು ಅವರ ದೋಣಿಗಳು, ಸಾಮೂಹಿಕ ಗೃಹಗಳು, ಭಾಷಣದಂಡ (ಆರೇಟರ್ ಸ್ಟ್ಯಾಫ್), ಮಕ್ಕಳ ಮುಕ್ಕಗಳ ಪೆಟ್ಟಿಗೆ ಮತ್ತು ಯುದ್ಧದಂಡಗಳು ಬಹಳ ಅಂದವಾಗಿ ಶೃಂಗರಿಸಲ್ಪಟ್ಟಿರುತ್ತಿದ್ದವು. ಹೆಯಿಟಿಕಿ ಎಂಬ ಹೆಸರಿನ ಯಂತ್ರ ಮತ್ತು ಯುದ್ಧದಂಡಗಳನ್ನು ಮರ ಅಥವಾ ಪಚ್ಚೆಶಿಲೆಯಲ್ಲಿ (ಜೇಡ್) ಕೆತ್ತುತ್ತಿದ್ದರು. ಮಾವೊರಿನಕಲೆ ಸಾಮಾಜಿಕವಾಗಿದ್ದು ಅಲ್ಲಿ ಮತೀಯ ಪ್ರಭಾವಗಳು ಕಂಡುಬರುವುದಿಲ್ಲ. ಅವರ 24 ಮೀ ಉದ್ದದ ದೋಣಿಗಳನ್ನು ಚಿತ್ರಾಲಂಕಾರಗಳಿಂದಲೂ ದೊಡ್ಡ ಫಲಕಗಳಿಂದಲೂ ಶೃಂಗರಿಸುತ್ತಿದ್ದರು. ಈ ಕಲೆಯಲ್ಲಿ ಹೂವಿನ ಮತ್ತು ಸುರುಳಿಯಾಕಾರದ ಕೆತ್ತನೆಗಳು ಬಹಳ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಟ್ಟಿವೆ. ಪಕ್ಕದ ಈಸ್ಟರ್ ದ್ವೀಪಗಳಲ್ಲಿ ಒಳ್ಳೆಯ ಮರದ ಅಭಾವವಿದ್ದುದರಿಂದ ಕಲ್ಲಿನಲ್ಲಿ ಪೂರ್ವಿಕರ ಶಿಲ್ಪಗಳನ್ನು ಕಡೆಯುತ್ತಿದ್ದರು. ಬೃಹದಾಕಾರದ ಈ ಶಿಲ್ಪಗಳನ್ನು ಅಗ್ನಿಪರ್ವತಗಳ ಇಳಿಜಾರಿನಲ್ಲಿ ಸ್ಥಾಪಿಸಿರುತ್ತಿದ್ದರು. ಪ್ರವಾಹದಲ್ಲಿ ಕೊಚ್ಚಿಬಂದ ಮರದಲ್ಲಿ ಸಣ್ಣ ಪ್ರತಿಮೆಗಳನ್ನೂ ಹೃದಯಾಭರಣಗಳನ್ನೂ ಇನ್ನಿತರ ಸಣ್ಣ ವಸ್ತುಗಳನ್ನೂ ಬಹಳ ಸೂಕ್ಷ್ಮವಾಗಿ ಕೆತ್ತುತ್ತಿದ್ದರು. ಹವಾಯ್ ದ್ವೀಪದಲ್ಲಿ ಯುದ್ಧದೇವತೆ ಕುನ ಪೂಜೆ ಮುಖ್ಯವಾದ ಮತೀಯ ಆಚರಣೆಯಾಗಿತ್ತು. ದೇವಾಲಯಗಳ ಸುತ್ತ ಆರಡಿಗಳಷ್ಟು ಎತ್ತರದ ಆವರಣವಿದ್ದು ನಾಯಕ ಮತ್ತು ಅರ್ಚಕರು ಮಾತ್ರ ಪ್ರವೇಶಿಸಿ ಯುದ್ಧಾಭಿಮಾನಿ ದೇವತೆಯ ಭಯಂಕರ ಪ್ರತಿಮೆಯನ್ನು ನೋಡಬಹುದಾಗಿತ್ತು. ಪುಕ್ಕಗಳ ಉಡುಗೆ, ಪುಕ್ಕಗಳ ಉಡುಪುಳ್ಳ ಜೊಂಡಿನ ಗೊಂಬೆ ಮತ್ತು ಚಿತ್ರಿತ ಬೋಗುಣಿಗಳನ್ನೂ ಈ ಜನ ನಿರ್ಮಿಸುತ್ತಿದ್ದರು.

ಮೆಲನೇಷ್ಯದ ಕಲೆ ಸರಳವಾಗಿದ್ದು, ಕಲಾವಸ್ತುಗಳ ಅಭಾವದಿಂದ ಹಿಂದುಳಿದಿತ್ತು. ಆಭರಣ, ತಟ್ಟೆಗಳು, ಕರುಮಾಡಿನ ಮುಖವಾಡಗಳು ಮತ್ತು ಕೊಂಚಮಟ್ಟಿಗೆ ಗೊಂಬೆಗಳು ಇವರ ಮುಖ್ಯ ಕಲಾಕೃತಿಗಳಾಗಿದ್ದವು. ಇವರ ಕಲಾಕೃತಿಗಳೆಲ್ಲ ಉಪಯುಕ್ತವಾಗಿದ್ದವು. ಮಾರ್ಷಲ್‌ದ್ವೀಪನಿವಾಸಿಗಳ ಮರದಲ್ಲಿ ಕೆತ್ತಿದ ಭೂಪಟಗಳು, ಕೆರೊಲಿನ್ ದ್ವೀಪವಾಸಿಗಳ ಷಾರ್ಕ್ ಮೀನಿನ ಹಲ್ಲುಗಳಿಂದ ಕೂಡಿದ್ದ ಉತ್ತಮ ದರ್ಜೆಯ ಖಡ್ಗಗಳು, ಮ್ಯಾಟಿದ್ವೀಪವಾಸಿಗಳ ಮರದ ತಟ್ಟೆಗಳು ಈ ಕಲೆಗಾರರ ಕುಶಲತೆಗೆ ಸಾಕ್ಷಿಯಾಗಿವೆ.

ಹೊರಗಿನವರಿಗೆ ರೂಕ್ಷ ಅಥವಾ ಅನಾಗರಿಕವಾಗಿ ಕಂಡರೂ, ಆದಿಮಜನರ ಕಲೆ ಉತ್ತಮ ಅಭಿರುಚಿ, ಕಲಾಪ್ರೌಢಿಮೆ ಮತ್ತು ತಾಂತ್ರಿಕತೆಗಳನ್ನೊಳಗೊಂಡಿದ್ದು ಆ ಜನರ ಉನ್ನತಸಾಧನೆಯ ಪ್ರತೀಕಗಳಾಗಿವೆ. (ಬಿ.ಕೆ.ಜಿ.)

**ಆದಿಮಾನವ :** ಮಾನವನ (ಹೋಮೊಎರೆಕ್ಟಸ್) ಉಗಮ ಹತ್ತು ಲಕ್ಷ ವರ್ಷಗಳ ಹಿಂದೆಯೇ ಆಗಿರಬೇಕೆಂದು ಊಹಿಸಿರುತ್ತಾರೆ. ಆದರೆ ಮಾನವ ಈಗಿನ ರೂಪಿನಲ್ಲೇ ಉದಿಸಲಿಲ್ಲ. ಆತ ಹಲವು ಅವಸ್ಥಾಂತರಗಳನ್ನು ಪಡೆದಿರಬೇಕು. ಅವನ ಪೂರ್ವಜರು ಯಾರು, ಅವನ ಮೂಲಸ್ವರೂಪ ಹೇಗಿತ್ತು ಎಂಬುವು ಜಟಿಲ ಪ್ರಶ್ನೆಗಳಾಗಿವೆ. ಡಾರ್ವಿನ್ನನ ಪರಿಣಾಮವಾದದ ಫಲವಾಗಿ ಕಾಲಕಾಲಕ್ಕೆ ಜೀವಿಗಳು ಬದಲಾವಣೆ ಹೊಂದುತ್ತಾ ಹೋಗುತ್ತವೆ ಎಂಬುದನ್ನು ಒಪ್ಪಿಕೊಂಡಮೇಲೆ ಮಾನವನ ಪೂರ್ವಜರು ಕಪಿಕುಲದವರಾಗಿರಬೇಕೆಂದು ಒಂದು ವಾದವಿತ್ತು. ಕಾರಣ ಕಪಿ ಮಾನವನ ತೀರ ಸಮೀಪ ಬಂಧುವಾಗಿರುವುದೇ. ಆದರೆ ಮಾನವ ನೇರವಾಗಿ ಕಪಿಕುಲದಿಂದ ಅವಸ್ಥಾಂತರ ಹೊಂದಲಿಲ್ಲವೆಂದೂ ಮಾನವನಿಗೂ ಕಪಿಗೂ ಮೂಲ ಈಗ ಅಳಿದು ಹೋಗಿರುವ ಬೇರೆ ಒಂದು ಪ್ರಾಣಿಯಾಗಿರಬೇಕೆಂದೂ ತಜ್ಞರ ಮತವಾಗಿದೆ. ಪ್ರಾಣಿ ಮಾಲೆಯಲ್ಲಿ ಮಾನವನನ್ನು ಸೇರ್ಪಡಿಸಿರುವ ಆ ಕೊಂಡಿಯನ್ನು (ಮಿಸಿಂಗ್ ಲಿಂಕ್) ಅರಸುವುದರಲ್ಲಿ ವಿಜ್ಞಾನಿಗಳು ಪೂರ್ಣಪ್ರಯತ್ನ ನಡೆಸಿದ್ದಾರೆ.

ಆದಿಮಾನವ ಮೊದಲು ಕಾಣಿಸಿಕೊಂಡಿದ್ದು ಎಲ್ಲಿ ಎಂಬ ಬಗ್ಗೆ ಅಭಿಪ್ರಾಯ ಭೇದವಿದೆ. ಅವನು ಹುಟ್ಟಿದುದು ಮಧ್ಯ ಏಷ್ಯದಲ್ಲಿ ಎಂದು ಊಹಿಸಲಾಗಿತ್ತು. ಆದರೆ ಕೆಲವು ವಿಜ್ಞಾನಿಗಳು ಈ ಉಗಮ ಆಫ್ರಿಕದಲ್ಲಾಗಿರಬೇಕೆಂದೂ (ಮಿಯೊ ಸೀನ್ ಕಾಲದಲ್ಲಿ ಪೂರ್ವ ಮತ್ತು ಮಧ್ಯ ಆಫ್ರಿಕದಲ್ಲಿ ಪ್ರೇಕನ್‌ಸಲ್ ಎಂಬ ಜೀವಿಯೊಂದಿತ್ತು; ಇದು ಎರಡು ಅಡಿ ಎತ್ತರವಿದ್ದು, ಕಾಲುಗಳಿಂದ ಮಾತ್ರ ನಡೆದು ಕೈಗಳನ್ನು ಕೆಲಸಕ್ಕೆ ಮಾತ್ರ ಉಪಯೋಗಿಸಿತ್ತು; ತೋಳುಗಳು ತುಂಡಾಗಿದ್ದವು; ಮಿದುಳು ಕೋತಿಗಳ ಮಿದುಳಿಗಿಂತ ಉತ್ತಮಗೊಂಡಿತ್ತು). ಮತ್ತೆ ಕೆಲವರು ಯುರೋಪಿ ನಲ್ಲಾಗಿರಬೇಕೆಂದೂ ವಾದಿಸಿದ್ದಾರೆ. ಆದರೆ ಮಾನವನ ಉಗಮ ಒಂದೇ ಕಡೆಯಲ್ಲಾಯಿತೇ ಅಥವಾ ಬೇರೆ ಕಡೆ ಸ್ವತಂತ್ರವಾಗಿ, ಏಕಕಾಲದಲ್ಲಿ ನಡೆಯಿತೇ ಎಂದು ನಿರ್ಧರಿಸುವುದು ಕಷ್ಟ. ಅದು ಹೇಗಿದ್ದರೂ ಮಾನವ ಜನಿಸಿದುದು ಪೂರ್ವಾರ್ಧಗೋಳದಲ್ಲಿಯೇ ಹೊರತು ಪಶ್ಚಿಮಾರ್ಧಗೋಳದಲ್ಲಲ್ಲ ಎಂಬುದು ನಿರ್ಧಾರವಾಗಿದೆ.

ಮಾನವ ನೇರವಾಗಿ ನಿಂತು ತನ್ನ ಎರಡು ಪಾದಗಳಿಂದಲೇ ನಡೆಯಬಲ್ಲ ಮತ್ತು ಓಡಬಲ್ಲ–ಇದೇ ಕಪಿಗೂ ಮಾನವನಿಗೂ ಇರುವ ಮೂಲ ವ್ಯತ್ಯಾಸ. ಕಾಲಿನ ಹೆಬ್ಬೆರಳುಗಳು ಇತರ ಬೆರಳುಗಳನ್ನು ಮುಟ್ಟಲಾರವು. ಪಾದ ಸಂಪೂರ್ಣವಾಗಿ ನೆಲಕ್ಕೂರುತ್ತದೆ. ದವಡೆಗಳು ಹಗುರವಾಗಿ ದುಂಡಗಿವೆ. ಹಲ್ಲುಗಳು ವಿಶಾಲವಾದ ಕಮಾನಿನಲ್ಲಿ ಜೋಡಿಸಿಕೊಂಡಿವೆ.




1. ಮನುಷ್ಯನ ಮೇಲುದವಡೆ; 2 ಆಸ್ಟ್ರಲೋಪಿತಕಸ್‌ನ ಮೇಲುದವಡೆ; 3 ಗೊರಿಲ್ಲಾದ ಮೇಲುದವಡೆ

ನೆಟ್ಟಗೆ ಎದೆ ಚಾಚಿ ನಡೆಯುವ ಅವನ ನಿಲುವಿಗೆ ತಕ್ಕಂತೆ ತಲೆಯ ಬುರುಡೆಯ ಕಾಂಡೈಲ್ ಮತ್ತು ಬೆನ್ನುಮೂಳೆ ಮಾರ್ಪಟ್ಟಿವೆ. ಬೆನ್ನುಮೂಳೆ 8 ಆಕಾರಕ್ಕಿರುವುದರಿಂದ ಶರೀರದ ಪೂರ್ಣಭಾರ ನೇರವಾಗಿ ಕಾಲುಗಳ ಮೇಲೆ ಬೀಳುತ್ತದೆ.

ಇದೆಲ್ಲಕ್ಕಿಂತ ಮಿಗಿಲಾಗಿ ಮಿದುಳಿನ ಬೆಳೆವಣಿಗೆ, ಒಂದು ಮಿದುಳು ಪೆಟ್ಟಿಗೆ ಸು. 350–500 ಘನ ಸೆಂಮೀನಷ್ಟು ದೊಡ್ಡದು. ಮಾನವನದಾದರೂ ಸರಾಸರಿ 1.350 ಮತ್ತು 1.500 ಘನ ಸೆಂ.ಮೀನಷ್ಟು ದೊಡ್ಡದು. ಹಣೆ ಮತ್ತು ಗಲ್ಲದ ಬೆಳೆವಣಿಗೆ ಮಾನವನಲ್ಲಾಗಿದೆ. ಮಂಗಗಳಲ್ಲಿ ಹಣೆ ಮತ್ತು ಗಲ್ಲಗಳಿಲ್ಲ. ಕಪಿಯೂ ಕೆಲವು ವೇಳೆ ಹಿಂದಿನ ಕಾಲಿನಮೇಲೆ ನಿಲ್ಲಬಲ್ಲುದಾದರೂ ಅದು ಮೇಲಿನ ಅರ್ಥದಲ್ಲಿ ನೇರ ನಿಲ್ಲುವಲ್ಲಿ ಮತ್ತು ಓಡುವಾಗ ಕೈಗಳ ಸಹಾಯವನ್ನು ಪಡೆದೇಪಡೆಯುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಮಾನವನ ಪೂರ್ವಜರಿಗೂ ನೇರ ನಿಲುವು ಇದ್ದಿರಬೇಕು. ಅವರು ಎರಡು ಕಾಲುಗಳಿಂದಲೇ ನಡೆಯುತ್ತಿದ್ದಿರಬೇಕು ಎಂದು ಸ್ಪಷ್ಟವಾಗುತ್ತದೆ. ಇದರೊಂದಿಗೆ ತಲೆ ಬುರುಡೆಯಲ್ಲಿನ ಮಿದುಳುಕೋಶ, ಆತ ಉಪಯೋಗಿಸಿರಬಹುದಾದ ಉಪಕರಣಗಳು ಆದಿಮಾನವನನ್ನು ಕಂಡುಕೊಳ್ಳಲು ಸಹಾಯ ಒದಗಿಸುತ್ತವೆ. ಪ್ರಾಚೀನ ಕಾಲದ ಅವಶೇಷಗಳನ್ನು ಶೋಧಿಸುವಾಗ ಲಕ್ಷಾಂತರ ವರ್ಷಗಳ ಹಿಂದೆಯೇ ಇದ್ದಿರಬಹುದಾದ ಪ್ರಾಣಿಗಳ ಪಳೆಯುಳಿಕೆಗಳು ಅನೇಕ ಕಡೆ ದೊರೆತಿವೆ. ಇವುಗಳ ಕಾಲವನ್ನೂ ಬೇರೆ ಬೇರೆ ಆಧಾರಗಳಿಂದ ನಿರ್ಧರಿಸಲಾಗಿದೆ. ಇಂಥ ಪಳೆಯುಳಿಕೆಗಳಲ್ಲಿ ಮೇಲೆ ತಿಳಿಸಿದ ಲಕ್ಷಣಗಳುಳ್ಳ ತಲೆಬುರುಡೆಗಳೂ ಇತರ ಅಸ್ಥಿಗಳೂ ಅಲ್ಲಲ್ಲಿ ದೊರೆತಿವೆ. ಇದುವರೆಗೆ ದೊರೆತಿರುವ ಇಂಥ ಅಸ್ಥಿಗಳಲ್ಲಿ ಅತ್ಯಂತ ಪ್ರಾಚೀನವಾದವು ದಕ್ಷಿಣ ಮತ್ತು ಪೂರ್ವ ಆಫ್ರಿಕದ ಕೆಲವು ಗವಿಗಳಿಂದ ಬಂದಂತಹವು. ಮಾನವನದೆಂಬಂತೆ ಕಾಣುವ ಇಲ್ಲಿನ ಕಲ್ಲಾದ (ಫಾಸಿಲೈಸ್) ಮೂಳೆಗಳು ಈ ಪ್ರಾಣಿ ನೇರವಾಗಿ ನಿಲ್ಲಬಲ್ಲದಾಗಿತ್ತು ಎಂಬುದನ್ನು ಸೂಚಿಸುತ್ತವೆ. ಆದ್ದರಿಂದ ಅವು ನೇರವಾಗಿ ನಡೆಯಬಲ್ಲುವಾಗಿದ್ದುವು ಎಂದೂ ಊಹಿಸಬಹುದು. ಆಕಾರದಲ್ಲಿ ಕಿರಿದಾಗಿದ್ದ ಈ ಪ್ರಾಣಿಗಳು ಹತ್ತು ಲಕ್ಷ ವರ್ಷಗಳಿಗೂ ಹಿಂದೆಯೇ ಇದ್ದುವೆಂದು ನಿರ್ಧರಿಸಿದ್ದಾರೆ. ಇವುಗಳ ಮಿದುಳು ಮಾತ್ರ ಕಪಿಯ ಮಿದುಳಿಗಿಂತ ದೊಡ್ಡದಾಗಿರಲಿಲ್ಲ. ಇವುಗಳನ್ನು ಆಸ್ಟ್ರಲೋಪಿತಕಸ್ (ಮಂಗ–ಮಾನವ) ಎಂದು ಕರೆದಿದ್ದಾರೆ. ಪ್ಲೀಸ್ಟೊಸೀನ್ ಕಾಲದ

ಆದಿಭಾಗದಲ್ಲಿ ಅಸ್ಟ್ರಲೋಪಿತಕಸ್ ಜೀವಿಗಳ ಉದಯವಾಯಿತು. ಇದರ ತಲೆಯ ಬುರುಡೆಯ ಕಾಂಡೈಲ್ ಮುಂದೆ ಸರಿದಿದೆ. ಸೊಂಟ ಅಗಲವಾಗಿದೆ. ಬೆನ್ನೆಲುಬು S ಬಾಗುಗಳನ್ನು ಹೊಂದಿದೆ. ಇದು ನಾಲ್ಕು ಅಡಿ ಎತ್ತರವಿತ್ತು. ಭೂಮಿಯ ಮೇಲೆ ನೆಟ್ಟಗೆ ನಡೆಯಿತು.

ಅಸ್ಟ್ರಲೋಪಿತಕಸ್ ಮಂಗನ ದವಡೆಗಳು ಬಹಳ ಗಾತ್ರವಿದ್ದು ಶಕ್ತಿಯುತವಾಗಿದ್ದವು. ಹಲ್ಲುಗಳು ಮನುಷ್ಯನ ಹಲ್ಲಿನಂತೆಯೇ ಇದ್ದವು. ಕೋರೆ ಹಲ್ಲು ಚಿಕ್ಕದಾಗಿತ್ತು. ಗೋರಿಲ್ಲಾದ ಹಲ್ಲಿನಂತೆ ಉದ್ದವಾಗಿ ಬಾಗಿರಲಿಲ್ಲ. ಹಲ್ಲುಗಳು ವಿಸ್ತಾರವಾದ ಕಮಾನಿನಲ್ಲಿ ಜೋಡಿಸಿ ಕೊಂಡಿದ್ದವು. ಇಷ್ಟಾದರೂ ಇದರ ಮಿದುಳುಪೆಟ್ಟಿಗೆ ಬಹಳ ಚಿಕ್ಕದು. ಕಣ್ಣಿನ ಮೇಲುಭಾಗದಲ್ಲಿ ಹಾಗು ತಲೆಯ ಬುರುಡೆಯ ಹಿಂಭಾಗದಲ್ಲಿ ಅಡ್ಡವಾದ ಅತಿ ಮಂದವಾದ ಏಣುಗಳಿದ್ದವು. ಇದರಿಂದಾಗಿ ತಲೆಯ ಚಿಪ್ಪು ಮಂದವಾಗಿ ಭಾರವಾಗಿತ್ತು. ಇದರ ಮಿದುಳುಪೆಟ್ಟಿಗೆ 600 ಘನ ಸೆಂಮೀನಷ್ಟಿತ್ತು. ಅಂದರೆ ಗೋರಿಲ್ಲಾ ಮಿದುಳುಪೆಟ್ಟಿಗೆಗಿಂತ ಸ್ವಲ್ಪ ದೊಡ್ಡದಾಗಿತ್ತು. ಓಲ್ಡುವಯ್ ಮುಂತಾದ ಕಡೆ ಈ ಮೂಳೆಗಳ ಜೊತೆಯಲ್ಲಿಯೇ ಕೆಲವು ಅತಿ ಪ್ರಾಚೀನ ಉಪಕರಣಗಳು ದೊರೆತಿದ್ದರೂ ಅಸ್ಟ್ರಲೋಪಿತಕಸ್ ಪ್ರಾಣಿಯೇ ಅವುಗಳನ್ನು ತಯಾರಿಸಿ ಉಪಯೋಗಿಸುತ್ತಿತ್ತೇ ಎನ್ನುವುದು ಸಂದೇಹ. ಆದರೂ ಇವು ಕಪಿಕುಲಕ್ಕಿಂತ ಮಾನವ ವರ್ಗಕ್ಕೆ ಹೆಚ್ಚು ಹತ್ತಿರ ಬರುವುದರಿಂದ ಮಾನವನ ಪೂರ್ವಜರ ಸ್ವರೂಪ ಹೇಗಿದ್ದಿರ ಬಹುದೆಂಬುದನ್ನು ಇವುಗಳಿಂದ ಊಹಿಸಬಹುದು. ಇದರಂತೆಯೇ ಚೀನದಲ್ಲಿ ದೊರೆತ ಕೆಲವು ದೊಡ್ಡ ಹಲ್ಲುಗಳು ಬೃಹದಾಕಾರದ ಕಪಿಮಾನವನಕುಲಕ್ಕೆ ಸೇರಿದ್ದವುಗಳಾಗಿರ ಬಹುದೆಂದು ಊಹಿಸಿದ್ದಾರೆ. ಇದೇ ರೀತಿಯ ದೊಡ್ಡ ಹಲ್ಲುಗಳುಳ್ಳ ದವಡೆಗಳು ಜಾವದಲ್ಲೂ ದೊರೆತಿವೆ. ಇವು ರೂಪ, ಗುಣ, ಆಕಾರಗಳಲ್ಲಿ ಮಾನವ ಕುಲದ ಕಡೆಗೆ ವಾಲಿವೆಯೇ ಅಥವಾ ಕಪಿಕುಲದ ಕಡೆಗೇ ಎನ್ನುವುದು ನಿರ್ಧಾರವಾಗಿಲ್ಲ.

ಜಾವದಲ್ಲಿ ಪ್ರಾಚೀನ ಮಾನವನ ಬೇರೆ ಬೇರೆ ಜಾತಿಯ ಮೂಳೆಗಳೂ ದೊರೆತಿವೆ. ಇವುಗಳಲ್ಲಿ ತುಂಬ ಪ್ರಾಚೀನವಾದುವು ದೊಡ್ಡ ಗೊರಿಲ್ಲಾ ಗಾತ್ರದ ಮಾನವನಿಗೆ ಸೇರಿದುವು. ಇದರ ಮೂಳೆಗಳು ಹಾಂಕಾಂಗ್‌ನಲ್ಲಿ ಸಿಕ್ಕಿದವು. ಇದನ್ನು ಜೈಗಾಂಡೊಪಿಥಿಕಸ್ ಎಂಬ ಜಾತಿಗೆ ಸೇರಿಸಲಾಗಿದೆ. ವೈಡನ್ ರಿಚ್ ಎಂಬುವನು ಇದನ್ನು ಪಿತಿಕ್ಯಾಂಥ್ರೊಪಸ್‌ಗಳ ಜನಕನೆಂದು ತೀರ್ಮಾನಿಸುತ್ತಾನೆ. ಇದು ಬಹಳ ಕೆಳದರ್ಜೆಯ ಜೀವಿಯೆಂದು ತೀರ್ಮಾನಿಸಲಾಗಿದೆ. ಏಕೆಂದರೆ ಇದರ ದವಡೆ ಗೊರಿಲ್ಲಾ ದವಡೆಗಿಂತಲೂ ದೊಡ್ಡದು; ಹಲ್ಲುಗಳು ಗೊರಿಲ್ಲಾ ಹಲ್ಲುಗಳನ್ನೇ ಹೆಚ್ಚು ಹೋಲುತ್ತವೆ.

ಪಿತಿಕ್ಯಾಂಥ್ರೊಪಸ್ ಅಥವಾ ಜಾವ ಮಾನವ ಎಂದು ಕರೆಯಲ್ಪಡುವ ಕಪಿ ಮಾನವನ (ಪ್ಲೀಸ್ಟೋಸೀನ್ ಅಂತ್ಯದಲ್ಲಿದ್ದವ) ಮೂಳೆಗಳನ್ನು ಡುಬಾಯಿಸ್ ಡಚ್ ಡಾಕ್ಟರ್ ಜಾವದಲ್ಲಿ ಮೊದಲು ಕಂಡುಹಿಡಿದ. ಇವುಗಳ ಪರೀಕ್ಷೆಯಿಂದ ಈ ವಿಷಯಗಳು ತಿಳಿದುಬಂದಿವೆ. ಜಾವ ಮಾನವ ಸುಮಾರು ಐದೂವರೆ ಅಡಿ ಎತ್ತರವಿದ್ದ. ನೇರವಾಗಿ ನಡೆಯಬಲ್ಲವನಾಗಿ ದ್ದರೂ ತಲೆ ಅಷ್ಟು ನೇರವಾಗಿ ಎತ್ತಲಾಗುತ್ತಿರಲಿಲ್ಲ. ತಲೆಯ ಚಿಪ್ಪು ತುಂಬ ದಪ್ಪ ಮತ್ತು ಭಾರವಾಗಿತ್ತು. ಕಪಿಯ ಮಿದುಳಿಗೂ ಈಗಿನ ಮಾನವನ ಮಿದುಳಿಗೂ ನಡುವಿನ ಗಾತ್ರದ ಮಿದುಳಿತ್ತು (778–1,100 ಘನ ಸೆಂಮೀ). ದಪ್ಪ ಹಲ್ಲು, ದೊಡ್ಡ ದವಡೆ, ಕಿರುಹಣೆ, ಅತಿಯಾಗಿ ಮುಂಚಾಚಿದ ಹುಬ್ಬುಮೂಳೆ, ಕಿರು ಕದಪು ಇದು ಅವನ ಮುಖದ ಆಕಾರ. ಈ ಜಾವ ಮಾನವ ಉಪಯೋಗಿಸಿರಬಹುದಾದ ಉಪಕರಣಗಳು ಅವನ ಮೂಳೆಗಳೊಂದಿಗೆ ದೊರೆತಿಲ್ಲ.

ಸುಮಾರು ಇವನ ಕಾಲಕ್ಕೇ ಸೇರಿದ್ದು ಇವನನ್ನೇ ಕೆಲಮಟ್ಟಿಗೆ ಹೋಲುವ ಚೀನ ಮಾನವ (ಸಿನಾನ್‌ಥ್ರೋಪಸ್ ಪಿಕಿಸಿನ್‌ನೆಸ್) ಪೀಕಿಂಗ್ ಬಳಿಯ ಚುಕೊಟಿನ್ ಗವಿಗಳಲ್ಲಿ ವಾಸಮಾಡುತ್ತಿದ್ದ. ಇವನು ಜಾವ ಮಾನವನಷ್ಟು ಎತ್ತರವಾಗಿಲ್ಲದಿದ್ದರೂ ಧಡೂತಿ ಯಾಗಿದ್ದ. ಅವನಿಗಿಂತ ನೇರವಾಗಿ ನಿಲ್ಲುತ್ತಿದ್ದನೆಂದು ತೋರುತ್ತದೆ. ತಲೆಬುರುಡೆ ಜಾವ ಮಾನವನ ತಲೆಬುರುಡೆಯನ್ನೇ ಹೋಲುತ್ತಿದ್ದರೂ ಮಿದುಳುಕೋಶ ಸ್ವಲ್ಪ ದೊಡ್ಡದಾಗಿತ್ತು (1,300 ಘನ ಸೆಂಮೀ), ಮುಖ ಜಾವ ಮಾನವನಷ್ಟು ರೂಕ್ಷವಾಗಿರಲಿಲ್ಲ. ಮೊದಲಬಾರಿಗೆ ಆದಿಮಾನವ ವಾಸ ಮಾಡುತ್ತಿದ್ದ ನೆಲೆಯಲ್ಲಿಯೇ ಅವನ ಮೂಳೆಗಳು, ಉಪಯೋಗಿಸುತ್ತಿದ್ದ ಉಪಕರಣಗಳು, ಇತರ ಸಲಕರಣೆಗಳು ದೊರೆತಿರುವುದರಿಂದ ಅವನ ಜೀವನ ವಿಧಾನ, ಆಹಾರ ಮುಂತಾದವು ಬೆಳಕಿಗೆ ಬಂದಿವೆ. ಆತ ಬೆಂಕಿಯ ಉಪಯೋಗವನ್ನು ಕಂಡು ಕೊಂಡಿದ್ದ. ಆಹಾರ ಬೇಯಿಸುವುದನ್ನೂ ತಿಳಿದಿದ್ದ. ಕಲ್ಲನ್ನು ಚಕ್ಕೆ ಎಬ್ಬಿಸಿ ಆಯುಧಗಳನ್ನು ಮಾಡಿಕೊಳ್ಳುತ್ತಿದ್ದ. ಗವಿಗಳಲ್ಲಿ ತೋಳ, ಕಾಡುನಾಯಿ, ನರಿ, ಕರಡಿಗಳ ಮೂಳೆಗಳೂ ದೊರೆತಿವೆ. ಅವುಗಳು ಆಗಾಗ ಅವನ ಮೇಲೆ ಮುತ್ತಿಗೆ ಹಾಕುತ್ತಿದ್ದುವೊ ಅಥವಾ ಆಹಾರಕ್ಕಾಗಿ ಅವನ್ನು ಬೇಟೆಯಾಡುತ್ತಿದ್ದನೊ ತಿಳಿಯದು. ಜಿಂಕೆ, ಕುರಿ, ಎಮ್ಮೆ, ಕಾಡುಕೋಣ, ಒಂಟೆ, ರೈನೋ, ಉಷ್ಟ್ರಪಕ್ಷಿ, ಆನೆ ಮುಂತಾದುವುಗಳ ಮೂಳೆಗಳನ್ನು ಸೀಳಿ ಹಾಕಿರುವುದರಿಂದ ಆತ ಅವುಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದುದು ಖಚಿತ. ಮನುಷ್ಯನ ಮೂಳೆಗಳೂ ಸೀಳಿ ಬಿದ್ದಿರುವುದನ್ನು ನೋಡಿದರೆ ಆತ ನರಭಕ್ಷಕನೂ ಆಗಿದ್ದನೇ ಎಂಬ ಸಂದೇಹ

ಬರುತ್ತದೆ. ಆತನಂಥವರೇ ಮುಂದೆ ವಿಕಾಸ ಗೊಂಡು ಆಧುನಿಕ ಮಂಗೋಲ್ ಬುಡಕಟ್ಟಿಗೆ ಸೇರಿದ ಚೀನ ಮಾನವರಾದರೇ? ಹೇಳುವು ದಕ್ಕಾಗುವುದಿಲ್ಲ. ಇವರೆಲ್ಲ ಸುಮಾರು ನಾಲ್ಕೈದು ಲಕ್ಷ ವರ್ಷಗಳಷ್ಟು ಹಿಂದೆ ಇದ್ದ ಆದಿಮಾನವರು. ಯುರೋಪಿನಲ್ಲೂ ಸರಿ ಸುಮಾರು ಈ ಕಾಲದಲ್ಲಿದ್ದ ಆದಿಮಾನವರ ಎಲುಬುಗಳು ದೊರೆತಿವೆ. ಜರ್ಮನಿಯ ಹೈಡೆಲ್‌ಬರ್ಗ್‌ನಲ್ಲಿ ದೊರೆತ ಬೃಹದ್ಗಾತ್ರದ ದವಡೆಯೇ ಯುರೋಪಿನಲ್ಲಿದ್ದ ಮಾನವನ ಅತ್ಯಂತ ಪ್ರಾಚೀನ ಕುರುಹು. ಇದು ಪೀಕಿಂಗ್ ಮಾನವನಿಗಿಂತಲೂ ಸ್ವಲ್ಪ ಪ್ರಾಚೀನವಿದ್ದರೂ ಇರಬಹುದು. ಇದಕ್ಕಿಂತ ಈಚಿನದಾದ ಬಹುಶಃ ಪೀಕಿಂಗ್ ಮಾನವನ ಸಮಕಾಲಕ್ಕೆ ಬರಬಹುದಾದ ಮತ್ತೊಂದು ತಲೆ ಬುರುಡೆ ಹಂಗರಿಯ ಎರ್ಟಸ್ಸೊಲೋಸ್‌ನಲ್ಲಿ ದೊರೆ ತಿದೆ. ಇದು ಕಪಿಮಾನವನದೇ ಇಲ್ಲವೆ ಪೂರ್ಣ ಮಾನವನದೇ ಎಂಬ ವಿಷಯದಲ್ಲಿ ಭಿನ್ನಾಭಿ ಪ್ರಾಯವಿದೆ. ಆಫ್ರಿಕದಲ್ಲಿ ಓಲ್ಡುವಯ್‌ನಲ್ಲಿ ಲೀಕಿಯವರು ಕಂಡುಹಿಡಿದ ಚೆಲ್ಲಿಯನ್ ತಲೆ ಬುರುಡೆಯೂ ಪೀಕಿಂಗ್ ಮಾನವನ ಕಾಲಕ್ಕೇ ಸೇರಿರಬಹುದು. ಆಫ್ರಿಕದ ವಾಯವ್ಯ ಭಾಗದಲ್ಲಿ ಟರ್ನಿಫೈನ್‌ನಲ್ಲಿ ದೊರೆತ ಟರ್ನಿಫೈನ್ ಮಾನವನ ದವಡೆಯ ಕೆಲಭಾಗಗಳೊಂದಿಗೆ ಚಿಕ್ಕ ಮಗುವೊಂದರ ಬುರುಡೆಯ ಪಳೆಯುಳಿ ಕೆಗಳು, ಅಷೂಲಿಯನ್ ಶಿಲಾಯುಧಗಳೂ ಸಿಕ್ಕಿವೆ. ಇವುಗಳ ಕಾಲ ಪ್ಲೀಸ್ಟೊಸೀನ್ ಮಧ್ಯ ಭಾಗವಿರಬಹುದೆಂದು ಊಹಿಸಲಾಗಿದೆ.

ಜರ್ಮನಿಯ ಸ್ಟೈನ್‌ಹೀಮ್‌ನಲ್ಲಿ ಸಿಕ್ಕಿರುವ ತಲೆಬುರುಡೆಯ ಚೂರು ದಪ್ಪ ಚಿಪ್ಪುಳ್ಳದ್ದು; ಹಿಂಭಾಗ ತೀರ ತಗ್ಗಾಗಿಲ್ಲ. ಹಣೆ ಹುಬ್ಬಿನ ಭಾಗದಲ್ಲಿ ಹೆಚ್ಚು ಮುಂಚಾಚಿದ್ದರೂ ಮುಖದ ರಚನೆ ತೀರ ಪ್ರಾಚೀನವೆನ್ನಲಾಗದು. ಇಂಗ್ಲೆಂಡಿನ ಸ್ವಾನ್ಸ್‌ಕೂಂಬ್‌ನಲ್ಲಿ ದೊರೆತ ತಲೆಬುರುಡೆಯ ಭಾಗವೂ ಹೆಚ್ಚು ಪರಿವರ್ತಿತ ವಾದುದೆಂದು ಊಹಿಸುತ್ತಾರೆ. ಈತನ ಮಿದುಳಿನ ಪ್ರಮಾಣ 1,325 ಘನ ಸೆಂಮೀ ನಷ್ಟಿತ್ತು. ಈತ ಕಲ್ಲು ಕೊಡಲಿಗಳನ್ನು ಉಪಯೋಗಿಸುತ್ತಿದ್ದ. ಈ ಕೊಡಲಿಗಳು ಗಟ್ಟಿಯಾಗಿ ಚೂಪಾಗಿದ್ದುವು. ಹಾಗೆಯೇ ಫ್ರಾನ್ಸಿನ ಫಾನ್ಟೆಷೆವಾಡೆ ಬಳಿಯ ಗವಿಯಲ್ಲಿ ಎರಡು ತಲೆಬುರುಡೆಗಳು ದೊರೆತಿವೆ. ಇವುಗಳ ಮೇಲ್ಭಾಗ ಬೆಳವಣಿಗೆ ಹೊಂದಿದೆ. ಹುಬ್ಬು ಮೂಳೆ ಅಷ್ಟು ದಪ್ಪನಾಗಿಲ್ಲ. ಪೂರ್ಣ ಮಾನವರೆಂದು ಕರೆಸಿಕೊಳ್ಳಲು ಇವರೆಲ್ಲ ಅರ್ಹರಾಗಿದ್ದರೇ ಎಂಬುದು ಇನ್ನೂ ನಿರ್ಧಾರ ವಾಗಬೇಕಾಗಿದೆ. ಈ ಮೇಲೆ ತಿಳಿಸಿರುವ ಪಂಗಡಗಳೆಲ್ಲ ಸುಮಾರು ಐದು ಲಕ್ಷ ವರ್ಷಗ ಳಿಂದ ಒಂದು ಲಕ್ಷ ವರ್ಷಗಳಷ್ಟು ಹಿಂದಿನ ವೆಂದು ಸ್ಥೂಲವಾಗಿ ಹೇಳಬಹುದು. 1911ರಲ್ಲಿ ಇಂಗ್ಲೆಂಡಿನ ಪಿಲ್ಟ್‌ಡೌನ್ ಬಳಿ ಪ್ರಥಮ ಹಿಮ ಯುಗದ ಶಿಲಾ ಸಂಪುಟಗಳಲ್ಲಿ ಮಾನವನ ಒಂದು ಪ್ರಾಚೀನ ಅವಶೇಷವನ್ನು ಕಂಡು

ಹಿಡಿಯಲಾಯಿತು. ಇದನ್ನು ಪಿಲ್ಟ್‍ಡೌನ್ ಮಾನವನೆಂದು ಕರೆಯಲಾಯಿತು. ಆದರೆ ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳಿಂದಾಗಿ ಇದೊಂದು ಮೋಸವೆಂದು ಸ್ಪಷ್ಟವಾಗಿದೆ. ಇನ್ನೂ ಮುಂದೆ ಬಂದರೆ ನಮಗೆ ಕಾಣಸಿಗುವ ಮುಖ್ಯವಾದ ಪಂಗಡ ನಿಯಾಂಡರ್‍ಥಲ್ ಮಾನವರದು. ಜರ್ಮನಿಯ ನಿಯಾಂಡರ್ ಕಣಿವೆಯಲ್ಲಿ ಇವರ ಮೂಳೆಗಳು ದೊರೆತುದರಿಂದ ಇವರಿಗೆ ಈ ಹೆಸರು ಬಂದಿದೆ. ಸ್ಪೇನ್, ಫ್ರಾನ್ಸ್, ಬೆಲ್ಜಿಯಂ, ರಷ್ಯ, ಚೆಕೊಸ್ಲೊವಾಕಿಯ, ಯೂಗೋಸ್ಲಾವಿಯ, ಇಟಲಿಗಳಲ್ಲೂ ಇವರ ಅವಶೇಷಗಳು ದೊರೆತಿವೆ. ಒರಟು ಮುಖದ ಈ ಪ್ರಾಣಿಗೆ ಇಳಿಜಾರು ಹಣೆ, ಉದ್ದ ಮತ್ತು ಅಗಲವಾಗಿ ಹರಡಿದ ಮೂಗು, ದೊಡ್ಡ ದವಡೆ, ಅತಿ ಕಿರಿದಾದ ಗಲ್ಲ ಇತ್ತು. ಸ್ವಲ್ಪ ಬಗ್ಗಿ ನಡೆಯುತ್ತಿದ್ದ ಈ ಕುಳ್ಳ ವ್ಯಕ್ತಿಗೆ ಭುಜ ವಿಸ್ತಾರ, ಎದೆ ದಪ್ಪ, ಕಾಲುಗಳು ಗಿಡ್ಡ. ಸುಮಾರು ಎಪ್ಪತ್ತೈದು ಸಾವಿರ ವರ್ಷಗಳ ಹಿಂದೆ ಹಿಮಯುಗದಲ್ಲಿ ಯುರೋಪಿನ ಈ ಭಾಗಗಳಲ್ಲಿ ಸಿಕ್ಕಿಹಾಕಿ ಕೊಂಡಿದ್ದ ಈ ವ್ಯಕ್ತಿ ರೂಕ್ಷನಾಗಿದ್ದುದರಲ್ಲಿ ಆಶ್ಚರ್ಯವಿಲ್ಲ. ಇವನ ಮಿದುಳು ಕೋಶ 1,450 ಘನ ಸೆಂಮೀನಷ್ಟಿದೆ. ಆಧುನಿಕ ಮಾನವನ ಮಿದುಳುಕೋಶದಷ್ಟೇ ಇದೆ. ಹಿಮಯುಗದ ಅತಿಶೀತವನ್ನೆದುರಿಸಲು ಈತ ಗವಿಗಳನ್ನಾಶ್ರಯಿಸಿದ್ದ. ಆದರೆ ಇದೇ ಆಶ್ರಯಕ್ಕಾಗಿಯೇ ಧಾವಿಸುತ್ತಿದ್ದ ಬೃಹತ್ಕರಡಿಗಳನ್ನೂ ಉದ್ದ ಕೋರೆಯ ಹುಲಿಗಳನ್ನೂ ಅವನು ಎದುರಿಸಬೇಕಾಗಿತ್ತು. ಆಹಾರಕ್ಕಾಗಿ ಬೇಟೆಯಾಡಬೇಕಾಗಿತ್ತು. ಆದ್ದರಿಂದ ಉಪಕರಣಗಳನ್ನು ತಯಾರಿಸುವುದರಲ್ಲಿ ಹೆಚ್ಚು ಮುಂದುವರಿದಿದ್ದ. ಕಲ್ಗೊಡಲಿ, ಕಲ್ಲನ್ನು ಚಕ್ಕೆ ಎಬ್ಬಿಸಿ ಮಾಡಿಕೊಂಡ ಹರಿತವಾದ ಚಾಕು, ಕೊರೆಯುವ, ಹೆರೆಯುವ ಸಲಕರಣೆ ಮೊದಲಾದುವನ್ನು ತಯಾರಿಸಿದ್ದ. ಬೇಟೆಯಲ್ಲಿ ನಿಷ್ಣಾತನಾಗಿದ್ದು ಆನೆಯಂಥ ಭಾರಿ ಪ್ರಾಣಿಯನ್ನೂ ಕಂದರದಲ್ಲಿ ಕೆಡವಿ ದಪ್ಪ ಬಂಡೆಗಳಿಂದ ಬಡಿದು ಸಾಯಿಸಬಲ್ಲ ಸಾಹಸಿಗನಾಗಿದ್ದ. ಚಳಿಯಿಂದಲೂ ಮೃಗಗಳಿಂದಲೂ ರಕ್ಷಿಸಿಕೊಳ್ಳಲು ಬೆಂಕಿಯನ್ನು ಉಪಯೋಗಿಸುತ್ತಿದ್ದ. ಪ್ರಾಣಿಗಳ ಚರ್ಮವನ್ನು ಸುಲಿದು ಜೋಡಿಸಿ ಉಡುಪು ತಯಾರಿಸಿಕೊಳ್ಳುತ್ತಿದ್ದ. ಬೇಟೆಗಾಗಿ ಆಹಾರಕ್ಕಾಗಿ ಪ್ರಾಣಿಗಳನ್ನು ಹಿಂಬಾಲಿ ಸಬೇಕಾಗಿದ್ದುದರಿಂದ ಅಲೆಮಾರಿಯಾಗಿದ್ದ.

ಹಿಮಪ್ರಪಾತದ ನೀರ್ಗಲ್ಲುಗಳ ಕೊರೆತ ಕಷ್ಟಗಳ ನಡುವೆ ಸಿಕ್ಕಿಹಾಕಿಕೊಂಡು ಅದರಲ್ಲಿಯೇ ಈಜಿ ಜಯಿಸಿದ. ಈ ಒರಟು ಮಾನವ ಯುರೋಪಿನ ಭಾಗಗಳಲ್ಲಿದ್ದ ಕಾಲದಲ್ಲಿಯೇ ಬೇರೆಡೆಗಳ ಆದಿಮಾನವ ವ್ಯತ್ಯಾಸವಾಗುತ್ತ ಬೆಳೆದು ಹೆಚ್ಚು ಹೆಚ್ಚು ಆಧುನಿಕನಾಗುತ್ತಿದ್ದ. ಈ ಬೆಳವಣಿಗೆಯನ್ನೇ ಜಾವ, ಆಸ್ಟ್ರೇಲಿಯ ಪ್ರದೇಶಗಳಲ್ಲಿ ಕಂಡುಬಂದಿರುವ ಸೋಲೋ ಮಾನವನಲ್ಲೂ ಆಫ್ರಿಕದ ರೊಡೇಷಿಯ ಮಾನವನಲ್ಲೂ ಗುರುತಿಸಬಹುದು. ಇವರೂ ಸರಿಸುಮಾರು ನಿಯಾಂಡರ್‍ಥಲ್ ಮಾನವನ ಕಾಲಕ್ಕೇ ಇದ್ದವರಾದರೂ ಅವರಿಗಿಂತ ವಿಭಿನ್ನರೀತಿಯ ವ್ಯಕ್ತಿಗಳಾಗಿದ್ದರು.

ಹಿಮಯುಗದ ಹಿಂಜರಿತದಿಂದ ಯುರೋಪಿನಲ್ಲಿ ಶಾಖ ಹರಡುತ್ತಿದ್ದಂತೆ ಪ್ರಪಂಚದ ಬೇರೆ ಭಾಗಗಳಿಂದ ನಿಯಾಂಡರ್‍ಥಲ್ ಮಾನವನಿಗಿಂತಲೂ ಮುಂದುವರಿದ ಮಾನವ ಪಂಗಡ ಇಲ್ಲಿಗೆ ವಲಸೆಬಂದು ನಿಯಾಂಡರ್‍ಥಲ್ ಮಾನವರನ್ನು ಕೊಂದು ನಾಶ ಮಾಡಿರಬೇಕೆಂದು ಒಂದು ವಾದ. ಆದರೆ ಅದು ಹಾಗಾಗದೆ ಕಾಲಕ್ರಮೇಣ ಇವರು ಹೊಸ ಜನಾಂಗದೊಂದಿಗೆ ಬೆರೆತು ಒಂದಾಗಿ ಹೋಗಿರುವ ಸಂಭವವೇ ಹೆಚ್ಚು. ಪ್ಯಾಲೆಸ್ಟೈನಿನ ಮೌಂಟ್ ಕಾರ್ಮೆಲ್ ಗವಿಗಳಲ್ಲಿ ದೊರೆತ ಮೂಳೆಗಳು ಇದಕ್ಕೆ ಪುಷ್ಟಿ ಕೊಡುತ್ತವೆ.

ಯುರೋಪಿನಲ್ಲಿ ಹಿಮಯುಗ ಕಳೆದು ನೀರ್ಗಲ್ಲುಗಳು ಕರಗಿದ ಕಾಲಕ್ಕೆ ಅಲ್ಲಿ ಬೇರೆ ಜನಾಂಗ ವಾಸ ಮಾಡುತ್ತಿದ್ದುದಕ್ಕೆ ಹಲವೆಡೆ ಆಧಾರಗಳು ದೊರೆತಿವೆ. ಫ್ರಾನ್ಸಿನ ಕ್ರೋಮ್ಯಾಗ್ನನ್ ಗವಿಗಳಲ್ಲಿ ಇವರ ಅವಶೇಷಗಳು ಹೆಚ್ಚಾಗಿ ದೊರೆತು ಈ ಮಾನವನಿಗೆ ಕ್ರೋಮ್ಯಾಗ್ನಿನ್ ಮಾನವನೆಂಬ ಹೆಸರು ಬಂದಿದೆ. ಇವರು ಪೂರ್ಣವಾಗಿ ಬೆಳೆವಣಿಗೆ ಹೊಂದಿ ಹೋಲಿಕೆಯಲ್ಲಿ ಆಧುನಿಕ ಮಾನವನಿಗೆ ಹತ್ತಿರವಾಗಿದ್ದಾರೆ. ದೀರ್ಘದೇಹಿಗಳಾಗಿದ್ದ ಇವರಿಗೆ ದೊಡ್ಡದಾದ ಉದ್ದುದ್ದ ತಲೆಯಿದ್ದು ಆಧುನಿಕ ಮಾನವನಿಗಿಂತ ದಪ್ಪ ಮಿದುಳಿತ್ತು. ತೆಳುಮೂಗು, ತುಂಬುಗಲ್ಲಗಳಿದ್ದುವು. ಕಲ್ಲಿನ ಹಲವು ರೀತಿಯ ಆಯುಧಗಳನ್ನು ತಯಾರಿಸುವುದರಲ್ಲಿ ಇವರು ನಿಷ್ಣಾತರಾಗಿದ್ದರು. ಮೂಳೆ, ಪ್ರಾಣಿಗಳ ಚರ್ಮಗಳನ್ನು ಉಪಯೋಗಿಸಿ ಬೀಸಿ ಹೊಡೆಯಬಲ್ಲ ಆಯುಧಗಳು ಇವರಿಗೆ ಗೊತ್ತಿದ್ದವು. ಚಿಕ್ಕ ಕಲ್ಲಿನ ಚಕ್ಕೆಗಳನ್ನೆಬ್ಬಿಸಿ ಬಾಣದ ತುದಿಗೆ ಸೇರಿಸುತ್ತಿದ್ದರು. ಕೊಕ್ಕೆಯಾಕಾರದಲ್ಲಿ ಮೂಳೆಗಳನ್ನು ಕೊರೆದು ಪ್ರಾಣಿಗಳ ಮಾಂಸಖಂಡವನ್ನು ಚುಚ್ಚಿ ಹಿಡಿಯಬಲ್ಲಂತೆ ಮಾಡಿಕೊಂಡಿದ್ದರು. ಪ್ರಾಣಿಗಳನ್ನು ಹಿಡಿಯಲು ಮಂತ್ರ ಮಾಟಗಳನ್ನೂ ನಡೆಸುತ್ತಿದ್ದಂತೆ ತಿಳಿದುಬರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಇವರು ಚತುರ ಕಲಾವಿದರಾಗಿದ್ದರು. ಗವಿಗಳ ಗೋಡೆಗಳಮೇಲೆ ಚಿತ್ರಿಸಿರುವ ಆ ಕಾಲದ ಪ್ರಾಣಿಗಳ ಚಿತ್ರಗಳು ಅದ್ಭುತವಾಗಿವೆ. ಯುರೋಪಿನಲ್ಲಿ ಇವರು ಕಾಣಿಸಿಕೊಂಡ ಕಾಲ ಸುಮಾರು ನಲವತ್ತು ಸಾವಿರ ವರ್ಷಗಳ ಹಿಂದೆ. ಇವರ ಕಾಲದಲ್ಲಿಯೇ ಪ್ರಪಂಚದ ಇತರ ಕಡೆಗಳಲ್ಲೂ ಆಧುನಿಕ ಮಾನವ ಕಾಣಿಸಿಕೊಳ್ಳುತ್ತಾನೆ. ಒಟ್ಟಿನಲ್ಲಿ ಸುಮಾರು 10 ಲಕ್ಷ ವರ್ಷಗಳ ಹಿಂದೆ ಕಾಣಿಸಿಕೊಂಡ ಮಾನವಕಪಿ ವಿಕಾಸ ಹೊಂದುತ್ತ 5 ಲಕ್ಷ ವರ್ಷಗಳ ಹಿಂದೆ ಆದಿಮಾನವನಾಗಿ ಬೆಳೆದು ಸುಮಾರು ನಲವತ್ತು ಸಾವಿರ ವರ್ಷಗಳ ಹಿಂದೆ ಆಧುನಿಕ ಮಾನವನಾಗಿ ಪೂರ್ಣವಾಗಿ ಬೆಳೆದನೆಂದು ಹೇಳಬಹುದು.

(ಎಲ್.ಎಸ್.ಜಿ.; ಎಂ.ಎಚ್.)

**ಆದಿಮಾನವ ಕಲೆ :** ಮಾನವ ನೆಟ್ಟಗೆ ನಡೆಯುವುದನ್ನು ಮತ್ತು ಕಲ್ಲಿನ ಆಯುಧಗಳನ್ನು ಮಾಡುವುದನ್ನು ಕಲಿತುಕೊಂಡಮೇಲೆ, ಅದರ ಜೊತೆಯಲ್ಲಿಯೇ ಕಲೆಯ ಸೃಷ್ಟಿಯನ್ನೂ ಮಾಡಿದ. ತಾನು ಮಾಡುತ್ತಿರುವುದು ಕಲೆ ಎಂಬ ಸ್ಪಷ್ಟೋದ್ದೇಶ ಅವನಿಗೆ ಇತ್ತೆಂದು ಹೇಳಲಿಕ್ಕೆ ಬಾರದಾದರೂ ತಾನು ಮಾಡಿರುವ ಪ್ರತಿಯೊಂದು ಕೆಲಸದಲ್ಲೂ ಉಪಯೋಗಿಸುತ್ತಿದ್ದ ಪ್ರತಿಯೊಂದು ಪದಾರ್ಥ ಅಥವಾ ಸಾಧನದಲ್ಲೂ ತಾಂತ್ರಿಕ ನೈಪುಣ್ಯ, ನಯ, ನಾಜೂಕುಗಳನ್ನು ತರಲು ಪ್ರಯತ್ನಿಸಿದನೆಂಬುದೇನೋ ನಿಜ. ಅವನ ಹೃದಯಾಂತರಾಳದಲ್ಲಿದ್ದ ಕಲಾಭಿರುಚಿ, ಕಲಾ ಮನೋಧರ್ಮ ಕ್ರಮೇಣ ಅವನ ಜೀವನದೊಂದಿಗೇ ಬೆಳೆದು ಬಂದಿತೆಂದು ಹೇಳಬಹುದು. ಅನೇಕಾನೇಕ ಉತ್ಖನನಗಳಿಂದ ದೊರಕಿರುವ ಅವಶೇಷಗಳಲ್ಲಿ ಅವನ ಕಲೆಯ ವಿವಿಧ ಹಂತಗಳನ್ನು ಕಾಣಬಹುದು. ಪ್ರಾರಂಭದಲ್ಲಿ ಅವನ ಕಲೆ ಉಪಯೋಗನಿಷ್ಠವಾಗಿದ್ದಿರಬೇಕು. ಏಕೆಂದರೆ ಜೀವನ ನಿರ್ವಹಣೆಯು ಮಾನವನ ಪ್ರಥಮೋದ್ದೇಶ. ಅದಾದ ಅನಂತರ ಕಲಾತ್ಮಕ ಜೀವನದ ಮಾತು ಬರುತ್ತದೆ. ಆಧುನಿಕ ನಾಗರಿಕತೆಗೆ ದೂರವಾಗಿ ಅಲೆಮಾರಿ ಜೀವನ ನಡೆಸುವ, ಒಂದು ರೀತಿ ಅನಾಗರಿಕ ಎನಿಸಿರುವ, ಆದಿಮವರ್ಗದ (ಪ್ರಿಮಿಟಿವ್) ಜನಾಂಗಗಳ ಕಲೆಯನ್ನು ಪ್ರತ್ಯೇಕವಾಗಿ ವಿವೇಚಿಸಲಾಗಿದೆ (ನೋಡಿ– ಆದಿಮಜನರ ಕಲೆ).

ಆದಿಮಾನವನ ಕಲೆಯನ್ನು ಇತಿಹಾಸಪೂರ್ವ ಕಲೆ, ಪ್ರಾಗೈತಿಹಾಸಿಕ ಕಲೆ ಎಂದೂ ಕರೆಯುವುದುಂಟು. ಇದನ್ನು ಬೇಟೆಗಾರರ ಕಲೆ, ಆಹಾರೋತ್ಪಾದಕರ ಕಲೆ, ಲೋಹಗಾರರ ಕಲೆ ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಮೊಟ್ಟಮೊದಲು ಮಾನವ ಮುಖ್ಯವಾಗಿ ಬೇಟೆಗಾರನಾಗಿದ್ದುದರಿಂದ ಅವನ ಕಲೆಯಲ್ಲಿ ಬೇಟೆಯ ಚಿತ್ರಗಳನ್ನು ವಿಶೇಷವಾಗಿ ಕಾಣಬಹುದು. ಈ ಚಿತ್ರಗಳು ಸಾಮಾನ್ಯವಾಗಿ ಹಳೆಯ ಶಿಲಾಯುಗದ ಅಂತ್ಯಭಾಗದಲ್ಲಿ ನಿರ್ಮಿತವಾದುವು. ಹಳೆ ಶಿಲಾಯುಗದ ಈ ಕಲೆಯಲ್ಲಿ ರೇಖಾಚಿತ್ರ, ವರ್ಣಚಿತ್ರ ಮತ್ತು ಶಿಲ್ಪಗಳನ್ನು ನೋಡಬಹುದು. ಯುರೋಪಿನ ಅತ್ಯಂತ ಪ್ರಾಚೀನ ಶಿಲಾಯುಗದ ಚಾಟಲ್ ಪೆರೋನಿಯನ್ ಕಾಲಕ್ಕೆ ಸೇರಿದ್ದುದು. ಅನಂತರದ ಆರಿಗ್ನೇಷಿಯನ್, ಗ್ರಾವೆಟಿಯನ್ ಸಂಸ್ಕೃತಿಯ ಕಾಲದಲ್ಲಿ ಇದು ಬಳಕೆಯಲ್ಲಿದ್ದು ಮ್ಯಾಗ್ಡಲೀನಿಯನ್ ಕಾಲದಲ್ಲಿ ಉಚ್ಚಾಯ ಸ್ಥಿತಿಯನ್ನು ಮುಟ್ಟಿತು. ಆಫ್ರಿಕದಲ್ಲಿ ಹಳೆಯ ಶಿಲಾಯುಗದ ಕೊನೆಯ ಭಾಗದಲ್ಲಿ ಮತ್ತು ಮಧ್ಯಶಿಲಾಯುಗದ ಆದಿ ಭಾಗದಲ್ಲಿ ಕಲೆ ನಿರ್ಮಾಣವಾಯಿತು. ಹಳೆಯ ಶಿಲಾಯುಗದ ಮಾನವ ಉಪಯೋಗಿಸುತ್ತಿದ್ದ ಅನೇಕ ಆಯುಧಗಳಲ್ಲಿ ಕೊರೆಯುಳಿ (ಬ್ಯೂರಿನ್) ರೇಖಾಚಿತ್ರ ನಿರ್ಮಾಣಕ್ಕೆ ಬಹು ಸಹಾಯಕವಾಗಿದ್ದಿತು. ಈ ರೇಖಾಚಿತ್ರಗಳು ಗುಹೆಗಳ ಗೋಡೆಗಳು, ಸಣ್ಣ ಶಿಲ್ಪಫಲಕಗಳು, ಮೂಳೆಯ ಆಯುಧಗಳ ಮೇಲೆ ರೂಪುಗೊಂಡಿವೆ. ಮ್ಯಾಗ್ಡಲೀನಿಯನ್ ಕಾಲದ ಮೂಳೆಯ ಆಯುಧಗಳು ಬಹು ಸುಂದರ ರೇಖಾಚಿತ್ರಗಳನ್ನು ಒಳಗೊಂಡಿವೆ. ವರ್ಣಚಿತ್ರಗಳನ್ನು ರಚಿಸಲು ಹಳೆಯ ಶಿಲಾಯುಗದ ಮಾನವ ವಿವಿಧ ಬಣ್ಣಗಳ ಕಲ್ಲುಗಳನ್ನು ದ್ರವದ ಸಹಾಯವಿಲ್ಲದೆ ಬಳಸುತ್ತಿದ್ದ. ಮತ್ತೆ ಕೆಲವು ಬಣ್ಣಗಳನ್ನು ಕೆಲವು ಎಲೆಗಳ ರಸದೊಂದಿಗೆ ಮಿಶ್ರಣ ಮಾಡಿ, ಆ ಮಿಶ್ರಣವನ್ನು ಟೊಳ್ಳಾಗಿರುವ ಮೂಳೆಯೊಳಗೆ ಸೇರಿಸಿ ಈಗಿನ ಲೇಖನಿಯಂತೆ ಉಪಯೋಗಿಸುತ್ತಿದ್ದ. ಈ ರೀತಿಯ ವರ್ಣಚಿತ್ರಗಳು ಮಾರ್‍ಸಾಲಾಸ್, ಅಲ್ಟಮೀರ, ನ್ಯೌಕ್ಸ್, ಲಾಸ್ಕಾಕ್ಸ್ ಮುಂತಾದ ಕಡೆಗಳಲ್ಲಿ ದೊರಕಿವೆ. ಇವುಗಳಲ್ಲಿ ವಿಶೇಷವಾಗಿ ಬೇಟೆಯ ದೃಶ್ಯ ಇಲ್ಲವೇ ವಿವಿಧಪ್ರಾಣಿಗಳ ಚಿತ್ರಗಳು ಮಾತ್ರ ಇವೆ. ಈ ಕಾಲದ ಇನ್ನೊಂದು ರೀತಿಯ ವರ್ಣಚಿತ್ರವೆಂದರೆ ಬಣ್ಣವನ್ನು ಎರಚಿ ಮಾಡುವ ಚಿತ್ರಗಳು (ಸ್ಪ್ರೇ ಪೇಂಟಿಂಗ್). ತನ್ನ ಅಂಗೈಯನ್ನು ಗೋಡೆಯ ಮೇಲಿಟ್ಟು, ತನ್ನ ಬಾಯಲ್ಲಿ ಬಣ್ಣದ ದ್ರವವನ್ನು ಇಟ್ಟುಕೊಂಡು, ಅದನ್ನು ಅಂಗೈಮೇಲೆ ಪಿಚಕಾರಿಯಂತೆ ಉಗುಳಿದಾಗ, ಅಂಗೈಯಿದ್ದ ಭಾಗ ಬಿಟ್ಟು ಮಿಕ್ಕ ಭಾಗವೆಲ್ಲವೂ ಬಣ್ಣವಾಗುತ್ತದೆ. ಅಂಗೈ ಹೊರಗೆ ತೆಗೆದಾಗ ಆ ಚಿತ್ರ ಬಣ್ಣದ ಹಿಂಬದಿಯಲ್ಲಿ ಬೆಳ್ಳಗೆ ಕಾಣುತ್ತದೆ. ಈ ಕಾಲದ ಶಿಲ್ಪಗಳಲ್ಲಿ ಪೂರ್ಣಶಿಲ್ಪ ಮತ್ತು ಉಬ್ಬುಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳಲ್ಲಿಯೂ ಮೊದಮೊದಲು ನಿರ್ಮಾಣವಾದುವು ಪ್ರಾಣಿಗಳು. ಆದರೆ ವಿಶೇಷವಾಗಿ ನಾವು ಕಾಣುವುದು ಕಾಮದೇವತೆಯ ಶಿಲ್ಪಗಳು. ಈ ಶಿಲ್ಪಗಳಲ್ಲಿ ಅಂಗಗಳು ಬಹು ಚೆನ್ನಾಗಿ ರೂಪಿತವಾಗಿರುತ್ತವೆ. ಇಂಥ ಶಿಲ್ಪಗಳು ಲೆಸ್ಪುಗ್, ವಿಲೆನ್‍ಡಾರ್ಫ್, ಮೊರಾವಿಯ ಮುಂತಾದ ಕಡೆಗಳಲ್ಲಿ ದೊರಕಿವೆ. ಲೌಸೆಲ್‍ನಲ್ಲಿ ದೊರಕಿರುವ ಉಬ್ಬುಶಿಲ್ಪದ ವಿಗ್ರಹ ಸುಣ್ಣಕಲ್ಲಿನದಾದರೂ ಅಂಗವಿನ್ಯಾಸ ಸ್ಪಷ್ಟವಾಗಿ ರೂಪುಗೊಂಡಿದೆ.

ಹಳೆಯ ಶಿಲಾಯುಗದ ಚಿತ್ರಗಳು, ಶಿಲ್ಪಗಳು ಸಾಮಾನ್ಯವಾಗಿ ದುರ್ಗಮವಾದ, ಒಳಗೆ ಬೆಳಕು ಇಲ್ಲದ ಗುಹೆಗಳಲ್ಲಿ ದೊರಕುತ್ತವೆ. ಬೆಳಕಿಲ್ಲದ ಗುಹೆಗಳಲ್ಲಿ ಈ ಚಿತ್ರಗಳನ್ನು ನಿರ್ಮಿಸಿದ ಬಗೆ ಏನು ಎಂಬುದು ವಿವಾದಾಸ್ಪದ ವಿಚಾರ. ಆದರೆ ಇದು ಮೋಡಿ ಅಥವಾ ಮಾಟದ ಕುರುಹು ಎಂದು ಎಲ್ಲರೂ ಒಪ್ಪುತ್ತಾರೆ. ಯಾರ ಕಣ್ಣಿಗೂ ಬೀಳದ ಕಡೆ ಪ್ರಾಣಿಯ ಚಿತ್ರ ಬರೆದರೆ ಆ ಪ್ರಾಣಿ ಬರೆದವನ ಬಿಲ್ಲಿಗೇ ಬಲಿಯಾಗುತ್ತದೆ ಎಂಬ ನಂಬಿಕೆಯಿಂದ ಅವರು ಹಾಗೆ ಮಾಡಿರಬಹುದು. ಆದ್ದರಿಂದ ಚಿತ್ರಗಳನ್ನು ಬರೆದ ಗುಹೆಗಳಲ್ಲಿ ಒಂದರಮೇಲೆ ಒಂದರಂತೆ ಚಿತ್ರಗಳಿವೆ. ಪಕ್ಕದಲ್ಲಿ ಸ್ಥಳ ಖಾಲಿಯಿದ್ದರೂ ಅದನ್ನು ಉಪಯೋಗಿಸದೆ ಅದೇ ಜಾಗವನ್ನು ಉಪಯೋಗಿಸಿರುವುದೂ ಈ ದೃಷ್ಟಿಯಿಂದ ಗಮನಾರ್ಹವಾದುದು.

ಆದಿಮಾನವ ನವಶಿಲಾಯುಗದ ನಾಗರಿಕತೆಯನ್ನು ಸಾಧಿಸಿದಮೇಲೆ ಅವನ ಸಾಧನಸಂಪತ್ತು, ಸುತ್ತಮುತ್ತಲ ವಾತಾವರಣ ಮುಂತಾದುವು ಬದಲಾದವು. ಅವನು ಆಹಾರೋತ್ಪಾದಕನಾದ. ಒಂದು ಕಡೆ ನಿಲ್ಲುವ ಹವ್ಯಾಸವನ್ನು ರೂಢಿಸಿಕೊಂಡ. ಇದರಿಂದ ಅವನ ಕಲೆಗಳಲ್ಲಿ ಗಮನಾರ್ಹ ಬದಲಾವಣೆಗಳಾದವು. ಈಗ ಗಮನವೆಲ್ಲವೂ ಹೊಸದಾಗಿ



1–6 ಪೂರ್ವ ಶಿಲಾಯುಗದ ವರ್ಣ ಮತ್ತು ರೇಖಾ ಚಿತ್ರಗಳು. 12 ಪೂರ್ವ ಶಿಲಾಯುಗದ ಆಯುಧ–ಈಟಿಗಾಳ. 13 ಪೂರ್ವ ಶಿಲಾಯುಗದ ಕಲ್ಲಿನ ಶಿಲ್ಪ. 7,8, 15 ನವ ಶಿಲಾಯುಗದ ಸುಟ್ಟ ಮಣ್ಣಿನ ಗೊಂಬೆಗಳು. 9, 14 ನವ ಶಿಲಾಯುಗದ ಮಣ್ಣಿನ ಪಾತ್ರೆಗಳು. 10 ಲೋಹಯುಗದ ಚಿನ್ನ ಮತ್ತು ಕಂಚಿನ ಪಾತ್ರೆಗಳು. 11 ಲೋಹಯುಗದ ಗಾಡಿಯ ಶಿಲ್ಪ.

ತಾನು ಕಂಡುಹಿಡಿದಿದ್ದ ಮಡಕೆಗಳನ್ನು ಮಾಡುವುದರಲ್ಲಿ ಅವುಗಳನ್ನು ಅಲಂಕರಿಸುವುದರಲ್ಲಿ ಕೇಂದ್ರೀಕೃತವಾಯಿತು. ಯುರೋಪಿನ ವಿವಿಧ ಭಾಗಗಳಲ್ಲಿ ದೊರಕಿರುವ ಹೊಸಶಿಲಾಯುಗದ ಮಡಕೆಗಳು ಬಹು ಕಲಾತ್ಮಕವಾಗಿವೆ. ಮಡಕೆಯ ಮೇಲ್ಭಾಗದಲ್ಲಿ ವಿವಿಧಬಣ್ಣಗಳಿಂದ ಬರೆದ ಜ್ಯಾಮಿತೀಯ ಚಿಹ್ನೆಗಳು, ಇಲ್ಲವೇ ಪ್ರಾಣಿಗಳ ಚಿತ್ರಗಳು ವಿಶೇಷವಾಗಿವೆ. ಮಡಕೆಯ ಮೇಲ್ಭಾಗದಲ್ಲಿ ಉಗುರಿನಿಂದ ಅನೇಕ ಆಲಂಕಾರಿಕ ವಿನ್ಯಾಸಗಳನ್ನು ಮಾಡುವುದು, ಇಲ್ಲವೇ ಮೊನಚಾದ ಆಯುಧದಿಂದ ಬುಟ್ಟಿಯ ಹೆಣಿಗೆಯಂಥ ಆಲಂಕಾರ ಮಾಡುವುದು ಈ ಕಾಲದ ಮಡಕೆಯಲ್ಲಿ ವಿಶೇಷವಾಗಿ ಕಾಣಬರುತ್ತವೆ. ಈ ಕಾಲದ ಶಿಲ್ಪಗಳೂ ಮಣ್ಣಿನಿಂದಲೇ ಮಾಡಿದವು. ಸೆರ್ನವೋಡದಲ್ಲಿ ದೊರಕಿರುವ ಪುರುಷನ ಮತ್ತು ಸ್ತ್ರೀಯ ಎರಡು ಶಿಲ್ಪಗಳು ಗಮನಾರ್ಹವಾದವು. ಕುಳಿತಿರುವ ಭಂಗಿಯಲ್ಲಿರುವ ಈ ಶಿಲ್ಪಗಳಲ್ಲಿ ಕಣ್ಣು, ಮೂಗು, ಬಾಯಿ, ಬೆರಳುಗಳು ಕಾಣುವಂತೆ ಕೆತ್ತಲ್ಪಟ್ಟಿವೆ. ಕೇವಲ ಮನುಷ್ಯನ ಆಕಾರವನ್ನು ಕೊಡುವುದೇ ಅಲ್ಲದೆ ವಿವಿಧ ಅಂಗಗಳ ಸ್ಪಷ್ಟೀಕರಣವನ್ನು ತೋರಿಸುವುದರಲ್ಲಿ ನವಶಿಲಾಯುಗದ ಈ ಕಲೆಗಾರ ಸಮರ್ಥನಾಗಿದ್ದಾನೆ. ಇದೇ ರೀತಿಯ ಶಿಲ್ಪಗಳು ಮೊರೇವಿಯ, ಹಂಗರಿ, ಸಾರ್ಡೀನಿಯ ಮುಂತಾದ ಕಡೆಗಳಲ್ಲಿ ದೊರಕಿವೆ.

ಶಿಲಾಯುಗದ ಮಾನವ ಒಂದು ದೊಡ್ಡ ಹೆಜ್ಜೆ ಮುಂದಿಟ್ಟು ಕಂಚಿನ ಯುಗದ ಮಾನವನೆನಿಸಿಕೊಂಡಮೇಲೆ, ಅವನ ಕಲೆಯಲ್ಲಿ ಮಹತ್ತರವಾದ ಬದಲಾವಣೆಗಳು ಉಂಟಾದುವು. ತಾಮ್ರ, ಕಂಚು, ಚಿನ್ನ ಮುಂತಾದ ಲೋಹಗಳ ಕೆಲಸದಲ್ಲಿ ಪರಿಶ್ರಮ ಸಾಧಿಸಿದಂತೆ ಅವನ ಕಲೆ ಅಭಿವೃದ್ಧಿ ಹೊಂದಿತು. ತಾಮ್ರದ ಪಾತ್ರೆಗಳನ್ನು ವಿವಿಧ ಆಕಾರಗಳಲ್ಲಿ ತಯಾರಿಸುವುದೇ ಅಲ್ಲದೆ, ಹಲವಾರು ರೀತಿಯ ಆಲಂಕಾರಿಕ ವಿನ್ಯಾಸಗಳನ್ನು ಅಳವಡಿಸ ತೊಡಗಿದ. ಈ ಕಾಲದ ಕಂಚಿನ ಪಾತ್ರೆಗಳು ನಿಜವಾಗಿಯೂ ಸುಂದರ ವಸ್ತುಗಳಾಗಿವೆ. ಇವನ ಕಲೆ ಪಾತ್ರೆಗಳಿಗೆ ಮಾತ್ರ ಸೀಮಿತಗೊಳ್ಳದೆ ಪ್ರಾಣಿಗಳ ಲೋಹಶಿಲ್ಪಗಳವರೆಗೂ ವ್ಯಾಪಿಸಿದೆ.

ಭಾರತದಲ್ಲಿ ಆದಿಮಾನವ ಕಲೆಯ ಅವಶೇಷಗಳು ಅಷ್ಟಾಗಿ ದೊರಕಿಲ್ಲ. ಮಧ್ಯ ಭಾರತದ ಮಿರ್ಜಾಪುರ, ಮಾಣಿಕ್‌ಪುರ, ರಾಯ್‌ಘರ್ ಜಿಲ್ಲೆಯ ಸಿಂಘನ್‌ಪುರ, ಹೊಶಂಗಾಬಾದ್ ಮುಂತಾದ ಸ್ಥಳಗಳಲ್ಲಿ ಗುಹೆಯ ಕಲ್ಲಿನಮೇಲೆ ಚಿತ್ರಗಳು ದೊರಕಿವೆ. ಇವು ಇತಿಹಾಸದ ಪೂರ್ವಕಾಲದ ಆದಿಮಾನವನಿಂದ ರಚಿತವಾದುವೆಂದು ಕೆಲವರು ಅಭಿಪ್ರಾಯಪಟ್ಟರೂ ಈ ವಿಚಾರದಲ್ಲಿ ಒಮ್ಮತವಿಲ್ಲ. ಇವುಗಳಲ್ಲಿ ಮನುಷ್ಯ, ಕುದುರೆ, ಮೊಸಳೆ, ಜಿಂಕೆ ಮುಂತಾದವುಗಳ ಚಿತ್ರಣವಿದೆ.

ಆದರೆ ಭಾರತದಲ್ಲಿ ಇತಿಹಾಸಪ್ರಾರಂಭಕಾಲದವನೆಂದು ಕರೆಯಬಹುದಾದ ಸಿಂಧೂ ಸಂಸ್ಕೃತಿಯ ಮಾನವ ಉತ್ತಮ ಕಲೆಗಾರನಾಗಿದ್ದನೆಂದು ಪ್ರಸಿದ್ಧವಾಗಿಯೇ ಇದೆ. ಇಂಥ ಉತ್ತಮ ಕಲೆ ಬೆಳೆಯಲು ಅದಕ್ಕೆ ಹಿಂದಿನಿಂದಲೂ ಒಂದು ಪರಂಪರೆ ಇದ್ದಿರಬೇಕೆಂದೂ ಆ ಪರಂಪರೆಯ ಕಲಾವಶೇಷಗಳು ನಮಗೆ ಉಪಲಬ್ಧವಾಗಿಲ್ಲವೆಂದೂ ಹೇಳಬಹುದು.

(ಎ.ವಿ.ಎನ್.)

**ಆದಿಯಪ್ಪ :** ಸು. 1650. ಜೈನಕವಿ. ಧನ್ಯಕುಮಾರ ಚರಿತೆ ಎಂಬ ಕಾವ್ಯದ ಕರ್ತೃ. ತಂದೆ ಶ್ರುತಿಯತಿ ಶಿಷ್ಯನಾದ ಮುನಿಯಣ್ಣ, ತಾಯಿ ದೇವರಸಿ. ನಾಲ್ಕು ಮಂದಿ ಪುತ್ರರಲ್ಲಿ ಕಿರಿಯವನೇ ಆದಿಯಪ್ಪ. ಸರಸಿಜಸಂಭವ (ಬ್ರಹ್ಮ), ಸರಸಿಜರಿಪು (ಚಂದ್ರ) ಮತ್ತು ವಿಜಯಪ್ಪ ಈ ಮೂವರೂ ಈತನ ಅಣ್ಣಂದಿರು. ತುಳು ದೇಶಕ್ಕೆ ಸೇರಿದ ಗೇರುಸೊಪ್ಪೆಯ ರಾಜಭೈರವರಾಯನ ಗುರುವಾದ ವೀರಸೇನ ಮುನಿಶ್ರೇಷ್ಠನ ಆದೇಶದಂತೆ ಕವಿ ಕೃತಿರಚನೆ ಮಾಡಿದ್ದಾನೆ. ಕಾವ್ಯದಲ್ಲಿ ಕಾಲನಿಷ್ಕರ್ಷೆಗೆ ಅನುಕೂಲಿಸುವ ಯಾವ ಪ್ರಮಾಣವೂ ದೊರೆಯುವುದಿಲ್ಲ.

ಧನ್ಯಕುಮಾರ ಚರಿತೆ ಸಾಂಗತ್ಯದಲ್ಲಿ ರಚಿತವಾಗಿದೆ. ಸುಮಾರು 410 ಪದ್ಯಗಳಿವೆ. ಮಧ್ಯದಲ್ಲಿ ಕೆಲವು ಕಂದ ಪದ್ಯಗಳೂ ವೃತ್ತಗಳೂ ರಗಳೆಗಳೂ ಇವೆ. ಕವಿಯ ವಿಚಾರ ಕಾವ್ಯದ ಕೊನೆಯಲ್ಲಿದೆ. ವರ್ಣನೆಗಿಂತ ಕಥೆಯ ನಿರೂಪಣೆಯಲ್ಲೇ ಕವಿಯ ಒಲವು ಅಧಿಕ.

**ಕಥಾಸಾರ ಹೀಗಿದೆ :** ಭೋಗಾವತಿ ಎಂಬುದು ಅವಂತಿ ದೇಶದಲ್ಲಿ ಒಂದು ಪಟ್ಟಣ. ದೊರೆ ಪಶುಪಾಲ. ಹೆಂಡತಿ ಪದ್ಮಾಕ್ಷಿ. ಇವರಿಗೆ ಅಕೃತಪುಣ್ಯನೆಂಬ ಮಗ ಹುಟ್ಟುತ್ತಾನೆ. ಈತ ಹುಟ್ಟಿದಂದಿನಿಂದ ಸಂಪತ್ತು ಕ್ಷಯಿಸಲಾರಂಭಿಸಿ ಪಶುಪಾಲ ದರಿದ್ರನಾಗಿ ಸಾಯುತ್ತಾನೆ. ಅನಂತರ ಅಕೃತ ಪುಣ್ಯ ಕಂಬಳ ಮಾಡಿ ಜೀವಿಸುತ್ತಾನೆ. ಬಂಧುಗಳು ಅನಾದರಣೆ ಮಾಡುತ್ತಾರೆ. ಸಹಿಸಲಾರದೆ ದುಃಖಿಸಿ ಬೇರೆ ಪಟ್ಟಣಕ್ಕೆ ತಾಯಿಯೊಡನೆ ಹೋಗಿ ಬಲಭದ್ರನೆಂಬ ವೈಶ್ಯನ ಮನೆಯಲ್ಲಿ ಆಳಾಗುತ್ತಾನೆ. ಊರಿನವರೆಲ್ಲ ಈತನನ್ನು ಕರಕುಚಿನ ಎಂದು ಕರೆಯಲು ಪ್ರಾರಂಭಿಸುತ್ತಾರೆ. ಆ ವೈಶ್ಯನಿಗೆ ಏಳು ಮಂದಿ ಮಕ್ಕಳು. ಈ ಅಕೃತಪುಣ್ಯನನ್ನು ದನ ಕಾಯುವ ಕೆಲಸಕ್ಕೆ ನೇಮಿಸುತ್ತಾರೆ. ಒಂದು ದಿನ ದನ ಕಾಯುವಾಗ ಆಲಸಿಕೆಯಿಂದ ಮಲಗಿ ನಿದ್ರಿಸಿದ ವೇಳೆಯಲ್ಲಿ ಹಸುಗಳು ಕರುಗಳೊಡನೆ ತಾವಾಗಿಯೇ ಮನೆಗೆ ಹಿಂತಿರುಗುತ್ತವೆ. ಕರಕುಚಿನ ನಿದ್ರೆಯಿಂದೆದ್ದು ನೋಡಿ ಹಸುಗಳನ್ನು ಕಾಣದೆ ಯೋಚಿಸುತ್ತಾನೆ. ಹಸುಗಳೊಡನೆ ಹುಡುಗ ಬರದಿದ್ದುದನ್ನು ಗಮನಿಸಿದ ಬಲಭದ್ರ ಅವನನ್ನು ಹುಡುಕಿಕೊಂಡು ಬರಲು ಮಕ್ಕಳನ್ನು ಕಳುಹಿಸುತ್ತಾನೆ. ಅವರು ತನ್ನ ಕಡೆಗೆ ಬರುತ್ತಿದ್ದುದನ್ನು ನೋಡಿ ಹೆದರಿದ ಕರಕುಚಿನ ಓಡಿ ಹೋಗಿ ಸಮೀಪದ ಆಶ್ರಮದಲ್ಲಿದ್ದ ಋಷಿಗಳಿಗೆರಗಿ ನಡೆದ ಸಂಗತಿಯನ್ನು ವಿನಯದಿಂದ ಅರಿಕೆ ಮಾಡುತ್ತಾನೆ. ಆ ಮುನಿ ಯೋಗದೃಷ್ಟಿಯಿಂದ ಅಂದಿನ ಇರುಳಿನಲ್ಲೇ ಈತ ಸಾಯುವನೆಂಬುದನ್ನು ತಿಳಿದು ಪಂಚಾಣುವ್ರತಗಳ ದೀಕ್ಷೆ ಕೊಡುತ್ತಾನೆ. ವ್ರತವನ್ನೇ ಧ್ಯಾನಿಸುತ್ತ ಒಂದೆಡೆಯಲ್ಲಿ ಕುಳಿತಿರಲು ರಾತ್ರಿ ಒಂದು ಹುಲಿ ಈತನನ್ನು ಕೊಲ್ಲುತ್ತದೆ. ಸಾಧುಗಳಲ್ಲಿ ದೀಕ್ಷೆ ಪಡೆದ ಕಾರಣ ಕರಕುಚಿನ ಅಮರಗತಿಯನ್ನು ಪಡೆಯುತ್ತಾನೆ. ಬಲಭದ್ರನ ಮಕ್ಕಳು ಸತ್ತು ದುಷ್ಕರ್ಮ ಫಲವಾಗಿ ಅನೇಕ ಭವಗಳಲ್ಲಿ ಸುತ್ತಿ ನರಕಕ್ಕೆ ಹೋಗುತ್ತಾರೆ. ಕಾಲಕ್ರಮದಲ್ಲಿ ಉಜ್ಜಯಿನಿಯ ಧನಪಾಲನೆಂಬ ವೈಶ್ಯೋತ್ತಮನ ಹೆಂಡತಿ ಪ್ರಭಾವತಿಯ ಉದರದಲ್ಲಿ ಈ ಏಳು ಮಂದಿ ಬಲಭದ್ರನ ಮಕ್ಕಳೂ ಭಾಗ್ಯಹೀನ ದುರ್ಗುಣ ಪುತ್ರರಾಗಿ ಹುಟ್ಟುತ್ತಾರೆ. ಈ ಮಕ್ಕಳ ಹುಟ್ಟಿನಿಂದ ಧನಪಾಲ ದರಿದ್ರನಾಗುತ್ತಾನೆ. ತನ್ನ ದರಿದ್ರಾವಸ್ಥೆ ಎಂದು ಹೋಗುತ್ತದೆಂದು ಆತ ಮುನಿವರನನ್ನು ಪ್ರಶ್ನಿಸುತ್ತಾನೆ. ಮುಂದೆ ಜನಿಸುವ ಮಗನಿಂದ ದಾರಿದ್ರ್ಯ ನಿವಾರಣೆ ಯಗುತ್ತದೆಂದು ಮುನಿಗಳು ಭರವಸೆ ಕೊಡುತ್ತಾರೆ. ಹುಟ್ಟಿದ ಮಗುವಿಗೆ ಧನ್ಯಕುಮಾರ ಎಂದು ನಾಮಕರಣ ಮಾಡುತ್ತಾರೆ. ತಾಯಿ ಧನ್ಯಕುಮಾರನನ್ನು ತಮಗಿಂತ ಅಧಿಕವಾಗಿ ಪ್ರೀತಿಸುವುದನ್ನು ಕಂಡು ಉಳಿದ ಮಕ್ಕಳು ಆಕ್ಷೇಪಿಸುತ್ತಾರೆ. ಅಸೂಯೆಯಿಂದ ಧನ್ಯಕುಮಾರ ನನ್ನು ಕೊಲ್ಲಲು ಯತ್ನಿಸುತ್ತಾರೆ. ಧನ್ಯಕುಮಾರ ಹೇಗೋ ಪಾರಾಗಿ ದೇಶಾಂತರ ಹೋಗುತ್ತಾನೆ. ಮಗ ಮನೆಗೆ ಬರದಿದ್ದುದನ್ನು ಕಂಡ ತಂದೆತಾಯಿಗಳು ಬಹಳ ದುಃಖಿಸುತ್ತಾರೆ. ಕೊನೆಗೆ ಉಳಿದ ಮಕ್ಕಳು ತೋರಿದ ಕೆಲವು ಕುರುಹುಗಳಿಂದ ಕಿರಿಯ ಮಗ ಸತ್ತನೆಂದು ಭಾವಿಸಿ

ಅವನಿಗೆ ಔರ್ಧ್ವದೇಹಿಕ ಕ್ರಿಯೆಯನ್ನು ಮಾಡುತ್ತಾರೆ. ಸ್ವಲ್ಪ ದಿನಗಳಲ್ಲೇ ಧನಪಾಲನ ಐಶ್ವರ್ಯ ನಶಿಸಿ ಆತ ಮತ್ತೆ ದರಿದ್ರನಾಗುತ್ತಾನೆ. ಇತ್ತ ಧನ್ಯಕುಮಾರ ಅನೇಕ ದೇಶಗಳಲ್ಲೂ ಕಾಡುಗಳಲ್ಲೂ ಅಲೆಯುತ್ತಾನೆ. ತನ್ನೊಡನೆ ಸೆಣಸಿದ ಬೇಡನೃಪ ಕಾಳರುದ್ರನನ್ನು ಸೋಲಿಸಿ ಮಗಧ ದೇಶಕ್ಕೆ ಬರುತ್ತಾನೆ. ಈತ ಹೋದೆಡೆಗಳಲ್ಲೆಲ್ಲ ಅಕಾಲದಲ್ಲೂ ವೃಕ್ಷಗಳು ಫಲಪುಷ್ಪಭರಿತವಾಗುತ್ತವೆ. ಪವಾಡಗಳಿಂದ ಮಗಧ ರಾಜರ ಪುತ್ರಿಯರನ್ನೂ ಮಂತ್ರಿಯ ಮಗಳನ್ನೂ ವನಪಾಲನ ಮಗಳನ್ನೂ, ಹೀಗೆ ಒಟ್ಟು 16 ಮಂದಿ ಕನ್ಯೆಯರನ್ನು ವಿವಾಹವಾಗಿ ಸುಖದಿಂದಿದ್ದು ಗುಣಪಾಲನೆಂಬ ಮಗನನ್ನು ಪಡೆಯುತ್ತಾನೆ.

ಧನಪಾಲ ದಾರಿದ್ರ್ಯದಿಂದ ಬೇಸತ್ತು ಸೋದರಳಿಯ ಮಗಧ ದೇಶದ ಶಾಲಿಭದ್ರನ ಸಹಾಯವನ್ನಪೇಕ್ಷಿಸಿ ಆ ದೇಶಕ್ಕೆ ಬರುತ್ತಾನೆ. ದಾರಿದ್ರ್ಯದಿಂದ ಕ್ಷೀಣನಾಗಿದ್ದ ಧನಪಾಲ ದಾರಿಯಲ್ಲಿ ಹೋಗುತ್ತಿದ್ದುದನ್ನು ಕಂಡ ಧನ್ಯಕುಮಾರ ಅವನನ್ನು ಎದುರುಗೊಂಡು ಕರೆತಂದು ಉಪಚರಿಸುತ್ತಾನೆ. ಬಳಿಕ ತಾನೇ ಅವನ ಕಿರಿಯ ಮಗನೆಂದು ತಿಳಿಸುತ್ತಾನೆ. ಇದನ್ನು ಕೇಳಿದ ಧನಪಾಲ ಬಹಳ ಸಂತೋಷಪಡುತ್ತಾನೆ. ಧನ್ಯಕುಮಾರ ತನ್ನ ತಾಯಿ ಮತ್ತು ಅಣ್ಣಂದಿರನ್ನು ಉಜ್ಜಯಿನಿಯಿಂದ ಕರೆಯಿಸುತ್ತಾನೆ. ಎಲ್ಲರೂ ಸುಖವಾಗಿ ಇರುತ್ತಾರೆ. ಕಾಲಕ್ರಮದಲ್ಲಿ ಧನ್ಯಕುಮಾರ ಐಹಿಕ ಸುಖಕ್ಕೆ ಜುಗುಪ್ಸೆಪಟ್ಟು ಮಗನಿಗೆ ಪಟ್ಟಕಟ್ಟಿ ಶ್ರುತಸಾಗರ ಭಟ್ಟಾರಕರಲ್ಲಿಗೆ ಹೋಗಿ ದೀಕ್ಷೆ ಪಡೆಯುತ್ತಾನೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇನ್ನೊಬ್ಬ ಆದಿಯಪ್ಪನ ಹೆಸರು ಬರುತ್ತದೆ. ಇವನ ಗ್ರಂಥ ಪಟಹಸ್ತನ ಚರಿತ್ರೆ. ಕಥೆ ಪಟ್ಟಹಸ್ತನೆಂಬ ಅತಿ ಲೋಭಿಗೆ ಸಂಬಂಧಿಸಿದ್ದು. ಕಾಲ ಸು. 1700. ಕವಿ ಬ್ರಾಹ್ಮಣ. ಸ್ಥಳ ಚಂಗಳನಾಡೊಳಗಣ ಸಪ್ಪಾರದ ಹಳ್ಳಿ. **(ಎಸ್.ಎನ್.ಕೆ.)**

**ಆದಿಲ್ ಶಾಹೀ ವಂಶ:** 1490–1686ರ ಅವಧಿಯಲ್ಲಿ ಉತ್ತರ ಕರ್ನಾಟಕದ ಬಹುಭಾಗ ಹಾಗೂ ದಖನ್ನಿನ ಇತರ ಪ್ರದೇಶಗಳ ಮೇಲೆ ಒಡೆತನ ನಡೆಸಿದ ರಾಜವಂಶ. ಆದಿಲ್‍ಶಾಹೀಗಳ ರಾಜಧಾನಿ ಬಿಜಾಪುರ. ಬಹಮನೀ ರಾಜ್ಯ ಒಡೆದುಹೋದಮೇಲೆ ಹುಟ್ಟಿಕೊಂಡ ಐದು ಶಾಹೀ ರಾಜ್ಯಗಳಲ್ಲಿ ಇವರದು ಅತ್ಯಂತ ಪ್ರಸಿದ್ಧವಾದುದು. ಆದಿಲ್‍ಶಾಹೀ ಹೆಸರು ಈ ವಂಶದ ಆಳ್ವಿಕೆಯ ಸ್ಥಾಪಕನಾದ ಯೂಸುಫ್ ಆದಿಲ್‍ಖಾನ್‍ನ ಹೆಸರಿನಮೇಲೆ ರೂಢಿತವಾಗಿದೆ. ಈತ ತಾನು ಆಟ್ಟೊಮನ್ ಸಾಮ್ರಾಜ್ಯದ ಸುಲ್ತಾನ 2ನೆಯ ಮುರಾದ್‍ನ ವಂಶಸ್ಥನೆಂದು ಹೇಳಿಕೊಂಡಿದ್ದಾನೆ. ಆದರೆ ಇದು ಸ್ವಕಲ್ಪಿತ. ಈತ ಷೇಕ್ ಸಫಿಯ ಯುವಕ ಗುಲಾಮರಲ್ಲಿ ಒಬ್ಬನಾಗಿ ನೇಮಕವಾಗಿದ್ದ. ಈತನ ವಂಶಸ್ಥರಲ್ಲಿ ಮುಂದಿನವರು ಸಫವಿದ್ ಮನೆತನಕ್ಕೆ ನಿಷ್ಠೆ ತೋರಿಸುತ್ತಿದ್ದರು. ಈ ಮಾಹಿತಿಗಳು ಇವನು ಅಜರ್‍ಬೈಜಾನ್ ಪ್ರದೇಶದ ಮೂಲ ಪಂಗಡಗಳಿಗೆ ಸೇರಿದವನು ಎಂದು ತೋರಿಸುತ್ತವೆ.

**ರಾಜಕೀಯ ಇತಿಹಾಸ:** ದಖನ್ ಹಾಗೂ ದಕ್ಷಿಣ ಭಾರತದ ರಾಜಕೀಯದಲ್ಲಿ ಬಹು ಪರಿಣಾಮಕಾರಿ ಪಾತ್ರವಹಿಸಿದ್ದ ಈ ವಂಶದಲ್ಲಿ ಒಂಬತ್ತು ಸುಲ್ತಾನರು ಆಳಿದರು. ಅವರಲ್ಲಿ ಯೂಸುಫ್, ಅಲಿ, 2ನೆಯ ಇಬ್ರಾಹೀಂ ಮತ್ತು ಮಹಮ್ಮದ್ ಪ್ರಮುಖರು. ಇತರರು ಇವರಷ್ಟು ಬಲಶಾಲಿಗಳಲ್ಲದಿದ್ದರೂ ತಮ್ಮ ವಂಶದ ದಕ್ಷ ಪರಂಪರೆಯಲ್ಲೆ ಕರ್ತವ್ಯ ನಿರ್ವಹಿಸಿ ರಾಜ್ಯದ ಪ್ರಾದೇಶಿಕ ಸಮಗ್ರತೆಯನ್ನು ಉಳಿಸಿಕೊಂಡು ಬಂದರು. ಅಲ್ಲದೆ ಕಲೆ, ವಾಸ್ತುಶಿಲ್ಪ ಹಾಗೂ ಸಾಹಿತ್ಯ ರಂಗಗಳಲ್ಲಿನ ಹಲವು ಸಾಧನೆಗಳಿಗೂ ಕಾರಣರಾದರು.

ಮೊದಲ ದೊರೆ ಯೂಸುಫ್ ಆದಿಲ್ ಷಾ (1490–1510). ಮೊದಲು ಬಹಮನೀ ಅರಸರ ಅಧೀನದಲ್ಲಿ ಬಿಜಾಪುರದ ಪ್ರಾಂತ್ಯಾಧಿಕಾರಿಯಾಗಿದ್ದ. ಬಹಮನೀ ಸಾರ್ವಭೌಮ ಮಹಮ್ಮದ್ ನಿರ್ಬಲನಾಗಿ ರಾಜ್ಯದ ವ್ಯವಹಾರ ಖಾಸಿಮ್ ಬರೀದ್‍ನ ಕೈಸೇರಿದಾಗ, ಈತ ಬಿಜಾಪುರದಲ್ಲಿ ಸ್ವತಂತ್ರನಾಗಿ ಆಳಲಾರಂಭಿಸಿದ. ಅಸೀಮ ವೀರನೂ ರಾಜಕೀಯ ಪಟುವೂ ಆಗಿದ್ದ ಈತನ ಆಳ್ವಿಕೆಯಲ್ಲಿ ರಾಜ್ಯ ವ್ಯವಸ್ಥಿತವಾಯಿತು. ಆದರೆ ಇವನ ಮರಣದ ವೇಳೆಗೆ ಪಕ್ಕದ ರಾಜ್ಯಗಳಿಂದ ಬಿಜಾಪುರಕ್ಕೆ ಅಪಾಯ ತಲೆದೋರಲಾರಂಭಿಸಿತು. ಇವನ ಮಗ ಇಸ್ಮಾಯಿಲ್ (1510–34) ಸಿಂಹಾಸನವೇರುವಾಗ ಕೇವಲ 13 ವರ್ಷದ ಬಾಲಕ. ಆ ಕಾಲದಲ್ಲಿ ರಾಜ ಪ್ರತಿನಿಧಿಯಾಗಿದ್ದ ಕಮಾಲ್ ಖಾನ್ ರಾಜ್ಯಾಧಿಕಾರವನ್ನು ತಾನೇ ವಶಮಾಡಿಕೊಳ್ಳಲು ಪ್ರಯತ್ನಿಸಿದ. ಆದರೆ ಇಸ್ಮಾಯಿಲನ ತಾಯಿ ಈ ಪ್ರಯತ್ನವನ್ನು ವಿಫಲಗೊಳಿಸಿದಳು. ಪರ್ಷಿಯ ಮೊದಲಾದೆಡೆಗಳಿಂದ ಬಂದು ದಖನ್ನಿನಲ್ಲಿ ನೆಲಸಿದ್ದ ಹೆಚ್ಚಿನ ಮಟ್ಟಿಗೆ ಷಿಯಾ ಪಂಥೀಯರಾಗಿದ್ದವರು ಮತ್ತು ಬಹುಮಟ್ಟಿಗೆ ಸ್ಥಳೀಯರೇ ಆಗಿದ್ದ ಸುನ್ನಿ ಪಂಥದವರು ಈ ಎರಡು ಪ್ರಭಾವೀ ಗುಂಪುಗಳೂ ಅಂದಿನ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದವು. ಆಗಾಗ್ಗೆ ತಲೆ ದೋರುತ್ತಿದ್ದ ಇವರ ವೈಮನಸ್ಯಗಳು ರಾಜ್ಯಗಳ ಮೇಲೆ ಅನೇಕ ರೀತಿಯ ಪರಿಣಾಮವನ್ನು ಬೀರುತ್ತಿದ್ದುವು. ಇಸ್ಮಾಯಿಲ್ ಪ್ರಬುದ್ಧನಾದ ಮೇಲೆ ದಖನೀ ಪಕ್ಷವನ್ನು ಸದೆಬಡಿದ. ಅಹಮದ್‍ನಗರ, ಬೀರಾರ್ ಮತ್ತು ಬಿದರೆಯ ಸುಲ್ತಾನರ ಸಂಯುಕ್ತ ವಿರೋಧವನ್ನು ಯಶಸ್ವಿಯಾಗಿ ಎದುರಿಸಿದ. 1534ರಲ್ಲಿ ಇವನು ಮೃತನಾದಾಗ ರಾಜ್ಯದ ಸ್ಥಿತಿ ಪುನಃ ಅಸ್ತವ್ಯಸ್ತವಾಯಿತು.

ಇಸ್ಮಾಯಿಲ್‍ನ ಉತ್ತರಾಧಿಕಾರಿಗಳಾದ ಮಲ್ಲು ಮತ್ತು ಅಲೂಫ್‍ಖಾನರು ಅಸಮರ್ಥರಾಗಿದ್ದರು. ಆಗ ರಾಜಮಾತೆ ಬೀಬೀಜಿ ಖಾನಂ ಬಲಿಷ್ಠ ಮಂತ್ರಿ ಅಸದ್ ಖಾನನ ಸಹಕಾರದಿಂದ ಇಸ್ಮಾಯಿಲ್‍ನ ಮೂರನೆಯ ಮಗ ಇಬ್ರಾಹೀಂನನ್ನು ಸುಲ್ತಾನನೆಂದು ಘೋಷಿಸಿದಳು. ಇವನ 24 ವರ್ಷಗಳ (1535–58) ಆಡಳಿತದಲ್ಲಿ ರಾಜ್ಯದಲ್ಲಿ ಹಲವು ಮುಖ್ಯ ಬದಲಾವಣೆಗಳಾದವು. ಇವನು ಅಫಕ್ವೀಗಳನ್ನು (ವಿದೇಶೀಯರು) ಹಿಂದಿಟ್ಟು ದಖನೀಯರಿಗೆ ಪ್ರೋತ್ಸಾಹವಿತ್ತ. ಪಾರಸೀ ಬದಲು ಮರಾಠಿಯನ್ನು ಅಧಿಕೃತ ಭಾಷೆಯಾಗಿ ಹೆಚ್ಚು ಬಳಕೆಗೆ ತಂದ. ಇವನ ರಾಜನೀತಿಯಿಂದಾಗಿ ಸ್ವಂತ ಸಹೋದರ ಅಬ್ದುಲ್ಲನೂ ಸೇರಿದಂತೆ ಹಲವರು ದಂಗೆ ಎದ್ದರು. ಈ ದಂಗೆಯನ್ನು ಅಡಗಿಸಿದರೂ ರಾಜ್ಯದ ಏಳ್ಗೆ ಕುಂಠಿತವಾಯಿತು. ಇಬ್ರಾಹೀಂ 1558ರಲ್ಲಿ ನಿಧನನಾದ. ಉತ್ತರಾಧಿಕಾರಿಯಾದ ಇವನ ಮಗ ಅಲಿಆದಿಲ್ ಷಾ (1558–80) ಶಾಹೀ ವಂಶದ ಅತ್ಯಂತ ಬಲಿಷ್ಠ ಹಾಗೂ ದಕ್ಷ ಸುಲ್ತಾನರಲ್ಲಿ ಒಬ್ಬ. ತನ್ನ ತಂದೆಯ ಕಾಲದಲ್ಲಿ ಹೆಚ್ಚು ತೊಂದರೆಗೊಳಗಾಗಿದ್ದ ಈತ ಕೆಲವು ಶ್ರೀಮಂತರ ನೆರವಿನಿಂದ ಸಿಂಹಾಸನವನ್ನೇರಿದ. ತನ್ನ ತಂದೆಯ ನೀತಿಯನ್ನು ಅನುಸರಿಸದೆ ಅಫಕ್ವೀಗಳನ್ನು ಪ್ರೋತ್ಸಾಹಿಸಿದ. ವಿಜಯನಗರದ ವಿರುದ್ಧ ಉಳಿದ ಶಾಹೀ ರಾಜರುಗಳ ಒಕ್ಕೂಟವನ್ನು ರಚಿಸಲು ಈತನೇ ಕಾರಣ. ಇವನ ಈ ಸಾಧನೆಯಿಂದಾಗಿ 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾಯಿತು. ಅಹಮದ್‍ನಗರದ ರಾಜವಂಶ ದೊಂದಿಗೆ ಪರಸ್ಪರ ರಕ್ತಸಂಬಂಧ ಬೆಳೆಸಿದ. ಶಿಥಿಲಗೊಂಡ ವಿಜಯನಗರ ಸಾಮ್ರಾಜ್ಯದತ್ತ ನಡೆದು ದಕ್ಷಿಣದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ರಾಜ್ಯ ವಿಸ್ತರಿಸಿದ. ಅಪಾರ ಐಶ್ವರ್ಯವನ್ನು ಸಂಪಾದಿಸಿದ. ಇವನ 23 ವರ್ಷಗಳ ಆಡಳಿತಕಾಲ ತೀವ್ರ ಚಟುವಟಿಕೆಗಳಿಂದ ಕೂಡಿತ್ತು. 1580ರಲ್ಲಿ ತನ್ನ ಸೇವಕನೊಬ್ಬನಿಂದ ಕೊಲೆಗೀಡಾದ.

ಅಲಿ ಆದಿಲ್ ಷಾನಿಗೆ ಸಂತಾನವಿಲ್ಲದಿದ್ದುದರಿಂದ ಇವನ ಸೋದರನ ಮಗ ಎರಡನೆಯ ಇಬ್ರಾಹೀಂ ಆದಿಲ್ ಷಾ (1580–1627) ಇನ್ನೂ ಒಂಬತ್ತು ವರ್ಷದ ಬಾಲಕನಾಗಿದ್ದಾಗಲೇ ಪಟ್ಟಕ್ಕೆ ಬಂದ. ಆದ್ದರಿಂದ ಮುಂದೆ 11 ವರ್ಷಗಳ ಕಾಲ ರಾಜ್ಯವನ್ನು ನಾಲ್ವರು ರಾಜಪ್ರತಿನಿಧಿಗಳು ಒಬ್ಬರ ಅನಂತರ ಒಬ್ಬರು ಆಳಿ ಪರಸ್ಪರ ಕುಟಿಲನೀತಿಗಳಿಂದ ಆಡಳಿತವನ್ನು ಸಾಕಷ್ಟು ಹದಗೆಡಿಸಿದರು. ಈ ಅವ್ಯವಸ್ಥೆಯ ಲಾಭ ಪಡೆದು ನೆರೆ ರಾಷ್ಟ್ರಗಳವರು ಬಿಜಾಪುರದ ಆಂತರಿಕ ವಿಷಯಗಳಲ್ಲಿ ಕೈಹಾಕಲಾರಂಭಿಸಿದರು. ಇದೇ ಕಾಲದಲ್ಲಿ ದಖನ್ನಿನ ರಾಜಕೀಯ ದಲ್ಲಿ ಮುಗಲರು ಪ್ರವೇಶಿಸಿದ್ದರಿಂದ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು. ಇಬ್ರಾಹೀಂ ವಯಸ್ಸಿಗೆ ಬರುತ್ತಿದ್ದಂತೆ ಈ ಎಲ್ಲ ಸಮಸ್ಯೆಗಳನ್ನೂ ಎದುರಿಸಬೇಕಾಯಿತು. ಈ ಕಾರ್ಯಕ್ಕೆ ಇವನಿಗೆ ಸಹಾಯಕರೂ ಇರಲಿಲ್ಲ. ರಾಜಪ್ರತಿನಿಧಿ ದಿಲಾವರ್ ಖಾನನನ್ನು ಕಿತ್ತೊಗೆದು ತನ್ನ ಸಹೋದರ ಇಸ್ಮಾಯಿಲ್‍ನ ದಂಗೆಯನ್ನು ಅಡಗಿಸಿದ್ದು ಇಬ್ರಾಹೀಂನ ಮೊದಲ ಸಾಧನೆ. ಅಹಮದ್‍ನಗರದವರು ಬಿಜಾಪುರದ ತೊಂದರೆಗಳಿಗೆ ಮುಖ್ಯಕಾರಣರಾದ್ದರಿಂದ ಈತ ಮುಗಲರ ಜೊತೆ ಸ್ನೇಹ ಬೆಳೆಸಿ ಅಹಮದ್ ನಗರವನ್ನು ತುಳಿದ. ಬಿದರೆಯನ್ನು ವಶಪಡಿಸಿ ಕೊಂಡು ಅದನ್ನು ತನ್ನ ರಾಜ್ಯದೊಳಗೆ ಸೇರಿಸಿಕೊಂಡ (1619). ಇಬ್ರಾಹೀಂ ಸಾಕಷ್ಟು ದೀರ್ಘಕಾಲ ಆಳಿ ತನ್ನ ಕಲ್ಯಾಣ ಕಾರ್ಯಗಳಿಂದ ಜಗತ್‍ಗುರು ಎಂದು ಪ್ರಸಿದ್ಧನಾಗಿದ್ದ.

ಅನಂತರ ಪಟ್ಟಕ್ಕೆ ಬಂದ ಇವನ ಎರಡನೆಯ ಮಗ ಮಹಮ್ಮದ್ ಆದಿಲ್ ಷಾ (1627–56) ತನ್ನ ವಿರೋಧಿ ಸೋದರರನ್ನು ಹತ್ತಿಕ್ಕಿ, ಉತ್ತಮ ರಾಜಕೀಯ ಪಟುವಾಗಿ ಬೆಳೆದ. ಮುಗಲ್ ಸಾಮ್ರಾಜ್ಯ ಶಾಹಿಯ ವಿಸ್ತರಣೆಯನ್ನು 1636ರ ವರೆಗೂ ಯಶಸ್ವಿಯಾಗಿ ತಡೆದ. ಆದರೆ ಅದೇ ವರ್ಷ ಅನಿವಾರ್ಯವಾಗಿ ಮುಗಲರೊಂದಿಗೆ ಅಧೀನತ್ವದ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಉತ್ತರದಲ್ಲಿ ತನಗಾದ ನಷ್ಟವನ್ನು ಭರಿಸಲು ದಕ್ಷಿಣದ ಕಡೆ ತಿರುಗಿ ಕರ್ನಾಟಕದ ಬಹುಭಾಗದ ಮೇಲೆ ಪ್ರಭುತ್ವ ಸ್ಥಾಪಿಸಿದ. ಇವನ ದಂಡನಾಯಕರುಗ ಳಾದ ರಣದುಲ್ಲಾಖಾನ್ ಮತ್ತು ಶಹಾಜೀ ಭೋನ್ಸ್ಲೆ ಅಪಾರ ಐಶ್ವರ್ಯವನ್ನೂ ಹೆಚ್ಚು ಪ್ರದೇಶಗಳನ್ನೂ ಗೆದ್ದುಕೊಟ್ಟರು. ಇವನ ಕಾಲದಲ್ಲಿ ಬಿಜಾಪುರ ವೈಭವದ ಉತ್ತುಂಗವನ್ನು ಕಂಡಿತು. ಇವನ ಕೊನೆಯ ಕಾಲದ ವೇಳೆಗೆ ಮರಾಠರು ಪ್ರಬಲಿಸಿದರು. ಇವನು ನಿಧನನಾಗುತ್ತಿದ್ದಂತೆಯೇ (1656) ಬಿಜಾಪುರ ಅವನತಿಯ ಹಾದಿ ಹಿಡಿಯಿತು. ಇವನ ಮಗ ಎರಡನೆಯ ಅಲಿ ಆದಿಲ್ ಷಾ (1656–72) ಅಧಿಕಾರಕ್ಕೆ ಬರುವಾಗ ಕೇವಲ 15 ವರ್ಷಗಳ ಬಾಲಕ. ಒಂದು ಕಡೆಯಿಂದ ಮುಗಲರೂ ಇನ್ನೊಂದು ಕಡೆಯಿಂದ ಮರಾಠರೂ ರಾಜ್ಯವನ್ನು ಒತ್ತುತ್ತಿದ್ದರು. ಅಲಿ ಸುಮಾರು ಒಂದು ದಶಕದ ಕಾಲ ಸ್ಥೈರ್ಯದಿಂದ ವರ್ತಿಸಿದರೂ ಒಂದೇ ಸಮನೆ ಅನುಭವಿಸಿದ ಹೊರಗಿನ ಸೋಲುಗಳು ಮತ್ತು ಒಳಗಿನ ಸಂಚುಗಳಿಂದ ಶಕ್ತಿಗುಂದಿ ಅನತಿಕಾಲದಲ್ಲಿ ಮೃತನಾದ (1672). ಅನಂತರ ಇವನ ಮಗ ಕೇವಲ ನಾಲ್ಕು ವರ್ಷದ ಬಾಲಕ ಸಿಕಂದರ ಅಧಿಕಾರಕ್ಕೆ ಬಂದ. ಮುಗಲರ ರಾಜ್ಯವಿಸ್ತರಣಾ ಪ್ರವಾಹ ಬಹು ರಭಸದಿಂದ ಹರಡುತ್ತಿದ್ದು 1686ರಲ್ಲಿ ಬಿಜಾಪುರವನ್ನೂ ಮುಳುಗಿಸಿತು. ಆ ಹೊತ್ತಿಗೆ ವಯಸ್ಸಿಗೆ ಬಂದಿದ್ದ ಸಿಕಂದರ್ ಶೌರ್ಯದಿಂದ ಹೋರಾಡಿದರೂ ಮುಗಲರ ಯುದ್ಧ ಯಂತ್ರಕ್ಕೆ ಇವನು ಸಾಟಿಯಾಗಿ ನಿಲ್ಲಲು ಸಾಧ್ಯವಾಗಲಿಲ್ಲ. ಆದಿಲ್ ಶಾಹೀ ಸಾಮ್ರಾಜ್ಯ ಕಣ್ಮರೆಯಾಯಿತು. ಸಿಕಂದರ್ ಔರಂಗಜೇಬನ ಬಂದಿಯಾಗಿ 1700ರಲ್ಲಿ ನಿಧನನಾದ. **(ಬಿ.ಎಸ್.ಎ.)**

## ಆದಿಲ್ ಶಾಹೀ ವಂಶಾವಳಿ

(1) **ಯೂಸುಫ್ ಆದಿಲ್** (1490-1510)
**(ಹೆಂ. ಮರಾಠ ಮುಕುಂದರಾವ್‌ನ ಮಗಳು)**

- (2) **ಇಸ್ಮಾಯಿಲ್ ಆದಿಲ್ ಖಾನ್** (1510-34)
- **ಮರ್ಯಂ ಸುಲ್ತಾನಾ (ಗಂ. ಬುರ್ಹಾನ್ ನಿಜಾಮ್ ಷಾ** 1)
- **ಬೀಬೀ ಸಿತ್ತೀ (ಗಂ. ಅಹ್ಮದ್ ಷಾ ಬಹಮನೀ ಅಮೀರ್ ಬರೀದ್)**
- **ಖದೀಜಾ ಸುಲ್ತಾನಾ (ಗಂ. ಅಲಾಉದ್ದೀನ್ ಇಮಾದ್ ಉಲ್-ಮುಲ್ಕ್)**

(2) ಇಸ್ಮಾಯಿಲ್ ಆದಿಲ್ ಖಾನ್‌ನ ಮಕ್ಕಳು:

- (3) **ಮಲ್ಲು ಆದಿಲ್ ಖಾನ್** (1534-35)
- **ಆಲಿಂಖಾನ್**
- (4) **ಇಬ್ರಾಹಿಂ ಆದಿಲ್ ಷಾ** 1 (1535-58) **(ಹೆಂ. ಬೆಳಗಾಂವಿಯ ಅಸದ್‌ಖಾನ್‌ನ ಮಗಳು)**
- **ಅಬ್ದುಲ್ಲಾ**

(4) ಇಬ್ರಾಹಿಂ ಆದಿಲ್ ಷಾ 1ರ ಮಕ್ಕಳು:

- **ಇಸ್ಮಾಯಿಲ್**
- (5) **ಅಲಿ ಆದಿಲ್ ಷಾ** 1 (1558-80) **(ಹೆಂ. ಅಹಮದ್‌ನಗರದ ಚಾಂದ್‌ಬೀಬೀ)**
- **ತಹ್‌ಮಾಸಪ್**
- **ಅಹ್ಮದ್**
- **ತಾನೀಬೀಬೀ (ಗಂ. ಅಲಿ ಬರೀದ್)**
- **ಹದಿಯಾ ಸುಲ್ತಾನಾ (ಗಂ. ಮುರ್ತುಜಾ ನಿಜಾಮ್ ಉಲ್-ಮುಲ್ಕ್)**

ತಹ್‌ಮಾಸಪ್‌ನ ಮಕ್ಕಳು:

- **ಇಸ್ಮಾಯಿಲ್**
- (6) **ಇಬ್ರಾಹಿಂ ಆದಿಲ್ ಷಾ** (1580-1627) **(ಹೆಂ. ಗೋಲ್ಕೊಂಡದ ಚಾಂದ್‌ಸುಲ್ತಾನಾ, ಮಲಿಕಾ ಎ ಜಹಾನ್, ತಾಜ್ ಸುಲ್ತಾನಾ, ಕಮಾಲ್ ಖಾತೂನ್, ಸುಂದರ್ ಮಹಲ್)**

(6) ಇಬ್ರಾಹಿಂ ಆದಿಲ್ ಷಾನ ಮಕ್ಕಳು:

- **ದರ್ವೇಶ್ ಸುಲೈಮಾನ್**
- (7) **ಮುಹಮ್ಮದ್ ಆದಿಲ್ ಷಾ** (1627-56) **(ಹೆಂ. ತಾಜ್ ಜಹಾನ್ ಬೇಗಂ, ಗೋಲ್ಕೊಂಡದ ಖದೀಜಾ ಸುಲ್ತಾನಾ, ಉರೂಸ್ ಬೇಗಂ)**
- **ಖಿಜರ್ ಷಾ**
- **ಜೊಹ್ರಾ ಸುಲ್ತಾನ್**
- **ಬುರ್ಹಾನ್**
- **ಸುಲ್ತಾನಾ ಬೇಗಂ (ಗಂ. ಮುಗಲ್ ರಾಜಕುಮಾರ್ ದನಿಯಾಲ್)**
- **ಫಾತಿಮಾ ಸುಲ್ತಾನಾ (ಗಂ. ಹಬೀಬುಲ್ಲಾ ಹುಸೇನ್)**

(8) **ಅಲಿ ಆದಿಲ್ ಷಾ** II (1656-72)
**(ಹೆಂ. ಖುರ್ಷಿದ್ ಖಾನಂ)**

- **ಪಾದ್ ಷಾ ಬೀಬೀ ಶಹರ್ ಬಾನು ಬೇಗಂ (ಗಂ. ಮುಹಮ್ಮದ್ ಆಜಂ)**
- **ಹುಸೇನ್**
- (9) **ಸಿಕಂದರ್ ಆದಿಲ್ ಷಾ** (1672-86)

**ಆಡಳಿತ ವ್ಯವಸ್ಥೆ:** ಆದಿಲ್ ಶಾಹೀಗಳು ತಮ್ಮ ಆಳ್ವಿಕೆಯ ಉತ್ತುಂಗ ಕಾಲದಲ್ಲಿ ಭಾರತ ಪರ್ಯಾಯ ದ್ವೀಪದ ಬಹುಭಾಗದ ಮೇಲೆ ಹತೋಟಿ ಹೊಂದಿದ್ದರು. ಅರಬ್ಬೀ ಸಮುದ್ರದಿಂದ ಹಿಡಿದು ಬಂಗಾಳ ಕೊಲ್ಲಿಯ ವರೆಗೂ ಇವರ ನಿಯಂತ್ರಣ ವ್ಯಾಪಿಸಿತ್ತು. ಇವರು ತಮ್ಮ ಆಡಳಿತ ಪದ್ಧತಿಯಲ್ಲಿ ಬಹಮನೀ ಆಡಳಿತ ಸಂಪ್ರದಾಯಗಳನ್ನೂ ವ್ಯವಸ್ಥೆಯನ್ನೂ ಅಳವಡಿಸಿಕೊಂಡರು. ಇವರ ಸರ್ಕಾರ ವ್ಯವಸ್ಥೆ, ಧಾರ್ಮಿಕ ಅಥವಾ ಸೈನಿಕ ಪ್ರಧಾನವಾಗದೆ ಪ್ರಬಲ ಪ್ರಭುತ್ವ ವರ್ಗ ಮತ್ತು ಪ್ರಭಾವೀ ಅಧಿಕಾರಿವರ್ಗಗಳಿಂದ ಬೆಂಬಲಿತವಾದ ರಾಜತ್ವವಾಗಿತ್ತು. ಸುಲ್ತಾನ ನಿರಂಕುಶ ಅಧಿಕಾರ ಪಡೆದಿದ್ದರೂ ಮಜ್ಲಿಸ್–ಇ–ಖಲ್ವಾತ್ ಎಂಬ ಸಲಹೆಗಾರರ ಮಂಡಲಿಯನ್ನು ಇಟ್ಟುಕೊಂಡಿರುತ್ತಿದ್ದ. ವಕೀಲ್–ಇ–ಸುಲ್ತನತ್ (ಪ್ರಧಾನಮಂತ್ರಿ), ಅಮೀರ್–ಇ–ಜುಮ್ಲಾ (ಅರ್ಥಮಂತ್ರಿ), ಮಸ್ತಾಫಿ–ಅಲ್– ಮುಲ್ಕ್ (ಉಪ ಅರ್ಥಮಂತ್ರಿ), ಪೇಶ್ವ, ಅರಮನೆ ಮೇಲ್ವಿಚಾರಕ, ಗೂಢಚರ್ಯೆಯ ಅಧಿಕಾರಿಗಳು ಮೊದಲಾದವರಿಂದ ಕೂಡಿದ ಮಂತ್ರಿಮಂಡಲ ಸಹ ಇರುತ್ತಿತ್ತು. ಕೆಲವೊಂದು ವ್ಯತ್ಯಾಸಗಳನ್ನು ಬಿಟ್ಟರೆ ಮತ್ತೆಲ್ಲ ರೀತಿಯಿಂದಲೂ ಆದಿಲ್ ಶಾಹೀಗಳ ಆಡಳಿತ ಪದ್ಧತಿ ಬಹಮನೀ ಪದ್ಧತಿಯನ್ನೇ ಹೋಲುತ್ತಿತ್ತು. ಬಹಮನೀ ರಾಜ್ಯಾಡಳಿತದಲ್ಲಿ ಬಿಜಾಪುರ ಒಂದು ತರಫ್ (ಪ್ರಾಂತ್ಯ) ಮಾತ್ರ ಆಗಿತ್ತು. ಅದು ಸ್ವತಂತ್ರ ರಾಜ್ಯವಾದ ಮೇಲೆ ಅದರೊಳಗೆ ಮತ್ತಷ್ಟು ತರಫ್ ವಿಭಾಗಗಳನ್ನು ಮಾಡಲಾಗದಷ್ಟು ಚಿಕ್ಕದಾಗಿತ್ತು. ಆದ್ದರಿಂದ ತರಫ್ ಮತ್ತು ತರಫ್‌ದಾರ್ ಎಂಬ ಪದಗಳ ಬದಲಾಗಿ ಜಾಗೀರ್ ಮತ್ತು ಜಾಗೀರ್‌ದಾರ್ ಎಂಬ ಪದಗಳನ್ನು ಬಳಸಲಾಯಿತು. ಹೊಸದಾಗಿ ಸಾಧಿಸಿಕೊಂಡ ವಿಜಯನಗರ ಸಾಮ್ರಾಜ್ಯದ ಭಾಗಗಳನ್ನು ತಮ್ಮ ರಾಜ್ಯದ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ತರಲು ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲವಾದ್ದರಿಂದ ಆ ಭಾಗದಲ್ಲಿ ಅಧಿಕಾರ ಹೊಂದಿದ್ದ ಸ್ಥಳೀಯ ಪಾಳೆಯಗಾರರಿಗೆ ಆಡಳಿತವನ್ನು ಬಿಟ್ಟುಕೊಟ್ಟು, ಅವರು ನಿಗದಿಯಾದ ಕಪ್ಪವನ್ನು ಒಪ್ಪಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಕೆಲವು ಸಂದರ್ಭಗಳಲ್ಲಿ ಆ ಭಾಗಗಳನ್ನೂ ವಶಪಡಿಸಿಕೊಂಡು ರಾಜ್ಯದ ಅಧಿಕಾರಿಗಳಿಗೆ ಜಹಗೀರಾಗಿ ನೀಡಲಾಗುತ್ತಿತ್ತು. ಪ್ರಭುತ್ವದ ನಾಡುಗಳನ್ನು ಸರ್ಕಾರ್, ಪರಗಣ ಮತ್ತು ಮಂಡಾಗಳೆಂದು ವಿಭಾಗಿಸಲಾಗಿತ್ತು. ಪ್ರತಿಯೊಂದು ಸರ್ಕಾರದಲ್ಲಿಯೂ ನಾಲ್ವರು ಅಧಿಕಾರಿಗಳಿರುತ್ತಿದ್ದರು. ಅದರಲ್ಲಿ ಇಬ್ಬರು ಹಿಂದುಗಳು, ಒಬ್ಬ ಕಂದಾಯ ವಸೂಲಿ ಮಾಡುವವನು, ಇನ್ನೊಬ್ಬ ಲೆಕ್ಕಪತ್ರಗಳನ್ನಿಡುವವನು, ಸರ್ಕಾರದ ಮುಖ್ಯನಿಗೆ ಸುಬೇದಾರ ಅಥವಾ ಸರ್ ಹವಾಲ್ದಾರ್ ಎಂದು ಕರೆಯಲಾಗುತ್ತಿತ್ತು. ನಾಲ್ಕನೆಯ ಅಧಿಕಾರಿ ಖಾಜಿ. ಪರಗಣದಲ್ಲಿ ಕೊತ್ವಾಲ ದೇಶಮುಖ್ ಮತ್ತು ದೇಸಾಯಿಗಳೆಂಬ ಮೂವರು ಅಧಿಕಾರಿಗಳಿರುತ್ತಿದ್ದರು. ಇವರು ಪೊಲೀಸ್ ಮತ್ತು ಕಂದಾಯದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಸಾಮಾನ್ಯವಾಗಿ ಕಂದಾಯದ ಅಧಿಕಾರಿಗಳು ಹಿಂದುಗಳಾಗಿರುತ್ತಿದ್ದರು. ಕಂದಾಯಕ್ಕೆ ಸಂಬಂಧಿಸಿದ ಪರಗಣದ ಆಡಳಿತವ್ಯವಸ್ಥೆಯೆಲ್ಲಾ ಇವರ ಜವಾಬ್ದಾರಿಯಲ್ಲಿರುತ್ತಿತ್ತು. ಹಳ್ಳಿಗಳು ಆಡಳಿತದ ಅತ್ಯಂತ ಚಿಕ್ಕ ಘಟಕಗಳಾಗಿದ್ದು ಅವುಗಳ ಆಡಳಿತಕ್ಕೆ ಪಂಚಾಯಿತಿಗಳು ಇರುತ್ತಿದ್ದುವು. ಇವುಗಳ ಆಡಳಿತದಲ್ಲಿ ಅಧಿಕಾರಿಗಳು ಸಾಮಾನ್ಯವಾಗಿ

ತಲೆಹಾಕುತ್ತಿರಲಿಲ್ಲ. ಗ್ರಾಮದ ಮುಖ್ಯಸ್ಥ ಪಾಟೀಲ. ಅವನು ಪೊಲೀಸ್, ನ್ಯಾಯ ಮತ್ತು ಕಂದಾಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ. ಅವನಿಗೆ ಕುಲಕರ್ಣಿ (ಲೆಕ್ಕಾಧಿಕಾರಿ) ಎಂಬ ಸಹಾಯಕನಿರುತ್ತಿದ್ದ. ಜೊತೆಗೆ ಚೌಕಿದಾರ ಅಥವಾ ಕಾವಲುಗಾರನಿರುತ್ತಿದ್ದ. ಇವರ ಸೇವೆಗಾಗಿ ಇವರಿಗೆ ಸ್ವಲ್ಪ ಭೂಮಿಗಳನ್ನು ದತ್ತಿಯಾಗಿ (ಇನಾಂ) ನೀಡಲಾಗುತ್ತಿತ್ತು. ಪ್ರಭುತ್ವದ ಜಮೀನುಗಳಲ್ಲಿ ರೈತವಾರಿ ಪದ್ಧತಿ ಜಾರಿಯಲ್ಲಿತ್ತು. ಸರ್ಕಾರ ತನಾಬ್ ಅಥವಾ ಸರಪಳಿಯಿಂದ ಜಮೀನನ್ನು ಅಳೆದು ಕಂದಾಯ ನಿಗದಿಪಡಿಸುತ್ತಿತ್ತು. ಈ ಕಂದಾಯ ಆಯಾ ಪ್ರದೇಶ ಅಥವಾ ಫಲವತಿಗನುಗುಣವಾಗಿ ಒಟ್ಟು ಉತ್ಪನ್ನದ $^1/_{10}$ ರಿಂದ $^1/_2$ ಭಾಗದ ವರೆಗೂ ಇರುತ್ತಿತ್ತು. ಇದಲ್ಲದೆ ಜಹಗೀರಿ, ಇನಾಂ, ಅಗ್ರಹಾರ ಮತ್ತು ವಕ್ಫ್‌ಗಳಂಥ ಪದ್ಧತಿಗಳೂ ಇದ್ದವು.

ಸರ್ಕಾರಕ್ಕೆ ಯುದ್ಧದಲ್ಲಿ ಗೆದ್ದುತಂದ ಐಶ್ವರ್ಯ, ವಾರ್ಷಿಕ ಕಪ್ಪ, ವಸ್ತುಗಳ ಮೇಲಿನ ತೆರಿಗೆ, ವಾಣಿಜ್ಯ ಸುಂಕ, ವಿಶೇಷ ಸಂದರ್ಭಗಳಲ್ಲಿ ರಾಜನಿಗೆ ಬರುವ ಕಾಣಿಕೆಗಳು – ಇವು ಆದಾಯ ಮೂಲಗಳು. ರಾಯಚೂರು ಪ್ರದೇಶದ ವಜ್ರದ ಗಣಿಗಳಿಂದಲೂ ಉತ್ತಮ ಆದಾಯ ಬರುತ್ತಿತ್ತು.

**ಆರ್ಥಿಕ ಸಾಮಾಜಿಕಸ್ಥಿತಿ:** ಆದಿಲ್‌ಶಾಹೀ ರಾಜರು ಹೊರಗಿನಿಂದ ಬಂದವರಾದರೂ ಬಹುಬೇಗನೆ ಸ್ಥಳೀಯ ಜನರೊಂದಿಗೆ ಬೆರೆತು ಆ ಜನರ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಿದರು. ವ್ಯವಸಾಯ ಜನರ ಮುಖ್ಯ ಕಸಬಾಗಿತ್ತು. ಬತ್ತ, ಮುಸುಕಿನ ಜೋಳ, ಜೋಳ, ಸಜ್ಜೆ ಮತ್ತು ಕೆಲವೆಡೆ ಗೋದಿ ಮುಖ್ಯ ಆಹಾರಬೆಳೆಗಳಾಗಿದ್ದುವು. ತೊಗರಿ ಮುಖ್ಯವಾದ ದ್ವಿದಳಧಾನ್ಯ. ಕಾರವಾರ, ಕೊಂಕಣ ಭಾಗದಲ್ಲಿ ಬೆಳೆಯುತ್ತಿದ್ದ ಮೆಣಸು, ಏಲಕ್ಕಿ, ತೆಂಗು, ಗೇರುಬೀಜ ಮತ್ತು ವೀಳ್ಯದ ಎಲೆ ಇವು ಮುಖ್ಯ ವಾಣಿಜ್ಯ ಬೆಳೆಗಳಾಗಿದ್ದವು. ಪೂರ್ವಭಾಗದಲ್ಲಿರುವ ಕಪ್ಪುಮಣ್ಣಿನಲ್ಲಿ ಹತ್ತಿ ಸಾಗುವಳಿ ವ್ಯಾಪಕವಾಗಿತ್ತು. ಕಬ್ಬನ್ನು ಹೆಚ್ಚಾಗಿ



ಇಬ್ರಾಹಿಂ ಕುಟುಂಬದ ಸಮಾಧಿ

ಬೆಳೆಯಲಾಗುತ್ತಿತ್ತು. ಹೊಗೆಸೊಪ್ಪನ್ನು ಪೋರ್ಚುಗೀಸರು ಭಾರತಕ್ಕೆ ತಂದರು. 17ನೆಯ ಶತಮಾನದ ಹೊತ್ತಿಗೆ ಅದರ ಸಾಗುವಳಿ ದಖನ್ ಪ್ರದೇಶದಲ್ಲಿ ದೃಢವಾಗಿ ಬೇರೂರಿತು. ಆರ್ಥಿಕ ದೃಷ್ಟಿಯಿಂದ ಈ ಬೆಳೆಗೆ ಹೆಚ್ಚು ಮಹತ್ವವಿತ್ತು. ವಿವಿಧ ಬಗೆಯ ಹಣ್ಣುಗಳು ಮತ್ತು ಹೂವುಗಳನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ ಮಾವು, ಬಾಳೆಹಣ್ಣು, ಕಿತ್ತಲೆ, ನಿಂಬೆ, ಕಲ್ಲಂಗಡಿ ಮುಖ್ಯವಾದವು. ದ್ರಾಕ್ಷಿ ಸಹ ದಖನ್ನಿನ ಎತ್ತರ ಪ್ರದೇಶದಲ್ಲಿ ಬೆಳೆಯುತ್ತಿತ್ತು. ಕೊಂಕಣ ಪ್ರದೇಶದಲ್ಲಿ ಹಲಸು, ಅನಾನಸು ಮತ್ತು ಪರಂಗಿ ಹಣ್ಣುಗಳು ಬೆಳೆಯುತ್ತಿದ್ದವು. ಹುಣಿಸೆಮರಗಳು ಇದ್ದವು. ಶುಂಠಿಯನ್ನೂ ಬೆಳೆಯಲಾಗುತ್ತಿತ್ತು. ಸ್ವಲ್ಪಮಟ್ಟಿಗೆ ಗಸಗಸೆ ಸಹ ಬೆಳೆಯುತ್ತಿದ್ದು, ಅದರಿಂದ ತಯಾರಿಸಿದ ಅಫೀಮು ಔಷಧವಾಗಿಯೂ ಬಂಗಿ ಸೇದಲೂ ಉಪಯೋಗವಾಗುತ್ತಿತ್ತು.

ಸಕ್ಕರೆಯನ್ನು ಕರ್ನಾಟಕ ಭಾಗದಲ್ಲಿ ಉತ್ಪಾದಿಸಿ ಪರ್ಷಿಯ ಮತ್ತು ಅರೇಬಿಯ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಬಿಜಾಪುರದಲ್ಲಿ ಹತ್ತಿ ಮತ್ತು ರೇಷ್ಮೆ ಕೈಗಾರಿಕೆಗಳು ಸುಸ್ಥಿತವಾಗಿದ್ದುವು. ಈ ಹಲವಾರು ಕೈಗಾರಿಕೆಗಳು ಕೊಂಕಣದ ಬಂದರುಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ಥಾಪಿತವಾಗಿದ್ದವು. ಬಿಜಾಪುರದ ಹತ್ತಿ ವಸ್ತುಗಳಿಗೆ ಪರ್ಷಿಯ, ಅರೇಬಿಯ ಮತ್ತು ಪೂರ್ವ ಆಫ್ರಿಕ ಭಾಗಗಳಲ್ಲಿ ಹೆಚ್ಚು ಬೇಡಿಕೆ ಇತ್ತು. ನೇಯ್ಗೆಯವರಿಗೆ ಹಲವು ತೆರಿಗೆಗಳ ರಿಯಾಯಿತಿ ನೀಡಿ ನೇಯ್ಗೆ ಕೈಗಾರಿಕೆಗೆ ಉತ್ತೇಜನ ನೀಡಲಾಗುತ್ತಿತ್ತು. ಹುಬ್ಬಳ್ಳಿ, ಲಕ್ಷ್ಮೇಶ್ವರ ಮತ್ತು ಕಾರವಾರಗಳಲ್ಲಿ ಹತ್ತಿ ಕೈಗಾರಿಕೆ ಸಮೃದ್ಧವಾಗಿದ್ದುದನ್ನು ಇಂಗ್ಲಿಷರು ಕಂಡಿದ್ದಾರೆ. ದಖನ್ನಿನಲ್ಲಿ ತಯಾರಾಗುತ್ತಿದ್ದ ಹತ್ತಿಬಟ್ಟೆಗಳಲ್ಲಿ ಕ್ಯಾಲಿಕೋ ಮತ್ತು ಮಸ್ಲಿನ್ ಮುಖ್ಯ ಬಗೆಗಳು. ಬಿಜಾಪುರ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ ರತ್ನಗಂಬಳಿಯನ್ನು ನೇಯುವುದು ವಿಶೇಷವಾಗಿತ್ತು. ಧಾರವಾಡ ಸೀರೆಗಳಿಗೆ ಪ್ರಸಿದ್ಧವಾಗಿತ್ತು. ರಾಜ್ಯದ ವಿವಿಧ ಭಾಗಗಳಲ್ಲಿ ಕಲ್ಲುಪ್ಪನ್ನು ತಯಾರಿಸಲಾಗುತ್ತಿತ್ತು. ಸ್ವಲ್ಪಮಟ್ಟಿಗೆ ಕಬ್ಬಿಣದ ಅದುರನ್ನು ತೆಗೆಯಲಾಗುತ್ತಿತ್ತು. ಇವುಗಳ ಜೊತೆಗೆ ಈ ರಾಜ್ಯದಲ್ಲಿ ನೀಲಮಣಿ, ಪದ್ಮರಾಗ, ಪಚ್ಚೆ ಮೊದಲಾದ ಅಮೂಲ್ಯ ಕಲ್ಲುಗಳು ದೊರೆಯುತ್ತಿದ್ದವು. ಇವುಗಳಲ್ಲಿ ವಜ್ರ ಬಹು ಮುಖ್ಯವಾದುದು. 16 ಮತ್ತು 17ನೆಯ ಶತಮಾನಗಳಲ್ಲಿ ಬಿಜಾಪುರಕ್ಕೆ ಭೇಟಿನೀಡಿದ ಬಹುತೇಕ ಪ್ರವಾಸಿಗಳೆಲ್ಲ ಈ ರಾಜ್ಯದಲ್ಲಿದ್ದ ವಜ್ರದ ಗಣಿಗಳ ಬಗ್ಗೆ ಹೇಳಿದ್ದಾರೆ. ಇಲ್ಲಿ ಸು.15 ವಜ್ರದ ಗಣಿಗಳಿದ್ದವು. ಇಲ್ಲಿನ ವಜ್ರಗಳು ಉತ್ತಮ ದರ್ಜೆಯವಾಗಿದ್ದುವು. ಆದರೆ ಗಾತ್ರದಲ್ಲಿ ಗೋಲ್ಕೊಂಡದ್ದಕ್ಕಿಂತ ಚಿಕ್ಕದಾಗಿರುತ್ತಿದ್ದವು. ವಜ್ರವನ್ನು ಕತ್ತರಿಸುವ ಮತ್ತು ಸಾಣೆಹಿಡಿಯುವ ಅನೇಕ ಕೆಲಸಗಾರರು ಈ ಗಣಿಗಳ ಬಳಿ ಇರುತ್ತಿದ್ದರು. ಈ ಉದ್ಯಮ ಗುಜರಾತಿ ವ್ಯಾಪಾರಿಗಳ ಕೈಯಲ್ಲಿತ್ತು. ಗಣಿಗಳು ರಾಜನ ಆಸ್ತಿಯಾಗಿದ್ದುವು. ಉತ್ಪಾದಕರಿಗೆ ಗೇಣಿಯ ಮೇಲೆ ಕೊಡಲಾಗುತ್ತಿತ್ತು. ಇಲ್ಲಿಂದ ವಜ್ರಗಳು ಸೂರತ್, ಗೋವ, ಆಗ್ರಾ, ದೆಹಲಿ ಮತ್ತಿತರ ಸ್ಥಳಗಳಿಗೆ ಹೋಗುತ್ತಿದ್ದವು. ಆದಿಲ್‌ಶಾಹೀ ರಾಜ್ಯದಲ್ಲಿ ಹಿಂದುಗಳೇ ಅಧಿಕಸಂಖ್ಯೆಯಲ್ಲಿದ್ದರು. ಅವರಲ್ಲಿ ಈಗಿನಂತೆಯೇ ಜಾತಿಪದ್ಧತಿ ಇತ್ತು. ಬ್ರಾಹ್ಮಣರು ಸಮಾಜದಲ್ಲಿ ಉತ್ತಮ ವರ್ಗಕ್ಕೆ ಸೇರಿದ್ದು ಹೆಚ್ಚಿನ ಅಧಿಕಾರ ಪಡೆದಿದ್ದರು. ಹಿಂದುಗಳ ಎಲ್ಲ ಧಾರ್ಮಿಕ ವಿಧಿಗಳಿಗೂ ಅವರ ಆವಶ್ಯಕತೆಯಿತ್ತು. ಅವರಲ್ಲಿ ಕೆಲವರು ವೈದ್ಯಕೀಯ ವೃತ್ತಿಯನ್ನು ಕೈಗೊಂಡಿದ್ದರು. ಪ್ರತಿಯೊಂದು ಕುಟುಂಬವೂ ಸಾಮಾನ್ಯ ಕಾಯಿಲೆಗೆ ಬೇಕಾಗುವ ಗಿಡಮೂಲಿಕೆಗಳನ್ನು ಇಟ್ಟುಕೊಂಡಿರುತ್ತಿತ್ತು..

ಜನರ ಮನರಂಜನೆಗಳು ಸುಲಭರೀತಿಯವಾಗಿರುತ್ತಿದ್ದವು. ಹಳ್ಳಿಯಿಂದ ಹಳ್ಳಿಗೆ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸಿ ಮನರಂಜನೆ ನೀಡುವ ವಿವಿಧ ಬಗೆಯ ವಲಸೆಗಾರರ ಗುಂಪುಗಳಿದ್ದವು. ಅವರಲ್ಲಿ ಹಾವಾಡಿಗರು, ದೊಂಬರು, ಹರಿಕಥೆ ಮಾಡುವವರು ಇದ್ದರು. ವಿನೋದಕ್ಕಾಗಿ ಕೋಳಿ ಜೂಜು ಸಾಮಾನ್ಯವಾಗಿತ್ತು. ರಾಜಮನೆತನದವರು ಮತ್ತು ಶ್ರೀಮಂತರು ಬೇಟೆಯಾಡುತ್ತಿದ್ದರು. ವಾರ್ಷಿಕ ಜಾತ್ರೆಗಳು ಮತ್ತು ಉತ್ಸವಗಳು ಅಲ್ಲಲ್ಲಿ ಜರುಗುತ್ತಿದ್ದು ಬಡಜನರಿಗೆ ನಿತ್ಯದುಡಿತದಿಂದ ಬಿಡುವನ್ನು ಒದಗಿಸುತ್ತಿದ್ದವು. ಬೇರೆ ಬೇರೆಡೆಗಳಲ್ಲಿದ್ದ ಸ್ನೇಹಿತರು ಅಲ್ಲಿ ಒಂದುಗೂಡಲು ಅವಕಾಶವಾಗುತ್ತಿತ್ತು. ಮುಸ್ಲಿಮರು ಉರುಸ್ ಸಂದರ್ಭದಲ್ಲಿ ಒಟ್ಟಿಗೆ ಸೇರುತ್ತಿದ್ದರು. ಹರಿದಾಸರು ಗ್ರಾಮದಿಂದ ಗ್ರಾಮಕ್ಕೆ ತೆರಳಿ ಧರ್ಮ ಬೋಧೆಯನ್ನೂ ಮನರಂಜನೆಯನ್ನೂ ನೀಡುತ್ತಿದ್ದರು. ಬಡವರು ದಟ್ಟಿಯಷ್ಟನ್ನೇ ಕಟ್ಟುತ್ತಿದ್ದರು. ಹೆಂಗಸರೂ ಹೆಚ್ಚು ಬಟ್ಟೆ ಧರಿಸುತ್ತಿರಲಿಲ್ಲ ಬ್ರಾಹ್ಮಣರು ಅಂಗಕ ಎಂಬ ಮಸ್ಲಿನ್‌ನ ನಿಲುವಂಗಿ ಹಾಕಿಕೊಂಡು ಪೇಟ ಇಟ್ಟುಕೊಳ್ಳುತ್ತಿದ್ದರು. ಮುಸ್ಲಿಮರು ಬಿಗಿಯಾದ ಪೈಜಾಮ, ಅಂಗಿ, ಉದ್ದನೆಯ ಕೋಟು ಮತ್ತು ಪೇಟವನ್ನು ಧರಿಸುತ್ತಿದ್ದರು. ಶ್ರೀಮಂತ ಹಿಂದೂ ಮಹಿಳೆಯರು ಆಭರಣವನ್ನು ಹೆಚ್ಚಾಗಿ ಧರಿಸುತ್ತಿದ್ದರು. ಮೂಗುತಿ, ಕಾಲ್ಗಡಗ, ಕೈಕಡಗ ಮತ್ತು ಕಂಠಾಭರಣಗಳು ಮುಖ್ಯವಾಗಿದ್ದವು. ಬಡವರು ಗಾಜಿನ ಬಳೆಗಳನ್ನು ತೊಡುತ್ತಿದ್ದರು. ಶ್ರೀಮಂತರ ಮನೆಗಳು ಸುಸಜ್ಜಿತವಾಗಿರುತ್ತಿದ್ದವು. ಕೆಲವು ರೋಗಗಳು ಹಾಗೂ ಹುಳಹುಪ್ಪಟೆಗಳನ್ನು ದೂರವಿಡಲು ನೆಲಕ್ಕೆ ಸಗಣಿ ಸಾರಿಸುತ್ತಿದ್ದರು. (ಪೆಟ್ರೊ–ಡ–ಲವೆಲ್ಲೆ ಇದನ್ನು ಇಟಲಿಯಲ್ಲೂ ರೂಢಿಗೆ ತರಲು ಬಯಸಿದ್ದನಂತೆ). ಬ್ರಾಹ್ಮಣರು, ಬನಿಯಾಗಳು ಸಸ್ಯಾಹಾರಿಗಳಾಗಿದ್ದರು. ಅಕ್ಕಿ, ಜೋಳ, ಗೋದಿ ಮತ್ತು ದ್ವಿದಳಧಾನ್ಯಗಳು ತುಪ್ಪ, ತರಕಾರಿ ಅವರ ಮುಖ್ಯ ಆಹಾರವಾಗಿತ್ತು. ಉಳಿದ ಜಾತಿಯವರು ಮಾಂಸ, ಮೀನು ಮೊದಲಾದವುಗಳನ್ನೂ ಉಪಯೋಗಿಸುತ್ತಿದ್ದರು. ಕೊಂಕಣ ಕರಾವಳಿಯಲ್ಲಿ ಮೀನು ವಿಶೇಷವಾಗಿ ದೊರಕುತ್ತಿತ್ತು. ಸಾಮಾನ್ಯ ಜನರು ಅನ್ನ ಮತ್ತು ಧಾನ್ಯಗಳನ್ನು ಆಹಾರವಾಗಿ ಬಳಸುತ್ತಿದ್ದರು. ಕೊಂಕಣ ಕರಾವಳಿಯಲ್ಲಿ ಮೀನು ವಿಶೇಷವಾಗಿ ದೊರಕುತ್ತಿತ್ತು. ಸಾಮಾನ್ಯ ಜನರು ಅನ್ನ ಮತ್ತು ಧಾನ್ಯಗಳನ್ನು ಆಹಾರವಾಗಿ ಬಳಸುತ್ತಿದ್ದರೆಂದು ಫ್ರೈಯರ್ ಹೇಳಿದ್ದಾನೆ. ಮುಸ್ಲಿಮರು ಮಾಂಸ ಮತ್ತು ಗೋದಿಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಹಿಂದುಗಳು ಎಲೆಯಲ್ಲಿ ಊಟಮಾಡುತ್ತಿದ್ದರು. ಅರಮನೆಯಲ್ಲಿ ಪಿಂಗಾಣಿ ಪಾತ್ರೆಗಳು ಉಪಯೋಗದಲ್ಲಿದ್ದವು. ವೀಳ್ಯದ ಎಲೆಯನ್ನು ಎಲ್ಲವರ್ಗದ ಜನರೂ ಉಪಯೋಗಿಸುತ್ತಿದ್ದರು. ಪೋರ್ಚುಗೀಸ ಹೆಂಗಸರು, ಗಂಡಸರು ಸಹಾ ಈ ಅಭ್ಯಾಸ ಬೆಳೆಸಿಕೊಂಡಿದ್ದರು.

**ಲಲಿತಕಲೆ ಮತ್ತು ಸಾಹಿತ್ಯ:** ಆದಿಲ್‌ಶಾಹೀಗಳು ಬೌದ್ಧಿಕ ಚಟುವಟಿಕೆಗಳಿಗೆ ಪ್ರೋತ್ಸಾಹವಿತ್ತರು. ವಿದ್ವತ್ ಜನರಿಗೆ ಹಾಗೂ ಕಲಾವಿದರಿಗೆ ಪೋಷಕರಾಗಿದ್ದರು. ಕೆಲವು ರಾಜರು ಸ್ವತಃ ಗಣನೀಯ ಸಾಂಸ್ಕೃತಿಕ ಸಾಧನೆಗಳನ್ನು ಮಾಡಿದ್ದರು. ಯೂಸುಫ್ ಆದಿಲ್ ಷಾ ಪಾರಸೀ ಭಾಷೆಯಲ್ಲಿ ಕವಿಯೂ ಸಮರ್ಥ ಬರೆಹಗಾರನೂ ಆಗಿದ್ದ. ತನ್ನ ಆಸ್ಥಾನಕ್ಕೆ ಇರಾನ್, ಟುರಾನ್, ಅರೇಬಿಯ ಮತ್ತು ತುರ್ಕಿಗಳಿಂದ ವಿದ್ವಾಂಸರನ್ನು ಕರೆತಂದಿದ್ದ. ಇವನ ಉತ್ತರಾಧಿಕಾರಿ ಇಸ್ಮಾಯಿಲ್ ಆದಿಲ್ ಷಾ ಸ್ವತಃ ಕವಿಯಾಗಿದ್ದುದಲ್ಲದೇ ವಿದ್ವಾಂಸರಿಗಾಗಿ ಅಪಾರ ಹಣವನ್ನು ವಿನಿಯೋಗಿಸುತ್ತಿದ್ದ. ಇವನು ಪಾರಸಿ ಮತ್ತು ತುರ್ಕಿಭಾಷೆಗಳೆರಡರಲ್ಲೂ ಕೃತಿಗಳನ್ನು ರಚಿಸಿದ್ದಾನೆ. ಆದಿಲ್‌ಶಾಹೀ ರಾಜರು ಇತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಆಸಕ್ತರಾಗಿದ್ದು ಲಲಿತಕಲೆಗಳನ್ನೂ ಪ್ರೋತ್ಸಾಹಿಸಿದ್ದಾರೆ. ಇಸ್ಮಾಯಿಲ್ ಆದಿಲ್‌ಷಾ ಚಿತ್ರಕಲೆ, ಆಭರಣಗಳ ತಯಾರಿ, ಬಿಲ್ಲು ಬಾಣಗಳ ರಚನೆ ಇವುಗಳಲ್ಲಿ ನಿಷ್ಣಾತನಾಗಿದ್ದ. ಒಳ್ಳೆಯ

ಉಡುಪು, ಆಹಾರಗಳಲ್ಲಿ ಆಸಕ್ತಿ ತೋರಿಸುತ್ತಿದ್ದ. ಎರಡನೆಯ ಇಬ್ರಾಹೀಂ ಆದಿಲ್ ಷಾ ಸಂಗೀತಪ್ರೇಮಿ. ಇವನ ಆಸ್ಥಾನದಲ್ಲಿ ಸಂಗೀತ ಚೆನ್ನಾಗಿ ಬೆಳೆಯಿತು. ಇವನೇ ಸ್ವತಃ ಆ ಕಾಲದ ಪ್ರಸಿದ್ಧ ಸಂಗೀತಗಾರನಾಗಿದ್ದುದ್ದಲ್ಲದೇ ಕಿತಾಬೆನವರಸ್ ಎಂಬ ಉತ್ತರಾದಿ ಸಂಗೀತ ಪದ್ಧತಿಯ ವಿವಿಧ ರಾಗಗಳಲ್ಲಿರುವ ಹಾಡುಗಳ ಗ್ರಂಥವನ್ನು ರಚಿಸಿದ್ದಾನೆ. ನಿಷ್ಠಾವಿವಂತ ಸಂಗೀತಗಾರನಾಗಿ ಸಂಗೀತದ ಅಧಿದೇವತೆ ಸರಸ್ವತಿ ಹಾಗೂ ಜ್ಞಾನದೇವತೆ ಗಣಪತಿಗೆ ಯಾವ ಸಂಕೋಚವೂ ಇಲ್ಲದೆ ಭಕ್ತಿಯನ್ನು ತೋರಿಸಿದ್ದಾನೆ. ಹಿಂದುದೇವತೆಗಳ ಬಗ್ಗೆ ಗೌರವ ವ್ಯಕ್ತಪಡಿಸಿದ್ದರೂ ಇಬ್ರಾಹೀಂ ನಿಷ್ಠಾವಿವಂತ ಮುಸ್ಲಿಂ ಧರ್ಮಗಳು ಬೇರೆ ಬೇರೆಯಾಗಿರಬಹುದು, ಆದರೆ ಹಿಂದುವಾಗಲಿ ಇಸ್ಲಾಮೀಯನಾಗಲಿ ರಸೋಲ್ಲಾಸದಲ್ಲಿ ವ್ಯತ್ಯಾಸಕಾಣುವ ಸಾಧ್ಯತೆಯಿಲ್ಲ ಎಂಬುದನ್ನು ಎತ್ತಿ ತೋರಿಸಿದ್ದಾನೆ.

ಪ್ರಾರಂಭದಲ್ಲಿ ಪಾರಸೀ ಹಾಗೂ ತುರ್ಕಿಗಳು ಆದಿಲ್‌ಶಾಹೀಗಳ ಆಸ್ಥಾನಭಾಷೆಗಳಾಗಿದ್ದವು. ಆದರೆ ತರುವಾಯ ಪಾರಸೀಯೊಂದನ್ನು ಮಾತ್ರ ಅಧಿಕೃತ ಭಾಷೆಯಾಗಿ ಅಂಗೀಕರಿಸಲಾಯಿತು. ಪಾರಸೀ ಅಧಿಕೃತ ಭಾಷೆಯಾಗಿದ್ದರೂ ಕನ್ನಡ ಹಾಗೂ ಮರಾಠಿಗಳೆರಡನ್ನೂ ಆಡಳಿತ ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು. ಇಲ್ಲಿನ ಮೊದಲ ಸುಲ್ತಾನರುಗಳ ಕಾಲದಲ್ಲಿ ದಖನಿ ಭಾಷೆ ರೂಪುಗೊಂಡಿತು. ಮುಂದೆ ಉರ್ದು ರೂಪುಗೊಂಡದ್ದು ಈ ದಖನಿಯಿಂದಲೇ. ಷಾ ಮಿರಂಜಿ ಮತ್ತು ಅವನ ಶಿಷ್ಯ ಬುರ್ಹಾನುದ್ದೀನ್ ಜಾನಮ್, ಈ ಬಿಜಾಪುರದ ಸೂಫಿಸಂತರು ದಖನೀ ಪದ್ಯಗಳನ್ನು ರಚಿಸಿರುವರಲ್ಲದೆ ಅದೇ ಭಾಷೆಯಲ್ಲಿ ತಮ್ಮ ಧರ್ಮಬೋಧೆ ಸಹ ಮಾಡುತ್ತಿದ್ದರು. ಇಬ್ರಾಹೀಂ ಆದಿಲ್ ಷಾನ ಕಾಲದಲ್ಲಿ

ಗೋಳಗುಮ್ಮಟ

ದಖನೀ ಭಾಷೆ ರಾಜಪ್ರೋತ್ಸಾಹವನ್ನೂ ಪಡೆಯಿತು. ಇವನ ಕಾಲದಲ್ಲಿ ರಾಜ್ಯದ ಪತ್ರಗಳು ಪಾರಸೀ, ಕನ್ನಡ ಮತ್ತು ಮರಾಠಿ ಭಾಷೆಯಲ್ಲಿರುತ್ತಿದ್ದುವು. ಬಿಜಾಪುರದಲ್ಲಿ ರಾಜಗ್ರಂಥಾಲಯ ಆರಂಭವಾದದ್ದೂ ಸುಮಾರು ಇದೇ ಕಾಲದಲ್ಲೇ. ಒಂದನೆಯ ಇಬ್ರಾಹೀಂ ಆದಿಲ್ ಷಾನ ಕಾಲದಲ್ಲಿ ಸಸ್ಯವರ್ಗ ಮತ್ತು ಪ್ರಾಣಿವರ್ಗದ ಮೇಲಿನ ಖ್ವಾಜ್‌ವಿನ್ ಎಂಬ ಅರಬ್ಬೀ ಕೃತಿಯನ್ನು ಪಾರಸಿಗೆ ಭಾಷಾಂತರಿಸಲಾಯಿತು. ಒಂದನೆಯ ಅಲಿ ಆದಿಲ್ ಷಾ ವಿದ್ವಜ್ಜನರ ಸಂಗವನ್ನು ಬಯಸುತ್ತಿದ್ದ. ಹಿಂದು ಹಾಗೂ ಮುಸ್ಲಿಂ ಸಾಧುಸಂತರ ಜೊತೆ ತತ್ತ್ವಶಾಸ್ತ್ರ ವಿಷಯಗಳನ್ನು ಚರ್ಚಿಸುತ್ತಿದ್ದ. ಅಲ್ಲದೆ ಇವನು ತನ್ನ ಆಸ್ಥಾನಕ್ಕೆ ಕ್ಯಾಥೊಲಿಕ್ ಧರ್ಮ ನಿಯೋಗಗಳನ್ನೂ ಆಹ್ವಾನಿಸಿದ. ತನ್ನನ್ನು ಆದಿಲ್ ಷಾ ಸೂಫಿ ಎಂದು ಕರೆದುಕೊಂಡ. ಜಾತಿಮತಗಳ ವ್ಯತ್ಯಾಸವಿಲ್ಲದೆ ಪವಿತ್ರ ಸ್ಥಳಗಳಿಗೆ ಹಾಗೂ ವಿದ್ವಾಂಸರಿಗೆ ಭೂಮಿಗಳನ್ನು ದತ್ತಿ ಬಿಡುತ್ತಿದ್ದ. ಇವನು ಪುಸ್ತಕಪ್ರೇಮಿ. ಇವನ ಗ್ರಂಥಾಲಯದಲ್ಲಿ ಒಳ್ಳೆಯ ಪುಸ್ತಕ ಸಂಗ್ರಹವಿತ್ತು. ಅನಂತ ಪಂಡಿತನ ಮಗ ವಾಮನ ಪಂಡಿತ ಎಂಬ ಸಂಸ್ಕೃತ ವಿದ್ವಾಂಸನನ್ನು ವರ್ಷಕ್ಕೆ ಸಾವಿರ ವರಹದ ವೇತನದೊಂದಿಗೆ ಅರಮನೆಯ ಗ್ರಂಥಾಲಯದ ಗ್ರಂಥಪಾಲಕನನ್ನಾಗಿ ನೇಮಿಸಿಕೊಂಡಿದ್ದ. ಇಂದಿನ ಬೆಲೆಯಲ್ಲಿ ಅದು 90,000ರೂ.ಗಳನ್ನೂ ಮೀರುತ್ತದೆ. ಈ ಗ್ರಂಥಾಲಯಕ್ಕೆ ಸೇರಿದಂತೆ ವಿರಳ ಗ್ರಂಥಗಳ ಸಂಯೋಜನೆ ಮತ್ತು ಪ್ರತಿ ಮಾಡುವುದಕ್ಕಾಗಿ ಒಂದು ಪ್ರತ್ಯೇಕ ವಿಭಾಗವಿತ್ತು. ಇಲ್ಲಿ ಸುಮಾರು ಅರವತ್ತು ಜನ ಕುಶಲ ಬರಹಗಾರರೂ ಪುಸ್ತಕಗಳಿಗೆ ಮೆರಗು ಕಟ್ಟುವವರೂ ಇದ್ದರು. ಎರಡನೆಯ ಇಬ್ರಾಹೀಂ ಆದಿಲ್ ಷಾ ಬಹುದೊಡ್ಡ ವ್ಯಕ್ತಿ. ಪ್ರಜೆಗಳು ಪ್ರೀತಿಗೌರವಗಳಿಂದ ಜಗತ್‌ಗುರು ಎಂಬ ಬಿರುದನ್ನು ಅವನಿಗೆ ನೀಡಿದ್ದರು. ಇದನ್ನು ಹಣ್–ಎ–ನೌರಸ್ ಎಂಬ ತನ್ನ ದೊಡ್ಡ ಚಿನ್ನದ ನಾಣ್ಯಗಳ ಮೇಲೆ ಸಹ ಕೆತ್ತಿಸಿಕೊಂಡಿದ್ದಾನೆ. ಫೆರಿಸ್ತ ಎಂದು ಪ್ರಸಿದ್ಧನಾಗಿರುವ ಮಹಮ್ಮದ್ ಕಾಸಿಂ ಹಿಂದು ಷಾ ಎಂಬ ಖ್ಯಾತ ಇತಿಹಾಸಕಾರ ತಾರಿಖ್–ಇ–ಫೆರಿಸ್ತಾ ಎಂಬ ಗ್ರಂಥವನ್ನು ರಚಿಸಿದ್ದು ಈ ಕಾಲದಲ್ಲೇ. ಒಟ್ಟಿನಲ್ಲಿ ಆದಿಲ್‌ಶಾಹೀ ರಾಜರು ಕಲೆ ಹಾಗೂ ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಅವರು ಬಿಜಾಪುರವನ್ನು ಜ್ಞಾನಕೇಂದ್ರವನ್ನಾಗಿ ಮಾಡಿದುದಲ್ಲದೆ ಅವರ ಕಾಲದ ಭಾರತದ ಅತಿ ಸುಂದರ ನಗರಗಳಲ್ಲೊಂದಾಗುವಂತೆಯೂ ಮಾಡಿದರು.

**ವಾಸ್ತುಶಿಲ್ಪ:** ಭಾರತೀಯ ವಾಸ್ತುಶಿಲ್ಪ ವೈಭವಕ್ಕೆ ಬಿಜಾಪುರದ ಆದಿಲ್‌ಶಾಹೀಗಳು ಸಲ್ಲಿಸಿರುವ ಕಾಣಿಕೆ ಬಹು ಗಣನೀಯವಾದುದು. ಬಿಜಾಪುರಕ್ಕಿಂತ ಹೆಚ್ಚು ಭವ್ಯ ಕಟ್ಟಡಗಳನ್ನು ಕಲಾವೈಭವವನ್ನು ಹೊಂದಿರುವ ನಗರಗಳು ಭಾರತದಲ್ಲಿ ಬಹಳವಿಲ್ಲ. ಹೊಯ್ಸಳರ ಕಾಲದ ಅನಂತರ ಬಿಜಾಪುರದ ಆದಿಲ್‌ಶಾಹೀ ವಂಶವೇ ಸೌಂದರ್ಯೋಪಾಸನೆಯಲ್ಲೂ ರಚನಾಸಾಮರ್ಥ್ಯದಲ್ಲೂ ಅದ್ಭುತ ವಾಸ್ತುಶಿಲ್ಪವನ್ನು ಬೆಳೆಸಿದೆ ಎಂದು ಹೇಳಬಹುದು. ಇವರು ಗಾತ್ರ, ಸಂಖ್ಯೆ, ಅಲಂಕಾರ ವೈಭವದಲ್ಲಿ ಹಿಂದಿನವರ ಸಾಧನೆಯನ್ನು ಮೀರಿಸುವುದಕ್ಕೋಸ್ಕರ ವಾಸ್ತುಶಿಲ್ಪದ ಕಡೆಗೆ ತಮ್ಮ ಶಕ್ತಿ ಸಂಪನ್ಮೂಲಗಳನ್ನೆಲ್ಲ ವಿನಿಯೋಗಿಸಿದರು. ಇದರ ಫಲವಾಗಿ ಒಂದೇ ನಗರದಲ್ಲಿ ಐವತ್ತು ಮಸೀದಿಗಳು, ಇಪ್ಪತ್ತು ದರ್ಗಾಗಳು ಮತ್ತು ಸುಮಾರು ಅಷ್ಟೇ ಸಂಖ್ಯೆಯ ಅರಮನೆಗಳು ನಿರ್ಮಾಣವಾದವು. ಈ ಕಾಲದ ಭವ್ಯ ಮಂದಿರಗಳು ಕುಶಲತೆಯಲ್ಲಿ ಪರಿಪೂರ್ಣತೆ ಸಾಧಿಸಿವೆ. ಇಡೀ ಪ್ರಪಂಚದಲ್ಲಿ ಅತಿ ದೊಡ್ಡದಾದ ಗುಮ್ಮಟ ಚಾವಣಿ ಇರುವ ಗೋಳಗುಮ್ಮಟ ಈ ಕಾಲದ ಮಹಾಮೇಧಾವಿಯೊಬ್ಬನ ಅದ್ಭುತ ಸಾಧನೆ.

ಬಿಜಾಪುರದಲ್ಲಿ ಕಟ್ಟಡಗಳ ರಚನಾ ಕಾರ್ಯ 16ನೆಯ ಶತಮಾನದ ಪೂರ್ವಾರ್ಧದಿಂದ ಪ್ರಾರಂಭವಾಯಿತು. ಆಗ ಒಂದು ಕೋಟೆ ಆಡಳಿತ ಕಛೇರಿ ಮತ್ತು ಎರಡು ಚಿಕ್ಕ ಮಸೀದಿಗಳು ನಿರ್ಮಾಣಗೊಂಡವು. 17ನೆಯ ಶತಮಾನದಲ್ಲಿ ಬಿಜಾಪುರದ ಶಕ್ತಿ ತುಟ್ಟತುದಿಯಲ್ಲಿದ್ದಾಗ ಈ ನಗರ ವಿಸ್ತಾರಗೊಂಡಿತು. ಎರಡನೆಯ ಇಬ್ರಾಹೀಂ ಆದಿಲ್ ಷಾ (1580– 1627)ನವರಸಪುರ ಎಂಬ ಎರಡನೆಯ ನಗರವನ್ನು ಸ್ಥಾಪಿಸಿದ. ಆದರೆ ಎಲ್ಲ ಮುಖ್ಯ ಕಟ್ಟಡಗಳು ಹಳೆಯ ನಗರದ ಕೋಟೆಗೋಡೆಗಳ ಒಳಗಡೆಯೇ ಇವೆ. 17ನೆಯ ಶತಮಾನದ ಪ್ರಥಮಾರ್ಧಭಾಗ ಬಿಜಾಪುರದ ಕಲೆಯ ಸುವರ್ಣಯುಗ. ಇದು ಇಂಗ್ಲೆಂಡಿನ ಎಲಿಜಬತ್ ಯುಗದೊಡನೆ ಮತ್ತು ಪರ್ಷಿಯದ ಷಾ ಅಬ್ಬಾಸನ ಕಾಲದೊಂದಿಗೆ ಹೊಂದಿಕೊಂಡಿದೆ. ಇಲ್ಲಿಯ ಆಸಾರ್ ಮಹಲ್, ಗಗನ್ ಮಹಲ್, ಮೆಹತರ್ ಮಹಲ್, ಚೀನಿ ಮಹಲ್, ಗೋಳಗುಮ್ಮಟ, ಇಬ್ರಾಹೀಂ ರೋಜ, ಜಾಮೀಮಸೀದಿ ಮುಂತಾದವು ಆದಿಲ್‌ಷಾಹೀ ಸುಲ್ತಾನರ ಕಲಾಭಿಮಾನದ ಪ್ರತೀಕಗಳಾಗಿವೆ. ಬಿಜಾಪುರದ ಕಲಾ ಮತ್ತು ವಾಸ್ತುಶಿಲ್ಪ ಲಕ್ಷಣಗಳನ್ನು ಗಮನಿಸಿದಾಗ ಅದು ಹಳೆಯ ಪರ್ಷಿಯನ್ ಮತ್ತು ಆಟ್ಟೋಮನ್ ಕಲಾಪಂಥಗಳೊಂದಿಗೆ ಸಂಪರ್ಕವಿಟ್ಟುಕೊಂಡಿತ್ತೆಂದು ಕಂಡುಬರುತ್ತದೆ.

ಬಿಜಾಪುರದ ವಾಸ್ತುಶಿಲ್ಪದ ಕೆಲವು ಮುಖ್ಯ ಲಕ್ಷಣಗಳು ಹೀಗಿವೆ. ಮೊದಲನೆಯದಾಗಿ ಇಲ್ಲಿನ ಗುಮ್ಮಟ ಬಹುತೇಕವಾಗಿ ಆಕಾರದಲ್ಲಿ ವರ್ತುಲವಾಗಿದ್ದು ಅದರ ನೆಲಗಟ್ಟಿನಲ್ಲಿ ಹೂವಿನ ದಳದೋಪಾದಿಯ ಸಮೂಹವನ್ನು ನಿರ್ಮಿಸಿ ಮೇಲೇಳಿಸಲಾಗಿದೆ. ಕಟ್ಟಡದ ಮೇಲ್ಭಾಗದಲ್ಲಿ ಮಿನಾರುಗಳು ಸ್ತಂಭಗೋಪುರಗಳು ಚಿಕ್ಕಗುಮ್ಮಟಗಳಿಂದ ಅಲಂಕೃತವಾಗಿವೆ. ಗುಲ್‌ದಸ್ತಾಗಳು (ಚಿಕ್ಕ ಸ್ತಂಭಗೋಪುರಗಳು) ಇರುತ್ತವೆ. ಎರಡನೆಯದಾಗಿ, ಬಿಜಾಪುರದ ಕಮಾನಿನ ಆಕಾರ ಬಹಳ ವಿಶಿಷ್ಟವಾದುದು. ಅದರ ಗೆರೆಗಳ ಮಾಟ ಹಿಂದಿನ ಕೋನ ಸಂಧಿಗಳನ್ನು ಕಳೆದುಕೊಂಡು ನಯವಾಗಿ ಬಾಗಿ ಸಾಗುತ್ತದೆ. ಬಿಜಾಪುರದ ಕಮಾನು ಚತುಷ್ಕೇಂದ್ರ ಮಾದರಿಯದು. ಮೂರನೆಯದಾಗಿ, ಬಿಜಾಪುರದ ವಾಸ್ತುಶಿಲ್ಪಗಳಲ್ಲಿ ಕಂಬಗಳು ಇರುವುದಿಲ್ಲ. ಅವುಗಳ ಸ್ಥಳಗಳಲ್ಲಿ ಆಯಾಕಾರ ಛೇದ ವಿನ್ಯಾಸದ ದಪ್ಪ ಗೋಡೆಗಳೇ ಇರುತ್ತವೆ. ನಾಲ್ಕನೆಯದಾಗಿ, ಗೋಡೆಯ ಮೇಲಿನ ಚಾಚುಭಾಗ ಅಥವಾ ಚಜ್ಜವು ಬಹುತೇಕ ಕಟ್ಟಡಗಳಲ್ಲಿ ಆಲಂಕಾರಿಕವಾಗಿ ಎಲ್ಲೆಡೆಯೂ ಕಂಡುಬರುತ್ತದೆ. ಅಂತಿಮವಾಗಿ, ಇವುಗಳಲ್ಲಿನ ಅಲಂಕರಣ ಉಬ್ಬುಶಿಲ್ಪ ವಿನ್ಯಾಸಗಳು ಸ್ವಂತಿಕೆ ಮತ್ತು ವಿಶಿಷ್ಟರೂಪಲಕ್ಷಣಗಳನ್ನು ಹೊಂದಿರುತ್ತದೆ. ವಿನ್ಯಾಸಗಳು ಹಿಂದೆ ಕಾಣದ ಹೊಸರೀತಿಗಳಲ್ಲಿ ಇರುತ್ತವೆ. ಗುಲಾಬಿ ಹೂವಿನಾಕಾರ, ಸಾಂಪ್ರದಾಯಿಕ ತೂಗುದೀಪ, ನಿರಂತರವಾಗಿ ಹಬ್ಬುವ ಅಂಚು, ಒಂದಕ್ಕೊಂದು ಒಳತೂರಿ ಹೆಣೆದುಕೊಳ್ಳುವ ವಿನ್ಯಾಸಗಳು– ಇವು ಮುಖ್ಯವಾಗಿ ಕಾಣುತ್ತವೆ. ಇವನ್ನು ಉಬ್ಬುಶಿಲ್ಪವಾಗಿ ಕಲ್ಲಿನಿಂದ ಕೆತ್ತಲಾಗಿರಬಹುದು, ಇಲ್ಲವೆ ಗಾರೆಯವಾಗಿರಬಹುದು.

ಬಿಜಾಪುರದ ವಾಸ್ತುಶಿಲ್ಪವನ್ನು ನಾಲ್ಕು ವಿಶಿಷ್ಟ ಉದಾಹರಣೆ ಗಳೊಂದಿಗೆ ವಿವರಿಸಬಹುದು. ಅವುಗಳೆಂದರೆ ಜಾಮೀ ಮಸೀದಿ (ಅಭಿಜಾತ ರೀತಿ), ಇಬ್ರಾಹೀಂ ರೋಜ (ಬಹು ಅಲಂಕರಣದ ರಚನೆ), ಗೋಳಗುಮ್ಮಟ (ಬಹು ಭವ್ಯ ಶೈಲಿ), ಮೆಹತರ್ ಮಹಲ್ (ನಾಜೂಕಾದ ಚಿಕ್ಕ ರಚನೆ).

ಜಾಮೀ ಮಸೀದಿಯನ್ನು ಒಂದನೆಯ ಆದಿಲ್ ಷಾ (1558–80) ನಿರ್ಮಿಸಿದ. ಇದನ್ನು ಬಿಜಾಪುರದ ವಾಸ್ತುಕಲೆಯ ಅಭಿಜಾತ ರೀತಿಗೆ ಒಳ್ಳೆಯ ಉದಾಹರಣೆಯಾಗಿ ಪರಿಗಣಿಸಬಹುದು. ಅದರ ಎರಡು ಮಿನಾರ್‌ಗಳು ಪೂರ್ಣವಾಗಿಲ್ಲದೆ ಕಟ್ಟಡ ಅಪೂರ್ಣ ನಿರ್ಮಾಣವಾಗಿಯೇ ಉಳಿದಿದೆ. ಹಾಗಿದ್ದರೂ ಇದೊಂದು ಭವ್ಯ ರಚನೆಯಾಗಿದ್ದು ಕಟ್ಟುವಾಣಗಾರರ ಕಲೆಯ ಉಚ್ಚತಮ ಕೃತಿಯಾಗಿದೆ. ಇದು 450' x 228' ಪ್ರಮಾಣವಿರುವ ಆಯಾತಾಕಾರದ ಬೃಹತ್ ಕಟ್ಟಡ.ಇದರಲ್ಲಿ ಒಂದರ ಮೇಲೊಂದರಂತೆ ಎರಡು ಕಮಾನು ಸಾಲುಗಳು ಇವೆ. ಕೆಳಗಿನ ಕಮಾನುಗಳು ಆಲಂಕಾರಿಕ. ಮೇಲಿನವು ತೆರೆದಿದ್ದು ಸಾಲು ಕಮಾನಿನ ಮುಮ್ಮುಖವನ್ನು ಒದಗಿಸಿವೆ. ತೆರೆದ ಅಂಗಳ 150' ಚೌಕ, ಮೂರು ಬದಿಗಳು

ಏಳು ಬೃಹತ್ ಕಮಾನುಗಳು ಸಾಲುಗಳಿಂದ ಆವೃತವಾಗಿವೆ. ಈ ಕಮಾನುಗಳ ಮೇಲುಗಡೆ ಗಂಧವಾರಣಗಳ ಮೇಲೆ ನಿಂತ ಚಾಚು ಚಜ್ಜ ಹಬ್ಬಿದೆ. ಹಜಾರದ ಮಧ್ಯಭಾಗದಲ್ಲಿರುವ ಅಂಕಣದ ಸುತ್ತ ನಾಲ್ಕುಕಡೆ ಎತ್ತರವಾದ ಕಮಾನುಗಳಿದ್ದು ಅದರ ಮೇಲೆ ಮಾಡಿಗಿಂತ ಉನ್ನತವಾಗಿ ಎದ್ದಿರುವ ದೊಡ್ಡ ಗುಮ್ಮಟವಿದೆ. ಮಾಡಿನ ಮೇಲೆ ಗುಮ್ಮಟದ ಸುತ್ತ ಕಮಾನು ಅಲಂಕರಣವೂ ಸುತ್ತಲ ಕೈಪಿಡಿಯಲ್ಲಿ ಎದ್ದು ಕಾಣುವ ಹೆನ್ನಾಲಗೆಗಳ ಸಾಲೂ ಇವೆ. ಈ ಮಸೀದಿಯಲ್ಲಿರುವ 208' ಉದ್ದ ಮತ್ತು 107' ಅಗಲದ ಪ್ರಾರ್ಥನಾ ಹಜಾರ ಅದರ ಭವ್ಯತೆ ಮತ್ತು ವಿಸ್ತಾರದಿಂದಾಗಿ ಬಹು ಗಮನೀಯವಾದುದು.ಈ ಹಜಾರವನ್ನು ದೊಡ್ಡ ಗೋಡೆ ರೀತಿಯ ದಪ್ಪ ಕಂಬಗಳ ಮೇಲೆ ನಿಂತ ಕಮಾನುಗಳ ಸಹಾಯದಿಂದ ಐದು ಉದ್ದ ಭಾಗಗಳಾಗಿ ವಿಂಗಡಿಸಲಾಗಿದೆ. ಇದರ ಮಧ್ಯಾಂಕಣ 76' ಚೌಕ. ಸುತ್ತ 12 ದೊಡ್ಡ ಕಮಾನುಗಳಿದ್ದು ಮೇಲೆ ಹೋದಂತೆ ಅವು ಕೂಡಿಕೊಳ್ಳುತ್ತ, ಮೇಲಿನ ಗುಮ್ಮಟಕ್ಕೆ ಅಷ್ಟಕೋನಾಕಾರದ ತಳವನ್ನು ಒದಗಿಸಿವೆ. ಹಿಂಬದಿಯ ಮಧ್ಯದ ಕಮಾನಿನಲ್ಲಿ ಮಿಹಾಬ್ ಪವಿತ್ರ ಕೋಷವಿ ಇದೆ. ಇದಾದರೋ ಗಾರೆಯಲ್ಲಿ ರಚಿಸಿದ ವಿವರವಾದ ಉಬ್ಬುಶಿಲ್ಪ ವಿನ್ಯಾಸಗಳಿಂದಲೂ ಥಳಥಳಿಸುವ ಬಣ್ಣಗಳಿಂದಲೂ ಅಲಂಕೃತವಾಗಿದೆ. ಈ ಮಸೀದಿಯ ಶ್ರೇಷ್ಠವಿಶೆಯಿರುವುದು ಇದರ ಸರಳತೆ ಮತ್ತು ಗಾಂಭೀರ್ಯದಲ್ಲಿ, ಹೆಚ್ಚಿನ ಶಿಲ್ಪಾದಿ ಅಲಂಕರಣವಿಲ್ಲದಿದ್ದರೂ ಇದು ಪ್ರದರ್ಶಿಸುವ ಪರಿಪೂರ್ಣ ಕೋಮಲತೆಯಲ್ಲಿ.

ಇಬ್ರಾಹೀಂ ರೋಜ ಬಿಜಾಪುರದ ಕೋಟೆಯ ಹೊರಭಾಗದಲ್ಲಿದೆ. ಎರಡನೆಯ ಇಬ್ರಾಹೀಂ ಆದಿಲ್ ಷಾ (1580–1627) ತನ್ನ ಸಮಾಧಿಮಂದಿರವಾಗಿ ಇದನ್ನು ಕಟ್ಟಿಸಿಕೊಂಡ. ಇದರಲ್ಲಿ ಎರಡು ಮುಖ್ಯ ಕಟ್ಟಡಗಳಿವೆ, ಒಂದು ಸಮಾಧಿ; ಇನ್ನೊಂದು ಮಸೀದಿ. ರೋಜ ಸುಂದರಾಲಂಕೃತ ಕಟ್ಟಡ. ಅಷ್ಟೇ ಅಲ್ಲ ಇದರ ರಚನಾ ವಿನ್ಯಾಸದಲ್ಲಿ ಪರಿಪೂರ್ಣತೆಯನ್ನು ಸಾಧಿಸಿ; ತನ್ನ ಸರಿಸಮಾನವಿಲ್ಲದ ಕಟ್ಟಡವಾಗಿದೆ. ಕಟ್ಟಡ ಕಪಿಲವರ್ಣದ ಕಲ್ಲಿನದು. ಇದನ್ನು ಅಮೃತಶಿಲೆಯಲ್ಲೇನಾದರೂ ಕಟ್ಟಿದ್ದರೆ ತಾಜಮಹಲನ್ನು ಮೀರಿಸುತ್ತಿತ್ತು ಎಂದು ಒಬ್ಬವಾಸ್ತುಕಲಾ ವಿಮರ್ಶಕ ಹೇಳಿದ್ದಾನೆ. ಕಟ್ಟಡ ದೊಡ್ಡದೇನೂ ಅಲ್ಲ, ಆದರೆ ಅದರ ಸೌಂದರ್ಯವಿರುವುದು ಅದರ ವಿವರಗಳಲ್ಲಿ. ರಚನೆ, ತಂತ್ರ, ಅಲಂಕಾರ ಮತ್ತು ಉಪಯುಕ್ತತೆಯ ದೃಷ್ಟಿಯಿಂದ ಇದು ಪರಿಪೂರ್ಣವಾಗಿದೆ. ಎರಡು ಕಟ್ಟಡಗಳೂ 360' ಉದ್ದ ಮತ್ತು 150' ಅಗಲವಿರುವ ಜಗತಿಯ ಮೇಲೆ ಇವೆ. ರೋಜದಲ್ಲಿ ಮಧ್ಯದ ಹಜಾರ, ಸುತ್ತಲೂ ಕಮಾನು ಸಾಲುಗಳಿಂದ ಸುತ್ತುವರಿದ ಮೊಗಸಾಲೆ ಮತ್ತು ಮೇಲೆ ಗುಮ್ಮಟ ಇವೆ. ಅದರ ಪ್ರತಿಯೊಂದು ಭಾಗವೂ ಒಂದಕ್ಕೊಂದು ಪೂರಕವಾದ ಸಹಜ ಪರಿಮಾಣಗಳಲ್ಲಿದೆ. ಸುತ್ತಲಿನ ಕಮಾನು ಸಾಲುಗಳು ಹಾಗೂ ಅಲಂಕರಣ ಕಮಾನುಗಳು ವೈವಿಧ್ಯತೆಯನ್ನೂ ವಾಸ್ತು ನೈಪುಣ್ಯವನ್ನೂ ಪ್ರತಿಬಿಂಬಿಸುತ್ತವೆ. ಈ ವ್ಯತ್ಯಸ್ತ ರೀತಿಯ ಕಮಾನುಗಳು ಕಟ್ಟಡದ ಚೆಲುವಿನ ಪೂರಕವಾಗಿದೆ. ಇದೇ ಸೌಂದರ್ಯ ದೃಷ್ಟಿ ಇತರ ಅಂಗಗಳಲ್ಲೂ ಕಂಡುಬರುತ್ತವೆ. ತೆಳುವಾಗಿಯೂ ಉದ್ದವಾಗಿಯೂ ಇರುವ ಮಿನಾರುಗಳು ಕಟ್ಟಡದ ಮೇಲೆ ಎಲ್ಲ ಕೋನಗಳಲ್ಲೂ ನವಿರಾಗಿ ಮೇಲೆದ್ದು ನಿಂತಿವೆ. ಸಾಲು ಸಾಲು ತೆಳು ಗಂಧವಾರಣಗಳ ಮೇಲೆ ನಿಂತ ಮೇಲು ಭಾಗ, ಅದರ ಮೇಲೆ ಇರುವ ಗುಮ್ಮಟದ ವಿನ್ಯಾಸ ಕಟ್ಟಡದ ವೈಭವಕ್ಕೆ ಕಾರಣವಾಗಿವೆ. ಸಮಾಧಿಯಿರುವ ಅಂಕಣದ ಹೊರ ಅಂಚಿನಲ್ಲಿ ಕಮಾನು ಸಾಲಿದೆ. ಕಟ್ಟಡದ ಎಲ್ಲಾ ಭಾಗಗಳೂ ತೆಳು ಉಬ್ಬು ಶಿಲ್ಪಗಳಿಂದ ಅಲಂಕೃತವಾಗಿವೆಯಾದರೂ ಮಧ್ಯಾಂಕಣದ ಉತ್ತರ ಗೋಡೆಯ ಹೊರಭಾಗ ಬಹುವಾಗಿ ಹೆಣೆದುಕೊಂಡು ವಿನ್ಯಾಸಗಳಿಂದ ಕೂಡಿದೆ. ವಿನ್ಯಾಸ ಸೌಂದರ್ಯದಲ್ಲಿ ಇದು ವೈಶಿಷ್ಟಪೂರ್ಣವಾಗಿದೆ, ಅನುಪಮವಾಗಿದೆ. ಪ್ರತಿಯೊಂದು ಗೋಡೆಯೂ ಮೂರು ಮೂರು ಕಮಾನು ವಿನ್ಯಾಸಗಳಿಂದಲೂ ಅಂಚುಪಟ್ಟಿ ಮತ್ತು ಮಧ್ಯಪಟ್ಟಿಕೆಗಳಿಂದಲೂ ಅಲಂಕೃತವಾಗಿದೆ. ನಡು ಹಜಾರ 18' ಚೌಕದ ಕೋಣೆ, ಮೇಲೆ ಪುನಃ ತೆಳು ಉಬ್ಬು ಶಿಲ್ಪಗಳಿಂದ ಕೂಡಿದ ಮಟ್ಟಸ ಚಾವಣಿ ಇದೆ. ಇಬ್ರಾಹೀಂ ರೋಜ ಬಿಜಾಪುರದ ಕಟ್ಟಡ ರಚನಾಚಾತುರ್ಯದ ಉತ್ತಮ ಸಾಧನೆ.

ಬಿಜಾಪುರದ ಗೋಳಗುಮ್ಮಟ (ನೋಡಿ) ಜಗತ್ಪ್ರಸಿದ್ಧ. ಆದಿಲ್‌ಶಾಹೀ ದೊರೆಗಳ ಆಳ್ವಿಕೆಯನ್ನು ಅಮರಗೊಳಿಸಿರುವ ಕೃತಿ. ಮಹಮ್ಮದ್ ಆದಿಲ್‌ಷಾನ (1627–57) ಈ ಗೋರಿ ಭಾರತದ ಅದ್ಭುತವಾದ ಕಟ್ಟಡಗಳಲ್ಲೊಂದು. ಪ್ರಪಂಚದಲ್ಲೇ ಅತಿ ದೊಡ್ಡ ಗುಮ್ಮಟಾಚ್ಛಾದಿತ ಹಜಾರವಿರುವುದು ಇಲ್ಲಿಯೇ. ಇಲ್ಲಿಯ ಭಾರಿ ಗುಮ್ಮಟ ಪ್ರಮಾಣದಲ್ಲಿ ವಿಶ್ವದಲ್ಲೇ ಎರಡನೆಯದು. 205' ತಳ ಚೌಕ ಇದ್ದು 198ಳ' ಅಡಿ ಎತ್ತರಕ್ಕೆ ಏರುವ ಗೋಳಗುಮ್ಮಟ ಬೃಹತ್ ಕಟ್ಟಡವಷ್ಟೇ ಅಲ್ಲ, ಬೃಹತ್ತಿಗೆ ತಕ್ಕಂಥ ಗಡಸುತನ, ಆದರೂ ವಿವಿಧ ಭಾಗಗಳ ಪ್ರಮಾಣ ಅಲಂಕರಣಗಳಿಂದ ವರ್ಧಿಸಿದ ಸೌಂದರ್ಯ ಇವುಗಳಿಂದ ಬಿಜಾಪುರದ ವಾಸ್ತುಶಿಲ್ಪಿಗಳ ಸಾಹಸೀ ಪ್ರವೃತ್ತಿಯನ್ನೂ ತಂತ್ರಜ್ಞಾನವನ್ನೂ ಸೌಂದರ್ಯ ದೃಷ್ಟಿಯನ್ನೂ ಈ ಕಟ್ಟಡ ಮೇಳೈಸಿಕೊಂಡಿದೆ.

ಮೆಹತರ್ ಮಹಲನ್ನು ಎರಡನೆಯ ಇಬ್ರಾಹೀಂ ಆದಿಲ್ ಷಾ 1620ರಲ್ಲಿ ಕಟ್ಟಿಸಿದ. ಇದೊಂದು ಚಿಕ್ಕ ಕಟ್ಟಡ, ಆದರೆ ಉಚ್ಚಮಟ್ಟದ ಕಲಾಕೃತಿ. ಇದರಲ್ಲಿ ಒಂದು ಸಣ್ಣ ಸಭಾಂಗಣವಿದೆ. ಮೇಲೆ ತೆರೆದ ಮಾಳಿಗೆಯಿದ್ದು ಅದರ ಸುತ್ತಲ ಗೋಡೆಯನ್ನು ಕಮಾನು ಕಿಟಕಿಗಳಿಂದ ಅಲಂಕರಿಸಲಾಗಿದೆ. ಅದರ ಮೇಲೆ ಜಾಲಂದ್ರದ ಕೈಪಿಡಿಯಿದೆ. ಕಟ್ಟಡದ ಮುಖಭಾಗ ಪ್ರಶಂಸಾರ್ಹ ಕಲ್ಪನೆ. ಇಕ್ಕೆಲದಲ್ಲೂ ಒಂದೊಂದು ಒತ್ತುಗಂಬಗಳಿದ್ದು ಮೇಲೇರುತ್ತ ಚಿಕ್ಕ ಮಿನಾರುಗಳಂತಾಗಿವೆ. ಮೇಲಿನ ಕಿಟಕಿ ವೈಶಿಷ್ಟ್ಯಪೂರ್ಣವಾಗಿದೆ. ಇದು ಗಂಧವಾರಣಗಳೆತ್ತಿದ ಚಾಚಣಿಕೆಯ ಮೇಲೆ ನಿಂತಿದೆ. ಇದರ ಮೇಲೆ ಅಗಲದ ಆಚ್ಛಾದನೆಯಿದೆ. ಬಾಗಿಲುವಾಡ ದಂತಪಂಕ್ತಿಯ ಕಮಾನಿನ ಆಕೃತಿಯಲ್ಲಿದೆ. ಇಲ್ಲಿಯ ಒಂದೊಂದು ವಿವರವೂ ಶಿಲ್ಪಭರಿತ. ಶಿಲ್ಪಕೆಲಸ ಉತ್ತಮ ಗುಣಮಟ್ಟದ್ದಾಗಿದ್ದು, ಶಿಲ್ಪಗಳು ಕಪಿಲ ಶಿಲೆಯಲ್ಲಿ ಮಾಡಿದ್ದರೂ ಜೇಡಿಯ ರೂಪಣೆಗಳಿದ್ದಂತೆ ಚೆನ್ನಾಗಿವೆ. ಉನ್ನತಕಲೆ ಇಲ್ಲಿ ಪ್ರತಿಬಿಂಬಿತವಾಗಿದೆ.

ಆದಿಲ್‌ಶಾಹೀ ಕಾಲದ ವರ್ಣಚಿತ್ರ

ಬಿಜಾಪುರದಲ್ಲಿರುವ ಷಾ ಕರೀಂದರ್ಗಾ, ಷಾ ನವಾಜ್‌ನ ಸಮಾಧಿ, ಶಾಹಪುರ ಬಡಾವಣೆಯಲ್ಲಿರುವ ಮಸೀದಿಗಳು, ಅಂದ ಮಸೀದಿ, ಮಲ್ಲಿಕಾ ಜಹಾನ್ ಬೇಗಂ ಮಸೀದಿ, ಅಲಿ ಷಹೀದ್ ಪೀರ್ ಮಸೀದಿ ಇತ್ಯಾದಿ ಕಟ್ಟಡಗಳು ಆದಿಲ್‌ಶಾಹೀ ರಾಜರ ಕಾಲದ ಇತರ ಕೆಲವು ಗಮನಾರ್ಹ ನಿರ್ಮಾಣಗಳು. ಬಿಜಾಪುರದಲ್ಲಿ ಅರಮನೆಗಳು, ಆಡಳಿತ ಕಟ್ಟಡಗಳು ಇತ್ಯಾದಿಗಳೂ ಇವೆ. ಆದರೆ ಇವುಗಳಲ್ಲಿ ಹೆಚ್ಚಿನ ವೈಶಿಷ್ಟ್ಯ ಕಾಣುವುದಿಲ್ಲ. ಆದರೂ ಅವುಗಳಲ್ಲಿ ಗಗನ ಮಹಲ್ (ರಚನೆ 1560) ಉಲ್ಲೇಖಾರ್ಹ. 120'ಥ82' ವಿಸ್ತಾರದ ಈ ಕಟ್ಟಡ ಅರಮನೆಯಾಗಿ ಮತ್ತು ಸಮಾಲೋಚನಾಗೃಹವಾಗಿ ಉಪಯೋಗವಾಗುತ್ತಿತ್ತು. ಇದರ ಮೇಲಂತಸ್ತು ಜನಾನಾದವರಿಗೆ ಮೀಸಲಾಗಿತ್ತು. ಇದರ ಮುಂಭಾಗ ಪರಿಣಾಮಕಾರಿ ವಿನ್ಯಾಸವನ್ನು ಹೊಂದಿದೆ. ಇದರಲ್ಲಿ ಮೂರು ದೊಡ್ಡ ಕಮಾನುಗಳಿದ್ದು ಮಧ್ಯದ್ದು ಮಿಕ್ಕೆರಡಕ್ಕಿಂತ ದೊಡ್ಡದಾಗಿ 60' ಅಗಲ ಮತ್ತು 50' ಎತ್ತರವಿದೆ.

ಈ ಆದಿಲ್‌ಶಾಹೀ ವಾಸ್ತುರೀತಿಯ ಕಟ್ಟಡಗಳು ಬಿಜಾಪುರದ ಹೊರಗೂ ಅನೇಕ ಕಡೆಗಳಲ್ಲಿವೆ. ಆದರೆ ಇವೆಲ್ಲಾ ಚಿಕ್ಕವು. ಗುಲ್ಬರ್ಗದಲ್ಲಿರುವ ಚಾಂದ್‌ಬೀಬಿ ಕಟ್ಟಿಸಿದ (1585) ಹೀರಾಪುರ ಮಸೀದಿ, ಅದೇ ಜಿಲ್ಲೆಯ ಶಾಹಪುರ ತಾಲ್ಲೂಕಿನಲ್ಲಿರುವ ಕಡೇಚೂರ್, ಯಾದಗಿರಿ ತಾಲ್ಲೂಕಿನ ದೋರನಹಳ್ಳಿ ಇಲ್ಲಿಯ ಮಸೀದಿಗಳನ್ನು ಉದಾಹರಣೆಯಾಗಿ ಹೆಸರಿಸಬಹುದು.

ಬಿಜಾಪುರದ ವಾಸ್ತುಕೃತಿಗಳು ಬಹಳ ಉತ್ತಮ ದರ್ಜೆಯವು. ಬಿಜಾಪುರದ ವಾಸ್ತುತಜ್ಞರು ಗೋಳಗುಮ್ಮಟದಂಥ ಅಸೀಮ ಸಾಹಸೀ ಪ್ರಯತ್ನಗಳನ್ನೂ ಮೆಹತರ್ ಮಹಲ್‌ನಂಥ ಸಣ್ಣ ಕಟ್ಟಡಗಳನ್ನೂ ಬಹು ಆಸ್ಥೆಯಿಂದ ಕಟ್ಟಬಲ್ಲವರಾಗಿದ್ದರು. ಗೋಳಗುಮ್ಮಟದಂಥ ಕಟ್ಟಡದಲ್ಲಿ ಶ್ರೀಮದ್ಗಾಂಭೀರ್ಯ, ಸ್ವಲ್ಪ ಮಟ್ಟಿನ ಗಡಸುತನವಿದ್ದರೆ, ಇಬ್ರಾಹೀಂ ರೋಜದಂಥ ಕಟ್ಟಡಗಳಲ್ಲಿ ತದ್ವಿರುದ್ಧವಾಗಿ ಲಲನಾ ಲಾಲಿತ್ಯವೇ ಮೈವೆತ್ತಿದೆ. ಹೀಗೆ ವೈವಿಧ್ಯಪೂರ್ಣ ಕೃತಿಗಳನ್ನು ನಿರ್ಮಿಸಬಲ್ಲವರಾಗಿದ್ದ ಬಿಜಾಪುರದ ವಾಸ್ತುತಜ್ಞರ ಕೌಶಲ್ಯ ಪ್ರಶಂಸಾರ್ಹ. ಬಿಜಾಪುರದ ಕಟ್ಟಡಗಳಲ್ಲಿ ಕಮಾನುಗಳ ಅಂತರ್ಛೇದನ, ಗುಮ್ಮಟಗಳ ಅಳವಡಿಕೆ ಮುಂತಾದ ತಂತ್ರಗಳನ್ನು ನೋಡಿದರೆ ಕಟ್ಟಡಕಲೆ ಬಹು ಹಿಂದಿನಿಂದ ರೂಢಿತವಾಗಿದ್ದ ರೀತಿಯನ್ನು ತೋರಿಸುತ್ತದೆ. ಪ್ರಾಚೀನ ವಿಧಾನಗಳನ್ನು ಬಿಜಾಪುರದವರೂ ಅಳವಡಿಸಿಕೊಂಡಿರಬೇಕು. ಆ ವಂಶ ಕೊನೆಗೊಳ್ಳುವ ವರೆಗೂ ಅವರ ಈ ಕಟ್ಟಡ ರಚನಾಸಾಮರ್ಥ್ಯ ಯಾವ ಕ್ಷೀಣತೆಯ ಲಕ್ಷಣವೂ ಕಾಣಿಸಿಕೊಳ್ಳದೆ ಮುಂದುವರಿದಿತ್ತು.

**ಶಾಸನಗಳು:** ಆದಿಲ್‌ಶಾಹೀ ವಂಶಕ್ಕೆ ಸೇರಿದ ಶಾಸನಗಳು ಅಧಿಕ ಸಂಖ್ಯೆಯಲ್ಲಿವೆ. ಕರ್ನಾಟಕದಲ್ಲೆಲ್ಲಾ ಕಂಡುಬರುವ ಈ ಶಾಸನಗಳು ಸಾಮಾನ್ಯವಾಗಿ ಮಸೀದಿಗಳು, ದರ್ಗಾಗಳು, ಕೋಟೆಗಳು, ಪ್ರವೇಶದ್ವಾರಗಳು ಅಥವಾ ಜನೋಪಯೋಗಿ ನಿರ್ಮಾಣಗಳ ಸಮೀಪ ಇವೆ. ಇವುಗಳಲ್ಲಿ ಬಳಸಿರುವ ಭಾಷೆ ಅರಬ್ಬೀ, ಪಾರಸೀ ಮತ್ತು ಕೆಲವು ಸಂದರ್ಭಗಳಲ್ಲಿ



ಗಗನ ಮಹಲ್

ಕನ್ನಡ. ಮಸೀದಿಗಳು ಮತ್ತು ದರ್ಗಾಗಳಲ್ಲಿರುವ ಶಾಸನಗಳಲ್ಲಿ ಇಸ್ಲಾಮಿನ ಪ್ರಥಮ ಗ್ರಂಥ ಕೊರಾನ್ ಮತ್ತು ಕಲೀಮಗಳ ಪದ್ಯಗಳನ್ನು ಸಾಮಾನ್ಯವಾಗಿ ಉಲ್ಲೇಖಿಸಲಾಗಿರುತ್ತದೆ. ಇವು ಸಾಂಪ್ರದಾಯಿಕವಾದ ಬಿಸ್ಮಿಲ್ಲಾ ಪ್ರಾರ್ಥನೆಯಿಂದ ಶುರುವಾಗುತ್ತವೆ. ಇವು ಆಳುವ ರಾಜನ ಹೆಸರು, ಅವನ ಬಿರುದುಗಳು, ಕಟ್ಟಿದವನ ಹೆಸರು, ಕಾಲ ಇತ್ಯಾದಿ ವಿವರಗಳನ್ನೂ ಸಾಮಾನ್ಯವಾಗಿ ಒಳಗೊಂಡಿರುತ್ತವೆ. ಲಿಪಿಕಲೆಯ ದೃಷ್ಟಿಯಿಂದ ಕೆಲವು ಶಾಸನಗಳು ಉತ್ತಮ ಮಾದರಿಗಳಾಗಿವೆ. ಇವುಗಳಲ್ಲಿ ಅತಿ ಮೊದಲಿನದೆಂದರೆ ಹಿಜರಿ 920ರ (ಕ್ರಿ.ಶ.1514) ತೇದಿಯುಳ್ಳ ಬಿಜಾಪುರದ ಕೋಟೆಯೊಳಗಿರುವ ಇಸ್ಮಾಯಿಲ್ ಆದಿಲ್ ಷಾನ ಕಾಲಕ್ಕೆ ಸೇರಿದ್ದು. ಗಾಲಿಬ್ ಮಸೀದಿಯಲ್ಲಿರುವ ಶಾಸನ ಮತ್ತು ಅಥರ್ ಮಹಲ್‌ನಲ್ಲಿರುವ ಶಾಸನಗಳು ಕೋಟೆಯನ್ನು ರಚಿಸಿದ್ದರ ಬಗ್ಗೆ ತಿಳಿಸುತ್ತವೆ. ಒಂದನೆಯ ಇಬ್ರಾಹಿಂನ ಕಾಲಕ್ಕೆ ಸೇರಿದ ಹಿಜರಿ 945 (1538) ಮತ್ತು 951 (1544) ತೇದಿಯುಳ್ಳ ಎರಡು ಶಾಸನಗಳು ಕೋಟೆಯದ್ವಾರದ ಮೇಲಿವೆ. ಇದರಲ್ಲಿ ಒಂದನ್ನು ಬಹು ಸುಂದರವಾದ ಅಕ್ಷರಗಳಲ್ಲಿ ಬರೆದಿದೆ. ಇದು ಸಾಮಾನ್ಯ ಪ್ರಾರ್ಥನಾ ಪದ್ಯದಿಂದ ಪ್ರಾರಂಭವಾಗಿದೆ. ಮುಂದೆ ಷಿಯಾಪಂಥೀಯವಾದ "ಅಲ್ಲಿ ಅಲ್ಲಾನ ಪ್ರತಿನಿಧಿ" ಎಂದು ಬರೆಯಲಾಗಿದೆ. ಈ ವಾಕ್ಯ ಬಿಜಾಪುರದ ಶಾಸನಗಳಲ್ಲಿ ಬಹು ಅಪರೂಪ. ಸುಲ್ತಾನನ ಫಿರಂಗಿಗಳ ಮೇಲೆ ಸಹ ಶಾಸನಗಳಿರುತ್ತಿದ್ದವು. ಇಂಥ ಮೂರು ಫಿರಂಗಿಗಳು ದೊರೆತಿವೆ. ಒಂದರಲ್ಲಿ ಅದನ್ನು ಮಾಡಿದವನ ಹೆಸರು (ತುರ್ಕಿದೇಶದ) ಹೆಸನ್ ರುಮಿಯ ಮಗ ಮಹಮ್ಮದ್ ಎಂದಿದೆ. ಇನ್ನೊಂದರಲ್ಲಿ ಅದನ್ನು ಎರಕ ಹೊಯ್ದ ದಿನಾಂಕವಿದೆ.

ವಿವಿಧ ಮಸೀದಿಗಳಲ್ಲಿ ಅನೇಕ ಶಾಸನಗಳು ಕಂಡುಬರುತ್ತವೆ. ಆದರೆ ಅವುಗಳಲ್ಲಿ ಕೊರಾನಿನ ಭಾಗಗಳ ಉದ್ಧರಣೆಗಳು ಹೆಚ್ಚಾಗಿರುವುದ ರಿಂದ ಅವು ಅಷ್ಟು ಐತಿಹಾಸಿಕ ಮಹತ್ವ ಹೊಂದಿಲ್ಲ. ಆದಾಗ್ಯೂ ಈ ಶಾಸನಗಳಲ್ಲಿ ಆಲಂಕಾರಿಕವಾಗಿ ಅಕ್ಷರಗಳು ಹೆಣೆದುಕೊಂಡಿರುವ ರೀತಿಯ ಬರೆವಣಿಗೆಯ ನಮೂನೆ ಆಕರ್ಷಣೀಯವಾಗಿದೆ. ಬಿಜಾಪುರದಲ್ಲಲ್ಲದೆ ಕರ್ನಾಟಕದ ಇತರ ಕಡೆಗಳಲ್ಲಿ ಅದರಲ್ಲೂ ಹಳೆಯ ಮೈಸೂರು ಭಾಗದಲ್ಲಿ ಆದಿಲ್‌ಶಾಹೀ ವಂಶದ ಅನೇಕ ಶಾಸನಗಳಿವೆ. ಶಿಕಾರಿಪುರ ತಾಲ್ಲೂಕಿನ ಮಾಸೂರಿನಲ್ಲಿ ರಾಜಾ ಫರೀದನ ಮಗ ಮಹಮ್ಮದ್ ಖಾನ್ ಎಂಬುವನು ಕಟ್ಟಿಸಿದನೆಂದು ತಿಳಿಸುವ 1632ರ ಒಂದು ಶಾಸನವನ್ನು ಸುಂದರ ನಮೂನೆಯ ಅರಬ್ಬೀ ಹಾಗೂ ಪಾರಸೀ ಲಿಪಿಯಲ್ಲಿ ಬರೆಯಲಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿರುವ ಒಂದು ಶಾಸನ ಮಹಮ್ಮದ್ ಷಾನ ಆಳ್ವಿಕೆಯ ಕಾಲದ್ದು. ಅದರಲ್ಲಿ ಬಾರಿ ಮಲಿಕ್ ಇಬ್ನೆ ಅರ್ಬನ್ ಎಂಬ ಅಮೀಲನು ಕೆರೆಯೊಂದನ್ನು ಕಟ್ಟಿಸಿದ ವಿಷಯವಿದೆ. ಈ ಕೆರೆಯನ್ನು ಕಟ್ಟಿಸುವ ಕಾರಣವನ್ನು ಕನ್ನಡದಲ್ಲಿ ದೀರ್ಘವಾಗಿ ವಿವರಿಸಲಾಗಿದೆ. ಸುಲ್ತಾನ ಮಹಮ್ಮದನು ಕಾಯಿಲೆ ಬಿದ್ದಿದ್ದ, ಅವನಿಗೆ ಗುಣವಾದರೆ ತಾನು ಕೆರೆಕಟ್ಟಿಸುವುದಾಗಿ ಅಮೀಲ ಹರಕೆ ಹೊತ್ತಿದ್ದ. ಸುಲ್ತಾನ ಗುಣಮುಖ ವಾಗಲು ಅಮೀಲ ಕಾಡನ್ನು ಕಡಿಸಿ, ಕೆರೆ ಕಟ್ಟಿಸಿ, ಕೆರೆ ಕೆಳಗಿನ ಭೂಮಿಯನ್ನು ರೈತರಿಗೆ ಉಚಿತವಾಗಿ ನೀಡುವ ವ್ಯವಸ್ಥೆ ಮಾಡಿದ ಎಂದು ಆ ಶಾಸನ ತಿಳಿಸುತ್ತದೆ. ಶಿರಾ ಇತ್ಯಾದೆಡೆಗಳಲ್ಲೂ ಆದಿಲ್‌ಶಾಹೀ ಶಾಸನಗಳು ದೊರೆಕಿವೆ.

**ನಾಣ್ಯಗಳು:** ಆದಿಲ್‌ಶಾಹೀ ವಂಶದ ಐದನೆಯ ಸುಲ್ತಾನ ಒಂದನೆಯ ಅಲಿಯೇ (1558–80) ನಾಣ್ಯಗಳನ್ನು ಹೊರಡಿಸಿದ ಬಿಜಾಪುರದ ಸುಲ್ತಾನರಲ್ಲಿ ಮೊದಲಿಗ. ಅವನ ನಾಣ್ಯಗಳು 1910ರಲ್ಲಿ ಮೊದಲಿಗೆ ದೊರೆತವು. ಜೆ.ಪಿ. ಟೇಲರ್ ಎಂಬುವರು ಬಿಜಾಪುರದಲ್ಲಿ ಕೆಲವು ತಾಮ್ರ ನಾಣ್ಯಗಳನ್ನೂ ಮತ್ತು ಬೆಳ್ಳಿ ಲಾರಿನ್‌ಗಳನ್ನೂ ಪತ್ತೆ ಹಚ್ಚಿದರು. 1912ರಲ್ಲಿ ಇವರು ಮಹಮ್ಮದ್ ಆದಿಲ್ ಷಾನ ಮೂರು ಚಿನ್ನದ ನಾಣ್ಯಗಳನ್ನು ಮತ್ತು ತರುವಾಯ ಇಸ್ಮಾಯಿಲ್‌ನ ನಾಲ್ಕು ಚಿನ್ನದ ನಾಣ್ಯಗಳನ್ನು 1922ರಲ್ಲಿ ಪತ್ತೆಹಚ್ಚಿದರು. ಆದಿಲ್‌ಶಾಹೀ ರಾಜರ ಕೆಲವು ನಾಣ್ಯಗಳು ವೃತ್ತಾಕಾರವಾಗಿಯೂ ಕೆಲವು ಚಚ್ಚೌಕವಾಗಿಯೂ ಇವೆ. ಇವರ ಚಿನ್ನದ ನಾಣ್ಯಗಳ ತೂಕ 52 ಗ್ರೈನ್. ತಾಮ್ರದ ನಾಣ್ಯಗಳು ನಾಲ್ಕುಮೌಲ್ಯಗಳವು. 267, 180, 120, ಮತ್ತು 60 ಗ್ರೈನ್‌ಗಳಷ್ಟು ತೂಗುತ್ತವೆ. ಬೆಳ್ಳಿಯ ಲಾರಿನ್‌ಗಳ ತೂಕ ಸು.70 ಗ್ರೈನ್. ಇತರ ಮುಸ್ಲಿಂ ನಾಣ್ಯಗಳಂತೆ ಇವುಗಳಲ್ಲೂ ಸಾಮಾನ್ಯವಾಗಿ ಬಿರುದುಗಳು ಮತ್ತು ಪಾರಸೀ ದ್ವಿಪದಿಗಳು ಇರುವುದು ರೂಢಿ. ಹೆಚ್ಚಿನವುಗಳಲ್ಲಿ ದಿನಾಂಕ ಕಾಣುವುದಿಲ್ಲ. ಆದರೆ ರಾಜರ ಹೆಸರುಗಳು ಇರುತ್ತವೆ. ಅಲಿ ಆದಿಲ್ ಷಾನ ತಾಮ್ರ ನಾಣ್ಯಗಳಲ್ಲಿ ಅಲಿ–ಇಬ್ನ್–ಅಬಿ–ತಾಲಿಬ್ ಎಂದು ಮುಮ್ಮುಖದಲ್ಲೂ ಅಸದಲ್ಲಾ–ಅಲ್–ಗಾಲಿಬ್ ಎಂದು ಹಿಮ್ಮುಖದಲ್ಲೂ ಲೇಖಗಳಿವೆ. ಈ ರೀತಿಯ ನಾಣ್ಯಗಳು ಮೂರು ತೂಕಗಳಲ್ಲಿವೆ. ಅವುಗಳ ಗಾತ್ರ 0.65" ನಿಂದ 0.8"ರ ವರೆಗೂ ವ್ಯತ್ಯಾಸ ಹೊಂದಿವೆ. ಅವನ ಚೌಕನಾಣ್ಯಗಳು 0.5" ಅಗಲವಿರುತ್ತವೆ. ಎರಡನೆಯ ಇಬ್ರಾಹೀಂ ಆದಿಲ್ ಷಾನ ನಾಣ್ಯಗಳು ವೃತ್ತ ಮತ್ತು ಚೌಕ ಈ ಎರಡು ಬಗೆಯಲ್ಲೂ ಇವೆ. ವೃತ್ತಾಕಾರದ ನಾಣ್ಯಗಳು 0.55" ನಿಂದ 0.75" ವರೆಗೂ ಇವೆ. ಚಚ್ಚೌಕಾಕಾರದ ನಾಣ್ಯಗಳು 0.65" ಅಗಲದವು. ಇವುಗಳಲ್ಲಿ ಇಬ್ರಾಹೀಂ–ಅಬ್ಲಾ–ಬಾಲಿ ಎಂಬ ವಾಕ್ಯ ಹಿಂಭಾಗದಲ್ಲೂ ಗುಲಾಮ್ ಮುರ್ತುಜ ಅಲಿ ಎಂಬ ವಾಕ್ಯ ಮುಂಭಾಗದಲ್ಲೂ ಕಂಡುಬರುತ್ತದೆ. ಮಹಮ್ಮದ್ ಆದಿಲ್ ಷಾ (1627–56) ಚಿನ್ನ ಮತ್ತು ತಾಮ್ರದ ನಾಣ್ಯಗಳೆರಡನ್ನೂ ಹೊರಡಿಸಿದ್ದಾನೆ. ಇವನ ಚಿನ್ನದ ನಾಣ್ಯಗಳು ವರ್ತುಲಾಕಾರವಾಗಿದ್ದು ಇವುಗಳ ವ್ಯಾಸ 0.35" ನಿಂದ 0.4" ನ ವರೆಗೂ ವ್ಯತ್ಯಾಸ ಹೊಂದಿದ್ದು 51.8 ಗ್ರೈನ್ ತೂಕವಿರುತ್ತವೆ. ನಾಣ್ಯದ ಮೇಲೆ ಎರಡು ಸಾಲುಗಳುಳ್ಳ ಪಾರಸೀ ದ್ವಿಪದಿಯನ್ನು ಎರಡು ಮುಖಗಳಲ್ಲಿಯೂ ಕೆತ್ತಲಾಗಿರುತ್ತದೆ. "ಪ್ರಪಂಚವು ಸೌಂದರ್ಯ ಮತ್ತು ಗಾಂಭೀರ್ಯವನ್ನು ಇಬ್ಬರು ಮಹಮ್ಮದರಿಂದ ಪಡೆಯಿತು. ಒಬ್ಬರು ಪ್ರವಾದೀ ಮಹಮ್ಮದ್, ಇನ್ನೊಬ್ಬರು ಸುಲ್ತಾನ್ ಮಹಮ್ಮದ್" ಎಂಬುದು ಈ ದ್ವಿಪದಿಯ ಅರ್ಥ. ಈ ದ್ವಿಪದಿಯಲ್ಲಿ ತಾಜ್ ಜಹಾನ್ ಎಂಬ ಪದವಿದ್ದು, ಸುಲ್ತಾನ ಮಹಮ್ಮದನಿಗೆ ತಾಜ್ ಜಹಾನ್ ಎಂಬ ಹೆಂಡತಿಯೂ ಇದ್ದುದರಿಂದ ಈ ಪದ್ಯವನ್ನು ಇನ್ನೊಂದು ರೀತಿಯಲ್ಲಿ ಹೀಗೆ ಅರ್ಥೈಸಬಹುದು: ಸೌಂದರ್ಯ ಮತ್ತು ಗಾಂಭೀರ್ಯವನ್ನು ಪ್ರವಾದೀ ಮಹಮ್ಮದರಿಂದ ಈ ಲೋಕ ಪಡೆಯಿತು, ಜಹಾನಳು (ರಾಣಿ) ಸುಲ್ತಾನ ಮಹಮ್ಮದನಿಂದ ಪಡೆದಳು ಎಂದು. ಈ ಸರಣಿಯಲ್ಲಿ ಬೆಳ್ಳಿ ನಾಣ್ಯಗಳು ದೊರೆತಿಲ್ಲ. ತಾಮ್ರದ ನಾಣ್ಯಗಳು 267, 179, 117, 66 ಮತ್ತು 56 ಗ್ರೈನ್ ಗಳಷ್ಟು ತೂಕವಿರುತ್ತವೆ. ಇವು ವೃತ್ತಾಕಾರವಾಗಿದ್ದು, ಇವುಗಳ ವ್ಯಾಸ 0.5" ರಿಂದ 0.85" ನವರೆಗೂ ವ್ಯತ್ಯಾಸ ಹೊಂದಿದೆ. ಎರಡನೆಯ ಅಲಿ ಆದಿಲ್ ಷಾ (1656–72) ಲಾರಿನ್ ಎಂಬ ನಾಣ್ಯವನ್ನು ಹೊರಡಿಸಿದ. ಇದು ಮೂಲತಃ ಪರ್ಷಿಯ ಕೊಲ್ಲಿಯ ಲಾರ್ ಜಿಲ್ಲೆಯಲ್ಲಿ ಪ್ರಚಲಿತವಾಗಿದ್ದು, ಅರೇಬಿಯದ ಸಮುದ್ರ ವ್ಯಾಪಾರಿಗಳಲ್ಲಿ ತುಂಬಾ ಜನಪ್ರಿಯವಾಗಿತ್ತು. ಲಾರಿನ್ ವಿಚಿತ್ರ ರೂಪದ ನಾಣ್ಯ. ಇದು ಮಧ್ಯದ ಭಾಗದಲ್ಲಿ ಎರಡು ಪಟ್ಟೆ ಇರುವ ಬೆಳ್ಳಿಯ ತಂತಿ ಅಥವಾ ಬೆಳ್ಳಿಯ ಸರಳು. ತೂಕ ಮಾತ್ರ ನಿರ್ದಿಷ್ಟವಾಗಿರುತ್ತದೆ. ಸ್ಥಳಾವಕಾಶದ ಅಭಾವದಿಂದ ಇದರ ಮೇಲಿನ ಬರಹಗಳು ಅಸಂಪೂರ್ಣವಾಗಿರುತ್ತವೆ. ಸುಲ್ತಾನ್ ಅಲಿ ಆದಿಲ್ ಷಾ ಜರ್ಬ್ ಲಾರಿ – ದಾಂಗೆ ಎಂಬ ವಾಕ್ಯ ಸಾಮಾನ್ಯವಾಗಿ ಇರುತ್ತದೆ. ಇವುಗಳ ಮೇಲಿರುವ ದಿನಾಂಕ ಸ್ಪಷ್ಟವಿರುವುದಿಲ್ಲ. ಈ ಬಗೆಯ ನಾಣ್ಯಗಳು ರಾಜ್ಯಾದ್ಯಂತ ಚಲಾವಣೆಯಲ್ಲಿದ್ದುವೇ ಎಂಬುದು ಸಂಶಯಾಸ್ಪದ. ಬಹುಶಃ ಈ ನಾಣ್ಯಗಳು ಬಿಜಾಪುರದ ತೀರಪ್ರದೇಶದಲ್ಲಿ ಸ್ಥಳೀಯ ಬೇಡಿಕೆಯನ್ನು ಪೂರೈಸಲು ಚಲಾವಣೆಯಲ್ಲಿದ್ದಿರಬೇಕು. ಲಾರಿನ್‌ಗಳಲ್ಲಿ ಎರಡು ವಿಧಗಳಿವೆ. ಒಂದು 3.75" ಉದ್ದವಾಗಿಯೂ 74 ಗ್ರೈನ್ ತೂಕವಾಗಿಯೂ ಇದ್ದರೆ ಮತ್ತೊಂದು 1.75" ಉದ್ದವಾಗಿಯೂ 70 ಗ್ರೈನ್ ತೂಕವಾಗಿಯೂ ಇರುತ್ತದೆ. ಅವುಗಳಲ್ಲಿ ಹಿಜರಿ

ಶಕದ 1077 ಎಂಬ ಕಾಲ ಇರುವುದರಿಂದ ಇವು ಎರಡನೆಯ ಅಲಿ ಆದಿಲ್ ಷಾನ ಕಾಲಕ್ಕೆ ಸಂಬಂಧಿಸಿದ್ದೆಂದು ಹೇಳಬಹುದು. ಕೊನೆಯ ರಾಜ ಸಿಕಂದರ್ ಆದಿಲ್ ಷಾನ ತಾಮ್ರದ ನಾಣ್ಯಗಳು ಹಿಜರಿಯ 1086 ದಿನಾಂಕ ಹೊಂದಿದ್ದು, ಮೂರು ಬಗೆಯ ತೂಕಗಳಲ್ಲಿ ಕಂಡುಬಂದಿವೆ. ಅವುಗಳ ಮುಮ್ಮುಖದಲ್ಲಿ ಸುಲ್ತಾನ್ ಸಿಕಂದರ್ ಖದಿರಿ ಎಂದೂ ಹಿಮ್ಮುಖದಲ್ಲಿ ಖುಸರವೆ ಗಿತಿಸ್ತಾನ್ ಎಂದೂ ಬರಹವಿರುತ್ತದೆ. (ಬಿ.ಎಸ್.ಎ.)

**ಆದಿವಾಸಿಗಳು :** ಹೆಸರೇ ಸೂಚಿಸುವಂತೆ ಒಂದು ದೇಶದ ಮೂಲವಾಸಿಗಳು (ಅಬೊರಿಜಿನೀಸ್). ಇಂಥವರೇ ಮೂಲವಾಸಿಗಳೆಂದು ಹೇಳುವುದು ಕೆಲವು ವೇಳೆ ಕಷ್ಟದ ಕೆಲಸ. ಇವರಿಗಿಂತ ಮೊದಲು ಅಲ್ಲಿ ಬಂದು ನೆಲೆಸಿದವರಿದ್ದಿರಬಹುದು. ಈ ಪದವನ್ನು ಗ್ರೀಕ್ ಮತ್ತು ರೋಮಿನ ಲೇಖಕರು ಲ್ಯಾಟಿಯಂ ಜಿಲ್ಲೆಯಲ್ಲಿ ನೆಲೆಸಿದ ಮೂಲವಾಸಿಗಳ ಬಗ್ಗೆ ಮೊಟ್ಟಮೊದಲಿಗೆ ಬಳಸಿದರು. ಈಗ ಯುರೋಪಿಯನ್ನರು ಕಾಲಿಡುವ ಮೊದಲು ಆಯಾ ದೇಶದಲ್ಲಿದ್ದ ಮೂಲವಾಸಿಗಳಿಗೆ ಈ ಹೆಸರಿದೆ. ಭಾರತದಲ್ಲಿ ಯುರೋಪಿಯನ್ನರು ಕಾಲಿಡುವ ಮೊದಲು ದ್ರಾವಿಡರೂ ಇದ್ದರಷ್ಟೆ. ದ್ರಾವಿಡರನ್ನು ಭಾರತದ ಆದಿವಾಸಿಗಳೆನ್ನಬಹುದು. ಅವರಿಗೂ ಮೊದಲು ಅಥವಾ ಅವರೊಂದಿಗಿದ್ದವರು ಕೋಲರೇ ಮೊದಲಾದವರು ಎಂದು ಹೇಳಲಾಗಿದೆ. ಅಮೆರಿಕದ ರೆಡ್ ಇಂಡಿಯನ್ನರು ಮತ್ತು ಅವರಿಗೂ ಹಿಂದೆ ಅನೇಕ ಬುಡಕಟ್ಟುಗಳು, ಆಸ್ಟ್ರೇಲಿಯದ ಮಾವೋರಿಗಳು, ಆಫ್ರಿಕದ ಬುಷ್‌ಮನ್‌ಗಳು ಮೊದಲಾದವರು ಆಯಾ ಖಂಡಗಳ ಆದಿವಾಸಿಗಳಾಗುತ್ತಾರೆ. ಇವರು ಪ್ರಧಾನವಾಗಿ ಅಲೆಮಾರಿಗಳು. ತಮಗೂ ತಮ್ಮ ಪರಿವಾರದವರಿಗೂ, ದನಕರುಗಳಿಗೂ ಆಹಾರ ನೀರನ್ನು ಅರಸುತ್ತ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುವವರು, ಗುಂಪು ಅಥವಾ ಪಂಗಡಗಳಲ್ಲಿ ವಾಸಮಾಡುವವರು. ಹೊಟ್ಟೆ ಪಾಡಿಗಾಗಿ ಬೇಟೆಯನ್ನೂ ಗಡ್ಡೆಗೆಣಸುಗಳನ್ನೂ ನಂಬಿರುವವರು. ಅನಂತರ ಬೇಸಾಯವನ್ನೂ ಪಶುಪಾಲನೆಯನ್ನೂ ಇತರ ಗೃಹ ಕೈಗಾರಿಕೆಗಳನ್ನೂ ಕಲಿತು ತಮಗೆ ಸರಿದೋರುವ ಸ್ಥಳಗಳಲ್ಲಿ ನೆಲೆಸಿದವರು. ಮೊದಮೊದಲು ಹೊರದೇಶದಿಂದ ಬಂದವರು ಆದಿವಾಸಿಗಳೊಡನೆ ಸೆಣಸಿ, ಅವರಲ್ಲನೇಕರನ್ನು ನಿರ್ನಾಮ ಮಾಡಿದರು. ಅಳಿದುಳಿದ ಆದಿವಾಸಿಗಳು ಕಾಡುಮೇಡುಗಳ ಅಂತರಾಳವನ್ನು ಸೇರಿದರು. ವಲಸೆ ಬಂದವರಿಗಿಂತ ನೆಲೆಸಿದವರು ಬಲವಾಗಿದ್ದೆಡೆ ಪರಸ್ಪರ ಘರ್ಷಣೆ ಉತ್ಕಟವಾಗಿತ್ತಲ್ಲದೆ ಬಹುಕಾಲ ನಡೆಯಿತು. ಯುರೋಪಿಯನ್ನರು ಹೋದ ಕಡೆಗಳಲ್ಲೆಲ್ಲಾ ಆದಿವಾಸಿಗಳನ್ನು ಸದೆಬಡಿದಿದ್ದಾರೆ, ಸುಲಿದಿದ್ದಾರೆ. ಅನಂತದಲ್ಲಿ ಆದಿವಾಸಿ ಸಂರಕ್ಷಣಾ ಸಂಘವೊಂದು ಸ್ಥಾಪಿತವಾಗಿ (1883) ಅವರ ಹಿತರಕ್ಷಣೆ ಮತ್ತು ಪ್ರಗತಿಗಾಗಿ ಕೆಲಸ ಮಾಡಿದೆ. 1872 ಮತ್ತು 1875ರಲ್ಲಿ ಜಾರಿಗೆ ಬಂದಿದ್ದ ಎರಡು ಶಾಸನಗಳಿಂದ ಪೆಸಿಫಿಕ್ ಸಾಗರ ದ್ವೀಪವಾಸಿಗಳನ್ನು ಮನಸ್ವಿಯಾಗಿ ಆಸ್ಟ್ರೇಲಿಯಕ್ಕೆ ಕೂಲಿಗಾರನನ್ನಾಗಿ ರವಾನಿಸುವುದನ್ನು ನಿಷೇಧಿಸಿದವು. ಭಾರತದಲ್ಲಿ ಸಹ ಆದಿವಾಸಿಗಳ ಉದ್ಧಾರ ಸಾಕಷ್ಟು ನಡೆಯುತ್ತಿದೆ.

ಒಂದು ಗಣತಿಯ ಪ್ರಕಾರ ಭಾರತದಲ್ಲಿ ಸುಮಾರು 84 ದಶಲಕ್ಷ ಆದಿವಾಸಿ ಜನರಿದ್ದಾರೆ. ಈ ಮೂಲ ಜನಾಂಗಗಳನ್ನು ಆದಿವಾಸಿಗಳು, ಗಿರಿಜನರು, ವನ್ಯಜಾತಿ (ಕಾಡುಗಳಲ್ಲಿರುವ ಬುಡಕಟ್ಟುಗಳು) ಎಂದು ಕರೆಯುತ್ತಾರೆ. ಅವರೇ ಭಾರತ ಉಪಖಂಡದಲ್ಲಿ ಮೊಟ್ಟಮೊದಲು ವಾಸವಾಗಿದ್ದ ಜನರೆಂದು ಪರಿಗಣಿಸಲಾಗಿದೆ. ಇಂಥ 500ಕ್ಕೂ ಹೆಚ್ಚಿನ ಮೂಲ ಜನಾಂಗಗಳು ಭಾರತದ ವಿವಿಧ ಭಾಗಗಳಲ್ಲಿ, ಬೆಟ್ಟಗಳಲ್ಲಿ ಹಾಗೂ ಬಯಲು ಪ್ರದೇಶಗಳಲ್ಲಿ ಚದುರಿ ಹೋಗಿದ್ದರು. ಅವರು ಮುಖ್ಯವಾಗಿ ಕೇಂದ್ರೀಕರಿಸಿರುವುದು ಬಹಳ ದೂರದ, ಪ್ರವೇಶವೇ ಕಷ್ಟವಾದ, ತುಂಬ ಹಿಂದುಳಿದಿರುವ ಪ್ರದೇಶಗಳಲ್ಲಿ. ಈಶಾನ್ಯ ದಿಕ್ಕಿನ ಹಿಮಾಲಯ ಪ್ರದೇಶಗಳಲ್ಲಿ, ನೇಫ ಮತ್ತು ಅಸ್ಸಾಮಿನ ಪರ್ವತ ಪ್ರದೇಶಗಳಲ್ಲಿ ವಾಸವಾಗಿರುವ ಗುರುಂಗ್, ಲಿಂಬು, ಲೆಪ್‌ಚ, ಅಕ, ದಾಫ್ಲ, ಅಬೋರ್ ಮಿರಿ, ಮಿಷ್ಮಿ, ಸಿಂಗ್‌ಫೊ, ಮಿಕಿರ್, ಕಚಾರಿ, ಗಾರೋ, ಖಾಸಿ, ನಾಗ, ಲುಷಾಯ್ ಮತ್ತಿತರ ಪಂಗಡಗಳೂ ಇದಕ್ಕೆ ಸೇರುತ್ತವೆ. ಬಿಹಾರ, ಮಧ್ಯಪ್ರದೇಶ ಮತ್ತು ಒರಿಸ್ಸಾಗಳ ಪರ್ವತ ಪ್ರದೇಶಗಳನ್ನು ಒಳಗೊಂಡ ಮಧ್ಯವಲಯ ಸಂತಾಲ, ಮುಂಡ, ಒರಾಯನರು, ಹೊ, ಗೊಂಡ್, ಜುವಾಂಗ್, ಭಿಲ್ ಮತ್ತು ಇತರ ಹಲವು ಬುಡಕಟ್ಟುಗಳಿಗೆ ವಸತಿಯನ್ನೊದಗಿಸಿದೆ. ದಕ್ಷಿಣ ವಲಯದಲ್ಲಾದರೋ ಚೆಂಚು, ಕೊತ, ತೋಡ, ಕಾದರ್, ಕುರುಂಬ, ಇರುಳ, ಮುಥುವನ್, ಕಾನಿಕ್ಕಾರ್, ಎರಲ್ ಮುಂತಾದ ಜನರು ವಾಸವಾಗಿದ್ದಾರೆ.

ಮಾನವಕುಲಶಾಸ್ತ್ರಜ್ಞರು ಬಳಸುವಂತೆ ಆದಿವಾಸಿ ಎಂಬ ಶಬ್ದ ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಗುರುತಿಸಬಹುದಾದ ಜನಾಂಗವನ್ನು ನಿರ್ದೇಶಿಸುತ್ತದೆ. ಭಾರತದ ಬುಡಕಟ್ಟುಗಳಲ್ಲಿ ಬಹುಪಾಲಿನವು ಶತಮಾನಗಳಿಂದಲೂ ಹಿಂದೂ ಸಂಸ್ಕೃತಿ, ಹಿಂದೂ ಜನಾಂಗಗಳೊಂದಿಗೆ ಸಂಪರ್ಕ ಹೊಂದಿದ್ದು, ಅವುಗಳಿಂದ ಪ್ರಭಾವಿತವಾಗಿವೆ. ಅವುಗಳ ಸಾಂಸ್ಕೃತಿಕ ವೈಶಿಷ್ಟ್ಯ ಇರುವುದು ಭಾಗಶಃ ಮಾತ್ರ. ಆದರೆ, ಈಶಾನ್ಯ ಮೇರೆಯಲ್ಲಿರುವ ಜನಾಂಗಗಳಿಗೂ ಅಂಡಮಾನ್ ದ್ವೀಪಗಳಲ್ಲಿರುವ ಬುಡಕಟ್ಟುಗಳಿಗೂ ಈ ಮಾತು ಅನ್ವಯಿಸುವುದಿಲ್ಲ. ವಾಸ್ತವವಾಗಿ ಅವು ಸ್ವಭಾವತಃ ಆದಿಜನಾಂಗಗಳು. ರಾಜ್‌ಗೊಂಡ್ ಮುಂತಾದ ಕೆಲವು ಹಿಂದುತ್ವ ಹೊಂದಿದ ಬುಡಕಟ್ಟುಗಳಿಗೂ ಅವರ ನೆರೆಯ ಗ್ರಾಮೀಣ ಹಿಂದೂಗಳಿಗೂ ನಡುವೆ ಇರುವ ವಿಭಾಗರೇಖೆ ಬಹಳ ತೆಳು. ಆಡಳಿತ ಉದ್ದೇಶಗಳಿಗಾಗಿ, ಪ್ರತ್ಯೇಕತೆ ಮತ್ತು ಆರ್ಥಿಕ ಹಿಂದುಳಿಕೆಗಳ ಆಧಾರದಿಂದ ಕೆಲವು ಹಿಂದು ಜನಾಂಗಗಳನ್ನು ಆದಿವಾಸಿ ಬುಡಕಟ್ಟುಗಳೆಂದು ವರ್ಗೀಕರಿಸುವುದಕ್ಕೆ ಹಲವು ಉದಾಹರಣೆಗಳಿವೆ.

ಜನಾಂಗೀಯವಾಗಿ ಆದಿವಾಸಿ ಜನರನ್ನು ಹಲವು ಸಂದರ್ಭಗಳಲ್ಲಿ ಅವರ ನೆರೆಯವರಿಂದ ಬೇರ್ಪಡಿಸಿ ನೋಡುವುದು ಕಷ್ಟವಾಗುತ್ತದೆ. ಅಂಡಮಾನಿಗಳಾಗಲಿ, ನೇಫ ಮತ್ತು ಅಸ್ಸಾಮಿನ ಬುಡಕಟ್ಟುಗಳಾಗಲಿ ಹಾಗಲ್ಲ. ಅವರು ಕ್ರಮವಾಗಿ ನೆಗ್ರಿಟೊ ಮತ್ತು ಮಂಗೋಲಾಯ್ಡ್. ಆದುದರಿಂದ ಅವರನ್ನು ಸುಲಭವಾಗಿ ಬೇರ್ಪಡಿಸಬಹುದು. ವಾಸ್ತವವಾಗಿ, ಭಾರತದಲ್ಲಿ ಜನಾಂಗಸಂಕರ ಬಹಳ ಪುರಾತನವಾದದ್ದು, ನಾವು ಜಾತಿಗಳ ಹಾಗೂ ಬುಡಕಟ್ಟುಗಳ ನಡುವೆ ಈಗ ಮಾಡುವ ವಿಭೇದಗಳಿಗಿಂತಲೂ ಮೊದಲಿನದು.

1. ತೋಡ ವೃದ್ಧ ಮತ್ತು ಅವನ ಗುಡಿಸಲು 'ಮೊ'. 2. ನಾಗಾ ನಾಯಕ. 3. ಖೋಡರ ವಧು. 4. ಮೋಸರು ಕಡೆಯುತ್ತಿರುವುದು (ತೋಡ). 5. ದಂಡಾರಿ ನೃತ್ಯ (ಗೋಂಡ). 6. ಒರಾಯನ್ ತನ್ನ ಮಕ್ಕಳನ್ನು 'ಸಿಕಾ-ಬಾಹಿಂಗ'ದಲ್ಲಿ ಹೊತ್ತುಕೊಂಡು ಹೋಗುತ್ತಿರುವುದು. 7. ಕುಶಲಕಲಸ (ಸವೋರ ಮಹಿಳೆ). 8. ಸವೋರ ಯುವಕರು. 9. ಕೋಂಡ್ ಯುವಕ. 10. ಭಿಲ್ಲ ಮಹಿಳೆ. 11. ಚಾಪೆ ಹೆಣೆಯುತ್ತಿರುವುದು (ನಾಗಾ ಮಹಿಳೆ).

ಈಶಾನ್ಯ ಪ್ರದೇಶದ ಬುಡಕಟ್ಟುಗಳ ಜನ ಟಿಬೆಟೊ-ಬರ್ಮನ್ ಭಾಷಾಕುಟುಂಬಕ್ಕೆ ಸೇರಿದ ವಿವಿಧ ಉಪಭಾಷೆಗಳನ್ನು ಆಡುತ್ತಾರೆ. ಬಂಗಾಲ, ಬಿಹಾರ, ಒರಿಸ್ಸಗಳ ಹಲವು ಜನಾಂಗಗಳು ಆಸ್ಟ್ರಿಕ್ ಭಾಷಾಕುಟುಂಬದ ಭಾಷೆಗಳನ್ನಾಡುತ್ತಾರೆ. ಈ ಗುಂಪಿನ ಮುಖ್ಯ ಆದಿವಾಸಿ ಭಾಷೆಗಳೆಂದರೆ ಸಂತಾಲಿ, ಸವಾರ, ಮುಂಟಾರಿ ಮತ್ತು ಗಡಬ. ಉಳಿದ ಬುಡಕಟ್ಟುಗಳು ತಾವು ವಾಸಿಸುವ ಪ್ರದೇಶಕ್ಕೆ ಸಂಬಂಧಿಸಿದ ಇಂಡೋ ಆರ್ಯನ್ ದ್ರಾವಿಡ ಭಾಷೆಗಳನ್ನಾಡುತ್ತಾರೆ.

ಆದಿವಾಸಿ ಜನತೆಯ ಆರ್ಥಿಕ ಪರಿಸ್ಥಿತಿ ಅವರ ಸಂಸ್ಕೃತಿಯಷ್ಟೇ ವೈವಿಧ್ಯಮಯ. ಅತ್ಯಂತ ಪ್ರಾಚೀನತೆಯ ಮಟ್ಟದಲ್ಲಿ ಅಂಡಮಾನಿ ಮತ್ತು ಅರಸದಾನ್ ಮುಂತಾದವರು ವ್ಯವಸಾಯ ಕಾಣರು. ಬೇರುಗಳು, ಹಣ್ಣುಗಳು, ಕಾಡಿನಲ್ಲಿ ದೊರಕುವ ಸಣ್ಣಪುಟ್ಟ ಬೇಟೆಗಳಿಂದ ಅವರ ಜೀವನ ಸಾಗುತ್ತದೆ. ಮುಂದಿನ ಘಟ್ಟದಲ್ಲಿ ಸರದಿ (ಷಿಫ್ಟಿಂಗ್) ಬೇಸಾಯ ಮಾಡುವ ಜನಾಂಗಗಳಿವೆ. ಇವರು ಕಾಡನ್ನು ಸುಟ್ಟು ಬೆಳೆಗಳನ್ನು ಬೆಳೆಯುತ್ತಾರೆ. ನಾಗ ಮತ್ತಿತರ ಈಶಾನ್ಯವಲಯದ ಆದಿವಾಸಿಗಳು ಬೆಟ್ಟದ ಇಳುಕಲುಗಳನ್ನು ಮಟ್ಟ ಹೊಡೆದು, ಬಹಳ ಕುಶಲತೆಯಿಂದ ಆ ಮಟ್ಟ ಗದ್ದೆಗಳಿಗೆ ನೀರು ಹರಿಸುತ್ತಾರೆ. ಒರಿಸ್ಸದ ಕಿಸಾನ್ ಮುಂತಾದ ಬುಡಕಟ್ಟುಗಳವರು ಶ್ರೇಷ್ಠ ಬೇಸಾಯಗಾರರು. ಸ್ವಲ್ಪಮಟ್ಟಿಗೆ ಬಯಲು ಪ್ರದೇಶದ ಜನರು ಸುಲಿಗೆಯಿಂದಲೂ ಸ್ವಲ್ಪಮಟ್ಟಿಗೆ ಭೂಮಿಯ ಅಭಾವದಿಂದಲೂ ಬಹು ಸಂಖ್ಯೆಯ ಆದಿವಾಸಿ ಜನಾಂಗಗಳು ತೀವ್ರ ಬಡತನದಿಂದಲೂ ಬಳಲುತ್ತಿವೆ. ಆದಿವಾಸಿ ಜನಾಂಗಗಳ ಬಹುಪಾಲು ಜನ ತಮ್ಮ ಸಮಗ್ರವಾದ ಸಾಂಪ್ರದಾಯಿಕ ಜೀವನ ಪದ್ಧತಿಗಳ ಸ್ವಾರಸ್ಯವಾದ ಲಕ್ಷಣಗಳನ್ನು ಇನ್ನೂ ಉಳಿಸಿಕೊಂಡಿದ್ದಾರೆ. ಅವರ ಸಮಾಜದಲ್ಲಿ

ಸರ್ವಸಮತಾ ಭಾವನೆಗಳಿವೆ. ಸ್ತ್ರೀಯರನ್ನು ಇತರ ಸಮಾಜಗಳಲ್ಲಿರುವಂತೆ ದಾಸ್ಯದಲ್ಲಿಡುವ ಪದ್ಧತಿ ಅವರಲ್ಲಿ ಇಲ್ಲ. ಜೀವನದ ಉತ್ತಮ ವಸ್ತುಗಳಿಗೆ ನೃತ್ಯ, ಗಾನಗಳ ಬಗೆಗೆ ಒಲವನ್ನು ಉಳಿಸಿಕೊಂಡಿದ್ದಾರೆ.

ಬಯಲು, ನಗರ ಹಾಗೂ ಭಾರತದ ಇತರ ಭಾಗಗಳ ಜನರಲ್ಲಿ ಕಾಣದ ಅನೇಕ ಗುಣಗಳನ್ನು ನಾನು ಆದಿವಾಸಿಗಳಲ್ಲಿ ಕಂಡಿದ್ದೇನೆ ಎಂದು ಜವಾಹರಲಾಲ್ ನೆಹರು ಅವರು ಹೇಳಿರುವ ಮಾತು ಸತ್ಯ.

ಪ್ರಾತಿನಿಧಿಕವಾಗಿ ಇಲ್ಲಿ ಭಾರತದ ಅತಿಪ್ರಾಚೀನ ಬುಡಕಟ್ಟುಗಳಾದ ಕೋಲರು, ಇತರ ಕೆಲವು ಪ್ರಮುಖ ಬುಡಕಟ್ಟುಗಳ ಮತ್ತು ಮೈಸೂರು ಜಿಲ್ಲೆಯ ಸ್ಥಳಜನ್ಯ ಆದಿವಾಸಿಗಳ ಪರಿಚಯವನ್ನು ಕೊಡಲಾಗಿದೆ.

**ಕೋಲರು :** ಪ್ರೋಟೋ ಆಸ್ಟ್ರೊಲಾಯಿಡ್ ವರ್ಗಕ್ಕೆ ಸೇರಿದ ಕೋಲರು ಅಥವಾ ಮುಂಡರು ಭಾರತ ದೇಶದ ಬಹು ಪ್ರಾಚೀನ ಜನಾಂಗಗಳಲ್ಲಿ ಮುಖ್ಯರಾದವರು. ಇವರು ಭಾರತಕ್ಕೆ ಬರುವುದಕ್ಕೆ ಮುಂಚೆ ಇಲ್ಲಿ ನೆಗ್ರಿಟೊ ಜನಾಂಗಕ್ಕೆ ಸೇರಿದ ಜನಗಳು ಇದ್ದರು. ಕೋಲರು ಪಶ್ಚಿಮದಿಂದ ಬಂದು ಮಧ್ಯಪ್ರದೇಶದ ಛೋಟಾನಾಗಪುರ ಮತ್ತು ದಕ್ಷಿಣ ಭಾರತದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡರೆಂದು ಹೇಳಬಹುದು. ಕೋಲರು, ಪಶ್ಚಿಮದಿಂದ ಬಂದ ಆಸ್ಟ್ರೊಲಾಯಿಡ್ ಜನಾಂಗ ಮತ್ತು ನೆಗ್ರಿಟೊ, ಮಂಗೋಲಾಯ್ಡ್ ಜನಾಂಗಗಳ ಮಿಶ್ರಣದಿಂದ ಉದ್ಭವವಾದ ಒಂದು ಸ್ಥಳೀಯ ವರ್ಗವೆಂದು ಕೆಲವರ ವಾದ. ಕೋಲರಲ್ಲಿ ಹತ್ತು ಹನ್ನೆರಡು ವಿಭಿನ್ನ ಪಂಗಡಗಳಿವೆ. ಇವರು ಕೆಂಪುಬಣ್ಣದ ಕುಳ್ಳನೆಯ ಆಕಾರದ ಜನ. ದಪ್ಪ ತುಟಿಗಳು, ಅಗಲವಾದ ಮೂಗು, ತುಂಬಿಕೊಂಡ ಕೈಕಾಲುಗಳು, ಕುರುಚಲು ಗಡ್ಡ ಇವರ ಇತರ ಸಾಮಾನ್ಯ ಲಕ್ಷಣಗಳು. ಕೋಲರ ಭಾಷೆ ಆಸ್ಟ್ರೊ ಏಷಿಯಾಟಿಕ್ ಪಂಗಡಕ್ಕೆ ಸೇರಿದ ಒಂದು ಉಪಜಾತಿ. ಕೋಲರ ಭಾಷೆಗೂ ಇಂಡೋನೇಷ್ಯದ ಮುನ್‌ಖ್ಮೆರ್ ಭಾಷೆಗೂ ಬಹು ನಿಕಟ ಸಂಬಂಧಗಳಿರುವುದು ಗಮನಾರ್ಹವಾದುದು. ಪ್ರೋಟೊ ಆಸ್ಟ್ರೊಲಾಯಿಡ್ ವರ್ಗಕ್ಕೆ ಸೇರಿದ ಕೋಲರು ಭಾರತೀಯ ಸಂಸ್ಕೃತಿಗೆ ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ. ಭಾರತದಲ್ಲಿ ಇವರಿಗಿಂತಲೂ ಮುಂಚೆ ನೆಲೆಸಿದ್ದ ನೆಗ್ರಿಟೋಜನಗಳಿಗೆ ಪರಿಚಯವೇ ಇಲ್ಲದೆ ಇದ್ದ ಅನೇಕ ನಾಗರಿಕತೆಯ ಅಂಶಗಳಲ್ಲಿ ಇವರು ಮುಂದುವರಿದಿದ್ದರು. ಮಡಕೆಗಳನ್ನು ಮಾಡುವುದು, ನವಶಿಲಾಯುಗದ ನುಣುಪಾದ ಕಲ್ಲಿನ ಆಯುಧಗಳನ್ನು ಮಾಡುವುದು, ಅದರಿಂದ ವ್ಯವಸಾಯ ಮಾಡುವುದು–ಇತ್ಯಾದಿಗಳಲ್ಲಿ ಇವರು ನುರಿತವರಾಗಿದ್ದರು. ಕೆಲವು ಮತೀಯ ಭಾವನೆಗಳು ಕೋಲರ ಕೊಡುಗೆಯೆಂದು ಹೇಳಬಹುದು. (ಎ.ವಿ.ಎನ್.)

**ಅಪತನಿಗಳು :** ಈಶಾನ್ಯ ಗಡಿಯ ಏಜೆನ್ಸಿ ಪ್ರದೇಶದ ಸುಬಾನ್ಸಿರಿ ವಿಭಾಗದಲ್ಲಿ ವಾಸಿಸುವ ಹಲವು ಆದಿವಾಸಿ ಬುಡಕಟ್ಟುಗಳಲ್ಲಿ ಒಂದು. ಅವರು ವಾಸವಾಗಿರುವ ಕಣಿವೆ ಸು. 51.8 ಚ.ಕಿಮೀ ವಿಸ್ತಾರವುಳ್ಳದ್ದೂ ಅಸ್ಸಾಂ, ಟಿಬೆಟ್ ಚೀನಗಳು ಸೇರುವ ಮುಕ್ಕೂಟ ಪ್ರದೇಶದಿಂದ ಅನತಿದೂರದ್ದೂ ಆಗಿದೆ. ಅಪತನಿ ಕಣಿವೆಯ ದಕ್ಷಿಣ ಮತ್ತು ಪಶ್ಚಿಮಕ್ಕೆ ಒರಟಾದ ದಾಫ್ಲ ಜನ ವಾಸಿಸುವ ಗಹನವಾದ ಪರ್ವತಗಳಿವೆ. ಉತ್ತರದಲ್ಲಿ ಮಿರಿ ಜನರಿದ್ದಾರೆ. ಪೂರ್ವದಲ್ಲಾದರೂ ಭಾರತದ ನಿರ್ಜನವಾದ ಈಶಾನ್ಯ ಗಡಿಯ ತುತ್ತತುದಿಯ ಪರ್ವತಶ್ರೇಣಿಯಿದೆ. ಸರದಿ ಬೇಸಾಯಗಾರ ಜನಾಂಗವಾದ ದುರ್ದಮ್ಯ ದಾಫ್ಲರಂತಲ್ಲದೆ ಅಪತನಿಗಳು ಒಂದು ಸ್ಥಿರವಾದ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಬೆಳೆಸಿಕೊಂಡಿದ್ದಾರೆ. ನೀರಾವರಿಯಿಂದ ಬೆಳೆಯುವ ಗದ್ದೆಗಳು, ಸುವ್ಯವಸ್ಥಿತ ಸಮಾಜಜೀವನ, ಅವರಲ್ಲಿ ಕಾಣುತ್ತದೆ. ಈ ಬುಡಕಟ್ಟಿನ ಜನಸಂಖ್ಯೆ ಸುಮಾರು 11,000. ದಾಫ್ಲಗಳು ಬೆಟ್ಟದ ಇಳಿಕಲುಗಳಲ್ಲಿ ವಾಸಿಸಿದರೆ ಅಪತನಿಗಳು ಇರುವುದು ಕಣಿವೆಗಳಲ್ಲಿ. ಪ್ರತಿಯೊಂದು ಹಳ್ಳಿಯ ಸುತ್ತಲೂ ಅದಕ್ಕೆ ಸೇರಿದ ಗದ್ದೆಗಳಿರುತ್ತವೆ. ಮನೆಗಳು ಒಡ್ಡುಗಳ ಮೇಲೆ ಇರುತ್ತವೆ. ಕೆಳಗಿನ ಮರೆಯಾದ ಸ್ಥಳವನ್ನು ಮನೆಯ ಹಂದಿಗಳಿಗೆ ಆಶ್ರಯವಾಗಿ ಬಳಸಲಾಗುತ್ತದೆ. ವಾಸ್ತವವಾಗಿ ಅವರಿಗೆ ಭೂಮಿ ಬಹಳ ಅಮೂಲ್ಯ. ಅನಂತರ ಅವರ ಸಂಪತ್ತು ಎಂದರೆ ಮಿಥಾನ್‌ಗಳು. ಈ ಕಾಡುದನಗಳನ್ನು (ಬಾಸ್ ಫ್ರಂಟಾಲಿಸ್) ದಾಫ್ಲಗಳು ಸಾಮಾನ್ಯವಾಗಿ ನೋಡಿಕೊಳ್ಳುತ್ತಾರೆ. ಅಂತರ ಗ್ರಾಮವ್ಯವಹಾರಗಳಲ್ಲೂ ಭೂಮಿಯನ್ನು ಕೊಳ್ಳುವಾಗಲೂ ಮಿಥಾನ್‌ಗಳು ಚಲಾವಣೆಯ ಮಾಧ್ಯಮವಾಗುತ್ತವೆ. ಅಸ್ಸಾಮಿನ ಬಯಲು ಪ್ರದೇಶಗಳಿಂದ ಕೊಂಡುತಂದ ಹಂದಿಗಳು, ಎತ್ತುಗಳು, ಬಟ್ಟೆಗಳು, ಟಿಬೆಟನ್ ಕತ್ತಿಗಳು–ಇವೂ ವಿನಿಮಯ ಮಾಧ್ಯಮವಾಗಿ ಉಪಯುಕ್ತವಾಗುತ್ತವೆ. ಅಪ ತನಿ ಹೆಂಗಸರು ಉತ್ತಮ ನೇಕಾರ್ತಿಯರಾಗಿದ್ದು ತಮ್ಮ ಉಪಯೋಗಕ್ಕೆ ಬೇಕಾದ ಹತ್ತಿಯ ಬಟ್ಟೆಗಳನ್ನು ತಾವೇ ನೇಯ್ದುಕೊಳ್ಳುತ್ತಾರೆ. ಅಸ್ಸಾಮಿ ವಸ್ತುಗಳಾದ ಕಳೆಗುದ್ದಲಿ, ಪಾತ್ರೆಗಳು, ಬಟ್ಟೆ, ಉಪ್ಪು, ಟಿಬೆಟ್ಟಿನ ಗಾಜಿನ ಮಣಿಗಳು ಮತ್ತು ಕತ್ತಿಗಳು ಇವುಗಳನ್ನು ಲಖಿಂಪುರ್ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುತ್ತಾರೆ.

ಅಪ ತನಿಗಳು ಸಾಮಾನ್ಯವಾಗಿ ಮಂಗೋಲಾಯ್ಡರು. ಆದರೆ ಕಾಕಸಾಯ್ಡರೊಡನೆ ಅತ್ಯಂತ ಪ್ರಾಚೀನ ಮಿಶ್ರಣವೂ ಅವರಲ್ಲಿ ಕಂಡುಬರುತ್ತದೆ. ದಾಫ್ಲಗಳಲ್ಲಿರುವಂತೆಯೇ ಅಪ ತನಿ ಸಮಾಜದಲ್ಲೂ ಎರಡು ಮುಖ್ಯ ವಿಭಾಗಗಳಿವೆ. ಒಂದು ಮೇಲುವರ್ಗ (ಮಿತೆ), ಇನ್ನೊಂದು ಗುಲಾಮರ ಕೆಳವರ್ಗ (ಮುರ). ಕಮ್ಮಾರರು, ಹಂದಿಗಳ ಹಿಡಮಾಡುವ ಹೆಂಗಸರು ಕೆಳಗಿನ ಮಟ್ಟದವರು. ಹಿಂದೆ ಬುಡಕಟ್ಟುಗಳ ನಡುವೆ ಗುಲಾಮರಿಗಾಗಿ ದಾಳಿಗಳು ಬಹಳ ಸಾಮಾನ್ಯವಾಗಿದ್ದವು (ಈಗ ಭಾರತ ಸರ್ಕಾರ ಗುಲಾಮಗಿರಿಯನ್ನು ಬಹಿಷ್ಕರಿಸಿದೆ). ಆದರೆ ಆಗ ಘೊಂಡುಗಳು (ಮಧ್ಯವರ್ತಿಗಳು) ಶಾಂತಿ ಸಂಧಾನಕ್ಕೂ ಅಪಹರಿಸಿದ ವ್ಯಕ್ತಿಗಳನ್ನು ಪಳಗಿಸುವುದಕ್ಕೂ ಪ್ರಯತ್ನಿಸುತ್ತಿದ್ದರು.

ಈಚಿನ ವರ್ಷಗಳಲ್ಲಿ ಭಾರತ ಸರ್ಕಾರ ಅಪ ತನಿಗಳೂ ಕೂಡಿದಂತೆ ನೀಫ ಜನರ ಜೀವನವನ್ನು ಆಧುನೀಕರಿಸುವುದರಲ್ಲಿ ಯಶಸ್ವಿಯಾಗಿದೆ.

**ಇರುಳರು :** ನೀಲಗಿರಿ ಬೆಟ್ಟದಲ್ಲಿರುವ ಹಿಂದುಳಿದ ಜನಾಂಗ. ದ್ರಾವಿಡ ಭಾಷೆಯನ್ನಾಡುತ್ತಾರೆ. ಕುಬ್ಜರು. ಕಪ್ಪು, ಚಪ್ಪಟೆ ಮೂಗಿನವರು. ಅನೇಕರು ತೋಟಗಳಲ್ಲಿ ಕೂಲಿಗಳಾಗಿದ್ದಾರೆ. ಇತರರ ವೃತ್ತಿ ಬೇಟೆಯಾಡುವುದು, ಅರಣ್ಯದಲ್ಲಿ ಸಿಕ್ಕುವ (ಜೇನು ಮುಂತಾದ) ಪದಾರ್ಥಗಳನ್ನು ಶೇಖರಿಸುವುದು ಮುಂತಾದವು.

**ಒರಾಯನರು:** ಭಾರತದ ಮೂರು ರಾಜ್ಯಗಳಲ್ಲಿ ಅಂದರೆ ಬಿಹಾರ, ಬಂಗಾಲ ಮತ್ತು ಒರಿಸ್ಸಗಳಲ್ಲಿ ಹಂಚಿಹೋಗಿರುವ ಜನ. ಕುರುಖ್ ಅಥವಾ ಒರಾಯನ್ ಅಥವಾ ಉರವೊ ಎಂದು ಹೆಸರಿರುವ ಉತ್ತರ ದ್ರಾವಿಡಭಾಷೆಗೆ ಹೆಸರು ನೀಡಿದವರು. ಈ ಭಾಷೆಯನ್ನಾಡುವವರು ಸು. 3,833,000 ಜನರಿದ್ದಾರೆ. ಆದಿವಾಸಿಗಳಲ್ಲದ ಜನಾಂಗಗಳೊಂದಿಗೆ ಸಂಪರ್ಕವಿರುವ ಪ್ರದೇಶಗಳಲ್ಲಿ ಅವರು ಸದ್ರಿ ಎಂಬ ಹಿಂದಿ ಮತ್ತು ಹಲವು ಆದಿವಾಸಿ ಭಾಷೆಗಳ ಮಿಶ್ರಣವಾದ ಭಾಷೆಯೊಂದನ್ನು ಆಡುತ್ತಾರೆ. ಅನೇಕರು ಸದ್ರಿ, ಹಿಂದಿ ಅಥವಾ ಒರಿಯ ಅಥವಾ ಬಂಗಾಳಿಗಳನ್ನು ಆಡುತ್ತ, ದ್ವಿಭಾಷಿಗಳಾಗಿದ್ದಾರೆ. ಅವರದೇ ಭಾಷೆಯಲ್ಲಿ ಅವರ ಬುಡಕಟ್ಟಿನ ಮೂಲನಾಮ ಕುರುಖ್ ಎಂದು. ಹೊ, ಮುಂಡ, ಖಾರಿಯ ಬುಡಕಟ್ಟುಗಳ ನಡುವೆ ಇವರು ವಾಸಿಸುತ್ತಾರೆ. ಅವರದೇ ಸಂಪ್ರದಾಯದ ಪ್ರಕಾರ ರಾಜ್‌ಮಹಲ್ ಬೆಟ್ಟಗಳ ಮಲೇರ್‌ಗೆ ಅವರು ಹತ್ತಿರದ ಸಂಬಂಧವುಳ್ಳವರು. ರಿಸ್ಲೆ ವರದಿ ಮಾಡಿರುವಂತೆ ಒರಾಯನರಲ್ಲಿ ಐದು ಉಪಪಂಗಡಗಳಿವೆ: ಬರ್ಗ ಒರಾಯನ್, ಧಂಕ ಒರಾಯನ್, ಖಾರಿಯ ಒರಾಯನ್, ಖಿಂಡಾರ್ ಒರಾಯನ್, ಮತ್ತು ಮುಂಡ ಒರಾಯನ್. ಈ ಐದೂ ಬಹಳ ಕಡ್ಡಾಯವಾಗಿ ಭಿನ್ನಗೋತ್ರ ವಿವಾಹ ಪದ್ಧತಿಯವು. ಪ್ರಾಣಿಗಳ, ಸಸ್ಯಗಳ, ಮತ್ತು ಉಪ್ಪು ಮುಂತಾದ ವಸ್ತುಗಳ, ಹಂದಿಯ ಕರುಳಿನ, ಕಬ್ಬಿಣದ ಹೆಸರುಗಳನ್ನುಳ್ಳ ಭಿನ್ನಗೋತ್ರ ವಿವಾಹಪದ್ಧತಿಯ ಹಲವಾರು ಪಂಗಡಗಳು ಅವರಲ್ಲಿವೆ. ಹಿಂದಿನ ಮಾನವಶಾಸ್ತ್ರಜ್ಞರು, ಈ ಹೆಸರುಗಳು ಕುಲದೇವತಾ ಲಾಂಛನಗಳು ಎಂದು ಭಾವಿಸಿದ್ದರು. ಆದರೆ ಈಗ ಹೇಳಬಹುದಾದದ್ದು ಅವು ಕುಲದೇವತಾ ಲಾಂಛನಗಳಂತೆ ಕಾಣುತ್ತವೆ ಎಂದಷ್ಟು ಮಾತ್ರ. ನಿಜವಾದ ಅಂಥ ನಂಬಿಕೆ ಒಂದು ವಸ್ತುವನ್ನು ಕುರಿತು ಧಾರ್ಮಿಕವಾದ ಮನೋಭಾವದಿಂದ ಪ್ರಾರಂಭವಾಗುತ್ತದೆ. ಉಪ್ಪಿನ ಪಂಗಡದವರು ತಮ್ಮ ಆಹಾರದೊಂದಿಗೆ ಉಪ್ಪನ್ನು ಸೇವಿಸುತ್ತಾರೆ. ಹಾಗೆ ಬೆರೆಸದೆ ಬರಿಯ ಉಪ್ಪನ್ನು ತಿನ್ನುವುದಿಲ್ಲ. ಒಂದು ಪಂಗಡದ ಸದಸ್ಯರು ಅದೇ ಪಂಗಡದವರನ್ನು ಮದುವೆಯಾಗಲು ಸಾಧ್ಯವಿಲ್ಲವಾದ್ದರಿಂದ, ಒಂದು ಗುಂಪಿಗೆ ಒಂದು ಹೆಸರಿಡುವ ಪದ್ಧತಿ. ಮದುವೆ ಮತ್ತು ಅಗಮ್ಯಗಮನಗಳ ವಿಷಯದಲ್ಲಿ ತಮ್ಮ ನಿಯಮಗಳನ್ನು ಆಚರಿಸಲು, ಉಳಿಸಿಕೊಳ್ಳಲು ಅನುಕೂಲವಾಗಿದೆ.

ಸಾಂಪ್ರದಾಯಿಕವಾಗಿ ಹಳ್ಳಿಯ ವ್ಯವಹಾರಗಳನ್ನು ಜಾತ್ಯತೀತ ನಾಯಕ ಮಹತೊ, ಧಾರ್ಮಿಕ ನಾಯಕ ಪಹಾನ್ ಮತ್ತು ಹಳ್ಳಿಯ ಹಿರಿಯರನ್ನುಳ್ಳ ಒಂದು ಸಮಿತಿ ನೋಡಿಕೊಳ್ಳುತ್ತಿದ್ದವು. ಬೇರೆ ಬೇರೆ ಹಳ್ಳಿಗಳಿಗೆ ಸೇರಿದ ಪಕ್ಷಗಳ ನಡುವೆ ಉಂಟಾಗುವ ವಿವಾದಗಳನ್ನು ಪರಿಹರಿಸುತ್ತಿದ್ದ ಪ್ರಾದೇಶಿಕ ಸಮಿತಿಗಳೂ ಇದ್ದವು. ಆಧುನಿಕ ಪರಿಸ್ಥಿತಿಗಳಲ್ಲಿ ಈ ಸಾಂಪ್ರದಾಯಿಕ ಸಂಸ್ಥೆಗಳ ಅಧಿಕಾರ ಹಾಗೂ ಚಟುವಟಿಕೆಗಳು ಕಾಣದಾಗಿವೆ. ನಾಯಕತ್ವದ ಹೊಸ ಮಾದರಿಗಳು ಮೂಡುತ್ತಿವೆ.

ಒರಾಯನರಲ್ಲಿ ಕೆಲವರು ಎಷ್ಟುಮಟ್ಟಿಗೆ ಹಿಂದೂಗಳಾಗಿಬಿಟ್ಟಿದ್ದಾರೆಂದರೆ ಮಾದಕ ಪಾನೀಯಗಳ ಸೇವನೆಯಿಂದ ದೂರವಾಗಿ ಹಿಂದೂ ಪದ್ಧತಿಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಭಗತ್ ಎಂಬ ಪಂಗಡ ಅಂಥದೊಂದು.

ಹುಡುಗ, ಹುಡುಗಿಯರಿಗಾಗಿ ಕಟ್ಟಿದ ಗ್ರಾಮನಿದ್ರಾ ಶಾಲೆ ಅತ್ಯಂತ ಪ್ರಮುಖ ಸಂಸ್ಥೆಗಳಲ್ಲಿ ಒಂದು. ಬಾಲಕರ ನಿದ್ರಾಶಾಲೆಗಳನ್ನು ಜೊಂಗ್‌ಖೆಡ್‌ಪಾ ಎಂದೂ ಬಾಲಿಕೆಯರದ್ದನ್ನು ಪೆಲ್‌ಅಡ್‌ಪಾ ಎಂದೂ ಕರೆಯುತ್ತಿದ್ದರು. ಈ ನಿದ್ರಾಶಾಲೆಗಳೇ ಯುವಕ ಸಂಘಗಳೂ ಆಗಿದ್ದು, ತರುಣ–ತರುಣಿಯರು ಬುಡಕಟ್ಟುಗಳಿಗೆ ಸಂಬಂಧಿಸಿದ ಪುರಾಣಗಳನ್ನೂ ಕತೆಗಳನ್ನೂ ಕಲಿಯಲು, ತಮ್ಮ ಬುಡಕಟ್ಟಿನ ಕಲೆ, ಕೈಕಸುಬುಗಳಲ್ಲಿ ಕುಶಲತೆ ಸಂಪಾದಿಸಲು ಒಂದು ರೀತಿಯ ಶಿಕ್ಷಣ ಕೇಂದ್ರಗಳೂ ಆಗಿರುತ್ತಿದ್ದವು. ಅಲ್ಲದೆ ಒಂದು ರೀತಿಯ ಗ್ರಾಮದ ಶ್ರಮಸಂಚಯ ಕೇಂದ್ರಗಳೂ ಆಗಿರುತ್ತಿದ್ದವು. ಒಂದು ಮನೆ ಕಟ್ಟಲೊ ಅಥವಾ ಕಾಡು ಕಡಿಯಲೊ ಜನಶಕ್ತಿ ಬೇಕಾದಾಗ ಗ್ರಾಮದ ಯುವಕರು ರಂಗಕ್ಕಿಳಿಯಲು ಸಿದ್ಧರಾಗುತ್ತಿದ್ದರು. ದುರದೃಷ್ಟವಶಾತ್ ಇಂಥ ಶಾಲೆಗಳು ವೇಗವಾಗಿ ಮಾಯವಾಗುತ್ತಿವೆ.

ವಿವಾಹ ಸಮಾರಂಭದ ಅತ್ಯಗತ್ಯ ಅಂಶಗಳು ಇವು. ಒಂದು ಹೊರೆ ಒಣಹುಲ್ಲು ಮತ್ತು ಒಂದು ನೇಗಿಲಿನ ಮೇಲೆ ಇಟ್ಟ ಒಂದು ಬೀಸುಕಲ್ಲಿನ ಮೇಲೆ ನಿಂತುಕೊಳ್ಳುತ್ತಾರೆ. ಅವರ ಮೇಲೆ ಒಂದು ತುಂಡು ಬಟ್ಟೆಯನ್ನು ಹೊದಿಸಲಾಗುತ್ತದೆ. ಹುಡುಗಿಯರ ಒಂದು ಗುಂಪು ಅವರ ಮೇಲೆ ನೀರನ್ನು ಸುರಿಯುತ್ತದೆ. ಈ ಸ್ನಾನವಾದ ಮೇಲೆ ಅವರು ಹೊಸ ಬಟ್ಟೆಗಳನ್ನು ಧರಿಸಿಕೊಂಡು ಪರಸ್ಪರ ಹಣೆಗೆ ಕುಂಕುಮ ಇಡುತ್ತಾರೆ.

ಒರಾಯನರಲ್ಲಿ ಅಂತ್ಯಸಂಸ್ಕಾರಗಳಾದರೂ ಬಹಳ ವಿಸ್ತಾರವಾದುವು. ಮಕ್ಕಳು ಮತ್ತು ಗರ್ಭಿಣಿಯರು ವಿನಾ ಮಿಕ್ಕವರನ್ನು ಸುಡುವುದು ಕಡ್ಡಾಯ. ಯಾರಾದರೂ ಬೀಜಗಳನ್ನು ಬಿತ್ತಿದ ಮೇಲೆ, ಕೊಯ್ಲಾಗುವುದಕ್ಕೆ ಮುಂಚೆ ಸತ್ತರೆ ಅವರನ್ನು ತಾತ್ಕಾಲಿಕವಾಗಿ ಹೂಳಲಾಗುವುದು. ಕೊಯ್ಲು ಮುಗಿದ ಮೇಲೆ ಆ ದೇಹವನ್ನು ತೆಗೆದು ಸುಡಲಾಗುವುದು. ಸುಟ್ಟ ಮೂಳೆಗಳನ್ನು ಸಾಮೂಹಿಕವಾಗಿ ನದಿಯಲ್ಲಿ ಮುಳುಗಿಸುವ ಸಮಾರಂಭದವರೆಗೂ ಒಂದು ಮಡಕೆಯಲ್ಲಿ ಕಾಪಾಡಿಡಲಾಗುವುದು.

ಒರಾಯನ್ ಧರ್ಮ ಬಹಳ ಮಟ್ಟಿಗೆ ಹಿಂದೂ ಧರ್ಮದಿಂದ ಪ್ರಭಾವಿತವಾಗಿದೆ. ಅವರ ಮುಖ್ಯ ದೇವತೆ ಸೂರ್ಯ (ಧರ್ಮ್). ಚಂಡಿ ಅವರ ಬೇಟೆಯ ದೇವತೆ. ಉಳಿದ ಬುಡಕಟ್ಟುಗಳಂತೆಯೇ ಅವರೂ ಕಾಯಿಲೆ, ಸಾವು ಮತ್ತಿತರ ದುರ್ವಿಧಿಗಳಿಗೆ ಅಸಂಖ್ಯಾತ ಪ್ರೇತಾತ್ಮಗಳು ಕಾರಣರೆಂದು ನಂಬುತ್ತಾರೆ. ಧಾರ್ಮಿಕ ಜನರಾದ್ದರಿಂದ ಅವರ ಯಾವ ಆರ್ಥಿಕ ಚಟುವಟಿಕೆಯೂ ಸೂಕ್ತವಾದ ಧಾರ್ಮಿಕ ವಿಧಿಯಿಲ್ಲದೆ ಇರುವುದಿಲ್ಲ. ಅವರ ವೈಭವೋಪೇತವಾದ ಬೇಟೆ (ಸರ್‌ಹುಲ್) ಒಂದು ವಿಸ್ತಾರವಾದ ಕಾರ್ಯಕ್ರಮ. ಬಹು ಹೆಚ್ಚಿನ ಸಂಖ್ಯೆಯ ಗಂಡಸರು ಅದರಲ್ಲಿ ಭಾಗವಹಿಸುತ್ತಾರೆ. ಎಲ್ಲ ಹಬ್ಬಗಳಲ್ಲೂ ಗಂಡಸರು ಹೆಂಗಸರು ಒಟ್ಟಿಗೆ ಸೇರಿ ನರ್ತಿಸುತ್ತಾರೆ, ಹಾಡುತ್ತಾರೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದು ನರ್ತನಕ್ಷೇತ್ರ (ಅಖ್ರ) ಇರುತ್ತದೆ.

ಒರಾಯನರು ಒಳ್ಳೆಯ ರೈತರು, ಉತ್ತಮ ಕೈಕಸುಬುಗಾರರು. ರಾಂಚಿ ಮತ್ತಿತರ ಪಟ್ಟಣಗಳ ಬಳಿ ಅವರಲ್ಲಿ ಅನೇಕರು ಕುಶಲ ಮತ್ತು ಅಕುಶಲ ಕೆಲಸಗಳಲ್ಲಿದ್ದಾರೆ. ನಗರದ ಸುತ್ತಣ ಹಳ್ಳಿಗಳಲ್ಲಿ ವ್ಯಾಪಾರ ಮಟ್ಟದಲ್ಲಿ ತರಕಾರಿಗಳನ್ನು ಬೆಳೆಯುತ್ತಾರೆ.

ಬೇಕಾದಷ್ಟು ಜನ ಒರಾಯನರು ಕ್ರೈಸ್ತರಾಗಿಬಿಟ್ಟಿದ್ದಾರೆ. ಅಂಥವರು ಮಿಷನರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದು ಅವರಲ್ಲಿ ಹಲವರು ಉನ್ನತ ಶಿಕ್ಷಣವನ್ನೂ ಪಡೆದು ಬೇರೆ ಬೇರೆ ವೃತ್ತಿಗಳನ್ನು ಪ್ರವೇಶಿಸುತ್ತಿದ್ದಾರೆ. ಹೀಗೆ ಒರಾಯನ್ ಸಮಾಜ ವೇಗವಾಗಿ ಆಧುನಿಕವಾಗುತ್ತಿದೆ, ಬದಲಾಗುತ್ತಿದೆ.

**ಕುರುಂಬರು:** ಇವರು ನೀಲಗಿರಿ ಬೆಟ್ಟಗಳು, ಕೊಡಗು ಮತ್ತು ಮೈಸೂರಿನ ಬೆಟ್ಟಗಾಡು ಪ್ರದೇಶಗಳಲ್ಲಿ ವಾಸಿಸುವ ಜನ. ಅಕ್ಕಪಕ್ಕದ ಪಂಗಡಗಳ ಜನರಿಗೆ ಪೌರೋಹಿತ್ಯ ನಡೆಸುತ್ತಾರೆ. ಮಂತ್ರ ಮಾಟಗಳಲ್ಲಿ ನಿಷ್ಣಾತರೆಂದು ಇವರಿಗೆ ಎಲ್ಲರೂ ಹೆದರುತ್ತಾರೆ. ಅಡವಿ ಬೇಟೆ ಇವರ ಕಸಬು. ಅರಣ್ಯದಲ್ಲಿ ದೊರಕುವ ಆಹಾರ ಪದಾರ್ಥಗಳನ್ನು ಕೂಡಿಟ್ಟು ಉಪಯೋಗಿಸುತ್ತಾರೆ.

**ಕೇರಳದ ಕಾಡರರು:** ಪಶ್ಚಿಮ ಘಟ್ಟಗಳ ನೆಲ್ಲಿಯಂಪಟ್ಟಿ ಬೆಟ್ಟಗಳು ಮತ್ತು ಅಣ್ಣಾಮಲೈ ಬೆಟ್ಟಗಳಲ್ಲಿ ಈ ಪಂಗಡದ ಸುಮಾರು 1,500 ಜನರಿದ್ದಾರೆ. ದಕ್ಷಿಣ ಭಾರತದ ಆದಿವಾಸಿ ಗುಂಪುಗಳಲ್ಲಿ ಇವರದು ಅತ್ಯಂತ ಪ್ರಾಚೀನ ಪಂಗಡ. ಕೆಲವು ಮಾನವಶಾಸ್ತ್ರಜ್ಞರು ಅವರನ್ನು ಒಂದು ಸಾಂಸ್ಕೃತಿಕ ಪಳೆಯುಳಿಕೆ, ಶಿಲಾಯುಗ ಕಾಲದ ಭಾರತೀಯ ಸಂಸ್ಕೃತಿಯ ಉಳಿದು ಬಂದಿರುವ ಅವಶೇಷ ಎಂದು ಅಭಿಪ್ರಾಯಪಡುತ್ತಾರೆ. ಮದರಾಸು ವಸ್ತುಸಂಗ್ರಹಾಲಯದ ಮೊದಲಿನ ನಿರ್ದೇಶಕರಾದ ಎಡ್ಗರ್ ಥರ್ಸ್ಟನ್ ಕಾಡರರ ಸಾಂಸ್ಕೃತಿಕ ಲಕ್ಷಣಗಳಿಗೂ ಮಲಯದ ಕಾಡುಗಳಲ್ಲಿನ ನೆಗ್ರಿಟೋ ಆದಿವಾಸಿಗಳಿಗೂ ಕೆಲವು ಹೋಲಿಕೆಗಳಿರುವುದನ್ನು ಕಂಡಾಗ ಭಾರತದ ಜನಾಂಗಿಕ ಚರಿತ್ರೆಯಲ್ಲಿ ಕಾಡರರು ಹೆಚ್ಚಿನದೊಂದು ವಿಶಿಷ್ಟತೆಯನ್ನು ಪಡೆದರು. ಮಲಯದ ಸಕಾಯಿ ಜನರಂತೆ ಇವರೂ ತಮ್ಮ ಮೇಲಿನ ಬಾಚಿಹಲ್ಲುಗಳನ್ನು ಕೆತ್ತಿ ಮೊನಚಾಗಿ ಮಾಡಿಕೊಳ್ಳುವುದನ್ನು ದೀಕ್ಷಾವಿಧಿಯಾಗಿ ಇಟ್ಟುಕೊಂಡಿದ್ದಾರೆ. ಮದುವೆಯ ಗಂಡು ಸುಂದರವಾಗಿ ಕೆತ್ತಿದ ಬಿದಿರು ಬಾಚಣಿಗೆಗಳನ್ನು ಹೆಣ್ಣಿಗೆ ಉಡುಗೊರೆ ಕೊಡುವ ಪದ್ಧತಿಯೂ ಅವರಲ್ಲಿದೆ. ಭೌತಮಾನವಶಾಸ್ತ್ರಜ್ಞರಲ್ಲೊಬ್ಬರಾದ ಬಿ.ಎಸ್. ಗುಹ 1927ರಲ್ಲಿ ಕೆಲವು ಮಂದಿ ಕಾಡರರು ಕುರುಚು ಕೂದಲನ್ನು ಹೊಂದಿದ್ದುದನ್ನು ಗಮನಿಸಿದರು. ಇದು ನೆಗ್ರಿಟೋಗಳ ಲಕ್ಷಣ. ಈ ಜನಾಂಗಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳು, ಇನ್ನೂ ಸನಿಹದಿಂದ ಪರೀಕ್ಷಿಸಿದರೆ, ಕಾಡರರನ್ನು ನೆಗ್ರಿಟೋ ಜನರ ಗುಂಪಿಗೆ ಸೇರಿಸುವುದನ್ನು ಸಮರ್ಥಿಸುವುದಿಲ್ಲ. ಅವರು ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಎಂಬ ದೃಷ್ಟಿಯೂ ನಿಲ್ಲುವಂತಹುದಲ್ಲ. ಇದಕ್ಕಿಂತ ಯುಕ್ತವಾದ ವಿವರಣೆಯೆಂದರೆ, ಅವರು ಕೇರಳ–ತಮಿಳು ಗಡಿಯ ಜನರ ಒಂದು ಹಿಂದುಳಿದ ಪಂಗಡವಾಗಿದ್ದು, ಮೂಲತಃ ಬಯಲುಪ್ರದೇಶಗಳಿಗೆ ಸೇರಿದವರು; ಕಾಡುಗಳಲ್ಲಿ ಆಶ್ರಯ ಪಡೆದು, ತಾವು ಹೊಂದಿದ್ದ ಸಾಂಸ್ಕೃತಿಕ ಸಂಪತ್ತನ್ನೂ ಪ್ರಗತಿ ಹೊಂದಬೇಕೆಂಬ ಬಯಕೆಯನ್ನೂ ಕಳೆದುಕೊಂಡವರು–ಎಂಬುದು. ಕಾಡರರು ತಕ್ಕಮಟ್ಟಿನ ಮಲೆಯಾಳಂ ಮಿಶ್ರಣವುಳ್ಳ ತಮಿಳಿನ ಉಪಭಾಷೆಯೊಂದನ್ನು ಆಡುತ್ತಾರೆ. ಈಗ ಅವರಲ್ಲಿ ಬಹು ಮಂದಿ ಅರಣ್ಯ ಇಲಾಖೆಯ ಆಶ್ರಯದಲ್ಲೋ, ಪ್ಲಾಂಟೇಷನ್‌ಗಳಲ್ಲೋ ಕೂಲಿಗಾರರಾಗಿದ್ದಾರೆ. ಆದರೆ ಸಾಂಪ್ರದಾಯಿಕವಾಗಿ ಅವರು ಗೆಡ್ಡೆ ಗೆಣಸು, ಜೇನುತುಪ್ಪ, ಚಿಕ್ಕ ಪುಟ್ಟ ಬೇಟೆ ಮುಂತಾಗಿ ಅರಣ್ಯ ಕೊಡುಗೆಗಳ ಮೇಲೆ ಜೀವಿಸುವ ಆಹಾರ ಸಂಚಯನ ಪ್ರವೃತ್ತಿಯವರು. ಕೇರಳದ ಕಾಡುಗಳಲ್ಲಿ ಬಹಳ ಕೆಟ್ಟರೂಪದ ಮಲೇರಿಯ ಸ್ಥಳೀಯ ವ್ಯಾಧಿಯಾಗಿ ಒಂದೇ ಸಮನೆ ಕಂಡುಬರುತ್ತಿತ್ತು. ಕಾಡರರು ಹೇಗೆ ಬದುಕಿ ಉಳಿದರೊ ಅದೇ ಒಂದು ಅಚ್ಚರಿ. ಕಬ್ಬಿಣದ ಮೊನೆಯುಳ್ಳ ಅಗೆಯುವ ಕೋಲು, ಕಬ್ಬಿಣದ ಕುಡುಗೋಲುಗಳು, ಬೆಣಚು ಮತ್ತು ಉಕ್ಕಿನ ಬೆಂಕಿ ಹೊತ್ತಿಸುವ ಸಾಧನಗಳು, ಕವಣೆ ಬಿಲ್ಲುಗಳು, ಬುಟ್ಟಿಗಳು, ಬೋನುಗಳು–ಇವು ಅವರ ವ್ಯವಹಾರ ಸಾಧನಗಳು. ಈಗ ಅವರಲ್ಲನೇಕರು ಕೇರಳ ಖಾತೆಯ ಕೆಲಸಗಾರರಾಗಿ ಆಧುನಿಕ ಆರ್ಥಿಕ ಪರಿಸ್ಥಿತಿಗೆ ಹೊಂದಿಕೊಂಡಿದ್ದಾರೆ. ಅವರ ಸಾಮಾಜಿಕ ವ್ಯವಸ್ಥೆ ಸರಳವಾದ ಕೌಟುಂಬಿಕ ಗುಂಪುಗಳಿಗಿಂತ ಮುಂದಕ್ಕೆ ವಿಕಾಸಗೊಂಡಿರುವಂತೆ ಕಾಣುವುದಿಲ್ಲ. ಮತೀಯ ವ್ಯವಸ್ಥೆ, ವಂಶಪರಂಪರೆಯ ನಿಯಮಗಳು, ಮುಖಂಡರ ಮೂಲಕ ಸಾಮಾಜಿಕ ನಿಯಂತ್ರಣ–ಇವೆಲ್ಲ ಅವರಿಗೆ ತಿಳಿದಿಲ್ಲ. ಅವರ ದೇವಪಂಕ್ತಿಯಲ್ಲಿ ಬಹು ಕಡಿಮೆ ಸಂಖ್ಯೆಯ ದೇವದೇವಿಯರಿದ್ದು ಅವರಲ್ಲಿ ಪ್ರಮುಖರಾದವರೆಂದರೆ ಮೂಲವಯ್ ಮತ್ತು ಮಲಕುರತ್ತಿ. ಕೆಲವು ಸರಳವಾದ ಅನುಕರಣಾತ್ಮಕ ನೃತ್ಯಗಳು ಮಾತ್ರವೇ ಅವರಿಗೆ ತಿಳಿದಿದ್ದ ಕಲಾತ್ಮಕ ಚಟುವಟಿಕೆಗಳು.

**ಕೊಂಡ ದೋರ:** ಆಂಧ್ರದ ಶ್ರೀಕಾಕುಳಂ ಮತ್ತು ವಿಶಾಖಪಟ್ಟಣಂ ಜಿಲ್ಲೆಗಳಲ್ಲಿ ಮತ್ತು ಒರಿಸ್ಸದ ಕೋರಾಪುಟ್ ಜಿಲ್ಲೆಯಲ್ಲಿ ಹೆಚ್ಚಾಗಿ ಕಾಣುವ ಕುಯಿ ಮಾತಾಡುವ ಆದಿವಾಸಿಗಳು. ಈ ಮಾತಿಗೆ ಪರ್ವತಪ್ರಭುಗಳು ಎಂದು ಅರ್ಥ. ಜನಸಂಖ್ಯೆ ಸು. 87,000. ಅತಿ ಹೆಚ್ಚಾಗಿ ಕೇಂದ್ರೀಕರಿಸಿರುವುದು ವಿಶಾಖಪಟ್ಟಣದ ಏಜೆನ್ಸಿ ಪ್ರದೇಶಗಳಲ್ಲಿ. ತಮ್ಮ ಪುರಾಣಗಳಲ್ಲಿ ಅವರು ತಮ್ಮನ್ನು ಕುಬಿಗಳೆಂದು ಕರೆದುಕೊಂಡಿದ್ದರೂ ಜನಗಣತಿಯ ಸಂದರ್ಭಗಳಲ್ಲಿ ಅನೇಕರು ತಮ್ಮನ್ನು ಕೊಂಡಕಾಪುಗಳೆಂದು ಹೇಳಿಕೊಂಡರು. ಅವರಲ್ಲಿ ಹೆಚ್ಚು ಕೂಟವಾಸಿಗಳಾದವರು ತಮ್ಮನ್ನು ಪಾಂಡವರಾಜರೆಂದು ಆಗಾಗ ಹೇಳಿಕೊಳ್ಳುವುದುಂಟು. ಏಕೆಂದರೆ ತಾವು ಭೀಮನಿಂದ ಬಂದವರೆಂದು ಅವರು ನಂಬುತ್ತಾರೆ. ಅವರ ಬುಡಕಟ್ಟಿನವರೇ ಆದರೂ ಸಾಮಾಜಿಕವಾಗಿ ತಾವು ಮೇಲೆಂದು ಭಾವಿಸುವ ಭಗತರೇ ಮುಂತಾದ ಬೆಟ್ಟಗಳಲ್ಲಿ ವಾಸಿಸುವ ಜನ ಕೊಂಡದೋರ ಎಂಬ ಹೆಸರನ್ನು ಇಷ್ಟಪಡುವುದಿಲ್ಲ. ತಮ್ಮನ್ನು ಕೊಂಡಕಾಪುಗಳೆಂದು ಕರೆದುಕೊಳ್ಳುತ್ತಾರೆ. ಕೊಂಡದೋರರು ಅವರ ಈಗಿನ ಸಂತತಿಗೆ ಮೂಲಪುರುಷರೆಂದು ಕಾಣುತ್ತದೆ. ಅವರ ಯಾವುದೇ ಪುರಾಣಗಳಲ್ಲಿ ಅವರು ಬೇರೆಲ್ಲಿಂದಲೋ ಬಂದು ನೆಲೆಸಿದ ಸೂಚನೆಯಿಲ್ಲ.

ಅವರವೆಂದು ಕಂಡುಬರುವ 450 ಹಳ್ಳಿಗಳಲ್ಲಿ ಕೇವಲ ನೂರಕ್ಕೆ ಹತ್ತು ಭಾಗದಲ್ಲಿ ಮಾತ್ರವೇ ಅವರು ಪ್ರತ್ಯೇಕವಾಗಿ ವಾಸ ಮಾಡುತ್ತಾರೆ. ಉಳಿದ ಎಲ್ಲ ಹಳ್ಳಿಗಳಲ್ಲೂ ಭಗತ, ಜಟಪು ಮತ್ತು ಡೋರಿ ಮುಂತಾದ ಆದಿವಾಸಿಗಳೊಂದಿಗೆ ವಾಸ ಮಾಡುತ್ತಾರೆ. ಪ್ರತಿಯೊಂದು ಬುಡಕಟ್ಟೂ ತನ್ನದೇ ಆದ ಕೇರಿಯನ್ನು ಹೊಂದಿರುತ್ತದೆ. ಈ ರೀತಿ ಹಲವು ಬುಡಕಟ್ಟುಗಳಿರುವ ಹಳ್ಳಿಗಳಲ್ಲಿ ಅವರ ಸಾಮಾಜಿಕ ಮಟ್ಟ ಭಗತರು ಮತ್ತು ಜಟಪುಗಳದಕ್ಕಿಂತ ಕೆಳಗೂ ಆದರೆ ದೋಂಗಗಳಿಗೆ ಮೇಲೂ ಆಗಿ ಇರುತ್ತದೆ. ಅವರ ಕುಯಿ ಭಾಷೆ ಅವರನ್ನು ತೆಲುಗು ಮಾತಾಡುವ ಭಗತರಿಂದಲೂ, ಕುವಿ ಮಾತನಾಡುವ ಜಟಪುಗಳಿಂದಲೂ ಬೇರ್ಪಡಿಸುತ್ತದೆ. ಕುಯಿ ಮತ್ತು ಕುವಿ ಭಾಷೆಗಳು ಒಂದೇ ಕೊಂಡ್ (ದ್ರಾವಿಡ) ಭಾಷೆಯ ಉಪಭಾಷೆಗಳಾದರೂ ಈ ಎರಡು ನುಡಿಗಳೂ ಅವರಿಗೆ ಪರಸ್ಪರ ತಿಳಿಯುವುದಿಲ್ಲ. ಉಡುಪಿನಲ್ಲಿ ಅವರು ಭಗತರನ್ನು ಹೋಲುತ್ತಾರೆ. ಆದರೆ ಜಟಪುಗಳಿಂದ ಬೇರೆಯಾಗಿದ್ದಾರೆ. ಏಕೆಂದರೆ ಜಟಪುಗಳಲ್ಲಿ ಹೆಂಗಸರು ಕೆಂಪು ಅಂಚಿನ, ಕಿರಿದಾದ, ಮಂಡಿಯ ಮೇಲೆ ನಿಲ್ಲುವ ಒಂದು ನಡುಬಟ್ಟೆಯನ್ನು ಮಾತ್ರ ಧರಿಸುತ್ತಾರೆ. ಭಗತರು ಮತ್ತು ಕೊಂಡದೋರರು ತಮ್ಮದೇ ಸ್ವಂತ ನಿವೇಶನಗಳಲ್ಲಿ ಬೇರೆ ಬೇರೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಜಟಪುಗಳಾದರೋ ಮುಂದೆ ಮತ್ತು ಹಿಂದೆ ಎರಡು ಉದ್ದಗೋಡೆಗಳನ್ನು ಹಾಕಿ ನಡುನಡುವೆ ಅಡ್ಡ ಗೋಡೆಗಳನ್ನೆಬ್ಬಿಸಿ ಎಡೆಬಿಡದೆ ಸಾಲುಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಕೊಂಡದೋರರು ಭಗತರ ಕೈಯಲ್ಲಿ ಊಟ ಮಾಡುತ್ತಾರೆ. ಭಗತರು ಹಾಗೆ ಮಾಡುವುದಿಲ್ಲ. ಜಟಪುಗಳು, ಕೊಂಡದೋರರಲ್ಲಿ ಸಹಪಂಕ್ತಿ ಭೋಜನ ಇಲ್ಲ. ಅತ್ಯಂತ ಕೆಳಮಟ್ಟದ ಗುಂಪುಗಳಾದ ಡೋಂ ಮತ್ತು ಕೊಂಡಗಳ ನಡುವೆ ಅಸ್ಪೃಶ್ಯತೆ ಎಂಬುದೇನೂ ಇಲ್ಲ.

ಹಿರಿಯ ಕೊಂಡ್ ಬುಡಕಟ್ಟಿನ ಉಳಿದ ಶಾಖೆಗಳಂತೆ ಕೊಂಡದೋರರು ಮೊದಲಿನಿಂದಲೂ ಗೋಮಾಂಸ ಭಕ್ಷಕರಾಗಿದ್ದರು. ಈಚೆಗೆ ಒರಿಯ ಗುರುಗಳ ಪ್ರಭಾವದಿಂದಾಗಿ ಅನೇಕರು ಗೋಮಾಂಸ ಭಕ್ಷಣೆಯನ್ನು ಬಿಟ್ಟುಬಿಟ್ಟಿದ್ದಾರೆ.

ಕೊಂಡದೋರರ ಆರ್ಥಿಕವ್ಯವಸ್ಥೆ ಸರದಿ ಬೇಸಾಯ (ಪೊಡು), ಕಾಯಂ ಬತ್ತ ಬಿತ್ತನೆಗಳನ್ನವಲಂಬಿಸಿದೆ. ಸರದಿ ಬೇಸಾಯ ಈಗ ತುಂಬ ಮಿತವಾಗಿದೆ. ಕಾರಣ ಸರ್ಕಾರದ ಕಡ್ಡಾಯ ಕಾನೂನುಗಳು. ಉದಾಹರಣೆಗೆ, ಅರಕು ಕಣಿವೆಯಲ್ಲಿದ್ದ ಸರದಿ ಬೇಸಾಯಗಾರ ಕುಟುಂಬಗಳಲ್ಲಿ ಸು. 30 ಜನ ಶ್ರೀಮಂತ ರೈತರ, ಕಂಟ್ರಾಕ್ಟರುಗಳ, ಅರಣ್ಯ ಇಲಾಖೆಯ

ಆಶ್ರಯದಲ್ಲಿ ಕೂಲಿಯ ಕೆಲಸಗಾರರಾಗಿ ಈ ಜನ ಮಾರ್ಪಟ್ಟಿದ್ದಾರೆ. ರೈಲ್ವೆಯ ಕಂಟ್ರಾಕ್ಟರುಗಳು ಬಹುಸಂಖ್ಯೆಯ ಆದಿವಾಸಿಗಳಿಗೆ ಕೆಲಸ ಒದಗಿಸುತ್ತಾರೆ. ಅನೇಕ ಆದಿವಾಸಿ ಕುಟುಂಬಗಳು ತಮಗೆ ಒದಗುವ ಆಹಾರದ ಜೊತೆಗೆ ಕಾಡಿನ ಗೆಡ್ಡೆಗೆಣಸುಗಳನ್ನು ಸಂಗ್ರಹಿಸಿ ಸಾಲದುದನ್ನು ಬೇಟೆ ಮತ್ತು ಮೀನುಗಾರಿಕೆಗಳಿಂದ ತುಂಬಿಕೊಳ್ಳುತ್ತಾರೆ.

ಕೊಂಡದೋರರ ಸಮಾಜ ವ್ಯವಸ್ಥೆ ಬಹಳ ಸರಳ. ಅದು ಇನ್ನೂ ಉಳಿದು ಬಂದಿದೆ. ಅವರಲ್ಲಿ ಎರಡು ಉಪ ಭಾಗಗಳಿವೆ: ಪೆದ್ದಕೊಂಡದೋರ ಮತ್ತು ಚಿನ್ನಕೊಂಡದೋರ. ಮೊದಲನೆಯವರು ಬಯಲು ಪ್ರದೇಶದ ತೆಲುಗು ಜನರೊಂದಿಗೆ ನಿಕಟ ಸಂಪರ್ಕಗಳನ್ನಿಟ್ಟು ಕೊಂಡು ಗೋಮಾಂಸ ತಿನ್ನುವುದನ್ನು ಬಿಟ್ಟಿದ್ದಾರೆ. ಕೊನೆಯವರಾದರೊ, ಹೋಲಿಸಿ ನೋಡಿದರೆ, ಬೇರೆಯಾಗಿಯೇ ಉಳಿದು ಈಗಲೂ ಗೋಮಾಂಸ ತಿನ್ನುತ್ತಾರೆ. ಬುಡಕಟ್ಟಿನ ಸು. ಶೇ. 10 ಜನ ಪೆದ್ದಕೊಂಡ ದೋರ ವಿಭಾಗಕ್ಕೆ ಸೇರಿದವರು. ಪ್ರತಿಯೊಂದು ಉಪವಿಭಾಗದಲ್ಲೂ ಮತ್ತೆ ಹಲವು ಪಂಗಡಗಳಿವೆ. ಪ್ರತಿಯೊಂದು ಹಳ್ಳಿಯಲ್ಲೂ ಹಲವು ಪಂಗಡಗಳು ಕಾಣುತ್ತವೆ. ಒಂದೇ ಒಂದು ಪಂಗಡವಿರುವ ಹಳ್ಳಿ ಇರುವುದಿಲ್ಲ. ಪ್ರತಿಯೊಂದು ಪಂಗಡಕ್ಕೂ ಒಂದು ಹೆಸರಿದ್ದು ಭಿನ್ನಗೋತ್ರ ವಿವಾಹ ಪದ್ಧತಿ, ಪಿತೃಪ್ರಧಾನ ವಂಶ ಪರಂಪರೆ ರೂಢಿಯಲ್ಲಿದೆ. ಪಂಗಡಗಳಿಗೆ ಸ್ಥಳಗಳ ಹೆಸರುಗಳಿಲ್ಲ. ಪ್ರಾಕೃತಿಕವಾದ ಸೂರ್ಯ ಮತ್ತು ನೀರು ಎಂಬ ಹೆಸರಿಟ್ಟುಕೊಂಡಿರುವ ಎರಡು ಗುಂಪುಗಳ ವಿನಾ ಉಳಿದುವಕ್ಕೆ ನಾಗರಹಾವು, ಹುಲಿ, ಟಗರು, ಮೀನು, ಮುಂತಾದ ಪ್ರಾಣಿಗಳ ಹೆಸರಿರುತ್ತವೆ. ಪಂಗಡದ ಹೆಸರಿನ ಪ್ರಾಣಿಯನ್ನು ಕೊಲ್ಲಬಾರದೆಂದಾಗಲಿ, ತಿನ್ನಬಾರದೆಂದಾಗಲಿ ನಂಬಿಕೆಯೇನೂ ಇಲ್ಲ. ಹಿಂದೆ ಪಂಗಡದ ಹೆಸರುಗಳನ್ನು ವ್ಯಕ್ತಿನಾಮದ ಭಾಗಗಳನ್ನಾಗಿ ಉಪಯೋಗಿಸಿರುತ್ತಿರಲಿಲ್ಲ. ಈಚಿನ ದಿನಗಳಲ್ಲಿ, ತೆಲುಗು ಪ್ರಭಾವದಿಂದಾಗಿ ವ್ಯಕ್ತಿಗಳು ಪಂಗಡದ ಹೆಸರುಗಳನ್ನು ಇಂಟಿಪೇರು (ಮನೆಯ ಹೆಸರುಗಳು)ಗಳನ್ನಾಗಿ ತಮ್ಮ ಸ್ವಂತ ಹೆಸರಿನ ಹಿಂದಕ್ಕೆ ಸೇರಿಸುತ್ತಾರೆ. ಕೆಲವು ಆದಿವಾಸಿ ಜನ ತಮ್ಮ ತವರುಹಳ್ಳಿಗಳಿಂದ ಬಂದವರು, ಆ ಹಳ್ಳಿಗಳ ಹೆಸರುಗಳನ್ನೇ ಇಂಟಿಪೇರುಗಳಾಗಿ ಬಳಸುತ್ತಾರೆ. ಭಿನ್ನಗೋತ್ರ ವಿವಾಹ ಕಡ್ಡಾಯ. ಉತ್ತರ ಒರಿಸ್ಸದ ಜುವಾಂಗ್ ಮತ್ತು ಇತರ ಬುಡಕಟ್ಟುಗಳಲ್ಲಿ ಮಾಡುವಂತೆ ಸೋದರ ಪಂಗಡಗಳಾಗಿ ಮತ್ತು ಬಂಧು ಪಂಗಡಗಳಾಗಿ ಒಟ್ಟುಗೂಡಿಸುವ ಪದ್ಧತಿ ಇವರಲ್ಲಿ ಇಲ್ಲ.

ಇಡೀ ಬುಡಕಟ್ಟಿಗೆ ಒಬ್ಬ ಧಾರ್ಮಿಕ ನಾಯಕ–ಕೊಯಕೊಂಡ–ಇರುತ್ತಾನೆ. ಈತ ಪೌರೋಹಿತ್ಯ, ನ್ಯಾಯಾಂಗ ಕರ್ತವ್ಯಗಳನ್ನು ನಿರ್ವಹಿಸುತ್ತಾನೆ. ಕುಲಂನಾಯಿಡು ಎಂಬ ಹೆಸರಿನ ತನ್ನ ಕೈಕೆಳಗಿನ ಕಾರ್ಯಕರ್ತರನ್ನು ಈತ ನೇಮಿಸುತ್ತಾನೆ. ಇವರು ಶುದ್ಧೀಕರಣ ಸಮಾರಂಭಗಳನ್ನು ನಡೆಸಿ, ಪಂಗಡದೊಳಗಿನ ಅಥವಾ ಅಂತರಬುಡಕಟ್ಟುಗಳ ಮದುವೆಗಳನ್ನು ಕ್ರಮಬದ್ಧಗೊಳಿಸುತ್ತಾರೆ. ಜಮೀನುದಾರಿಯ ರದ್ದತಿಗಿಂತ ಮುಂಚೆ ಮುತ್ತಾದಾರರು ಆದಿವಾಸಿ ಹಳ್ಳಿಗಳನ್ನು ಆಳಲು ತಮ್ಮ ಪ್ರತಿನಿಧಿಗಳನ್ನು ನೇಮಿಸುತ್ತಿದ್ದರು.

ಮದುವೆಗಳು ಬಹುಮಟ್ಟಿಗೆ ಅಪಹಾರ ಪದ್ಧತಿಯವು. ಏರ್ಪಡಿಸಿದ ಮದುವೆಗಿಂತ ಇದರಲ್ಲಿ ಖರ್ಚು ಕಡಿಮೆ. ತರುಣ ತರುಣಿಯರು ಪರಸ್ಪರ ಸಂಧಿಸಲು ಸಂತೆಗಳಲ್ಲಿ, ಜಾತ್ರೆಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ ಹಲವಾರು ಅವಕಾಶಗಳು ಒದಗುತ್ತವೆ. ಆಗ ಅವರು ತಮ್ಮ ಪಲಾಯನಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿಕೊಳ್ಳುತ್ತಾರೆ. ಮುಂದೆ ಮದುವೆಯ ನಂಟು ಬೆಳೆಯುತ್ತದೆ. ಒಂದೇ ಹಳ್ಳಿಯ ಗಂಡು ಹೆಣ್ಣುಗಳಿಗೆ ಮದುವೆಗೆ ಅವಕಾಶವುಂಟು. ಅಂದರೆ, ಉತ್ತರ ಭಾರತದಲ್ಲಿನಂತೆ ಗ್ರಾಮ ಭಿನ್ನಗೋತ್ರ ವಿವಾಹ ನಿಯಮ ಇಲ್ಲ. ವಿವಾಹ ವಿಚ್ಛೇದನಗಳು ವಿಶೇಷವಾಗಿ ಸಂಪರ್ಕ ಪ್ರದೇಶಗಳಲ್ಲಿ ಬಹಳ ಸಾಮಾನ್ಯ. ಹೆಚ್ಚಿನ ಆದಿವಾಸಿ ಹಳ್ಳಿಗಳಲ್ಲಿ ವೈದ್ಯಕೀಯ ನೆರವು ಇಲ್ಲವಾದುದರಿಂದ ಶಿಶುಮರಣ ಬಹಳ ಹೆಚ್ಚು.

ಏರ್ಪಡಿಸಿದ ಮದುವೆಗಳಲ್ಲಿ ಆಚರಿಸುವ ಸಮಾರಂಭಗಳು ಇವು : ಹುಡುಗನ ತಂದೆತಾಯಿಗಳು ಮೊದಮೊದಲಿನ ಭೇಟಿಗಳನ್ನು ನಡೆಸಿ ಹುಡುಗಿಯ ತಂದೆತಾಯಿಗಳಿಗೆ ಅಕ್ಕಿ, ಹೆಂಡದ ಸೀಸೆಗಳನ್ನು ಉಡುಗೊರೆ ಕೊಡುತ್ತಾರೆ. ಮೂರನೆಯ ಬಾರಿ ಹೆಂಡದ ಉಡುಗೊರೆ ಸ್ವೀಕೃತವಾಯಿತೆಂದರೆ ಮದುವೆಗೆ ಒಪ್ಪಿಗೆ ದೊರೆಯಿತೆಂದು ಅರ್ಥ. ಆಮೇಲೆ ಒಂದು ಒಳ್ಳೆಯ ದಿನ ಹೆಣ್ಣಿನ ಕಡೆಯವರು ಗಂಡಿನ ಮನೆಗೆ ಅವಳನ್ನು ಕರೆದುಕೊಂಡು ಹೋಗುತ್ತಾರೆ. ವಧೂವರರು ಎಲೆಗಳಿಂದ ಮಾಡಿದ ಒಂದು ಚಪ್ಪರದಲ್ಲಿ ಕುಳಿತುಕೊಳ್ಳುತ್ತಾರೆ. ಒಬ್ಬ ಮುದುಕ, ಪುರೋಹಿತನ ಪರವಾಗಿ ಅರಿಶಿನದ ನೀರನ್ನು ಅವರ ತಲೆಯ ಮೇಲೆ ಸುರಿಯುತ್ತಾನೆ. ಇದು ಉತ್ಸವದ ಮುಕ್ತಾಯ. ನಿಷೇಕ ಸಾಮಾನ್ಯವಾಗಿ ಅದೇ ರಾತ್ರಿ ನಡೆಯುತ್ತದೆ. ವರ ತೆರವನ್ನು (ವಳಿ) ಕೊಡಬೇಕು. ಇದು ಈಗ 50 ರೂಪಾಯಿಗಳವರೆಗೂ ಇರುತ್ತದೆ. ಪಲಾಯನದ ಮೂಲಕ ನಡೆವ ಮದುವೆಗಳಲ್ಲಾದರೆ ಈ ತೆರವನ್ನು ಆಮೇಲೆ ಹಲವು ಕಂತುಗಳಲ್ಲಿ ಕೂಡ ಕೊಡಬಹುದು. ವಿಧವಾವಿವಾಹಕ್ಕೆ ಅವಕಾಶವುಂಟು.

ಕೊಂಡದೋರ ದೇವಪಂಕ್ತಿಯಲ್ಲಿರುವ ದೇವತೆಗಳು: ಪೆದ್ದ ದೇವುಡು, ಗಂಗಾದೇವತ, ನಿಶಾನಿ ದೇವತ, ಅಮ್ಮತಲ್ಲಿ ಮತ್ತು ನಂದಿ ದೇವತ. ಪ್ರತಿಯೊಂದು ದೇವತೆಯನ್ನೂ ಒಂದು ಮರದ ಕೆಳಗೆ ಬಣ್ಣ ಬಳಿದು ಒಂದು ಮಡಕೆಯನ್ನಿಟ್ಟು ಪ್ರತಿನಿಧಿಸಲಾಗುತ್ತದೆ. ಈ ಕುಂಭ ದೇವಾಲಯಗಳಲ್ಲಿ ಕೋಳಿಮರಿಗಳನ್ನು, ಟಗರು ಮತ್ತು ಗೂಳಿಗಳನ್ನು ಬಲಿ ಕೊಡುತ್ತಾರೆ. ಹಿಂದುತ್ವ ಅಂಗೀಕರಿಸಿದ ಕೆಲವು ಕೊಂಡದೋರ ಮನೆಗಳಲ್ಲಿ ಶಿವ ಮತ್ತು ವೆಂಕಟೇಶ್ವರರ ಚಿತ್ರಗಳಿರುತ್ತವೆ. ಕೆಲವು ಆದಿವಾಸಿಗಳು ಸಿಂಹಾಚಲಕ್ಕೆ ಯಾತ್ರೆ ಹೋಗುತ್ತಾರೆ. ತಮ್ಮ ಗುರು ಕೊಂಡ ಕೋಯನಿಗೆ ಎಲ್ಲ ಕೊಂಡದೋರ ಕುಟುಂಬಗಳೂ ವರ್ಷಕ್ಕೊಮ್ಮೆ ರಾಗಿ ಕಾಣಿಕೆ ಕೊಡುತ್ತವೆ.

ಪಂಗಡಕ್ಕೆ ಸೇರದ ಹೊರಗಿನವರನ್ನು ಗುರುಮುಖೇನ ಅಗತ್ಯವಾದ ಪ್ರಾಯಶ್ಚಿತ್ತಾನಂತರ ಬುಡಕಟ್ಟಿನ ಸದಸ್ಯರನ್ನಾಗಿ ಮಾಡಿಕೊಳ್ಳಲು ಸಾಧ್ಯವಿದೆ.

ಏಜೆನ್ಸಿ ಪ್ರದೇಶಗಳ ಆದಿವಾಸಿ ಗ್ರಾಮಗಳಲ್ಲಿ ಹಲವು ಮಿಷನರಿ ತಂಡಗಳು ಕೆಲಸ ಮಾಡುತ್ತಿವೆ. ಅವುಗಳ ಪ್ರಭಾವದಿಂದ ಕೆಲವು ಕೊಂಡದೋರರು ಕ್ರೈಸ್ತರಾಗಿದ್ದಾರೆ.

**ಕೊತರು :** ನೀಲಗಿರಿ ಪ್ರಸ್ಥಭೂಮಿ ಪ್ರದೇಶವೊಂದರಲ್ಲಿ ಏಳು ಗ್ರಾಮಗಳಲ್ಲಿ ವಾಸಿಸುತ್ತಾರೆ. ಭಾಷೆ ತೋಡರ ಭಾಷೆಯಂತೆಯೇ. ಸಮರ್ಥ, ಕೃಷಿಗಾರರೆನ್ನಿಸಿಕೊಂಡಿದ್ದಾರೆ. ಒಳ್ಳೆಯ ಕೈಕೆಲಸಗಾರರೆಂದೂ ಹೆಸರು ಪಡೆದಿದ್ದಾರೆ. ಗಂಡಸರು ಮರಗೆಲಸ, ಕುಲುಮೆ ಕೆಲಸ, ಅಕ್ಕಸಾಲಿ ವೃತ್ತಿ, ಚರ್ಮ ಹದಮಾಡುವುದು ಮುಂತಾದ ಕೆಲಸಗಳಲ್ಲಿ ನಿಪುಣರು. ಹೆಂಗಸರು ಬುಟ್ಟಿ ಹೆಣೆಯುತ್ತಾರೆ. ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಾರೆ. ಎಮ್ಮೆ ಹಸುಗಳನ್ನು ಸಾಕುತ್ತಾರೆ. ಹಸುವಿನ ಹಾಲನ್ನು ಕುಡಿಯುವರು. ಹಾಲು ಕರೆಯುವವರು ಪುರೋಹಿತ ವರ್ಗದವರು ಮಾತ್ರ.

**ಖೋಡರು :** ಬಿಹಾರ್, ಒರಿಸ್ಸ, ಮದರಾಸು ಪ್ರಾಂತ್ಯದ ಉತ್ತರಭಾಗ ಮುಂತಾದ ಕಡೆಗಳ ಪರ್ವತ ಪ್ರಾಂತ್ಯಗಳಲ್ಲಿದ್ದಾರೆ. ಭಾಷೆ ದ್ರಾವಿಡ. ಬಯಲುಸೀಮೆ ಹತ್ತಿರ ಇರುವವರು ಹಿಂದೂ ಧರ್ಮವನ್ನವಲಂಬಿಸಿದ್ದರೂ ಬೆಟ್ಟಸೀಮೆಯವರು ಪ್ರತ್ಯೇಕವಾಗಿಯೇ ಉಳಿದಿದ್ದಾರೆ. ಇವರಲ್ಲಿ ನರಬಲಿ ಪದ್ಧತಿ ಬಹಳ ವ್ಯಾಪಕವಾಗಿತ್ತು, 19ನೆಯ ಶತಮಾನದಲ್ಲಿ ಅದನ್ನು ನಿಷೇಧಿಸಲಾಯಿತು. ಅದಕ್ಕಾಗಿ ಮಕ್ಕಳನ್ನು ಕೊಂಡು ತರುತ್ತಿದ್ದರು. ತಂದೆತಾಯಿಗಳು ತಮ್ಮ ಯಾವುದಾದರೊಂದು ಮಗುವನ್ನು ಬಲಿಗೆಂದು ಮೀಸಲಾಗಿಡುತ್ತಿದ್ದರು. ಕೈಸೆರೆ ಸಿಕ್ಕಿದವರನ್ನು ಬಲಿ ಕೊಡುವುದಂತೂ ಸಾಮಾನ್ಯವಾಗಿತ್ತು. ತರುಣರನ್ನೇ ಹೆಚ್ಚಾಗಿ ಬಲಿ ಕೊಡುತ್ತಿದ್ದರು. ಬಲಿಯಾದವನನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಎಲ್ಲರಿಗೂ ಹಂಚುತ್ತಿದ್ದರು. ಪಾಲಿಗೆ ಬಂದ ತುಂಡನ್ನು ಪ್ರತಿಯೊಬ್ಬನೂ ತನ್ನ ಜಮೀನಿನಲ್ಲಿ ಹೂಳುತ್ತಿದ್ದ. ಇದರಿಂದ ಹಸನಾದ ಪೈರು ದೊರಕುವುದೆಂದು ನಂಬಿದ್ದರು. ಈಗ ಎಮ್ಮೆ ಅಥವಾ ಕುರಿಯನ್ನು ಬಲಿ ಕೊಡುತ್ತಾರೆ.

**ಗೊಂಡರು :** ಭಾರತದಲ್ಲಿ ಇವರು ಸುಮಾರು ಮೂವತ್ತು ಲಕ್ಷದಷ್ಟಿದ್ದಾರೆ. ಹೆಚ್ಚಾಗಿ ಮಧ್ಯಪ್ರದೇಶದಲ್ಲಿ. ದ್ರಾವಿಡ ಭಾಷೆಯನ್ನಾಡುವ ಪಂಗಡಗಳಲ್ಲಿ ಇವರದೇ ಬಹು ದೊಡ್ಡದು. 14 ಮತ್ತು 15ನೆಯ ಶತಮಾನದಲ್ಲಿ ಮಧ್ಯಪ್ರದೇಶವನ್ನು ಗೊಂಡ್ ರಾಜವಂಶೀಯರೇ ಆಳುತ್ತಿದ್ದರು. ಹಿಂದೂ ರೈತರು 16ನೆಯ ಶತಮಾನದಲ್ಲೇ ಅಲ್ಲಿಗೆ ಬಂದು ನೆಲೆಸತೊಡಗಿದರು. ಗೊಂಡರು ಗುಡ್ಡಗಾಡು ಪ್ರದೇಶಗಳಿಗೆ ಹೋಗಿ ನಿಲ್ಲಬೇಕಾಯಿತು. ಪ್ರಧಾನ ಕಸುಬು ಕೃಷಿ. ಕೆಲವರು ಮರಗೆಲಸ, ಕುಲುಮೆ ಕೆಲಸ ಮುಂತಾದ ಉದ್ಯೋಗಗಳನ್ನು ಕಲಿತಿದ್ದಾರೆ. ನಾಗಪೂಜೆ, ಸೂರ್ಯಪೂಜೆ, ಪಿತೃಪೂಜೆಗಳು ರೂಢಿಯಲ್ಲಿವೆ. 19ನೆಯ ಶತಮಾನದ ಮಧ್ಯಕಾಲದವರೆಗೂ ನರಬಲಿ ಅವರಲ್ಲಿ ರೂಢಿಯಲ್ಲಿತ್ತು. ನಾನಾ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಹಾವುಗಳು ಇರುವೆಗಳನ್ನೂ ಬಿಡರು. ಅತಿಯಾಗಿ ಮದ್ಯ ಸೇವಿಸುತ್ತಾರೆ. (ಆದರೂ ಅವರು ಭಂಗಿಗಳ ಕೆಲಸವನ್ನು ಮಾತ್ರ ಮಾಡುವುದಿಲ್ಲ).

**ಚೆಂಚುಗಳು :** ಭಾರತದ ಅತಿಪ್ರಾಚೀನ ಜನಾಂಗಗಳಲ್ಲೊಬ್ಬರಾದ ಇವರು ಆಂಧ್ರಪ್ರದೇಶದ ಪೂರ್ವಘಟ್ಟಗಳ ಪ್ರಾಂತ್ಯದಲ್ಲಿದ್ದಾರೆ. ಅಂಗರಚನೆ ಮುಂತಾದವಲ್ಲಿ ಅವರೊಂದು ಸಂಕೀರ್ಣ ಜನಾಂಗ. ಭಾಷೆ ತೆಲುಗು. ಕೆಲವರು ಪ್ರಾಚೀನ ಕೃಷಿ ಮತ್ತು ಪಶುಪಾಲನಾಕ್ರಮಗಳನ್ನವಲಂಬಿಸಿದ್ದರೂ ಅನೇಕರು ಇನ್ನೂ ಬೇಟೆಯಾಡುವ, ಕಾಡಿನ ಕಂದಮೂಲಗಳು ಸೊಪ್ಪುಗಳನ್ನು ಶೇಖರಿಸುವ ವೃತ್ತಿಯನ್ನೇ ಅವಲಂಬಿಸಿದ್ದಾರೆ. ಅವರ ತೊಡುಗೆ ಒಂದು ತುಂಡು ಬಟ್ಟೆ ಮಾತ್ರ. ಬಿಲ್ಲು, ಬಾಣ, ಮಚ್ಚುಗತ್ತಿ–ಇವು ಆಯುಧಗಳು. ತಾವೇ ತಯಾರಿಸಿದ ಮಾದಕ ಪಾನೀಯವೊಂದನ್ನು ಹೆಚ್ಚಾಗಿ ಸೇವಿಸುತ್ತಾರೆ.

**ತೋಡರು :** ವಾಸಸ್ಥಳ ನೀಲಗಿರಿ ಪರ್ವತಪ್ರದೇಶ. ಚಹರೆಯಲ್ಲಿ ಇವರು ಇತರ ಆದಿವಾಸಿಗಳಿಗಿಂತ ಕೊಂಚ ಭಿನ್ನವಾಗಿದ್ದಾರೆ. ದೃಢಕಾಯರು, ಎತ್ತರವಾದ ಆಳುಗಳು, ನೇರವಾದ ಮೂಗು, ವಿಪುಲವಾದ ಕೂದಲು. ಭೂವ್ಯವಸಾಯ ಬೇಕಿಲ್ಲ; ಅವರ ಆರ್ಥಿಕ ಜೀವನ, ಮತಸಂಪ್ರದಾಯಗಳು ಎಮ್ಮೆಯ ಸುತ್ತ ಬೆಳೆದಿವೆ. ತೋಡ ಗ್ರಾಮದಲ್ಲಿ ಮೂರು ವಿಭಾಗಗಳನ್ನು ಕಾಣಬಹುದು : 1. ಎಮ್ಮೆಗಳ ದೊಡ್ಡಿ, ಅದು ದೇವಾಲಯ ಕೂಡ, 2. ಎಮ್ಮೆ ಕರುಗಳನ್ನು ಕೂಡುವ ದೊಡ್ಡಿ, 3. ವಾಸದ ಮನೆಗಳು. ಈ ಮನೆಗಳು ಅರ್ಧ ವರ್ತುಲಾಕೃತಿಯ ಗುಡಿಸಲುಗಳು. ಹಾಲು ಕರೆಯುವ ಕೆಲಸ ಗಂಡಸರಿಂದಲೇ ಆಗಬೇಕು. ಕೊಟ್ಟಿಗೆಯೊಳಗೆ ಹೆಂಗಸರು ಬರಲೇಕೂಡದು. ಹಾಲು ಕರೆಯುವ ಸಾಧಾರಣ ಎಮ್ಮೆಗಳಲ್ಲದೆ ಪೂಜೆಗೆ ಸಂಬಂಧಿಸಿದ ಎಮ್ಮೆಗಳು ಕೊಟ್ಟಿಗೆಯಲ್ಲಿ ಇರುತ್ತವೆ. ಆಗಾಗ್ಗೆ ಈ ಎಮ್ಮೆಗಳನ್ನು

ಪವಿತ್ರಕ್ಷೇತ್ರಗಳಿಗೆ ಅಟ್ಟಿಕೊಂಡು ಹೋಗುತ್ತಾರೆ. ಆ ಸಂದರ್ಭಗಳಲ್ಲಿ ಗ್ರಾಮಸ್ಥರೆಲ್ಲ ಎಮ್ಮೆಗಳೊಂದಿಗೆ ಹೋಗಬಹುದು. ಎಮ್ಮೆಗಳು ತುಳಿದ ಈ ದಾರಿಯಲ್ಲಿ ಹೆಂಗಸರು ತಿರುಗಾಡಕೂಡದು. ತೋಡರು ಮಾಂಸವನ್ನು ತಿನ್ನುವುದಿಲ್ಲ. ಅವರು ತಿನ್ನುವ ಧಾನ್ಯ ಬಡಗರಿಂದ ಕಾಣಿಕೆ ರೂಪದಲ್ಲಿ ಬರುತ್ತದೆ. ಧಾನ್ಯದೊಂದಿಗೆ ತಿನ್ನಲು ಬೇಕಾದ ಕಾಯಿಪಲ್ಯಗಳನ್ನು ತೋಡರು ಅರಣ್ಯದಿಂದ ಒದಗಿಸಿಕೊಳ್ಳುತ್ತಾರೆ. ಅವರಲ್ಲಿ ಬಹುಪತಿ ಪದ್ಧತಿಯಿದೆ. ಕನ್ಯೆ ಒಬ್ಬನನ್ನು ಮದುವೆಯಾದ ಮೇಲೆ ಅವನ ಸಹೋದರರಿಗೂ ಪತ್ನಿಯಾಗುತ್ತಾಳೆ. ಅವರಲ್ಲಿ ರೂಢಿಯಲ್ಲಿದ್ದ ಶಿಶುಹತ್ಯಾ ಪದ್ಧತಿ ಕೊನೆಗೊಂಡ ಮೇಲೆ ಇತ್ತೀಚೆಗೆ ಸ್ತ್ರೀಯರ ಸಂಖ್ಯೆ ಹೆಚ್ಚಿ ಬಹುಪತಿ ಪದ್ಧತಿ ಸಡಿಲವಾಗುತ್ತಿದೆ. (ಎಚ್.ಆರ್.ವಿ.)

**ನಾಗಾ ಬುಡಕಟ್ಟುಗಳು :** ಪ್ರತ್ಯೇಕ ರಾಜ್ಯದ ಸ್ಥಾನಮಾನಗಳನ್ನು ಪಡೆದಿರುವ (1960) ನಾಗಾ ಪ್ರದೇಶದಲ್ಲಿ ಇರುವ ಜನರು. ಈ ದುರ್ಗಮ ಕೊಳ್ಳ ಅಸ್ಸಾಮಿನ ಗಹನ ಪರ್ವತಗಳ ನಡುವೆ ಇದೆ. 1944ರ ಮೊದಲು ಬ್ರಿಟಿಷ್ ಆಡಳಿತವಿದ್ದಾಗಲೂ ಈ ಭಾಗಕ್ಕೆ ಸಾಕಷ್ಟು ಸಂಪರ್ಕಗಳೇರ್ಪಟ್ಟಿರಲಿಲ್ಲ. ಬ್ರಿಟಿಷ್, ಭಾರತೀಯ ಹಾಗೂ ಜಪಾನಿ ಸೈನಿಕರೊಂದಿಗೆ ಬಹುಕಾಲದ ಸಂಪರ್ಕದಿಂದಾಗಿ ಬುಡಕಟ್ಟಿನ ಪ್ರಾಚೀನತೆ ಮಾಯವಾಗಿ ನಾಗಾಗಳ ಮನಸ್ಸಿನಲ್ಲಿ ಒಂದು ಕ್ರಾಂತಿಮನೋಭಾವ ಮೂಡಿತು. ಕ್ರೈಸ್ತಧರ್ಮಕ್ಕೆ ಸಾಮೂಹಿಕವಾಗಿ ಪರಿವರ್ತನೆ ನಡೆದದ್ದು ನಾಗಾಬುಡಕಟ್ಟುಗಳವೇಗವಾದ ಆಧುನೀಕರಣಕ್ಕೆ ಸಹಕಾರಿಯಾಯಿತು. ಹಿಂದೂ ಗ್ರಂಥಗಳಲ್ಲಿ ಅವರನ್ನು ಕಿರಾತರೆಂದು ಕರೆದಿರುವ ಉಲ್ಲೇಖಗಳಿವೆಯಾದರೂ ಹಿಂದೂ ಧರ್ಮ ಅನೇಕ ನಾಗಾ ಬುಡಕಟ್ಟುಗಳನ್ನು ಹೆಸರಿಸಿಯೇ ಇಲ್ಲ. ಇದಕ್ಕೆ ಒಂದೇ ಒಂದು ಅಪವಾದ ಹಿಂದೂಗಳೇ ಆಗಿಬಿಟ್ಟ ಮಣಿಪುರದ ಮೇಥಿಗಳು. ನಾಗಾಗಳು ಅವರ ವಾಸಸ್ಥಾನಕ್ಕೆ ಪೂರ್ವದಿಂದ ಬರ್ಮ ಮೂಲಕವಾಗಿ ಬಂದು ನೆಲೆಸಿದವರು ಎಂದು ನಂಬಲಾಗಿದೆ. ಆದರೆ 350,000 ಇರುವ ನಾಗಾಗಳನ್ನು ಹನ್ನೆರಡು ಬುಡಕಟ್ಟುಗಳಾಗಿ ವಿಭಾಗಿಸಲಾಗಿದೆ. ಪ್ರತಿಯೊಂದಕ್ಕೂ ತನ್ನದೇ ರಾಜ್ಯವಿದೆ. ಪಕ್ಕದಲ್ಲಿ ವಾಸಮಾಡುವ ಪಂಗಡಕ್ಕೇ ಅರ್ಥವಾಗದಂಥ ತನ್ನದೇ ಭಾಷೆಯಿದೆ. ಎತ್ತರದ ಬೆಟ್ಟದ ಇಳುಕಲ ಮೇಲೆ ಇದ್ದ ನಾಗಾ ಹಳ್ಳಿಗಳು ಭದ್ರವಾದ ಆಳ್ವೇರಿಗಳಿಂದ ಸುತ್ತುವರಿದು ಹೆಚ್ಚು ಕಡಿಮೆ ದುರ್ಗಗಳಂತೆಯೇ ಇದ್ದವು. ನಾಗಾಗಳು ಒಳ್ಳೆಯ ಬೇಸಾಯಗಾರರು. ಕೆಲವು ಪ್ರದೇಶಗಳಲ್ಲಂತೂ ಅವರ ಮಟ್ಟ ಗದ್ದೆಗಳು ಪ್ರಾಚೀನ ವ್ಯವಸಾಯ ಕ್ರಮದ ಅದ್ಭುತಗಳಾಗಿವೆ. ಪ್ರತಿಯೊಂದು ಬುಡಕಟ್ಟಿನ ತರುಣರೂ ಒಂದು ಸೇನಾತುಕಡಿಯಂತೆ ವ್ಯವಸ್ಥಿತವಾಗಿ ತಮ್ಮದೇ ನಿದ್ರಾಶಾಲೆಗಳಲ್ಲಿ ಅಥವಾ ಮೊರುಂಗ್‌ಗಳಲ್ಲಿ ಮಲಗುತ್ತಾರೆ. ಹಳ್ಳಿಗಳು ಒಂದೇ ಸಮನೆ ಒಂದರೊಡನೊಂದು ಕಾದಾಡುತ್ತಿದ್ದುದರಿಂದ ಮೊರುಂಗ್‌ಗಳು ಕಾವಲುದಾಣಗಳಾಗಿ, ಸೈನಿಕ ಶಿಬಿರಗಳಾಗಿ, ವಿನೋದಶಾಲೆಗಳಾಗಿ ಕೆಲಸ ಮಾಡುತ್ತಿದ್ದುದೂ ಉಂಟು. ಕೊನೆಯ ಪಕ್ಷ ಒಂದೇ ಒಂದಾದರೂ ಯುದ್ಧದಲ್ಲಾದ ಗಾಯದ ಗುರುತು ಮೈಯಲ್ಲಿಲ್ಲದ ಯುವಕನನ್ನು ಯಾವ ಹುಡುಗಿಯೂ ಮದುವೆಯಾಗುತ್ತಿರಲಿಲ್ಲ. ಶತ್ರುಗಳ ತಲೆಯನ್ನು ಕತ್ತರಿಸಿ ಹಳ್ಳಿಗೆ ತಂದ ಯೋಧರನ್ನು ಗಂಡಸರು ಹೆಂಗಸರೆಲ್ಲರೂ ಬಹುವಾಗಿ ಗೌರವಿಸುತ್ತಿದ್ದರು. ಆಗಾಗ ವಿಜಯೋತ್ಸವಗಳನ್ನು ಏರ್ಪಡಿಸಲಾಗುತ್ತಿತ್ತು. ಆಗ ಉತ್ಸವಗಳ ಪರಂಪರೆಯೇ ಜರುಗುತ್ತಿತ್ತು. ಮಿಥಾನ್‌ಗಳ ಬಲಿಯೂ ನಡೆಯುತ್ತಿತ್ತು. ಅವುಗಳನ್ನು ಆಚರಿಸುವವರಿಗೆ ವಿವಿಧ ಪದವಿಗಳು ಸ್ಥಾನಮಾನಗಳು ಇರುತ್ತಿದ್ದುದಲ್ಲದೆ, ಕೆಲವು ಆಭರಣಗಳನ್ನು ಧರಿಸುವ ಹಕ್ಕುಗಳೂ ದೊರೆಯುತ್ತಿದ್ದವು. ಇವುಗಳಿಗಾಗಿ ನಾಗಾಗಳು ಹೆಚ್ಚಿನ ಸಂಪನ್ಮೂಲಗಳನ್ನೂ ಸತ್ವವನ್ನೂ ಹೊಂದಿರಬೇಕಾಗಿತ್ತು. ಇವುಗಳಲ್ಲಿ ಅನೇಕ ಪದ್ಧತಿಗಳು ಅವರಲ್ಲಿ ಈಗಲೂ ಬಳಕೆಯಲ್ಲಿವೆ.

**ಮುಖ್ಯ ನಾಗಾ ಬುಡಕಟ್ಟುಗಳು ಇವು :** 1. ಕೊನ್ಯಾಕ್‌ಗಳು : ತ್ವಾನ್‌ಸಾಂಗ್ ಜಿಲ್ಲೆಯವರು. ತಲೆಬೇಟೆ ಅವರಲ್ಲಿ ಇನ್ನೂ ಇದೆ ಎಂದು ಹೇಳಲಾಗಿದೆ. 2. ಆವೋಗಳು: ಕೊನ್ಯಾಕ್‌ಗಳ ಅನಂತರ ಹೆಚ್ಚಿನ ಸಂಖ್ಯೆಯುಳ್ಳವರು ಎಂದರೆ ಇವರೇ; ಅತ್ಯಂತ ವಿದ್ಯಾವಂತ ಜನಾಂಗ. ಮೊದಲನೆಯ ಚರ್ಚ್ ಅವರಲ್ಲಿ ಸ್ಥಾಪಿತವಾಯಿತು. ನಾಗಾ ಪ್ರದೇಶದ ಈ ಹಿಂದಿನ ಮುಖ್ಯಮಂತ್ರಿ ಈ ಬುಡಕಟ್ಟಿನವರೇ ಆಗಿದ್ದರು. 3. ಸೆಮಾಗಳು : ಜನಸಂಖ್ಯೆಯ ದೃಷ್ಟಿಯಿಂದ ಮೂರನೆಯದು; ಯೋಧ ಜನಾಂಗ. ಭಾರತೀಯ ಸೈನ್ಯಕ್ಕೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರನ್ನು ಕೊಟ್ಟಿದೆ. ಈ ಜನ ದಂಗೆಕೋರರ ಯೋಧದಳಗಳ ಬೆನ್ನುಮೂಳೆಯಾಗಿದ್ದಾರೆ. 4. ಅಂಗಾಮಿಗಳು : ಇವರು ನಾಗಾ ಜನಾಂಗಗಳಲ್ಲೆಲ್ಲ ಅತ್ಯಂತ ಎತ್ತರವಾದವರು, ಸುಂದರರು. ದಂಗೆಕೋರರ ನಾಯಕ ಫ಼ಿಝೊ ಒಬ್ಬ ಅಂಗಾಮಿ. ಹಾಗೆಯೇ ನಾಗಾ ರಾಜ್ಯದ ಮುಖ್ಯಮಂತ್ರಿ ಕೂಡ.

ಸುಮಾರು ಮೂವತ್ತಕ್ಕಿಂತಲೂ ಹೆಚ್ಚು ನಾಗ ಪಂಗಡಗಳಿವೆ. ಅವೆಂದರೆ ಅನಲ್, ಅಂಗಮಿ, ಅವೊ, ಚಕೇಸಂಗ್, ಚಾಂಗ್, ಖಿಮಿಎಂಗನ್, ಕೊನ್ಯಕೆ, ಕುಕಿನಾಗ, ಲಿಯಂಗ್‌ಮೇ, ಲೋಆ, ಫೋಮ್, ಪೊಧುರಿ, ಮಾಓ, ಮರಂ, ಮರಿಂಗ್, ನಾಕ್ಬೆ, ಪಾಮ್ಯೆ, ರೆಂಗ್ಮ, ರಾಂಗ್ಮೆ, ಇನ್‌ಪುಯಿನಾಗ, ಸಂಗ್ಬಮ್, ಸುಮಿನಾಮ, ತಂಗ್‌ಖುಲ್, ತಂಗ್ಸ, ಕುಟ್ಸ, ವಾಂಥೋ ಯುಂಭುಂಗರ್, ಸೆಮೇ, ಸಿಲಿಯಾಂಗ್ರಾಂಗ್.

ನಾಗಾ ಜನಾಂಗಗಳ ದೈಹಿಕ ಲಕ್ಷಣಗಳಲ್ಲಿ ಬಹಳ ವೈವಿಧ್ಯವಿದೆ. ಅಂಗಾಮಿಗಳು ಎತ್ತರ. ಆದರೆ ಸೆಮೇಗಳು ಕುಳ್ಳು, ಹೆಚ್ಚು ಸ್ಪಷ್ಟವಾಗಿ ಮಂಗೊಲಾಯ್ಡ್ ಲಕ್ಷಣವುಳ್ಳವರು. ಅವರ ಸಾಂಪ್ರದಾಯಿಕ ಸಂಸ್ಕೃತಿಯಲ್ಲೂ ಬೇಕಾದಷ್ಟು ವ್ಯತ್ಯಾಸಗಳಿದ್ದುವು. ಕೆಲವು ಬುಡಕಟ್ಟುಗಳು ಹಲವು ಮೈಲುಗಳವರೆಗೆ ಸುದ್ದಿಯನ್ನು ಮುಟ್ಟಿಸಬಲ್ಲ ದೊಡ್ಡ ನಗಾರಿಗಳನ್ನು ಅಥವಾ ಒಂದು ಬಗೆಯ ದಾರುವಾದ್ಯವನ್ನು ಮಾಡುತ್ತಿದ್ದವು. ಕೆಲವು ಜನಾಂಗಗಳವರು ಸತ್ತವರನ್ನು ಹೂತರೆ ಮತ್ತೆ ಕೆಲವರು ಸುಡುತ್ತಿದ್ದರು. ಇನ್ನೂ ಕೆಲವರು–ಕೊನ್ಯಾಕ್ ಮುಂತಾದವರು–ಹೆಣಗಳನ್ನು ವೇದಿಕೆಗಳ ಮೇಲೆ ಇಟ್ಟುಬಿಡುತ್ತಿದ್ದರು. ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆಯಲ್ಲೂ ಅವರಲ್ಲಿ ವೈವಿಧ್ಯವಿದೆ. ಸೆಮೇ ಮತ್ತು ಚಾಂಗ್‌ಗಳಲ್ಲಿ ಶಕ್ತಿಯುತರಾದ ಮುಖಂಡರು ಅಥವಾ ಅಂಗ್‌ಗಳು ಪವಿತ್ರರಾದವರೆಂದು ಪರಿಗಣಿತರಾಗಿದ್ದಾರೆ. ಆವೋಗಳಲ್ಲಿ ರಾಜಕೀಯ ಅಧಿಕಾರ ಮುಖ್ಯ ಕುಟುಂಬಗಳ ಹಿರಿಯರದು. ಅಂಗಾಮಿಗಳು, ಲ್ಹೋತಾಗಳು ಮತ್ತು ರೆಂಗ್ಮಾಗಳು ಹೆಚ್ಚಾಗಿ ಪ್ರಜಾಪ್ರಭುತ್ವ ಉಳ್ಳವರು.

ನಾಗಾಗಳ ಮುಖ್ಯ ಆಹಾರ ಅಕ್ಕಿ, ಗೋಮಾಂಸ, ಹಂದಿಮಾಂಸ. ಅಕ್ಕಿ, ಹೆಂಡಗಳೆಂದರೆ ಅವರಿಗೆ ಬಹಳ ಇಷ್ಟ. ಚೀನಿಯರಂತೆ ಅವರಿಗೂ ಹಾಲನ್ನು ಕಂಡರೆ ಜುಗುಪ್ಸೆ. ಆದರೆ ಮಿಷನರಿಗಳ ಪ್ರಭಾವದಿಂದಾಗಿ ಹಾಲಿನ ಬಳಕೆ ಹೆಚ್ಚುತ್ತಿದೆ. ನಾಗಾ ಯೋಧರು ಅಗಲವಾದ ಶಿರೋವಸ್ತ್ರಗಳನ್ನು ಧರಿಸುತ್ತಾರೆ. ಉದ್ದನೆಯ ಈಟಿಗಳಿಂದ ಮತ್ತು ದೊಡ್ಡ ದಾವೋ ಅಥವಾ ಕೈಕೊಡಲಿಗಳಿಂದ ಸಜ್ಜುಗೊಳ್ಳುತ್ತಾರೆ. ಮಣಿಗಳು ಮತ್ತು ತೋಳ್ಬಳೆಗಳಿಂದ ಅಲಂಕರಿಸಿಕೊಳ್ಳುತ್ತಾರೆ.

ಕ್ರೈಸ್ತರಾಗಿ ಮತಾಂತರಗೊಳ್ಳುವುದಕ್ಕೆ ಮೊದಲು ನಾಗಾಧರ್ಮ ಇತರ ಅಂಥ ಜನಾಂಗಗಳ ಧರ್ಮದಂತೆಯೇ ಇತ್ತು. ಅವರು ಪರಮ ಸೃಷ್ಟಿಕರ್ತನಲ್ಲೂ ಅಸಂಖ್ಯ ಪ್ರೇತಾತ್ಮಗಳು ಹಾಗೂ ಪಿಶಾಚಿಗಳಲ್ಲೂ ನಂಬಿಕೆಯಿಟ್ಟಿದ್ದರು. ಈ ಪ್ರೇತಾತ್ಮಗಳನ್ನು ಸಂತೈಸಲು, ಅವರ ಅನುಗ್ರಹಗಳನ್ನು ಪಡೆಯಲು ಪುರೋಹಿತರಿದ್ದರು. ಅವರ ಸಾಂಪ್ರದಾಯಿಕವಾದ ಹೆಚ್ಚಿನಶಕ್ತಿ ತಲೆಯಲ್ಲಿ ಇರುತ್ತದೆಯಾದ್ದರಿಂದ ದೇಹದಿಂದ ಅದನ್ನು ಕತ್ತರಿಸಿ ತಂದಾತ ಗದ್ದೆಗಳಿಗೆ ಮತ್ತು ಹಳ್ಳಿಗಳಿಗೆ ಆ ಶಕ್ತಿಯನ್ನು ವರ್ಗಾಯಿಸಬಹುದು ಎಂಬ ನಂಬಿಕೆ ಇದ್ದುದರಿಂದ ಅವರು ಬಹುತೇಕವಾಗಿ ತಲೆಹೋಕರಾಗಿದ್ದರು. ಉದ್ದ ಕೂದಲಿನ ಹೆಂಗಸಿನ ತಲೆಯಾದರಂತೂ ಗದ್ದೆಗಳಲ್ಲಿ ಬೆಳೆಯೂ ಹೆಚ್ಚಾಗಿ ಬರುತ್ತದೆ ಎಂಬ ನಂಬಿಕೆ ಇತ್ತು. ನಾಗಾರಾಜ್ಯದಲ್ಲಿ ತಯಾರಾದ ಅತ್ಯಂತ ವೈಭವೋಪೇತವಾದ ವಸ್ತ್ರಗಳನ್ನು ಯಶಸ್ವೀ ತಲೆಗಡುಕ ಮತ್ತು ಅವನ ಹತ್ತಿರದ ನಂಟರು ಮಾತ್ರವೇ ಧರಿಸಬಹುದಾಗಿತ್ತು. ಉದಾಹರಣೆಗೆ : ಯುದ್ಧ ನೃತ್ಯಗಳು, ಪದಕಗಳಾಗಿ ಧರಿಸುತ್ತಿದ್ದ ತಲೆಯ ಆಕೃತಿಯ ಶಿಲ್ಪಗಳನ್ನು ನೋಡಿದರೆ ತಲೆಗಡುಕತನ ಪರೋಕ್ಷವಾಗಿ ಲಲಿತಕಲೆಗಳನ್ನು ಹೇಗೆ ಪ್ರಚೋದಿಸಿತೆಂಬುದು ತಿಳಿಯುತ್ತದೆ. ಬ್ರಿಟಿಷರು ತಲೆಗಡುಕತನವನ್ನು ನಿಲ್ಲಿಸಲು ಅತ್ಯಂತ ತೀವ್ರವಾದ ಕ್ರಮವನ್ನು ಕೈಕೊಂಡು ಹೆಚ್ಚು ಕಡಿಮೆ ಯಶಸ್ವಿಯಾದರು.

ಹೆಚ್ಚಿನ ನಾಗಾಗಳು ಇಂದು ಕ್ರೈಸ್ತರಾಗಿದ್ದಾರೆ. ಆದರೆ ನಾಗಾಲಕ್ಷಣವಾದ ದಾಳಿಕೋರತನ ಇನ್ನೂ ತಗ್ಗಿಲ್ಲ. ನಾಗಾರಾಜ್ಯದಲ್ಲಿ ಈಗ ನಾಗಾ ಧರ್ಮಾಧಿಕಾರಿಗಳಿಂದ ನಿರ್ವಹಿಸಲ್ಪಡುತ್ತಿರುವ ಆರು ನೂರಕ್ಕಿಂತ ಹೆಚ್ಚಿನ ಚರ್ಚ್‌ಗಳಿವೆ.

ನಾಗಾ ಉಪಭಾಷೆಗಳು ಇಂಡೋ ಬರ್ಮನ್ ಭಾಷಾವರ್ಗಕ್ಕೆ ಸೇರುತ್ತವೆ. ಅಂತರ ಜನಾಂಗ ಸಂಪರ್ಕಕ್ಕೆ ನಾಗಾಗಳು ಅಸ್ಸಾಮೀ ಭಾಷೆಯ ಒಂದು ಬಗೆಯ ವಿಕೃತ ರೂಪವನ್ನು ಬಳಸುತ್ತಾರೆ. ಆದರೆ ಈಚಿನ ದಿನಗಳಲ್ಲಿ ಅವರಲ್ಲಿ ಹಲವರಿಗೆ ಇಂಗ್ಲಿಷ್ ಮತ್ತು ಹಿಂದಿ ಬರುತ್ತದೆ. ನಾಗಾರಾಜ್ಯದ ಸರ್ಕಾರ ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ; ಇಂಗ್ಲಿಷನ್ನೇ ಉಳಿಸಿಕೊಳ್ಳಬೇಕೆನ್ನುತ್ತದೆ.

**ಬಡಗರು :** ನೀಲಗಿರಿ ಪರ್ವತಗಳಲ್ಲಿ ವಾಸಿಸುವ ರೈತಜನರು. ಇವರಾಡುವ ಭಾಷೆ ಕನ್ನಡವನ್ನು ಹೋಲುತ್ತದೆ. ಮೈಸೂರು ಕಡೆಯಿಂದ ವಲಸೆಬಂದವರೆಂದು ಕೆಲವರ ಅಭಿಪ್ರಾಯ. ಆದರೆ ಅಂಗರಚನೆಯಲ್ಲಿ ತೋಡ ಮತ್ತು ಕೊತ ಜನರನ್ನು ಹೋಲುತ್ತಾರೆ. ಬೆಟ್ಟದ ಇಳಿಜಾರನ್ನು ಕಡಿದು ಮೆಟ್ಟಲುದಿಬ್ಬಗಳನ್ನಾಗಿ ಮಾಡಿ ಊಬುಗೋದಿ, ಜವೆ, ಈರುಳ್ಳಿ ಮುಂತಾದುವನ್ನು ಬೆಳೆಯುತ್ತಾರೆ. ಕೃಷಿಕೆಲಸ ಹೆಚ್ಚಾಗಿ ಹೆಂಗಸರಿಗೆ ಸೇರಿದ್ದು. ಗಂಡಸರು ನೆಡುತೋಟಗಳಲ್ಲಿ ಕೂಲಿಗಳಾಗಿಯೊ ಕೈಗೆಲಸದವರಾಗಿಯೊ ದುಡಿಯುತ್ತಾರೆ. ಪಶುಪಾಲನೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವ ನೆರೆಯ (ತೋಡರು ಮುಂತಾದವರು) ಜನರಿಗೆ ದನಗಳಿಗೆ ಬೇಕಾದ ಆಹಾರವನ್ನೊದಗಿಸಿದರೂ ತಾವೂ ದನಗಳನ್ನು ಸಾಕುತ್ತಾರೆ. ಹೈನು ಶೇಖರಿಸಿ ಮಾರುತ್ತಾರೆ. ಹೈನುವೃತ್ತಿ ಬ್ರಹ್ಮಚಾರಿಗಳಾದ ಪುರೋಹಿತವರ್ಗದವರ ಮೇಲ್ವಿಚಾರಣೆಯಲ್ಲಿದೆ. ಬಡಗರು ನೆರೆಯ ಕೊತಜನರೊಂದಿಗೆ ವಿನಿಮಯ ಸಂಪರ್ಕವನ್ನಿಟ್ಟುಕೊಂಡಿದ್ದಾರೆ. ಕೃಷಿ ಉತ್ಪನ್ನಗಳನ್ನು ಅವರಿಗೆ ಒದಗಿಸಿ ಅವುಗಳಿಗೆ ಬದಲಾಗಿ ವ್ಯವಸಾಯೋಪಕರಣಗಳು, ಮೃತ್ಪಾತ್ರೆಗಳು ಮುಂತಾದವನ್ನು ಪಡೆಯುತ್ತಾರೆ. ಶವಸಂಸ್ಕಾರದ ಸಂದರ್ಭಗಳಲ್ಲಿ ಬಡಗರು ಕೊತಜನರಿಗೆ ಧಾನ್ಯ ಮತ್ತು ಎಮ್ಮೆಯನ್ನೊದಗಿಸುತ್ತಾರೆ. ಕೊತ ಕುಲದವರು ಮದುವೆಗಳಲ್ಲಿ ಮತ್ತು ಉತ್ತರಕ್ರಿಯೆಗಳಲ್ಲಿ ಬಡಗರಿಗೆ ವಾದ್ಯಗಳನ್ನೊದಗಿಸುತ್ತಾರೆ. ನೆರೆಯ ಇನ್ನೊಂದು ಪಂಗಡದವರಾದ ಕುರುಬರ ಮಂತ್ರವಾದಿ (ವಿಚ್ ಡಾಕ್ಟರ್) ಬಡಗರಿಗೂ ವೈದ್ಯ. ಅವರ ಈ ಸೇವೆಗಾಗಿ ಬಡಗರು ವಾರ್ಷಿಕ ತೆರಿಗೆ ಕೊಡುತ್ತಾರೆ. ಬಡಗರ ಗ್ರಾಮ ಒಂದೇ ಹುಲ್ಲುಚಾವಣಿ ಇರುವ ಅನೇಕ ಮನೆಗಳ ಗುಂಪು. ಗ್ರಾಮದ ಮುಖಂಡ ಅವರಲ್ಲೆಲ್ಲ ಅತ್ಯಂತ ಅನುಕೂಲಸ್ಥನಾದವನು. ಗ್ರಾಮದ ಆಡಳಿತ ಆತ ಮತ್ತು ಇತರ ಹಿರಿಯರು ಸೇರಿದ ಒಂದು ಸಭೆಯ ಕೈಲಿದೆ. ಯಾರಾದರೂ ಸತ್ತರೆ ಅದೊಂದು

ವಿಧ್ಯುಕ್ತ ಉತ್ಸವ ಸಂದರ್ಭ. ಸಂಗೀತ ನೃತ್ಯಾದಿಗಳು ಜರುಗಬೇಕು. ಮೃತನ ಆತ್ಮಕ್ಕಂಟಿದ ಪಾಪವೆಲ್ಲ ಹೊರಬರುತ್ತದೆಂಬ ನಂಬಿಕೆಯಿಂದ ಒಂದು ಕರುವನ್ನು ಶವದ ಸುತ್ತ ಮೂರು ಸಲ ಸುತ್ತಿಸುತ್ತಾರೆ. ಅನಂತರ ಆ ಕರು ಪಾವಿತ್ರ್ಯ ಪಡೆಯುತ್ತದೆ. ಆಮೇಲೆ ಅದನ್ನು ಸ್ವೇಚ್ಛೆಯಾಗಿ ತಿರುಗಾಡಲು ಬಿಟ್ಟುಬಿಡುತ್ತಾರೆ; ಅದನ್ನು ಯಾರೂ ಮಾರಕೂಡದು, ಕೊಲ್ಲಕೂಡದು. ಬಡಗರು ಎಲ್ಲ ಪಿತೃಗಳ ಸ್ಮರಣಾರ್ಥವಾಗಿ ವಿಶೇಷ ಕರ್ಮಗಳನ್ನೂ ಆಗಾಗ ನಡೆಸುತ್ತಾರೆ.

**ಬೊಂಡೊ :** ಸುಮಾರು ಐದು ಸಾವಿರ ಜನರಿರುವ ಅತ್ಯಂತ ಪ್ರಾಚೀನ ಆದಿವಾಸಿ ಜನಾಂಗ. ಒರಿಸ್ಸದ ಕೋರಾಪುಟ್ ಜಿಲ್ಲೆಯಲ್ಲಿ ಮಚ್‌ಕುಂದ್ ನದಿಯ ವಾಯವ್ಯಕ್ಕಿರುವ ಉನ್ನತ ಪರ್ವತಗಳಲ್ಲಿ ವಾಸಿಸುತ್ತಾರೆ. ತಮ್ಮನ್ನು ರೆಮೊಗಳೆಂದು ಕರೆದುಕೊಳ್ಳುತ್ತಾರೆ. ಅವರಿಗೆ ತಮ್ಮದೇ ಆದ ಒಂದು ಉಪಭಾಷೆ ಇದೆ. ಅದು ಮುಂಡಾರಿ ಭಾಷಾವರ್ಗಕ್ಕೆ ಸೇರಿದ ಒಂದು ಉಪಭಾಷೆ. ಅವರ ನೆರೆಹೊರೆಯ ಗಡಬ, ಪರೆಂಗ್ ಮತ್ತು ದಿದಾಯಿ ಜನರು ಆಡುವ ಭಾಷೆಗೆ ಅದು ಹತ್ತಿರದ ಸಂಬಂಧಿಯಾಗಿದೆ. ಪ್ರತ್ಯೇಕತೆಯಿಂದಾಗಿ ಬೊಂಡೊ ಜನ ತಮ್ಮ ಮೂಲಸಂಸ್ಕೃತಿಯ ಬಹುಭಾಗವನ್ನು ಉಳಿಸಿಕೊಂಡಿದ್ದಾರೆ. ಅವರು ಸವೋರರಂತೆ ಉತ್ತಮ ಬೇಸಾಯಗಾರರು. ಬೆಟ್ಟದ ಇಳಿಕಲುಗಳನ್ನು ಮಟ್ಟಮಾಡಲು ಎಚ್ಚರಿಕೆಯಿಂದ ಬದುಕಟ್ಟಲು ಅಣೆಕಟ್ಟುಗಳನ್ನು ಕಟ್ಟಿ ತಮ್ಮ ಮಟ್ಟವಾದ ಬತ್ತದ ಗದ್ದೆಗಳಿಗೆ ನೀರು ಹಾಯಿಸಲು ತುಂಬ ಶ್ರಮಪಟ್ಟು ಕೆಲಸ ಮಾಡುತ್ತಾರೆ. ಹಣ್ಣಿನ ತೋಟಗಳನ್ನು ಬೆಳೆಸಿ, ಹೆಚ್ಚಾದ ಹಣ್ಣುಗಳನ್ನು ಮಾರುತ್ತಾರೆ. ಬೆಟ್ಟದ ಇಳಿಕಲುಗಳಲ್ಲಿ ಸರದಿ ಬೇಸಾಯ ಮಾಡುವುದೂ ಉಂಟು. ಬೊಂಡೊ ಬೆಟ್ಟಗಳು ಇನ್ನೂ ಜನವಿದೂರವಾಗಿರುವುದರಿಂದ ಹಣ ಸಾಲಕೊಡುವವರ ಮತ್ತು ಇತರ ಸುಲಿಗೆಗಾರರ ದೃಷ್ಟಿಯಿಂದ ಅವರು ಪಾರಾಗಿದ್ದಾರೆ.

ಬೊಂಡೊ ಸಂಸ್ಕೃತಿಯ ಅತ್ಯಂತ ವಿಶಿಷ್ಟ ಲಕ್ಷಣವೆಂದರೆ ಗಂಡಸರು ಉದ್ದವಾಗಿ ಕೂದಲು ಬೆಳೆಸಿಕೊಳ್ಳುತ್ತಾರೆ. ಹೆಂಗಸರು ತಲೆಯನ್ನು ನುಣ್ಣಗೆ ಬೋಳಿಸಿಕೊಳ್ಳುತ್ತಾರೆ. ಹೆಂಗಸರು ತಮ್ಮ ಎದೆಗೆ ಕೆಲವೇ ಅಂಗುಲ ಅಗಲವಿರುವ ಕಿರಿದಾದ ಒಂದು ಬಟ್ಟೆಯನ್ನು ಕಟ್ಟಿಕೊಳ್ಳುತ್ತಾರೆ. ಕುತ್ತಿಗೆಯಿಂದ ಹೊಕ್ಕುಳವರೆಗೆ ಮರೆಮಾಡುವ ಒಂದೇ ಒಂದು ಸಾಧನವೆಂದರೆ ಮಣಿಗಳು ಮತ್ತು ಹಿತ್ತಾಳೆ ಉಂಗುರಗಳನ್ನು ಪೋಣಿಸಿದ ಅಸಂಖ್ಯಾತ ಮಾಲೆಗಳು. ಹೆಂಗಸರು ದೃಢಸ್ವಭಾವವುಳ್ಳವರು. ಮುಂದೆ ವಿವಾಹ ಬಾಂಧವ್ಯಕ್ಕೆ ಎಡೆಗೊಡುವ ಸ್ತ್ರೀ ಪುರುಷರ ಭೇಟಿಗಳನ್ನು ತಾವೇ ಏರ್ಪಡಿಸುತ್ತಾರೆ. ತರುಣ ತರುಣಿಯರಿಗೆ ಬೇರೆ ಬೇರೆ ನಿದ್ರಾಶಾಲೆಗಳಿದ್ದರೂ ಅವುಗಳ ಒಂದೇ ಒಂದು ಕೆಲಸ ಭಾವೀ ಸತಿಪತಿಗಳನ್ನು ಪರಸ್ಪರ ಸಂಧಿಸುವಂತೆ ಮಾಡುವುದು. ಬೊಂಡೊ ಸಂಸ್ಕೃತಿಯಾದರೋ ವಿವಾಹಪೂರ್ವ ಲೈಂಗಿಕ ಸಂಬಂಧಗಳಿಗೆ ಅನುಮತಿ ಕೊಡುವುದಿಲ್ಲ. ಹುಡುಗ ಹುಡುಗಿಯರು ತಮ್ಮ ತಮ್ಮ ಜೊತೆಗಾರರನ್ನು ಆರಿಸಿಕೊಳ್ಳಬೇಕಾಗುತ್ತದೆ. ಎಲ್ವಿನ್‌ನ ಪ್ರಕಾರ ಬೊಂಡೊ ಜನ ನ್ಯೂನ ಲೈಂಗಿಕ ಪ್ರವೃತ್ತಿಯವರು. ಅವರ ಪ್ರಣಯದಲ್ಲಿ ನಯ ನಾಜೂಕುಗಳು ಇಲ್ಲ.

ಒಬ್ಬ ತರುಣ ತನ್ನ ಜೊತೆಗಾತಿಯನ್ನು ಆರಿಸಿಕೊಂಡಾದ ಮೇಲೆ ಮದುವೆಗೆ ತಂದೆತಾಯಿಗಳ ಸಾಂಪ್ರದಾಯಿಕ ಅನುಮತಿಯನ್ನು ಪಡೆಯಬೇಕು. ಅವರು ಶ್ರೀಮಂತರಾಗಿದ್ದರೆ ಮದುವೆ ಬಹಳ ವಿಸ್ತಾರವಾಗಿ ಸೆಬಂಗ್ ಎನಿಸಿಕೊಳ್ಳುತ್ತದೆ. ಅದರಲ್ಲಿ ಅನೇಕ ಸಲದ ಸಂದರ್ಶನ, ಕನ್ಯಾಶುಲ್ಕ, ಉಡುಗೊರೆಗಳ ವಿನಿಮಯ, ಕೋಣದ ಬಲಿ ಇವೆಲ್ಲ ಇರುತ್ತವೆ. ಕಡಿಮೆವೆಚ್ಚದ ಇನ್ನೂ ಎರಡು ಬಗೆಯ ಮದುವೆಗಳಿವೆಯಾದರೂ ಹೆಚ್ಚಿನ ಸಂಖ್ಯೆಯವು ಅಪಹಾರ ಸ್ವರೂಪದವು (ಗುಬಾಯ್ ಗೋಡೊ – ಓಡಿ ಹೋಗುವುದು). ವಿಧವಾ ವಿವಾಹಕ್ಕೆ ಅನುಮತಿ ಇದೆ. ಆದರೆ ಅನೇಕ ಸಲ ಅದು ಸತ್ತ ಗಂಡನ ಅಣ್ಣನೊಂದಿಗೆ ನಡೆಯುತ್ತದೆ.

ಧೈರ್ಯ, ಸ್ವಾತಂತ್ರ್ಯ, ಸಮಾನತೆ, ಗುಂಪಿನ ಬಗೆಗೆ ನಿಷ್ಠೆ, ಮೇಲೆ ಬೀಳುವಿಕೆ, ಕ್ರೌರ್ಯ, ಆಗಾಗ ಸೋಮಾರಿತನ ಮತ್ತು ರಗಳೆಯಿಂದ ಕೂಡಿದ ಸಮಾರಂಭಗಳು – ಇವುಗಳ ಒಂದು ವಿಚಿತ್ರ ಮಿಶ್ರಣ ಬೊಂಡೊ ಜನರ ಲಕ್ಷಣ. ಈ ಬುಡಕಟ್ಟಿನವರಲ್ಲಿ ಕಂಡುಬರುವ ಕೊಲೆ ಮತ್ತು ಕ್ರೌರ್ಯಗಳು ಮನಶ್ಶಾಸ್ತ್ರದ ಒಂದು ಅಚ್ಚರಿಯಾಗಿದೆ.

**ಬ್ರಾಹೂಈ :** ಬಲೂಚಿಸ್ತಾನದ ಪೂರ್ವ ಮತ್ತು ಪಶ್ಚಿಮ ಬಲೂಚಿ ಪಂಗಡಗಳ ನಡುವೆ ಇರುವ ಜನರು. ಅಂಗರಚನೆಯಲ್ಲಿ ಬಲೂಚಿಗಳನ್ನು ಬಹುಮಟ್ಟಿಗೆ ಹೋಲುತ್ತಾರೆ. ಸಂಸ್ಕೃತಿಯಲ್ಲೂ ಅಷ್ಟೇ. ಆದರೆ ಅವರ ವೈಶಿಷ್ಟ್ಯ, ಅವರ ಭಾಷೆ ಮಾತ್ರ; ದಕ್ಷಿಣ ಭಾರತಕ್ಕೆ ಸೀಮಿತವಾಗಿರುವ ದ್ರಾವಿಡ ಭಾಷೆಯನ್ನು ಹೋಲುತ್ತದೆ. ತಾವೊಂದು ಸಂಕೀರ್ಣ ಜನಾಂಗವೆಂದು ಅವರೇ ಹೇಳಿಕೊಳ್ಳುತ್ತಾರೆ. ಸ್ಥಳೀಯ ಗುಂಪುಗಳೆರಡು. ಭಾರತದ ಜಾಟರಿಗೆ ಸಂಬಂಧಿಸಿದ ಗುಂಪುಗಳು ನಾಲ್ಕು. ಇರಾನಿನ ಜನರಿಗೆ ಸಂಬಂಧಿಸಿದವು ಎರಡು. ಆಫ್ಘನರ ಗುಂಪಿಗೆ ಸೇರಿದವು ಎರಡು. ಈ ಪಂಗಡಗಳೆಲ್ಲ 18ನೆಯ ಶತಮಾನದಲ್ಲಿ ಒಂದುಗೂಡಿ ಒಬ್ಬ ಖಾನನ ಆಳ್ವಿಕೆಗೆ ಒಳಪಟ್ಟವು. ಇತ್ತೀಚೆಗೆ ಅವರೆಲ್ಲ ಹೆಚ್ಚಾಗಿ ಬ್ರಾಹೂಈ ಭಾಷೆಯನ್ನೇ ಬಳಸತೊಡಗಿದ್ದಾರೆ.

**ಮೈಸೂರಿನ ಸ್ಥಳಜನ್ಯ ಆದಿವಾಸಿಗಳು :** ದೇಶದ ವಿವಿಧ ಭಾಗಗಳಲ್ಲಿ ನೆಲೆಸಿರುವ ಈ ಆದಿವಾಸಿಕುಲದವರಿಗೆ ಬೇರೆ ಬೇರೆ ಹೆಸರುಗಳುಂಟು. ಮೈಸೂರು ಜಿಲ್ಲೆಯಲ್ಲಿ ಅಂಥ ಮೂರು ಕುಲಗಳಿವೆ. ಅವರಾರೂ ಅಸ್ಪೃಶ್ಯರಲ್ಲ. ಪ್ರತಿಯೊಂದಕ್ಕೂ ಅವರದೇ ಆದ ಸಂಪ್ರದಾಯಗಳೂ ರೂಢಿಗಳೂ ಇವೆ. ಅವರಾರೆಂದರೆ 1. ಸೋಲಿಗರು; 2. ಬೆಟ್ಟ ಕುರುಬರು 3. ಜೇನು ಕುರುಬರು. ಕೊನೆಯೆರಡು ಜಾತಿಗಳವರು ನೆಲೆಸಿರುವ ಕ್ಷೇತ್ರಗಳ ಎಲ್ಲೆ ಅಷ್ಟು ಪ್ರತ್ಯೇಕವಾಗಿಲ್ಲ; ಒಂದೇ ಕ್ಷೇತ್ರದಲ್ಲಿ ಸಮ್ಮಿಳಿತವಾಗಿ ನೆಲೆಸಿರುವ ಎರಡು ಕುಲಗಳಂತೆ ಇವರು ಜೀವಿಸುತ್ತಿದ್ದಾರೆ. ಕೊಡಗಿನ ಉತ್ತರ ಭಾಗದಿಂದ ಹೊರಟು ಕುರುಬರ ಈ ಎರಡು ಕುಲಗಳೂ ವಾಸಮಾಡುತ್ತಿರುವ ಪ್ರದೇಶ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು, ಹೆಗ್ಗಡದೇವನಕೋಟೆ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳವರೆಗೂ ಹರಡಿದೆ. ವೈನಾಡು ಮತ್ತು ನೀಲಗಿರಿ ಜಿಲ್ಲೆಗಳಲ್ಲೂ ಇವರು ವಲಸೆ ಬಂದಿರುವ ಕುರುಹು ಕಾಣಿಸಿಕೊಳ್ಳುತ್ತದೆ. ಇವರ ಭಾಷೆ ಮತ್ತು ಜೀವನರೀತಿ ಸ್ಥಳಗಳ ಸನ್ನಿವೇಶಕ್ಕೆ ತಕ್ಕಂತೆ ಭಿನ್ನವಾಗಿದ್ದರೂ ಇವರು ಸ್ವತಂತ್ರವಾದ ಬೇರೆ ಬೇರೆ ಕುಲಕ್ಕೆ ಸೇರಿದ ಮೂಲಪುರುಷರಿಂದ ಜನಿಸಿದವರು.

ಸೋಲಿಗರು ನೆಲೆಸಿರುವ ಕ್ಷೇತ್ರ ಅಷ್ಟು ಬೇರೆ ಬೇರೆಯಾಗಿಲ್ಲ. ಇವರು ಚಾಮರಾಜನಗರ ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಕಾಡುಗಳಲ್ಲಿ ನೆಲೆಸಿದ್ದಾರೆ. ಇವರ ಹರವು ಕೊಳ್ಳೇಗಾಲ ಮತ್ತು ಕೊಯಮತ್ತೂರಿನ ಪೂರ್ವ ಘಟ್ಟದಿಂದೀಚಿನ ತಾಲ್ಲೂಕುಗಳವರೆಗೂ ವ್ಯಾಪಿಸಿದೆ. ಸೋಲಿಗರಲ್ಲಿ ಸ್ವಕುಲದಲ್ಲೇ ಮದುವೆ ಮಾಡಿಕೊಳ್ಳುವ ಉರಳಿ, ಮಲೆ, ಕಾಡು, ಉರುಬತ್ತಿ ಸೋಲಿಗ ಎಂಬ ನಾಲ್ಕು ಜಾತಿಗಳಿವೆ.

ಸ್ವಭಾವತಃ ಈ ಕುಲಗಳ ಜನ ಅಡವಿಗಳಲ್ಲಿ ಬಾಳಲು ಇಷ್ಟಪಡುತ್ತಾರೆ. ವನಪರಿಸರಕ್ಕೆ ಅವರ ಜೀವನ ಹೊಂದಿಕೊಂಡಿದೆ. ಹಳ್ಳಿಗಳಿಂದಲೂ ಪಟ್ಟಣಗಳಿಂದಲೂ ಅವರು ದೂರವಿರಲು ಬಯಸುತ್ತಾರೆ; ಗಂಡಸರಿಗಿಂತ ಹೆಂಗಸರಲ್ಲಿ ಈ ಬಯಕೆ ಹೆಚ್ಚು. ಆದರೆ ಇತ್ತೀಚೆಗೆ ಈ ಕುಲಗಳ ಜನರು ನಾಗರಿಕರ ಸಮೀಪದಲ್ಲಿ ಸ್ಥಿರವಾಗಿ ನೆಲೆಸಿರುವುದು ಕಂಡುಬಂದಿದೆ. ಇವರ ಆಚಾರಗಳಲ್ಲೂ ಬದಲಾವಣೆಗಳು ಕಾಣುತ್ತಿವೆ.

ಸ್ಥಳ ಪರಿಸ್ಥಿತಿಗನುಸಾರವಾಗಿ ಈ ಜನ ಅಡವಿಯ ಬಾಳಿಗೆ ಹೊಂದಿಕೊಂಡಿದ್ದಾರೆ. ತಮ್ಮ ತಲೆಗೂದಲನ್ನು ಹೆಣೆದುಕೊಳ್ಳುವುದು, ಉಗುರುಗಳನ್ನು ಪರಿಷ್ಕರಿಸಿಕೊಳ್ಳುವುದು, ಸ್ನಾನ ಮಾಡುವುದು ಮುಂತಾದವುಗಳಿಗೆ ಇವರು ವಿಶೇಷ ಗಮನ ಕೊಡುವುದಿಲ್ಲ. ಕಾಡಿನಲ್ಲಿ ಅಡೆತಡೆಗಳಿಲ್ಲದೆ ಸರಾಗವಾಗಿ ಸಂಚರಿಸಲು ಇವರ ಅರೆಬೆತ್ತಲೆತನ ಅನುಕೂಲವಾಗಿದೆ. ವೇಗವಾಗಿ ಸಂಚರಿಸುವುದರಲ್ಲಿ ಹೆಣ್ಣು ಗಂಡು ಸಮಾನ ಸ್ಪರ್ಧಿಗಳಾಗಿದ್ದಾರೆ. ನಾಗರಿಕನಾಗಲಿ ದುಷ್ಟಮೃಗವಾಗಲಿ ಕಣ್ಣಿಗೆ ಬಿದ್ದಾಗ ಈ ಜನ ತಮಗೆ ಸಹಜವಾದ ನಾಚಿಕೆಯಿಂದಲೋ ಅಥವಾ ಅಂಜಿಕೆಯಿಂದಲೋ ಮಿಂಚಿನಂತೆ ಮರೆಯಾಗುತ್ತಾರೆ. ಗಂಡಿನ ಹೆಜ್ಜೆ ಹಿಡಿದು ಹೆಂಗಸು ಮಾಯವಾಗುತ್ತಾಳೆ. ಆದಿವಾಸಿಗಳು ತಪ್ಪದೆ ಗುಡಿಸಲುಗಳಲ್ಲಿ ವಾಸಮಾಡುತ್ತಾರೆ. ಇಂಥ ಗುಡಿಸಲುಗಳ ಸಮೂಹಕ್ಕೆ ಹಡಿಗಳೆಂದು ಹೆಸರು. ಹಡಿಯಲ್ಲಿ ಹಟ್ಟಿಗಳು ಹೆಚ್ಚಾಗಿರುವುದಿಲ್ಲ. ಸುತ್ತಲಿನ ಕಾಡುಗಳಲ್ಲಿ ತಮಗೆ ಆಹಾರವಸ್ತುಗಳು ಕೊರೆಯಾಗದಿರುವಂತೆ ನೋಡಿಕೊಳ್ಳುವ ಮತ್ತು ಇತರ ಕಾರಣಗಳ ಸಲುವಾಗಿ ಇವರು ಅಧಿಕ ಸಂಖ್ಯೆಯಾಗಿ ಒಟ್ಟಿಗೆ ಕಲೆತಿರಲು ಬಯಸುವುದಿಲ್ಲ. ಹಟ್ಟಿಗಳು ತುಂಬ ಸರಳವಾಗಿವೆ. ಇವನ್ನು ಬೊಂಬು ಮತ್ತು ಎಲೆಗಳಿಂದ ಕಟ್ಟುತ್ತಾರೆ. ಸಗಣಿ ಮತ್ತು ಮಣ್ಣುಗಳಿಂದ ಸಾರಿಸಿ ಹಟ್ಟಿಗಳನ್ನು ಚೊಕ್ಕಟವಾಗಿಡುತ್ತಾರೆ. ತಮ್ಮ ಹಡಿಗಳ ಸುತ್ತಣ ಜಾಗವನ್ನು ಬಹಳ ನಿರ್ಮಲವಾಗಿಡುತ್ತಾರೆ. ಸ್ಥಳದಿಂದ ಸ್ಥಳಕ್ಕೆ ಹಡಿಗಳನ್ನು ಬದಲಾಯಿಸುವುದು ಈ ಜನಕ್ಕೆ ಸಾಮಾನ್ಯವಾದ ರೂಢಿ. ಈ ಹಟ್ಟಿಗಳನ್ನು ಬಿಟ್ಟರೆ ಅವರಿಗೆ ಮತ್ತೇನೂ ಆಸ್ತಿ ಇಲ್ಲವೆಂದೇ ಹೇಳಬಹುದು. ಅನ್ನ ನೀರು ದೊರೆಯುವ ಸ್ಥಳಗಳನ್ನರಸಿಯೋ ಕೆಲವು ವೇಳೆ ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಹೆದರಿಯೋ ಸಾಮಾನ್ಯವಾಗಿ ಇವರು ತಮ್ಮ ಹಡಿಗಳನ್ನು ಬೇರೆಡೆಗೆ ಎತ್ತುತ್ತಾರೆ. ಪದೇಪದೇ ಹೀಗೆ ಬದಲಾಯಿಸುವುದಕ್ಕೆ ಅಡೆತಡೆಗಳಿಲ್ಲದೆ ಇಲ್ಲ. ಪ್ರತಿಯೊಂದು ಕುಲಕ್ಕೂ ಒಂದು ಕ್ಷೇತ್ರ ಪರಿಮಿತಿಯುಂಟು. ಅದಕ್ಕೆ ಜಮ್ಮ ಎಂದು ಹೆಸರು. ತಮ್ಮ ವೈಯಕ್ತಿಕ ಜಮ್ಮವನ್ನು ಅವರು ಅತಿಕ್ರಮಿಸುವುದಿಲ್ಲ. ಪ್ರತಿಯೊಂದು ಪಂಗಡಕ್ಕೂ ಮೊದಲ ಎಂಬ ಮುಂದಾಳಿದ್ದಾನೆ. ಆತ ದೇವ ಬಳಗವೆಂದು ಆ ಜನ ನಂಬುತ್ತಾರೆ. ತಮ್ಮ ಸಾಮಾಜಿಕ ರೀತಿನೀತಿಗಳಲ್ಲಿ ತಪ್ಪದೆ ಈತ ಹೇಳಿದಂತೆ ಕೇಳುತ್ತಾರೆ. ಹಡಿಯಲ್ಲಿ ಬಿದ್ದಿರುವ ಒಂದು ಹೆಣವನ್ನು ಕೂಡ ಈತನ ಸಮ್ಮತಿಯಿಲ್ಲದೆ ಎತ್ತಿ ಹೂಳಲಾಗುವುದಿಲ್ಲ.

ಆದಿವಾಸಿಗಳಿಗೆ ಭೂತಗಳಲ್ಲಿ ನಂಬಿಕೆ ಹೆಚ್ಚು. ಅವರ ಪೂಜಾವಿಧಾನ ಹಿಂದೂಗಳಂತೆಯೇ. ಕುಲದೇವ ಮತ್ತು ದೇವತೆಯನ್ನು ಪೂಜೆ ಮಾಡಲೂ ಜಾತ್ರೆಗಳಿಗೆ ಹೋಗಲೂ ಕುಟುಂಬದೊಡನೆ ಮೈಲಿಗಟ್ಟಲೆ ಪ್ರಯಾಣಮಾಡುತ್ತಾರೆ. ಸಂತೋಷವಾಗಿ ದೀರ್ಘಕಾಲ ಉಳಿಯಬೇಕೆಂಬ ಅಪೇಕ್ಷೆ ಅವರಿಗಿಲ್ಲ; ಆದರೂ ಅದು ಸತ್ತ್ವವುಳ್ಳದ್ದು. ಇಂಥ ಸಂಯೋಗಗಳಲ್ಲಿ ಅವರ ಕುಟುಂಬವೆಲ್ಲ ಏಕೀಭವಿಸಿ ಸಮಾನವಾಗಿ ಪಾಲುಗೊಳ್ಳುತ್ತಾರೆ. ಗಂಡಸರು ತಮ್ಮ ಹೆಂಗಸರು ಸುಂದರವಾಗಿರಬೇಕೆಂದು ಬಯಸುತ್ತಾರೆ. ಹೆಂಗಸರು ನವೀನ ವಸ್ತುಗಳಿಗೆ ಸುಲಭವಾಗಿ ಮನಸೋಲುತ್ತಾರೆ. ಮಗ ತಂದೆಯನ್ನೂ, ಹೆಂಡತಿ ಗಂಡನನ್ನೂ ಅನುಸರಿಸಿ ಕಾಡಿನಲ್ಲಿ ಸಂಚರಿಸುತ್ತ ಹೊಸ ಸಂಗತಿಗಳನ್ನು ಕಲಿತುಕೊಳ್ಳುತ್ತಾರೆ. ನೋಡಿ ಅನುಕರಿಸುವುದರ ಮೂಲಕ ಇವರ ಕಲಿಕೆ ಜರುಗುತ್ತದೆಯೇ ಹೊರತು ಇನ್ನೊಬ್ಬರ ಉಪದೇಶದ ಮೂಲಕ ಅಲ್ಲ. ಈ ವಿಷಯದಲ್ಲಿ ಇವರು ಪ್ರಾಣಿಗಳನ್ನು ಹೋಲುತ್ತಾರೆ. ಒಬ್ಬ ತಂದೆ

ತನ್ನ ಮಗನಿಗೆ ವಿದ್ಯೆ ಕಲಿಸುವುದನ್ನಾಗಲಿ ಅಥವಾ ತಾಯಿ ಮಗಳಿಗೆ ಹೇಳಿಕೊಡುವುದನ್ನಾಗಲಿ ಕಾಣುವುದು ಅಪರೂಪ. ಇವರ ಪ್ರಪಂಚಜ್ಞಾನ ತುಂಬ ಮಿತವಾದುದು. ಬಯಕೆಗಳು ಅತ್ಯಲ್ಪ. ಮಿದುಳು ಯಂತ್ರದಂತೆ ಕೆಲಸ ಮಾಡುತ್ತದೆ. ಹೊಸಭಾವನೆಗಳನ್ನು ಅದರೊಳಕ್ಕೆ ತೂರಿಸಿ ನೆಲೆಗೊಳ್ಳುವಂತೆ ಮಾಡಲು ತುಂಬ ಕಾಲ ಹಿಡಿಯುತ್ತದೆ. ಹಾಗೆಯೇ ಬೇರೂರಿರುವ ಭಾವನೆಗಳನ್ನು ಹೊರಗಟ್ಟುವುದೂ ಕಷ್ಟ. ತರ್ಕಬದ್ಧವಾಗಿ ಆಲೋಚಿಸುವುದು ಅವನ ಚಿಂತನಾರಹಿತ ಮನಸ್ಸಿನಿಂದ ದೂರವಾಗಿದೆ. ಸಂಪ್ರದಾಯ ಮತ್ತು ಅಭ್ಯಾಸ ಇವುಗಳು ಅವರನ್ನು ನಡೆಸುತ್ತವೆಯೇ ಹೊರತು ಹೊಸ ಕಲಿಕೆಯಲ್ಲ. ಹೆಂಗಸು ಗಂಡಸಿಗಿಂತ ಹೊಸ ಪ್ರಭಾವಗಳಿಗೆ ಹೆಚ್ಚಾಗಿ ಮನಗೊಡುತ್ತಾಳೆ.

ತಮ್ಮ ಪರಿಸರದ ಪರಿಸ್ಥಿತಿಗೆ ತಕ್ಕಂತೆ ಈ ಆದಿವಾಸಿಗಳ ಆಹಾರ ತುಂಬ ಸರಳವಾಗಿದೆ. ಇವರು ಸಿಕ್ಕಿದ್ದನ್ನು ತಿನ್ನುತ್ತಾರೆ. ಮಾಂಸಾಹಾರದಲ್ಲಿ ಪ್ರೀತಿ ಹೆಚ್ಚು. ಧಾನ್ಯಗಳು, ಗೆಡ್ಡೆಗೆಣಸುಗಳು, ಜೇನು, ಹಣ್ಣು ಇತ್ಯಾದಿಗಳನ್ನು ತಿನ್ನುತ್ತಾರೆ. ಸಿಕ್ಕಿದಾಗ ಹೊಟ್ಟೆ ಬಿರಿಯುವಷ್ಟು ಉಣ್ಣುತ್ತಾರೆ. ಕೆಲವು ಸಮಯಗಳಲ್ಲಿ ತಮ್ಮ ಬಂಧುಬಳಗವನ್ನೆಲ್ಲ ಕರೆಸಿಕೊಂಡು ತಾವು ಕಲೆಹಾಕಿದ್ದನ್ನೆಲ್ಲ ಒಂದು ಕಾಳೂ ಉಳಿಯದಂತೆ ತಿಂದು ಮೋಜು ಮಾಡುವುದು ಉಂಟು. ಒಂದು ರೀತಿಯಲ್ಲಿ ಇವರ ಜೀವನ ಪ್ರಾಣಿಜೀವನದಂತೆಯೇ ಇದೆ. ಕೂಡಿಹಾಕುವುದರಲ್ಲಿ ಇವರಿಗೆ ವಿಶ್ವಾಸವಿಲ್ಲ. ಅಂಥ ಆಲೋಚನೆ ಮನಸ್ಸಿಗೇ ಸುಳಿಯದು. ಈ ಜನಕ್ಕೆ ಖಾರ ತುಂಬಾ ಇಷ್ಟ. ಬೇರು ಕಾಂಡಗಳನ್ನು, ಗೆಡ್ಡೆಗಳನ್ನು ಕೆಲವು ವೇಳೆ ಹಸಿಯಾಗಿಯೂ ಕೆಲವು ವೇಳೆ ಸುಟ್ಟೂ ತಿನ್ನುತ್ತಾರೆ.

ಇತ್ತೀಚಿನವರೆಗೂ ಸರದಿ ವ್ಯವಸಾಯವೇ ತಪ್ಪದ ರೂಢಿಯಾಗಿತ್ತು. ನೆಲವನ್ನು ಕೋಲಿನಿಂದಲೋ ಒರಟಾದ ಉಪಕರಣಗಳಿಂದಲೋ ಕೆದಕಿ ಬೀಜ ಬಿತ್ತುತ್ತಾರೆ. ಬತ್ತ, ರಾಗಿ, ಜೋಳ ಇವು ಮುಖ್ಯ ಧಾನ್ಯಗಳು. ಜೊತೆಗೆ ಮೆಣಸಿನಕಾಯಿ, ಸೋರೆ, ಸಾಸಿವೆ, ಬಾಳೆ ಮುಂತಾದವನ್ನು ಬೆಳೆಯುತ್ತಾರೆ. ಬೆಳೆಗಳನ್ನು ಕಾಡುಮೃಗಗಳಿಂದ ಕಾಪಾಡಿಕೊಳ್ಳಲು ಹೊಲಗಳ ಸುತ್ತ ಹಟ್ಟಿಗಳನ್ನು ಹಾಕಿಕೊಳ್ಳುವುದಲ್ಲದೆ ಹಗಲಿರುಳು ಬೆಂಕಿ ಉರಿಸುತ್ತಾರೆ. ಇರುಳಿನಲ್ಲಿ ಬೆಂಕಿಯ ಸುತ್ತ ಕುಳಿತು ಮೈಕಾಸಿಕೊಳ್ಳುತ್ತಾರೆ. ಎಲ್ಲೆಂದರಲ್ಲಿ ಸಂಚರಿಸದಂತೆ ನಿರ್ಬಂಧಗಳನ್ನು ಹಾಕಿ ಕೆಲವು ನಿರ್ದಿಷ್ಟ ಕ್ಷೇತ್ರಗಳ ಮಿತಿಗೊಳಪಡಿಸಿರುವುದರ ಪರಿಣಾಮವಾಗಿ ಅವರ ರೂಢಿಗಳು ಬದಲಾಯಿಸುತ್ತ ಬಂದಿವೆ. ಕಾಡಿನ ಕೆಲಸಗಳಲ್ಲಿ ಅವರು ಪ್ರತಿ ವರ್ಷವೂ ವನಪಾಲಕರೊಡನೆ ಜಾಗದಿಂದ ಜಾಗಕ್ಕೆ ಸಂಚರಿಸುತ್ತಾರೆ. ಆ ಕ್ಷೇತ್ರದಲ್ಲಿ ಖಾಲಿ ಇದ್ದ ಕಡೆ ಬೇಸಾಯ ಮಾಡುತ್ತಾರೆ. ಈ ಹೊಸ ಪದ್ಧತಿ ಅವರಿಗೆ ರುಚಿಸದಿದ್ದರೂ ಅವರು ಅದರ ಉಪಯುಕ್ತತೆಯನ್ನು ಅರಿತುಕೊಂಡು ಅದಕ್ಕೆ ಒಗ್ಗಿಕೊಳ್ಳುವ ಸೂಚನೆಗಳು ಕಂಡುಬಂದಿವೆ. ಈ ಆದಿವಾಸಿ ಕುಲಗಳನ್ನು ದೇಶದ ಅನೇಕ ಭಾಗಗಳಲ್ಲಿ ನೆಲೆಗೊಳಿಸುವ ಕಾರ್ಯಕ್ರಮಕ್ಕೂ ಈ ಮನೋಧರ್ಮ ಅನ್ವಯಿಸುತ್ತದೆ.

ದೇಶದ ಈ ಭಾಗದ ಅರಣ್ಯ ಸಂರಕ್ಷಣೆ, ಪುರೋಭಿವೃದ್ಧಿಗಳ ಕೆಲಸಗಳು ಇವರ ಮೂಲಕವೇ ನಡೆಯುತ್ತಿದೆ. ಮರ ಕಡಿಯುವುದು, ದಿಮ್ಮಿ ಮಾಡುವುದು, ಗಿಡ ನೆಡುವುದು, ಕಳೆ ಕೀಳುವುದು, ವ್ಯವಸಾಯ ಭೂಮಿಯನ್ನು ಶುದ್ಧಿಗೊಳಿಸುವುದು ಇತ್ಯಾದಿ ಒರಟು ಕೆಲಸಗಳಿಗೆಲ್ಲ ಇವರು ಎತ್ತಿದ ಕೈ. ಅಡವಿಯ ಅಂತರಾಳದಲ್ಲಿ ನಡೆಸಬೇಕಾದ ಅನೇಕ ಕೆಲಸಗಳಿಗೆ ಇವರು ತುಂಬಾ ಉಪಯುಕ್ತವಾಗಿದ್ದಾರೆ.

ಗಂಡಸರ ಉಡಿಗೆ ತೊಡಿಗೆ ಮತ್ತು ನಡೆವಳಿಕೆಗಳು ಎಂದಿನಂತೆಯೇ ಇವೆ. ವಸ್ತುಗಳು ದೊರೆತಂತೆ, ಹಣವಿದ್ದಂತೆ ಇವರ ಉಡುಪಿನ ರೀತಿಗಳೂ ಇರುತ್ತವೆ. ಸೋಲಿಗರ ಹೆಂಗಸರು ತಮ್ಮ ಸೀರೆಯನ್ನು ಕೊಡಗಿನವರಂತೆ ಸೆರಗನ್ನು ಬಲಹೆಗಲಿನ ಮೇಲೆ ಇಳಿಯಬಿಟ್ಟು ಎದೆಯ ಮೇಲು ಭಾಗದಲ್ಲಿ ಒಂದು ಗಂಟು ಹಾಕಿ ಉಡುತ್ತಾರೆ. ಆದರೆ ಬೆಟ್ಟಕುರುಬ ಹೆಂಗಸರು ಸೀರೆಯನ್ನು ಪಂಚೆಯಂತೆ ಎದೆಮುಚ್ಚುವ ಹಾಗೆ ಸುತ್ತುತ್ತಾರೆ. ಬೆಟ್ಟಕುರುಬರ ಹೆಂಗಸರು ಮಿಕ್ಕೆರಡು ಜಾತಿಗಳವರಂತೆ ಕುಪ್ಪಸ ಹಾಕಿಕೊಳ್ಳುವುದಿಲ್ಲ. ಆದರೂ ಈ ಮೂರು ಕುಲಗಳಲ್ಲೂ ಹೆಂಗಸರೂ ಗಂಡಸರೂ ತಮ್ಮ ತಮ್ಮ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಸಭ್ಯತೆಯನ್ನರಿತಿದ್ದಾರೆ. ಹೆಂಗಸರು ಒಡವೆಗಳನ್ನು ಧರಿಸಿ ಅಲಂಕರಿಸಿಕೊಳ್ಳುತ್ತಾರೆ. ಅನೇಕ ಸಲ ಗಂಡಸರಿಗೆ ಈ ವಿಚಾರದಲ್ಲಿ ಶ್ರದ್ಧೆಯಿರುವಂತೆ ತೋರುವುದಿಲ್ಲ. ತಮ್ಮ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಶೃಂಗರಿಸಿಕೊಳ್ಳುವುದರಲ್ಲಿ ಹೆಂಗಸರಿಗೆ ಆಸಕ್ತಿಯುಂಟು. ಅನೇಕವೇಳೆ ಕಾಡಿನಲ್ಲಿ ದೊರೆಯುವ ಬಣ್ಣ ಬಣ್ಣದ ಹೂಗಳು ಇವರ ಮೈಮೇಲೆ ಮೆರೆಯುತ್ತವೆ. ತಲೆಗೆ ಎಣ್ಣೆ ಸವರಿ ಕೂದಲನ್ನು ಬಾಚಿಕೊಳ್ಳುವುದೂ ಇವರಿಗೆ ಸಾಮಾನ್ಯವಾಗಿದೆ. ಕೂದಲನ್ನು ಗಂಟುಹಾಕುವ ಮಾದರಿ ಅವರವರ ಇಚ್ಛೆಯಂತಿರುತ್ತದೆ.

ವಿವಾಹ ಪದ್ಧತಿ ಸರಳವಾಗಿದ್ದರೂ ಕೌತುಕಾಸ್ಪದವಾಗಿದೆ. ಸೋದರಮಾವನ ಮಗಳನ್ನೋ ನೆಂಟರಲ್ಲದವರ ಕನ್ಯೆಯನ್ನೋ ತಂದುಕೊಳ್ಳುವುದು ರೂಢಿ. ಒಬ್ಬ ಗಂಡನಿಗೆ ಹಲವು ಹೆಂಡಿರಿರುವುದುಂಟು. ಒಂದು ಹೆಣ್ಣಿಗೆ ಹಲವು ಗಂಡಂದಿರಿರುವುದು ಕಾಣಬರುವುದಿಲ್ಲ. ಎರಡು ಕುಟುಂಬದವರು ತಮ್ಮ ಹೆಣ್ಣುಗಳನ್ನು ಪರಸ್ಪರವಾಗಿ ಕೊಟ್ಟು ತರುವುದುಂಟು. ಅವರಲ್ಲಿ ಮೂರು ತರದ ಪದ್ಧತಿಗಳು ಕಂಡುಬರುತ್ತವೆ: ತಂದಿಟ್ಟುಕೊಳ್ಳುವುದು, ಎತ್ತಿಕೊಂಡು ಹೋಗುವುದು ಮತ್ತು ವ್ಯವಹಾರ ನಡೆಸಿ ಮದುವೆಯಾಗುವುದು. ದಂಡತೆತ್ತು ಅಥವಾ ಅಡಿಗೆ ಊಟಣವಿತ್ತು ಕೆಟ್ಟ ನಡತೆಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಕುಲದಿಂದ ಹೊರಕ್ಕೆ ತಳ್ಳುತ್ತಾರೆ. ಈ ಜನ ಇತರ ಜನದಂತೆ ತಮ್ಮ ಮದುವೆಯನ್ನು ವಿಜೃಂಭಣೆಯಿಂದ ನಡೆಸುವುದನ್ನು ಕಲಿತಿದ್ದಾರೆ.

ವಿಧವಾವಿವಾಹ ಅಪರೂಪವಲ್ಲ. ಗಂಡಹೆಂಡಿರಲ್ಲಿ ಒಬ್ಬರು ಅಸಮ್ಮತಿಸಿದರೂ ಸರಿ ವಿವಾಹ ವಿಚ್ಛೇದನಕ್ಕೆ ಆಸ್ಪದವುಂಟು. ಕೆಲ ಸಮಯಗಳಲ್ಲಿ ವಿಚ್ಛೇದನಕ್ಕೆ ಅಪೇಕ್ಷಿಪಟ್ಟವರು ಮದುವೆಯ ಖರ್ಚನ್ನು ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಕೈಮಕ್ಕಳು ತಾಯಿಯ ಹತ್ತಿರವಿರುತ್ತವೆ. ಬೆಳೆದ ಮಕ್ಕಳ ಮೇಲೆ ತಂದೆಗೆ ಸ್ವಾಮ್ಯವುಂಟು. ಮಗ ಮದುವೆಯಾದ ಮೇಲೆ ಬೇರೆ ಮನೆಯಲ್ಲಿ ವಾಸಮಾಡುವುದು ರೂಢಿಯಲ್ಲಿದೆ. ಮುಟ್ಟಾದಾಗ ಹೆಣ್ಣು ಐದು ದಿನ ಹೊರಗಿರುವುದು ಪದ್ಧತಿ.

ಬೆಟ್ಟಕುರುಬರ ಭಾಷೆ ಮಲಯಾಳಿ, ಕನ್ನಡ, ಕೊಡವ ಮತ್ತು ತಮಿಳಿನ ಬೆರಕೆ. ಕಾಡುಕುರುಬರೂ ಸೋಲಿಗರೂ ಹಳಗನ್ನಡದ ಅಪಭ್ರಂಶವನ್ನಾಡುತ್ತಾರೆ.

ಕಷ್ಟಪಟ್ಟು ದುಡಿಯುವುದರ ಪರಿಣಾಮವಾಗಿ ಈ ಜನರ ಆರೋಗ್ಯ, ಮೈಕಟ್ಟು ಚೆನ್ನಾಗಿದೆ. ಹಿಂದೆ ಮಲೇರಿಯ ಜ್ವರಕ್ಕೆ ಸಾಮಾನ್ಯವಾಗಿ ಈಡಾಗುತ್ತಿದ್ದರು.

ಔಷಧಿ, ಶಸ್ತ್ರಕ್ರಿಯೆ, ಚುಚ್ಚುಮದ್ದುಗಳಲ್ಲಿ ಇವರಿಗೆ ವಿಶ್ವಾಸವಿಲ್ಲ. ಮೈಯ ಸಣ್ಣ ಪುಟ್ಟ ಗಾಯಗಳನ್ನೂ ಹಸಿರಿನ ಔಷಧಗಳಿಂದ ವಾಸಿಮಾಡಿಕೊಳ್ಳುತ್ತಾರೆ. ದೈವ ಮುನಿಸಿಕೊಂಡದ್ದರಿಂದ ತಮಗೆ ಕಾಯಿಲೆ ಬಂತೆಂದು ಸಾಮಾನ್ಯವಾಗಿ ಭಾವಿಸುತ್ತಾರೆ.

ಬೆಟ್ಟಕುರುಬರು ಮಿಕ್ಕೆರಡು ಕುಲದವರಿಗಿಂತ ಹೆಚ್ಚು ಕಷ್ಟಸಹಿಷ್ಣುಗಳು ಮತ್ತು ನಂಬಿಕೆಗೂ ಅರ್ಹರು. ಜೇನು ಕುರುಬರೂ ಸೋಲಿಗರೂ ಮರ ಹತ್ತುವುದರಲ್ಲಿ ಗಟ್ಟಿಗರು. ಮಿಕ್ಕ ಎರಡು ಕುಲಗಳಿಗಿಂತ ಸೋಲಿಗರು ಹೆಚ್ಚು ನಾಗರಿಕರು. ಇತ್ತೀಚಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ದೃಢ ಪ್ರಯತ್ನಗಳ ಫಲವಾಗಿ ಈ ಜನರನ್ನು ಒಂದೆಡೆಯಲ್ಲಿ ನೆಲೆಗೊಳಿಸುವ ಕಾರ್ಯ ಮುಂದುವರಿಯುತ್ತಿದೆ. ಹೊಸ ತಲೆಮಾರಿನ ಜನ ವಿದ್ಯೆ ಕಲಿಯಲುಪಕ್ರಮಿಸಿ ನಾಗರಿಕರೊಂದಿಗೆ ಹೆಚ್ಚು ಹೆಚ್ಚಾಗಿ ಬೆರೆತು ಬಾಳುವ ಸಾಮರ್ಥ್ಯವನ್ನು ಪಡೆಯುತ್ತಿದ್ದಾರೆ. ಎಲ್ಲ ದೆಸೆಗಳಲ್ಲಿಯೂ ಅವರ ಆಚಾರ ವ್ಯವಹಾರಗಳು ಬದಲಾಯಿಸುತ್ತಿವೆ.

**ಸವೋರರು** : ತಮ್ಮದೇ ಆದ ಸವೋರ ಭಾಷೆಯನ್ನಾಡುವ ಇವರು ಸುಮಾರು ನಾಲ್ಕು ಲಕ್ಷ ಜನರಿದ್ದಾರೆ. ಅವರಲ್ಲಿ ಸು. ಶೇ.80 ಜನ ಒರಿಸ್ಸದಲ್ಲೂ ಉಳಿದವರು ಆಂಧ್ರದಲ್ಲೂ ಇದ್ದಾರೆ. ಕೆಲವರು ಅಸ್ಸಾಮಿನ ಟೀ ತೋಟಗಳಲ್ಲಿದ್ದಾರೆ. ಈ ಬುಡಕಟ್ಟಿನಲ್ಲಿ ಹದಿನಾಲ್ಕು ಉಪವಿಭಾಗಗಳಿವೆ. ಅತ್ಯಂತ ಪ್ರಾಚೀನರಾದ ಕೋರಾಪುಟ್‍ನ ಲಾಂಜಿಯಾ ಸವೋರರು ಹಿತ್ತಾಳೆ ಕೆಲಸಗಾರರು, ಮನೆ ಸವೋರರು, ರಾಯ್‍ಗಡದ ರಾಯ್ಕರು, ಜಾದುಗಳು, ಬುಟ್ಟಿ ಹೆಣಿಗೆ ಮಾಡುವ ಕಿಂಡಾಲ್ ಅಥವಾ ತಂಕ್ಲಾ ಸವೋರರು, ಅತ್ಯಂತ ಕೆಳಮಟ್ಟದವರೆಂದು ಪರಿಗಣಿತರಾಗಿರುವ ಅರ್ಸಿಗಳು, ಕಂಚೇರರು, ಕುರುಬ ಸವೋರರು ಗೋಮಾಂಸ ತಿನ್ನುವುದನ್ನು ಪೂರ್ಣವಾಗಿ ಬಿಟ್ಟುಕೊಟ್ಟು ಉನ್ನತಮಟ್ಟದವರೆಂದು ಪರಿಗಣಿತರಾಗಿರುವ ಶುದ್ಧ ಅಥವಾ ಜಾತಿ ಸವೋರರು, ತೆಲುಗರಾಗಿ ಬಿಟ್ಟಿರುವ ಕಂಪ ಸವೋರರು, ಮಡಕೆ ಮಾಡುವ ಕುಂಬಿಟ್‍ಗಳು, ಮನೇಗಳಂತೆಯೇ ಹಿತ್ತಾಳೆ ಕೆಲಸಗಾರರಾದ ಗೊಂತಾರರು ಮತ್ತು ಕಮ್ಮಾರರಾದ ಲೂವಾಗಳು, ಜಾತಿಸವೋರರು ಅವರ ಮೂಲದ ಸವೋರ ಭಾಷೆಯನ್ನು ಬಿಟ್ಟಿರುವುದಲ್ಲದೆ, ಮೂಲ ಆದಿವಾಸಿ ಸಂಸ್ಕೃತಿಯ ಬಹುಪಾಲನ್ನೂ ಕಳೆದುಕೊಂಡು, ನೆರೆಯ ಒರಿಯ ಜಾತಿಯ ಜನಗಳಿಂದ ಬೇರ್ಪಡಿಸಲು ಅಸಾಧ್ಯರಾಗಿದ್ದಾರೆ. ಇಲ್ಲಿ ಕೊಟ್ಟಿರುವ ಸಾಂಸ್ಕೃತಿಕ ವರ್ಣನೆ ಲಾಂಜಿಯಾ ಸವೋರರಿಗೆ ಅನ್ವಯಿಸುತ್ತದೆ. ಧರಿಸುವ ಕೌಪೀನದ ಮುಂಭಾಗವನ್ನು ಉದ್ದವಾಗಿ ಬಾಲದಂತೆ ಇಳಿಯಬಿಡುವುದರಿಂದ ಅವರನ್ನು ಲಾಂಜಿಯಾ ಅಥವಾ ಬಾಲವುಳ್ಳ ಸವೋರರು ಎಂದು ಕರೆಯುತ್ತಾರೆ.

ಈ ಪ್ರಾಚೀನ ಸವೋರರು ಗಂಜಾಮ್ ಮತ್ತು ಕೋರಾಪುಟ್ ಜಿಲ್ಲೆಗಳ ಅತ್ಯಂತ ದುರ್ಗಮವಾದ ಪರ್ವತಪ್ರದೇಶಗಳಲ್ಲಿದ್ದಾರೆ. ಬೆಟ್ಟದ ಇಳುಕಲಲ್ಲಿ ಅವರ ಹಳ್ಳಿಗಳು, ಸಾಲು ಮನೆಗಳಿಂದ ಸುಂದರವಾಗಿ ನಿರ್ಮಿತವಾಗಿರುತ್ತವೆ. ಸವೋರರ ಮುಖ್ಯ ಜೀವನಮಾರ್ಗ ಸರದಿ ಬೇಸಾಯ. ಇದಕ್ಕಾಗಿ ಬೆಟ್ಟಗಳ ಇಳುಕಲನ್ನು ಕಡಿದು ಹಸನು ಮಾಡುವುದಕ್ಕೆ ಮುಂಚೆ ಪುರೋಹಿತ ಹಂದಿಯನ್ನೋ ಕೋಳಿಯನ್ನೋ ಲೋಬೋಸಮ್‍ಗೆ (ಭೂಮಿದೇವತೆ) ಅರ್ಪಿಸುತ್ತಾನೆ. ಹಸನು ಮಾಡಿದ ಪ್ರದೇಶ ಸುಟ್ಟ ಮರಗಳ ಬೂದಿಯಿಂದ ಫಲವತ್ತಾದ ಮೇಲೆ, ವಿವಿಧ ಬೀಜಗಳನ್ನು ಬಿತ್ತುತ್ತಾರೆ. ದ್ವಿದಳ ಧಾನ್ಯಗಳು, ಬೀನ್ಸ್, ಹರಳು, ರಾಗಿ, ಸಾವೆ ಮುಂತಾದ ಧಾನ್ಯಗಳು ಮತ್ತು ಬೆಟ್ಟಕ್ಕಿಗಳನ್ನು ಒಟ್ಟಿಗೆ ಹಾಕುತ್ತಾರೆ. ಬೆಟ್ಟದ ಇಳುಕಲುಗಳನ್ನು ಮಟ್ಟ ಹೊಡೆದು ಕಷ್ಟಪಟ್ಟು ಅವುಗಳಿಗೆ ಬದುಗಳನ್ನು ಕಟ್ಟಿ ಗದ್ದೆಗಳಿಗೆ ಝರಿಗಳಿಂದ ನೀರು ಹಾಯಿಸುತ್ತಾರೆ.

ಬೆಟ್ಟ ಸವೋರರಲ್ಲಿ ಹೆಸರು ಹೇಳುವಂಥ ಪಂಗಡಗಳು ಯಾವುವೂ ಇಲ್ಲ. ನಾಲ್ಕು ಐದು ತಲೆಮಾರುಗಳಷ್ಟು ಹಿಂದಿನಿಂದ ಬಂದ ಒಂದೊಂದು ಕುಟುಂಬ, ಬಿರಿಂದ ಎಂದು ಕರೆಯುವಂಥದು, ಎಲ್ಲ ಬಗೆಯ ವಿಧಿ, ವಿವಾಹ ಮತ್ತಿತರ ಸಾಮಾಜಿಕ

ಉದ್ದೇಶಗಳಿಗಾಗಿ ಅಳತೆಗೋಲಿದ್ದಂತೆ. ಮದುವೆಯಾದ ಮಾತ್ರಕ್ಕೆ ಹೆಂಗಸು ತನ್ನ ಬಿರಿಂದದಲ್ಲಿ ಬದಲಾವಣೆ ಹೊಂದುವುದಿಲ್ಲವಾದುದರಿಂದ ಅವಳ ಅಂತ್ಯಸಂಸ್ಕಾರವನ್ನು (ಗುಅರ್) ಅವಳ ತವರಿನ ಬಿರಿಂದ ಸದಸ್ಯರೇ ಮಾಡುತ್ತಾರೆ. ಅವಳ ಮದುವೆಯಾದ ಹಳ್ಳಿಯ ಸ್ಮಶಾನದಿಂದ ಅವಳ ಮೂಳೆಗಳನ್ನು ತವರು ಮನೆಗೆ ತರುತ್ತಾರೆ.

ಸವೋರ ಸಮಾಜದಲ್ಲಿನ ಆಡಳಿತ ಪದ್ಧತಿಯಲ್ಲಿ ಆಡಳಿತ ದರ್ಜೆ ಇದೆ. ಗಮಂಗ್ ಎಂದು ಕರೆಯುವ ಗ್ರಾಮ ಮುಖಂಡನೇ ಆ ಪ್ರದೇಶದ ಆಡಳಿತ ಮಾನ್ಯ ಮಾಡಿರುವ ಲೌಕಿಕ ನಾಯಕ. ದೊಲ್ಲ್–ಬೆಹೇರ ಮತ್ತು ಮೊಂದಲ್ಲರು ಅವನಿಗೆ ನೆರವಾಗುತ್ತಾರೆ. ಧಾರ್ಮಿಕ ನಾಯಕನನ್ನು ಬುಯ್ಯ ಎಂದು ಕರೆಯುತ್ತಾರೆ. ಈ ನಾಲ್ವರು ಮತ್ತು ಅವರ ಬಿರಿಂದರು ಸವೋರ ಶ್ರೀಮಂತವರ್ಗವೆನಿಸುತ್ತಾರೆ. ಸಾಮಾನ್ಯ ಜನರನ್ನು ರೊಯತ್ತರೆಂದು ಕರೆಯಲಾಗುತ್ತದೆ. ರೊಯತ್ತರಿಗೂ ಶ್ರೀಮಂತರಿಗೂ ಅಂತರ ವಿವಾಹಕ್ಕೆ ಸಾಮಾನ್ಯವಾಗಿ ಅನುಮತಿಯಿಲ್ಲ. ಶ್ರೀಮಂತರು ಸಂಖ್ಯೆಯಲ್ಲಿ ಕಡಿಮೆಯಿರುವುದರಿಂದ ಮದುವೆ, ಅದರಲ್ಲೂ ಅವರ ಹೆಂಗಸರಿಗೆ, ಕಷ್ಟ. ಬಹುಪತ್ನೀತ್ವದಿಂದ ಈ ಸಮಸ್ಯೆ ಸ್ವಲ್ಪಮಟ್ಟಿಗೆ ಪರಿಹಾರವಾಗಿದೆ. ಗಮಂಗ್ ದಾಯಾದಿಗಳ ಪರಸ್ಪರ ವಿವಾಹಕ್ಕೆ ಸವೋರರಲ್ಲಿ ಅವಕಾಶವಿದೆ. ಎಷ್ಟೋಸಲ ಅದನ್ನೇ ಅಪೇಕ್ಷಿಸುವುದೂ ಉಂಟು. ಮದುವೆಯ ಸಮಾರಂಭಗಳು ಬಹಳ ಸರಳ. ಗಂಡಿನ ಕಡೆಯವರು ಕೊಡುವ ಒಂದು ಮಡಕೆ ಈಚಲ ಹೆಂಡವನ್ನು ಸ್ವೀಕರಿಸುವುದರಿಂದ ಗಂಡಿನ ಒಪ್ಪಿಗೆಯನ್ನು ಪಡೆದಂತಾಗುತ್ತದೆ. ನಿಶ್ಚಿತಾರ್ಥ ಅಂತಿಮ ತೀರ್ಮಾನಕ್ಕೆ ಬರುವುದು ಒಂದು ಬಾಣವನ್ನು ಸ್ವೀಕರಿಸುವುದರಿಂದ. ಕನ್ಯಾಶುಲ್ಕ ಕೊಡಲೇಬೇಕು. ಸೋದರೀ ಸಂಬಂಧ (ಸತ್ತವನ ಹೆಂಡತಿಯನ್ನು ಅವನ ತಮ್ಮ ಅಥವಾ ಬೇರೊಬ್ಬ ಹತ್ತಿರ ಸಂಬಂಧಿ ಮದುವೆ ಮಾಡಿಕೊಳ್ಳಬೇಕೆಂಬ ನಿಯಮ) ಮತ್ತು ಬಹುಪತ್ನೀತ್ವಗಳು ಸಾಮಾನ್ಯ. ವ್ಯಕ್ತಿ ಪ್ರಮುಖನಾದಷ್ಟೂ ಅವನ ಪತ್ನಿಯರ ಸಂಖ್ಯೆ ಹೆಚ್ಚಾಗಿರುತ್ತದೆ.

ಸವೋರ ಸ್ತ್ರೀಯರು ಶ್ರಮಜೀವಿಗಳು. ತಮ್ಮ ಆರ್ಥಿಕ ಪ್ರಾಮುಖ್ಯದಿಂದಾಗಿ ಉತ್ತಮ ಸ್ಥಾನ ಗೌರವವನ್ನು ಪಡೆಯುತ್ತಾರೆ. ಯಾವ ಕನ್ಯೆಗೂ ಅವಳ ಇಷ್ಟವನ್ನು ತಿಳಿದುಕೊಳ್ಳದೆ ಮದುವೆ ಮಾಡುವುದಿಲ್ಲ. ಹೆಂಗಸರು ಷಾಮನಿನ್ (ಸ್ತ್ರೀಪುರೋಹಿತರು) ಆಗುವುದೂ ಉಂಟು. ಸವೋರರು ತಮ್ಮ ಮಕ್ಕಳ ಮೇಲೆ ತುಂಬ ಕರುಣೆ, ಪ್ರೀತಿಗಳನ್ನುಳ್ಳವರು. ಸವೋರ ಹಳ್ಳಿಯಲ್ಲಿ ಮಕ್ಕಳು ಅಳುವುದೇ ಕಾಣಿಸುವುದಿಲ್ಲ. ಅವರು ಮಕ್ಕಳನ್ನು ದೊಡ್ಡವರಂತೆಯೇ ಸಮಾರಂಭಗಳಲ್ಲಿ ಭಾಗವಹಿಸಲು, ಬೀಡಿ ಸೇದಲು, ಕುಡಿಯಲು ಬಿಡುತ್ತಾರೆ.

ಸವೋರ ದೇವಪಂಕ್ತಿಯಲ್ಲಿ ಬಹುಸಂಖ್ಯೆಯ ದೇವದೇವಿಯರಿರುವುದಲ್ಲದೆ, ದೇವತ್ವ ಹೊಂದಿದ ಪಿತೃಗಳೂ ಇದ್ದು, ಬದುಕನ್ನು ನಿರಂತರವಾಗಿ ಗಮನಿಸುತ್ತ ಅದರ ಆಗುಹೋಗು ಗಳಲ್ಲಿ ಪಾತ್ರವಹಿಸುತ್ತಾರೆ. ರೋಗಗಳಿಗೆ ಕಾರಣ ಯಾವುದೋ ಪ್ರೇತಾತ್ಮಗಳ ಕೋಪ; ಪರ್ವತ, ಅರಣ್ಯ, ಗದ್ದೆ, ಮನೆಗಳ ಅಧಿದೇವತೆಗಳಾಗಿರುವ ಈ ಪ್ರೇತಾತ್ಮಗಳು ತಮ್ಮದೇ ಆದ ಒಂದು ಕೆಳ ಜಗತ್ತಿನಲ್ಲಿ ವಾಸಿಸುತ್ತಾರೆಂದು ನಂಬಲಾಗಿದೆ. ಇವರೊಂದಿಗೆ ವ್ಯವಹರಿಸಲು ಅಸಂಖ್ಯಾತ ಸ್ತ್ರೀಪುರುಷ ಪುರೋಹಿತರು ಸವೋರರಲ್ಲಿದ್ದಾರೆ. ತಮ್ಮ ವ್ಯವಹಾರದಲ್ಲಿ ಮೂಗು ಹಾಯಿಸುವ ಈ ಪ್ರೇತಾತ್ಮಗಳಿಗೆ ಕಾಣಿಕೆಗಳನ್ನು, ಪ್ರಾಣಿಗಳನ್ನು ವರ್ಷದ ಎಲ್ಲ ಕಾಲಗಳಲ್ಲೂ ಅಸಂಖ್ಯ ಸಂದರ್ಭಗಳಲ್ಲಿ ಅರ್ಪಿಸುತ್ತಾರೆ. ಪ್ರತಿಯೊಂದು ಕಾಯಿಲೆಗೂ ಕೊನೆಗೆ ಒಂದು ತಲೆನೋವಿಗೂ ಪುರೋಹಿತನನ್ನೇ ವಿಚಾರಿಸಬೇಕು; ಅದಕ್ಕೆ ತಕ್ಕ ದೇವತೆಯನ್ನು ತುಷ್ಟಿಪಡಿಸ ಬೇಕು. ಸಾಮಾನ್ಯವಾಗಿ ಡಾಮ್ ಬುಡಕಟ್ಟಿಗೆ ಸೇರಿದ ಸಾಲಿಗನಿಂದ, ಸಾಲವಾಗಿ ತೆಗೆದುಕೊಂಡ ಹಣದಿಂದ ಬಲಿಕೊಡಲು ಕೋಣಗಳನ್ನು ಕೊಳ್ಳುತ್ತಾರೆ. ಅವರ ಹೆಚ್ಚಿನ ಹಬ್ಬಗಳಲ್ಲಿ ವಿಪರೀತ ಕುಡಿತ, ನರ್ತನಗಳಿರುತ್ತವೆ. ಧರ್ಮದ ಹೆಸರಿನಲ್ಲಿ ತುಂಬ ಸಾಲ ಮಾಡಿರುವ ಸವೋರರು ತೀರ ಬಡವರಾಗಿದ್ದಾರೆ. ಧರ್ಮ ಹೇರಿರುವ ಈ ಹೊರೆಯಿಂದ ತಪ್ಪಿಸಿಕೊಳ್ಳಲು ಕ್ರೈಸ್ತಧರ್ಮ ಕೆಲವರಿಗೆ ಒಂದು ದಾರಿಯನ್ನೊದಗಿಸಿದೆ. ಹಲವು ಕ್ರೈಸ್ತ ಮಿಷನರಿಗಳು ಸವೋರರ ನಡುವೆ ಧರ್ಮಬೋಧೆಯನ್ನು ಬಹು ಚುರುಕಾಗಿ ನಡೆಸುತ್ತಿದ್ದಾರೆ.

ಸವೋರರು ಸಂಗೀತಪ್ರಿಯರು, ಅವರಲ್ಲಿ ಬೇಕಾದಷ್ಟು ಸಂಗೀತವಾದ್ಯಗಳಿವೆ. ಚೆನ್ನಾಗಿ ಬಲ್ಲವರು ಹಲವು ಉತ್ತಮ ಗುಣಗಳಿಗಾಗಿ ಅವರನ್ನು ಮೆಚ್ಚುತ್ತಾರೆ. ವಿದ್ವಾಂಸರು ಅವರನ್ನು ಋಗ್ವೇದದಲ್ಲಿ ಉಲ್ಲೇಖಿತವಾಗಿರುವ ಶಬರರೊಂದಿಗೆ ಸಮೀಕರಿಸುವುದುಂಟು. ಸವೋರರು ತುಂಬ ಹಿಂದೆ ಬಹು ವಿಸ್ತಾರವಾಗಿ ಹರಡಿಕೊಂಡಿದ್ದು, ಬಹಳ ದೀರ್ಘವಾದ ಚರಿತ್ರೆಯನ್ನು ಹೊಂದಿದ್ದ ಆದಿವಾಸಿಗಳು; ಆದರೆ ಅದೆಲ್ಲ ಈಗ ಕಳೆದುಹೋದ ಚರಿತ್ರೆಯಾಗಿದೆ.

ಇಷ್ಟು ವಿಚಾರಗಳು ಪ್ರಾತಿನಿಧಿಕವಾಗಿ ಕೆಲವು ಆದಿವಾಸಿ ಬುಡಕಟ್ಟುಗಳನ್ನು ಕುರಿತದ್ದಾಗಿದೆ. ಇವಲ್ಲದೆ ಇನ್ನೂ ಅನೇಕ ಬುಡಕಟ್ಟುಗಳ ಬಗ್ಗೆ ಶಾಸ್ತ್ರೀಯ ವ್ಯಾಸಂಗ ನಡೆಯಬೇಕಾಗಿದೆ. ಕೇರಳದ ಮಲೆಯ ಒರಿಯನರು, ಪುಲಯನರು, ವಡ್ಡರು, ಪಣಿಯರು, ಉರಲೀ, ಬಿಹಾರದ ಗಡಬರು, ಬಿಹಾರ್ ಮತ್ತು ಒರಿಸ್ಸದ ಮುಂಡರು, ಬಿಹಾರ್ ಮತ್ತು ಬಂಗಾಲದ ಸಂತಾಲರು, ಮಧ್ಯ ಪ್ರದೇಶದ ಮರಿಯರು, ಭಿಲ್ಲರು, ಆಂಧ್ರದ ರೆಡ್ಡಿಗಳು, ಅಸ್ಸಾಮಿನ ಖಾಸಿಗಳು–ಇವರ ಬಗ್ಗೆ ಸಾಕಷ್ಟು ಮಾಹಿತಿ ದೊರೆತಿದೆ **ನೋಡಿ– ಎಲ್ವಿನ್, ವೆರಿಯರ್.**

(ಎ.ಎ.ಐ.)

**ಆದಿವಾಸಿ ಧರ್ಮ** : ಪೂರ್ವಜರ ಆರಾಧನೆಯಿಂದ ಆದಿವಾಸಿ ಧರ್ಮ ಹುಟ್ಟಿತು ಎಂದು ಹರ್ಬರ್ಟ್ ಸ್ಪೆನ್ಸರನೂ ಯಕ್ಷಿಣಿ, ಮಂತ್ರ, ಮಾಟಗಳಿಂದ ಹುಟ್ಟಿತೆಂದು ಜೇಮ್ಸ್ ಫ್ರೇಜರನೂ ಹೇಳುತ್ತಾರೆ. ಭಯ, ಭೀತಿ, ಆಶ್ಚರ್ಯಗಳಿಂದ ನಿಸರ್ಗದ ವೈಚಿತ್ರ್ಯದ ಫಲವಾಗಿ ಧರ್ಮ ಹುಟ್ಟಿದೆ, ಅದೇ ಆದಿವಾಸಿಗಳಲ್ಲಿ ಕಂಡುಬರುವ ಧರ್ಮವಾಗಿದೆ ಎಂದು ವಾದಿಸುವವರೂ ಇದ್ದಾರೆ. ಇಂದು ಆದಿವಾಸಿಗಳಲ್ಲಿ ಕಂಡುಬರುವ ಅನೇಕ ಪದ್ಧತಿ ಪರಂಪರೆಗಳಿಗೆ ಅತಿ ಪ್ರಾಚೀನ ಇತಿಹಾಸ ಇದೆ. ಅದರ ಆಚಾರ ವಿಚಾರಗಳಲ್ಲಿ ಕೆಲವು ವೈಜ್ಞಾನಿಕವೆನ್ನಿಸಿದರೆ ಹಲವು ಅಜ್ಞಾನದ್ಯೋತಕವಾಗಿಯೂ ಇವೆ. ಆದಿವಾಸಿಗಳಿಗೆ ಜೀವ, ಆತ್ಮದ ಬಗ್ಗೆ ನಂಬಿಕೆ ಇತ್ತು. ಬಹುಶಃ ನೀರಿನ ಪ್ರತಿಬಿಂಬ, ನೆರಳು, ಮರಣ, ಕನಸು ಮುಂತಾದವುಗಳ ಅನುಭವದಿಂದ ಆತ್ಮದ ಕಲ್ಪನೆ ಅವರಿಗೆ ಬಂದಿರಬೇಕು. ಸತ್ತವನ ಆತ್ಮ ಹಿಂತಿರುಗಿ ಬರುತ್ತದೆ ಅಥವಾ ಇನ್ನೊಂದು ಲೋಕಕ್ಕೆ ಹೋಗುತ್ತದೆ ಎಂಬ ನಂಬಿಕೆಯಿತ್ತು. ಆದಕಾರಣ ಸತ್ತವನ ಅನುಕೂಲತೆಗಾಗಿ ಅವನಿಗೆ ಪ್ರಿಯವಾಗಿದ್ದ ವಸ್ತುಗಳನ್ನು ಆತನೊಂದಿಗೆ ಗೋರಿಗೊಳಿಸುತ್ತಿದ್ದರು. ಆತ್ಮವೆಂಬ ಚೈತನ್ಯ ಅಥವಾ ಶಕ್ತಿ ಗಿಡ, ಮರ, ಪ್ರಾಣಿ, ಬೆಟ್ಟ, ಗುಡ್ಡ, ಕಲ್ಲು, ನಕ್ಷತ್ರ, ಚಂದ್ರ ಮೊದಲಾದುವುಗಳಲ್ಲಿ ವಾಸಿಸುತ್ತದೆ ಎಂಬ ನಂಬಿಕೆ ಇದ್ದುದರ ಫಲವಾಗಿ ವೃಕ್ಷಪೂಜೆ, ಪ್ರಾಣಿಪೂಜೆ, ನರಬಲಿ, ಕುಲಸಂಕೇತಗಳ ಆರಾಧನೆ, ವಿಧಿ ನಿಷಿದ್ಧಗಳ ಪರಂಪರೆ (ಟ್ಯಾಬೂ), ಪ್ರಕೃತಿಯ ಆರಾಧನೆ, ಭೂತಾರಾಧನೆ, ಪೂರ್ವಜರ ಆರಾಧನೆ ಇತ್ಯಾದಿ ಕಂಡುಬರುತ್ತವೆ. ದೈವಶಕ್ತಿಗಳನ್ನು ಒಲಿಸಿಕೊಳ್ಳಲು ಮಾಡಿದ ಈ ಪ್ರಯತ್ನಗಳ ಫಲವಾಗಿ ಅವರಲ್ಲಿ ಪ್ರಾರ್ಥನೆ, ನೃತ್ಯ, ಗೀತ, ಬಲಿ, ಕಾಣಿಕೆ, ಪೂಜಾಪದ್ಧತಿಗಳೂ ಇದಕ್ಕೆ ತಕ್ಕಂತೆ ಯಕ್ಷಿಣಿಕಾರ, ಮಂತ್ರಮಾಟಕಾರ, ಪುರೋಹಿತ ವರ್ಗದವರು ನೇಮಕಗೊಂಡರು. ಸಿಡಿಲು, ಗುಡುಗು, ಮಳೆ, ಪ್ರವಾಹ, ಜ್ವಾಲಾಮುಖಿ, ಭೂಕಂಪಗಳು ಆದಿವಾಸಿಗಳ ಪ್ರಕೃತಿ ಪೂಜೆ, ದೈವ ಕಲ್ಪನೆಗಳಿಗೆ ಕಾರಣವಾಗಿರಬೇಕು. ಸತ್ತವರ ಆತ್ಮದ ಪ್ರೀತ್ಯರ್ಥ ಹಬ್ಬ, ಉತ್ಸವ, ಭೂತಾರಾಧನೆಗಳು ನಡೆಯುತ್ತಿದ್ದವು. ಆದಿವಾಸಿಗಳಲ್ಲಿ ಪೂರ್ವಜರ ಆರಾಧನೆಗೆ ಮಹತ್ತ್ವದ ಸ್ಥಾನವಿತ್ತು. ಮಾನವ ಸಮಾಜದ ವಿಕಾಸದ ಇತಿಹಾಸದಲ್ಲಿ ಆದಿವಾಸಿ ಧರ್ಮ ಹಿರಿಯ ಪಾತ್ರವಹಿಸಿದೆ. (ಜಿ.ಎ.)

**ಆದಿಶಂಕರಾಚಾರ್ಯ :** 789–820. ಅದ್ವೈತ ತತ್ತ್ವಪ್ರತಿಪಾದಕರಲ್ಲಿ ಅಗ್ರಗಣ್ಯರು. ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲೆ ಆಳವೂ ಮೌಲಿಕವೂ ಆದ ಭಾಷ್ಯಗಳನ್ನು ಬರೆದಿದ್ದಾರೆ. ಇವರ ಅದ್ವೈತ ತುಂಬ ವಿಚಾರಪರವೂ ತರ್ಕನಿಷ್ಠವೂ ಆದ ಸಿದ್ಧಾಂತ. ಅದು ಒಂದು ಕಲಾಕೃತಿಯಂತೆ ಪರಿಪೂರ್ಣವಾಗಿದೆ. ತನ್ನ ಸಿದ್ಧಾಂತಕ್ಕೆ ಆಧಾರವಾದ ತತ್ತ್ವಗಳನ್ನೂ ಅದರ ಅಂತಿಮ ಗುರಿಯನ್ನೂ ಸ್ಪಷ್ಟಪಡಿಸಿ ಅದರ ಎಲ್ಲ ಅಂಶಗಳನ್ನು ಸುಸಂಗತವಾಗಿ ವಿಶದಗೊಳಿಸಿದೆ. ಭಾರತೀಯ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಮೆಚ್ಚುಗೆ ಪಡೆದಿದೆ.

ಇವರ ಬಗ್ಗೆ ನಮಗೆ ತಿಳಿದಿರುವ ಅಂಶಗಳು ಅತ್ಯಲ್ಪ. ಇವರು ಯಾವ ಕಾಲದಲ್ಲಿ ಹುಟ್ಟಿ ಬೆಳೆದರು ಎಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇವರು 6ನೆಯ ಶತಮಾನದ ಮಧ್ಯೆ ಅಥವಾ ಅಂತಿಮ ಭಾಗದಲ್ಲಿದ್ದಿರಬಹುದೆಂದು ತೇಲಂಗರು, 980 ಅಥವಾ ಅದಕ್ಕೆ ಕೆಲವು ವರ್ಷಗಳ ಹಿಂದೆ ಇದ್ದಿರಬಹುದೆಂದು ಆರ್. ಜಿ. ಭಂಡಾರ್ಕರ್ ಅವರು ವಾದಿಸುತ್ತಾರೆ. 820ರಲ್ಲಿ ನಿರ್ವಾಣ ಹೊಂದಿದರೆಂದು ಮ್ಯಾಕ್ಸ್‌ಮುಲರ್ ಮತ್ತು ಮ್ಯಾಕ್‌ಡೊನೆಲ್ ಅವರು ಅಭಿಪ್ರಾಯಪಡುತ್ತಾರೆ. 9ನೆಯ ಶತಮಾನದ ಆದಿಯಲ್ಲಿ ಇದ್ದರೆಂದು ಬೆರಿಡೇಲ್ ಕೀತ್ ತಿಳಿಸುತ್ತಾನೆ. ಅಂತೂ ಇವರು ಬದುಕಿ ಬಾಳಿದ ಅವಧಿ 32 ವರ್ಷಗಳೇ ಎಂಬ ವಿಚಾರದಲ್ಲಿ ಹೆಚ್ಚು ಕಡಿಮೆ ಎಲ್ಲರ ಒಮ್ಮತವಿದೆ. ಇಷ್ಟು ಅವಧಿಯಲ್ಲಿ ಬಹುಶಃ ಇವರು ಸಾಧಿಸಿದಷ್ಟು ಮಹಾಕಾರ್ಯಗಳನ್ನಾಗಲಿ ರಚಿಸಿದಷ್ಟು ಮಹಾಗ್ರಂಥಗಳನ್ನಾಗಲಿ, ಬೇರೆ ಯಾವ ಭಾರತೀಯ ತತ್ತ್ವಜ್ಞರಿಂದಲೂ ಸಾಧ್ಯವಾಗಿಲ್ಲ.

ಶಂಕರಾಚಾರ್ಯರ ಅನುಯಾಯಿಗಳು ಇವರ ಜೀವನ ಚರಿತ್ರೆಯನ್ನು ರಚಿಸಿದ್ದಾರೆ. ಅವುಗಳಲ್ಲಿ ಮಾಧವಾಚಾರ್ಯರ ಶಂಕರದಿಗ್ವಿಜಯ ಮತ್ತು ಆನಂದಗಿರಿಯ ಶಂಕರವಿಜಯ ಮುಖ್ಯವಾದವು. ಚಿದ್ವಿಲಾಸ ಮತ್ತು ಸದಾನಂದ ಇವರಿಬ್ಬರೂ ಶಂಕರಾಚಾರ್ಯರ ಜೀವನದ ಕೆಲವು ವಿವರಗಳನ್ನು ತಿಳಿಸಿದ್ದಾರೆ. ಸ್ಕಾಂದಪುರಾಣದಲ್ಲೂ ಕೆಲವು ವಿವರಗಳು ದೊರೆಯುತ್ತವೆ. ನಾರಾಯಣಾಚಾರ್ಯರು ತಮ್ಮ ಮಧ್ವವಿಜಯದಲ್ಲೂ ಮಣಿಮಂಜರಿಯಲ್ಲೂ ಶಂಕರಾಚಾರ್ಯರ ಜೀವನವನ್ನು ಕುರಿತು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಇವುಗಳಲ್ಲಿ ಬಹುಭಾಗ ಕೇವಲ ಕಾಲ್ಪನಿಕವಾದವು. ಚರಿತ್ರೆಯ ದೃಷ್ಟಿಯಲ್ಲಿ ಮುಖ್ಯವಾದುವಲ್ಲ. ಪ್ರ.ಶ.ಪೂ. 44ರಲ್ಲಿ ಚಿದಂಬರದಲ್ಲಿ ಜನಿಸಿ, ಪ್ರ.ಶ.ಪೂ. 12ರಲ್ಲಿ ದೈವಾಧೀನರಾದರೆಂದು ಆನಂದಗಿರಿ ಯವರು ತಿಳಿಸುತ್ತಾರೆ. ಇವರ ಅಭಿಪ್ರಾಯಕ್ಕೆ ಆಧಾರವಿಲ್ಲ.

ಶಂಕರಾಚಾರ್ಯರು ಮಲಬಾರಿನ ನಂಬೂದರಿ ಬ್ರಾಹ್ಮಣ ಜಾತಿಗೆ ಸೇರಿದವರು. ಕೇರಳದ ಕಾಲಟಿಯಲ್ಲಿ ಶಿವಗುರು ಮತ್ತು ಆರ್ಯಾಂಬಾಮಾದೇವಿ ಎಂಬ ದಂಪತಿಗಳ ಮಗನೆಂದು ಸಾಮಾನ್ಯವಾಗಿ ಎಲ್ಲರೂ ನಂಬಿರುತ್ತಾರೆ. ಶಂಕರಾಚಾರ್ಯರ ಮನೆತನದವರು ಶೈವರೆಂದೂ ಶಾಕ್ತೇಯರೆಂದೂ ಎರಡು ಅಭಿಪ್ರಾಯಗಳಿವೆ. ಇವರು ಬಾಲ್ಯದಲ್ಲಿ ಗೌಡಪಾದರ

ಶಿಷ್ಯರಾದ ಗೋವಿಂದರಲ್ಲಿ ವಿದ್ಯಾಭ್ಯಾಸ ಮಾಡಿದರು. ತಮ್ಮ ಗ್ರಂಥಗಳಲ್ಲಿ ಇವರು ಗೋವಿಂದರ ಶಿಷ್ಯರೆಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಬಹಳ ಚಿಕ್ಕ ಹುಡುಗನಾಗಿದ್ದಾಗಲೇ ಎಲ್ಲ ವೇದಗಳನ್ನೂ ಬಾಯಿಪಾಠ ಮಾಡಿದ್ದರೆಂದು ತಿಳಿದುಬರುತ್ತದೆ. ಯೌವನದಲ್ಲೇ ಇವರಿಗೆ ಸನ್ಯಾಸದ ಹಂಬಲು ಹಿಡಿಯಿತು. ತಾಯಿಗಾದರೋ ಮಗನು ಮದುವೆಯಾಗಿ ಮಕ್ಕಳನ್ನು ಪಡೆದುದನ್ನು ನೋಡಿ ಆನಂದಿಸುವ ಹೆಬ್ಬಯಕೆ. ಮಗನ ದೃಢಸಂಕಲ್ಪವನ್ನೂ ನಿರಂತರ ಬೇಡಿಕೆಯನ್ನೂ ಆಧರಿಸಿ ಅವಸಾನ ಕಾಲದಲ್ಲಿ ತನ್ನ ಬಳಿಗೆ ಬರಬೇಕೆಂದು ಮಗನಿಂದ ಮಾತು ಪಡೆದು ತಾಯಿ ಮಗನಿಗೆ ಸನ್ಯಾಸ ಸ್ವೀಕಾರಕ್ಕೆ ಒಪ್ಪಿಗೆ ಕೊಟ್ಟರು.

ಇವರು ತಾವು ತಿಳಿದ ತತ್ತ್ವವನ್ನು ಬೋಧಿಸಲು ತಮ್ಮ ಜೀವಮಾನವನ್ನೇ ಮುಡಿಪಾಗಿಟ್ಟು ಕನ್ಯಾಕುಮಾರಿಯಿಂದ ಹಿಡಿದು ಕಾಶ್ಮೀರದವರೆಗೆ ಇಡೀ ಭಾರತವನ್ನು ಸುತ್ತಿದರು. ಬೇರೆ ಬೇರೆ ಕಡೆಗಳಲ್ಲಿ ಸಂಧಿಸಿದ ಭಿನ್ನಮತದವರೊಡನೆ ವಾದ ನಡೆಸಿದರು. ಪ್ರಸಿದ್ಧ ಮೀಮಾಂಸಕ ರಾದ ಕುಮಾರಿಲಭಟ್ಟರನ್ನೂ ಮಂಡನಮಿಶ್ರರನ್ನೂ ವಾದದಲ್ಲಿ ಗೆದ್ದು ಅವರನ್ನು ತಮ್ಮ ಅನುಯಾಯಿಗಳಾಗಿ ಮಾಡಿಕೊಂಡರೆಂದು ತಿಳಿಯಬರುತ್ತದೆ. ಒಂದು ಸಂಪ್ರದಾಯದ ಪ್ರಕಾರ ಶಂಕರಾಚಾರ್ಯರು ಕುಮಾರಿಲಭಟ್ಟರ ಶಿಷ್ಯರು.

ವಿರಕ್ತರಾದರೂ ಇವರು ಮಾನವ ಶ್ರೇಯಸ್ಸಿನಲ್ಲಿ ಆಸಕ್ತಿ ಪಡೆದಿದ್ದರು. ಕ್ಷೀಣದಶೆಯಲ್ಲಿದ್ದ, ಕುರುಡು ನಂಬಿಕೆಗಳಿಗೆ ಬಲಿಯಾಗಿದ್ದ ಅಸಹ್ಯಕರ ವರ್ತನೆಗಳಿಂದ ತುಂಬಿದ್ದ ಅಂದಿನ ಮತಗಳನ್ನು ಶುದ್ಧೀಕರಿಸಿ ಶುದ್ಧವಾದ ಹಲವು ಸಂಪ್ರದಾಯಗಳನ್ನು ಸ್ಥಾಪಿಸಲು ಹಗಲಿರುಳೂ ಶ್ರಮಿಸಿದರು. ಅದಕ್ಕಾಗಿ ದೇಶಾಟನೆಯನ್ನು ಕೈಗೊಂಡರು. ಕಾಮರೂಪದಲ್ಲಿ ಅಭಿನವಗುಪ್ತ ನೊಂದಿಗೆ ವಾದ ನಡೆಸಿ ಗೆದ್ದರೆಂದು ಐತಿಹ್ಯವಿದೆ. ಇದು ನಿಜವಾದರೆ ಇವರ ಜೀವನಕಾಲ ಇನ್ನೂ ಮುಂದೆ ಹೋಗಬೇಕಾಗುತ್ತದೆ. ಸಂನ್ಯಾಸಿಗಳಾದರೂ ತಾಯಿಯ ಅಂತ್ಯಕ್ರಿಯೆ ನಡೆಸಿ ಸಂಪ್ರದಾಯಶರಣರ ನೈಷ್ಠುರ್ಯಕ್ಕೆ ತುತ್ತಾದರು. ಕಂಚಿಯಲ್ಲಿ ಕೆಲವು ಕಾಲವಿದ್ದು ಪುನಃ ಉತ್ತರ ದೇಶಗಳಿಗೆ ಹೋಗಿ ಕೇದಾರನಾಥದಲ್ಲಿ ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ನಿರ್ವಾಣ ಹೊಂದಿದರು.

ಶಂಕರಾಚಾರ್ಯರು ತಮ್ಮ ಕೆಲವೇ ವರ್ಷಗಳ ಜೀವನದಲ್ಲಿ ನಾಲ್ಕಾರು ಜನ ಒಂದೊಂದು ಪೂರ್ಣಜೀವಮಾನದಲ್ಲಿ ಸಾಧಿಸಬಹುದಾದಷ್ಟನ್ನು ಸಾಧಿಸಿದ ಮಹಾಪುರುಷರು. ಪ್ರಸ್ಥಾನತ್ರಯಗಳೆಂದು ಪ್ರಸಿದ್ಧವಾದ ಮುಖ್ಯವಾದ ಉಪನಿಷತ್ತುಗಳು, ಐತರೇಯ, ಬೃಹದಾರಣ್ಯಕ, ಈಶ, ಕೇನ, ಕಠ, ತೈತ್ತಿರೀಯ, ಶ್ವೇತಾಶ್ವತರ, ಛಾಂದೋಗ್ಯ, ಮಾಂಡೂಕ್ಯ, ಮುಂಡಕ, ಪ್ರಶ್ನ ಉಪನಿಷತ್ತುಗಳಿಗೆ. ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳ ಮೇಲೆ ಅತ್ಯುತ್ಕೃಷ್ಟವಾದ ಭಾಷ್ಯಗಳನ್ನು ಬರೆದಿದ್ದಾರೆ. ಅದ್ವೈತತತ್ತ್ವವನ್ನು ಸ್ಥಾಪಿಸುವುದೇ ಈ ಮೂರು ಭಾಷ್ಯಗಳ ಮುಖ್ಯೋದ್ದೇಶ. ಅತಿ ಗಹನವಾದ ತತ್ತ್ವವನ್ನು ಇವರು ಬಹಳ ಸರಳವಾದ ಶೈಲಿಯಲ್ಲಿ ಹೇಳಿದ್ದಾರೆ. ಅಲ್ಲಲ್ಲಿ ಕಾಣಬರುವ ನವುರಾದ ಹಾಸ್ಯ ಅವರ ಬರವಣಿಗೆಯನ್ನು ಮನೋಹರವಾಗಿ ಮಾಡಿದೆ. ಅವರದ್ದು ತಿಳಿಯಾದ, ಗಂಭೀರವಾದ, ಸಾರಪ್ರಕಾಶನ ಯೋಗ್ಯವಾದ, ಸುಂದರ ಶೈಲಿ. ಬ್ರಹ್ಮಸೂತ್ರಭಾಷ್ಯ ಆಚಾರ್ಯರ ಎಲ್ಲ ಗ್ರಂಥಗಳಿಗಿಂತಲೂ ಸುಂದರವಾದುದು, ಪ್ರೌಢವಾದುದು ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಶರೀರದಲ್ಲಿ ಸ್ಥಿತನಾದ ಆತ್ಮನ ವಿಚಾರವನ್ನು ಕುರಿತದ್ದಾದುದರಿಂದ ಬ್ರಹ್ಮಸೂತ್ರಗಳನ್ನು ಶಾರೀರಿಕ ಸೂತ್ರಗಳೆಂದೂ ಭಾಷ್ಯವನ್ನು ಶಾರೀರಕ ಭಾಷ್ಯವೆಂದೂ ಕರೆಯುತ್ತಾರೆ. ಗೀತಾಭಾಷ್ಯದಲ್ಲಿ ಅನುಕ್ರಮವಾಗಿ ಪ್ರತಿ ಪದದ ಅರ್ಥವೂ ತಾತ್ಪರ್ಯವೂ ಇವೆ. ಈ ಭಾಷ್ಯ ಜ್ಞಾನಪರವಾದುದು. ಏಕೆಂದರೆ ತತ್ತ್ವಜ್ಞಾನದಿಂದ ಮಾತ್ರ ಮೋಕ್ಷ ಪ್ರಾಪ್ತಿ ಎಂಬುದು ಆಚಾರ್ಯರ ಅಭಿಪ್ರಾಯ. ಉಪನಿಷದ್ ಭಾಷ್ಯಗಳು ಮೂಲಕೃತಿಯಷ್ಟೇ ಸರಳವಾಗಿವೆ. ಸಾಹಿತ್ಯದ ದೃಷ್ಟಿಯಿಂದ ಇವಕ್ಕೆ ಮಹತ್ವ ಉಂಟು. ಪ್ರೌಢವೂ ಶಾಸ್ತ್ರೀಯವೂ ನೇರವೂ ಆದ ಗದ್ಯದ ಉತ್ತಮ ಮಾದರಿಗಳು ಇಲ್ಲಿವೆ.

ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಸಾಮರಸ್ಯವಿದೆ. ಏಕಮುಖವಾದ ದೃಷ್ಟಿ ಇದೆ. ಒಂದೇ ತತ್ತ್ವದ ನಿರೂಪಣೆಯೂ ಇದೆ. ಆಚಾರ್ಯರ ಸಿದ್ಧಾಂತಗಳನ್ನು ಆಮೂಲಾಗ್ರವಾಗಿ ತಿಳಿಯಲು ಇವು ಅತ್ಯಂತ ಆವಶ್ಯಕ. ಶಂಕರರು ತತ್ತ್ವಜ್ಞರಷ್ಟೇ ಅಲ್ಲದೆ ಕವಿಗಳೂ ಆಗಿದ್ದವರು. ಸ್ತೋತ್ರ ಸಾಹಿತ್ಯದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿದೆ. ಭಜಗೋವಿಂದಂ ಭಜಗೋವಿಂದಂ ಗೋವಿಂದಂ ಭಜ ಮೂಢಮತೇ, ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕೃಞ್‍ಕರಣೆ ಎನ್ನುವ ಸ್ತೋತ್ರವನ್ನು ಕೇಳದವರಿಲ್ಲ. ಈ ಸ್ತೋತ್ರಗಳಿಗೆ ಚರ್ಪಟ ಮಂಜರಿಕಾ, ಮೋಹಮುದ್ಗರ, ದ್ವಾದಶಮಂಜರೀ, ದ್ವಾದಶಪಂಜರಿಕಾ ಎಂಬ ಹೆಸರುಗಳಿವೆ. ಇವರ ಹೃದಯ ಉದಾರವಾದದ್ದು. ಶಿವ, ವಿಷ್ಣು, ಬ್ರಹ್ಮರಲ್ಲಿ ಇವರು ಒಂದೇ ರೀತಿಯಾಗಿ ಪ್ರೀತಿಯನ್ನು ತೋರಿಸಿರುತ್ತಾರೆ. ಶಿವನದಾಗಲಿ, ವಿಷ್ಣುವಿನದಾಗಲಿ, ದೇವಿಯದಾಗಲಿ ಇವರ ಒಂದೊಂದು ಸ್ತೋತ್ರವನ್ನು ಓದಿದಾಗಲೂ ಇವರು ಆ ದೇವತೆಯ ಪರಮ ಭಕ್ತರು, ಆ ದೇವತೆಯೇ ಇವರ ಇಷ್ಟದೇವತೆಯೋ ಎಂಬಂತೆ ಬೋಧೆಯಾಗುತ್ತದೆ. ಗಂಗಾ, ಯಮುನಾ, ನರ್ಮದಾ ನದಿಗಳ ಸ್ತೋತ್ರಗಳು ನಾದಲೀಲೆಯ ಸೌಂದರ್ಯವನ್ನು ಸೂಸುತ್ತವೆ. ಇವರ ಸೌಂದರ್ಯಲಹರಿಯ ತತ್ತ್ವ ಎಷ್ಟು ಗಂಭೀರವೋ ಅದರ ಶೈಲಿಯೂ ಅಷ್ಟೇ ಮನೋಹರ. ಇತರ ಸ್ತೋತ್ರಗಳಲ್ಲಿ ಮುಖ್ಯವಾದವು ಅನ್ನಪೂರ್ಣೇಶ್ವರೀ ಸ್ತೋತ್ರ, ನರಸಿಂಹ ಕರಾವಲಂಬನ ಸ್ತೋತ್ರ, ಆನಂದಲಹರಿ, ಶಿಖರಿಣೀ ವೃತ್ತದ 20 ಪದ್ಯಗಳನ್ನುಳ್ಳ ಆನಂದಲಹರಿಯ ಮೇಲೆ ಮೂವತ್ತು ವ್ಯಾಖ್ಯಾನಗಳು ಬಂದಿವೆ ಎಂದಮೇಲೆ ಅದರ ಪ್ರಾಮುಖ್ಯ ಸುಸ್ಪಷ್ಟವಾಗಿದೆ. ದೇವಿಯ ಸುಂದರ ಸ್ತುತಿಗಳನ್ನೊಳಗೊಂಡ ಈ ಪುಟ್ಟ ಸ್ತೋತ್ರಕಾವ್ಯ ಇಂದಿಗೂ ಜನಪ್ರಿಯವಾಗಿದೆ. ಅಥರ್ವಶಿಖಾ, ಅಥರ್ವ ಶಿರಸ್, ನೃಸಿಂಹತಾಪನೀಯ ಉಪನಿಷತ್ತುಗಳ ಮೇಲೆ ಅವರು ಭಾಷ್ಯಗಳನ್ನು ಬರೆದರೆಂದು ಹೇಳುವ ಒಂದು ವಾದವಿದೆ. ದಕ್ಷಿಣಾಮೂರ್ತಿ ಸ್ತೋತ್ರ, ಹರಿಮೀಡೇ ಸ್ತೋತ್ರ, ಮೋಹಮುದ್ಗರ, ದಶಶ್ಲೋಕೀ, ಅಪರೋಕ್ಷಾನುಭೂತಿ, ವಿಷ್ಣುಸಹಸ್ರನಾಮ ಭಾಷ್ಯ, ಸನತ್‍ಸುಜಾತೀಯ–ಇವು ಅವರ ಇತರ ಕೆಲವು ಮುಖ್ಯ ಕೃತಿಗಳು.

ಇವಲ್ಲದೆ ವೇದಾಂತ ವಿಚಾರವನ್ನೊಳಗೊಂಡು ಪದ್ಯರೂಪದಲ್ಲಿ ರಚಿತವಾಗಿರುವ ಇವರ ಇಪ್ಪತ್ತೈದಕ್ಕೂ ಹೆಚ್ಚಿನ ಕೃತಿಗಳು ಪ್ರಕರಣ ಗ್ರಂಥಗಳೆಂದು ಪ್ರಸಿದ್ಧವಿವೆ. ಶಂಕರಾಚಾರ್ಯರು ಜ್ಞಾನಯೋಗವೇ ಪರಮಸಿದ್ಧಿಗೆ ಏಕೈಕ ಮಾರ್ಗವೆಂದು ಬೋಧಿಸಿರು ವುದು ನಿಜ. ಆದರೆ ಇವರ ಸ್ತೋತ್ರಗಳನ್ನು ಓದುತ್ತಿದ್ದಾಗ ನಮಗೆ ಇವರು ಭಕ್ತಿಯೋಗಿಗಳೆಂದೆನ್ನಿ ಸುತ್ತದೆ. ಜ್ಞಾನಕ್ಕೂ ಭಕ್ತಿಗೂ ಕರ್ಮಕ್ಕೂ ವಿರೋಧವನ್ನು ಬಗೆಯದ ಉದಾರ ಹೃದಯ ಇವರದೆಂದು ಬೋಧೆಯಾಗುತ್ತದೆ. ಇವರು ಬಾಲ್ಯದಲ್ಲಿ ಸಂಸಾರವನ್ನು ತೊರೆದು ಸಂನ್ಯಾಸಿಗಳಾದರೂ ಇವರ ಹೃದಯ ಮಾತ್ರ ನಿರಂತರವಾಗಿ ಮಾನವನಿಗೆ ಶ್ರೇಯಸ್ಸನ್ನುಂಟು ಮಾಡುವುದರಲ್ಲಿ ಲೀನವಾಗಿತ್ತು. ಹಗಲಿರುಗಳೂ ವರ್ಷದ ದಿನದಿನವೂ ಬಾಳಿದ ಹಲವು ವರ್ಷಗಳೂ ಭಾರತದ ಜನರ ಮತೀಯ ಜೀವನವನ್ನು ಸ್ವಚ್ಛಗೊಳಿಸಲು, ಬಲಪಡಿಸಲು ಇವರು ಶ್ರಮಿಸಿದರು.

ಶಂಕರಾಚಾರ್ಯರು ತಮ್ಮ ಕಾಲದಲ್ಲಿ ಪ್ರಚಾರದಲ್ಲಿದ್ದ ಎಲ್ಲ ಧರ್ಮಗಳಲ್ಲೂ ಆಸಕ್ತಿ ತೋರಿಸಿ ಅವುಗಳಲ್ಲಿ ಕಂಡುಬಂದ ಲೋಪದೋಷಗಳನ್ನು ನಿವಾರಿಸಿದರು. ಸಾಮಾನ್ಯ ಜನರು ಕ್ಷುದ್ರ ದೇವತಾರಾಧನೆಯಲ್ಲೂ ನರಬಲಿ ಮುಂತಾದ ಘೋರ ಕೃತ್ಯಗಳಲ್ಲೂ ಭಾಗವಹಿಸುವುದನ್ನು ತೀವ್ರವಾಗಿ ಖಂಡಿಸಿದರು. ಭಕ್ತಿ ಪಂಥದವರ ಭಾವಾತಿರೇಕವನ್ನೂ ಮೀಮಾಂಸಕರ ಬಾಹ್ಯಕರ್ಮಗಳನ್ನೂ ಶೈವರ ಮಲ್ಲಾರಿ ಮುಂತಾದ ದೇವತೆಗಳ ಪೂಜೆಯನ್ನೂ ಖಂಡಿಸಿದರು. ಭಗವದ್ಗೀತೆಯ ಭಾಷ್ಯದಲ್ಲಿ ಭಕ್ತಿ, ಕರ್ಮ, ಜ್ಞಾನ ಮಾರ್ಗಗಳನ್ನು ಒಂದಕ್ಕೊಂದು ಪುಷ್ಟಿಕೊಡುವ ರೀತಿಯಲ್ಲಿ ತೆರೆದಿಟ್ಟರು. ಇವರು ಷಣ್ಮತಸ್ಥಾಪನಾಚಾರ್ಯರೆಂದು ಪ್ರಸಿದ್ಧರಾಗಿದ್ದಾರೆ. ಇವರು ಒಪ್ಪಿದ ಮತಗಳಲ್ಲಿ ನಾಲ್ಕು ಈಗಲೂ ಪ್ರಚಾರದಲ್ಲಿವೆ.

ಬೌದ್ಧಧರ್ಮದಲ್ಲಿ ಕುದುರಿದ್ದ ಶಿಸ್ತನ್ನು ಇವರು ಮನಗಂಡು ಅವುಗಳ ಮಾದರಿಯಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಮುಖ್ಯವಾದದ್ದು ಶೃಂಗೇರಿಯ ಮಠ. ಇತರವು ಪೂರ್ವದಲ್ಲಿ ಪುರಿ, ಪಶ್ಚಿಮದಲ್ಲಿ ದ್ವಾರಕಾ, ಉತ್ತರದಲ್ಲಿ ಬದರೀನಾಥ್, ಕಂಚಿಯ ಕಾಮಕೋಟಿಗಳಲ್ಲಿವೆ.

ತಾತ್ತ್ವಿಕರೂ, ಕವಿಗಳೂ, ಮತಸುಧಾರಕರೂ ಆಗಿದ್ದ ಶಂಕರರು ಭಕ್ತರೂ ಸಂತರೂ ಆಗಿದ್ದರು. ಬಹುಮುಖವಾದ ಅವರ ವ್ಯಕ್ತಿತ್ವ ಸರ್ವಜನಾದರಣೀಯವಾಗಿದೆ **ನೋಡಿ– ಅದ್ವೈತ.** (ಜಿ.ಎಚ್.)

**ಆದಿ ಶಿಲೋಪಕರಣ :** ಇಂಗ್ಲೆಂಡಿನ ಕೆಂಟ್, ನಾರ್‌ಫೋಕ್ ಮತ್ತು ಸಫೋಕ್‌ಗಳ ಹೊಲಗಳಲ್ಲಿ ಸು. 500 ಸಹಸ್ರ ವರ್ಷಗಳಿಗೂ ಹಿಂದಿನ ಭೂಪದರಗಳಲ್ಲಿ ಸಿಕ್ಕಿದ ಹಲವು ಚಕ್ಕೆ ಎಬ್ಬಿಸಿದ ಕಲ್ಲುಗಳನ್ನು ಅತ್ಯಂತ ಪ್ರಾಚೀನ ಶಿಲೋಪಕರಣಗಳೆಂದು ಪರಿಗಣಿಸುತ್ತಾರೆ. ಮೊದಲು ಇವುಗಳ ಅಧ್ಯಯನ ಮಾಡಿದವ ಬೆಂಜಮಿನ್ ಹ್ಯಾರಿಸನ್ (1865). ಇಂಥ ಕಲ್ಲುಗಳು ಫ್ರಾನ್ಸ್, ಪೋರ್ಚುಗಲ್ ಮತ್ತು ಇನ್ನೂ ಇತರ ಯುರೋಪು ಭಾಗಗಳಲ್ಲಿ ದೊರೆತಿವೆ.



ಈಯೊಲಿತ್ ಶಿಲೋಪಕರಣ

ಇವು ಮಾನವನಿರ್ಮಿತವೇ ಅಥವಾ ಸ್ವಾಭಾವಿಕವಾದುವೇ ಎಂಬ ಬಗ್ಗೆ ಬಹಳ ವಿವಾದ ಗಳಿವೆ. ಲಕ್ಷಣಗಳನ್ನು ಗಮನಿಸಿದರೆ ಇವು ಮಾನವ ನಿರ್ಮಿತ ಉಪಕರಣಗಳಂತೆ ಅಥವಾ ಆಯುಧಗ ಳಂತೆ ಕಾಣುವುವು. ತನಗೆ ಉಪಯುಕ್ತವೆಂದು ಕಂಡುಬಂದವನ್ನು ಮಾನವ ಆಯ್ದು ಬಳಸಿಕೊಳ್ಳುತ್ತಿದ್ದನೆಂದು ತೋರುತ್ತದೆ. (ಎಸ್.ಎನ್.)

**ಆದಿಶೇಷ :** ಬ್ರಹ್ಮನ ಮರಿಮಗ. ತಂದೆ ಮಾರೀಚಿ (ಕಶ್ಯಪ ಅಥವಾ ಕಾಶ್ಯಪ). ಅಜ್ಜ ಮರೀಚಿ. ಸೃಷ್ಟಿಕಾರ್ಯದಲ್ಲಿ ಚತುರ್ಮುಖ ಬ್ರಹ್ಮನಿಗೆ ಎರಡನೆಯವನಾಗಿ ಪುತ್ರಕಾಮೇಷ್ಟಿ ಯನ್ನು ಸಾಧಿಸಿ ದೈತ್ಯ, ದಾನವ, ಗರುಡ, ಗಂಧರ್ವ, ನಾಗ, ಪಶು, ಪಕ್ಷಿ, ತರು, ಗುಲ್ಮಗಳೆಲ್ಲವನ್ನೂ ಪಡೆದುದಲ್ಲದೆ ಕದ್ರು ಎಂಬ ಹೆಂಡತಿಯಿಂದ ನಾಗಸಂತತಿಯನ್ನು

ಹೊಂದಿದ. ಈ ಸಂತತಿಯಲ್ಲಿ ಹಿರಿಯನೇ ಆದಿಶೇಷ. ಬ್ರಹ್ಮನನ್ನು ಕುರಿತು ತಪಶ್ಚರ್ಯೆ ಮಾಡಿ, ವರವನ್ನು ಪಡೆದು ಭೂಮಿಯನ್ನೇ ಹೊರುವ ಕೆಲಸದಲ್ಲಿ ನಿಂತ. ಕ್ಷೀರಸಮುದ್ರದಲ್ಲಿ ಶ್ವೇತದ್ವೀಪದ ನಡುವೆ, ವಿಷ್ಣುವಿಗೆ ಮಲಗಲು ಹಾಸಿಗೆಯಾಗಿ ನೆರವಾದ. (ಎಸ್.ಕೆ.ಆರ್.)

**ಆಧಾರ ಕಟ್ಟಡ :** ಗೋಡೆಗಳ ಕೆಳತುದಿಗೂ ಭೂಮಟ್ಟಕ್ಕೂ ಮಧ್ಯೆ ಭದ್ರತೆಗಾಗಿ ಕಟ್ಟುವ ಮಂದವಾದ ಕಟ್ಟಡ (ಪ್ಲಿಂತ್; ಮೇಲ್ಪಾಯ), ಚಡಿಯೆಂದೂ ಹೆಸರಿದೆ. ಕೂರಲು ಅನುಕೂಲಿಸುವಂತೆ ಸ್ವಲ್ಪ ಅಗಲವಾಗಿರುವ ಚಡಿಯ ಹೆಸರು ಚಿಟ್ಟೆ. ಸಾಧಾರಣವಾಗಿ ಈ ಭಾಗವನ್ನು ಕಲ್ಲಿನಿಂದ ಕಟ್ಟುತ್ತಾರೆ. ಇದು ಪೂರ್ತ ಕಟ್ಟಡದ ಭದ್ರತೆಗೆ ಆಧಾರ. ಅಂದದ ದೃಷ್ಟಿಯಿಂದ ಆಧಾರ ಕಟ್ಟಡದ ಎತ್ತರ ಗೋಡೆಗಳ ಎತ್ತರದ ಸುಮಾರು ಆರನೆಯ ಒಂದು ಭಾಗದಷ್ಟಿರುತ್ತದೆ. ಸಾಮಾನ್ಯವಾಗಿ ಮನೆಗಳ ಒಳಭಾಗದ ನೆಲಗಟ್ಟಿನ ಮಟ್ಟ ಆಧಾರ ಕಟ್ಟಡದ ಮೇಲ್ಮಟ್ಟವಾಗಿರುತ್ತದೆ. ಈ ಮಟ್ಟದ ಹೆಸರು ಆಧಾರಮಟ್ಟ (ಪ್ಲಿಂತ್ ಲೆವಲ್). ಐದಾರು ಅಂತಸ್ತುಗಳ ಸೌಧಗಳ ಆಧಾರ ಕಟ್ಟಡದ ಎತ್ತರ ಮೇಲ್ಕಂಡ ಪ್ರಮಾಣದ ಪ್ರಕಾರ ಒಂದು ಅಂತಸ್ತಿನಷ್ಟಿರುತ್ತದೆ. ಇಂಥ ಕೆಳ ಅಂತಸ್ತಿನ ಹೆಸರು ಆಧಾರ ಅಂತಸ್ತು (ಬೇಸ್‌ಮೆಂಟ್ ಫ್ಲೋರ್). ಕೆಲವು ಸಂದರ್ಭಗಳಲ್ಲಿ ಈ ಆಧಾರ ಅಂತಸ್ತು ಕುಬ್ಜವಾಗಿ, ಮತ್ತೆ ಕೆಲವು ಸಂದರ್ಭಗಳಲ್ಲಿ ಭಾಗಶಃ ಅಥವಾ ಪೂರ್ತಿ ಭೂಮಟ್ಟಕ್ಕಿಂತ ಕೆಳಗೆ ಇರುತ್ತದೆ. ಇಂಥ ಆಧಾರ ಅಂತಸ್ತನ್ನು ಉಗ್ರಾಣ, ದಫ್ತರ ಖಾನೆ, ಗಾಡಿ ಖಾನೆ ಮುಂತಾದವುಗಳಿಗಾಗಿ ರಚಿಸುತ್ತಾರೆ. (ಕೆ.ಎಸ್.ಕೆ.,ಎಂ.ಜಿ.ಎಸ್)

**ಆಧಾರಗೆರೆ :** ನೆಲದ ಸರ್ವೆಗೆ ತೊಡಗುವ ಮೊದಲು ಗುರುತಿಸುವ ಸಮತಲದೂರದ ಅತಿಮುಖ್ಯವಾದ ಗೆರೆ (ಬೇಸ್ ಲೈನ್). ಎರಡು ಬಿಂದುಗಳ ಮಧ್ಯೆ ಇರುವ ಸಮತಲದೂರವನ್ನು ಕರಾರುವಾಕ್ಕಾಗಿ ಸ್ಥಾಪಿಸುವುದೇ ಈ ಅಳತೆಯ ಉದ್ದೇಶ. ಆಧಾರಗೆರೆ ಸಾಧ್ಯವಾದ ಮಟ್ಟಿಗೂ ಸಮತಲವಾದ ಭೂಪ್ರದೇಶದಲ್ಲಿ ಹಾದುಹೋಗುವಂತಿದ್ದರೆ ಒಳ್ಳೆಯದು. ಏಕೆಂದರೆ ಅದರಿಂದ ಅಳತೆ ಕರಾರುವಾಕ್ಕಾಗಿಯೂ ಸುಲಭವಾಗಿಯೂ ಆಗುವುದು. ತ್ರಿಕೋಣಾಕಾರದಲ್ಲಿ ಸರ್ವೆ ಮಾಡುವಾಗ ಆಧಾರಗೆರೆಯನ್ನು ಅತಿ ನಿಖರವಾಗಿ ಅಳೆಯಬೇಕಾದುದು ಆವಶ್ಯಕ. ಮಿಶ್ರಲೋಹದ ಟೇಪಿನಿಂದ ಅಳೆಯುವಾಗ ಅದು ಜೋತುಬೀಳದ ರೀತಿಯಲ್ಲಿ ಅದನ್ನು ಅಲ್ಲಲ್ಲಿ ಭದ್ರಪಡಿಸಿ ಸಮಾನವಾದ ಎತ್ತರದಲ್ಲಿರುವಂತೆ ವ್ಯವಸ್ಥೆ ಮಾಡಬೇಕು. ಇಂಥ ಟೇಪನ್ನು ತಯಾರಿಸುವಾಗ ಎಷ್ಟರಮಟ್ಟಿನ ಎಳೆತಕ್ಕೆ ಅದನ್ನು ಗುರಿಪಡಿಸಲಾಗಿತ್ತೋ ಅಷ್ಟೇ ಪ್ರಮಾಣದ ಎಳೆತಕ್ಕೆ ಅದನ್ನು ಖಚಿತಗೊಳಿಸಲು ಅದರ ಎರಡೂ ತುದಿಯಲ್ಲೂ ಸ್ಪ್ರಿಂಗ್ ತಕ್ಕಡಿಯನ್ನು ಉಪಯೋಗಿಸಿ ಉಷ್ಣತೆಯನ್ನು ಗುರುತಿಸಲು ಉಷ್ಣಮಾಪಕವನ್ನು ಉಪಯೋಗಿಸಿ ಉಷ್ಣತೆಯ ವ್ಯತ್ಯಾಸಕ್ಕೆ ಅನುಗುಣವಾಗಿ ಅಳತೆಯನ್ನು ಸರಿಪಡಿಸಿಕೊಳ್ಳಬೇಕು. (ಕೆ.ಸಿ.ಆರ್.ಎಂ.ಜಿ.ಎಸ್.)

**ಆಧಾರತತ್ತ್ವಗಳು :** ಅನುಭವವನ್ನು ಅರ್ಥಮಾಡಿಕೊಳ್ಳಲು ಬೇಕಾದ ಆಧಾರ ನಂಬಿಕೆಗಳು (ಪಾಸ್ಚುಲೇಟ್ಸ್). ಇವನ್ನು ಅನುಭವದಿಂದ ಸ್ಥಾಪಿಸಲು ಆಗುವುದಿಲ್ಲ. ಇವು ಸ್ವತಸ್ಸಿದ್ಧವೂ (ಆ್ಯಕ್ಸಿಯಮ್ಸ್) ಅಲ್ಲ. ವಿಜ್ಞಾನಿಗಳು ಮೊದಮೊದಲು ಪ್ರಕೃತಿಯಲ್ಲಿ ಹೊಂದಿಕೆ (ಯೂನಿಟಿ) ಇದೆ ಎಂದು ನಂಬಿ ಅನ್ವೇಷಣೆಗಳಲ್ಲಿ ತೊಡಗಿದ್ದರು. ಹೊಂದಿಕೆ ಎಂದರೆ ಅದರಲ್ಲಿ ಉದ್ದೇಶವಿದೆ ಎಂಬ ಅರ್ಥ ಬರುವುದರಿಂದ ಅಂಥ ಉದ್ದೇಶವನ್ನು ಪ್ರಕೃತಿಗೆ ಆರೋಪಿಸುವುದು ಅಸಂಗತ ಎಂದು ಆ ಆಧಾರತತ್ತ್ವವನ್ನು ಬಿಟ್ಟು ಪ್ರಕೃತಿ ಏಕರೂಪವಾಗಿರುತ್ತದೆ ಎಂಬ ಏಕರೂಪ ನಿಯಮವನ್ನು (ಲಾ ಆಫ್ ಯೂನಿಫಾರ್ಮಿಟಿ) ವಿಜ್ಞಾನಕ್ಕೆ ಆಧಾರವಾಗಿ ಇಟ್ಟುಕೊಂಡರು. ಪ್ರಕೃತಿಯಲ್ಲೂ ಏಕರೂಪವಾಗಿದೆ ಎಂದರೆ ಭಿನ್ನತೆ ಇಲ್ಲ ಎಂಬ ಭಾವನೆಗೆ ಅವಕಾಶವಿದೆ. ಯಾವ ರೀತಿಯ ಭಿನ್ನತೆಯೂ ಇಲ್ಲದೆ ಎಲ್ಲವೂ ಏಕರೂಪ ಪಡೆದುದಾದರೆ ಎಲ್ಲಕ್ಕೂ ಒಂದೇ ರೀತಿಯಾದ ಕಾರಣವಿರಬೇಕಾಗುತ್ತದೆ. ಕಾರ್ಯವೂ ಕಾರಣವೂ ಒಂದೇ ಎಂದು ಹೇಳಬೇಕಾಗುತ್ತದೆ. ಅದರ ಕಾರ್ಯ ಬೇರೆ ಕಾರಣ ಬೇರೆ. ಆದ್ದರಿಂದ ಏಕತೆಯ ನಿಯಮವನ್ನು ವಿಜ್ಞಾನದ ಆಧಾರ ನಿಯಮವಾಗಿ ಒಪ್ಪದೆ ಕಾರ್ಯಕಾರಣ ನಿಯಮವನ್ನು ವಿಜ್ಞಾನದ ಆಧಾರತತ್ತ್ವವಾಗಿ ಇಟ್ಟುಕೊಂಡರು. ಕಾಲಕ್ರಮದಲ್ಲಿ ಕಾರ್ಯಕಾರಣನಿಯಮವೂ ಅಬಾಧಿತವಲ್ಲವೆಂದು ತಿಳಿದಾಗ ಅದನ್ನು ಹೇತುವಿನ ಏಕತೆಯ (ಯೂನಿಫಾರ್ಮಿಟಿ ಆಫ್ ರೀಸನ್ಸ್) ತತ್ತ್ವವನ್ನಾಗಿ ಮಾರ್ಪಡಿಸಿದರು. ಒಂದು ಸಂದರ್ಭದಲ್ಲಿ ಅದು ಸರಿಯಾದ ಹೇತು (ಸಂಬಂಧವಾದದ್ದು) ಎಂದು ತಿಳಿಯಬಂದರೆ, ಅದೇ ರೀತಿಯಾದ ಎಲ್ಲ ಸಂದರ್ಭಗಳಲ್ಲೂ ಅದು ಸಮರ್ಪಕವಾದ ಹೇತುವೆಂದು ತಿಳಿಯಬಹುದು. ಇದೂ ತಾತ್ಕಾಲಿಕವಾದ ಆಧಾರತತ್ತ್ವವೆಂದೇ ಭಾವಿಸಬೇಕು. ಇದು ವಿಜ್ಞಾನದ ಅನ್ವೇಷಣೆಗೆ ಸಾಲದೆಂಬ ಭಾವನೆ ಹುಟ್ಟಿದಾಗ ಅದನ್ನು ಸಮಯೋಚಿತವಾಗಿ ಮಾರ್ಪಡಿಸಬಹುದು. ಎಲ್ಲ ಕಾಲಕ್ಕೂ ಒಂದೇ ತತ್ತ್ವ ಆಧಾರತತ್ತ್ವವಾಗಿರಬೇಕಾಗಿಲ್ಲ. ವಿಜ್ಞಾನಕ್ಕೆ ಆಧಾರತತ್ತ್ವವಿರುವಂತೆಯೇ ನೀತಿಜ್ಞಾನಕ್ಕೂ ಒಂದು ಆಧಾರಭಾವನೆ ಇದೆ. ಮನುಷ್ಯನಿಗೆ ಸ್ವಾತಂತ್ರ್ಯವಿರಬೇಕು. ಅದಿಲ್ಲದೆ ಅವನಿಗೆ ಕರ್ತವ್ಯಗಳೂ ಇಲ್ಲ, ಹೊಣೆಗಾರಿಕೆಯೂ ಇಲ್ಲ. ನೀತಿಗೆ ಆಧಾರವಾದ ಸ್ವತಂತ್ರ ತತ್ತ್ವವೂ ನೀತಿಯ ತಿಳಿವೂ ಬೆಳೆದಂತೆಲ್ಲ ಬೇರೆ ಬೇರೆ ರೀತಿಯಾಗಿ ನಿರೂಪಣೆ ಪಡೆಯುತ್ತದೆ. ಹಾಗೆಯೇ ಮತಕ್ಕೆ ಪರಮಾರ್ಥವಿದೆ ಎಂಬ ತತ್ತ್ವ ಆಧಾರವಾದದ್ದು. ಇದೂ ಕಾಲೋಚಿತವಾಗಿ ವಿಚಾರ ಬೆಳೆದಂತೆಲ್ಲ ಬೇರೆ ಬೇರೆಯಾಗಿ ಸೂಚಿಸಲ್ಪಡುತ್ತದೆ. (ಜಿ.ಎಚ್.)

**ಆಧಾರದ ಪೆಟ್ಟಿಗೆ :** ವೀರಶೈವರು ಲಿಂಗಪೂಜೆಗೆ ಬೇಕಾದ ಭಸ್ಮ, ರುದ್ರಾಕ್ಷಿ, ಪತ್ರೆ, ಪುಷ್ಪ, ಗಂಧ, ಧೂಪ, ಘಂಟೆ, ದರ್ಪಣ ಮೊದಲಾದ ಶಿವಪೂಜಾವಸ್ತುಗಳನ್ನು ಇಟ್ಟುಕೊಳ್ಳುವ ಪೆಟ್ಟಿಗೆ. ಈ ಪೆಟ್ಟಿಗೆ ಇಹಪರಗಳಿಗೆ ಆಧಾರ, ಮಿಕ್ಕುದು ನಿರಾಧಾರ ಎಂಬುದು ಈ ಮಾತಿನ ಅರ್ಥ. (ಬಿ.ಎಸ್.)

**ಆಧಾರಭಾವನೆ :** ಕ್ರಮೀಕೃತ ವಿವೇಚನೆಯಲ್ಲಿ (ಫಾರ್ಮಲ್ ರೀಸನಿಂಗ್) ತೀರ್ಮಾನವನ್ನು (ಕನ್‌ಕ್ಲೂಷನ್) ಸುಬದ್ಧವಾಗಿ ಎತ್ತಿ ಹಿಡಿಯುವ ನಿಯಮ (ಹೈಪಾಥಿಸಿಸ್)–ಈ ತೀರ್ಮಾನ ಲಭಿಸಿದ್ದು ಈ ಕಾರಣದಿಂದಾಗಿರಬಹುದೇ ಎಂಬ ಊಹೆ ಅಥವಾ ಗುಮಾನಿ. ಉದಾಹರಣೆಗೆ ಸಮುದ್ರದ ಭರತ ಇಳಿತ ಎಂಬ ಭೌತಿಕ ಘಟನೆಯನ್ನು ಒಂದು ತೀರ್ಮಾನ ಎಂದು ಪರಿಗಣಿಸಬಹುದು. ಇದು ನೆರವೇರಲು ಕಾರಣಗಳೇನು ಎಂದು ಪ್ರಾಯೋಗಿಕವಾಗಿ ಪರೀಕ್ಷಿಸಿದಾಗ ಹಲವಾರು ದತ್ತಾಂಶಗಳನ್ನು ಸಂಗ್ರಹಿಸಬೇಕಾಗುತ್ತದೆ. ಇವನ್ನು ಕ್ರಮಬದ್ಧವಾಗಿ ಅಳವಡಿಸಿ ಕೂಲಂಕಷವಾಗಿ ಪರಿಶೀಲಿಸಿದಾಗ ಸ್ಫುರಿಸುವ ಊಹೆ ಆಧಾರಭಾವನೆ. ಅಂದರೆ, ಈ ಆಧಾರಭಾವನೆ H. ಈ ತೀರ್ಮಾನ Cಯನ್ನು ಸಕಾರಣವಾಗಿ ವಿವರಿಸುವುದು ಎಂದಂತಾಯಿತು. ಆದರೆ Cಯ ಪೂರ್ಣವ್ಯಾಪ್ತಿಯನ್ನು ನಾವು ಗ್ರಹಿಸದೇ ಇದ್ದಿರಬಹುದು; ದತ್ತಾಂಶಗಳ ಸಂಗ್ರಹಣೆಯಲ್ಲಿ, ಮುಂದಿನ ಏರ್ಪಾಡಿನಲ್ಲಿ ಲೋಪದೋಷಗಳು ತೋರಿರಬಹುದು–ಇಂತಹ ಪ್ರತಿಯೊಂದು ಕೊರತೆಯೂ Hನ್ನು ಅಷ್ಟಷ್ಟು ಅಸಮರ್ಪಕ ಮತ್ತು ದೋಷಪೂರಿತವಾಗಿಸುವುದು. ಆದ್ದರಿಂದ ಆಧಾರಭಾವನೆ Hನ್ನು ಒರೆಗೆ ಹಚ್ಚಲು ತೀರ್ಮಾನ Cಯನ್ನು ಕುರಿತು ಪುನಃ ಪುನಃ ಪರಿಶೀಲನೆ ನಡೆಸಬೇಕು. ಹಲವಾರು ಪ್ರಶ್ನೆಗಳಿಗೆ ಪ್ರಯೋಗಗಳಿಗೆ Hನ್ನು ಒಳಪಡಿಸಬೇಕು. ಕೆಲವು ಪ್ರಶ್ನೆಗಳು ಹೀಗಿವೆ: ಗೊತ್ತಿರುವ ದತ್ತಾಂಶಗಳಿಗೆ ಸಂಗತವಾಗಿ H ಇದೆಯೇ? ಅಸಂಗತವಾಗಿದ್ದರೆ Hನ್ನು ಮಾರ್ಪಡಿಸಿ ಉಪಯುಕ್ತವಾಗಿಸಬಹುದೇ? ಇಂಥ ಮಾರ್ಪಾಡು ಸಮರ್ಥನೀಯವೇ? Hನಿಂದ ಅನಿರೀಕ್ಷಿತ ಪರಿಣಾಮಗಳೇನಾದರೂ ದೊರೆಯುತ್ತವೆಯೇ? ಇಂಥವನ್ನು ಪ್ರತ್ಯಕ್ಷವಾಗಿ ಗುರುತಿಸಬಹುದೇ ಅಥವಾ ಪ್ರಯೋಗಮಂದಿರದಲ್ಲಿ ತಾಳೆನೋಡಬಹುದೇ? ಇನ್ನೊಂದು ಆಧಾರಭಾವನೆ H' ಇದೇ ತೀರ್ಮಾನ Cಯನ್ನು ಸಮರ್ಪಕವಾಗಿ ವಿವರಿಸಬಲ್ಲುದೇ? ಹೌದಾದರೆ H ಮತ್ತು H' ಗಳಲ್ಲಿ ಯಾವುದನ್ನು ಆರಿಸಬೇಕು, ಏಕೆ? H ಮತ್ತು H’ ಗಳಲ್ಲಿ ಸಾಂಗತ್ಯವಿದೆಯೇ?

ಅಂತಿಮವಾಗಿ ಒಪ್ಪಿಗೆಯಾದ ಆಧಾರಭಾವನೆ ಸಿದ್ಧಾಂತ (ಥಿಯರಿ) ಎನ್ನಿಸುವುದು. **ನೋಡಿ– ಅನುಗಮನ.**

**ಆಧಾರಭಾವನೆಯ ಪರೀಕ್ಷೆ :** ಆಧಾರಭಾವನೆಯ (ಹೈಪಾಥಿಸಿಸ್) ತಥ್ಯಾಂಶ ಕಂಡುಹಿಡಿಯಲು ಸಂಖ್ಯಾಶಾಸ್ತ್ರದ ನೆರವಿನಿಂದ ನಡೆಸುವ ಪರೀಕ್ಷೆ (**ನೋಡಿ– ಅನುಕ್ರಮ ವಿಶ್ಲೇಷಣೆ**).

**ನೇಮಾನ್–ಪಿಯರ್ಸನ್ನರ ಸಿದ್ಧಾಂತ :** ವಿಜ್ಞಾನದ ಮುನ್ನಡೆ ಆಧಾರಭಾವನೆಗಳನ್ನು ಅವಲಂಬಿಸಿದೆ. ಕೆಲವೊಂದು ಆಧಾರಭಾವನೆಗಳ ತಥ್ಯಾಂಶ ಕಂಡುಹಿಡಿಯಲು ಅನೇಕ ಪ್ರಯೋಗಗಳ ಮೂಲಕ ಸಾಧ್ಯ. ಒಂದೊಂದು ಪ್ರಯೋಗ ಒಂದೊಂದು ಉತ್ತರವನ್ನು ಕೊಟ್ಟರೆ ಈ ಪ್ರಯೋಗಗಳಿಂದ ತಥ್ಯಾಂಶವನ್ನು ಬಟ್ಟಿ ಇಳಿಸಲು ಸಂಖ್ಯಾಶಾಸ್ತ್ರದ ನೆರವು ಬೇಕು. ಉದಾಹರಣೆಗೆ, ಒಬ್ಬ ಕೃಷಿ ಪಂಡಿತ ಒಂದು ಜಾತಿಯ ಬೀಜಕ್ಕಿಂತ ಇನ್ನೊಂದು ಜಾತಿಯ ಬೀಜ ಉತ್ತಮ ಬೆಳೆ ಕೊಡುವುದೆಂಬ ಆಧಾರಭಾವನೆಯನ್ನು ಅವಲಂಬಿಸಬಹುದು. ಇದನ್ನೇ ಪ್ರಾಯೋಗಿಕವಾಗಿ ಪರೀಕ್ಷಿಸಲು ಮತ್ತು ಪ್ರಯೋಗಗಳ ಸಾರಾಂಶವನ್ನು ಸಂಖ್ಯಾರೂಪದಲ್ಲಿ ನಿರೂಪಿಸಲು ಸಾಧ್ಯವಿರುವುದರಿಂದ ಈ ಆಧಾರಭಾವನೆಯನ್ನು ಸಾಂಖ್ಯಿಕ ಆಧಾರಭಾವನೆ ಎನ್ನಬಹುದು. ಇಂಥ ಭಾವನೆಗಳನ್ನು ಸಾಂಖ್ಯಿಕವಾಗಿ ಪರೀಕ್ಷಿಸಲು ಸಾಧ್ಯವಿದೆ.

ಒಂದು ಬಲ್ಬಿನ ಕಂಪೆನಿಯವರು 10 ಬಲ್ಬುಗಳ ಮೇಲೆ ಪ್ರಯೋಗ ನಡೆಸಿ ತಮ್ಮ ಕಂಪೆನಿಯ ಬಲ್ಬುಗಳು 1000 ಗಂಟೆಗಳಿಗಿಂತ ಹೆಚ್ಚು ಕಾಲ ಬಾಳುವುವು ಎಂದು ಘೋಷಿಸಬಹುದು. ಒಂದು ಸಕ್ಕರೆ ಕಾರ್ಖಾನೆಯವರು ಕೆಲವು ಕಬ್ಬಿನ ತುಂಡುಗಳನ್ನು ಪರೀಕ್ಷಿಸಿ, ಅವುಗಳ ಆಧಾರದ ಮೇಲೆ ಒಬ್ಬ ರೈತ ತಂದ ಕಬ್ಬು ಉತ್ತಮ ದರ್ಜೆಯದೇ ಇಲ್ಲವೇ ಸಾಧಾರಣ ದರ್ಜೆಯದೇ ಎಂದು ನಿರ್ಣಯಿಸಬಹುದು. ಕಂಪೆನಿ ತಯಾರಿಸಿದ ಬಲ್ಬುಗಳ ಸರಾಸರಿ ಜೀವಿತಾವಧಿ ಒಂದು ಗೊತ್ತಿಲ್ಲದ ಪ್ರಾಚಲ (ಪೆರಾಮೀಟರ್). ಇದರ ಬೆಲೆ 1000ಕ್ಕಿಂತ ಹೆಚ್ಚು ಎಂಬುದು ನಮ್ಮ ಆಧಾರಭಾವನೆ ನಮೂದಿಸುವ ಬೆಲೆ. ಪ್ರಾಯೋಗಿಕವಾಗಿ ಇದನ್ನು ಅನೇಕ ಬಲ್ಬುಗಳ ಜೀವಿತಾವಧಿಯನ್ನು ಪರೀಕ್ಷಿಸಿ ಅವುಗಳ ಆಧಾರದಿಂದ ಸಮರ್ಥಿಸಬೇಕಾಗಿರುವುದರಿಂದ, ಈ ಆಧಾರಭಾವನೆ ಸಾಂಖ್ಯಿಕವಾದದ್ದು. ಪ್ರಯೋಗಾನಂತರ ಅದರ ಫಲಿತಾಂಶವನ್ನು ಅನುಸರಿಸಿ ಈ ಭಾವನೆಯನ್ನು ನಾವು

ಸ್ವೀಕರಿಸಬಹುದು ಅಥವಾ ತ್ಯಜಿಸಬಹುದು. ಹೀಗೆ ಪ್ರಯೋಗಗಳ ಸಹಾಯದಿಂದ ಒಂದು ಆಧಾರಭಾವನೆಯ ತಥ್ಯಾಂಶ ಪರೀಕ್ಷಿಸಿ ಒಂದು ನಿಶ್ಚಯಕ್ಕೆ ಬರುವಾಗ ನಾವು ಎರಡು ವಿಧದ ತಪ್ಪುಗಳನ್ನು ಮಾಡಬಹುದು. ಒಂದನೆಯದು, ಆಧಾರಭಾವನೆ ನಿಜವಿರುವಾಗ ಅದು ತಪ್ಪೆಂದು ನಿಶ್ಚಯಿಸುವುದು; ಇನ್ನೊಂದು ಅದು ತಪ್ಪಾಗಿರುವಾಗ ನಿಜವೆಂದು ಹೇಳುವುದು. ಒಂದು ಕೋರ್ಟಿನಲ್ಲಿ ಹಾಜರು ಮಾಡಲ್ಪಟ್ಟ ಕೈದಿಯನ್ನು ಪರೀಕ್ಷಿಸಿ ಅಥವಾ ಅವನು ನಿರ್ದೋಷಿ ಇದ್ದರೂ ಅವನಿಗೆ ಶಿಕ್ಷೆಯನ್ನು ವಿಧಿಸಬಹುದು ಅಥವಾ ತಪ್ಪು ಮಾಡಿದ್ದರೂ ಅವನನ್ನು ನಿರ್ದೋಷಿಯೆಂದು ಬಿಟ್ಟುಬಿಡಬಹುದು: ಈ ತಪ್ಪುಗಳನ್ನು ಅನುಕ್ರಮವಾಗಿ ಒಂದನೆಯ ಮತ್ತು ಎರಡನೆಯ ವಿಧದ ತಪ್ಪುಗಳೆಂದು ಕರೆಯುವರು. ಪ್ರಯೋಗದಿಂದ ದೊರೆಯುವ ಬೆಲೆಗಳು ಸಂಭವಚರಗಳಾಗಿರುವುದರಿಂದ (ಸ್ಟೊಕೇಸ್ಟಿಕ್ ವೇರಿಯಬಲ್ಸ್) ಈ ಎರಡು ತರದ ತಪ್ಪುಗಳನ್ನು ನಾವು ಮಾಡುವ ಸಂಭವವಿದೆ. ಇಂಥವೆರಡನ್ನು ಮಾಡುವ ಸಂಭವಗಳನ್ನೂ ನಾವು ಆದಷ್ಟು ಕಡಿಮೆ ಮಾಡಬೇಕು. ಆಗ ಮಾತ್ರ ನಮ್ಮ ನಿರ್ಣಯ ಉತ್ತಮವೆನಿಸುವುದು. ಈ ಸಂದರ್ಭದಲ್ಲಿ ನಾವು ಇನ್ನೊಂದು ವಿಚಾರವನ್ನು ಗಮನಿಸಬೇಕು. ಒಂದು ವೇಳೆ ನಮ್ಮ ಆಧಾರಭಾವನೆ ತಪ್ಪಾದರೆ ಬೇರಾವುದೋ ಒಂದು ಪರ್ಯಾಯ ಆಧಾರಭಾವನೆ ಸರಿಯಿರಬಹುದು ಎಂದು ನಮ್ಮ ವಿಚಾರವಾಗಿರುತ್ತದೆ. ಬಲ್ಬುಗಳ ಸರಾಸರಿ ಜೀವಿತ 1000 ಗಂಟೆ ಎಂಬುದು ಮೂಲ ಆಧಾರಭಾವನೆಯಾದರೆ ಅದು 800 ಗಂಟೆ ಎಂಬುದು ಪರ್ಯಾಯ ಆಧಾರಭಾವನೆ ಆಗಿರಬಹುದು. ಮೂಲ ಆಧಾರಭಾವನೆ ತಪ್ಪಾದಲ್ಲಿ ಈ ಪರ್ಯಾಯಭಾವನೆ ನಿಜವಾಗಿರುವುದೆಂದು ನಾವು ಪರಿಗಣಿಸುತ್ತೇವೆ. ಒಂದು ಸಾಂಖ್ಯಿಕ ನಿರ್ಧಾರ ಮೊದಲನೆಯ ವಿಧದ ತಪ್ಪನ್ನಾಗಿ ಮಾಡುವಂತೆ ಮೂಲ ಆಧಾರಭಾವನೆಯನ್ನು ಇಟ್ಟುಕೊಳ್ಳುತ್ತೇವೆ ಮತ್ತು ಮೊದಲನೆಯ ವಿಧದ ತಪ್ಪಿನ ಸಂಭವವನ್ನು ಒಂದು ಮಿತಿಯಲ್ಲಿಟ್ಟುಕೊಂಡು (ಶೇ. 5 ಅಥವಾ ಶೇ. 1) ಎರಡನೆಯ ವಿಧದ ತಪ್ಪನ್ನು ಕನಿಷ್ಠಗೊಳಿಸುವಂತೆ ನಾವು ನಮ್ಮ ಸಾಂಖ್ಯಿಕ ನಿಶ್ಚಯವನ್ನು ಕೈಗೊಳ್ಳುತ್ತೇವೆ.

**ಒಂದು ಸಾಂಖಿಕ ನಿಶ್ಚಯವನ್ನು ಈ ರೀತಿ ವಿವರಿಸಬಹುದು :** ನಾವು ನೋಡಬಹುದಾದ ಸಂಭವಚರಗಳ ವಿವಿಧ ಬೆಲೆಗಳನ್ನೂ ನಮೂನಾಕಾಶದ (ಸ್ಯಾಂಪಲ್ ಸ್ಪೇಸ್) ಬಿಂದುಗಳಾಗಿ ನಿರ್ದೇಶಿಸಬಹುದು. ನಾವು ನೋಡಿದ ಬೆಲೆ ನಮೂನಾಕಾಶದ ಒಂದು ಭಾಗದಲ್ಲಿ ಬಿದ್ದರೆ ಮೂಲ ಆಧಾರಭಾವನೆ ನಿಜವೆಂದೂ, ಇಲ್ಲದೇ ಇದ್ದರೆ ಪರ್ಯಾಯ ಆಧಾರಭಾವನೆ ನಿಜವೆಂದೂ ತಿಳಿಯುತ್ತೇವೆ. ನಮೂನಾಕಾಶದ ಈ ಭಾಗಗಳನ್ನು ಸ್ವೀಕರಣ ಪ್ರದೇಶ (ಆ್ಯಕ್‌ಸೆಪ್ಟೆನ್ಸ್ ರೀಜನ್) ಮತ್ತು ಸಂದಿಗ್ಧ (ಕ್ರಿಟಿಕಲ್) ಅಥವಾ ನಿರಾಕರಣ (ರಿಜೆಕ್ಷನ್) ಪ್ರದೇಶಗಳೆಂದು ಕರೆಯುತ್ತೇವೆ. ಒಂದು ಸಂಭವಚರದ ಬೆಲೆ, ಮೂಲ ಆಧಾರಭಾವನೆ ನಿಜವಾಗಿದ್ದಲ್ಲಿ, ಸಂದಿಗ್ಧ ಪ್ರದೇಶದಲ್ಲಿ ಬೀಳುವ ಸಂಭವ ಮೊದಲನೆಯ ವಿಧದ ತಪ್ಪಿನ ಸಂಭವಕ್ಕೆ ಸಮವಾಗಿರುತ್ತದೆ. ಈ ಸಂಭವ (ಶೇ. 5 ಅಥವಾ ಶೇ. 1) ಆಗಿರುವಂತೆ ಮತ್ತು ಪರ್ಯಾಯ ಆಧಾರಭಾವನೆ ನಿಜವಾಗಿದ್ದಲ್ಲಿ ಸಂಭವಚರದ ಬೆಲೆ ಸ್ವೀಕರಣ ಪ್ರದೇಶದಲ್ಲಿ ಬೀಳುವ ಸಂಭವ ಕನಿಷ್ಠವಾಗಿರುವಂತೆ ಸಂದಿಗ್ಧ ಪ್ರದೇಶವನ್ನು ಆರಿಸಬೇಕು. ಪರ್ಯಾಯ ಆಧಾರಭಾವನೆ ನಿಜವಾಗಿದ್ದಲ್ಲಿ, ಸಂಭವಚರದ ಬೆಲೆಗಳು ಸಂದಿಗ್ಧ ಪ್ರದೇಶದಲ್ಲಿ ಬೀಳುವ ಸಂಭವಕ್ಕೆ ಆಧಾರಭಾವನಾಪರೀಕ್ಷೆಯ ಸಾಮರ್ಥ್ಯ (ಪವರ್) ಎನ್ನುತ್ತೇವೆ. ಇದು ಎರಡನೆಯ ವಿಧದ ತಪ್ಪನ್ನು ಮಾಡದಿರುವುದರ ಸಂಭವವಾಗಿದೆ. ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆಯನ್ನು ಕಂಡುಹಿಡಿಯುವುದೇ ನಮ್ಮ ಉದ್ದೇಶ. ಇದೇ ನೇಮಾನ್–ಪಿಯರ್ಸನ್ನರ ಸಾಂಖ್ಯಿಕ ಆಧಾರಭಾವನಾಪರೀಕ್ಷೆಯ ಮೂಲತತ್ತ್ವ.

ಒಂದೇ ರೀತಿಯ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆ (ಯೂನಿಫಾರ್ಮ್‌ಲಿ ಮೋಸ್ಟ್ ಪವರ್‌ಫುಲ್ ಟೆಸ್ಟ್): ಪ್ರಾಚಲದ ಬೆಲೆಯನ್ನು ನಿಶ್ಚಿತವಾಗಿ ಒಂದು ಆಧಾರಭಾವನೆ ನಮೂದಿಸಿದಲ್ಲಿ ಅದನ್ನು ಸರಳ ಆಧಾರಭಾವನೆ ಎಂದು ಹೇಳುತ್ತೇವೆ. ಪರ್ಯಾಯ ಭಾವನೆಯೂ ಸರಳವಾಗಿದ್ದಲ್ಲಿ ಅಂಥ ಆಧಾರಭಾವನೆಗಳ ಪರೀಕ್ಷೆಯ ಪ್ರಶ್ನೆಯನ್ನು ನೇಮಾನ್ ಮತ್ತು ಪಿಯರ್ಸನರು ಪೂರ್ಣವಾಗಿ ಬಿಡಿಸಿರುವರು. ಇದನ್ನು ನೇಮಾನ್–ಪಿಯರ್ಸನ್ನರ ಮೂಲ ಉಪಪ್ರಮೇಯ (ಫಂಡಮೆಂಟಲ್ ಲೆಮ್ಮ) ಎಂದು ಕರೆಯುತ್ತಾರೆ. ಮೂಲ ಆಧಾರಭಾವನೆ ಸರಿಯಾಗಿದ್ದಲ್ಲಿ ಸಂಭವಚರದ ಸಾಂದ್ರತೆ $p_o$, ಪರ್ಯಾಯ ಆಧಾರಭಾವನೆ ಸರಿಯಾಗಿದ್ದಲ್ಲಿ ಅದು $p_1$ ಆಗಿದ್ದರೆ,

$$\omega=[x:p_1>kp_o] \qquad \ldots(1)$$

ನಿರಾಕರಣ ಪ್ರದೇಶವುಳ್ಳ ಪರೀಕ್ಷೆ ಅತ್ಯಂತ ಸಾಮರ್ಥ್ಯಯುತ ಪರೀಕ್ಷೆ.

$p_o(x)\ dx=a$ ಮತ್ತು $p_1(x)\,dx=$ ಗರಿಷ್ಠವಾಗುವಂತೆ $\omega$ ವನ್ನು ಆರಿಸಿಕೊಳ್ಳಬೇಕಾಗಿರುವುದರಿಂದ ಈ ಉಪಪ್ರಮೇಯವನ್ನು ಗಣಿತಶಾಸ್ತ್ರದಲ್ಲಿಯ ಲೆಗ್ರಾಂಜ್‌ನ ರೀತಿಯಿಂದ ಸುಲಭವಾಗಿ ಸಾಧಿಸಬಹುದು. (1)ರಲ್ಲಿ kಯನ್ನು $p_o(x)\,dx=a$ ಆಗಿರುವಂತೆ ಆರಿಸುತ್ತೇವೆ.

ಒಂದು ಆಧಾರಭಾವನೆ ಪ್ರಾಚಲದ ಬೆಲೆಯನ್ನು ನಿರ್ದಿಷ್ಟವಾಗಿ ತಿಳಿಸದೆ ಇದ್ದಲ್ಲಿ ಅದನ್ನು ಕ್ಲಿಷ್ಟ (ಕಾಂಪೊಸಿಟ್) ಆಧಾರಭಾವನೆಯೆಂದು ಕರೆಯುತ್ತೇವೆ. ಉದಾಹರಣೆಗೆ ಪ್ರಾಚಲದ ಬೆಲೆ 1000ಕ್ಕಿಂತ ಕಡಿಮೆ ಇಲ್ಲ ಎಂಬುದು ಕ್ಲಿಷ್ಟ ಆಧಾರಭಾವನೆ. ಮೂಲ ಮತ್ತು ಪರ್ಯಾಯ ಆಧಾರಭಾವನೆಗಳು ಸರಳವಾಗಿದ್ದಲ್ಲಿ ನೇಮಾನ್–ಪಿಯರ್ಸನ್ನರ ಮೂಲ ಉಪಪ್ರಮೇಯದ ಮೂಲಕ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆಯನ್ನು ಪಡೆಯಬಹುದು; ಆದರೆ ಮೂಲ ಅಥವಾ ಪರ್ಯಾಯ ಆಧಾರಭಾವನೆಗಳು ಕ್ಲಿಷ್ಟವಾಗಿದ್ದಲ್ಲಿ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆ ಸಿಗುವುದು ವಿರಳ. ಉದಾ : $H: \theta=1000$ ಇದು ಮೂಲ ಆಧಾರಭಾವನೆ ಆಗಿರಲಿ. $K: \theta>1000$ ಇದು ಪರ್ಯಾಯ ಆಧಾರಭಾವನೆ ಆಗಿರಲಿ (ಇಲ್ಲಿ $\theta$ ಒಂದು ಪ್ರಾಚಲ). ಇಲ್ಲಿ K ಕ್ಲಿಷ್ಟ ಆಧಾರಭಾವನೆ; Hನ್ನು Kಯ ಭಾಗವಾದ (ಉದಾ : $K:\theta=1100$) ಒಂದು ಸರಳ ಆಧಾರಭಾವನೆಯೊಂದಿಗೆ ಪರೀಕ್ಷಿಸುವ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆ ನಾವು ಆರಿಸಿದ Kಯ ಭಾಗದ ಮೇಲೆ ಅವಲಂಬಿಸದೆ Kಯ ಮೇಲೆ ಮಾತ್ರ ಅವಲಂಬಿಸಿದರೆ ನಮಗೆ Hನ್ನು Kಯೊಂದಿಗೆ ಪರೀಕ್ಷಿಸುವ ಒಂ.ರೀ.ಅ.ಸಾ. ಪರೀಕ್ಷೆ ದೊರೆತಂತಾಯಿತು. ಇಂಥ ಪರೀಕ್ಷೆ ಸಿಗುವುದು ತೀರ ವಿರಳ. ಸಂಭವಚರದ ಸಾಂದ್ರತೆ ಕೆಲವೊಂದು ವಿಶೇಷ ಗುಣಗಳನ್ನು ಪಡೆದಿದ್ದಲ್ಲಿ (ಉದಾ : ಏಕಸ್ಪಂದನ ಸಾಧ್ಯತಾ ನಿಷ್ಪತ್ತಿ ಗುಣ, ಏ.ಸಾ.ನಿ.ಗು.–ಮಾನೊಟೋನ್ ಲೈಕ್‌ಲಿಹುಡ್ ರೇಷಿಯೋ ಪ್ರಾಪರ್ಟಿ) ಈ ತರಹ ಕ್ಲಿಷ್ಟ ಪರ್ಯಾಯ ಆಧಾರಭಾವನೆಗೆ ಒಂ.ರೀ.ಅ.ಸಾ. ಪರೀಕ್ಷೆಯನ್ನು ಕಂಡುಹಿಡಿಯಬಹುದು. ಸಂಭವಸಾಂದ್ರತೆ ಪ್ರಸಾಮಾನ್ಯ (ನಾರ್ಮಲ್), ಗಾಮ ಮುಂತಾದ ಜಾತಿಗೆ ಸೇರಿದ್ದರೆ ಅಥವಾ

$$p_\theta(x)=c\cos e^{Q(\theta)T(x)}\ h(x) \qquad \ldots(2)$$

ಆಗಿದ್ದು $Q(\theta)$ ಏಕಸ್ಪಂದನ ಗುಣ ಹೊಂದಿದ್ದರೆ $H:\theta\le\theta_o$ ಎಂಬ ಮೂಲ ಆಧಾರ ಭಾವನೆಯನ್ನು $K:\theta>\theta_0$ ಎಂಬ ಪರ್ಯಾಯ ಆಧಾರಭಾವನೆಯೊಂದಿಗೆ ಪರೀಕ್ಷಿಸುವ ಒಂ.ರೀ.ಅ.ಸಾ. ಪರೀಕ್ಷೆ ಇದೆ. ಇದರ ನಿರಾಕರಣ ಪ್ರದೇಶ $\omega=[T(x)>c]$ ಆಗಿದೆ. ಅಂತೆಯೇ $H:\theta>\theta_o$ ಎಂಬ ಆಧಾರಭಾವನೆಯನ್ನು $K:\theta<\theta_o$ ಎಂಬ ಆಧಾರ ಭಾವನೆಯೊಂದಿಗೆ ಪರೀಕ್ಷಿಸುವ ಒಂ.ರೀ.ಅ.ಸಾ. ಪರೀಕ್ಷೆಯನ್ನು ಕಂಡುಹಿಡಿಯಬಹುದು.

X ಸಂಭವಚರ ವಿರತವಾಗಿದ್ದಲ್ಲಿ (ಡಿಸ್‌ಕ್ರೀಟ್) ಪ್ರಥಮ ವಿಧದ ತಪ್ಪಿನ ಗಾತ್ರ ಪ್ರದೇಶವನ್ನು ಕಂಡುಹಿಡಿಯಲು ಅನೇಕವೇಳೆ ...ದೀಯ ಚಲನೆಯನ್ನು ಹೊಂದಿದ್ದಾಗ. ಈ ...ೂನಾಕಾಶದ ಬಿಂದುವೊಂದರ ಭಾಗವನ್ನಷ್ಟೇ ಗಾತ್ರವನ್ನು $\alpha$ವನ್ನಾಗಿ ಮಾಡಬಹುದು. (ಮೊದಲನೆಯ ವಿಧದ ತಪ್ಪು ಮಾಡುವ ಸಂಭವವನ್ನು ನಿರಾಕರಣ ಪ್ರದೇಶದ ಗಾತ್ರವೆಂದೂ ಹೇಳುವರು).

ಉದಾ: $x_1, x_2, \ldots\ldots, x_n$ ಇವು ಪ್ರಸಾಮಾನ್ಯ ವಿತರಣೆಯಿಂದ ಆಯ್ದುಕೊಂಡ n ಸಂಭವಚರಗಳಾಗಿರಲಿ. ಈ ವಿತರಣೆಯ ನಿರೀಕ್ಷೆ $\theta$ ಆಗಿಯೂ ಪ್ರಮಾಪಿ ವಿಚಲನೆ ಏಕವಾಗಿಯೂ ಇರಲಿ. ಮೂಲ ಆಧಾರಭಾವನೆ ($H:\theta=\theta_0$ ಮತ್ತು ಪರ್ಯಾಯ ಆಧಾರಭಾವನೆ $K:\theta=\theta_1$) ಆಗಿರಲಿ. ಈ ನಿದರ್ಶನದ ಸಂಭವ ಸಾಂದ್ರತೆ ಮೂಲ ಆಧಾರಭಾವನೆ ಸರಿಯಿರುವಾಗ

$$p_0=\left(\frac{1}{\sqrt{2\pi}}\right)^n e^{-\frac{1}{2}\sum_{i=1}^{n}(x_i-\theta_0)^2}$$

ಆಗಿಯೂ ಪರ್ಯಾಯ ಆಧಾರಭಾವನೆ ಸರಿಯಾಗಿರುವಾಗ

$$p_1=\left(\frac{1}{\sqrt{2\pi}}\right)^n e^{-\frac{1}{2}\sum_{i=1}^{n}(x_i-\theta_1)^2}$$

ಆಗಿಯೂ ಇರುತ್ತದೆ. ಆದುದರಿಂದ ನೇಮಾನ್–ಪಿಯರ್ಸನ್ನರ ಉಪಪ್ರಮೇಯದ ಮೇರೆಗೆ, ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆಯ ನಿರಾಕರಣ ಪ್ರದೇಶ

$$[\,(p_1/p_0)>k\,] = [\,\log p_1-\log p_o>\log k]$$

ಆಗಿರುವುದು. ಇದನ್ನು ಸುಲಭರೂಪಕ್ಕೆ ತರಲು ನಿರಾಕರಣ ಪ್ರದೇಶ

$(\theta_1-\theta_0)\,\bar{x}>c$ ...(3)

ಆಗಿರುವುದು. ಮೇಲಿನ ಅಸಮೀಕರಣದಲ್ಲಿ $c$ ಯು θವನ್ನೊಳಗೊಳ್ಳದ ಅಂಕೆಯಾಗಿದ್ದು, ಅದು ನಿರಾಕರಣ ಪ್ರದೇಶದ ಗಾತ್ರವಾದ α ದ ಮೇಲೆ ಹೊಂದಿಕೊಂಡಿದೆ. ಮಾತ್ರವಲ್ಲದೆ $\theta_1-\theta_0$ ಧನವಾಗಿದ್ದರೆ ನಿರಾಕರಣ ಪ್ರದೇಶದಲ್ಲಿ $\bar{x}$ ದೊಡ್ಡದಾಗಿಯೂ. $\theta_1-\theta_0$ ಋಣವಾಗಿದ್ದರೆ ನಿರಾಕರಣ ಪ್ರದೇಶದಲ್ಲಿ $\bar{x}$ ಸಣ್ಣದಾಗಿಯೂ ಇರುವುದು. ಎಷ್ಟು ದೊಡ್ಡದು, ಎಷ್ಟು ಸಣ್ಣದು ಎಂಬುದನ್ನು α ದ ಬೆಲೆಯ ಮೇಲಿಂದ ಮತ್ತು ಮೂಲ ಆಧಾರಭಾವನೆ ಸರಿಯಿರುವಾಗ $\bar{x}$ ನ ವಿತರಣೆಯನ್ನು ಉಪಯೋಗಿಸಿ ಕಂಡು ಹಿಡಿಯಬಹುದು. ಹೀಗೆ ಈ ಪರೀಕ್ಷೆ $\theta_1-\theta_0$ ಚಿಹ್ನೆಯ ಮೇಲೆ ಹೊಂದಿಕೊಂಡಿರುವುದೇ ವಿನಾ θ ರ ಬೆಲೆಯ ಮೇಲೆ ಅಲ್ಲ. ಆದ್ದರಿಂದ, $H{:}\theta=\theta_0$ ಎಂಬ ಆಧಾರಭಾವನೆಯನ್ನು $K{:}\theta=\theta_1>\theta_0$ ಎಂಬ ಆಧಾರಭಾವನೆಯೊಂದಿಗೆ ಪರೀಕ್ಷಿಸಲು ಒಂ.ರೀ.ಅ.ಸಾ. ಪರೀಕ್ಷೆ ಇದೆ. ಅಂತೆಯೇ $H{:}\theta=\theta_0$ ಎಂಬುದನ್ನು $K{:}\theta=\theta_1>\theta_0$ ಎಂಬ ಆಧಾರಭಾವನೆಯೊಂದಿಗೆ ಪರೀಕ್ಷಿಸಲು ಕೂಡ ಒಂ.ರೀ.ಅ.ಸಾ. ಪರೀಕ್ಷೆ ಇದೆ. ಮೊದಲನೆಯದರಲ್ಲಿ $\bar{x}>c$ ಮತ್ತು ಎರಡನೆಯದರಲ್ಲಿ $\bar{x}<c$ ಆಗಿದೆ.

**ಅಪಕ್ಷಪಾತಿ ಪರೀಕ್ಷೆ (ಅನ್‌ಬಯಸ್ಡ್ ಟೆಸ್ಟ್) :** ಒಂದು ಆಧಾರಭಾವನೆಯ ಒಂ.ರೀ.ಅ.ಸಾ. ಪರೀಕ್ಷೆ ನಮಗೆ ದೊರೆತಲ್ಲಿ ಅದರ ಪರೀಕ್ಷೆಯ ಪ್ರಶ್ನೆಯನ್ನು ಪೂರ್ಣವಾಗಿ ಬಿಡಿಸಿದಂತಾಯಿತು. ಆದರೆ ಇಂಥ ಪರೀಕ್ಷೆ ಸಿಗುವುದು ಅಪೂರ್ವ. ಮೇಲಿನ ಉದಾಹರಣೆಯಲ್ಲಿ, ಪ್ರಮಾಪಿ ವಿಚಲನೆ ಏಕವೆಂದು ನಮಗೆ ತಿಳಿಯದಿದ್ದಲ್ಲಿ ಅಥವಾ ಪರ್ಯಾಯ ಆಧಾರಭಾವನೆ $\theta\neq\theta_0$ ಆಗಿದ್ದಲ್ಲಿ, ಇಂಥ ಒಂ.ರೀ.ಅ.ಸಾ ಪರೀಕ್ಷೆ ಸಿಗುವುದಿಲ್ಲ. ಇಂಥ ಸಂದರ್ಭಗಳಲ್ಲಿ ಉಪಯೋಗವಾಗುವಂತೆ ನೇಮಾನ್–ಪಿಯರ್ಸನ್ನರು ಅಪಕ್ಷಪಾತಿ ಪರೀಕ್ಷೆಯ ವಿಚಾರವನ್ನು ಮುಂದಿಟ್ಟಿರುವರು. ಒಂದು ಪರೀಕ್ಷೆ ನಿಜವಾದ ಆಧಾರಭಾವನೆಯನ್ನು ಸರಿಯೆಂದು ಹೇಳುವ ಸಂಭವಕ್ಕಿಂತ, ತಪ್ಪಾದ ಆಧಾರಭಾವನೆಯನ್ನು ಸರಿಯೆಂದು ಹೇಳುವ ಸಂಭವ ಕಡಿಮೆಯಾದಲ್ಲಿ ಅದನ್ನು ಅಪಕ್ಷಪಾತಿ ಎನ್ನುವರು. ಎಲ್ಲ ಪರೀಕ್ಷೆಗಳಲ್ಲಿ ಉತ್ತಮವಾದ ಒಂ.ರೀ.ಅ.ಸಾ. ಪರೀಕ್ಷೆ ಸಿಗದಿದ್ದರೂ ಅಪಕ್ಷಪಾತಿ ಪರೀಕ್ಷೆಗಳಲ್ಲಿ ಅತ್ಯುತ್ತಮವಾದ ಅಪಕ್ಷಪಾತಿ ಒಂ.ರೀ.ಅ.ಸಾ. ಪರೀಕ್ಷೆ ಸಿಗಬಹುದು.

ಮೇಲಿನ ಉದಾಹರಣೆಯಲ್ಲಿ ಚರದ ಬೆಲೆ $(\sigma^2)$ತಿಳಿದಿಲ್ಲವಾದರೆ ಅದರ ಸ್ಥಾನದಲ್ಲಿ ನಿದರ್ಶಕಚರದ ಬೆಲೆಯನ್ನು $(8^2)$ ಇಟ್ಟು $t=\dfrac{\bar{x}-\theta_0}{s/\sqrt{n-1}}>c\cdots$ (4)

ಎಂಬುದನ್ನು ನಿರಾಕರಣ ಪ್ರದೇಶವನ್ನಾಗಿ ಆರಿಸಬಹುದು. ಇದರಿಂದ ಸಿಗುವ ಪರೀಕ್ಷೆ

$$H: \theta = \theta_0, \sigma > 0$$

ಎಂಬ ಕ್ಲಿಷ್ಟ ಆಧಾರಭಾವನೆಯನ್ನು $K:\theta=\theta_1, \sigma>0$ ಎಂಬ ಕ್ಲಿಷ್ಟ ಆಧಾರಭಾವನೆಯೊಂದಿಗೆ ಪರೀಕ್ಷಿಸುವ ಒಂ.ರೀ.ಅ.ಸಾ. ಅಪಕ್ಷಪಾತಿ ಪರೀಕ್ಷೆಯಾಗಿದೆ. ಅಂತೆಯೇ $H{:}\theta=\theta_0$, $\sigma>0$ ಎಂಬ ಮೂಲ ಆಧಾರಭಾವನೆಯನ್ನು $K{:}\theta\neq\theta_0$, $\sigma>0$ ಎಂಬ ಆಧಾರಭಾವನೆಯೊಂದಿಗೆ ಪರೀಕ್ಷಿಸಲು ನಿರಾಕರಣ ಪ್ರದೇಶವುಳ್ಳ ಪರೀಕ್ಷೆ ಒಂ.ರೀ.ಅ.ಸಾ. ಅಪಕ್ಷಪಾತಿ ಪರೀಕ್ಷೆ.

ಪರ್ಯಾಯ ಆಧಾರಭಾವನೆಯ ಮೇರೆಗೆ θ ಪಡೆಯುವ ಬೆಲೆಗಳನ್ನು x– ನಿರ್ದೇಶಕವಾಗಿಯೂ ಸಾಮರ್ಥ್ಯವನ್ನು y– ನಿರ್ದೇಶಕವಾಗಿಯೂ ಆರಿಸಿ ಬರೆದ ರೇಖೆಗೆ ಪರೀಕ್ಷೆಯ ಸಾಮರ್ಥ್ಯ ರೇಖೆ (ಪವರ್ ಕರ್ವ್) ಎಂದು ಹೆಸರು. $H{:}\ \theta=\theta_0$ಯ ಒಂ.ರೀ.ಅ.ಸಾ. ಅಪಕ್ಷಪಾತಿ ಪರೀಕ್ಷೆಯ ಸಾಮರ್ಥ್ಯ ರೇಖೆಯನ್ನು ಎಳೆದಲ್ಲಿ, ಇದರ ಕನಿಷ್ಠ ಬೆಲೆ $\theta=\theta_0$ ಎಂಬ ಬಿಂದುವಿನಲ್ಲಿರುವುದು $K{:}\theta\neq\theta_0$ ಎಂಬುದು ಪರ್ಯಾಯ ಆಧಾರಭಾವನೆ) (2)ನೆಯ ಫಲಿತಾಂಶದಲ್ಲಿ ಹೇಳಿದ ಘಾತೀಯ ಕುಟುಂಬಕ್ಕೆ (ಎಕ್ಸ್‌ಪೊನೆನ್ಷಿಯಲ್ ಫ್ಯಾಮಿಲಿ) ಸೇರಿದ ಸಂಭವಸಾಂದ್ರತೆಯುಳ್ಳ ಸಂಭವಚರಗಳಿಗೆ ಸಂಬಂಧಿಸಿದ ಪ್ರಾಚಲವನ್ನು ನಿರ್ದೇಶಿಸುವ ಆಧಾರ ಭಾವನೆಗಳನ್ನು ಪರೀಕ್ಷಿಸಲು ಒಂ.ರೀ.ಅ.ಸಾ. ಅಪಕ್ಷಪಾತಿ ಪರೀಕ್ಷೆ ಇರುವುದೆಂದು ನೇಮಾನ್ ಸಾಧಿಸಿದ್ದಾನೆ. ಮಾತ್ರವಲ್ಲದೆ ಅನೇಕ ಪ್ರಾಚಲಗಳು ಘಾತೀಯ ಕುಟುಂಬಕ್ಕೆ ಸೇರಿದ ಸಂಭವಚರಗಳಿಗೆ ಸಂಬಂಧಿಸಿದ ಆಧಾರಭಾವನೆಗಳನ್ನು ಪರೀಕ್ಷಿಸಲು ಮತ್ತು ಅನೇಕ ಪ್ರಾಚಲಗಳಿದ್ದಲ್ಲಿ ಅವುಗಳಲ್ಲಿ ಒಂದು ಪ್ರಾಚಲದ ಬೆಲೆಯನ್ನು ನಮೂದಿಸಿ ಉಳಿದುವನ್ನು ಹೇಳದೆ ಇರುವ ಕ್ಲಿಷ್ಟ ಆಧಾರಭಾವನೆಗಳನ್ನು ಪರೀಕ್ಷಿಸುವುದಕ್ಕೂ ಒಂ.ರೀ.ಅ.ಸಾ. ಅಪಕ್ಷಪಾತಿ ಪರೀಕ್ಷೆ ಇರುವುದೆಂದು ಅವನು ಹೇಳಿದ್ದಾನೆ. ಉದಾಹರಣೆಗೆ, ಎರಡು ಪ್ರಸಾಮಾನ್ಯ ಅಥವಾ ಪೋಸೋನ್ ಸಂಭವಚರಗಳ ನಿರೀಕ್ಷಿತ ಬೆಲೆಗಳು ಒಂದೇ ಆಗಿರುವುವೆ ಎಂಬುದನ್ನು ಪರೀಕ್ಷಿಸಲು ನಮಗೆ ಒಂ.ರೀ.ಅ.ಸಾ. ಅಪಕ್ಷಪಾತಿ ಪರೀಕ್ಷೆ ಇದೆ.

**ಅನುಕ್ರಮ ವಿಶ್ಲೇಷಣೆ** (ನೋಡಿ) ವಾಲ್ಡ್‌ನು ಮಂಡಿಸಿದ ಪರೀಕ್ಷಾವಿಧಾನ.

**ಬೃಹತ್ ನಮೂನಾಪರೀಕ್ಷೆ (ಲಾರ್ಜ್ ಸ್ಯಾಂಪಲ್ ಟೆಸ್ಟ್) ಮತ್ತು ಸಾಧ್ಯತಾ ನಿಷ್ಪತ್ತಿ ಪರೀಕ್ಷೆ (ಲೈಕಿಹುಡ್ ರೇಷಿಯೋ ಟೆಸ್ಟ್) :** ಸಂಭವಚರದ ಸಾಂದ್ರತೆ ಘಾತೀಯ ಕುಟುಂಬಕ್ಕೆ ಸೇರಿದಾಗ ಇಲ್ಲವೇ ಸಂಭವಚರ ಬೇರಾವುದೇ ಆದ ಸುಲಭ ಸಾಂದ್ರತೆಯನ್ನು ಹೊಂದಿದಾಗ, ಸಾಂದ್ರತೆಯಲ್ಲಿನ ಪ್ರಾಚಲದ ಮೇಲಿನ ಆಧಾರಭಾವನೆಗಳನ್ನು ಪರೀಕ್ಷಿಸಲು, ಮೇಲೆ ವಿವರಿಸಿದ ನಿಶ್ಚಿತ ಪರೀಕ್ಷೆ (ಎಗ್ಸಾಕ್ಟ್ ಟೆಸ್ಟ್) ನಮಗೆ ದೊರೆಯುವುವು. ಆದರೆ ಸಂಭವಚರದ ಸಾಂದ್ರತೆ ಕಠಿಣವಾಗಿದ್ದಲ್ಲಿ ಈ ಸಂಭವಚರದ ಪರೀಕ್ಷೆಗಳನ್ನು ಪಡೆಯಲು ಕಷ್ಟವಾಗುತ್ತದೆ. ಈ ಸಂದರ್ಭದಲ್ಲಿ ನಮೂನೆಯ ಗಾತ್ರ ದೊಡ್ಡದಾಗಿದ್ದಲ್ಲಿ ನಮೂನೆ ಪ್ರಸಾಮಾನ್ಯ ವಿತರಣೆಯಿಂದ ಬಂದುದೆಂದು ಪರಿಗಣಿಸಿ ಪರೀಕ್ಷೆಯನ್ನು ಮಾಡಿದರೆ ದೊಡ್ಡ ತಪ್ಪಾಗುವುದಿಲ್ಲ; ಏಕೆಂದರೆ ಕೇಂದ್ರಮಿತಿ ಪ್ರಮೇಯದ (ಸೆಂಟ್ರಲ್ ಲಿಮಿಟ್ ತಿಯರಂ) ಪ್ರಕಾರ ಯಾವುದೇ ವಿತರಣೆಯಿಂದ ಆಯ್ದ ನಮೂನಾಮಾನದ ವಿತರಣೆ ನಮೂನಾಗಾತ್ರ ವೃದ್ಧಿಯಾದಂತೆ ಪ್ರಸಾಮಾನ್ಯ ವಿತರಣೆಯನ್ನು ಸಮೀಪಿಸುವುದು. ನಿಶ್ಚಿತ ಪರೀಕ್ಷೆ ತಿಳಿದಿದ್ದರೂ, ನಮೂನಾಗಾತ್ರ ದೊಡ್ಡದಾದಲ್ಲಿ ಪರೀಕ್ಷಾಪ್ರಮಾಣದ (ಟೆಸ್ಟ್‌ಕ್ರೈಟೀರಿಯನ್) ವಿತರಣೆ ಪ್ರಸಾಮಾನ್ಯ ವಿತರಣೆ ಎಂದು ಪರಿಗಣಿಸಬೇಕಾಗುವುದು. ಇಂಥ ಪರೀಕ್ಷೆಗಳನ್ನು ಬೃಹತ್ ನಮೂನಾಪರೀಕ್ಷೆ ಅಥವಾ ಅನಂತಸ್ಪರ್ಶಕೀಯ (ಅಸಿಂಪ್ಟೋಟಿಕ್) ಪರೀಕ್ಷೆ ಎಂದು ಕರೆಯುವರು.

ಬೃಹತ್ ನಮೂನಾಪರೀಕ್ಷೆಗಳಲ್ಲಿ ಅತಿ ಮುಖ್ಯವಾದುದು ಸಾಧ್ಯತಾ ನಿಷ್ಪತ್ತಿ ಪರೀಕ್ಷೆ. ನೇಮಾನ್–ಪಿಯರ್ಸನ್ನರ ಮೂಲ ಉಪಪ್ರಮೇಯದ ಮೇರೆಗೆ, ಆಧಾರಭಾವನೆಗಳು ಸರಳವಾಗಿದ್ದಲ್ಲಿ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆಯ ನಿರಾಕರಣ ಪ್ರದೇಶದಲ್ಲಿ ಆಗಿರುವುದು $[(p_1/p_0)>c]$ ಆಧಾರಭಾವನೆಗಳು ಕ್ಲಿಷ್ಟವಾಗಿದ್ದಲ್ಲಿ ನಿರಾಕರಣ ಪ್ರದೇಶವನ್ನು ಈ ರೀತಿ ಆರಿಸಬಹುದು:

$$\frac{\underset{K}{\text{ಗರಿಷ್ಠ}}\ p(x)}{\underset{H.}{\text{ಗರಿಷ್ಠ}}\ p(x)} = \frac{\max_K p(x)}{\max_H p(x)} > c$$

ಹೆಚ್ಚಾಗಿ K, Hನ್ನು ಒಳಗೊಂಡಿರುವಾಗ ಈ ಮೇಲಿನ ಸಾಧ್ಯತಾ ನಿಷ್ಪತ್ತಿ ಪರೀಕ್ಷೆಯನ್ನು ಉಪಯೋಗಿಸುವರು. ಆಗ ಮೇಲಿನ ನಿಷ್ಪತ್ತಿ 1ಕ್ಕಿಂತ ದೊಡ್ಡದಾಗಿರುತ್ತದೆ. ಈ ನಿಷ್ಪತ್ತಿಯ ಅನಂತಸ್ಪರ್ಶಕೀಯ ವಿತರಣೆಯನ್ನು ಕಂಡುಹಿಡಿದು c ಯ ಬೆಲೆಯನ್ನು ನಿರ್ದಿಷ್ಟಪಡಿಸಬಹುದು. ಗರಿಷ್ಠ p(x)ನ್ನು ಕಂಡುಹಿಡಿಯಲು, ನಿರ್ದಿಷ್ಟ ಪಡಿಸದ ಪ್ರಾಚಲಗಳ ಬೆಲೆಗಳಿಗೆ, ಸಾಧ್ಯತೆಯನ್ನು ಗರಿಷ್ಠ ಮಾಡುವ ಅಂದಾಜಿನ ಬೆಲೆಗಳನ್ನು ಬದಲಾಗಿ ಇಡುತ್ತೇವೆ. ಈ ಸಾಧ್ಯತಾನಿಷ್ಪತ್ತಿ ಪರೀಕ್ಷೆಯನ್ನು ಬಹುಚರ ವಿತರಣೆಗಳಿಗೆ ಸಂಬಂಧಿಸಿದ ಆಧಾರಭಾವನೆಗಳನ್ನು ಪರೀಕ್ಷಿಸಲು ಉಪಯೋಗಿಸುತ್ತೇವೆ.

ಕೆಲವೊಂದು ವಿತರಣೆಗಳಲ್ಲಿನ ಪ್ರಾಚಲದ ಗರಿಷ್ಠ ಸಾಧ್ಯತಾ ಅಂದಾಜನ್ನು ಕಂಡುಹಿಡಿಯುವುದು ಕಷ್ಟ. ನೇಮಾನ್ ಅತ್ಯುತ್ತಮ ಅನಂತಸ್ಪರ್ಶಕ (ಆಪ್ಟಿಮಲ್ ಅಸಿಂಪ್ಟೋಟಿಕ್) ಪರೀಕ್ಷೆಯನ್ನು ಉಪಯೋಗಿಸಲು ಸೂಚಿಸಿರುವನು. ಈ ಪರೀಕ್ಷೆಯಲ್ಲಿ H ನಿರ್ದಿಷ್ಟಗೊಳಿಸದ ಪ್ರಾಚಲಗಳಿಗೆ $\sqrt{n}$ ಸುಸಂಗತ ಅಂದಾಜಿನ ಬೆಲೆಯನ್ನು ಬದಲಾಗಿ ಇಟ್ಟರೆ ಸಾಕು.

$\chi^2$– ಪರೀಕ್ಷೆಯೂ ಒಂದು ಬೃಹತ್ ನಮೂನಾಪರೀಕ್ಷೆ. ಸಂಭವಚರದ ಬೆಲೆಗಳು ವಿರತವಾಗಿದ್ದಲ್ಲಿ, Hನ ಮೇರೆಗೆ ನಿರೀಕ್ಷಿಸಿದ ಬೆಲೆಗಳೂ ಪರಾಂಬರಿಸಿದ ಬೆಲೆಗಳೂ ಒಂದನ್ನೊಂದು ಹೋಲುವುವೆ ಇಲ್ಲವೇ ಎಂಬುದನ್ನು ಪರೀಕ್ಷಿಸುವುದಕ್ಕೆ ಉದಾ: ಒಂದು ಅನುಷಂಗತೆ ಕೋಷ್ಟಕದಲ್ಲಿನ (ಕನ್ಟಿನ್ಜೆನ್ಸಿ ಟೇಬಲ್) ಎರಡು ಗುಣಗಳು ಸ್ವತಂತ್ರವಾಗಿವೆಯೇ ಎಂಬುದನ್ನು ಪರೀಕ್ಷಿಸುವುದಕ್ಕೆ ಈ ಪರೀಕ್ಷೆಯನ್ನು ಉಪಯೋಗಿಸುವರು.

**ಅಚರ ಪರೀಕ್ಷೆ (ಇನ್‌ವೇರಿಯಂಟ್ ಟೆಸ್ಟ್) ಮತ್ತು ಚರ ವಿಶ್ಲೇಷಣ (ಅನ್ಯಾಲಿಸಿಸ್ ಆಫ್ ವೇರಿಯನ್ಸ್) :** ಮೇಲೆ ವಿವರಿಸಿದಂತೆ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆ ಇಲ್ಲದಿರುವಾಗ, ನಾವು ಅಪಕ್ಷಪಾತಿ ಅಥವಾ ಅನಭಿನತ ಪರೀಕ್ಷೆಗಳಲ್ಲಿನ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆಯಿಂದ ಸಮಾಧಾನಗೊಳ್ಳಬೇಕಾಯಿತು. ಆದರೆ ಅನಭಿನತ ಪರೀಕ್ಷೆಗೆ ಅಷ್ಟು ಮಹತ್ತ್ವವನ್ನೇಕೆ ಕೊಡಬೇಕು ಎಂಬ ಪ್ರಶ್ನೆಗೆ ನಮ್ಮ ಹತ್ತಿರ ಉತ್ತರವಿಲ್ಲ. ಆ ಕಾರಣದಿಂದ ಅದರ ಬದಲಿಗೆ ಬೇರೆ ಯಾವುದಾದರೂ ಒಂದು ಗುಣವನ್ನು ಪರೀಕ್ಷೆಗಳಲ್ಲಿ ನಿರೀಕ್ಷಿಸಬಹುದಲ್ಲವೇ ಎಂದು ಇತ್ತೀಚಿಗೆ ಅನೇಕರು ವಿಚಾರ ಮಾಡತೊಡಗಿರುವರು. ಇವರಲ್ಲಿ ಸ್ಟೈನ್ ಅಚರತೆಯ ಗುಣಕ್ಕೆ ಮಹತ್ತ್ವ ನೀಡಿದ್ದಾನೆ. ಮೂಲ ಮತ್ತು ಪರ್ಯಾಯ ಆಧಾರಭಾವನೆಗಳು ಪ್ರಾಚಲಗಳ ಕೆಲವೊಂದು ಪರಿವರ್ತನೆಗಳಿಂದ (ಟ್ರಾನ್ಸ್‌ಫಾರ್ಮೇಷನ್ಸ್) ವ್ಯತ್ಯಾಸವಾಗದಿದ್ದ ಪಕ್ಷದಲ್ಲಿ ಆ ಆಧಾರಭಾವನೆಗಳ ಪರೀಕ್ಷೆ ಕೂಡ ಇದೇ ರೀತಿಯ ಅಚರತೆಯ ಗುಣಗಳನ್ನು ಹೊಂದಿರಬೇಕೆಂಬುದೇ ಇವನ ವಾದ. ಇಂಥ ಅಚರತೆಯ ಗುಣಗಳನ್ನೊಳಗೊಂಡ ಪರೀಕ್ಷೆಗಳಲ್ಲಿ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆಯನ್ನು

ನಾವು ಉತ್ತಮ ಪರೀಕ್ಷೆ ಎಂದು ಪರಿಗಣಿಸಬಹುದು. ಉದಾ: $\mu$ ನಿರೀಕ್ಷಿತ ಬೆಲೆಯಾಗಿಯೂ, $\sigma^2$ ಚರನೀಯವಾಗಿಯೂ ಇರುವ ಪ್ರಸಾಮಾನ್ಯ ವಿತರಣೆಯಿಂದ ಒಂದು ನಮೂನೆ ಆರಿಸಲ್ಪಟ್ಟಿರಲಿ. ಇಲ್ಲಿ $(\mu,\sigma^2)$ಗಳಿಗೆ $(\bar{x}, s^2)$ಗಳನ್ನು ನೋಡಿದರೆ ಸಾಕು (ಸಫಿಷಿಯಂಟ್) $[H{:}\mu/\sigma<$ ಅಥವಾ $=\theta_0]$ ಎಂಬ ಮೂಲ ಆಧಾರಭಾವನೆಯನ್ನು ನಾವು ಪರೀಕ್ಷಿಸಬೇಕಾದರೆ, ಪರೀಕ್ಷಾ ಪ್ರಮಾಣ $(\bar{x},s^2)$ ದ ಉತ್ಪನ್ನವಾಗಿರಬೇಕು. $x_i$ ಗಳನ್ನು ಒಂದೇ ಅಂಕೆಯಿಂದ ಗುಣಿಸಿದರೆ H ವ್ಯತ್ಯಾಸವಾಗುವುದಿಲ್ಲ. ಇದೇ ಗುಣಪರೀಕ್ಷಾ ಪ್ರಮಾಣದಲ್ಲಿಯೂ ಇರಬೇಕಾದರೆ ಅದು $\bar{x}/s$ ನ ಒಂದು ಉತ್ಪನ್ನವಾಗಿರಬೇಕು. ಇವುಗಳಿಂದ ದೊರೆಯುವ ಪರೀಕ್ಷೆಗಳಲ್ಲಿ ಅತ್ಯಂತ ಸಾಮರ್ಥ್ಯಯುತವಾದ ಪರೀಕ್ಷೆಯನ್ನು ನಾವು ಆರಿಸಬೇಕು. ಈ ಪರೀಕ್ಷೆ ಸ್ಟೂಡೆಂಟನ t–ವಿತರಣೆಯ ಮೇಲಿನ ಪರೀಕ್ಷೆ. ಅಂತೆಯೇ ಅನೇಕ ನಮೂನೆಗಳು ಒಂದೇ ನಿರೀಕ್ಷಿತ ಬೆಲೆಯುಳ್ಳ ಪ್ರಸಾಮಾನ್ಯ ವಿತರಣೆಯಿಂದ ಬಂದಿರುವುವೇ ಎಂದು ಕಂಡುಹಿಡಿಯಲು ಸ್ನೆಡೆಕರನ F–ವಿತರಣೆಯನ್ನು ಉಪಯೋಗಿಸಬೇಕೆಂದು ಅಚರತೆಯ ಆಧಾರದಿಂದಲೂ ಹೇಳಬಹುದು.

ನಾವು ಚರವಿಶ್ಲೇಷಣೆಯಲ್ಲಿ ಉಪಯೋಗಿಸುವ ಪರೀಕ್ಷೆ ಈ ಅಚರತೆಯ ಗುಣವನ್ನು ಪಡೆದಿದೆ. ಇದು ಒಂ.ರೀ.ಅ.ಸಾ. ಅಚರಪರೀಕ್ಷೆಯಾಗಿದೆ. $x_i$ ಗಳು $(\theta_1,\theta_2,...........,\theta_k)$ ಯ ಏಕಘಾತಿಕ ಉತ್ಪನ್ನಗಳು ನಿರೀಕ್ಷಿತ ಬೆಲೆಯಾಗಿರುವ ಪ್ರಸಾಮಾನ್ಯ ವಿತರಣೆಯಿಂದ ಬಂದಿರಲಿ. $(\theta_1,\theta_2,...........,\theta_k)$ ಯ ಒಂದು ಅಥವಾ ಅನೇಕ ಏಕಘಾತ ಫಲಗಳ ಬೆಲೆಗಳನ್ನು ನಿರ್ದಿಷ್ಟಪಡಿಸುವ ಆಧಾರಭಾವನೆಗಳನ್ನು ಪರೀಕ್ಷಿಸಲು ನಾವು F–ಪರೀಕ್ಷೆಯನ್ನು ಉಪಯೋಗಿಸುತ್ತೇವೆ. F–ಪರೀಕ್ಷೆ ಅಚರತೆಯಿಲ್ಲದೆ ಬೇರೆ ಅನೇಕ ಉತ್ತಮಗುಣಗಳನ್ನು ಪಡೆದಿರುವುದು.

**ಅಪ್ರಾಚಲ ಪರೀಕ್ಷೆ (ನಾನ್‌ಪ್ಯಾರಮೆಟ್ರಿಕ್ ಟೆಸ್ಟ್) :** ಈವರೆಗೆ ನಾವು X ನ ಸಂಭವ ವಿತರಣೆ $\theta$ ಪ್ರಾಚಲವನ್ನವಲಂಬಿಸಿದೆ ಎಂದು ಕಲ್ಪಿಸಿದ್ದೆವು. ಸಂಭವ ಸಾಂದ್ರತೆಯ ರೂಪ (ಪ್ರಸಾಮಾನ್ಯ, ಗಾಮ ಇತ್ಯಾದಿ) ತಿಳಿದಿದ್ದು ಆ ರೂಪದಲ್ಲಿ ಸೇರಿರುವ ಪ್ರಾಚಲಗಳ ಬೆಲೆಗಳು ತಿಳಿದಿಲ್ಲ ಎಂದು ಊಹಿಸಿದ್ದೆವು. ಸಂಭವ ಸಾಂದ್ರತೆಯ ರೂಪವೇ ತಿಳಿಯದಿದ್ದಲ್ಲಿ $\mu$ ನ ಬಗೆಗಿನ ಪರೀಕ್ಷೆ ಪ್ರಾಚಲದ ಪರೀಕ್ಷೆ ಎನಿಸುವುದು. ಈ ಪರೀಕ್ಷೆಗಳನ್ನು ಮಾಡುವಾಗ ಸಂಭವಚರಗಳ ಬೆಲೆಗಳ ಬದಲಾಗಿ ಅವುಗಳ ಸ್ಥಾನ (ರ‍್ಯಾಂಕ್) ಅಥವಾ ಸಂಜ್ಞೆಗಳನ್ನು (ಸೈನ್) ಮಾತ್ರ ಎಣಿಸುವುದರಿಂದ ಪರೀಕ್ಷೆಯನ್ನು ಮಾಡುವುದು ಸುಲಭ. ಆದ್ದರಿಂದ ಈ ಪರೀಕ್ಷೆಗಳನ್ನು ಬಹು ವೇಗದಿಂದ ನಡೆಸಬಹುದು.

ಉದಾಹರಣೆಗೆ, ಎರಡು ನಮೂನೆಗಳು ಒಂದೇ ಸಂಭವಸಾಂದ್ರತೆಯುಳ್ಳವುಗಳೋ (H) ಅಥವಾ ಎರಡನೆಯ ನಮೂನೆಯ ಬೆಲೆಗಳು ಮೊದಲನೆಯ ನಮೂನೆಯ ಬೆಲೆಗಳಿಗಿಂತ ಹೆಚ್ಚಾಗಿವೆಯೋ (K) ಎಂಬುದನ್ನು ತಿಳಿಯಬೇಕಾಗಿದೆ. ಈ ನಮೂನೆಗಳು ಪ್ರಸಾಮಾನ್ಯ ವಿತರಣೆಯನ್ನು ಹೊಂದಿವೆ ಎಂದು ನಮಗೆ ತಿಳಿದಿದ್ದರೆ, ನಾವು ಸ್ಟೂಡೆಂಟನ t–ವಿತರಣೆಯನ್ನು ಉಪಯೋಗಿಸಬಹುದು. ಹಾಗೆಂದು ತಿಳಿಯದಿದ್ದರೆ ವಿಲ್ಕೊಕ್ಸನನ ಎರಡು ನಮೂನೆಗಳ ಪರೀಕ್ಷೆ ಎಂಬ ಅಪ್ರಾಚಲ ಪರೀಕ್ಷೆಯನ್ನು ಉಪಯೋಗಿಸಬಹುದು. ಎರಡೂ ನಮೂನೆಗಳ ಬೆಲೆಗಳನ್ನು ಆರೋಹಣ ಕ್ರಮದಲ್ಲಿಟ್ಟು, ಅದರಲ್ಲಿ ಎರಡನೆಯ ನಮೂನೆ ಬೆಲೆಗಳ ಸ್ಥಾನಗಳ ಮೊತ್ತ ಹೆಚ್ಚಾಗಿದ್ದಲ್ಲಿ ನಾವು K ಯನ್ನು ನಿಜವೆಂದು ನಂಬುತ್ತೇವೆ. ಇಲ್ಲವಾದರೆ Hನ್ನು ಸರಿಯೆಂದು ಸ್ವೀಕರಿಸುತ್ತೇವೆ. ಒಂದು ನಮೂನೆ ಸಮಾಂಗ ವಿತರಣೆ (ಸಿಮೆಟ್ರಿಕ್ ಡಿಸ್ಟ್ರಿಬ್ಯೂಷನ್) ಇರುವ ಆಕಾಶದಿಂದ ಆಯ್ದುದೇ ಇಲ್ಲವೇ ಎಂಬಿತ್ಯಾದಿಗಳನ್ನು ಪರೀಕ್ಷಿಸುವುದಕ್ಕೂ ಅಪ್ರಾಚಲರ ಪರೀಕ್ಷೆ ಇದೆ. ಮಧ್ಯರೇಖಾ ಪರೀಕ್ಷೆ (ಮೀಡಿಯನ್ ಟೆಸ್ಟ್) ಸಂಜ್ಞಾಪರೀಕ್ಷೆ (ಸೈನ್ ಟೆಸ್ಟ್) ಇವು ಬಹಳ ಜನಪ್ರಿಯವಾದ ಅಪ್ರಾಚಲ ಪರೀಕ್ಷೆಗಳು. (ಬಿ.ಆರ್.ಬಿ.)

**ಆಧಿದೈವಿಕ :** ಮನುಸ್ಮೃತಿಯಂತೆ ದೇವತೆಯನ್ನು ಕುರಿತು ಪ್ರವೃತ್ತವಾದುದು. ದುಃಖ (ತಾಪ) ತ್ರಯಗಳೆನಿಸಿಕೊಂಡಿರುವ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳಲ್ಲೊಂದು. ದೈವದ ಕಾರಣದಿಂದ ಉಂಟಾಗುವುದೆಂದು ಪ್ರತೀತಿ (**ನೋಡಿ– ದುಃಖತ್ರಯಗಳು**).

(ಬಿ.ಕೆ.ಎಸ್.)

**ಆಧುನಿಕ, ಆಧುನಿಕತೆ :** ಸಾಂಪ್ರದಾಯಿಕ ರೀತಿ ನೀತಿ, ಚಿಂತನೆಗಿಂತ ಭಿನ್ನವಾದ ಹೊಸ ಕ್ರಮ. ಈ ಪ್ರಕ್ರಿಯೆ ನಿರಂತರವಾದದ್ದು. ಮಾನವ ಜೀವನದ ಪ್ರತಿ ಹೆಜ್ಜೆಯೂ ಇದರಲ್ಲಿ ಸೇರಿದ್ದರೂ ಈ ಪದಗಳು ಹೆಚ್ಚಾಗಿ ಅನ್ವಯಿಸುವುದು ಚಿತ್ರಣ, ಶಿಲ್ಪ, ವಾಸ್ತುಶಿಲ್ಪ ಮೊದಲಾದ ಕಲೆಗಳಿಗೆ, ಸಾಹಿತ್ಯದಲ್ಲೂ ಇವುಗಳ ಪ್ರಸಾರವುಂಟು. ಆದರೆ ಪ್ರಭಾವ ಕಡಿಮೆಯೆಂದೇ ಹೇಳಬೇಕು. ಆಧುನಿಕ (ಮಾಡರ್ನ್) ಕಲೆ ಎಂದರೆ ನಮ್ಮ ಕಾಲದಲ್ಲಿ ಹೊರಬಂದ ಕಲೆ. ಸಮಕಾಲೀನ ಕಲೆ ಎಂಬಷ್ಟೇ ಅರ್ಥವಲ್ಲ; ತನ್ನ ಮುಖ್ಯ ಲಕ್ಷಣಗಳಲ್ಲಿ ಹಿಂದಣ ಕಲೆಗಿಂತ ಸ್ಪಷ್ಟವಾಗಿ ಬೇರೆಯಾದದ್ದು, ಈಗಿನ ಪರಿಸ್ಥಿತಿಗೂ ಸಂಸ್ಕೃತಿಯ ವಿಕಾಸದ ಈಚಿನ ಮಜಲಿಗೂ ಅನುರೂಪವಾಗಿ ಹೊಂದಿಕೊಂಡಿದ್ದು. ಹಾಗಾದರೆ, ಯಾವುದು ಆಧುನಿಕಯುಗವೆಂಬ ಪ್ರಶ್ನೆಗೆ ನೇರವಾದ ಮತ್ತು ಸರ್ವರೂ ಅಂಗೀಕರಿಸಬಲ್ಲ ಉತ್ತರ ಕೊಡುವುದಕ್ಕೆ ಆಗದಿದ್ದರೂ ಸುಮಾರು ಐವತ್ತು ವರ್ಷಗಳ ಇತ್ತೀಚಿನ ಸಮಯ ಎನ್ನಬಹುದು. ಸಾಂಪ್ರದಾಯಿಕವಾದ ವಿಧಾನಗಳನ್ನೆಲ್ಲ ಗುಡಿಸಿ ಒಗೆದು, ನವೀನವಿಧಾನಗಳನ್ನು ಬಳಕೆಗೆ ತರುವುದು ಆಧುನಿಕತೆಯ (ಮಾಡರ್ನಿಸಂ) ಒಂದು ಗುರುತು. ಆ ಪ್ರಮಾಣದಿಂದ ಪರಿಶೀಲಿಸಿದರೆ, 19ನೆಯ ಶತಮಾನದ ಕೆಲವು ಚಿತ್ರಕಾರರು ಆಧುನಿಕರಿಗೆ ಮುಂದಾಳುಗಳಾಗುತ್ತಾರೆ ಅಥವಾ ಮುನ್ಸೂಚಕರಾಗುತ್ತಾರೆ (ನೋಡಿ– ಅಗ್ರಗಾಮಿ). ಅಲ್ಲಿನವರೆಗೂ ಪುರಾತನ ಗ್ರೀಕ್, ರೋಮನ್ ಸನ್ನಿವೇಶಗಳ ಹಿನ್ನೆಲೆಯಲ್ಲೋ ಬೈಬಲ್‌ನ ಸನ್ನಿವೇಶಗಳ ಹಿನ್ನೆಲೆಯಲ್ಲೋ ಪೌರಾಣಿಕ ಸ್ತ್ರೀಪುರುಷರ ಮತ್ತು ದಿವ್ಯವ್ಯಕ್ತಿಗಳ ಆಗುಹೋಗುಗಳನ್ನು ಚಿತ್ರಿಸುವುದು ವಾಡಿಕೆಯಾಗಿತ್ತು. ಸಮಕಾಲೀನ ಶ್ರೀಮಂತರ ಭಾವಚಿತ್ರಗಳನ್ನು ತಯಾರಿಸುವಾಗಲೂ ಉಡುಪು ಸ್ಥಳ ಆವರಣವೆಲ್ಲವೂ ಪ್ರಾಚೀನ ರೀತಿಯದೇ ಆಗಿರುತ್ತಿತ್ತು. 1830ರಿಂದ ಈಚೆಗೆ ಬಂದ, ಕೂರ್ಬೆ, ಸಿಜಾನ್, ವಾನ್‌ಗೊ ಮೊದಲಾದವರು ವಾಸ್ತವಿಕ ದೃಶ್ಯಗಳನ್ನೂ ವ್ಯಕ್ತಿಗಳನ್ನೂ ಮೂಲಾಧಾರ ಮಾಡಿಕೊಂಡು ವರ್ಣಕೃತಿಗಳನ್ನು ರಚಿಸಿ ಕ್ರಾಂತಿಯನ್ನು ಉಂಟುಮಾಡಿದರು. ಆದರೂ ಹಳೆಯ ಸಂಪ್ರದಾಯ ಅಳಿಸಿಹೋಗಲಿಲ್ಲ.

ಹಿಂದಣದನ್ನು ಕೈಬಿಟ್ಟ ಮಾತ್ರಕ್ಕೆ ಆಧುನಿಕತ್ವ ಸಿದ್ಧಿಸಲಿಲ್ಲ ಎಂಬ ಶಂಕೆ 1910ರಿಂದ ಈಚೆಗೆ ಎದ್ದು ಬಲಗೊಂಡು, ಲಲಿತಕಲೆಗಳ ಉದ್ದೇಶವನ್ನೂ, ಸ್ವರೂಪವನ್ನೂ ಇನ್ನೂ ಹೆಚ್ಚಾಗಿ ಪಲ್ಲಟಗೊಳಿಸಿತು. ನಮ್ಮ ಕಾಲಮಾನದ ಲಾಂಛನಗಳೆಂದರೆ ಯಂತ್ರಗಳ ಹೆಚ್ಚಳ, ನುಡಿಯಲ್ಲಿ ಆತುರ, ನಡೆಯಲ್ಲಿ ವೇಗ, ಆಚಾರವ್ಯವಹಾರಗಳಲ್ಲಿ ನಷ್ಟತೆ–ಇತ್ಯಾದಿ ಸಡಗರಗಳಷ್ಟೆ ಆದ್ದರಿಂದ ಒಡವೆ, ವಸ್ತು, ವಸ್ತ್ರ, ವಸತಿವಾಹನ ಯಾವುದೇ ಆಗಲಿ ಕೇವಲ ಲಾವಣ್ಯಕ್ಕೋಸ್ಕರ ಅದಕ್ಕೆ ಪ್ರಶಸ್ತಿಯನ್ನು ಕೊಡಲಾಗುವುದು. ಸಮರ್ಪಕ ಉಪಯುಕ್ತತೆಯಿಂದಲೂ, ಪ್ರಗತಿಯ ಸೂಚನೆಯಿಂದಲೂ ಅದು ಮಾನ್ಯವಾಗತಕ್ಕದ್ದು. ಇದು ಆಧುನಿಕರ ಜೀವನನೇಮ. ವಾಸ್ತುಶಿಲ್ಪಿ ಒಬ್ಬನ ವಿವರಣೆಯಂತೆ ಗೃಹವೆನ್ನುವುದು ಬದುಕು ಸಾಗಿಸಲು ಅನುಕೂಲವಾದ ಯಂತ್ರ. ಆಡಳಿತದ ಕಚೇರಿಗೆ ಅಲಂಕೃತವಾದ ಕಂಬ, ವಿಶಾಲವಾದ ಅಂಗಳಗಳು ಬೇಡ. ಕಾರ್ಖಾನೆಗಳಿಗೆ ತೆರಸಾಲೆ, ದಿವಾನಖಾನೆಗಳು ಅನಗತ್ಯ. ಇದು ಮನಶ್ಶಾಸ್ತ್ರ ವಿಶೇಷವಾಗಿ ಬೆಳೆದು ಹಬ್ಬಿರುವ ಯುಗ. ಅದರ ಒತ್ತಡದಿಂದ ಅಂತರಾಳದ ಸುಪ್ತಚೇತನಕ್ಕೂ ಗುಪ್ತ ಪ್ರಚೋದನೆಗೂ ಸಂಬಂಧಿಸಿದಂತೆ ಕಲೆಯ ವ್ಯಾಪಾರವನ್ನು ಹವಣಿಸುವ ಪ್ರಯತ್ನ ಹಲವಾರು ತೆರಗಳಲ್ಲಿ ನಡೆದಿದೆ.

ಲಲಿತಕಲೆಗಳಲ್ಲಿ ಒಂದಾದ ಸಾಹಿತ್ಯದ ಮೇಲೂ ಆಧುನಿಕತೆಯ ಛಾಯೆ ಬಿದ್ದಿದ್ದರೆ ಅದೇನೂ ಅಚ್ಚರಿಯಲ್ಲ. ಆದರೆ ಇತರ ಕಲೆಗಳ ಮೇಲಿನಷ್ಟು ಆ ಛಾಯೆ ದಪ್ಪವಲ್ಲ. ಕಾದಂಬರಿ, ನಾಟಕ, ಪ್ರಬಂಧ, ಸಣ್ಣಕಥೆ ಇತ್ಯಾದಿ ಸಾಹಿತ್ಯ ಪ್ರಭೇದಗಳು ಹೊಸ ಅಂಶವನ್ನು ಸ್ವೀಕರಿಸಿ ಅಷ್ಟಿಷ್ಟು ಬದಲಾವಣೆ ತೋರಿದರೂ ಮೂಲ ರೂಪದಿಂದ ಅವು ಬಹುದೂರ ಸರಿದಿಲ್ಲ. ಪದ್ಯಕಾವ್ಯದಲ್ಲಿ ಮಾರ್ಪಾಟು ಕಣ್ಣುಕುಕ್ಕುವಷ್ಟು ಕಾಣಬರುತ್ತಿದೆ. ಹಿಂದಣ ಕಥನರೀತಿಯೂ ಛಂದಸ್ಸೂ ಕವಿಸಮಯವೂ ಹಿಂದೆಬಿದ್ದಿವೆ. ಸಂಕ್ಷಿಪ್ತತೆ, ವ್ಯಂಗ್ಯ, ಮರ್ಯಾದೆ, ನಾಟಕೀಯತೆ, ವಿರೋಧಗಳ ಮಿಲನ, ತೊಡಕುಗಳ ಸರಣಿ–ಮುಂತಾದವುಗಳಿಂದ ಬರವಣಿಗೆ ಕಷ್ಟಗ್ರಾಹ್ಯವಾಗಿದೆ. ಕೆಲವು ಕವಿಗಳ ಗೀತಕಾವ್ಯವಂತೂ ಅತ್ಯಾಧುನಿಕವಾಗಿದೆ.

ಸಾಹಿತ್ಯ ವಿಮರ್ಶೆಗೂ ಹಿಂದಣ ಕ್ಲ್ಯಾಸಿಕಲ್, ರೋಮ್ಯಾಂಟಿಕ್, ಇಂಪ್ರೆಷನಿಸ್ಟಿಕ್ ಇತ್ಯಾದಿ ಕ್ರಮಗಳಿಂದ ವಿಭಿನ್ನವಾಗುವ ಆಕಾಂಕ್ಷೆ ಬಲವಾಗಿದೆ. ಈಚಿನ ವಿಮರ್ಶೆಯ ಕೆಲವು ಸಿದ್ಧಾಂತಗಳು ಇವು : ಕವಿಯ ಸ್ವಭಾವಕ್ಕೂ ವೈಯಕ್ತಿಕ ಜೀವನಕ್ಕೂ ಅವನ ಲೇಖನಕ್ಕೂ ಏನೇನೂ ಸಂಬಂಧವಿಲ್ಲ; ಶಬ್ದಕೃತಿ ಒಂದೊಂದಕ್ಕೂ ತನ್ನದೇ ಆದ ಸ್ವತಂತ್ರ ವ್ಯಕ್ತಿತ್ವ ಇದ್ದೇ ಇರಬೇಕು; ಕಾವ್ಯ ಕಾವ್ಯವಾಗಿರತಕ್ಕದ್ದೇ ಹೊರತು ಮತ್ತಾವ ಉದ್ದೇಶವೂ ಅದಕ್ಕೆ ಇರಕೂಡದು; ಕಾವ್ಯದ ಅರ್ಥವನ್ನು ಹುಡುಕುವುದು ವ್ಯರ್ಥ; ಕಾವ್ಯವೆಂಬುದು ಒಂದು ಕಾರ್ಯ. ಆ ಕಾರ್ಯವನ್ನು ನಾವು ಅನುಭವಿಸಬೇಕು; ರೂಪದ ವಿಮರ್ಶೆಯಲ್ಲಿ ಕಂದಾಚಾರದ ಪಾತ್ರ, ಕಥಾಸಂವಿಧಾನ, ಕವಿದರ್ಶನ ಮುಂತಾದುವನ್ನು ನಿರಾಕರಿಸಬೇಕು; ಕೃತಿಗೆ ಬೆಲೆಕಟ್ಟಲು ಹೋಗಬಾರದು, ಕೃತಿಕಾರನ ಪ್ರತಿಮಾಶಿಲ್ಪವನ್ನು ಸವಿದು ತೃಪ್ತರಾಗತಕ್ಕದ್ದು. ಈ ಬಗೆಯ ಅಭಿಪ್ರಾಯಗಳ ಸುರಿಮಳೆಯಿಂದಲೂ ವಾದ ಪ್ರತಿವಾದಗಳ ಘರ್ಷಣೆಯಿಂದಲೂ ಗೊಂದಲ ಅಧಿಕವಾಗಿದೆ. ಸಕಲ ವಿದ್ವಾಂಸರೂ ಒಪ್ಪಬಹುದಾದ ಆಧುನಿಕ ಸೂತ್ರ ಯಾವೊಂದೂ ಫಲಿತವಾಗಿಲ್ಲ. ಸ್ಥೂಲವಾಗಿ ವರ್ಣಿಸಬೇಕಾದರೆ, ಆಧುನಿಕವೆನಿಸಿಕೊಳ್ಳುವ ವಿಮರ್ಶೆ ಉದ್ದಕ್ಕೂ ಕಠಿಣ ಪಾರಿಭಾಷಿಕ ಪದಗುಚ್ಛಗಳ ನೆಯ್ಗೆ, ಆಧುನಿಕತೆಯೇ ಉದ್ಯೋಗವಾಗುಳ್ಳ ಪಂಡಿತರು–ಮುಖ್ಯವಾಗಿ ವಿದ್ಯಾನಿಲಯಗಳ ಪ್ರಾಧ್ಯಾಪಕರು–ಆ ದುಪ್ಪಟಿಯನ್ನು ಹೊದೆಯಬಹುದು, ಹೊರಬಹುದು. ಎಂದರೆ, ಆಧುನಿಕ ವಿಮರ್ಶೆ ಸಾಮಾನ್ಯ ವಿದ್ಯಾವಂತರ ಕೈಗೆ ನಿಲುಕುವಂತಿಲ್ಲ. ಹೆಚ್ಚೆಂದರೆ ವಿಪರೀತಮತಿಗಳಿಗೆ ಮೀಸಲಾದ ಸಾರಸ್ವತ ಪ್ರಕ್ರಿಯೆಯಾಗಿದೆ. *

**ಆಧುನಿಕ ಜೀವಯುಗ :** ಭೂ ವಿಜ್ಞಾನದಲ್ಲಿ 63 ದಶಲಕ್ಷ ವರ್ಷಗಳಿಂದ ಈಚೆಗಿನ ಕಾಲ (ಸೀನೋಝೋಯಿಕ್ ಈರಾ). ಅದರ ಹಿಂದಿನ ಉರಗ ಯುಗದ (ಮೀಸೋಝೋಯಿಕ್ ಈರಾ) ಕೊನೆಯ ಭಾಗವಾದ ಕ್ರಿಟೇಷಿಯಸ್ ಕಲ್ಪದ (ಈಪಾಕ್)

ಅನಂತರ ಮಹಾಪ್ರಳಯವಾಗಿ ಮಹತ್ತರ ಬದಲಾವಣೆಗಳಾದವು. ಅದರ ಪ್ರಭಾವ ಜೀವಕೋಟಿಯಲ್ಲಿ ಅತಿಶಯವಾಗಿ ಎದ್ದು ಕಾಣುತ್ತದೆ. ಉರಗ ಯುಗದಲ್ಲಿ (ಮಧ್ಯಜೀವ ಯುಗ) ಭೂಸ್ವಾಮ್ಯ ಹೊಂದಿದ್ದ ಏಕೈಕ ಪ್ರಾಣಿವರ್ಗವಾದ ಸರೀಸೃಪಗಳ ಅನೇಕ ಶಾಖೆಗಳು ಸಂಪೂರ್ಣ ನಿರ್ವಂಶವಾದವು. ಬೆನ್ನೆಲುಬಿಲ್ಲದ ಪ್ರಾಣಿವರ್ಗಗಳಲ್ಲಿ ಆ್ಯಮನೈಟ್ ಮತ್ತು ಬೆಲಿಮ್ನೈಟ್ ಎಂಬ ಪ್ರಾಣಿಗಳು ಅಂದಿನ ಸಾಗರಗಳಲ್ಲಿ ಅಸಂಖ್ಯಾತವಾಗಿದ್ದವು. ಅವೆಲ್ಲ ಗತಕಾಲದ ಕುರುಹಾದವು. ಸಸ್ಯವರ್ಗಗಳಲ್ಲಿ ಎಲ್ಲೆಲ್ಲಿಯೂ ತಾನೇತಾನಾಗಿ ಬೀಡು ಬಿಟ್ಟಿದ್ದ ಸೈಕಾಡ್ ಮತ್ತು ಕೋನಿಫೆರ್ ಎಂಬ ಹೂಬಿಡದ ಆದರೆ ಬೀಜಗಳಿಂದ ಕೂಡಿದ್ದ ಜಿಮ್ನೊಸ್ಪರ್ಮ ಜಾತಿಯ ಸಸ್ಯವರ್ಗ ಅನೇಕ ಅತಿ ಮುಖ್ಯವಾದ ವಂಶಶಾಖೆಗಳನ್ನು ಕಳೆದುಕೊಂಡು ಹೇಗೋ ಉಳಿದುಕೊಂಡವು. ಮೇಲೆ ಹೇಳಿದ ಸರೀಸೃಪಗಳ ಸ್ಥಾನವನ್ನು ಸಸ್ತನಿಗಳು ಆಕ್ರಮಿಸಿದವು. ಅವು ಆಧುನಿಕ ಜೀವಕಲ್ಪದ ಆದಿಯಲ್ಲಿ ಸಾಮಾನ್ಯ ಜಾತಿಯವು. ಆದರೆ ಅವು ವಿವಿಧ ವಾತಾವರಣಕ್ಕನುಸಾರವಾಗಿ ಸಿಕ್ಕಿದ ಆಹಾರ ಮತ್ತು ಅನುಕೂಲಗತಿಗಳ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಬಹು ಬೇಗನೆ ವೃದ್ಧಿಹೊಂದಿ ಅನೇಕ ವಿಧದ ಸಸ್ತನಿಗಳಾದವು. ಸಾಗರದಲ್ಲಿ ಶಂಖಗಳು, ಕಪ್ಪೆಚಿಪ್ಪು ಮತ್ತು ಮುತ್ತಿನ ಚಿಪ್ಪಿನ ಪ್ರಾಣಿಗಳು ಆ್ಯಮನೈಟ್ ಸ್ಥಾನವನ್ನು ಪಡೆದವು. ಹೂಬಿಡುವ ಸಸ್ಯವರ್ಗ ಮಧ್ಯ ಜೀವಕಲ್ಪದ ಅಂತ್ಯದಲ್ಲಿಯೇ ಕಾಣಿಸಿಕೊಂಡಿತಾದರೂ ಅದು ವೃದ್ಧಿಹೊಂದಿದುದು ಆಧುನಿಕ ಜೀವಯುಗದಲ್ಲಿ. ಆದ್ದರಿಂದ ಈ ಭೂತಕಾಲವನ್ನು ಆಧುನಿಕ ಜೀವಯುಗ ಎಂದು ಕರೆದಿರುವುದು ಸಮಂಜಸವಾಗಿದೆ.

ಪ್ರಳಯಕಾಲದಲ್ಲಿ ಪ್ರಾರಂಭವಾದ ಅಗಾಧವಾದ ಭೂಚಲನೆಯ ಪರಿಣಾಮವಾಗಿ ಹೊಸ ಪರ್ವತಸ್ತೋಮಗಳು ಉದಯವಾದವು. ಮೊದಲೇ ಇದ್ದ ಪರ್ವತಸ್ತೋಮಗಳು ಹೊಸ ರೂಪ ತಾಳಿದವು. ಈಗಿನ ಮೇಲ್ಮೈಲಕ್ಷಣಗಳೆಲ್ಲ ಬಹುತೇಕ ಆಗ ಆದವುಗಳೇ. ಅದುವರೆಗೂ ಒಂದಾಗಿದ್ದ ಗೊಂಡವಾನ ಭೂಭಾಗ ಈಗಿನ ಇಂಡಿಯ ಪರ್ಯಾಯ ದ್ವೀಪಭಾಗ. ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣಅಮೆರಿಕ ಮತ್ತು ಅಂಟಾರ್ಕ್‌ಟಿಕ ಎಂಬ ಖಂಡಗಳಾಗಿ ಬೇರ್ಪಟ್ಟಿತು. ಬೇರ್ಪಟ್ಟ ಭೂಭಾಗಗಳೆಲ್ಲೆಲ್ಲ ಹಿಂದೆಂದೂ ಕಂಡರಿಯದಷ್ಟು (ಆರ್ಷೇಯ ಯುಗವನ್ನುಳಿದು) ಶಿಲಾರಸ ಹೊರ ಹೊಮ್ಮಿತು. ಭಾರತದ ಡೆಕ್ಕನ್ ಟ್ರ್ಯಾಪ್ ಶಿಲಾವರ್ಗ, ಆಫ್ರಿಕದ ಸ್ಟ್ರಾಂಬರ್ಗ್ ಮತ್ತು ದಕ್ಷಿಣ ಅಮೆರಿಕದ ಸೆರ್ರಾಗೆರಾಲ್ ಜ್ವಾಲಾಮುಖಿಜಶಿಲೆಗಳು ಆ ಕಾಲದಲ್ಲಿ ಹೊರಹೊಮ್ಮಿದ ಶಿಲಾರಸದಿಂದ ಆದವು. ಈ ಖಂಡಗಳ ಮಧ್ಯೆ ಇದ್ದ ಅಲ್ಪಸ್ವಲ್ಪ ಭೂಭಾಗಗಳು ಸಮುದ್ರಗಳ ಅಡಿಯಲ್ಲಿ ಮುಳುಗಿರಲೂ ಸಾಧ್ಯ. ಮೆಡಗಾಸ್ಕರ್ ಮತ್ತು ಭಾರತಗಳ ನಡುವೆ ಸೇತುವೆಯಂತಿದ್ದ ಲೆಮೂರಿಯ ಮುಳುಗಿಹೋಗಿ ಈಗಿನ ಅರಬ್ಬೀ ಸಮುದ್ರ ರೂಪುಗೊಂಡಿತು. ಭಾರತ ಪರ್ಯಾಯದ್ವೀಪದ ತೀರಗಳು ಆ ಕಾಲದಲ್ಲಿಯೇ ರೂಪುಗೊಂಡುವು. ಹೀಗೆ ಬೇರ್ಪಟ್ಟ ಖಂಡಗಳ ಚಲನೆಯಿಂದ, ಆ ಕಾಲದ ಭೂಮಧ್ಯ ಪ್ರದೇಶದಲ್ಲಿ ಬಹುಕಾಲದಿಂದಲೂ ಇದ್ದ ಟೆತಿಸ್ ಎಂಬ ಸಾಗರ ಪ್ರದೇಶ ಮಾಯವಾಗಿ ಅದರಡಿಯಲ್ಲಿ ನಿಕ್ಷೇಪಗೊಂಡಿದ್ದ ಜಲಜಶಿಲಾರಾಶಿ ಭೂಚಲನೆಗಳ ಒತ್ತಡಕ್ಕೆ ಸಿಕ್ಕಿ ಅಟ್ಲಾಸ್, ಪಿರನೀಸ್, ಆಲ್ಪ್ಸ್ ಮತ್ತು ಹಿಮಾಲಯ ಪರ್ವತಸ್ತೋಮಗಳಾಗಿ ಮೇಲೊಗೆಯಲ್ಪಟ್ಟವು. ಮಾರುತಗಳ ಬಡಿತಕ್ಕೆ ಸಿಕ್ಕಿ ಸವೆದಿದ್ದ ರಾಕೀಸ್ ಮತ್ತು ಆಂಡೀಸ್ ಪರ್ವತಸ್ತೋಮಗಳು ಸಹ ಈಗಿನ ಎತ್ತರಕ್ಕೆ ಮೇಲೊಗೆಯಲ್ಪಟ್ಟವು.

ಟಿಬೆಟ್ಟಿಗೂ ಭಾರತ ಪರ್ಯಾಯದ್ವೀಪಕ್ಕೂ ಮಧ್ಯೆ ಇದ್ದ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡ ಜಲಜ ಶಿಲೆಗಳು ಭೂಚಲನೆಗೊಳಪಟ್ಟು ಮೇಲೊಗೆಯಲ್ಪಟ್ಟುದು ಸರಿಯಷ್ಟೆ ಈ ಕಾರ್ಯ ಕ್ರಿಟೇಷಿಯಸ್ ಕಾಲದಲ್ಲೇ ಪ್ರಾರಂಭವಾಗಿ ಸಾಗರಪ್ರದೇಶಗಳೆಲ್ಲೆಲ್ಲ ಆಳ ಕಡಿಮೆಯಾಗಿ ಅಲ್ಲಿ ಫ್ಲಿಷ್ ನಿಕ್ಷೇಪವಾಯಿತು. ಈ ಕಾಲದ ನಿಜವಾದ ಆರಂಭ ಇಯೊಸೀನ್ ಕಾಲದ ಅಂತ್ಯ ಭಾಗದಲ್ಲಿ ಆಯಿತು. ಇದೇ ಹಿಮಾಲಯ ಪರ್ವತಗಳ ಉದಯದ ಮೊದಲನೆಯ ಹಂತ. ಇದರ ಪರಿಣಾಮವಾಗಿ ಟೆತಿಸ್ ಸಾಗರದ ನೀರು ಮುಕ್ಕಾಲುಭಾಗ ಪ್ರದೇಶದಿಂದ ನಿರ್ಗಮಿಸಿ ಪಶ್ಚಿಮದಲ್ಲಿ ಸಿಂಧ್ ಮತ್ತು ಬಲೂಚಿಸ್ತಾನ್ ಕೊಲ್ಲಿಗಳ, ಪೂರ್ವದಲ್ಲಿ ಅಸ್ಸಾಂ ಮತ್ತು ಬರ್ಮ ಕೊಲ್ಲಿಗಳ ರೂಪದಲ್ಲಿಯೂ ಹಿಮಾಲಯ ಪ್ರದೇಶದಲ್ಲಿ ಕ್ಯಾಸ್ಪಿಯನ್ ಸಮುದ್ರದ ಹಾಗೆ ದೊಡ್ಡ ಸರೋವರಗಳಾಗಿಯೂ ಉಳಿದುಕೊಂಡಿತು. ಈ ಪ್ರದೇಶದ ಜಲಜಶಿಲಾನಿಕ್ಷೇಪ ಮೇಲ್ಭಾಗಕ್ಕೆ ಒಗೆಯಲ್ಪಟ್ಟಿತು. ಅನಂತರ ಪರಿಸ್ಥಿತಿ ಶಾಂತವಾಗಿತ್ತು. ಮತ್ತೆ ಮಿಯೊಸೀಸ್ ಕಾಲದ ಮಧ್ಯಭಾಗದಲ್ಲಿ ಈ ಚಲನೆ ಅತಿ ತೀವ್ರಗೊಂಡಿತು. ಹಿಮಾಲಯ ಪರ್ವತಗಳು ಹೆಚ್ಚು ಕಡಿಮೆ ಈಗಿನ ರೂಪಕ್ಕೆ ಬಂದುದು ಈ ಚಲನೆಯ ಅನಂತರವೇ. ಆಗಲೇ ಟೆತಿಸ್ ಸಾಗರದ ಪೂರ್ಣನಿರ್ಗಮನವೂ ಆಯಿತು. ಅದರ ಜಾಗದಲ್ಲಿ ಮಧ್ಯೆ ಮಧ್ಯೆ ನದೀಕಣಿವೆ ಮತ್ತು ಕೆಸರು ಪ್ರದೇಶಗಳಿಂದ ಕೂಡಿದ ಪರ್ವತಗಳ ಉದಯವಾಯಿತು. ಅಷ್ಟೇ ಅಲ್ಲದೆ, ಮೇಲೇಳುತ್ತಿರುವ ಹಿಮಾಲಯ ಪರ್ವತ ಗಳಿಗೂ ಪರ್ಯಾಯದ್ವೀಪಕ್ಕೂ ಮಧ್ಯೆ ಬಹು ಆಳವಾದ, ಅಗಲದಲ್ಲಿ ಕಿರಿದಾದ ತಗ್ಗು ಪ್ರದೇಶ ಉಂಟಾಯಿತು. ಇಂಥ ಪ್ರದೇಶ ಹಿಮಾಲಯ ಪರ್ವತಸ್ತೋಮದ ಉದ್ದಕ್ಕೂ ಇದೆ. ಈ ತಗ್ಗು ಪ್ರದೇಶದಲ್ಲಿ ಮುಖ್ಯವಾಗಿ, ಹಿಮಾಲಯ ಪರ್ವತದಿಂದ ಹರಿದು ಬರುವ ನದಿಗಳು ತಂದ ಮೆಕ್ಕಲು ಮಣ್ಣು ನಿಕ್ಷೇಪಗೊಳ್ಳುತ್ತ ಬಂತು. ಪರ್ಯಾಯದ್ವೀಪದ ಕಡೆಯಿಂದಲೂ ನದಿಗಳು ಮೆಕ್ಕಲು ಮಣ್ಣನ್ನು ತಂದು ಈ ತಗ್ಗನ್ನು ತುಂಬಿದವು. ಪ್ಲಿಯೊಸೀನ್ ಕಾಲದ ಅಂತ್ಯ ಅಥವಾ ಪ್ಲೀಸ್ಟೊಸೀನ್ ಕಾಲದ ಆದಿಯಲ್ಲಿ ಮತ್ತೆ ಈ ಪ್ರದೇಶದಲ್ಲಿ ಭೂಚಲನೆ ಆಯಿತು. ಇದರ ಪರಿಣಾಮವಾಗಿ, ಹಿಮಾಲಯ ಪರ್ವತಗಳು ತಗ್ಗು ಪ್ರದೇಶದಲ್ಲಿ ನಿಕ್ಷೇಪಗೊಂಡ ನದೀ ಮೆಕ್ಕಲು ನಿಕ್ಷೇಪಕ್ಕೂ ತಗುಲಿತು. ಅವೂ ಮೇಲೊಗೆಯಲ್ಪಟ್ಟವು. ಅಲ್ಲದೆ ಮಡಿಕೆ ಮಡಿಕೆಗಳಾಗಿ ಮಾರ್ಪಟ್ಟು ಸ್ತರಭಂಗಗಳನ್ನು ಹೊಂದಿ ಹಲವಾರು ಕಡೆ ಶಿಲಾಸ್ತರಗಳ ಕ್ರಮ ತಲೆಕೆಳಗಾಗಿ ಅದಲುಬದಲಾಯಿತು. ಈ ಶಿಲಾರಾಶಿಯನ್ನೇ ನಾವು ಶಿವಾಲಿಕ್ ಶಿಲಾಸಮುದಾಯವೆಂದು ಕರೆಯುವುದು. ಇವು ಖಂಡಾಂತರ ಜಲಜ ಮತ್ತು ಭೂನಿಕ್ಷೇಪಗಳು. ಇವಕ್ಕೂ ಮತ್ತು ಈಗಿನ ಸಿಂಧೂ ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಬಯಲುಗಳಲ್ಲಿರುವ ಮೆಕ್ಕಲು ನಿಕ್ಷೇಪಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಶಿವಾಲಿಕ್‌ಶಿಲೆಗಳು ವಯಸ್ಸಿನಲ್ಲಿ ಹಿರಿದಾಗಿ, ಭೂ ಚಲನೆಯ ಪರಿಣಾಮವಾಗಿ ಮಡಿಕೆಯಾಗಿ ಅನೇಕ ರೀತಿ ಬದಲಾವಣೆಗಳನ್ನು ಹೊಂದಿ, ತಾವು ನಿಕ್ಷೇಪಗೊಂಡ ಮಟ್ಟಕ್ಕಿಂತ ಮೇಲ್ಮಟ್ಟಕ್ಕೆ ತಳ್ಳಲ್ಪಟ್ಟಿವೆ. ಆದರೆ ಗಂಗಾ ಬ್ರಹ್ಮಪುತ್ರ ನದಿಗಳ ಮೆಕ್ಕಲು ನಿಕ್ಷೇಪ ಹಾಗಾಗಿಲ್ಲ.

ಈ ಬದಲಾವಣೆಯಾದ ಸ್ವಲ್ಪ ಕಾಲದಲ್ಲಿಯೇ ವಾಯುಗುಣದಲ್ಲಿ ಮಹತ್ತರ ವ್ಯತ್ಯಾಸ ಕಂಡುಬಂದಿತು. ತೀವ್ರ ಶೀತವಾಯುಗುಣ ಎಲ್ಲೆಲ್ಲಿಯೂ ಅದರಲ್ಲಿಯೂ, ಉತ್ತರಾರ್ಧ ಗೋಳದಲ್ಲಿ ಆವರಿಸಿಕೊಂಡಿತು. ಶಿವಾಲಿಕ್ ಕಾಲದಲ್ಲಿ ಹಿಮಾಲಯ ಪರ್ವತಗಳ ಕಾಡಿನಲ್ಲಿ ವಾಸವಾಗಿದ್ದ ಅಸಂಖ್ಯಾತ ಸ್ತನಿಗಳು ಈ ಶೀತ ವಾಯುಗುಣದ ಅತಿ ಶೈತ್ಯವನ್ನು ತಾಳಲಾರದೆ ಗತವಂಶಿಗಳಾದವು. ಹಿಮಾಲಯ ಪರ್ವತಗಳ ಕೊನೆಯ ಮೇಲೇರಿಕೆಯನ್ನೂ ಶೀತವಾಯ ಗುಣವನ್ನೂ ಮಾನವ ಅವಲೋಕಿಸಿರುವುದು ಸಾಧ್ಯ. ಹೀಗೆ ಹಿಮಾಲಯ ಪರ್ವತಗಳು ದೀರ್ಘ ಪ್ರಶಾಂತ ಕಾಲಗಳಿಂದ ಬೇರ್ಪಡಿಸಲ್ಪಟ್ಟು ಮೂರು ಅಥವಾ ನಾಲ್ಕು ಹಂತಗಳಲ್ಲಿ ಮೇಲೆ ಬಂದಿವೆ.

ಆಧುನಿಕ ಜೀವಯುಗವನ್ನು ಆರು ಭಾಗಗಳಾಗಿ ವಿಭಜಿಸುತ್ತಾರೆ. ವರ್ತಮಾನ ಕಾಲದಿಂದ ಭೂತಕಾಲದೆಡೆಗೆ (ಆವರಣದಲ್ಲಿರುವ ಸಂಖ್ಯೆ ದಶಲಕ್ಷ ವರ್ಷಗಳ ಕಾಲ ಸೂಚಿಸುವುದು) : ಪ್ಲೀಸ್ಟೊಸೀನ್ ($1.0 \pm 0.5$); ಪ್ಲಿಯೊಸೀನ್ ($13 \pm 1$); ಮಯೊಸೀನ್ ($25 \pm 1$); ಆಲಿಗೊಸೀನ್($36 \pm 2$); ಇಯೊಸೀನ್ ($58 \pm 2$); ಪೆಲಿಯೊಸೀನ್ ($63 \pm 2$); **(ನೋಡಿ– ಆದಿಜೀವಯುಗ, ಆರ್ಷೇಯ–ಯುಗ ಮತ್ತು ಕಲ್ಪ).** (ಡಿ.ಆರ್.)

**ಆಧುನಿಕ ಪಾಶ್ಚಾತ್ಯತತ್ತ್ವದ ಮುನ್ನಡೆ :** ಪ್ರಾಚೀನ ಪಾಶ್ಚಾತ್ಯತತ್ತ್ವ ಪ್ರಕೃತಿಕೇಂದ್ರ ವಾದುದು, ಮಧ್ಯಯುಗದ ತತ್ತ್ವ ಈಶ್ವರಕೇಂದ್ರವಾದುದು, ಆಧುನಿಕತತ್ತ್ವ ಜೀವಕೇಂದ್ರವಾ ದುದು ಎಂದು ಹೇಳುವುದು ವಾಡಿಕೆಯಾಗಿದೆ. ಆಧುನಿಕ ಪಾಶ್ಚಾತ್ಯತತ್ತ್ವವನ್ನು ಜೀವತತ್ತ್ವ ಕೇಂದ್ರವಾದುದೆಂದು ಕರೆಯುವುದಕ್ಕಿಂತ ಮಾನವಕೇಂದ್ರವಾದುದು ಎಂದರೆ ಹೆಚ್ಚು ಸಂಗತ. ಪ್ರಾಚೀನ ಗ್ರೀಕ್ ತಾತ್ತ್ವಿಕರು ಪ್ರಕೃತಿಗೆ ಸಂಬಂಧಪಟ್ಟ ತತ್ತ್ವಕ್ಕೆ ಹೆಚ್ಚು ಗಮನ ಕೊಟ್ಟರು. ಮಧ್ಯಯುಗದ ತಾತ್ತ್ವಿಕರು ಈಶ್ವರನಿಗೆ ಸಂಬಂಧಪಟ್ಟ ತತ್ತ್ವಕ್ಕೆ ಹೆಚ್ಚು ಗಮನಕೊಟ್ಟರು. ಆಧುನಿಕ ತತ್ತ್ವಜ್ಞರಾದರೂ ಮಾನವ ಜೀವನಕ್ಕೆ ಸಂಬಂಧಪಟ್ಟ ತತ್ತ್ವಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರು, ಕೊಡುತ್ತಿದ್ದಾರೆ.

ಆಧುನಿಕ ತತ್ತ್ವದ ಆರಂಭ ಕಾಲ 16ನೆಯ ಶತಮಾನ. ಇದು ಪ್ರತಿಭಟನೆಯ ಕಾಲ. ಕಲೆ, ರಾಜಕೀಯ, ಮತ, ತತ್ತ್ವ ಈ ಎಲ್ಲ ವಿಚಾರಗಳಲ್ಲೂ ಮಧ್ಯಯುಗದ ರೀತಿನೀತಿಗಳಿಗೆ ಪ್ರತಿಭಾಶಾಲಿಗಳಾದವರು ಎದುರುಬಿದ್ದ ಕಾಲ. ಕ್ರೈಸ್ತಗುರು ಪೋಪನ ಅಧಿಕಾರವನ್ನು ಯುರೋಪಿನ ರಾಜರೂ ಜನರೂ ಸೇರಿ ಪ್ರತಿಭಟಿಸಿ ಮತದ ಆಶ್ರಯವನ್ನು ಕೋರದೆ, ರಾಜಕೀಯವನ್ನು ಲೌಕಿಕವಾಗಿ ಮಾರ್ಪಡಿಸಲು ಪಣತೊಟ್ಟರು. ಕೇವಲ ಲೌಕಿಕ ದೃಷ್ಟಿಯಿಂದ ರಾಜಕೀಯ ತತ್ತ್ವವನ್ನು ನಿರೂಪಿಸಲು ಮೊಟ್ಟಮೊದಲಿಗೆ ಪ್ರಯತ್ನ ಮಾಡಿದವ ನಿಕೊಲೊ ಮೆಕಿಯವೆಲ್ಲಿ (1469–1527). ಆತ ಬರೆದ ಪ್ರಿನ್ಸ್ (ರಾಜಕುಮಾರ) ಎಂಬ ಗ್ರಂಥದಲ್ಲಿ ರಾಜಕೀಯ ದಲ್ಲೂ ಜ್ಞಾನಾನ್ವೇಷಣ ಕಾರ್ಯದಲ್ಲೂ ಮತಾಧಿಕಾರಿಗಳ ಅತಿಕ್ರಮ ಪ್ರವೇಶವನ್ನು ಖಂಡಿಸಿದ. ರಾಷ್ಟ್ರದ ಮತ್ತು ಜನರ ಮುಖಂಡನಾದ ರಾಜನ ಸ್ವಾತಂತ್ರ್ಯವನ್ನು ಎತ್ತಿಹಿಡಿದ. ಜೀನ್‌ಬೋಡಿನ್ (1530–96) ಎಂಬ ರಾಜ್ಯಶಾಸ್ತ್ರಜ್ಞ ಜನರು ರಾಜರೊಡನೆ ಏರ್ಪಡಿಸಿಕೊಂಡ ಒಪ್ಪಂದವೇ ರಾಜನ ಅಧಿಕಾರಕ್ಕೆ ಆಶ್ರಯವೆಂದು ಸಾರಿದ. ಜೊಹಾನಸ್ ಆಲ್‌ತೂಸಿಯಸ್ (1557–1638) ಜನರೊಡನೆ ಮಾಡಿಕೊಂಡ ಒಪ್ಪಂದವನ್ನು ಮುರಿದ ರಾಜನನ್ನು ಜನ ಪಟ್ಟದಿಂದ ಉರುಳಿಸಬಹುದೆಂದೂ ಗಲ್ಲಿಗೇರಿಸಬಹುದೆಂದೂ ಘೋಷಿಸಿದ. ನ್ಯಾಯದ ಹಕ್ಕು ಮಾನವನಿಗೆ ಸ್ವಾಭಾವಿಕವಾದ ಹುಟ್ಟುಹಕ್ಕು. ದೇವರಿಗೆ ಕೂಡ ಆ ಹಕ್ಕನ್ನು ಕಸಿದುಕೊಳ್ಳುವ ಹಕ್ಕಿಲ್ಲವೆಂದು ಹ್ಯೂಗೊ ಗ್ರೋಸಿಯಸ್ (1583–1645) ವಾದಿಸಿದ. ಮಾನವರು ಪಾಪಿಗಳು. ಮಾನವನ ಲೌಕಿಕಜೀವನ ಹೇಯವಾದ ಜೀವನವೆಂಬ ಭಾವನೆಗಳನ್ನು ತೊರೆದು ಕವಿಗಳು ಕಲೆಗಾರರು ಸಾಂಸಾರಿಕ ಜೀವನವನ್ನು ತಮ್ಮ ಕಾವ್ಯ ಮತ್ತು ಕಲೆಗಳ ವಸ್ತುವಾಗಿ ಮಾಡಿಕೊಂಡರು. ಅಂಥ ಜೀವನವನ್ನು ಪ್ರತಿಬಿಂಬಿಸಿದ ಗ್ರೀಕ್ ಸಾಹಿತ್ಯಕ್ಕೆ ಮತ್ತು ಕಲೆಗೆ ಪ್ರಾಶಸ್ತ್ಯ ಬಂತು. 14ನೆಯ ಶತಮಾನದ ಒಬ್ಬ ಸಾಹಿತಿ ಪೀಟ್ರಾರ್ಕ್ ಲ್ಯಾಟಿನ್ ಭಾಷೆಯನ್ನು ಬಿಟ್ಟು ಮಾತೃಭಾಷೆಯಲ್ಲಿ ಕಾವ್ಯಗಳನ್ನು ಬರೆದ.

ಲಿಯೊನಾರ್ಡೋ ಡ ವಿಂಚಿ (1452–1519), ಕೋಪರ್ನಿಕಸ್ (1473–1543), ಗೆಲಿಲಿಯೊ (1564–1641) ವಿಚಾರ ಸ್ವಾತಂತ್ರ್ಯವನ್ನು ಎತ್ತಿಹಿಡಿದರು. ಕ್ರೈಸ್ತಧರ್ಮ ವಿಚಾರದಲ್ಲೂ ಮತಾಧಿಕಾರಿಗಳ ಹಂಗಿಲ್ಲದೆ ನೇರವಾಗಿ ಯೇಸುಕ್ರಿಸ್ತನ ಮಾತುಗಳಿಂದಲೇ ಪ್ರಚೋದನೆ ಪಡೆಯುವ ಹಕ್ಕು ಉಂಟೆಂದು ಮಾರ್ಟಿನ್ ಲೂಥರ್ (1483–1546) ಸಾರಿದ. ಜೀವನದಲ್ಲಿ ಉತ್ಸಾಹ, ವ್ಯಕ್ತಿತ್ವದಲ್ಲಿ ನೆಚ್ಚಿಕೆ, ಸ್ವಪ್ರಯತ್ನದಲ್ಲಿ ಭರವಸೆ, ಸ್ವಾತಂತ್ರ್ಯದಲ್ಲಿ ಪ್ರೀತಿ, ಅನ್ವೇಷಣದಲ್ಲಿ ಆಸಕ್ತಿ–ಈ ಭಾವಗಳ ಹಿನ್ನೆಲೆಯಲ್ಲಿ ಆಧುನಿಕತತ್ತ್ವ ಉದಯಿಸಿತು.

ಆಧುನಿಕ ತತ್ತ್ವ ಮಧ್ಯಯುಗದ ತತ್ತ್ವವನ್ನು ಪ್ರತಿಭಟಿಸಿ ಸ್ವತಂತ್ರ ವಿಚಾರ ಪಥದಲ್ಲಿ ಮುನ್ನಡೆಯಲು ಸಂಕಲ್ಪಿಸಿದರೂ ಅದು ಮಧ್ಯಯುಗದ ಕುರುಡು ನಂಬಿಕೆಗಳ ಸಂಕೋಲೆ ಯಿಂದ ಬಹುಕಾಲದವರೆಗೂ ಪೂರ್ಣವಾಗಿ ಬಿಡಿಸಿಕೊಳ್ಳಲಾಗಲಿಲ್ಲ. ಬೇಕನ್, ಡೇಕಾರ್ಟ್, ಲಾಕ್, ಬಾರ್ಕ್ಲಿ ಮತ್ತು ಲೈಪ್ನಿಟ್ಸ್ ಮುಂತಾದವರ ತತ್ತ್ವದಲ್ಲಿ ಮಧ್ಯಯುಗದ ನಂಬಿಕೆಗಳ ಅವಶೇಷಗಳು ಇವೆ. ಕ್ರೈಸ್ತಧರ್ಮದ ಮುಖ್ಯ ಭಾವನೆಗಳನ್ನು ತಮ್ಮ ಮೂಲ ತರ್ಕಕ್ಕೆ ಆಧಾರವೆಂದು ಅವರು ಒಪ್ಪಿಕೊಂಡಿರುತ್ತಾರೆ. ಅವುಗಳ ಮೇಲಿನ ಅಭಿಮಾನ ಈಗಲೂ ಬಿಟ್ಟುಹೋಗಿಲ್ಲ. ಇಂದಿನ ತಾತ್ತ್ವಿಕರಾದ ಮ್ಯಾರಿಟೈನ್, ಗಿಲ್ಸನ್ ಮುಂತಾದವರು ಅದಕ್ಕೆ ಹೊಸ ರೂಪಕೊಟ್ಟು ಹೊಸದಾದ ವಾದಸರಣಿಯನ್ನು ಏರ್ಪಡಿಸಿಕೊಂಡು ಅವುಗಳನ್ನು ಪುನರುತ್ಥಾನ ಮಾಡಲು ಯತ್ನಿಸುತ್ತಿದ್ದಾರೆ.

ಹೆಗಲ್

**ಆಧುನಿಕ ತತ್ತ್ವ ಹುಟ್ಟಿದ ತರುಣದಲ್ಲಿ ಪ್ರಬಲವಾಗಿದ್ದ ವಾದಗಳು ಎರಡು :** ಬುದ್ಧ್ಯಾರೂಢವಾದ (ರ್‍ಯಾಷನಲಿಸಂ) ಮತ್ತು ಅನುಭವಾರೂಢವಾದ (ಎಂಪಿರಿಸಿಸಂ). ಬುದ್ಧ್ಯಾರೂಢ ಅನುಭವಾರೂಢ ಎಂಬ ಮಾತುಗಳ ಅರ್ಥ ಸಂದಿಗ್ಧ. ಶ್ರುತಿಯನ್ನು ನೆಚ್ಚದೆ ಬುದ್ಧಿಪೂರ್ವಕವಾದ ವಿಚಾರವೇ ತತ್ತ್ವಕ್ಕೆ ಆಧಾರವೆಂಬ ವಾದವೇ ಬುದ್ಧಾರೂಢವೆಂದು ಹೇಳುವುದಾದರೆ ಆಧುನಿಕ ತತ್ತ್ವಗಳನ್ನೆಲ್ಲ ಬುದ್ಧ್ಯಾರೂಢವಾದಗಳೆಂದು ಪರಿಗಣಿಸಬೇಕಾಗುತ್ತದೆ. ಅವುಗಳಲ್ಲಿ ಕೆಲವು ಬುದ್ಧಿಗಿಂತ ಭಾವವೇ (ಫೀಲಿಂಗ್) ಅಥವಾ ಪ್ರತಿಭೆಯೇ ಪ್ರಧಾನವೆಂದು ಹೇಳಿದರೂ ಆ ಹೇಳಿಕೆಯನ್ನು ವಾದದ ಮೂಲಕ, ಎಂದರೆ ಬೌದ್ಧಿಕವಾಗಿ ಸಮರ್ಥಿಸುತ್ತಾರೆ. ಬೌದ್ಧಿಕ ವಾದವೆಂದರೆ ಗಣಿತಶಾಸ್ತ್ರದ ಅನುಮತಿಗಳಂತೆ ಎಲ್ಲ ಬಗೆಯ ಅನುಮತಿಗಳೂ ನಿಶ್ಚಿತವಾಗಿರಬೇಕಾದುದೇ ಬುಧ್ಯಾರೂಢವೆಂದು ಬಗೆದರೂ ಆ ಧ್ಯೇಯವನ್ನು ಎಲ್ಲ ಆಧುನಿಕ ತಾತ್ತ್ವಿಕರೂ ಒಪ್ಪಿಕೊಳ್ಳುತ್ತಾರೆ. ಅಂಥ ನಿಶ್ಚಿತ ಜ್ಞಾನ ಸಾಧ್ಯವೆಂದು ಕೆಲವರು ಹೇಳಿದರೆ ಇನ್ನೂ ಕೆಲವರು ಅದು ಅಸಾಧ್ಯವೆನ್ನುತ್ತಾರೆಯೇ ಹೊರತು ಅದು ಒಳ್ಳೆಯ ಆದರ್ಶವೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಈ ಎರಡು ವಾದಗಳ ಜೊತೆಗೆ ಇನ್ನೊಂದು ವಾದವಿದೆ. ಅದೇ ಈಗ ನಮಗೆ ಪ್ರಸಕ್ತವಾದದ್ದು. ಈ ಬುಧ್ಯಾರೂಢವಾದಕ್ಕೆ ವಿಶಿಷ್ಟವಾದ ಮುಖ್ಯ ಅಂಶಗಳು ಇವು : ಇಂದ್ರಿಯಾನುಭವ ನಂಬತಕ್ಕ ಅನುಭವವಲ್ಲ. ಸ್ವತಸ್ಸಿದ್ಧವಾದ ಭಾವನೆಗಳು ಇಂದ್ರಿಯಾನುಭವದ ಹಂಗಿಲ್ಲದವು. ಅವು ಬುದ್ಧಿಗೆ ಆಂತರಿಕವಾದವು ಅಥವಾ ಸಹಜವಾದವು. ಹೀಗೆ ಸಹಜವಾದುದರಿಂದಲೇ ಅವು ಸ್ಪಷ್ಟ ಮತ್ತು ನಿರ್ದಿಷ್ಟವಾಗಿರುವುವು. ಸ್ಪಷ್ಟ ಮತ್ತು ನಿರ್ದಿಷ್ಟ ಭಾವನೆಗಳು ನಿತ್ಯಸತ್ಯಗಳು. ಅವು ಉಳಿದೆಲ್ಲ ಸತ್ಯಗಳಿಗೂ ಆಧಾರವಾದ ಸತ್ಯಗಳು.

**ಇದಕ್ಕೆ ಪ್ರತಿಯಾದದ್ದು ಆಧುನಿಕವಾದ ಅನುಭವಾರೂಢವಾದ** (ಎಂಪಿರಿಸಿಸಂ). **ಇದರ ಅಂಶಗಳು ಹೀಗಿವೆ :** ಅನುಭವಾರೂಢವಾದ ಅಥವಾ ಅನುಭವಪ್ರಧಾನವಾದ ಒಂದು ನಿಟ್ಟಿನಿಂದ ನೋಡಿದರೆ ಎಲ್ಲ ಆಧುನಿಕ ತತ್ತ್ವಜ್ಞರಿಗೂ ಸಾಮಾನ್ಯವಾದದ್ದು, ಸಂಗತವಾದದ್ದು ಎಂದು ಹೇಳಬಹುದು. ಜ್ಞಾನಕ್ಕೆ ಅನುಭವ ಆಶ್ರಯವೆಂಬುದನ್ನು ಯಾವ ಆಧುನಿಕ ತಾತ್ತ್ವಿಕನೂ ನಿರಾಕರಿಸಿಲ್ಲ. ಅನುಭವಕ್ಕಿಂತ ಅಧಿಕಾರವಾಣಿ ಶ್ರೇಷ್ಠವೆಂದೂ ಅದೇ ಪರಮ ಪ್ರಮಾಣವೆಂದೂ ಹೇಳುತ್ತಿದ್ದ ಮಧ್ಯಯುಗದ ತಾತ್ತ್ವಿಕರನ್ನು ಪ್ರತಿಭಟಿಸಿ ಹುಟ್ಟಿದ ತತ್ತ್ವ ಆಧುನಿಕತತ್ತ್ವ. ಅನುಭವವೇ ಜ್ಞಾನಕ್ಕೆ ಆಧಾರ. ಅದನ್ನು ವಿಚಾರ ಮಾಡಿ ಅದರ ಎಲ್ಲ ಅಂಶಗಳನ್ನೂ ಸಂಗತಗೊಳಿಸುವುದೇ ತತ್ತ್ವಶಾಸ್ತ್ರದ ಪ್ರಾರಂಭ ಕಾಲದಲ್ಲಿ ಹುಟ್ಟಿದ ಅನುಭವವಾದ. ಈ ಸರ್ವಸಮ್ಮತಾವಾದ ಅನುಭವಕ್ಕಿಂತ ಕೆಲವು ಅಂಶಗಳಲ್ಲಿ ಭಿನ್ನವಾಗಿದೆ. 1. ಬುದ್ಧಿಗೆ ಸಹಜವಾದ ಅದಕ್ಕೆ ಆಂತರಿಕವಾದ, ಭಾವನೆಗಳು ಇಲ್ಲವೇ ಇಲ್ಲ. 2. ಇಂದ್ರಿಯಪ್ರತ್ಯಕ್ಷವೇ ಜ್ಞಾನಕ್ಕೆ ಆಶ್ರಯ. ಎಲ್ಲ ಜ್ಞಾನವೂ ಹುಟ್ಟುವುದು ಇಂದ್ರಿಯಾನುಭವದಿಂದಲೇ. 3. ಬುದ್ಧಿಯ ಭಾವನೆಗಳು ಇಂದ್ರಿಯಾನುಭವದಿಂದ ಪಡೆದ ಅದರ ನಕಲುಗಳು. ಇವು ಇಂದ್ರಿಯಾನುಭವದಷ್ಟು ಬಲಿಷ್ಠವಾದುವಲ್ಲ. ಅದರಷ್ಟು ಲವಲವಿಕೆ ಇವಕ್ಕೆ ಇಲ್ಲ. 4. ಇವುಗಳಲ್ಲಿ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಮೂಲಭೂತ ಭಾವನೆಗಳು ಮಾತ್ರ ಇಂದ್ರಿಯಾನುಭವಕ್ಕೆ ಒಳಪಡದೆ ಸ್ವತಂತ್ರವಾಗಿ ಬುದ್ಧಿಯಿಂದ ಏರ್ಪಡಿಸಿಕೊಂಡವು. ನೇರವಾದ ಗೆರೆಗೆ ಸಮಾನವಾದ ವಾಸ್ತವ ವಿಷಯ ಇರಲಿ ಇಲ್ಲದಿರಲಿ ಆ ಭಾವನೆ ಮಾತ್ರ ಸ್ಪಷ್ಟ ಮತ್ತು ಸ್ವತಃಸಿದ್ಧ. ಅದು ಸಂಪೂರ್ಣವಾಗಿ ನೆಚ್ಚಬಲ್ಲ ಭಾವನೆ. ಉಳಿದೆಲ್ಲ ಭಾವನೆಗಳು ಸ್ವತಃಸಿದ್ಧವಾದುವಲ್ಲ, ಸಂಪೂರ್ಣವಾಗಿ ನೆಚ್ಚಬಲ್ಲ ಸತ್ಯಗಳಲ್ಲ. 5. ಅವುಗಳ ಸತ್ಯ ಕೇವಲ ಸಂಭವನೀಯ ಸತ್ಯ. ಈ ವಿಧವಾದ ಅನುಭವವಾದ ಮೇಲೆ ತಿಳಿಸಿರುವ ಬುಧ್ಯಾರೂಢವಾದಕ್ಕೆ ಪ್ರತಿಯಾದದ್ದು, ವಿರುದ್ಧವಾದದ್ದು. ಆಧುನಿಕ ಬುದ್ಧ್ಯಾರೂಢವಾದವನ್ನು ಮೊಟ್ಟಮೊದಲಿಗೆ ನಿರೂಪಿಸಿದವನೆ ಡೇಕಾರ್ಟ್. ಆಧುನಿಕ ಅನುಭವಾರೂಢವಾದವನ್ನು ನಿರೂಪಿಸಿದವ ಜಾನ್ ಲಾಕ್.

**ರನೆ ಡೇಕಾರ್ಟ್ :** 1596–1650. ಫ್ರಾನ್ಸಿನ ಪ್ರಸಿದ್ಧ ತತ್ತ್ವಜ್ಞಾನಿ ಆಧುನಿಕ ತತ್ತ್ವಶಾಸ್ತ್ರದ ಜನಕ. ಕೆಲವರು ಆ ಪಟ್ಟ ನ್ಯಾಯವಾಗಿ ಫ್ರಾನ್ಸಿಸ್ ಬೇಕನ್‍ಗೆ (1561–1626) ಸಲ್ಲಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಬೇಕನ್ ಡೇಕಾರ್ಟ್‍ಗಿಂತ ಮುಂಚೆ ಹುಟ್ಟಿದವ. ಇಬ್ಬರಿಗೂ ಸಾಮಾನ್ಯವಾದ ಕೆಲವು ಭಾವನೆಗಳಿವೆ. ಆದರೂ ಬೇಕನ್ ತತ್ತ್ವಶಾಸ್ತ್ರದ ಮುಖ್ಯ ಸಮಸ್ಯೆಗಳನ್ನು ಡೇಕಾರ್ಟ್‍ನಷ್ಟು ಸ್ಪಷ್ಟವಾಗಿ ನಿರೂಪಣೆ ಮಾಡಲಿಲ್ಲ. ವಿಶೇಷವಾಗಿ ವಿಜ್ಞಾನಕ್ಕೂ ವೈಜ್ಞಾನಿಕ ಅನುಗಮನ ವಿಧಾನಕ್ಕೂ (ಇಂಡಕ್ಷನ್) ಹೆಚ್ಚು ಗಮನ ಕೊಟ್ಟ. ಆಗಿನ ಕಾಲದಲ್ಲಿ ಅವನ ಪ್ರಭಾವ ವಿಶೇಷವಾಗಿ ಕಾಣಿಸಿಕೊಂಡದ್ದು ಆಧುನಿಕ ತರ್ಕಶಾಸ್ತ್ರದಲ್ಲಿ ಮಾತ್ರ. ಪರತತ್ತ್ವ (ಮೆಟಫಿಸಿಕ್ಸ್) ಜ್ಞಾನಮೀಮಾಂಸೆ (ಎಪಿಸ್ಟಿಮಾಲಜಿ) ಮತಮೀಮಾಂಸೆ (ಫಿಲಾಸಫಿ ಆಫ್ ರಿಲಿಜನ್) ಈ ಮೂರರ ಮೇಲೆ ಇವನ ಪ್ರಭಾವ ಅಷ್ಟಾಗಿ ಕಾಣಿಸಿಕೊಂಡಿಲ್ಲ. ಈ ಮೂರರ ಮೇಲೆ ಹೆಚ್ಚು ಪ್ರಭಾವ ಬೀರಿದವ ಡೇಕಾರ್ಟ್. ಆದ್ದರಿಂದ ಡೇಕಾರ್ಟ್ ಆಧುನಿಕ ತತ್ತ್ವಶಾಸ್ತ್ರದ ಜನಕನೆಂದು ಹೇಳುವುದರಲ್ಲಿ ಹೆಚ್ಚು ಔಚಿತ್ಯವಿದೆ.

**ಡೇಕಾರ್ಟ್‍ನ ಮೂಲ ಸಮಸ್ಯೆ ಇದು :** ತತ್ತ್ವಶಾಸ್ತ್ರ ಮಾನವ ತಿಳಿಯಬಹುದಾದ ಎಲ್ಲದರ ಸರ್ವತೋಮುಖವಾದ ವಿಚಾರಶಾಸ್ತ್ರ. ಸ್ವತಂತ್ರವಾಗಿ ಅನ್ವೇಷಣೆ ನಡೆಸಿ ನಿಶ್ಚಿತವಾದ ಭಾವನೆಗಳ ತಳಹದಿಯ ಮೇಲೆ ಕಟ್ಟಿದ ಸುಭದ್ರವಾದ ಜ್ಞಾನಸೌಧ. ಮಧ್ಯಯುಗದ ತಾತ್ತ್ವಿಕರು ಕಟ್ಟಿದ ಜ್ಞಾನಸೌಧ ಭದ್ರವಲ್ಲ. ಅನ್ವೇಷಣೆ ನಡೆಸಿ ನಿಶ್ಚಿತವಾದ ಭಾವನೆಗಳ ತಳಹದಿಯ ಮೇಲೆ ಕಟ್ಟಿದ್ದಲ್ಲ. ಮರಳಿನ ಮೇಲೆ ಕಟ್ಟಿದ ಮನೆಯಂತೆ ವಿಚಾರ ಪ್ರವಾಹಕ್ಕೆ ಸಿಕ್ಕಿದಾಗ ಕುಸಿದುಬೀಳುವಂಥದು. ನಿಶ್ಚಿತವಾದ ಭಾವನೆಗಳೆಂದರೆ ಗಣಿತಶಾಸ್ತ್ರಕ್ಕೆ ಆಧಾರವಾದಂಥ ಸರಳ, ಸ್ಪಷ್ಟ, ನಿರ್ದಿಷ್ಟ ಮತ್ತು ಸ್ವತಃ ಸಿದ್ಧ ಭಾವನೆಗಳು. ಆ ಸರಳ ಭಾವನೆಗಳನ್ನು ಸೇರಿಸಿ ಸಂಕೀರ್ಣವಾದ ಭಾವನೆಗಳನ್ನು ಏರ್ಪಡಿಸಿರುವ ಗಣಿತವಿಧಾನ ಆದರ್ಶಪ್ರಾಯವಾದದ್ದು. ಭೌತಶಾಸ್ತ್ರ ಗಣಿತದ ಆದರ್ಶವನ್ನು ಅನುಸರಿಸಿದುದರಿಂದಲೇ ಅದಕ್ಕೆ ನಿರ್ದಿಷ್ಟವಾದ ಭೌತನಿಯಮಗಳನ್ನು ಏರ್ಪಡಿಸಲು ಸಾಧ್ಯವಾದದ್ದು. ತತ್ತ್ವಾನ್ವೇಷಣೆಯೂ ಗಣಿತದ ಜಾಡು ಹಿಡಿದರೆ ಅದೂ ನಿಶ್ಚಿತ ಮತ್ತು ನಿರ್ದಿಷ್ಟ ಜ್ಞಾನವಾಗಿ ಪರಿಣಮಿಸುತ್ತದೆ.

ನಿಸ್ಸಂದೇಹಕರವಾದ ಸರಳ, ಸ್ಪಷ್ಟ, ನಿರ್ದಿಷ್ಟ ಭಾವನೆಗಳನ್ನು ಪಡೆಯುವುದು ಹೇಗೆ ಎಂಬುದು ಮೊಟ್ಟಮೊದಲಿನ ಸಮಸ್ಯೆ. ಹಿಂದಿನವರಾದ ಕ್ರೈಸ್ತಮತ ಮುಖಂಡರ ಭಾವನೆಗಳನ್ನು ಆಶ್ರಯಿಸಿದರೆ ಅಂಥ ನಿಶ್ಚಿತ ಭಾವನೆಗಳು ದೊರೆಯುವುದಿಲ್ಲ. ಇತರರ ಭಾವನೆಗಳಿಗೆ ಮಾರುಹೋಗುವುದು, ಶರಣಾಗುವುದು ವಿಜ್ಞಾನದ ಮಾರ್ಗವಲ್ಲ. ಇತರರ ಭಾವನೆಗಳು ಸರ್ವಸಮ್ಮತವೂ ಅಲ್ಲ. ಅವು ಅನೇಕ ವೇಳೆ ಪರಸ್ಪರ ವಿರುದ್ಧವಾಗಿವೆ. ಬಾಲ್ಯದಿಂದ ಹಿರಿಯರು ಮಕ್ಕಳಲ್ಲಿ ಬಿತ್ತಿದ ಇಂಥ ಪೂರ್ವಕಲ್ಪಿತ ಭಾವನೆಗಳಿಂದ ಬಿಡುಗಡೆ ಪಡೆಯಬೇಕು. ಸಂಶಯಕ್ಕೆ ಒಳಪಡಿಸಿ ಇವುಗಳಲ್ಲಿರುವ ಸಂಶಯಾತ್ಮಕ ಅಂಶಗಳನ್ನು ಬೇರ್ಪಡಿಸಿ, ನಿಸ್ಸಂಶಯವಾದ ಅಂಶಗಳನ್ನು ಕಂಡುಹಿಡಿಯಬೇಕು. ಸಂಶಯಪಡಬೇಕೆಂದರೆ, ಸಂಶಯಾತ್ಮರಾಗಿ ಸಂಶಯದಲ್ಲೇ ಮುಳುಗಿ ಹೋಗುವುದೆಂದು ಭಾವಿಸಕೂಡದು. ಸಂಶಯ ಮಾರ್ಗದ ಉದ್ದೇಶ ಸಂಶಯಕರವಾದುವನ್ನು ಬಿಟ್ಟು ನಿಸ್ಸಂಶಯವಾದುವನ್ನು ಬೇರ್ಪಡಿಸಿ ಬೆಳಗಿಸುವುದಾಗಿದೆ.

ಸಂಶಯಕ್ಕೆ ಒಳಪಡಿಸಬೇಕಾದದ್ದು ಇತರರ ಅಭಿಪ್ರಾಯಗಳನ್ನು ಮಾತ್ರವೇ ಅಲ್ಲ, ಇಂದ್ರಿಯಗಳ ಮೂಲಕ ಬಂದ ಅನುಭವಗಳನ್ನೂ. ಇಂದ್ರಿಯ ಜ್ಞಾನ ಭ್ರಮೆಗೆ ಒಳಗಾಗಿರುತ್ತದೆ ಎಂಬುದು ಲೋಕಪ್ರಸಿದ್ಧ. ಎರಡು ಸಾವಿರ ವರ್ಷಗಳ ಹಿಂದೆ ಪ್ಲೇಟೊ ಅದನ್ನು ಸಾರಿದ್ದ. ಅವನ ಮಾತು ಇಂದಿಗೂ ಅನುಭವಸಿದ್ಧವಾದದ್ದು. ಇಂದ್ರಿಯದಿಂದ ಹುಟ್ಟಿದ ಅನುಭವ ತಪ್ಪಿಗೆ ಎಡೆಕೊಡುವ ಸಂಭವವಿರುವುದರಿಂದ ಅಲ್ಲವೇ ಆಧುನಿಕ ವಿಜ್ಞಾನಿಗಳು ಇಂದ್ರಿಯ ಅನುಭವವನ್ನು ಸೂಕ್ಷ್ಮವಾದ ಪರೀಕ್ಷೆಗೆ ಒಳಪಡಿಸಿದ್ದು.

ಹೀಗೆ ಇತರರು ಅಭಿಪ್ರಾಯಗಳನ್ನೂ ಇಂದ್ರಿಯಜ್ಞಾನವನ್ನೂ ಜ್ಞಾಪಿಸಿಕೊಂಡ ವಿಷಯಗಳನ್ನೂ ನಾವು ನೆಚ್ಚದಿರಬಹುದು. ಎಲ್ಲವೂ ಸಂದೇಹಕರವಾದುವೆಂದು ಹೇಳಬಹುದು. ಆದರೆ ಸಂದೇಹವೇ ಸಂದೇಹಕರವೆಂದು ಹೇಳಲಾಗುವುದಿಲ್ಲ. ಸಂದೇಹಪಡುವ ನಾನು

ಎಂಬುದಂತೂ ನಿಶ್ಚಿತ. ಸಂದೇಹವೂ ಒಂದು ಬಗೆಯ ಆಲೋಚನೆ. ಆ ಯೋಚನೆ ಮಾಡುವ ಕಾಲದಲ್ಲೇ ಆಲೋಚಿಸುವವನಿದ್ದಾನೆಂಬುದೂ ವಿಶದವಾಗುತ್ತದೆ. ನಾನು ಆಲೋಚಿಸುತ್ತೇನೆ, ಆದರೆ ನಾನು ಇಲ್ಲ ಎಂದು ಹೇಳುವುದು ಪರಸ್ಪರ ವಿರುದ್ಧ ಪ್ರತಿಜ್ಞೆಗಳು. ನಾನು ಯೋಚಿಸುತ್ತಿದ್ದೇನೆ ಆದ್ದರಿಂದ ಇದ್ದೇನೆ ಎಂಬುದು ನಿಸ್ಸಂದೇಹಕರ, ನಿಶ್ಚಿತಸತ್ಯ. ಇದು ಸಂಪೂರ್ಣವಾಗಿ ವಿಶದವಾದದ್ದು, ನಿರ್ದಿಷ್ಟವಾದದ್ದು. ಈ ಬಗೆಯ ಭಾವನೆಯೇ ನಿರ್ದುಷ್ಟಸತ್ಯ. ಈ ರೀತಿಯಾಗಿ ವಿಶದವಾಗಿ ನಿರ್ದಿಷ್ಟವಾಗಿ ಇರುವ ಭಾವನೆಯೇ ಪ್ರಮಾಣ. ಈ ಪ್ರಮಾಣವೇ ಎಲ್ಲ ಭಾವನೆಗಳನ್ನೂ ಅಳೆಯಲು ಯೋಗ್ಯವಾದ ಮಾನದಂಡ.

ಯೋಚಿಸುವ ಚೇತನ ಸ್ವತಃಸಿದ್ಧವಾದುದಕ್ಕೆ ಕಾರಣವೇನು? ಬಾಹ್ಯ ವಸ್ತುಗಳ ಸಂಪರ್ಕವನ್ನು ಬಿಟ್ಟಂತೆ ಅದನ್ನು ತಿಳಿದಿದ್ದರಿಂದಲೇ ಅಲ್ಲವೆ ಅದು ಅಷ್ಟು ಸ್ಪಷ್ಟವೂ ನಿರ್ದಿಷ್ಟವೂ ಆದದ್ದು? ಇಂದ್ರಿಯ ವಸ್ತುಗಳಿಗಿರುವ ವಾಸನೆ, ಬಣ್ಣ, ರುಚಿ ಮುಂತಾದುವಕ್ಕೆ ಈ ನಿರ್ದಿಷ್ಟ ಗುಣಗಳಿಲ್ಲ. ನಿರ್ದಿಷ್ಟ, ಸ್ಪಷ್ಟ, ಆಂತರಿಕ ಭಾವನೆಗಳ ಸ್ವರೂಪ ಕೇವಲ ತಿಳಿವಿನ ಸ್ವರೂಪ (ಪ್ಯೂರ್ ಥಾಟ್). ಅದು ನಿಷ್ಕಳಂಕವಾದ ತಿಳಿವು ಶುದ್ಧಚಿಂತನೆ. ಅದೊಂದು ಸ್ವಚ್ಛವಾದ ದ್ರವ್ಯ. ತಿಳಿವೇ ಅದರ ಆಂತರಿಕಗುಣ. ಯಾವುದು ಒಂದಕ್ಕೆ ಆಂತರಿಕವಾದದ್ದೋ ಯಾವುದನ್ನು ಬಿಟ್ಟು ಅದು ಇರಲಾರದೋ ಅದೇ ಅದರ ನಿಜಗುಣ. ಆಂತರಿಕವಾದದ್ದರಿಂದ ಅದು ಎಂದೆಂದಿಗೂ ಬದಲಾಯಿಸುವುದಿಲ್ಲ. ಬದಲಾವಣೆ ಹೊಂದುವುದು ಅದರ ವಿವಿಧ ರೂಪಗಳು (ಮೋಡ್ಸ್) ಮಾತ್ರವೇ. ಈ ರೂಪಗಳಿಗೆ, ದ್ರವ್ಯಕ್ಕೆ ಆಂತರಿಕವಾದ ಶುದ್ಧಗುಣ ಆಶ್ರಯ. ಬದಲಾಯಿಸುವ ರೂಪಗಳು ಅದಕ್ಕೆ ಆಶ್ರಯಗಳಲ್ಲ. ಬದಲಾಯಿಸುವ ವಿವಿಧ ರೂಪಗಳು ಆ ಮೂಲಗುಣದಿಂದ ಗಮ್ಯವಾದವು. ಅವಕ್ಕೆ ಆಧಾರವಾದ ಗುಣವಾಗಲಿ, ದ್ರವ್ಯವಾಗಲಿ, ಅವುಗಳಿಂದ ಗಮ್ಯವಾಗಲಾರವು. ಯೋಚಿಸುವ ಚೈತನ್ಯವೇ ನಮ್ಮ ಸಕಲ ಆಲೋಚನೆಗಳಿಗೂ ಸ್ಥಿರವಾದ ಅಸ್ತಿಭಾರ.

ನಾವು ತತ್ತ್ವವಿಚಾರದಲ್ಲಿ ವಿಜಯಿಗಳಾಗಬೇಕಾದರೆ ಯೋಚಿಸುವ ಈ ದ್ರವ್ಯದಲ್ಲಿ ಅಡಗಿರುವ ಭಾವನೆಗಳನ್ನು ತಿಳಿದುಕೊಂಡು ಅವುಗಳ ಆಧಾರದ ಮೇಲೆ ನಮ್ಮ ತತ್ತ್ವಸೌಧವನ್ನು ಕಟ್ಟಬೇಕು. ಅಂಥ ಒಳಭಾವಗಳು ಯಾವುವು, ಎಂಬುದು ಮುಂದಿನ ಪ್ರಶ್ನೆ. ಕೆಲವು ಭಾವನೆಗಳು ತಿಳಿವಿಗೆ ಆಂತರಿಕವಾದವು. ಯಾವ ಭಾವನೆಗಳನ್ನು ಬಿಟ್ಟರೆ ಆಲೋಚನೆ ಮಾಡುವುದೇ ಅಸಾಧ್ಯವಾಗುತ್ತದೆಯೋ ಅಂಥ ಭಾವನೆಗಳು ಆಂತರಿಕ ಭಾವನೆಗಳು. ಇತರ ಭಾವನೆಗಳು ಕೃತಕ ಮತ್ತು ಕಲ್ಪಿತ. ಅನೇಕ ಭಾವನೆಗಳು ನಮ್ಮ ಯತ್ನವಿಲ್ಲದೆಯೇ ಹೊರಗಿನಿಂದ ಬಂದು ಹೊರಗಿನ ವಸ್ತುಗಳ ನಕಲುಗಳಾಗಿ ನಮ್ಮ ಮನಸ್ಸಿನ ಮುಂದೆ ಓಡಾಡುತ್ತವೆ. ಮೊದಲ ಬಗೆಯ ಭಾವನೆಯನ್ನು ಬಿಟ್ಟರೆ ಈ ಬಗೆಯ ಉಳಿದುದೆಲ್ಲ ಕೇವಲ ಭ್ರಮೆಯಾಗಬಹುದು. ನಮ್ಮ ತಿಳಿವಿಗೆ ಆಂತರಿಕ ಭಾವನೆಗಳು ಇವು : ದ್ರವ್ಯಭಾವನೆ, ಗುಣಭಾವನೆ, ಕಾರ್ಯಕಾರಣ ಭಾವನೆ, ಸ್ವಾತಂತ್ರ್ಯ ಭಾವನೆ, ಅನಂತತಾ ಭಾವನೆ.

ಇವುಗಳಲ್ಲಿ ಕಾರಣಕಾರ್ಯಭಾವ ಪ್ರಸಕ್ತವಾದದ್ದು. ಯಾವುದಾದರೂ ಇರಬೇಕಾದರೆ ಅದಕ್ಕೆ ಕಾರಣವಿರಬೇಕು. ಇರುವುದಕ್ಕೆ ಇರುವುದೇ ಕಾರಣವಾಗಬಲ್ಲುದೇ ಹೊರತು, ಇಲ್ಲದ್ದು ಕಾರಣವಾಗಲಾರದು. ಇಲ್ಲದ್ದರಿಂದ ಇರುವುದು ಹುಟ್ಟುವುದಿಲ್ಲ. ಇದು ಸ್ವತಸ್ಸಿದ್ಧವಾದ ಭಾವನೆ. ಕಾರಣ ಕಾರ್ಯದಷ್ಟಾದರೂ ನಿಜವಾಗಿಯೇ ಇರಬೇಕು. ಕಾರಣ ನಿಜವಾಗದಿದ್ದರೆ ಕಾರ್ಯ ನಿಜವಾಗುವುದೆಂತು?

ನನ್ನ ಮನಸ್ಸಿನಲ್ಲಿ ಅನಂತವಾದದ್ದು (ಇನ್‌ಫಿನಿಟ್) ಪರಿಪೂರ್ಣವಾದದ್ದು (ಪರ್ಫೆಕ್ಟ್) ಎಂಬ ಭಾವನೆ ಇದೆ. ಈ ಭಾವನೆಗೆ ನಾನೇ ಕಾರಣವಲ್ಲ. ಏಕೆಂದರೆ ನಾನು ಮಿತಿ ಇರುವವನು, ಅಪರಿಪೂರ್ಣ. ಮಿತಿ ಇರುವುದು ಅಪರಿಪೂರ್ಣವಾದದ್ದು. ಅಮಿತವಾದುದಕ್ಕೆ, ಪರಿಪೂರ್ಣವಾದುದಕ್ಕೆ ಮಿತಿ ಇರುವುದು ಕಾರಣವಾಗಲಾರದು. ಈ ಭಾವನೆ ನನ್ನಲ್ಲಿರಬೇಕಾದರೆ ಅದಕ್ಕೆ ಕಾರಣ ಪರಿಪೂರ್ಣವಾದ ವಸ್ತುವೇ ಆಗಿರಬೇಕು. ಆ ವಸ್ತು ನನ್ನನ್ನು ಮೋಸಗೊಳಿಸಲಾರದು. ಏಕೆಂದರೆ ಹಾಗೆ ಮೋಸಗೊಳಿಸುವ ವಸ್ತು ಪರಿಪೂರ್ಣವಾಗಲಾರದು. ನಿಜವಾಗಿಯೂ ಸ್ವತಂತ್ರವಾದ ದ್ರವ್ಯ ಎಂದು ತಿಳಿಯಬೇಕಾದದ್ದು ಇದೊಂದೇ. ಇದು ಅನೇಕವಾಗಿರಲಾರದು. ಏಕೆಂದರೆ ಎರಡು ದ್ರವ್ಯಗಳಿದ್ದರೆ ಒಂದು ಇನ್ನೊಂದನ್ನು ಬಾಧೆಗೊಳಿಸುವುದಿಲ್ಲ. ಅವುಗಳು ಪರಿಪೂರ್ಣವಾಗಿರಲೂ ಸಾಧ್ಯವಿಲ್ಲ. ಪರಿಪೂರ್ಣವಾಗಬೇಕಾದರೆ, ಸ್ವತಂತ್ರವಾಗಿರಬೇಕಾದರೆ ಅದು ಒಂದೇ ಆಗಿರಬೇಕು. ಅದಕ್ಕಿಂತ ಭಿನ್ನವಾದ ದ್ರವ್ಯಗಳಿದ್ದರೆ ಅವು ಅದಕ್ಕೆ ಅಧೀನವಾಗಿಯೇ ಇರಬೇಕು.

ಈ ಪ್ರಧಾನ ದ್ರವ್ಯಕ್ಕೆ ಅಧೀನವಾದ ಎರಡು ದ್ರವ್ಯಗಳಿವೆ. ಒಂದು ಯೋಚಿಸುವ ದ್ರವ್ಯ (ಮನಸ್ಸು). ಇನ್ನೊಂದು ವಿಸ್ತರಣೆಯುಳ್ಳ (ಎಕ್ಸ್‌ಟೆನ್ಷನ್) ದ್ರವ್ಯ (ಭೌತವಸ್ತು). ಇವು ಒಂದಕ್ಕಿಂತ ಒಂದು ತೀರ ಭಿನ್ನ. ಯೋಚಿಸುವ ದ್ರವ್ಯಕ್ಕೆ ವಿಸ್ತರಣೆ ಇಲ್ಲ; ವಿಸ್ತರಣೆ ಇರುವುದಕ್ಕೆ ಯೋಚಿಸುವ ಗುಣವಿಲ್ಲ. ಯೋಚನೆ ಆತ್ಮಕ್ಕೆ ಆಂತರಿಕಗುಣವಾಗಿರುವಂತೆ, ವಿಸ್ತರಣೆ ಇಲ್ಲದ ಯಾವ ಭೌತವಸ್ತುವೂ ಇರಲಾರದು. ಈ ಗುಣಗಳ ರೂಪಗಳು ಅನೇಕವಾಗಿರಬಹುದು. ಯೋಚನೆಗಳು ಅನೇಕ ರೂಪದವಾಗಿರುತ್ತವೆ. ವಿಸ್ತರಣೆಯ ರೂಪಗಳು ಅನೇಕವಾಗಿರುತ್ತವೆ. ಗುಣಗಳಿಗೂ ರೂಪಗಳಿಗೂ ಇರುವ ವ್ಯತ್ಯಾಸ ಇದು; ಗುಣಗಳು ನಿತ್ಯರೂಪಗಳು. ಅನಿತ್ಯರೂಪಗಳು ಬದಲಾಯಿಸಬಹುದು, ಹಲವಾಗಿರಬಹುದು. ಅವು ಹುಟ್ಟಬಹುದು, ಅಳಿದು ಹೋಗಬಹುದು, ವ್ಯತ್ಯಾಸಗೊಳ್ಳಬಹುದು. ಆದರೆ ಅವುಗಳಿಗೆ ಆಧಾರವಾದ ಗುಣ ಮಾತ್ರ ಈ ವಿಕಾರಗಳಿಗೆ ಮೀರಿದ್ದು. ಯಾವ ಒಂದು ವಸ್ತುವನ್ನು ಯೋಚಿಸಬೇಕಾದರೂ ಅದರ ಸಾಮಾನ್ಯ ಗುಣವನ್ನು ಬಿಟ್ಟು ಯೋಚಿಸಲಾಗುವುದಿಲ್ಲ. ಸಾಮಾನ್ಯದ ಅರಿವು ಅತ್ಯಗತ್ಯ. ಆದರೆ ಯಾವುದೋ ಪೃಥಕ್ಕಾದ ಒಂದು ರೂಪವನ್ನು ಮಾತ್ರ ಕಡ್ಡಾಯವಾಗಿ ಯೋಚಿಸಬೇಕೆಂಬ ನಿರ್ಬಂಧವಿಲ್ಲ. ಹಾಗೆಯೇ ವಿಸ್ತರಣೆಯೆಂಬ ಸಾಮಾನ್ಯಗುಣದ ನೆರವಿಲ್ಲದೆ ಯಾವ ಒಂದು ವಿಶಿಷ್ಟರೂಪವನ್ನೂ ತಿಳಿಯಲಾಗುವುದಿಲ್ಲ. ಒಂದು ತ್ರಿಕೋನವನ್ನು ಯೋಚಿಸಬೇಕಾದರೆ ವಿಸ್ತರಣೆಯ ಭಾವನೆ ಅಗತ್ಯ. ಆದರೆ ಒಂದು ತ್ರಿಕೋನವನ್ನು ಯೋಚಿಸದ ವಿನಾ ವಿಸ್ತರಣೆಯ ವಿಚಾರವಾಗಿ ಯೋಚಿಸಲಾಗುವುದಿಲ್ಲವೆಂದು ಹೇಳಲಾಗುವುದಿಲ್ಲ.


ಇಮ್ಯಾನ್ಯುಯಲ್ ಕಾಂಟ್

ಡೇಕಾರ್ಟ್ ಭೌತಗುಣಗಳನ್ನು ಪ್ರಧಾನ ಮತ್ತು ಗೌಣ ಎಂದು ಎರಡು ವಿಧವಾಗಿ ವಿಂಗಡಿಸಿದ್ದಾನೆ. ತೂಕ, ಉದ್ದ, ಅಗಲ ಮುಂತಾದುವು ಭೌತ ವಸ್ತುವಿನ ಪ್ರಧಾನ ಗುಣಗಳು.

ಇಂಥ ತೀರ ವಿರುದ್ಧ ವಸ್ತುಗಳು ಮನುಷ್ಯನಲ್ಲಿ ಸೇರಿರುವುದು ಹೇಗೆ? ಈ ಸೇರುವಿಕೆಗೆ ಈಶ್ವರನೇ ಕಾರಣ ಎಂಬುದು ಡೇಕಾರ್ಟನ ಉತ್ತರ. ಈಶ್ವರ ಅಥವಾ ದೇವರು ಭೌತವಸ್ತುವನ್ನು ಸೃಷ್ಟಿಸಿ ಅದರಲ್ಲಿ ಮೊತ್ತವಾಗಿ ಚಲನೆಯನ್ನು ಇಟ್ಟಿರುತ್ತಾನೆ. ಈ ಮೊತ್ತ ಹೆಚ್ಚುವುದೂ ಇಲ್ಲ, ಕಡಿಮೆಯಾಗುವುದೂ ಇಲ್ಲ. ಮೊತ್ತವಾದ ಚಲನೆಯನ್ನು ಭೌತವಸ್ತುವಿನಲ್ಲಿ ಇಟ್ಟ ಮೇಲೆ ದೇವರು ಅದನ್ನು ಯಾವ ರೀತಿಯಲ್ಲೂ ಬದಲಾಯಿಸುವುದಿಲ್ಲ. ಪ್ರಥಮದಲ್ಲಿ ಆತ ಏರ್ಪಡಿಸಿದ ನಿಯಮಾನುಸಾರವಾಗಿ ಅದು ನಡೆಯುತ್ತದೆ. ಒಂದು ಸಲ ಆತ ಭೌತವಸ್ತುವಿಗೆ ಮೊತ್ತವಾದ ಚಲನೆ ಕೊಟ್ಟು ವಿಧಾಯಕ ಮಾಡಿದ ಮೇಲೆ ಅದಕ್ಕೆ ಯಾವ ರೀತಿಯಲ್ಲೂ ಅಡ್ಡಬರುವುದಿಲ್ಲ. ಏಕೆಂದರೆ ದೇವರ ಸಂಕಲ್ಪ ದೃಢವಾದದ್ದು. ಮಧ್ಯಯುಗದ ತಾತ್ತ್ವಿಕರ ದೇವರಂತೆ ಡೇಕಾರ್ಟ್‌ನ ದೈವ ಪವಾಡಗಳನ್ನು ನಡೆಸುವುದಿಲ್ಲ. ಈ ರೀತಿಯಾಗಿ ಡೇಕಾರ್ಟ್ ಮತಾಂಧರ ಪ್ರತಿಬಂಧಕವಿಲ್ಲದೆ ಭೌತವಿಜ್ಞಾನಿಗಳು ಪ್ರಕೃತಿ ಸಂಶೋಧನೆಯನ್ನು ನಡೆಸಲು ದಾರಿಮಾಡಿಕೊಟ್ಟ ಈ ವಿಚಾರಣೆ ತುಂಬ ಕೃತಕವೆಂಬುದು ಸ್ಪಷ್ಟ.

ಭೌತವಾದ ಶರೀರ ಮಾನಸಿಕವಾದ ಆತ್ಮ ಇವೆರಡೂ ಅತ್ಯಂತ ಭಿನ್ನವಾದ್ದರಿಂದ ನ್ಯಾಯವಾಗಿ ಇವೆರಡಕ್ಕೂ ಪರಸ್ಪರ ಸಂಬಂಧವಿರಕೂಡದು. ಶರೀರ ಮನಸ್ಸನ್ನು ಚಲಿಸಲಾರದು. ಹಾಗೆಯೇ ಮನಸ್ಸು ಶರೀರವನ್ನು ಚಲಿಸಲಾರದು. ಇವುಗಳ ಸ್ವಭಾವ ಹೀಗಿದ್ದರೂ ಡೇಕಾರ್ಟ್ ಅವೆರಡಕ್ಕೂ ಹತ್ತಿರ ಸಂಬಂಧವಿದೆಯೆಂದು ತಿಳಿಸಿರುತ್ತಾನೆ. ಎಲ್ಲರ ಅನುಭವಕ್ಕೂ ಬಂದಿರುವ ವಾಸ್ತವಸಂಗತಿಗಳನ್ನು ಆತ ನಿರಾಕರಿಸಲಾಗಲಿಲ್ಲ. ಮಾನವ ಸ್ವತಂತ್ರ ಆತ್ಮನಲ್ಲ. ಅನೇಕ ವೇಳೆ ನಮ್ಮ ಯತ್ನವಿಲ್ಲದೆಯೇ ನಮಗೆ ತಿಳಿಯದೆಯೇ ನಮ್ಮ ದೇಹದಲ್ಲಿ ಚಲನೆಯುಂಟಾಗುತ್ತದೆ. ಹೊರವಸ್ತುಗಳ ಸಂಪರ್ಕದಿಂದ ನಮಗೆ ಸಿಹಿ, ಕಹಿ, ಮೃದು, ಕಠಿಣ, ಅಹಿತ, ನೋವು, ಸುಖ ಮುಂತಾದ ಅನೇಕ ಇಂದ್ರಿಯಾನುಭವಗಳು ಉಂಟಾಗುತ್ತವೆ. ಶರೀರ ನನಗೆ ತೀರ ಬಾಹಿರವಾಗಿದ್ದರೆ ಹಸಿವು ನನ್ನದಲ್ಲವೆಂದು ತಿಳಿಯಬೇಕಿತ್ತು. ನನ್ನೊಳಗಾಗುವ ಹಸಿವಿನ ಅನುಭವ ನನಗೆ ತುಂಬ ಹತ್ತಿರದ್ದು. ಹಸಿವಾದಾಗ ಇದು ನನ್ನ ಹಸಿವು ಎಂದು ತಿಳಿಯುತ್ತೇನೆ. ಅದರಿಂದ ಬಿಡುಗಡೆಯಾಗಲು ನಾನು ಅನೇಕ ಬಗೆಯಾಗಿ ಯೋಚಿಸುತ್ತೇನೆ, ಯತ್ನ ಮಾಡುತ್ತೇನೆ. ಹೊರವಸ್ತು ನನ್ನ ಮೇಲೆ ಕ್ರಿಯಾಕಾರಕವಾಗಿದೆ. ನಾನು ದೇಹದಲ್ಲಿ ಅನೇಕ ವಿಧವಾದ ಕ್ರಿಯೆಗಳನ್ನು ಉತ್ಪತ್ತಿ ಮಾಡುತ್ತೇನೆ. ಹೀಗೆ ಮನಸ್ಸು ದೇಹದ ಮೇಲೂ ದೇಹ ಮನಸ್ಸಿನ ಮೇಲೂ ಪರಿಣಾಮವನ್ನುಂಟು ಮಾಡುತ್ತವೆಯೆಂಬ ವಾಸ್ತವ ಅನುಭವಗಳನ್ನು ನಿರಾಕರಿಸಲಾಗುವುದಿಲ್ಲ. ಆದರೆ ಮನಸ್ಸು ಚೇತನವಾದದ್ದು, ದೇಹ ಅಚೇತನವಾದದ್ದು. ಇವೆರಡೂ ವಿರುದ್ಧ ಎಂಬುದು ಅವನ ಮೂಲ ಸಿದ್ಧಾಂತ. ಇವೆರಡನ್ನೂ ಹೇಗೆ ಸಂಗತಗೊಳಿಸುವುದು ಎಂಬ ಸಮಸ್ಯೆಯನ್ನು ಪರಿಹರಿಸಲು ಆತ ತುಂಬ ಕಷ್ಟಪಟ್ಟಿದ್ದಾನೆ.

ಈ ಸಮಸ್ಯೆಯನ್ನು ಬಗೆಹರಿಸಲು ಆತ ಕೊಟ್ಟ ಉತ್ತರಗಳಲ್ಲಿ ಇದೂ ಒಂದು; ನಮ್ಮ ಆಲೋಚನೆಗಳನ್ನು ದೇಹದ ಇಂದ್ರಿಯಗಳು ಬಾಧಿಸಬಹುದು. ಆದರೆ ಆ ಬಾಧೆಗಳನ್ನು ಇಂದ್ರಿಯಗಳು ಹುಟ್ಟಿಸುವುದಿಲ್ಲ. ಆ ಬಾಧೆಗೆ ಅವು ಕಾರಣಗಳೂ ಅಲ್ಲ. ಬಾಧೆಗೆ ಕಾರಣ

ನಮ್ಮ ಆತ್ಮಕ್ಕೂ ಇಂದ್ರಿಯಗಳಿಗೂ ಇರುವ ಸಂಸರ್ಗ. ಹೀಗೆ ಆತ್ಮ ಮತ್ತು ಇಂದ್ರಿಯಗಳಿಗೆ ಸಂಸರ್ಗವಿದ್ದರೂ ಅವು ಭಿನ್ನವಾದವು. ಅವುಗಳ ಸ್ವಭಾವವೂ ಭಿನ್ನವಾದದ್ದು. ಇಂದ್ರಿಯಗಳು ನಮ್ಮನ್ನು ಬಂಧಿಸಿ ಬಾಧಿಸಿದರೂ ಅವುಗಳನ್ನು ಹತೋಟಿಯಲ್ಲಿ ಇಡುವುದು ನಮಗೆ ಸಾಧ್ಯವಾಗದಿದ್ದರೂ ದೇವರಿಗೆ ಅವುಗಳ ಮೇಲೆ ಸಂಪೂರ್ಣ ಹತೋಟಿ ಇದೆ. ಅವುಗಳನ್ನು ಬೇರೆಯಾಗಿಯೇ ಇಡುವ ಶಕ್ತಿ ಅವನಿಗೆ ಇದೆ. ಮನಸ್ಸಿನಲ್ಲಿ ಹುಟ್ಟಿದ ಭಾವನೆಗಳಿಗೂ ಇಂದ್ರಿಯಗಳಿಂದ ಹುಟ್ಟಿದ ಕಾಮ, ನೋವು, ಹೆದರಿಕೆ ಮುಂತಾದ ಭಾವಗಳಿಗೂ ಹೋರಾಟ ನಡೆಯುವುದು ನಿಜ. ಇಂದ್ರಿಯ ಭಾವಗಳು ಆತ್ಮಕ್ಕೆ ಬಾಧೆ ಕೊಡುವುದು ವಾಸ್ತವ. ಆದರೆ ದೇವರು ನಮಗೆ ಯೋಚಿಸುವ ಶಕ್ತಿ ಕೊಟ್ಟಿರುತ್ತಾನೆ. ಅವುಗಳನ್ನು ತಡೆದಿಡುವ ಧೈರ್ಯವನ್ನೂ ಸ್ವತಂತ್ರವಾಗುವ ಇಚ್ಛೆಯನ್ನೂ ನಮಗೆ ಕೊಟ್ಟಿರುತ್ತಾನೆ. ಈ ಇಂದ್ರಿಯಗಳ ಕೋಟಲೆಯನ್ನು ನಿವಾರಿಸಿ ಅವುಗಳ ಮೇಲೆ ಸಂಪೂರ್ಣವಾದ ಹತೋಟಿ ಇಟ್ಟುಕೊಳ್ಳುವ ಶಕ್ತಿಯನ್ನು ದೇವರು ಎಲ್ಲ ಮಾನವರಿಗೂ ಕೊಟ್ಟಿರುತ್ತಾನೆ. ಈ ಶಕ್ತಿ ನಮ್ಮಲ್ಲಿ ಹುಟ್ಟುವುದಕ್ಕೆ ಜ್ಞಾನ ಕಾರಣ.

ಇಂದ್ರಿಯಗಳಿಂದ ನೇರವಾಗಿ ಹುಟ್ಟಿದ ಭಾವಗಳನ್ನು ನಾವು ನಮ್ಮ ಮನಸ್ಸಿನಲ್ಲಿ ನೇರವಾಗಿ ಹುಟ್ಟಿದ ಭಾವಗಳೆಂದು ತಿಳಿದುಕೊಂಡಿರುತ್ತೇವೆ. ಇದು ತಪ್ಪು ತಿಳಿವು, ಅಜ್ಞಾನದಿಂದ ಹುಟ್ಟಿದ್ದು. ನೇರವಾಗಿ ನಮ್ಮ ಮನಸ್ಸಿನಲ್ಲಿ ಹುಟ್ಟಿದವು. ಭಾವನೆಗಳು (ಐಡಿಯಾಸ್) ಇಂದ್ರಿಯ ಭಾವಗಳಲ್ಲ (ಪ್ಯಾಷನ್). ಅವಕ್ಕೂ ನಮ್ಮ ಮನಸ್ಸಿಗೂ ನೇರ ಸಂಬಂಧವಿಲ್ಲ. ಅದು ಪರೋಕ್ಷ ಸಂಬಂಧ. ಪ್ರತ್ಯಕ್ಷ ಸಂಬಂಧವಿರುವುದು ಭೌತವಾದ ಇಂದ್ರಿಯಗಳಿಗೆ ಮತ್ತು ಭೌತವಾದ ಹೊರವಸ್ತುಗಳಿಗೆ ಮಾತ್ರವೇ. ಪ್ರತ್ಯೇಕ ಸಂಬಂಧವಿರುವುದು ಮನಸ್ಸು ಮತ್ತು ಮಾನಸಿಕ ಭಾವನೆಗಳಿಗೆ ಮಾತ್ರವೇ. ಇಂದ್ರಿಯ ಭಾವಗಳಿಗೂ ಮನಸ್ಸಿನ ಭಾವಗಳಿಗೂ ಪರೋಕ್ಷ ಸಂಬಂಧ ಏರ್ಪಡುವುದು ಮನುಷ್ಯನ ಶರೀರದ ಒಂದೇ ಒಂದು ಭಾಗದಲ್ಲಿ–ಮಿದುಳಿನ ಮೂರನೆಯ ಕುಕ್ಷಿಯ ಹಿಂದುಗಡೆ ಇರುವ ಒಂದು ಗ್ರಂಥಿಯಲ್ಲಿ (ಪೈನಿಯಲ್). ಭೌತವಸ್ತುವಿಗೂ ಇಂದ್ರಿಯಕ್ಕೂ ನೇರವಾದ ಸಂಬಂಧದಿಂದ ಹುಟ್ಟಿದ ಭಾವಗಳು ಈ ಗ್ರಂಥಿಯಲ್ಲಿ ಸೇರುತ್ತವೆ. ಹೀಗೆ ಅಲ್ಲಿ ಬಂದು ಸೇರಿದುವಕ್ಕೂ ಮನಸ್ಸಿಗೂ ಇರುವ ಸಂಬಂಧ ಪರೋಕ್ಷವಾದದ್ದು. ಅದು ಪ್ರತ್ಯಕ್ಷವೆಂದು ಭ್ರಮಿಸುವುದೇ ನಮ್ಮ ಸಂಕಟಗಳಿಗೆ ಕಾರಣ. ಪ್ರತ್ಯಕ್ಷವಲ್ಲವೆಂದು ಜ್ಞಾನೋದಯವಾದಾಗ ಸಂಕಟದಿಂದ ಪರಿಹಾರ ಮಾರ್ಗವನ್ನು ಯೋಚಿಸಿ ಕರಗತ ಮಾಡಿಕೊಳ್ಳುತ್ತೇವೆ. ಈ ಶೀಲಗಳು ಸದ್ವಿವೇಕದಿಂದ ಸದ್ಗುಣಗಳಿಂದ ಹುಟ್ಟುತ್ತವೆ. ಸದ್ಗುಣ ಆತ್ಮಕ್ಕೆ ಆಂತರಿಕವಾದದ್ದು, ಸ್ವಾಭಾವಿಕವಾದದ್ದು. ಕಾಮ, ಕ್ರೋಧ, ಹೇಡಿತನ–ಇವು ಆತ್ಮಕ್ಕೆ ನೇರವಾಗಿ ಸೇರಿದುವಲ್ಲ. ಅವು ಆತ್ಮದ ಮುಂದೆ ಕೇವಲ ಸುಳಿದಾಡುತ್ತವೆ. ಇದೆಲ್ಲ ಭಗವದಿಚ್ಛೆ. ಪಾಪಿಗಳಾದ ನಮ್ಮನ್ನು ಸನ್ಮಾರ್ಗಕ್ಕೆ ತಿರುಗಿಸಲು ದೇವರು ಏರ್ಪಡಿಸಿದ ನಿಯಮ. ಈ ವಾದಕ್ಕೂ ಮಧ್ಯಯುಗದ ಕ್ರೈಸ್ತ ತಾತ್ತ್ವಿಕರ ನಿರ್ವಿಚಾರ (ಡಾಗ್ಮ್ಯಾಟಿಸಂ) ವಾದಕ್ಕೂ ವ್ಯತ್ಯಾಸವಿಲ್ಲ. ಬೌದ್ಧಿಕ ಮಾರ್ಗವೊಂದೇ ತತ್ತ್ವ ಅನುಸರಿಸಬೇಕಾದ ಮಾರ್ಗವೆಂಬ ತತ್ತ್ವವನ್ನು ಬಿಟ್ಟು ಕೊನೆಯಲ್ಲಿ ನಿರ್ವಿಚಾರಮಾರ್ಗವನ್ನು ಡೇಕಾರ್ಟ್ ಆಶ್ರಯಿಸಿರುತ್ತಾನೆ. ಬೌದ್ಧಿಕವಾದ ವಿಚಾರವಾದದಿಂದ ಪ್ರಾರಂಭವಾದ ಅವನ ತತ್ತ್ವ ನಿರ್ವಿಚಾರ ತತ್ತ್ವದಲ್ಲಿ ಪರಿಸಮಾಪ್ತಿಗೊಂಡಿದೆ.



ಡೇವಿಡ್ ಹ್ಯೂಮ್

ಡೇಕಾರ್ಟ್‌ನ ಸ್ವತಂತ್ರ ವಿಚಾರಶ್ರದ್ಧೆ ಜನರನ್ನು ಆಕರ್ಷಿಸಿತು. ಆದರೆ ಅವನ ತತ್ತ್ವದಿಂದ ಹುಟ್ಟಿದ ಸಮಸ್ಯೆಗಳನ್ನು ಕಂಡು ತಲೆ ಕೆರೆದುಕೊಳ್ಳುವಂತಾಯಿತು. 1. ಈಶ್ವರನೂ ಪ್ರಕೃತಿಯೂ ಒಂದಕ್ಕೊಂದು ಪ್ರತಿಯಾದುವಾದರೆ, ಅವುಗಳಿಗೆ ಯಾವ ಬಗೆಯ ಸಂಬಂಧವೂ ಇಲ್ಲದಂತಾಗುತ್ತದೆ. ಶುದ್ಧ ಚೇತನ ಸ್ವರೂಪನೂ ಅಚಲನೂ ಆದ ಈಶ್ವರ ಅಚೇತನವಾದ ಭೌತವಸ್ತುವಿನಲ್ಲಿ ಚಲನೆಯನ್ನು ಏರ್ಪಡಿಸುವುದು ಹೇಗೆ ಸಾಧ್ಯ. 2. ಈಶ್ವರನೊಬ್ಬನೇ ನಿತ್ಯದ್ರವ್ಯವಾದರೆ ಅವನಿಗೆ ಬಾಹಿರವಾದ ಆತ್ಮ ಪದಾರ್ಥವಾಗಲಿ ಭೌತ ಪದಾರ್ಥವಾಗಲಿ ಇರುವುದು ಅನುಚಿತವಾಗುತ್ತದೆ. ದ್ವೈತ ತತ್ತ್ವವನ್ನು ಬಿಡಬೇಕಾಗುತ್ತದೆ. ಈಶ್ವರನೊಬ್ಬನೇ ಸತ್ಯವೆಂಬ ಏಕತೆಯ ತತ್ತ್ವವನ್ನು ಒಪ್ಪಿಕೊಳ್ಳಬೇಕಾಗುತ್ತದೆ. 3. ಮಾನವನ ಆತ್ಮ ಸ್ವತಂತ್ರವಾದದ್ದೆಂದು ಡೇಕಾರ್ಟ್ ಹೇಳುತ್ತಾನೆ. ಈಶ್ವರೊಬ್ಬನೇ ಸ್ವತಂತ್ರನೆಂದೂ ಹೇಳುತ್ತಾನೆ. ಮಾನವ ಸ್ವತಂತ್ರನಾದರೆ ಈಶ್ವರಭಾವನೆ ಅನಗತ್ಯವಾಗುತ್ತದೆ. ಈಶ್ವರನೊಬ್ಬನೇ ಸ್ವತಂತ್ರನೆಂದರೆ ಮಾನವ ಅಸ್ವತಂತ್ರನೆನ್ನಬೇಕಾಗುತ್ತದೆ. ಹೀಗೆ ಮಾನವ ಆತ್ಮಕ್ಕೂ ಈಶ್ವರನಿಗೂ ಇರುವ ಸಂಬಂಧ ಗೂಢ ಸಮಸ್ಯೆಯಾಗಿ ಪರ್ಯವಸಾನ ಹೊಂದುತ್ತದೆ. 4. ಶರೀರ ಭೌತವಾದುದಾದರೆ, ಕೇವಲ ಒಂದು ಯಂತ್ರದಂತಿದ್ದರೆ, ಆತ್ಮ ಅದಕ್ಕೆ ವಿರುದ್ಧವಾದ ಕೇವಲ ಚೇತನವಾದರೆ, ಇವೆರಡಕ್ಕೂ ಯಾವ ಸಂಬಂಧವೂ ಇರಕೂಡದು. ಹಾಗೆ ಎರಡಕ್ಕೂ ಸಂಬಂಧವಿರಬೇಕಾದರೆ ಎರಡರ ಸ್ವಭಾವಗಳೂ ವಿರುದ್ಧವಾಗಿರಕೂಡದು.

ಡೇಕಾರ್ಟ್ ಒಂದು ಕಡೆ ಆಧುನಿಕ ಭೌತ ವಿಜ್ಞಾನವನ್ನು ಸಮರ್ಥಿಸಲೂ ಇನ್ನೊಂದು ಕಡೆ ಈಶ್ವರ ಮತ್ತು ಆತ್ಮಗಳ ವಿಚಾರವಾಗಿ ಕ್ರೈಸ್ತರ ನಂಬಿಕೆಗಳನ್ನು ಸಮರ್ಥಿಸಲೂ ಪಣ ತೊಟ್ಟಿದ್ದಾನೆ. ಎರಡು ಸಂಕಲ್ಪಗಳನ್ನೂ ಸೇರಿಸಿ ಸಂಗತಗೊಳಿಸಲು ಆತ ಮಾಡಿದ ಪ್ರಯತ್ನದಿಂದ ಮೇಲೆ ಹೇಳಿದ ಎಲ್ಲ ತೊಂದರೆಗಳೂ ಉದ್ಭವಿಸಿವೆ. ಇವನ ಅನಂತರದಲ್ಲಿ ಬಂದ ತಾತ್ತ್ವಿಕರಲ್ಲಿ ಕೆಲವರು ಇವನ ತತ್ತ್ವದಲ್ಲಿರುವ ಅಸಂಗತ ಅಂಶಗಳನ್ನು ಬಯಲಿಗೆ ಎಳೆದರು. ಇನ್ನು ಕೆಲವರು ಆ ದೋಷಗಳನ್ನು ಪರಿಹರಿಸುವ ಮಾರ್ಗವನ್ನು ಕಂಡುಹಿಡಿಯಲು ಪ್ರಯತ್ನಿಸಿದರು. ಅವರು ಅನುಸರಿಸಬಹುದಾದ ಮಾರ್ಗಗಳು ಇವು: 1. ದ್ವೈತದ ತೊಂದರೆಗಳಿಂದ ತಪ್ಪಿಸಿಕೊಳ್ಳಲು ಪ್ರಕೃತಿಯನ್ನು ಬಿಟ್ಟು ಚೇತನ ವಸ್ತುವೊಂದೇ ಸತ್ಯವಾದದ್ದು, ಸ್ವತಂತ್ರವಾದದ್ದು ಎಂದು ಮಾಲ್ ಬ್ರಾಂಚ್‌ನಂತೆ ವಾದಿಸುವುದು. 2. ಚೇತನವನ್ನು ನಿರಾಕರಿಸಿ ಭೌತವಸ್ತುವೊಂದೇ ಸತ್ಯವೆಂದು ಹಾಬ್ಸ್‌ನಂತೆ ವಾದಿಸುವುದು. 3. ಬೇರೆ ಬೇರೆಯಾದ ಮತ್ತು ಸ್ವತಂತ್ರವಾದ ಚೇತನ ಮತ್ತು ಅಚೇತನಗಳು ವಸ್ತುಗಳಲ್ಲ, ಅವು ಕೇವಲ ಗುಣಗಳು, ಅವು ಒಂದೇ ಆದ ಈಶ್ವರನ ಎರಡು ಗುಣಗಳೆಂದು ಸ್ಪಿನೋಜನಂತೆ ವಾದಿಸುವುದು. 4. ಆತ್ಮ ಮತ್ತು ಜೀವ ಇವೆರಡೂ ಭಿನ್ನ, ಒಂದರ ಮೇಲೆ ಇನ್ನೊಂದು ಯಾವ ಬಗೆಯಾದ ಬದಲಾವಣೆಯನ್ನೂ ಉಂಟುಮಾಡುವುದಿಲ್ಲ, ಅವೆರಡೂ ಸಮಾನಾಂತರವಾದುವು ಎಂದು ಸ್ಪಿನೋಜನಂತೆ ವಾದಿಸುವುದು. 5. ಜ್ಞಾನಕ್ಕೆ ಇಂದ್ರಿಯಾನುಭವವೇ ಪ್ರಧಾನ ಆಶ್ರಯ. ಇಂದ್ರಿಯ ಅನುಭವಗಳ ಪರಿಮಿತಿಗೆ ಒಳಪಟ್ಟು ಅವುಗಳ ಸಾಹಚರ್ಯದಿಂದ ಹುಟ್ಟಿದವೇ ಬೌದ್ಧಿಕ ಭಾವನೆಗಳು. ಅವು ಸಂಪೂರ್ಣವಾಗಿ ಇಂದ್ರಿಯಾನುಭವಗಳಿಗೆ ಅಧೀನವಾದುವು; ಇಂದ್ರಿಯಾನುಭವಕ್ಕೆ ಮುಂಚೆ ಮನಸ್ಸಿನಲ್ಲಿ ಆಂತರಿಕ ಭಾವನೆಗಳು ಯಾವುವೂ ಇಲ್ಲ–ಈ ಬಗೆಯಾಗಿ ಲಾಕ್, ಬಾರ್ಕ್ಲೆ, ಹ್ಯೂಮ್ ಮುಂತಾದವರಂತೆ ವಾದಿಸಬಹುದು.

ಈ ಒಂದೊಂದು ತತ್ತ್ವವನ್ನೂ ಡೇಕಾರ್ಟ್‌ನ ತರುವಾಯ ಬಂದ ತಾತ್ತ್ವಿಕರು ಸಮರ್ಥಿಸಲು ಪ್ರಯತ್ನಪಟ್ಟರು. ಡೇಕಾರ್ಟ್ ಪ್ರಾರಂಭಿಸಿದ ಬುದ್ಧ್ಯಾರೂಢವಾದವನ್ನು ಬಿಡದೆ ಅದನ್ನೊಪ್ಪಿ ಅದಕ್ಕೆ ಸಂಗತವಾದ ತತ್ತ್ವವನ್ನು ಏರ್ಪಡಿಸಲು ಪ್ರಯತ್ನಪಟ್ಟ ಇಬ್ಬರ ತತ್ತ್ವವನ್ನು ಮಾತ್ರ ಇನ್ನು ಮುಂದೆ ಪರಿಶೀಲಿಸಲಾಗುವುದು. ಇದಾದಮೇಲೆ ಡೇಕಾರ್ಟ್‌ನ ತತ್ತ್ವವನ್ನು ಪ್ರತಿಭಟಿಸಲು ಏರ್ಪಟ್ಟ ಅನುಭವಾರೂಢವಾದವನ್ನೂ ಪರಿಶೀಲಿಸಲಾಗುವುದು.

**ಸ್ಪಿನೋಜ** : 1632–77. ಇವನು ಹಾಲೆಂಡಿನಲ್ಲಿ ಯಹೂದಿ ಮನೆತನದಲ್ಲಿ ಹುಟ್ಟಿದ. ಮತಗ್ರಂಥಗಳನ್ನು ಚೆನ್ನಾಗಿ ತಿಳಿದುಕೊಂಡ. ಆದರೆ ಆ ಮತ ತತ್ತ್ವವೂ ಕ್ರೈಸ್ತಮತ ತತ್ತ್ವದಂತೆ ವಿಜ್ಞಾನಕ್ಕೆ ವಿರುದ್ಧವಾದ ಅಂಶಗಳಿಂದ ಕೂಡಿದ್ದರಿಂದ ಆ ಅಂಶಗಳನ್ನು ಖಂಡಿಸಿದ. ಯೆಹೂದಿಗಳು ಬಹಿಷ್ಕಾರ ಹಾಕಿ ಅವನನ್ನು ತಮ್ಮ ಸಮಾಜದಿಂದ ಹೊರದೂಡಿದರು. ಹೇಗ್‌ನಲ್ಲಿ ನೆಲಸಿ ಕನ್ನಡಕದ ಗಾಜುಗಳನ್ನು ತಯಾರಿಸಿ ಜೀವನ ನಡೆಸಿದ. ಡೇಕಾರ್ಟ್‌ನ ತತ್ತ್ವದಿಂದ ಆಕರ್ಷಿತನಾಗಿ ಅವನ ತತ್ತ್ವವನ್ನು ಕುರಿತು ಒಂದು ಗ್ರಂಥ ಬರೆದ. ಗ್ರೀಸಿನ ಪ್ಲೋಟೈನಸ್, ಅರೇಬಿಯದ ಅವೆರೋಸ್, ಯಹೂದ್ಯ ಮೈಮನೋಡೀಸ್, ಇಟಲಿಯ ಗಯೋರ್ಡಿನೊ, ಬ್ರೂನೊ ಮುಂತಾದ ತಾತ್ತ್ವಿಕರಿಂದ ಪ್ರಚೋದನೆ ಪಡೆದ. ಇವರೆಲ್ಲರ ತತ್ತ್ವದೃಷ್ಟಿಯಿಂದ ಡೇಕಾರ್ಟ್‌ನ ತತ್ತ್ವವನ್ನು ಪರೀಕ್ಷಿಸಿ ಅದರಲ್ಲಿದ್ದ ಕೆಲವು ಅಸಂಗತ ಅಂಶಗಳನ್ನು ಬಿಟ್ಟು ಅದನ್ನು ಮಾರ್ಪಡಿಸಿದ. ಅವನಿಗೆ ತತ್ತ್ವ ವಿಚಾರ ಒಂದು ಗಣಿತ ಸಮಸ್ಯೆಯನ್ನು ಪರಿಹರಿಸುವ ಬೌದ್ಧಿಕ ಕ್ರೀಡೆಯಾಗಿರಲಿಲ್ಲ. ಪರಮಸುಖವನ್ನು ಪಡೆಯುವುದೇ ಅವನ ತತ್ತ್ವಚಿಂತನೆಯ ಉದ್ದೇಶ. ಮನಸ್ಸು ಪ್ರಕೃತಿಯಲ್ಲಿ ಲೀನವಾದಾಗ ಹುಟ್ಟಿದ ಜ್ಞಾನವೇ ಪರಮಶ್ರೇಯಸ್ಸಿಗೆ ದಾರಿ. ಪ್ರಕೃತಿಯ ಮರ್ಮಗಳು ಹೆಚ್ಚು ಹೆಚ್ಚಾಗಿ ಮನನಗೊಂಡಾಗ ನಿರುಪಯೋಗಿ ವ್ಯಸನಗಳಿಂದ ಮನಸ್ಸನ್ನು ಬಿಡುಗಡೆಮಾಡಲು ಸಾಧ್ಯವಾಗುತ್ತದೆ. ಇದೇ ತತ್ತ್ವದ ಪೂರ್ಣವಿಧಾನ.

**1. ಬುದ್ಧ್ಯಾರೂಢವಾದ:** ಸ್ಪಿನೋಜ ಡೇಕಾರ್ಟ್‌ನಂತೆ ಬುದ್ಧ್ಯಾರೂಢವಾದಿಯಾದರೂ ಭಾವನೆಗಳು ಅನುಭವ ಹುಟ್ಟುವುದಕ್ಕೆ ಮುಂಚೆ ಬುದ್ಧಿಯಲ್ಲಿ ಅಂತರ್ಗತವಾಗಿರುತ್ತವೆಂದು ಹೇಳಲಿಲ್ಲ. ಆದರೂ ಸ್ಪಷ್ಟ ಮತ್ತು ನಿರ್ದಿಷ್ಟವಾಗಿರುವ ಭಾವನೆಗಳೇ ಪ್ರಾಮಾಣಿಕ ಭಾವನೆಗಳೆಂದು ಡೇಕಾರ್ಟ್‌ನ ಅಭಿಪ್ರಾಯವನ್ನು ಒಪ್ಪಿಕೊಂಡ. ಅವನಂತೆಯೇ ಗಣಿತವಿಧಾನವೇ ತತ್ತ್ವ ಅವಲಂಬಿಸಬೇಕಾದ ವಿಧಾನವೆಂದು ಒಪ್ಪಿದ್ದಲ್ಲದೆ ಎಥಿಕ್ಸ್ ಎಂಬ ತನ್ನ ಮುಖ್ಯಗ್ರಂಥವನ್ನು ಯೂಕ್ಲಿಡ್ ರೇಖಾಗಣಿತವನ್ನು ಬರೆದ ರೀತಿಯಲ್ಲಿ ಬರೆದ. ಡೇಕಾರ್ಟ್ ಜ್ಞಾನವನ್ನು ಇಂದ್ರಿಯಜ್ಞಾನ, ಬೌದ್ಧಿಕಜ್ಞಾನ ಎಂದು ಎರಡಾಗಿ ಮಾತ್ರ ವಿಭಾಗಿಸಿರುತ್ತಾನೆ. ಸ್ಪಿನೋಜ ಇವುಗಳಿಗಿಂತ ಭಿನ್ನವಾದ ಪ್ರತಿಭಾಜ್ಞಾನವನ್ನು ಮೂರನೆಯ ವಿಧವಾದ ಜ್ಞಾನವಾಗಿ

ಸೇರಿಸುತ್ತಾನೆ. ಈ ಪ್ರತಿಭಾಜ್ಞಾನ ಬೌದ್ಧಿಕಜ್ಞಾನಕ್ಕಿಂತ ಉತ್ಕೃಷ್ಟವಾದದ್ದು. ಬೌದ್ಧಿಕ ಭಾವನೆಗಳು ಬಿಡಿ ಬಿಡಿಯಾದ ಭಾವನೆಗಳು. ಇವುಗಳು ನಮಗೆ ಎಲ್ಲವನ್ನೂ ಒಳಗೊಂಡ ಪರಿಪೂರ್ಣ ವಸ್ತುವಿನ ಜ್ಞಾನವನ್ನು ಕೊಡುವುದಿಲ್ಲ. ಪ್ರತಿಭಾಜ್ಞಾನವಾದರೋ ಪರಮ ವಸ್ತುವಿನ ಎಲ್ಲವನ್ನೂ ಒಳಗೊಂಡ ಪರಿಪೂರ್ಣ ಅಪರೋಕ್ಷ (ಇಮೀಡಿಯಟ್) ಜ್ಞಾನವನ್ನು ಕೊಡುತ್ತದೆ. ಅದೇ ಪರಮಜ್ಞಾನ. ಪರಮ ಉತ್ಕೃಷ್ಟವಾದ ಜ್ಞಾನವೆಂದು ಪ್ಲೋಟೈನಸ್‌ನಂತೆ ಸ್ಪಿನೋಜನು ಅದನ್ನು ವರ್ಣಿಸಿರುತ್ತಾನೆ. ಈ ವಿಚಾರದಲ್ಲಿ ಅವನ ಜ್ಞಾನತತ್ತ್ವ ಡೇಕಾರ್ಟ್‌ನದಕ್ಕಿಂತ ಭಿನ್ನ. ಪ್ರತಿಭಾಜ್ಞಾನ ಬೌದ್ಧಿಕ ಜ್ಞಾನಕ್ಕೆ, ವಿಜ್ಞಾನಕ್ಕೆ, ವಿರುದ್ಧವಲ್ಲ. ಅದರ ಲೋಪವನ್ನು ಪರಿಹರಿಸುತ್ತದೆ ಎಂಬುದು ಸ್ಪಿನೋಜನ ಅಭಿಮತ. ಈ ರೀತಿಯಾಗಿ ಸ್ಪಿನೋಜ ಬುದ್ಧ್ಯಾರೂಢವಾದವನ್ನು ಮಾರ್ಪಡಿಸಿದ್ದಾನೆ. ಈ ಭಾವನೆ ಅವನಿಂದಾಚೆ ಬಂದ ಕ್ಯಾಂಟ್ ಮತ್ತು ಹೆಗೆಲ್ ಮುಂತಾದವರ ತತ್ತ್ವದಲ್ಲಿ ಪುನರುಕ್ತವಾಗಿದೆ.

**2. ಮೂಲದ್ರವ್ಯ:** ಡೇಕಾರ್ಟ್ ದ್ರವ್ಯವನ್ನು ಈ ರೀತಿಯಾಗಿ ನಿರೂಪಿಸಿರುತ್ತಾನೆ: ಬೇರೆ ಯಾವುದರ ಆಶ್ರಯವಿಲ್ಲದೆ ಯಾವುದು ಇರಬಲ್ಲದೋ ಅದು ದ್ರವ್ಯ. ದ್ರವ್ಯಕ್ಕೆ ಡೇಕಾರ್ಟ್ ಸಮ್ಮತವಾಗಿ ತೀರ್ಮಾನ ಮಾಡಿದ. ಅಂಥ ದ್ರವ್ಯ ತನಗೆ ತಾನೇ ಕಾರಣವಾಗಬಹುದೆಂಬುದೇ ಹೊರತು (ಕಾಸಾ ಸುಯಿ) ಬೇರೆ ಯಾವುದೂ ಅದಕ್ಕೆ ಆಶ್ರಯವಾಗಿರಲಾರದು. ಅದು ಸ್ವಾವಲಂಬನ ದ್ರವ್ಯ. ತ್ರಿಕೋಣದ ಸ್ವಭಾವದಿಂದ ಅದರ ಎಲ್ಲ ಲಕ್ಷಣಗಳೂ ಗಮ್ಯವಾದಂತೆ, ಈ ಸ್ವಾವಲಂಬನ ದ್ರವ್ಯದ ಗುಣಗಳೆಲ್ಲ ಅದರ ಸ್ವಭಾವದಿಂದಲೇ ಗಮ್ಯ. ಅದಕ್ಕೆ ಯಾವ ಬಗೆಯ ಪುರುಷ ಲಕ್ಷಣವನ್ನೂ ಆರೋಪಿಸಲಾಗದು. ಏಕೆಂದರೆ ಪುರುಷಲಕ್ಷಣಗಳನ್ನು ಆರೋಪಿಸುವುದರಿಂದ ಅದರ ಪರಮ (ಆ್ಯಬ್ಸೊಲ್ಯುಟ್) ಸ್ವಭಾವವನ್ನು ಕುಂಠಿತಗೊಳಿಸಿದಂತಾಗುತ್ತದೆ. (ಆಲ್ ಡಿಟರ್ಮಿನೇಷನ್ ಈಸ್ ನೆಗೇಷನ್) ಮನುಷ್ಯನಿಗಿರುವಂತೆ ಬುದ್ಧಿಯನ್ನಾಗಲಿ ಇಚ್ಛೆಯನ್ನಾಗಲಿ ಆರೋಪಿಸಿದರೆ ಅದರ ಅನಂತತ್ತ್ವಕ್ಕೆ ಚ್ಯುತಿಯುಂಟಾಗುತ್ತದೆ. ದೈವ ಮಾಡುವುದೆಲ್ಲ ಮಾನವ ಧರ್ಮವನ್ನು ಎತ್ತಿಹಿಡಿಯುವುದಕ್ಕಾಗಿ ಎಂದು ಅನೇಕರು ಹೇಳಿರುತ್ತಾರೆ. ಹೀಗೆ ಹೇಳಿದಾಗ ಅವರು ದೈವ ತನಗಿಂತ ಭಿನ್ನವಾದ ಮತ್ತು ಸ್ವತಂತ್ರವಾದ ಯಾವುದೇ ಒಂದು ಮಾದರಿಗನುಸಾರವಾಗಿ ವರ್ತಿಸುವುದೆಂದೂ ಹೇಳಿದಂತಾಗುತ್ತದೆ. ಹೀಗೆ ಭಾವಿಸಿದಾಗ ಅದನ್ನು ವಿಧಿಗೆ ಒಳಪಡಿಸಿದಂತಾಗುತ್ತದೆ. ಎಲ್ಲದರ ತಿರುಳಾದದ್ದನ್ನು ಎಲ್ಲದರ ಸ್ವತಂತ್ರ ಮತ್ತು ಪ್ರಥಮ ಕಾರಣವಾದ ದೈವವನ್ನು ದುರ್ಬಲಗೊಳಿಸುವುದು ತಿಳಿಗೇಡಿತನ.

ದೈವ ವಿಶ್ವದಿಂದ ಬೇರೆಯಾಗಿ ಬಹುದೂರದಲ್ಲಿದ್ದುಕೊಂಡು ಎಲ್ಲವನ್ನೂ ಉಂಟುಮಾಡುವುದಿಲ್ಲ. ಸ್ಪಿನೋಜನ ಅಭಿಪ್ರಾಯ ಹೀಗಿದೆ: ದೈವ ಸೃಷ್ಟಿಕರ್ತನಲ್ಲ. ಅದು ಪ್ರಕೃತಿಯಲ್ಲಿ ವ್ಯಾಪಕವಾಗಿರುತ್ತದೆ. (ಇಮೆನ್ಸ್). ಪ್ರಕೃತಿ ದೈವದಲ್ಲಿ ಐಕ್ಯವಾಗಿರುತ್ತದೆ (ಪ್ಯಾಂಥೀಯಿಸಂ). ಕಾರ್ಯವಾದ ಪ್ರಕೃತಿ ಕಾರಣವಾದ ದೈವದ ಒಳಗಿನಿಂದಲೇ ಬಂದದ್ದು. ವಿಶ್ವದಲ್ಲಿ ಎಲ್ಲದರ ತಿರುಳಾದದ್ದು, ಅಂತರ್ಯಾಮಿಯಾದದ್ದು. ಕಾರಣರೂಪನಾದ ದೈವವನ್ನು ನ್ಯಾಟುರ ನ್ಯಟುರಾನ್ಸ್ ಎಂದೂ ಕಾರ್ಯರೂಪದ ದೈವವನ್ನು ನ್ಯಾಟುರ ನ್ಯಟುರಾಟ ಎಂದೂ ಆತ ಕರೆದಿದ್ದಾನೆ.

**3. ದೈವದ ಗುಣಗಳು:** ದೈವದ ಗುಣಗಳು ಅಗಣಿತ. ಆದರೆ ಮಾನವ ಗುರುತಿಸಬಲ್ಲ ಗುಣಗಳು ಎರಡೇ. ಅವು ಯೋಚನೆ ಮತ್ತು ವಿಸ್ತಾರ. ಈ ಎರಡು ಗುಣಗಳು ಮಾನವ ದೈವಕ್ಕೆ ಆರೋಪಿಸಿದ ಗುಣಗಳೆಂದು ಹೆಗೆಲ್‌ನ ಅಭಿಪ್ರಾಯ. ಅವು ದೈವದ ನಿಜವಾದ ಅಭಿವ್ಯಕ್ತ ಗುಣಗಳೆಂದು ಫಿಷರ್‌ನ ಅಭಿಪ್ರಾಯ. ಇಲ್ಲಿ ನಾವು ಒಂದು ನಿರ್ಣಯಕ್ಕೆ ಬರಬೇಕಾದರೆ ಯೋಚನೆ ಎಂಬ ಪದಕ್ಕೆ ಸ್ಪಿನೋಜ ಕೊಟ್ಟ ಅರ್ಥವೇನು ಎಂಬುದನ್ನು ನಿರ್ಧರಿಸಿಕೊಳ್ಳಬೇಕು. ಯೋಚನೆ ಎಂದರೆ ಮಾನವನ ಯೋಚನೆ ಎಂದು ಅರ್ಥಮಾಡಿಕೊಂಡರೆ ಸ್ಪಿನೋಜನನ್ನು ಭಾವವಾದಿ (ಐಡಿಯಲಿಸ್ಟ್) ಎಂದು ಎಣಿಸಬೇಕಾಗುತ್ತದೆ. ನಾವು ತಿಳಿಯುವುದರಿಂದ ದೈವ ಚೇತನವಾಗುವುದಿಲ್ಲ. ದೈವದಲ್ಲಿ ಬುದ್ಧಿವಂತಿಕೆ ಹುಟ್ಟುವುದಿಲ್ಲ. ದೈವ ಚೇತನಸ್ವರೂಪವಾದದ್ದರಿಂದ ಅದರ ರೂಪಾಂತರಗಳಾದ ನಾವು ಬುದ್ಧಿವಂತರಾಗಿರುತ್ತೇವೆ. ದೈವದ ರಚನೆಯೂ ಪ್ರಕೃತಿಯ ರಚನೆಯೂ ಚೇತನಮಯವಾದ್ದರಿಂದ ಆ ಚೇತನದ ಅಂಶ ನಮ್ಮಲ್ಲಿರುವುದರಿಂದ ನಮಗೆ ಪ್ರಕೃತಿಯನ್ನು ತಿಳಿಯಲು ಸಾಧ್ಯವಾಗುವುದು. ಹೀಗೆ ಅರ್ಥಮಾಡಿಕೊಂಡರೆ ಅವನ ತತ್ತ್ವ ಪ್ಲೇಟೋನ ತತ್ತ್ವದಂತೆ ಒಂದು ಬಗೆಯಾದ ವಸ್ತುವಾಗುತ್ತದೆ. ಮಾನವನಿಗೆ ಪ್ರಕೃತಿ ವಾಸ್ತವವಸ್ತು, ಪ್ರಕೃತಿಯಲ್ಲಿರುವುವೆಲ್ಲ ವಾಸ್ತವವಸ್ತುಗಳು. ಅವು ಮಾನವನ ವೈಯಕ್ತಿಕ ಭಾವನೆಗಳಲ್ಲವೆಂಬುದೇ ಸ್ಪಿನೋಜನ ಸಿದ್ಧಾಂತವಾಗುತ್ತದೆ. ಈ ಸಿದ್ಧಾಂತವೇ ಅವನ ತತ್ತ್ವಕ್ಕೆ ಹೆಚ್ಚು ಸಂಗತವಾದದ್ದು. ಈ ಸಿದ್ಧಾಂತ ಡೇಕಾರ್ಟ್‌ನ ಬುದ್ಧ್ಯಾರೂಢವಾದಕ್ಕಿಂತ ಭಿನ್ನ. ಬಹುಶಃ ಅದು ಮಾರ್ಪಾಟಾದ ಬುದ್ಧ್ಯಾರೂಢವಾದ. ಅದು ಡೇಕಾರ್ಟ್‌ನ ಬುದ್ಧ್ಯಾರೂಢವಾದಕ್ಕಿಂತ ಹೆಚ್ಚು ಸಮರ್ಪಕವಾದದ್ದು.

ದೈವದ ಇನ್ನೊಂದು ಸ್ವರೂಪ ವಿಸ್ತರಣೆ. ಇದು ಡೇಕಾರ್ಟ್‌ನ ವಿಸ್ತರಣೆಯಂತೆ ಭೌತವಸ್ತುವಿನ ಗುಣವಲ್ಲ. ದೈವದ ಸ್ವರೂಪ ಗುಣಗಳು ಬುದ್ಧಿ ಮತ್ತು ವಿಸ್ತರಣೆ. ಇವೆರಡೂ ಒಂದನ್ನೊಂದು ಬಿಡದೆ ಸೇರಿಕೊಂಡ ಗುಣಗಳು. ವಿಸ್ತರಣೆ ಇದ್ದಕಡೆ ಬುದ್ಧಿ ಇದೆ. ಬುದ್ಧಿ ಇದ್ದ ಕಡೆ ವಿಸ್ತರಣೆಯೂ ಇದೆ. ಹೀಗೆ ಹೇಳಿದಾಗ ಕಲ್ಲಿನಲ್ಲೂ ಬುದ್ಧಿ ಇದೆ. ಮಾನವನ ಬುದ್ಧಿ ವಿಸ್ತರಣೆಯುಳ್ಳದ್ದು ಎಂದು ಹೇಳಬೇಕಾಗುತ್ತದೆ. ಹೀಗೆ ಬುದ್ಧಿ ಇದ್ದ ಕಡೆ ವಿಸ್ತರಣೆ ಅಥವಾ ಆಕಾಶ ಇದೆ. ಆಕಾಶವಿದ್ದೆಡೆಯಲ್ಲಿ ಬುದ್ಧಿ ಇದೆ ಎಂದು ಹೇಳಿದಮಾತ್ರಕ್ಕೆ ಬುದ್ಧಿಯೂ ಮಾನವನ ಶರೀರವೂ ಒಂದೇ ಎಂದು ಭಾವಿಸಕೂಡದು. ಈ ಒಂದೊಂದನ್ನೂ ಬೇರೆ ಬೇರೆಯಾಗಿ ಗುರುತಿಸಬಹುದು. ಚೇತನಕ್ಕೆ ಚಲನೆ ಇಲ್ಲ, ಚಲನೆ ಇರುವ ದೇಹಕ್ಕೆ ಬುದ್ಧಿ ಇಲ್ಲ. ಚೇತನ ಚಲನೆಯನ್ನು ಹುಟ್ಟಿಸಲಾರದು, ಚಲನೆ ಚೇತನವನ್ನು ಹುಟ್ಟಿಸಲಾರದು. ಒಂದು ಇನ್ನೊಂದಕ್ಕೆ ಕಾರಣವಾಗಲಾರದು. ಬೌದ್ಧಿಕವಾದುದಕ್ಕೆ ಬೌದ್ಧಿಕವಾದುದು ಮಾತ್ರ ಕಾರಣವಾಗಬಲ್ಲುದು. ಎರಡು ವಸ್ತುಗಳಲ್ಲಿ ಎರಡಕ್ಕೂ ಸಮಾನವಾದುದು ಇಲ್ಲವಾದರೆ ಒಂದು ಇನ್ನೊಂದಕ್ಕೆ ಕಾರಣವಾಗಲಾರದು. ಬುದ್ಧಿಯ ವೃತ್ತಿಗಳನ್ನು ಭೌತವಾದಿಗಳು ಹೇಳುವಂತೆ ಭೌತವಸ್ತುವಿಗೆ ಸಹಜವಾದ ನಿಯಮಗಳಿಗೆ ಒಳಪಡಿಸಲಾಗುವುದಿಲ್ಲ. ಮಾನವನ ಬುದ್ಧಿಯೂ ದೇಹವೂ ಎರಡೂ ಒಂದೇ ಕಾರಣದ (ದೈವದ) ಕಾರ್ಯಗಳು. ಎರಡೂ ಆ ಮೂಲಕಾರಣಗಳಿಂದ ಗಮ್ಯ. ಕಾರಣರೂಪದಲ್ಲಿ ಒಂದೇ ಆದ ದೈವದ ಸ್ವರೂಪವನ್ನು ಒಂದು ನಿಟ್ಟಿನಿಂದ ನೋಡಿದಾಗ ಅದು ಆಕಾಶವಾಗಿ ಗೋಚರವಾಗುತ್ತದೆ. ಇನ್ನೊಂದು ನಿಟ್ಟಿನಿಂದ ಅಂದರೆ ಬೌದ್ಧಿಕವಾಗಿ ನೋಡಿದಾಗ ಅದು ಬುದ್ಧಿಯಾಗಿ ಗೋಚರವಾಗುತ್ತದೆ. ಇವು ಒಂದೇ ಆದ ಮೂಲವಸ್ತುವಿನ ಎರಡು ಮುಖಗಳು. ಸಮಾನಾಂತರ ಗುಣಗಳು.


ಜಾನ್ ಲಾಕ್

**4. ಪರ್ಯಾಯಗಳು (ಮೋಡ್ಸ್) :** ಮೂಲಗುಣಗಳ ಪರಿಣಾಮಗಳೇ ಪರ್ಯಾಯಗಳು. ಪರ್ಯಾಯಗಳು ಪರಾಶ್ರಯವಾದಂತಹವು. ಭೌತವಸ್ತುಗಳೆಲ್ಲ ಆಕಾಶದ ಪರಿಣಾಮಗಳು. ಆಕಾಶದ ಆಶ್ರಯವಿಲ್ಲದೆ ಚಲಿಸುವ ಯಾವ ಭೌತರೂಪವೂ ಇರಲಾರದು. ಬುದ್ಧಿಯನ್ನು ಆಶ್ರಯಿಸದೆ ಬುದ್ಧಿರೂಪವಾದ ಭಾವನೆಗಳೂ ಇರಲಾರವು. ಕೇವಲ ಖಾಲಿಯಾದ ಆಕಾಶವಾಗಲಿ, ಕೇವಲ ಖಾಲಿಯಾದ ಬುದ್ಧಿಯಾಗಲಿ ಎಲ್ಲಿಯೂ ಇಲ್ಲ. ಇರುವುವೆಲ್ಲವೂ ಪೃಥಕ್ಕಾದ ಭೌತವಸ್ತುಗಳು, ಪೃಥಕ್ಕಾದ ಬುದ್ಧಿಗಳು. ಆದರೂ ಪೃಥಕ್ಕಾದ ಭೌತವಸ್ತುಗಳನ್ನು ಅವೆಲ್ಲಕ್ಕೂ ಸಾಮಾನ್ಯವಾದ ಆಕಾಶವನ್ನು ಬಿಟ್ಟು ಭಾವಿಸಲಾಗುವುದಿಲ್ಲ . ಹಾಗೆಯೇ ಪೃಥಕ್ಕಾದ ಬುದ್ಧಿವೃತ್ತಿಗಳನ್ನು ಅವೆಲ್ಲಕ್ಕೂ ಸಾಮಾನ್ಯವಾದ ಬುದ್ಧಿಯನ್ನು ಬಿಟ್ಟು ಭಾವಿಸಲಾಗುವುದಿಲ್ಲ.

ಬುದ್ಧಿಯ ಪರ್ಯಾಯಗಳಾದ ಜೀವಿಗಳು, ಆಕಾಶದ ಪರ್ಯಾಯಗಳಾದ ಭೌತವಸ್ತುಗಳು ಪರಿಮಿತವಾದುವು (ಫೈನೈಟ್), ಕಾಲದೇಶಪರಿಮಿತಿಗಳಿಗೆ ಒಳಗಾದುವು. ಅನಂತಭಾವನೆಗಳ ವ್ಯವಸ್ಥೆ, ಅನಂತಬುದ್ಧಿ, ಅನಂತಭೌತರೂಪಗಳ ವ್ಯವಸ್ಥೆ, ಅನಂತ ಆಕಾಶ, ದೈವದ ಅನಂತಬುದ್ಧಿಯ ವ್ಯವಸ್ಥೆ, ದೈವದ ಅನಂತ ವಿಸ್ತಾರದ ವ್ಯವಸ್ಥೆಗಳು ಸೇರಿ ವಿಶ್ವವಾಗಿದೆ. ಪ್ರಧಾನಗುಣಗಳು ಬದಲಾಯಿಸುವುದಿಲ್ಲ. ಬದಲಾವಣೆ ಹೊಂದುವುವು ಪೃಥಕ್ಕಾದ ಪರ್ಯಾಯಗಳು ಮಾತ್ರವೇ.

ಮೂಲವಾದ ಬುದ್ಧಿಯ ಆಶ್ರಯವಿಲ್ಲದೆ ಯಾವ ಮಾನಸಿಕ ಭಾವನೆಯೂ ಮೂಲವಾದ ಆಕಾಶದ ಆಶ್ರಯವಿಲ್ಲದೆ ಯಾವ ಭೌತರೂಪವೂ ಇರಲಾರವಾದರೂ ಒಂದು ಪ್ರತಿಜ್ಞೆಯಿಂದ ಇನ್ನೊಂದು ಪ್ರತಿಜ್ಞೆಯನ್ನು ನಿಗಮನ ಅನುಮಾನದ ಮೂಲಕ ಪಡೆಯುವಂತೆ ಪಡೆಯಲಾಗುವುದಿಲ್ಲ. ಹಾಗೆಯೇ ಆಕಾಶದಿಂದ ಪೃಥಕ್ಕಾದ ಮಿತಿಯುಳ್ಳ ಯಾವ ಒಂದು ಭೌತರೂಪವನ್ನೂ ಪಡೆಯಲಾಗುವುದಿಲ್ಲ. ಪೃಥಕ್ಕಾದ ಒಂದೊಂದರ ಪರಸ್ಪರ ಸಂಬಂಧಗಳಲ್ಲಿ ಒಂದೊಂದನ್ನೂ ಅನುಭವದಿಂದಲೇ ವಿಜ್ಞಾನಿಗಳು ತಿಳಿಯುವಂತೆ ತಿಳಿಯಬೇಕು. ಆದರೆ ಅವೆಲ್ಲಕ್ಕೂ ಪರಸ್ಪರ ಸಂಬಂಧವಿದೆ. ಅವೆಲ್ಲ ಒಂದೇ ಆದ ದೈವದ ವ್ಯವಸ್ಥೆಯಲ್ಲಿ ಸೇರಿವೆ–ಎಂಬ ಭಾವನೆ ಮಾತ್ರ ಸ್ವತಃಸಿದ್ಧವಾದದ್ದು. ಅದು ಎಲ್ಲ ಬಗೆಯ ವಿಜ್ಞಾನಕ್ಕೂ ಆಧಾರಭಾವನೆ. ಅದನ್ನು ಪೃಥಕ್ಕಾದ ವೈಜ್ಞಾನಿಕ ಭಾವನೆಗಳಿಂದ ಪಡೆಯಲಾಗುವುದಿಲ್ಲ. ವೈಜ್ಞಾನಿಕ ಭಾವನೆಗಳು ಈ ತಿಳಿವನ್ನು ಹುಟ್ಟಿಸಲು ಯೋಗ್ಯವಾದ ಭಾವನೆಗಳಲ್ಲ. ಅವು ಕಾಲ ದೇಶಕ್ಕೆ ಒಳಪಡದೆ ವಿಷಯಗಳಿಗೆ ಮಾತ್ರ ಅನ್ವಯಿಸಲು ಯೋಗ್ಯವಾದವು. ವಿಶ್ವದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಸರ್ವಕಾಲದಲ್ಲೂ ದೈವಕ್ಕೆ ನಿಕಟವಾಗಿ ಸೇರಿಕೊಂಡಿರುವುದರಿಂದ

ಸಾಕ್ಷಾತ್ತಾಗಿ ಅಂತರಂಗದಲ್ಲಿ ಅದನ್ನು ದರ್ಶಿಸಬಹುದು. ಈ ಭಾವನೆಗೆ ನೇರವಾಗಿ ದೈವಭಾವನೆ ಕಾರಣವೇ ಹೊರತು ಪೃಥಕ್ಕಾದ ಜೀವರುಗಳ, ಪೃಥಕ್ಕಾದ ವಿಷಯಗಳ ಸಂಬಂಧವನ್ನು ಮಾತ್ರ ತಿಳಿಸಬಲ್ಲುದಾದ ವಿಜ್ಞಾನ ಕಾರಣವಾಗಲಾರದು. ಈ ದೈವಭಾವನೆಯೊಂದೇ ಅಂಥ ಯೋಗ್ಯತೆಯುಳ್ಳದ್ದು. ಭಾವನೆಯ ಅರಿವನ್ನು ಅಪರೋಕ್ಷ ವಿಜ್ಞಾನ (ಸೈಂಟಿಯ ಇಂಟ್ಯೂಯಿಟಿವ) ಎಂದು ಸ್ಪಿನೋಜ಼ ಕರೆದಿದ್ದಾನೆ.

ಸ್ಪಿನೋಜ಼ ತತ್ತ್ವಜ್ಞಾನದ ಮತ್ತು ವಿಜ್ಞಾನದ ಮಿತಿಗಳನ್ನು ಸ್ಪಷ್ಟವಾಗಿ ತಿಳಿಸಿರುತ್ತಾನೆ. ತತ್ತ್ವಜ್ಞಾನ ತಿಳಿಸಬಲ್ಲದ್ದನ್ನು ವಿಜ್ಞಾನ ತಿಳಿಸಲಾರದು. ಅದಕ್ಕೆ ಆ ಯೋಗ್ಯತೆ ಇಲ್ಲ. ಹಾಗೆಯೇ ತತ್ತ್ವಜ್ಞಾನಕ್ಕೂ ಪೃಥಕ್ಕಾದ ಪರಿಮಿತರೂಪಗಳ ಪರಸ್ಪರ ಸಂಬಂಧವನ್ನು ತಿಳಿಸುವ ಶಕ್ತಿ ಇಲ್ಲ. ಅವೆರಡೂ ಬುದ್ಧಿಯ ಬೇರೆ ಬೇರೆ ರೂಪಗಳು. ಒಂದು ತೋರಿಸಲಾಗದ್ದನ್ನು ಇನ್ನೊಂದು ತೋರಿಸಿ ಒಂದಕ್ಕೊಂದು ಪೂರಕವಾಗಿವೆ. ಸ್ಪಿನೋಜ಼ ವಿಜ್ಞಾನದ ದ್ವೇಷಿಯೆಂದು ಯಾರೂ ಹೇಳಲಾರರು. ಆದರೆ ಕ್ರೈಸ್ತಮತ ಒಂದೇ ಮತಭಾವನೆಗೆ ಆದರ್ಶಪ್ರಾಯವಾದದ್ದು ಎಂದು ತಿಳಿದುಕೊಂಡಿರುವ ಪಾಶ್ಚಾತ್ಯತಾತ್ತ್ವಿಕರು ಆತ ಮತವಿರೋಧಿಯೆಂದು ಭಾವಿಸುತ್ತಾರೆ.

ಪಾಶ್ಚಾತ್ಯ ತತ್ತ್ವಶಾಸ್ತ್ರಚರಿತ್ರೆಯಲ್ಲಿ ಸ್ಪಿನೋಜ಼ನ ತತ್ತ್ವವನ್ನು ಬುದ್ಧ್ಯಾರೂಢವಾದದ ಗುಂಪಿಗಾಗಲಿ ಅನುಭವಾರೂಢವಾದದ ಗುಂಪಿಗಾಗಲಿ ಸೇರಿಸಲಾಗುವುದಿಲ್ಲ. ಕೊನೆಗೆ ಹೆಗೆಲ್ಸನ ಪರಮಭಾವವಾದದ (ಆಬ್ಸಲೂಟ್ ಐಡಿಯಲಿಸಂ) ಗುಂಪಿಗೂ ಸೇರಿಸಲಾಗುವುದಿಲ್ಲ. ಅದನ್ನು ವಿಶಿಷ್ಟ ತತ್ತ್ವವನ್ನಾಗಿ ಭಾವಿಸಬೇಕು. ಏಕೆಂದರೆ ಸ್ಪಿನೋಜ಼ನಂತೆ ಹೆಗೆಲ್ ಭೌತಗುಣಕ್ಕೆ ಸಮನಾದ ಸ್ಥಾನವನ್ನು ಕೊಟ್ಟಿರುವುದಿಲ್ಲ. ಸ್ಪಿನೋಜ಼ನ ತತ್ತ್ವದ ಈ ಅಂಶವನ್ನು ಇಂದಿನ ರಷ್ಯದ ತಾತ್ತ್ವಿಕರು ಚೆನ್ನಾಗಿ ಗಮನಿಸಿ ಮೆಚ್ಚಿಕೊಂಡಿದ್ದಾರೆ.

**ಗಾಟ್‌ಫ್ರಿಡ್ ವಿಲ್ಹೆಲ್ಮ್ ಲೈಬ್ನಿಟ್ಸ್** : 1646–1716. ಜರ್ಮನಿಯಲ್ಲಿ ಹುಟ್ಟಿದ ತಾತ್ತ್ವಿಕ. ಈತನನ್ನು ಬುದ್ಧ್ಯಾರೂಢವಾದಿಗಳ ಗುಂಪಿಗೆ ಸೇರಿಸುವುದು ವಾಡಿಕೆಯಾಗಿದೆ. ಈತ ಡೇಕಾರ್ಟ್ ಮತ್ತು ಸ್ಪಿನೋಜ಼ರಂತೆ ಗಣಿತ ವಿಧಾನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುತ್ತಾನೆ. ಡೇಕಾರ್ಟ್‌ನಂತೆ ಈತನೂ ಪ್ರತಿಭಾಶಾಲಿಯಾದ ಗಣಿತಶಾಸ್ತ್ರಜ್ಞ. ಆ ಶಾಸ್ತ್ರದಲ್ಲಿ ತುಂಬ ಪರಿಣಾಮಕಾರಿಯಾದ ಸಂಶೋಧನೆ ನಡೆಸಿ ಇನ್‌ಫಿನಿಟೆಸಿಮಲ್ ಕ್ಯಾಲ್ಕುಲಸ್ ಎಂಬ ಗಣಿತಶಾಸ್ತ್ರ ಸೂತ್ರವನ್ನು ಕಂಡುಹಿಡಿದು ಆ ಶಾಸ್ತ್ರದ ಮುನ್ನಡೆಗೆ ಕಾರಣನಾಗಿರುತ್ತಾನೆ. ಡೇಕಾರ್ಟ್ ಮತ್ತು ಸ್ಪಿನೋಜ಼ರಂತೆ ಭೌತಪ್ರಪಂಚದ ವಸ್ತುಗಳ ಚಲನೆಯನ್ನು ಯಾಂತ್ರಿಕವಾಗಿ ನಿಮಿತ್ತ ಕಾರಣದ ಮೂಲಕ ವಿವರಿಸುವುದೇ ಸಾಧುವೆಂದು ಒಪ್ಪಿಕೊಂಡಿರುತ್ತಾನೆ. ಆದರೆ ಅಂತಿಮಕಾರಣ ಅಸಾಧುವೆಂಬ ಸ್ಪಿನೋಜ಼ನ ವಾದವನ್ನು ಲೈಬ್ನಿಟ್ಸ್ ಒಪ್ಪಲಿಲ್ಲ. ಅಂತಿಮ ಕಾರಣದ ಆಧಾರದ ಮೇಲೆ ವಿಶ್ವವನ್ನು ವಿವರಿಸುವುದು ಅಗತ್ಯವೆಂದು ಇವನ ಅಭಿಮತ. ಈ ಎರಡು ವಿಧವಾದ ವಿವರಣೆಗಳೂ ಅಗತ್ಯ. ಎರಡನ್ನೂ ಹೇಗೆ ಸಂಗತಗೊಳಿಸಬಹುದು ಎಂಬ ಸಮಸ್ಯೆಯನ್ನು ಬಗೆಹರಿಸಲು ಈತ ಪ್ರಯತ್ನಪಟ್ಟಿರುತ್ತಾನೆ. ಪ್ರಧಾನಗುಣ ಭೌತವಸ್ತುಗಳಿಗೆ ವಿಸ್ತರಣೆ ಎಂದು ಡೇಕಾರ್ಟ್ ಮತ್ತು ಸ್ಪಿನೋಜ಼ರಿಬ್ಬರೂ ಕೊಟ್ಟ ವಿವರಣೆ ಲೈಬ್ನಿಟ್ಸ್‌ಗೆ ಒಪ್ಪಿಗೆಯಾಗಲಿಲ್ಲ. ವಿಸ್ತರಣೆ ಕೇವಲ ತ್ರಾಣವಿಲ್ಲದ್ದು, ಭೌತವಸ್ತುವಾದರೋ ತ್ರಾಣವುಳ್ಳದ್ದು; ಕ್ರಿಯಾಕಾರಿಯಾದ ಭೌತಶಕ್ತಿಯೇ ವಿಸ್ತರಣೆಗೆ ಮೂಲವಾದದ್ದು. ಕ್ರಿಯೆ ಇಲ್ಲದ್ದು ವಿಸ್ತರಿಸಲಾರದು. ಪ್ರತಿಯೊಂದು ವಸ್ತುವೂ ಒಂದು ಕ್ರಿಯಾಕೇಂದ್ರ. ಆ ಕ್ರಿಯಾಕೇಂದ್ರ ರೇಖಾಗಣಿತದ ಬಿಂದುವಿನಂತೆ ಸ್ಥಾಯಿಯಾದುದಲ್ಲ. ಪರಿಣಾಮ ಹೊಂದುವಂಥದು. ಆ ಕೇಂದ್ರ ಎಂದೆಂದಿಗೂ ವಿನಾಶವಾಗಲಾರದು. ಇಂಥ ಸರಳಕ್ರಿಯಾಕೇಂದ್ರವನ್ನು ಲೈಬ್ನಿಟ್ಸ್ ಮೋನ್ಯಾಡ್ (ಚಿದ್‌ಅಣು) ಎಂದು ಕರೆದಿದ್ದಾನೆ.

ಈ ಮೋನ್ಯಾಡ್ ಎಲ್ಲಕ್ಕೂ ಮೂಲಭೂತವಾದದ್ದು. ಇದೇ ನಿಜವಾದ ದ್ರವ್ಯ. ಬೇರೆ ಯಾವುದನ್ನೂ ಆಶ್ರಯಿಸದೆ ಯಾವುದು ಇರಬಲ್ಲದೋ ಅದು ದ್ರವ್ಯವೆಂದೂ ಅದೇ ದೈವವೆಂದೂ ಸ್ಪಿನೋಜ಼ ಹೇಳಿದ. ದ್ರವ್ಯಕ್ಕೆ ಸ್ಪಿನೋಜ಼ ಕೊಟ್ಟ ವಿವರಣೆಯನ್ನು ಲೈಬ್ನಿಟ್ಸ್ ಒಪ್ಪಿಕೊಂಡು, ಅಂಥ ಲಕ್ಷಣಗಳುಳ್ಳದ್ದು ಮೋನ್ಯಾಡ್ ಮಾತ್ರವೇ ಎಂದು ವಾದಿಸಿದ. ನಿಜವಾಗಿ ಒಂದೇ ಆಗಿರಬಲ್ಲದ್ದು ವ್ಯಕ್ತಿತ್ವವುಳ್ಳ ಕ್ರಿಯಾಕಾರಿಯಾದ ದ್ರವ್ಯ. ಈ ಮೋನ್ಯಾಡ್ ಭೌತಾಣುವಿನಂತೆ ಅಚೇತನವಾದುದಲ್ಲ, ಚೇತನವಾದದ್ದು, ಶಕ್ತಿಯುತವಾದದ್ದು. ಅದು ಕೇವಲ ರೇಖಾಗಣಿತದ ಬಿಂದುವಿನಂತೆ ಉದ್ದ, ಅಗಲ, ಆಳಗಳಿಲ್ಲದೆ ನಿರ್ಜೀವವಾದುದಲ್ಲ. ಮೋನ್ಯಾಡ್ ನಮ್ಮ ಆತ್ಮವನ್ನು ಹೋಲುತ್ತದೆ. ಅದರಂತೆ ಅದಕ್ಕೂ ದರ್ಶನವಿದೆ (ಪರ್ಸೆಪ್ಷನ್), ತೃಷೆ ಇದೆ, ತವಕವಿದೆ (ಅಫೆಕ್ಷೇಷನ್). ಅದು ಕುರುಡಾದದ್ದಲ್ಲ. ತನ್ನ ಮುಂದಿನ ಗತಿಯೇನೆಂಬುದನ್ನು ಅದು ದರ್ಶಿಸಬಲ್ಲುದು. ತನಗೆ ಆಂತರಿಕವಾದ ಗತಿಯನ್ನು ಸಾಧಿಸಬೇಕೆಂಬ ತವಕ ಅದಕ್ಕೆ ಇದೆ. ಆ ಗತಿ ಮುಟ್ಟುವ ತನಕ ಅದಕ್ಕೆ ಸಮಾಧಾನವಿಲ್ಲ. ಅದಕ್ಕೆ ತಡೆಯಾದುದನ್ನು ಒತ್ತರಿಸಿ ತನಗೆ ಅಂತರಿಕವಾದ ಗುರಿ ಮುಟ್ಟಿದ ವಿನಾ ಅದು ವಿಶ್ರಾಂತವಾಗುವುದಿಲ್ಲ. ಉಪ್ಪಿನ ದ್ರವ ಉಪ್ಪಿನ ಹರಳಾಗಿ ಪರಿಣಾಮ ಹೊಂದಿದ ವಿನಾ ವಿಶ್ರಮಿಸುವುದಿಲ್ಲ. ಹರಳಾಗಬೇಕೆಂಬ ಅದರ ಹಸಿವು ಅದಮ್ಯ. ಡೇಕಾರ್ಟ್ ಚೇತನ ಅಚೇತನಗಳು ವಿರುದ್ಧವೆಂದು ಹೇಳಿ ಅವೆರಡಕ್ಕೂ ಮಧ್ಯೆ ದಾಟಲಾಗದ ಕಂದರವನ್ನು ಏರ್ಪಡಿಸಿದ. ಸ್ಪಿನೋಜ಼ ಅವೆರಡೂ ಒಂದೇ ವಸ್ತುವಿನ ಎರಡು ಪಾರ್ಶ್ವಗಳೆಂದು ಹೇಳಿದ್ದು ಹೆಚ್ಚು ಸಮರ್ಪಕ. ಆದರೆ ಒಂದರಿಂದ ಒಂದು ಅವಿಚ್ಛಿನ್ನವಾಗಿ ನಿರಂತರವಾಗಿ ಹೇಗೆ ಮುಂದುವರಿಯುತ್ತದೆ ಎಂಬುದನ್ನು ತೋರಿಸಲಿಲ್ಲ. ಲೈಬ್ನಿಟ್ಸನ ದೃಷ್ಟಿಯಲ್ಲಿ ನಿರಂತರತೆ ಒಂದು ಮುಖ್ಯ ತತ್ತ್ವ. ಭೌತವೆಂದು ಕರೆಯುವ ವಸ್ತುವಿಗೂ ಚೇತನವೆಂದು ಕರೆಯುವ ವಸ್ತುವಿಗೂ ಅಂತರವಿಲ್ಲ. ಭೌತ ವಸ್ತುವಿನಲ್ಲಿ ಚೇತನ ಅವ್ಯಕ್ತವಾಗಿದೆ. ಸ್ಪಷ್ಟವಾಗಿ ಕಾಣಿಸುವುದಿಲ್ಲ. ಇಂದ್ರಿಯಾನುಭವದಲ್ಲಿರುವ ಅಂಶ ಬುದ್ಧಿಯ ತಿಳಿವಿನಲ್ಲಿರುವ ಅಂಶದಂತೆ ವಿಶದವಲ್ಲ, ನಿರ್ದಿಷ್ಟವಲ್ಲ. ನಾವು ಇಂದ್ರಿಯಾನುಭವದಿಂದ ಮುಂದೆ ಸಾಗಿದಾಗ ಅದರಲ್ಲಿ ಅವ್ಯಕ್ತವಾಗಿದ್ದ ಅಂಶ ವಿಶದವಾಗುತ್ತದೆ. ಇಂದ್ರಿಯ ಪ್ರತ್ಯಕ್ಷಾನುಭವ ಎರಡು ಬಗೆಯಾದುದು; ಕೆಲವು ಅಸ್ಪಷ್ಟ ಪ್ರತ್ಯಕ್ಷಗಳು, ಇನ್ನೂ ಕೆಲವು ವಿಶದಪ್ರತ್ಯಕ್ಷಗಳು. ಯಾವುದು ಒಂದು ಕಾಲದಲ್ಲಿ ಅಸ್ಪಷ್ಟವಾಗಿತ್ತೋ ಅದನ್ನೇ ನಾವು ಗಮನಿಸಿ ನೋಡಿದಾಗ ಕ್ರಮಕ್ರಮವಾಗಿ ಹೆಚ್ಚು ಹೆಚ್ಚು ವಿಶದವಾಗುತ್ತದೆ. ಹೀಗೆ ಇಂದ್ರಿಯಾನುಭವದಲ್ಲಿ ನಿರಂತರತೆ ಇರುವಂತೆ ಮೋನ್ಯಾಡ್‌ಗಳಲ್ಲೂ ನಿರಂತರತೆ ಇದೆ. ಒಂದು ಮೋನ್ಯಾಡ್‌ಗೂ ಇನ್ನೊಂದು ಮೋನ್ಯಾಡ್‌ಗೂ ಇರುವ ಭೇದ ಅಂತಸ್ತಿನದು, ಜಾತಿಯದಲ್ಲ. ಕೆಲವು ಮೋನ್ಯಾಡ್ ಹೆಚ್ಚು ವ್ಯಕ್ತವಾದುವು, ಅವುಗಳ ನೋಟವೂ ಹೆಚ್ಚು ವಿಶದ. ತೀರ ಅವ್ಯಕ್ತ ಮೋನ್ಯಾಡ್‌ನಿಂದ ತೀರ ವ್ಯಕ್ತವಾದ ಮೋನ್ಯಾಡಿನವರೆಗೆ ನಿರಂತರವಾಗಿ, ಅಸಂಖ್ಯಾತ ಅಂತಸ್ತುಗಳಿವೆ. ಪ್ರಕೃತಿಯ ವಸ್ತುಗಳ ಮಧ್ಯೆ ಖಾಲಿಯಾದ ಆಕಾಶ ಇಲ್ಲ. ಕಲ್ಲಿನಲ್ಲಿ ಚೇತನ ತುಂಬ ಅವ್ಯಕ್ತವಾಗಿದೆ. ಅದರ ನೋಟ ಅವಿಶದ, ಅದರಲ್ಲಿ ಚೇತನ ನಿದ್ರಿಸುತ್ತಿದೆ. ಪ್ರಾಣಿಗಳಲ್ಲಿನ ಚೇತನ ಸ್ವಲ್ಪ ಚುರುಕಾಗಿದೆ. ಮಾನವರಲ್ಲಿ ಅದು ಎಚ್ಚೆತ್ತಿದೆ. ಮಾನವರ ದರ್ಶನದಲ್ಲೂ ಅನೇಕ ಅಂತಸ್ತುಗಳಿವೆ. ವಿವೇಚನೆ ಹೆಚ್ಚಿದಂತೆಲ್ಲ ಮಾನವನ ದರ್ಶನ ಹೆಚ್ಚು ವಿಶದವಾಗುತ್ತದೆ. ಮೋನ್ಯಾಡಿಗೆ ದರ್ಶನವಿದೆಯೆಂದು ಹೇಳಿದಾಗ ದರ್ಶನ ಪದಕ್ಕೆ ವಿಶಾಲವಾದ ಅರ್ಥವನ್ನು ಕೊಡಬೇಕು. ಈ ದರ್ಶನ ಯಾವ ಬಗೆಯದು ಎಂಬುದನ್ನು ವೈಟ್‌ಹೆಡ್ ವಿವರಿಸಿದ್ದಾನೆ.

ಸರಳ ಮೋನ್ಯಾಡುಗಳಿಂದ ಸಂಕೀರ್ಣ ಮೋನ್ಯಾಡ್‌ಗಳು ಬೆಳೆಯುತ್ತವೆ. ಒಂದೊಂದು ಸಂಕೀರ್ಣ ಮೋನ್ಯಾಡ್ ಮೋನ್ಯಾಡುಗಳ ಕಂತೆಯಲ್ಲ; ಅದು ಒಂದು ಸಮಾಜ. ಅದರ ರಚನೆ ವ್ಯವಸ್ಥಿತವಾದುದು. ಪ್ರತಿಯೊಂದು ಸಂಕೀರ್ಣವಾದ ದೇಹದಲ್ಲೂ ಆತ್ಮವಿರುವಂತೆ ಸಂಕೀರ್ಣವಾದ ವಿಶ್ವದಲ್ಲಿ ಒಂದು ಕೇಂದ್ರ ಮೋನ್ಯಾಡ್ ಇದೆ. ಅದು ತನ್ನ ಕೇಂದ್ರದಿಂದ ವಿಸ್ತರಿಸುತ್ತ ಹೋಗುತ್ತದೆ. ಪ್ರತಿಯೊಬ್ಬನಲ್ಲಿರುವ ಕೇಂದ್ರ ಮೋನ್ಯಾಡ್ ಬೆಳೆದಂತೆ ಅದರ ಪರಿಧಿ ವಿಸ್ತಾರವಾಗುತ್ತದೆ. ಅದು ವಿಸ್ತರಿಸುತ್ತ ಹೋದಂತೆಲ್ಲ ಅದರ ಪರಿಧಿಯಲ್ಲಿ ವಿಶ್ವವನ್ನೆಲ್ಲ ಸೇರಿಸಿಕೊಳ್ಳಬಲ್ಲುದು. ಈ ವಿಶ್ವ ಅನಂತಕೇಂದ್ರಗಳುಳ್ಳದ್ದು. ಅದು ಅನಂತ ಪರಿಧಿಗಳನ್ನು ಒಳಗೊಂಡ ಅನಂತವಾದ ಮಹಾಗೋಳ. ಒಂದೊಂದೂ ತನ್ನದೇ ಆದ ಕೇಂದ್ರದಿಂದ (ಜೈನರು ಹೇಳುವಂತೆ) ದರ್ಶನ ಬೆಳೆದು ಅನಂತದರ್ಶನವಾಗಿ ವಿಸ್ತರಿಸಬಹುದು.

ಒಂದೊಂದು ಮೋನ್ಯಾಡ್ ತನ್ನ ದೃಷ್ಟಿಕೋನದಿಂದ ವಿಶ್ವವನ್ನು ತನ್ನೊಳಗೆ ಪ್ರತಿಬಿಂಬಿಸುತ್ತದೆ. ಹೆಚ್ಚಾಗಿ ಬೆಳೆದಂತೆಲ್ಲ ಬೆಳೆದ ಮೋನ್ಯಾಡ್ ವಿಶ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ವಿಶದೀಕರಿಸುತ್ತದೆ. ಯಾವುದೊಂದು ಮೋನ್ಯಾಡ್ ಇನ್ನೊಂದರ ಅನುಕರಣವಲ್ಲ. ಯಾವುದೂ ಇನ್ನೊಂದರ ಪಡಿಯಚ್ಚಲ್ಲ. ಪ್ರತಿಯೊಂದೂ ತನ್ನದೇ ಆದ ವ್ಯಕ್ತಿತ್ವವನ್ನು ಪಡೆದಿರುತ್ತದೆ. ಈ ಮೋನ್ಯಾಡುಗಳಲ್ಲಿ ವ್ಯತ್ಯಾಸವಿರುವುದಕ್ಕೆ ಅವುಗಳಲ್ಲಿನ ಚಟುವಟಿಕೆ ಮತ್ತು ಜಡತ್ವದ ಪರ್ಯಾಯಭೇದ ಕಾರಣ. ಎಲ್ಲಕ್ಕಿಂತ ಕೆಳದರ್ಜೆಯ ಮೋನ್ಯಾಡ್ ತೀರ ಜಡ. ಎಲ್ಲಕ್ಕಿಂತ ಮೇಲಿನ ಮೋನ್ಯಾಡ್ ಪೂರ್ಣವಾಗಿ ಪೂರ್ಣಚಟುವಟಿಕೆಯಿಂದ ಕೂಡಿರುತ್ತದೆ. ಅದನ್ನು ಲೈಬ್ನಿಟ್ಸ್ ಆಕ್ಟಸ್‌ಪ್ಯೂರ ಎಂದು ಕರೆದಿದ್ದಾನೆ. ಈ ಪೂರ್ಣಚೇತನವಾದ ಮೋನ್ಯಾಡ್ ದೇವರು. ಲೈಬ್ನಿಟ್ಸನ ಮೂಲಭಾವನೆಗಳಿಗೆ ದೈವಭಾವ ಸಂಗತವಾಗಬೇಕಾದರೆ ಆ ದೇವರು ಕರ್ತನಾಗಲಾರ. ತನ್ನ ಮೂಲತತ್ತ್ವಕ್ಕೆ ಅಸಂಗತವಾಗಿ ಆತ ಕ್ರೈಸ್ತಮತ ಭಾವನೆಗಳಿಗೆ ಮರುಳಾಗಿ ದೇವರನ್ನು ಕರ್ತನಾಗಿ ಭಾವಿಸಿರುತ್ತಾನೆ. ಅವನು ನಿರ್ವಿಚಾರವಾದಿ. (ಡಾಗ್ಮ್ಯಾಟಿಸ್ಟ್).

ಪ್ರತಿಯೊಂದು ಮೋನ್ಯಾಡಿನಲ್ಲೂ ಅನಂತಚೇತನವಿದೆ. ಆದ್ದರಿಂದ ಅದರ ಬೆಳವಿಗೆ ಮಿತಿ ಇಲ್ಲ. ಅದಕ್ಕೆ ಹೊರಗಿನ ಯಾವುದರ ಪ್ರತಿಬಂಧಕವಿಲ್ಲ. ಅದರೊಳಗೆ ಹೊರಗಿನಿಂದ ಯಾವುದೂ ಪ್ರವೇಶಿಸಲಾರದು. ಅದಕ್ಕೆ ಕಿಟಕಿಗಳಿಲ್ಲ. ಆದರೂ ಅದು ಉಳಿದೆಲ್ಲವನ್ನೂ ಪ್ರತಿಬಿಂಬಿಸುತ್ತದೆ. ಯಾವ ವಿಧವಾದ ಘರ್ಷಣೆ ಇಲ್ಲದೆ ಎಲ್ಲವೂ ಹೊಂದಿಕೆಯಾಗಿರುತ್ತದೆ. ಏಕೆಂದರೆ ಲೋಕದಲ್ಲಿ ನಿಯಮವಿದೆ, ಕ್ರಮವಿದೆ. ಆದ್ದರಿಂದ ಅದರ ಭೌತವ್ಯಾಪಾರವನ್ನು ಯಾಂತ್ರಿಕವಾಗಿ ನಿರೂಪಿಸಬಹುದು. ಆದರೆ ಈ ಯಾಂತ್ರಿಕ ನಡೆವಳಿಕೆಯನ್ನು ನಿಯಂತ್ರಿಸುವವ ದೇವರು. ಆತ ಈ ರೀತಿ ಉದ್ದೇಶಿಸಿರುತ್ತಾನೆ. ಎಲ್ಲವೂ ಘರ್ಷಣೆಗೊಳಗಾಗದಂತೆ ಇರಬೇಕೆಂದು ಆಜ್ಞೆ ಮಾಡಿರುತ್ತಾನೆ. ವಿಶ್ವದಲ್ಲಿ ಸಾಂಗತ್ಯವಿರುವಂತೆ ವಿಶ್ವ ಹುಟ್ಟುವುದಕ್ಕೆ ಮೊದಲೇ ಏರ್ಪಡಿಸಿರುತ್ತಾನೆ. ಹೀಗೆ ಆರಂಭದಲ್ಲೇ ಏರ್ಪಡಿಸಿದ ಸಾಂಗತ್ಯವನ್ನು ಪೂರ್ವನಿಯೋಜಿತ ಸಾಂಗತ್ಯ (ಪ್ರಿ ಎಸ್ಟಾಬ್ಲಿಷ್ಟ್ ಹಾರ್ಮೊನಿ) ಎಂದು ಕರೆಯಲಾಗಿದೆ. ಈ ಮೂಲಕ ಯಾಂತ್ರಿಕವಾದ ಭೌತನಿರೂಪಣೆಗೂ ಉದ್ದೇಶವೇ ಪ್ರಧಾನವಾದ ಮತಧರ್ಮ

ನಿರೂಪಣೆಗೂ ಸಾಂಗತ್ಯವೇರ್ಪಟ್ಟಿದೆ ಎಂದು ಆತ ಭಾವಿಸಿರುತ್ತಾನೆ. ಇಲ್ಲೂ ಅವನ ವಾದ ಕುಂಟುತ್ತದೆ. ಮೋನ್ಯಾಡಿಗೆ ದರ್ಶನವಿದೆ, ಆದರೆ ಕಿಟಕಿಗಳಿಲ್ಲವೆಂದು ಹೇಳುವುದು ಅಸಂಗತ. ಎಲ್ಲವೂ ಎಲ್ಲಕ್ಕೂ ತೆರಪಾಗಿದೆ. ಅದು ಅನಂತವಾಗಿ ವಿಸ್ತರಿಸಬಹುದು ಎಂಬ ಅವನ ಮೂಲಭಾವನೆಗೂ ಅಲ್ಲಿ ಕಿಟಕಿಗಳಿಲ್ಲವೆಂಬ ಭಾವನೆಗೂ ವಿರೋಧವಿದೆ.

ಲೈಬ್ನಿಟ್ಸ್ ಪ್ರಾರಂಭಿಸಿದ್ದು ಸ್ವತಂತ್ರವಾದ ಮೋನ್ಯಾಡುಗಳಿಂದ. ಆದರೆ ಅವನ ತತ್ತ್ವ ಕೊನೆಗೊಳ್ಳುವುದು ಸ್ವತಂತ್ರವಾದ ದೈವಭಾವನೆಯಲ್ಲಿ. ಇದಕ್ಕೂ ಸ್ಪಿನೋಜ಼ನ ತತ್ತ್ವಕ್ಕೂ ಅಂತ್ಯದಲ್ಲಿ ಹೆಚ್ಚು ಭೇದವಿಲ್ಲ. ಸ್ಪಿನೋಜ಼ನ ತತ್ತ್ವವನ್ನೇ ತಲೆ ಕೆಳಕಾದಂತೆ ಅವನು ತೋರಿಸುತ್ತಾನೆ. ಭೌತವಾದ ವಸ್ತುವಿಲ್ಲವೆಂದು ಆತ ಪ್ರಾರಂಭಿಸುತ್ತಾನೆ. ಕೊನೆಯಲ್ಲಿ ವಿಶ್ವವೆಲ್ಲ ಯಾಂತ್ರಿಕವಾಗಿ ನಿರೂಪಿಸಬಹುದೆಂದು ತಿಳಿಸುತ್ತಾನೆ. ನೆಂಟರ ಮೇಲಿನ ಇಷ್ಟ ಪೂರೈಕೆಯಾಗಬೇಕಾದರೆ ಅಕ್ಕಿಯ ಮೇಲಿನ ಆಸೆಯನ್ನು ಬಿಡಬೇಕು. ಅಕ್ಕಿಯನ್ನು ಉಳಿಸಿಕೊಳ್ಳಬೇಕಾದರೆ ನೆಂಟರನ್ನು ಮರೆಯಬೇಕು. ಈ ಉಭಯಸಂಕಟಕ್ಕೆ ಲೈಬ್ನಿಟ್ಸ್ ತನ್ನ ತತ್ತ್ವವನ್ನು ಗುರಿಮಾಡಿದ್ದಾನೆ.

ಮೋನ್ಯಾಡ್ ತತ್ತ್ವವನ್ನು ಸಂಗತಗೊಳಿಸಬೇಕಾದರೆ ಜೈನರಂತೆ ಸೃಷ್ಟಿಕರ್ತನಾದ ದೇವರು ಇಲ್ಲವೆಂದು ಹೇಳಬೇಕಾಗುತ್ತದೆ. ಸೃಷ್ಟಿಕರ್ತನ ಅಗತ್ಯವಿದ್ದರೆ ಮೋನ್ಯಾಡ್‌ಗಳ ವ್ಯಕ್ತಿತ್ವವನ್ನು ನಿರಾಕರಿಸಬೇಕಾಗುತ್ತದೆ. ಲೈಬ್ನಿಟ್ಸ್‌ನ ತತ್ತ್ವದಿಂದ ಈಶ್ವರತತ್ತ್ವವನ್ನು ತೆಗೆದು ಹಾಕಿದರೆ ಅದು ಹೆಚ್ಚು ಸಮರ್ಪಕವಾದ ತತ್ತ್ವವಾಗುತ್ತದೆ ಎಂದು ಇತ್ತೀಚಿನ ಆಂಗ್ಲೇಯ ತಾತ್ತ್ವಿಕನಾದ ವಿಲ್ಡನ್‌ಕಾರ್ ಅಭಿಪ್ರಾಯಪಡುತ್ತಾನೆ. ಆ ಕಲ್ಪನೆಯನ್ನು ಬಿಟ್ಟು ತನ್ನ ಆತ್ಮಸಾಕ್ಷಿಗೆ ಒಪ್ಪಿಗೆಯಾದ ತತ್ತ್ವವನ್ನು ಆತ ತನ್ನ ಜೀವಿತಕಾಲದಲ್ಲಿ ಬರೆದು ಅದನ್ನು ತನ್ನ ಮೇಜಿನ ಮೇಲಿಟ್ಟಿದ್ದ. ಆ ಲೇಖನ ಈಚೆಗೆ ಬೆಳಕಿಗೆ ಬಂದು ಈ ಶತಮಾನದ ಆದಿಯಲ್ಲಿ ಪ್ರಕಟನೆಯಾಯಿತು. ಅದರಲ್ಲಿ ಆತ ವ್ಯಕ್ತಿಗೆ ಆಂತರಿಕವಾದ ಸಾಮಾನ್ಯವೇ ಪ್ರಧಾನವಾದದ್ದು, ವರ್ಗಸಾಮಾನ್ಯ ಅದಕ್ಕೆ ಅಧೀನವಾದದ್ದು, ಅದರಿಂದ ಗಮ್ಯವಾದದ್ದು ಎಂಬುದನ್ನು ಸ್ಪಷ್ಟಪಡಿಸಿರುತ್ತಾನೆ. ಈ ವಿಚಾರದಲ್ಲಿ ಅವನ ತತ್ತ್ವ ಜೈನತತ್ತ್ವವನ್ನು ಹೋಲುತ್ತದೆ.

ಲೈಬ್ನಿಟ್ಸ್‌ನ ತತ್ತ್ವದಲ್ಲಿ ನವೀನತೆ ಇದೆ, ಓಜಸ್ಸಿದೆ. ಪಾಶ್ಚಾತ್ಯ ತಾತ್ತ್ವಿಕರಲ್ಲಿ ಅದಕ್ಕೆ ಸಾಟಿಯಾದ ತತ್ತ್ವ ಇತ್ತೀಚಿನವರಿಗೆ ಕಾಣಿಸಿಕೊಂಡಿರಲಿಲ್ಲ. ಬುದ್ಧ್ಯಾರೂಢವಾದಕ್ಕೂ ಅನುಭವಾರೂಢವಾದಕ್ಕೂ ಸಾಂಗತ್ಯವೇರ್ಪಡಿಸಿ ಅವನ ಸಮಕಾಲೀನನಾದ ಜಾನ್‌ಲಾಕ್‌ನ ಅನುಭವವಾದದಲ್ಲಿರುವ ದೋಷವನ್ನು ಆತ ತೋರಿಸಿದ. ಇವನ ತತ್ತ್ವ ಇತ್ತೀಚೆಗೆ ಎಚ್. ಡಬ್ಲ್ಯು. ವಿಲ್ಡನ್‌ಕಾರ್, ಎ. ಎನ್. ವೈಟ್‌ಹೆಡ್ ಮುಂತಾದ ತಾತ್ತ್ವಿಕರನ್ನು ಆಕರ್ಷಿಸಿದೆ. ಬರ್‌ಟ್ರಂಡ್ ರಸೆಲನ ಗಣಿತ ತತ್ತ್ವದಲ್ಲಿ ಅವನ ಕೆಲವು ಭಾವನೆಗಳು ಸೇರಿವೆ.

**ಜಾನ್ ಲಾಕ್** : 1632–1704. ಅನುಭವಾರೂಢ ಅಥವಾ ಅನುಭವಪ್ರಧಾನವಾದ ಮುಖಂಡರು ಜಾನ್ ಲಾಕ್, ಬಿಷಪ್ ಬಾರ್ಕ್ಲೆ ಮತ್ತು ಡೇವಿಡ್ ಹ್ಯೂಂ. ಮೂವರೂ ಬ್ರಿಟನ್ನಿನವರು. ಅನುಭವಪ್ರಧಾನವಾದವನ್ನು ಪ್ರಸಿದ್ಧಪಡಿಸಿದ ಆಧುನಿಕ ತಾತ್ತ್ವಿಕರಲ್ಲಿ ಜಾನ್ ಲಾಕ್ ಮೊದಲನೆಯವ. ಇಲ್ಲಿ ನಮಗೆ ಪ್ರಸಕ್ತವಾದ ತತ್ತ್ವಕ್ಕೆ ಆಧಾರವಾದದ್ದು ಆತನ ಎನ್ ಎಸ್ಸೆ ಕನ್ಸರ್ನಿಂಗ್ ಹ್ಯೂಮನ್ ಅಂಡರ್‌ಸ್ಟ್ಯಾಂಡಿಂಗ್ ಎಂಬ ಬೃಹದ್‌ಗ್ರಂಥ.

ಗ್ರಂಥದ ಹೆಸರೇ ತಿಳಿಸುವಂತೆ ಇದು ಮುಖ್ಯವಾಗಿ ಮಾನವನ ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟಿರುತ್ತದೆ. ಜ್ಞೇಯ ವಿಷಯಗಳಾದ ಭೌತವಸ್ತು, ಆತ್ಮ, ಈಶ್ವರ, ಮುಂತಾದುವನ್ನು ವಿಮರ್ಶಿಸಿದರೂ ಅವುಗಳಿಗೆ ಅಷ್ಟು ಪ್ರಾಧಾನ್ಯವಿಲ್ಲ. ಈ ವಿಚಾರದಲ್ಲಿ ಇವನ ತತ್ತ್ವ ಹೆಚ್ಚು ಕಡಿಮೆ ಡೇಕಾರ್ಟ್‌ನ ತತ್ತ್ವವನ್ನೇ ಹೋಲುತ್ತದೆ. ಅಲ್ಲದೆ ಆ ಭಾವನೆಗಳು ಇವನ ಜ್ಞಾನತತ್ತ್ವಕ್ಕೆ ಸಂಗತವೂ ಅಲ್ಲ. ವೈಶಿಷ್ಟ್ಯವಿರುವುದು ಮುಖ್ಯವಾಗಿ ಇವನ ಅನುಭವಪ್ರಧಾನವಾದದಲ್ಲಿ.

ನಮ್ಮ ತಿಳಿವಿನ ಮಿತಿ ಏನು? ನಮ್ಮ ಭಾವನೆಗಳು ಹುಟ್ಟುವುದು ಹೇಗೆ? ಯಾವ ಭಾವನೆಗಳು ಸ್ಪಷ್ಟವಾದವು, ನಿರ್ದಿಷ್ಟವಾದವು. ನಿಶ್ಚಿತವಾದವು? ಇವು ಇವನ ಮುಖ್ಯ ಸಮಸ್ಯೆಗಳು.

ನಮಗೆ ತಿಳಿವಿದೆ, ಅನುಭವವಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ತಿಳಿವಿಗೆ ಮುಂಚೆಯೇ ಅನುಭವಕ್ಕೆ ಮುಂಚೆಯೇ ನಮ್ಮೊಳಗೆ ಆಂತರಿಕ ಭಾವನೆಗಳು ಇವೆ ಎಂದು ಡೇಕಾರ್ಟ್ ಹೇಳಿದ. ಲಾಕ್ ಅಂಥ ಭಾವನೆಗಳನ್ನು ನಿರಾಕರಿಸುತ್ತಾನೆ. ಇದು ನಾವು ಮೊದಲು ವಿಚಾರಮಾಡಬೇಕಾದ ವಿಷಯ. ಇವನ ವಿಚಾರಸರಣಿ ಈ ರೀತಿ ಇದೆ. ಯಾವುದನ್ನಾದರೂ ನಾವು ತಿಳಿದಿದ್ದೇವೆ ಎಂದು ಹೇಳಿದಾಗ ಆ ವಿಷಯ ನಮ್ಮ ಗಮನಕ್ಕೆ ಬರಬೇಕು. ನಮ್ಮ ಗಮನಕ್ಕೆ ಬಾರದ ಯಾವುದನ್ನಾದರೂ ನಾವು ತಿಳಿದಿದ್ದೇವೆ ಎಂದರೆ ಅದು ಅವಿವೇಕ. ತಿಳಿಯದುದನ್ನು ತಿಳಿವಿಗೆ ಬಾರದುದನ್ನು ನಾವು ತಿಳಿದಿದ್ದೇವೆಂದು ಹೇಳಿದಂತಾಗುತ್ತದೆ.

ಆಂತರಿಕ ಭಾವನೆಗಳೆಂದು ಡೇಕಾರ್ಟ್ ತಿಳಿಸಿರುವ ಭಾವನೆಗಳನ್ನು ಪರಿಶೀಲಿಸೋಣ. ಅವು ಆತ್ಮ, ದ್ರವ್ಯ, ಈಶ್ವರ ಮುಂತಾದವು. ನಮಗೆ ತಿಳಿವಳಿಕೆ ಹುಟ್ಟುವುದಕ್ಕೆ ಮುಂಚೆಯೇ ಇವು ನಮಗೆ ತಿಳಿದಿವೆಯೇ ? ಹಾಗೆ ತಿಳಿದಿದ್ದರೆ ಈ ಭಾವನೆಗಳು ಮಕ್ಕಳ ಅರಿವಿಗೆ ಮೊಟ್ಟಮೊದಲು ಬರಬೇಕಾಗಿತ್ತು. ಆದಿವಾಸಿಗಳಾದ ಕಾಡುಜನರಲ್ಲೂ ಈ ಭಾವನೆಗಳು ಇದ್ದಿರಬೇಕಾಗಿತ್ತು. ಇವು ಮಾನವನ ತಿಳಿವಿಗೆ ಆಂತರಿಕವಾದ ಭಾವನೆಗಳಾಗಿದ್ದರೆ ಈ ಭಾವನೆಗಳ ವಿಚಾರವಾಗಿ ಭಿನ್ನಾಭಿಪ್ರಾಯಗಳು ಇರಕೂಡದು. ವಾಸ್ತವ ಪರಿಸ್ಥಿತಿ ಇವಕ್ಕೆ ವಿರುದ್ಧವಾಗಿದೆ. ಮಕ್ಕಳಿಗೆ ದ್ರವ್ಯದ ತಿಳಿವಿಲ್ಲ. ದೈವದ ತಿಳಿವಿಲ್ಲ. ಮಕ್ಕಳ ಅನುಭವ ತುಂಬ ಬೆಳೆದ ಮೇಲೆ ಈ ಭಾವನೆಗಳು ಹುಟ್ಟುತ್ತವೆ. ಇವು ಹುಟ್ಟಿದ ಮೇಲೂ ಬಹುವಿಧವಾಗಿರುತ್ತವೆ. ತಮ್ಮ ತಮ್ಮ ಅನುಭವಾನುಸಾರವಾಗಿ ಆ ಭಾವನೆಗಳನ್ನು ಒಬ್ಬೊಬ್ಬರು ಒಂದೊಂದು ಬಗೆಯಾಗಿ ಕಲ್ಪಿಸಿಕೊಳ್ಳುತ್ತಾರೆ. ಅನಾಗರಿಕನ ದೈವ ನಾಗರಿಕನ ದೈವವಲ್ಲ. ಕ್ರೈಸ್ತರ ದೈವ ಇತರ ಜನರ ದೈವವಲ್ಲ. ಕ್ರೈಸ್ತರಲ್ಲೂ ದೈವದ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ. ಈ ಭಾವನೆಗಳು ಸರಳ ಭಾವನೆಗಳೂ ಅಲ್ಲ. ಅನೇಕಾನೇಕ ಅನುಭವಗಳು ಹುಟ್ಟಿದ ಅನಂತರವೇ ಈ ಎಲ್ಲ ಭಾವನೆಗಳೂ ಹುಟ್ಟುವುದು. ವಿಶ್ವದ ಅನೇಕ ವಿಷಯಗಳನ್ನು ಕಂಡ ಮೇಲಲ್ಲವೇ ನಾವು ವಿಶ್ವಕ್ಕೆ ಕಾರಣವಾಗಿ ದೇವರಿರಬೇಕೆಂದು ಭಾವಿಸುವುದು. ಆದ್ದರಿಂದ ಅನುಭವ ಹುಟ್ಟುವುದಕ್ಕೆ ಮುಂಚೆಯೇ ನಮ್ಮ ಬುದ್ಧಿಯಲ್ಲಿ ಇಂಥ ಭಾವನೆಗಳಿರಲಾರವು.

ನಮಗೆ ಅನುಭವ ಹುಟ್ಟುವುದಕ್ಕೆ ಮುಂಚೆ ನಮ್ಮ ಮನಸ್ಸು ಬರೆಯಲು ಉಪಯೋಗಿಸುವ ಕಪ್ಪು ಹಲಗೆಯಂತೆ, ಕಾಗದದಂತೆ ಖಾಲಿಯಾಗಿರುತ್ತದೆ. (ಟ್ಯಾಬ್ಯುಲರಾಸ್). ಖಾಲಿಯಾದ ಮನಸ್ಸಿನ ಪರದೆಯಮೇಲೆ ಕಾಣಿಸಿಕೊಳ್ಳುವ ಭಾವನೆಗಳೇ ನಮ್ಮ ಅನುಭವದ ಸರ್ವಸ್ವ. ನಮ್ಮ ಅನುಭವದ ಭಾವನೆಗಳು ಎರಡು ಬಗೆಯವು : 1. ಹೊರವಸ್ತುಗಳು ಇಂದ್ರಿಯಗಳ ಮೂಲಕ ಮನಸ್ಸಿನ ಮೇಲೆ ಒತ್ತಿದ ಮುದ್ರೆಗಳು ಅಥವಾ ಪ್ರತಿಬಿಂಬಗಳು. 2. ಅವುಗಳನ್ನು ಅನುಸರಿಸಿ ಪರ್ಯಾಲೋಚನೆಯಿಂದ ಹುಟ್ಟಿದ ಭಾವನೆಗಳು. ಇಂದ್ರಿಯಗಳಿಗೆ ಗೋಚರವಾದ ಪ್ರತಿಬಿಂಬಗಳು ಹೊರ ವಸ್ತುಗಳ ಮುದ್ರೆಗಳು, ಹೊರವಸ್ತುಗಳು ಮನಸ್ಸಿನ ಮೇಲೆ ಒತ್ತಿದ ಮುದ್ರೆಗಳು, ಹೊರವಸ್ತುಗಳ ನಕಲುಗಳು. ಸಂಶಯವೃತ್ತಿ, ವಿಚಾರವೃತ್ತಿ, ಚಿತ್ತವೃತ್ತಿ– ಇವು ಪರ್ಯಾಲೋಚನೆಯ ಭಾವನೆಗಳು. ಲಾಕ್‌ನ ಅಭಿಪ್ರಾಯದಲ್ಲಿ ಯಾವುದನ್ನು ಮನಸ್ಸು ನೇರವಾಗಿ ಅರಿಯುವುದೋ ಅಥವಾ ಯಾವುದು ಮನಸ್ಸಿಗೆ ಪ್ರತ್ಯಕ್ಷವಾಗಿ ಗೋಚರವಾಗುತ್ತದೋ ಅದು ಭಾವನೆ (ಐಡಿಯ). ಈ ರೀತಿ ನೇರವಾಗಿ ಮೊಟ್ಟಮೊದಲಲ್ಲಿ ಪಡೆದವು ಸರಳಭಾವನೆಗಳು. ಇವನ್ನು ಪುನಶ್ಚರಣೆ ಮಾಡುವುದಕ್ಕೂ ಒಂದರೊಡನೆ ಒಂದನ್ನು ಹೋಲಿಸುವುದಕ್ಕೂ ಅವುಗಳನ್ನು ವಿಧ ವಿಧವಾಗಿ ಸೇರಿಸಿ ಸಂಕೀರ್ಣಭಾವನೆಗಳನ್ನು ರಚಿಸುವುದಕ್ಕೂ ಮನಸ್ಸಿಗೆ ಶಕ್ತಿ ಇದೆ. ಒಂದೊಂದು ಸರಳಭಾವನೆಯೂ ಒಂದೊಂದು ಇಂದ್ರಿಯದ ಮೂಲಕ ಬರುತ್ತದೆ. ಉದಾ: ಬಣ್ಣ, ಶಬ್ದ, ರುಚಿ, ಶಾಖ ಮುಂತಾದುವುಗಳನ್ನು ಕ್ರಮವಾಗಿ ಕಣ್ಣಿನಿಂದ, ಕಿವಿಯಿಂದ, ನಾಲಗೆಯಿಂದ, ಸ್ಪರ್ಶೇಂದ್ರಿಯದಿಂದ ತಿಳಿಯಬಹುದು. ಮನಸ್ಸು ತನ್ನ ಕ್ರಿಯೆಗಳನ್ನು ಪರ್ಯಾಲೋಚನೆಯಿಂದ ತಿಳಿಯುತ್ತದೆ. ಕೆಲವು ಭಾವನೆಗಳನ್ನು (ಉದಾ. ಸುಖ, ದುಃಖ, ಕ್ಲೇಶ ಇತ್ಯಾದಿ) ಇಂದ್ರಿಯಗಳು ಮತ್ತು ಪರ್ಯಾಲೋಚನೆ ಎರಡರಿಂದಲೂ ತಿಳಿಯಬಹುದು.

ಕೆಲವು ಇಂದ್ರಿಯ ಭಾವನೆಗಳು ಹೊರವಸ್ತುಗಳಿಗೆ ನೇರವಾಗಿ ಸೇರಿದ ಗುಣಗಳನ್ನು ಪ್ರತಿಬಿಂಬಿಸುತ್ತವೆ. ಆದರೆ ಅನೇಕ ಇಂದ್ರಿಯ ಭಾವನೆಗಳು ಹೊರವಸ್ತುವಿಗೆ ನೇರವಾಗಿ ಸೇರಿದ ಗುಣಗಳನ್ನು ಪ್ರತಿಬಿಂಬಿಸುವುದಿಲ್ಲ. ಮೊದಲನೆಯವನ್ನು ಪ್ರಧಾನಗುಣಗಳೆಂದೂ, ಎರಡನೆಯವನ್ನು ಗೌಣಗುಣಗಳೆಂದೂ ಲಾಕ್ ಕರೆದಿರುತ್ತಾನೆ. ಆಕಾರ, ಚಲನೆ, ಸಂಖ್ಯೆ– ಇವು ಪ್ರಧಾನಗುಣಗಳು. ಈ ಗುಣಗಳನ್ನು ಹೊರವಸ್ತುವಿನಿಂದ ಪ್ರತ್ಯೇಕಿಸಲಾಗುವುದಿಲ್ಲ. ಬಣ್ಣ, ರುಚಿ, ವಾಸನೆ–ಇವು ಗೌಣಗುಣಗಳು. ಇವು ಹೊರವಸ್ತುವಿಗೇ ಸೇರಿದುವೆಂದು ಹೇಳಲಾಗುವುದಿಲ್ಲ. ಹೊರವಸ್ತುವಿನಿಂದ ಪ್ರತ್ಯೇಕವಾಗಿದ್ದಂತೆ ಇವುಗಳನ್ನು ಭಾವಿಸಬಹುದು.

ಮನಸ್ಸು ಸರಳಭಾವನೆಗಳನ್ನು ಪಡೆಯುವವರೆಗೆ ಅದು ನಿಷ್ಕ್ರಿಯವಾಗಿರುತ್ತದೆ. ಪಡೆದಮೇಲೆ ಅವುಗಳನ್ನು ಹೋಲಿಸಿದಾಗ, ಸೇರಿಸಿದಾಗ, ಸಂಕೀರ್ಣಭಾವನೆಗಳನ್ನು ರಚಿಸಿದಾಗ, ಬಿಡಿಸಿ ಪ್ರತ್ಯೇಕಿಸಿದಾಗ, ಅದು ಸಕ್ರಿಯವಾಗುತ್ತದೆ.

**ಸಂಕೀರ್ಣಭಾವನೆಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು:** 1. ಪರ್ಯಾಯಗಳು, ದ್ರವ್ಯಗಳು ಮತ್ತು ಸಂಬಂಧಗಳು. ಬಣ್ಣ ಮತ್ತು ರೇಖೆಗಳಿಂದ ಕೂಡಿದ ಸೌಂದರ್ಯ, ಅರುವತ್ತು ಸೆಕೆಂಡುಗಳು ಸೇರಿ ಆದ ಮಿನಿಟು, ಇಪ್ಪತ್ತುನಾಲ್ಕು ತಾಸುಗಳುಳ್ಳ ದಿವಸ, ಹದಿನೈದು ದಿವಸಗಳುಳ್ಳ ಪಕ್ಷ –ಇತ್ಯಾದಿಗಳು. 2. ತೂಕ, ಬಣ್ಣ, ಗಾತ್ರವಿರುವ ದ್ರವ್ಯಗಳು. ಉದಾ: ಸೀಸ, ಚಿನ್ನ, ಉಪ್ಪು ಮುಂತಾದವು. ನಮಗೆ ಕಾಣುವುದು ಈ ದ್ರವ್ಯಗಳ ತೂಕ, ಬಣ್ಣ, ಗಾತ್ರ ಮುಂತಾದ ಗುಣಗಳು ಮಾತ್ರವೇ. ಇವು ಯಾವುದರಲ್ಲಿವೆಯೋ ಅದು ದ್ರವ್ಯ. ಅದು ನಮ್ಮ ಕಣ್ಣಿಗೆ ಕಾಣಿಸದ ವಸ್ತು. ಯಾವುದು ಗುಣಗಳಿಗೆ ಆಧಾರವಾಗಿ ಆದರೆ ನಮಗೆ ತಿಳಿಯದೆ ಇದೆಯೋ ಅದು ದ್ರವ್ಯ. ಇದು ದ್ರವ್ಯಕ್ಕೆ ಲಾಕ್ ಕೊಟ್ಟಿರುವ ವಿಚಿತ್ರ ಲಕ್ಷಣನಿರೂಪಣೆ. 3. ಎರಡು ಅಥವಾ ಅನೇಕ ಸರಳಭಾವನೆಗಳಿಗೆ ಸಂಬಂಧಗಳನ್ನೇರ್ಪಡಿಸಿ, ಸಂಕೀರ್ಣ ಭಾವನೆಗಳನ್ನು ಪಡೆಯಬಹುದು. ಭೂಮಿ ಸೂರ್ಯನ ಸುತ್ತ ಸುತ್ತುತ್ತದೆ. ಉಷ್ಣ ಮೇಣವನ್ನು ಕರಗಿಸುತ್ತದೆ. ಇವು ಸಂಬಂಧಗಳ ಮೂಲಕ ಏರ್ಪಟ್ಟ ಸಂಕೀರ್ಣಭಾವನೆಗಳಿಗೆ ಉದಾಹರಣೆಗಳು. ಕಾರ್ಯಕಾರಣ ಸಂಬಂಧ

ತುಂಬ ವ್ಯಾಪಕವಾದ ಮತ್ತು ಜ್ಞಾನಕ್ಕೆ ಅಗತ್ಯವಾದ ಸಂಬಂಧ. ಕೆಲವು ಸಂಬಂಧಗಳನ್ನು ನಾವು ಬೇರೆ ಯಾವ ಸಂಬಂಧಗಳ ಮಧ್ಯಸ್ತಿಕೆ ಇಲ್ಲದೆ ನೇರವಾಗಿ ತಿಳಿಯುತ್ತೇವೆ. ಕಪ್ಪು ಬಿಳುಪಲ್ಲ, ಮೂರು ಎರಡಕ್ಕಿಂತ ಹೆಚ್ಚು–ಇಂಥ ಸಂಬಂಧಗಳನ್ನು ನಾವು ಪ್ರತಿಭಾನದಿಂದ ತಿಳಿಯುತ್ತೇವೆ. ಇವು ಪರಮವಿಶದವಾದುವು. ಇವು ಸತ್ಯವೆಂದು ತಿಳಿಯಲು ರುಜುವಾತು ಅನಾವಶ್ಯಕ. ಕೆಲವು ವೇಳೆ ನಾವು ಎರಡು ಭಾವನೆಗಳಿರುವ ಸಂಬಂಧವನ್ನು ಹೀಗೆ ನೇರವಾಗಿ ತಿಳಿಯುವುದಿಲ್ಲ. ಆ ಸಂಬಂಧವನ್ನು ಇತರ ಸಂಬಂಧಗಳ ಮೂಲಕ, ಅಂದರೆ ಮಾಧ್ಯಮಿಕವಾಗಿ ಸ್ಥಾಪಿಸುತ್ತೇವೆ. ಹೀಗೆ ಮಾಧ್ಯಮ ಅನುಮಾನದ ನೆರವಿನಿಂದ ಸ್ಥಾಪಿಸಿದ ಸಂಬಂಧಗಳು ಸಂಪೂರ್ಣವಾಗಿ ನಿಶ್ಚಿತಸತ್ಯಗಳು. ಆದರೆ ಆ ಸಂಬಂಧ ನಮಗೆ ಮೂರು ಎರಡಕ್ಕಿಂತ ಹೆಚ್ಚು ಎಂಬ ಸಂಬಂಧದಂತೆ ತತ್‌ಕ್ಷಣದಲ್ಲಿ ನೇರವಾಗಿ ಸಿದ್ಧವಾಗುವುದಿಲ್ಲ. ಒಂದು ತ್ರಿಕೋಣದ ಎರಡು ಭುಜಗಳು ಸಮಾನವಾಗಿದ್ದರೆ ಅದಕ್ಕೆ ಅಭಿಮುಖವಾಗಿರುವ ಕೋನಗಳು ಸಮನಾಗಿರುತ್ತವೆ–ಎಂಬುದು ನೇರವಾಗಿ ತತ್‌ಕ್ಷಣದಲ್ಲಿ ನಮಗೆ ತಿಳಿಯುವುದಿಲ್ಲ. ಅದನ್ನು ಮಧ್ಯಮಾನುಮಾನದ ಮೂಲಕ ಸ್ಥಾಪಿಸಬೇಕಾಗುತ್ತದೆ. ಗಣಿತ ಸ್ಥಾಪಿಸುವ ಸತ್ಯಗಳು ಈ ಬಗೆಯವು. ಈ ಮಧ್ಯಮಾನುಮಾನದಲ್ಲಿ ಅನೇಕ ಹಂತಗಳಿರುತ್ತವೆ. ಅನುಮಾನದ ಮೂಲಪ್ರತಿಜ್ಞೆಗಳ ತಿಳಿವು ನೇರವಾದದ್ದು. ಆದರೆ ಅವುಗಳ ಮೂಲಕ ಏರ್ಪಟ್ಟ ಅನುಮಿತಿ (ಕನ್‌ಕ್ಲೂಷನ್) ನಮಗೆ ಮೊದಲೇ ನೇರವಾಗಿ ತಿಳಿದಿರುವುದಿಲ್ಲ. ಅದು ಅನುಮಾನದ ಮೂಲಕ ಸ್ಥಾಪನೆಯಾದ ಸತ್ಯ. ಹೀಗೆ ಸ್ಥಾಪನೆಯಾಗದ್ದು, ರುಜುವಾತಾಗದ್ದು, ಕೇವಲ ಅಭಿಪ್ರಾಯ ಅಥವಾ ನಂಬಿಕೆ (ಫೇತ್). ಅದನ್ನು ನಿಜವಾಗಿ ಜ್ಞಾನವೆಂದು ಎಣಿಸಲಾಗುವುದಿಲ್ಲ.

ಇಂಥ ಕೇವಲ ಅಭಿಪ್ರಾಯರೂಪವಾದ ಭಾವನೆಗಳನ್ನು ನಾವು ನಂಬುತ್ತೇವೆ. ಆದರೆ ಅವು ಸ್ಥಿರವಾಗಿ ನಿಸ್ಸಂದೇಹವಾಗಿ ರುಜುವಾತಾದ ಭಾವನೆಗಳಲ್ಲ. ಅವು ಸತ್ಯವಿರಬಹುದು ಎಂದು ಹೇಳಬಹುದೇ ಹೊರತು ಸತ್ಯವಾಗಿ ಇದ್ದೇ ತೀರಬೇಕೆಂದು ಹೇಳುವಂತಿಲ್ಲ. ನಮ್ಮ ಶರೀರದ ಹೊರಗೆ ಇತರ ವಸ್ತುಗಳಿವೆ ಎಂಬುದನ್ನು ನಾವು ಸಾಧಾರಣವಾಗಿ ಭಾವಿಸುತ್ತೇವೆ, ನಿಶ್ಚಿತವೆಂದೂ ಬಗೆದಿರುತ್ತೇವೆ. ಆದರೆ ಅವು ನಿಶ್ಚಿತ ಸತ್ಯಗಳೆಂದು ಹೇಳಲಾಗುವುದಿಲ್ಲ. ನಮ್ಮ ಹೊರಗಡೆ ವಸ್ತುಗಳಿವೆ ಎಂಬ ಭಾವನೆ ಪೂರ್ಣಸತ್ಯಕ್ಕೆ ತುಂಬ ಹತ್ತಿರವಿರಬಹುದು. ಅದರ ಸಂಭವನೀಯತೆ ತುಂಬ ಹೆಚ್ಚಿನದಾಗಿರಬಹುದು. ಆದರೆ ಅದು ಪೂರ್ಣ ನಿಶ್ಚಿತಜ್ಞಾನವಲ್ಲ.

ನಿಶ್ಚಿತಜ್ಞಾನದ ಎಲ್ಲೆ ತುಂಬ ಪರಿಮಿತ. ಸರಳ ಇಂದ್ರಿಯ ಭಾವನೆಗಳು, ಸರಳ ಪರ್ಯಾಲೋಚನೆಯ ಭಾವನೆಗಳು ನಿಶ್ಚಿತವಾದವು. ನಮಗೆ ಬುದ್ಧಿ ಇದೆ, ಮನಸ್ಸಿದೆ, ಆತ್ಮವಿದೆ ಎಂಬ ಸರಳ ಭಾವನೆಗಳು ನಿಶ್ಚಿತ. ಆದರೆ ಹೊರಪ್ರಪಂಚದ ವಸ್ತುಗಳಿವೆ ಎಂಬುದು ಅಷ್ಟು ನಿಶ್ಚಿತವಲ್ಲ. ಆ ಭಾವನೆಯ ಆಧಾರದ ಮೇಲೆ ಏರ್ಪಟ್ಟ ಭೌತವಿಜ್ಞಾನ ಪೂರ್ಣನಿಶ್ಚಿತಜ್ಞಾನವಲ್ಲ. ಈಶ್ವರಭಾವನೆ ಇದೆ. ಆದರೆ ಅದಕ್ಕೆ ಕಾರಣನಾದ ಈಶ್ವರನಿದ್ದೇ ಇರುತ್ತಾನೆ, ಅವನ ಸ್ವಭಾವ ಇಂಥದೇ ಎಂದು ನಿಷ್ಕೃಷ್ಟವಾಗಿ ಹೇಳಲಾಗುವುದಿಲ್ಲ. ಈಶ್ವರನಿದ್ದಾನೆ ಎಂದು ಸಾಧಿಸಲು ಹಲವು ಬಗೆಯಾಗಿ ವಾದಿಸಬಹುದು. ಡೇಕಾರ್ಟ್ ಮುಂತಾದವರು ಪ್ರಯತ್ನಿಸಿದಂತೆ ರುಜುವಾತುಗಳನ್ನು ಕೊಡಬಹುದು. ಒಂದು ಇನ್ನೊಂದಕ್ಕಿಂತ ಪ್ರಬಲವಾಗಿರಬಹುದು. ಆದರೆ ಈಶ್ವರನಿದ್ದೇ ಇರುತ್ತಾನೆ ಎಂಬುದಕ್ಕೆ ರುಜುವಾತು ಸಾಲದು. ಈಶ್ವರನ ಇರವಿನ ವಿಚಾರವಾಗಿ ನಮ್ಮ ತಿಳಿವು ವಿಚಾರಬುದ್ಧಿಗೆ ಮೀರಿದ್ದು. ಭಕ್ತಿಯೇ ಈಶ್ವರ ಭಾವನೆಗೆ ಪರಮ ಆಸರೆ. ಭಕ್ತನಿಗೆ ಸ್ವಲ್ಪವೂ ಸಂಶಯವಿಲ್ಲ. ಆದರೆ ಅಪೌರುಷೇಯ ಸಾಕ್ಷಾತ್ಕಾರ (ರೆವಲೇಷನ್) ಸರಳ ಸಾಧಾರಣ ಭಾವನೆಗಳಿಗೆ ವ್ಯತಿರಿಕ್ತವಾಗಿದ್ದರೆ ಅದು ನೆಚ್ಚತಕ್ಕದ್ದಲ್ಲ. ಅಂಥ ಅನುಭೂತಿ ನಮ್ಮ ಸರಳಭಾವನೆಗಳಷ್ಟು ವಿಶದವಲ್ಲ. ಭಕ್ತಿಗೆ ಮಾತ್ರ ಅದು ವಿಶದವಾಗುತ್ತದೆ.

ಇವನ ವಾದವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಕೆಲವು ಅಸಂದಿಗ್ಧ ಮತ್ತು ಪರಸ್ಪರ ವಿರೋಧಾಂಶಗಳು ಎದ್ದು ಕಾಣುತ್ತವೆ. 1. ಭಾವನೆ (ಐಡಿಯ) ಎಂಬ ಪದಕ್ಕೆ ಕೊಟ್ಟಿರುವ ಅರ್ಥ ಎರಡು ಬಗೆಯಾಗಿದೆ. ಮೊದಲಲ್ಲಿ ಭಾವನೆಗೆ ಮನಸ್ಸಿನ ವೃತ್ತಿಗಳು ಎಂಬ ಅರ್ಥ. ಅಂದರೆ ಇಂದ್ರಿಯ ಸಂವೇದನ, ಪರ್ಯಾಲೋಚನೆ (ರಿಫ್ಲೆಕ್ಷನ್), ಸಂಶಯವೃತ್ತಿ, ಊಹೆ–ಇತ್ಯಾದಿ ಮಾನಸಿಕ ವೃತ್ತಿಗಳೆಂದು ಅರ್ಥ. ಭಾವನೆ ಎಂದರೆ ಸಂವೇದನೆಯ ವಿಷಯ, ಪರ್ಯಾಲೋಚನೆಯ ವಿಷಯ, ಸಂಶಯಕ್ಕೆ ಒಳಗಾದ ವಿಷಯ, ಊಹೆಯ ವಿಷಯ ಎಂದು ಅರ್ಥ ಬದಲಾಯಿಸುತ್ತಾನೆ. ಅಂದರೆ ಮಾನಸಿಕವೃತ್ತಿ ಎಂಬ ಅರ್ಥದಲ್ಲೂ ಮಾನಸಿಕವೃತ್ತಿಯ ವಿಷಯವೆಂಬ ಅರ್ಥದಲ್ಲೂ, ಆ ಪದವನ್ನು ಬಳಸಲಾಗಿದೆ. ಇದು ಅವನ ತತ್ತ್ವದಲ್ಲಿ ಅಸಂದಿಗ್ಧತೆ ಹುಟ್ಟಲು ಕಾರಣ. 2. ಪ್ರಧಾನ ಗುಣಗಳು, ಗೌಣಗುಣಗಳು ಎಂಬುದಾಗಿ ಭೇದವೇರ್ಪಡಿಸಿರುವುದಕ್ಕೆ ಆತ ಕೊಟ್ಟ ಕಾರಣಗಳೂ ಸಮಂಜಸವಲ್ಲ. ಆಕಾರದ ಭಾವನೆ ಹುಟ್ಟುವುದಕ್ಕೆ ಕಣ್ಣೊಂದೇ ಕಾರಣವಲ್ಲ. ಸ್ಪರ್ಶೇಂದ್ರಿಯವೂ ಕಾರಣವೆಂದು ಅವನಿಂದೀಚೆಗೆ ಬಂದ ಬಾರ್ಕ್ಲೆ ಸ್ಪಷ್ಟಪಡಿಸಿದ್ದಾನೆ. ಆಕಾರ ವಸ್ತುವಿಗೆ ಸೇರಿದ್ದು, ಬಣ್ಣ ವಸ್ತುವಿಗೆ ಸೇರಿದ್ದಲ್ಲವೆಂದು ಹೇಳುವುದು ಸಂಗತವಲ್ಲ. ಒಂದು ಅನಿಲದ ವಾಸನೆ –ಉದಾಹರಣೆಗೆ ಕ್ಲೋರೀನ್‌ನ ವಾಸನೆ–ಅದಕ್ಕೆ ಸೇರಿದ್ದೆಂದೂ ಅದು ಅದರ ನಿಜಗುಣವೆಂದೂ ರಸಾಯನವಿಜ್ಞಾನಿಗಳು ಭಾವಿಸಿದ್ದಾರೆ. ಗುಣಗಳಿಗೂ ಇಂದ್ರಿಯವೇ ಕಾರಣವಾದರೆ, ಇಂದ್ರಿಯಜ್ಞಾನ ನಿಸ್ಸಂದೇಹಸತ್ಯವಾದರೆ, ಪ್ರಧಾನ ಮತ್ತು ಗೌಣ ಗುಣಗಳೆರಡೂ ಏಕರೀತಿಯಾಗಿ ನಿಶ್ಚಿತಸತ್ಯಗಳಾಗುತ್ತವೆ. ಇಂದ್ರಿಯಗಳ ಸಾಕ್ಷ್ಯವನ್ನು ಅವಲಂಬಿಸಿದರೆ ಲಾಕ್ ಏರ್ಪಡಿಸಿದ ಭೇದಕ್ಕೆ ಅವಕಾಶವಿಲ್ಲದಂತಾಗುತ್ತದೆ. ಅವನಿಂದ ಆಚೆಗೆ ಬಂದ ಬಾರ್ಕ್ಲೆ ಇಂದ್ರಿಯಾನುಭವಗಳ ಆಧಾರದ ಮೇಲೆ ಪ್ರಧಾನ ಮತ್ತು ಗೌಣ ಎಂಬ ಭೇದಗಳನ್ನು ಕಲ್ಪಿಸಲು ಅವಕಾಶವಿಲ್ಲವೆಂದು ಸ್ಪಷ್ಟಪಡಿಸಿದ್ದಾನೆ.

**ಬಿಷಪ್ ಬಾರ್ಕ್ಲೆ** : 1685–1753. ಬಾರ್ಕ್ಲೆ ಐರ್ಲೆಂಡಿನವ. ಕ್ರೈಸ್ತಧರ್ಮಭಕ್ತ, ಕ್ರೈಸ್ತಧರ್ಮ ಬೋಧಕ. ಆದ್ದರಿಂದ ದೇವರನ್ನೇ ತನ್ನ ತತ್ತ್ವದ ಅಡಿಗಲ್ಲಾಗಿ ಮಾಡಿಕೊಂಡದ್ದು ಸ್ವಾಭಾವಿಕವೇ. ಈಶ್ವರ (ಆತನ ತತ್ತ್ವದಲ್ಲಿ) ಪ್ರಥಮತತ್ತ್ವವಾದರೂ ಅದಕ್ಕೆ ಆಧಾರವಾಗಿ ಲಾಕ್ ಇಂದ್ರಿಯಪ್ರಧಾನವಾದವನ್ನು ಅನಿರೀಕ್ಷಿತವಾದ ರೀತಿಯಲ್ಲಿ ಉಪಯೋಗಿಸಿಕೊಂಡ. ಲಾಕ್‌ನ ಪ್ರಕಾರ ನಮ್ಮ ಜ್ಞಾನಕ್ಕೆ ಇಂದ್ರಿಯಾನುಭವವೇ ಆಶ್ರಯ. ಆಕಾರ, ಚಲನೆ, ಬಣ್ಣ, ಶಬ್ದ, ವಾಸನೆ, ರುಚಿ ಇವೇ ಮೂಲ ಭಾವನೆಗಳು. ಪರ್ಯಾಲೋಚನೆಯ ಮೂಲಕ ಇವುಗಳನ್ನು ವಿಧವಿಧವಾಗಿ ಸೇರಿಸುತ್ತೇವೆ. ಹಾಗೆ ಸೇರಿಸಿದ ಭಾವನೆಗಳಲ್ಲಿ ಭೌತವಸ್ತು ಒಂದು. ಇದು ಅಪ್ರತ್ಯಕ್ಷ ಅಂದರೆ ಪರೋಕ್ಷಭಾವನೆ. ಭೌತವಸ್ತು ನಮ್ಮ ಇಂದ್ರಿಯಾನುಭವಗಳು ಹುಟ್ಟುವುದಕ್ಕೆ ಕಾರಣ. ಇವು ಮನಸ್ಸಿನಮೇಲೆ ಇಂದ್ರಿಯಗಳ ಮೂಲಕ ಮುದ್ರೆಯೊತ್ತುತ್ತವೆ. ಹೀಗೆ ಒತ್ತಿದ ಮುದ್ರೆಗಳೇ, ನಕಲುಗಳೇ ಇಂದ್ರಿಯಭಾವನೆಗಳು. ಮನಸ್ಸು ಖಾಲಿ ಸ್ಲೇಟಿನಂತೆ ಬರಿದಾದದ್ದು. ಲಾಕ್‌ನ ಈ ಭಾವನೆಗಳಲ್ಲಿ ಕೆಲವನ್ನು ಒಪ್ಪಿಕೊಂಡು, ಇನ್ನು ಕೆಲವನ್ನು ಅಸಾಧುವೆಂದು ಖಂಡಿಸಿ ಬಾರ್ಕ್ಲೆ ತನ್ನ ತತ್ತ್ವವನ್ನು ಬೆಳೆಸಿದ.

1. ಇಂದ್ರಿಯ ಭಾವನೆಗಳು ನಮ್ಮ ತಿಳಿವಿಗೆ ಮೂಲಭೂತವಾದಂತಹವು ಎಂಬುದನ್ನು ಒಪ್ಪಿಕೊಂಡ. ಅದನ್ನು ಒಂದು ಸೂತ್ರದಲ್ಲಿ ಅಡಗಿಸಿದ. ಯಾವುದಾದರೂ ಇರಬೇಕಾದರೆ ಅದು ಇಂದ್ರಿಯಭಾವನೆಯಾಗಬೇಕು (ಟು ಬಿ ಈಸ್ ಟು ಬಿ ಪರ್ಸೀವ್ಡ್). ಇರವೇ ಇಂದ್ರಿಯದ ಅರಿವು (ಎಸ್ಸೇ–ಪರ್ಸಿಪಿ). ಮನಸ್ಸಿನಲ್ಲಿ ಇರುವುದೆಲ್ಲ ಇಂದ್ರಿಯಾನುಭವಗಳೇ.

2. ಈ ಇಂದ್ರಿಯಾನುಭಗಳಲ್ಲಿ ಕೆಲವು ಪ್ರಧಾನವಾದವು, ಇನ್ನೂ ಕೆಲವು ಗೌಣವಾದವು ಎಂದು ಲಾಕ್ ಹೇಳಿದ್ದನ್ನು ಬಾರ್ಕ್ಲೆ ಒಪ್ಪಲಿಲ್ಲ. ಎಲ್ಲವೂ ಇಂದ್ರಿಯದಿಂದಲೇ ಬಂದುವಾದುದರಿಂದ ಇವುಗಳಲ್ಲಿ ಭೇದವೆಣಿಸುವುದು ಅಸಂಗತವೆಂದು ಹೇಳಿದ.

3. ಲಾಕ್‌ನ ತತ್ತ್ವದಲ್ಲಿ ಈ ಬಗೆಯ ಅಸಾಂಗತ್ಯ ಹುಟ್ಟಲು ಅವನು ಭೌತವಸ್ತು ಎಂಬ ಅಮೂರ್ತ ಭಾವನೆಗಳನ್ನು ಕಲ್ಪಿಸಿಕೊಂಡದ್ದೇ ಕಾರಣ. ನಮ್ಮ ಕಣ್ಣಿಗೆ ಕಾಣುವುವೆಲ್ಲ ಮೂರ್ತರೂಪಗಳೇ. ಇದು ಬಣ್ಣ, ಇದು ರುಚಿ, ಇದು ವಾಸನೆಯುಳ್ಳದ್ದು–ಈ ರೀತಿಯಾಗಿಯೇ ಎಲ್ಲವೂ ನಮ್ಮ ಇಂದ್ರಿಯಗಳಿಗೆ ಗೋಚರವಾಗುವುವು. ಇವುಗಳಿಗೆ ತಳಹದಿಯಾದುದೆಂದು ಲಾಕ್ ಹೇಳಿದ ದ್ರವ್ಯ ಇಂದ್ರಿಯಾನುಭವವೇದ್ಯವಲ್ಲ. ಇದು ಅಮೂರ್ತಭಾವನೆ. ಅಮೂರ್ತಭಾವನೆಗಳು ಕೇವಲ ಕೃತಕವಾದ, ಕಲ್ಪಿತಭಾವನೆಗಳು. ಲಾಕ್ ದ್ರವ್ಯಕ್ಕೆ ಕೊಟ್ಟ ಲಕ್ಷಣ ಅಪಹಾಸ್ಯಕರ. ಅದು ಯಾವ ಬಗೆಯಲ್ಲೂ ನಮಗೆ ತಿಳಿಯದಿರುವುದು. ಹೀಗೆ ನಮಗೆ ತಿಳಿಯದೆ, ಕತ್ತಲೆಯಲ್ಲಿ ಒಂದು ಪ್ರೇತ ಅಡಗಿಕೊಂಡಿದೆ ಎಂಬುದು ಅಡುಗೂಲಜ್ಜಿಯ ಕಥೆ. ಇಂಥ ಅಮೂರ್ತಭಾವನೆಗಳ ಕುರುಡುನಂಬಿಕೆಗಳು. ಆದ್ದರಿಂದ ತತ್ತ್ವಶಾಸ್ತ್ರ ಇಂಥ ಅಮೂರ್ತಭಾವನೆಗಳನ್ನು ಬಿಟ್ಟುಬಿಡಬೇಕು. ಮೊಟ್ಟಮೊದಲು ವರ್ಜಿಸಬೇಕಾದ ಭಾವನೆ–ಭೌತದ್ರವ್ಯ ಇದೆ ಎಂಬ ಭಾವನೆ.

4. ಇರುವುವೆಲ್ಲ ಅನುಭವಕ್ಕೆ ಬಂದ ವಾಸ್ತವಭಾವನೆಗಳು. ಆದರೆ ಅವುಗಳಿಗೆ ಕಾರಣ ಯಾವುದು ಎಂದು ಕೇಳಬಹುದು. ಕಾರಣವಿದೆ. ಕಾರಣವಾಗಬೇಕಾದರೆ ಅದು ಕ್ರಿಯಾಕಾರಿಯಾಗಿರಬೇಕು. ಕ್ರಿಯಾಕಾರಿಯಲ್ಲ ಆದರೂ ಅದು ಕಾರಣವೆಂದು ಹೇಳುವುದು ಅಸಂಗತ. ಕಾರಣ ಕ್ರಿಯಾಕಾರಿಯಾಗಿರಬೇಕಾದರೆ ಅದು ಜಡವಾದ ಭೌತವಸ್ತುವಾಗಲಾರದು. ಅದು ಚೇತನವಸ್ತುವಾಗಿಯೇ ಇರಬೇಕು. ಅಂಥ ವಸ್ತು ಆತ್ಮ. ತಿಳಿವಿಗೆ ಕಾರಣವಾದಾಗ ಅದನ್ನು ಬುದ್ಧಿಯೆಂದು (ಅಂಡರ್‌ಸ್ಟ್ಯಾಂಡಿಂಗ್) ಕರೆಯುತ್ತೇವೆ. ಅದು ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಂಡಾಗ ಅದನ್ನು ಚಿತ್ತ (ವಿಲ್) ಎಂದು ಕರೆಯುತ್ತೇವೆ. ಇಂದ್ರಿಯಭಾವನೆಗಳು ಕಾರ್ಯರೂಪವಾದ್ದರಿಂದ ಅದಕ್ಕೆ ಕಾರಣವಾದ ಆತ್ಮ ಇಂದ್ರಿಯ ರೂಪವಾಗಿರಲಾರದು. ಅದು ಆತ್ಮಕ್ಕೆ ವಿಶಿಷ್ಟವಾದದ್ದು. ಇದನ್ನು ಬಾರ್ಕ್ಲೆ ನೋಷನ್ ಎಂದು ಕರೆದಿರುತ್ತಾನೆ. ಇದನ್ನು ಇಂಗಿತಭಾವನೆ, ಭಾವ, ವಿಚಾರ ಎಂದು ಹೇಳಬಹುದು.

5. ಇಂದ್ರಿಯಭಾವನೆಗಳನ್ನು ಆತ್ಮ ಕೂಡಿಸಬಲ್ಲುದೇ ಹೊರತು, ಸೃಷ್ಟಿಸಲಾರದು. ಕೆಂಪಾಗಿರುವುದನ್ನು ಕೆಂಪಾಗಿಮಾಡುವುದು ನಮ್ಮ ಚಿತ್ತಕ್ಕೆ ಮೀರಿದ ಕೆಲಸ. ನೋವು ನಮ್ಮ ಇಂದ್ರಿಯದ ಅನುಭವ. ನಮ್ಮನ್ನು ಬಿಟ್ಟು ತೊಲಗು ಎಂದರೆ ಅದು ತೊಲಗುವುದಿಲ್ಲ. ಭಾರ ಇಳಿಯಲಿ ಎಂದರೆ ಅದು ಇಳಿದುಹೋಗುವುದಿಲ್ಲ. ನಾವು ನೋಡದಿದ್ದಾಗಲೂ ಕಣ್ಣುಮುಚ್ಚಿಕೊಂಡಾಗಲೂ ಅವು ಇದ್ದೇ ಇರುತ್ತವೆ. ಇವು ಒಂದು ಕ್ರಮಕ್ಕೆ ಒಂದು ಕಟ್ಟಿಗೆ ಒಳಪಟ್ಟಿವೆ. ಆ ಕ್ರಮ ಕಟ್ಟು ನಾವೇ ಏರ್ಪಡಿಸಿದವುಗಳಲ್ಲ. ನಾವು ಕಣ್ಣುಮುಚ್ಚಿದಾಗಲೂ

ಅವು ಇರಬೇಕಾದರೆ, ನಮ್ಮ ಯತ್ನವನ್ನು ಲೆಕ್ಕಿಸದೆ ಅವು ಕ್ರಮಬದ್ಧವಾಗಿದ್ದರೆ, ಅದಕ್ಕೆ ನಾವು ಕಾರಣವಾಗಲಾರೆವು. ಜಡವಸ್ತುವೂ ಕಾರಣ ಆಗಲಾರದು. ಆದ್ದರಿಂದ ಅದು ಒಂದು ಸ್ವತಂತ್ರವಾದ, ಶಕ್ತಿಯುತವಾದ ಚೇತನವಾಗಿರಬೇಕು. ಆ ಚೇತನವೇ ಈಶ್ವರ. ಈ ಈಶ್ವರ ನಮ್ಮ ಇಂದ್ರಿಯಗಳ ಮೇಲೆ ಒತ್ತಿದ ಭಾವನೆಗಳೇ ಇಂದ್ರಿಯ ಭಾವನೆಗಳು. ಅವು ಅವನ ಕಟ್ಟಿಗೆ ಸಿಕ್ಕಿದ ಭಾವನೆಗಳು.

6. ಬಾರ್ಕ್ಲೆಯಲ್ಲಿ ಲಾಕ್‌ನ ತತ್ತ್ವದ ಕೆಲವು ದೋಷಗಳು ಮುಂದುವರಿದಿವೆ. (i) ಆತ ಇಂದ್ರಿಯಭಾವನೆ ಎಂಬ ಪದವನ್ನು ಎರಡರ್ಥಗಳಲ್ಲಿ ಉಪಯೋಗಿಸಿರುತ್ತಾನೆ. ಇಂದ್ರಿಯವೃತ್ತಿ (ಸ್ಟೇಟ್ ಆಫ್ ಸೆನ್‌ಸೇಷನ್) ಎಂಬುದನ್ನು ಇಂದ್ರಿಯಭಾವವೆಂದು ಕರೆದಿದ್ದಾನೆ. ಇಂದ್ರಿಯವಿಷಯವನ್ನು (ಆಬ್ಜೆಕ್ಟ್ ಆಫ್ ಸೆನ್‌ಸೇಷನ್) ಇಂದ್ರಿಯಭಾವನೆ ಯೆಂದು ಕರೆದಿದ್ದಾನೆ. ಈ ಅಸಂದಿಗ್ಧತೆ ಇಲ್ಲಿ ಮುಂದುವರಿದಿದೆ. (ii) ಕಾರ್ಯಕಾರಣಭಾವನೆ ಇಂದ್ರಿಯಭಾವನೆಯಲ್ಲ. ಇಂದ್ರಿಯಭಾವನೆಗಳೇ ಜ್ಞಾನಕ್ಕೆ ಆಶ್ರಯವೆಂಬ ಭಾವನೆ ಲಾಕ್‌ನ ತತ್ತ್ವದ ಮೂಲಭಾವನೆ. ಆದ್ದರಿಂದ ಭೌತವಸ್ತುವಿನ ಭಾವನೆ ಕೇವಲ ಕಲ್ಪನೆ ಎಂಬುದು ಬಾರ್ಕ್ಲೆ ಭಾವಿಸಿದ್ದು ಆ ಮೂಲಭಾವನೆಗೆ ಸಂಗತ. ಆ ತರ್ಕಕ್ಕೆ ವಿರುದ್ಧವಾಗಿ ಇಂದ್ರಿಯಾನು ಭವಗಳಿಗೆ ಕಾರಣವಾಗಿ ಚೇತನವಸ್ತುವಿದೆ ಎಂದು ವಾದಿಸಿದ್ದು ಅಸಂಗತ. ಬಿಡಿಬಿಡಿಯಾದ ಇಂದ್ರಿಯಾನುಭವಗಳೇ ಮೂಲವಾದವು ಎಂದು ಭಾವಿಸಿದರೆ, ಭೌತವಸ್ತುವಿನ ಭಾವನೆಗೂ ಅವಕಾಶವಿಲ್ಲ. ಚೇತನವಸ್ತುವಿನ ಭಾವನೆಗೂ ಅವಕಾಶವಿಲ್ಲ. ಚೇತನವಸ್ತುವಿನ ವಿಚಾರದಲ್ಲಿ ಬಾರ್ಕ್ಲೆ ವಾದದಲ್ಲಿ ಪಕ್ಷಪಾತ ಸ್ಪಷ್ಟವಾಗಿ ಕಾಣಿಸುತ್ತದೆ.

7. ಅವನ ತತ್ತ್ವದಲ್ಲಿ ಈಶ್ವರಭಾವನೆಯಲ್ಲೂ ಅನ್ಯೋನ್ಯಾಶ್ರಯ ದೋಷವಿದೆ. ಈಶ್ವರಭಾವನೆಗೆ ಮಾನವನ ಭಾವನೆಗಳು ಆಶ್ರಯ. ಮಾನವನ ಭಾವನೆಗಳಿಗೆ ಈಶ್ವರಭಾವನೆ ಆಶ್ರಯ. ನಮ್ಮ ಕಣ್ಣಿಗೆ ಕಾಣುವ ಭಾವಗಳೇ ನಿಜವಾದ ಭಾವನೆಗಳಾದರೆ, ನಮ್ಮ ಕಣ್ಣಿಗೆ ಕಾಣದ ಈಶ್ವರಭಾವನೆ ಇದೆ ಎಂದು ಹೇಳಲಾಗುವುದಿಲ್ಲ. ಅದು ಅವಕ್ಕೆ ಆಶ್ರಯವಾಗಲಾರದು. ಹೀಗೆ ಇವನ ವಾದದಲ್ಲಿ ಅನ್ಯೋನ್ಯಾಶ್ರಯ ತರ್ಕಾಭಾಸ (ಫ್ಯಾಲಸಿ ಆಫ್ ಬೆಗಿಂಗ್ ದಿ ಕ್ವೆಶ್ಚನ್) ಸ್ಪಷ್ಟವಾಗಿ ಕಾಣಿಸುತ್ತದೆ, ಇದನ್ನು ಅನಂತರ ಬಂದ ಡೇವಿಡ್ ಹ್ಯೂಮ್ ತೋರಿಸಿಕೊಟ್ಟು ಇಂದ್ರಿಯಾನುಭವವೇ ಮೂಲವಾದರೆ ಆತ್ಮ, ಈಶ್ವರ ಮುಂತಾದ ಅಮೂರ್ತ ಭಾವನೆಗೆ ಅವಕಾಶವೇ ಇಲ್ಲವೆಂದು ಸ್ಪಷ್ಟಪಡಿಸಿದ.

**ಡೇವಿಡ್ ಹ್ಯೂಮ್** : 1711–76. ಸ್ಕಾಟ್ಲೆಂಡಿನವ. ಅವನ ಜೀವಿತಕಾಲದಲ್ಲಿ ಜನರಿಗೆ ಮೆಚ್ಚುಗೆಯಾದುವು ಆತನ ಚರಿತ್ರೆಯ ಗ್ರಂಥ ಮತ್ತು ಪ್ರಬಂಧಗಳು. ಅವನ ಹೆಸರು ಸ್ಥಿರವಾಗಿ ಉಳಿದಿರುವುದು ಆತನ ಮುಖ್ಯ ತಾತ್ತ್ವಿಕ ಗ್ರಂಥವಾದ ಟ್ರೀಟೈಸ್ ಆನ್ ಹ್ಯೂಮನ್ ನೇಚರ್‌ನಿಂದ. ಅದನ್ನು ಪ್ರಕಟಿಸಿದಾಗ ಜನ ಅದನ್ನು ಓದಲಿಲ್ಲ. ಅವನೇ ಹೇಳಿರುವಂತೆ, ಮುದ್ರಣಾಲಯದಿಂದ ಹೊರಬಿದ್ದ ಸಮಯದಲ್ಲೇ ಅದು ಸತ್ತಿತು. ಆದರೆ ಅದು ಅವನ ತರುವಾಯ ನಿರ್ವಿಚಾರವಾದಿಯಾಗಿ ತೂಕಡಿಸುತ್ತಿದ್ದ ಕ್ಯಾಂಟ್‌ನನ್ನು ಬಡಿದೆಬ್ಬಿಸಿತು. ಲಾಕ್‌ನಿಂದ ಪ್ರಾರಂಭವಾದ ಅನುಭವ ಪ್ರಧಾನವಾದ ಹ್ಯೂಮ್‌ನ ತತ್ತ್ವದಲ್ಲಿ ಪರಾಕಾಷ್ಠೆಯನ್ನು ಮುಟ್ಟಿತು. ಇಂದ್ರಿಯ ಪ್ರತ್ಯಕ್ಷವೇ ಮೂಲ ಆಸರೆಯಾದರೆ ಭೌತವಸ್ತುವಾಗಲಿ, ಆತ್ಮವಾಗಲಿ, ಈಶ್ವರನಾಗಲಿ ಇರುವುದೆಂದು ಸ್ಥಾಪಿಸಲು ಅಸಾಧ್ಯವಾಗುತ್ತದೆ. ಭೌತವಿಜ್ಞಾನ, ಆತ್ಮವಿಜ್ಞಾನ, ಈಶ್ವರನನ್ನು ಕುರಿತ ಮತಜ್ಞಾನ–ಇವೆಲ್ಲವೂ ಸಂದೇಹಗ್ರಸ್ತವಾದುವು. ಈ ನಂಬಿಕೆಗಳಿಗೆ ಇಂದ್ರಿಯಾನುಭವ ಆಶ್ರಯವಾಗಲಾಗದು. ಇಂದ್ರಿಯಾನುಭವವೇ ಪ್ರಾಮಾಣಿಕ ಜ್ಞಾನವಾದರೆ ಈ ನಂಬಿಕೆಗಳನ್ನು ಜ್ಞಾನವೆಂದು ಪರಿಗಣಿಸಲಾಗುವುದಿಲ್ಲ. ಇವು ನಿರ್ವಿಚಾರ (ಡಾಗ್ಮ್ಯಾಟಿಕ್) ನಂಬಿಕೆಗಳಾಗುತ್ತವೆ. ಇವು ಸ್ವತಸ್ಸಿದ್ಧವಲ್ಲ, ಸಂಶಯಗ್ರಸ್ತವಾದುವು.

ಹ್ಯೂಮ್ ಕೇವಲ ಸಂಶಯವಾದಿಯಲ್ಲ. ಈ ಭಾವನೆಗಳೆಲ್ಲ ಸಂಶಯಗ್ರಸ್ತವಾದುವಾದರೂ ಇವು ಜನರ ಬಾಳಿನಲ್ಲಿ ತುಂಬ ಪರಿಣಾಮಕಾರಿಗಳಾಗಿವೆ. ಈ ನಂಬಿಕೆಗಳಿಲ್ಲದಿದ್ದರೆ ನಮ್ಮ ಜೀವನ ವ್ಯವಹಾರವೇ ಕುಸಿದುಬೀಳುತ್ತದೆ. ಆದ್ದರಿಂದ ಇವು ಅಪ್ರಯೋಜಕವಾದುವು. ಜೀವನಕ್ಕೆ ಅನಗತ್ಯವಾದುವು ಎಂದು ಭಾವಿಸುವುದೂ ಒಂದು ಬಗೆಯ ನಿರ್ವಿಚಾರವಾದವಾಗುತ್ತದೆ. ತಾತ್ತ್ವಿಕವಾಗಿ ಇವು ನಂಬಲರ್ಹವೆಂದು ಭಾವಿಸಬಹುದೇ ಹೊರತು, ಜೀವನದಲ್ಲಿ ಇವು ವಾಸ್ತವವಾಗಿ ಪರಿಣಾಮಕಾರಿಯಾಗಿರುತ್ತವೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ. ಇದೂ ಸಂದೇಹಕರವೆಂದು ಹೇಳುವುದು ನಿರ್ವಿಚಾರಸಂದೇಹ. ಪ್ರಾಮಾಣಿಕನಾದ ಸಂದೇಹವಾದಿಯಾದವ ತಾನು ಸಂದೇಹಕರವೆಂದು ತಿಳಿದ ತತ್ತ್ವಗಳ ವಿಚಾರದಲ್ಲೂ ತಾನು ನೆಚ್ಚಿದ ತತ್ತ್ವಗಳ ವಿಚಾರವಾಗಿಯೂ ಒಂದೇ ಪ್ರಕಾರ ಶಂಕೆ ಇಟ್ಟುಕೊಂಡಿರುತ್ತಾನೆ–ಎಂದೂ ಹ್ಯೂಮ್ ತನ್ನ ಅಂತರಂಗವನ್ನು ತೆರೆದಿಟ್ಟಿದ್ದಾನೆ. ಬೇರೆ ಯಾವ ಫಲವನ್ನೂ ನಿರೀಕ್ಷಿಸದೆ ತತ್ತ್ವಜಿಜ್ಞಾಸೆಯಲ್ಲಿ ಒಂದು ಬಗೆಯಾದ ಸುಖವಿದೆ. ಅದನ್ನು ಬೇಡವೆನ್ನಲಾಗದು. ಆದರೆ ಅದೊಂದರಿಂದಲೇ ಜೀವನ ನಡೆಯುವುದಿಲ್ಲ. ಜೀವನದ ನಡವಳಿಕೆಯ ದೃಷ್ಟಿಯಿಂದ ವ್ಯವಹಾರದ ದೃಷ್ಟಿಯಿಂದ ನಮಗೆ ಹಿತವಾದದ್ದು ಯಾವುದು, ಅಹಿತವಾದದ್ದು ಯಾವುದು, ಎಂಬುದನ್ನು ನಾವು ನಿಶ್ಚಯಿಸಿಕೊಳ್ಳುವುದು ಅಗತ್ಯ. ಈ ವಿಚಾರದಲ್ಲಿ ಪ್ರಯೋಜನವೇ ಪ್ರಮಾಣ. ವಿಚಾರದೃಷ್ಟಿಯಿಂದ ಕೆಲವು ಭಾವನೆಗಳು ಸಂದೇಹಾಸ್ಪದವಾದವಾಗಿರಬಹುದು. ಅವುಗಳ ಸತ್ಯ ಸಂಭವನೀಯ ಸತ್ಯವಾಗಿರಬಹುದು. ಆಚರಣೆಯಲ್ಲಿ ಅವು ಸತ್ಪರಿಣಾಮಕಾರಿಯಾದರೆ ಅವುಗಳನ್ನು ತ್ಯಜಿಸಲಾಗದು. ಪ್ರಯೋಜನವಾದಷ್ಟು ಮಟ್ಟಿಗೆ ಅವು ಪ್ರಾಯೋಗಿಕ ಸತ್ಯಗಳು. ಹ್ಯೂಮ್ ಸೂಚಿಸಿದ ಈ ಅಂಶಗಳನ್ನು ಕ್ಯಾಂಟ್ ಬೆಳೆಸಿದ. ಅವನ ತರುವಾಯ ಫಲವಾದಿಯಾದ ವಿಲಿಯಮ್ ಜೇಮ್ಸ್ ಮುಂದುವರಿಸಿದ.

ಲಾಕ್ ಮತ್ತು ಬಾರ್ಕ್ಲೆಗಳ ವಾದಕ್ಕೆ ಮೂಲಭೂತವಾದ ಇಂದ್ರಿಯಭಾವನೆಗಳನ್ನು ಮಾತ್ರ ತನಗೆ ಸಂಗತವೆಂದು ಹ್ಯೂಮ್ ಆಯ್ದುಕೊಂಡ. ಇತರವು ಅಸಂಗತವೆಂದು ನಿರ್ದಾಕ್ಷಿಣ್ಯವಾಗಿ ತೊರೆದುಬಿಟ್ಟ. ಆಯ್ದುಕೊಂಡ ಅಂಶವನ್ನು ಈ ರೀತಿ ತಿಳಿಸಿರುತ್ತಾನೆ:

1. ಮಾನವನ ಪ್ರತ್ಯಕ್ಷ ಅನುಭವಗಳನ್ನು ವಿಭಜಿಸಿದಾಗ ಅವು ಎರಡು ಬಗೆಯಾಗಿರುತ್ತವೆ. ಅವೇ ಮುದ್ರೆಗಳು ಮತ್ತು ಭಾವನೆಗಳು. ಅವೆರಡಕ್ಕೆ ಇರುವ ಭೇದ ಕೇವಲ ಪರಿಮಾಣದ್ದು. ಮನಸ್ಸಿನೊಳಕ್ಕೆ ಬಿರುಸಾಗಿ ಬಲವಾಗಿ ಪ್ರವೇಶಿಸುವ ಪ್ರತ್ಯಕ್ಷಾನುಭಗಳನ್ನು ಮುದ್ರೆಗಳು (ಇಂಪ್ರೆಷನ್ಸ್) ಎಂದು ಕರೆಯಬಹುದು. ಈ ನಾಮಧೇಯದಲ್ಲಿ ಮೊಟ್ಟಮೊದಲಿಗೆ ನಮ್ಮ ಮನಸ್ಸಿನಲ್ಲಿ ಕಾಣಿಸಿಕೊಳ್ಳುವ ನಮ್ಮೆಲ್ಲ ಇಂದ್ರಿಯಾನುಭವಗಳನ್ನೂ, ರಾಗಗಳನ್ನೂ (ಪ್ಯಾಷನ್ಸ್), ಭಾವಗಳನ್ನೂ (ಎಮೋಷನ್ಸ್) ಒಟ್ಟಿಗೆ ಸೇರಿಸಲಾಗಿದೆ. ಭಾವನೆಗಳು (ಐಡಿಯಾಸ್) ಎಂದರೆ ನಾವು ಆಲೋಚಿಸಿದಾಗ ವಿಚಾರ ಮಾಡಿದಾಗ ತೋರುವಂತಹವು. ಇವು ಮಸುಕಾದ ಪ್ರತಿಬಿಂಬಗಳು. ಮುದ್ರೆಗಳು ಬಿರುಸಾಗಿ ಬಲವಾಗಿ ಮನಸ್ಸಿನಲ್ಲಿ ನಾಟಿದುವು. ಅವುಗಳನ್ನೇ ನಾವು ಯೋಚಿಸಿದಾಗ ಅವು ಬಲ ಕುಗ್ಗಿದಂತೆ ತೋರುತ್ತವೆ. ವ್ಯತ್ಯಾಸವಿರುವುದು ಬಿರುಸಿನ ಪ್ರಮಾಣದಲ್ಲಿ ಮಾತ್ರ. ನಕಲುಗಳಿಗೆ ಮೂಲದಷ್ಟು ಪ್ರಾಬಲ್ಯವಿಲ್ಲ.

2. ಮುದ್ರೆಗಳು, ಭಾವನೆಗಳು, ಸರಳವಾಗಿರಬಹುದು ಅಥವಾ ಸಂಕೀರ್ಣವಾಗಿರಬಹುದು. ಸರಳ ಭಾವನೆಗಳು ಮುದ್ರೆಗಳ ನಕಲುಗಳು. ಆದರೆ ಸಂಕೀರ್ಣಭಾವಗಳು ಮುದ್ರೆಗಳ ತದ್ವತ್ತಾದ ನಕಲುಗಳಾಗಬೇಕಾಗಿಲ್ಲ. ಸಂಕೀರ್ಣಭಾವನೆಗಳು ಸರಳ ಭಾವನೆಗಳಿಗಿಂತ ಎರಡು ಬಗೆಯಲ್ಲಿ ಭಿನ್ನವಾಗಿರಬಹುದು. ಬೇರೆ ಬೇರೆಯಾಗಿ ಪಡೆದ ಮುದ್ರೆಗಳನ್ನು ಸೇರಿಸಬಹುದು. ರೆಕ್ಕೆಗಳಿರುವ ಕುದುರೆ, ಹಾಗೆ ಸೇರಿಸಿ ಪಡೆದ ಸಂಕೀರ್ಣ ಭಾವನೆಗೆ ಒಂದು ಉದಾಹರಣೆ. 3. ಮುದ್ರೆಗಳಲ್ಲಿರುವ ಒಂದನ್ನು ಬಿಟ್ಟು ಒಂದನ್ನು ಭಾವಿಸಬಹುದು. ಉದಾ: ಬಣ್ಣವನ್ನು ಬಿಟ್ಟು ಆಕಾರವನ್ನು ಮಾತ್ರ ಭಾವಿಸಬಹುದು. ಆದರೆ ಮೂಲ ಇಂದ್ರಿಯಾನುಭವವಿಲ್ಲದ ಯಾವುದನ್ನೂ ನಮ್ಮ ಮನಸ್ಸು ಸೃಷ್ಟಿಸಲಾರದು. ಕೇಳದ ಶಬ್ದವನ್ನಾಗಲಿ, ನೋಡದ ಬಣ್ಣವನ್ನಾಗಲಿ, ಆಕಾರವನ್ನಾಗಲಿ, ಅನುಭವಿಸದ ರಾಗವನ್ನಾಗಲಿ ಭಾವಿಸುವುದು ಸಾಧ್ಯವಿಲ್ಲ.

**ಹ್ಯೂಮ್ ನಿರಾಕರಿಸಿದ ಅಂಶಗಳು** : ಲಾಕ್ ಎರಡು ದ್ರವ್ಯಗಳನ್ನು (ಭೌತ ಮತ್ತು ಮಾನಸಿಕ) ಒಪ್ಪಿರುತ್ತಾನೆ. ಬಾರ್ಕ್ಲೆ ಮಾನಸಿಕ ದ್ರವ್ಯಗಳನ್ನು ಮಾತ್ರ ಒಪ್ಪಿರುತ್ತಾನೆ. ಹ್ಯೂಮ್ ಯಾವ ಬಗೆಯ ದ್ರವ್ಯವನ್ನೂ ಒಪ್ಪುವುದಿಲ್ಲ. ದ್ರವ್ಯ ಎಂಬ ಭಾವನೆಯನ್ನು ನಾವು ಎಷ್ಟೇ ತೀಕ್ಷ್ಣವಾಗಿ ಚಿಂತಿಸಿದರೂ ಅದು ನಮಗೆ ಕಾಣಿಸುವುದಿಲ್ಲ. ಅದು ಯಾವ ಬಗೆಯಾದ ಇಂದ್ರಿಯದ ಮುದ್ರೆಯ ನಕಲೂ ಅಲ್ಲ. ಯಾವ ಇಂದ್ರಿಯ ಭಾವನೆಯನ್ನು ಸೇರಿಸಿದರೂ ಅದು ನಮ್ಮ ಮನಸ್ಸಿನಲ್ಲಿ ಉದ್ಭವವಾಗುವುದಿಲ್ಲ. ಅದನ್ನು ನಾವು ಇಂದ್ರಿಯದ ಮೂಲಕ ಪಡೆಯಬಹುದೆಂದರೆ, ಅದು ಯಾವ ಇಂದ್ರಿಯ? ಕಿವಿಯಿಂದ ಪಡೆದುದಾದರೆ ಅದು ಶಬ್ದವಾಗಿರಬೇಕು. ಅದು ಶಬ್ದವಲ್ಲ. ನಾಲಗೆಯಿಂದ ಪಡೆದುದಾದರೆ ಅದು ರುಚಿಯಾಗಿರಬೇಕು. ಅದು ರುಚಿ ಇಲ್ಲದ್ದು. ದ್ರವ್ಯ ಬಣ್ಣವೆಂದಾಗಲಿ, ರುಚಿಯೆಂದಾಗಲಿ, ಶಬ್ದವೆಂದಾಗಲಿ ಯಾರೂ ಸಾಧಿಸಿ ಹೇಳುವುದಿಲ್ಲ. ಹಾಗೆಯೇ ಪರ್ಯಾಲೋಚನೆಯಿಂದಲೂ ನಮಗೆ ದ್ರವ್ಯವೆಂಬ ಭಾವನೆ ತಿಳಿಯುವುದಿಲ್ಲ. ಮೊದಲಲ್ಲಿ ನಮ್ಮ ಇಂದ್ರಿಯಾನುಭವಕ್ಕೆ ಬಾರದ ಯಾವ ಅಂಶವೂ ಪರ್ಯಾಲೋಚನೆಗೆ ವಿಷಯವಾಗಲಾರದು. ನಮಗೆ ತಿಳಿದಿರುವುದು ಇಂದ್ರಿಯಭಾವನೆಗಳ ಒಂದು ಗುಂಪು ಮಾತ್ರವೇ. ಈ ಅಮೂರ್ತ ದ್ರವ್ಯಭಾವನೆಗಳೂ ಅನುಭವಸಿದ್ಧವಲ್ಲ. ಕಾರ್ಯಕಾರಣಭಾವವೂ ಇಂದ್ರಿಯಾನುಭವದಿಂದ ಪಡೆಯಲಾಗದ ಭಾವನೆ. ಒಂದು ಮುದ್ರೆಯ ಅನಂತರ ಇನ್ನೊಂದು ಮುದ್ರೆ ಬರುತ್ತದೆ. ಇದು ಅನುಭವ ಸಿದ್ಧ, ಪ್ರಸಿದ್ಧ. ಆದರೆ ಹಿಂದಿನದು ಮುಂದಿನದರ ಕಾರಣವೆಂಬ ಭಾವನೆ ನಮ್ಮ ಅನುಭವಕ್ಕೆ ಬಂದ ವಿಷಯವಲ್ಲ. ಈ ಭಾವನೆಗೆ ಸಮನಾದ ಇಂದ್ರಿಯದ ಮುದ್ರೆಯಾಗಲಿ, ತದ್ಗಮ್ಯವಾದ ಭಾವನೆಯಾಗಲಿ ಇರುವುದಿಲ್ಲ. ಈ ಭಾವನೆ ಮನಸ್ಸಿನ ಒಂದು ಚಾಳಿ.

ಹಾಗೆಯೇ ಆತ್ಮವಸ್ತುವಿಗೂ ಅದಕ್ಕೆ ಸಮಾನವಾದ ಇಂದ್ರಿಯದ ಮುದ್ರೆಯಾಗಲಿ, ನಕಲಾದ ಭಾವನೆಯಾಗಲಿ ಇರುವುದಿಲ್ಲ. ಆತ್ಮವೆಂದು ನಾವು ಯಾವುದನ್ನು ಕರೆಯುತ್ತೇವೆಯೋ ಅದೂ ಕೂಡ ಒಂದನ್ನೊಂದು ಹಿಂಬಾಲಿಸುವ ಮಾನಸಿಕ ವೃತ್ತಿಗಳ ಒಂದು ಕಂತೆ ಅಥವಾ ಸಮೂಹ.

ನಮ್ಮ ಮಾನಸಿಕ ಶಕ್ತಿ ಬಹಳ ಪರಿಮಿತ. ಅದು ಭೌತವಸ್ತು ಮತ್ತು ಆತ್ಮ ಇಂಥ ಸಾಧಾರಣ ವಿಷಯಗಳನ್ನೇ ತಿಳಿಯಲು ಅಸಮರ್ಥವಾಗಿರುವುದರಿಂದ ಅದಕ್ಕೆ ಈಶ್ವರನನ್ನು ತಿಳಿಯುವ ಬಲ ಎಲ್ಲಿಂದ ಬರಬೇಕು? ಒಂದು ಪಕ್ಷ ಈಶ್ವರನಿದ್ದಾನೆಂದು ಹೇಳಿದರೂ

ಆತನ ಪರಿಪೂರ್ಣತೆಯನ್ನಾಗಲಿ, ಸರ್ವಶಕ್ತಿಯನ್ನಾಗಲಿ, ವಿಶ್ವವನ್ನು ಸೃಷ್ಟಿಸಿದ್ದರ ಉದ್ದೇಶವನ್ನಾಗಲಿ ನಾವು ತಿಳಿಯಲು ಸಮರ್ಥರಲ್ಲ. ಅಲ್ಲದೆ ಮಾನವಗುಣಗಳನ್ನು ಈಶ್ವರನಿಗೆ ಆರೋಪಿಸುವುದು ಕೇವಲ ಅನಾಗರಿಕ ಮನೋಭಾವನೆ. ಅವನಿಗೆ ಮಾನವಗುಣಗಳನ್ನು ಆರೋಪಿಸಿದರೆ, ಮಾನವರ ಲೋಪಗಳನ್ನು ಆರೋಪಿಸಿದಂತಾಗುತ್ತದೆ. ಈಶ್ವರ ಪರಿಪೂರ್ಣನಾದರೆ ಅಪರಿಪೂರ್ಣವಾದ ವಿಶ್ವವನ್ನೂ ಮಾನವನನ್ನೂ ಏಕೆ ಸೃಷ್ಟಿಸಿದ? ಪರಿಪೂರ್ಣವಾದ್ದರಿಂದ ಪರಿಪೂರ್ಣವಾದದ್ದು ಹುಟ್ಟಬಹುದೇ ವಿನಾ ಅಪರಿಪೂರ್ಣವಾದ ವಿಶ್ವ ಮತ್ತು ಮಾನವ ಹುಟ್ಟಲು ಸಾಧ್ಯವಿಲ್ಲ. ಈಶ್ವರ ಒಳ್ಳೆಯವ, ದಯಾಮಯ ಎಂದು ಹೇಳುವುದುಂಟು. ಹಾಗಿದ್ದರೆ ಆತ ಸೃಷ್ಟಿಸಿದ ಈ ವಿಶ್ವದಲ್ಲಿ ಇಷ್ಟೊಂದು ದುಃಖವೇಕಿದೆ? ಮಾನವ ಅಜ್ಞ, ದೇವರ ಸ್ವಭಾವವನ್ನೂ ಅವನ ಉದ್ದೇಶವನ್ನೂ ಅರಿತುಕೊಳ್ಳಲಾರ ಎಂದು ಹೇಳುವುದುಂಟು. ಅವನಿಗೆ ಆ ಶಕ್ತಿ ಇಲ್ಲ ಎಂಬುದು ನಮಗೂ ಸಮ್ಮತವೇ. ಆದರೆ ತಿಳಿಯದುದರ ವಿಚಾರವಾಗಿ ವಾದವೇಕೆ? ಒಬ್ಬ ತನಗೆ ತಿಳಿದಿರುವುದರ ಆಧಾರದ ಮೇಲೆ ಅನುಮಿತಿಗಳನ್ನು ಏರ್ಪಡಿಸಬೇಕೇ ಹೊರತು ತಿಳಿಯದುದರ ಆಧಾರದ ಮೇಲಲ್ಲ. ಅದು ವಿವೇಕವಲ್ಲ.

ಅಲ್ಲದೆ ಮತದ ಹುಟ್ಟು ಬೆಳೆವಣಿಗೆಗಳನ್ನು ತಿಳಿದುಕೊಂಡಾಗ ದೇವರ ಸ್ವರೂಪವನ್ನು ಎಲ್ಲ ಜನರೂ ಒಂದೇ ರೀತಿಯಾಗಿ ಚಿತ್ರಿಸಿಕೊಂಡಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಎಲ್ಲ ಮತಗಳೂ ಈಶ್ವರನನ್ನು ನಂಬುವುದಿಲ್ಲ. ಮತಕ್ಕೆ ಇಂಥ ಗುಣಗಳುಳ್ಳ ದೇವರೇ ಅಗತ್ಯವೆಂದು ಹೇಳಲಾಗುವುದಿಲ್ಲ. ಅಲ್ಲದೆ ಮತಭಾವಕ್ಕೆ ತರ್ಕ ಕಾರಣವೆಂದೂ ಹೇಳಲಾಗುವುದಿಲ್ಲ. ನಮ್ಮ ಜೀವನದಲ್ಲಿ ತರ್ಕಕ್ಕಿಂತಲೂ ನಮ್ಮಲ್ಲಿ ಬೇರೂರಿರುವ ವಾಸನೆಗಳೂ (ಇನ್‌ಸ್ಟಿಂಕ್ಟ್ಸ್) ಮತ್ತು ಭಾವಗಳೂ (ಫೀಲಿಂಗ್ಸ್) ಹೆಚ್ಚು ಪ್ರಚೋದನಕಾರಿಗಳು. ಸೌಂದರ್ಯವೇನೆಂದು ನಾವು ತರ್ಕಿಸಿ ತಿಳಿದು ಸವಿಯುವುದಿಲ್ಲ. ಅನೇಕ ವೇಳೆ ತರ್ಕಿಸಿದಾಗ ಸೌಂದರ್ಯಭಾವ ಬತ್ತಿಹೋಗುವ ಸಂಭವವೇ ಹೆಚ್ಚು. ತಾಯಿ ಮಗುವನ್ನು ತರ್ಕದಿಂದ ತಿಳಿದು ಪ್ರೀತಿಸುವುದಿಲ್ಲ. ಮತಭಾವಕ್ಕೂ ಹಾಗೆಯೇ ನಮ್ಮ ಭಾವಗಳು ಮುಖ್ಯ ಕಾರಣಗಳಿರಬಹುದು. ಆ ಮೂಲಭಾವಗಳು ದುಷ್ಪರಿಣಾಮಕಾರಿಗಳಾದಂತೆ ತರ್ಕ ಸ್ವಲ್ಪಮಟ್ಟಿಗೆ ನಮ್ಮನ್ನು ಅವಿವೇಕದಿಂದ ಬಿಡುಗಡೆ ಮಾಡಬಹುದೇ ಹೊರತು ಆ ಭಾವವನ್ನು ಹುಟ್ಟುಹಾಕಲಾರದು. ಯಾವುದು ಧರ್ಮ, ಯಾವುದು ಅಧರ್ಮವೆಂಬುದನ್ನು ನಿರ್ಧರಿಸಲು ಜೀವನದಲ್ಲಿ ಅವುಗಳಿಂದ ಉಂಟಾಗುವ ಸತ್ಪರಿಣಾಮಗಳನ್ನೇ ಪ್ರಮಾಣವಾಗಿ ಆಧರಿಸಬೇಕು. ಧರ್ಮಕ್ಕೆ ಮುಖ್ಯವಾದದ್ದು ಭಾವಶುದ್ಧಿ, ಭಾವಸಿದ್ಧಿ. ಇವುಗಳನ್ನು ಯಾವ ಮತಭಾವನೆ ಏರ್ಪಡಿಸುತ್ತದೆಯೋ ಅದೇ ಒಳ್ಳೆಯ ಮತ. ಆ ಮತ ಜೀವನಪರಿಸ್ಥಿತಿ ಬದಲಾಯಿಸಿದಂತೆಲ್ಲ ಬದಲಾಯಿಸಬೇಕು, ಬೆಳೆಯಬೇಕು. ಯಾವುದೋ ಒಂದು ಬುದ್ಧ್ಯಾರೂಢವಾದ ಆತ್ಮತತ್ತ್ವ (ರ್‍ಯಾಷನಲ್ ಸೈಕಾಲಜಿ) ಅಸಾಧ್ಯ. ಕೇವಲ ಬುದ್ಧ್ಯಾರೂಢವಾದ ಆತ್ಮತತ್ತ್ವ (ರ್‍ಯಾಷನಲ್ ಕಾಸ್ಮಾಲಜಿ) ಅಸಾಧ್ಯ. ಕೇವಲ ಬುದ್ಧ್ಯಾರೂಢವಾದ ಮತತತ್ತ್ವವೂ (ರ್‍ಯಾಷನಲ್ ಥಿಯಾಲಜಿ) ಅಸಾಧ್ಯ. ಈ ಭಾವನೆಗಳು ಕ್ಯಾಂಟ್‌ನ ತತ್ತ್ವವನ್ನು ಪ್ರಚೋದನೆಗೊಳಿಸಿದವು.

**ಇಮ್ಯಾನ್ಯುಯಲ್ ಕಾಂಟ್** : 1724–1804. ಹುಟ್ಟಿದ್ದು ಜರ್ಮನಿಯ ಕೋನಿಗ್ಸ್‌ಬರ್ಗ್‌ನಲ್ಲಿ. ಹುಟ್ಟಿದಂದಿನಿಂದ ಸಾಯುವವರೆಗೂ ಆ ನಗರದ ಸುತ್ತಿನಲ್ಲೇ ಬಾಳಿದ. ವಿದ್ಯಾಭ್ಯಾಸ ಮಾಡಿದ್ದೂ ಅಲ್ಲೇ. ಸಮಾಧಿಯಾದದ್ದೂ ಅಲ್ಲೇ. ವಿಶ್ವವಿದ್ಯಾಲಯದ ಬೋಧಕನಾಗಿದ್ದುದೂ ಅಲ್ಲೇ. ಮಿಗಿಲಾಗಿ ಕ್ರಿಟೀಕ್ ಆಫ್ ಪ್ಯೂರ್ ರೀಸನ್, ಕ್ರಿಟೀಕ್ ಆಫ್ ಪ್ರ್ಯಾಕ್ಟಿಕಲ್ ರೀಸನ್, ಕ್ರಿಟೀಕ್ ಆಫ್ ಜಡ್ಜ್‌ಮೆಂಡ್ ಎಂಬ ದೊಡ್ಡ ಗ್ರಂಥಗಳನ್ನು ಬರೆದದ್ದೂ ಅಲ್ಲೇ.

ಇದುವರೆಗೂ ಆಧುನಿಕ ತತ್ತ್ವ ಹುಟ್ಟಿದಾರಭ್ಯ ಬುದ್ಧ್ಯಾರೂಢವಾದ ಮತ್ತು ಅನುಭವಾರೂಢವಾದಗಳು ಬೆಳೆದು ಒಂದನ್ನೊಂದು ಪ್ರತಿಭಟಿಸಿ ನಿಂತದ್ದನ್ನು ನೋಡಿದ್ದೇವೆ. ಇವೆರಡನ್ನೂ ವಿಮರ್ಶೆಗೆ ಒಳಪಡಿಸಿ ಅವುಗಳಲ್ಲಿರುವ ದೋಷಗಳನ್ನು ಬೇರ್ಪಡಿಸಿ, ಹೊರದೂಡಿ, ಗುಣಗಳನ್ನು ಸಮನ್ವಯಗೊಳಿಸಲು ಕ್ಯಾಂಟ್ ಪ್ರಯತ್ನಿಸಿದ. ಅವನ ತತ್ತ್ವ ಬುದ್ಧಿಪರವಾದವೂ ಅಲ್ಲ, ಅನುಭವಪರವಾದವೂ ಅಲ್ಲ, ಅವೆರಡರಲ್ಲೂ ಕಾಣಬರುವ ನಿರ್ವಿಚಾರವಾದವೂ ಅಲ್ಲ. ಅದು ಅವೆಲ್ಲದರ ವಿಮರ್ಶನತತ್ತ್ವ. ನ್ಯಾಯಾಧೀಶ, ವಾದಿ ವಿವಾದಿಗಳು ಕೊಟ್ಟ ಸಾಕ್ಷ್ಯವನ್ನು ಪರೀಕ್ಷೆಮಾಡಿ ತೀರ್ಮಾನಕ್ಕೆ ಬರುವಂತೆ ಕ್ಯಾಂಟ್ ಈ ಮೂರು ಪಕ್ಷಗಳನ್ನೂ ವಿಮರ್ಶಿಸಿ ತೀರ್ಪುಕೊಡಲು ಪ್ರಯತ್ನಿಸಿದ್ದಾನೆ. ಅನುಭವವಾದಿಗಳ ಪಕ್ಷ ಇದು: 1. ತಿಳಿವಿಗೆ ಬರುವುದೆಲ್ಲ ಬಿಡಿಬಿಡಿಯಾದ ಇಂದ್ರಿಯಗಳ ಮೇಲೆ ಒತ್ತಿದ ಮುದ್ರೆಗಳು. 2. ಈ ಮುದ್ರೆಗಳು ತಿಳಿವಿನೊಳಗೆ ಬರುವುದಕ್ಕೆ ಮುಂಚೆ ತಿಳಿವಿನಲ್ಲಿ ಇನ್ನೇನೂ ಲವಲವಿಕೆ ಇಲ್ಲ. ಅದು ಬರಿದಾದದ್ದು. 3. ಅದರೊಳಕ್ಕೆ ಪ್ರವೇಶಿಸಿದ ಮುದ್ರೆಗಳ ಅಂಶಗಳನ್ನು ಅದು ಬಿಡಿಸಿ ಬಗೆಬಗೆಯಾಗಿ ಸೇರಿಸಿ ಭಾವನೆಗಳನ್ನು ಏರ್ಪಡಿಸುತ್ತದೆ. ಈ ಭಾವನೆಗಳಿಗೆ ಇಂದ್ರಿಯಾನುಭವಗಳ ಎಲ್ಲೆಯನ್ನು ಮೀರಿ ತಾವೇ ತಾವಾಗಿ ಮೆರೆಯಲು ಅವಕಾಶವಿಲ್ಲ. ಹಾಗೆ ಇಂದ್ರಿಯಾನುಭವದ ಎಲ್ಲೆಯನ್ನು ಮೀರಿದ ಭಾವನೆಗಳು (ಆತ್ಮ, ಭೌತವಸ್ತು, ಈಶ್ವರ) ಬರೀ ಜಳ್ಳು, ಬರಡು. ಇದಕ್ಕೆ ವಿರುದ್ಧವಾದ ಬುದ್ಧಿಪರವಾದ ವಾದದ ಪಕ್ಷ ಹೀಗಿದೆ: 1. ಇಂದ್ರಿಯಾನುಭವಗಳು ನೆಚ್ಚತಕ್ಕವಲ್ಲ. 2. ಬುದ್ಧಿಗೆ ಆಂತರಿಕ ಭಾವನೆಗಳು ನೆಚ್ಚಬಹುದಾದವು. ಇವು ಇಂದ್ರಿಯಾನುಭವ ಹುಟ್ಟುವುದಕ್ಕೆ ಮುಂಚೆಯೇ ಬುದ್ಧಿಯಲ್ಲಿ ಇರತಕ್ಕವು. ಬುದ್ಧಿಗೆ ಆಂತರಿಕವಾದಂತಹವು, ಹೊರತಾದುವಲ್ಲ. ಆದ್ದರಿಂದ ಸ್ವತಃಸಿದ್ಧವಾದವು. ಇವುಗಳ ನೆರವಿಲ್ಲದೆ ಜ್ಞಾನ ಸಾಧ್ಯವಿಲ್ಲ. ಇವು ಇಂದ್ರಿಯಗಳಿಗೆ ಅಧೀನವಲ್ಲವಾದ್ದರಿಂದ, ಇಂದ್ರಿಯಾತೀತ ವಿಷಯಗಳನ್ನು, ಆತ್ಮ ದೈವ ಮುಂತಾದ ವಿಷಯಗಳನ್ನು ತಿಳಿಯಲು ಇವಕ್ಕೆ ಮಾತ್ರ ಸಾಧ್ಯ.

**ಈ ಪಕ್ಷಗಳನ್ನು ಪರೀಕ್ಷೆಗೆ ಒಳಪಡಿಸಿ ಕಾಂಟ್ ತೀರ್ಮಾನಿಸಿದ್ದು ಇದು :** ಇವೆರಡು ಪಕ್ಷಗಳೂ ನಿರ್ವಿಚಾರವಾದಗಳೇ? ಜ್ಞಾನಕ್ಕೆ ಇಂದ್ರಿಯಾನುಭವಗಳು ಮಾತ್ರ ಆಧಾರಗಳಲ್ಲ. ಇಂದ್ರಿಯಗಳ ಮುದ್ರೆಗಳು ಬುದ್ಧಿಯನ್ನು ಪ್ರವೇಶಿಸುವುದಕ್ಕೆ ಮುಂಚೆ ಬುದ್ಧಿ ಇದೆ ಎಂಬುದನ್ನು ಮರೆಯಕೂಡದು ಎಂದು ಲೈಬ್ನಿಟ್ಸ್ ಲಾಕ್‌ನಿಗೆ ಎಚ್ಚರಕೊಟ್ಟಿದ್ದು ನ್ಯಾಯ. ಬುದ್ಧಿ ಕೇವಲ ಜಡವಸ್ತುವಲ್ಲ. ಒಂದು ಖಾಲಿ ಚೀಲವಲ್ಲ. ಅದರೊಳಗೆ ಬಂದದ್ದನ್ನು ಅದು ಯಾಂತ್ರಿಕವಾಗಿ ಸುಮ್ಮನೆ ಸ್ವೀಕರಿಸುವುದಿಲ್ಲ. ಗಮನಿಸಿ ನೋಡುತ್ತದೆ, ನಿರ್ದೇಶಿಸುತ್ತದೆ; ಮೂಕವಾಗಿ ಬಂದವುಗಳನ್ನು ಮಾತನಾಡುವಂತೆ ಮಾಡುತ್ತದೆ. ಮನಸ್ಸು ಕೇವಲ ನಿಶ್ಚೇತನವಾದುದಲ್ಲ. ಅದರ ಮುಂದೆ ಬಂದ ವಿಷಯಗಳನ್ನು ವ್ಯವಸ್ಥೆಗೊಳಿಸುವ ಶಕ್ತಿ ಅದಕ್ಕೆ ಇದೆ. ವಿಷಯಗಳು ತನ್ನ ರಚನಾಶಕ್ತಿಗೆ ಒಳಪಟ್ಟ ಹೊರತು ಒಳಕ್ಕೆ ಬರಲು ಅವಕಾಶ ಕೊಡುವುದಿಲ್ಲ. ಲಾಕ್ ಮತ್ತು ಹ್ಯೂಮ್ ಹೇಳಿದಂತೆ ವಿಷಯಗಳು ಒಳಗೆ ಬರುವುದಕ್ಕೆ ಮುಂಚೆ ಅದು ನಿಶ್ಚೇತನವಾಗಿದ್ದು ಅವು ಒಳಕ್ಕೆ ಬಂದು ನೆಲೆಸಿದ ಮೇಲೆ ಕ್ರಿಯಾಕಾರಿಯಾಗುವುದಿಲ್ಲ. ತನ್ನ ರಚನಾಶಕ್ತಿಗೆ ಉಚಿತವಾದ ವಿಷಯಗಳು ತನ್ನ ಮುಂದೆ ಬಂದಾಗಲೇ ಅದು ಅವುಗಳನ್ನು ಗಮನಿಸುವುದು. ನಡೆಸಬೇಕಾದ ವೃತ್ತಿ ಕೂಡುವುದಾಗಿದ್ದರೆ, ಮೂರು, ಮೂರು ಎಂಬ ಅಂಕಿಗಳು ಗೋಚರವಾದ ಕೂಡಲೆ, ವಿಧಿಗೆ ಅನುಸಾರವಾಗಿ ಅವುಗಳನ್ನು ಆರು ಎಂದಾಗಿಸಿಕೊಂಡು ಸ್ವೀಕರಿಸುತ್ತದೆ. ನಡೆಸಬೇಕಾದ ವೃತ್ತಿ ಗುಣಾಕಾರವಾದರೆ, ಅದೇ ವಿಷಯಗಳನ್ನೇ ಒಂಬತ್ತು ಎಂದಾಗಿಸಿಕೊಂಡು ಸ್ವೀಕರಿಸುತ್ತದೆ. ಬಿಡಿಬಿಡಿಯಾದ ವಿಷಯಗಳನ್ನು ಮನಸ್ಸು ಸ್ವೀಕರಿಸಬೇಕಾದರೆ ಒಪ್ಪುವ ವಿಧಿನಿಯಮಗಳು ಅಗತ್ಯ.

**ಮನಸ್ಸು ವಿಧಾಯಕ ಮಾಡುವ ಬಗೆಗಳು ಯಾವುವು ಎಂಬುದು ಮೂಲ ಪ್ರಶ್ನೆ. ಈ ಪ್ರಶ್ನೆಯನ್ನು ಕಾಂಟ್ ಎರಡಾಗಿ ವಿಂಗಡಿಸಿರುತ್ತಾನೆ:** 1. ವಿಷಯಗಳನ್ನು ವಿಧಾಯಕ ಮಾಡುವ ಬಗೆಗಳು. 2. ಚಿಂತನದ ವಿಷಯಗಳನ್ನು ವಿಧಾಯಕ ಮಾಡುವ ಬಗೆಗಳು. ಇಂದ್ರಿಯಪ್ರತ್ಯಕ್ಷದ ವಿಷಯಗಳನ್ನು ನಿರ್ಧರಿಸುವ ಬಗೆಗಳು ಯಾವುವು? ಚಿಂತನದ ವಿಷಯಗಳನ್ನು ನಿರ್ಧರಿಸುವ ಬಗೆಗಳು ಯಾವುವು? ಮೊದಲ ಪ್ರಶ್ನೆಗೆ ಉತ್ತರ ಹೇಳಲು ಕ್ರಿಟೀಕ್ ಆಫ್ ಪ್ಯೂರ್ ರೀಸನ್ ಎಂಬ ಗ್ರಂಥದ ಮೊದಲ ಭಾಗವಾದ ಟ್ರಾನ್ಸೆಂಡೆಂಟಲ್ ಈಸ್ಟೆಟಿಕ್ ಅನ್ನೂ ಎರಡನೆಯ ಪ್ರಶ್ನೆಗೆ ಉತ್ತರ ಹೇಳಲು ಎರಡನೆಯ ಭಾಗವಾದ ಟ್ರಾನ್ಸೆಂಡೆಂಟಲ್ ಅನಲಿಟಿಕ್‌ಅನ್ನೂ ಮೀಸಲಾಗಿ ಇಟ್ಟಿರುತ್ತಾನೆ.

ಇಂದ್ರಿಯಪ್ರತ್ಯಕ್ಷದ ಅಂಶಗಳನ್ನು ವಿಧಾಯಕ ಮಾಡುವ ಬಗೆಗಳು ಎರಡು : ದೇಶ ಮತ್ತು ಕಾಲ. ಯಾವುದೊಂದನ್ನು ತಿಳಿಯಬೇಕಾದರೂ ಅದು ಇಲ್ಲಿದೆ, ಈ ಕಾಲದಲ್ಲಿದೆ ಎಂದು ನಿರ್ದೇಶಿಸಿದ ಹೊರತು ಯಾವ ಇಂದ್ರಿಯವಿಷಯಗಳನ್ನೂ ತಿಳಿಯಲಾಗುವುದಿಲ್ಲ. ಕಾಲದೇಶಗಳು ಇಂದ್ರಿಯದ ಮೂಲಕ ಕಂಡ ವಿಷಯಗಳಲ್ಲ; ಅವು ಇಂದ್ರಿಯವಿಷಯಗಳನ್ನು ನಿರ್ಧಾರಕವಾಗಿ ಮಾಡುವ ಬಗೆಗಳು. ಅವು ಮನಸ್ಸಿಗೆ ಆಂತರಿಕವಾದುವು. ಆಂತರಿಕವಾದುವು ಎಂದರೆ ವಿಷಯಗಳನ್ನು ತಿಳಿಯುವುದಕ್ಕೆ ಮುಂಚೆಯೇ ಮನಸ್ಸಿನಲ್ಲಿರುವುವೆಂದು ಭಾವಿಸಬಾರದು. ಎಲ್ಲ ಬಗೆಯ ಜ್ಞಾನವೂ ಅನುಭವದಿಂದ ಪ್ರಾರಂಭವಾಗುತ್ತದೆಯಾದರೂ ಅದು ಅನುಭವದಿಂದಲೇ ಹುಟ್ಟಿಬರುವುದಿಲ್ಲ. ಅವು ವಿಷಯಗಳ ತಿಳಿವಿಗೆ ತಳಹದಿಯಾಗಿ ಅವುಗಳೊಡನೆಯೇ ಚೇತನಗೊಳ್ಳುತ್ತವೆ. ಅವುಗಳನ್ನು ಬಿಟ್ಟು ವಿಷಯಗಳನ್ನು ನಾವು ಆಲೋಚಿಸಲಾಗುವುದಿಲ್ಲ. ಆದ್ದರಿಂದ ಅವು ತಿಳಿವಿಗೆ ಅಗತ್ಯವಾದುವು. ಈ ಜ್ಞಾನ ಅವಶ್ಯವಾದ ತಿಳಿವು, ನಿಸ್ಸಂದೇಹವಾದ ತಿಳಿವು. ಹೀಗೆ ಗಣಿತಶಾಸ್ತ್ರಜ್ಞಾನ ನಿಶ್ಚಿತವಾದ ಅಗತ್ಯಜ್ಞಾನವೆಂದು ಸ್ಥಾಪಿಸಿದ.

ಎರಡನೆಯ ಭಾಗವಾದ ಅನಲಿಟಿಕ್‌ನಲ್ಲಿ ಚಿಂತನೆಯ ಬಗೆಗಳೂ ಅದೇ ರೀತಿಯಾಗಿ ಅಗತ್ಯಭಾವನೆಗಳೇ ಎಂಬ ಪ್ರಶ್ನೆಗೆ ಉತ್ತರ ಹೇಳಲು ಪ್ರಯತ್ನಿಸಿದ್ದಾನೆ. ಕಾಲದೇಶಗಳು ಇಂದ್ರಿಯ ವಿಷಯಗಳನ್ನು ಇಂದ್ರಿಯಪ್ರತ್ಯಕ್ಷ ಜ್ಞಾನವಾಗಿ ವ್ಯವಸ್ಥೆಗೊಳಿಸುತ್ತವೆ. ಚಿಂತನೆಯ ಬಗೆಗಳು ವ್ಯವಸ್ಥಿತವಾದ ಪ್ರತ್ಯಕ್ಷ ಜ್ಞಾನ ವಿಷಯವನ್ನು ವ್ಯವಸ್ಥೆಗೊಳಿಸುತ್ತವೆ. ಹೀಗೆ ಹೇಳಿದಾಗ ಇಂದ್ರಿಯಭಾವನೆಗಳು ಚಿಂತನೆಯ ಭಾವನೆಗಳಿಗಿಂತ ಮುಂಚೆ ಬರುತ್ತವೆಯೆಂದು ತಿಳಿಯಕೂಡದು. ತಳಹದಿಯಾದವು ಎಂದು ಅರ್ಥಮಾಡಿಕೊಳ್ಳಬೇಕು. ಇವು ಒಂದನ್ನೊಂದು ಬಿಟ್ಟು ಇರುವುದಿಲ್ಲ. ಪ್ರತ್ಯಕ್ಷ ಅನುಭವಗಳು ತಾನೇತಾನಾಗಿ ನೆರವಿಲ್ಲದಿದ್ದರೆ ಕುರುಡಾಗಿರುತ್ತವೆ. ಹಾಗೆಯೇ ಚಿಂತನೆ ಪ್ರತ್ಯಕ್ಷದ ನೆರವಿಲ್ಲದಿದ್ದರೆ ನಿರ್ವಿಶೇಷವಾದ ತಿರುಳಿಲ್ಲದ ಜಳ್ಳುಜ್ಞಾನವಾಗುತ್ತದೆ. ಪ್ರತ್ಯಕ್ಷ ಮತ್ತು ಚಿಂತನಗಳು ಎಡೆಬಿಡದೆ ಸೇರಿದಾಗಲೇ ಅಗತ್ಯವೂ ವ್ಯವಸ್ಥಿತವೂ ಆದ ಪ್ರತಿಜ್ಞೆಗಳು ಹುಟ್ಟುವುವು. ಭೌತವಿಜ್ಞಾನ ಅಂಥ ಅಗತ್ಯವೂ ವ್ಯವಸ್ಥಿತವೂ ಆದ ಪ್ರತಿಜ್ಞೆಗಳಿಂದ ಕೂಡಿದ್ದು. ಭೌತವಿಜ್ಞಾನದ ಪ್ರತಿಜ್ಞೆಗಳು ಸಾಧ್ಯವಾಗಿರುವುದು ಪ್ರತ್ಯಕ್ಷ ಬಗೆಗಳ ಮತ್ತು ಚಿಂತನ ಬಗೆಗಳ ಮಿಲನದಿಂದ ಮಾತ್ರವೇ.

ಈ ಪ್ರತಿಜ್ಞೆಗಳನ್ನೂ ಅವುಗಳಿಗೆ ಸಮಾನಾಂತರವಾದ ಚಿಂತನೆಯ ಬಗೆಗಳನ್ನೂ ಈ ರೀತಿಯಾಗಿ ವಿಂಗಡಿಸಲಾಗಿದೆ:

| | **ಪ್ರತಿಜ್ಞೆಗಳು** | | **ಚಿಂತನೆಯ ಬಗೆಗಳು** |
|---|---|---|---|
| 1 | ಪರಿಮಾಣ | 1 | ಪರಿಣಾಮ |
| i | ಸಾಮಾನ್ಯ ಪ್ರತಿಜ್ಞೆ | i | ಏಕತೆ |
| ii | ಪ್ರತ್ಯೇಕಪ್ರತಿಜ್ಞೆ | ii | ಅನೇಕತೆ |
| iii | ವೈಯಕ್ತಿಕ ಪ್ರತಿಜ್ಞೆ | iii | ಸಂಪೂರ್ಣತೆ |
| 2 | **ಗುಣ** | 2 | **ಗುಣ** |
| i | ಅಸ್ತ್ಯರ್ಥಕ ಪ್ರತಿಜ್ಞೆ | i | ಅಸ್ತಿತ್ವ |
| ii | ನಾಸ್ತ್ಯರ್ಥಕ ಪ್ರತಿಜ್ಞೆ | ii | ನಾಸ್ತಿತ್ವ |
| iii | ಅನಂತ ಪ್ರತಿಜ್ಞೆ | iii | ಪರಿಮಿತಿ |
| 3 | **ಸಂಬಂಧ** | 3 | **ಸಂಬಂಧ** |
| I | ನಿರುಪಾಧಿಕ ಪ್ರತಿಜ್ಞೆ | I | ಅಂತರ್ಗತ |
| ii | ಔಪಾಧಿಕ ಪ್ರತಿಜ್ಞೆ | ii | ಅಧೀನ |
| iii | ಪಕ್ಷಾಂತರ ಪ್ರತಿಜ್ಞೆ | iii | ಸಮೂಹ |
| **4** | **ರೀತಿ** | **4** | **ರೀತಿ** |
| I | ಸಂಭಾವನಾ ಪ್ರತಿಜ್ಞೆ | I | ಸಾಧ್ಯತೆ |
| ii | ಸ್ಥಿರೀಕರಣ ಪ್ರತಿಜ್ಞೆ | ii | ವಾಸ್ತವಿಕತೆ |
| iii | ಅಗತ್ಯ ಪ್ರತಿಜ್ಞೆ | iii | ಅಗತ್ಯತೆ |

ಚಿಂತನೆಯ ಬಗೆಗಳು ಅನುಗಮನತರ್ಕದಿಂದ ಪಡೆದುವಲ್ಲ. ನಿಗಮನದಿಂದಲೂ ಪಡೆದುವಲ್ಲ. ಅವು ಅನುಭವಕ್ಕೆ ಆಧಾರಭಾವನೆಗಳು. ಅವುಗಳಿಲ್ಲದೆ ಅನುಗಮನವೂ ಇಲ್ಲ ನಿಗಮನವೂ ಇಲ್ಲ. ನಮ್ಮ ಚೇತನದ ರಚನೆಯೇ ಆ ಬಗೆಯಾದದ್ದು. ಯಾವುದೊಂದು ಅನುಭವ ಸಾಧ್ಯವಾಗಬೇಕಾದರೂ ಅವುಗಳ ತಳಹದಿಯಾಗಿ ಅವು ಅಗತ್ಯವಾಗಿ ಇದ್ದೇ ಇರಬೇಕು. ಹೀಗಿರಬೇಕು ಎಂದು ನಮ್ಮ ಬುದ್ಧಿ ಒತ್ತಾಯಪಡಿಸುತ್ತದೆ, ವಿಧಾಯಕ ಮಾಡುತ್ತದೆ.

ಇಂದ್ರಿಯಾನುಭವದ ಬಗೆಗಳು ಹೊಂದಿಕೆಗೆ ಬುದ್ಧಿಯ ಬಗೆಗಳ ಹೊಂದಿಕೆ ಆಧಾರ. ಬುದ್ಧಿಯ ಬಗೆಗಳ ಹೊಂದಿಕೆಗೆ ನಮ್ಮ ಅಂತರಂಗಪ್ರಜ್ಞೆಯ ಹೊಂದಿಕೆ ಆಧಾರ. ಇದು ಎಲ್ಲ ಅನುಭವಗಳ ಹಿಂಬದಿಯಲ್ಲಿ ಸೂತ್ರಧಾರನಂತೆ ಇದ್ದು ಎಲ್ಲವೂ ಹೊಂದಿಕೆಯಾಗುವಂತೆ ನಡೆಸುವುದೇ ಅದರ ಪ್ರವೃತ್ತಿ. ಯಾವುದೊಂದು ಅನುಭವ ಹೊಂದಿಕೆಯಾಗಬೇಕಾದರೂ ಅಂತರಂಗ ಚೇತನದ ಆಜ್ಞೆಯನ್ನು ಅನುಸರಿಸಿಯೇ ತೀರಬೇಕು. ನಾನು ಏನನ್ನು ಯೋಚಿಸುತ್ತೇನೆಯೋ ಅದೆಲ್ಲವೂ ನನ್ನ ಅಂತರಂಗದ ಭಾವಗಳನ್ನು ಬಿಟ್ಟು ಇರಲಾರವು. ಇದು ಮಾನವ ಚೇತನದ ಸಹಜವರ್ತನೆ. ಇದಕ್ಕೆ ಒಳಪಟ್ಟು ಮಾತ್ರ ವಿಷಯವನ್ನು ನಾವು ತಿಳಿಯಬಲ್ಲೆವು. ಅದೇ ನಮಗೆ ಪ್ರಕೃತವಾದದ್ದು.

ನಮ್ಮ ಬುದ್ಧಿಯ ಬಗೆಗಳು ಬಾಹ್ಯಪ್ರಪಂಚದ ವಿಷಯಗಳಿಗೆ ಮಾತ್ರ ಅನ್ವಯವಾಗುವಂಥವು. ಉಳಿದ ವಿಷಯಗಳಿಗೆ ಅವು ಅನ್ವಯವಾಗುವುದಿಲ್ಲ. ಉಳಿದವಕ್ಕೂ ಅನ್ವಯವಾಗಬೇಕೆಂದು ಹೇಳುವುದಕ್ಕೆ ಅದಕ್ಕೆ ಯೋಗ್ಯತೆಯೂ ಇಲ್ಲ. ಹಾಗೆ ತನ್ನ ಮಿತಿಯನ್ನು ಮೀರಿ ವರ್ತಿಸಿದರೆ, ಉಳಿದವು ಅದಕ್ಕೆ ವಿಧೇಯವಾಗಿರುವುದೂ ಇಲ್ಲ.

ಇದನ್ನು ಸ್ಪಷ್ಟಪಡಿಸುವುದೇ ಅವನ ಮೊದಲ ಗ್ರಂಥದ ಮೂರನೆಯ ಭಾಗವಾದ ಟ್ರಾನ್ಸೆಂಡೆಂಟಲ್ ಡಯಲೆಕ್ಟಿಕ್‌ನ ಉದ್ದೇಶ. ಕಾರ್ಯಕಾರಣ ಭಾವ ಇಂದ್ರಿಯಗೋಚರವಾದ ಭೌತವಸ್ತುಗಳಿಗೆ ಮಾತ್ರ ಪರಿಮಿತವಾದದ್ದು. ಆ ಭಾವನೆಯನ್ನು ಇಂದ್ರಿಯಾತೀತವಾದ ಆತ್ಮಕ್ಕೂ ಅನಂತವಾದ ಇಡೀ ವಿಶ್ವಕ್ಕೂ ದೈವಕ್ಕೂ ಅನ್ವಯಿಸಿದರೆ ಪರಸ್ಪರ ವಿರುದ್ಧ ಭಾವನೆಗಳ ಗೊಂದಲಗಳು ಉದ್ಭವಿಸುತ್ತವೆ.

ನಿರ್ವಿಚಾರಮತ ತತ್ತ್ವ ಇಂಥ ಪರಸ್ಪರ ವಿರುದ್ಧ ಭಾವನೆಗಳ ಗೊಂದಲ. ಇದನ್ನು ಮೂರನೆಯ ಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ. ಈ ನಿರ್ವಿಚಾರಮತ ತತ್ತ್ವವನ್ನು ಪ್ರಚಾರ ಮಾಡಿದವರು ಬುದ್ಧ್ಯಾರೂಢವಾದಿಗಳು. ಕೇವಲ ತರ್ಕದ ಆಧಾರದ ಮೇಲೆ ಆತ್ಮ, ಅನಂತವಾದ ವಿಶ್ವ, ಸರ್ವಜ್ಞನಾದ ಮತ್ತು ಸರ್ವಸಮರ್ಥನಾದ ಈಶ್ವರ ಈ ಭಾವನೆಗಳನ್ನು ಸ್ಥಾಪಿಸಲು ಪ್ರಯತ್ನಪಟ್ಟರು. ಭೌತಶಾಸ್ತ್ರದ ವಿಷಯಗಳಿಗೆ ಕಾರಣಗಳನ್ನು ತಿಳಿಸಿ ಸ್ಥಾಪಿಸಿದಂತೆ ಈ ವಿಷಯಗಳಿಗೂ ಯುಕ್ತ ಕಾರಣಗಳನ್ನು ಕೊಡಲು ಯತ್ನಿಸಿದರು. ಭೌತ ವಿಷಯಗಳಿಗೆ ಪರಿಮಿತವಾದ ಭಾವನೆಗಳನ್ನು ಆತ್ಮ, ಈಶ್ವರ ಮುಂತಾದ ಅಭೌತಿಕ ವಿಷಯಗಳಿಗೆ ತದ್ವತ್ತಾಗಿ ಅನ್ವಯಿಸಿದರು. ಭೌತವಿಜ್ಞಾನದ ಪರಿಮಿತಿ ವಸ್ತುಗಳಿಗೆ ಇರುವ ಸಂಬಂಧವನ್ನು ಮಾತ್ರ ತಿಳಿಸುತ್ತದೆ. ಅಪರಿಮಿತ ವಸ್ತುಗಳಿಗೂ ಪರಿಮಿತ ವಸ್ತುಗಳಿಗೂ ಇರುವ ಸಂಬಂಧವನ್ನು ಅದು ತಿಳಿಯಲು ಪ್ರಯತ್ನಿಸುವುದಿಲ್ಲ. ಅದು ತಿಳಿಸುವುದು ನಿಮಿತ್ತಕಾರಣಗಳನ್ನು ಮಾತ್ರ. ಆದಿ ಮತ್ತು ಅಂತಿಮ ಕಾರಣಗಳು ಅದರ ವಿಚಾರಕ್ಕೆ ಮೀರಿದ ಭಾವನೆಗಳು. ಅವುಗಳನ್ನು ನಿಮಿತ್ತ ಕಾರಣ ಸರಣಿಗೆ ಒಳಪಡಿಸಿದರೆ ನಮ್ಮ ಯೋಚನೆ ಅಸ್ತವ್ಯಸ್ತವಾಗುತ್ತದೆ. ಒಂದಕ್ಕೆ ಇನ್ನೊಂದು ಕಾರಣ, ಆ ಇನ್ನೊಂದಕ್ಕೆ ಮತ್ತೊಂದು ಕಾರಣ. ಮತ್ತೊಂದಕ್ಕೆ ಮಗುದೊಂದು ಕಾರಣ. ಹೀಗೆ ಕಾರಣಗಳಿಗೆ ಕೊನೆಯಿಲ್ಲ. ಇದರಿಂದ ಅವ್ಯವಸ್ಥೆಯ ಪರಿಸ್ಥಿತಿ ಉಂಟಾಗುತ್ತದೆ. ಅನಂತವಾದದ್ದು, ಅಂತ್ಯವಿರುವುದಕ್ಕೆ ಕಾರಣವೆಂದು ಹೇಳುವುದು ಒಂದು ವಿರೋಧಾಭಾಸ ಭಾವ. ಅಂತ್ಯವಿರುವ ಅನಂತ್ಯದಿಂದ ಹುಟ್ಟುವುದು ಹೇಗೆ? ಹುಟ್ಟಿಲ್ಲದ್ದರಿಂದ ಸಾವಿಲ್ಲದಿರುವುದು ಹುಟ್ಟಿರುವುದು ಸಾವಿರುವುದು ಉದ್ಭವಿಸುವುದೆಂತು? ಹೀಗೆ ಕಾಲದಲ್ಲಿ ವಿರುದ್ಧ ಭಾವನೆಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. 1. ವಿಶ್ವಕ್ಕೆ ಮೊದಲಿದೆ, ಕೊನೆ ಇದೆ. ಅದು ಕೊನೆ ಇಲ್ಲದ್ದು, ಮೊದಲಿಲ್ಲದ್ದು. ಅದು ಕಾಲದೇಶಗಳುಳ್ಳದ್ದು. ಅದು ಕಾಲದೇಶಗಳಿಲ್ಲದ್ದು. 2. ಭೌತ ವಸ್ತುಗಳು ಅನಂತವಾಗಿ ಒಡೆಯಬಹುದಾದವು. ಒಡೆದು ಕೊನೆಯಲ್ಲಿ ಅಣುಗಳನ್ನು ಮುಟ್ಟಿದಾಗ ಆ ಅಣುಗಳು ಅಭೇದ್ಯ ವಸ್ತುಗಳಾಗಿ ತೋರುತ್ತವೆ. ವಿಶ್ವದಲ್ಲಿ ಸ್ವಾತಂತ್ರ್ಯವಿದೆ. ವಿಶ್ವದಲ್ಲಿರುವುದೆಲ್ಲ ಕಾರ್ಯಕಾರಣ ಕಟ್ಟಿಗೆ ಒಳಪಟ್ಟಿದೆ. ವಿಶ್ವದಲ್ಲಿ ಕಾರಣವಾದ ದೈವವಿದೆ. ಆ ಕಾರಣವಾದ ದೈವ ಅದರ ಹೊರಗಡೆಯೂ ಇದೆ. ಅದರೊಳಗಿದ್ದರೆ ಅದರ ಪರಿಮಿತಿಗೆ ಒಳಪಟ್ಟು ಅದರ ಅನಂತತೆಗೆ ಚ್ಯುತಿಯುಂಟಾಗುತ್ತದೆ. ಹೊರಗಿದ್ದು ಅನಂತವಾದರೆ ಅದರಿಂದ ವಿಶ್ವ ಹುಟ್ಟಲು ಅವಕಾಶವೇ ಇಲ್ಲ. ಒಳಗೂ ಇದೆ ಹೊರಗೂ ಇದೆ, ಆದರೂ ಅನಂತವಾಗಿದೆ ಎಂದು ಹೇಳುವುದು ಪರಸ್ಪರ ವಿರುದ್ಧ. ಇವು ಪರಸ್ಪರ ವಿರುದ್ಧ ಪಕ್ಷಗಳು. ಆತ್ಮ ಸ್ವತಂತ್ರವಾದದ್ದು, ಅವಿಭಾಜ್ಯವಾದದ್ದು, ಅಮರವಾದದ್ದು–ಎಂಬುದು ಬುದ್ಧ್ಯಾರೂಢವಾದಿಗಳು ಎತ್ತಿ ಹಿಡಿದ ಪಕ್ಷ. ಆತ್ಮ ಅಸ್ವತಂತ್ರ, ವಿಭಾಜ್ಯ, ಮತ್ತು ವಿನಾಶವುಳ್ಳದ್ದು–ಎಂಬುದು ಅನುಭವರೂಢವಾದಿಗಳು ಎತ್ತಿ ಹಿಡಿದ ಪಕ್ಷ. ಒಂದು ಮತಧರ್ಮಕ್ಕೆ ಅಗತ್ಯವಾದ ಪಕ್ಷ. ಇನ್ನೊಂದು ಭೌತ ವ್ಯಾಪಾರಗಳಿಗೆ ಅಗತ್ಯವಾದ ಪಕ್ಷ. ಒಂದು ನಮ್ಮ ಮತ ಭಾವಗಳಿಗೆ ಸಂಬಂಧಿಸಿದ್ದು, ಭಕ್ತಿಗೆ ಸಂಬಂಧಿಸಿದ್ದು. ಇನ್ನೊಂದು ಲೌಕಿಕ ವಿಷಯಕ್ಕೆ, ವ್ಯವಹಾರಕ್ಕೆ, ಅಗತ್ಯವಾದ ಬುದ್ಧಿಯ ಭಾವನೆಗಳಿಗೆ ಸಂಬಂಧಿಸಿದ್ದು. ಇವೆರಡನ್ನೂ ಬೇರೆ ಬೇರೆಯಾಗಿಡದೆ ಕಲಸಿದರೆ ವಾದದಲ್ಲಿ ಕ್ಲೇಶಗಳು ಕಾಣಿಸಿಕೊಳ್ಳುವುದು ಸಹಜ. ಎರಡೂ ವಿಚಾರಚೇತನಕ್ಕೆ ಒಳಪಟ್ಟವೇ ಆದರೂ ಆ ವಿಚಾರವಿಧಾನಗಳನ್ನೂ ಅದರ ಆಧಾರಕಲ್ಪನೆಗಳನ್ನೂ ನಾವು ಸವಿಚಾರವಾಗಿ ವಿಧಿಸಿಕೊಳ್ಳಬೇಕು. ಮತ ಮತ್ತು ಧರ್ಮ ವಿಚಾರಕ್ಕೆ ಆಧಾರಕಲ್ಪನೆಗಳು ಯಾವುವು, ಅವುಗಳ ನಿಯಮಗಳು ಯಾವುವು ಎಂಬುದನ್ನು ಕಾಂಟ್ ವಿಚಾರ ಮಾಡಲು ಕ್ರಿಟೀಕ್ ಆಫ್ ಪ್ರ್ಯಾಕ್ಟಿಕಲ್ ರೀಸನ್ ಎಂಬ ತನ್ನ ಎರಡನೆಯ ಗ್ರಂಥವನ್ನು ಬರೆದ.

ಬುದ್ಧಿಗೆ (ಇಂಟಲೆಕ್ಟ್) ಮೀರಿದ, ಬುದ್ಧಿಯಿಂದ ಏರ್ಪಡಿಸಲಾಗದ ಭಾವನೆಗಳು ಮಾನವನ ಜೀವನಕ್ಕೆ ಅಗತ್ಯವಾದುವು. ಇವುಗಳನ್ನು ನಾವು ಭೌತವಸ್ತುಗಳಂತೆ ಕಾರ್ಯಕಾರಣ ಸಂಬಂಧದ ಮೂಲಕ ತಿಳಿಯಲಾಗದಿದ್ದರೂ ಅವುಗಳಿಗೆ ನೈತಿಕ ಚೇತನದ ಬೆಂಬಲವಿದೆ. ನೀತಿ ಚೇತನಕ್ಕೆ ತನಗೇ ವಿಶಿಷ್ಟವಾದ ನಿಯಮವನ್ನು ವಿಧಾಯಕ ಮಾಡಿಕೊಳ್ಳುವ ಶಕ್ತಿ ಇದೆ. ಧರ್ಮಕರ್ಮಾಚರಣೆಗಳೂ ವಿಧಿವತ್ತಾದುವು. ಆ ವಿಧಿ ಯಾವುದು ಎಂಬುದನ್ನು ನಮ್ಮ ವಿಚಾರಚೇತನ ತಿಳಿಯಬೇಕೆಂದು ಒತ್ತಾಯಪಡಿಸುತ್ತದೆ. ಆ ವಿಧಿ, ಆ ನಿಯಮ ಭೌತ ನಿಯಮಗಳಷ್ಟೇ ಅಗತ್ಯ. ಆ ನಿಯಮದ ಸ್ವರೂಪ ಬೇರೆಯಾದದ್ದು. ಅದು ಕರ್ತವ್ಯನಿಯಮ. ವಸ್ತುವಾಗಿ ತಿಳಿಯಬೇಕಾದರೆ ಹೀಗಿರಬೇಕು ಎಂದು ಬುದ್ಧಿ ವಿಧಾಯಕ ಮಾಡುವಂತೆಯೇ ಕರ್ತವ್ಯವಾಗಬೇಕಾದರೆ ಅದು ಹೀಗಿರಲೇಬೇಕು ಎಂದು ಧರ್ಮಚೇತನ ವಿಧಾಯಕ ಮಾಡುತ್ತದೆ.

ಭೌತನಿಯಮ ಹೊರವಸ್ತುವಿಗೆ ವಿಧೇಯವಾದದ್ದು. ಧಾರ್ಮಿಕ ನಿಯಮವಾದರೋ ಹೊರವಸ್ತುವಿಗೆ ವಿಧೇಯವಲ್ಲ. ಅದು ನಮ್ಮ ಆತ್ಮದೊಳಗಿನಿಂದಲೇ ಬಂದದ್ದು. ಆತ್ಮವೇ ವಿಧಾಯಕ ಮಾಡಿಕೊಂಡದ್ದು. ಭೌತನಿಯಮಕ್ಕೆ ಇಂದ್ರಿಯಾರ್ಥಗಳ ಸಾಕ್ಷ್ಯ ಅಗತ್ಯವಾಗಿರುವಂತೆ ಧಾರ್ಮಿಕ ನಿಯಮಕ್ಕೆ ಹೊರಸಾಕ್ಷ್ಯ ಅನಗತ್ಯ. ಅದಕ್ಕೆ ಆತ್ಮವೇ ಸಾಕ್ಷಿ. ಆತ್ಮವೇ ಬೆಳಕು. ಆ ನಿಯಮವನ್ನು ಆತ್ಮವೇ ನಿಯೋಜಿಸಿದ್ದು. ವಿಷಯಾರ್ಜನೆಗೆ, ವಿಷಯಸುಖಕ್ಕೆ ಅದು ಅಧೀನವಾದುದಲ್ಲ. ಅದಕ್ಕಾಗಿಯೇ ಅದನ್ನು ಬಯಸುತ್ತೇವೆ. ಸುಳ್ಳು ಹೇಳಕೂಡದು, ನಿಜವನ್ನೇ ನುಡಿಯಬೇಕು ಎಂಬ ಕರ್ತವ್ಯನಿಷ್ಠೆ ಇರುವವ ಐಶ್ವರ್ಯವನ್ನು ಲೆಕ್ಕಿಸುವುದಿಲ್ಲ, ವಿಷಯಸುಖವನ್ನು ಲೆಕ್ಕಿಸುವುದಿಲ್ಲ. ಲಕ್ಷಗಟ್ಟಲೆ ಆಸ್ತಿ ಹೋಗುತ್ತದೆ, ಆದ್ದರಿಂದ ಸುಳ್ಳು ಹೇಳಿ ಉಳಿಸಿಕೊಳ್ಳಬೇಕು ಎಂಬ ಲೌಕಿಕ ನಡೆವಳಿಕೆಯನ್ನು ಅದು ಧಿಕ್ಕರಿಸುತ್ತದೆ. ನಿಜ ಹೇಳಿದಾಗ ಕ್ರಿಸ್ತನಿಗೆ ಚಾವಟಿ ಏಟು ಬಿತ್ತು. ಜನ ಅವನ ಮುಖದ ಮೇಲೆ ಉಗುಳಿದರು. ಕಾಲಿನಿಂದ ಒದ್ದರು, ಶಿಲುಬೆಗೆ ಏರಿಸಿ, ಕೈಕಾಲಿಗೆ ಮೊಳೆ ಹೊಡೆದರು. ಪ್ರಾಣ ಹೋಯಿತು. ಅವನು ನಿಜವನ್ನು ಬಿಡಲಿಲ್ಲ. ಇಂಥ ದೃಷ್ಟಾಂತಗಳು ಚರಿತ್ರೆಯುದ್ದಕ್ಕೂ ಇವೆ. ಎಲ್ಲ ಕಾಲಗಳಲ್ಲೂ ಎಲೆಮರೆಯ ಕಾಯಿಗಳಂತೆ ಎಷ್ಟೋ ಜನ ಬಡತನದಲ್ಲಿದ್ದೂ ಸತ್ಯವಂತರಾಗಿರುತ್ತಾರೆ. ಸಂಖ್ಯಾಬಲ ಈ ನಿಯಮಕ್ಕೆ ಆಧಾರವಲ್ಲ. ಲೋಕದಲ್ಲೆಲ್ಲ ಸತ್ಯ ಹೇಳುವವ ಒಬ್ಬನೇ ಇರಲಿ, ಸಾವಿರ ಜನರಿರಲಿ, ಆ ವಿಧಿಗೆ ಸಂಖ್ಯೆ ಪ್ರಮಾಣವಲ್ಲ. ಅದು ಒಬ್ಬನಲ್ಲಿದ್ದರೂ ಅದು ಎಲ್ಲರಲ್ಲೂ ಇರಬೇಕಾದದ್ದು ಎಂಬ ಕರ್ತವ್ಯ ನಿಯಮವನ್ನು ಮಾತ್ರ ಯಾರೂ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನೀನು ಇರಬೇಕೆಂದಂತೆಯೇ ಇತರರೂ ಇರಬೇಕೆಂದೂ

ಇತರರು ನಿನ್ನ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಬಯಸುತ್ತಾರೆಯೋ ಅವರಂತೆಯೇ ನೀನೂ ಇತರರ ವಿಚಾರವಾಗಿ ಭಾವಿಸಿ ನಡೆದುಕೊಳ್ಳಬೇಕು ಎಂದೂ ಸಾರದ ಮತ ಯಾವುದಾದರೂ ಇದೆಯೇ? ಈ ಭಾವನೆ ನಮ್ಮ ಅಂತರಂಗದಲ್ಲಿ ಏಕೆ ಬೇರೂರಿದೆ? ನನ್ನ ಆತ್ಮ ನನಗೆ ಪವಿತ್ರವಾದದ್ದು. ನನ್ನ ಆ ಆತ್ಮದಲ್ಲಿ ನನಗೆ ಗೌರವವಿದೆ ಎಂಬ ಭಾವನೆ, ಕರ್ತವ್ಯಕ್ಕೆ ತಳಹದಿಯಾದ ಭಾವನೆ. ನಿನ್ನಲ್ಲಿರುವ ಆತ್ಮ ಬೇರೊಬ್ಬನಿಗೆ ಅಧೀನವಲ್ಲ. ಅದು ಇನ್ನೊಬ್ಬನಿಗೆ ಉಪಯುಕ್ತವಾದ ಸಾಧನವಲ್ಲ. ನೀನು ನಿನ್ನನ್ನು ಹೇಗೆ ಗೌರವಿಸಿಕೊಳ್ಳುತ್ತೀಯೋ ಅದರಂತೆ ಪ್ರತಿಯೊಬ್ಬನೂ ತನ್ನ ಆತ್ಮವನ್ನು ಗೌರವಿಸಿಕೊಳ್ಳುವ ಹಕ್ಕಿದೆ.

ಕರ್ತವ್ಯಕ್ಕೆ ಫಲ ಮೂಲವಲ್ಲದಿದ್ದರೂ ಕರ್ತವ್ಯಕ್ಕೆ ಫಲವಿದೆ. ಮೂಲಫಲ ಆತ್ಮಲಾಭ, ಆತ್ಮತೃಪ್ತಿ, ಆತ್ಮ ಅಜೇಯವೆಂಬ ನೆಚ್ಚಿಕೆ. ನನ್ನ ದೇಹ ಬಿದ್ದು ಹೋಗಬಹುದು, ಆದರೆ ನಾನು ಅಮರವಾದ ಆ ಕರ್ತವ್ಯಚೇತನದಲ್ಲಿ ಸೇರಿಕೊಳ್ಳುತ್ತೇನೆ ಎಂಬ ದೃಢನಂಬಿಕೆ ಇದೆ. ಈ ಚೇತನ ಅಜೇಯ, ಅಮರ ಮತ್ತು ಅನಂತ. ಇಂಥ ಚೇತನಗಳ ಸಮೂಹವೇ ಸ್ವರ್ಗರಾಜ್ಯ. ಕಾಂಟ್ ಅಂದಿನ ನಿರ್ವಿಚಾರ ಮತಭಾವನೆಗಳನ್ನು ಕಟುವಾಗಿ ಟೀಕಿಸಿರುತ್ತಾನೆ. ಆತ ವಿಚಾರ ಸಮ್ಮತವಾದ ಮತ ಯಾವುದು ಎಂಬುದನ್ನು ಕುರಿತು ತನ್ನ ಜೀವನದ ಅಂತ್ಯಕಾಲದಲ್ಲಿ ಒಂದು ಲೇಖನವನ್ನು ಪ್ರಕಟಿಸಿದ. ಅದರ ಮುಖ್ಯ ಅಂಶಗಳು ಇವು : 1. ಬೈಬಲ್ಲು ವಿಜ್ಞಾನಕ್ಕೆ ವಿರುದ್ಧವಾದ ಪವಾಡಗಳ ಆಧಾರದ ಮೇಲೆ ಮತವನ್ನು ನಿಲ್ಲಿಸಿದರೆ ಮರಳಿನ ಮೇಲೆ ಮನೆ ಕಟ್ಟಿದಂತೆ ಆಗುತ್ತದೆ. 2. ಕರ್ತವ್ಯ ಭಾವನೆಗೆ ವಿರುದ್ಧವಾಗಿ ಬೈಬಲ್ ಏನನ್ನು ಹೇಳಿದರೂ ಅದು ಪ್ರಮಾಣವಾಗಲಾರದು. ಅದಕ್ಕೆ ವ್ಯತಿರಿಕ್ತವಾದ ಪೂಜೆಗಳಿಂದ, ಆಚರಣೆಗಳಿಂದ, ಪ್ರಾರ್ಥನೆಗಳಿಂದ ಮೋಕ್ಷ ಸಿದ್ಧಿಸುವುದಿಲ್ಲ. 3. ಮತಚೇತನದ ಸಿದ್ಧಿಗೆ ಚರ್ಚಿನ ಅಧಿಕಾರದ ಮಧ್ಯಸ್ಥಿಕೆ ಅನಗತ್ಯ. ಒಬ್ಬೊಬ್ಬನ ಆತ್ಮಸಾಕ್ಷಿಯೇ ಅಂತಿಮ ಪ್ರಮಾಣ. ಆದ್ದರಿಂದ ಮತವಿಮರ್ಶೆಯ ಮಿತಿಗೆ ಒಳಪಟ್ಟಾಗಲೇ ಸನ್ಮತವಾಗುವುದು. ವಿಚಾರಪೂರ್ಣವಾದ ಈಶ್ವರಭಾವನೆ ಎಂಥಾದ್ದಾಗಿರಬೇಕೆಂಬುದನ್ನು ಕಾಂಟ್ ತಿಳಿಸಲಿಲ್ಲ.

ಮೊದಲನೆಯ ಎರಡು ಕ್ರಿಟೀಕುಗಳಲ್ಲಿ ಏರ್ಪಡಿಸಿದ ಭಾವನೆಗಳನ್ನು ಕ್ರಿಟೀಕ್ ಆಫ್ ಜಡ್ಜ್‌ಮೆಂಟ್ ಎಂಬ ಮೂರನೆಯ ಗ್ರಂಥದಲ್ಲಿ ಸಮನ್ವಯ ಮಾಡಲು ಪ್ರಯತ್ನಿಸಿದ್ದಾನೆ. ಮೊದಲ ಗ್ರಂಥದಲ್ಲಿ ಕೇವಲ ಕಾರ್ಯಕಾರಣಕ್ಕೆ ಒಳಪಟ್ಟಂತೆ ಪ್ರಕೃತಿಯ ನಿಯಮಗಳನ್ನು ವಿವರಿಸಿರುತ್ತಾನೆ. ಮಾನವಜೀವನದ ಉದ್ದೇಶ ಪರಿಪೂರ್ಣವಾಗದಿದ್ದರೂ ಉದ್ದೇಶವೆಂಬುದಿದೆ. ಮಾನವನ ನಡತೆಗೆ ಬೆಲೆ ಇರುವುದು ಅದು ನಿಸ್ವಾರ್ಥವಾಗಿ ಕರ್ತವ್ಯವನ್ನು ಈಡೇರಿಸುವುದರಿಂದಲೇ. ನಾವು ಪ್ರಕೃತಿಯನ್ನು ಸ್ವಾರ್ಥದೃಷ್ಟಿಯಿಂದ ಪರೀಕ್ಷಿಸುವುದರಿಂದ ನಮ್ಮ ಉದ್ದೇಶಕ್ಕೂ ಪ್ರಕೃತಿಯ ಚಲನೆಗಳಿಗೂ ವಿರೋಧ ತೋರುತ್ತದೆ. ವಿರುದ್ಧವಾದಂತೆ ನಮಗೆ ತೋರುತ್ತದೆ. ಆದರೆ ಪ್ರಕೃತಿಯನ್ನು ಕೇವಲ ಒಂದು ಉಪಯೋಗವಸ್ತುವೆಂದು ಭಾವಿಸದೆ, ಅದರ ಒಂದೊಂದು ವಸ್ತುವೂ ತನ್ನದೇ ಆದ ಅನುಪಮ ಸ್ವಭಾವವನ್ನು ಪಡೆದಿರುತ್ತದೆ ಎಂಬ ನಿಸ್ವಾರ್ಥದೃಷ್ಟಿಯಿಂದ ನೋಡಿದಾಗ ಅದು ಸುಂದರವಾಗಿ ಕಾಣುತ್ತದೆ. ಅದರಲ್ಲಿ ಒಂದು ಅನುಪಮವಾದ ಕೂಡಿಕೆ, ಸಾಂಗತ್ಯ ತೋರುತ್ತದೆ. ಸೌಂದರ್ಯದ ಅರಿವಾದಾಗ ಭೌತದೃಷ್ಟಿಗೂ ಧರ್ಮದೃಷ್ಟಿಗೂ ಇದ್ದ ಅಸಾಂಗತ್ಯ ತೇಲಿಹೋಗುತ್ತದೆ. ಅಂದರೆ ಈ ಸೌಂದರ್ಯ ದೃಷ್ಟಿ ಮರಳಿದಾಗ ಪುನಃ ನಮಗೆ ಹಿಂದಿನ ಅಸಾಂಗತ್ಯ ಎದ್ದು ಕಾಣುತ್ತದೆ. ಈ ಮೂರು ದೃಷ್ಟಿಗಳೂ ಸಮನ್ವಯವಾದಾಗ ಬಹುಶಃ ವಿಶ್ವವೆಲ್ಲ ಸಂಗತವಾಗಿ ತೋರಬಹುದು. ಆದರೆ ಕಾಂಟ್ ಆ ಮೂರನ್ನೂ ಸಮನ್ವಯಗೊಳಿಸದೆ, ಬೇರೆ ಬೇರೆಯಾಗಿ ಉಳಿಸಿದ. ಅವನ ತರುವಾಯ ಬಂದ ಹೆಗೆಲ್ ಸತ್ಯ, ಧರ್ಮ, ಸೌಂದರ್ಯ ಆ ಮೂರನ್ನೂ ಸಂಗತಗೊಳಿಸಲು ಪ್ರಯತ್ನಪಟ್ಟ. ಕಾಂಟನ ತತ್ತ್ವ ಒಂದು ಮಹಾಸಂಗಮ ಕ್ಷೇತ್ರ. ಬುದ್ಧ್ಯಾರೂಢ, ಅನುಭವರೂಢವಾದಗಳು ಅದರೊಳಕ್ಕೆ ಬಂದು ಸೇರಿ ರೂಪಾಂತರ ಹೊಂದಿ ಅದು ಹೊಸ ತತ್ತ್ವಗಳಿಗೆ ಪ್ರಚೋದಕವಾಯಿತು. ಆ ಎರಡು ವಾದಗಳೂ ಪೂರ್ಣವಾಗಿ ಸಮನ್ವಯವಾದುವೆಂದು ಹೇಳಲಾಗುವುದಿಲ್ಲ. ಆದರೂ ಅವು ಹಿಂದಿನ ರೂಪದಲ್ಲಿ ಉಳಿಯಲಿಲ್ಲ. ಎರಡಾದ ವಾದಗಳನ್ನು ಕಾಂಟ್ ಸಮನ್ವಯ ಮಾಡಲು ಪ್ರಯತ್ನಿಸಿದಾಗ ಆ ಪ್ರಯತ್ನದಿಂದ ಬಹುಮುಖವಾದ ತತ್ತ್ವಗಳು ಕಾಣಿಸಿಕೊಂಡು ಆ ನಂತರ ಬಂದ ತಾತ್ತ್ವಿಕರನ್ನು ಬಹು ವಿಧವಾಗಿ ಪ್ರಚೋದನೆಗೊಳಿಸಿದವು. ಭೌತಜ್ಞಾನವನ್ನು ಅವನು ಸ್ಥಾಪಿಸಿದ. ಆದರೆ ಆ ಭೌತಜ್ಞಾನವನ್ನು ತಿಳಿಸುವ ವಿಶ್ವವು ತೋರಿಕೆಯ ವಿಶ್ವವೆಂಬ ಒಂದು ಪಕ್ಷ ಅವನ ತತ್ತ್ವದಲ್ಲಿ ಕಾಣಿಸಿಕೊಂಡಿತು. ಅವನ ಈಚಿನ ಅನುಯಾಯಿಯಾದ ಮ್ಯಾಕ್ಸ್ ಮುಲ್ಲರ್ ಅದನ್ನು ಶಂಕರಾಚಾರ್ಯರ ಮಾಯಾವಾದಕ್ಕೆ ಹೋಲಿಸಿದ. ಆದರೆ ಹಲವು ಶಾಸ್ತ್ರಗಳು ತೋರಿಸಿದ ತೋರಿಕೆಯ ವಿಷಯವನ್ನು ಸಮನ್ವಯ ಮಾಡಿದಾಗ ಈ ತೋರಿಕೆಗಳ ಲೋಪ ಕಡಿಮೆಯಾಗುತ್ತದೆಯೆಂದು ಭಾವಿಸಿ ಆತ ಸಮನ್ವಯತತ್ತ್ವವನ್ನು ಬೆಳೆಸಿದ. ವಿಶ್ವವು ಸ್ವರೂಪದಲ್ಲಿ ಹೇಗಿದೆ ಎಂಬುದನ್ನು ಬುದ್ಧಿಯಿಂದ ನಾವು ತಿಳಿಯಲಾರೆವು ಎಂಬ ಕಾಂಟ್‌ನ ವಾದವನ್ನು ಹರ್ಬರ್ಟ್ ಸ್ಪೆನ್ಸರ್ ಒಪ್ಪಿಕೊಂಡ. ಸದ್ವಸ್ತುವನ್ನು ಸ್ವಸ್ವರೂಪದಲ್ಲಿ ಬುದ್ಧಿಯಿಂದ ತಿಳಿಯಲಾಗದು. ಆದರೆ ಅದನ್ನು ಪ್ರತಿಭಾನದಿಂದ ತಿಳಿಯಬಹುದೆಂದು ಬರ್ಗ್‌ಸನ್ ಪ್ರತಿಭಾನತತ್ತ್ವವನ್ನು ಬೆಳೆಸಿದ. ಬುದ್ಧಿಯಿಂದ ತಿಳಿಯಲಾಗದ ಆತ್ಮವನ್ನು ಚಿತ್ತರೂಪವಾದ ಧರ್ಮಚೇತನದಿಂದ ತಿಳಿಯಬಹುದೆಂದು ಕಾಂಟ್ ತನ್ನ ಎರಡನೆಯ ಗ್ರಂಥವಾದ ಕ್ರಿಟೀಕ್ ಆಫ್ ಪ್ರ್ಯಾಕ್ಟಿಕಲ್ ರೀಸನ್ ಮೂಲಕ ಸ್ಥಾಪಿಸಿದ. ಷೋಪೆನ್‌ಹೋವರ್ ಆ ಚಿತ್ತವನ್ನೇ ತನ್ನ ತತ್ತ್ವಕ್ಕೆ ಪ್ರಧಾನ ಆಧಾರವಾಗಿ ಇಟ್ಟುಕೊಂಡು ಚಿತ್ತಪ್ರಧಾನ ವಾದವನ್ನು (ವಾಲಂಟರಿಸಂ) ಬೆಳೆಸಿದ. ಸತ್ಯವನ್ನು ಕೇವಲ ಯೋಚನೆಯಿಂದ ನಿರ್ಧರಿಸುವುದಕ್ಕಾಗುವುದಿಲ್ಲ. ಜೀವನದ ವ್ಯವಹಾರದಲ್ಲಿ ಯಾವ ಭಾವನೆ ಸತ್ಪರಿಣಾಮಕಾರಿಯಾಗಿರುವುದೋ ಅದೇ ಸತ್ಯ. ಸಫಲದಿಂದ ಸತ್ಯವನ್ನು ನಿರ್ಧರಿಸಬೇಕೆಂಬ ಫಲವಾದವನ್ನು (ಪ್ರ್ಯಾಗ್ಮ್ಯಾಟಿಸಂ) ವಿಲಿಯಂ ಜೇಮ್ಸ್, ಜಾನ್ ಡ್ಯೂಯಿ ಮುಂತಾದ ಅಮೆರಿಕದ ತಾತ್ತ್ವಿಕರು ಬೆಳೆಸಿದರು. ಬಹುಶಃ ಇಂದಿನ ಎಲ್ಲ ತತ್ತ್ವಗಳೂ ಯಾವುದಾದರೂ ಒಂದು ರೀತಿಯಲ್ಲಿ ಕಾಂಟ್ ಮಂಡಿಸಿದ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ಪ್ರಯತ್ನಿಸಿವೆ. ಹೆಗೆಲ್‌ನ ತತ್ತ್ವವಾದರೋ ಕಾಂಟ್‌ನ ತತ್ತ್ವಕ್ಕೆ ನೇರವಾಗಿ ಸಂಬಂಧಿಸಿದುದಾಗಿದೆ.

**ಜಾರ್ಜ್ ವಿಲ್‌ಹೆಲ್ಮ್ ಹೆಗೆಲ್** : 1770–1831. ಕಾಂಟ್‌ನಂತೆ ಜರ್ಮನಿಯಲ್ಲಿ ಹುಟ್ಟಿದವ. ಕಾಂಟ್ ಕೋನಿಗ್ಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಇಪ್ಪತ್ತೇಳು ವರ್ಷಗಳ ಕಾಲ ತತ್ತ್ವಶಾಸ್ತ್ರದ ಅಧ್ಯಾಪಕನಾಗಿದ್ದರೆ ಹೆಗೆಲ್ ಜರ್ಮನಿಯ ಹೈಡಲ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಹದಿನೈದು ವರ್ಷಗಳ ಕಾಲ ತತ್ತ್ವಶಾಸ್ತ್ರದ ಅಧ್ಯಾಪಕನಾಗಿದ್ದ. ಇವನ ತತ್ತ್ವವನ್ನು ಪ್ರಚೋದನೆಗೊಳಿಸಿದ್ದು ಕಾಂಟ್‌ನ ಮೊದಲನೆಯ ಗ್ರಂಥದ ಮೂರನೆಯ ಭಾಗವಾದ ಟ್ರಾನ್ಸೆಂಡೆಂಟಲ್ ಡಯಲೆಕ್ಟಿಕ್. ಡಯಲೆಕ್ಟಿಕ್ ಎಂದರೆ ವಿರುದ್ಧಾಂಶಗಳ ವಿಮರ್ಶೆ.

ಪಕ್ಷ (ಥೀಸಿಸ್) ಪ್ರತಿಪಕ್ಷಗಳನ್ನು ಕಾಂಟ್ ನಿರೂಪಿಸಿದನೇ ಹೊರತು ಅವುಗಳನ್ನು ಸಮನ್ವಯ ಮಾಡಲಿಲ್ಲ. ಅವುಗಳಲ್ಲಿ ಒಂದು ಇನ್ನೊಂದನ್ನು ಬಿಟ್ಟು ತಾನೇ ತಾನಾಗಿರುವುದೆಂದು ಭಾವಿಸಿದ್ದರಿಂದ ಸಮನ್ವಯ ಮಾಡಲಾಗದ ವಿರುದ್ಧ ಭಾವನೆಗಳಾಗಿ ಉಳಿದುಕೊಂಡವು. ಅನಲಿಟಿಕ್ ಭಾಗದಲ್ಲಿ ಪರಿಮಾಣ, ಗುಣ, ಸಂಬಂಧ, ರೀತಿ ಎಂಬ ನಾಲ್ಕು ಮೂಲಭಾವನೆಗಳೂ ಮೂರು ಮೂರು ಬಗೆಗಳನ್ನು ಹೊಂದಿರುವುದಾಗಿ ಹೇಳಿದೆ. ಉದಾ: ಪರಿಮಾಣದ ಮೂರು ಬಗೆಗಳು–ಏಕತೆ, ಅನೇಕತೆ, ಪೂರ್ಣತೆ. ಗುಣದ ಮೂರು ಬಗೆಗಳು–ಅಸ್ತಿತ್ವ, ನಾಸ್ತಿತ್ವ, ನಾಸ್ತಿತ್ವದ ಮಿತಿಗೊಳಪಟ್ಟ ಅಸ್ತಿತ್ವ (ಲಿಮಿಟೇಷನ್). ಆದರೆ ಈ ಮೂರರಲ್ಲಿ ಮೊದಲ ಎರಡು ತಾವೇ ತಾವಾಗಿ ಉಳಿದುಕೊಳ್ಳದೆ ಮೂರನೆಯದರಲ್ಲಿ ಸಮನ್ವಯವಾಗಬಹುದೆಂಬ ಸೂಚನೆ ಕಾಂಟ್‌ನಿಗೆ ಹೊಳೆದಿರಲಿಲ್ಲ. ಹೆಗೆಲ್ ಈ ಒಂದೊಂದು ಭಾವನೆಯನ್ನು ಪರೀಕ್ಷಿಸಿದಾಗ ಮೊದಲನೆಯದಾದ ಸರಳವಾದ ಕೇವಲ ಅಸ್ತಿತ್ವ (ಪ್ಯೂರ್ ಬೀಯಿಂಗ್) ಕೇವಲ ನಾಸ್ತಿಕತ್ವಗಳಾಗಿ (ಪ್ಯೂರ್ ನಥಿಂಗ್) ಪರಿಣಮಿಸುತ್ತವೆ. ಹಾಗೆಯೇ ಕೇವಲ ಸರಳ ನಾಸ್ತಿಕತ್ವವನ್ನು (ಪ್ಯೂರ್ ನಾನ್‌ಬೀಯಿಂಗ್) ಪರೀಕ್ಷಿಸಿದಾಗ ಅದು ಕೇವಲ ನಾಸ್ತಿಕವಾಗಿ ಉಳಿಯದೆ ಅಸ್ತಿತ್ವವಾಗಿ ಪರಿಣಮಿಸುತ್ತದೆ. ಯಾವ ವಸ್ತುವನ್ನು ಪರೀಕ್ಷಿಸಿದರೂ ಅದು ಇದ್ದಂತೆಯೇ ಇರುವುದಿಲ್ಲ. ಈಗ ಇರುವುದರಲ್ಲಿ ಸ್ವಲ್ಪವಾದರೂ ಇನ್ನೊಂದು ಗಳಿಗೆಯಲ್ಲಿ ಇಲ್ಲದೆ ಹೋಗುತ್ತದೆ. ಈಗ ಇಲ್ಲದ್ದು ಇನ್ನೊಂದು ಗಳಿಗೆಯಲ್ಲಿ ಇರುವುದಾಗಿ ಕಾಣಿಸಿಕೊಳ್ಳುತ್ತದೆ. ಅಸ್ತಿತ್ವವೂ ನಾಸ್ತಿತ್ವವೂ ಬೇರೆ ಬೇರೆಯಾಗಿ ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಹಾಗೆ ಅವು ಒಂದನ್ನು ಬಿಟ್ಟು ಕೇವಲವಾಗಿರುವಂತೆ ಭಾವಿಸಿದಾಗ ಅವೆರಡಕ್ಕೂ ವ್ಯತ್ಯಾಸವೇ ಇಲ್ಲದಂತಾಗುತ್ತದೆ. ಕೇವಲ ಅಸ್ತಿತ್ವ ಕೇವಲ ನಾಸ್ತಿತ್ವವಾಗುತ್ತದೆ. ವಿಶ್ವದಲ್ಲಿರುವುದೆಲ್ಲ ಅಸ್ತಿತ್ವ ನಾಸ್ತಿತ್ವಗಳ ಸಮನ್ವಯ. ಸಮನ್ವಯವಾಗಿ ಮೂರನೆಯ ಭಾವವಾದ ಪರಿಣಾಮಭಾವ (ಬಿಕಮಿಂಗ್) ಅಸ್ತಿತ್ವ ನಾಸ್ತಿಕತ್ವಗಳೆರಡನ್ನೂ ಎಡೆಬಿಡದೆ ಹೊಂದಿರುತ್ತದೆ. ಹಾಗೆಯೇ ಸಾಮಾನ್ಯ (ಯೂನಿವರ್ಸಲ್), ವಿಶೇಷ (ಪರ್ಟಿಕ್ಯುಲರ್) ಇವೆರಡೂ ಬೇರೆಬೇರೆಯಾದ ಕೇವಲ ಭಾವನೆಗಳಲ್ಲ. ಪ್ರತಿಯೊಂದು ನಿಜವಾದ ವಸ್ತುವೂ ವೈಶಿಷ್ಟ್ಯಸಹಿತ ಸಾಮಾನ್ಯ, ಸಾಮಾನ್ಯಸಹಿತ ವೈಶಿಷ್ಟ್ಯ ಎರಡೂ ಸಮನ್ವಯವಾಗಿ ಪೂರ್ಣ (ಟೋಟಲ್) ವಸ್ತುವಾಗುತ್ತದೆ. ಹಾಗೆಯೇ ಅಗತ್ಯವಾದದ್ದು ಎಂಬ ಭಾವನೆ ಔಪಾಧಿಕವಾದದ್ದನ್ನು (ಕಂಟಿಂಜೆಂಟ್) ಬಿಟ್ಟು ಇರುವುದಿಲ್ಲ. ತ್ರಿಕೋನ ಕೇವಲ ತ್ರಿಕೋನವಾಗಿ ಭಾವಿಸಲು ಅಸಾಧ್ಯ. ಅದು ಯಾವುದಾದರೂ ಒಂದು ಉಪಾಧಿಗೆ ಎಂದರೆ ಮೂರು ಕೋನಗಳ ಸಮತೆ ಎಂಬ ಉಪಾಧಿಗೆ ಒಳಪಟ್ಟಂತೆ ಎರಡು ಸಮಕೋನಗಳು ಸಮತೆಯ ಉಪಾಧಿಗೆ ಒಳಪಟ್ಟಂತೆ ಅಥವಾ ಎಲ್ಲ ಕೋನಗಳ ಅಸಮತೆಯ ಉಪಾಧಿಗೆ ಒಳಪಟ್ಟಂತೆ ಭಾವಿಸದಿದ್ದರೆ ಅದು ವಾಸ್ತವವಾಗುವುದಿಲ್ಲ. ತ್ರಿಕೋನ ಮೂರು ಕೋನಗಳುಳ್ಳದ್ದಾಗಿರುವುದು ಅದರ ಒಂದು ಉಪಾಧಿರೂಪ. ನಾವು ಯಾವ ವಾಸ್ತವವಾದ ತ್ರಿಕೋನವನ್ನು ಯೋಚಿಸಿದಾಗ ಯಾವುದಾದರೂ ಒಂದು ಉಪಾಧಿಗೆ ಒಳಪಟ್ಟಂತೆ ಯೋಚಿಸಬೇಕು. ಹೀಗೆ ಎರಡು ಭಾವನೆಗಳು ವಿರೋಧವಿಲ್ಲದಂತೆ ಮೂರನೆಯ ಭಾವದಲ್ಲಿ ಸಮನ್ವಯವಾಗಬಹುದೆಂಬ ಸೂಚನೆಯನ್ನು ಕಾಂಟ್ ಬೆಳೆಸಲಿಲ್ಲ. ಅದನ್ನು ಹೆಗೆಲ್ ಬೆಳೆಸಿ ಹೊಸ ತರ್ಕವನ್ನು ಏರ್ಪಡಿಸಿದ. ಇದು ಹಿಂದೂತರ್ಕದಂತೆ ಒಣ ತರ್ಕ (ಫಾರ್ಮಲ್ ಲಾಜಿಕ್) ಅಲ್ಲ. ಜೀವಂತವಾದ ತರ್ಕ. ಇದು ಪರಿಣಾಮ

ಹೊಂದುತ್ತಿರುವ ವಿಶ್ವವನ್ನು ಪ್ರತಿಬಿಂಬಿಸುವ ಭಾವಗಳ ಸಮನ್ವಯ. ಸತ್ (ಬೀಯಿಂಗ್) ಮತ್ತು ಚಿತ್ (ಥಾಟ್), ವಿಷಯ (ಸಬ್ಜಕ್ಟ್), ವಿಷಯಿ(ಆಬ್ಜಕ್ಟ್), ಭಾವನಾರೂಪ (ಫಾರಂ) ಮತ್ತು ಭಾವಿಸಿದ ವಿಷಯ (ಕಂಟೆಂಟ್) ಇವು ಅವಿಭಾಜ್ಯ. ಸತ್ ಕೇವಲ ಇರವೂ ಅಲ್ಲ ಅದರ ಅಭಾವವೂ ಅಲ್ಲ. ಅದು ಪರಿಣಾಮಕಾರಿಯಾದ ಸತ್. ಅದು ಕೇವಲ ಏಕತೆಯೂ ಅಲ್ಲ, ಭಿನ್ನತೆಯೂ ಅಲ್ಲ. ಭೇದಸಹಿತವಾದ ಏಕತೆ. ಹಾಗೆಯೇ ಚಲನೆಯೂ ಸ್ಥಿರತೆಯೂ ಒಂದನ್ನೊಂದು ಬಿಟ್ಟು ಇರುವುದಿಲ್ಲ. ಚಲನೆಯಿಂದ ಕೂಡಿದ ಸ್ಥಿರತೆ ವಾಸ್ತವದ ಸತ್‌ರೂಪ. ಇಂಥ ಪರಿಣಾಮಕಾರಿಯಾದ ಸತ್ತನ್ನು, ಭಿನ್ನತೆಯನ್ನು ಒಳಗೊಂಡು ಒಂದಾದ ಸತ್ತನ್ನು ಪ್ರತಿಬಿಂಬಿಸುವುದೇ ಜೀವಂತವಾದ ತರ್ಕ. ಇದು ವಿರುದ್ಧಾಂಶಗಳನ್ನು ಸಮನ್ವಯ ಮಾಡುವ ವೈಚಾರಿಕ ತರ್ಕ (ಡಯಲೆಕ್ಟಿಕಲ್ ಲಾಜಿಕ್). ಈ ತರ್ಕಸ್ಥಾಪಿಸುವ ಸಾಮಾನ್ಯ, ತಿರುಳಿಲ್ಲದ, ಜೊಳ್ಳಾದ ಸಾಮಾನ್ಯವಲ್ಲ. ನಿಷ್ಕ್ರಿಯವಾದ ಸಾಮಾನ್ಯವಲ್ಲ. ಅದು ತಿರುಳಿನಿಂದ ತುಂಬಿದ, ಲವಲವಿಕೆಯಿಂದ ಕೂಡಿದ ಮೂರ್ತಸಾಮಾನ್ಯ (ಕಾಂಕ್ರೀಟ್ ಯೂನಿವರ್ಸಲ್). ಇಂಥ ಮೂರ್ತ ಸಾಮಾನ್ಯವನ್ನು ಆತ ಪರಮಭಾವನೆ (ಆ್ಯಬ್ಸಲೂಟ್ ಐಡಿಯ) ಎಂದು ಕರೆದಿರುತ್ತಾನೆ. ಈ ವಿಶ್ವವೆಲ್ಲ ಪರಮದ (ಆ್ಯಬ್ಸಲೂಟ್) ಅಭಿವ್ಯಕ್ತ ರೂಪಗಳು.

ಈ ವೈಚಾರಿಕ ತರ್ಕವನ್ನು ಎಲ್ಲ ವಿಧವಾದ ಅನುಭವಗಳಿಗೂ ಅನ್ವಯಿಸಿ ಆತ ತತ್ತ್ವಶಾಸ್ತ್ರವನ್ನು ಬೆಳೆಸಿರುತ್ತಾನೆ. ಅವನ ತತ್ತ್ವಶಾಸ್ತ್ರದ ಭಾಗಗಳು ಮೂರು : 1. ಪ್ರಕೃತಿ ಮತ್ತು ಚೇತನತತ್ತ್ವ (ಫಿಲಾಸಫಿ ಆಫ್ ನೇಚರ್ ಅಂಡ್ ಮೈಂಡ್). 2. ಚಾರಿತ್ರಿಕ ತತ್ತ್ವ (ಫಿಲಾಸಫಿ ಆಫ್ ಹಿಸ್ಟರಿಗಳ) 3. ಕಲೆ ಮತ್ತು ಮತಗಳತತ್ತ್ವ (ಫಿಲಾಸಫಿ ಆಫ್ ಆರ್ಟ್ ಅಂಡ್ ರಿಲಿಜನ್). ಈ ಮೂರಕ್ಕೂ ಆಧಾರವಾದದ್ದು ವೈಚಾರಿಕ ತರ್ಕ.

ಪ್ರಕೃತಿ ಪರಮದ ಒಂದು ಅಭಿವ್ಯಕ್ತ ರೂಪ. ಪರಮಭಾವನೆ ಕಾಲ ದೇಶಗಳ ರೂಪದಲ್ಲಿ ಅಭಿವ್ಯಕ್ತವಾದಾಗ ಪ್ರಕೃತಿಯ ರಚನೆಯೂ ಒಂದೇ ಆಗಿರುವುದೇ ಕಾರಣ. ಪ್ರಕೃತಿಯ ರಚನೆ ಬೇರೆಯಾಗಿ ನಮ್ಮ ಮನಸ್ಸಿನ ರಚನೆಯೇ ಬೇರೆಯಾಗಿದ್ದರೆ, ನಮ್ಮ ಭಾವನೆಗಳು ಪ್ರಕೃತಿಯ ಕಾರ್ಯಗಳನ್ನು ಪ್ರತಿಬಿಂಬಿಸಲಾರವು. ಪ್ರಕೃತಿ ಪರಿಣಾಮಗೊಳ್ಳುತ್ತಿರುವಂತೆಯೇ ನಮ್ಮ ಭಾವನೆಗಳೂ ಪರಿಣಾಮಗೊಳ್ಳುತ್ತಿರಬೇಕು. ಪ್ರಕೃತಿ ಮಾನವಚೈತನ್ಯದಲ್ಲಿ ಎಚ್ಚರಗೊಳ್ಳುತ್ತದೆ. ಮಾನವಚೈತನ್ಯ ಪ್ರಕೃತಿಯ ಮೂಲಕ ವಿಷಯೀಕೃತವಾಗುತ್ತದೆ. ಈ ಮೂಲಕ ನಮ್ಮ ಒಳಭಾವನೆಗಳು ಮೂರ್ತಭಾವನೆಗಳಾಗುತ್ತವೆ. ಹೀಗೆ ಪ್ರಕೃತಿ ಮಾನವನ ಚೇತನದ ಮೂಲಕ ತನ್ನ ಜಡತೆಯನ್ನು ಕಳೆದುಕೊಂಡು ಅಭಿವ್ಯಕ್ತವಾಗಿ ಪೂರ್ಣವಾಗುತ್ತದೆ. ಹೀಗೆ ಪ್ರಕೃತಿ ಮಾನವನ ಮೂಲಕವೂ ಮಾನವ ಪ್ರಕೃತಿಯ ಮೂಲಕವೂ ಪರಸ್ಪರವಾಗಿ ಪೂರ್ಣಗೊಳ್ಳುತ್ತವೆ. ಹೀಗೆ ಪೂರ್ಣಗೊಳಿಸುವ ಚೇತನವೇ ಪರಮಚೇತನ (ಆ್ಯಬ್ಸಲೂಟ್ ಕಾನ್ಷಸ್‌ನೆಸ್). ಅದರಲ್ಲಿ ಪ್ರಕೃತಿ ಮತ್ತು ಮಾನವಚೇತನ ಹೊಂದಿಕೆಯಾಗಿರುತ್ತವೆ.

ಪರಮ ಭಾವನೆ ಪ್ರಕೃತಿಯಲ್ಲೂ ಮಾನವಜೀವಿಗಳಲ್ಲೂ ಅಭಿವ್ಯಕ್ತವಾಗಿರುವುದಲ್ಲದೆ, ಸಾಮಾಜಿಕಸಂಸ್ಥೆಗಳಲ್ಲೂ ಮಾನವನ ಚರಿತ್ರೆಯಲ್ಲೂ ಮಾನವನ ಧಾರ್ಮಿಕ, ರಾಷ್ಟ್ರೀಯ ಭಾವನೆಗಳಲ್ಲೂ ಅಭಿವ್ಯಕ್ತವಾಗಿರುತ್ತದೆ. ಸುಪ್ತವಾಗಿದ್ದ ಭಾವನೆ ಮಾನವಸಂಸ್ಥೆಗಳಲ್ಲಿ ವ್ಯಕ್ತವಾಗುತ್ತದೆ. ಮಾನವ ಸೃಷ್ಟಿಸಿರುವ ಸಂಸ್ಥೆಗಳ ಮೂಲಕ, ತನ್ನ ಒಳಭಾವಗಳಾದ ನ್ಯಾಯ, ಧರ್ಮಗಳನ್ನು ತನ್ನ ಮುಂದೆ ವಿಷಯೀಕೃತವಾದಂತೆ ತಿಳಿಯಲು ಸಾಧ್ಯವಾಗುತ್ತದೆ. ಕುಟುಂಬ, ರಾಷ್ಟ್ರ ಅಂಥ ಸಂಸ್ಥೆಗಳು. ಆ ಸಂಸ್ಥೆಗಳ ಅಗತ್ಯತೆಯನ್ನು ಕಂಡು ತಿಳಿದಾಗ ತನ್ನ ನ್ಯಾಯಭಾವನೆ ಧರ್ಮಭಾವನೆ ಮೂರ್ತರೂಪಗಳಾಗುತ್ತವೆ. ಮಾನವ ತನ್ನ ಚರಿತ್ರೆಯನ್ನು ತಿಳಿದುಕೊಂಡಾಗ ಅದು ಪರಮ ಚೈತನ್ಯದ ಒಂದು ಮೂರ್ತರೂಪವೆಂದು ಅವನಿಗೆ ಸ್ಪಷ್ಟವಾಗುತ್ತದೆ. ರಾಷ್ಟ್ರದ ಕಾನೂನುಗಳಿಗೆ, ಸಮಾಜದ ಕಟ್ಟುಕಟ್ಟಳೆಗಳಿಗೆ ಮಾನವ ವಿಧೇಯನಾಗಿರುವುದು ಅವು ತನ್ನ ಒಳಭಾವಗಳ ಹೊರ ರೂಪಗಳಾದ್ದರಿಂದಲೇ. ರಾಷ್ಟ್ರದ ಕಾನೂನಿಗೆ ವಿಧೇಯನಾದಾಗ ತಾನು ತನ್ನ ಒಳಭಾವಗಳ ಹೊರ ರೂಪಗಳಾದ್ದರಿಂದಲೇ. ರಾಷ್ಟ್ರದ ಕಾನೂನಿಗೆ ವಿಧೇಯನಾದಾಗ ತಾನು ತನ್ನ ಅಂತರಂಗದ ನ್ಯಾಯ ಭಾವನೆಗೆ ವಿಧೇಯನಾಗಿರುತ್ತಾನೆಂಬುದು ಸ್ಪಷ್ಟವಾಗುತ್ತದೆ. ಆ ತಿಳಿವಿಲ್ಲದಿದ್ದರೆ ರಾಜ್ಯದ ಕಾನೂನು, ಸಮಾಜದ ಕಟ್ಟಳೆಗಳು ಕೃತಕ ಬಂಧನಗಳಾಗಿ ಪರಿಣಮಿಸುತ್ತವೆ. ಸಾಮಾಜಿಕ ಸಂಸ್ಥೆಗಳೂ ರಾಷ್ಟ್ರವೂ ನಮ್ಮ ಅಂತರಂಗದ ಭಾವನೆಗಳನ್ನು ಸಿದ್ಧಿಸಿಕೊಳ್ಳಲು ಅಗತ್ಯವಾದ ಅಂಗಗಳು. ಅವು ಇಲ್ಲದಿದ್ದರೆ ನಮ್ಮ ಒಳಭಾವಗಳು ಹೊರಹೊಮ್ಮಲು ಅವಕಾಶವಿಲ್ಲದಂತಾಗುತ್ತದೆ. ನಮ್ಮ ಆತ್ಮಸಿದ್ಧಿಗೆ, ಧಾರ್ಮಿಕ, ಭೌತಿಕ, ಸ್ವಾತಂತ್ರ್ಯ ಸಿದ್ಧಿಗಳಿಗೆ ಸಾಮಾಜಿಕ ಮತ್ತು ರಾಷ್ಟ್ರೀಯ ಸಂಸ್ಥೆಗಳು ಅಗತ್ಯವಾದ ವಾತಾವರಣ. ಮಾನವಚರಿತ್ರೆ ಕಾಲದಿಂದ ಕಾಲಕ್ಕೆ ಹುಟ್ಟುವ ನಮ್ಮ ವಿರುದ್ಧ ಭಾವನೆಗಳ ಮಸೆದಾಟವನ್ನೂ ಅವುಗಳ ಸಮನ್ವಯವನ್ನೂ ಪ್ರತಿಬಿಂಬಿಸುತ್ತದೆ. ವ್ಯಕ್ತಿಸ್ವಾತಂತ್ರ್ಯವೆಷ್ಟು ಅಗತ್ಯವೋ ಸಮಾಜದ ಸ್ಥಿಮಿತತೆಯೂ ಅಷ್ಟೇ ಅಗತ್ಯ. ಒಂದು ಕಾಲದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಗತ್ಯವಾದ ಭಾವನೆಗಳು ಪ್ರಬಲವಾಗುತ್ತವೆ. ಆ ಭಾವನೆಗಳು ಅತಿಯಾಗಿ ಅವುಗಳಿಗೆ ಪ್ರತಿಯಾದ ಸಾಮಾಜಿಕ ಸುಭದ್ರತೆಗೆ ಅಗತ್ಯವಾದ ಭಾವನೆಗಳು ಹುಟ್ಟಿಕೊಳ್ಳುತ್ತವೆ. ಅವುಗಳೆರಡೂ ಒಂದು ಹಂತದಲ್ಲಿ ಸಮನ್ವಯವಾದಾಗ ಹೊಸ ಬಗೆಯಾದ, ವ್ಯಕ್ತಿಸ್ವಾತಂತ್ರ್ಯಕ್ಕೆ ಅಗತ್ಯವಾದ ಹೊಸ ಭಾವನೆಗಳು ಹುಟ್ಟುತ್ತವೆ. ಹೀಗೆ ಸಮಾಜದ ಬೆಳೆವಣಿಗೆಯ, ವ್ಯಕ್ತಿಯ ಬೆಳೆವಣಿಗೆಯ ಹೊಸ ಹೊಸ ಹಂತಗಳು ಏರ್ಪಡುತ್ತವೆ. ಈ ಮೂಲಕ ಪರಮ ತನ್ನ ಸ್ವರೂಪವನ್ನು ಚರಿತ್ರೆಯ ಉದ್ದಕ್ಕೂ ವಿಕಸಿಸುತ್ತಿದೆ.

ಪ್ರಕೃತಿಯ ಮೂಲಕವೂ ಸಮಾಜ ಸಂಸ್ಥೆಗಳ ಮೂಲಕವೂ ಪರಮ ಅಭಿವ್ಯಕ್ತವಾದಂತೆ ಕಲೆಯ ಮೂಲಕವೂ ಮತದ ಮೂಲಕವೂ ಅಭಿವ್ಯಕ್ತವಾಗುತ್ತದೆ. ಪರಮಚೈತನ್ಯ ಮಾನವನ ಪ್ರತಿಭಾ ರೂಪಗಳ ಮೂಲಕ ಅಭಿವ್ಯಕ್ತವಾದಾಗ ಕಲೆಯಾಗುತ್ತದೆ. ಪೂಜ್ಯ ಭಾವನೆಗಳ ಮೂಲಕ ಅಭಿವ್ಯಕ್ತರೂಪಗಳು. ಮತವಾಗುತ್ತದೆ. ಇವೆಲ್ಲ ಸರ್ವತೋಮುಖವಾದ ವೈಚಾರಿಕ ಚೇತನದ ವಿಮರ್ಶೆಗೆ ಒಳಪಟ್ಟು ಸಮನ್ವಯವಾದಾಗ ತತ್ತ್ವವಾಗಿ ಅಭಿವ್ಯಕ್ತವಾಗುತ್ತದೆ. ಕಲೆ, ಮತ, ತತ್ತ್ವ ಈ ಮೂರು ಪರಚೇತನದ ಅಭಿವ್ಯಕ್ತರೂಪಗಳು. ಹೆಗೆಲ್‌ನ ಅನುಯಾಯಿಗಳನ್ನು ಎಡಬಲಪಕ್ಷಗಳವರೆಂದು ವಿಂಗಡಿಸುವುದುಂಟು. ಬಲ ಪಕ್ಷದವರು ಆತ ಈಶ್ವರವಾದಿ (ಥೀಯಿಸ್ಟ್) ಎಂದೂ ಎಡ ಪಕ್ಷದವರು ಆತ ವಿಶ್ವದೈವೈಕ್ಯವಾದಿ (ಪ್ಯಾಂಥೀಯಿಸ್ಟ್) ಎಂದೂ ಭಾವಿಸಿರುತ್ತಾರೆ. ಕಾರ್ಲ್ ಮಾರ್ಕ್ಸ್‌ನದು ತೃತೀಯ ಪಕ್ಷ. ಈತ ಹೆಗೆಲ್ ನಿರೂಪಿಸಿದ ವೈಚಾರಿಕ ತತ್ತ್ವವನ್ನು ಅಂಗೀಕರಿಸಿರುತ್ತಾನೆ. ಆ ತರ್ಕಕ್ಕೆ ಚಿಚ್ಛಕ್ತಿಗೆ ಬದಲಾಗಿ ಭೌತಶಕ್ತಿ ಮೂಲವೆಂದು ವಾದಿಸಿರುತ್ತಾನೆ. ಕಾರ್ಲ್ ವೈಚಾರಿಕ ಭೌತವಾದಿ.

**ಷೋಪೆನ್‌ಹೋವರ್** : 1788–1860. ಈತನೂ ಹೆಗಲ್ಲನಂತೆ ಜರ್ಮನಿಯ ತಾತ್ತ್ವಿಕ. ಚಿಂತಕ ಹೆಗೆಲ್‌ನ ಸಮಕಾಲೀನ. ಅವನಂತೆ ಕಾಂಟ್‌ನ ತತ್ತ್ವವನ್ನು ತನ್ನದೇ ಆದ ರೀತಿಯಲ್ಲಿ ಬೆಳೆಸಿದ. ನಮ್ಮ ಜ್ಞಾನ ತೋರಿಕೆಯ ವಿಶ್ವಕ್ಕೆ ಮಾತ್ರ ಕ್ಲುಪ್ತವಾದದ್ದು. ಅದಕ್ಕೆ ಕಾರಣವಾದ ಸತ್ತಿನ ಜ್ಞಾನ ಬುದ್ಧಿಗೆ ಮೀರಿದ್ದು. ನಮಗೆ ತೋರುವ ವಿಶ್ವ ಭಾವನಾರೂಪವಾದದ್ದು (ವರ್ಲ್ಡ್ ಆ್ಯಸ್ ಐಡಿಯ). ಕಾಂಟ್‌ನ ತತ್ತ್ವದಲ್ಲಿ ಇಷ್ಟನ್ನು ಮಾತ್ರ ಈತ ಒಪ್ಪಿಕೊಳ್ಳುತ್ತಾನೆ. ಇವನ ಪ್ರಸಿದ್ಧಗ್ರಂಥವಾದ ದಿ ವರ್ಲ್ಡ್ ಆ್ಯಸ್ ಐಡಿಯ ಅಂಡ್ ವಿಲ್ ಎಂಬ ಗ್ರಂಥದ ಸುಮಾರು ಇನ್ನೂರು ಪುಟಗಳಲ್ಲಿ ಅವನ್ನು ವಿವರಿಸುತ್ತಾನೆ. ಸ್ವಸ್ವರೂಪದಲ್ಲಿ ಸತ್ತನ್ನು ತಿಳಿಯಲಾಗುವುದಿಲ್ಲವೆಂಬ ಕಾಂಟ್‌ನ ಅಭಿಪ್ರಾಯವನ್ನು ಆತ ಒಪ್ಪಲಿಲ್ಲ. ಅದು ತಿಳಿಯಬಹುದಾದದ್ದು, ಅದರ ಸ್ವರೂಪ ಚಿತ್ತರೂಪವಾದದ್ದು. ಭಾವನಾರೂಪದಲ್ಲಿ ತಿಳಿಯಲಾಗದ್ದನ್ನು ಚಿತ್ತರೂಪದಲ್ಲಿ ತಿಳಿಯಬಹುದು. ಅದು ಚಿತ್ತರೂಪವಾದದ್ದೆಂದು ನಮ್ಮ ಕ್ರಿಯೆಗಳ ಮೂಲಕ ನೇರವಾಗಿ ತಿಳಿದುಕೊಳ್ಳುತ್ತೇವೆ. ಚಿತ್ತವೇ ಪ್ರಧಾನವಾದ ನಮ್ಮ ಆತ್ಮ. ಅದು ಕಾಲದೇಶಗಳ ಮಿತಿಗೆ ಒಳಪಟ್ಟದ್ದಲ್ಲ. ಕಾರ್ಯಕಾರಣ ಸಂಬಂಧಕ್ಕೆ ಒಳಪಟ್ಟದ್ದಲ್ಲ. ಸತ್ತಿನ ಸ್ವಸ್ವಭಾವವನ್ನು ನಮ್ಮಲ್ಲಿರುವ ವಾಸನೆಗಳ (ಇನ್‌ಸ್ಟಿಂಕ್ಟ್ಸ್) ಮೂಲಕ, ಇಚ್ಛೆಗಳ ಮೂಲಕ ನೇರವಾಗಿ ಅರಿತುಕೊಳ್ಳಬಹುದು. ನಮ್ಮ ಶರೀರ ನಮ್ಮ ಚಿತ್ತದ ಹೊರರೂಪ. ಇತರ ವಸ್ತುಗಳನ್ನು ತಿಳಿದುಕೊಳ್ಳುವಂತೆ ನಾವು ನಮ್ಮ ಶರೀರವನ್ನು ಭಾವನಾರೂಪವಾಗಿ ತಿಳಿದುಕೊಳ್ಳುತ್ತೇವೆ. ನಮ್ಮ ಆತ್ಮವಾದ ಚಿತ್ತವನ್ನು ಅದರ ಸ್ವಸ್ವರೂಪಗಳ ಮೂಲಕ ತಿಳಿದುಕೊಳ್ಳುತ್ತೇವೆ. ನಮ್ಮ ಚಿತ್ತ ಶರೀರದ ಮೂಲಕ ವಿಷಯೀಕೃತವಾಗುತ್ತದೆ. ವಿಷಯೀಕೃತವಾದಾಗ ಶರೀರ ಇತರ ವಸ್ತುಗಳಂತೆ ಭಾವನಾರೂಪವಾಗಿ ಕಾಣಿಸಿಕೊಳ್ಳುತ್ತದೆ. ಇದು ಇವನ ಮೂಲ ಸಿದ್ಧಾಂತ.

ನನ್ನಲ್ಲಿ ಚಿತ್ತವಿರುವಂತೆಯೇ ಪ್ರಕೃತಿಯಲ್ಲೂ ಇದೆ. ಅಯಸ್ಕಾಂತದ ಮುಳ್ಳು ಉತ್ತರಕ್ಕೆ ಮುಖಮಾಡುತ್ತದೆ. ಎಷ್ಟು ಅದನ್ನು ಪಲ್ಲಟಿಸಲು ಪ್ರಯತ್ನ ಮಾಡಿದರೂ ಅದು ಆ ದಿಕ್ಕಿನ ಕಡೆಗೇ ವಾಲುತ್ತದೆ. ಅದರ ಒಳಶಕ್ತಿ ಅದಮ್ಯ. ಉಪ್ಪಿನ ಹರಳುಗಳು ತಮಗೆ ಸ್ವಾಭಾವಿಕವಾದ ರೂಪವನ್ನು ಪಡೆಯಲು ತವಕಪಡುತ್ತವೆ. ಈ ಭೌತ ಪದಾರ್ಥಗಳ ವರ್ತನೆ ಅವುಗಳಲ್ಲಿ ಸುಪ್ತವಾಗಿ ಅಡಗಿರುವ ಚಿತ್ತಶಕ್ತಿಯನ್ನು ಪ್ರದರ್ಶಿಸುತ್ತದೆ. ಗಿಡಗಳ ವರ್ತನೆಯೂ ಅದೇ ರೀತಿಯಾಗಿ ಚಿತ್ತಶಕ್ತಿಯ ರೂಪಭೇದಗಳು. ಗಿಡಗಳು ಸೂರ್ಯನ ಕಿರಣಗಳನ್ನು ಸ್ಪರ್ಶಿಸಲು ಅಡ್ಡಬಂದ ಅಂಶಗಳನ್ನು ನಿವಾರಿಸಿಕೊಂಡು ಮೇಲಕ್ಕೆ ಏಳುತ್ತವೆ. ನೆಲದೊಳಗಿರುವ ಶೈತ್ಯವನ್ನು ಹೀರಿಕೊಳ್ಳಲು ತಮ್ಮ ಬೇರುಗಳನ್ನು ಆಳಕ್ಕೆ ಇಳಿಸುತ್ತವೆ. ಕ್ರೂರ ಮೃಗಗಳು ಕೋರೆ ಹಲ್ಲುಗಳನ್ನು ಬೆಳೆಸುತ್ತವೆ. ಆಕಳುಗಳು ತಿವಿಯಲು ಕೊಂಬುಗಳನ್ನು ಬೆಳೆಸುತ್ತವೆ. ದೇಹರಚನೆಗೆ ಚಿತ್ತವೃತ್ತಿಯೇ ಆಶ್ರಯ. ಹೀಗೆ ಚಿತ್ತವೇ ಎಲ್ಲಕ್ಕೂ ಮೂಲ.

ಸುಪ್ತವಾಗಿದ್ದ ಚಿತ್ತ ಮಾನವನಲ್ಲಿ ಚೇತನಗೊಳ್ಳುತ್ತದೆ. ಅದು ಬುದ್ಧಿಯನ್ನು ಅದರ ಒಂದು ಅಂಗವಾಗಿ ಬೆಳೆಸುತ್ತದೆ. ಮಿದುಳನ್ನು ರೂಪುಗೊಳಿಸುತ್ತದೆ. ಅದು ಜೀವನವನ್ನು ಕಾಪಾಡಿಕೊಳ್ಳಲು ಏರ್ಪಟ್ಟ ಸಾಧನ. ಚಿತ್ತ ಪ್ರಭು, ಬುದ್ಧಿ ಅದರ ಸೇವಕ. ಚಿತ್ತ ಸ್ಮೃತಿ ಕಲ್ಪನಾ ಶಕ್ತಿ, ದರ್ಶನ ಮುಂತಾದ ಶಕ್ತಿಗಳನ್ನು ಹುಟ್ಟು ಹಾಕುತ್ತದೆ. ನಿಯಂತ್ರಿಸುತ್ತದೆ.

ಈ ಮೂಲಚಿತ್ತ ಪುರುಷರೂಪದ್ದಲ್ಲ. ಅದು ಬುದ್ಧಿರೂಪವಾದ ಈಶ್ವರನಲ್ಲ. ಅದು ಕಾಲ ದೇಶಗಳಲ್ಲಿರುವ ಎಲ್ಲ ವಸ್ತುಗಳಿಗೂ ಮೂಲವಾದರೂ ಅದೇ ಕಾಲ ದೇಶಗಳ ಮಿತಿಗೆ ಒಳಪಟ್ಟದ್ದಲ್ಲ. ಅದು ಅನಂತವಾದ ಮಾದರಿಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಈ ಮಾದರಿಗಳು ಪ್ಲೇಟೋನ ಮಾದರಿಗಳನ್ನು ಹೋಲುತ್ತವೆ. ಪ್ರಕೃತಿಯಲ್ಲಿ ನಾವು ಕಾಣುವ ಜಾತಿಗಳೇ (ಸ್ಪೀಷೀಸ್) ಇವು. ಈ ಜಾತಿಗಳು ಅನಂತವಾದುವು. ಇವು ಕಾಲದೇಶಗಳ ಕಟ್ಟಿಗೆ ಒಳಪಟ್ಟವಲ್ಲ. ಇವಕ್ಕೆ ಬದಲಾವಣೆ ಇಲ್ಲ. ಬದಲಾಯಿಸುವುವು ವ್ಯಕ್ತಿಗಳು. ವ್ಯಕ್ತಿಗಳಿಗೆ

ಹುಟ್ಟು ಸಾವುಂಟು. ಆದರೆ ಜಾತಿಗಳಿಗೆ ಹುಟ್ಟುಸಾವಿಲ್ಲ. ಅವು ಚಿರಸ್ಥಿರವಾದುವು. ಈ ಜಾತಿಗಳಲ್ಲಿ ಕ್ರಮವಾದ ಅಂತಸ್ತುಗಳಿವೆ. ಲೋಹಜಾತಿಗಳು ಕೆಳ ಅಂತಸ್ತಿನವು. ಸಸ್ಯಜಾತಿಗಳು ಅವುಗಳಿಗಿಂತ ಮೇಲಿನವು. ಪ್ರಾಣಿಜಾತಿಗಳು ಅವುಗಳಿಗಿಂತ ಮೇಲಿನವು. ಮಾನವ ಜಾತಿ ಎಲ್ಲಕ್ಕೂ ಮೇಲಿನ ಅಂತಸ್ತಿನದು. ಇವೆಲ್ಲಕ್ಕೂ ತಳಹದಿಯಾದ ಚಿತ್ತ ಅನಂತ, ಅಮೃತ.

ಇರಬೇಕು, ಇದ್ದು ಹೋರಾಡಬೇಕು, ಇದ್ದು ಜಯಿಸಬೇಕು–ಎಂಬುದೇ ಚಿತ್ತದ ಮೂಲತಂತ್ರ. ಈ ಮಂತ್ರ ನಿರಾಶಾಮಂತ್ರವಾಗಬೇಕಾದ್ದಿಲ್ಲ. ಆದರೆ ಷೋಪೆನ್ ಹೋವರ್ ನಿರಾಶಾವಾದವನ್ನು ಎತ್ತಿ ಹಿಡಿದಿರುತ್ತಾನೆ. ಹೋರಾಟ, ಕೊಲೆ, ದುಃಖ–ಇವುಗಳಿಂದ ಜೀವನ ತುಂಬಿ ತುಳುಕುತ್ತಿದೆ. ಒಂದು ಆಶೆ ಪೂರ್ಣವಾದಾಗ ಅದರ ಸ್ಥಳದಲ್ಲಿ ಪೂರ್ಣವಾಗದ ಹತ್ತು ಆಶೆಗಳು ಹುಟ್ಟುತ್ತವೆ. ನಾವು ನಿರಂತರವಾಗಿ ಜೀವವನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತೇವೆ. ಆದರೆ ಕೊನೆಯಲ್ಲಿ ಸಾವು ತಪ್ಪಿದ್ದಲ್ಲ. ಒಂದೊಂದು ಸಲ ನಾವು ಉಸಿರನ್ನು ಎಳೆದುಕೊಂಡಾಗಲೂ ನಮಗೆ ಅಭಿಮುಖವಾದ ಸಾವನ್ನು ಹೊರಕ್ಕೆ ಅಟ್ಟುತ್ತಿದ್ದೇವೆ. ಆದರೂ ಅದನ್ನು ಅಟ್ಟಲಾಗದೆ ಸೋತು ಉಸಿರೆಳೆಯುವುದನ್ನು ನಿಲ್ಲಿಸುತ್ತೇವೆ. ಬೆಕ್ಕು ಇಲಿಯನ್ನು ಸ್ವಲ್ಪಕಾಲ ಆಡಿಸಿ ಕೊನೆಗೆ ಅದನ್ನು ನುಂಗುವಂತೆ ಸಾವು ನಮ್ಮನ್ನು ಸ್ವಲ್ಪಮಟ್ಟಿಗೆ ವಿನೋದಗೊಳಿಸಿ ಕೊನೆಯಲ್ಲಿ ನಮ್ಮನ್ನು ನುಂಗಿಬಿಡುತ್ತದೆ. ಜೀವನ ವಾಸಿಯಾಗದ ಒಂದು ಹುಣ್ಣು.

ಈ ನಿರಂತರವಾದ ಬೇನೆಗೆ ಸ್ವಾರ್ಥವೇ ಕಾರಣ. ನಾವು ಮೇಲೆ ನೋಡುವುದಕ್ಕೆ ಪ್ರಾಮಾಣಿಕರಾಗಿಯೂ ಪರಚಿಂತಕರಾಗಿಯೂ ಇರುತ್ತೇವೆ. ಆದರೆ ಒಳಗೆ ಅಪ್ರಾಮಾಣಿಕತೆ ಇದೆ. ಸ್ವಾರ್ಥವಿದೆ. ನಾವು ಪ್ರಾಮಾಣಿಕರಾಗಿದ್ದರೆ ಅದಕ್ಕೆ ಭಯವೇ ಕಾರಣ. ಪರಹಿತ ಚಿಂತಕರಾಗಿದ್ದರೆ ಅದಕ್ಕೆ ನಮ್ಮ ಒಣ ಜಂಭವೇ ಮೂಲ. ನಾಗರಿಕತೆ ಎಂದು ನಾವು ಯಾವುದನ್ನು ಹೆಮ್ಮೆಯಿಂದ ಆದರಿಸುತ್ತೇವೆಯೊ ಅದೇನೂ ಸುಖಪ್ರದವಲ್ಲ. ಎರಡು ಆಶೆಗಳಿಗೆ ಬದಲಾಗಿ ಇಪ್ಪತ್ತು ಆಶೆಗಳು ಹುಟ್ಟುತ್ತವೆ. ಆಶೆಯ ದಾಹ ಹೆಚ್ಚಿದಂತೆಲ್ಲ ದಣಿವೂ ಹೆಚ್ಚುತ್ತದೆ. ಜ್ಞಾನ ಬೆಳೆದರೆ ಚಿಂತೆ ಉಡುಗುವುದಿಲ್ಲ. ಜ್ಞಾನ ಹೆಚ್ಚಿದಂತೆಲ್ಲ ಹೊಸ ಹೊಸ ಚಿಂತೆಗಳು ಹೆಚ್ಚುತ್ತವೆ. ಮಾನವನ ಚರಿತ್ರೆ ಕೊನೆ ಇಲ್ಲದ, ಬಿಡುವಿಲ್ಲದ, ಕೊಲೆ, ದರೋಡೆ, ಒಳಸಂಚು, ಸುಳ್ಳುಗಳಿಂದ ತುಂಬಿದೆ. ಆ ಚರಿತ್ರೆಯ ಒಂದು ಪುಟವನ್ನು ತಿಳಿದರೆ ಸಾಕು ಎಲ್ಲವನ್ನೂ ತಿಳಿದಂತೆಯೇ ಆಗುತ್ತದೆ.

ಇಂಥ ಪ್ರಪಂಚದಲ್ಲಿ ಮಾನವರು ಆಚರಿಸಬೇಕಾದ ಧರ್ಮ ಯಾವುದು? ಅನುಕಂಪ ಮತ್ತು ಸ್ವಾರ್ಥತ್ಯಾಗ–ಇವೇ ಮಾನವಜೀವನದ ಧರ್ಮದೀಪಗಳು. ಸಂಕಟ ನಮಗೆಲ್ಲರಿಗೂ ಸಾಮಾನ್ಯವಾದದ್ದು. ಸಂಕಟದಲ್ಲಿರುವವರಲ್ಲಿ ಅನುತಾಪ, ಅನುಕಂಪವೇ ಮಾನವೀಯ ಗುಣ. ದುಃಖದಿಂದ ಬಿಡುಗಡೆ ಹೊಂದಲು ಮಾನವನಿಗೆ ಇರುವ ದಾರಿ ಒಂದೇ. ಅದು ಸ್ವಾರ್ಥತ್ಯಾಗ. ಚಿತ್ತದಮನದಿಂದ ಚಿತ್ತಸ್ವಾಸ್ಥ್ಯ ದೊರೆಯುವುದು. ಚಿತ್ತಸ್ವಾಸ್ಥ್ಯವನ್ನು ಹಲವು ಬಗೆಯಾಗಿ ಏರ್ಪಡಿಸಿಕೊಳ್ಳಬಹುದು. ಕಲೋಪಾಸನೆ ಅದಕ್ಕೆ ಒಂದು ಉಪಾಯ. ಎಲ್ಲವೂ ದುಃಖಮಯವೆಂಬ ತತ್ತ್ವಚಿಂತನೆ ಎರಡನೆಯ ಉಪಾಯ. ಕಲೋಪಾಸನೆ ಒಂದು ಕ್ಷಣ ಮಾತ್ರ ನಮಗೆ ಶಾಂತಿ ಕೊಡುತ್ತದೆ. ಕಲಾಧ್ಯಾನದಿಂದ ನಮ್ಮ ಮನಸ್ಸು ಮರಳಿದಾಗ ಪುನಃ ಈ ಸಂಕಟದ ಪ್ರಪಂಚ ಕಾಣಿಸಿಕೊಳ್ಳುತ್ತದೆ. ತತ್ತ್ವಚಿಂತನೆ ಕೂಡ ಸ್ಥಿರಶಾಂತಿಯನ್ನು ಕೊಡುವುದಿಲ್ಲ. ಸ್ಥಿರಶಾಂತಿ ಸಂನ್ಯಾಸದಿಂದಲೇ ಸಾಧ್ಯ. ಬುದ್ಧನಂತೆ ಚಿತ್ತವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕು. ನಿರಂತರ ತಾಪಸ್ಯ ನಡೆಸಿದಾಗ ಚಿತ್ತದ ಸಂಕೋಲೆ ಕ್ರಮಕ್ರಮವಾಗಿ ಕಳಚಿಬಿದ್ದು, ಚಿತ್ತರಹಿತ ನಿರ್ವಾಣ ಲಭಿಸುತ್ತದೆ. ನಿರ್ವಾಣವೇ ಪರಮಸಿದ್ಧಿ. ಷೋಪೆನ್‍ಹೋವರ್‌ಗೆ ಭಾರತೀಯ ಸಂನ್ಯಾಸದ ಜೀವನ ತುಂಬ ಮೆಚ್ಚಿನದಾಗಿ ಕಂಡಿತು. ಆದರೆ ಭಾರತದ ದರ್ಶನಗಳೆಲ್ಲ ನಿರಾಶಾದರ್ಶನಗಳೆಂದು ಆತ ಬಗೆದಿದ್ದ. ಅವನಿಗೆ ಭಾರತದ ತತ್ತ್ವ ಸ್ವಲ್ಪ ತಿಳಿದಿದ್ದೇ ಅದಕ್ಕೆ ಕಾರಣ. ಭಾರತದ ತತ್ತ್ವ ಪಾಶ್ಚಾತ್ಯ ತಾತ್ತ್ವಿಕರನ್ನು ಪ್ರಚೋದನೆಗೊಳಿಸಲು ಪ್ರಾರಂಭಿಸಿದ್ದು ಈ ಕಾಲದಲ್ಲೇ.

**ಫ್ರೆಡರಿಚ್ ನೀಚೆ :** 1844–1900. ಈತನೂ ಜರ್ಮನಿಯವನೇ. ಬಾನ್ ಮತ್ತು ಲೀಪ್ಜಿಗ್ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಸ್ವಿಟ್ಜರ್‌ಲೆಂಡಿನ ಪ್ರಜೆಯಾದ. ಅಲ್ಲಿ ಬಾಸೆಲ್ ವಿಶ್ವವಿದ್ಯಾನಿಲಯದಲ್ಲಿ ಗ್ರೀಕ್ ತತ್ತ್ವಾಧ್ಯಾಪಕನಾದ. ಕ್ರೈಸ್ತಧರ್ಮ ತತ್ತ್ವವನ್ನು ಬಲವಾಗಿ ಖಂಡಿಸಿದ ಆಧುನಿಕ ತಾತ್ತ್ವಿಕರಲ್ಲಿ ಇವನೇ ಮೊದಲನೆಯವ. ಷೋಪೆನ್ ಹೋವರ್‌ನ ತತ್ತ್ವದಲ್ಲಿ ನೀಚೆಗೆ ಮೊದಲಲ್ಲಿ ಆದರವಿತ್ತು. ಆದರೆ ತನ್ನ ತತ್ತ್ವ ಬೆಳೆದಂತೆಲ್ಲ ಆತನ ನಿರಾಶಾವಾದವನ್ನು ತ್ಯಜಿಸಿದ. ಜೀವನದಲ್ಲಿ ಸಂಕಟವುಂಟೆಂದು ಒಪ್ಪಿಕೊಂಡರೂ ಮಾನವ ಚಿತ್ತಕ್ಕೆ ಅದನ್ನು ಗೆಲ್ಲುವ ಶಕ್ತಿ ಇದೆ ಎಂದು ವಾದಿಸಿದ. ಅವನ ತತ್ತ್ವ ಜೀವನಿರಾಕರಣೆಯದಲ್ಲ, ಜೀವಸ್ಥಿರೀಕರಣದ್ದು. ಸಂಕಟವನ್ನು, ಕಷ್ಟವನ್ನು ಎದುರಿಸುವ ಶಕ್ತಿ ಚಿತ್ತಕ್ಕಿದೆ ಎಂದು ಆತ ಸಮರ್ಥಿಸಿದ. ಮೊದಲಲ್ಲಿ ಮಾನವನ ಭಾವೋದ್ರೇಕ ಸ್ವಭಾವವೂ (ಡಯೊನೀಸಿನ ಸ್ವಭಾವ) ಸಂಯಮ ಸ್ವಭಾವವೂ (ಅಪಾಲೋವಿನ ಸ್ವಭಾವ) ಪರಸ್ಪರ ವಿರುದ್ಧವೆಂದು ಅವನು ಬಗೆದಿದ್ದ. ಇವೆರಡೂ ಸಮನ್ವಯವಾಗುವುದು ಸಾಧ್ಯ. ಹಾಗೆ ಸಮನ್ವಯವಾದಾಗಲೇ ಮಾನವ ತನ್ನ ನಿಜಸ್ವರೂಪವನ್ನು ತಿಳಿದುಕೊಳ್ಳುವುದು. ಆಗ ಮಾನವನಿಗೆ ತನ್ನ ಘನತೆಯ ಅರಿವಾಗುತ್ತದೆ, ಅವನಲ್ಲಿ ಆತ್ಮಗೌರವ ಆತ್ಮಪ್ರತ್ಯಯಗಳು ಹುಟ್ಟುತ್ತವೆ. ಅವನ ಚಿತ್ತ ವೀರಚಿತ್ತವಾಗುತ್ತದೆ. ಷೋಪೆನ್‍ಹೋವರ್ ಬಗೆದಿದ್ದಂತೆ ಜೀವವನ್ನು ಕಾಪಾಡಿಕೊಳ್ಳುವುದೊಂದೇ ಚಿತ್ತದ ಗುರಿಯಲ್ಲ. ಜೀವನದಲ್ಲಿ ಶಕ್ತಿ ವರ್ಧಿಸುವಂತೆ ಬಾಳುವುದೇ ಅಪಾಯವನ್ನು ಧೈರ್ಯವಾಗಿ ಎದುರಿಸಿ, ಅದನ್ನು ಜಗ್ಗಿಸುವುದೇ ಚಿತ್ತದ ಗುರಿ. ಮಾನವ ಸಾಧಾರಣ ಪುರುಷಾರ್ಥಗಳಿಗೆ ಶರಣನಾಗದೆ, ಅವುಗಳನ್ನು ಮಾತ್ರ ಸಾಧಿಸಿ ತೃಪ್ತನಾಗಿರದೆ ಹೊಸ ಪುರುಷಾರ್ಥಗಳನ್ನು ಸಾಧಿಸಬೇಕು. ಕಲಿಯಾಗಬೇಕು, ಕಲೆಗಾರನಾಗಬೇಕು, ಪ್ರಕೃತಿಯ ಮರ್ಮವನ್ನು ಭೇದಿಸಬೇಕು. ಮಾನವನ ಜೀವನವನ್ನು ಹೊಸಮಟ್ಟಕ್ಕೆ ಎತ್ತಬೇಕು. ಹಾಗೆ ಜೀವನದ ಮಟ್ಟವನ್ನು ಏರಿಸಿದ ಮಾನವ ಅತಿಮಾನವ (ಸೂಪರ್‌ಮ್ಯಾನ್). ಕಲ್ಲಿನಲ್ಲಿದ್ದ ಶಕ್ತಿ ಪ್ರಬಲಿಸಿ, ಅದಕ್ಕಿಂತ ಮೇಲ್ಮಟ್ಟದ ಸಸ್ಯ ಹುಟ್ಟಿತು. ಸಸ್ಯದಲ್ಲಿದ್ದ ಚಿತ್ತಶಕ್ತಿ ಬೆಳೆದು, ಅದಕ್ಕಿಂತ ಮೇಲ್ಮಟ್ಟದ ಪ್ರಾಣಿಗಳು ಹುಟ್ಟಿದುವು. ಪ್ರಾಣಿಗಳಲ್ಲಿ ಅಂತರ್ಗತವಾದ ಚಿತ್ತಶಕ್ತಿ ಬೆಳೆದು ಮೇಲಿನ ಹಂತದ ಮಾನವನಾದ. ಹೀಗೆ ಪ್ರಕೃತಿಯ ಉದ್ದಕ್ಕೂ ಜೀವನವನ್ನು ಹೊಸ ಮಟ್ಟಕ್ಕೆ ಏರಿಸುವ ಸಾಹಸ ಎದ್ದು ಕಾಣಿಸುತ್ತದೆ. ಮಾನವರಾದರೋ ಕೇವಲ ಮೃಗಗಳಂತೆ ವಾಸನಾಜೀವಿಯಾಗಿ ಮೃಗಗಳ ದರ್ಜೆಗೆ ಇಳಿಯಲು ಪ್ರಯತ್ನಿಸುತ್ತಿದ್ದಾನೆ. ಇದನ್ನು ತಡೆಯಬೇಕು. ಮಾನವ ಹೊಸ ಶಕ್ತಿಯನ್ನು ಹುಟ್ಟಿಸಿಕೊಳ್ಳಬೇಕು. ಕೇವಲ ಹಣಗಳಿಸುವುದನ್ನು ಬಿಟ್ಟು ಸೃಷ್ಟ್ಯಾತ್ಮಕ ಜೀವನ ನಡೆಸಬೇಕು. ಅತಿಮಾನವನಾಗಬೇಕು. ಇಂಥ ಅತಿಮಾನವರು (ಜೀನಿಯಸ್) ಹಿಂದೆ ಕೇವಲ ಕೆಲವರಿದ್ದರು. ಅವರು ಜೀವನದ ಮಟ್ಟವನ್ನು ಏರಿಸಿದರು. ಇಂಥವರು ಈಗ ಹೆಚ್ಚಾಗಿ ಹುಟ್ಟಿಕೊಳ್ಳದಿದ್ದರೆ ಮಾನವ ಅಧೋಗತಿಗೆ ಇಳಿಯುತ್ತಾನೆ. ನೀಚೆಯ ತತ್ತ್ವ ಇಲ್ಲಿ ಭಾರತದ ಶಕ್ತಿ ತತ್ತ್ವವನ್ನು ಹೋಲುತ್ತದೆ.

ಕ್ರೈಸ್ತಧರ್ಮ ದಾಸ್ಯಧರ್ಮವೆಂದು ನೀಚೆ ತಿರಸ್ಕರಿಸುತ್ತಾನೆ. ನಮ್ರತೆಯೇ (ಹುಮಿಲಿಟಿ) ಪರಮನೀತಿ, ದಾಸ್ಯ ಭಾವವೇ ಪರಮಮತವೆಂದು ಸಾರಿ ಕ್ರೈಸ್ತಧರ್ಮ ಮಾನವನ ಘನತೆಯನ್ನು ಇಳಿಸಿದೆ. ದೈವಂ ನಿಹತ್ಯ ಕುರು ಪೌರುಷಮಾತ್ಮ ಶಕ್ತ್ಯಾ. ದೇವರನ್ನು ಹೊರದೂಡಿ ಆತ್ಮ ಅವಲಂಬನೆಯಿಂದ ಪೌರುಷಶಾಲಿಯಾಗು ಎಂದು ಘೋಷಿಸಿದೆ. ಪೌರುಷವುಳ್ಳವನೇ ಪುರುಷನೆಂದು ಕರೆದುಕೊಳ್ಳಲು ಯೋಗ್ಯ. ಇತರರಲ್ಲಿ ಅನುಕಂಪ ತೋರಿಸಿದರೆ ಅವರಾಗಲಿ, ನಾವಾಗಲಿ ಏನನ್ನು ಸಾಧಿಸಿದಂತಾಯಿತು. ನಿಜವಾಗಿ ನಮ್ಮ ಜೊತೆಗಾರರನ್ನು ಪ್ರೀತಿಸುವುದಾದರೆ ನಿರ್ಬಲರಾದವರನ್ನು ಬಲಿಷ್ಠರನ್ನಾಗಿ ಮಾಡಬೇಕು, ಇದು ತತ್ತ್ವ. ಇದು ನೀತಿ. ಇದು ಜೀವನದ ಪರಮ ಪುರುಷಾರ್ಥ. ಈ ದೃಷ್ಟಿಯಿಂದ ಹಳೆಯ ಪುರುಷಾರ್ಥಗಳನ್ನು ಖಂಡಿಸಿ ಹೊಸ ಪುರುಷಾರ್ಥಗಳನ್ನು ಸೃಷ್ಟಿಸಿಕೊಳ್ಳಬೇಕು. ಆತ್ಮತೇಜೋಬಲಂ ಬಲಂ ಎಂದು ಸಾರುವ ಹೊಸ ವಿಶ್ವಾಮಿತ್ರ ನೀಚೆ.

ಷೋಪನ್‍ಹೋವರ್‌ನಂತೆ ವೈಚಾರಿಕ ಚೇತನವನ್ನು ನೀಚೆ ಅಲ್ಲಗಳೆಯುವುದಿಲ್ಲ. ಅದು ಅಂತಿಮ ಗುರಿಯಾದ ಶೀಲಶ್ರೀಮಂತಿಕೆಯನ್ನೂ ಭಾವಸೌಷ್ಠವವನ್ನೂ ಚಿರಂತನ ಆನಂದವನ್ನೂ ಪಡೆಯಲು ಅತ್ಯಗತ್ಯವಾದ ಸಾಧನ. ವಿಚಾರಬಲದಿಂದ ಮಾತ್ರವೇ ಉದ್ರೇಕಭಾವಗಳನ್ನು ಪುಟವಿಟ್ಟು ಉನ್ನತವಾಗಿಸಲು, ಉದಾತ್ತವಾಗಿಸಲು ಸಾಧ್ಯ. ಭಕ್ತಿ, ಭಕ್ತಿ ಎಂದು ಹೇಳುವ ಕ್ರೈಸ್ತಧರ್ಮ ಮಾನವನನ್ನು ಕೀಳಾಗಿಮಾಡಿದೆ. ವಿಚಾರಬಲವಿಲ್ಲದೆ ಯಾವ ಬಗೆಯ ಸೃಷ್ಟಿಯೂ ಸಿದ್ಧಿಸದು.

ಸತ್ತಿನ ವಿಚಾರವಾಗಿ ನೀಚೆಯ ತತ್ತ್ವ ಲೈಬ್ನಿಟ್ಸ್‌ನ ಮೋನ್ಯಾಡ್ ತತ್ತ್ವವನ್ನು ಹೋಲುತ್ತದೆ. ವಿಶ್ವ ಒಂದು ವಸ್ತುವಿನಿಂದ ಹುಟ್ಟಿದ್ದಲ್ಲ. ಅದು ಅನೇಕ ಸತ್ವಯುತವಾದ ತೇಜಃಪುಂಜವಾದ ಆತ್ಮಗಳಿಂದ ಕೂಡಿದೆ. ಆತ್ಮಗಳೆಂದರೆ ಮಾನವ ಆತ್ಮಗಳೆಂದೂ ತಿಳಿಯಕೂಡದು. ನೀಚೆಯದು ಜೈನರ ವಾದದಂತೆ. ಅಣುವಿನಿಂದ ಹಿಡಿದು ಮಾನವನವರೆಗೆ ಎಲ್ಲವೂ ಆತ್ಮವೆಂಬ ಸರ್ವಾತ್ಮವಾದ. ಒಂದೊಂದು ಆತ್ಮವೂ ತನ್ನ ಶಕ್ತಿಯನ್ನು, ತನ್ನ ದರ್ಶನವನ್ನು ಹೆಚ್ಚಿಸಿಕೊಳ್ಳಲು, ಉನ್ನತಗೊಳಿಸಲು, ಉದಾತ್ತಗೊಳಿಸಲು ಮಿಡಿಯುತ್ತಿದೆ. ಪ್ರತಿಯೊಂದೂ ಎಲ್ಲದರೊಡನೆ ಸಂಬಂಧ ಹೊಂದಿದೆ. ಒಂದೊಂದೂ ತನ್ನದೇ ಆದ ನಿಟ್ಟಿನಿಂದ ಎಲ್ಲವನ್ನೂ ವೀಕ್ಷಿಸುತ್ತದೆ. ಆ ಒಂದೊಂದು ಕಣ್‌ನೆಲೆಯೂ (ಪರ್‌ಸ್ಪೆಕ್ಟಿವ್) ವಿಶ್ವದ ಪೂರ್ಣತೆಗೆ ಅಗತ್ಯ. ಯಾವ ಒಂದು ಕಣ್‌ನೆಲೆಯೂ ಇನ್ನೊಂದರ ಪ್ರತಿನಿಧಿಯಾಗಲಾರದು. ವಿಶ್ವ ವ್ಯಕ್ತಿತ್ವದಿಂದ ತುಂಬಿ ತುಳುಕುತ್ತಿದೆ. ವ್ಯಕ್ತಿವಿಶೇಷಗಳು ಭ್ರಮೆಗಳಲ್ಲ, ಅಗತ್ಯ ಸತ್ಯಗಳು. ಏನೇ ಬರಲಿ, ಸಾವೇ ಬರಲಿ ತನ್ನ ವ್ಯಕ್ತಿತ್ವವನ್ನು ಬಿಡುವುದಿಲ್ಲವೆಂಬ ಆತ್ಮಪ್ರತ್ಯಯವುಳ್ಳ ಮಾನವರಿದ್ದುದರಿಂದಲೇ ಮಾನವಜೀವನ ಒಂದು ಹೊಸ ಮಟ್ಟವನ್ನು ಮುಟ್ಟಲು ಸಾಧ್ಯವಾದದ್ದು. ನೀಚೆ ಇದನ್ನೆಲ್ಲ ಪಾರಸಿಕ ಧರ್ಮಸ್ಥಾಪಕನಾದ ಜರತುಷ್ಟ್ರನ ಹೆಸರಿನಲ್ಲಿ ಹೇಳಿರುತ್ತಾನೆ. ದಸ್ ಸ್ಪಿಕ್ ಜರತುಷ್ಟ್ರ ಎಂಬುದು ಅವನ ಮುಖ್ಯ ಗ್ರಂಥ. ಅವನ ತತ್ತ್ವ ಸಿಮ್ಮೆಲ್, ಷೇಲರ್, ಜಾಸ್ಪರ್ಸನ್, ಹೈಡಿಗರ್ ಮುಂತಾದ ಈಚಿನ ತಾತ್ತ್ವಿಕರನ್ನು ಪ್ರಚೋದನೆಗೊಳಿಸಿದೆ.

(ಜಿ.ಎಚ್.)

**ಆಧುನಿಕ ಬೀಜಗಣಿತ :** ರೂಢಿಯ ಬೀಜಗಣಿತದ (ನೋಡಿ– ಬೀಜಗಣಿತ) ಹಿನ್ನೆಲೆಯಿಂದ ವಿಕಸಿಸಿರುವ, ಸ್ಥೂಲವಾಗಿ ಹೇಳುವುದಾದರೆ ಆ ಭಾವನೆಗಳ ಸಾಮಾನ್ಯೀಕೃತ ಮತ್ತು ಅದರಿಂದ ರೂಪುಗೊಂಡ ಇತರ ಅಮೂರ್ತ ವ್ಯವಸ್ಥೆಗಳ, ಒಟ್ಟು ಹೆಸರು

(ಮಾಡರ್ನ್ ಆಲ್ಜಿಬ್ರಾ); 1830ರಿಂದೀಚೆಗೆ ಗಮನಾರ್ಹವಾಗಿಯೂ ಸ್ವತಂತ್ರವಾಗಿಯೂ ವರ್ಧಿಸಿದೆ. 19ನೆಯ ಶತಮಾನದ ಆದಿಭಾಗದವರೆಗೂ ಬೀಜಗಣಿತವನ್ನು ಕೇವಲ ಸಾಂಕೇತಿಕ ಅಂಕಗಣಿತವೆಂದು ಭಾವಿಸುವುದೇ ರೂಢಿಯಲ್ಲಿತ್ತು; ಎಂದರೆ ಅಂಕಗಳಿಗೆ ಪ್ರತಿಯಾಗಿ ವರ್ಣಮಾಲೆಯ ಅಕ್ಷರಗಳನ್ನು ಸಾಂಕೇತಿಕವಾಗಿ ಉಪಯೋಗಿಸಿಕೊಂಡು ಅಂಕಗಣಿತದ ಮೂಲಪರಿಕರ್ಮಗಳಾದ ಸಂಕಲನ, ಗುಣಾಕಾರಗಳನ್ನೂ ಅವುಗಳ ವಿಲೋಮಗಳಾದ ವ್ಯವಕಲನ, ಭಾಗಾಕಾರವನ್ನೂ ಯಥಾವತ್ತಾಗಿ ನಡೆಸಿಕೊಂಡು ಬರುವುದೇ ಬೀಜಗಣಿತದ ವ್ಯಾಪಾರವಾಗಿತ್ತು. ಆದರೆ ಆಧುನಿಕ ಬೀಜಗಣಿತದಲ್ಲಿ ಪೂರ್ಣಾಂಕಗಳಾದ ...,–3, –2, –1, 0, 1, 2, 3, ... ಗಳ ಗಣ Z ಅಥವಾ ಭಾಗಲಬ್ಧ ಸಂಖ್ಯೆಗಳೆಂದರೆ ಎಲ್ಲ ಸಾಮಾನ್ಯ ಭಿನ್ನರಾಶಿಗಳಿಂದ ಏರ್ಪಟ್ಟ ಸಮೂಹ Q ಅಥವಾ ಎಲ್ಲ ವಾಸ್ತವ (ರಿಯಲ್) ಸಂಖ್ಯೆಗಳ ಸಮೂಹ R ಗಳಿಂದ ಉಂಟಾಗುವ ಸಂಖ್ಯಾವ್ಯವಸ್ಥೆಗಳನ್ನು ಮಾತ್ರ ಬಳಸಬೇಕೆಂಬ ನಿರ್ಬಂಧವಾಗಲಿ, ಸಾಮಾನ್ಯ ಪರಿಕರ್ಮಗಳಾದ ಸಂಕಲನ, ಗುಣಾಕಾರಗಳು ಪರಿಪಾಲಿಸುವ ನಿಯಮಗಳು ಸಾರ್ವತ್ರಿಕವಾಗಿ ನಿಲ್ಲಬೇಕೆಂಬ ನಿಬಂಧನೆಯಾಗಲಿ ಇರುವುದಿಲ್ಲ. ಯಾವ ಒಂದು ಗಣದ (ಸೆಟ್) ಮೇಲಾದರೂ ಒಂದು ಅಥವಾ ಇನ್ನೂ ಹೆಚ್ಚು ಸಂಖ್ಯೆಯ ಪರಿಕರ್ಮಗಳನ್ನು ವ್ಯಾಖ್ಯಿಸಿ ಅದರಿಂದ ದೊರೆಯುವ ವ್ಯವಸ್ಥೆಯನ್ನೇ ಆಧುನಿಕ ಬೀಜಗಣಿತದಲ್ಲಿ ಬಳಸಬಹುದು. ಅಂಥ ವ್ಯವಸ್ಥೆಗಳ ಪರಸ್ಪರ ಸಂಬಂಧಗಳನ್ನು ಅಧ್ಯಯನ ಮಾಡುವುದು ಈ ವಿಷಯದ ಒಂದು ಮುಖ್ಯ ಧ್ಯೇಯ.

ಸಾಮಾನ್ಯ ಸಂಖ್ಯಾವ್ಯವಸ್ಥೆಗಳ ಅಂಕಗಣಿತಕ್ಕೆ ಕೇವಲ ಒಂದು ಸಂಕೇತರೂಪದಲ್ಲಿ ವ್ಯವಹರಿಸಿಕೊಂಡಿರಬೇಕಾದ ಸ್ಥಿತಿಯಿಂದ ಬೀಜಗಣಿತವನ್ನು ಉದ್ಧರಿಸಿ ಗಣಿತದ ಒಂದು ಪ್ರಮುಖ ಶಾಖೆಯನ್ನಾಗಿ ಮಾಡುವ ದಿಶೆಯಲ್ಲಿ ದೊರೆತ ಫಲಮಂಜರಿಯೇ ಆಧುನಿಕ ಬೀಜಗಣಿತ. ಮುಖ್ಯವಾಗಿ ಐರಿಷ್ ಗಣಿತಜ್ಞ ಹಾಮಿಲ್ಟನ್ (1805–65) ಮತ್ತು ಜರ್ಮನ್ ಗಣಿತಜ್ಞ ಗ್ರಾಸ್‌ಮನ್ (1809–77) ಇವರ ಚಿಂತನೆಯ ಫಲವಾಗಿ ಸುಮಾರು 1830–40ರ ವೇಳೆಗೆ, ಈ ಬೀಜಗಣಿತ ಸ್ವಾತಂತ್ರ್ಯವನ್ನು ಪಡೆಯಿತು. ಸಾಮಾನ್ಯ ಸಂಖ್ಯಾವ್ಯವಸ್ಥೆಗಳಲ್ಲಿ $a+b=b+a$ ಮತ್ತು $a.b=b.a$ ಎಂಬ ಪರಿವರ್ತನೀಯ (ಕಾಮ್ಯುಟೇಟಿವ್) ನಿಯಮಗಳು ನಿಲ್ಲುತ್ತವೆ. ಆದರೆ ಈ ನಿಯಮಗಳು ಹ್ಯಾಮಿಲ್ಟನ್ ರಚಿಸುತ್ತಿದ್ದ ಸದಿಶಗಳ (ವೆಕ್ಟರ್ಸ್) ಮತ್ತು ಪರಿಭ್ರಮಣೆಗಳ (ರೊಟೇಷನ್ಸ್) ಬೀಜಗಣಿತದಲ್ಲಿ ತಾಳೆಯಾಗಲಿಲ್ಲ. ಅನೇಕ ವರ್ಷಗಳ ಪರಿಶೋಧನೆ ಫಲಿಸದಿರಲು ಒಂದು ಸಲ ಈ ನಿಯಮಗಳನ್ನೇ ತ್ಯಜಿಸಬಾರದೇಕೆಂದು ಈತ ಯೋಚಿಸಿ ಒಂದು ಸಮಂಜಸ ಬೈಜಿಕ ವ್ಯವಸ್ಥೆಯನ್ನು (ಆಲ್ಜಿಬ್ರೇಇಕ್ ಸಿಸ್ಟಂ) ರಚಿಸಿದ. ಈ ಪರಿಶೋಧನೆಗಳಿಂದ ಹ್ಯಾಮಿಲ್ಟನ್‌ರ ಕ್ವೇಡರ್ನಿಯಾನ್‌ಗಳ ಅಪರಿವರ್ತನೀಯ (ನಾನ್‌ಕಾಮ್ಯುಟೇಟಿವ್) ಬೀಜಗಣಿತ ರೂಪುಗೊಂಡಿತು. 1844ರಲ್ಲಿ ಗ್ರಾಸ್‌ಮನ್ ವಿಸ್ತರಣ ಸಿದ್ಧಾಂತ ಎಂಬ ಸುಪ್ರಸಿದ್ಧ ಗ್ರಂಥವನ್ನು ಪ್ರಕಟಿಸಿದ; ಹ್ಯಾಮಿಲ್ಟನ್ನನ ಕ್ವೆಟರ್ನಿಯಾನ್ ಬೀಜಗಣಿತಕ್ಕಿಂತ ಹೆಚ್ಚು ಸಾಮಾನ್ಯವಾದ ವಿವಿಧ ಬೀಜಗಣಿತ ಪ್ರಕಾರಗಳು ಇದರಲ್ಲಿ ಪ್ರತಿಪಾದಿತವಾಗಿವೆ. 1857ರಲ್ಲಿ ಕೇಲಿ (1821–95) ಕೋಶಗಳ (ಮೆಟ್ರಿಕ್ಸ್) ಒಂದು ಅಪರಿವರ್ತನೀಯ ಬೀಜಗಣಿತ ರಚಿಸಿದ. ಈ ಮೊದಲಿಗರ ಶ್ರಮದ ಫಲವಾಗಿ ವಾಡಿಕೆಯಲ್ಲಿರುವ ಸಂಖ್ಯಾವ್ಯವಸ್ಥೆಗಳು ಸಂಕಲನ, ಗುಣಾಕಾರ ಪರಿಕರ್ಮಗಳಲ್ಲಿ ಪರಿಪಾಲಿಸುವ ನಿಯಮಗಳು ಎಲ್ಲ ಬೈಜಿಕ ವ್ಯವಸ್ಥೆಗಳ ಪರಿಕರ್ಮಗಳಲ್ಲಿಯೂ ತಾಳೆಯಾಗಬೇಕೆಂಬ ಭಾವನೆಗಳು ಸಡಿಲಿದವು. ಇದೇ ಕಾಲದಲ್ಲಿ ಗೌಸ್ (1777–55), ಬೊಲ್ಯಾಯ್ (1802–60) ಮತ್ತು ಲೊಬಚೇವ್ಸ್ಕಿ (1793–56) ಇವರುಗಳಿಂದ ರಚಿತವಾದ ಅಯೂಕ್ಲಿಡೀಯ ರೇಖಾಗಣಿತದ **(ನೋಡಿ– ರೇಖಾಗಣಿತ ಯೂಕ್ಲಿಡೀಯ ಮತ್ತು ಅಯೂಕ್ಲಿಡೀಯ)** ಅವತರಣಿಕೆಯಿಂದ ಗಣಿತ ವ್ಯವಸ್ಥೆಗಳ ಸ್ವತಸ್ಸಿದ್ಧಗಳು (ಆ್ಯಕ್ಸಿಯಮ್ಸ್) ಬದಲಿಸಲಾಗದ ನೈಸರ್ಗಿಕ ನಿಯಮಗಳೆಂದು ನಂಬಲಾಗಿದ್ದ ಬಲು ಹಳೆಯ ಭಾವನೆ ವಿಚಲಿತವಾಯಿತು. ಜೊತೆಯಲ್ಲಿಯೇ ಸ್ವತಸ್ಸಿದ್ಧಗಳನ್ನು ಉಪಯೋಗಿಸಿ ಬೈಜಿಕ ವ್ಯವಸ್ಥೆಗಳನ್ನು ರಚಿಸುವ ಪದ್ಧತಿ ಬಲವಾಗತೊಡಗಿತು. ಯಾವುದಾದರೂ ಗಣದ ಮೇಲೆ ಒಂದು ಅಥವಾ ಇನ್ನೂ ಹೆಚ್ಚು ಪರಿಕರ್ಮಗಳನ್ನು ವ್ಯಾಖ್ಯಿಸಿ, ಅವು ಪಾಲಿಸಬೇಕಾದ ಕೆಲವು ನಿಯಮಗಳನ್ನು ಸ್ವೀಕೃತ ಭಾವನೆಗಳೆಂದು (ಪಾಸ್ಟ್ಯುಲೇಟ್ಸ್) ಪರಿಗಣಿಸಿ ತರ್ಕಬದ್ಧ ನಿಗಮನದಿಂದ ಲಭಿಸುವ ಎಲ್ಲ ಪ್ರಮೇಯಗಳನ್ನೂ ವ್ಯಾಸಂಗಿಸುವುದೇ ಈ ಪದ್ಧತಿಯ ಮುಖ್ಯ ಪ್ರಕಾರ. ಈ ಪ್ರಕಾರ ಅನೇಕ ಬೈಜಿಕ ವ್ಯವಸ್ಥೆಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಅತಿ ಪ್ರಮುಖವಾದ ಕೆಲವನ್ನು ಇಲ್ಲಿ ಸಂಕ್ಷೇಪವಾಗಿ ಕೊಟ್ಟಿದೆ.

**ಸಂಕುಲಗಳು (ಗ್ರೂಪ್ಸ್) :** ಗಣಗಳು (ಸೆಟ್ಸ್): ಗಣ ಎಂಬ ಪದವನ್ನು ಯಾವುದೇ ವಿಧವಾದ ವಸ್ತು ಅಥವಾ ಭಾವನೆಗಳ ಸಮೂಹವನ್ನು ತಿಳಿಸುವುದಕ್ಕೆ ಬಳಸುತ್ತೇವೆ. ಉದಾಹರಣೆಗೆ, ಮೈಸೂರು ನಗರವಾಸಿಗಳ ಗಣ M, ಸ್ವಾಭಾವಿಕ ಸಂಖ್ಯೆ 1,2,3,.. ಇವುಗಳ ಗಣ N, ಎಲ್ಲ ಲಂಬಕೋನ ತ್ರಿಕೋಣಗಳ ಗಣ T ಇತ್ಯಾದಿಗಳನ್ನು ತೆಗೆದುಕೊಳ್ಳಬಹುದು. s ಎಂಬುದು S ಗಣದ ಒಂದು ಅಂಶವಾದರೆ, ಅದನ್ನು Sನ ಗಣಾಂಶವೆಂದು (ಎಲಿಮೆಂಟ್) ಕರೆದು $s\in S$ ಎಂದು ಬರೆಯುತ್ತೇವೆ. ಇದನ್ನು s, Sಗೆ ಸೇರಿದುದು ಎಂದು ಓದುತ್ತೇವೆ. ಉದಾ: $4\in N$. A ಗಣದ ಪ್ರತಿಯೊಂದು ಗಣಾಂಶ a, B ಗಣದಲ್ಲಿರುವುದಾದರೆ A, Bಯ ಉಪಗಣವೆಂದು ಹೇಳುತ್ತೇವೆ; ಮತ್ತು A B ಎಂದು ಬರೆಯುತ್ತೇವೆ. $S\subset T$ ಮತ್ತು $T\subset S$ ಆದಾಗ S ಮತ್ತು T ಗಳು ಪರಸ್ಪರ ಸಮವೆಂದು ಕರೆದು S=T ಎಂದು ಬರೆಯುತ್ತೇವೆ. A B ಎಂಬ ಸಂಕೇತದಿಂದ A ಅಥವಾ B ಅಥವಾ ಇವೆರಡರಲ್ಲೂ ಇರುವ ಎಲ್ಲ ಗಣಾಂಶಗಳಿಂದ ಏರ್ಪಟ್ಟ ಗಣವನ್ನೂ $A\cap B$ ಯಿಂದ ಇವೆರಡರಲ್ಲೂ ಸಾಮಾನ್ಯವಾಗಿ ಇರುವ ಗಣಾಂಶಗಳ ಗಣವನ್ನೂ ತಿಳಿಸುತ್ತೇವೆ. A, B ಗಳ ಸಂಯೋಗ (ಯೂನಿಯನ್) $A\cup B$; ಛೇದನ (ಇಂಟರ್‌ಸೆಕ್ಷನ್) $A\cap B$. ಗಣಾಂಶವೇ ಇಲ್ಲದೆ ಬರಿದಾಗಿರುವ ಗಣ ಶೂನ್ಯಗಣ (ನಲ್‌ಸೆಟ್). ಇದರ ಚಿಹ್ನೆ $\varnothing$.

ಚಿತ್ರಣಗಳು (ಮ್ಯಾಪಿಂಗ್ಸ್) : X ಮತ್ತು Y ಎರಡು ಗಣಗಳಾಗಿರಲಿ. ಈಗ ಚಿತ್ರಣ $\alpha : X \rightarrow Y$, X ನಿಂದ Yಗೆ ಹೊರಡುವ ಚಿತ್ರಣವೆಂದರೆ, X ನಲ್ಲಿರುವ ಪ್ರತಿಯೊಂದು ಗಣಾಂಶ x ನೊಂದಿಗೂ, y ಯ ಒಂದು ಗಣಾಂಶ y ಯನ್ನು ಅನ್ವಯಿಸುವಂಥ ಒಂದು ಪರಿಕರ್ಮವೆಂದು ಭಾವಿಸಬೇಕು. ಇಲ್ಲಿ Yಯನ್ನು Xನ $\alpha$ಚಿತ್ರಣದ ಪ್ರತಿಬಿಂಬ (ಇಮೇಜ್) ಎಂದು ಹೇಳುತ್ತೇವೆ. $Y=\alpha(x)$ ಎಂದು ಬರೆಯುತ್ತೇವೆ. Yಯ ಪ್ರತಿಯೊಂದು ಗಣಾಂಶ yಯೂ X ನ ಯಾವುದೋ x ನ $\alpha$ ಚಿತ್ರಣವಾಗಿರುವುದಾದರೆ $\alpha$ವನ್ನು ಒಂದು ಮೇಲ್ಚಿತ್ರಣ (ಸರ್‌ಜೆಕ್ಷನ್) ಎಂದು ಕರೆಯುತ್ತೇವೆ. X ನಲ್ಲಿರುವ ಪ್ರತಿ $x_1 \neq x_2$ ಗಳಿಗೂ, $\alpha(x_1) \neq \alpha(x_2)$ ಆಗಿದ್ದರೆ $\alpha$ ವನ್ನು x ನಿಂದ y ಗೆ ಹೊರಡುವ ಒಳಚಿತ್ರಣ (ಇಂಜೆಕ್ಷನ್) ಎಂದು ಕರೆಯುತ್ತೇವೆ. ಒಂದು ಚಿತ್ರಣ ಮೇಲ್ಚಿತ್ರಣ ಮತ್ತು ಒಳಚಿತ್ರಣ ಎರಡೂ ಆಗಿದ್ದರೆ ಅದನ್ನು ದ್ವೈಚಿತ್ರಣ (ಬೈಜೆಕ್ಷನ್) ಎಂದೂ ಹೇಳುತ್ತೇವೆ. $\alpha, \beta$ ಎಂಬುವು X ನಿಂದ Y ಗೆ ಚಿತ್ರಣಗಳಾಗಿದ್ದು Xನ ಪ್ರತಿ $x$ ಗೂ $\alpha(x)=\beta(x)$ ಆಗಿದ್ದರೆ ಈ ಚಿತ್ರಣಗಳು ಪರಸ್ಪರ ಸಮವೆಂದು ಹೇಳುತ್ತೇವೆ; ಮತ್ತು $\alpha=\beta$ ಎಂದು ಬರೆಯುತ್ತೇವೆ. X ನಿಂದ ಅದಕ್ಕೆ ಹೊರಡುವ ದ್ವೈಚಿತ್ರಣಗಳನ್ನು S ನ ಪರಿವರ್ತನೆಗಳೆಂದು (ಟ್ರಾನ್ಸ್‌ಫರ್ಮೇಷನ್ಸ್)ಹೇಳುತ್ತೇವೆ. $(s)=s$ ಎಂಬ sನ ಎಲ್ಲಗಳಿಗೂ ಹೊಂದುವ ಚಿತ್ರಣ Sನ ಒಂದು ಪರಿವರ್ತನೆಯೇ. ಇದನ್ನು Sನ ಏಕಚಿತ್ರಣವೆಂದು ಕರೆಯುತ್ತೇವೆ.

$f_1 : S\rightarrow S$ ಮತ್ತು $f_2 : S\rightarrow S$ ಇವು ಎರಡು ಚಿತ್ರಣಗಳಾಗಿದ್ದರೆ S ನ ಎಲ್ಲ s ಗಳಿಗೂ $(f_1 f_2)(s) = f_1(f_2(s))$ ಎಂದು ವ್ಯಾಖ್ಯಿಸಿದರೆ $(f_1 f_2)(s)$ ಎಂಬುದೂ S ನಲ್ಲೇ ಇರುವುದರಿಂದ $f_1 f_2$ ಸಹ S ನಿಂದ Sಗೆ ಹೊರಡುವ ಒಂದು ಚಿತ್ರಣವೇ. ಇದನ್ನು $f_1$ಮತ್ತು $f_2$ ರ ಸಂಯೋಜನೆ (ಕಾಂಪೊಸಿಷನ್) ಎಂದು ಹೇಳುತ್ತೇವೆ.

ಪರ್ಯಾಪ್ತ ಮತ್ತು ಅಪರ್ಯಾಪ್ತ ಗಣಗಳು : $n$ ಧನ ಪೂರ್ಣಾಂಕವಾಗಿದ್ದು, $H_n$ ಎಂಬುದು $\{1,2,3, ....., n\}$ ಎಂಬ ಗಣವಾಗಿರಲಿ. ಈಗ S ಒಂದು ಗಣವಾಗಿದ್ದು, S ಮತ್ತು $H_n$ಗಳ ನಡುವೆ ಒಂದು ದ್ವೈ ಚಿತ್ರಣವನ್ನು ನಿರ್ಮಿಸಬಹುದಾದರೆ, Sನ್ನು ಸಾಂತ (ಫೈನೈಟ್) ಗಣವೆನ್ನುತ್ತೇವೆ. ಅದರ ಅಂಶಾಂಕ (ಆರ್ಡರ್) n ಎಂದೂ ಎನ್ನುತ್ತೇವೆ. S ಗಣವನ್ನು ಯಾವ $H_n$ನೊಂದಿಗೂ ದ್ವೈಚಿತ್ರಣವೊಂದರ ಮೂಲಕ ಸಂಬಂಧಿಸಲಾಗದೇ ಹೋದರೆ, ಅದು ಅನಂತ ಗಣವೆನ್ನಿಸುವುದು.

**ಕಾರ್ಟೀಸಿಯನ್ ಗುಣಲಬ್ಧಗಳು :** S, T ಗಳು ಎರಡು ದತ್ತಗಣಗಳಾದರೆ, (s,t), $s\in S$, $t\in T$ಎಂಬ ಎಲ್ಲ ಕ್ರಮಗತ ಯುಗ್ಮಗಳ ಗಣಕ್ಕೆ S ಮತ್ತು T ಗಳ ಕಾರ್ಟೀಸಿಯನ್ ಗುಣಲಬ್ಧವೆಂದು ಹೇಳುತ್ತೇವೆ. ಇದನ್ನು $S\times T$ ಎಂದು ನಿರೂಪಿಸುತ್ತೇವೆ.

**ದ್ವಿಗುಣ ಪರಿಕರ್ಮಗಳು :** S ಒಂದು ಗಣವಾದರೆ, $f : S\times S\rightarrow S$ ಎಂಬ $S\times S$ ನಿಂದ S ಗೆ ವ್ಯಾಖ್ಯಿಸಲ್ಪಟ್ಟ ಪ್ರತಿಯೊಂದು ಚಿತ್ರಣ f ನ್ನು S ಮೇಲಿನ ಒಂದು ದ್ವಿಗುಣ ಪರಿಕರ್ಮವೆಂದು ಹೇಳುತ್ತೇವೆ. ಇದರಿಂದ $s_1, s_2\in S$ ಆದರೆ $f(s_1, s_2) = s$ ಆಗುವಂತಿರುವ ಗಣಾಂಶ s ಒಂದು s ನಲ್ಲಿರುತ್ತದೆ. ಸಂಕ್ಷೇಪವಾಗಿ $f(s_1, s_2)$ಇದನ್ನು $s_1. s_2$ ಅಥವಾ $s_1s_2$ ಎಂದು ನಿರೂಪಿಸುತ್ತೇವೆ. ಹೀಗಾಗಿ $s_1s_2=s$ ಎಂದು ಬರೆಯಬಹುದು. S ಗೆ ಸೇರಿದ ಎಲ್ಲ $s_1, s_2, s_3$ ಗಳಿಗೂ $(s_1.s_2).s_3=s_1.(s_2.s_3)$ ಆಗಿದ್ದರೆ, fನ್ನು ಒಂದು ಸಹವರ್ತನೀಯ (ಅಸೋಸಿಯೇಟಿವ್) ದ್ವಿಗುಣ ಪರಿಕರ್ಮವೆಂದು ಕರೆಯುತ್ತೇವೆ.

ಉದಾ : 1 ಪೂರ್ಣಾಂಕಗಳ ಗಣದಲ್ಲಿ ಸಂಕಲನ, ವ್ಯವಕಲನ ಮತ್ತು ಗುಣಾಕಾರಗಳು ದ್ವಿಗುಣಪರಿಕರ್ಮಗಳು. 2. 0ಯನ್ನುಳಿದು ಮಿಕ್ಕೆಲ್ಲ ಭಾಗಲಬ್ಧ ಸಂಖ್ಯೆಗಳ ಗಣ $Q_0$ ಯಲ್ಲಿ ಭಾಗಾಹಾರ ಒಂದು ದ್ವಿಗುಣ ಪರಿಕರ್ಮ.

ಅರ್ಧ ಸಂಕುಲಗಳು (ಸೆಮಿಗ್ರೂಪ್ಸ್) : S ಒಂದು ಗಣವಾಗಿಯೂ f ಅದರಲ್ಲಿ ವ್ಯಾಖ್ಯಿಸಲಾಗಿರುವ ಒಂದು ಪರಿವರ್ತನೀಯ ದ್ವಿಗುಣ ಪರಿಕರ್ಮವೂ ಆಗಿದ್ದರೆ S,f ಎಂಬ ವ್ಯವಸ್ಥೆ ಒಂದು ಅರ್ಧಸಂಕುಲವೆನಿಸುವುದು. ಉದಾ : 1 N,+ಎಂದರೆ ಎಲ್ಲ ಸ್ವಾಭಾವಿಕ ಸಂಖ್ಯೆಗಳಾದ 1,2,3,... ಗಳ ಗಣ ಸಂಕಲನಪರಿಕರ್ಮದಲ್ಲಿ ಒಂದು ಅರ್ಧ ಸಂಕುಲ. ಹೀಗೆಯೇ N,. ಎಂಬುದು ಗುಣಾಕಾರ ಪರಿಕರ್ಮದಲ್ಲಿ ಅರ್ಧ ಸಂಕುಲ.

2 S ಒಂದು ಗಣವೂ A(S) ಎಂಬುದು S→S ಚಿತ್ರಣಗಳೆಲ್ಲವುಗಳ ಗಣವೂ ಆದರೆ A (S) ಎಂಬುದು ಚಿತ್ರಣಗಳ ಸಂಯೋಜನೆಯೆಂಬ ಪರಿಕರ್ಮದಲ್ಲಿ ಅರ್ಧಸಂಕುಲ ವಾಗಿರುವುದು.

ಏಕಾಂಶಗಳು : 1 N,. ನಲ್ಲಿರುವ 1 ಎಂಬುದು N ನಲ್ಲಿರುವ ಯಾವ n ನೊಂದಿಗೂ 1.n=n=n.1 ಎಂಬ ಸಂಬಂಧಗಳಲ್ಲಿ ನಿಲ್ಲುತ್ತದೆ. ಇದನ್ನು N,. ನ ಏಕಾಂಶವೆನ್ನುತ್ತೇವೆ. N, + ನಲ್ಲಿ ಏಕಾಂಶವಿಲ್ಲವೆಂದು ಗಮನಿಸಿ.

2. A (S) ನಲ್ಲಿರುವ ∈ ಎಂಬ ಏಕ ಚಿತ್ರಣ A( S ) ನಲ್ಲಿರುವ ಯಾವ ಚಿತ್ರಣ f ನೊಂದಿಗೂ ∈.f =f=f.$_{\in}$ ಎಂಬ ಸಂಬಂಧಗಳಲ್ಲಿ ನಿಲ್ಲುತ್ತದೆ.

ಪರಿವರ್ತನೀಯ ಅರ್ಧಸಂಕುಲಗಳು : S,f ಅರ್ಧಸಂಕುಲದಲ್ಲಿ Sನ ಎಲ್ಲ $s_1$, $s_2$ ಗಳಿಗೂ f (s$_1$, s$_2$)=f (s$_2$,s$_1$) ಆದರೆ ಅದನ್ನು ಪರಿವರ್ತನೀಯ ಅರ್ಧಸಂಕುಲ ವೆಂದು ಕರೆಯುತ್ತೇವೆ. ಮೇಲಿನ N, ಮತ್ತು N,+ ಗಳು ಪರಿವರ್ತನೀಯಗಳು; A (S) ಹಾಗಿಲ್ಲ.

ಸಂಕುಲಗಳು : G ಒಂದು ಏಕಾಂಶವನ್ನುಳ್ಳ ಅರ್ಧಸಂಕುಲವಾಗಿರಲಿ. G ಯಲ್ಲಿರುವ ಒಂದು ಅಂಶ g ದತ್ತವಾದಾಗ G ಯಲ್ಲೇ ಇರುವ ಒಂದು ಅಂಶ $g^{-1}$ (ಎನ್ನೋಣ) ಎಂಬುದು $g^{-1}g=e=gg^{-1}$ ಎಂದಾಗುವಂತಿದ್ದರೆ $g^{-1}$ ನ್ನು g ಯ ವಿಲೋಮವೆಂದು ಕರೆಯುತ್ತೇವೆ. ಈಗ g, $g^{-1}$ ರ ವಿಲೋಮವೆಂಬುದನ್ನು ಗಮನಿಸಿ. ಮೇಲಿನ G ಯಲ್ಲಿರುವ ಪ್ರತಿಯೊಂದು ಗಣಾಂಶಕ್ಕೂ ವಿಲೋಮವೊಂದಿರುವುದಾದರೆ G ಒಂದು ಸಂಕುಲವೆನಿಸುತ್ತದೆ. ಈ ಪದವನ್ನು ಗ್ಯಾಲ್ವಾ (Evaristo Galois, 1811–1832) ಎಂಬ ಫ್ರೆಂಚ್ ಗಣಿತಜ್ಞ 1830ರಲ್ಲಿ ಮೊಟ್ಟ ಮೊದಲು ಉಪಯೋಗಿಸಿದ. 19ನೆಯ ಶತಮಾನದ ಪ್ರಮುಖ ಗಣಿತಜ್ಞರಾದ ಕೌಷಿ (1789–1857), ಕೇಲಿ, ಜೋರ್ಡಾನ್ (1832–1922), ಸೈಲೋ (1832–1918) ಮತ್ತು ಸೋಫಸ್ ಲೀ (1842–99) ಮುಂತಾದವರು ಈ ಭಾವನೆಯನ್ನು ವಿಶೇಷವಾಗಿ ವರ್ಧಿಸಿದರು. ಇದರಿಂದ ಗಣಿತದ ಬೇರೆ ಬೇರೆ ಶಾಖೆಗಳಿಗಿರುವ ಪರಸ್ಪರ ಸಂಬಂಧಗಳು ತೋರಿಬಂದು ಗಣಿತಶಾಸ್ತ್ರದಲ್ಲಿ ಹಲವಾರು ಏಕೀಕರಣಗಳು ನಡೆದುವು; ಬೀಜಗಣಿತ ಮತ್ತು ರೇಖಾ ಗಣಿತಗಳ ಕೆಲವು ಶಾಖೆಗಳಿಗೆ ಸ್ವಾಭಾವಿಕವಾಗಿದ್ದು ಅದುವರೆಗೆ ಗೋಚರಿಸದಿದ್ದ ಅನೇಕ ಸಂಬಂಧಗಳು ಸ್ಪಷ್ಟವಾಗಿ ಎದ್ದು ಕಾಣಿಸುವಂತಾಯಿತು. ಭೌತ ಪ್ರಪಂಚದ ಮೂಲರಚನೆಯ ಪರಿಶೋಧನೆಯಲ್ಲಿ ತೊಡಗಿರುವ ಶಕಲಬಲ ವಿಜ್ಞಾನ ದಲ್ಲಿ (ಕ್ವಾಂಟಂ ಮೆಕ್ಯಾನಿಕ್ಸ್) ಸಂಕುಲಸಿದ್ಧಾಂತದ ಮಾರ್ಗಗಳು ಬಹು ಫಲಕಾರಿಯಾದ ಅಸ್ತ್ರಗಳಾಗಿ ಪರಿಣಮಿಸಿವೆ.

**ಸಂಕುಲಗಳನ್ನು ಹೀಗೆಂದು ವ್ಯಾಖ್ಯಿಸಬಹುದು :** G ಒಂದು ಗಣವೂ ಅದರಲ್ಲಿ ಒಂದು ದ್ವಿಗುಣ ಪರಿಕರ್ಮವೂ ಆಗಿರಲಿ. ಈಗ ಮುಂದೆ ಕಾಣಿಸಿರುವ ಸ್ವತಸ್ಸಿದ್ಧಗಳು ತಾಳೆಯಾದರೆ G,. ಎಂಬ ವ್ಯವಸ್ಥೆಯನ್ನು ಒಂದು ಸಂಕುಲವೆನ್ನುತ್ತೇವೆ.

1 Gಗೆ ಸೇರಿದ ಎಲ್ಲ a,b,c, ಗಳಿಗೂ (a.b).c=a. (b.c) ಎಂಬ ಸಹವರ್ತನೀಯ ನಿಯಮ ನಿಲ್ಲಬೇಕು. 2 G ಗೆ ಸೇರಿದ ಪ್ರತಿ ಅಂಶ a ಗೂ, a.e=a=e.a ಎಂದಾಗುವಂತೆ G ಯಲ್ಲಿ ಒಂದು ಗಣಾಂಶ e ಇರಬೇಕು. (ಇದು ಏಕೈಕ ಮತ್ತು ಇದೇ G ಯ ಏಕಾಂಶ–ಯೂನಿಟ್ ಎಲಿಮೆಂಟ್). 3 G ಯಲ್ಲಿರುವ ಪ್ರತಿ g ಗೂ $g.g^{-1}=e=g^{-1}\cdot g$ ಎಂಬ ಸಂಬಂಧಗಳಲ್ಲಿ ನಿಲ್ಲತಕ್ಕ ಒಂದು ಗಣಾಂಶ $g^{-1}$ ಎಂಬುದು Gಯಲ್ಲಿರ ಬೇಕು. ($g^{-1}$ನ್ನು g ಯ ವಿಲೋಮವೆಂದು ಕರೆಯುತ್ತೇವೆ. g,$g^{-1}$ರ ವಿಲೋಮ). 4 ಇದರ ಮೇಲೆ G ಯ ಎಲ್ಲ a,b ಗಳಿಗೂ a.b=b.a ಎಂಬ ಪರಿವರ್ತನೀಯ ನಿಯಮವೂ ತಾಳೆಯಾದರೆ G ಪರಿವರ್ತನೀಯ ಸಂಕುಲ (ಕಾಮ್ಯುಟೇಟಿವ್ ಗ್ರೂಪ್) ಅಥವಾ ಅಬೆಲಿಯನ್ (ಎನ್. ಎಚ್. ಅಬೆಲ್‌ನಿಂದ ಬಂದದ್ದು, 1802–1829) ಸಂಕುಲ ವೆಂದು ಹೇಳುತ್ತೇವೆ. ಮುಂದೆ ಕೆಲವು ಪರಿವರ್ತನೀಯ ಸಂಕುಲಗಳ ಉದಾಹರಣೆಗಳಿವೆ.

1 Z, + = ಸಂಕಲನ ಪರಿಕರ್ಮ, ಪೂರ್ಣಾಂಕಗಳ ಗಣ.

2 Q, + = ಸಂಕಲನ ಪರಿಕರ್ಮ, ಭಾಗಲಬ್ಧ ಸಂಖ್ಯೆಗಳ ಗಣ.

3 R, + = ಸಂಕಲನ ಪರಿಕರ್ಮ, ವಾಸ್ತವ ಸಂಖ್ಯೆಗಳ ಗಣ.

4 $Q_o$,. = ಗುಣಾಕಾರ ಪರಿಕರ್ಮ, o ಯನ್ನು ಬಿಟ್ಟು ಉಳಿದ ಭಾಗಲಬ್ಧ ಸಂಖ್ಯೆಗಳ ಗಣ.

5 $R_o$,. = ಗುಣಾಕಾರ ಪರಿಕರ್ಮ, o ಯನ್ನು ಬಿಟ್ಟು ಉಳಿದ ವಾಸ್ತವ ಸಂಖ್ಯೆಗಳ ಗಣ.

6 $U_n$,. $=x^{n-1}=o$ ಸಮೀಕರಣದ ಎಲ್ಲ ಮೂಲಗಳು, ಗುಣಾಕಾರ ಪರಿಕರ್ಮದಲ್ಲಿ.

**ಪರಿವರ್ತನ ಸಂಕುಲಗಳು :** f:X→Y ಒಂದು ದ್ವೈಚಿತ್ರಣವಾದರೆ x↔f(x) = y ಎಂಬ ಸಂಬಂಧದಿಂದ Y ಯ ಪ್ರತಿ y ಯೊಂದಿಗೂ ಏಕೈಕವಾದ x∈X ಒಂದು ಅನ್ವಯವಾಗುವುದರಿಂದ Y ನಿಂದ X ಗೆ ಒಂದು ದ್ವೈಚಿತ್ರಣ ಸಿದ್ಧಿಸುತ್ತದೆ; ಇದನ್ನು f ನ ವಿಲೋಮವೆಂದು ಕರೆದು $f^{-1}$ ಎಂದು ನಿರೂಪಿಸುತ್ತೇವೆ. $f^{-1}f$ ಎಂಬುದು X ನಲ್ಲೂ $ff^{-1}$ಎಂಬುದು Y ನಲ್ಲೂ ಏಕಚಿತ್ರಣಗಳಾಗುವುದನ್ನು ಗಮನಿಸಿ. Y=X ಆಗುವ ವಿಶೇಷ ಪರಿಸ್ಥಿತಿಯಲ್ಲಿ f ಎಂಬುದು x ನ ಒಂದು ಪರಿವರ್ತನೆಯಾದರೆ $f^{-1}$ ಸಹ ಒಂದು ಪರಿವರ್ತನೆಯೇ. X ನ ಎಲ್ಲ ಪರಿವರ್ತನೆಗಳ ಗಣ T (X), ಚಿತ್ರಣಗಳ ಸಂಯೋಜನೆ ಎಂಬ ದ್ವಿಗುಣ ಪರಿಕರ್ಮದಲ್ಲಿ ಒಂದು (ಅಪರಿವರ್ತನೀಯ) ಸಂಕುಲವಾಗುವುದು; ಇದನ್ನು X ನ ಪರಿವರ್ತನ ಸಂಕುಲವೆಂದು ಕರೆಯುತ್ತೇವೆ. X ಪರ್ಯಾಪ್ತಗಣವಾಗಿ, ಅದರ ಅಂಶಾಂಕ (ಅಂಶಗಳ ಸಂಖ್ಯೆ) n ಆದರೆ ಅದರ ಪರಿವರ್ತನೆ ಗಳನ್ನು ಕ್ರಮಯೋಜನೆಗಳು (ಪರ್ಮ್ಯುಟೇಷನ್ಸ್) ಎನ್ನುತ್ತೇವೆ. ಈಗ T(X) ನ್ನು ಕ್ರಮಯೋಜನೆಗಳ n ಘಾತದ ಸಂಕುಲ (ಅಥವಾ n ಘಾತದ ಸಮಾಂಗತೆಯ ಸಂಕುಲ) ಎಂದು ಕರೆಯುತ್ತೇವೆ; ಅದನ್ನು $S_n$ ಎಂದು ಸೂಚಿಸುತ್ತೇವೆ. $S_n$ನ ಅಂಶಾಂಕ n! ಎಂದರೆ 1,. 2,. 3......n ಆಗಿದೆ. ಉದಾಹರಣೆಗೆ $S_3$ರಲ್ಲಿ ಮೂರು ಚಿಹ್ನೆಗಳ ಮೇಲಿನ ಎಲ್ಲ ಕ್ರಮಯೋಜನೆಗಳೂ ಇವೆ. ಈ ಚಿಹ್ನೆಗಳನ್ನು ಸಂಕ್ಷೇಪವಾಗಿ 1, 2, 3 ಎಂದುಕೊಂಡರೆ ಮೇಲಿನ 6 ಕ್ರಮ ಯೋಜನೆಗಳನ್ನು ಸಾಂಕೇತಿಕವಾಗಿ ಇಲ್ಲಿ ಕೊಟ್ಟಿರುವಂತೆ ಬರೆಯಬಹುದು; ಪ್ರತಿಯೊಂದರಲ್ಲೂ ಕೆಳಗಿನ ಸಾಲಿನಲ್ಲಿ ಮೇಲಿನ ಸಾಲಿನಲ್ಲಿರುವ ಆಯಾ ಚಿಹ್ನೆಯ ಪ್ರತಿಬಿಂಬವನ್ನು ತೋರಿಸಿದೆ; ಇವು ಯಾವುವೆಂದರೆ

$$\varepsilon = \begin{pmatrix}123\\123\end{pmatrix}, \vartheta_1 = \begin{pmatrix}123\\231\end{pmatrix}, \vartheta_2 = \begin{pmatrix}123\\312\end{pmatrix}$$

$$\mu_1 = \begin{pmatrix}123\\132\end{pmatrix}, \mu_2 = \begin{pmatrix}123\\321\end{pmatrix}, \mu_3\begin{pmatrix}123\\213\end{pmatrix}$$

ಈಗ ಒಂದು ಸಮಬಾಹುತ್ರಿಕೋನದ ಶೃಂಗಗಳನ್ನು 1,2,3 ಎಂದು ಕರೆದರೆ ಮೇಲ್ಕಂಡ 6 ಕ್ರಮಯೋಜನೆಗಳು ತ್ರಿಕೋನವನ್ನು ಅದರ ಮೇಲೆಯೇ ನಕ್ಷೀಕರಿಸುವ ಚಿತ್ರಣಗಳೆಂದು ಸುಲಭವಾಗಿ ಕಂಡುಬರುತ್ತದೆ. $\varepsilon$, $\vartheta_1$, $\vartheta_2$ ಗಳು ಕ್ರಮವಾಗಿ $0^0$, $120^0$, $240^0$ ಗಳ ಮೂಲಕ ಕೇಂದ್ರದ ಸುತ್ತ ತಿರುಗುವ ಪರಿಭ್ರಮಣೆಗಳನ್ನೂ $\mu_1$, $\mu_2$ $\mu_3$ ಗಳು ಅದರ ಮಧ್ಯಕಗಳಲ್ಲಿ ನಡೆಸಬಹುದಾದ (ದರ್ಪಣ) ಪ್ರತಿಫಲನಗಳನ್ನೂ (ರಿಫ್ಲೆಕ್ಷನ್ಸ್) ಸೂಚಿಸುತ್ತವೆ. ಇವು ತ್ರಿಕೋನದ ಎಲ್ಲ ಸಮಾಂಗತೆಗಳನ್ನೂ ಸಂಪೂರ್ಣವಾಗಿ ವ್ಯಕ್ತಪಡಿಸುವುದರಿಂದ $S_3$ ಸಂಕುಲಕ್ಕೆ 3ನೆಯ ಘಾತದ ಸಮಾಂಗತೆಯ ಸಂಕುಲವೆಂಬ ಹೆಸರು ಚೆನ್ನಾಗಿ ಒಪ್ಪುತ್ತದೆ. ಇದನ್ನು 3ನೆಯ ಘಾತದ ದ್ವಿತಲ ಸಂಕುಲ (ಡೈಹೆಡ್ರಲ್ ಗ್ರೂಪ್) ಎಂದು ಕರೆಯುವುದು ವಾಡಿಕೆ.

**ಉಪಸಂಕುಲಗಳು :** G ಸಂಕುಲದ ಒಂದು ಉಪಗಣ H, G ಯ ಪರಿಕರ್ಮದಲ್ಲಿಯೇ ಒಂದು ಸಂಕುಲವಾಗಿದ್ದರೆ, ಅದನ್ನು Gಯ ಒಂದು ಉಪಸಂಕುಲವೆನ್ನುತ್ತೇವೆ. ಉದಾಹರಣೆಗೆ ಪೂರ್ಣಾಂಕಗಳ ಸಂಕುಲ Z,+ ನಲ್ಲಿ ಎಲ್ಲ ಸಮ (ಈವನ್) ಸಂಖ್ಯೆಗಳ ಉಪಗಣ $Z_2$ ಎಂಬುದು ಒಂದು ಉಪಸಂಕುಲ: ಹೀಗೆಯೇ

$$A_3 = \{\varepsilon, \vartheta_1, \vartheta_2\}$$

ಎಂಬ $S_3$ ಯ ಉಪಗಣ ಅದರ ಒಂದು ಉಪಸಂಕುಲ.

G ಸಂಕುಲದಲ್ಲಿ H ಒಂದು ಉಪಸಂಕುಲವಾಗಿಯೂ a,Gಯ ಒಂದು ನಿರ್ದಿಷ್ಟ ಅಂಶವಾಗಿಯೂ ಇದೆ ಎನ್ನೋಣ. ಈಗ Hನಲ್ಲಿರುವ ಎಲ್ಲ hಗಳನ್ನೂ ಉಪಯೋಗಿಸಿ haರೂಪದಲ್ಲಿರುವ Gಯ ಎಲ್ಲ ಗುಣಾಂಶಗಳೂ ಸೇರಿ ಅದರ ಒಂದು ಉಪಗಣವಾಗುವುವಷ್ಟೆ; ಇದನ್ನು G ಯಲ್ಲಿ H ನ್ನು ಕುರಿತ a ಯ ಬಲಸಹಗಣ (ರೈಟ್‌ಕೋಸೆಟ್) ಎನ್ನುವೆವು. ಇದನ್ನು Ha ಎಂದು ಬರೆಯುತ್ತೇವೆ. ಹೀಗೆಯೇ ಎಡಸಹಗಣವನ್ನೂ ವ್ಯಾಖ್ಯಿಸುತ್ತೇವೆ. Gಯಲ್ಲಿನ ಒಂದು ಉಪಸಂಕುಲ N ಎಂಬುದು Gಗೆ ಸೇರಿದ ಎಲ್ಲ g ಗಳಿಗೂ Ng=gN ಎಂದಾಗುವಂತಿದ್ದರೆ N ಉಪಸಂಕುಲ G ಯಲ್ಲಿ ಶಿಷ್ಟ (ನಾರ್ಮಲ್) ಉಪಸಂಕುಲವಾಗುವುದೆಂದು ವ್ಯಾಖ್ಯಿಸುತ್ತೇವೆ. ಈಗ Gಗೆ ಸೇರಿದ ಎಲ್ಲ $g_1$, $g_2$ಗಳಿಗೂ $Ng_1g_2$ ಎಂಬ ಸಂಬಂಧವೇರ್ಪಡುತ್ತದೆ. ಈಗ $Ng_1g_2$ ಸಹ N ನ ಒಂದು ಸಹಗಣವೇ ಆಗಿರುವುದರಿಂದ ಮೇಲಿನ ಸಂಬಂಧಗಳನ್ನು ಸಹಗಣಗಳ ಸಮೂಹದಲ್ಲಿ ಒಂದು ದ್ವಿಗುಣ ಪರಿಕರ್ಮವೆಂದು ಭಾವಿಸಬಹುದು. G/N ಸಂಕೇತದಿಂದ G ಯಲ್ಲಿ N ಉಂಟುಮಾಡುವ ಎಲ್ಲ ಸಹಗಣಗಳ ಸಮೂಹವನ್ನೂ ಸೂಚಿಸಿದರೆ ಹಿಂದೆ ಹೇಳಿದ ಪರಿಕರ್ಮದಲ್ಲಿ G/N ಒಂದು ಸಂಕುಲವಾಗುತ್ತದೆ. ಇದರ ಏಕಾಂಶ N. G ಪರಿವರ್ತನೀಯ ವಾದರೆ ಇದೂ ಪರಿವರ್ತನೀಯ. G/Nನ್ನು Gಯ ಒಂದು ಭಾಗ ಸಂಕುಲ ಅಥವಾ ಅಪವರ್ತನ ಸಂಕುಲವೆಂದು (ಕ್ವೋಷಂಟ್ ಗ್ರೂಪ್, ಫ್ಯಾಕ್ಟರ್ ಗ್ರೂಪ್) ಕರೆಯುತ್ತೇವೆ. ಸಮಾನರೂಪತ್ವ (ಹೋಮೋಮಾರ್ಫಿಸಂ) ಸಮಾನ ರೂಪತ್ವ ಆಧುನಿಕ ಬೀಜಗಣಿತದಲ್ಲಿ ಎಲ್ಲೆಡೆಗಳಲ್ಲೂ ಬಹು ಪ್ರಧಾನವಾದ ಭಾವನೆ. ಇದರಿಂದ ಪ್ರತ್ಯೇಕ ಸಂದರ್ಭಗಳಲ್ಲಿ ಕಂಡುಬರುವ ಸನ್ನಿವೇಶಗಳೆಲ್ಲವನ್ನೂ ಬೇರೆ ಬೇರೆಯಾಗಿ ಪರಿಶೀಲಿಸುವುದರ ಬದಲಾಗಿ ಇವೆಲ್ಲ ಗುಣಗಳಿರುವ ಅಮೂರ್ತ ಅಂಕುಲ (ಆಬ್‌ಸ್ಟ್ರಾಕ್ಟ್ ಗ್ರೂಪ್) ಒಂದನ್ನು ವ್ಯಾಸಂಗಿಸ

ಬಹುದಾದಷ್ಟು ಸುಲಭವಾಗಿರುತ್ತದೆ. G ಮತ್ತು G'ಗಳು ಸಂಕುಲಗಳಾಗಿದ್ದು $\phi$ : G $\rightarrow$ G' ಒಂದು ಚಿತ್ರಣವಾಗಿರಲಿ. ಈಗ G ಗೆ ಸೇರಿದ ಎಲ್ಲ a, b ಗಳಿಗೂ $\phi$(ab) = $\phi$ (a). $\phi$ (b) ಎಂಬ ನಿಯಮ ನಿಲ್ಲುವುದಾದರೆ $\phi$ಯನ್ನು G ಯಿಂದ G' ಗೆ ಇರುವ ಒಂದು ಸಮಾನರೂಪತ್ವವೆಂದು ಕರೆಯುತ್ತೇವೆ. ಒಂದು ಸಮನರೂಪತ್ವ $\phi$ : G $\rightarrow$ G' ಒಂದು ದ್ವೈತಚಿತ್ರಣವಾಗಿದ್ದರೆ, ಅದನ್ನು G ಯಿಂದ G' ಮೇಲಕ್ಕಿರುವ ಒಂದು ಏಕೈಕ ಸಮಾನರೂಪತ್ವ (ಐಸೋಮಾರ್ಫಿಸಂ) ಎಂದು ಕರೆಯುತ್ತೇವೆ; G $\cong$ G' ಎಂದು ಬರೆಯುತ್ತೇವೆ. ಒಂದು ಸಂಕುಲವನ್ನು ಅದರ ಮೇಲೆಯೇ ಚಿತ್ರಿಸುವ ಏಕೈಕಸಮಾನರೂಪತ್ವಗಳನ್ನು ಆ ಸಂಕುಲದ ಸ್ವಏಕೈಕಸಮಾನರೂಪತ್ವ (ಆಟೋಮಾರ್ಫಿಸಂ) ಎಂದು ಹೇಳುತ್ತೇವೆ.

G ಯಾವ ಸಂಕುಲವಾದರೂ ಅದು ಒಂದು ಪರಿವರ್ತನ ಸಂಕುಲ T ಗೆ ಏಕೈಕ ಸಮಾನರೂಪದಲ್ಲಿರುತ್ತದೆ ಎಂಬುದು ಕೇಲಿಯ ಒಂದು ಪ್ರಧಾನ ಪ್ರಮೇಯ. ಇದರ ಉಪಪ್ರಮೇಯವಾಗಿ ಪ್ರತಿಯೊಂದು ಪರ್ಯಾಪ್ತ ಸಂಕುಲವೂ ಒಂದು ಕ್ರಮಯೋಜನೆಗಳ ಸಂಕುಲಕ್ಕೆ ಏಕೈಕ ಸಮಾನರೂಪತ್ವದಲ್ಲಿರುತ್ತದೆ ಎಂದು ಹೇಳಬಹುದು.

ಉದಾಹರಣೆಗಳು : 1R.,. ಎಂಬುದು ಅಶೂನ್ಯ ವಾಸ್ತವ ಸಂಖ್ಯೆಗಳ ಗುಣಾಕಾರ ಸಂಕುಲವೂ $U_2$ ಎಂಬುದು $\{1, -1\}$ ಎಂಬ ಅದರ ಉಪಸಂಕುಲವೂ ಆಗಿರಲಿ.

$\phi$ : Ro $\rightarrow$ $U_2$ನ್ನು $x \in R_o$ ಧನಸಂಖ್ಯೆಯಾದರೆ $\phi$ (x) = 1, ಋಣಸಂಖ್ಯೆಯಾದರೆ $\phi$ ($x$) = –1 ಎಂದೂ ವ್ಯಾಖ್ಯಾನಿಸಿದರೆ $\phi : R_o \rightarrow U_2$ ಒಂದು ಸಮಾನರೂಪತ್ವ.

ವ್ಯಾಖ್ಯೆ $\phi$ : G $\rightarrow$ G' ಸಮಾನರೂಪತ್ವದಲ್ಲಿ G' ನ ಏಕ e' ಮೇಲೆ ಚಿತ್ರೀಕೃತವಾಗುವ G ಯ ಎಲ್ಲ ಗಣಾಂಶಗಳ ಗಣ Gಯ ಒಂದು ಉಪಗಣ. ಇದನ್ನು $\phi$ ಯ ಸಾರ (ಕರ್ನಲ್) ಎಂದು ಕರೆಯುತ್ತೇವೆ. ಇದು G ಯ ಒಂದು ಶಿಷ್ಟ ಉಪಸಂಕುಲ.

ಮೇಲಿನ ಉದಾಹರಣೆಯಲ್ಲಿ $\phi$ ಯ ಸಾರ = K $\phi$ = ಎಲ್ಲ ಧನವಾಸ್ತವ ಸಂಖ್ಯೆಗಳ ಗಣ; ಇದು Ro,. ನ ಒಂದು ಶಿಷ್ಟ ಉಪಸಂಕುಲವೆಂದು ಸ್ಪಷ್ಟವಾಗುತ್ತದೆ.

2 $\phi$ : Z, + $\rightarrow$ $Z_2$, + ಅನ್ನು Z ಗೆ ಸೇರಿದ ಎಲ್ಲ ಪೂರ್ಣಾಂಕ n ಗಳಿಗೂ $\phi$ (n) = 2n ಎಂದು ವ್ಯಾಖ್ಯಿಸಿದರೆ $\phi$ ಎಂಬುದು ಒಂದು ಏಕೈಕಸಮಾನ ರೂಪತ್ವ.

3 G ಒಂದು ಸಂಕುಲವೂ, a ಅದರ ಒಂದು ನಿರ್ದಿಷ್ಟ ಗಣಾಂಶವೂ ಆಗಿರಲಿ. $\phi$ : G $\rightarrow$ G ಚಿತ್ರಣವನ್ನು $\phi$ (x) = $a^{-1}xa$ ಎಂದು G ಗೆ ಸೇರಿದ ಪ್ರತಿಯೊಂದು x ಗೂ ವ್ಯಾಖ್ಯಿಸಿದರೆ $\phi$ ಚಿತ್ರಣ G ಯ ಒಂದು ಸ್ವಏಕೈಕಸಮಾನರೂಪತ್ವ (ಆಟೋಮಾರ್ಫಿಸ್ಂ) ಆಗುತ್ತದೆ.

ಸಂಕುಲಗಳ ಸಮಾನರೂಪತ್ವಗಳಿಗೆ ಸಂಬಂಧಿಸಿದ ಕೆಲವು ಪ್ರಧಾನವಾದ ಪ್ರಮೇಯಗಳನ್ನು ಇಲ್ಲಿ ಉಲ್ಲೇಖಿಸಿದೆ :

1 $\phi$ : G $\rightarrow$ G' ಒಂದು G' ಮೇಲಿನ ಸಮನರೂಪತ್ವವೂ K ಅದರ ಸಾರವೂ ಆದಾಗ G/K ಭಾಗ ಸಂಕುಲ G' ಗೆ ಏಕೈಕಸಮಾನರೂಪತ್ವದಲ್ಲಿರುತ್ತದೆ : ಎಂದರೆ G/K $\cong$ $G^1$.

2 ಮೇಲಿನ ಸಂದರ್ಭದಲ್ಲಿ H, K ಯನ್ನೊಳಗೊಂಡ G ಯ ಒಂದು ಶಿಷ್ಟ ಉಪಗಣವಾದರೆ ಅದರ $\phi$ ಚಿತ್ರಣ $H^1$ ಸಹ G' ನಲ್ಲಿ ಶಿಷ್ಟ ಉಪಗಣವಾಗುವುದೇ ಅಲ್ಲದೆ G/H $\cong$ G'/H' ಎಂದಾಗುತ್ತದೆ.

3 $G_1$ ಮತ್ತು $G_2$ಗಳು G ಯ ಉಪಸಂಕುಲಗಳಾಗಿದ್ದು $G_2$, G ಯಲ್ಲಿ ಶಿಷ್ಟವೂ ಆಗಿದ್ದರೆ , $G_1 \cap G_2$ ಸಹ $G_1$ರಲ್ಲಿ ಶಿಷ್ಟ ಉಪಸಂಕುಲವಾಗುತ್ತದೆ; ಮತ್ತು $G_1 G_2 / G_2 \cong G_1 / G_1 \cap G_2$ ಎಂದೂ ಆಗುತ್ತದೆ. ($G_1 G_2$ ಎಂದರೆ $G_1$ಕ್ಕೆ ಸೇರಿದ ಎಲ್ಲ $g_1$ ಮತ್ತು $G_2$ ರ ಎಲ್ಲ $g_2$ಗಳ ಎಲ್ಲ ಗುಣಲಬ್ಧ $g_1g_2$ಗಳನ್ನೂ ಹೊಂದಿದ ಗಣವೆಂದು ಅರ್ಥ.)

ಸಂಕುಲ ಸಿದ್ಧಾಂತ ಮತ್ತು ರೇಖಾಗಣಿತ : ಫೆಲಿಕ್ಸ್ ಕ್ಲೈನ್ (1849–1925) ಎಂಬ ಗಣಿತಜ್ಞ 1872ರಲ್ಲಿ ಜರ್ಮನಿಯ ಎರ್‌ಲಾಂಗೆನ್ ವಿಶ್ವವಿದ್ಯಾನಿಲಯದಲ್ಲಿ ಎರ್‌ಲಾಂಗರ್ ಕಾರ್ಯಕ್ರಮವೆಂದು ಹೆಸರು ಪಡೆದಿರುವ ಒಂದು ಭಾಷಣಮಾಲೆಯನ್ನು ಕೊಟ್ಟ. ಇದರಲ್ಲಿ ಆ ಕಾಲದಲ್ಲಿ ತಿಳಿದಿರುವಷ್ಟು ರೇಖಾಗಣಿತವನ್ನೆಲ್ಲ ಸಂಕುಲಗಳನ್ನು ಉಪಯೋಗಿಸಿ ವಿವಿಧ ಪ್ರಕಾರಗಳಾಗಿ ವಿಂಗಡಿಸಿದ. ಸಮಾನರೂಪತ್ವಗಳ ಕೆಲವು ಸಂಕುಲಗಳ ಪ್ರಯೋಗದಲ್ಲಿ ಸ್ಥಿರವಾಗಿ ನಿಲ್ಲುವ ರೇಖಾಚಿತ್ರಗಳ ಗುಣವಿಶೇಷಗಳನ್ನು ವ್ಯಾಸಂಗಿಸುವುದೇ ಯಾವ ರೇಖಾಗಣಿತದಲ್ಲೂ ಮುಖ್ಯ ಧ್ಯೇಯವಾಗಿರುವುದರಿಂದ ರೇಖಾಗಣಿತದ ವಿವಿಧ ಪ್ರಕಾರಗಳನ್ನು ಆಯಾ ಸಂಕುಲದೊಂದಿಗೆ ಅನ್ವಯಿಸುವುದೂ, ಅದೇ ಹೆಸರಿನಿಂದ ಕರೆಯುವುದೂ ಸ್ವಾಭಾವಿಕವೇ ಸರಿ. ಹೀಗಾಗಿ, ಯೂಕ್ಲಿಡೀಯ ರೇಖಾಗಣಿತ, ಅಫೈನ್ ರೇಖಾಗಣಿತ, ವಿಕ್ಷೇಪ(ಪ್ರೊಜೆಕ್ಟಿವ್) ರೇಖಾಗಣಿತ ಮುಂತಾದ ಪ್ರಕಾರಗಳಿವೆ. ಉದಾಹರಣೆಗೆ ಯೂಕ್ಲಿಡೀಯ ರೇಖಾಗಣಿತದಲ್ಲಿ ಪ್ರತಿಫಲನ, ಪರಿಭ್ರಮಣ, ಸರಳಚಲನಗಳಿಂದ (ಟ್ರ್ಯಾನ್ಸ್‌ಲೇಷನ್) ಏರ್ಪಡುವ ದೃಢ ಚಲನೆಗಳ ಸಂಕುಲವನ್ನು ಅನ್ವಯಿಸಿ, ಈ ಚಲನೆಗಳಿಂದ ಬದಲಾಗದ, ರೇಖಾಕೃತಿಗಳ ಗುಣವಿಶೇಷಗಳನ್ನು ಪ್ರತಿಪಾದಿಸುತ್ತೇವೆ; ಹೀಗೆಯೇ, ಇತರ ಪ್ರಕಾರಗಳಲ್ಲಿಯೂ.

**ವಲಯಗಳು, ಅಂಕಮುಖ ಪ್ರಾಂತಗಳು ಮತ್ತು ಕ್ಷೇತ್ರಗಳು :** (ರಿಂಗ್ಸ್, ಇಂಟೆಗ್ರಲ್ ಡೊಮೇನ್ಸ್ ಅಂಡ್ ಫೀಲ್ಡ್ಸ್) : $\oplus$ ಮತ್ತು $\odot$ ಎಂದು ಸೂಚಿತವಾದ ಎರಡು ದ್ವಿಗುಣಪರಿಕರ್ಮಗಳಿರುವ ಒಂದು ಗಣ A, ಮುಂದೆ ಕಾಣಿಸಿರುವ ನಿಬಂಧನೆಗಳಿಗೆ ಅನುಸಾರವಾಗಿದ್ದರೆ A, $\otimes$, $\odot$ ಎಂಬ ಸಮುಚ್ಚಯವನ್ನು ಒಂದು ವಲಯವೆಂದು ಹೇಳುತ್ತೇವೆ : 1, A, $\otimes$ ಒಂದು ಪರಿವರ್ತನೀಯ ಸಂಕುಲವಾಗಿರಬೇಕು. 2 A, $\odot$ ಒಂದು ಅರ್ಧಸಂಕುಲವಾಗಿರಬೇಕು. 3 A $\odot$ ಗೆ ಸೇರಿದ ಎಲ್ಲ a, b,c ಗಳಿಗೂ a $\odot$ b$\oplus$c) = a $\odot$ b $\oplus$ b $\odot$ c ಮತ್ತು (b $\oplus$c) a = b $\odot$ a $\oplus$ c $\odot$ a ಎಂಬ ವಿಭಾಜಕನಿಯಮಗಳು ನಿಲ್ಲಬೇಕು. A, $\odot$ ಪರಿವರ್ತನೀಯವಾದರೆ Aಯನ್ನು ಪರಿವರ್ತನೀಯವಲಯವೆಂದೂ ಹೇಳುತ್ತೇವೆ. A, $\odot$ ದಲ್ಲಿ ಏಕಾಂಶವಿದ್ದರೆ Aಯನ್ನು ಏಕಾಂಶವುಳ್ಳ ವಲಯವೆಂದೂ ಹೇಳುತ್ತೇವೆ.

ಉದಾ : ಎಲ್ಲ ಪೂರ್ಣಾಂಕಗಳ ಗಣ Z, ಸಂಕಲನ ಮತ್ತು ಗುಣಾಕಾರ ಪರಿಕರ್ಮಗಳಲ್ಲಿ ಏಕಾಂಶವನ್ನುಳ್ಳ ಒಂದು ಪರಿವರ್ತನೀಯ ವಲಯವಾಗಿದೆ.

ಸಂಕೇತಗಳನ್ನು ಸುಲಭಗೊಳಿಸುವುದಕ್ಕಾಗಿ, + ಮತ್ತು . ಗಳನ್ನೇ ಸಾಮಾನ್ಯವಾದ $\oplus$ ಮತ್ತು $\odot$ ಗಳಿಗೆ ಬದಲಾಗಿ ಉಪಯೋಗಿಸುವುದೇ ಅಲ್ಲದೆ ಈ ಪರಿಕರ್ಮಗಳನ್ನು ಸಂಕಲನ, ಗುಣಾಕಾರ ಎಂದು ಸಾಂಕೇತಿಕವಾಗಿ ಕರೆಯೋಣ; ಇದರಿಂದ ವಲಯಗಳು ಎಂಬ ಭಾವನೆ ಹೇಗೆ ಸಾಮಾನ್ಯ ಸಂಖ್ಯಾವ್ಯವಸ್ಥೆಗಳ ಒಂದು ಸಾಮಾನ್ಯೀಕರಣವೆಂದು ಚೆನ್ನಾಗಿ ತೋರಿಬರುತ್ತದೆ. ವಾಸ್ತವಕ್ಕೂ, ಸಾಮಾನ್ಯ ಸಂಖ್ಯಾ ವ್ಯವಸ್ಥೆಗಳಾದ Q (ಭಾಗಲಬ್ಧ ಸಂಖ್ಯೆಗಳು), R (ವಾಸ್ತವ ಸಂಖ್ಯೆಗಳು), C (ಮಿಶ್ರ ಸಂಖ್ಯೆಗಳು) ಏಕಾಂಶಗಳನ್ನುಳ್ಳ ಪರಿವರ್ತನೀಯ ವಲಯಗಳೇ. ಈ ವಲಯಗಳಲ್ಲಿ ಮೊದಲನೆಯ ಪರಿಕರ್ಮ ಸಂಕಲನ + ಆಗಿಯೂ, 0 ಸಂಕಲನದ ಏಕಾಂಶವಾಗಿಯೂ ಇರುವುದರಿಂದ ಯಾವ ವಲಯದಲ್ಲೂ ಅದರ ಸಂಕಲನದ ಏಕಾಂಶವನ್ನು 0 ಎಂದೂ ಅದರಲ್ಲಿ ಗುಣಾಕಾರದ ಏಕಾಂಶವಿದ್ದರೆ, ಅದನ್ನು 1 ಎಂದೂ ನಿರೂಪಿಸುತ್ತೇವೆ. 0 ಯನ್ನು ಸೊನ್ನೆ, ಶೂನ್ಯ ಎಂದೂ 1ನ್ನು ಏಕ (ಒಂದು) ಎಂದೂ ಕರೆಯುತ್ತೇವೆ.

A ವಲಯದ ಒಂದು ಉಪಗಣ B ಯೂ ಸಹ A ಯ ಪರಿಕರ್ಮಗಳಿಗನುಸಾರವಾಗಿ ಒಂದು ವಲಯವಾಗುವುದಾದರೆ, B ಯನ್ನು A ಯ ಉಪವಲಯವೆಂದು ಹೇಳುತ್ತೇವೆ. ಉದಾ : Z,+,.ನಲ್ಲಿ ಎಲ್ಲ ಸಮಪೂರ್ಣಾಂಕಗಳನ್ನು ಒಳಗೊಂಡ $Z_2$ ಎಂಬ ಉಪಗಣ ಒಂದು ಉಪವಲಯ.

ಲಘುಮಾನಕವಲಯಗಳು (ಮಾಡ್ಯುಲರ್ ರಿಂಗ್ಸ್) : n ದತ್ತ ಧನಪೂರ್ಣಾಂಕವಾದರೆ, ಸಂಕಲನ ಮತ್ತು ಗುಣಾಕಾರ (mod n) ಎಂಬ ಪರಿಕರ್ಮಗಳನ್ನು ಹೀಗೆ ವ್ಯಾಖ್ಯಿಸುತ್ತೇವೆ: a, bಗಳು ಯಾವ ಎರಡು ಪೂರ್ಣಾಂಕಗಳಾದರೂ ಅವುಗಳ ಮೊತ್ತ a + b ಮತ್ತು ಗುಣಲಬ್ಧ ab ಗಳನ್ನು n ನಿಂದ ಭಾಗಿಸಿ ಬಂದ ಶೇಷಗಳು $r_1$ಮತ್ತು $r_2$ (0 < ಅಥವಾ = $r_1$ < n), (0 < ಅಥವಾ $r_2$ < n) ಇರುವಂತಿದ್ದರೆ, $r_1$ಎಂಬುದು a, bಗಳು (mod n) ಸಂಕಲನದ ಮೊತ್ತವೆಂದೂ, $r_2$ ಎಂಬುದು ಅವುಗಳ (mod n) ಗುಣಾಕಾರದ ಲಬ್ಧವೆಂದೂ ಹೇಳುತ್ತೇವೆ. ಹಾಗೂ $r_1$ = (a + b ) (mod n); $r_2$ = ab (mod n) ಎಂದು ಬರೆಯುತ್ತೇವೆ. ಉದಾ : 3 + 5 = 2 (mod 6), 3 x 5 =3 (mod 6).

ಈಗ, n ಒಂದು ಪೂರ್ಣಾಂಕವಾಗಿದ್ದರೆ 0, 1, 2, .................,(n–1) ಗಳ ಗಣವಾದ Z/(n) ಎಂಬುದು, (mod n)ಸಂಕಲನ ಮತ್ತು ಗುಣಾಕಾರ ಪರಿಕರ್ಮಗಳಲ್ಲಿ ಒಂದು ವಲಯವಾಗುತ್ತದೆ. ಇದು ಏಕವನ್ನುಳ್ಳ ಒಂದು ಪರಿವರ್ತನೀಯ ವಲಯ. ಇಂಥ ವಲಯಗಳಲ್ಲಿ ಒಂದು ವಿಶೇಷ ಪರಿಸ್ಥಿತಿ ಕಂಡುಬರುತ್ತದೆ; ಉದಾಹರಣೆಗೆ, Z/(6)ನಲ್ಲಿ 2X3 =0 (mod 6). ಹೀಗೆ ಎರಡೂ ಅಶೂನ್ಯ ಎರಡೂ ಗಣಾಂಶಗಳ ಗುಣಲಬ್ಧ, ವಲಯದ ಶೂನ್ಯವಾಗುವಂಥ ವಲಯಗಳಿರಬಹುದೆಂದು ತೋರ್ಪಡುತ್ತದೆ. a $\neq$ 0, b $\neq$ 0 ಎಂಬುವು A ವಲಯದ ಗಣಾಂಶಗಳಾಗಿದ್ದು, ab=0 ಆದರೆ, a ಶೂನ್ಯದ ಎಡ ಅಪವರ್ತನವೆಂದೂ (ಲೆಫ್ಟ್ ಜೀರೋ ಡಿವೈಸರ್) b ಅದರ ಬಲ ಅಪವರ್ತನವೆಂದೂ ಹೇಳುತ್ತೇವೆ.

ಶೂನ್ಯದ ಅಪವರ್ತನಗಳಿಲ್ಲದ ಪರಿವರ್ತನೀಯ ವಲಯಗಳನ್ನು ಅಂಕಮುಖ ಪ್ರಾಂತಗಳೆಂದು ಹೇಳುತ್ತೇವೆ; ಉದಾ: **Z, + ,**.ಎಂಬ ಪೂರ್ಣಾಂಕಗಳ ವಲಯ; ವಾಸ್ತವಕ್ಕೂ ಸಾಮಾನ್ಯೀಕರಣವೇ ಅಂಕಮುಖಪ್ರಾಂತ. ಹೀಗೆ ವಲಯಗಳ ಗುಣಾಕಾರ ಅರ್ಧಸಂಕುಲಗಳ ಮೇಲೆ ವಿವಿಧ ನಿಬಂಧನೆಗಳನ್ನು ವಿಧಿಸುವುದರಿಂದ ವಿಶಿಷ್ಟ ಪ್ರಕೃತಿಯ ವಲಯಗಳು ವ್ಯಾಖ್ಯಿತವಾಗುತ್ತವೆ. ಹೀಗಾಗಿ ಒಂದು ವಲಯದಲ್ಲಿರುವ ಅಶೂನ್ಯ ಇತರ

ಗಣಾಂಶಗಳೆಲ್ಲ ಗುಣಾಕಾರ ಪರಿಕರ್ಮದಲ್ಲಿ ಒಂದು ಸಂಕುಲವನ್ನೇರ್ಪಡಿಸಿದರೆ ಆ ವಲಯವನ್ನು ಭಾಗಾಹಾರವಲಯ(ಡಿವಿಜ಼ನ್ ರಿಂಗ್) ಎಂದು ಕರೆಯುತ್ತೇವೆ. ಪರಿವರ್ತನೀಯ ಭಾಗಾಹಾರವಲಯಗಳೇ ಬಹು ಮುಖ್ಯವಾದ ಕ್ಷೇತ್ರಗಳೆಂಬ (ಫೀಲ್ಡ್ಸ್) ಬೈಜಿಕ ವ್ಯವಸ್ಥೆಗಳು ಅಲ್ಲಿ (ಅಲ್ಜಿಬ್ರಾಇಕ್ ಸಿಸ್ಟಮ್ಸ್). ಸಾಮಾನ್ಯ ಸಂಖ್ಯಾವ್ಯವಸ್ಥೆಗಳಾದ Q (ಭಾಗಲಬ್ಧ ಸಂಖ್ಯೆಗಳು), R (ವಾಸ್ತವ ಸಂಖ್ಯೆಗಳು) C (ಮಿಶ್ರ ಸಂಖ್ಯೆಗಳು) – ಇವು ಕ್ಷೇತ್ರಗಳಿಗೆ ಉದಾಹರಣೆಗಳು. ಇವು ಅಪರ್ಯಾಪ್ತ ಕ್ಷೇತ್ರಗಳು. p ಎಂಬುದು ಅಬಿಭಾಜ್ಯ ಸಂಖ್ಯೆಯಾದರೆ $Z/(p) = \{0,1,2,.......p^{-1}\}$ ಒಂದು ಕ್ಷೇತ್ರ. ಇದು ಒಂದು ಪರ್ಯಾಪ್ತ ಕ್ಷೇತ್ರ.

ಭಾಗಾಹಾರ ವಲಯಗಳಲ್ಲಿ ಶೂನ್ಯದ ಅಪವರ್ತನಗಳಿರುವುದಿಲ್ಲವೆಂದೂ ಕ್ಷೇತ್ರಗಳೆಲ್ಲ ಅಂಕಮುಖ ಪ್ರಾಂತಗಳೆಂದೂ ಸುಲಭವಾಗಿ ತೋರಿಬರುತ್ತದೆ. ಮೇಲಾಗಿ ಪ್ರತಿಯೊಂದು ಪರ್ಯಾಪ್ತ ಅಂಕಮುಖಪ್ರಾಂತವೂ ಒಂದು ಕ್ಷೇತ್ರ.

ವಲಯಗಳ ಸಮಾನರೂಪತ್ವವನ್ನು (ಹೋಮೊಮಾರ್ಫಿಸಂ ಆಫ್ ರಿಂಗ್ಸ್) ಸಂಕುಲಗಳ ಸಂದರ್ಭದಂತೆಯೇ ವ್ಯಾಖ್ಯಿಸುತ್ತೇವೆ. A ವಲಯದಿಂದ A$'$ ವಲಯಕ್ಕೆ ಚಿತ್ರಿಸುವ $\phi$ ಎಂಬ ಚಿತ್ರಣ A ಸೇರಿದ ಎಲ್ಲ a , b ಗಳಿಗೂ (1) $\phi$ (a+b) = $\phi$ (a) + $\phi$ (b), (2) $\phi$ (ab) = $\phi$ (a). $\phi$ (b) ಎಂಬ ನಿಯಮಗಳನ್ನು ಪಾಲಿಸುವಂತಿದ್ದರೆ $\phi$ ಯನ್ನು A ಯಿಂದ $A^1$ ಗೆ ಇರುವ ಸಮಾನರೂಪತ್ವವೆಂದು ಹೇಳುತ್ತೇವೆ.

$\phi$ ಚಿತ್ರಣದಲ್ಲಿ $A^1$ನ ಶೂನ್ಯದ ಮೇಲಕ್ಕೆ ಚಿತ್ರೀಕೃತವಾಗುವ A ಯ ಎಲ್ಲ ಗಣಾಂಶಗಳ ಗಣವನ್ನು $\phi$ ಯ ಸಾರ (ಕರ್ನಲ್) ಎನ್ನುತ್ತೇವೆ. ಇದನ್ನು K$\phi$ ಎಂದು ಸೂಚಿಸೋಣ. K$\phi$, A ಯ ಉಪವಲಯ. ಮೇಲಾಗಿ $k\in K\phi$ ಮತ್ತು $a\in A$ ಆದರೆ, ak ಮತ್ತು ka ಗಳೆರಡೂ K$\phi$ ಯಲ್ಲಿರುತ್ತವೆ. ಈ ಗುಣವನ್ನನುಸರಿಸಿ ಮುಂದಿನ ಭಾವನೆಯನ್ನು ವ್ಯಾಖ್ಯಿಸುತ್ತೇವೆ: A ವಲಯದ ಉಪವಲಯ U ಎಂಬುದರ ಯಾವ u ಆಗಲಿ $a\in A$ ಆದಾಗ ಎಲ್ಲ $ua\in U$ ಮತ್ತು $au\in U$ ಆಗುವಂತಿದ್ದರೆ U ನ್ನು A ಯ ಒಂದು ಆದರ್ಶ (ಐಡಿಯಲ್) ಉಪವಲಯವೆಂದು ಕರೆಯುತ್ತೇವೆ; ಸಂಕ್ಷೇಪವಾಗಿ ಇದನ್ನು ಆದರ್ಶ ಎನ್ನೋಣ. ವಲಯ ಸಿದ್ಧಾಂತದಲ್ಲಿ ಆದರ್ಶಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ.

ಕೋಶ (ಮೇಟ್ರಿಕ್ಸ್) ವಲಯಗಳು : ಈ ಒಂದು ಕ್ಷೇತ್ರವಾಗಿದ್ದು $a_{rs}\in$,F, r =1, 2,....., m ಮತ್ತು s = 1, 2, ... n ಆಗಿರಲಿ; ಎಂದರೆ $a_{rs}$ ಗಳು F ಗೆ ಸೇರಿದ mn ಗಣಾಂಶಗಳು. ಇವನ್ನು m ಅಡ್ಡಗಳೂ (ರೋಸ್) n ನೀಟಗಳೂ (ಕಾಲಂಸ್) ಇರುವಂತೆ ಒಂದು ಆಯತಾಕಾರದ ಜೋಡಣೆಯ ಹಾಗೆ ಇಲ್ಲಿ ತೋರಿಸಿರುವಂತೆ ಅಳವಡಿಸಬಹುದು.

$$A = \begin{bmatrix} a_{11} & \cdots & a_{12} & \cdots & \cdots & \cdots & a_{1s} & \cdots & \cdots & \cdots & a_{1n} \\ a_{21} & \cdots & a_{22} & \cdots & \cdots & \cdots & a_{2s} & \cdots & \cdots & \cdots & a_{2n} \\ \cdots & \cdots & \cdots & \cdots & \cdots & \cdots & \cdots & \cdots & \cdots & \cdots & \cdots \\ \cdots & \cdots & \cdots & \cdots & \cdots & \cdots & \cdots & \cdots & \cdots & \cdots & \cdots \\ \cdots & \cdots & \cdots & \cdots & \cdots & \cdots & \cdots & \cdots & \cdots & \cdots & \cdots \\ a_{e1} & \cdots & a_{r2} & \cdots & \cdots & \cdots & a_{rs} & \cdots & \cdots & \cdots & a_{rn} \\ \cdots & \cdots & \cdots & \cdots & \cdots & \cdots & \cdots & \cdots & \cdots & \cdots & \cdots \\ \cdots & \cdots & \cdots & \cdots & \cdots & \cdots & \cdots & \cdots & \cdots & \cdots & \cdots \\ \cdots & \cdots & \cdots & \cdots & \cdots & \cdots & \cdots & \cdots & \cdots & \cdots & \cdots \\ a_{m1} & a_{m2} & \cdots & \cdots & \cdots & a_{ms} & \cdots & \cdots & \cdots & a_{mn} & \end{bmatrix}$$

ಮೇಲ್ಕಂಡ A ಎಂಬ ಜೋಡಣೆಯನ್ನು F ಮೇಲಿನ ಒಂದು (mXn) ಕೋಶ (ಮೇಟ್ರಿಕ್ಸ್) ಎಂದು ಕರೆಯುತ್ತೇವೆ. ಇಲ್ಲಿ r ಎಂಬ ಧನ ಪೂರ್ಣಾಂಕ A ಯಲ್ಲಿ $a_{rs}$ ಇರುವ ಅಡ್ಡವನ್ನೂ s ಎಂಬುದು ಅದು ಇರುವ ನೀಟವನ್ನೂ ಗುರ್ತಿಸುತ್ತವೆ. ಸಂಕ್ಷೇಪವಾಗಿ A ಯನ್ನು $[a_{rs}]$ ಎಂದು ಸೂಚಿಸುವುದು ವಾಡಿಕೆ.

ಸಮತ್ವ : A = $[a_{rs}]$ ಮತ್ತು B = $[b_{rs}]$ ಗಳು ಎರಡು (mXn) ಕೋಶಗಳಾಗಿರಲಿ, ಈಗ $a_{rs} = b_{rs}$, 1 < ಅಥವಾ = r < ಅಥವಾ = m, 1 < ಅಥವಾ = s < ಅಥವಾ = n ಆದರೆ, A ಮತ್ತು Bಗಳು ಪರಸ್ಪರ ಸಮವೆಂದು ಹೇಳಿ A = B ಎಂದು ಬರೆಯುತ್ತೇವೆ.

ಸಂಕಲನ : $c_{rs} = a_{rs} + b_{rs}$ಎಂದು ಎಲ್ಲ r ಮತ್ತು s ಗಳಿಗೂ ಅನ್ವಯಿಸಿದರೆ $[c_{rs}]$ ಎಂಬುದೂ ಒಂದು (mXn) ಕೋಶ ಆಗುತ್ತದೆ. ಇದನ್ನೇ A, B ಗಳ ಮೊತ್ತವೆಂದು ಹೇಳಿ =$[c_{rs}]$ =A + B ಎಂದು ಬರೆಯುತ್ತೇವೆ. A + B ಯನ್ನು ಪಡೆಯುವ ಕ್ರಿಯೆಗೆ ಕೋಶಗಳ ಸಂಕಲನವೆಂದು ಹೆಸರು.

ಗುಣಾಕಾರ : A = $[a_{rs}]$, B = $[b_{st}]$ , 1 < ಅಥವಾ = r < ಅಥವಾ = m, 1 < ಅಥವಾ =s < ಅಥವಾ =n ಮತ್ತು 1 < ಅಥವಾ = t < ಅಥವಾ = p ಆಗಿದ್ದರೆ $c_{rt}$ = $\sum_{s=1}^{n} a_{rs}b_{st}$ ಎಂಬ Fನಲ್ಲಿರುವ mp ಗಣಾಂಶಗಳನ್ನು ಪಡೆಯೋಣ. ಇವುಗಳಿಂದ ಏರ್ಪಡುವ $[c_{rt}]$ ಎಂಬ mXp ಕೋಶವನ್ನು A,B ಗಳ ಕೇಲಿ ಗುಣಲಬ್ಧವೆಂದು ಕರೆಯುತ್ತೇವೆ. ಇದನ್ನು AB ಎಂದು ನಿರೂಪಿಸುತ್ತೇವೆ. ಈ ಕ್ರಿಯೆಗೆ ಕೋಶ ಗುಣಾಕಾರವೆಂದು ಹೆಸರು.

(Aಯನ್ನು B ಯಿಂದ ಗುಣಿಸಬೇಕಾದರೆ A ಯ ನೀಟಗಳ ಸಂಖ್ಯೆ B ಯ ಅಡ್ಡಗಳ ಸಂಖ್ಯೆಗೆ ಸಮವಾಗಿರಬೇಕಾದುದು ಅಗತ್ಯ.)

ಆದಿಶ (ಸ್ಕೇಲಾರ್) ಗುಣಾಕಾರ : A = $[a_{rs}]$ ಎಂಬುದು F ಮೇಲಿನ ಒಂದು ಕೋಶ ಆಗಿದ್ದು $\alpha\in F$ ಆದರೆ, $[\alpha a_{rs}]$ ಎಂಬುದೂ F ಮೇಲಿನ ಒಂದು ಕೋಶವೇ ಆಗಿದೆ. ಇದನ್ನು $\alpha A$ ಎಂದು ನಿರೂಪಿಸುತ್ತೇವೆ; ಈ ಕ್ರಿಯೆಗೆ ಆದಿಶ (ಸ್ಕೇಲಾರ್) ಗುಣಾಕಾರವೆನ್ನುತ್ತೇವೆ. 1, Fನ ಏಕವಾದರೆ –1 ಅದರ ಸಂಕಲನದ ವಿಲೋಮ. (–1)A ಯನ್ನು ಹ್ರಸ್ವವಾಗಿ – A ಎಂದು ಬರೆಯುವುದು ವಾಡಿಕೆ. ಹೀಗಾಗಿ A + (–A) = $[a_{rs} + (-a_{rs})] = [a_{rs} - a_{rs}]$ = [0] ಇದು ಎಲ್ಲ ಸ್ಥಾನಗಳಲ್ಲಿಯೂ 0 ಇರುವ ಕೋಶ. ಇದನ್ನು ಶೂನ್ಯ (ನಲ್) ಕೋಶ ಎಂದು ಕರೆಯುತ್ತೇವೆ. ಇದರಲ್ಲಿ m ಅಡ್ಡಗಳೂ n ನೀಟಗಳೂ ಇದ್ದರೆ ಇದನ್ನು $0_{m,n}$ ಎಂದು ಕರೆಯಬಹುದು.

$M_{m,n}$ ಎಂಬುದು F ಮೇಲಿನ ಎಲ್ಲ mXn ಕೋಶಗಳ ಗಣವಾದರೆ ಸಂಕಲನ ಪರಿಕರ್ಮದಲ್ಲಿ ಇದು ಒಂದು ಪರಿವರ್ತನೀಯ ಸಂಕುಲವಾಗುತ್ತದೆ. ಹೀಗೆಯೇ $M_{n,n}$ ಎಂಬುದು ಸಂಕಲನದಲ್ಲಿ ಪರಿವರ್ತನೀಯ ಸಂಕುಲವೂ ಗುಣಾಕಾರದಲ್ಲಿ ಅರ್ಧ ಸಂಕುಲವೂ ಆಗಿದೆ. ಹಾಗೂ $A,B,C \in M_{n,n}$ ಆದಾಗ A. (B+C) = AB + AC ಮತ್ತು (B+C) A = BC + CA ಎಂಬ ವಿಭಾಜಕ ನಿಯಮವೂ ಸಲ್ಲುತ್ತವೆ.

ಹೀಗಾಗಿ $M_{n,n}$ ಎಂಬುದು ಮೇಲೆ ಉಕ್ತವಾದ ಪರಿಕರ್ಮಗಳಲ್ಲಿ ಒಂದು ವಲಯವಾಗಿ ನಿಲ್ಲುತ್ತದೆ. ಇದರಲ್ಲಿ ಒಂದು ಏಕಾಂಶವೂ ಉಂಟು. ಪ್ರಧಾನ ಕರ್ಣದಲ್ಲಿ (ಮೇನ್ ಡಯಗನಲ್) 1 ಮತ್ತೆಲ್ಲ ಕಡೆ 0 ಇರುವ

$$I_n = \begin{bmatrix} 1 & 0\cdots & \cdots & 0 \\ 0 & 1\cdots & \cdots & 0 \\ 0 & 0\cdots & \cdots & 0 \\ \cdots & \cdots & \cdots & \cdots \\ 0 & 0\cdots & \cdots & 1 \end{bmatrix}$$

ಎಂಬುದೇ ಈ ಏಕಾಂಶ.

ಬಹುಪದಿಗಳ ವಲಯಗಳು (ಪಾಲಿನೋಮಿಯಲ್ ರಿಂಗ್ಸ್) : F ಒಂದು ಕ್ಷೇತ್ರವಾಗಿಯೂ *x* ಒಂದು ಅನಿರ್ದಿಷ್ಟವಾಗಿಯೂ (ಇಂಡಿಟರ್ಮಿನೇಟ್) ಇರಲಿ. n ಒಂದು ಧನಪೂರ್ಣಾಂಕವಾಗಿಯೂ $a_0, a_1, ...... a_n \in F$ ಮತ್ತು $a_n \neq 0$ ಎಂದಿರಲಿ. ಈಗ $f(x) = a_0 + a_1x + a_2x^2 + ..... + a_nx^n$ ಎಂಬ ರೂಪದಲ್ಲಿರುವ ಸಂಕೇತವನ್ನು F ಮೇಲಿನ *x* ನಲ್ಲಿರುವ n ಘಾತದ ಬಹುಪದಿ ಎಂದು ಕರೆಯುತ್ತೇವೆ. $g(x) = b_0 + b_1x + b_2x^2 + ... + b_mx^m$ ಎಂಬುದು ಇನ್ನೊಂದು ಬಹುಪದಿಯಾದರೆ ಇವುಗಳ ಮೊತ್ತ f(*x*) + g(*x*) ಮತ್ತು ಗುಣಲಬ್ಧ f(*x*). g(*x*) ಗಳನ್ನು ಹೀಗೆ ವ್ಯಾಖ್ಯಿಸೋಣ : m < ಅಥವಾ = n ಎಂದು ಭಾವಿಸಿದರೆ.

$$f(x) + g(x) = (a_0+ b_0) + (a_1+b_1)\,x + (a_2+b_2)x^2 + ..... + (a_m + b_m)\,x^m + a_{m+1}\,x^{m+1} + .... + a_n\,x^n$$

$$f(x).g(x) = a_0b_0 + (a_0b_1 + a_1b_0)\,x + (a_0b_2 + a_1b_1 + a_2b_0)\,x^2 + ..... + a_nb_m\,x^{m+n}.$$ ಹೀಗೆಯೇ m > n ಆದಾಗಲೂ.

ಈಗ f(*x*) + g(*x*) = g (*x*) + f(*x*) ಮತ್ತು f(*x*). g (*x*) = g (*x*) f (*x*) ಎಂದು ಸುಲಭವಾಗಿ ತೋರಿಬರುತ್ತದೆ. ಈ ಕ್ರಿಯೆಗಳನ್ನು ಬಹುಪದಿಗಳ ಸಂಕಲನ ಮತ್ತು ಗುಣಾಕಾರವೆಂದು ಹೇಳುತ್ತೇವೆ. F[*x*] ಎಂಬ ಸಂಕೇತದಿಂದ F ಮೇಲಿನ ಎಲ್ಲ ಬಹುಪದಿಗಳ ಗಣವನ್ನು ಸೂಚಿಸಿದರೆ ಮೇಲ್ಕಂಡ ಕ್ರಿಯೆಗಳಲ್ಲಿ F[*x*] ಸಹ ಒಂದು ವಲಯವಾಗಿರುತ್ತದೆ; ಇದು ಪರಿವರ್ತನೀಯ ಮತ್ತು ಏಕಾಂಶವನ್ನುಳ್ಳದ್ದು.

**ಯೂಕ್ಲಿಡೀಯ (ಯೂಕ್ಲಿಡೀಯನ್) ವಲಯಗಳು :** ಪೂರ್ಣಾಂಕಗಳ ವಲಯ Z, +.. ಮತ್ತು ಮೇಲೆ ಕೊಟ್ಟಿರುವ F [*x*] ಎಂಬ ಬಹುಪದಿಗಳ ವಲಯಗಳು ಇವುಗಳಿಗೆ ಉದಾಹರಣೆಗಳು. E ಒಂದು ಅಂಕಮುಖ ಪ್ರಾಂತವಾಗಿದ್ದು ಅದರ ಪ್ರತಿಯೊಂದು ಅಶೂನ್ಯಗಣಾಂಶ a ಯೊಂದಿಗೂ d (a) ಯೆಂದು ಸೂಚಿತವಾದ ನಾನ್ಋಣ ಪೂರ್ಣಾಂಕವೊಂದು ವ್ಯಾಖ್ಯಿಸಲ್ಪಟ್ಟಿರಲಿ; ಮತ್ತು E ಗೆ ಸೇರಿದ ಪ್ರತಿ $a\neq 0$, $b\neq 0$ ಗಳಿಗೂ, (1) d(a) < ಅಥವಾ = d(b) ಮತ್ತು (2) a = $q^b$ + r ಮತ್ತು r = 0 ಅಥವಾ d (r) < d (b) ಆಗಿರುವಂತೆ E ಯಲ್ಲಿ q ಮತ್ತು r ಎಂಬ ಎರಡು ಗಣಾಂಶಗಳಿರುವ ಹಾಗಿದ್ದರೆ E ಯನ್ನು ಒಂದು ಯೂಕ್ಲಿಡೀಯ ವಲಯವೆಂದು ಕರೆಯುವೆವು. ಮುಂದೆ ಉಲ್ಲೇಖಿಸಿರುವ ಪ್ರಮೇಯಗಳು ಯೂಕ್ಲಿಡೀಯ ವಲಯಗಳ ಕೆಲವು ವಿಶಿಷ್ಟಗುಣಗಳನ್ನು ಸೂಚಿಸುತ್ತವೆ.

1 E ಒಂದು ಯೂಕ್ಲಿಡೀಯ ವಲಯವೂ U ಅದರ ಒಂದು ಆದರ್ಶವೂ ಆಗಿರಲಿ. U ನಲ್ಲಿರುವ ಪ್ರತಿಯೊಂದು ಗಣಾಂಶ u ಅನ್ನೂ $u = u_0x$ ಎಂಬ ರೂಪದಲ್ಲಿ U ನಲ್ಲಿರುವ ಒಂದು ದತ್ತಗಣಾಂಶ $u_0$ ಮತ್ತು E ಯ ಯಾವುದೋ ಒಂದು ಗಣಾಂಶ x ಗಳ ಗುಣಲಬ್ಧ ರೂಪದಲ್ಲಿ ವ್ಯಕ್ತಪಡಿಸಬಹುದು. ಇಂಥ ಆದರ್ಶಗಳನ್ನು ಪ್ರಧಾನ (ಪ್ರಿನ್ಸಿಪಲ್) ಆದರ್ಶಗಳೆಂದು ಕರೆಯಲಾಗಿದೆ. ಹೀಗಾಗಿ ಪ್ರತಿಯೊಂದು ಯೂಕ್ಲಿಡೀಯ ವಲಯವೂ ಒಂದು ಪ್ರಧಾನ ಆದರ್ಶ ವಲಯವಾಗಿರುತ್ತದೆ.

**ಅಪವರ್ತನಗಳು; ಅವಿಭಾಜ್ಯ ಅಂಶಗಳು :** E ಯಲ್ಲಿರುವ ಯಾವುದಾದರೂ ಗಣಾಂಶ a ಯನ್ನು $a = bc$, $b \in E$, $c \in E$ ಇರುವಂತೆ ವ್ಯಕ್ತಪಡಿಸಬಹುದಾದರೆ, b ಮತ್ತು c ಗಳನ್ನು a ಯ ಭಾಜಕಗಳು (ಡಿವೈಸರ್ಸ್) ಅಥವಾ ಅಪವರ್ತನಗಳು (ಫ್ಯಾಕ್ಟರ್ಸ್) ಎಂದು ಕರೆಯುತ್ತೇವೆ. $a \in E$ ಆಗಿದ್ದು $ab = 1$ ಆಗುವಂತೆ E ಯಲ್ಲಿ ಒಂದು ಗಣಾಂಶ b ಇದ್ದರೆ a ಮತ್ತು b ಗಳನ್ನು E ಯಲ್ಲಿ ಏಕಗಳು (ಯೂನಿಟ್ಸ್) ಎಂದು ಕರೆಯಲಾಗಿದೆ. (ಏಕಗಳಿಗೂ ಏಕಾಂಶಕ್ಕೂ ವ್ಯತ್ಯಾಸವಿದೆ ಎಂದು ಗಮನಿಸಬೇಕು).

ಏಕಗಳಲ್ಲದ ಎರಡು ಗಣಾಂಶಗಳ ಗುಣಲಬ್ಧದ ರೂಪದಲ್ಲಿ ಅಪವರ್ತಿಸಲಾಗದ E ಯ ಗಣಾಂಶಗಳನ್ನು ಅವಿಭಾಜ್ಯ ಅಂಶಗಳೆಂದು (ಪ್ರೈಮ್ ಎಲಿಮೆಂಟ್ಸ್) ಕರೆಯಲಾಗಿದೆ. ಏಕಗಳಲ್ಲದ ಉಳಿದ ಗಣಾಂಶಗಳೂ ವಿಭಾಜ್ಯ ಅಂಶಗಳು (ಕಾಂಪೊಸಿಟ್ಸ್).

2 E ಯೂಕ್ಲಿಡೀಯ ವಲಯವಾದರೆ ಅದರ ಪ್ರತಿಯೊಂದು ಗಣಾಂಶವೂ ಒಂದು ಏಕವೋ ಅವಿಭಾಜ್ಯವೋ ಅಥವಾ ಕೆಲವು ಅವಿಭಾಜ್ಯ ಅಂಶಗಳ ಲಬ್ಧವೋ ಆಗಿರುತ್ತದೆ. ಏಕವಲ್ಲದ ಪ್ರತಿಯೊಂದು ಗಣಾಂಶವನ್ನೂ ಕೆಲವು ಅವಿಭಾಜ್ಯಗಳ ಏಕೈಕ ಲಬ್ಧವಾಗಿ ನಿರೂಪಿಸಬಹುದು. ಈ ತೆರನಾದ ವಲಯಗಳನ್ನು ಏಕೈಕ ಅಪವರ್ತನೀಯಪ್ರಾಂತ (ಯುನೀಕ್ ಫ್ಯಾಕ್ಟರೈಸೇಷನ್ ಡೊಮೇನ್) ಎನ್ನುವರು. ಆದುದರಿಂದ ಯೂಕ್ಲಿಡೀಯ ವಲಯಗಳು ಏಕೈಕ ಅಪವರ್ತನೀಯ ವಲಯಗಳು.

ಕ್ಷೇತ್ರ ವಿಸ್ತರಣೆಗಳು (ಫೀಲ್ಡ್ ಎಕ್ಸ್‌ಟೆನ್‌ಷನ್ಸ್) : ಪೂರ್ಣಾಂಕಗಳ ವಲಯವಾದ Z ನಲ್ಲಿ 1 ಮತ್ತು – 1 ಗಳನ್ನುಳಿದು ಮಿಕ್ಕೆಲ್ಲ ಅಂಶಗಳಿಗೂ ಗುಣಾಕಾರ ಪರಿಕರ್ಮದಲ್ಲಿ ವಿಲೋಮಗಳಿಲ್ಲ. 0 ಒಂದಕ್ಕೆ ಬಿಟ್ಟು ಉಳಿದ ಎಲ್ಲವುಗಳ ವಿಲೋಮಗಳನ್ನು Zನೊಂದಿಗೆ ಸೇರಿಸಿ ಹೀಗೆ ಸಿದ್ಧಿಸಿದ ಗಣದ ಪ್ರತಿಯೊಂದು ಪರ್ಯಾಪ್ತ ಗುಣಲಬ್ಧವನ್ನೂ (ಫೈನೈಟ್ ಪ್ರಾಡಕ್ಟ್) ಇದರೊಂದಿಗೆ ಸೇರಿಸಿದ ಮೇಲೆ ದೊರೆಯುವ ಗಣವೇ ಎಲ್ಲ ಭಾಗಲಬ್ಧಸಂಖ್ಯೆಗಳ Q ವಲಯ. ಈ ವಲಯದಲ್ಲಿ Z ಒಂದು ಉಪವಲಯ. Q ವನ್ನು Z ನ ವಿಸ್ತರಣೆ ಎನ್ನುತ್ತಾರೆ. Z ನ್ನು ಸಂಪೂರ್ಣವಾಗಿ ಒಳಗೊಳ್ಳುವ ಕ್ಷೇತ್ರವೇ Q. ಇದನ್ನು Zನ ಭಾಗಲಬ್ಧ ಕ್ಷೇತ್ರ (ಫೀಲ್ಡ್ ಆಫ್ ಕ್ವೋಷಂಟ್ಸ್) ಎನ್ನಲಾಗಿದೆ. ವಾಸ್ತವಿಕವಾಗಿ ಪ್ರತಿಯೊಂದು ಅಂಕಮುಖ ಪ್ರಾಂತವನ್ನೂ ಒಂದು ಕ್ಷೇತ್ರದಲ್ಲಿ ಒಳಹೊಗಿಸಬಹುದೆಂಬುದು ಒಂದು ಮುಖ್ಯ ಪ್ರಮೇಯ.

F ಎಂಬುದು K ಎಂಬ ಕ್ಷೇತ್ರದ ಉಪಕ್ಷೇತ್ರವಾದರೆ K, F ನ ಒಂದು ವಿಸ್ತರಣೆ ಎಂದು ಹೇಳುತ್ತೇವೆ. ಭಾಗಲಬ್ಧ ಸಂಖ್ಯೆಗಳ ಕ್ಷೇತ್ರ Q ನ ಒಂದು ಬಗೆಯ ವಿಸ್ತರಣೆಯನ್ನು ಕುರಿತು ವಿಚಾರ ಮಾಡೋಣ. $f(x) = x^2 - 2x - 1 = 0$ ಎಂಬ ಸಮೀಕರಣದ ಗುಣಾಂಕಗಳು (ಕೋಎಫಿಷಂಟ್ಸ್) ಭಾಗಲಬ್ಧ ಸಂಖ್ಯೆಗಳು. ಅದರ ಮೂಲಗಳಾದ $1 \pm \sqrt{2}$ ಗಳೂ Q ನಲ್ಲಿಲ್ಲ. a ಮತ್ತು b ಗಳು ಭಾಗಲಬ್ಧ ಸಂಖ್ಯೆಗಳಾಗಿದ್ದು $a + \sqrt{2}\, b$ ರೂಪದಲ್ಲಿರುವ ಎಲ್ಲ ವಾಸ್ತವ ಸಂಖ್ಯೆಗಳ ಗಣ $Q(\sqrt{2})$ನ್ನು ತೆಗೆದುಕೊಂಡರೆ ಸಂಕಲನ ಮತ್ತು ಗುಣಾಕಾರ ಗಳಲ್ಲಿ ಇದು ಒಂದು ಕ್ಷೇತ್ರವಾಗಿರುವುದನ್ನು ಸುಲಭವಾಗಿ ಕಾಣಬಹುದು ಹಾಗೂ ಇದು Q ವನ್ನು ಒಳಗೊಂಡು ಅದರ ಒಂದು ವಿಸ್ತರಣೆಯಾಗಿದೆ. ಆದರೂ ಎಲ್ಲ ವಾಸ್ತವ ಸಂಖ್ಯೆಗಳ ಕ್ಷೇತ್ರ Rನಷ್ಟು ದೊಡ್ಡ ವಿಸ್ತರಣೆಯಲ್ಲ. ಮೇಲಾಗಿ $Q(\sqrt{2})$ರಲ್ಲಿ ದತ್ತ ಸಮೀಕರಣದ ಮೂಲಗಳಿದ್ದು, ನ ಇದಕ್ಕಿಂತ ಚಿಕ್ಕದಾಗಿರುವ ಇನ್ನಾವ ಕ್ಷೇತ್ರದಲ್ಲೂ ಈ ಮೂಲಗಳಿಲ್ಲದ ಹಾಗೂ ಇದೆ. ಇದಕ್ಕಾಗಿ $Q(\sqrt{2})$ ನ್ನು f(x) ನ ಛೇದನಕ್ಷೇತ್ರ (ಸ್ಪ್ಲಿಟಿಂಗ್ ಫೀಲ್ಡ್) ಎಂದು ಕರೆಯುತ್ತೇವೆ. ಏಕೆಂದರೆ ಈ ಕ್ಷೇತ್ರದ ಗುಣಾಂಕಗಳನ್ನುಪಯೋಗಿಸಿದರೆ f(x) ನ್ನು

$$f((x)=\{(x-1)+\sqrt{2}\}.\{x-1)-\sqrt{2}\}$$

ಎಂದು ಎರಡು ಅಪವರ್ತನಗಳಾಗಿ ಛೇದಿಸಬಹುದು. ಇದನ್ನು Q ನ ಒಂದು ಸುಲಭ (ಸಿಂಪಲ್) ವಿಸ್ತರಣೆ ಎಂದು ಹೇಳುವರು. ಮೇಲಾಗಿ, $Q(\sqrt{2})$ ನ್ನು ಪಡೆಯಲು ಅದರಲ್ಲಿ ಒಂದು ವರ್ಗಸಮೀಕರಣದ ಮೂಲಗಳಿರಬೇಕಾದುದರಿಂದ $Q(\sqrt{2})$ ನ್ನು Q ನ ಒಂದು ವರ್ಗವಿಸ್ತರಣೆ (ಕ್ವಾಡ್ರ್ಯಾಟಿಕ್ ಎಕ್ಸ್‌ಟೆನ್‌ಷನ್) ಎಂದೂ ಹೇಳುತ್ತಾರೆ.

**ಗ್ಯಾಲ್ವಾ ಸಂಕುಲಗಳು :** F ಒಂದು ಕ್ಷೇತ್ರವೂ $f(x) \in F[x]$ ಒಂದು ಬಹುಪದಿಯೂ K, f(x) ನ ಛೇದನ ಕ್ಷೇತ್ರವೂ ಆಗಿರಲಿ. ಈಗ G(K, F) ಎಂಬುದು F ನಲ್ಲಿರುವ ಪ್ರತಿಯೊಂದು ಗಣಾಂಶವನ್ನೂ ಅಚರವಾಗಿಡುವ (ಮೇಂಟೇನಿಂಗ್ ಇನ್‌ವೇರಿಯಂಟ್) K ಯ ಎಲ್ಲ ಸ್ವಏಕೈಕ ಸಮಾನರೂಪತ್ವಗಳ ಸಂಕುಲವಾದರೆ G(K, F) ನ್ನು $f(x)$ ನ ಗ್ಯಾಲ್ವಾ ಸಂಕುಲವೆಂದು ಕರೆಯುತ್ತಾರೆ. ಸಮೀಕರಣಗಳ ಈ ಆಧುನಿಕ ಸಿದ್ಧಾಂತವನ್ನು ಗ್ಯಾಲ್ವಾ ಪ್ರಾರಂಭಿಸಿದ; ಈತನ ಪರಿಶೋಧನೆಗಳು ಈಗ ಗ್ಯಾಲ್ವಾ ಸಿದ್ಧಾಂತವೆಂದು ಆಧುನಿಕ ಬೀಜಗಣಿತದಲ್ಲಿ ಪ್ರಖ್ಯಾತವಾದ ಒಂದು ಶಾಖೆ. ಈ ಸಿದ್ಧಾಂತದ ಒಂದು ಮುಖ್ಯವಾದ ಪ್ರಮೇಯ ದತ್ತ ಬಹುಪದಿಯ ಛೇದನಕ್ಷೇತ್ರಕ್ಕೂ, ಅದರ ಗ್ಯಾಲ್ವಾ ಸಂಕುಲಕ್ಕೂ ಇರುವ ಮನೋಜ್ಞವಾದ ಪರಸ್ಪರ ಸಂಬಂಧಗಳನ್ನು ಪ್ರತಿಪಾದಿಸುತ್ತದೆ.

**ಯೂಕ್ಲಿಡೀಯ ರಚನೆಗಳು (ಯೂಕ್ಲಿಡೀಯನ್ ಕನ್‌ಸ್ಟ್ರಕ್ಷನ್) :** ಕೇವಲ (1) ಸರಳ ಅಂಚು (ಸ್ಟ್ರೇಟ್ ಎಡ್ಜ್) ಅಥವಾ ರೇಖನಿ ಮತ್ತು (2) ಕೈವಾರ (ಕಂಪಸಸ್) ಇವುಗಳನ್ನು ಮಾತ್ರ ಉಪಯೋಗಿಸಬಹುದಾದ ರೇಖಾಗಣಿತದ ರಚನೆಗಳನ್ನು ಯೂಕ್ಲಿಡೀಯ ರಚನೆಗಳೆಂದು ಕರೆಯುವೆವು. ಮೊದಲನೆಯದರಿಂದ ಸರಳ ರೇಖೆಗಳನ್ನು ಎಳೆಯಬಹುದು; ಎರಡನೆಯದರಿಂದ ವೃತ್ತಗಳನ್ನೆಳೆಯಬಹುದು. ಎರಡು ಚರಾಂಕಗಳಿರುವ ಸರಳ ಸಮೀಕರಣ ಮತ್ತು ವರ್ಗಸಮೀಕರಣಗಳು ಇವುಗಳ ಬೈಜಿಕ ಪ್ರತಿನಿಧಿಗಳು. ಗುಣಾಂಕಗಳು ಒಂದು ದತ್ತಕ್ಷೇತ್ರ F ನಲ್ಲಿರುವ ಎರಡು ಸಮೀಕರಣಗಳ ಸಾಮಾನ್ಯ ಮೂಲಗಳು Fನಲ್ಲೇ ಇರುತ್ತವೆ; ಎಂದರೆ ಎರಡು ಸರಳ ರೇಖೆಗಳು ಸಂಧಿಸುವ ಬಿಂದುವಿನ ನಿರ್ದೇಶಕಗಳು F ನಲ್ಲೇ ಇರುತ್ತವೆ. ಆದರೆ ಒಂದು ಸರಳ ಮತ್ತು ಒಂದು ವರ್ಗ ಸಮೀಕರಣಗಳ ಅಥವಾ ಎರಡು ವರ್ಗಸಮೀಕರಣಗಳ ಸಾಮಾನ್ಯ ಮೂಲಗಳು F ನಲ್ಲಿರಬೇಕಾದುದಿಲ್ಲ. ಆದುದರಿಂದ ಒಂದು ವೃತ್ತ ಒಂದು ಸರಳ ರೇಖೆಯನ್ನೋ ಮತ್ತೊಂದು ವೃತ್ತವನ್ನೋ ಸಂಧಿಸುವ ಬಿಂದುಗಳ ನಿರ್ದೇಶಕಗಳು F ನಲ್ಲಿರಬೇಕಾದುದಿಲ್ಲ. ಅವು ಸಾಧಾರಣವಾಗಿ F ನ ಯಾವುದಾದರೂ ವರ್ಗವಿಸ್ತರಣ ಕ್ಷೇತ್ರ K ಯಲ್ಲಿರುತ್ತವೆ. ಈಗ ಯಾವುದಾದರೂ ಅಭೀಷ್ಟ ರಚನೆಯಲ್ಲಿ ಬರುವ ಎರಡು ಅಥವಾ ಹೆಚ್ಚಿನ ಘಾತದ ಸಮೀಕರಣ $f(x)=0$ ಎಂಬುದರ ಛೇದನ ಕ್ಷೇತ್ರವೂ K ಅಥವಾ ಅದರ ಯಾವ ಉಪಕ್ಷೇತ್ರವೂ ಆಗಿರಬೇಕಾದು ದಿಲ್ಲ. ಕೆಲವು ಸಂದರ್ಭಗಳಲ್ಲಿ ಇಂಥ ಒಂದು ಬಹುಪದಿಯ ಅವಿಭಾಜ್ಯತೆಯ ಆಧಾರದ ಮೇಲೆ ಅಭೀಷ್ಟರಚನೆಯ ಅಸಾಧ್ಯತೆಯನ್ನು ಸಾಧಿಸಬಹುದು. ಹೀಗಾಗಿ, ಮುಂದೆ ತೋರಿಸಿರುವ ಕೆಲವು ಪ್ರಾಚೀನ ಸಮಸ್ಯೆಗಳ ಅಸಾಧ್ಯತೆಯನ್ನು ಸಾಧಿಸಲಾಗಿದೆ: 1. ಯಾವ ಕೋನವನ್ನಾಗಲೀ ಮೂರು ಸಮಭಾಗ ಮಾಡುವುದು. 2. ವೃತ್ತವನ್ನು ವರ್ಗೀಕರಿಸುವುದು, ಎಂದರೆ ದತ್ತವೃತ್ತದ ಸಲೆಯನ್ನುಳ್ಳ ವರ್ಗವನ್ನು ರಚಿಸುವುದು. 3. ಘನವನ್ನು ದ್ವಿಗುಣಿಸುವುದು, ಎಂದರೆ ದತ್ತಘನದ ಘನಗಾತ್ರದ ಎರಡರಷ್ಟು ಘನಗಾತ್ರವುಳ್ಳ ಘನವನ್ನು ರಚಿಸುವುದು. 4, 7 ಮತ್ತು 9 ಭುಜಗಳುಳ್ಳ ಸಮಭುಜಗಳನ್ನು ರಚಿಸುವುದು.

ಇದೇ ಆಧಾರದ ಮೇಲೆ ಕೆಲವು ಸಾಧ್ಯತೆಯನ್ನು ಸಾಧಿಸಬಹುದು : 1. ಸಮಪಂಚಭುಜ ಮತ್ತು ಸಮಷಡ್ಭುಜಗಳನ್ನು ರಚಿಸಬಹುದು. 2. $72^0$ ಕೋನವನ್ನು ರಚಿಸಬಹುದು; ಅದನ್ನು ಮೂರು ಸಮಭಾಗಗಳಾಗಿ ಮಾಡಬಹುದು. 3. 15 ಮತ್ತು 17 ಭುಜಗಳುಳ್ಳ ಸಮಭುಜಗಳನ್ನು ರಚಿಸಬಹುದು. (ಡಿ.ವಿ.ಆರ್.)

**ಆಧುನಿಕ ಯುದ್ಧಕಲೆ : ನೋಡಿ – ಯುದ್ಧಕಲೆ**

**ಆಧುನಿಕ ವಾಸ್ತುಶಿಲ್ಪ : ನೋಡಿ – ವಾಸ್ತುಶಿಲ್ಪ**

**ಆಧುನಿಕ ಕರ್ಣಾಟಕ ಸಂಗೀತ :** ಆಧುನಿಕವೆಂಬ ಮಾತಿಗೆ ಪ್ರಾಚೀನವಲ್ಲದುದು, ಇಂದಿನದು ಎಂಬ ಎರಡು ಅರ್ಥಗಳಲ್ಲಿ ವ್ಯವಹಾರವಿದೆ. ಈ ಎರಡು ಅರ್ಥವಿನ್ಯಾಸಗ ಳಿಂದಲೂ ಆಧುನಿಕ ಸಂಗೀತದ ವ್ಯಾಪ್ತಿ ಸ್ವಲ್ಪಮಟ್ಟಿಗೆ ಬೇರೆಯೇ ಆಗುತ್ತದೆ. ಅರ್ವಾಚೀನ ವಾದುದು ಎಂಬ ಅರ್ಥದಲ್ಲಿ ಪ್ರಾಚೀನ ಸಂಗೀತದಿಂದ ಹೇಗೆ ಭಿನ್ನವಾಗಿದೆ ಎಂದೂ, ಇಂದಿನದು ಎಂಬ ಅರ್ಥದಲ್ಲಿ ಕೇವಲ ಸಮಸಾಮಯಿಕವಾಗಿದ್ದು ಸಂಗೀತವೆಂಬುದರ ಹೆಸರಿನಲ್ಲಿ ಏನೇನೆಲ್ಲ ಒಳಗೊಂಡಿದೆಯೋ ಅದರ ಮೊತ್ತ ಎಂದೂ ಭಾವ. ಇವೆರಡರ ಸಂಪೂರ್ಣ ಅಧ್ಯಯನ ಈ ಹ್ರಸ್ವ ಲೇಖನದ ವ್ಯಾಪ್ತಿಯನ್ನು ಮೀರಿದುದು. ಉದಾಹರಣೆಗೆ, ಆಧುನಿಕವೆನ್ನುವ ಹೆಸರಿನಲ್ಲಿ ಲಘು ಅಥವಾ ಸುಗಮ ಸಂಗೀತ, ಮೇಳ (ಆರ್ಕೆಸ್ಟ್ರ), ಚಲನಚಿತ್ರಸಂಗೀತ, ಜಾನಪದ ಸಂಗೀತ, ಹಿಪ್ಪಿ ಸಂಗೀತ, ಬೀಟ್ಲ್ ಸಂಗೀತ ಮುಂತಾದವೆಲ್ಲ ಶಾಸ್ತ್ರೀಯದಷ್ಟೇ ವಿವಕ್ಷಿತವಾಗಿವೆ. ಆದರೆ ಇವುಗಳನ್ನೆಲ್ಲ ಬಿಟ್ಟು ಶಾಸ್ತ್ರೀಯ ಸಂಗೀತವನ್ನು ಮಾತ್ರ ಕುರಿತು ಇಲ್ಲಿ ವಿವೇಚಿಸಿದೆ. ಅಂತೆಯೇ ಸಂಗೀತವೆನ್ನುವ ಮಾತಿನ ವ್ಯಾಪ್ತಿಯೂ ಬಹು ವಿಸ್ತಾರವಾದುದೇ. ವಿವಿಧ ದೇಶಗಳ ಸಂಗೀತದ ಸಮಷ್ಟಿಯನ್ನಾಗಲಿ, ಅದರ ಹಿನ್ನೆಲೆಯಲ್ಲಿ ಭಾರತೀಯ ಸಂಗೀತ ಮಾತ್ರವನ್ನಾಗಲಿ ಇಲ್ಲಿ ಇಟ್ಟುಕೊಂಡಿಲ್ಲ. ನಮ್ಮ ಸಂಗೀತಕ್ಕೆ ಗೀತವಾದನ ನರ್ತನಗಳ ಸಮುಚ್ಚಯವೆಂಬ ಅರ್ಥವೇ ಬಹುಕಾಲ ಇದ್ದು ಅನಂತರ ಗೀತವಾದನಗಳ ಕೂಟವೆಂಬ ಅರ್ಥ ನಿಂತಿತು. ಇಂದು ಶ್ರೀಸಾಮಾನ್ಯನ ವಾಣಿಯಲ್ಲಿ ಸಂಗೀತವೆಂದರೆ ಹಾಡಿಕೆಯೆಂಬ ಅರ್ಥವೇ ಪ್ರಧಾನವಾಗಿ ನಿಂತಿದೆ. ಆದರೂ ಆಧುನಿಕ ಸಂಗೀತವೆಂದರೆ ಕರ್ಣಾಟಕ ಸಂಗೀತದಲ್ಲಿ ಇಂದಿನ ಗೀತವಾದನಗಳ ಕೂಟ ಎಂದು ಇಲ್ಲಿ ವ್ಯವಹರಿಸಿದೆ.

**ಪ್ರಾಚೀನ ಸಂಗೀತದಿಂದ ಭಿನ್ನತೆ :** ಆಧುನಿಕ ಸಂಗೀತಕ್ಕೂ ಪ್ರಾಚೀನ ಸಂಗೀತಕ್ಕೂ ಕೆಲವು ವಿಷಯಗಳಲ್ಲಿ ಸಾದೃಶ್ಯವೂ ಉಳಿದಂತೆ ವೈದೃಶ್ಯವೂ ಇದೆ. ಹಿಂದೆ ಉಪಯೋಗಿಸುತ್ತಿದ್ದ ಎರಡು ಆಧಾರ ಸ್ವರಗಳ ಬದಲು ಸಪ್ತಸ್ವರಗಳಲ್ಲಿ ಅತ್ಯಂತ ಕೆಳಮಟ್ಟದ ಮೊದಲನೆಯ ಸ್ವರವನ್ನು ಮಾತ್ರ ಆಧಾರ ಸ್ವರವಾಗಿ ಬಳಸುತ್ತಾರೆ. ಅನಿಶ್ಚಿತವೂ ಸಂಕೀರ್ಣವೂ ಆಗಿದ್ದ ಅಂತರ, ಕಾಕಲೀ ಸ್ವರಗಳ ಸ್ಥಾನಗಳು ಈಗ ನಿಷ್ಕೃಷ್ಟವಾಗಿವೆ. ಪ್ರತಿಮಧ್ಯಮದ ಬಳಕೆ ಈಗ ಹೆಚ್ಚು ಅನಿರ್ಬಂಧಿತವಾಗಿಯೂ ವ್ಯಾಪಕವಾಗಿಯೂ ಬೆಳೆದಿದೆ. ರಾಗ, ತಾಳ, ಹಾಡುಗಳಲ್ಲಿ ವೈವಿಧ್ಯ, ಬಹುಮುಖಿತ್ವಗಳ ಬದಲು ಏಕಾಗ್ರ ವಿಕಾಸದೆಡೆಗೆ ಓಟವಿದೆ. ಈ ಮೂರರ ಲಕ್ಷ್ಯ ಲಕ್ಷಣಗಳಲ್ಲಿ ತೀವ್ರವಾದ ಮಾರ್ಪಾಟುಗಳಾಗಿವೆ. ಸ್ವಾಭಾವಿಕವಾಗಿಯೇ ಕಾಲಪ್ರವಾಹ ಇವುಗಳಲ್ಲಿ ಹಳೆಯದನ್ನು ಕಳೆದು ಹೊಸತನ್ನು ತಂದಿದೆ. ಈ ದೃಷ್ಟಿಯಲ್ಲಿ ಆಧುನಿಕ ಸಂಗೀತ ಸಾವಿರಾರು ವರ್ಷಗಳ ಮಾತಿರಲಿ, ಕೇವಲ ಮುನ್ನೂರು ವರ್ಷಗಳಷ್ಟು ಹಿಂದಿನ ಸಂಗೀತದಿಂದ ಸಹ ತೀರಾ ಭಿನ್ನವಾಗಿ ತೋರುತ್ತಿದೆ. ಆದರೂ ಇಂದು (ಹಿಂದೂಸ್ಥಾನೀ ಸಂಗೀತ ಮತ್ತು ಕರ್ಣಾಟಕ ಸಂಗೀತಗಳೆರಡರಲ್ಲಿ ಬಹುವಾದ) ಪ್ರಾಯೋಗಿಕ ಹಾಗೂ ತಾಂತ್ರಿಕ ವ್ಯತ್ಯಾಸಗಳಿದ್ದರೂ ಇವುಗಳ ತಾಯಿಬೇರು ಒಂದೇ ಆದುದರಿಂದ ಎರಡರಲ್ಲೂ ಕಾಣುವ ಕೆಲವು ಸಾಮ್ಯ, ಸಾದೃಶ್ಯಗಳು ಸಂಪ್ರದಾಯದ ಅವಿಚ್ಛಿನ್ನತೆಯಿಂದಾಗಿ ಉಳಿದುಬಂದಿದೆ. ಹೀಗೆ, ಸ್ವರಾನುಕ್ರಮಣದ ಕಾರಣದಿಂದ ಹುಟ್ಟುವ ಸ್ಥಾನಗಳು, ಗಮಕಗಳು, ರಾಗ ಮುಂತಾದುವುಗಳಿಂದಲೂ ಶ್ರುತಿ, ಮೂರ್ಛನೆ, ವರ್ಣಾಲಂಕಾರಗಳು, ತಾಳಪ್ರಮಾಣಗಳು ಇತ್ಯಾದಿಗಳಿಂದಲೂ ನಮ್ಮ ಸಂಗೀತದಲ್ಲಿ ಪ್ರಾಚೀನತೆಯಿಂದ ಆಧುನಿಕತೆಯವರೆಗೆ ಪರಂಪರೆಯ ಅವಿಚ್ಛಿನ್ನತೆ ಉಳಿದುಬಂದಿದೆ.

**ಆಧುನಿಕತೆಯ ಉಗಮ :** ಕರ್ಣಾಟಕ ಸಂಗೀತದಲ್ಲಿ ಆಧುನಿಕ ಯುಗದ ಬೇರು ಹದಿನೈದನೆಯ ಶತಮಾನದಲ್ಲಿ ಹುಟ್ಟಿ, ಹದಿನಾರನೆಯ ಶತಮಾನದಲ್ಲಿ ಬಲಿತು, ಹದಿನೇಳನೆಯ ಶತಮಾನದಲ್ಲಿ ಮೊಳೆತು ಮೇಲೆದ್ದು ಕಾಣಿಸಿಕೊಳ್ಳುತ್ತದೆ. ಸ್ವರ ವ್ಯವಸ್ಥೆಯಲ್ಲೂ ರಾಗಲಕ್ಷಣಗಳಲ್ಲೂ ತಾಳವ್ಯವಸ್ಥೆಯಲ್ಲೂ ಪ್ರಾರಂಭವಾದ ಬದಲಾವಣೆಗಳು ಹದಿನೈದನೆಯ ಶತಮಾನದಲ್ಲಿ ಶಾರ್ಙ್ಗದೇವನ ಸಂಗೀತರತ್ನಾಕರಕ್ಕೆ ಕಲ್ಲಿನಾಥ ಬರೆದ ಸಂಗೀತ ಕಲಾನಿಧಿ ವ್ಯಾಖ್ಯಾನದಲ್ಲಿ ಮೊದಲಬಾರಿಗೆ ಕಾಣಿಸಿಕೊಳ್ಳುತ್ತದೆ. ಇವು ಹದಿನಾರನೆಯ ಶತಮಾನದಲ್ಲಿ ರಚಿತವಾದ ರಾಮಾಮಾತ್ಯನ ಸ್ವರಮೇಳ ಕಳಾನಿಧಿಯಲ್ಲೂ ಪುಂಡರೀಕವಿಠಲನ ಸದ್ರಾಗಚಂದ್ರೋದಯ, ನರ್ತನನಿರ್ಣಯಗಳಲ್ಲೂ ಬೆಳೆದು ಬಲಿಯುತ್ತವೆ. ಹನ್ನೆರಡು ಸ್ವರಸ್ಥಾನಗಳಲ್ಲಿ ಏಳನ್ನು ವಿವಿಧರೀತಿಗಳಲ್ಲಿ ವೈಜ್ಞಾನಿಕವಾಗಿ ಸಂಯೋಜಿಸುವ ಗಣಿತ ಪ್ರಕ್ರಿಯೆಯನ್ನೂ ಅವುಗಳ ಚೌಕಟ್ಟಿನಲ್ಲಿ ಸಮಸಾಮಯಿಕವಾದ ಎಲ್ಲ ರಾಗಗಳನ್ನೂ ಜನಕಜನ್ಯಭಾವದಲ್ಲಿ ಅಡಗಿಸುವ ಪದ್ಧತಿಯನ್ನೂ ಮೊದಲಬಾರಿಗೆ ಪುಂಡರೀಕವಿಠಲನಲ್ಲೂ ಅನಂತರ ಸ್ವಲ್ಪ ಭಿನ್ನವಾದ ಕ್ರಮದಲ್ಲಿ ವೆಂಕಟಮಖಿಯಲ್ಲೂ ಕಾಣುತ್ತೇವೆ. ಹದಿನಾಲ್ಕನೆಯ ಶತಮಾನದಲ್ಲಿ ವಿದ್ಯಾರಣ್ಯ ಯತಿ ಉದ್ಘಾಟಿಸಿದ ಮೇಳದ ಕಲ್ಪನೆ ಹದಿನೇಳನೆಯ ಶತಮಾನದಲ್ಲಿ ಗೋವಿಂದ ದೀಕ್ಷಿತನ ಸಂಗೀತಸುಧೆಯಲ್ಲಿ ಬೆಳೆಯಿತು. ಆದರೂ ಆಧುನಿಕ ಸಂಗೀತಕ್ಕೆ ನಾಂದೀರೂಪವಾದುದು ಗೋವಿಂದ ದೀಕ್ಷಿತನ ಮಗನಾದ ವೆಂಕಟಮಖಿ ಬರೆದ ಚತುರ್ದಂಡಿಪ್ರಕಾಶಿಕೆಯೇ. ಹದಿನಾರನೆಯ ಶತಮಾನದಲ್ಲಿ ಆಧುನಿಕ ತಾಳಪದ್ಧತಿಯನ್ನೂ ಆಧುನಿಕ ರಾಗಲಕ್ಷಣಗಳನ್ನೂ ಹರಿದಾಸರು ರೂಢಿಗೆ ತಂದರು. ಶಿವಶರಣರ ಕೃತಿ ರಚನೆಗಳೂ ಈ ನಿಟ್ಟಿನಲ್ಲಿ ಸ್ವಲ್ಪ ಸಹಕಾರಿಗಳಾದುವು. ಆಧುನಿಕ ಶಿಕ್ಷಣ ಕ್ರಮಕ್ಕೂ ರಾಗತಾಳಗಳಿಗೂ ಬುನಾದಿಯನ್ನು ಕಲ್ಪಿಸಿಕೊಟ್ಟ ಪುರಂದರದಾಸರನ್ನು ಕರ್ಣಾಟಕ ಸಂಗೀತ ಪಿತಾಮಹನೆಂದು ಎಲ್ಲರೂ ಒಪ್ಪುತ್ತಾರೆ. ಇವರೆಲ್ಲರೂ ಕನ್ನಡಿಗರೆಂಬುದನ್ನು ಇಲ್ಲಿ ಸ್ಮರಿಸಬಹುದು.

ಇಂದು ರೂಢಿಯಲ್ಲಿರುವ ರೂಪದಲ್ಲಿ ಕರ್ಣಾಟಕ ಸಂಗೀತ ಪ್ರಾರಂಭವಾದುದು ಸುಮಾರು ಹದಿನೆಂಟನೆಯ ಶತಮಾನದ ಮಧ್ಯದಲ್ಲಿ. ನಮ್ಮ ಸಂಗೀತದ ತ್ರಿಮೂರ್ತಿಗಳೆಂದು ಪ್ರಸಿದ್ಧರಾದ ತ್ಯಾಗರಾಜ, ಮುತ್ತು ಸ್ವಾಮಿ ದೀಕ್ಷಿತ ಮತ್ತು ಶಾಮಾಶಾಸ್ತ್ರಿಗಳು ತಂಜಾವೂರಿನಲ್ಲಿ ಉದಯಿಸಿದಾಗ, ಮಹಾಪ್ರತಿಭಾವಂತರೂ ಸಮಾಜಸುಧಾರಕರೂ ಆದ ಈ ಮೂವರು ಸ್ವತಃ ಶ್ರೇಷ್ಠ ಸಂಗೀತ ವಿದ್ವಾಂಸರಾಗಿದ್ದುದಲ್ಲದೆ ವೆಂಕಟಮಖಿಯ ಶಾಸ್ತ್ರೀಯ ಕಲ್ಪನೆಗಳನ್ನೇ ಮೈಗೂಡಿಸಿಕೊಂಡ ನೂರಾರು ಸಂಗೀತರಚನೆಗಳನ್ನು ಮಾಡಿ ತಮ್ಮ ಹಲವಾರು ಶಿಷ್ಯಪ್ರಶಿಷ್ಯರಿಂದ ದಕ್ಷಿಣ ಭಾರತದಲ್ಲೆಲ್ಲ ಕೇವಲ ಐವತ್ತು ವರ್ಷಗಳಲ್ಲಿ ಪ್ರಸಾರ ಮಾಡಿ ಊರ್ಜಿತ ಮಾಡಿದರು. ಆದುದರಿಂದ, ಕಾಲದೇಶಗಳಲ್ಲಿ ಐಕ್ಯವನ್ನೂ ಸ್ಥಿರತೆಯನ್ನೂ ಪಡೆಯಲು ಸಾಮಾನ್ಯವಾಗಿ ಹೆಚ್ಚು ಕಾಲವನ್ನು ಅಪೇಕ್ಷಿಸುವ ಈ ವಿಕಾಸಕ್ರಿಯೆ ತನ್ನ ವೇಗವನ್ನು ವಿಶೇಷವಾಗಿ ವರ್ಧಿಸಿಕೊಂಡು ಇಂದಿನ ಸಂಗೀತದ ಘಟ್ಟವನ್ನು ಕೇವಲ ನೂರು ವರ್ಷಗಳಲ್ಲಿ ತಲುಪಿತು. ಈ ತ್ರಿಮೂರ್ತಿಗಳು ಸಾಧಿಸಿಕೊಟ್ಟ ಆಧುನಿಕತೆಗೆ ಅರ್ವಾಚೀನರು ಕಳೆದ ಒಂದು ಶತಮಾನದಲ್ಲಿ ಕೆಲವು ಹೊಸರಾಗಗಳ, ಹೊಸರಚನೆಗಳ ವಿವರಗಳನ್ನು ಬಿಟ್ಟರೆ ಹೊಸತೇನನ್ನೂ ಸೇರಿಸಿಲ್ಲವೆಂದೇ ಹೇಳಬೇಕು.

**ಆಧುನಿಕ ಸಂಗೀತದ ಲಕ್ಷಣಗಳು :** ಆಧುನಿಕ ಕರ್ಣಾಟಕ ಸಂಗೀತವೆಂದರೆ ಎಪ್ಪತ್ತೆರಡು ಮೇಳಕರ್ತಗಳ ಯೋಜನೆಯ ಆಶ್ರಯದಲ್ಲಿ ಸಂಪೂರ್ಣ ಷಾಡವ, ಔಡುವ, ಶುದ್ಧ, ವಕ್ರ ಎಂಬ ಭೇದಗಳನ್ನುಳ್ಳ, ರಾಗಾಂಗ, ಉಪಾಂಗ, ಭಾಷಾಂಗ ಎಂಬ ಜಾತಿಗಳುಳ್ಳ ಜನಕ–ಜನ್ಯ ರಾಗಗಳನ್ನೂ ಸುಳಾದಿ ತಾಳಗಳನ್ನೂ ಅಳವಡಿಸಿ ರಚಿಸಲಾಗಿರುವ ಹಾಡುಗಳನ್ನು ಒಳಗೊಂಡ ಪದ್ಧತಿಯೆನ್ನಬಹುದು. ಇದೇ ರೀತಿಯಲ್ಲಿ, ಕಛೇರಿ ಪದ್ಧತಿಗೆ ವರ್ಣ, ಕೃತಿ, ಪದ, ತಿಲ್ಲಾನ, ದೇವರ ನಾಮ, ದರು, ಜಾವಳಿ, ಶ್ಲೋಕ, ಪಲ್ಲವಿ ಎಂಬ ರಚನಾ ರೀತಿಗಳನ್ನೂ ರಾಗಾಲಾಪನೆ, ನೆರವಲು ಸ್ವರ ಕಲ್ಪನೆ ಮತ್ತು ತಾನ ಎಂಬ ಹೆಸರುಗಳಲ್ಲಿ ಸಂಗೀತ ವಿದ್ವಾಂಸ ವೇದಿಕೆಯ ಮೇಲೆಯೇ ತನ್ನ ಮನೋಧರ್ಮಕ್ಕೆ ಅನುಸಾರವಾಗಿ ಸ್ವತಂತ್ರವಾಗಿಯೂ ಸ್ವಯಂ ಸ್ಫೂರ್ತಿಯಿಂದಲೂ ಪೂರ್ವನಿಯೋಜನವಿಲ್ಲದೆಯೂ ಸೃಷ್ಟಿಸುವ ಅಂಶಗಳನ್ನೂ ಒಳಗೊಂಡುದು ಆಧುನಿಕ ಕರ್ಣಾಟಕ ಸಂಗೀತವೆನ್ನಬಹುದು. ಈ ಹಾಡಿನ ರೀತಿಗಳಲ್ಲಿ ಹಲವು ಪ್ರಾಚೀನವಾದುವುಗಳೇ : ದೇವರನಾಮ ಐನೂರು ವರ್ಷಗಳಷ್ಟಾದರೂ ಹಳೆಯದು. ಇದೇ ಕೃತಿಗೆ ಮಾತೃಕೆಯೂ ಹೌದು. ಪದ ಸುಮಾರು ಮುನ್ನೂರು ವರ್ಷಗಳಷ್ಟಾದರೂ ಹಳೆಯದು. ತಿಲ್ಲಾನದ ಮೂಲ ಸ್ವರೂಪವಾದ ಕೈವಾಡವೆಂಬ ಸಂಗೀತ ಪ್ರಬಂಧ ಕಡೆಯ ಪಕ್ಷ ಸಾವಿರದ ಐನೂರು ವರ್ಷಗಳಷ್ಟು ಹಳೆಯದು. ಆದರೂ ಇವೆಲ್ಲವೂ ಆಧುನಿಕ ರೂಪವನ್ನೂ ಸಂಕಲಿತ ಹಾಗೂ ವ್ಯವಸ್ಥಿತ ಪ್ರಯೋಗವನ್ನೂ ಪಡೆದುದು ಸುಮಾರು ಇನ್ನೂರು ವರ್ಷಗಳಷ್ಟು ಹಿಂದೆ ಮಾತ್ರ. ಉಳಿದ ವರ್ಣ, ಪಲ್ಲವಿ, ನೆರವಲು, ಸ್ವರಕಲ್ಪನೆ, ತಾನ, ಆಧುನಿಕ ರೂಪದ ಜಾವಳಿ – ಇವು ಸುಮಾರು ಎರಡು ಶತಮಾನಗಳಷ್ಟು ಪ್ರಾಚೀನ.

ಅಲ್ಲದೆ ಆಧುನಿಕ ಸಂಗೀತವನ್ನೂ ಅದರ ಕಛೇರಿ ಪದ್ಧತಿಯಲ್ಲಿ ಬಳಕೆಯಾಗುವ ವಾದ್ಯಗಳು, ಶಿಕ್ಷಣ ಕ್ರಮ ಮತ್ತು ಮುನ್ನೋಟದ ದಿಕ್ಕುಗಳಿಂದಲೂ ವರ್ಣಿಸಬಹುದು. ಈಗ ಕರ್ಣಾಟಕ ಸಂಗೀತದ ಕಛೇರಿಗಳು ವರ್ಣದಿಂದ ಪ್ರಾರಂಭವಾಗಿ, ಗಣಪತಿಯ ಸ್ತುತಿಯ ಒಂದು ಕೃತಿ, ಶಾರದಾಸ್ತುತಿ, ಗುರುಸ್ತುತಿಗಳಲ್ಲಿ ಐಚ್ಛಿಕವಾಗಿ ಒಂದೊಂದು ಕೃತಿ, ಅಲ್ಪ ರಾಗಾಲಾಪನೆ, ಹ್ರಸ್ವ ಸ್ವರಕಲ್ಪನೆಗಳುಳ್ಳ ಕೆಲವು ಪುಟ್ಟ ಕೃತಿಗಳು, ಕಛೇರಿಯ ಪ್ರಧಾನ ಅಂಗವಾಗಿ ಅದರ ಮಧ್ಯದಲ್ಲಿ ನಿರೂಪಿತವಾಗುವ ಒಂದು ಕೃತಿಗೆ ವಿಸ್ತಾರವಾದ ರಾಗಾಲಾಪನೆ, ಕೃತಿಯಲ್ಲಿ ನೆರವಲು ಮತ್ತು ಸ್ವರ ಕಲ್ಪನೆಗಳು, ಅನಂತರ ಐಚ್ಛಿಕವಾಗಿ ರಾಗ, ತಾನ ಮತ್ತು ಪಲ್ಲವಿ, ಆಮೇಲೆ ಪದ, ತಿಲ್ಲಾನ, ಒಂದೆರಡು ಕನ್ನಡ ದೇವರ ನಾಮಗಳು, ಐಚ್ಛಿಕವಾಗಿ ಜಾವಳಿ, ದರು, ಕಡೆಯಲ್ಲಿ ಶ್ಲೋಕ ಮತ್ತು ಮಂಗಳ–ಹೀಗೆ ನಡೆದು ಮುಗಿಯುತ್ತದೆ. ಹದಿನೆಂಟನೆಯ ಶತಮಾನದ ಮೊದಲಲ್ಲಿ ಕನ್ನಡ ನಾಡಿನಲ್ಲಿ ಮೊದಲಾದ ಪಿಟೀಲು ವಾದ್ಯ ಪಕ್ಕವಾದ್ಯವಾಗಿ ಬಳಸಲ್ಪಟ್ಟು ಅನಂತರ ದಕ್ಷಿಣ ಭಾರತದಲ್ಲೆಲ್ಲ ಹರಡಿತು. ಮೃದಂಗ, ಕಂಜಿರ, ಘಟಗಳೂ ಪಕ್ಕವಾದ್ಯಗಳಾಗತೊಡಗಿದುದು ಈ ಸುಮಾರಿನಲ್ಲಿಯೇ. ಅಂತೆಯೇ ವೀಣೆ, ಕೊಳಲುಗಳು ಹಾಡಿಕೆಯಿಂದ ಬೇರ್ಪಟ್ಟು ಸ್ವತಂತ್ರವೂ ಪ್ರಧಾನವೂ ಆದ ತನಿಕಚೇರಿಯ ವಾದ್ಯಗಳಾದುವು.

ಪುರಂದರದಾಸರಿಗೆ ಪೂರ್ವದಲ್ಲಿ ನಮ್ಮ ಸಂಗೀತ ಗುರುಗಳು ಯಾವ ಶಿಕ್ಷಣ ಕ್ರಮವನ್ನು ಅನುಸರಿಸುತ್ತಿದ್ದರೆಂದು ಹೇಳುವುದು ಕಷ್ಟ. ಮಾಯಾಮಾಳವಗೌಳ ರಾಗದಲ್ಲಿ ಆದಿ ತಾಳದಲ್ಲಿ ಪುರಂದರರು ರಚಿಸಿಕೊಟ್ಟ ಸರಳೆವರಸೆಗಳು, ಜಂಟಿಸ್ವರ ವರಸೆಗಳು, ಸುಳಾದಿ ಸಪ್ತ ತಾಳಗಳ ಐದು ಜಾತಿಗಳಲ್ಲಿ ರಚಿಸಿದ ತಾಳಾಲಂಕಾರಗಳು, ಪಿಳ್ಳಾರಿ ಸಂಚಾರಿ ಗೀತಗಳು–ಇವುಗಳಿಂದಲೇ ಇಂದಿಗೂ ಸಂಗೀತ ಪಾಠ ಪ್ರಾರಂಭವಾಗುತ್ತದೆ. ಇದಾದ ಮೇಲೆ, ಸ್ವರಜತಿ, ವರ್ಣ, ಕೃತಿ; ಅನಂತರ ಮನೋಧರ್ಮ ಸೃಷ್ಟಿಯ ಸ್ವರ ಕಲ್ಪನೆ, ರಾಗಾಲಾಪನೆ, ನೆರವಲು; ಆಮೇಲೆ ಪದ, ತಿಲ್ಲಾನ, ದರು, ಜಾವಳಿ, ಶ್ಲೋಕ; ಕಡೆಯಲ್ಲಿ ತಾನ, ಪಲ್ಲವಿ–ಹೀಗೆ ನಮ್ಮ ಆಧುನಿಕ ಸಂಗೀತದ ಪಠ್ಯಕ್ರಮ. ಸಂಗೀತದ ಶಿಕ್ಷಣಕ್ಕೆಂದೇ ಏರ್ಪಟ್ಟ ಶಾಲೆಗಳೂ ಸರ್ಕಾರಗಳ ವಿದ್ಯಾ ಇಲಾಖೆಗಳು ಸಿದ್ಧಗೊಳಿಸಿದ ಪಠ್ಯಕ್ರಮವೂ ಅದರಂತೆ ನಡೆಸುವ ವಾರ್ಷಿಕ ಪರೀಕ್ಷೆಗಳೂ ಶಾಲಾ ಕಾಲೇಜುಗಳಲ್ಲೂ ವಿಶ್ವವಿದ್ಯಾನಿಲಯಗಳ ಮಟ್ಟದಲ್ಲೂ ಸಂಗೀತವನ್ನು ಪಠ್ಯ ವಿಷಯವಾಗಿ ಇಟ್ಟಿರುವುದೂ ಆಧುನಿಕ ಸಂಗೀತದ ಲಕ್ಷಣಗಳೇ.

**ಮುನ್ನೋಟ :** ಆಧುನಿಕ ಸಂಗೀತ ಅಧ್ಯಾತ್ಮ ಮೌಲ್ಯಗಳಿಂದ ಸಾಮಾಜಿಕ ಮೌಲ್ಯಗಳೆಡೆಗೆ ವಾಲುತ್ತಿದೆ. ಸಾಂಪ್ರದಾಯಿಕ ರೂಪನಿರ್ಬಂಧಗಳು ಸಡಿಲವಾಗುತ್ತಿವೆ. ಕೆಲವು ಶ್ರೀಮಂತರ ಸ್ವತ್ತಾಗಿದ್ದ ಸಂಗೀತ ಈಗ ಜನತೆಯ ಮನೆಬಾಗಿಲಿಗೆ ಬಂದ ಭಾಗೀರಥಿಯಾಗಿದೆ. ಆಸಕ್ತರ, ಕಲಿಯುವವರ ಸಂಖ್ಯೆ ಬೆಳೆದು ಅದರ ಗಾತ್ರ ಹಿಗ್ಗಿದೆ. ಗುಣದ ಔನ್ನತ್ಯವೂ ಉಳಿಯುತ್ತದೆಯೇ ಎಂಬುದನ್ನು ಕಾದು ನೋಡಬೇಕು. ಆಧುನಿಕ ಸಂಗೀತದ ದೇಹದಲ್ಲೂ ಬದಲಾವಣೆಗಳಾಗುತ್ತಿವೆ: ಹಿಂದೂಸ್ಥಾನೀ ಸಂಗೀತದ, ದೇಶ್ಯ ಪ್ರಯೋಗದ ಮತ್ತು ಭಾಷಾಂಗ ಜಾತಿಯ ರಾಗಗಳು ಹೆಚ್ಚುತ್ತಿವೆ; ಕೃತಿರಚನೆಯಲ್ಲೂ ಕಚೇರಿ ಪದ್ಧತಿಯಲ್ಲೂ ನವ್ಯ ಪ್ರಯೋಗಗಳು ನಡೆಯುತ್ತಿವೆ ; ವಾದ್ಯಮೇಳಗಳ ಸಂಯೋಜನೆ ಯಶಸ್ವಿಯಾಗಿ

ನಡೆಯುತ್ತಿದೆ. ಹಾಗೆಯೇ ಲಘು ಸಂಗೀತದ ಹೆಸರಿನಲ್ಲಿ ವಿಷಾದನೀಯವಾದ ಅಂಧಾನುಕರಣೆಯೂ ಗದ್ದಲಮಯವಾದ ಕೂಗಾಟ ಚೀರಾಟಗಳೂ ಸಮಾಜದಲ್ಲಿ ಪ್ರವೇಶ ಮಾಡಿವೆ. ಆಧುನಿಕ ಸಂಗೀತದ ಹೆಸರಿನಲ್ಲಿ ಆಗುತ್ತಿರುವ ಬದಲಾವಣೆಗಳು ಆಧುನಿಕ ಸಮಾಜಕ್ಕೆ ಕನ್ನಡಿಯನ್ನೇನೋ ಹಿಡಿಯುತ್ತವೆ. ಆದರೆ ಇವುಗಳಲ್ಲಿ ಆರೋಗ್ಯಸೂಚಕವಾದ ನೈಸರ್ಗಿಕ ಬದಲಾಣೆಗಳು ಎಷ್ಟು, ರೋಗಮೂಲವಾದುವುಗಳು ಎಷ್ಟು ಎಂಬುದನ್ನು ಕಾಲ ನಿರ್ಧರಿಸಿ ಹೇಳಬೇಕು. (ಆರ್.ಎಸ್.ಎಸ್.)

**ಆ್ಯನ್ :** (1665 – 1714). ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡುಗಳ ರಾಣಿ (1702 – 07). ಅನಂತರ ಬ್ರಿಟನ್ನಿನ ರಾಣಿ (1707–14). ಸ್ಟೂಅರ್ಟ್ ಆಳರಸರಲ್ಲಿ ಕೊನೆಯವಳು. ಜೇಮ್ಸ್ IIನ ಮಗಳು. ಡೆನ್ಮಾರ್ಕಿನ ರಾಜಪುತ್ರ ಜಾರ್ಜ್‌ನನ್ನು ಮದುವೆಯಾದಳು (1683). ಮೈದುನ ವಿಲಿಯಂ ಆಫ್ ಆರೆಂಜ್ ಇಂಗ್ಲೆಂಡ್‌ನ ಮೇಲೆ ದಾಳಿ ಮಾಡಿದಾಗ ತಂದೆಯ ಪಕ್ಷ ಬಿಟ್ಟು ವಿಲಿಯಂನ ಕಡೆ ಸೇರಿದಳು. ಈಕೆ ರಾಣಿಯಾದ ಪ್ರಾರಂಭದಲ್ಲಿ ಆಡಳಿತ ಸಂಸದೀಯ ಮಾದರಿಯಲ್ಲಿ ರೂಪುಗೊಳ್ಳುತ್ತಿತ್ತು. ಅಲ್ಲದೆ ಸ್ಪೇನಿನ ಗಾದಿಗಾಗಿ ದೊಡ್ಡ ಯುದ್ಧ ನಡೆಯುತ್ತಿತ್ತು (1712–13). ಸೇನಾಪತಿ ಮಾರಲ್ ಬರೊ ಡ್ಯೂಕ್ ಅನೇಕ ವಿಜಯಗಳನ್ನು ಸಾಧಿಸಿದನಾದರೂ ಯುದ್ಧಗಳಿಗಾದ ಅಪಾರ ವ್ಯಯದ ಬಗ್ಗೆ ವಿಗ್ಗರಿಗೂ ಟೋರಿಗಳಿಗೂ ಘರ್ಷಣೆ ಮೊದಲಾಯಿತು. ಮಕ್ಕಳಾರೂ ಉಳಿಯದ ಕಾರಣ ಆ್ಯಕ್ಟ್ ಆಫ್ ಸೆಟ್ಲ್‌ಮೆಂಟ್‌ನ(1701)ರೀತ್ಯ ಜಾರ್ಜ್ I ಗೆ ಪಟ್ಟವಾಯಿತು. ವೈಯಕ್ತಿಕವಾಗಿ ಆಕೆ ಅಷ್ಟು ಸಮರ್ಥಳಲ್ಲದಿದ್ದರೂ ಪ್ರಸಿದ್ಧ ಸಾಹಿತಿ ಎಡಿಸನ್‌ನಂಥ ಮೇಧಾವಿಗಳ ಬರಹಗಳಿಂದಲೂ ಶಿಲ್ಪಕೃತಿಗಳಿಂದಲೂ ರಾಜ್ಯವಿಸ್ತರಣೆ ಮತ್ತು ಆಡಳಿತಕ್ರಮ ಪರಿಷ್ಕರಣದಿಂದಲೂ ಪತ್ರಿಕಾಸ್ವಾತಂತ್ರ್ಯ ಚಳುವಳಿಯಿಂದಲೂ ಆಕೆಯ ಆಡಳಿತಾವಧಿ ಮುಖ್ಯವಾದುದಾಯಿತು.

**ಆ್ಯನ್, ಆಸ್ಟ್ರಿಯದ :** (1602– 66). ಫ್ರಾನ್ಸಿನ ರಾಣಿ, ಸ್ಪೇನಿನ ಫಿಲಿಪ್ IIIನ ಮಗಳು. ಲೂಯಿ XIIIನ್ನು ಮದುವೆಯಾದಳು. ಪತಿಯ ಅವಜ್ಞೆಗೆ ಪಾತ್ರಳಾಗಿ ರಿಚ್‌ಲೂ ಕೊಟ್ಟ ಕೋಟಲೆಗಳಿಗೆ ಈಡಾದಳು.

**ಆ್ಯನ್, ಕ್ಲೀವ್ಸ್‌ನ :** (1515 – 57). ಇಂಗ್ಲೆಂಡಿನ ರಾಣಿ. ಹೆನ್ರಿ VII ನ ನಾಲ್ಕನೆಯ ಹೆಂಡತಿ. ಕೇವಲ ರಾಜಕೀಯ ಕಾರಣಗಳಿಗಾಗಿ ಕ್ರಾಮ್‌ವೆಲ್ಲನ ಒತ್ತಾಯದಿಂದ ಹೆನ್ರಿ ಈಕೆಯನ್ನು ಮದುವೆಯಾಗಿದ್ದನಾಗಿ (1540) ಆ ವರ್ಷವೇ ವಿವಾಹವನ್ನೂ ವಿಚ್ಛೇದನಗೊಳಿಸಿದ.

**ಆ್ಯನ್, ಡೆನ್ಮಾರ್ಕಿನ :** (1574–1619). ಜೇಮ್ಸ್ I ನ ಹೆಂಡತಿ. ಡೆನ್ಮಾರ್ಕ್ ಮತ್ತು ನಾರ್ವೆ ದೇಶದ ರಾಜಪುತ್ರಿ. ಗಂಡ ಇವಳಿಗಾಗಿ ಗ್ರೀನಿಚ್‌ನಲ್ಲಿ ಕಟ್ಟಿಸಿದ ಅರಮನೆ ಇಂದು ಸಾಮುದ್ರಿಕ ಸೈನ್ಯಶಾಖೆಯ ಪ್ರದರ್ಶನಾಲಯವಾಗಿದೆ. (ಎಚ್.ಜಿ.ಬಿ.)

**ಆನಂದ್, ಮುಲ್ಕ್‌ರಾಜ್** : 1905–2004. ಭಾರತದ ಖ್ಯಾತ ಕಾದಂಬರಿಕಾರ, ಕಥೆಗಾರ, ವಿಮರ್ಶಕ. ಪೆಷಾವರಿನಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದರು. ತಂದೆ ಸೈನ್ಯದಲ್ಲಿ ಸುಬೇದಾರನಾಗಿದ್ದಾಗ ಕೆಳವರ್ಗದ ಮಕ್ಕಳೊಂದಿಗೆ ಬೆರೆತರು. ಚಿಕ್ಕಂದಿನಲ್ಲಿಯೇ ಲಲಿತ ಕಲೆಗಳಲ್ಲಿ ಆಸಕ್ತಿ ತೋರಿದರು. ಮೊದಲು ಲಾಹೋರ್‌ನಲ್ಲಿ, ಅನಂತರ ಲಂಡನ್, ಕೇಂಬ್ರಿಜ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಪಿಎಚ್.ಡಿ. ಪದವಿಯನ್ನು ಗಳಿಸಿದರು. ಪರ್ಷಿಯನ್ ಚಿತ್ರಕಲೆ (1930) ಮತ್ತು ಹಿಂದೂಗಳ ದೃಷ್ಟಿಯಲ್ಲಿ ಕಲೆ (1933) ಎಂಬ ಗ್ರಂಥಗಳು ಅವರ ಪ್ರಾರಂಭದಲ್ಲಿನ ಮನೋಧರ್ಮವನ್ನು ತೋರಿಸುತ್ತವೆ. ದಿ ಗೋಲ್ಡನ್ ಬ್ರೆತ್ (1933) ಎಂಬುದು ಇಕ್ಬಾಲ್, ಠಾಕೂರ್, ಪೂರನ್ ಸಿಂಗ್, ಸರೋಜಿನಿ ನಾಯ್ಡು ಮತ್ತು ಹರೀಂದ್ರನಾಥ ಚಟ್ಟೋಪಾಧ್ಯಾಯ--ಇವರ ಕೃತಿಗಳ ಪರಿಶೀಲನಾತ್ಮಕ ವಿಮರ್ಶೆಯನ್ನು ಒಳಗೊಂಡಿದೆ. ಆನಂದರಿಗೆ ವಿದ್ವತ್ತು ಇತ್ತು. ಆದರೆ ಪುಸ್ತಕಗಳಿಗಿಂತ ಸ್ವಂತ ಅನುಭವಗಳ ಪ್ರಭಾವ ಹೆಚ್ಚಾಗಿತ್ತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಘಟನೆಗಳು ಮತ್ತು ಭಾರತದ ಸಾಮಾಜಿಕ ಜೀವನದಲ್ಲಿ ಕಳೆದ ಶತಮಾನದಲ್ಲಿ ಆದ ಅಗಾಧ ಬದಲಾವಣೆಗಳು ಇವರ ಕಾದಂಬರಿಗಳಿಗೆ ಸಾಮಗ್ರಿಯನ್ನೂ ಸ್ಫೂರ್ತಿಯನ್ನೂ ಒದಗಿಸಿದುವು. ಮೊದಲ ಮೂರು ಕಾದಂಬರಿಗಳಾದ ಕೂಲಿ (1933) ದಿ ಅನ್‌ಟಚಬಲ್ (1935) ಮತ್ತು ಟೂ ಲೀವ್ಸ್ ಆ್ಯಂಡ್ ಎ ಬಡ್ (1937) ಇವುಗಳಲ್ಲಿ ಇವರಿಗೆ ಸುಪರಿಚಿತವಾದ ಭಾರತೀಯ ಜೀವನದ ದೃಶ್ಯಗಳ ಪರಿಶೀಲನಾತ್ಮಕ ನಿರೂಪಣೆಗಳ ಮಾಲೆಯನ್ನೇ ಕಾಣಬಹುದು. ಕಾದಂಬರಿಕಾರರ ಸಹಾನುಭೂತಿಯೆಲ್ಲ ಶ್ರಮಜೀವಿಗಳಲ್ಲಿ, ಸಾಮಾನ್ಯ ಕೂಲಿಕಾರನ ಸಂಕಟಗಳು ಮನ್ನೂನ ಜೀವನದಲ್ಲಿ ಹೃದಯಸ್ಪರ್ಶಿಯಾಗಿ ಚಿತ್ರಿತವಾಗಿವೆ. ಜಾತೀಯ ಅವಿಚಾರ ಭಾವನೆಗಳ ವಿಷಾದಕರ ಪರಿಣಾಮಗಳನ್ನು ಅಸ್ಪೃಶ್ಯರನ್ನು ಕುರಿತ ಕಾದಂಬರಿ ಮುಂದಿಡುತ್ತದೆ. ಅಸ್ಪೃಶ್ಯ ಹಿಂದೂ ಸಮಾಜದಿಂದ ಹೊರಬೀಳುವುದು, ಹಿಂದೂ ಸಮಾಜದಲ್ಲಿ ಎಲ್ಲರಿಗೂ ನ್ಯಾಯ ಸಮಾನತೆಯನ್ನು ನೀಡಬೇಕೆನ್ನುವ ಗಾಂಧೀವಾದದ ವಿಜಯಕ್ಕೆ ಕಾಯುವುದು, ಹಿಂದಿನ ಸಾಮಾಜಿಕ ಅಡ್ಡಿ ಆತಂಕಗಳನ್ನು ತೊಡೆದುಹಾಕುವ ಯಂತ್ರಯುಗದ ವಿಜಯಕ್ಕೆ ಕಾಯುವುದು, ಹೀಗೆ ಕಾದಂಬರಿ ಮುಕ್ತಾಯವಾಗಬಹುದಾದ ಮೂರು ರೀತಿಗಳನ್ನು ಇಲ್ಲಿ ಗುರುತಿಸಲಾಗಿದೆ. ಗಾಂಧೀಜಿಯವರ ಉಪದೇಶದಿಂದ ಸ್ಫೂರ್ತಿ ಪಡೆದರೂ ಕಾದಂಬರಿಕಾರರು ಯಂತ್ರಯುಗದ ಬೆಳೆವಣಿಗೆಯನ್ನು ಗುರುತಿಸುತ್ತಾರೆ. ಭಾರತೀಯ ಜೀವನದ ಈ ನಿರೂಪಣೆ ಇ. ಎಂ. ಫಾಸ್ಟರ್‌ನ ಮೆಚ್ಚಿಗೆ ಪಡೆಯಿತು. 'ಎರಡು ಎಲೆಗಳು, ಒಂದು ಮೊಗ್ಗು' ಅಸ್ಸಾಂನ ಟೀ ತೋಟಗಳಲ್ಲಿನ ಜೀವನದ ಚಿತ್ರ; ಕಾಮ, ಹಿಂಸೆ ಮತ್ತು ಇತರರ ರಕ್ತಶೋಷಣೆ – ಇವುಗಳನ್ನು ಮನಕರಗುವಂತೆ ಚಿತ್ರಿಸುತ್ತದೆ. ಸಹಜವಾಗಿ ಇಂಗ್ಲೆಂಡಿನಲ್ಲಿ ಇದನ್ನು

ಖಂಡಿಸಲಾಯಿತು. ಆದರೆ ಕಾದಂಬರಿಕಾರರು ನೋಡುವ ಕಣ್ಣು ಕರಗುವ ಹೃದಯಗಳಿರುವ ಉದಾತ್ತ ಇಂಗ್ಲಿಷ್ ನವನೊಬ್ಬನನ್ನೂ ಚಿತ್ರಿಸುತ್ತಾರೆ. ತನ್ನನ್ನು ಸುತ್ತಿಕೊಂಡ ಘಟಸರ್ಪದೊಡನೆ ಲೀಲಳ ಹೋರಾಟ ಉದ್ದೇಶಿತ ಪ್ರತಿಮೆಯಾಗಿರಬಹುದು. ಇನ್ನು ಮೂರು ಕಾದಂಬರಿಗಳೂ – ವಿಲೇಜ್ (1939), ಅಕ್ರಾಸ್ ದಿ ಬ್ಲ್ಯಾಕ್ ವಾಟರ್ (1940) ಮತ್ತು ದಿ ಸೋರ್ಡ್ ಆ್ಯಂಡ್ ದಿ ಸಿಕಲ್ (1942) ಕಾದಂಬರಿಕಾರರ ಅನುಕಂಪಪೂರಿತ ದರ್ಶನವನ್ನು ನಿರೂಪಿಸುತ್ತವೆ. ಲಾಲುಸಿಂಗ್ ಇವುಗಳ ನಾಯಕ. ಮೊದಲ ಕಾದಂಬರಿಯಲ್ಲಿ ಸಿಖ್ ಹುಡುಗನ ಬಾಲ್ಯ ಮತ್ತು ಸಂಕಷ್ಟಗಳು ಚಿತ್ರಿತವಾಗಿವೆ. ಹುಡುಗ ಸೂಕ್ಷ್ಮ ಮನಸ್ಸಿನವ, ಅಂತಃಪರೀಕ್ಷಣ ಮನೋಭಾವದವ. ಸಮಾಜದಲ್ಲಿನ ಸನ್ನಿವೇಶಗಳಿಗೆ ಅವನ ಪ್ರತಿಕ್ರಿಯೆ ಕಾದಂಬರಿಕಾರನ ಅಭಿಪ್ರಾಯ. ಎರಡನೆಯದರಲ್ಲಿ 1914–18ರ ಯುದ್ಧದಲ್ಲಿ ಫ್ರಾನ್ಸ್‌ನಲ್ಲಿನ ಧ್ವಂಸಫಲಗಳನ್ನು ನಿರೂಪಿಸುತ್ತದೆ. ಯುದ್ಧವೊಂದು ಅವಿವೇಕ, ಅಪರಾಧ ಎನ್ನುವ ಭಾವನೆಯನ್ನು ಮೂಡಿಸುತ್ತದೆ. ದಿ ಸೋರ್ಡ್ ಆ್ಯಂಡ್ ದಿ ಸಿಕಲ್ ಎಂಬ ಮೂರನೆಯದು ವಿನಾಶಕರ ಯುದ್ಧ ಮತ್ತು ಭಯಂಕರ ಕ್ರಾಂತಿಗಳೆರಡನ್ನೂ ಸೂಚಿಸುತ್ತದೆ. ಇವರ ಸಣ್ಣಕಥೆಗಳಲ್ಲೂ ಸಾಮಾಜಿಕ ಮೌಲ್ಯಗಳ ಪ್ರಜ್ಞೆ ಮತ್ತು ಯಂತ್ರಯುಗ ಮತ್ತು ಸಮತಾವಾದಗಳ ಪ್ರಭಾವವನ್ನು ಕಾಣಬಹುದು. ಕಾದಂಬರಿಕಾರರ ದರ್ಶನ ಯಾವಾಗಲೂ ಉದಾತ್ತವಾದುದು. ಆದರೆ ಇಂಗ್ಲಿಷ್‌ನಲ್ಲಿ ಬರೆಯುವ ಬಹುಮಂದಿ ಭಾರತೀಯ ಲೇಖಕರ ಭಾಷೆಯಂತೆ ಇವರ ಭಾಷೆಯೂ ಕಲಾತ್ಮಕ ದರ್ಶನಕ್ಕೆ ಅಗತ್ಯವಾದ ಸೂಕ್ಷ್ಮತೆ, ಉಜ್ವಲತೆ ಮತ್ತು ಶಕ್ತಿಗಳನ್ನು ಸಾಕಷ್ಟು ಪಡೆದಿಲ್ಲ. (ಕೆ.ವಿ.ಆರ್.)

ಆನಂದರು ಎಂಥ ವಾತಾವರಣದಲ್ಲಿ ಬರೆಹವನ್ನು ಪ್ರಾರಂಭಿಸಿದರೆಂಬುದನ್ನು ಒಂದು ಸಂಗತಿ ತೋರಿಸುತ್ತದೆ. ಕೂಲಿಯಂಥ ಸೊಗಸಾದ ಕಾದಂಬರಿಯನ್ನು ಹತ್ತೊಂಬತ್ತು ಮಂದಿ ಪ್ರಕಾಶಕರು ಹಿಂದಿರುಗಿಸಿದರು–ಕಾದಂಬರಿ ಚೆನ್ನಾಗಿಲ್ಲ ಎಂದಲ್ಲ, ಈ ವಸ್ತುವಿನ ಮತ್ತು ಅಭಿಪ್ರಾಯಗಳ ಕಾದಂಬರಿಯನ್ನು ಓದುಗರೂ ವಿಮರ್ಶಕರೂ ಸ್ವೀಕರಿಸುವುದಿಲ್ಲ ಎಂದು.

ವ್ಯಕ್ತಿಯ ಆವರಣವು ಅವನ ವರ್ತನೆಯನ್ನು ರೂಪಿಸುವ ಪ್ರಭಾವಗಳಲ್ಲಿ ಬಹು ಮುಖ್ಯವಾದದ್ದು ಎಂದು ಆನಂದರ ನಂಬಿಕೆ. ಆದುದರಿಂದಲೇ ಕಥಾವಸ್ತುವಿನ ಬಹು ಮುಖ್ಯ ಅಂಶ ಸಾಮಾಜಿಕ ಅರಿವು. ಸಮಾಜದ ಒತ್ತಡ ಮತ್ತು ನಿಯಂತ್ರಣ ಇವು ವ್ಯಕ್ತಿಯ ಬದುಕನ್ನು ಇವರ ಕಾದಂಬರಿಗಳಲ್ಲಿ ರೂಪಿಸುತ್ತವೆ. ಸಾಮಾಜಿಕ ವಾಸ್ತವವನ್ನು ಪ್ರತಿಬಿಂಬಿಸುವುದು ಇವರ ಉದ್ದೇಶ. ಆನಂದರು ಜನಸಾಮಾನ್ಯರಲ್ಲಿ ಒಬ್ಬರಾಗಿ, ಜನಸಾಮಾನ್ಯರ ವಿಷಯವಾಗಿ ಜನಸಾಮಾನ್ಯರಿಗಾಗಿ ಬರೆದರು ಎಂದು ವಿಮರ್ಶಕರು ಹೇಳಿದ್ದಾರೆ. ಭಾರತೀಯ ಕಾದಂಬರಿಕಾರರು ಬಹುಮಟ್ಟಿಗೆ ಕಡೆಗಣಿಸಿದ್ದ ಭಾರತೀಯರ ಬದುಕನ್ನು ಕುರಿತು ಅವರು ಬರೆದರು. ಅವರ ಬಹು ಪ್ರಸಿದ್ಧ ಕಾದಂಬರಿ ದಿ ಅನ್‌ಟಚಬಲ್ ಅಸ್ಪೃಶ್ಯ ಹುಡುಗನೊಬ್ಬನ ಕಣ್ಣುಗಳ ಮತ್ತು ಮನಸ್ಸುಗಳ ಮೂಲಕ ಅಸ್ಪೃಶ್ಯರ ಬದುಕನ್ನು ಸಮಾಜವನ್ನು ಕಾಣುವ ಪ್ರಯತ್ನ. ಇಡೀ ಕಾದಂಬರಿಯ ಕ್ರಿಯೆ ಇಪ್ಪತ್ನಾಲ್ಕು ಗಂಟೆಗಳಲ್ಲಿ ಅಡಕವಾಗಿದೆ. ಒಂದು ಇಡೀ ಸಮುದಾಯದ ಬದುಕಿನ ಸ್ವರೂಪವನ್ನು ಇಪ್ಪತ್ನಾಲ್ಕು ಘಂಟೆಗಳಲ್ಲಿ ಅಡಕ ಮಾಡುವ ತಂತ್ರ ವಿಶಿಷ್ಟವಾದದ್ದು. ಈ ಕಾದಂಬರಿಗೆ ಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರ ವಿಮರ್ಶಕ ಇ.ಎಂ.ಫಾಸ್ಟರ್ ಮುನ್ನುಡಿಯನ್ನು ಬರೆದ.

ಆನಂದರು ಹಲವಾರು ಕಾದಂಬರಿಗಳನ್ನು ಬರೆದಿದ್ದಾರೆ. ದಿ ಓಲ್ಡ್ ವಿಮೆನ್ ಅಂಡ್ ದಿ ಕೌ, ದಿ ರೋಡ್, ಡೆತ್ ಆಫ್ ಎ ಹೀರೋ ಇವುಗಳಲ್ಲಿ ಕೆಲವು. ಆತ್ಮವೃತ್ತವಾದ ಕಾದಂಬರಿ ಮಾರ್ನಿಂಗ್ ಫೇಸ್‌ಗೆ (1969) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರೆಯಿತು.

ಆನಂದರು ಲಲಿತ ಕಲಾ ಅಕಾಡೆಮಿಯ ಮೊದಲನೆಯ ಅಧ್ಯಕ್ಷರು (1966–71). ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಟ್ಯಾಗೋರ್ ಪ್ರೊಫೆಸರ್ ಆಫ್ ಆರ್ಟ್ ಅಂಡ್ ಲಿಟರೇಚರ್ ಆಗಿದ್ದರು (1973–74). (ಎಲ್. ಎಸ್. ಎಸ್)

**ಆನಂದ[1] : ನೋಡಿ– ಸೀತಾರಾಂ, ಎ**

**ಆನಂದ[2] : ನೋಡಿ– ಸಂವತ್ಸರ**

**ಆನಂದ[3] :** ಸಂಸಾರ ದುಃಖಾಲಯ, ಹೇಯ ಎಂದು ಬಗೆದು ದಾರ್ಶನಿಕರು ಲೋಕೋತ್ತರವಾದ, ಸಂಸಾರಾತೀತವಾದ ಸ್ಥಿತಿಯೊಂದನ್ನು ನಿರ್ದೇಶಿಸಿ ಅದು ಬ್ರಹ್ಮ, ಆನಂದಮಯ ಎಂದು ವರ್ಣಿಸಿದರು. ಬ್ರಹ್ಮ ವಸ್ತುವಿನ ನೈಜ ಸ್ಥಿತಿಯೇ ಆನಂದ. ಇದು ಆನಂದಂ ಬ್ರಹ್ಮ ಎಂಬ ಮಾತಿನ ತಾತ್ಪರ್ಯ. ಇದು ಉಪನಿಷತ್ತಿನ ಕಲ್ಪನೆ. ತೈತ್ತಿರೀಯ ಉಪನಿಷತ್ತು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಕೋಶಗಳನ್ನು ಹೇಳಿ, ಆತ್ಮನ ಅತ್ಯಂತ ಸೂಕ್ಷ್ಮವಾದ ಪಂಚಮಕೋಶವೇ ಆನಂದಮಯವೆನ್ನುವ ನಿಲುವನ್ನು ತಳೆದಿದೆ. ಆನಂದಂ ಬ್ರಹ್ಮೇತಿ ವ್ಯಜನಾತ್ ಎಂದು ಹೇಳಿ, ಆನಂದದಿಂದಲೇ ಎಲ್ಲವೂ ಹುಟ್ಟುವುದು, ಆನಂದದಲ್ಲಿಯೇ ನಿಲ್ಲುವುದು, ಆನಂದವನ್ನೇ ಸೇರುವುದು ಎಂದು ವಿವರಿಸುತ್ತದೆ. ಆನಂದ ಈ ನೆಲೆಯಲ್ಲಿ ನಿರವಧಿಕ ಸ್ವೇಚ್ಛಾನಂದವಾದ ಚರಮಭೂಮಿಕೆ. ಅದರ ಸಾಕ್ಷಾತ್ಕಾರಕ್ಕಾಗಿಯೇ ಸಂಸಾರ ಪ್ರವೃತ್ತವಾಗಿರುವುದು, ಪ್ರಪಂಚಿತವಾಗಿರುವುದು. ಆಕಾಶದಲ್ಲಿ ಆನಂದವಿರದಿದ್ದರೆ ಉಸಿರಾಡುವವರು ಯಾರು? ಬದುಕುವವರು ಯಾರು? (ಕೋಹ್ಯೇವಾನ್ಯತ್ ಕಃ ಪ್ರಾಣಾತ್ ಯದೇಷ ಆಕಾಶ ಆನಂದೋ ನ ಸ್ಯಾತ್?). ಆನಂದ ಪರಮಾತ್ಮನ ಅನುದ್ಭೂತ, ಅಮೂರ್ತಸ್ಥಿತಿಯೆಂದು ಎಲ್ಲ ಆಸ್ತಿಕ ಧರ್ಮಗಳೂ ಒಪ್ಪಿಕೊಂಡಿವೆ. ಲೋಕದಲ್ಲಿ ಒದಗುವ ಲೌಕಿಕಾನಂದವೂ ಬ್ರಹ್ಮಾನಂದದ ಒಂದು ಅಂಶವೇ, ಒಂದು ಪ್ರಕಾರವೇ. ಆನಂದ ಮೀಮಾಂಸೆಯಲ್ಲಿ ಶಂಕರಾಚಾರ್ಯರ ಮುಕ್ತಾನಂದವೂ ಸೇರುತ್ತದೆ. ಬ್ರಹ್ಮಜ್ಞಾನದಿಂದ ಮಾಯಾತಿಮಿರ ನಾಶವಾಗಿ ಆತ್ಮ ನಿತ್ಯ ಶುದ್ಧಬುದ್ಧ ಮುಕ್ತವಾದಾಗ ಮುಕ್ತ್ಯಾನಂದದ ಆವಿರ್ಭಾವವಾಗುತ್ತದೆ. ಜೀವಾತ್ಮದ ಆನಂದದಲ್ಲಿಯೇ ಪರಮಾತ್ಮನ ಆನಂದದ ಅಭಿವ್ಯಕ್ತಿಯಾಗುವುದೆಂದು ಕೆಲವು ದರ್ಶನಗಳ ನಿಲುವು. ವೇದಾಂತವಲ್ಲದೆ, ನ್ಯಾಯ, ಸಾಂಖ್ಯ, ಯೋಗಾದಿ ದರ್ಶನಗಳು ಕೂಡ ದುಃಖಾಂತಸ್ಥಿತಿಯಿಂದ ಆನಂದವನ್ನು ನಿರೂಪಿಸುತ್ತವೆ. ನ್ಯಾಯ ವೈಶೇಷಿಕರು ಅಜ್ಞಾನನಾಶವೇ ಅಪವರ್ಗವೆಂದು ನಿರ್ದೇಶಿಸುತ್ತಾರೆ; ಅಪವರ್ಗವೇ ಮುಕ್ತಿ, ಮೋಕ್ಷ, ಕೈವಲ್ಯ, ನಿಃಶ್ರೇಯಸ. ಇದೂ ಆನಂದರೂಪವೇ. ಬೌದ್ಧರ ನಿರ್ವಾಣದಲ್ಲಿ ದುಃಖನಾಶವಿದ್ದರೂ ವೇದಾಂತಿಗಳ ಆನಂದ ಕಲ್ಪನೆಯಿಲ್ಲ. ದೇಹಾತ್ಮವಾದಿಗಳಾದ ಚಾರ್ವಾಕರು ಸಂಭೋಗಜನ್ಯವಾದ ಸುಖವೇ ಪರಮಾನಂದವೆಂದು ಬಗೆದರು. ಜೈನರ ಮೋಕ್ಷ ಸಮಸ್ತ ಕರ್ಮಕ್ಷಯದಿಂದ ಉಂಟಾಗುವ ಸ್ಥಿತಿ; ಇದರಲ್ಲಿ ಜೀವನದ ಅನಂತಸುಖ ಸೇರಿದೆ. ಅವರ ಆನಂದದಲ್ಲಿ ದುಃಖದ ಅಭಾವವೂ ಅಮಿಶ್ರಿತ ಸುಖವೂ ಮುಖ್ಯ ಲಕ್ಷಣಗಳು. (ಎಸ್.ಕೆ.ಆರ್.)

**ಆನಂದ[4] :** ಗೌತಮ ಬುದ್ಧನ ಶಿಷ್ಯರಲ್ಲಿ ಪ್ರಮುಖನಾದವ. ಭಿಕ್ಷುವಾಗುವ ಮುನ್ನ ಮಲ್ಲ ವಂಶದ ಕ್ಷತ್ರಿಯ ರಾಜ ಪುತ್ರನಾಗಿದ್ದ. ಗೌತಮಬುದ್ಧನ ಗೆಳೆಯ. ಪರ್ಯಟನ ಕಾಲದಲ್ಲಿ ಬುದ್ಧ ಅನುಪಿಯೆಗೆ ಬಂದಾಗ ಅಲ್ಲಿ ಆನಂದನೂ ಸೇರಿ ನಾಲ್ಕೈದು ಜನ ಜ್ಞಾತಿಗಳು ಭಿಕ್ಷುಗಳಾದರು. ಗುರು ಪಯೋಜೀರ್ಣನಾದಾಗ ಆನಂದ ಅವನ ಪರಿಚಾರಕನಾಗಿ ನಿಯಮಿತನಾದ. ಸಂಘಕ್ಕೆ ಸ್ತ್ರೀಯರ ಪ್ರವೇಶವಾದುದು ಆನಂದನಿಂದ. ಭಿಕ್ಷುಣಿ ಸಂಘವೇರ್ಪಟ್ಟುದೂ ಅವನಿಂದಲೇ. ಬುದ್ಧ ಅವನ ಮೇಲೆ ವಿಶೇಷವಾದ ವಾತ್ಸಲ್ಯವಿಟ್ಟಿದ್ದುದು ಮಹಾಪರಿನಿಬ್ಬಾಣಸುತ್ತಂತದಿಂದ ತಿಳಿಯುತ್ತದೆ. ಬುದ್ಧನ ನಿರ್ವಾಣವಾದ ಮೇಲೆ ರಾಜಗೃಹದಲ್ಲಿ ನಡೆದ ಮಹಾಸಂಗೀತಿಯಲ್ಲಿ ಸುತ್ತಪಿಟಕ ರೂಪಗೊಂಡುದು ಆನಂದನ ನೆನಪಿನ ಆಧಾರದ ಮೇಲೆ. ಬುದ್ಧನ ಅನಂತರ ಮಹಾಕಶ್ಯಪನೂ ಅವನ ಅನಂತರ ಆನಂದನೂ ಸಂಘಾಚಾರ್ಯರಾಗಿದ್ದರೆಂದು ಮಹಾಯಾನದವರ ಕಲ್ಪನೆ. ಆನಂದ ಅಗ್ರಸ್ರಾವಕನೆಂದೂ ಅರ್ಹತನೆಂದೂ ಕೀರ್ತಿವೆತ್ತಿದ್ದಾನೆ. ಇವನ ಜೀವನವನ್ನು ಚಿತ್ರಿಸುವ ಶ್ರೀನಿವಾಸರ ಒಂದು ಕನ್ನಡ ಸಣ್ಣಕಥೆ ಖ್ಯಾತವಾಗಿದೆ. (ಎಸ್.ಕೆ.ಆರ್.)

**ಆನಂದಕುಮಾರಸ್ವಾಮಿ :** 1877 – 1947. ಲೋಕಪ್ರಸಿದ್ಧ ಕಲಾವಿಮರ್ಶಕರು. ಭಾರತದ ಹಾಗೂ ಏಷ್ಯದ ಕಲೆಯ ಹಿರಿಮೆಯನ್ನು ಜಗತ್ತಿಗೆ ಸಾರಿ ಹೇಳಲು ನಿರಂತರವಾಗಿ ಶ್ರಮಿಸಿದವರು. ತಂದೆ ಸಿಂಹಳೀಯ ಹಿಂದೂ, ತಾಯಿ ಸ್ಕಾಟ್ಲೆಂಡಿನವರು.

ಭೂಗರ್ಭಶಾಸ್ತ್ರವನ್ನು ಕಲಿತು 1906ರಲ್ಲಿ ಸಿಂಹಳದ ಖನಿಜ ಪರಿವೀಕ್ಷಣೆಯ ನಿರ್ದೇಶಕರಾಗಿ ನೇಮಕಗೊಂಡರು. ಒಮ್ಮೆ ಸಿಂಹಳದ ಹಾಳುಬಿದ್ದ ಗುಹೆಗಳ ಕಲಾವೈಭವವನ್ನು ಕಂಡಮೇಲೆ ಅವರ ಬದುಕಿನ ದಾರಿಯೇ ಬದಲಾಯಿತು. ಕಲಾರಾಧಕರಾದರು. ಮೊದಲು ಸಿಂಹಳದ ಕಲೆಯನ್ನೂ ಅನಂತರ ಭಾರತದ ಕಲೆಯನ್ನೂ ಕಡೆಗೆ ಇಡೀ ಏಷ್ಯಾದ ಕಲೆಯನ್ನೂ ಅಭ್ಯಸಿಸಿದರು. ಅನಂತರ ಅಮೆರಿಕಕ್ಕೆ ಹೋಗಿ, ಬಾಸ್ಟನ್ನಿನ ವಸ್ತುಸಂಗ್ರಹಾಲಯದ ಏಷ್ಯನ್ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. ಭಾರತದ ಕಲೆಯನ್ನು ಮಾತ್ರವಲ್ಲದೆ ಪುರಾಣ, ದರ್ಶನ, ಸಾಹಿತ್ಯ, ಶಿಲ್ಪ, ಧರ್ಮ ಮುಂತಾದವನ್ನೆಲ್ಲ ಕೂಲಂಕಷವಾಗಿ ಅಧ್ಯಯನ ಮಾಡಿದರು. ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಕಲೆಗೆ ಕೇವಲ ವೈಯಕ್ತಿಕ ಪ್ರೇರಣೆಯಿದ್ದರೆ ಪೌರ್ವಾತ್ಯ ಕಲೆಗಳ ಹಿನ್ನೆಲೆ ಬೇರೆಬೇರೆಯೆಂಬುದನ್ನು ಸಿದ್ಧಾಂತ ಮಾಡಿದರು. ಪಾಶ್ಚಾತ್ಯ ಕಲೆಗೆ ವೈಯಕ್ತಿಕ ಪ್ರೇರಣೆಯಿದ್ದರೆ ಪೌರ್ವಾತ್ಯ ಕಲೆಗೆ

ಸಮಷ್ಟಿ ಪ್ರೇರಣೆಯುಂಟೆಂದೂ ಅದು ಧಾರ್ಮಿಕ ಸ್ಫೂರ್ತಿಯನ್ನುಳ್ಳದ್ದೆಂದೂ ಅವರ ಪ್ರತಿಪಾದನೆ. ಅವರ ಪ್ರಯತ್ನಗಳ ಫಲವಾಗಿ, ಪೌರ್ವಾತ್ಯ ಕಲೆಯನ್ನು ಕುರಿತ ಅನೇಕ ಪಾಶ್ಚಾತ್ಯ ವಿದ್ವಾಂಸರ ತಪ್ಪು ತಿಳಿವಳಿಕೆ ದೂರವಾಯಿತು.

ಭಾರತೀಯ ಕಲೆಯ ಬಗೆಗೆ ಆನಂದಕುಮಾರಸ್ವಾಮಿಯವರ ಅಭಿಮಾನ ಅಪಾರವಾದುದು. ಅದರ ಮಹತ್ವವನ್ನು ಪ್ರಕಟಿಸುವ ಕಾರ್ಯಕ್ಕೇ ಅವರು ತಮ್ಮ ಜೀವಮಾನದ ಬಹುಭಾಗವನ್ನು ವಿನಿಯೋಗಿಸಿದರು. ಭಾರತೀಯ ಕಲೆಯ ವಿಷಯದಲ್ಲಿ ಅವರು ಪ್ರಮಾಣವೆಂದು ಎಲ್ಲೆಡೆಯೂ ಅಂಗೀಕರಿಸಲ್ಪಟ್ಟರು. ಭಾರತೀಯರು ಭಾರತೀಯರಾಗಿಯೇ ಉಳಿದು ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳಬೇಕೆಂದೂ ವಿದೇಶೀಯ ಕಲೆ ಸಂಸ್ಕೃತಿಗಳಿಗೆ ಮಾರುಹೋಗಬಾರದೆಂದೂ ಅವರ ಸಂದೇಶ.

ಆನಂದ ಕುಮಾರಸ್ವಾಮಿಯವರು ವಿಪುಲ ಸಂಖ್ಯೆಯಲ್ಲಿ ಗ್ರಂಥಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಶಿವತಾಂಡವ, ಸಿಂಹಳೀ ಕಲೆ, ಭಾರತದ ಮತ್ತು ಇಂಡೋನೇಷ್ಯದ ಕಲೆಯ ಇತಿಹಾಸ, ಪೂರ್ವ ಏಷ್ಯದ ಕಲಾ ಪರಿಚಯ, ಬುದ್ಧ ಮತ್ತು ಬೌದ್ಧ ಧರ್ಮ, ಹಿಂದೂ ಧರ್ಮ ಮತ್ತು ಬೌದ್ಧ ದಂತ ಕಥೆಗಳು–ಇವು ಅವರ ಕೆಲವು ಕೃತಿಗಳ ವಸ್ತುಗಳು. ಡಾನ್ಸ್ ಆಫ್ ಶಿವ ಎಂಬ ಗ್ರಂಥ ಅತ್ಯಂತ ಪ್ರಸಿದ್ಧವಾದುದು. ಭಾರತೀಯ ಕಲೆಯ ಹೃದಯವನ್ನೇ ತೆರೆದು ತೋರುವ ಪುಸ್ತಕವಿದು. (ಸಿ.ಪಿ.ಕೆ.)

**ಆನಂದಗಿರಿ :** ಶಂಕರಾಚಾರ್ಯರ ಅದ್ವೈತ ಸಂಪ್ರದಾಯದಲ್ಲಿ ಪ್ರಸಿದ್ಧರಾದ ವ್ಯಾಖ್ಯಾನಕಾರರು. ಆನಂದಜ್ಞಾನ ಎಂದು ಹೆಸರಿದ್ದಂತೆ ಕಾಣುತ್ತದೆ. ಇವರಿಂದ ಒಂದು ಶಂಕರವಿಜಯವೂ ರಚಿತವಾಗಿತ್ತೆಂದು ಪ್ರತೀತಿ ಇದೆ. ಶಂಕರಾಚಾರ್ಯರ ಸರ್ವ ಉಪನಿಷದ್ಭಾಷ್ಯಗಳಿಗೂ ಗೀತಾಭಾಷ್ಯಕ್ಕೂ ಬ್ರಹ್ಮಸೂತ್ರ ಭಾಷ್ಯಕ್ಕೂ ಸುಂದರವೂ ಉಪಯುಕ್ತವೂ ಆದ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಹಾಗೆಯೇ ಸುರೇಶ್ವರರ ಬೃಹದಾರಣ್ಯಕ ಭಾಷ್ಯವಾರ್ತಿಕಕ್ಕೆ ಉತ್ತಮ ವ್ಯಾಖ್ಯಾನ ಒದಗಿಸಿದ್ದಾರೆ. ವಾಚಸ್ಪತಿಮಿಶ್ರರ ಭಾಮತಿಯಾದ ಮೇಲೆ ಇವರ ಸೂತ್ರ ಭಾಷ್ಯಾವ್ಯಾಖ್ಯಾನ ಬಂದಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಕಾಲ ಸು. 12 ಅಥವಾ 13ನೆಯ ಶತಮಾನವಾಗಿರಬಹುದು. ಕಂಚೀ ಕಾಮಕೋಟಿ ಮಠಾಧೀಶ್ವರರಾಗಿದ್ದರೆಂದೂ ಪ್ರತೀತಿ. ಭಾಷ್ಯಕಾರರ ಸರ್ವಭಾಷ್ಯಗಳಿಗೂ ವ್ಯಾಖ್ಯಾನ ಮಾಡಿದವರೆಂದು ಪೂಜನೀಯರಾಗಿದ್ದಾರೆ. (ಕೆ.ಕೆ.; ಎಸ್.ಎಸ್.ಆರ್.)

**ಆನಂದ ದೇವಾಲಯ :** ಪ್ರಾಚೀನ ಬರ್ಮಾದೇಶದ, ಈಗಿನ ಮಯನ್ಮಾರಿನ ಅತ್ಯಂತ ಮಹತ್ತರವಾದ ವಾಸ್ತುಶಿಲ್ಪ ಕಲಾಕೃತಿ. ಈ ಭವ್ಯ ದೇವಾಲಯವನ್ನು ನಿರ್ಮಿಸಿದ ಕೀರ್ತಿ ಅನೋರಥನ ಮಗನಾದ ಕ್ಯಾನ್‍ಜಿತ್ಥ (1086–1122) ಮಹಾರಾಜನಿಗೆ ಸೇರಿದುದು. ಆನಂದ ದೇವಾಲಯ ಭಾರತಕ್ಕೂ ಬರ್ಮಾದೇಶಕ್ಕೂ ಇದ್ದ ಸಂಸ್ಕೃತಿ ವಿನಿಮಯದ ಪ್ರತೀಕವಾಗಿದೆ. ಶೈಲಿಯ ಆಧಾರದ ಮೇಲೆ ಇದು ಬಹುಶಃ ಭಾರತೀಯ ಶಿಲ್ಪಿಗಳಿಂದಲೇ ನಿರ್ಮಿತವಾದ ಕಟ್ಟಡವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ದೇವಾಲಯ ಸುಮಾರು 52.69 ಚ.ಕಿಮೀ ವಿಸ್ತಾರವಾದ ಹೂದೋಟದಲ್ಲಿ ನಿರ್ಮಿತವಾಗಿದೆ. ಕಟ್ಟಡ ಇಟ್ಟಿಗೆಯದು. ಚಚ್ಚೌಕವಾಗಿದ್ದರೂ ನಾಲ್ಕು ದಿಕ್ಕಿಗೂ ಹೊರಚಾಚಿರುವ ಕಮಾನಿನ ಆಕಾರದ ಹಜಾರಗಳು ಇದಕ್ಕೆ ನಕ್ಷತ್ರದ ಆಕಾರವನ್ನು ಕೊಟ್ಟಿವೆ. ಮಧ್ಯದಲ್ಲಿ 9.44 ಮೀ ಎತ್ತರದ ಬುದ್ಧನ ವಿಗ್ರಹವಿದೆ. ಮುಂಭಾಗದಲ್ಲಿ ಬುದ್ಧನಿಗೆ ನಮಸ್ಕಾರ ಮಾಡುವ ಭಂಗಿಯಲ್ಲಿ ಕ್ಯಾನ್‍ಜಿತ್ಥನ ವಿಗ್ರಹವಿದೆ. ಗೋಡೆಗಳ ಮೇಲೆ ಸುಮಾರು ಒಂದು ಸಾವಿರ ಶಿಲ್ಪಫಲಕಗಳಿದ್ದು, ಅವುಗಳಲ್ಲಿ ಬುದ್ಧನ ಜೀವನಕಥೆಗಳು ಚಿತ್ರಿತವಾಗಿವೆ. ಸುಪ್ರಸಿದ್ಧ ಪಾಶ್ಚಾತ್ಯ ವಿದ್ವಾಂಸರು ಅಭಿಪ್ರಾಯಪಟ್ಟಿರುವಂತೆ ಬರ್ಮಾ ದೇಶದಲ್ಲಿದ್ದರೂ ಇದೊಂದು ಭಾರತೀಯ ದೇವಾಲಯವಾಗಿದೆ. (ಎ.ಪಿ.ಎನ್)

**ಆನಂದ ಬಝಾರ್ ಪತ್ರಿಕಾ :** ಬಂಗಾಲಿ ಭಾಷೆಯಲ್ಲಿ, 1922ರಲ್ಲಿ ಮೃಣಾಲಿಕಾಂತಿ ಘೋಷ್, ಪ್ರಫುಲ್ಲಕುಮಾರ ಸರಕಾರ ಮತ್ತು ಸುರೇಶ್‍ಚಂದ್ರ ಮುಜುಂದಾರ ಈ ಮೂವರು ಸೇರಿ ಪ್ರಾರಂಭಿಸಿದ ದಿನಪತ್ರಿಕೆ; ಸುಮಾರು 1926ರ ಹೊತ್ತಿಗೆ ದೇಶದ ಪ್ರಮುಖ ಬಂಗಾಲಿ

ಪತ್ರಿಕೆಯಾಯಿತು. ಬಂಗಾಲಿ ಭಾಷೆ ಜನಭಾಷೆಯಾಗಿರುವಲ್ಲೆಲ್ಲ ಇದು ಜನಪ್ರಿಯವಾಗಿದೆ. ವಾರ್ತೆಗಳ ವಿವರಪೂರ್ಣ ಪ್ರಕಟಣೆಯೇ ವೈಶಿಷ್ಟ್ಯವಾಗಿರುವ ಇದರ ನೀತಿ ಸ್ವತಂತ್ರ ಮತ್ತು ರಾಷ್ಟ್ರೀಯವೆಂದು ಘೋಷಿತ. ಪ್ರಥಮ ಸಂಪಾದಕ ಸತ್ಯೇಂದ್ರನಾಥ ಮುಜುಂದಾರ್ ಅತ್ಯಂತ ಪ್ರಸಿದ್ಧರು. ಇದರ ಇಂಗ್ಲಿಷ್ ಸಹಚರಿ ದಿನಪತ್ರಿಕೆಯಾದ ಹಿಂದೂಸ್ತಾನ್ ಸ್ಟ್ಯಾಂಡರ್ಡ್ 1937ರಲ್ಲಿ ಪ್ರಾರಂಭವಾಯಿತು. ದೇಶ ಎಂಬ ಇನ್ನೊಂದು ವಾರಪತ್ರಿಕೆ ಇದರೊಂದಿಗೆ ಬಂಗಾಲಿ ಭಾಷೆಯಲ್ಲಿ ಪ್ರಕಟವಾಗುತ್ತಿದೆ. ಕೋಲ್ಕತ, ನವದೆಹಲಿ ಮತ್ತು ಮುಬಯಿಗಳಿಂದ ಪ್ರಕಟವಾಗುತ್ತಿದ್ದು, ಪ್ರಸಾರಸಂಖ್ಯೆ 1,577,000. 2010ರ ಓದುಗ ಸರ್ವೆಯ ಪ್ರಕಾರ ಇದಕ್ಕೆ 15,318,000 ಓದುಗರಿದ್ದು, ಭಾರತದಲ್ಲಿ ಅತ್ಯಂತ ಹೆಚ್ಚು ಓದುಗರನ್ನು ಹೊಂದಿರುವ ದಿನಪತ್ರಿಕೆಗಳಲ್ಲಿ ಎಂಟನೆಯ ಸ್ಥಾನ ಪಡೆದಿದೆ. ಈಗಿನ ಸಂಪಾದಕರು ಅವೀಕ್ ಸರ್ಕಾರ್.

(ಕೆ.ಎಸ್.)

**ಆನಂದರಂಗಂ ಪಿಳ್ಳೆ :** 18ನೆಯ ಶತಮಾನದ ಅಂತ್ಯದಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯಲ್ಲಿದ್ದ ಉನ್ನತಾಧಿಕಾರಿ. ಉಲ್ಲೇಖಾರ್ಹವಾದ ಒಂದು ದಿನಚರಿಯನ್ನು ಬಿಟ್ಟುಹೋಗಿದ್ದಾನೆ. ಇಂಗ್ಲಿಷರಿಗೂ ಫ್ರೆಂಚರಿಗೂ ನಡೆದ ಯುದ್ಧದ ಖಚಿತವಾದ ವಿವರಗಳು ಸಮಕಾಲೀನವಾದ ಅವನ ದಿನಚರಿಯಲ್ಲಿವೆ. ಅಲ್ಲದೆ ದಕ್ಷಿಣ ಭಾರತದಲ್ಲಿ ರಾಜರುಗಳಿಗೆ ಪರಸ್ಪರ ವೈಷಮ್ಯವಿದ್ದು ಡೂಪ್ಲೆ ಫ್ರೆಂಚರ ಸಾಮ್ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಪಟ್ಟಿದ್ದು ಹೇಗೆ ಎಂಬುದನ್ನೂ ಇದರಿಂದ ತಿಳಿಯಬಹುದು. ಈ ಗ್ರಂಥದಲ್ಲಿ ಸಣ್ಣಪುಟ್ಟ ವಿವರಗಳನ್ನೂ ಸಹಜವಾಗಿ ಹೇಳಿರುವುದು ಬಹು ಸ್ವಾರಸ್ಯವಾಗಿದೆ. ಇಂತಹ ಗ್ರಂಥವನ್ನು ಬರೆದಿರುವ ಈ ಕರ್ತೃವನ್ನು ಭಾರತದ ಪೆಪಿಸ್ ಎಂದು ಕರೆಯುವರು. (ಬಿ.ಎಸ್.ಕೆ.)

**ಆನಂದರಾವ್, ಟಿ.:** 1852–1919. ಮೈಸೂರು ಸಂಸ್ಥಾನದ ದಿವಾನರು (ಮಾರ್ಚ್ 1909 ನವೆಂಬರ್ 1912). ದಕ್ಷಿಣ ಭಾರತದ ಖ್ಯಾತ ರಾಜತಂತ್ರಜ್ಞ ದಿವಾನ್ ಸರ್ ತಂಜಾವೂರು ಮಾಧವರಾವ್ ಅವರ ಪುತ್ರ. ತಿರುವನಂತಪುರದಲ್ಲಿ ತಮ್ಮ ತಂದೆ ದಿವಾನರಾಗಿದ್ದ ಕಾಲದಲ್ಲಿ 1852ಮೇ 15 ರಂದು ಹುಟ್ಟಿದ ಆನಂದರಾಯರು 1871ರಲ್ಲಿ ಪದವೀ ಧರರಾಗಿ ತಿರುವಾಂಕೂರಿನ ರಾಜಕುಮಾರ ನಿಗೂ ಮುಂದೆ ಇಂದೂರಿನ ರಾಜಕುಮಾರ ನಿಗೂ ಶಿಕ್ಷಕರಾಗಿ ಕೆಲಸ ಮಾಡಿದರು. ನವೆಂಬರ್ 1873ರಲ್ಲಿ ಮೈಸೂರು ಸಂಸ್ಥಾನದ ಸೇವೆಗೆ ಸೇರಿದ ಇವರು ದಿವಾನ್ ರಂಗಾಚಾರ್ಲು ಅವರ ಸಹಾಯಕರಾಗಿದ್ದು ಅವರಿಂದ ಪ್ರೋತ್ಸಾಹಿತರಾದರು. ಅನೇಕ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ, ಮೈಸೂರಿನಲ್ಲಿ ಡೆಪ್ಯುಟಿ ಕಮಿಷನರ್ ಆಗಿ, ಮೈಸೂರು ಸಂಸ್ಥಾನದ ಸ್ಟ್ಯಾಟಿಸ್ಟಿಕ್ಸ್ ವಿಭಾಗದ ನಿರ್ದೇಶಕರಾಗಿ

ಹಾಗೂ ಸಂಸ್ಥಾನದ ಚೀಫ್ ಸೆಕ್ರೆಟರಿ ಆಗಿ ಸೇವೆ ಸಲ್ಲಿಸಿದರು. 1904ರಲ್ಲಿ ಇವರನ್ನು ರೆವಿನ್ಯೂ ಕಮಿಷನರ್ ಆಗಿ ಆಯ್ಕೆ ಮಾಡಲಾಗಿತ್ತು. ಸಂಸ್ಥಾನದ ಕಾರ್ಯಕಾರಿ ಸಮಿತಿಗೆ (ಎಕ್ಸಿಕ್ಯುಟಿವ್ ಕಮಿಟಿ) ಕೆ.ಪಿ.ಪುಟ್ಟಣ್ಣಚೆಟ್ಟಿಯವರ ಜೊತೆ ಆಯ್ಕೆಗೊಂಡರು (1906). ದಿವಾನ್ ವಿ.ಪಿ.ಮಾಧವರಾಯರ ಅನಂತರ ದಿವಾನ್ ಪದವಿಗೆ ಇವರನ್ನು ನೇಮಿಸಲಾಯಿತು. ಜೂನ್ 1911ರಲ್ಲಿ ಮೈಸೂರು ಸಂಸ್ಥಾನದ ಮೊದಲ ಎಕನಾಮಿಕ್ ಕಾನ್ಫರೆನ್ಸ್ ನಡೆಸಿದುದು, ಕನ್ನಂಬಾಡಿ ಅಣೆಕಟ್ಟು ರಚನೆಗೆ ನಿರ್ಣಯ ಕೈ ಕೊಂಡುದು (1911) ಹಾಗೂ ಮೈಸೂರಿನ ಹೊಸ ಅರಮನೆ ಪೂರ್ತಿಯಾದುದು (1910) ಇವರ ದಿವಾನ ಗಿರಿಯ ಕಾಲದ ಕೆಲವು ಮುಖ್ಯ ಸಾಧನೆಗಳು. ಅಲ್ಲದೆ ಮದರಾಸು ಪ್ರಾಂತ್ಯದ ಜನರಿಗೆ ಮೈಸೂರು ಸಂಸ್ಥಾನದ ಉನ್ನತ ಹುದ್ದೆ ಗಳು ದೊರೆಯುತ್ತಿರುವುದರ ವಿರುದ್ಧ ನಡೆದ ಚಳವಳಿಗೆ ಮಣಿದು ಮೈಸೂರಿಗರಿಗೆ ಸಂಸ್ಥಾನದ ಸಿವಿಲ್ ಸರ್ವಿಸ್ ಹುದ್ದೆಗಳು ಮೀಸಲಾಗಿರಬೇಕೆಂದು ಇವರು ನಿರ್ಣಯ ಮಾಡಿದರು. 1912ರಲ್ಲಿ ಸೇವೆಯಿಂದ ನಿವೃತ್ತರಾದರು. ಇವರಿಗೆ ಪ್ರಧಾನಶಿರೋಮಣಿ ಎಂಬ ಬಿರುದು ಮತ್ತು ಸಿ.ಐ.ಇ. ಪ್ರಶಸ್ತಿ ದೊರಕಿತ್ತು. ಇವರು 1919 ಜುಲೈ 20ರಂದು ಬೆಂಗಳೂರಲ್ಲಿ ನಿಧನರಾದರು. (ಎಸ್.ಕೆ.)

**ಆನಂದವರ್ಧನ :** ಸು. 850. ಭಾರತೀಯ ಕಾವ್ಯಮೀಮಾಂಸೆಯ ಇತಿಹಾಸದಲ್ಲಿ ಉತ್ತಮ ಸಾಹಿತ್ಯಾಭಿರುಚಿ, ಉಜ್ಜ್ವಲ ಪ್ರತಿಭೆ, ಉನ್ನತ ತಾತ್ತ್ವಿಕ ವಿಚಾರ ಎಲ್ಲದರಲ್ಲೂ ಅದ್ವಿತೀಯನೆನಿಸಿ ಅಗ್ರಸ್ಥಾನಕ್ಕೆ ಅರ್ಹನಾದ ವಿಮರ್ಶಕ. ಈತ ಕಾಶ್ಮೀರದವನು.

ಈತ ಶಾಸ್ತ್ರದಲ್ಲಿ ಪರಿಣತನೂ ಕವಿಗಳಲ್ಲಿ ಗಣ್ಯನೂ ಆಗಿದ್ದುದನ್ನು ಈತನ ಮಿಕ್ಕ ಕೃತಿಗಳು (ತತ್ತ್ವಾಲೋಕ, ದೇವೀಶತಕ, ವಿಷಮಬಾಣಲೀಲಾ ಇತ್ಯಾದಿ) ನಿದರ್ಶಿಸುತ್ತವೆ. ಇವು ಈಗ ಉಪಲಬ್ಧವಿಲ್ಲ; ಕಡೆಯದು ಪ್ರಾಕೃತ ಮಹಾಕಾವ್ಯ. ಅವಂತಿವರ್ಮನ ಆಸ್ಥಾನದಲ್ಲಿ ಆನಂದವರ್ಧನ ಮನ್ನಣೆ ಪಡೆದ ವಿಷಯ ಕಲ್ಹಣನ ರಾಜತರಂಗಿಣಿಯಲ್ಲಿ ಉಕ್ತವಾಗಿದೆ. ಈತ ಪೂರ್ವ ಸಂಪ್ರದಾಯಗಳ ಪರಿಷ್ಕಾರದಿಂದ ತೃಪ್ತನಾಗಲಿಲ್ಲ. ತನ್ನದೇ ಆದ ಹೊಸ ಪ್ರಸ್ಥಾನವನ್ನು ಜಗತ್ತಿಗೆ ಸಾರಿದ. ಅದಕ್ಕೆ ಧ್ವನಿ ಎಂಬ ಅಪೂರ್ವ ಹಾಗೂ ಅನ್ವರ್ಥಕ ಹೆಸರನ್ನಿತ್ತ. ಗುಣ, ರೀತಿ, ಅಲಂಕಾರ, ವೃತ್ತಿ, ಸಂಘಟನೆ ಮುಂತಾದ ಹಿಂದಿನ ಪ್ರಕ್ರಿಯೆಗಳಲ್ಲಿ ಸಾರವತ್ತಾದ ಅಂಶವೆಷ್ಟು, ನಿಸ್ಸಾರವಾದ ಅಂಶವೆಷ್ಟು, ನಿಸ್ಸಾರವಾದುದನ್ನೇ ಸಾರವೆಂದು ಅನೇಕ ಪಂಡಿತರು ಕೂಡ ಭ್ರಮಿಸುವಂತೆ ಆದುದೇಕೆ, ಕಾವ್ಯವಿಮರ್ಶೆಗೆ ಶಾಸ್ತ್ರಪಂಡಿತರು ಸರಿಯಾದ ಅಧಿಕಾರಿಗಳೆನ್ನಬಹುದೆ, ಕವಿಪ್ರತಿಭೆಗೂ ಸಹೃದಯನ ಪ್ರತಿಭೆಗೂ ಇರುವ ಸಾಮರಸ್ಯ ಯಾವ ಮಟ್ಟದ್ದು, ಮಹಾಕವಿಗಳ ಉತ್ತಮ ಕೃತಿಗಳ ರಹಸ್ಯವೇನು, ರಸೌಚಿತ್ಯದ ನಿಯಮಗಳಾವುವು, ಕಾವ್ಯಗಳಲ್ಲಿ ತಾರತಮ್ಯ ಬರುವುದು ಯಾವುದರಿಂದ, ಕವಿಪ್ರತಿಭೆಯನ್ನು ಗುರುತಿಸಲು ಸಹೃದಯನಿಗೆ ಸಾಧಕಗಳಾವುವು– ಇವೇ ಮುಂತಾದ ಮೂಲಭೂತ ತಾತ್ತ್ವಿಕಪ್ರಶ್ನೆಗಳನ್ನು ಪ್ರಥಮತಃ ಎತ್ತಿ, ಎಲ್ಲಕ್ಕೂ ಸರ್ವಗ್ರಾಹ್ಯವಾಗುವಂಥ ನಿಸ್ಸಂದಿಗ್ಧ ಉತ್ತರಗಳನ್ನು ತರ್ಕಶುದ್ಧವೂ ಯುಕ್ತಿಪೂರ್ಣವೂ ಆದ ಶೈಲಿಯಲ್ಲಿ ಸೂಚಿಸಿದ್ದಲ್ಲದೆ ಸಹೃದಯರೊಪ್ಪುವಂತೆ ನೂರಾರು ಸುಂದರ ಕಾವ್ಯ ಲಕ್ಷ್ಯಗಳಲ್ಲಿ ತನ್ನ ವಿನೂತನ ತತ್ತ್ವವನ್ನು ಸಮನ್ವಯ ಮಾಡಿ ತೋರಿಸಿದ ಉಜ್ಜ್ವಲ ಯಶಸ್ಸು ಆನಂದವರ್ಧನನದು. ಆ ಯಶಸ್ಸಿಗೆ ಆಧಾರಸ್ತಂಭವಾದ ಮಹಾಗ್ರಂಥವೇ ಧ್ವನ್ಯಾಲೋಕ (ಧ್ವನಿಯ ಬೆಳಕು). ಮುಖ್ಯವಾಗಿ ಹಿಂದಿನವರು ಕವಿಗಳಿಗೆ ಅನುಕೂಲವಾಗುವಂಥ ಕೈಪಿಡಿಗಳನ್ನು ಬರೆದಿದ್ದರು. ಮೊತ್ತಮೊದಲಿಗೆ ಸಹೃದಯರ ದೃಷ್ಟಿಯನ್ನು ಪ್ರಧಾನವಾಗಿಟ್ಟುಕೊಂಡು ಅದರ ದೃಷ್ಟಿಯಿಂದಲೇ ಮೂಲತತ್ತ್ವಗಳನ್ನೆಲ್ಲ ಪುನರ್ವಿವೇಚನೆ ಮಾಡಹೊರಟ ಈ ಗ್ರಂಥಕ್ಕೆ ಸಹೃದಯಾಲೋಕವೆಂಬ ಹೆಸರೂ ಸಮುಚಿತವಾಗಿದೆ. ಹಿಂದಿನ ಲಾಕ್ಷಣಿಕರ ಬರೆವಣಿಗೆ ವಿವರಣಾತ್ಮಕವೂ ವಿಭಜನಾತ್ಮಕವೂ ಆಗಿದ್ದರೆ ಆನಂದವರ್ಧನನದು ವಿಚಾರಾತ್ಮಕವೂ ಸಂಯೋಜನಾತ್ಮಕವೂ ಆಗಿದೆಯೆನ್ನಬಹುದು. ಅಲಂಕಾರ, ಗುಣ ಇತ್ಯಾದಿಗಳ ಭೇದ ಪ್ರಭೇದಗಳ ಸಂಖ್ಯಾನದಲ್ಲಿ ಪ್ರಾಚೀನರಿಗೆ ಶ್ರದ್ಧೆ ಹೆಚ್ಚು. ಪ್ರಕ್ರಿಯೆಗಳ ಸ್ವರೂಪವನ್ನು ಕುರಿತ ಶಾಸ್ತ್ರೀಯ ವಿವೇಚನೆ ಅವರಲ್ಲಿ ಕಡಿಮೆ. ಆದರೆ ಆನಂದವರ್ಧನನ ಗ್ರಂಥವೆಲ್ಲ ಕಾವ್ಯದ ಆತ್ಮಸ್ವರೂಪ ಪ್ರದರ್ಶನಕ್ಕಾಗಿಯೇ ಮೀಸಲಾಗಿದೆಯೆಂದರೂ ಸಲ್ಲುತ್ತದೆ. ಬಳಕೆಯ ವ್ಯವಹಾರದಲ್ಲಿ ಕಾಣದ, ಶಾಸ್ತ್ರದ ಪಂಕ್ತಿಗಳಲ್ಲಿ ದೊರೆಯದ, ಆದರೆ ಉತ್ತಮ ಕಾವ್ಯದಲ್ಲಿ ತಪ್ಪದೆ ಇದ್ದೇ ತೀರುವ ಅರ್ಥವಾವುದೋ ಅದೇ ಕಾವ್ಯದ ತಿರುಳು. ಅದಕ್ಕೇ ಧ್ವನಿಯೆಂಬ ಹೆಸರು. ಅದು ಪಂಡಿತರಿಗೂ ಅಗೋಚರವಾಗಬಹುದು. ಕೇವಲ ಸಹೃದಯರು ಮಾತ್ರ ಅದನ್ನು ಅರಿತು ಸವಿಯಲಾರ್ಪರು. ಅದೇ ಮಹಾಕವಿ ವಾಣಿಯ ಪರಮರಹಸ್ಯ. ಹೀಗೆ ಶಬ್ದಗಳಿಗೆ ಮೇಲಾಗಿ ಅರ್ಥಗಳಿಗೆ ಕಾವ್ಯದಲ್ಲಿ ಮಾತ್ರ ಕಾಣುವ ವ್ಯಂಜಕತ್ವಶಕ್ತಿಯನ್ನು ತಾರ್ಕಿಕರೂ ಮೀಮಾಂಸಕರೂ ವೈಯಾಕರಣರೂ ಒಪ್ಪುವಂತೆ ಅವರವರ ದಾರ್ಶನಿಕ ಯುಕ್ತಿಗಳಿಂದಲೇ ಸಾಧಿಸಿರುವ ಆನಂದವರ್ಧನನ ಸಾಮರ್ಥ್ಯವನ್ನು ಎಷ್ಟು ಹೊಗಳಿದರೂ ಕಡಿಮೆಯೇ. ಧ್ವನಿಯೆಂದರೆ ಯಾರೋ ಕೆಲವರಿಗೆ ಮಾತ್ರ ಕಾಣುವ ಭ್ರಮೆ, ಅದನ್ನು ಇನ್ನೊಬ್ಬರಿಗೆ ತೋರಿಸುವುದು ಅಶಕ್ಯ ಎಂಬ ಅಪವಾದವನ್ನು ಸಮೂಲವಾಗಿ ಉಚ್ಚಾಟನೆ ಮಾಡುವಂತೆ ಧ್ವನಿಪ್ರಪಂಚದ ವೈಶಾಲ್ಯವನ್ನು ಸುಸ್ಪಷ್ಟವಾಗಿ ಚಿತ್ರಿಸಿ, ಅದರ ಒಂದೊಂದು ಪರಿಯನ್ನೂ ಸೋದಾಹರಣವಾಗಿ ನಿರ್ಣಯಿಸಿರುವ ಕಾರ್ಯವಂತೂ ಅಚ್ಚರಿಗೊಳಿಸು ವಂಥದು. ಹೀಗೆ ಧ್ವನಿತತ್ತ್ವದ ಪ್ರತಿಷ್ಠಾಪನೆ, ಸ್ವರೂಪ ನಿರೂಪಣೆ, ಶಾಸ್ತ್ರೀಯ ಯುಕ್ತಿಗಳಿಂದ ಸಮರ್ಥನೆ, ಭೇದ–ಪ್ರಭೇದ ನಿರ್ಣಯ, ಧ್ವನಿತತ್ತ್ವದ ಅಂಗೀಕಾರದಿಂದಾಗುವ ಲಾಭ ಹಾಗೂ ತಿರಸ್ಕಾರದಿಂದಾಗುವ ಹಾನಿಗಳ ಪ್ರದರ್ಶನ ಇಷ್ಟನ್ನೂ ಒಳಗೊಂಡಿರುವ ಗ್ರಂಥವೇ ಧ್ವನ್ಯಾಲೋಕವೆನ್ನಬಹುದು. ಸಾಹಿತ್ಯ ವಿಮರ್ಶೆಯ ಮೂಲವಿಚಾರಗಳ ಮಂಡನದಲ್ಲಿ, ವಿವೇಚನೆಯಲ್ಲಿ, ವಿಸ್ತರಣೆಯಲ್ಲಿ ಆನಂದವರ್ಧನ ಹೊಸ ಹೆಜ್ಜೆಗಳನ್ನಿಟ್ಟಿದ್ದಾನೆ. ಅವನ ಅಭಿಪ್ರಾಯವನ್ನು ಒಪ್ಪದವರೂ ಕೂಡ ಆತನನ್ನು ಗೌರವಿಸುವಷ್ಟು ದೊಡ್ಡ ಕಾರ್ಯ ಮಾಡಿದ್ದಾನೆ. ಆತನ ಯಶಸ್ಸಿಗೆ ಕಳಸವಿಡುವಂತೆ ಅಭಿನವಗುಪ್ತರಂಥ ಮಹಾಚಾರ್ಯರೇ (ನೋಡಿ– ಅಭಿನವಗುಪ್ತ) ಧ್ವನ್ಯಾಲೋಕಕ್ಕೆ ವ್ಯಾಖ್ಯಾನ ಬರೆದು ಧನ್ಯರಾದರು. ಸಂಸ್ಕೃತ ಅಲಂಕಾರಶಾಸ್ತ್ರದ ಚರಿತ್ರೆಯಲ್ಲಿ ಹೊಸ ಅಧ್ಯಾಯ ಆರಂಭವಾದುದೇ ಆನಂದವರ್ಧನನಿಂದ. ಮುಂದಿನವರೆಲ್ಲ ಆತನ ತತ್ತ್ವದಿಂದ ಪ್ರಚೋದಿತರಾದವರೇ. ವಿರೋಧಿಗಳೂ ಕೂಡ ಆತನ ಪರಿಭಾಷೆಯನ್ನು ತಪ್ಪೆಂದರೇ ಹೊರತು ಮೂಲತತ್ತ್ವವನ್ನಲ್ಲ. ಹೀಗೆ ನೂತನ ಸಾಹಿತ್ಯವಿಮರ್ಶೆಗೆ ನಾಂದಿ ಹಾಕಿಕೊಟ್ಟ ಆನಂದವರ್ಧನ ಪ್ರಾಚೀನ ರಸಿಕರ ಮೆಚ್ಚುಗೆಗೆ ಪಾತ್ರನಾದಂತೆ ಆಧುನಿಕ ವಿಮರ್ಶಕರ ಪ್ರಶಂಸೆಯನ್ನೂ ಗಳಿಸಿದ್ದಾನೆ. ಧ್ವನ್ಯಾಲೋಕದಲ್ಲಿ ಛಂದೋಬದ್ಧವಾದ, ಸೂತ್ರಪ್ರಾಯವಾದ ಕಾರಿಕೆಗಳಿರುವಂತೆ ಇವುಗಳ ಮೇಲಿನ ವಿಸ್ತೃತ ವಿವರಣೆಯನ್ನೊಳಗೊಂಡ ಗದ್ಯವೃತ್ತಿಯೂ ಇದೆ. ಲಕ್ಷ್ಯ ಪದ್ಯಗಳಿರುವುದೆಲ್ಲ ವೃತ್ತಿಭಾಗದಲ್ಲಿಯೇ.

ವಿವೇಚಿಸಲ್ಪಟ್ಟ ಮುಖ್ಯಾಂಶಗಳನ್ನು ಸಂಗ್ರಹಿಸುವ ಪರಿಕರಶ್ಲೋಕಗಳಾದರೂ ವೃತ್ತಿಯಲ್ಲೇ ಅಂತರ್ಗತವಾಗುತ್ತವೆ. ಅಲಂಕಾರಶಾಸ್ತ್ರದ ಮುಂದಿನ ಲೇಖಕರೆಲ್ಲರೂ ಆನಂದವರ್ಧನನೇ ಕಾರಿಕಾ–ವೃತ್ತಿ ಗ್ರಂಥಗಳೆರಡನ್ನೂ ಬರೆದನೆಂದು ಭಾವಿಸುವ ಪರಂಪರೆಯಿದೆ. ಆದರೆ ಅಭಿನವಗುಪ್ತರ ವ್ಯಾಖ್ಯಾನ–ಲೋಚನದಲ್ಲಿ ಕಾರಿಕಾಕಾರ ವೃತ್ತಿಕಾರ ಎಂಬ ಭೇದನಿರ್ದೇಶ ಮೇಲಿಂದ ಮೇಲೆ ಬರುವುದನ್ನು ಅನುಲಕ್ಷಿಸಿ ಇದು ಭಿನ್ನಕರ್ತೃಕತೆಯ ದ್ಯೋತಕವೆನ್ನುವ ಆಧುನಿಕ ವಿದ್ವಾಂಸರಿದ್ದಾರೆ. ಇದಕ್ಕೆ ವ್ಯಾಖ್ಯಾಶೈಲಿಯೇ ಮುಂತಾದ ಉಪಪತ್ತಿ ಹೇಳಿ, ಏಕಕರ್ತೃಕವೆಂಬ ಭಾವನೆಯನ್ನು ಪುಷ್ಟೀಕರಿಸುವವರೂ ಉಂಟು. ಕೇವಲ ಕಾರಿಕೆಗಳಲ್ಲಿ ಧ್ವನಿಪ್ರಸ್ಥಾನದ ಸಾಂಗೋಪಾಂಗ ಪ್ರತಿಷ್ಠಾಪನೆ ಒಂದೂ ಉದಾಹರಣೆಯಿಲ್ಲದೆಯೇ ನೆರವೇರುವುದು ಅಶಕ್ಯವೆನಿಸುವುದರಿಂದಲೂ ಧ್ವನಿಕಾರನ ನಾಮಾಂತರ ಎಲ್ಲಿಯೂ ಉಪಲಬ್ಧವಿಲ್ಲದಿರುವುದರಿಂದಲೂ (ಸಹೃದಯವೆಂಬ ಅಂಕಿತನಾಮ ಶಕ್ಯವೆನಿಸುವುದು ಕಷ್ಟ) ಅಭಿನವಗುಪ್ತರೇ ಬೇರೆಡೆಗಳಲ್ಲಿ ಈ ಭೇದನಿರ್ದೇಶದ ಬದಲು ಅಭೇದವನ್ನು ಹೇಳಿರುವುದರಿಂದಲೂ ಆನಂದವರ್ಧನನೇ ಧ್ವನ್ಯಾಲೋಕದ ಏಕೈಕ ಕರ್ತೃವೆಂಬ ವಾದ ಪುಷ್ಟೀಕೃತವಾಗುತ್ತದೆ. ವಿದ್ವಾಂಸರಲ್ಲಿ ಈ ಚರ್ಚೆ ಇನ್ನೂ ಮುಗಿದಿಲ್ಲ.

ಆನಂದವರ್ಧನ ಗ್ರಂಥವನ್ನು ಆರಂಭಿಸುವುದೇ ಪೂರ್ವಪಕ್ಷಗಳ ಪಟ್ಟಿಯಿಂದ. ಧ್ವನಿಯೆಂಬುದೇ ಇಲ್ಲ. ಧ್ವನಿಯೆಂದರೆ ಲಕ್ಷಣಾವೃತ್ತಿಗಿಂತ ಹೆಚ್ಚೇನೂ ಆಗಲಾರದು, ಬಾಯಿಯಿಂದ ಆಡಿ ತೋರಿಸಲಾಗದ ರಹಸ್ಯವೇ ಧ್ವನಿ–ಇತ್ಯಾದಿ ಆಕ್ಷೇಪಣೆಗಳನ್ನು ಗ್ರಂಥಕಾರ ಸವಿಸ್ತಾರವಾಗಿ ಮೊದಲು ಉಲ್ಲೇಖಿಸಿದ್ದಾನೆ. ಮೊದಲನೆಯ ಅಭಾವವಾದಿಗಳು ಪ್ರಸಿದ್ಧವಾದ ಗುಣ, ಅಲಂಕಾರ ಇತ್ಯಾದಿಗಳಲ್ಲಿ ಧ್ವನಿತತ್ತ್ವವನ್ನು ಅಂತರ್ಗತಗೊಳಿಸಲು ಹವಣಿಸಿದರೆ, ಎರಡನೆಯ ಭಾಕ್ತವಾದಿಗಳು ಧ್ವನಿಯೆಂಬ ಅಪೂರ್ವ ಶಬ್ದವ್ಯಾಪಾರವನ್ನೊಪ್ಪದೆ ಪ್ರಸಿದ್ಧ ಲಾಕ್ಷಣಿಕ ಪ್ರಯೋಗವೇ ಧ್ವನಿಯ ಮೂಲವೆನ್ನುತ್ತಾರೆ. ಮೂರನೆಯ ವಾದಿಗಳು ಧ್ವನಿಗೆ ಲಕ್ಷಣ ಹೇಳುವುದೇ ಅಸಾಧ್ಯವೆನ್ನುತ್ತಾರೆ. ಇವುಗಳಲ್ಲಿ ಒಂದೊಂದು ಪೂರ್ವಪಕ್ಷವನ್ನೂ ಆನಂದವರ್ಧನ ಕ್ರಮಕ್ರಮವಾಗಿ ಖಂಡಿಸಿ, ತನ್ನ ಸಿದ್ಧಾಂತವನ್ನು ಮಂಡಿಸಿ, ಧ್ವನಿಪ್ರಸ್ಥಾನದ ಪರಮಾಚಾರ್ಯನೆನಿಸಿಕೊಳ್ಳುತ್ತಾನೆ. ಪೂರ್ವಪಕ್ಷಗಳ ನಿವಾರಣೆಯ ಜೊತೆಜೊತೆಗೇ ಸ್ವಸಿದ್ಧಾಂತದ ಪೋಷಣೆಯಾಗಿರುವುದು ಈ ಗ್ರಂಥದ ವೈಶಿಷ್ಟ್ಯವೆನ್ನಬಹುದು.

ಗುಣಾಲಂಕಾರಗಳಿಂದ ಸಂಸ್ಕೃತವಾದ ಶಬ್ದಾರ್ಥವೇ ಕಾವ್ಯವೆಂಬುದು ಪ್ರಾಚೀನರ ಮತ. ಕಾವ್ಯದ ಪರ್ಯವಸಾನವೇ ರಸ ಅಥವಾ ಸಹೃದಯ ಮನಃಪ್ರೀತಿ. ಕಾವ್ಯವನ್ನು ವಿಶ್ಲೇಷಿಸಿದರೆ ಯಾರಿಗಾದರೂ ಕಾಣತಕ್ಕ ಅಂಶವೆಂದರೆ ಶಬ್ದಾರ್ಥಗಳ ವೈಶಿಷ್ಟ್ಯವಾದ ಗುಣ ಹಾಗೂ ಅಲಂಕಾರಗಳೇ. ಹೀಗೆ ಶಾಸ್ತ್ರತಃ ಗುಣ ಅಲಂಕಾರ ರಸಗಳನ್ನು ಬೇರ್ಪಡಿಸಿ ವಿವರಿಸಬಹುದಾದರೂ ಸಹೃದಯನ ಅನುಭೂತಿಯನ್ನು ಗಮನಿಸಿದರೆ ಇವು ಅವಿಭಾಜ್ಯ ಘಟಕಗಳೇ ಸರಿ. ಈ ತತ್ತ್ವವನ್ನು ಪೂರ್ಣವಾಗಿ ಮನಗಂಡ ಕೀರ್ತಿ ಆನಂದವರ್ಧನನದು. ನಿರ್ಗುಣವೂ ನಿರಲಂಕಾರವೂ ಆದ ಶಬ್ದಾರ್ಥಗಳಿಂದ ರಸಾಸ್ವಾದ ಬಾರದು. ಆದರೆ ಗುಣಾಲಂಕಾರಗಳಿಗೂ ರಸಕ್ಕೂ ಇರುವ ಸಾಕ್ಷಾತ್ ಸಂಬಂಧದ ವಿವೇಚನೆಯನ್ನು ಆನಂದವರ್ಧನನ ಹಿಂದಿನವರಾರೂ ಶಾಸ್ತ್ರೀಯವಾಗಿ ಕೈಗೊಂಡಿರಲಿಲ್ಲ. ಇದನ್ನು ಸಮರ್ಥವಾಗಿ ನಿರ್ವಹಿಸಿರುವುದೇ ಧ್ವನ್ಯಾಲೋಕದ ವೈಶಿಷ್ಟ್ಯ. ಕವಿಯ ಪ್ರತಿಭಾವೇಶಕ್ಕೆ ಬೀಜರೂಪವಾದ ರಸಾದಿ ಅನುಭೂತಿಯೇ ಸಹೃದಯನ ಹೃದಯದಲ್ಲಿ ಕಡೆಗೆ ವಿಕಸಿತವಾಗುತ್ತದೆ. ಈ ಕಾವ್ಯೈಕಗೋಚರವಾದ ಅಥವಾ ಅಲೌಕಿಕವೆನ್ನಬಹುದಾದ ರಸದ ಮಾಧ್ಯಮವೇ ಶಬ್ದಾರ್ಥಗಳ ವೈಶಿಷ್ಟ್ಯ ಅಥವಾ ಸಾಹಿತ್ಯ ಅಥವಾ ಗುಣಾಲಂಕಾರ. ಇದನ್ನು ರಮಣೀಯತೆಯೆಂದ ಮಾತ್ರಕ್ಕೆ ಶಾಸ್ತ್ರೀಯವಾಗಿ ವಿವೇಚಿಸಿದಂತಾಗುವುದಿಲ್ಲ. ಆ ಮಾಧ್ಯಮದ ಕಾರ್ಯವನ್ನು ವಿವರಿಸುವುದಕ್ಕಾಗಿ ಶಬ್ದಾರ್ಥಗಳ ವ್ಯಾಪಾರಗಳೆಷ್ಟೆಂದು ಕೂಲಂಕಷವಾಗಿ ವಿಚಾರಮಾಡಬೇಕಾಗುತ್ತದೆ. ಗುಣಗಳ ಪಟ್ಟಿಯಿಂದಾಗಲಿ ಅಲಂಕಾರಗಳ ಪಟ್ಟಿಯಿಂದಾಗಲಿ, ಕಾವ್ಯಮಾತ್ರ ವಿಶ್ರಾಂತವಾದ ಶಬ್ದಾರ್ಥ– ವ್ಯಾಪಾರದ ಸ್ಪಷ್ಟಕಲ್ಪನೆಯಾಗದು. ಅಸ್ಪಷ್ಟವಾಗಿ ಅದರ ಏಕದೇಶವನ್ನು ಮಾತ್ರ ಅದು ವಿವರಿಸಬಹುದು, ಅಷ್ಟೇ. ಈ ದೃಷ್ಟಿಯಿಂದ ಅನಂದವರ್ಧನ ಪ್ರಾಚೀನ ಲಾಕ್ಷಣಿಕರ ಉಕ್ತಿಗಳನ್ನು ಪುನರ್ವಿಮರ್ಶೆಗೆ ಗುರಿಮಾಡುತ್ತಾನೆ. ರಸಾದಿಗಳಿಗೆ ಸಲ್ಲಬೇಕಾದ ಪ್ರಥಮ ಪ್ರಾಶಸ್ತ್ಯವನ್ನೀಯುತ್ತಾನೆ. ಗುಣಗಳನ್ನು ರಸಧರ್ಮಗಳೆಂದೂ ಅಲಂಕಾರಗಳು ರಸೋಚಿತವಾದಾಗ ಮಾತ್ರ ಗ್ರಾಹ್ಯವೆಂದೂ ಸಿದ್ಧಾಂತಿಸುತ್ತಾನೆ. ಪ್ರಾಚೀನ ಲಾಕ್ಷಣಿಕರ ಅಭಿಪ್ರಾಯ ಕೂಡ ಹೀಗೆಯೇ ಇದ್ದಿರಬಹುದಾದರೂ ಅವರು ಇಷ್ಟು ಸ್ಪಷ್ಟವಾಗಿ ಹೇಳಿರಲಿಲ್ಲ. ಶಬ್ದಾರ್ಥಗಳಿಗೆ ಕಾವ್ಯದಲ್ಲಿ ಅಸಾಧಾರಣ ವ್ಯಾಪಾರವಿದೆಯೆಂಬುದನ್ನು ಅಸ್ಫುಟವಾಗಿ ಅರಿತರೂ ಅದರ ವಿಮರ್ಶೆಗೆ ಹೋಗಿರಲಿಲ್ಲ. ಅದಕ್ಕೆ ವ್ಯಂಜನಾ ಅಥವಾ ಧ್ವನಿಯೆಂಬ ನಾಮಕರಣಮಾಡಿ, ಅದರ ವಿಮರ್ಶೆಗಾಗಿಯೇ ಇಡೀ ಗ್ರಂಥವನ್ನು ಬರೆದವನೆಂದರೆ ಅನಂದವರ್ಧನನೇ. ಈ ವಿಮರ್ಶೆಯಲ್ಲಿ ಆತನ ಅಗಾಧ ಶಾಸ್ತ್ರಪಾಂಡಿತ್ಯ ಹೆಜ್ಜೆಹೆಜ್ಜೆಗೂ ಕಾಣುತ್ತದೆ.

ಶಬ್ದವ್ಯಾಪಾರವನ್ನು ಮೊದಲು ವಿವೇಚನೆ ಮಾಡಿದವರೆಂದರೆ ವೈಯಾಕರಣರು. ಇವರು ರೂಢವಾದ ಪ್ರಸಿದ್ಧ ಅರ್ಥವನ್ನು ಬೋಧಿಸುವ ಶಬ್ದಶಕ್ತಿಗೆ ಅಭಿಧಾ ಎಂಬ ಹೆಸರನ್ನಿತ್ತಿದ್ದರು. ಸಾದೃಶ್ಯಾದಿ ಸಂಬಂಧಗಳ ಮೂಲಕ ಮುಖ್ಯಾರ್ಥಕ್ಕೆ ಪ್ರತಿಯಾಗಿ ಎರಡನೆಯ ಗೌಣಾರ್ಥ ಬರುವ ವಾಕ್ಯಪ್ರಯೋಗಗಳನ್ನು ಪರಾಮರ್ಶಿಸಿ ಲಕ್ಷಣಾವೃತ್ತಿಯ ವಿವೇಚನೆ ಮಾಡಿದ್ದವರು ಮೀಮಾಂಸಕರು. ಲೋಕ ವ್ಯವಹಾರದಲ್ಲೂ ಶಾಸ್ತ್ರವ್ಯವಹಾರದಲ್ಲೂ ಈ ಎರಡು ಶಬ್ದವೃತ್ತಿಗಳದೇ ಸಾಮ್ರಾಜ್ಯ. ಮೊದಲನೆಯದು ಕೇವಲ ಶಬ್ದವೃತ್ತಿ. ಲಕ್ಷಣ ಅರ್ಥವೃತ್ತಿಯೂ ಆಗಬಹುದು. ವಾಕ್ಯಾರ್ಥದ ಒಟ್ಟು ಅಭಿಪ್ರಾಯದ ವಿವರಣೆಗೆ ಕೆಲವು ಮೀಮಾಂಸಕರು ತಾತ್ಪರ್ಯವೃತ್ತಿಯೆಂಬ ಮೂರನೆಯದನ್ನೂ ಒಪ್ಪಿದ್ದರು. ಕಾವ್ಯದಲ್ಲಿ ಈ ಮೂರೂ ಇರುತ್ತವೆ ಎನ್ನುವುದು ನಿಜ; ಆದರೆ ಈ ಮೂರನ್ನೂ ಮೀರಿದ ವ್ಯಂಜನಾವೃತ್ತಿ ಕೂಡಿದಾಗ ಮಾತ್ರ ಕಾವ್ಯ ಕಾವ್ಯತ್ವವನ್ನು ಪಡೆಯುತ್ತದೆಯೆಂಬ ಪರಮರಹಸ್ಯ ಆನಂದವರ್ಧನನಿಂದ ಮೊದಲಿಗೆ ನಿರ್ಣೀತವಾಯಿತು. ವಾರ್ತಾ–ಶಾಸ್ತ್ರ–ಕಾವ್ಯ ಇವನ್ನು ಬೇರ್ಪಡಿಸುವ ಒಂದೇ ತತ್ತ್ವವೆಂದರೆ ಧ್ವನಿ. ಧ್ವನಿಯೇ ಕಾವ್ಯದ ಆತ್ಮ. ಮೊದಲ ಎರಡರಲ್ಲಿ ಧ್ವನಿಯಿಲ್ಲ. ಅದರಿಂದಲೇ ಅವು ಕಾವ್ಯವಲ್ಲ. ಧ್ವನಿಯಿದ್ದಾಗ ಕಾವ್ಯವಾಗದೆ ಇರುವುದೂ ಶಕ್ಯವಿಲ್ಲ. ಈ ಧ್ವನಿವ್ಯಾಪಾರ ಶಬ್ದಗತವೂ ಹೌದು, ಅರ್ಥಗತವೂ ಹೌದು, ಅಭಿಧಾಮೂಲವೂ ಆಗಬಹುದು, ಲಕ್ಷಣಾಮೂಲವೂ ಆಗಬಹುದು. ಶಬ್ದ, ಅರ್ಥ ಎರಡೂ ಕಾವ್ಯವಲ್ಲದ ಕಡೆ ವಾಚಕಗಳು ಮಾತ್ರ. ಆದರೆ ಕಾವ್ಯದಲ್ಲಿ ಅವು ವ್ಯಂಜಕಗಳೂ ಆಗಿರುತ್ತವೆ. ವಾಚ್ಯಾರ್ಥ ಲಕ್ಷ್ಯಾರ್ಥಗಳು ಎಲ್ಲರ ಪ್ರತೀತಿಗೂ ಬರುತ್ತವೆ. ವ್ಯಂಗ್ಯಾರ್ಥ ಕೇವಲ ಸಹೃದಯರಿಗೆ ಗೋಚರ.

ಕಾವ್ಯದಲ್ಲಿ ಶಬ್ದಾರ್ಥಗಳಿಂದ ವ್ಯಂಗ್ಯವಾಗುವ ವಿಷಯ ಯಾವುದು ಎಂಬ ಪ್ರಶ್ನೆ ಬರುತ್ತದೆ. ತಾತ್ತ್ವಿಕವಾಗಿ ನೋಡಿದರೆ ಮೊದಲನೆಯಸ್ಥಾನ ರಸಾದಿಗಳಿಗೆ ಮೀಸಲು. ಏಕೆಂದರೆ ಅವಕ್ಕೆ ವ್ಯಂಗ್ಯದಶೆಯೊಂದೇ ವಿನಾ ವಾಚ್ಯದಶೆಗೆ ಅವಕಾಶವಿಲ್ಲ. ರಸಾದಿಗಳನ್ನು ಶಬ್ದಾರ್ಥಗಳಿಂದ ಸೂಚಿಸಬಹುದೇ ಹೊರತು, ಸಹೃದಯನಲ್ಲಿ ಮೂಡಿಸಬಹುದೇ ಹೊರತು ಅವುಗಳ ಹೆಸರನ್ನು ಹೇಳಿ ಅನುಭವಕ್ಕೆ ತಂದುಕೊಡಲಾಗುವುದಿಲ್ಲ. ಆದರೆ ವಿಧಿ–ನಿಷೇಧಾದಿ ವಸ್ತುಗಳನ್ನೂ ಅಭಿಪ್ರಾಯ ವಿಶೇಷಗಳನ್ನೂ ವಾಚ್ಯವಾಗಿ ಹೇಳುವುದು ಸಾಧ್ಯವಿರುವಂತೆ ವ್ಯಂಗ್ಯವಾಗಿಯೂ ಸೂಚಿಸಬಹುದು. ವಾಚ್ಯ ಅಲಂಕಾರಗಳಂತೆ ವ್ಯಂಗ್ಯ ಅಲಂಕಾರಗಳೂ ಇರುವುದು ಅಶಕ್ಯವಲ್ಲ. ಹೀಗೆ ವ್ಯಂಗ್ಯಗಳು ಕಾವ್ಯದಲ್ಲಿ ಮೂರು ಬಗೆ: 1. ರಸಾದಿ; 2. ವಸ್ತು; 3. ಅಲಂಕಾರ. ಮೂರರಲ್ಲೂ ವ್ಯಂಜಕತ್ವವಿರುತ್ತದೆ. ವ್ಯಂಜಕತ್ವವೊಂದೇ ಇರುವುದು ಶಕ್ಯವಿಲ್ಲವಾಗಿ ವಾಚಕತ್ವವೂ ಅದರ ಹಿಂದೆ ಇದ್ದೇ ಇರುತ್ತದೆ. ವ್ಯಂಜಕತ್ವವೇ ವಾಚಕತ್ವಕ್ಕಿಂತ ಕವಿ ವಿವಕ್ಷೆಯಲ್ಲಿ ಪ್ರಧಾನವಾಗಿದ್ದಾಗ ಉತ್ತಮಕಾವ್ಯ ಅಥವಾ ಧ್ವನಿಕಾವ್ಯವಾಗುತ್ತದೆ. ಅಪ್ರಧಾನವಾಗಿದ್ದಾಗ ಗುಣೀಭೂತವ್ಯಂಗ್ಯ ಅಥವಾ ಮಧ್ಯಮಕಾವ್ಯವಾಗುತ್ತದೆ. ಇಲ್ಲವೆನ್ನುವ ಮಟ್ಟಕ್ಕಿಳಿದುಬಿಟ್ಟರೆ ಅಕಾವ್ಯ ಅಥವಾ ಚಿತ್ರಕಾವ್ಯವೆನ್ನಬಹುದು. ಹೀಗೆ ಕಾವ್ಯದ ಮಟ್ಟವನ್ನಳೆಯಲು ಧ್ವನಿತತ್ತ್ವ ಅತ್ಯಂತ ಉಪಯುಕ್ತವಾಗುತ್ತದೆ.

ಧ್ವನಿತತ್ತ್ವದ ವ್ಯಾಪಕದೃಷ್ಟಿಕೋನದಿಂದ ನೋಡಿದರೆ ಅಲಂಕಾರಗಳೆಲ್ಲ ವಾಚ್ಯಾರ್ಥ ಇಲ್ಲವೆ ಲಕ್ಷ್ಯಾರ್ಥದ ಪ್ರಕಾರ ವಿಶೇಷಗಳೆನಿಸಿ ಪರಿಮಿತವೆನಿಸುತ್ತವೆ. ಯಾವುದೇ ಅಲಂಕಾರದ ಅಥವಾ ಅಲಂಕಾರಗಳ ಕ್ಷೇತ್ರ ಅಪರಿಮಿತವಾದ ಧ್ವನಿಯ ವಿಸ್ತಾರವನ್ನು ಪಡೆಯಲಾರದು. ಅಲಂಕಾರಾದಿ ಮುಖ್ಯಾರ್ಥದ ಪ್ರಾಧಾನ್ಯವಿವಕ್ಷೆಯಿದ್ದಾಗಲೆಲ್ಲ, ರಸಾದಿ ವ್ಯಂಗ್ಯಾರ್ಥ ಗುಣೀಭೂತವಾಗಿ, ಕಾವ್ಯ ಗುಣೀಭೂತವ್ಯಂಗ್ಯವೆನಿಸುವುದೇ ಹೊರತು ಧ್ವನಿಯೆನಿಸದು. ಆದರೂ ಅದರ ಸೌಂದರ್ಯಕ್ಕೆ ಬಾಧೆಯೇನೂ ಇಲ್ಲ. ರಸಾದಿಶೂನ್ಯವಾದ ರಚನೆ ಮಾತ್ರ ಹೇಯ. ತಾತ್ತ್ವಿಕವಾಗಿ ನೋಡಿದರೆ ಕವಿಪ್ರತಿಭೆಯಲ್ಲಿ ರಸಾದಿಪರತ್ವ ಶೂನ್ಯವಾಗುವುದೇ ಅಸಂಭವ. ಏಕೆಂದರೆ ಪ್ರತಿಭಾ ವಿಷಯವಾದ ನೀರಸವಸ್ತು ಕೂಡ ಯಾವುದೋ ಒಂದು ರಸಾದಿಗೆ ವಿಭಾವವಾಗಿಯೇ ಇರುತ್ತದೆ. ದುಷ್ಕರ ಚಿತ್ರಬಂಧಾದಿಗಳು ಮಾತ್ರ ನೀರಸವಾಗಬಹುದು, ಅಷ್ಟೆ. ಕೃತ್ರಿಮತೆ ಸಂಸ್ಕೃತ ಸಾಹಿತ್ಯದಲ್ಲಿ ಹೆಚ್ಚಾಗುತ್ತಿದ್ದಾಗ ಸಮಯೋಚಿತ ಸಲಹೆಯನ್ನು ಧ್ವನಿತತ್ತ್ವ ನೀಡಿತೆನ್ನಬಹುದು.

ಧ್ವನಿ ಯ ಪ್ರಕಾರಗಳೆಷ್ಟು? ಉದಾಹರಣೆಗಳು ಯಾವುವು? ಎಂಬುದನ್ನು ವಿವರವಾಗಿ ಅರಿಯಲು ಧ್ವನ್ಯಾಲೋಕವನ್ನೇ ಓದಬೇಕು. ಸುವ್ಯವಸ್ಥಿತವಾದ ಧ್ವನಿವಿಭಾಗ ಕ್ರಮವನ್ನು ಚಿತ್ರಮುಖೇನ ಹೀಗೆ ತೋರಿಸಬಹುದು :

ಗ್ರಂಥದ ಎರಡನೆಯ ಅಧ್ಯಾಯದಲ್ಲೆಲ್ಲ ವ್ಯಂಗ್ಯಮುಖೇನ ಧ್ವನಿಯ ವಿವರಣೆ ಬಂದರೆ ವ್ಯಂಜಕಗಳ ವಿವರಣೆ ಮೂರನೆಯದರಲ್ಲಿ ತುಂಬಿದೆ. ಶಬ್ದಭಾಗಗಳು ಕೂಡ ರಸಕ್ಕೆ ವ್ಯಂಜಕವಾಗುವುದನ್ನೂ ಇಡೀಪ್ರಬಂಧವೇ ರಸಪರವಾಗಿರುವ ಸೂಕ್ಷ್ಮತತ್ತ್ವವನ್ನೂ ಮಾರ್ಮಿಕವಾಗಿ ಇಲ್ಲಿ ವಿವರಿಸಲಾಗಿದೆ. ಹೀಗೆ ರಸದೃಷ್ಟಿಯಿಂದ ಕವಿಗಳ ಮಾರ್ಗದರ್ಶನಕ್ಕೆ ಹೊರಟ ಆನಂದವರ್ಧನ ಕಥಾವಸ್ತುವಿನ ಯೋಜನೆ, ಪಾತ್ರಚಿತ್ರಣ, ಶೈಲಿ ಎಲ್ಲವನ್ನೂ ನಾಟಕ, ಮಹಾಕಾವ್ಯ, ಭಾವಗೀತೆ, ಗದ್ಯ ಇತ್ಯಾದಿ ವಿವಿಧ ಕಾವ್ಯಪ್ರಕಾರಗಳಲ್ಲಿ ಹೇಗೆ ರಸೌಚಿತ್ಯ ನಿಯಮ ನಿಯೋಜಿಸುತ್ತದೆಂಬುದನ್ನು ಸುಂದರ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾನೆ. ಕಡೆಯ ಅಧ್ಯಾಯದಲ್ಲಿ ಈ ತತ್ತ್ವದ ಅನುಸರಣೆಯಿಂದ ಹೇಗೆ ಪ್ರತಿಭಾವಂತ ಕವಿಗೆ ಸಿದ್ಧಿಸುವುದೆಂದು ತೋರಿಸಿದ್ದಾನೆ. ರಾಮಾಯಣ, ಮಹಾಭಾರತ ಮುಂತಾದ ಮಹಾಕಾವ್ಯಗಳಲ್ಲಿ ಕೂಡ ಹೇಗೆ ಪ್ರಧಾನವಾಗಿ ಕರುಣ ಹಾಗೂ ಶಾಂತರಸಗಳು

ಬಂದಿವೆಯೆಂದು ವಿವರಿಸಿದ್ದಾನೆ. ಹೀಗೆ ಧ್ವನ್ಯಾಲೋಕದಲ್ಲಿ ಶಾಸ್ತ್ರೀಯವಾದ ಕಾವ್ಯತತ್ತ್ವ ಪ್ರತಿಪಾದನೆಯ ಜೊತೆಗೆ ಸಾರಗ್ರಾಹಿಯಾದ ಸಾಹಿತ್ಯವಿಮರ್ಶೆ ಕೂಡ ಮೂಡಿಬಂದಿದೆ.




ನಾಟಕಾದಿಗಳಿಗೆ ಸೀಮಿತವಾಗಿದ್ದ ರಸಸೂತ್ರವನ್ನು ಯಥೋಚಿತವಾಗಿ ಕಾವ್ಯಕ್ಷೇತ್ರಕ್ಕೂ ಸಮನ್ವಯ ಮಾಡಿದ್ದರಿಂದ ಸಂಸ್ಕೃತ ಅಲಂಕಾರಶಾಸ್ತ್ರದ ಇತಿಹಾಸದಲ್ಲಿ ಆನಂದವರ್ಧನನ ಕೀರ್ತಿ ಅಜರಾಮರವಾಗಿದೆ. **(ನೋಡಿ– ರಸಸಿದ್ಧಾಂತ ಧ್ವನಿ).** (ಕೆ.ಕೆ)

**ಆನಂದ ವಿಕಟನ್ :** ವಿಕಟನ್ ಗುಂಪಿಗೆ ಸೇರಿದ ಒಂದು ತಮಿಳು ವಾರಪತ್ರಿಕೆ. ಸ್ಥಾಪನೆ 1924. ಪ್ರಸಿದ್ಧ ಸಾಹಿತಿ ಎಸ್.ಎಸ್. ವಾಸನ್ 1929ರಲ್ಲಿ ಅದನ್ನು 200ರೂ.ಗಳಿಗೆ ವಹಿಸಿಕೊಂಡು ಅದಕ್ಕೆ ಆಕರ್ಷಕ ಸ್ವರೂಪ, ಜನಪ್ರಿಯ ವೈವಿಧ್ಯಗಳನ್ನಿತ್ತು, ಅತ್ಯಧಿಕ ಪ್ರಸಾರವುಳ್ಳದ್ದನ್ನಾಗಿ ಮಾಡಿದರು. ಈ ಶತಮಾನದ ತಮಿಳು ಸಾಹಿತ್ಯ ಪ್ರಪಂಚದಲ್ಲಿ ಧ್ರುವನಕ್ಷತ್ರದಂತೆ ಬೆಳಗಿದ ಶ್ರೇಷ್ಠ ಕಥೆಗಾರ, ಕಾದಂಬರಿಕಾರ, ಪತ್ರಿಕೋದ್ಯಮಿ ಎನಿಸಿದ ಆರ್. ಕೃಷ್ಣಮೂರ್ತಿಯವರ (ಕಲ್ಕಿ) ನೆರವು ದೊರೆತಮೇಲೆ ಪತ್ರಿಕೆಯ ಖ್ಯಾತಿ ಮತ್ತೂ ಹೆಚ್ಚಿ ದಕ್ಷಿಣ ಭಾರತದ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗದಲ್ಲಿ ವಿಖ್ಯಾತವಾಯಿತು. ವಿನೋದ, ಪ್ರಹಸನಗಳಲ್ಲಿ ಪಂಚ್ ನಂತೆ ಉತ್ತಮ ಸ್ಥಾನಗಳಿಸಿತು. ರಾಜಕೀಯ ವ್ಯಂಗ್ಯಚಿತ್ರಗಳ ಪ್ರಕಟಣೆ ಪ್ರಾರಂಭಿಸಿದ ಪ್ರಥಮ ಭಾರತೀಯ ಪತ್ರಿಕೆಗಳಲ್ಲಿ ಇದೂ ಒಂದು. ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ಸಿಗೆ ಅಚಲನಿಷ್ಠೆಯಿಂದ ಬೆಂಬಲ ನೀಡಿತು. ಈ ಗುಂಪಿನ ಇತರ ಪತ್ರಿಕೆಗಳೆಂದರೆ ಜೂನಿಯರ್ ವಿಕಟನ್, ಚುಟ್ಟಿ ವಿಕಟನ್, ನಾನಯಂ ದಿಕ್‌ಬನ್, ಶಕ್ತಿ ವಿಕಟನ್, ಮೋಟಾರ್ ವಿಕಟನ್ ಮತ್ತು ಪಸುಮೈ ವಿಕಟನ್.

ಎಂಬತ್ತೇಳು ವರ್ಷಗಳಾದರೂ ಈ ಪತ್ರಿಕೆ ತನ್ನ ಜನಪ್ರಿಯತೆಯನ್ನು ಕಳದುಕೊಂಡಿಲ್ಲ, ಇದು ಅನೇಕ ಉದಯೋನ್ಮುಖ ತಮಿಳು ಲೇಖಕರಿಗೆ ಅವಕಾಶ ಕೊಟ್ಟು, ಅವರನ್ನು ಹೆಸರಾಂತ, ಸುಜಾತಾ ರಂಗರಾಜನ್, ಮದನ್, ಕಲ್ಯೆಮಣ ಕೊತ್ತಮಂಗಲಂ ಸುಬು, ನಾಡೋಡಿ.

ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್ ಪ್ರಕಾರ ಜುಲೈ – ಡಿಸೆಂಬರ್ 2004ರಲ್ಲಿ ಈ ವಾರಪತ್ರಿಕೆಯ ಪ್ರಸಾರ ಸಂಖ್ಯೆ 4,30,534 ಇತ್ತು. (ಎಂ.ಕೆ.)

**ಆನಿ ಬೆಸೆಂಟ್ :** 1847–1933. ಬಹುಮುಖವಾದ (ಅಸಾಧಾರಣ) ಪ್ರತಿಭೆ, ತೀಕ್ಷ್ಣಬುದ್ಧಿ, ತಾನು ಸರಿಯೆಂದು ತಿಳಿದಿದ್ದನ್ನು ಎಂಥ ಪರಿಸ್ಥಿತಿಯಲ್ಲೂ ಬಿಟ್ಟುಕೊಡದ ದಿಟ್ಟತನ, ಸಂಘಟನಾ ಶಕ್ತಿ, ಬೆರಗುಗೊಳಿಸುವ ವಾಕ್ಪಟುತ್ವ ಇವೆಲ್ಲವನ್ನೂ ಹೊಂದಿ, ಭಾರತವನ್ನು ತನ್ನ ಮಾತೃಭೂಮಿಯನ್ನಾಗಿ ಮಾಡಿಕೊಂಡು, ಅದರ ಭವ್ಯಸಂಸ್ಕೃತಿಯ ಪುನರುಜ್ಜೀವನಕ್ಕೆ, ಭಾರತೀಯರ ದಾಸ್ಯವಿಮೋಚನೆಗೆ, ನಲವತ್ತು ವರ್ಷಕಾಲ ಅವಿಶ್ರಾಂತವಾಗಿ ದುಡಿದ ಐರಿಷ್ ಮಹಿಳೆ. ಹುಟ್ಟಿದ್ದು ಲಂಡನ್ನಿನಲ್ಲಿ. ಮನೆಯಲ್ಲೇ ವಿದ್ಯಾಶಿಕ್ಷಣವಾಯಿತು. ಫ್ರೆಂಚ್, ಜರ್ಮನ್ ಮುಂತಾದ ಭಾಷೆಗಳನ್ನು ಕಲಿತು, ತನ್ನ ಇಪ್ಪತ್ತನೆಯ ವಯಸ್ಸಿನಲ್ಲೇ ಪಾಂಡಿತ್ಯವನ್ನೂ, ಅಸಾಧಾರಣ ಬುದ್ಧಿಶಕ್ತಿಯನ್ನೂ ಪಡೆದಿದ್ದಳು. ಫ್ರಾಂಕ್ ಬೆಸೆಂಟನೊಡನೆ ವಿವಾಹವಾಯಿತು. ಆತನೊಬ್ಬ ಆ್ಯಂಗ್ಲಿಕನ್ ಕ್ರೈಸ್ತಪಾದ್ರಿ. ಮತ ವಿಷಯಗಳಲ್ಲೂ ಅಂಧ ಶ್ರದ್ಧೆಯನ್ನೊಪ್ಪದ ಅವಳಿಗೆ ಗಂಡನ ಅಂಧಾಭಿಮಾನ ಬೇಸರ ತಂದಿತು. ಇವಳ ಮತಶ್ರದ್ಧೆಯೂ ಬದಲಾವಣೆ ಹೊಂದಿತು. (ದೇವಾಸ್ತಿಕ್ಯವನ್ನೇ) ನಂಬದೆ ನಿರೀಶ್ವರವಾದಿಯಾದಳು. ಇದು ದಾಂಪತ್ಯ ವಿಚ್ಛೇದನದಲ್ಲಿ ಕೊನೆಗಂಡಿತು. (1873) ಮತಧರ್ಮಗಳ ವಿಷಯದಲ್ಲಿ ಸ್ವತಂತ್ರ ವಿಚಾರಿಯಾಗಿದ್ದ ಚಾರಲ್ಸ್ ಬ್ರಾಡ್‌ಲ ಎಂಬುವನೊಂದಿಗೆ ಕೆಲಸಮಾಡಿ ಸಂತಾನ ನಿಯಂತ್ರಣ ಚಳವಳಿಯಲ್ಲಿ ಭಾಗವಹಿಸಿದಳು. ಸಂತಾನ ದೈವದತ್ತವಾದದ್ದು, ಅದರ ನಿಯಂತ್ರಣ ದೈವದ್ರೋಹ ಎಂದು ನಂಬಿದ್ದ ಕ್ರೈಸ್ತ ಸನಾತನಿಗಳಿಗೆ ಇವಳ ಚಟುವಟಿಕೆಗಳು ಅಸಹನೀಯವಾವು. ಈಕೆಗೆ ತುಂಬ ಕಿರುಕುಳ ಕೊಟ್ಟರು. ಇವಳ ಮೇಲೆ ಕಾನೂನುಕ್ರಮವೂ ಜರುಗಿ ತಪ್ಪಿತಸ್ಥಳಲ್ಲವೆಂದು ತೀರ್ಮಾನವಾಯಿತು. ಈ ಕಾಲಕ್ಕಾಗಲೇ ತನ್ನ ಅಸಾಧಾರಣ ಬುದ್ಧಿಶಕ್ತಿ, ನಿರ್ವ್ಯಾಜ ಮನೋಭಾವ,

ಮನಸೆಳೆಯುವ ವಾಕ್ಪಟುತ್ವ, ಸಂಘಟನಾ ಸಾಮರ್ಥ್ಯ–ಇವುಗಳಿಂದ ಜನಾನುರಾಗವನ್ನು ಸಂಪಾದಿಸಿದ್ದಳು. ಇವಳ ತೀವ್ರ ಸುಧಾರಣಾ (ರ್‍ಯಾಡಿಕಲ್) ಧೋರಣೆ ಕೆಲಕಾಲ ಬರ್ನಾರ್ಡ್‌ಷಾರವರ ಸಂಪರ್ಕದಿಂದಾದ ಪರಿಣಾಮವಾಗಿ, ಯಾವ ಸುಧಾರಣೆಯಾಗಲಿ ಮಂದಗತಿಯಿಂದ ಸಾಗಬೇಕೆಂಬ ಫೇಬಿಯನ್ ಸಮಾಜವಾದದ ಕಡೆ ಒಲಿಯಿತು.

ಅಂತಿಮವಾಗಿ ಇವಳ ಅಭಿಪ್ರಾಯಗಳನ್ನು ರೂಪಿಸಿ, ಆಜನ್ಮ ಪರ್ಯಂತ ಅವುಗಳನ್ನು ಕಾರ್ಯಗತಗೊಳಿಸುವುದಕ್ಕೆ ಪ್ರೇರೇಪಿಸಿದ್ದು, 1889ರಲ್ಲಿ ಥಿಯಾಸಫಿಯ ಮೊದಲನೆಯ ಪ್ರವರ್ತಕಳಾದ ಮೇಡಾಂ ಬ್ಲಾವಟ್ಸ್ಕಿಯೊಂದಿಗೆ ಅವಳಿಗೊದಗಿದ ಸಂಪರ್ಕ. ಅತೀಂದ್ರಿಯ ಸಿದ್ಧಾಂತ ವನ್ನೊಳಗೊಂಡ ಬ್ಲಾವಟ್ಸ್ಕಿಯ 'ದಿ ಸೀಕ್ರೆಟ್ ಡಾಕ್ಟ್ರಿನ್' ಎಂಬ ಗ್ರಂಥದ ವಿಚಾರಸರಣಿಗೆ ಮನಸೋತು, ನಾಸ್ತಿಕಳಾಗಿದ್ದ ಬೆಸೆಂಟ್ ಆಸ್ತಿಕಳಾದಳು. 1891ರಲ್ಲಿ ಬ್ಲಾವಟ್ಸ್ಕಿ ಕಾಲವಾದ ಮೇಲೆ ಬೆಸೆಂಟ್ ಥಿಯಸಾಫಿಕಲ್ ಸೊಸೈಟಿಯ ಮುಖಂಡತ್ವವನ್ನು ವಹಿಸಿಕೊಂಡು, ಆಧ್ಯಾತ್ಮಿಕತೆಯ ಜನ್ಮಭೂಮಿಯೆಂದು ತಿಳಿದಿದ್ದ ಭಾರತಕ್ಕೆ 1893ರಲ್ಲಿ ಬಂದಳು. ಪೂರ್ವಜನ್ಮದಲ್ಲಿ ತಾನು ಹಿಂದೂ ಆಗಿದ್ದೆನೆಂಬ ಭಾವನೆ ಬಂದು, ಹಿಂದೂ ಧಾರ್ಮಿಕ ತತ್ತ್ವಗಳಲ್ಲಿ ಅಚಲವಿಶ್ವಾಸ, ನಂಬಿಕೆಗಳನ್ನು ಹೊಂದಿ, ಬೆಸೆಂಟ್ ಅವಕ್ಕೆ ಅನುಸಾರವಾಗಿ ಜೀವಿಸತೊಡಗಿದಳು. ಪರದಾಸ್ಯ, ಅದರಿಂದ ಉಂಟಾಗಿದ್ದ ದಟ್ಟ ದಾರಿದ್ರ್ಯಗಳ ಪರಿಣಾಮವಾಗಿ ಭಾರತೀಯರಲ್ಲಿ ಬೆಳೆದುಬಂದಿದ್ದ ವಿಷಣ್ಣತೆ, ನಿರುತ್ಸಾಹಗಳನ್ನು ಹೋಗಲಾಡಿಸಿ, ಅವರು ತಮ್ಮ ಭವ್ಯಸಂಸ್ಕೃತಿಯ ಹಿರಿಮೆಯನ್ನರಿತು ಅದಕ್ಕನುಸಾರವಾದ ಹೊಸಹುಟ್ಟನ್ನು ರೂಪಿಸಿಕೊಂಡು, ಪ್ರಪಂಚಕ್ಕೆ ಮಾರ್ಗದರ್ಶಿಗಳಾಗುವಂತೆ ಮಾಡಬೇಕೆಂಬ ಉದ್ದೇಶದಿಂದ, ವಿದ್ವತ್‌ಪೂರ್ಣ ಗ್ರಂಥಗಳನ್ನು ಬರೆದಳು. ದೇಶದ ನಾನಾ ಕಡೆ ಸಂಚರಿಸಿ ಭಾಷಣ ಮಾಡಿದಳು. ಅಡ್ಯಾರಿನಲ್ಲಿ ತಾನೇ ಸ್ಥಾಪಿಸಿದ ಥಿಯಾಸಫಿ ಕೇಂದ್ರವನ್ನು ವಿದ್ವಾಂಸರ ವಿಚಾರವಿನಿಮಯ ಕ್ಷೇತ್ರವನ್ನಾಗಿ ಮಾಡಿದಳು. ವಾರಾಣಸಿಯಲ್ಲಿ ಸೆಂಟ್ರಲ್ ಹಿಂದೂ ಕಾಲೇಜ್ ಎಂಬ ಉಚ್ಚಶಿಕ್ಷಣ ವಿದ್ಯಾಶಾಲೆಯನ್ನು ಸ್ಥಾಪಿಸಿದಳು. ರಾಜಕೀಯ ಸ್ವಾತಂತ್ರ್ಯವಿಲ್ಲದೆ ಭಾರತದ ಏಳಿಗೆ ಸಾಧ್ಯವಿಲ್ಲವೆಂಬುದನ್ನರಿತು, ಯಂಗ್ ಇಂಡಿಯಾ ಎಂಬ ಪತ್ರಿಕೆಯನ್ನು ಹೊರಡಿಸಿ ಅದರಲ್ಲಿ ಪ್ರಚಾರ ನಡೆಸಿದಳು. ಹೋಂ ರೂಲ್ ಚಳವಳಿ ಪ್ರಾರಂಭವಾಯಿತು. 1917ರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಳಾಗಿ ಚುನಾಯಿತಳಾದಳು. ಮುಂದೆ ಗಾಂಧೀಜಿ ಪ್ರಾರಂಭಿಸಿದ ಸತ್ಯಾಗ್ರಹ ಮತ್ತು ಅಸಹಕಾರ ಚಳವಳಿಗಳನ್ನು ಅವಳು ಒಪ್ಪಲಿಲ್ಲ. ಅಶಿಕ್ಷಿತ ಜನರ ಕೈಯ್ಯಲ್ಲಿ ಆ ಚಳವಳಿಗಳಿಂದ ರಾಷ್ಟ್ರಘಾತಕ ಕೃತ್ಯಗಳು ನಡೆಯಬಹುದೆಂದು ವಾದಿಸಿದಳು. ಇದರಿಂದ ರಾಜಕೀಯ ರಂಗದಲ್ಲಿ ಅವಳ ಪ್ರಭಾವ ಕುಗ್ಗಿತು. ಅಂತೂ ಈ ಮಹಿಳೆ ಪರಕೀಯಳಾಗಿದ್ದು ಭಾರತದ ಏಳಿಗೆಗೆ ನಡೆಸಿದ ಕಾರ್ಯ ಕೃತಜ್ಞತಾ ದ್ಯೋತಕವಾಗಿದೆ.

**ಆನು ಏಣಿನ ಜೋಡಣೆ :** ಎರಡು ಫಲಕಗಳ ಜೋಡಣೆಯಲ್ಲಿ ಒಂದರ ಏಣು ಅಥವಾ ಅಂಚು ಇನ್ನೊಂದರದಕ್ಕೆ ಆನಿರುವ ವಿಧಾನ **(ಬಟ್ ಜಾಯಿಂಟ್).** ಮೂರನೆಯ ಫಲಕವೊಂದನ್ನು (ಆವರಣಫಲಕವೆಂದು ಇದರ ಹೆಸರು) ಜೋಡಣೆಗೊಳಿಸಬೇಕಾದ ಎರಡು ಫಲಕಗಳ ಮೇಲೆಯೂ ಸ್ವಲ್ಪ ಚಾಚಿರುವಂತೆ ಇಟ್ಟು, ಒಂದೊಂದು ಫಲಕಕ್ಕೂ ಒಂದು ಸಾಲು ರಿವೆಟ್ಟುಗಳಿಂದ ಬಂಧಿಸುವುದು ಸರಳ ರೀತಿಯ ಜೋಡಣೆ. ಇಂಥ ಜೋಡಣೆಯಲ್ಲಿ ಪ್ರಧಾನ ಫಲಕಗಳು ಸೆಳೆತಕ್ಕೆ ಒಳಗಾದಾಗ ಜೋಡಣೆ ಬಾಗುವ ಸಂಭವ ಇದೆ. ಈ ಕಾರಣದಿಂದ ಒತ್ತಡದ ಪಾತ್ರೆಗಳಿಗೆ ಸರಳರೀತಿಯ ಜೋಡಣೆ

ಸಮರ್ಪಕವಲ್ಲ. ಒಂದರ ಬದಲು ಎರಡೂ ಕಡೆ ಆವರಣ ಫಲಕಗಳನ್ನಿಟ್ಟು ಒಂದಕ್ಕಿಂತ ಹೆಚ್ಚು ಸಾಲು ರಿವೆಟ್ಟುಗಳಿಂದ ಬಂಧಿಸಿದರೆ ಜೋಡಣೆ ಹೆಚ್ಚು ಬಲಯುತವಾಗುವುದು ಮತ್ತು ಮೇಲೆ ಹೇಳಿದ ನ್ಯೂನತೆ ತಲೆದೋರದು. ಅಲ್ಲದೆ ಜೋಡಣೆಯ ಸ್ಥಳದಲ್ಲಿ ಪಾತ್ರೆಯ ಒಳಗಿರುವ ಒತ್ತಡದ ದ್ರವ ಅಥವಾ ಅನಿಲ ಹೊರತೂರದಂತೆ ಎರಡೂ ಕಡೆಯ ಆವರಣ ಫಲಕಗಳ ಎರಡು ಅಂಚಿನಲ್ಲೂ ಗಿಡಗಿ ಭದ್ರಪಡಿಸುವ ಸಾಧ್ಯತೆಯೂ ಇದೆ. ಎರಡು ಅಥವಾ ಹೆಚ್ಚು ಸಾಲು ರಿವೆಟ್ಟುಗಳಿರುವಾಗ ಅವುಗಳ ವಿನ್ಯಾಸ ಸರಪಣಿಯಂತೆಯೋ ವಂಕಿವಂಕಿಯಾಗಿಯೋ ಇರಬಹುದು. ಕೆಲವು ಬಾರಿ ಹೊರಸಾಲುಗಳಲ್ಲಿನ ರಿವೆಟ್ಟುಗಳ ಪರಸ್ಪರ ದೂರ ಒಳಸಾಲುಗಳಲ್ಲಿನ $1\,^1/_2$ ಅಥವಾ 2ರಷ್ಟಿರುವುದೂ ಉಂಟು. ಎರಡು ಆವರಣಫಲಕಗಳನ್ನು ಬಳಸಿದಾಗ ಒಂದೊಂದರ ದಪ್ಪ ಪ್ರಧಾನಫಲಕದ 5/8 ರಷ್ಟೂ ಒಂದೇ ಆವರಣಫಲಕ ಇರುವಾಗ ಅದರ ದಪ್ಪ ಪ್ರಧಾನಫಲಕದ 5/4 ರಷ್ಟೂ ಇರುವುದು ಸಾಮಾನ್ಯ ರೂಢಿ. ಆವರಣಫಲಕಗಳ ಅಂಚುಗಳು ನೇರವಾಗಿರಬಹುದು ಅಥವಾ ಅವು ವಂಕಿಯಾಗಿ ಕತ್ತರಿಸಲ್ಪಟ್ಟಿರಬಹುದು. ರಿವೆಟ್ಟುಗಳಿಂದ ಮಾತ್ರವಲ್ಲದೆ ಬೆಸುಗೆಯಿಂದಲೂ ಇಂಥ ಜೋಡಣೆಗಳನ್ನು ಮಾಡಬಹುದು. ವಿದ್ಯುತ್‌ರೋಧ ಬೆಸುಗೆಯ (ರೆಸಿಸ್ಟೆನ್ಸ್ ವೆಲ್ಡಿಂಗ್) ಕ್ರಮದಿಂದ ಫಲಕಗಳ ಅಂಚುಗಳನ್ನು ಒತ್ತಿ ಹಿಡಿದು ಕಡಿಮೆ ವೋಲ್ಟೇಜಿನ ಅಧಿಕ ವಿದ್ಯುತ್ಪ್ರವಾಹವನ್ನು ಹರಿಸುವುದರಿಂದ ಲೋಹದ ಉಷ್ಣತೆ ಕರಗುವ ಮಟ್ಟಕ್ಕೇರಿ ಅಂಚುಗಳು ಕೂಡಿಕೊಳ್ಳುತ್ತವೆ. ವಿದ್ಯುಚ್ಚಾಪದ ಅಥವಾ ಅನಿಲದ ಬೆಸುಗೆಯ (ಆರ್ಕ್‌ಗ್ಯಾಸ್ ವೆಲ್ಡಿಂಗ್) ಕ್ರಮದಲ್ಲಿ ಫಲಕಗಳ ಅಂಚುಗಳ ನಡುವೆ ಸಂದುಬಿಡಿಸಿದ್ದು ಅದನ್ನು ಬೆಸುಗೆಯ ಕಬ್ಬಿಣದ ಕಡ್ಡಿಯನ್ನು ಕರಗಿಸಿ ತುಂಬಲಾಗುತ್ತದೆ. ಬೆಸುಗೆಯ ಹಿಡಿತ ಹೆಚ್ಚು ಭದ್ರವಾಗಿಸ ಲೋಸುಗ ದಪ್ಪವಾದ ಫಲಕಗಳ ಅಂಚುಗಳನ್ನು V-ಆಕಾರವಾಗಿಯೋ U-ಆಕಾರವಾಗಿಯೋ ಕತ್ತರಿಸಿದ್ದು ವೆಜ್ಜದಲ್ಲಿ (ಗ್ರೂವ್) ಲೋಹ ತುಂಬಲಾಗುತ್ತದೆ. ಸರಿಯಾದ ರೀತಿಯಲ್ಲಿ ಮಾಡಿದ ಬೆಸುಗೆಯ ಜೋಡಣೆ ಅಖಂಡ ಫಲಕದಷ್ಟೇ ಬಲಯುತ. ಅದೇ ರಿವೆಟ್ಟುಗಳಿಂದ ಆದ ಜೋಡಣೆ ಅಷ್ಟು ಬಲಯುತವಲ್ಲ. (ಬಿ.ಆರ್.ಎನ್.)

**ಆನುವಂಶಿಕ ವರ್ಗೀಕರಣ :** ಪರಸ್ಪರ ಹೋಲಿಕೆಯುಳ್ಳ ಭಾಷೆಗಳು ಯಾವುದೂ ಒಂದು ಮೂಲಭಾಷೆಯಿಂದ ಹುಟ್ಟಿ, ಕಾಲಕ್ರಮದಲ್ಲಿ ಕವಲೊಡೆದು ವಿಕಾಸ ಹೊಂದಿರ ಬೇಕೆಂದು ಭಾವಿಸಿ ವಂಶಗಳ ಗುಣಲಕ್ಷಣಗಳಿಗನುಸಾರವಾಗಿ ಭಾಷೆಗಳನ್ನು ವಿಂಗಡಿಸುವ ವಿಧಾನ (**ನೋಡಿ–ಭಾಷೆಗಳ ವರ್ಗೀಕರಣ**). ಆಯಾ ಭಾಷೆಗಳಲ್ಲಿರುವ ನಿತ್ಯೋಪಯೋಗಿ ಶಬ್ದಗಳಲ್ಲಿ ಕಂಡುಬರುವ ಸಾಮ್ಯಗಳನ್ನೂ ಭಾಷಾವಿಜ್ಞಾನಕ್ಕನುಸಾರವಾಗಿ ನಿರ್ಣಯಿಸಬಹು ದಾದ ಧ್ವನ್ಯನುರೂಪತೆಗಳನ್ನೂ ಅವಲಂಬಿಸಿ ಭಾಷಾವಿಜ್ಞಾನಿಗಳು ಅನೇಕ ಭಾಷಾವಂಶಾವಳಿ ಗಳನ್ನು ವಿಂಗಡಿಸಿರುತ್ತಾರೆ. ಈ ತತ್ತ್ವವನ್ನು ಅನುಸರಿಸಿ ವಿಂಗಡಿಸಿದ ಪರಸ್ಪರ ಸಂಬಂಧವುಳ್ಳ ಭಾಷೆಗಳನ್ನು ಜ್ಞಾತಿ (ಕಾಗ್ನೇಟ್) ಭಾಷೆಗಳು ಎಂದು ಕರೆಯುತ್ತಾರೆ. ಈ ಮೂಲಕ ಆಯಾ ಭಾಷಾವರ್ಗದ ಮೂಲಭಾಷೆಯನ್ನೂ ಅದರ ರಚನೆಯನ್ನೂ ಗುರುತಿಸುವ ಪ್ರಯತ್ನಗಳು ನಡೆದಿವೆ. ಉದಾಹರಣೆಗೆ ದ್ರಾವಿಡ ಭಾಷಾವರ್ಗದಲ್ಲಿ ತಮಿಳು, ತೆಲುಗು, ಕನ್ನಡ, ಮಲಯಾಳ ಮೊದಲಾದ ಗ್ರಾಂಥಿಕಭಾಷೆಗಳಲ್ಲದೆ ಬ್ರಾಹೂಇ, ಕೊತ, ಕೊಡವ, ಕೊಲಾಮಿ, ಕೊಂಡ, ಕೂಇ, ಕುವಿ, ಕುರುಖ್, ಮಾಲ್ತೊ, ನಾಯ್ಕಿ, ಪರ್ಜಿ, ತೊದ, ತುಳು, ಬಡಗ, ಮೊದಲಾದ ಆಡು ಭಾಷೆಗಳೂ (ಸ್ಪೋಕನ್ ಲ್ಯಾಂಗ್ವೇಜಸ್) ಅಡಕವಾಗುತ್ತವೆ. ಈ ಪ್ರಚಲಿತ ಭಾಷೆಗಳ ಆಧಾರದ ಮೇಲೆ ಇಂದು ಅಲಭ್ಯವಾಗಿರುವ ಮೂಲ ದ್ರಾವಿಡಭಾಷೆಯ ಸ್ವರೂಪ ಹೇಗಿರಬಹುದೆಂದು ಪುನಾರಚಿಸುವ ಪ್ರಯತ್ನವನ್ನು ದ್ರಾವಿಡಭಾಷಾ ವಿಜ್ಞಾನಿಗಳು ಮಾಡಿರುತ್ತಾರೆ. ಆನುವಂಶಿಕ ವರ್ಗೀಕರಣ ಸಿದ್ಧಾಂತದ ನೆರವಿನಿಂದ ಇಂಥ ಹಲವಾರು ಭಾಷಾ ವಂಶಾವಳಿಗಳನ್ನು ರಚಿಸಲಾಗಿದೆ. (ವಿ.ಜಿ.)

**ಆನುಷಂಗಿಕ ಮೊಗ್ಗುಗಳು :** ಕಕ್ಷಗಳಿಂದ ಕುಡಿಯೊಡೆಯುವ ಹೆಚ್ಚುವರಿ ಮೊಗ್ಗುಗಳು (ಅಕ್ಸೆಸ್ಸರಿ ಬಡ್ಸ್). ಡ್ಯೂರಂಟ ಎಂಬ ಮುಳ್ಳುಗಿಡದಲ್ಲಿ ಇವನ್ನು ಕಾಣಬಹುದು. ಅರಿಸ್ಟೊಲೋಕಿಯಾ, ವಾಲ್‌ನಟ್ ಇವುಗಳಲ್ಲಿನ ಆನುಷಂಗಿಕ ಮೊಗ್ಗುಗಳು ಒಂದರ ಮೇಲೊಂದು ಕುಡಿಯೊಡೆಯುತ್ತವೆ. ಅವನ್ನು ಆಚ್ಛಾದಿತ ಮೊಗ್ಗುಗಳೆನ್ನುತ್ತಾರೆ. (ಸೂಪರ್‌ಪೋಸ್ಡ್ ಬಡ್ಸ್). ಪಲಾಂಡು (ಲಿಲಿಯೇಸೀ) ಮತ್ತು ದತ್ತೂರ ಜಾತಿಯ (ಸೊಲೆನೇಸೀ ಕುಟುಂಬದ) ಬದನೆ ಮತ್ತು ಮೆಣಸಿನ ಗಿಡಗಳ ಕಕ್ಷಗಳಲ್ಲಿ ಅಕ್ಕಪಕ್ಕಗಳಿಂದ ಮೊಗ್ಗುಗಳು ಕುಡಿಯೊಡೆಯುತ್ತವೆ. ಕೆಲವೊಮ್ಮೆ ಅವು ಗೊಂಚಲು ಗೊಂಚಲಾಗಿರುವುದೂ ಉಂಟು. ಗೊಂಚಲುಗಳು ಸಂಯೋಗಗೊಂಡು ಸಂಕೀರ್ಣ ಕೊಂಬೆಯಾಗಿ ರೂಪಾಂತರ ಗೊಳ್ಳುವುದುಂಟು. ಅಮರಬಳ್ಳಿ ಎಂಬ ಪರಾವಲಂಬಿ ಬಳ್ಳಿಯಲ್ಲಿನ ಏಕೈಕ ಮೂಲಮೊಗ್ಗು ಕವಲೊಡೆದು ಒಂದೇ ಕಕ್ಷದಿಂದ ಅನೇಕ ಆನುಷಂಗಿಕ ಮೊಗ್ಗುಗಳನ್ನು ಕುಡಿಯೊಡೆಸುವುದು. (ಎಂ.ಜಿ.)

**ಆನೆ :** ಪ್ರೊಬಾಸಿಡಿಯ ಕುಲಕ್ಕೆ ಸೇರಿದ ಸ್ತನಿ. ಜೀವಂತ ಭೂಚರ ಪ್ರಾಣಿಗಳಲ್ಲಿ ಅತಿ ದೊಡ್ಡದು. ಸದ್ಯಕ್ಕೆ ಇರುವ ಆಫ್ರಿಕದ ಆನೆ, ಲೋಕ್ಸೊಡಾಂಟ ಆಫ್ರಿಕನ ಮತ್ತು ಏಷ್ಯದ ಆನೆ, ಎಲಿಫಾಸ್ ಮ್ಯಾಕ್ಸಿಮಸ್ ಎಲಿಫ್ಯಾಂಟಿಡೀ ಕುಟುಂಬದ ಪ್ರಭೇದಗಳು. ಇವೆರಡಕ್ಕೂ ಎತ್ತರದಲ್ಲೂ ಕಿವಿ ಮತ್ತು ದಂತ ರಚನೆಯಲ್ಲೂ ಸಾಕಷ್ಟು ವ್ಯತ್ಯಾಸಗಳಿವೆ. ಏಷ್ಯದ ಆನೆಗಳು ಇಂಡಿಯ, ಮಲಯ, ಮಯನ್ಮಾರ್, ವಿಯೆಟ್ನಾಂ, ಶ್ರೀಲಂಕದ್ವೀಪ, ಸುಮಾತ್ರಗಳಲ್ಲಿ ಇವೆ; ಆಫ್ರಿಕದ ಆನೆಗಳು ಸಹರ ಮರುಭೂಮಿಯ ದಕ್ಷಿಣಕ್ಕಿರುವ ಆಫ್ರಿಕ ಖಂಡದ ಪ್ರದೇಶಗಳಲ್ಲಿ ವಾಸಿಸುತ್ತವೆ. ಕಾಡುಪ್ರದೇಶ, ಹುಲ್ಲುಗಾವಲು, ಕಣಿವೆ ಪ್ರದೇಶಗಳು ಇವುಗಳ ವಾಸಸ್ಥಾನ.



ಚಿತ್ರ 1. ಮ್ಯಾಸ್ಟೊಡಾನ್ ಪ್ರಾಣಿಯ ತಲೆಬುರುಡೆ

**ಆನೆಯ ಪೂರ್ವಚರಿತ್ರೆ :** ಆನೆಯ ಪಳೆಯುಳಿಕೆಗಳು ಆಲಿಗೋಸಿನ್ ಕಾಲದಿಂದಲೂ ದೊರೆತಿವೆ. ಈ ಕಾಲದಲ್ಲಿ ಸಿಕ್ಕಿರುವುದು ಫಿಯೋಮಿಯ ಎಂಬ ಪ್ರಾಣಿಯ ಪಳೆಯುಳಿಕೆ. ಇದು ಆಫ್ರಿಕ ಖಂಡದಲ್ಲಿತ್ತು. ಇದಕ್ಕಾಗಲೆ ಮೇಲು ದವಡೆಯ ಕೋರೆ ಹಲ್ಲುಗಳು ಉದ್ದವಾಗಿ ದ್ದುವು. ಮೂತಿ ಬೆಳೆಯಲಾರಂಭಿಸಿತ್ತು. ಮುಂದೆ ಮಯೋಸೀನ್ ಕಾಲದಲ್ಲಿನ ಟ್ರೈಲೊಫೊಡಾನ್ ಎಂಬ ಪ್ರಾಣಿಯ ಪಳೆಯುಳಿಕೆ ಸಿಕ್ಕಿದೆ. ಇದು ಫಿಯೋಮಿಯ ರೀತಿಯ ಜೀವಿಗಳಿಂದ ಹುಟ್ಟಿಬಂದಿರಬೇಕೆಂದು ಅಭಿಪ್ರಾಯಪಡಲಾಗಿದೆ. ಇದು ಇಂದಿನ ಆನೆಯಷ್ಟೇ ದೊಡ್ಡದಾಗಿತ್ತು. ಆದರೆ ಇದರ ಕೆಳದವಡೆ ಬಹಳ ದೊಡ್ಡದು. ಮತ್ತಿತರ ಶರೀರ ರಚನೆಗಳು ಇಂದಿನ ಆನೆಯಂತೆಯೇ ಇದ್ದುವು.



ಚಿತ್ರ 2. ಈಗ ನಾಮಾವಶೇಷವಾಗಿರುವ, ದಕ್ಷಿಣ ಭಾರತದ ಮ್ಯಾಸ್ಟೊಡಾನ್

ಚಿತ್ರ 3. ಕೂದಲುಳ್ಳ ಮ್ಯಾಮತ್

ಫಿಯೋಮಿಯದಿಂದ ಹುಟ್ಟಿಬಂದ ಜೀವಿಗಳು ಪರಿಸರದ ಪ್ರಭಾವಕ್ಕೊಳಗಾಗಿ ವಿಕಾಸ ಹೊಂದಿ ಪ್ಲಿಯೋಸಿನ್ ಕೊನೆಯ ಭಾಗದಲ್ಲಿ ಸ್ಟೀಗೋಡಾಂಟ ಎಂಬ ಜೀವಿಗಳನ್ನು ಕೊಟ್ಟವು. ಈ ಸ್ಟೀಗೋಡಾಂಟಗಳಿಂದಲೇ ಇಂದಿರುವ ಆಫ್ರಿಕದ ಆನೆಗಳು ಮತ್ತು ಏಷ್ಯದ ಆನೆಗಳು ಹುಟ್ಟಿಬಂದಿವೆ. ಇವೆರಡರ ಜೊತೆಯಲ್ಲಿಯೇ ಹುಟ್ಟಿ ಬಂದ ಮ್ಯಾಮತ್ಸ್

ಎಂಬ ಗಜಗಳು ಪ್ಲೈಸ್ಟೊಸೀನ್ ಕೊನೆಯ ಭಾಗದಲ್ಲಿಯೇ ನಾಶವಾದುವು. ಭಾರತ ದೇಶದ ಆನೆಗಳ ತಲೆ ದೊಡ್ಡವು. ಕಿವಿ ಕಣ್ಣುಗಳು ಚಿಕ್ಕವು. ಸೊಂಡಿಲು ಬುಡದಲ್ಲಿ ದಪ್ಪನಾಗಿಯೂ ತುದಿಯಲ್ಲಿ ಸಣ್ಣದಾಗಿಯೂ ಇದೆ. ಮುಂದಿನ ಕಾಲುಗಳಲ್ಲಿ ಐದೈದು ಉಗುರುಗಳು, ಹಿಂದಿನ ಕಾಲುಗಳಲ್ಲಿ ನಾಲ್ಕು ನಾಲ್ಕು ಉಗುರುಗಳು, ಒಟ್ಟು ನಾಲ್ಕು ಕಾಲುಗಳಿಂದ 18 ಉಗುರುಗಳಿವೆ. ಗಂಡು ಆನೆಗಳಿಗೆ ಮೇಲಿನ ದವಡೆಯಲ್ಲಿ ಎರಡು ದೊಡ್ಡ ದಂತಗಳಿವೆ. ಆದರೆ ಹೆಣ್ಣು ಆನೆಗಳಿಗೆ ದಂತಗಳು ಇರುವುದಿಲ್ಲ. ಕೆಲವು ಗಂಡು ಆನೆಗಳಿಗೂ ದಂತಗಳು ಇರುವುದಿಲ್ಲ. ಅಂಥವನ್ನು ಮಕ್ನ ಎಂದು ಕರೆಯುತ್ತಾರೆ. ಭಾರತದ ಆನೆಗಳಿಗೆ ಬೆನ್ನು ಮಧ್ಯೆ ಉಬ್ಬಿದೆ. ಕಪ್ಪು ಮಿಶ್ರಿತ ಬೂದಿ ಬಣ್ಣ. ವಯಸ್ಸಾಗುತ್ತ ಬಂದಾಗ ಮುಖದ ಚರ್ಮದ ಮೇಲೆ, ಸೊಂಡಿಲ ಬುಡದಲ್ಲಿ, ಮತ್ತು ಕಿವಿಗಳ ಮೇಲೆ ಬಿಳಿ ಮಚ್ಚೆಗಳು ಕಂಡುಬರುತ್ತವೆ. ಬಿಳಿ ಆನೆಗಳು ಇರುವುವೆಂದು ಪ್ರತೀತಿ ಉಂಟು. ಇವೆಲ್ಲ ಅಸಹಜವಾದ ಬಿಳುಪು ಬಣ್ಣದ ದೇಹವುಳ್ಳ (ಆಲ್ಬಿನೋಸ್) ಆನೆಗಳು. ಇಂಥ ಆನೆಗಳನ್ನು ಮಯನ್ಮಾರ್ ಮತ್ತು ಸಯಾ (ಥೈಲೆಂಡ್) ದೇಶಗಳಲ್ಲಿ ಬಹಳ ಪವಿತ್ರವೆಂದು ಪರಿಗಣಿಸುತ್ತಾರೆ.

ಗಂಡು ಆನೆಗಳ ಎತ್ತರ 2.75ಮೀ–3.2 ಮೀ ವರೆಗೂ ಇದೆ. ಆದರೆ ಹೆಣ್ಣು ಆನೆಗಳ ಎತ್ತರ2.6ಮೀ ಗಿಂತ ಹೆಚ್ಚು ಇರುವುದಿಲ್ಲ. 2.6ಮೀ ಗಿಂತ ಎತ್ತರವಿರುವ ಹೆಣ್ಣು ಆನೆಗಳು ಬಹಳ ವಿರಳ.2.5 ಮೀ ಎತ್ತರದ ಗಂಡು ಆನೆಯ ಭಾರ ಸುಮಾರು 3 ಟನ್; 2.75 ಮೀ ಎತ್ತರದ್ದರ ಭಾರ 4–4.5 ಟನ್; 3 ಮೀ ಗಿಂತ ಹೆಚ್ಚು ಎತ್ತರದ ಆನೆಯ ಭಾರ 5.5–6.5 ಟನ್‌ವರೆಗೆ.

**ಆನೆಯ ದಂತಗಳು :** 1.5 ಮೀ ಉದ್ದ 406 ಮಿಮೀ. ಬುಡದ ಸುತ್ತಳತೆ ಇರುವ ದಂತಗಳ ತೂಕ ಸುಮಾರು 38 ಕಿ.ಗ್ರಾಂ.; 2.4 ಮೀ ಉದ್ದ, 406ಮಿಮೀ. ಬುಡದ ಸುತ್ತಳತೆ ಇರುವ ದಂತಗಳ ತೂಕ ಸುಮಾರು 45 ಕಿ.ಗ್ರಾಂ. ಕೆಲವು ದಂತಗಳ ಭಾರ 50–75 ಕಿ.ಗ್ರಾಂ.ಗಳವರೆಗೂ ಇರುವುದು. ಗಂಡು ಆನೆಗಳು ಪ್ರೌಢಾವಸ್ಥೆಗೆ ಬರಬೇಕಾದರೆ ಕನಿಷ್ಠ ಪಕ್ಷ 25 ವರ್ಷಗಳಾಗಬೇಕು. ಆದರೆ ಹೆಣ್ಣು ಆನೆಗಳಿಗೆ 20 ವರ್ಷಗಳು ಸಾಕು. ಆದರೆ ಪ್ರಬುದ್ಧಾವಸ್ಥೆಗೆ ಬರುವ ವಯಸ್ಸು ಹಲವು ಅಂಶಗಳನ್ನು ಅವಲಂಬಿಸಿ ಗುಂಪು ಹಾಗೂ ಪ್ರದೇಶಗಳ ನಡುವೆ 5–6ವರ್ಷಗಳ ವ್ಯತ್ಯಾಸ ಕಂಡುಬರುತ್ತದೆ. ಇನ್ನೂ ಸಾಕಷ್ಟು ಅಧ್ಯಯನಗಳು ಈ ನಿಟ್ಟಿನಲ್ಲಿ ನಡೆಯಬೇಕಿದೆ. ಸಾಧಾರಣವಾಗಿ ಆನೆ 100–150 ವರ್ಷಗಳವರೆವಿಗೂ ಜೀವಿಸುತ್ತದೆ. ಪ್ರಬುದ್ಧಾವಸ್ಥೆ ತಲುಪಿದ ಗಂಡಾನೆಗಳಲ್ಲಿ ಮುಖದ ಒಂದು ಭಾಗದಲ್ಲಿ 'ಮಸ್ತ್' ದ್ರವ ಸೋರುತ್ತದೆ. ಈ ಸಮಯದಲ್ಲಿ ಅವು ಉದ್ರೇಕಿತ ಅವಸ್ಥೆಯಲ್ಲಿದ್ದು, ಕೆಲವು ವಿಶೇಷ ನಡವಳಿಕೆಗಳನ್ನು ತೋರುತ್ತವೆ. ಆನೆಗಳಲ್ಲಿ ಶೇಕಡ 95ರಷ್ಟು ಸ್ತನಿಗಳಲ್ಲಿರುವಂತೆ ಬಹುಪತ್ನಿತ್ವ ವ್ಯವಸ್ಥೆ ಇದ್ದು, ಒಂದು ಆನೆ ಹಲವಾರು ಹೆಣ್ಣುಗಳೊಂದಿಗೆ ಕೂಡುತ್ತದೆ.

ಆಫ್ರಿಕದ ಆನೆಗಳು ಭಾರತದ ಆನೆಗಳಿಗಿಂತ ಬಹಳ ಎತ್ತರ. ಅವುಗಳ ಕಿವಿಗಳು ತುಂಬ ದೊಡ್ಡವು. ಹಣೆ ಉಬ್ಬಿಕೊಂಡಿರುತ್ತದೆ. ಕಣ್ಣುಗಳು ದೊಡ್ಡವು ಮತ್ತು ಸೊಂಡಿಲ ತುದಿಯಲ್ಲಿ ಎರಡು ಬೆರಳುಗಳು ಹಿಂದೊಂದು ಮುಂದೊಂದು ಇವೆ. ಈ ಆನೆಗಳ ಬೆನ್ನಿನ ಮಧ್ಯಭಾಗ ತಗ್ಗಾಗಿದೆ. ಹಿಂದಿನ ಕಾಲುಗಳಲ್ಲಿ ನಾಲ್ಕು ನಾಲ್ಕು ಉಗುರುಗಳಿಗೆ ಬದಲಾಗಿ ಮೂರು ಮೂರು ಉಗುರುಗಳಿವೆ. ಗಂಡು ಹೆಣ್ಣು ಆನೆಗಳೆರಡಕ್ಕೂ ದಂತಗಳಿವೆ. ಇವು ಭಾರತದ ಆನೆಗಳ ದಂತಗಳಿಗಿಂತ ಬಹಳ ದೊಡ್ಡವಾಗಿಯೂ ಮತ್ತು ದಪ್ಪನಾಗಿಯೂ ಇವೆ. ಪೂರ್ವ ಮತ್ತು ಉತ್ತರ ಇಥಿಯೋಪಿಯ ದೇಶಗಳಲ್ಲಿರುವ ಆನೆಗಳಿಗೆ ದಂತಗಳೇ ಇರುವುದಿಲ್ಲ.

ಆಫ್ರಿಕದ ಕೆಲವು ಪ್ರದೇಶಗಳಲ್ಲಿರುವ ಆನೆಗಳು ಒಂದಕ್ಕೊಂದು ತಮ್ಮ ಶರೀರದ ಬೆಳವಣಿಗೆ ಮತ್ತು ಆಕೃತಿಯಲ್ಲೂ ದಂತಗಳ ಬೆಳವಣಿಗೆಗಳಲ್ಲೂ ಮತ್ತು ಕೆಲವು ಕಿವಿಗಳ ಆಕಾರದಲ್ಲೂ ವ್ಯತ್ಯಾಸ ಹೊಂದಿವೆ. ಆಫ್ರಿಕದ ಆನೆಗಳ ಎತ್ತರ 3 ರಿಂದ 3.5 ಮೀ ವರೆಗೆ ಇದೆ. 3 ಮೀ ಎತ್ತರದ ಆನೆಯ ಭಾರ 4.5 ಟನ್; 3.5 ಮೀ. ಎತ್ತರದ ಆನೆಯ ಭಾರ 6.5 ಟನ್. ಸೂಡಾನ್ ಆನೆಗಳ ದಂತಗಳ ಭಾರ 70ಕಿ.ಗ್ರಾಂ. ಉದ್ದ 2 3/4 ಮೀ. ಬುಡದ ಸುತ್ತಳತೆ 520 ಮಿಮೀ ಇರುವ ದಂತಗಳ ಭಾರ 80 ಕಿಗ್ರಾಂ. ಸುತ್ತಳತೆ 520 ಮಿಮೀ, ಉದ್ದ 3 ಮೀ ಇರುವ ಕೊಂಬುಗಳ ಭಾರ 114 ಕಿ.ಗ್ರಾಂಗಳು.

ಆನೆ ಶಾಕಾಹಾರಿ. ಗಿಡಮರಗಳ ಎಲೆ, ಎಳಸಾದ ಕೊಂಬೆಗಳು, ಬಿದಿರು, ಮರದ ತೊಗಟೆ, ಜೊಂಡಿನಂಥ ಹುಲ್ಲು ಮತ್ತು ಹಣ್ಣುಗಳು ಇದರ ಆಹಾರ. ಈ ದೊಡ್ಡ ಪ್ರಾಣಿಗೆ ಆಹಾರ ಅಧಿಕಪ್ರಮಾಣದಲ್ಲಿ ಬೇಕು. ಆದ್ದರಿಂದ ಇವು ಆಹಾರಕ್ಕಾಗಿ ಬಹು ದೂರ ಸಂಚರಿಸುತ್ತವೆ. ವೇಗ ಒಂದು ಗಂಟೆಗೆ ಸುಮಾರು 24 ಕಿಮೀ. ನದಿಗಳನ್ನೂ ಕೆರೆಗಳನ್ನೂ ಈಸಿ ದಾಟುತ್ತವೆ. ಆನೆಯ ಕಾಲು ವಿಶಾಲವಾದ ಮೆತ್ತೆಯಂಥ ಹಿಗ್ಗುವ ಪಾದಗಳಿಂದ ಕೂಡಿದೆ; ಮೈಭಾರವನ್ನು ಚೆನ್ನಾಗಿ ಹೊರುತ್ತವೆ. ಮಿಕ್ಕ ಪ್ರಾಣಿಗಳಲ್ಲಿರುವಂತೆ ಆನೆಗೆ ಕಾಲಿನ ಹರಡಿನಲ್ಲಿ ಕೀಲು ಇಲ್ಲ. ಮಂಡಿಯನ್ನು ಮಾತ್ರ ಇದು ತಗ್ಗಿಸಬಲ್ಲದು. ಇತರ ಸ್ತನಿಗಳಲ್ಲಿ ಇರುವುದಕ್ಕಿಂತ ಆನೆಯಲ್ಲಿ ಹಲ್ಲುಗಳ ಸಂಖ್ಯೆ ಕಡಿಮೆ. ಇದರ ದಂತಸೂತ್ರ ಬಾಚಿಹಲ್ಲು 1/0, ಕೋರೆಹಲ್ಲು 0/0, ದವಡೆ ಹಲ್ಲು 6/6=26. ಪ್ರತಿದವಡೆಯ ಅರ್ಧಭಾಗ ದಲ್ಲಿ ಒಂದು ಅಥವಾ ಎರಡು ಭಾರಿ ದವಡೆಹಲ್ಲುಗಳಿವೆ. ಮೇಲುದವಡೆಯಲ್ಲಿ ಎರಡು ನೀಳವಾಗಿ ಬೆಳೆದ ಬಾಚಿಹಲ್ಲುಗಳೇ ಆನೆಯ ದಂತಗಳು. ದಂತಗಳು ಸವೆದ ಹಾಗೆಲ್ಲಾ ಹಿಂದಿನಿಂದ ಬೆಳೆಯುತ್ತಲೇ ಇರುತ್ತವೆ.

ಹೆಣ್ಣು ಆನೆ 607–614 ದಿವಸಗಳ ಗರ್ಭಧಾರಣೆಯ ಅನಂತರ ಒಂದು ಮರಿಯನ್ನು ಈಯುತ್ತದೆ. ಮರಿ 2 ವರ್ಷಗಳ ತನಕ ತಾಯಿಯ ಪೋಷಣೆಯಲ್ಲಿರುತ್ತದೆ. ಮುಂಗಾಲುಗಳ ಹಿಂದೆ ಇರುವ ಎರಡು ಸ್ತನಗಳಿಂದ ಮರಿ ಸೊಂಡಿಲನ್ನು ಪಕ್ಕಕ್ಕೆ ಸರಿಸಿ ಬಾಯಿಂದ ಹಾಲು ಕುಡಿಯುತ್ತದೆ. ಮರಿಯಾನೆಗಳನ್ನು ರಕ್ಷಿಸುವಲ್ಲಿ ತಾಯಿಯ ಜೊತೆಗೆ ಆ ಗುಂಪಿನ ಇತರ ಹೆಣ್ಣಾನೆಗಳೂ ಸಹಕರಿಸುತ್ತವೆ. ಹುಟ್ಟಿದ ಒಂದು ಗಂಟೆಯೊಳಗೆ ಎದ್ದುನಿಂತು ತಾಯಿಯನ್ನು ಹಿಂಬಾಲಿಸುವ ಆನೆಯ ಮರಿಗಳು, ನಡಿಗೆಯ ಮೇಲೆ ಹಿಡಿತ ಸಾಧಿಸಲು ಕಾಲಾವಕಾಶ ಬೇಕಾಗುತ್ತದೆ. ಹುಟ್ಟಿದಾಗ ಕಣ್ಣಿನ ದೃಷ್ಟಿ ಕಡಿಮೆ ಇದ್ದು, ವಾಸನೆ ಹಾಗೂ ಸ್ಪರ್ಶದಿಂದ ತಾಯಿಯೊಂದಿಗೆ ಸಂಪರ್ಕವಿರಿಸಿಕೊಂಡಿರುತ್ತದೆ.

ಆನೆಗಳು ಯಾವಾಗಲೂ ಹಿಂಡುಹಿಂಡಾಗಿ ಸಂಚರಿಸುತ್ತವೆ. ಒಂದು ಹಿಂಡಿನಲ್ಲಿ ಸುಮಾರು 15–30ರವರೆಗೆ ಎಲ್ಲ ವಯಸ್ಸಿನ ಆನೆಗಳೂ ಇರುತ್ತವೆ. ಅಧಿಕ ವಯಸ್ಸಿನ ಹೆಣ್ಣಾನೆ ಹಿಂಡಿನ ಮುಂದಾಳುತನವನ್ನು ವಹಿಸುತ್ತದೆ. ಕೆಲವೊಮ್ಮೆ ಸಲಗ ಮದವೇರಿದಾಗ ರೊಚ್ಚಿಗೆದ್ದು ಅಪಾಯಕಾರಿಯಾಗಬಲ್ಲದು. ಅಂಥ ಮದಗಜ ಹಿಂಡಿನಿಂದ ಹೊರದೂಡಲ್ಪಡುತ್ತದೆ. ಸಾಮಾನ್ಯವಾಗಿ ಗಂಡಾನೆಗಳು ತಾವಾಗೆಯೇ ಗುಂಪಿನಿಂದ ಹೊರಬಂದು ಸ್ವತಂತ್ರ ಜೀವನ ನಡೆಸುತ್ತವೆ. ಆದರೆ, ಒಮ್ಮೊಮ್ಮೆ ಗುಂಪಿನಲ್ಲಿರುವ ರಕ್ಷಣೆಯನ್ನು ಕಳೆದುಕೊಳ್ಳಲು ಇಚ್ಛಿಸದೇ ಉಳಿಯುತ್ತವೆ. ಅಂಥ ಆನೆಗಳು ಹಿಂಡಿನಿಂದ ಹೊರದೂಡಲ್ಪಡುತ್ತವೆ. ಅಂತೆಯೇ ಬೇರೆ ಗುಂಪಿನಿಂದ ಬಂದ ಗಂಡಾನೆಯನ್ನು ಸ್ವಾಗತಿಸ ಲಾಗುತ್ತದೆ. ಇದರಿಂದ ಹತ್ತಿರದ ಸಂಬಂಧಿಗಳಲ್ಲಿ ಗರ್ಭಧಾರಣೆಯಾಗುವುದು ತಪ್ಪಿ ವಂಶ ಸದೃಢವಾಗಿ ಬೆಳೆಯುವಂತಾಗುತ್ತದೆ. ಗುಂಪಿನ ನಾಯಕಿಯಾದ ಹೆಣ್ಣಾನೆ ಇವನ್ನೆಲ್ಲಾ ಗಮನಿಸುತ್ತದೆ. ಆನೆಗಳಲ್ಲಿ ಕೌಟುಂಬಿಕ ಹಾಗೂ ಸಾಮಾಜಿಕ ಜೀವನ ವ್ಯವಸ್ಥೆಗಳಿದ್ದು, ಭಾವಪೂರ್ಣ ಜೀವನ ನಡೆಸುತ್ತವೆ. ಮರಿ ಆನೆಗಳನ್ನು ಗುಂಪಿನ ಮಧ್ಯದಲ್ಲಿಟ್ಟುಕೊಂಡು ರಕ್ಷಿಸುತ್ತವೆ. ಗುಂಪಿನ ನಾಯಕಿಗೆ ತನ್ನ ಕಾಡಿನಲ್ಲಿ ವರ್ಷದ ಯಾವ ಯಾವ ಸಮಯದಲ್ಲಿ ಎಲ್ಲೆಲ್ಲಿ ಆಹಾರ ಸಿಗುತ್ತದೆ, ನೀರು ಎಲ್ಲಿದೆ ಎಂಬ ಮಾಹಿತಿ ತಿಳಿದಿರುತ್ತದೆ. ತನ್ನ ತಾಯಿಯಿಂದ ಕಲಿತ ಈ ಮಾಹಿತಿಯನ್ನು ತನ್ನ ಮರಿಗಳಿಗೆ ತಿಳಿಸಿಕೊಡುತ್ತದೆ. ಆನೆಗಳು ಸತ್ತ ಇತರ ಆನೆಗಳ ಎಲುಬುಗಳನ್ನು ಪರಿಶೀಲಿಸುವುದು ಕಂಡುಬಂದಿದ್ದು, ಇದು ಇವುಗಳಲ್ಲಿನ ಭಾವಜೀವನಕ್ಕೆ ಪೂರಕವಾಗಿದ್ದು, ನೆನಪಿನ ಶಕ್ತಿಯ ಪ್ರತೀಕವಾಗಿದೆ. ಆನೆಗಳು ಸ್ಪರ್ಶ, ಧ್ವನಿ ಹಾಗೂ ರಾಸಾಯನಿಕಗಳ ಹೊರಸೂಸುವಿಕೆಯಿಂದ ಇನ್ನೊಂದು ಆನೆ ಮತ್ತು ಗುಂಪಿನೊಂದಿಗೆ ಸಂಪರ್ಕವಿಟ್ಟುಕೊಂಡಿರುತ್ತವೆ. ಇತ್ತೀಚಿನ ಸಂಶೋಧನೆಗಳು ಆನೆಗಳು ಮನುಷ್ಯನಿಗೆ ಕೇಳದ ತರಂಗಾಂತರಗಳಲ್ಲೂ ಧ್ವನಿಯನ್ನು ಹೊರಡಿಸಿ ಸಂಪರ್ಕಿಸುವುದನ್ನು ಶ್ರುತಪಡಿಸಿವೆ.

ಏಷ್ಯದ ಆನೆಗಳು ಬಹಳ ಹಿಂದಿನಿಂದಲೂ ಮನುಷ್ಯನಿಗೆ ಉಪಯುಕ್ತ ಪ್ರಾಣಿಯೆನಿಸಿವೆ. ಕಾಡಾನೆಗಳನ್ನು ಪಳಗಿಸಿ ಮಠಮಾನ್ಯಗಳಲ್ಲಿ ಅರಮನೆಯಲ್ಲಿ ಗೌರವ ಸಂಕೇತವಾಗಿ ಸಾಕುತ್ತಿದ್ದರು. ರಣರಂಗದಲ್ಲಿ ಆನೆಗಳ ದಳವನ್ನೇ ಬಳಸುತ್ತಿದ್ದರು. ಈಗಲೂ ಕಾಡುಗಳಲ್ಲಿ ಮರದ ದಿಮ್ಮಿಗಳನ್ನು ಎಳೆಸಲು ಆನೆಯನ್ನು ಬಳಸುತ್ತಾರೆ. ಆನೆಗಳನ್ನು ಹಿಡಿದು ಅವುಗಳನ್ನು ಪಳಗಿಸುವುದು ಒಂದು ದೊಡ್ಡ ವಿದ್ಯೆ. ಇದು ಕೆಲವು ಜನಾಂಗಗಳ (ಸೋಲಿಗರ) ಕುಲಕಸುಬು. ಭಾರತದಲ್ಲಿ ಮುಸಲ್ಮಾನರು ಮತ್ತು ಕಾಡುಕುರುಬರು ಮಯನ್ಮಾರ್‌ನಲ್ಲಿ ಕರೆನ್ಸ, ತಾಲ್ಮೆಸ್ ಮತ್ತು ಲೇಯಾನ್ ಎಂಬ ಜನಗಳು, ಶ್ರೀಲಂಕದಲ್ಲಿ ಮೂರ್ ಜನಗಳು ಆನೆಗಳನ್ನು ಹಿಡಿದು ಪಳಗಿಸುವುದರಲ್ಲಿ ಬಹಳ ಚೆನ್ನಾಗಿ ನುರಿತವರು.

ಆನೆಗಳನ್ನು ಹಿಡಿಯುವುದರಲ್ಲಿ ಮೂರು ವಿಧಾನಗಳುಂಟು. ಮೊದಲನೆಯದು ಖೆಡ್ಡಾ ವಿಧಾನ. ಆನೆಗಳು ಇರುವ ಕಾಡಿನ ಮಧ್ಯದಲ್ಲಿ ನೀರಿನ ಮತ್ತು ಮರಗಳ ನೆರಳಿನ ಅನುಕೂಲವಿರುವ ಸ್ಥಳವನ್ನು ಹುಡುಕಿ ಆ ಸ್ಥಳದ ಸುತ್ತಲೂ 2 ಮೀ ಅಥವಾ 2 1/2 ಮೀ ಅಗಲ, 3 ಮೀ ಆಳವಿರುವ, ತ್ರಿಕೋಣಾಕಾರದ ಗುಂಡಿಯನ್ನು ತೆಗೆಸಿ, ಒಂದು ಕಡೆ ಬಾಗಿಲನ್ನಿಟ್ಟು ಆನೆಗಳ ಹಿಂಡನ್ನು ಈ ಬಾಗಿಲ ಮುಖಾಂತರ ಒಳಗೆ ಸೇರಿಸುವುದಕ್ಕೆ ಖೆಡ್ಡಾ (ನೋಡಿ) ಎಂದು ಕರೆಯುತ್ತಾರೆ. ಈ ವಿಧಾನದಲ್ಲಿ ಆನೆಗಳನ್ನು ಹಿಡಿಯಲು ಸಾವಿರಾರು ಜನಗಳು, 40 ಅಥವಾ 50 ಪಳಗಿದ ಸಹಾಯಕ ಆನೆಗಳು ಬೇಕಾಗುತ್ತವೆ. ಎರಡನೆಯದು ಆನೆಗಳು ಸಂಚಾರಮಾಡುವ ಮಾರ್ಗದಲ್ಲಿ ದೊಡ್ಡ ಗುಂಡಿಗಳನ್ನು ತೆಗೆದು (2 ಮೀ ಉದ್ದ 2 1/2 ಮೀ ಅಗಲ ಮತ್ತು 3 ಮೀ ಆಳ) ಅವುಗಳಿಗೆ ಗೋಚರ ವಾಗದಂತೆ ಸೊಪ್ಪುಪೊದೆಗಳ ಹೊದಿಕೆ ಹಾಕಿ ಆನೆಗಳನ್ನು ಹಿಡಿಯುತ್ತಾರೆ. ಈ ವಿಧಾನದಲ್ಲಿ ಒಂದು ಅಥವಾ ಎರಡು ಆನೆಗಳನ್ನು ಹಿಡಿಯಲು ಸಾಧ್ಯ. ಈ ವಿಧಾನಕ್ಕೆ ಹೆಚ್ಚು ಜನವಾಗಲಿ ಅಥವಾ ಆನೆಗಳಾಗಲಿ ಬೇಕಾಗುವುದಿಲ್ಲ. ಬಯಲು ಶಿಕಾರಿಯಿಂದ ಹಿಡಿಯುವುದು

ಮೂರನೆಯ ವಿಧಾನ. ಇದರಲ್ಲಿ ಒಂಟಿ ಆನೆಯನ್ನು ಮಾತ್ರ ಪಳಗಿದ ಆನೆಗಳ ಸಹಾಯದಿಂದ ಹಿಡಿಯುತ್ತಾರೆ. ಇದಕ್ಕೂ ಕೂಡ ಹೆಚ್ಚಿಗೆ ಜನವಾಗಲಿ, ಆನೆಗಳಾಗಲಿ ಬೇಕಾಗುವುದಿಲ್ಲ. ಹೀಗೆ ಹಿಡಿದ ಆನೆಗಳನ್ನು ಪಳಗಿಸುವುದು ಆನೆ ಹಿಡಿಯುವವರಿಗೆ ಒಂದು ದೊಡ್ಡ ಕೆಲಸ. ಚಿಕ್ಕ ಮರಿಗಳಾದರೆ ಬಹಳ ಬೇಗ ಪಳಗುತ್ತವೆ. ದೊಡ್ಡ ಆನೆಗಳಾದರೆ ಬಹಳ ದಿವಸಗಳು ಬೇಕು. ಇದಕ್ಕೆ 6 ತಿಂಗಳಿನಿಂದ ಹಿಡಿದು ಒಂದು ವರ್ಷವಾದರೂ ಬೇಕು. ಪಳಗಿದ ಆನೆಗಳ ಸಹಾಯದಿಂದ ಈ ರೀತಿ ಹಿಡಿದ ಆನೆಗಳನ್ನು ಪಳಗಿಸುತ್ತಾರೆ. ಈಗ ಖೆಡ್ಡ ಕಾರ್ಯಕ್ರಮವನ್ನು ನಿಲ್ಲಿಸಲಾಗಿದೆ.

ಆನೆ ಹಾಗೂ ಮಾನವನ ನಡುವಿನ ಸಂಘರ್ಷವೂ ಮಾನವ ಆನೆಯ ನಡುವಿನ ಸಂಬಂಧದಷ್ಟೇ ಹಳೆಯದು. ಮುಖ್ಯವಾಗಿ ಮಾನವನ ಬೆಳೆಗಳ ಮೇಲೆ ಆನೆಗಳು ದಾಳಿ ನಡೆಸುವುದರ ಮೂಲಕ ಸಂಘರ್ಷ ಮೊದಲಾಗುತ್ತದೆ. ಆನೆಗಳ ಈ ದಾಳಿಗೆ ಅನೇಕ ಕಾರಣಗಳಿದ್ದು, ಪೌಷ್ಟಿಕ ಆಹಾರ, ಆನೆಗಳ ವರ್ತನಾ ವಿಜ್ಞಾನ, ನೈಸರ್ಗಿಕ ಆವಾಸದ ನಾಶ, ಕಾಡುಗಳ ನಡುವೆ ಮಾನವನ ವಸಹಾತುಗಳ ಬೆಳವಣಿಗೆ ಇತ್ಯಾದಿಗಳನ್ನೊಳಗೊಂಡ ಸಂಕೀರ್ಣ ವ್ಯವಸ್ಥೆಯಾಗಿದೆ. ಮೊದಲಲ್ಲಿ, ಆನೆ ನಮ್ಮ ಪ್ರಮುಖ ವನ್ಯಜೀವಿಯಾಗಿದ್ದು, ಅದರ ಇರವು ಸುಸ್ಥಿರ ಕಾಡಿನ ಆರೋಗ್ಯದ ದ್ಯೋತಕವಾಗಿದೆ. ಮಿಲಿಯಾಂತರ ವರ್ಷಗಳಲ್ಲಿ ವಿಕಾಸ ಹೊಂದಿರುವ ಆನೆಗಳು ನಿಸರ್ಗದ ಪ್ರಯೋಗಗಳ ಫಲ. ಇದು ಒಳಗೊಂಡಿರುವ ಜೀವಜಾಲ ಸೂಕ್ಷ್ಮಸಂಬಂಧಗಳನ್ನು ಇನ್ನೂ ಮಾನವ ಅರಿಯಬೇಕಾಗಿದೆ. ಭಾರತವು ಏಷ್ಯದ ಆನೆಗಳ ಒಂದು ಪ್ರಮುಖ ನೆಲೆಯಾಗಿದ್ದು, ಇದರ ರಕ್ಷಣೆಗೆ ಆನೆ ಪರಿಯೋಜನೆಯನ್ನು (ಪ್ರಾಜೆಕ್ಟ್ ಎಲಿಫಂಟ್) 1992ರಲ್ಲಿ ಜಾರಿಗೊಳಿಸಲಾಗಿದೆ. (ಕೆ.ಎಂ.ಕೆ.; ಡಿ.ಎಸ್.ಇ., ಕೆ.ಎಸ್.ಎನ್.)

**ಆನೆಗಳ ರೋಗಗಳು ಮತ್ತು ಚಿಕಿತ್ಸೆ :** ಆನೆಗಳು ಕಾಯಿಲೆ ಬೀಳುವುದು ಅಪರೂಪ. ಕಾಯಿಲೆ ಬಿದ್ದಾಗ ಚಿಕಿತ್ಸೆ ಸ್ವಲ್ಪ ಕಷ್ಟವಾದ ಕೆಲಸ. ಸಾಧಾರಣವಾಗಿ ಈ ಪ್ರಾಣಿಗಳಿಗೆ ಅಂಜುಬುರುಕುತನ ಮತ್ತು ಅನುಮಾನ ಹೆಚ್ಚು. ಆದ್ದರಿಂದ ಅವುಗಳಿಗೆ ಔಷಧಿ ತಿನ್ನಿಸ ಬೇಕಾದರೆ, ನಂಬಿಕೆ ಹುಟ್ಟಿಸಿ ಅವು ತಿನ್ನುವ ರುಚಿಕರವಾದ ಆಹಾರದಲ್ಲಿ ಸೇರಿಸಿ ಕೊಡಬೇಕು.

ಆನೆ ಆರೋಗ್ಯವಾಗಿದೆ ಎಂದರೆ ಲವಲವಿಕೆಯಿಂದ, ಸೊಂಡಿಲು, ಕಿವಿಗಳು ಮತ್ತು ಬಾಲ ಇವುಗಳನ್ನು ಅಲ್ಲಾಡಿಸುತ್ತಿರಬೇಕು. ಕಾಲಿನ ಉಗುರುಗಳ ಬುಡದ ಸುತ್ತಲೂ ಬೆವರಿನಿಂದ ಕೂಡಿದ ತೇವವಿರಬೇಕು ಮತ್ತು ಯಾವಾಗಲೂ ಆಹಾರ ತಿನ್ನುತ್ತಿರಬೇಕು. ಅನಾರೋಗ್ಯದ ಚಿಹ್ನೆಗಳೆಂದರೆ ಮಂಕಾಗಿ, ಯಾವ ತರಹದ ಲವಲವಿಕೆ, ಆಹಾರದ ಮೇಲಿನ ಆಸೆ ಇಲ್ಲದೆ ಇರುವುದು. ಕೆಲವು ರೋಗಗಳಲ್ಲಿ ಜ್ವರ ಕಾಣಿಸಿಕೊಳ್ಳುತ್ತದೆ. ಅವುಗಳ ಆರೋಗ್ಯ ಉಷ್ಣಾಂಶ $97^0$. 4 ಫ್ಯಾ. –$98^0$ ಫ್ಯಾ ಗಳ ವರೆಗೆ ಇರುತ್ತದೆ. ಜ್ವರ ಬಂದಾಗ ಈ ಉಷ್ಣತೆ ಅಧಿಕವಾಗುತ್ತದೆ. ಕೆಲವು ವೇಳೆ ಕಡಿಮೆಯಾಗುವುದೂ ಉಂಟು.

ಆನೆಗೆ ಅನಾರೋಗ್ಯದ ಚಿಹ್ನೆಗಳು ಕಂಡಕೂಡಲೆ ಅದಕ್ಕೆ ವಿಶ್ರಾಂತಿ ಕೊಟ್ಟು, ತತ್‌ಕ್ಷಣ ನಿತ್ಯವೂ ಕೊಡುವ ಅಕ್ಕಿ, ಬತ್ತ ಮುಂತಾದ ಆಹಾರಗಳನ್ನು ನಿಲ್ಲಿಸಿ, ಆಹಾರ ತಿನ್ನುವ ಆಸೆ ತೋರಿಸಿದರೆ ಯಥೇಚ್ಛವಾಗಿ ಹಸಿ ಹುಲ್ಲನ್ನೂ ಸ್ವಚ್ಛ ನೀರನ್ನೂ ಕೊಡಬೇಕು. ಅವುಗಳ ರೋಗ ಇಂಥದ್ದು ಎಂದು ತಿಳಿದ ಕೂಡಲೆ ಅದಕ್ಕೆ ಸರಿಯಾದ ಔಷಧಿಗಳನ್ನು ಆಹಾರದ ಅಥವಾ ಚುಚ್ಚುಮದ್ದಿನ ಮುಖಾಂತರ ಕೊಟ್ಟು ಚಿಕಿತ್ಸೆ ಮಾಡಬೇಕು. ಸ್ವಲ್ಪ ಗುಣಮುಖ ವಾದಕೂಡಲೆ ಅವನ್ನು ಸ್ವೇಚ್ಛೆಯಾಗಿ, ಇಷ್ಟಬಂದ ಆಹಾರವನ್ನು ಹುಡುಕಿ ಕೊಂಡು ತಿನ್ನುವುದಕ್ಕೆ ಕಾಡಿನಲ್ಲಿ ಬಿಡಬೇಕು. ಹೀಗೆ ಮಾಡುವುದರಿಂದ ಕೆಲವು ರೋಗಗಳು ಶೀಘ್ರವಾಗಿ ವಾಸಿಯಾಗುತ್ತವೆ.

ಆನೆಗಳಿಗೆ ಬರುವ ರೋಗಗಳು ಸಾಮಾನ್ಯವಾಗಿ ಹೀಗಿವೆ : 1. ಜಹೀರ್ ಅಥವಾ ಜಲೋದರ ರೋಗ ಬಹಳ ವಿಶೇಷವಾಗಿ ಬರುತ್ತದೆ. ದೀರ್ಘಕಾಲ ಪುಷ್ಟಿಕರ ಆಹಾರದ ಅಭಾವ ಇದರ ಕಾರಣ. ಇದರಲ್ಲಿ ರಕ್ತವೆಲ್ಲ ನೀರಾಗಿ, ಗಂಟಲಿನ ಕೆಳಭಾಗ, ಕತ್ತಿನ ಕೆಳಭಾಗ ಮತ್ತು ಕಾಲುಗಳಿಗೆ ನೀರು ತುಂಬಿಕೊಂಡು ಊದಲೂ ಕ್ರಮೇಣ ದಿನದಿನಕ್ಕೆ ನಿಶ್ಶಕ್ತಿ ಹೊಂದಿ ಸತ್ತು ಹೋಗುತ್ತದೆ. ಈ ರೋಗದ ಪ್ರಾರಂಭದಲ್ಲಿ ಅಂದರೆ ಊತ ಹೆಚ್ಚಿಗೆ ಇಲ್ಲದಿರುವಾಗ ಚಿಕಿತ್ಸೆ ಮಾಡಿದರೆ ವಾಸಿಯಾಗುತ್ತದೆ. ಪುಷ್ಟಿಕರವಾದ ಆಹಾರ ಕೊಡಬೇಕು. ಅಂದರೆ ಗೋದಿರೊಟ್ಟಿ, ತುಪ್ಪ, ಬೆಲ್ಲ ಮತ್ತು ಜೊತೆಗೆ ಭಗಿನಿ ಮರದ ತಿರುಳು ಮತ್ತು ಈಚಲ ಮರದ ಸುಳಿಗಳನ್ನು ಕೊಟ್ಟರೆ ಗುಣ ವಾಗುತ್ತದೆ. ಚೆನ್ನಾಗಿ ಹುಲ್ಲು ಮತ್ತು ಬಿದಿರು ಸೊಪ್ಪು ಬೆಳೆದಿರುವ ಕಾಡಿನಲ್ಲಿ ಬಿಟ್ಟರೂ ಗುಣ ಹೊಂದಲು ಅನುಕೂಲ. 2. ಕೆಲವು ಹುಳುಗಳ ರೋಗ ಬರುವುದುಂಟು. ವಿಶೇಷವಾಗಿ ಈ ಹುಳುಗಳು ಕರುಳಿನಲ್ಲೂ ಪಿತ್ತಕೋಶದಲ್ಲಿಯೂ ಇರುತ್ತವೆ. ಹುಳುಗಳು ಹೆಚ್ಚಾದಾಗ ಆನೆಗಳು ಸ್ವಾಭಾವಿಕವಾಗಿ, ಕಾಡಿನಲ್ಲಿ ಒಂದು ತರಹ ಕೆಂಪು ಮಣ್ಣನ್ನು ತಿಂದು ಚೆನ್ನಾಗಿ ಭೇದಿ ಮಾಡಿಕೊಂಡು ಶಮನ ಪಡೆಯುತ್ತವೆ. 3.ಕೆಲವು ಅಂಟುರೋಗಗಳು ಬರುವುದುಂಟು. ಮುಖ್ಯವಾದವು i. ನರಡಿ ರೋಗ; ii ಮೆಟ್ರಾಗಟ್ಟು iii. ಸರ್‍ರಾ; iv. ಉಣ್ಣೆಗಳಿಂದ ಹರಡುವ ರೋಗ; v. ಕಾಲು ಜ್ವರ ಬಾಯಿಜ್ವರ ಇತ್ಯಾದಿ. ಈ ರೋಗಗಳನ್ನು ಪ್ರಾರಂಭದಲ್ಲಿಯೇ ಕಂಡುಹಿಡಿದು ಚಿಕಿತ್ಸೆ ಮಾಡಿದರೆ ಗುಣವಾಗುತ್ತವೆ. (ಡಿ.ಎಸ್.ಇ.)

**ಆನೆಗೊಂದಿ :** ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಒಂದು ಊರು. ಹೊಸಪೇಟೆಯಿಂದ ಸುಮಾರು 10 ಕಿಮೀಗಳ ದೂರದಲ್ಲಿ ತುಂಗಭದ್ರಾ ನದಿಯ ಎಡ ದಂಡೆಯಲ್ಲಿನ ಚಿಕ್ಕದೊಂದು ಗ್ರಾಮ. ಇದು ರಾಮಾಯಣ ಕಾಲದಲ್ಲಿ ಕಪಿರಾಜನಾದ ವಾಲಿಯ ರಾಜಧಾನಿಯಾಗಿತ್ತು. ಇದೇ ಕಿಷ್ಕಿಂಧೆಯೆಂದು ಪ್ರಸಿದ್ಧವಾಗಿತ್ತು. ರಾಮಚಂದ್ರ ವಾಲಿಯನ್ನು ಕೊಂದು ಕಿಷ್ಕಿಂಧೆಯನ್ನು ಸುಗ್ರೀವನಿಗೆ ಕೊಟ್ಟನೆಂದೂ ಸುಗ್ರೀವ ಮಂತ್ರಿಯಾದ ಹನುಮಂತನ ದೌತ್ಯದಲ್ಲಿ ಕಪಿಸೇನೆಯನ್ನು ಒಯ್ದು ರಾವಣನನ್ನು ಸಂಹರಿಸಿ ಸೀತೆಯನ್ನು ಬಂಧನದಿಂದ ಬಿಡಿಸಿಕೊಂಡು ಬಂದನೆಂದೂ ರಾಮಾಯಣದಲ್ಲಿ ಹೇಳಿದೆ. ಪರ್ವತಾ ವಳಿಯ ಪರಿಸರದಲ್ಲಿ ನಿಸರ್ಗದ ರಕ್ಷಣೆಯಿರುವುದರಿಂದ ಸ್ವಾಭಾವಿಕ ದುರ್ಗವಾಗಿದ್ದು, ಇದು ಬಹು ಪ್ರಾಚೀನ ಕಾಲದಿಂದಲೂ ರಾಜಧಾನಿಯಾಗಿ ಪ್ರಸಿದ್ಧಿಯನ್ನೂ ಹೊಂದಿದೆ. ಯಾದವ – ಹೊಯ್ಸಳರ ಕಾಲದಲ್ಲಿ ಕಂಪಿಲರಾಯನೆಂಬ ಚಿಕ್ಕ ಪಾಳೆಯಗಾರ ಕುಮ್ಮಟ ದುರ್ಗದ ರಾಜಧಾನಿಯಿಂದ ಆನೆಗೊಂದಿ ರಾಜ್ಯವನ್ನಾಳುತ್ತಿದ್ದ. ಅಲ್ಲಾವುದ್ದೀನ್‌ಖಿಲ್ಜಿಯ ದಂಡನಾಯಕನಾದ ಮಲ್ಲಿಕಾಫರ್ ಹೊಯ್ಸಳ ಯಾದವ ಕಾಕತೀಯ ರಾಜರನ್ನು ಸೋಲಿಸಿ ಇಡೀ ಹಿಂದೂಸ್ತಾನವನ್ನು ಪಾದಾಕ್ರಾಂತವಾಗಿ ಮಾಡಬೇಕೆಂದು ಹವಣಿಸಿದಾಗ ಕಂಪಿಲರಾಯ ಕುಮಾರರಾಮನೆಂಬ ತನ್ನ ಮಗನೊಂದಿಗೆ ಆ ದಂಡನಾಯಕನನ್ನು ಸೋಲಿಸಿ ವಿಫಲ ಪ್ರಯತ್ನನನ್ನಾಗಿ ಮಾಡಿದ. ಕಡೆಗೆ ಮಲ್ಲಿಕಾಫರ್ ಮೋಸದಿಂದ ಕಂಪಿಲರಾಯನನ್ನು ಬಂಧಿಸಿ ದಿಲ್ಲಿಗೆ ಒಯ್ದನೆಂದೂ ಮುಸಲ್ಮಾನ ಇತಿಹಾಸಕಾರರು ಬರೆದಿದ್ದಾರೆ. ಅವನ ಜೊತೆಯಲ್ಲಿ ಬೊಕ್ಕಸಿಗರಾಗಿದ್ದ ಹಕ್ಕಬುಕ್ಕರು ಯುಕ್ತಿಯಿಂದಲೂ ಬಾಹುಬಲದಿಂದಲೂ ದೊಡ್ಡ ಸೈನ್ಯವನ್ನು ಶೇಖರಿಸಿ ಮಲ್ಲಿಕಾಫರ್‌ನ ಪ್ರತಿನಿಧಿಯನ್ನು ಹೊಡೆದೋಡಿಸಿ ಆನೆಗೊಂದಿಯ ಹತ್ತಿರ ವಿಜಯನಗರವನ್ನು (ವಿದ್ಯಾನಗರ) ಕಟ್ಟಿ, ಹೊಸದೊಂದು ರಾಜ್ಯವನ್ನು ಸ್ಥಾಪಿಸಿ ಮುಸಲ್ಮಾನರ ಆಕ್ರಮಣವನ್ನು ತಡೆದರು. ಎರಡನೆಯ ದೇವರಾಯನ ಕಾಲದಲ್ಲಿ ಈ ವಿದ್ಯಾನಗರ ಆನೆಗೊಂದಿಯನ್ನೊಳಗೊಂಡು ಜಗತ್ತಿನಲ್ಲಿಯೇ ಅತ್ಯಂತ ವಿಸ್ತಾರವುಳ್ಳ (20 ಕಿಮೀ) ಶ್ರೀಮಂತ ರಾಜಧಾನಿಯೆಂದೂ ಪ್ರಸಿದ್ಧವಾಗಿತ್ತು. ತುಳು ವಂಶದ ಕೃಷ್ಣದೇವರಾಯನ ಕಾಲದಲ್ಲಂತೂ ಇದರ ವೈಭವ ಮುಗಿಲುಮುಟ್ಟಿತ್ತು. ತುಂಗಭದ್ರಾ ನದಿಯ ದಂಡೆಯ ಮೇಲೆ ಸೆನಗೊಂಡ್ಯಂ (ಆನೆಗೊಂದಿ) ಎಂಬ ಪಟ್ಟಣವಿತ್ತು. ಅದು ಪೂರ್ವಕಾಲದಲ್ಲಿ ರಾಜಧಾನಿಯಾಗಿತ್ತು. ಈಗಲೂ ಅದರ ಕೋಟೆಕೊತ್ತಳಗಳನ್ನು ಕಾಣಬಹುದು ಎಂದು ಪೇಸ್ ಎಂಬ ಪೋರ್ಚುಗೀಸ್ ಪ್ರಯಾಣಿಕ 1530ರಲ್ಲಿ ಬರೆದಿದ್ದಾನೆ. ನ್ಯೂನಿಜ್ ಎಂಬ ವಿದೇಶಿಯಾತ್ರಿಕ ಆನೆಗೊಂದಿಯನ್ನು ವಿಜಯನಗರದ ಮಾತೃಸ್ಥಾನವೆಂದು ಕರೆದಿದ್ದಾನೆ. ವಿಜಯನಗರದ ಪತನಾನಂತರ ಆನೆಗೊಂದಿಯಲ್ಲಿ ಚಿಕ್ಕರಾಜಮನೆತನವೊಂದು ಆಳುತ್ತಿತ್ತು. 15ನೆಯ ಶತಮಾನದಲ್ಲಿ ಆನೆಗೊಂದಿಯ ಶ್ರೀರಂಗರಾಯ ಶ್ರೀರಂಗನಾಥ ದೇವಾಲಯವನ್ನೂ ಕಟ್ಟಿಸಿ ಈ ಪ್ರಾಂತ್ಯವನ್ನು ಆಳಿದನೆನ್ನುವರು. 16–17ನೆ ಶತಮಾನದಲ್ಲಿ ಮುಸ್ಲಿಮರ ಆಡಳಿತ ಇಲ್ಲಿ ಬಂತು. 1749ರಲ್ಲಿ ಮರಾಠರು ಇದನ್ನು ಸ್ವಾಧೀನಪಡಿಸಿಕೊಂಡರು. 1776ರಲ್ಲಿ ಟಿಪ್ಪು ಇದನ್ನು ಹಾಳು ಮಾಡಿದ. ಬ್ರಿಟಿಷರು ಮುಂದೆ ಕೆಲವು ಭಾಗಗಳನ್ನು ತಾವಿಟ್ಟುಕೊಂಡು ಉಳಿದ ಪ್ರದೇಶವನ್ನು ಅಲ್ಲಿಯ ಅರಸರಿಗೆ ಕೊಟ್ಟರು. 1949ರವರೆಗೆ ಇದು ಆ ಅರಸರ ಸಂಸ್ಥಾನವಾಗಿತ್ತು. ಇಲ್ಲಿನ ಶೇಷಶಾಯಿ ಗುಹಾಂತರ ವಿಷ್ಣುವಿಗ್ರಹ ಪ್ರಸಿದ್ಧವಿದೆ. ಇಲ್ಲಿಯ ಹುಚ್ಚಪ್ಪಯ್ಯನ ಮಠ, ಗಗನ ಮಹಲ್, ಗುರಂಗನಾಥಸ್ವಾಮಿ ದೇವಾಲಯ, ಪಾಳುಬಿದ್ದಿರುವ ಅರಮನೆ ಇವು ಸು. 16–17ನೆಯ ಶತಮಾನಕ್ಕಿಂತ ಈಚಿನವು. ಹತ್ತಿರವೇ ಮಾಧ್ವಯತಿಗಳ ಒಂಬತ್ತು ವೃಂದಾವನಗಳಿದ್ದು ಆ ಗುಂಪಿಗೆ ನವವೃಂದಾವನವೆಂದು ಹೆಸರು. ಈ ಯತಿಗಳಲ್ಲಿ ಶ್ರೀ ಪದ್ಮನಾಭತೀರ್ಥರೂ ವ್ಯಾಸತೀರ್ಥರೂ ಸುಧೀಂದ್ರತೀರ್ಥರೂ ಮುಖ್ಯರಾಗಿದ್ದಾರೆ. (ಆರ್.ಎಸ್.ಪಿ.)

ಆನೆಗೊಂದಿ ಭೂಸುಧಾರಣಾ ಪದ್ಧತಿ ಉಲ್ಲೇಖಾರ್ಹವಾಗಿದೆ. ಕೃಷ್ಣದೇವರಾಯ ತನ್ನ ಮಂತ್ರಿಯಾದ ಅಪ್ಪಾಜಿಯ ಸಹಕಾರದಿಂದ ಭೂಮಿಯನ್ನು ರಾಯರೇಖಾ ಎಳೆಯುವುದರ ಮೂಲಕ ಅಳತೆ ಮಾಡಿಸಿ, ಕಂದಾಯ ನಿಗದಿ ಮಾಡಿದ. ಈ ಪದ್ಧತಿಯನ್ನು ಮುಂದಿನ ಅನೇಕರು ತಮ್ಮ ರಾಜ್ಯಗಳಲ್ಲಿ ಜಾರಿಗೆ ತಂದರು. 1896ರಲ್ಲಿ ಭೂಸುಧಾರಣೆಗೆ ಕೈಹಾಕಿದ ಇಂಗ್ಲಿಷ್ ಅಧಿಕಾರಿಗಳು ಆನೆಗೊಂದಿಯ ವಿಧಾನವನ್ನು ಕೊಂಡಾಡಿದ್ದಾರೆ. (ಬಿ.ಎಂ.)

**ಆನೆದೊಗಲು :** ಸಾಮಾನ್ಯವಾಗಿ ಕೈಕಾಲುಗಳು ಯೋನಿದುಟಿಗಳು (ಲೇಬಿಯ), ಬೀಜಚೀಲ (ಸ್ಕ್ರೋಟಂ) ಬಲು ಅಪರೂಪವಾಗಿ ಮೊಗ, ಮೊಲೆಗಳ ಚರ್ಮ, ಚರ್ಮದಡಿಯ ಅಂಗಾಂಶಗಳು ಬರುಬರುತ್ತ ದಪ್ಪಗೆ ಬೀರೂರಿದಂತೆ ಬೆಳೆದಿರುವುದು (ಎಲಿಫೆಂಟಿಯಾಸಿಸ್). ರೋಗ ಕಾಲುಗಳಲ್ಲಿ ಬರುವುದೇ ನಮ್ಮಲ್ಲಿ ಸಾಮಾನ್ಯವಾದುದರಿಂದ ಆನೆಗಾಲು, ಹುತ್ತಗಾಲು ಎನ್ನುವುದುಂಟು. ಸಿರ (ವೇನ್) ರಕ್ತನಾಳಗಳು ಇಲ್ಲವೇ ಹಾಲ್ರಸನಾಳಗಳ (ಲಿಂಫ್ಯಾಟಿಕ್ಸ್) ತಡೆಯಾಗಿದ್ದರೆ ಹೀಗಾಗುತ್ತದೆ. ಈ ತಡೆಗೆ ಸಾಮಾನ್ಯ ಕಾರಣ ಎಳೆಹುಳು (ನಿಮಟೋಡ್). ಗಂಡು ಹುಳುಗಳು ಬೆಳೆವ ಒಂದು ಹಂತದಲ್ಲಿ ಈ ಹುಳುಗಳು ಮಾನವನ ರಕ್ತ, ಹಾಲ್ರಸ ನಾಳಗಳೊಳಕ್ಕೆ ನುಗ್ಗಿ ಇರುಕಿಸಿಕೊಂಡು ಮುಂದೆ ದ್ರವ ಹರಿಯದಂತೆ ತಡೆಯುತ್ತವೆ. ಹೀಗಾಗುವ ಮುನ್ನ ಹುಳುಬೇನೆ ಹತ್ತಿದಾಗಲೆಲ್ಲ ಹಾಲ್ರಸನಾಳಗಳುರಿತ (ಲಿಂಫ್ಯಾಂಜೈಟಿಸ್),

ಚರ್ಮ ಚರ್ಮದಡಿಯ ಅಂಗಾಂಶಗಳ ಉರಿತವಾಗಿ ಮೇಲಿಂದ ಮೇಲೆ ಚಳಿ ಜ್ವರ ಬರುತ್ತದೆ. ಸೊಳ್ಳೆಗಳಿಂದ ಬರುವ ಈ ರೋಗದಿಂದಲೇ ಅಲ್ಲದೆ, ಪೆಟ್ಟು, ಗಾಯ, ಬೇರೆ ಕಾರಣಗಳ ಉರಿತ, ನವ (ವಿಷಮ) ಗಂತಿಗಳಿಂದಲೂ ಹೀಗಾಗಬಹುದು **(ನೋಡಿ– ಫೈಲೇರಿಯ ಬೇನೆ; ಪರಪಿಂಡಿ ಶಾಸ್ತ್ರ).** (ಡಿ.ಎಸ್.ಎಸ್.)

**ಆನೆಹುಣಿಸೆ :** ಬಾಂಬಕೇಸೀ ಕುಟುಂಬಕ್ಕೆ ಸೇರಿದ ಸಸ್ಯ (ಅಡನ್‍ಸೋನಿಯ). ಮಾಗಿಮಾವು ಅಥವಾ ಕೋತಿಗಡ್ಡದ ಮರವೆಂದೂ ಹೆಸರುಗಳಿವೆ. ಈ ಮರದ ಮೂಲಸ್ಥಾನ ಆಫ್ರಿಕ. ಉಷ್ಣವಲಯಗಳ ಪ್ರದೇಶಗಳಲ್ಲಿ ಮತ್ತು ಆಸ್ಟ್ರೇಲಿಯದಲ್ಲಿ ವ್ಯಾಪಿಸಿದೆ. ಭಾರತದ ಉತ್ತರ ಪ್ರದೇಶ, ಬಿಹಾರ್, ಬೊಂಬಾಯಿ, ಮದರಾಸಿನಲ್ಲಿ ಬೆಳೆಯುತ್ತದೆ. ಇದು ದೀರ್ಘಕಾಲ ಬೆಳೆಯುವ ಮರ. ಇದರಲ್ಲಿ ಹತ್ತು ಜಾತಿಗಳಿವೆ. ಅವುಗಳಲ್ಲಿ ಅಡನ್‍ಸೋನಿಯ ಡಿಜಿಟೇಟ ಎಂಬುದು ಮುಖ್ಯವಾದುದು. ಇದರ ತಿರುಳಿನಲ್ಲಿ ಹಗ್ಗ ತಯಾರಿಸುತ್ತಾರೆ. (ಡಿ.ಜಿ.)

**ಆನೆ ಹುಲ್ಲು :** ಪೆನಿಸೀಟಂ ಪರ್‍ಪ್ಯೂರಿಯಂ ಅಥವಾ ಆನೆಹುಲ್ಲು ಅಥವಾ ದಪ್ಪ ನೇಪಿಯರ್ ಹುಲ್ಲು. ಪೋಯೇಸೀ ಕುಟುಂಬಕ್ಕೆ ಸೇರಿದೆ. ಇದರ ಮೂಲಸ್ಥಾನ ದಕ್ಷಿಣ ಆಫ್ರಿಕ. ಈ ಹುಲ್ಲನ್ನು 1913–15ರ ಸಮಯದಲ್ಲಿ ಭಾರತಕ್ಕೆ ತರಲಾಯಿತೆನ್ನಲಾಗಿದೆ. ಅಧಿಕ ಫಸಲು ನೀಡುವ ಹುಲ್ಲು. ಫಲವತ್ತಾದ ಭೂಮಿಯಲ್ಲಿ ಬೆಳೆಸಲು ಅನುಕೂಲ. ಸಂತಾನೋತ್ಪತ್ತಿ ಸಾಮಾನ್ಯವಾಗಿ ಟಸಕ್ಸ್ ಅಥವಾ ಸೆಟ್ಸ್‍ಗಳಿಂದ (ಕಂದು). ವರ್ಷಕ್ಕೆ ಸು. 8–12 ಬಾರಿ ಕತ್ತರಿಸಬಹುದು. ಒಟ್ಟು ಫಸಲು ವರ್ಷಕ್ಕೆ ಸು. 3,000 ಪೌಂಡುಗಳಷ್ಟು. ಈ ಹುಲ್ಲಿನ ಪ್ರಮುಖ ಉಪಯೋಗ ಮೇವು. ಸಿಲೇಜ್‍ಗಳಿಗೂ ಬಳಸಬಹುದು. (ಎಂ.)

**ಆನೇಕಲ್ಲು :** ಬೆಂಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಪಟ್ಟಣ. ಈ ತಾಲ್ಲೂಕು ಪೂರ್ವಕ್ಕೆ ತಮಿಳುನಾಡು, ಉತ್ತರ ಮತ್ತು ವಾಯವ್ಯಕ್ಕೆ ಹೊಸಕೋಟೆ ಮತ್ತು ಬೆಂಗಳೂರು, ದಕ್ಷಿಣ ಮತ್ತು ನೈಋತ್ಯಕ್ಕೆ ಕನಕಪುರ ತಾಲ್ಲೂಕುಗಳಿಂದ ಸುತ್ತುವರಿದಿದೆ. ಆನೇಕಲ್ಲು, ಜಿಗಣೀ, ಸರ್ಜಾಪುರ, ಅತ್ತಿಬೆಲೆ ಹೋಬಳಿಗಳಿದ್ದು ಒಟ್ಟು 223 ಗ್ರಾಮಗಳನ್ನೊಳಗೊಂಡಿದೆ. ತಾಲ್ಲೂಕಿನ ವಿಸ್ತೀರ್ಣ 534 ಚಕಿಮೀ. ಜನಸಂಖ್ಯೆ 2,98,961. ತಾಲ್ಲೂಕಿನ ಪಶ್ಚಿಮ ಭಾಗ ಅರ್ಕಾವತಿ ಜಲಾನಯನದ ಕಣಿವೆ, ಕಾಡು ಮತ್ತು ಬೆಟ್ಟಗುಡ್ಡಗಳಿಂದ ಕೂಡಿದೆ. ಪೂರ್ವದ ಕಣಿವೆ ಪೊನ್ನೆಯಾರ್ ನದಿಯ ಜಲಾನಯನ ಭೂಮಿಗೆ ಸೇರಿದೆ. ಭೂಮಿ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ತಾಲ್ಲೂಕಿನ

ಮುತ್ಯಾಲಮಡು ಜಲಪಾತ (ಆನೇಕಲ್ಲು)

ಹೆಚ್ಚುಭಾಗ ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಸಾಮಾನ್ಯವಾಗಿ ಈ ಪ್ರದೇಶದಲ್ಲಿ ರಾಗಿ, ಬತ್ತ, ದ್ವಿದಳ ಧಾನ್ಯಗಳು ಮತ್ತು ಎಣ್ಣೆ ಬೀಜಗಳನ್ನು ಬೆಳೆಯುತ್ತಾರೆ. ಸಾಕಷ್ಟು ಮಳೆಯಾಗುತ್ತದೆ. ಉತ್ತಮ ಹವಾಗುಣ ಉಂಟು. ಬೆಳೆಗಳು ಕುಯ್ಲಿಗೆ ಬರುವ ಕಾಲದಲ್ಲಿ ಕೆಲವೊಮ್ಮೆ ಅಕ್ಕಪಕ್ಕದ ಕಾಡುಗಳಿಂದ ಆನೆಗಳು ನುಗ್ಗಿಬರುವುದುಂಟು. ಚಂಪಕಧಾಮಸ್ವಾಮಿ ದೇವಾಲಯವಿರುವ ಬನ್ನೇರುಘಟ್ಟ (ನೋಡಿ) ಈ ತಾಲ್ಲೂಕಿನ ಒಂದು ಸುಪ್ರಸಿದ್ಧ ಕ್ಷೇತ್ರ. ದೊಮ್ಮಸಂದ್ರ ಕೈಮಗ್ಗದ ಸೀರೆಗಳಿಗೆ ಹೆಸರಾಗಿದೆ. ಹಿಂದೆ ಪಾರಂಗಲನಿ, ಖಗಪುರ ಎಂದು ಹೆಸರಿದ್ದ ಇಂದಿನ ಹಾರಗದ್ದೆಯಲ್ಲಿರುವ ಚನ್ನಕೇಶವ ದೇವಾಲಯ ದೊಡ್ಡದು. ಭಾರತ, ರುಕ್ಮಾಂಗದ ಚರಿತೆಗಳನ್ನು ಬರೆದ ಲಕ್ಷ್ಮಕವಿ (18ನೆಯ ಶತಮಾನ) ಇಲ್ಲಿಯವನು. ಪಾಳೆಯಪಟ್ಟುಗಳಿದ್ದ ಜಿಗಣೀ ಮತ್ತು ಸರ್ಜಾಪುರ (ನೋಡಿ) ಐತಿಹಾಸಿಕ ಸ್ಥಳಗಳು. ಆನೇಕಲ್ಲಿನಿಂದ 3–4ಕಿಮೀ ದೂರದಲ್ಲಿರುವ ಮುತ್ಯಾಲಮಡು (ಮುತ್ತಿನಂತೆ ನೀಡು ತೊಟ್ಟಿಡುತ್ತಿರುವ)ಸಣ್ಣ ಜಲಪಾತವಿರುವ ಸ್ಥಳ, ಸುಂದರ ತಾಣ, ಇತ್ತೀಚೆಗೆ ಇದು ಪ್ರಾಸಿ ತಾಣವಾಗಿ ರೂಪುಗೊಳ್ಳುತ್ತಿದೆ.

ತಾಲ್ಲೂಕಿನ ಕಸಬೆ ಆನೇಕಲ್ಲು ಬೆಂಗಳೂರಿನಿಂದ ಆಗ್ನೇಯಕ್ಕೆ 35ಕಿಮೀ ದೂರದಲ್ಲಿದೆ. ಬೆಂಗಳೂರು ಮತ್ತು ಹೊಸೂರುಗಳಿಗೆ ಇಲ್ಲಿಂದ ಉತ್ತಮ ರಸ್ತೆ ಇದೆ. ಜನಸಂಖ್ಯೆ 33,160. ಆನೇಕಲ್ಲಿನಲ್ಲಿ ನಗರಸಭೆ ಇದೆ. ಈ ರೂರು ನೇಯ್ಗೆ ಸೀರೆಗಳಿಗೆ ಪ್ರಸಿದ್ಧ. ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ.

ಆನೇಕಲ್ಲನ್ನು 1603ರಲ್ಲಿ ಸುಗಟೂರು ಮನೆತನಕ್ಕೆ ಸೇರಿದ ಚಿಕ್ಕತಿಮ್ಮೇಗೌಡ ಸ್ಥಾಪಿಸಿದ. ಬಿಜಾಪುರದ ರಾಜ ಸುಗಟೂರನ್ನು ವಶಪಡಿಸಿಕೊಂಡಾಗ ಚಿಕ್ಕ ತಿಮ್ಮೇಗೌಡನಿಗೆ ಆನೇಕಲ್ಲು ಮಾತ್ರ ಉಳಿಯಿತು. ಈತ ಇಲ್ಲಿ ಕೋಟೆಯನ್ನು ಕಟ್ಟಿ ಊರನ್ನು ಭದ್ರಪಡಿಸಿದ. ದೇವಾಲಯ ಮತ್ತು ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದ. ಇವರ ಮೊಮ್ಮಗ ದೊಡ್ಡ ತಿಮ್ಮೇಗೌಡ ಮೈಸೂರು ರಾಜರಿಗೆ ವರ್ಷಕ್ಕೆ 2,000 ರೂಪಾಯಿಗಳ ಕಾಣಿಕೆ ಕೊಡಲೊಪ್ಪಿ ರಾಜ್ಯವನ್ನು ಉಳಿಸಿಕೊಂಡ. ದೊಡ್ಡ ತಿಮ್ಮೇಗೌಡ ಮೊಮ್ಮಗ ಚಾಮಗೌಡನ ಕಾಲದಲ್ಲಿ ಹೈದರ್ ಈ ಊರನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡ.

ಇಲ್ಲಿ ಚನ್ನಕೇಶವ, ಮಲ್ಲಿಕಾರ್ಜುನ, ವೇಣುಗೋಪಾಲ ದೇವಾಲಯಗಳಿವೆ. ಇವುಗಳಲ್ಲಿ ಚನ್ನಕೇಶವ ದೇವಾಲಯ ಪ್ರಾಚೀನವಾದುದು. ಹದಿನಾಲ್ಕು ಹಸ್ತಗಳುಳ್ಳ ವಿಷ್ಣುವಿನ ಪ್ರತಿಮೆ ಇದೆ. ಇಲ್ಲಿರುವ ಮಲ್ಲಿಕಾರ್ಜುನ ದೇವಾಲಯದ ಮುಂದೆ 20' ಎತ್ತರದ ದೀಪಸ್ತಂಭವಿದೆ. ತ್ರಿಕೂಟವರ್ಗಕ್ಕೆ ಸೇರಿದ ಈ ದೇವಾಲಯದ ಉತ್ತರ ದಕ್ಷಿಣದಲ್ಲಿ ಪಾರ್ವತಿ ಮತ್ತು ನಂಜುಂಡೇಶ್ವರ ವಿಗ್ರಹಗಳಿವೆ. ಸಾಧನಪುರವಾಸ ಎಂಬ ಅಂಕಿತದಿಂದ ಆನಂದ ರಾಮಾಯಣವನ್ನು ಬರೆದ ತಿರುಮಲಾರ್ಯ ಇಲ್ಲಿಯವನೆಂದು ಹೇಳಲಾಗಿದೆ. ಇಲ್ಲಿ ಒಂದು ಶಂಕರಮಠವಿದೆ. ಇಲ್ಲಿನ ಕರಗ ಬೆಂಗಳೂರಿನ ಕರಗದಷ್ಟೇ ಪ್ರಸಿದ್ಧ.

ಆನೇಕಲ್ಲಿನ ದಕ್ಷಿಣಕ್ಕೆ ಶಾಸನಬಸದಿಯೂ ಬೂದಿಹಳ್ಳ ಎಂದು ಕರೆಯುವ ಕ್ರಿಸ್ತಶಕಾರಂಭ ಕಾಲದ ಒಂದು ಪ್ರಾಚೀನ ನಿವೇಶನವೂ ಇವೆ. (ಎಚ್.ವಿ.ಎಸ್.;ಎನ್.ವಿ.)

**ಆನೇಕೊಂಡ :** ದಾವಣಗೆರೆ ಜಿಲ್ಲೆಯಲ್ಲಿ ದಾವಣಗೆರೆಗೆ ಹೊಂದಿಕೊಂಡಂತೆ ಅಲ್ಲಿಂದ 2ಕಿಮೀ ದೂರದಲ್ಲಿರುವ ಒಂದು ಸಣ್ಣ ಹಳ್ಳಿ. 11–12ನೆಯ ಶತಮಾನಗಳಲ್ಲಿ ಪ್ರಸಿದ್ಧ ಪಟ್ಟಣವಾಗಿತ್ತು. ಆನೇಕೊಂಡ ಎಂಬ ಹೆಸರು ಈ ಊರಿಗೆ ಯಾವಾಗ ಹೇಗೆ ಬಂದಿತೆಂಬುದು ತಿಳಿಯದು. ಶಾಸನಗಳು ಬೆಳ್ಳುಜು ಎಂಬ ಒಂದು ಊರನ್ನು ಹೆಸರಿಸುತ್ತವೆ. ಇದು ಈಗಿನ ಆನೇಕೊಂಡ, ಬೇತೂರು ಮತ್ತು ದಾವಣಗೆರೆಗಳನ್ನೊಳಗೊಂಡಿದ್ದಿರಬೇಕೆಂದು ಇವುಗಳ ನಡುವೆ ಇರುವ ಪುರಾತನ ನಿವೇಶನದಿಂದ ತಿಳಿಯಬಹುದು. ಈ ಹಳೆಯ ನಿವೇಶನದಲ್ಲಿ ಕೆಲವು ಗಜಪತಿ ನಾಣ್ಯಗಳು ದೊರಕಿವೆ. ಇದು ಉಚ್ಚಂಗಿ ಪಾಂಡ್ಯರ ಮೊದಲ ರಾಜಧಾನಿಯಾಗಿದ್ದು ಬೆಳ್ತುಜು 12ರ ಮುಖ್ಯ ಬೀಡಾಗಿತ್ತು. ಹೊಯ್ಸಳರು ಪಾಂಡ್ಯರನ್ನು ಸೋಲಿಸಿದ ಮೇಲೆ ಊರು ಅವನತಿಯನ್ನು ಹೊಂದಿರಬೇಕು. ಮೂಲಸ್ಥಾನ, ಸರ್ಪೇಶ್ವರ, ತ್ರಿಭುವನಮಲ್ಲ ವೀರಪಾಂಡ್ಯ ಕಟ್ಟಿಸಿದ ತ್ರಿಭುವನಮಲ್ಲ ಪಾಂಡ್ಯೇಶ್ವರ, ಬೆಳ್ತುಜುವಿನ ಜಗತಿಗಳು ಮತ್ತು ಕೊತ್ತಳಗಳು ಜಗತೇಶ್ವರ, ರಾಯಪಾಂಡ್ಯನ ರಾಣಿ ಸೋವಲದೇವಿ ಕಟ್ಟಿಸಿದ ಸೋಮನಾಥ, ಧರ್ಮೇಶ್ವರ, ಅವಿಮುಕ್ತೇಶ್ವರ ಮತ್ತು ವಾಸುದೇವರ ದೇವಾಲಯಗಳು ಇಲ್ಲಿದ್ದುವೆಂದು ಶಾಸನಗಳು ತಿಳಿಸುತ್ತವೆ. ಇವುಗಳಲ್ಲಿ ಅನೇಕವು ಉಳಿದಿಲ್ಲ. ಈಗಿನ ಆನೇಕೊಂಡದಲ್ಲಿ ಒಂದು ಈಶ್ವರ ದೇವಾಲಯ ಇದೆ. ಸು.1120ರಲ್ಲಿ ಕಟ್ಟಿರಬಹು ದಾದ ತ್ರಿಭುವನಮಲ್ಲ ಪಾಂಡ್ಯೇಶ್ವರ ದೇವಾಲಯವಾಗಿರಬಹುದು. ಈ ಗುಡಿಗೆ 6ನೆಯ ವಿಕ್ರಮಾದಿತ್ಯ 1123ರಲ್ಲಿ ದತ್ತಿ ಬಿಟ್ಟಿದ್ದಾನೆ. ಇದು ಕಲ್ಯಾಣದ ಚಾಳುಕ್ಯರ ದೇವಾಲಯಗಳ ಮಾದರಿಯಲ್ಲಿ ಉಚ್ಚಂಗಿ ಪಾಂಡ್ಯರು ಕಟ್ಟಿಸಿದ ಬಳಪದ ಕಲ್ಲಿನ ಸುಂದರ ದೇವಾಲಯಗಳ ಒಂದು ಉತ್ತಮ ಉದಾಹರಣೆ. ಪೂರ್ವಾಭಿಮುಖವಾಗಿರುವ ಒಂದು ಗರ್ಭಗೃಹ, ಅದರ ಮುಂದೆ ಸುಕನಾಸಿ, ನವರಂಗಗಳು, ನವರಂಗಕ್ಕೆ ಸೇರಿದಂತೆ ಉತ್ತರಕ್ಕೆ ಇನ್ನೊಂದು ಗರ್ಭಗೃಹ, ಪೂರ್ವ ದಕ್ಷಿಣಗಳಲ್ಲಿ ಎರಡಂಕಣದ ಮುಖಭದ್ರಗಳಿರುವ ಅಪರೂಪ ವಿನ್ಯಾಸದ ಈ ದೇವಾಲಯದ ಹೊರಗೋಡೆಗಳು ಸರಳವಾಗಿದ್ದು ಅಲ್ಲಲ್ಲಿ ಅರೆಗಂಬಗಳಿವೆ. ತೆರೆದ ಮುಖಮಂಟಪಗಳ ಹೊರಮೈಯಲ್ಲಿ ಕಟಾಂಜನದ ಕೆಳಗೆ ಹಲವು ಸಾಲು ಅಡ್ಡಪಟ್ಟಿಕೆಗಳು, ಮೇಲೆ ಜೋಡಿ ಅರೆಗಂಬಗಳ ನಡುವೆ ನೃತ್ಯಗಣಪತಿ, ಋಷಿಗಳು, ನರ್ತನದ, ವಿವಿಧ ಭಂಗಿಗಳಲ್ಲಿರುವ ಸ್ತ್ರೀಮೂರ್ತಿಗಳು, ವ್ಯಾಧರು ಮುಂತಾದ ಕಿರುಮೂರ್ತಿ ಗಳ ಸಾಲಿನಿಂದ ತುಂಬಿದ್ದು ಒಳಭಾಗದಲ್ಲಿ ಎರಡು ಕಡೆಯೂ ಜಗತಿಗಳಿವೆ. ಈ ದೇವಾಲ ಯದ ಕಂಬಗಳು ಬಗೆಬಗೆಯಾಗಿವೆ. ಮುಖಮಂಟಪ ಮತ್ತು ನವರಂಗದ ಭುವನೇಶ್ವರಿಗಳು ಸುಂದರವಾಗಿದ್ದು ನವರಂಗದ ಸುತ್ತಲ ಅಂಕಣಗಳಲ್ಲಿ ಪದ್ಮಗಳ ನಡುವಣ ಗೊಂಡೆಗಳಲ್ಲಿ ಅಷ್ಟದಿಕ್ಪಾಲಕರು,

ಮಧ್ಯದ ಅಂಕಣದಲ್ಲಿ ನಡುವೆ ಗಜಾರಿ ಮತ್ತು ಇಕ್ಕೆಲಗಳಲ್ಲಿ ವಿಷ್ಣು, ಬ್ರಹ್ಮ, ಮೇಲೆ ಕೆಳಗೆ ದ್ವಾದಶಾದಿತ್ಯರು, ಏಕಾದಶರುದ್ರರು, ಶಿವನ ಪರಿವಾರ ದೇವತೆಗಳು, ಯೋಗಾನರಸಿಂಹ, ಮೋಹಿನಿ, ಕೋದಂಡರಾಮ ಮುಂತಾದ ಮೂರ್ತಿಗಳಿಂದ ತುಂಬಿದ್ದು ಭವ್ಯವಾಗಿದೆ. ಬರಿದಾಗಿರುವ ಉತ್ತರದಿಕ್ಕಿನ ಗರ್ಭಗೃಹದ ಬಾಗಿಲುವಾಡ ಸುಂದರವಾಗಿದೆ. ಬಹುಶಃ

ಈಶ್ವರ ದೇವಾಲಯ

ಈ ಗರ್ಭಗೃಹದಲ್ಲಿದ್ದ ಕೇಶವನ ಭಿನ್ನವಾದ ಮೂರ್ತಿ ದೇವಾಲಯದ ಎದುರಿಗೆ ಈಚೆಗೆ ಕಟ್ಟಿರುವ ಒಂದು ಚಿಕ್ಕಗುಡಿಯಲ್ಲಿದೆ. ಜಾಲಂಧ್ರದಿಂದ ಕೂಡಿದ ಸುಕನಾಸಿಯ ಬಾಗಿಲುವಾಡದ ಎರಡು ಕಡೆಯೂ ಅರೆಮಂಟಪಗಳಿವೆ. ಅಭಿನವಹಸ್ತವೆಡಂಗ ಸರಸ್ವತೀ ಗಣದಾಸಿ ಬಾಚೋಜನ ಮಗ ಬಾಮೋಜ ಈ ದೇವಾಲಯದ ಶಿಲ್ಪಿ. (ಎಂ.ಎಚ್.)

**ಆನೋಲೀಡ್ :** ಸು. 1080ರಲ್ಲಿ ರಚಿತವಾದ ಒಂದು ಜರ್ಮನ್ ಕಾವ್ಯ. ಕೊಲೋನ್ ನಗರದ ಆರ್ಚ್‍ಬಿಷಪ್ ಆಗಿದ್ದ ಆನೋ ಎಂಬ ಮಠಾಧಿಕಾರಿಯನ್ನು ಕುರಿತ ಪ್ರಶಸ್ತಿಕಾವ್ಯ. ತೀರಾ ಸರಳವಾದ, ಜನಾದರಣೆ ಗಳಿಸಬಲ್ಲ ಶೈಲಿಯಲ್ಲಿ ರಚಿತವಾಗಿದ್ದುದರಿಂದ ಇದು ಹಲವರ ಗಮನ ಸೆಳೆಯಿತು. ಹನ್ನೊಂದನೆಯ ಶತಮಾನದ ಮಧ್ಯದಲ್ಲಿ ಜರ್ಮನ್‍ಭಾಷೆ ಹಳೆಯ ಸ್ವರೂಪವನ್ನು ಕಳೆದು ಮಧ್ಯಯುಗದ ಪ್ರೌಢ ಜರ್ಮನ್ ಸ್ವರೂಪವನ್ನು ತಳೆಯುತ್ತಿದ್ದ ಕಾಲದಲ್ಲಿ ವಿಪರೀತವಾದ ಧಾರ್ಮಿಕ ಕಟ್ಟುಪಾಡುಗಳಿಗೆ ಸಿಕ್ಕಿ ಲೌಕಿಕ ಕಾವ್ಯ ನರಳುತ್ತಿತ್ತು. ಆ ಕಾಲದಲ್ಲಿ ರಚಿತವಾದ ಸಾಹಿತ್ಯಕ ಅಂಶಗಳನ್ನುಳಿಸಿಕೊಂಡ ಕಾವ್ಯ ಇದು. ಇದಕ್ಕೆ ಸ್ವಲ್ಪ ಮುಂಚೆ ಬ್ರಾನ್‍ಬರ್ಗನ್ ಕ್ರೈಸ್ತ ಸಂನ್ಯಾಸಿಯೊಬ್ಬ ಬರೆದ ಎಝೋಲೀಡ್ (1063) ಎಂಬ, ಏಸುಕ್ರಿಸ್ತನ ಜೀವನ ಹಾಗೂ ಅಂತಿಮಕಾಲಕ್ಕೆ ಸಂಬಂಧಿಸಿದ ಪವಾಡಗಳನ್ನು ನಿರೂಪಿಸುವ ಇನ್ನೊಂದು ಕಾವ್ಯಕ್ಕೆ ಹೋಲಿಸುವುದುಂಟು. ಈ ಎರಡೂ ಕಾವ್ಯಗಳು ಅತಿ ಧರ್ಮಶ್ರದ್ಧೆಯ ಮಂಜಿನಲ್ಲೂ ಕಾವ್ಯಗುಣಗಳನ್ನುಳಿಸಿಕೊಂಡು ಅರಳಿದ ಸಾಹಿತ್ಯಕೃತಿಗಳು. (ಎಚ್.ಕೆ.ಆರ್.)

**ಆನ್ವೀಕ್ಷಿಕೀ :** ಪ್ರಾಚೀನ ಭಾರತದ ರಾಜ್ಯತಂತ್ರ ವಿಧಾನದ ರೀತ್ಯಾ ರಾಜಕುಮಾರ ನಾದವ ಪಡೆಯಬೇಕಾದ ಮುಖ್ಯ ವಿದ್ಯೆಗಳಲ್ಲಿ ಒಂದು. ಈ ಸಾಲಿನಲ್ಲಿ ಆನ್ವೀಕ್ಷಿಕೀ, ತ್ರಯೀ (ವೇದಗಳು), ವಾರ್ತಾ (ಅರ್ಥಶಾಸ್ತ್ರ), ದಂಡನೀತಿ (ರಾಜ್ಯತಂತ್ರ) ಎಂಬ ನಾಲ್ಕು ವಿದ್ಯೆಗಳ ಹೆಸರುಗಳಿವೆ. ಗೌತಮತ್ರಯೀ ಮತ್ತು ಆನ್ವೀಕ್ಷಿಕೀಗಳೆರಡನ್ನು ಮನುಸ್ಮೃತಿಗಿಂತ ಭಿನ್ನ ಪಂಥದವರಾದ ಮಾನವ ಪಂಥದವರು ತ್ರಯೀ, ವಾರ್ತಾ, ದಂಡನೀತಿಗಳನ್ನು ಬಾರ್ಹಸ್ಪತ್ಯರು ವಾರ್ತಾ ಮತ್ತು ದಂಡನೀತಿಗಳೆರಡನ್ನು ಔಶನಸರು ದಂಡನೀತಿಯೊಂದನ್ನು ಪ್ರಸ್ತಾಪಿಸಿದ್ದಾರೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಸಾಂಖ್ಯಯೋಗ ಮತ್ತು ಲೋಕಾಯತ ದರ್ಶನಗಳು ಆನ್ವೀಕ್ಷಿಕೀಯಲ್ಲಿ ಒಂದು ರೀತಿಯಲ್ಲಿ ಸಮ್ಮಿಳಿತವಾಗಿದೆ ಎಂದು ಹೇಳುತ್ತಾನೆ. ಶ್ರುತಿಯನ್ನು ಅವಲಂಬಿಸಿರುವ ವೇದವೇದಾಂತಗಳಲ್ಲದೆ ಪೂರ್ವಮೀಮಾಂಸೆ ಮತ್ತು ಉತ್ತರ ಮೀಮಾಂಸೆ ಅಥವಾ ವೇದಾಂತಗಳನ್ನೂ ಒಳಗೊಂಡಿರುವ ತ್ರಯೀವಿದ್ಯೆಗೆ ಎದುರಾಗಿ, ಆನ್ವೀಕ್ಷಿಕೀ ಎಂಬ ಶಬ್ದ ವೇದದಿಂದ ನೇರವಾಗಿ ಉದ್ಭವಿಸದೆ ನಾಮಮಾತ್ರಕ್ಕೆ ಅದರ ಪ್ರಭುತ್ವವನ್ನು ಒಪ್ಪಿಕೊಂಡಿರುವ ಸಾಂಖ್ಯಯೋಗಗಳನ್ನೂ ಅಥವಾ ವೇದಬಾಹಿರವಾದ ಲೋಕಾಯತಾದಿ ದರ್ಶನಗಳನ್ನೂ ದ್ಯೋತಿಸುತ್ತದೆ ಎಂದು ಕೌಟಿಲ್ಯ ಭಾವಿಸಿರುವಂತೆ ತೋರುತ್ತದೆ. (ಮೊದಲನೆಯ ವರ್ಗದಲ್ಲಿ ವೈಶೇಷಿಕ ಮತ್ತು ನ್ಯಾಯಗಳನ್ನೂ ಎರಡನೆಯದರಲ್ಲಿ ಬೌದ್ಧ ಮತ್ತು ಜೈನಧರ್ಮ ಗಳನ್ನೂ ಕೌಟಿಲ್ಯ ಏಕೆ ಸೇರಿಸಲಿಲ್ಲವೋ ವಿಶದವಾಗಿಲ್ಲ). ಇದು ತೀರ ಅಸಂಭವವೆಂದು ತೋರಿದರೂ ಬಹುಶಃ ಕೌಟಿಲ್ಯ ಲೋಕಾಯತ ಎಂಬ ಪದವನ್ನು ಅದರ ಪಾರಿಭಾಷಿಕಾರ್ಥ ವಾದ ಲೋಕಸತ್ತಾವಾದದಲ್ಲಿ ಉಪಯೋಗಿಸದೆ ಲೋಕಾನುಭವಜನ್ಯ ಜ್ಞಾನವೆಂಬ ಅರ್ಥದಲ್ಲಿ ಉಪಯೋಗಿಸಿರಬಹುದೆಂದು ಕಾಣುತ್ತದೆ. ತ್ರಯೀವಿದ್ಯೆಯಲ್ಲಿ ಶ್ರದ್ಧೆಗೆ ಹೆಚ್ಚು ಪ್ರಾಶಸ್ತ್ಯ ದೊರೆತಿದೆಯೆಂದೂ ಆನ್ವೀಕ್ಷಿಕೀಯಲ್ಲಿ ಅನ್ವೀಕ್ಷೆಗೆ, ಎಂದರೆ ವಿಚಾರಕ್ಕೆ ಹೆಚ್ಚು ಪ್ರಾಶಸ್ತ್ಯ ದೊರೆಯಬೇಕೆಂದೂ ಇಲ್ಲಿ ಸೂಚಿತವಾಗಿರುವಂತೆ ಕಾಣುತ್ತದೆ. ಸುತರ್ಕದಿಂದ ಒಳ್ಳೆಯದಾವುದು, ಕೆಟ್ಟದಾವುದು ಎಂಬುದನ್ನು ವೈದಿಕಮತದಿಂದಲೂ ಲಾಭದಾಯಕ ಯಾವುದು ನಷ್ಟಕಾರಕ ಯಾವುದು ಎಂಬುದನ್ನು ಅರ್ಥಶಾಸ್ತ್ರದಿಂದಲೂ ಯುಕ್ತವಾದ ನೀತಿ ಯಾವುದು ಅಯುಕ್ತವಾ ದುದು ಯಾವುದು ಎಂಬುದನ್ನು ರಾಜ್ಯತಂತ್ರದಿಂದಲೂ ತಿಳಿದುಕೊಂಡು ವಿಶಿಷ್ಟ ಪರಿಸ್ಥಿತಿಗಳಲ್ಲಿ ಈ ಶಾಸ್ತ್ರಗಳ ಪೈಕಿ ಯಾವುದು ಸಮಂಜಸವೆಂಬುದನ್ನು ನಿರ್ಣಯಿಸುವುದರಲ್ಲಿ ಆನ್ವೀಕ್ಷಿಕೀ ಜನರಿಗೆ ತುಂಬ ಉಪಯುಕ್ತವಾಗುತ್ತದೆ. ದುಃಖದಲ್ಲೂ ಸಂತೋಷದಲ್ಲೂ ಮನಸ್ಸನ್ನು ಸ್ಥಿರವಾಗಿರಿಸುತ್ತದೆ. ತಿಳಿವಳಿಕೆಯಲ್ಲೂ ಮಾತಿನಲ್ಲೂ ಕಾರ್ಯದಲ್ಲೂ ಚಾಕಚಕ್ಯತೆಯನ್ನು ಉತ್ಪಾದಿಸುತ್ತದೆ. ಹೀಗೆಂದು ಕೌಟಿಲ್ಯ ಹೇಳಿದ್ದಾನೆ. ಕೌಟಿಲ್ಯ ಮೇಲಿನದರ ಜೊತೆಗೆ ಈ ಮಾತನ್ನು ಜೋಡಿಸಿದ್ದಾನೆ: ಅನ್ವೀಕ್ಷಿಕೀ ಎಲ್ಲ ಶಾಸ್ತ್ರಗಳ ದೀಪ, ಎಲ್ಲ ಕಾರ್ಯಗಳಿಗೂ ಸತ್‍ಸಾಧನ, ಎಲ್ಲ ಶಾಸನಗಳಿಗೂ ಕರ್ತವ್ಯಗಳಿಗೂ ಅಡಿಗಲ್ಲು.

ಆನ್ವೀಕ್ಷಿಕೀಯನ್ನು ತಥ್ಯಪರಾಮರ್ಶೆ ಎಂದು ಭಾವಿಸಿ ಆ ಕಾರಣದಿಂದ ಅದು ತ್ರಯೀವಿದ್ಯೆಯ ಒಂದು ಶಾಖೆಯೆಂದು ಮಾನವಪಂಥದವರು ಭಾವಿಸಿರುವಂತಿದೆ. ಈಚೆಗೆ ಹೇತುವಿದ್ಯಾ, ನ್ಯಾಯವಿದ್ಯಾ ಮತ್ತು ತರ್ಕಶಾಸ್ತ್ರಗಳೊಂದಿಗೆ ಆನ್ವೀಕ್ಷಿಕೀ ಸಮೀಕೃತವಾಗಿದೆ. ನೇರವಾದ ಪ್ರತ್ಯಕ್ಷಾನುಭವ ಮತ್ತು ಆಗಮಶಾಸ್ತ್ರಗಳು ಎಂಬ ಎರಡು ದಾರಿಗಳಿಂದ ದೊರೆತ ಜ್ಞಾನವನ್ನು ಪುನಃ ಪರಿಶೀಲಿಸುವುದು ಆನ್ವೀಕ್ಷಿಕೀಯ ಲಕ್ಷಣವೆಂದು ಹೇಳಲಾಗಿದೆ. (ಪ್ರತ್ಯಕ್ಷಾಗಮಾಭ್ಯಾಂ ಈಕ್ಷಿತಸ್ಯ ಪಶ್ಚಾತ್ ಈಕ್ಷಣಂ ಅನ್ವೀಕ್ಷಾ ಸಾ ಪ್ರಯೋಜನಂ ಯಸ್ಯಾಃ– ಅಮರಕೋಶದ ಮೇಲೆ ಕ್ಷೀರಸ್ವಾಮಿಯ ವ್ಯಾಖ್ಯಾನ). (ಆರ್.ಎನ್.ಡಿ.)

**ಆನ್ಸೆರೆಸ್ ಬಾತು :** ಆನ್ಸೆರಿಫಾರ್ಮೀ ಉಪವರ್ಗಕ್ಕೆ ಸೇರಿದ ಹಕ್ಕಿ. ಈ ಬಾತು ಪ್ರಪಂಚದ ಸಿಹಿನೀರಿನ ಜಲಾಶಯಗಳಲ್ಲಿ ವಾಸಿಸಬಲ್ಲದು. ಅಗಲವಾಗಿ ಚಪ್ಪಟೆಯಾಗಿರುವ ಇದರ ಕೊಕ್ಕು ಮುಖ್ಯವಾಗಿ ನೀರಿನಲ್ಲಿರುವ ಸಣ್ಣ ಸಣ್ಣ ಜೀವಿಗಳನ್ನು ಹಿಡಿದು ತಿನ್ನಲು ಅನುಕೂಲಿಸುವಂತಿದೆ. ಕೆಲವು ಬಾತುಗಳು ಸಸ್ಯಾಹಾರಿಗಳು; ಕೆಲವು ನೀರಿನಲ್ಲಿರುವ ಆಹಾರವನ್ನು ಜಾಲಿಸಿ ತಿನ್ನಬಲ್ಲವು. ಮತ್ತೆ ಕೆಲವು ಮೃದ್ವಂಗಿಗಳನ್ನು ಅಥವಾ ಮೀನುಗಳನ್ನು ಹಿಡಿದು ತಿನ್ನುವುವು. ಹೆಬ್ಬೆಟ್ಟು ಮೊಟಕಾಗಿದೆ. ಇತರ ಬೆರಳುಗಳ ಮಧ್ಯೆ ಚರ್ಮ ಆವರಿಸಿ ಜಲಪಾದ ಏರ್ಪಟ್ಟು ನೀರಿನಲ್ಲಿ ಈಜಲು ಅನುಕೂಲವಾಗಿದೆ. ನಾಲಗೆ ದಪ್ಪವಾಗಿಯೂ ಮಾಂಸಭರಿತವಾಗಿಯೂ ಇದೆ. ಹಾರುವ ಹಕ್ಕಿಗಳಲ್ಲಿಲ್ಲದ ಒಳಹೊರಗಾಗುವ ಶಿಶ್ನವಿರುವುದು. ಹೆಣ್ಣುಬಾತುಗಳು ಬಹು ಸಂಖ್ಯೆಯಲ್ಲಿ ಬಿಳಿಯ ಮೊಟ್ಟೆಗಳನ್ನಿಡುತ್ತವೆ. ನೆಲದ ಮೇಲೆ ಗೂಡುಗಳನ್ನು ಕಟ್ಟುತ್ತವೆ. ಒಂದೇ ಜೊತೆ ಗಂಡು ಹೆಣ್ಣು ಬಾತು ಹಕ್ಕಿಗಳು ಒಟ್ಟಾಗಿ ದೀರ್ಘಕಾಲ ದಾಂಪತ್ಯ ಜೀವನ ನಡೆಸುವುವು. ಹೆಚ್ಚು ವೇಳೆ ಜಲಾಶಯಗಳಲ್ಲಿರುವ ಮುಳುಗುವ ಹಕ್ಕಿ ಆನ್ಸೆರ್ ಇಂಡಿಕಸ್ ಎಂಬುದು ನಮ್ಮ ದೇಶದ ಬಾತು.

(ಪಿ.ಎ.ಆರ್.; ಕೆ.ಎನ್.ಎನ್)

**ಆನ್ಸೆಲ್ಮ್, ಸೇಂಟ್ :** 1034–1109. ಲ್ಯಾನ್ ಫ್ರಾಂಕ್‍ನ ತರುವಾಯ ಕ್ಯಾಂಟರ್‍ಬೆರಿ ಮಠದ ಪ್ರಧಾನ ಪದವಿಯನ್ನಲಂಕರಿಸಿದವ (1093–1109). ಬೆಕ್ ಮಠದಲ್ಲಿ ಉಪದೇಶಕ ನಾಗಿದ್ದು ತನ್ನ ಪ್ರತಿಭೆಯಿಂದ, ಸೌಶೀಲ್ಯದಿಂದ ಆ ಮಠವನ್ನು ದೊಡ್ಡ ವಿದ್ಯಾಕೇಂದ್ರವನ್ನಾಗಿ ಮಾಡಿದವ. ಇವನು ಮಠಾಧಿಪತಿಯಾಗಿದ್ದ ಕಾಲ ಚಿರಸ್ಮರಣೀಯವಾದುದು. ಇವನ ಬರೆಹಗಳು ತುಂಬ ಪ್ರಭಾವಶಾಲಿಯಾಗಿದ್ದುವು. ಮನುಷ್ಯನ ಮನಸ್ಸು ದೇವರೂಪವನ್ನು ಕಲ್ಪಿಸಿಕೊಳ್ಳಬಲ್ಲುದಾದುದರಿಂದ ದೇವರಿರಲೇಬೇಕು ಎಂದು ಈತನ ವಾದ. ಮಠಾಧಿಪತಿಯ ಸ್ಥಾನಕ್ಕೆ ಬರುವವ ಅಧಿಕಾರವನ್ನು ಪೋಪನಿಂದ ಸ್ವೀಕರಿಸಬೇಕೇ ಅಥವಾ ರಾಜನಿಂದಲೇ ಎಂಬ ಜಟಿಲ ಪ್ರಶ್ನೆ ಇವನ ಕಾಲದಲ್ಲಿ ಎರಡು ಸಲ ಚರ್ಚೆಗೆ ಬಂದು, ಮಠಾಧಿಪತಿಯ ಸ್ಥಾನಕ್ಕೆ ಬರುವವ ಪೋಪನ ಹಸ್ತದಿಂದ ಅಧಿಕಾರ ದಂಡ, ಉಂಗುರಗಳನ್ನು ಸ್ವೀಕರಿಸಬೇಕು. ರಾಜನಿಗೆ ಸ್ವಾಮಿಭಕ್ತಿ ತೋರಿಸಬೇಕು ಎಂದು ತೀರ್ಮಾನವಾಯಿತು. ಅಂದಿನಿಂದ ಈತನ ಹೆಸರು ಚರ್ಚಿನ ಚರಿತ್ರೆಯಲ್ಲಿ ಶಾಶ್ವತವಾಗಿ ನಿಂತಿತು. (ಎಚ್.ಕೆ.)

**ಆಪದ್ಧರ್ಮ :** ಧರ್ಮವೆಂಬುದು ಸೂತ್ರವಾದರೆ ಆಪದ್ಧರ್ಮ ಅದರ ಒಂದು ಅಪವಾದ. ಧರ್ಮವನ್ನು ಯಾರೂ ಯಾವಾಗಲೂ ಮೀರಿ ನಡೆಯಬಾರದು. ಆದರೆ ಆಪತ್ತು ಆವರಿಸಿದಾಗ ಧರ್ಮದ ನೇರ ಗೆರೆಯಿಂದ ಸ್ವಲ್ಪ ಅತ್ತಇತ್ತ ನಡೆದರೂ ಬಾಧಕವಿಲ್ಲವೆಂದು ಧರ್ಮಸೂಕ್ಷ್ಮ ಹೇಳುತ್ತದೆ. ಇಲ್ಲಿ ಆಪತ್ತು ಎಂದರೆ ಎಂಥದು, ಮೀರುವುದು ಎಂದರೆ ಎಷ್ಟರಮಟ್ಟಿಗೆ ಎಂಬುದನ್ನು ವಿವೇಕದಿಂದ ನಿರ್ಧರಿಸಬೇಕು. ಏಕೆಂದರೆ ಸಾಮಾನ್ಯರಿಗೆ ಧರ್ಮಾಚರಣೆಯ ಪ್ರತಿ ಹಂತದಲ್ಲೂ ಆಪತ್ತು ಒದಗಿದಂತೆ ಭಾಸವಾಗುತ್ತದೆ. ಅಂಥವರಿಗೆ ಅಂಥ ಎಲ್ಲ ಕಾಲಗಳಲ್ಲೂ ಧರ್ಮಬಾಹಿರವಾದದ್ದನ್ನು ಮಾಡಲು, ವಿನಾಯತಿ ಕೊಡಲು ಶಾಸ್ತ್ರಕಾರರು ಆಪದ್ಧರ್ಮ ಸೂತ್ರವನ್ನು ಹೇಳಿಲ್ಲ. ಆಪತ್ತು ಅತ್ಯಧಿಕ ಪ್ರಮಾಣದ್ದಾಗಿದ್ದು ಅದರಿಂದ ಪಾರಾಗಲು ಅಲ್ಪಸ್ವಲ್ಪ ಧರ್ಮದೂರವಾದ ಕಾರ್ಯಾಚರಣೆಯಲ್ಲಿ ಮನುಷ್ಯ

ನಿರತನಾದಲ್ಲಿ ಅದನ್ನು ಆಪದ್ಧರ್ಮಾನುಸಾರಿಯಾದ ನಡೆವಳಿಕೆ ಎಂದು ಹೇಳಬಹುದು. ಅಂದರೆ ಆಪದ್ಧರ್ಮ ಎಂದಿಗೂ ಅನುಕೂಲಸಿಂಧುವಲ್ಲ. ಜೀವಕ್ಕೋ ಜೀವನೋಪಾಯಕ್ಕೋ ಸಂಚಕಾರ ಬರುವಂಥ ಪ್ರಸಂಗವೇ ಆಪತ್ತು. ಅದು ಬಂದಾಗ ಗತ್ಯಂತರವಿಲ್ಲದೆ, ಅನಿವಾರ್ಯವಾಗಿ ಮಾಡುವ ಆಚರಣೆ, ವ್ಯವಹಾರ ಅಥವಾ ಕೆಲಸ. ಅದು ಎಷ್ಟೇ ನಿಂದನೀಯವೂ, ದೂಷಿತವೂ, ವರ್ಜಿತವೂ ಆಗಿದ್ದರೂ ಆಪದ್ಧರ್ಮವೆನಿಸಿಕೊಳ್ಳುತ್ತದೆ (ಆಪದಿ ಕರ್ತವ್ಯೋ ಧರ್ಮ:).

ಆಪತ್ತು ಹೇಗೆ ಬರುತ್ತದೆ, ಯಾವಾಗ ಬರುತ್ತದೆ, ಏಕೆ ಬರುತ್ತದೆ, ಯಾರಿಗೆ ಬೇಕಾದರೂ ಬರುತ್ತದೆಯೇ–ಎಂಬ ಪ್ರಶ್ನೆಗಳಿಗೆ ನಿತ್ಯಜೀವನದಲ್ಲೇ ಸದುತ್ತರ ಸಿಗುತ್ತದೆ. ವೇದಗಳು, ಇತಿಹಾಸ, ಪುರಾಣಗಳು ಮತ್ತು ಚರಿತ್ರೆಯಲ್ಲಂತೂ ಜ್ವಲಂತ ಉದಾಹರಣೆಗಳಿವೆ.

ಹರಿಶ್ಚಂದ್ರನಿಗೆ ಬರಬಾರದ ಕಷ್ಟ ಬಂತು. ಆತ ಕ್ಷತ್ರಿಯ ಧರ್ಮವನ್ನು ತ್ಯಜಿಸಿ ಚಂಡಾಲನಾಗಬೇಕಾಯಿತು. ಧರ್ಮಪತ್ನಿಯನ್ನು ದಾಸಿಯನ್ನಾಗಿ ಮಾಡಬೇಕಾಯಿತು. ಆದರೂ ಆತ ಪರಮಧರ್ಮವಾದ ಸತ್ಯವನ್ನು ಬಿಡಲಿಲ್ಲ. ಇಲ್ಲಿ ದೊಡ್ಡ ಧರ್ಮವನ್ನು ಪಾಲಿಸುವುದಕ್ಕಾಗಿ ಸಣ್ಣ ಧರ್ಮಗಳನ್ನು ತ್ಯಜಿಸಿರುವುದು ಕಾಣುತ್ತದೆ. ನ್ಯಾಯವಾಗಿ ಇದು ಧರ್ಮಾಚರಣೆಗೆ ಉದಾಹರಣೆಯೇ ಹೊರತು ಆಪದ್ಧರ್ಮಕ್ಕಲ್ಲ. ಸಾಮಾನ್ಯರಿಗೆ ಜೀವ, ಜೀವನೋಪಾಯಗಳೇ ದೊಡ್ಡವು. ಅವನ್ನುಳಿಸಲು ಅವರು ಆಪದ್ಧರ್ಮವನ್ನು ಮೊರೆ ಹೋಗಬೇಕಾಗುತ್ತದೆ. ಅಜೀಗರ್ತನೆಂಬೊಬ್ಬ ಬಡಬ್ರಾಹ್ಮಣ ಹೊಟ್ಟೆಪಾಡಿಗಾಗಿ ಮಗ ಶುನಃಶೇಪನನ್ನು ಮಾರಿದ್ದೂ ಅಲ್ಲದೆ ಆತನನ್ನು ಕೊಲ್ಲಲೂ ಹಿಂದೆಗೆಯಲಿಲ್ಲ. ವಾಮದೇವನೆಂಬ ಋಷಿಯೊಬ್ಬ ಹಸಿವೆಯನ್ನು ಇಂಗಿಸಿಕೊಳ್ಳಲು ನಾಯಿಯ ಮಾಂಸ ತಿನ್ನಬೇಕಾಯಿತು. ಸುಪ್ರಸಿದ್ಧನಾದ ವಿಶ್ವಾಮಿತ್ರನಂತೂ ಚಂಡಾಲನ ಕೈಯಿಂದ ನಾಯಿಯ ಮಾಂಸವನ್ನು ಪಡೆದು ಭಕ್ಷಿಸಿದ. ಪಾಂಡವರು ಮಾಡಿದ ಭಿಕ್ಷಾಚರ್ಯೆ, ಅಜ್ಞಾತವಾಸಕಾಲದ ಅವರ ವೃತ್ತಿಗಳು ಆಪದ್ಧರ್ಮಕ್ಕೆ ಕೆಲವು ಉದಾಹರಣೆಗಳು. ಪತ್ನಿಯನ್ನು ಕಳೆದುಕೊಂಡು ಪರಿತಪಿಸುತ್ತಿದ್ದ ಶ್ರೀರಾಮ ಸಮಾನದುಃಖಿಯಾದ ಸುಗ್ರೀವನ ಸಖ್ಯ ಬೆಳೆಸಿ, ವಾಲಿವಧೆ ಮಾಡಿದ್ದು ನ್ಯಾಯವೇ ಅನ್ಯಾಯವೇ ಎಂಬುದನ್ನು ಆಮೇಲಿನವರು ಚರ್ಚಿಸುವಂತಾಯಿತು.

ಹೀಗೆ ಆಪತ್ಕಾಲ (ಮಹಾಭಾರತದಂತೆ ಜಘನ್ಯಕಾಲ) ಬಂದಾಗ ಧರ್ಮಶಾಸ್ತ್ರದ ಕಟ್ಟುಕಟ್ಟಳೆಗಳನ್ನು ಮೀರಿ ತನ್ನ ಉಳಿವಿಗಾಗಿ ಮನುಷ್ಯ ನಡೆದುದುಂಟು. ಆತ್ಮಾರ್ಥೇ ಪೃಥಿವೀಂ ತ್ಯಜೇತ್ ಎಂಬ ವ್ಯಾಸವಾಕ್ಯವನ್ನು ಆಪದ್ಧರ್ಮದ ಪ್ರತಿಪಾದನೆಗಾಗಿ ಬಳಸಬಾರದು. ಅಲ್ಲಿ ಅದರ ಅರ್ಥ–ಆತ್ಮೋದ್ಧಾರಕ್ಕಾಗಿ ಉಳಿದುದೆಲ್ಲವನ್ನೂ ಬಿಡು ಎಂದು. ಆದರೆ ಅದೇ ವ್ಯಾಸರು ಶಾಂತಿಪರ್ವದಲ್ಲಿ ನತ್ವೇವಾತ್ಮಾ ಪ್ರದಾತವ್ಯಃ ಶಕ್ಯೇ ಸತಿ ಕಥಂಚನ ಎಂದು ಹೇಳಿ ಏನೇ ಬರಲಿ ವ್ಯಕ್ತಿ ತನ್ನನ್ನು ತಾನು ಬಿಟ್ಟುಕೊಡಬಾರದೆಂದು ಆಪದ್ಧರ್ಮ ಸೂತ್ರವನ್ನು ಸೂಚಿಸಿದ್ದಾರೆ. ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮ ಯುಧಿಷ್ಠರನಿಗೆ ಆಪದ್ಧರ್ಮದ ವಿಚಾರವಾಗಿ ಅನೇಕ ನಿದರ್ಶನಗಳ ಸಮೇತ ಒಂದು ಸುದೀರ್ಘ ಪ್ರವಚನವನ್ನೇ ಕೊಟ್ಟಿದ್ದಾನೆ. (ಸಿ.ಜಿ.ಪಿ.)

**ಆಪಲ್ಟನ್, ಸರ್ ಎಡ್ವರ್ಡ್ ವಿಕ್ಟರ್ :** 1892–1965. ಬ್ರಿಟಿಷ್ ಭೌತವಿಜ್ಞಾನಿ. ರೇಡಿಯೊ ತರಂಗಗಳ ಪ್ರಸಾರದ ವಿಷಯದಲ್ಲಿ ಮುಖ್ಯ ಸಂಶೋಧನೆ ನಡೆಸಿದ. ಭೂಮಿಯಿಂದ 230 ಕಿಮೀ ಎತ್ತರದಲ್ಲಿರುವ ವಿದ್ಯುತ್ಕಣಯುಕ್ತವಾದ ವಲಯವನ್ನು ಸಂಶೋಧಿಸಿದ. ಆಪಲ್ಟನ್ ಸ್ತರವೆಂದೇ ಅದನ್ನು ಕರೆಯಲಾಗಿದೆ. ಅಯಾನ್‌ಗೋಳದ ಎಫ್–ಪ್ರದೇಶದಲ್ಲಿಯ ಒಂದು ಅಯಾನೀಕೃತ ಪದರ. ಸೂರ್ಯಾಭಿಮುಖ ಗೋಳಾರ್ಧ ಕುರಿತಂತೆ ಇದರಲ್ಲಿ ಎಫ್–1 ಮತ್ತು ಎಫ್–2 ಪದರಗಳಿವೆ. ರಾತ್ರಿ ಗೋಳಾರ್ಧದಲ್ಲಿ ಕೇವಲ ಎಫ್–2 ಪದರ ಮಾತ್ರ ಇರುವುದು. 50ಮೆಗ ಹರ್ಟ್ಸ್ ಆವೃತ್ತಿಗಳವರೆಗೂ ಎಫ್–ಪದರ ರೇಡಿಯೋ ತರಂಗಗಳನ್ನು ಪ್ರಸರಿಸಬಲ್ಲದು. ಇದಕ್ಕಾಗಿ 1947ರಲ್ಲಿ ನೊಬೆಲ್ (ಭೌತವಿಜ್ಞಾನ) ಪ್ರಶಸ್ತಿ ಲಭಿಸಿತು (**ನೋಡಿ– ಅಯಾನ್‌ಗೋಳ**). ಜನನ ಬ್ರಾಡ್‌ಫರ್ಡ್‌ನಲ್ಲಿ, ವಿದ್ಯಾಭ್ಯಾಸ ಅದೇ ಊರಿನಲ್ಲಿ ಮತ್ತು ಕೇಂಬ್ರಿಜ್‌ನ ಸೇಂಟ್ ಜಾನ್ಸ್ ಕಾಲೇಜಿನಲ್ಲಿ. 1924–1936ರ ವರೆಗೆ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಪ್ರಾಯೋಗಿಕ ಭೌತವಿಜ್ಞಾನದ ವೀಟ್‌ಸ್ಟನ್ ಪ್ರಾಧ್ಯಾಪಕನಾಗಿದ್ದು 1936–39ರಲ್ಲಿ ಕೇಂಬ್ರಿಜ್‌ನಲ್ಲಿ ಜ್ಯಾಕ್‌ಸೋನೀಯನ್ ಪ್ರಾಧ್ಯಾಪಕನಾದ. 1939 ರಿಂದ 47ರವರೆಗೆ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಇಲಾಖೆಯ ಕಾರ್ಯದರ್ಶಿಯಾಗಿದ್ದ. 1949ರಲ್ಲಿ ಎಡಿನ್‌ಬರೊ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ನೇಮಕಗೊಂಡ. 1927ರಲ್ಲಿ ಇವನಿಗೆ ಎಫ್.ಆರ್.ಎಸ್. ಗೌರವ ಲಭಿಸಿತು. (ಟಿ.ಎಸ್.ಎಸ್.)

**ಆಪಸ್ತಂಬ :** ಮಹಾಭಾರತದ ಪ್ರಕಾರ ಭೃಗುವಂಶಜನಾದ ಮಹರ್ಷಿ. ಕಶ್ಯಪ ಮಹರ್ಷಿ ದಿತಿಯಿಂದ ಮಾಡಿಸಿದ ಪುತ್ರಕಾಮೇಷ್ಟಿಗೆ ಈತ ಆಚಾರ್ಯನಾಗಿದ್ದನೆಂದೂ (ಮತ್ಸ್ಯಪುರಾಣ) ಈತನ ಪತ್ನಿಯ ಹೆಸರು ಅಕ್ಷಸೂತ್ರಾ ಎಂದೂ ಪುತ್ರನ ಹೆಸರು ಕರ್ಕಿಯೆಂದೂ ಪುರಾಣಗಳಲ್ಲಿ (ಬ್ರಹ್ಮಪುರಾಣ) ಊಹಿಸುತ್ತಾರೆ. ಕಾಲ ಪ್ರ.ಶ.ಪೂ. 900 ರಿಂದ 300 ಎಂದು ಕಾಣೆಯವರು ಸಾಧಾರವಾಗಿ ನಿರ್ಣಯಿಸಿದ್ದಾರೆ. ಈತ ಮಹಾಭಾರತವನ್ನೂ ಭವಿಷ್ಯ ಪುರಾಣವನ್ನೂ ಉಲ್ಲೇಖಿಸಿದ್ದಾನೆ.

ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆ ಇಲ್ಲವೆ ಚರಣವನ್ನು ತನ್ನ ಕಲ್ಪಸೂತ್ರಗಳಿಂದ ಪರಿಷ್ಕರಿಸಿ ವೈದಿಕಕರ್ಮ ಮಾರ್ಗವನ್ನು ಸರ್ವಗ್ರಾಹ್ಯವಾಗುವಂತೆ ಮಾಡಿದ ಕೀರ್ತಿ ಈತನದು. ಕುಮಾರಿಲಭಟ್ಟರು ಹೇಳಿರುವಂತೆ,

ವೇದಾದೃತೇಽಪಿ ಕುರ್ವನ್ತಿ ಕಲ್ಪೈಃ ಕರ್ಮಾಣಿ ಯಾಜ್ಞಿಕಾಃ  
ನತು ಕಲ್ಪೈರ್ವಿನಾ ಕೇಚಿನ್ಮನ್ತ್ರ ಬ್ರಾಹ್ಮಣಮಾತ್ರಕಾತ್॥

ವೇದವೇ ಇಲ್ಲದಿದ್ದರೂ ಕಲ್ಪಸೂತ್ರಗಳ ಸಹಾಯದಿಂದ ಯಾಜ್ಞಿಕರು ಕರ್ಮಾಚರಣೆ ಮಾಡಬಲ್ಲರು. ಆದರೆ ಕಲ್ಪಸೂತ್ರಗಳಿಲ್ಲದೆ ಹೋದರೆ ಮನ್ತ್ರಬ್ರಾಹ್ಮಣಗಳಿದ್ದರೂ ಕರ್ಮಾಚರಣೆ ಅವಶ್ಯ. ಈ ದೃಷ್ಟಿಯಿಂದ ಕಲ್ಪವೆಂಬ ವೇದಾಂಗದ ಮಹತ್ತ್ವ ಸ್ಪಷ್ಟ. ಅಧ್ವರ್ಯುಗಳಿಗೆ ಮೀಸಲಾದ ಯಜುರ್ವೇದಕ್ಕೆ ಕಲ್ಪಸೂತ್ರವನ್ನು ಸಮಗ್ರ ರೀತಿಯಿಂದ ನಿರ್ಮಿಸಿದ ಕೀರ್ತಿ ಆಪಸ್ತಂಬನದು. ಪ್ರಾಯಃ ಭಾರದ್ವಾಜನೆಂಬ ಕಲ್ಪಸೂತ್ರಕಾರನಿಗಿಂತ ಈಚಿನವರಾದರೂ ಹಿರಣ್ಯಕೇಶಿಯೆಂಬ ಕಲ್ಪಸೂತ್ರಕಾರನಿಗೆ ಆಪಸ್ತಂಬನೇ ಮಾರ್ಗದರ್ಶಕ.

ಆಪಸ್ತಂಬ ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ, ಶುಲ್ಬಸೂತ್ರ, ಮಂತ್ರಪಾಠ–ಹೀಗೆ ಸಮಗ್ರವಾಗಿ ಕಲ್ಪದ ಸರ್ವಾಂಗಗಳನ್ನೂ ಕುರಿತು ಪ್ರಮಾಣಬದ್ಧವಾಗಿ ಸೂತ್ರರಚನೆ ಮಾಡಿದ್ದಾನೆ. ಇವೆಲ್ಲವೂ ಈಗ ವಿದ್ವಾಂಸರಿಂದ ಪ್ರಕಟಿತವಾಗಿವೆ. ಕುಮಾರಿಲಭಟ್ಟ, ಯಾಜ್ಞವಲ್ಕ್ಯ, ವಿಜ್ಞಾನೇಶ್ವರ ಮುಂತಾದವರು ಆಪಸ್ತಂಬನನ್ನು ಗೌರವದಿಂದ ಸ್ಮರಿಸಿದ್ದಾರೆ. ಹದಿನಾರನೆಯ ಶತಮಾನದ ಹರದತ್ತ ಧರ್ಮಸೂತ್ರಕ್ಕೆ ಉಜ್ಜಲಾ ಎಂಬ ವೃತ್ತಿಯನ್ನು ರಚಿಸಿದ್ದಾನೆ.

ವೇದಸಂಹಿತೆ ಹಾಗೂ ಬ್ರಾಹ್ಮಣಗಳನ್ನು ಶ್ರುತಿಯೆನ್ನುವಂತೆ ವೇದಾಂಗ ಕಲ್ಪಸೂತ್ರಗಳನ್ನು ರಚಿಸಿರುವ ಆಪಸ್ತಂಬಾದಿಗಳನ್ನು ಸ್ಮೃತಿಕಾರರೆನ್ನುತ್ತಾರೆ. ಬ್ರಾಹ್ಮಣಗಳಲ್ಲಿ ಯಜ್ಞವಿಧಿಗಳ ಸಂಗಡವೇ ರೋಚಕವಾದ ಕಥೆ ಮುಂತಾದುವೂ ಬಂದು ಅರ್ಥವಾದವೆನಿಸುತ್ತವೆ. ಆದರೆ ಅರ್ಥವಾದಗಳನ್ನು ತೆಗೆದು ವಿನಿಯುಕ್ತ ಮಂತ್ರಗಳನ್ನು ಕ್ರೋಡೀಕರಿಸಿಕೊಡುವ ಪರಿಷ್ಕರಣ ಶ್ರೌತಸೂತ್ರಗಳದು.

ಸಾಮಾನ್ಯವಾಗಿ ಅಗ್ನಿಕಾರ್ಯಗಳು, ಮಂತ್ರಗಳು, ಇಷ್ಟಿಗಳು, ಅನೇಕ ಯಜ್ಞಗಳು–ಇವುಗಳ ವಿಧಿವಿವರಣೆ ಶ್ರೌತಸೂತ್ರಗಳ ವಿಷಯ. ಪುರೋಹಿತರ ಕೈಪಿಡಿಗಳೆಂದು ಇವನ್ನು ಭಾವಿಸಬಹುದು. ಯಜ್ಞಯಾಗಾದಿಗಳ ಇತಿಹಾಸವನ್ನರಿಯಲು ಇವುಗಳ ಅಧ್ಯಯನ ಅಗತ್ಯ.

ಮನುಷ್ಯನ ಜನ್ಮಸಂಸ್ಕಾರದಿಂದ ಹಿಡಿದು, ಅಂತ್ಯಸಂಸ್ಕಾರದವರೆಗೆ ಸಕಲ ಗೃಹ್ಯಕರ್ಮಗಳೂ ಗೃಹ್ಯಸೂತ್ರಗಳ ವಿಷಯ. ಇಂದಿನವರೆಗೂ ಇವು ಆಚರಣೆಯಲ್ಲಿ ಉಳಿದು ಬಂದಿವೆ. ಗರ್ಭಾಧಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೌಲ, ಉಪನಯನ, ಸಮಾವರ್ತನ, ವಿವಾಹ, ಶ್ರಾದ್ಧಾದಿಗಳು, ದೇವಯಜ್ಞ, ಪಿತೃಯಜ್ಞ, ಬ್ರಹ್ಮಯಜ್ಞ ಇತ್ಯಾದಿ ಕರ್ಮಾಂಗಗಳ ಪ್ರಯೋಗವಿಧಿ ಗೃಹ್ಯಸೂತ್ರದಲ್ಲಿ ಬರುತ್ತದೆ.

ವರ್ಣಾಶ್ರಮಧರ್ಮಗಳ ಕೂಲಂಕಷ ವಿವೇಚನೆ ಧರ್ಮಸೂತ್ರಗಳ ವಿಷಯ. ಹಾಗೆಯೇ ಶುಲ್ಬಸೂತ್ರಗಳಲ್ಲಿ ವೇದಿಯ ನಿರ್ಮಾಣ, ಅಗ್ನಿಕುಂಡದ ರಚನೆ, ಅಳತೆಯ ವಿಧಾನ ಮುಂತಾದ ವಿಷಯಗಳಿರುತ್ತವೆ. ಉಪಯುಕ್ತ ಮಂತ್ರಗಳನ್ನು ಕಲ್ಪಸೂತ್ರಗಳಲ್ಲಿ ಪೂರ್ಣವಾಗಿ ಕೊಡುವುದೂ ಉಂಟು, ಪ್ರತೀಕವನ್ನು ಮಾತ್ರ ಸೂಚಿಸುವುದೂ ಉಂಟು.

ಆಪಸ್ತಂಬಶಾಖೆಯ ಅನುಯಾಯಿಗಳು ನರ್ಮದಾನದಿಯ ದಕ್ಷಿಣದಲ್ಲಿ ಮಾತ್ರ ಉಂಟೆಂದು ಚರಣವ್ಯೂಹಭಾಷ್ಯ ಹೇಳಿದೆ. ಈಗಲೂ ಆಂಧ್ರ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಈ ಶಾಖೆಯ ಪ್ರಸಾರವನ್ನು ನೋಡಬಹುದು. ಉತ್ತರಭಾರತ ಮಧ್ಯಪ್ರದೇಶಗಳಲ್ಲಿ ಇದರ ಪ್ರಸಾರವಿಲ್ಲ. (ಕೆ.ಕೆ.; ಕೆ.ಟಿ.ಪಿ.)

**ಆಪೆನ್ ಹೈಮ್, ಎಡ್ವರ್ಡ್ ಫಿಲಿಪ್ಸ್ :** 1866–1946. ಜನಪ್ರಿಯ ಕಾದಂಬರಿಕಾರ. ಇಂಗ್ಲೆಂಡಿನಲ್ಲಿ ಜನಿಸಿದ. ತಂದೆಯೊಡನೆ ಚರ್ಮವ್ಯಾಪಾರ ಮಾಡುತ್ತಿದ್ದು ಬಿಡುವಾದಾಗ ಬರೆಯುತ್ತಿದ್ದ. ಮೊದಲ ಕಾದಂಬರಿ 1887ರಲ್ಲಿ ಅಚ್ಚಾಯಿತು. ಷೆಫಿಲ್ಡ್‌ನ ವೀಕ್ಲಿ ಟೆಲಿಗ್ರಾಫ್ ಪತ್ರಿಕೆಗೆ ಆರು ಧಾರಾವಾಹಿ ಕಥೆಗಳನ್ನು ಬರೆದ. 1891ರಲ್ಲಿ ಎಲ್ಸಿ ಹಾಪ್‌ಕಿನ್ಸ್ ಎಂಬ ಅಮೆರಿಕದ ಮಹಿಳೆಯನ್ನು ಮದುವೆಯಾದ. ಅಂತಾರಾಷ್ಟ್ರೀಯ ರಹಸ್ಯ ಪತ್ರಗಳು, ಮೋಸದ ರಾಜಕಾರಣಿಗಳು, ಸಾಹಸಿ ಸ್ತ್ರೀಯರು–ಇವರ ಗುಪ್ತಸಂಚುಗಳನ್ನೊಳಗೊಂಡ ನೂರಾರು ಕಾದಂಬರಿಗಳನ್ನು ಬರೆದ. ದಿ ಮಿಸ್ಟೀರಿಯಸ್ ಮಿಸ್ಟರ್ ಸ್ಯಾಬಿನ್ (1898), ಎ ಪ್ರಿನ್ಸ್ ಆಫ್ ಸಿನರ್ಸ್ (1903), ದಿ ಗ್ರೇಟ್ ಇಂಪರ್ಸನೇಷನ್ (1920), ದಿ ಕಿಂಗ್‌ಡಂ ಆಫ್ ದಿ ಬ್ಲೈಂಡ್ (1917)–ಇವು ಆತನ ಪ್ರಸಿದ್ಧ ಕಾದಂಬರಿಗಳು. ದಿ ಪೂಲ್ ಆಫ್ ಮೆಮೊರಿ (1941) ಆತನ ಆತ್ಮಕಥೆ. ಆತ್ಮವಿಷಯ ಹೆಚ್ಚಿಲ್ಲದಿದ್ದರೂ ಗ್ರಂಥ ಚೆನ್ನಾಗಿದೆ. (ಎಚ್.ವಿ.ಎಸ್.)

**ಆಪೆರ : ನೋಡಿ– ಗೇಯರೂಪಕ.**

**ಆಪ್ಟೆರಿಕ್ಸ್ :** ಕೀವೀ ಎಂಬ ಹಾರಲಾಗದ ಪಕ್ಷಿಯ ವಂಶನಾಮ. ನ್ಯೂಜಿಲೆಂಡಿನ ಮೂಲನಿವಾಸಿ. ಇದರ ರೆಕ್ಕೆ ಬಹಳ ಮೊಟಕು; ಪುಕ್ಕದ ಗರಿಗಳು ಬಿಡಿಬಿಡಿ. ಪೃಷ್ಠಭಾಗ ಮೊಟಕಾಗಿ ಕಾಣುತ್ತದೆ. ಮಾಂಸಕ್ಕೆಂದು ಇವನ್ನು ಬೇಟೆಯಾಡುವುದುಂಟು. ಇದರ ಕೂಗು ಕೀವೀ ಎಂದು ಧ್ವನಿಸುವುದರಿಂದ ಅದೇ ಹೆಸರು ಪಕ್ಷಿಗೆ ಬಳಕೆಯಾಗಿದೆ.

ಕೀವೀ ಗಾತ್ರದಲ್ಲಿ ದೊಡ್ಡ ಕೋಳಿಯನ್ನು ಹೋಲುವುದು. ಇದರ ಕೊಕ್ಕು ಅತಿ ಉದ್ದವಾಗಿ ಬಾಗಿದೆ. ಕೊಕ್ಕಿನ ತುದಿಯಲ್ಲಿ ನಾಸಿಕ ರಂಧ್ರಗಳು ಇವೆ. ಈ ಪಕ್ಷಿಗಳ ಗ್ರಹಣ ಮತ್ತು ಶ್ರವಣ ಶಕ್ತಿ ಅತಿ ಚುರುಕು; ಆದರೆ ದೃಷ್ಟಿ ಸ್ವಲ್ಪ ಮಂದ. ಕಾಲುಗಳು ಬಹಳ ದಪ್ಪ; ಪ್ರತಿ ಕಾಲಿನಲ್ಲೂ ನಾಲ್ಕು ಬೆರಳುಗಳು, ಪ್ರತಿ ಬೆರಳಿನಲ್ಲಿಯೂ ಮೊನಚಾದ ಒಂದು ಉಗುರು. ನಾಲ್ಕು ಬೆರಳುಗಳಲ್ಲಿ ಒಂದು ಮಾತ್ರ ಹಿಂದಕ್ಕೆ ತಿರುಗಿದೆ. ರೇಗಿಸಿದಾಗ ಇವು ಮೈಮೇಲೆ ಬೀಳಲು ಹಿಂಜರಿಯುವುದಿಲ್ಲ. ವಾಸ ದಟ್ಟವಾದ ಕಾಡುಗಳಲ್ಲಿ. ಇದು ನಿಶಾಚರಿ. ಈ ಹಕ್ಕಿ ತನ್ನ ಉದ್ದವಾದ ಕೊಕ್ಕಿನಿಂದ ಇರುವೆ, ಗೆದ್ದಲುಹುಳು ಮತ್ತು ಎರೆಹುಳುಗಳನ್ನು ಗೂಡುಗಳಿಂದ ಎಳೆದು ತಿನ್ನುತ್ತದೆ.

ಬೆಳುದಿಂಗಳ ರಾತ್ರಿಯಲ್ಲಿ ಇವುಗಳ ಗರಿಗಳು ಥಳಥಳ ಹೊಳೆಯುತ್ತವೆ. ಈ ಜಾತಿಯ ಪಕ್ಷಿಗಳಲ್ಲಿ ಗಂಡಿಗೆ ಶಿಶ್ನವಿದೆ; ಕೀವೀ ಪಕ್ಷಿಯ ಮೊಟ್ಟೆ ಬಹು ದೊಡ್ಡದು. ತಂದೆ ತಾಯಿ ಪಕ್ಷಿಗಳು ಮೊಟ್ಟೆಗಳನ್ನು ಜೋಪಾನವಾಗಿ ಕಾಪಾಡಿ, ಮರಿಗಳಾದ ಮೇಲೆ ಆನಂದದಿಂದ ಅವುಗಳ ಸಂಗಡ ನಲಿಯುತ್ತವೆ.

ಈ ಪಕ್ಷಿಜಾತಿಯಲ್ಲಿ ಮೂರು ವಂಶಗಳು ಮಾತ್ರ ಉಳಿದಿವೆ. ಅವೆಲ್ಲ ಬಹುಮಟ್ಟಿಗೆ ಒಂದನ್ನೊಂದು ಹೋಲುತ್ತವೆ. ಅವುಗಳಲ್ಲಿ ಕೀವೀ ಎಂದು ಕರೆಯುವ ಆಪ್ಟೆರಿಕ್ಸ್ ಆಸ್ಟ್ರೀಲಿಕ್ಸ್ ಎಂಬುದೇ ದೊಡ್ಡ ಪಕ್ಷಿ. (ಜಿ.ಎಂ.ಬಿ.)

**ಆಪ್ಟೆರಿಗೋಟ :** ಕೀಟವರ್ಗದ ಕೆಳದರ್ಜೆಯ ಎರಡು ಉಪವರ್ಗಗಳಲ್ಲಿ ಒಂದು; ಇನ್ನೊಂದರ ಹೆಸರು ಪ್ಟೆರಿಗೋಟ. ಆಪ್ಟೆರಿಗೋಟಗಳಿಗೆ ರೆಕ್ಕೆಗಳಿಲ್ಲ ಪ್ಟೆರಿಗೋಟಗಳು ರೆಕ್ಕೆಗಳಿರುವುವು. ಆಪ್ಟೆರಿಗೋಟ ಪದ ಆಪ್ಟೀರಾ (ನೆಲದ ಮೇಲಿನ ಹಲವಾರು ರೆಕ್ಕೆಗಳಿಲ್ಲದ ಸಂಧಿಪದಗಳನ್ನು ಕುರಿತು ಬಲುಹಿಂದೆ ಬಳಸುತ್ತಿದ್ದ ಪದ) ಪದದಿಂದ ಭಿನ್ನವಾಗಿದೆ. ಆಪ್ಟೆರಿಗೋಟಗಳು ಪ್ರಪಂಚದಲ್ಲೆಲ್ಲ ಹರಡಿವೆ. ಶರೀರ ರಚನೆ ಎಲ್ಲಕ್ಕೂ ಒಂದೇ ತೆರನಾಗಿದೆ.



ಥೈಸನೂರ



ಡೈಪ್ಲೂರ

ಆಪ್ಟೆರಿಗೋಟ ಕೀಟಗಳನ್ನು ನಾಲ್ಕು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು. ಪ್ರೊಟೂರ, ಕೊಲೆಂಬೊಲ, ಥೈಸನೂರ, ಡೈಪ್ಲೂರ.

ಪ್ರೊಟೂರ: ಗಾತ್ರ ಸಣ್ಣ. ಬಣ್ಣ ಹಳದಿ, ಬೂದು. ಕುಡಿ ಮೀಸೆಗಳಿಲ್ಲ. ಬಾಯಿ ತಲೆಯೊಳಗೆ ಅಡಗಿದೆ. 12 ಖಂಡಗಳು (ಉಂಗುರದಂಥ ರಚನೆ) ಉದರದಲ್ಲಿವೆ. ಉಪಾಂಗಗಳು ಮೊದಲನೆಯ 3 ಖಂಡಗಳಲ್ಲಿ ಮಾತ್ರ ಇವೆ. ವಾಸ ಸಾಮಾನ್ಯವಾಗಿ ಕಾಡಿನ ಕೊಳಕು ವಸ್ತುಗಳ ಕೆಳಗಿನ ಮಣ್ಣಿನಲ್ಲಿ. ಕೆಲವು ವೇಳೆ ತೋಗಟೆಯ ಕೆಳಗೆ ಅಸಂಖ್ಯಾತವಾಗಿರುತ್ತವೆ. ಪ್ರಾಯದ ಕೀಟದ ಉದರದಲ್ಲಿ 12 ಖಂಡಗಳಿವೆ. ಕೊನೆಯ 3 ಖಂಡಗಳ ಬೆಳೆವಣಿಗೆ ಕೀಟ ಮೊಟ್ಟೆಯಿಂದ ಹೊರಬಂದ ಮೇಲೆ ಆಗುವುದು. ಅವು ಉದ್ದದಲ್ಲಿ ಇತರ ಖಂಡಗಳಿಗಿಂತ ಚಿಕ್ಕವು.

**ಕೊಲೆಂಬೊಲ :** ಕುಡಿಮೀಸೆ, ಜಿಗಿಬಾಲ (ಉದ್ದ 1–5 ಮಿಮೀ) ಇವೆ. ವಾಸ ಕೊಳೆಯುತ್ತಿರುವ ಸಸ್ಯಗಳೆಡೆ, ತೊಗಟೆಗಳ ಹಿಂದೆ ಇರುವೆ ಗೂಡುಗಳಲ್ಲಿ ಇತ್ಯಾದಿ. ಬಾಯಿ ತಲೆಯೊಳಗೆ ಅಡಗಿದೆ. ಉದರದಲ್ಲಿ 6 ಖಂಡಗಳಿವೆ. ಮೊದಲನೆಯ ಖಂಡದ ಮೇಲೆ ಮಧ್ಯದ ಉಪಾಂಗಗಳಿವೆ. 3ನೆಯ ಖಂಡದ ಮೇಲೆ ಮಾರ್ಪಟ್ಟ ಚಿಕ್ಕ ಉಪಾಂಗಗಳೂ ಇವೆ. ಉಸಿರಾಡಲು ಶ್ವಾಸನಾಳಗಳಿವೆ. ಕೀಟಗಳು ಸಸ್ಯ, ಮಾಂಸ ಎರಡನ್ನೂ ತಿನ್ನುವುವು. ಬಣ್ಣ ಕಪ್ಪು, ಬೂದು, ನೀಲಿ. ಹೆಣ್ಣು ಗಂಡುಗಳಲ್ಲಿ ವ್ಯತ್ಯಾಸ ಕಾಣುವುದಿಲ್ಲ.

**ಥೈಸನೂರ :** ಕೊಳೆತ ಎಲೆ, ತೊಗಟೆಗಳು ಕಲ್ಲುಗಳ ಕೆಳಗೆ, ಮಣ್ಣಿನಲ್ಲಿ, ಇರುವೆ, ಗೆದ್ದಲ ಗೂಡುಗಳಲ್ಲಿ ವಾಸ. ಕುಡಿಮೀಸೆ, ಉದರದಲ್ಲಿ 10–11 ಖಂಡಗಳು. ಕೆಳಗಡೆಯ ಉಪಾಂಗಗಳು ಜೊತೆಯಾಗಿವೆ. ಉದರದ ತುದಿಯಲ್ಲಿ ಬಿರುಗೂದಲು (ಬ್ರಿಸಲ್ ಟೈಲ್ಸ್) ಇವೆ. ಶ್ವಾಸನಾಳ ಇದೆ. ಎದೆಯ ಪಕ್ಕದಲ್ಲಿ ನಾಲ್ಕು ಜೊತೆ ಶ್ವಾಸರಂಧ್ರಗಳಿವೆ. ಕೊಳೆತ ಸಸ್ಯ, ಪುಸ್ತಕಗಳಿಗೆ ಲೇಪಿಸಿದ ಗಂಜಿ ತಿನ್ನುತ್ತದೆ. ಕೆಲವು ಮಾಂಸಾಹಾರಿ ಕೀಟಗಳೂ ಉಂಟು.

**ಡೈಪ್ಲೂರ :** ಹಲವಾರು ಖಂಡಗಳಿಂದ ಕೂಡಿದ ಕುಡಿಮೀಸೆಗಳಿವೆ. ಬಾಯಿಯ ಒಂದು ಭಾಗ ತಲೆಯೊಳಗೆ ಹುದುಗಿದೆ. ಕುರುಡು. 11 ಖಂಡಗಳಿರುವ ಉದರ. ಇದರ ಕೊನೆಗೆ ಖಂಡಗಳಿಂದ ಕೂಡಿದ ಚಿಮಟದಂಥ ಎರಡು ಉದ್ದದ ರಚನೆಗಳಿವೆ. (ಪಿ.ಎಂ.)

**ಆಪ್ಲೈಟ್ :** ಸೂಕ್ಷ್ಮಕಣಗಳಿಂದ ಕೂಡಿದ ಸಕ್ಕರೆಯಂಥ ರಚನೆಯಿರುವ ಶಿಲೆ. ಸಾಮಾನ್ಯವಾಗಿ ಗ್ರಾನೈಟಿನ ಖನಿಜಸಂಯೋಜನೆಯುಳ್ಳ ಶಿಲೆ. ಆದರೆ ಇದರ ಖನಿಜಸಂಯೋಜನೆ ಗ್ರ್ಯಾನೈಟಿನಿಂದ ಗ್ರಾನೊಡೆಯೊರೈಟನ ತನಕ ವ್ಯತ್ಯಾಸ ಹೊಂದಬಹುದು. ಇದು ಸಾಮಾನ್ಯವಾಗಿ ಬೆಣಚು–ಫೆಲ್ಡ್‌ಸ್ಪಾರ್‌ಗಳನ್ನು ಪ್ರಮುಖವಾಗಿ ಹೊಂದಿರುತ್ತವೆ. ಫೆಲ್ಡ್‌ಸ್ಪಾರ್‌ಗಳು ಆರ್ತೋಕ್ಲೇಸಿನಿಂದ ಪೇಜಿಯೋಕ್ಲೇಸಿನವರೆಗೂ ವ್ಯತ್ಯಾಸಹೊಂದಬಹುದು. ಕಪ್ಪು ಮತ್ತು ಬಿಳಿ ಅಭ್ರಕಗಳು, ಮತ್ತಿತರ ಖನಿಜಗಳು ಬಹಳ ಸ್ವಲ್ಪ ಪ್ರಮಾಣದಲ್ಲಿರಬಹುದು.

ಆಪ್ಲೈಟುಗಳು ಬಿತ್ತಿಗಳ (ಡೈಕ್ಸ್) ಹಾಗೂ ಸಣ್ಣಸಣ್ಣ ದಾರಗಳಂತೆಯೂ, ಸಾಮಾನ್ಯವಾಗಿ ಕೆಲವೇ ಅಡಿಗಳ ಅಗಲ ಉಳ್ಳದ್ದಾಗಿಯೂ ಇರುತ್ತವೆ. ಅವುಗಳ ಅಂಚುಗಳು ಸ್ಪಷ್ಟವಾಗಿಯಾದರೂ ಇರಬಹುದು. ಅವು ಸುತ್ತುಮುತ್ತಲಿನ ಕಲ್ಲುಗಳೊಡನೆ ಹೊಂದಿಕೊಂಡಿರಬಹುದು. ಕೆಲವು ತಮ್ಮ ಅಂಚುಗಳಿಗೆ ನೇರವಾಗಿ ಪಟ್ಟಿಗಳನ್ನು ಹೊಂದಿರಬಹುದು (ಬ್ಯಾಂಡೆಡ್). ಸಾಮಾನ್ಯವಾಗಿ ಇವು ದೊಡ್ಡ ದೊಡ್ಡ ಗ್ರಾನೈಟ್ ಮಹಾಶಿಲೆಗಳಲ್ಲಿ ಇರುತ್ತವೆ. ಇತರ ಶಿಲೆಗಳಲ್ಲಿ ಬಹಳ ಅಪೂರ್ವವಾಗಿ ದೊರೆಯುತ್ತವೆ. ಸಾಮಾನ್ಯವಾಗಿ ಇವು ಪೆಗ್ಮಟೈಟ್‌ಗಳ ಜೊತೆಯಲ್ಲಿರುತ್ತವೆ. ಪೆಗ್ಮಟೈಟ್ ಮತ್ತು ಆಪ್ಲೈಟುಗಳ ಸಂಬಂಧ ಅನೇಕ ವಿಧವಾಗಿರಬಹುದು. ಒಂದನ್ನೊಂದು ಹೊಂದಿಕೊಂಡಿರಬಹುದು ಅಥವಾ ಒಂದಕ್ಕೊಂದು ನೇರವಾಗಿರಬಹುದು. ಅಥವಾ ಒಂದರಲ್ಲೊಂದು ತ್ಯಾಪೆಗಳಂತೆಯೂ ಮಚ್ಚೆಗಳಂತೆಯೂ ಇರಬಹುದು.

ಆಪ್ಲೈಟುಗಳು ವಿವಿಧ ರೀತಿಯಲ್ಲಿ ಉದ್ಭವಿಸುತ್ತವೆ. ಬಿರುಕುಗಳಲ್ಲಿ ಗ್ರಾನೈಟುಗಳ ಅಥವಾ ಪೆಗ್ಮಟೈಟುಗಳ ಪುನಃಸ್ಫಟೀಕರಣದಿಂದ ಉದ್ಭವಿಸುತ್ತವೆ. ಇನ್ನು ಕೆಲವು ಶಿಲಾಂತಸ್ಸರ ಸ್ಥಾನಪಲ್ಲಟದಿಂದ (ಮೆಟಸೊಮಾಟಿಸಂ) ಉಂಟಾಗುತ್ತವೆ. ಹಲವಾರು ಗ್ರಾನೈಟ್ ಶಿಲಾರಸದ ಸ್ಫಟಿಕೀಕರಣದ ಸಮಯದಲ್ಲಿ ಉದ್ಭವಿಸಿದ ಶೇಷ ದ್ರಾವಣಗಳಿಂದ (ರೆಸಿಡ್ಯುಯಲ್ ಸಲ್ಯೂಷನ್ಸ್) ಉದ್ಭವಿಸುತ್ತವೆ. ಈ ಶೇಷ ದ್ರಾವಣಗಳಲ್ಲಿ ಅನಿಲಗಳು ಹಾಗೇ ಉಳಿದರೆ ಪೆಗ್ಮಟೈಟುಗಳುಂಟಾಗುತ್ತವೆ. ಅನಿಲಗಳು ಉಳಿಯದೇ ಹೋದಲ್ಲಿ ಆಪ್ಲೈಟುಗಳುಂಟಾಗುತ್ತವೆ. (ಎಸ್.ಬಿ.ಎಲ್.)

**ಆಫ್ ಹ್ಯೂಮನ್ ಬಾಂಡೇಜ್ :** ಸಾಮರ್‌ಸೆಟ್ ಮಾಮ್‌ನ ಪ್ರಸಿದ್ಧ ಇಂಗ್ಲಿಷ್ ಕಾದಂಬರಿ. ಮಾಮ್ ಇದನ್ನು 1889ರಲ್ಲಿ ಬರೆಯಲು ಪ್ರಾರಂಭಿಸಿದ. 1915ರಲ್ಲಿ ಪ್ರಕಟವಾಯಿತು. ಕರ್ತೃವಿನ ಜೀವನವನ್ನೇ ಕಾದಂಬರಿಯ ಕಥೆಯಲ್ಲಿ ಬಹುಮಟ್ಟಿಗೆ ಕಾಣಬಹುದು. ಕಥಾನಾಯಕ ಫಿಲಿಪ್ ಕುಂಟನಾಗಿ ಹುಟ್ಟಿ ಅನೇಕ ಕಷ್ಟಗಳನ್ನು ಸಹಿಸುತ್ತಾನೆ. ಮಾಮ್ ಆದರೋ ತನ್ನ ಉಗ್ಗಿನಿಂದ ಕಷ್ಟಪಡುತ್ತಾನೆ. ಫಿಲಿಪ್ ತನ್ನ ಕುಂಟನ್ನು ಸರಿಪಡಿಸಲೆಂದು ದೇವರನ್ನು ಭಯಭಕ್ತಿಯಿಂದ ಪ್ರಾರ್ಥಿಸುತ್ತಾನೆ. ತನ್ನ ಉಗ್ಗಿನ ಬಗ್ಗೆಯೂ ಮಾಮ್ ಒಮ್ಮೆ ಹಾಗೆ ಪ್ರಾರ್ಥಿಸಿದ್ದನಂತೆ. (ಎಚ್.ವಿ.ಎಸ್.)

ಈ ಕಾದಂಬರಿಯ ನಾಯಕ ಫಿಲಿಪ್‌ನಿಗೆ 'ಕ್ಲಬ್‌ಫುಟ್' (ಕಾಲು ದಪ್ಪನಾಗಿದ್ದು ಸರಿಯಾಗಿ ಬೆಳೆಯದಿರುವುದು). ಇದರಿಂದ ಶಾಲೆಯಲ್ಲಿ ಇತರರ ಹಾಸ್ಯಕ್ಕೆ ಗುರಿಯಾಗಿ ಹಿಂಸೆಗೊಳಗಾಗುತ್ತಾನೆ. ಆತನಿಗೆ ತಂದೆ ಇಲ್ಲ, ತಾಯಿ ಇಲ್ಲ, ಕಲಾವಿದನಾಗಲು ಪ್ರಯತ್ನಿಸುತ್ತಾನೆ, ಯಶಸ್ವಿಯಾಗುವುದಿಲ್ಲ. ವೈದ್ಯನಾಗಲು ಓದುತ್ತಿರುವಾಗ ಹೋಟೆಲಿನಲ್ಲಿ ಕೆಲಸಮಾಡುವ ಒಬ್ಬ ಹುಡುಗಿಯಲ್ಲಿ ಅನುರಕ್ತನಾಗಿ, ಪರೀಕ್ಷೆಯಲ್ಲಿ ಅನುತ್ತೀರ್ಣನಾಗುವ ಸ್ಥಿತಿಯಲ್ಲಿರುತ್ತಾನೆ. ಚಿಕ್ಕಪ್ಪನ ನೆರವಿನಿಂದ ವೈದ್ಯನಾಗುತ್ತಾನೆ. ಅವನಿಗೆ ಬೇಡದ ಹುಡುಗಿಯರು ಆತನನ್ನು ಬಯಸಿ ಕಾಟಕೊಡುತ್ತಾರೆ. ಕಡೆಗೆ ಸ್ಯಾಲಿ ಎನ್ನುವ ಹುಡುಗಿಯನ್ನು ಮದುವೆಯಾಗಿ ನೆಮ್ಮದಿಯಾಗಿ ಬಾಳುತ್ತಾನೆ. ಆದರೂ ಅವನನ್ನು ಅತೀವ ಏಕಾಕಿತನದ ಭಾವ ಕಾಡುತ್ತದೆ, ಮದುವೆಗೆ ಅರ್ಥವಿಲ್ಲ ಎನ್ನಿಸುತ್ತದೆ.

ಈ ಕಾದಂಬರಿ ಪರೋಕ್ಷ ಆತ್ಮಮಿತ್ರ. ಈ ಕಾದಂಬರಿಯನ್ನು ಬರೆದಿದ್ದರಿಂದ ತನ್ನನ್ನು ಕಾಡುತ್ತಿದ್ದ ನೆನಪುಗಳಿಂದ ಬಿಡುಗಡೆಯಾಯಿತು. ಈ ಕಾದಂಬರಿಯ ಬರೆಹ ತನಗೊಂದು ಚಿಕಿತ್ಸೆಯಾಯಿತು ಎಂದು ಮಾಮ್‌ನೇ ಹೇಳಿಕೊಂಡಿದ್ದಾನೆ. *

**ಆಫಾ :** ಇಂಗ್ಲೆಂಡಿನ ಮರ್ಸಿಯ ದೇಶವನ್ನು ಪ್ರ.ಶ. 757–96 ರವರೆಗೆ ಆಳಿ, ಸಮಗ್ರ ಇಂಗ್ಲೆಂಡ್ ಒಂದೇ ರಾಜ್ಯವಾಗಲು ದಾರಿಮಾಡಿಕೊಟ್ಟ ಒಬ್ಬ ದೊರೆ. ಕೆಂಟ್, ಸಸೆಕ್ಸ್ ಮುಂತಾದ ನೆರೆ ರಾಜ್ಯಗಳು ತನ್ನ ಪ್ರಭಾವಕ್ಕೆ ಒಳಪಡುವಂತೆ ಮಾಡಿಕೊಂಡು, 774ರಲ್ಲಿ ಹೊರಡಿಸಿದ ಸನ್ನದಿನಂತೆ ರೆಕ್ಸ್ ಆಂಗ್ಲೋರಂ ಅಥವಾ ಇಂಗ್ಲಿಷರ ದೊರೆ ಎಂಬ ಬಿರುದು ಧರಿಸಿದ. ಪೂರ್ವ ಆಂಗ್ಲಿಯ ದೇಶವನ್ನು ವಶಪಡಿಸಿಕೊಂಡು ವೆಸೆಕ್ಸ್

ದೊರೆಯ ಪ್ರಾಬಲ್ಯವನ್ನು ಕುಗ್ಗಿಸಿದ. ಆ ದೊರೆಗೆ ಮತ್ತು ನಾರ್ದಂಬ್ರಿಯದ ದೊರೆಗೆ ತನ್ನ ಪುತ್ರಿಯರನ್ನು ಕೊಟ್ಟು ವಿವಾಹ ಮಾಡಿ ಅವರ ಮೈತ್ರಿಯನ್ನು ಗಳಿಸಿದ. ಫ್ರಾನ್ಸಿನ ದೊರೆ ಷಾರ್ಲ್‌ಮನ್‌ನೊಂದಿಗೆ ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡ. ಹೊರದೇಶಗಳೊಡನೆ ಇಂಗ್ಲೆಂಡ್ ಮಾಡಿಕೊಂಡ ವಾಣಿಜ್ಯ ಒಪ್ಪಂದಗಳಲ್ಲಿ ಇದೇ ಮೊದಲನೆಯದೆಂದು ತೋರುತ್ತದೆ. ವೇಲ್ಸಿಗೂ ಮರ್ಸಿಯಕ್ಕೂ ನಡುವೆ ಆಫಾಸ್ ಡೈಕ್ ಎಂದು ಹೆಸರು ಹೊಂದಿರುವ ದೊಡ್ಡ ಅಣೆಕಟ್ಟನ್ನು ನಿರ್ಮಿಸಿದ. ಅಂದವಾದ ಬೆಳ್ಳಿ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದ. ಆಲ್ಫ್ರೆಡ್ ಮಹಾಶಯನಿಗಿಂತ ಹಿಂದೆ ಆಳಿದ ರಾಜರಲ್ಲಿ ಇವನಷ್ಟು ಸಮರ್ಥನೂ ಪ್ರಭಾವಶಾಲಿಯೂ ಆದ ದೊರೆ ಬೇರೊಬ್ಬನಿಲ್ಲ.

**ಅಫ್ಘಾನಿಸ್ತಾನ :** ಮಧ್ಯ ಏಷ್ಯದಲ್ಲಿನ ಒಂದು ಸ್ವತಂತ್ರ ರಾಷ್ಟ್ರ. ($29^0$ – $38^0$ 35' ಉ.ಅ; $60^0$ 50' – $71^{0.}$ 35' ಪೂ.ರೇ.) ಸುತ್ತಲೂ ಭೂಭಾಗದಿಂದಾವೃತವಾದುದು. ಪಶ್ಚಿಮದಲ್ಲಿ ಇರಾನ್, ವಾಯವ್ಯದಲ್ಲಿ ತುರ್ಕ್‌ಮೆನಿಸ್ತಾನ, ಉತ್ತರದಲ್ಲಿ ಉಜ್ಬೆಕಿಸ್ತಾನ ಮತ್ತು ತಜಿಕಿಸ್ತಾನ, ಈಶಾನ್ಯದಲ್ಲಿ ಚೀನ ಹಾಗೂ ಪಶ್ಚಿಮ ಮತ್ತು ದಕ್ಷಿಣಗಳಲ್ಲಿ ಪಾಕಿಸ್ತಾನಗಳಿವೆ. ಉತ್ತರದಿಂದ ದಕ್ಷಿಣಕ್ಕೆ 560 ಕಿಮೀಗಳಷ್ಟು ಅಗಲವಾಗಿಯೂ ಪೂರ್ವದಿಂದ ಪಶ್ಚಿಮಕ್ಕೆ 1232 ಕಿ.ಮೀಗಳಷ್ಟು ಉದ್ದವಾಗಿಯೂ ವ್ಯಾಪಿಸಿದೆ. ವಿಸ್ತೀರ್ಣ 6,47,497 ಚ.ಕಿಮೀ ಜನಸಂಖ್ಯೆ: 27,75,600 (2002). ರಾಜಧಾನಿ:ಕಾಬೂಲ್. ಜನಸಂಖ್ಯೆ 2.8 ದಶಲಕ್ಷ. ಬಹಳಷ್ಟು ನೆಲ ಸರಾಸರಿ 1220 ಮೀ ಎತ್ತರವುಳ್ಳ ಪ್ರಸ್ಥಭೂಮಿ. ಉತ್ತರ ಭಾಗದಲ್ಲಿ 460 ಮೀ ಎತ್ತರದ ಸಾಧಾರಣ ಮೈದಾನವಿದೆ. ಮಧ್ಯಭಾಗದಲ್ಲಿ 960 ಕಿಮೀ. ಗಳವರೆಗೆ, 6100 ಮೀ ಎತ್ತರವುಳ್ಳ ಹಿಂದೂಕುಷ್ ಪರ್ವತಶ್ರೇಣಿ ಈಶಾನ್ಯದಿಂದ ನೈಋತ್ಯದ ಕಡೆಗೆ ಹಬ್ಬಿದೆ. ಇಲ್ಲಿನ ಎತ್ತರವಾದ ಶಿಖರ ಮೌಂಟ್ ನೌಶಾಕ್ 7,485 ಮೀ. ದಕ್ಷಿಣ ಭಾಗ 1825 ಮೀ ಎತ್ತರವುಳ್ಳ ವಿಶಾಲವಾದ ಪ್ರಸ್ಥಭೂಮಿಯಾಗಿದೆ.ಅದು ಬಹಳಷ್ಟು ಮಟ್ಟಿಗೆ ಮರುಭೂಮಿಯ ಸ್ವರೂಪವುಳ್ಳದ್ದು.

ಈ ದೇಶದ ಮೂಲಕ ಆಮೂದಾರ್ಯ ನದಿ ಉತ್ತರಕ್ಕೂ ಹರಿರುದ್ ಮತ್ತು ಮುರ್ಘಾಬ್ ನದಿಗಳು ಪಶ್ಚಿಮಕ್ಕೂ ಹೆಲ್ಮಂಡ್ ನದಿ ನೈಋತ್ಯಕ್ಕೂ ಕಾಬೂಲ್ ನದಿ ಪೂರ್ವದ ಕಡೆಗೂ ಹರಿಯುತ್ತವೆ. ನದಿಗಳ ಕಣಿವೆಗಳು ಫಲವತ್ತಾಗಿದ್ದು ಹೆಚ್ಚು ಜನಸಂಖ್ಯೆಯುಳ್ಳ ಭಾಗಗಳಾಗಿವೆ. ಕೆಲವು ಸರೋವರಗಳೂ ಉಂಟು. ನದಿಗಳಲ್ಲಿ ಹೆಲ್ಮಂಟ್ ಉದ್ದವಾದುದು. (1400 ಕಿಮೀ).

ಇದು ಒಳನಾಡಿನ ಪ್ರಸ್ಥಭೂಮಿಯಾಗಿರುವುದರಿಂದ, ಬೇಸಗೆಯಲ್ಲಿ $24^0$ ಸೆಲ್ಸಿಯಸ್ ಉಷ್ಣಾಂಶವೂ ಚಳಿಗಾಲದಲ್ಲಿ 4 ರಿಂದ $5^0$ ಸೆಲ್ಸಿಯಸ್‌ಗಳಷ್ಟು ಉಷ್ಣಾಂಶವೂ ಇರುತ್ತವೆ. ಅರೆ ಶುಷ್ಕವಾಯುಗುಣ. ಉತ್ತರದ ಪರ್ವತಗಳಲ್ಲಿ ಚಳಿಗಾಲವು ಅತಿ ಶೀತದಿಂದ ಕೂಡಿರುತ್ತದೆ. ನೈಋತ್ಯಭಾಗ ಶುಷ್ಕ ಮತ್ತು ಪೂರ್ವ ಭಾಗ ಆರ್ದ್ರತೆಯಿಂದ ಕೂಡಿರುತ್ತದೆ. ಚಳಿಗಾಲದಲ್ಲಿ 25–30 ಸೆಂಮೀ ಮಳೆಯಾಗುತ್ತದೆಯಲ್ಲದೆ ಚಳಿಗಾಲದಲ್ಲಿ ಹಿಮವೃಷ್ಟಿಯಾಗುವುದೂ ಉಂಟು. ದೇಶದ ಬಹುಪಾಲು ಸಮಶೀತೋಷ್ಣವಲಯದ ಶುಷ್ಕ ಭೂಮಿಯಾದ್ದರಿಂದ ಅಲ್ಲಲ್ಲಿ ಒರಟು ಹುಲ್ಲು, ಕುರುಚಲು, ಹಲಕೆಲವು ಬಳ್ಳಿಗಳು, ಅಂಟಿನ ಗಿಡಗಳು ಮಾತ್ರ ಇವೆ. ತೋಳ, ಮೊಲ, ಕಾಡುಟಗರು, ನರಿ, ಮುಳ್ಳುಹಂದಿಗಳು ಈ ದೇಶದ ಕೆಲವು ವನ್ಯಪ್ರಾಣಿಗಳು.

ಈ ದೇಶದಲ್ಲಿ ಕೇವಲ ಶೇ.15 ರಷ್ಟು ಪ್ರದೇಶ ವ್ಯವಸಾಯಯೋಗ್ಯವಾಗಿದೆ. ಸು. ಶೇ. 50 ವ್ಯವಸಾಯದ ಪ್ರದೇಶದಲ್ಲಿ ನೀರಾವರಿ ಸಹಾಯದಿಂದ ಬೇಸಾಯ ನಡೆಯುತ್ತದೆ. ಆಮೂದಾರ್ಯ, ಹೆಲ್ಮಂಡ್, ಕಾಬೂಲ್ ನದಿಗಳ ಫಲವತ್ತಾದ ಕಣಿವೆಗಳಲ್ಲಿ ಗೋದಿ, ಬಾರ್ಲಿ, ಮೆಕ್ಕೆಜೋಳ, ದ್ವಿದಳಧಾನ್ಯ, ಜೋಳ, ಸಕ್ಕರೆ, ಬೀಟ್‌ರೂಟ್, ಕಬ್ಬು, ಹೊಗೆಸೊಪ್ಪು, ಹತ್ತಿ, ಹರಳು ಬೆಳೆಯುತ್ತವೆ. ಸೇಬು, ದ್ರಾಕ್ಷಿ, ದಾಳಿಂಬೆ, ಕಲ್ಲಂಗಡಿ, ಜರದಾಳು (ಏಪ್ರಿಕಾಟ್), ಪೀಚ್, ಪೇರಲ, ಪ್ಲಮ್ ಮುಂತಾದ ಹಣ್ಣುಗಳು ಹೆಚ್ಚಾಗಿ ಬೆಳೆಯುತ್ತವೆ. ಕೆಲವು ಹಣ್ಣುಗಳನ್ನು ಒಣಗಿಸಿ ರಫ್ತು ಮಾಡುತ್ತಾರೆ.

ಈ ದೇಶದಲ್ಲಿ ಕುರಿ, ದನಕರು, ಮೇಕೆಗಳನ್ನು ಮಾಂಸ, ಹಾಲು, ತುಪ್ಪಟ, ಚರ್ಮ, ಗಿಣ್ಣುಗಳಿಗಾಗಿ ಹೆಚ್ಚು ಸಂಖ್ಯೆಯಲ್ಲಿ ಸಾಕುತ್ತಾರೆ. ನದಿಗಳಲ್ಲಿ ಅಲ್ಪಸ್ವಲ್ಪ ಮೀನುಗಳನ್ನು ಹಿಡಿಯುವರು.

ಕ್ರೋಮ್, ಕಲ್ಲಿದ್ದಲು, ತಾಮ್ರ, ಕಬ್ಬಿಣ, ಅಭ್ರಕ, ಉಪ್ಪು, ಸತು, ಸೀಸ, ಗಂಧಕ, ಸುಣ್ಣಕಲ್ಲು, ಪೆಟ್ರೋಲಿಯಂ ಎಣ್ಣೆ ಮತ್ತು ನೈಸರ್ಗಿಕ ಅನಿಲಗಳು ಸ್ವಲ್ಪಮಟ್ಟಿಗೆ ಸಿಕ್ಕುತ್ತವೆ. ಖನಿಜೋದ್ಯಮ ಅಭಿವೃದ್ಧಿಗೊಂಡಿಲ್ಲ. ಮಹೀಪಾರ್, ಸಾರೋಬಿ, ಮತ್ತು ನಂಗಾಹ್ರರ್ ಎಂಬುವು ಜಲವಿದ್ಯುಚ್ಛಕ್ತಿಯ ಕೇಂದ್ರಗಳು.

ಈ ದೇಶದಲ್ಲಿ, ಬಟ್ಟೆ ತಯಾರಿಕೆ, ಉಣ್ಣೆ ಹಸನುಮಾಡುವುದು, ಜಮಖಾನ, ಕಂಬಳಿ, ಸಾಬೂನು, ಸಿಮೆಂಟ್, ಸಕ್ಕರೆ ತಯಾರಿಕೆ, ಚರ್ಮ ಹದಮಾಡುವುದು, ಹತ್ತಿಗಿರಣಿ, ಹಿಟ್ಟಿನಗಿರಣಿ, ಬೆಂಕಿಪೆಟ್ಟಿಗೆ ತಯಾರಿಕೆ, ಚಿಕ್ಕ ಯಂತ್ರೋಪಕರಣಗಳ ತಯಾರಿಕೆ, ವರ್ಕ್‌ಷಾಪುಗಳು ಮುಂತಾದ ಕೈಗಾರಿಕೋದ್ಯಮಗಳು ಕಂಡುಬರುತ್ತವೆ. ಇವು ಕಾಬೂಲ್, ಖಾಂದಹಾರ್, ಹೀರತ್, ಸೆರಾಜ್, ಗುಲ್‌ಬಹಾರ್, ಗಾರದೆ, ಖುಮ್ರಿ ಮುಂತಾದ ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿವೆ. ದೇಶ ಪರ್ವತಮಯವಾಗಿರುವುದರಿಂದ ಸಾರಿಗೆ ಸಂಪರ್ಕಗಳು ಹೆಚ್ಚಾಗಿಲ್ಲ. ಖೈಬರ್, ಕೋಜಾಕ್, ಗೋಮಲ್, ಕುರ್ರಂ, ಟೋಚಿ ಕಣಿವೆಗಳ ಮೂಲಕ ದೇಶದ ನಾನಾಕಡೆಗಳಿಂದ ಪಶ್ಚಿಮ ಪಾಕಿಸ್ತಾನ, ಇರಾನ್, ರಷ್ಯ ದೇಶಗಳ ಕಡೆಗೆ ರಸ್ತೆಮಾರ್ಗಗಳಿವೆ. ಇತ್ತೀಚೆಗೆ ಸಾಲಾಂಗ್ ಸುರಂಗದ ಮೂಲಕ ಕಾಬೂಲಿನಿಂದ ಉತ್ತರ ಆಫ್ಘಾನಿಸ್ತಾನಕ್ಕೆ ಹತ್ತಿರದ ಮಾರ್ಗವನ್ನು ನಿರ್ಮಿಸಲಾಗಿದೆ. ರೈಲು ಮಾರ್ಗಗಳು ಅಭಿವೃದ್ಧಿಗೊಂಡಿಲ್ಲ. ವಿಮಾನ ಮಾರ್ಗಗಳು ಹೆಚ್ಚು ಉಪಯುಕ್ತವಾಗಿವೆ. ತುಪ್ಪಟ, ಜಮಖಾನಗಳು, ಹತ್ತಿ, ಹಣ್ಣು, ಚರ್ಮಗಳು, ಇಂಗು, ಹೆಚ್ಚಾಗಿ ರಫ್ತಾಗುತ್ತವೆ. ಬಟ್ಟೆ, ಪೆಟ್ರೋಲಿಯಂ ವಾಹನಗಳು, ಟೀ, ಯಂತ್ರೋಪಕರಣಗಳು, ವಿವಿಧ ಸಿದ್ಧವಸ್ತುಗಳು, ಆಹಾರ ಪದಾರ್ಥಗಳು ಆಮದಾಗುತ್ತವೆ. (ಎ.ಕೆ)

**ಪ್ರಾಕ್ತನ ಚರಿತ್ರೆ :** ಈ ಬಗ್ಗೆ ಸಂಶೋಧನೆಗಳು ಪ್ರಾರಂಭವಾಗಿರುವುದು ಕೇವಲ ಐದಾರು ದಶಕಗಳಿಂದ ಈಚೆಗೆ ಮಾತ್ರ. ಉತ್ತರದ ಬ್ಯಾಕ್ಟ್ರೀಯ ಪ್ರದೇಶದಲ್ಲಿ, ಬಾಲ್ಕ್ ಮತ್ತು ಹೈಬಕ್ ನಗರಗಳ ಸಮೀಪದಲ್ಲಿ ಮೌಸ್ಟೀರಿಯನ್ ರೀತಿಯ ಶಿಲೋಪಕರಣಗಳು ದೊರಕಿವೆ. ಹೈಬಕ್ ಬಳಿಯ ಕಾರಕಾಮರ್ ಎಂಬ ಗುಹೆಯಲ್ಲಿ ಪೂರ್ವ ಶಿಲಾಯುಗದ ಉತ್ತರ ಭಾಗದಿಂದ ಹಿಡಿದು ಸೂಕ್ಷ್ಮ ಶಿಲಾಯುಗದವರೆಗಿನ ಸಾಂಸ್ಕೃತಿಕ ಸ್ತರಗಳು ಬೆಳಕಿಗೆ ಬಂದಿವೆ. ಇವು ರಷ್ಯದ ಉಜ್ಬೆಕಿಸ್ತಾನದಲ್ಲಿ ಕಂಡುಬಂದಿರುವ ಪ್ರಾಗೈತಿಹಾಸಿಕ ಸಂಸ್ಕೃತಿಗಳಂತೆಯೇ ಇವೆ.

ದಕ್ಷಿಣದ ಮುಂಡೀಗಕ್ ಎಂಬ ಸ್ಥಳದಲ್ಲಿ ನಡೆಸಿರುವ ಉತ್ಖನನದಿಂದ ಹಿಂದೆ ವಾಯವ್ಯ ಭಾರತದಲ್ಲಿ ಪ್ರಚಲಿತವಾಗಿದ್ದ ಕುಲ್ಲ ಸಂಸ್ಕೃತಿ ಇಲ್ಲಿಯವರೆಗೂ ಹರಡಿತ್ತೆಂಬ ವಿಷಯ ತಿಳಿದುಬಂದಿದೆ. ಕುಲ್ಲ ಸಂಸ್ಕೃತಿಯಕಾಲ ಪ್ರ.ಶ.ಪೂ. ಸು. 2,500ಕ್ಕಿಂತ ಮುಂಚೆ. ಇದಕ್ಕೂ ಹಿಂದೆ ಸುಮೇರಿಯ ಸಂಸ್ಕೃತಿಯ ಪ್ರಭಾವವೂ ಇಲ್ಲಿ ಇದ್ದಿತೆಂಬ ಬಗ್ಗೆ ಕುರುಹುಗಳಿರುವುದರಿಂದ ಪ್ರಾಗೈತಿಹಾಸಿಕ ಯುಗದಲ್ಲಿ ಭಾರತ ಮತ್ತು ಪಶ್ಚಿಮ ಏಷ್ಯದ ಸಂಪರ್ಕ ಆಫ್ಘಾನಿಸ್ತಾನದ ಮೂಲಕ ನಡೆಯುತ್ತಿದ್ದಿರಬಹುದೆಂದು ಊಹಿಸಲಾಗಿದೆ. ಮುಂಡೀಗಕ್‌ನ ಮೇಲ್ಪದರಗಳಲ್ಲಿ ಬೂದು ಮತ್ತು ಕಂದು ಬಣ್ಣದ ಮಡಿಕೆಗಳನ್ನು ಉಪಯೋಗಿಸುತ್ತಿದ್ದ ಮೊದಲ ಕಬ್ಬಿಣ ಯುಗದ ಸಂಸ್ಕೃತಿಯ ಅವಶೇಷಗಳಿವೆ. ಉತ್ತರ ಆಫ್ಘಾನಿಸ್ತಾನದ ಬಾಲ್ಕ್ ಬಳಿಯೂ ಇದೇ ರೀತಿಯ ಕಬ್ಬಿಣ ಯುಗದ ನೆಲೆಯೊಂದು ಗುರುತಿಸಲ್ಪಟ್ಟಿದೆ. ಅಲ್ಲದೆ ರಷ್ಯದ ಅನೌನಲ್ಲಿ ಸಹ ಬೂದುಬಣ್ಣದ ಮಡಕೆಗಳು ಪ್ರಚಲಿತವಾಗಿದ್ದ ಸ್ತರಗಳು ಕಂಡುಬಂದಿವೆ. ಇವೆಲ್ಲ ಪೂರ್ವ ಇರಾನೀ ಭಾಷೆಯನ್ನಾಡುತ್ತಿದ್ದ ಜನರಿಗೆ ಸಂಬಂಧಪಟ್ಟವೆಂದು ಅನೇಕರು ಊಹಿಸುತ್ತಾರೆ.

ವೇದಕಾಲದ ಆರ್ಯರು ಈ ಪ್ರದೇಶದಲ್ಲಿ ಇದ್ದರೆಂಬುದಕ್ಕೆ ಸಾಹಿತ್ಯಕ ಆಧಾರಗಳು ಸಾಕಷ್ಟು ದೊರಕಿದ್ದರೂ ಈ ಆರ್ಯ ಜನಾಂಗದ ನೆಲೆಗಳಾವುವೂ ಬೆಳಕಿಗೆ ಬಂದಿಲ್ಲದಿರುವುದು ಆಶ್ಚರ್ಯದ ವಿಷಯ. ಹಾಗೆಯೇ ಪರ್ಷಿಯದ ದೊರೆ ಡೇರಿಯಸ್‌ನ ಬೆಹಿಸ್ತನ್ ಶಾಸನಗಳಲ್ಲೂ ಗ್ರೀಕ್ ಚರಿತ್ರಕಾರ ಹೆರೊಡೋಟಸ್‌ನ ಬರೆಹಗಳಲ್ಲೂ ಆಫ್ಘಾನಿಸ್ತಾನ ಅಖಮೇನಿಯ ಸಾಮ್ರಾಜ್ಯದ ಭಾಗವಾಗಿದ್ದಿತೆಂಬುದೂ ಮತ್ತು ಅಲೆಕ್ಸಾಂಡರ್ ತನ್ನ ದಂಡಯಾತ್ರೆಯಲ್ಲಿ ಈ ಪ್ರದೇಶದ ಮೂಲಕ ಹಾಯ್ದುಹೋದನೆಂಬ ವಿಷಯ ನಿಶ್ಚಿತವಾಗಿದ್ದರೂ ಅಖಮೇನಿಯನ್ನರ ಅಥವಾ ಅಲೆಕ್ಸಾಂಡರನ ಕಾಲದ ಖಚಿತ ಅವಶೇಷಗಳೇನೂ ಇಲ್ಲಿ ಇನ್ನೂ ಕಂಡುಬಂದಿಲ್ಲ. ಆದರೆ ಕಾಬೂಲಿನ ಬಳಿಯ ಚಮನ್–ಇ–ಹಜೂರಿಯಲ್ಲಿ ಸಿಕ್ಕಿದ ನಾಣ್ಯಗಳು ಅಲೆಕ್ಸಾಂಡರನ ಕಾಲಕ್ಕಿಂತ ಹಿಂದಿನದೆಂದು ಮಾತ್ರ ತಿಳಿದುಬಂದಿದೆ. ಅಲೆಕ್ಸಾಂಡರನ ಅನಂತರ ಈ ದೇಶ ಮೌರ್ಯ ಸಾಮ್ರಾಜ್ಯಕ್ಕೆ ಒಳಪಟ್ಟಿತು. ಇದೇ ಕಾಲದಲ್ಲಿ ಬೌದ್ಧಧರ್ಮ ಇಲ್ಲಿ ಕಾಲಿಟ್ಟಿತು. ಈ ಕಾಲದ ಕುರುಹಾಗಿ ಗ್ರೀಕ್ ಮತ್ತು ಆರಮೇಯಿಕ್ ಭಾಷೆಗಳಲ್ಲಿ ಬರೆದಿರುವ ಅಶೋಕನ ಒಂದು ಶಾಸನ ಕಾಂದಹಾರ್ ಬಳಿಯೂ ಆರಮೇಯಿಕ್ ಭಾಷೆಯಲ್ಲಿರುವ ಅವನ ಇನ್ನೊಂದು ಶಾಸನ ಜಲಾಲಾಬಾದ್ ಬಳಿಯೂ ದೊರಕಿವೆ. ಈ ಪ್ರದೇಶದಲ್ಲಿ ಮೌರ್ಯರ ಅನಂತರ ರಾಜ್ಯವಾಳಿದ ಬ್ಯಾಕ್ಟ್ರೀಯನ್ನರು ಮತ್ತು ಪಾರ್ಥಿಯನ್ನರ ಕಾಲದ ಅವಶೇಷಗಳು ಬಾಲ್ಕ್–ಖುಲ್ಮ್ ಮುಂತಾದ ಪುರಾತನ ದಿಬ್ಬಗಳಲ್ಲಿ ಹುದುಗಿಹೋಗಿವೆ. ಅದೇ ಪ್ರದೇಶದ ಬೆಗ್ರಾಮ್‌ನಲ್ಲಿ ಸಿಕ್ಕಿರುವ ನಾಣ್ಯಗಳು, ಮಡಕೆಗಳು, ಭಗ್ನ ವಾಸ್ತು ಕೃತಿಗಳು, ರೋಮ್ ಮತ್ತು ಈಜಿಪ್ಟಿನಲ್ಲಿ ತಯಾರಾದ ಗಾಜಿನ ವಸ್ತುಗಳು, ಚೀನದ ಜಾಡಿಗಳು ಮತ್ತು ಹಲವು ದಂತದ ಕೆತ್ತನೆಗಳು ಸಹ ಬ್ಯಾಕ್ಟ್ರೀಯನ್ ಮತ್ತು ಪಾರ್ಥಿಯನ್ನರ ಕಾಲಕ್ಕೆ ಸೇರಿದುವುಗಳು.

ಪ್ರ.ಶಕದ ಆರಂಭಕಾಲದಲ್ಲಿ ಈ ಪ್ರದೇಶ ಕುಶಾನ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಈ ಕಾಲದ ಬಹುಮುಖ ಸಾಂಸ್ಕೃತಿಕ ಬೆಳೆವಣಿಗೆಯ ಪ್ರತೀಕವಾಗಿ ಹಲವಾರು ವಾಸ್ತುಶಿಲ್ಪದ ಅವಶೇಷಗಳು ಆಫ್ಘಾನಿಸ್ತಾನದ ಬೇರೆ ಬೇರೆ ಭಾಗಗಳಲ್ಲಿ ಬೆಳಕಿಗೆ ಬಂದಿವೆ. ಬೌದ್ಧಧರ್ಮದಲ್ಲಿ ಮಹಾಯಾನ ಪಂಥದ ಆವಿಷ್ಕಾರವೂ ಭಾರತೀಯ ಮತ್ತು ಗ್ರೀಕ್ ಸಂಪ್ರದಾಯಗಳ ಸಮ್ಮಿಲನದಿಂದಾದ ಗಾಂಧಾರ ಸಂಪ್ರದಾಯವೆಂಬ ಒಂದು ವಿನೂತನ ಕಲಾಪದ್ಧತಿಯ ವಿಕಾಸವೂ ಆದದ್ದು ಈ ಕಾಲದಲ್ಲಿಯೇ. ಹಿಂದೂಕುಷ್ ಪರ್ವತ ಪ್ರಾಂತ್ಯದಲ್ಲಿನ ಸುರ್ಖ

ಕೋತಲ್ ಎಂಬಲ್ಲಿ ಕಾನಿಷ್ಕನ ಶಾಸನವಿರುವ ದೇವಾಲಯವೊಂದನ್ನು ಅಗೆದು ತೆಗೆದಿದ್ದಾರೆ. ಇದು ಜರತುಷ್ಟ್ರ ಧರ್ಮಕ್ಕೆ ಸಂಬಂಧಿಸಿದ ಅಗ್ನಿ ದೇವಾಲಯ. ಇದರ ರಚನೆಯಲ್ಲಿ ಗ್ರೀಕ್ ಮತ್ತು ಪರ್ಷಿಯದ ವಾಸ್ತುಸಂಪ್ರದಾಯಗಳ ಪ್ರಭಾವ ಬಹುವಾಗಿದೆ. ಇದೇ ಸ್ಥಳದಲ್ಲಿ ಸಿಕ್ಕಿರುವ ಹದ್ದಿನ ಶಿಲ್ಪಗಳಿರುವ ದೇವಪೀಠ, ಮಥುರದ ಕಾನಿಷ್ಕನ ಶಿಲ್ಪಕ್ಕೆ ಹೋಲುವ ಭಗ್ನಶಿಲ್ಪಗಳು ಮತ್ತು ಒಂದು ಅಪೂರ್ವ ಶಿವವಿಗ್ರಹ, ಕುಶಾನ ಶಿಲ್ಪ ಸಂಪ್ರದಾಯದ ಒಳ್ಳೆಯ ಉದಾಹರಣೆಗಳು. ಫೂಚೆ ಅವರು ಬಾಲ್ಕ್‌ನಲ್ಲಿ ನಡೆಸಿರುವ ಸಂಶೋಧನೆಯಲ್ಲಿ ಕೆಲವು ಬೌದ್ಧ ಸ್ತೂಪದ ಅವಶೇಷಗಳನ್ನು ಗುರುತಿಸಿದ್ದಾರೆ. ಈ ಸ್ತೂಪಗಳು ಹೊರನೋಟಕ್ಕೆ ಇಟ್ಟಿಗೆಯಲ್ಲಿ ಕಟ್ಟಿದಂತೆ ಕಂಡರೂ ಒಳಭಾಗ ಜೇಡಿಮಣ್ಣಿನ ದೊಡ್ಡ ಗುಡ್ಡೆಯಾಗಿದ್ದು




ಮೇಲ್ಪದರ ಮಾತ್ರ ಹಸಿ ಇಟ್ಟಿಗೆಯದಾಗಿರುತ್ತದೆ. ಟೇಪೆ-ಇ-ರುಸ್ತುಮ್ ಎಂಬಲ್ಲಿ ಇವುಗಳಿಗಿಂತಲೂ ಚೆನ್ನಾಗಿ ಸಂರಕ್ಷಿಸಲ್ಪಟ್ಟಿರುವ ಸ್ತೂಪವೊಂದಿದೆ. ಇದು ಯುವಾನ್‌ಚಾಂಗ್ ಸಂದರ್ಶಿಸಿದ ಪ್ರಸಿದ್ಧ ನವವಿಹಾರದ ಭಾಗವಾಗಿತ್ತು. ಈ ಸ್ತೂಪ 54ಮೀ ಚಚ್ಚೌಕದ ಜಗಲಿಯ ಮೇಲೆ ಇದೆ. ಜಗಲಿಯ ನಾಲ್ಕು ಕಡೆಯೂ 11ಮೀ ಪಾವಟಿಗೆಗಳಿದ್ದು, ಜಗುಲಿಯ ಇತರ ಭಾಗಗಳು ಅರ್ಧ ಕಂಬಗಳಿಂದ ಅಲಂಕೃತವಾಗಿವೆ. ಜಗಲಿಯ ಮೇಲೆ ಇರುವ ಅರ್ಧಗೋಳಾಕಾರದ ಸ್ತೂಪದ ಮೇಲೂ ಕಣ್ಕಟ್ಟಿನವರೆಗೆ ಇದೇ ರೀತಿಯ ಅಲಂಕಾರವಿದೆ. ರಚನಾ ರೀತಿಯಲ್ಲಿ ಬಾಲ್ಕ್‌ನ ಸ್ತೂಪಗಳ ಅನುಕರಣವಿದೆ. ಇದೇ ರೀತಿಯ ಸ್ತೂಪಗಳು ಗಾಂಧಾರ, ಸ್ವಾಟ್, ಕಪಿಶ ಮತ್ತು ನಗರಾಹಾರಗಳಲ್ಲೂ ಸಹ ಇವೆ. ಇವೆಲ್ಲ ಕುಶಾನ ಸ್ತೂಪರಚನಾ ಶೈಲಿಗೆ ಉದಾಹರಣೆಗಳು. ಆಫ್ಘಾನಿಸ್ತಾನದ ಹಲವು ಸ್ಥಳಗಳಲ್ಲಿ ಗಾಂಧಾರ ಶಿಲ್ಪಗಳು ದೊರಕಿವೆ. ಗ್ರೀಕ್ ಶಿಲ್ಪ ರೀತಿಯ ಸ್ವಾಭಾವಿಕತೆ, ಮನುಷ್ಯರ ಶಿಲ್ಪಗಳಲ್ಲಿ ಗ್ರೀಕರ ರೀತಿಯ ಮೈಮಾಟ, ಕೇಶಬಂಧ, ವಸ್ತ್ರವಿನ್ಯಾಸ ಮುಂತಾದುವು ಕಂಡುಬಂದರೂ ಶಿಲ್ಪವಸ್ತುವಿನಲ್ಲಿ ಮಾತ್ರ ಇದು ಅಚ್ಚ ಭಾರತೀಯ. ಹೆಚ್ಚಿನ ಶಿಲ್ಪಗಳೆಲ್ಲ ಬುದ್ಧನ ಜೀವನದ ವಿವಿಧ ಘಟನೆಗಳನ್ನೋ ಬೌದ್ಧ ಜಾತಕದ ಕಥೆಗಳನ್ನೋ ಚಿತ್ರಿಸುತ್ತವೆ. ಜಲಾಲಾಬಾದ್ ಬಳಿಯ ಹಡ್ಡದಲ್ಲಿ ಗಾಂಧಾರ ಶೈಲಿಯ ಶಿಲ್ಪಕೃತಿಗಳು ಬಹಳವಾಗಿ ಸಿಕ್ಕಿವೆ. ಅಲ್ಲದೆ ಕುಶಾನರ ಕಾಲದ ಕೆಲವು ಸ್ತೂಪಾವಶೇಷಗಳೂ ಗಾಂಧಾರ ಶಿಲ್ಪಶೈಲಿಯಲ್ಲೇ ತಯಾರಿಸಿದ ಸುದ್ದೆಮಣ್ಣಿನ ವಿಗ್ರಹಗಳೂ ಇಲ್ಲಿ ದೊರಕಿವೆ.

ಉತ್ತರ ಆಫ್ಘಾನಿಸ್ತಾನದ ಹೈಬಕ್ ನಗರದ ಬಳಿ ಒಂದೇ ಬಂಡೆಯಲ್ಲಿ ಕೊರೆದ ಒಂದು ಸ್ತೂಪವೂ ಹಲವು ಬೌದ್ಧಗುಹೆಗಳೂ ಇವೆ. ಇವು ಪ್ರ.ಶ. 4-5ನೆಯ ಶತಮಾನಕ್ಕೆ ಸೇರಿದುವು. ಇಲ್ಲಿಯ ಗುಹೆಗಳು ಚಚ್ಚೌಕವಾಗಿದ್ದರೂ ಛಾವಣಿಯ ಭಾಗ ಮಾತ್ರ ಗುಮ್ಮಟದಂತೆ ಕೆತ್ತಲ್ಪಟ್ಟಿದೆ. ಇದು ಸಸ್ಸಾನೀಯ ವಾಸ್ತುಶೈಲಿಯ ಅನುಕರಣೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಫೂಚೆ ಎಲ್ಲೋರದ ಭಾರತೀಯ ವಾಸ್ತುಶೈಲಿಯ ಛಾಯೆ ಕೂಡ ಈ ಬಂಡೆಗೆತ್ತನೆಗಳಲ್ಲಿವೆಯೆಂದು ಊಹಿಸಿದ್ದಾರೆ. ಜಲಾಲಾಬಾದ್ ಬಳಿಯ ದರುತಾದಲ್ಲಿ ಇದೇ ಬಗೆಯ ಬಂಡೆಯಲ್ಲಿ ಕೊರೆದ ಗುಹೆಗಳಿವೆ. ಕಾಬೂಲಿನಿಂದ ಸುಮಾರು 128 ಕಿಮೀ ವಾಯವ್ಯಕ್ಕಿರುವ ಬಾಮಿಯಾನ್‌ನಲ್ಲಿ ಪ್ರ.ಶ. 5-6ನೆಯ ಶತಮಾನದ ಅನಂತರದ ಬೌದ್ಧಶಿಲ್ಪಗಳಿವೆ. ಇವುಗಳಲ್ಲಿ ಕಮರಿಯ ಪಕ್ಕದ ದೊಡ್ಡ ಬಂಡೆಯಲ್ಲಿ ಕೊರೆದಿರುವ ಎರಡು ಬುದ್ಧವಿಗ್ರಹಗಳು ಮುಖ್ಯವಾದವು. ಒಂದು 53 ಮೀ ಎತ್ತರವಿದ್ದು ಪ್ರಪಂಚದಲ್ಲೇ ಅತಿ ದೊಡ್ಡ ವಿಗ್ರಹವಾಗಿದೆ. ಇನ್ನೊಂದು 36 1/2ಮೀ ಎತ್ತರವಿದೆ. ಇತ್ತೀಚೆಗೆ ತಾಲಿಬಾನ್ ಸರ್ಕಾರವಿದ್ದಾಗ ಈ ವಿಗ್ರಹಗಳನ್ನು ಫಿರಂಗಿಗಳ ಸಹಾಯದಿಂದ ಧ್ವಂಸಗೊಳಿಸಲಾಯಿತು. ಈ ಶಿಲ್ಪಗಳು ಸಸ್ಸಾನೀಯರಿಂದ ಪ್ರಭಾವಿತವಾದ ನವೀಕೃತ ಗಾಂಧಾರ ಶೈಲಿಯಲ್ಲಿವೆ. ಶಿಲ್ಪಗಳ ಪಕ್ಕದಲ್ಲಿ ವರ್ಣಚಿತ್ರಗಳೂ ಇವೆ. ಸಸ್ಸಾನೀಯರು, ಹೆಫ್ತಲೀಯರು ಮತ್ತು ಶಾಹೀ ಅರಸರ ಕಾಲದ ಅವಶೇಷಗಳು ಫೋಂಡುಕೀಸ್ತಾನದಲ್ಲಿ ಬಹಳವಾಗಿ ಸಿಕ್ಕಿವೆ. ಬಾಮಿಯಾನ್ ಬಳಿಯ ಜೋಹಕ್ ಎಂಬಲ್ಲಿರುವ ಇಟ್ಟಿಗೆಯ ಕೋಟೆ ಇವುಗಳಲ್ಲಿ ಮುಖ್ಯವಾದುದು. ಈ ಕಾಲಕ್ಕೆ ಸೇರಿದ ಕೆಲವು ಹಿಂದೂ ವಿಗ್ರಹಗಳು ಈ ಪ್ರಾಂತ್ಯದಲ್ಲಿ ದೊರಕಿವೆ. ಕಾಬೂಲಿನಲ್ಲಿ ಒಂದು ಹಿಂದೂ ದೇವಾಲಯವೂ ಇದೆ.

ಪ್ರ.ಶ. 7ನೆಯ ಶತಮಾನದ ಹೊತ್ತಿಗೆ, ಆಫ್ಘಾನಿಸ್ತಾನಕ್ಕೆ ಇಸ್ಲಾಮಿನ ಸಂಪರ್ಕ ಒದಗಿದ್ದರೂ ಅದು ಪೂರ್ಣವಾಗಿ ಆ ಧರ್ಮೀಯರಿಗೆ ಒಳಪಟ್ಟಿದ್ದು ಪ್ರ.ಶ. 10ನೆಯ ಶತಮಾನದಲ್ಲಿ. ಸಹಜವಾಗಿ ಆ ಕಾಲದಿಂದ ಈಚಿನ ಕಟ್ಟಡಗಳು ಬೇರೆಯ ವರ್ಗಕ್ಕೆ ಸೇರುತ್ತವೆ. ಕಾಬೂಲ್ ಬಳಿಯ ಲಷ್ಕರೀ ಬಜಾರಿನಲ್ಲಿ ಘಜ್ನಿ ಮಹಮ್ಮದನ ಕಾಲದ (998-1030) ಕೋಟೆ, ಅರಮನೆ, ಮಸೀದಿ ಮದರಸ ಮತ್ತು ಗೋರಿಗಳು ಬೆಳಕಿಗೆ ಬಂದಿವೆ. ಘಜ್ನಿ ವಾಸ್ತುಶೈಲಿ ಇಸ್ಲಾಮಿ-ಅದರಲ್ಲೂ ಪರ್ಷಿಯ- ಸಂಪ್ರದಾಯಕ್ಕೆ ಸೇರಿದುದು. ಆದರೂ ಆ ಕಾಲದ ಕೆಲವು ಅಮೃತಶಿಲೆಯ ಕಟ್ಟಡಗಳು, ಅರಮನೆಯಲ್ಲಿ ಅಲಂಕರಣಕ್ಕಾಗಿ ಮಾಡಿರುವ ಸುದ್ದೆಮಣ್ಣಿನ ಶಿಲ್ಪಗಳು ಮತ್ತು ವರ್ಣಚಿತ್ರಗಳು ಭಾರತ ಮತ್ತು ಮಧ್ಯಏಷ್ಯ ಕಲಾಸಂಪ್ರದಾಯಗಳ ಪ್ರಭಾವವನ್ನು ಬಿಂಬಿಸುತ್ತವೆ. ಘೋರಿ ಅರಸರ ಕಾಲದ ಭಗ್ನಕಟ್ಟಡಗಳು ಘೋರ್‌ನಲ್ಲಿವೆ. ಕಾಬೂಲ್ ನಗರದಲ್ಲಿ, ಸುಂದರ ತೋಟದ ಮಧ್ಯದಲ್ಲಿರುವ ಬಾಬರ್‌ನ ಸಮಾಧಿ ಮೊಗಲ ಅರಸರ ಕಾಲದ ಉತ್ತಮ ಕಟ್ಟಡ. ಹಾಗೆಯೇ ಅಲ್ಲಿನ ಲೋಹದ ಗುಮ್ಮಟವಿರುವ ತೈಮೂರನ ಸಮಾಧಿಯೂ ಪ್ರಖ್ಯಾತವಾದುದು. ಆಫ್ಘಾನಿಸ್ತಾನದ ಹೆರಾತ್ ನಗರ ಮುಸಲ್ಮಾನ ಸಂಸ್ಕೃತಿಯ ಕೇಂದ್ರ. ಮಹಮದ್ ಘೋರಿ ಕಟ್ಟಿಸಿದ ಇಲ್ಲಿಯ ಮಸೀದಿ ಬಹಳ ದೊಡ್ಡ ಕಟ್ಟಡ. ಇದೇ ಊರಿನ ಅರ್ಗ್ ಕೋಟೆ, ಮುಸಲ್ಲಾ ಕಾಲೇಜು, ಜವಹರ್‌ಶದ್‌ನ ಸಮಾಧಿ, ಹುಸೇನ್ ಬೈಖರಾನ ಮದರಸ, ಪ್ರಸಿದ್ಧ ಮುಸಲ್ಮಾನ ಕವಿ ಅಬ್ದುಲ್ಲ ಅಸ್ಸರಿಯ ಸಮಾಧಿ ಇವು ಪ್ರ.ಶ. 13ರಿಂದ 18ನೆಯ ಶತಮಾನಕ್ಕೆ ಸೇರಿದ ಇತರ ಮುಖ್ಯ ವಾಸ್ತುಕೃತಿಗಳು.

ಇತ್ತೀಚಿನವರೆಗೆ ಆಫ್ಘಾನಿಸ್ತಾನದಲ್ಲಿ ಪುರಾತತ್ತ್ವಸಂಶೋಧನೆಯ ಬಗ್ಗೆ ಫ್ರೆಂಚ್ ಸಂಸ್ಥೆಯೊಂದು ಏಕಸ್ವಾಮ್ಯವನ್ನು ಹೊಂದಿದ್ದಿತಾದ್ದರಿಂದ ಆ ದೇಶದ ಬಗ್ಗೆ ಹೆಚ್ಚು ಸಾಹಿತ್ಯವೆಲ್ಲವೂ ಫ್ರೆಂಚ್ ಭಾಷೆಯಲ್ಲಿದೆ. ಫೂಚೆ, ರೀನೆಗ್ರಾಸೆ, ಜೆಮೆಯೂನೀ, ಡಿ ಶ್ಲುಂಬರ್ಗರ್ ಮುಂತಾದವರು ಆಫ್ಘಾನಿಸ್ತಾನದ ಪುರಾತತ್ತ್ವಜ್ಞರಲ್ಲಿ ಆದ್ಯರು. ಭೂಖನನಗಳಲ್ಲಿ ಸಿಕ್ಕಿರುವ ಹೆಚ್ಚು ಅವಶೇಷಗಳು ಪ್ಯಾರಿಸ್ಸಿನ ಮ್ಯೂಸಿಯಂ ಮತ್ತು ಕಾಬೂಲ್ ವಸ್ತುಸಂಗ್ರಹಾಲಯಗಳಲ್ಲಿವೆ. (ಎಸ್.ಎನ್.)

**ಬುಡಕಟ್ಟುಗಳು :** ಮುಖ್ಯವಾಗಿ ಆಫ್ಘಾನರು, ಪರ್ಷಿಯನ್ನರು, ತುರ್ಕಿಸ್ತಾನದವರು, ಮಂಗೋಲರು ಮತ್ತು ಹಿಂದೂಕುಷ್‌ನ ಆರ್ಯರು ಇಲ್ಲಿ ವಾಸಮಾಡುತ್ತಾರೆ. ರಾಜಕೀಯವಾಗಿ ಪ್ರಬಲರೆಂದರೆ ಜನಸಂಖ್ಯೆಯ ಶೇ.60 ಇರುವ ಆಫ್ಘನ್ನರು. ಅವರ ಬಣ್ಣ ಹಸನಾಗಿದ್ದು ಮೂಗು ಉಬ್ಬಾಗಿದೆ. ಅವರ ನಿಜವಾದ ಹೆಸರು ಪಕ್ತೂನ್ (ಇದರಿಂದಲೇ ಪಠಾಣ ಬಂದಿದೆ). ಇವರು ಪುಷ್ತು ಭಾಷೆಯನ್ನು ಬಳಸುತ್ತಾರೆ. ಮಹ್ಮಂದ್, ಮಂಗಲ್, ವಜೀರಿಗಳೇ ಆದಿಯಾದ ಅನೇಕ ಗುಂಪುಗಳು ಈ ವರ್ಗಕ್ಕೇ ಸೇರುತ್ತವೆ. ಸುಮಾರಾಗಿ ಎಲ್ಲರೂ ಮುಸಲ್ಮಾನ ಸುನ್ನಿ ಪಂಗಡದವರು. ಇವರಲ್ಲಿ ಬಹುಮಂದಿ ಪೂರ್ಣ ಅಲೆಮಾರಿಗಳು. ಎಲ್ಲರೂ ಯುದ್ಧವಿದ್ಯೆಯಲ್ಲಿ ನಿಪುಣರು. ಗುಂಪಿನ ನಾಯಕನಿಗೆ ಖಾನ್ ಎಂದು ಹೆಸರು.

ಮುಖ್ಯಸ್ಥನನ್ನು ಮಾಲಿಕ ಎನ್ನುತ್ತಾರೆ. ಮಾಲಿಕನನ್ನೂ ಖಾನನನ್ನೂ ರಾಜನೇ ನೇಮಿಸುತ್ತಾನೆ. ಅವನ ಪ್ರತಿನಿಧಿಯಾಗಿ ಇವರು ಪಾಳೆಯದ ಆಡಳಿತ ನಡೆಸುತ್ತಾರೆ. ವರ್ಷಂಪ್ರತಿ ಇವರು ಅರಸನಿಗೆ ಸಲ್ಲಬೇಕಾದ ಕಪ್ಪವನ್ನು ಕೊಡಬೇಕಲ್ಲದೆ ನಾಡಿನ ಸಂರಕ್ಷಣೆಗೆ ನೆರವಾಗಬೇಕು. ಪಾರಸಿ ಮತ್ತು ಅರಬ್ಬೀ ಜನರಿದ್ದ ಕಡೆಗಳಲ್ಲೆಲ್ಲ ಈಗ ತಜಿಕರಿದ್ದಾರೆ. ಸಾಮಾನ್ಯವಾಗಿ ಆಫ್ಘನ್ನರ ಯಾಜಮಾನ್ಯದಲ್ಲಿ ಉಳುಮೆ ಮಾಡುವುದೇ ಒಂದು ವೃತ್ತಿ. ಇವರು ಸುನ್ನಿ ಪಂಗಡದವರು. ತಾಜಿಕರು ಆಫ್‌ಘಾನಿಸ್ತಾನದ ಆಡಳಿತ ಭಾಷೆಗಳಲ್ಲಿ ಒಂದಾಗಿರುವ ಧರಿ ಭಾಷೆಯನ್ನು ಬಳಸುತ್ತಾರೆ. ಇವರಲ್ಲದೆ ಬಹುಮಂದಿ ತುರುಕರು ಆಫ್ಘಾನಿಸ್ತಾನ ದಲ್ಲಿದ್ದಾರೆ. ಮಂಗೋಲ್ ಬುಡಕಟ್ಟಿಗೆ ಸೇರಿದ ಹಸ್ಸಾರರು ದೃಢಕಾಯರಾಗಿದ್ದು ಊಳಿಗದ ಕೆಲಸದಲ್ಲಿ ತೊಡಗಿದ್ದಾರೆ. ಇವರು ಷಿಯ ಪಂಗಡದವರು. ಭಾಷೆ ಪಾರಸಿ. ಇರಾನಿ ಪಂಗಡಕ್ಕೆ ಸೇರಿದ ಆರ್ಯರು ಕಾಬೂಲಿನ ಈಶಾನ್ಯದಲ್ಲಿದ್ದಾರೆ. ಅಮೀರ್ ಅಬ್ದುರ್ ರಹಮಾನನು ಇವರನ್ನು ಮುಸಲ್ಮಾನರಾಗಿ ಮತಾಂತರಗೊಳಿಸಿದ. ಆಫ್ಘಾನಿಸ್ತಾನದಲ್ಲಿ ಅನೇಕ ಸಣ್ಣಪುಟ್ಟ ಜನರ ಬುಡಕಟ್ಟುಗಳಿವೆ.

**ಚರಿತ್ರೆ :** ಪೂರ್ವದಲ್ಲಿ ಭಾರತ, ಪಶ್ಚಿಮದಲ್ಲಿ ಪರ್ಷಿಯ ಮತ್ತು ಇತರ ಪಶ್ಚಿಮ ಏಷ್ಯ ದೇಶಗಳು, ಉತ್ತರಕ್ಕೆ ಚೀನ ಮತ್ತು ಮಧ್ಯ ಏಷ್ಯ ಇವುಗಳ ನಡುವೆ ಇರುವುದರಿಂದ ಪ್ರಾಚೀನಕಾಲದಿಂದಲೂ ಈ ಪ್ರದೇಶ ಚಾರಿತ್ರಿಕ ಪ್ರಾಮುಖ್ಯ ಪಡೆದಿದೆ. ಭಾರತದಿಂದ ಪರ್ಷಿಯಕ್ಕೆ ಅಥವಾ ಚೀನಕ್ಕೆ ಹೋಗಬೇಕಾದರೆ, ಈ ಪರ್ವತಮಯ ದೇಶದ ಕಣಿವೆಗಳ ಮುಖಾಂತರ ಹೋಗಬೇಕು. ಪರ್ಷಿಯದ ಪ್ರಸ್ಥಭೂಮಿಯ ಪೂರ್ವಭಾಗವನ್ನು ಆಫ್ಘಾನಿಸ್ತಾನ ಆಕ್ರಮಿಸಿರುವುದರಿಂದ ಅವೆರಡು ದೇಶಗಳ ಸಂಪರ್ಕ ಸುಲಭ. ಆದ್ದರಿಂದ ಇರಾನಿನ ಸಂಸ್ಕೃತಿ ಆಫ್ಘನ್ನರ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಭಾರತ, ಚೀನಾ ಸಂಸ್ಕೃತಿಗಳೂ ಗಮನಾರ್ಹವಾದ ಪ್ರಭಾವ ಬೀರಿವೆ.

ಆಫ್ಘಾನಿಸ್ತಾನದ ಇತಿಹಾಸ ಇರಾನಿನ ಅಕೀಮೆನಿಡ್ ದೊರೆಗಳ (ಪ್ರ.ಶ.ಪೂ. 550–330) ಕಾಲದಿಂದ ಪ್ರಾರಂಭವಾಗುತ್ತದೆ. **(ನೋಡಿ– ಅಕೇಮೆನಿಡ್)**. ಕೈರಸ್ ಆಫ್ಘಾನಿಸ್ತಾನದ ಅನೇಕ ಪ್ರದೇಶಗಳನ್ನು ಗೆದ್ದ. ಒಂದನೆಯ ಡೇರಿಯಸ್ ಆಡಳಿತವನ್ನು ಭದ್ರಪಡಿಸಿದ. ಅಲೆಕ್ಸಾಂಡರ್ ಬಂದು ಪರ್ಷಿಯವನ್ನು ಗೆಲ್ಲುವವರೆಗೂ **(ನೋಡಿ–ಅಲೆಕ್ಸಾಂಡರ್)** ಅದು ಅಕೀಮೆನಿ ದೊರೆಗಳ ಆಳ್ವಿಕೆಗೇ ಸೇರಿತ್ತು. ಅಲೆಕ್ಸಾಂಡರನ ಮರಣಾ ನಂತರ ಅದು ಸೆಲ್ಯೂಕಸ್ ದೊರೆಗಳ ಅಧೀನಕ್ಕೆ ಬಂದಿತು. ಮೌರ್ಯ ದೊರೆಯಾದ ಚಂದ್ರಗುಪ್ತ ಸು. ಪ್ರಶ.ಪೂ. 305ರಲ್ಲಿ ಸೆಲ್ಯೂಕಸ್‌ನನ್ನು ಸೋಲಿಸಿದ ಮೇಲೆ, ಆಫ್ಘಾನಿಸ್ತಾನದ ಪರೋಪಮೀಸಡೆ ಮತ್ತು ಅರಕೋಸಿಯ ಪ್ರಾಂತ್ಯಗಳು ಮೌರ್ಯ ಸಾಮ್ರಾಜ್ಯಕ್ಕೆ ಸೇರಿಹೋದುವು. ಅಶೋಕನ ಕಾಲದಲ್ಲೂ ಈ ಪ್ರದೇಶಗಳು ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದುವೆನ್ನುವುದಕ್ಕೆ ಶಾಸನಗಳ ಆಧಾರವಿದೆ. ಬೌದ್ಧಧರ್ಮ ಅಲ್ಲಿಗೂ ಹರಡಿತ್ತು. ಆದರೆ ಕೊಂಚ ಕಾಲದಲ್ಲೇ ಅದು ಕ್ಷೀಣಿಸಿತು. ಅನಂತರ ಸಿಥಿಯನ್ನರು, ಪಾರ್ಥಿಯನ್ನರು, ಯೂಚಿ, ಕುಶಾನರು ಮುಂತಾದ ನಾನಾ ಜನರ ದಾಳಿಗೆ ಸಿಕ್ಕಿ ದೇಶ ಶಾಂತಿಯನ್ನು ಕಾಣಲೇ ಇಲ್ಲ. ಒಂದೇ ದೇಶವಾಗಿ ಉಳಿಯಲೂ ಇಲ್ಲ. 7ನೆಯ ಶತಮಾನದಲ್ಲಿ ಮುಸ್ಲಿಮರು ಪಶ್ಚಿಮದ ಪ್ರಾಂತ್ಯಗಳನ್ನಾವರಿಸಿಕೊಂಡಾಗಲೇ ಕೊಂಚ ಸ್ಥಿರವಾದ ಧರ್ಮ ಜನರಲ್ಲಿ ಹರಡಿತೆನ್ನಬಹುದು. ಆಗ ಸಣ್ಣ ಸಣ್ಣ ಮುಸ್ಲಿಂ ರಾಜ್ಯಗಳು ಸ್ಥಾಪಿತವಾದುವು. ಮುಸ್ಲಿಂ ಧರ್ಮ ಕೊಂಚ ಕೊಂಚವಾಗಿ ಹರಡತೊಡಗಿತು. ಈ ಮುಸ್ಲಿಂ ರಾಜ್ಯಗಳಲ್ಲಿ ಅತ್ಯಂತ ಪ್ರಖ್ಯಾತ ರಾಜ್ಯ, ಘಜ್ನಿಯಿಂದಾಳಿದ ಸುಲ್ತಾನ್ ಮಹಮೂದನದು (11ನೆಯ ಶತಮಾನ). ಇವನು ಪಶ್ಚಿಮದ ಖುರಾಸಾನ್‌ನಿಂದ ಪೂರ್ವದಲ್ಲಿ ಪಂಜಾಬಿನವರೆಗೂ ರಾಜ್ಯವನ್ನು ವಿಸ್ತರಿಸಿದ. 1152ರಲ್ಲಿ ಘೋರ್ ಸುಲ್ತಾನ ಘಜ್ನಿ ರಾಜ್ಯವನ್ನು ವಶಪಡಿಸಿಕೊಂಡ ಮತ್ತು ಸುಂದರ ಘಜ್ನಿ ನಗರವನ್ನು ಸಂಪೂರ್ಣವಾಗಿ ನಾಶಪಡಿಸಿದನು. ಮುಂದೆ ಆಫ್ಘಾನಿಸ್ತಾನ್ ಚಂಘೇಸ್‌ಖಾನನ ದಾಳಿಗೆ ತುತ್ತಾಯಿತು. ಅವನನ್ನು ಪ್ರತಿಭಟಿಸಿದವರೆಲ್ಲ, ಹೆಂಗಸರು ಮಕ್ಕಳೆನ್ನದೆ, ಮಂಗೋಲರ ಕತ್ತಿಗೆ ತುತ್ತಾದರು. ನಗರಗಳು ನೆಲಸಮವಾದುವು. ಅವನ ವಂಶಜನಾದ ಬಾಬರ್, ಉತ್ತರ ಹಿಂದೂಸ್ತಾನವನ್ನು ಗೆಲ್ಲುವ ಪ್ರಯತ್ನಕ್ಕೆ ಕಾಬೂಲನ್ನು ಆಧಾರಸ್ಥಾನವನ್ನಾಗಿ ಮಾಡಿಕೊಂಡ (16ನೆಯ ಶತಮಾನ). ಈ ಕಾಲದಲ್ಲಿ ಆಫ್ಘಾನಿಸ್ತಾನದ ಎಲ್ಲ ತಂಡಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದವು. ಹೊಸದಾಗಿ ಅಲ್ಲಿ ಬಂದು ನೆಲೆಸಿದವರೂ ಮುಸಲ್ಮಾನರಾಗಿದ್ದರು.

ಹೀಗೆ ಆಫ್ಘಾನಿಸ್ತಾನದಲ್ಲಿ ಒಂದೇ ಮತಧರ್ಮ ಹರಡಿದುದು ಅಲ್ಲಿ ಐಕ್ಯ ಬೆಳೆಯುವುದಕ್ಕೆ ಸಹಕಾರಿಯಾಯಿತು. ಇಲ್ಲಿಯವರೆಗೆ ದೇಶವು ಇರಾನಿಯನ್, ಘಜ್ನಿವಿಡ್, ಮಂಗೋಲಿಯನ್ ಅಥವಾ ಮುಗಲ್ ರಾಜ್ಯಗಳ ಒಂದು ಅಂಗವಾಗಿತ್ತು. 1747ರಲ್ಲಿ ಪರ್ಷಿಯದ ದೊರೆ ನಾದಿರ್‌ಷಾ ಕಾಲವಾದ ಮೇಲೆ, ಅವನ ಅಂಗರಕ್ಷಕಪಡೆಯ ದಳಪತಿಯಾಗಿದ್ದ ಅಹಮದ್‌ಷಾ ಅಬ್ದಾಲಿ ಆಫ್ಘಾನಿಸ್ತಾನದ ದೊರೆಯಾಗಿ ದುರಾನಿ ವಂಶವನ್ನು ಸ್ಥಾಪಿಸಿದ. ಸ್ವತಂತ್ರ ಆಫ್ಘಾನಿಸ್ತಾನದ ಚರಿತ್ರೆ ಆ ವರ್ಷ ಪ್ರಾರಂಭವಾಯಿತೆನ್ನಬಹುದು. ಅಬ್ದಾಲಿಯ ಕಾಲದಲ್ಲಿ ದೇಶಕ್ಕೆ ಆಫ್ಘಾನಿಸ್ತಾನ ಎಂದು ನಾಮಕರಣ ಮಾಡಲಾಯಿತು. ಮೊದಲು ಆಫ್ಘಾನಿಸ್ತಾನವನ್ನು ಖೊರಸಾನ್ ಎಂದು ಕರೆಯಲಾಗುತ್ತಿತ್ತು.

ಅಹಮದ್‌ಷಾ ಹಿಂದೂಸ್ಥಾನದ ದಂಡಯಾತ್ರೆಯನ್ನು ಕೈಗೊಂಡು 3ನೆಯ ಪಾಣಿಪತ್ ಕದನದಲ್ಲಿ ಮರಾಠರನ್ನು ಸಂಪೂರ್ಣವಾಗಿ ಸೋಲಿಸಿದ. ಆದರೆ ಹಿಂದೂಸ್ಥಾನದಲ್ಲಿ ನೆಲಸಲು ಇಷ್ಟವಿಲ್ಲದೆ ಹಿಂತಿರುಗಿದ. ಆದರೂ ಪಂಜಾಬಿನಲ್ಲಿ ನೆಲೆಸಿದ ದುರಾನಿಯವರನ್ನು ರಣಜಿತ್‌ಸಿಂಗ್ ಓಡಿಸಿ ಸಿಖ್ ರಾಜ್ಯವನ್ನು ಸ್ಥಾಪಿಸಬೇಕಾಯಿತು. 1801ರಲ್ಲಿ ಜಮಾನ್‌ಷಾ ಪದಚ್ಯುತನಾಗಿ ಷಾಷೂಜ ಅಮೀರನಾದ. ಬರಕ್ಸೆ ಕುಲದವರು ರಾಜಕೀಯದಲ್ಲಿ ಪ್ರಭಾವಕ್ಕೆ ಬಂದರು. ಬ್ರಿಟಿಷ್ ಸರ್ಕಾರ ಷಾ ಷೂಜನ ಸ್ನೇಹ ಬಯಸಿತು. ಆದರೆ 1810ರಲ್ಲಿ ಷಾ ಷೂಜ ಪದಚ್ಯುತನಾಗಿ ಬ್ರಿಟಿಷರ ರಕ್ಷಣೆಯಲ್ಲಿದ್ದ. ಮತ್ತೆ ಸಿಂಹಾಸನವನ್ನು ಪಡೆಯಲು ಗುಟ್ಟಾಗಿ ಯತ್ನಿಸುತ್ತಿದ್ದ. 30 ವರ್ಷಗಳ ಕಾಲ ಆಫ್ಘಾನಿಸ್ತಾನದ ಬರಕ್ಸೆ ಕುಲದವರೂ ರಣಜಿತ್‌ಸಿಂಗ್‌ನೂ ದ್ವೇಷದಿಂದ ಪರಸ್ಪರ ಯುದ್ಧ ಮಾಡುತ್ತಿದ್ದು ರಣಜಿತ್‌ಸಿಂಗ್ ಮುಲ್ತಾನ್, ಪೆಷಾವರ್ ಮತ್ತು ಕಾಶ್ಮೀರ್ ಪ್ರದೇಶಗಳನ್ನು ವಶಮಾಡಿಕೊಂಡ. ಆಫ್ಘನ್ನರ ಪರಸ್ಪರ ವೈಷಮ್ಯಗಳೇ ರಣಜಿತ್‌ಸಿಂಗನಿಗೆ ಅನುಕೂಲವಾಯಿತು. ಬರಕ್ಸೆ ಕುಲದ ಪ್ರಭಾವವನ್ನು ಅನೇಕ ಪಾಳೆಯಗಾರರು ಸಹಿಸಲಿಲ್ಲ. ಅಂತರ್ಯುದ್ಧಕ್ಕೆ ಅವಕಾಶವಾಯಿತು. ಬರಕ್ಸೆ ಕುಲದ ದೋಸ್ತ್ ಮೊಹಮ್ಮದ್ ಪ್ರಾಬಲ್ಯಕ್ಕೆ ಬಂದ. ಪರ್ಷಿಯ ದೇಶ ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನೀತಿಯನ್ನು ಅನುಸರಿಸುತ್ತಿರುವುದು ರಷ್ಯನ್ನರ ಬೆಂಬಲದಿಂದ ಎಂಬುದು ವ್ಯಕ್ತವಾಯಿತು. ದೋಸ್ತ್ ಮೊಹಮ್ಮದ್ ಬ್ರಿಟಿಷರನ್ನು ನಂಬದೆ ಇದ್ದರೂ ಅವರ ಸಹಾಯವನ್ನು ಅಪೇಕ್ಷಿಸಿ ಸಂಧಿ ಪ್ರಸ್ತಾಪ ಮಾಡಿದ. ಆದರೆ ಲಾರ್ಡ್ ಆಕ್ಲಂಡ್ ಕಾಬೂಲಿನಲ್ಲಿ ತನ್ನ ಕೈಗೊಂಬೆಯ ರಾಜನನ್ನು ನೇಮಿಸಿದರೆ ಬ್ರಿಟಿಷರ ಪ್ರಾಬಲ್ಯ ಹೆಚ್ಚುವುದೆಂದು ಯೋಚಿಸಿ ಷಾ ಷೂಜನನ್ನು ಮತ್ತೊಮ್ಮೆ ಅಮೀರನನ್ನಾಗಿ ಘೋಷಿಸಿದ. ದೋಸ್ತ್ ಮೊಹಮ್ಮದ್ ತನ್ನ ನಡತೆಯಿಂದ ಶೂರನೆಂಬುವುದನ್ನು ಸ್ಪಷ್ಟಪಡಿಸಿ ಬ್ರಿಟಿಷರಿಗೆ ಶರಣಾಗತನಾದ. ಈ ಹೊಸ ಆಡಳಿತವನ್ನು ರಕ್ಷಿಸಲು ಕಾಬೂಲಿನಲ್ಲಿ ಒಂದು ಬ್ರಿಟಿಷ್ ಸೈನ್ಯ ನೆಲೆಸಿತು. ಲಾರ್ಡ್ ಆಕ್ಲಂಡ್‌ನ ಆಫ್ಘನ್ ನೀತಿ ಎಲ್ಲರಿಂದಲೂ ಖಂಡಿಸಲ್ಪಟ್ಟಿದೆ. ರಾಜಕೀಯ ದೃಷ್ಟಿಯಿಂದ ಆಫ್ಘನ್ ಯುದ್ಧ ದುರ್ದೈವವೆಂದೂ, ನೈತಿಕ ದೃಷ್ಟಿಯಿಂದ ಅನ್ಯಾಯವೆಂದೂ ಒಪ್ಪಿಕೊಳ್ಳಬೇಕು. ಆದರೆ 1837ರಲ್ಲಿ ಲಾರ್ಡ್ ಆಕ್ಲಂಡ್‌ನಿಗಿದ್ದ ಕ್ಲಿಷ್ಟ ಸಮಸ್ಯೆಗಳನ್ನು ವಿಮರ್ಶಿಸಿದರೆ ಅವನ ಆ ನೀತಿ ಹೇಗೆ ಅನಿವಾರ್ಯವಾಗಿತ್ತೆಂಬುದು ಗೋಚರವಾಗುತ್ತದೆ. ಮುಖ್ಯವಾಗಿ ಏಷ್ಯದಲ್ಲಿ ರಷ್ಯನ್ನರ ಪ್ರಭಾವವೇ ಈ ನೀತಿಗೆ ಹಿನ್ನೆಲೆ. 1809 ಮತ್ತು 1814ರಲ್ಲಿ ಮಾಡಿಕೊಂಡಿದ್ದ ಟೆಹರಾನ್ ಒಪ್ಪಂದದಂತೆ ಬ್ರಿಟಿಷರು ಪರ್ಷಿಯ ದೇಶಕ್ಕೆ ಯಾವ ಯುರೋಪಿಯನ್ನರ ಆಕ್ರಮಣ ವಿರುದ್ಧವಾಗಿಯಾದರೂ ಸಹಾಯ ಮಾಡಬೇಕಾಗಿತ್ತು. 1826ರಲ್ಲಿ ರಷ್ಯನ್ನರು ಪರ್ಷಿಯನ್ನರ ಮೇಲೆ ಯುದ್ಧ ಮಾಡಿದಾಗ ಪರ್ಷಿಯನ್ನರು ಬ್ರಿಟಿಷರ ಸಹಾಯವನ್ನು ಅಪೇಕ್ಷಿಸಿದರು. ಆದರೆ ಬ್ರಿಟಿಷರು ಸಹಾಯ ಮಾಡದೆ ಪರ್ಷಿಯನ್ನರೇ ಆಕ್ರಮಣ ನೀತಿಯನ್ನು ಅನುಸರಿಸಿದರೆಂದು ಹೇಳಿದ್ದು ಸತ್ಯಕ್ಕೆ ವಿರುದ್ಧವಾಗಿತ್ತು. ಪರ್ಷಿಯನ್ನರು ಸೋತರು ಕೊನೆಗೆ ಹೆಚ್ಚು ಹಣವನ್ನು ಪ್ರತಿಫಲವಾಗಿ ಕೊಟ್ಟು ಪರ್ಷಿಯನ್ನರಿಗೆ ಸಹಾಯ ಮಾಡುವ ಷರತ್ತನ್ನೂ ಒಪ್ಪಂದದಿಂದ ರದ್ದು ಮಾಡಿದರು. ಏಷ್ಯದಲ್ಲಿ ರಷ್ಯನ್ನರ ಬೆದರಿಕೆ ನಿಜವಾಗಿದ್ದರೂ ಭಾರತದ ವಾಯವ್ಯಗಡಿಗೆ ಇದರಿಂದ ವಿಪತ್ತು ಎಂಬುದು ಕೇವಲ ಭ್ರಮೆಯೆಂದು ಹೇಳಬೇಕು. ರಷ್ಯನ್ನರು ಭಾರತದ ವಾಯವ್ಯಗಡಿಗೆ ಬರಬೇಕಾದರೆ ಸುಲಭ ಸಾಧ್ಯವಲ್ಲ. ಅದರಲ್ಲೂ ಮಾಸ್ಕೊದಿಂದ ಸಿಂಧೂ ನದಿಯ ತೀರಕ್ಕೆ ಬರಬೇಕಾದರೆ ಬಹು ದೂರ. ರಷ್ಯನ್ನರ ಕೊನೆಯ ಠಾಣೆಗಳು 1600 ಕಿ.ಮೀ ದೂರದಲ್ಲಿದ್ದುವು. ಅವರ ಬೆದರಿಕೆಯನ್ನು ಆ ಕಾಲದ ಬ್ರಿಟಿಷ್ ರಾಜಕಾರಣಿಗಳು ಉತ್ಪ್ರೇಕ್ಷಿಸಿದರೆಂದು ಹೇಳಬೇಕು. ಆದರೂ ರಷ್ಯನ್ನರು ಆಫ್ಘಾನಿಸ್ತಾನದ ಆಕ್ರಮಣಕ್ಕೆ ಪರ್ಷಿಯನ್ನರಿಗೆ ಗುಟ್ಟಾಗಿ ಪ್ರೋತ್ಸಾಹ ಕೊಟ್ಟಿದ್ದರು. ದೋಸ್ತ್ ಮೊಹಮ್ಮದ್ ರಣಜಿತ್‌ಸಿಂಗ್‌ನಿಂದ ಪೆಷಾವರ್‌ಅನ್ನು ತನಗೆ ಹಿಂದಕ್ಕೆ ಕೊಡಿಸಿದರೆ ಬ್ರಿಟಿಷರ ಸ್ನೇಹ ಮಾಡಿಕೊಳ್ಳುವುದಾಗಿ ಹೇಳಿದ್ದು ಅವರಿಗೆ ಒಪ್ಪಿಗೆಯಾಗಲಿಲ್ಲ. ರಣಜಿತ್‌ಸಿಂಗ್ 1809 ರ ಅಮೃತ್‌ಸರ ಒಪ್ಪಂದದ ಪ್ರಕಾರ ಬ್ರಿಟಿಷರ ಸ್ನೇಹಿತನಾಗಿ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದ. ಆದ್ದರಿಂದ ದೋಸ್ತ್ ಮೊಹಮ್ಮದ್‌ನ ಷರತ್ತು ಒಪ್ಪಿಗೆಯಾಗಲಿಲ್ಲ. ಆದರೂ ಆಕ್ಲಂಡ್ ಸ್ವಲ್ಪ ಚಾತುರ್ಯ ತೋರಿಸಿದ್ದರೆ ಮುಂದೆ ನಡೆದ ಘೋರ ಘಟನೆಗಳಿಗೆ ಅವಕಾಶವಿರುತ್ತಿರಲಿಲ್ಲ.

1838ರಲ್ಲಿ ಲಾರ್ಡ್ ಆಕ್ಲಂಡ್ ರಣಜಿತ್‌ಸಿಂಗ್ ಮತ್ತು ಷಾ ಷೂಜರೊಡನೆ ಒಂದು ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡ. ಅದರ ಪ್ರಕಾರ ಸಿಖ್ಖರ ಮತ್ತು ಬ್ರಿಟಿಷರ ಸೈನ್ಯಗಳ ಸಹಾಯದಿಂದ ಷಾ ಷೂಜನನ್ನು ಕಾಬೂಲಿಗೆ ರಾಜನಾಗಿ ಮಾಡಬೇಕಾಗಿತ್ತು. ಬ್ರಿಟಿಷರ ಸೈನ್ಯ ಫೆರೋಜ್‌ಪುರದಲ್ಲಿ ಗುಂಪು ಗೂಡಿತು. ಪಂಜಾಬಿನ ಮೂಲಕ ಹೋಗಲು ರಣಜಿತ್‌ಸಿಂಗ್ ಅದಕ್ಕೆ ಅನುಮತಿ ಕೊಡಲಿಲ್ಲ. ಆದ್ದರಿಂದ ಸಿಂಧ್ ಮತ್ತು ಬಲೂಚಿಸ್ತಾನದ ಮೂಲಕ ಅದು ಹೋಗಬೇಕಾಯಿತು. ಸಿಂಧ್ ಮೂಲಕ ಹೋಗಿದ್ದು 1832ರಲ್ಲಿ. ಇದರಿಂದ ಸಿಂಧ್‌ನ ಅಮೀರರೊಡನೆ ಮಾಡಿಕೊಂಡ ಕೌಲಿನ ಉಲ್ಲಂಘನೆಯಾಯಿತು. ಬ್ರಿಟಿಷ್ ಸೈನಿಕರು ಖಾಂದಹಾರ್ ಮತ್ತು ಘಜ್ನಿಗಳನ್ನು ಸ್ವಾಧೀನ ಮಾಡಿಕೊಂಡರು. ದೋಸ್ತ್ ಮೊಹಮ್ಮದ್ ಕಾಬೂಲನ್ನು ಬಿಟ್ಟ. ಷಾ ಷೂಜ ಕಾಬೂಲಿಗೆ ಬಂದ. ಅವನ ಬಗ್ಗೆ ಜನ ಯಾವ ಉತ್ಸಾಹವನ್ನೂ ತೋರಿಸಲಿಲ್ಲ. ಅದು ಒಂದು ಪ್ರೇತಯಾತ್ರೆಯ ಮೆರವಣಿಗೆಯ

ಹಾಗೆ ಇತ್ತು. ಏನೂ ತೋಚದೆ ದೋಸ್ತ್ ಮೊಹಮ್ಮದ್ ಬ್ರಿಟಿಷರಿಗೆ ಅಧೀನನಾಗಿ ಕೋಲ್ಕತದಲ್ಲಿ ಖೈದಿಯಾದ. ಈ ಸಂದಿಗ್ಧಸ್ಥಿತಿಯಲ್ಲಿ ಲಾರ್ಡ್ ಆಕ್ಲೆಂಡ್ ಅನೇಕ ತಪ್ಪುಗಳನ್ನು ಮಾಡಿದ. ಕಾಬೂಲಿನಲ್ಲಿ ಬ್ರಿಟಿಷರ ಸೈನ್ಯಕ್ಕೆ ಮುಖ್ಯಸ್ಥನನ್ನಾಗಿ ನಾಟ್‌ನನ್ನು ಮುಖ್ಯ ಸೈನ್ಯಾಧಿಪತಿಯಾಗಿ ನೇಮಿಸಿದ್ದರೂ ಆಕ್ಲೆಂಡ್ ಜನರಲ್ ಎಲ್‌ಫಿನ್‌ಸ್ಟನ್‌ನನ್ನು ನೇಮಿಸಿದ. ಬ್ರಿಟಿಷರು ಷಾ ಷೂಜನ ಇಚ್ಛೆಯಂತೆ ಬಾಲಾ ಹಿಸ್ಸಾರ್ ಎಂಬ ಪ್ರಬಲವಾದ ಕೋಟೆಯನ್ನು ಖಾಲಿ ಮಾಡಬೇಕಾಯಿತು. ಇದರಿಂದ ಬ್ರಿಟಿಷರ ಸೈನ್ಯ ಆಫ್ಘನ್ನರ ಆಕ್ರಮಣಕ್ಕೆ ತುತ್ತಾಯಿತು. ಷಾ ಷೂಜ ತನ್ನ ಸ್ವಂತ ಜನರ ವಿಶ್ವಾಸವನ್ನು ಕಳೆದುಕೊಂಡು, ಬ್ರಿಟಿಷರ ಕೈಗೊಂಬೆಯೆಂಬ ಉಪೇಕ್ಷೆಗೊಳಗಾದ. ಈ ಸಂದರ್ಭದಲ್ಲಿ ಬ್ರಿಟಿಷರ ಸೈನ್ಯವನ್ನೂ ಷಾ ಷೂಜನನ್ನೂ ಹಿಂದಕ್ಕೆ ಕರೆದುಕೊಂಡಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಆದರೆ ಲಾರ್ಡ್ ಆಕ್ಲಂಡ್ ಈ ರೀತಿ ಮಾಡಿದರೆ ತನ್ನ ಗೌರವಕ್ಕೆ ಚ್ಯುತಿ ಎಂದು ಭಾವಿಸಿ ತನ್ನ ಕಾರ್ಯವನ್ನು ಮುಂದುವರಿಸಿದ. ಆಫ್ಘಾನಿಸ್ತಾನದಲ್ಲಿ ಎಲ್ಲೆಲ್ಲೂ ಅಶಾಂತಿ, ಅತೃಪ್ತಿ ಹರಡಿತು.

**ದೊಡ್ಡ ದಂಗೆ (1841) :** ಕಾಬೂಲಿನಲ್ಲಿ ದೊಡ್ಡ ದಂಗೆ ಎದ್ದಿತು. ಕಾನೂನನ್ನು ಉಲ್ಲಂಘಿಸಿ ಬ್ರಿಟಿಷ್ ಅಧಿಕಾರಿಯಾದ ಬರ್ನ್ಸ್‌ನನ್ನು ಕೊಲ್ಲಲಾಯಿತು. ಇಂಥ ಪರಿಸ್ಥಿತಿಯಲ್ಲೂ ಆಫ್ಘಾನಿಸ್ತಾನದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳು ತತ್‌ಕ್ಷಣವೇ ಮಧ್ಯಸ್ತಿಕೆ ವಹಿಸದೆ ಇದ್ದರು. ದೋಸ್ತ್ ಮೊಹಮ್ಮದ್‌ನ ಮಗನಾದ ಮೊಹಮ್ಮದ್ ಅಕ್ಬರ್‌ಖಾನ್ ಆಫ್ಘನ್ನರ ನಾಯಕನಾಗಿದ್ದ. ಬ್ರಿಟಿಷ್ ಅಧಿಕಾರಿಗಳು ಅವನ ಹತ್ತಿರ ಮಾತುಕತೆ ನಡೆಸಲು ಪ್ರಯತ್ನಿಸಿದರು. ಆದರೆ ಯಾವ ಷರತ್ತೂ ಇಲ್ಲದೆ ಬ್ರಿಟಿಷರು ತಮಗೆ ಶರಣಾಗತರಾಗಬೇಕೆಂದು ಆಫ್ಘನ್ನರು ಕೇಳಿದರು. ಬ್ರಿಟಿಷರು ಒಪ್ಪಲಿಲ್ಲ. ಇದರಿಂದ ಸಂಧಿಗ್ಧಸ್ಥಿತಿ ಉಂಟಾಯಿತು. ಬ್ರಿಟಿಷ್ ಅಧಿಕಾರಿ ಮ್ಯಾಕ್‌ನಾಟನ್ ತನ್ನ ವಕ್ರನೀತಿಯಿಂದಾಗಿ ಅಕ್ಬರ್‌ಖಾನ್‌ನೊಡನೆ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ದಂಗೆಕೋರರು ಮ್ಯಾಕ್‌ನಾಟನ್ನನನ್ನು ಕೊಂದು ಹಾಕಿದರು. ಪರಿಣಾಮವಾಗಿ ಆಫ್ಘಾನಿಸ್ತಾನದಲ್ಲಿದ್ದ 16,000 ಬ್ರಿಟಿಷರು ಅಲ್ಲಿಂದ ಹಿಮ್ಮೆಟ್ಟಲು ಸಂಕಲ್ಪಿಸಿದರು. ಸಾಧ್ಯವಾಗದ ಅನೇಕರು ಕೊಲ್ಲಲ್ಪಟ್ಟರು. ಅವರಲ್ಲಿ ಜನರಲ್ ಎಲ್‌ಫಿನ್‌ಸ್ಟನ್ ಕೂಡ ಸೇರಿದ್ದ. ಬ್ರಿಟಿಷ್ ಸೈನಿಕರ ಪೈಕಿ 120 ಜನರನ್ನು ಅಕ್ಬರ್‌ಖಾನ್ ಸೆರೆಹಿಡಿದ. ಡಾಕ್ಟರ್ ಬ್ರೈಡನ್ ಮಾತ್ರ ಜಲಾಲಾಬಾದನ್ನು ಸುರಕ್ಷಿತವಾಗಿ ಸೇರಿದ. ಆಫ್ಘಾನಿಸ್ತಾನದಲ್ಲಿ ನಡೆದ ಈ ವಿಪತ್ತಿನ ಸುದ್ದಿ ಭಾರತ ಮತ್ತು ಇಂಗ್ಲೆಂಡಿನಲ್ಲಿ ಕೋಲಾಹಲ ಎಬ್ಬಿಸಿತು. ಬ್ರಿಟಿಷ್ ಸರ್ಕಾರ ಲಾರ್ಡ್ ಆಕ್ಲಂಡ್‌ನನ್ನು ಹಿಂದಕ್ಕೆ ಕರೆಸಿ ಲಾರ್ಡ್ ಎಲ್ಲೆನ್‌ಬರೋನನ್ನು ಗವರ್ನರ್ ಜನರಲ್‌ನನ್ನಾಗಿ ನೇಮಿಸಿತು (1842). ಈತ ಹಿಂದಿನ ಕರಾರನ್ನು ರದ್ದುಗೊಳಿಸಿ ಸೈನಿಕ ದೃಷ್ಟಿಯಿಂದ ಏನು ಅಗತ್ಯವೊ ಹಾಗೆ ನಡೆದುಕೊಳ್ಳಲು ಸಂಕಲ್ಪಿಸಿದ. ಆದರೆ ಘಜ್ನಿಯಲ್ಲಿ ಪಾಮರ್ ಎಂಬಾತ ಶತ್ರುಗಳಿಗೆ ಶರಣಾಗತನಾದನೆಂಬ ಸುದ್ದಿಯನ್ನು ತಿಳಿದು, ಕಾಬೂಲ್ ಮತ್ತು ಖಾಂದಹಾರ್‌ಗಳಿಂದ ಬ್ರಿಟಿಷರು ಹಿಂದಿರುಗಲು ಆಜ್ಞೆಮಾಡಿದ. ಈ ಆಜ್ಞೆಗೆ ಸೈನ್ಯದ ಉನ್ನತಾಧಿಕಾರಿಗಳು ವಿರುದ್ಧಾಭಿಪ್ರಾಯವನ್ನು ಸೂಚಿಸಿದರು. ಖುರ್ದ್ ಕಾಬೂಲ್ ಕಣಿವೆಯ ಹತ್ತಿರ ಪೊಲಾಕ್ ಅಕ್ಬರ್‌ಖಾನ್‌ನನ್ನು ಸಂಪೂರ್ಣವಾಗಿ ಸೋಲಿಸಿದ. ಆತ ಕಾಬೂಲನ್ನು ಪ್ರವೇಶಿಸಿ ಬಾಲಾಹಿಸ್ಸರ್ ಕೋಟೆಯ ಮೇಲೆ ಬ್ರಿಟಿಷ್ ಧ್ವಜವನ್ನು ಏರಿಸಿದ. ನಾಟ್ಟನೂ ಅವನನ್ನು ಸೇರಿದ. ತಮ್ಮ ಮೇಲೆ ಮಾಡಿದ ಕ್ರೌರ್ಯಗಳ ಸೇಡನ್ನು ತೀರಿಸಿಕೊಳ್ಳಲು ಬ್ರಿಟಿಷರ ಸೈನ್ಯ ಮದ್ದುಗುಂಡಿನಿಂದ ಕಾಬೂಲಿನ ದೊಡ್ಡಪೇಟೆಯನ್ನು ಭಸ್ಮ ಮಾಡಿತು. ಅದಾದ ಮೇಲೆ ಬ್ರಿಟಿಷ್ ಸೈನ್ಯಗಳು ಆಫ್ಘಾನಿಸ್ತಾನವನ್ನು ಬಿಟ್ಟುಬಿಟ್ಟವು. ಲಾರ್ಡ್ ಎಲ್ಲೆನ್‌ಬರೊ ಅಕ್ಟೋಬರ್ 1842ರಲ್ಲಿ ಒಂದು ಬಹಿರಂಗ ಪ್ರಕಟಣೆಯನ್ನು ಹೊರಡಿಸಿದ. ಬ್ರಿಟಿಷ್ ಸರ್ಕಾರ ಆಫ್ಘಾನಿಸ್ತಾನದಲ್ಲಿ ಜನರು ಒಪ್ಪಿದ ಯಾವ ಸರ್ಕಾರವನ್ನೇ ಆಗಲಿ ಮಾನ್ಯ ಮಾಡುವುದಾಗಿಯೂ ಆ ಸರ್ಕಾರ ನೆರೆಹೊರೆಯ ದೇಶಗಳೊಡನೆ ಸ್ನೇಹದಿಂದ ವರ್ತಿಸಬೇಕೆಂದೂ ಹಾಗೆ ಮಾಡಿದ್ದೇ ಆದರೆ ಬ್ರಿಟಿಷ್ ಸರ್ಕಾರ ಶಾಂತಿ ಸ್ಥಾಪನೆಗೆ ಸಹಾಯ ಮಾಡುವುದಾಗಿಯೂ ಈ ಪ್ರಕಟಣೆಯ ಮುಖ್ಯ ಸಾರಾಂಶ. 1843 ರಲ್ಲಿ ದೋಸ್ತ್ ಮೊಹಮ್ಮದ್‌ನನ್ನು ಕೋಲ್ಕತದ ಜೈಲಿನಿಂದ ಬಿಡುಗಡೆ ಮಾಡಿ ಕಾಬೂಲಿಗೆ ಹೋಗಲು ಅನುಮತಿ ಕೊಡಲಾಯಿತು. ಈತ 1863ರವರೆಗೆ ಕಾಬೂಲಿನಲ್ಲಿ ರಾಜ್ಯವಾಳಿದ.

ಒಂದನೆಯ ಆಫ್ಘನ್ ಯುದ್ಧ ಬ್ರಿಟಿಷರಿಗೆ ದೊಡ್ಡ ಅಪಜಯ ತಂದಿತು. ಹೆಚ್ಚು ನಷ್ಟವೂ ಆಯಿತು. 20,000 ಜನ ಕೊಲ್ಲಲ್ಪಟ್ಟರು. 15 ದಶಲಕ್ಷ ಪೌಂಡುಗಳು ಖರ್ಚಾದುವು. ಯುದ್ಧವಾದ ಮೇಲೂ ದೋಸ್ತ್ ಮೊಹಮ್ಮದನೇ ಕಾಬೂಲಿಗೆ ಅಮೀರನಾದ. ಬ್ರಿಟಿಷ್ ಸರ್ಕಾರ ಆಫ್ಘಾನಿಸ್ತಾನದ ಮೇಲೆ ಯಾವ ರೀತಿಯಾದ ಹತೋಟಿಯನ್ನು ಹೊಂದಲೂ ಸಾಧ್ಯವಾಗಲಿಲ್ಲ. ಲಾರ್ಡ್ ಎಲ್ಲೆನ್‌ಬರೊ ಘಜ್ನಿಯಿಂದ ಸೋಮನಾಥ ದೇವಸ್ಥಾನದ ಬಾಗಿಲುಗಳನ್ನು ಹಿಂದಕ್ಕೆ ತಂದದ್ದೇ ದೊಡ್ಡ ಸಾಧನೆ ಎಂದು ಬಡಾಯಿ ಕೊಚ್ಚಿಕೊಂಡ. ಇವು ನಿಜವಾದ ಬಾಗಿಲುಗಳಲ್ಲವೆಂದು ಹಿಂದೂಗಳು ಲಕ್ಷ್ಯಮಾಡದೆ ಇದ್ದರು. ಹಿಂದೂ ದೇಶದ ಮುಸ್ಲಿಮರ ಮನಸ್ಸಿಗೆ ನೋವಾಯಿತು. ಪ್ರಪಂಚದ ಇತಿಹಾಸದಲ್ಲಿ ಇಷ್ಟು ನಷ್ಟಕರವಾದ ಯುದ್ಧ ಇನ್ನು ಯಾವುದೂ ಇಲ್ಲವೆಂದು ಇತಿಹಾಸಕಾರ ಕಾಯೆ ಬರೆದಿದ್ದಾನೆ. ಹೀರಾತ್‌ನಿಂದ ಪರ್ಷಿಯನ್ನರ ಸೈನ್ಯ ಹಿಂದಕ್ಕೆ ಹೋದಮೇಲೆ ಬ್ರಿಟಿಷರು ಆಫ್ಘಾನಿಸ್ತಾನದಲ್ಲಿ ಮಧ್ಯಸ್ಥಿಕೆ ವಹಿಸಲು ಯಾವ ನ್ಯಾಯವೂ ಇರಲಿಲ್ಲ. ದೋಸ್ತ್ ಮಹಮ್ಮದ್ ಸ್ವತಂತ್ರ್ಯ ರಾಜನಾಗಿ ರಷ್ಯ ದೇಶದೊಡನೆ ಒಪ್ಪಂದ ಮಾಡಿಕೊಳ್ಳಲು ಯಾವ ಅಡ್ಡಿಯೂ ಇರಲಿಲ್ಲ. ಆದರೂ ಬ್ರಿಟಿಷರ ಒತ್ತಾಯದಿಂದ ರಷ್ಯನ್ನರ ಪ್ರತಿನಿಧಿಯನ್ನು ಕಾಬೂಲಿನಿಂದ ವಾಪಸ್ಸು ಕಳುಹಿಸಿದ. ದೋಸ್ತ್ ಮಹಮ್ಮದ್ ಷಾಷೂಜನಿಗಿಂತ ಆಡಳಿತದಲ್ಲಿ ಹೆಚ್ಚು ದಕ್ಷತೆ ಮತ್ತು ಸಾಮರ್ಥ್ಯವನ್ನು ಹೊಂದಿದ್ದ. ಲಾರ್ಡ್ ಆಕ್ಲಂಡ್, ಷಾಷೂಜನನ್ನು ಅಮೀರನನ್ನಾಗಿ ಮಾಡಲು ಯತ್ನಿಸಿದ್ದು ದೊಡ್ಡ ತಪ್ಪು. ರಾಜಕೀಯ ಮತ್ತು ಸೈನಿಕ ಉಪಯುಕ್ತತೆಗೆ ವಿರೋಧವಾಗಿ ಈ ಯುದ್ಧ ನಡೆಯಿತೆಂದು ಒಪ್ಪಿಕೊಳ್ಳಬೇಕು.

ಬೌದ್ಧಶಿಲ್ಪ

ದೋಸ್ತ್ ಮೊಹಮ್ಮದ್ 1863 ರವರೆಗೂ ರಾಜ್ಯವಾಳಿದ. ಬ್ರಿಟಿಷರ ಸ್ನೇಹವನ್ನು ಕಾಪಾಡಿಕೊಂಡ, ಆದರೆ ಆತ ಸತ್ತಮೇಲೆ (1863) ಸಿಂಹಾಸನದ ಬಾಧ್ಯಸ್ತಿಕೆಗೆ ಅವನ 56 ಮಕ್ಕಳಲ್ಲಿ ಜಗಳವುಂಟಾಯಿತು. ದೋಸ್ತ್ ಮೊಹಮ್ಮದ್ ತನ್ನ ಮೂರನೆಯ ಮಗ ಷೇರ್ ಅಲಿ ತನ್ನ ಉತ್ತರಾಧಿಕಾರಿಯೆಂದು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿದ್ದ. ಆದರೆ ಷೇರ್ ಆಲಿಯ ಹಿರಿಯ ಸಹೋದರರಾದ ಮಹಮ್ಮದ್ ಅಫಜ಼ಲ್ ಮತ್ತು ಮಹಮ್ಮದ್ ಅಸ್ಸಿಮ್‌ಖಾನ್‌ರು ರಾಜ್ಯಕ್ಕೆ ವಾರಸುದಾರರಾಗಿ ಯುದ್ಧ ಮಾಡಲು ಸಿದ್ಧತೆ ಮಾಡಿಕೊಂಡರು. ವೈಸರಾಯ್ ಲಾರ್ಡ್ ಲಾರೆನ್ಸ್ ಷೇರ್ ಅಲಿಯನ್ನು ಕಾಬೂಲಿನ ರಾಜನಾಗಿ ಮಾನ್ಯ ಮಾಡಿದ್ದರೂ ಆಫ್ಘಾನಿಸ್ತಾನದ ಒಳ ವಿಚಾರಗಳಲ್ಲಿ ಮಧ್ಯಸ್ಥಿಕೆ ವಹಿಸುವುದಿಲ್ಲವೆಂದು ಖಂಡಿತವಾಗಿ ತಿಳಿಸಿದ. ಆಫ್ಘಾನಿಸ್ತಾನದ ವಿಚಾರದಲ್ಲಿ ತಾಟಸ್ಥ್ಯ ನೀತಿಯೇ ಸರಿಯೆಂದೂ ಅದರಿಂದ ಆಫ್ಘನ್ನರ ಪ್ರೀತಿಯನ್ನು ಪಡೆಯಬಹುದೆಂದೂ ಆತ ನಂಬಿದ್ದ. 1868ರಲ್ಲಿ ಷೇರ್ ಅಲಿ ಆಫ್ಘಾನಿಸ್ತಾನದಲ್ಲಿ ಭದ್ರವಾದ ಆಡಳಿತವನ್ನು ಸ್ಥಾಪಿಸಿ ಬ್ರಿಟಿಷರ ಸ್ನೇಹವನ್ನು ಹೊಂದಿದ್ದ. ಲಾರ್ಡ್ ಮೇಯೋ ಮತ್ತು ಲಾರ್ಡ್ ನಾರ್ತ್‌ಬ್ರೂಕರೂ ಲಾರೆನ್ಸ್‌ರ ನೀತಿಯನ್ನೇ ಅನುಸರಿಸಿದರು. ಆದರೆ ಲಾರ್ಡ್ ಲಿಟ್ಟನ್ ತಾಟಸ್ಥ್ಯನೀತಿಯನ್ನು ರದ್ದು ಮಾಡಿದ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಮತ್ತೊಮ್ಮೆ ವಿಪತ್ತನ್ನು ಅನುಭವಿಸಬೇಕಾಯಿತು.

ಷೇರ್‌ಆಲಿಯೊಡನೆ ಕಟ್ಟುನಿಟ್ಟಾದ ವ್ಯಾವಹಾರಿಕ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಲಾರ್ಡ್ ಲಿಟ್ಟನ್ ನಿಶ್ಚಯಿಸಿದ. ಅಮೀರ್‌ನ ಷರತ್ತುಗಳನ್ನು ಒಪ್ಪಿ, ಹೊರಗಿನಿಂದ ಆಕ್ರಮಣ ನಡೆದರೆ ಸಹಾಯ ಮಾಡುವುದಾಗಿ ಲಿಖಿತ ಭರವಸೆಯನ್ನು ಕೊಟ್ಟ. ಆದರೆ ಷೇರ್‌ಆಲಿ ಹೀರಾತ್‌ನಲ್ಲಿ ಬ್ರಿಟಿಷ್ ರೆಸಿಡೆಂಟ್‌ನ ನೇಮಕಕ್ಕೆ ಒಪ್ಪಬೇಕಾಯಿತು. ರಾಣಿ ಭಾರತದ ಚಕ್ರವರ್ತಿನಿ ಎಂಬ ಬಿರುದನ್ನು ಒಪ್ಪಲು ಷೇರ್ ಆಲಿ ಬ್ರಿಟಿಷ್ ನಿಯೋಗ ಮಂಡಳಿಯೊಂದನ್ನು ಆಫ್ಘಾನಿಸ್ತಾನದಲ್ಲಿ ಸ್ವಾಗತಿಸಬೇಕಾಯಿತು. ಷೇರ್‌ಆಲಿ ಇದಕ್ಕೆ ಒಪ್ಪಲಿಲ್ಲ. ಯಾವ ರೀತಿಯಾದ ಭರವಸೆಯನ್ನೂ ಕೊಡಲು ನಿರಾಕರಿಸಿದ. ಬ್ರಿಟಿಷ್ ರೆಸಿಡೆಂಟ್‌ನ ನೇಮಕಕ್ಕೂ ಒಪ್ಪಿಗೆ ಕೊಡಲಿಲ್ಲ. ಇವೇ ಎರಡನೆಯ ಆಫ್ಘನ್ ಯುದ್ಧಕ್ಕೆ ಕಾರಣಗಳು. ರಷ್ಯ ಮತ್ತು ಬ್ರಿಟನ್ ಎಂಬ ಎರಡು ಕಬ್ಬಿಣದ ಮಡಿಕೆಗಳ ಮಧ್ಯೆ ಆಫ್ಘಾನಿಸ್ತಾನ ಒಂದು ಮಣ್ಣಿನ ಸಣ್ಣ ಮಡಿಕೆ ಎಂದು ಲಿಟ್ಟನ್ ತಿಳಿದಿದ್ದ. ಆಫ್ಘಾನಿಸ್ತಾನ ಬಲವಾದ ರಾಷ್ಟ್ರವಾಗದೇ ಇರಲು ಅದನ್ನು ಪ್ರತ್ಯೇಕ ಭಾಗಗಳಾಗಿ ಒಡೆದರೆ ಅನುಕೂಲವೆಂದು ಆತ ಭಾವಿಸಿದ, ಡಿಸ್ರೇಲಿಯ ಸಾಮ್ರಾಜ್ಯಶಾಹಿ ನೀತಿಯನ್ನು ಲಾರ್ಡ್ ಲಿಟ್ಟನ್ ಆಫ್ಘಾನಿಸ್ತಾನದಲ್ಲಿ ಪ್ರಯೋಗಿಸಿದ.

**ಎರಡನೆಯ ಆಫ್ಘಾನ್ ಯುದ್ಧ (1878–80) :** ರಷ್ಯನ್ನರ ಬೆದರಿಕೆಯಿಂದ ಷೇರ್‌ಆಲಿ ರಷ್ಯ ದೇಶದೊಡನೆ ಶಾಶ್ವತವಾದ ಸ್ನೇಹಕ್ಕೆ ಒಪ್ಪಬೇಕಾಯಿತು. ಕಾಬೂಲಿನಲ್ಲಿ ರಷ್ಯನ್ನರ ಮಂಡಳಿ ಬಂದಿದ್ದನ್ನು ತಿಳಿದು ಲಾರ್ಡ್ ಲಿಟನ್ ಬ್ರಿಟಿಷ್ ರಾಯಭಾರಿಯ ನೇಮಕಕ್ಕೆ ಒಪ್ಪಬೇಕೆಂದು ಷೇರ್‌ಆಲಿಗೆ ತಿಳಿಸಿದ. ಷೇರ್‌ಆಲಿ ಒಪ್ಪಲಿಲ್ಲ. ರಷ್ಯನ್ನರ ನಿಯೋಗ ಕಾಬೂಲನ್ನು ಬಿಟ್ಟರೂ ಲಾರ್ಡ್ ಲಿಟನ್ ಬ್ರಿಟಿಷ್ ರೆಸಿಡೆಂಟನ ನೇಮಕಕ್ಕೆ ಒತ್ತಾಯಪಡಿಸಿದ.

ಷೇರ್‌ಅಲಿ ರಷ್ಯದ ಕೈಗೊಂಬೆಯಾಗಲು ಅವಕಾಶಕೊಡಬಾರದೆಂದು ಲಿಟನ್ನನ ಆಶೆ. ಸ್ವತಂತ್ರ ಪ್ರಭುವಾಗಿ ಬ್ರಿಟಿಷ್ ರೆಸಿಡೆಂಟ್‌ನ ನೇಮಕಕ್ಕೆ ಷೇರ್‌ಅಲಿ ಒಪ್ಪದೇ ಇದ್ದದ್ದು ಸರಿ. ಬಲವಂತದಿಂದ ನೇಮಿಸುವುದಕ್ಕೆ ಬ್ರಿಟಿಷ್ ಸರ್ಕಾರಕ್ಕೆ ಯಾವ ಹಕ್ಕೂ ಇರಲಿಲ್ಲ. ಹೀಗಿದ್ದರೂ ಲಿಟ್ಟನ್ ಬಲವಂತದಿಂದ ಬ್ರಿಟಿಷ್ ರಾಯಭಾರಿಯನ್ನು ಹೇರಿದ. ಷೇರ್‌ಅಲಿ ಕಾಬೂಲಿನಲ್ಲಿದ್ದ ರಷ್ಯನ್ನರ ರಾಯಭಾರಿಯ ಸಲಹೆಯನ್ನು ಕೇಳಿದ್ದು ಲಿಟನ್‌ನನ್ನ ಕೆರಳಿಸಿತು. ಲಿಟನ್ ಜನರಲ್ ಸರ್ ನೆವಿಲ್ ಛೇಂಬರ್‌ಲೈನ್‌ನನ್ನು ಪೆಷಾವರ್‌ಗೆ ನಿಯೋಗಿಯಾಗಿ ಕಳುಹಿಸಿದ. ನಿಯೋಗಕ್ಕೆ ಮಸೀದಿಯಿಂದ ಮುಂದಕ್ಕೆ ಹೋಗಲು ಅಲಿ ಅವಕಾಶ ಕೊಡಲಿಲ್ಲ. ಲಿಟ್ಟನ್‌ನಿಗೆ ಕೋಪ ಬಂದು 1878ರ ನವಂಬರ್ ತಿಂಗಳಿನಲ್ಲಿ ಅಂತ್ಯ ನಿರ್ಧಾರ ಕೈಗೊಂಡ. ಅಮೀರ್ ಯಾವ ಷರತ್ತೂ ಇಲ್ಲದೆ ಕ್ಷಮಾಪಣೆ ಕೇಳಬೇಕೆಂದೂ ಮತ್ತು ಕಾಬೂಲ್‌ನಲ್ಲಿ ಬ್ರಿಟಿಷ್ ರಾಯಭಾರಿಯ ನೇಮಕಕ್ಕೆ ಒಪ್ಪಬೇಕೆಂದೂ ತಿಳಿಸಲಾಯಿತು. ಜವಾಬು ಬರದೇ ಇದ್ದುದರಿಂದ ಬ್ರಿಟಿಷ್ ಸೈನ್ಯಗಳು ಅಫ್ಘಾನಿಸ್ತಾನಕ್ಕೆ ನುಗ್ಗಲು ಆಜ್ಞೆ ಮಾಡಲಾಯಿತು. ತನ್ನ ದೇಶದ ಮೇಲೆ ಆಕ್ರಮಣ ಮಾಡಿದ ಬ್ರಿಟಿಷರ ವಿರುದ್ಧ ಸಹಾಯ ಮಾಡಲು ಷೇರ್ ಆಲಿ ರಷ್ಯ ದೇಶಕ್ಕೆ ಮನವಿಮಾಡಿದ. ಆದರೆ ರಷ್ಯ ಯಾವ ಸಹಾಯವನ್ನೂ ಮಾಡದೆ ದ್ರೋಹವನ್ನು ಪ್ರಕಾಶಪಡಿಸಿತು. ಷೇರ್ ಆಲಿ ದಿಕ್ಕಿಲ್ಲದೆ ರಷ್ಯದ ತುರ್ಕಿಸ್ತಾನಕ್ಕೆ ಓಡಿಹೋಗಿ 1879ರ ಫೆಬ್ರವರಿಯಲ್ಲಿ ಸತ್ತುಹೋದ. ಅವನ ಮಗ ಯಾಕೂಬ್ ಖಾನ್ ಬ್ರಿಟಿಷರಿಗೆ ಶರಣಾಗತನಾಗಿ ಗಂಡಮಕ್ (26 ಮೇ 1879) ಒಪ್ಪಂದ ಮಾಡಿಕೊಂಡ. ಯಾಕೂಬ್ ಖಾನ್ ತನ್ನ

ಭಾಗ್-ಎ-ಜಾನ್‌ನೆಮಹ್, ಅಫ್ಘಾನಿಸ್ತಾನ

ವಿದೇಶ ನೀತಿಯನ್ನು ಬ್ರಿಟಿಷ್ ಸರ್ಕಾರದ ಸೂಚನೆಯಂತೆ ರೂಪಿಸುವುದಾಗಿ ಒಪ್ಪಿದ. ಕಾಬೂಲಿನಲ್ಲಿ ಕಾಯಂ ಆಗಿ ಬ್ರಿಟಿಷ್ ರೆಸಿಡೆಂಟ್‌ನನ್ನು ಇಟ್ಟುಕೊಳ್ಳುವುದಕ್ಕೆ ಸಮ್ಮತಿಸಿದ. ಕುರಂ ಕಣಿವೆ ಹಾಗೂ ಮಿಷ್ನಿ ಕಣಿವೆಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಕೊಡಲು ಒಪ್ಪಿದ. ಪ್ರತಿಯಾಗಿ ಬ್ರಿಟಿಷ್ ಸರ್ಕಾರ ಸೈನ್ಯ, ಧನ ಮತ್ತು ಇತರ ಯುದ್ಧ ಸಾಮಗ್ರಿಗಳ ಸಹಾಯವನ್ನು ಮಾಡುವುದಾಗಿಯೂ ಅಮೀರನನ್ನು ಸಿಂಹಾಸನದ ಮೇಲೆ ಸ್ಥಿರವಾಗಿರಿಸಲು ಸಕಲ ಪ್ರಯತ್ನ ಮಾಡುವುದಾಗಿಯೂ ಭರವಸೆ ಕೊಟ್ಟಿತು. ಬ್ರಿಟಿಷರು ತಮ್ಮ ಸೈನ್ಯಪಡೆಗಳನ್ನು ಅಫ್ಘಾನಿಸ್ತಾನದಿಂದ ಹಿಂದಕ್ಕೆ ಕರೆದುಕೊಳ್ಳಲು ಒಪ್ಪಿದರು. ರಾಬರ್ಟ್ಸ್ ಎಂಬ ಇತಿಹಾಸಕಾರನ ಅಭಿಪ್ರಾಯದಂತೆ ಈ ಒಪ್ಪಂದ ಲಿಟ್ಟನ್ನನ ಅಫ್ಘನ್ ನೀತಿಯ ಪರಮಾವಧಿ ಎಂದು ಹೇಳಬಹುದು. ಈ ಒಪ್ಪಂದ ಡಿಸ್ರೇಲಿಯ ದೃಷ್ಟಿಯಲ್ಲಿ ಭಾರತ ಸರ್ಕಾರಕ್ಕೆ ಒಂದು ವೈಜ್ಞಾನಿಕ ಗಡಿಯನ್ನು ಸ್ಥಾಪಿಸಿತು. ಆದರೆ ಈ ಒಪ್ಪಂದ ಕೇವಲ ಕ್ಷಣಿಕವಾದದ್ದು. ಅಫ್ಘನ್ನರು ಕಾಬೂಲಿನಲ್ಲಿ ಬ್ರಿಟಿಷ್ ರೆಸಿಡೆಂಟ್‌ನ ನೇಮಕಕ್ಕೆ ವಿರೋಧ ತೋರಿಸಿದರು. ಬ್ರಿಟಿಷ್ ಸರ್ಕಾರದ ಅಧೀನನಾದ ಯಾಕೂಬ್‌ನನ್ನು ನಿಕೃಷ್ಟವಾಗಿ ಕಂಡರು. ಸ್ಥಿರತೆ, ಶೀಲಗಳಿಲ್ಲದ ಹೊಸನವಾಬನ ನುಣುಚಿಕೊಳ್ಳುವ ಗುಣ ಹೊರಬಿತ್ತು. ಕಾಬೂಲಿಗೆ ಬಂದ ಬ್ರಿಟಿಷ್ ರೆಸಿಡೆಂಡ್ ಕಾವಗ್ನರಿಯನ್ನು ಕೇವಲ ಒಂದೂವರೆ ತಿಂಗಳಲ್ಲಿ 1879ರ ಸೆಪ್ಟೆಂಬರ್ 3 ರಂದು ಅಫ್ಘನ್ ಸೈನಿಕರು ಕೊಂದು ಹಾಕಿದರು. ಈ ಕೊಲೆ ಗಂಡಮಕ್ ಒಪ್ಪಂದಕ್ಕೆ ತಿಲಾಂಜಲಿಯಾಯಿತು. ಬ್ರಿಟಿಷ್ ಸೈನ್ಯಗಳನ್ನು ಅಫ್ಘಾನಿಸ್ತಾನಕ್ಕೆ ತತ್‌ಕ್ಷಣವೇ ರವಾನಿಸಲಾಯಿತು. 1879ರ ಅಕ್ಟೋಬರ್‌ನಲ್ಲಿ ಬ್ರಿಟಿಷರು ಛರಸಿಯಾಬ್ ಕದನದಲ್ಲಿ ಅಫ್ಘನ್ನರನ್ನು ಸೋಲಿಸಿದರು. ಯಾಕೂಬನನ್ನು ಕೈದಿಯಂತೆ ಡೆಹರಾಡೂನ್‌ಗೆ ಕಳುಹಿಸಿದರು. ಬ್ರಿಟಿಷ್ ಸರ್ಕಾರ ಅಫ್ಘಾನಿಸ್ತಾನವನ್ನು ಪ್ರತ್ಯೇಕ ಭಾಗಗಳಾಗಿ ಒಡೆಯಲು ಸಂಕಲ್ಪಿಸಿತು. ಈ ಸಮಯದಲ್ಲಿ ದೋಸ್ತ್ ಮೊಹಮ್ಮದನ ಮೊಮ್ಮಗನಾದ ಅಬ್ದುಲ್ ರಹಮಾನ್ ರಂಗಭೂಮಿಗೆ ಪ್ರವೇಶಿಸಿದ. ಇದುವರೆಗೂ ರಷ್ಯ ಸರ್ಕಾರದ ಆಶ್ರಯದಲ್ಲಿದ್ದ ಅಬ್ದುಲ್ ರಹಮಾನ್ ಅಫ್ಘಾನಿಸ್ತಾನಕ್ಕೆ ಹಿಂತಿರುಗಿ ಬಂದು ತನ್ನ ಅದೃಷ್ಟವನ್ನು ಪರೀಕ್ಷೆ ಮಾಡಿದ. ಕಾಲವಿಳಂಬ ಮಾಡದೆ ಲಿಟ್ಟನ್ ಅಬ್ದುಲ್ ರಹಮಾನ್‌ನನ್ನು ಅಫ್ಘಾನಿಸ್ತಾನದ ಅಮೀರನಾಗಿ ಮಾನ್ಯ ಮಾಡಬೇಕೆಂದಿರುವಾಗ ಇಂಗ್ಲೆಂಡಿನಲ್ಲಿ 1880ರಲ್ಲಿ ಗ್ಲಾಡ್‌ಸ್ಟನ್ ಸರ್ಕಾರ ಆಡಳಿತಕ್ಕೆ ಬಂದಿದ್ದರಿಂದ ಲಿಟ್ಟನ್ ಹಿಂದಕ್ಕೆ ಹೋಗಬೇಕಾಯಿತು. ಅನಂತರ ವೈಸರಾಯಿಯಾಗಿ ಬಂದ ಲಾರ್ಡ್ ರಿಪ್ಪನ್ ಅಬ್ದುಲ್ ರಹಮಾನ್‌ನನ್ನು ಅಫ್ಘಾನಿಸ್ತಾನದ ಅಮೀರನಾಗಿ ಅಂಗೀಕರಿಸಿ ಇಂಗ್ಲೆಂಡ್ ವಿನಾ ಬೇರೆ ದೇಶಗಳೊಡನೆ ಯಾವ ರಾಜಕೀಯ ಸಂಪರ್ಕವನ್ನೂ ಇಟ್ಟುಕೊಳ್ಳಕೂಡದೆಂದೂ ಪಿಷಿನ್ ಮತ್ತು ಸಿಬಿ ಜಿಲ್ಲೆಗಳು ಬ್ರಿಟಿಷ್ ಸರ್ಕಾರದ ಆಡಳಿತದಲ್ಲಿರಬೇಕೆಂದೂ ಷರತ್ತು ಹಾಕಿದ. ಅಮೀರನಿಗೆ ಭಾರತ ಸರ್ಕಾರ ಪ್ರತಿ ವರ್ಷವೂ ಸಹಾಯಧನವನ್ನು ಕೊಡಲು ಒಪ್ಪಿತು. ಅಫ್ಘಾನಿಸ್ತಾನದ ವಿದೇಶ ನೀತಿ ಬ್ರಿಟಿಷರ ಅಧೀನದಲ್ಲಿದ್ದುದರಿಂದ ಕಾಬೂಲ್‌ನಲ್ಲಿ ಬ್ರಿಟಿಷ್ ರೆಸಿಡೆಂಟ್‌ನ ನೇಮಕದ ಆವಶ್ಯಕತೆ ಇರಲಿಲ್ಲ. ಈ ತೀರ್ಮಾನ ಬಹುಕಾಲದವರೆಗೂ ಆಚರಣೆಯಲ್ಲಿತ್ತು. ಅಬ್ದುಲ್ ರಹಮಾನ್ ಅಮೀರನಾಗಿರುವವರೆಗೂ ಬ್ರಿಟಿಷ್ ಸರ್ಕಾರ ಅಫ್ಘಾನಿಸ್ತಾನದೊಡನೆ ವಿರಸವಿಲ್ಲದ ಸಂಬಂಧವನ್ನು ಹೊಂದಿತ್ತು. ಅಯೂಬ್ ಖಾನ್, ಅಬ್ದುಲ್ ರಹಮಾನ್‌ನ ಅಧಿಕಾರವನ್ನು ಆಕ್ಷೇಪಿಸಲು ಮೈವಾಂಡ ಮತ್ತು ಕಾಂದಹಾರ್‌ಗಳಲ್ಲಿ ಅವನನ್ನು ಸೋಲಿಸಲಾಯಿತು. ಲಾರ್ಡ್ ರಿಪನ್ ಅಫ್ಘಾನಿಸ್ತಾನದಿಂದ ಬ್ರಿಟಿಷ್ ಸೈನ್ಯಪಡೆಗಳನ್ನು ಹಿಂದಕ್ಕೆ ಕರೆಸಿಕೊಂಡ. ಎರಡನೆಯ ಅಫ್ಘನ್ ಯುದ್ಧ ಬ್ರಿಟಿಷರಿಗೆ ದೊಡ್ಡ ಅನರ್ಥವಾಗಿ ಪರಿಣಮಿಸಿತು. ಲಾರ್ಡ್ ಲಿಟ್ಟನ್ ಆಕ್ರಮಣ ನೀತಿಯನ್ನು ಅನುಸರಿಸಿದನೆಂದೂ ಮೊದಲನೆಯ ಅಫ್ಘನ್ ಯುದ್ಧದಿಂದ ಪಾಠ ಕಲಿಯಲಿಲ್ಲವೆಂದೂ ಖಂಡಿಸುವವರಿದ್ದಾರೆ. ಆದರೂ ಈ ಯುದ್ಧದ ಪರಿಣಾಮವಾಗಿ ರಷ್ಯದ ಪರ ಇದ್ದ ಷೇರ್ ಅಲಿಯನ್ನು ತೆಗೆದುಹಾಕಿ ಬ್ರಿಟಿಷ್ ಸರ್ಕಾರದೊಡನೆ ಸ್ನೇಹ ಸೂಚಿಸಿದ ಅಬ್ದುಲ್ ರಹಮಾನ್‌ನನ್ನು ಅಮೀರನನ್ನಾಗಿ ಮಾಡಿದ್ದು ಒಂದು ದೊಡ್ಡ ಸಾಧನೆಯೆಂದು ಹೇಳಬೇಕು. ಕಾಬೂಲಿನಲ್ಲಿ ರಷ್ಯನ್ನರ ಪ್ರಭಾವವನ್ನು ತಡೆಗಟ್ಟಲಾಯಿತು. ಬ್ರಿಟಿಷ್ ಸರ್ಕಾರದ ಹತೋಟಿಯಲ್ಲಿದ್ದ ಬಲೂಚಿಸ್ತಾನ ಪ್ರಾಂತ್ಯವಾಯಿತು. ಕ್ವೆಟ್ಟವೂ ಬ್ರಿಟಿಷರ ಹತೋಟಿಗೆ ಬಂತು.

1884ರಲ್ಲಿ ರಷ್ಯನ್ನರು ಮೆರ್ವ್‌ಅನ್ನು ಆಕ್ರಮಿಸಿದರು. ಇದು ಬ್ರಿಟಿಷ್ ಸರ್ಕಾರಕ್ಕೆ ಕಳವಳವನ್ನುಂಟುಮಾಡಿತು. 1885ರ ಮಾರ್ಚಿನಲ್ಲಿ ಪ್ರಸಿದ್ಧ ಪಂಜದೇ ಘಟನೆ ನಡೆಯಿತು. ಬ್ರಿಟಿಷ್ ಸರ್ಕಾರದ ಪ್ರತಿಭಟನೆಯನ್ನು ನಿರ್ಲಕ್ಷಿಸಿದ ರಷ್ಯನ್ನರು ಮೆರ್ವ್‌ನ ದಕ್ಷಿಣಕ್ಕೆ 761 ಕಿ.ಮೀ. ದೂರದ ಒರಿಜದೇ ಎಂಬ ಸ್ಥಳವನ್ನು ಆಕ್ರಮಿಸಿದರು. ಈ ಸ್ಥಳದಲ್ಲಿ ರಷ್ಯ ಮತ್ತು ಅಫ್ಘನ್ ಸೈನಿಕರಿಗೆ ಹೋರಾಟನಡೆದು ಪರಿಸ್ಥಿತಿ ಅಪಾಯಕಾರವಾಗಿ ಕಂಡುಬಂತು. ಆದರೆ ವೈಸರಾಯ್ ಲಾರ್ಡ್ ಡಫರಿನ್ನನ ಪ್ರಯತ್ನದಿಂದಲೂ ಅಬ್ದುಲ್ ರಹಮಾನ್ ತೋರಿಸಿದ ಆತ್ಮಸಂಯಮದಿಂದಲೂ ವಿಷಮಸ್ಥಿತಿಗೆ ಅವಕಾಶವಾಗಲಿಲ್ಲ. ಅಬ್ದುಲ್ ರಹಮಾನ್ ಈ ಘಟನೆಯನ್ನು ಉಪೇಕ್ಷಿಸಿದ. ಕೊನೆಗೆ ಪಂಜದೇ ತನಗೆ ಸೇರಿದ್ದೇ ಎಂದು ಸಂಶಯಪಟ್ಟ. ಯುದ್ಧದ ಬೆದರಿಕೆ ಮಾಯವಾಯಿತು. ಅಲ್ಲದೆ ರಷ್ಯ ಜುಲ್ಫಿಕರ್ ಕಣಿವೆಯನ್ನು ಅಫ್ಘಾನಿಸ್ತಾನಕ್ಕೆ ಬಿಟ್ಟುಕೊಟ್ಟಿತು. ಆಕ್ಸಸ್ (ಆಮಾ ದಾರ್ಯ) ನದಿಯನ್ನು ರಷ್ಯದ ದಕ್ಷಿಣದ ಗಡಿಯಾಗಿ  ಅಂಗೀಕರಿಸಲಾಯಿತು. ಲಾರ್ಡ್ ಡಫರಿನ್ನನ ಚಾತುರ್ಯ ಮತ್ತು ವಾತ್ಸಲ್ಯದಿಂದ ಈ ಸಮಸ್ಯೆ ಶಾಂತರೀತಿಯಾಗಿ ಕೊನೆಗೊಂಡಿತು. ಅಫ್ಘಾನಿಸ್ತಾನ ಎರಡು ಬೀಸುವ ಕಲ್ಲಿನಮಧ್ಯೆ ಸಿಕ್ಕಿಕೊಂಡು ಪುಡಿಯಾಗಿದೆ. ದೇವರ ರಕ್ಷಣೆಯಿಲ್ಲದಿದ್ದರೆ ದೇಶ ಸಿಂಹ ಮತ್ತು ಕರಡಿಗಳ ವಕ್ರದೃಷ್ಟಿಗೆ ಬಿದ್ದಿರುವ ಬಡ ಮೇಕೆಯಂತೆ ಯಾವಾಗಲೋ ಆಹುತಿ ಆಗುತ್ತಿತ್ತು. ಇದು ಅಬ್ದುಲ್ ರಹಮಾನ್ ಸಂಕಟದಿಂದ ನುಡಿದ ಮಾತು.

1901ರ ಅಕ್ಟೋಬರ್‌ನಲ್ಲಿ ಅಬ್ದುಲ್ ರಹಮಾನ್ ಸತ್ತ. ಅನಂತರ ಅವನ ಮಗ ಹಬೀಬ್‌ಉಲ್ಲ ಸಿಂಹಾಸನಕ್ಕೆ ಬಂದ. ಸ್ವಲ್ಪಕಾಲ ಹೊಸ ಅಮೀರ ಭಾರತ ಸರ್ಕಾರದೊಡನೆ ಸ್ನೇಹ ತೋರಿಸಲಿಲ್ಲ. 1905ರಲ್ಲಿ ಈ ಮನಸ್ತಾಪದ ಬದಲು ಮತ್ತೊಮ್ಮೆ ಸ್ನೇಹ ಉಂಟಾಗಿ ಅಮೀರ್ ಬ್ರಿಟಿಷರಿಂದ ಧನಸಹಾಯ ಪಡೆದ. ಆದರೂ ಅಮೀರ ರಷ್ಯದ ಪರ ಎಂದು ಸಂಶಯಪಡಲಾಯಿತು. 1907ರ ಬ್ರಿಟನ್-ರಷ್ಯ ಒಪ್ಪಂದದ ಅನ್ವಯ ಅಫ್ಘಾನಿಸ್ತಾನ ತನ್ನ ಪ್ರಭಾವಕ್ಕೆ ಒಳಗಾಗಿಲ್ಲವೆಂಬುದನ್ನು ರಷ್ಯ ಒಪ್ಪಿಕೊಂಡಿತು. ಇನ್ನು ಮುಂದೆ ರಷ್ಯ ಅಫ್ಘಾನಿಸ್ತಾನದ ವಿಷಯದಲ್ಲಿ ಭಾರತ ಸರ್ಕಾರದ ಸಲಹೆಯನ್ನು ಪಡೆಯಲು ಸಮ್ಮತಿಸಿತು. ಆದರೆ ಅಮೀರ ಮೇಲಿನ ಒಪ್ಪಂದವನ್ನು ಅನುಮೋದಿಸಲಿಲ್ಲ. 1919ರಲ್ಲಿ ಹಬೀಬ್‌ಉಲ್ಲ ಕೊಲ್ಲಲ್ಪಟ್ಟ. ಪ್ರಜೆಗಳು ಅವನ ಪಾಶ್ಚಾತ್ಯ ರೀತಿಯ ಸುಧಾರಣೆಗಳನ್ನು ವಿರೋಧಿಸಿದರು. ಹಬೀಬ್‌ಉಲ್ಲನ ಮಗನಾದ ಅಮಾನುಲ್ಲ ಬ್ರಿಟಿಷ್ ಸರ್ಕಾರಕ್ಕೆ ವಿರೋಧ ವ್ಯಕ್ತಪಡಿಸಿದ. ಇದೇ ಮೂರನೆಯ ಅಫ್ಘನ್ ಯುದ್ಧಕ್ಕೆ ಕಾರಣವಾಯಿತು. ರಷ್ಯನ್ನರ ಪ್ರೇರಣೆಯಿಂದ ಅಮಾನುಲ್ಲ ತನ್ನ ಸ್ವಾತಂತ್ರ್ಯವನ್ನು ಘೋಷಿಸಿ ಭಾರತದ ಗಡಿಯಮೇಲೆ ಆಕ್ರಮಣ ಮಾಡಿದ. ಕೊನೆಗೆ 1919ರಲ್ಲಿ ರಾವಲ್ಪಿಂಡಿ ಒಪ್ಪಂದವಾಯಿತು. ಅದರಂತೆ ಬ್ರಿಟಿಷ್ ಸರ್ಕಾರ ಅಫ್ಘಾನಿಸ್ತಾನದ  ಸ್ವಾತಂತ್ರ್ಯವನ್ನು ಮಾನ್ಯ ಮಾಡಿತು. ಈಗ ಅಫ್ಘಾನಿಸ್ತಾನ ತನ್ನ ವಿದೇಶ ನೀತಿಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಸ್ವಾತಂತ್ರ್ಯ ಪಡೆದ ಅನಂತರ ಅಮಾನುಲ್ಲಖಾನ್ ದೇಶವನ್ನು ಆಧುನೀಕರಿಸುವ ಉದ್ದೇಶದಿಂದ ಪಾಶ್ಚಾತ್ಯ ಮಾದರಿಯ ಸುಧಾರಣೆಗಳನ್ನು ಜಾರಿಗೆ ತರಲಾರಂಭಿಸಿದ. 1923ರಲ್ಲಿ ದೇಶದ ಪ್ರಥಮ

ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. 1926ರಲ್ಲಿ ಅವನು ತನ್ನನ್ನು ರಾಜನೆಂದು ಘೋಷಿಸಿಕೊಂಡ. ಆದರೆ ಸುಧಾರಣೆ ವಿರೋಧಿಗಳಾದ ಧಾರ್ಮಿಕ ಹಾಗೂ ಬುಡಕಟ್ಟುಗಳ ಮುಖಂಡರು ಅವನನ್ನು 1929ರಲ್ಲಿ ಪದಚ್ಯುತಗೊಳಿಸಿದರು. ಕೆಲಕಾಲದ ಅರಾಜಕತೆಯ ಅನಂತರ ಮೊಹಮ್ಮದ್ ನಾದಿರ್ ಖಾನ್‌ನನ್ನು ರಾಜನಾಗಿ ಆಯ್ಕೆಮಾಡಲಾಯಿತು (1929). ನೂತನ ದೊರೆ ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಿದ ಅನಂತರ ಆಂತರಿಕ ಸುಧಾರಣೆಗಳನ್ನು ಜಾರಿಗೊಳಿಸಲು ಮುಂದಾದನು. 1931ರಲ್ಲಿ ಒಂದು ನೂತನ ಸಂವಿಧಾನ ಜಾರಿಗೆ ತರಲಾಯಿತು. ಶಾಲಾಕಾಲೇಜುಗಳನ್ನು ಸ್ಥಾಪಿಸಿದ. ಆದರೆ ಈ ಪ್ರಯೋಗ ಪೂರ್ಣಗೊಳ್ಳುವ ಮೊದಲೇ 1933ರಲ್ಲಿ ಅವನ ಹತ್ಯೆಯಾಯಿತು. ಅನಂತರ ಅವನ ಮಗ ಮೊಹಮ್ಮದ್ ಜಹೀರ್ ಷಾ ಅರಸನಾದ.

**ಆಧುನಿಕ ಆಫ್ಘಾನಿಸ್ತಾನ–ರಷ್ಯದ ಆಕ್ರಮಣ :** ಜಹೀರ್ ಷಾ 1973ರವರೆಗೂ ಸುದೀರ್ಘ ಕಾಲ ಆಡಳಿತ ನಡೆಸಿದನು. ಅವನು ಆಫ್ಘಾನಿಸ್ತಾನದ ಕೊನೆಯ ಅರಸ. 1973ರಲ್ಲಿ ಮೊಹಮ್ಮದ್ ದಾವೂದ್ ಖಾನ್ ನೇತೃತ್ವದಲ್ಲಿ ಸೈನಿಕ ದಂಗೆ ನಡೆದು ಜಹೀರ್ ಖಾನ್ ಪದಚ್ಯುತನಾದ. ದಾವೂದ್ ಅಧ್ಯಕ್ಷ ಮತ್ತು ಪ್ರಧಾನಿಯಾದ. ಆಫ್ಘಾನಿಸ್ತಾನ ಗಣರಾಜ್ಯವಾಯಿತು. ಆದರೆ 1978ರಲ್ಲಿ ಸೋವಿಯತ್ ರಷ್ಯದ ಬೆಂಬಲ ಪಡೆದ ಎಡಪಂಥೀಯ ಸೇನಾನಾಯಕರು ದಂಗೆ ನಡೆಸಿ ದಾವೂದನನ್ನು ಹತ್ಯೆಮಾಡಿದರು ಮತ್ತು ಸರ್ಕಾರವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.ಆಫ್ಘಾನಿಸ್ತಾನದ ಜನರು ರಷ್ಯದ ಪ್ರಭಾವವನ್ನು ವಿರೋಧಿಸಿದರು. ಅದರ ಫಲವಾಗಿ ಸರ್ಕಾರಿ ಪಡೆಗಳು ಹಾಗೂ ಮುಜಾಹಿದ್ದೀನ್ ಎಂದು ಕರೆಯಲ್ಪಟ್ಟ ದಂಗೆಕೋರರ ನಡುವೆ ತೀವ್ರ ಘರ್ಷಣೆ ಆರಂಭವಾಯಿತು. ಈ ಸನ್ನಿವೇಶದಲ್ಲಿ 1979ರ ಕೊನೆಯ ಭಾಗದ ಸೋವಿಯೆತ್ ರಷ್ಯದ ಪಡೆಗಳು ಆಫ್ಘಾನಿಸ್ತಾನದ ಮೇಲೆ ಧಾಳಿ ನಡೆಸಿದವು. ದಂಗೆಕೋರರನ್ನು ಹತ್ತಿಕ್ಕಲು ಸರ್ಕಾರಿ ಪಡೆಗಳಿಗೆ ರಷ್ಯದ ಸೈನ್ಯ ನೆರವಾಯಿತು. ಹಲವಾರು ಗ್ರಾಮಗಳ ಮೇಲೆ ಬಾಂಬ್ ಹಾಕಲಾಯಿತು. ಮೂರು ದಶಲಕ್ಷ ಆಫ್ಘಾನರು ನೆರೆಯ ಪಾಕಿಸ್ತಾನಕ್ಕೆ ವಲಸೆ ಹೋದರು. ಹಲವರು ಇರಾನಿಗೆ ತೆರಳಿದರು. ಆದರೂ ರಷ್ಯಕ್ಕೆ ಆಫ್ಘಾನ್ ಮುಜಾಹಿದ್ದೀನರನ್ನು ಹತ್ತಿಕ್ಕುವುದು ಸಾಧ್ಯವಾಗಲಿಲ್ಲ. ಹತ್ತು ವರ್ಷಗಳ ಅನಂತರ ರಷ್ಯ ಆಫ್ಘಾನಿಸ್ತಾನದಿಂದ ತನ್ನ ಪಡೆಗಳನ್ನು 1989ರಲ್ಲಿ ಹಿಂತೆಗೆದುಕೊಂಡಿತು. ಆ ನಂತರವೂ ಸರ್ಕಾರಿ ಪಡೆಗಳು ಹಾಗೂ ಮುಜಾಹಿದ್ದೀನ್ ನಡುವೆ ಹೋರಾಟ ಮುಂದುವರಿದು 1992ರಲ್ಲಿ ಮುಜಾಹಿದ್ದೀನ್ ದಂಗೆಕೋರರು ತಾತ್ಕಾಲಿಕ ಸರ್ಕಾರ ಸ್ಥಾಪಿಸಿದರು. ಆದರೆ 1996ರಲ್ಲಿ ತಾಲಿಬಾನ್ ಎಂಬ ಹೆಸರಿನ ಮುಸ್ಲಿಂ ಮೂಲಭೂತವಾದಿಗಳು ಸರ್ಕಾರವನ್ನು ವಶಪಡಿಸಿಕೊಂಡರು. ಒಂದು ಕಣ್ಣಿನ ಮುಲ್ಲಾ ಒಮರ್ ಸರ್ಕಾರದ ಮುಖ್ಯಸ್ಥನಾದ.

**ತಾಲಿಬಾನ್ ಪತನ :** 1996 ರಿಂದ 2001ರವರೆಗೆ ತಾಲಿಬಾನ್ ಸರ್ಕಾರ ಆಡಳಿತ ನಡೆಸಿತು. ಈ ಅವಧಿಯಲ್ಲಿ ಪಷ್ತೂನರು ಅಥವಾ ಪಠಾಣರು ಇತರ ಅಲ್ಪಸಂಖ್ಯಾತ ಗುಂಪುಗಳ ಮೇಲೆ ನಿಯಂತ್ರಣ ಸ್ಥಾಪಿಸಿದರು. ಷಿಯ ಮುಸಲ್ಮಾನರು ಹೆಚ್ಚು ತೊಂದರೆ ಅನುಭವಿಸಿದರು ಮುಸ್ಲಿಮೇತರರ ಮೇಲೂ ದೌರ್ಜನ್ಯ ನಡೆಯಿತು. ನೆರೆ ರಾಷ್ಟ್ರಗಳಲ್ಲೂ ಭಯೋತ್ಪಾದಕ ಚಟುವಟಿಕೆಗಳಿಗೆ ತಾಲಿಬಾನ್ ಸರ್ಕಾರ ನೆರವು ನೀಡಿತು. ಅಂತಾರಾಷ್ಟ್ರೀಯ ಭಯೋತ್ಪಾದಕ ಒಸಾಮ ಬಿನ್ ಲಾಡನ್ ಆಫ್ಘಾನಿಸ್ತಾನದಲ್ಲಿ ಆಶ್ರಯ ಪಡೆದ. ಅಮೆರಿಕನ್ ಸೈನ್ಯ ಒಸಾಮ ಬಿನ್ ಲಾಡರ್ನನ್ನು 2011 ಮೇ 1 ರಂದು ಕೊಂದು ಹಾಕಿತು. 2001 ಸೆಪ್ಟೆಂಬರ್ 11 ರಂದು ಅಮೆರಿಕದ ನ್ಯೂಯಾರ್ಕ್ ನಗರದ ವಿಶ್ವವಾಣಿಜ್ಯ ಸಂಕೀರ್ಣವನ್ನು ಉಗ್ರರು ನಾಶಪಡಿಸಿದ್ದರ ಹಿನ್ನೆಲೆಯಲ್ಲಿ ಅಮೆರಿಕ ಹಾಗೂ ಅದರ ಮಿತ್ರದೇಶಗಳು ಆಫ್ಘಾನಿಸ್ತಾನದ ಮೇಲೆ ಧಾಳಿ ಮಾಡಿದವು. ತಾಲಿಬಾನ್ ಸರ್ಕಾರ ಪತನಗೊಂಡು ಪಷ್ತೂನಿಗಳ ಜನಪ್ರಿಯ ನಾಯಕ ಹಮೀದ್ ಕರ್ಜಾಯ್ ನೇತೃತ್ವದಲ್ಲಿ ನೂತನ ಸರ್ಕಾರ ರಚನೆಯಾಯಿತು (ಡಿಸೆಂಬರ್ 2001). ಅಂತಾರಾಷ್ಟ್ರೀಯ ಸೇನಾಪಡೆಯನ್ನು ಕಾಬೂಲ್‌ನಲ್ಲಿ ನೆಲೆಗೊಳಿಸಲಾಗಿದೆ. 2004ರ ಪ್ರಾರಂಭದಲ್ಲಿ ಆಫ್ಘಾನಿಸ್ತಾನ ಒಂದು ಹೊಸ ಸಂವಿಧಾನವನ್ನು ಅಳವಡಿಸಿಕೊಂಡಿತು. ಅದರ ಪ್ರಕಾರ ಅಧ್ಯಕ್ಷೀಯ ಮಾದರಿಯ ಸರ್ಕಾರ ರಚನೆಯಾಗಿ: ದ್ವಿಸದನ ಶಾಸಕಾಂಗ ಮತ್ತು ಸ್ವತಂತ್ರ ನ್ಯಾಯಾಂಗಕ್ಕೆ ಅವಕಾಶ ಕಲ್ಪಿಸಲಾಗಿದೆ. ಇಸ್ಲಾಂ ಅಧಿಕೃತ ಧರ್ಮವೆಂದು ಘೋಷಿಸಲ್ಪಟ್ಟಿದೆ. ಮಹಿಳೆಯರಿಗೂ ಪುರುಷರಿಗೂ ಸಮಾನವಾದ ಹಕ್ಕುಗಳನ್ನು ನೀಡಲಾಗಿದೆ. ಪ್ರಸ್ತುತ ಹಮೀದ್ ಕರ್ಜಾಯ್ ಆಫ್ಘಾನಿಸ್ತಾನದ ಅಧ್ಯಕ್ಷರಾಗಿದ್ದಾರೆ. ಭಾರತ ಈ ದೇಶದೊಂದಿಗೆ ಉತ್ತಮ ಸಂಬಂಧ ಸ್ಥಾಪಿಸಿಕೊಂಡಿದೆ ಹಾಗೂ ಅದರ ಅಭಿವೃದ್ಧಿಗೆ ಆರ್ಥಿಕ ನೆರವು ನೀಡುತ್ತಿದೆ. ಆಫ್ಘಾನಿಸ್ತಾನದಲ್ಲಿ ಈಗ ಒಟ್ಟು 34 ಪ್ರಾಂತ್ಯಗಳಿವೆ.

(ಬಿ.ಪಿ.)

**ಆಫ್ರಿಕ ಖಂಡ :** ಪೂರ್ವಾರ್ಧಗೋಳದಲ್ಲಿನ ಒಂದು ಖಂಡ. ವಿಸ್ತೀರ್ಣದಲ್ಲಿ ಏಷ್ಯ ಖಂಡಕ್ಕೆ ಎರಡನೆಯದು. ಭೂವಿಜ್ಞಾನದ ಪ್ರಕಾರ ಇದು ಬೃಹದಾಕಾರದ ಯೂರೇಷಿಯ ಭೂಭಾಗದ ಒಂದು ವಿಸ್ತರಣಾಭಾಗವಾಗಿತ್ತು. ಇಂದು ಜಿಬ್ರಾಲ್ಟರ್ ಜಲಸಂಧಿ ಮತ್ತು ಸೂಯೆಜ್ ಕಾಲುವೆಗಳಿಂದಾಗಿ ಯುರೋಪ್ ಮತ್ತು ಏಷ್ಯಾಖಂಡಗಳಿಂದ ಕ್ರಮವಾಗಿ ಪ್ರತ್ಯೇಕಿಸಲ್ಪಟ್ಟಿದೆ. ಅಂಕುಡೊಂಕಾದ ಪರ್ವತಶ್ರೇಣಿಗಳು, ಭವ್ಯ ಜಲಪಾತಗಳು, ದಟ್ಟವಾದ ಉಷ್ಣವಲಯದ ಕಾಡುಗಳಿಂದಾಗಿ ಕೆಲಭಾಗಗಳನ್ನು ಹೊರತುಪಡಿಸಿ ಇಲ್ಲಿನ ನೆಲ ರಮ್ಯವಾಗಿದೆ. ಕಾಡು ಮತ್ತು ಹುಲ್ಲುಗಾವಲುಗಳಲ್ಲಿ ಈ ಪ್ರದೇಶಕ್ಕೆ ವಿಶಿಷ್ಟವಾದ ಜಿರಾಫೆ, ಓಕಾಪಿ, ಆರ್ಡ್‌ವಾರ್ಕ್, ಹಿಪ್ಪೊ ಮೊದಲಾದ ಪ್ರಾಣಿಗಳು ವಾಸಿಸುತ್ತವೆ. ಕಾಂಗೊ ಪ್ರದೇಶದ ಪಿಗ್ಮಿಗಳು, ಕಲಹರಿ ಮರುಭೂಮಿಯ ಬುಷ್‌ಮನ್ ಶಿಲಾಯುಗದೊಂದಿಗಿನ ಸಂಬಂಧಕ್ಕೆ ಜೀವಂತ ಸಾಕ್ಷಿಗಳಾಗಿದ್ದಾರೆ. ಈಜಿಪ್ಷನವರು ನಿರ್ಮಿಸಿದ ಪುರಾತನ ಪಿರಮಿಡ್ಡುಗಳು ಮತ್ತು ದೇವಾಲಯಗಳು ಪ್ರಾಚೀನ ನಾಗರಿಕತೆಯ ಮೂಕಸಾಕ್ಷಿಗಳಾಗಿವೆ. ಹಿಂದಿನಿಂದಲೂ ಉತ್ತರ ಆಫ್ರಿಕಕ್ಕೂ ಏಷ್ಯ ಯುರೋಪುಗಳಿಗೂ ಸಂಬಂಧವಿದ್ದಿತು. ಮಧ್ಯ ಮತ್ತು ದಕ್ಷಿಣ ಆಫ್ರಿಕಗಳು 19ನೆಯ ಶತಮಾನದವರೆಗೂ ಅಂಥ ಸಂಪರ್ಕಗಳಿಂದ ದೂರ ಉಳಿದುವು. ಅಂಟುಜಾಡ್ಯಗಳಿಗೆ ಯುಕ್ತ ಮದ್ದು ಬಳಕೆಗೆ ಬಂದಮೇಲೆ ಖಂಡಾನ್ವೇಷಣೆ ಬಿರುಸಿನಿಂದ ನಡೆದು ಇಲ್ಲಿನ ಪ್ರಾಕೃತಿಕ ಸಂಪನ್ಮೂಲಗಳ ಅನ್ವೇಷಣೆಯ ಉದ್ದೇಶದಿಂದ ಬಂದ ಯುರೋಪಿಯನ್ನರ ದಾಳಿಗೆ ಆಫ್ರಿಕ ತುತ್ತಾಯಿತು. ಫ್ರಾನ್ಸ್ ಬಹಳಕಾಲ ಖಂಡದ ಬಹುಭಾಗವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿತ್ತು. ಆರ್ಥಿಕವಾಗಿ ಲಾಭದಾಯಕವಾದ ಭಾಗಗಳು ಬ್ರಿಟನ್ನಿನ ವಶದಲ್ಲಿದ್ದುವು. ಉಳಿದ ಭಾಗಗಳು ಬೆಲ್ಜಿಯಂ, ಪೋರ್ಚುಗಲ್ ಮತ್ತು ಸ್ಪೇನಿನ ವಶದಲ್ಲಿದ್ದುವು.

ಆಫ್ರಿಕದ ಸಾಮಾನ್ಯ ಭೌಗೋಳಿಕ ಪರಿಚಯ ಈ ಲೇಖನದಲ್ಲಿದೆ. ಉಳಿದ ಎಲ್ಲ ವಿಷಯಗಳಿಗೂ ಈ ಲೇಖನಗಳನ್ನು **ನೋಡಿ– ಆಫ್ರಿಕದ ಭಾಷೆಗಳು, ಆಫ್ರಿಕದ ಧರ್ಮ; ಆಫ್ರಿಕದ ನೀಗ್ರೊ ಸಂಗೀತ; ಆಫ್ರಿಕದ ಕಲೆ; ಆಫ್ರಿಕದ ಜನಾಂಗಗಳು; ಆಫ್ರಿಕದ ಪ್ರಾಕ್ತನ–ಚರಿತ್ರೆ; ಆಫ್ರಿಕದ ಭೂ–ಇತಿಹಾಸ; ಆಫ್ರಿಕದ ರಾಜಕೀಯ ಚರಿತ್ರೆ;**

**ಸನ್ನಿವೇಶ ಮತ್ತು ವಿಸ್ತೀರ್ಣ :** ಉತ್ತರ ಅಕ್ಷಾಂಶ $37^0$ ಮತ್ತು ದಕ್ಷಿಣ ಅಕ್ಷಾಂಶ $35^0$ ಹಾಗೂ ಪೂರ್ವರೇಖಾಂಶ $51^0$ ಮತ್ತು ಪಶ್ಚಿಮ ರೇಖಾಂಶ $20^0$ ಗಳ ನಡುವೆ ವಿಸ್ತರಿಸಿರುವ ಖಂಡ. ಸಮಭಾಜಕ ವೃತ್ತ ಈ ಖಂಡದ ಮಧ್ಯಭಾಗದಲ್ಲಿ ಹಾದುಹೋಗಿದ್ದು ಖಂಡವನ್ನು ಸುಮಾರು ಸಮವಾದ ಎರಡು ಭಾಗಗಳನ್ನಾಗಿ ಮಾಡಿದೆ. ಕರ್ಕಾಟಕಸಂಕ್ರಾಂತಿ ವೃತ್ತ ಮತ್ತು ಮಕರಸಂಕ್ರಾಂತಿ ವೃತ್ತಗಳು ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಕ್ರಮವಾಗಿ ಹಾದುಹೋಗಿರುವುದರಿಂದ ಈ ಖಂಡವನ್ನು ಉಷ್ಣವಲಯದ ಖಂಡವೆಂದೇ ಹೇಳಬಹುದು. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವೂ ಪೂರ್ವದಲ್ಲಿ ಹಿಂದೂ ಮಹಾಸಾಗರವೂ ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರವೂ ಇದನ್ನು ಆವರಿಸಿದೆಯಾಗಿ ಇಡೀ ಖಂಡವೇ ಒಂದು ದ್ವೀಪದಂತಿದೆ.

ಆಫ್ರಿಕ ಜಗತ್ತಿನ ಒಟ್ಟು ಭೂಭಾಗದ $^1/_5$ ಭಾಗವನ್ನು ಆಕ್ರಮಿಸಿದೆ. ವಿಸ್ತೀರ್ಣ 30,348,110 ಚ.ಕಿಮೀ ಅಂದರೆ ಯುರೋಪಿನ ಮೂರರಷ್ಟು. ಉತ್ತರದಿಂದ ದಕ್ಷಿಣಕ್ಕೆ ಸುಮಾರು 8000 ಕಿ.ಮೀ ಉದ್ದವಾಗಿಯೂ ಹೆಚ್ಚು ಅಗಲವಾಗಿರುವ ಸಹರ ಮರುಭೂಮಿಯ ಪ್ರದೇಶದಲ್ಲಿ ಪೂರ್ವ ಪಶ್ಚಿಮವಾಗಿ 7,200 ಕಿ.ಮೀ ಅಗಲವಾಗಿಯೂ ಇದೆ. 57 ಸ್ವತಂತ್ರ ರಾಷ್ಟ್ರಗಳಿರುವ ಈ ಖಂಡದ ಜನಸಂಖ್ಯೆ 2001ರಲ್ಲಿ ಸು. 816524000. ರಷ್ಟಿದ್ದು 2005ರಲ್ಲಿ 906 ಮಿಲಿಯನ್ ಆಗಿತ್ತು.

ಪಶ್ಚಿಮದಲ್ಲಿ ಗಿನಿ ಕೊಲ್ಲಿ ಇದೆ. ಪೂರ್ವದಲ್ಲಿ ಸೋಮಾಲಿ ಪರ್ಯಾಯ ದ್ವೀಪವಿದೆ (ಹಾರನ್ ಆಫ್ ಆಫ್ರಿಕ). ತೀರ ಪ್ರದೇಶ ಸಾಮಾನ್ಯವಾಗಿ ನೇರವಾಗಿದ್ದು ಹೆಚ್ಚಿನ ಖಾರಿ ಕೊಲ್ಲಿಗಳಿಲ್ಲದಿರುವುದರಿಂದ ಆಫ್ರಿಕದ ಬೆಳವಣಿಗೆ ಕುಂಠಿತವಾಗಿದೆ. ದಕ್ಷಿಣದ ತುದಿಯಿಂದ ಇನ್ನೂ ದಕ್ಷಿಣದಲ್ಲಿ ಅತಿ ದೊಡ್ಡದಾದ ಮಡಗಾಸ್ಕರ್ ದ್ವೀಪವಿದೆ. ಸೊಕೊಟ್ರ ದ್ವೀಪಗಳು ಏಡನ್ ಖಾರಿಯ ಮುಖದಲ್ಲಿವೆ. ಕೊಮೊರೊ ದ್ವೀಪಗಳು ಮೊಜಾಂಬಿಕ್ ಕಡಲ್ಗಾಲುವೆಯ ಮುಖದಲ್ಲಿವೆ. ಜಾಂಬಿಹಾರ್ ಮತ್ತು ಪೆಂಬಗಳು ಟಾಂಗನೀಕದ ತೀರದ ಆಚೆ ಇವೆ. ಅಟ್ಲಾಂಟಿಕ್ ಸಾಗರದಲ್ಲಿ ಹರಡಿರುವ ದ್ವೀಪಗಳೆಂದರೆ ಸೇಂಟ್ ಹೆಲೆನ್ ಅಸೆನ್‌ಷನ್, ಮಡೀರ್, ಕೇಪ್ ವರ್ಡೆ ದ್ವೀಪಗಳು.

**ಮೇಲ್ಮೈಲಕ್ಷಣ :** ಆಫ್ರಿಕ ಖಂಡ ವಿಸ್ತಾರವಾದ ಮತ್ತು ಅವಿಚ್ಛಿನ್ನವಾದ ಪ್ರಸ್ಥಭೂಮಿ. ಇದ್ದಕ್ಕಿದ್ದಂತೆ ಕಡಿದಾದ ತೀರಪ್ರದೇಶದಿಂದ ಭೂಮಿ ಸ್ತರಸ್ತರವಾಗಿ ಎತ್ತರವಾಗುತ್ತ ಬಂದು ಡ್ರಾಕೆನ್ಸ್‌ಬರ್ಗ್ ಪರ್ವತಗಳಲ್ಲಿ ಲೀನವಾಗುತ್ತದೆ. ದಕ್ಷಿಣದಲ್ಲಿ ಇಳಿಜಾರು ಕ್ರಮವಾಗಿದೆ. ಪ್ರಸ್ಥಭೂಮಿಯ ಅಂಚು ಕಡಿದಾಗಿದ್ದು ಹರಿಯುವ ನದಿಗಳಲ್ಲಿ ಜಲಪಾತಗಳಿರುವುದರಿಂದ ಜಲ ಸಾರಿಗೆ ಸೌಲಭ್ಯಗಳು ಬೆಳೆಯಲು ಅವಕಾಶ ಕಡಿಮೆ. ಪಶ್ಚಿಮದಲ್ಲಿ ಈಜಿಪ್ಟ್, ಇಟಲಿಯ ಸೋಮಾಲಿ ಲ್ಯಾಂಡ್, ನೈಜೀರಿಯ, ಫ್ರೆಂಚ್ ಪಶ್ಚಿಮ ಆಫ್ರಿಕ ಭಾಗಗಳಲ್ಲಿ ದೊಡ್ಡ ಮೈದಾನಗಳಿವೆ. ಗಿನಿ ಖಾರಿಯ ಭಾಗದಲ್ಲಿ ವ್ಯಾಪಾರಕೇಂದ್ರಗಳಾದ ಐವರಿ ಕೋಸ್ಟ್, ಸ್ಲೇವ್‌ಕೋಸ್ಟ್, ಗೋಲ್ಡ್ ಕೋಸ್ಟ್‌ಗಳಿವೆ. ಖಂಡದ ಬಹುಭಾಗಗಳು ಪುರಾತನ ಶಿಲೆಗಳಿಂದ ನಿರ್ಮಿತವಾಗಿವೆ. ಆದುದರಿಂದಲೇ ಇಲ್ಲಿ ಅನೇಕ ರೀತಿಯ ಬೆಲೆಬಾಳುವ ಖನಿಜಗಳು ದೊರೆಯುತ್ತವೆ. ದಕ್ಷಿಣದಲ್ಲಿರುವ ಕೇಸ್ ಪರ್ವತಶ್ರೇಣಿಗಳೂ ಉತ್ತರದಲ್ಲಿರುವ ಅಟ್ಲಾಸ್ ಪರ್ವತಗಳೂ ಗುಣಲಕ್ಷಣಗಳಲ್ಲಿ ಯುರೋಪಿನ ದಕ್ಷಿಣದಲ್ಲಿರುವ ಆಲ್ಪೈನ್ ಮತ್ತು ಹಿಮಾಲಯ ಪರ್ವತಗಳ ಗುಂಪಿಗೆ ಸೇರಿದ ಪಕ್ಷೀಕೃತ ಪರ್ವತಗಳು. ಈ ಪರ್ವತಗಳಲ್ಲಿ

ಬಹು ಎತ್ತರದ ಶಿಖರಗಳೆಂದರೆ, ಮೌಂಟ್ ಕಿಲಿಮಾಂಜೀರೋ 5,801 ಮೀ ಮೌಂಟ್ ಕೆನ್ಯ 5,117 ಮೀ ಮೌಂಟ್ ಎಲ್ಗಿನ್ 4,245 ಮೀ. ಸಾಮಾನ್ಯವಾಗಿ ಭೂಮಿಯ ಎತ್ತರ ದಕ್ಷಿಣದಲ್ಲಿ ಹೆಚ್ಚಾಗಿದೆ (305–1219 ಮೀ.) ಉತ್ತರದ ಕಡೆ ಹೋದಂತೆ ಭೂಮಿಯ ಎತ್ತರ ಕಡಿಮೆಯಾಗುತ್ತ ಹೋಗುವುದು (1524–305) ಅತ್ಯಂತ ಉನ್ನತವಾದ ಪ್ರದೇಶವೆಂದರೆ ಇಥಿಯೋಪಿಯದ ಪ್ರಸ್ಥಭೂಮಿ. ಅಲ್ಲಿಯ ಎತ್ತರ 4,575 ಮೀ ಗಿಂತಲೂ ಹೆಚ್ಚು. ದಕ್ಷಿಣದ ಕಡೆ ಪೂರ್ವ ಆಫ್ರಿಕದ ಪ್ರಸ್ಥಭೂಮಿ ಸು. 2,438 ಮೀ ಎತ್ತರ.




ಆಫ್ರಿಕದ ತಗ್ಗುಪ್ರದೇಶಗಳು ಅಪಾರ ವಿಸ್ತಾರವನ್ನಾಕ್ರಮಿಸಿವೆ. ಅವುಗಳಲ್ಲೊಂದಾದ ಖಂಡದ ಪೂರ್ವಭಾಗದಲ್ಲಿರುವ ಸೀಳುಕಣಿವೆ ಗಮನಾರ್ಹವಾದ ಮತ್ತು ವೈಶಿಷ್ಟ್ಯಪೂರ್ಣವಾದ ಪ್ರಾಕೃತಿಕ ಲಕ್ಷಣವನ್ನು ಹೊಂದಿದೆ. ಇದು ಸು. 48 ಕಿ.ಮೀ ಅಗಲವಾಗಿಯೂ 4800 ಕಿ.ಮೀ ಉದ್ದವಾಗಿಯೂ ಇದೆ. ಕಣಿವೆಯ ತಗ್ಗುಪ್ರದೇಶಗಳಲ್ಲಿ ಖಂಡದ ಮುಖ್ಯ ಸರೋವರಗಳಿವೆ. ಆಲ್ಬರ್ಟ್, ಟಾಂಗನೀಕ, ನಯಾಸ ಮತ್ತು ರುಡಾಲ್ಫ್ –ಇವು ಇಲ್ಲಿನ ಮುಖ್ಯ ಸರೋವರಗಳು. ಎರಡನೆಯ ಎತ್ತರವಾದ ಭೂಭಾಗವೇ ಸಹರ ಮರುಭೂಮಿ. ಇದು ದಕ್ಷಿಣ ಆಲ್ಜೀರಿಯ, ಲಿಬಿಯ, ಪಶ್ಚಿಮ ಆಫ್ರಿಕ ಉಷ್ಣವಲಯದ ಭಾಗಗಳನ್ನೊಳಗೊಂಡು ಈಜಿಪ್ಟ್ ಮತ್ತು ಸೂಡಾನ್‍ಗಳನ್ನು ಮುಟ್ಟಿದೆ. ಸಹರ ಮರುಭೂಮಿಯ ದಕ್ಷಿಣದಲ್ಲಿ ಚಾಡ್ ಎಂಬ ಮತ್ತೊಂದು ಸರೋವರವಿದೆ. ವಿಕ್ಟೋರಿಯ ಸಹ ಸೀಳು ಕಣಿವೆಯಲ್ಲಿರುವ ಅತ್ಯಂತ ದೊಡ್ಡ ಸರೋವರ. ಇದು ಪ್ರಪಂಚದ ದೊಡ್ಡ ಸರೋವರಗಳಲ್ಲಿ ಮೂರನೆಯದು. ವಿಸ್ತೀರ್ಣ 69,464 ಚ.ಕಿಮೀ ಮೂರನೆಯ ಉನ್ನತ ಭೂಭಾಗವೆಂದರೆ ಕ್ವಟ್ಟಾರ ಪ್ರದೇಶ. ಸಮುದ್ರಮಟ್ಟಕ್ಕೆ 134 ಮೀ ತಗ್ಗಿನಲ್ಲಿದೆ. ಕಲಹರಿ ಮತ್ತು ದಕ್ಷಿಣದ ಇತರ ಮರುಭೂಮಿಗಳೂ ಸೇರಿದರೆ ದೇಶದ ಶೇ. 25 ಭಾಗವು ಒಣ ಹವಾಮಾನದಿಂದ ಕೂಡಿದೆ.

**ಆಫ್ರಿಕದ ನದಿಗಳು :** ಅಲ್ಲಿಯ ವಾಯುಗುಣ ಮತ್ತು ಮೇಲ್ಮೈಲಕ್ಷಣವನ್ನು ಅವಲಂಬಿಸಿವೆ. ಮರುಭೂಮಿ ಪ್ರದೇಶದಲ್ಲಿ ನದಿಗಳೇ ಇಲ್ಲದಿರುವುದು, ಹೆಚ್ಚು ಮಳೆ ಬೀಳುವ ಸಮಭಾಜಕ ವೃತ್ತ ಪ್ರದೇಶದಲ್ಲಿ ಅನೇಕ ನದಿಗಳು ಹರಿಯುವುದು ಈ ಖಂಡದ ಒಂದು ವೈಶಿಷ್ಟ್ಯ. ನದಿಗಳೆಲ್ಲ ಪ್ರಸ್ಥಭೂಮಿಯ ನಡುವಣ ಜೌಗು ಪ್ರದೇಶ ಮತ್ತು ಸರೋವರ ಪ್ರದೇಶಗಳಲ್ಲಿ ಹುಟ್ಟಿ ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ಸಮುದ್ರಗಳನ್ನು ಸೇರುತ್ತವೆ. ಝಾಂಬೆಜಿ ಮಾತ್ರ ಹಿಂದೂ ಮಹಾಸಾಗರಕ್ಕೆ ಸೇರುತ್ತದೆ.

ಆಫ್ರಿಕದ ಅತಿಮುಖ್ಯ ನದಿಯಾದ ನೈಲ್ ನದಿಯು ವಿಕ್ಟೋರಿಯ ಸರೋವರದ ಬಳಿ ಹುಟ್ಟಿ ಉತ್ತರಾಭಿಮುಖವಾಗಿ ಹರಿದು, ಉಪನದಿಯಾದ ನೀಲಿನೈಲ್ ಜೊತೆಗೂಡಿ ಮೆಡಿಟರೇನಿಯನ್ ಸಮುದ್ರಕ್ಕೆ ಬೀಳುವುದು. ಜಗತ್ತಿನ ಅತಿ ಉದ್ದವಾದ ನದಿಗಳ ಗುಂಪಿನಲ್ಲಿ ನೈಲ್ ಪ್ರಥಮ ಸ್ಥಾನವನ್ನೂ (6459 ಕಿಮೀ) ಕಾಂಗೊ ಆರನೆಯ ಸ್ಥಾನವನ್ನೂ (4800 ಕಿಮೀ) ನೈಜರ್ ಹತ್ತನೆಯ ಸ್ಥಾನವನ್ನೂ (4160 ಕಿಮೀ) ಪಡೆದಿವೆ.

ನೈಲ್ ನದಿ ಬ್ರಿಟಿಷ್ ಉಗಾಂಡ, ಸೂಡಾನ್ ಗಣರಾಜ್ಯ ಮತ್ತು ಈಜಿಪ್ಟ್‍ಗಳ ಮೂಲಕ ಹರಿಯುತ್ತದೆ. ನೈಜರ್ ತನ್ನದೇ ಆದ ಮೆಕ್ಕಲು ಮಣ್ಣಿನ ಮೈದಾನವನ್ನೂ, ಮುಖಜಭೂಮಿ ಯನ್ನೂ ಸೃಷ್ಟಿಸಿದೆ. ಕಾಂಗೊ ನದಿಯ ಅಳಿವೆಯನ್ನು ನೋಡಿದರೆ ದೇಶದ ಅಂತರಾಳದಲ್ಲಿ ಒಂದು ಒಳ ಸಮುದ್ರವಿತ್ತೆಂಬ ಊಹೆಗೆ ಅವಕಾಶವಾಗುತ್ತದೆ. ಝಾಂಬೆಜಿ ವಿಕ್ಟೋರಿಯ ಜಲಪಾತಕ್ಕೂ ಆರೆಂಜ್ ನದಿ ತುಗೇಲ್ ಜಲಪಾತಕ್ಕೂ ಪ್ರಸಿದ್ಧವಾಗಿವೆ. ಜಲಪಾತಗಳಿಂದ ವಿದ್ಯುಚ್ಛಕ್ತಿ ನಿರ್ಮಾಣದ ಯೋಜನೆಗಳಿಗೆ ಒಳ್ಳೆಯ ಭವಿಷ್ಯವಿದೆ.

**ವಾಯುಗುಣ :** $35^0$ ದಕ್ಷಿಣ ಅಕ್ಷಾಂಶದಿಂದ $37^0$ ಉತ್ತರ ಅಕ್ಷಾಂಶದವರೆಗೆ ಆಫ್ರಿಕ ಆವರಿಸಿರುವುದರಿಂದ ಮುಖ್ಯವಾಗಿ ಉಷ್ಣವಲಯದ ಹವಾಗುಣವನ್ನು ಹೊಂದಿದೆ. ವಿಶಾಲ ವಾದ ಈ ಖಂಡದ ವಾಯುಗುಣದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೆಚ್ಚಿನ ವ್ಯತ್ಯಾಸವಿದೆ. ಉತ್ತರ ಮತ್ತು ದಕ್ಷಿಣದ ತುದಿಗಳಲ್ಲಿ ಮೆಡಿಟರೇನಿಯನ್ ಹವಾಗುಣವಿದೆ. ಮಧ್ಯ ಆಫ್ರಿಕದಲ್ಲಿ ಸಾಮಾನ್ಯವಾಗಿ ತೇವದಿಂದ ಕೂಡಿದ ಉಷ್ಣ ವಾಯುಗುಣವಿದೆ. ಸವನ್ನ ಹುಲ್ಲುಗಾವಲುಗಳಲ್ಲಿ ಅಷ್ಟು ಉಷ್ಣತೆ ಇಲ್ಲ. ಸ್ಥಳ ಎತ್ತರವಾಗಿರುವುದರಿಂದ ಪೂರ್ವ ಭಾಗದಲ್ಲಿ ವಾಯುಗುಣ ಹಿತಕರವಾಗಿದೆ.

ಸಹರ ಮರುಭೂಮಿಯಲ್ಲಿ ಸರಾಸರಿ ವಾರ್ಷಿಕ ಮಳೆ ಕೇವಲ 15 ಸೆಂಮೀಗಳಿ ಗಿಂತಲೂ ಕಡಿಮೆಯಾಗಿ ಕೆಲವು ವರ್ಷಗಳಲ್ಲಿ ಅನಾವೃಷ್ಟಿಯುಂಟಾಗುವುದು. ಬೇಸಗೆಯಲ್ಲಿ ಉಷ್ಣತೆ ಸುಮಾರು $49^0$ ಸೆಂ. ಹೆಚ್ಚಾಗಿರುತ್ತದೆ. ಕಾಂಗೊ ನದಿಯ ಬಯಲುಗಳಲ್ಲಿ, ಪಶ್ಚಿಮ ಆಫ್ರಿಕದ ಕೆಲವು ಭಾಗಗಳಲ್ಲಿ ಸರಾಸರಿ 200 ಸೆಂಮೀ ಮಳೆ ಬೀಳುವುದು. ಕ್ಯಾಮರೂನ್ ಪ್ರದೇಶದಲ್ಲಿ 1000 ಸೆಂಮೀ ಮಳೆ ಬೀಳುತ್ತದೆ. ಉನ್ನತವಾದ ಪ್ರಸ್ಥಭೂಮಿಗಳಲ್ಲಿ ಸಮಶೀತೋಷ್ಣ ಮಾದರಿಯ ವಾಯುಗುಣವನ್ನು ಕಾಣಬಹುದು. ಹಾಗೆಯೇ ಅಗ್ನಿಪರ್ವತದ ಶಿಲಾರಸದಿಂದ ಉಂಟಾದ ಕಿಲಿಮಾಂಜೀರೋ, ಕೆನ್ಯ ಮತ್ತು ಎಲ್ಗಿನ್ ಶಿಖರಗಳು ವರ್ಷದ ಎಲ್ಲ ಋತುಗಳಲ್ಲೂ ಮಂಜಿನಿಂದ ಮುಚ್ಚಿರುತ್ತವೆ.

ಆಫ್ರಿಕದ ವಾಯುಗಣದಲ್ಲಿ ಒಂದು ರೀತಿಯ ವೈಶಿಷ್ಟ್ಯವಿದೆ. ಉತ್ತರಾರ್ಧಗೋಳದಲ್ಲಿರುವಂಥ ವಾಯುಗುಣ ವಲಯಗಳೇ ದಕ್ಷಿಣಾರ್ಧಗೋಳದಲ್ಲಿವೆ. ಸಮಭಾಜಕವೃತ್ತ ಖಂಡದ ನಡುವೆ ಹಾದುಹೋಗುವುದರಿಂದ ಉತ್ತರಾರ್ಧಗೋಳದಲ್ಲಿ ಬೇಸಗೆ ಕಾಲವಾಗಿದ್ದರೆ ದಕ್ಷಿಣಾರ್ಧಗೋಳದಲ್ಲಿ ಚಳಿಗಾಲ.

ಸಮಭಾಜಕವೃತ್ತದ ಎರಡು ಕಡೆಗಳಲ್ಲೂ ಉತ್ತರ ಮತ್ತು ದಕ್ಷಿಣದ $5^0$ ಅಕ್ಷಾಂಶಗಳ ಮಧ್ಯೆ ಅಧಿಕ ಶಾಖ, ಅಧಿಕ ಮಳೆಯಿಂದ ಕೂಡಿದ ಸಮಭಾಜಕವೃತ್ತ ಮಾದರಿಯ ವಾಯುಗುಣವಿದೆ. $5^0$–$15^0$ ಅಕ್ಷಾಂಶಗಳ ಮಧ್ಯೆ ಬೆಚ್ಚನೆಯ ವಾಯುಗುಣವಿದ್ದರೂ ಬೇಸಗೆಯಲ್ಲಿ ಮಳೆ ಬೀಳುತ್ತದೆ. ಇದು ಉಷ್ಣವಲಯದ ವಾಯುಗುಣ. ಈ ವಲಯದಿಂದ

ಉತ್ತರ ಮತ್ತು ದಕ್ಷಿಣಕ್ಕೆ ತೇವಾಂಶ ಕಡಿಮೆಯಾಗುತ್ತ ಶುಷ್ಕ ವಾತಾವರಣದಿಂದ ಕೂಡಿದ ಮರುಭೂಮಿ ಪ್ರದೇಶ ಪ್ರಾರಂಭವಾಗುತ್ತದೆ. ಪಶ್ಚಿಮ ತೀರದಲ್ಲಿ ಸಮಭಾಜಕವೃತ್ತದ ಕಡೆ ಹರಿಯುವ ಬೆಂಗೈಲ ಶೀತಸಾಗರ ಪ್ರವಾಹವೂ ಪೂರ್ವಭಾಗದಲ್ಲಿ ಹರಿಯುವ ಮೊಜಾಂಬಿಕ್ ಉಷ್ಣಸಾಗರ ಪ್ರವಾಹವೂ ತೀರಪ್ರದೇಶಗಳ ವಾಯುಗುಣದ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತವೆ.

ವಾಯುಗುಣದ ರೀತ್ಯಾ ಇಲ್ಲಿ ಅತಿ ಮುಖ್ಯವಾದ ನಾಲ್ಕು ವಲಯಗಳನ್ನು ಕಾಣಬಹುದು. ಕಾಂಗೊ ನದಿಯ ಬಯಲು, ಮಧ್ಯ ಆಫ್ರಿಕದ ಗಣರಾಜ್ಯ ಗಿನಿತೀರ ಪ್ರದೇಶಗಳು, ದಕ್ಷಿಣ ನೈಜೀರಿಯ, (ಕೋಟೆ–ಡಿ–ಐವೋರೆ) ಮತ್ತು ಘಾನದ ಸ್ವಲ್ಪ ಭಾಗಗಳಲ್ಲಿ ಸಮಭಾಜಕವೃತ್ತ ಮಾದರಿಯ ವಾಯುಗುಣ ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ ವರ್ಷವೆಲ್ಲ ಉಷ್ಣತೆ ಹೆಚ್ಚು, ಮಳೆ ಅಧಿಕ. ಮಧ್ಯಾಹ್ನಾತ್ತರ ಶಾಖದ ಪ್ರಚಲನದಿಂದಾಗಿ ಮಳೆ ಬೀಳುತ್ತದೆ. ಉಷ್ಣವಲಯದ ವಾಯುಗುಣ ಸಮಭಾಜಕ ವೃತ್ತ ವಲಯದ ಇಕ್ಕೆಲಗಳಲ್ಲೂ ಕಂಡುಬರುವುದು. ಸವನ್ನ ಪ್ರದೇಶಗಳಿಂದ, ಪಶ್ಚಿಮದಲ್ಲಿ ಚಾಡ್ ಸರೋವರದವರೆಗೂ ದಕ್ಷಿಣದಲ್ಲಿ ಟ್ಯಾಂಗನೀಕ, ಜಾಂಬಿಯ ಮತ್ತು ಅಂಗೋಲಗಳಲ್ಲೂ ಈ ವಾಯುಗುಣವಿದೆ. ಸಮಭಾಜಕವೃತ್ತದ ವಾಯುಗುಣದ ಪ್ರದೇಶಕ್ಕಿಂತ ಇಲ್ಲಿ ಮಳೆ ಕಡಿಮೆ. ಬೆಚ್ಚನೆಯ ಬೇಸಗೆಯೂ ಶೀತವಾದ ಚಳಿಗಾಲವೂ ಇಲ್ಲಿಯ ವಾಯುಗುಣದ ವೈಶಿಷ್ಟ್ಯ. ಇದನ್ನು ಸೂಡಾನ್




ಮಾದರಿಯ ವಾಯುಗುಣವೆಂದು ಕರೆಯುತ್ತಾರೆ. ಮರುಭೂಮಿಯ ವಾಯುಗುಣವೆಂದರೆ ಅಧಿಕಶಾಖದಿಂದ ಕೂಡಿ ಮಳೆಯ ಸುಳಿವೇ ಇಲ್ಲದ್ದು. ಇಂಥದು ಉತ್ತರದ ಸಹರ ಮರುಭೂಮಿ ಪ್ರದೇಶದಲ್ಲೂ ದಕ್ಷಿಣದಲ್ಲಿ ಕಲಹರಿ ಮರುಭೂಮಿ ವಲಯದಲ್ಲೂ ಕಂಡುಬರುತ್ತವೆ. ಮೆಡಿಟರೇನಿಯನ್ ವಾಯುಗುಣ ಉತ್ತರದಲ್ಲಿ ಮೊರಾಕೊ, ಆಲ್ಜೀರಿಯ, ಟ್ಯುನೀಸಿಯ, ಲಿಬಿಯ ಮತ್ತು ಈಜಿಪ್ಟ್ ದೇಶಗಳ ಉತ್ತರ ತೀರಗಳಲ್ಲೂ ದಕ್ಷಿಣದ ತುದಿಯಲ್ಲೂ ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಮಳೆ ಬೀಳುತ್ತದೆ. ಮತ್ತು ಬೇಸಗೆಯಲ್ಲಿ ಮಳೆಯಿಲ್ಲ, ಸೆಕೆ ಹೆಚ್ಚು. ಇಲ್ಲಿಯ ವಾಯುಗುಣ ಹಿತಕರವೂ ಉತ್ತೇಜನಕಾರಿಯೂ ಆಗಿರುವುದು.

**ಸ್ವಾಭಾವಿಕ ಸಸ್ಯವರ್ಗ :** ಇಲ್ಲಿಯ ಭೂ ಮತ್ತು ವಾಯುಗುಣವನ್ನು ಅವಲಂಬಿಸಿರುತ್ತದೆ. ಹಿಂದೆ ದಟ್ಟಡವಿಗಳು ಮತ್ತು ಮನುಷ್ಯನ ಎತ್ತರದ ಹುಲ್ಲುಗಾವಲುಗಳಿಂದ ಈ ಪ್ರದೇಶ ತುಂಬಿಹೋಗಿತ್ತು. ಈಗ ಅನೇಕ ಕಡೆಗಳಲ್ಲಿ ಕಾಡುಗಳನ್ನು ಕಡಿದು, ಹುಲ್ಲುಗಾವಲುಗಳನ್ನೂ ಸವರಿ ಅಥವಾ ಸುಟ್ಟು ವ್ಯವಸಾಯಕ್ಕೆ ಅಳವಡಿಸಿಕೊಂಡಿದ್ದಾರೆ. ವಾಯುಗುಣಕ್ಕೆ ಅನುಸಾರವಾಗಿ ಇಲ್ಲಿ ಐದು ಮುಖ್ಯವಾದ ಸ್ವಾಭಾವಿಕ ಸಸ್ಯವಲಯಗಳಿವೆ.

ಸಮಭಾಜಕ ವೃತ್ತ ಪ್ರದೇಶದ ಸಸ್ಯವರ್ಗ ಕಾಂಗೊ ಮತ್ತು ಗಿನಿ ಭಾಗಗಳಲ್ಲಿ ಹೇರಳವಾಗಿದೆ. ಮಡಗಾಸ್ಕರ್ ದ್ವೀಪದಲ್ಲೂ ಇದೇ ಸಸ್ಯವರ್ಗವುಂಟು. ನಿತ್ಯಹರಿದ್ವರ್ಣ ಜಾತಿಯ ಅನೇಕ ಕಾಡುಗಳು ಇಲ್ಲಿ ಹೆಚ್ಚಾಗಿವೆ. ಎಲ್ಲೆಲ್ಲೂ ದಟ್ಟವಾಗಿ ಬೆಳೆದು ನಿಂತಿರುವ ದೈತ್ಯಾಕಾರದ ಮರಗಳಿವೆ. ಮಹಾಗನಿ, ಐರನ್‌ವುಡ್, ಕೋಕೊ ಮತ್ತು ರಬ್ಬರ್ ಮುಂತಾದ ನಾನಾ ಜಾತಿಯ ಉಪಯುಕ್ತ ಸಸ್ಯಗಳಿವೆ. ತೆಂಗು ಮತ್ತು ಕಾಡುಬಾಳೆ ಅಧಿಕ. **ಸವನ್ನ ಹುಲ್ಲುಗಾವಲುಗಳು :** ಸಮಭಾಜಕವೃತ್ತದ ಕಾಡುಗಳ ಎರಡು ಕಡೆಗಳಲ್ಲೂ ವಿಸ್ತಾರವಾಗಿ ಹಬ್ಬಿವೆ. ಅಂಚಿನಲ್ಲಿ ಅಲ್ಲಲ್ಲಿ ಕುರುಚಲು ಗಿಡಮರಗಳಿವೆ. ಇವು ಉಷ್ಣವಲಯದ ಹುಲ್ಲುಗಾವಲುಗಳು. ಪಶ್ಚಿಮದಲ್ಲಿ ಅಟ್ಲಾಂಟಿಕ್ ತೀರಪ್ರದೇಶದಿಂದ ಪೂರ್ವದಲ್ಲಿ ಉಗಾಂಡದವರೆಗೂ ದಕ್ಷಿಣದಲ್ಲಿ ಪೂರ್ವ ಆಫ್ರಿಕದ ಬೆಟ್ಟದ ಸೀಮೆಯಿಂದ ಅಟ್ಲಾಂಟಿಕ್ ಸಾಗರದವರೆಗೂ ವಿಶಾಲವಾದ ಈ ಹುಲ್ಲುಗಾವಲುಗಳು ಹಬ್ಬಿವೆ. ಇತ್ತೀಚೆಗೆ ಯುಗಾಂಡ, ಸೂಡಾನ್, ರೊಡೇಷಿಯ, ಜಾಂಬಿಯ ಮತ್ತು ಅಂಗೋಲಗಳಲ್ಲಿ ಹುಲ್ಲುಗಾವಲುಗಳನ್ನು ವ್ಯವಸಾಯಕ್ಕೆ ಅಳವಡಿಸಿಕೊಂಡಿದ್ದಾರೆ.

ಸಮಶೀತೋಷ್ಣವಲಯದ ಹುಲ್ಲುಗಾವಲುಗಳನ್ನು ಹೈವೆಲ್ಡ್ ಎಂದು ಕರೆಯುತ್ತಾರೆ. ದಕ್ಷಿಣ ಆಫ್ರಿಕದ ಪ್ರಸ್ಥಭೂಮಿಯ ಪೂರ್ವಭಾಗ, ಕೇಪ್ ಪ್ರಾಂತ್ಯ, ಆರೆಂಜ್ ಫ್ರೀಸ್ಟೇಟ್ ಮತ್ತು ಟ್ರಾನ್ಸ್‌ವಾಲ್‌ಗಳಲ್ಲಿ ವೆಲ್ಡ್ ಮತ್ತು ಹೈವೆಲ್ಡ್ ಹುಲ್ಲುಗಾವಲುಗಳಿವೆ. ಸರಾಸರಿ 50–100 ಸೆಂಮೀ ಮಳೆ ಬೀಳುವುದರಿಂದ ಹುಲ್ಲು ತುಂಬ ಹುಲುಸಾಗಿ ಬೆಳೆಯುವುದು. ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆಲ್ಲ ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಮರುಭೂಮಿಯ ವಾತಾವರಣ ಕಂಡುಬರುತ್ತದೆ.

ಉತ್ತರದಲ್ಲಿರುವ ಸಹರ, ಜಗತ್ತಿನಲ್ಲಿ ಅತ್ಯಂತ ದೊಡ್ಡದಾದ ಮರುಭೂಮಿ ಓಯಸಿಸ್ ಇರುವ ಪ್ರದೇಶಗಳಲ್ಲಿ ಖರ್ಜೂರದ ಗಿಡಗಳು ಬೆಳೆಯುತ್ತವೆ. ಮರುಭೂಮಿಯ ಅಂಚಿನಲ್ಲಿ ಕುರುಚಲು ಗಿಡಗಳೂ ಕಾಣಸಿಗುತ್ತವೆ.

ದಕ್ಷಿಣದಲ್ಲಿರುವ ಕಲಹರಿ ಸಹರಾದಷ್ಟು ಸಸ್ಯರಹಿತವಾಗಿಲ್ಲ. ಅಲ್ಪಸ್ವಲ್ಪ ಮಳೆ ಬೀಳುವುದರಿಂದ ಶುಷ್ಕ ವಾತಾವರಣವನ್ನು ತಡೆದುಕೊಳ್ಳುವಂಥ ಕೆಲವು ಮರಗಿಡಗಳು ಕಾಣಿಸುತ್ತವೆ.

ಮೆಡಿಟರೇನಿಯನ್ ಸಸ್ಯವರ್ಗ ಉತ್ತರ ಮತ್ತು ದಕ್ಷಿಣ ಆಫ್ರಿಕದಲ್ಲಿ ವ್ಯಾಪಿಸಿದೆ. ಸಾಮಾನ್ಯವಾಗಿ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಬೆಚ್ಚನೆಯ ಹರಿದ್ವರ್ಣದ ಕಾಡುಗಳಲ್ಲಿ ಓಕ್, ಕಾರ್ಕ್, ಸೀಡರ್ ಮುಂತಾದ ಉಪಯುಕ್ತ ಮರಗಳಿವೆ. ಮಳೆ ಕಡಿಮೆ ಬೀಳುವಲ್ಲಿ ಮಾಕ್ವಿಸ್ ಜಾತಿಯ ಮರಗಳಿವೆ. ಈಚೆಗೆ ಇಲ್ಲಿ ವಿವಿಧ ಜಾತಿಯ ಹಣ್ಣಿನ ಮರಗಳನ್ನು ಸಮೃದ್ಧವಾಗಿ ಬೆಳೆಸಿದ್ದಾರೆ.

**ವನ್ಯಮೃಗ ಸಂಪತ್ತು :** ಆಫ್ರಿಕ ತನ್ನ ಮೃಗ ವಿಶೇಷಗಳಿಗೆ ಪ್ರಸಿದ್ಧವಾಗಿದೆ. ನಡುವಣ ದೊಡ್ಡ ಕಾಡುಗಳಲ್ಲಿ ಗೊರಿಲ್ಲ, ಚಿಂಪಾಂಜಿ, ಲವ್ ಬರ್ಡ್, ಕೆಂಪು ಎದೆಯ ಗಿಣಿ, ಹೆಬ್ಬಾವು, ನಾಗರಹಾವು, ಮೊಸಳೆ ಮೊದಲಾದ ಪ್ರಾಣಿಗಳಿವೆ. ಸವನ್ನ ಮತ್ತು ವೆಲ್ಡ್ ಪ್ರದೇಶಗಳಲ್ಲಿ ಸಿಂಹ, ಜೀಬ್ರ, ಚಿರತೆ, ಕತ್ತೆಕಿರುಬ, ರೈನಾಸರಸ್, ಕಾಡೆಮ್ಮೆ, ಆರ್ಡ್‌ವುಲ್ಫ್, ಮುಳ್ಳುಹಂದಿ, ಅನೇಕ ಬಗೆಯ ಜಿಂಕೆಗಳು, ಆನೆಗಳು ಮುಂತಾದ ಪ್ರಾಣಿಗಳು ಸಾವಿರಾರು ಸಂಖ್ಯೆಯಲ್ಲಿವೆ. ಈಚೆಗೆ ಮಾನವನ ಪ್ರವೇಶದಿಂದಾಗಿ, ವಿವೇಚನೆಯಿಲ್ಲದ ಬೇಟೆಯಿಂದಾಗಿ ಅವುಗಳ ಸಂಖ್ಯೆ ಬಹು ಕಡಿಮೆಯಾಗಿದೆ. ಮೆಡಿಟರೇನಿಯನ್ ಪ್ರದೇಶಗಳಲ್ಲಿ ಒಂಟೆ, ಕಂಕನರಿ, ಕಾಡುಹಂದಿ, ನುಬಿಯದ ಕಾಡುಕತ್ತೆಗಳು, ಕಪಿಗಳು ಹೇರಳವಾಗಿವೆ. ಆಫ್ರಿಕದ ಮೃಗಗಳಲ್ಲಿ ಸೆಕ್ರೆಟರಿ ಹಕ್ಕಿ, ಐಬಿಸ್, ಹಾರನ್‌ಬಿಲ್, ಮರಾಬು, ಗಿನಿ ಹಕ್ಕಿಗಳು ಪ್ರಸಿದ್ಧವಿವೆ. ಇಡೀ ಖಂಡದಲ್ಲಿ ಹುಳುಹುಪ್ಪಟೆಗಳು ಲಕ್ಷಗಟ್ಟಲೆ ಇವೆ. ಅನೇಕ ಬಗೆಯ ಚಿಟ್ಟೆಗಳಿವೆ. ಸೈನಿಕ ಇರುವೆಗಳಿಗೆ ಮಿಡತೆಗಳಿಗೆ ಆಫ್ರಿಕ ತವರೂರು. ಮಲೇರಿಯ ಹರಡುವ ಸೊಳ್ಳೆ ಮತ್ತು ಟ್ಸೆಟ್ಸೆ ನೊಣಗಳು ಇಲ್ಲಿಯವೇ. ಉಷ್ಟ್ರಪಕ್ಷಿ ಇಲ್ಲಿನ ಮರುಭೂಮಿಯ ಮೂಲವಾಸಿ. ಈಚೆಗೆ ವನ್ಯಮೃಗ ಸಂರಕ್ಷಣೆಗಾಗಿ ಅಂತಾರಾಷ್ಟ್ರೀಯ ಚಳವಳಿ ಪ್ರಾರಂಭವಾದ ವೇಳೆ ಆಫ್ರಿಕದಲ್ಲಿ ಬಹು ದೊಡ್ಡ ವನ್ಯಮೃಗ ಸಂರಕ್ಷಣಾಲಯಗಳು ಏರ್ಪಟ್ಟಿವೆ.

**ಖನಿಜ ಸಂಪತ್ತು :** ಅತಿ ಪ್ರಾಚೀನ ಕಾಲದಿಂದಲೂ ಆಫ್ರಿಕ ಖನಿಜಗಳ ತವರೂರೆಂದು ಪ್ರಸಿದ್ಧವಾಗಿದ್ದರೂ 19ನೆಯ ಶತಮಾನದಲ್ಲಿ ಖನಿಜೋತ್ಪನ್ನ ಪ್ರಾರಂಭವಾಯಿತೆನ್ನಬಹುದು. ದಕ್ಷಿಣ ಆಫ್ರಿಕ, ರೊಡೇಷಿಯ ಟಾಂಗನೀಕ, ಗೋಲ್ಡ್‌ಕೋಸ್ಟ್, ಕಾಂಗೊ ಪ್ರದೇಶಗಳಲ್ಲಿ ಚಿನ್ನದ ಗಣಿಗಳಿವೆ. ಪ್ರಪಂಚದ ಉತ್ಪನ್ನದಲ್ಲಿ ಶೇ.50 ಚಿನ್ನ ಆಫ್ರಿಕದಿಂದ ಬರುತ್ತದೆ. 1870ರಲ್ಲಿ ದಕ್ಷಿಣ ಆಫ್ರಿಕದಲ್ಲಿ ವಜ್ರ ಪತ್ತೆಯಾದ ಮೇಲೆ ಟಾಂಗನೀಕ, ಅಂಗೋಲ, ಕಾಂಗೊ, ಪಶ್ಚಿಮ ಆಫ್ರಿಕಗಳಲ್ಲಿ ಆ ಅಮೂಲ್ಯ ಪದಾರ್ಥವನ್ನು ತೆಗೆಯಲಾಗುತ್ತಿದೆ. ಉತ್ತಮ ಮತ್ತು ವ್ಯಾಪಾರಿ ದರ್ಜೆಯ ವಜ್ರ ಇಲ್ಲಿ ಪ್ರಪಂಚದ ಶೇ.98 ಭಾಗ ಸಿಗುತ್ತಿದೆ. ಖಂಡದ ಬಹು ಮುಖ್ಯ ಕೈಗಾರಿಕಾ ಪ್ರದೇಶವೆಂದರೆ ದಕ್ಷಿಣ ಆಫ್ರಿಕ. ಕಲ್ಲಿದ್ದಲು, ಕಬ್ಬಿಣ ಮತ್ತು ಟಂಗ್‌ಸ್ಟನ್‌ಗಳು ದೊರೆಯುವುದರಿಂದ ಸಿಯಾರ ಲಿಯೋನ್‌ನಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿವೆ.

ಯುರೇನಿಯಂ, ವಜ್ರ, ತಾಮ್ರ, ಬಾಕ್ಸೈಟ್, ಮ್ಯಾಂಗನೀಸ್, ಕ್ರೋಮಿಯಂ ಇವು ಆಫ್ರಿಕದ ಅತಿ ಮುಖ್ಯವಾದ ಇತರ ಖನಿಜ ಸಂಪತ್ತು.

ಶಕ್ತಿ ಉತ್ಪಾದಕ ಪದಾರ್ಥಗಳಾದ ಪೆಟ್ರೋಲಿಯಂ ಮತ್ತು ಕಲ್ಲಿದ್ದಲು ಈ ಖಂಡದಲ್ಲಿ ಅಲ್ಪ ಪ್ರಮಾಣದಲ್ಲಿ ದೊರೆಯುವುರಿಂದ ಅವುಗಳ ಕೊರತೆ ಹೆಚ್ಚು. ಪೆಟ್ರೋಲಿಯಂ ಅಲ್ಪ ಪ್ರಮಾಣದಲ್ಲಿ ಈಜಿಪ್ಟ್, ಆಲ್ಜೀರಿಯ, ಗಬನ್, ನೈಜೀರಿಯ, ಅಂಗೋಲ ಮತ್ತು ಮೊರಾಕೊಗಳಲ್ಲಿ ದೊರೆಯುತ್ತವೆ. ಕಾಂಗೊ ಮತ್ತು ಉತ್ತರ ರೊಡೇಷಿಯಗಳು ಜಗತ್ತಿನಲ್ಲೇ ಹೆಚ್ಚಿನ ಪ್ರಮಾಣದಲ್ಲಿ ತಾಮ್ರವನ್ನು ಉತ್ಪಾದಿಸುವ ಪ್ರದೇಶಗಳಾಗಿವೆ. ಕಾಂಗೊದ ಕಟಾಂಗ

ಪ್ರದೇಶದಲ್ಲಿ ಅತ್ಯಂತ ಬೆಲೆ ಬಾಳುವ ತಾಮ್ರದ ಗಣಿಗಳಿವೆ. ತಾಮ್ರದ ಜೊತೆಗೆ ಇಲ್ಲಿ ಮ್ಯಾಂಗನೀಸ್, ಸತು, ಕಬ್ಬಿಣ, ತವರ, ಟಂಗ್‌ಸ್ಟನ್, ಪ್ಲಾಟಿನಂ, ಬೆಳ್ಳಿ, ಮತ್ತು ಬಿಸ್ಮತ್ ಲೋಹಗಳು ದೊರೆಯುತ್ತವೆ. ಮ್ಯಾಂಗನೀಸ್ ಅದಿರು ಹೆಚ್ಚಿನ ಪ್ರಮಾಣದಲ್ಲಿ ದಕ್ಷಿಣ ಆಫ್ರಿಕದ ಮೊರಾಕೊ, ಘಾನಗಳಲ್ಲಿ ದೊರೆಯುತ್ತದೆ. ಕಾಂಗೊ, ರೊಡೀಷಿಯಗಳಲ್ಲಿ ಕೊಬಾಲ್ಟ್ ಕೂಡ ದೊರೆಯುತ್ತದೆ.

ಬಾಕ್ಸೈಟ್ ಅದಿರಿಗೆ ಗಿನಿ ಮತ್ತು ಘಾನ ದೇಶಗಳು ಹೆಸರು ಪಡೆದಿವೆ. ಟ್ಯೂನೀಸಿಯ ಮತ್ತು ಮೊರಾಕೊ ಫಾಸ್ಫೇಟನ್ನು ಒದಗಿಸುವ ರಾಜ್ಯಗಳು. ಸೀಸ ಮತ್ತು ತವರ ಉತ್ತರ ರೊಡೀಷಿಯ, ನೈಋತ್ಯ ಆಫ್ರಿಕ, ಮೊರಾಕೊ ಮತ್ತು ಕಾಂಗೊ ರಾಜ್ಯಗಳ ಮುಖ್ಯ ಖನಿಜಗಳು.



ಆಫ್ರಿಕ ಖಂಡದ ಸ್ವಾಭಾವಿಕ ಸಸ್ಯವರ್ಗ

1 ಮರುಭೂಮಿ
2 ಅರೆ ಮರುಭೂಮಿಯ ವಿರಳ ಪೊದೆಗಳು
3 ಜಾಲಿಮರವುಳ್ಳ ಒಣಹುಲ್ಲುಗಾವಲು
4 ಸವನ್ನಾ
5 ಹುಲುಸಾದ ಸವನ್ನಾ ಹುಲ್ಲುಗಾವಲು
6 ಗಿನಿ, ಕಾಂಗೊ ಮತ್ತು ಮಡಗಾಸ್ಕರ್‌ಗಳ ಮಳೆಯ ಕಾಡುಗಳು
7 ಮೆಡಿಟರೇನಿಯನ್ ಮತ್ತು ಪೂರ್ವ ಆಫ್ರಿಕದ ಉನ್ನತ ಪ್ರದೇಶದ ಕಾಡುಗಳು
8 ಅಬಿಸೀನಿಯ (ಈಗಿನ ಇಥಿಯೋಪಿಯ) ಪ್ರಸ್ಥಭೂಮಿಯ ಹುಲ್ಲುಗಾವಲುಗಳು
9 ಸಮಭಾಜಕ ವೃತ್ತದ ಪೂರ್ವ ಆಫ್ರಿಕ ಮತ್ತು ಮಡಗಾಸ್ಕರಿನ ಭೂಮಿಯ ಹುಲ್ಲುಗಾವಲುಗಳು
10 ವೆಲ್ಡ್ ಹುಲ್ಲುಗಾವಲು
11 ನಜಾರ್‌ನ ತಾಳೆಮರದ ಪ್ರದೇಶ
12 ಚೌಗು ಸಸ್ಯ
13 ತೋಪುಗಳು

**ವ್ಯವಸಾಯ :** ಆಫ್ರಿಕದ ಜನರ ಅತ್ಯಂತ ಮುಖ್ಯ ಉದ್ಯೋಗ ವ್ಯವಸಾಯ. ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ವ್ಯವಸಾಯ ಅಲ್ಪ ಪ್ರಮಾಣದ ಮಳೆ ಬೀಳುವ ರಾಜ್ಯಗಳಲ್ಲಿ ದನಕರು ಮತ್ತು ಕುರಿಗಳನ್ನು ಸಾಕುವುದು ಇವರ ಮುಖ್ಯ ಜೀವನೋಪಾಯಗಳು.

ಸಂಪ್ರದಾಯಬದ್ಧವಾದ ವ್ಯವಸಾಯ ಉಷ್ಣವಲಯದ ಭಾಗದಲ್ಲಿ ಸಾಮಾನ್ಯವಾಗಿದೆ. ಇಲ್ಲಿಯ ಬೆಳೆಗಳು ಜೀವನಾಧಾರದವು. ವ್ಯವಸಾಯ ಪದ್ಧತಿಯೂ ವಿಚಿತ್ರವಾದುದು. ಹೊಲದ ಪಕ್ಕದಲ್ಲಿಯೇ ಹಳ್ಳಿ ಇರುತ್ತದೆ. ಮರ ಗಿಡಗಳನ್ನು ಸವರಿ ವ್ಯವಸಾಯಕ್ಕೆ ಅಳವಡಿಸಿ ಕೊಳ್ಳುತ್ತಾರೆ. ನೆಲಗಡಲೆ, ಗೆಣಸು, ಕೆಲವು ರೀತಿಯ ಕಾಳುಗಳು ಯಾಮ್ ಮತ್ತು ಕೆಸ್ಸವ ಎಂಬ ಗೆಣಸಿನ ಜಾತಿಯ ಗೆಡ್ಡೆಗಳು ಮುಂತಾದುವನ್ನು ಬೆಳೆಯುತ್ತಾರೆ. ನೀರಿನ ಸೌಲಭ್ಯವಿದ್ದಲ್ಲಿ ಜೋಳ ಮತ್ತು ಬತ್ತವನ್ನು ಸಹ ಬೆಳೆಯುತ್ತಾರೆ. ಒಂದು ಅಥವಾ ಎರಡು ಬೆಳೆಗಳನ್ನು ತೆಗೆದು ಆ ಭೂಮಿ ನಿಸ್ಸತ್ತ್ವವಾದಾಗ ಅದನ್ನು ಬಿಟ್ಟು ಮತ್ತೊಂದು ಜಾಗಕ್ಕೆ ಹೋಗುವರು. ಇದು ಇಲ್ಲಿನ ವ್ಯವಸಾಯದ ವೈಶಿಷ್ಟ್ಯ. ಈ ಪ್ರದೇಶದ ಇತರ ಉತ್ಪನ್ನಗಳು ತಾಳೆ (ಇದರಿಂದ ಎಣ್ಣೆ ಮತ್ತು ಕೊಬ್ಬರಿಯ ಹಾಗಿರುವ ತಿರುಳನ್ನು ತಯಾರಿಸಿ ಅನೇಕ ರೀತಿಯಲ್ಲಿ ಬಳಸುತ್ತಾರೆ), ಕೋಕೊ, ಕಾಫಿ, ಬಾಳೆ ಮತ್ತು ರಬ್ಬರ್.

ಪಶ್ಚಿಮ ಆಫ್ರಿಕ ತೀರಪ್ರದೇಶದಲ್ಲಿ ಗ್ಯಾಂಬಿಯದ ದಕ್ಷಿಣದ ಕಾಂಗೊ, ಸಿಯಾರ ಲಿಯೋನ್ ಮತ್ತು ನೈಜೀರಿಯಗಳಲ್ಲಿ ತಾಳೆಎಣ್ಣೆ ಮತ್ತು ತಾಳೆ ತಿರುಳು ಹೆಸರುವಾಸಿಯಾಗಿವೆ. ಗಿನಿ ತೀರಪ್ರದೇಶದಲ್ಲಿರುವ ಅನೇಕ ದ್ವೀಪಗಳು, ಘಾನ, ಪಶ್ಚಿಮ ನೈಜೀರಿಯಗಳು ಕೋಕೊ ಬೆಳೆಗೆ ಹೆಸರುವಾಸಿಯಾಗಿವೆ. ಇಥಿಯೋಪಿಯ ಪ್ರಸಿದ್ಧ ಅರೇಬಿಕ ಕಾಫಿಗೆ ತವರುಮನೆ. ಕಾಫಿಯನ್ನು ಸಿಯಾರಲಿಯೋನ್, ಲೈಬೀರಿಯ, ಕಾಂಗೊ, ಅಂಗೋಲ ಮತ್ತು ಪೂರ್ವದ ಬೆಟ್ಟದ ಸೀಮೆಯಲ್ಲಿ ಹೇರಳವಾಗಿ ಬೆಳೆಯುತ್ತಾರೆ. ಮಳೆ ಹೇರಳವಾಗಿ ಬೀಳುವ ಸಮಭಾಜಕವೃತ್ತ ಪ್ರದೇಶದಲ್ಲಿ ಉಷ್ಣವಲಯದ ಕೆಲವು ಭಾಗಗಳಲ್ಲಿ ಬಾಳೇಹಣ್ಣನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ. ಕಾಂಗೊ ಮತ್ತು ಪಶ್ಚಿಮ ಆಫ್ರಿಕಗಳಲ್ಲಿ ರಬ್ಬರಿನ ಗಿಡಗಳು ಹೆಚ್ಚಾಗಿವೆ.

ನದೀ ಕೊಳ್ಳಗಳಲ್ಲಿ ಉತ್ತಮ ರೀತಿಯ ಸುಧಾರಿಸಿದ ವ್ಯವಸಾಯ ಪದ್ಧತಿ ರೂಢಿಯಲ್ಲಿದೆ. ಹತ್ತಿ, ಹೊಗೆಸೊಪ್ಪು, ಗೋದಿ, ಬಾರ್ಲಿ ಮತ್ತು ಅನೇಕ ರೀತಿಯ ಧಾನ್ಯಗಳನ್ನು ನದಿಯ ಬಯಲುಗಳಲ್ಲಿ ಬೆಳೆಯುತ್ತಾರೆ.

ಆಫ್ರಿಕದ ಹತ್ತಿಯ ಬೆಳೆ ದಿನೇ ದಿನೇ ಅಭಿವೃದ್ಧಿ ಹೊಂದುತ್ತದೆ. ಸೂಡಾನ್ ಮತ್ತು ಈಜಿಪ್ಟ್ ದೇಶಗಳು ಹತ್ತಿಯನ್ನು ಹೇರಳವಾಗಿ ಬೆಳೆಯುತ್ತವೆ. ಶ್ಯಾಕಲ್ ಎಂಬ ಜಗತ್ ಪ್ರಸಿದ್ಧವಾದ ಹತ್ತಿಗೆ ಈಜಿಪ್ಟ್ ಹೆಸರಾದ ರಾಷ್ಟ್ರ. ಕಾಂಗೊ, ಉಗಾಂಡ ಮತ್ತು ಗಿನಿ ತೀರದ ರಾಷ್ಟ್ರಗಳಲ್ಲೂ ಹತ್ತಿಯನ್ನು ಬೆಳೆಯುತ್ತಾರೆ.

ಸೆನೆಗಾಲ್, ಗ್ಯಾಂಬಿಯ, ಉತ್ತರ ನೈಜೀರಿಯ ಮತ್ತು ಕಾಂಗೊ ರಾಷ್ಟ್ರಗಳ ಬೆಳೆಗಳಲ್ಲಿ ನೆಲಗಡಲೆಯೂ ಒಂದಾಗಿದೆ. ಈಜಿಪ್ಟ್ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಜೋಳವನ್ನು ಮೇವಿಗಾಗಿಯೇ ಉಪಯೋಗಿಸುತ್ತಾರೆ. ಹೈವೆಲ್ಡ್ ಪ್ರದೇಶ ದಕ್ಷಿಣ ಆಫ್ರಿಕದಲ್ಲಿ ಜೋಳದ ಬೆಳೆಗೆ ಹೆಸರು ಪಡೆದಿದೆ. ಉಷ್ಣವಲಯದ ವಾಯುಗುಣವಿರುವ ಪ್ರದೇಶಗಳಲ್ಲಿ ಹೊಗೆಸೊಪ್ಪು ಅತಿ ಮುಖ್ಯ ಬೆಳೆ. ಸವನ್ನಾದ ನಾಡುಗಳಾದ ಸೂಡಾನ್, ಕಾಂಗೊ ಮತ್ತು ಮಡಗಾಸ್ಕರ್, ರೊಡೀಷಿಯ ಮತ್ತು ದಕ್ಷಿಣ ಆಫ್ರಿಕಗಳಲ್ಲೂ ಹೊಗೆಸೊಪ್ಪನ್ನು ಬೆಳೆಯುತ್ತಾರೆ.

ಉತ್ತರ ಆಫ್ರಿಕದ ಆಲ್ಜೀರಿಯ, ಟ್ಯೂನೀಷಿಯ ಮತ್ತು ಮೊರಾಕೊ ರಾಜ್ಯಗಳು ಗೋದಿ ಮತ್ತು ಬಾರ್ಲಿ ಉತ್ಪಾದನೆಯಲ್ಲಿ ಪ್ರಥಮಸ್ಥಾನ ಪಡೆದಿವೆ. ಮೆಡಿಟರೇನಿಯನ್ ತೀರಪ್ರದೇಶದಲ್ಲಿ ಹಣ್ಣಿನ ತೋಟಗಳು ಬಹುಸಂಖ್ಯೆಯಲ್ಲಿವೆ. ದ್ರಾಕ್ಷಿ ಮುಂತಾದ ಹಣ್ಣುಗಳನ್ನು ಇಲ್ಲಿ ಬೆಳೆಯುತ್ತಾರೆ. ಆಲಿವ್ ಮತ್ತು ದ್ರಾಕ್ಷಿ ತೋಟಗಳಿಗೆ ಈ ಪ್ರದೇಶ ಹೆಸರು ಪಡೆದಿದೆ. ಮೆಡಿಟರೇನಿಯನ್ ಹಣ್ಣುಗಳನ್ನು ಕೇಪ್ ಪ್ರಾಂತ್ಯ, ಟ್ರಾನ್ಸ್‌ವಾಲ್, ನೇಟಾಲ್ ಮತ್ತು ದಕ್ಷಿಣ ರೊಡೀಷಿಯದಲ್ಲೂ ಬೆಳೆಯುವರು.

ದನಕರು ಮತ್ತು ಕುರಿ ಸಾಕುವುದು ಆಫ್ರಿಕದಲ್ಲಿ ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಗಿನಿ ತೀರ, ಸೂಡಾನ್, ಪೂರ್ವ ರಾಜ್ಯಗಳು ಮತ್ತು ದಕ್ಷಿಣ ಆಫ್ರಿಕದ ರಾಜ್ಯಗಳು ದನಕರುಗಳು ಮತ್ತು ಕುರಿಸಾಕಣೆಗೆ ಪ್ರಸಿದ್ಧವಾಗಿವೆ. ಬರ್‌ಬರಿ ರಾಜ್ಯಗಳು (ಮೆಡಿಟರೇನಿಯನ್) ಮತ್ತು ಪೂರ್ವ, ದಕ್ಷಿಣ ಆಫ್ರಿಕದ ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುರಿಗಳನ್ನು ಸಾಕುತ್ತಾರೆ. ದಕ್ಷಿಣ ಆಫ್ರಿಕದಲ್ಲಿ ಎಣ್ಣೆ ಅತಿ ಮುಖ್ಯವಾದ ರಫ್ತಿನ ವಸ್ತುಗಳಲ್ಲೊಂದು. ರೊಡೀಷಿಯ, ಅಂಗೋಲಗಳಲ್ಲಿ ಸಹ ಕುರಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

**ಕೈಗಾರಿಕೆಗಳು :** ಬೃಹತ್ ಕೈಗಾರಿಕೆಗಳು, ಆಫ್ರಿಕದ ಯಾವ ರಾಜ್ಯದಲ್ಲೂ ಇಲ್ಲವೆಂದು ಹೇಳಬಹುದು. ಇಲ್ಲಿ ಕೈಗಾರಿಕೆ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಈಗ ಇರುವ ಕೆಲವೇ ಕೈಗಾರಿಕೆಗಳು ಹೆಚ್ಚಾಗಿ ವ್ಯವಸಾಯ ಅಥವಾ ಖನಿಜಗಳ ಉತ್ಪಾದನೆಗೆ ಸಂಬಂಧಿಸಿದುವು. ರಫ್ತು ಮಾಡುವ ಕಚ್ಚಾಪದಾರ್ಥಗಳನ್ನು ಸಿದ್ಧಪಡಿಸುವ ಅನೇಕ ಕೈಗಾರಿಕೆಗಳು ಇಲ್ಲಿವೆ. ಕೈಗಾರಿಕೆಯ ಪ್ರಗತಿ ಎರಡನೆಯ ಮಹಾಯುದ್ಧಾನಂತರ ಹೆಚ್ಚಾಗಿ ನಡೆದಿದೆ ಎಂದು ಹೇಳಬಹುದು.

ಬೃಹತ್ ಕೈಗಾರಿಕೆಗಳು ಅಲ್ಲೊಂದು ಇಲ್ಲೊಂದು ಇತ್ತೀಚೆಗೆ ಸ್ಥಾಪಿಸಲ್ಪಟ್ಟಿವೆ. ಭಾರಿ ಪ್ರಮಾಣದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ದಕ್ಷಿಣ ಆಫ್ರಿಕದ ಗಣರಾಜ್ಯದಲ್ಲಿ ಸ್ಥಾಪಿಸಿದ್ದಾರೆ. ಇಲ್ಲಿ ರಫ್ತು ಪದಾರ್ಥಗಳನ್ನು ಅಣಿಗೊಳಿಸುವ ಮತ್ತು ಆಹಾರ ಪದಾರ್ಥಗಳನ್ನು ಸಿದ್ಧಗೊಳಿಸುವ ಅನೇಕ ಕಾರ್ಖಾನೆಗಳಿವೆ.

ಇಲ್ಲಿಯ ಕೈಗಾರಿಕೆಯಲ್ಲಿ ಚರ್ಮವನ್ನು ಹದ ಮಾಡುವುದು, ಮರದ ದಿಮ್ಮಿಗಳನ್ನು ಸಿದ್ಧಪಡಿಸುವುದು, ಹತ್ತಿ ಬಟ್ಟೆ ಕೈಗಾರಿಕೆ, ತಾಮ್ರವನ್ನು ಕರಗಿಸುವುದು ಮತ್ತು ಯಂತ್ರೋಪಕರಣಗಳನ್ನು ತಯಾರಿಸುವುದು ಮುಖ್ಯವಾಗಿವೆ. ಈ ಕೈಗಾರಿಕೆಗಳು ಕೆನ್ಯ, ರೊಡೀಷಿಯ, ಈಜಿಪ್ಟ್, ಕಾಂಗೊ ಮತ್ತು ಪಶ್ಚಿಮ ಆಫ್ರಿಕದಲ್ಲಿ ಹೆಚ್ಚಾಗಿವೆ. ತಾಮ್ರವನ್ನು ಕರಗಿಸುವ

ಕೈಗಾರಿಕೆ ಕಾಂಗೊದಲ್ಲೂ, ಹತ್ತಿಬಟ್ಟೆಯ ಉದ್ಯಮ ಸೂಡಾನ್ ಮತ್ತು ಈಜಿಪ್ಟ್‌ಗಳಲ್ಲೂ ತಾಳೆಕಾಯಿಯಿಂದ ಎಣ್ಣೆಯನ್ನು ತೆಗೆಯುವ ಕೈಗಾರಿಕೆ ನೈಜೀರಿಯದಲ್ಲಿಯೂ ಹೆಚ್ಚಾಗಿ ಬೆಳೆದಿವೆ.

ಇತ್ತೀಚೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಬದಲಾವಣೆಗಳಾಗಿವೆ. ಉತ್ತರ ಆಫ್ರಿಕ ಮತ್ತು ಲಿಬಿಯಗಳಲ್ಲಿ ಪೆಟ್ರೋಲಿಯಂ ಉದ್ಯಮ ತೀವ್ರಗತಿಯಲ್ಲಿ ಸಾಗಿದೆ.

ವೊಲುಬಿಲಿಸ್‌ನಲ್ಲಿರುವ ಕಾರಕಲ್ಲ ಕಮಾನು, ಉತ್ತರ ಮೊರಾಕ್ಕೊ

ಈಜಿಪ್ಟ್, ಉಗಾಂಡ ಮತ್ತು ರೊಡೀಷಿಯಗಳಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿ ನಡೆದಿದೆ. ಈಜಿಪ್ಟ್‌ನಲ್ಲಿ ಕಬ್ಬಿಣ, ಉಕ್ಕಿನ ಕೈಗಾರಿಕೆ ಮತ್ತು ಕಾರು ಮುಂತಾದ ವಾಹನಗಳನ್ನು ಜೋಡಿಸುವ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿವೆ. ಉಗಾಂಡದಲ್ಲಿ ಸಕ್ಕರೆಯ ಕಾರ್ಖಾನೆಗಳು ಸ್ಥಾಪಿತವಾಗಿವೆ. ದಕ್ಷಿಣ ಆಫ್ರಿಕದ ರಾಜ್ಯಗಳಲ್ಲಿ ಉಣ್ಣೆ ಬಟ್ಟೆ, ಸಿಮೆಂಟ್, ಸೋಪು, ರಬ್ಬರ್ ಟೈರುಗಳು, ಬೆಣ್ಣೆ ಮತ್ತು ಗಿಣ್ಣುಗಳನ್ನು ತಯಾರಿಸುವುದು ಮುಖ್ಯ ಕೈಗಾರಿಕೆಗಳು.

**ಸಂಚಾರ ವ್ಯವಸ್ಥೆ :** ಆಫ್ರಿಕದಲ್ಲಿನ ಸಂಚಾರ ಸಂಪರ್ಕವನ್ನು ಬೇರೆ ಖಂಡಗಳೊಡನೆ ಹೋಲಿಸಿದರೆ ಖಂಡ ಇನ್ನೂ ಬಹಳ ಹಿಂದುಳಿದಿದೆ ಎಂದು ಹೇಳಬೇಕು. ಇಲ್ಲಿ ಸುಮಾರು 75,00 ಕಿಮೀಗಿಂತ ಹೆಚ್ಚು ಉದ್ದದ ರೈಲು ಮಾರ್ಗವಿದೆ. ಇದರಲ್ಲಿ ಹೆಚ್ಚಿನ ಭಾಗ ದಕ್ಷಿಣ

ಶಿಲಾವರ್ಣಚಿತ್ರ, ತಸ್ಸಿಲಿ ಪ್ರಸ್ಥಭೂಮಿ, ಸಹರ, ಆಫ್ರಿಕ

ಯೂನಿಯನ್ ಆಫ್ ಸೌತ್ ಆಫ್ರಿಕ ಮತ್ತು ಮೆಡಿಟರೇನಿಯನ್ ರಾಜ್ಯಗಳಲ್ಲಿ ಕಂಡುಬರುತ್ತದೆ. ಸಾಧಾರಣ ರಸ್ತೆ ಸಂಪರ್ಕವೂ ಬಹಳ ಕಡಿಮೆ. ಹೆಚ್ಚು ದೂರವಿರುವ ಪ್ರಮುಖ ಪಟ್ಟಣಗಳ ಮಧ್ಯೆ ವಾಯುಮಾರ್ಗ ಸಂಪರ್ಕಗಳಿವೆ. ಮಧ್ಯ ಆಫ್ರಿಕದ ಕೆಲವು ಕಡೆಗಳಲ್ಲೂ ಮರುಭೂಮಿ ವಲಯಗಳಲ್ಲೂ ಸಂಪರ್ಕ ಸಾಧನಗಳ ಕೊರತೆ ಇದೆ. ಸಹರದಲ್ಲೂ ಮಧ್ಯ ಆಫ್ರಿಕದಲ್ಲೂ ಸರಕು ಸಾಗಾಣಿಕೆಗೆ ಒಂಟೆಗಳನ್ನು ಉಪಯೋಗಿಸುತ್ತಾರೆ. ಅನೇಕ ಕಡೆಗಳಲ್ಲಿ ದೋಣಿ ಮುಖ್ಯ ಸಾಗಾಣಿಕೆಯ ಸಾಧನವಾಗಿದೆ. ನೈಲ್ ಮತ್ತು ಕಾಂಗೊ ಮುಂತಾದ ನದಿಗಳಲ್ಲಿ ಕೆಲವು ಕಡೆ ದೋಣಿಯ ಸಂಚಾರಕ್ಕೆ ಅನುಕೂಲತೆಯಿದೆ.

**ವ್ಯಾಪಾರ:** ಆಫ್ರಿಕ ದೇಶಗಳ ಬಹಳಷ್ಟು ವ್ಯಾಪಾರ ಸಂಬಂಧ ಯುರೋಪ್ ಮತ್ತು ಆಂಗ್ಲೊ ಅಮೆರಿಕ ದೇಶಗಳೊಂದಿಗೆ ನಡೆಯುತ್ತದೆ. ರಫ್ತಾಗುವ ಪ್ರಮುಖ ಸರಕುಗಳು–ಕಚ್ಚಾಪದಾರ್ಥ, ನೆಡುತೋಪು, ಬೆಳೆ ಉತ್ಪನ್ನ, ಪಾನೀಯ ಬೆಳೆ ವಸ್ತುಗಳು, ಚರ್ಮ ಮತ್ತು ಚರ್ಮದ ವಸ್ತುಗಳು, ಮಾಂಸ, ಉಣ್ಣೆ, ದಂತ, ಬಿದಿರು, ಮರದತಿರುಳು, ಖನಿಜಗಳು, ಚಿನ್ನ, ತಾಮ್ರ, ಬೆಲೆಬಾಳುವಂತಹ ಲೋಹಗಳು, ಪೆಟ್ರೋಲಿಯಂ ಮತ್ತು ಮರದ ದಿಮ್ಮಿಗಳು ಆಮದಾಗುವ ಪ್ರಮುಖ ಸರಕುಗಳು–ಸಿದ್ಧ ವಸ್ತುಗಳು, ಜವಳಿ ವಸ್ತುಗಳು, ವಿದ್ಯುದುಪಕರಣ, ರಾಸಾಯನಿಕಗಳು, ವಾಹನಗಳು, ಔಷಧಿ ಮತ್ತು ಭಾರಿ ಪ್ರಮಾಣದ ಯಂತ್ರೋಪಕರಣಗಳು.

**ಆಫ್ರಿಕದ ನಾಗರಿಕತೆ :** ಇಪ್ಪತ್ತನೆಯ ಶತಮಾನದ ಆರ್ಥಿಕಾಭಿವೃದ್ಧಿ, ಎರಡು ಮಹಾಯುದ್ಧಗಳ ಪರಿಣಾಮ ಮತ್ತು ಮಹತ್ತರ ರಾಜಕೀಯ ಬದಲಾವಣೆಗಳಿಂದ ಆಫ್ರಿಕದ ನಾಗರಿಕತೆ ಬದಲಾಗಿದೆ. ಅನೇಕ ಮಹಾನಗರಗಳು ಆಧುನಿಕ ರೀತಿಯಲ್ಲಿ ಬೆಳೆಯುತ್ತಿವೆ. ಗ್ರಾಮಾಂತರ ಪ್ರದೇಶವನ್ನು ಕಡೆಗಣಿಸಿ ಅನೇಕ ಹಳ್ಳಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣದ ಕಡೆಗೆ ಧಾವಿಸುತ್ತಿದ್ದಾರೆ. ಈ ಖಂಡದಲ್ಲಿ ಈಚೆಗೆ ರಾಷ್ಟ್ರೀಯ ಮನೋಭಾವ ಎಲ್ಲೆಡೆಗಳಲ್ಲೂ ಉಕ್ಕೇರುತ್ತಿದೆ. ಪರಿಣಾಮವಾಗಿ ಅನೇಕ ರಾಜ್ಯಗಳು ಸ್ವಯಮಾಧಿಕಾರ ಪಡೆದಿವೆ. ಇನ್ನೂ ಸ್ವತಂತ್ರವಾಗದೆ ಉಳಿದ ಕೆಲವು ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರಾದ ಬಿಳಿಯರ ಆಡಳಿತದ ದಮನಕ್ಕೆ ಅನೇಕ ಚಳವಳಿಗಳು ನಡೆಯುತ್ತಿವೆ.

ಖಂಡದ ನಾಗರಿಕತೆಯಲ್ಲಿ ಮಹತ್ತರ ಏರುಪೇರುಗಳನ್ನು ಗುರುತಿಸಬಹುದು. ಈಜಿಪ್ಟ್ ಭವ್ಯ ಸಂಸ್ಕೃತಿಗೆ ಹೆಸರಾಗಿದ್ದು, ನವನಾಗರಿಕತೆಯಲ್ಲೂ ಹಿಂದುಳಿದಿಲ್ಲ. ಆದರೆ ಪೂರ್ವ ಆಫ್ರಿಕದ ಕೆಲವು ರಾಷ್ಟ್ರಗಳಲ್ಲಿ ಏನೂ ಬದಲಾವಣೆಗಳಾಗಿಲ್ಲ. ಬಡತನ, ಅನಾರೋಗ್ಯ, ಅನಕ್ಷರತೆ, ಎಲ್ಲೆಡೆಗಳಲ್ಲೂ ಮನೆಮಾಡಿಕೊಂಡಿವೆ. ಮಂತ್ರ, ಮಾಟ, ಬಹುಪತ್ನೀ ವಿವಾಹ ಮುಂತಾದ ಪದ್ಧತಿಗಳು ಇಂದಿಗೂ ಬಳಕೆಯಲ್ಲಿವೆ.

ಇತ್ತೀಚೆಗೆ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದ ಪರಿಣಾಮವಾಗಿ ಮಹತ್ತರ ಬದಲಾವಣೆಗಳು ಇಲ್ಲೂ ಕಂಡುಬರುತ್ತಿವೆ. ಆಫ್ರಿಕ, ಅನೇಕ ಅಪೂರ್ವ ಅವಶ್ಯ ವಸ್ತುಗಳ ಕಚ್ಚಾಪದಾರ್ಥಗಳ ಕೋಠಿಯಾಗಿದೆ. ಅನೇಕ ಪಾಶ್ಚಾತ್ಯರು ಅತ್ಯಾವಶ್ಯಕ ವಸ್ತುಗಳನ್ನು ಆಫ್ರಿಕದಿಂದ ಪಡೆಯುತ್ತಾರೆ. ಆದ್ದರಿಂದ ಪಾಶ್ಚಾತ್ಯರು ಈ ಹಿಂದುಳಿದ ಜನಾಂಗ ಮತ್ತು ರಾಷ್ಟ್ರಗಳಿಗೆ ಸಹಾಯಹಸ್ತ ನೀಡಲು ತವಕಿಸುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಗಣನೀಯವಾದ ಬದಲಾವಣೆಗಳಾಗಿವೆ. (ಎಸ್.ಎಲ್.ಎಂ.)

**ಆಫ್ರಿಕದ ಕಲೆ :** ಬೆಳಕಿಗೆ ಬಂದದ್ದು ಕಳೆದ ಶತಮಾನದ ಮೊದಲಿಗಷ್ಟೇ. ಫ್ರಾನ್ಸಿನ ಮೆತಿಸ್ ಎಂಬ ಕಲಾಕಾರ ಆಫ್ರಿಕದ ಶಿಲ್ಪವೊಂದನ್ನು ಕಂಡು ತುಂಬ ಪ್ರಭಾವಿತನಾಗಿ ತನ್ನ ಚಿತ್ರಗಳಲ್ಲಿ ಆಫ್ರಿಕದ ಕಲೆಯ ಲಕ್ಷಣಗಳನ್ನು ಬಳಸಲು ಪ್ರಾರಂಭಿಸಿದ. ಪಿಕಾಸೊ, ಡಿರೈನ್ ಮೊದಲಾದ ಕಲಾಕಾರರೂ ಕ್ರಮೇಣ ಈ ಕಲೆಯಿಂದ ಪ್ರಭಾವಿತರಾದರು. ಆವರೆಗೆ ವಸ್ತುಸಂಗ್ರಹಾಲಯಗಳ ಮಾನವಶಾಸ್ತ್ರ ವಿಭಾಗದಲ್ಲಿ ಶೇಖರಿಸಲ್ಪಟ್ಟಂಥ ಆಫ್ರಿಕದ ಕಲೆಯ ನಿದರ್ಶನಗಳನ್ನೂ ಆಫ್ರಿಕ ದೇಶದಲ್ಲೇ ಸಜೀವವಾಗಿದ್ದಂಥ ಸಂಪ್ರದಾಯವನ್ನೂ ತಿಳಿದುಕೊಳ್ಳುವ, ಅಭ್ಯಾಸ ಮಾಡುವ ಪ್ರಯತ್ನವನ್ನು ಅಲ್ಲಿಂದ ಮುಂದೆ ಕಲಾಕಾರರೂ ಮಾನವಶಾಸ್ತ್ರಜ್ಞರೂ ಪ್ರಾರಂಭಿಸಿದರು. ಆಫ್ರಿಕದ ಕಲೆಯ ಕಡೆಗೆ ಗಮನವನ್ನು ಮೊದಲಿಗೆ ಸೆಳೆದವ ಲಿಯೊ ಫ್ರೊಬಿನಸ್. ಈ ವಿಷಯದಲ್ಲಿ ಮೊದಲ ಪುಸ್ತಕ ಬರೆದವ ಕಾರ್ಲ್ ಐನ್‌ಸ್ಟೈನ್.

ದಕ್ಷಿಣದಿಂದ ಉತ್ತರಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ ಆಫ್ರಿಕದ ತುಂಬ ನೂರಾರು ಜನಪ್ರಭೇದಗಳು, ಪಂಗಡಗಳು ಹಬ್ಬಿಕೊಂಡಿವೆ. ಆಷಂಟಿ, ಬಂಬರ, ಬಲೂಬ, ಕೊಗೊನ್, ಡಾನ್, ಸೆನೂಫೊ, ಯಾರುಬ, ಬಾಲ್, ಐಫಿ, ಬಸುಂಡಿ, ಗುರೊ, ಬೊಬೊ ಮೊದಲಾದ ಈ ಪಂಗಡಗಳ ಆಚಾರ ವಿಚಾರ, ನಡೆನುಡಿ, ಮತ ಸಂಸ್ಥೆಗಳಲ್ಲಿ ಎಷ್ಟು ವೈವಿಧ್ಯವಿದೆಯೋ ಅಷ್ಟೇ ಸಾಮರಸ್ಯ, ಕೆಲವು ಸಾಮಾಜಿಕ ಆಚರಣೆಗಳು, ನಂಬಿಕೆಗಳು, ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿವೆ. ಕೆಲವು ಪಂಗಡಗಳ ಮೇಲೆ ಇಸ್ಲಾಂ ಧರ್ಮದ ಪ್ರಭಾವ ಬಿದ್ದಿದ್ದರೂ ಅವು ತಮ್ಮ ಪೂರ್ವಜರ ಪೂಜೆ, ಸಮೃದ್ಧಿಕ್ರಿಯೆ (ಫರ್ಟಿಲಿಟಿ ರೈಟ್ಸ್) ಸಂಪ್ರದಾಯದ ನೃತ್ಯಗಳು, ಇವನ್ನೆಲ್ಲ ಇನ್ನೂ ಉಳಿಸಿಕೊಂಡಿವೆ. ಕೃಷಿ, ಪಶುಸಂಗೋಪನೆಗಳು ತಿಳಿದಿರುವ ಪಂಗಡಗಳಲ್ಲಿ ಪೂರ್ವಜರ ಪೂಜೆ, ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿದ್ದರೆ ಅರಣ್ಯನಿವಾಸಿಗಳಾದ ಪಂಗಡಗಳಲ್ಲಿ ಪ್ರಾಣಿಗಳ, ಪ್ರಾಕೃತಿಕ ದೈವಗಳ ಪೂಜೆಗಳಲ್ಲಿ ಪ್ರಬಲವಾಗಿ ಬೇರೂರಿವೆ. ಈ ಎಲ್ಲ ಪಂಗಡಗಳ ಕಲೆ ಪೂರ್ವಜರ, ಅರಸರ, ಪ್ರಾಣಿ ಪಕ್ಷಿಗಳ, ಇತರ ದೈವಗಳ, ಸಮೃದ್ಧಿಕಾರಕ ಮಾತೃದೇವತೆಯರ ಮೂರ್ತಿಗಳಲ್ಲಿ ಮತ್ತು ಪೂಜೆ, ಬೇಟೆ, ನೃತ್ಯ, ಮರಣ ಮೊದಲಾದ ಸಂದರ್ಭಗಳಲ್ಲಿ ಉಪಯೋಗಿಸುವ ಮುಖವಾಡಗಳಲ್ಲಿ ನಿತ್ಯೋಪಯೋಗಿ ವಸ್ತುಗಳಾದ ಸೌಟು, ಚಿಪ್ಪು, ಪಾತ್ರೆ, ಮನೆಬಾಗಿಲು ಮುಂತಾದುವುಗಳಲ್ಲಿ, ಪಂಗಡದ ನಾಯಕನ ಅಧಿಕಾರದಂಡ, ಸಿಂಹಾಸನಗಳಲ್ಲಿ ಕಂಡುಬರುತ್ತವೆ. ಆಫ್ರಿಕದ ಕಲೆಯ ಹೆಚ್ಚಿನ ನಿದರ್ಶನಗಳು ಮರದ ಕೆತ್ತನೆಗಳು. ಸುಲಭವಾಗಿ ಕೆಲಸಕ್ಕೆ ಬರುವಂಥ ಮರವನ್ನು ಅವರು ಆರಿಸಿಕೊಳ್ಳುತ್ತಾರೆ. ಮುಖವಾಡಗಳಲ್ಲಿ ಹೆಚ್ಚಿನವು ಹಗುರಾದ ಮರಗಳಿಂದ ಮಾಡಲ್ಪಟ್ಟವಾದರೂ ಮಂತ್ರವಾದಿಗಳಂತೆ ಪರಂಪರಾಗತವಾಗಿ ಒಂದು ಸ್ಥಾನದಲ್ಲಿರುವವರು ಉಪಯೋಗಿಸುವ ಮುಖವಾಡಗಳು ಘನವಾದ ಮರದಿಂದ

ಮಾಡಲ್ಪಟ್ಟಿರುತ್ತವೆ. ಇವುಗಳ ಮೇಲೆ ಗೀರುವುದೂ ಬಣ್ಣಗಳನ್ನು ಬಳಿಯುವುದೂ ಕೂದಲೂ ಕನ್ನಡಿಯ ತುಂಡುಗಳನ್ನು ಉಪಯೋಗಿಸುವುದೂ ಇದೆ. ಮೂರ್ತಿಗಳಲ್ಲಿ ಕಂಚಿನ ಎರಕದವು, ದಂತದವು, ಮಣ್ಣಿನವು, ಕಲ್ಲಿನವು ಕೆಲವು ದೊರಕಿದ್ದರೂ ಹೆಚ್ಚಿನವು ಮರದವು. ಕೆಲವಕ್ಕೆ ಬಂಗಾರದ ತೆಳ್ಳಗಿನ ತಗಡಿನ ಹೊದಿಕೆ ಇರುವುದೂ ಉಂಟು.

ಬೇರೆ ಬೇರೆ ಪಂಗಡಗಳಲ್ಲಿ ಶೈಲಿಯ ವೈವಿಧ್ಯವಿದೆ. ಪ್ರಾದೇಶಿಕ ಪರಿಸ್ಥಿತಿ, ಸಾಂಪ್ರದಾಯಿಕ ನಂಬಿಕೆಗಳು ಲಭ್ಯವಿರುವ ಮಾಧ್ಯಮ ಇವುಗಳ ಮೇಲೆ ಶೈಲಿಗಳು ಹೊಂದಿಕೊಂಡಿವೆ. ಆದರೆ ಸರಳ, ಸಹಜ, ಸುಂದರ, ನೈಜವಾಗಿರುವ ಇವರ ಮೂರ್ತಿಶಿಲ್ಪದಲ್ಲಿ ಘನ ಪರಿಮಾಣ ಗಳ ಸಂಯೋಜನೆ, ಭಾವನಾತ್ಮಕ ರಚನೆ, ಪ್ರಮಾಣಗಳ ಸೂಕ್ಷ್ಮ ತಿಳಿವಳಿಕೆ, ಈ ತಿಳಿವಳಿಕೆ ಯಿಂದ ಭಾವನೆಗಳ ಪ್ರಚೋದನೆಗೆ ಬೇಕಾದಂತೆ ಅವುಗಳ ಪ್ರಯೋಗ–ಇವುಗಳಿದ್ದು ವೀಕ್ಷಕರ ಮೇಲೆ ತುಂಬ ಪ್ರಭಾವವನ್ನು ಬೀರುತ್ತವೆ. ಆಕೃತಿ ರೂಪಗಳ ಜೀವಂತಿಕೆ, ಕೊರತೆ ಇಲ್ಲದ ನಿರಾಡಂಬರ ಸರಳತೆ, ಉಪಯೋಗಿಸುತ್ತಿರುವ ಮಾಧ್ಯಮದ ಸಂಪೂರ್ಣ ತಿಳಿವು, ಅದರ ವಿಶೇಷತೆಯ ಸದುಪಯೋಗ ಇವು ಆ ಕಲೆಯ ಮುಖ್ಯ ಲಕ್ಷಣಗಳು.

1897ರಲ್ಲಿ ಬ್ರಿಟಿಷ್ ಸೇನೆಯ ಪಡೆಯೊಂದು ಬ್ರಿಟಿಷ್ ಅಧಿಕಾರಿಯನ್ನು ಕೊಲೆಗೈದ ಬೆನಿನ್ ಪಂಗಡವನ್ನು ದಂಡಿಸಲು ಹೊರಟು ದಂಡರೂಪದಲ್ಲಿ ಬೆನಿನ್‌ನಲ್ಲಿದ್ದ ಎಲ್ಲ ಬೆಲೆಬಾಳುವ ವಸ್ತುಗಳನ್ನೂ ವಶಪಡಿಸಿಕೊಂಡಿತು. ಈ ಸಂಗ್ರಹದಲ್ಲಿ ಸುಮಾರು ಎರಡು ಸಾವಿರಕ್ಕೂ ಹೆಚ್ಚಾಗಿ ಕಲಾಕೃತಿಗಳು ಇದ್ದು ಅವನ್ನು ಈಗ ಯುರೋಪಿನ ಪ್ರಮುಖ ಸಂಗ್ರಹಗಳಲ್ಲೆಲ್ಲ ಸೇರಿಸಲಾಗಿದೆ. ಕಂಚಿನ ಎರಕದ ಅತ್ಯಂತ ಸುಂದರವಾದ ಮಾದರಿಗಳು ಈ ಸಂಗ್ರಹದಲ್ಲಿದ್ದವು. ಇಂಥ ಕೆಲಸದಲ್ಲಿ ಆ ಪಂಗಡದವರಿಗೆ ಅಸಾಧಾರಣ ನೈಪುಣ್ಯ ಇದ್ದು, ನೂರಾರು ವರ್ಷಗಳ ಅನುಭವದ ಹಿನ್ನೆಲೆ ಇರುವುದು ಕಂಡುಬಂದಿತು. ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿರುವ ರಾಜಮಾತೆಯ ಶಿರ ತುಂಬುಗಲ್ಲದ, ತೆರೆದ ಕಣ್ಣುಗಳಿರುವ ಹೆಣ್ಣಿನ ಮುಖವನ್ನು ತೋರಿಸುತ್ತದೆ. ಹಣೆಯ ಮೇಲೆ ಚೂಪಾಗಿರುವ ಕುಲಾವಿಯಂಥ ಟೊಪ್ಪಿ ಇದೆ. ಕುತ್ತಿಗೆಯಲ್ಲಿ ಬಳೆಗಳಂಥ ಆಭರಣಗಳಿವೆ. ಇದು ಸು. 16ನೆಯ ಶತಮಾನ ದ್ದಾಗಿರಬಹುದೆಂದು ಊಹಿಸಲಾಗಿದೆ.

ಇದೇ ಸಂಗ್ರಹದಿಂದ ಬಂದ ಇನ್ನೊಂದು ಮೂರ್ತಿಯಲ್ಲಿ ಸೂಕ್ಷ್ಮವಾಗಿಯೂ ನಾಜೂಕಾಗಿಯೂ ಕೆತ್ತಲ್ಪಟ್ಟ ಶಿರಸ್ತ್ರಾಣ, ಆಭರಣಗಳು ಇದ್ದು, ಅಗಲವಾಗಿ ತೆರೆದ ಕಣ್ಣುಗಳು, ಅಗಲವಾದ ಮೂಗು, ಅರೆತೆರೆದ ತುಟಿಗಳು ಒಟ್ಟಿಗೆ ವೀರಭಾವವನ್ನು ಸೂಚಿಸುತ್ತವೆ. ಇನ್ನೊಂದು ಫಲಕದಲ್ಲಿ ಅರಸನೊಬ್ಬ ತನ್ನ ಪರಿವಾರದವರು ಮತ್ತು ಆಳುಗಳೊಂದಿಗೆ ಚಿತ್ರಿಸಲ್ಪಟ್ಟಿದ್ದಾನೆ. ಬಲಗೈಯಲ್ಲಿ ಅಗಲವಾದ ಅಲಗುಳ್ಳ ಕತ್ತಿ, ಎಡಗೈಯಲ್ಲಿ ಈಟಿ, ತಲೆಯಲ್ಲಿ ಶಿರಸ್ತ್ರಾಣ, ಕತ್ತಿನಲ್ಲಿ ಬಳೆಗಳಂಥ ಆಭರಣ, ಜನಿವಾರದಂತೆ ತೂಗುಬಿದ್ದಿರುವ ಅಗಲವಾದ ಮಾಲೆ, ಸೊಂಟದಿಂದ ಕೆಳಗೆ, ಮೊಣಕಾಲವರೆಗೆ ವಸ್ತ್ರ ಸುತ್ತಿದ ಅರಸನ ಎಡಬಲಗಳಲ್ಲಿ ಈಟಿ, ಢಾಲುಗಳನ್ನು ಹಿಡಿದುಕೊಂಡಿರುವ ಪರಿವಾರದವರು, ಇನ್ನೂ ಚಿಕ್ಕಗಾತ್ರದ ಇಬ್ಬರು ಆಳುಗಳು ಈ ಫಲಕದಲ್ಲಿ ಕಂಡುಬರುತ್ತಾರೆ. ಇದು ಪ್ಯಾರಿಸ್ ನಗರದ ವಸ್ತುಸಂಗ್ರಹಾಲಯದಲ್ಲಿದೆ. ಇನ್ನೊಂದು ಕುದುರೆಸವಾರನ ಮೂರ್ತಿ ಜೂರಿಕ್ ನಗರದ ಸಂಗ್ರಹದಲ್ಲಿದ್ದು, ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಬಹುದಾದ ದೈವಗಳ ಮೂರ್ತಿಗಳನ್ನು ತುಂಬ ಹೋಲುತ್ತದೆ. ಆಷಂಟಿ ಪಂಗಡದವರು ತೂಕದ ಕಲ್ಲುಗಳಾಗಿ ಕಂಚಿನ ಮೀನು, ಹಲ್ಲಿ, ಚೇಳು ಮೊದಲಾದ ಆಕೃತಿಗಳನ್ನು ಉಪಯೋಗಿಸುತ್ತಾರೆ. ಕ್ಯಾಮರೂನ್, ಗೋಲ್ಡ್ ಕೋಸ್ಟ್, ಐವರಿಕೋಸ್ಟ್, ಪ್ರದೇಶಗಳಲ್ಲೂ ಕಂಚಿನ ಕೆಲಸವನ್ನು ಮಾಡುತ್ತಾರೆ. ಆಷಂಟಿ ಹಾಗೂ ಬೌಲ್ ಜನಾಂಗಗಳಲ್ಲಿ ಬಂಗಾರದ ಮುಖವಾಡಗಳಿವೆ.

ಕಲ್ಲಿನ ಮೂರ್ತಿಗಳು ಹೆಚ್ಚಾಗಿ ಬಳಪದ ಕಲ್ಲುಗಳಿಂದ ಮಾಡಲ್ಪಟ್ಟಿವೆ. ಸಿಯಾರಲಿಯೋನ್ ಪ್ರದೇಶದಲ್ಲಿ ಮೆಂಡ್ ಪಂಗಡದವರು ಇಂಥ ಕೆಲಸದಲ್ಲಿ ನುರಿತವರು. ಮೂರ್ತಿಚಿತ್ರಣದ ಸುಂದರ ಮಾದರಿಗಳು ಮರದವು. ಹೆಚ್ಚಿನ ಜನಾಂಗಗಳಲ್ಲಿನ ಮೂರ್ತಿಗಳು ಪೂರ್ವಜರವು. ಸಮೃದ್ಧಿಸೂಚಕ ಮತ್ತು ಮಾತೃದೇವತೆಗಳವು. ಬಕುಬ ಗುಂಪಿನವರ ಒಂದು ಮೂರ್ತಿ ಅವರ ಅರಸ ಕಟಮ್ಯುಲ ಎಂಬುವನನ್ನು ಒಂದು ಕೈಯಲ್ಲಿ ಡೋಲು, ಒಂದು ಕೈಯಲ್ಲಿ ಶಾಂತಿಪ್ರತೀಕವಾದ ದಂಡಗಳನ್ನು ಹಿಡಿದು ಕುಳಿತಿರುವುದನ್ನು ತೋರಿಸು ತ್ತದೆ. ತಲೆಯ ಮೇಲೆ ಚಿಕ್ಕ ಚೌಕಾಕಾರದ ಕಿರೀಟವಿದೆ. ಔರುವ ಪಂಗಡದ ಇನ್ನೊಂದು ಮೂರ್ತಿ ದೊಡ್ಡ ತಲೆ, ಬಡಕಲು ದೇಹ, ದೀನ ಭಾವಗಳ ಭಿಕ್ಷುಕನೊಬ್ಬ ಕೈಯಲ್ಲಿ ಪಾತ್ರೆಯೊಂದನ್ನು ಹಿಡಿದು ಮೊಣಕಾಲೂರಿ ಕೂತಿರುವ ಭಂಗಿಯನ್ನು ತೋರಿಸುತ್ತದೆ. ಇವೆರಡೂ ಮೂರ್ತಿಗಳು ಬೆಲ್ಜಿಯಂ ದೇಶದ ತೆರ್‌ವುರೆನ್ ವಸ್ತುಸಂಗ್ರಹಾಲಯದಲ್ಲಿವೆ. ದೊಗೊನ್ ಪಂಗಡದವರ ಒಂದು ಕಲಾಕೃತಿಯಲ್ಲಿ ಗಂಡು ಹೆಣ್ಣುಗಳು ಒಟ್ಟೊಟ್ಟಿಗೆ ಕುಳಿತಿದ್ದು, ಗಂಡಿನ ಎಡಗೈ ಹೆಣ್ಣಿನ ಕುತ್ತಿಗೆಯನ್ನು ಬಳಸಿದ್ದು ಸುಂದರವಾಗಿದೆ. ಬಡಕಲು ದೇಹ, ನೀಳವಾದ ಕೈಕಾಲುಗಳು, ಉದ್ದವಾದ ಕುತ್ತಿಗೆ, ಎತ್ತರವಾಗಿಯೂ ಚೂಪಾಗಿಯೂ ಇರುವ ಸ್ತನಗಳು, ಕೆಲವೊಮ್ಮೆ ಉಬ್ಬಿದ ನಾಭಿ, ನೈಜವಾದ ರೀತಿಯ ತಲೆಗೂದಲು ಇವುಗಳ ಚಿತ್ರಣಗಳನ್ನು ಹೆಚ್ಚಿನ ಮೂರ್ತಿಗಳಲ್ಲಿ ಕಾಣಬಹುದು.

ಮುಖವಾಡಗಳಲ್ಲಿ ತುಂಬ ವೈವಿಧ್ಯವಿದೆ. ಕೆಲವಲ್ಲಿ ಮನುಷ್ಯರ ಮುಖಗಳಿದ್ದರೆ ಇನ್ನು ಕೆಲವಲ್ಲಿ ಮೃಗಪಕ್ಷಿಗಳ ಆಕೃತಿಗಳಿವೆ. ಕೆಲವಲ್ಲಿ ಬರಿ ಗೀರುಗಳಿದ್ದರೆ ಇನ್ನು ಕೆಲವು ಬಣ್ಣಗಳಿಂದ ಕೂಡಿವೆ. ಕೂದಲು, ಕನ್ನಡಿ ಚೂರುಗಳು, ತಾಮ್ರ, ಕಬ್ಬಿಣದ ಸರಿಗೆಗಳು ಇವುಗಳಲ್ಲಿ ಬಳಕೆಯಾಗಿವೆ. ಬಂಬಾರದವರ ಮುಖವಾಡ ನಾಲ್ಕು ಕೊಂಬುಗಳುಳ್ಳ ಎರಳೆಯ ಮುಖದ ಆಕೃತಿಯಲ್ಲಿದೆ. ಮೊಸ್ಸಿ ಜನಾಂಗದ ಮುಖವಾಡದಲ್ಲಿ ಮೃಗಗಳ ಕೋಡುಗಳ ಮೇಲೆ ಬೆತ್ತಲೆ ನಿಂತ ಸ್ತ್ರೀಮೂರ್ತಿಯೂ ಕಂಡುಬರುತ್ತದೆ. ಇದು ಪ್ರಾಯಶಃ ಸಮೃದ್ಧಿನೃತ್ಯದ ಮುಖವಾಡವಿರಬಹುದು. ಡಾನ್ ಪಂಗಡದ ಮುಖವಾಡಗಳಲ್ಲಿ ಭಾವನೆಗಳು ಎದ್ದು ಕಾಣುತ್ತವೆ. ಈ ಜನಾಂಗ ಸುಂದರವಾದ ಸೌಟು, ಚಿಪ್ಪುಗಳನ್ನು ನಿರ್ಮಿಸಿದೆ. ಪೆನುಘೊ ಪಂಗಡದ ಮುಖವಾಡವೊಂದರಲ್ಲಿ ಎರಳೆಯ ಕೋಡು, ಮೊಸಳೆಯ ಬಾಯಿ ಚಿತ್ರಿತವಾಗಿವೆ. ಈ ಎಲ್ಲ ಮುಖವಾಡಗಳು ಅವುಗಳು ಉಪಯೋಗಿಸಲ್ಪಡುವ ಕಾರ್ಯಕ್ರಮ ಗಳಲ್ಲಿ ಅಲೌಕಿಕತೆಯನ್ನು ಹುಟ್ಟಿಸಲು ತುಂಬ ಸಹಕಾರಿಯಾಗಿವೆ.

ಸಂಗೀತೋಪಕರಣಗಳಲ್ಲಿ ಕೆಲವು ಮನುಷ್ಯಾಕೃತಿಯಲ್ಲಿವೆ. ಇನ್ನು ಕೆಲವು ಉಪಕರಣಗಳ ಹಿಡಿಯ ಮೇಲೆ ಬೇರೆ ಬೇರೆ ಬಗೆಯ ಚಿತ್ರಗಳಿವೆ. ಕೊಡಲಿ, ಕತ್ತಿಗಳ ಹಿಡಿಗಳಲ್ಲಿ ಕೆತ್ತನೆ ಇದ್ದು ಹಿಡಿಯ ಕೊನೆಯಲ್ಲಿ ಹೆಣ್ಣಿನ ಅಥವಾ ಪ್ರಾಣಿಯ ತಲೆ ಇರುತ್ತದೆ. ದಂತದ ಕೆಲಸದ ಅತ್ಯುತ್ತಮ ಮಾದರಿ ಬೆನಿಸ್ ಪಂಗಡದ ಮುಖವಾಡಗಳು. ಇವು ಕಂಚಿನ ಮೂರ್ತಿಗಳಂತೆಯೇ ಇದ್ದು ಬಹಳ ನಾಜೂಕಾಗಿವೆ. ಕೆಲವು ಚಿರತೆಗಳ ಮೂರ್ತಿಗಳೂ ದೊರೆತಿವೆ.

ಐಫಿ ಜನಾಂಗದಲ್ಲಿ ಆಳೆತ್ತರದ ಮಣ್ಣಿನ ಮೂರ್ತಿಗಳನ್ನು ಮಾಡುವ ವಾಡಿಕೆ ಇದ್ದಂತೆ ತೋರುತ್ತದೆ. ಇಂಥ ಅನೇಕ ತಲೆಗಳು, ಅರ್ಧ ದೇಹಗಳು ದೊರೆತಿದ್ದು ಇವು ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದಿನವೆಂದು ನಂಬಲಾಗಿದೆ.

ಆಫ್ರಿಕದಲ್ಲಿ ಚಿತ್ರಗಾರಿಕೆಯ ನಿದರ್ಶನಗಳು ತೀರ ಕಡಿಮೆ. ರೊಡೀಷಿಯದ ಕೆಲವು ಗವಿಚಿತ್ರಗಳು, ದಾಹೊಮಿ ಪ್ರದೇಶ ಮತ್ತು ಬಯಕ್ ಪಂಗಡಗಳಲ್ಲಷ್ಟೇ ಸ್ವಲ್ಪ ಬಣ್ಣಗಾರಿಕೆಯ ನಿದರ್ಶನಗಳು ಸಿಕ್ಕಿವೆ. (ಎಂ.ಎಂ.ಪಿ.)

**ಆಫ್ರಿಕದ ಗುಲಾಮೀ ವ್ಯಾಪಾರ : ನೋಡಿ– ಗುಲಾಮರು, ಗುಲಾಮರ ವ್ಯಾಪಾರ.**

**ಆಫ್ರಿಕದ ಜನಾಂಗಗಳು :** ಜನಾಂಗಗಳ ಅಧ್ಯಯನ ದೃಷ್ಟಿಯಿಂದ ಆಫ್ರಿಕವನ್ನು ಸಹರ ಮರುಭೂಮಿಯ ಉತ್ತರ ಮತ್ತು ದಕ್ಷಿಣ ಎಂದು ಎರಡು ವಲಯಗಳಾಗಿ ವಿಂಗಡಿಸಬಹುದು. ಇಲ್ಲಿರುವ ಜನಾಂಗಗಳಲ್ಲಿ ಅತಿ ಮುಖ್ಯವಾದುವು ಎರಡು: ನೀಗ್ರೊ ಮತ್ತು ಕಾಕಸಾಯಿಡ್. ಈ ಎರಡು ಜನಾಂಗಗಳನ್ನು ಸಹರ ಮರುಭೂಮಿ ಪ್ರತ್ಯೇಕಿಸಿದ್ದರೂ ಎರಡು ಜನಾಂಗಗಳೂ ಅನೇಕ ವಿಧವಾದ ಸಂಪರ್ಕಗಳಿಂದ ಒಂದರ ಮೇಲೊಂದು ಪ್ರಭಾವ ಬೀರಿವೆ.

ಮರುಭೂಮಿಯ ದಕ್ಷಿಣದಲ್ಲಿ ವಾಸಿಸುವ ನೀಗ್ರೊಗಳ ಚರ್ಮ ಮತ್ತು ಕಣ್ಣು ಕಪ್ಪು. ಗುಂಗುರು ಕೂದಲು, ಗೆಡ್ಡೆಮೂಗು, ಉದ್ದನೆಯ ತಲೆ, ಚಾಚುದವಡೆ, ಮಧ್ಯಮವರ್ಗದ ಎತ್ತರ ಮುಂತಾದುವು ಅವರ ಇತರ ಲಕ್ಷಣಗಳು. ಭಾಷಾದೃಷ್ಟಿಯಿಂದ ನಿಗ್ರೋಗಳನ್ನು ಬಂಟು ಮತ್ತು ಸೂಡಾನಿಗಳು ಎಂದು ವಿಭಾಗಿಸಬಹುದು. ಬಂಟು ಭಾಷೆಯಾಡುವವರು ನೀಗ್ರೊ ಆಫ್ರಿಕದ ಮೂರನೇ ಎರಡು ಭಾಗ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ. ಇವರನ್ನು ಉಗಾಂಡ, ಟಾಂಗನೀಕ, ಉತ್ತರ ರೊಡೀಷಿಯ, ಉತ್ತರ ಮೊಜಾಂಬಿಕ್ ಪ್ರದೇಶಗಳ ಪೂರ್ವಬಂಟು ಜನ ಎಂದೂ ಅಂಗೋಲ, ಬೆಲ್ಜಿಯನ್ ಕಾಂಗೊ, ಫ್ರೆಂಚ್ ಈಕ್ವಟೋರಿಯಲ್ ಆಫ್ರಿಕ ಪ್ರದೇಶಗಳ ಪಶ್ಚಿಮ ಬಂಟು ಜನ ಎಂದೂ ಜಾಂಬೆಸಿ ನದಿಯ ಕೆಳ ತೀರಪ್ರದೇಶಗಳ ದಕ್ಷಿಣ ಬಂಟು ಜನ ಎಂದೂ ಮೂರು ಭಾಗಗಳಾಗಿ ವಿಂಗಡಿಸಬಹುದು. ಸಂಸ್ಕೃತಿಯ ದೃಷ್ಟಿಯಿಂದ ನಿಗ್ರೋಗಳನ್ನು ಐದು ಭಾಗಗಳಾಗಿ ವಿಂಗಡಿಸಬಹುದು. ಪೂರ್ವದ ಪಶುಪಾಲನಾ ಕ್ಷೇತ್ರ, ಕಾಂಗೊ, ಗಿನಿ ತೀರಪ್ರದೇಶ, ಪಶ್ಚಿಮ ಸೂಡಾನ್ ಮತ್ತು ಪೂರ್ವ ಸೂಡಾನ್. ಪೂರ್ವದ ಪಶುಪಾಲನಾ ಕ್ಷೇತ್ರದಲ್ಲಿ ವಿಶೇಷವಾಗಿ ಪಶುಪಾಲನೆಯೇ ಮುಖ್ಯ ವೃತ್ತಿ. ಅಲ್ಲಿ ವ್ಯವಸ್ಥಿತ ಸಣ್ಣ ರಾಜ್ಯಗಳು ಕಡಿಮೆ. ಕಾಂಗೊ ಮತ್ತು ಗಿನಿತೀರ ಪ್ರದೇಶಗಳ ಸಂಸ್ಕೃತಿಯಲ್ಲಿ ಸುವ್ಯವಸ್ಥಿತವಾದ ಮತ್ತು ಬಲಯುತವಾದ ರಾಜ್ಯಗಳು ವಿಶೇಷವಾಗಿವೆ. ಅದರ ಜೊತೆಗೆ ನಗರೀಕರಣ ಸಂಸ್ಕೃತಿ, ಧಾರ್ಮಿಕ ಮತ್ತು ಮತೀಯ ಆಡಳಿತ ವ್ಯವಸ್ಥೆ, ಗುಪ್ತ ಧಾರ್ಮಿಕ ಸಂಘಗಳು, ಶಿಲ್ಪ ವರ್ಣಚಿತ್ರ ಮುಂತಾದ ಕಲೆಗಳನ್ನು ನೋಡಬಹುದು. ಸೂಡಾನಿನಲ್ಲಿ ಮುಸ್ಲಿಮರ ಪ್ರಭಾವವನ್ನು ವಿಶೇಷವಾಗಿ ಕಾಣಬಹುದು. ಆದರೆ ಇದು ಕೆಲವು ಮುಖ್ಯ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದು, ಹಳ್ಳಿಗಳಲ್ಲಿ ಅವರ ಮುಂಚಿನ ಸಂಸ್ಕೃತಿಯೇ ಉಳಿದುಬಂದಿದೆ. ಪಿತೃದೇವತಾಪೂಜೆ, ಮಡಿಕೆಗಳನ್ನು ಮಾಡುವುದು, ಕಬ್ಬಿಣದ ಕೆಲಸ, ವ್ಯವಸಾಯ ಇವರ ಮುಖ್ಯ ಲಕ್ಷಣಗಳು. ಇಲ್ಲಿ ಪಶುಪಾಲನೆ ಬಹಳ ಕಡಿಮೆ. ನಾಯಿ, ಕುರಿ, ಹಂದಿ, ಕೋಳಿಗಳೇ ಇವರ ಸಾಕು ಪ್ರಾಣಿಗಳು. ಸೂಡಾನಿನ ಸ್ಟೆಪ್ಪಿಸ್ ಪ್ರದೇಶಗಳಲ್ಲಿ ಪಶುಪಾಲನೆಯೇ ಮುಖ್ಯ ವೃತ್ತಿ.

ಸಹರ ಮರುಭೂಮಿಯ ದಕ್ಷಿಣದಲ್ಲಿ ನೀಗ್ರೊಗಳಿಗಿಂತ ಸ್ವಲ್ಪ ಭಿನ್ನವಾದ ಹಾಟೆನ್‌ಟೊ, ಪಿಗ್ಮಿ ಮತ್ತು ಬುಷ್‌ಮೆನ್ ಬುಡಕಟ್ಟಿನವರು ವಾಸಿಸುತ್ತಾರೆ. ಇವರು ನೀಗ್ರೊಗಳಂತೆಯೇ ಕಂಡರೂ ಅವರಿಗಿಂತ ಭಿನ್ನವಾದ ಭಾಷೆ ಮತ್ತು ಲಕ್ಷಣಗಳನ್ನು ಹೊಂದಿದ್ದಾರೆ. ಇವರನ್ನು ನೀಗ್ರಾಯಿಡ್ ಎಂದು ಕರೆಯುತ್ತಾರೆ. ಕಲಹರಿ ಮರುಭೂಮಿ ಮತ್ತು ಕಾಂಗೊ ಪ್ರದೇಶಗಳ ದುರ್ಗಮವಾದ ಒಳನಾಡಿನಲ್ಲಿ ಇವರು ವಾಸಿಸುತ್ತಾರೆ. ಬಹುಶಃ ಇವರು ಆಫ್ರಿಕದ ಮೂಲನಿವಾಸಿಗಳಾಗಿದ್ದು, ನೀಗ್ರೊಗಳ ದಾಳಿಯಿಂದ ಒಳನಾಡಿನಲ್ಲಿ ಹೋಗಿ ನೆಲೆಸಿದವರಿರ ಬೇಕೆಂದು ಹೇಳಬಹುದು.

ಆಫ್ರಿಕದಲ್ಲಿ ವಾಸಮಾಡುವ ನೀಗ್ರೊ ಅಥವಾ ನೀಗ್ರಾಯಿಡ್ ಜನಾಂಗದಲ್ಲಿ ಅನೇಕ ಪ್ರಭೇದಗಳಿವೆ. ನೀಗ್ರೊಗಳಿಗಿರುವ ಮುಖ್ಯ ಲಕ್ಷಣಗಳೇ ಇವರಲ್ಲೂ ಇದ್ದರೂ ಸಾಂಸ್ಕೃತಿಕ ಮತ್ತು ಭಾಷಾ ಭೇದಗಳನ್ನು ಈ ವಿವಿಧ ಜನಾಂಗಗಳಲ್ಲಿ ಕಾಣಬಹುದು. ಮುಖ್ಯವಾದ ನೀಗ್ರೊ ಪ್ರಭೇದಗಳನ್ನು ಇಲ್ಲಿ ಗಮನಿಸಲಾಗಿದೆ.

ಅಕನ್ ಎಂಬ ಜನಾಂಗದವರು ಟ್ವಿ ಅಥವಾ ಟ್ವಿ ಎಂಬ ಭಾಷೆಯನ್ನು ಮಾತನಾಡುತ್ತಾರೆ. ಸುಮಾರು ಮೂವತ್ತು ಲಕ್ಷಕ್ಕೂ ಮೀರಿದ ಜನಸಂಖ್ಯೆ ಇವರದು. ಇವರಲ್ಲಿ ಜನನಾಂಗದ ಮುಂದೊಗಲ ಭಾಗವನ್ನು ಕತ್ತರಿಸಿ ಹಾಕುವ ಮತೀಯ ಸಂಸ್ಕಾರ ಇಲ್ಲ. ಸುವ್ಯವಸ್ಥಿತ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಮತೀಯ ಸಂಸ್ಥೆಗಳಿವೆ. ಕುಶಲಕಲೆಗಳಲ್ಲಿ ಬಟ್ಟೆ ನೇಯುವುದು ಮತ್ತು ಹಿತ್ತಾಳೆಯ ಕೆಲಸ ಮುಖ್ಯವಾದುವು.

ಆಷಂಟಿ ಎಂಬ ಸುಮಾರು ಆರು ಲಕ್ಷ ಜನ ಗೋಲ್ಡ್ ಕೋಸ್ಟ್‌ನಲ್ಲಿ ವಾಸಿಸುತ್ತಾರೆ. ಇವರ ರಾಜ್ಯ ಅನೇಕ ಯುದ್ಧಗಳ ಅನಂತರ ಬ್ರಿಟಿಷರ ವಶವಾಯಿತು. ಇವರ ರಾಜಧಾನಿ ಯಾಗಿದ್ದ ಕುಮಸಿ ಪೂರ್ಣವಾಗಿ ನಾಶಮಾಡಲ್ಪಟ್ಟಿತು.

ಸುಮಾರು ಐದು ಲಕ್ಷವಿರುವ ಎಡೊವರು ದಕ್ಷಿಣ ನೈಜೀರಿಯದಲ್ಲಿ ವಾಸಿಸುತ್ತಿದ್ದರು. ಇವರಲ್ಲಿ ಬಿನಿ, ಎಸ, ಸೋಬೊ ಮುಂತಾದ ಹದಿನೈದು ಒಳಪಂಗಡಗಳು ಇದ್ದುವು. ಮೊಟ್ಟಮೊದಲನೆಯದಾಗಿ ಹದಿನೈದನೆಯ ಶತಮಾನದಲ್ಲಿ ಪೋರ್ಚುಗೀಸರು ಇಲ್ಲಿಗೆ ಬಂದಾಗ ಇವರ ರಾಜಧಾನಿಯಾದ ಬೆನಿನ್ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಸುವ್ಯವಸ್ಥಿತ ಆಡಳಿತ ಪದ್ಧತಿ, ಬಹು ಉತ್ತಮವಾದ ಕಂಚಿನ ಕೆಲಸ, ದಂತದ ಕೆತ್ತನೆ ಮುಂತಾದುವು ಇವರ ವೈಶಿಷ್ಟ್ಯ. ಬ್ರಿಟಿಷ್ ಅಧಿಕಾರಿಯೊಬ್ಬ ಇವರ ನರಬಲಿಯನ್ನು ನೋಡಲು ಹೋಗಿ ತಾನೇ ಬಲಿಯಾದ. ಇದರಿಂದ ಕೋಪಗೊಂಡ ಬ್ರಿಟಿಷರು ಬೆನಿನ್ ನಗರವನ್ನು ನಾಶಮಾಡಿ ಅಲ್ಲಿಯ ಕಲಾವೈಶಿಷ್ಟ್ಯಗಳೆಲ್ಲವನ್ನೂ ಯುರೋಪಿಗೆ ಸಾಗಿಸಿದರು. ರಾಜ ಹತನಾದ. 1914ರಲ್ಲಿ ರಾಜನ ಮಗ ಸಿಂಹಾಸನಕ್ಕೆ ಬಂದ.

ಫುಲನಿ ಅಥವಾ ಫಿಲಸಿ ಎಂದು ಪ್ರಖ್ಯಾತವಾಗಿರುವ ನೀಗ್ರೊ ಜನಗಳು ಚಾಡ್ ಸರೋವರ ಮತ್ತು ಸೆನೆಗಲ್ ನದಿಯ ತೀರಪ್ರದೇಶಗಳಲ್ಲಿ ವಾಸವಾಗಿದ್ದರು. ಅವರ ಜನಸಂಖ್ಯೆ ಅರುವತ್ತು ಲಕ್ಷ. ಮುಖ್ಯ ವೃತ್ತಿ ಪಶುಪಾಲನೆ. ಅಕ್ಕಪಕ್ಕದ ಜನಾಂಗಗಳ ಮೇಲೆ ದಂಡೆತ್ತಿ ಹೋಗಿ ಬಲಯುತವಾದ ರಾಜ್ಯವನ್ನು ಕಟ್ಟಿದರು. 1903ರಲ್ಲಿ ಫ್ರೆಂಚರು ಇವರನ್ನು ಪೂರ್ಣವಾಗಿ ಸೋಲಿಸಿದರು.

ಉತ್ತರ ನೈಜೀರಿಯದಲ್ಲಿ ವಾಸಿಸುವ ಹೌಸ್ ಎಂಬ ಸಮುದಾಯದವರು ಸುಮಾರು ಐದು ಲಕ್ಷ ಇರಬಹುದು. ಇವರು ಅರಬ್ಬೀ ಲಿಪಿಯನ್ನು ಉಪಯೋಗಿಸುತ್ತಿದ್ದರೂ ಫುಲನಿಯಿಂದ ಸೋಲಿಸಲ್ಪಡುವ ಮುಂಚೆ ಇವರಲ್ಲಿ ಮಹಮ್ಮದೀಯ ಧರ್ಮ ಪ್ರಚಲಿತವಾಗಿದ್ದಿತು. ಇವರು ಅಂಥ ಸುಸಂಸ್ಕೃತ ಜನರೇನೂ ಅಲ್ಲ.

ಬಂಟರ ಅಥವಾ ಜನ್ಮನ ಎಂದು ಪ್ರಸಿದ್ಧವಾಗಿರುವ ಸುಮಾರು ಹನ್ನೆರಡು ಲಕ್ಷ ಜನ ಫ್ರೆಂಚ್ ಸೂಡಾನಿನ ಕೆಲವು ಭಾಗಗಳಲ್ಲಿದ್ದಾರೆ. ಇವರಲ್ಲಿ ಹಲವರು ಇಸ್ಲಾಂ ಧರ್ಮಾವಲಂಬಿಗಳು. ವ್ಯವಸಾಯ, ಮೀನು ಹಿಡಿಯುವುದು ಮತ್ತು ಪಶುಪಾಲನೆ ಇವರ ಮುಖ್ಯವೃತ್ತಿಗಳು. ಇವರು ಕರ್ತ ಮತ್ತು ಸೆಗು ಎಂಬ ಬಲಯುತ ರಾಜ್ಯಗಳನ್ನು ಹದಿನೇಳನೆಯ ಶತಮಾನದಲ್ಲಿ ಸ್ಥಾಪಿಸಿದ್ದರು.

ಎ ಹೊವೆ ಎಂಬ ಹತ್ತು ಲಕ್ಷ ಜನ ದಕ್ಷಿಣ ಟೋಗೋಲ್ಯಾಂಡ್ ಮತ್ತು ಗೋಲ್ಡ್ ಕೋಸ್ಟ್‌ನ ಕೆಲವು ಭಾಗಗಳಲ್ಲಿ ವಾಸಿಸುತ್ತಿದ್ದರು. ಸುವ್ಯವಸ್ಥಿತ ಆಡಳಿತ ವ್ಯವಸ್ಥೆಯನ್ನು ಇವರು ಹೊಂದಿದ್ದರು. ದಕ್ಷಿಣ ನೈಜೀರಿಯದ ಐಬೋ ಜನರು ಸುಸಂಸ್ಕೃತರು. ಇವರು ಮರದ ಕೆತ್ತನೆ ಕೆಲಸಗಳಲ್ಲಿ ನಿಷ್ಣಾತರು. 1948ರಲ್ಲಿ ನೈಜೀರಿಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ವಿಶೇಷವಾಗಿ ಇವರು ಪಾಶ್ಚಾತ್ಯ ಪ್ರಭಾವಕ್ಕೊಳಗಾದವರು. ಫ್ರೆಂಚ್, ಸೂಡಾನ್, ಸೆನೆಗಲ್, ಮತ್ತು ಗಿನಿಗಳಲ್ಲಿ ವಾಸಿಸುವ ಮಲಿಂಕೆ ಸಮುದಾಯದ ಜನಸಂಖ್ಯೆ ಆರು ಲಕ್ಷ. ಭಾಷೆ ಮತ್ತು ಸಂಸ್ಕೃತಿಯಲ್ಲಿ ಅವರು ಬಂಬರರನ್ನು ಹೋಲುತ್ತಾರೆ. ಹನ್ನೊಂದ ರಿಂದ ಹದಿನೇಳನೆಯ ಶತಮಾನದವರೆಗೆ ಇವರು ಮಾಲಿ ಎಂಬ ಸುಭದ್ರ ರಾಜ್ಯವನ್ನು ಸ್ಥಾಪಿಸಿದ್ದರು. ಕನುರಿ ಜನರು ನೈಜೀರಿಯದ ಕೆಲವು ಭಾಗಗಳಲ್ಲಿದ್ದರು. ಫುಲನಿ ರಾಜ್ಯ ಬಲವಾದ ಮೇಲೆ ಇವರ ಪ್ರಾಬಲ್ಯ ಕಡಿಮೆಯಾಯಿತು. ಸಂಸ್ಕೃತಿಯಲ್ಲಿ ಇವರು ಹೌಸ್ ಜನಾಂಗವನ್ನು ವಿಶೇಷವಾಗಿ ಹೋಲುತ್ತಾರೆ. ನೈಜೀರಿಯದಲ್ಲಿರುವ ಮತ್ತೊಂದು ಸಮುದಾಯ ದವರೆಂದರೆ ನ್ಯೂಪೆ. ಅವರ ರಾಜಧಾನಿ ಬಿಡ, ಫುಲನಿಗೆ ವಶವಾಯಿತು. ಇವರಲ್ಲಿ ಭಿನ್ನಗೋತ್ರ ವಿವಾಹ, ಪಿತೃಯಾಜಮಾನ್ಯ ಪದ್ಧತಿ ಮುಖ್ಯವಾದುವು. ಇವರ ಕುಶಲಕಲೆಗಳಲ್ಲಿ ಗಾಜಿನ ಮಣಿಗಳು, ಬಳೆಗಳು ಮುಖ್ಯವಾದುವು.

ಮೊಸ್ಸಿ, ಮಂಡೆ, ಮಂಗ್ಬೆಟ್ಟು, ನ್ಯೂಬ ಸಮುದಾಯಗಳು ಸೂಡಾನ್, ಐವರಿಕೋಸ್ಟ್, ಕಾಂಗೊ ಪ್ರದೇಶಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. ಮಂಡೆ ಸೂಡಾನಿನ ಭಾಷೆಯ ಮುಖ್ಯ ಪ್ರಭೇದ. ಮಂಗ್ಬೆಟ್ಟು ರಾಜ್ಯ ಹತ್ತೊಂಬತ್ತನೆಯ ಶತಮಾನದವರೆಗೂ ಒಬ್ಬ ರಾಜನ ಆಳ್ವಿಕೆಯಲ್ಲಿತ್ತು. ಇವರ ಮುಖ್ಯ ಆಹಾರ ಬಾಳೆಯಹಣ್ಣು. ಮೊಸ್ಸಿ ಜನರು ಸಂಸ್ಕೃತಿ ಬಂಬರರನ್ನು ಹೋಲುತ್ತದೆ. ಇಸ್ಲಾಂ ಧರ್ಮವನ್ನು ಪ್ರತಿಭಟಿಸಿ ನಿಂತವರಲ್ಲಿ ಮೊಸ್ಸಿ ರಾಜ್ಯ ಬಹು ಮುಖ್ಯವಾದುದು. ಈ ರಾಜ್ಯ ಬಲಯುತವಾಗಿದ್ದವರೆಗೂ ಸೂಡಾನಿನಲ್ಲಿ ಇಸ್ಲಾಂ ಮುಖ್ಯಧರ್ಮವಾಗಲು ಸಾಧ್ಯವಾಗಲಿಲ್ಲ. ನ್ಯೂಬ ಜನರು ವಿಶೇಷವಾಗಿ ಅರಬ್ಬೀ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿದ್ದಾರೆ. ವ್ಯವಸಾಯ ಮತ್ತು ಪಶುಪಾಲನೆ ಇವರ ಮುಖ್ಯ ಕಸುಬು. ಪ್ರಾಚೀನ ಕಾಲದಲ್ಲಿ ನ್ಯೂಬ ಹೆಂಗಸರು ಎಲೆಗಳಿಂದ ತಮ್ಮ ಶರೀರ ಭಾಗಗಳನ್ನು ಮುಚ್ಚಿಕೊಳ್ಳುತ್ತಿದ್ದರು. ಪುರುಷರು ಬೆತ್ತಲೆಯಾಗಿ ಓಡಾಡುತ್ತಿದ್ದರು. ಇವರಲ್ಲಿ ಮಾತೃಯಾಜಮಾನ್ಯ ಪದ್ಧತಿಯಿತ್ತು. ಹಳ್ಳಿಹಳ್ಳಿಗೂ ಭಿನ್ನಭಾಷೆಗಳಿದ್ದುವು. ಅನೇಕಸಾರಿ ಒಂದು ಹಳ್ಳಿಯವರಿಗೆ ಮತ್ತೊಂದು ಹಳ್ಳಿಯ ಭಾಷೆ ಅರ್ಥವಾಗುತ್ತಿರಲಿಲ್ಲ.

ಯಾರುಬ ಎಂಬ ಜನ ಆಫ್ರಿಕದ ಮುಖ್ಯ ಬುಡಕಟ್ಟುಗಳ ಸಮುದಾಯ. ಸುಮಾರು ಮೂವತ್ತೈದು ಲಕ್ಷ ಜನಸಂಖ್ಯೆಯ ಯಾರುಬರು ನೈಜೀರಿಯದ ಕೆಲವು ಭಾಗಗಳಲ್ಲಿದ್ದರು. ಇವರಲ್ಲಿ ಅನೇಕ ಸ್ವತಂತ್ರ ರಾಜ್ಯಗಳಿದ್ದು, ಪ್ರತಿಯೊಬ್ಬ ರಾಜನಿಗೂ ಮಣಿಗಳಿಂದ ಮಾಡಿದ ಕಿರೀಟವಿರುತ್ತಿತ್ತು. ಈ ರಾಜರ ಕೈಕೆಳಗೆ ಪಿಕೆಟು, ಅಹೊರಿ, ಎಗ್ಬ, ಎಕಿಟಿ, ಓಂಡೊ ಮುಂತಾದ ಸಣ್ಣ ಸಣ್ಣ ಬುಡಕಟ್ಟುಗಳ ಜನರು ಇದ್ದರು. ಸಾಮಾನ್ಯವಾಗಿ ಇವರು ನಗರದಲ್ಲಿ ವಾಸಿಸುತ್ತಿದ್ದರು. ಇವರ ನಗರಗಳಲ್ಲಿ ದೊಡ್ಡ ಕೋಟೆಗಳೂ ಅದರ ಮಧ್ಯದಲ್ಲಿ ರಾಜನ ಅರಮನೆಯೂ ಇರುತ್ತಿತ್ತು. ರಾಜರಿಗೆ ಅನೇಕ ವರ್ಗದ ಅಧಿಕಾರಿಗಳಿರುತ್ತಿದ್ದರು. ಭಿನ್ನಗೋತ್ರವಿವಾಹ ಮತ್ತು ಪಿತೃಯಾಜಮಾನ್ಯ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಕೆಲವು ನಾಗರಿಕತೆಯಿಂದ ಹಿಂದುಳಿದ ಬುಡಕಟ್ಟಿಗೆ ಸೇರಿದ ಜನರು ಗುಲಾಮರಾಗಿದ್ದರು. ಮೆಕ್ಕೆಜೋಳದ ವ್ಯವಸಾಯ, ಮೀನುಗಾರಿಕೆ ಮತ್ತು ಬೇಟೆ ಇವರ ಮುಖ್ಯ ಕಸುಬು. ಇವರಲ್ಲಿ ನಾಲ್ಕು ನೂರಕ್ಕೂ ಹೆಚ್ಚು ದೇವತೆಗಳಿದ್ದರು. ಮಾಯ, ಮಾಟ, ಪಿತೃಪೂಜೆ, ನರಬಲಿ ಮುಂತಾದವು ಇವರ ಮುಖ್ಯ ಮತೀಯ ಭಾವನೆಗಳು. ಇವರು ಕುಶಲಕಲೆಗಳಲ್ಲಿ ವಿಶೇಷ ಪ್ರಾವೀಣ್ಯವನ್ನು ಪಡೆದಿದ್ದರು. ಇವರ ಮರದ ಕೆತ್ತನೆಯ ಕೆಲಸ ಮತ್ತು ಕಂಚಿನ ಶಿಲ್ಪಗಳು ಅತ್ಯುತ್ತಮ ಮಟ್ಟವನ್ನು ಮುಟ್ಟಿದುವು. ಒಟ್ಟಿನಲ್ಲಿ ಹೇಳುವುದಾದರೆ ಯಾರುಬರು ನೀಗ್ರೊ ಬುಡಕಟ್ಟು ಪಂಗಡಗಳಲ್ಲಿ ಬಹು ಮುಖ್ಯರಾದವರು.

ಸರಕೊಲ್ಲೆ, ಸೆನುಫೂ ಮತ್ತು ಸೊಂಘೈ ಜನರು ಫ್ರೆಂಚ್ ಸೂಡಾನ್ ಮತ್ತು ಐವರಿಕೋಸ್ಟ್‌ನಲ್ಲಿದ್ದ ಮುಖ್ಯ ಜನಸಮುದಾಯಗಳು. ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಸರಕೊಲ್ಲೆ ಜನರು ಬಂಬರರನ್ನು ವಿಶೇಷವಾಗಿ ಹೋಲುತ್ತಾರೆ. ಇವರಲ್ಲಿ ಇಸ್ಲಾಂ ಧರ್ಮವೇ ವಿಶೇಷವಾಗಿದೆ. ಇವರ ಮುಖ್ಯ ರಾಜ್ಯವಾದ ಘಾನ, ಪಶ್ಚಿಮ ಸೂಡಾನನ್ನು ಎಂಟರಿಂದ ಹತ್ತನೆಯ ಶತಮಾನದವರೆಗೆ ಆಕ್ರಮಿಸಿಕೊಂಡಿತ್ತು. ಹನ್ನೊಂದನೆಯ ಶತಮಾನದಲ್ಲಿ ಘಾನ ಮಹಮ್ಮದೀಯರ ಆಳ್ವಿಕೆಗೆ ಸೇರಿಹೋಯಿತು. ಇದು ಬಹಳ ಸಂಪದ್ಯುಕ್ತವಾದ ರಾಜ್ಯವಾಗಿದ್ದಿತು. ಸರಕೊಲ್ಲೆಯ ಮುಖ್ಯ ನಗರವಾದ ಜೆನ್ನ ಟಿಂಬಕ್ಟುವನ್ನೂ ವ್ಯಾಪಾರದಲ್ಲಿ ಮೀರಿಸಿದ್ದಿತು. ಹದಿನೈದನೆಯ ಶತಮಾನದಲ್ಲಿ ಸರಕೊಲ್ಲೆ ಅವನತಿಯನ್ನು ಹೊಂದಿತು ಮತ್ತು ಸೊಂಘೈ ಪ್ರವರ್ಧಮಾನಕ್ಕೆ ಬಂದಿತು. ಸೊಂಘೈ ರಾಜ್ಯ ಸರಕೊಲ್ಲೆಯನ್ನು ವಶಮಾಡಿ ಕೊಂಡು ಹದಿನೇಳನೆಯ ಶತಮಾನದವರೆಗೆ ಚೆನ್ನಾಗಿ ಅಭಿವೃದ್ಧಿ ಹೊಂದಿತು. ಇದರ ಮುಖ್ಯ ನಗರವಾದ ಟಿಂಬಕ್ಟು ವ್ಯಾಪಾರ ಮತ್ತು ವಿದ್ಯಾಭ್ಯಾಸದಲ್ಲಿ ವಿಶೇಷ ಪಾತ್ರವನ್ನು ವಹಿಸಿ ಸಮಕಾಲೀನ ಮಹಮ್ಮದೀಯ ನಗರಗಳಲ್ಲಿ ಪ್ರಮುಖವೆನಿಸಿಕೊಂಡಿದ್ದಿತು. ಐವರಿಕೋಸ್ಟಿನ ಸೆನುಫೊ ಬಂಬರ ಸಂಸ್ಕೃತಿಯ ಲಕ್ಷಣಗಳನ್ನೇ ಹೊಂದಿದ್ದು, ಮರದ ಕೆತ್ತನೆಯ ಕೆಲಸಕ್ಕೆ ಬಹಳ ಪ್ರಸಿದ್ಧವಾಗಿತ್ತು.

ವೈ ಎಂಬ ಜನ ಪಶ್ಚಿಮ ಲೈಬೀರಿಯದಲ್ಲಿ ಮುಖ್ಯವಾಗಿದ್ದಿತು. ಇವರು ಬತ್ತವನ್ನು ವಿಶೇಷವಾಗಿ ಬೆಳೆಯುತ್ತಿದ್ದರು. ಇವರು ಭಿನ್ನಗೋತ್ರವಿವಾಹ, ಪಿತೃಯಾಜಮಾನ್ಯ ಪದ್ಧತಿಗಳನ್ನು ರೂಢಿಸಿಕೊಂಡಿದ್ದರು. ಇವರು ಗಂಡು ಮಕ್ಕಳಿಗೆ ಬೆರಿ ಎಂಬ ಗುಪ್ತ ಶಾಲೆಯಲ್ಲಿಯೂ ಮತ್ತು ಹೆಣ್ಣುಮಕ್ಕಳಿಗೆ ಸಂಡೆ ಎಂಬ ಗುಪ್ತಶಾಲೆಯಲ್ಲಿಯೂ ಅನೇಕ ಧಾರ್ಮಿಕ ವಿಚಾರಗಳನ್ನು ಮೂರು–ನಾಲ್ಕು ವರ್ಷ ಕಲಿಸುತ್ತಿದ್ದರು. ವೈ ಜನಗಳ ವೈಶಿಷ್ಟ್ಯವೆಂದರೆ, ಅವರು ತಮ್ಮದೇ ಆದ ಒಂದು ಲಿಪಿಯನ್ನು ಸಿದ್ಧಪಡಿಸಿಕೊಂಡಿದ್ದರು.

ಈ ಮೇಲೆ ಹೇಳಿದ ಸಮುದಾಯಗಳಲ್ಲದೆ ಟೀವ್, ಟೆಮ್ನೆ, ಟೆಲೆನ್ಸಿ, ಕ್ರು, ಕ್ಪೆಲ್ಲೆ, ಐಬಿಬಿಯೊ, ಗ್ರೆಬೊ ಗಾ, ಬೌಲೆ, ಬಸ, ಅಕಿಮ್ ಎಂಬ ಇತರ ಜನಾಂಗಗಳು ನೀಗ್ರೊ ಆಫ್ರಿಕದಲ್ಲಿ ವಾಸಿಸುತ್ತಿದ್ದವು. ಸಾಂಸ್ಕೃತಿಕ ದೃಷ್ಟಿಯಿಂದ ಅವರು ಒಂದಲ್ಲ ಒಂದು ಪ್ರಸಿದ್ಧ ಬಣದವರನ್ನೇ ಹೋಲುತ್ತಿದ್ದರು.

ನೈಲೋಟಿಕ್ ಎಂಬ ಭಾಷಾವರ್ಗಕ್ಕೆ ಸೇರಿದ ಅನೇಕ ಜನಾಂಗಗಳು ನೀಗ್ರೊ ಆಫ್ರಿಕದಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಮಸೈ, ಸುಕ್, ಶಿಲ್ಲುಕ್ ನಂದಿ ಮುಖ್ಯರಾದವರು. ಮಸೈ ಬಣಕ್ಕೆ ಸೇರಿದವರು ಟಾಂಗನೀಕ, ಕೆನ್ಯ, ನೈರೋಬಿಯ ಪಶ್ಚಿಮ ಭಾಗಗಳಲ್ಲಿ ವಿಶೇಷವಾಗಿದ್ದಾರೆ. ಇವರಲ್ಲಿ ಒಂದು ಗುಂಪು ವ್ಯವಸಾಯ ಮಾಡಿದರೆ, ಇನ್ನೊಂದು ಗುಂಪಿನ ಜನಗಳು ಅಲೆಮಾರಿಗಳಾಗಿ ಜೀವಿಸುತ್ತಾರೆ. ಇವರಲ್ಲಿ ಚೆನ್ನಾಗಿ ತರಬೇತು ಕೊಡಲ್ಪಟ್ಟ ಯೋಧರು ವಿಶೇಷವಾಗಿದ್ದು ಅಕ್ಕಪಕ್ಕದ ರಾಜ್ಯಗಳ ಮೇಲೆ ಯುದ್ಧಮಾಡಿ ಕಾಣಿಕೆಗಳನ್ನು ವಸೂಲು ಮಾಡುತ್ತಿದ್ದರು. ಅಷ್ಟೇ ಅಲ್ಲದೆ ಅರಬ್ಬಿ ಮತ್ತು ಯುರೋಪಿಯನ್ ವರ್ತಕರಿಂದಲೂ ಕಪ್ಪಗಳನ್ನು ತೆಗೆದುಕೊಳ್ಳುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಕ್ಷಾಮಡಾಮರಗಳಿಂದ ಇವರ ಅವನತಿಯುಂಟಾಯಿತು. ಪಶ್ಚಿಮ ಕೆನ್ಯದಲ್ಲಿ ವಾಸಮಾಡುವ ಸುಕ್ ಜನಾಂಗದವರಲ್ಲಿಯೂ ಎರಡು ಗುಂಪು, ಒಂದು ಅನಾಗರಿಕರದು ಮತ್ತೊಂದು ವ್ಯವಸಾಯಗಾರರದು. ಇವರಲ್ಲಿ ಕೇಶಶೃಂಗಾರಕ್ಕೆ ವಿಶೇಷ ಗಮನ ಕೊಡುತ್ತಾರೆ. ಪುರುಷರು ಬೆತ್ತಲೆಯಾಗಿಯೇ ಓಡಾಡುತ್ತಾರೆ. ಆ್ಯಂಗ್ಲೋ ಈಜಿಪ್ಷಿಯನ್ ಸೂಡಾನಿನ ದಕ್ಷಿಣ ಭಾಗಗಳಲ್ಲಿ ಶಿಲ್ಲುಕ್ ಎಂಬ ಜನಾಂಗದವರು ವಾಸಿಸುತ್ತಾರೆ. ವ್ಯವಸಾಯ, ಮೀನುಗಾರಿಕೆ, ಬೇಟೆ ಇವರ ಮುಖ್ಯ ಕಸಬು. ಸ್ತ್ರೀಯರು ಚರ್ಮವನ್ನು ಧರಿಸಿದರೆ, ಪುರುಷರು ಬೆತ್ತಲೆಯಾಗಿಯೇ ಇರುತ್ತಾರೆ. ಕೆನ್ಯದಲ್ಲಿ ವಾಸಮಾಡುವ ನಂದಿ ಬಣದವರು ಪಶುಪಾಲನೆ ಮತ್ತು ವ್ಯವಸಾಯಗಳನ್ನು ಮುಖ್ಯ ವೃತ್ತಿಯಾಗಿ ಉಳ್ಳವರು. ವೈದ್ಯನೇ ಸಾಮಾನ್ಯವಾಗಿ ಇವರ ಮುಖಂಡನಾಗಿರುತ್ತಾನೆ. ಅವನ ಜೊತೆಗೆ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳೂ ಇರುತ್ತಾರೆ.

ಬಂಟು ಭಾಷಾವರ್ಗಕ್ಕೆ ಸೇರಿದ ಅನೇಕ ಬಣಗಳು ನೀಗ್ರೊ ಆಫ್ರಿಕದ ಮೂರನೆಯ ಎರಡರಷ್ಟು ಭಾಗ ಆಕ್ರಮಿಸಿಕೊಂಡಿದ್ದಾರೆ. ಈ ವರ್ಗಕ್ಕೆ ಸೇರಿದ ಮುಖ್ಯ ಬುಡಕಟ್ಟುಗಳ ಪರಿಚಯವನ್ನು ಕೆಳಗೆ ಮಾಡಿಕೊಡಲಾಗಿದೆ. ಗಂಡ ಅಥವಾ ಬಗಂಡ ಅನ್ನುವ ಬಣ ಉಗಾಂಡದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದಾರೆ. ಇವರ ರಾಜ್ಯ ಬಹಳ ಬಲಯುತವಾಗಿದ್ದಿತು. ರಾಜನೇ ಸರ್ವಾಧಿಕಾರಿಯಾದರೂ, ಅವನಿಗೆ ಸಹಾಯಕವಾಗಿ ಒಂದು ಸಭೆ ಇರುತ್ತಿದ್ದಿತು. ರಾಜನ ತಾಯಿಗೆ ವಿಶೇಷ ಗೌರವವಿದ್ದಿತು. ರಾಜನಿಂದ ನಿಯಮಿಸಲ್ಪಟ್ಟ ಅಧಿಕಾರಿಗಳು ರಾಜಧಾನಿಯ ಹೊರಗೆ ಆಳುತ್ತಿದ್ದರು. ರಾಜಧಾನಿಯಲ್ಲಿ ರಾಜನದೇ ವಿಶಿಷ್ಟ ಅಧಿಕಾರ. ತೆರಿಗೆಗಳನ್ನು ಧಾನ್ಯದ ರೂಪದಲ್ಲಿ ಇಲ್ಲವೇ ಪ್ರಾಣಿಗಳ ರೂಪದಲ್ಲಿ ವಸೂಲು ಮಾಡುತ್ತಿದ್ದರು. ಬಾಲಕ, ಬಾಲಕಿಯರನ್ನು ಅರಮನೆಯಲ್ಲಿ ಗುಲಾಮರನ್ನಾಗಿ ನಿಯಮಿಸಿಕೊಳ್ಳುತ್ತಿದ್ದರು. ಇವರಲ್ಲಿ ಗೋತ್ರಪದ್ಧತಿ ಬಳಕೆಯಲ್ಲಿದ್ದಿತು. ಎಲ್ಲ ಗೋತ್ರದವರಿಗೂ ರಾಜನಾಗುವ ಹಕ್ಕು ಇರುತ್ತಿರಲಿಲ್ಲ. ಅಂಥ ರಾಣಿಗೆ ಹುಟ್ಟಿದ ಮಕ್ಕಳನ್ನು ಕೂಡಲೇ ಕೊಲ್ಲಿಸುತ್ತಿದ್ದರು. ಪ್ರಜೆಗಳಲ್ಲಿ ಪಿತೃಯಾಜಮಾನ್ಯ ಪದ್ಧತಿ ರೂಢಿಯಲ್ಲಿದ್ದರೂ, ರಾಜ ಮಾತ್ರ ಮಾತೃಯಾಜಮಾನ್ಯ ಪದ್ಧತಿಗೆ ಸೇರಿದವನು. ರಾಜನ ಶವವನ್ನು ಹೂಳುವಾಗ ನೂರಾರು ಮಂದಿ ಸೇವಕರನ್ನು ಮತ್ತು ನೂರಾರು ಹೆಂಡತಿಯರಲ್ಲಿ ನಾಲ್ವರನ್ನು ಕೊಂದು ಹೂಳುವ ಪದ್ಧತಿಯೂ ರೂಢಿಯಲ್ಲಿದ್ದಿತು.

ಬನ್ಯನ್ಕೋಲ್ ಎನ್ನುವ ಸಮುದಾಯ ಉಗಾಂಡದ ಅಂಕೋಲ್ ಜಿಲ್ಲೆಯಲ್ಲಿ ವಿಶೇಷವಾಗಿದ್ದಿತು. ಪ್ರಜೆಗಳಲ್ಲಿ ಭಿನ್ನಗೋತ್ರವಿವಾಹಪದ್ಧತಿ ರೂಢಿಯಲ್ಲಿದ್ದರೂ, ರಾಜನು ತನ್ನ ತಂಗಿಯನ್ನು ಮದುವೆಯಾಗಲು ಅವಕಾಶವಿದ್ದಿತು. ಇವರಲ್ಲಿ ವ್ಯವಸಾಯ, ವ್ಯಾಪಾರ, ಕುಶಲಕಲೆಗಳು ವಿಶೇಷವಾಗಿದ್ದ ಕಸಬುಗಳು. ಆಗತಾನೇ ಬಾಣದಿಂದ ಕೊಂದ ಪ್ರಾಣಿಯ ರಕ್ತವನ್ನು ಹಾಲಿಗೆ ಬೆರೆಸಿ ಕುಡಿಯುವುದು ವಿಶೇಷವಾಗಿ ರೂಢಿಯಲ್ಲಿದ್ದಿತು.

ದನಗಳನ್ನು ಮಾತ್ರ ಆಹಾರಕ್ಕಾಗಿ ಇವರು ಕೊಲ್ಲುತ್ತಿರಲಿಲ್ಲ. ಆದರೆ ತಾವಾಗಿಯೇ ಸತ್ತುಹೋದ ದನದ ಮಾಂಸವನ್ನು ತಿನ್ನುತ್ತಿದ್ದರು. ಪಶುಬಲಿ ರೂಢಿಯಲ್ಲಿದ್ದಿತು. ಎತ್ತುಗಳನ್ನು ಆಹಾರಕ್ಕಾಗಿ ಕೊಲ್ಲುತ್ತಿದ್ದರು. ದನದ ಗಂಜಲವನ್ನು ಪಾತ್ರೆ ತೊಳೆಯಲು ಉಪಯೋಗಿಸುತ್ತಿದ್ದರು. ಪ್ರಾಣಿಗಳ ಚರ್ಮಗಳನ್ನು ಬಟ್ಟೆಯಾಗಿ ಉಪಯೋಗಿಸುತ್ತಿದ್ದರು. ಸ್ತ್ರೀಯರು ತಮ್ಮ ಕಣ್ಣುಗಳನ್ನು ಬಿಟ್ಟು, ದೇಹದ ಎಲ್ಲ ಭಾಗಗಳನ್ನೂ ಪ್ರಾಣಿಯ ಚರ್ಮದಿಂದ ಮುಚ್ಚಿಕೊಳ್ಳುತ್ತಿದ್ದರು. ಇವರಲ್ಲಿದ್ದ ಅನೇಕ ನಿಷಿದ್ಧ ಪದ್ಧತಿಗಳಲ್ಲಿ ಹಾಲನ್ನು ಕಾಯಿಸದೇ ಇರುವುದು, ಹಾಲನ್ನು ಕಬ್ಬಿಣದ ಪಾತ್ರೆಯಲ್ಲಿ ಹಾಕದಿರುವುದು ಮುಖ್ಯವಾದುವು. ಬೆಳಗ್ಗೆ ಹತ್ತು ಘಂಟೆಯಿಂದ ಮಧ್ಯಾಹ್ನ ನಾಲ್ಕು ಘಂಟೆಯವರೆಗೆ ಸ್ತ್ರೀಯರು ಬೆಣ್ಣೆಯನ್ನು ಮುಟ್ಟುವುದು, ರಜಸ್ವಲೆಯಾದ ಸ್ತ್ರೀಯರು ನಾಲ್ಕು ದಿವಸಗಳು ಹಸುವಿನ ಹಾಲು ಕುಡಿಯುವುದು ನಿಷಿದ್ಧವಾಗಿದ್ದುವು. ಹಸು ಸತ್ತ ಐದು ದಿವಸಗಳವರೆಗೆ ಅದರ ಒಡೆಯ ದುಃಖಸೂಚಕವಾಗಿ ಅನೇಕ ಕರ್ಮಗಳನ್ನು ಮಾಡುವುದೇ ಅಲ್ಲದೆ ಸ್ತ್ರೀಸಂಗವನ್ನೂ ಬಯಸುತ್ತಿರಲಿಲ್ಲ. ಹಸುಗಳ ಆರೋಗ್ಯ ವಿಚಾರದಲ್ಲಿ ವಿಶೇಷ ಗಮನವನ್ನು ಕೊಟ್ಟಿದ್ದರು. ಅದಕ್ಕಾಗಿ ವೈದ್ಯರಿರುತ್ತಿದ್ದರು.

ನೇಟಾಲ್ ಮತ್ತು ಟ್ರಾನ್ಸ್‌ವಾಲ್ ಪ್ರದೇಶಗಳಲ್ಲಿ ಜುಲು ಎಂಬ ಬಣದವರಿದ್ದರು. ಇವರು ಸುವ್ಯವಸ್ಥಿತ ರಾಜ್ಯಪದ್ಧತಿಯನ್ನು ರೂಢಿಸಿಕೊಂಡಿದ್ದರು. ಶತ್ರುಗಳನ್ನು ಕೊಂದು ಅವರ ಪತ್ನಿಯರನ್ನು ಅಪಹರಿಸಿಕೊಂಡು ಬರುತ್ತಿದ್ದರು. ಇವರು ಸ್ಥಾಪಿಸಿದ್ದ ರಾಜ್ಯ ಬಲಯುತವಾಗಿದ್ದು 1880ರಲ್ಲಿ ಬ್ರಿಟಿಷರಿಂದ ನಾಶಗೊಂಡಿತು.

ಬಂಟು ವರ್ಗಕ್ಕೆ ಸೇರಿದ ಇತರ ಬುಡಕಟ್ಟುಗಳೆಂದರೆ ಬೇಿನ, ಚಾಗ, ಜೋಪಿ, ಅಂಗೊ, ಹೇಹೆ, ಕಂಬ, ಕಿಕುಯು, ಮ್ಬುನ್ದ, ನ್ಗುನಿ, ನೈರೋ, ರುವಾಂಡ, ಶೋನ, ಸುಟೋ, ಟೊಂಗ, ಟ್ಸ್ವಾನ, ವೆಂಡ, ನೀಕ ಮುಂತಾದುವು. ಈ ಜನಸಮುದಾಯಗಳಲ್ಲಿ ಸಣ್ಣಪುಟ್ಟ ಭೇದಗಳಿದ್ದರೂ ಸಾಮಾನ್ಯವಾಗಿ ಮೇಲೆ ಹೇಳಿದ ಸಾಂಸ್ಕೃತಿಕ ಚೌಕಟ್ಟಿನೊಳಗೇ ಇವು ಬರುತ್ತವೆ.

ಹೋಟೆನಟೋ ಎಂಬ ಬಣದವರು ನೈಋತ್ಯ ಆಫ್ರಿಕದಲ್ಲಿ ವಿಶೇಷವಾಗಿ ವಾಸಿಸುತ್ತಾರೆ. ಇವರಿಗೂ ಬುಷ್‌ಮನ್ ಜನಗಳಿಗೂ ವಿಶೇಷ ಹೋಲಿಕೆಗಳಿದ್ದರೂ, ಸಾಂಸ್ಕೃತಿಕ ಭೇದಗಳು ಬೇಕಾದಷ್ಟಿವೆ. ಪಶುಪಾಲನೆ, ಬೇಟೆ, ಮೀನುಗಾರಿಕೆ ಇವರ ಮುಖ್ಯ ಕಸಬುಗಳು.

ನೆಗ್ರಿಗೋ ಅಥವಾ ನೆಗ್ರಿಲ್ಲಾ ಎಂದು ಕರೆಯಲ್ಪಡುವ ಕುಳ್ಳರು ಬೆಲ್ಜಿಯಮ್, ಕಾಂಗೊ ಮತ್ತು ಈಕ್ವಟೋರಿಯಲ್ ಆಫ್ರಿಕದ ಕೆಲವು ಭಾಗಗಳಲ್ಲಿ ವಿಶೇಷವಾಗಿದ್ದಾರೆ. ಸಾಮಾನ್ಯವಾಗಿ ಇವರು ನೀಗ್ರೊ ಬಂಟುಗಳ ಗುಲಾಮರು. ಬಂಟು ಭಾಷೆಯನ್ನೇ ಆಡುತ್ತಾರೆ. ಮೀನುಗಾರಿಕೆ ಮತ್ತು ಬೇಟೆಯಾಡುವುದು ಇವರ ಮುಖ್ಯ ಕಸಬು. ಒಟ್ಟಿನಲ್ಲಿ ಬಹಳ ಹಿಂದುಳಿದವರು.

ಬುಷ್‌ಮನ್ ಎಂದು ಪ್ರಸಿದ್ಧರಾಗಿರುವ ಜನರು ಕಲಹರಿ ಮರುಭೂಮಿ, ಬಿಚುವಾನ ಲ್ಯಾಂಡ್, ದಕ್ಷಿಣ ಅಂಗೋಲಗಳಲ್ಲಿ ವಿಶೇಷವಾಗಿದ್ದಾರೆ. ಈ ಭಾಗದ ಅತ್ಯಂತ ಪುರಾತನ ಆದಿವಾಸಿಗಳು ಇವರು. ಇವರು ಬಂಟುಗಳಿಗಿಂತ ಭಾಷೆ, ರೂಪ, ಸಂಸ್ಕೃತಿಯಲ್ಲಿ ಭಿನ್ನರು. ಹಳದಿಯ ಬಣ್ಣದ ಸುಕ್ಕುಗಟ್ಟಿದ ಚರ್ಮದ, ಸುಮಾರಾಗಿ ಕುಳ್ಳರಾಗಿರುವ ಇವರು ಮುಖ್ಯವಾಗಿ ಬೇಟೆಯಿಂದ ಜೀವಿಸುತ್ತಾರೆ. ಇವರು ಗುಹೆಗಳ ಕಲ್ಲಿನಲ್ಲಿ ಮೂಡಿಸಿರುವ ವರ್ಣಚಿತ್ರಗಳು ಪ್ರಪಂಚದಲ್ಲೇ ಖ್ಯಾತಿ ಪಡೆದಿವೆ.

ಇದುವರೆಗೂ ವರ್ಣಿಸಿದ ನೀಗ್ರೊಗಳಿಗಿಂತ ಪೂರ್ಣವಾಗಿ ಭಿನ್ನರಾದ ಜನರು ಉತ್ತರ ಆಫ್ರಿಕದಲ್ಲಿ ವಾಸಿಸುತ್ತಾರೆ. ಉತ್ತರ ಆಫ್ರಿಕದ ಈ ಜನಗಳು ಸಂಸ್ಕೃತಿ, ಭಾಷೆ ಮತ್ತು ಶರೀರ ಲಕ್ಷಣಗಳಲ್ಲಿ ಯುರೋಪ್ ಮತ್ತು ಮಧ್ಯಪ್ರಾಚ್ಯದ ಜನಗಳನ್ನು ಹೋಲುತ್ತಾರೆ. ಮೆಡಿಟರೇನಿಯನ್ ಕಾಕಸಾಯಿಡ್ ಎಂದು ಕರೆಯಲ್ಪಡುವ ಈ ಜನಗಳು ಕುಳ್ಳರು. ಕರಿಯ ಕೂದಲುಳ್ಳವರು, ಕಪ್ಪುಬಣ್ಣದ ಕಣ್ಣುಗಳುಳ್ಳವರು ಮತ್ತು ತಿಳಿಯ ಬಣ್ಣದವರು. ಸ್ಥಳೀಯ ಆದಿವಾಸಿಗಳೊಡನೆ ಮತ್ತು ಅರಬ್ಬರೊಡನೆ ಉಂಟಾದ ಸಂಪರ್ಕಗಳಿಂದ, ಉತ್ತರ ಆಫ್ರಿಕ ಜನರನ್ನು ಹೆಮೈಟ್ ಮತ್ತು ಸೆಮೈಟ್ ಎಂದು ವಿಭಾಗಿಸಿದ್ದಾರೆ. ಹೇಮೈಟಿಕ್ ಜನಾಂಗದವರು ಉತ್ತರ ಆಫ್ರಿಕ ಪಶ್ಚಿಮ ಸಹಾರಾದಿಂದ ಎಥಿಯೋಪಿಯದವರೆಗೂ ವಾಸಿಸುತ್ತಾರೆ. ಅವರನ್ನು ಭಾಷಾದೃಷ್ಟಿಯಿಂದ ಬರ್ಬರು ಮತ್ತು ಕುಷಿಟಿಗಳು ಎಂದು ವಿಭಾಗಿಸಬಹುದು. ಬರ್ಬರರು ನೀಗ್ರೊ ಮಿಶ್ರಣ ಹೊಂದಿದ ಕಾಕಸಾಯಿಡ್ ಜನಗಳು. ಇಸ್ಲಾಂ, ಯುರೋಪ್ ಮತ್ತು ಆದಿವಾಸಿಗಳಿಂದ ಪ್ರಭಾವಿತರಾದ ಇವರಲ್ಲಿ ಎಲ್ಲ ಬಗೆಯ ಸಂಸ್ಕೃತಿಯ ಲಕ್ಷಣಗಳೂ ಕಾಣಬರುತ್ತವೆ. ಬರ್ಬರರಲ್ಲಿ ಮುಖ್ಯರಾದವರು ಕಬೈಲ್, ಸಿವಾನ್, ಟೆಬು ಮತ್ತು ಟುವಾರೆ.

ಕುಷಿಟಿಕ್ ಭಾಷೆಯನ್ನಾಡುವ ಜನಸಮುದಾಯಗಳಲ್ಲಿ ಬೇಜ, ಡಂಕಿಲ್, ಗಲ್ಲ, ಸೊಮಾಲಿ ಮುಖ್ಯರಾದವರು. ಇವರು ಇಥಿಯೋಪಿಯ, ಸೊಮಾಲಿಲ್ಯಾಂಡ್, ಉತ್ತರ ಕೆನ್ಯ, ಆಗ್ನೇಯ ಈಜಿಪ್ಟ್ ಮತ್ತು ಆಗ್ನೇಯ ಆ್ಯಂಗ್ಲೊ ಈಜಿಪ್ಷಿಯನ್ ಸೂಡಾನ್‌ಗಳಲ್ಲಿ ವಾಸಿಸುತ್ತಾರೆ.

ಸೆಮಿಟಿಕ್ ಭಾಷೆಯನ್ನಾಡುವ ಆಫ್ರಿಕದ ಜನಗಳು ಎಥಿಯೋಪಿಯನ್ನರು ಮತ್ತು ಅರಬ್ಬೀ ವಲಸೆಗಾರರು. ಈ ವಲಸೆಗಾರರಿಗೆ ಕಲಾಬಿಷ್ ಎಂದೂ ಹೆಸರು. ಇವರು ಸೂಡಾನಿನಲ್ಲಿ ಅತ್ಯಂತ ಪ್ರಭಾವಿತ ಜನ. ಇವರು ಇಸ್ಲಾಂ ಧರ್ಮಾವಲಂಬಿಗಳು. (ಎ.ವಿ.ಎನ್.)

**ಆಫ್ರಿಕದ ಧರ್ಮ** : ಆಫ್ರಿಕ ಖಂಡದಲ್ಲಿ ನಾಗರಿಕತೆಯ ವಿವಿಧ ಶ್ರೇಣಿಗಳಲ್ಲಿರುವ ಸಮಾಜಗಳನ್ನು ಕಾಣುತ್ತೇವೆ. ಅಲ್ಲಿನ ಧರ್ಮಗಳೂ ವಿವಿಧವಾಗಿವೆ. ಯುರೋಪಿನಿಂದ ವಲಸೆ ಬಂದ ಬಿಳಿಯ ಜನಾಂಗಗಳು ಕ್ರೈಸ್ತ ಧರ್ಮಕ್ಕೆ ಸೇರಿದವರು. ಇಥಿಯೋಪಿಯದವರು ಸುಮಾರು ಸಾವಿರ ವರ್ಷಗಳಿಂದ ಕ್ರೈಸ್ತಧರ್ಮದ ಅನುಯಾಯಿಗಳಾಗಿರುವರು. ಅನೇಕ ನೀಗ್ರೊಗಳು ಈಚೆಗೆ ಕ್ರೈಸ್ತಧರ್ಮದ ಅನುಯಾಯಿಗಳಾಗಿದ್ದಾರೆ. ಈಜಿಪ್ಟ್, ಸೂಡಾನ್, ಮೊರಾಕೊ ಮೊದಲಾದ ದೇಶಗಳಲ್ಲಿ ವಾಸಿಸುವವರು ಮುಸಲ್ಮಾನರು. ಆದರೆ ಆಫ್ರಿಕದಲ್ಲಿ ವಾಸಿಸುವವರು ಹೆಚ್ಚಾಗಿ ಆದಿವಾಸಿ ಜನಾಂಗಗಳಿಗೆ ಸೇರಿದವರು. ಇಲ್ಲಿ ಆದಿವಾಸಿಗಳ ಧರ್ಮಗಳನ್ನು ಸಂಕ್ಷೇಪವಾಗಿ ನಿರೂಪಿಸಲಾಗಿದೆ.

ಆಫ್ರಿಕದ ಅನೇಕ ಜನಾಂಗಗಳಿಗೆ ಅವರ ಪೂರ್ವಿಕರೇ ದೇವತೆಗಳು. ಪಿತೃಗಳಿಗೆ ಸರಿಯಾದ ರೀತಿಯಲ್ಲಿ ಸಂಸ್ಕಾರಗಳನ್ನು ಮಾಡದೇ ಇದ್ದಲ್ಲಿ ಅವರು ತಮಗೆ ಕಷ್ಟಗಳನ್ನು ಕೊಡುವರೆಂಬ ನಂಬಿಕೆಯಿದೆ. ಇದನ್ನು ಪಶ್ಚಿಮ ಆಫ್ರಿಕದ ಹೋಮಯನ್ ನೀಗ್ರೊಗಳಲ್ಲಿ ಕಾಣಬಹುದು. ಹಲವೆಡೆಗಳಲ್ಲಿ ಪಿತೃದೇವತೆಗಳಿಗೆ ನರಬಲಿಯನ್ನು ಕೊಡುವ ಪದ್ಧತಿ ಇತ್ತು. ಸಾಧಾರಣವಾಗಿ ನರಬಲಿಗೆ ಆಹುತಿಯಾಗುತ್ತಿದ್ದವರು ವಯಸ್ಸಾದ ಯುದ್ಧ ಖೈದಿಗಳು, ಮರಣದಂಡನೆಗೆ ಗುರಿಯಾದ ತಪ್ಪಿತಸ್ಥರು. ಕಪ್ಪು ಮತ್ತು ಬಿಳಿಯ ಜನರು ಒಬ್ಬ ದೇವನಿಂದಲೇ ಸೃಷ್ಟಿಸಲ್ಪಟ್ಟರೆಂಬ ನಂಬಿಕೆ ಆಫ್ರಿಕದ ಜನಗಳಲ್ಲಿ ಇದೆ. ಕಾಂಗೊ ನೀಗ್ರೊಗಳ ಪ್ರಕಾರ ದೇವರು ಎಲ್ಲರನ್ನೂ ಮೊದಲು ಕಪ್ಪಾಗಿ ಸೃಷ್ಟಿಸಿದ್ದನೆಂದೂ ಕೆಲವರು

ಬೇಗ ತಮ್ಮ ಬಣ್ಣ ತೊಳೆದುಕೊಂಡು ಬೆಳ್ಳಗಾದರೆಂದೂ ಭಾವಿಸಲಾಗಿದೆ. ನೀಗ್ರೋಗಳ ಪ್ರಕಾರ ದೇವರು ಇಬ್ಬರು ಕರಿಯರನ್ನೂ ಇಬ್ಬರು ಬಿಳಿಯರನ್ನೂ ಸೃಷ್ಟಿಸಿ ಭೂಮಿಗೆ ಕಳುಹಿಸಿದ. ಇಬ್ಬರೂ ಒಟ್ಟಾಗಿ ಒಂದೇ ಕಡೆ ಇದ್ದರು. ಅನಂತರ ಅವರ ಉಪಯೋಗಕ್ಕಾಗಿ ದೇವರು ಎರಡು ಬುಟ್ಟಿಗಳನ್ನು ಕಳುಹಿಸುವುದಾಗಿಯೂ ಇಬ್ಬರೂ ಅದನ್ನು ಸಮವಾಗಿ ಹಂಚಿಕೊಳ್ಳಬೇಕೆಂದೂ ಆಣತಿಯಿತ್ತ. ಬುಟ್ಟಿಗಳಲ್ಲಿ ಒಂದು ಸಣ್ಣದು ಇನ್ನೊಂದು ದೊಡ್ಡದು. ಕಪ್ಪು ಜನರು ದುರಾಸೆಯಿಂದ ದೊಡ್ಡ ಬುಟ್ಟಿಯನ್ನು ತೆಗೆದು ಕೊಂಡರು. ಅದರೊಳಗೆ ಕಳೆಗುದ್ದಲಿ, ಬಲೆ, ಬೇಟೆಯಾಡುವ ಆಯುಧಗಳಿದ್ದುವು. ಸಣ್ಣ ಬುಟ್ಟಿಯಲ್ಲಿ ಕೇವಲ ಒಂದು ಪುಸ್ತಕವಿತ್ತು. ಬಿಳಿಯ ಜನ ಆ ಪುಸ್ತಕದ ಸಹಾಯದಿಂದ ಬುದ್ಧಿವಂತರಾಗಿ ಅತುಳೈಶ್ವರ್ಯವನ್ನು ಸಂಪಾದಿಸಿದರು. ಕಪ್ಪುಜನ ಅಸೂಯೆಯಿಂದ ಬಿಳಿಯರಿಗೆ ಆಗಾಗ್ಗೆ ತೊಂದರೆ ಕೊಡುತ್ತಿದ್ದರು. ಆಗ ದೇವರು ಆಕಾಶದಿಂದ ಒಂದು ದೊಡ್ಡ ಹಗ್ಗವನ್ನು ಇಳಿಬಿಟ್ಟು ಬಿಳಿಯರನ್ನು ಸಮುದ್ರದಾಚೆಗೆ ಸುಖವಾಗಿ ತಲುಪಿಸಿದ.

ಒಳ್ಳೆಯವರು ಸ್ವರ್ಗಕ್ಕೆ ಹೋಗಿಯೇ ಹೋಗುತ್ತಾರೆಂಬ ನಂಬಿಕೆ ಅನೇಕ ನೀಗ್ರೊ ಜನಾಂಗಗಳಲ್ಲಿ ಇದೆ. ದೇವರು ಸ್ವರ್ಗದಿಂದ ಒಂದು ಹಗ್ಗವನ್ನು ಬಿಡುತ್ತಿದ್ದನೆಂದೂ ಭೂಮಿಯ ಸತ್ಪುರುಷರು ಅದನ್ನು ಹಿಡಿದುಕೊಂಡು ಸ್ವರ್ಗಕ್ಕೆ ಹೋಗುತ್ತಿದ್ದರೆಂದೂ ಅವರ ಕಲ್ಪನೆ. ಕಾಲಕ್ರಮೇಣ ಆ ಹಗ್ಗ ಹಳೆಯದಾಗಿ ಕಿತ್ತುಹೋಯಿತೆಂದು ಹೇಳುತ್ತಾರೆ.

ಆಫ್ರಿಕದ ಜನ ಹಲವು ಪ್ರಾಣಿಗಳನ್ನು ತಮ್ಮ ಬುಡಕಟ್ಟಿನ ಚಿಹ್ನೆಗಳಾಗಿ ಪರಿಗಣಿಸಿದ್ದರು. ಆ ಪ್ರಾಣಿಗಳನ್ನು ಅವರು ವಿಶೇಷವಾಗಿ ಗೌರವಿಸುತ್ತಿದ್ದರು. ಅವುಗಳನ್ನು ಕೊಲ್ಲುತ್ತಿರಲಿಲ್ಲ. ಒಟ್ಟಪಿಯನ್ನರು ಮೀನನ್ನೂ, ಬಕಲಾಹರಿಗಳು ಸಿಂಹವನ್ನೂ, ಮಕೊಂಡೆಯವರು ಚಿರತೆಯನ್ನೂ, ಬಾಕ್ವೀನರು ಮೊಸಳೆಯನ್ನೂ, ಬಕಟ್‌ಲರು ಕಪಿಯನ್ನೂ, ಅಶಾಂತಿಯನ್ನರು ಕಾಡುಬೆಕ್ಕನ್ನೂ ತಮ್ಮ ಬುಡಕಟ್ಟುಗಳ ಚಿಹ್ನೆಗಳನ್ನಾಗಿ ಪರಿಗಣಿಸಿದ್ದರು.

ಆಫ್ರಿಕದ ಜನಾಂಗಗಳಲ್ಲಿ ಆಕಾಶದಲ್ಲಿರುವ ವಸ್ತುಗಳ ಪೈಕಿ ಚಂದ್ರನಿಗೆ ಉನ್ನತ ಸ್ಥಾನವಿದೆ. ದಹೋಮಿಯ ನೀಗ್ರೊಗಳು ಸೂರ್ಯಚಂದ್ರರನ್ನು ಗಂಡಹೆಂಡಿರೆಂದು ಪರಿಗಣಿಸಿದ್ದರೂ ಚಂದ್ರನಿಗೆ ಅತ್ಯುನ್ನತ ಸ್ಥಾನವನ್ನು ಕೊಟ್ಟಿದ್ದರು. ಹಾಟೆಂಟಾಟರು ಆಚರಿಸು ತ್ತಿದ್ದ ಹಬ್ಬಗಳಲ್ಲಿ ಚಂದ್ರನ ಕುಣಿತ ಬಹಳ ದೊಡ್ಡಹಬ್ಬ. ಅವರ ಪ್ರಾರ್ಥನೆ ಹೀಗಿದೆ : ಎಲೈ ಚಂದ್ರನೇ, ನಿನಗೆ ಸುಖಾಗಮನ. ನಮಗೆ ವಿಶೇಷವಾಗಿ ಜೇನನ್ನು ಕೊಡು. ನಮ್ಮ ಪಶುಗಳಿಗೆ ಅಮಿತವಾಗಿ ಮೇವನ್ನು ಕೊಟ್ಟು ಅವುಗಳು ನಮಗೆ ಸಮೃದ್ಧಿಯಾಗಿ ಹಾಲನ್ನು ಕೊಡುವಂತೆ ಕರುಣಿಸು.

ಒಟ್ಟಿನಲ್ಲಿ ಆಫ್ರಿಕದ ಜನ ಹೆಚ್ಚಾಗಿ ಪಿತೃದೇವತಾರಾಧಕರಾಗಿದ್ದರು. ಅವರಲ್ಲಿ ಅನೇಕ ಮೂಢನಂಬಿಕೆಗಳಿದ್ದವು. ಅವರು ಉಪಯೋಗಿಸುವಷ್ಟು ತಾಯಿತಿಗಳನ್ನು ಇನ್ನೆಲ್ಲಿಯೂ ಕಾಣಲಾರೆವು. ಎಲ್ಲ ಆದಿ ಜನಾಂಗಗಳೂ ಇಂಥದೇ ಮತಧರ್ಮಪ್ರವೃತ್ತಿಗಳನ್ನು ಹೊಂದಿದ್ದವು. ಅವುಗಳ ಹಿಂದೆ ಪ್ರಕೃತಿಯ ಅಮಿತವೂ ಅನೂಹ್ಯವೂ ಆದ ಶಕ್ತಿಗಳ ಹಿಂದೆ ಮಾನವನಿಗಿದ್ದ ಭಯ ಭೀತಿಗಳು, ಭಕ್ತಿ ಗೌರವಗಳು ಎದ್ದುಕಾಣುತ್ತವೆ. (ಎಚ್.ಎಂ.ಎಸ್.)

**ಆಫ್ರಿಕದ ನೀಗ್ರೊ ಸಂಗೀತ :** ಪ್ರಪಂಚದಲ್ಲಿ ಇಂದು ಜಾಸ್ ಎಂದು ಪ್ರಸಾರವಾಗಿ ಪ್ರಸಿದ್ಧವಾಗಿರುವ ಸಂಗೀತಕ್ಕೆ ಪಶ್ಚಿಮ ಆಫ್ರಿಕದ ನೀಗ್ರೊಗಳ ಸಂಗೀತವೇ ಮೂಲ. ಇಂಥದರಲ್ಲಿ ಆಫ್ರಿಕ ಖಂಡದ ಸಂಗೀತವಾಗಲಿ ಅದರಲ್ಲಿ ಸ್ವದೇಶೀ ನೀಗ್ರೊ ಸಂಗೀತವಾಗಲಿ ಸುವ್ಯವಸ್ಥಿತವಾದ ಅಭ್ಯಾಸಕ್ಕೆ ಒಳಪಡದಿರುವುದು ಸೋಜಿಗವೇ ಸರಿ. 1700–1830ರ ಸುಮಾರಿಗೆ ಬಿಳಿಯರು ಸೆನೆಗಾಂಬಿಯ ಉತ್ತರ ಗಿನಿ ಮತ್ತು ದಕ್ಷಿಣ ಗಿನಿಗಳಿಂದಲೂ ಕಾಂಗೊ ದಹೋಮಿ ಮುಂತಾದ ಪ್ರಾಂತ್ಯಗಳಿಂದಲೂ ನೀಗ್ರೊಗಳನ್ನು ಗುಲಾಮರಾಗಿ ಕೊಂಡೊಯ್ದರು. ಇವರೇ ಜಾಸ್ ಸಂಗೀತದ ಮೂಲಪುರುಷರಾದರು. ನೀಗ್ರೊಗಳಲ್ಲಿ ಶ್ರೀಸಾಮಾನ್ಯನಿಗೆ ಸಹ ಸಂಗೀತ ಕಲೆ ಹುಟ್ಟಿನಿಂದಲೇ ರಕ್ತಗತವಾಗಿರುತ್ತದೆ. ಅದನ್ನು ಆತ ಧಾರ್ಮಿಕ ಆಚಾರ, ಯುದ್ಧ, ಮೂಢನಂಬಿಕೆಯ ಕರ್ಮ, ಮಾಟ, ಮಂತ್ರ, ತಂತ್ರ ಮೊದಲಾದ ಅಭಿಚಾರ ಪ್ರಯೋಗಗಳಲ್ಲೂ ಬಲಿ ಕೊಡುವಾಗಲೂ ಮೈಮೇಲೆ ದೇವರ ಅಥವಾ ಭೂತದ ಆವೇಶ ಬರುವುದು ಮುಂತಾದ ಸನ್ನಿವೇಶಗಳಲ್ಲೂ ಪ್ರಭುಸ್ತುತಿ, ದೇವತಾರಾಧನೆ, ಹುಟ್ಟು, ಸಾವು, ಶ್ರಮಸಾಧ್ಯವಾದ ದುಡಿಮೆಗಳ ಅನಂತರ ಮನಸ್ಸನ್ನು ರಂಜಿಸಿ ಹಗುರ ಮಾಡಿಕೊಳ್ಳುವ ಸಂದರ್ಭಗಳಲ್ಲೂ ಬಳಸಿ ಬೆಳೆಸಿಕೊಂಡಿದ್ದರು. ಪ್ರಧಾನವಾಗಿ ಅವರ ಸಂಗೀತ ಜನಪದ ಮಾದರಿಯದು, ನೃತ್ಯಪ್ರಧಾನವಾದುದು. ಯಾವುದೋ ಒಂದು ತಾಳಗತಿಯಲ್ಲಿ ಸಣ್ಣದಾಗಿ ಪ್ರಾರಂಭವಾಗುವ ಒಂದು ಹಾಡನ್ನು ಹಾಡುತ್ತ ಹಾಡುತ್ತ ಬೆಳೆಸುವ, ತಾಳ ಕೆಡದಂತೆ ವಿವಿಧಗೀತೆಗಳಲ್ಲಿ ನಡೆಸುವ, ಪುನರಾವರ್ತಿಸುವ ರಸಭಾವಗಳ ಏರಿಳಿತಗಳನ್ನು ತರುವ, ಪರಾಕಾಷ್ಠೆಗೊಯ್ಯುವ ಎಲ್ಲ ತಂತ್ರಗಳನ್ನೂ ಆತ ಅನುಭವದಿಂದ ಕಲಿತ. ಉಪಯೋಗಿಸುತ್ತಿದ್ದ ವಿವಿಧ ವಾದ್ಯಗಳ ನಾದಗಳನ್ನು ಅನುಲಕ್ಷಿಸಿ ಯಾವಾಗ ಎಲ್ಲಿ ಯಾವ ವಾದ್ಯದ ನಾದ ಹೊಂದುತ್ತದೆಂಬುದನ್ನು ಕಲಿತ. ಒಬ್ಬನೇ ಹಾಡುವುದು ಎಷ್ಟನ್ನು, ಎಲ್ಲರೊಂದಾಗಿ ಹಾಡುವುದು ಎಷ್ಟನ್ನು ಎಂಬುದನ್ನು ಪ್ರಯೋಗಗ ಳಿಂದ ತಿಳಿದ. ಹೀಗೆ ಸುಲಭವೂ ಸಹಜವೂ ಆಗಿದ್ದ ಅವನ ಜಾನಪದ ಮಟ್ಟುಗಳು ಬರುಬರುತ್ತ ಸಂಕೀರ್ಣವಾದುವು. ಇದು ಎಲ್ಲ ಜಾನಪದ ಸಂಗೀತಗಳಿಗೂ ಹೊಂದಬಲ್ಲ ಮಾತು. ಜೊತೆಗೆ ಸ್ಥಳೀಯ ಜೀವನಕ್ರಮ, ರೀತಿನೀತಿ, ಆಚಾರವಿಚಾರಗಳ ಪ್ರಭಾವ, ಮನೋಧರ್ಮಗಳ ವಿಚಾರಗಳು ಸೇರಿ ಆಫ್ರಿಕದ ಸಂಗೀತ ತನ್ನ ವೈಶಿಷ್ಟ್ಯವನ್ನು ರೂಪಿಸಿಕೊಂಡಿತು. ಅವರ ಹಾಡುಗಳು ಮೂರು ಬಗೆಯಾಗಿವೆ. 1 ಚಾಕುಸಂಗೀತ; 2 ಭೂತಗೀತೆ; 3 ಕೆಲಸದ ಹಾಡು. ಚಾಕುಗೀತೆಯಲ್ಲಿ ತಂತೀವಾದ್ಯವನ್ನು ನುಡಿಸಲು ಚಾಕುವನ್ನೊ, ಮೂಳೆಯ ತುಂಡನ್ನೊ ಬಳಸುತ್ತಾರೆ. ಧಾರ್ಮಿಕ ಗೀತೆಗಳಂತೆ ಸಾಮಾಜಿಕ ಗೀತೆಗಳೂ ಸ್ವಾರಸ್ಯವಾಗಿರುತ್ತವೆ. ತನ್ನ ಮನೆ, ತಾಯಿತಂದೆಗಳ ಹಂಬಲ ಬಹು ಗೀತೆಗಳ ತಿರುಳು.

ನಾ ಮನೆಯ ಬಿಟ್ಟಾಗ । ತಾಯಮ್ಮಗೆ ಕಾಯಿಲೆ
ಕರೆದೊಯ್ಯೊ ನನಗೆಳೆಯ । ನಮ್ಮೂರಿಗೆ
ತಂಗಿ ಅಳುತಿಹಳೇನೋ ।
ಸಾಯುತ್ತಿರುವಳೊ ತಾಯಿ
ಬಾ ಮಗನೆ ಬಾ ಎಂದು । ಕಣ್ಣೀರ ಸುರಿಸುವಳೊ
ಬರೆದ ಕಾಗದವೆಲ್ಲ । ಸಾವ ಬಗೆಯನೆ ಸಾರಿ
ನಾನೋದಲಾರೆನದ । ಕಣ್ಣೀರು ತುಂಬಿ ಬರೆ
ಕರೆದೊಯ್ಯೊ ನನಗೆಳೆಯ । ನಮ್ಮೂರಿಗೆ

ಆಫ್ರಿಕದ ಹಾಡುಗಳು ವಿಶೇಷವಾಗಿ ಜನಪದ ಕಥೆಗಳನ್ನು ಆಧರಿಸಿ ರಚಿಸಿದ ಲಾವಣಿಗಳು. ಧಾರ್ಮಿಕ ಗೀತೆಗಳಲ್ಲಿ ದೇವತೆಗಳನ್ನು ಕರೆಯುವುದೇ ಹೆಚ್ಚು. ಸ್ಥಳೀಯ ವಿಷಯಗಳಿಗೂ ಸಂಬಂಧಿಸಿದಂತೆ ಹಾಡುಗಳಿರುತ್ತವೆ. ಇತ್ತೀಚಿನ ಘಟನೆಗಳ ಆಧಾರದ ಮೇಲೂ ಹಾಡುಗಳು ಹುಟ್ಟಿಕೊಳ್ಳುತ್ತವೆ. ಹದಿನೆಂಟನೆಯ ಶತಮಾನದ ಯುದ್ಧಗಳ ಮೇಲಿನ ಹಾಡುಗಳೂ ದೊರೆಯುತ್ತವೆ.

ಆಫ್ರಿಕನರ ಜನಪದ ಸಂಗೀತ ಅಮೆರಿಕದಲ್ಲಿ ಹುಟ್ಟಿದ ಜಾಸ್ ಸಂಗೀತ ಸೃಷ್ಟಿಗೆ ಸ್ಫೂರ್ತಿಯಿತ್ತು ಹೇಗೆ ಅದಕ್ಕೆ ಮಾತೃಕೆಯಾಯಿತು ಎಂಬುದನ್ನು ಜಾಸ್ ಸಂಗೀತವನ್ನು ಕುರಿತ ಲೇಖನದಲ್ಲಿ ವಿವರಿಸಿದೆ. ಪಶ್ಚಿಮ ಆಫ್ರಿಕದ ನೀಗ್ರೊಗಳಲ್ಲಿ ಸಂಗೀತ ಹಲವರಿಗೆ ವೃತ್ತಿಯೇ ಆಗಿತ್ತು. ಚಾರಣಕವಿಗಳಾಗಿ ತಮ್ಮ ಕವಿತೆಗಳನ್ನು ಹಾಡಿಕೊಂಡು ಊರಿಂದೂರಿಗೆ ತಿರುಗುತ್ತಿದ್ದಂಥ ವೃತ್ತಿವಂತರಿಗೆ ಗ್ರಿರಿಯೋಟ್ ಎಂಬ ಹೆಸರಿತ್ತು. ಜನಪದಗಾಯಕವಾದಕ ರಾಗಿದ್ದ ಕಲೆಗಾರರಿಗೆ ಜೆಲ್ಲೀ ಎಂದೂ ಹೆಸರಿತ್ತು. ಇವರು ಸುಮಾರು ಇನ್ನೂರು ವರ್ಷಗಳಷ್ಟು ಈಚಿನವರೆಗೂ ಪ್ರಸಿದ್ಧರಾಗಿದ್ದರು.

ನೀಗ್ರೊ ಸಂಗೀತ ವಿಶೇಷವಾಗಿ ಲಯಪ್ರಧಾನವಾದುದು. ಸಹಜೋತ್ಸಾಹದ, ಸಮಯಸ್ಫೂರ್ತಿಯ ಛಂದಸ್ಸೂ ಓಜಸ್ಸೂ ಈ ಸಂಗೀತದ ಪ್ರಧಾನ ಲಕ್ಷಣ. ಗೇಯಾಂಶ ದಲ್ಲೂ ತಾಳಕ್ರಮದಲ್ಲೂ ಸ್ವಚ್ಛಂದ ಸೃಷ್ಟಿಯೇ ಅವರ ವೈಶಿಷ್ಟ್ಯ. ಆದ್ದರಿಂದ ಪರಂಪರೆ ಮತ್ತು ಸಂಪ್ರದಾಯಗಳ ಮೌಲ್ಯಗಳು ಇಲ್ಲಿ ಅಷ್ಟಾಗಿ ಕಾಣಸಿಗುವುದಿಲ್ಲ. ಒಂದೇ ಹಾಡನ್ನು ಬೇರೆ ಬೇರೆ ನೀಗ್ರೊಗಳು ಬೇರೆ ಬೇರೆ ರೀತಿಯಲ್ಲಿ ಹಾಡುತ್ತಾರೆ. ಅಷ್ಟೇ ಅಲ್ಲ, ಒಬ್ಬನೇ ಒಂದು ಹಾಡನ್ನು ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆಯಾಗಿ ಹಾಡುತ್ತಾನೆ. ಸ್ವದೇಶ, ಸ್ವಗೃಹ, ಸ್ವಬಾಂಧವರ ಸಹವಾಸ–ಈ ಸನ್ನಿವೇಶಗಳಲ್ಲಿ ಸ್ವಚ್ಛಂದ ಸಂಗೀತ ಸೃಷ್ಟಿಯ ಹೂ ಅರಳುವುದು ಹೆಚ್ಚಲ್ಲದಿರಬಹುದು. ಆದರೆ ಅಮೆರಿಕದ ಗುಲಾಮಗಿರಿಯು ನರಕವಾದಲ್ಲಿ ಹೃದಯದ ಮಾರ್ದವ, ಆರ್ದ್ರತೆಗಳು ಬತ್ತಿಹೋಗಿ ಬೆಂಗಾಡಾಗಿ ಹೋದಾಗಲೂ ಇದು ಅರಳಿ ಪ್ರಪಂಚದಲ್ಲೆಲ್ಲ ಪರಿಮಳವನ್ನು ಪ್ರಸರಿಸಿದ್ದು ಹೆಚ್ಚಿನ ಮಾತೇ. ಬಹುಶಃ ಕಲೆಗಳ ಒಂದು ಪ್ರಧಾನ ಉದ್ದೇಶ ಇದೇ ಆಗಿದೆ. ಅದು ನೊಂದ ಹೃದಯಕ್ಕೆ ಔಷಧವಾಗಬಲ್ಲುದು. ಗಾಯ ಮಾಯುವಂತೆ, ನೋವನ್ನು ಮರೆಯುವಂತೆ ಮಾಡುವ ಗುಣ ಅದಕ್ಕುಂಟು. ನೀಗ್ರೊ ಹಾಡುಗಳಲ್ಲಿ ಗೇಯಾಂಶ ಸಾಮಾನ್ಯವಾಗಿ ಸರಳವಾಗಿಯೇ ಇರುತ್ತದೆ. ಅದರಲ್ಲಿನ ಸೌಂದರ್ಯಪ್ರಜ್ಞೆಯನ್ನೂ ರಸಪ್ರತೀತಿಯನ್ನೂ ಗಾಯಕ ತನ್ನ ವೈಯಕ್ತಿಕ ಅಭಿವ್ಯಕ್ತಿಯಿಂದಲೇ ಮಾತುಗಳಲ್ಲಿ ವಿವರಿಸಲು ಕಷ್ಟಸಾಧ್ಯವಾದ ಲಯ–ಛಂದಸ್ಸುಗಳ ಒಂದು ಬಗೆಯ ಸೂಕ್ಷ್ಮ ಮಿಶ್ರಣದಿಂದಲೇ ಮಾಡುತ್ತಾನೆ. ಆದುದರಿಂದ ಈ ಸಂಗೀತ ಮುಖ್ಯವಾಗಿ ವ್ಯಕ್ತಿನಿಷ್ಠವಾದುದು. ಅದೇ ಹಾಡನ್ನು ಅಷ್ಟೇ ನಿಷ್ಕೃಷ್ಟವಾಗಿ ಇನ್ನೊಬ್ಬರು ಹಾಡಿದರೂ ಅದೇ ರಸಪ್ರತೀತಿ ಆಗದೆ ಹೋಗಬಹುದು.

ನೀಗ್ರೊ ಸಂಗೀತದ ಇತರ ವೈಶಿಷ್ಟ್ಯಗಳೆಂದರೆ, ಛಂದೋಬದ್ಧವಾದ ಸಣ್ಣ ಸಣ್ಣ ಸ್ವರಸಮುಚ್ಚಯಗಳನ್ನು ಬಹು ಬಾರಿ ಪುನರಾವರ್ತಿಸಿ ಇವುಗಳನ್ನು ತೀವ್ರವಾದ ವೇಗ, ಉದ್ವೇಗಗಳ ಓಜೋಮಯ ಪರಾಕಾಷ್ಠೆಗೆ ಒಯ್ಯುವುದು. ಹಲವು ಸ್ವರಾರ್ಥಗಳನ್ನು ಅನುಕ್ರಮದಲ್ಲಿಯೇ ಬಳಸಿ ವಿವಿಧಭಾವಗಳಿಂದ ರಂಜಿಸುವುದು. ಸ್ವರಾಘಾತದಿಂದ ಸ್ವರಭಾರದ ವ್ಯತ್ಯಾಸದಿಂದಲೇ ಲಯದ ಭಾವವನ್ನು ಸ್ಫುರಿಸುವುದು. ತಾಳಕ್ರಮದಲ್ಲಿ ವಿಚಿತ್ರ ಛಂದೋ ವಿನ್ಯಾಸಗಳನ್ನು ಸೃಷ್ಟಿಸುವುದು, ಇತ್ಯಾದಿ. ಆಫ್ರಿಕದಲ್ಲಿ ನೀಗ್ರೊ ಸಂಗೀತ ತನ್ನದೇ ಆದ ಪ್ರೌಢಿಮೆಯನ್ನು ಈಚಿನವರೆಗೂ ಉಳಿಸಿಕೊಂಡಿತ್ತು. ಉದಾಹರಣೆಗೆ, 1820ರ ಸುಮಾರಿನಲ್ಲಿ

ಸುಲಿಮ ಪ್ರಾಂತ್ಯದ ಪ್ರಭು ಯರ್ರದಿ ನೂರಕ್ಕಿಂತ ಹೆಚ್ಚು ವಾದ್ಯಗಾರರಿದ್ದ ಸಂಗೀತಗೋಷ್ಠಿಯೊಂದನ್ನು ತನ್ನ ಆಸ್ಥಾನದಲ್ಲಿ ನೇಮಿಸಿಕೊಂಡಿದ್ದ. ಗಾನದಂತೆ ವಾದ್ಯದಲ್ಲೂ ನೀಗ್ರೊಗಳು ಪ್ರೌಢರಾಗಿದ್ದರು. ಹೀಗೆ, ಸೆನೆಗಾಂಬಿಯದ ನೀಗ್ರೊಗಳು ಆನೆಯ ದಂತದ ಕಾಳೆ, ಕಾಷ್ಠತರಂಗ (ಝಂಝೀ=ಮರಿಂಬ =ಇಬೆಕ) ಬೌಲೋ (ಒಂಬಿ) ಎಂಬ ಸ್ವರಮಂಡಲ, ಬುಲಾಫೊ, ಬಲೊಂಡ ಎಂಬ ರೀತಿಯ ರಾಗಮಾಲಿಕೆಗಳು (ಮೌತ್ ಆರ್ಗನ್), ವಲ್ಗ (ವಾಂಬೀ, ಕಿಸ್ಸುಂಬ)ಮತ್ತು ಸ್ಯಾಂಚೋ ಎಂಬ ತಂತೀವಾದ್ಯಗಳು ಅನೇಕ ವಿಧದ ಆಕಾರಗಳ ಮದ್ದಳೆಗಳು, ಕೊಳಲುಗಳು, ಪಿಟೀಲಿನಂಥ ವಾದ್ಯ ಮೊದಲಾದುವನ್ನು ಉಪಯೋಗಿಸುತ್ತಿದ್ದರು. ಅಪೊನೊ ನೀಗ್ರೊಗಳು ಹಂಜ ಎಂಬ ರಾಗಮಾಲಿಕೆಯನ್ನು ಅಶಂತೀ ನೀಗ್ರೊಗಳು ಉಪ್ಪಂಗವನ್ನೂ ಅನೇಕ ಮದ್ದಳೆಗಳನ್ನೂ (ಚಿರತೆಯ ಚರ್ಮದಿಂದ ಮುಚ್ಚಿದುದೇ ಇವುಗಳಲ್ಲಿ ಶ್ರೇಷ್ಠತಮವೆನಿಸಿತ್ತು). ಕಂಜಿರ, ಕೊಂಬು, ಕಾಳೆಗಳನ್ನೂ ಫಾಂತೀ ನೀಗ್ರೊಗಳು ಇವುಗಳ ಜೊತೆಗೆ ಅನೇಕ ಜಾಗಟೆಗಳು, ಚಿಟಿಕೆಗಳು ಮೊದಲಾದುವನ್ನೂ ದಹೋಮಿಯ ಬೆನಿನ್ ನೀಗ್ರೊಗಳು ಮದ್ದಳೆ, ಸ್ವರಮಂಡಲಗಳನ್ನೂ ಕಾಂಗೊ ನೀಗ್ರೊಗಳು ಗಿಟಾರ್‌ನಂಥ ವಾದ್ಯ, ವಿಸ್ಸಂದಿ ಎಂಬ ಕಾಷ್ಠತರಂಗ ಉಪ್ಪಂಗ, ಇತ್ಯಾದಿಗಳನ್ನೂ ಬಳಸುತ್ತಿದ್ದರು.

ಆಫ್ರಿಕದಲ್ಲಿ ಈಗ ಪಾಶ್ಚಾತ್ಯ ಸಂಸ್ಕೃತಿ ಪ್ರಬಲವಾಗಿ ದೇಶೀಯ ಸಂಗೀತದ ನೈಜ ಮೌಲ್ಯಗಳು ಮಸುಕಾಗುತ್ತಿವೆ. (ಆರ್.ಎಸ್.ಎಸ್.)

**ಆಫ್ರಿಕದ ಪ್ರಾಕ್ತನ ಚರಿತ್ರೆ :** ಆಫ್ರಿಕ ಖಂಡ ಪ್ರಾಕೃತಿಕ ಅಥವಾ ಭೌಗೋಳಿಕ ತಡೆಗಳಿಲ್ಲದ ಒಂದು ವಿಸ್ತಾರ ಪ್ರದೇಶ. ಪ್ರಾದೇಶಿಕ ವೈವಿಧ್ಯಕ್ಕೆ ಅಲ್ಲಿನ ಹವೆ ಕಾರಣ. ಉತ್ತರ ಆಫ್ರಿಕದ ಹಿತಕರವಾದ ಹವಾಗುಣ ಕ್ರಮೇಣ ಭೂಮಧ್ಯರೇಖೆಯ ಪ್ರದೇಶದಲ್ಲಿ ರೂಕ್ಷವಾಗುತ್ತದೆ. ದಕ್ಷಿಣಕ್ಕೆ ಹೋದಂತೆಲ್ಲ ಹೆಚ್ಚು ಹೆಚ್ಚು ಸಹನೀಯವಾಗುತ್ತದೆ. ದಕ್ಷಿಣ ಮತ್ತು ಆಗ್ನೇಯ ಆಫ್ರಿಕದಲ್ಲಿ ಹೆಚ್ಚು ಮಳೆ ಆಗುತ್ತದೆ. ನೈಲ್ ನದಿ ಉತ್ತರದ ಮರಳುಗಾಡಿನ ಮಧ್ಯೆ ಒಂದು ಫಲವತ್ತಾದ ಪ್ರದೇಶವನ್ನು ನಿರ್ಮಿಸಿದೆ. ಬಹುಶಃ ಇಲ್ಲಿನ ಸ್ಥಿತಿ ಸುಮಾರು ಒಂದು ದಶಲಕ್ಷ ವರ್ಷಗಳಿಂದಲೂ ಬದಲಾಯಿಸಿದಂತೆ ಕಾಣುವುದಿಲ್ಲ. ಈ ಹವಾಗುಣದ ಹಿನ್ನೆಲೆ ಅಲ್ಲಿನ ಪುರಾತತ್ವ ಮತ್ತು ಆದಿಮಾನವನ ಉಗಮ ಮತ್ತು ವಿಕಾಸಗಳನ್ನರಿಯಲು ಅತ್ಯಾವಶ್ಯಕ.

ಪೂರ್ವ ಮತ್ತು ಮಧ್ಯ ಆಫ್ರಿಕ ಆದಿಮಾನವನ ಉಗಮ ಮತ್ತು ವಿಕಾಸ ಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಮಾನವನ ಉಗಮವನ್ನು ಅವನಿಂದ ತಯಾರಿಸಲ್ಪಟ್ಟ ಸಲಕರಣೆಗಳ ಪರಿಶೋಧನೆಯಿಂದ ನಿರ್ಧರಿಸುತ್ತಾರೆ. ಏಕೆಂದರೆ ಅವು ಅವನ ದೈಹಿಕ ಮತ್ತು ಮಾನಸಿಕ ವಿಕಾಸದ ಹೆಗ್ಗುರುತುಗಳು.

ಅತ್ಯಂತ ಪುರಾತನವಾದ ಮಾನವನಿರ್ಮಿತ ಆಯುಧಗಳ ಉತ್ಪಾದನಕಲೆ ಆಫ್ರಿಕದಲ್ಲಿ ಜನಿಸಿ, ಬೆಳೆದು ಅಲ್ಲಿಂದ ಯುರೋಪು ಮತ್ತು ಏಷ್ಯ ಖಂಡಗಳಿಗೆ ಹರಡಿತೆಂಬ ವಾದ ಸರಿಯೆಂದು ತಿಳಿದುಬರುತ್ತದೆ. ಈ ಎಲ್ಲ ಪ್ರದೇಶಗಳಲ್ಲೂ ಆಯುಧಗಳು ಏಕರೀತಿಯಾಗಿದ್ದು ಒಂದೇ ಮೂಲಕ್ಕೆ ಸೇರಿದ್ದುವೆಂಬುದನ್ನು ಸ್ಥಿರೀಕರಿಸುತ್ತವೆ. ಕ್ರಮೇಣ ಹವಾಗುಣ ಹೆಚ್ಚು ಹೆಚ್ಚು ಬೆಂಗಾಡು ರೀತಿಯದಾಗುತ್ತ ಬಂದುದರಿಂದ ಹೊಸ ಮತ್ತು ಅಭಿವೃದ್ಧ್ಯಾತ್ಮಕ ಶೋಧನೆಗಳು ಇತರ ಪ್ರದೇಶಗಳಲ್ಲಿ ನಡೆದು ಆಫ್ರಿಕ ಮುಖ್ಯ ಮಾರ್ಗದಿಂದ ಬೇರೆಯಾಗಿ ಉಳಿದರೂ ತನ್ನದೇ ಆದ ಹಲವಾರು ಹೊಸ ಭಾವನೆಗಳನ್ನೂ ವೈಶಿಷ್ಟ್ಯಗಳನ್ನೂ ಬೆಳೆಸಿಕೊಂಡಿತು. ಈ ರೀತಿಯ ಪ್ರತ್ಯೇಕತೆ ಸುಮಾರು ಕ್ರಿಸ್ತಶಕಾರಂಭ ಕಾಲದವರೆಗೂ ಮುಂದುವರಿಯಿತು. ಅನಂತರ ಹೊರಗಿನ ಪ್ರಭಾವಗಳು ಸ್ವಲ್ಪ ಸ್ವಲ್ಪವಾಗಿ ಬರಲಾರಂಭಿಸಿದ ಮೇಲೆ ಅದು ಬದಲಾವಣೆಯ ಮತ್ತು ಆಧುನಿಕತೆಯ ಜಾಡು ಹಿಡಿಯಿತೆಂದು ಹೇಳಬಹುದು. ಉತ್ತರ ಆಫ್ರಿಕ, ಅದರಲ್ಲೂ ಈಜಿಪ್ಟ್ ದೇಶ ಮೆಡಿಟರೇನಿಯನ್ ಮತ್ತು ಪಶ್ಚಿಮ ಏಷ್ಯಗಳ ಸಾಮೀಪ್ಯದಿಂದ ಅಲ್ಲಿಯ ಪುರಾತನ ಸಂಸ್ಕೃತಿಗಳ ನೆಲೆವೀಡಾಯಿತು. ಆಫ್ರಿಕದ ಇತರ ಭಾಗಗಳಲ್ಲೂ ನಿಧಾನವಾಗಿಯಾದರೂ ಅನೇಕ ಸ್ಥಳೀಯ ವೈಶಿಷ್ಟ್ಯಗಳು ಬೆಳೆದುವು.

ಇತ್ತೀಚಿನ ಸಂಶೋಧನೆಗಳಿಂದ ಈವರೆಗಿನ ನಂಬಿಕೆಯಂತೆ ಏಷ್ಯದಲ್ಲಿ ಮಾನವನ ಉಗಮವಾಗಿರಲಾರದೆಂದೂ ಆ ಪ್ರಶಸ್ತಿ ಆಫ್ರಿಕಕ್ಕೆ ಸಲ್ಲತಕ್ಕದೆಂದೂ ಕಂಡುಬರುತ್ತದೆ. ಈ ವಾದವನ್ನು ಪುಷ್ಟೀಕರಿಸಲು (ಆಸ್ಟ್ರಲೋಪಿತಿಕಸ್) ಎಂಬ ನೆಟ್ಟಗೆ ನಿಲ್ಲಬಲ್ಲ ಆದಿಮಾನವನ ಮತ್ತು ಅವನಿಗಿಂತಲೂ ಹಿಂದಿನದಾದ ಪ್ರೋಕಾನ್ಸಲ್ ಆಫ್ರಿಕಾನಸ್ ಬಗೆಯ ಚತುಷ್ಪಾದಿ ಕಿರು ಮಂಗಗಳ ಅವಶೇಷಗಳೂ ಅಲ್ಲಿ ದೊರಕಿವೆ. ಮುಂದಿನ ಹಂತವಾದ ಅಟ್ಲಾಂತ್ರೋಪಸ್ ಮಾರಿಟಾನಿಕಸ್ ಜಾತಿಯ ಮಾನವ ಏಷ್ಯದ ಜಾವ ಮತ್ತು ಪೀಕಿಂಗ್ ಬಳಿ ದೊರಕಿ ಮಂಗ_ಮಾನವ (ಪಿತಿಕ್ಯಾಂತ್ರೋಪಸ್ ಎರೆಕ್ಟಸ್) ಜಾತಿಗೆ ಸೇರಿದವ. ಮುಂದಿನ ಪೀಳಿಗೆಯ ಜನರನ್ನು (ಪ್ರೋಟೊ–ಆಸ್ಟ್ರಲಾಯಿಡ್) ಮತ್ತು ಹೋಮೋ–ಸೆಪಿಯನ್ (ಆಧುನಿಕ ಮಾನವನ ವರ್ಗ) ಗುಂಪುಗಳಿಗೆ ಸೇರಿಸಬಹುದು. ಆಫ್ರಿಕದಲ್ಲಿ ದೊರಕಿದ ಮಾನವಾವಶೇಷಗಳು ಬಹುವಾಗಿ ಪ್ರೊಟೊ–ಆಸ್ಟ್ರಲಾಯಿಡ್ ಗುಂಪಿಗೆ ಸೇರಿದುವಾದರೂ ರೊಡೀಷಿಯ ಮಾನವನ ಅವಶೇಷಗಳು ಹೋಮೋ–ಸೆಪಿಯನ್ ಗುಂಪಿಗೆ ಸೇರುತ್ತವೆ. ಆಫ್ರಿಕದಲ್ಲಿ ಇವಲ್ಲದೆ ಕನಮ್, ಕಂಜೆರ, ಫ್ಲಾರಿಸ್‌ಬಾದ್‌ಗಳ ಮಾನವನ ಅವಶೇಷಗಳು ಪೂರ್ವ ಶಿಲಾಯುಗಕ್ಕೂ ಬಾಸ್ಕಾಪ್ ಮತ್ತು ಸಿಂಗ ತಲೆಬುರುಡೆಗಳು ಮಧ್ಯ ಮತ್ತು ಅಂತ್ಯ ಶಿಲಾಯುಗಕ್ಕೂ ಸೇರುತ್ತವೆ. ಆದಿಯಲ್ಲಿ ಪ್ರಬಲವಾಗಿದ್ದ ಪ್ರೋಟೊ–ಆಸ್ಟ್ರಲಾಯಿಡ್ ಗುಂಪಿನಿಂದ ಕ್ರಮೇಣ ವೈಶಿಷ್ಟ್ಯಪೂರ್ಣ ಬಾಸ್ಕಾಪ್ ಮತ್ತು ಬುಷ್ಮನಾಯಿಡ್ ಗುಂಪುಗಳ ವಿಕಾಸವಾಯಿತು.

**ಉಂಡೆಕಲ್ಲಿನ ಉಪಕರಣಗಳ ಕಾಲ :** (ಪೆಬಲ್ ಟೂಲ್ಸ್ ಏಜ್). ಆಫ್ರಿಕದ ಶಿಲಾಯುಗ ಸಂಸ್ಕೃತಿಯ ಪರಿಶೀಲನೆ ಪೂರ್ವಮಧ್ಯ ಪ್ರದೇಶಗಳಲ್ಲಿ ಆರಂಭವಾಗುತ್ತದೆ. ಅತಿ ಪುರಾತನವಾದ ನದಿಕಣಿವೆಗಳಲ್ಲಿ ದೊರಕುವ ಗುಂಡಾದ ಬೆಣಚುಕಲ್ಲುಗಳನ್ನು ಒಮ್ಮುಖ ಅಥವಾ ದ್ವಿಮುಖವಾಗಿ ಸೀಳಿ ಚೂಪಾದ ಮೊನೆಯುಳ್ಳ ಉಪಕರಣಗಳನ್ನು ಮಾಡುತ್ತಿದ್ದರು. ಅವುಗಳನ್ನು ಕಫ್ಯೂವನ್ (ಕಫ್ಯೂನದಿ ಕಣಿವೆಯಲ್ಲಿ ಮೊದಲು ಕಂಡುಬಂದಿದ್ದು) ಮತ್ತು ಓಲ್ಡೋವನ್ (ಓಲ್ದು ಕಮರಿಯಲ್ಲಿ ಮೊದಲು ಕಂಡುಬಂದದ್ದು) ಎಂದು ವಿಭಾಗ ಮಾಡಿದ್ದಾರೆ. ಕಫ್ಯೂವನ್ ಉಪಕರಣಗಳು ಬಹುಶಃ ಮಾನವನಿರ್ಮಿತವಲ್ಲ. ಪ್ರಕೃತಿಯ ಆಕಸ್ಮಿಕಗಳೆಂದು ಹಲವು ವಿದ್ವಾಂಸರು ನಿರಾಕರಿಸುತ್ತಾರೆ. ಆದರೆ ಓಲ್ಡೋವನ್ ಉಪಕರಣಗಳು ಮಾನವನಿರ್ಮಿತವೆಂದು ಖಚಿತವಾಗಿದೆ. ಈ ಆಯುಧೋಪಕರಣಗಳು ಟಾಂಗನೀಕ ಪ್ರದೇಶದ ಓಲ್ಡುವಾಯ್ ಕಮರಿಯಲ್ಲಿರುವ ಬಹು ಪುರಾತನ ಭೂಪದರಗಳಲ್ಲೂ ಅಷ್ಟೇ ಪುರಾತನವಾದ ಪ್ರದೇಶಗಳಲ್ಲೂ ಕಂಡುಬಂದಿವೆ. ಪೂರ್ವಶಿಲಾಯುಗ ಸಂಶೋಧನೆಗೆ ಓಲ್ಡುವೆ ಕಮರಿಯ ಶೋಧನೆ ಬಹಳ ನೆರವಾಗಿದೆ. ಇಲ್ಲಿನ ಕ್ರಮಾಗತ ಪದರಗಳಲ್ಲಿ ಗುಂಡುಕಲ್ಲಿನಿಂದ ಮಾಡಿದ ಆಯುಧಗಳು, ಅನಂತರದ ಕೈಕೊಡಲಿಗಳ ಹಂತ ಹಂತವಾದ ಬೆಳವಣಿಗೆಯ ಆಧಾರಗಳು ದೊರಕುವುದು ಮಾತ್ರವಲ್ಲದೆ ಸಮಕಾಲೀನ ಮಾನವ ಮತ್ತು ಪ್ರಾಣಿಗಳ ಅವಶೇಷಗಳೂ ಕಂಡುಬಂದು ಮಾನವನ ಕ್ರಮಬದ್ಧ ಬೆಳವಣಿಗೆಗೆ ಬೇಕಾದ ಖಚಿತ ಆಧಾರಗಳು ದೊರಕುತ್ತವೆ. ಉಗಾಂಡ, ಕೆನ್ಯ, ಆಲ್ಜೀರಿಯ, ರೊಡೀಷಿಯ, ಅಂಗೋಲ ಮತ್ತು ಟ್ರಾನ್ಸ್‌ವಾಲ್ ಪ್ರಾಂತ್ಯಗಳಲ್ಲೂ ಈ ಕಾಲದ ಉಪಕರಣಗಳೂ ಅವಶೇಷಗಳೂ ದೊರಕಿವೆ. ಈ ಎಲ್ಲ ಪ್ರದೇಶಗಳಲ್ಲೂ ದೊರಕುವ ಈ ಗುಂಡುಕಲ್ಲಿನ ಉಪಕರಣಗಳ ನಿರ್ಮಾಪಕರೇ ವಿಶ್ವದ ಅತ್ಯಂತ ಹಳೆಯ ಮಾನವ ಕೈಗಾರಿಕೆಯನ್ನು ಯುರೋಪು ಮತ್ತು ಏಷ್ಯ ಖಂಡಗಳಿಗೆ ಒಯ್ದಿರಬೇಕು. ಮುಂದಿನ ಹಂತದ ಪ್ರಭಾವ ಯುರೋಪು ಹಾಗೂ ಪಶ್ಚಿಮ ಮತ್ತು ಮಧ್ಯ ಏಷ್ಯ ಖಂಡಗಳಿಗೆ (ದಕ್ಷಿಣಭಾರತದವರೆಗೂ) ಒಯ್ಯಲ್ಪಟ್ಟರೂ ಪೂರ್ವ ಏಷ್ಯಕ್ಕೆ ತಲುಪದೇ ಅಲ್ಲಿನ ಮಾನವರು ಹಳೆಯ ಸಂಸ್ಕೃತಿಯಲ್ಲೇ ಹಲವು ಲಕ್ಷ ವರ್ಷಗಳು ಜೀವಿಸುತ್ತಿದ್ದರೆಂದು ತಿಳಿದುಬಂದಿದೆ.

**ಹಳೆಯ ಶಿಲಾಯುಗ :** ಈ ಹಂತದಲ್ಲಿ ಅಬೆವಿಲಿಯನ್ (ಫ್ರಾನ್ಸಿನ ಬಳಿಯ ಅಬೆವಿಲೆಯಲ್ಲಿ ಮೊದಲು ಗುರುತಿಸಿದ್ದು) ಮತ್ತು ಅವುಲಿಯನ್ ಹಂತದ ಕೈಕೊಡಲಿ ಮತ್ತಿತರ ಉಪಕರಣಗಳ ಬೆಳವಣಿಗೆ ಓಲ್ಡುವೆ ಕಮರಿ ಮತ್ತು ಇತರ ಪ್ರದೇಶಗಳಲ್ಲೂ ಕಂಡುಬರುತ್ತವೆ. ಉಪಯೋಗದ ದೃಷ್ಟಿಯಿಂದ ಉಪಕರಣಗಳ ಆಕೃತಿ ಉತ್ತಮಗೊಂಡಿವೆ. ಯೂರೋಪಿನ ಲೆವಾಲ್ವಾ ಎಂಬ ಹೆಸರಿನ ಕಲ್ಲುಚಕ್ಕೆಗಳ ಆಯುಧಗಳನ್ನು ತಯಾರಿಸುವ ವಿಧಾನ ಆ ಕಾಲದಲ್ಲೇ ಈ ಸಂಸ್ಕೃತಿಯ ಅಂಗವಾಗಿ ಬೆಳೆದುಬಂದಿತ್ತು. ಈ ಸಂಸ್ಕೃತಿಯ ಮುಖ್ಯಕೇಂದ್ರಗಳು ಓಲ್ಡುವೆ ಕಮರಿ, ವಾಲ್‌ನದೀ ಕಣಿವೆ, ರೊಡೀಷಿಯ, ಕಾಂಗೊ, ಕೆನ್ಯ, ಉಗಾಂಡ, ಮೊರಾಕೊ ಟ್ಯುನೀಷಿಯ ಮತ್ತು ನೈಲ್‌ನದಿ ಕಣಿವೆ–ಮುಂತಾದುವು. ಕಲ್ಲಿನ ಆಯುಧಗಳೇ ಅಲ್ಲದೆ ಮರದ ಆಯುಧಗಳು, ಸಸ್ಯಗಳ ಅವಶೇಷಗಳು ಮಧ್ಯ ಪಶ್ಚಿಮ ಆಫ್ರಿಕಗಳಲ್ಲಿ ದೊರಕಿರುವುದರಿಂದ ಆಗಿನ ಮತ್ತು ಮಾನವನಿರ್ಮಿತವಾದ ಅತ್ಯಂತ ಪುರಾತನ ವಸತಿಗಳ (ಪ್ರ.ಶ.ಪೂ. 52,000) ವಿಷಯವಾಗಿ ತಿಳಿಯಲು ಸಾಧ್ಯವಾಗಿದೆ.

**ಮಧ್ಯಶಿಲಾಯುಗ :** ಹಳೆಯ ಶಿಲಾಯುಗದ ಅಂತ್ಯಭಾಗದಲ್ಲಿ ಆಯುಧ ತಯಾರಿಕೆಯಲ್ಲಿ ಕಂಡುಬಂದ ಹೊಸ ವಿಧಾನಗಳಿಂದ, ಪರಿಷ್ಕೃತವಾಗಿ ಮಾಡಲ್ಪಟ್ಟ ಆಯುಧಗಳನ್ನುಳ್ಳ ಮಧ್ಯಶಿಲಾಯುಗ ಪ್ರಾರಂಭವಾಗುತ್ತದೆ. ದಕ್ಷಿಣದಲ್ಲಿ ಫೌರೆಸ್ಮಿತ್ ಮತ್ತು ಸ್ಯಾಂಗೋವನ್, ಪಶ್ಚಿಮ ಮತ್ತು ಮಧ್ಯಪ್ರದೇಶಗಳಲ್ಲಿ ಸ್ಟಿಲ್‌ಬೇ, ಪೂರ್ವ ಆಫ್ರಿಕದಲ್ಲಿ ಕ್ಯಾಪ್ಸಿಯನ್, ಇಷಂಗಿಯನ್, ಲುಪೆಂಬಾನ್ ಮತ್ತು ಪಿಟೋಲಿಯನ್ ಮತ್ತು ಉತ್ತರದಲ್ಲಿ ಅಟೇರಿಯನ್ ಸಂಸ್ಕೃತಿಗಳು ಹರಡಿಕೊಂಡಿದ್ದುವು. ಈ ಕಾಲದಲ್ಲಿ ಹಳೆಯ ಕೈಕೊಡಲಿ, ಬಾಚಿಗಳ (ಕ್ಲೀವರ್ಸ್) ಜೊತೆಗೆ ಕ್ರಮೇಣ ತೆಳುವಾದ ಕಲ್ಲಿನ ಚೆಕ್ಕೆಗಳಿಂದ ಮಾಡಿದ ಹೆರೆಯುವ ಸಾಧನಗಳಾಗಿ ಮತ್ತು ಈಟಿ, ಭರ್ಜಿಗಳ ಚೂಪು ಮೊನೆಗಳಾಗಿ ಉಪಯೋಗಿಸಲ್ಪಡುತ್ತಿದ್ದ ಆಯುಧಗಳೂ ಬಳಕೆಗೆ ಬಂದವು. ಕೈಕೊಡಲಿಗಳು ಸಣ್ಣವಾಗಿ ಹೆಚ್ಚು ಕೌಶಲದಿಂದ ಮಾಡಲ್ಪಟ್ಟಿವೆ. ಮಾನವ ಬೇಟೆ ಮತ್ತು ಆಹಾರ ಸಂಗ್ರಹಣದಿಂದಲೇ ಜೀವಿಸುತ್ತಿದ್ದರೂ ಈತನ ಕಾರ್ಯಗಳಿಗೆ ಹೆಚ್ಚು ಉಪಯುಕ್ತವಾದ ಮತ್ತು ಉತ್ತಮವಾಗಿ ರೂಪಿಸಲ್ಪಟ್ಟ ಉಪಕರಣಗಳನ್ನು ಉಪಯೋಗಿಸಲು ಕಲಿತುಕೊಂಡ. ಅಲ್ಲದೆ ಇದೇ ಕಾಲದಲ್ಲಿ ಉಪಕರಣಗಳನ್ನು ಬಿಡಿಬಿಡಿಯಾಗಿ ಉಪಯೋಗಿಸುವ ಬದಲು ಸಂಯುಕ್ತಾಯುಧಗಳಾಗಿ ಉಪಯೋಗಿಸುತ್ತಿದ್ದ. ಆಫ್ರಿಕದ ವಿವಿಧ ಪ್ರದೇಶಗಳಿಂದ ಈ ಸಂಸ್ಕೃತಿಯ ಅವಶೇಷಗಳು (ಪ್ರ.ಶ.ಪೂ. 40,000 ವರ್ಷಗಳ ಹಿಂದಿನವು) ದೊರಕುತ್ತವೆ.

**ಅಂತ್ಯ ಶಿಲಾಯುಗ :** ಮೇಲಿನ ಸಂಸ್ಕೃತಿಗಳಲ್ಲಿ ಪೂರ್ವಶಿಲಾಯುಗದ ಉಪಕರಣಗಳ ಮತ್ತು ಅವುಗಳ ಉತ್ಪಾದನಾರೀತಿ ಮುಂದುವರಿದರೂ ಅಂತ್ಯ ಶಿಲಾಯುಗದಲ್ಲಿ ಸೂಕ್ಷ್ಮಶಿಲಾಯುಧಗಳು (ಮೈಕ್ರೊಲಿಕ್ಸ್) ಬಳಕೆಗೆ ಬರಲಾರಂಭಿಸಿದುವು. ಈ ಸೂಕ್ಷ್ಮ ಶಿಲಾಯುಧಗಳು ಯುರೋಪಿನಲ್ಲಿ ಸುಮಾರು ಪ್ರ.ಶ.ಪೂ. 10,000 ವರ್ಷಗಳ ಹಿಂದಿನವು. ಆದರೆ ಆಫ್ರಿಕದಲ್ಲಿ ಇನ್ನೂ ಹಳೆಯವಾಗಿದ್ದು ಪ್ರ.ಶ. 15–16 ಶತಮಾನಗಳ ಕಾಲಕ್ಕೂ ಕೆಲವು ಪ್ರಾಂತ್ಯಗಳಲ್ಲಿ ಮುಂದುವರಿದುವು. ಆಫ್ರಿಕದಲ್ಲಿ ಈ ಸಂಸ್ಕೃತಿ ಪೂರ್ವ ಶಿಲಾಯುಗದ ಅಂಗವಾಗಿ ಬೆಳೆದುಬಂದು ಕಾಲಕ್ರಮೇಣ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿತು. ಈ ಸಂಸ್ಕೃತಿಗೆ ಸುಮಾರು ಕ್ರಿ.ಪೂ. 10,000 ವರ್ಷಗಳಷ್ಟು ಹಳೆತನವನ್ನು ಕೊಡಬಹುದು. ಈ ಸಂಸ್ಕೃತಿಯ ಆಯುಧಗಳಲ್ಲಿ ಹೆರೆಯುವ ಉಪಕರಣಗಳು, ಮೊನಚಾದ ಉಪಕರಣಗಳು, ಮುಕ್ಕೋಣಗಳು, ಸುಧಾರಿತ ವಿಧಾನಗಳಿಂದ ಮಾಡಲ್ಪಡುತ್ತಿದ್ದವು. ಇದೇ ಕಾಲದಲ್ಲಿ ಆಫ್ರಿಕದ ಮಾನವ ಮೊತ್ತ ಮೊದಲಿಗೆ ಬಿಲ್ಲು ಬಾಣಗಳ ಉಪಯೋಗವನ್ನು ಕಂಡುಕೊಂಡ. ಆ ಹೊಸ ವಿಧಾನದಿಂದ ಅವನ ಆಹಾರ ಸಂಗ್ರಹಣಕ್ಕೆ ಹೆಚ್ಚಿನ ಅನುಕೂಲವುಂಟಾಗಿ ಅವನ ಜೀವನಮಟ್ಟ ಉತ್ತಮಗೊಂಡಿತೆಂದು ಹೇಳಬಹುದು. ಇದಕ್ಕೆ ಸಾಕ್ಷಿಯಾಗಿ ಆ ಕಾಲದಲ್ಲಿ ಆಫ್ರಿಕದ ವಿವಿಧ ಭಾಗಗಳಲ್ಲಿ ಕಂಡುಬರುವ, ಕಲ್ಲಿನ ಮೇಲೆ ವರ್ಣಿಸಿರುವ, ಕೆತ್ತಲ್ಪಟ್ಟಿರುವ ಮಾನವ ಮತ್ತು ಪ್ರಾಣಿಗಳ ಚಿತ್ರಗಳು ಕಂಡುಬರುತ್ತವೆ. ಅವರಿಗೆ ಆಹಾರ ಸಂಪಾದನೆಯಲ್ಲೇ ಕಳೆದುಹೋಗುತ್ತಿದ್ದ ಕಾಲ ಈ ಸುಧಾರಿತ ವಿಧಾನಗಳಿಂದ ಉಳಿದು ಅದನ್ನು ಅವರು ವಿಶ್ರಾಂತಿಯುತ ಮಾನಸಿಕ ಮತ್ತು ಬೌದ್ಧಿಕ ಚಟುವಟಿಕೆಗಳಿಗೆ ನಿಯೋಜಿಸಲು ಸಾಧ್ಯವಾಯಿತು. ಅಂತ್ಯ ಶಿಲಾಯುಗದಲ್ಲಿ ದಕ್ಷಿಣದಲ್ಲಿ ಸ್ಮಿತ್‌ಫೀಲ್ಡ್ ಮತ್ತು ವಿಲ್ಟನ್, ಪಶ್ಚಿಮ, ಮಧ್ಯ ಆಫ್ರಿಕಗಳಲ್ಲಿ ಷಿಟೋಲಿಯನ್ ಮತ್ತು ನಚಿಕುಫಾನ್, ಪೂರ್ವ ಮತ್ತು ಉತ್ತರ ಆಫ್ರಿಕಗಳಲ್ಲಿ ಕ್ಯಾಪ್ಸಿಯನ್ ಮತ್ತು ಓರಾನಿಯನ್ ಸಂಸ್ಕೃತಿಗಳು ಬೆಳಕಿಗೆ ಬಂದಿವೆ. ಕೆಲವು ಪ್ರದೇಶಗಳಲ್ಲಿ ಈ ಸಂಸ್ಕೃತಿಗಳು ಪ್ರ.ಶ.ಪೂ. 5,000ದಲ್ಲೇ ಪ್ರಬಲವಾಗಿದ್ದವೆಂದು ತಿಳಿದುಬರುತ್ತದೆ.

**ನವ ಶಿಲಾಯುಗ :** ಸುಮಾರು ಈ ವೇಳೆಯಲ್ಲಿ ಪಶ್ಚಿಮ ಏಷ್ಯ ಮತ್ತು ಮೆಡಿಟರೇನಿಯನ್ ಪ್ರದೇಶಗಳಲ್ಲಿ ನವ ಶಿಲಾಯುಗ ಸಂಸ್ಕೃತಿ ಬೆಳೆಯುತ್ತಿತ್ತು. ಮೊದಲು ಈಜಿಪ್ಟಿಗೂ ಅಲ್ಲಿಂದ ಉತ್ತರ ಮತ್ತು ಪೂರ್ವ ಆಫ್ರಿಕ ಪ್ರದೇಶಗಳಿಗೂ ಕ್ರಮೇಣ ಹರಡಲಾರಂಭಿಸಿತು. ಆದರೆ ನಾಗರಿಕತೆಯ ಚಿಹ್ನೆಗಳಿಂದೊಡಗೂಡಿದ ಈ ನೂತನ ಶಿಲಾಯುಗದ ಮಾಹಿತಿಗಳೆಲ್ಲವೂ ಆಫ್ರಿಕದ ಒಳಪ್ರದೇಶಗಳಲ್ಲಿ ಕಂಡುಬರುವುದಿಲ್ಲ. ಮುಂದುವರಿದ ಪ್ರದೇಶಗಳೊಂದಿಗೆ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದುದರಿಂದ ಈ ಹಿಂದುಳಿದ ಜನ ಕೂಡ ಹಲವಾರು ಅಂಶಗಳನ್ನು ಪಡೆದರು. ಈ ಕಾರಣಗಳಿಂದ ನಯ ಮಾಡಿದ ಕಲ್ಲಿನ ಕೊಡಲಿಗಳೂ ಕೈಬಾಚಿಗಳೂ ಸುತ್ತಿಗೆಗಳೂ ಅಗೆಯುವ ಕೋಲಿಗೆ ಭಾರವಾಗಿ ಉಪಯೋಗಿಸುತ್ತಿದ್ದ ರಂಧ್ರ ಮಾಡಿದ ಕಲ್ಲುಗಳೂ ಕಂಡುಬಂದಿವೆ. ಸ್ವಲ್ಪ ಕಾಲಾನಂತರ ಒರಟಾದ ಮಡಿಕೆಗಳ ಬಳಕೆಯೂ ಕಂಡುಬರುತ್ತದೆ. ಇದೇ ಸಮಯದಲ್ಲಿ ಪೂರ್ವ ಆಫ್ರಿಕದ ಸುಧಾರಿತ ನವ ಶಿಲಾಯುಗದ ಎಲಿಮೆಂಟಿಯನ್ ಸಂಸ್ಕೃತಿಯಲ್ಲಿ ಉದ್ದವಾದ ಚೂಪಲಗುಳ್ಳ ಉಪಕರಣಗಳೂ ಉತ್ತಮ ಮಡಿಕೆಗಳೂ ಈಜಿಪ್ಟಿನ ರೀತಿಯ ಕಲ್ಲಿನ ಪಾತ್ರೆಗಳೂ ಉಪಯೋಗಿಸಲ್ಪಟ್ಟವು. ಗುಂಬನ್ ಎ ಮತ್ತು ಬಿ ಹಾಗೂ ಛೋರೋ ನದೀಗುಹೆಯ ಸಂಸ್ಕೃತಿಗಳು ಈ ಗುಂಪಿಗೆ ಸೇರಿದುವು. ಛೋರೋನದೀ ಸಂಸ್ಕೃತಿ ಇಂಗಾಲ–14ರ ವಿಧಾನದಿಂದ ಪ್ರ.ಶ.ಪೂ. 960ರದ್ದೆಂದು ತಿಳಿದುಬಂದಿದೆ. ಆ ಕಾಲದಲ್ಲಿ ಅಲ್ಲಿನ ಜನ ಕಾಕಸಾಡ್ ಬುಡಕಟ್ಟಿಗೆ ಸೇರಿದ್ದವರೆಂದೂ ಅವರಲ್ಲಿ ನೀಗ್ರಾಯಿಡ್ ಚಿಹ್ನೆಗಳು ಸ್ವಲ್ಪವೂ ಇರಲಿಲ್ಲವೆಂದೂ ತಿಳಿದುಬರುತ್ತದೆ. ಈ ನಿವೇಶನದಲ್ಲಿ ಕಲ್ಲಿನ ಮಣಿಗಳೂ ಕೊರೆದ ಮರದ ಪಾತ್ರೆಗಳೂ ಅರೆಯುವ ಕಲ್ಲುಗಳೂ ಮೂಳೆಯ ಪದಕಗಳೂ ಸೂಜಿಗಳೂ ಹೆಣಿಗೆಬುಟ್ಟಿ ಮುಂತಾದ ಕುಶಲಕಲಾ ಸಾಮಗ್ರಿಗಳೂ ಕಂಡುಬಂದಿವೆ. ಉತ್ತರ ಆಫ್ರಿಕದ ಸೈರನೈಕ ಪ್ರಾಂತ್ಯದಲ್ಲಿ ಪ್ರ.ಶ.ಪೂ. 4000ದಲ್ಲಿ ಈಜಿಪ್ಟಿನ ಫಯೂಂ ಸಂಸ್ಕೃತಿಯಿಂದ ಪ್ರಭಾವಿತವಾದ ನವ ಶಿಲಾಯುಗ ಸಂಸ್ಕೃತಿಯಲ್ಲಿ ಸೂಕ್ಷ್ಮ ಶಿಲಾಯುಧಗಳೂ ಹೊಳೆಯುವ ಅಲಂಕಾರಶೂನ್ಯ ಮಡಿಕೆಗಳೂ ಬಳಕೆಯಲ್ಲಿದ್ದುವು. ಆಡುಕುರಿಗಳನ್ನು ಪಳಗಿಸಿ ಸಾಕತೊಡಗಿದ್ದರು.

ಈ ನವ ಶಿಲಾಯುಗದ ಕಾಲದಲ್ಲೂ ಬಂಡೆಗಳ ಮೇಲೆ ವರ್ಣಿಸಿದ ಮತ್ತು ಕೆತ್ತಲಾದ ಚಿತ್ರಗಳು ಬಹಳ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ್ದುವು. ಇವುಗಳಲ್ಲಿ ಗುಹೆ ಮತ್ತು ಗುಹಾಮುಖಗಳಲ್ಲಿ ಪ್ರಾಣಿಗಳ ಮತ್ತು ಮನುಷ್ಯರ ಗುಂಪು ದೃಶ್ಯಗಳಲ್ಲದೆ ಸೂಚ್ಯರೂಪೀಕರಣವೂ ಕಂಡುಬರುತ್ತದೆ. ಈ ಚಿತ್ರಣಗಳು ಉತ್ತರ ಮತ್ತು ಈಶಾನ್ಯ ಆಫ್ರಿಕಗಳಲ್ಲೂ ನೈಲ್ ನದೀದಂಡೆಗಳಲ್ಲೂ ಪೂರ್ವದ ಉಗಾಂಡ, ಟಾಂಗನೀಕ, ರೊಡೀಷಿಯ ಪ್ರಾಂತ್ಯಗಳಲ್ಲೂ ದಕ್ಷಿಣದ ಅನೇಕ ಪ್ರದೇಶಗಳಲ್ಲೂ ಕಂಡುಬಂದಿವೆ. ದಕ್ಷಿಣದಲ್ಲಿ ಈ ವರ್ಣಚಿತ್ರಣಗಳು ಏಕವರ್ಣ, ದ್ವಿವರ್ಣ ಮತ್ತು ಬಹುವರ್ಣ ಚಿತ್ರಣಗಳ ಹಂತಗಳನ್ನು ಹಾಯ್ದು ಉನ್ನತಿಯ ಶಿಖರವನ್ನು ಮುಟ್ಟಿದ್ದವೆಂದು ಹೇಳಬಹುದು.

**ಕಬ್ಬಿಣದ ಉಪಕರಣಗಳ ಕಾಲ :** ದಕ್ಷಿಣ ಆಫ್ರಿಕದಲ್ಲಿ ಈ ಕಾಲದ್ದು ಬಹು ತೊಡಕಿನ ಸಮಸ್ಯೆ. ಕೆಲವು ಪ್ರದೇಶಗಳಲ್ಲಿ ಪ್ರ.ಶ.ಪೂ. ಒಂದನೆಯ ಸಹಸ್ರಾಬ್ದ ಮಧ್ಯದಲ್ಲಿ ಕಬ್ಬಿಣದ ಉಪಯೋಗ ಈಜಿಪ್ಟಿನ ಮಾರ್ಗವಾಗಿ ಬಂದಿರಬಹುದಾದರೂ ಆಫ್ರಿಕ ಜನ ಯುರೋಪಿಯನ್ನರು 17ನೆಯ ಶತಮಾನದಲ್ಲಿ ಅಲ್ಲಿಗೆ ಪ್ರವೇಶಿಸುವವರೆಗೂ ಶಿಲಾಯುಗ ಸಂಸ್ಕೃತಿ ಮಟ್ಟದಲ್ಲೊ ಹಿಂದುಳಿದ ಕಬ್ಬಿಣ ಯುಗೀನ ಸಂಸ್ಕೃತಿ ಮಟ್ಟದಲ್ಲೊ ಇದ್ದುದಾಗಿ ಕಂಡುಬರುತ್ತದೆ.

ಉತ್ತರದ ಸೈರನೈಕ ಪ್ರದೇಶಕ್ಕೆ ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಕಾರ್ತೇಜಿನವರು ಕಬ್ಬಿಣವನ್ನು ತಂದರು. ಆ ಕಾಲದಲ್ಲೇ ಗ್ರೀಕರು ಈಜಿಪ್ಟಿಗೆ ಅದರ ಪ್ರವೇಶ ಮಾಡಿಸಿದರು. ಅಲ್ಲಿಂದ ನ್ಯೂಬಿಯ ಇಥಿಯೋಪಿಯಗಳಿಗೆ ಹಬ್ಬಿರಬಹುದು. ಪಶ್ಚಿಮ, ದಕ್ಷಿಣ ಪ್ರದೇಶಗಳಿಗೆ ಬಹಳ ತಡವಾಗಿ ಅಂದರೆ ಪ್ರ.ಶ. 16–17ನೆಯ ಶತಮಾನದಲ್ಲಿ ಕಬ್ಬಿಣ ಪ್ರವೇಶಿಸಿತು. ಆ ಕಾಲದಲ್ಲಿ ಆಫ್ರಿಕದ ಜನ ಸಾಮಾನ್ಯವಾಗಿ ಬೇಟೆಯಿಂದಲೇ ಜೀವಿಸುತ್ತಿದ್ದರು. ಹಲವು ಮುಂದುವರಿದ ಪಂಗಡಗಳವರು ಆಡು, ಕುರಿ, ದನಗಳ ಸಾಕಾಣಿಕೆ, ಖನಿಜಗಳ ಅಗೆತ, ವ್ಯಾಪಾರ, ವನಜನ್ಯವಸ್ತುಗಳಾದ ಜೇನು, ದಂತ ಇವುಗಳ ವ್ಯಾಪಾರಗಳನ್ನು ಮಾಡುತ್ತಿದ್ದರು. ಕೆಲವು ಗುಂಪುಗಳು ಕೀಳ್ಮಟ್ಟದ ವ್ಯವಸಾಯವನ್ನೂ ಮಾಡುತ್ತಿದ್ದರು. 16ನೆಯ ಶತಮಾನದಲ್ಲಿ ಪೋರ್ಚುಗೀಸರಾದಿಯಾದ ಯುರೋಪ್ ಜನಾಂಗಗಳು ಬರುವವರೆಗೂ ಅರಬ್ಬೀಯರ ಕೈವಶವಾಗಿದ್ದ ಈ ವ್ಯಾಪಾರೋದ್ಯಮ ಅನಂತರ ಯುರೋಪಿಯನ್ನರ ವಶವಾಗಿ ಅವರ ಸಂಪರ್ಕ ಮತ್ತು ಇತರ ಕಾರಣಗಳಿಂದ ಆಫ್ರಿಕ ನಾಗರಿಕತೆಯ ಪರಿಚಯವನ್ನು ಬೆಳೆಸಿಕೊಂಡಿತು. (ಬಿ.ಕೆ.ಜಿ.)

**ಆಫ್ರಿಕದ ಭಾಷೆಗಳು :** ಪ್ರಪಂಚದ ಸುಮಾರು ಎರಡು ಸಾವಿರದ ಎಂಟುನೂರು ಭಾಷೆಗಳಲ್ಲಿ ಆಫ್ರಿಕ ಖಂಡವೊಂದರಲ್ಲಿ ಬಳಕೆಯಲ್ಲಿರುವ ಭಾಷೆಗಳ ಸಂಖ್ಯೆ ಆರುನೂರಕ್ಕೂ ಹೆಚ್ಚು. ಇದರಿಂದ ಅಲ್ಲಿಯ ಭಾಷಾವೈವಿಧ್ಯ ಎದ್ದು ಕಾಣುತ್ತದೆ. ನೈಜೀರಿಯದ ಚಾಜಿ ಪ್ರಸ್ಥಭೂಮಿಯಂಥ ಕೆಲವು ಚಿಕ್ಕ ಪ್ರದೇಶಗಳಲ್ಲಿ ಅನೇಕ ಬೇರೆ ಬೇರೆ ಭಾಷೆಗಳು ಕಿಕ್ಕಿರಿದಿವೆ. ಅನೇಕ ಲಕ್ಷ ಸಂಖ್ಯೆಯ ಜನ ಆಡುವ ದೊಡ್ಡ ಭಾಷೆಗಳೂ ಆಫ್ರಿಕದಲ್ಲುಂಟು. ಉದಾಹರಣೆಗೆ ಪೂರ್ವ ಆಫ್ರಿಕದ ಸ್ವಹಿಲಿ (8 ದಶಲಕ್ಷ ), ಪಶ್ಚಿಮ ಆಫ್ರಿಕದ ಹೌಸ (13 ದಶಲಕ್ಷ), ಉತ್ತರ ಆಫ್ರಿಕದ ಅರಬ್ಬೀ (ಅರೇಬಿಯ, ಇರಾಕ್, ಪ್ಯಾಲೆಸ್ಟೀನ್ ಮತ್ತು ಸಿರಿಯಗಳನ್ನು ಸೇರಿಸಿಕೊಂಡರೆ 75 ದಶಲಕ್ಷ), ಆದರೂ ಆಫ್ರಿಕದ ಭಾಷೆಗಳ ಬಗ್ಗೆ ಸರಿಯಾದ ಕೆಲಸ ಆಗಬೇಕಾಗಿದೆ ಎಂದೇ ಹೇಳಬೇಕು.

ಅಲ್ಲಿನ ಭಾಷೆಗಳ ಸಂಖ್ಯೆಯೂ ನಿರ್ಧಾರವಾಗಿಲ್ಲ. ಆ ಭಾಷೆಗಳ ವರ್ಗೀಕರಣವೂ ಸಮರ್ಪಕವಾಗಿಲ್ಲ. ಸ್ಥೂಲವಾಗಿ ನೋಡುವುದಾದರೆ ಆಫ್ರಿಕದ ಭಾಷೆಗಳನ್ನು ಐದು ವಂಶಗಳಿಗೆ ಹಂಚಬಹುದು: 1 ಹೆಮಿಟೊ–ಸಿಮಿಟಿಕ್ : ಹೆಚ್ಚು ಕಡಿಮೆ ಆಫ್ರಿಕದ ಉತ್ತರದ ಉದ್ದಗಲದಲ್ಲಿ; 2 ಮಧ್ಯ ಸಹರನ್ : ಮಧ್ಯ ಆಫ್ರಿಕದ ಚಾಡ್ ಪ್ರದೇಶದಲ್ಲಿ; 3 ನೈಜರ್ ಕಾಂಗೊ : ಸಹರ ಮರುಭೂಮಿಗೆ ಇಡೀ ದಕ್ಷಿಣ ಆಫ್ರಿಕ ಪ್ರದೇಶದಲ್ಲಿ; 4 ಮ್ಯಾಕ್ರೊ ಸುಡಾನಿಕ್ : ಸೂಡಾನ್ ಪ್ರದೇಶದಲ್ಲಿ; 5 ಕ್ಲಿಕ್ : ದಕ್ಷಿಣ ಆಫ್ರಿಕದ ಪಶ್ಚಿಮ ತೀರದಲ್ಲಿ.

ಈ ಒಂದೊಂದು ವಂಶದಲ್ಲೂ ಉಪವರ್ಗಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.

**ಹೆಮಿಟೊ–ಸಿಮಿಟಿಕ್ ಭಾಷೆಗಳು** : ಈ ವಂಶವನ್ನು ಕೆಲವರು ಆಫ್ರೊ–ಏಷಿಯಾಟಿಕ್ ಎಂದೂ ಕರೆದಿರುವುದುಂಟು. ಇದಕ್ಕೆ ಕಾರಣ ಉತ್ತರ ಆಫ್ರಿಕದಲ್ಲಿ ಮಾತ್ರವಲ್ಲದೆ ಅದರ ಪಕ್ಕದ ಪಶ್ಚಿಮ ಏಷ್ಯದಲ್ಲೂ ಈ ವಂಶದ ಭಾಷೆಗಳು ಹಬ್ಬಿರುವುದು. ಕೆಲವರು ಹೆಮಿಟೊ ಮತ್ತು ಸಿಮಿಟಿಕ್‌ಗಳನ್ನು ಪ್ರತ್ಯೇಕವೆಂದು ಭಾವಿಸಿದರೂ ಅವೆರಡೂ ಒಂದು ದೊಡ್ಡ ವಂಶದ ಎರಡು ಗುಂಪುಗಳೆಂದು ಹೇಳಬೇಕಾಗುತ್ತದೆ. ಅವೆರಡನ್ನೂ ಒಂದು ಸೇರಿಸಿ ಒಂದು ಹೆಸರಿನಿಂದ ಕರೆಯುವ ರೂಢಿ ಈಗಾಗಲೇ ಬಂದುಬಿಟ್ಟಿದೆ. ಈ ವಂಶದಲ್ಲಿ ಐದು ಶಾಖೆಗಳನ್ನು ಗುರುತಿಸಬಹುದು. 1 ಬರ್ಬರ್–ಈಗ ಬಹುಮಟ್ಟಿಗೆ ಮೊರಾಕೊ, ಅಲ್ಜೀರಿಯ ಮತ್ತು ಸಹರದ ಕೆಲವು ಭಾಗಗಳಲ್ಲಿ ಪ್ರಚಾರದಲ್ಲಿದೆ. 2 ಪ್ರಾಚೀನ ಈಜಿಪ್ಟಿಯನ್–ಇದರ ಈಚಿನ ರೂಪವಾದ ಕಾಪ್ಟಿಕ್ ಎಂಬುದು ಈಜಿಪ್ಟಿನ ಕ್ರೈಸ್ತ ಜನಾಂಗದ ಪೂಜಾ ಸಮಯದ ಭಾಷೆಯಾಗಿ ಮಾತ್ರ ಉಳಿದಿದೆ. ಆಡುಮಾತಿನಲ್ಲಿ ಇದರ ಸ್ಥಾನವನ್ನು ಅರಬ್ಬೀ ಆಕ್ರಮಿಸಿಕೊಂಡಿದೆ. 3 ಸಿಮಿಟಿಕ್–ಅರಬ್ಬೀ ಭಾಷೆಯನ್ನೊಳಗೊಳ್ಳುವ ಈ ಗುಂಪಿನ ಭಾಷೆಗಳು ಉತ್ತರ ಆಫ್ರಿಕದ ತುಂಬ ವ್ಯಾಪಿಸಿವೆ. ಈ ಗುಂಪಿನ ಅರಬ್ಬೀ ಹಿಬ್ರೂ ಭಾಷೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ್ದಾರೆ. ಇಥಿಯೋಪಿಯನ್ ಸಿಮಿಟಿಕ್ಕನ್ನು ಉತ್ತರದ ಒಳಗುಂಪೆಂದು (ಟೈಗ್ರೆ ಮತ್ತು ಟೈಗ್ರಿನ್ಯ ಭಾಷೆಗಳು) ದಕ್ಷಿಣದ ಒಳಗುಂಪೆಂದು (ಅಮ್ಹರಿಕ್, ಗಫತ್, ಹರರಿ ಇತ್ಯಾದಿ) ಮತ್ತೆ ವಿಂಗಡಣೆ ಮಾಡುತ್ತಾರೆ. 4 ಇಥಿಯೋಪಿಯ ಮತ್ತು ಅದರ ಅಕ್ಕಪಕ್ಕಗಳಲ್ಲಿ ಆಡುವ ಕುಷ್ಟಿಕ್ ಭಾಷೆಗಳು. ಇದರ ವ್ಯಾಪ್ತಿಗೆ ಬರುವ ಸೊಮಾಲಿ ಗಲ್ಲ ಮತ್ತು ಬೇಜ ಭಾಷೆಗಳನ್ನು ಆಡುವ ಜನರ ಸಂಖ್ಯೆ ಬಹುವಾಗಿದೆ. 5 ಉತ್ತರ ನೈಜೀರಿಯ ಮತ್ತು ಅದರ ಸುತ್ತಮುತ್ತಣ ಪ್ರದೇಶದಲ್ಲಿ ಆಡುವ ಚಾಡ್ ಭಾಷೆಗಳು. ಈ

ಗುಂಪಿನ ಅನೇಕ ಭಾಷೆಗಳ ವಿಷಯ ಚೆನ್ನಾಗಿ ತಿಳಿದಿಲ್ಲ. ಕೆಲವು ಭಾಷೆಗಳನ್ನಾಡುವ ಜನರ ಸಂಖ್ಯೆಯಂತೂ ತೀರಾ ಕಡಿಮೆ. ಆದರೆ ಈ ಗುಂಪಿಗೆ ಸೇರುವ ಹೌಸ ಮಾತ್ರ ಆಫ್ರಿಕದ ಅತಿ ಮುಖ್ಯ ಭಾಷೆಗಳಲ್ಲೊಂದು. ಇದು ಬಹುಸಂಖ್ಯಾತರ ಪ್ರಥಮ ಭಾಷೆಯಾಗಿರುವುದು ಮಾತ್ರವಲ್ಲದೆ ಪಶ್ಚಿಮ ಆಫ್ರಿಕದ ವಿಸ್ತಾರವಾದ ಪ್ರದೇಶದ ವ್ಯಾಪಾರದ ಭಾಷೆಯೂ ಆಗಿದೆ. ಅಂಗಸ್, ಬುದುಮ ಮತ್ತು ಲೊಗೊನೆ ಮುಂತಾದ ಕೊತೊಕೊ ಭಾಷೆಗಳು, ಬತ ಭಾಷೆಗಳು, ಮಂದರ, ಸೊಮ್ರೈ, ಸೊಕೊರ, ತುಬುರಿ ಮತ್ತು ಮುಬಿಗಳು ತಕ್ಕಮಟ್ಟಿಗೆ ಸುಪ್ರಸಿದ್ಧವಾಗಿರುವ ಭಾಷೆಗಳು.




ಹೆಮಿಟೊ–ಸಿಮಿಟಿಕ್ ವರ್ಗದ ಭಾಷೆಗಳ ಪ್ರಮುಖ ಲಕ್ಷಣವೆಂದರೆ ಮೂರು ವ್ಯಂಜನಗಳುಳ್ಳ ಪದ– ಪ್ರಕೃತಿಗಳು ಬೇರೆ ಬೇರೆ ಸ್ವರಗಳು ಅವುಗಳ ಅರ್ಥವನ್ನು ಮಾರ್ಪಡಿಸುತ್ತವೆ. ಉದಾಹರಣೆಗೆ ಅರಬ್ಬೀ ಪ್ರಕೃತಿ k-t-b 'ಬರೆ' →

| | |
|---|---|
| kataba | ಅವನು ಬರೆದಿದ್ದಾನೆ |
| kutiba | ಅದು ಬರೆಯಲ್ಪಟ್ಟಿದೆ |
| yaktubu | ಅವನು ಬರೆಯುತ್ತಾನೆ |
| kitabun | ಬರೆಹ, ಪುಸ್ತಕ |

**ಮಧ್ಯ ಸಹರನ್ ವಂಶ** : ಚಾಡ್ ಸರೋವರದ ಉತ್ತರಕ್ಕೆ ಮತ್ತು ಪೂರ್ವಕ್ಕೆ ಸೇರಿದ ಭಾಗಗಳಲ್ಲಿ ಈ ವಂಶಕ್ಕೆ ಸೇರಿದ ಭಾಷೆಗಳು ಬಳಕೆಯಲ್ಲಿವೆ. ಇವುಗಳಲ್ಲಿ ಬಹುಮುಖ್ಯವಾದುದೆಂದರೆ ಕನೂರಿ ಭಾಷೆ. ಉತ್ತರ ನೈಜೀರಿಯದ ಚಾಡ್ ಸರೋವರದ ಅಂಚಿನಲ್ಲಿರುವ ಬೋರ್ನು ರಾಜ್ಯದ ಪ್ರಮುಖ ಭಾಷೆಯಿದು. ಮಧ್ಯ ಸಹರದ ಪರ್ವತಮಯವಾದ ತಿಬೆಸ್ತಿಯದ ತೆಬು ಭಾಷೆ : ಇನ್ನೂ ಪೂರ್ವ ಭಾಗಗಳಲ್ಲಿ ಆಡುವ ಸಘವ ಮತ್ತು ಬೆರ್ತಿ ಭಾಷೆಗಳು ಇದೇ ವಂಶಕ್ಕೆ ಸೇರಿದ ಇನ್ನೂ ಕೆಲವು ಭಾಷೆಗಳು. ಈ ಭಾಷೆಗಳಲ್ಲಿ ಸ್ವರಭಾರದ (ಟೋನ್) ಬಳಕೆ ಬಹು ಮಟ್ಟಿಗೆ ಇದೆ.

**ನೈಜರ್ ಕಾಂಗೊವಂಶ** : ಆಫ್ರಿಕದ ಅತಿಮುಖ್ಯ ವರ್ಗವಾದ ಈ ವಂಶದ ಭಾಷೆಗಳು ಸಹರ ಮರುಭೂಮಿಯ ಪಶ್ಚಿಮ ಭಾಗ ಮತ್ತು ದಕ್ಷಿಣ ಭಾಗಗಳ ಇಥಿಯೋಪಿಯದ ಪಶ್ಚಿಮದ ವಿಸ್ತಾರವಾದ ಪ್ರದೇಶದಲ್ಲಿ ನಿಬಿಡವಾಗಿ ಬಳಕೆಯಲ್ಲಿವೆ. ಇವುಗಳ ಉಪವರ್ಗೀಕರಣ ಇನ್ನೂ ಒಂದು ಸಮಸ್ಯೆಯಾಗಿಯೇ ಉಳಿದುಕೊಂಡಿದೆ. ಕೆಲವು ಪ್ರಮುಖ ಉಪವರ್ಗಗಳು ಮತ್ತು ಭಾಷೆಗಳು ಹೀಗಿವೆ : 1 ತೀರ ಪಶ್ಚಿಮದಲ್ಲಿ ಪಶ್ಚಿಮ ಅಟ್ಲಾಂಟಿಕ್ ಭಾಷೆಗಳಿವೆ. ಅವುಗಳ ಹರಹು ಲೈಬೀರಿಯದ ಸಮುದ್ರ ತೀರದಿಂದ ಸೆನೆಗಲ್‌ವರೆಗೆ. ಸಿಯಾರ ಲಿಯೋನಿನ ತೆಮ್ನೆ ಮತ್ತು ಬುಲೊಮ್ ಭಾಷೆಗಳು, ಸೆನೆಗಲ್ಲಿನ ವೊಲೆಫ್ ಹೆಚ್ಚು ಪ್ರಸಿದ್ಧವಾಗಿರುವ ಭಾಷೆಗಳು. ಈ ವರ್ಗದ ಅತಿ ಸುಪ್ರಸಿದ್ಧ ಭಾಷೆ ಫುಲನಿಯನ್ನು ಸೆನೆಗಲ್ಲಿನಿಂದ ಕ್ಯಾಮೆರೂನ್ಸ್‌ವರೆಗೆ ಹರಡಿರುವ ಫುಲ ಜನಾಂಗದ ಜನರು ಆಡುತ್ತಾರೆ. 2 ಎರಡನೆಯ ಉಪವರ್ಗವೆಂದರೆ ಮಂದಿಂಗೊ ಭಾಷೆಗಳು. ಕೆಳ ನೈಜರ್ ಕಣಿವೆ ಪ್ರದೇಶದಲ್ಲಿ ಲೈಬೀರಿಯ ಮತ್ತು ಸಿಯಾರ ಬಹು ಭಾಗಗಳಲ್ಲಿ ಈ ಭಾಷೆಗಳು ಬಳಕೆಯಲ್ಲಿವೆ. ಈ ವರ್ಗದ ಮಲಿಂಕೆ ಮತ್ತು ಬಂಬರ ಭಾಷೆಗಳು ತಕ್ಕಮಟ್ಟಿಗೆ ಪ್ರಸಿದ್ಧವಾಗಿವೆ. 3 ಕ್ವ ಉಪವರ್ಗದ ಭಾಷೆಗಳನ್ನು ಲೈಬೀರಿಯದಿಂದ ಕ್ಯಾಮರೂನ್‌ವರೆಗೆ ಆಡುತ್ತಾರೆ. ಘಾನದ ಅಕನ್, ಐವರಿಕೋಸ್ಟಿನ ಬವೌಲೆ, ನೈಜೀರಿಯದ ಯೊರುಬ, ಇಬೊ ಮತ್ತು ನುಪೆಗಳು ಗಮನಾರ್ಹ ಭಾಷೆಗಳು. 4 ಈ ಭಾಷೆಗಳ ಉತ್ತರಕ್ಕೆ ಗುರ್ ಉಪವರ್ಗದ ಭಾಷೆಗಳಿವೆ. ಮೊಸ್ಸಿ ಇವುಗಳಲ್ಲೊಂದು. 5 ಕಾಂಗೊ ಜಲಾನಯನ ಭೂಮಿಯ ವಿಸ್ತಾರವಾದ ಪ್ರದೇಶಗಳಲ್ಲಿ, ಅಂಗೋಲ, ಮೊಸಾಂಬಿಕ್ ಮತ್ತು ದಕ್ಷಿಣ ಆಫ್ರಿಕದ ಬಹುಭಾಗದಲ್ಲಿ ಆಡುವ ಮಧ್ಯವರ್ಗದಲ್ಲಿ ಬಂಟು ಒಂದು ಮುಖ್ಯವಾದ ಉಪವರ್ಗ. ಬಂಟು ವರ್ಗ ಒಳಗೊಳ್ಳುವ ಭಾಷೆಗಳ ಸಂಖ್ಯೆ ಅಂಥ ಯಾವುದೇ ಇನ್ನೊಂದು ವರ್ಗದ ಭಾಷೆಗಳ ಸಂಖ್ಯೆಯನ್ನೂ ಮೀರಿಸುತ್ತದೆ. ಇವುಗಳಲ್ಲಿ ಬಹುಮುಖ್ಯವಾದುದು ಸ್ವಹಿಲಿ. ಪೂರ್ವ ಆಫ್ರಿಕದ ಉದ್ದಗಲಕ್ಕೂ ಕಾಂಗೊದ ಪೂರ್ವಕ್ಕೆ ಈ ಭಾಷೆಯ ವ್ಯಾಪ್ತಿಯಿದೆ. ಕಾಂಗೊದಲ್ಲಿ ಕೊಂಗೊ, ಲುಬ ಮತ್ತು ನ್ಗಲಗಳು ಕ್ರಮವಾಗಿ ಪೂರ್ವ, ದಕ್ಷಿಣ ಮತ್ತು ಉತ್ತರಗಳಲ್ಲಿ ಬಳಕೆಯಲ್ಲಿರುವ ಭಾಷೆಗಳು. ಉಗಾಂಡದ ಗಂಡ, ಕೆನ್ಯದ ಕಿಕುಯು ಮತ್ತು ಕಂಬ, ತಾಂಗನೀಕದ ಜಾಗ, ಅಂಗೋಲದ ಉಂಬುಂಡು ಮತ್ತು ಕಿಂಬುಂಡು, ದಕ್ಷಿಣ ಆಫ್ರಿಕದ ಝುಲು, ಸ್ವಸಿ, ದಕ್ಷಿಣ ಸೋತೊ, ಉತ್ತರ ಸೋತೊ ಇವು ಹೆಸರಿಸಬಹುದಾದ ಇನ್ನಿತರ ಭಾಷೆಗಳು.

ನೈಜರ್–ಕಾಂಗೊ ಭಾಷೆಗಳು, ಎಲ್ಲೊ ಕೆಲವು ಅಪವಾದಗಳನ್ನು ಬಿಟ್ಟರೆ, ಸ್ವರಭಾರವುಳ್ಳವಾಗಿವೆ. ಈ ಭಾಷೆಗಳಲ್ಲಿ ನಾಮಪದಗಳನ್ನು ಬೇರೆ ಬೇರೆ ವರ್ಗಗಳನ್ನಾಗಿ ವಿಂಗಡಿಸುತ್ತಾರೆ. ಈ ವರ್ಗಗಳನ್ನು ಏಕವಚನ ಮತ್ತು ಬಹುವಚನಗಳನ್ನು ಸೂಚಿಸುವ ಪ್ರತ್ಯಯಗಳ ಜೋಡಿಯಿಂದ ಗುರುತಿಸಬಹುದು. ಮನುಷ್ಯರು ಲಿಂಗಭೇದವಿಲ್ಲದೆ ಒಂದು ವರ್ಗಕ್ಕೆ ಸೇರುತ್ತಾರೆ, ದ್ರವಗಳು ಇನ್ನೊಂದು ವರ್ಗಕ್ಕೆ ಸೇರುತ್ತವೆ–ಇತ್ಯಾದಿ. ಸ್ವಹಿಲಿಯಿಂದ ಒಂದು ನಿದರ್ಶನವನ್ನು ಕೊಡಬಹುದು. Su ಎಂದರೆ ಕತ್ತಿ. ಇದರ ವರ್ಗವನ್ನು ಏಕವಚನದಲ್ಲಿ Ki–ಎನ್ನುವ ಪೂರ್ವ ಪ್ರತ್ಯಯ ಸೂಚಿಸುತ್ತದೆ One sharp knife has been lost ಎಂಬುದನ್ನು ಹೇಳುವ ಸ್ವಹಿಲಿ ವಾಕ್ಯ ಹೀಗಿರುತ್ತದೆ : Ki-Su Ki-Kali Ki-moja Ki-me-potea. ಅಕ್ಷರಶಃ ಇದು-Knife sharp one has-been-lost ಎಂದಾಗುತ್ತದೆ.

ನಾಮಪದದ ಲಿಂಗ ವಚನಗಳನ್ನು ಗುಣವಚನ, ಕ್ರಿಯಾಪದಗಳು ಅನುಸರಿಸಬೇಕು. Ki–ಗೆ ಸಂವಾದಿಯಾದ ಬಹುವಚನ ಪೂರ್ವ ಪ್ರತ್ಯಯ Vi-

Vi-Su Vi-Kali Vi-nane Vi-me-potea

Eight sharp knives have been lost.

**ಮ್ಯಾಕ್ರೊ ಸೂಡಾನಿಕ್** : ಈ ವಂಶದ ಭಾಷೆಗಳನ್ನು ಪೂರ್ವ ಆಫ್ರಿಕ, ನೈಲ್ ಕಣಿವೆಯ ಮೇಲ್ಭಾಗದಲ್ಲಿ ಇನ್ನೂ ಪೂರ್ವಕ್ಕೆ ಚಾಡ್ ಸರೋವರದವರೆಗಿನ ಪ್ರದೇಶದಲ್ಲಿ ಆಡುತ್ತಾರೆ. ಪೂರ್ವ ಸೂಡಾನಿಕ್ ಉಪವರ್ಗಕ್ಕೆ ಸೇರುವ ನುಬಿಯನ್ ಭಾಷೆಗಳು, ತಬಿ ಮುಂತಾದ ಭಾಷೆಗಳು ಗಮನಾರ್ಹವಾದುವು. ಅತಿಮುಖ್ಯ ಶಾಖೆಯೆಂದರೆ ದಕ್ಷಿಣದ್ದು. ಈ ದಕ್ಷಿಣ ಶಾಖೆಯಲ್ಲಿ ಷಿಲ್ಲುಕ್, ದಿಂಕ, ಲಂಗೊ, ಮಸೈ, ಬರಿ ಮುಂತಾದುವು ಮುಖ್ಯವಾದುವು. ಮಧ್ಯ ಸೂಡಾನಿಕ್‌ನಲ್ಲಿ ಬಗಿರ್ಮಿ ಮತ್ತು ಮೊರುಗಳು ಮುಖ್ಯವಾದುವು.

ಈ ಭಾಷೆಗಳೂ ನಮಗೆ ತಿಳಿದ ಮಟ್ಟಿಗೆ ಸ್ವರಭಾರವುಳ್ಳವಾಗಿವೆ. ನಾಮಪದಗಳಿಗೆ ಸಂಕೀರ್ಣವಾದ ಬಹುವಚನ ರೂಪಗಳಿದ್ದರೂ ಅವುಗಳನ್ನು ಬೇರೆ ಬೇರೆ ವರ್ಗಗಳಾಗಿ ವಿಂಗಡಿಸಿಲ್ಲ.

**ಕ್ಲಿಕ್‌ವಂಶ** : ಇದರಲ್ಲಿ ಮೂರು ಉಪವರ್ಗಗಳನ್ನು ಗುರುತಿಸಬಹುದು. 1 ದಕ್ಷಿಣ–ಪಶ್ಚಿಮ ಆಫ್ರಿಕದ ಬುಷ್‌ಮನ್ ಮತ್ತು ಹಾಟೆನ್‌ಟಾಟ್ ಜನ ಆಡುವ ಬೊಯಿಸನ್ ಭಾಷೆಗಳು. 2 ಪೂರ್ವ ಆಫ್ರಿಕದ ತಾಂಗನೀಕದಲ್ಲಿ ಆಡುವ ಸಂದವೆ. 3 ಪೂರ್ವ ಆಫ್ರಿಕದ ಹದ್ಸಪಿ.

ಹೆಸರೇ ಹೇಳುವಂತೆ ಈ ವಂಶದ ಭಾಷೆಗಳ ಪ್ರಮುಖ ಲಕ್ಷಣವೆಂದರೆ ಕ್ಲಿಕ್ ಧ್ವನಿಗಳು. ಈ ಕ್ಲಿಕ್ ಧ್ವನಿಗಳನ್ನು ಆಫ್ರಿಕದಲ್ಲಿ ಬಿಟ್ಟರೆ ಪ್ರಪಂಚದ ಬೇರಾವುದೇ ಭಾಷೆಯಲ್ಲಿಯೂ ಬಳಸುವುದಿಲ್ಲ. ಕೆಲವು ಬಂಟು ಭಾಷೆಗಳು ಈ ಧ್ವನಿಯನ್ನು ಸ್ವೀಕರಿಸಿವೆ.

ಈ ಐದು ಪ್ರಮುಖ ವಂಶಗಳಲ್ಲದೆ ಇನ್ನೂ ಹಲವು ಅಷ್ಟೊಂದು ಪ್ರಮುಖವಲ್ಲದ ವಂಶಗಳೂ ಅವುಗಳಿಗೆ ಸೇರಿದ ಭಾಷೆಗಳೂ ಆಫ್ರಿಕದಲ್ಲಿವೆ. ಉದಾಹರಣೆಗೆ ಸೂಡಾನಿನಲ್ಲಿ ಕೋರ್ಡೊಫಾನಿನ ನೂಬಾ ಬೆಟ್ಟಗಳಲ್ಲಿ ಆಡುವ ಭಾಷೆಗಳು ಕೋರ್ಡೊಫಾನಿಯನ್ ವಂಶಕ್ಕೆ ಸೇರಿವೆ. ಮಲಗಸಿ ಗಣರಾಜ್ಯದಲ್ಲಿ (ಮಡಗಾಸ್ಕರ ದ್ವೀಪ) ಮಲಯೊಪಾಲಿನೇಷಿಯನ್ ವಂಶಕ್ಕೆ ಸೇರಿದ ಭಾಷೆಗಳಿವೆ. ಇವುಗಳಿಗೂ ಇಂಡೊನೇಷಿಯನ್ ಭಾಷೆಗಳಿಗೂ ಹತ್ತಿರದ ಸಂಬಂಧವಿದೆ. ಈ ಅಪ್ರಮುಖ ವಂಶಗಳ ಬಗ್ಗೆ ಇನ್ನೂ ಹೆಚ್ಚಿನ ಕೆಲಸ ನಡೆದು, ಅವುಗಳ ಶಾಸ್ತ್ರೀಯವಾದ ವರ್ಗೀಕರಣ ಕಾರ್ಯ ನಡೆಯಬೇಕಾಗಿದೆ. ನಾವು ಇಲ್ಲಿಯವರೆಗೆ ಐದು ಪರಸ್ಪರ ಭಿನ್ನ ವಂಶಗಳನ್ನೂ ಅವುಗಳಿಗೆ ಸೇರಿದ ಭಾಷೆಗಳನ್ನೂ ನೋಡಿದ್ದೇವೆ.

ಆದರೂ ಆಫ್ರಿಕದ ಭಾಷೆಗಳಿಗೆ ಕೆಲವು ಸಾಮಾನ್ಯ ಲಕ್ಷಣಗಳಿವೆ. ಸ್ವರಭಾರ, ನಾಮಪದಗಳ ವರ್ಗೀಕರಣಗಳ ಸಂಗತಿಯನ್ನಾಗಲೇ ನೋಡಿದ್ದೇವೆ. ಬಹುಭಾಗದ ಪ್ರದೇಶದ ಭಾಷೆಗಳಲ್ಲಿ ಓಷ್ಠ್ಯಕಂಠ್ಯ ವ್ಯಂಜನಗಳು (ಉದಾ : kp; gb) ಬಳಕೆಯಾಗುತ್ತವೆ. ಪ್ರಪಂಚದ ಬೇರೆ ಭಾಗದ ಭಾಷೆಗಳಲ್ಲಿ ವಿರಳವಾಗಿ ಕಂಡುಬರುವ ಉಚ್ಛ್ವಾಸ ವ್ಯಂಜನಗಳು ಸಾಕಷ್ಟು ಸಂಖ್ಯೆಯ ಭಾಷೆಗಳಲ್ಲಿವೆ.

ಈ ಆಫ್ರಿಕದ ಭಾಷೆಗಳ ಜೊತೆಗೆ ವಸಾಹತು ಭಾಷೆಗಳನ್ನೂ ನಾವು ಇಲ್ಲಿ ಗಮನಿಸ ಬೇಕಾಗುತ್ತದೆ. ದಕ್ಷಿಣ ಆಫ್ರಿಕದಲ್ಲಿ ಇಂಗ್ಲಿಷಿನ ಸ್ಥಾನ ಬಹಳ ಭದ್ರವಾದುದು. ಇಲ್ಲಿ ಇದು ಮತ್ತು ಆಫ್ರಿಕಾನ್ಸ್ ಭಾಷೆ (ಡಚ್ ಭಾಷೆಯ ರೂಪಾಂತರ) ರಾಷ್ಟ್ರ ಭಾಷೆಗಳಾಗಿವೆ. ಜೊತೆಗೆ ಇಂಗ್ಲಿಷ್ ಭಾಷೆ ಘಾನ, ಕೆನ್ಯ, ಲೈಬೀರಿಯ, ನ್ಯಾಸಾಲ್ಯಾಂಡ್, ತಾಂಗನೀಕ ಮುಂತಾದ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆಲ್ಜೀರಿಯ, ಕ್ಯಾಮರೂನ್ಸ್, ಟ್ಯುನೀಸಿಯ ಮುಂತಾದ ದೇಶಗಳಲ್ಲಿ ಫ್ರೆಂಚ್ ಕಾಣಿಸಿಕೊಳ್ಳುತ್ತದೆ. ಲಿಬಿಯ, ಇಥಿಯೋಪಿಯ ಮುಂತಾದ ಕಡೆಗಳಲ್ಲಿ ಇಟ್ಯಾಲಿಯನ್ ಬಳಕೆಯಲ್ಲಿದೆ. ಅಂಗೋಲ, ಮೊಸಾಂಬಿಕ್‍ಗಳಲ್ಲಿ ಪೋರ್ಚುಗೀಸ್ ಕಾಣಿಸಿಕೊಳ್ಳುತ್ತದೆ. ಮೊರಾಕೊ, ಸ್ಪ್ಯಾನಿಷ್ ಸಹರ, ಗಿನಿಗಳಲ್ಲಿ ಸ್ಪ್ಯಾನಿಷ್ ಭಾಷೆಯನ್ನಾಡು ವವರಿದ್ದಾರೆ. ಮೊದಲ ಮಹಾಯುದ್ಧಕ್ಕಿಂತ ಮುಂಚೆ ಜರ್ಮನಿಯ ವಸಾಹತುಗಳಾಗಿದ್ದ ಕ್ಯಾಮರೂನ್ಸ್, ಟೋಗೋ, ನ್ಯಾಸಾಲ್ಯಾಂಡ್ ಮುಂತಾದ ಕಡೆಗಳಲ್ಲಿ ವಿರಳವಾಗಿ ಜರ್ಮನ್ ಭಾಷೆ ಕಂಡುಬರುತ್ತದೆ. (ಎಂ.ಪಿ.)

**ಆಫ್ರಿಕದ ಭೂ ಇತಿಹಾಸ :** ಖಂಡದ ಉತ್ತರ ತಗ್ಗುಪ್ರದೇಶವನ್ನು ಗಣನೆಗೆ ತಾರದಿದ್ದರೆ ಇಡೀ ಖಂಡವನ್ನೇ ಬೃಹತ್ ಪ್ರಸ್ಥಭೂಮಿ ಎನ್ನಬಹುದು. ಇದು ಭೂಚರಿತ್ರೆಯಲ್ಲಿ–ಪ್ರೀಕೇಂಬ್ರಿಯನ್ ಯುಗದಿಂದ ಇಂದಿನವರೆಗೂ ಸಮುದ್ರಗಳಿಂದ ಆವೃತವಾಗಿದ್ದು ಶಾಶ್ವತ ಖಂಡವೆನಿಸಿದೆ. ಈ ಭೂಖಂಡದಲ್ಲಿ ಅತಿ ಪ್ರಾಚೀನ ಆರ್ಕಿಯನ್ ಶಿಲೆಗಳಿಂದ ಹಿಡಿದು ನವೀನ ಯುಗದವರೆಗಿನ ಶಿಲಾಪ್ರಸ್ತರಗಳನ್ನು ನೋಡಬಹುದು. ಅನೇಕ ಭಾಗಗಳಲ್ಲಿ ಆರ್ಕಿಯನ್ ಅಥವಾ ಪ್ರೀಕೇಂಬ್ರಿಯನ್ ಯುಗದ ಶಿಲೆಗಳ ಮೇಲೆ ತೀವ್ರಗತಿಯ ರೂಪಾಂತರಕ್ಕೊಳಗಾದ ಶಿಲಾಸಮುದಾಯಗಳನ್ನೂ ಅವುಗಳ ನಡುವೆ ಅಲ್ಲಲ್ಲೇ ಭೂಕಲ್ಪಗಳ ವಿವಿಧ ಯುಗಗಳಲ್ಲಿ ತಲೆದೋರಿದ ಗ್ರ್ಯಾನೈಟ್ ಅಂತಸ್ಸರಣಗಳನ್ನೂ ಗುರುತಿಸಬಹುದು. ಅಲ್ಲದೆ ಇವುಗಳ ಒತ್ತಟ್ಟಿಗೆ ಸಮುದ್ರಸಂಪರ್ಕವಿಲ್ಲದ ಅಸಂಖ್ಯಾತ ಜಲಜಶಿಲಾಶ್ರೇಣಿಗಳೂ ಕಂಡುಬಂದಿವೆ. ಈ ಶ್ರೇಣಿಗಳ ಹಲಕೆಲವು ಶಿಲಾಪ್ರಸ್ತರಗಳ ಸಂಯೋಜನೆ, ತೀರಪ್ರದೇಶದ ವಿನ್ಯಾಸ ಮತ್ತು ಈ ಶಿಲಾಪ್ರಸ್ತರಗಳಿಗೂ ಅಕ್ಕಪಕ್ಕದ ಭೂಖಂಡಗಳಾದ ದಕ್ಷಿಣ ಅಮೆರಿಕ, ಭಾರತ, ಆಸ್ಟ್ರೇಲಿಯ ಮತ್ತು ಅಂಟಾರ್ಕ್ಟಿಕಗಳಲ್ಲಿ ಹರಡಿರುವ ಪೇಲಿಯೊಜ಼ೋಯಿಕ್ ಮತ್ತು ಮೀಸೋಜೋಯಿಕ್ ಯುಗಗಳ ಶಿಲಾ ಸಮುದಾಯಗಳಿಗಿರುವ ಪರಸ್ಪರ ಹೋಲಿಕೆ – ಇವುಗಳ ಆಧಾರದ ಮೇಲೆ ಈಗ ದೂರ ದೂರ ಹರಡಿ ಬೇರೆಯಾಗಿರುವ ಈ ಭೂಖಂಡಗಳೆಲ್ಲವೂ ಕೂಡಿಕೊಂಡು ಭೂ ಇತಿಹಾಸದ ಪರ್ಮೊ–ಕಾರ್ಬಾನಿಫೆರಸ್ ಯುಗದ ತನಕ ಗೊಂಡ್ವಾನಲ್ಯಾಂಡ್ ಎಂಬ ಏಕ ಬೃಹತ್ ಭೂಖಂಡವಾಗಿತ್ತೆಂದು ವಿಜ್ಞಾನಿಗಳು ಊಹಿಸಿದ್ದಾರೆ. ಖಂಡದ ಇಂದಿನ ರೂಪುರೇಖೆ ಬಹುಶಃ ಕ್ರಿಟೇಷಿಯಸ್ ಆದಿಭಾಗದಲ್ಲಿ ಉಂಟಾಯಿತೆಂದು ನಿರ್ಧರಿಸಲಾಗಿದೆ.

ಖಂಡದ ಭೂ ಇತಿಹಾಸದಲ್ಲಿ ಹಲವಾರು ತೀವ್ರಗತಿಯ ಪರ್ವತಜನ್ಯ ಆಂದೋಳನಗಳೂ ಉಂಟಾಗಿವೆ. ಉತ್ತರದಲ್ಲಿನ ಅಟ್ಲಾಸ್ ಪರ್ವತ ಯುರೋಪಿನ ಪರ್ವತಗಳೊಡನೆ ಹೆಚ್ಚಿನ ಬಾಂಧವ್ಯವನ್ನು ಹೊಂದಿದ್ದು ಟರ್ಷಿಯರಿ ಯುಗದಲ್ಲಿ ಉದ್ಭವಿಸಿತು. ಆದರೆ ದಕ್ಷಿಣದ ಕೇಪ್ ಪರ್ವತಶ್ರೇಣಿ ಟ್ರಯಾಸಿಕ್ ಯುಗದಲ್ಲಿ ಮೈವೆತ್ತಿತು. ಸಹರ ಮರುಭೂಮಿಯ ಶಿಲೆಗಳಲ್ಲಿ ಪೇಲಿಯೊಜೋಯಿಕ್ ಯುಗದ ಮಡಿಕೆಗಳಿವೆ. ಅಲ್ಲದೆ ಹಲವು ಕಡೆ ಪ್ರೀಕೇಂಬ್ರಿಯನ್ ಯುಗದ ವಿವಿಧ ಹಂತಗಳಲ್ಲಿ ತಲೆದೋರಿದ ಶಿಲಾವಿನ್ಯಾಸಗಳನ್ನು ಗುರುತಿಸಬಹುದು.

ಅನೇಕ ಭಾಗಗಳಲ್ಲಿ ಬೃಹದಾಕಾರದ ತಗ್ಗುಗಳೂ, ಅವುಗಳ ನಡುವೆ ಅಷ್ಟೇ ದೊಡ್ಡದಾದ ಉಬ್ಬುಗಳೂ ಇವೆ. ಇವುಗಳ ರಚನೆ ಪ್ರೀಕೇಂಬ್ರಿಯನ್ ಯುಗದಲ್ಲಿ ಮೊದಲಾಗಿ ಇತ್ತೀಚಿನವರೆಗೂ ನಡೆದ ಆಧಾರಗಳಿವೆ. ಇವುಗಳಲ್ಲಿನ ಉತ್ತಮ ಉದಾಹರಣೆಗಳು–ಕಾಂಗೊ ತಗ್ಗು, ಕಲಹರಿ ತಗ್ಗು ಮತ್ತು ಛಾಡ್ ತಗ್ಗು. ಈ ತಗ್ಗು ಪ್ರದೇಶಗಳಲ್ಲಿ ಬಹುಮಟ್ಟಿಗೆ ಜಲಜ ಶಿಲಾಶ್ರೇಣಿಗಳನ್ನು ನೋಡಬಹುದು. ಆಫ್ರಿಕ ಖಂಡದ ಮತ್ತೊಂದು ವಿಶಿಷ್ಟ ರೀತಿಯ ಭೂವಿನ್ಯಾಸವೆಂದರೆ – ಭೂಕುಸಿತದಿಂದಾದ ಕಮರಿಗಳು. ಇವು ಉತ್ತರದಲ್ಲಿ ಜೋರ್ಡಾನ್‍ನಲ್ಲಿ ಪ್ರಾರಂಭವಾಗಿ ದಕ್ಷಿಣದಲ್ಲಿ ಮೊಸಾಂಬಿಕ್‍ವರೆಗೂ ಹಬ್ಬಿವೆ. ಇವು ವಿವಿಧ ಭೂಯುಗಗಳಲ್ಲಿ ಉಂಟಾಗಿದ್ದರೂ ಇವುಗಳ ಮೇಲೆ ಮಧ್ಯ ಪ್ಲಿಸ್ಟೊಸೀನ್ ಭೂಯುಗದ ಮುದ್ರೆ ಅಚ್ಚಳಿಯದಂತಿದೆ. ಕೆಲವು ಕಮರಿಗಳ ಅಕ್ಕಪಕ್ಕದ ಭೂಪ್ರದೇಶ 3033.33 ಮೀ ಗಳಿಗೂ ಮೀರಿ ಎತ್ತರವಾಗಿದ್ದು, ಆಳವೂ ಅಷ್ಟೇ ತೀವ್ರಗತಿಯಲ್ಲಿ ಕಂಡುಬಂದಿವೆ. ಕಮರಿಗಳು ಬಹುಮಟ್ಟಿಗೆ ಭೂಭಾಗಗಳ ತುಯ್ತದಿಂದಾದುವೆಂದು ಊಹಿಸಲಾಗಿದೆ. ಭೂಚರಿತ್ರೆಯುದ್ದಕ್ಕೂ ಖಂಡದಲ್ಲಿ ಅಗ್ನಿಪರ್ವತಗಳ ಚಟುವಟಿಕೆಯನ್ನು ಕಾಣಬಹುದು. ಇವುಗಳಿಂದ ಹೊರಬಂದ ಅಗ್ನಿಶಿಲಾಶ್ರೇಣಿಗಳಲ್ಲಿ ಕಾರೂ ಶಿಲಾಶ್ರೇಣಿ ಬಹು ಮುಖ್ಯವಾದದ್ದು. ಇದರ ಒಟ್ಟು ಮಂದ 8797 ಮೀ, ವಿಸ್ತೀರ್ಣ 5,000–1,00,000 ಘನ (ಕ್ಯೂಬಿಕ್) ಮೈಲಿಗಳೆಂದೂ ಪ್ರಸಿದ್ಧ ಭೂವಿಜ್ಞಾನಿ ಎ.ಎಲ್.ಡ್ಯೂ ಟಾ ಅಂದಾಜು ಮಾಡಿದ್ದಾನೆ, ಹೀಗೆಯೇ ಕಲ್ಪಿನಿಯ ಮತ್ತು ಹೋಪ್ ಟೌನ್ ಪ್ರದೇಶಗಳಲ್ಲಿ 12900 ಚ.ಕಿಮೀಗಳಿಗೂ ವಿಸ್ತಾರವಾದ ಡಾಲರೈಟ್ ಹಾಳೆಗಳಿವೆ. ಅಲ್ಲದೆ ಕೆನ್ಯರಾಜ್ಯದ ಮಧ್ಯ ಟರ್ಷಿಯರಿ ಯುಗದ ಫೊನೋಲೈಟ್ ಲಾವಾ ಪ್ರಸ್ತರಗಳೂ ಬಹುಪ್ರಸಿದ್ಧಿ. ಇಷ್ಟೇ ಅಲ್ಲದೆ ಭೂಕಮರಿಗಳ ಅಕ್ಕಪಕ್ಕದ ಪ್ರದೇಶಗಳಲ್ಲೂ ಅಗ್ನಿಪರ್ವತಗಳ ಕಾರ್ಯಾಚರಣೆ ವ್ಯಕ್ತವಾಗಿದೆ. ಕೆನ್ಯ ಶಿಖರ, ಕಿಲಿಮಂಜಾರೊ ಶಿಖರ ಇತ್ಯಾದಿಗಳೆಲ್ಲವೂ ಲುಪ್ತ ಜ್ವಾಲಾಮುಖಿಗಳು. ಹೀಗೆಯೇ ಈಚಿನ ವರ್ಷಗಳಲ್ಲಿ (1931–40) ಟಾನ್‍ಜೇನಿಯದ ಲೆಂಗೈ, ಕಾಂಗೊನ ನ್ಯಾಮ್ಲಾಗಿರ ಮತ್ತು ನರಗೊಂಗೊ ಅಗ್ನಿಪರ್ವತಗಳನ್ನೂ

**ಆಫ್ರಿಕದ ಭೂ ಇತಿಹಾಸ ನಕ್ಷೆ**

ಉದಾಹರಿಸಬಹುದು. ಇವುಗಳ ಮೂಲಕ ಅಗಾಧ ಪ್ರಮಾಣದಲ್ಲಿ ಬೆಸಾಲ್ಟ್ ಲಾವಾ ಪ್ರವಾಹಗಳು ಹೊರಬಂದವು. ಉತ್ತರ ಆಫ್ರಿಕದ ಕ್ಯಾಮರೂನ್ ಎಮಿಕೌಸಿ ಮತ್ತು ಟಿಬೆಸ್ಟಿಗಳಲ್ಲೂ ಅಗ್ನಿಪರ್ವತಗಳ ಚಟುವಟಿಕೆಗಳಿಗೆ ಸಂಬಂಧಿಸಿದ ಕುರುಹುಗಳಿವೆ.

ಖಂಡದ ಪ್ರೀಕೇಂಬ್ರಿಯನ್ ಯುಗದ ಶಿಲೆಗಳಲ್ಲಿ ಜೀವ್ಯವಶೇಷಗಳಿಲ್ಲ. ಆದರೆ ವಿದ್ಯುತ್ ವಿಕಿರಣ ವಿಧಾನಗಳಿಂದ ಆ ಶಿಲೆಗಳ ಕೆಲವು ಖನಿಜಗಳ ವಯಸ್ಸನ್ನು ಅಳೆದು ನಿರ್ಧರಿಸಲಾಗಿದೆ. ಈ ದಿಸೆಯಲ್ಲಿ ಆರ್ಥರ್ ಹೋಮ್ಸ್ ಮತ್ತು ಎಲ್. ಕಾಹೆನ್ ಅವರು ಅಮೋಘ ಸಂಶೋಧನೆಗಳನ್ನು ನಡೆಸಿದ್ದಾರೆ. ಅಲ್ಲದೆ ಯುಗದಲ್ಲಿ ಏಳು ವಿವಿಧ ಹಂತಗಳನ್ನೂ ಗುರುತಿಸಿದ್ದಾರೆ. ಶಿಲೆಗಳ ಅತ್ಯಂತ ಹೆಚ್ಚಿನ ವಯಸ್ಸು 3,000,000,000 ವರ್ಷಗಳು ಮತ್ತು ಕನಿಷ್ಠ ವಯಸ್ಸು 630,000,000 ವರ್ಷಗಳು.

ಆಫ್ರಿಕದ ಸುಮಾರು ಮೂರನೆಯ ಒಂದು ಭೂಪ್ರದೇಶ ಆರ್ಕೀಯನ್ ಯುಗದ ಪದರುಶಿಲೆಗಳಿಂದಲೂ ಗೀರುಶಿಲೆಗಳಿಂದಲೂ ಆವೃತವಾಗಿದೆ. ಇವುಗಳನ್ನು ಅನೇಕ ಕಡೆ ತೂರಿಕೊಂಡು ಭೂಯುಗದ ವಿವಿಧಕಾಲಗಳಲ್ಲಿ ಗ್ರ್ಯಾನೈಟ್ ಹೊರಬಂದಿದೆ. ಶಿಲಾಸಮೂಹ ಅನೇಕ ಕಡೆ ವಿವಿಧ ರೀತಿಯಲ್ಲಿ ಸವೆದುಹೋಗಿದೆ. ಅಲ್ಲದೆ ಉತ್ತಮ ದರ್ಜೆಯ ಖನಿಜ ನಿಕ್ಷೇಪಗಳಿಗೆ ತೌರೆನಿಸಿದೆ. ಉದಾ. 9100ಮೀ. ಮಂದವಾದ ಬುಲವಾಯನ್ ಶಿಲಾಶ್ರೇಣಿ ಚಿನ್ನದ ನಿಕ್ಷೇಪಗಳಿಗೆ ಹೆಸರುವಾಸಿ. ಅಲ್ಲದೆ ಈಜಿಪ್ಟ್, ಸುಡಾನ್, ಘಾನ, ನೈಜೀರಿಯ, ಕ್ಯಾಮರೊನ್ ಪ್ರಾಂತ್ಯಗಳಲ್ಲಿ ಹರಡಿರುವ ಆರ್ಕೀಯನ್ ಶಿಲೆಗಳಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಸತು, ಕ್ರೋಮೈಟ್, ಬೆರಿಲ್, ಕಲ್ನಾರು, ಅಭ್ರಕ ಮತ್ತು ಇತರ ಅಪೂರ್ವ ಖನಿಜಗಳಿವೆ.

ಉತ್ತಮ ಶಿಲಾಶ್ರೇಣಿಗಳಿರುವ ಕಡೆ ಅದನ್ನು ವಿಶೇಷವಾಗಿ ಅಧ್ಯಯನಮಾಡಿ ವಯೋಗುಣಕ್ಕನುಸಾರವಾಗಿ ವರ್ಗೀಕರಿಸಲಾಗಿದೆ. ಉದಾ. ಪೂರ್ವ ಆಫ್ರಿಕದ ಆರ್ಕೀಯನ್ ಶಿಲಾಸಮೂಹವನ್ನು ಬೇಸ್‍ಮೆಂಟ್, ನ್ಯಾನ್‍ಜಿಯನ್ ಮತ್ತು ಕವಿರಾಂಡಿಯನ್ ಎಂದು ವಿಭಜಿಸಲಾಗಿದೆ. ಹೀಗೆಯೇ ದಕ್ಷಿಣ ಆಫ್ರಿಕದ ವಿಟ್‍ವಾಟರ್ಸ್ ರ್‍ಯಾಂಡ್ ಮತ್ತು ಟ್ರಾನ್ಸ್‍ವಾಲ್

ಪ್ರದೇಶಗಳ ಆದಿ ಪ್ರೀಕೇಂಬ್ರಿಯನ್ ಶಿಲೆಗಳನ್ನು ಹಿರಿಯ ಮತ್ತು ಕಿರಿಯ ಉಪವರ್ಗಗಳಾಗಿ ವಿಂಗಡಿಸಲಾಗಿದೆ. ಹಿರಿಯ ಶ್ರೇಣಿಯಲ್ಲಿ ಪ್ರಪಂಚದಲ್ಲೇ ಅತಿ ಶ್ರೇಷ್ಠ ದರ್ಜೆಯ ಚಿನ್ನದ ಅದುರಿನ ನಿಕ್ಷೇಪಗಳೂ ಕಿರಿಯ ಶ್ರೇಣಿಯಲ್ಲಿ ಬುಷ್‍ವೆಲ್ಡ್ ಶಿಲಾಸಮೂಹವೂ ಇವೆ. ಈ ಶಿಲಸಮೂಹದಲ್ಲಿ ದೊರೆವ ಕ್ರೋಮೈಟ್, ನಿಕಲ್ ಮತ್ತು ಪ್ಲಾಟಿನಂ ಅದುರುಗಳು ಲೋಕಪ್ರಸಿದ್ಧ.

ಆದಿ ಪೇಲಿಯೊಜೋಯಿಕ್ ಕಲ್ಪದ ಶಿಲೆಗಳು ಇಡೀ ಆಫ್ರಿಕದಲ್ಲೆ ಅಪೂರ್ವ. ಉತ್ತರದ ಮೊರಾಕೊನಲ್ಲಿ ಕೇಂಬ್ರಿಯನ್ ಶಿಲಾಪ್ರಸ್ತರಗಳೂ ಸಹರ ಪ್ರದೇಶದಲ್ಲಿ ಆರ್ಡೊವೀಶಿಯನ್ ಪ್ರಸ್ತರಗಳೂ ಇವೆ. ಅಲ್ಲದೆ ಅಲ್ಲಲ್ಲಿ ಸೈಲೂರಿಯನ್ ಯುಗದ ಶಿಲೆಗಳೂ ಹರಡಿವೆ. ಇವುಗಳಲ್ಲಿ ಬ್ರೇಕಿಯೋಪಾಡ್‍ನ ಚಿಪ್ಪುಗಳೂ ಮತ್ತು ಕ್ರೈನಾಡ್ ಅವಶೇಷಗಳೂ ಹುದುಗಿವೆ. ಇದೇ ಯುಗದ ಕೆಂಪು ಮರಳು ಶಿಲೆ ಮತ್ತು ಪೆಂಟೆಶಿಲೆ ದಕ್ಷಿಣ ಆಫ್ರಿಕ, ಕಾಂಗೊ ಮತ್ತು ಟಾಂಜೇನಿಯ ಪ್ರಾಂತ್ಯಗಳುದ್ದಕ್ಕೂ ಹರಡಿವೆ. ಟಾನ್‍ಜೇನಿಯದ ಜಲಜ ಶಿಲೆಗಳಲ್ಲಿ ಮೀನು ಶಲ್ಕಗಳೂ, ಏಡಿ, ಸ್ಪಂಜು ಮತ್ತು ರೇಡಿಯೊಲೇರಿಯ ಮುಂತಾದ ಅಸಂಖ್ಯಾತ ಜೀವ್ಯವಶೇಷಗಳೂ ಇವೆ. ಈ ಶಿಲಾಪ್ರಸ್ತರಗಳೂ ಕಾಂಗೊ ಮತ್ತು ಕೇಪ್ ಪ್ರಾಂತ್ಯಗಳಲ್ಲಿ ತೀವ್ರಗತಿಯಲ್ಲಿ ಉಂಟಾದ ಭೂಚಟುವಟಿಕೆಗಳಿಗೆ ಒಳಗಾಗಿ ಮಡಿಕೆ ಬಿದ್ದಿವೆ.

ಡಿವೋನಿಯನ್ ಶಿಲಾಪ್ರಸ್ತರಗಳಲ್ಲೂ ಅಸಂಖ್ಯಾತ ಅವಶೇಷಗಳನ್ನು ಕಾಣಬಹುದು. ಈ ಯುಗದ ಬೊಕೆವಾಲ್ಡ್ ಶಿಲಾಶ್ರೇಣಿ ದಕ್ಷಿಣ ಕೇಪ್ ಸಹರ ಲಿಬಿಯ ಮತ್ತು ಪಶ್ಚಿಮ ಸೂಡಾನ್‍ಗಳಲ್ಲಿ ಹಬ್ಬಿದೆ. ಘಾನ ತೀರಪ್ರದೇಶದಲ್ಲಿ ಇದೇ ಯುಗದ ಕೆಳ, ಮಧ್ಯಮ ಮತ್ತು ಮೇಲಿನ ಉಪವರ್ಗಗಳನ್ನು ನೋಡಬಹುದು.

ಉತ್ತರ ಆಫ್ರಿಕದಲ್ಲಿ ಕಾರ್ಬಾನಿಫೆರಸ್ ಯುಗದ ಶಿಲಾಪ್ರಸ್ತರಗಳು ಹೇರಳವಾಗಿವೆ. ಇವು ಬಹುಮಟ್ಟಿಗೆ ನೆಲ ಭಾಗಗಳಿಗೆ ಸಂಬಂಧಿಸಿದುವು (ಕಾಂಟಿನೆಂಟಲ್). ಛಾದ್ ಮತ್ತು ಲಿಬಿಯ – ಈಜಿಪ್ಟ್ – ಸೂಡಾನ್ ಗಡಿ ಪ್ರದೇಶದ ಮಧ್ಯೆಯಿರುವ ಈ ಯುಗದ ಶಿಲೆಗಳಲ್ಲಿ ಲೆಪಿಡೊಡೆನ್‍ಡ್ರಾನ್ ಸ್ಟಿಗ್ಮೇರಿಯ ಮತ್ತು ಆರ್ಕೆಯೊ ಸಿಜಿಲೇರಿಯ ಮುಂತಾದ ಸಸ್ಯಾವಶೇಷಗಳೂ ಇತರ ಜೀವ್ಯವಶೇಷಗಳೂ ಇವೆ.

ಮಧ್ಯ ಮತ್ತು ದಕ್ಷಿಣ ಆಫ್ರಿಕದಲ್ಲಿ ಕಾರೂ ಶಿಲಾ ಶ್ರೇಣಿಯನ್ನು ಅನೇಕ ಕಡೆ ನೋಡಬಹುದು. ಶ್ರೇಣಿಯ ಅತಿ ಕೆಳಗಿನ ಪ್ರಸ್ತರಗಳೆಂದರೆ ಕಾರ್ಬಾನಿಫೆರಸ್ ಯುಗದ ಹಿಮ ನದಿಯ ಡ್ವೈಕಾ ಟಿಲ್ಲೈಟ್ ಶಿಲಾ ಪ್ರಸ್ತರಗಳು. ಇವು ಕೇಪ್ ಪ್ರಾಂತ್ಯದಲ್ಲಿ 607 ಮೀ. ಮಂದವಾಗಿದ್ದು ಬಹು ಪ್ರಖ್ಯಾತವಾಗಿವೆ. ಉತ್ತರಕ್ಕೆ ಸರಿದಂತೆಲ್ಲ ತೆಳುವಾಗುತ್ತ ಕಡೆಕಡೆಗೆ ಕಾಂಗೊ ಮತ್ತು ಮಡಗಾಸ್ಕರ್‍ಗಳಲ್ಲಿ ಚದುರಿಹೋಗಿವೆ.

ಪರ್ಮಿಯನ್ ಯುಗದ ಎಕ್ಕಾ ಶಿಲಾಪ್ರಸ್ತರಗಳನ್ನು ದಕ್ಷಿಣ ಆಫ್ರಿಕ, ರೊಡೀಷಿಯ ಮತ್ತು ತಾಂಗನೀಕಗಳಲ್ಲಿ ನೋಡಬಹುದು. ಉತ್ತಮ ದರ್ಜೆಯ ಕಲ್ಲಿದ್ದಲಿನ ನಿಕ್ಷೇಪಗಳಿಗೆ ಇವು ಹೆಸರುವಾಸಿ. ಇವುಗಳಲ್ಲಿ ಗ್ಲಾಸಾಪ್ಟೆಸ್ ಎಂಬ ಸಸ್ಯಾವಶೇಷವನ್ನು ನೋಡಬಹುದು. ಕೇಪ್ ಪ್ರಾಂತ್ಯದ ಟ್ರಯಾಸಿಕ್ ಯುಗದ ಬ್ಯೂಫರ್ಟ್ ಶಿಲಾ ಪ್ರಸ್ತರಗಳಲ್ಲಿ ಸರೀಸೃಪಗಳ ಪಳೆಯುಳಿಕೆಗಳಿವೆ. ಈ ಪ್ರಸ್ತರಗಳನ್ನು ಕಾಂಗೊನಲ್ಲಿ ಲ್ಯುಕುಗಾ ಶಿಲಾಪ್ರಸ್ತರಗಳೆನ್ನುತ್ತಾರೆ. ಕಾರೂ ಶಿಲಾಶ್ರೇಣಿ ವಾಯುನಿಕ್ಷೇಪಗಳಾದ (ಇಯೋಲಿಯನ್) ಮರಳುಶಿಲೆಗಳಲ್ಲಿ ಅಂತ್ಯಗೊಳ್ಳುತ್ತದೆ. ಇದಾದ ಅನಂತರ ಬೆಸಾಲ್ಟ್ ಲಾವಾಗಳ ಹೊರ ಹೊಮ್ಮುವಿಕೆ ಪ್ರಾರಂಭವಾಯಿತು. ಈ ಲಾವಾ ಪ್ರಸ್ತರಗಳು ಡ್ರೇಕನ್ಸ್‍ಬರ್ಗ್‍ನಲ್ಲಿ 1365 ಮೀ ಮೀರಿ ಮಂದವಾಗಿವೆ. ಇವುಗಳ ನಿಕಟವರ್ತಿಯಾದ ಶಿಲಾ ಒಡ್ಡುಗಳೂ ಮತ್ತು ಸಿಲ್‍ಗಳೂ ಅಸಂಖ್ಯಾತವಾಗಿವೆ.

ಜುರಾಸಿಕ್ ಯುಗದ ಶಿಲಾಪ್ರಸ್ತರಗಳು ಈ ಖಂಡದಲ್ಲಿ ಅಷ್ಟಾಗಿ ಕಂಡುಬಂದಿಲ್ಲ. ಕಾಂಗೋ ರಾಜ್ಯಕ್ಕೆ ಮಾತ್ರ ಸೀಮಿತಗೊಂಡಿವೆ. ಈ ಭೂಯುಗದಲ್ಲಿ ಖಂಡದ ಬಹುತೇಕ ಭಾಗ ಮೈದಾನ ಪ್ರದೇಶವಾಗಿ ಪರಿವರ್ತಿತವಾಯಿತು. ಬಹುಶಃ ಏಕ ಖಂಡವಾದ ಗೊಂಡ್ವಾನ ಸಹ ಒಡೆದು ಛಿದ್ರವಾಗಲು ಪ್ರಾರಂಭವಾಯಿತೆನ್ನಬಹುದು. ಈ ಕಾಲದಲ್ಲಿ ಮಡಗಾಸ್ಕರ್ ಮೂಲ ಖಂಡದಿಂದ ದೂರ ಸರಿಯಿತು. ಮುಂದೆ ಕ್ರಿಟೇಷಿಯಸ್ ಯುಗದ ವೇಳೆಗೆ ಖಂಡಕ್ಕೆ ಈಚಿನ ರೂಪರೇಖೆ ಬಂದಿತೆನ್ನಬಹುದು. ಈ ಯುಗದ ಪ್ರಾಣಿಗಳ ಅವಶೇಷಗಳನ್ನು ಖಂಡದ ಪೂರ್ವತೀರ ಪ್ರದೇಶಗಳಲ್ಲಿನ ಶಿಲಾಪ್ರಸ್ತರಗಳಲ್ಲಿ ನೋಡಬಹುದು. ಅದರಲ್ಲೂ ಈ ಯುಗದ ನಿಯೊಕೋಮಿಯನ್ ಮತ್ತು ಸಿನೋನಿಯನ್ ಪ್ರಸ್ತರಗಳು ಉತ್ತಮರೀತಿಯಲ್ಲಿ ಕಂಡುಬಂದಿವೆ. ಇದೇ ಯುಗದ ಸಿನೊಮೇನಿಯನ್ ಸಮುದ್ರ ಪಶ್ಚಿಮ ಆಫ್ರಿಕ, ಟ್ಯುನಿಸ್, ಮೊರಾಕೊ ಈ ಪ್ರಾಂತ್ಯಗಳನ್ನೆಲ್ಲ ಆವರಿಸಿತ್ತು. ಉತ್ತಮ ಸುಣ್ಣಶಿಲಾ ನಿಕ್ಷೇಪಗಳೂ ರೂಪಗೊಂಡುವು.

ಕ್ರಿಟೇಷಿಯಸ್ ಯುಗವಾದ ಮೇಲೆ ಸಮುದ್ರ ಕ್ರಮೇಣ ತನ್ನ ವಿಸ್ತೀರ್ಣದಲ್ಲಿ ಕುಗ್ಗುತ್ತ ಇಯೊಸೀನ್ ಕಾಲದಲ್ಲಿ ಸಣ್ಣಪುಟ್ಟ ಜಲಾಶಯಗಳಂತೆ ಪರಿವರ್ತಿತವಾಯಿತು. ಉದಾ : ನೈಲ್‍ಕಣಿವೆ ಕೇಂದ್ರ ಲಿಬಿಯ, ನೈಜರ್‍ಕಣಿವೆ – ಇಲ್ಲೆಲ್ಲ ಜಲಜ ಶಿಲೆಗಳು ಶೇಖರವಾಗಲು ಮೊದಲಾಯಿತು. ಮುಂದೆ ಈ ಪ್ರದೇಶಗಳಲ್ಲೇ ಟರ್ಷಿಯರಿ ಮತ್ತು ಕ್ವಾಟರ್ನರಿ ಶಿಲಾಪ್ರಸ್ತರಗಳೂ ನಿಕ್ಷೇಪವಾದುವು. ಛಾದ್ ಮುಂತಾದ ಕಡೆ ಉಂಟಾದ ಇಳುಕುಗಳಲ್ಲಿ ನಿಕ್ಷೇಪವಾದ ಶಿಲಾಪ್ರಸ್ತರಗಳಲ್ಲಿ ಆಯಾ ಭೂಕಾಲದ ಜೀವಾವಶೇಷಗಳು ಹುದುಗಿವೆ. ಅದರಲ್ಲೂ ಬಹು ಮುಖ್ಯವಾದುದು ಈಜಿಪ್ಟಿನ ಫಯ್ಯಾಂಶ್ರೇಣಿಗೆ ಸೇರಿದ ಪ್ರಸ್ತರಗಳು. ಇವುಗಳಲ್ಲಿ ಗತಕಾಲದ ಆನೆ ಮತ್ತು ಕಪಿಗಳ ಅವಶೇಷಗಳಿವೆ.

ಪಶ್ಚಿಮ ಸಹರದಲ್ಲಿ ಇಯೊಸೀನ್ ಕಾಲದ ಸಮುದ್ರವಿರಲಿಲ್ಲ. ಈ ಕಾಲದಲ್ಲೇ ಟೆಥಿಯನ್ ಬೃಹದ್ ಇಳುಕಲಿನ (ಜಿಯೊಸಿಂಕ್ಲೈನ್) ಜಲಜಶಿಲೆಗಳಿಂದ ಉದ್ಭವಗೊಂಡ ಅಟ್ಲಾಸ್ ಪರ್ವತಗಳ ಮೊದಲ ಹಂತವೂ ಪ್ರಾರಂಭವಾಯಿತು. ಮಯೊಸೀನ್ ಸಮುದ್ರ ಆಲ್ಜೀರಿಯಕ್ಕೆ ಮಾತ್ರ ಸೀಮಿತವಾಗಿತ್ತು. ಪ್ಲಿಯೊಸೀನ್ ಕಾಲದ ಸಮುದ್ರವಂತೂ ಇನ್ನೂ ಚಿಕ್ಕದು. ಹೀಗಾಗಿ ಉತ್ತರ ಆಫ್ರಿಕದ ಬಹುಭಾಗ ಭೂಖಂಡವಾಗಿಯೇ ಉಳಿಯಿತು.

ಟರ್ಷಿಯರಿ ಯುಗದ ಪ್ರಸ್ತರಗಳು ಬಹುಮಟ್ಟಿಗೆ ಖಂಡದ ಪೂರ್ವ ದಕ್ಷಿಣ ಮತ್ತು ಪಶ್ಚಿಮ ತೀರಪ್ರದೇಶಗಳಲ್ಲಿ ಕಂಡುಬಂದಿವೆ. ದಕ್ಷಿಣ ಆಫ್ರಿಕದ ಪ್ಲಿಯೊಸೀನ್ ಕಾಲದ ಗುಹಾನಿಕ್ಷೇಪಗಳು ಮಾನವ ಪೂರ್ವಜರ ಗುಂಪಿನ ಆಸ್ಟ್ರಲೋ – ಪಿಥಿಕಸ್ ಎಂಬ ನರವಾನರ ಅವಶೇಷಗಳನ್ನು ಹೊಂದಿದ್ದು ಜೀವ ವಿಕಾಸದ ಅಧ್ಯಯನದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಅದರಲ್ಲೂ ಟಾನ್‍ಜೇನಿಯದ ಓಲ್ಡುವೈ ಇಳಕಲಿನ ಮೆಕ್ಕಲು ಪ್ರದೇಶ ಈ ಅವಶೇಷಗಳಿಗೆ ಬಹು ಹೆಸರುವಾಸಿ. ಅಲ್ಲದೆ ಖಂಡದುದ್ದಕ್ಕೂ ಕಂಡುಬರುವ ಪ್ಲಿಸ್ಟೊಸೀನ್ ನಿಕ್ಷೇಪಗಳಲ್ಲಿ ಶಿಲಾಯುಗದ ಉಪಕರಣಗಳನ್ನು ಮತ್ತು ಆದಿಮಾನವನಿಗೆ ಸಂಬಂಧಿಸಿದ ಇತರ ಕುರುಹುಗಳನ್ನೂ ಗುರುತಿಸಬಹುದು. (ಬಿ.ವಿ.ಜಿ.)

**ಆಫ್ರಿಕದ ರಾಜಕೀಯ ಚರಿತ್ರೆ :** ಹದಿನೈದು ಹದಿನಾರನೆಯ ಶತಮಾನದವರೆಗೂ ಆಫ್ರಿಕವನ್ನು ಕತ್ತಲೆಯ ಖಂಡ ಎಂದು ಕರೆಯುತ್ತಿದ್ದುದು ಸರಿಯಷ್ಟೆ. ಕಾರ್ತೇಜನ್ನು ಒಳಗೊಂಡಂತೆ ತಮಗೆ ಆಫ್ರಿಕದಲ್ಲಿ ಸೇರಿದ್ದ ಪ್ರಾಂತ್ಯವನ್ನು ರೋಮನರು ಆಫ್ರಿಕ ಎಂಬ ಹೆಸರಿನಿಂದ ಕರೆದರು. ಅಲ್ಲಿಂದ ಆಚೆ ರೋಮಿನ ಲೇಖಕರು ಈ ಖಂಡವನ್ನು ಲಿಬಿಯ ಎಂದು ಕರೆದರು. ಹಿರೋಡಾಟಸ್ (ಪ್ರ.ಶ.ಪೂ. 484), ಟಾಲಮಿ (ಪ್ರ.ಶ.ಪೂ. 139)

ಇವರು ತಮ್ಮ ಕೃತಿಗಳಲ್ಲಿ ಈ ಖಂಡದ ಬಗ್ಗೆ ಉಲ್ಲೇಖಿಸಿದ್ದಾರೆ. ಏಳನೆಯ ಶತಮಾನದಲ್ಲಿ ಅರಬ್ಬರಿಗೆ ಈ ನಾಡಿನ ವಿಷಯ ತಿಳಿದಿತ್ತು. ಎಡ್ರಿಸಿ, ಇಬ್ನ್ ಬತೂತ, ಜಾನ್‍ಲಿಯೊ ಮೊದಲಾದ ಭೂಗೋಳಶಾಸ್ತ್ರಜ್ಞರ ಬರೆಹಗಳಲ್ಲಿ ಖಂಡದ ಬಗ್ಗೆ ಹೆಚ್ಚಿನ ಮಾಹಿತಿಗಳು ಸಿಗುತ್ತವೆ. 17ನೆಯ ಶತಮಾನದಲ್ಲಿ ಪೋರ್ಚುಗೀಸರು ವಾಯವ್ಯ ತೀರದಲ್ಲಿ ಬಂದು ನೆಲೆಸತೊಡಗಿದರು. 1487ರಲ್ಲಿ ಬಾರ್ತಲೋಮಿಯೊ ಡಯಾಜ಼್ ಗುಡ್‍ಹೋಪ್ ಭೂಶಿರವನ್ನು ಕಂಡ. 1497ರಲ್ಲಿ ವಾಸ್ಕೋಡಗಾಮ ಗುಡ್‍ಹೋಪ್‍ನ ಮೂಲಕ ಭಾರತಕ್ಕೆ ಜಲಮಾರ್ಗ ಪತ್ತೆ ಹಚ್ಚಿದ. ಅಲ್ಲಿಂದಾಚೆ ಯೂರೋಪಿಯನ್ನರು ಕ್ರಮಕ್ರಮವಾಗಿ ಆಫ್ರಿಕವನ್ನು ಆಕ್ರಮಿಸತೊಡಗಿದರು.

ಅಲ್ಲಿಯವರೆಗಿನ ಆಫ್ರಿಕದ ರಾಜಕೀಯ ಚರಿತ್ರೆ ಬಹು ಸಾಧಾರಣವಾದುದು. ಆದಿವಾಸಿಗಳಾದ ನೀಗ್ರೊಗಳು, ಹಾಟೆಂಟಾಟರು, ಬುಷ್‌ಮೆನ್‌ಗಳು ಜಲವಸತಿ ಇರುವ ಕಡೆಗಳಲ್ಲಿ, ಪ್ರಾಕೃತಿಕ ಆಶ್ರಯಗಳಾದ ಗುಡ್ಡಗಾಡುಗಳಿರುವಲ್ಲಿ ಅನೇಕಾನೇಕ ಪಾಳೆಯಗಳಾಗಿ ಜೀವಿಸುತ್ತಿದ್ದರು. ಒಂದೊಂದು ಜಾತಿ, ಉಪಜಾತಿಯಲ್ಲೂ ಅನೇಕ ಪಂಗಡಗಳಿದ್ದುವು.

ಈ ಪಾಳೆಯಗಳಲ್ಲಿ ಬಹುಪಾಲು ಅಲೆಮಾರಿ ರೀತಿಯವು. ಇವುಗಳಲ್ಲಿ ಒಂದೊಂದು ಪಾಳೆಯಕ್ಕೂ ಒಬ್ಬೊಬ್ಬ ನಾಯಕನಿರುತ್ತಿದ್ದ. ಅವನು ಆ ಪಾಳೆಯದ ಆಗುಹೋಗುಗಳನ್ನೆಲ್ಲ ನಡೆಸುವ ನೇತಾರ. ಅವನಿಗೆ ವಿಧೇಯರಾಗಿ ಇತರರು ನಡೆಯುತ್ತಿದ್ದರು. ಪಾಳೆಯ ಪಾಳೆಯಗಳ ಮಧ್ಯೆ ಜಗಳಗಳು ಯುದ್ಧಗಳು ಆಗುತ್ತಿದ್ದುವು. ಸ್ತ್ರೀಯರನ್ನೇ ತಮ್ಮ ಒಡೆತಿಯರನ್ನಾಗುಳ್ಳ ಪಾಳೆಯಗಳೂ ಇದ್ದುವು. ಪಾಳೆಯಗಳೆಲ್ಲ ಹಿಂದಿನ ಪಾಳೆಯಗಾರಿಕೆಯ ಮಾದರಿಯವೇ ಆಗಿದ್ದುವು. ಯೊರೂಬ, ಆಷಂಟಿ, ದಹೋಮೆ – ಇವು ಅಂಥ ಕೆಲವು ಪಾಳೆಯಗಳು. ಈ ಜನ ಸಹಜವಾಗಿ ಯುದ್ಧಪ್ರಿಯರು. ಒಂದು ಕಾಲದಲ್ಲಿ ನಿರಂತರವಾಗಿ ಖಂಡದ ಉದ್ದಕ್ಕೂ ರಣಕಹಳೆ ಮೊಳಗುತ್ತಲೇ ಇತ್ತು. ನೈಜೀರಿಯ ಭಾಗದಲ್ಲಿ ಬಹು ದೊಡ್ಡ ಸಂಸ್ಕೃತಿ, ನಾಗರಿಕತೆಗಳನ್ನುಳ್ಳ ಆದಿವಾಸಿ ರಾಜ್ಯಗಳಿದ್ದುವೆಂದು ಹೇಳಲಾಗಿದೆ. ಇವನ್ನು ಬಿಟ್ಟರೆ ಚರಿತ್ರೆಯಲ್ಲಿ ಆದ್ಯ ಪ್ರಾಶಸ್ತ್ಯವನ್ನು ಪಡೆದ ದೇಶಗಳೆಂದರೆ ಈಜಿಪ್ಟ್ ಮತ್ತು ಇಥಿಯೋಪಿಯಗಳು. ಅವುಗಳ ಬಗ್ಗೆ ಪ್ರತ್ಯೇಕ ಲೇಖನಗಳಿವೆ.

ಖಂಡ ದೊಡ್ಡದಾದರೂ ಜನರಲ್ಲಿ ರಾಷ್ಟ್ರೀಯ ಭಾವನೆ ಮೂಡದಿರಲು ಅವರ ನೂರಾರು ಸಣ್ಣಪುಟ್ಟ ಒಳಪಂಗಡಗಳೇ ಕಾರಣವಾದುವು. ಇದರಿಂದಾಗಿ ಯೂರೋಪಿನಿಂದ ವಲಸೆ ಬಂದ ಬಿಳಿಯರು ಕರಿಯರನ್ನು ಸುಲಭವಾಗಿ ಸೋಲಿಸಿ ತಮ್ಮ ಸ್ವಾಸ್ಥ್ಯಗಳನ್ನು ಸ್ಥಾಪಿಸಲು ಅನುಕೂಲವಾಯಿತು. ಹದಿನಾರನೆಯ ಶತಮಾನದಲ್ಲಿ ಪ್ರಾರಂಭವಾದ ವಿದೇಶೀಯ ಶೋಷಣೆ ದ್ವಿಮುಖವಾಗಿದ್ದು ಮೂರು ಶತಮಾನಗಳ ಕಾಲ ನಿರಂತರವಾಗಿ ನಡೆಯಿತು. ಅಲ್ಲಿನ ಆದಿವಾಸಿಗಳನ್ನು ಗುಲಾಮರನ್ನಾಗಿ ಮಾಡಿ ದುಡಿಸಿದುದಲ್ಲದೆ ಅವರನ್ನು ಯೂರೋಪು, ಅಮೆರಿಕಗಳಲ್ಲಿ ಮಾರಲಾಯಿತು. ಆಫ್ರಿಕದ ಪ್ರಾಕೃತಿಕ ಸಂಪತ್ತನ್ನು ದೋಚಲಾಯಿತು.

ಇದನ್ನು ಪ್ರತಿಭಟಿಸುವ ದೇಶೀಯ ಆಂದೋಲನಗಳನ್ನು ದಮನ ಮಾಡಲಾಯಿತು. ಆದರೆ ಕಾಲಕ್ರಮೇಣ ಮಾನವ ಸ್ವಾತಂತ್ರ್ಯಕ್ಕೆ ಗೌರವ ಕೊಡುವ ಭಾವನೆ ಹೆಚ್ಚಿದಂತೆಲ್ಲ ವಿಶ್ವವ್ಯಾಪಕವಾಗಿ ಜನಜಾಗೃತಿ ಉಂಟಾಗಿ ಅದರಿಂದ ಆಫ್ರಿಕನ್ನರ ಪರಿಸ್ಥಿತಿ ಉತ್ತಮಗೊಳ್ಳಲು ಪಕ್ರಮಿಸಿತು. ಅಮೆರಿಕದಲ್ಲಿ ಗುಲಾಮಗಿರಿಯ ವಿರುದ್ಧ ನಡೆದ ಚಳುವಳಿ ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ಪ್ರಾರಂಭಿಸಿದ ಸತ್ಯಾಗ್ರಹ, ಎರಡು ಮಹಾಯುದ್ಧಗಳು, ಪರಕೀಯ ಸ್ವಾಸ್ಥ್ಯಗಳ ನಿರ್ಮೂಲನ ಚಳುವಳಿ, ಸ್ವರಾಜ್ಯಕ್ಕಾಗಿ ನಡೆದ ಹೋರಾಟಗಳು – ಇವೆಲ್ಲದರ ಫಲವಾಗಿ ಆಫ್ರಿಕದಲ್ಲೂ ಟ್ಯೂನೀಸಿಯ (1956), ಮೊರಾಕೊ (1956), ಆಲ್ಜೀರಿಯ (1962), ಸೂಡಾನ್ (1956), ಲಿಬಿಯ (1951), ಅರಬ್ಬೀ ಗಣರಾಜ್ಯ (1962), ಕೆನ್ಯ (1963), ಕಾಂಗೊ (1960), ಜಾಂಬಿಯ (1964), ನೈಜೀರಿಯ (1960), ನೈಜರ್ (1960) ಹೀಗೆ ಅನೇಕಾನೇಕ ರಾಷ್ಟ್ರಗಳು ಸ್ವತಂತ್ರವಾದುವು. ಈ ಹೋರಾಟ ಇನ್ನೂ ಮುಂದುವರಿದಿದೆ. ನೀಗ್ರೊ ಎಂದರೆ ಕತ್ತಲೆಯ ಖಂಡದವ, ಗುಲಾಮ ಎಂಬ ಅಭಿಪ್ರಾಯ ಕ್ರಮೇಣ ಹೋಗುತ್ತಿದೆ. ತಾನು ಆಫ್ರಿಕದ ಸ್ವತಂತ್ರ ಪ್ರಜೆ ಎಂಬ ಭಾವನೆ ಆ ಜನರಲ್ಲಿ ಬೆಳೆಯುತ್ತಿದೆ. ಅದಕ್ಕೆ ಇತರರಿಂದ ಪುರಸ್ಕಾರ ದೊರೆಯಲು ಮೊದಲಾಗಿದೆ. ಆಫ್ರಿಕದ ಸ್ವತಂತ್ರ ರಾಜ್ಯತಂತ್ರ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಶಿಶುವೆಂದು ಹೇಳಬಹುದು. ಅದರ ಚರಿತ್ರೆ ಈಗ ರೂಪುಗೊಳ್ಳುತ್ತಿದೆ.

*

**ಆಫ್ರಿಕ ಮತ್ತು ಹೊರನಾಡಿನ ನೀಗ್ರೊ ಜಾನಪದ :** ಹತ್ತೊಂಬತ್ತನೆಯ ಶತಮಾನದವರೆಗೆ ಅಜ್ಞಾತವಾಗಿ, ಕಗ್ಗತ್ತಲೆಯ ಖಂಡವೆನಿಸಿದ್ದ ಆಫ್ರಿಕದಲ್ಲಿ ನೀಗ್ರೊ ಜಾನಪದ ಅತ್ಯಂತ ಸತ್ತ್ವಪೂರ್ಣವಾಗಿ ಇನ್ನೂ ಉಳಿದಿದೆ. ಸಕ್ರಮ ಸಂಗ್ರಹಕಾರ್ಯ ಅಲ್ಲಿನ್ನೂ ನಡೆಯಬೇಕಾಗಿದ್ದರೂ ಪಾಶ್ಚಾತ್ಯ ಮಿಷನರಿಗಳೂ ವಿದ್ವಾಂಸರೂ ವಿಶೇಷ ಸಾಹಸದಿಂದ ಸಾಕಷ್ಟು ಸಾಹಿತ್ಯವನ್ನು ಸಂಗ್ರಹಿಸಿ ಈಗಾಗಲೇ ಅಧ್ಯಯನ ಕಾರ್ಯವನ್ನು ನಡೆಸಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿ ಕ್ರಮವಾಗಿ ಆ ನೆಲವನ್ನೆಲ್ಲ ವ್ಯಾಪಿಸುತ್ತಿರುವಾಗ ಅಲ್ಲಿನ ಸಂಗ್ರಹ ತೀವ್ರ ರೀತಿಯಲ್ಲಿ ನಡೆಯಬೇಕಾದ ಅಗತ್ಯವೂ ಇದೆ. ರಾಜಕೀಯವಾಗಿ, ಭೌಗೋಳಿಕವಾಗಿ, ಅನೇಕ ಅಡ್ಡಿ ಅಡಚಣೆಗಳಿರುವ ದಕ್ಷಿಣ ಆಫ್ರಿಕ ನೀಗ್ರೊಗಳ ನೆಲೆವೀಡು. ಸಹರ ಮರುಭೂಮಿಯ ದಕ್ಷಿಣ ಭಾಗವೆಲ್ಲ ದಕ್ಷಿಣ ಆಫ್ರಿಕವೆನಿಸುತ್ತದೆ. ಜೊತೆಗೆ ನೀಗ್ರೊಗಳು ನಾನಾ ಕಾರಣಗಳಿಂದಾಗಿ ಮುಖ್ಯವಾಗಿ ಗುಲಾಮರಾಗಿ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ವೆಸ್ಟ್ ಇಂಡೀಸ್ ಮುಂತಾದ ಕಡೆಗಳಿಗೂ ಒಯ್ಯಲ್ಪಟ್ಟು ಅಲ್ಲಿನ ಪ್ರಮುಖ ಪ್ರಜಾವರ್ಗವೇ ಆಗಿದ್ದಾರೆ. ಅವರ ಜೊತೆಯಲ್ಲಿ ಸಹಜವಾಗಿ ಆಫ್ರಿಕದ ಜಾನಪದವೂ ಸಾಗಿ ಅಲ್ಲಿನ ಪ್ರಭಾವ ಪರಿಸರಕ್ಕೆ ತಕ್ಕಂತೆ ಸಾಕಷ್ಟು ಬದಲಾವಣೆಯನ್ನು ಪಡೆದೂ ತನ್ನ ಮೂಲಸತ್ತ್ವವನ್ನು ತಕ್ಕಮಟ್ಟಿಗೆ ಕಾಪಾಡಿಕೊಂಡಿದೆ. ನೀಗ್ರೊ ಜಾನಪದ ಎಂದಾಗ ಈ ಎಲ್ಲ ಪ್ರದೇಶಗಳನ್ನೂ ದೃಷ್ಟಿಯಲ್ಲಿಟ್ಟುಕೊಳ್ಳುವುದು ಅನಿವಾರ್ಯ.

ಅಮೆರಿಕದಲ್ಲಿ ನೀಗ್ರೊ ಜಾನಪದದ ಮೇಲೆ ಅನೇಕ ಪ್ರಭಾವಗಳು ಉಂಟಾದುವು. ಅಲ್ಲಿನ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರು, ಹೊರಗಿನಿಂದ ಬಂದ ಇಂಗ್ಲಿಷ್, ಫ್ರೆಂಚ್, ಸ್ಪ್ಯಾನಿಷ್, ಪೋರ್ಚುಗೀಸ್, ಡಚ್ ಮುಂತಾದ ಜನಾಂಗಗಳು, ಅವುಗಳಲ್ಲಿನ ಸಾಮಾಜಿಕ ಪರಿವರ್ತನೆಗಳು ಸಾಕಷ್ಟು ರೀತಿಯಲ್ಲಿ ನೀಗ್ರೊ ಜಾನಪದವನ್ನು ಕಲಕಲು ಸಾಧ್ಯವಾಗಿವೆ ಎಂಬುದನ್ನು ಮನಗಂಡಾಗ, ಕೆಲವು ವಿದ್ವಾಂಸರು ಅಲ್ಲಿನ ನೀಗ್ರೊ ಜನಪದ ಗೀತೆಗಳನ್ನು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸಿಕೊಂಡಿರುವುದು ಸಮರ್ಪಕವಾಗಿಯೇ ಇದೆ. ದಕ್ಷಿಣ ನೀಗ್ರೊ ಹಾಡುಗಳನ್ನು ಆಧುನಿಕ ಕೂನ್ ಪದಗಳು, ರ್‍ಯಾಗ್ ಟೈಮ್ ಹಾಡುಗಳು, ಮತ್ತು ಶುದ್ಧ ನೀಗ್ರೊ ಪದಗಳು ಎಂದು ಸ್ಥೂಲವಾಗಿ ವಿಂಗಡಿಸಲಾಗಿದೆ. ವಿವರಗಳಿಗೆ ನೋಡಿ: ಆಫ್ರಿಕದ ನೀಗ್ರೊ ಸಂಗೀತ.

ಕೆಲವು ಜನಪದ ಮೇಳಗಳೂ ಆಫ್ರಿಕದಲ್ಲಿ ನಡೆಯುತ್ತವೆ. ಕಥೆಗೆ ತಕ್ಕಂತೆ ಆಯಾ ಪಾತ್ರಕ್ಕೆ ತಕ್ಕಂತೆ ಮುಖ್ಯ ನಿರೂಪಕ ಅಭಿನಯಿಸುತ್ತಾನೆ. ಕೆಲವರಿಗೆ ಈ ಕಥೆಗಿಂತ ಮಧ್ಯೆ ಮಧ್ಯೆ ಬರುವ ಹಾಡುಗಳೇ ಮುಖ್ಯ. ಜನಪ್ರಿಯವಾದ ಯಾವ ಹಾಡನ್ನೂ ಕಥೆಗಾರ ಕೈಬಿಡುವಂತಿಲ್ಲ. ಹಾಗೆ ಬಿಟ್ಟರೆ ಜನ ರೇಗಿ ಬೀಳುತ್ತಾರೆ. ಹಾಡುಗಾರನ ಜೊತೆಯಲ್ಲಿ ಸಭಿಕರೂ ದನಿಗೂಡಿಸುತ್ತಾರೆ. ಅವರು ಮುಗಿಸುವವರೆಗೆ ಕಥೆ ಮುಂದೆ ಸಾಗುವಂತಿಲ್ಲ. ಮಕ್ಕಳು ನಿದ್ದೆ ಮಾಡದಂತೆ ಒಗಟುಗಳನ್ನು ಬೇರೆ ಈತ ನಡು ನಡುವೆ ಹೇಳುತ್ತಾನೆ.

ಆಫ್ರಿಕ ಗಾದೆಗಳಿಗೆ ಹೆಸರಾದುದು. ಕೋರ್ಟು ಕಚೇರಿಗಳಲ್ಲೂ ಈ ಗಾದೆಗಳ ಬಳಕೆ ಹೆಚ್ಚು. ಗೋಲ್ಡ್‌ಕೋಸ್ಟಿನಲ್ಲಿ ಗಂಟೆಗಟ್ಟಲೆ ಕಾಲೇಜು ಹುಡುಗಿಯರು ಗಾದೆಗಳಲ್ಲೇ ಮಾತಾಡುತ್ತಾರೆ. ಕೋರ್ಟಿನಲ್ಲಿ ನ್ಯಾಯವಾದಿಗಳೂ ನ್ಯಾಯಮೂರ್ತಿಗಳೂ ಗಾದೆಗಳನ್ನು ಬಳಸುತ್ತಾರೆ. ನೀಗ್ರೊ ಗಾದೆಗಳು ಎಲ್ಲ ದೇಶದ ಗಾದೆಗಳಂತೆ ಅರ್ಥವತ್ತಾಗಿ, ಅನುಭವಪೂರ್ಣವಾಗಿ, ಆಕರ್ಷಕವಾಗಿರುತ್ತವೆ.

ತಾಯಿಯುಳ್ಳ ಮಗು ಎರಡನೆಯ ಬಾರಿಗೆ ಉಣ್ಣುತ್ತದೆ (ಕೆನ್ಯ)

ಎರಡು ಪಾದಗಳಿಂದ ಯಾರೂ ನದಿಯ ಆಳವನ್ನು ನೋಡುವುದಿಲ್ಲ (ಗೋಲ್ಡ್‌ಕೋಸ್ಟ್)

ಎರಡು ಮನೆಯುಳ್ಳವ ಹಸಿವಿನಿಂದ ಸಾಯುತ್ತಾನೆ (ಉಗಾಂಡ)

ಸೂಜಿಯಿಂದ ದಾರ ಹೆಸರಾಯಿತು (ಕಾಂಗೊ)

ಆಫ್ರಿಕದ ಜಾನಪದದಲ್ಲಿ ಕಥೆಗಳಿಗೂ ವಿಶೇಷವಾದ ಸ್ಥಾನವಿದೆ. ಜಾನಪದ ಸಂಗ್ರಹಕಾರರು ಸಹಸ್ರಾರು ಜನಪದ ಕಥೆಗಳನ್ನು ದಕ್ಷಿಣ ಆಫ್ರಿಕದಲ್ಲಿ ಗುರುತಿಸಿದ್ದಾರೆ. ಆಫ್ರಿಕದ ಸಾವಿರಾರು ಪಂಗಡಗಳ ಸಮಗ್ರ ಕಥಾಸಾಹಿತ್ಯ ಸಂಗ್ರಹವಾಗಬೇಕಾಗಿದೆ. ಒಂದೊಂದು ಪಂಗಡದಲ್ಲೂ ಸಾವಿರಾರು ಕಥೆಗಳಿವೆ ಎಂದು ಅಂದಾಜು ಮಾಡಲಾಗಿದೆ. ಸ್ಟ್ರಕ್, ಕ್ಲೆಪ್ಪೆ ಮುಂತಾದ ವಿದ್ವಾಂಸರು ಇಲ್ಲಿನ ಸಂಗ್ರಹ, ಪರಿಶೀಲನೆಗಳನ್ನು ನಡೆಸಿದ ಗಣ್ಯವಿದ್ವಾಂಸರು. ಆಫ್ರಿಕದ ಕಥೆಗಳಲ್ಲಿ ಅವುಗಳ ನೈಸರ್ಗಿಕ ಹಿನ್ನೆಲೆಯಿಂದಾಗಿ ಪ್ರಾಣಿಕಥೆಗಳ ಪಾತ್ರ ಪ್ರಮುಖವಾಗಿದೆ. ಅಲ್ಲಿನ ಕಥೆಗಳಲ್ಲಿ ಮೊಲ ತಂತ್ರಕುಶಲಿ. ಎರಡನೆಯ ಸ್ಥಾನ ಆಮೆಗೆ ದೊರೆಯುತ್ತದೆ. ಕಾಯಿಲೆಯೆಂದು ನಟನೆ ಹೂಡಿದ ಮೊಲ ತನಗಿಂತ ಪ್ರಬಲವಾದ ಪ್ರಾಣಿಯೊಂದರ ಮೇಲೆ ಪ್ರಯಾಣ ಮಾಡಿ ಪಂಥವನ್ನು ಗೆಲ್ಲುತ್ತದೆ. ನನ್ನನ್ನು ನೀರಿಗೆ ಮಾತ್ರ ಎಸೆಯಬೇಡ ಎಂದು ನಟಿಸಿ ಆಮೆ ಪ್ರಾಣಾಪಾಯದಿಂದ ಪಾರಾಗುತ್ತದೆ. ಉದಾಹರಣೆಗೆ ಚಿಕ್ಕಪ್ಪ ರೀಮಸ್‌ನ ಕಥೆಗಳನ್ನು ನೋಡಬಹುದು. ಅವೆಲ್ಲ ಮಕ್ಕಳಿಗಾಗಿ ಹುಟ್ಟಿದುವು, ನೀತಿಬೋಧಾತ್ಮಕವಾಗಿವೆ. ಕಥೆಗಳಲ್ಲಿನ ನಾಯಕಪಾತ್ರ ಉಪಾಯಗಾರ ಸಾಧು ಮೊಲದ್ದು. ಖಳನಾಯಕ ಕ್ರೂರ ತೋಳರಾಯ. ತೋಳರಾಯನ ಎಲ್ಲ ಕುತಂತ್ರಗಳನ್ನೂ ಮೊಲ ನಿರ್ನಾಮ ಮಾಡಿ ಗೆಲ್ಲುತ್ತದೆ. ಈ ಕಥೆಗಳನ್ನು ವಾಲ್ಟ್‌ಡಿಸ್ನಿ ಮಕ್ಕಳಿಗಾಗಿ ಬಹು ಸೊಗಸಾಗಿ ಚಿತ್ರಿಸಿದ್ದಾನೆ. ಚಲನಚಿತ್ರಗಳನ್ನು ತಯಾರಿಸಿದ್ದಾನೆ.

ಹೀಗೆಯೇ ಮಾನವರ, ಅತಿಮಾನವರ ಕಥೆಗಳೂ ಅಪಾರ ಸಂಖ್ಯೆಯಲ್ಲಿವೆ. ಜಾಣರ ಕಥೆಗಳಿಗೂ ಬರವಿಲ್ಲ.

ಒಬ್ಬ ರಾಜ ಯಾರೋ ಒಬ್ಬನಿಗೆ ಅಕ್ಕಿಕಾಳಿನಿಂದ ಚಾಪೆಯನ್ನು ಮಾಡಲು ಸೂಚಿಸಿದ. ಆ ಜಾಣ ಅಂಥ ಒಂದು ಚಾಪೆಯನ್ನು ಮಾದರಿಗಾಗಿ ಕೊಡಿ ಅನಂತರ ಮಾಡುತ್ತೇನೆ ಎಂದ. ಇನ್ನೊಬ್ಬ ರಾಜ ಒಂದೇ ದಿನದಲ್ಲಿ ಎತ್ತರವಾದ ಮನೆಯೊಂದನ್ನು ಕಟ್ಟಲು ಸೂಚಿಸಿದ. ಕಟ್ಟುವಾತ ಗಾಳಿಯಪಟದ ದಾರವನ್ನು ಹತ್ತಿ ಬಂದರೆ ನಾನು ಕಟ್ಟಿದ ಮನೆಯನ್ನು ನೋಡಲು ಸಾಧ್ಯ ಎಂದ. ಮಾಂತ್ರಿಕ ಕಥೆಗಳೂ ರಾಕ್ಷಸನ ಕಥೆಗಳೂ ಹೇರಳವಾಗಿ ದೊರೆಯುತ್ತವೆ.

ಸುದೀರ್ಘ ಕಥೆಗಳು ಮಾತ್ರ ಆಫ್ರಿಕದ ಕಥೆಗಳಲ್ಲಿ ವಿರಳ. ಆದರೆ ಸಮಸ್ಯೆಯ ಕಥೆಗಳು, ಅಂತ್ಯವೇ ಇಲ್ಲದ ಕಥೆಗಳು ಬೇಕಾದಷ್ಟಿವೆ. ಪಶ್ಚಿಮ ಆಫ್ರಿಕದಲ್ಲಿ ಪುರಾಣಸಾಹಿತ್ಯ ಹೆಚ್ಚು. ಅವನ್ನು ಹೇಳುವವರಿಗೆ ಇಲ್ಲಿ ಅಧಿಕ ಗೌರವ. ಐತಿಹ್ಯ, ವಿವರಣಾತ್ಮಕ ಕಥೆಗಳು ಸಾಕಷ್ಟು ಸಿಗುತ್ತವೆ. ಪೂರ್ವ ಆಫ್ರಿಕ ಕಥೆಗಳಲ್ಲಿ ವಿವರಣಾತ್ಮಕ ಕಥೆಗಳು ಹೆಚ್ಚು.

ಜಾನಪದದ ಎಲ್ಲ ಬಗೆಗಳೂ ಆಫ್ರಿಕದ ನೀಗ್ರೊ ಜನಾಂಗದಲ್ಲಿ ಲಭ್ಯವಾಗುತ್ತವೆ. ಅದೊಂದು ಎಂದೂ ಬತ್ತದ ತೊರೆ. ಜೀವಂತವಾದ ಜಾನಪದ ಒರತೆ. (ಜಿ.ಎಸ್.ಪಿ.)

**ಆಫ್‌ಸೆಟ್ ಮುದ್ರಣ :** ಮುದ್ರಣ ಫಲಕದಲ್ಲಿರುವ ವಸ್ತುವಿಗೆ ಮಸಿಯನ್ನೂ ಮುದ್ರಣವಾಗದ ಭಾಗಕ್ಕೆ ನೀರನ್ನೂ ಲೇಪಿಸಿ ರಬ್ಬರ್ ಹಾಳೆಗೆ ಅದನ್ನು ಮುದ್ರಿಸಿ ಆ ಹಾಳೆಯಿಂದ ಕಾಗದಕ್ಕೆ ವರ್ಗಾಯಿಸುವ (ಆಫ್‌ಸೆಟ್) ವಿಧಾನ. ಮಸಿಲೇಪಿತ ಫಲಕದಿಂದ ಕಾಗದದ ಮೇಲೆ ನೇರವಾಗಿ ಮುದ್ರಿಸುವ ಸಾಂಪ್ರದಾಯಿಕ ವಿಧಾನದಿಂದ ಇದು ಭಿನ್ನ. ಹಿಂದಿನಿಂದಲೂ ಬಳಕೆಯಲ್ಲಿರುವ ಲಿಥೋ ಮುದ್ರಣ ಯಂತ್ರಗಳು ಒಂದು, ಎರಡು ಅಥವಾ ನಾಲ್ಕು ಬಣ್ಣಗಳಲ್ಲಿ ಮುದ್ರಿಸಬಲ್ಲವು.

ಇವು ಕಾಗದದ ಬಿಡಿ ಹಾಳೆಗಳ ಮೇಲೆ ಮಾತ್ರ ಮುದ್ರಿಸುವ ಅನುಕೂಲತೆಗಳನ್ನು ಪಡೆದಿವೆ. ಆದರೆ ಇತ್ತೀಚೆಗೆ ವೆಬ್ ಆಫ್‌ಸೆಟ್ ಎಂಬ ಅತ್ಯಾಧುನಿಕ ಯಂತ್ರಗಳು ಬಳಕೆಗೆ ಬಂದಿವೆ. ಬಿಡಿಹಾಳೆಗೆ ಬದಲು ಕಾಗದವನ್ನು ನಿರಂತರವಾಗಿ ಒಂದು ಕಾಗದದ ಸುರುಳಿಯಿಂದಲೇ (ರೀಲ್ ಅಥವಾ ವೆಬ್) ಒದಗಿಸುವ ಕ್ರಮ ಇವುಗಳಲ್ಲಿರುವ ಮುಖ್ಯ ಮಾರ್ಪಾಟು. ನಿರಂತರ ಪ್ರವಹಿಸುವ ಕಾಗದದ ಮೇಲೆ ಯಂತ್ರದ ಸಿಲಿಂಡರಿನ ಪ್ರತಿಯೊಂದು ಸುತ್ತಿಗೂ ಒಂದರ ಮಗ್ಗುಲಲ್ಲಿ ಮತ್ತೊಂದು ಪಡಿಯಚ್ಚು ಮುದ್ರಿತವಾಗಿ ಹೊರಬರುತ್ತದೆ.

ಒಂದು ಕಡೆ ಕಾಗದದ ಸುರುಳಿಯನ್ನು (ವೆಬ್) ಯಂತ್ರಕ್ಕೆ ಒದಗಿಸಿದರೆ ಹಲವು ಬಣ್ಣಗಳಲ್ಲಿ ಹಾಳೆಯ ಎರಡೂ ಕಡೆ ಮುದ್ರಿಸಿ ಹೊರತರಲು ಸಾಧ್ಯವಿದೆ. ಎರಡು ಕ್ರಮಾನುಗತ ಮುದ್ರಣಗಳ ನಡುವಿನ ಕಾಲಾವಕಾಶ ಕೇವಲ ಒಂದು ಸೆಕೆಂಡಿನ




ಆಫ್‌ಸೆಟ್ ಮುದ್ರಣಪದ್ಧತಿ

ಅತ್ಯಲ್ಪಾಂಶವೆಂಬುದನ್ನು ಇಲ್ಲಿ ಗಮನಿಸಬೇಕು. ಆದರೆ ಪ್ರತಿಯೊಂದು ಮುದ್ರಣದಲ್ಲೂ ಬಿಂಬರಹಿತ ಕ್ಷೇತ್ರದಲ್ಲಿ (ನಾನ್‌ಇಮೇಜ್ ಏರಿಯ) ನೀರು ಮತ್ತು ಬಿಂಬ ಕ್ಷೇತ್ರದಲ್ಲಿ ಜಿಡ್ಡಾದ ಮಸಿಯೂ ಲೇಪನಗೊಂಡು ಸುರುಳಿಯ ಕಾಗದ ಒಂದು ಮುದ್ರಣದಲ್ಲಿ ಒದ್ದೆಯಾದದ್ದು ಮತ್ತೊಂದು ಮುದ್ರಣದ ಒಳಗಾಗಿ ಒಣಗಲು ಅವಕಾಶವಿಲ್ಲದೆ ಒದ್ದೆಯಾಗಿರುವ ಮಸಿಯ ಮೇಲೆಯೇ ಮತ್ತೊಂದು ಬಣ್ಣದ ಮಸಿಯನ್ನು ಹಚ್ಚಲಾಗುತ್ತದೆ. (ವೆಟ್–ಆನ್ ವೆಟ್ ಪ್ರಿಂಟಿಂಗ್). ಅಂತಿಮವಾಗಿ ಅದನ್ನು ಕಾಯಿಸಿದ ಲೋಹದ ಸಿಲಿಂಡರ್ ಮೇಲೆ ಅಥವಾ ತೆರೆದ ಅನಿಲ ಜ್ವಾಲೆಯ ಬುಗ್ಗೆಯ (ಗ್ಯಾಸ್ ಫ್ಲೇಮ್‌ಜೆಟ್) ಮೇಲೆ ಅಥವಾ ವಿದ್ಯುಚ್ಛಕ್ತಿಯಿಂದ ಕಾಯಿಸಿದ ಅತಿರಕ್ತ ಜ್ವಾಲೆಯ ಮೇಲೆ ಹಾಯಿಸಲಾಗುವುದು. ಮುದ್ರಿತವಾದ ಸುರುಳಿಯ ಹಾಳೆಯನ್ನು ಆ ಯಂತ್ರಕ್ಕೆ ಅನುಗೊಳಿಸಿರುವ ಇನ್‌ಲೈನ್ ಸಲಕರಣೆಯ ಮೂಲಕ ಹಾಯಿಸಲಾಗುತ್ತದೆ. ಅಲ್ಲಿ ಅದನ್ನು ಸೀಳಿ, ಮಡಚಿ, ಬೇಕಾದ ಅಳತೆಗೆ ಕತ್ತರಿಸಿ, ತಂತಿಯಿಂದ ಹೊಲೆದು ಪುಸ್ತಕ ಅಥವಾ ಪತ್ರಿಕೆಗಳ ಪ್ರತಿಗಳಾಗಿ ನೇರವಾಗಿ ರವಾನೆಗೆ ಸಿದ್ಧವಾಗಿ ಹೊರಹಾಕಲಾಗುವುದು. ಈ ಯಂತ್ರಗಳು ಅತ್ಯಂತ ವೇಗವಾಗಿ ಓಡುತ್ತವೆ. ಗಂಟೆಗೆ ಸುಮಾರು 15,000–35,000 ಪ್ರತಿಗಳವರೆಗೆ ಸರಬರಾಜು ಮಾಡಬಲ್ಲುವು. ವಿವಿಧ ವರ್ಣಗಳ ಚಿತ್ರಗಳುಳ್ಳ ಸಮಾಚಾರ ಪತ್ರಿಕೆಗಳನ್ನೂ ಸಹ ಈ ವೆಬ್ ಆಫ್‌ಸೆಟ್ ಯಂತ್ರದಿಂದ ಅತ್ಯಂತ ಯಶಸ್ವಿಯಾಗಿ ಮುದ್ರಿಸಲಾಗುತ್ತಿದೆ. ಚಿಕ್ಕ ಆಫ್‌ಸೆಟ್ ನಕಲು ಯಂತ್ರಗಳು (ಸ್ಮಾಲ್ ಆಫ್‌ಸೆಟ್ ಡೂಪ್ಲಿಕೇಟರುಗಳು): ಕಾರ್ಯಾಲಯದ ಲೇಖನ ಸಾಮಗ್ರಿಗಳನ್ನು ಮುದ್ರಿಸಲು ಉಪಯೋಗಿಸುವ ಕಿರಿಯ ಪ್ರಮಾಣದ ಆಫ್‌ಸೆಟ್ ಮುದ್ರಣ ಯಂತ್ರಗಳಿಗೆ ಈ ಹೆಸರಿದೆ. ತತ್ತ್ವಶಃ ಇವು ದೊಡ್ಡ ಆಫ್‌ಸೆಟ್ ಯಂತ್ರಗಳಿಗಿಂತ ಯಾವ ವಿಧದಲ್ಲೂ ಬೇರೆಯಲ್ಲ. ಕಾರ್ಯಾಲಯದ ನಮೂನೆಗಳು ಮತ್ತು ಸ್ಥಾವರ ನಮೂನೆಗಳು ತಪಶೀಲು ಪಟ್ಟಿಗಳು, ಬೆಲೆ ಪಟ್ಟಿಗಳು, ಲಘು ಪ್ರಕಟಣೆಗಳು (ಬುಲೆಟಿನ್ಸ್) ಮಾರಾಟ ಪತ್ರಗಳು, ಅನುಸೂಚಿಗಳು, ಮಡಿಸಿದ ಪ್ರಕಟಣ ಪತ್ರಗಳು ಮುಂತಾದುವನ್ನು ಶೀಘ್ರವಾಗಿ ಮುದ್ರಿಸಲು ಇವು ಆದರ್ಶ ಯಂತ್ರಗಳಾ ಗಿವೆ. ಈ ಯಂತ್ರಗಳಲ್ಲಿ ಅತಿ ಶೀಘ್ರವಾಗಿ ಕೆಲಸದ ಬದಲಾವಣೆಯನ್ನು ಮಾಡಬಹುದಷ್ಟೇ ಅಲ್ಲದೆ ಕೆಲವು ಯಂತ್ರಗಳಲ್ಲಿ ಸಾಲುರಂಧ್ರಗಳನ್ನು ಮಾಡುವ, ಸ್ಕೋರಿಂಗ್ ಮಾಡುವ, ಕತ್ತರಿಸುವ, ಇಂಪ್ರಿಂಟ್ ಮಾಡುವ, ಕ್ರಮಸಂಖ್ಯೆಗಳನ್ನು ಮುದ್ರಿಸುವ ಮತ್ತು ಎಂಬೋಸಿಂಗ್ ಮಾಡುವ ಸಲಕರಣೆಗಳನ್ನೂ ಹೊಂದಿಸಿರುತ್ತಾರೆ. ಒಂದು ಹಾಳೆಯ ಎರಡೂ ಮಗ್ಗುಲಲ್ಲಿ ಒಂದೇ ಸಮಯದಲ್ಲಿ ಮುದ್ರಿಸುವ ಎರಡು ಯೂನಿಟ್ಟುಗಳಿರುವ ಯಂತ್ರಗಳೂ ಇವೆ. ಈ ಯಂತ್ರಗಳನ್ನು ನಡೆಸುವ ವೆಚ್ಚ ಕಡಿಮೆ. ಚಲನೆ ಸುಲಭ ಮತ್ತು ಸರಳ. ಚಿಕ್ಕ ಪ್ರಮಾಣದಲ್ಲಿ ಮುದ್ರಿತವಾಗಬೇಕಾದ ಕೆಲಸಗಳನ್ನು ಶೀಘ್ರವಾಗಿ ಮಾಡಲು ಇವು ಅತಿದಕ್ಷ. ಆದ್ದರಿಂದ ಸಾವಿರಾರು ವ್ಯಾಪಾರ ಕಾರ್ಯಾಲಯಗಳಲ್ಲೂ ಔದ್ಯಮಿಕ, ವಿಕ್ರೀಯ, ಶೈಕ್ಷಣಿಕ, ಸರ್ಕಾರಿ ಮತ್ತು ವಾಣಿಜ್ಯಸಂಸ್ಥೆಗಳಲ್ಲೂ ಮುದ್ರಣ ಕೆಲಸಗಳಿಗೆ ಚಿಕ್ಕ ಆಫ್‌ಸೆಟ್ ನಕಲುಯಂತ್ರಗಳು ಬಲು ಜನಪ್ರಿಯವಾಗಿವೆ. ಇವುಗಳನ್ನು ನಕಲು ಯಂತ್ರಗಳಿಗೆ ಸಮಾನವಾಗಿ ಕಾಣುತ್ತಾರೆ. ಕಳೆದ ಸುಮಾರು ಐವತ್ತು ವರ್ಷಗಳಲ್ಲಿ ಈ ಚಿಕ್ಕ ಆಫ್‌ಸೆಟ್ ನಕಲುಯಂತ್ರಗಳ ಉಪಯೋಗ ತುಂಬ ಹೆಚ್ಚಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತಿಯೊಂದು ಗಣನೀಯ ಕಾರ್ಯಾಲಯ ದಲ್ಲಿಯೂ ಆವಶ್ಯಕ ಲೇಖನ ಸಾಮಗ್ರಿಗಳನ್ನು ಮುದ್ರಿಸಿಕೊಳ್ಳಲು ಒಂದು ಚಿಕ್ಕ ಆಫ್‌ಸೆಟ್ ಶಾಖೆಯನ್ನು ನಿಯೋಜಿಸುತ್ತಾರೆ. ಹೀಗಾಗಿ ಈ ಪದ್ಧತಿ ಸಾಂಪ್ರದಾಯಿಕ ಮುದ್ರಣಾಲಯಗಳ ಕೈಗಳಿಂದ ಕಳಚಿ ಕ್ರಮೇಣ ದೂರ ಸರಿಯುತ್ತಿದೆ. ಈ ಯಂತ್ರಗಳಲ್ಲಿ ಮೂಲತಃ ಕಾಗದದ ಡೈರೆಕ್ಟ್ ಇಮೇಜ್ ಮಾಸ್ಟರ್ ಮತ್ತು ಪ್ರೀಸೆನ್ಸಿಟೈಸ್ಡ್ ಪ್ಲೇಟುಗಳು ಎಂಬುದಾಗಿ ಎರಡು ಬಗೆಯ ಆಫ್‌ಸೆಟ್ ನಕಲು ತೆಗೆಯುವ ಫಲಕಗಳನ್ನು ಬಳಸುವರು. ಮೊದಲನೆಯ ಬಗೆಯ ಪ್ಲೇಟನ್ನು (ಸೆನ್ಸಿಟೈಸ್ಡ್) ಬಿಂಬಗ್ರಹಣ ಶಕ್ತಿ ಇರದಂತೆ ರಚಿಸಿದೆ. ಇದರಲ್ಲಿ ಕೈಬರಹ, ಬೆರಳಚ್ಚಿರುವುದು (ಟೈಪ್ ಮಾಡಿರುವುದು) ಅಥವಾ ರೇಖಾಚಿತ್ರಗಳನ್ನು ಬರೆದು ಮುದ್ರಿಸಲಾಗುವುದು. ರಾಸಾಯನಿಕ ಲೇಪನವನ್ನು ಕೊಟ್ಟು ತಯಾರಿಸಿರುವ ಈ ಪ್ಲೇಟಿನ ಮೇಲೆ ವಿಶೇಷವಾದ ಬೆರಳಚ್ಚಿನ (ಟೈಪ್‌ರೈಟಿಂಗ್) ರಿಬ್ಬನ್‌ಗಳು, ಮಸಿಗಳು ಅಥವಾ ಬಳಪಗಳನ್ನು ಉಪಯೋಗಿಸಿ ಬೇಕಾದ ವಿಷಯವನ್ನು ಬರೆಯಬಹುದು. ಅಲ್ಪ ಪ್ರಮಾಣದ ಲೇಖನ ಸಾಮಗ್ರಿಗಳನ್ನು ಮುದ್ರಿಸಲು ಇವು ಬಹು ಸೂಕ್ತ. ಬೆಲೆ ಅಗ್ಗ. ಇವನ್ನು ಮುದ್ರಣಕ್ಕೆ ತಯಾರಿಸುವುದೂ ಬಲು ಸುಲಭ. ಅಧಿಕ ಪ್ರಮಾಣದ ಕೆಲಸಗಳಿಗೆ ಪ್ರೀಸೆನ್ಸಿಟೈಸ್ಡ್ ಪ್ಲೇಟುಗ ಳನ್ನು ಉಪಯೋಗಿಸುವರು. ಅಲ್ಯೂಮಿನಿಯಂ, ಕಾಗದ ಅಥವಾ ಪ್ಲಾಸ್ಟಿಕ್‌ಗಳ ಮೇಲೆ ಬೆಳಕಿನ ಕಿರಣಗಳಿಗೆ ಪ್ರತಿಕ್ರಿಯೆ ತೋರಿಸುವ ಒಂದು ರಾಸಾಯನಿಕ ವಸ್ತುವನ್ನು ಹಚ್ಚಿ ಇವನ್ನು ತಯಾರಿಸುತ್ತಾರೆ. ಬೇಕಾದ ಬರೆಹ, ಚಿತ್ರ ಇತ್ಯಾದಿ ಬಿಂಬವನ್ನು ಛಾಯಾಗ್ರಾಹಕ ರೀತಿಯಿಂದ ಈ ಪ್ಲೇಟುಗಳಿಗೆ ವರ್ಗಾಯಿಸುತ್ತಾರೆ. (ಎಂ.ಎ.ಎಸ್.)

**ಆಫ್ರೆಚ್ ಥಿಯೋಡರ್ :** 1821–1907. ಕ್ಯಾಟಲಾಗಸ್ ಕ್ಯಾಟಲೋಗೋರಮ್–ಎನ್ ಆಲ್ಫಬೆಟಿಕಲ್ ರಿಜಿಸ್ಟರ್ ಆಫ್ ಸ್ಯಾಂಸ್ಕ್ರಿಟ್ ವರ್ಕ್ಸ್ ಅಂಡ್ ಆಥರ್ಸ್ ಎಂಬ ಮೂರು ಸಂಪುಟಗಳ ಸೂಚೀ ಗ್ರಂಥವನ್ನು ಸಿದ್ಧಪಡಿಸಿದ ಪ್ರಾಚ್ಯ ಸಾಹಿತ್ಯ ಪಂಡಿತ, ಭಾಷಾಶಾಸ್ತ್ರ ನಿಪುಣ. ಎಡಿನ್‌ಬರೋದಲ್ಲಿ ಸಂಸ್ಕೃತ ಪ್ರಾಧ್ಯಾಪಕನಾಗಿದ್ದ. ಖ್ಯಾತಿವೆತ್ತ ಸಂಸ್ಕೃತ ವಿದ್ವಾಂಸ ಮ್ಯಾಕ್ಸ್‌ಮುಲ್ಲರ್ ಈತನ ಸಹೋದ್ಯೋಗಿ. ಈತನಷ್ಟು ವಿವೇಚನೆಯಿಂದ ಅಷ್ಟೊಂದು ಸಂಸ್ಕೃತ ಗ್ರಂಥಗಳನ್ನು ಓದಿದವರು ಮತ್ತೊಬ್ಬರಿಲ್ಲವೆಂದು ಕೀಲ್‌ಹಾರ್ಗ್ ಈ ವಿದ್ವಾಂಸನನ್ನು ಪ್ರಶಂಸೆ ಮಾಡಿದ್ದಾನೆ. (ಬಿ.ಆರ್.ಎಂ.)

**ಆಬರ್‌ಕ್ರಾಂಬಿ, ಲಾಸೆಲಸ್ :** 1881–1938. ಆಂಗ್ಲಕವಿ, ವಿಮರ್ಶಕ. ಲೀಡ್ಸ್ ಮತ್ತು ಲಂಡನ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕನಾಗಿದ್ದ. ಕಾವ್ಯಕೃತಿಗಳಲ್ಲಿ ಮುಖ್ಯವಾದವು–

ಪ್ರಥಮ ಕೃತಿಯಾದ ಇಂಟರ್‌ಲ್ಯೂಡ್ಸ್ ಅಂಡ್ ಪೊಯಮ್ಸ್ (1908) ಎಂಬ್ಲಮ್ಸ್ ಆಫ್ ಲವ್ (1912), ಡೆಬೋರಾ (1912). 1930ರಲ್ಲಿ ಹೊರಬಂದ ಆಕ್ಸ್‌ಫರ್ಡ್ ಪೊಯೆಟ್ಸ್ ಎಂಬ ಕೃತಿಯಲ್ಲಿ ಇವನ ಕೆಲವು ಕವನಗಳಿವೆ. ಸುಂದರ ಚಿತ್ರಗಳನ್ನು ಸೃಷ್ಟಿಸಬಲ್ಲ ಸಾಮರ್ಥ್ಯ ಮತ್ತು ಉತ್ತಮ ಮಟ್ಟದ ಸೌಂದರ್ಯಕಲ್ಪನೆ ಇವನ ಕವನಗಳಲ್ಲಿ ಕಂಡುಬರುತ್ತದೆ. ಈತ ಕೆಲವು ನಾಟಕಗಳನ್ನೂ ಬರೆದಿದ್ದಾನೆ. ಅವುಗಳಲ್ಲಿ ಫೀನಿಕ್ಸ್ (1923) ಪ್ರಸಿದ್ಧವಾದುದು.

ವಿಮರ್ಶೆಯ ಕ್ಷೇತ್ರದಲ್ಲಿ ಈತನ ಥಾಮಸ್ ಹಾರ್ಡಿ (1912), ದಿ ಥಿಯೊರಿ ಆಫ್ ಪೊಯೆಟ್ರಿ (1924), ದಿ ಐಡಿಯ ಆಫ್ ಗ್ರೇಟ್ ಪೊಯೆಟ್ರಿ (1925), ಲಿಬರ್ಟಿ ಆಫ್ ಇಂಟರ್‌ಪ್ರಿಟಿಂಗ್ (1930), ಪೊಯೆಟ್ರಿ–ಇಟ್ಸ್ ಮ್ಯೂಸಿಕ್ ಅಂಡ್

ಮೀನಿಂಗ್, ಪ್ರಿನ್ಸಿಪಲ್ಸ್ ಆಫ್ ಇಂಗ್ಲಿಷ್ ಪ್ರಾಸಡಿ (1922), ಥಿಯರಿ ಆಫ್ ಆರ್ಟ್ (1922), ಇವು ಖ್ಯಾತ ಕೃತಿಗಳಾಗಿವೆ. ಈತನ ಒಳ್ಳೆಯ ಗ್ರಂಥವಾದ ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಮ್ ಎಂಬ ಗ್ರಂಥ ಕನ್ನಡಕ್ಕೆ ಅನುವಾದವಾಗಿದೆ. *

**ಆಬಾದಾನ್ :** ಇರಾನಿಗೆ ನೈರುತ್ಯದಲ್ಲಿ ಪರ್ಷಿಯ ಕೊಲ್ಲಿಗೆ 48 ಕಿಮೀ ದೂರದಲ್ಲಿರುವ ಮುಖ್ಯ ಬಂದರು. ಜನಸಂಖ್ಯೆ 4,15,135 (2005). ಪ್ರಪಂಚದ ಮುಖ್ಯ ತೈಲಶುದ್ಧೀಕರಣ ಕೇಂದ್ರಗಳಲ್ಲೊಂದು. 1980ರ ಇರಾನ್–ಇರಾಕ್ ಯುದ್ಧದಲ್ಲಿ ಈ ತೈಲಶುದ್ಧೀಕರಣ ಕೇಂದ್ರ ನಾಶವಾಗಿತ್ತು. ಇಲ್ಲಿಂದ ಇರಾನಿನ ನೈಋತ್ಯ ಮತ್ತು ಉತ್ತರ ಭಾಗದ ಎಲ್ಲ ತೈಲವಲಯಗಳಿಂದ ಕಚ್ಚಾ ತೈಲದ ರವಾನೆಗೆ ಅಗತ್ಯವಾದ ಉತ್ತಮ ಕೊಳವೆ ಮಾರ್ಗಗಳ ಜಾಲವಿದೆ. ಹಿಂದೆ ಇದೊಂದು ಕೆಸರು ಜವುಗುವಿನಿಂದ ಕೂಡಿದ, ಅಲ್ಲಲ್ಲಿ ಖರ್ಜೂರಮರಗಳನ್ನುಳ್ಳ ಬಂಜರು ಭೂಮಿಯಾಗಿತ್ತು. 1909ರ ಅನಂತರ ತೈಲಶುದ್ಧೀಕರಣ ಕೇಂದ್ರಗಳ ಅಭಿವೃದ್ಧಿಯೊಂದಿಗೆ ಪ್ರಗತಿಹೊಂದಿತು. (ಆರ್.ಡಿ.ಆರ್.)

**ಆಬೆಲ್ :** ಆದಂನ ಎರಡನೆಯ ಮಗ. ಅಣ್ಣ ಕೇನ್. ಈತ ಆಬೆಲ್ಲನನ್ನು ಕೊಂದ ವಿಷಯ ಜೆನಿಸಿಸ್‌ನಲ್ಲಿ ವರ್ಣಿತವಾಗಿದೆ.

**ಆಬ್ಲೊಮಾನ್ :** ರಷ್ಯನ್ ಕಾದಂಬರಿಕಾರ ಗಾನ್ ಚಾರಾಫ್‌ನ ಮಹಾಕೃತಿ (1858). ಇದರ ನಾಯಕ ಉನ್ನತ ಮೌಲ್ಯಗಳು, ಸೌಜನ್ಯಗಳಿದ್ದರೂ ಕ್ರಿಯಾಶಕ್ತಿ ದೃಢಮನಸ್ಸುಗಳಿಲ್ಲದೆ ನಿಷ್ಪ್ರಯೋಜಕ ವ್ಯಕ್ತಿಗಳ ಪ್ರತಿನಿಧಿಯಾಗಿದ್ದಾನೆ. ನಾಲ್ಕು ಭಾಗಗಳಿರುವ ಈ ಕೃತಿಯ ಕಡೆಯ ಎರಡು ಭಾಗಗಳ ಗಾಢವಿಷಾದ ರಷ್ಯನ್ ಸಾಹಿತ್ಯದಲ್ಲಿ ಸಹ ಅಸಮಾನವಾದುದು. ಈ ಕೃತಿಯಲ್ಲಿ ಗಾನ್ ಚಾರಾಫ್‌ನ ವಿಧಾನ ವಾಸ್ತವಿಕತೆ, ನಾಯಕನ ವಿಷಯದಲ್ಲಿ ತಿರಸ್ಕಾರ ಉಂಟಾಗದೆ ಅನುಕಂಪ ಉಂಟಾಗುವಂತೆ ಮಾಡಿರುವುದು ಇಲ್ಲಿನ ಅದ್ಭುತ ಸಾಧನೆ. (ಎಲ್.ಎಸ್.ಎಸ್.)

**ಆಬ್ಸಿಡಿಯನ್ :** ಜ್ವಾಲಾಮುಖಜ ಶಿಲಾವರ್ಗಕ್ಕೆ ಸೇರಿದ ಸ್ವಾಭಾವಿಕ ಗಾಜು. ಲಾವಾರಸ ಪರಿವರ್ತನೆಯಿಂದಾದುದು. ಇದರಲ್ಲಿ ಶೇ. 65 ರಿಂದ ಶೇ. 75 ಸಿಲಿಕಾಂಶ ಇರುತ್ತದೆ.

ಈ ಶಿಲೆ ರೈಯೋಲೈಟ್ ಮತ್ತು ಡೇಸೈಟ್ ಶಿಲೆಗಳ ಖನಿಜಸಂಯೋಗವನ್ನು ಹೊಂದಿದೆ. ಆದರೆ ಇದರ ಉತ್ಪತ್ತಿಯ ರೀತಿ ಆ ಶಿಲೆಗಳ ಉತ್ಪತ್ತಿಯ ರೀತಿಗಿಂತ ಬೇರೆಯದಾಗಿದೆ. ಆ ಎರಡೂ ಶಿಲೆಗಳಲ್ಲಿ ಕಾಣುವ ಪಾರ್ಫಿರಿಟಿಕ್ ರಚನೆ ಇದಕ್ಕಿಲ್ಲ. ಇದು ಪ್ರಕೃತಿನಿರ್ಮಿತವಾದ ಗಾಜು. ಆದ್ದರಿಂದ ಇದರಲ್ಲಿ ಯಾವ ಖನಿಜ ಹರಳುಗಳೂ ಇಲ್ಲ. ಹೊಳೆಯುವ ಅತಿ ಕಪ್ಪು ಬಣ್ಣದ ಈ ಕಲ್ಲಿನ ಮೈ ಶಂಖಾಕೃತಿಯಲ್ಲಿ ಬಿರಿದಿರುವಂತೆ ಕಾಣುತ್ತದೆ.

ಇದರ ಉತ್ಪತ್ತಿಗೆ ಕಾರಣವಾದ ಶಿಲಾರಸ ಬಹಳ ಜಿಗುಟಾಗಿದ್ದು ಪ್ರವಾಹನಿರೋಧಕವಾಗಿರುತ್ತದೆ. ಶಿಲಾರಸದಲ್ಲಿ ಶೇ.4 ಕ್ಕಿಂತ ಹೆಚ್ಚು ನೀರಿನ ಭಾಗವಿರುವುದಿಲ್ಲ. ಈ ಕಾರಣದಿಂದಾಗಿ ಶಿಲಾರಸ ಭೂಮಿಯ ಹೊರಕ್ಕೆ ಬಂದೊಡನೆಯೇ ಬಹಳ ಬೇಗ ಹೆಪ್ಪುಗಟ್ಟುತ್ತದಾಗಿ ಈ ಶಿಲೆಯ ಅತಿ ತೆಳುವಾದ ಭಾಗಗಳಿಂದ ಮತ್ತು ಮೊನಚಾದ ಅಂಚುಗಳಿಂದ ಬೆಳಕು ಹರಿಯುವುದನ್ನು ಕಾಣಬಹುದು. ಈ ಗಾಜಿನ ಒಳರಚನೆಯಲ್ಲಿ ಬೇರೆ ಬೇರೆ ಖನಿಜಗಳು ಕಣ್ಣಿಗೆ ಕಾಣುವ ಸ್ಫಟಿಕಗಳಾಗಿರದೆ ಕ್ರಸ್ಟಲೋಟ್ ಮತ್ತು ಮೈಕ್ರೊಲೈಟ್ ಎಂಬ ಬಹು ಸೂಕ್ಷ್ಮ ಕಣಗಳಾಗಿರುತ್ತವೆ.

ಈ ಶಿಲೆ ಭೂಚರಿತ್ರೆಯ ಮಿಸೋಜೋಯಿಕ್, ಟರ್ಷಿಯರಿ ಮತ್ತು ಇತ್ತೀಚಿನ ಯುಗಗಳಲ್ಲಿ ಸಿಕ್ಕುತ್ತದೆ. ಪ್ರೀಕೇಂಬ್ರಿಯನ್ ಕಾಲದಲ್ಲೂ ಹಲ ಕೆಲವು ಶಿಲೆಗಳು ಸಿಕ್ಕಿವೆ.

ಪ್ರಾಗೈತಿಹಾಸಿಕ ಯುಗದಲ್ಲಿ ಶಿಲೋಪಕರಣಗಳನ್ನು ಮಾಡಲು ಈಜಿಪ್ಟ್, ಅಮೆರಿಕ ಮುಂತಾದ ದೇಶಗಳಲ್ಲಿ ಇದು ಬಹಳ ಬಳಕೆಯಲ್ಲಿತ್ತು. (ಐ.ಆರ್.ವಿ.)(ಎಸ್.ಎನ್)

**ಆಬ್ಸೆಲಾಮ್, ಆಬ್ಸೆಲಾಮ್ :** ಅಮೆರಿಕದ ಸುಪ್ರಸಿದ್ಧ ಕಾದಂಬರಿಕಾರ ವಿಲಿಯಂ ಫಾಕ್ನರ್‌ನ ಕಾದಂಬರಿ (1936). 'ದಿ ಸೌಂಡ್ ಅಂಡ್ ದಿ ಫ್ಯೂರಿ' ಎಂಬ ಕಾದಂಬರಿಯಲ್ಲಿ ಆತ ಉಪಯೋಗಿಸಿದ ತಂತ್ರದ ಪ್ರಯೋಗವೇ ಇಲ್ಲೂ ಮುಂದುವರಿದಿದೆ. ಕಥಾನಾಯಕನಾದ ಥಾಮಸ್ ಸಟ್‌ಪೆನ್‌ನ ಕಥೆಯನ್ನು ಮೂರು ಜನರ ಬಾಯಲ್ಲಿ ಕೃತಿಕಾರ ಹೇಳಿಸುತ್ತಾನೆ. ಕಥೆ ಹೇಳುವ ರೀತಿಯಲ್ಲಿ ಅವರ ವ್ಯಕ್ತಿತ್ವ, ಅವರ ಹೃದಯದಲ್ಲಿರುವ ಭಾವನೆಗಳು ಚೆನ್ನಾಗಿ ಪ್ರಕಟವಾಗುತ್ತವೆ.

ಸಟ್‌ಪೆನ್‌ನ ಅತ್ತಿಗೆ ರೋಸಾ ಕೋಲ್ಡ್‌ಫೀಲ್ಡ್ ಎಂಬಾಕೆ ಕ್ವಿಂಟನ್ ಕಾಂಪ್‌ಸನ್‌ಗೆ ಆತ ಹಾರ್‌ವರ್ಡ್‌ಗೆ ಪ್ರಯಾಣ ಮಾಡುವ ಸ್ವಲ್ಪ ಮುಂಚೆ–ಸಟ್‌ಪೆನ್‌ನ ಕಥೆಯನ್ನು ಮೊದಲು ಹೇಳುತ್ತಾಳೆ. ಈ ಕಥೆಯನ್ನು ಆಮೇಲೆ ಕ್ವಿಂಟನ್‌ನ ತಂದೆ ಮುಂದುವರಿಸುತ್ತಾನೆ. ಅನಂತರ ಕ್ವಿಂಟನ್ ಈ ಇಬ್ಬರ ಕಥೆಗಳಿಗೆ ತನ್ನ ವಿವರಣೆಯನ್ನು ಸೇರಿಸಿ ಹಾರ್‌ವರ್ಡಿ ತನ್ನ ಜೊತೆಗಾರನಿಗೆ ಹೇಳುತ್ತಾನೆ.

ಥಾಮಸ್ ಸಟ್‌ಪೆನ್‌ಗೆ ತಾನು ದಕ್ಷಿಣ ಅಮೆರಿಕದ ದೊಡ್ಡ ಶ್ರೀಮಂತನೆಂದು ಕರೆಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ. ಅಷ್ಟೇ ಅಲ್ಲ, ಅವನಿಗೆ ಶ್ರೀಮಂತ ಕುಟುಂಬದ ಸ್ಥಾಪಕನೆಂದು ಕರೆಸಿಕೊಳ್ಳುವ ಹಂಬಲವೂ ಇತ್ತು. ಈ ದಿಶೆಯಲ್ಲಿ ಆತ ಮಾಡುವ ಪ್ರಯತ್ನಗಳೇ ಇಲ್ಲಿನ ಕಥಾವಸ್ತು. ಆತ ಹುಟ್ಟಿದ್ದು ಪಶ್ಚಿಮ ವರ್ಜೀನಿಯದ ಒಂದು ಬಡ ಬಿಳಿಯ ಕುಟುಂಬದಲ್ಲಿ. ತನ್ನ ಸಾಹಸದಿಂದ ಜೆಫರ್‌ಸನ್ ಊರಿನಲ್ಲಿ ಸಮಾಜದ ಓರ್ವ ಗಣ್ಯ ವ್ಯಕ್ತಿಯಾಗುತ್ತಾನೆ. ಅಮೆರಿಕದ ಅಂತರ್ಯುದ್ಧ ಸಮಯದಲ್ಲಿ ಕರ್ನಲ್ ಪದವಿಗೆ ಚುನಾಯಿತನಾಗುತ್ತಾನೆ. ಯುದ್ಧ ಮುಗಿದು ತನ್ನ ಜಮೀನಿಗೆ ಹಿಂತಿರುಗುವಾಗ ಆತ ನೋಡುವ ಪರಿಸ್ಥಿತಿ–ಮದುವೆಯಿಲ್ಲದೆ ಕನ್ಯೆಯಾಗಿಯೇ ಉಳಿದಿರುವ ಮಗಳು, ಕಾಣದೆ ತಪ್ಪಿಸಿಕೊಂಡಿರುವ ಮಗ, ಅರ್ಧ ಬೀಳುಬಿದ್ದಿರುವ ಜಮೀನು.

ತನ್ನ ಹೆಸರನ್ನು ಮುಂದುವರಿಸುವ ಉದ್ದೇಶದಿಂದ ಮತ್ತೊಬ್ಬ ಮಗನನ್ನು ಪಡೆಯಲು ಹಂಬಲಿಸುತ್ತಾನೆ. ಆತ ಪ್ರೀತಿಸಿದ್ದ ಒಬ್ಬಳು ಬಡ ಬಿಳಿ ಹುಡುಗಿಯ ಹೊಟ್ಟೆಯಲ್ಲಿ ಒಂದು ಹೆಣ್ಣು ಮಗು ಹುಟ್ಟುತ್ತದೆ. ಕಡೆಗೆ ಸಟ್‌ಪೆನ್‌ನನ್ನು ಹುಡುಗಿಯ ಅಜ್ಜ ಕೊಂದುಹಾಕುತ್ತಾನೆ. ಅವನು ಕಂಡ ಕನಸಿನ ಕೊನೆಯಲ್ಲಿ ಉಳಿಯುವುದು ಉರಿದು ಬಿದ್ದ ಮನೆ, ಅದರ ಬೂದಿಯಲ್ಲಿ ಅರಚುತ್ತ ಹೊರಳಾಡುತ್ತ ಬಿದ್ದಿರುವ ತನ್ನ ಒಬ್ಬನೇ ವಂಶಸ್ಥ ಜಿಮ್ ಬಾಂಡ್ ಎಂಬ ಪೆಪ್ಪು ನೀಗ್ರೊ. ತನ್ನ ಮೊದಲಿನ ನೀಗ್ರೊ ಹೆಂಡತಿಯನ್ನು ಮತ್ತು ಅವಳ ಮೂಲಕ ಪಡೆದ ಮಗನನ್ನು ಆತ ತನ್ನ ದಕ್ಷಿಣ ದೇಶದ ಸಮಾಜದ ಕಟ್ಟುಪಾಡಿಗೊಳಗಾಗಿ ನಿರಾಕರಿಸಿದ್ದ. ಅದರ ಪರಿಣಾಮಗಳು ಆತನ ಬಾಳಿನುದ್ದಕ್ಕೂ ಹಿಂಬಾಲಿಸಿ ಕಡೆಗೆ ಆತ ಸತ್ತ ಮೇಲೆ ಆತನ ಕನಸನ್ನು ನುಚ್ಚುನೂರು ಮಾಡುತ್ತವೆ. ಬಿಳಿಯರ ವಂಶದ ಹಿರಿಮೆ, ನೀಗ್ರೊಗಳ ಸಮಸ್ಯೆಗಳಿಗೆ ಈ ಕಾದಂಬರಿ ಒಳ್ಳೆಯ ನಿದರ್ಶನವಾಗಿದೆ. (ಎಚ್.ಜಿ.ಎಸ್.ಆರ್.)

**ಆಭರಣಗಳು :** ಮನುಷ್ಯನ ಅಲಂಕರಣ ಸಾಧನಗಳಲ್ಲಿ ಒಂದು (ತೊಡುಗೆ); ಅಂಗರಾಗಗಳು ಮತ್ತು ಉಡುಗೆ ಉಳಿದ ಎರಡು ಸಾಧನಗಳು. ಅಮೂಲ್ಯ ಪದಾರ್ಥ, ಲೋಹ, ಮುತ್ತು, ರತ್ನಗಳಿಂದ ಕೂಡಿದ ಅಲಂಕರಣ ಸಾಧನ ಆಭರಣ. ಕವಡೆ, ಚಿಪ್ಪು ಅಮೂಲ್ಯ ಪದಾರ್ಥಗಳೆಂದೆನಿಸಿದ್ದ ಅತಿ ಪ್ರಾಚೀನ ಕಾಲದಲ್ಲಿ ಅವೇ ಆಭರಣದ ಮೂಲ ವಸ್ತುಗಳಾಗಿದ್ದುವು. ಆದರೆ ಚಿರಕಾಲ ಉಳಿದಿರುವುದು ಅಮೂಲ್ಯ ಲೋಹ, ಮುತ್ತು, ರತ್ನ ಮಾತ್ರ. ಆಭರಣ ರಚನೆ ಮತ್ತು ಧಾರಣೆಯಲ್ಲಿನ ಉದ್ದೇಶಗಳು ಸ್ಥೂಲವಾಗಿ ಮೂರು–ಸೌಂದರ್ಯವರ್ಧನೆ, ಸ್ವಪ್ರತಿಷ್ಠೆಯ ಪ್ರದರ್ಶನ, ಸಂಪತ್ತಿನ ಸಂಚಯನ. ಇಲ್ಲೆಲ್ಲ ಸಮಕಾಲೀನ ಸಾಮಾಜಿಕ ಮೌಲ್ಯಗಳ ಮತ್ತು ವ್ಯಕ್ತಿಯ ಮಾನಸಿಕ ಸ್ಥಿತಿಯ ಪಾತ್ರ ಹಿರಿದು. ಆಭರಣಗಳು ಒಂದು ಜನಾಂಗದ ವೈಶಿಷ್ಟ್ಯವನ್ನು ಪ್ರತಿಬಿಂಬಿಸುವ ಪ್ರತೀಕಗಳು. ಆದ್ದರಿಂದ ಆಭರಣಗಳ ರೂಪರೇಖೆ, ಆ ದೇಶದಲ್ಲಿ ಸಿಗಬಹುದಾದ ಖನಿಜ ಮತ್ತು ಲೋಹ ಸಂಪತ್ತು, ದೇಶದ ಹವಾಗುಣ ಮತ್ತು ಅಲ್ಲಿನ ಜನ ಧರಿಸುವ ಉಡುಪನ್ನು ಅವಲಂಬಿಸಿದೆ. ಧಾರ್ಮಿಕ ನಂಬಿಕೆಗಳು, ರಾಷ್ಟ್ರೀಯ ಪದ್ಧತಿಗಳು ಮತ್ತು ಸಂಸ್ಕಾರ ಶಾಸ್ತ್ರದ ಪ್ರಭಾವ ಕೆಲವು ಆಭರಣಗಳಿಗೆ ವಿಶೇಷ ಮಹತ್ತ್ವವನ್ನು ತಂದಿವೆ.



ಚಿನ್ನದ ಕಂಠಾಭರಣಗಳು (ತಕ್ಷಶಿಲಾ) (ಪ್ರಶ. 1–2ನೆಯ ಶತಮಾನ)

ಪ್ರಪಂಚದ ಇತಿಹಾಸದಲ್ಲಿ ಆಭರಣಗಳ ಮೂಲವನ್ನು ಕಂಡುಹಿಡಿಯುವುದು ಕಷ್ಟ. ಇವುಗಳ ಬಳಕೆ ಶಿಲಾಯುಗದಲ್ಲೂ ಇತ್ತು. ಕಂಚಿನ ಯುಗಕ್ಕೂ ಮೊದಲು ಚಿನ್ನದ ಒಡವೆಗಳು ಪ್ರಚಲಿತವಾಗಿದ್ದುವು ಎಂದು ತಿಳಿದಿದೆ. ಪ್ರಾಚೀನ ಭಾರತೀಯ ಮಹಾಕಾವ್ಯಗಳಲ್ಲಿ ವರ್ಣಿತವಾಗಿರುವ ಆಭರಣಗಳು ಇಂದಿಗೂ ವಿಶೇಷ ಬದಲಾವಣೆ ಹೊಂದದೆ ಪ್ರಚಲಿತವಾಗಿರುವುದನ್ನು ಗಮನಿಸಬಹುದು. ಇದರಿಂದ ಆಭರಣಗಳ ಪ್ರಾಚೀನತೆ ತಿಳಿಯುತ್ತದೆ. ಸುಗ್ರೀವನಿಂದ ಶ್ರೀರಾಮಚಂದ್ರನಿಗೆ ದೊರೆತ ಸೀತಾದೇವಿ ತೊಟ್ಟಿದ್ದ ಕಾಲುಗೆಜ್ಜೆ ಕಡಗ, ರಾಮನು ಸೀತೆಗೆ ಕಳಿಸಿದ ಪ್ರತೀಕ ಚೂಡಾಮಣಿ, ಸೀತೆ ಹನುಮಂತನಿಗೆ ಬಹುಮಾನ ನೀಡಿದ ಕಂಠಾಭರಣ ಮುಂತಾದ ಆಭರಣಗಳು ಇನ್ನೂ ಭಾರತದಲ್ಲಿ ಅವೇ ಹೆಸರಿನಿಂದ ಪ್ರಚಲಿತವಿವೆ. ಸೌಂದರ್ಯಕ್ಕಾಗಿ ಹರಳುಗಳನ್ನು ಚಿನ್ನದಲ್ಲಿ ಕೂರಿಸಿ ಮಾಡುವ ಕಲೆಯನ್ನು ಭಾರತ ಅರಿತಿತ್ತೆಂದು ಶಮಂತಕಮಣಿಯ ಕಥೆಯಿಂದ ತಿಳಿದುಕೊಳ್ಳಬಹುದು. 2000 ವರ್ಷಕ್ಕೂ ಹಿಂದೆ ರೂಪುಗೊಂಡ ಮನುಧರ್ಮಶಾಸ್ತ್ರದಲ್ಲಿಯೂ ಆಭರಣಕಲೆ ವಿವರಿಸಲ್ಪಟ್ಟಿದೆಯಲ್ಲದೆ ಕೆಟ್ಟ ಕೈಕೆಲಸ ಅಥವಾ ಬಂಗಾರವನ್ನು ಮಿಶ್ರಗೊಳಿಸುವ ನೀತಿಬಾಹಿರ ಕೆಲಸಗಳಿಗೆ ವಿಧಿಸಲ್ಪಡುತ್ತಿದ್ದ ದಂಡವನ್ನೂ ನಮೂದಿಸಲಾಗಿದೆ. ಮೃಚ್ಛಕಟಿಕ ಎಂಬ ಸಂಸ್ಕೃತ ನಾಟಕದಲ್ಲಿ ಆಭರಣ ಕಲೆಯ ಕೌಶಲವನ್ನು ಕಾಣಬಹುದು. ಅಮೂಲ್ಯ ಹರಳು, ಮುತ್ತುಗಳನ್ನು ಅಳವಡಿಸಿಕೊಂಡು ಚಿನ್ನದ ಮಣಿಗಳನ್ನು ಬಣ್ಣಬಣ್ಣದ ದಾರಗಳಲ್ಲಿ ಹೆಣೆದು ತಯಾರಿಸುವ

ರೀತಿಗಳಲ್ಲದೆ ಹವಳ ಚಿಪ್ಪುಗಳನ್ನು ಚಿನ್ನದೊಂದಿಗೆ ಅಳವಡಿಸಿ ಸುಂದರ ಆಭರಣಗಳನ್ನಾಗಿ ಪರಿವರ್ತಿಸುವ ವಿಧಾನ ಹೇಳಲಾಗಿದೆ. ಇಂದು ನಾವು ಧರಿಸುವ ವಿವಿಧ ನಮೂನೆಯ ಕಂಠಹಾರಗಳು, ತೋಳಬಂದಿಗಳು, ಕೈಬಳೆಗಳು, ಕಾಲ್ಗೊರಸುಗಳು, ಶಿರಾಭರಣಗಳು, ಮಕುಟಗಳು, ಉಂಗುರಗಳು, ಮೂಗುತಿಗಳು, ಕಡಗಗಳು, ಒಂಟಿಗಳು ಮುಂತಾದುವು ಗಳಿಗೂ, ಅಜಂತ ಎಲ್ಲೋರಗಳ ಚಿತ್ರಕಲೆಗಳಲ್ಲಿ ಸಾಂಚಿ, ಬಾರ್ಹುತ್, ಅಮರಾವತಿ, ಒರಿಸ್ಸ, ಹಳೆಬೀಡು, ಬೇಲೂರು ಮುಂತಾದಲ್ಲಿನ ಶಿಲ್ಪಗಳಲ್ಲಿ ತೋರುವ ಇವೇ ಆಭರಣ ಗಳಿಗೂ ಹೊಂದಾಣಿಕೆ ಕಂಡುಬರುತ್ತದೆ. ಭಾಷೆ ಮತ್ತು ಭೌಗೋಳಿಕ-ರಾಜಕೀಯ ಕಾರಣಗಳಿಗಾಗಿ ಭಾರತ ಭಿನ್ನ ರಾಜ್ಯಗಳಾಗಿ ವಿಭಾಗಿಸಲ್ಪಟ್ಟಿದ್ದರೂ ಅಖಿಲ ಭಾರತೀಯ ಮಹಿಳೆಯರು ತೊಡುವ ಒಡವೆಗಳಲ್ಲಿ ಮಾತ್ರ ವಿಶೇಷ ಸಾಮ್ಯ ಕಂಡುಬರುವುದು.

ವಿವಿಧ ಆಭರಣಗಳು

**ನಮೂನೆಗಳು :** 1. **ಶಿರಭೂಷಣಗಳು**-ಬೈತಲೆಸರ, ಬಾಸಿಂಗ, ಬೈತಲೆ ಪದಕ, ನಾಗರ ರಾಗಟೆ, ಕೇದಿಗೆ, ಸಂಪಿಗೆ, ಚೌರಿ, ರೋಜಾ ಹೂ, ಮೊಗ್ಗಿನ ಮಾಲೆ, ಮುಳ್ಳು ಮೊಗ್ಗಿನ ಜಡೆ, ಗಿಳಿ ಹರಳು ಬಂಗಾರ, ಹೆರಳಲಂಕಾರ, ಗೊಂಡೆ ಹೂ ಇತ್ಯಾದಿ. 2. **ಕರ್ಣಭೂಷಣ ಗಳು**-ಓಲೆ, ಕಮಲಪುಷ್ಪ, ಬುಗುಡಿ, ಗುಬ್ಬಿ, ಬಳೆ, ಕೊಪ್ಪು, ಕೆನ್ನೆ ಸರಪಳಿ ಇತ್ಯಾದಿ. 3. **ನಾಸಿಕ ಭೂಷಣಗಳು**-ಮೂಗುತಿ, ಬುಲಾಕು, ಇತ್ಯಾದಿ. 4. **ಕಂಠಭೂಷಣಗಳು**-ತಾಳಿ, ಚಂದ್ರಹಾರ, ಮೋಹನಮಾಲೆ, ಕಂಠೀಸರ, ಪುತ್ಥಳಿಸರ, ಕಾಸಿನಸರ, ಗುಂಡಿನಸರ, ಬ್ರಹ್ಮಮುಡಿಸರ, ಕೋಪಚೇನು, ಬೋರಮಾಳು, ನೆಲ್ಲಿಕಾಯಿಸರ, ಗೋದಿಸರ, ಜೋಳದಸರ, ಮಾವಿನಕಾಯಿಸರ, ಮಲ್ಲಿಗೆಮೊಗ್ಗಿನ ಮಾಲೆ, ಪದಕ ಇತ್ಯಾದಿ. 5. **ಕರಭೂಷಣಗಳು**-ಕಡಗ, ಗೋಟು, ಪಾಟಲಿ, ತೋಡ, ಬಳೆ, ತೋಳಬಂದಿ, ವಂಕಿ, ನಾಗಮುರಿಗೆ, ಉಂಗುರ, ಸರಪಳಿ, ಸರಿಗೆ, ಅಸಲಿ ಇತ್ಯಾದಿ. 6. **ಕಟಿಭೂಷಣಗಳು**-ಡಾಬು, ಒಡ್ಯಾಣ, ಮೇಖಲೆ ಇತ್ಯಾದಿ. 7. **ಪಾದಭೂಷಣಗಳು**-ಗೆಜ್ಜೆ, ಪೈಜಣ, ರುಳಿ, ಕಡಗ, ಸರಪಳಿ, ಕಾಲುಂಗುರ, ಇತ್ಯಾದಿ. ಈ ಆಭರಣಗಳಲ್ಲಿ ಪ್ರದರ್ಶಿತವಾಗಿರುವ ಸೂಕ್ಷ್ಮ ಕುಸುರಿ ಕೆಲಸ, ಕಲಾಪ್ರಿಯತೆ, ವರ್ಣಜೋಡಣೆ, ಮೆರುಗು ಬೆರಗುಗೊಳಿಸುವಂತಿವೆ. ಅತ್ಯಂತ ಹಳೆಯ ಒಂದು ಕುಶಲ ಕೈಗಾರಿಕೆಯನ್ನು ಕಾಬುಲ್ ಕಣಿವೆಯಲ್ಲಿ ಜಲಾಲಾಬಾದ್‌ನಲ್ಲಿರುವ ಬುದ್ಧ ದೇವಸ್ಥಾನದಲ್ಲಿ ಕಾಣಬಹುದು. ಕೆಂಪುಹರಳನ್ನು ಕೂರಿಸಿದ ಒಂದು ಚಿನ್ನದ ಸ್ಮೃತಿಭರಣಿ ಅಲ್ಲಿ ಸಿಕ್ಕಿತು. ಸುಟ್ಟ ಮುತ್ತುಗಳು, ಹರಳುಗಳು, ವಿವಿಧ ಮಣಿಗಳು, ಚಿಕ್ಕಪುಟ್ಟ ಆಭರಣಗಳು ಅದರಲ್ಲಿದ್ದುವು. ಅದರಲ್ಲಿ ದೊರೆತ ನಾಣ್ಯಗಳಿಂದ ಆ ವಸ್ತುಗಳು ಪ್ರ.ಶ.ಪೂ. ಒಂದನೆಯ ಶತಮಾನಕ್ಕೆ ಸೇರಿದ್ದುವೆಂದು ತಿಳಿಯಿತು.

**ಉಪಯೋಗ:** ನಾನಾ ತರದ ಬಣ್ಣಬಣ್ಣಗಳ ಹರಳುಗಳನ್ನು ಆಭರಣಗಳಲ್ಲಿ ತಾಂತ್ರಿಕ ಉದ್ದೇಶಗಳಿಗಾಗಿ ಬಳಸುವುದು ರೂಢಿಯಲ್ಲಿದ್ದರೂ ಭಾರತೀಯರು ಆಭರಣಗಳ ರೂಪದಲ್ಲಿ ಅಮೂಲ್ಯ ಲೋಹಗಳಾದ ಚಿನ್ನ-ಬೆಳ್ಳಿಗಳನ್ನು ಆಸ್ತಿಯಾಗಿ ಕೂಡಿಡಲು ಪಡೆಯುವುದೇ ಹೆಚ್ಚು. ಭಾರತೀಯ ಮಹಿಳೆ ಒಡವೆಗಳಿಂದ ಅಲಂಕರಿಸಿಕೊಂಡು ತನ್ನ ಪತಿಯನ್ನು ಸೌಂದರ್ಯದಿಂದ ಸಂತುಷ್ಟಗೊಳಿಸುವುದು ಧರ್ಮವೆಂದು ಭಾವಿಸುತ್ತಾಳೆ. ಹಿಂದೂ ವಿವಾಹಗಳಲ್ಲಿ ಚಿನ್ನದ ಪಾತ್ರ ಹಿರಿದು. ಚಿನ್ನದಲ್ಲಿ ತಯಾರಿಸಿದ ಮಾಂಗಲ್ಯದ ತಾಳಿ ವಧೂವರರ ಜೀವನಬಂಧನದ ಪವಿತ್ರ ಸಂಕೇತ. ವಧುವಿಗೆ ಆಕೆಯ ತಂದೆಯಿಂದ ಬಳುವಳಿಯಾಗಿ ದೊರೆತ ಚಿನ್ನ, ವಿವಾಹ ಕಾಲದಲ್ಲಿ ಮತ್ತು ಅನಂತರ ಪತಿಯಿಂದ ಮತ್ತು ಬಂಧುಬಳಗದವರಿಂದ ಕಾಲಕಾಲಕ್ಕೆ ದೊರೆತ ಒಡವೆಗಳು ಸ್ತ್ರೀಧನ. ಆ ಒಡವೆಗಳಿಗೆ ಆಕೆ ಒಡತಿ. ಮಹಿಳೆ ಗಂಡನ ಮನೆಯಿಂದ ಹಿಂತಿರುಗುವ ಪ್ರಸಂಗ ಬಂದರೆ ಆ ಒಡವೆಗಳೇ ಆಕೆಗೆ ಜೀವನಾಧಾರ. ಮಡದಿ ಮಕ್ಕಳಿಗೆ ಆಭರಣಗಳನ್ನು ಮಾಡಿಸಿಕೊಡುವಾಗ ಪುರುಷನ ಉದ್ದೇಶ ಬಹುಶಃ ಪ್ರಸಂಗ ಒದಗಿದಾಗ ಅವು ಉಪಯೋಗಕ್ಕೆ ಬರುವುವೆಂದಿರಬಹುದು. ಹಿಂದಿನ ಕಾಲದ ಹೆಚ್ಚಿನ ಒಡವೆಗಳು ವಿಶೇಷ ನಯನಾಜೂಕನ್ನು ಪಡೆಯದೆ ಸರಳ ಮತ್ತು ತೂಕವುಳ್ಳದ್ದಾಗಿದ್ದುವು. ಹಣ ಬೇಕಿದ್ದಾಗ ತತ್‌ಕ್ಷಣ ಅವನ್ನು ಮುರಿದು ಹಣಪಡೆದು ಹಣ ಮತ್ತೆ ದೊರಕಿದಾಗ ಕೂಡಲೇ ಆ ಒಡವೆಗಳನ್ನು ಮಾಡಿಸುವುದು ಸುಲಭವಾಗುತ್ತಿತ್ತು. ಸರಳ ಒಡವೆಗಳಿಗೆ ಕೂಲಿ, ಸಮಯ ಕಡಿಮೆ ಬೇಕಾಗುತ್ತಿದ್ದುದರಿಂದ ಹೆಚ್ಚು ಜನ ಗಟ್ಟಿ ಬಂಗಾರದ ಸರಳ ಒಡವೆಗಳನ್ನು ಮಾಡಿಸುತ್ತಿದ್ದರು. ಇಂಥ ಒಡವೆಗಳಲ್ಲಿ ಗೋಟು, ಪಾಟಲಿ, ಪಟ್ಟಿ, ಅಸಲಿ ಸರಿಗೆ ಪುತ್ಥಳಿ ಸರ ಇವು ಮುಖ್ಯ. ನೋಟುಗಳಿಲ್ಲದ ಕಾಲದಲ್ಲಿ ಫಸಲು ಮಾರಿ ಬಂದ ಬೆಳ್ಳಿಯ ರೂಪಾಯಿಗಳ ಒಡವೆಗಳನ್ನು ಮಾಡಿಸಿ ಕ್ಷಾಮವಿದ್ದಾಗ ಅವುಗಳನ್ನು ಮುರಿಸಿಬಿಡುವುದು ಹಳ್ಳಿಯ ರೈತನಿಗೆ, ಕೂಲಿ ಮಾಡುವ ಮಹಿಳೆಯರಿಗೆ ಸಾಧಾರಣ ಸಂಗತಿ. ಆ ಒಡವೆಗಳೇ ಅವರಿಗೆ ಭದ್ರ ಸುರಕ್ಷಿತ ಬ್ಯಾಂಕುಗಳು. ಜಮೀನು ಕೊಳ್ಳುವಾಗ, ಎತ್ತುಗಳನ್ನು ಕೊಳ್ಳುವಾಗ, ಹಣ ಒದಗಿಸಲು, ಅಡವಿಡಲು, ಮದುವೆ ಮತ್ತು ಕರ್ಮಾಂತರಗಳಿಗೆ ಹಣ ಬೇಕಿದ್ದಾಗ ಉಪಯೋಗಿಸಿಕೊಳ್ಳಲು ಒಡವೆಗಳು ಆಪದ್ಧನವಾಗಿ ಉಪಯುಕ್ತ. ಆದ್ದರಿಂದ ಭಾರತೀಯರ ಜೀವನಕ್ಕೆ ಆಭರಣಗಳು ಅತ್ಯಾವಶ್ಯಕ. ಜೀವನದ ಒಂದು ಭಾಗವೇ ಬಂಗಾರ, ಬೆಳ್ಳಿ ಎಂದು ಧಾರಾಳವಾಗಿ ಹೇಳಬಹುದು.

**ವೈಶಿಷ್ಟ್ಯ :** ಆಭರಣಗಳ ತಯಾರಿಕೆಯಲ್ಲಿ ಭಾರತೀಯ ವೈಶಿಷ್ಟ್ಯವನ್ನು ಪ್ರಪಂಚದ ವೈಶಿಷ್ಟ್ಯದ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಭಾರತದಲ್ಲಿಯೂ ಪ್ರಾದೇಶಿಕವಾಗಿ ವಿವಿಧ ಕೌಶಲಗಳು ವಿಕಾಸಗೊಂಡಿವೆ. ಹಿಂದೂ ಪುರಾಣಗಳಲ್ಲಿ ಬರುವ ಬಂಗಾರದ ಒಡವೆಗಳನ್ನು ತಯಾರಿಸುವ ಕಲೆ ದಕ್ಷಿಣ ಭಾರತಕ್ಕಿದ್ದರೆ, ತೆಳುವಾದ ಬೆಳ್ಳಿಯ ಕೆತ್ತನೆಯ ಕೆಲಸ (ಫಿಲಿಗ್ರಿ ವರ್ಕ್) ಮಾಡುವುದರಲ್ಲಿ ಕಾಶ್ಮೀರ, ಒರಿಸ್ಸದ ಕಟಕ್, ಬಂಗಾಲ, ಮತ್ತು ಆಂಧ್ರದ ಅಕ್ಕಸಾಲಿಗರು ಪ್ರಾವೀಣ್ಯ ಪಡೆದಿದ್ದಾರೆ. ಈ ಕೆತ್ತನೆಯ ಕೌಶಲ ಕಂಡುಬರುವ ನಮೂನೆಗಳು : ನವಿಲು, ನಾನಾ ಪ್ರಕಾರದ ಹೂಗಳು, ವಿಮಾನ, ಮೀನು, ಪಕ್ಷಿ, ಎಲೆ, ಅತ್ತರದಾನಿ, ವಿವಿಧಾಕಾರದ ತಟ್ಟೆಗಳು, ಪನ್ನೀರದಾನಿ, ಹೂಜಿ, ದುಂಡು, ಅಂಡಾಕಾರದ ಬಾದಾಮಿ ಆಕಾರದ ಮಾವಿನಕಾಯಿ ನಮೂನೆಯ ಹಲವು ಬಗೆಯ ಕುಂಕುಮ ಅಂಗಚೂರ್ಣ ಡಬ್ಬಿಗಳು; ನಾನಾ ಪ್ರಕಾರದ ಹೂದಾನಿಗಳು, ತಾರೀಕು ಪಟ್ಟಿ ಪೀಠ, ದೀಪದ ಪೀಠ, ಪರಿಚಯ ಚೀಟಿ (ವಿಸಿಟಿಂಗ್ ಕಾರ್ಡ್), ಕಡ್ಡಿ ಪೊಟ್ಟಣ, ಸಿಗರೇಟು, ನಸ್ಯ ಮತ್ತು ಇಸ್ಪೀಟುಗಳ ಡಬ್ಬಿಗಳು, ಬೂದಿ ಕರಂಡಗಳು, ಶೇರವಾನಿ, ಶರ್ಟು ಕೋಟುಗಳ ಗುಂಡಿಗಳು, ವಿವಿಧ ಚಿತ್ರವಿಚಿತ್ರ ಬ್ರೋಚುಗಳು, ಎಲೆ ಅಡಿಕೆ ಡಬ್ಬಗಳು (ಪಾನ್‌ದಾನಿ) ಬಳೆಗಳು, ಲೋಲಕ್ಕುಗಳು, ಜುಮುಕಿ, ಪೆಂಡೆಂಟು ಪದಕಗಳು, ಹೇರ್‌ಪಿನ್ ಮೊದಲಾದ ನಾನಾ ಪ್ರಕಾರದ ಮುಡಿ ಭೂಷಣದ ವಸ್ತುಗಳು ಇತ್ಯಾದಿ. ಹೀಗೆ ಕಾಲಕ್ಕನುಸಾರವಾಗಿ ಆವಶ್ಯಕತೆಗಳನ್ನು ಪೂರೈಸುವ ಕಲೆ ಪರಂಪರೆಯನ್ನು ಉಳಿಸಿಕೊಂಡು ಅಭಿವೃದ್ಧಿ ಮಾರ್ಗ ದಲ್ಲಿಯೇ ನಡೆದಿದೆ. ಬಂಗಾರದ ಆಭರಣಗಳನ್ನು ಗಾಜುಲೇಪನದಿಂದ (ಎನಾಮಲ್) ಅಧಿಕ ಸೌಂದರ್ಯಗೊಳಿಸುವ ಕಲೆ ಭಾರತದಲ್ಲಿ ಪರಿಪೂರ್ಣತೆ ಪಡೆದಿದೆ. ಈ ಕಲೆಯಲ್ಲಿ ರಾಜಸ್ಥಾನದ ಜೈಪೂರಿನ ಅಕ್ಕಸಾಲಿಗರು ಅತ್ಯಂತ ನಿಪುಣರಾಗಿದ್ದಾರೆ. ಆಭರಣದ ಆಕಾರವನ್ನು ಚಿನ್ನದಲ್ಲಿ ಕೆತ್ತಿ ಪಾರದರ್ಶಕ ಗಾಜು ಲೇಪನದಿಂದ ಹೊಳೆಯುವಂತೆ ತುಂಬುತ್ತಾರೆ. ಅಮೂಲ್ಯವಾದ ಹರಳುಗಳನ್ನು ಚಿನ್ನದಲ್ಲಿ ಕೂರಿಸುವ ಕಲೆಯಲ್ಲಿ ಉತ್ತರ ಪ್ರದೇಶದ ಆಗ್ರ ಪಟ್ಟಣವೂ ಅಗ್ರಸ್ಥಾನ ಪಡೆದಿದೆ. 1952ರಲ್ಲಿ ಕೊಲಂಬೋಪ್ಲಾನ್ ಪ್ರದರ್ಶನವಾದಾಗ ಅಲ್ಲಿ ಆಗ್ರ ನಗರದ ಅಕ್ಕಸಾಲಿಗರು ಭಾರತದ ಹೆಮ್ಮೆ ಎಂಬ ಹೆಸರಿನಿಂದ

ಆಲಂಕಾರಿಕ ಜಾಡಿಯೊಂದನ್ನು ತಯಾರಿಸಿ ಪ್ರದರ್ಶಿಸಿದ್ದರು. ಅದು ಸಾವಿರಾರು ಜನರ ಮೆಚ್ಚುಗೆ ಗಳಿಸಿ ಭಾರತದ ಅಕ್ಕಸಾಲಿಗರ ಕುಶಲ ಕೈಗಾರಿಕೆಯ ಶ್ರೇಷ್ಠತೆಯನ್ನು ತೋರಿಸಿಕೊಟ್ಟಿತು. ಹಿತ್ತಾಳೆ ಮತ್ತು ತಾಮ್ರ ಮಿಶ್ರಿತ ಕಂಠಹಾರ ಮಣಿಮುರದ ಕಲಾವಿದರ ಮಾದರಿ. ಈ ಮಿಶ್ರಣದ ಒಡವೆಗಳು ಕಪ್ಪು ಅಥವಾ ಹಸಿರು ಆಗದಿರುವುದು ಅವುಗಳ ವೈಶಿಷ್ಟ್ಯ. ಭಾರತದ ಯಾವುದೇ ಸಮಾಜ ಅಥವಾ ನಾಗರಿಕತೆಯನ್ನು ಪ್ರತಿಬಿಂಬಿಸುವ ಹಳೆಯ ಮಾದರಿಯ ಹೆಚ್ಚಿನ ಆಭರಣಗಳೆಲ್ಲವೂ ಯಾವ ಲೋಹದಲ್ಲಿ ತಯಾರಿಸಿದ್ದರೂ ಅವು ಬಹಳ ತೂಕ ಉಳ್ಳದ್ದಾಗಿವೆ. ರಾಜಸ್ಥಾನ, ಪಂಜಾಬ್, ಅಸ್ಸಾಂಗಳಲ್ಲಿ ಬಳಸುವ ಕೆಲವು ಆಭರಣಗಳನ್ನು ನೋಡಿದರೆ ಆ ಒಡವೆಗಳ ಭಾರದಿಂದಲಾದರೂ ಸ್ತ್ರೀ ತಗ್ಗಿ ಬಗ್ಗಿ ನಡೆಯಲಿ ಎಂಬ ಒಂದು ಭಾವ ಆ ಸಮಾಜಕ್ಕಿದ್ದಿರಬಹುದೆ ಎನ್ನಿಸುವುದು. ಭಾರವಾದ ಒಡವೆಗಳನ್ನು ತೊಡುವುದರಲ್ಲಿ ಕರ್ನಾಟಕದ ಮಹಿಳೆಯೂ ಹಿಂದಿರಲಿಲ್ಲ ಎಂಬುದಕ್ಕೆ

ಆರು ಸೇರಿನ ಸರಿಗಿ ಅರಗಿಲ್ಲದ ಕಟ್ಟಾಣಿ
ನತ್ತು ಬೇಡಿದರ, ಬೇಡಿದರ ನಗುವಂಥ
ರಾಯನ ನಿಂತು ಬೇಡಿನ ಶಿವನಲ್ಲಿ

ಎಂದು ಗರತಿ ಪದ ಹೇಳುತ್ತಾಳೆ. ಅರಗಿಲ್ಲದ ಅಚ್ಚ ಬಂಗಾರವನ್ನು ಭಾರತೀಯರು ಹೆಚ್ಚಾಗಿ ಬಯಸುತ್ತಾರೆ ಎಂಬುದನ್ನು ಮೇಲಿನ ಪದದಿಂದಲೂ ತಿಳಿಯಬಹುದು. ಚಿನ್ನದ ಬೆಲೆ ಅತಿಯಾಗಿ ಬೆಳೆದು ಭಾರವಾದ ಒಡವೆಗಳನ್ನು ಮಾಡಿಸುವುದು ದುರ್ಲಭವಾಗಿದ್ದರೂ ಆ ಹಳೆಯ ನಮೂನೆಗಳನ್ನು ಆಕರ್ಷಕ ರೀತಿಯಲ್ಲಿ ಮತ್ತು ಕಡಿಮೆ ಚಿನ್ನದಲ್ಲಿ ಮಾಡುವ ಕಲೆಯಲ್ಲಿಯೂ ಭಾರತದ ಅಕ್ಕಸಾಲಿಗರು ಅತ್ಯಂತ ನಿಪುಣರಿರುವರು.

ಪೂರ್ವ ದೇಶಗಳಲ್ಲಿ ನಾಜೂಕಿನ ಅಭರಣಗಳನ್ನು ಕಲಾತ್ಮಕವಾಗಿ ಚೀನದ ಕುಶಲ ಕರ್ಮಿಗಳು ತಯಾರಿಸುತ್ತಾರೆ. ಬಂಗಾರದ ಭಾರವಾದ ಒಡವೆಗಳು ಚೀನದಲ್ಲಿ ಸಹ ಬಳಕೆಯಲ್ಲಿದ್ದರೂ ಅಲ್ಲಿ ಹೆಚ್ಚಾಗಿ ಬೆಳ್ಳಿಯ ಆಭರಣವೇ ಕಂಡುಬರುತ್ತದೆ. ಆಭರಣಗಳಿಗೆ ಬಳಸುವ ಹರಳುಗಳನ್ನು ಕೆತ್ತುವ ಬದಲಾಗಿ ಮೆರುಗು ನೀಡುವುದು (ಪಾಲಿಷ್) ಚೀನೀ ಕುಶಲ ಕೈಗಾರಿಕೆಯ ವೈಶಿಷ್ಟ್ಯ. ಅವರ ಆಭರಣಗಳು ಪ್ರಾಣಿಗಳ ಆಕಾರ, ಸಂಸ್ಕೃತಿ ಮತ್ತು ಕಲೆಯನ್ನು ಪ್ರತಿಬಿಂಬಿಸುತ್ತವೆ. ಅಮೂಲ್ಯ ಹರಳುಗಳನ್ನು ಕೂಡಿಸುವ ಭಾರತದ ವಿಧಾನವನ್ನು ಚೀನ ಅನುಸರಿಸುತ್ತದೆ. ನೇಪಾಳ, ಮಾಯನ್ಮಾರ್, ಸಯಾಂ ದೇಶಗಳ ಆಭರಣಗಳಲ್ಲಿ ಅನೇಕವು ಚೀನದ ಆಭರಣಗಳನ್ನೇ ಹೋಲುತ್ತವೆ. ವಜ್ರ ಮತ್ತು ಚಿನ್ನದ ಮಣಿಗಳಿಂದ ಕೂಡಿದ ಅನೇಕ ಎಳೆಗಳುಳ್ಳ ಕಂಠಾಭರಣ ಮಾಯನ್ಮಾರಿನ ವೈಶಿಷ್ಟ್ಯ. ಪ್ರಕೃತಿ ಸಾಧನಗಳು ಅಲ್ಪವಿರುವುದರಿಂದ ಆಭರಣಗಳ ಪ್ರಭಾವ ಅಲ್ಲಿ ಹರಡಿಲ್ಲ.

ಯುರೋಪಿನಲ್ಲಿ ಆಭರಣಗಳು : ಚಿನ್ನದ ವಿವಿಧ ರೀತಿಯ ಬ್ರೋಚುಗಳು, ಕೆಂಪು ಹರಳುಗಳನ್ನು ಲೋಹದಲ್ಲಿ ಕೂರಿಸುವಿಕೆ, ಗಾಜುಲೇಪನ ಮಾದರಿಯ ಕೌಶಲ ಯುರೋಪಿಗೆ ಇಟಲಿಯ ಕೊಡುಗೆ. 3 ರಿಂದ 6 ಶತಮಾನದವರೆಗೆ ಈ ಕಲೆ ಯೂರೋಪಿನಲ್ಲಿ ಬಳಕೆಯಲ್ಲಿತ್ತು.

ಆ ಕಾಲದಲ್ಲಿ ಸತ್ತವರ ಜೊತೆಗೆ ತಮ್ಮ ಅಮೂಲ್ಯವಾದ ವಸ್ತುಗಳನ್ನು ಹೂತಿಡುವ ಪದ್ಧತಿ ಇದ್ದುದರಿಂದ ಯುರೋಪಿನ ಕೆಲವು ವಸ್ತುಸಂಗ್ರಹಾಲಯಗಳಲ್ಲಿ ಈಗಲೂ ಕೆಲವು ಮಾದರಿಗಳನ್ನು ಕಾಣಲು ಸಾಧ್ಯ. ರೋಮ್ ಸಾರ್ವಭೌಮತ್ವದಲ್ಲಿ ಈ ಕಲೆ ಊರ್ಜಿತಾವಸ್ಥೆಗೆ ಬಂದು ಚಕ್ರಾಧಿಪತ್ಯ ಅಳಿದ ಮೇಲೂ ಕಲೆ ಪರಂಪರಾಗತವಾಗಿ ಉಳಿದು ಬಂದು ಸ್ಕ್ಯಾಂಡಿನೇವಿಯ ದೇಶಗಳಲ್ಲಿ ಮತ್ತೂ ಪ್ರಕಾಶಮಾನ ಹೊಂದಿತು. ಪ್ಯಾರಿಸ್ ಮತ್ತು ಮಡ್ರಿಡ್ ಪಟ್ಟಣಗಳ ವಸ್ತು ಸಂಗ್ರಹಾಲಯಗಳಲ್ಲಿ ಆಗಿನ ಕಾಲದ ರಾಜಮಹಾರಾಜರು ಶಿರೋಭೂಷಣವಾಗಿ ಧರಿಸುತ್ತಿದ್ದ ಆಭರಣಗಳ ನಮೂನೆಗಳು ಹಲವಾರು ಇವೆ. ವೃತ್ತಾಕಾರದ ಪಕ್ಷಿಗಳನ್ನು ಹೋಲುವ ಜರ್ಮನ್ ಶೈಲಿಯ ಬ್ರೋಚುಗಳು ರೋಮ್ ಆಧಿಪತ್ಯದ ಪ್ರಭಾವದಿಂದ ಚಚ್ಚೌಕ, ಅರ್ಧಚಂದ್ರಾಕಾರ, ಮೀನು, ಕುದುರೆ ಮುಂತಾದ ಮಾದರಿಯನ್ನೊಳಗೊಂಡು ಬೆಳಕಿಗೆ ಬಂದವು. ಪ್ರ.ಶ.5ನೆಯ ಶತಮಾನದಲ್ಲಿ ಚಿಕ್ಕೆ ಎಬ್ಬಿಸಿ ಕೆತ್ತನೆಯ ಒಂದು ನಮೂನೆಯನ್ನು ಬೆಲ್ಜಿಯಂ ದೇಶದ ಅಕ್ಕಸಾಲಿಗರು ಬೆಳಕಿಗೆ ತಂದಿದ್ದರು. ಈ ವಿಧಾನ ಸ್ಕ್ಯಾಂಡಿನೇವಿಯ ದೇಶಗಳ ವೈಶಿಷ್ಟ್ಯವಾಗಿ ಉಳಿಯಿತು. ಇಂಗ್ಲೆಂಡಿನ ಮಾದರಿಗಳು ಹಲವಾರು ದೇಶಗಳ ನಮೂನೆಗಳ ಪರಿಷ್ಕೃತ ರೂಪಗಳಾಗಿದ್ದವು. ಕೆಂಪು ಹರಳಿನ ತುಣುಕಿನ ಮತ್ತು ಬಂಗಾರದ ಫಿಲಿಗ್ರಿ ಕೆಲಸ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿದ್ದರೆ ಥೇಮ್ಸ್ ಉತ್ತರ ಭಾಗದಲ್ಲಿ ಸ್ಕ್ಯಾಂಡಿನೇವಿಯ ನಮೂನೆಗಳು ಬಳಕೆಯಲ್ಲಿದ್ದವು. ಕ್ರೈಸ್ತ ಧರ್ಮ ಹರಡಿದಾಗ ಶಿಲಬೆಯಾಕಾರದ ಪದಕಗಳು ಜಾರಿಗೆ ಬಂದವು. ಮಧ್ಯಕಾಲದ ಉದಯದೊಂದಿಗೆ ಅನಾಗರಿಕ ಪದ್ಧತಿಯ ನಮೂನೆಗಳು ಕೊನೆಗೊಂಡು ಆಭರಣಗಳ ತಯಾರಿಕೆ ಒಂದು ಉದ್ದಿಮೆಯಾಗಿ ಪರಿಣಮಿಸಿತು. ಹೂಗೊಂಚಲುಗಳು, ಹೃದಯಾಕಾರದ ಬ್ರೋಚುಗಳು, ಉಂಗುರ, ಒಡ್ಯಾಣ, ಪಿನ್ನುಗಳು, ಕಂಠಾಭರಣಗಳು ಗಾಜುಲೇಪನದಿಂದ ಕೂಡಿದ ಪದಕಗಳು ಹೆಚ್ಚಾಗಿ ಬಳಕೆಗೆ ಬಂದವು. ಅವು 15ನೆಯ ಶತಮಾನದಲ್ಲಿ ಉಡುಪಿನ ಒಂದು ಭಾಗವಾಗಿ ಪರಿಣಮಿಸಿ ಅದಕ್ಕೆ ಜೋಡಿಸಿ ಹೊಲಿಯುವ ಕ್ರಮವೂ ಆರಂಭವಾಯಿತು. 1857ರ ಸುಮಾರಿಗೆ ಅಭಿವೃದ್ಧಿ ಹೊಂದಿದ ಯುರೋಪಿನ ರಾಷ್ಟ್ರಗಳಲ್ಲಿ ಹಣವಂತ ಕುಟುಂಬಗಳು ಹೆಚ್ಚಿದುವು. ಸಂಪತ್ತು ಅಭಿವೃದ್ಧಿಯಾದಾಗ ಅಕ್ಕಸಾಲಿಗರು ಬೆಲೆಬಾಳುವ ವಜ್ರ ಮತ್ತು ಹರಳುಗಳನ್ನು ಕೂರಿಸಿದ, ಮುತ್ತುಗಳನ್ನು ಬಳಸಿದ ಹೊಳಪುಳ್ಳ ವಿವಿಧಾಕೃತಿಯ ಶಿರೋಭೂಷಣಗಳನ್ನು ರಚಿಸಿದರು. ಬ್ರೋಚುಗಳು, ಬ್ರೇಸ್‌ಲೆಟ್‌ಗಳು, ಉಂಗುರ, ಹೇರ್ ಪಿನ್ನುಗಳು ಮುಂತಾದ ಆಭರಣಗಳು, ಪೌಡರ್ ಡಬ್ಬ, ಕೊಡೆಹಿಡಿಕೆ, ಕೈಚೀಲದ ಹಿಡಿಕೆ, ಕಾರ್ಡ್‌ಕೇಸು ಮೊದಲಾದ ಆಕರ್ಷಕ ಅಲಂಕಾರಿಕ ವಸ್ತುಗಳನ್ನು ಚಿನ್ನದಲ್ಲಿ ತಯಾರಿಸುವ ಕಲೆ ಬೆಳಕಿಗೆ ಬಂದಿತು. ಕೆಲವು ಅಕ್ಕಸಾಲಿಗರು ಪ್ರಕೃತಿ ವೈಶಿಷ್ಟ್ಯವನ್ನು ಬಿಂಬಿಸಿ ನವ್ಯ ಕಲೆಯನ್ನು ಬೆಳಕಿಗೆ ತಂದರೆ ಕೆಲವು ಕಲಾವಿದರು ಹಳೆಯ ಮಾದರಿಯ ಪರಂಪರೆಯನ್ನು ಉಳಿಸಿಕೊಳ್ಳುವುದರಲ್ಲಿಯೇ ನಿರತರಾದರು.

ಯಾವುದೇ ವಿದೇಶ ವ್ಯವಹಾರಗಳಿಗೆ ವಾಣಿಜ್ಯದಲ್ಲಿ ದಾಸ್ತಾನಿಗೆ ಬದಲು ದಾಸ್ತಾನು ಕೊಡುವುದು ಸಾಧ್ಯವಿರದ ಕಾರಣ ಚಿನ್ನವನ್ನಾಗಿ ಪರಿವರ್ತಿಸಲು ಆ ಬೆಲೆಯ ಕರೆನ್ಸಿ ಅಥವಾ ಚಿನ್ನವನ್ನು ವಿದೇಶ ವಿನಿಮಯಕ್ಕೆ ಬಳಸಲಾಗುತ್ತದೆ. ಭಾರಿ ಭಾರಿ ಪಂಚವಾರ್ಷಿಕ ಯೋಜನೆಗಳು ಮತ್ತು ದೇಶದ ರಕ್ಷಣೆಗಾಗಿ ವಿದೇಶ ವಿನಿಮಯದ ಕೊರತೆ ಬಿದ್ದುದರಿಂದ ದೇಶದಲ್ಲಿ ಚಿನ್ನದ ಬಳಕೆಯನ್ನು ಕಡಿಮೆಮಾಡಲು, ಕಳ್ಳ ವ್ಯಾಪಾರವನ್ನು ತಡೆಗಟ್ಟಲು, ಜನತೆ ತಮ್ಮ ಉಳಿತಾಯವನ್ನು ಚಿನ್ನದ ಆಭರಣಗಳಲ್ಲಿ ತೊಡಗಿಸದೆ ಯೋಜನೆಗಳಿಗೆ ಸಹಾಯವಾಗುವಂತೆ ಹಣವನ್ನು ತೊಡಗಿಸಿ ವ್ಯಕ್ತಿಗಳ ಲಾಭದೊಂದಿಗೆ ಸಾಮಾಜಿಕ ಲಾಭವಾಗುವಂತೆ ಮಾಡಲು ಭಾರತ ಸರ್ಕಾರ 10ನೆಯ ಜನವರಿ 1963ರಲ್ಲಿ ಚಿನ್ನ ನಿಯಂತ್ರಣ ಆಜ್ಞೆ ಹೊರಡಿಸಿತು. ಶುದ್ಧ ಚಿನ್ನಕ್ಕೆ ಬದಲಾಗಿ ಹದಿನಾಲ್ಕು ಕ್ಯಾರೆಟ್‌ಗಳ ಚಿನ್ನವನ್ನು ತಯಾರಿಸಲು ಅನುಮತಿ ನೀಡಿತು. ಶುದ್ಧ ಚಿನ್ನವನ್ನು ಆಸ್ತಿಯಾಗಿ ಪಡೆಯುವ ಹಂಬಲವನ್ನು ರೂಢಿಸಿಕೊಂಡು ಬಂದ ಭಾರತೀಯರ ಮೇಲೆ ಹದಿನಾಲ್ಕು ಕ್ಯಾರೆಟ್ ಚಿನ್ನದ ಒಡವೆಗಳು ಬಣ್ಣದಿಂದಲೂ ಅಶುದ್ಧತೆಯಿಂದಲೂ ಯಾವ ಪ್ರಭಾವವನ್ನೂ ಬೀರಲಿಲ್ಲ. ಅನೇಕ ಕುಶಲಕಲೆಗಳು ಶುದ್ಧ ಚಿನ್ನವನ್ನು ಅವಲಂಬಿಸಿದ್ದುದರಿಂದ ಕುಶಲ ಕಲಾವಿದರು ಕಷ್ಟದಿಂದ ಪ್ರತಿರೂಪಗಳನ್ನು ಸೃಷ್ಟಿಸಿದರೂ ಗ್ರಾಹಕರ ಶುದ್ಧ ಚಿನ್ನದ ಹಂಬಲ ಕಡಿಮೆಯಾಗದೆ ಅದು ಕಳ್ಳ ವ್ಯಾಪಾರವನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ಮತ್ತು ಅದು ಅಕ್ಕಸಾಲಿಗರ ಆರ್ಥಿಕ ಸ್ಥಿತಿಗತಿಗಳ ಮೇಲೆ ಭಾರಿ ಪರಿಣಾಮವನ್ನುಂಟುಮಾಡಿತು. ಪ್ರಪಂಚದಲ್ಲಿಯೇ ಶ್ರೇಷ್ಠವೆನಿಸಿಕೊಂಡ ಭಾರತೀಯ ಆಭರಣಗಳ ಕುಶಲ ಕೈಗಾರಿಕೆಯ ಮಟ್ಟ ಇಳಿಯುವ ಅಳಿಯುವ ಸಂಭವವಿತ್ತು. ಪರಿಣಾಮವಾಗಿ 2ನೇ ಸೆಪ್ಟೆಂಬರ್‌ನ 1966ರಂದು ಈ ಚಿನ್ನ ನಿಯಂತ್ರಣ ಕಾನೂನನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕಾಯಿತು. ಭಾರತದ ಯಾವುದೇ ಪರಿಸ್ಥಿತಿ ಆಭರಣಗಳ ಮೇಲೆ ಪ್ರಭಾವವನ್ನು ಬೀರಲು ಸಮರ್ಥವಾಗಿಲ್ಲ. ಜೊತೆಗೆ ಸಾಂಪ್ರದಾಯಿಕತೆ, ಧಾರ್ಮಿಕ ನಂಬಿಕೆ, ಸಾಮಾಜಿಕ ಘನತೆ, ಸೌಂದರ್ಯಪ್ರಿಯತೆ, ಇವೆಲ್ಲವೂ ಅಭರಣಗಳ ಕುಶಲಕಲೆಯ ಉನ್ನತ ಮಟ್ಟವನ್ನು ಉಳಿಸಿಕೊಂಡು ಬರಲು ಸಹಾಯಕವಾಗಿವೆ (**ನೋಡಿ– ಅಕ್ಕಸಾಲಿಗರ ಉದ್ಯಮ**). (ಎಸ್.ಕೆ.ಪಿ.)

**ಜನಪದ ಆಭರಣಗಳು :** ಆಭರಣವನ್ನು ಧರಿಸುವುದರಿಂದ ನೈಸರ್ಗಿಕ ಸೌಂದರ್ಯ ಇನ್ನೂ ಶೋಭಿಸುತ್ತದೆ. ಕುರೂಪಿಗಳಾದವರ ದೋಷಗಳೆಲ್ಲ ಮುಚ್ಚಿಹೋಗಿ ಅವರು ಸುರೂಪಿಗಳಾಗಿ ತೋರುತ್ತಾರೆ. ಈ ಸೌಂದರ್ಯದೃಷ್ಟಿಯ ಜೊತೆಗೆ ವಿಶೇಷವಾದ ಆಭರಣಗಳನ್ನು ಧರಿಸುವುದು ಶ್ರೀಮಂತಿಕೆಯ ಕುರುಹೂ ಆಗಿದೆ. ವ್ಯಕ್ತಿತ್ವಕ್ಕೆ ಒಂದು ಬಗೆಯ ಪ್ರತಿಷ್ಠೆಯನ್ನೂ, ಗೌರವವನ್ನೂ ಅವು ತಂದುಕೊಡುತ್ತವೆ. ಕೆಲವರಿಗೆ ಅವು ಅಲಂಕಾರ ಸಾಧನವಾದರೆ ಮತ್ತೆ ಕೆಲವರಿಗೆ ಅಹಂಕಾರದ ಪ್ರದರ್ಶನವೂ ಆಗಬಹುದು. ಅವರವರ ಅಭಿರುಚಿಗಳಿಗೆ ತಕ್ಕಂತೆ ಆಭರಣಗಳು ಶರೀರವನ್ನು ಅಲಂಕರಿಸುತ್ತವೆ.

ಕೇವಲ ಸೌಂದರ್ಯದೃಷ್ಟಿಯಷ್ಟೇ ಆಭರಣಗಳಿಗೆ ಸೀಮಿತವಾಗಬೇಕಾದುದಿಲ್ಲ. ಧಾರ್ಮಿಕ ಶ್ರದ್ಧೆ, ನಂಬಿಕೆಗಳ ಹಿನ್ನೆಲೆಯಲ್ಲಿಯೂ ಧರಿಸಬಹುದು. ದುಷ್ಟಶಕ್ತಿಗಳ ಬಾಧೆಯಿಂದ ಪಾರಾಗಲು ಕೆಲವು ತೊಡಿಗೆಗಳು ನೆರವಾಗಬಹುದು. ಆಭರಣಗಳ ಗುಂಪಿನಲ್ಲಿ ಇವು ಗೌಣ. ತಾಯಿತಿ, ಯಂತ್ರ, ಕರಡಿಗೆ, ಚಿನ್ನದ ಹೊದಿಕೆಯ ರುದ್ರಾಕ್ಷಿ ಮುಂತಾದುವನ್ನು ಆಭರಣಗಳೆನ್ನಲಾಗುವುದಿಲ್ಲ. ಆದರೆ ವಿಶಿಷ್ಟವಾದ ಧಾರ್ಮಿಕ ಉದ್ದೇಶಗಳಿಗಾಗಿ ಧರಿಸುವ ಕೆಲವು ಕುಂಡಲಗಳು ಅಲಂಕಾರ ಸಾಧನವೂ ಆಗಬಹುದು. ಒಡವೆಗಳ ಪರಿಶೀಲನೆಯಿಂದ ಆಯಾ ವ್ಯಕ್ತಿಯ ಸಾಮಾಜಿಕ, ಧಾರ್ಮಿಕ ನೆಲೆ ಬೆಲೆಗಳನ್ನು ಅಳೆಯಲೂಬಹುದು. ಈ ಎಲ್ಲ ಅಭಿಪ್ರಾಯಗಳೂ ಜನಪದ ಅಲಂಕರಣಗಳ ಹಿಂದೆ ಇದ್ದುವೆನ್ನಬಹುದು.

ಪ್ರಾಚೀನ ದೇವಾಲಯಗಳ ಶಿಲಾಮೂರ್ತಿಗಳನ್ನೂ ಅಜಂತ, ಎಲ್ಲೋರ, ಲೇಪಾಕ್ಷಿ ಮುಂತಾದ ಕಡೆಯ ಭಿತ್ತಿಚಿತ್ರಗಳನ್ನೂ ಗಮನಿಸಿದರೆ ಭಾರತದಲ್ಲಿ ಒಡವೆಗಳಿಗೆ ಎಷ್ಟೊಂದು ಪ್ರಾಶಸ್ತ್ಯವಿತ್ತು, ಎಷ್ಟೊಂದು ವೈವಿಧ್ಯಮಯ ಆಭರಣಗಳು ನಮ್ಮಲ್ಲಿ ಇದ್ದುವು ಎನ್ನುವುದು ಸ್ಪಷ್ಟವಾಗುತ್ತದೆ. ಅನೇಕ ಪ್ರಾಚೀನ ಕವಿಗಳ ವರ್ಣನೆಯಲ್ಲಿ ಒಡವೆಗಳ ಪ್ರಸ್ತಾಪ ಬರುತ್ತದೆ. ಜನಪದ ಸಾಹಿತ್ಯದಲ್ಲಿಯೂ ಅಲ್ಲಲ್ಲಿ ಒಡವೆಗಳ ಮನೋಜ್ಞ ವರ್ಣನೆಗಳು ಬರುತ್ತವೆ:

ಪಿಲ್ಲಿಯ ಕಾಲಿನೊಳೆ ಚೆಲ್ಲಿದ ನೆರಿಯೋಳೆ
ಕಲ್ಲುಮೇಲೆ ಕಾಲ ತೊಳಿಯೋಳೆ– ಮಾಳವ್ವ
ನಿನ್ನ ಪಿಲ್ಲಿ ಸಾವಿರಕೆ ಬೆಲೆಯಾದೊ

ಮೂಗಿನಾಗೆ ಮೂಗುತಿ ನಕ್ಕರೆ ಕರಿಕಲ್ಲು
ಅಕ್ಕ ನೀನ್ಯಾರ ಮಗಳವ್ವ–ಹಲಸಂಗಿ
ಗಜ್ಜಿನ ಗುಡಿಯ ಜಕ್ಕವ್ವ

ಕಡಗ ಇಲ್ಲದ ಕೈಯ ಕರುಣ ಇಲ್ಲದ ಪುರುಷ
ಹಡೆದವ್ವನಿಲ್ಲದ ತೌರೀಗೆ– ಹೋದಾರ
ಅಡವ್ಯಾಗ ವಸ್ತಿ ಇಳಿದಂಗ

ಬಂಗಾರ ಬಳೆಯವರು ತಿಂಗಳ ಹಾದ್ಯವರು
ನನ ಕೊಟ್ಟ್ಯಾಕ ಮರೆತಾರ– ಮಾವೀನ
ಹಣ್ಣು ಉಣುವಾಗ ನೆನೆಸ್ಯಾರ

ಉಂಗುರ ಉಡದಾರ ಮುರಿದರ ಮಾಡಿಸಬಹುದು
ಮಡದಿ ಸತ್ತರ ತರಬಹುದು – ಹಡೆದಂಥ
ತಂದೆ ತಾಯೆಲ್ಲಿ ಸಿಕ್ಕಾರ

ಬಾವುಲಿ ಇಟಗೊಂಡು ಕಾವುಲಿ ತಿದ್ದುವ
ಗಾಳಿ ಬಂದತ್ತ ಬಳಕುವ – ನನ ತಮ್ಮ
ಬಾಳಿಯೆಲಿಗಿಂತ ಬಲು ಚೆಲುವ

ಜನಪದ ಸಾಹಿತ್ಯದಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವ ಆಭರಣಗಳನ್ನು ಗಮನಿಸಿದಾಗ ಜನತೆಯ ಸಂಸ್ಕೃತಿಯೊಡನೆ ಅವು ಅವಿಚ್ಛಿನ್ನವಾಗಿ ಉಳಿದು ಬಂದ ಪರಿ ಆಶ್ಚರ್ಯವನ್ನುಂಟುಮಾಡುತ್ತದೆ. ಬದುಕಿಗೂ ಆಭರಣಗಳಿಗೂ ನಿಕಟವಾದ ಸಂಬಂಧವಿರುವುದನ್ನು ನಾವಿಲ್ಲಿ ಕಾಣುತ್ತೇವೆ. ಒಡವೆ ಎನ್ನುವುದು ಜನಸಾಮಾನ್ಯರ ದೃಷ್ಟಿಯಲ್ಲಿ ಕೇವಲ ಒಂದು ಅಲಂಕಾರಸಾಧನ ಮಾತ್ರವಲ್ಲ, ಜೀವನಮೌಲ್ಯಗಳಿಗೆ ಸಂಕೇತವಾಗಿ ನಿಲ್ಲುವ ಪವಿತ್ರ ವಸ್ತು. ಇಂದಿಗೂ ಗ್ರಾಮಾಂತರ ಪ್ರದೇಶದ ವಿವಾಹಗಳಲ್ಲಿ ಬಂಗಾರದ ಪೆಟ್ಟಿಗೆಯನ್ನು ಗಂಡಿನ ಕಡೆಯವರು ಹೊತ್ತು ತರುತ್ತಾರೆ. ವಧುವಿಗೆ ಇಂತಿಷ್ಟೇ ಒಡವೆಗಳನ್ನು ಕೊಡಲೇಬೇಕೆಂಬ ನಿರ್ಬಂಧವೂ ಇದೆ. ಅಂಥ ಒಡವೆಗಳನ್ನು ತರದಿದ್ದರೆ ಅಮಂಗಳಕರವೆಂದೂ ಭಾವಿಸಲಾಗಿದೆ. ಒಡವೆಗಳನ್ನು ಮಾಡಿಸುವ ಶಕ್ತಿ ಇಲ್ಲದವರು ಇತರರ ಒಡವೆಗಳನ್ನಾದರೂ ಎರವಲಾಗಿ ಪಡೆದು ಆ ದಿನ ಧರಿಸಲೇಬೇಕು. ಊರಿನ ಒಡವೆಯನ್ನೆಲ್ಲಾ ತಂದು ಹೆಣ್ಣನ್ನು ಅಲಂಕರಿಸುವ ಸಂಪ್ರದಾಯ ಮದುವೆಗಳಲ್ಲಿ ಇಂದಿಗೂ ಕಂಡುಬರುತ್ತದೆ.

ಹಬ್ಬ ಹರಿದಿನಗಳಲ್ಲಿ, ಮಂಗಳ ಕಾರ್ಯಗಳಲ್ಲಿ, ಜಾತ್ರೆ–ಉತ್ಸವಗಳಲ್ಲಿ ಮಾತ್ರ ಆಭರಣಗಳನ್ನು ಧರಿಸಿ ಉಳಿದ ಸಂದರ್ಭದಲ್ಲಿ ತೆಗೆದು ಪೆಟ್ಟಿಗೆಯಲ್ಲಿ ಭದ್ರಪಡಿಸುವ ಪದ್ಧತಿ ಬಹಳ ದಿನಗಳಿಂದಲೂ ಬಂದಿದೆ. ತೆರವಾದ ಕಿವಿಗಳಿಗೆ ಓಲೆಗಳ ಬದಲಾಗಿ ಬಿಚ್ಚೋಲೆಯನ್ನು ಹೆಂಗಸರು ಇಂದಿಗೂ ಧರಿಸುತ್ತಾರೆ.

ಒಡವೆಗಳನ್ನು ಕುರಿತು ವಿವೇಚಿಸುವಾಗ ಪುರುಷರಿಗೆ ಸಂಬಂಧಿಸಿದವು, ಸ್ತ್ರೀಯರಿಗೆ ಸಂಬಂಧಿಸಿದವು, ಮಕ್ಕಳಿಗೆ ಸಂಬಂಧಿಸಿದವು ಹೀಗೆ ಮೂರು ಸ್ಥೂಲ ವಿಭಜನೆಯನ್ನು ಮಾಡಿಕೊಳ್ಳಬಹುದು. ಮಾನವರು ಪ್ರಾಣಿಗಳು ಎಂದು ಮತ್ತೆರಡು ಪ್ರಮುಖ ವರ್ಗಗಳನ್ನು ಮಾಡಿಕೊಳ್ಳಬಹುದು.

ಸೌಂದರ್ಯಪ್ರಿಯನಾದ ಮಾನವ ತಾನು ಆಭರಣಗಳನ್ನು ಧರಿಸಿ ಆನಂದಿಸಿದ. ಸ್ತ್ರೀಯರಿಗೆ ತೊಡಿಸಿ ಹಿಗ್ಗಿದ. ಅಂತೆಯೇ ತನ್ನ ಅಚ್ಚುಮೆಚ್ಚಿನ ಪ್ರಾಣಿಗೂ ಕೆಲವು ಆಭರಣಗಳನ್ನು ತೊಡಿಸಿ ಸಂತೋಷಪಟ್ಟ. ಕೊಂಬಿನಲ್ಲಿ ರಂಧ್ರವನ್ನು ಮಾಡಿ ಗೆಜ್ಜೆ ಕಟ್ಟುವುದು, ಕೊರಳಿಗೆ ಹವಳ ಹಾಗೂ ಸಣ್ಣ ಗಂಟೆಯ ಸರವನ್ನು ಹಾಕುವ ಹೊರತು ಉಳಿದ ಅಲಂಕಾರವೆಲ್ಲ ಒಳ್ಳೆಯ ಹೋರಿಗಳಿಗೆ ಮೀಸಲು. ಹೋರಿಗಳ ಕೊರಳಿಗೆ ಗಂಟೆಸರ, ಗಗ್ಗರಗಳನ್ನು ಹಾಕಿ ಅಲಂಕರಿಸುತ್ತಾನೆ ರೈತ. ಕೂದಲು ದಂಡೆಗೆ ಹಿತ್ತಾಳೆಯ ಸರಪಣಿಯನ್ನು ಸುತ್ತಿ ಕೊರಳಿಗೆ ಹಾಕುತ್ತಾನೆ. ಮೊಕರಂಬಗಳನ್ನು ಹಾಕಿ ಹೋರಿಗಳ ಬೆಡಗನ್ನು ನೋಡುತ್ತಾನೆ. ಕೋಡಣುಸುಗಳಂತೂ ಬಗೆಬಗೆಯಲ್ಲಿ ಲಭ್ಯವಾಗುತ್ತವೆ. ಮೂರು ಅಂಗುಲ ಉದ್ದದ ಕೋಡಣಸಿನಿಂದ 5–6 ಅಂಗುಲ ಉದ್ದದ ಕಲಾತ್ಮಕವಾದ ಕೊಂಬು ಕಳಸಗಳೂ ಇವೆ. ಹೋರಿಗಳಿಗೆ ಧರಿಸುವ ಆಭರಣಗಳಲ್ಲಿ ಗಗ್ಗರಗಳು, ಮಾಗಾಯಿಗಳು ಅಪೂರ್ವವಾದುವು. ಇತ್ತೀಚೆಗೆ ಮಾಗಾಯಿಗಳು ವಿರಳವಾಗುತ್ತಿವೆ. ಅರ್ಧಚಂದ್ರಾಕಾರದ ವಿವಿಧ ಕೆತ್ತನೆಯಿಂದ ಕೂಡಿದ ಜಣಜಣ ಶಬ್ದ ಮಾಡುವ ಮಾಗಾಯಿಗಳು 3–4 ಅಂಗುಲ ಉದ್ದವಾಗಿ ಆಕರ್ಷಕವಾಗಿರುತ್ತವೆ.

ಕೆಲವು ಕಡೆ ಬೆಲೆಬಾಳುವ ಹೋರಿಗಳ ದೃಷ್ಟಿಪರಿಹಾರಕ್ಕಾಗಿ, ಅಥವಾ ಇನ್ನಾವುದೋ ರೀತಿಯ ದುಷ್ಟ ಶಕ್ತಿಗಳ ಪ್ರಭಾವವುಂಟಾಗದಂತೆ ಸೊಗಸಾದ ತಾಯಿತಿಗಳನ್ನು ಮಾಡಿಸಿ ಹಾಕುವುದೂ ಉಂಟು. ಮೂರು ಅಂಗುಲ ಉದ್ದದ ಹೆಬ್ಬೆರಳು ಗಾತ್ರದ ಬೆಳ್ಳಿ ತಾಯಿತಿಗಳು ಶ್ರೀಮಂತರ ಮನೆಯ ಹೋರಿಯ ಕೊರಳನ್ನು ಅಲಂಕರಿಸುತ್ತವೆ. ಮಾನವ ವರ್ಗದಲ್ಲಿ ಮಕ್ಕಳ ಆಭರಣಗಳು ಚಿನ್ನ ಬೆಳ್ಳಿಯವಾಗಿರಬಹುದು. ಅರಳೆಲೆ ಮಾಗಾಯಿಗಳ ವರ್ಣನೆ ಪ್ರಾಚೀನ ಕಾವ್ಯಗಳಲ್ಲೂ ಬರುತ್ತದೆ. ಬೆಳ್ಳಿಯ ಉಡಿದಾರ, ಕಾಲಂದುಗೆ, ಇವು ಮಕ್ಕಳ ಆಭರಣಗಳು. ಸಾಮಾನ್ಯವಾಗಿ ಹುಟ್ಟಿದ ಮೇಲೆ ತಿಂಗಳಿಗೆ ಮೂರು ದಿನ ಮುಂಚಿತವಾಗಿಯೇ ಕಿವಿ ಚುಚ್ಚಿ ಬಿಡುವ ಪದ್ಧತಿಯಿತ್ತು. ಹರಳಿನ ಬೊಟ್ಟುಗಳನ್ನು ಮಕ್ಕಳಿಗೆ ಇಡುವ ವಾಡಿಕೆ. ಮೊದಲ ಹೆರಿಗೆಯಲ್ಲಿ ತೌರಿನವರು ಸಾಮಾನ್ಯವಾಗಿ ಮಕ್ಕಳ ಒಡವೆಗಳನ್ನು ಮಾಡಿಸುವರು. ಮೂರನೆಯ ಮಗುವಿನ ಮುಖ ನೋಡಬೇಕಾದರೆ ಸೋದರ ಮಾವ ಒಂದು ಚಿನ್ನದ ಉಂಗುರವನ್ನು ತಂದು ಮಗುವಿನ ಕೈಗೆ ಧರಿಸಿ, ಎಣ್ಣೆಯಲ್ಲಿ ಮುಖ ನೋಡಬೇಕು ಎಂಬ ವಾಡಿಕೆ ಕೆಲವು ಕಡೆ ಉಂಟು.

ಆಭರಣಗಳಲ್ಲಿ ಪುರುಷರಿಗಾಗಿಯೇ ಮೀಸಲಾದವು ಹೆಚ್ಚು ಸಂಖ್ಯೆಯಲ್ಲಿಲ್ಲ. ಪುರುಷರಲ್ಲಿ ಕಿವಿಯ ಆಭರಣಗಳೇ ಹೆಚ್ಚು. ಹಿಂದೆ ಗಂಡಸರು ಕೂದಲು ಬಿಟ್ಟು ತಲೆ ಬಾಚಿ, ಜಡೆಹಾಕಿ ಹೂ ಮುಡಿಯುತ್ತಿದ್ದರೂ ಮುಡಿಗೆ ಯಾವ ಬಗೆಯ ಒಡವೆಗಳನ್ನೂ ಧರಿಸುತ್ತಿರಲಿಲ್ಲ. ಆದರೆ ಕಿವಿಗೆ ಮಾತ್ರ ಎರಡು ಮೂರು ಬಗೆಯ ಆಭರಣಗಳನ್ನು ಎರಡೆರಡೂ ಕಡೆ ಧರಿಸುತ್ತಿದ್ದ ಪದ್ಧತಿಯಿತ್ತು. ಕಿವಿಯ ಮೇಲು ಭಾಗಕ್ಕೆ ತೊಟ್ಟು ಮುರಾವು, ಇನ್ನೊಂದು ಕಡೆಗೆ ಅರೆಬಾಬಲು ಅಥವಾ ಉಂಗುರಾಕಾರದ ಜಟ್ಲ ಗುಂಡಲನ್ನು ತೊಡುತ್ತಿದ್ದರು. ಕೆಳಭಾಗಕ್ಕೆ ಹತ್ತಕಡಕು ಮುಂತಾದುವನ್ನು ಈಗಲೂ ಅನೇಕರು ಧರಿಸುತ್ತಾರೆ. ಈಚೆಗೆ ಕೆಲವರು ಕೊರಳಿಗೆ ಚಿನ್ನದ ಸರ ಧರಿಸುವುದು ಬಳಕೆಗೆ ಬಂದಿದೆ. ಇದರಂತೆ ಗಡಿಯಾರದ ಸರಪಣಿಗಳು ಗಡಿಯಾರವಿರುವ ಉಂಗುರಗಳು ಆಭರಣಗಳಾಗಿವೆ.

ಬಲಗಾಲಿಗೆ ಕಪ್ಪ ಧರಿಸುವ ವಾಡಿಕೆಯೂ ಕೆಲವು ಕಡೆ ಇದೆ. ಕಾಲ್ಬೆರಳುಗಳಿಗೆ ಕೆಲವರು ಗಂಡುಮಿಂಚುಗಳನ್ನು ಧರಿಸುತ್ತಾರೆ. ಇವು ಬೆಳ್ಳಿಯಿಂದ ಮಾಡಿದ ಆಭರಣಗಳು. ಮದುವೆಯಲ್ಲಂತೂ ವರ ಇವನ್ನು ಕಾಲ್ಬೆರಳಿಗೆ ಧರಿಸಲೇಬೇಕು. ಕೈಬೆರಳಿಗೆ ಹಿಂದೆ ವಿಶೇಷವಾಗಿ ಬೆಳ್ಳಿಯ ಮುದ್ರೆಯುಂಗುರವಿರುತ್ತಿತ್ತು. ಕೈಗೆ ಬೆಳ್ಳಿ ಅಥವಾ ಚಿನ್ನದ ಕಪ್ಪಗಳನ್ನು ಧರಿಸುವ ವಾಡಿಕೆ ಈಗಲೂ ಇದೆ. ಚಿನ್ನದ ಕಪ್ಪಗಳಲ್ಲಿ ನುಲಿಕೆಕಪ್ಪ ಪ್ರಸಿದ್ಧವಾದುದು.

ಆಭರಣವಿಶೇಷಗಳು ಹೆಚ್ಚಾಗಿ ಸ್ತ್ರೀಯರಿಗಾಗಿಯೇ ಹುಟ್ಟಿಕೊಂಡವೆನ್ನಬೇಕು. ಕನ್ನಡ ನಾಡಿನ ಎಲ್ಲ ಪ್ರದೇಶಗಳಲ್ಲೂ ಸಂಚರಿಸಿ ಪರಿಶೀಲಿಸುತ್ತ ಹೋದರೆ ನೂರಾರು ಬಗೆಗಳನ್ನು ಕಾಣಬಹುದು. ತಲೆ, ತುರುಬು, ಕಿವಿ, ಮೂಗು, ಕೊರಳು, ಕೈ, ಸೊಂಟ, ಕಾಲುಬೆರಳು ಹೀಗೆ ಎಲ್ಲೆಲ್ಲಿ ಒಡವೆಗಳನ್ನು ಧರಿಸಲು ಸಾಧ್ಯವೋ ಅಲ್ಲಿಗೆಲ್ಲ ಅನೇಕ ಒಡವೆಗಳು ಲಭ್ಯವಾಗುತ್ತವೆ. ಭಾರವನ್ನು ಹೆಚ್ಚಾಗಿ ತಡೆಯುವ ಕೊರಳು ಹೆಚ್ಚು ಹೊರೆಯಾದ ಒಡವೆಗಳ ಮಾಲೆಗಳನ್ನೇ ಪಡೆದುಕೊಳ್ಳುತ್ತವೆ. ಚುಚ್ಚಲು ಹೆಚ್ಚು ಸುಲಭವಾದ ಕಿವಿಯಲ್ಲಿ ಆರೇಳು ಕಡೆ ರಂಧ್ರಗಳನ್ನು ಮಾಡಿ ಒಡವೆಗಳನ್ನು ಧರಿಸುತ್ತಾರೆ. ಮೂರು ಕಡೆ ಮಾತ್ರ ಚುಚ್ಚಲು ಸಾಧ್ಯವಾದ ಮೂಗಿನಲ್ಲಿ ಎಡ, ಬಲ ಹಾಗೂ ಕೆಳಭಾಗಗಳಲ್ಲಿ ಚುಚ್ಚಿ ಒಡವೆಗಳನ್ನು ತೊಡುತ್ತಾರೆ. ಕಾಲಿನ ಐದು ಬೆರಳುಗಳಿಗೂ ಒಡವೆಗಳುಂಟು. ಅಲ್ಲದೆ ಕಾಲು ಮತ್ತು ಕೈಗಳಿಗೆ ಹೆಚ್ಚು ತೂಕದ ಒಡವೆಗಳನ್ನೇ ಧರಿಸುತ್ತಾರೆ. ಹಳೆಯ ಕಾಲದ ಶ್ರೀಮಂತ ಮಹಿಳೆಯರ ಛಾಯಾಚಿತ್ರಗಳನ್ನು ನೋಡಿದರೆ ಮೈತುಂಬ ಒಡವೆಗಳೇ ಕಾಣುತ್ತವೆ.

ಒಡವೆಗಳಲ್ಲಿ ಸಾಮಾನ್ಯವಾಗಿ ಕಿವಿ, ಮೂಗು, ನೆತ್ತಿ, ತುರುಬು, ಕೊರಳು ಮುಂತಾದ ಕಡೆಗೆ ಚಿನ್ನದ ಒಡವೆಗಳನ್ನೇ ಧರಿಸುತ್ತಾರೆ. ಸೊಂಟ ಕೈಕಾಲುಗಳಿಗೆ ಬೆಳ್ಳಿಯ ಒಡವೆಗಳು ಹಳ್ಳಿಯ ಬದುಕಿನ ಮನೆಗಳಲ್ಲಿ ಒಂದೊಂದು ಬೀಸುವ ಕುಕ್ಕೆಯಷ್ಟು ಆಭರಣಗಳು ಇರುತ್ತಿದ್ದವು. ಹೆಂಗಸರ ಒಡವೆಗಳನ್ನು ಹೀಗೆ ಪಟ್ಟಿಮಾಡಬಹುದು.

**ತಲೆಗೆ :** ಜಡೆಬಿಲ್ಲೆ, ನಾಗರು, ಚವಲಿತುಂಬು, ಸೇವಂತಿಗೆ ಹೂ, ಕುಪ್ಪಿಗೆ ಇತ್ಯಾದಿ.

**ಕಿವಿಗೆ: 1**. ಮೇಲು ಕಿವಿಗೆ – ಬುಗಡಿ, ಸಿಂಹನ ಮೆಟ್ಟಿದ ಮುರುವು; (ಮುತ್ತುಹಾಕಿದ ಮುರುವು, ಹಲಸಿನ ಕಾಯಿ ಮುರುವು, ಕಪ್ಪಾಕಿದ ಮುರುವು); ತಟ್ಟು ಬಾಬುಲು, ಮೇಟಿಕೊಳವೆ, ಇತ್ಯಾದಿ. 2. ನಡುಗಿವಿಗೆ –– ಲವಂಗದ ಹೂವು, ಬುರುಗಿ ಬೊಟ್ಟು ಗೆಜ್ಜೆ ಡಾಬು, ಸಾದಾ ಡಾಬು, ಕುಡುಕೆ ವಾಲೆ, ಕೆನ್ನೆ ಸರಪಣಿ ಇತ್ಯಾದಿ.

**ಮೂಗಿಗೆ :** ಮೂಗು ಬೊಟ್ಟು, ಬುಲಾಕು, ಚಂದ್ರ, ಅಕ್ಕಿ ಮುರು, ಬೊಟ್ಟು ಇತ್ಯಾದಿ.

**ಕೊರಳಿಗೆ:** ಚಿಂತಾಕು, ಮೂರೆಳೆ ಗುಂಡು, ಐದೆಳೆ ಗುಂಡು, ಆರೆಳೆ ಗುಂಡು, ತಟ್ಟು ಗುಂಡು, ಮೂರೆಳೆ ಅಂಟು ಗುಂಡು, ದೊಡ್ಡ ಗುಂಡು, ಜೋಮಾಲೆ ಸರ, ಇತ್ಯಾದಿ.

**ಕೈಗೆ:** ಕಡಗ, ಗಂಟುಮುರಿ, ಕೊಂಡಿಕಪ್ಪ, ಬೆಳ್ಳಿ ಬಳೆ ಇತ್ಯಾದಿ.

ಕೈ ಬೆರಳಿಗೆ: ಬೆರಳುಂಗುರ, ತಟ್ಟುಂಗುರ, ಗೋಲುಂಗುರ, ಬೇಲುಂಗುರ, ಮುದ್ರೆಯುಂಗುರ, ಮುಡಿಯುಂಗುರ, ಅಕ್ಕಿಯುಂಗುರ ಇತ್ಯಾದಿ.

**ಕಾಲಿಗೆ :** ಕಾಲಂದುಗೆ, ತೋಡ, ಸಾಡಗ, ರುಳಿ ಇತ್ಯಾದಿ.

**ಕಾಲ್ಬೆರಳಿಗೆ :** ಕಿರುಪಿಲ್ಲಿ, ಗೆಜ್ಜೆಪಿಲ್ಲಿ, ಮಿಂಚು, ಸುತ್ತು, ಕಾಲುಂಗುರ, ಕಳಸಪಿಲ್ಲಿ, ಎಲೆಪಿಲ್ಲಿ, ನಿಂಬೆ ಹೂವಿನ ಪಿಲ್ಲಿ ಇತ್ಯಾದಿ.

ತೋಳಿಗೆ: ಎಡಗೈ ಮುರಿ, ಬೇವಿನ ಕಾಯಿ ತಾತಿ, ಸನಿಕೆ ಬಂದಿ, ಬಂದಿಮೇಗಣ ಸನಿಕೆ ಇತ್ಯಾದಿ.

ಹೆಂಗಸರ ಒಡವೆಗಳಲ್ಲಿ ಕಾಲುಚೈನು, ಕಾಸಿನ ಸರ, ಹರಳೋಲೆಗಳು ಇತ್ತೀಚೆಗೆ ಬಂದವು. ಕಾಲುಂಗುರ ಹಿಂದೆ ವಿಶೇಷವಾಗಿರಲಿಲ್ಲ. ಹೆಣ್ಣು ಮಕ್ಕಳಿಗೆ ಕುವಾಲಿ ಹಾಕಿ, ಜಡೆಹಾಕಿ, ಕುವಾಲಿಗೆ ಸೇರಿದಂತೆ ಮುಂದಲೆ ಹೂವು ಹಾಕುತ್ತಿದ್ದರು. ಕುವಾಲಿ ಹಾಕುವ ಪದ್ಧತಿಯೊಡನೆ ಮುಂದಲೆ ಹೂವು ಕಣ್ಮರೆಯಾಗಿದೆ. ಒಡವೆಗಳಲ್ಲಿ ದೊಡ್ಡ ಗುಂಡಿನ ಸರ ಬೆಲೆಯಾದುದು. ಕಲಾತ್ಮಕವಾದುದು. ಮುದ್ರೆಯುಂಗುರ ತಲೆತಲಾಂತರದಲ್ಲಿ ವಂಶದ ಹಿರಿಯ ಮಗನಿಗೆ ಹೋಗುತ್ತದೆ. ಕುಡಿಕೆವಾಲೆಗೆ ಸೇರಿದಂತೆ ಎರಡೆಳೆ ಕಂಠಿಸರ ತಲೆಗಂಟಿಗೆ ಸೇರಿಸಿ ಕಟ್ಟುತ್ತಾರೆ.

ಬಯಲುನಾಡಿನ ಆಭರಣಗಳಂತೆಯೇ ಮಲೆನಾಡಿನ ಆಭರಣಗಳೂ ವಿಶಿಷ್ಟವಾದುವು. ಎಲ್ಲ ಪ್ರಾಂತ್ಯಕ್ಕಿಂತ ಘಟ್ಟದ ಕೆಳಗಿನ ದಕ್ಷಿಣ ಕನ್ನಡ ಭಾಗ ಒಡವೆಗಳಿಗೆ ಪ್ರಸಿದ್ಧವಾದುದು. ಕೊಪ್ಪು ಮೊದಲಾದ ಅತ್ಯಂತ ಪ್ರಾಚೀನವಾದ, ಕಲಾತ್ಮಕವಾದ ಆಭರಣ ವಿಶೇಷಗಳು ಅಲ್ಲಿ ಈಗಲೂ ಲಭ್ಯವಾಗುತ್ತವೆ. ಭೂತದ ಒಡವೆಗಳ ರಾಶಿಯನ್ನು ನೋಡಿದರೆ ಯಾರಾದರೂ ಬೆರಗಾಗಬೇಕು. ಬಯಲುನಾಡಿನ ದೇವರ ಒಡವೆಗಳೂ ಅಷ್ಟೇ ಆಕರ್ಷಕವಾಗಿವೆ. ಇವತ್ತಿಗೂ ವಿಶೇಷ ಸಂದರ್ಭಗಳಲ್ಲಿ ದೇವಸ್ಥಾನದಲ್ಲಿ ದೇವರುಗಳಿಗೆ ಆಭರಣಾಲಂಕಾರಗಳು ನಡೆಯುತ್ತವೆ. ಹಳೆಯ ಕಲಾಪ್ರಕಾರಗಳಾದ ನೃತ್ಯ ನಾಟಕಗಳಲ್ಲಿನ ಪಾತ್ರಗಳಿಗೆ ಶಾಸ್ತ್ರೀಯವಾದ ಎಲ್ಲ ಆಭರಣಗಳನ್ನೂ ತೊಡಿಸುತ್ತಿದ್ದರು.

ಕಿರು ಜಾತಿಗಳಲ್ಲಿ ಮಣಿಸರಗಳು, ಹವಳದ ಸರಗಳು, ಹಿತ್ತಾಳೆಯ ಕೈಬಂದಿಗಳು ಹೆಚ್ಚು. ಕಾಡುಗೊಲ್ಲರ, ಲಂಬಾಣಿಗರ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಗೌಡರ ಹೆಂಗಸರ ಹವಳದ ಸರಗಳು, ದಂತದ ಒಡವೆಗಳು, ಮಣಿಸರಗಳು ಗಮನಾರ್ಹವಾದುವು.

ಈಗೀಗ ಹಳೆಯ ಕಾಲದ ಅಪೂರ್ವ ಆಭರಣಗಳನ್ನು ಧರಿಸುವವರೂ, ತಯಾರಿಸುವವರೂ ವಿರಳವಾಗುತ್ತಿದ್ದಾರೆ. ಸರ್ಕಾರದ ಈಚಿನ ಧೋರಣೆಯಿಂದಾಗಿ ಹಾಗೂ ಆಭರಣಗಳ ತಯಾರಿಕೆಗೆ ಆಧುನಿಕ ಯಂತ್ರಗಳ ಬಳಕೆಯಿಂದಾಗಿ ಅಕ್ಕಸಾಲಿಗರ ಉದ್ಯಮಕ್ಕೆ ಪ್ರೋತ್ಸಾಹ ಕಡಿಮೆಯಾಗಿದೆ. ಅಲ್ಲದೆ ಆಭರಣಗಳ ವಿಷಯ ಮನೋಧರ್ಮಕ್ಕೆ ಸಂಬಂಧಪಟ್ಟದ್ದಾದ್ದರಿಂದ ಜನ ಹೊಸ ಮಾದರಿಯನ್ನು ಬಯಸತೊಡಗಿದ್ದಾರೆ. ನವೀನ ರೀತಿಯ ಒಡವೆಗಳು ಆ ಸ್ಥಾನವನ್ನು ಆಕ್ರಮಿಸುತ್ತಿವೆ. (ಜೆ.ಎಸ್.ಪಿ.)

**ಆಭೀರರು :** ಪ್ರಾಚೀನ ಭಾರತದಲ್ಲಿ ಬಂದು ನೆಲೆಸಿದ್ದ ಅನ್ಯದೇಶೀಯರು. ಕಾಂದಹಾರದ ಸಮೀಪದ ಅಬಿರವನ್ ಎಂಬ ಸ್ಥಳದಿಂದ ವಲಸೆ ಬಂದವರೆಂದು ಊಹಿಸಲಾಗಿದೆ. ಈ ಜನ ಮುಖ್ಯವಾಗಿ ಅಪರಾಂತ ಎಂಬ ಪಶ್ಚಿಮ ಭಾರತ ಪ್ರದೇಶದಲ್ಲಿ ನೆಲೆಸಿದ್ದರು. ಪುರಾಣಗಳಲ್ಲಿ ಆಭೀರರು ಸಾತವಾಹನರ ಅನಂತರ ಆಳಿದರೆಂದು ಹೇಳಿದೆ. ಪತಂಜಲಿಯ ಮಹಾಭಾಷ್ಯದಲ್ಲಿ ಆಭೀರರ ನಿರ್ದೇಶನವಿದೆ. ಈ ಕುಲದ ಕೆಲವು ನಾಯಕರು ಶಕ ಮಹಾಕ್ಷತ್ರಪರ ಸೇನಾಪತಿಗಳಾಗಿದ್ದರು. ಅಭೀರ ಮರಾಠಿಪುತ್ರ ಈಶ್ವರಸೇನ 3ನೆಯ ಶತಮಾನದಲ್ಲಿ ನಾಸಿಕದ ಪ್ರದೇಶದಲ್ಲಿ ಆಳಿದಂತೆ ಶಾಸನದಿಂದ ತಿಳಿಯುತ್ತದೆ. ಈತನ ಆಳ್ವಿಕೆಯ ವರ್ಷದಿಂದ (ಪ್ರ.ಶ. ಸು. 248) ಕಲಚುರಿ ಸಂವತ್ ಪ್ರಾರಂಭವಾಯಿತೆಂದು ಅಭಿಪ್ರಾಯವಿದೆ. ಮಯೂರವರ್ಮನ ಚಂದ್ರವಳ್ಳಿ ಶಾಸನದಲ್ಲಿ ಕದಂಬ ರಾಜ ಆಭೀರರನ್ನು ಜಯಿಸಿದನೆಂದು ಹೇಳಿದೆ. ಸಮುದ್ರಗುಪ್ತನಿಂದ ಪರಾಜಯ ಹೊಂದಿದ ನಾಯಕರಲ್ಲಿ ಆಭೀರರ ಹೆಸರಿದೆ. (ಪಿ.ಬಿ.ಡಿ.)

**ಆಮದುಗಳು :** ಬಳಕೆಗಾಗಲಿ, ಬೇರೆ ಪದಾರ್ಥಗಳ ತಯಾರಿಕೆಗಾಗಲಿ ಅಗತ್ಯವಾದ ವಸ್ತುಗಳನ್ನು ಹೊರ ದೇಶದಿಂದ ತರಿಸಿಕೊಳ್ಳುವುದಕ್ಕೆ ಆಮದು ವ್ಯಾಪಾರವೆಂದು ಹೆಸರು (ಇಂಪೋರ್ಟ್). ಹಾಗೆ ತರಿಸಿದ ಪದಾರ್ಥಗಳನ್ನು ಆಮದು ಪದಾರ್ಥಗಳು ಎನ್ನುತ್ತಾರೆ. ರಫ್ತು ವ್ಯಾಪಾರ, ರಫ್ತು ಪದಾರ್ಥಗಳು ಇದಕ್ಕೆ ತದ್ವಿರುದ್ಧವಾದವು. ಆಮದಿನಿಂದ ದೇಶದ ಸಂಪನ್ಮೂಲಗಳ ಬೆಳವಣಿಗೆಯಾಗುತ್ತದೆ. ಇದಲ್ಲದೆ ಬೇರೆ ಕಾರಣಗಳಿಂದ ದೇಶದೊಳಕ್ಕೆ ಬರುವ ವಸ್ತುಗಳನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ, ವ್ಯಕ್ತಿಗಳ ಉಪಯೋಗಕ್ಕಾಗಿ, ಪ್ರದರ್ಶನಕ್ಕಾಗಿ, ನಿಯೋಗಿಗಳ ಮತ್ತು ವಿದೇಶಿ ಸೇನಾಠಾಣ್ಯಗಳ ಬಳಕೆಗಾಗಿ ತರಿಸಿಕೊಳ್ಳುವ ಪದಾರ್ಥಗಳು ಆಮದು ಪದಾರ್ಥಗಳಾಗುವವು. ಆದರೆ ಸಂಪನ್ಮೂಲಗಳನ್ನು ಹೆಚ್ಚಿಸಲು ಹೊರದೇಶಗಳಿಂದ ಆಮದು ಮಾಡಿಕೊಳ್ಳುವ ಯಂತ್ರೋಪಕರಣಾದಿಗಳು ಅಗತ್ಯ. ರಾಸಾಯನಿಕಾದಿಗಳು, ತಜ್ಞರ ಸೇವೆ ಮೊದಲಾದವು ಆಮದು ಎನಿಸಿಕೊಳ್ಳುತ್ತವೆ.

ಪ್ರತಿ ರಾಷ್ಟ್ರವೂ ಸ್ವಾವಲಂಬಿಯಾಗಿರುವುದು ಸಾಧ್ಯವಿಲ್ಲದ ಮಾತು. ಒಂದಲ್ಲೊಂದು ಸರಕು ಅಥವಾ ಸೇವೆ ಅಥವಾ ಬಂಡವಾಳಕ್ಕೆ ಒಂದು ರಾಷ್ಟ್ರ ಮತ್ತೊಂದನ್ನು ಅವಲಂಬಿಸಲೇ ಬೇಕು. ಇದಕ್ಕೆ ನೈಸರ್ಗಿಕ ಕಾರಣಗಳಿರಬಹುದು. ಅಥವಾ ಬೇರೆ ಯಾವುದಾದರೂ ಕಾರಣಗಳಿರಬಹುದು. ಪಾಶ್ಚಾತ್ಯ ರಾಷ್ಟ್ರಗಳು ಅರಬ್ ರಾಷ್ಟ್ರಗಳನ್ನು ತೈಲಕ್ಕಾಗಿ ಅವಲಂಬಿಸಬೇಕು. ಇಲ್ಲದಿದ್ದರೆ ಅವರ ಕೈಗಾರಿಕೆಗೆ ಪೆಟ್ಟು ಬೀಳುತ್ತದೆ. ಹಿಂದುಳಿದ ರಾಷ್ಟ್ರಗಳು ನವೀನ ಯಂತ್ರೋಪಕರಣಗಳನ್ನು ಮುಂದುವರಿದ ರಾಷ್ಟ್ರಗಳಿಂದ ಕೊಳ್ಳದಿದ್ದರೆ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲ. ಹಾಗೆಯೇ ಆಹಾರ ವಸ್ತುಗಳ ಕೊರತೆ ಇರುವುದರಿಂದ ಮುಂದುವರೆದ ರಾಷ್ಟ್ರಗಳಿಂದ ಅವುಗಳನ್ನು ಕೊಂಡುಕೊಳ್ಳದಿದ್ದರೆ ಆಹಾರ ಸಮಸ್ಯೆ ಭೀಕರ ಸ್ವರೂಪವನ್ನು ತಾಳುತ್ತದೆ.

ಅಂತಾರಾಷ್ಟ್ರೀಯ ವ್ಯಾಪಾರದ ಮುಖ್ಯ ಸಿದ್ಧಾಂತವಾದ ತಾರತಮ್ಯ ವೆಚ್ಚ ಸಿದ್ಧಾಂತ (ಥಿಯರಿ ಆಫ್ ಕಂಪ್ಯಾರಿಟಿವ್ ಕಾಸ್ಟ್ಸ್) ತಿಳಿಸುವಂತೆ ಪ್ರತಿ ರಾಷ್ಟ್ರವೂ ಯಾವ ವಸ್ತುಗಳ ತಯಾರಿಕೆಗೆ ಹೆಚ್ಚು ಅನುಕೂಲ ಹೊಂದಿದೆಯೋ ಅಥವಾ ಯಾವ ವಸ್ತುಗಳನ್ನು ಬೇರೆಯವರಿಗಿಂತ ಕಡಿಮೆ ವೆಚ್ಚದಲ್ಲಿ ತಯಾರಿಸಲು ಶಕ್ಯವಾಗಿದೆಯೋ ಅಂಥ ವಸ್ತುಗಳನ್ನು ತಯಾರಿಸುವುದರಲ್ಲಿ ಮಾತ್ರ ಪರಿಣತಿ ಗಳಿಸಿಕೊಳ್ಳಬೇಕು. ಉಳಿದವುಗಳನ್ನು ಯಾವ ರಾಷ್ಟ್ರಗಳು ತಮಗಿಂತ ಕಡಿಮೆ ವೆಚ್ಚದಲ್ಲಿ ತಯಾರಿಸಲು ಶಕ್ಯವಾಗಿದೆಯೋ ಅವುಗಳಿಂದ ಕೊಳ್ಳಬೇಕು. ಉದಾಹರಣೆಗೆ, ಕಾಫಿ ಬೆಳೆಗೆ ಅನುಕೂಲವಾದ ಹವೆ ಇಲ್ಲದಿರುವ ದೇಶಗಳಲ್ಲಿ ಕೃತಕವಾಗಿ ಅದಕ್ಕೆ ತಗಲುವ ವೆಚ್ಚ ಅತಿಯಾಗುವುದರಿಂದ ಅದಕ್ಕೆ ಬದಲು ಎಲ್ಲಿ ಕಡಿಮೆ ವೆಚ್ಚದಲ್ಲಿ ಬೆಳೆಯಲು ಸಾಧ್ಯವೋ ಅಲ್ಲಿಂದ ಕೊಳ್ಳುವುದೇ ಲೇಸು. ಈ ಕಾರಣಗಳಿಂದ ಸರಕುಗಳ ಆಮದು ಅನಿವಾರ್ಯ.

ಅಂತೆಯೇ ಸೇವೆಗಳ ಆಮದೂ ಎಷ್ಟೋ ವೇಳೆ ಅನಿವಾರ್ಯ. ಇತರ ದೇಶಗಳ ಜನರ ತಾಂತ್ರಿಕ ಸೇವೆಯನ್ನು ಪಡೆದುಕೊಳ್ಳಬೇಕಾಗಬಹುದು. ಇಲ್ಲವೇ ಇತರ ದೇಶಗಳ ಸಾರಿಗೆ ಸಂಸ್ಥೆಗಳ ಸೇವೆಯನ್ನು ಪಡೆದುಕೊಳ್ಳಬೇಕಾಗಬಹುದು.

ಬಂಡವಾಳವನ್ನು ಆಮದು ಮಾಡಿಕೊಳ್ಳುವುದೂ ಬಹಳ ಕಾಲದಿಂದಲೂ ರೂಢಿಯಲ್ಲಿದ್ದರೂ ಇತ್ತೀಚಿನ ದಿನಗಳಲ್ಲಿ ಇದರ ಪ್ರಾಮುಖ್ಯ ಹೆಚ್ಚುತ್ತಿದೆ. ಇಂದು ಸಂಪತ್ಸಮೃದ್ಧವಾಗಿರುವ ಅಮೆರಿಕ ಬಹಳ ಕಾಲದವರೆಗೆ ಬಂಡವಾಳವನ್ನು ಆಮದು ಮಾಡಿಕೊಳ್ಳುತ್ತಿದ್ದು ಅನಂತರ ಬಂಡವಾಳವನ್ನು ರಫ್ತು ಮಾಡುವ ಮಟ್ಟವನ್ನು ಮುಟ್ಟಿತು. ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಗಳಲ್ಲಿ ಬಂಡವಾಳ ಹೂಡುವಿಕೆಗೆ ಬೇಕಾಗುವಷ್ಟು ಉಳಿತಾಯವಿಲ್ಲದಿರುವುದರಿಂದ ಅಭಿವೃದ್ಧಿಯನ್ನು ತ್ವರಿತಗೊಳಿಸಿ ಜನರಿಗೆ ಉತ್ತಮ ಜೀವನ ಮಟ್ಟವನ್ನೊದಗಿಸಲು ಬಂಡವಾಳವನ್ನು ಆಮದು ಮಾಡಿಕೊಳ್ಳವುದು ಅವಶ್ಯಕವಾಯಿತು.

ಆಮದು ಒಂದು ರಾಷ್ಟ್ರದ ಲೇಣೆ ದೇಣೆ ಪಟ್ಟಿಯ (ಬ್ಯಾಲೆನ್ಸ್ ಆಫ್ ಪೇಮೆಂಟ್) ಮೇಲೆ ತನ್ನದೇ ಆದ ಪರಿಣಾಮವನ್ನು ಬೀರುತ್ತದೆ. ಪಟ್ಟಿಯು ಸರಿದೂಗುವಂತೆ ಆಮದು ಮತ್ತು ರಫ್ತುಗಳು ಸಮನಾಗಿರಬೇಕು. ರಫ್ತಿಗಿಂತ ಆಮದು ಹೆಚ್ಚಾಗಿದ್ದರೆ ಪಟ್ಟಿಯಲ್ಲಿ ಉಳಿತಾಯ ಉಂಟಾಗುತ್ತದೆ. ಇವುಗಳಲ್ಲಿ ಯಾವ ಒಂದೂ ಅಪೇಕ್ಷಣೀಯವಲ್ಲ. ಖೋತವನ್ನು ಮಾತ್ರ ಸಮಸ್ಯೆ ಎಂದು ಪರಿಗಣಿಸಿ ಉಳಿತಾಯ ಅಪೇಕ್ಷಣೀಯ ಸ್ಥಿತಿ ಎಂದು ಭಾವಿಸುವುದುಂಟು. ಆದರೆ ಸಮಸ್ಥಿತಿ ಅತ್ಯುತ್ತಮವಾದುವೆಂದು ತಿಳಿಯುವುದು ಆವಶ್ಯಕ. ಒಂದು ರಾಷ್ಟ್ರದ ಲೇಣೆ ದೇಣೆ ಪಟ್ಟಿಯಲ್ಲಿ ಉಳಿತಾಯವಿದ್ದರೆ ಬೇರೆ ಯಾವುದೋ ದೇಶ ಖೋತ ಸಮಸ್ಯೆಯನ್ನು ಎದುರಿಸುತ್ತಿದೆ ಎಂದು ಅರ್ಥ. ಆದ್ದರಿಂದ ಸಮಸ್ಯೆಗೆ ಲೇಣೆ ದೇಣೆ ಪಟ್ಟಿಯಲ್ಲಿ ಖೋತ ಎಷ್ಟರ ಮಟ್ಟಿಗೆ ಕಾರಣವೋ ಉಳಿತಾಯವೂ ಅಷ್ಟರ ಮಟ್ಟಿಗೆ ಕಾರಣ.

ರಫ್ತಿಗಿಂತ ಆಮದು ಹೆಚ್ಚಾಗಿ ಖೋತ ಸಮಸ್ಯೆ ಉದ್ಭವಿಸಿದಾಗ ಆಮದಿನಮಟ್ಟವನ್ನು ಕಡಿಮೆ ಮಾಡಲು ಅನೇಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆಮದುಸುಂಕ ವಿಧಿಸುವುದರ ಮೂಲಕ ಆಮದುವಸ್ತುಗಳ ಬೆಲೆ ಹೆಚ್ಚುವಂತೆ ಮಾಡಿ ಅವುಗಳ ಪ್ರಮಾಣವನ್ನು ಇಳಿಸುವುದು ಆಮದು ನಿರ್ಬಂಧ ಕ್ರಮಗಳಲ್ಲೊಂದು. ಆದರೆ ಇದು ಪರಿಣಾಮಕಾರಿಯಾಗಬೇಕಾದರೆ ಬೆಲೆ ಏರಿದಂತೆ ಬೇಡಿಕೆ ಕಡಿಮೆಯಾಗಬೇಕು. ಹಾಗಲ್ಲದಿದ್ದರೆ ಬೆಲೆ ಏರಿದರೂ ಆಮದು ಪ್ರಮಾಣ ಕಡಿಮೆಯಾಗುವುದಿಲ್ಲ. ಆಮದು ಪಾಲನ್ನು (ಕೋಟ) ನಿಗದಿ ಮಾಡಿ, ಗೊತ್ತಾದ ಮಿತಿಯನ್ನು ಮೀರಿ ಆಮದು ಮಾಡಿಕೊಳ್ಳದಂತೆ ತಡೆಯುವುದು ಮತ್ತೊಂದು ಆಮದು ನಿರ್ಬಂಧಕ ಕ್ರಮ. ಈ ಎರಡು ಕ್ರಮಗಳ ಪೈಕಿ ಆಮದು ಪಾಲು ನಿಗದಿ ಮಾಡುವುದು ಹೆಚ್ಚು ಪರಿಣಾಮಕಾರಿಯಾಗಿ ಕಂಡುಬಂದಿದೆ. ವಿನಿಮಯದ ದರಗಳಲ್ಲಿ ತಾರತಮ್ಯ ಮಾಡುವುದರ ಮೂಲಕವೂ ಆಮದು ನಿರ್ಬಂಧ ಸಾಧ್ಯ. ಅನಾವಶ್ಯಕ ಆಮದುಗಳಿಗೆ ಬೇಕಾಗುವ ವಿದೇಶೀ ವಿನಿಮಯದ ಬೆಲೆಯನ್ನು ಹೆಚ್ಚಿಸಿ ಅವುಗಳ ಆಮದನ್ನು ಕಡಿಮೆಮಾಡಿಕೊಳ್ಳಬೇಕಾದ ವಸ್ತುಗಳಿಗೆ ಸರಿಸಮವಾದ ವಸ್ತುಗಳನ್ನು ದೇಶದಲ್ಲಿಯೇ ತಯಾರಿಸಿಕೊಳ್ಳಲು ಯತ್ನಿಸುವ ಕಡೆಗೆ ಹೆಚ್ಚು ಗಮನ ಕೊಡುವುದು ಆವಶ್ಯಕ. ಭಾರತದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಿರುವಾಗ ವಿದೇಶದಿಂದ ಆಮದಾಗುತ್ತಿದ್ದ ಅನೇಕ ಪದಾರ್ಥಗಳಿಗೆ ಸರ್ಕಾರ ಅನುಜ್ಞಾಪತ್ರ ಕೊಡುವುದನ್ನು ನಿಲ್ಲಿಸಿತು. ಆಮದಾಗುವ ಪದಾರ್ಥಗಳಲ್ಲಿ ಕೆಲವದರ ಮೇಲೆ ಹೆಚ್ಚು ಸುಂಕ ಹೇರಿತು. ಹಾಗೆ ಮಾಡಿದರೆ ವ್ಯಾಪಾರದ ಪೈಪೋಟಿಯನ್ನು ಎದುರಿಸುವುದು ಕಷ್ಟವಾಗುತ್ತಿತ್ತು.

ಒಂದು ರಾಷ್ಟ್ರದ ಆಮದು ಪ್ರಮಾಣ, ಆ ರಾಷ್ಟ್ರ ಅಭಿವೃದ್ಧಿಯ ಯಾವ ಹಂತದಲ್ಲಿದೆಯೆಂಬುದನ್ನು ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಅಭಿವೃದ್ಧಿಯ ಪ್ರಾರಂಭದ ಹಂತದಲ್ಲಿರುವ ರಾಷ್ಟ್ರವೂ ಯೋಜನಾಬದ್ಧ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುವುದ

ರಿಂದ ಯಂತ್ರೋಪಕರಣಗಳು, ತಾಂತ್ರಿಕ ನೆರವು ಮತ್ತು ಅನೇಕ ವೇಳೆ ಅಹಾರ ವಸ್ತುಗಳನ್ನೂ ಅನ್ಯದೇಶಗಳಿಂದ ಪಡೆಯಬೇಕಾಗುತ್ತದೆ. ರಾಷ್ಟ್ರದ ಅಭಿವೃದ್ಧಿ ಮುಂದುವರಿದಂತೆ ಇವುಗಳ ಆವಶ್ಯಕತೆ ಕಡಿಮೆಯಾಗಿ ಆಮದಿನ ಮಟ್ಟ ಕಡಿಮೆಯಾಗುತ್ತದೆ. ಅಂತಾರಾಷ್ಟ್ರೀಯವಾಗಿ ವ್ಯಾಪಾರ ಸೌಹಾರ್ದಯುತವಾಗುವಂತೆ ಮಾಡಲು ಅನೇಕ ಸಂಸ್ಥೆಗಳನ್ನು ಈಚೆಗೆ ಸ್ಥಾಪಿಸಲಾಗಿದೆ. (ನೋಡಿ– ಅಂತಾರಾಷ್ಟ್ರೀಯ–ಅಭಿವೃದ್ಧಿ–ಸಂಸ್ಥೆ; ಅಂತಾರಾಷ್ಟ್ರೀಯ–ಆರ್ಥಿಕ–ಮಂಡಲಿ; ಅಂತಾರಾಷ್ಟ್ರೀಯ–ತೀರುವೆ–ಬ್ಯಾಂಕು; ಅಂತಾರಾಷ್ಟ್ರೀಯ–ಪುನಾರಚನೆ–ಮತ್ತು–ಅಭಿವೃದ್ಧಿ–ಬ್ಯಾಂಕು; ಅಂತಾರಾಷ್ಟ್ರೀಯ–ದ್ರವ್ಯನಿಧಿ; ಅಂತಾರಾಷ್ಟ್ರೀಯ–ವ್ಯಾಪಾರ; ಅತಿಸವಲತ್ತು–ಪಡೆದ–ರಾಷ್ಟ್ರ–ವ್ಯವಹಾರ) (ಬಿ.ಎಸ್.ಎಸ್.ಎ.)

**ವ್ಯವಹಾರ ವಿಧಾನ** : ಸರ್ಕಾರ, ಜಹಜಿನ ಕಂಪನಿ ಮತ್ತು ಬಂದರು ಅಧಿಕಾರಿಗಳು ವಿಧಿಸುವ ಕೆಲವು ನಿಯಮಾವಳಿಗನುಸಾರವಾಗಿ ಆಮದು ವ್ಯಾಪಾರ ನಡೆಯಬೇಕು. ಮೊದಲನೆಯದಾಗಿ, ಪದಾರ್ಥಗಳ ಆಮದು ಮಾಡಿಕೊಳ್ಳುವುದಕ್ಕೆ ಸರ್ಕಾರದಿಂದ ಅನುಮತಿ ಆವಶ್ಯಕ. ಅಂಥ ಅಜ್ಞಾಪತ್ರದೊಂದಿಗೆ ಆಮದು ಮಾಡಿಕೊಂಡ ಪದಾರ್ಥದ ಬೆಲೆ ಮತ್ತು ಇತರ ಅಗತ್ಯ ವಿವರಣೆಯನ್ನು ಸುಂಕದ ಅಧಿಕಾರಿಗಳಿಗೆ ಕೊಟ್ಟು ನಿಗದಿಯಾದ ಸುಂಕವನ್ನು ಪಾವತಿ ಮಾಡಿ ಪದಾರ್ಥಗಳನ್ನು ಬಿಡಿಸಿಕೊಂಡು ಹೋಗಬೇಕು. ಆಮೇಲೆ ಜಹಜಿನ ಕಂಪನಿ ಕಛೇರಿಗೆ ಹಡಗು ಬಾಡಿಗೆಯನ್ನು ತೆತ್ತು ರವಾನೆಯ ಆದೇಶವನ್ನು ಪಡೆಯಬೇಕು. ಕೆಲವು ವೇಳೆ ಆಮದು ಮಾಡಿಕೊಳ್ಳುವವ ಸರಕುಗಳನ್ನು ತಕ್ಷಣವೇ ಬಂದರಿನಿಂದ ತೆಗೆಯದೇ, ಅಧಿಕಾರಿಗಳ ವಶದಲ್ಲಿರುವ ಈಡುಮಳಿಗೆಯಲ್ಲಿ ಶೇಖರಿಸಿ ಇಡಬಹುದು. ಆಮದು ಮಾಡಿಕೊಂಡ ಪದಾರ್ಥಗಳನ್ನು ಮತ್ತೆ ರಫ್ತು ಮಾಡಬೇಕಾದಾಗ ಸುಂಕದ ಬಾಕಿಯನ್ನು ತರಲು ಆಮದು ಮಾಡಿಕೊಳ್ಳುವವರಿಗೆ ಹಣವಿಲ್ಲದಿದ್ದಾಗ ಶೇಖರಣೆ ಮಾಡಲು ಅನುಕೂಲಗಳಿಲ್ಲದಿದ್ದಾಗ ಹೀಗೆ ಮಾಡಲಾಗುತ್ತದೆ.

ಆಮದು ಮಾಡಿಕೊಳ್ಳುವವರು ಸಾಧಾರಣವಾಗಿ ಅವರ ಬ್ಯಾಂಕರುಗಳಿಂದ ಸಾಲವನ್ನು ಪಡೆಯುತ್ತಾರೆ. ಬ್ರಿಟನ್ನಿನಲ್ಲಿ ಸ್ವೀಕರಣ ಸಂಸ್ಥೆಗಳು ಈ ಕಾರ್ಯವನ್ನು ನೆರವೇರಿಸುತ್ತವೆ. ವಾಷಿಂಗ್‌ಟನ್ನಿನಲ್ಲಿ ರಫ್ತು ಮತ್ತು ಆಮದಿನ ಬ್ಯಾಂಕು ಅನೇಕ ರಾಷ್ಟ್ರಗಳಿಗೆ ಆಮದು ಸಾಲವನ್ನು ನೀಡುತ್ತದೆ. ಆಮದು ವ್ಯಾಪಾರಿಗಳು ಸಾಕಷ್ಟು ಭರವಸೆ ನೀಡಿದಲ್ಲಿ ಅದರ ಬಗ್ಗೆ ಕೊಡಬೇಕಾದ ಹಣವನ್ನು ತತ್‌ಕ್ಷಣದಲ್ಲಿ ಕೊಡದೆ ಮಾಲನ್ನು ಪಡೆದು ವಾಯಿದೆಯಂತೆ ಅನಂತರ ಹಣ ಪಾವತಿ ಮಾಡುವ ಸೌಲಭ್ಯವನ್ನು ಭಾರತ ಸರ್ಕಾರ ಈಚೆಗೆ ನೀಡಿದೆ.

(ಬಿ.ಬಿ.ಕೆ.)

**ಆಮದು ಸುಂಕಗಳು**: ಒಳದೇಶಗಳಲ್ಲಿನ ಉಕ್ಕಡಗಳಲ್ಲಿ ವಸೂಲು ಮಾಡುವ ಸುಂಕಕ್ಕಿಂತ ಭಿನ್ನವಾದವು. ಈಗ ದೇಶದೇಶಗಳ ನಡುವಣ ವ್ಯಾಪಾರಕ್ಕೆ ಮಾತ್ರ ಅನ್ವಯವಾಗುತ್ತವೆ. (ಟ್ಯಾರಿಫ್ : ಕಸ್ಟಮ್ಸ್). ರಫ್ತು ಸುಂಕಕ್ಕಿಂತ ಆಮದು ಸುಂಕವೇ ಈಗ ಹೆಚ್ಚು ಬಳಕೆಯಲ್ಲಿವೆ. ಬೇರೆ ದೇಶಗಳಿಂದ ಆಮದಾದ ಸರಕುಗಳ ಮೇಲೆ, ಅವುಗಳನ್ನು ದೇಶದ ಒಳಕ್ಕೆ ಒಯ್ಯುವ ಮುನ್ನ, ಈ ಸುಂಕ ಕೊಡಬೇಕಾಗುತ್ತದೆ. ಈ ರೀತಿಯ ಸುಂಕವನ್ನು ಸಮುದ್ರತೀರದಲ್ಲಿರುವ ರೇವು ಪಟ್ಟಣಗಳಲ್ಲೂ ವಿಮಾನನಿಲ್ದಾಣಗಳಲ್ಲೂ ಗಡಿನಾಡಿನ ಉಕ್ಕಡಗಳಲ್ಲೂ ವಸೂಲು ಮಾಡಲಾಗುತ್ತದೆ.

ಆಮದು ಸುಂಕಗಳು ಮೂರು ವಿಧ. ಮೊದಲನೆಯದಾಗಿ ಸರಕುಗಳ ಬೆಲೆಯ ಆಧಾರದ ಮೇಲೆ ವಿಧಿಸುವ ಸುಂಕ. ಇದಕ್ಕೆ ಅಡ್ ವಲೋರಂ ಡ್ಯೂಟಿ ಎಂದು ಹೆಸರು. ಇಲ್ಲಿ ಸರಕಿನ ಬೆಲೆಯ ಮೇಲೆ ನೂರಕ್ಕಿಷ್ಟರಂತೆ ಕೊಡಬೇಕಾಗುತ್ತದೆ. ಈ ಬೆಲೆಯನ್ನು ಗೊತ್ತುಮಾಡುವಾಗ ಆಮದಾದ ಸರಕನ್ನೇ ಹೋಲುವ ಸರಕು ದೇಶದ ಸಗಟು ವ್ಯಾಪಾರ ಸಂತೆಯಲ್ಲಿ ಯಾವ ದರದಲ್ಲಿ ಮಾರಾಟವಾಗುವುದೋ ಆ ದರವನ್ನು ಗಮನದಲ್ಲಿಡಲಾಗುತ್ತದೆ. ಈ ರೀತಿ ಬೆಲೆಯನ್ನು ನಿರ್ಧರಿಸುವುದು ಅನೇಕ ವೇಳೆ ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭಗಳಲ್ಲಿ ಕಳೆದ ಹನ್ನೆರಡು ತಿಂಗಳಲ್ಲೋ ಅಥವಾ ಇನ್ನಾವುದಾದರೂ ಗೊತ್ತಾದ ಅವಧಿಯಲ್ಲೊ ಯಾವ ಬೆಲೆಯಲ್ಲಿ ಆ ರೀತಿಯ ಸರಕುಗಳು ಆಮದಾಗಿರುತ್ತವೆಯೋ ಆ ಬೆಲೆಯನ್ನೇ ಮೂಲವಾಗಿ ಇಟ್ಟುಕೊಂಡು ಸುಂಕವನ್ನು ವಿಧಿಸಲಾಗುತ್ತದೆ. ಇದಕ್ಕೆ ಸುಂಕ ನಿರ್ಧಾರ (ಟ್ಯಾರಿಫ್ ವ್ಯಾಲ್ಯುಯೇಷನ್) ಎಂದು ಹೆಸರು.

ಎರಡನೆಯ ರೀತಿಯದು ಸರಕಿನ ಬೆಲೆಯನ್ನವಲಂಬಿಸದೆ ಅದರ ಒಂದು ನಿಗದಿಯಾದ ಪ್ರಮಾಣದ ಆಧಾರದ ಮೇಲೆ ನಿಗದಿಯಾಗುತ್ತದೆ. ಹೇಗೆಂದರೆ ಬೆಲೆ ಎಷ್ಟಾದರೂ ಇರಲಿ, ಆಮದಾದ ಒಂದು ಪೌಂಡು ಅಥವಾ ಒಂದು ಕಿಲೋಗ್ರಾಮಿಗೆ ಕೊಡಬೇಕಾದ ಸುಂಕ ಇಂತಿಷ್ಟು ಎಂದು ವಿಧಾಯಕವಾಗಿರುತ್ತದೆ. ಈ ರೀತಿಯ ಸುಂಕಕ್ಕೆ ನಿಗದಿಸುಂಕ (ಸ್ಪೆಸಿಫಿಕ್ ಡ್ಯೂಟಿ) ಎಂದು ಹೆಸರು. ಎರಡೂ ಬಳಕೆಯಲ್ಲಿದ್ದರೂ ಇವೆರಡರಲ್ಲಿ ಸರ್ಕಾರ ತನಗೆ ಆದಾಯ ಹೆಚ್ಚು ಬರುವ ಕ್ರಮವನ್ನು ಸಾಮಾನ್ಯವಾಗಿ ಅನುಸರಿಸುತ್ತದೆ.

ಆಮದು ಸುಂಕಗಳನ್ನು ಹಾಕುವ ಉದ್ದೇಶ ಎರಡು ರೀತಿಯದಾಗಿರಬಹುದು. ಒಂದು, ಸರ್ಕಾರಕ್ಕೆ ಹೆಚ್ಚು ಅದಾಯವನ್ನೊದಗಿಸುವುದು. ಎರಡನೆಯದು, ದೇಶದಲ್ಲಿ ಬೆಳೆಯುತ್ತಿರುವ ಕೈಗಾರಿಕೆಗಳಿಗೆ ರಕ್ಷಣೆ ನೀಡುವುದು. ಈ ಎರಡು ಉದ್ದೇಶಗಳೂ ಪರಿಣಾಮದಲ್ಲಿ ಒಂದಕ್ಕೊಂದು ವಿರೋಧವಾದವುಗಳೆಂಬುದನ್ನು ಸುಲಭವಾಗಿ ತಿಳಿಯಬಹುದು. ಮೊದಲನೆಯ ಉದ್ದೇಶ ಸಾಧನೆಯಾಗಬೇಕಾದರೆ ಸರ್ಕಾರಕ್ಕೆ ಆಮದು ಬರುವ ಆದಾಯ ಹೆಚ್ಚಬೇಕು. ಎರಡನೆಯ ಉದ್ದೇಶ ಕೈಗೂಡಲು ಆಮದು ಕಡಿಮೆಯಾದರೂ ಅದರ ಬೆಲೆ ಹೆಚ್ಚಿರಬೇಕು. ಇವುಗಳ ಜೊತೆಗೆ ಮೂರನೆಯ ಒಂದು ಪದ್ಧತಿ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲೂ ಇನ್ನೂ ಕೆಲವು ದೇಶಗಳಲ್ಲೂ ಜಾರಿಯಲ್ಲಿದೆ. ಇದನ್ನು ರಿಯಾಯಿತಿ ಸುಂಕ (ಪ್ರಿಫರೆಂಷಿಯಲ್ ಟ್ಯಾಸರಿಪ್) ಪದ್ಧತಿ ಕರೆಯಬಹುದು. ಈ ಪದ್ಧತಿಯಲ್ಲಿ ತಮಗೆ ಇಷ್ಟವಾದ ದೇಶಗಳಿಂದ ಬರುವ ಸರಕುಗಳ ಮೇಲೆ ವಿಧಿಸುವ ಸುಂಕದ ದರ ಮಿಕ್ಕೆಲ್ಲ ದೇಶಗಳಿಂದ ಬರುವ ಸರಕುಗಳ ಮೇಲೆ ವಿಧಿಸುವ ಸುಂಕದ ದರಕ್ಕಿಂತ ಕಡಿಮೆಯಾಗಿರುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಪರದೇಶಗಳು ತಮ್ಮ ಸರಕುಗಳ ರಫ್ತನ್ನು ಹೆಚ್ಚಿಸಲು ಪ್ರೋತ್ಸಾಹ ದ್ರವ್ಯ (ಸಬ್ಸಿಡಿ, ಚಾರಿಟಿ) ಕೊಡುತ್ತಿರಬಹುದು. ಈ ರೀತಿ ಪ್ರೋತ್ಸಾಹಿತವಾದ ಸರಕುಗಳಿಂದ ಸ್ವದೇಶದಲ್ಲಿ ತಯಾರಾದ ಸರಕುಗಳಿಗೆ ಪೈಪೋಟಿ ಉಂಟಾಗುತ್ತದೆ. ಇಂಥ ಪೈಪೋಟಿಯನ್ನು ತಡೆಗಟ್ಟುವ ಉದ್ದೇಶದಿಂದಲೂ ಸುಂಕಗಳನ್ನು ವಿಧಿಸಬಹುದು. ಈ ಸುಂಕಗಳಿಗೆ ಈಡು ತೆರಿಗೆ (ಕೌಂಟ್‌ವೇಲಿಂಗ್ ಡ್ಯೂಟೀಸ್) ಎಂದು ಹೆಸರು. ಸಾಮಾನ್ಯವಾಗಿ ಇರುವ ಸುಂಕದ ಜೊತೆಗೆ ಪರದೇಶಗಳಲ್ಲಿ ಕೊಡಲಾಗುವ ಪ್ರೋತ್ಸಾಹ ದ್ರವ್ಯದ ಮೊತ್ತಕ್ಕೆ ಸರಿಗಟ್ಟುವಂತೆ ಈ ಸುಂಕಗಳನ್ನು ವಿಧಿಸಲಾಗುತ್ತದೆ.

ಮೊದಮೊದಲು ಆಮದು ಸುಂಕಕ್ಕಿಂತ ರಫ್ತು ಸುಂಕ ಹೆಚ್ಚು ಚಾಲ್ತಿಯಲ್ಲಿತ್ತು. ಇದರ ಮುಖ್ಯ ಉದ್ದೇಶ ದೇಶದಲ್ಲಿ ತಯಾರಾದ ಸರಕುಗಳನ್ನು ಹೊರಗೆ ಹೋಗಲು ಆಸ್ಪದ ಕೊಡದೆ, ದೇಶದ ಜನತೆಯ ಉಪಯೋಗಕ್ಕಾಗಿ ಉಳಿಸಿಕೊಳ್ಳುವುದೇ ಆಗಿದ್ದಿತ್ತು. ಈಗ ಈ ರಫ್ತು ಸುಂಕಗಳು ಮೊದಲಿನಷ್ಟು ಉಪಯೋಗದಲ್ಲಿಲ್ಲ. ಇದ್ದರೂ ಇದಕ್ಕೊಳಪಟ್ಟ ವಸ್ತುಗಳ ಸಂಖ್ಯೆ ತುಂಬ ಕಡಿಮೆ ಮತ್ತು ಈ ಸುಂಕಗಳ ಉದ್ದೇಶ ಸರ್ಕಾರಕ್ಕೆ ಹೆಚ್ಚು ಆದಾಯವನ್ನೊದಗಿಸುವುದು.

ಸುಂಕ ಪದ್ಧತಿಯನ್ನು ಅನುಸರಿಸುತ್ತಿರುವ ದೇಶಗಳಲ್ಲಿ ಮೂರು ಗುಂಪನ್ನು ಗುರುತಿಸಬಹುದು. ಮೊದಲನೆಯ ಗುಂಪಿನಲ್ಲಿರುವ ದೇಶದಲ್ಲಿ ಸುಂಕ ಹಾಕುವ ಮುಖ್ಯ ಉದ್ದೇಶ ಸರಕಾರಕ್ಕೆ ಹೆಚ್ಚು ಹೆಚ್ಚು ವರಮಾನವನ್ನೊದಗಿಸುವುದು. ಇಲ್ಲೂ ಕೈಗಾರಿಕೆಗಳಿಗೆ ರಕ್ಷಣೆ ದೊರೆಯಬಹುದಾದರೂ ಈ ರಕ್ಷಣೆ ಉದ್ದೇಶಪೂರ್ವಕವಾದುದಲ್ಲ. ಸಾಮಾನ್ಯವಾಗಿ ಕೃಷಿ ಅಥವಾ ಕೃಷಿಸಂಬಂಧವಾದ ವೃತ್ತಿಗಳೇ ಪ್ರಧಾನವಾಗಿರುವ ಆಸ್ಟ್ರೇಲಿಯ ಮುಂತಾದ ರಾಷ್ಟ್ರಗಳು ಈ ಗುಂಪಿಗೆ ಸೇರುತ್ತವೆ. ಎರಡನೆಯ ಗುಂಪಿನಲ್ಲಿ ಬರುವ ದೇಶಗಳು ಸ್ವದೇಶದ ಕೈಗಾರಿಕೆಗಳಿಗೆ ರಕ್ಷಣೆ ನೀಡುವ ಉದ್ದೇಶದಿಂದಲೇ ಕೆಲವು ಸರಕುಗಳ ಮೇಲೆ ಸುಂಕ ಹಾಕಲುಬಾರದಂಥ ದೇಶಗಳು, ಬೆಳೆದು ತಲೆ ಎತ್ತಿ ನಿಂತಿರುವ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಮಾಲುಗಳನ್ನು ಎಲ್ಲೆಲ್ಲಿಂದ ಸಾಧ್ಯವೋ ಅಲ್ಲಿಂದೆಲ್ಲಾ ಆದಷ್ಟು ಅಗ್ಗವಾಗಿ ಆಮದು ಮಾಡಿಕೊಳ್ಳಲು ಯತ್ನಿಸುತ್ತಿರುವ ಇಂಗ್ಲೆಂಡ್ ಮುಂತಾದ ರಾಷ್ಟ್ರಗಳು ಮೂರನೆಯ ಗುಂಪಿನವು.

ಸುಂಕ ಪದ್ಧತಿಯ ಚರಿತ್ರೆಯಲ್ಲಿ ಮುಖ್ಯವಾದ ಘಟ್ಟಗಳನ್ನು ಇಲ್ಲಿ ಸ್ಥೂಲವಾಗಿ ಚಿತ್ರಿಸಬಹುದು. 1789–1815 ರ ಅವಧಿ ನೆಪೋಲಿಯನ್ನನ ವ್ಯಕ್ತಿತ್ವ ಐರೋಪ್ಯ ರಾಷ್ಟ್ರಗಳ ವಿಕಾಸದ ಮೇಲೆ ಪ್ರಭಾವ ಬೀರುತ್ತಿದ್ದ ಕಾಲ. ಈ ಅವಧಿಯಲ್ಲಿ ಯುದ್ಧಕ್ಕೆ ಬೇಕಾದ ಹಣವನ್ನೊದಗಿಸುವುದೇ ಈ ರಾಷ್ಟ್ರಗಳ ಸುಂಕನೀತಿಯ ಪರಮೋದ್ದೇಶವಾಗಿತ್ತು. ಆದುದರಿಂದ ಸುಂಕಗಳ ಮಟ್ಟ ವರ್ಷವರ್ಷಕ್ಕೆ ಏರುತ್ತಲೇ ಬಂತು.

ಮುಂದಿನ ಘಟ್ಟ 1815ರಿಂದ ಪ್ರಾರಂಭವಾಗಿ 1870 ರ ವರೆಗೆ ಬಲಿಷ್ಠ ರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಅಮೆರಿಕಗಳ ಜೊತೆಗೆ, ಜರ್ಮನಿಯೂ ರಾಷ್ಟ್ರದ ಏಕೀಕರಣವನ್ನು ಸಾಧಿಸಿ, ತಲೆ ಎತ್ತಿತ್ತು. ಆ ದೇಶಗಳಂತೆಯೇ ಜರ್ಮನಿಯಲ್ಲೂ ಸುಂಕಪದ್ಧತಿಯನ್ನು ಜಾರಿಗೆ ತರಲಾಯಿತು. ಹಾಲೆಂಡ್ ಮತ್ತು ಸ್ವಿಟ್ಜರ್ಲೆಂಡ್ ದೇಶಗಳೂ ಈ ಪದ್ಧತಿಯನ್ನು ಜಾರಿಗೆ ತಂದುವು. ಎಚ್ಚೆತ್ತ ಕೂಲಿಕಾರರ ತಂಡಕ್ಕೆ ಸುಲಭ ಬೆಲೆಯಲ್ಲಿ ಆಹಾರ ಧಾನ್ಯಗಳನ್ನೊದಗಿಸಲು ಇಂಗ್ಲೆಂಡು ಧಾನ್ಯಗಳ ಆಮದಿನ ಮೇಲೆ ಸುಂಕವನ್ನು ಕ್ರಮೇಣ ಕಡಿಮೆ ಮಾಡಿ 1845 ರಲ್ಲಿ ಸಂಪೂರ್ಣವಾಗಿ ರದ್ದು ಮಾಡಿತು. 1846ರ ವೇಳೆಗೆ ಅಮೆರಿಕ, ಮತ್ತು 1952ರಲ್ಲಿ ಫ್ರಾನ್ಸ್ ದೇಶಗಳಲ್ಲಿ ಆಮದು ಸುಂಕವನ್ನು ಕಡಿಮೆ ಮಾಡಿ ತಡೆಯಿಲ್ಲದ ವ್ಯಾಪಾರ ನೀತಿಯನ್ನು ಅನುಸರಿಸಲಾಯಿತು.

1871ರಿಂದ 1914ರ ವರೆಗೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಈ ನೀತಿಯನ್ನೇ ಮುಂದುವರಿಸಿಕೊಂಡು ಬರಲಾಯಿತು. ಜರ್ಮನಿಯಲ್ಲಿ ಕೂಡ ಕೈಗಾರಿಕಾ ಕ್ರಾಂತಿ ಒಂದು ಮಟ್ಟಕ್ಕೆ ಬಂದಾಗ ಸುಂಕದ ದರವನ್ನು ಇಳಿಸಲು ಸಾಧ್ಯವಾಯಿತು. ಅಮೆರಿಕದಲ್ಲಿ ಮಾತ್ರ 1865ರಲ್ಲಿ ಕೊನೆಗೊಂಡ ಒಳಯುದ್ಧದ ಅನಂತರ ರಕ್ಷಣಾನೀತಿ ಬಲಗೊಂಡು ಆಮದು ಸುಂಕಗಳನ್ನು ಹೆಚ್ಚಿಸಲಾಯಿತು.

1914 – 18ರ ಒಂದನೆಯ ಮಹಾಯುದ್ಧದ ಕಾಲದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಅನೇಕ ವಿಧವಾದ ತಡೆಗಳು ಜಾರಿಗೆ ಬಂದು ಸುಂಕ ಪದ್ಧತಿ ಹೆಚ್ಚು ಪರಿಣಾಮಕಾರಿಯಾಗಲಿಲ್ಲ.

ಯುದ್ಧ ಮುಗಿದ ಮೇಲೆ ಬಂದ 1921–30ರ ದಶಕದಲ್ಲಿ ಸುಂಕಪದ್ಧತಿಗೆ ಮತ್ತೆ ಪ್ರಾಮುಖ್ಯ ದೊರೆಯಿತು. ಇದಕ್ಕೆ ಕಾರಣ ಸ್ವದೇಶದ ಕೈಗಾರಿಕೆಗಳನ್ನು ಬೆಳೆಸಬೇಕೆಂಬ ಎಲ್ಲೆಲ್ಲೂ ತಲೆ ಎತ್ತಿದ ತೀವ್ರ ಆಕಾಂಕ್ಷೆ. ಇದರ ಪರಿಣಾಮವಾಗಿ ಅನೇಕ ದೇಶಗಳಲ್ಲಿ ಆಮದು ಸುಂಕಗಳನ್ನು ಏರಿಸಲಾಯಿತು. 1914ಕ್ಕೆ ಮುಂಚೆ ಶೇಕಡ ಮೂವತ್ತಕ್ಕೂ ಮೀರಿದ ಸುಂಕ ಎಲ್ಲೋ ಅಲ್ಲೊಂದು ಇಲ್ಲೊಂದು ಮಾತ್ರ ಇತ್ತು. 1931ರ ವೇಳೆಗೆ ಈ ದರವೇ ಕನಿಷ್ಠ ಪ್ರಮಾಣವಾಗಿ ಪರಿಣಮಿಸಿ ಶೇಕಡ ಮೂವತ್ತು ಅಥವಾ ನಲವತ್ತರ ಮಟ್ಟ ಸರ್ವಸಾಧಾರಣವಾಯಿತು. ಇತರ ಮುಂದುವರೆದ ಐರೋಪ್ಯ ರಾಷ್ಟ್ರಗಳು ಕೃಷಿಸಂಬಂಧವಾದ ಸರಕುಗಳ ಮೇಲಿನ ಆಮದು ಸುಂಕವನ್ನು ಶೇಕಡ ಐವತ್ತರ ತನಕ ಏರಿಸಿದ್ದರೆ, ಜರ್ಮನಿ ಇನ್ನೂ ಮುಂದುವರಿದು, ಈ ಸುಂಕವನ್ನು ಶೇಕಡ 82.5ಕ್ಕೆ ಹೆಚ್ಚಿಸಿತು. ಅಮೆರಿಕದಲ್ಲಿ ಕೂಡ ಈ ಪ್ರವೃತ್ತಿ ಕಂಡುಬಂದಿತು. ಉದಾಹರಣೆಗಾಗಿ 1930ರಲ್ಲಿ ಜಾರಿಗೆ ಬಂದ ಹಾಲಿ ಸ್ಮೂಟ್ ಟ್ಯಾರಿಫ್‌ನಲ್ಲಿ ಆಮದು ಸುಂಕಗಳನ್ನು ಏರಿಸಲಾದ ಸರಕುಗಳ ಸಂಖ್ಯೆ 900 ಕ್ಕೂ ಮೀರಿತ್ತು.

1932– 39ರ ಅವಧಿಯಲ್ಲಿ ಆರ್ಥಿಕ ಮುಗ್ಗಟ್ಟು ಎಲ್ಲೆಲ್ಲೂ ತಲೆದೋರಿ ಅದನ್ನು ನಿವಾರಿಸಲು ಹಲವು ಪ್ರದೇಶಗಳಲ್ಲಿ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ತೀವ್ರವಾದ ತಡೆಗಳನ್ನು ಒಡ್ಡಲಾಯಿತು. ಮುಂದೆ 1939 – 45ರಲ್ಲಿ ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಅಂತಾರಾಷ್ಟ್ರೀಯ ವ್ಯಾಪಾರ ನೇರವಾಗಿ ಸರ್ಕಾರಗಳ ಕೈಗೆ ಬಂತು. ಈ ಪರಿಸ್ಥಿತಿಯಲ್ಲಿ ಸುಂಕ ಪದ್ಧತಿಯ ಆವಶ್ಯಕತೆ ಹೆಚ್ಚಾಗಿ ಬೀಳಲಿಲ್ಲ. ಯುದ್ಧ ಮುಗಿದ ಮೇಲೆ ಇಲ್ಲಿಯವರೆಗೆ, ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಇರುವ ಅಡಚಣೆಗಳನ್ನು ಸಾಧ್ಯವಾದಷ್ಟು ತೆಗೆದು ಹಾಕಿ ಈ ವ್ಯಾಪಾರ ಸಲೀಸಾಗಿ ನಡೆಯಲು ಬೇಕಾದ ಹಿನ್ನೆಲೆಯನ್ನು ಕಲ್ಪಿಸಲು ಸುಂಕಗಳನ್ನು ಕಡಿಮೆ ಮಾಡುವುದೂ ಒಂದು ಮುಖ್ಯವಾದ ಸಾಧನವೆಂಬುದನ್ನು ರಾಷ್ಟ್ರಗಳು ಮನಗಂಡಿವೆ. 1947ರಿಂದ ಕೆಲಸ ಮಾಡುತ್ತಿರುವ ಗ್ಯಾಟ್ (ಜನರಲ್ ಅಗ್ರಿಮೆಂಟ್ ಆನ್ ಟ್ಯಾರಿಫ್ಸ್ ಅಂಡ್ ಟ್ರೇಡ್, 1948.) ಮತ್ತು ಇನ್ನಿತರ ಅಂತಾರಾಷ್ಟ್ರೀಯ ಸಂಸ್ಥೆಗಳು ಕ್ರಮೇಣ ಪರಸ್ಪರವಾಗಿ ಸುಂಕಗಳನ್ನು ಇಳಿಸಲು ಶ್ರಮಿಸುತ್ತಿವೆ. (ಎ.ಎಸ್.ಎಲ್.; ಜಿ.ಎಸ್.ಎನ್)

**ಆಮನಿಯರ್ ಸ್ಟೇಸಿ :** 1887–1928. ಇಂಗ್ಲಿಷ್ ಕಾದಂಬರಿಕಾರ ಕಥೆಗಾರ. ಯುದ್ಧಕಾಲದ ಸಂಸಾರವೊಂದರ ಕಥೆಯನ್ನು ನಿರೂಪಿಸುವ ದಿ ಕ್ವೆರಿಲ್ಸ್ ಎಂಬ ಪ್ರಸಿದ್ಧ ಕಾದಂಬರಿಯ ಕರ್ತೃ. ತಂದೆ ಶಿಲ್ಪಿ. ಚಿತ್ರಕಲೆಯಲ್ಲೂ ಅಭಿರುಚಿಯುಂಟು. ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿದ. ಹಾರ್ಟ್‌ಬೀಟ್ (1922), ಓವರ್‌ಹರ್ಡ್ (1924), ದಿ ಬೇಬಿ ಗ್ರಾಂಡ್ (1926), ಲಿಟ್ಲ್ ವಿಂಡೋಸ್ (1931)– ಈತನ ಪ್ರಸಿದ್ಧ ಕೃತಿಗಳು. ಆಧುನಿಕ ಕಥಾಪ್ರಂಪಚದಲ್ಲಿ ಅತಿ ಮುಖ್ಯರಲ್ಲೊಬ್ಬನೆಂದು ಹೆಸರು ಪಡೆದಿದ್ದಾನೆ.

(ಎಸ್.ಎ.ಎಸ್.ಜಿ.ಎಸ್.ಎಸ್.ಎನ್)

**ಆಮಶಂಕೆ :** ಹೊಟ್ಟೆನೋವು ನುಲಿತಗಳೊಂದಿಗೆ ಮಲದಲ್ಲಿ ಆಮ, ರಕ್ತ ಬೀಳುವ ಬೇನೆಯ ಒಂದು ಲಕ್ಷಣ. ಇದನ್ನೇ ರಕ್ತಭೇದಿ ಅನ್ನುವುದೂ ಉಂಟು. ಕರುಳುಗಳಲ್ಲಿ ಸೋಂಕು ಹತ್ತದೆ ಹೀಗೆಯೇ ಆಮ, ರಕ್ತ ಬೀಳುವುದಾದರೂ ಹೆಗ್ಗರುಳಿನ (ಕೋಲನ್) ಸೋಂಕಿನಿಂದ ಆದುದಕ್ಕೇ ಈ ಹೆಸರು ರೂಢಿಯಲ್ಲಿದೆ. ಆಮಶಂಕೆಯಲ್ಲಿ ಹೊಟ್ಟೆನುಲಿತ ಮುಕ್ಕುರಿಗಳೊಂದಿಗೆ (ಟೆನಿಸ್ಮಸ್) ಮಲದಲ್ಲಿ ಆಮ, ರಕ್ತ ಬೆರೆತಿರುತ್ತವೆ. ಆದರೆ ಸೋಂಕು ತುಸುವಾಗಿದ್ದರೆ ಯಾವ ರೋಗಲಕ್ಷಣಗಳೂ ಹೊರದೋರದೆ ಇರಬಹುದು. ಅದೇ ಕಟ್ಟುನಿಟ್ಟಾಗಿದ್ದರೆ ಇದ್ದಕ್ಕಿದ್ದ ಹಾಗೆ ಜೋರಾಗಿ ಮಾರಕವಾಗುವುದುಂಟು. ಚಿಕಿತ್ಸೆ ಕೈಗೊಡಲು ರೋಗದ ಖಚಿತವಾದ ಕಾರಣ ಗೊತ್ತಾಗಬೇಕು. ಆಮಶಂಕೆ ಏಕಾಣುಜೀವಿಕ (ಬ್ಯಾಕ್ಟೀರಿಯಲ್), ಮುಂಜೀವಿಕ (ಪ್ರೋಟೊಜೋವಲ್), ಕರುಳುಹುಳುವಿನದು (ಹೆಲ್ಮಿಂತಿಕ್) ಆಗಿರಬಹುದು. ಈ ಗುಂಪುಗಳಲ್ಲಿ ಕ್ರಮವಾಗಿ ದಂಡಾಣುಜೀವಿಗಳು (ಬ್ಯಾಸಿಲೈ), ಚಲ್ಕಣಗಳು (ಅಮೀಬ), ಸೀಳೂಡಲಿಗಳು (ಷಿಸ್ಟೊಸೋಮ್ಸ್) ತೀರ ಸಾಮಾನ್ಯ ಕಾರಕಗಳು.

**ಏಕಾಣುಜೀವಿಕ ಆಮಶಂಕೆಗಳು** : ಮುಖ್ಯವಾಗಿ ಮೂರು ಷೀಗಜೀವಿಗಳು (ಷೀಗೆಲ್ಲ) ಕಾರಣಗಳು; ಷೀಗನ ಷಿಗಜೀವಿ (ಷೀಗೆಲ್ಲ ಷೀಗೆ), ಫ್ಲೆಕ್ಸ್‌ನರನ ಷೀಗಜೀವಿ (ಷೀಗೆಲ್ಲ ಫ್ಲೆಕ್ಸ್‌ನರಿ), ಸೊನ್ನೆನ ಷೀಗಜೀವಿ(ಷೀಗೆಲ್ಲ ಸೊನ್ನೆಯೈ). ಷೀಗನ ದಂಡಾಣುಜೀವಿಯಷ್ಟು (ಬ್ಯಾಸಿಲಸ್) ಸರಕ್ಕನೆ ಬಲಿ ತೆಗೆದುಕೊಳ್ಳುವಷ್ಟು ಮಾರಕವಾದ ಆಮಶಂಕೆ ಉಷ್ಣವಲಯದಲ್ಲಿ ಇನ್ನೊಂದಿಲ್ಲ. ಕಾಲರವನ್ನು ಹೋಲುವ ಈ ಆಮಶಂಕೆ ಅಷ್ಟೇ ಭಯಂಕರ. ಅನೇಕ ವೇಳೆ, ಮೆಲುಪಿನ ಆಮಶಂಕೆಗೆ ಫ್ಲೆಕ್ಸ್‌ನರನ ದಂಡಾಣುಜೀವಿಗಳು ಕಾರಣ. ಸೊನ್ನೆನ ದಂಡಾಣುಜೀವಿ ಚಳಿನಾಡುಗಳಲ್ಲಿ ಹೆಚ್ಚು; ಅದರಲ್ಲೂ ಎಳೆಗೂಸುಗಳು, ಮಕ್ಕಳಲ್ಲಿ ಸಾಂಕ್ರಾಮಿಕವಾಗಿ ಬಲು ಬೇಗನೆ ಹರಡುತ್ತದೆ. ಹರೆಯದವರಲ್ಲಿ ಬರೀ ಉಚ್ಚಾಟವಾಗುತ್ತದೆ. ಈ ರೋಗಾಣುಗಳನ್ನೆಲ್ಲ ಅವುಗಳ ವಿಶಿಷ್ಟವಾದ ತಳಿಯೆಬ್ಬಿಕ (ಕಲ್ಚರಲ್), ರಕ್ತರಸಿಕೆಯ (ಸೀರಂ) ಗುಣಲಕ್ಷಣಗಳಿಂದ ಗುರುತಿಸಬಹುದು.

**ಲಕ್ಷಣಗಳು** : ಮುಖ್ಯವಾಗಿ ದೊಡ್ಡ ಕರುಳಿನಲ್ಲಿ ಲೋಳೆಪರೆಯಲ್ಲಿ (ಮ್ಯೂಕಸ್ ಮೆಂಬ್ರೇನ್) ಉರಿಯೂತ (ಇನ್‌ಫ್ಲಮೇಷನ್) ಆಗುವುದು. ಕೆಲವೇಳೆ ಸಣ್ಣ ಕರುಳಿನ ಕೊನೆಯ ಭಾಗಕ್ಕೂ ಹರಡಿ, ಲೋಳೆಪರೆ ಮೇಲ್ಮೇಲೇ ಕೊಳೆಯಬಹುದು. ಅಮಶಂಕೆಯ ಬಗೆಬಗೆಯ ಏಕಾಣುಜೀವಿಗಳು ಬಿಡುವ ಹೊರಜೀವಿ ವಿಷಗಳು (ಎಕ್ಸೊಟಾಕ್ಸಿನ್ಸ್) ರಕ್ತಗತವಾಗುವುದರಿಂದಲೂ ಹೀಗೆ ಹಾಳಾದ್ದನ್ನು ಹೊರಕಳೆವಾಗಿನ, ಮೈಯ ಯತ್ನಗಳಿಂದಲೂ ಕರುಳು ಕೆರಳಿ, ಹೊಟ್ಟೆ ಶೂಲೆ, ಉಚ್ಚಾಟ ಆಗುತ್ತದೆ. ಲೋಳೆಪರೆಯಲ್ಲಿ ಹುಣ್ಣಾಗಿ ಕೊಳೆವುದರಿಂದ ಮಲದಲ್ಲಿ ಆಮ, ರಕ್ತ, ಕೀವು, ಗೋಚೂ (ಸ್ಲಫ್) ಆಗಿ ಬೀಳುತ್ತವೆ. ಅದರಲ್ಲೂ ಷೀಗನ ದಂಡಾಣುಜೀವಿಗಳು ಬಲವಾದ ಹೊರಜೀವಿ ವಿಷವನ್ನು ತಯಾರಿಸುತ್ತವೆ. ಇದರಿಂದ ನಂಜೇರಿ, ಮೈಯಲ್ಲಿನ ಬಹುಪಾಲು ನೀರು ಕಳೆದುಹೋಗಿ, ನೇರವಾಗೋ ಮೂತ್ರಪಿಂಡಗಳ ನಿಷ್ಕ್ರಿಯತೆಯಿಂದಲೋ ರೋಗಿ ಸಾಯಬಹುದು. ಈ ಆಮಶಂಕೆ ಒಬ್ಬೊಬ್ಬರಲ್ಲಿ ಒಂದೊಂದು ತೆರನಾಗಿರಬಹುದು. ಎಲ್ಲೊ ತುಸು ಕಂಡಂತಾಗಿ ಹಾಗೇ ಅಣಗಬಹುದು. ದಿನಕ್ಕೆ 2–60 ಸಾರಿ ಉಚ್ಚಾಟವಾಗಬಹುದು. ರಕ್ತ, ಆಮ ಹೆಚ್ಚಾಗಿದ್ದು



ಮೇಲಿನವು ಊತಕಲಯಕ ಕರುಳ್ಚಲಕಣಗಳು. ಕೆಳಗಿನವು ಹೆಗ್ಗರುಳಿನ ಕರುಳ್ಚಲಕಣಗಳು

ಮಲ ತೀರ ಕಡಿಮೆ ಇರುತ್ತದೆ, ಇಲ್ಲದೆಯೂ ಇರಬಹುದು. ಇದ್ದಕ್ಕಿದ್ದಂತೆ, ವಿಪರೀತವಾಗಿ ಬಲು ರಕ್ತ ವಿಷವೇರಿ 1–2 ದಿವಸಗಳಲ್ಲೇ ಸಾಯುವುದು ಅಪೂರ್ವವಲ್ಲ. ಹೊಸ ಊರುಗಳಿಗೆ ಹೋಗುವವರಲ್ಲಂತೂ ಇದು ಸಿಡಿವಂತೆ ಕಾಡುತ್ತದೆ. ಕಾಲರ ರೋಗವೆಂದು ತಪ್ಪು ತಿಳಿವಷ್ಟು ಉಚ್ಚಾಟ ಬಲವಾಗಿರುವುದು. 3–4 ತಾಸುಗಳಲ್ಲಿ ಇನ್ನೂ ಜೋರಾಗುತ್ತದೆ. ಇದ್ದಕ್ಕಿದ್ದ ಹಾಗೆ ಕಾಣಿಸಿಕೊಂಡರೂ ಕೆಲವೇ ತಾಸುಗಳಲ್ಲಿ ಜ್ವರ ಏರುತ್ತದೆ. ರೋಗಿಗೆ ಬಹಳ ನಂಜೇರಿ, ಮೈಯಲ್ಲಿ ನೀರು ಸಾಲದಾಗುವ ಪರಿಣಾಮ ಬೇಗನೆ ತಲೆದೋರುವುದು. ಕೆಲವೇಳೆ ವಾಂತಿ ಆಗುವುದುಂಟು. ಹೊಟ್ಟೆಯೆಲ್ಲ ನೋವು, ಮುಕ್ಕುರಿ ಇರುವುವು. ರಕ್ತ, ಆಮ ಮಲದಲ್ಲಿ ಹೋಗಲು ತಡೆಯಿರದು. ಮಕ್ಕಳಲ್ಲಿ ಸೆಳವು (ಕನ್ವಲ್ಷನ್) ಇದರ ಮುನ್ಸೂಚಕವಾಗಿ ಬರಬಹುದು. ಈ ಆಮಶಂಕೆ ಬೇರೂರುವುದು ಅಪೂರ್ವ. ಬೇರೂರಿದರೆ, ಆಯಾಸ, ದಣಿವು, ನಿತ್ರಾಣಗಳಿರುತ್ತವೆ. ಕೆಲವೇಳೆ ಈ ಆಮಶಂಕೆಯೊಂದಿಗೆ, ಕೀಲುರಿತವಾಗಿ (ಆರ್ತ್ರೈಟಿಸ್) ಊದಿಕೊಂಡು ನೋವಿಡುತ್ತದೆ. ಮೂತ್ರಪಿಂಡುರಿತವೂ (ನೆಫ್ರೈಟಿಸ್) ಆಗಬಹುದು. ಒಮ್ಮೊಮ್ಮೆ ಹೊಟ್ಟೆಯಲ್ಲಿ ನೀರು ತುಂಬಿಕೊಂಡು ನೀರ್ಡೊಳ್ಳು (ಅಸ್ಸೈಟಿಸ್) ಆಗಲೂಬಹುದು.

**ನಿದಾನ:** ರೋಗಿಯ ಲಕ್ಷಣಗಳಿಂದಲೂ, ಮಲವನ್ನು ಪರೀಕ್ಷಿಸುವುದರಿಂದಲೂ ಈ ಆಮಶಂಕೆಯನ್ನು ನಿಖರವಾಗಿ ಗುರುತಿಸಬಹುದು. ರಸಿಕೆ ತುಂಬಿದ ರಕ್ತಕಲೆಗಳು ಬೆರೆತ ಆಮ ಇಲ್ಲಿ ವಿಶೇಷ. ಆಯಾ ರೋಗಾಣುಗಳಿಗೆ ತಕ್ಕ ಆಯ್ದ ಅಗಾರಿನ ತಳಿವರ್ಧಿಸೆಯ ನಡುವರ್ತಿಗಳಲ್ಲಿ (ಕಲ್ಚರ್ ಮೀಡಿಯ) ಹುಲುಸಾಗಿ ಬೆಳೆಯ ಬಿಟ್ಟು ಬೇರ್ಪಡಿಸಿ (ಐಸೊಲೇಟ್) ಗುರುತಿಸಬಹುದು. ಮಿಣಿದರ್ಶಕದಲ್ಲಿ ನೋಡಿದರೆ ರೋಗಿಯ ಕರುಳಿನ ಸುರಿಕೆಗಳಲ್ಲಿ ನಿಡುಂಬಕಣಗಳಂಥವು (ಮ್ಯಾಕ್ರೊಫೇಜಸ್) ದೊಡ್ಡ ಊತಕ (ಟಿಷ್ಯೂ) ಕಣಗಳ, ಲೋಳೆಪರೆ

ಯಿಂದ ಬಂದ ಕೀವಿನ ಬಿಳಿಕಣಗಳು ವಿಶಿಷ್ಟವಾಗಿ ಕಾಣುತ್ತವೆ. ಕೂರಾದ (ಅಕ್ಯೂಟ್) ಏಕಾಣುಜೀವಿಕ ಆಮಶಂಕೆಯಲ್ಲಿ ಗುದದ ಮೂಲಕ ಕೊಳವೆ ತೂರಿಸಿ, ಬೆಳಕು ಹಾಯಿಸಿ ಹೆಗ್ಗರುಳಿನೊಳಗೆ ನೋಡಬೇಕಾಗಿ ಬರುವುದು ಅಪೂರ್ವ. ಹಾಗೂ ನೋಡಿದಲ್ಲಿ ಲೋಳೆಪರೆ ಒರಟೊರಟಾಗಿ ತರಕಲಾಗಿ ಕಾಣುವುದು.

**ಚಿಕಿತ್ಸೆ** : ರೋಗ ಉಲ್ಬಣವಾಗಿರುವಾಗ, ರೋಗಿ ಹಾಸಿಗೆಯಲ್ಲಿ ಮಲಗೇ ತೀರಬೇಕು. ಮೊದಲೆರಡು ದಿವಸಗಳು ಯಾವ ಆಹಾರವನ್ನೂ ಕೊಡಬಾರದು. ಆದರೆ ಕೊಂಚ ಉಪ್ಪು ಹಾಕಿದ ನೀರನ್ನು ಮಾತ್ರ ದಂಡಿಯಾಗಿ ಕುಡಿಸುತ್ತಿರಬೇಕು. ಸಲ್ಫ ಮದ್ದುಗಳನ್ನು ಕೊಡುವುದೇ ಇದಕ್ಕೆ ಸರಿಯಾದ ಚಿಕಿತ್ಸೆ. ಸಲ್ಫಸಕ್ಸಿಡೀನ್, ಸಲ್ಫಡಯಜಿನ್, ಸಲ್ಫತ್ಯಾಲಜೋಲ್‌ಗಳು ಷೀಗಜೀವಿಗಳು ಗುಣಿತವಾಗುವುದನ್ನು ತಗ್ಗಿಸುವುದರಿಂದ, ಲೋಳೆಪರೆಯೊಳಕ್ಕೆ ರೋಗಾಣುಗಳು ನುಗ್ಗುವುದು ತಪ್ಪಿ ಜೀವಿಷ (ಟಾಕ್ಸಿನ್) ತಯಾರಿಕೆ ನಿಂತು, ಮೈಯ ಎಂದಿನ ರೋಗತಡೆವ ಬಲ ಹೆಚ್ಚಿ ಸೋಂಕನ್ನು ಹೋಗಲಾಡಿಸುವುವು. ಈ ಮದ್ದುಗಳನ್ನು ನುಂಗುತ್ತಿರುವಾಗ, ಅಲ್ಲದೆ ಉಚ್ಚಾಟದಿಂದ ಮೈ ನೀರು ಬಹಳವಾಗಿ ಕಳೆವುದರಿಂದ, ಮುಖ್ಯವಾಗಿ ನೀರು ಒಳಸೇರುತ್ತಿದ್ದರೆ ಕೆಡುಕಿಲ್ಲ. ಕುಡಿಯಲಾಗದಿದ್ದರೆ, ವಾಂತಿ ಆಗುತ್ತಿದ್ದರೆ, 2–3 ಲೀಟರುಗಳಷ್ಟು ಬೆಚ್ಚಗಿನ ಉಪ್ಪುನೀರನ್ನು ನಿಧಾನವಾಗಿ ರಕ್ತನಾಳದ ಒಳಕ್ಕೆ ಬಿಡುವ ಚುಚ್ಚುಗೆಯನ್ನು ಜೋಡಿಸಿರುವುದುಂಟು. ತೀವ್ರವಾದ ಷೀಗಜೀವಿಗಳ ಸೋಂಕುಗಳಲ್ಲಿ ಹುಟ್ಟೇಳುವ ಜೀವಿಷಗಳನ್ನು ಸಯ್ಗೊಳಿಸಲು (ನ್ಯೂಟ್ರಲೈಸ್) ತಕ್ಕ ಜೀವಿಷರೋಧಕಗಳನ್ನು (ಆ್ಯಂಟಿಟಾಕ್ಸಿನ್ಸ್) ಕೊಡಬೇಕಾಗಬಹುದು. ಜೀವಿರೋಧಕಗಳಲ್ಲಿ (ಆ್ಯಂಟಿಬಯೋಟಿಕ್ಸ್) ಸ್ಟ್ರೆಪ್ಟೊಮೈಸಿನ್ ಒಳ್ಳೆಯದು. ಇದನ್ನು ಬಾಯಲ್ಲಿ ನುಂಗಿಸಲೂ ಬಹುದು, ಚುಚ್ಚಿ ಕೊಡಲೂ ಬಹುದು. ಕ್ಲೋರಾಂಫೆನಿಕಾಲ್, ಆರಿಯೊಮೈಸಿನ್, ಆಕ್ಸಿಟೆಟ್ರಸೈಕ್ಲೀನುಗಳೂ ಅಷ್ಟೇ ಚೆನ್ನಾಗಿ ಕೆಲಸಕ್ಕೆ ಬರುತ್ತವೆ. ಜಠರದಲ್ಲಿ ಆಮ್ಲದ ಸುರಿಕೆ ತಗ್ಗಿದರೆ, ಕರುಳುಗಳಲ್ಲಿ ಇನ್ನಷ್ಟು ಸೊಂಕು ಒಳಸೇರುವುದನ್ನು ತಪ್ಪಿಸಲು, ತಕ್ಕ ಆಮ್ಲಗೂಡಿಸುವ ಮದ್ದುಗಳನ್ನು ಕೊಡಬೇಕು. ಜೀವಿಷದ ಕೀಲುರಿತದಂಥ ಮರುಚಲದ (ಸೆಕೆಂಡರಿ) ಸೋಂಕುಗಳಿಗೆ ತಕ್ಕ ಚಿಕಿತ್ಸೆ ಆಗಬೇಕು. ಆಮಶಂಕೆ ಹೆಚ್ಚು ದಿವಸಗಳು ಇದ್ದಾಗ, ಬಹಳ ಪಥ್ಯ ಮಾಡುತ್ತಲೇ ಇದ್ದರೆ, ರಕ್ತದಲ್ಲಿ ಪ್ರೋಟೀನು ಕೊರೆಯಾಗುತ್ತದೆ. ಇದನ್ನು ತಪ್ಪಿಸಲು, ಕೆಲವು ದಿವಸಗಳು ಕಳೆದ ಮೇಲಾದರೂ ಹೆಚ್ಚು ಜೀವಾತುಗಳು, ಪ್ರೋಟೀನುಗಳು ಕೂಡಿರುವ ಸಮತೋಲದ, ಪುಷ್ಟಿಕರ ಆಹಾರವನ್ನು ಸೇವಿಸುತ್ತ ಬರಬೇಕು.

**ಮುಂಜೀವಿಕ ಆಮಶಂಕೆಗಳು**: ಬಹುಮಟ್ಟಿಗೆ ಈ ಸೋಂಕಿಗೆ ಕಾರಣ ಊತಕಲಯಕ ಕರುಳ್ಚಲಕಣವೇ (ಎಂಟಮೀಬ ಹಿಸ್ಟೊಲಿಟಿಕ), ಅಪೂರ್ವವಾಗಿ ಬಾಸೆಗವಾದ (ಸಿಲಿಯೇಟ್) ಬ್ಯಾಲಾಂಟಿಡಿಯಂ ಕೋಲೈ ಕೂಡ ಈ ಆಮಶಂಕೆಯ ಕಾರಣವಾಗಬಹುದು. ಮಾನವನಿಗಿಂತ ಹಂದಿ ಮುಂತಾದ ಪ್ರಾಣಿಗಳಲ್ಲಿ ಇದು ಹೆಚ್ಚು. ಒಂದು ಬಗೆಯ ಮಲೇರಿಯ (ಪ್ಲಾಸ್ಮೋಡಿಯಂ ಫಾಲ್ಸಿಪಾರಂ) ರೋಗದಲ್ಲೂ ರೋಗಿಯ ಮಲದಲ್ಲಿ ಆಮ, ರಕ್ತ ಹೋಗಬಹುದು. ಕರುಳಿನ ಗೋಡೆಗಳಲ್ಲಿನ ಲೋಮನಾಳಗಳಲ್ಲಿ ಮಲೇರಿಯ ಪರಪಿಂಡಿಗಳು ಕಿಕ್ಕಿರಿದು ಕೂಡುವುದೇ ಇದರ ಕಾರಣ (ನೋಡಿ– ಮಲೇರಿಯ).

ಕಾಳಜ್ವರದ (ಕಾಲಾ ಅಜಾರ್) ಪರಪಿಂಡಿಯಿಂದ (ಲೀಷ್ಮಾನಿಯ ಡೊನೊವಾನಿ) ಕರುಳಲ್ಲಿ ಸೋಂಕಾದರೆ ಲೀಷ್ಮನ್ ಬೇನೆಯ (ಲೀಷ್ಮಾನಿಯಾಸಿಸ್ ಆಮಶಂಕೆಯಾಗಿ ಮಲದಲ್ಲಿರುವ ರೋಗದ ಸೂಸುಗೆಯಲ್ಲಿ (ಎಕ್ಸುಡೇಟ್) ಹಲವಾರು ಬಗೆಗಳ ಜೀವಾಣುಗಳು ಹೊರಬೀಳಬಹುದು. ಮೈಯೆಲ್ಲ ಹರಡುವ ಈ ಮುಂಜೀವಿಕ ಸೋಂಕುಗಳ ಲಕ್ಷಣಗಳಲ್ಲಿ ಆಮಶಂಕೆಯೂ ಒಂದು. ಇಲ್ಲಿ ಕರುಳಿನವು ಆ ಲಕ್ಷಣಗಳಲ್ಲಿ ಎಲ್ಲೋ ಒಂದು ಭಾಗ ಮಾತ್ರ. ಆಮಶಂಕೆಯ ಉಚ್ಚಾಟದ ಮಲದಲ್ಲಿ ಸಾಮಾನ್ಯವಾಗಿ, ಕರುಳಿನ ಗಿಯಾರ್ಡ್‌ಜೀವಿ (ಗಿಯಾರ್ಡಿಯ ಇಂಟೆಸ್ಟೈನಾಲಿಸ್) ತೆರನ ಬಗೆಬಗೆಯ ಕೊರಡಾಂಗಿಗಳು (ಫ್ಲಾಜೆಲೇಟ್ಸ್) ಕಂಡುಬರುತ್ತವೆ. ಆದರೆ ಇವು ಉಚ್ಚಾಟದ ನಿಜವಾದ ಕಾರಕ ಎನ್ನುವುದು ಅನುಮಾನವೇ. ಉಚ್ಚಾಟದ ದೆಸೆಯಿಂದ ಮಾತ್ರ ಇವು ಮಲದಲ್ಲಿ ಹೊರಬೀಳುತ್ತವೆ, ಅಷ್ಟೆ.

**ಚಲ್ಕಣದ ಆಮಶಂಕೆ** : ಹಲವಾರು ಬಗೆಗಳ ಚಲ್ಕಣಗಳು ಮಲದಲ್ಲಿ ಕಂಡುಬಂದರೂ ಚಲ್ಕಣದ (ಅಮೀಬಿಕ್) ಆಮಶಂಕೆಗೆ ಕಾರಣ, ಹೆಗ್ಗರುಳಿಗೆ ನುಗ್ಗಿ ಒಳ ನೆಲೆಸುವ ಊತಕಲಯಕ ಕರುಳ್ಚಲಕಣ. ಮುಖ್ಯವಾಗಿ ಊತಕಗಳಲ್ಲಿ ಇದರ ವಾಸ. ಕರುಳು ಗೋಡೆಯ ಜೀವಕಣದಿಂದಲೇ ಇದಕ್ಕೆ ಪುಷ್ಟಿ ದೊರೆಯಬೇಕು. ರೋಗಿಯಲ್ಲಿ ಹಲವಾರು ಹಂತಗಳಲ್ಲಿ ಕಂಡುಬರುತ್ತದೆ. ಕರುಳಲ್ಲಿ, ಊತಕದ ಒಳ ನುಗ್ಗುವ ಹಂತದಲ್ಲಿನ ಪಾಲಕ ಜೀಕಣ (ಟ್ರೊಫೊಜಾಯ್ಟ್) 20-30 m ವ್ಯಾಸದ ಗಾತ್ರಕ್ಕಿರುವುದು. ಪುಟಾಣಿಯವು ಇದರ ಅರ್ಧಕ್ಕಿರಬಹುದು. ಇವುಗಳಲ್ಲಿ ವಿಶೇಷ ನಬ್ಬೀಜವೂ (ನ್ಯೂಕ್ಲಿಯಸ್), ಒಳಗೆಲ್ಲ ಕಣಕಣಗಳಾಗೂ ಅಂಚುಗಳು ಗಾಜುತೆರನಾಗೂ ಇರುವ ವಲಯವಿರುವ, ಇದ್ದಂತಿರದ ಜೀವಿರಸವೂ (ಪ್ರೋಟೊಪ್ಲಾಸ್ಮ್) ಇವೆ. ಈ ಚಲ್ಕಣ ಹುಸಿಗಾಲುಗಳಿಂದ ಚಲಿಸುತ್ತ ಬಹುಮಟ್ಟಿಗೆ ಕೆಂಪು ರಕ್ತಕಣಗಳ, ಊತಕದ ಜೀವಕಣಗಳ ತಿನಿಸನ್ನು ಒಳಸೇರಿಸಿಕೊಳ್ಳುತ್ತದೆ. ಈ ಚಲ್ಕಣವನ್ನು ಹೆಗ್ಗರುಳ ಕರುಳ್ಚಲಕಣದಿಂದ (ಎಂಟಮೀಬ ಕೋಲೈ), ಆರೋಗ್ಯವಂತರ ಕರುಳಲ್ಲೂ ಇದ್ದೇ ಇರುವ ರೋಗಕಾರಕವಲ್ಲದ ಇನ್ನೂ ಮೂರು ಜಾತಿಗಳನ್ನೂ ವ್ಯತ್ಯಾಸ ಕಂಡು ಗುರುತಿಸಬೇಕು. ಇದು ಸುಲಭವಲ್ಲ. ನುರಿತವರಿಂದ ಮಾತ್ರ ಸಾಧ್ಯ. ಅಂಗಗಳ ಊತಕಗಳಲ್ಲಿ ಒಳನುಗ್ಗಲು ನೆರವಾಗುವ ಒಂದು ಊತಕ ಲಯಕವನ್ನು (ಲೈಸಿನ್) ಈ ಚಲ್ಕಣ ಸುರಿಸಿ ಬಿಡುತ್ತದೆ. ಅಲಸ (ವೆಜಿಟೇಟಿವ್) ಹಂತದಲ್ಲಿ, ಊತಕಗಳಲ್ಲೂ ಅದರಿಂದಾಗುವ ಹುಣ್ಣುಗಳಿಂದ ಸುರಿವ ರಸಗಳಲ್ಲೂ ಇದರಿಂದಾಗಿ ಚಲ್ಕಣದ ಆಮಶಂಕೆ ಜೋರಾಗಿರುವಾಗ ಮಲದಲ್ಲೂ ಈ ಚಲ್ಕಣಗಳು ಇರುತ್ತವೆ. ಈ ಹಂತದಲ್ಲಿ ಇರುವಾಗ ಮಾತ್ರ ಇದನ್ನು ಒಣಗಿಸಿದರೆ, ಜಠರದ ರಸ ತಾಕಿದರೆ ಸುಲಭವಾಗಿ ಸಾಯುತ್ತದೆ. ಆದ್ದರಿಂದಲೇ ಬೇರೆಯವರಿಗೆ ಹೊಸ ಸೋಂಕು ಇದರಿಂದ ತಾಕುವಂತಿಲ್ಲ. ಆಮಶಂಕೆಯ ಜೋರು ಇಳಿದಿರುವಾಗ, ಚಲ್ಕಣ ಊತಕಗಳನ್ನು ಬಿಟ್ಟು ಕರುಳಿನ ನಾಳದೊಳಕ್ಕೆ ಬೀಳುತ್ತದೆ. ಇನ್ನೂ ಸಣ್ಣಗೆ ದುಂಡಾಗಿ, ಅಲುಗಾಡದೆ ಬಿದ್ದಿದ್ದು, ರಸ ಸುರಿಸಿ ತಂತಾನು ಕಾಪಿಟ್ಟುಕೊಳ್ಳುವ ಕವಚ ಕಟ್ಟಿಕೊಂಡು ಜಿಟ್ಟಿ (ಸಿಸ್ಟ್) ಆಗುತ್ತದೆ. ಮೊದಲು ಇದರಲ್ಲಿ ಒಂಟಿ ನಬ್ಬೀಜ (ನ್ಯೂಕ್ಲಿಯಸ್), ಆಯೊಡೀನಿನಿಂದ ಕಂದುಬಣ್ಣ ತಳೆವ ದೊಡ್ಡ ಮಿಗದಿಟ್ಟಿನ (ಗ್ಲೈಕೊಜನ್) ಮುದ್ದೆ, ಸಾಮಾನ್ಯವಾಗಿ ದಟ್ರಂಗಿತೆರ (ಕ್ರೊಮೆಟಾಯ್ಡ್) ವಸ್ತುಗಳು ಎಂಬ ಗಾಜುತೆರನ ಕಡ್ಡಿಗಳೂ (ಹಯಲೀನ್ ರಾಡ್ಸ್) ಇರುವುವು. ಜಿಟ್ಟಿ ಬಲಿತಂತೆಲ್ಲ ನಬ್ಬೀಜ ಎರಡಾಗಿ ನಾಲ್ಕಾಗುತ್ತದೆ. ಮಿಗದಿಟ್ಟಿನ ಮುದ್ದೆ, ದಟ್ರಂಗಿತೆರನ ವಸ್ತುಗಳೂ ಬರುಬರುತ್ತ ಕಾಣೆಯಾಗುತ್ತವೆ. ಮಲದಲ್ಲಿ ಹೊರಬೀಳುವ ಜಿಟ್ಟಿಯನ್ನು ಒಣಗಿಸಿದರೂ ಸಾಯದು. ಬೇರೆ ತೆರನ ಕೆಡುಕುಗಳನ್ನೂ ತಡೆದುಕೊಳ್ಳುತ್ತದೆ. ಸೋಂಕು ಹತ್ತಿರುವ ನೀರು, ಉಣಿಸುಗಳ ಮೂಲಕ ಇದು ಇನ್ನೊಬ್ಬರ ಹೊಟ್ಟೆಗೆ ಸೇರಿದ ಮೇಲೆ, ಜಠರದಲ್ಲಿ ಇದಕ್ಕೆ ಏನೂ ತೊಂದರೆ ಆಗದೆ ಕರುಳನ್ನು ಸೇರುತ್ತದೆ. ಆಮೇಲೆ ಇದೇ ಒಂಟಿ ನಬ್ಬೀಜವಿರುವ ನಾಲ್ಕು ಬೇರೆ ಬೇರೆ ಚಲ್ಕಣಗಳಾಗುತ್ತದೆ. ಇವೆಲ್ಲ ಮತ್ತೆ ಕರುಳಿನ ಲೋಳೆಪರೆಗೆ ತೂರಿ ನೆಲಸಿ ಹೊರ ಸೋಂಕನ್ನು ಹತ್ತಿಸುತ್ತವೆ. ಆದ್ದರಿಂದ, ಆಮಶಂಕೆ ಜೋರಾಗಿ ಇರುವಾಗ ಸೋಂಕು ಇತರರಿಗೆ ಹರಡುವುದಿಲ್ಲ. ಆದರೆ, ಎಷ್ಟೋ ವೇಳೆ ರೋಗಲಕ್ಷಣಗಳೇ ಕಂಡುಬರದ ಬೇರೂರಿದ ಸೋಂಕಿನ ರೋಗಿಯೇ ಸದ್ದಿಲ್ಲದೆ ಸೋಂಕು ಹರಡುವುದರಲ್ಲಿ ಇನ್ನೂ ಹೆಚ್ಚು ಅಪಾಯಕಾರಿ. ಮಲದಲ್ಲಿ ಎಂದಿಗೂ ಇರುವ ಏಕಾಣುಜೀವಿಕೋಟಿಯೂ (ಬ್ಯಾಕ್ಟೀರಿಯಲ್ ಫ್ಲೋರ) ಮಲದ ರಾಸಾಯನಿಕ ಸಂಯೋಗವೂ, ಚಲ್ಕಣಗಳು ಕರುಳುಗಳ ಗೋಡೆಗಳಲ್ಲಿ ತಳವೂರುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತವೆಂಬ ಸೂಚನೆಯೂ ಇದೆ. ಚಲ್ಕಣದ ಆಮಶಂಕೆ ಅಂಟಿತೋ ಇಲ್ಲವೆನ್ನುವಷ್ಟಾಗೋ ವಿಪರೀತ ಕಟ್ಟುನಿಟ್ಟಾಗೋ ಇರಬಹುದು. ಹೀಗೆ ಬಂದು ಹಾಗೆ ಹೋಗಿಬಿಡಬಹುದು. ಇಲ್ಲವೆ ಕೆಲವು ವರ್ಷಗಳು ನರಳಿಸಬಹುದು. ಇದು ಬರುವುದರಲ್ಲೂ ಎರಡು ಮುಖ್ಯ ಬಗೆಗಳನ್ನು ಗುರುತಿಸಬಹುದು. ಮೈಗೇನೂ ಅಷ್ಟಾಗಿ ಇರಸು ಮುರಸಾಗದೆ, ಸುಮ್ಮನೆ ಭೇದಿ ಆಗುತ್ತ ಕಂಡೂ ಕಾಣದಂತೆ ಬರುವುದು ಒಂದು ಬಗೆ. ಇನ್ನೂ ಬೇಗನೆ, ಹೊಟ್ಟೆನೋವು, ಶೂಲೆಗಳೊಂದಿಗೆ, ರಕ್ತ ಬೆರೆತ ಆಮದ ಮಲ ಹೋಗುವುದು ಇನ್ನೊಂದು ಬಗೆ. ಸರಕ್ಕನೆ ಜೋರಾಗುವುದು ಅಪರೂಪ. ದಿನಕ್ಕೆ 3–4 ಬಾರಿ ಮಲ ಕಳೆಯಬಹುದು ಅಷ್ಟೆ. ಹೊಟ್ಟೆ ನುಲಿತ, ತಡೆಯಿಲ್ಲದ ಉಚ್ಚಾಟಗಳು ಆಗುವುದು ಬಲು ಅಪರೂಪ. ಬೇರೂರಿ ಬಹಳ ಕಾಲ ತರುವುದೇ ಸಾಮಾನ್ಯ. ಹೊಟ್ಟೆಯಲ್ಲಿ ಸಮಾಧಾನ ಇಲ್ಲದಂತಾಗಿ, ಆಗಾಗ್ಗೆ ಬರುವುದು, ಹೆಚ್ಚುವುದು, ಹೋಗುವುದು ಹೀಗೆ ನಡೆಯುತ್ತಿರುವುದು. ಎಡ ಬಲ ಕೆಳ ಹೊಟ್ಟೆಗಳಲ್ಲಿ ಮುಟ್ಟಿದರೆ ನೋವೂ, ಅಲ್ಲಿನ ಹೆಗ್ಗರುಳಿನ ಭಾಗ ಗಡುಸಾಗೂ ಇರುವುದು ಸಾಮಾನ್ಯ. ಏಕಾಣುಜೀವಿಕ ಆಮಶಂಕೆಯಲ್ಲಿನ ಮಲಕ್ಕಿಂತಲೂ ಇದರದು ದುರ್ನಾತ ಬಡಿಯುತ್ತದೆ. ಮಲದ ತುಂಬ ಬದಲಾದ ರಕ್ತ ಬೆರೆತಿರುವುದು. ಬರುಬರುತ್ತ ಇನ್ನೂ ಕಪ್ಪಾಗುತ್ತ ನೀರುನೀರಾಗಿರುವುದು. ಬೇನೆ ತೆಪ್ಪಗಿರುವಾಗ, ಗರಣೆಗಟ್ಟಿದ ರಕ್ತ, ಲೋಳೆಗಳೊಂದಿಗೆ ಗಟ್ಟಿಯಾದ ಮಲ ಹೊರಬೀಳಬಹುದು. ಜ್ವರ ಇಲ್ಲದಿದ್ದರೂ, ಓಕರಿಕೆ ಮಾತ್ರ ಇರಬಹುದು. ವಾಂತಿ ಆಗದು. ಆಮಶಂಕೆಯ ಪರಪಿಂಡಿ ಚಲ್ಕಣದ ಚಟುವಟಿಕೆಯಿಂದ ರೋಗವನ್ನು ತಡೆವ ದೇಹದ ಚೇತರಿಕೆಯ ಬಲ ಹೆಚ್ಚುವುದರಿಂದ, ಆಮಶಂಕೆ ಬರುಬರುತ್ತ ವಾಸಿಯಾಗುತ್ತ ಬರುತ್ತದೆ. ಅಪೂರ್ವವಾಗಿ ಹುಣ್ಣುಗಳ ಮೇಲೆ ಮರುಚಲದ ಸೋಂಕು ಅಂಟಿದಾಗ ಜ್ವರ ಬಂದು ರಕ್ತ ವಿಷವೇರಬಹುದು. ದೊಡ್ಡ ಕರುಳಿನ ಹುಣ್ಣಿನಲ್ಲಿ ತೂತು ಬಿದ್ದು, ಹೊರ ಬಿಗಿ ಪರೆಯುರಿತವಾಗೋ (ಪೆರಿಟೊನೈಟಿಸ್), ಕರುಳಿಂದ ಬಹಳ ರಕ್ತ ಸುರಿದೋ, ಅದರಲ್ಲೂ ಹೆಗ್ಗರುಳು ಬಾಗುವೆಗಳಲ್ಲಿ (ಫ್ಲೆಕ್ಸರ್ಸ್) ಕರುಳು ಕೊಳೆತೋ ರೋಗಿ ಸಾಯಬಹುದು.

**ನಿದಾನ** : ರೋಗಿ ತಿಳಿಸಿದ ವಿಚಾರಗಳು, ಮಲದ ಕಣ್ಣರಿಕೆಗಳೊಂದಿಗೆ, ಮಲದ ಪರೀಕ್ಷೆಯಲ್ಲಿ ಇದರ ಕರುಳ್ಚಲಕಣವನ್ನು ಸರಿಯಾಗಿ ಗುರುತಿಸಿ ಕಾಣಲೇಬೇಕು. ರೋಗ ಜೋರಾಗಿರುವಾಗ ಇವನ್ನು ಗುರುತಿಸುವುದು ಬಹುಮಟ್ಟಿಗೆ ಸುಲಭ. ಊತಕದಲ್ಲಿ ಒಳನುಗ್ಗುವ, ಕೆಂಪು ರಕ್ತಕಣಗಳನ್ನು ನುಂಗಿರುವ, ಚುರುಕಿನ ದೊಡ್ಡ ಪಾಲಕಜೀಕಣಗಳು ಕಾಣಸಿಗುತ್ತವೆ. ಮಲದಲ್ಲೆಲ್ಲ ಇವು ಇರವು. ರಕ್ತ, ಆಮ ಇರುವೆಡೆಯಲ್ಲಿ ಮಾತ್ರ ಹುಡುಕಬೇಕು. ಮಲ ಬಿದ್ದ ಕೂಡಲೇ ತಂದು ಪರೀಕ್ಷಿಸಿದರೆ ಮಾತ್ರ ಕಾಣುವುವು. ಆಮೇಲೆ ಇಲ್ಲ.

ಮೂಗರುಳು (ಸೀಕಂ), ಹೆಗ್ಗರುಳಿನ ಬಾಗುವೆಗಳು, ನೆಟ್ಟಗರುಳೂ (ರೆಕ್ಟಂ) ಚಲ್ಕಣದ ಹುಣ್ಣುಗಳು ಏಳುವ ಮುಖ್ಯ ಜಾಗಗಳು. ಮಲದಲ್ಲಿ ಸುಲಭವಾಗಿ ಕಾಣಸಿಗದಿದ್ದರೆ, ಇನ್ನೂ ಖಚಿತವಾಗಿ, ದೊಡ್ಡ ಕರುಳಿನ ಕೆಳಕೊನೆಯ ಭಾಗಗಳಾದ ನೆಟ್ಟಗರುಳು, ಇಬ್ಬಂಕದ (ಸಿಗ್ಮಾಯ್ಡ್) ಒಳಗೆ ಬೆಳಕು ಬಿಟ್ಟು, ನೆಟ್ಟಗರಳುಗಳ ದರ್ಶಕ (ಪ್ರಾಕ್ಟೊಸ್ಕೋಪ್) ಇಲ್ಲವೇ ಇಬ್ಬಂಕ ದರ್ಶಕ (ಸಿಗ್ಮಾಯ್ಡೊಸ್ಕೋಪ್) ಮೂಲಕ ಹೆಗ್ಗರುಳಿನ ಲೋಳೆಪರೆಗಳನ್ನು ಕೆರೆಯುವ ಒಂದು ವಿಶೇಷ (ವೋಕ್‌ಮಾನನ) ಚಮಚದಿಂದ ಕೆರೆದು ಬಂದುದನ್ನು ನೇರವಾಗಿ ಪರೀಕ್ಷಿಸಬಹುದು. ಆಮಶಂಕೆ ಬೇರೂರಿರುವಾಗ, ಭೇದಿಯ ಮಲದಲ್ಲಿ ಜಿಟ್ಟಿಗಳನ್ನು ಕಾಣಬಹುದು. ಆಗ ಅವು ಹೇರಳವಾಗಿರುತ್ತವೆ. ಆದರೆ ಒಂದು ದಿವಸ ಇದ್ದಂತೆ ಇನ್ನೊಂದು ದಿವಸ ಇರವು. ಎಷ್ಟೋ ದಿವಸಗಳು ನೋಡಬೇಕೆಂದರೆ ಒಂದೂ ಕಾಣದಿರಬಹುದು. ನೆಟ್ಟಗರುಳದರ್ಶಕದಿಂದ ಆಮಶಂಕೆಯ ವಿಶಿಷ್ಟ ಹುಣ್ಣುಗಳನ್ನು ಕಣ್ಣಿನಿಂದ ನೋಡಬಹುದು. ಕೆಲವೇಳೆ ಈ ಹುಣ್ಣುಗಳು ಸಣ್ಣಗೆ ಮೆಲ್ಮೇಲೇ ಇರುತ್ತವೆ. ಅಲ್ಲಲ್ಲಿ ಲೋಳೆಪರೆಯಡಿ (ಸಬ್‌ಮ್ಯೂಕಸ್) ಚಿಕ್ಕದಾಗಿ ರಕ್ತ ಸುರಿಕೆಗಳು ಆಗಿರಬಹುದು. ಬೇರೂರಿದ ಹಂತದಲ್ಲಿ ಇವು ಹಳ್ಳತಗ್ಗುಗಳಾಗಿ ಹಂದಿ ಚಕ್ಕಳದಂತೆ ಕಾಣಬಹುದು. ಅಂತೂ ಯಾವಾಗಲೂ ಗುದದ ಆಳದಲ್ಲೇ ಆಮಶಂಕೆ ಹುಣ್ಣುಗಳು ಸುಲಭವಾಗಿ ಕಾಣುತ್ತವೆ. ಸರಳವಾದ ನೆಟ್ಟಗರುಳದರ್ಶಕದಿಂದಲೇ ತೋರಿಬರುವುವು, ಏಕಾಣುಜೀವಿಕ ಆಮಶಂಕೆ, ವಿಶಿಷ್ಟವಲ್ಲದ ಹುಣ್ಣಾಗುವ ಹೆಗ್ಗರುಳುರಿತ, ಏಡಿಗಂತಿಗಳು (ಕ್ಯಾನ್ಸರ್), ಆಹಾರನಾಳದಲ್ಲಿನ ಕ್ಷಯ ಮುಂತಾದ ಸೋಂಕು ರೋಗಗಳನ್ನು, ಚಲ್ಕಣದ ಆಮಶಂಕೆಯಿಂದ ಬೇರೆಯಾಗಿ ಎಚ್ಚರದಿಂದ ಗುರುತಿಸಬೇಕಾಗುತ್ತದೆ.

ಹೆಗ್ಗರುಳಲ್ಲಿ ಆಗಾಗ್ಗೆ ಚಲ್ಕಣಗಂತಿಯೋ (ಅಮೀಬೋಮ) ಏಡಿಗಂತಿಯನ್ನೋ ಹೋಲುವ ಹುಲುಸು ಬೆಳೆವ ದೊಡ್ಡ ಹುಣ್ಣೋ ಆಗಬಹುದು. ಆಮಶಂಕೆಯ ಲಕ್ಷಣಗಳೊಂದಿಗೆ ಏಡಿಗಂತಿ ಆಗಿರುವಾಗ ಕೇವಲ ಚಲ್ಕಣಗಂತಿಯೆಂದು ತಿಳಿಯುವುದು ಇನ್ನೂ ಕೆಡಕು, ಅಪಾಯಕರ. ಪರಿಣತ ವೈದ್ಯ ವಿಧಾನ ಎಷ್ಟು ಮುಖ್ಯವೆಂದು ಇದರಿಂದ ತಿಳಿಯುತ್ತದೆ.

**ತಾಕುತೊಡಕುಗಳು:** ಚಲ್ಕಣದ ಆಮಶಂಕೆ ವರ್ಷವೂ ಹೆಚ್ಚು ಕಾಲವೂ ಒಳಗೇ ಅಣಗಿ ಅಡಗಿರಬಹುದು. ರಕ್ತನಾಳಗಳ ಒಳ ನುಗ್ಗಿದ ಚಲ್ಕಣಗಳು ಕೆಲವೇಳೆ ಯಕೃತ್ತಿಗೆ (ಲಿವರ್) ಸಾಗಿಹೋಗಿ, ಸಣ್ಣ ಸಣ್ಣ ಚಲ್ಕಣದ ಕುರುಗಳು ಏಳಬಹುದು. ರೂಢಿಯಲ್ಲಿ ಇದನ್ನು ಚಲ್ಕಣದ ಈಲಿಯುರಿತ (ಹೆಪೆಟೈಟಿಸ್) ಎನ್ನುವುದುಂಟು. ಈ ಕುರುಗಳು ಬರುಬರುತ್ತ ಬೆಳೆದು ಒಂದಾಗಿ ಯಕೃತ್ತಿನ ಚಲ್ಕಣದ ದೊಡ್ಡ ಕುರು ಆಗುತ್ತದೆ. ಅಕ್ಕಪಕ್ಕದ ಅಂಗಗಳೊಳಕ್ಕೆ ಇದು ಒಡೆದುಕೊಂಡು ಸೋಂಕನ್ನು ಹರಡಬಹುದು. ವಪೆಯ ಮೂಲಕ ಪುಪ್ಪುಸದೊಳಕ್ಕೆ ಒಡೆದುಕೊಂಡು, ಪುಪ್ಪುಸದ ಮರುಚಲದ (ಸೆಕೆಂಡರಿ) ಚಲ್ಕಣಬೇನೆ ಹತ್ತಬಹುದು. ಮೈಯಲ್ಲಿ ಮಿದುಳು, ತೊರಳೆ (ಸ್ಪ್ಲೀನ್) ಇತ್ಯಾದಿ ಅಂಗಗಳಲ್ಲೂ ಈ ತೆರನ ಕುರುಗಳು ಏಳಬಹುದಾದರೂ ಹಾಗಾಗುವುದು ಬಲು ಅಪರೂಪ. ತಡ್ಡಿನಲ್ಲಿರುವ (ಟೆಸ್ಟಿಸ್) ತಡ್ಡುಮೇಲ್ನಾಳದಲ್ಲಿ (ಎಪಿಡಿಡೈಮಿಸ್) ಕುರು ಎದ್ದ ವರದಿಯಿದೆ. ಒಂದೊಂದು ಬಾರಿ ಕುರುಗಳಿಂದಲೋ, ಈಲಿಯಿಂದಲೋ ಗುದದ ಇಲ್ಲವೇ ಶಸ್ತ್ರಕ್ರಿಯೆಯ ಗಾಯದ ಹುಣ್ಣಿನ ಸುತ್ತಣ ಚರ್ಮಕ್ಕೆ ಚಲ್ಕಣದ ಸೋಂಕು ತಗುಲಿ ಹುಣ್ಣಾಗಬಹುದು. ಆಗ ಪಿರ್‍ರೆಗಳಲ್ಲಿ ಬೊರಿಗೆಗಳು (ಫಿಸ್ಟುಲಾಸ್), ಗುದದ ಸುತ್ತ ಚಲ್ಕಣದ ಹುಣ್ಣುಗಳೂ ಕುರುಗಳೂ, ಹೆಂಗಸಿನಲ್ಲಿ ಗರ್ಭಗೊರಳಲ್ಲೂ (ಸರ್ವಿಕ್ಸ್) ಅದೇ ತೆರನವೂ ಏಳಬಹುದು. ಚಲ್ಕಣದ ಆಮಶಂಕೆಯ ಚಿಕಿತ್ಸೆ ಆಗದಿದ್ದಲ್ಲಿ ಎಷ್ಟು ಮಾಸಗಳು ಕಳೆದರೂ ಆ ಹುಣ್ಣುಗಳು ವಾಸಿಯಾಗದೆ, ಚಲ್ಕಣಗಳು ತುಂಬಿದ ಗೋಚಿನ (ಸ್ಲಫ್) ಚರ್ಮವಾಗಬಹುದು. ಕೆಲವು ವೇಳೆ, ಎಂದೂ ಚಲ್ಕಣದ ಆಮಶಂಕೆ ಅನುಭವಿಸದಿದ್ದವರಲ್ಲೂ, ಮಲದಲ್ಲಿ ಮಾತ್ರ ಊತಕಲಯಕ ಕರುಳ್ಚಲಕಣಗಳು ಇದ್ದಲ್ಲಿ ಕೂಡ ಹೀಗಾಗಬಹುದು.

**ಚಿಕಿತ್ಸೆ** : ಸಾಮಾನ್ಯ ಬಳಕೆಯಲ್ಲಿರುವ ಚಲ್ಕಣಮಾರಕ (ಅಮೀಬಿಸೈಡಲ್) ಮದ್ದುಗಳು ಮೂರು ಬಗೆಯವು: ಎಮಿಟೀನ್ ಹೈಡ್ರೊಕ್ಲೋರೈಡು, ಎಮಿಟೀನ್ ಬಿಸ್ಮತ್ ಅಯೊಡೈಡು ತೆರನ ಸಂಯುಕ್ತಗಳು; ಡಯೊಡೊಕ್ವಿನ್ ತೆರನ (ಚೆನಿಯೊಫಾನ್) ಅಯೊಡಾಕ್ಸಿಕ್ವಿನೊಲೀನ್ ಸಂಯುಕ್ತಗಳು; ಕಾರ್ಬಾರ್ಸೋನ್ ತೆರನ ಬದಲಿ ಜೋಡಿಸಿದ ಫಿನೈಲ್ ಆರ್ಸೋನೇಟುಗಳು. ಅನೇಕರು ಇವುಗಳಲ್ಲಿ ಒಂದೆರಡನ್ನು ಒಟ್ಟಿಗೇ ಕೊಡುವರು. ಈ ಬಗೆಯ ಒಂದು ಜೋಡಿಯಾಗಿ, ದಿನವೂ ರಾತ್ರಿ ಹೊತ್ತು ಎಮಿಟೀನ್ ಬಿಸ್ಮತ್ ಅಯೊಡೈಡನ್ನು, 10–12 ದಿವಸಗಳು ನುಂಗಿಸಿ, ಬೆಳಗಿನ ಹೊತ್ತು ಡಯೊಡೊಕ್ವಿನ್ ಶೇ. 2.5ರ ದ್ರಾವಣವನ್ನು ಗುದದ ಮೂಲಕ ವಸ್ತಿಯಾಗಿ (ಎನೀಮ) ನಿಧಾನವಾಗಿ ತೊಟ್ಟಿಡುವಂತೆ ಒಳಬಿಟ್ಟು 4–5 ತಾಸುಗಳು ಇರಿಸಬೇಕು. ವಸ್ತಿಕೊಡುವ ಮುನ್ನ ಕರುಳಲ್ಲಿ ಅಲ್ಲಿರುವ ಆಮನ್ನೆಲ್ಲ ತೆಗೆದು ಚೊಕ್ಕಗೊಳಿಸಲು ಶೇಕಡ ಒಂದರ ಅಡುಗೆ ಸೋಡದ ಕ್ಷಾರದ ದ್ರಾವಣದಿಂದ ತೊಳೆವುದುಂಟು. ಇದಾದ ಮೇಲೆ ಬೆಳಗು, ಸಂಜೆಯಲ್ಲಿ ಕಾರ್ಬಾರ್ಸೋನ್ ಮಾತ್ರೆಗಳನ್ನು ಇನ್ನೂ 10 ದಿವಸಗಳು ಕೊಡುವುದುಂಟು. ಜೋರಾಗಿರುವ ರೋಗವನ್ನು ಬೇಗನೆ ತಗ್ಗಿಸಲು, ಕೆಲವು ದಿವಸಗಳು ಎಮಿಟೀನ್ ಹೈಡ್ರೊಕ್ಲೋರೈಡನ್ನು ದಿವಸವೂ ಚರ್ಮದಡಿಯ ಚುಚ್ಚುಗೆಯಾಗಿ ಕೊಡಬಹುದು. ಕೂಡಲೇ ನೋವು, ಆಮಶಂಕೆ ಭೇದಿಗಳನ್ನು ಚೆನ್ನಾಗಿ ತಡೆಗಟ್ಟಿದರೂ, ಇದು ಸೋಂಕನ್ನು ಮಾತ್ರ ಹೋಗಲಾಡಿಸದು. ಊತಕಲಯಕ ಕರುಳ್ಚಲಕಣಗಳ ಜಿಟ್ಟಿಗಳಂತೂ ಇದಕ್ಕೆ ಏನೇನೂ ಜಗ್ಗವು. ಆಮೇಲೆ ಉಳಿದ ಪೂರಕ ಚಿಕಿತ್ಸೆ ಆಗಬೇಕು. ಈಲಿ ಮತ್ತಿತರ ಅಂಗಗಳ ಚಲ್ಕಣ ಬೇನೆ ಕಾಣಿಸಿಕೊಂಡಾಗ ಕೂಡ ಎಮಿಟೀನ್ ಚುಚ್ಚುಗೆಯನ್ನು 8–10 ದಿವಸಗಳು ಕೊಡಬೇಕಾಗುತ್ತದೆ. ಅದೇ ಹೊತ್ತಿನಲ್ಲಿ ಕರುಳಿನ ಸೋಂಕಿನ ಚಿಕಿತ್ಸೆಯನ್ನು ಮುಂದುವರಿಸಬೇಕು. ಇಲ್ಲವಾದಲ್ಲಿ ಆಮಶಂಕೆ ಮರುಕಳಿಸಬಹುದು. ಎಮಿಟೀನಿಂದ ಗುಂಡಿಗೆ ಸ್ನಾಯುವಿಗೆ ಬಲು ಕೆಡಕಾಗಬಹುದು; ರೋಗಿಗೆ ನಿತ್ರಾಣ ಆಗುವುದರಿಂದ ಇದನ್ನು ಚುಚ್ಚಿಸಿಕೊಳ್ಳುವ ದಿವಸಗಳಾದರೂ ರೋಗಿ ಹಾಸಿಗೆಯಲ್ಲಿ ಮಲಗಿರಬೇಕು. ಚಲ್ಕಣದ ಸೋಂಕನ್ನು ಹಾಗೇ ಉಳಿಸಿರುವುದರಲ್ಲಿ ಕರುಳಲ್ಲಿರುವ ಏಕಾಣುಜೀವಿಗಳ ಪಾತ್ರವೂ ಇರುವುದರಿಂದ ಆಮಶಂಕೆ ಹುಣ್ಣುಗಳು ಬಹಳವಾಗಿ ಬಿಟ್ಟು ಮರುಚಲದ ಸೋಂಕೂ ಹತ್ತಿರುವಾಗ, ಪೆನೆಸಿಲಿನ್ನುಗಳನ್ನೂ ಸಲ್ಫೋನಮೈಡು ಮದ್ದುಗಳನ್ನೂ ಕೊಡಬೇಕಾಗುತ್ತದೆ. ಏಕಾಣುಜೀವಿಕ ಆಮಶಂಕೆಯಲ್ಲಿ ಇದ್ದ ಹಾಗೆ, ಇಲ್ಲೂ ರೋಗಿಯ ಆಹಾರ, ಆರೈಕೆಗಳು ಆಗಬೇಕು.

ಮುಂಜೀವಿಕ ಆಮಶಂಕೆಯಲ್ಲಿ ಚಲ್ಕಣದ ಆಮಶಂಕೆಯೇ ಬಲು ಸಾಮಾನ್ಯವಾದರೂ ಬೇರೆ ರೋಗಾಣುಗಳೂ ಕೆಲವೇಳೆ ಅಪೂರ್ವವಾಗಿ ಕಾಣಿಸಿಕೊಳ್ಳುತ್ತವೆ. ವಿಷಮ ಮೂರ್ದಿನದ (ಮೆಲಿಗ್ನೆಂಟ್ ಟರ್ಷಿಯನ್) ಮಲೇರಿಯದಲ್ಲೂ ಒಳಾಂಗದ ಲೀಷ್ಮನ್ ಬೇನೆಯಲ್ಲೂ (ಲೀಷ್ಮಾನಿಯಾಸಿಸ್) ಆಮಶಂಕೆ ಆಗಬಹುದು. ಈ ರೋಗಗಳ ಎಂದಿನ ಚಿಕಿತ್ಸೆ ಚೆನ್ನಾದರೆ, ಆಮಶಂಕೆಯೂ ಕಳೆದ ಹಾಗೆ ಅಪೂರ್ವವಾಗಿ ಬಾಸಗವಾದ (ಫ್ಲಾಜೆಲೇಟ್) ಬ್ಯಾಲಾಂಟಿಡಿಯಂ ಕೋಲೈ ಕೂಡ ಕಾರಣವಾಗಬಹುದು. ಹಂದಿಗಳಿಂದ ಮಾನವನಿಗೆ ಅಂಟಿದರೂ ಮಾನವ ರೋಗಿಯಲ್ಲಿ ಜಿಟ್ಟಿ ಆಗದುದರಿಂದ, ಮಾನವ ಇದರ ಹೊರುಗನಾಗಿ (ಕ್ಯಾರಿಯರ್) ಇತರರಿಗೆ ಸೋಂಕು ಹರಡಲಾರ. ಈ ಬೇನೆಗಾಗಿ ಬೇರೆ ಬೇರೆ ಮದ್ದುಗಳನ್ನು ಕೊಡುವುದಾದರೂ ಬಾಯಿ ಮೂಲಕ ಕಾರ್ಬಾರ್ಸೋನ್ ಕೊಟ್ಟರೂ ಸಾಕಾಗುವುದು.

ಡಯೊಡೊಕ್ವಿನ್ನಿನಿಂದ ಜಿಟ್ಟಿಗಳ ಹೊರುಗರ ಚಿಕಿತ್ಸೆ ಚೆನ್ನಾಗುವುದು. ಮುಂಜೀವಿಕ ಆಮಶಂಕೆಗಳ ಚಿಕಿತ್ಸೆಯಲ್ಲಿ ವಿಶಿಷ್ಟವಾಗಿ ಬಳಸುವ ಉಳಿದ ಮದ್ದುಗಳು, ಮೆಪಕ್ರೀನ್ (ಅಟಬ್ರೀನ್), ಗಿಯಾರ್ಡಬೇನೆಗೂ ಚಲ್ಕಣದ ಆಮಶಂಕೆಗೂ ಕ್ಲೋರೊಕ್ವಿನ್, ಮಲೇರಿಯದ ಆಮಶಂಕೆಗೆ ಪಾಲುಡ್ರೀನ್, ಲೀಷ್ಮನ್‌ಬೇನೆಗೆ ನಿಯೊಸ್ಟಿಬೊಸಾನ್, ಬಿಲ್ಹಾರ್ಜ್‌ಬೇನೆಯಲ್ಲಿ ಸೋಡಿಯಂ ಸುರಮಾ ಟಾರ್ಟರೇಟು.

**ಕರುಳುಹುಳುವಿನ ಆಮಶಂಕೆ :** ಕಾಳ ಜ್ವರದ (ಕಾಲಾ ಅಜಾರ್) ಪರಪಿಂಡಿಯಿಂದ (ಲೀಷ್ಮಾನಿಯ ಡೊನೊವಾನಿ) ಕರುಳಿನಲ್ಲಿ ಸೋಂಕಾದರೆ ಲೀಷ್ಮನ್ ಬೇನೆಯ ಆಮಶಂಕೆಯಾಗಿ ಮಲದಲ್ಲಿ ರೋಗದ ಸೋಸುಗೆಯಲ್ಲಿ (ಎಕ್ಸುಡೇಟ್) ಹಲವಾರು ಬಗೆಗಳ ಜೀವಾಣುಗಳು ಹೊರಬೀಳಬಹುದು. ಆಫ್ರಿಕ, ದಕ್ಷಿಣ ಅಮೆರಿಕಗಳಲ್ಲಿ ಮ್ಯಾನ್ಸನ್ನನ ಸೀಳೊಡಲಿಯೂ (ಷಿಸ್ಟೊಸೋಮ ಮಾನ್ಸೋನಿ), ಜಪಾನಿನ ಸೀಳೊಡಲಿಯೂ (ಷಿ.ಜಪಾನಿಕಂ), ಕರುಳಿನ ಸೀಳೊಡಲಿಯ ಸೋಂಕಿಗೆ (ಸೀಳೊಡಲಿ ಬೇನೆ, ಬಿಲ್ಹಾರ್ಜಬೇನೆ) ಸಾಮಾನ್ಯ ಕಾರಕಗಳು. ರಕ್ತಜೀವಿ ಸೀಳೊಡಲಿಯಿಂದ (ಷಿ.ಹೆಮೆಟೋಬಿಯಂ) ಸಾಮಾನ್ಯವಾಗಿ ಮೂತ್ರಾಂಗಗಳ ಸೀಳೊಡಲಿಯಿಂದ (ಷಿಸ್ಟೊಸೋಮಿಯಾಸಿಸ್) ಆಗುವುದಾದರೂ, ಹೆಚ್ಚಿನ ಸಂದರ್ಭಗಳಲ್ಲಿ ಕರುಳಿಗೂ ಹತ್ತಿ ಆಮಶಂಕೆ ಆಗಬಹುದು. ಮಾನವನಿಗೆ ಸೋಂಕು ಹತ್ತಿಸುವುದರ ನಡುವೆ ಬಸವನ ಹುಳುವಿನಲ್ಲಿ ಇವು ಬೆಳೆಯುತ್ತವೆ.

**ರೋಗ ವಿಧಾನ:** ಬೆಳೆದ ಸೀಳೊಡಲಿಗಳಿಂದ ಮೈಗೆ ತೊಂದರೆಯಿಲ್ಲ. ಆದರೆ ಅವುಗಳ ಅಂಡಾಣುಗಳು (ಓವ) ಮಾತ್ರ ಕರುಳಿನ ಲೋಳೆ ಪರೆ ವೆಗ್ಗಳಿಸುವಂತೆ (ಪ್ರೊಲಿಫರೇಟ್) ಮಾಡುತ್ತದೆ. ಊತಕಗಳಲ್ಲಿ ಇವು ಇರುವೆಡೆಯಲ್ಲೆಲ್ಲ ಕಿಗ್ಗಂಟು ಬೆಳೆಯುತ್ತವೆ. ಇದರಿಂದ ಕರುಳಲ್ಲಿ ಎಲ್ಲೆಲ್ಲೂ ಕುರು, ರಕ್ತ ಸುರಿಕೆ, ಹುಣ್ಣುಗಳೂ ಆಗುತ್ತವೆ. ರೋಗ ಇನ್ನೂ ಬೇರೂರಿದ್ದರೆ, ಕರುಳಿನ ಗೋಡೆ ದಪ್ಪವಾಗಿ, ಗಂತಿಗಳು ಬೆಳೆದು ಕೊನೆಗೆ ವಿಷಮ (ಮಾಲಿಗ್ನೆಂಟ್) ಗಂತಿಗಳೂ ಆಗಬಹುದು. ಈಲಿಯಲ್ಲಿ (ಲಿವರ್) ಹುಸಿಗಂಟುಗಳಾಗಿ ಕೊನೆಗೆ ಅರಿಶಿನಾರಿಗೆ (ಸಿರ್ರೋಸಿಸ್) ತೆರನಾಗಿ ಬದಲಾಗಬಹುದು. ಮಲದಲ್ಲಿ ಆಮ, ರಕ್ತಗಳೊಂದಿಗೆ ಇದರದೇ ಅಂಡಾಣುಗಳಿರುತ್ತವೆ.

**ಲಕ್ಷಣಗಳು:** ಈ ಹುಳುಗಳ ಮರಿಗಳಾದ ಬಾಲಗೂದಲಿಗಳು (ಸರ್ಕೇರಿಯ) ಚರ್ಮದಲ್ಲಿ ತೂರುವ ಕಾಲದಲ್ಲಿ ತುರುಚೆ ದದ್ದಿನ ತೆರನ ಬಗೆಬಗೆಯ ಒಗ್ಗದಿಕೆಯ (ಅಲರ್ಜಿಕ್) ಲಕ್ಷಣಗಳು ತೋರಬಹುದು. ಇವು ಮೈಯಲ್ಲೆಲ್ಲ ಹರಡಿ, ಆಮೇಲೆ ತಾವಿನ (ಲೋಕಲ್) ಲಕ್ಷಣಗಳೇ ಎದ್ದು ಕಾಣುತ್ತವೆ. ಈಲಿ, ತೊರಳೆಗಳು ದೊಡ್ಡದಾಗಿ ಊದುವುದು ಸಾಮಾನ್ಯ. ಇನ್ನೂ ಮುಂದೆ ನೀರ್ದೊಳ್ಳೊಂದಿಗೆ (ಅಸೈಟಿಸ್) ಅರಿಶಿನಾರಿಗೆಯೂ (ಕೆಚೆಕ್ಸಿಯ) ಆಗಬಹುದು. ರೋಗಿ ತುಂಬ ಸುಸ್ತಾಗಿ ಬಡಕಲಾಗುವನು. ಕೆಲವೇಳೆ ಗುದದ ಸುತ್ತಲೂ ಅಂಡಾಣುಗಳು ಒಳಗೆ ಪಸರಿಸಿಕೊಂಡು ಚರ್ಮ ಪಪ್ಪರಿದು (ಇಂಡ್ಯುರೇಟೆಡ್) ಬೊರಿಗೆಗಳು ಆಗುವುವು.

**ನಿದಾನ:** ಮಿಣಿದರ್ಶಕದ ಪರೀಕ್ಷೆಯಿಂದ ಮಲದಲ್ಲಿ ಸೀಳೊಡಲಿಯ ಅಂಡಾಣುಗಳನ್ನು ಕಾಣಬಹುದು. ಕರುಳಲ್ಲಿ ನೆಟ್ಟಗರುಳದರ್ಶಕವನ್ನು ಒಳತೂರಿಸಿ ನೋಡಿದರೆ ನೆರವು ಸಿಗಬಹುದು. ಹುಣ್ಣುಗಳನ್ನು ಕೆರೆದು ಬಂದಿದ್ದರಲ್ಲಿ ಅಂಡಾಣುಗಳಿರಬಹುದು. ಊತಕಗಳು ಈಡಾಗುವಂತೆ ಇರುವುದರಿಂದ, ಸೀಳೊಡಲಿಗಳ ಉಪ್ಪು ನೀರಿನ ಸಾರಕವನ್ನು ಚರ್ಮದೊಳಕ್ಕೆ ಚುಚ್ಚಿದಾಗ, ಚರ್ಮದಲ್ಲಿ ವಿಶೇಷ ಪ್ರಕ್ರಿಯೆಯನ್ನು ಕಾಣಬಹುದು. ಸೀಳೊಡಲಿಯ ರೋಧಜನಕವನ್ನು (ಆ್ಯಂಟಿಜನ್) ರೋಗಿ ಚರ್ಮಕ್ಕೆ ಚುಚ್ಚಿ ರಕ್ತದಲ್ಲಿ ವಿಶಿಷ್ಟ ರೋಧಕವಸ್ತುಗಳು (ಆ್ಯಂಟಿಬಾಡೀಸ್) ಇರುವುದನ್ನೂ ತೋರಿಸಬಹುದು. ಇವೆರಡೂ ಪೂರಾ ಗುಂಪಿನ ಪರೀಕ್ಷೆಗಳೇ ಹೊರತು ಬೇರೆ ಬೇರೆ ಸೀಳೊಡಲಿಗಳ ಸೋಂಕನ್ನು ಗುರುತಿಸವು. ಸೋಂಕು ಕಳೆದುಹೋದ ಎಷ್ಟೋ ದಿವಸಗಳೂ ಈ ಪರೀಕ್ಷೆಗಳು ಸೋಂಕು ಇರುವುದೆಂದೇ ತೋರುತ್ತಿರುವುವು.

**ಚಿಕಿತ್ಸೆ :** ಸಾಮಾನ್ಯ ಬಳಕೆಯಲ್ಲಿ ಮಕ್ಕಲೆಬಲದ (ಟ್ರೈವೇಲೆಂಟ್) ರೂಪದ ಸುರಮಾ (ಆಂಟಿಮೊನಿ) ಟಾರ್ಟರೇಟು ಬಲು ಪರಿಣಾಮಕರ ಮದ್ದು. ಆಗ ತಾನೆ ತಯಾರಿಸಿ ರಕ್ತನಾಳಾಂತರವಾಗಿ ಚುಚ್ಚಿ ಹೊಗಿಸಬಹುದು. ಹೀಗೆ 2–3 ವಾರಗಳು ಕೊಡುವುದರ ಬದಲು, ಎರಡೇ ದಿವಸಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಡುವುದು ಉಂಟು. ನಿಯೊಸ್ಟಿಬೊಸಾನ್ ಕೂಡ ಬಳಕೆಯಲ್ಲಿದೆ. ದಿವಸ ಬಿಟ್ಟು ದಿವಸ ರಕ್ತ ನಾಳಾಂತರವಾಗೋ ಸ್ನಾಯುವಿನಲ್ಲೋ ಚುಚ್ಚಿ ಹೊಗಿಸಬೇಕು. ಲಿತಿಯಂ ಸುರಮಾ ತಯೊಮೆಲೇಟ್ (ಅಂತಯಮೆಲೀನ್) ಕೂಡ ಕೊಡುವುದುಂಟು. ಸೀಳೊಡಲಿಗಳ ಮೇಲೆ ಎಮಿಟೀನೂ ಪರಿಣಾಮಕರ. ಆದ್ದರಿಂದ ಇದನ್ನೂ ಒಂದೊಂದು ಬಾರಿ ಬಳಸಬಹುದು. ಇಂದಿನ ಪರಿಣಾಮಕಾರಿ ಮದ್ದು ಮಿರಾಸಿಲ್–ಡಿ. ಮೊದಮೊದಲ ಹಂತಗಳಲ್ಲಿ ಸೊಂಕು ಬಲು ಬೇಗನೆ ಚಿಕಿತ್ಸೆಗೆ ಮಣಿಯುತ್ತದೆ. ಆದರೆ ಮುಂದೆ ಅಂಗರಚನೆ ಬಹಳ ಕೆಟ್ಟ ಮೇಲೆ ಪೂರ್ತಿ ವಾಸಿಯಾಗಲಾರದು. ಆಗ ಶಸ್ತ್ರಕ್ರಿಯೆ ಬೇಕಾಗಬಹುದು.

**ಹೆಗ್ಗರುಳುರಿತ :** ಮೇಲಿನ ಕಾರಣಗಳೇ ಅಲ್ಲದೆ, ಮಲದಲ್ಲಿ ಆಮ, ರಕ್ತ ಬೀಳುವ ಬೇರೆ ಎಷ್ಟೋ ದೊಡ್ಡ ಕರುಳಿನ ರೋಗಗಳಿವೆ. ಸರಿಯಾದ ಕಾರಣ ಗೊತ್ತಿರದ ನಾಗರಿಕರ ಪ್ರಪಂಚದಲ್ಲಿ ಜನರು ಅನುಭವಿಸುವ ಹಲವಾರು ತೆರನ ಹೆಗ್ಗರುಳುರಿತಗಳಿವೆ (ಕೊಲೈಟಿಸ್). ಹೆಗ್ಗರುಳಿನ ಸುರಿತದ ನರಬೇನೆ ಆದಾಗ ಉಚ್ಚಾಟವಾಗಿ ಕೆಲವೇಳೆ ರಕ್ತದೊಂದಿಗೆ ಲೋಳೆ ಎಳೆಯೆಳೆಯಾಗಿ ಸುರಿವುದು. ಇದು ವಿಪರೀತವಾಗಿ ಕೆಲವೇಳೆ ರಕ್ತದೊಂದಿಗೆ ಕರುಳಿನ ಆಮದ ಅಚ್ಚುಗಳು (ಕ್ಯಾಸ್ಟಿಸ್) ಬೀಳುತ್ತವೆ. ಇದು ಪರೆಯ (ಮೆಂಬ್ರೇನಸ್) ಹೆಗ್ಗರುಳುರಿತ. ತಾನಾಗೇಳುವ ಹುಣ್ಣಾಗಿಸುವ (ಈಡಿಯೋಪತಿಕ್ ಅಲ್ಸರೇಟಿವ್) ಹೆಗ್ಗರುಳುರಿತ ಬಲು ಕೆಟ್ಟ ರೋಗ. ಕೆಲವೇಳೆ ಮಾರಕ ಆಗುವುದುಂಟು. ಮುಖ್ಯವಾಗಿ, ಬೆಳೆಯುವವರ ರೋಗವಿದು. ಆಗಾಗ್ಗೆ ಇದು ಅಣಗಿ, ಇದಕ್ಕಿದ್ದಂತೆ ಜೋರಾಗಬಹುದು, ಹೀಗಾಗುವಾಗ ಚೆನ್ನಾಗಿ ಕಾರಣ ತಿಳಿದಿರುವ ಏಕಾಣುಜೀವಿಕ ಆಮಶಂಕೆಗಳಲ್ಲಿ ಒಂದೆಂದು ಇದನ್ನು ತಿಳಿಯಬಹುದು. ಮದ್ದುಗಳಿಂದಾಗುವ ಚಿಕಿತ್ಸೆಯಲ್ಲಿ, ಪಾದರಸದ ವಿಷವೇರಿದರೆ ಹೆಗ್ಗರುಳುರಿತವೂ ಆಗಿ ಇದೇ ತೆರನಾಗಿರಬಹುದು.

ಮೂತ್ರರಕ್ತ (ಯುರಿಮಿಯ) ಏರಿದಾಗಲೂ ಹೆಚ್ಚು ಕಡಿಮೆ ಹೀಗೇ ಆಗುತ್ತದೆ.

**ಉಳಿದ ಕಾರಣಗಳು :** ತೀವ್ರ ರೋಗದ ಮೂಲ ಕಾರಣ ಗೊತ್ತಾಗುವ ಎಷ್ಟೋ ಮೊದಲೇ, ಮಲದಲ್ಲಿ ಆಮ ರಕ್ತ ಬೀಳುವ ಕರುಳುಗಳ, ಮುಖ್ಯವಾಗಿ ಹೆಗ್ಗರುಳಿನ, ಹಲವಾರು ಬೇರೆ ರೋಗಗಳಿವೆ. ಹೆಗ್ಗರುಳು, ನೆಟ್ಟಗರುಳುಗಳಲ್ಲಿ ಏಡಿಗಂತಿ ಎದ್ದಿದ್ದಾಗ ಆಮಶಂಕೆಯ ಲಕ್ಷಣಗಳು ತೋರುತ್ತವೆ. ವಯಸ್ಸಾದವರಲ್ಲಿ ಈ ಲಕ್ಷಣಗಳು ಕಂಡಾಗ ನಿಜವಾದ ರೋಗ ಕಾರಣ ಕಂಡುಕೊಳ್ಳುವ ಅವಸರವನ್ನು ಒತ್ತಿ ಹೇಳಿದಂತಾಯಿತು.

ದೊಡ್ಡ ಕರುಳಲ್ಲಿ ಹಲವಾರು ಗ್ರಂಥಿಗಂತಿಗಳು (ಅಡಿನೊಮೆಟ) ಹಲಪಾದಿಬೇನೆ (ಪಾಲಿಪೋಸಿಸ್) ಆಗಿದ್ದರೂ ಹೀಗೇ. ವಯಸ್ಸಾದವರಲ್ಲಿ ಸಾಮಾನ್ಯವಾಗಿ ಹೆಗ್ಗರುಳಲ್ಲಿ ಆಗುವ ತಿರುಚೀಲುರಿತ (ಡೈವರ್ಟಿಕ್ಯುಲೈಟಿಸ್) ಇತರ ಹಲತೆರನ ಗಂತಿಗಳನ್ನೂ ಗಮನದಲ್ಲಿ ಇಟ್ಟಿರಬೇಕು. ಏಕಾಣುಜೀವಿ ಇಲ್ಲವೇ ಚಲ್ಕಣದ ಆಮಶಂಕೆಗಳಲ್ಲಿ ಹೊಟ್ಟೆ ನುಲಿದು ಮುಕ್ಕುತ್ತಲೇ ಇರುವುದರಿಂದ ಕರುಳುಗಳ ಒಂದು ಭಾಗ ಮುಂದಿನ ಭಾಗದೊಳಕ್ಕೆ ತೂರಿ ಒಳ್ತೂರಿಕೆ(ಇಂಟುಸಸೆಪ್ಷನ್) ಆಗಬಹುದು. ಚಿಕ್ಕ ಮಕ್ಕಳಲ್ಲಿ ಹಲಪಾದಿ (ಪಾಲಿಪ್) ಕೆರಳಿಸುವುದು ಇದರ ಕಾರಣ. ದೊಡ್ಡ ಕರುಳಲ್ಲಿ ಕ್ಷಯರೋಗದ ಹುಣ್ಣುಗಳೆದ್ದರೂ ಒಳಗಣ ಮೊಳೆಯು (ಪೈಲ್ಸ್) ಎದ್ದಾಗ ನೆಟ್ಟಗರುಳಲ್ಲಿ ನಂಜು ಹುಣ್ಣಾದರೂ ಮಲದಲ್ಲಿ ಆಮೂ, ರಕ್ತ, ಬೀಳುತ್ತವೆ. ಇವಾವುವೂ ಸಾಂಕ್ರಾಮಿಕ ಸೋಂಕಾಗುವ ಕಾರಣಗಳಲ್ಲ. ಅಲ್ಲದೆ, ಮಲದಲ್ಲಿ ಆಮ ರಕ್ತ ಬೀಳುವುದರ ಜೊತೆಗೆ ಆಯಾ ರೋಗದ ವಿಶಿಷ್ಟ ಲಕ್ಷಣಗಳೂ ಇರುತ್ತವೆ.

**ನಿರೋಧ :** ಸೋಂಕುಗೂಡಿದ ಮಲವೇ ಆಮಶಂಕೆ ಸೊಂಕು ಹತ್ತಿಸಿ ಹರಡುವುದರ ಮುಖ್ಯ ಮೂಲ. ಆದರೆ ಸೋಂಕಿನ ಚಕ್ರದಲ್ಲಿ ಎಷ್ಟೋ ಕಡೆ ತಾಕಬಹುದು. ಸೋಂಕು ಸಾಗಾಣಿಕೆಯ ಸರಪಣಿಯಲ್ಲಿ ಮುಖ್ಯ ಕೊಂಡಿ ಮಲವನ್ನು ತಿನ್ನುತ್ತ ಅಲ್ಲೇ ಮೊಟ್ಟೆ ಇಟ್ಟು ಮರಿ ಮಾಡುವ ನೊಣಗಳು. ಸೋಂಕು ಹತ್ತಿದ ಮಲ ಇರುವವರ ಬೆರಳುಗಳಿಂದ ಎಷ್ಟೋ ವೇಳೆ ಈ ರೋಗಾಣುಗಳ ಜಿಟ್ಟಿಗಳು ದೊರೆತಿವೆ. ಅಂಥವರಿಗೆ ರೋಗದ ಲಕ್ಷಣಗಳಿಲ್ಲದೆ ಕೇವಲ ಹೊರುಗರಾಗಿದ್ದರೆ, ಬಲು ಅಪಾಯಕರ, ಸೋಂಕು ಅನುಮಾನ ಬರುವ ಮೂಲಗಳು. ಇದರಿಂದಲೇ ಆಹಾರ ಪದಾರ್ಥಗಳನ್ನು ಬಡಿಸುವವರನ್ನೂ ಅಡುಗೆಯವರನ್ನೂ ಬಲು ಚೆನ್ನಾಗಿ ಪರೀಕ್ಷಿಸಬೇಕು.

ಆದ್ದರಿಂದ ಮಲದ ಸಾಗಾಣೆ, ತೀರಿಕೆಯೇ ಏಕಾಣುಜೀವಿಕ ಚಲ್ಕಣದ ಆಮ್ಲ ಶಂಕೆಗಳ ಮುಖ್ಯವಾದ ರೋಗ ತಡೆವ ಕ್ರಮಗಳು. ಕಕ್ಕಸುಗಳು, ಆಹಾರಕೋಣೆ, ಅಡುಗೆ ಮನೆ, ಊಟದ ಮನೆ, ಉಪಾಹಾರ ಮಂದಿರಗಳು, ಹೋಟೆಲುಗಳಿಗೆ ನೊಣಗಳು ಬರದಂತೆ ತಡೆದು ಅವನ್ನು ಸಾಯಿಸಬೇಕು. ಬಡಿಸುವವರು, ಬಾಣಸಿಗರು, ಅಡುಗೆಮನೆ, ಊಟದ ಮನೆಗಳ ಪಾತ್ರೆಗಳೂ ಚೊಕ್ಕಟವಾಗಿರಬೇಕು. ಸೋಂಕು ಹತ್ತಿರುವವರು ಚಿಕಿತ್ಸೆ ಬೇಗನೆ ಚೆನ್ನಾಗಿ ಮಾಡಿ ಸೋಂಕಿನ ಮೂಲವನ್ನು ಅಣುಗಿಸಬೇಕು. ರೋಗಾಣುಗಳ ಹೊರುಗರನ್ನು ಆಹಾರ ಮುಟ್ಟಗೊಡಿಸದೆ ಕೆಲಸದಿಂದ ತೆಗೆಯಬೇಕು. ಕರುಳುಹುಳುವಿನ ಆಮಶಂಕೆಯಲ್ಲಿ ಬೇರೆ ರೀತಿಯಿಂದ ಹತ್ತುವುದರಿಂದಲೂ ಅವಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಉದಾಹರಣೆಗಾಗಿ, ಸೀಳೊಡಲಿಯ ಆಮಶಂಕೆಯ ಹತೋಟಿಗಾಗಿ ನಡಂತರದ ಆಸರಿಗವಾಗಿ (ಹೋಸ್ಟ್) ಬಸವನ ಹುಳುವನ್ನೂ ಬಾಲಗೂದಲಿಗಳನ್ನೂ ಸಾಯಿಸುವ ದೊಡ್ಡ ಪ್ರಮಾಣಗಳ ರಾಸಾಯನಿಕ ಇಲ್ಲವೇ ಜೀವಿಜ್ಞಾನಿಕ ವಿಧಾನಗಳನ್ನು ಕೈಗೊಂಡು, ಸೋಂಕು ಹತ್ತಿದ ಅನುಮಾನವಿರುವ ನೀರನ್ನು ಕುಡಿಯಲೂ ಬಾರದು. ಅದರಲ್ಲಿ ಕಾಲಿಡಲೂ ಕೂಡದು. ಸ್ನಾನವಂತೂ ಮೊದಲೇ ಕೂಡದು. (ಕೆ.ಎಲ್.ಎನ್.)

**ಆಮಸ್ಟ್, ಲಾರ್ಡ್ :** 1772–1857. ಐದು ವರ್ಷಗಳ ಕಾಲ (1823–1828) ಭಾರತದಲ್ಲಿ ಗವರ್ನರ್–ಜನರಲ್ ಆಗಿದ್ದ. ಇಂಗ್ಲೆಂಡಿನಲ್ಲಿ ಶ್ರೀಮಂತ ಮನೆತನದಲ್ಲಿ ಹುಟ್ಟಿ ಕೆಲಕಾಲ ಸೈನಿಕನಾಗಿ ಕೆಲಸ ಮಾಡಿ ಬ್ರಿಟಿಷ್ ಸರ್ಕಾರದ ಆದೇಶದ ಮೇಲೆ 1816ರಲ್ಲಿ ಚೀನ ದೇಶಕ್ಕೆ ಬಂದು ರಾಜಕೀಯ ನಿಯೋಗದ ಸದಸ್ಯನಾಗಿ ಹೋಗಿದ್ದ. ತಿರುಗಿ ಬರುವಾಗ ಸೇಂಟ್ ಹೆಲಿನ ದ್ವೀಪದಲ್ಲಿಳಿದು, ನೆಪೋಲಿಯನ್ ಚಕ್ರವರ್ತಿಯ ಸಂಗಡ ದೀರ್ಘಸಂಭಾಷಣೆ ನಡೆಸಿದ. ಒಂದನೆಯ ಬರ್ಮಾ ಯುದ್ಧ (1824) ಇವನ ಕಾಲದಲ್ಲಿ ನಡೆದ ಮುಖ್ಯ ಘಟನೆ. ಈ ಯುದ್ಧದಿಂದ ಅರೆಕಾನ್ ಮತ್ತು ತೆನಾಸರೀಮ್‌ಗಳ ಮೇಲೆ ಬ್ರಿಟಿಷ್ ಪ್ರಭುತ್ವ ಏರ್ಪಟ್ಟಿತು. 1826ರಲ್ಲಿ ಲಾರ್ಡ್ ಪದವಿಯನ್ನು ಪಡೆದು 1828ರಲ್ಲಿ ಇಂಗ್ಲೆಂಡಿಗೆ ಮರಳಿದ. (ಕೆ.ವಿ.ಎಸ್.)

**ಆಮಿಯನ್ಸ್ ಒಪ್ಪಂದ :** ನೆಪೋಲಿಯನ್ನನ ಮಹಾದಂಡಯಾತ್ರೆಯ ಮಧ್ಯದಲ್ಲಿನ ಒಂದು ಶಾಂತಿ ಒಪ್ಪಂದ. ಬ್ರಿಟನ್ನಿಗೂ ಫ್ರಾನ್ಸಿಗೂ ನಡುವೆ 1802ರ ಮಾರ್ಚ್ 27ರಂದು ಉತ್ತರ ಫ್ರಾನ್ಸಿನ ಆಮಿಯನ್ಸ್ ನಗರದಲ್ಲಿ ನಡೆಯಿತು. ಇದರ ಪ್ರಕಾರ ಫ್ರೆಂಚರಿಗೆ ಅವನ ವಸಾಹತುಗಳೆಲ್ಲ ದಕ್ಕಿದವು. ಬ್ರಿಟನ್ ಮಾತ್ರ ಸಿಲೋನ್ ಮತ್ತು ಟ್ರಿನಿಡ್ಯಾಡ್‌ಗಳನ್ನು ಇಟ್ಟುಕೊಂಡು ಉಳಿದಂತೆ ಸ್ಪೇನಿಗೆ ಮೈನಾರ್ಕವನ್ನೂ ಹಾಲೆಂಡಿಗೆ ಕೊಚಿನ್, ಕೇಪ್ ಆಫ್ ಗುಡ್‌ಹೋಪ್ ಸ್ಪೈನ್ ದ್ವೀಪಗಳನ್ನೂ ಬಿಟ್ಟುಕೊಟ್ಟಿತು. ಈ ಒಪ್ಪಂದದಿಂದ ತಾತ್ಕಾಲಿಕವಾಗಿ ಮಾತ್ರ ಯುರೋಪಿನಲ್ಲಿ ಶಾಂತಿ ನೆಲೆಸಿತು. ಏಕೆಂದರೆ 1803ರಲ್ಲಿ ಮತ್ತೆ ಇಂಗ್ಲೆಂಡ್ ನೆಪೋಲಿಯನ್ನನ ಮೇಲೆ ಯುದ್ಧ ಘೋಷಿಸಿತು. (ಜಿ.ವಿ.)

**ಆಮಿರ್ ಖಾನ್:** 1965–. ಹಿಂದಿ ಚಲನಚಿತ್ರರಂಗದ ಹೆಸರಾಂತ ನಾಯಕ ನಟ, ನಿರ್ದೇಶಕ, ನಿರ್ಮಾಪಕ. 14 ಮಾರ್ಚ್ 1965ರಲ್ಲಿ ಜನಿಸಿದರು. ನಾಸಿರ್ ಹುಸೇನರ



ಯಾದೋಂ ಕಿ ಬಾರಾತ್ (1973) ಎಂಬ ಚಿತ್ರದಲ್ಲಿ ಬಾಲನಟನಾಗಿ ಚಿತ್ರರಂಗ ಪ್ರವೇಶಿಸಿದರು. ಖಾನ್ 1984ರಲ್ಲಿ ಹೋಲಿ ಎಂಬ ಚಿತ್ರದ ಮೂಲಕ ಚಿತ್ರ ನಿರ್ಮಾಣವನ್ನಾರಂಭಿಸಿದರು. ರಾಜಾ ಹಿಂದೂಸ್ತಾನಿ (1996) ಚಿತ್ರದ ನಟನೆಗೆ ಇವರಿಗೆ 'ಫಿಲ್ಮ್‌ಫೇರ್' ಶ್ರೇಷ್ಠನಟ ಪ್ರಶಸ್ತಿ ದೊರಕಿದೆ. 2001ರಲ್ಲಿ ಸಿನಿಮಾ ನಿರ್ಮಾಪಕರಾಗಿ ಲಗಾನ್ ಚಿತ್ರ ನಿರ್ಮಾಣ ಮಾಡಿದರು. ಈ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರೆತಿದೆ. 2008ರಲ್ಲಿ ಬಿಡುಗಡೆಯಾದ, ಇವರು ನಟಿಸಿದ ಘಜ್ನಿ ಚಲನಚಿತ್ರ ಅತಿ ಹೆಚ್ಚು ಹಣ ಗಳಿಸಿ ದಾಖಲೆ ಸೃಷ್ಟಿಸಿತು. 2009ರಲ್ಲಿ ಬಿಡುಗಡೆಯಾದ 3 ಇಡಿಯಟ್ಸ್ ಎಂಬ ಚಿತ್ರ ಕೂಡ ಭಾರಿ ಯಶಸ್ಸುಗಳಿಸಿದ ಬಾಲಿವುಡ್ ಚಿತ್ರವೆಂಬ ಖ್ಯಾತಿಗೆ ಪಾತ್ರವಾಯಿತು. ಕಯಾಮತ್ ಸೆ ಕಯಾಮತ್ ತಕ್ (1988), ದಿಲ್ (1990), ಜೋ ಜೀತ ವಹೀ ಸಿಕಂದರ್ (1992), ರಂಗೀಲಾ (1995), ದಿಲ್ ಚಾಹತಾಹೈ (2001), ಮಂಗಲ್

ಪಾಂಡೆ (2005), ತಾರೆ ಜಮೀನ್‌ಪರ್ (2007), ಇವರು ಅಭಿನಯಿಸಿರುವ ಇತರ ಕೆಲವು ಮುಖ್ಯ ಚಿತ್ರಗಳು. ಪೀಪ್ಲಿಲೈವ್ (2010) ಇವರ ಇತ್ತೀಚಿನ ಚಿತ್ರ 2010ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ಪ್ರಥಮ ಪತ್ನಿ ರೀನಾದತ್ತ (1986–2002) ಇವರಿಗೆ ಇಬ್ಬರು ಮಕ್ಕಳು. ಈಗ ಅವರಿಂದ ದೂರವಾಗಿರುವ ಇವರು ಕಿರಣ್‌ರಾವ್ (ವಿವಾಹ ಡಿಸೆಂಬರ್ 2005) ಅವರೊಂದಿಗಿದ್ದಾರೆ.

**ಆಮೂದಾರ್ಯ :** ಮಧ್ಯ ಏಷ್ಯದ ಅತಿ ದೊಡ್ಡ ನದಿಗಳಲ್ಲೊಂದು (2540 ಕಿಮೀ). ಹಿಂದೆ ಆಕ್ಸಸ್ ನದಿ ಎಂದು ಕರೆಯುತ್ತಿದ್ದರು. ಪರ್ಷಿಯದ ಪ್ರಾಚೀನ ಇತಿಹಾಸದಲ್ಲೂ ಅಲೆಕ್ಸಾಂಡರನ ದಂಡಯಾತ್ರೆಯಲ್ಲೂ ಇದಕ್ಕೆ ಪ್ರಾಶಸ್ತ್ಯ ದೊರೆತಿದೆ. ಉಗಮಸ್ಥಾನ ತಜಕಿಸ್ಥಾನದ ಮತ್ತು ಉತ್ತರ ಆಫ್ಘಾನಿಸ್ತಾನದ ನಡುವಣ ಪರ್ವತಶ್ರೇಣಿ. ಪಂಜ್ ಮತ್ತು ವಕ್ಷ್ ಎಂಬ ಜಲಮೂಲಗಳಿಂದ ಉಗಮಗೊಂಡು, ಪಶ್ಚಿಮ ಮತ್ತು ಈಶಾನ್ಯದ ಕಡೆಗೆ ಹರಿದು ಆರಲ್ ಸಮುದ್ರವನ್ನು ಸೇರುತ್ತದೆ. ಅನೇಕ ಉಪನದಿಗಳಿವೆ. ನದಿಯ ಅರ್ಧಭಾಗ ಪರ್ವತ ಪ್ರದೇಶದಲ್ಲಿದೆ. ಉಳಿದ ಅರ್ಧಭಾಗ ವಿಶಾಲವಾದ ಮೈದಾನ ಪ್ರದೇಶದಲ್ಲಿದೆ (46,620 ಚಕಿಮೀ.) ಪ್ರದೇಶ ಇದರಿಂದ ನೀರಾವರಿ ಸೌಲಭ್ಯವನ್ನು ಪಡೆದಿದೆ. ಅದರಲ್ಲಿ ಶೇ. 60 ಭಾಗ ನದೀಮುಖಜ ಭೂಮಿಯಲ್ಲೇ ಇದೆ. (ಎಂ.ಎಸ್.ಎಂ.)

**ಆಮೆ :** ಸರೀಸೃಪ (ರೆಪ್ಟೀಲಿಯ) ವರ್ಗದ ಕೀಲೋನಿಯ ಗಣಕ್ಕೆ ಸೇರಿದ ಕಶೇರುಕ. ಈ ಪ್ರಾಣಿಗೆ ಇಂಗ್ಲಿಷಿನಲ್ಲಿ ಟಾರ್ಟಾಯ್ಸ್, ಟರ್ಟಲ್, ಟೆರ‍್ರಾಪಿನ್ ಎಂಬ ಹೆಸರುಗಳಿವೆ; ಸಂಸ್ಕೃತದಲ್ಲಿ ಕೂರ್ಮ. ಮೊದಲನೆಯ ಪದ ಟಾರ್ಟಸ್ ಎಂದರೆ ಫ್ರೆಂಚ್ ಭಾಷೆಯಲ್ಲಿ ತಿರುಚಿದ್ದು ಎಂದರ್ಥ. ಈ ಪ್ರಾಣಿಯ ಕಾಲುಗಳು ವಿಚಿತ್ರವಾಗಿ ಬಗ್ಗಿರುವುದರಿಂದ ಈ ಹೆಸರು ಬಂದಿದೆ. ಟರ್ಟಲ್ ಎಂಬುದು ಈ ಪದದ ಇಂಗ್ಲಿಷ್ ಸಮಾನಾರ್ಥಕ. ಟೆರ‍್ರಾಪಿನ್ ಎಂಬುದು 16ನೆಯ ಶತಮಾನದ ನಾವಿಕರು ಉಷ್ಣವಲಯದ, ಅದರಲ್ಲೂ ಅಮೆರಿಕ ದೇಶದ ಸಿಹಿ ನೀರಿನ ಆಮೆಗಳಿಗಿಟ್ಟ ಹೆಸರು. ಟಾರ್ಟಸ್ ಎಂಬ ಹೆಸರು ನೆಲವಾಸಿ ಆಮೆಗಳಿಗೂ ಟರ್ಟಲ್ ಎಂಬುದು ಕಡಲವಾಸಿ ಅಥವಾ ಹೆಚ್ಚು ಕಾಲವನ್ನು ಸಿಹಿನೀರಿನಲ್ಲಿ ಕಳೆಯುವ ಆಮೆಗಳಿಗೂ ಅನ್ವಯಿಸುತ್ತದೆ. ಕೆಲವು ಅಳಿವೆಗಳಲ್ಲಿಯೂ ವಾಸಿಸಬಲ್ಲವು. ಆ ಪ್ರಾಣಿಗಳೆಲ್ಲಾ ಹಲ್ಲಿಲ್ಲದ ಸರೀಸೃಪಗಳು. ಚೆನ್ನಾಗಿ ಬೆಳೆದಿರುವ ಕಾಲುಗಳೂ ಮೂಳೆಯ ಹಲಗೆಗಳಿಂದ ನಿರ್ಮಿತವಾದ ಬೆನ್ನಿನ ಮತ್ತು ಹೊಟ್ಟೆಯ ಕಡೆ ಚಿಪ್ಪುಗಳೂ ದೊಡ್ಡದಾದ ಮತ್ತು ಅಲುಗಾಡದಂತೆ ಕುಳಿತಿರುವ ಕ್ವಾಡ್ರೇಟ್ ಮೂಳೆಯೂ ಇವೆ. ಮೊಂಡಕಾಲು, ಮೊನಚಾದ ನಖಗಳಿವೆ. ಗುದದ್ವಾರ ಉದ್ದವಾಗಿದೆ. ಮೈಥುನಾಂಗ ಕವಲೊಡೆದಿಲ್ಲ. ಆಮೆಗಳು 150ಕ್ಕೂ ಹೆಚ್ಚು ವರ್ಷ ಬದುಕಬಲ್ಲವು.

ಇಡೀ ಚಿಪ್ಪು ಬೆನ್ನುಕಡೆ ಉಬ್ಬಿದ ಕ್ಯಾರಾಪೇಸ್ ಮತ್ತು ಹೊಟ್ಟೆಕಡೆ ಚಪ್ಪಟೆಯಾದ ಪ್ಲಾಸ್ಟ್ರಾನ್‌ನಿಂದ ಕೂಡಿದೆ. ಕ್ಯಾರಾಪೇಸ್ ಕ್ರಮವಾದ ಪಂಕ್ತಿಗಳಾಗಿ ಜೋಡಿಸಲ್ಪಟ್ಟ ಎಲುಬುಗಳಿಂದಾಗಿ ಚರ್ಮದ ಹೊದಿಕೆ ಹೊಂದಿದೆ.

ಸಾಧಾರಣವಾಗಿ ಕೀಲೋನಿಯಗಳಲ್ಲಿ ಅಸ್ಥಿಮಯ ಚಿಪ್ಪು, ದೊಡ್ಡ ದೊಡ್ಡ ಫಲಕಗಳಾಗಿ ವಿಭಜಿಸಲ್ಪಟ್ಟು ಗಟ್ಟಿಯಾದ ಪಟಲಗಳಿಂದ ಆವರಿಸಿದೆ. ಇದೇ ಆಮೆಯ ಚಿಪ್ಪು. ಕೊಂಬಿನ ಈ ಪಟಲಗಳು ಕೆಳಗಿರುವ ಎಲಬುಗಳಿಗೆ ಸಂಖ್ಯೆಯಲ್ಲಾಗಲೀ ವಿಸ್ತಾರದಲ್ಲಾಗಲೀ ಹೊಂದಿಕೊಂಡಿಲ್ಲ. ಆದರೂ ಜೋಡಣೆಗಳಲ್ಲಿ ಕೊಂಚಮಟ್ಟಿಗೆ ಹೋಲಿಕೆಯುಂಟು. ಒಂದು ಬೆನ್ನೆಲುಬಿನ ಸಾಲು, ಒಂದು ಜೋಡಿ ಪಕ್ಕೆಗಳ ಸಾಲು ಮತ್ತು ಒಂದು ಜೋಡಿ ಅಂಚಿನ ಸಾಲು ಈ ರೀತಿ ಹೊಂದಿಕೊಂಡಿವೆ.

ತಲೆ, ಕತ್ತು, ಬಾಲ ಮತ್ತು ಕಾಲುಗಳ ಚರ್ಮ ಮೆತ್ತಗೂ ನುಣುಪಾಗಿಯೂ ಇದೆ, ಇವು ಹುರುಪೆಯಿಂದಾವೃತವಾಗಿವೆ.

ಕೀಲೋನಿಯಗಳಲ್ಲಿ ಸುಮಾರು 250 ಪ್ರಭೇದಗಳಿವೆ. ಅವುಗಳಲ್ಲಿ ಸಿಹಿನೀರಿನವೇ ಹೆಚ್ಚು. ಸಾಧಾರಣವಾಗಿ ಅವು ಉಷ್ಣವಲಯದ ತೀರ ಪ್ರದೇಶಗಳಲ್ಲಿ ಇರುವುದು ಹೆಚ್ಚು. ಸಮುದ್ರದ ಆಮೆಗಳೂ ಉಷ್ಣವಲಯದಲ್ಲಿಯೇ ವಾಸಿಸುವುವು. ಬಂಜರು ಪ್ರದೇಶಗಳಲ್ಲೂ ಅತಿ ಎತ್ತರ ಜಾಗಗಳಲ್ಲೂ ಅವು ಬದುಕಲಾರವು.

ಆಮೆಗಳ ಜೀವನರೀತಿಯಲ್ಲಿ ವೈವಿಧ್ಯ ಕಂಡುಬರುತ್ತದೆ. ಕೆಲವು ಯಾವಾಗಲೂ ಭೂಮಿಯ ಮೇಲೆ ವಾಸಿಸುವುವು; ಅವುಗಳ ಕಾಲುಗಳು ಮೊಂಡಾಗಿದ್ದು, ಮೊಂಡಾದ ನಖಗಳುಂಟು. ಇನ್ನು ಕೆಲವು ನೆಲದ ಮೇಲೂ ನೀರಿನಲ್ಲೂ ವಾಸಿಸಬಲ್ಲವು. ಮತ್ತೆ ಕೆಲವು ಯಾವಾಗಲೂ ನೀರಿನಲ್ಲಿ ಸೀನೀರಿರುವ ಸಮುದ್ರದಲ್ಲಿ ಇರುವುವು. ಸೀನೀರಿನ ಪ್ರಾಣಿಗಳ ಕಾಲು ನಖಗಳನ್ನು ಹೊಂದಿದ್ದು ಪರೆಯಿಂದ ಕೂಡಿ ಜಾಲಪಾದದಂತಿವೆ.

ಕೀಲೋನಿಯಗಳು ಹಗಲಲ್ಲಿ ಸಂಚರಿಸುವುವು. ಮೊಟ್ಟೆಯಿಡುವಾಗ ರಾತ್ರಿಯೂ ಓಡಾಡುತ್ತವೆ. ಭೂಚರ ಆಮೆಗಳು ಮಂದಗಾಮಿಗಳು; ಸಾಮಾನ್ಯವಾಗಿ ನೀರಿನಲ್ಲಿ ವಾಸಮಾಡುವುವು. ಆಹಾರ ಹುಡುಕುವಾಗಲೂ ಶತ್ರುಗಳು ಬಂದಾಗಲೂ ಬಹಳ ವೇಗವಾಗಿ ಚಲಿಸಬಲ್ಲವು. ಕೀಲೋನಿಯಗಳು ಸಾಧಾರಣವಾಗಿ ಒಂದೇ ಪ್ರದೇಶದಲ್ಲಿ ವಾಸಿಸುವುವು. ಸಮುದ್ರಪ್ರಾಣಿಗಳು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುವು. ಶೀತವಲಯದ ಪ್ರಾಣಿಗಳು ಹಿಮಶಯನ ಮಾಡುತ್ತವೆ.

ಭೂಚರ ಆಮೆಗಳೂ ಕೆಲವು ಸೀನೀರಿನ ಆಮೆಗಳೂ ಕೆಲವು ಸಮುದ್ರದ ಆಮೆಗಳೂ ಸಸ್ಯಾಹಾರಿಗಳು; ಮಿಕ್ಕವು ಮೀನು, ಕಪ್ಪೆ, ಮೃದ್ವಂಗಿ ಮತ್ತಿತರ ಜಲಚರ ಪ್ರಾಣಿಗಳನ್ನು ತಿನ್ನುತ್ತವೆ. ಕೀಲೋನಿಯಗಳು ಅಂಡಜಗಳು, ಮೊಟ್ಟೆಯ ಚಿಪ್ಪು ಗಟ್ಟಿಯಾಗಿದ್ದು ಕೊಂಚ ಉದ್ದನಾಗಿರುತ್ತದೆ; ಸಮುದ್ರದ ಆಮೆಯ ಮೊಟ್ಟೆ ದುಂಡಗಿರುತ್ತದೆ.

ಗರುಡ ಮೂಗಿನ ಆಮೆ: ಇದು ಕೀಲೋನಿಯ ಉಪವರ್ಗಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಕೀಲೋನ್ ಇಂಬ್ರಿಕೇಟ. ಕಾಲು ಎರಡು ನಖಗಳಿಂದ ಕೂಡಿದ್ದು



ಬೆನ್ನು ಫಲಕಗಳು ನಾಡುಹೆಂಚುಗಳ ಹಾಗೆ ಜೋಡಣೆಯಾಗಿವೆ. ಇದು ಮಾಂಸಾಹಾರಿ. ಈ ಪ್ರಾಣಿಯ ಚಿಪ್ಪು ಮಾರುಕಟ್ಟೆಯಲ್ಲಿ ಬಹಳ ಆಕರ್ಷಣೀಯ ವಸ್ತು.

ವರ್ಣರಂಜಿತ ಆಮೆ : ಕ್ರೈಸೆಮಿಸ್ ಪಿಕ್ಟ ಎಂಬ ಹೆಸರುಳ್ಳ ವರ್ಣರಂಜಿತ ಟೆರಾಪಿನ್ ಆಮೆ ಅಮೆರಿಕ ದೇಶದ ವಾಸಿ. ಚಿಪ್ಪು ಬಹಳ ನಯವಾಗಿದ್ದು ಸ್ವಲ್ಪಮಟ್ಟಿಗೆ ಚಪ್ಪಟೆಯಾಗಿದೆ. ಮೇಲ್ಮೈ ಬಣ್ಣ ಕಪ್ಪು ಮಿಶ್ರಿತ ಕಂದು. ಬೆನ್ನು ಮತ್ತು ಪಾರ್ಶ್ವಗಳಲ್ಲಿರುವ ಫಲಕಗಳ ಮೇಲೆ ಪೀತವರ್ಣದ ರೇಖೆಗಳನ್ನು ಕಾಣಬಹುದು. 3–4 ಕಪ್ಪು ಬಣ್ಣದ ಅಡ್ಡಪಟ್ಟೆಗಳು ಇವೆ. ದೇಹದ ಒಳಭಾಗಗಳೂ ಕೂಡ ವರ್ಣವಿನ್ಯಾಸವನ್ನು ಹೊಂದಿವೆ. ತಲೆಯಲ್ಲಿ ಕಣ್ಣಿನ ಹಿಂಬದಿಯಲ್ಲಿ ಎರಡು ಹಳದಿ ಬಣ್ಣದ ಚುಕ್ಕೆಗಳಿವೆ. (ಎಂ.ಡಿ.ಪಿ.)

**ಆಮೆಯ ಚಿಪ್ಪು :** ವ್ಯಾಪಾರಕ್ಕೆ ಬರುವ ಆಮೆಚಿಪ್ಪುಗಳು ಕಡಲಾಮೆಗಳ ಅತಿ ಚಿಕ್ಕದಾದ ಕಿಲೋನಿ ಇಂಬ್ರಿಕೇಟ ಎಂಬ ಜಾತಿಯ ಆಮೆಯ ಉಪಪತ್ಕನ ಹಲಗೆಗಳು. ಬೆನ್ನಿನ ಮೇಲೆ ಇಂಥ ಹಲಗೆಗಳುಂಟು. ಇವು ಒಂದರ ಮೇಲೊಂದು ಹೆಂಚು ಹೊದಿಸಿದ ಹಾಗೆ ಇರುವುದರಿಂದ ಚಿಪ್ಪು ದೊಡ್ಡದಾಗಿರುತ್ತದೆ. ಅತಿ ದೊಡ್ಡದೆಂದರೆ 18" ರಿಂದ 13" ಇದ್ದು 0.31 ಗ್ರಾಂ ತೂಕವಿರುತ್ತವೆ. ಅದು ಕೊಂಬಿಗಿಂತ ಗಟ್ಟಿಯ ಪೆಡಸೂ ಆಗಿರುತ್ತದೆ. ಬಣ್ಣವಿನ್ಯಾಸದ ಮೇಲೆ ಅದಕ್ಕೆ ಬೆಲೆ ಕಟ್ಟುತ್ತಾರೆ. ಇವು ಉಷ್ಣವಲಯದ ಎಲ್ಲ ಸಮುದ್ರಗಳಲ್ಲಿ ದೊರಕಿದರೂ ಸೆಲಿಬಿಸ್ ದ್ವೀಪದಿಂದ ನ್ಯೂಗಿನಿವರೆಗಿನ ಸಾಗರದ ಪ್ರದೇಶಗಳಲ್ಲಿ ಸಿಕ್ಕತಕ್ಕವು ಉತ್ಕೃಷ್ಟವಾದುವು. ತಗಡುಗಳನ್ನು ಶರೀರದ ಅಸ್ಥಿಯಿಂದ ಕಾಯಿಸಿ ಬೇರ್ಪಡಿಸಲಾಗುತ್ತದೆ. ಮೊದಲು ಡುಬ್ಬಾಗಿ ದೋಣಿಯ ಅಡಿತಟ್ಟೆಯಂತಿರುತ್ತದೆ. ಉಷ್ಣ ಮತ್ತು ಒತ್ತಡಗಳಿಂದ ಚಪ್ಪಟೆ ಮಾಡಿ ಒಂದಕ್ಕೊಂದು ಬೆಸೆದುಕೊಳ್ಳುವಂತೆ ಮಾಡುತ್ತಾರೆ. ಅದರಿಂದ ಪೆಟ್ಟಿಗೆ, ನಸ್ಯದ ಡಬ್ಬಿ, ಕನ್ನಡಕದ ಕಟ್ಟು, ಬಾಚಣಿಗೆ ಇತ್ಯಾದಿ ವಸ್ತುಗಳನ್ನು ತಯಾರಿಸುತ್ತಾರೆ. ಈಚೆಗೆ ಸೆಲುಲಾಯಿಡ್ ಮತ್ತು ಪ್ಲ್ಯಾಸ್ಟಿಕ್ ಪದಾರ್ಥಗಳು ಬಂದ ನಂತರ ಇದರ ಬಳಕೆ ಕಡಿಮೆಯಾಗಿದೆ.

ಎರಿಮೋಕೆಲಿಸ್ ಎಂಬ ಬಹು ಚಿಕ್ಕದಾದ ಒಂದು ಸಮುದ್ರದಾಮೆಯ ಹೊರಚಿಪ್ಪು ಕೊಂಬಿನಂಥ ವಸ್ತುವಿನಿಂದ ರಚನೆಯಾಗಿದ್ದು ಬಹಳ ವೈವಿಧ್ಯಮಯವಾಗಿದೆ. ನಾನಾ ಬಣ್ಣಗಳನ್ನು ಹೊಂದಿದೆ. ಅತ್ಯುತ್ತಮವಾದ ಆಮೆಚಿಪ್ಪುಗಳು ಸೆಲಿಬಸ್, ನ್ಯೂಗಿನಿ, ವೆಸ್ಟ್ ಇಂಡೀಸ್ ಮತ್ತು ಬ್ರೆಜಿಲ್ ದೇಶಗಳಿಂದ ಆಮದಾಗುತ್ತವೆ. (ಎಂ.ಡಿ.ಪಿ.)

**ಆಮೂರ, ಜಿ.ಎಸ್.:** 1925–. ಕನ್ನಡದ ಪ್ರಸಿದ್ಧ ವಿಮರ್ಶಕರು. ಗುರುರಾಜ ಶಾಮಾಚಾರ್ಯ ಆಮೂರ ಇವರ ಪೂರ್ಣ ಹೆಸರು. ಧಾರವಾಡ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಹೂರಣಗಿಲ್ಲಿಯಲ್ಲಿ 1925 ಮೇ 8ರಂದು ಜನಿಸಿದರು. ತಂದೆ ಶಾಮಾಚಾರ್ಯ, ತಾಯಿ ಗಂಗಾದೇವಿ. ಇಂಗ್ಲಿಷ್ ಎಂ.ಎ. ಪದವೀಧರರಾದ ಆಮೂರ ಅವರು ಕುಮಟ, ಗದಗ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡಿ ಔರಂಗಾಬಾದಿನ ಮರಾಠವಾಡ ವಿಶ್ವ ವಿದ್ಯಾಲಯದಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿ ಈಗ ಧಾರವಾಡದಲ್ಲಿ ನೆಲಸಿದ್ದಾರೆ.

ಆಮೂರ ಅವರು ಕಳೆದ ಅರ್ಧ ಶತಮಾನದಿಂದ ಕನ್ನಡ ವಿಮರ್ಶೆಯ ಉತ್ಕರ್ಷಕ್ಕಾಗಿ ಶ್ರಮಿಸುತ್ತ ಬಂದಿ ದ್ದಾರೆ. ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ಕಾರಂತರ ಕಾದಂಬರಿಗಳ ಬಗ್ಗೆ ವಿಮರ್ಶೆ ಬರೆದು ಬಹುಮಾನ ಪಡೆದಿದ್ದರು (1943). ಕನ್ನಡ ಹಾಗೂ ಇಂಗ್ಲಿಷ್

ಈ ಎರಡೂ ಭಾಷೆಗಳು ಸೇರಿದಂತೆ 40 ವಿಮರ್ಶಾ ಗ್ರಂಥಗಳನ್ನೂ 500ಕ್ಕೂ ಹೆಚ್ಚು ವಿಮರ್ಶಾ ಲೇಖನಗಳನ್ನೂ ಬರೆದಿದ್ದಾರೆ. ಆಳವಾದ ಅಧ್ಯಯನ, ಪ್ರತಿಭೆ, ಪಾಂಡಿತ್ಯ ಕ್ಷೇತ್ರದಲ್ಲಿ ಮಹತ್ವ ಗಳಿಸಿದ್ದು, ವಿದ್ವಾಂಸರ ಆದರಕ್ಕೂ ಪಾತ್ರವಾಗಿದೆ.

ಆಮೂರ ಅವರ ವಿಮರ್ಶೆ ನಾಲ್ಕು ಸ್ತರಗಳಲ್ಲಿ ಪ್ರಕಟಗೊಂಡಿದೆ. ಕನ್ನಡ ಸಾಹಿತ್ಯ ವಿಮರ್ಶೆ, ಇಂಗ್ಲಿಷ್‍ನಲ್ಲಿ ಬಂದ ಭಾರತೀಯ ಸಾಹಿತ್ಯ, ಅಮೆರಿಕನ್ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್‍ನಲ್ಲಿ ವಿಮರ್ಶೆ. ತಾತ್ವಿಕ ಮತ್ತು ಆನ್ವಯಿಕ ಅಧ್ಯಯನವೇ ಇವರ ವಿಮರ್ಶಾ ಕೃತಿಗಳಲ್ಲಿ ಕಾಣುವ ಮುಖ್ಯ ಅಂಶಗಳಾಗಿವೆ. ಮಹಾಕವಿ ಮಿಲ್ಟನ್ (1958), ಕೃತಿಪರೀಕ್ಷೆ (1970), ಸಮಕಾಲೀನ ಕಥೆ, ಕಾದಂಬರಿ (1988), ಭುವನದ ಭಾಗ್ಯ (1991), ವ್ಯವಸಾಯ (1992), ಕಾಮಿಡಿ (1993), ಕನ್ನಡ ಕಥನ ಸಾಹಿತ್ಯ ಕಾದಂಬರಿ (1994), ಸಾತ್ವಿಕ ಪಥ (1995), ಆಧುನಿಕ ಕನ್ನಡ ಸಾಹಿತ್ಯ ವಿರಾಟ್ ಪುರುಷ (1998), ಕಾದಂಬರಿಯ ಸ್ವರೂಪ ಹೊಸ ಚಿಂತನೆ (1999), ದತ್ತಾತ್ರೇಯ ರಾಮಚಂದ್ರ ಬೇಂದ್ರೆ (2000), ಬೇಂದ್ರೆ ಕಾವ್ಯದ ಪ್ರತಿಮಾ ಲೋಕ (2000), ಅಮೃತ ವಾಹಿನಿ (2000), ಸೀಮೋಲ್ಲಂಘನ (2002), ಕನ್ನಡ ಸಣ್ಣಕಥೆ (2003) – ಇವು ಇವರ ಕೆಲವು ಪ್ರಮುಖ ವಿಮರ್ಶಾನ ಕೃತಿಗಳು. ಇವರ ವಿಮರ್ಶೆಯಲ್ಲಿ ಕನ್ನಡ ಕಥನ ಸಾಹಿತ್ಯ ಸಣ್ಣಕಥೆ ಮತ್ತು ಕಾದಂಬರಿಗಳ ಕುರಿತಾದ ಕೃತಿನಿಷ್ಠ ವಿಮರ್ಶೆ ಪ್ರಮುಖವಾದದ್ದು. ಕನ್ನಡ ಕಥನ ಪರಂಪರೆ ವಾಸ್ತವವಾದ ನೆಲೆಯಲ್ಲಿ ಬೆಳೆದಿದೆ ಎಂಬ ಆಲೋಚನೆಯನ್ನು ಆಮೂರರು ವಿಸ್ತಾರವಾಗಿ ಚರ್ಚಿಸಿದ್ದಾರೆ. ತಮ್ಮ ವಿಮರ್ಶೆಗೆ ಸಂಶೋಧನೆಯಂತೆ ಆಧಾರ, ಆಕರ ಸಾಮಗ್ರಿಯನ್ನು ಒದಗಿಸಿ ಕೃತಿಪರೀಕ್ಷೆ ನಡೆಸಿ ವಸ್ತುನಿಷ್ಠ ದೃಷ್ಟಿಯಿಂದ ಪರಿಶೀಲಿಸಿ ವಿಮರ್ಶನ ಅಭಿಮತ ರೂಪಿಸುವುದು ಆಮೂರರ ವಿಮರ್ಶೆಯ ರೀತಿಯಾಗಿದೆ. ಹಾಗಾಗಿ ಕನ್ನಡ ಸಣ್ಣಕಥೆ ಮತ್ತು ಕಾದಂಬರಿಗಳ ಬಗ್ಗೆ ಇವರ ವಿಮರ್ಶೆ ಅತ್ಯಂತ ಮಹತ್ವದ ಕೊಡುಗೆಯಾಗಿದೆ. ಬೇಂದ್ರೆಯವರ ಸಾಹಿತ್ಯವನ್ನು ಅದರ ಜಾರಿತಿಕ ನೆಲೆಯಲ್ಲಿ ಪರಿಶೀಲಿಸಿ, ಬೇಂದ್ರೆ ದರ್ಶನದ ಅಖಂಡತೆಯನ್ನು ವಸ್ತು ಮತ್ತು ಆಕೃತಿಗಳ ವಿಕಾಸಕಮವನ್ನೂ ಅಭಿವ್ಯಕ್ತಿಯ ವೈವಿಧ್ಯವನ್ನೂ ಗುರುತಿಸುವ ವಿಶಿಷ್ಟ ಕಾರ್ಯವನ್ನು ಆಮೂರರು ಭುವನದ ಭಾಗ್ಯ ಎಂಬ ಕೃತಿಯಲ್ಲಿ ಮಾಡಿದ್ದಾರೆ. ಬೇಂದ್ರೆ ಸಾಹಿತ್ಯವನ್ನು ವಸ್ತು ಮತ್ತು ಆಶಯದ ನೆಲೆಯಲ್ಲಿ ಬೆಳಗು, ಓ ಹಾಡೇ, ಮರಳು ಅರಳು, ಪಂಚಾಂಗ ಎಂದು ವಿಭಜಿಸಿ ವಿಶ್ಲೇಷಿಸಿ ಬೇಂದ್ರೆ ಸಾಹಿತ್ಯವಿಮರ್ಶೆಗೆ ನೂತನ ಆಯಾಮ ಒದಗಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ವಿರಾಟ್ ಪುರುಷ ಎಂಬುದು ಆಳವಾದ ವಿಮರ್ಶನ ಒಳನೋಟಗಳಿಂದ ಶ್ರೀರಂಗ ಸಾಹಿತ್ಯ ವಿಮರ್ಶೆಯ ಪ್ರಮಾಣಗ್ರಂಥವಾಗಿದೆ.



ಆಧುನಿಕ ಕನ್ನಡ ಸಾಹಿತ್ಯವನ್ನು ಇಂಗ್ಲಿಷ್ ಲೋಕಕ್ಕೆ ಪರಿಚಯಿಸಿ ಅದರ ಶ್ರೇಷ್ಠತೆಯ ಸಮಾಲೋಕನ ಮಾಡಿದ ಶ್ರೇಯಸ್ಸು ಆಮೂರರದು. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್‍ನಲ್ಲಿ ಇವರು ಬರೆದ ಗ್ರಂಥವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಆಮೂರ ಅವರು ಬರೆದ ಇಂಗ್ಲಿಷ್ ಗ್ರಂಥ ಹಾಗೂ ಲೇಖನಗಳು ವಿಪುಲವಾಗಿವೆ. ದಿ ಕಾನ್ಸೆಪ್ಟ್ ಆಫ್ ಕಾಮೆಡಿ ಇವರ ಪಿಎಚ್.ಡಿ. ಮಹಾಪ್ರಬಂಧ. ಮನೋಹರ ಮಳಗಾಂವಕರ, ಆದ್ಯ ರಂಗಾಚಾರ್ಯ, ಡಿ.ಆರ್. ಬೇಂದ್ರೆ ಎ ಕ್ರಿಟಿಕಲ್ ಸ್ಪೆಕ್ಟ್ರಂ, ಎಸ್ಸೇಸ್ ಆನ್ ಕಂಪ್ಯಾರೆಟಿವ್ ಲಿಟರೇಚರ್ ಅಂಡ್ ಲಿಂಗ್ವಿಸ್ಟಿಕ್ಸ್, ಕಲೋನಿಯಲ್ ಕಾನ್ಸ್‌ನೆಸ್ ಇನ್ ಕಾಮನ್‌ವೆಲ್ತ್ ಫ್ರೂಟ್, ಸೆಲೆಕ್ಟೆಡ್ ಕನ್ನಡ ಷಾರ್ಟ್ ಸ್ಟೋರೀಸ್, ಪರ್‌ಸಪ್ಷನ್ಸ್ ಆಫ್ ಮಾಡರ್ನ್ ಇಂಡಿಯನ್ ಲಿಟರೇಚರ್, ಕಿಟಿಕ್ ಆನ್ ದಿ ರನ್, ಐಡಿಯಾಸ್ ಅಂಡ್ ಇಮೇಜಸ್ ಇವು ಇವರ ಕೆಲವು ಪ್ರಮುಖ ಇಂಗ್ಲಿಷ್ ಕೃತಿಗಳು. ಇಂಗ್ಲಿಷ್‍ನಲ್ಲಿ ಹಾಗೂ ಕನ್ನಡದಲ್ಲಿ ಅಂಕಣಕಾರರಾಗಿಯೂ ಇವರು ಪುಸ್ತಕಗಳ ಬಗ್ಗೆ ವಿಮರ್ಶೆ ಬರೆದಿದ್ದಾರೆ. ಕೃತಿನಿಷ್ಠ ವಿಮರ್ಶೆಯ ಶ್ರೇಷ್ಠ ಮಾದರಿಯನ್ನು ಒದಗಿಸಿದ್ದಾರೆ.

ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ದೊರೆತಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸ.ಸ. ಮಾಳವಾಡ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಬಿ.ಎಚ್. ಶ್ರೀಧರ ಹಾಗೂ ಭುವನದ ಭಾಗ್ಯ ಎಂಬ ಕೃತಿಗೆ ಬೇಂದ್ರೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿವೆ. (ಜಿ.ಎಂ.ಎಚ್.)

**ಆಮೂರ್ ನದಿ :** ಈಶಾನ್ಯ ಏಷ್ಯದ ಮುಖ್ಯ ನದಿ. ಉದ್ದ 2824ಕಿಮೀ. ಉದ್ದದಲ್ಲಿ ಪ್ರಪಂಚದಲ್ಲಿ ಒಂಬತ್ತನೆಯದು ಆಮೂರ್ ನದಿಯ ಉಗಮ ಶಿಲ್ಕ ಮತ್ತು ಆರ್ಗುನ್ ಎಂಬ ಎರಡು ಜಲಮೂಲಗಳಿಂದಾದುದು. ಅವು ಮಂಗೋಲಿಯದ ಈಶಾನ್ಯಕ್ಕೆ ಉಲಾನ್ ಬತೂರ್ ಸಮೀಪದಲ್ಲಿ ಉಗಮಿಸುತ್ತವೆ. ಸಂಗಮಗೊಂಡು ಆಮೂರ್ ನದಿಯಾಗಿ ಪೂರ್ವ ಮತ್ತು ಆಗ್ನೇಯದ ಕಡೆಗೆ ಮೊದಲು ರಷ್ಯ ಮತ್ತು ಚೀನಗಳ ಗಡಿಯಾಗಿ, ಅನಂತರ ರಷ್ಯದಲ್ಲಿ ಹರಿದು ತಾತಾರ್ ಜಲಸಂಧಿಯಲ್ಲಿ ಓಕಟುಸ್ಕ ಸಮುದ್ರವನ್ನು ಸೇರುತ್ತದೆ. ಝೆಯ, ಬುರಿಯ, ಮತ್ತು ಉಸ್ಸುರಿಗಳು ಉಪನದಿಗಳು. 17ನೆಯ ಶತಮಾನದಲ್ಲಿ ರಷ್ಯ ಪ್ರಬಲ ರಾಷ್ಟ್ರವಾಗಲು ಪ್ರಾರಂಭಿಸಿದಾಗಿನಿಂದ ಈ ನದಿಯ ಪ್ರಾಮುಖ್ಯ ಹೆಚ್ಚಿದೆ. ಬೇಸಗೆಯಲ್ಲಿ ಮಳೆಯಿಂದಾಗಿ ತುಂಬ ಪ್ರವಾಹವಿರುತ್ತದೆ. ಚಳಿಗಾಲದಲ್ಲಿ ನೀರು ಹೆಪ್ಪುಗಟ್ಟುತ್ತದೆ. ಚಿಕ್ಕ ದೋಣಿಗಳ ಸಂಚಾರ 3200 ಕಿಮೀವರೆಗೂ ನಡೆಯಬಹುದು. ಈಚೆಗೆ ವಿದ್ಯುತ್ತಿಗಾಗಿ ನದೀಜಲವನ್ನು ಬಳಸಿಕೊಳ್ಳುವ ಪ್ರಯತ್ನ ನಡೆದಿದೆ. *

**ಆಮ್ನಿಯೋಟ :** ಕಾರ್ಡೇಟ ವಂಶದ ಸರೀಸೃಪ. ಪಕ್ಷಿ ಮತ್ತು ಸಸ್ತನಿಗಳನ್ನೊಳಗೊಂಡ ಗುಂಪು. ಆದ್ದರಿಂದ ಕಶೇರುಕಗಳನ್ನು ಆಮ್ನಿಯೋಟ ಮತ್ತು ಅನಾಮ್ನಿಯೋಟ ಎಂದು ಎರಡು ಮುಖ್ಯ ಗುಂಪುಗಳಾಗಿ ವಿಭಾಗಿಸಬಹುದು. ಆಮ್ನಿಯೋಟದ ಮುಖ್ಯ ಲಕ್ಷಣವೆಂದರೆ ಬೆಳವಣಿಗೆಯ ಕಾಲದಲ್ಲಿ ಭ್ರೂಣದ ಸುತ್ತಲೂ ಆಮ್ನಿಯಾನ್ ಎಂಬ ಪಟಲಸಂಚಿ ಬೆಳೆಯುತ್ತದೆ. ಇದರಿಂದಾಗಿ ಈ ಪಟಲಸಂಚಿ ಬೆಳೆಯುವ ಪ್ರಾಣಿಗಳೆಲ್ಲವೂ ಆಮ್ನಿಯೋಟ ಗುಂಪಿಗೆ ಸೇರುತ್ತವೆ. ಪಟಲಸಂಚಿ ಭ್ರೂಣವನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುತ್ತದೆ. ಇದರಲ್ಲಿ ಆಮ್ನಿಯಾಟಿಕ್ ದ್ರವವೂ ಇರುತ್ತದೆ. ಇದರಿಂದ ಬೆಳೆಯುತ್ತಿರುವ ಭ್ರೂಣಕ್ಕೆ ಹೊರಗಿನ ಒತ್ತಡಗಳಿಂದ ರಕ್ಷಣೆ ಒದಗುತ್ತದೆ. ಅನಾಮ್ನಿಯೋಟಗಳು ಪೂರ್ಣ ಜಲವಾಸಿಗಳಾಗಿರಲಿ, ಇಲ್ಲದಿರಲಿ, ಬೆಳವಣಿಗೆಯ ಕಾಲದಲ್ಲಿಯಾದರೂ ನೀರಿನಲ್ಲಿರುತ್ತವೆ. ಆದ್ದರಿಂದ ನೀರೇ ಇವುಗಳು ಎದುರಿಸಬೇಕಾಗಬಹುದಾದ ಒತ್ತಡದ ಹೊಡೆತಗಳನ್ನು ನಿವಾರಿಸಿ ಮೊಟ್ಟೆಗಳನ್ನು ರಕ್ಷಿಸುತ್ತದೆ. ಆದರೆ ಆಮ್ನಿಯೋಟಗಳಲ್ಲಿ ಭ್ರೂಣದ ಬೆಳವಣಿಗೆ ನೀರಿನಿಂದ ಹೊರಗೆ, ತತ್ತಿಯ ಚಿಪ್ಪಿನೊಳಗೆ (ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ) ಅಥವಾ ತಾಯಿಯ ದೇಹದೊಳಗೆ (ಸ್ತನಿಗಳಲ್ಲಿ) ನಡೆಯುತ್ತದೆ. ಆದ್ದರಿಂದ ಆಮ್ನಿಯಾನ್ ರಚನೆ ಸುತ್ತಲೂ ಇರುವ ದ್ರವಾವರಣ ಭ್ರೂಣವನ್ನು ರಕ್ಷಿಸುತ್ತದೆ. ಈ ಆಮ್ನಿಯಾನ್ ರಚನೆ ಹೊರಗೆ ಮೀಸೊಡರ್ಮ್ ಮತ್ತು ಒಳಗೆ ಎಕ್ಟೊಡರ್ಮ್ ಇರುತ್ತದೆ. ಈ ಗುಂಪಿನ ಪ್ರಾಣಿಗಳ ಬೆಳವಣಿಗೆಯಲ್ಲಿ ಇದೊಂದೇ ಅಲ್ಲದೆ ಭ್ರೂಣದ ಹೊರ ಪೊರೆಯೂ ಅಲಂಟಾಯಿಸ್ ಮತ್ತು ಭಂಡಾರ ಸಂಚಿ ಎಂಬ ಪಟಲಗಳೂ ಬೆಳೆಯುತ್ತವೆ. ಆಮ್ನಿಯಾನನ್ನು ಕೆಲವು ಸಾರಿ ಭ್ರೂಣದ ಸ್ವಂತ ಈಜುಕೊಳ ಎಂದು ವಿವರಿಸುವುದೂ ಉಂಟು. (ಎಚ್.ಬಿ.ಡಿ.)

**ಆಮ್ರಪಾಲಿ :** ಬುದ್ಧನ ಸಮಕಾಲೀನಳಾದ ವೇಶ್ಯೆ. ಅಪೂರ್ವ ಸುಂದರಿಯಾದ ಈಕೆಯ ಸ್ನೇಹವನ್ನು ಬಯಸಿ ಅನೇಕ ಶ್ರೀಮಂತರು ಇವಳ ಮನೆಯ ಬಾಗಿಲಲ್ಲಿ ಗುಂಪಾಗಿ ಕಾಯುತ್ತಿದ್ದರು ಎಂದು ಕಥೆಯಿದೆ. ಹಾಗಾಗಿ ಈಕೆ ಅಪಾರವಾದ ಐಶ್ವರ್ಯಕ್ಕೆ ಒಡತಿಯಾದಳು. ಅನಂತರ ಬುದ್ಧನ ಆಧ್ಯಾತ್ಮಿಕ ಪ್ರಭಾವಕ್ಕೆ ಒಳಗಾಗಿ ತನ್ನ ಪೂರ್ವ ಜೀವನವನ್ನು ಬಿಟ್ಟು ಭಕ್ತೆಯಾದಳು. ಬುದ್ಧ ಇವಳಿಂದ ಭಿಕ್ಷೆಯನ್ನು ಸ್ವೀಕರಿಸಿದ. ತನ್ನ ಒಂದು ಮಾವಿನ ತೋಪನ್ನು (ಆಮ್ರವನ) ಸಂಘದ ಉಪಯೋಗಕ್ಕೆ ದಾನ ಮಾಡಿದ್ದರಿಂದ ಇವಳಿಗೆ ಆಮ್ರಪಾಲಿ ಎಂಬ ಹೆಸರು ಬಂತು ಎಂಬುದೂ ಒಂದು ಕಥೆ. (ಪ.)

**ಆಮ್ಲ ಕೈಗಾರಿಕೆ :** ನಿರವಯವ (ಇನಾರ್ಗ್ಯಾನಿಕ್) ಮತ್ತು ಸಾವಯವ (ಆರ್ಗ್ಯಾನಿಕ್) ಆಮ್ಲಗಳಲ್ಲಿ ಕೆಲವು ಪ್ರಧಾನ ಆಮ್ಲಗಳ ತಯಾರಿಕಾ ವಿಧಾನ ಮತ್ತು ಉಪಯೋಗಗಳನ್ನು ಇಲ್ಲಿ ಕೊಡಲಾಗಿದೆ.

**ನಿರವಯವ ಆಮ್ಲಗಳು :** 1 ಸಲ್ಫ್ಯೂರಿಕ್ ಆಮ್ಲ ($H_2SO_4$): ಸಲ್ಫರನ್ನು (S) ಗಾಳಿ ಅಥವಾ ಆಕ್ಸಿಜನ್ನಿನಲ್ಲಿ (O) ಉರಿಸಿದಾಗ ಸಲ್ಫರ್ ಡೈಆಕ್ಸೈಡ್ ದೊರೆಯುತ್ತದೆ. $S+O_2 \rightarrow SO_2$. ಇದನ್ನು ವೇಗವರ್ಧಕಗಳ ಸಂಪರ್ಕದಿಂದ ಉತ್ಕರ್ಷಣೆ ಮಾಡಿದಾಗ ಸಲ್ಫರ್ ಟ್ರೈ ಆಕ್ಸೈಡ್ ($SO_3$) ಉಂಟಾಗುತ್ತದೆ. $2SO_2 + O_2 \rightarrow 2SO_3$

ಸಲ್ಫರ್ ಟ್ರೈ ಆಕ್ಸೈಡ್ ನೀರಿನಲ್ಲಿ ಲೀನವಾದಾಗ ಸಲ್ಫ್ಯೂರಿಕ್ ಆಮ್ಲ ಲಭಿಸುವುದು. $SO_3 + H_2O \rightarrow H_2SO_4$. ಆದ್ದರಿಂದ ಈ ಆಮ್ಲದ ಉತ್ಪಾದನೆಗೆ ಬೇಕಾದ ಮುಖ್ಯ ಕಚ್ಚಾ ವಸ್ತುಗಳು ಸಲ್ಫರ್ (ಗಂಧಕ), ಗಾಳಿ (ಆಕ್ಸಿಜನ್ ರೂಪದಲ್ಲಿ) ಮತ್ತು ನೀರು.

ಸಲ್ಫರ್ ಡೈ ಆಕ್ಸೈಡನ್ನು ಸಲ್ಫ್ಯೂರಿಕ್ ಆಮ್ಲವಾಗಿ ಪರಿವರ್ತಿಸಲು ಎರಡು ಪ್ರಮುಖ ಕೈಗಾರಿಕಾ ವಿಧಾನಗಳು ಪ್ರಚುರವಾಗಿವೆ.

**(i) ಸೀಸಕೋಷ್ಠ ವಿಧಾನ (ಲೆಡ್ ಚೇಂಬರ್ ಪ್ರೋಸೆಸ್):** ಸಲ್ಫರ್ ಡೈ ಆಕ್ಸೈಡ್, ನೀರಿನ ಹಬೆ, ಅಮೋನಿಯ ಇವುಗಳನ್ನು ಬಳಸಿ ಉತ್ಕರ್ಷಣದಿಂದ ತಯಾರಿಸಲ್ಪಟ್ಟ ನೈಟ್ರೋಜನ್ ಆಕ್ಸೈಡ್‍ಗಳು ಮತ್ತು ಯಥೇಚ್ಛವಾದ ಗಾಳಿ ಇವುಗಳ ಮಿಶ್ರಣವೊಂದು ಮೊದಲು ಆಮ್ಲಸಹಿಷ್ಣು ಇಟ್ಟಿಗೆಗಳಿಂದ ನಿರ್ಮಿತವಾದ ಎತ್ತರದ ಗ್ಲೋವರನ ಗೋಪುರವನ್ನು ಪ್ರವೇಶಿಸುವುದು. ಅಲ್ಲಿಂದ ಮುಂದೆ ಸೀಸ (ಲೆಡ್) ಲೋಹದಿಂದ ನಿರ್ಮಿತವಾದ

ವಿಶಾಲವಾಗಿರುವ ಕ್ರಿಯಾಗಾರದೊಳಕ್ಕೆ (ಲೆಡ್‌ಚೇಂಬರ್ ಅಥವಾ ಸೀಸಕೋಷ್ಠ) ಪ್ರವಹಿಸುವುದು. ನೈಟ್ರೋಜನ್ ಆಕ್ಸೈಡ್‌ಗಳ ಪಾತ್ರವೆಂದರೆ ಗಾಳಿಯಲ್ಲಿನ ಆಕ್ಸಿಜನ್ನನ್ನು ಸಲ್ಫರ್ ಡೈ ಆಕ್ಸೈಡ್‌ಗೆ ವರ್ಗಾಯಿಸಿ ಉತ್ಕರ್ಷಣೆಯಿಂದ ಸಲ್ಫರಿನ ಟ್ರೈ ಆಕ್ಸೈಡ್‌ನ ಉತ್ಪಾದನೆಯ ವರ್ಧನೆ. ನೈಟ್ರೋಜನ್ನಿನ ಆಕ್ಸೈಡ್‌ಗಳು ರಾಸಾಯನಿಕ ಕ್ರಿಯೆಯಲ್ಲಿ ಒಂದು



ಚಿತ್ರ 1. ಆಮ್ಲ ತಯಾರಿಕೆ

ರೀತಿಯಲ್ಲಿ ವೇಗವರ್ಧಕಗಳಾಗಿ ಪಾತ್ರವಹಿಸುವುವು. ಉತ್ಕರ್ಷಣ ಕ್ರಿಯೆಯಿಂದ ಉತ್ಪನ್ನವಾದ ಸಲ್ಫರ್ ಟ್ರೈ ಆಕ್ಸೈಡ್ ನೀರಿನೊಳಗೆ ಲೀನವಾಗಿ ಸಲ್ಫ್ಯೂರಿಕ್ ಆಮ್ಲ ದ್ರಾವಣ ಹನಿಹನಿಯಾಗಿ ಸೀಸಕೋಷ್ಠ ತಳದಲ್ಲಿ ಕ್ರಮೇಣ ಶೇಖರವಾಗುತ್ತದೆ.

$$H_2O + SO_2 + {}^1/_2\,O_2 \rightarrow H_2SO_4$$

ಆಮ್ಲ ಉತ್ಪಾದನೆಯಲ್ಲಿ ಹೊರಹೊಮ್ಮುವ ಉಷ್ಣವನ್ನು ಸುತ್ತ ಆವರಿಸಿರುವ ನೀರಿನ ಕೊಳಾಯಿಗಳ ಮೂಲಕ ಹೀರಲಾಗುವುದು. ಅಪರಿವರ್ತಿತ ಅನಿಲಗಳು ಅಲ್ಲಿಂದ ಮುಂದೆ ಗೇಲ್ಯುಸಾಕ್‌ನ ಗೋಪುರವನ್ನು ಪ್ರವೇಶಿಸುವುವು. ನೈಟ್ರೋಜನ್ ಆಕ್ಸೈಡನ್ನು ತಣ್ಣನೆಯ ಆಮ್ಲದಲ್ಲಿ ಹೀರಿ, ಪುನಃ ಗ್ಲೋವರನ ಗೋಪುರಕ್ಕೆ ಕಳುಹಿಸಲಾಗುವುದು. ಶೇಖರಿತ ಆಮ್ಲವನ್ನು ವಿಶೇಷ ತುಕ್ಕು ನಿರೋಧಕ ಲೋಹಗಳಿಂದ ನಿರ್ಮಿತವಾದ ಯಂತ್ರಗಳ



ಚಿತ್ರ 2. ಸಂಪರ್ಕ ವಿಧಾನದಿಂದ ಸಲ್ಫ್ಯೂರಿಕ್ ಆಮ್ಲ ತಯಾರಿಕೆ

ಮೂಲಕ ಹೊರಕ್ಕೆಳೆದು ಸೂಕ್ತ ಜೇಡಿಮಣ್ಣಿನ, ಗಾಜಿನ, ಸಿಲಿಕಾನ್ ಅಂಶ ಹೆಚ್ಚಾಗಿರುವ ಬೀಡು ಕಬ್ಬಿಣದ ಅಥವಾ ವಿಶೇಷ ಉಕ್ಕಿನ ಧಾರಕಗಳಲ್ಲಿ ತುಂಬುವರು. ಈ ವಿಧಾನದಲ್ಲಿ ಒಂದು ಸಲ ಕಾರ್ಯಾರಂಭವಾದ ಮೇಲೆ ಕ್ರಿಯೆ ನಿರಂತರವಾಗಿ ನಡೆಯುವುದು. ಆದರೆ ಉತ್ಪಾದಿತ ಆಮ್ಲದಲ್ಲಿ ನೀರಿನ ಅಂಶ ಹೆಚ್ಚಾಗಿದ್ದು ದುರ್ಬಲವಾಗಿರುತ್ತದೆ. ದ್ರಾವಣದ ಪ್ರಬಲತೆ ಮತ್ತು ಸಾಂದ್ರತೆಗಳನ್ನು ಅಳೆದು ತಿಳಿಯಬಹುದು. ಆಮ್ಲಾಂಶ ಶೇ. 93.19 ಮಟ್ಟ ಮೀರಿದಾಗ ಆಮ್ಲದ ಪ್ರಬಲತೆಯನ್ನು ಅದರ ವಿದ್ಯುದ್ವಾಹಕ ಶಕ್ತಿ ಪ್ರಮಾಣ ಮಾಪನೆಯಿಂದ ನಿರ್ಧರಿಸಬಹುದು. ಸೀಸಕೋಷ್ಠ ವಿಧಾನ ಇಂದು ಅಷ್ಟಾಗಿ ಬಳಕೆಯಲ್ಲಿಲ್ಲ.

**(ii) ಸಂಪರ್ಕವಿಧಾನ (ಕಾಂಟ್ಯಾಕ್ಟ್ ಪ್ರೋಸೆಸ್)** : ಆಧುನಿಕ ಸಂಪರ್ಕ ವಿಧಾನದಲ್ಲಿ ಕ್ರಿಯಾವಸ್ತುಗಳಾದ ಸಲ್ಫರ್ ಡೈ ಆಕ್ಸೈಡ್ ಮತ್ತು ಗಾಳಿಯಲ್ಲಿನ ಆಮ್ಲಜನಕದ ಸಂಪರ್ಕದಲ್ಲಿ ಒಂದು ಘನ ವೇಗವರ್ಧಕ ಇರುತ್ತದೆ. ಉತ್ಕರ್ಷಣ ಕ್ರಿಯಾ ಪ್ರೇರಣೆಗೆ ಅತ್ಯಂತ ಅನುಕೂಲಕರ ವಾದ ಉಷ್ಣತೆಯ ಮಟ್ಟ $450^0$ ಸೆ. ಉತ್ಕರ್ಷಣ ಕ್ರಿಯೆಯಿಂದಾಗಿ ಸಲ್ಫರ್ ಟ್ರೈಆಕ್ಸೈಡ್ ಉತ್ಪನ್ನವಾಗುತ್ತದೆ. ಇದನ್ನು ನೇರವಾಗಿ ನೀರಿನೊಳಕ್ಕೆ ನುಗ್ಗಿಸುವಂತಿಲ್ಲ. ಇಂಥ ಕ್ರಿಯೆ ಉಷ್ಣೋತ್ಪತ್ತಿಯಿಂದ ಆಸ್ಫೋಟನಾ ಪ್ರೇರಕವಾಗಿದೆ. ಉತ್ಪಾದಿತ ಸಲ್ಫರ್ ಟ್ರೈಆಕ್ಸೈಡನ್ನು ಹೀರಲು ನೀರಿನ ಬದಲು ಸೀಸಕೋಷ್ಠ ವಿಧಾನದಿಂದ ಅಥವಾ ಇನ್ನಾವುದೇ ಮೂಲದಿಂದ ದೊರೆಯುವ ದುರ್ಬಲ ಸಲ್ಫ್ಯೂರಿಕ್ ಆಮ್ಲದ ದ್ರಾವಣವನ್ನೇ ಉಪಯೋಗಿಸಬೇಕು. ವೇಗವರ್ಧಕವಾಗಿ ಪ್ಲಾಟಿನಂ, ಕಬ್ಬಿಣದ ಆಕ್ಸೈಡ್, ಕ್ರೋಮಿಯಂ, ಯುರೇನಿಯಂ ಮತ್ತಿತರ ಲೋಹಗಳ ಆಕ್ಸೈಡ್‌ಗಳು, ವೆನೇಡಿಯಂ ಪೆಂಟಾಕ್ಸೈಡ್ ಈ ಎಲ್ಲವೂ ಕೆಲಸಕ್ಕೆ ಬರುವಂಥವು. ಮೊದಮೊದಲು ಕೈಗಾರಿಕೆಗಳಲ್ಲಿ ಕಬ್ಬಿಣದ ಆಕ್ಸೈಡ್ ಅನಂತರ ಶ್ರೇಷ್ಠ ಲೋಹವಾದ ಪ್ಲಾಟಿನಮನ್ನು ಉಪಯೋಗಿಸುತ್ತಿದ್ದರು. ಕಲ್ನಾರಿನ ಮೇಲೆ ಪ್ಲಾಟಿನಂ ಕಣಗಳನ್ನು ಉರಿಸಿ ಅಥವಾ ಆವರಿಸಿ ಅದನ್ನು ವೇಗವರ್ಧಕವಾಗಿ ಉಪಯೋಗಿಸುವುದು ವಾಡಿಕೆಯಾಗಿತ್ತು. ಆದರೆ ಸಲ್ಫರ್ ಡೈ ಆಕ್ಸೈಡ್ ಮತ್ತು ಗಾಳಿ ಶ್ರೇಷ್ಠ ಮಟ್ಟದ ಶುದ್ಧತೆಯಲ್ಲಿರ ಬೇಕು; ಕಲ್ಮಷಗಳಿದ್ದಲ್ಲಿ ಪ್ಲಾಟಿನಂ ಲೋಹ ಬಹುಬೇಗ ತನ್ನ ವೇಗವರ್ಧಕ ಶಕ್ತಿಯನ್ನು ಕಳೆದುಕೊಳ್ಳುವುದೆಂದು ತಿಳಿಯಿತು. ಪುನಃ ಪುನಃ ಪ್ಲಾಟಿನಂ ಲೋಹವನ್ನು ಬಳಸುವುದು ದುಬಾರಿಯಾದಾಗ ಅದರ ಬದಲು ಅಗ್ಗದ ಬೆಲೆಯ ವೆನೇಡಿಯಂ ಪೆಂಟಾಕ್ಸೈಡ್ ಸಂಯುಕ್ತವನ್ನು ಉಪಯೋಗಿಸತೊಡಗಿದರು. ಈ ಸಂಯುಕ್ತವನ್ನು ಕಲ್ನಾರು ಅಥವಾ ಶುದ್ಧ ಮರಳಿನ ಹರಳುಗಳ ಮೇಲೆ ಉರಿಸಿ ಉಪಯೋಗಿಸುವರು. ಇದು ಪ್ಲಾಟಿನಂನಷ್ಟು ಸುಲಭವಾಗಿ ತನ್ನ ವೇಗವರ್ಧಕತೆಯ ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ; ಅನೇಕ ವರ್ಷಗಳ ಕಾಲ (ಸರಾಸರಿ 2 $^1/_2$) ಸತತವಾಗಿ ಉಪಯೋಗಕ್ಕೆ ಬರುತ್ತದೆ.

ಉತ್ಕರ್ಷಣಕ್ರಿಯೆ ಜರುಗುವ ಸಂಪರ್ಕಾಲಯದಲ್ಲಿ ವೇಗವರ್ಧಕಗಳ ಅನೇಕ ಪದರಗಳನ್ನು ಒಂದರಮೇಲೊಂದರಂತೆ ಕ್ರಮೇಣ ದಪ್ಪಹೆಚ್ಚುವ ರೀತಿಯಲ್ಲಿ ಜೋಡಿಸಿರು ತ್ತಾರೆ. ಬಿಸಿಯಾದ ಸಲ್ಫರ್ ಡೈ ಆಕ್ಸೈಡ್ ಮತ್ತು ಯಥೇಚ್ಛ ಪ್ರಮಾಣದ ಗಾಳಿಯ ಮಿಶ್ರಣವನ್ನು ನಿಯಂತ್ರಿತ ಉಷ್ಣತೆಯ ಮಟ್ಟದಲ್ಲಿ ($400^0$ ಮೇಲೆ $595^0$ ಸೆ. ಒಳಗೆ) ಸಂಪರ್ಕಾಲಯದೊಳಕ್ಕೆ ಬಿಡುವರು. ಉಷ್ಣತೆಯ ಮಟ್ಟ $400^0$ ಸೆ. ಗೆ ಕಡಿಮೆಯಾದರೆ ರಾಸಾಯನಿಕ ಉತ್ಕರ್ಷಣ ಕ್ರಿಯೆಯ ವೇಗ ಕಡಿಮೆಯಾಗುವುದು. $595^0$ ಸೆ. ಹೆಚ್ಚಾದರೆ ಉತ್ಪಾದಿತ ಸಲ್ಫರ್ ಟ್ರೈ ಆಕ್ಸೈಡ್ ಪುನಃ ಉಷ್ಣ ವಿಭಜನೆಹೊಂದಿ ಸಲ್ಫರ್ ಡೈ ಆಕ್ಸೈಡ್, ಆಮ್ಲಜನಕಗಳು ಉಂಟಾಗುವುವು.

$$2SO_3 \xrightarrow{595^\circ \text{ ಸೆ.}} 2SO_2 + O_2$$

ವೇಗವರ್ಧಕದ ಸಂಪರ್ಕದಲ್ಲಿ ರಾಸಾಯನಿಕ ಉತ್ಕರ್ಷಣದಿಂದಾಗಿ ಸಲ್ಫರ್ ಟ್ರೈ ಆಕ್ಸೈಡ್ ಉತ್ಪತ್ತಿಯಾಗಿ ಹೊರಬೀಳುವುದು. ಇದನ್ನು ದುರ್ಬಲ ಸಲ್ಫ್ಯೂರಿಕ್ ಆಮ್ಲದೊಳಗೆ ಸತತವಾಗಿ ಹೀರುವಂತೆ ಏರ್ಪಾಡು ಮಾಡಲಾಗಿದ್ದು ಪ್ರಬಲ ಸಲ್ಫ್ಯೂರಿಕ್ ಆಮ್ಲ ನಿರಂತರ ವಾಗಿ ಉತ್ಪಾದನೆಯಾಗುತ್ತಿರುತ್ತದೆ. ಸಂಪರ್ಕ ವಿಧಾನದ ಮೂಲತತ್ತ್ವಗಳು ಪ್ರಥಮವಾಗಿ 1831ರಲ್ಲಿಯೇ ಪ್ರತಿಪಾದಿಸಲ್ಪಟ್ಟವು. ಆದರೂ ಅನೇಕ ತಾಂತ್ರಿಕ ತೊಂದರೆಗಳ ಪರಿಣಾಮವಾಗಿ 1898ರವರೆಗೂ ಯಶಸ್ವೀ ಕೈಗಾರಿಕೋತ್ಪನ್ನ ಸಾಧ್ಯವಾಗಲಿಲ್ಲ. ಸಂಪರ್ಕವಿಧಾನ ಇಂದು ಹೆಚ್ಚಾಗಿ ಬಳಕೆಯಲ್ಲಿದೆ.

ಮೂಲವಸ್ತು ಸ್ವರೂಪದ ನಿಕ್ಷೇಪಗಳಿಂದ ಪಡೆಯುವ ಪ್ರಕೃತಿಮೂಲ ಸಲ್ಫರಿನ ಶುದ್ಧತೆಯ ಮಟ್ಟ ಹೆಚ್ಚು; ಭಾರ ಕಡಿಮೆ. ಆದ್ದರಿಂದ ಅದನ್ನು ಸುಲಭ ಖರ್ಚಿನಲ್ಲಿ ಸಾಗಿಸುವುದು ಸಾಧ್ಯ. ಉಳಿದ ಕಚ್ಚಾವಸ್ತುಗಳು ಗಾಳಿ, ನೀರು ಆದ್ದರಿಂದ ಸಲ್ಫ್ಯೂರಿಕ್ ಆಮ್ಲ ಕೈಗಾರಿಕಾ ಕೇಂದ್ರಗಳನ್ನು ಎಲ್ಲಿ ಬೇಕಾದರೂ ಅಂದರೆ, ಆಮ್ಲದ ಪೂರೈಕೆಯ ಅವಲಂಬಿತ ಇತರ ಕೈಗಾರಿಕಾ ಕೇಂದ್ರಗಳು ಎಲ್ಲಿವೆಯೋ ಅಲ್ಲಿಯೂ ನಿರ್ಮಿಸಬಹುದು.

ಪ್ರಬಲ ಸಲ್ಫ್ಯೂರಿಕ್ ಅಮ್ಲ ಮತ್ತಷ್ಟು ಸಲ್ಫರ್ ಟ್ರೈ ಆಕ್ಸೈಡನ್ನು ಹೀರಿ ತನ್ನಲ್ಲಿ ಲೀನಮಾಡಿಕೊಳ್ಳುವ ಲಕ್ಷಣ ಹೊಂದಿದೆ. ಹೀಗೆ ದೊರೆಯುವ ಆಮ್ಲದ ಉಗ್ರತೆ ಬಹು ತೀಕ್ಷ್ಣ. ಅದು ಅತಿ ಅಪಾಯಕಾರಿಯೂ ಹೌದು. ಇದರ ಹೆಸರು ಓಲಿಯಂ. ಇದಕ್ಕೂ ಅನೇಕ ಕೈಗಾರಿಕಾ ಉಪಯೋಗಗಳಿವೆ.

ಸಲ್ಫ್ಯೂರಿಕ್ ಆಮ್ಲವನ್ನು ಮಾರುಕಟ್ಟೆಗೆ ಸಾಮಾನ್ಯವಾಗಿ ನಾಲ್ಕು ದರ್ಜೆಗಳಲ್ಲಿ ಬಿಡುಗಡೆ ಮಾಡಲಾಗುವುದು; ವಾಣಿಜ್ಯ ದರ್ಜೆಯದು, ವಿದ್ಯುತ್ ಕೋಶದರ್ಜೆಯದು, ರಾಸಾಯನಿಕ ವಾಗಿ ಶುದ್ಧವಾದುದು ಮತ್ತು ಅತ್ಯಂತ ಶುದ್ಧವಾದುದು. ನಿಯೋಜಿತ ಉದ್ದೇಶ ಉಪಯೋಗ ಗಳಿಗೆ ತಕ್ಕಂತೆ ಬೇಕಾದುದನ್ನು ಆರಿಸಿಕೊಳ್ಳಬಹುದು. ಬಹು ಭಾರಿ ಪ್ರಮಾಣದ ಕೈಗಾರಿಕೆಗಳಿಗೆ (ಉದಾಹರಣೆಗೆ ರಾಸಾಯನಿಕ ಗೊಬ್ಬರ ಮತ್ತಿತರ ಆಮ್ಲಗಳ ತಯಾರಿಕೆ) ಅಷ್ಟೇನೂ ಶುದ್ಧವಾದುದು ಬೇಕಾಗಿಲ್ಲ; ವಾಣಿಜ್ಯ ದರ್ಜೆಯ ಆಮ್ಲವೇ ಸಾಕು. ಅದೇ ಔಷಧಿ ಅಥವಾ ಆಹಾರ ಸಾಮಗ್ರಿಗಳಿಗೆ ಸಂಬಂಧಿತ ಕೈಗಾರಿಕೆಗಳಿಗೆ ಅತ್ಯಂತ ಶುದ್ಧ ಅಂದರೆ ಸೀಸ ಮತ್ತು ಆರ್ಸೆನಿಕ್ ರಹಿತವಾದ ಆಮ್ಲದ ಪೂರೈಕೆಯಾಗಬೇಕು.

ಸಲ್ಫ್ಯೂರಿಕ್ ಆಮ್ಲ ಮಂದವಾದ ಎಣ್ಣೆಯಂತೆ ಕಾಣುವ ವರ್ಣರಹಿತ ದ್ರಾವಣ. ಅದಕ್ಕೆ ನೀರು ಅಥವಾ ತೇವವನ್ನು ತೀವ್ರವಾಗಿ ಹೀರುವ ಗುಣವಿದೆ. ನೀರಿನೊಡನೆ ಬೆರೆತಾಗ ಗಣನೀಯ ಪ್ರಮಾಣದ ಉಷ್ಣ ಉತ್ಪಾದಿಸುವುದು. ಬಹುತೇಕ ಲೋಹಗಳನ್ನು

ಸುಲಭವಾಗಿ ತಿಂದುಹಾಕುವುದು. ಪ್ರಬಲ ಆಮ್ಲ ಸೀಸವನ್ನು ಸಹ ಕ್ರಮೇಣ ಜೀರ್ಣಿಸಿಕೊಳ್ಳ ಬಲ್ಲುದು. ಚರ್ಮಕ್ಕೆ ಸೋಕಿದರೆ ತೀವ್ರ ಸುಟ್ಟಗಾಯಗಳಾಗುವುವು. ಮರಮುಟ್ಟುಗಳೂ ಸುಟ್ಟು ಕಪ್ಪಾಗುತ್ತವೆ. ಇದರಿಂದಾಗಿ ಈ ಆಮ್ಲದ ಶೇಖರಣೆ ಮತ್ತು ಸಾಗಾಣಿಕೆಯಲ್ಲಿ ಬಹುವಾಗಿ ಸುಟ್ಟ ಜೇಡಿಮಣ್ಣಿನ ಜಾಡಿಗಳು, ಗಾಜಿನ ದೊಡ್ಡ ಸೀಸೆ ಅಥವಾ ಹಂಡೆಗಳನ್ನು ಉಪಯೋಗಿಸುವುದು ವಾಡಿಕೆಯಾಗಿತ್ತು. ಇತ್ತೀಚೆಗೆ ಅಗಾಧ ಪ್ರಮಾಣದಲ್ಲಿ ಆಮ್ಲ ಸರಬರಾಜಿನ ಆವಶ್ಯಕತೆಯುಂಟಾದಂತೆ, ಲಾರಿ ಹಡಗುಗಳಲ್ಲಿ ಸಾಗಿಸಬೇಕಾಗಿ ಬಂದಿತು. ಈ ಕಾರಣ ದೈತ್ಯಾಕಾರದ ಉಕ್ಕಿನ ಧಾರಕಗಳಿಗೆ ಗಾಜು, ಸೀಸ, ಪ್ಲಾಸ್ಟಿಕ್‌ಗಳ ಬಿಳಿ ಮೈ ಪದರವನ್ನು ಹೊದಿಸಿ ಪಿಂಗಾಣಿ ತೂಬುಗಳನ್ನು ಅಳವಡಿಸಿ, ಟೆಫ್ಲಾನ್ ಪ್ಲಾಸ್ಟಿಕ್ ಕೊಳವೆಗಳ ಮೂಲಕ (ಪೆಟ್ರೋಲ್, ಸೀಮೆಎಣ್ಣೆಯ ಸರಬರಾಜಿನಂತೆ) ಸುಲಭವಾಗಿ ಆಮ್ಲವನ್ನು ಪೂರೈಕೆಮಾಡುವ ವಿಧಾನ ಆಚರಣೆಗೆ ಬಂದಿದೆ.

ಭಾರತದಲ್ಲಿ ಸಲ್ಫರ್ ನಿಕ್ಷೇಪಗಳು ಇರಲಿಲ್ಲ. ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ಸಣ್ಣ ನಿಕ್ಷೇಪಗಳು ಕಂಡುಬಂದಿವೆ. ಸಲ್ಫರನ್ನು ಅಮೆರಿಕ, ಫ್ರಾನ್ಸ್, ಕೆನಡ, ಮೆಕ್ಸಿಕೊ, ರಷ್ಯ ಮುಂತಾದ ದೇಶಗಳಿಂದ ಅಗಾಧ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾಗಿರುವುದರಿಂದ ಸಲ್ಫ್ಯೂರಿಕ್ ಆಮ್ಲದ ಕೈಗಾರಿಕೆ ಸ್ವಾವಲಂಬಿಯಲ್ಲ. ಆಂಧ್ರಪ್ರದೇಶದ ಕಮ್ಮಂ ಜಿಲ್ಲೆಯ ಕೊತ್ತಗುಂಡಂನಲ್ಲಿ ಗಂಧಕವನ್ನು ಅಲ್ಪ ಪ್ರಮಾಣದಲ್ಲಿ ಇತ್ತೀಚೆಗೆ ತಯಾರಿಸಲಾಗುತ್ತಿದೆ. ಬಿಹಾರ್‌ನ ಶಹಬಾದ್ ಜಿಲ್ಲೆಯ ಅಮಜ್ಹೋರ್, ತಮಿಳುನಾಡಿನ ಉತ್ತರ ಆರ್ಕಾಟ್, ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಇಂಗಳಹಾಳ್‌ಗಳಲ್ಲಿ ಸಲ್ಫೈಡ್ ನಿಕ್ಷೇಪಗಳಿರುವುದು ಕಂಡುಬಂದಿದೆ. ಅಮಜ್ಹೋರ್‌ನ ನಿಕ್ಷೇಪಗಳ ಉಪಯೋಗ ಆರಂಭವಾಗಿದೆ. ದುರ್ಗಾಪುರ ಮತ್ತು ಸಿಂಧ್ರಿಗಳಲ್ಲಿ ಸಲ್ಫೈಡ್ ನಿಕ್ಷೇಪಗಳಾಧಾರಿತ ಸಲ್ಫ್ಯೂರಿಕ್ ಆಮ್ಲತಯಾರಿಕೆಯ ಕೈಗಾರಿಕೆಗಳು ಕಾರ್ಯಗತವಾಗಲಿವೆ. ಪೆಟ್ರೋಲಿಯಂ ಎಣ್ಣೆ ಶುದ್ಧೀಕರಣ ಕಾರ್ಯಾಗಾರಗಳು ಹೆಚ್ಚಿದಂತೆಲ್ಲ ಹೆಚ್ಚು ಹೆಚ್ಚಾಗಿ ದೊರೆಯಲಾರಂಭಿಸಿರುವ ಸಲ್ಫರ್ ಅಂಶವಿರುವ ಅನಿಲಗಳನ್ನವಲಂಬಿಸಿಯೂ ಆಮ್ಲ ತಯಾರಿಕೆ ಸಾಧ್ಯ. ಪಂಜಾಬ್, ರಾಜಸ್ತಾನ್, ತಮಿಳುನಾಡುಗಳಲ್ಲಿ ಗಣನೀಯ ಪ್ರಮಾಣದಲ್ಲಿ ದೊರಕುವ ಕ್ಯಾಲ್ಸಿಯಂ ಸಲ್ಫೇಟ್ ನಿಕ್ಷೇಪಗಳನ್ನೂ ಕಲ್ಲಿದ್ದಲಿನಲ್ಲಿರುವ ಗಂಧಕಾಂಶವನ್ನೂ ಅವಲಂಬಿಸಿದಂತೆ ಕೈಗಾರಿಕಾಭಿವೃದ್ಧಿಯಾಗಬೇಕಾದುದು ಅಪೇಕ್ಷಣೀಯ.

ಮೊಟ್ಟಮೊದಲನೆಯ ಸೀಸಕೋಷ್ಠ ವಿಧಾನದ ಸಲ್ಫ್ಯೂರಿಕ್ ಆಮ್ಲ ಕೈಗಾರಿಕೆ ಭಾರತದಲ್ಲಿ ಸ್ಥಾಪಿತವಾದುದು ಪಶ್ಚಿಮ ಬಂಗಾಳದ ಹೂಗ್ಲಿ ನದಿಯ ದಂಡೆಯ ಮೇಲೆ (1890ರಲ್ಲಿ). ಇಂಗ್ಲೆಂಡಿನಲ್ಲಿ ಬರ್ಮಿಂಗ್‌ಹ್ಯಾಂ ನಗರದಲ್ಲಿ ಈ ಕೈಗಾರಿಕೆ ಸ್ಥಾಪಿತವಾದುದು 1746ರಲ್ಲಿ. ಅಲ್ಲಿಂದೀಚೆಗೆ 20ನೆಯ ಶತಮಾನದ ಆದಿಯಿಂದಲೂ ಕ್ರಮೇಣ ಕೈಗಾರಿಕಾಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ಉತ್ಪನ್ನ ಹೆಚ್ಚಾಗುತ್ತಲೇ ಇದೆ. 1935ರಲ್ಲಿ ಮೊಟ್ಟಮೊದಲನೆಯ ಸಂಪರ್ಕ ವಿಧಾನಾಧಾರಿತ ಕೈಗಾರಿಕೆ ಟಾಟಾರವರ ಜಂಷಡ್‌ಪುರದಲ್ಲಿ ಸ್ಥಾಪಿತವಾಯಿತು. 1950–1951ರಲ್ಲಿ 1,01,000 ಟನ್ ಸಲ್ಫ್ಯೂರಿಕ್ ಆಮ್ಲ ತಯಾರಿಸಲ್ಪಟ್ಟಿದ್ದು ( ಅದೇ ವರ್ಷದಲ್ಲಿ ಅಮೆರಿಕ ದೇಶದ ಉತ್ಪಾದನೆ 13,30 ,00,000 ಟನ್), 1964–65ರಲ್ಲಿ 6,95,000 ಟನ್‌ಗಳಷ್ಟೂ 1965–66ರಲ್ಲಿ 6,55,000 ಟನ್‌ಗಳಷ್ಟೂ ತಯಾರಿಸಲಾಗಿದೆ. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಮೊದಲನೆಯ ಸಲ್ಫ್ಯೂರಿಕ್ ಆಮ್ಲ ತಯಾರಿಕಾ ಕೈಗಾರಿಕೆ ಸ್ಥಾಪಿತವಾದುದು ಮಂಡ್ಯ ಜಿಲ್ಲೆಯ ಬೆಳಗೊಳದಲ್ಲಿ.

ಸಲ್ಫ್ಯೂರಿಕ್ ಆಮ್ಲಕ್ಕಿರುವ ಉಪಯೋಗಗಳು ಅಸಂಖ್ಯಾತ. ಶಾಂತಿ ಮತ್ತು ಯುದ್ಧಕಾಲಗಳೆರಡರಲ್ಲೂ ರಾಷ್ಟ್ರದ ಕ್ಷೇಮಕ್ಕೆ ಈ ಆಮ್ಲ ಅತ್ಯಾವಶ್ಯಕ. ಸಲ್ಫ್ಯೂರಿಕ್ ಆಮ್ಲದ ವಿವಿಧ ಉಪಯೋಗಗಳೆಂದರೆ: ಕೃತಕ ರಾಸಾಯನಿಕ ಗೊಬ್ಬರಗಳು (ನೈಟ್ರೋಜನ್ ಮೂಲ ಅಮೋನಿಯಂ ಸಲ್ಫೇಟ್, ಮತ್ತು ರಂಜಕಮೂಲ ಸೂಪರ್ ಫಾಸ್ಫೇಟ್) ಇತರ ಆಮ್ಲಗಳು (ಹೈಡ್ರೋಕ್ಲೋರಿಕ್, ನೈಟ್ರಿಕ್, ಫಾಸ್‌ಫಾರಿಕ್ ಮತ್ತು ಕ್ರೋಮಿಕ್), ರೇಯಾನ್ ಕೃತಕನೂಲು ಬಣ್ಣಗಳು, ಔಷಧಿಗಳು, ಆಹಾರ, ಯುರೇನಿಯಂ, ನಿಕ್ಕಲ್, ಕೋಬಾಲ್ಟ್ ಲೋಹಗಳ ತಯಾರಿಕೆ, ಲೋಹಗಳ ಶುದ್ಧೀಕರಣ, ಲೋಹಗಳನ್ನು ಮತ್ತು ಉಕ್ಕುಗಳನ್ನು ಸ್ವಚ್ಛ ಮಾಡುವುದು, ಪೆಟ್ರೋಲಿಯಂ ಶುದ್ಧೀಕರಣ, ಕಾರು ಬಸ್ಸು ಲಾರಿ ಭಾರಿ ಟ್ರಕ್ಕುಗಳಲ್ಲಿನ ವಿದ್ಯುತ್ಕೋಶಗಳು, ಬ್ಯಾಟರಿಗಳು, ಸಾವಯವ ಸಂಯುಕ್ತಗಳ ತಯಾರಿಕೆಯ ಕೈಗಾರಿಕೆಗಳು, ಮಾರ್ಜಕಗಳು, ಸ್ಫೋಟಕಗಳು, ನೀರಿನ ಶುದ್ಧೀಕರಣದಲ್ಲಿ ಉಪಯೋಗಿಸುವ ಅಲ್ಯೂಮಿನಿಯಂ ಸಲ್ಫೇಟ್ ಮತ್ತು ಪಟಿಕಗಳ ತಯಾರಿಕೆ ಇತ್ಯಾದಿ. ಅಮೋನಿಯಂ ಸಲ್ಫೇಟ್, ಹೈಡ್ರೋಕ್ಲೋರಿಕ್ ಆಮ್ಲ, ನೈಟ್ರಿಕ್ ಅಮ್ಲಗಳ ತಯಾರಿಕೆಯಲ್ಲಿ ಹೊಸ ವಿಧಾನಗಳ ಅನುಸರಣೆಯಿಂದ ಸಲ್ಫ್ಯೂರಿಕ್ ಆಮ್ಲದ ಬಳಕೆ ಕುಗ್ಗುತ್ತಲಿದೆ. ಆದರೆ ಇತರ ಅನೇಕ ಕೈಗಾರಿಕಾ ಬೆಳವಣಿಗೆ ಹೆಚ್ಚಿದಂತೆ ಹೊಸ ಹೊಸ ಉಪಯೋಗಗಳು (ಕೃತಕ ಸಾಬೂನಿನ ತಯಾರಿಕೆ) ಕಂಡುಹಿಡಿಯುವಿಕೆಯಿಂದಲೂ ಸಲ್ಫ್ಯೂರಿಕ್ ಆಮ್ಲದ ಕೈಗಾರಿಕೆ ಬೆಳೆಯುತ್ತಲೇ ಇದೆ. ಹೀಗಾಗಿ ಒಟ್ಟಿನಲ್ಲಿ ಸಲ್ಫ್ಯೂರಿಕ್ ಆಮ್ಲ ತಯಾರಿಕಾ ಕೈಗಾರಿಕೆ ಒಂದು ಮೂಲಭೂತವಾದ ಭಾರಿ ಪ್ರಮಾಣದ ರಾಸಾಯನಿಕ ಕೈಗಾರಿಕೆ.

ಸಲ್ಫ್ಯೂರಿಕ್ ಆಮ್ಲ ತಯಾರಿಕೆಗೆ ಸಂಬಂಧಿಸಿದಂತೆ ಕೆಲವು ನೂತನ ವಿಧಾನಗಳನ್ನು ಅನುಸರಣೆಗೆ ತರಲು ಸಂಶೋಧನೆಗಳು ನಡೆಯುತ್ತಿವೆ. ಕ್ಯಾಲ್ಸಿಯಂ ಸಲ್ಫೇಟ್ ಮತ್ತು ಇತರ ಲೋಹಗಳ ಸಲ್ಫೇಟ್‌ಗಳ ದ್ರಾವಣಗಳ ವಿದ್ಯುದ್ವಿಭಜನೆಯ ಮೂಲಕ ಆಮ್ಲವನ್ನು ಪಡೆಯಲು ಸಾಧ್ಯ. ಸಲ್ಫರ್‌ನ ಆಕ್ಸೈಡ್ ಮತ್ತು ಆಕ್ಸಿಜನ್‌ಗಳ ರಾಸಾಯನಿಕ ಸಂಯೋಗವನ್ನುಂಟುಮಾಡಲು ವೇಗವರ್ಧಕಗಳ ಸಂಪರ್ಕದಲ್ಲಿ ಕಾಯಿಸುವುದರ ಬದಲು ಅತಿ ನೇರಳೆ ಬಣ್ಣದ ಕಿರಣಗಳು, ರೇಡಿಯಂ ಮುಂತಾದ ಲೋಹಗಳು ಹೊರಸೂಸುವ ವಿಕಿರಣಗಳು ಶಬ್ದಾತೀತತರಂಗಗಳು, ಕೃತಕ ವಿದ್ಯುಚ್ಚಾಪ–ಇವೇ ಮುಂತಾದವು ಎಷ್ಟರಮಟ್ಟಿಗೆ ಪ್ರಭಾವಯುತವಾದವು ಎಂಬುದನ್ನು ಅರಿಯಲು ಸಂಶೋಧನೆಗಳು ನಡೆಯುತ್ತಲಿವೆ.

**2 ನೈಟ್ರಿಕ್ ಆಮ್ಲ** : ತಯಾರಿಕೆಯ ಪ್ರಮಾಣ ಮತ್ತು ಉಪಯುಕ್ತತೆಯ ವೈವಿಧ್ಯ ಇವೆರಡು ದೃಷ್ಟಿಗಳಿಂದಲೂ ಎರಡನೆಯ ಸ್ಥಾನ ನೈಟ್ರಿಕ್ ಆಮ್ಲಕ್ಕೆ ಸಲ್ಲುತ್ತದೆ. ಇದರ ತಯಾರಿಕೆಯಲ್ಲಿಯೂ ಎರಡು ಪ್ರಮುಖ ವಿಧಾನಗಳಿವೆ. ನೈಟ್ರೇಟ್ ಲವಣವನ್ನು ಸಲ್ಫ್ಯೂರಿಕ್ ಆಮ್ಲದೊಡನೆ ಬಟ್ಟಿ ಇಳಿಸುವದು ಒಂದನೆಯ ವಿಧಾನ.

$$NaNO_3 + H_2SO_4 \rightarrow HNO_3 + NaHSO_4$$

ಚಿಲಿದೇಶದ ನೈಟ್ರೇಟ್ ಲವಣಗಳ ನಿಕ್ಷೇಪಗಳ ವಿಶ್ವವಿಖ್ಯಾತಿಗೆ ಇದೇ ಕಾರಣ. ಪ್ರಪಂಚದ ಎಲ್ಲ ರಾಷ್ಟ್ರಗಳೂ ಈ ಸೋಡಿಯಂ ನೈಟ್ರೇಟ್ ಲವಣವನ್ನು ಆಮದು ಮಾಡಿಕೊಂಡು ನೈಟ್ರಿಕ್ ಆಮ್ಲವನ್ನು ತಯಾರಿಸುತ್ತಿದ್ದವು. ಈ ವಿಧಾನದಲ್ಲಿ ಸೋಡಿಯಂ ನೈಟ್ರೇಟ್ ಲವಣವನ್ನು ಬೀಡು ಕಬ್ಬಿಣ ಅಥವಾ ಸಾಮಾನ್ಯ ಉಕ್ಕಿನ ಬಟ್ಟಿ ಇಳಿಸುವ ಪಾತ್ರೆಯೊಂದರಲ್ಲಿ ಮೊದಲು ತೆಗೆದುಕೊಳ್ಳಬೇಕು. ಅದನ್ನು ಪೂರ್ಣವಾಗಿ, ಮೇಲಿನ ಸಮೀಕರಣದಲ್ಲಿ ನಿರೂಪಿಸಿರುವಂತೆ ಸೋಡಿಯಂ ಬೈಸಲ್ಫೇಟ್ ಆಗಿ ಪರಿವರ್ತಿಸಲು ಎಷ್ಟು ಸಲ್ಫ್ಯೂರಿಕ್ ಆಮ್ಲ ಬೇಕೋ ಅಷ್ಟೇ ಪ್ರಮಾಣದ ಸಲ್ಫ್ಯೂರಿಕ್ ಆಮ್ಲವನ್ನು ಮಾತ್ರ ಹಾಕಿ ಬೆರೆಸಿ ಕಾಯಿಸಿ ಬಟ್ಟಿ ಇಳಿಸಿದರೆ ನೈಟ್ರಿಕ್ ಆಮ್ಲ ದೊರೆಯುವುದು. ಸಾಮಾನ್ಯವಾಗಿ ಸಲ್ಫ್ಯೂರಿಕ್ ಆಮ್ಲ ತಯಾರಿಕಾ ಕೈಗಾರಿಕೆಗಳೆಲ್ಲವೂ ತಮ್ಮದೇ ಆದ ನೈಟ್ರಿಕ್ ಆಮ್ಲ ಕೈಗಾರಿಕೆಯನ್ನು ಹೊಂದಿರುತ್ತಿದ್ದುದು ಈ ಕಾರಣದಿಂದಲೇ.

ಬಟ್ಟಿ ಇಳಿಸುವಾಗ ಉಷ್ಣತೆಯ ನಿಯಂತ್ರಣ ಆವಶ್ಯಕ. ಹೆಚ್ಚಾಗಿ ಕಾಯಿಸಿದರೆ ನೈಟ್ರಿಕ್ ಆಮ್ಲ ಉಷ್ಣವಿಭಜನೆ ಹೊಂದುವ ಸಾಧ್ಯತೆ ಇದೆ. ಈ ವಿಧಾನ ಈಗ ಹೆಚ್ಚಾಗಿ ಬಳಕೆಯಲ್ಲಿಲ್ಲ.

ಇನ್ನೊಂದು ವಿಧಾನದ ಸೂತ್ರ ನಿಸರ್ಗದ ಅನುಕರಣೆ. ಗಾಳಿಯಲ್ಲಿರುವ ಆಕ್ಸಿಜನ್, ನೈಟ್ರೋಜನ್‌ಗಳು ಆಕಾಶದಲ್ಲಿ ಮಿಂಚು ಹೊಡೆದಾಗ ರಾಸಾಯನಿಕವಾಗಿ ಸಂಯೋಗ ಹೊಂದಿ ಮೊದಲ ಹಂತದಲ್ಲಿ ನೈಟ್ರೋಜನ್ನಿನ ಆಕ್ಸೈಡ್ ಸಂಯುಕ್ತವನ್ನು ಕೊಡುತ್ತವೆ. ಇದು ಗಾಳಿಯಲ್ಲಿರುವ ಆಕ್ಸಿಜನ್ನಿನೊಡನೆ ಸುಲಭವಾಗಿ ಉತ್ಕರ್ಷಣ ಹೊಂದಿ ನೈಟ್ರೋಜನ್ನಿನ ಡೈಆಕ್ಸೈಡ್ ಆಗಿ ಪರಿವರ್ತನೆಹೊಂದಿ, ಮಳೆಯುಂಟಾದಾಗ ನೀರಿನೊಡನೆ ಲೀನವಾಗಿ ನೈಟ್ರಿಕ್ ಆಮ್ಲವಾಗುತ್ತದೆ. ನಿಸರ್ಗದ ಈ ಕ್ರಿಯೆಯ ಪ್ರತಿರೂಪವೊಂದನ್ನು ಕೃತಕವಾಗಿ ನಡೆಸುವ ಸಾಹಸ ನಡೆದಿದೆ. ಮಿಂಚಿಗೆ ಬದಲಾಗಿ ಗಾಳಿಯ ಮೂಲಕ ಕೃತಕ ವಿದ್ಯುಚ್ಚಾಪವನ್ನು ಹಾಯಿಸುವುದು ಇಲ್ಲಿನ ಕ್ರಮ. ವಿದ್ಯುಚ್ಚಾಪದ ಉಷ್ಣತೆಯ ಮಟ್ಟ ಸುಮಾರು $3,000^{0}$ ಸೆ. ಅಗಲವಾದ ಕೃತಕ ವಿದ್ಯುಚ್ಚಾಪದ ಮೂಲಕ ಗಾಳಿಯನ್ನು ಹಾಯಿಸಿ ನೈಟ್ರೋಜನ್ ಆಕ್ಸಿಜನ್‌ಗಳ ರಾಸಾಯನಿಕ ಸಂಯೋಗ ಉಂಟಾಗುವಂತೆ ಮಾಡುತ್ತಾರೆ. ಅಲ್ಲಿಂದಾಚೆಗೆ ಉಳಿದ ಕ್ರಿಯೆಗಳು ಹಿಂದೆ ವಿವರಿಸಿದಂತೆ. ಇಲ್ಲಿ ವಿದ್ಯುಚ್ಛಕ್ತಿ ಹೇರಳ ಮತ್ತು ಅಗ್ಗವಾಗಿ ದೊರೆತರೆ ಮಾತ್ರ ಈ ವಿಧಾನ ಆರ್ಥಿಕವಾಗಿ ಸಾಧ್ಯ. ಮೊದಲು ನಾರ್ವೆ ದೇಶದಲ್ಲಿ ಈ ವಿಧಾನ ಯಶಸ್ವಿಯಾಗಿ ಸ್ಥಾಪಿತವಾಯಿತು. ಈಗ ಅಲ್ಲಿಯೂ ಅಷ್ಟಾಗಿ ಆಚರಣೆಯಲ್ಲಿಲ್ಲ. ಮೊದಲನೆಯ ಜಾಗತಿಕ ಸಮರ ಸಮಯದಲ್ಲಿ ಚಿಲಿ ನೈಟ್ರೇಟ್ ಲವಣಾಧಾರಿತ ವಿಧಾನ ಮಿತಿ, ಆ ಲವಣ ದೊರೆಯದೆ ಸಂಕುಚಿತವಾಯಿತು. ಆಗ ಭಾರತದಲ್ಲಿ ಇಲ್ಲೇ ದೊರೆಯುವ ಪೊಟ್ಯಾಸಿಯಂ ನೈಟ್ರೇಟ್ ಲವಣವನ್ನು ಉಪಯೋಗಿಸಿ ನೈಟ್ರಿಕ್ ಆಮ್ಲವನ್ನು ತಯಾರಿಸುವ ಪ್ರಯತ್ನ ಯಶಸ್ವಿಯಾಗಿ ನಡೆಯಿತು. ಆದರೆ ಬೆಲೆ ಮಾತ್ರ ದುಬಾರಿಯಾಗಿ ಕೈಗಾರಿಕೆ ಊರ್ಜಿತವಾಗಲಿಲ್ಲ, ಪಾಶ್ಚಾತ್ಯ ರಾಷ್ಟ್ರಗಳೂ ಇಂಥ ಸನ್ನಿವೇಶವನ್ನು ಎದುರಿಸಬೇಕಾಗಿ ಬಂದು ಪರಿಹಾರ ಕ್ರಮವಾದ ಸಂಶೋಧನೆಯ ಫಲವಾಗಿ ವೇಗವರ್ಧಕವೊಂದರ ಸಮ್ಮುಖದಲ್ಲಿ ಅಮೋನಿಯಾದ ಉತ್ಕರ್ಷಣೆ ಮಾಡುವ ಹೊಸ ಕ್ರಮ ಪ್ರಚಲಿತವಾಯಿತು. ಇದೇ ಎರಡನೆಯ ಪ್ರಮುಖ ವಿಧಾನ. ಗಾಳಿಯಲ್ಲಿರುವ ಯಥೇಚ್ಛ ನೈಟ್ರೋಜನ್ ಅನ್ನು ನೀರಿನಿಂದ ಪಡೆದ ಹೈಡ್ರೋಜನ್ನೊಂದಿಗೆ ಸಂಯೋಗ ಹೊಂದುವಂತೆ ಮಾಡಿ ಹೇರಳವಾಗಿ ಅಮೋನಿಯವನ್ನು ಕೃತಕವಾಗಿ ತಯಾರಿಸುವ ಯಶಸ್ವಿಕೈಗಾರಿಕೆ ಆಗತಾನೆ ಬೆಳಕಿಗೆ ಬಂದಿತ್ತು.

$$N_2 + 3H_2 \rightarrow 2NH_3$$

ಅಮೋನಿಯವನ್ನು ಗಾಳಿಯೊಡನೆ 1:9 ಪ್ರಮಾಣದಲ್ಲಿ ಬೆರಸಿ ಕಾದ ($700^{0}$–$930^{0}$ ಸೆಂ.ಗ್ರೇ. ಉಷ್ಣತೆ) ಪ್ಲಾಟಿನಂ ಲೋಹದ ತೆಳುವಾದ ಒಂದು ಜಾಲರಿಯ ಮೇಲೆ ಹಾಯಿಸಿದರೆ, ಅಮೋನಿಯಾ ಉತ್ಕರ್ಷಣ ಹೊಂದಿ ನೈಟ್ರೋಜನ್ನಿನ ಆಕ್ಸೈಡ್ ಉತ್ಪನ್ನವಾಗುತ್ತದೆ.

ಈ ಕ್ರಿಯೆಯಲ್ಲಿ ಅಧಿಕ ಉಷ್ಣೋತ್ಪತ್ತಿಯಾಗಿ ಆ ಉಷ್ಣವೇ ಪ್ಲಾಟಿನಂನ ಉಷ್ಣತೆಯ ಮಟ್ಟವನ್ನು ಸತತವಾಗಿ ಕಾಪಾಡುತ್ತದೆ. ಈ ನೈಟ್ರೋಜನ್ನಿನ ಆಕ್ಸೈಡ್‌ನ್ನು ಮತ್ತಷ್ಟು ಗಾಳಿ ಅಥವಾ ಆಕ್ಸಿಜನ್ನಿನೊಡನೆ ಬೆರೆಯುವಂತೆ ಮಾಡಿದರೆ ನೈಟ್ರೋಜನ್ನಿನ ಡೈಆಕ್ಸೈಡ್‌ನ್ನು ನೀರಿನಲ್ಲಿ ಹೀರಿದರೆ ನೈಟ್ರಿಕ್ ಆಮ್ಲ ಉಂಟಾಗುವುದು.

$4NH_3+O_2 \rightarrow 4NO+6H_2O$

$2NO+O_2 \rightarrow 2NO_2$

$2NO_2 \rightarrow N_2O_4$

$3N_2O_4+2H_2O \rightarrow 4HNO_3+NO$

ಅಮೋನಿಯದೊಡನೆ ಗಾಳಿಯ ಬದಲು ಆಕ್ಸಿಜನ್ನನ್ನು ಬೆರೆಸುವದು ಮತ್ತು ಉತ್ಕರ್ಷಣ ಕ್ರಿಯೆಯನ್ನು ಹೆಚ್ಚಿನ ಒತ್ತಡದಲ್ಲಿ ನಡೆಸುವುದು ಇವು ನೈಟ್ರಿಕ್ ಆಮ್ಲದ ಉತ್ಪನ್ನವನ್ನು ಅಭಿವೃದ್ಧಿಪಡಿಸುವುದಕ್ಕೆ ಸಹಕಾರಿ. ಕಿರ್ಕಿ, ಅರವನ ಕಾಡುಗಳಲ್ಲಿರುವ




ಚಿತ್ರ 3. ಅಮೋನಿಯ ಉತ್ಕರ್ಷಣ ಕ್ರಿಯಾಗಾರ

ರಾಷ್ಟ್ರೀಯ ರಕ್ಷಣಾ ಕೈಗಾರಿಕಾ ಕೇಂದ್ರಗಳಲ್ಲಿ ಈ ವಿಧಾನವನ್ನು ಅನುಸರಿಸುವರು. ಭಾರತದಲ್ಲಿ ಮೊದಮೊದಲು ಟಂಕಸಾಲೆಗಳೇ ನೈಟ್ರಿಕ್ ಆಮ್ಲವನ್ನು ಹೆಚ್ಚಾಗಿ ಬಳಸುತ್ತಿದ್ದುವು. ಆಗ ನಾರ್ವೆ ಜರ್ಮನಿಗಳಿಂದ ಆಮ್ಲವನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳಲಾಗುತ್ತಿತ್ತು.

ಈ ಮೇಲಿನ ವಿಧಾನದಿಂದ ನಮಗೆ ದೊರೆಯುವ ನೈಟ್ರಿಕ್ ಆಮ್ಲ ದುರ್ಬಲ. ಶೇ. 60 –65 ರಷ್ಟು ಮಾತ್ರ ಆಮ್ಲದ ಪ್ರಮಾಣ:ಸ್ಫೋಟಕ ವಸ್ತುಗಳ ತಯಾರಿಕೆಗೂ ಬಣ್ಣಗಳ ತಯಾರಿಕೆಗೂ ಪ್ರಬಲ ನೈಟ್ರಿಕ್‌ಆಮ್ಲ (ಶೇ.90–98)ಆವಶ್ಯಕ. ದುರ್ಬಲ ಆಮ್ಲವನ್ನು ಕಾಯಿಸಿ ಬಟ್ಟಿ ಇಳಿಸಿದರೂ ಆವಿಯಲ್ಲಿ ಆಮ್ಲ ಮತ್ತು ನೀರು ಎರಡೂ ಅದೇ ಪ್ರಮಾಣದಲ್ಲಿ ಹೊರಬೀಳುವುವು. ಹೀಗಾಗಿ ಪ್ರಬಲ ನೈಟ್ರಿಕ್ ಆಮ್ಲವನ್ನು ತಯಾರಿಸಲು ಬೇರೆ ವಿಧಾನವನ್ನು ಅನುಸರಿಸಬೇಕಾಗುವುದು. ಆಮ್ಲದಲ್ಲಿರುವ ಹೆಚ್ಚಿನ ನೀರನ್ನು ಪ್ರಬಲ ಸಲ್ಫ್ಯೂರಿಕ್ ಆಮ್ಲವನ್ನು ಬೆರೆಸುವದರಿಂದ ತಡೆಹಿಡಿದು, ಅನಂತರ ಬಟ್ಟಿ ಇಳಿಸಿದರೆ ಪ್ರಬಲ ನೈಟ್ರಿಕ್ ಆಮ್ಲ ಭಟ್ಟಿ ಇಳಿಯುವುದು. ಪ್ರಬಲ ಸಲ್ಫ್ಯೂರಿಕ್ ಆಮ್ಲ ದುರ್ಬಲ ನೈಟ್ರಿಕ್ ಆಮ್ಲಗಳನ್ನು ಬೆರೆಸಿ ಮಿಶ್ರಣವನ್ನು ಹೊರಗಿನಿಂದ ಕಾಯಿಸಲಾಗಿ ನೀರಿನ ಹಬೆಯನ್ನು ಅದರ ಮೂಲಕ ಬಿಟ್ಟು ಕಾಯಿಸಿಯಾಗಲಿ ಬಟ್ಟಿ ಇಳಿಸಿದರೆ ನೈಟ್ರಿಕ್ ಆಮ್ಲದ ಆವಿ ಹೊರಬಿದ್ದು ತಣ್ಣಗಾದೊಡನೆ ದ್ರವೀಕರಿಸುವುದು. ಸಲ್ಫ್ಯೂರಿಕ್ ಆಮ್ಲದ ಬದಲು ಮೆಗ್ನೀಸಿಯಂ ನೈಟ್ರೇಟನ್ನು ಉಪಯೋಗಿಸಿ ಜಲಾಂಶವನ್ನು ಪ್ರತಿಬಂಧಿಸಿ ಪ್ರಬಲ ನೈಟ್ರಿಕ್ ಆಮ್ಲವನ್ನು ಬಟ್ಟಿ ಇಳಿಸುವರು.

ಪ್ರಬಲ ನೈಟ್ರಿಕ್‌ಆಮ್ಲದ ಶೇಖರಣೆಯೂ ಸಾಗಾಣಿಕೆಯೂ ಕಷ್ಟಕರ ಮತ್ತು ಅಪಾಯಕಾರಿ. ಅನೇಕ ಲೋಹಗಳು, ಮರಮುಟ್ಟುಗಳು, ಚರ್ಮ ಇವುಗಳ ಮೇಲೆಲ್ಲ ನೈಟ್ರಿಕ್ ಆಮ್ಲ ಕ್ರಿಯಾತ್ಮಕ. ಅತಿಶುದ್ಧ ಅಲ್ಯೂಮಿನಿಯಂ, ತುಕ್ಕು ನಿರೋಧಕ ಸ್ಟೈನ್‌ಲೆಸ್ ಸ್ಟೀಲ್, ಟ್ಯಾಂಟಲಮ್ ಗಾಜು, ಪಿಂಗಾಣಿಗಳನ್ನು ನೈಟ್ರಿಕ್ ಆಮ್ಲ ಶೇಖರಣೆಗೆ, ಸಾಗಾಣಿಕೆಗೆ ಬಳಸುವರು.

ವಿವಿಧ ರೀತಿಯ ಆಸ್ಫೋಟಕ ವಸ್ತುಗಳ ತಯಾರಿಕಾ ಕೈಗಾರಿಕೆಗೆ ನೈಟ್ರಿಕ್ ಆಮ್ಲ ಆವಶ್ಯಕ. ಕೆಲವು ಮುಖ್ಯ ಸ್ಫೋಟಕಗಳೆಂದರೆ ನೈಟ್ರೋಗ್ಲಿಸರೀನ್, ಗನ್‌ಕಾಟನ್, ಟ್ರೈನೈಟ್ರೋಟೋಲುಇನ್, ಪಿಕ್ರಿಕ್ ಆಮ್ಲ, ಅಮಟಾಲ್ ಇತ್ಯಾದಿ. ಕೃತಕ ರಾಸಾಯನಿಕ ಗೊಬ್ಬರಗಳ ಉಪಯುಕ್ತತೆಯ ಅರಿವಾದಂತೆಲ್ಲ ಪ್ರಪಂಚದ ಎಲ್ಲ ದೇಶಗಳಲ್ಲೂ ವ್ಯವಸಾಯ ಕ್ಷೇತ್ರದಲ್ಲಿ ಅವುಗಳ ಬಳಕೆ ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿರುವುದು ಸಹಜವಾದುದು. ಸಸ್ಯಗಳಿಗೆ ನೈಟ್ರೋಜನ್ ಪೂರೈಕೆಗೋಸ್ಕರ ಬಳಸುವ ಒಂದು ಪ್ರಮುಖ ಕೃತಕ ಗೊಬ್ಬರ ಅಮೋನಿಯಂ ನೈಟ್ರೈಟ್. ಇದರ ತಯಾರಿಕೆಯಲ್ಲಿ ಈಗ ನೈಟ್ರಿಕ್ ಆಮ್ಲವನ್ನು ಪ್ರಧಾನವಾಗಿ ಉಪಯೋಗಿಸುತ್ತಿದ್ದಾರೆ. ಈ ನೈಟ್ರೇಟ್ ಲವಣವನ್ನು ನೈಟ್ರಿಕ್ ಆಮ್ಲ ಮತ್ತು ಸಂಶ್ಲೇಷಿತ ಅಮೋನಿಯಗಳ ಮಿಶ್ರಣದಿಂದ ತಯಾರಿಸಲಾಗುವುದು. ಕೃತಕ ದಾರಗಳು ಮತ್ತು ಪ್ಲಾಸ್ಟಿಕ್‌ಗಳು, ಬಣ್ಣದ ತಯಾರಿಕೆ, ಚಿನ್ನ ಬೆಳ್ಳಿಯ ಶುದ್ಧೀಕರಣ, ಹಳೆಯ ನಾಣ್ಯಗಳನ್ನು ಕರಗಿಸುವುದು, ತಾಮ್ರ, ಸೀಸ ಮುಂತಾದ ಲೋಹಗಳನ್ನು ಕರಗಿಸುವುದು, ಪರಮಾಣು ಶಕ್ತಿ ಉತ್ಪಾದನೆಗೆ ಮೂಲ ಇಂಧನವಾದ ಯುರೇನಿಯಂ ಲೋಹದ ತಯಾರಿಕೆ, ಆಕಾಶಬಾಣಗಳನ್ನು ಹಾರಿಸಲು ಉಪಯೋಗಿಸುವ ಇಂಧನದಲ್ಲಿ ಉತ್ಕರ್ಷಣಕಾರಿಯಾಗಿ, ಔಷಧಿಗಳ ತಯಾರಿಕೆ, ನರುಳ್ಳೆ ಅಥವಾ ವಾರ್ಟ್ಸ್‌ಗಳನ್ನು ಸುಟ್ಟು ನಿರ್ಮೂಲಿಸಲು, ಮುದ್ರಣಕ್ಕೆ ಅನುಕೂಲವಾಗುವಂತೆ ಛಾಯಾಚಿತ್ರಗಳ ಪ್ರತಿಯನ್ನು ಲೋಹದ ಮೇಲೆ ಕೊರೆಯುವುದೇ (ಫೋಟೋ ಎನ್‌ಗ್ರೇವಿಂಗ್) ಮುಂತಾದ ಕೆಲಸಗಳಿಗೆ ನೈಟ್ರಿಕ್ ಆಮ್ಲವನ್ನು ಉಪಯೋಗಿಸುವರು.

**3 ಹೈಡ್ರೋಕ್ಲೋರಿಕ್ ಆಮ್ಲ (HCl) :** ರಾಸಾಯನಿಕವಾಗಿ ಹೈಡ್ರೋಕ್ಲೋರಿಕ್ ಆಮ್ಲ ಹೈಡ್ರೋಜನ್ ಕ್ಲೋರೈಡ್‌ನ ದ್ರಾವಣ. ಹೈಡ್ರೋಜನ್ ಕ್ಲೋರೈಡ್ ಅನಿಲ ನೀರಿನಲ್ಲಿ ಸುಲಭವಾಗಿ ಲೀನವಾಗಿ ಆಮ್ಲವನ್ನು ಉತ್ಪಾದಿಸುವುದು. ಈ ಕ್ರಿಯೆಯಲ್ಲಿ ಅಧಿಕ ಉಷ್ಣೋತ್ಪತ್ತಿಯಾಗುವುದು. ಶುದ್ಧ ಆಮ್ಲ ಬಣ್ಣವಿಲ್ಲದ ತಿಳಿ ದ್ರಾವಣ. ಆದರೆ ಬಹಳ ಘಾಟು ವಾಸನೆ. ಪ್ರಬಲ ದ್ರಾವಣವಂತೂ ಗಾಳಿಯಲ್ಲಿ ಹೊಗೆಯಾಡುತ್ತದೆ. ಚರ್ಮದ ಮೇಲೆ ಬಿದ್ದರೆ ವೇದನೆಯುಂಟಾಗುತ್ತದೆ. ಈ ಆಮ್ಲ ಕಬ್ಬಿಣ, ತವರ, ಸತು, ನಿಕ್ಕಲ್ ಮುಂತಾದ ಸಾಮಾನ್ಯ ಲೋಹಗಳನ್ನೆಲ್ಲ ಬಲು ಸುಲಭವಾಗಿ ತಿಂದುಹಾಕುತ್ತದೆ. ಜೇಡಿಮಣ್ಣು ಮರಳು, ಸುಣ್ಣಕಲ್ಲು ಸಂಬಂಧಿತ ವಸ್ತುಗಳನ್ನು ರಾಸಾಯನಿಕವಾಗಿ ವಿಭಜಿಸಬಲ್ಲದು. ಆದರೆ ಶುಷ್ಕ ಹೈಡ್ರೋಜನ್ ಕ್ಲೋರೈಡ್ ಅನಿಲ ರಾಸಾಯನಿಕವಾಗಿ ಅಷ್ಟು ಕ್ರಿಯಾಶೀಲವಲ್ಲ. ಈ ಮೇಲಿನ ಅಂಶಗಳನ್ನು ಹೈಡ್ರೋಕ್ಲೋರಿಕ್ ಆಮ್ಲದ ತಯಾರಿಕೆ, ಶೇಖರಣೆ, ಉಪಯೋಗಗಳನ್ನು ಪರಿಶೀಲಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹೈಡ್ರೋಕ್ಲೋರಿಕ್ ಆಮ್ಲದ ತಯಾರಿಕೆಗೆ ನಾಲ್ಕು ಮುಖ್ಯ ವಿಧಾನಗಳು ಆಚರಣೆಯಲ್ಲಿವೆ : 1 ಸೋಡಿಯಂ ಕ್ಲೋರೈಡ್ (ಉಪ್ಪು) ಸಲ್ಫ್ಯೂರಿಕ್ ಆಮ್ಲ ವಿಧಾನ; 2 ಹಾರ್‌ಗ್ರೀವ್‌ನ ವಿಧಾನ; 3 ಮೂಲವಸ್ತುಗಳಿಂದ ನೇರಸೃಷ್ಟಿ; 4 ಸಾವಯವ ಸಂಯುಕ್ತಗಳನ್ನು ಕ್ಲೋರೀನಿನೊಡನೆ ಕ್ರಿಯೆಗೊಳಪಡಿಸುವ ವಿಧಾನ.

ಸೋಡಿಯಂ ಕ್ಲೋರೈಡ್ ಸಲ್ಫ್ಯೂರಿಕ್ ಆಮ್ಲವಿಧಾನ : ಇದೇ ಎಲ್ಲಕ್ಕಿಂತ ಮೊದಲು ಆಚರಣೆಗೆ ಬಂದ ಕೈಗಾರಿಕಾ ವಿಧಾನ. ಸೋಡಿಯಂ ಕ್ಲೋರೈಡ್‌ಗೆ ಪ್ರಬಲ ಸಲ್ಫ್ಯೂರಿಕ್ ಆಮ್ಲವನ್ನು ಲೆಕ್ಕಾಚಾರ ಮಾಡಿ ನಿಯಂತ್ರಿತ ಪ್ರಮಾಣದಲ್ಲಿ ಹಾಕಿ ಮಿಶ್ರಣವನ್ನು ಕಾಯಿಸಿ ಬಟ್ಟಿ ಇಳಿಸಿದರೆ ಹೈಡ್ರೋಕ್ಲೋರಿಕ್ ಆಮ್ಲ ಹೊಗೆಯಂತೆ ಹೊರಬೀಳುವುದು. ಇದನ್ನು ನೀರಿನಲ್ಲಿ ಹಾಯಿಸಿದರೆ ಹೈಡ್ರೋಕ್ಲೋರಿಕ್ ಆಮ್ಲದ ದ್ರಾವಣವುಂಟಾಗುವುದು.

$NaCI+H_2SO_4 \rightarrow NaHSO_4+HCI$

$NaHSO_4+NaCI \rightarrow Na_2SO_4+HCI$

ಬಟ್ಟಿಯಲ್ಲಿ ಉಳಿದುಕೊಳ್ಳುವ ಸೋಡಿಯಂ ಸಲ್ಫೇಟ್‌ಅನ್ನು ಕಾಗದ ಮತ್ತು ಗಾಜಿನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಮೊದ ಮೊದಲು ಈ ವಿಧಾನ ಹೈಡ್ರೋಕ್ಲೋರಿಕ್ ಆಮ್ಲದ ತಯಾರಿಕೆಗಿಂತ ಸೋಡಾಕ್ಷಾರ (ಸೋಡ ಆ್ಯಷ್, $Na_2CO_3$) ತಯಾರಿಕೆಯ ಮೊದಲ ಹಂತವಾಗಿ ಆಚರಣೆಯಲ್ಲಿತ್ತು. ಆದರೆ ವಾತಾವರಣವನ್ನು ಬಹುವಾಗಿ ಕಲುಷಿತಗೊಳಿಸುವ ಹೈಡ್ರೋಕ್ಲೋರಿಕ್ ಆಮ್ಲವನ್ನು ಕಾರ್ಖಾನೆಗಳಿಂದ ನೇರವಾಗಿ ಗಾಳಿಗೆ ಬಿಡುವುದನ್ನು ಸರ್ಕಾರ ಶಾಸನಬಾಹಿರವನ್ನಾಗಿ ಮಾಡಿದಂದಿನಿಂದ ಹೈಡ್ರೋಕ್ಲೋರಿಕ್ ಆಮ್ಲ ತಯಾರಿಕೆ ಪ್ರಾರಂಭವಾಯಿತು.

**ಹಾರ್‌ಗ್ರೀವ್‌ನ ವಿಧಾನ :** ಮೇಲಿನ ವಿಧಾನದಲ್ಲಿ ದೊರೆಯುವ ಉತ್ಪನ್ನಗಳನ್ನು ಇಲ್ಲೂ ಪಡೆಯಬಹುದು. ಸಲ್ಫರ್ ಡೈಆಕ್ಸೈಡ್ ಆಮ್ಲ, ನೀರಿನ ಹಬೆ ಮತ್ತು ಗಾಳಿಗಳ ಮಿಶ್ರಣವೊಂದನ್ನು ಕ್ರಿಯಾಗಾರಗಳಲ್ಲಿ ಜೋಡಿಸಿ ಉಪ್ಪಿನ ಪದರಗಳ ಮೂಲಕ ಹಾಯಿಸುವುದೇ ಹಾರ್‌ಗ್ರೀವ್‌ನ ವಿಧಾನ.

$2SO_2+O_2+2H_2O+4NaCl \rightarrow 2Na_2SO_4+4HCl$

ಈ ವಿಧಾನದಲ್ಲಿ ದೊರೆಯುವ ಆಮ್ಲ ದುರ್ಬಲವಾದುದು. ಈ ವಿಧಾನ ಅಷ್ಟು ಜನಪ್ರಿಯವಾಗಿಲ್ಲ.

ಮೂಲವಸ್ತುಗಳಿಂದ ನೇರ ಉತ್ಪಾದನೆ: ಇದೇ ಈಗ ಆಚರಣೆಯಲ್ಲಿರುವ ಬಹು ಜನಪ್ರಿಯ ವಿಧಾನ. ಹೈಡ್ರೊಜನ್ ಮತ್ತು ಕ್ಲೋರೀನ್ ಅನಿಲವನ್ನು ಜೊತೆಯಾಗಿ ಉರಿಸುವುದರಿಂದ ಹೈಡ್ರೊಕ್ಲೋರಿಕ್ ಆಮ್ಲ ಉತ್ಪನ್ನವಾಗುವುದು.

$H_2+Cl_2 \rightarrow 2HCl$

ಈ ವಿಧಾನದಲ್ಲಿ ಉತ್ಪನ್ನವಾಗುವ ಆಮ್ಲ ಹೆಚ್ಚು ಶುದ್ಧವೂ ಹೆಚ್ಚು ಪ್ರಬಲವೂ ಆಗಿರುತ್ತದೆ. ಭಾರಿಪ್ರಮಾಣದ ಮೂಲಭೂತ ರಾಸಾಯನಿಕ ಕೈಗಾರಿಕೆಗಳಲ್ಲೊಂದಾದ ಕ್ಷಾರ ತಯಾರಿಕೆಯಲ್ಲಿ ಹೈಡ್ರೊಜನ್ ಮತ್ತು ಕ್ಲೋರೀನ್‌ಗಳೆರಡೂ ಉಪಉತ್ಪನ್ನಗಳಾಗಿ ದೊರೆಯುವುವು. ಉಪ್ಪಿನ ವಿದ್ಯುದ್ವಿಭಜನೆಯಿಂದ ಸೋಡಿಯಂ ಲೋಹ ಮತ್ತು ಕ್ಲೋರೀನ್




ಚಿತ್ರ 4. ಮೂಲವಸ್ತುಗಳಿಂದ ನೇರ ಉತ್ಪಾದನೆ

ಗಳು ಉತ್ಪನ್ನವಾಗುವುವು. ಉಪ್ಪುನೀರಿನ ವಿದ್ಯುದ್ವಿಭಜನೆಯಿಂದ ಸೋಡಿಯಂ ಹೈಡ್ರಾಕ್ಸೈಡ್ ಕ್ಷಾರ, ಹೈಡ್ರೊಜನ್ ಮತ್ತು ಕ್ಲೋರೀನ್‌ಗಳು ಉತ್ಪನ್ನವಾಗುವುವು. ಹೈಡ್ರೊಜನ್ ಕ್ಲೋರೀನ್ ಮಿಶ್ರಣಗಳ ದಹನ ಆಸ್ಫೋಟನಕಾರಕ. ಅಗಾಧ ಪ್ರಮಾಣದ ಉಷ್ಣವೂ ಉತ್ಪತ್ತಿಯಾಗುವುದು. ಹೈಡ್ರೊಜನ್ ಕ್ಲೋರೈಡ್ ಅನಿಲ ನೀರಿನೊಳಗೆ ಲೀನವಾದಾಗ ಅಧಿಕ ಉಷ್ಣೋತ್ಪತ್ತಿಯಾಗುವುದು. ಈ ಕಾರಣಗಳಿಂದ ದಹನಕಾರ್ಯ ಮತ್ತು ಆಮ್ಲದ ದ್ರಾವಣ ತಯಾರಿಕೆಯ ಎರಡು ಹಂತಗಳಲ್ಲೂ ಬಹಳ ಎಚ್ಚರಿಕೆ ವಹಿಸಬೇಕು. ದಹನಗೋಪುರ ಆಮ್ಲರೋಧಕ ಇಟ್ಟಿಗೆ ಹೊದಿಸಿ ಒಳಮೈ ಉಕ್ಕಿನಿಂದಾಗಲಿ ತಣ್ಣೀರಿನ ಕೊಳವೆಗಳಿಂದ ಆವೃತವಾದ ಉಕ್ಕಿನ ಫಲಕ ಅಥವಾ ಗ್ರಾಫೈಟ್ ಇದ್ದಲಿನ ರಚನಾ ಸಾಮಗ್ರಿಯಿಂದಾಗಲಿ ನಿರ್ಮಿತವಾಗಿರುವುದು. ನಿಯಂತ್ರಿತ ರೀತಿಯಲ್ಲಿ ಹೈಡ್ರೊಜನ್, ಕ್ಲೋರೀನ್ ಅನಿಲಗಳನ್ನು ದಹನಮಂದಿರದೊಳಕ್ಕೆ ಬಿಟ್ಟು ಮಿಶ್ರಣಕ್ಕೆ ಅಗ್ನಿ ಸ್ಪರ್ಶಿಸಿದರೆ ಮಿಶ್ರಣ ಉಗ್ರವಾಗಿ ಉರಿಯಲಾರಂಭಿಸುವುದು. ಉತ್ಪಾದಿತ ಉಷ್ಣವನ್ನು ಸುತ್ತಲ ತಣ್ಣೀರು ಸತತವಾಗಿ ಹೀರಿಕೊಳ್ಳುತ್ತಿರುವುದು.

ರಾಸಾಯನಿಕ ಸಂಯೋಗದಿಂದ ಉತ್ಪಾದನೆಯಾದ ಹೈಡ್ರೊಜನ್ ಕ್ಲೋರೈಡ್ ಅನಿಲ ಹೊರಬಿದ್ದು ಮುಂದೆ ಇನ್ನೊಂದು ಗೋಪುರದಲ್ಲಿ ತುಂತುರು ನೀರಿನೊಡನೆ ಸಂಪರ್ಕ ಹೊಂದುವಂತೆ ಮಾಡಲಾಗುವುದು. ಈ ಗೋಪುರದಿಂದ ಹೈಡ್ರೊಕ್ಲೋರಿಕ್ ಆಮ್ಲ ದ್ರಾವಣ ಉಂಟಾಗಿ ಅಂತಿಮವಾಗಿ ಹೊರಬೀಳುವುದು. ಉತ್ಪನ್ನ ಹೈಡ್ರೊಜನ್ ಕ್ಲೋರೈಡ್ ಅನಿಲ ರೂಪದಲ್ಲಿಯೇ ಬೇಕಾದಾಗ, ಎರಡನೆಯ ಗೋಪುರದೊಳಗೆ ನೀರಿನ ಪೂರೈಕೆಯನ್ನು ಕಡಿದು ಹಾಕಬೇಕು. ತಣ್ಣೀರಿನಿಂದ ಸುತ್ತುವರಿಸಿ ಅನಿಲವನ್ನು ತಣ್ಣಗೆ ಮಾತ್ರ ಮಾಡಿ, ಆರಿದ ಅನಿಲವನ್ನು ನೇರವಾಗಿ ಉಕ್ಕಿನ ಸಿಲಿಂಡರುಗಳಲ್ಲಿ ಒತ್ತಡಭರಿತವಾಗಿ ಶೇಖರಿಸಬಹುದು ಅಥವಾ ದ್ರವೀಕರಿಸಬಹುದು.

**ನಾಲ್ಕನೆಯ ವಿಧಾನ :** ಮೀಥೇನ್, ಬೆಂಜೀನ್ ಮುಂತಾದ ಹೈಡ್ರೊಜನ್, ಇಂಗಾಲ ಸಂಯುಕ್ತಗಳನ್ನು ಕ್ಲೋರೀನ್‌ನೊಡನೆ ಕ್ರಿಯೆಗೊಳಪಡಿಸುವಿಕೆ. ಇತ್ತೀಚೆಗೆ ಅನೇಕ ಸಾವಯವ ಸಂಬಂಧಿತ ರಾಸಾಯನಿಕ ಕೈಗಾರಿಕೆಯಲ್ಲಿ ಹೆಚ್ಚಾಗಿ, ಹೈಡ್ರೊಜನ್ ಕ್ಲೋರೈಡ್ ಹೇರಳವಾಗಿ ಉಪ ಉತ್ಪನ್ನವಾಗಿ ದೊರೆಯಲಾರಂಭಿಸಿದೆ. ಆದ್ದರಿಂದ ಹೈಡ್ರೊಕ್ಲೋರಿಕ್ ಆಮ್ಲ ತಯಾರಿಕೆಗೆ ಒಂದು ನೂತನ ಪ್ರಮುಖ ಮೂಲ ದೊರೆತಿದೆ. ವೀನೈಲ್ ಕ್ಲೋರೈಡ್ ಆಧಾರಿತ ಕೃತಕ ರಬ್ಬರ್ ತಯಾರಿಕೆಯಲ್ಲಿ ಎಥಿಲೀನ್ ಕ್ಲೋರೈಡ್ ಅನ್ನು ಕಾಯಿಸಿದರೆ ಉಷ್ಣವಿಭಜನೆಯಿಂದ ವೀನೈಲ್ ಕ್ಲೋರೈಡ್ ಮತ್ತು ಹೈಡ್ರೊಜನ್ ಕ್ಲೋರೈಡ್ ದೊರೆಯುವುವು. ಈ ವಿಧಾನಗಳಲ್ಲಿ ಹೊರಬೀಳುವ ಹೈಡ್ರೊಜನ್ ಕ್ಲೋರೈಡ್ ಮಾತ್ರ ಅಶುದ್ಧವಾಗಿದ್ದು ಅದನ್ನು ಸ್ವಚ್ಛ ಮಾಡಬೇಕಾಗುವುದು. ದುರ್ಬಲ ಆಮ್ಲ ದ್ರಾವಣ ಕೂಡ ಎಲ್ಲ ಸಾಮಾನ್ಯ ಲೋಹಗಳ ಮೇಲೂ ರಾಸಾಯನಿಕವಾಗಿ ತೀಕ್ಷ್ಣಕ್ರಿಯೆ ಹೊಂದಿರುವುದರಿಂದ ಆಮ್ಲದ ತಯಾರಿಕೆ ಮತ್ತು ಶೇಖರಣೆಗಳಲ್ಲಿ ಗಾಜು, ಗಾಜಿನ ಒಳಮೈನ ಲೋಹಗಳು, ಟ್ಯಾಂಟಲಮ್ ಮತ್ತು ಗ್ರಾಫೈಟ್ ಇದ್ದಲು– ಈ ಮೂರೇ ಹೆಚ್ಚು ಬಳಕೆಯಲ್ಲಿರುವ ವಸ್ತುಗಳು. ಸುಟ್ಟ ಜೇಡಿಮಣ್ಣು ಅಥವಾ ಪಿಂಗಾಣಿ ಮತ್ತು ರಬ್ಬರ್‌ಗಳೂ ಆಮ್ಲ ಸಹಿಷ್ಣುಗಳು.

ಹೈಡ್ರೊಕ್ಲೋರಿಕ್ ಆಮ್ಲ ಒಂದು ಉಪಯುಕ್ತ ಕೈಗಾರಿಕಾ ಆಮ್ಲ. ಕಬ್ಬಿಣ ಉಕ್ಕು ಮತ್ತಿತರ ಲೋಹಗಳ ಮೇಲ್ಮೈ ತುಕ್ಕನ್ನು ತೆಗೆಯಲು, ಕಬ್ಬಿನ ಸಕ್ಕರೆ ಶುದ್ಧೀಕರಣದಲ್ಲಿ ಉಪಯೋಗಿಸುವ ಇದ್ದಿಲಿನ ಪುಡಿಯ ಪುನಶ್ಚೇತನ, ಅಲ್ಯೂಮಿನಿಯಂ, ಮೆಗ್ನೀಸಿಯಂ, ವೆನೇಡಿಯಂ, ಯುರೇನಿಯಂ, ಟಂಗ್‌ಸ್ಟನ್, ಟ್ಯಾಂಟಲಮ್, ಮ್ಯಾಂಗನೀಸ್, ಜರ್ಮೇನಿಯಂ ಲೋಹಗಳ ಬೇರ್ಪಡೆ, ಕೃತಕ ರಬ್ಬರ್ ತಯಾರಿಕೆ. ಪಿಷ್ಟಪದಾರ್ಥಗಳಿಂದ ಸಕ್ಕರೆ ಮತ್ತು ಗ್ಲೂಕೋಸ್ ತಯಾರಿಕೆ, ಪೆಟ್ರೋಲಿಯಂ ಎಣ್ಣೆಯ ಪ್ರವಾಹ ಅಡಚಣೆಗಳಿಂದ ಕಾರ್ಯಸ್ತಬ್ಧವಾಗಿರುವ ಎಣ್ಣೆ ಬಾವಿಗಳ ಪುನಶ್ಚೇತನ, ರಾಸಾಯನಿಕ ಸಂಶೋಧನೆಗಳೇ ಮುಂತಾದ ಅನೇಕ ಉಪಯೋಗಗಳಿಗೆ ಹೈಡ್ರೊಕ್ಲೋರಿಕ್ ಆಮ್ಲವನ್ನು ಬಳಸುವರು. ಭಾರತ ಈ ಆಮ್ಲವನ್ನು ಹೆಚ್ಚಾಗಿ ಆಮದುಮಾಡಿಕೊಳ್ಳುತ್ತಿಲ್ಲ.

**ಹೈಡ್ರೊಫ್ಲೋರಿಕ್ ಆಮ್ಲ :** ಹೈಡ್ರೊಕ್ಲೋರಿಕ್ ಆಮ್ಲದ ಗುಂಪಿಗೇ ಸೇರಿದ ಹೈಡ್ರೊಜನ್ ಮತ್ತು ಫ್ಲೋರಿನ್ ಸಂಯುಕ್ತದ ದ್ರಾವಣ ಹೈಡ್ರೊಫ್ಲೋರಿಕ್ ಆಮ್ಲ. ಪ್ರಕೃತಿಯಲ್ಲಿ ದೊರಕುವ ಕ್ಯಾಲ್ಸಿಯಂ ಫ್ಲೋರೈಡ್ (ಫ್ಲೋರೋಸ್ಪಾರ್) ಮತ್ತು ಪ್ರಬಲ ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣವನ್ನು ಕಾಯಿಸಿ ಬಟ್ಟಿ ಇಳಿಸಿದರೆ ಹೈಡ್ರೊಜನ್ ಫ್ಲೋರೈಡ್ ಉತ್ಪತ್ತಿಯಾಗುವುದು.

$CaF_2+H_2SO_4 \rightarrow CaSO_4+2HF$

ಸುಣ್ಣಕಲ್ಲು ಮತ್ತು ಮರಳಿನ ಅಂಶ ಕಡಿಮೆಯಿರುವ ಉತ್ತಮ ದರ್ಜೆಯ ಕ್ಯಾಲ್ಸಿಯಂ ಫ್ಲೋರೈಡ್ ನಿಕ್ಷೇಪಗಳನ್ನು ಛಿದ್ರಿಸಿ ನಯವಾದ ಪುಡಿ ಮಾಡಬೇಕು. ಆ ಪುಡಿಗೆ 96%–98% ಪ್ರಮಾಣದ ಪ್ರಬಲತೆಯ ಸಲ್ಫ್ಯೂರಿಕ್ ಆಮ್ಲವನ್ನು ಹಾಕಿ ಚೆನ್ನಾಗಿ ಕದಡಿ ಮಿಶ್ರಣ ಮಾಡಬೇಕು. ಈ ಮಿಶ್ರಣವನ್ನು ಉಕ್ಕಿನ ಅಥವಾ ಸೀಸ ಅಥವಾ ಮೊನೆಲ್ ಮಿಶ್ರಲೋಹ (ಮುಖ್ಯವಾಗಿ ನಿಕ್ಕಲ್ ಮತ್ತು ತಾಮ್ರ) ಪಾತ್ರೆಗಳಲ್ಲಿ $200^0$–$250^0$ ಸೆಂ. ಗ್ರೇ. ಉಷ್ಣತೆಯ ಮಟ್ಟದಲ್ಲಿ 30–60 ಮಿನಿಟುಗಳವರೆಗೆ ಕಾಯಿಸಿದರೆ ಹೈಡ್ರೊಜನ್ ಫ್ಲೋರೈಡ್ ಅನಿಲ ಹೊರಬೀಳುವುದು. ಇತ್ತೀಚೆಗೆ ಜಲಾಂಶ ರಹಿತ ಅಂದರೆ ಒಣ ಅಥವಾ ಶುಷ್ಕ ಹೈಡ್ರೊಜನ್ ಫ್ಲೋರೈಡ್ ಅನಿಲಕ್ಕೆ ಹೆಚ್ಚು ಉಪಯೋಗಗಳಿರುವುದರಿಂದ ಉತ್ಪಾದಿತ ಅನಿಲವನ್ನು ನೇರವಾಗಿ ಉಕ್ಕಿನ ಸಿಲಿಂಡರುಗಳಲ್ಲಿ ಒತ್ತಡದಲ್ಲಿಯಾಗಲೀ ದ್ರವರೂಪದಲ್ಲಿಯಾಗಲೀ ಶೇಖರಿಸುವರು. ಹೈಡ್ರೊಫ್ಲೋರಿಕ್ ಆಮ್ಲದ ಆವಶ್ಯಕತೆಯಿದ್ದಾಗ ಅನಿಲವನ್ನು ನೇರವಾಗಿ ನೀರಿನಲ್ಲಿ ಹೀರಿದರೆ ಮೊದಲು ದುರ್ಬಲ ದ್ರಾವಣ ದೊರೆಯುವುದು. ಈ ದುರ್ಬಲ ದ್ರಾವಣವನ್ನು ಸಲ್ಫ್ಯೂರಿಕ್ ಆಮ್ಲದೊಡನೆ ಮಿಶ್ರಮಾಡಿ ಬಟ್ಟಿ ಇಳಿಸುವುದರ ಮೂಲಕ ಪ್ರಬಲ ಆಮ್ಲವನ್ನು ಪಡೆಯುತ್ತಾರೆ. ಶುಷ್ಕ ಅನಿಲಕ್ಕಿಂತ ದ್ರಾವಣವೇ ಅದರಲ್ಲೂ ದುರ್ಬಲ ದ್ರಾವಣ ರಾಸಾಯನಿಕವಾಗಿ ಉಗ್ರ ಚಟುವಟಿಕೆಯುಳ್ಳದ್ದು. ದ್ರಾವಣ ಸಾಮಾನ್ಯ ಎಲ್ಲ ಲೋಹಗಳನ್ನೂ ಗಾಜು, ಮರಳುಗಳನ್ನೂ ತಿಂದು ಹಾಕುವುದು. ಸೀಸ ಅಥವಾ ಪ್ಲಾಟಿನಂ ಲೋಹ ಮತ್ತು ಕೃತಕ ಪ್ಲಾಸ್ಟಿಕ್‌ಗಳು ಈ ಆಮ್ಲ ನಿರೋಧಕಗಳಾದುದರಿಂದ ಆಮ್ಲದ ದ್ರಾವಣವನ್ನು ಇವುಗಳಲ್ಲಿಯೇ ಉಪಯೋಗಿಸಬೇಕು. ಅದೇ ಶುಷ್ಕ ಹೈಡ್ರೊಜನ್ ಫ್ಲೋರೈಡ್ ಅನಿಲವನ್ನು ಉಕ್ಕಿನ ಸಿಲಿಂಡರ್‌ಗಳಲ್ಲಿ ಯಾವ ರಾಸಾಯನಿಕ ಕ್ರಿಯೆಯೂ ಇಲ್ಲದೆ ಶೇಖರಿಸಬಹುದು. ಸಾಮಾನ್ಯವಾಗಿ ಗಾಜನ್ನು ಕರಗಿಸುವ ಶಕ್ತಿಯುಳ್ಳ ಹೈಡ್ರೊಫ್ಲೋರಿಕ್ ಆಮ್ಲವನ್ನು ಅನೇಕರು ಅತ್ಯುಗ್ರ ಆಮ್ಲವೆಂದು ನಂಬಿದರೂ ಅದರ ಉಗ್ರತೆ ಅಥವಾ ಕ್ರಿಯೆ ಆಮ್ಲದ ಪ್ರಬಲತೆ, ಜಲಾಂಶ, ಉಷ್ಣತೆ ಅದರಲ್ಲಿರುವ ಆರ್ಸೆನಿಕ್ ಮುಂತಾದ ಅಶುದ್ಧತೆಗಳು– ಇವುಗಳನ್ನವಲಂಬಿಸಿರುತ್ತದೆ. ಆದುದರಿಂದ ಪರಿಸ್ಥಿತಿಗೆ ತಕ್ಕಂತೆ ಉತ್ಪಾದನೆ, ಶೇಖರಣೆ, ಸಾಗಾಣಿಕೆಗಳಿಗೆ ಸೂಕ್ತ ಆಮ್ಲ ನಿರೋಧಕ ವಸ್ತುಗಳನ್ನು ಆರಿಸಿಕೊಳ್ಳಬೇಕು.

ಶುಷ್ಕ ಹೈಡ್ರೊಜನ್ ಫ್ಲೋರೈಡ್ ಒಂದು ವರ್ಣ ರಹಿತ ಅನಿಲ ಅಥವಾ ದ್ರವ (ಕುದಿಬಿಂದು $19.5^0$ ಸೆಂ.ಗ್ರೇ.). ನೀರಿನಲ್ಲಿ ಸುಲಭವಾಗಿ ಲೀನವಾಗುವುದು. ವಾತಾವರಣದ ಸಂಪರ್ಕದಲ್ಲಿ ಹೊಗೆಯಾಡುವುದು. ಚರ್ಮ, ಕಣ್ಣು, ಶ್ವಾಸಕೋಶಗಳಿಗೆ ತೀವ್ರ ಅಪಾಯಕಾರಿ. ದ್ರಾವಣ ರಾಸಾಯನಿಕವಾಗಿ ಚಟುವಟಿಕೆಯುಳ್ಳ ವಸ್ತು. ಆದುದರಿಂದ ಈ ಆಮ್ಲದ

ಬಳಕೆಯಲ್ಲಿ ಎಚ್ಚರ ಅತ್ಯಾವಶ್ಯಕ. ಕೆಲಸಗಾರರಿಗೆ ಸೂಕ್ತ ಆಮ್ಲ ನಿರೋಧಕ ಬಟ್ಟೆಗಳು, ಕಣ್ಣಿಗೆ ಕನ್ನಡಕ, ಮುಖವಾಡ, ಅತಿ ಸಮೀಪದಲ್ಲಿಯೇ ಅವಶ್ಯವಿದ್ದರೆ ಕೃತಕ ಉಸಿರಾಟಕ್ಕೆ ಆಕ್ಸಿಜನ್ನಿನ ಸಿಲಿಂಡರುಗಳು, ವೈದ್ಯಕೀಯ ಸಹಾಯ–ಇವು ಆವಶ್ಯಕ.

ಬಹುಕಾಲದಿಂದ ಆಚರಣೆಯಲ್ಲಿರುವ ಮತ್ತು ಈಗಲೂ ಬಳಕೆಯಲ್ಲಿರುವ ಒಂದು ಉಪಯೋಗ ಗಾಜಿಗೆ ಹೊಳಪು ಕೊಡುವುದು ಮತ್ತು ಗಾಜಿನ ಮೇಲೆ ಅಕ್ಷರ, ರೇಖೆಗಳು, ರೇಖಾಚಿತ್ರಗಳು ಮುಂತಾದುವನ್ನು ಕೊರೆಯುವುದು. 1670ರಲ್ಲೇ ಈ ಕ್ರಿಯೆಯ ಅರಿವಾಗಿ ಹೈಡ್ರೊಫ್ಲೋರಿಕ್ ಆಮ್ಲ ಆಗಲೇ ಮೊದಲು ತಯಾರಿಸಲಾಯಿತೆಂದು ಭಾವಿಸಬಹುದು. ಆದರೆ 1813–14ರಲ್ಲಿ ಮೊದಲ ಬಾರಿಗೆ ಇದು ಒಂದು ನೂತನ ಮೂಲವಸ್ತು ಫ್ಲೋರೀನ್‌ನ ಸಂಯುಕ್ತವೆಂದು ನಿರ್ಧರಿಸಲಾಯಿತು. ಈಗ ಹೈಡ್ರೊಜನ್ ಫ್ಲೋರೈಡಿಗೆ ಇರುವ ಪ್ರಮುಖ ಉಪಯೋಗವೆಂದರೆ ಫ್ಲೋರೀನ್ ಸಾವಯವ ಸಂಯುಕ್ತಗಳ ಕೈಗಾರಿಕಾ ತಯಾರಿಕೆ, ಪ್ಲಾಸ್ಟಿಕ್‌ಗಳು, ನೊರೆಯೀಯುವ ವಸ್ತುಗಳು, ಲೋಹಗಳ ತುಕ್ಕು ಸ್ವಚ್ಛ ಮಾಡುವ ದ್ರವಗಳು, ರಾಕೆಟ್‌ಗಳಲ್ಲಿ ಚಿಮ್ಮುವಿಕೆಗೆ ಪ್ರಚೋದಕಗಳು, ಇತ್ಯಾದಿ. ಎರಡನೆಯ ಮುಖ್ಯ ಉಪಯೋಗ ವಿದ್ಯುದ್ವಿಭಜನಾ ವಿಧಾನದಿಂದ ಅಲ್ಯೂಮಿನಿಯಂ ಲೋಹ ತಯಾರಿಸುವಾಗ ವಿದ್ಯುತ್ ವಿಶ್ಲೇಷಣೆಗಾಗಿ ಅವಶ್ಯವಾದ ಅಲ್ಯೂಮಿನಿಯಂ ಫ್ಲೋರೈಡ್ ಮತ್ತು ಕೃತಕ ಕ್ರಿಯೊಲೈಟ್‌ಗಳ ($Na_3AlF_6$) ಉತ್ಪಾದನೆ. ಮೂರನೆಯದಾಗಿ ಪರಮಾಣು ಶಕ್ತಿ ಉತ್ಪಾದನೆಯಲ್ಲಿ ಮೂಲ ಇಂಧನವಾದ ಯುರೇನಿಯಂ ಲೋಹದ ಉತ್ಪಾದನೆ, ನಾಲ್ಕನೆಯದಾಗಿ ಪೆಟ್ರೋಲಿಯಂ ಎಣ್ಣೆ, ಕೈಗಾರಿಕೆಯಲ್ಲಿ, ವಿಮಾನಗಳಲ್ಲಿ ಬಳಸುವ ಪೆಟ್ರೋಲ್‌ನ ತಯಾರಿಕೆ (ವೇಗವರ್ಧಕವಾಗಿ) ಸ್ಟೈನ್‌ಲೆಸ್ ಸ್ಟೀಲನ್ನು ಸ್ವಚ್ಛಗೊಳಿಸುವುದು, ಲೋಹಗಳ ಎರಕಗಳಿಗಂಟಿರುವ ಮರಳಿನ ನಿರ್ಮೂಲನ, ಫ್ಲೋರೀನ್ ತಯಾರಿಕೆ, ಕೊಳೆ ಬಟ್ಟೆಗಳ ಕಲೆಗಳನ್ನು ತೆಗೆಯುವ ವಸ್ತುಗಳ ತಯಾರಿಕೆ, ವಿಶೇಷ ಬಣ್ಣ ಮತ್ತು ಔಷಧಿಗಳ ತಯಾರಿಕೆ, ಖನಿಜಗಳ ರಾಸಾಯನಿಕ ವಿಶ್ಲೇಷಣೆ ಇತ್ಯಾದಿ ಇತರ ಕೆಲವು ಸಾಮಾನ್ಯ ಉಪಯೋಗಗಳು.

**4 ಬೋರಿಕ್ ಆಮ್ಲ ($H_3BO_3$) :** ಇದು ರಸಾಯನವಿಜ್ಞಾನಿಗಳು ಇಟ್ಟ ಹೆಸರು; ಔಷಧಿ ತಯಾರಿಕರು ಬೊರಾಸಿಕ್ ಆಮ್ಲವೆಂದು ಇದನ್ನು ಕರೆಯುವರು. ಈ ಆಮ್ಲವನ್ನು 1702ರಲ್ಲಿ ಮೊದಲ ಬಾರಿಗೆ ತಯಾರಿಸಲು ಉಪಯೋಗಿಸಿದ ವಿಧಾನವೇ ಇಂದೂ ಕೈಗಾರಿಕೆಯಲ್ಲಿ ಆಚರಣೆಯಲ್ಲಿದೆ. ಪ್ರಕೃತಿಯಲ್ಲಿ ದೊರಕುವ ಬೋರ್ಯಾಕ್ಸ್ ಲವಣದ ದ್ರಾವಣವೊಂದಕ್ಕೆ ಸಲ್ಫ್ಯೂರಿಕ್ ಆಮ್ಲವನ್ನು ಮಿಶ್ರಿತ ದ್ರಾವಣ ಆಮ್ಲಕ್ರಿಯೆ ತೋರಿಸುವವರೆಗೂ ಹಾಕುವರು. ಅನಂತರ ಫಲಿತ ದ್ರಾವಣವನ್ನು ತಂಪಾಗುವಂತೆ ಮಾಡಿದರೆ ಬಿಳಿಯ ಬೋರಿಕ್ ಆಮ್ಲದ ಹರಳುಗಳು ಹೊರಬೀಳುವುವು. ಅವುಗಳನ್ನು ಶೋಧಿಸಿ ಪ್ರತ್ಯೇಕಿಸಿದ ಅನಂತರ ಉಳಿದ ತಿಳಿ ದ್ರಾವಣವನ್ನು ಕಾಯಿಸಿ ನೀರನ್ನು ಆವಿಯಾಗಿಸಿದರೆ ಸೋಡಿಯಂ ಸಲ್ಫೇಟ್ ಲವಣವೂ ದೊರೆಯುವುದು.

$$Na_2B_4O_7 + H_2SO_4 + 5H_2O \rightarrow 4H_3BO_3 + NaSO_4$$

ಸಲ್ಫ್ಯೂರಿಕ್ ಆಮ್ಲದ ಬದಲು ಹೈಡ್ರೊಕ್ಲೋರಿಕ್ ಆಮ್ಲವನ್ನೂ ಉಪಯೋಗಿಸಬಹುದು. ಭಾರತದಲ್ಲಿ ಬೋರ್ಯಾಕ್ಸ್ ನಿಕ್ಷೇಪಗಳು ಕಾಶ್ಮೀರದ ಪೂಗಾ ಕಣಿವೆಯ ವಲಯದಲ್ಲಿ, ರಾಜಾಸ್ಥಾನದಲ್ಲಿ ಇರುವುದು ವರದಿಯಾಗಿದೆ.

**5 ಫಾಸ್‌ಫಾರಿಕ್ ಆಮ್ಲ ($H_3PO_4$) :** ಪ್ರಕೃತಿಯಲ್ಲಿ ದೊರಕುವ ಫಾಸ್‌ಫೇಟ್ ಕಲ್ಲಿನ ನಿಕ್ಷೇಪಗಳು ರಾಸಾಯನಿಕವಾಗಿ ಕ್ಯಾಲ್ಸಿಯಂ ಫಾಸ್‌ಫೇಟ್. ಪ್ರಾಣಿಗಳ ಮೂಳೆಗಳಲ್ಲಿಯೂ ಇದೇ ಪ್ರಧಾನಾಂಶ. ಕ್ಯಾಲ್ಸಿಯಂ ಫಾಸ್‌ಫೇಟ್‌ನಿಂದ ಫಾಸ್‌ಫಾರಿಕ್ ಆಮ್ಲವನ್ನು ಎರಡು ವಿಧಾನಗಳಿಂದ ತಯಾರಿಸಬಹುದು. ಮೊದಲನೆಯದರಲ್ಲಿ ಪುಡಿ ಮಾಡಿದ ಫಾಸ್‌ಫೇಟ್ ಕಲ್ಲು ಅಥವಾ ಒಣ ಮೂಳೆ ಪುಡಿಯನ್ನು ಹೆಚ್ಚಿನ ಪ್ರಮಾಣದ ಪ್ರಬಲ ಸಲ್ಫ್ಯೂರಿಕ್ ಆಮ್ಲದೊಡನೆ ಮಿಶ್ರಣಮಾಡಿ ರಾಸಾಯನಿಕ ಕ್ರಿಯೆ ಜರುಗಲು ಸಾಕಷ್ಟು ಕಾಲಾವಕಾಶ ಕೊಟ್ಟರೆ ಅಂತಿಮವಾಗಿ ಫಾಸ್‌ಫಾರಿಕ್ ಆಮ್ಲ ದೊರೆಯುವುದು. ದ್ರಾವಣವನ್ನು ಸೋಸಿ ಕ್ಯಾಲ್ಸಿಯಂ ಸಲ್ಫೇಟ್ ಘನ ವಸ್ತುವನ್ನು ಪ್ರತ್ಯೇಕಿಸಿ ತಿಳಿ ಆಮ್ಲ ದ್ರಾವಣವನ್ನು ಪಡೆಯಬಹುದು. ಹೀಗೆ ಪಡೆದ ಆಮ್ಲವನ್ನು ಕಾಯಿಸಿ ಜಲಾಂಶವನ್ನು ಕಡಿಮೆ ಮಾಡಿ ಶುದ್ಧೀಕರಣಕ್ಕೊಳಪಡಿಸಿ ಪ್ರಬಲ ಆಮ್ಲವನ್ನು ಹೊಂದಬಹುದು.

$$Ca_3(PO_4)_2 + 3H_2SO_4 + 6H_2O \rightarrow 2H_3PO_4 + 3\ (CaSO_4 . 2H_2O)$$

ಮೇಲಿನ ರಾಸಾಯನಿಕಕ್ರಿಯೆ ನಡೆಸುವಾಗ ಸಲ್ಫ್ಯೂರಿಕ್ ಆಮ್ಲದ ಪ್ರಮಾಣ ಕಡಿಮೆ ಮಾಡಿ ನಿಯಂತ್ರಿಸಿದರೆ ಕೃತಕ ರಾಸಾಯನಿಕ ಗೊಬ್ಬರಗಳಾದ ಸೂಪರ್ ಫಾಸ್‌ಫೇಟ್‌ಗಳು ದೊರೆಯುವುವು.

ಫಾಸ್ಫರಸ್‌ನಿಂದ (ರಂಜಕ) ಫಾಸ್‌ಫಾರಿಕ್ ಆಮ್ಲವನ್ನು ತಯಾರಿಸುವುದು ಎರಡನೆಯ ವಿಧಾನ. ಫಾಸ್‌ಫೇಟ್ ಕಲ್ಲು ಅಥವಾ ಮೂಳೆಗಳ ಪುಡಿ, ಮರಳು ಮತ್ತು ಕಲ್ಲಿದ್ದಲುಗಳ ಮಿಶ್ರಣವೊಂದನ್ನು ವಿದ್ಯುತ್ ಕುಲುಮೆಯೊಂದರೊಳಗೆ ಕಾಯಿಸಿದರೆ ಹೆಚ್ಚು ಉಷ್ಣದಿಂದ ಕೂಡಿದ ಅನಿಲಗಳು ಕುಲುಮೆಯಿಂದ ಹೊರಬೀಳುವುವು.

$$Ca_3(PO_4)_2 + 3SiO_2 + 5C \rightarrow 3CaSiO_3 + P_2 + 5CO$$

ಈ ಬಿಸಿ ಅನಿಲಗಳನ್ನು ಆರಲು ಬಿಟ್ಟರೆ ರಂಜಕ ಘನೀಭೂತವಾಗಿ ಶೇಖರವಾಗುವುದು. ದ್ರವರೂಪದಲ್ಲಿರುವ ಪಂಪುಗಳ ಮೂಲಕ ಹೊರಸೆಳೆದು ಶೇಖರಿಸಬಹುದು. ಈ ಫಾಸ್‌ಫರಸ್ಸನ್ನು ಒಂದು ಕುಲುಮೆಯೊಳಗೆ ಯಥೇಚ್ಛವಾಗಿ ಗಾಳಿಯಲ್ಲಿ ಉರಿಸಿದರೆ ಫಾಸ್‌ಫರಸಿನ ಆಕ್ಸೈಡ್ ಆಗಿ ಪರಿವರ್ತನೆ ಹೊಂದುವುದು. ಅನಂತರ ಇದನ್ನು ನೀರೊಡನೆ ಮಿಶ್ರಗೊಳ್ಳುವಂತೆ ಮಾಡಿದರೆ ಫಾಸ್‌ಫಾರಿಕ್ ಆಮ್ಲ ದೊರೆಯುವುದು.

$$4P + 5O_2 \rightarrow 2P_2O_5$$

$$P_2O_5 + 3H_2O \rightarrow 2H_3PO_4$$

ಇತ್ತೀಚೆಗೆ ಬಳಕೆಯಲ್ಲಿರುವ ಮತ್ತೊಂದು ಬಗೆಯ ಈ ವಿಧಾನದಲ್ಲಿ ಸಲ್ಫ್ಯೂರಿಕ್ ಆಮ್ಲದ ಬದಲು ಹೈಡ್ರೊಕ್ಲೋರಿಕ್ ಆಮ್ಲವನ್ನು ಫಾಸ್‌ಫೇಟ್ ಕಲ್ಲಿನ ಜೊತೆ ರಾಸಾಯನಿಕ ಕ್ರಿಯೆಗೊಳಪಡಿಸಿ ಫಲಿತ ಫಾಸ್‌ಫಾರಿಕ್ ಆಮ್ಲವನ್ನು ಸೂಕ್ತ ಲೀನಕಾರಿಗಳಿಂದ ಬೇರೆ ಮಾಡಲಾಗುವುದು.

ಫಾಸ್‌ಫಾರಸ್ ಅಂಶ ಕೂಡಿರುವ ಕೃತಕ ರಾಸಾಯನಿಕಗೊಬ್ಬರಗಳ ತಯಾರಿಕೆ ಫಾಸ್‌ಫಾರಿಕ್ ಆಮ್ಲಕ್ಕಿರುವ ಪ್ರಮುಖ ಉಪಯೋಗ; ಅಲ್ಲದೆ ಸಾಬೂನು, ಸ್ವಚ್ಛಕಾರಿಗಳು, ಲೋಹಗಳನ್ನು ತುಕ್ಕಿನಿಂದ ರಕ್ಷಿಸುವುದು, ಔಷಧಿಗಳು, ಪೆಟ್ರೋಲಿಯಂ ಕೈಗಾರಿಕೆ (ವೇಗವರ್ಧಕವಾಗಿ), ಸಕ್ಕರೆ ಶುದ್ಧೀಕರಣ, ಗಡಸು ನೀರನ್ನು ಕೈಗಾರಿಕಾ ಉಪಯೋಗಗಳಿಗೆ ಮೆದುಮಾಡುವುದು ಅಪಾರದರ್ಶಕ ಗಾಜಿನ ತಯಾರಿಕೆ, ಮೇಣ, ಪಾಲಿಷ್‌ಗಳ ತಯಾರಿಕೆ, ಬಟ್ಟೆಗಳಿಗೆ ಬಣ್ಣಹಾಕುವ ಕೈಗಾರಿಕೆ, ಆಹಾರ ಪಾನಿಯಗಳ ಕೈಗಾರಿಕೆ–ಇವೇ ಮುಂತಾದ ಅನೇಕ ಕೈಗಾರಿಕೆಗಳಲ್ಲಿ ಉಪಯೋಗಿಸುವರು.

ಭಾರತದಲ್ಲಿ ಫಾಸ್‌ಫಾರಿಕ್ ಆಮ್ಲ ತಯಾರಿಕೆ 1923 – 24 ರಿಂದಲೇ ಮುಂಬಯಿಯಲ್ಲಿ ಆರಂಭವಾಯಿತು. ಮೊದಮೊದಲು ಮೂಳೆಗಳಿಂದ ಆಮ್ಲವನ್ನು ಉತ್ಪಾದಿಸಲಾಯಿತು. ಏಕೆಂದರೆ ಭಾರತದಲ್ಲಿ ಫಾಸ್‌ಫೇಟ್ ಕಲ್ಲಿನ ನಿಕ್ಷೇಪಗಳಿಲ್ಲ. ಆದರೆ ಮೂಳೆಗಳಿಗೆ ರಫ್ತು ಮೌಲ್ಯವಿರುವುದರಿಂದ ಈಗ ಫಾಸ್‌ಫೇಟ್ ಕಲ್ಲನ್ನು ಆಲ್ಜೀರಿಯ. ಮೊರಾಕೊ ಮುಂತಾದ ದೇಶಗಳಿಂದ ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಂಡು ಆಮ್ಲವನ್ನು ತಯಾರಿಸಲಾಗುತ್ತಿದೆ. 1923–1928 ರ ಅವಧಿಯಲ್ಲಿ ಕೇವಲ 16 ಟನ್ ಆಮ್ಲವನ್ನು ಉತ್ಪಾದಿಸುವ ಸಾಮರ್ಥ್ಯದ ಕೈಗಾರಿಕೆ ಬೆಳೆದಿತ್ತು. ಫಾಸ್‌ಫರಸನ್ನು ಉರಿಸಿ ಆಮ್ಲವನ್ನು ಅಂತಿಮವಾಗಿ ಪಡೆಯುವ ವಿಧಾನವೂ ಆಚರಣೆಯಲ್ಲಿದೆ. ಮಂಗಳೂರಿನಲ್ಲಿ 6000 ಟನ್ ರಂಜಕದ ವಾರ್ಷಿಕ ಉತ್ಪಾದನಾ ಸಾಮರ್ಥ್ಯವುಳ್ಳ ಕೈಗಾರಿಕೆಯೊಂದನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

**ಸಾವಯವ ಆಮ್ಲಗಳು : 1 ಎಥನಾಯಿಕ್ ಆಮ್ಲ ($CH_3.COOH$) :** ಸು. 5000 ವರ್ಷಗಳಿಂದಲೂ ತಿಳಿದಿರುವ ಈ ಸಾವಯವ ಆಮ್ಲದ ಪರಿಚಿತನಾಮ ಅಸಿಟಿಕ್ ಆಮ್ಲ. ಇದರ ಉತ್ಪಾದನೆ ವಿಪುಲ. ಇದು ಹಲವಾರು ರಾಸಾಯನಿಕ ಕೈಗಾರಿಕೆ ಉತ್ಪನ್ನಗಳಿಗೆ ಆಧಾರವಸ್ತು. ದ್ರಾಕ್ಷಿ ಸೇಬು ಮುಂತಾದ ಹಣ್ಣುಗಳ ರಸ ಗಾಳಿಗೆ ಬಿಟ್ಟಂತೆಲ್ಲ ಕ್ರಮೇಣ ಹೆಚ್ಚು ಹೆಚ್ಚಾಗಿ ಹುಳಿ ಹಿಡಿಯುವುದಕ್ಕೆ ಕಾರಣ ಈ ಅಸಿಟಿಕ್ ಆಮ್ಲದ ವರ್ಧನೆ. ದ್ರಾಕ್ಷಾರಸದಲ್ಲಿನ ಮದ್ಯಸಾರ ಗಾಳಿಯಲ್ಲಿನ ಆಕ್ಸಿಜನ್‌ನಿಂದ ಉತ್ಕರ್ಷಣ ಹೊಂದಿ ಅಂತಿಮವಾಗಿ ಅಸಿಟಿಕ್ ಆಮ್ಲವುಂಟಾಗಲು ಕಾರಣವಾಗುತ್ತದೆ. ಈ ಉತ್ಕರ್ಷಣಕ್ರಿಯೆ ಅನೇಕ ಏಕಾಣುಜೀವಿಗಳು ಬಹಳ ಉತ್ತೇಜನಕಾರಿಗಳು. ಪ್ರಾಯಃ ಮದ್ಯಸಾರ ಮೊದಲು ಉತ್ಕರ್ಷಣ ಕ್ರಿಯೆಯಿಂದ ಅಸಿಟಾಲ್ಡಿಹೈಡ್ ಆಗಿ, ಅಂತಿಮವಾಗಿ ಅಸಿಟಿಕ್ ಆಮ್ಲ ಆಗುವುದು.

ಹಣ್ಣಿನ ರಸಗಳನ್ನು ಹುದುಗುವಂತೆ ಮಾಡಿ ಹುಳಿಹಿಡಿಸಿ, ಅಸಿಟಿಕ್ ಆಮ್ಲವನ್ನು ತಯಾರಿಸಿದ್ದು ಮೊದಲ ಕೈಗಾರಿಕಾ ವಿಧಾನವೆನ್ನಬಹುದು. ಈ ವಿಧಾನದಲ್ಲಿ ಉತ್ಪಾದಿತವಾಗುವ ಆಮ್ಲದ ಪರಮಾವಧಿ ಶೇಕಡಾಂಶ 5. ಕಚ್ಚಾ ಹಣ್ಣಿನ ಬದಲು ದುರ್ಬಲ ಆಲ್ಕೊಹಾಲ್ ಉಪಯೋಗಿಸಿ ಆಮ್ಲದ ಶೇಕಡಾಂಶವನ್ನು 12–14 ರವರೆಗೆ ಏರಿಸಬಹುದು.

ಆಧುನಿಕ ಕೈಗಾರಿಕೆಯ ವಿಧಾನಗಳಲ್ಲಿ ಮುಖ್ಯವಾದವು ನಾಲ್ಕು :

i ಅಸಿಟಾಲ್ಡಿಹೈಡ್‌ನ ಉತ್ಕರ್ಷಣೆ.

$$CH_3 . CHO + 1/2\ O_2 \rightarrow CH_3COOH$$

ii ಮದ್ಯಸಾರ ಅಂದರೆ ಈಥೈಲ್ ಆಲ್ಕೊಹಾಲ್‌ನ ಉತ್ಕರ್ಷಣೆ.

$$C_2H_5 . OH + O_2 \rightarrow CH_3COOH + H_2O$$

iii ಹೈಡ್ರೊಜನ್ – ಇಂಗಾಲ ಸಂಯುಕ್ತಗಳ ಉತ್ಕರ್ಷಣೆ.

$$CH \equiv CH + H_2O \rightarrow CH_3\,COOH$$

$$2CH_3 . CHO + O_2 \rightarrow 2CH_3 . COOH$$

iv ಮಿಥೈಲ್ ಆಲ್ಕೊಹಾಲ್ ಇಂಗಾಲದ ಮಾನಾಕ್ಸೈಡ್ ವಿಧಾನ.

$$CH_3OH + CO \rightarrow CH_3 .COOH$$

ಮೂಲಭೂತವಾಗಿ ಪೆಟ್ರೋಲಿಯಂ ಎಣ್ಣೆಬಾವಿಗಳನ್ನು ತೋಡುವಾಗ ಚಿಮ್ಮುವ ನೈಸರ್ಗಿಕ ಅನಿಲದಿಂದ ಅಂತಿಮವಾಗಿ ಅಸಿಟಿಕ್ ಆಮ್ಲವನ್ನು ಈ ನಾಲ್ಕನೆಯ ವಿಧಾನದಿಂದ ಪಡೆಯಬಹುದು. ಒಟ್ಟಿನಲ್ಲಿ ಈ ಎಲ್ಲ ವಿಧಾನಗಳಲ್ಲೂ ಉತ್ಪನ್ನವಾಗುವ ಅಸಿಟಿಕ್ ಆಮ್ಲ

ಇತರ ಅನೇಕ ಸಾವಯವ ಸಂಯುಕ್ತಗಳು ಮತ್ತು ನೀರಿನೊಡನೆ ಬೆರೆತೇ ದೊರೆಯುವುದು. ನಿಯಂತ್ರಿತ ರೀತಿಯಲ್ಲಿ ಬಟ್ಟಿ ಇಳಿಸುವುದರ ಮೂಲಕ ಶುದ್ಧ ಅಸಿಟಿಕ್ ಆಮ್ಲವನ್ನು ಬೇರ್ಪಡಿಸಬೇಕು. ಅಸಿಟಿಕ್ ಆಮ್ಲವನ್ನು ಉಪಯೋಗಿಸುವ ಕೈಗಾರಿಕೆಗಳಲ್ಲಿ ಉಪಯೋಗದ ಅನಂತರ ದುರ್ಬಲ ಅಸಿಟಿಕ್ ಆಮ್ಲ ದ್ರಾವಣ ಗಣನೀಯ ಪ್ರಮಾಣದಲ್ಲಿ ಶೇಖರವಾಗುವುದು. ಅದನ್ನು ಸೂಕ್ತ ರೀತಿಯಲ್ಲಿ ಬಟ್ಟಿ ಇಳಿಸುವುದರಿಂದಾಗಲಿ ಅಥವಾ ಲೀನಕಾರಿಗಳಲ್ಲಿ ಮಿಲನವಾಗುವಂತೆ ಮಾಡಿ ಅನಂತರ ಮತ್ತೆ ಬಟ್ಟಿ ಇಳಿಸುವುದರಿಂದಾಗಲಿ ಸಾರೀರಕಣ ಮಾಡಿ ಮತ್ತೆ ಉಪಯೋಗಿಸುವರು.

ಅಸಿಟಿಕ್ ಆಮ್ಲ ಬಣ್ಣವಿರದ, ಘಾಟುವಾಸನೆಯಿಂದ ಕೂಡಿರುವ ತೀಕ್ಷ್ಣಹುಳಿ ರುಚಿಯ ದ್ರವ. ಘನರೂಪದಲ್ಲಿ ಮಂಜುಗಡ್ಡೆಯ ತೆಳು ಚಕ್ಕೆಗಳಂತೆ ಕಾಣುವುದು. ಪ್ರಬಲ ದ್ರಾವಣ ಮತ್ತು ಅದರ ಆವಿ ಚರ್ಮಕ್ಕೂ ಕಣ್ಣಿಗೂ ಬಹಳ ಅಪಾಯಕಾರಿ. ನೀರು, ಆಲ್ಕೋಹಾಲ್, ಈಥರ್‌ಗಳಲ್ಲಿ ಧಾರಾಳವಾಗಿ ವಿಲೀನವಾಗುವುದು. ಅನೇಕ ಸಾವಯವ ಸಂಯುಕ್ತಗಳಿಗೂ ನಿರವಯವ ಆಮ್ಲಗಳಿಗೂ ಉತ್ತಮ ಲೀನಕಾರಿ. ಅಸಿಟಿಕ್ ಆಮ್ಲ ಕೈಗಾರಿಕಾ ಸಲಕರಣೆಗಳಿಗೆ ಮೊದಮೊದಲು ತಾಮ್ರವನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದರು. ತುಕ್ಕು ನಿರೋಧಕ ಲಕ್ಷಣಗಳುಳ್ಳ ಲೋಹ ಅಥವಾ ಮಿಶ್ರಲೋಹಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳಲ್ಲಿ ಪ್ರಗತಿಯಾದಂತೆಲ್ಲ ಅಲ್ಯೂಮಿನಿಯಂ, ಸ್ಟೇನ್‌ಲೆಸ್ ಸ್ಟೀಲ್, ಮೋನೆಲ್ ಮಿಶ್ರ ಲೋಹ, ಟ್ಯಾಂಟಲಮ್ ಮುಂತಾದುವು ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿವೆ. ಶೇಖರಣೆಗೆ ಮತ್ತು ಸಾಗಾಣಿಕೆಗೆ ಪಿಂಗಾಣಿ, ಸುಟ್ಟ ಜೇಡಿ ಮಣ್ಣು, ಗಾಜು, ರಬ್ಬರ್ ಅಥವಾ ಪ್ಲಾಸ್ಟಿಕ್ ಒಳಮೈ ಹೊಂದಿರುವ ಉಕ್ಕು ಇವೇ ಮುಂತಾದ ವಿವಿಧ ಸಾಮಗ್ರಿಗಳನ್ನು ಬಳಸುವರು.

**ಅಸಿಟಿಕ್ ಆಮ್ಲದ ಪ್ರಧಾನ ಉಪಯೋಗಗಳು :** ಕೃತಕ ದಾರಗಳು, ಪ್ಲಾಸ್ಟಿಕ್‌ಗಳು ಮತ್ತು ಔಷಧಿಗಳ ತಯಾರಿಕೆ, ಛಾಯಾಚಿತ್ರಗ್ರಾಹಿ ಫಿಲ್ಮುಗಳು, ಅರಗಿನ ಅಥವಾ ರಾಳದ ಬಣ್ಣಗಳು, ಚರ್ಮ, ಬಟ್ಟೆ ಮತ್ತು ಬಣ್ಣಗಳ ತಯಾರಿಕೆ, ನೈಲಾನ್, ಜೀವಾತುಗಳು (ವಿಟಮಿನ್ಸ್), ಆಸ್ಪಿರಿನ್ ಮುಂತಾದ ಔಷಧಿಗಳು, ರಬ್ಬರ್, ಸುವಾಸನಾ ದ್ರವ್ಯಗಳು ಇವೇ ಮುಂತಾದ ಅನೇಕ ನಿತ್ಯೋಪಯೋಗಿ ವಸ್ತುಗಳ ತಯಾರಿಕಾ ಕೈಗಾರಿಕೆಗಳಿಗೆ ಅಸಿಟಿಕ್ ಆಮ್ಲ ಅತ್ಯಾವಶ್ಯಕ.

**2 ಕೊಬ್ಬಿನ ಆಮ್ಲಗಳು (ಫ್ಯಾಟಿ ಆ್ಯಸಿಡ್ಸ್)**: ಅಸಿಟಿಕ್ ಆಮ್ಲಕ್ಕೆ ಸಂಬಂಧಿಸಿದ ಆದರೆ ತನ್ನ ಅಣುವಿನಲ್ಲಿ ಅಸಿಟಿಕ್ ಆಮ್ಲಕ್ಕಿಂತ ಇನ್ನೂ ಹೆಚ್ಚು ಉದ್ದವಾದ ಇಂಗಾಲ ಸರಪಳಿಗಳನ್ನು ಅನೇಕ ಸಾವಯವ ಆಮ್ಲಗಳು ಸಸ್ಯ ಮತ್ತು ಪ್ರಾಣಿ ಮೂಲದ ಎಣ್ಣೆ ಮತ್ತು ಕೊಬ್ಬುಗಳಲ್ಲಿ ಅಡಗಿವೆ. ಇವುಗಳಲ್ಲಿ ಕೆಲ ಪ್ರಮುಖ ಆಮ್ಲಗಳೆಂದರೆ ಲಾರಿಕ್ ಅಮ್ಲ ($C_{11}H_{23}COOH$), ಓಲಿಯಿಕ್ ಆಮ್ಲ ($C_{17}H_{33}COOH$) ಮತ್ತು ಸ್ಟಿಯರಿಕ್ ಆಮ್ಲ ($C_{17}H_{35}COOH$). ಇವು ಗ್ಲಿಸರೀನಿನೊಡನೆ ಸಂಯುಕ್ತದ ಸ್ವರೂಪದಲ್ಲಿ (ಗ್ಲಿಸರಿಕ್ ಎಸ್ಟರ್ಸ್), ಕೊಬ್ಬು ಮತ್ತು ಎಣ್ಣೆಗಳಲ್ಲಿ ದೊರೆಯುತ್ತವೆ. ದನ, ಕುದುರೆ ಮತ್ತು ಕುರಿ, ಕೊಬ್ಬರಿ, ಹತ್ತಿಕಾಳು, ಎಣ್ಣೆಬೀಜಗಳು ಇವೆಲ್ಲವುಗಳಿಂದಲೂ ಕೊಬ್ಬಿನ ಆಮ್ಲವರ್ಗದ ಆಮ್ಲಗಳನ್ನು ಪಡೆಯಲು ಸಾಧ್ಯ. ಘನಸ್ಥಿತಿಯಲ್ಲಿರುವ ಆಮ್ಲಗಳನ್ನು ಮೇಣದ ಬತ್ತಿ, ಲೋಹ ಮತ್ತು ಪಾದರಕ್ಷೆಗಳಿಗೆ ಉಪಯೋಗಿಸುವ ಪಾಲಿಷ್‌ಗಳು, ಔಷಧಿ ಮತ್ತು ಕೇಶ, ಅಂಗರಾಗಗಳ ತಯಾರಿಕೆಯಲ್ಲಿಯೂ ದ್ರವರೂಪದ ಆಮ್ಲಗಳನ್ನು ಬಣ್ಣಗಳ ತಯಾರಿಕೆ, ಚರ್ಮ ಹದಮಾಡುವುದು, ಬಟ್ಟೆ ಕೈಗಾರಿಕೆಗಳಲ್ಲಿಯೂ ಉಪಯೋಗಿಸುವರು. ಎಲ್ಲ ಆಮ್ಲಗಳಿಂದಲೂ ಕೀಲೆಣ್ಣೆ ಮತ್ತು ಚರಬಿಗಳನ್ನು (ಗ್ರೀಸ್) ತಯಾರಿಸಬಹುದು.

**3 ಸಿಟ್ರಿಕ್ ಆಮ್ಲ ($C_6H_80_7$) :** ಇದು ಆಹಾರ ಪಾನೀಯಗಳ ಕೈಗಾರಿಕೆಯಲ್ಲಿ ಹೇರಳವಾಗಿ ಬಳಕೆಯಲ್ಲಿರುವ ಆಮ್ಲ. ನೀರಿನಲ್ಲಿ ಸುಲಭವಾಗಿ ಧಾರಾಳವಾಗಿ ಲೀನವಾಗುವುದು. ಹಿತಕರವಾದ ಹುಳಿ ರುಚಿಯಿದ್ದು ಸುಲಭವಾಗಿ ಜೀರ್ಣವಾಗುವುದು. ಪ್ರಬಲ ದ್ರಾವಣದಲ್ಲಿಯೂ ಅಪಾಯಕಾರಿಯಲ್ಲ. ಬೆಲೆ ಕಡಿಮೆ. ಈ ಕಾರಣಗಳಿಂದ ಮಿಠಾಯಿ, ಕಲ್ಲುಸಕ್ಕರೆ, ಹಣ್ಣುಗಳಿಂದ ಮಾಡುವ ಸಿಹಿಗಳು, ಸಿಹಿಪಾನೀಯಗಳು, ಹಣ್ಣಿನ ರಸಗಳು ಮುಂತಾದ ಖಾದ್ಯ ವಸ್ತುಗಳ ತಯಾರಿಕೆಯಲ್ಲಿ ಸಿಟ್ರಿಕ್ ಆಮ್ಲವನ್ನು ಧಾರಾಳವಾಗಿ ಉಪಯೋಗಿಸುವರು. ಅಲ್ಲದೆ ಕೆಲವು ಔಷಧಿಗಳು, ಕೇಶ ಮತ್ತು ಅಂಗರಾಗಗಳು, ಲೋಹಗಳನ್ನು ಸ್ವಚ್ಛಮಾಡಲು ಬಳಸುವ ದ್ರಾವಣಗಳು, ಚರ್ಮ ಹದಮಾಡುವಿಕೆ, ಶಾಯಿ ತಯಾರಿಕೆ, ಬಟ್ಟೆಗಳಿಗೆ ಬಣ್ಣ ಸ್ಥಿರಗೊಳಿಸುವುದು ಮುಂತಾದ ಇತರ ಕೈಗಾರಿಕೆಗಳಲ್ಲೂ ಉಪಯೋಗಗಳಿವೆ. ಕಿತ್ತಳೆ, ನಿಂಬೆ, ಅನಾನಸ್ ವರ್ಗದ ಹುಳಿ ಹಣ್ಣುಗಳಲ್ಲೆಲ್ಲಾ ಸಿಟ್ರಿಕ್ ಆಮ್ಲಾಂಶವಿದೆ. ಬಹು ಕಾಲದವರೆಗೂ ಸಿಟ್ರಿಕ್ ಆಮ್ಲ ತಯಾರಿಕೆಗೆ ಈ ಹಣ್ಣುಗಳ ರಸಗಳೇ ಆಧಾರವಾಗಿದ್ದವು. ಈ ಹಣ್ಣುಗಳನ್ನು ಹೇರಳವಾಗಿ ಬೆಳೆಯುವ ಇಟಲಿ, ಅಮೆರಿಕದ ಕ್ಯಾಲಿಫೋರ್ನಿಯ ಮತ್ತು ಹವಾಯ್ ದ್ವೀಪಗಳು ಸಿಟ್ರಿಕ್ ಆಮ್ಲ ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿದ್ದವು. ಕಚ್ಚಾ ನಿಂಬೆ, ಕಿತ್ತಳೆಯ ಕೆಳದರ್ಜೆಯ ಹುಳಿ ಹಣ್ಣುಗಳು, ಅನಾನಸ್ ಹಣ್ಣಿನ ಮುಖ್ಯ ತಿರುಳನ್ನು ಪ್ರತ್ಯೇಕಿಸಿದ ಮೇಲೆ ಉಳಿಯುವ ಚೂರುಗಳು ಇವೆಲ್ಲವನ್ನೂ ಹಿಂಡಿ, ಕಚ್ಚಾರಸವನ್ನು ಕೆಲದಿನಗಳು ಹುಳಿ ಹಿಡಿಯಲು ಹಾಗೇ ಬಿಡುವುದು ಮೊದಲ ಹಂತ. ಅನಂತರ ರಸವನ್ನು ಶೋಧಿಸಿ ತಿಳಿರಸಕ್ಕೆ ಶುದ್ಧವಾದ ಸುಣ್ಣಕಲ್ಲಿನ ಪುಡಿಯನ್ನು (ಕ್ಯಾಲ್ಸಿಯಂ ಕಾರ್ಬೊನೇಟ್) ಬೆರೆಸಿದರೆ ಕ್ಯಾಲ್ಸಿಯಂ ಸಿಟ್ರೇಟ್ ಲವಣ ಘನರೂಪದಲ್ಲಿ ಹೊರಬೀಳುವುದು. ಆ ಲವಣವನ್ನು ಶೋಧಿಸಿ, ಬಿಸಿನೀರಿನಲ್ಲಿ ತೊಳೆದು ಅನಂತರ ಸಲ್ಫ್ಯೂರಿಕ್ ಆಮ್ಲದೊಡನೆ ಬೆರೆಸಿದರೆ ಸಿಟ್ರಿಕ್ ಆಮ್ಲ ದ್ರಾವಣರೂಪದಲ್ಲಿಯೂ ಕ್ಯಾಲ್ಸಿಯಂ ಸಲ್ಫೇಟ್ ಘನರೂಪದಲ್ಲಿಯೂ ದೊರೆಯುವುವು. ಘನವಸ್ತುವನ್ನು ಸೋಸಿ ತೆಗೆದರೆ ತಿಳಿ ಸಿಟ್ರಿಕ್ ಆಮ್ಲ ದ್ರಾವಣ ಸಿಗುವುದು. ಜಲಾಂಶವನ್ನು ಬತ್ತಿಸಿದರೆ ಘನ ಸಿಟ್ರಿಕ್ ಆಮ್ಲ ಉಳಿದುಕೊಳ್ಳುವುದು.

ಸಿಟ್ರಿಕ್ ಆಮ್ಲದ ವ್ಯಾಪಾರದಲ್ಲಿ ಇಟಲಿ ದೇಶದ ಪ್ರಾಬಲ್ಯ ಮತ್ತು ಏಕಸ್ವಾಮ್ಯವನ್ನು ಮುರಿಯಲು ಅಮೆರಿಕದಲ್ಲಿ ನಡೆಸಿದ ಸಂಶೋಧನೆಗಳ ಫಲವಾಗಿ ಸಕ್ಕರೆಯಿಂದ ಸಿಟ್ರಿಕ್ ಆಮ್ಲವನ್ನು ತಯಾರಿಸುವ ನೂತನ ಕ್ರಮ ಆಚರಣೆಗೆ ಬಂದು ಈಗ ಹೆಚ್ಚಾಗಿ ಬಳಕೆಯಲ್ಲಿದೆ. ಅಲ್ಯೂಮಿನಿಯಂ ಅಥವಾ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಯೊಂದರಲ್ಲಿ ಅಸಫರ್‌ಜಿಲಸ್ ನಿಗರ್ ಎಂಬ ಸೂಕ್ಷ್ಮದರ್ಶಕೀಯ ಬೂಷ್ಟುವರ್ಗದ ಜೀವಿಯನ್ನು (ಫಂಗಸ್) ಸಕ್ಕರೆಯ ದ್ರಾವಣದೊಳಗೆ ವೃದ್ಧಿಸಲು ಅವಕಾಶ ಮಾಡಿಕೊಟ್ಟರೆ ಕೆಲದಿನಗಳಲ್ಲಿ ಸಿಟ್ರಿಕ್ ಆಮ್ಲ ತಯಾರಾಗುತ್ತದೆ. ಮುಂದೆ ಗಷ್ಟನ್ನು ಶೋಧಿಸಿ ತೆಗೆದು, ತಿಳಿದ್ರಾವಣದಿಂದ ಜಲಾಂಶವನ್ನು ಬತ್ತಿಸಿ ಸಿಟ್ರಿಕ್ ಆಮ್ಲವನ್ನು ಪಡೆಯಬಹುದು. ಉಷ್ಣ ದೇಶವಾದ ಭಾರತದಲ್ಲಿ ಹುಳಿ ಕಿತ್ತಳೆ, ನಿಂಬೆ, ಅನಾನಸ್ ಹಣ್ಣುಗಳು ಸಮೃದ್ಧಿಯಾಗಿ ಬೆಳೆಯುವುದರಿಂದ ಆ ಹಣ್ಣುಗಳು ಬಿಡುವ ಕಾಲದಲ್ಲಿ ಬೇಡಿಕೆಗಿಂತ ಪೂರೈಕೆ ಸಂದರ್ಭಗಳು ಹೆಚ್ಚಾಗಿದ್ದಾಗಲೆಲ್ಲ ಕೊಳೆಸುವುದಕ್ಕಿಂತ ಅವುಗಳಿಂದ ಸಿಟ್ರಿಕ್ ಆಮ್ಲವನ್ನು ಪಡೆಯಬಹುದಾಗಿದೆ.

**4 ಇತರ ಸಾವಯವ ಆಮ್ಲಗಳು :** ವಿಶೇಷತಃ ಸಸ್ಯಮೂಲಗಳಿಂದ ದೊರೆಯುವ, ವಿವಿಧ ಕೈಗಾರಿಕೆಗಳಲ್ಲಿ ಉಪಯೋಗಗಳನ್ನು ಹೊಂದಿರುವ ಇನ್ನೂ ಅನೇಕ ಸಾವಯವ ಆಮ್ಲಗಳು ಇವೆ. ಕೆಲವಕ್ಕೆ ಮಾತ್ರ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿ ವಿವರಗಳನ್ನು ಕೋಷ್ಟಕ ರೂಪದಲ್ಲಿ ಕೊಡಲಾಗಿದೆ.

| ಆಮ್ಲದ ಹೆಸರು ಮತ್ತು ಸೂತ್ರ | ತಯಾರಿಕೆಗೆ ಮೂಲ ಕಚ್ಚಾವಸ್ತು | ಮುಖ್ಯ ಉಪಯೋಗಗಳು |
|---|---|---|
| 1 ಟಾರ್ಟಾರಿಕ್ ಆಮ್ಲ | ದ್ರಾಕ್ಷಾರಸ, ಹುಣಿಸೆ ಹಣ್ಣು | ಪಾನೀಯಗಳು, ಅಡುಗೆಸೋಡ, ಬಟ್ಟೆಗಳಿಗೆ ಬಣ್ಣ ಕಚ್ಚಿಸುವುದು, ಛಾಯಾಚಿತ್ರ ಗ್ರಹಣ. |
| 2 ಟ್ಯಾನಿಕ್ ಆಮ್ಲ ಅಥವಾ ಟ್ಯಾನಿನ್ | ಕೆಲವು ಮರಗಳ ಎಲೆಗಳು, ತೊಗಟೆ, ಹಣ್ಣು ಇತ್ಯಾದಿಬಟ್ಟೆಗಳಿಗೆ (ಉದಾ; ಓಕ್ ಮರ, ಚಹಾ ಎಲೆ, ಹಲವು ಬಗೆಯ ಕುರುಚಲು ಗಿಡಗಳು, ಮಲಯ ದೇಶದ ಮ್ಯಾನ್‌ಗ್ರೋವ್ ಗಿಡದ ತೊಗಟೆ) | ಚರ್ಮ ಹದಮಾಡುವುದು, ಬಣ್ಣ ಕಚ್ಚಿಸುವುದು, ಶಾಯಿ ತಯಾರಿಕೆ, ಔಷಧಿಗಳು. |
| 3 ಆಕ್ಸಾಲಿಕ್ ಆಮ್ಲ | ಮರದ ಪುಡಿ ಅಥವಾ ಹೊಟ್ಟು( ನೀಲಗಿರಿ ತೈಲದ ಮರದಂತೆ ಮೃದುವಾದ ಶಾಯಿ ತಯಾರಿಕೆ, ಮರಗಳಾದರೆ ಉತ್ತಮ), ಶರ್ಕರಪಿಷ್ಟ ಪದಾರ್ಥಗಳು, ಸೋಡಿಯಂ ಫಾರ್ಮೇಟ್ | ಬಟ್ಟೆಗಳ ಮೇಲೆ ಬಣ್ಣವನ್ನು ಸ್ಥಿರಪಡಿಸುವುದು, ಚೆಲುವೆಕಾರಿ, ಛಾಯಾಚಿತ್ರ ಗ್ರಹಣ. |
| 4 ಗ್ಯಾಲಿಕ್ ಆಮ್ಲ | ಕೆಲವು ಸಸ್ಯಗಳು, ಉದಾ: ಓಕ್ ಮರದತೊಗಟೆಯಲ್ಲಿನ ಗಂಟುಗಳು, ಹೆಮ್‌ಲಾಕ್ ವಿಷಸಸ್ಯ, ಚೆಸ್ಟನಟ್ ಮರ. | ಚರ್ಮ ಹದಮಾಡುವುದು, ಶಾಯಿ ತಯಾರಿಕೆ, ಬಣ್ಣಗಳು, ಔಷಧಿ. |
| 5 ಕ್ಷೀರಾಮ್ಲ | ಹುಳಿಹಾಲು, ಕಾಕಂಬಿ, ಸಕ್ಕರೆ ಪಾಕ, ಲ್ಯಾಕ್ಟೋನೈಟ್ರೈಲ್ | ಆಹಾರ ಪಾನೀಯಗಳು, ಪ್ಲಾಸ್ಟಿಕ್‌ಗಳು, ಕ್ರಿಮಿನಾಶಕಗಳು, ಶಾಯಿ, ಚರ್ಮ ಹದಮಾಡುವುದು, ಉಣ್ಣೆ ಬಟ್ಟೆಗಳಿಗೆ ಬಣ್ಣ ಕಚ್ಚಿಸುವುದು. |

(ಎನ್.ಎಚ್.ಎಸ್.)

**ಆಮ್ಲಗಳು ಮತ್ತು ಪ್ರತ್ಯಾಮ್ಲಗಳು :** ಲಿಟ್ಮಸ್ಸನ್ನು ಕೆಂಪು ಬಣ್ಣಕ್ಕೆ ತಿರುಗಿಸುವ, ಲೋಹಗಳು ಮೃತ್‌ಗಳು (ಅರ್ತ್ಸ್, ಅಂದರೆ ಆಕ್ಸೈಡುಗಳು) ಮುಂತಾದ ವಸ್ತುಗಳನ್ನು ವಿಲೀನಗೊಳಿಸುವ ಮತ್ತು ಕ್ಷಾರದ (ಆಲ್ಕಲಿ) ಸಂಪರ್ಕದಿಂದ ಈ ಗುಣಗಳನ್ನು ಕಳೆದುಕೊಳ್ಳುವ ವಸ್ತು ಆಮ್ಲ(ಆ್ಯಸಿಡ್). ಇದು ರಾಬರ್ಟ್ ಬಾಯಿಲ್ ಮೊಟ್ಟಮೊದಲು ನೀಡಿದ ವಿವರಣೆ (1680). ಜಲ ದ್ರಾವಣದಲ್ಲಿರುವ ಹೈಡ್ರಾಕ್ಸೈಡ್ ಅಯಾನನ್ನು (OH–) ಬಿಡುಗಡೆ ಮಾಡುವ, ಆಮ್ಲಗಳನ್ನು ತಟಸ್ಥಗೊಳಿಸುವ (ನ್ಯೂಟ್ರಲೈಸ್) ಅಥವಾ ಎಲೆಕ್ಟ್ರಾನ್ ಕೊರತೆ ಇರುವ ವಸ್ತುವಿನೊಡನೆ ಸಂಯೋಜನೆಗೊಂಡು ಅದಕ್ಕೆ ಎಲೆಕ್ಟ್ರಾನ್ ನೀಡುವ ವಸ್ತು ಪ್ರತ್ಯಾಮ್ಲ (ಬೇಸ್). ಈ ವಿವರಗಳನ್ನು ನಿಖರವಾದ ವ್ಯಾಖ್ಯೆಗಳೆಂದೇನೂ ಭಾವಿಸಬೇಕಾಗಿಲ್ಲ. ಕ್ಷಾರ ಲಿಟ್ಮಸ್ಸನ್ನು ನೀಲಿ ಬಣ್ಣಕ್ಕೆ ತಿರುಗಿಸುವುದು' ಮುಟ್ಟಿದರೆ ಸಾಬೂನು ಮುಟ್ಟಿದ ಭಾವನೆ ಬರುವುದು, ಖಾರವಾಗಿದ್ದು ನಾಲಿಗೆಯನ್ನು ಕೊರೆಯುವುದು. ಕ್ರಮೇಣ ಆ ಗುಣಗಳ ಜೊತೆಗೆ ಇನ್ನೂ ಕೆಲವು ವಿಶಿಷ್ಟಗುಣಗಳನ್ನು ಸೇರಿಸಲಾಯಿತು. ದುರ್ಬಲ (ಡೈಲ್ಯೂಟ್) ಆಮ್ಲ ಹುಳಿ. ಆಮ್ಲಗಳು ಸಾಮಾನ್ಯವಾಗಿ ಕಾರ್ಬೊನೇಟುಗಳೊಡನೆ ವರ್ತಿಸಿ ಕಾರ್ಬನ್ ಡೈಆಕ್ಸೈಡನ್ನುಂಟುಮಾಡುವುವು. ಲಿಟ್ಮಸ್ ಅಲ್ಲದೆ ಇತರ ಅನೇಕ ಸಾವಯವ ವರ್ಣದ್ರವ್ಯಗಳೂ ಆಮ್ಲ ಪ್ರತ್ಯಾಮ್ಲಗಳಲ್ಲಿ ವಿಶಿಷ್ಟ ಬಣ್ಣವನ್ನು ಹೊಂದುವುವು. ಉದಾಹರಣೆಗೆ, ಮಿಥೈಲ್ ಆರೆಂಜ್, ಆಮ್ಲಗಳಲ್ಲಿ ಗುಲಾಬಿ ಕೆಂಪು ಬಣ್ಣವನ್ನೂ ಪ್ರತ್ಯಾಮ್ಲಗಳಲ್ಲಿ ಹಳದಿ ಬಣ್ಣವನ್ನೂ ಹೊಂದುವುದು. ಫೀನಾಲ್‌ಫ್ತಲೀನ್ ಆಮ್ಲಗಳಲ್ಲಿ ನಿರ್ವರ್ಣವಾಗಿರುವುದು. ಪ್ರತ್ಯಾಮ್ಲಗಳಲ್ಲಿ ಗುಲಾಬಿ ಕೆಂಪುಬಣ್ಣ ಹೊಂದುವುದು. ಆಮ್ಲಗಳು ಮತ್ತು ಪ್ರತ್ಯಾಮ್ಲಗಳು ಅನೇಕ ರಾಸಾಯನಿಕ ಪರಿವರ್ತನೆಗಳ ವೇಗವರ್ಧಕಗಳಾಗಿರುವುವು.

ಆಮ್ಲಗಳ ರಚನೆಯಲ್ಲಿ ಕಂಡುಬರುವ ಕೆಲವೊಂದು ಸಾದೃಶ್ಯಗಳು ಅವುಗಳ ವಿಶಿಷ್ಟಗುಣಗಳಿಗೆ ಕಾರಣವೆಂಬ ಭಾವನೆಯನ್ನು ಮೊಟ್ಟಮೊದಲು ಪ್ರತಿಪಾದಿಸಿದವ ಲೆವಾಸಿಯೆ. ಎಲ್ಲ ಆಮ್ಲಗಳ ಅಣುಗಳಲ್ಲಿಯೂ ಆಕ್ಸಿಜನ್ನಿನ (ಆಮ್ಲಜನಕ) ಪರಮಾಣುವಿದ್ದು, ಈ ಆಕ್ಸಿಜನ್ ವಸ್ತುವಿಗೆ ಆಮ್ಲೀಯ ಗುಣವನ್ನುಂಟುಮಾಡುವುದೆಂದು ಅವನ ಭಾವನೆಯಾಗಿತ್ತು. ಅನ್ವರ್ಥಕವಾದ ಆಕ್ಸಿಜನ್ ಎಂಬ ಹೆಸರನ್ನು ಈ ಮೂಲವಸ್ತುವಿಗೆ ಲೆವಾಸಿಯೆ ಕೊಟ್ಟ. ಇದರ ಅನಂತರ ಡೇವಿ ಮ್ಯೂರಿಯಾಟಿಕ್ ಆಮ್ಲದಲ್ಲಿ (ಹೈಡ್ರೋಕ್ಲೋರಿಕಾಮ್ಲ) ಆಕ್ಸಿಜನ್ನಿನ ಅಗತ್ಯವಿಲ್ಲವೆಂದು ತೋರಿಸಿದ. ಒಂದು ವಸ್ತು ಆಮ್ಲೀಯ ಗುಣ ಹೊಂದಲು ಆಕ್ಸಿಜನ್ನಿನ ಅಗತ್ಯವಿಲ್ಲ, ಪ್ರತಿ ಆಮ್ಲದ ಅಣುವಿನಲ್ಲಿಯೂ ಇರುವ ಹೈಡ್ರೊಜನ್ ಪರಮಾಣು ವಸ್ತುವಿನ ಆಮ್ಲೀಯಗುಣಕ್ಕೆ ಕಾರಣ ಎಂಬುದು ಇವನ ಮತ. ಲೇಬೆಗ್ ಎಂಬಾತ ಆಮ್ಲೀಯ ಗುಣವುಳ್ಳ ಅನೇಕ ಸಾವಯವ ಸಂಯುಕ್ತಗಳ ಸಂಶೋಧನೆ ಮಾಡಿ ಪ್ರತಿಯೊಂದು ಆಮ್ಲದ ಅಣುವಿನಲ್ಲಿಯೂ ಲೋಹದಿಂದ ಪಲ್ಲಟಿಸಲ್ಪಡಬಹುದಾದ ಹೈಡ್ರೊಜನ್ ಪರಮಾಣು ಒಂದಾದರೂ  ಇದ್ದು, ಇದು ವಸ್ತುವಿನ ಆಮ್ಲೀಯ ಗುಣಕ್ಕೆ ಕಾರಣವೆಂದು ಪ್ರತಿಪಾದಿಸಿ ಡೇವಿಯ ಭಾವನೆಯನ್ನು ಪುಷ್ಟೀಕರಿಸಿದ.

ಪಲ್ಲಟಿಸಲ್ಪಡಬಹುದಾದ ಹೈಡ್ರೊಜನ್ ಪರಮಾಣುವನ್ನು ಅವುಗಳ ಅಣುವಿನಲ್ಲಿ ಹೊಂದಿದ ವಸ್ತುಗಳು ಆಮ್ಲಗಳು ಎಂಬ ಭಾವನೆ ಬಹುಕಾಲ ಬಳಕೆಯಲ್ಲಿತ್ತು. ಪ್ರಥಮ ಪಾಠಗಳಲ್ಲಿ ಆಮ್ಲಗಳ ಈ ವಿವರಣೆಯನ್ನು ಈಗಲೂ ನೀಡುವರು. ಆದರೆ  ಈ ವಿವರಣೆ ಆಮ್ಲಗಳ ಪ್ರಬಲತೆಗಳಲ್ಲಿ (ಸ್ಟ್ರೆನ್ತ್), ವೇಗವರ್ಧಕ ಸಾಮರ್ಥ್ಯದಲ್ಲಿ ಮತ್ತು ವಿದ್ಯುದ್ವಾಹಕತ್ವದಲ್ಲಿ ಕಂಡುಬರುವ ಹೆಚ್ಚಿನ ವ್ಯತ್ಯಾಸಗಳನ್ನು ವಿವರಿಸಲಾಗಲಿ ಅಥವಾ ರಚನೆಯಲ್ಲಿ ಹೈಡ್ರೊಜನ್ ಇರದ ಅಲ್ಯೂಮಿನಿಯಂ ಕ್ಲೋರೈಡ್ ಮುಂತಾದ ವಸ್ತುಗಳ ದ್ರಾವಣಗಳು ಆಮ್ಲೀಯಗುಣಗಳನ್ನು ಏಕೆ ಪ್ರದರ್ಶಿಸುವುವೆಂದು ವಿವರಿಸಲಾಗಲಿ ಸಮರ್ಥವಾಗಿಲ್ಲ. ಈಚಿನ ವರ್ಷಗಳಲ್ಲಿ ಆಮ್ಲಗಳ ವಿಷಯಗಳಲ್ಲಿ ನಮ್ಮ ಭಾವನೆಗಳು ವಿಶೇಷ ಮಾರ್ಪಾಡಾಗಿ ಅನೇಕ ಹೊಸ ಭಾವನೆಗಳು ಪ್ರತಿಪಾದಿತವಾಗಿವೆ. ಇವುಗಳಲ್ಲಿ ಮುಖ್ಯವಾದುವನ್ನು ಈ ಕೆಳಗೆ ವಿವರಿಸಿದೆ.

**ಅರೇನಿಯಸ್‌ನ ವಾದ :** ಈ ವಾದದ ಪ್ರಕಾರ ನೀರಿನಲ್ಲಿ ವಿಲೀನವಾದಾಗ ಹೈಡ್ರೊಜನ್ ಆಯಾನನ್ನು $H^+$, (ಇನ್ನೂ ನಿಖರವಾಗಿ ಹೇಳುವುದಾದರೆ ಹೈಡ್ರೋನಿಯಂ ಆಯಾನ್ $H_3O^+$ ಅನ್ನು ಏಕೆಂದರೆ $H^+$ ಅಯಾನು ಸ್ವತಂತ್ರ ಅಸ್ತಿತ್ವ ಹೊಂದಿರಲು ಸಾಧ್ಯವಿಲ್ಲದಷ್ಟು ಚಿಕ್ಕದಾಗಿರುವುದು) ಕೊಡುವ ವಸ್ತುಗಳೆಲ್ಲವೂ  ಆಮ್ಲಗಳು, ನೀರಿನ ದ್ರಾವಣದಲ್ಲಿ ಹೈಡ್ರಾಕ್ಸಿಲ್ ಅಯಾನನ್ನು $OH^{-1}$ ಕೊಡುವ ವಸ್ತುಗಳೆಲ್ಲವೂ ಪ್ರತ್ಯಾಮ್ಲಗಳು. ಉದಾಹರಣೆಗೆ HCl ಮತ್ತು $CH_3.COOH$ಗಳು ಆಮ್ಲಗಳು.  ನೀರಿನ ದ್ರಾವಣದಲ್ಲಿ ಇವು ಅಯಾನೀಕರಿಸಿ ಹೈಡ್ರೊಜನ್ ಆಯಾನನ್ನು ಕೊಡುವುವು.

$HCI \rightarrow H^{\circ} + OH'$ ಮತ್ತು $CH_3COOH \leftrightarrows CH_3COO' + H+$

NaOH ಮತ್ತು  $Ba(OH)_2$ ಪ್ರತ್ಯಾಮ್ಲಗಳು. ಇವು ನೀರಿನ ದ್ರಾವಣದಲ್ಲಿ ಹೈಡ್ರಾಕ್ಸಿಲ್ ಅಯಾನ್‌ಗಳನ್ನು ಕೊಡುವುವು.

$NaOH \rightarrow Na+ + OH^-$  ಮತ್ತು  $Ba(OH)_2 \rightarrow Ba++ + 2OH^-$

ನೀರು ಆ್ಯಂಫೊಟರಿಕ್ ಅಂದರೆ ಎರಡು ವರ್ಗಕ್ಕೂ ಸೇರಿದ ವಸ್ತು. ಇದು ಅಲ್ಪಪ್ರಮಾಣದಲ್ಲಿ ಅಯಾನೀಕರಿಸಿ ಹೈಡ್ರೊಜನ್ ಅಯಾನನ್ನೂ ಹೈಡ್ರಾಕ್ಸಿಲ್ ಅಯಾನನ್ನೂ ಕೊಡುವುದು.

$$H_2O \rightarrow H+ + OH^-$$

ಶುದ್ಧ ನೀರಿನಲ್ಲಿ ಹೈಡ್ರೊಜನ್ ಅಯಾನಿನ ಮತ್ತು ಹೈಡ್ರಾಕ್ಸಿಲ್ ಅಯಾನಿನ ಪ್ರಬಲತೆಗಳು (ಕಾನ್ಸನ್‌ಟ್ರೇಷನ್)–ಅಂದರೆ ಒಂದು ಲೀಟರ್ ನೀರಿನಲ್ಲಿರುವ ಈ ಅಯಾನ್‌ಗಳ ಸಂಖ್ಯೆಗಳು–ಸಮಾನವಾಗಿರುವುವು. ಆಮ್ಲ ನೀರಿನಲ್ಲಿ ಹೈಡ್ರೊಜನ್ ಅಯಾನಿನ ಪ್ರಬಲತೆಯನ್ನು ಹೆಚ್ಚಿಸುವುದು; ಹೈಡ್ರಾಕ್ಸಿಲ್ ಅಯಾನಿನ ಪ್ರಬಲತೆಯನ್ನು ತಗ್ಗಿಸುವುದು. ಪ್ರತ್ಯಾಮ್ಲ ಹೈಡ್ರಾಕ್ಸಿಲ್ ಅಯಾನಿನ ಪ್ರಬಲತೆಯನ್ನು ಹೆಚ್ಚಿಸುವುದು. ಹೈಡ್ರೊಜನ್ ಅಯಾನ್ ಮತ್ತು ಹೈಡ್ರಾಕ್ಸಿಲ್ ಅಯಾನುಗಳು ಸಂಯೋಜಿಸಿ ನೀರಿನ ಅಣುಗಳಾಗುವುದೇ ತಟಸ್ಥೀಕರಣ (ನ್ಯೂಟ್ರಲೈಸೇಷನ್). ಲವಣದ ಉತ್ಪತ್ತಿ ಆನುಷಂಗಿಕ (ಇನ್ಸಿಡೆಂಟಲ್).

$$(H^+ + CI^-) + (Na^+ + OH^-) \rightarrow H_2O + (Na^+ + CI^-)$$

ಈ ವಾದದ ಸಹಾಯದಿಂದ ಆಮ್ಲಗಳ ಪ್ರಬಲತೆಗಳಲ್ಲಿ ವೇಗವರ್ಧಕ ಸಾಮರ್ಥ್ಯಗಳಲ್ಲಿ ಮತ್ತು ವಿದ್ಯುದ್ವಾಹಕತ್ವದಲ್ಲಿ ಇರುವ ವ್ಯತ್ಯಾಸಗಳನ್ನು ವಿವರಿಸಬಹುದು. ಸಂಪೂರ್ಣವಾಗಿ ಅಯಾನೀಕರಿಸುವ ಆಮ್ಲಗಳು ಪ್ರಬಲ ಆಮ್ಲಗಳು. ಉದಾ: HCI, HBr, $HNO_3$ ಇತ್ಯಾದಿ. ಅಲ್ಪ ಪ್ರಮಾಣದಲ್ಲಿ ಅಯಾನೀಕರಿಸುವ ಆಮ್ಲಗಳು ದುರ್ಬಲ ಆಮ್ಲಗಳು. ಉದಾ: $CH_3.COOH$, $H_3PO_4$. ಸಮಾನ ಪ್ರಬಲತೆಯಲ್ಲಿ ಇರುವ ಸಮಾನಗಾತ್ರ ಆಮ್ಲಗಳನ್ನು ತೆಗೆದುಕೊಂಡರೆ, ಪ್ರಬಲ ಆಮ್ಲಗಳಲ್ಲಿ ಹೈಡ್ರೊಜನ್ ಅಯಾನಿನ ಪ್ರಬಲತೆ ಹೆಚ್ಚಾಗಿಯೂ ದುರ್ಬಲ ಆಮ್ಲಗಳಲ್ಲಿ ಹೈಡ್ರೊಜನ್ ಅಯಾನಿನ ಪ್ರಬಲತೆ ಕಡಿಮೆಯಾಗಿಯೂ ಇರುವುದು. ಪ್ರತ್ಯಾಮ್ಲಗಳಿಗೂ ಇದೇ ಅನ್ವಯಿಸುವುದು. ಇಲ್ಲಿ ಹೈಡ್ರಾಕ್ಸಿಲ್ ಅಯಾನ್ ಗಣನೆಗೆ ಬರುವುದು. ಹೈಡ್ರೊಜನ್ ಅಯಾನ್ ಮತ್ತು ಹೈಡ್ರಾಕ್ಸಿಲ್ ಅಯಾನ್‌ಗಳು ವೇಗವರ್ಧಕಗಳಾಗಿರುವುದರಿಂದ ಪ್ರಬಲ ಆಮ್ಲಗಳು ಮತ್ತು ಪ್ರತ್ಯಾಮ್ಲಗಳು ಒಳ್ಳೆಯ ವೇಗವರ್ಧಕಗಳು. ದುರ್ಬಲ ಆಮ್ಲಗಳ ಮತ್ತು ಪ್ರತ್ಯಾಮ್ಲಗಳ ವೇಗವರ್ಧಕ ಸಾಮರ್ಥ್ಯ ಕಡಿಮೆ. ಅಯಾನುಗಳು ಮಾತ್ರ ವಿದ್ಯುದ್ವಾಹಕಗಳಾದ್ದರಿಂದ ಸಂಪೂರ್ಣ ಅಯಾನೀಕರಿಸುವ ಪ್ರಬಲ ಆಮ್ಲ ಮತ್ತು ಪ್ರತ್ಯಾಮ್ಲಗಳು ಒಳ್ಳೆಯ ವಿದ್ಯುದ್ವಾಹಕಗಳು. ಅಲ್ಪವಾಗಿ ಅಯಾನೀಕರಿಸುವ ದುರ್ಬಲ ಆಮ್ಲ ಪ್ರತ್ಯಾಮ್ಲಗಳ ವಿದ್ಯುದ್ವಾಹಕತ್ವ ಕೀಳ್ಮಟ್ಟದ್ದಾಗಿದೆ. ಜಲವಿಶ್ಲೇಷಣೆಯನ್ನೂ (ಹೈಡ್ರಾಲಿಸಿಸ್) ಇದರ ಸಹಾಯದಿಂದ ವಿವರಿಸಬಹುದು.

ಆದರೆ ಈ ವಾದ ಒಂದು ಮಿತಿಯನ್ನು ಹೊಂದಿದೆ. ಆಮ್ಲ ಪ್ರತ್ಯಾಮ್ಲಗಳ ವರ್ತನೆಗಳ ಕ್ಷೇತ್ರ ಇಲ್ಲಿ ನೀರಿನ ದ್ರಾವಣಗಳಿಗೆ ಮಾತ್ರ ಸೀಮಿತವಾಗಿದೆ. ಅಲ್ಲದೆ ಹೈಡ್ರಾಕ್ಸಿಲ್ ಅಯಾನನ್ನು ಹೊಂದಿರುವ ಪ್ರತ್ಯಾಮ್ಲಗಳು ಇದರ ವ್ಯಾಪ್ತಿಯೊಳಗೆ ಬರುವುದಿಲ್ಲ. ದ್ರವ ಅಮೋನಿಯಾ, ನಿರ್ಜಲ (ಅನ್‌ಹೈಡ್ರಸ್) ಹೈಡ್ರೊಜನ್ ಫ್ಲೋರೈಡ್, ಬೆಂಜೀನ್, ಕ್ಲೋರೋಫಾರಂ ಇತ್ಯಾದಿ ದ್ರವಗಳಲ್ಲಿ ವಿಲೀನವಾದ ಅನೇಕ ವಸ್ತುಗಳು ಆಮ್ಲ ಪ್ರತ್ಯಾಮ್ಲಗಳ ಗುಣಗಳನ್ನು ಪ್ರದರ್ಶಿಸುವುವು. ಹೈಡ್ರಾಕ್ಸಿಲ್ ಅಯಾನ್ ಇರದ ಪ್ರತ್ಯಾಮ್ಲಗಳು, ಉದಾ, $KNH_2$ ಇರುವುವು. ಅರೇನಿಯಸ್ ವಾದದಿಂದ ವಿವರಿಸಲ್ಪಡುವ ಈ ಪ್ರಾಯೋಗಿಕ ವಿಷಯಗಳನ್ನು ವಿವರಿಸುವ ಸಲುವಾಗಿ ಏಕಕಾಲದಲ್ಲಿ ಬ್ರಾನ್‌ಸ್ಟೆಡ್ ಮತ್ತು ಲೌರಿ ಎಂಬ ರಸಾಯನವಿಜ್ಞಾನಿಗಳು ಹೊಸದೊಂದು ವಾದವನ್ನು 1923ರಲ್ಲಿ ಪ್ರತಿಪಾದಿಸಿದರು. ಇದನ್ನು ಪ್ರೋಟಾನಿಕ್ ಭಾವನೆ ಎನ್ನಬಹುದು.

**ಪ್ರೋಟಾನಿಕ್ ಭಾವನೆ :** ಈ ವಾದದ ಪ್ರಕಾರ ಪ್ರೋಟಾನನ್ನು (H+) ಕೊಡಲು ಸಮರ್ಥವಾದ ಹೈಡ್ರೊಜನ್ ಇರುವ ಯಾವ ವಸ್ತುವೇ ಆಗಲಿ ಅದು ಅಣುವಾಗಿರಲಿ, ಅಯಾನ್ ಆಗಿರಲಿ ಆಮ್ಲ. ಪ್ರೋಟಾನನ್ನು ಗ್ರಹಿಸುವ ಸಾಮರ್ಥ್ಯವುಳ್ಳ ಪ್ರತಿಯೊಂದು ವಸ್ತುವೂ ಅದು ಅಣುವಾಗಿರಬಹುದು ಅಥವಾ ಅಯಾನ್ ಆಗಿರಬಹುದು ಪ್ರತ್ಯಾಮ್ಲ.

ಆಮ್ಲ $A \leftrightarrows$ ಪ್ರತ್ಯಾಮ್ಲ $B + H^+$

ಒಂದು ಆಮ್ಲದ ಪ್ರಬಲತೆ ಅದರ ಪ್ರೋಟಾನ್‌ದಾಯಕ ಸಾಮರ್ಥ್ಯಕ್ಕೆ ಅನುಗುಣವಾಗಿರುವುದು. ಪ್ರತ್ಯಾಮ್ಲದ ಪ್ರಬಲತೆ ಪ್ರೋಟಾನ್ ಗ್ರಾಹಕ ಸಾಮರ್ಥ್ಯಕ್ಕೆ ಅನುಗುಣವಾಗಿರುವುದು. ಆಮ್ಲಪ್ರತ್ಯಾಮ್ಲಗಳ ವರ್ತನೆಗಳನ್ನು ಸರ್ವಸಮನ್ವಯವಾಗಿ ಕೆಳಗಿನಂತೆ ಬರೆಯಬಹುದು.

ಆಮ್ಲ1 +ಪ್ರತ್ಯಾಮ್ಲ1 $\rightleftarrows$ ಆಮ್ಲ2+ಪ್ರತ್ಯಾಮ್ಲ2. ಪರಿವರ್ತನೆ

ದುರ್ಬಲ ಆಮ್ಲ ಪ್ರತ್ಯಾಮ್ಲಗಳ ದಿಕ್ಕಿನಲ್ಲಿ ನಡೆಯುವುದು. ಈ ವಿಧದ ವರ್ತನೆಗಳ ಕೆಲವು ಉದಾಹರಣೆಗಳನ್ನು ಕೆಳಗೆ ಕೊಟ್ಟಿದೆ.

ಆಮ್ಲ1 ಪ್ರತ್ಯಾಮ್ಲ ಆಮ್ಲ2 ಪ್ರತ್ಯಾಮ್ಲ2

$$HCI + NH_3 \rightleftarrows NH_4+ + CI^-$$

$$HBr + H_2O \rightleftarrows H_3O+ + Br^-$$

$$HF + HNO_3 \rightarrow H_2NO_3+ + F^-$$

ಮೇಲಿನ ಉದಾಹರಣೆಗಳಲ್ಲಿ HCl, HBr, HF ಗಳು ಆಮ್ಲಗಳು. ಏಕೆಂದರೆ ಇವು ಪ್ರೋಟಾನ್‌ದಾಯಕಗಳು. $NH_2$, $H_2O$, $HNO_3$ (ಕೊನೆಯದು ಸಾಮಾನ್ಯವಾಗಿ ಆಮ್ಲವೆಂದು ಪರಿಗಣಿತವಾಗಿರುವುದು) ಪ್ರತ್ಯಾಮ್ಲಗಳು. ಏಕೆಂದರೆ ಇವು ಪ್ರೋಟಾನ್‌ಗ್ರಾಹಕಗಳು. ದ್ರಾವಕ (ಸಾಲ್‌ವೆಂಟ್) ಅದರಲ್ಲಿ ವಿಲೀನವಾದ ವಸ್ತುವನ್ನವಲಂಬಿಸಿ ಆಮ್ಲವಾಗಿ ಅಥವಾ ಪ್ರತ್ಯಾಮ್ಲವಾಗಿ ವರ್ತಿಸುವುದು. ಉದಾಹರಣೆಗೆ, ಅಮೋನಿಯ ದ್ರಾವಣದಲ್ಲಿದ್ದಾಗ ನೀರು ಆಮ್ಲವಾಗಿಯೂ, ಹೈಡ್ರೋಜನ್ ಕ್ಲೋರೈಡ್ ನೀರಿನಲ್ಲಿದ್ದಾಗ ನೀರು ಆಮ್ಲವಾಗಿಯೂ ವರ್ತಿಸುವುದು.

$$H_2O+NH_3 \leftrightarrows NH_4^+ + OH^- \;;\; H_2O+HCl \leftrightarrows H_3O^+ + Cl^-$$

ಹಾಗೆಯೇ ದ್ರಾವ್ಯವಸ್ತುವೂ ಸಾಲ್ಯುಟ್. ಅದು ವಿಲೀನವಾಗಿರುವ ದ್ರಾವಕವನ್ನು ಅವಲಂಬಿಸಿ ಆಮ್ಲವಾಗಿ ಅಥವಾ ಪ್ರತ್ಯಾಮ್ಲವಾಗಿ ವರ್ತಿಸಬಹುದು. ಯೂರಿಯ $CO(NH_2)_2$ ದ್ರವ ಅಮೋನಿಯದಲ್ಲಿ ಆಮ್ಲವಾಗಿಯೂ ನಿರ್ಜಲ ಫಾರ್ಮಿಕ್ ಆಮ್ಲದಲ್ಲಿ ಪ್ರತ್ಯಾಮ್ಲವಾಗಿಯೂ ವರ್ತಿಸುವುದು.



ಈ ವಾದ ಹೈಡ್ರಾಕ್ಸಿ ಸಂಯುಕ್ತಗಳಲ್ಲದ ಇತರ ಸಂಯುಕ್ತಗಳನ್ನು ಪ್ರತ್ಯಾಮ್ಲಗಳ ವರ್ಗದಲ್ಲಿ ಗಣಿಸಿದೆ ಮತ್ತು ತಟಸ್ಥೀಕರಣ ಆಮ್ಲ ಪ್ರತ್ಯಾಮ್ಲಗಳ ಒಂದು ವಿಶಿಷ್ಟ ಗುಣವೆಂದು ಭಾವಿಸಿಲ್ಲ. ಈ ಕಾರಣಗಳಿಂದ ಇದು ಅರೇನಿಯಸ್‌ನ ವಾದದ ಕೆಲವು ನ್ಯೂನತೆಗಳನ್ನು ಸರಿಪಡಿಸಿದೆ. ಹಾಗಿದ್ದರೂ ಈ ವಾದ ಸಹ ಅನ್ಯೂನವಲ್ಲ. ಪ್ರೋಟಾನ್ ವರ್ಗಾವಣೆಯ ಮೇಲೆ ವಿಶೇಷಲಕ್ಷ್ಯ ಹೊಂದಿರುವ ಈ ವಾದದಲ್ಲಿ ಪ್ರೋಟಾನು ಭಾಗವಹಿಸದ ಇತರ ಅನೇಕ ಆಮ್ಲ ಪ್ರತ್ಯಾಮ್ಲಗಳಿಗೆ ಸ್ಥಾನವಿಲ್ಲ. ಪ್ರೋಟಾನು ಭಾಗವಹಿಸದ ಆಮ್ಲ ಪ್ರತ್ಯಾಮ್ಲ ವಸ್ತುಗಳನ್ನೂ ಗಣನೆಗೆ ತೆಗೆದುಕೊಂಡಿರುವ ಇನ್ನೊಂದು ವಾದದಲ್ಲಿ ಈ ನ್ಯೂನತೆ ಇಲ್ಲ. ಈ ವಾದವನ್ನು ದ್ರಾವಕ ವ್ಯವಸ್ಥೆಗಳ ವಾದ (ಥಿಯೊರಿ ಆಫ್ ಸಾಲ್‌ವೆಂಟ್ ಸಿಸ್ಟಮ್) ಎನ್ನುವರು.

**ದ್ರಾವಕ ವ್ಯವಸ್ಥೆಗಳ ವಾದ :** ಇದರ ಪ್ರಕಾರ ದ್ರಾವಕ ದ್ರಾವಕೀಯ ಧನ ಅಯಾನ್ (ಸಾಲ್ವೊಪಾಸಿಟಿವ್ ಅಯಾನ್) ಮತ್ತು ದ್ರಾವಕೀಯ ಋಣ ಅಯಾನ್‌ಗಳಾಗಿ (ಸಾಲ್ವೊನೆಗೆಟಿವ್ ಅಯಾನ್) ವಿಶ್ಲೇಷಿಸುವುದು. ಇದರ ಅರ್ಥ ಮನದಟ್ಟು ಮಾಡಲು ಕೆಲವು ಉದಾಹರಣೆಗಳನ್ನು ಕೆಳಗೆ ಕೊಟ್ಟಿದೆ.

| ದ್ರಾವಕ | ದ್ರಾವಕೀಯ ಧನಅಯಾನ್ | ದ್ರಾವಕೀಯ ಋಣಅಯಾನ್ |
|---|---|---|
| $2H_2O$ | $H_3O$ + | $OH^-$ |
| $2NH_3$ | $NH_4$ + | $NH_2^-$ |
| $3SO_2$ | $SO_2.SO$++ | $SO_3^=$ |
| $2COCl_2$ | $COCl_2.COCl$+ | $Cl^-$ |

ದ್ರಾವಣದಲ್ಲಿರುವ ವಸ್ತು ದ್ರಾವಕೀಯ ಧನ ಅಯಾನಿನ ಪ್ರಬಲತೆ ಹೆಚ್ಚಿಸಿದರೆ ಆ ವಸ್ತು ಆಮ್ಲ. ಇದು ದ್ರಾವಕೀಯ ಋಣಅಯಾನಿನ ಪ್ರಬಲತೆಯನ್ನು ಹೆಚ್ಚಿಸಿದರೆ ಆ ವಸ್ತು ಪ್ರತ್ಯಾಮ್ಲ. ದ್ರವ ಅಮೋನಿಯದಲ್ಲಿ ವಿಲೀನವಾದ $NH_4Cl$ ದ್ರಾವಕೀಯ ಧನ ಅಯಾನ್ ಆದ ಅಯಾನಿನ ಪ್ರಬಲತೆಯನ್ನು ಹೆಚ್ಚಿಸುವುದು. ಆದ್ದರಿಂದ ಇದು ಆಮ್ಲ. $KNH_2$ ದ್ರಾವಕೀಯ ಋಣಅಯಾನಾದ $NH_2^-$ ಅಯಾನಿನ ಪ್ರಬಲತೆ ಹೆಚ್ಚಿಸುವುದು. ಆದ್ದರಿಂದ ಇದು ಪ್ರತ್ಯಾಮ್ಲ. ದ್ರಾವಕೀಯ ಧನಅಯಾನು ಮತ್ತು ದ್ರಾವಕೀಯ ಋಣಅಯಾನುಗಳು ವರ್ತಿಸಿ ದ್ರಾವಕದ ಅಣು ಉಂಟಾಗುವುದೇ ತಟಸ್ಥೀಕರಣ. ಉದಾ:

$$(NH_4^+ + Cl^-) + (K^+ + NH_2^-) \rightarrow 2NH_3 + (K^+ + Cl^-)$$

ಈ ವಾದ ಆಮ್ಲ ಪ್ರತ್ಯಾಮ್ಲಗಳು ಪ್ರೋಟಾನಿಕ್ ವ್ಯವಸ್ಥೆಗಳಿಗೆ ಮಾತ್ರ ಸೀಮಿತವಾಗಿರುವ ನ್ಯೂನತೆಯನ್ನು ಹೋಗಲಾಡಿಸಿರುವುದು. ಆದರೆ ಆಮ್ಲ ಪ್ರತ್ಯಾಮ್ಲಗಳ ವರ್ತನೆಗಳನ್ನು ದ್ರಾವಣದಲ್ಲಿ ನಡೆಯುವ ಅಯಾನಿಕ್ ವರ್ತನೆಗಳಿಗೆ ಮಾತ್ರ ಸೀಮಿತಮಾಡಿದೆ. ದ್ರಾವಣದಲ್ಲಿರುವ ಮತ್ತು ಅಯಾನ್ ವರ್ತನೆಗಳಲ್ಲದ ಅನೇಕ ಪರಿವರ್ತನೆಗಳು ಆಮ್ಲ ಪ್ರತ್ಯಾಮ್ಲಗಳ ವರ್ತನೆಗಳ ಸ್ವರೂಪವನ್ನು ಹೊಂದಿರುವುವು. ಇಂಥ ವರ್ತನೆಗಳನ್ನೂ ಆಮ್ಲ ಪ್ರತ್ಯಾಮ್ಲಗಳ ವರ್ತನೆಗಳ ವ್ಯಾಪ್ತಿಯಲ್ಲಿ ತಂದಿರುವ ಇನ್ನೊಂದು ವಾದ ಜಿ.ಎನ್. ಲೂಯಿಯಿಂದ ಪ್ರತಿಪಾದಿತವಾಗಿದೆ. ಇದಕ್ಕೆ ಲೂಯಿಯ ಎಲೆಕ್ಟ್ರಾನಿಕ್ ವಾದವೆಂದು ಹೆಸರು.

**ಲೂಯಿಯ ಎಲೆಕ್ಟ್ರಾನಿಕ್ ವಾದ :** 1923ರಲ್ಲಿ ಪ್ರತಿಪಾದಿಸಿದ ಈ ವಾದದಲ್ಲಿ ಎರಡು ಭಾಗಗಳಿವೆ. ಯಾವುದೊ ಒಂದು ವಿಶಿಷ್ಟ ಮೂಲ ವಸ್ತುವಿನ ಅಥವಾ ಅಯಾನಿನ ಅಸ್ತಿತ್ವದ ಭಾವನೆ ಆಮ್ಲ ಪ್ರತ್ಯಾಮ್ಲಗಳ ವಿವರಣೆಗೆ ಅಗತ್ಯವೆಂಬ ವಾದವನ್ನು ಇವನು ನಿರಾಕರಿಸಿದ. ಒಂದು ವಸ್ತುವನ್ನು ಆಮ್ಲ ಅಥವಾ ಪ್ರತ್ಯಾಮ್ಲವಾಗಿ ವರ್ಗೀಕರಿಸಲು ಅದು ಕೆಳಗಿನ ನಿರ್ಧಾರ ಲಕ್ಷಣಗಳನ್ನು ಹೊಂದಿರಬೇಕು. ಈ ನಿರ್ಧಾರಲಕ್ಷಣಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಪ್ರಾಯೋಗಿಕವಾಗಿ ನಿರ್ಧಾರಕಗಳು (ಫಿನಾಮೆನಲಾಜಿಕಲ್ ಕ್ರೈಟೀರಿಯ) : ಇವು

**i ಶೀಘ್ರ ತಟಸ್ಥೀಕರಣ (ರ್‍ಯಾಪಿಡ್ ನ್ಯೂಟ್ರಲೈಸೇಷನ್) :** ಪ್ರಚೋದಕ ಶಕ್ತಿ (ಆ್ಯಕ್ಟಿವೇಷನ್ ಎನರ್ಜಿ) ಅನವಶ್ಯವಾಗುವಷ್ಟು ಶೀಘ್ರವಾಗಿ ತಟಸ್ಥೀಕರಣ ಸಂಭವಿಸುವುದು. ಉದಾ:

$$H_3O^+ + OH^- \rightarrow 2H_2O$$
$$HCl + NH_3 \rightarrow NH_4Cl$$
$$Cu^{2+} + 4NH_3 \rightarrow [Cu(NH_3)_4]^{2+}$$
$$BCl_3 + (C_2H_5)_3N \rightarrow (C_2H_5)_3N{:}BCl_3$$

**ii ದುರ್ಬಲ ಆಮ್ಲ ಅಥವಾ ಪ್ರತ್ಯಾಮ್ಲದ ಪಲ್ಲಟನ :** $[Cu(NH_3)_4]^{2+}$ ನಿಂದ ಕ್ಯುಪ್ರಿಕ್ ಅಯಾನನ್ನು $Cu^{2+}$ ಹೈಡ್ರೋಜನ್ ಅಯಾನು $H^+$ ಪಲ್ಲಟಿಸುವುದು. ಏಕೆಂದರೆ ಹೈಡ್ರೋಜನ್ ಅಯಾನು ಕ್ಯುಪ್ರಿಕ್ ಅಯಾನಿಗಿಂತ ಹೆಚ್ಚು ಪ್ರಬಲವಾದ ಆಮ್ಲ. ಅಸಿಟೇಟ್ ಅಯಾನನ್ನು $(CH_3COO^-)$ ಹೈಡ್ರಾಕ್ಸಿಲ್ ಅಯಾನು $OH^-$ ಪಲ್ಲಟಿಸುವುದು. ಏಕೆಂದರೆ ಹೈಡ್ರಾಕ್ಸಿಲ್ ಅಯಾನು ಅಸಿಟೇಟ್ ಅಯಾನಿಗಿಂತಲೂ ಹೆಚ್ಚು ಪ್ರಬಲವಾದ ಪ್ರತ್ಯಾಮ್ಲ.

**iii ಸೂಚಕಗಳನ್ನುಪಯೋಗಿಸಿ ಅನುಮಾಪನ (ಟೈಟ್ರೇಷನ್ ಯೂಸಿಂಗ್ ಇಂಡಿಕೇಟರ್ಸ್):** ಮೀಥೈಲ್ ವಯೊಲೆಟ್‌ಅನ್ನು ಉಪಯೋಗಿಸಿ ಆಮ್ಲ HClಅನ್ನು ಪ್ರತ್ಯಾಮ್ಲ $NH_3$ ಒಡನೆ ನೀರಿನ ದ್ರಾವಣದಲ್ಲಿ ಅನುಮಾಪಿಸಬಹುದು. ಆಮ್ಲ $BCl_3$ನ್ನು ಪ್ರತ್ಯಾಮ್ಲ ಫ್ರಾಲಿಕ್ ಅನ್‌ಹೈಡ್ರೈಡಿನೊಡನೆ ಕ್ಲೋರೋ ಬೆಂಜೀನಿನ ದ್ರಾವಣದಲ್ಲಿ ಅನುಮಾಪಿಸಬಹುದು. ಆಮ್ಲ $AlCl_3C_5H_5N$ ನೊಡನೆ ಕ್ಲೋರೋಫಾರಂ ದ್ರಾವಣದಲ್ಲಿ ಅನುಮಾಪಿಸಬಹುದು. ಪ್ರತಿ ಸಂದರ್ಭದಲ್ಲಿಯೂ ಆಮ್ಲ ಹೆಚ್ಚಿನ ಪ್ರಮಾಣದಲ್ಲಿದ್ದಾಗ ಸೂಚಕ ಹಳದಿ ಬಣ್ಣವನ್ನೂ ಪ್ರತ್ಯಾಮ್ಲ ಹೆಚ್ಚಿದ್ದಾಗ ಸೂಚಕ ನೇರಳೆ ಬಣ್ಣವನ್ನೂ ಹೊಂದಿರುವುದು.

**iv ವೇಗವರ್ಧಕತ್ವ :** $H_2SO_4$, HF, $BF_3$, $AlCl_3$ ಮುಂತಾದ ಆಮ್ಲಗಳು ಮತ್ತು ಸಾವಯವ ಅಮೀನುಗಳು, ಅಮೈಡುಗಳು ಇತ್ಯಾದಿ ಪ್ರತ್ಯಾಮ್ಲಗಳು ಇವುಗಳ ಸುವಿದಿತ ವೇಗವರ್ಧಕಗುಣಗಳನ್ನು ಲೂಯಿವಾದ ಸಂಪೂರ್ಣ ಸುವ್ಯವಸ್ಥಿತಗೊಳಿಸಿದೆ.

**ರಾಚನಿಕ ನಿರ್ಧಾರಕಗಳು (ಸ್ಟ್ರಕ್ಚರಲ್ ಕ್ರೈಟೀರಿಯ) :** ರಾಚನಿಕವಾಗಿ ಒಂದು ಜೊತೆ ಎಲೆಕ್ಟ್ರಾನನ್ನು ಕೊಡುವ ಸಾಮರ್ಥ್ಯವುಳ್ಳ ಪರಮಾಣುವನ್ನು ಹೊಂದಿರುವ ಎಲ್ಲ ವಸ್ತುಗಳೂ ಪ್ರತ್ಯಾಮ್ಲಗಳು. ಒಂದು ಜೊತೆ ಎಲೆಕ್ಟ್ರಾನನ್ನು ಗ್ರಹಿಸುವ ಸಾಮರ್ಥ್ಯ ಹೊಂದಿರುವ ಎಲ್ಲ ವಸ್ತುಗಳೂ ಆಮ್ಲಗಳು. ಈ ಪ್ರತ್ಯಾಮ್ಲ ಆಮ್ಲಗಳು ನಿರ್ದೇಶಕ ಸಹಸಂಯೋಜಕ ಸಾಮರ್ಥ್ಯವಿರುವ ಕೋಆರ್ಡಿನೇಟ್ ಕೋವೆಲೆಂಟ್ ಬಂಧದ ಮೂಲಕ ಸಂಯೋಜಿಸಿ ಸಂಯುಕ್ತವಾಗುವುದೇ ತಟಸ್ಥೀಕರಣ. ಇದರಿಂದಾಗಿ ಫಲಿತವಸ್ತು ಅಯಾನ್‌ಗಳಾಗಿ ವಿಶ್ಲೇಷಿಸಬಹುದು. ಅಥವಾ ಬೇರೊಂದು ರೀತಿಯಲ್ಲಿ ಪುನರ್ಯೋಜಿತವಾಗಬಹುದು. ಇಲ್ಲವೆ, ಯಾವ ವ್ಯತ್ಯಾಸವನ್ನೂ ಹೊಂದದೆ ಇರಬಹುದು. ಈ ಕೆಳಗಿನ ಕೆಲವು ಉದಾಹರಣೆಗಳು ಇದನ್ನು ವಿಶದಪಡಿಸುವುವು.

| ಪ್ರತ್ಯಾಮ್ಲ | ಆಮ್ಲ | ತಟಸ್ಥೀಕರಣದಿಂದಾದ ವಸ್ತು |
|---|---|---|
| $H_2O$ | $SO_3$ | $H_2SO_4(2H^+ + SO_4^{--})$ |
| CaO | $SO_3$ | $CaSO_4\,(Ca^{++} + SO_4^{--})$ |
| $NH_3$ | $BCl_3$ | $H_3N{:}BCl_3$ |
| $2NH_3$ | $Ag^+$ | $[Ag(NH_3)_2]$+ |

ಲೂಯಿಯ ಎಲೆಕ್ಟ್ರಾನಿಕ್ ವಾದ ಯಾವುದೇ ಒಂದು ಮೂಲವಸ್ತುವನ್ನಾಗಲಿ ಅಥವಾ ಅಯಾನನ್ನಾಗಲಿ ಅಥವಾ ದ್ರಾವಕವನ್ನಾಗಲಿ ಅವಲಂಬಿಸಿಲ್ಲ. ಹಿಂದಿನ ವಾದಗಳೆಲ್ಲ ಲೂಯಿವಾದದ ಕೆಲವು ವಿಶಿಷ್ಟ ಸಂದರ್ಭಗಳು.

**ಉಸನೊವಿಷ್‌ನ ವಾದ :** 1939ರಲ್ಲಿ ಉಸನೊವಿಷ್ ಪ್ರತಿಪಾದಿಸಿದ ಈ ವಾದ ಲೂಯಿಯ ವಾದಕ್ಕಿಂತಲೂ ಹೆಚ್ಚಿನ ವ್ಯಾಪ್ತಿಯುಳ್ಳದ್ದು. ಈ ವಾದದ ಪ್ರಕಾರ ಆ್ಯನಯಾನ್‌ಗಳನ್ನು ಅಥವಾ ಎಲೆಕ್ಟ್ರಾನುಗಳನ್ನು ಕೊಡುವ ಅಥವಾ ಕ್ಯಾಟಯಾನ್‌ಗಳೊಡನೆ ಸಂಯೋಜಿಸುವ ಯಾವ ವಸ್ತುವೇ ಆಗಲಿ ಪ್ರತ್ಯಾಮ್ಲವಾಗಿರುವುದು. ಕ್ಯಾಟಯಾನ್‌ಗಳನ್ನು ಕೊಡುವ ಅಥವಾ ಆ್ಯನಯಾನ್ ಅಥವಾ ಎಲೆಕ್ಟ್ರಾನ್‌ಗಳೊಡನೆ ಸಂಯೋಜಿಸುವ ಯಾವ ವಸ್ತುವೇ ಆಗಲಿ ಆಮ್ಲವಾಗಿರುವುದು. ಈ ವಾದ ಇತರ ಎಲ್ಲ ವಾದಗಳ ವ್ಯಾಪ್ತಿಯಲ್ಲಿ ಬರುವ ಪರಿವರ್ತನೆಗಳನ್ನು ಒಳಗೊಂಡಿರುವುದಲ್ಲದೆ ಉತ್ಕರ್ಷಣ, ಅಪಕರ್ಷಣ (ಆಕ್ಸಿಡೇಷನ್, ರಿಡಕ್ಷನ್) ಪರಿವರ್ತನೆಗಳೂ ಇದರಲ್ಲಿ ಅಡಕವಾಗಿವೆ. ಇದನ್ನು ಸ್ಪಷ್ಟೀಕರಿಸುವ ಕೆಲವು ಉದಾಹರಣೆಗಳನ್ನು ಕೆಳಗೆ ಕೊಟ್ಟಿದೆ:

| ಆಮ್ಲ | ಪ್ರತ್ಯಾಮ್ಲ | ಲವಣ |
|---|---|---|
| $SO_3$ | $Na_2O$ | $Na_2SO_4$ |
| $Fe(CN)_2$ | KCN | $K_4Fe(CN)_6$ |
| $CI_2$ | Na | NaCI |

ಈ ವರ್ಗೀಕರಣದ ಸಮರ್ಥನೆ: i $Na_2O$ವು $O^{2-2-}$ ಅಯಾನನ್ನು ಕೊಡುವುದು. ಆದ್ದರಿಂದ ಇದು ಪ್ರತ್ಯಾಮ್ಲ. $SO_3$ಯು $O^{2-}$ ನೊಡನೆ ಸಂಯೋಜಿಸುವುದು. ಆದ್ದರಿಂದ ಇದು ಆಮ್ಲ.

ii KCN ಆ್ಯನಯಾನ್ ಆದ $CN^-$ಅನ್ನು ಕೊಡುವುದು. ಆದ್ದರಿಂದ ಇದು ಪ್ರತ್ಯಾಮ್ಲ. ಆ್ಯನಯಾನ್ ಆದ $CN^-$ನೊಡನೆ $Fe(CN)_2$ ಸಂಯೋಜಿಸುವುದು. ಆದ್ದರಿಂದ ಇದು ಆಮ್ಲ.

iii Na ಎಲೆಕ್ಟ್ರಾನನ್ನು ಕೊಡುವುದು. ಆದ್ದರಿಂದ ಇದು ಪ್ರತ್ಯಾಮ್ಲ. CI ಎಲೆಕ್ಟ್ರಾನಿನೊಡನೆ ಸಂಯೋಜಿಸುವುದು. ಆದ್ದರಿಂದ ಇದು ಆಮ್ಲ.

ಈವರೆಗೆ ವಿಮರ್ಶೆಯಿಂದ ಆಮ್ಲ ಮತ್ತು ಪ್ರತ್ಯಾಮ್ಲಗಳೆಂಬ ಪದಗಳು ನಿರಪೇಕ್ಷ ಪದಗಳಲ್ಲ, ಇವು ಸಾಪೇಕ್ಷ ಪದಗಳಾಗಿದ್ದು ಕೆಲವೊಂದು ವಿಶಿಷ್ಟ ಸನ್ನಿವೇಶಕ್ಕೆ ಸಂಬಂಧ ಹೊಂದಿರುವ ಪದಗಳು ಎನ್ನುವುದು ಸ್ಪಷ್ಟವಾಗಿರುವುದು. ಈಗ ನಾವು ವಿಮರ್ಶಿಸಿದ ಬೇರೆ ಬೇರೆ ವಾದಗಳು ಪರಸ್ಪರ ವಿರುದ್ಧ ವಾದಗಳಾಗಿಲ್ಲ. ಒಂದು ರೀತಿಯಲ್ಲಿ ಇವು ಪರಸ್ಪರ ಪೂರಕಗಳು. ಪ್ರತಿಯೊಂದು ವಾದವೂ ಆಯಾ ದೃಷ್ಟಿಯಿಂದ ಸರಿಯಾಗಿರುವುದು. ಉದಾಹರಣೆಗೆ, ನೀರಿನ ದ್ರಾವಣದಲ್ಲಿ ಹೈಡ್ರೊಕ್ಲೋರಿಕ್ ಆಮ್ಲ– ಸೋಡಿಯಂ ಹೈಡ್ರಾಕ್ಸೈಡ್‌ಗಳ ಅನುಮಾಪನವನ್ನು ಪರಿಶೀಲಿಸುವಾಗ ನಾವು ಅರೀನಿಯಸ್ ವಾದಕ್ಕಿಂತ ಮುಂದೆ ಹೋಗಬೇಕಾದುದಿಲ್ಲ. ದ್ರವ ಅಮೋನಿಯದಂಥ ಜಲೇತರ (ನಾನ್‌ಏಕ್ವಿಯಸ್) ದ್ರಾವಕಗಳಲ್ಲಿ ನಡೆಯುವ ಪರಿವರ್ತನೆಗಳ ಪರಿಶೀಲನೆಯಲ್ಲಿ ದ್ರಾವಕ ವ್ಯವಸ್ಥೆಗಳ ವಾದವನ್ನು ಅನುಸರಿಸಬೇಕಾಗುವುದು. ಯಾವುದೇ ಒಂದು ದೃಷ್ಟಿಕೋನ ಎಲ್ಲ ಸನ್ನಿವೇಶಗಳನ್ನು ವಿವರಿಸಲು ಸಮರ್ಥವಾಗಿದೆ ಎನ್ನಲಾಗುವುದಿಲ್ಲ. ಸರ್ವಸಮನ್ವಯತೆ ಹೆಚ್ಚು ವ್ಯಾಪಕವಿರುವ ಕಾರಣ ಅಪೇಕ್ಷಣೀಯವಾದರೂ ಇದು ಹೆಚ್ಚು ಜಟಿಲವಾಗಿರುವುದು. ವ್ಯಾಪ್ತಿ ಕಡಿಮೆಯಾಗಿದ್ದರೂ ಅನೇಕ ದೃಷ್ಟಿಕೋನಗಳು ಅವುಗಳ ಸರಳತೆಯ ಕಾರಣದಿಂದ ಕೆಲವು ವಿಶೇಷ ಸನ್ನಿವೇಶಗಳಲ್ಲಿ ಬಳಸಲಾಗದಿದ್ದರೂ ಹೆಚ್ಚು ಉಪಯುಕ್ತವಾದವು. ಒಂದೊಂದು ವಾದ ಒಂದೊಂದು ಅನ್ವಯ ಕ್ಷೇತ್ರವನ್ನು ಹೊಂದಿದ್ದು ಈ ಎಲ್ಲ ವಾದಗಳ ಮೂಲಭೂತ ಜ್ಞಾನ ಆಮ್ಲ–ಪ್ರತ್ಯಾಮ್ಲಗಳ ಪೂರ್ಣ ವಿವರಣೆಯನ್ನರಿಯಲು ಅಗತ್ಯ.

ಸಿದ್ಧಾಂತದ ಆಧಾರದ ಮೇಲೆ ಯಾವ ವಸ್ತುಗಳು ಆಮ್ಲಗಳು, ಯಾವ ವಸ್ತುಗಳು ಪ್ರತ್ಯಾಮ್ಲಗಳು ಎಂದು ನಿರ್ಣಯಿಸುವುದು ಕಷ್ಟವಾದರೂ ಕೆಲವು ವಸ್ತುಗಳು ಆಮ್ಲಗಳೆಂದೂ ಕೆಲವು ವಸ್ತುಗಳು ಪ್ರತ್ಯಾಮ್ಲಗಳೆಂದೂ ದೀರ್ಘ ಕಾಲದಿಂದಲೂ ಸುಪರಿಚಿತವಾಗಿವೆ. ಇಂಥ ಕೆಲವು ಸುವಿದಿತ ಪ್ರಮುಖ ಆಮ್ಲ ಮತ್ತು ಪ್ರತ್ಯಾಮ್ಲಗಳನ್ನೂ ಇವುಗಳ ಪ್ರಾಮುಖ್ಯವನ್ನೂ ಈ ಕೆಳಗೆ ಸಂಗ್ರಹವಾಗಿ ಕೊಟ್ಟಿದೆ.

**ಆಮ್ಲಗಳು** : ಆಮ್ಲಗಳನ್ನು ಖನಿಜ ಆಮ್ಲಗಳು ಮತ್ತು ಸಾವಯವ ಆಮ್ಲಗಳು ಎಂದು ಎರಡು ವರ್ಗಗಳಾಗಿ ವಿಂಗಡಿಸಬಹುದು. ಖನಿಜ ಆಮ್ಲಗಳ ಪೈಕಿ ಔಪಯೋಗಿಕ ದೃಷ್ಟಿಯಿಂದ ಸಲ್ಫ್ಯೂರಿಕ್ ಆಮ್ಲ ($H_2SO_4$) ಅಗ್ರಸ್ಥಾನ ಹೊಂದಿದೆ. ಫಲವತ್ಕಾರಿಗಳು (ಫರ್ಟಿಲೈಸರ್ಸ್), ರೇಯಾನ್, ನೂಲುಗಳು (ಟೆಕ್ಸ್‌ಟೈಲ್ಸ್), ವರ್ಣದ್ರವ್ಯಗಳು, ಸ್ಫೋಟಕಗಳು, ಸಂಶ್ಲೇಷಿತ ಶುದ್ಧಿಕಾರಕಗಳು (ಸಿಂಥೆಟಿಕ್ ಡಿಟರ್ಜೆಂಟ್), ಅಯಾನ್ ವಿನಿಮಯಿಗಳು (ನೋಡಿ– ಅಯಾನ್ ವಿನಿಮಯಿಗಳು), ವಿವಿಧ ನಿರವಯವ ಮತ್ತು ಸಾವಯವ ಸಂಯುಕ್ತಗಳು ಇತ್ಯಾದಿಗಳ ತಯಾರಿಕೆಗಳಲ್ಲಿಯೂ ಪೆಟ್ರೋಲಿಯಂ ಶುದ್ಧೀಕರಣ, ಲೋಹಗಳ ಶುದ್ಧೀಕರಣ, ಅದಿರುಗಳಿಂದ ಲೋಹಗಳನ್ನು ತೆಗೆಯುವುದು ಮುಂತಾದ ಕಾರ್ಯಗಳಲ್ಲಿಯೂ ಸೀಸ ಸಂಗ್ರಾಹಕಗಳಲ್ಲಿಯೂ (ಲೆಡ್ ಕ್ಯುಮ್ಯುಲೇಟರ್ಸ್) ಈ ಆಮ್ಲವನ್ನು ಅಗಾಧ ಪ್ರಮಾಣದಲ್ಲಿ ಬಳಸುವರು.

**ಹೈಡ್ರೊಕ್ಲೋರಿಕ್ ಆಮ್ಲ** (HCl) ಉಪಯುಕ್ತತೆಯಲ್ಲಿ ಎರಡನೆಯ ಸ್ಥಾನ ಹೊಂದಿದೆ. ಉಕ್ಕಿನ ಸಾಮಾನುಗಳ ಮೇಲೆ ತವರ ಅಥವಾ ಸತುವಿನ ಲೇಪ ಕೊಡುವ ಮುಂಚೆ ಅಥವಾ ಇವುಗಳನ್ನು ಎನ್ಯಾಮೆಲ್ ಮಾಡುವ ಮುಂಚೆ, ಈ ವಸ್ತುಗಳನ್ನು ಹೈಡ್ರೊಕ್ಲೋರಿಕ್ ಆಮ್ಲದಲ್ಲಿ ಅದ್ದಿ, ಇವುಗಳ ಮೇಲ್ಮೈಯನ್ನು ಶುದ್ಧಗೊಳಿಸುವರು. ಇದಕ್ಕಾಗಿ ಈ ಆಮ್ಲ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲಾಗುವುದು. ಇದನ್ನು ವಿವಿಧ ಲೋಹಗಳ ಕ್ಲೋರೈಡುಗಳ ತಯಾರಿಕೆಯಲ್ಲಿಯೂ ವರ್ಣದ್ರವ್ಯಗಳು, ಔಷಧಗಳು ಮತ್ತು ಇತರ ಅನೇಕ ವಸ್ತುಗಳ ತಯಾರಿಕೆಯಲ್ಲಿಯೂ ಉಪಯೋಗಿಸುವರು.

**ನೈಟ್ರಿಕ್ ಆಮ್ಲ** ($HNO_3$) ಕೈಗಾರಿಕೆಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಈ ಆಮ್ಲವನ್ನು ವಿಶೇಷವಾಗಿ ವರ್ಣದ್ರವ್ಯಗಳ ಮತ್ತು ಸ್ಫೋಟಕಗಳ ತಯಾರಿಕೆಗಳಲ್ಲಿ ಉಪಯೋಗಿಸುವರು. ನೈಟ್ರೇಟುಗಳು ಉತ್ತಮವಾದ ಸಸಾರಜನಕ ಫಲವತ್ಕಾರಿಗಳು (ನೈಟ್ರಾಜಿನಸ್ ಫರ್ಟಿಲೈಸರ್ಸ್).

**ಫಾಸ್ಫಾರಿಕ್ ಆಮ್ಲ** ($H_2PO_4$) ಇನ್ನೊಂದು ಖನಿಜ ಆಮ್ಲ. ಫಾಸ್ಫರಸ್ ಅಂಶದಲ್ಲಿ ಸಮೃದ್ಧವಾಗಿರುವ ಟ್ರಿಪಲ್ ಫಾಸ್ಫೇಟ್ ಎಂಬ ಫಾಸ್ಫಾಟಿಕ್ ಫಲವತ್ಕಾರಿಯ ತಯಾರಿಕೆಯಲ್ಲಿ ಇದನ್ನು ವಿಶೇಷವಾಗಿ ಬಳಸಬಹುದು.

**ಕಾರ್ಬಾನಿಕ್ ಆಮ್ಲ** ($H_2CO_3$) ದ್ರಾವಣದಲ್ಲಿ ಮಾತ್ರ ಅಸ್ತಿತ್ವವನ್ನು ಹೊಂದಿರುವ ಆಮ್ಲ. ಎಲ್ಲ ಅನಿಲ ಸಂಸ್ಕಾರಿತ (ಏರೇಟೆಡ್) ಪಾನೀಯಗಳಲ್ಲಿಯೂ ಈ ಆಮ್ಲ ವಿಲೀನವಾಗಿರುವುದಲ್ಲದೆ ಇದನ್ನು ಪ್ರಮುಖ ಪ್ರತ್ಯಾಮ್ಲಗಳಲ್ಲಿ ಒಂದಾದ ವಾಷಿಂಗ್ ಸೋಡ ಅಥವಾ ಸೋಡಿಯಂ ಕಾರ್ಬೊನೇಟ್‌ನ $Na_2CO_3$ ತಯಾರಿಕೆಯಲ್ಲಿ ವಿಶೇಷವಾಗಿ ಬಳಸುವರು.

**ಬೋರಿಕ್ ಆಮ್ಲ** ($H_3BO_3$): ರೋಗಾಣುನಿರೋಧಕ ಗುಣವನ್ನು ಹೊಂದಿರುವ ಈ ಆಮ್ಲವನ್ನು ಔಷಧಾಲಯಗಳಲ್ಲಿ ಗಾಯಗಳ ಚಿಕಿತ್ಸೆಯಲ್ಲಿ ಉಪಯೋಗಿಸುವರು.

**ಸಾವಯವ ಆಮ್ಲಗಳು** : ಎಲ್ಲ ಸಾವಯವ ಆಮ್ಲಗಳ ಅಣುಗಳಲ್ಲಿಯೂ ಮತ್ತು ಅಸಿಟಿಕ್ ಆಮ್ಲಗಳ ಅಣುಗಳಲ್ಲಿಯೂ ಕಾರ್ಬಾಕ್ಸಿಲಿಕ್ ಗುಂಪು COOH ಇರುವುದು. ಫಾರ್ಮಿಕ್ ಆಮ್ಲ H.COOH ಮತ್ತು ಅಸಿಟಿಕ್ ಆಮ್ಲ $CH_3COOH$ ಗಳು ಅತ್ಯಂತ ಸರಳವಾದ ಎರಡು ಸಾವಯವ ಆಮ್ಲಗಳು. ಅಸಿಟಿಕ್ ಆಮ್ಲವನ್ನು ಪಾಶ್ಚಾತ್ಯ ದೇಶಗಳಲ್ಲಿ ವಿನಿಗರ್ ಎಂಬ ಹೆಸರಿನಿಂದ ಹುಳಿ ರುಚಿ ಕೊಡಲು ಆಹಾರ ಪದಾರ್ಥಗಳಲ್ಲಿ ವಿಶೇಷವಾಗಿ ಬಳಸುವರು. ಅನೇಕ ಸಾವಯವ ಸಂಯುಕ್ತಗಳ ತಯಾರಿಕೆಯಲ್ಲಿಯೂ ಸಫೇಡು (ವೈಟ್‌ಲೆಡ್) ಎಂಬ ಪ್ರಮುಖ ಬಿಳಿಯ ಬಣ್ಣದ ತಯಾರಿಕೆಯಲ್ಲಿಯೂ ಅಸಿಟಿಕ್ ಆಮ್ಲವನ್ನು ಬಳಸುವರು. ಹೆಚ್ಚಿನ ಇಂಗಾಲ ಪರಮಾಣುಗಳು ಅಣುವಿನಲ್ಲಿರುವ ಇದೇ ಗುಂಪಿನ ಆಮ್ಲಗಳಾದ ಸ್ಟೀರಿಕ್ ಆಮ್ಲ $C_{17}H_{35}$.COOH ಮತ್ತು ಪಾಮಿಟಿಕ್ ಆಮ್ಲ $C_{15}H_{31}$COOH. ಗಳನ್ನು ಹೆಚ್ಚಿನ ಉಷ್ಣದಲ್ಲಿರುವ ಹಬೆಯ (ಸೂಪರ್‌ಹೀಟೆಡ್ ಸ್ಟೀಂ) ಸಹಾಯದಿಂದ ಕೊಬ್ಬಿನ ಜಲವಿಶ್ಲೇಷಣ (ಹೈಡ್ರೊಲಿಸಿಸ್) ಮಾಡಿ ತಯಾರಿಸುವರು. ಈ ಆಮ್ಲಗಳನ್ನು ಮೇಣದ ಬತ್ತಿಯ ತಯಾರಿಕೆಯಲ್ಲಿ ಉಪಯೋಗಿಸುವರು.

**ಬ್ಯುಟರಿಕ್ ಆಮ್ಲ $C_3H_7$.COOH** : ಇದು ಬೆಣ್ಣೆಯಲ್ಲಿ ಗ್ಲಿಸರೀನ್ ಸಂಯುಕ್ತ ರೂಪದಲ್ಲಿರುವುದು. ಬಹಳ ಕಾಲವಿಟ್ಟ ಬೆಣ್ಣೆ ನಿಧಾನವಾಗಿ ವಿಶ್ಲೇಷಿಸಿ ಬ್ಯುಟರಿಕ್ ಆಮ್ಲವನ್ನು ಕೊಡುವುದು. ಈ ಬ್ಯುಟರಿಕ್ ಆಮ್ಲವೇ ಬಹಳ ದಿನವಿಟ್ಟ ಬೆಣ್ಣೆಯ ಕೊಳಕು ವಾಸನೆಗೆ ಕಾರಣ. ಬೆಣ್ಣೆಯನ್ನು ಅಡಿಗೆ ಸೋಡದ ($NAHCO_3$) ದ್ರಾವಣದಿಂದ ತೊಳೆದರೆ ಈ ಆಮ್ಲ ಅದರೊಡನೆ ವರ್ತಿಸಿ ಬೆಣ್ಣೆಯ ಕೆಟ್ಟ ವಾಸನೆ ಹೋಗುವುದು.

ಡೈಕಾರ್ಬಾಕ್ಸಿಲಿಕ್ ಆಮ್ಲ ಮತ್ತು ಟ್ರೈಕಾರ್ಬಾಕ್ಸಿಲಿಕ್ ಆಮ್ಲಗಳಲ್ಲಿ ಎರಡು ಮತ್ತು ಮೂರು ಕಾರ್ಬಾಕ್ಸಿಲಿಕ್ ಗುಂಪುಗಳಿರುವುವು. ಟಾರ್ಟಾರಿಕ್ ಆಮ್ಲ $HOOC(CHOH)_2COOH$ ಹುಣಿಸೆಹಣ್ಣಿನಲ್ಲಿಯೂ ಸಿಟ್ರಿಕ್ ಆಮ್ಲ HOOC. $CH_2$ C(OH), COOH, $CH_2$ COOH ನಿಂಬೆ ಹಣ್ಣಿನ ಜಾತಿಯ ಹಣ್ಣುಗಳಲ್ಲಿಯೂ ಇರುವುದು. ಈ ಆಮ್ಲಗಳನ್ನು ಪಾನೀಯ ವಿಶೇಷಗಳಿಗೆ ಹುಳಿರುಚಿಕೊಡಲು ಉಪಯೋಗಿಸುವರು. ಹಣ್ಣುಗಳ ಹುಳಿಗೆ ಒಂದಲ್ಲೊಂದು ಸಾವಯವ ಆಮ್ಲ ಕಾರಣ.

ಸ್ಯಾಲಿಸಿಲಿಕ್ ಆಮ್ಲ :  ಇದೊಂದು ಆರೋಮ್ಯಾಟಿಕ್ ಹೈಡ್ರಾಕ್ಸಿ ಆಮ್ಲ. ಇದರ ಅನೇಕ ಸಂಯುಕ್ತಗಳನ್ನು ಔಷಧಗಳಲ್ಲಿ ಉಪಯೋಗಿಸುವರು. ಇಂಥ ಸಂಯುಕ್ತಗಳಲ್ಲಿ ಒಂದಾದ ಅಸಿಟೈಲ್ ಸ್ಯಾಲಿಸಿಕ್ ಆಮ್ಲ ಸುವಿದಿತ ವೇದನಾಹಾರಿಯಾದ ಆ್ಯಸ್ಪಿರಿನ್.

ಫ್ಯಾಲಿಕ್ ಆಮ್ಲ ಅಥವಾ 1–2 ಕಾರ್ಬಾಕ್ಸಿಲಿಕ್ ಬೆನ್‌ಜೋಯಿಕ್ ಆಮ್ಲ.

 ಇಂಡಿಗೋ ಎಂಬ ನೀಲಿ ಬಣ್ಣದ ತಯಾರಿಕೆಯಲ್ಲಿ ಇದು ಪ್ರಮುಖಪಾತ್ರ ವಹಿಸುವುದು.

ಟ್ಯಾನಿಕ್ ಆಮ್ಲ ಟ್ಯಾನ್ ಮರದ ತೊಗಟೆಗಳಲ್ಲಿದ್ದು ಚರ್ಮ ಹದಮಾಡುವ ಕಾರ್ಯಕ್ಕೆ ವಿಶೇಷವಾಗಿ ಬಳಸಲ್ಪಡುವುದು.

ಫೀನಾಲ್ $C_6H_5OH$; ಇದನ್ನು ಕಾರ್ಬಾಲಿಕ್ ಆಮ್ಲವೆಂದೂ ಕರೆಯುವರು. ಇದು ಸೋಡಿಯಂ ಹೈಡ್ರಾಕ್ಸೈಡಿನೊಡನೆ ವರ್ತಿಸಿ ಸೋಡಿಯಮ್ ಫೀನೇಟನ್ನು $C_6H_5ONa$ ಕೊಡುವುದು. ಈ ಕ್ರಿಮಿನಾಶಕವಾಗಿ ಉಪಯೋಗಿಸುವ ಪಿನೈಲ್‌ನ ಕ್ರಿಯಾತ್ಮಕಾಂಶದ ಬಹು ಭಾಗ ಇದೇ ಆಗಿರುವುದು. ಬೇಕಲೈಟ್ ಎಂಬ ಪ್ಲಾಸ್ಟಿಕು ಫೀನಾಲ್–ಫಾರ್ಮಾಲ್ಡಿಹೈಡುಗಳ ಸಾಂದ್ರೀಕರಣ ಫಲಿತವಸ್ತು.

**ಅಮೈನೊ ಆಮ್ಲಗಳು** : ಸಾವಯವ ಆಮ್ಲಗಳ ಪೈಕಿ ಇನ್ನೊಂದು ಪ್ರಮುಖ ಗುಂಪು. ಇವುಗಳ ಅಣುಗಳಲ್ಲಿ ಆಮ್ಲೀಯ ಗುಂಪಾದ–COOH ಮತ್ತು ಪ್ರತ್ಯಾಮ್ಲೀಯ ಗುಂಪಾದ $-NH_2$ ಎರಡೂ ಇದ್ದು, ಇವು ಆಮ್ಲ–ಪ್ರತ್ಯಾಮ್ಲಗಳೆರಡರ ಸ್ವಭಾವವನ್ನೂ ಹೊಂದಿರುವುವು.

ಈ ಗುಂಪಿನ ಆಮ್ಲಗಳ ಪೈಕಿ ಗ್ಲೈಸಿನ್ $H_2N.CH_2.COOH$ ಅತ್ಯಂತ ಸರಳವಾದುದು. 21 ಅಮೈನೊ ಆಮ್ಲಗಳು ಪ್ರಾಣಿಜ–ಪ್ರೋಟೀನುಗಳ ರಚನೆಯಲ್ಲಿ ಪಾತ್ರ ವಹಿಸಿರುವುವು. ಜೀವಿಯ ಸಮಸ್ತ ಜೈವಿಕ ಚಟುವಟಿಕೆಗಳೂ ಪ್ರೋಟೀನುಗಳ ಸಹಾಯದಿಂದಲೇ ನಡೆಯುತ್ತಿರುವುವು. ಅಮೈನೊ ಆಮ್ಲದ ಒಂದು ಅಣುವಿನ $-NH_2$ ಗುಂಪು ಇನ್ನೊಂದು ಅಣುವಿನ $-COOH$ ನೊಡನೆ ಜೊತೆಗೂಡಿ ಇವೆರಡು ಅಣುಗಳು ಒಂದಾಗುವುವು.

$$NH_2.CH_2.COOH+H_2N.CH_2.COOH \rightarrow NH_2.CH_2.CO.NH.CH_2.COOH+H_2O$$

ಹೀಗೆ ಜೊತೆಗೂಡಿ ಆದ ಎರಡು ಅಣುಗಳು ಪುನಃ ಇದೇ ಮಾದರಿಯಲ್ಲಿ ಜೊತೆಗೂಡುವುವು. ಈ ವಿಧವಾದ ಸಂಯೋಜನೆಯ ಆವರ್ತನದಿಂದ ಅತಿ ದೀರ್ಘ ಶ್ರೇಣಿಯ ಪ್ರೋಟೀನ್ ಅಣುಗಳಾಗುವುವು. ಪ್ರೊಟೀನ್ ಅಣುಗಳ ರಚನೆಯಲ್ಲಿರುವ ಅಮೈನೋ ಆಮ್ಲಗಳು ಅವು ಜೋಡಿಸಿರುವ ರೀತಿ, ಇವುಗಳ ವ್ಯತ್ಯಾಸಗಳು ಪ್ರೊಟೀನುಗಳ ವೈವಿಧ್ಯಕ್ಕೆ ಕಾರಣ. ಶರೀರದ ಸಮಸ್ತ ಚಟುವಟಿಕೆಗಳನ್ನೂ ನಿರ್ದೇಶಿಸುವ ಮತ್ತು ನಿಯಂತ್ರಿಸುವ ಈ ಪ್ರೊಟೀನುಗಳ ಇತ್ತೀಚಿನ ಸಂಶೋಧನೆಗಳು ಮಹತ್ತ್ವಪೂರ್ಣವಾದ ಮತ್ತು ಸ್ವಾರಸ್ಯವಾದ ಅಂಶಗಳನ್ನು ಬಯಲಿಗೆ ತಂದಿವೆ.

**ಪ್ರತ್ಯಾಮ್ಲಗಳು:** ಪ್ರತ್ಯಾಮ್ಲಗಳನ್ನು ಸಹ ನಿರವಯವ ಮತ್ತು ಸಾವಯವ ಎಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಅವುಗಳಲ್ಲಿ ಪ್ರಮುಖವಾದ ಎಲ್ಲವನ್ನೂ ಈ ಕೆಳಗೆ ಸಂಗ್ರಹವಾಗಿ ವಿವರಿಸಿದೆ.

**ನಿರವಯವ ಪ್ರತ್ಯಾಮ್ಲಗಳು:** ಕ್ಷಾರಲೋಹಗಳ ಹೈಡ್ರಾಕ್ಸೈಡುಗಳು (ಆಲ್ಕಲಿಮೆಟಲ್ ಹೈಡ್ರಾಕ್ಸೈಡ್ಸ್) ಇವುಗಳ ಪೈಕಿ ಸೋಡಿಯಂ ಹೈಡ್ರಾಕ್ಸೈಡ್ $NaOH$ ಮತ್ತು ಪೊಟ್ಯಾಸಿಯಂ ಹೈಡ್ರಾಕ್ಸೈಡ್ $KOH$ ಮುಖ್ಯವಾದವು. ಇವುಗಳ ಪೈಕಿ ಸೋಡಿಯಂ ಹೈಡ್ರಾಕ್ಸೈಡು ಹೆಚ್ಚು ಬಳಸಲ್ಪಡುವ ಪ್ರತ್ಯಾಮ್ಲ. ಇದನ್ನು ಅನೇಕ ರಾಸಾಯನಿಕ ವಸ್ತುಗಳು, ರೇಯಾನು, ವಿಸ್ಕೋಸ್ ರೇಷ್ಮೆ, ಸೆಲ್ಯುಲೋಸ್ ಫಿಲ್ಮುಗಳು, ಸೋಪುಗಳು, ಕಾಗದ ಮುಂತಾದುವುಗಳ ತಯಾರಿಕೆಗಳಲ್ಲಿಯೂ ಪೆಟ್ರೋಲಿಯಂ ಶುದ್ಧೀಕರಣದಲ್ಲಿಯೂ ಬಾಕ್ಸೈಟ್ ಅದುರನ್ನು ಶುದ್ಧ ಮಾಡಲೂ ಇತರ ಕೈಗಾರಿಕೆಗಳಲ್ಲಿಯೂ ಉಪಯೋಗಿಸುವರು.

**ಕ್ಷಾರಲೋಹಗಳ ಕಾರ್ಬೋನೇಟುಗಳು:** ಸೋಡಿಯಂ ಕಾರ್ಬೋನೇಟ್ ಅಥವಾ ವಾಷಿಂಗ್ ಸೋಡ $Na_2CO_3$ ಮತ್ತು ಪೊಟ್ಯಾಸಿಯಂ ಕಾರ್ಬೋನೇಟ್ $K_2CO_3$ಗಳು ವಿಶೇಷವಾಗಿ ಬಳಸಲ್ಪಡುವ ಆಲ್ಕಲಿ ಕಾರ್ಬೋನೇಟುಗಳು, ಸೋಡಿಯಂ ಕಾರ್ಬೋನೇಟನ್ನು ಗಾಜು, ಸೋಪಿನ ಪುಡಿ ಮತ್ತು ಇತರ ಶುದ್ಧಿಕಾರಕ ವಸ್ತುಗಳ (ಕ್ಲೆನ್ಸಿಂಗ್ ಏಜೆಂಟ್ಸ್) ತಯಾರಿಕೆಯಲ್ಲಿಯೂ, ನೀರನ್ನು ಮೆದು ಮಾಡಲು ಮತ್ತು ಇತರ ಅನೇಕ ರಾಸಾಯನಿಕ ಕೈಗಾರಿಕೆಗಳಲ್ಲಿಯೂ ಉಪಯೋಗಿಸುವರು. ಪೊಟ್ಯಾಸಿಯಂ ಕಾರ್ಬೋನೇಟನ್ನು ಗಟ್ಟಿಗಾಜಿನ ತಯಾರಿಕೆಯಲ್ಲಿಯೂ ಅನೇಕ ಉಪಯುಕ್ತ ಪೊಟ್ಯಾಸಿಯಂ ಸಂಯುಕ್ತಗಳ ತಯಾರಿಕೆಯಲ್ಲಿಯೂ ಉಪಯೋಗಿಸುವರು.

ಕ್ಯಾಲ್ಸಿಯಂ ಆಕ್ಸೈಡ್ $CaO$, ಕ್ಯಾಲ್ಸಿಯಂ ಹೈಡ್ರಾಕ್ಸೈಡ್ $Ca(OH)_2$ ಮತ್ತು ಕ್ಯಾಲ್ಸಿಯಂ ಕಾರ್ಬೋನೇಟ್ $CaCO_3$ ಅತ್ಯಂತ ವಿಸ್ತೃತವಾಗಿ ಮತ್ತು ಅಗಾಧ ಪ್ರಮಾಣಗಳಲ್ಲಿ ಉಪಯೋಗಿಸಲ್ಪಡುವ ಪ್ರತ್ಯಾಮ್ಲಗಳಲ್ಲಿ ಇವು ಅಗ್ರಸ್ಥಾನವನ್ನು ಹೊಂದಿವೆ.

ಕ್ಯಾಲ್ಸಿಯಂ ಹೈಡ್ರಾಕ್ಸೈಡನ್ನು ಕಟ್ಟಡ ನಿರ್ಮಾಣಗಳಲ್ಲಿ ಅವಶ್ಯವಾದ ಗಾರೆಯನ್ನು ತಯಾರಿಸಲೂ ನೂಲುಗಳನ್ನು ಚೆಲುವೆಮಾಡಲು ಉಪಯೋಗಿಸುವ ಚೆಲುವೆಪುಡಿಯ (ಬ್ಲೀಚಿಂಗ್ ಪೌಡರ್) ತಯಾರಿಕೆಯಲ್ಲಿಯೂ ಇನ್ನೊಂದು ಪ್ರಮುಖ ಪ್ರತ್ಯಾಮ್ಲವಾದ ಕಾಸ್ಟಿಕ್ ಸೋಡದ ತಯಾರಿಕೆಯಲ್ಲಿಯೂ ಚರ್ಮ ಹದಮಾಡುವ ಕಾರ್ಖಾನೆಗಳಲ್ಲಿಯೂ ಉಪಯೋಗಿಸುವರು. ಕ್ಯಾಲ್ಸಿಯಂ ಆಕ್ಸೈಡ್‌ನ್ನು ಇದರ ಹೈಡ್ರಾಕ್ಸೈಡಿನ ತಯಾರಿಕೆಯಲ್ಲಿ ಉಪಯೋಗಿಸುವರಲ್ಲದೆ ಭೂಮಿಯ ಆಮ್ಲೀಯತೆಯನ್ನು ಸರಿಪಡಿಸಲು ಹಾಗೂ ಕ್ಯಾಲ್ಸಿಯಂ ಕಾರ್ಬೈಡ್ ಮುಂತಾದ ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಕ್ಯಾಲ್ಸಿಯಂ ಕಾರ್ಬೋನೇಟು ವಿವಿಧ ರೂಪಗಳಲ್ಲಿ ದೊರೆಯುವುದು. ಕಟ್ಟಡಗಳಲ್ಲಿ ಸೌಂದರ್ಯಕ್ಕಾಗಿ ಉಪಯೋಗಿಸುವ ಅಮೃತಶಿಲೆ ಕ್ಯಾಲ್ಸಿಯಂ ಕಾರ್ಬೋನೇಟಿನ ಒಂದು ರೂಪ. ಸುಣ್ಣಕಲ್ಲಿನ ರೂಪದಲ್ಲಿ ಪ್ರಕೃತಿಯಲ್ಲಿ ಅಗಾಧ ಪ್ರಮಾಣದಲ್ಲಿ ದೊರೆಯುವ ಕ್ಯಾಲ್ಸಿಯಂ ಕಾರ್ಬೋನೇಟ್‌ನ್ನು ಕ್ಯಾಲ್ಸಿಯಂ ಆಕ್ಸೈಡಿನ ತಯಾರಿಕೆಯಲ್ಲಿ ಲೋಹ ತಯಾರಿಕೆಯಲ್ಲಿ ಸ್ರಾವಕ (ಫ್ಲಕ್ಸ್) ಆಗಿಯೂ ಇತರ ರಾಸಾಯನಿಕ ಕೈಗಾರಿಕೆಗಳಲ್ಲಿಯೂ ಉಪಯೋಗಿಸುವರು. ಕ್ಯಾಲ್ಸಿಯಂ ಕಾರ್ಬೋನೇಟ್–ಮೆಗ್ನೀಸಿಯಂ ಕಾರ್ಬೋನೇಟುಗಳ ಯುಗ್ಮ ಲವಣವಾದ ಡಾಲಮೈಟ್ $CaCO_3,MgCO_3$ ಅನ್ನು ಉಕ್ಕು ಮತ್ತು ಅನೇಕ ಲೋಹಗಳ ತಯಾರಿಕೆಯಲ್ಲಿ ಉಪಯೋಗಿಸುವ ಕುಲುಮೆಗಳಿಗೆ ಅಸ್ತರಿ ಕೊಡಲು (ಲೈನಿಂಗ್) ಉಪಯೋಗಿಸುವರು.

ಸೋಡಿಯಂ ಫಾಸ್ಫೇಟ್ $Na_3PO_4$ ಮತ್ತು ಬೋರ್ಯಾಕ್ಸ್ $Na_2B_4O_7$ ಗಳನ್ನು ಅನೇಕ ಶುದ್ಧಿಕಾರಕ ಪುಡಿಗಳಲ್ಲಿ ಉಪಯೋಗಿಸುವರು. ಇವು ದ್ರಾವಣದಲ್ಲಿ ಕ್ಷಾರಗಳಂತೆ ವರ್ತಿಸಿ ಜಿಡ್ಡು ಮೊದಲಾದ ಕಶ್ಮಲಗಳನ್ನು ತೊಡೆದುಹಾಕಲು ಸಮರ್ಥವಾಗುವುವು. ನೀರನ್ನು ಮೆದುಮಾಡಲು ಸೋಡಿಯಂ ಫಾಸ್ಫೇಟನ್ನು ಉಪಯೋಗಿಸುವರು.

**ಸಾವಯವ ಪ್ರತ್ಯಾಮ್ಲಗಳು :** ಇವುಗಳ ಪೈಕಿ ಆ್ಯಲಿಫ್ಯಾಟಿಕ್ ಮತ್ತು ಆ್ಯರೋಮ್ಯಾಟಿಕ್ ಅಮೀನ್‌ಗಳು ಮುಖ್ಯವಾದುವು. ಮೀಥೈಲ್–, ಈಥೈಲ್–, ಬ್ಯೂಟೈಲ್– ಮತ್ತು ಅಮೈಲ್– ಅಮೀನ್‌ಗಳನ್ನು $R-NH_2(R=CH_3)$ ಅಥವಾ $-C_2H_5$ – ಅಥವಾ $C_3H_7$- ಅಥವಾ $C_4H_{10}$) ವರ್ಣದ್ರವ್ಯಗಳು, ಕ್ರಿಮಿನಾಶಕಗಳು, ಸಂಶ್ಲೇಷಿತ ಶುದ್ಧಿಕಾರಕಗಳು, ಕೃತಕ ನೂಲುಗಳು, ತುಕ್ಕು ಹಿಡಿಯುವುದನ್ನು ತಡೆಗಟ್ಟುವ ವಸ್ತುಗಳು ಮತ್ತು ವಿಶೇಷ ತರಹದ ದ್ರಾವಕಗಳು–ಇವುಗಳ ತಯಾರಿಕೆಗಳಲ್ಲಿ ಕಚ್ಚಾ ವಸ್ತುಗಳಾಗಿ ಉಪಯೋಗಿಸುವರು. ಟೆಟ್ರಮಿಥಿಲೀನ್ ಡೈಅಮೀನ್ $H_2N(CH_2)_4NH_2$ ಮತ್ತು ಅಡಿಪಿಕ್ ಆಮ್ಲ $HOOC(CH_2)_6COOH$ ಗಳ ಸಾಂದ್ರೀಕರಣದಿಂದ ಸುಪ್ರಸಿದ್ಧವಾದ ನೈಲಾನ್ ನೂಲನ್ನು ತಯಾರಿಸುವರು.

ಅನಿಲೀನ್ $C_6H_5NH_2$ ಮತ್ತು ಮೆಟಫಿನಿಲೀನ್ ಡೈಅಮೀನ್



ಮುಂತಾದ ವಿವಿಧ ಆರೋಮ್ಯಾಟಿಕ್ ಅಮೀನ್‌ಗಳನ್ನು ಅನಿಲೀನ್ ವರ್ಣ ದ್ರವ್ಯಗಳ ಮತ್ತು ಅಜೊ ಗುಂಪಿನ ವರ್ಣದ್ರವ್ಯಗಳ ತಯಾರಿಕೆಯಲ್ಲಿ ಉಪಯೋಗಿಸುವರು.

ಪಿರಿಡೀನ್ $C_5H_5N$ ಮತ್ತು ಈ ಗುಂಪಿಗೆ ಸೇರಿದ ಇತರ ಅನೇಕ ಸಂಯುಕ್ತಗಳು ಹೆಟರೋ ಸೈಕ್ಲಿಕ್ ಸಂಯುಕ್ತಗಳ ಗುಂಪಿಗೆ ಸೇರಿದ ಪ್ರತ್ಯಾಮ್ಲಗಳು. ಸುಪ್ರಸಿದ್ಧವಾದ ಕ್ವಿನೈನ್ ಮತ್ತು ಹೊಗೆಸೊಪ್ಪಿನಲ್ಲಿರುವ ನಿಕೋಟಿನ್‌ಗಳೂ ಈ ಗುಂಪಿನ ಪ್ರತ್ಯಾಮ್ಲಗಳು. ಇವುಗಳನ್ನು ಅನೇಕ ಔಷಧಗಳ ತಯಾರಿಕೆಯಲ್ಲಿಯೂ ಬೂಷ್ಟು ನಿರೋಧಕ ವಸ್ತುಗಳ (ಫಂಗಿಸೈಡ್ಸ್) ತಯಾರಿಕೆಯಲ್ಲಿಯೂ ವಿಶೇಷವಾಗಿ ಬಳಸುವರು. (ಎಸ್.ಬಿ.)

**ಆಮ್ಲಜನಕ ಕೊರೆ :** ಎಂದರೆ, ಯಾವ ಕಾರಣದಿಂದಲೇ ಆಗಲಿ ಮೈಯಲ್ಲಿನ ಊತಕಗಳಿಗೆ (ಟಿಷ್ಯೂಸ್) ಸಾಕಷ್ಟು ಆಮ್ಲಜನಕ (ಆಕ್ಸಿಜನ್) ದೊರೆಯದಾಗುವ ಸ್ಥಿತಿ. ಇದು ತೀರ ಸಾಮಾನ್ಯವಾದರೂ ರೋಗಗಳಲ್ಲಿ ತೊಡಕಿನ ಲಕ್ಷಣವಾಗಿರುವುದೇ ಹೆಚ್ಚು. ಇದರಲ್ಲಿ ನಾಲ್ಕು ಬಗೆಗಳಿವೆ: 1 ಧಮನಿಗಳ ಮೂಲಕ ಊತಕಗಳಿಗೆ ಹರಿವ ರಕ್ತದಲ್ಲಿ




ಎತ್ತರದ ಮೆಟ್ಟಿಲುಗಳಲ್ಲಿ ಬರೀ ಗಾಳಿಯ ಉಸಿರಾಟಕ್ಕಿಂತ ಆಮ್ಲಜನಕದ ಉಸಿರಾಟ ಅನುಕೂಲಕರವೆಂದು ತೋರುವ ಗೆರೆಪಟ್ಟಿ

ಆಮ್ಲಜನಕದ ಒತ್ತಡ ರಕ್ತ ಬಣ್ಣಕವನ್ನು (ಹೀಮೋಗ್ಲೋಬಿನ್) ಪೂರಕಗೊಳಿಸಲು ಸಾಲದಂತಿರುವ ರಕ್ತಾಮ್ಲಜನಕ ಕೊರೆಯದು (ಅನಾಕ್ಸೀಮಿಕ್); 2 ರಕ್ತಬಣ್ಣಕದ ತುಂಬ ಆಮ್ಲಜನಕ ತುಂಬಿದ್ದರೂ ರಕ್ತಬಣ್ಣಕವೇ ಸಾಲದಾಗಿ ಆಮ್ಲಜನಕ ಹೊತ್ತು ಸಾಗಿಸುವ ರಕ್ತದ ಬಲ ಕುಂದಿರುವ ರಕ್ತಕೊರೆಯದು (ಅನೀಮಿಕ್); 3 ಎಲ್ಲ ರೀತಿಗಳಲ್ಲೂ ರಕ್ತ ಚೆನ್ನಾಗಿದ್ದರೂ ಒಂದು ಅಂಗದಲ್ಲಿ ರಕ್ತದ ಹರಿವು ತೀರ ಕಡಿಮೆಯಾಗಿರುವ ಮಂದಹರಿವಿನದು (ಸ್ಟ್ಯಾಗ್ನೆಂಟ್); 4 ಸಯನೈಡಿನಂತೆ, ಯಾವುದಾದರೂ ವಿಷ ಊತಕಗಳ ಜೀವಕಣಗಳಿಗೆ ಹತ್ತಿ, ಆಮ್ಲಜನಕವನ್ನು ಸರಿಯಾಗಿ ಬಳಸಲಾಗದಿರುವ ಊತಕವಿಷಯದ್ದು (ಹಿಸ್ಟೋಟಾಕ್ಸಿಕ್) ರಕ್ತ, ಗುಂಡಿಗೆ, ರಕ್ತ ಸುತ್ತಾಟ, ಪುಪ್ಪುಸ ಇವುಗಳ ರೋಗಗಳಲ್ಲೂ ಆಮ್ಲಜನಕಕೊರೆ ಏಳಬಹುದು.

**ರಕ್ತಾಮ್ಲಜನಕಕೊರೆ:** ರೋಗಗಳಲ್ಲಿ ಕಾಣುವುದಲ್ಲದೆ, ಅನೇಕ ವೇಳೆ ಆಮ್ಲಜನಕಕೊರೆ ಎತ್ತರದಲ್ಲಿ ವಿಮಾನ ಹಾರಾಟದಲ್ಲೂ ಪರ್ವತದ ಎತ್ತರಗಳಲ್ಲೂ ಆಗುತ್ತದೆ. ವಿಮಾನಚಾಲಕ ಈ ವಿರಳವಾದ ಗಾಳಿಯೊಳಕ್ಕೆ ಸರಕ್ಕನೆ ಏರಿದರೆ, ಪರ್ವತ ಏರುವವ ನಿಧಾನವಾಗಿ ಹತ್ತುವನು. ವಿಮಾನದಲ್ಲಿ ಏರಲು ಚಾಲಕನಿಗೆ ಶ್ರಮ ಬೇಕಿಲ್ಲ. ಪರ್ವತ ಏರುವವ ಬಹುಮಟ್ಟಿಗೆ ತನ್ನ ಮೈ ಸ್ನಾಯುದುಡಿತದ ಯತ್ನದಿಂದ ದಣಿಯುತ್ತಾನೆ. ಪರ್ವತ ಹತ್ತುವವ ಹಾಸಿಗೆಯಲ್ಲಿ ಪಕ್ಕಕ್ಕೆ ಹೊರಳಲೂ ಎರಡು ಬಾರಿ ಯೋಚಿಸುವನು. ಆದ್ದರಿಂದ ಇವರಿಬ್ಬರ ಮೇಲಿನ ಪರಿಣಾಮಗಳೂ ಬೇರೆ ಬೇರೆ.

ನಿಧಾನವಾಗಿ ಆಮ್ಲಜನಕಕೊರೆಯಾದರೆ, ಅವನಿಗೆ ಗೊತ್ತಾಗದೆಯೇ ಮಂಕುಕವಿದಂತಾಗುವನು. ಆಮ್ಲಜನಕಕೊರೆ ಸರಕ್ಕನೆ ತೀವ್ರವಾದರೆ, ಮಿತಿಗೆಟ್ಟು ಮದ್ಯಸಾರ ಕುಡಿದವನಂತೆ ವರ್ತಿಸುವನು. ತಲೆನೋವು, ಮನಗುಂದುವೆ, ನಿರಾಸಕ್ತಿ ತೂಕಡಿಕೆ ಇಲ್ಲವೇ ಉದ್ರೇಕಗಳಿಂದ ಮೈಮೇಲೆ ಪರಿವೆಯಿಲ್ಲದೆ ಕುಣಿದಾಡಬಹುದು. ಕೂಗಾಡಿ, ಜಗಳಗಂಟಿಯಾಗಿ ಕಚ್ಚಾಡಬಹುದು. ಯಾವುದು ಅಪಾಯಕರ ಯಾವುದಲ್ಲ ಎನ್ನುವುದೂ ತಿಳಿಯದಿರಬಹುದು. ಇಂಗಾಲಮಾನಾಕ್ಸೈಡು ವಿಷವೇರಿದ ಗಣಿ ಕೆಲಸಗಾರರನಿಗೆ ತನ್ನ ಕೈಸುಟ್ಟಿದ್ದೇ ತಿಳಿಯದಿರುವನು. ಹೀಗಿದ್ದರೂ ತಾನೂ ಎಂದಿನಂತೆ ಚೆನ್ನಾಗೇ ಇರುವೆ ಎಂದುಕೊಳ್ಳುತ್ತಾನೆ. ನೆನಪು ಅಳಿದು ಹೊತ್ತುಗೊತ್ತು ಇಲ್ಲವಾಗುವನು, ಕೆಲವೇ ಹೆಜ್ಜೆಗಳನ್ನು ಇರಿಸಿ ಮೈಲಿಗಳೇ ನಡೆದೆನೆಂದು ತಿಳಿವನು. ಅರಿವಿಗಿಂತಲೂ ತಿಳಿವೇ ಕುಂದಿರುತ್ತದೆ. ಕಣ್ಣುಬಿಟ್ಟು ನೋಡುತ್ತಿದ್ದರೂ ಏನು ನೋಡುವೆನೆಂದು ಗೊತ್ತಿರದು. ಬರೆದ, ಅಚ್ಚುಹಾಕಿದ ಪದಗಳನ್ನು ಅರ್ಥಮಾಡಿಕೊಳ್ಳಲು ತೊಡರಿಸುತ್ತಾನೆ. ನೋವು ಕೂಡ ಅವನಿಗೆ ಗೊತ್ತಾಗದು.

ಬಲು ಎತ್ತರದಲ್ಲಿ ಹಾರಾಡುವ ವಿಮಾನಚಾಲಕನ ಇಲ್ಲವೇ ಕಡಲಿನಾಳದ ಕೆಲಸಗಾರನ ಆಮ್ಲಜನಕ ಪೂರೈಕೆಯನ್ನು ನಿಲ್ಲಿಸಬಿಟ್ಟರೆ, ಗಣಿಕೆಲಸಗಾರ ಮೀಥೇನ್ ಅನಿಲ ತುಂಬಿರುವ ದೊಗರಿನಲ್ಲಿ ತಲೆಹಾಕಿದರೆ ಬಲವಾದ ಏಟು ತಿಂದವನಂತೆ 45 ಸೆಕೆಂಡುಗಳಲ್ಲೇ ಅರಿವು ತಪ್ಪಿ ಕುಸಿದು ಬೀಳುವನು. ಕೂಡಲೇ ಆಮ್ಲಜನಕವನ್ನು ಒದಗಿಸದಿದ್ದಲ್ಲಿ ತುಸು ಹೊತ್ತಿನಲ್ಲೇ ಅಸು ನೀಗುವನು. ಆಮ್ಲಜನಕ ಕೊಟ್ಟಕೂಡಲೇ ಎಚ್ಚರವಾಗುವನು. ಕೊರೆತುಂಬಿದ ಕೂಡಲೇ ಸರಕ್ಕನೆ ಬಲಗೊಂಡು, ಕಣ್ಣಿನ ಪಾಟವ ಹೆಚ್ಚಿ ಅವನಿಗೇ ಅಚ್ಚರಿಯಾಗುತ್ತದೆ. ಒಂದೊಂದು ಅರಿವೂ ಸರಕ್ಕನೆ ಕಳೆದುಹೋಗಿ ಕೊನೆಗೆ ಕಿವಿಕೇಳುವುದೂ ಹೋಗಿರುತ್ತದೆ. ಆಮ್ಲಜನಕ ಕೊರೆಯ ತೀವ್ರತೆ, ಅವಧಿಗಳಿಗೆ ತಕ್ಕಂತೆ ತಡವಾಗಿ ಹಲವಾರು ಪರಿಣಾಮಗಳು ತಲೆದೋರುತ್ತವೆ. ಆಮ್ಲಜನಕ ಕೊರೆಯ ಆವರಣದಲ್ಲಿದ್ದ ಗಣಿಗಳ ಪರೀಕ್ಷಕನೊಬ್ಬ ಮೇಲಕ್ಕೆ ಬಂದಕೂಡಲೇ ಅಲ್ಲಿ ನಿಂತಿದ್ದವರ ಕೈಗಳನ್ನು ಕುಲುಕಿದ. ಹಾಗೇ ವೈದ್ಯನೂ ಕೈ ನೀಡಿದ. ಇದು ನನಗೆ ಅವಮಾನವೆಂದು, ಸರಕ್ಕನೆ ಅಂಗಿಕಳಚಿ, ಜಗಳಕ್ಕೇ ನಿಂತ. ಹೀಗೆ ಚೇತರಿಸಿಕೊಂಡಮೇಲೆ ಯಾರೋ ಹೊಡೆದು ಕೆಡವಿದರೆಂದೇ ಭಾವಿಸಿ ಸಿಕ್ಕಿದವರನ್ನೆಲ್ಲ ಹೊಡೆಯಬಹುದು.

ಆವರಣದಲ್ಲಿ ತುಸು ವ್ಯತ್ಯಾಸವಾದರೂ ಆಮ್ಲಜನಕಕೊರೆಯ ರೋಗಿಯಲ್ಲಿ ಹೆಚ್ಚಿನ ವ್ಯತ್ಯಾಸಗಳು ತೋರಬಹುದು. ಫುಪ್ಪುಸದಲ್ಲಿ ರೋಗದಿಂದ ಕೆಟ್ಟಿರುವ ಭಾಗವನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಿದಮೇಲೆ ಆಮ್ಲಜನಕಕೊರೆ ಕೂರಾಗಿ (ಅಕ್ಯೂಟ್) ತಲೆದೋರಬಹುದು. ಆಗ, ರೋಗಿ ಹಿಂದೂ ಮುಂದೂ ಏನೂ ತಿಳಿಯದಾಗುವನು. ತಾನೆಲ್ಲಿರುವೆನೆಂದೇ ಗೊತ್ತಿರದೆ ತಬ್ಬಿಬ್ಬಾಗುವನು. ಮಂಚದಿಂದ ಇಳಿದು ಓಡಬಹುದು. ಬಹಳ ಗಲಾಟೆ ಮಾಡಬಹುದು.

ಪರ್ವತ ಏರುವವ ಸಾಮಾನ್ಯವಾಗಿ ಪರ್ವತ ನರಳಿಕೆ (ಮೌಂಟನ್ ಸಿಕ್ನೆಸ್) ಅನುಭವಿಸುತ್ತಾನೆ. ಎತ್ತರಕ್ಕೇರಿದ ಕೆಲವೇ ತಾಸುಗಳಲ್ಲಿ, ಸಾಮಾನ್ಯವಾಗಿ ರಾತ್ರಿ ಹೊತ್ತು ಬೇನೆಯ ಲಕ್ಷಣಗಳು ತಲೆದೋರುವುವು. ಇದರ ಲಕ್ಷಣಗಳು ಹಲವಾರು ತೆರ. ಮಿದುಳಿನ ದೆಸೆಯಿಂದ, ತಲೆನೋವು, ಆಲಸಿಕೆ, ದಣಿವು, ನಿದ್ದೆಗೇಡು, ಕಣ್ಣು ಕಿವಿಗಳ ಕುಂದು, ಮನಗುಂದುವೆ, ಹೀಗೆಲ್ಲ ಅರೆತಲೆಬೇನೆಯಲ್ಲಿ ಇದ್ದಂತೆಲ್ಲ ಇರುವುವು. ಗುಂಡಿಗೆಯ ಬಡಿತ ಗತಿತಪ್ಪಿ ಎದೆನೋವು, ಎದೆಮಿಡಿತ ಆಗಬಹುದು. ರಕ್ತದ ಹರಿವು ಕುಂದಿ ಕೈಕಾಲುಗಳು ತಣ್ಣಗಾಗಿ, ನೀಲಿಗಟ್ಟಿ ಮಿಡಿಯಬಹುದು. ತುಸು ದುಡಿದರೂ ಏದುಸಿರಾಗಿ ಉಸಿರಾಟದ ತೆರನೇ ಬದಲಾಗಿ ನಿಟ್ಟುಸಿರು ಬಿಡುವಂತಾಗುತ್ತದೆ, ವಾಕರಿಕೆ, ವಾಂತಿ, ಹಸಿವುಗೊರೆ, ಸುತ್ತು (ಪರ್ವತ ನರಳಿಕೆ) ಎತ್ತರಕ್ಕೇರಿದ 8–12 ತಾಸುಗಳಲ್ಲೇ ತೋರಿಬಂದು ಕೆಳಗಿಳಿದ ಮೇಲೂ ಇರಬಹುದು ಆದ್ದರಿಂದಲೇ ಆಮ್ಲಜನಕಕೊರೆ ಎಲ್ಲೊ ತುಸುವೇ ಇದ್ದರೆ, ಗೊತ್ತಾಗದೆಯೇ ಇದ್ದುಬಿಟ್ಟು, ಎಷ್ಟೋ ಹೊತ್ತಿನ ಮೇಲೆ ಕೆಡುಕು ಮಾಡಬಹುದು. ಬಹಳ ಮಂದಿಗಳಲ್ಲಿ ಹೀಗಾಗುವುದು ಅಪೂರ್ವವೇನೂ ಅಲ್ಲ. ಆಮ್ಲಜನಕಕೊರೆ ತೀವ್ರವಾದರೆ ಆಮೇಲೆ ತಡವಾಗಿ ಕಂಡುಬರುವ ಪರಿಣಾಮಗಳು ಭಯಂಕರ, ಇದಕ್ಕೋಸ್ಕರವೇ, ಆಮ್ಲಜನಕ ಕೊರೆ ಯಂತ್ರವನ್ನು ನಿಲ್ಲಿಸುವುದೇ ಅಲ್ಲದೆ ಅದನ್ನೇ ಹಾಳುಗೆಡವುತ್ತದೆ ಎಂದು ಜೆ. ಎಸ್. ಹಾಲ್ಡೇನ್ ಹೇಳಿದ್ದು. ಗೌರೀಶಂಕರ ಶಿಖರದ ಏರುಗರು 26,700' ಎತ್ತರದಲ್ಲಿ ಮಾಂಸ ತಿನ್ನಲು ಕಷ್ಟಪಡಬೇಕಾಯಿತು. ಬಾಯಾರಿಕೆಯೂ ಹೆಚ್ಚಿತ್ತು. ಆ ಏರಿನ ಮಟ್ಟಗಳಲ್ಲೇ ವಾಸವಾಗಿದ್ದರೆ, 2–3 ದಿವಸಗಳಲ್ಲಿ ಇವೆಲ್ಲ ಇಳಿಯುತ್ತವೆ. ಅಂದರೆ, ಅಲ್ಲಿನ ಹವ, ಆವರಣಗಳು ಒಗ್ಗಿ, ಹವದೊಗ್ಗಿಕೆ (ಅಕ್ಲೈಮೆಟೈಸೇಷನ್) ಆಗುವುದು. ಆದರೆ, ಎಷ್ಟೇ ಹವಾಗುಣಕ್ಕೆ ಒಗ್ಗಿಕೊಂಡರೂ ಕಡಲಿನ ಮಟ್ಟದಲ್ಲಿ ಆಗುವಷ್ಟು ಕೆಲಸ ದುಡಿತವನ್ನು 14,000' ಎತ್ತರದಲ್ಲಿ ಮಾಡಲಾರ, ಅದೇ ಎತ್ತರದ ಮಟ್ಟದಲ್ಲಿ ಹುಟ್ಟಿ ಬಾಳುವವರು ಮಾತ್ರ ದುಡಿಯಬಲ್ಲರು. ಆದರೆ ಪಯಣಿಗರು ಎಷ್ಟೇ ತಿಂಗಳು, ವರ್ಷಗಳೇ ಅಲ್ಲಿ ಉಳಿದುಕೊಂಡರೂ ತಾವು ತಗ್ಗಿನ ಮಟ್ಟಗಳಲ್ಲಿ ದುಡಿವಷ್ಟು ಕೆಲಸಗಳನ್ನು ಇಲ್ಲಿ ಮಾಡುವುದು ಎಂದಿಗೂ ಆಗದು.

ಪರ್ವತದ ಪ್ರವಾಸದಲ್ಲಾಗಲಿ ವಿಮಾನದಲ್ಲಾಗಲಿ ಎತ್ತರಗಳ ಮಟ್ಟಕ್ಕೇರಿದ ಕೆಟ್ಟ ಪರಿಣಾಮಗಳು ರಕ್ತದ ಸ್ಥಿತಿಗೆ ತಕ್ಕಂತೆ ತೋರಿಬರುತ್ತವೆ. ಜೀವ, ಆರೋಗ್ಯಗಳಿಗೆ ಸಂಬಂಧಿಸಿದ ಗುಂಡಿಗೆ, ಮಿದುಳು, ಸ್ನಾಯುಗಳು, ಗ್ರಂಥಿಗಳು ಇತ್ಯಾದಿಗಳ ಸದ್ಯ ಊತಕಗಳಲ್ಲೇ ಅವಕ್ಕೆ ಬಲು ಮುಖ್ಯವಾದ ಆಮ್ಲಜನಕಗೂಡಿಕೆ (ಆಕ್ಸಿಡೇಷನ್) ಆಗುವುದು. ಆಮ್ಲಜನಕ ಕೊರೆ ಯಾವಕಾರಣದಿಂದಲೇ ಏಳಲಿ, ಮೈಯ ಬೇರೆ ಬೇರೆ ಜೀವಕಣಗಳ ಪರಿಣಾಮ ಬೇರೆಬೇರೆಯಾಗಿರುತ್ತದೆ. ಕೇಂದ್ರ ನರದ ಮಂಡಲದ ನರಕಣಗಳಂತೂ ಈ ಕೊರೆಯನ್ನು ಕೆಲವೇ ಮಿನಿಟುಗಳು ತಡೆಯಲಾರವು. ಬಲು ಬೇಗನೆ ಹಾಳಾಗುತ್ತವೆ. ಇವನ್ನೆಲ್ಲ ಮೊದಲು ಪೆಟ್ಟು ತಿನ್ನುವುದು ಮಿದುಳು. ಯೋಚನೆಗಳಿಗೆ, ಚಿಂತನೆಗಳಿಗೆ ಅಲ್ಲದೆ, ನಾಡಿವೇಗ, ಉಸಿರಾಟದ ಆಳ, ವೇಗ ಇತ್ಯಾದಿ ತೆರನ ಮೈಯ ಇತರ ನಿಜ ಗೆಲಸಗಳೂ ಸರಿಯಾಗಿ ನಡೆವಂತೆ ಮಿದುಳು ನೋಡಿಕೊಳ್ಳುತ್ತದೆ. ಕೊನೆಯದಾಗಿ, ಎತ್ತರದ ಮಟ್ಟಗಳಲ್ಲಿ ತೊಂದರೆಗೀಡಾಗಿಸುವ ಸ್ಥಿತಿಗಳನ್ನು ಗಮನಿಸುವುದೆಂದರೆ ಮಿದುಳಿಗೆ ಸಾಕಷ್ಟು ಆಮ್ಲಜನಕ ದೊರೆವುದೆಂದು ನೋಡುವುದು ಎಂದಾಯಿತು.

ಫುಪ್ಪುಸದಿಂದ ಮಿದುಳಿಗೆ ರಕ್ತ ಆಮ್ಲಜನಕವನ್ನು ಸಾಗಿಸುತ್ತದೆ. ರಕ್ತಬಣ್ಣಕ (ಹಿಮೋಗ್ಲಾಬಿನ್) ಅಂದರೆ ರಕ್ತದಲ್ಲಿರುವ ಕೆಂಬಣ್ಣದ ವಸ್ತು, ಆಮ್ಲಜನಕದೊಂದಿಗೆ ಸಡಿಲವಾಗಿ ಸಂಯೋಗವಾಗುತ್ತದೆ. ಫುಪ್ಪುಸ ಬಿಟ್ಟು ಮುಂದೆ ಸಾಗುವ ರಕ್ತಬಣ್ಣದ ಒಟ್ಟು ಪ್ರಮಾಣದಲ್ಲಿ, ಎಷ್ಟು ಪಾಲು ಆಮ್ಲಜನಕವನ್ನು ಹೊತ್ತು ಸಾಗುತ್ತದೆ ಎನ್ನುವುದು ಫುಪ್ಪುಸದ ಗಾಳಿಗೂಡುಗಳಲ್ಲಿನ (ಆಲ್ವಿಯೋಲೈ) ಆಮ್ಲಜನಕದ ಒತ್ತಡವನ್ನು ಅನುಸರಿಸುವುದು. ಈ ಒತ್ತಡ ಮತ್ತೆ, ಗಾಳಿಯಲ್ಲಿನ ಆಮ್ಲಜನಕದ ಒತ್ತಡಕ್ಕೆ ಅನುಗುಣವಾಗಿರುವುದು. ಯಾವ ಏರಿನ ಮಟ್ಟದಲ್ಲೇ ಆಗಲಿ, ಅಲ್ಲಿನ ಆವರಣದ ಒತ್ತಡದಲ್ಲಿ ನೂರಕ್ಕೆ 21 ರಷ್ಟು ಆಮ್ಲಜನಕ ಇರುವುದರಿಂದ, ಮಾನವ ಎತ್ತರಗಳಿಗೆ ಏರಿದಂತೆಲ್ಲ ಅವನ ಪುಪ್ಪುಸಗಳ ಗಾಳಿಗೂಡುಗಳಲ್ಲಿನ ಆಮ್ಲಜನಕದ ಒತ್ತಡವೂ ಇಳಿಯುತ್ತ ಹೋಗುವುದು. ಸಾಮಾನ್ಯ ಆವರಣದ ಒತ್ತಡಗಳಲ್ಲಿ ಇರುವ ಆಮ್ಲಜನಕದ ಒತ್ತಡ ರಕ್ತಬಣ್ಣಕ ಪೂರ್ತಿ ತುಂಬುವಷ್ಟು ಇರುವುದು.

**ಹವದೊಗ್ಗಿಕೆ :–** ಆಮ್ಲಜನಕಕೊರೆ ವಿಪರೀತವಾಗದಿದ್ದಲ್ಲಿ ಮಾನವನ ಮೈ ಚೆನ್ನಾಗಿ ಹೊಂದಿಕೊಳ್ಳಬಹುದು. ಎತ್ತರಗಳಿಗೆ ಏರುವವರಲ್ಲಿ ಇದನ್ನು ಬಲು ಸರಳವಾಗಿ ರಕ್ತಾಮ್ಲಜನಕ ಕೊರೆಯಾಗಿ ಕಾಣಬಹುದು. ಆಮ್ಲಜನಕಕೊರೆಗೆ ಹೊಂದಾಣಿಕೆಗಳು ಕೆಲವಂತೂ ಕಡಲ ಮಟ್ಟದಿಂದ ಏರಲು ಮೊದಲು ಮಾಡಿದಾಗಲೇ ಕಾಲಿಡುತ್ತವೆ. ಎತ್ತರ ಏರಿದಂತೆಲ್ಲ, ಹೆಚ್ಚು ಹೊತ್ತು ಅಲ್ಲೇ ಇದ್ದಂತೆಲ್ಲ ಉಳಿದವೂ ತಲೆಹಾಕುತ್ತವೆ. ಆಮ್ಲಜನಕಕೊರೆಯ ಒತ್ತಡವನ್ನು ತಡೆದುಕೊಳ್ಳಲು ಈ ಹೊಂದಾಣಿಕೆ ನೆರವಾಗುತ್ತವೆ. ದ.ಅಮೆರಿಕದ ಆಂಡೀಸ್ ಪರ್ವತಗಳಲ್ಲಿ 17,500' ಎತ್ತರದಲ್ಲಿ ಮನೆ ಮಾಡಿಕೊಂಡಿರುವರು. 19,000' ಆಳದ ಗಣಿಯಲ್ಲೂ ಅಷ್ಟೇ ಸುಲಭವಾಗಿ ದುಡಿವ ಜನರಿದ್ದಾರೆ. ಅವರಲ್ಲಿ ಹವದೊಗ್ಗಿಕೆ ಚೆನ್ನಾಗಿರುವುದು. ಅವರು ಆಮ್ಲಜನಕಕೊರೆಯ ಪರಿಸರಕ್ಕೆ ಚೆನ್ನಾಗಿ ಒಗ್ಗಿಕೊಂಡಿರುವರು, ಆ ಜನಾಂಗವೇ ಬಹುಮಟ್ಟಿಗೆ ಒಗ್ಗಿಕೊಂಡಿರುವುದೆಂದು ಹೇಳಲೂಬಹುದು.

ಹವದೊಗ್ಗಿಕೆ ಪೂರ್ತಿ ಆದ ಹಾಗೆಲ್ಲ, ಆಮ್ಲಜನಕಕೊರೆಗೆ ಒಡ್ಡಿದಾಗ ತೋರುವ ಲಕ್ಷಣಗಳೂ ತಗ್ಗುತ್ತವೆ. ಹಸಿವು ಎಂದಿನಂತೆ ಇರುವುದು; ಎಳೆಯರ ಬೆಳೆವಣಿಗೆ ಒಂದೇ ಸಮನಾಗಿರುವುದು; ಬೆಳೆದವರ ಮೈ ತೂಕ ಇಳಿಯದು; ಸಂತಾನಬಲ ಎಂದಿನಂತಿರುತ್ತದೆ; ಆರೋಗ್ಯದ ಲವಲವಿಕೆ ಇರುವುದು. ಅನುಕೂಲಕರ ಸಂದರ್ಭಗಳಲ್ಲಿ, ಆಮ್ಲಜನಕಕೊರೆ ನಿಧಾನವಾಗಿ ಬಂದರೆ, ಮೈ ಒಗ್ಗಿಕೊಳ್ಳುತ್ತದೆ. ಪರ್ವತದ 14,100' ಎತ್ತರದಲ್ಲಿ ಮೈ ಆಲಸಿಕೆ, ದಣಿವು, ಏರುಸಿರು ಇವೆಲ್ಲ 10 ದಿನಗಳಲ್ಲಿ ಇಲ್ಲವಾಗಿ ಎಂದಿನಂತೆ ಗೆಲುವಾದರು. ಹಾಗೇ ರೋಗದಲ್ಲಿ ಕಾಣಬರುವ ಆಮ್ಲಜನಕಕೊರೆಯ ಸುಳಿವೇ ಬಹದ ದಿನಗಳು ಹೊರಗಾಣದೆ, ಕೊನೆಗೆ ಒಗ್ಗಿದಂತಾದಾಗ ಇದ್ದಕ್ಕಿದ್ದ ಹಾಗೆ ತೋರಬಹುದು.

ಏರುಮಟ್ಟದ ಆಮ್ಲಜನಕದೊಂದಿಗೆ ಹೊಂದಿಕೊಳ್ಳುವುದರಲ್ಲೂ ಆಮ್ಲಜನಕಕೊರೆಯೊಂದಿಗಿನ ಬೇನೆಗಳಲ್ಲೂ ಮೈಯ ಊತಕಗಳಲ್ಲಿನ ಆಮ್ಲಜನಕದ ಇಳಿದ ಒತ್ತಡವನ್ನು ಇನ್ನೂ ತಡೆದುಕೊಳ್ಳುವಂಥ ಮಟ್ಟಗಳಿಗೆ ಏರಿಸುವ ಕ್ರಮಗತಿಗಳು ಕೊನೆಗೆ ಜಾರಿ ಆಗುತ್ತದೆ. ಹವದೊಗ್ಗಿಕೆ ಆದಂತೆಲ್ಲ, ಉಸಿರಾಡುವಾಗ ಫುಪ್ಪುಸಗಳ ಗಾಳಿಯಾಟ (ವೆಂಟಿಲೇಷನ್) ಇನ್ನೂ ಚೆನ್ನಾಗಿರುವುದು. ನೇರವಾಗೊ ಬಳಸಾಗೊ ಮೂತ್ರಪಿಂಡಗಳು, ಅಡ್ರಿನಲ್‌ಗಳು, ನರಮಂಡಲವೂ ಇದರಲ್ಲಿ ಪಾಲುಗೊಳ್ಳುತ್ತವೆ. ಗಾಳಿಯಾಟ ಹೆಚ್ಚುವ ಮುಂಚೆಯೇ,

ರಕ್ತದಲ್ಲಿ ಆಮ್ಲಜನಕ ಕುಗ್ಗಿದ ಒತ್ತಡವನ್ನು ಸರಿಗಟ್ಟಲು, ಗುಂಡಿಗೆ ಇನ್ನಷ್ಟು ರಕ್ತವನ್ನು ತಳ್ಳುತ್ತಿರಬೇಕು. ಉಸಿರಾಟ ಹೊಂದಿಕೊಂಡಂತೆಲ್ಲ ಗುಂಡಿಗೆ ರಕ್ತ ಸುತ್ತಾಟಗಳ ಮೇಲಿನ ಬೇಡಿಕೆಗಳು ತಗ್ಗುತ್ತವೆ. ಆದರೆ ವ್ಯಾಯಾಮದಲ್ಲಿ ಆಗುವಂತೆ, ಮೈಮೇಲಿನ ಬೇಡಿಕೆ ಬಂದಾಗೆಲ್ಲ ರಕ್ತ ಮಂಡಲ ಬಲವಾಗಿ ದುಡಿಯುತ್ತದೆ. ಸಣ್ಣ ರಕ್ತನಾಳಗಳು ಹಿಗ್ಗಿಯೊ ಹೆಚ್ಚಿಕೊಂಡೊ ಊತಕಗಳಿಗೆ ರಕ್ತ ಇನ್ನೂ ಚೆನ್ನಾಗಿ ಸೇರಿದುದರ ಪರಿಣಾಮ ಇದು.

ರಕ್ತಾಮ್ಲಜನಕಕೊರೆಯಲ್ಲಿ ಮೈಯಲ್ಲಿನ ಊತಕಗಳಿಗೆ ಮೂರು ರೀತಿಗಳಲ್ಲಿ ತೊಡಕಾಗುವುದು: ರಕ್ತದಲ್ಲಿನ ಆಮ್ಲಜನಕದ ಒತ್ತಡ ಇಳಿದಿರುವುದರಿಂದ ಊತಕಗಳಲ್ಲಿ ಆಮ್ಲಜನಕದ ಬಳಕೆ ತಗ್ಗಿರುವುದು; ರಕ್ತದಲ್ಲಿ ಆಮ್ಲಜನಕ ತಗ್ಗಿರುವುದರಿಂದ, ಆಮ್ಲಜನಕದ ಹೆಚ್ಚಿನ ಬೇಡಿಕೆಗಳು ಬರುವ ಯಾವ ಚಟುವಟಿಕೆಯೂ ಆಗುವಂತಿಲ್ಲ; ಇಂಗಾಲ ಡೈಆಕ್ಸೈಡಿನ ಒತ್ತಡ ತಗ್ಗಿರುವಾಗ ರಕ್ತಬಣ್ಣಕ ಆಮ್ಲಜನಕವನ್ನು ಸುಲಭವಾಗಿ ಬಿಟ್ಟುಕೊಡದ್ದರಿಂದ, ರಕ್ತದಲ್ಲಿರುವ ಆಮ್ಲಜನಕ ಊತಕಗಳಿಗೆ ಕೂಡಲೇ ದೊರೆಯದು.

ಆಮ್ಲಜನಕಕೊರೆಯ ಮೊದಮೊದಲ ಹೊಂದಾಣಿಕೆಗಳಲ್ಲಿ ರಕ್ತದಲ್ಲಿ ಆಮ್ಲಜನಕವನ್ನು ಸಾಗಿಸುವ ಸಂಯುಕ್ತವಾದ, ರಕ್ತಬಣ್ಣಕದ ಹೆಚ್ಚಳಿಕೆಯೂ ಒಂದು. ಆಮ್ಲಜನಕ ಒತ್ತಡ ಇಳಿದಾಗ ರಕ್ತವನ್ನು ತಯಾರಿಸುವ ಮೂಳೆಯೊಳಗಿನ ಕೆಂಪು ಮಜ್ಜೆ ಚುರುಕಾಗುತ್ತದೆ. ರಕ್ತದೊಳಕ್ಕೆ ಮತ್ತಷ್ಟು ಕೆಂಪುರಕ್ತ ಕಣಗಳನ್ನು ಬಿಡುವುದು. ಇದರಿಂದ ರಕ್ತಬಣ್ಣಕದ ಪ್ರಮಾಣವೂ ಹೆಚ್ಚಿದಂತಾಗಿ, ಮೊದಲಿಗಿಂತಲೂ ಇನ್ನೂ ಹೆಚ್ಚು ಆಮ್ಲಜನಕವನ್ನು ಸಾಗಿಸಿ, ಕೊರೆಯಾಗಿರುವ ಆಮ್ಲಜನಕ ಪೂರೈಕೆಯನ್ನು ಸರಿಪಡಿಸುವುದು.

ಪುಪ್ಪುಸಗಳ ಗಾಳಿಯಾಟ ಹೆಚ್ಚಿದ ಹಾಗೆಲ್ಲ, ಪುಪ್ಪುಸಗಳಲ್ಲಿನ ಆಮ್ಲಜನಕದ ಒತ್ತಡವೂ ಏರುತ್ತದೆ. ಅದೇ ಹೊತ್ತಿನಲ್ಲಿ, ಇಂಗಾಲದ ಡೈ ಆಕ್ಸೈಡು ಎಂದಿಗಿಂತ ಬೇಗನೆ ಹೊರಬಿದ್ದು ಅದರ ಒತ್ತಡ ಕುಸಿಯುವುದು. ಇದರಿಂದ ಧಮನಿಯಲ್ಲಿನ ರಕ್ತದಲ್ಲಿ ಇದರ ಒತ್ತಡ ಇಳಿದು, ಜಲಜನಕ ಅಯಾನಿನ ಸಾಂದ್ರತೆಯನ್ನು ಇಳಿಸುತ್ತದೆ. ಅಂದರೆ, ರಕ್ತದ ಆಮ್ಲತೆಯನ್ನು ಹೆಚ್ಚಿಸುತ್ತದೆ.

ಯಾವ ಕಾರಣದಿಂದಲೇ ಆಗಲಿ, ಎದೆಯಲ್ಲಿ ನೋವಿದ್ದರೆ, ಉಸಿರಾಡುವಾಗ ಪಕ್ಕೆಯಲ್ಲಿ ಚಳುಕು ಹಿಡಿದರೆ, ಇಲ್ಲವೇ ರೋಗ, ಪೆಟ್ಟುಗಳಿಂದ ಮಿದುಳಲ್ಲಿನ ಉಸಿರಾಟದ ಕೇಂದ್ರ ಕಟ್ಟಿದ್ದರೆ, ಉಸಿರಾಟದ ನರಗಳು, ಸ್ನಾಯುಗಳ ರೋಗವಿದ್ದರೆ ಮೇಲ್ಮೇಲಿನ ಉಸಿರಾಟವಾಗಿ ರಕ್ತಾಮ್ಲಜನಕ ಕೊರೆಯಾಗುತ್ತದೆ. ಹೊರಗಣ ಇಲ್ಲವೇ ಒಳಗಣ ಅಡಚಣೆಯಿಂದ ಪುಪ್ಪುಸ ಸಾಕಷ್ಟು ಹಿಗ್ಗಲಾರದಂತಾದರೆ, ಪುಪ್ಪುಸದ ಗಾಳಿಗೂಡಗಳಲ್ಲಿ ಗಟ್ಟಿ ಇಲ್ಲವೇ ದ್ರವ ಪದಾರ್ಥ ಸೇರಿಕೊಂಡರೆ, ಅಲ್ಲಿ ಹರಿವ ರಕ್ತ ಸಾಕಷ್ಟು ಆಮ್ಲಜನಕವನ್ನು ಹೀರಿಕೊಳ್ಳಲಾರದು.

ಇಂದಿನ ಇಂಗಾಲ ಡಯಾಕ್ಸೈಡಿನ ಒತ್ತಡವೂ ರಕ್ತದಲ್ಲಿನ ಜಲಜನಕ ಅಯಾನಿನ ಸಾಂದ್ರತೆಯೂ ಸಾಮಾನ್ಯವಾಗಿ ಉಸಿರಾಟಕ್ಕೆ ಚೋದನೆಗಳು. ಆದರೆ ಆಮ್ಲಜನಕಕೊರೆಯಲ್ಲಿ ಈ ಚೋದನೆಗಳಿರವು. ಇಷ್ಟಾದರೂ ಆಮ್ಲಜನಕಕೊರೆಗೆ ಒಡ್ಡಿರುವ ಕಾಲ ಹೆಚ್ಚಿದಂತೆಲ್ಲ, ರಕ್ತದ ಜಲಜನಕ ಅಯಾನಿನ ಸಾಂದ್ರತೆ ಬರುಬರುತ್ತ ಇಂದಿನ ಮಟ್ಟಕ್ಕೇರುವಂತೆ (ಆಮ್ಲಗೊಳ್ಳುವಂತೆ), ಮೂತ್ರಪಿಂಡಗಳು ಮೂತ್ರದಲ್ಲಿ ಹೆಚ್ಚು ಹೆಚ್ಚಾಗಿ ಕ್ಷಾರಗಳನ್ನು ಹೊರದೂಡುತ್ತವೆ. ಆಗ ಆಮ್ಲಜನಕ ಏರುವುದು, ಧಮನಿಯ ರಕ್ತದಲ್ಲಿನ ಆಮ್ಲಜನಕದ ಒತ್ತಡ ಯಾವಾಗಲೂ ಪುಪ್ಪುಸದಲ್ಲಿನದಕ್ಕೆ ಅನುಗುಣವಾಗಿರುವುದು.

ಬರೀ ಗಾಳಿಗಿಂತಲೂ ಪೂರ್ತಿ ಆಮ್ಲಜನಕವನ್ನೇ ಉಸಿರಲ್ಲಿ ಸೇದಿಕೊಳ್ಳುವುದರಿಂದ ಬಲು ಎತ್ತರಗಳಿಗೆ ಹೋಗಬಹುದು. ಗೌರೀಶಂಕರ ಶಿಖರ ಏರುವವರು ಹಾಗೆ ಬಳಸಿದ್ದರಿಂದ ಶಿಖರ ಮುಟ್ಟುವಂತಾದರು. ಆದರೆ ಹಾಗೆ ಹೆಚ್ಚಿನ ಆಮ್ಲಜನಕ ಬಳಸಿ ಮುಟ್ಟುವ ಏರುಮಟ್ಟಕ್ಕೂ ಒಂದು ಗೊತ್ತಾದ ಮಿತಿಯಿದೆ. ಪುಪ್ಪುಸದಲ್ಲಿನ ಆಮ್ಲಜನಕದ ಒತ್ತಡ 17,000' ಎತ್ತರದಲ್ಲಿ ಗಾಳಿಯಲ್ಲಿನ ಉಸಿರಾಟದಲ್ಲಿ ಇರುವಷ್ಟೇ ಸುಮಾರಾಗಿ ಬರೀ ಆಮ್ಲಜನಕದ ಉಸಿರಾಟದಲ್ಲೂ ಇರುವುದು. ಹವ ಒಗ್ಗಿದವನಿಗೆ ಎರಡು ಕಡೆಗಳಲ್ಲೂ ತೊಂದರೆಯೇ, 44,000' ಮೀರಿದ ಎತ್ತರಗಳಿಗೆ ಹಾರುವ ವಿಮಾನ ಚಾಲಕರಿಗೆ ಸಾಕಷ್ಟು ಗಾಳಿ, ಆಮ್ಲಜನಕದ ಒತ್ತಡಗಳು ಒದಗಬೇಕಾದರೆ, ಒತ್ತಡವಿರುವ ಕವಚ ತೊಡುಗೆಯನ್ನೂ ವಿಮಾನ ಕೋಣೆಯನ್ನೂ ಅಳವಡಿಸಬೇಕು.

**ರಕ್ತಕೊರೆಯ ಆಮ್ಲಜನಕಕೊರೆ**: ಈ ಬೇನೆಯಲ್ಲಿ, ಬೇಕಿರುವ ಆಮ್ಲಜನಕವನ್ನು ಒದಗಿಸುವ ರಕ್ತಬಣ್ಣಕ ರಕ್ತದಲ್ಲಿ ಸಾಕಷ್ಟು ಪ್ರಮಾಣದಲ್ಲಿರದು. ರಕ್ತಕೊರೆಯಲ್ಲಿ (ಅನೀಮಿಯ), ಇದರ ಪ್ರಮಾಣ ಕಂಡಹಾಗೇ ಕಡಿಮೆ ಇರುತ್ತದೆ. ಇದು ರಕ್ತಾಮ್ಲಜನಕಕೊರೆಯದರಷ್ಟು ಕೆಡುಕಿನದಲ್ಲ. ರಕ್ತದಲ್ಲಿನ ಆಮ್ಲಜನಕದ ಒತ್ತಡ ಸರಿಯಾಗಿರುವುದರಿಂದ ಊತಕಗಳು ಇದನ್ನು ಬಳಸುವ ವೇಗವೂ ಸರಿಯಾಗಿರುವುದು. ವಿರಾಮದಲ್ಲಿ ಇರುವ ತನಕ ರೋಗಿಗೆ ತೊಂದರೆಯೇ ಇಲ್ಲ. ಆದರೆ, ತುತ್ತಿನ ಹೊತ್ತಿನಲ್ಲಿ ಸರಕ್ಕನೆ ಹೆಚ್ಚಿನ ಕೆಲಸ ಮಾಡಲು ಮಾತ್ರ ಆಗದೆ ಕುಸಿಯುವನು. ಕೇಡಿನ ರಕ್ತಕೊರೆ (ಪರ್ನಿಸಿಯಸ್ ಅನೀಮಿಯ) ತೆರನ ತೀವ್ರವಾದ ರಕ್ತ ಕೊರೆಯಲ್ಲಿ ಎಂದಿನಷ್ಟು ಆಮ್ಲಜನಕವನ್ನೂ ಮೈಯಿಂದ ಬಹಳ ರಕ್ತಸುರಿದು ಹೋದ ಮೇಲೆ, ಅದರ ಬೇಡಿಕೆಗಳನ್ನು ಪೂರೈಸಲು ಮೈಯಲ್ಲಿ ರಕ್ತಸಾಕಷ್ಟು ಇಲ್ಲದಾಗಬಹುದು.

ಮೊದಮೊದಲು ಆಮ್ಲಜನಕಕೊರೆಯೇ ಚೋದಕವಾಗಿ ಗುಂಡಿಗೆ ಚೆನ್ನಾಗಿ ಬಡಿಯುತ್ತಿರುವುದು. ರಕ್ತದ ಒತ್ತಡ ತುಸು ಏರಬಹುದು. ಹೊಟ್ಟೆ ಚರ್ಮಗಳಿಗೆ ಸಾಗುವ ರಕ್ತ ಕಡಿಮೆಯಾಗಿ, ಮಿದುಳು, ಗುಂಡಿಗೆಗಳಿಗೆ ಹೆಚ್ಚು ರಕ್ತ ನುಗ್ಗುತ್ತದೆ. ಆಮೇಲೆ ಗುಂಡಿಗೆ ವೇಗ ಹೆಚ್ಚಿದರೂ ಒತ್ತಳ್ಳುವ ಬಲ ಕುಂದುವುದು. ರಕ್ತದಲ್ಲಿ ಸಾಕಷ್ಟು ಆಮ್ಲಜನಕ ಇಲ್ಲದ್ದರಿಂದ, ತುಟಿ, ಕಣ್ಣು, ಅಂಗೈ, ಅಂಗಾಲುಗಳು ಬಿಳಚಿಕೊಳ್ಳುತ್ತದೆ.

ಕೂಸು ಹುಟ್ಟುವಾಗಲೇ ಬಂದಿರುವ ಗುಂಡಿಗೆಯ ಕೆಲವು ರಚನೆಯ ವಿಕಾರಗಳಲ್ಲಿ ಗುಂಡಿಗೆಯಿಂದ ಹೊರಬಿದ್ದ ರಕ್ತ ಪುಪ್ಪುಸಗಳಿಗೆ ಹೋಗದೆ ನೇರವಾಗಿ ಸಿರಗಳಿಗೆ ನುಗ್ಗುವುದರಿಂದ ಆಮ್ಲಜನಕಕೊರೆ ಆಗುತ್ತದೆ. ಇಲ್ಲಿ ಧಮನಿಯ ರಕ್ತದಲ್ಲಿ ಆಮ್ಲಜನಕ ಇರುವುದೂ ತೀರ ಕಡಿಮೆ. ರಕ್ತಾಮ್ಲಜನಕಕೊರೆ ಹಲವಾರು ಕಾರಣಗಳಿಂದ ಬಂದಿದ್ದರೆ ಬಲು ಅಪಾಯಕರ. ಪುಪ್ಪುಸ ಉರಿತ (ನ್ಯುಮೋನಿಯ) ಆಗಿರುವವ ಎಂದಿಗೂ ರಕ್ತಾಮ್ಲಜನಕ ಕೊರೆ ಅನುಭವಿಸುವವನೇ. 16,000' ಮೀರಿದ ಎತ್ತರಗಳಲ್ಲಿ ಇದ್ದರಂತೂ ಸಾಮಾನ್ಯವಾಗಿ ಬದುಕಲಾರ.

ಇರುವ ರಕ್ತಬಣ್ಣದ ಸದ್ಯಕ್ಕೆ ಕೆಲಸಕ್ಕೆ ಬಾರದಂತಾಗುವ ಮೂರು ಸ್ಥಿತಿಗಳಿವೆ: ಕಲ್ಲಿದ್ದಲಿನ ಅನಿಲದ (ಇಂಗಾಲ ಡೈಆಕ್ಸೈಡಿನ) ವಿಷವೇರಿಕೆ. ಕಂದುರಕ್ತಬಣ್ಣಕತೆ (ಮೆತೀಮೊಗ್ಲಾಬಿನೀಯ), ಗಂಧಕ ರಕ್ತಬಣ್ಣಕತೆ (ಸಲ್ಫ್‌ಹೀಮೊಗ್ಲಾಬಿನೀಮಿಯ). ಮೊದಲಿನ ಎರಡು ಬಲು ಮುಖ್ಯವಾದುವು.

ಕಲ್ಲಿದ್ದಲೇ ಅಲ್ಲದೆ ಬೇರೆ ಮೂಲಗಳಿಂದಲೂ ಇಂಗಾಲದ ಮಾನಾಕ್ಸೈಡು ತಯಾರಾಗಬಹುದು. ಆಳದ ಗಣಿಗಳಲ್ಲಿ ಇದೊಂದು ಆಗಾಗ್ಗೆ ತಲೆದೋರುವ ಅಪಾಯ ಮುಖ್ಯವಾಗಿ ಒಳಗೆ ಸುಟ್ಟುರಿಸುವ ಚಲನ ಯಂತ್ರಗಳಿಂದ ಹೊರ ಬೀಳುವ ಅರೆಬರೆ ಸುಟ್ಟುಗಿಸಿದ ಅನಿಲಗಳಿಂದ ಬೇಕಾದಷ್ಟು ಮಂದಿ ಸತ್ತಿದ್ದಾರೆ. ಆದರೆ ನಮ್ಮ ಬಹುಪಾಲು ಸಾವುಗಳಿಗೆ ಕಾರಣ ಸಾಮಾನ್ಯ ಇದ್ದಲಿನ ಇಲ್ಲವೇ ಸೌದೆಯ ಒಲೆಗಳು. ರಾತ್ರಿಹೊತ್ತು ಚಳಿಗಾಲದಲ್ಲಿ ಬೆಚ್ಚಗಿರಿಸಲೋಸುಗ ಕಿಟಿಕಿ ಬಾಗಿಲುಗಳನ್ನೆಲ್ಲ ಭದ್ರವಾಗಿ ಮುಚ್ಚಿಬಿಟ್ಟು ಬೆಂಕಿ ಉರಿಸಿ ಮಲಗಿದಾಗ, ಬೆಳಗ್ಗೆ ನೋಡಿದರೆ ಅಲ್ಲಿದ್ದವರು ಹೆಣಗಳಾಗಿರುತ್ತಾರೆ. ಇಲ್ಲಿ ಇಂಧನ ಅರೆಬರೆ ಉರಿದಾಗ ಇಂಗಾಲದ ಮಾನಾಕ್ಸೈಡ್ ಅನಿಲ ತಯಾರಾಗುತ್ತದೆ. ರಕ್ತ ಬಣ್ಣದ ಆಮ್ಲಜನಕದ 250 ರಷ್ಟು ಹೆಚ್ಚು ಬಲವಾಗಿ ಇಂಗಾಲ ಮಾನಾಕ್ಸೈಡ್‌ನೊಂದಿಗೆ ಕೂಡಿ ಕಚ್ಚಿಕೊಂಡು ಕಾರ್ಬಾಕ್ಸಿ ರಕ್ತಬಣ್ಣಕ ಆಗುತ್ತದೆ. ಇದರಿಂದ ಆಮ್ಲಜನಕದ ಸಾಗಣಿಕೆ ಆತಂಕ. ಒಬ್ಬರು ಇಂಗಾಲದ ಮಾನಾಕ್ಸೈಡಿಂದ ಅರಿವು ತಪ್ಪಲು ಮೈಯಲ್ಲಿರುವ ಅರೆಪಾಲಿಗೂ ಹೆಚ್ಚುಪಾಲು ರಕ್ತಬಣ್ಣಕ ಇಂಗಾಲದ ಮಾನಾಕ್ಸೈಡೊಂದಿಗೆ ಕೂಡಿರಬೇಕು. ಹೊರ ಆವರಣದಲ್ಲಿ ಸಾವಿರದಲ್ಲಿ ಒಂದು ಭಾಗಕ್ಕೂ ಕಡಿಮೆ ಈ ಅನಿಲವಿದ್ದರೂ ಹೀಗಾಗುತ್ತದೆ. ಆದರೆ ಹೀಗಾಗಲು ಈ ಅನಿಲದ 500 ಮಿ.ಲೀ.ಗಳಷ್ಟಾದರು ಮೈಯಲ್ಲಿ ಸೇರಿರಬೇಕು. ಇದಕ್ಕೆ ಒಂದು ತಾಸು ಹಿಡಿಯಬಹುದು. ಇದರ ಪರಿಣಾಮ ಒಬ್ಬೊಬ್ಬರಲ್ಲಿ ಒಂದೊಂದು ತೆರನಾಗಿ ಇರುವುದಾದರೂ ಶೇಕಡ ಸುಮಾರು 30–40ರಷ್ಟು ಸೇರಿಕೊಂಡರೆ ತಲೆನೋವೂ 50–60ರಷ್ಟು ಸೇರಿದರೆ ಅರಿವಿಲ್ಲದಾಗುವುದೂ, 75ರಷ್ಟಕ್ಕೆ ಸಾವೂ ಆಗಬಹುದು. ಅಲ್ಲದೆ, ಬೇರೆ ಕಾರಣಗಳಿಂದಾದ ಶೇಕಡ 50ರ ರಕ್ತಕೊರೆ ಇದ್ದವನು ಕೆಲಸ ದುಡಿಯಬಲ್ಲ. ಆದರೆ ಅದೇ ಶೇಕಡ 50ರಷ್ಟು ಇಂಗಾಲದ ಮಾನಾಕ್ಸೈಡ್ ಇದ್ದರೆ ಹೆಳವನಾಗಿ ಬಿದ್ದಿರುವನು.

ಈ ಅನಿಲವಿರದ ಗಾಳಿಯನ್ನು ಉಸಿರಲ್ಲಿ ಚೆನ್ನಾಗಿ ತೆಗೆದುಕೊಳ್ಳುತ್ತಿದ್ದರೆ, ರಕ್ತದಲ್ಲಿನ ಇಂಗಾಲದ ಮಾನಾಕ್ಸೈಡ್ ನಿಧಾನವಾಗಿ ಕಳೆದುಹೋಗುತ್ತದೆ. ಅಚ್ಚ ಆಮ್ಲಜನಕವನ್ನು ತೆಗೆದುಕೊಂಡರಂತೂ ಇನ್ನೂ ಬೇಗನೆ ಹೋಗುವುದು ಅಪಾಯಕರ ಇಂಗಾಲದ ಮಾನಾಕ್ಸೈಡಿನ ಪ್ರಮಾಣಗಳಿಗೆ ಒಡ್ಡಿ ಸಿಕ್ಕಿಬಿದ್ದರೆ, ಮಿದುಳಿನ ಕೆಲವು ನರಕಣಗಳು ಸರಿಪಡಿಸಲಾಗದಷ್ಟು ಹಾಳಾಗಬಹುದು. ಇದರಿಂದ ಮುಂದೆ ಅವನ ಬುದ್ಧಿಗೆಲಸದಲ್ಲಿ ವ್ಯತ್ಯಾಸವಾಗಬಹುದು. ಬುದ್ಧಿ ಕೆಡಬಹುದು. **(ನೋಡಿ– ಇಂಗಾಲದ–ಮಾನಾಕ್ಸೈಡ್–ವಿಷವೇರಿಕೆ)**

ರಕ್ತಬಣ್ಣದ ಒಂದು ಪಾಲಾದರೂ ಕೆಲಸಕ್ಕೆ ಭಾರದಂತಾಗುವ ಇನ್ನೊಂದು ಬೇನೆ ಕಂದುರಕ್ತಬಣ್ಣಕತೆ. ಅನಿಲೀನ್, ನೈಟ್ರೈಟ್‌ಗಳು, ನೈಟ್ರೊಬೆಂಜೀನು ಇತ್ಯಾದಿಗಳನ್ನು ಉಸಿರಲ್ಲಿ ಎಳೆದುಕೊಂಡರೆ ರಕ್ತದಲ್ಲಿ ಆಮ್ಲಜನಕವನ್ನು ಹೊತ್ತು ಸಾಗಿಸುವ, ಆಮ್ಲ ರಕ್ತಬಣ್ಣಕ (ಆಕ್ಸಿಹೀಮೊಗ್ಲಾಬಿನ್), ಮೈಗೆ ಆಮ್ಲಜನಕವನ್ನು ಒದಗಿಸದ ಕಂದುರಕ್ತಬಣ್ಣಕವಾಗುತ್ತದೆ. ರಕ್ತಕಣಗಳೂ ಕೆಡುತ್ತವೆ. ಕೆಟ್ಟಿರುವ ಗಾಳಿಯ ಸೇವನೆ ನಿಲ್ಲಿಸಿದರೆ, ವಿಷವೇರಿಕೆ ಬಲವಾಗಿರದಾಗ ಬೇಗನೆ ಸರಿಹೋಗುವುದು. ಕೆಂಪು ರಕ್ತಕಣಗಳನ್ನು ಬಹಳ ಹಾಳುಗೆಡುವುದರಿಂದ ಕ್ಲೋರೇಟು, ಬ್ರೋಮೇಟುಗಳಿಂದ ಹೀಗಾಗುವುದು ಇನ್ನೂ ಕೆಡುಕು.

ಆಮ್ಲಜನಕವನ್ನು ರಕ್ತಬಣ್ಣಕ ಹೊತ್ತು ಸಾಗಿಸಲಾಯಿಸುವ ಗಂಧಕರಕ್ತಬಣ್ಣಕ ಇನ್ನೊಂದಿದೆ. ಆಸಿಟನಲೈಡು, ಸಲ್ಫಾನಿಲೇಮೈಡು, ಮತ್ತಿತರ ಬೆಂಜೀನ್ ಉತ್ಪನ್ನಗಳ ಸೇವನೆಯಿಂದ ಹೀಗಾಗಬಹುದು. ಕೆಲವೇಳೆ ಇದು ಮೈಯಲ್ಲಿ ತಂತಾನಾಗೇ ಹುಟ್ಟಿಕೊಳ್ಳಬಹುದು.

**ಮಂದಹರಿವ ಆಮ್ಲಜನಕಕೊರೆ:** ಯಾವುದಾದರೂ ಅಂಗದಲ್ಲೋ ಅಂಗ ಭಾಗದಲ್ಲೋ ಇಲ್ಲವೇ ಮೈಯಲ್ಲಿ ಹೀಗಾಗಬಹುದು. ಮೈಯಲ್ಲಿ ಹೀಗಾಗಲು ಹಲವಾರು ಕಾರಣಗಳಿವೆ. ಗುಂಡಿಗೆ ರೋಗಿಗಳಲ್ಲಿ ಮೈಗೆಲ್ಲ ಸಾಕಷ್ಟು ವೇಗದಲ್ಲಿ ರಕ್ತವನ್ನು ಒತ್ತಳ್ಳುವುದರಲ್ಲಿ ಗುಂಡಿಗೆ ಸೋಲಬಹುದು. ರಕ್ತ ಮತ್ತೆ ಗುಂಡಿಗೆಗೆ ಬರುವುದು ಕುಗ್ಗಿ, ಇದ್ದಲ್ಲೇ ಇರುವಾಗ ರಕ್ತವನ್ನು ಮುಂದಕ್ಕೆ ತಳ್ಳಿ ಹರಿಸಲು ಕಷ್ಟವಾಗಬಹುದು. ಹೊಟ್ಟೆಗೆ ಬಲವಾಗಿ ಬಿದ್ದ ಪೆಟ್ಟುಗಳಿಂದಲೋ ಶಸ್ತ್ರಕ್ರಿಯೆಗಳಿಂದಲೋ ಒಳಗಿನ ಅಂಗಗಳು ಹೊರಗಾಳಿಗೆ ಒಡ್ಡಿದಾಗ, ಶಸ್ತ್ರಕ್ರಿಯೆಯ ಸೊಕ್ಕೆ (ಷಾಕ್) ಆಗಿ ರೋಗಿ ಸುತ್ತುಬಿದ್ದು, ರಕ್ತದ ಸುತ್ತಾಟ ತೀರ ಕುಂದಿ, ಊತಕಗಳಿಗೆ ಸಾಕಷ್ಟು ಆಮ್ಲಜನಕ ದೊರೆಯದಾಗುತ್ತದೆ. ಇಲ್ಲಿರುವ ತೊಡಕು, ರಕ್ತ ಬಲು ನಿಧಾನವಾಗಿ ಹರಿದೋ ನಿಂತುಹೋಗಿಯೋ ರಕ್ತದಲ್ಲಿನ ಆಮ್ಲಜನಕವೆಲ್ಲ ಇದ್ದಲ್ಲೇ ಬಳಕೆ ಆಗಿಬಿಟ್ಟು ಮುಂದೆ, ಆಮ್ಲಜನಕಗೂಡಿದ ರಕ್ತ ಏನೇನೂ ಸಾಲದಾಗುತ್ತದೆ, ಆಮ್ಲಜನಕಕೊರೆಯ ಪೆಟ್ಟು ಹೆಚ್ಚಾಗಿ ಮಿದುಳು ಈಲಿಗೆ (ಲಿವರ್) ಬೀಳುವುದು. ಗಾಯ ಪೆಟ್ಟುಗಳಾಗಿ ಮೈಯಲ್ಲಿನ ರಕ್ತ ವಿಪರೀತ ಸುರಿದುಹೋದರೂ ರಕ್ತ ಮೈಯಲ್ಲೆಲ್ಲ ಹರಿಯಲು ಸಾಕಾಗದೆ ಕೂಡ ಹೀಗಾಗಬಹುದು. ಹರವು ಮಂದವಾದಾಗ ರಕ್ತದಲ್ಲಿನ ಇಂಗಾಲದ ಡೈಆಕ್ಸೈಡ್ ಹೆಚ್ಚಾಗುವುದರಿಂದ ಆಮ್ಲಜನಕವನ್ನು ಕಳೆದುಕೊಳ್ಳುತ್ತದೆ.

ಮೈಯಲ್ಲಿ ಎಲ್ಲಾದರೂ ಒಂದೆಡೆಯಲ್ಲಿ ರಕ್ತದ ಹರಿವನ್ನು ನಿಧಾನಗೊಳಿಸಿದರೆ, ಇಲ್ಲವೇ ಆತಂಕಿಸಿದರೆ, ಆ ಎಡೆಯ ಮುಂದಹರಿವ ಆಮ್ಲಜನಕಕೊರೆಯಾಗುವುದು. ಇಲ್ಲಿ ಮುಖ್ಯವಾಗಿ ಗುಂಡಿಗೆ ಮೂತ್ರಪಿಂಡಗಳಿಗೆ ತೊಂದರೆ, ರೇನಾಡನ ರೋಗ, ಬರ್ಜರನ ರೋಗಗಳಲ್ಲಿ (**ನೋಡಿ– ಬರ್ಜರನ–ರೋಗ**) ಕೈಕಾಲುಗಳಲ್ಲಿ ರಕ್ತ ಹರಿವಿನ ತಡೆಯಾಗುವುದು ಇದರ ಉದಾಹರಣೆಗಳು. ರಕ್ತ ಸುರಿದು ಹೋಗುವುದನ್ನು ತಡೆಯಲು ಕಾಕುವ ತಿರುಚೊತ್ತು (ಟೊರ್ನಿಕೆ), ಎರ್ಗಟ್ (**ನೋಡಿ– ಎರ್ಗಟ್**) ವಿಷವೇರಿಕೆ, ಚಳಿಗೊಡ್ಡಿಕೆ ಇತರ ಕಾರಣಗಳು.

**ಊತಕವಿಷದ ಆಮ್ಲಜನಕಕೊರೆ :** ರಕ್ತದಲ್ಲಿ ಸಾಕಷ್ಟು ಆಮ್ಲಜನಕ ಇರುವುದಲ್ಲದೆ, ಅದರ ಒತ್ತಡ ಎಂದಿನಷ್ಟೇ ಇದ್ದರೂ ಇರುವ ಆಮ್ಲಜನಕವನ್ನು ಮೈಯಲ್ಲಿನ ಊತಕಗಳ ಜೀವಕಣಗಳು ಎತ್ತಿಕೊಂಡು ಬಳಸಲಾರವು. ಸಯನೈಡುಗಳು ಆಮ್ಲಜನಕದ ಬಳಕೆಗೆ ನೆರವಾಗುವ ಕಣಬಣ್ಣಕ (ಸೈಟೊಕ್ರೋಂ) ಆಕ್ಸೈಡುದೊಳೆಯನ್ನು ಜೋಗರಿಸಿ, ಜೀವಕಣಗಳ ಆಮ್ಲಜನಕ ಬಳಕೆಯನ್ನು ಕುಂದಿಸುವುದು ಗೊತ್ತಿರುವ ವಿಷಯ. ಆದರೂ ಜೀವಕಣಗಳ ಉಸಿರಾಟವನ್ನು ಕುಂದಿಸುವ ಯಾವ ಕಾರಣದಿಂದಲಾದರೂ ಹೀಗಾಗಬಹುದು. ಅಫೀಮಿನ ತೆರನ ಮಂಪರಿಕಗಳು, ಮದ್ಯಸಾರ, ಫಾರ್ಮಾಲ್ಡಿಹೈಡು, ಅಸಿಟೋಮ ಅರಿವಳಿಕ (ಅನೀಸ್ತೆಟಿಕ್) ವಸ್ತುಗಳೂ ಕಾರಣವಾಗಬಹುದು. ಈ ಕಾರಕಗಳಿಂದ ಈ ಕೊರೆಯಾಗುವುದಂತೂ ಬಲು ಅಪರೂಪವೇ. (ಎಸ್.ಆರ್.ಆರ್.)(ಪರಿಷ್ಕರಣೆ: ನಾ. ಸೋಮೇಶ್ವರ)

**ಆಮ್ಲಾಂಕ :** ಒಂದು ಗ್ರಾಂ ವಸ್ತುವಿನಲ್ಲಿರುವ ಆಮ್ಲದ ಅಂಶವನ್ನು ತಟಸ್ಥಗೊಳಿಸಲು ಅಗತ್ಯವಾದ ಪೊಟ್ಯಾಸಿಯಂ ಹೈಡ್ರಾಕ್ಸೈಡಿನ ತೂಕವನ್ನು ಮಿಲಿಗ್ರಾಂಗಳಲ್ಲಿ ಸೂಚಿಸುವ ಸಂಖ್ಯೆ (ಆ್ಯಸಿಡ್ ವ್ಯಾಲ್ಯು). ವಸ್ತುವನ್ನು ಮದ್ಯಸಾರದಲ್ಲಿ ವಿಲೀನಮಾಡಿ ಡೆಸಿನಾರ್ಮಲ್ ಕ್ಷಾರದೊಡನೆ, ಫೀನಾಲ್ಫ್ ಥ್ಯಾಲೈನ್ ಸೂಚಕದ ಸಹಾಯದಿಂದ, ಅನುಮಾಪಿಸಿ (ಟೈಟ್ರೇಟ್) ನಿರ್ಣಯಿಸಲಾಗುವುದು. ಸಸ್ಯಜನ್ಯ ತೈಲಗಳು, ಕೊಬ್ಬು, ಮೇಣಗಳು ಮತ್ತು ಇವುಗಳಿಂದ ತಯಾರಿಸಲಾದ ಸಾಬೂನು, ಬಣ್ಣ, ಇಂಧನ, ಕೀಲೆಣ್ಣೆ ಇತ್ಯಾದಿಗಳ ರಾಸಾಯನಿಕ ವಿಶ್ಲೇಷಣೆಯಲ್ಲಿ ಈ ಮಾನದ ಬಳಕೆ ಹೆಚ್ಚು.

ವನಸ್ಪತಿ ತೈಲಾದಿಗಳು ಮೂಲತಃ ಗ್ಲಿಸರಾಲ್ ಮತ್ತು ಫ್ಯಾಟಿ ಆಮ್ಲಗಳ ಸಂಯೋಜನೆಯಿಂದಾದ ಲವಣಸದೃಶವಾದ ಸಂಯುಕ್ತಗಳು. ಬ್ಯಾಕ್ಟೀರಿಯ, ಕಿಣ್ವಗಳು ಅಥವಾ, ರಾಸಾಯನಿಕ ವಸ್ತುಗಳ ವರ್ತನೆಯಿಂದ ಆಮ್ಲ ಬಿಡುಗಡೆಯಾಗುವುದು. ಹೀಗೆ ಉತ್ಪತ್ತಿಯಾದ ಆಮ್ಲದ ಪ್ರಮಾಣವನ್ನು ಅಳೆಯಲು ಆಮ್ಲಾಂಕ ಮಾನದ ಬಳಕೆ ಇದೆ. ಆದ್ದರಿಂದ ತಯಾರಿಕಾ ವಿಧಾನ, ದಾಸ್ತಾನುಮಾಡಿದ ಪರಿಸ್ಥಿತಿ ಮತ್ತು ಅವಧಿಗೆ ಅನುಗುಣವಾಗಿ, ಆಮ್ಲಾಂಕವೂ ವ್ಯತ್ಯಾಸ ಹೊಂದುವುದು.

ಕೊಬ್ಬಿನ ಆಮ್ಲೀಯತೆಯನ್ನು ಅದರಲ್ಲಿರುವ ಫ್ರೀಫ್ಯಾಟಿ ಆಮ್ಲದ (ಎಫ್.ಎಫ್.ಎ.) ಶೇಕಡಾಂಶವನ್ನು ಸೂಚಿಸುವುದು ವಾಡಿಕೆ. ಉದಾಹರಣೆಗೆ, ಕೊಬ್ಬರಿ ಎಣ್ಣೆಗೆ ಲಾರಿಕ್ ಆಮ್ಲ, ಹರಳೆಣ್ಣೆಗೆ ರಿಸಿನ್ ಒಲಿಯಿಕ್ ಆಮ್ಲ, ಮತ್ತು ಇತರ ಅನೇಕ ಎಣ್ಣೆಗಳಿಗೆ ಒಲಿಯಿಕ್ ಆಮ್ಲಗಳನ್ನು ಆಧಾರವಾಗಿಟ್ಟುಕೊಂಡು ಲೆಕ್ಕಾಚಾರ ಮಾಡಬೇಕು. ಆಮ್ಲಾಂಕದ ಒಂದು ಮೂಲಮಾನಕ್ಕೆ 0.357 ಲಾರಿಕ್ ಆಮ್ಲವೂ 0.456 ಪಾಮಿಟಿಕ್ ಆಮ್ಲವೂ 0.531 ರಿಸಿನ್ ಒಲಿಯಿಕ್ ಆಮ್ಲವೂ 0.503 ಒಲಿಯಿಕ್ ಆಮ್ಲವೂ ಸಮವೆಂದು ಪರಿಗಣಿಸಲಾಗುವುದು. (ಎಚ್.ಜಿ.ಎಸ್.)

**ಆಯಾಸ :** ಒಂದೇ ಸಮನಾದ ಮೈ ದುಡಿಮೆ ಇಲ್ಲವೇ ಮನಸ್ಸಿನ ಚಟುವಟಿಕೆಯಿಂದ ಕುಂದೆನಿಸಿ, ಸಾಮಾನ್ಯವಾಗಿ ವಿಶ್ರಾಂತಿಯಿಂದಲೋ ಕೆಲಸದ ಬದಲಾವಣೆಯಿಂದಲೋ ಹೋಗಲಾಡಿಸುವ ಸ್ಥಿತಿ. ಕೆಲವೇಳೆ ಕೆಲಸದಲ್ಲಿ ದುಡಿದ ಮೇಲೆ ಆಗುವ ಸುಸ್ತು ಆಗ ಮನಸ್ಸಿಗೆ ಎನಿಸುವ ದಣಿವು, ಬೇಜಾರು ಇವಕ್ಕೂ, ಬಿಡುವಿಲ್ಲದೆ ಏನಾದರೂ ಮಾಡುತ್ತಿರುವಾಗ ಕೆಲಸ ಕೆಡುತ್ತ ಬರುವುದಕ್ಕೂ ಆಯಾಸ (ಫಟೀಗ್) ಎನ್ನುವುದೂ ಉಂಟು. ದಣಿವು ಎಲ್ಲರೂ ಅನುಭವಿಸುವುದೇ ಆದರೂ ಮಿತಿಮೀರಿದಾಗ ಇಲ್ಲವೇ ಸುಲಭವಾಗಿ ತಲೆದೋರಿದಾಗ ಮಾತ್ರ ಇದು ಬೇನೆಯ ಸೂಚಕ. ಆಯಾಸ ಬಹಳವಾದರೆ, ಮೈ ಅಂಗಗಳಲ್ಲಿ ಶಾಶ್ವತ ಬದಲಾವಣೆಗಳು ಆಗಬಹುದು. ಇಲ್ಲವೇ ಮತಿಕೆಡಬಹುದು. ಇತ್ತೀಚಿನ ಯುದ್ಧಕಾಲಗಳಲ್ಲಿ ಆಯಾಸ ಎನ್ನುವುದಕ್ಕೆ ಇನ್ನೂ ಹೆಚ್ಚಿನ ಅರ್ಥಗಳು ಬಂದಿವೆ. ಆಯಾಸ ಬರೀ ಕೆಲಸ, ಚಟುವಟಿಕೆಗಳಿಂದಲೇ ಆಗಬೇಕಿಲ್ಲ. ನಿದ್ದೆಗೇಡು, ಅಂಜಿಕೆ, ಮುಕ್ಕಲುತನ, ಚಿಂತೆಯ ಒತ್ತಡ, ಬಲು ಚಳಿ ಇಲ್ಲವೇ ಬಲು ಬಿಸಿಲಿಗೆ ಒಡ್ಡುವಿಕೆ, ಸುಮ್ಮನೆ ಕೆಲಸವಿಲ್ಲದೆ, ಬೇಸರಿಕೆ, ಮನಸ್ಸಿಗೆ ಬೇರೆ ಕೆಲಸವಿಲ್ಲದೆ ಬರಿದೇ ಕಾಯುತ್ತ ಕುಳಿತಿರುವುದು ಇವೆಲ್ಲವುಗಳಿಂದಲೂ ಆಯಾಸವಾಗಬಹುದು. ಕೈಗಾರಿಕೆಗಳಲ್ಲಿ ಇನ್ನೂ ಹಲತೆರನ ಕಾರಣಗಳೂ ಇವೆ.

ಪುಷ್ಟಿಸಾಲದೆ ಸ್ನಾಯು ದಣಿದರೂ ಬಹಳ ಹೊತ್ತು ದುಡಿದುದರಿಂದ ಅವರಲ್ಲಿ ಮುಖ್ಯವಾಗಿ ಇಂಗಾಲದ ಡಯಾಕ್ಸೈಡು, ಹಾಲಿನಾಮ್ಲದ (ಲ್ಯಾಕ್ಟಿಕ್ ಆ್ಯಸಿಡ್) ತೆರನ ಕಸರಿನ ಪದಾರ್ಥಗಳು ಹೆಚ್ಚು ಕೂಡುವುದೇ ಕಾರಣ. ಸ್ನಾಯುಗಳ ಮಿತಿಯನ್ನು ದಣಿವು ತೋರಿಸಿ, ಇನ್ನಷ್ಟು ಕೆಡದಂತಿರಿಸಲು ವಿಶ್ರಾಂತಿ ಬಯಕೆ ಸೂಚಿಸುತ್ತದೆ. ಆಯಾಸವನ್ನು ಲೆಕ್ಕಿಸದವರಿಗೆ ಹೀಗೆ ಕಸರಿನ ಪದಾರ್ಥಗಳನ್ನು ಕೂಡಿಹಾಕಿಕೊಳ್ಳುವ ಮಿತಿ ದೊಡ್ಡದಾಗಿರುವುದು, ಇಲ್ಲವೇ ಇನ್ನೂ ನಿಧಾನ ಆಗಬಹುದು.

**ಅಳತೆ:** ಅಂಗಕೆಲಸದಿಂದಲೋ ಕಣ್ಣರಿಕೆಯಿಂದಲೋ ಅನುಭವದಿಂದಲೋ ಆಯಾಸವನ್ನು ಗಮನಿಸಿ ಅಳೆಯಬಹುದು.

ಅನುಭವದಿಂದ ಅಳೆವ ಬಗೆ ತೀರ ಸಾಮಾನ್ಯವಾದುದು. ಆದರೆ ದಣಿವು, ತೊಂದರೆ, ನೋವು, ನಿತ್ರಾಣಗಳನ್ನು ಅನುಭವಿಸುವುದರ ಅಳತೆ ನಿಖರವಲ್ಲ. ಏಕೆಂದರೆ ಕೇವಲ ಅನುಭವವನ್ನು ಇಷ್ಟೆಂದು ಎಣಿಸುವಂತಿಲ್ಲ, ಅಳೆಯುವಂತಿಲ್ಲ, ತೋರಿ ಗುರುತಿಸುವಂತಿಲ್ಲ. ಮನಸ್ಸಿಗೆ ದಣಿವೆನಿಸಿದರೆ ಅಂಗಗಳಲ್ಲೂ ದಣಿವು ಕಾಣಬಹುದು. ಮನಸ್ಸಿನ ನಿತ್ರಾಣ ಸಹಜವಾಗಿ ಹಗಲಿನ ಕೊನೆಯಲ್ಲಿ ನಿದ್ದೆ ಬರಿಸಿ ಬೆಳಗಿನ ಹೊತ್ತಿಗೆ ಚೇತರಿಸಿಕೊಳ್ಳುವಂತೆ ಮಾಡುವುದು. ಮನಸ್ಸಿಗೆ ಆಯಾಸ ಆಗಿರುವವನೇ ಆಗಿಂದಾಗ್ಗೆ ಎಷ್ಟು ನಿತ್ರಾಣ ಎನ್ನಿಸುತ್ತಿದೆಯೆಂದು ಗುರುತಿಸುತ್ತಾ ಇರುವುದು ಈ ತೆರನ ಒಂದು ಉಪಾಯವಿದೆ. ಇವನ್ನೂ ಗೆರೆ ಚಿತ್ರದಲ್ಲಿ ಗುರುತಿಸಿ, ಕೆಲಸದ ದುಡಿತದಲ್ಲಿನದರೊಂದಿಗೆ ಹೋಲಿಸಿದರೆ, ಬಹು ಮಟ್ಟಿಗೆ ಎರಡಕ್ಕೂ ಚೆನ್ನಾಗಿ ಹೊಂದಾಣಿಕೆ ಕಾಣುವುದು. ಮೈ ನಿತ್ರಾಣ ತೋರುವ ಎಷ್ಟೋ ಮುಂಚೆ ಮನದ ದಣಿವು ಗೊತ್ತಾಗುತ್ತದೆ.

**ಸುಸ್ತು:** ಆರೋಗ್ಯ ಕೆಟ್ಟಿರುವಾಗಲೋ ರೋಗದ ಮುನ್ಸೂಚನೆಯಾಗೋ ಆಯಾಸ ಎಡೆಬಿಡದೆ ಇದ್ದೇ ಇರಬಹುದು. ಇದೇ ಸುಸ್ತು. ಹಲವಾರು ಕಾರಣಗಳಿಂದ ಸ್ನಾಯುಗಳ, ಮನಸ್ಸಿನ ಬಲ ಕುಂದಿ, ಮುಂದೆ ಏನೇನೂ ಕೆಲಸವಾಗದಷ್ಟು ನಿತ್ರಾಣವಾಗುವುದು. ನರಗಳ ಸ್ನಾಯುಗಳ ಚಟುವಟಿಕೆಯಿಂದ ಮೈಯಲ್ಲಿ ವಿಷಪದಾರ್ಥಗಳು ಕೂಡಿಕೊಳ್ಳುತ್ತವೆ. ಎಂದಿನ ಕೆಲಸಕ್ಕೂ ಆತಂಕವಾಗುವುದು. ಸುಸ್ತಿನಲ್ಲಿ ಮನಸ್ಸಿನ, ಮೈಯ ನಿತ್ರಾಣ ಮಿತಿಮೀರಿ, ಯಾವುದರಲ್ಲೂ ಆಸಕ್ತಿಯಿರದೆ, ತಲೆನೋವು, ಕೆರಳು, ಮನಗುಂದುವೆ, ಮರೆವು, ಯಾವುದರಲ್ಲೂ ಮನಸ್ಸಿಡಲು ಕಷ್ಟ, ಅಲಸಿಕೆ, ಕೊನೆಯದಾಗಿ ತಬ್ಬಿಬ್ಬೂ ಆಗಿ ಕೆಲವೇಳೆ ಭ್ರಮೆಯಿಂದ ಹುಚ್ಚುಹುಚ್ಚಾಗಿ ತೋರಬಹುದು. ಮೈಯಲ್ಲಿನ ಸ್ನಾಯುಗಳು ಸಣ್ಣಗಾಗಿ ಬಲಗುಂದಿ, ಅಜೀರ್ಣ, ಮಲಗಟ್ಟು, ನರಗಳ ಹಿಮ್ಮರಿಗೆಗಳು (ರಿಫ್ಲೆಕ್ಸಸ್) ಅತಿಯಾಗಬಹುದು. ಬಲು ಕೆಲಸ ಮಾಡುವ ಯಾವುದಾದರೂ ಕೆಲವು ಸ್ನಾಯುಗಳೂ ಸುಸ್ತಾಗಬಹುದು.

ಮೈಯಲ್ಲಿನ ಅಂಗಗಳ ಕೆಲಸಗಳನ್ನು ಅಳೆವುದರಿಂದಲೂ ಆಯಾಸದ ಮಟ್ಟವನ್ನು ತಿಳಿಯಬಹುದು. ಮುಖ್ಯವಾಗಿ ಮೈಯಲ್ಲಿನ ಶಕ್ತಿಗಳ ಕೊಳ್‌ಕೊಡುಗೆಗಳ ವೇಗದಿಂದ ಅಳೆಯಬಹುದು. ಜೀವವಸ್ತುಕರಣದ ವೇಗದಿಂದ(ಮೆಟಬಾಲಿಕ್ ರೇಟ್) ಇದು ಚೆನ್ನಾಗಿ ಗೊತ್ತಾಗುವುದು. ಸಾಮಾನ್ಯವಾಗಿ ನಾಡಿ, ರಕ್ತದ ಒತ್ತಡ, ಮೈಕಾವು, ಉಸಿರಾಟಗಳನ್ನು ಗುರುತಿಸಿದರೆ ತಿಳಿಯುತ್ತದೆ. ಜೀವವಸ್ತುಕರಣದಿಂದ ಮೈಯಲ್ಲಿ ಹುಟ್ಟಿಕೊಂಡ, ಅಂದರೆ ಪುಪ್ಪುಸಗಳಿಂದ ಹೊರಬಿದ್ದ ಇಂಗಾಲದ ಡಯಾಕ್ಸೈಡಿಗೂ ಒಳಗೆ ಸೇದಿಕೊಂಡ ಆಮ್ಲಜನಕಕ್ಕೂ ಇರುವ ಪರಿಮಾಣದ ಲೆಕ್ಕದಿಂದಲೂ ತಿಳಿಯಬಹುದು. ಇದನ್ನೇ ಅಡ್ರಿನಲ್ ರಗಟೆಯಿಂದ (ಕಾರ್ಟೆಕ್ಸ್) ರಕ್ತದಲ್ಲಿ ಸೇರಿದ 17– ಕೀಟೊಸ್ಟಿರಾಯ್ಡ್‌ಗಳ ತೆರನ ಗ್ರಂಥಿಗಳ ಸುರಿಕೆಗಳನ್ನೋ ರಕ್ತದಲ್ಲಿ ಹೆಚ್ಚಿಕೊಳ್ಳುವ ಹಾಲಿನಾಮ್ಲ, ರಂಜಕ, ಕೊಲೆಸ್ಟಿರಾಲ್, ಕ್ರಿಯಾಟಿಸೀನುಗಳ ಪ್ರಮಾಣಗಳಿಂದ ಕೂಡ ಕಂಡುಕೊಳ್ಳಬಹುದು.

ಸ್ನಾಯುಗಳ ದುಡಿತ ಜೋರಾಗಿದ್ದಾಗ ಇವುಗಳ ಲೆಕ್ಕ ಖಚಿತ. ಆದರೆ ಕೇವಲ ಕೂತಲ್ಲೇ ಕೂತಿದ್ದರೆ, ಬರಿಯ ಚಿಂತೆಗಳಲ್ಲಿ ಮುಳುಗಿದ್ದರೆ ಆಗುವ ವ್ಯತ್ಯಾಸಗಳು ತೀರ ಸ್ವಲ್ಪ. ಅಳತೆಗೂ ಸಿಗವು. ಆ ಹೊತ್ತಿನಲ್ಲಿ ಜೀವ ವಸ್ತುಕರಣ ತುಸು ಹೆಚ್ಚಿರುವುದು ಕಂಡರೂ ಚಿಂತೆಯೊಂದಿಗೇ ಬರುವ ಸ್ನಾಯುಗೆಲಸಗಳೇ ಕಾರಣವಾಗಿರಬಹುದು. ಚಿಂತೆಯೊಂದಿಗೆ

ಯಾವಾಗಲೂ ತಲೆ, ಕೊರಳುಗಳ ಸುತ್ತಮುತ್ತಲ ಸಣ್ಣ ಸ್ನಾಯುಗಳಲ್ಲೂ ಕೊನೆಗೆ ಮೈ ನಿಲುವಿನ ದೊಡ್ಡ ಸ್ನಾಯುಗಳಲ್ಲಿ ಕೂಡ ಸೆಳೆತಗಳು ಸೇರುತ್ತಿರುವುವು. ಮನದ ಉದ್ರೇಕದ ಒತ್ತಡವಿದ್ದೇ ಇರುವುದು. ಇದಕ್ಕಾಗಿ ತನ್ನಿಯಮಿಕ ನರದ ಮಂಡಲದ (ಆಟೊನಾಮಿಕ್ ನರ್ವಸ್ ಸಿಸ್ಟಂ) ಅಂಕೆಯಲ್ಲಿರುವ ಗ್ರಂಥಿಗಳು ನಯ ಸ್ನಾಯುಗಳೂ ಹೆಚ್ಚಿನ ಶಕ್ತಿಯನ್ನು ಬಳಸುತ್ತವೆ. ಸ್ನಾಯುವಿನಲ್ಲಿನ ಬಿಗಿತಗಳನ್ನು, ಅದರಲ್ಲಿ ಹರಿದ ವಿದ್ಯುತ್ತನ್ನು ಹರಿಬಿಟ್ಟು, ಚರ್ಮದಲ್ಲಿ ಹರಿವ ವೇಗದ ಬದಲಾವಣೆಗಳಿಂದಲೂ ಮನಸ್ಸಿನ ಉದ್ವೇಗವನ್ನು ಗುರುತಿಸಬಹುದು.







**ಆಯಾಸ, ಸುಸ್ತುಗಳನ್ನು ಅಳೆವ ಬೆರಳಕೆಲಸ ಚಿತ್ರಕ. ತೋರುಬೆರಳೂ ಉಂಗುರ ಬೆರಳೂ ಲೋಹದ ಕೊಳವೆಗಳಲ್ಲಿವೆ. ಮಣಿಕಟ್ಟೂ ಕೈಯೂ ಪಟ್ಟಿಗಳೊಳಗಿವೆ. ದಾರಕಟ್ಟಿದ ನಡುಬೆರಳು ತೂಕವನ್ನು ಎಳೆದು ಬಿಡುತ್ತಿರುವುದು. ಇದನ್ನು ತಿರುಗುವ ಉರುಳೆಯ ಮೇಲೆ ಸೂಜಿ ಗುರುತಿಸುತ್ತಿರುವುದು. ಹೀಗೆ ಗುರುತಿಸಿದ ಬೆರಳಕೆಲಸ ಚಿತ್ರ ಮೇಲುಗಡೆ ತೋರಿಸಿದೆ.**

ಕಣ್ಣರಿಕೆಗಳಿಂದ ಆಯಾಸವನ್ನು ಎರಡು ರೀತಿಗಳಲ್ಲಿ ಪರೀಕ್ಷಿಸಬಹುದು. ಒಂದೇ ಸಮನೆ ಕೆಲಸ ಮಾಡುತ್ತಿರುವವರ ಸಾಧನೆಯನ್ನು ಆಗಾಗ್ಗೆ ಗುರುತಿಸಿಟ್ಟುಕೊಂಡು ಅಳೆಯಬಹುದು. ಆಗಿಂದಾಗ್ಗೆ ಮಾಡುವ ಕೆಲಸ ಬಿಟ್ಟು ಇನ್ನೇನಾದರೂ ಬೇರೆ ಕೆಲಸಕೊಟ್ಟು ಒಬ್ಬನಿಂದಾಗುವ ಕೆಲಸವನ್ನು ಅಳೆಯಬಹುದು. ಅನೇಕ ಸಂಶೋಧಕರು ಚುರುಕಾಗಿ ಮಿನುಗು ಕೂಡುವ ವೇಗವನ್ನು ಇದಕ್ಕಾಗಿ ಬಳಸುತ್ತಿರುವರು. ಕಪ್ಪು, ಬಿಳಿಯ ಪಟ್ಟೆಗಳನ್ನು ಸುತ್ತಲೂ ಬಳಿದಿರುವ ಒಂದು ಗುಂಡು ತಟ್ಟೆಯನ್ನು ತಿರುಗಿಸುತ್ತ ನೋಡುವವನಿಗೆ ಇದು ನಸು ಬೂದುಬಣ್ಣವಾಗಿ ತೋರುವಾಗಿನ ವೇಗವನ್ನು ಗುರುತಿಸುವರು. ಆಯಾಸ ಆಗಿರುವಾಗ ಇದರ ವೇಗ ಇಳಿದಿರುವುದು.

ಮೈಯಲ್ಲಿ ಯಾವುದಾದರೂ ಒಂದೆಡೆಯಲ್ಲಿ ಆಗಿರುವ ಸ್ನಾಯುವಿನ ನಿತ್ರಾಣವನ್ನು ಅಳೆಯುವ ಒಂದು ಸಾಧನವಿದೆ. ಬೆರಳಿನ ಕೆಲಸ ಚಿತ್ರಕದಲ್ಲಿ (ಎರ್ಗೊಗ್ರಾಫ್) ಒಂದೆಡೆಯಲ್ಲಿರುವ ಬೆರಳಿಗೆ ದಾರಕಟ್ಟಿ ಗೊತ್ತಾದ ತೂಕ ತೂಗು ಕಟ್ಟಿರುತ್ತದೆ. ಒಂದೇ ಸಮನಾಗಿ ಇದನ್ನು ನಡು ಬೆರಳಿಂದ ಎಳೆಯುತ್ತಿರಬೇಕು. ತಿರುಗುತ್ತಿರುವ ಉರುಳೆಯ ಮೇಲೆ ಹಾಗೆ ಎಳೆದ ದೂರವನ್ನು ಸೂಜಿಯೊಂದು ಗೀಚಿ ಗುರುತಿಸುತ್ತಿರುವುದು. ಇದರಿಂದ ಬಂದ ಕೆಲಸಚಿತ್ರ (ಎರ್ಗೊಗ್ರಾಂ) ಬಲು ದುಡಿದ ಹೊತ್ತು, ನಿಧಾನವಾಗಿ ಬೀಳಾಗುವುದು, ಕೊನೆಗೆ ಸುಸ್ತಾಗಿ ಎಳೆಯದಾಗುವುದನ್ನೂ ಸೂಚಿಸುತ್ತದೆ. ತೂಗು ಹಾಕಿದ ತೂಕಕ್ಕೆ ತಕ್ಕಂತೆ ಕೆಲವೇ ನಿಮಿಷಗಳಲ್ಲಿ ಆಯಾಸ ತಲೆದೋರುವುದು.

ಮನಸ್ಸಿನ ಕೆಲಸಗಳಲ್ಲೂ ಇದೇ ಇಳಿವು ಕಂಡರೂ ಪೂರ್ತಿ ಸುಸ್ತು ಅಪರೂಪ. ಕೆಲವೇಳೆ ತಂತಾನಾಗಿ ಕೆಲಸ ಸಾಗುತ್ತಲೇ ಹೋಗುತ್ತಿರುವ ಮಟ್ಟಕ್ಕೆ ಬಂದು ನಿಂತುಬಿಡಬಹುದು. ಬುದ್ಧಿಗೆಲಸಗಳಿಗೆ ಆಗಾಗ್ಗೆ ತಮ್ಮ ಚಿತ್ತಕ್ಕೆ ತಡೆಯಾಗುವುದು ಅವರಿಗೇ ಗೊತ್ತಿರದು. ನರಮಂಡಲ ತಂತಾನು ಪಾಲಿಸಿಕೊಳ್ಳುವ ಉಪಾಯವಿದು. ಬಿಡುವಿಲ್ಲದೆ ಬೇಜಾರಿನ ಕೆಲಸವನ್ನು ಮಾಡಿದ್ದೇ ಮಾಡುವುದು, ಬಹುಮಟ್ಟಿಗೆ ಮನಸ್ಸಿನ ಆಯಾಸಕ್ಕೆ ಮುಖ್ಯ ಕಾರಣ. ಕೆಲವರು ಇದನ್ನೇ ಆಯಾಸ ಎನ್ನದೆ ಬೇಜಾರು, ನಿರಾಸಕ್ತಿ ಎನ್ನುವರು.

**ಕೈಗಾರಿಕೆಯಲ್ಲಿ ಆಯಾಸ :** ಕೈಗಾರಿಕೆಯ ಕಾರ್ಖಾನೆಗಳಲ್ಲಿ ಉತ್ಪತ್ತಿಯನ್ನು ಏರುಪೇರು ಮಾಡುವುದರಲ್ಲಿ ಆಯಾಸದ ಪಾತ್ರ ಹಿರಿದು. ಆಯಾಸವೆಂದರೆ ಏನೆಂದು ಖಚಿತವಾಗಿ ಯಾರೂ ಹೇಳದಿದ್ದರೂ, ಎಲ್ಲ ತೆರನ ಆಯಾಸ ಇರುವುದನ್ನೂ ಅದರ ಹರಿವನ್ನೂ ಅಳೆವ ಖಚಿತ ಪರೀಕ್ಷೆ ಇಲ್ಲವಾದರೂ ಕೈಗಾರಿಕೆಗಳ ಉತ್ಪತ್ತಿಗೆ ಅಡ್ಡಿಯಾಗುವ ಮುಖ್ಯ ಕಾರಕಗಳಲ್ಲಿ ಇದೂ ಒಂದು. ಎಂದೆಂದಿಗೂ ತಲೆಹಾಕುವ ತೊಡರು, ಆಯಾಸ ಕೆಲಸಗಾರನಿಗೆ ಗೊತ್ತಾಗುವ ಮೊದಲೇ ಅವನನ್ನು ಮುತ್ತಿ ನಿತ್ರಾಣಗೊಳಿಸುತ್ತದೆ. ಇಲ್ಲಿ ಎಲ್ಲರಿಗೂ ಗೊತ್ತಿರುವ ನಿಜವಾದ ದಣಿವು, ಸುಸ್ತುಗಳಲ್ಲ. ಈ ಅನುಭವಗಳು ಅವನಿಗೆ ಬರುತ್ತಲೇ ಇರುವುವು. ದಣಿವು ಗೊತ್ತಾಗುವ ಮೊದಲೇ ಈ ಆಯಾಸ ತಲೆ ಹಾಕಿರುವುದು. ಹೀಗೆ ಯಾವುದಾದರೂ ಉತ್ಸಾಹಕರ ಚಟುವಟಿಕೆಯಲ್ಲಿ ನಿರತನಾಗಿರುವ ಒಬ್ಬನ ಆಯಾಸ ಅವನಿಗೆ ಗೊತ್ತಾಗದೆಯೇ ಆವರಿಸಿ ಅವನು ಮಾಡುವ ಕೆಲಸದಲ್ಲಿ ತಪ್ಪುಗಳಾಗಬಹುದು, ಚೆನ್ನಾಗದಿರಬಹುದು, ಕೊನೆಗೆ ಕೆಡಬಹುದು.

ಆಯಾಸ ಅವರಿಸಿದಾಗ ಕೆಲಸಗಾರನ ಉತ್ಪತ್ತಿ ಕುಗ್ಗುತ್ತ ಹೋಗುವುದು. ಆದ್ದರಿಂದ, ಆಯಾಸ ಹೆಚ್ಚಿಸುವ ಯಾವ ಕಾರಣವೇ ಆಗಲಿ, ಕೈಗಾರಿಕೆಯಲ್ಲಿನ ಉತ್ಪತ್ತಿಯನ್ನೂ ಇಳಿಸುತ್ತದೆ. ಆದರೆ ಆಯಾಸವನ್ನು ಮುಂದೂಡುವುದಾದರೆ ಉತ್ಪತ್ತಿ ಏರುವುದು. ಒಂದನೆಯ ಮಹಾಯುದ್ಧದಿಂದೀಚೆಗೆ ಕೈಗಾರಿಕಾ ವೈದ್ಯರಲ್ಲಿ ಹಲವಾರು ಸಂಶೋಧನೆಗಳಾಗಿವೆ. ಕೆಲಸಗಾರನ ದುಡಿಮೆಯ ಬಲವನ್ನು ಖಚಿತವಾಗಿ ಕಂಡುಹಿಡಿಯುವ ಯತ್ನಗಳಾಗಿವೆ. ಉತ್ಪತ್ತಿಯನ್ನು ಹೆಚ್ಚಿಸುವುದೇ ಮುಖ್ಯ ಗುರಿಯಾದರೂ ಕೆಲಸಗಾರನ ಆರೋಗ್ಯ ಸುಪಾಲನೆಗಳ ಕಡೆ ಗಮನ ಹರಿಸದಿಲ್ಲ. ಆಯಾಸವನ್ನು ಕಳೆವ, ಮನೋದೃಢತೆ ಹೆಚ್ಚಿಸುವ ಕ್ರಮಗಳು ಹೆಚ್ಚಾಗಿ ಜಾರಿಯಲ್ಲಿವೆ.

ಇದಕ್ಕೆ ಒಂದು ಉದಾಹರಣೆ ಇದೆ. ಒಂದು ಕಾರ್ಖಾನೆಯಲ್ಲಿ ಇನ್ನೊಂದು ಹೊಸ ಭಾಗವನ್ನು ಕಟ್ಟಿ, ವಾರಕ್ಕೆ 5,000 ಹೆಚ್ಚಿಗೆ ಸಾಮಾನುಗಳನ್ನು ತಯಾರಿಸಲು ಯೋಜಿಸಿದರು. ಹೊಸಬರನ್ನು ಕೆಲಸಕ್ಕೆ ನೇಮಿಸಿಕೊಂಡರು. ಆ ಕೆಲಸದಲ್ಲಿ ಇವರಾರಿಗೂ ಏನೇನೂ ಅನುಭವ ಇರಲಿಲ್ಲ. ಆದರೂ 6 ತಿಂಗಳು ಕಳೆದ ಮೇಲೆ ಎಲ್ಲರಿಗೂ ಸೋಜಿಗವಾಗುವಂತೆ, ಹಳಬರು ವಾರಕ್ಕೆ 5,000 ಸಾಮಾನುಗಳನ್ನು ತಯಾರಿಸುತ್ತಿದ್ದರೆ, ಹೊಸಬರು ವಾರಕ್ಕೆ 13,000 ಸಾಮಾನುಗಳನ್ನು ತಯಾರಿಸಿದ್ದರು. ಹಳಬರಿಗಿದ್ದ ಯಂತ್ರಸೌಕರ್ಯಗಳು, ಅನುಕೂಲಗಳೇ ಹೊಸಬರಿಗೂ ದೊರೆತಿದ್ದುವು, ಇದನ್ನು ಬಿಡಿಸಿ ನೋಡಿದ ಪರಿಣತರು ಹೇಳಿದಂತೆ, ಹಳಬರಿಗೆ ಹಲವಾರು ಕ್ರಮಗಳು, ನಡವಳಿಕೆಗಳು, ಅಭ್ಯಾಸಗಳು ಎಷ್ಟೋ ಕಾಲದಿಂದಲೂ ಮಾಮೂಲು ಆಗಿಬಿಟ್ಟಿದ್ದುವು. ಈ ಕಟ್ಟುಗಳು ಹೊಸಬರನ್ನು ಬಿಗಿದಿರಲಿಲ್ಲ. ಈ ಕಾರಣಗಳಿಂದ ಹಳಬರಲ್ಲಿ ಆಯಾಸ ಬೇಗನೆ ಬರುತ್ತಿತ್ತು. ಹೀಗೇ ಕೆಲಸದ ವೇಳೆಯೂ ದುಡಿವ ಕ್ರಮಗಳೂ, ಆಯಾಸಕ್ಕೆ ಕಾರಣ ಆಗಬಹುದು.

**ಕೆಲಸದ ವೇಳೆ :** ಇದು ಬಲು ಮುಖ್ಯ. ಹೆಚ್ಚು ಹೊತ್ತು ಕೆಲಸ ಮಾಡಿದಷ್ಟೂ ಹೆಚ್ಚು ಉತ್ಪತ್ತಿ ಆಗುವುದೆಂದು ತೋರುವುದಾದರೂ ನಿಜವಾಗಿ ಆಯಾಸ ಬೇಗನೆ ಆವರಿಸಿ ಅವನ ದುಡಿಮೆ ಕುಗ್ಗುತ್ತ ಹೋಗುವುದು. ಯಾವ ಕೆಲಸದಲ್ಲೇ ಇರಲಿ, ಅದರಿಂದ ಚೇತರಿಸಿಕೊಳ್ಳಲೂ ಒಂದು ಗೊತ್ತಾದ ಅವಧಿ ಬೇಕೇ ಬೇಕು. ಚೇತರಿಸಿಕೊಳ್ಳಲು ಬಿಡುವನ್ನು ಮೊಟಕು ಮಾಡಿದ ಹಾಗೆಲ್ಲ ಕೆಲಸವೂ ಕೆಡುತ್ತ ಹೋಗುವುದು.

ಕೆಲಸಗಳನ್ನು ಅಂಕೆಗೊಳಿಸುವ ಕೇಂದ್ರ ನರಮಂಡಲದಲ್ಲಿನ ನರಕಣಗಳೂ ಬಹುಮಟ್ಟಿಗೆ ಆಯಾಸಕ್ಕೆ ಈಡಾಗುತ್ತವೆ. ಇದರಿಂದಲೇ ಕೆಲಸಗಾರರು ತಮ್ಮ ಕೆಲಸದ ರೀತಿಯನ್ನು ಬದಲಾಯಿಸಿದರೆ, ಮಿದುಳಲ್ಲಿ ನರಕಣಗಳ ಹೊಸ ತಂಡವೇ ಕೆಲಸಕ್ಕಿಳಿಯುವುದರಿಂದ ಆಯಾಸ ಬೇಗನೆ ಬಾರದು. ಒಂದೊಂದು ನರಕಣಕ್ಕೂ ಅದರದೇ ಕೆಲಸಗೈವ, ವಿರಮಿಸುವ ತಾಳಗತಿ ಇರುವುದು. ಇದಕ್ಕೆ ಸರಿಯಾಗಿ ಕೆಲಸಗಳ ವೇಳೆ, ಯಂತ್ರಗಳ ಚಲನೆಗಳೂ ಇದ್ದಲ್ಲಿ ಕೆಲಸವೂ ಹಸನಾಗಿರುವುದು. ಇದಕ್ಕೂ ಹೆಚ್ಚಿನ ಅವಸರವಾದರೆ ಆಯಾಸ ತಲೆದೋರುವುದು. ಆಯಾಸಗೊಳಿಸುವ ಕೆಟ್ಟಕಾರಕಗಳನ್ನು ದೂರವಿರಿಸಿ, ಕೆಲಸಗಾರರು ಚೆನ್ನಾಗಿ ಕೆಲಸಮಾಡಿ ಹೆಚ್ಚು ಉತ್ಪತ್ತಿ ಕೈಗೆ ಬರುವ ಉಪಾಯಗಳನ್ನು ಕಂಡುಕೊಳ್ಳಬೇಕು.

ಇಂಗ್ಲೆಂಡಿನಲ್ಲಿ, ಕಳೆದ ಮಹಾಯುದ್ಧದ ಕಾಲದಲ್ಲಿ ದಿನವೂ ಅಲ್ಲದೆ ವಾರವಾರವೂ ಮಾಡುವ ಕೆಲಸದ ವೇಳೆಗೆ ಹೆಚ್ಚಿನ ತಾಸುಗಳನ್ನು ಸೇರಿಸಲು ಯತ್ನಿಸಿದರು. ವಾರದಲ್ಲಿ ದುಡಿವ ತಾಸುಗಳನ್ನು 60ಕ್ಕೇರಿಸಿದಾಗ ಬರುಬರುತ್ತ ಕೆಲಸ ಕೆಡುತ್ತ ಬಂದಿತು. ಬೇಗನೆ, ದಿನಕ್ಕೆ 8 ತಾಸುಗಳ, ವಾರಕ್ಕೆ 40–44 ತಾಸುಗಳ, ಸರಿಸಮವಾದ ಹಿಂದಿನ ಪದ್ಧತಿಗೇ ಹೋಗಬೇಕಾಯಿತು. ನಡುವೆ ಎಷ್ಟು ಬಾರಿ, ಎಷ್ಟು ಹೊತ್ತು ವಿರಾಮ ಇರಬೇಕೆನ್ನುವುದೂ ಮುಖ್ಯವೇ. ಜವಾಬ್ದಾರಿ ಕೆಲಸಗಳಾದರೆ, ಚುಟುಕು ವಿರಾಮಗಳು ಆಗಾಗ್ಗೆ ಇರಬೇಕು. ವಿರಾಮವನ್ನು ಹೇಗೆ ಕಳೆಯಬೇಕು ಎನ್ನುವುದು ಮಾಡುವ ಕೆಲಸವನ್ನು ಅನುಸರಿಸಿರುವುದು. ಮೈ ದುಡಿತವೇ ಹೆಚ್ಚಿದ್ದರೆ ಪೂರಾ ಆರಾಮ ಬೇಕು. ಬುದ್ಧಿಗೆಲಸಿಗಳಾದರೆ, ಒಂದಿಷ್ಟು ಅಡ್ಡಾಟ, ಹಗುರ ಮನರಂಜನೆ, ಹರಟೆ, ಕಾಫಿ ವಿರಾಮವೋ ಸಾಕಾಗುತ್ತದೆ. ಹೆಚ್ಚು ಕಾಲ ವಿರಾಮವಾದರೆ, ಮತ್ತೆ ಕೆಲಸ ಕೈಗೆತ್ತಿಕೊಳ್ಳುವುದು ನಿಧಾನವಾಗುವುದು. ಎಷ್ಟೋ

ವೇಳೆ ಕೆಲಸವನ್ನೇ ಬದಲಾಯಿಸಿದರೆ ಆರಾಮವಾದಷ್ಟೇ ಬೇಗನೆ ಆಯಾಸ ಕಳೆವುದು. ಕೆಲವೇಳೆ, ಮಾಡುವ ಕೆಲಸಕ್ಕಿಂತಲೂ ಅದನ್ನು ಮಾಡುವ ರೀತಿ ಮುಖ್ಯ. ಇದಕ್ಕಾಗಿ, ಕೆಲಸಕ್ಕೆ ಹಿಡಿವ ಹೊತ್ತು, ಚಲನೆಗಳನ್ನು ಲೆಕ್ಕಹಾಕಿ, ಕಡಿಮೆ ಶ್ರಮ, ದುಡಿತಗಳಿಂದ ಇನ್ನೂ ಬೇಗನೆ ಅದೇ ಕೆಲಸವನ್ನು ಚೆನ್ನಾಗಿ ಮಾಡುವ ವಿಧಾನಗಳನ್ನು ಕಂಡುಹಿಡಿಯುವ ಪದ್ಧತಿಗಳು ಈಗ ಜಾರಿಗೆ ಬಂದಿವೆ. ದಿನವೆಲ್ಲ ಮಾಡಿದ್ದನ್ನೇ ಮಾಡುತ್ತಲೇ ಇದ್ದರೆ ಬೇಜಾರು ಬಂದು ಆಯಾಸ ಬೇಗನೆ ಹುಟ್ಟುವುದು. ಅದರಲ್ಲೂ ತಂತಾನಾಗಿ ನಡೆವ ಯಂತ್ರಗಳು ಬಂದ ಮೇಲಂತೂ ಇದು ಇನ್ನೂ ಮುಖ್ಯವಾಯಿತು. ಏಕೆಂದರೆ, ಯಂತ್ರದ ಮೇಲ್ವಿಚಾರಕ ಯಾವಾಗಲೂ ಬಲುಚುರುಕಾಗಿ ಇರಬೇಕಾಗುತ್ತದೆ. ಇಲ್ಲಿ ಬೇಜಾರು ತಲೆಹಾಕಿದರೆ, ಗಮನ ಎತ್ತಲೋ ಹರಿವುದು, ಕೆಲಸವೂ ಕೆಡುವುದು.

ಆಯಾಸವನ್ನು ಬೇಗನೆ ಹುಟ್ಟಿಸುವ ಕೆಲಸದ ಸ್ಥಿತಿಗಳು ಹಲವಾರಿವೆ. ಸರಿಯಾಗಿ ಗಾಳಿಯಾಡುತ್ತಿರದಿದ್ದಲ್ಲಿ ಬೇಸಿಗೆ ಕಾಲದಲ್ಲಿ ಯಾವಾಗಲೂ ಉತ್ಪತ್ತಿ ತಗ್ಗುವುದು. ಹಲವಾರು ವೃತ್ತಿಗಳಲ್ಲಿ ಕೃತಕ ದೀಪಗಳ ಬೆಳಕುಗಳಲ್ಲಿ ಕೆಲಸ ಮಾಡುವ ಹೊತ್ತಿನಲ್ಲೂ ತಗ್ಗುತ್ತದೆ. ಹಾಗೇ ಕಾರ್ಖಾನೆಯಲ್ಲಿ ಆಕಸ್ಮಿಕಗಳು ಮೇಲಿಂದ ಮೇಲೆ ಆಗುತ್ತಿದ್ದರೆ, ಅದರ ಅಂಜಿಕೆಯಿಂದ ಚಿಂತೆಯಾಗಿ ಉತ್ಪತ್ತಿ ತಗ್ಗುವುದು. ಮೇಲ್ವಿಚಾರಕನ, ಒಂದಿಗನ ಮೇಲಿನ ಮನಸ್ತಾಪ ಕೋಪಗಳಿಂದಲೂ ಬೇಗನೆ ಆಯಾಸವಾಗಬಹುದು.

**ಆವರಣ:** ಕೆಲಸ ಮಾಡುವ ಆವರಣದಲ್ಲಿ ಬೇಗನೆ ಆಯಾಸ ಹುಟ್ಟಿಸುವ ಕಾರಕಗಳು ಹಲವಾರಿವೆ: ಕಣ್ಣಿಗೆ ಕುಕ್ಕುವ, ನೆರಳು ಮೇಲೆ ಬೀಳುವ, ಸಾಲದಷ್ಟು ಬೆಳಕು; ತಲೆಚಿಟ್ಟು ಹಿಡಿಸುವಷ್ಟು ಜೋರಿನ ಸದ್ದು, ಗಲಾಟೆ; ಕಾವು, ತೇವ, ಗಾಳಿಯ ಚಲನೆ ಇವು ಚೆನ್ನಾಗಿರದ, ತಡೆಯಲಾರದ ಹವಾಗುಣ, ತೇವ ಅಷ್ಟಾಗಿಲ್ಲದಿದ್ದರೆ ಕೆಲಸಗಾರರು ಹೆಚ್ಚಿನ ಕಾವನ್ನು ತಡೆಯಬಲ್ಲರು. ಗಾಳಿ ಚೆನ್ನಾಗಿ ಬೀಸುತ್ತಿದ್ದರೆ, ತೇವ ವಿಪರೀತವಾಗಿದ್ದರೂ ತಡೆದುಕೊಳ್ಳ ಬಹುದು. ನಿಂತಲ್ಲಿ ನಿಂತಿರುವ ಗಾಳಿಯಲ್ಲಿ ಮನಗುಂದುವುದು. ಆದರೆ, ತೇವ ಅಷ್ಟೇ ಇದ್ದು ಕಾವು ಬಹಳವಾಗಿ ಏರಿದರೂ ಆಯಾಸ ಬೇಗನೆ ತೋರುತ್ತದೆ. ಬಲು ಕಾವೇರಿದರೆ, ನಾಡಿ ಜೋರಾಗಿ ಬಡಿಯುವುದು. ರಕ್ತಹರಿವು ಸಾಲದಾಗಿ ಕೈಕಾಲುಗಳು ಚಳುಕು ಹಿಡಿಯುತ್ತವೆ. ಬಿಸಿಲಿನ ಧಕ್ಕೆ, ಸುಸ್ತು ಆಗುವುವು. ಉಪ್ಪನ್ನು ಹೆಚ್ಚಾಗಿ ಸೇವಿಸಿದರೆ ತುಸು ಶಮನ, ಕೆಲವು ಕಾರ್ಖಾನೆಗಳಲ್ಲಿ ಏಳುವ ಹೊಗೆ, ವಿಷದ ಧೂಳು, ವಾಸನೆಗಳಿಂದಲೂ ಕೆಲಸಗಾರನ ಆರೋಗ್ಯ ಕೆಡುವುದಲ್ಲದೆ ಆಕಸ್ಮಿಕಗಳೂ ಹೆಚ್ಚಾಗುತ್ತವೆ.

ಕೆಲಸಗಾರರಲ್ಲಿ ಆಯಾಸ, ಸುಸ್ತು, ಬೇಸರಗಳಿಗೆ ಬಹುಮಟ್ಟಿಗೆ ಮೇಲ್ವಿಚಾರಕರಿಂದ ಬರುವ ಕಿರುಕುಳ, ಮೇಸ್ತ್ರಿಗಳ, ಒಂದಿಗರ ಬಯ್ಗುಳು, ಹೊರಗೆ ಸಿಗುವ ಮರ್ಯಾದೆ, ತಮ್ಮವೇ ಬೇರೆ ತಾಪತ್ರಯಗಳೂ ಕಾರಣವಾಗುತ್ತವೆ. ಚಿಂತೆ, ತಾಪತ್ರಯಗಳು ತಲೆಗೆ ಹೊಕ್ಕರೆ ಕೆಲಸಗಾರನಲ್ಲಿ ಆಯಾಸ ತೋರುವುದು. ಮಾಡುವ ಕೆಲಸ ಆಸಕ್ತಿ ಹುಮ್ಮಸ್ಸು ಹುಟ್ಟಿಸುವಂತಿದ್ದರೆ, ಎಷ್ಟು ಕಷ್ಟವಾಗಿದ್ದರೂ ಆಯಾಸಗೊಳಿಸದು.

ಕೊನೆಯದಾಗಿ, ಕೆಲಸಗಾರನ ಆರೋಗ್ಯ ಕಾಪಾಡುವುದು ಬಲು ಮುಖ್ಯ. ಆರೋಗ್ಯ ವಾಗಿರುವ ಹೆಂಗಸಾಗಲಿ ಗಂಡಸಾಗಲಿ ಎಂದಿಗೂ ಆಯಾಸವನ್ನು ಚೆನ್ನಾಗಿ ಮುಂದೂಡ ಬಲ್ಲರು. ಆವರಣದಲ್ಲಿ ಕೆಡುಕಾಗಿಸುವ ಕಾರಕಗಳನ್ನು ಹೋಗಲಾಡಿಸಿದರೆ ಕೆಲಸವೂ ಚೆನ್ನಾಗುವುದು. ಇದರಿಂದಲೇ ಆಗಿಂದಾಗ್ಗೆ ಕೆಲಸಗಾರರ ವೈದ್ಯಪರೀಕ್ಷೆಗಳನ್ನು ಮಾಡುತ್ತಿದ್ದರೆ, ಹೆಚ್ಚಿನ ಮಟ್ಟದಲ್ಲಿ ಲವಲವಿಕೆಯಿಂದ ಇರುವರು. ಇದರೊಂದಿಗೆ ವಿರಾಮಕಾಲ ಕಳೆಯಲು, ಆಟದ ಬಯಲು, ಒಳಾಂಗಣ ಆಟಗಳು, ಹವ್ಯಾಸಗಳಿಗೆ ಅನುಕೂಲ ಮಾಡಿಕೊಡಬೇಕು (ಡಿ.ಇ.)

**ಆಯುಧಗಳು :** ಆತ್ಮರಕ್ಷಣೆ, ಹೋರಾಟಕ್ಕೆ ಬಳಸುವ ಸಾಧನಗಳು ಮಾನವಜೀವನ ಸಂಕೀರ್ಣವಾದಂತೆಲ್ಲ ಆತ್ಮರಕ್ಷಣೆಯ ಮತ್ತು ಹೋರಾಟದ ಅಂಶಗಳೂ ಜಟಿಲವಾಗಿ ಅದಕ್ಕೆ ತಕ್ಕಂತೆ ಆಯುಧಗಳೂ ಮಾರ್ಪಡುತ್ತ ಬಂದಿವೆ. ಇಲ್ಲಿ ಆದಿಮಾನವನ ಮತ್ತು ಜನಪದದ ಆಯುಧಗಳ ಉಲ್ಲೇಖವಿದೆ. ಪ್ರಾಸಂಗಿಕವಾಗಿ ಕಾವ್ಯಗಳಲ್ಲಿನ ಆಯುಧಗಳ ಪ್ರಸ್ತಾಪವೂ ಬಂದಿದೆ. ಆಧುನಿಕ ಆಯುಧಗಳಿಗೆ ನೋಡಿ– ಶಸ್ತ್ರಾಸ್ತ್ರಗಳು; ಮದ್ದುಗುಂಡುಗಳು; ಫಿರಂಗಿ; ಕ್ಷಿಪಣಿ; ರಾಕೆಟ್ಟು.

ಮಾನವಜೀವನದ ಆವಶ್ಯಕತೆಗಳಲ್ಲಿ ಆಯುಧಗಳ ಪಾತ್ರ ಬಹು ದೊಡ್ಡದು. ಆದಿಮಾನವ ನಿಂದ ಆಧುನಿಕ ಮಾನವನವರೆಗೆ ಅವನ ಜೊತೆಯಲ್ಲಿ ಉಳಿದುಬಂದಿರುವ ಅಗತ್ಯ ವಸ್ತು ಗಳಲ್ಲಿ ಇವಕ್ಕೇ ಅಗ್ರಪ್ರಾಶಸ್ತ್ಯ. ಏಕೆಂದರೆ ಇವನಿಗೆ ಆಹಾರವನ್ನೊದಗಿಸುವ, ಶತ್ರುಬಾಧೆಯನ್ನು ನಿವಾರಿಸುವ, ಆತ್ಮರಕ್ಷಣೆಯನ್ನು ಮಾಡುವ ಸಾಧನಗಳಿವು. ಬದುಕಿನೊಡನೆ ನಿಕಟ ಸಂಬಂಧ ವನ್ನು ಹೊಂದಿರುವ ಆಯುಧಗಳು ಮಾನವ ಮಾತು ಕಲಿಯುವ ಪೂರ್ವದಿಂದಲೂ ಅವನ ಕೈಯಲ್ಲಿ ಉಳಿದಿವೆ. ನಾಗರಿಕತೆ ಬೆಳೆದಂತೆ, ಬದುಕು ವಿಕಾಸವಾದಂತೆ ಆಯುಧಗಳ ಲ್ಲಿಯೂ ಬೆಳವಣಿಗೆಯಾಗಿದೆ. ಆಧುನಿಕ ಮಾರಕಾಸ್ತ್ರಗಳು ಮಾನವನ ಬಹು ದೊಡ್ಡ ಸಾಧನಗಳಲ್ಲಿ ಮುಖ್ಯವಾದುವು.

ಆದಿಮಾನವನಿಂದ ಅಣುಯುಗದ ಮಾನವನವರೆಗೆ ಆಯುಧಗಳ ಅಭ್ಯಾಸವೆಂದರೆ ಮಾನವ ನಾಗರಿಕತೆಯ ಅಭ್ಯಾಸವೇ ಆಗುತ್ತದೆ. ಪ್ರಾಣಿವರ್ಗದಿಂದ ಮಾನವನನ್ನು ಬೇರ್ಪಡಿಸಿ, ಸಮಸ್ತ ಜೀವಿಗಳ ಮೇಲೆ ಅವನ ಸ್ವಾಮ್ಯವನ್ನು ಇವು ಸಾಧಿಸಿ ಕೊಟ್ಟಿವೆ. ಅವನ ಪರಾಕ್ರಮ



ಆಯುಧಗಳು
ಪ್ರಾಚೀನ (1–11); ಮಧ್ಯಕಾಲೀನ (12–18); ಈಚಿನ (19–24)

ಪ್ರದರ್ಶನಕ್ಕೆ, ಸುಖಸಂತೋಷಗಳನ್ನು ದೊರಕಿಸಿ ಕೊಡುವುದಕ್ಕೆ ಇವು ನೆರವಾಗಿವೆ. ಮೆಚ್ಚಿದ ವಧುವನ್ನು ವರಿಸಲು, ಸ್ವಯಂವರಗಳಲ್ಲಿ ಜಯಿಸಬೇಕಾಗಿದ್ದುದು ಆಯುಧವಿಶೇಷ ಗಳನ್ನೇ. ಮೃಗಯಾವಿಹಾರದ ಉತ್ಸಾಹವನ್ನೂ ಆನಂದವನ್ನೂ ಆಯುಧಗಳು ತಂದೊಡ್ಡುತ್ತಿದ್ದುವು. ರಾಜ್ಯ, ಸಾಮ್ರಾಜ್ಯಗಳ ಸ್ಥಾಪನೆಗೆ, ಪತನಕ್ಕೆ ಕಾರಣವಾದ ಸಾಧನಗಳೂ ಇವೇ. ವೀರರ ಬಲಾಬಲಗಳನ್ನು ನಿರ್ಧರಿಸುವ ಮುಖ್ಯ ವಸ್ತುಗಳೂ ಆಯುಧಗಳೇ.

ಹೀಗೆ ಕ್ಷತ್ರಿಯರ ಕ್ಷಾತ್ರ ವಿಜೃಂಭಿಸಲು ಪೂರಕವಾಗುತ್ತಿದ್ದ ಆಯುಧಗಳು ಸಾಮಾನ್ಯ ಜನರ ನಿತ್ಯಬಳಕೆಯ ವಸ್ತುಗಳೂ ಆಗಿ ಉಳಿದುಬಂದುವು. ರೈತನ ಆಯುಧಗಳಲ್ಲಿ ಬಹುಪಾಲು ವ್ಯವಸಾಯ ಸಾಧನಗಳೂ ಹೌದು. ಬೇಡರ, ಕಾಡುಜನರ, ಮೂಲನಿವಾಸಿಗಳ ನಿತ್ಯದ

ಆಧಾರಸ್ತಂಭ ಆಯುಧಗಳು. ಬ್ರಾಹ್ಮಣ ಹಾಗೂ ವೈಶ್ಯ ವರ್ಗದವರು ಮನೆಬಳಕೆಯ ವಸ್ತುಗಳಲ್ಲಿ ಒಂದಲ್ಲ ಒಂದು ವಿಧದ ಆಯುಧ ವಿಶೇಷಗಳನ್ನು ಪಡೆದುಕೊಂಡೇ ಇದ್ದಾರೆ ಎಂದಮೇಲೆ ಸಮಸ್ತ ಮಾನವನ ಬದುಕಿನೊಡನೆ ಇವುಗಳ ನಿಕಟಸಂಬಂಧ ಏನು ಎಂಬುದು ವೇದ್ಯವಾಗುತ್ತದೆ.

ಮಾನವಜೀವನದ ಅರುಣೋದಯ ಕಾಲವೆನಿಸುವ ಆದಿ ಶಿಲಾಯುಗದಲ್ಲಿಯೇ ಅನೇಕ ರೀತಿಯ ಕಲ್ಲಿನ ಆಯುಧಗಳನ್ನು ಮಾನವ ಬಳಸಿದ ನಿದರ್ಶನಗಳು ಪ್ರಪಂಚದ ಎಲ್ಲ ಕಡೆಯೂ ನಡೆದ ಸಂಶೋಧನೆಗಳಿಂದ ವ್ಯಕ್ತವಾಗಿವೆ. ಆರಂಭದಲ್ಲಿ ಒರಟಾದ ಕಲ್ಲುಗಳನ್ನೇ ಆಯುಧವಾಗಿ ಬಳಸಲಾಗುತ್ತಿತ್ತು. ಒಂದು ಕಡೆ ಚೂಪಾದ ಸ್ವಾಭಾವಿಕವಾದ ಆಕಾರಗಳನ್ನು ಪಡೆದ ಶಿಲೆಗಳವು. ಪ್ರಾಣಿಗಳನ್ನು ಹೊಡೆಯಲು, ವಸ್ತುಗಳನ್ನು ಜಜ್ಜಲು, ತುಂಡರಿಸಲು ಇಂಥ ವಸ್ತುಗಳನ್ನು ಬಳಸಲಾಗುತ್ತಿತ್ತು. ಬೆಲ್ಜಿಯಂ, ಫ್ರಾನ್ಸ್, ಸ್ಪೇನ್, ಸ್ವಿಟ್ಸರ್ಲೆಂಡ್, ಜರ್ಮನಿ, ಇಂಗ್ಲೆಂಡ್, ಚೆಕೋಸ್ಲೋವೇಕಿಯ, ಪೋಲೆಂಡ್, ಮಂಗೋಲಿಯ, ಚೀನ, ಭಾರತ, ಸಿರಿಯ, ಪ್ಯಾಲಸ್ಟೀನ್ ಮತ್ತು ಆಫ್ರಿಕಗಳಲ್ಲಿ ನಡೆದ ಭೂಶೋಧನೆಯಿಂದ ಆದಿಶಿಲಾಯುಗದ ಅವಶೇಷಗಳು ದೊರಕಿವೆ. ಬೇಟೆಯಾಡಿ ಬದುಕಲು ಬೇಕಾದ ಈ ಯುಗದ ಮಾನವ, ಮರದ ಚೂಪಾದ ಸಾಧನಗಳನ್ನೂ ದೊಣ್ಣೆಗಳನ್ನೂ ಕಲ್ಲನ್ನೂ ವಿಶೇಷವಾಗಿ ಬಳಸಿಕೊಳ್ಳುತ್ತಿದ್ದ. ಸಾಮಾನ್ಯವಾಗಿ ಸಣ್ಣ ಸಣ್ಣ ಪ್ರಾಣಿಗಳನ್ನೇ ಈ ಸಾಧನಗಳಿಂದ ಕೊಲ್ಲುತ್ತಿದ್ದ. ದೊಡ್ಡ ಪ್ರಾಣಿಗಳು ಅಪಾಯದಲ್ಲಿದ್ದಾಗ, ನದಿ ಮುಂತಾದುವನ್ನು ದಾಟುವಾಗ, ಇತರ ಪ್ರಾಣಿಯೊಡನೆ ಹೋರಾಡಿ ಗಾಯಗೊಂಡಾಗ ಅವುಗಳ ಮೇಲೂ ಎರಗಿ ತನ್ನ ಸಾಧನಗಳನ್ನು ಬಳಸಿ ಅವನ್ನು ಕೊಲ್ಲುತ್ತಿದ್ದ. 5,00,000 ವರ್ಷಗಳ ಹಿಂದೆ ಶಿಲಾಯುಗದ ಪ್ರಾರಂಭದಲ್ಲಿಯೇ ಆಯುಧಗಳ ಬಳಕೆ ಮಾನವನಿಗೆ ಅತ್ಯಾವಶ್ಯಕವಾಗಿತ್ತು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಪ್ರ.ಶ.ಪೂ.3,00,000–1,50,000 ವರ್ಷಗಳ ಅವಧಿಯ ಹಳೆ ಶಿಲಾಯುಗಕ್ಕೆ ಬಂದರೆ ಆಯುಧಗಳಲ್ಲಿ ತಕ್ಕಮಟ್ಟಿನ ಸುಧಾರಣೆ ಕಂಡುಬರುತ್ತದೆ. ಆರಂಭದಲ್ಲಿ ಒರಟಾಗಿ ಕೆತ್ತಿದ ಕಲ್ಲಿನ ಆಯುಧಗಳು ಕಂಡುಬಂದರೆ ಮುಂದೆ ಅವುಗಳನ್ನು ನಯಗೊಳಿಸಿಕೊಂಡು ಬಳಸಲಾಯಿತು. ಸರಿಯಾದ ಆಕಾರಕ್ಕೆ ತೆಳ್ಳಗೆ, ಚೂಪಾಗಿ ಕೆತ್ತಿಕೊಳ್ಳಲಾಯಿತು. ಕೈಗೊಡಲಿ, ಹಿಡಿಯುಳ್ಳ ಉಪಕರಣಗಳನ್ನು ಕಲ್ಲಿನಲ್ಲೇ ತಯಾರಿಸಿಕೊಳ್ಳಲಾಯಿತು. ಮುಂದೆ ಕ್ರಮೇಣ ಪ್ರಾಣಿಗಳ ಕೊಂಬುಗಳನ್ನು, ಮೂಳೆಗಳನ್ನು ಮಾನವ ಆಯುಧಗಳ ಗುಂಪಿಗೆ ಸೇರಿಸಿಕೊಂಡ. ಮೀನು ಮುಂತಾದುವುಗಳ ಬೇಟೆಯಲ್ಲಿ ಇವು ಹೆಚ್ಚು ನೆರವಾಗುತ್ತಿದ್ದುವು. ಮೂಳೆಯ ಭರ್ಜಿಗಳ ಮೇಲೆ ಕೆತ್ತನೆಯ ಕೆಲಸವನ್ನು ಮಾಡಿಕೊಂಡ. 12,000 ವರ್ಷಗಳ ಈಚಿನ ಮಧ್ಯಶಿಲಾಯುಗದ ವೇಳೆಗೆ ತನ್ನ ಆಯುಧವಿಶೇಷಗಳಲ್ಲಿ ಹೆಚ್ಚು ಮಾರ್ಪಾಡು ಮಾಡಿಕೊಂಡ. ಆಹಾರವನ್ನು ಹುಡುಕಿಕೊಂಡು ಹೋಗುವ ಕ್ರಮವನ್ನು ಕೈಬಿಟ್ಟು ಫಲವತ್ತಾದ ನದೀತೀರದಲ್ಲಿ ನೆಲೆಸಿ ತಾನೇ ಆಹಾರವನ್ನು ತಯಾರಿಸಿಕೊಳ್ಳಲು ಅರಿತ. ಪ್ರಾಣಿಗಳನ್ನು ಸಾಕತೊಡಗಿದ. ನುಣುಪಾದ, ಹೊಳಪಾದ ಕಲ್ಲಿನ ಆಯುಧಗಳನ್ನು ಉಪಯೋಗಿಸತೊಡಗಿದ. ನೂತನ ಶಿಲಾಯುಗದ ವೇಳೆಗೆ ಅವನ ಬದುಕು ಒಂದು ವ್ಯವಸ್ಥಿತ ಕ್ರಮಕ್ಕೆ ಬರತೊಡಗಿತು.

ಪ್ರ.ಶ.ಪೂ. 400ರ ವೇಳೆಗೆ ಕ್ರಮೇಣ ಶಿಲಾಯುಗ ಲೋಹಯುಗಕ್ಕೆ ದಾರಿ ಮಾಡಿಕೊಟ್ಟಿತು. ಅನಂತರ ಶಿಲೆಯ ಉಪಕರಣಗಳ ರೀತಿಯಲ್ಲೇ ತಾಮ್ರದ ಆಯುಧಗಳು ಹುಟ್ಟಿಕೊಂಡುವು. ಕ್ರಮೇಣ ಕಂಚಿನ ಯುಗ ಕಾಲಿರಿಸಿತು. ಕಬ್ಬಿಣದ ಯುಗವೂ ಆರಂಭವಾಗಿ ಆಯುಧವಿಶೇಷಗಳಲ್ಲಿ ಬೇಕಾದಷ್ಟು ಬೆಳವಣಿಗೆಯಾಯಿತು.

ಮಾನವ ಆಯುಧಗಳನ್ನು ಸೃಷ್ಟಿ ಮಾಡಿಕೊಂಡ ಹಿನ್ನಲೆಯಲ್ಲಿ ಶತ್ರುಭಯ ಪ್ರಮುಖವಾದುದು. ಕ್ರಮೇಣ ಬೆಳೆದ ಯುದ್ಧಗಳು ಆಯುಧಗಳ ತೀವ್ರಸುಧಾರಣೆಗೆ ದಾರಿ ಮಾಡಿಕೊಟ್ಟುವು. ಆತ್ಮರಕ್ಷಣೆ ಹಾಗೂ ವಿನಾಶಕಾರಕ ಆಯುಧಗಳ ಸೃಷ್ಟಿಯೂ ಆಯಿತು. ಹರಪ್ಪ ಮೊಹೆಂಜೋದಾರೊ ಸಂಸ್ಕೃತಿಗಳಲ್ಲಿ ತಾಮ್ರದ ಆಯುಧಗಳನ್ನು ಬಳಸಿರುವುದು ಕಂಡುಬರುತ್ತದೆ. ಋಗ್ವೇದದಲ್ಲೂ ಇತಿಹಾಸಯುಗದ ಮೌರ್ಯರ, ಶಕರ, ಕುಶಾನರ ಕಾಲದಲ್ಲೂ ಯುದ್ಧಗಳಲ್ಲಿ ವಿಶಿಷ್ಟ ಆಯುಧಗಳ ಬಳಕೆಯಾಗಿರುವುದು ಕಂಡುಬರುತ್ತದೆ.

ಭಾರತೀಯ ಯುದ್ಧಪದ್ಧತಿಯಲ್ಲಿ ಚತುರಂಗ ಬಲಗಳ ವ್ಯವಸ್ಥೆ ಕಾಣಿಸಿಕೊಂಡು, ಆಯಾ ಸೈನ್ಯಕ್ಕೆ ಉಚಿತವಾದ ಆಯುಧಗಳ ತಯಾರಿಕೆ ನಡೆಯಿತು. ನುರಿತ ಗುರುವಿನಲ್ಲಿ ಶಸ್ತ್ರಾಭ್ಯಾಸ ಮಾಡುವ ಪದ್ಧತಿ ರಾಮಾಯಣ ಮಹಾಭಾರತಗಳ ಕಾಲಕ್ಕೇ ಕಾಣಿಸಿಕೊಂಡು ಧನುರ್ವೇದವೆಂದು ಹೆಸರಾಯಿತು. ಆಯುಧಗಳ ಬಳಕೆಯಲ್ಲಿ ಶಾಸ್ತ್ರೀಯ ಕ್ರಮ ಬಹಳ ಹಿಂದೆಯೇ ರೂಢಿಗೆ ಬಂತು. ಬಿಲ್ಲುಬಾಣಗಳ ಪ್ರಾಚುರ್ಯ ಹೆಚ್ಚಿತು.

ಮೆಗಸ್ತನೀಸ್ ಭಾರತೀಯ ಯುದ್ಧಕ್ರಮವನ್ನು ಬಣ್ಣಿಸುತ್ತ ಆನೆಯ ಮೇಲೆ ಮೂರು ಜನ ಬಿಲ್ಲುಗಾರರು ಕುಳಿತು ಬಾಣಪ್ರಯೋಗಮಾಡುತ್ತಿದ್ದ ಕ್ರಮವನ್ನು ವರ್ಣಿಸಿದ್ದಾನೆ. ಆರು ಜನ ವೀರರು ಆನೆಯ ಮೇಲೆ ಕುಳಿತು ವಿವಿಧ ಶಸ್ತ್ರಾಸ್ತ್ರಗಳಿಂದ ಯುದ್ಧ ಮಾಡುತ್ತಿದ್ದರೆಂದು ಅಗ್ನಿಪುರಾಣ ತಿಳಿಸುತ್ತದೆ. ಈ ಆರು ಜನರಲ್ಲಿ ಇಬ್ಬರು ಬಿಲ್ಲು ಹಿಡಿದು ಯುದ್ಧ ಮಾಡಿದರೆ, ಮತ್ತಿಬ್ಬರು ಲೋಹದ ಮುಳ್ಳುಗಳಿಂದ ಕೂಡಿದ ಆಯುಧಗಳೊಡನೆ ಹೋರಾಡುತ್ತಿದ್ದರು. ಉಳಿದಿಬ್ಬರು ಕತ್ತಿಗಳನ್ನು ಬಳಸುತ್ತಿದ್ದರು. ಕಲ್ಲು, ಕಠಾರಿ ಮುಂತಾದ ಎಸೆಯುವ ಸಾಧನಗಳನ್ನೂ ಬಳಸಲಾಗುತ್ತಿತ್ತು. ಶೂಲಗಳು, ಭಲ್ಲೆಗಳು, ಕೊಡಲಿಗಳು, ಕವಣೆಗಳು ಸೇರಿಕೊಂಡುವು. ನಿತ್ಯಬಳಕೆಯ ವಸ್ತುಗಳಲ್ಲಿ ಅನೇಕವು ಕೆಲವು ಪುರಾಣ ಪುರುಷರ ಆಯುಧಗಳಾಗಿ ಆರೋಪಿಸಲ್ಪಟ್ಟವು. ಹಲಾಯುಧ, ಮುಸಲಾಯುಧಗಳು ಇದಕ್ಕೆ ಉತ್ತಮ ನಿದರ್ಶನ.

ಬಿಲ್ವಿದ್ಯೆಯಲ್ಲಿ ನೈಪುಣ್ಯವನ್ನು ಸಾಧಿಸಿಕೊಂಡ ಭಾರತೀಯ ವೀರರು ಅನೇಕ ಆಕಾರದ ಬಿಲ್ಲುಗಳನ್ನು ಬಳಸುತ್ತಿದ್ದರು. ಶಾರ್ಙ್ಗರವ, ಪಿನಾಕ, ಕೋದಂಡ, ಗಾಂಡೀವ ಮೊದಲಾದ ಪುರಾಣಪ್ರಪಂಚದ ಕೆಲವು ಪ್ರಸಿದ್ಧ ಧನುಸ್ಸುಗಳನ್ನು ಗಮನಿಸಬಹುದು. ಸೀತಾಸ್ವಯಂವರದ ಶಿವಧನುಸ್ಸು ಅತ್ಯಂತ ದೊಡ್ಡ ಆಕಾರದ, ಭಾರವಾದ ಆಯುಧವಾಗಿತ್ತು. ಅರಿಯನ್ ಎಂಬುವ ಭಾರತೀಯ ವೀರರು ಅವರೆತ್ತರದ ಬಿಲ್ಲುಗಳನ್ನು ಬಳಸುತ್ತಿದ್ದರು ಎಂದು ವರ್ಣಿಸಿದ್ದಾನೆ. ಬಿಲ್ಲಿನ ಒಂದು ತುದಿಯನ್ನು ನೆಲದಮೇಲೆ ಊರಿ, ವೀರಮಂಡಿಯ ಭಂಗಿಯಲ್ಲಿ ಕುಳಿತು, ಮೂರುಗಜದಷ್ಟು ಉದ್ದವಾದ ಬಾಣವನ್ನು ಪ್ರಯೋಗ ಮಾಡುತ್ತಿದ್ದರು – ಎಂದಿದ್ದಾನೆ. ಈ ವೀರರು ಅಗಲವಾದ ಭಾರವಾದ ಇಬ್ಬಾಯಿಯ ಖಡ್ಗಗಳನ್ನು ಬಳಸುತ್ತಿದ್ದರೆಂದು ತಿಳಿಸಿದ್ದಾನೆ. ಕತ್ತಿ, ಭರ್ಜಿ, ಗುರಾಣಿಗಳ ಬಳಕೆಯನ್ನು ಪ್ರಸ್ತಾಪಿಸಿದ್ದಾನೆ. ಅನೇಕ ಭಿತ್ತಿಚಿತ್ರಗಳಲ್ಲಿ ಇಂಥ ದೃಶ್ಯಗಳು ಹೇರಳವಾಗಿ ದೊರೆಯುತ್ತವೆ. ಮುಕ್ತ, ಅಮುಕ್ತ, ಮುಕ್ತಾಮುಕ್ತ, ಯಂತ್ರಮುಕ್ತ, ಮುಂತಾಗಿ ಭಾರತೀಯರು ಆಯುಧಗಳನ್ನು ವಿಭಜಿಸಿಕೊಂಡಿರುವುದನ್ನು ಕಾಣಬಹುದು. ಬಿಲ್ಲುಗಳನ್ನು ಲೋಹ ಹಾಗೂ ಬಿದಿರಿನಿಂದ ಮಾಡಿಕೊಳ್ಳಲಾಗುತ್ತಿತ್ತು. ಬಾಣಗಳಿಗೆ ಲೋಹದ ತುದಿಗಟ್ಟುಗಳಿದ್ದವು. ಒಮ್ಮೊನೆಯ, ಇಮ್ಮೊನೆಯ, ವಿಷದ ಬಾಣಗಳಿದ್ದುವೆಂದು ಕಾವ್ಯದಲ್ಲಿ ವರ್ಣನೆಗಳಿವೆ. ಪ್ರಪಂಚದ ಎಲ್ಲಕಡೆಯೂ ಬಿಲ್ಲುಬಾಣಗಳ ಬಳಕೆ ಇತ್ತು.

ಭಾರತೀಯ ಬಿಲ್ಲಿನಂತೆಯೇ ಈಜಿಪ್ಟಿನ ಬಿಲ್ಲು ಬಹಳ ಉದ್ದ. ಗ್ರೀಕರ ಬಿಲ್ಲು ಬಹಳ ಚಿಕ್ಕದು.

ಮಹಾಭಾರತದಲ್ಲಿ ಕಬ್ಬಿಣದ ಚೂರುಗಳನ್ನು ನಳಿಕೆಗಳೆಂಬ ಸಾಧನದಿಂದ ಹಾರಿಸುತ್ತಿದ್ದ ಪ್ರಸ್ತಾಪ ಬಂದಿದೆ. ಈಗಿನ ಬಂದೂಕಿನೊಡನೆ ಅದನ್ನು ಹೋಲಿಸಲು ಸಾಧ್ಯವಾಗದಿದ್ದರೂ ಆ ಬಗೆಯ ಒಂದು ಸಾಧನ ಇತ್ತು ಎನ್ನುವುದಕ್ಕೆ ಒಳ್ಳೆಯ ನಿದರ್ಶನವಾಗಿದೆ.

ಹೀಗೆ ಭಾರತೀಯ ಪರಂಪರೆಯಲ್ಲಿ ಅಸಿ, ಪರಶು, ಶಕ್ತಿ, ಶೂಲ, ಗದೆ, ಕವಣೆ ಮೊದಲಾದ ಆಯುಧವಿಶೇಷಗಳ ಜೊತೆಗೆ ಗುರುತಿಸಲಾಗದ ಅನೇಕ ಶಸ್ತ್ರಾಸ್ತ್ರಗಳ ಹೆಸರು ಬರುತ್ತದೆ. ಮಂತ್ರಶಕ್ತಿಯ ಪ್ರಭಾವದಿಂದ ಪ್ರಯೋಗಿಸಲ್ಪಡುತ್ತಿದ್ದ ದಿವ್ಯಾಸ್ತ್ರಗಳಾದ ಪಾಶುಪತ, ಇಂದ್ರ, ವಾಯವ್ಯ, ಆಗ್ನೇಯ, ಬ್ರಹ್ಮ, ನಾರಾಯಣ, ಸಂಮೋಹನ ಮೊದಲಾದುವುಗಳ ಪ್ರಸ್ತಾಪವನ್ನು ಕಾವ್ಯಪುರಾಣಗಳಲ್ಲಿ ಗಮನಿಸಬಹುದು.

ಕುಶಲಿಗಳಾದ ಪಾಂಚಾಲರು ರಾಜನಿಂದ ನೇಮಿಸಲ್ಪಟ್ಟ ಸೇನಾನಿಯೊಬ್ಬನ ನೇತೃತ್ವದಲ್ಲಿ ಅಧಿಕೃತ ನೆಲೆಯೊಂದರಲ್ಲಿ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಅದರ ಮೇಲೆ ರಾಜಮುದ್ರೆಯನ್ನು ಹಾಕುತ್ತಿದ್ದರು ಎಂದು ಕೌಟಿಲ್ಯ ಬಣ್ಣಿಸಿದ್ದಾನೆ. ಭಾರತೀಯರು ಆಯುಧಗಳ ಬಳಕೆಯಲ್ಲಿ ಎಂಥ ಉನ್ನತ ಸಾಧನೆಯನ್ನು ತೋರಿದ್ದರು ಎಂಬುದು ಈ ನಿದರ್ಶನಗಳಿಂದ ವೇದ್ಯವಾಗುತ್ತದೆ.

ಆಯುಧಗಳ ಪ್ರಯೋಗದ ಹಿನ್ನೆಲೆಯಲ್ಲಿ ಅವುಗಳ ವಿಭಜನೆಯನ್ನು ಮಾಡಿಕೊಳ್ಳಬಹುದು:

1(ಅ) ಕೈಯಲ್ಲಿ ಹಿಡಿಯುವ ಆಯುಧಗಳು.

**i ನೈಸರ್ಗಿಕವಸ್ತುಗಳು:** ಮತ್ತೊಂದು ವಸ್ತುವಿನ ಹೊಡೆತದ ತೀವ್ರತೆಯನ್ನು ಹೆಚ್ಚಿಸಲು ಹಾಗೂ ನೇರವಾಗಿ ಆ ವಸ್ತುವಿನಿಂದಲೇ ಹೊಡೆಯಲು ಈ ಸಾಧನಗಳನ್ನು ಬಳಸುವಂಥವು.

**ii ತಯಾರಿಸಿದ ವಸ್ತುಗಳು.**

**iii ಆಭರಣಗಳು:** ಕೆಲವು ಉಂಗುರಗಳಲ್ಲಿ, ಕೈಕಟ್ಟುಗಳಲ್ಲಿ ಮೊನಚಾದ ಭಾಗವನ್ನು ಸಂದರ್ಭವೊದಗಿದಾಗ ಆಯುಧವನ್ನಾಗಿ ಬಳಸಿಕೊಳ್ಳುವುದು.

**2 ದೊಣ್ಣೆಗಳು:** ತುದಿಯ ಭಾಗದಲ್ಲಿ ಹೆಚ್ಚುಭಾರವಾಗಿರುವ ದೊಣ್ಣೆಗಳು ತೀವ್ರವಾದ ಪೆಟ್ಟನ್ನುಂಟುಮಾಡುತ್ತವೆ. ಕೆಲವು ದೊಣ್ಣೆಗಳಲ್ಲಿ ಮೊನಚಾದ ಭಾಗಗಳು ಇದ್ದು ಗಾಯ ಮಾಡುವ ಸಂದರ್ಭವೂ ಉಂಟು. ಕೈಯಿಂದ ಜಾರಿಕೊಳ್ಳದಂತೆ ಭದ್ರವಾದ ಹುರಿಯನ್ನು ಹಸ್ತಕ್ಕೆ ಸುತ್ತಿಕೊಳ್ಳುವಂತೆ ವ್ಯವಸ್ಥೆಮಾಡಿಕೊಂಡ ದೊಣ್ಣೆಗಳೂ ಇರುತ್ತವೆ. ಒಂದು ಕೈಯಿಂದ, ಎರಡು ಕೈಗಳಿಂದ ಬಳಸಲ್ಪಡುವ ದೊಣ್ಣೆಗಳೂ ಇರುತ್ತವೆ.

**3 ಕೊಡಲಿಗಳು :** ದೊಣ್ಣೆಗಳ ಹಿನ್ನೆಲೆಯಲ್ಲಿಯೇ ಸಿದ್ಧಗೊಂಡ ಸಾಧನವಾದರೂ ಕಾವಿನಭಾಗ, ಕೊಡಲಿಯ ಭಾಗವೆಂದು ವಿಭಾಗವಾಗಿರುವ ಸಾಧನ: ಮರದ ಕಾವು, ಲೋಹದ ಕೊಡಲಿ ಇವನ್ನೊಳಗೊಂಡು ಕತ್ತರಿಸಲು, ಸೀಳಲು ಬಳಸುವ ಆಯುಧ. ಗಂಡುಗೊಡಲಿ ಪುರಾಣಗಳಲ್ಲೇ ಪ್ರಸ್ತಾಪಿಸಲ್ಪಟ್ಟಿರುವ ಆಯುಧ ವಿಶೇಷ. ಪರಶುರಾಮ ಆ ಆಯುಧದಿಂದಲೇ ಕ್ಷತ್ರಿಯರ ಕಗ್ಗೊಲೆ ನಡೆಸಿದ ಸಂದರ್ಭವನ್ನು ಇಲ್ಲಿ ನೆನೆಯಬಹುದು.

ಅರ್ಧಚಂದ್ರಾಕಾರದ ಕೊಡಲಿಯ ಭಾಗವನ್ನು ಪಡೆದ ಈ ಸಾಧನವನ್ನು ಚಂದ್ರಾಯುಧವೆಂದೂ ಕೆಲವು ಕಡೆ ಕರೆಯುತ್ತಾರೆ. ಜನಪದ ಕಥೆಗಳಲ್ಲಿ ವಿಶೇಷವಾಗಿ ಬಳಕೆಯಾಗಿರುವ ಚಂದ್ರಾಯುಧ ಬಹುಶಃ ವಿಶಿಷ್ಟ ರೀತಿಯ ಖಡ್ಗ.

ಕೊಡಲಿಗಳಲ್ಲಿ ಕೈಗೊಡಲಿ, ಎಡಗೊಡಲಿ ಮುಖ್ಯವಾದುವು. ಕೈಗೊಡಲಿ, ಸಣ್ಣ ಆಕಾರದ ಸಾಧನ. ಎಡಗೊಡಲಿ ಎರಡು ಕೈಯಿಂದಲೂ ದೊಡ್ಡ ವಸ್ತುಗಳನ್ನು ಕಡಿಯಲು ಬಳಸುವ ಭಾರವಾದ ಸಾಧನ. ಸುತ್ತಿಗೆಗಳೂ ಇದೇ ವರ್ಗಕ್ಕೆ ಸೇರಿದರೂ ದುಂಡಾದ ಭಾಗಗಳನ್ನು ಪಡೆದು ಗಟ್ಟಿಯಾದ ಪದಾರ್ಥಗಳನ್ನೂ ವಿಶೇಷವಾಗಿ ಕಲ್ಲು, ಲೋಹಗಳನ್ನೂ ಹೊಡೆಯಲು ಬಳಸಲಾಗುತ್ತದೆ.


ಕತ್ತಿಗಳ ವಿವಿಧ ರೂಪಗಳು

**4 ಭರ್ಜಿಗಳು :** ಬೇಟೆಗಾಗಿ ಬಳಸುವ ಈ ಉದ್ದವಾದ ಸಾಧನಗಳ ತುದಿಯಲ್ಲಿ ಮೊನಚಾದ, ಚೂಪಾದ ಲೋಹದ ಭಾಗವಿರುತ್ತದೆ. ತಿವಿಯಲು ಬಳಸುವ ಭರ್ಜಿಗಳು ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ಉಳಿದಿವೆ. ಹಂದಿಯ ಬೇಟೆಯಲ್ಲಿ ಬಳಸುವ ಭರ್ಜಿ, ಹಾವನ್ನು ಕೊಲ್ಲುವ ಭರ್ಜಿ, ಯುದ್ಧಗಳಲ್ಲಿ ಬಳಸುವ ಭರ್ಜಿ ಅಥವಾ ಭಲ್ಲೆಗಳು ವಿಶಿಷ್ಟ ಆಕಾರಗಳಲ್ಲಿ ಇರುತ್ತವೆ. ಎಸೆಯುವ ಭಲ್ಲೆಗಳನ್ನೂ ಕಾಣಬಹುದು. ವಿಶ್ವದಾದ್ಯಂತ ಭರ್ಜಿಗಳು ಬಳಕೆಯಲ್ಲಿವೆ. ಭರ್ಜಿಯ ತುದಿ ಹರಿತವಾದ ಚಪ್ಪಟೆ ಬಾಯನ್ನು ಪಡೆದಿರಬಹುದು, ಇಲ್ಲವೆ ಚಪ್ಪಟೆ ಅಥವಾ ದುಂಡಾದ ಭಾಗದೊಡನೆ ಮೊನಚಾದ ಬಾಯನ್ನು ಪಡೆದಿರಬಹುದು. ಕಾವಿನ ಭಾಗ ಒಂದು ಮಾರಿನಷ್ಟಿದ್ದು ಮರದ, ಬಿದಿರಿನ ಭಾಗವಾಗಿರುತ್ತದೆ. ಲೋಹದ ಕಾವುಗಳೂ ಇರಬಹುದು.

**5 ಖಡ್ಗಗಳು :** ಕತ್ತರಿಸುವ, ತಿವಿಯುವ ಅಥವಾ ಎರಡು ಉದ್ದೇಶಗಳಿಗೂ ಬಳಸುವ ಬಗೆಗಳಿರುತ್ತವೆ. ಖಡ್ಗದ ಹಿಡಿ ಕಲಾತ್ಮಕವಾಗಿದ್ದು ಕೈಯಿಂದ ಜಾರಿಕೊಳ್ಳದಂತೆ ಮಡಿಕೆಗಳನ್ನು ಪಡೆದಿರುತ್ತದೆ. ಅನೇಕ ಬಗೆಯ ಖಡ್ಗಗಳ ಪ್ರತ್ಯೇಕವಾದ ಹೆಸರುಗಳನ್ನೂ ಕಾಣಬಹುದು. ಕತ್ತಿಗಳೆಲ್ಲ ಸಾಮಾನ್ಯವಾಗಿ ಒಂದೇ ಲೋಹದಿಂದ ಮಾಡಲ್ಪಟ್ಟಿರುತ್ತವೆ. ಕಠಾರಿಗಳನ್ನು ಈ ಗುಂಪಿಗೇ ಸೇರಿಸಬಹುದು. ಕಡಿಯುವ, ಇರಿಯುವ, ಚುಚ್ಚುವ, ಬಗೆಯುವ, ಹೆರೆಯುವ, ಹರಿಯುವ ಚಿಕ್ಕ ಚಿಕ್ಕ ಸಾಧನಗಳೂ ಈ ಗುಂಪಿಗೇ ಸೇರುತ್ತವೆ. ಕ್ಷೌರಿಕನ ಕತ್ತಿ ಮರದ ಹಿಡಿಯನ್ನು ಪಡೆದಿರುತ್ತದೆ. ಕುಡುಗೋಲು, ಚಾಕು, ಚೂರಿಗಳಿಗೂ ಹಿಡಿಗಳಿರುತ್ತವೆ. ಕುಡುಗೋಲಿನಲ್ಲಿ ಹತ್ತಾರು ಬಗೆಗಳಿವೆ. ಸೊಪ್ಪಿನ ಕುಡುಲು, ಉಜ್ಜುಗರಿ, ಕೈಗುಡುಲು, ಹರಿಗುಡುಲು, ಜವಣಿ ಕುಡುಲು ಮುಂತಾದುವು ಆಯಾ ಉದ್ದೇಶಕ್ಕೆ ತಕ್ಕಂತೆ ಬೇರೆಬೇರೆ ಆಕಾರದಲ್ಲಿಯೇ ಇರುತ್ತವೆ.

ಕುಡುಲಿನ ಜಾತಿಗೆ ಸೇರಿದ, ಇನ್ನೂ ದೊಡ್ಡದಾದ ಮಚ್ಚು, ಬಲಿಗೆ ಪ್ರಸಿದ್ಧವಾದುದು. ಬಲಿಮಚ್ಚು ಅಥವಾ ಕಂದಲು ವಿಶಿಷ್ಟ ಉದ್ದೇಶಕ್ಕಾಗಿ ಹಬ್ಬಗಳಲ್ಲಿ ಕುರಿಯನ್ನೊ ಕೋಣವನ್ನೊ ಮಾರಿಗೆ ಬಲಿಗೊಡಲು ಮಾತ್ರ ಬಳಸುವ ಸಾಧನವಾಗಿರುತ್ತದೆ. ಎರಡು ಕಡೆಯೂ ಬಾಯುಳ್ಳ ಮಚ್ಚುಗಳು ಮನೆಬಳಕೆಯ ವಸ್ತುಗಳಾಗಿವೆ.

ಚಾಕುಗಳಲ್ಲೂ ಅನೇಕ ಆಕಾರಗಳನ್ನು ಗುರುತಿಸಬಹುದು. ಹೆಂಗಸರು ಸದಾಕೊರಳಲ್ಲಿ ಧರಿಸುವ ಹಲ್ಲುಕಡ್ಡಿ, ಗುಗ್ಗೆ ಕಡ್ಡಿಗಳ ಜೊತೆಯಲ್ಲಿ ಕಿರುಬೆರಳುದ್ದದ ಕುಡಲಿನಾಕಾರದ ಬೆಳ್ಳಿಯ ಚಾಕುವನ್ನು ಇಟ್ಟಿರುತ್ತಾರೆ. ಸಣ್ಣ ಸಣ್ಣ ಚಾಕುಗಳನ್ನು ಪ್ರತಿಯೊಬ್ಬ ಪುರುಷನೂ ತನ್ನ ಸೊಂಟದಲ್ಲಿ ಕಟ್ಟಿಕೊಂಡಿರುವ ಬಗೆಯನ್ನು ಈಗಲೂ ವಿಶೇಷವಾಗಿ ಕಾಣಬಹುದು.

ಸೊಂಟದಪಟ್ಟಿಯಂತೆ ಬಳಸುವ, ಊರೆಗೋಲಿನಲ್ಲಿ ಹುದುಗಿಸಿಡುವ ಕತ್ತಿಗಳನ್ನು ಈಗಲೂ ವಸ್ತುಸಂಗ್ರಹಾಲಯಗಳಲ್ಲಿ ಕಾಣಬಹುದು.

**(ಆ) ಎಸೆಯುವ ಸಾಧನಗಳು : i** ಎಸೆಯುವ ಸಾಧನಗಳ ಗುಂಪಿಗೆ ನೈಸರ್ಗಿಕ ವಸ್ತುಗಳೂ ತಯಾರಿಸಿದ ವಸ್ತುಗಳೂ ಸೇರುತ್ತವೆ. ದೊಣ್ಣೆಗಳು, ಭರ್ಜಿಗಳು, ಈಟಿಗಳು ತಯಾರಿಸಿಕೊಂಡ ಸಾಧನಗಳಾದರೆ ಕವಣೆಗೆ ಆರಿಸಿಕೊಳ್ಳುವ ವಸ್ತುಗಳು, ಕೆಲವು ಬಗೆಯ ಕೋಲುಗಳು ಎಸೆಯುವ ನೈಸರ್ಗಿಕ ಸಾಧನಗಳು. ಬಾಣದ ಬುಡಕ್ಕೆ ದಾರವನ್ನು ಕಟ್ಟಿ ಪ್ರಯೋಗಿಸಿದ ಮೇಲೆ ಮತ್ತೆ ಹಿಂದಕ್ಕೆ ಪಡೆದುಕೊಳ್ಳುವ ಸಾಧನಗಳೂ ಈ ಗುಂಪಿನಲ್ಲೇ ಬರುತ್ತವೆ. ಬಿಲ್ಲುಬಾಣಗಳು, ಎಲ್ಲ ಬಗೆಯ ಚಿಮ್ಮುವ, ಎಸೆಯುವ, ಪ್ರಯೋಗಿಸುವ ಸಾಧನಗಳೂ ಈ ವರ್ಗಕ್ಕೆ ಸೇರುತ್ತವೆ. ಆಧುನಿಕ ಫಿರಂಗಿ, ಬಂದೂಕು ಮುಂತಾದುವನ್ನೂ ಇಲ್ಲಿಯೇ ಹೆಸರಿಸಬಹುದು.

**ii ಸ್ವತಂತ್ರ ಚಾಲನೆಯ ಆಯುಧಗಳು :** ಪ್ರಾಣಿಗಳನ್ನೂ ಶತ್ರುಗಳನ್ನೂ ಇದ್ದಕ್ಕಿದ್ದಂತೆ ಗಾಯಗೊಳಿಸುವ, ಬಂಧಿಸುವ ಸಾಧನಗಳು ಈ ವರ್ಗಕ್ಕೆ ಸೇರುತ್ತವೆ. ಬೋನುಗಳೂ ಈ ದೃಷ್ಟಿಯಿಂದ ಆಯುಧಗಳೇ. ಆಳವಾದ ಗುಳಿಗಳನ್ನು ತೋಡಿ ಸಲಾಕೆಗಳನ್ನು ವಿಷಮುಳ್ಳುಗಳನ್ನು ನೆಟ್ಟು ಶತ್ರುಗಳನ್ನು ಗಾಯಗೊಳಿಸಿದ ಪ್ರಸಂಗಗಳು ಜನಪದ ಕಥೆಗಳಲ್ಲಿ, ಲಾವಣಿಗಳಲ್ಲಿ ವಿಶೇಷವಾಗಿ ಬರುತ್ತವೆ.

**iii ಆತ್ಮರಕ್ಷಣೆಯ ಸಾಧನಗಳು :** ಎಲ್ಲ ಬಗೆಯ ಆಯುಧಗಳೂ ಒಂದಲ್ಲ ಒಂದು ರೀತಿಯಲ್ಲಿ ಆತ್ಮರಕ್ಷಣೆಯ ಸಾಧನಗಳೇ. ಆದರೂ ಅದಕ್ಕಾಗಿಯೇ ಮೀಸಲಾದ ಸಾಧನ ಸಲಕರಣೆಗಳೂ ಮುಖ್ಯವಾಗಿ ಗಮನಿಸಬೇಕಾದುವು. ಪ್ರಾಚೀನ ಕಾಲದಿಂದಲೂ ಬಳಸಲ್ಪಡುತ್ತಿರುವ ಗುರಾಣಿ ಇದಕ್ಕೆ ಒಳ್ಳೆಯ ಉದಾಹರಣೆ. ಕೆಲವು ಸಂದರ್ಭಗಳಲ್ಲಿ ಅದರ ಮೇಲುಹೊದಿಕೆಯಲ್ಲಿ ಚೂಪಾದ ಭಾಗಗಳಿದ್ದು ಅದೂ ಆಯುಧವಾಗಿಯೇ ಬಳಸಲ್ಪಡಬಹುದು. ಉಕ್ಕಿನ ರಕ್ಷಾಕವಚಗಳು ಶಿರಸ್ತ್ರಾಣಗಳು, ಕೈಕಟ್ಟು, ಕಾಲ್ಕಟ್ಟುಗಳೂ ಆತ್ಮರಕ್ಷಣೆಯ ಸಾಧನಗಳು.

ಆಯುಧಗಳಲ್ಲಿ ಪವಿತ್ರವಾದ ಸಾಧನಗಳೂ ಕೆಲವಿವೆ. ತಮ್ಮ ಕುಲಗುರುವೊ, ಮನೆತನದ ಹಿರಿಯರೊ ಬಳಸಿದ ಆಯುಧವಿಶೇಷಗಳನ್ನು ಮನೆಗಳಲ್ಲಿಟ್ಟು ಪೂಜಿಸುವ ವಾಡಿಕೆಯಿದೆ. ಕೆಲವು ದೈವಗಳ ಆರಾಧನೆಯಲ್ಲಿ ಆ ದೈವದ ಆಯುಧವಿಶೇಷವನ್ನೇ ಇಟ್ಟು ಪೂಜಿಸುವ ಬಗೆಯನ್ನು ಕಾಣಬಹುದು. ಭೈರವನ ಪೂಜೆಯಲ್ಲಿ ತ್ರಿಶೂಲ, ಸಿದ್ದಪ್ಪಾಜಿಯ ಪೂಜೆಯಲ್ಲಿ ಕಂಡಾಯ ಮುಂತಾದುವು ಮುಖ್ಯವಾದುವು. ಮಾದೇಶ್ವರನ ಭಕ್ತರು ತಮ್ಮ ಕುಲದೈವ ಹಿಡಿದ ಕೋಲನ್ನೇ ಪೂಜಿಸುತ್ತಾರೆ.

ಕೆಲವು ಆಯುಧಗಳಲ್ಲಿ ವಿಷವನ್ನೂ ಲೇಪಿಸಿ ಬಳಸುವ ವಾಡಿಕೆಯಿದೆ. ಕೆಲವು ಆಯುಧವಿಶೇಷಗಳಲ್ಲಿ ಅನೇಕ ನಂಬಿಕೆಗಳೂ ಮನೆಮಾಡಿಕೊಂಡಿರುತ್ತವೆ. ಮದುವೆಗಳಲ್ಲಿ ವರನ ಕೈಯಲ್ಲಿ ಬಣ್ಣದ ವಸ್ತ್ರ ಸುತ್ತಿದ ಕಠಾರಿಯನ್ನು ಕೊಡುವ ವಾಡಿಕೆ ಈಗಲೂ ನಡೆದುಬಂದಿದೆ. ಅಂಕೋಲೆದೊಣ್ಣೆಯನ್ನು ಕೈಯಲ್ಲಿ ಹಿಡಿದು ಹೊರಟರೆ, ಮನೆಗಳಲ್ಲಿ ಇರಿಸಿದರೆ, ಭೂತ ಪ್ರೇತಗಳು ಹತ್ತಿರ ಸುಳಿಯವು ಎಂದು ಕೆಲವು ಕಡೆ ನಂಬಲಾಗಿದೆ. ಭೂತಗಳನ್ನು ಬಿಡಿಸುವ ವಿಶಿಷ್ಟ ಆಕಾರದ ಬೆಳ್ಳಿಯ ಹಿಡಿಯ ಕೋಲುಗಳೂ ಇರುತ್ತವೆ. ಕಳ್ಳರು ಬಳಸುವ ಕನ್ನಗತ್ರಿಯೂ ಗಮನಿಸಬೇಕಾದ ಆಯುಧವೇ.

ರೈತ ಬಳಸುವ ಸಾಧನಗಳಲ್ಲಿ ವ್ಯವಸಾಯ ಹಾಗೂ ಮನೆಬಳಕೆಯ ಸಾಧನಗಳೇ ಆಯುಧಗಳೂ ಆಗುತ್ತವೆ. ಮೂಲನಿವಾಸಿಗಳ ಆಯುಧಗಳನ್ನು ಈ ದೃಷ್ಟಿಯಿಂದಲೇ ಪರಿಗಣಿಸಬೇಕಾಗುತ್ತದೆ. ಹಾರೆ, ಗುದ್ದಲಿ, ಪಿಕಾಸಿ, ಬಾಚಿ, ಕಳೆಕೊಕ್ಕೆ, ಕುಡುಲು, ಕೊಡಲಿ ಮುಂತಾದುವು ಆಯುಧಗಳೂ ಹೌದು, ರೈತನ ಸಾಧನಗಳೂ ಹೌದು. ಆಯುಧಪೂಜೆ ಕರ್ನಾಟಕದಲ್ಲಿ ಒಂದು ವಿಶಿಷ್ಟ ಆಚರಣೆಯಾಗಿ ಬೆಳೆದಿದೆ. ನವರಾತ್ರಿಯ ಕಾಲದಲ್ಲಿ ನಡೆಯುವ ಈ ಪೂಜೆ ಗ್ರಾಮಾಂತರ ಪ್ರದೇಶಗಳಲ್ಲೂ ವ್ಯಾಪಿಸಿದ್ದು ಈ ಸಂದರ್ಭದಲ್ಲಿ ವಾಹನಗಳನ್ನೂ ವ್ಯವಸಾಯ ಸಾಧನಗಳನ್ನೂ ಆಯುಧವಿಶೇಷಗಳನ್ನೂ ಇಟ್ಟು ಪೂಜಿಸಲಾಗುವುದು.

(ಜೆ.ಎಸ್.ಪಿ.)

**ಆಯುಧದ ಉಕ್ಕು :** ಎಲ್ಲ ವಿಧವಾದ ಆಯುಧಗಳನ್ನೂ ಕಡೆತದ ಯಂತ್ರಗಳಲ್ಲಿ (ಲೇತ್) ಉಪಯೋಗಿಸಲು ಬೇಕಾದ ಸಣ್ಣ ಸಣ್ಣ ಆಯುಧಗಳನ್ನೂ (ಹತ್ಯಾರುಗಳು, ಬೈರಿಗೆಯ ತುಣುಕುಗಳು ಇತ್ಯಾದಿ) ತಯಾರಿಸಲು ಬಳಸುವ ವಿಶೇಷ ತರಹದ ಉಕ್ಕು. ಓಪನ್ ಹಾರ್ತ್‌ನಲ್ಲಾಗಲಿ ಬೆಸೆಮರ್ ಮೂಸೆಯಲ್ಲಾಗಲಿ ತಯಾರಾಗುವ ಸಾಮಾನ್ಯವಾದ ಉಕ್ಕು ಮೆದು. ಇದನ್ನು ಗಟ್ಟಿಮಾಡದೆ ಆಯುಧಗಳಿಗೆ ಉಪಯೋಗಿಸಲು ಬರುವುದಿಲ್ಲ. ಇಂಗಾಲದ (ಕಾರ್ಬನ್) ಅಂಶವನ್ನು ಹೆಚ್ಚಿಸಿದರೆ ಉಕ್ಕು ಗಡಸೇನೋ (ಹಾರ್ಡ್) ಆಗುತ್ತದೆ, ಆದರೆ ಇದು ಬಹಳ ಭಿದುರ (ಬ್ರಿಟ್‌ಲ್). ಗಡಸಿನ ಜೊತೆಗೆ ಕಠಿಣವಾಗಿಯೂ (ಟಫ್) ಇರಬೇಕು. ಇವೆರಡು ಗುಣಗಳು ಬರಲು ಇಂಗಾಲದ ಅಂಶವನ್ನು ಹೆಚ್ಚು ಮಾಡುವುದರ ಜೊತೆಗೆ ಕೆಲವು ವಿಶೇಷವಾದ ಲೋಹಗಳನ್ನು ನಿರ್ದಿಷ್ಟ ಪ್ರಮಾಣಗಳಲ್ಲಿ ಬೆರೆಸುತ್ತಾರೆ. ಸಾಮಾನ್ಯವಾಗಿ ಕ್ರೋಮಿಯಂ, ನಿಕ್ಕಲ್, ವೆನೇಡಿಯಂ, ಮ್ಯಾಲಿಬ್ಡಿನಂ ಮತ್ತು ಟಂಗ್‌ಸ್ಟನ್ ಎಂಬ ಲೋಹಗಳನ್ನು ಬೆರೆಸುತ್ತಾರೆ. ಎಷ್ಟೆಷ್ಟು ಪ್ರಮಾಣಗಳಲ್ಲಿ ಇವನ್ನು ಬೆರೆಸಬೇಕೆಂಬುದು ಆಯುಧದ ಉಪಯೋಗದ ಆವಶ್ಯಕತೆಗಳನ್ನು ಅವಲಂಬಿಸಿದೆ. ಆಯುಧದ ಉಕ್ಕುಗಳಲ್ಲಿ ಸಾವಿರಾರು ವಿಭಾಗಗಳಿವೆ. ಮುಖ್ಯವಾದ ಕೆಲವು ಉಕ್ಕುಗಳ ವಿಶ್ಲೇಷಣೆಯನ್ನು ಇಲ್ಲಿ ಕೊಡಲಾಗಿದೆ:

| ಮಿಶ್ರಣ ವಸ್ತು | ಕ್ರೋಮಿಯಂ ಉಕ್ಕು | ಕ್ರೋಮಿಯಂ ವೆನೇಡಿಯಂ | ಕ್ರೋಮಿಯಂ ನಿಕ್ಕಲ್ ಉಕ್ಕು | ಕ್ರೋಮಿಯಂ ಮಾಲಿಬ್ಡಿನಂ |
|---|---|---|---|---|
| ಕಾರ್ಬನ್% ... | 0.9–1.1 | 0.5–1.0 | 0.4–0.75 | 0.4–0.75 |
| ಮ್ಯಾಂಗನೀಸ್ ... | 0.25 | 0.25 | 0.40 | 0.40 |
| ಕ್ರೋಮಿಯಂ%... | 1.0–2.0 | 0.75–1.5 | 0.75–2.25 | 0.75–1.50 |
| ವೆನೇಡಿಯಂ%... | — | 0.20 | — | — |
| ನಿಕ್ಕಲ್% ... | — | — | 1.0–2.0 | 1.0–2.0 |
| ಮಾಲಿಬ್ಡಿನಂ%... | — | — | — | 0.2–0.5 |

ಮೇಲ್ಕಂಡ ಆಯುಧದ ಉಕ್ಕುಗಳನ್ನು ಮೂಸೆಯಿಂದ ಹೊರಬಂದು ಅಚ್ಚಾದ ಮೇಲೆ ಒಂದು ವಿಶೇಷವಾದ ಉಷ್ಣಸಂಸ್ಕಾರಕ್ಕೆ (ಹೀಟ್ ಟ್ರೀಟ್‌ಮೆಂಟ್) ಒಳಪಡಿಸಲಾಗುವುದು. ಪರಿಣಾಮವಾಗಿ ಅವುಗಳಿಗೆ ಬೇಕಾದ ವಿಶೇಷ ಗುಣಗಳು ಬರುತ್ತವೆ. ಮಿಶ್ರಲೋಹಗಳ ಪ್ರಮಾಣದ ಮೇಲೆಯೂ ಇಂಗಾಲ ಅಂಶದ ಮೇಲೆಯೂ ಅವಲಂಬಿಸಿ ಈ ಉಷ್ಣಸಂಸ್ಕಾರಗಳೂ ಸ್ವಲ್ಪ ಸ್ವಲ್ಪ ವ್ಯತ್ಯಾಸವಾಗುತ್ತವೆ. ಸಾಮಾನ್ಯವಾಗಿ ಈ ತರಹದ ಉಕ್ಕನ್ನು ಚೆನ್ನಾಗಿ ಕೆಂಪಗೆ ಕಾಯಿಸಿ ತಕ್ಷಣ ಅದನ್ನು ನೀರಿನಲ್ಲಾಗಲಿ ಎಣ್ಣೆಯಲ್ಲಾಗಲಿ ಅದ್ದಿ ತಣ್ಣಗೆಮಾಡಿ (ಕ್ವೆಂಚಿಂಗ್) ಆಮೇಲೆ ಪುನಃ ಅವುಗಳನ್ನು ಸುಮಾರು $120^0$–$220^0$ ಸೆಂ.ಗ್ರೇ.ವರೆಗೆ ನಿಧಾನವಾಗಿ ಕಾಯಿಸಿ, ನಿಧಾನವಾಗಿ ಆರಿಸಬೇಕು (ಹದಗೊಳಿಸುವಿಕೆ, ಟೆಂಪರಿಂಗ್). ಇಂಥ ಲೋಹ ಉಪಯೋಗಕ್ಕೆ ಸಿದ್ಧವಾಗುವುದು.

ಆಯುಧದ ಉಕ್ಕುಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಅತಿವೇಗದ ಉಕ್ಕು (ಹೈಸ್ಪೀಡ್ ಸ್ಟೀಲ್). ಕೆಲವು ವಿಶೇಷ ಉಕ್ಕಿನಿಂದ ತಯಾರಿಸಲ್ಪಟ್ಟ ಯಂತ್ರಭಾಗಗಳನ್ನು ಕತ್ತರಿಸಲು, ನುಣುಪು ಮಾಡಲು ಸಾಮಾನ್ಯವಾದ ಆಯುಧದ ಉಕ್ಕು ಸಮರ್ಥವಲ್ಲ. ಸ್ವಲ್ಪಹೊತ್ತಿನಲ್ಲಿಯೇ ಆಯುಧ ಕೆಂಪಾಗಿ ತುದಿ ಮೆತ್ತಗಾಗಿ ಕೆಲಸವೇ ನಿಂತುಹೋಗುವುದು. ಕೆಲಸ ನಡೆಯುತ್ತಿರುವಾಗ ಉತ್ಪತ್ತಿಯಾಗುವ ಉಷ್ಣದಿಂದ ಕೆಂಪಾಗಿರುವಾಗಲೂ ತನ್ನ ಕಾಠಿಣ್ಯ ಕಳೆದುಕೊಳ್ಳದ ಒಂದು ತರಹದ ಉಕ್ಕು ಅವಶ್ಯ. ಇದೇ ಅತಿವೇಗದ ಉಕ್ಕು. ಇದನ್ನು ಸಾಮಾನ್ಯವಾಗಿ 18 : 4 : 1 ಉಕ್ಕು ಎಂದು ಕರೆಯುವುದು ವಾಡಿಕೆ. ಇದರಲ್ಲಿ ಕಾರ್ಬನ್ ಶೇ.0.5–0.8, ಮ್ಯಾಂಗನೀಸ್ ಶೇ.0.25, ಟಂಗ್‌ಸ್ಟನ್ ಶೇ.18, ಕ್ರೋಮಿಯಂ ಶೇ.4, ವೆನೇಡಿಯಂ ಶೇ.1 ಇರುತ್ತವೆ. ಇದರಲ್ಲಿಯೂ ಈ ಮಿಶ್ರಲೋಹಗಳ ಪ್ರಮಾಣಗಳನ್ನು ಆವಶ್ಯಕತೆಗೆ ತಕ್ಕಂತೆ ಬದಲಾಯಿಸಬಹುದು. ಇದಕ್ಕೂ ವಿಶೇಷವಾದ ಉಷ್ಣಸಂಸ್ಕಾರ ಆವಶ್ಯಕ. ಅದನ್ನು ಸಾಮಾನ್ಯವಾಗಿ $1175^0$–$1320^0$ ಸೆಂ.ಗ್ರೇ.ವರೆಗೆ ಕಾಯಿಸಿ ಎಣ್ಣೆಯಲ್ಲಾಗಲಿ ವಿಶೇಷವಾದ ದ್ರವ ಪದಾರ್ಥಗಳಲ್ಲಾಗಲಿ ಅದ್ದಿ ವಾತಾವರಣದ ಉಷ್ಣತೆಗೆ ಇಳಿಸಿ ಅದನ್ನು ಪುನಃ ಸುಮಾರು $540^0$–$595^0$ ಸೆಂಗ್ರೇ. ವರೆಗೆ ಕಾಯಿಸಿ ನಿಧಾನವಾಗಿ ಆರಿಸುತ್ತಾರೆ. ಮೂರನೆಯ ಬಾರಿ ಪುನಃ ಸುಮಾರು $320^0$–$345^0$ ಸೆಂಗ್ರೇ.ವರೆಗೆ ಕಾಯಿಸಿ ನಿಧಾನವಾಗಿ ಆರಿಸುತ್ತಾರೆ.

(ಕೆ.ಆರ್.)

**ಆಯುರ್ವೇದ :** ಭಾರತೀಯ ವೈದ್ಯ ಪದ್ಧತಿ. ಅಥರ್ವಣವೇದದ ಉಪವೇದವೆಂದೂ ಬ್ರಹ್ಮನಿಂದ ಬಂದಿದೆಯೆಂದೂ ಹೇಳಲಾಗಿದೆ. ಆದ್ದರಿಂದ ಇದು ವೇದದಷ್ಟೇ ಪ್ರಾಚೀನ, ಅದರಂತೆ ಅಪೌರುಷೇಯ. ದಕ್ಷಪ್ರಜಾಪತಿ, ಅಶ್ವಿನಿ ದೇವತೆಗಳು, ಇಂದ್ರ–ಇವರಿಗೆ ಪರಂಪರಾಗತವಾಗಿ ಅಂದರೆ ಇಂದ್ರನಿಂದ ಭಾರದ್ವಾಜನಿಗೂ ಅವನಿಂದ ಇತರ ಋಷಿಗಳಿಗೂ ಉಪದೇಶಿಸಲ್ಪಟ್ಟಿದೆ ಎಂದಿದೆ. ನಮಗೆ ಗೋಚರವಾಗುವ ಎಲ್ಲ ದ್ರವ್ಯಗಳೂ ಪಂಚಮಹಾಭೂತಗಳ ಸಂಘಟನೆಯಿಂದಾಗಿವೆ. ಚೇತನಾದ್ರವ್ಯವೆನಿಸಿದ ಆತ್ಮನ ಸಂಯೋಗದಿಂದ ಜೀವರಾಶಿಗಳೇರ್ಪಡುತ್ತವೆ. ಈ ತತ್ತ್ವಕ್ಕನುಸಾರವಾಗಿ ಮನುಷ್ಯ, ಪಂಚಭೂತ ಮತ್ತು ಆತ್ಮ ಸೇರಿ ಆಗಿರುವ ಪ್ರಾಣಿ. ಇತರ ಪ್ರಾಣಿ, ಸಸ್ಯ, ಖನಿಜ, ಗಾಳಿ, ನೀರು ಮುಂತಾದುವುಗಳನ್ನು ಯುಕ್ತಿಯಿಂದ ಉಪಯೋಗಿಸಿಕೊಳ್ಳುತ್ತ ಮನುಷ್ಯ ತನ್ನ ಜೀವನವನ್ನು ಸಾಗಿಸುತ್ತಾನೆ. ಸಾಧನಚತುಷ್ಟಯಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಇವನ ಶರೀರವೇ ಆಧಾರವಾದುದರಿಂದ ಇದನ್ನು ಯಾವ ಬಾಧೆಯೂ ಇಲ್ಲದಂತೆ ಬಹುಕಾಲ ಕಾಪಾಡಲು ಪ್ರಯತ್ನಪಡುತ್ತಾನೆ. ಇದೇ ಆರೋಗ್ಯರಕ್ಷಣೆ.

ಆರೋಗ್ಯವು ಆಹಾರ, ದೇಶ, ಕಾಲ, ನಿದ್ರೆ, ಬ್ರಹ್ಮಚರ್ಯೆ, ನಡೆವಳಿಕೆ ಮುಂತಾದವುಗಳನ್ನವಲಂಬಿಸಿದೆ. ಇವುಗಳಲ್ಲಿ ಹೆಚ್ಚು ಕಡಿಮೆಯಾಗುವುದರಿಂದ ಆರೋಗ್ಯ ಕೆಡುವುದು. ಈ ಅವಸ್ಥೆಯೇ ರೋಗ. ಆರೋಗ್ಯದಲ್ಲೂ ಶರೀರ ಮತ್ತು ಮನಸ್ಸುಗಳ ಸ್ಥಿತಿಗೆ ಪಂಚಭೂತಗಳೇ ಕಾರಣ. ಪಂಚೀಕೃತವಾದ ಭೌತಿಕ ದ್ರವ್ಯಗಳಲ್ಲಿ ಪ್ರಧಾನವಾದುವು ವಾಯು, ಅಗ್ನಿ ಮತ್ತು ಉದಕ. ಇವು ಶರೀರದಲ್ಲಿ ವಾಯು, ಪಿತ್ತ ಮತ್ತು ಕಫ ರೂಪದಲ್ಲಿವೆ. ಇವುಗಳ ಗುಣಕರ್ಮಗಳು ಶರೀರಾವಯವಗಳಿಗೆ (ಧಾತುಗಳಿಗೆ) ಸಮಾನವಾಗಿದ್ದರೆ ದೇಹಪೋಷಣೆಯನ್ನೂ ವಿಷಮವಾಗಿದ್ದರೆ ರೋಗ ಮತ್ತು ಮರಣವನ್ನೂ ಉಂಟುಮಾಡುವುವು. ನಿತ್ಯಜೀವನದಲ್ಲಿ ಆಹಾರಾದಿಗಳ ವ್ಯತ್ಯಾಸವಾಗುತ್ತಿದ್ದು ವಾತ, ಪಿತ್ತ ಮತ್ತು ಕಫಗಳು ಹೆಚ್ಚುಕಡಿಮೆಯಾಗಿ ಧಾತುಗಳನ್ನು ದೂಷಿಸುವುದರಿಂದ ಇವುಗಳಿಗೆ ದೋಷಗಳೆಂದು ಹೆಸರು ಬಂದಿದೆ. ಧಾತುಗಳು ಬಲಿಷ್ಠವಾಗುವವರೆಗೂ ಆಹಾರಾದಿಗಳ ಹೆಚ್ಚು ಕಡಿಮೆಯಿಂದ ಯಾವ ಬಾಧೆಯೂ ತೋರುವುದಿಲ್ಲ. ಆಗ ದೋಷಗಳ ಬಲ ಕಡಿಮೆಯಾಗಿರುವುದು. ಇದಕ್ಕೆ ವಿರುದ್ಧವಾಗಿದ್ದರೆ ದುಷ್ಟದೋಷಗಳು ರೋಗಕ್ಕೆ ಕಾರಣವಾಗುತ್ತವೆ. ಸರಿಯಾದ ವ್ಯಾಯಾಮ, ಸ್ನಿಗ್ಧಾಹಾರ ಮತ್ತು ಹಸಿವು ಇರುವ ಮನುಷ್ಯನಿಗೆ ವಿರುದ್ಧವಾದುವು ಪೀಡಿಸುವುದಿಲ್ಲ. ಆದರೂ ಅಭ್ಯಾಸವಿರುವ ಆಹಾರವನ್ನು ಮಿತವಾಗಿಯೇ ಸೇವಿಸಬೇಕು.

ರೋಗಕ್ಕೆ ಕಾರಣವಾದುದನ್ನು (ರೋಗಹೇತು) ವರ್ಜಿಸುವುದು, ರೋಗಲಕ್ಷಣಗಳಿಂದ (ಲಿಂಗ) ವಿಷಮ ದೋಷಗಳ ವೃದ್ಧಿಕ್ಷಯಗಳನ್ನು ಕಂಡುಹಿಡಿದು, ಅವುಗಳನ್ನು ಸಮಸ್ಥಿತಿಯಲ್ಲಿರಿಸಿ ಧಾತುಗಳ ಬಲವನ್ನು ಹೆಚ್ಚಿಸುವುದು(ಔಷಧ)–ಈ ವೈದ್ಯಪದ್ಧತಿಯ ತತ್ತ್ವಗಳು. ಹೇತುಲಿಂಗೌಷಧ ಜ್ಞಾನವನ್ನನುಸರಿಸಿ ಆರೋಗ್ಯವನ್ನು ರಕ್ಷಿಸಿಕೊಳ್ಳುವುದು ಎಲ್ಲ ಕಾಲಕ್ಕೂ ವಿಹಿತವಾಗಿದೆ. ಶರೀರದಲ್ಲಿ ಉತ್ಪತ್ತಿಯಾಗುವ ವಾತವಿಣ್ಮೂತ್ರಾದಿಗಳ ವೇಗಗಳನ್ನು ತಡೆಯುವುದು. ವೇಗವಿಲ್ಲದಿರುವಾಗ ಅದನ್ನು ಉಂಟುಮಾಡುವುದಕ್ಕೆ ಪ್ರಯತ್ನಿಸುವುದು ಎಲ್ಲ ರೋಗಗಳಿಗೂ ಸಾಮಾನ್ಯ ಕಾರಣವಾಗುವುವು. ಶಾರೀರಿಕ ಕ್ರಿಯೆಯಲ್ಲಿ ವ್ಯತ್ಯಾಸವಾಗಿ ಉಂಟಾಗುವ ರೋಗಕ್ಕೆ ನಿಜರೋಗವೆಂದೂ ಅಪಘಾತ, ಅಗ್ನಿ, ವಿಷ ಮುಂತಾದ ಹೊರಗಿನ ಕಾರಣಗಳಿಂದ ಸಂಭವಿಸುವ ರೋಗಕ್ಕೆ ಆಗಂತುಕವೆಂದೂ ಹೆಸರು. ಆಗಂತುಕದಲ್ಲಿ ಬಾಧೆಯಾದ ಅನಂತರ ದೋಷವೈಷಮ್ಯ ಕಂಡುಬರುವುದು. ಚಿಕಿತ್ಸೆಯನ್ನು ದೋಷಕ್ಕೆ ತಕ್ಕಂತೆಯೂ ವ್ಯಾಧಿಗೆ ತಕ್ಕಂತೆಯೂ ಎಂದರೆ ದೋಷಪ್ರತ್ಯನೀಕ ಮತ್ತು ವ್ಯಾಧಿಪ್ರತ್ಯನೀಕವೆಂದು ಎರಡು ಭಾಗ ಮಾಡುವುದುಂಟು. ರೋಗ ತನ್ನ ಸ್ಪಷ್ಟ ರೂಪವನ್ನು ಹೊಂದುವುದಕ್ಕೆ ಮೊದಲು ಶೋಧನ ಅಥವಾ ಶಮನಕ್ರಿಯೆಗಳಿಂದ ದೋಷಗಳನ್ನು ಸರಿಪಡಿಸುವುದು ದೋಷಪ್ರತ್ಯನೀಕ. ರೋಗ ಸ್ಪಷ್ಟವಾಗಿ ಮುಂದುವರಿಯುತ್ತಿದ್ದರೆ ರೋಗಹರಣಮಾಡುವ ಸಿದ್ಧೌಷಧ ಪ್ರಯೋಗ ವ್ಯಾಧಿಪ್ರತ್ಯನೀಕವೆನಿಸುವುದು. ಚಿಕಿತ್ಸೆಗೆ ಕೇವಲ ಔಷಧಗಳೇ ಅಲ್ಲದೆ ಕ್ಷಾರ ಕರ್ಮ, ಶಸ್ತ್ರಕರ್ಮ ಮತ್ತು ಅಗ್ನಿಕರ್ಮಗಳೆಂಬ ಬೇರೆ ಬೇರೆ ಉಪಾಯಗಳಿವೆ. ಕ್ಷಾರ ಮತ್ತು ಅಗ್ನಿಕರ್ಮಗಳು ದುರ್ಮಾಂಸ, ವಿಷದಂಶ ಮುಂತಾದುವನ್ನು ಸುಡುವುದರಲ್ಲೂ ಶಸ್ತ್ರಕರ್ಮ, ಶಲ್ಯಾಹರಣ, ವಿದ್ರಧಿ (ಕುರು ಅಥವಾ ಬಾವು), ಅಧಿಮಾಂಸ, ಅಸ್ಥಿಭಗ್ನ ಮುಂತಾದುವುಗಳಲ್ಲೂ ಉಪಯೋಗವಾಗಿವೆ. ನಾಡೀಪರೀಕ್ಷೆ, ಪಂಚಕರ್ಮ, ಲೋಹಾದಿಗಳ ಭಸ್ಮ ಪ್ರಯೋಗಗಳು ಚಿಕಿತ್ಸೆಯಲ್ಲಿ ಬಹಳ ಉಪಯುಕ್ತವಾಗಿವೆ. ವೈದ್ಯರು ತಮಗೆ ಬೇಕಾದ ಔಷಧಗಳನ್ನು ತಾವೇ ತಯಾರಿಸಿಕೊಳ್ಳುವುದು, ಏಕಮೂಲಿಕಾ ಪ್ರಯೋಗ, ಪಥ್ಯಕ್ರಮ, ಋತುಗಳಿಗೆ ತಕ್ಕ ಆಹಾರ ವಿಹಾರ ನಿಯಮಗಳು–ಇವು ಆಯುರ್ವೇದದ ವೈಶಿಷ್ಟ್ಯಗಳು.

ದೀರ್ಘಾಯುಸ್ಸು, ಸ್ಮೃತಿ, ಮೇಧಾಶಕ್ತಿ ಮುಂತಾದುವನ್ನು ಪಡೆಯುವುದಕ್ಕೆ ರಸಾಯನ ಪ್ರಯೋಗಗಳುಂಟು. ಮನುಷ್ಯ ನೆಮ್ಮದಿಯಾಗಿದ್ದುಕೊಂಡು ತನ್ನ ವಂಶಾಭಿವೃದ್ಧಿ ಹಾಗೂ ಸುಖಸಂತೋಷಕ್ಕಾಗಿ ಸತ್ಸಂತಾನವನ್ನು ಪಡೆಯುವುದಕ್ಕೋಸ್ಕರ ವಾಜೀಕರಣವೆಂಬ ವಿಧಿಯುಂಟು. ಇವೆಲ್ಲವನ್ನೂ ಒಳಗೊಂಡಿರುವ ಆಯುರ್ವೇದವನ್ನು ಶಲ್ಯ, ಶಾಲಾಕ್ಯ, ಕಾಯಚಿಕಿತ್ಸಾ, ಭೂತವಿದ್ಯಾ, ಕೌಮಾರಭೃತ್ಯ, ಅಗದತಂತ್ರ (ವಿಷಚಿಕಿತ್ಸಾ) ರಸಾಯನ ತಂತ್ರ ಮತ್ತು ವಾಜೀಕರಣತಂತ್ರಗಳೆಂದು ಎಂಟುವಿಧವಾಗಿ ಮಾಡಿದ್ದಾರೆ.

**ಇತಿಹಾಸ:** ಭೂಲೋಕದಲ್ಲಿ ರೋಗರುಜಿನಗಳು ಜನರನ್ನು ಪೀಡಿಸುತ್ತಿರುವುದರಿಂದ ತಮ್ಮ ಪುರುಷಾರ್ಥಸಾಧನೆಗಳಿಗೆ ವಿಘ್ನವಾಗುತ್ತಿರುವುದನ್ನು ನಿವಾರಿಸುವುದಕ್ಕಾಗಿ ಹಿಂದೆ ಭಾರದ್ವಾಜನೇ ಮೊದಲಾಗಿ ಅನೇಕ ಮಹರ್ಷಿಗಳು ಹಿಮಾಲಯದ ತಪ್ಪಲಲ್ಲಿ ಸಭೆ ಸೇರಿದರು. ಇವರೆಲ್ಲರ ತೀರ್ಮಾನದಂತೆ ಭಾರದ್ವಾಜ ಇಂದ್ರನ ಬಳಿಗೆ ಹೋಗಿ

ಆಯುರ್ವೇದವನ್ನು ತಿಳಿದುಬಂದು ಋಷಿಗಳಲ್ಲಿ ಪ್ರಚಾರಮಾಡಿದ. ಈ ಋಷಿಸಭೆಯನ್ನು ನಮ್ಮ ದೇಶದ ಮೊತ್ತಮೊದಲನೆಯ ವೈದ್ಯರ ಸಮ್ಮೇಳನವೆನ್ನಬಹುದು. ಇದರಲ್ಲಿ ಬೇರೆ ಬೇರೆ ದೇಶದ ವಿದ್ವಾಂಸರು ಭಾಗವಹಿಸಿದ್ದರು. ಇವರಲ್ಲಿ ಪುನರ್ವಸು, ಆತ್ರೇಯ ತನ್ನ ಆರು ಜನ ಶಿಷ್ಯರಾದ ಅಗ್ನಿವೇಶ, ಭೇಡ, ಜತೂಕರ್ಣ, ಪರಾಶರ, ಹಾರೀತ ಮತ್ತು ಕ್ಷಾರಪಾಣಿಗಳಿಗೆ ಈ ಶಾಸ್ತ್ರವನ್ನು ಹೇಳಿಕೊಟ್ಟ. ಇವರೆಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಗ್ರಂಥಗಳನ್ನು ರಚಿಸಿದರು. ಅವುಗಳಲ್ಲಿ ಅಗ್ನಿವೇಶನ ತಂತ್ರವೇ ಶ್ರೇಷ್ಠವೆನಿಸಿತು. ಆದರೆ ಈ ಮೂಲಗ್ರಂಥ ಈಗ ನಮಗೆ ದೊರೆತಿಲ್ಲ. ಪ್ರ.ಶ.ಪೂ. ಸು. 3 ಅಥವಾ 2ನೆಯ ಶತಮಾನದಲ್ಲಿ ಚರಕಾಚಾರ್ಯ ಈ ತಂತ್ರವನ್ನು ಸಂಸ್ಕರಿಸಿದ. ಅಂದಿನಿಂದೀಚೆಗೆ ಇದಕ್ಕೆ ಚರಕಸಂಹಿತೆ ಎಂದು ಹೆಸರುಬಂದಿದೆ. ಇತರರ ಗ್ರಂಥಗಳಲ್ಲಿ ಕೆಲವು ದೊರೆತಿಲ್ಲ. ದೊರೆತ ಗ್ರಂಥಗಳಲ್ಲಿ ಎಷ್ಟೋ ಭಾಗಗಳು ನಷ್ಟವಾಗಿವೆ. ಪರಾಶರನು ಹಸ್ತ್ಯಾಯುರ್ವೇದದಲ್ಲೂ ನಿಪುಣನಾಗಿದ್ದನೆಂದು ತಿಳಿದುಬಂದಿದೆ. ಆಯುರ್ವೇದ ಗ್ರಂಥಗಳ ಹಿಂದಿನ ವ್ಯಾಖ್ಯಾನಕಾರರು ಈ ಗ್ರಂಥಗಳಿಂದ ಕೆಲವು ಆಧಾರಗಳನ್ನು ಉಲ್ಲೇಖಿಸಿದ್ದಾರೆ.

ಪುನರ್ವಸು ಆತ್ರೇಯ ತ್ರಿದೋಷಸಿದ್ಧಾಂತವನ್ನು ಕ್ರಮಬದ್ಧ ರೂಪಕ್ಕೆ ತಂದ. ಹಿಂದೆ ಮೂಲಿಕಾದಿಗಳನ್ನು ಅನುಭವದಿಂದ ಉಪಯೋಗಿಸುತ್ತಿದ್ದುದನ್ನು ಮಾರ್ಪಡಿಸಿ ಅವುಗಳ ರಸ, ಗುಣ, ವೀರ್ಯ, ವಿಪಾಕ ಮತ್ತು ಪ್ರಭಾವಗಳನ್ನು ಕಂಡುಹಿಡಿದು ದೋಷಗಳಿನುಸಾರವಾಗಿ ಚಿಕಿತ್ಸಿಸುವುದನ್ನು ಪ್ರಚಾರ ಮಾಡಿದ. ರಸಗಳು ಆರು ಮಾತ್ರ ಎಂಬುದನ್ನು ದೃಢಪಡಿಸುವುದಕ್ಕೆ ಒಂದು ಸಮ್ಮೇಳನವನ್ನೇ ನಡೆಸಿದ. ಆಗಿಂದಾಗ್ಯೆ ತದ್ವಿದ್ಯಾಸಂಭಾಷಾ ಪರಿಷತ್ತುಗಳನ್ನು ನಡೆಸುತ್ತಿದ್ದ. ಎಲ್ಲ ಕಡೆಗಳಿಂದಲೂ ಪ್ರಸಿದ್ಧ ವೈದ್ಯರು ಸೇರಿ ಚರ್ಚಿಸುತ್ತಿದ್ದರು. ಎಲ್ಲರೂ ಆತ್ರೇಯನ ತೀರ್ಮಾನಗಳನ್ನೇ ಅಂಗೀಕರಿಸುತ್ತಿದ್ದರು. ಈತ ಬಹುಶಃ ಪ್ರ.ಶ.ಪೂ. 8–7ನೆಯ ಶತಮಾನದಲ್ಲಿದ್ದನೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆತ್ರೇಯಪಂಥದವರು ವಿಶೇಷವಾಗಿ ಕಾಯಚಿಕಿತ್ಸೆಗೆ ಪ್ರಾಧಾನ್ಯ ಕೊಟ್ಟಿರುತ್ತಾರೆ; ಆಮ್ಲ ಉತ್ಪತ್ತಿ, ಅದರಿಂದಾಗುವ ವಿವಿಧ ರೋಗಗಳು–ಇವನ್ನು ವಿವರಿಸಿರುತ್ತಾರೆ.

ಎರಡನೆಯ ಪಂಥವೆಂದರೆ ಭಗವಾನ್ ಧನ್ವಂತರಿಯದು. ಈತ ಕ್ಷೀರಸಮುದ್ರದ ಮಥನಕಾಲದಲ್ಲಿ ಉದ್ಭವಿಸಿದನೆಂದೂ ಕೈಯಲ್ಲಿ ಅಮೃತಕಳಶವನ್ನಿಟ್ಟುಕೊಂಡು ಬಂದ ಆದಿದೇವನೆಂದೂ ರಾಮಾಯಣ, ಮಹಾಭಾರತ ಮತ್ತು ಹರಿವಂಶಪುರಾಣಗಳಲ್ಲಿ ಹೇಳಿದೆ. ಇವನನ್ನು ವಿಷ್ಣುವಿನ ಅವತಾರವೆಂದು ಇಂದಿಗೂ ವೈದ್ಯರು ಪೂಜಿಸುತ್ತಾರೆ. ವಿಷ್ಣು, ಬ್ರಹ್ಮವೈವರ್ತ ಮತ್ತು ವಾಯುಪುರಾಣಗಳ ಪ್ರಕಾರ ಧನ್ವಂತರಿ ಸೂರ್ಯನಿಂದ ಆಯುರ್ವೇದವನ್ನು ಕಲಿತನೆಂದು ತಿಳಿಯುತ್ತದೆ. ಸ್ಕಂದ, ಗರುಡ ಮತ್ತು ಮಾರ್ಕಂಡೇಯ ಪುರಾಣಗಳ ಪ್ರಕಾರ ಗಾಲವಋಷಿಯ ಮಗ ಸರ್ವಶಾಸ್ತ್ರ ಸಂಪನ್ನನಾಗಿದ್ದು ಅಶ್ವಿನಿ ಕುಮಾರರ ಶಿಷ್ಯನಾಗಿ ಧನ್ವಂತರಿ ಎಂಬ ಹೆಸರನ್ನು ಪಡೆದ. ಸುಶ್ರುತಸಂಹಿತೆಯ ಪ್ರಕಾರ ಕಾಶೀರಾಜನಾದ ದಿವೋದಾಸ ಆದಿದೇವ ಧನ್ವಂತರಿಯ ಅವತಾರಪುರುಷನೆಂದೂ ಶಲ್ಯತಂತ್ರವನ್ನು ಪ್ರಧಾನವಾಗಿ ಉಪದೇಶ ಮಾಡುವುದಕ್ಕಾಗಿ ಭೂಲೋಕಕ್ಕೆ ಪುನಃ ಬಂದನೆಂದೂ ಹೇಳಿದೆ.

ಅಹಂ ಹಿ ಧನ್ವಂತರಿರಾದಿದೇವೋ ಜರಾರುಜಾಮೃತ್ಯುಹರೋಽಮರಾಣಾಮ್1

ಶಲ್ಯಾಂಗಮಂಗೈರಪರೈರುಪೇತಂ ಪ್ರಾಪ್ತೋಽಸ್ಮಿಗಾಂಭೂಯ ಇಹೋಪದೇಷ್ಟುಮ್11

(ಸುಶ್ರುತಸಂಹಿತಾ)

ದಿವೋದಾಸನೆಂಬ ಧನ್ವಂತರಿ ಸುಶ್ರುತನನ್ನೇ ಮುಂದಾಗಿಟ್ಟುಕೊಂಡು ಔಪಧೇನವ, ವೈತರಣ, ಔರಭ್ರ ಮುಂತಾದವರಿಗೆ ಶಲ್ಯಚಿಕಿತ್ಸೆಯನ್ನೇ ಮುಖ್ಯವಾಗಿ ಉಪದೇಶಿಸಿದ. ಚರಕಸಂಹಿತೆಯಲ್ಲಿ ಅನುಸರಿಸಿರುವಂತೆಯೇ ಸುಶ್ರುತಸಂಹಿತೆಯಲ್ಲಿ ದ್ರವ್ಯಗಳ ರಸಾದಿಗಳು, ದೋಷಭೇದ–ಮುಂತಾದುವು ವಿವರಿಸಲ್ಪಟ್ಟಿವೆ. ಶಸ್ತ್ರಚಿಕಿತ್ಸೆಗೆ ಅವಶ್ಯವಾಗಿ ಆಮ, ಪಚ್ಯಮಾನ ಮತ್ತು ಪಕ್ವವಿದ್ರಧಿ, ಕ್ರಿಯಾಕಾಲ, ಪೂರ್ವಕರ್ಮ–ಇವು ವಿಶೇಷವಾಗಿ ವರ್ಣಿಸಲ್ಪಟ್ಟಿವೆ. ಮೂಢಗರ್ಭಚಿಕಿತ್ಸೆ ಕ್ಯಾಟರ್‍ಯಾಕ್ಟ್ ರೈನೊಪ್ಲಾಸ್ಟಿ ಎಂಬ ನೇತ್ರರೋಗ ನಾಸಾ ರೋಗ ಮುಂತಾದುವುಗಳ ಶಸ್ತ್ರಚಿಕಿತ್ಸೆಗಳನ್ನು ಆ ಕಾಲದಲ್ಲಿ ನಡೆಸುತ್ತಿದ್ದರು. ದಿವೋದಾಸ ಇಂದ್ರನ ಶಿಷ್ಯನೆಂದು ಸುಶ್ರುತಸಂಹಿತೆಯಲ್ಲಿ ಹೇಳಿದೆ. ಈತ ಪ್ರ.ಶ.ಪೂ. 8ನೆಯ ಶತಮಾನದಲ್ಲಿದ್ದನೆಂದು ಗೊತ್ತುಪಡಿಸಿದ್ದಾರೆ. ಧನ್ವಂತರಿಯ ಹೆಸರಿನಲ್ಲಿ ಸುಮಾರು ಎಂಟು ಗ್ರಂಥಗಳು, ದಿವೋದಾಸನ ಹೆಸರಿನ ಚಿಕಿತ್ಸಾದರ್ಶನವೆಂಬುದು ಮತ್ತು ಕಾಶೀರಾಜನ ಚಿಕಿತ್ಸಾಕೌಮುದೀ ಮತ್ತು ಅಜೀರ್ಣಾಮೃತಗಳೆಂಬ ಗ್ರಂಥಗಳಿವೆ.

ಸುಶ್ರುತ ವಿಶ್ವಾಮಿತ್ರನ ಮಗ. ಈತನ ಸಂಹಿತೆ ಭಿಕ್ಷು ನಾಗಾರ್ಜುನನಿಂದ ಪ್ರತಿ ಸಂಸ್ಕರಣವಾಗಿ ದೊರೆತಿದೆ. ಮೂಲಗ್ರಂಥದಲ್ಲಿ ಐದು ಸ್ಥಾನಗಳು ದೊಡ್ಡ ಶಸ್ತ್ರಕ್ರಿಯೆಗಳನ್ನೊಳಗೊಂಡಿತ್ತೆಂದೂ ಮುಂದೆ ಬೇರೆಯವರು ನಷ್ಟಭಾಗವನ್ನು ಉತ್ತರ ತಂತ್ರದಲ್ಲಿ ಸೇರಿಸಿದರೆಂದೂ ಸಂಶೋಧಕರು ತಿಳಿಸುತ್ತಾರೆ. ಶಸ್ತ್ರಚಿಕಿತ್ಸೆಯ ಗ್ರಂಥಗಳಲ್ಲಿ ಇದೇ ಮೊದಲನೆಯದು. ಶಸ್ತ್ರಗಳ ವರ್ಣನೆ, ಕ್ರಿಯಾಕರ್ಮ, ಪೂರ್ವ ಮತ್ತು ಪಶ್ಚಾತ್ಕರ್ಮ ಇವು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುತ್ತವೆ. ಅನೇಕರು ಈ ಸಂಹಿತೆಗೆ ವ್ಯಾಖ್ಯಾನ ಮಾಡಿದ್ದಾರೆ. 8ನೆಯ ಶತಮಾನದಲ್ಲಿ ಈ ಸಂಹಿತೆ ಅರಬ್ಬೀ ಭಾಷೆಗೆ ಭಾಷಾಂತರಿಸಲ್ಪಟ್ಟಿತು. ಮಹಾಭಾರತದಲ್ಲಿ ಧನ್ವಂತರಿ ಪಂಥದ ಕಾಶ್ಯಪನ ಹೆಸರು ಉಲ್ಲೇಖವಾಗಿದೆ. ಈತ ವಿಷಚಿಕಿತ್ಸಕನೆಂದೂ ಪರೀಕ್ಷಿತರಾಜನನ್ನು ತಕ್ಷಕನೆಂಬ ಸರ್ಪ ಕಚ್ಚಿದಾಗ ಚಿಕಿತ್ಸಿಸಲು ಹೋಗಿದ್ದನೆಂದೂ ತಿಳಿಸಲಾಗಿದೆ.

ಬಾಲೋಪಚಾರ, ಬಾಲರೋಗಗಳ ಚಿಕಿತ್ಸೆಯಲ್ಲಿ ನಿಷ್ಣಾತನಾದ ಕಾಶ್ಯಪ ಪ್ರ.ಶ.ಪೂ. 6ನೆಯ ಶತಮಾನಕ್ಕೆ ಸೇರಿದವ. ಈತ ರಚಿಸಿರುವ ಕಾಶ್ಯಪಸಂಹಿತೆಯಲ್ಲಿ ಬಹುಭಾಗ ನಷ್ಟವಾಗಿದೆ. ಆದರೂ ಇದರಲ್ಲಿ ಅಡಕವಾಗಿರುವ ಅನೇಕ ಸಂಗತಿಗಳು ಸಂಶೋಧನೆ ಮಾಡುವವರಿಗೆ ಉಪಯುಕ್ತವಾಗಿವೆ.

ಪ್ರ.ಶ.ಪೂ. ಒಂದನೆಯ ಶತಮಾನದಲ್ಲಿ ಭಿಕ್ಷುರಾತ್ರೇಯನೆಂಬ ಪ್ರಸಿದ್ಧ ಪ್ರಾಧ್ಯಾಪಕ ತಕ್ಷಶಿಲೆಯ ವಿಶ್ವವಿದ್ಯಾನಿಲಯದಲ್ಲಿದ್ದ, ಈತನ ಶಿಷ್ಯ ಜೀವಕ ತಕ್ಷಶಿಲೆಯಲ್ಲಿ ವ್ಯಾಸಂಗ ಮಾಡಿ ಮಗಧದೇಶದ ಅನೇಕ ಕಡೆಗಳಲ್ಲಿ ಸಂಚರಿಸಿ ವೈದ್ಯವೃತ್ತಿಯನ್ನು ನಡೆಸಿದ. ಅನಂತರ ಬುದ್ಧದೇವನ ಆಸ್ಥಾನದ ಹೆಸರುವಾಸಿಯಾದ ವೈದ್ಯನಾದ. ಇವನ ಬುದ್ಧಿಚಾತುರ್ಯ, ಚಿಕಿತ್ಸಾಕೌಶಲಗಳು ಟಿಬೆಟ್, ಚೀನ ಪ್ರಾಂತ್ಯಗಳಲ್ಲೆಲ್ಲ ಹರಡಿದ್ದುವು. ಈತನ ಕಾಲ 6ನೆಯ ಶತಮಾನ. ಬೌದ್ಧಮತ ಪ್ರಚಾರದ ಮೂಲಕ ಆಯುರ್ವೇದ ಚಿಕಿತ್ಸೆ ಹಳ್ಳಿ ಹಳ್ಳಿಯಲ್ಲೂ ನಡೆಯುತ್ತಿತ್ತು. ಉಚಿತ ಚಿಕಿತ್ಸಾಲಯಗಳು ತೆರೆಯಲ್ಪಟ್ಟವು. ಆದರೆ ಶಸ್ತ್ರಚಿಕಿತ್ಸೆ ಹಿಂದುಳಿಯಿತು.

ದೇವ ಮತ್ತು ಋಷಿಗಣಗಳಲ್ಲಿ ಇನ್ನೂ ಅನೇಕ ವೈದ್ಯಶ್ರೇಷ್ಠರು ಆಯುರ್ವೇದವನ್ನು ಪ್ರಸಾರ ಮಾಡಿದರು. ಇವರೆಲ್ಲರೂ ಹೆಚ್ಚಾಗಿ ಗಿಡಮೂಲಿಕೆ ಮತ್ತು ಪ್ರಾಣಿಜದ್ರವ್ಯಗಳನ್ನೇ ಉಪಯೋಗಿಸುತ್ತಿದ್ದರು. ಪಾದರಸ, ಲೋಹಾದಿಗಳ ಪ್ರಯೋಗಗಳು ಬಹಳ ವಿರಳ.

ಮೂರನೆಯದು ಶೈವಪಂಥ. ಈ ಪಂಥದ ವೈದ್ಯರು ಪಾದರಸವನ್ನೇ ಶಿವನ ರೂಪವೆಂದು ರಸಲಿಂಗ ಮಾಡಿ ಅದನ್ನು ಪೂಜಿಸುತ್ತಿದ್ದರು. ರಸವಾದದಲ್ಲಿ ಪರಾಕಾಷ್ಠೆಯನ್ನು ಪಡೆದು ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದರು. ರಸ, ತಾಮ್ರ ಮುಂತಾದುವನ್ನು ಚಿನ್ನವಾಗಿ ಪರಿವರ್ತಿಸುವುದನ್ನು ಸಾಧಿಸಿದ್ದರು. ಲೋಹಾದಿಗಳನ್ನು ಭಸ್ಮ ಮಾಡಿ ರೋಗಗಳನ್ನು ಚಮತ್ಕಾರವಾಗಿ ಹೋಗಲಾಡಿಸುತ್ತಿದ್ದರು. ಗೋವಿಂದ ಭಿಕ್ಷು, ಭಿಕ್ಷು ನಾಗಾರ್ಜುನ, ಸಿದ್ಧನಾಗಾರ್ಜುನ ಮುಂತಾದವರು ಈ ಶಾಸ್ತ್ರದಲ್ಲಿ ಪ್ರವೀಣರು. ಸಿದ್ಧನಾಗಾರ್ಜುನ ಪೂಜ್ಯಪಾದನೆಂಬ ಜೈನ ವೈದ್ಯನ ಸೋದರಳಿಯ ಪೂಜ್ಯಪಾದನಿಂದ ವಿದ್ಯೆ ಕಲಿತ. ಸ್ವಲ್ಪ ಕಾಲದ ಅನಂತರ ಈತ ಬೌದ್ಧಮತಾವಲಂಬಿಯಾಗಿ ನೇಪಾಳ, ಟಿಬೆಟ್ಟುಗಳಲ್ಲೆಲ್ಲ ಮತಪ್ರಚಾರ, ಆಯುರ್ವೇದ ಪ್ರಚಾರಮಾಡುತ್ತ ಕೊನೆಗೆ ಶ್ರೀಶೈಲದಲ್ಲಿ ನೆಲೆಸಿದ. ರಸಸಿದ್ಧಿಯನ್ನು ಪಡೆದುದರಿಂದ ಈತನಿಗೆ ಸಿದ್ಧನಾಗಾರ್ಜುನನೆಂಬ ಹೆಸರು ಬಂದಿದೆ. ಪ್ರ.ಶ. ಸು. 6ನೆಯ ಶತಮಾನದಲ್ಲಿ ಕರ್ಣಾಟಕದಲ್ಲಿ ಹುಟ್ಟಿ ಲೋಕಪ್ರಖ್ಯಾತನಾದ ಸಿದ್ಧನಾಗಾರ್ಜುನನನ್ನು ಯಾರೂ ಮರೆಯುವಂತಿಲ್ಲ.

ಭದಂತನಾಗಾರ್ಜುನ ಏಳನೆಯ ಶತಮಾನಕ್ಕೆ ಸೇರಿದವ. ಈತನ ಹಲ್ಲುಗಳು ಸ್ವಚ್ಛವಾಗಿ ಹೊಳೆಯುತ್ತಿದ್ದುದರಿಂದ ಭದಂತನಾಗಾರ್ಜುನನೆಂದು ಹೆಸರು ಬಂದಿದೆ. ರಸವೈಶೇಷಿಕಸೂತ್ರವೆಂಬ ಷಡ್ರಸಗಳ ಪಾಂಚಭೌತಿಕತ್ವ, ರಸಭೇದ ಮುಂತಾದು ವನ್ನೊಳಗೊಂಡ ಸಂಸ್ಕೃತ ಗ್ರಂಥವನ್ನು ರಚಿಸಿದ್ದಾನೆ. ಹೀಗೆ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳ ಅನುಯಾಯಿಗಳಾಗಿ ಆತ್ರೇಯ ಧಾನ್ವಂತರ ಮತ್ತು ಶೈವ ಪದ್ಧತಿಗಳು ಕ್ರಮೇಣ ಅಭಿವೃದ್ಧಿಗೆ ಬಂದುವು. ಪ್ರ.ಶ. ಸುಮಾರು 4ನೆಯ ಶತಮಾನದಲ್ಲಿ ಅಷ್ಟಾಂಗಸಂಗ್ರಹ ಮತ್ತು ಅಷ್ಟಾಂಗಹೃದಯಗಳನ್ನು ಬರೆದ ವಾಗ್ಭಟ ಸಿಂಧೂದೇಶದ ಸಿಂಹಗುಪ್ತನ ಮಗ. ಪ್ರ.ಶ. 1 ಅಥವಾ 2ನೆಯ ಶತಮಾನದವರೆಗೆ ಕಾಯ, ಬಾಲ, ಗ್ರಹ, ಶಾಲಾಕ್ಯ, ಶಲ್ಯ, ವಿಷ, ರಸಾಯನ ಮತ್ತು ವಾಜೀಕರಣಗಳೆಂಬ ಆಯುರ್ವೇದದ ಎಂಟುಭಾಗಗಳು ಶಾಸ್ತ್ರೀಯವಾಗಿ ಅಭ್ಯಸಿಸಲ್ಪಡುತ್ತಿದ್ದವು. ಅಲ್ಲಿಂದ ಮುಂದಕ್ಕೆ 200 ವರ್ಷಗಳಲ್ಲಿ ದೇಶದ ರಾಜಕೀಯ ಮತ್ತು ಮತೀಯ ಗೊಂದಲಗಳಿಂದ ಶಾಸ್ತ್ರಾಭಿವೃದ್ಧಿ ನಿಂತುಹೋಯಿತು. ಗ್ರಂಥಗಳು ಖಿಲವಾಗುತ್ತ ಬಂದುವು. ವಾಗ್ಭಟ ತನ್ನ ಕಾಲದಲ್ಲಿ ದೊರೆತಷ್ಟು ವಿಷಯಗಳನ್ನೆಲ್ಲ ಕೂಡಿಹಾಕಿ ಚರಕ, ಸುಶ್ರುತ, ನಿಮಿ ಮುಂತಾದ ಸಂಹಿತೆಗಳ ಆಧಾರದ ಮೇಲೆ ತನ್ನ ಅಷ್ಟಾಂಗ ಗ್ರಂಥಗಳನ್ನು ಬರೆದು ಉಪಕರಿಸಿದ್ದಾನೆ. ರಸರತ್ನಸಮುಚ್ಚಯದ ಗ್ರಂಥಕರ್ತ ಇದೇ ಹೆಸರುಳ್ಳ ಬೇರೊಬ್ಬನೆಂದು ಹೇಳಬಹುದು. ಏಕೆಂದರೆ ಶೈಲಿ, ತತ್ತ್ವಗಳು ಬೇರೆ ಬೇರೆ. ಅಷ್ಟಾಂಗಹೃದಯದಲ್ಲಿ ರಸದಯೋಗ ಅಥವಾ ಭಸ್ಮಪ್ರಯೋಗಗಳಿಲ್ಲ. ಒಂದೆರಡು ಕಡೆ ಧಾತುಗಳ ಪ್ರಯೋಗವಿದ್ದರೂ ಅವು ಪ್ರತ್ಯೇಕವಾದುವು.

ವಾಗ್ಭಟನ ಅನಂತರ ಮಾಧವಕರ ರೋಗ ನಿಶ್ಚಯಮಾಡಲು ಮಾಧವನಿದಾನವನ್ನು ಬರೆದ. ಪಾತಕ್ರಮಕ್ಕನುಸಾರವಾಗಿ ಪ್ರತ್ಯೇಕ ವಿಷಯವನ್ನುಳ್ಳದ್ದು. ಇದು ಮೊದಲನೆಯ ಗ್ರಂಥ. ಅನಂತರದ ಗ್ರಂಥಕರ್ತರಾದ ಶಾರ್ಙ್ಗಧರ, ಭಾವಮಿಶ್ರರು ಮೂಲಿಕೆ ಮತ್ತು ರಸೌಷಧಗಳನ್ನು ತಮ್ಮ ಗ್ರಂಥಗಳಲ್ಲಿ ಸೇರಿಸಿದ್ದಾರೆ. ಮಾಧವ ನಿದಾನ, ಶಾರ್ಙ್ಗಧರಸಂಹಿತೆ ಮತ್ತು ಭಾವಪ್ರಕಾಶಗಳನ್ನು ಲಘು ತ್ರಯಿಗಳೆಂದೂ ಚರಕ, ಸುಶ್ರುತ, ಅಷ್ಟಾಂಗಸಂಗ್ರಹಗಳನ್ನು

(ಹೃದಯ) ಬೃಹತ್ರಯಿಗಳೆಂದೂ ಕರೆಯುತ್ತಾರೆ. ಔಷಧ ನಿರ್ಮಾಣದಲ್ಲಿ ಕಾಲದಿಂದ ಕಾಲಕ್ಕೆ ಹೆಚ್ಚು ಕಲ್ಪಗಳು, ಯೋಗಗಳು ಮತ್ತು ರೀತಿಗಳು ಹೆಚ್ಚುತ್ತಾಬಂದುವು. ಈಚೀಚೆಗೆ ಕಾರ್ಖಾನೆಗಳು ಮತ್ತು ಮಾರಾಟ ರೀತಿಗಳು ಆಧುನಿಕ ಕ್ರಮದಂತಿವೆ. ಚರಕಸಂಹಿತೆಗೆ ಚಕ್ರಪಾಣಿ (ಪ್ರ.ಶ. 11ನೆಯ ಶತಮಾನ) ಸುಶ್ರುತಕ್ಕೆ ಡಲ್ಲಣ (11ನೆಯ ಶತಮಾನ), ಅಷ್ಟಾಂಗಸಂಗ್ರಹಕ್ಕೆ ಇಂದು (9ನೆಯ ಶತಮಾನ) ಅಷ್ಟಾಂಗಹೃದಯಕ್ಕೆ ಅರುಣದತ್ತ (12ನೆಯ ಶತಮಾನ) ಮತ್ತು ಹೇಮಾದ್ರಿ (13ನೆಯ ಶತಮಾನ)–ಇವರ ವ್ಯಾಖ್ಯಾನಗಳು ಹೆಸರುವಾಸಿಯಾಗಿವೆ.

ಕರ್ನಾಟಕದಲ್ಲಿ ಅನೇಕ ವೈದ್ಯರು ಸೇವೆಯನ್ನು ಸಲ್ಲಿಸಿದ್ದಾರೆ. ಇವರಲ್ಲಿ 8ನೆಯ ಶತಮಾನದ ಉಗ್ರಾದಿತ್ಯ, 12ನೆಯ ಶತಮಾನದ ಬೋಪದೇವ, ಹೇಮಾದ್ರಿ ಮುಂತಾದವರು ಗ್ರಂಥರಚನೆ, ವೈದ್ಯವೃತ್ತಿಗಳಲ್ಲಿ ಪ್ರಸಿದ್ಧರಾಗಿದ್ದಾರೆ. ಉಗ್ರಾದಿತ್ಯ ರಾಷ್ಟ್ರಕೂಟ ನೃಪತುಂಗನ ಆಸ್ಥಾನದಲ್ಲಿದ್ದ. ಜೈನಧರ್ಮಕ್ಕೆ ಸೇರಿದವನಾದ್ದರಿಂದ ದೊಡ್ಡ ಚರ್ಚೆಯನ್ನೇ ನಡೆಸಿ ಔಷಧಗಳಲ್ಲಿ ಮಧು, ಮಾಂಸ ಮತ್ತು ಮದ್ಯಗಳನ್ನು ನಿಷೇಧಿಸಿದ. ಈತನ ಕಲ್ಯಾಣಕಾರಕ ಶ್ರೇಷ್ಠ ಗ್ರಂಥ. ಕಳಲೆಯ ವೀರರಾಜ (17ನೆಯ ಶತಮಾನ ಸಕಲವೈದ್ಯ ಸಂಹಿತಾಸಾರಾರ್ಣವವೆಂಬ ಕನ್ನಡ ಮತ್ತು ತೆಲುಗು ಸೇರಿರುವ ಗ್ರಂಥವನ್ನೂ ನಂಜರಾಜ ಭೂಪಾಲ ವೈದ್ಯಸಾರಸಂಗ್ರಹವೆಂಬ ಗ್ರಂಥವನ್ನೂ ಬರೆದಿದ್ದಾರೆ).

**ಆಧುನಿಕ ಯುಗ :** ವಿಜ್ಞಾನ ಮುನ್ನಡೆದು ಜನಜೀವನ ಮತ್ತು ನಾಗರಿಕತೆಗಳು ಬದಲಾಗುತ್ತಿರುವ ಈ ಕಾಲದಲ್ಲಿ ಆಯುರ್ವೇದ ತತ್ತ್ವಗಳನ್ನನುಸರಿಸಿ ರೋಗ ಪ್ರತಿಬಂಧಕ ಮತ್ತು ನಿವಾರಣೆಗಳನ್ನು ಮಾಡಲು ಸಾಧ್ಯವೇ ಎಂಬ ಸಂಶಯ ಉಂಟಾಗುತ್ತದೆ. ಆಧುನಿಕ ನಾಗರಿಕತೆ ಕೃತಕವಾದ ಜೀವನಕ್ಕೆ ಪ್ರಾಧಾನ್ಯವನ್ನು ಕೊಡುತ್ತಿರುವುದರಿಂದ ಮನುಷ್ಯನ ಧಾತುಬಲ ಕಡಿಮೆಯಾಗುತ್ತಿದೆ. ಇದರಿಂದ ಹೊಸ ಹೊಸ ರೋಗಗಳೂ ಅವನ್ನು ಚಿಕಿತ್ಸಿಸುವುದಕ್ಕೆ ಸಾಧನಗಳೂ ಮತ್ತು ಅವುಗಳಿಂದಾಗುವ ಅಪಾಯಗಳೂ ಹೀಗೆ ಒಂದರಿಂದ ಮತ್ತೊಂದು ಸಮಸ್ಯೆ ಹುಟ್ಟುತ್ತಿವೆ. ವಾತಾವರಣಕ್ಕೆ ಹೊಂದಿಕೊಂಡು ಜೀವಿಸಬೇಕಾದುದು ಅನಿವಾರ್ಯ. ರೋಗವಿಜ್ಞಾನಕ್ಕೆ ಆಧುನಿಕ ಯಂತ್ರೋಪಕರಣ ಮತ್ತು ಪರೀಕ್ಷಾಕ್ರಮಗಳು ಬಹುಮಟ್ಟಿಗೆ ಸಹಾಯಕವಾಗಿವೆ. ದಿನದಿನಕ್ಕೆ ಹೊಸ ಔಷಧಗಳು ಬರುತ್ತಿವೆ. ಆದರೂ ಅನೇಕ ವ್ಯಾಧಿಗಳು ಚಿಕಿತ್ಸೆಗೆ ಕಠಿಣವಾಗಿಯೇ ಇವೆ. ಅಲ್ಪವ್ಯಾಧಿಗೆ ಬಲವತ್ತರವಾದ ಔಷಧಗಳನ್ನು ಉಪಯೋಗಿಸುವುದು, ಗುರುತರ ವ್ಯಾಧಿಯನ್ನು ಅಲಕ್ಷಿಸುವುದು ಮನಸ್ಸನ್ನು ಸ್ವೇಚ್ಛೆಯಾಗಿ ಬಿಡುವುದು–ಇವೆಲ್ಲ ಅನಾಯುಷ್ಯವಾದುವು.

ನೈಸರ್ಗಿಕ ತತ್ತ್ವಗಳನ್ನು ಬಿಟ್ಟು ಕ್ಲಿಷ್ಟ ಮಾರ್ಗವನ್ನು ಹಿಡಿದಿರುವುದೇ ಈ ಸಮಸ್ಯೆಗೆ ಕಾರಣವೆಂದು ಹೇಳಬಹುದು. ಪ್ರಾಚೀನವಾದ ಆಯುರ್ವೇದ ನಿಯಮಗಳು ನೈಸರ್ಗಿಕವಾದ ಜೀವನಕ್ಕೆ ಅನುಕೂಲವಾಗಿವೆ. ಇವನ್ನು ಈಗಿನ ಪರಿಸ್ಥಿತಿಗೆ ಸರಿಹೊಂದುವಂತೆ ಅಳವಡಿಸಿಕೊಳ್ಳುವುದು ಅತ್ಯಗತ್ಯ. ಶಾಸ್ತ್ರಬದ್ಧ ವಿಷಯಗಳನ್ನು ಪ್ರಾಯೋಗಿಕವಾಗಿಯೂ ಫಲಪ್ರದವಾಗಿರುವ ವಿಷಯಗಳನ್ನು ಶಾಸ್ತ್ರೀಯವಾಗಿಯೂ ಅಧ್ಯಯನ ಮಾಡಬೇಕು. ಆಯುರ್ವೇದೀಯ ಸಂಶೋಧನಾ ಕೇಂದ್ರಗಳಲ್ಲಿ ತ್ರಿದೋಷ ಸಿದ್ಧಾಂತಕ್ಕನುಸಾರವಾಗಿ ಸಂಹಿತಾಯುಗ ಮತ್ತು ಆಧುನಿಕ ಯುಗಗಳಲ್ಲಿ ಉಪಯುಕ್ತವಾಗಿರುವ ಭಾಗಗಳನ್ನು ಕ್ರೋಡೀಕರಿಸಿ ಪ್ರಚಾರಕ್ಕೆ ತರುವ ಏರ್ಪಾಡುಗಳಾಗಬೇಕು. ಈಗ ವೈದ್ಯರನೇಕರಿಗೆ ತಾವೇ ಔಷಧಗಳನ್ನು ಮಾಡಿಕೊಳ್ಳುವುದು ತೊಂದರೆಯಾಗಿದೆ. ಈಚೀಚೆಗೆ ಬೆಳೆಯುತ್ತಿರುವ ಔಷಧ ಕಾರ್ಖಾನೆಗಳಿಗೆ ಸಾಕಷ್ಟು ಉತ್ತೇಜನವಿಲ್ಲ. ಅಧಿಕ ಸಂಖ್ಯೆಗಳಲ್ಲಿ ಆಯುರ್ವೇದೀಯ ಶಿಕ್ಷಣಸಂಸ್ಥೆಗಳೂ ಚಿಕಿತ್ಸಾಲಯಗಳೂ ಪ್ರಚಾರ ಕೇಂದ್ರಗಳೂ ಏರ್ಪಟ್ಟರೆ ದೇಶದ ಸ್ವಾಸ್ಥ್ಯ ಸಮಸ್ಯೆ ಬಹುಮಟ್ಟಿಗೆ ಬಗೆಹರಿಯುವುದು. ಜನಸಾಮಾನ್ಯಕ್ಕೆ ಸತ್ಸಂತಾನದ ತಿಳಿವಳಿಕೆಯನ್ನು ಕೊಡುವುದರಿಂದ ಕುಟುಂಬಯೋಜನೆ ಸಾರ್ಥಕವಾಗುವುದು. (ಎಂ.ಎಂ.ಎಸ್.)

## ಆಯುರ್ವೇದ ಚಿಕಿತ್ಸಾ ತತ್ತ್ವಗಳು :

ಆಯುರ್ವೇದ ರೀತ್ಯಾ ಚಿಕಿತ್ಸೆ ಮಾಡಬೇಕಾದರೆ ಮತ್ತು ಪರಿಶೋಧನೆಮಾಡಬೇಕಾದರೆ ವ್ಯಾಧಿಗಳ ಲಕ್ಷಣಗಳು, ಅವುಗಳ ಆಶ್ರಯಸ್ಥಾನಗಳು ಮತ್ತು ರೋಗೋತ್ಪತ್ತಿಗೆ ಕಾರಣಗಳಾದ ತ್ರಿದೋಷಗಳು (ವಾತ, ಪಿತ್ತ, ಕಫ), ಪಂಚಭೂತಗಳು (ಪೃಥ್ವಿ, ಅಪ್, ತೇಜಸ್ಸು, ವಾಯು, ಆಕಾಶ) ಷಡ್ರಸಗಳು (ಮಧುರ, ಹುಳಿ, ಉಪ್ಪು, ಖಾರ, ಕಹಿ, ಕಷಾಯ), ಸಪ್ತಧಾತುಗಳು (ರಸ, ರಕ್ತ, ಮಾಂಸ ಮೇದಸ್ಸು, ಅಸ್ಥಿ, ಮಜ್ಜ, ಶುಕ್ರ), ವೀರ್ಯಗಳು (ಶೀತ, ಉಷ್ಣ) ವಿಪಾಕ ಮತ್ತು ಪ್ರಭಾವಗಳನ್ನು ವೈದ್ಯನಾದವ ಅರಿತಿರಬೇಕು. ಈ ಪ್ರಕಾರ ವ್ಯಾಧಿಗಳನ್ನು ಚೆನ್ನಾಗಿ ತಿಳಿದುಕೊಂಡು ತಡಮಾಡದೆ ಚಿಕಿತ್ಸಿಸಬೇಕು. ಉಪೇಕ್ಷೆ ಮಾಡಿದರೆ ರೋಗ ದುಸ್ಸಾಧ್ಯ ಅಥವಾ ಅಸಾಧ್ಯವಾಗಿ ಪರಿಣಮಿಸಬಹುದು. ಶ್ರಮವಿಲ್ಲದೆ ವೃಕ್ಷವನ್ನು ಸಣ್ಣ ಸಸಿಯಾಗಿರುವಾಗಲೇ ಹೇಗೆ ಕೀಳಬಹುದೋ ಹಾಗೆ ವ್ಯಾಧಿಯ ಪ್ರಾರಂಭದಲ್ಲೇ ಚಿಕಿತ್ಸೆ ಮಾಡಬೇಕು. ಚಿಕಿತ್ಸೆ ಮಾಡಲು ರಸ, ಉಪರಸಗಳು, ಧಾತು, ಉಪಧಾತು ಮತ್ತು ವನಸ್ಪತಿಗಳ ಉಪಯೋಗಪಡಿಸಿಕೊಳ್ಳುವ ರೀತಿಗಳನ್ನೂ ಆಯುರ್ವೇದದಲ್ಲಿ ವಿವರಿಸಿದೆ. ಈ ವಿಷಯಗಳನ್ನೆಲ್ಲ ವೈದ್ಯ ತಿಳಿದಿರಬೇಕು ಮತ್ತು ಆ ದ್ರವ್ಯಗಳ ದೋಷ, ದೂಷ್ಯ ಮತ್ತು ವೈಷಮ್ಯ ಗುಣಗಳನ್ನೂ ತಿಳಿದಿರಬೇಕು.

ಸಮದೋಷಃ, ಸಮಾಗ್ನಿಶ್ಚ, ಸಮಧಾತು ಮಲಕ್ರಿಯಃ
ಪ್ರಸನ್ನಾತ್ಮೇಂದ್ರಿಯಮನಾಃ ಸ್ವಸ್ಥ ಇತ್ಯಭಿಧೀಯತೇ

**ಆರೋಗ್ಯವಂತನ ಲಕ್ಷಣಗಳು ಹೀಗಿವೆ :** ತ್ರಿದೋಷಗಳು ಒಂದೇ ರೀತಿಯಾಗಿ ಸ್ವಸ್ಥಾನದಲ್ಲಿದ್ದು, ಅವುಗಳ ಸರಿಯಾದ ಕೆಲಸಗಳನ್ನು ಮಾಡಿಕೊಂಡಿರಬೇಕು. ಮಂದ, ವಿಷಮ, ತೀಕ್ಷ್ಣ ಮತ್ತು ಸಮ ಜಠರಾಗ್ನಿಗಳಲ್ಲಿ ಶ್ರೇಷ್ಠವಾದ ಸಮಾಗ್ನಿ ಇರಬೇಕು. ರಸವೇ ಆದಿಯಾದ ಸಪ್ತಧಾತುಗಳ ಮತ್ತು ಮಲಮೂತ್ರ, ಬೆವರು ಇವುಗಳ ಕ್ರಿಯೆಗಳು ಸಮನಾಗಿರಬೇಕು. ಸೇವನೆಯಲ್ಲಿ ಹಿತ ಮಿತಗಳಿರಬೇಕು. ಮನಸ್ಸು, ಇಂದ್ರಿಯಗಳು ನಿರ್ಮಲವಾಗಿ ಶುದ್ಧವಾಗಿರಬೇಕು. ಶರೀರ ದೃಢವಾಗಿರಬೇಕು. ಅಂಥವನನ್ನು ಸ್ವಸ್ಥ ಎನ್ನುತ್ತಾರೆ. ಮೇಲೆ ಹೇಳಿರುವುದರಲ್ಲಿ ಏನೇ ವ್ಯತ್ಯಾಸವಾದರೂ ರೋಗೋತ್ಪತ್ತಿಗೆ ಕಾರಣಗಳಾಗುತ್ತವೆ. ನಮ್ಮ ಪೂರ್ವಜನ್ಮದ ಕರ್ಮಫಲಕ್ಕೆ ಅನುಗುಣವಾಗಿಯೂ ಬರುವ ರೋಗಗಳು ಕೆಲವು ಇವೆ. ರೋಗಗಳ ಮೂಲಸ್ಥಾನ ಶರೀರ ಮತ್ತು ಮನಸ್ಸು. ಮನೋಧಿಷ್ಠಾನ ರೋಗಗಳು ಸ್ಥೂಲವಾಗಿ ರಜೋಗುಣ ಮತ್ತು ತಮೋಗುಣಗಳ ಅತಿರೇಕದಿಂದ ಉತ್ಪನ್ನವಾಗುವುವು. ಶರೀರಾಧಿಷ್ಠಾನವ್ಯಾಧಿಗಳು ನಿಜ, ಆಗಂತು ಎಂದು ಎರಡು ವಿಧಗಳಾಗಿವೆ. ಸ್ಥೂಲವಾಗಿ ಕಾಲ, ಅರ್ಥ ಕರ್ಮಗಳಲ್ಲಿ ಹೀನಯೋಗ, ಅತಿಯೋಗ ಮತ್ತು ಮಿಥ್ಯಾ ರೋಗಗಳು ಅವಕ್ಕೆ ಕಾರಣಗಳು. ವಿಷಕ್ರಿಮಿಗಳನ್ನು ಎದುರಿಸಬಲ್ಲ ಶಕ್ತಿ ಕಡಿಮೆಯಾದರೆ ರೋಗೋತ್ಪತ್ತಿಯಾಗುತ್ತದೆ. ಅನೇಕವಾದ ಶಾರೀರಿಕ ವ್ಯಾಧಿಗಳಿಗೆ ಮನಸ್ಸಿನ ಅಸ್ವಸ್ಥತೆಯೂ ಕಾರಣವಾಗಬಹುದು.

ವೈದ್ಯನಾದವ ಇಂದ್ರಿಯ ವಿಷಯಗಳ ಮೇಲೆ ಹೆಚ್ಚು ಆಸಕ್ತನಾಗದೆ, ಸ್ವಾರ್ಥನಾಗದೆ ಪರರಿಗೆ ಹಿತೈಷಿಯಾಗಿ ಪರೋಪಕಾರಿಯಾಗಿರಬೇಕು. ಸತ್ಯವನ್ನೇ ಆಡಬೇಕು. ಕ್ಷಮಾಶೀಲನಾಗಿರಬೇಕು. ಹಿಂಸೆ, ಸುಳ್ಳು ಹೇಳುವುದು, ವ್ಯರ್ಥ ಕಾಲಕಳೆಯುವುದು, ಪರಸ್ತ್ರೀಯರಲ್ಲಿ ಅಭಿಲಾಷೆ ಮುಂತಾದ ಪಾಪಕರ್ಮಗಳನ್ನು ಕಾಯೇನ ವಾಚಾ ಮನಸಾ ಬಿಟ್ಟಿರಬೇಕು.

ಆಯುರ್ವೇದದಲ್ಲಿ ರೋಗಗಳ ಪರೀಕ್ಷೆ, ಔಷಧಿಗಳ ಜ್ಞಾನ, ಚಿಕಿತ್ಸಾಕ್ರಮಗಳು ಮುಂತಾದ ವೈದ್ಯದ ಎಲ್ಲ ಅಂಗಗಳ ವಿಚಾರದಲ್ಲೂ ತ್ರಿದೋಷಗಳು ವ್ಯಾಪಿಸಿಕೊಂಡಿವೆ. ತ್ರಿದೋಷನ್ಯಾಯದ ಪ್ರತಿಪಾದನಕ್ಕೆ ಮತ್ತು ರೋಗವಿಮರ್ಶೆಗೆ ಆಪ್ತೋಪದೇಶ, ಉಪಮಾನ ಮತ್ತು ಪ್ರತ್ಯಕ್ಷ ಎಂಬ ನಾಲ್ಕು ಸಾಧನಗಳನ್ನು ಹೊಂದಿರಬೇಕು. ಪಂಚಭೂತಗಳ ಸಂಯೋಗದಿಂದ ತ್ರಿದೋಷಗಳೂ ಷಡ್ರಸಗಳೂ ಉತ್ಪತ್ತಿಯಾಗಿವೆ.

ವಾತ, ಪಿತ್ತ, ಕಫ ಎಂಬ ತ್ರಿದೋಷಗಳು ಒಂದೊಂದೂ ಐದು ವಿಧ. ಇವುಗಳು ತಮ್ಮ ಸ್ವಸ್ಥಾನದಿಂದ ಬೇರೆ ಕಡೆಗೆ ಚಲಿಸಿದರೆ ಅಥವಾ ಇದ್ದಲ್ಲಿಯೇ ಚಯಪ್ರಕೋಪ ಪ್ರಶಮನ ಎಂಬ ಅವಸ್ಥೆಗಳನ್ನು ಹೊಂದಿದರೆ ವ್ಯಾಧಿ ಉತ್ಪತ್ತಿಯಾಗುತ್ತದೆ.

ವ್ಯಾಧಿಚಿಕಿತ್ಸೆಯಲ್ಲಿ ಸಂತರ್ಪಣ (ಬೃಂಹಣ) ಮತ್ತು ಅಪತರ್ಪಣ (ಲಂಘನ) ಚಿಕಿತ್ಸೆ ಎಂದು ಎರಡು ವಿಧ. ದೇಹವನ್ನು ಪುಷ್ಟಿ ಮಾಡುವ ವಿಧಾನಕ್ಕೆ ಬೃಂಹಣ ಎಂದೂ ಕೃಶ ಮಾಡುವ ರೀತಿಗೆ ಲಂಘನ ಚಿಕಿತ್ಸೆಯೆಂದೂ ಪರಿಗಣಿಸಲಾಗಿದೆ. ಚಿಕಿತ್ಸೆಯಲ್ಲಿ ಶೋಧನ, ಶಮನ ಎಂದು ಎರಡು ಪ್ರಕಾರಗಳಿವೆ. ಶೋಧನವೆಂದರೆ ಪ್ರಕುಪಿತ ದೋಷಗಳನ್ನು ಹೊರಗೆ ಹೋಗಲಾಡಿಸುವ ಚಿಕಿತ್ಸೆ. ಶೋಧನ ಚಿಕಿತ್ಸಾಕ್ರಮದಲ್ಲಿ ನಿರೂಹ, ವಮನ, ಕಾಯವಿರೇಚನ, ಶಿರೋವಿರೇಚನ, ರಕ್ತಮೋಕ್ಷಣಗಳೆಂದು 5 ವಿಧಕ್ರಮಗಳು. ಶಮನ ಚಿಕಿತ್ಸೆಯೆಂದರೆ ವಿಷಮವಾದ (ಹೆಚ್ಚು ಅಥವಾ ಕಡಿಮೆ ದೋಷಪ್ರಮಾಣಗಳಿದ್ದರೆ) ದೋಷಗಳಿದ್ದರೆ ಮಾತ್ರ ಅವುಗಳನ್ನು ಸಮಪ್ರಮಾಣಕ್ಕೆ ಮತ್ತು ಸಮಸ್ಥಿತಿಗೆ ತರುವುದು. ಇದರಲ್ಲೂ ಪಾಚನ, ದೀಪನ, ಹಸಿವು ಉಂಟು ಮಾಡುವುದು, ಬಾಯಾರಿಕೆ ನಿಗ್ರಹ ಮಾಡುವುದು, ವ್ಯಾಯಾಮ, ಬಿಸಿಲು ಕಾಯಿಸುವುದು. ಶುದ್ಧ ವಾಯುಸೇವನೆ––ಎಂದು ಏಳು ವಿಧ ಚಿಕಿತ್ಸಾಕ್ರಮಗಳಿವೆ.

ಬೃಂಹಣ ಚಿಕಿತ್ಸೆಗೆ ಅರ್ಹರು: ವ್ಯಾಧಿಯಿಂದ ಕ್ಷೀಣರಾದವರು, ತೀಕ್ಷ್ಣೌಷಧ ಸೇವನೆಯಿಂದ ಕೃಶರಾದವರು, ಅತಿ ಮದ್ಯಪಾನ, ಸ್ತ್ರೀಸಂಗ ಶೋಕಗಳಿಂದ ಕೃಶರಾದವರು, ಹೆಚ್ಚು ಭಾರ ಹೊತ್ತು ಕೆಲಸ ಮಾಡುವವರು, ದೂರ ನಡೆಯುವವರು, ಉರಃಕ್ಷತದಿಂದ ಕೃಶರಾದವರು, ವಾತದೋಷಗಳಿಂದ ರೂಕ್ಷರಾಗಿರುವವರು, ದುರ್ಬಲರು, ಗರ್ಭಿಣಿಯರು, ಬಾಣಂತಿಯರು, ಬಾಲಕರು, ವೃದ್ಧರು––ಇವರುಗಳಿಗೆ ಬೃಂಹಣ ಚಿಕಿತ್ಸೆ ಮಾಡತಕ್ಕದ್ದು. ಗ್ರೀಷ್ಮ ಋತುವಿನಲ್ಲಿ ಈ ಚಿಕಿತ್ಸೆ ಮಾಡಿದರೆ ಬಹಳ ಗುಣವುಂಟಾಗುವುದು.

ಲಂಘನ ಚಿಕಿತ್ಸೆಗೆ ಅರ್ಹರು: ಅತಿಯಾಗಿ ಸ್ಥೂಲರಾದವರು, ಬಲಿಷ್ಠರು, ಪಿತ್ತ ಕಫದೋಷದವರು, ಆಮದೋಷ, ಜ್ವರ, ವಮನ, ಅತಿಸಾರ, ಹೃದ್ರೋಗ, ಮಲಬಂಧ, ಮೈಭಾರ, ಮೇಹರೋಗ, ಊರುಸ್ತಂಭ, ಕುಷ್ಠ, ವಿಸರ್ಪ, ವಿದ್ರಧಿ, ಪ್ಲೀಹ, ಶಿರಸ್ಸು, ಕಿವಿ,

ನೇತ್ರ ರೋಗಗಳಿಂದ ಪೀಡಿತರಾದವರು, ಅತಿಸ್ನಿಗ್ಧರು––ಲಂಘನ ಚಿಕಿತ್ಸೆಗೆ ಅರ್ಹರು. ಇದನ್ನು ಹೇಮಂತಋತುವಿನಲ್ಲಿ ಮಾಡಿದರೆ ಹೆಚ್ಚು ಲಾಭಕಾರಿಯಾಗುತ್ತದೆ. ಬೃಂಹಣ ಚಿಕಿತ್ಸೆಗೆ ದೇವದಾರು, ತಗರ, ಚಂಗಲಕೋಷ್ಠ, ದಶಮೂಲ, ಬಲ, ಅತಿಬಲ ಮತ್ತು ವಿದಾರ್‍ಯಾದಿ ಔಷಧ ದ್ರವ್ಯಗಳನ್ನೂ ಮಾಂಸ, ಹಾಲು, ತುಪ್ಪ, ಮಧುರವಾದ ಜಿಡ್ಡಾದ ಪದಾರ್ಥಗಳು, ಅಭ್ಯಂಗಸ್ನಾನ, ಹೆಚ್ಚು ನಿದ್ರೆ ಬರಿಸುವ ವಿಧಾನಗಳನ್ನೂ, ಮಾನಸಿಕ ಮತ್ತು ಶಾರೀರಿಕ ಯೋಚನೆಗಳು ಇಲ್ಲದಂತೆ ಮಾಡುವ ವಿಧಾನಗಳನ್ನೂ ಮಾಡಬೇಕು. ಈ ಬೃಂಹಣ ಚಿಕಿತ್ಸೆಯಿಂದ ದೇಹಪುಷ್ಟಿ, ಶಕ್ತಿ ಉಂಟಾಗುತ್ತವೆ. ತ್ರಿಕಟು, ತ್ರಿಫಲ, ಕಟುಕ ರೋಹಿಣಿ, ಬಜೆ, ಬ್ರಾಹ್ಮಿ, ಲವಣ, ಜೀರಿಗೆ, ವಾದಕ್ಕಿ, ಚಿತ್ರಮೂಲ, ಕೊತ್ತಂಬರಿ, ಅರಿಶಿಣ, ಹೆಗ್ಗುಳ್ಳ, ನೆಲಗುಳ್ಳ, ಶಿಲಾಜಿತು ಎಂಬ ಔಷಧ ದ್ರವ್ಯಗಳೂ ಯವಧಾನ್ಯ, ಮಜ್ಜಿಗೆ, ಜೇನುತುಪ್ಪ ಮುಂತಾದ ಪದಾರ್ಥಗಳೂ ಲಂಘನಚಿಕಿತ್ಸೆಗೆ ಉಪಯುಕ್ತವಾದುವು. ಲಂಘನಚಿಕಿತ್ಸೆಯಿಂದ ಇಂದ್ರಿಯಗಳ ಶುದ್ಧಿ, ಮಲಮೂತ್ರಗಳ ಸರಿಯಾದ ವಿಸರ್ಜನೆ, ಶರೀರ ಲಾಘವ, ಹಸಿವು ಬಾಯಾರಿಕೆ ತೋರುವುವು. ಸರಿಯಾದ ಹೃದಯಕ್ರಿಯೆ, ಶುದ್ಧವಾಗಿ ತೇಗು ಬರುವುದು, ಉತ್ಸಾಹ ಉಂಟಾಗುವುದು, ತೂಕಡಿಕೆ ನಿವಾರಣೆಯಾಗುವುದು, ಹೃದ್ರೋಗ, ಕಾಮಾಲೆ, ಉಬ್ಬಸ, ಕಾಸ, ಗಳಗ್ರಹ ವ್ಯಾಧಿಗಳ ನಿವಾರಣೆಯೂ ಉಂಟಾಗುತ್ತವೆ. ಧಾರಣಾಶಕ್ತಿ, ಜ್ಞಾಪಕಶಕ್ತಿಗಳು ಉಂಟಾಗುತ್ತದೆ; ಮತ್ತು ಅಗ್ನಿದೀಪ್ತಿ ಉಂಟಾಗುತ್ತದೆ.

ಆಗಂತು ರೋಗಗಳಿಗೆ ಸದಸದ್ವಿವೇಕ, ಬುದ್ಧಿಯ ವಿರುದ್ಧ ಆಚರಣೆಯನ್ನು ತ್ಯಾಗ ಮಾಡುವುದು, ಇಂದ್ರಿಯಗಳ ವೈರಾಗ್ಯ, ದೇಶ ಕಾಲಗಳ, ಶಾಸ್ತ್ರ ಸ್ಮೃತಿಗಳ, ಸಜ್ಜನರ ಆಚಾರಗಳನ್ನು ಅನುಸರಿಸುವುದು, ಗ್ರಹಗಳ ಪೂಜೆ, ಹಿರಿಯರು ಗುರುಗಳಲ್ಲಿ ಭಕ್ತಿ ಮತ್ತು ಪೂಜೆ––ಇವೇ ಮುಂತಾದ ರೀತಿಗಳಿಂದ ಮಾನಸಿಕ ಮತ್ತು ಆಗಂತುರೋಗಗಳನ್ನು ಚಿಕಿತ್ಸೆ ಮಾಡತಕ್ಕದ್ದು.

ಮೇಲೆ ಹೇಳಿದ ಚಿಕಿತ್ಸಾತತ್ತ್ವಗಳನ್ನು ಆರು ವಿಧಗಳಾಗಿ ವಿಂಗಡಿಸಿದೆ: 1. ಹೇತು ವಿಪರೀತ ಚಿಕಿತ್ಸೆ, 2. ವ್ಯಾಧಿ ವಿಪರೀತ ಚಿಕಿತ್ಸೆ, 3. ಹೇತು––ವ್ಯಾಧಿ ವಿಪರೀತ ಚಿಕಿತ್ಸೆ, 4. ಹೇತುತದರ್ಥಕಾರಿ ಚಿಕಿತ್ಸೆ, 5. ವ್ಯಾಧಿ ತದರ್ಥಕಾರಿ ಚಿಕಿತ್ಸೆ, 6. ಹೇತು––ವ್ಯಾಧಿ ತದರ್ಥಕಾರಿ ಚಿಕಿತ್ಸೆ.

ಹೇತುವೆಂದರೆ ವ್ಯಾಧಿಗೆ ಕಾರಣೀಭೂತವಾದದ್ದು ಅಥವಾ ಮೂಲಭೂತವಾದದ್ದು. ಹಿತವಲ್ಲದ ಇಂದ್ರಿಯಗಳ ಸಂಘಟನೆ, ಪ್ರಜ್ಞೆ ತಪ್ಪುವುದು ಮತ್ತು ಕಾಲಾದಿ ಪರಿಪಾಕಗಳಿಂದ ತ್ರಿದೋಷಗಳು ವ್ಯತ್ಯಾಸವಾಗಿ ವ್ಯಾಧಿಯನ್ನು ಉತ್ಪತ್ತಿಮಾಡುತ್ತವೆ. ಆದ್ದರಿಂದ ವ್ಯಾಧಿಗೆ ಮೂಲಭೂತವಾದದ್ದನ್ನು ಪತ್ತೆಮಾಡಿ ಅದಕ್ಕೆ ವ್ಯತಿರಿಕ್ತಗುಣಗಳುಳ್ಳ ಔಷಧ ದ್ರವ್ಯಗಳ ಪ್ರಯೋಗವೇ ಹೇತು ಅಥವಾ ವ್ಯಾಧಿ ವಿಪರೀತ ಚಿಕಿತ್ಸೆ. ವ್ಯಾಧಿಯ ಬರೀ ಲಕ್ಷಣಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಿದರೆ ಅದು ತದರ್ಥಕಾರಿ ಚಿಕಿತ್ಸೆ ಎನ್ನಿಸಿಕೊಳ್ಳುತ್ತದೆ. ಈ ಪ್ರಯೋಗಗಳಿಂದ ಶಾರೀರಕವಾದ, ಮಾನಸಿಕವಾದ ಮತ್ತು ಬಾಹ್ಯರೋಗಗಳನ್ನು ಗುಣಪಡಿಸಬಹುದು. ರೋಗದ ಪ್ರಾರಂಭದಲ್ಲೇ ಕಾರಣ ತಿಳಿಯದಿದ್ದರೆ ಆಮೇಲೆ ತ್ರಿದೋಷಗಳ ಚಯ, ಪ್ರಕೋಪ, ಪ್ರಶಮನಗಳನ್ನು ತಿಳಿದು, ವ್ಯಾಧಿಯ ಲಕ್ಷಣಗಳನ್ನು ಸರಿಯಾಗಿ ಅರಿತುಕೊಂಡು ಚಿಕಿತ್ಸೆ ಮಾಡಬೇಕು. ಆಯುರ್ವೇದದಲ್ಲಿ ಹೆಚ್ಚಾಗಿ ವ್ಯಾಧಿಗಳ ಲಕ್ಷಣಗಳನ್ನು ಅರಿತು ಚಿಕಿತ್ಸೆ ಮಾಡುವ ರೀತಿ ಹೇಳಿದೆ. ಆದರೆ ಪ್ರಯೋಗಶಾಲೆಯಲ್ಲಿ ಮಾಡುವ ಪರೀಕ್ಷೆಗಳ ಮೂಲಕ ವ್ಯಾಧಿ ಗೊತ್ತುಪಡಿಸಿ (ಹೇತುವನ್ನು ತಿಳಿದು) ಮಾಡುವ ಚಿಕಿತ್ಸಾಕ್ರಮ ಕಡಿಮೆ. ಪ್ರತಿ ರೋಗದ ಹೆಸರು, ಅದನ್ನು ತಿಳಿಯಲು ಹೇಳಿರುವ ಪೂರ್ವರೂಪ ಲಕ್ಷಣಗಳು, ವ್ಯಾಧಿಯ ಪೂರ್ವರೂಪ ಲಕ್ಷಣಗಳು, ವ್ಯಾಧಿಯ ನಿದಾನ, ಉಪಶಯ ಸಂಪ್ರಾಪ್ತಿಗಳನ್ನೂ ಅದಕ್ಕೆ ತಕ್ಕ ಪರಿಹಾರಗಳನ್ನೂ ಪಥ್ಯಾಪಥ್ಯಗಳನ್ನೂ ಅವುಗಳಿಂದ ಉಂಟಾಗಬಹುದಾದ ಅನ್ಯವಿಕಾರಗಳನ್ನೂ ಚೆನ್ನಾಗಿ ಅರಿತು ವ್ಯಾಧಿಯನ್ನು ಗುಣಪಡಿಸಬೇಕು.

ವೈದ್ಯ ರೋಗವನ್ನು ತನ್ನ ಪಂಚೇಂದ್ರಿಯಗಳ ಮೂಲಕ ದರ್ಶನ, ಸ್ಪರ್ಶನ, ಪ್ರಶ್ನೆ ಮುಂತಾದುವುಗಳಿಂದ ಗೊತ್ತುಮಾಡಿ ಚಿಕಿತ್ಸೆ ಮಾಡಬೇಕು. ಇವುಗಳ ಜೊತೆಗೆ ರೋಗಿಯ ನಾಡಿ, ಮಲಮೂತ್ರ ಪರೀಕ್ಷೆ, ನಾಲಗೆ, ಶಬ್ದ, ರೂಪ, ದೃಷ್ಟಿಗಳ ಪರೀಕ್ಷೆ, ಸಮಸ್ಪರ್ಶನಗಳ ಮೂಲಕ ರೋಗವನ್ನು ಪತ್ತೆಮಾಡಿ ಅವುಗಳಿಗೆ ತಕ್ಕಂತೆ ಚಿಕಿತ್ಸೆ ಮಾಡತಕ್ಕದ್ದು.

ವಾತದೋಷದಿಂದ ಉತ್ಪತ್ತಿಯಾದ ರೋಗಗಳಿಗೆ ಸ್ನೇಹಗಳಿಂದ, ಮೃದುವಾದ ಔಷಧಗಳಿಂದ, ವಮನ ವಿರೇಚನಗಳಿಂದ, ಅಭ್ಯಂಗ ಸ್ನಾನದಿಂದ, ಸಿಹಿ ಹುಳಿ ಉಪ್ಪು ರಸಗಳಿಂದ ಉಷ್ಣವೀರ್ಯವುಳ್ಳ ದ್ರವ್ಯಗಳಿಂದ ಚಿಕಿತ್ಸೆಯನ್ನೂ ಬೃಂಹಣ, ದೀಪನ, ಪಾಚನ ದ್ರವ್ಯಗಳ ಸೇವನೆಯನ್ನೂ ಅನುವಾಸನ ಬಸ್ತಿಯನ್ನೂ ಕೊಡಬೇಕು.

ಪಿತ್ತದೋಷದಿಂದ ಉಂಟಾದ ರೋಗಗಳಿಗೆ ಘೃತಪಾನ, ಮಧುರ ಶೀತವೀರ್ಯವುಳ್ಳ ದ್ರವ್ಯಗಳಿಂದ ವಿರೇಚನ, ಸಿಹಿಕಹಿ ಕಷಾಯ ರಸಗಳುಳ್ಳ ದ್ರವ್ಯಗಳ ಸೇವನೆ, ಸುವಾಸನೆಯಾಗಿ ತಂಪಾಗಿ ಹಿತಕರವಾದ ದ್ರವ್ಯಗಳ ಲೇಪನ, ಆಲಿಂಗನ, ತಂಪಾದ ನೆರಳಿನಲ್ಲಿ ಶೀತಲವಾದ ಶುದ್ಧೋದಕಗಳ ಸೇವನೆ ಮತ್ತು ಹಿತಕರವಾದ ಆಹಾರ ವಿಹಾರಗಳು, ಹೆಚ್ಚಾಗಿ ಹಾಲು ತುಪ್ಪ, ವಿರೇಚನ ಔಷಧಗಳ ಸೇವನೆಯಿಂದ ಚಿಕಿತ್ಸೆ ಮಾಡಬಹುದು.

- ವ್ಯಾಧಿ ಚಿಕಿತ್ಸೆ
  - ಅಂತಃಚಿಕಿತ್ಸೆ
    - ಶಾರೀರಿಕ
      - ಬೃಂಹಣ
      - ಲಂಘನ
        - ಶೋಧನ
          - ನಿರೂಹ
          - ವಮನ
          - ಕಾಯ ವಿರೇಚನ
          - ಶಿರೋ ವಿರೇಚನ
          - ರಕ್ತ ಮೋಕ್ಷಣ
        - ಶಮನ
          - ಪಾಚನ
          - ದೀಪನ
          - ಕ್ಷುತ್ ನಿಗ್ರಹ
          - ವ್ಯಾಯಾಮ
          - ಆತಪ
    - ಮಾನಸಿಕ
    - ಆಗಂತು
  - ಬಾಹ್ಯ ಚಿಕಿತ್ಸೆ

ಕಫದೋಷದಿಂದ ಉತ್ಪನ್ನವಾದ ರೋಗಗಳಿಗೆ ವಮನ ವಿರೇಚನ ಔಷಧಗಳಿಂದ ಚಿಕಿತ್ಸೆ ಮಾಡಬೇಕು. ಮತ್ತು ರೂಕ್ಷ, ತೀಕ್ಷ್ಣ, ಉಷ್ಣವೀರ್ಯದಿಂದ ಕೂಡಿದ, ಕಟುತಿಕ್ತ ಕಷಾಯ ರಸ ಪ್ರಧಾನವಾದ ಔಷಧದ್ರವ್ಯಗಳು ಮತ್ತು ಆಹಾರ ಸೇವನೆ, ಜೇನುತುಪ್ಪ ಧೂಮಪಾನ ಉಪವಾಸವೇ ಮುಂತಾದ ಮೇದೋಹರ ಔಷಧಗಳನ್ನು ಪ್ರಯೋಗ ಮಾಡಬೇಕು. ಯೋಗಾಭ್ಯಾಸ, ವ್ಯಾಯಾಮ, ಇಂದ್ರಿಯಗಳ ನಿಗ್ರಹ ಮುಂತಾದವುಗಳನ್ನು ಕಫಜನ್ಯರೋಗಗಳಲ್ಲಿ ಮಾಡತಕ್ಕದ್ದು.

ವಾತ, ಪಿತ್ತ ಮತ್ತು ಕಫ ದೋಷಗಳ ಸಂಸರ್ಗದಿಂದ ಉತ್ಪನ್ನವಾದ ರೋಗಗಳಿಗೆ ಅವಕ್ಕೆ ತಕ್ಕ ರೀತಿಯಲ್ಲಿ ವ್ಯಾಧಿಗಳ ಅವಸ್ಥೆ, ಲಕ್ಷಣಗಳನ್ನು ಸರಿಯಾಗಿ ಅರಿತು ಸೂಕ್ತವಾಗಿ ವಿಧಿವತ್ತಾಗಿ ಚಿಕಿತ್ಸೆ ಮಾಡತಕ್ಕದ್ದು.

ಔಷಧ ದ್ರವ್ಯಗಳನ್ನೂ ಅವುಗಳ ಗುಣಗಳಿಗೆ ಅನುಗುಣವಾಗಿ ತಕ್ಕಂತೆ ವಿಂಗಡಿಸಬಹುದು.

- ಔಷಧ ದ್ರವ್ಯಂ
  - ಊರ್ಜಸ್ಕರಂ
    - ರಸಾಯನಂ
    - ವಾಜೀಕರಣಂ
  - ರೋಗಘ್ನಂ
    - ರೋಗಸ್ಯಪ್ರಶಮನಂ
    - ರೋಗಸ್ಯಅಪುನರ್ಭವಂ
      - ದ್ರವ್ಯಂ
        - ಭೌಮಂ
        - ಔದ್ಭಿದಂ
        - ಜಂಗಮಂ
      - ಅದ್ರವ್ಯಂ
        - ದೈವ ವ್ಯಪಾಶ್ರಯಂ
        - ಯುಕ್ತಿ ವ್ಯಪಾಶ್ರಯಂ
        - ಸತ್ತ್ವಾವಜಯಃ

ಮೇಲ್ಕಂಡ ಆಯುರ್ವೇದ ರೀತ್ಯಾ ರೋಗ ನಿರ್ಣಯ ಮತ್ತು ಚಿಕಿತ್ಸಾ ಕ್ರಮಗಳು ಹೇಳಲ್ಪಟ್ಟಿವೆ. ಇವು ತ್ರಿದೋಷಗಳನ್ನು ಅವಲಂಬಿಸಿವೆ. ಈ ನಿರ್ಧಾರಕ್ರಮಗಳು ನಿಷ್ಕೃಷ್ಟ ಜ್ಞಾನದಿಂದ ಕೂಡಿವೆ. ಆದ್ದರಿಂದ ಊಹೆಗಳಿಗೆ ಅವಕಾಶ ಕೊಡದೆ, ಸರಿಯಾಗಿ ರೋಗಗಳ ಲಕ್ಷಣ ಮತ್ತು ಕಾರಣಗಳನ್ನು ಅರಿತುಕೊಂಡು, ಅವಕ್ಕೆ ತಕ್ಕ ರೀತಿಯಲ್ಲಿ ದ್ರವ್ಯೌಷಧಿಗಳನ್ನು ಉಪಯೋಗಿಸಿ ಆಹಾರ ವಿಹಾರಗಳಲ್ಲಿ ಮಿತವಾಗಿದ್ದು ಚಿಕಿತ್ಸೆ ಮಾಡಿದರೆ ಬಾಹ್ಯ, ಶಾರೀರಿಕ ಮತ್ತು ಮಾನಸಿಕ ರೋಗಗಳು ಶಮನವಾಗುತ್ತವೆ. ದೀರ್ಘಕಾಲ ಆಯುಷ್ಯವನ್ನು ಹೆಚ್ಚಿಸಿಕೊಳ್ಳಬಹುದು ಮತ್ತು ಅಕಾಲಮರಣಗಳಿಂದ ಪಾರಾಗಿ ಬಹುಕಾಲ ಬದುಕಿ ದೇಶಗಳನ್ನು ಸಂಪದ್ಭರಿತವನ್ನಾಗಿ ಮಾಡಬಹುದು.

**ವೈದ್ಯನ ಲಕ್ಷಣ, ವೈದ್ಯ ನೀತಿ :** ಆಳವಾದ ಶಾಸ್ತ್ರಜ್ಞಾನ, ಉತ್ಕೃಷ್ಟವಾದ ಪ್ರತ್ಯಕ್ಷಾನುಭವ, ಹಸ್ತಶುದ್ಧಿ, ವೃತ್ತಿ ಪಾಲನೆಗೆ ಬೇಕಾಗುವ ಉಪಕರಣಾದಿಗಳನ್ನು ಹೊಂದಿರುವುದು, ಸರ್ವೇಂದ್ರಿಯ ಸಂಪನ್ನತೆ, ಶರೀರದ ಪ್ರಾಕೃತಜ್ಞಾನ, ವ್ಯಾಧಿಕಾಲದ ಆಪತ್ಸಂದರ್ಭಗಳಲ್ಲಿ ಧೈರ್ಯದಿಂದ ಯುಕ್ತಕರ್ಮಗಳನ್ನು ಮಾಡುವ ಶಕ್ತಿ, ಶುಚಿತ್ವ, ಕಾರ್ಯದಕ್ಷತೆ ಮತ್ತು ಭೂತದಯೆ–ಇವು ವೈದ್ಯನ ಲಕ್ಷಣಗಳು. ಈ ಲಕ್ಷಣಗಳನ್ನುಳ್ಳ ವೈದ್ಯ ರೋಗವನ್ನು ನಿವಾರಿಸಿ ಪ್ರಾಣವನ್ನು ಕಾಪಾಡುತ್ತಾನಾದ್ದರಿಂದ ಆತ ಪ್ರಾಣಾಭಿಸರ ವೈದ್ಯನೆನಿಸುತ್ತಾನೆ. ಇಂಥ ಕಲ್ಯಾಣಗುಣಗಳನ್ನು ಹೊಂದಿರದೆ ರೋಗವನ್ನು ಹಿಂಬಾಲಿಸಿ ಕೊನೆಗೆ ಪ್ರಾಣವನ್ನೇ ನಾಶಮಾಡುವ ರೋಗಾಭಿಸರ ವೈದ್ಯರೆಂಬುವರು ಮತ್ತೊಂದು ವಿಧ. ಇವರಲ್ಲಿ ಸಿದ್ಧಿಸಾಧಕರು ಮತ್ತು ಛದ್ಮಚರರೆಂಬುದಾಗಿ ಪುನಃ ಎರಡು ವಿಧ. ಜ್ಞಾನಿಗಳು, ಪ್ರಖ್ಯಾತಪುರುಷರು, ಸಿದ್ಧರು ಮುಂತಾದವರೊಡನೆ ತಮ್ಮ ಸಂಬಂಧವನ್ನು ಮೇಲಿಂದಮೇಲೆ ಹೇಳಿಕೊಳ್ಳುತ್ತ

ತಾವೂ ಕುಶಲವೈದ್ಯರೆಂದು ಪ್ರಶಂಸೆ ಮಾಡಿಕೊಳ್ಳುವವರು–ಸಿದ್ಧಿಸಾಧಕರು. ದೊಡ್ಡ ದೊಡ್ಡ ಗ್ರಂಥಗಳು, ಔಷಧಗಳು ಮತ್ತು ಉಪಕರಣಗಳು–ಮುಂತಾದುವನ್ನು ಪ್ರದರ್ಶಿಸುತ್ತ ತಾವು ಶಾಸ್ತ್ರಜ್ಞರೆಂದು ನಟಿಸುವವರು ಛದ್ಮಚರರು. ಇವರಿಬ್ಬರೂ ಅಜ್ಞರೂ ಪ್ರಾಣಘಾತಕರೂ ಆಗಿರುತ್ತಾರೆ.

ಶಾಸ್ತ್ರದೃಷ್ಟಿ ಮತ್ತು ಪ್ರತ್ಯಕ್ಷದೃಷ್ಟಿಗಳೆರಡನ್ನೂ ಹೊಂದಿರುವ ವೈದ್ಯನ ಜ್ಞಾನ ಅಭಿವೃದ್ಧಿಯಾಗುತ್ತದೆ. ಒಂದೇ ಶಾಸ್ತ್ರವನ್ನು ಓದಿರುವವ ಅನೇಕವೇಳೆ ದೃಢ ನಿರ್ಧಾರವನ್ನು ಕೈಗೊಳ್ಳಲು ಅಸಮರ್ಥನಾಗುತ್ತಾನಾದ್ದರಿಂದ ವೈದ್ಯ ಅನೇಕ ಶಾಸ್ತ್ರಗಳನ್ನು ತಿಳಿದವನಾಗಿರಬೇಕು. ಉತ್ತಮ ಸ್ಮರಣಶಕ್ತಿಯುಳ್ಳವನೂ ರೋಗಗಳ ಕಾರಣ ಮತ್ತು ಸ್ವರೂಪವನ್ನು ತಿಳಿದವನೂ ಜಿತೇಂದ್ರಿಯನೂ ಆಪತ್ಕಾಲದಲ್ಲಿ ಧೃತಿಗೆಡದೆ ಚಿಕಿತ್ಸೆ ಮಾಡುವವನೂ ಉತ್ಕೃಷ್ಟ ಔಷಧ ಸಂಗ್ರಹವುಳ್ಳವನೂ ಆದ ವೈದ್ಯ ಮಾತ್ರ ಚಿಕಿತ್ಸೆ ಮಾಡಲು ಅರ್ಹನಾಗುತ್ತಾನೆ.

ರೋಗವೆಂಬ ಕೆಸರಿನಲ್ಲಿ ಬಿದ್ದು ನರಳುತ್ತಿರುವವರನ್ನು ಮೇಲೆತ್ತಲು ವೈದ್ಯ ಸಿದ್ಧಹಸ್ತನಾಗಿರಬೇಕು. ಜೀವದಾನಕ್ಕಿಂತ ಮಿಗಿಲಾದ ದಾನ ಬೇರೊಂದಿಲ್ಲ. ಭೂತ ದಯೆಯೇ ವೈದ್ಯವೃತ್ತಿಯ ತಿರುಳು.

ಧರ್ಮಕ್ಕೆ ವಿರೋಧವಲ್ಲದ ರೀತಿಯಲ್ಲಿ ವೈದ್ಯವೃತ್ತಿಯನ್ನು ನಡೆಸಬೇಕು. ಅಂತೆಯೇ ತನ್ನ ವೃತ್ತಿಪಾಲನೆಯಲ್ಲಿ ತಾನೂ ಪುರುಷಾರ್ಥಗಳನ್ನು ಸಾಧಿಸಬೇಕು. ಧರ್ಮಜ್ಞರು, ಧರ್ಮಪ್ರತಿಷ್ಠಾಪಕರು, ಅಧ್ಯಾತ್ಮವಿದ್ಯಾಕುಶಲರು, ಗುರು, ಮಾತಾ ಪಿತೃಬಂಧುಗಳು ಮುಂತಾದವರ ಆರೋಗ್ಯವನ್ನು ರಕ್ಷಿಸುವುದು, ಆಯುರ್ವೇದೋಕ್ತ ಆತ್ಮಜ್ಞಾನವನ್ನು ಅನುಷ್ಠಾನಕ್ಕೆ ತರುವುದು–ಇವು ವೃತ್ತಿಯಲ್ಲಿ ಧರ್ಮಸಾಧನೆ. ರಾಜರು, ಧನಿಕರು ಮುಂತಾದವರ ರೋಗವನ್ನು ನಿವಾರಿಸಿ ಅವರು ಸಂತೋಷದಿಂದ ಕೊಡುವ ಧನವನ್ನು ಸಂಗ್ರಹಿಸುವುದು, ತನ್ನನ್ನು ಆಶ್ರಯಿಸಿದವರನ್ನು ರಕ್ಷಿಸುವುದು ವೃತ್ತಿಯಲ್ಲಿ ಅರ್ಥಸಾಧನೆ. ವಿದ್ವಜ್ಜನರಿಂದ ಪ್ರಶಂಸೆ, ಸರ್ವರಿಂದಲೂ ಗೌರವ ಮತ್ತು ವೃತ್ತಿಕುಶಲತೆಗಳನ್ನು ಸಂಪಾದಿಸಿ ತನ್ಮೂಲಕ ಇಷ್ಟಾರ್ಥಗಳನ್ನು ಹೊಂದುವುದು ಕಾಮಸಾಧನೆ. ಈ ಮೂರರ ಸಮ್ಯಗನುಷ್ಠಾನದಿಂದ ಜನ್ಮಾಂತ್ಯದಲ್ಲಿ ಬ್ರಹ್ಮಸಾಯುಜ್ಯ–ಇವೇ ವೈದ್ಯನು ಸಾಧಿಸಬೇಕಾದ ವೃತ್ತಿಮೌಲ್ಯಗಳು.

ಎಲ್ಲ ಪ್ರಾಣಿಗಳಲ್ಲಿ ಮೈತ್ರಿ, ಆರ್ತರಲ್ಲಿ ಕರುಣೆ, ಸುಲಭಸಾಧ್ಯವ್ಯಾಧಿಗಳನ್ನುಳ್ಳವರಲ್ಲಿ ಪ್ರೀತಿ, ಮರಣೋನ್ಮುಖರಾದವರಲ್ಲಿ ಉಪೇಕ್ಷೆ ವೈದ್ಯವೃತ್ತಿಯ ನಾಲ್ಕು ಮುಖಗಳಾಗಿವೆ. ಒಳ್ಳೆಯ ಶಾಸ್ತ್ರಜ್ಞಾನ ಮತ್ತು ಪ್ರತ್ಯಕ್ಷಾನುಭವಗಳುಳ್ಳ ವೈದ್ಯ ರೋಗವನ್ನು ಮೊದಲು ನಿರ್ಣಯಿಸಿ ಅನಂತರ ಯುಕ್ತ ಚಿಕಿತ್ಸೆಯನ್ನು ಕೂಡಲೇ ಮಾಡಬೇಕು. ರೋಗವನ್ನು ಸರಿಯಾಗಿ ತಿಳಿಯದೆ ಚಿಕಿತ್ಸೆಯನ್ನು ಪ್ರಾರಂಭಿಸಿ ಯಶಸ್ವೀ ಔಷಧಿಗಳನ್ನು ಕೊಟ್ಟರೂ ಸಿದ್ಧಿ ನಿಶ್ಚಿತವಲ್ಲ. ಜ್ಞಾನವೆಂಬ ದೀಪದ ಬೆಳಕಿನಲ್ಲಿ ಯಾವ ವೈದ್ಯ ರೋಗಿಯ ಅಂತರಾತ್ಮನನ್ನು ಅರಿತುಕೊಳ್ಳುತ್ತಾನೋ ಆತ ಚಿಕಿತ್ಸೆಯಲ್ಲಿ ವಿಫಲನಾಗುವುದಿಲ್ಲ. ವ್ಯಾಧಿನಿರ್ಣಯ ಮತ್ತು ವೇದನೆಗಳ ನಿವಾರಣೆ ಇವಿಷ್ಟೇ ವೈದ್ಯನ ವೈದ್ಯತ್ವವೇ ಹೊರತು ರೋಗಿಯ ಆಯುಸ್ಸಿಗೆ ವೈದ್ಯ ಪ್ರಭುವಲ್ಲ. ರೋಗಿಯ ಕೊನೆಯುಸಿರಿರುವವರೆಗೂ ಯುಕ್ತ ಚಿಕಿತ್ಸೆಗಳನ್ನು ಮಾಡಬೇಕು, ಮರಣ ಲಕ್ಷಣಗಳು ಕಂಡುಬರುತ್ತಿರುವ ರೋಗಿಗಳನೇಕರು ದೈವಕೃಪೆಯಿಂದ ಮೃತ್ಯುವನ್ನು ಜಯಿಸುತ್ತಾರೆ.

ಚಿಕಿತ್ಸಾವೃತ್ತಿ ಕೆಲವು ಮೇಳೆ ಧರ್ಮವನ್ನೋ ಕೆಲವು ವೇಳೆ ಮೈತ್ರಿಯನ್ನೋ ಧನ, ಯಶಸ್ಸು ಅಥವಾ ಕರ್ಮಾಭ್ಯಾಸವನ್ನೋ ಕೊಡುವುದಾದ್ದರಿಂದ ಎಂದಿಗೂ ನಿಷ್ಫಲವಲ್ಲ.

ಚಿಕಿತ್ಸಾವೃತ್ತಿಯನ್ನು ಯಾರು ಕೇವಲ ಧನಾರ್ಜನೆಗಾಗಿಯೇ ಮಾಡುತ್ತಾರೋ ಅವರು ಕಾಂಚನರಾಶಿಯನ್ನು ಬಿಟ್ಟು ಮರಳಿನ ರಾಶಿಯನ್ನು ಸಂಪಾದಿಸುತ್ತಾರೆ.

**ರೋಗಿಯ ಪರೀಕ್ಷೆ :** ಈ ವಿಷಯದಲ್ಲಿ ಆಯುರ್ವೇದ ಶಾಸ್ತ್ರ ಎರಡು ಪದ್ಧತಿಗಳನ್ನು ತಿಳಿಸಿದೆ:

1. ತ್ರಿವಿಧ ಪರೀಕ್ಷಾಪದ್ಧತಿ–ಪ್ರಶ.ಪೂ. ಸುಮಾರು 6–7ನೆಯ ಶತಮಾನದಲ್ಲಿದ್ದನೆಂದು ಹೇಳಲಾಗುವ ಮಹರ್ಷಿ ಪುನರ್ವಸು ಆತ್ರೇಯನಿಂದ ಪ್ರತಿಪಾದಿಸಲ್ಪಟ್ಟ ಆರ್ಷ ಪದ್ಧತಿ. ಆಪ್ತೋಪದೇಶ, ಪ್ರತ್ಯಕ್ಷ ಮತ್ತು ಅನುಮಾನಗಳೆಂಬ ಮೂರು ಮುಖ್ಯ ಪ್ರಮಾಣಗಳನ್ನೇ ಆಧರಿಸಿ ರೋಗಿಯನ್ನು ಪರೀಕ್ಷಿಸುವುದು ಇದರ ಮುಖ್ಯ ಲಕ್ಷಣ. ಶಾಸ್ತ್ರಗ್ರಂಥಗಳ ಅಧ್ಯಯನ, ಗುರುಗಳು, ಪರಿಣತರು ಮತ್ತು ಆಪ್ತರುಗಳ (ರೋಗಕಾಲದಲ್ಲಿ ರೋಗಿಯೂ ಒಬ್ಬ ಆಪ್ತ) ಹೇಳಿಕೆಗಳಿಂದ ರೋಗಜ್ಞಾನವನ್ನು ಪಡೆಯುವುದು ಆಪ್ತೋಪದೇಶ; ವೈದ್ಯ ತನ್ನ ಪಂಚ ಜ್ಞಾನೇಂದ್ರಿಯಗಳನ್ನೇ ಉಪಯೋಗಿಸಿ ರೋಗಿಯ ಶರೀರವನ್ನು ವಿಶದವಾಗಿ ಪರೀಕ್ಷಿಸುವುದರ ಮೂಲಕ ರೋಗಜ್ಞಾನವನ್ನು ಹೊಂದುವುದು ಪ್ರತ್ಯಕ್ಷ. ಪ್ರತ್ಯಕ್ಷಪರೀಕ್ಷೆಯ ವ್ಯಾಪ್ತಿಗೆ ಒಳಪಡದ ವಿಷಯಗಳನ್ನು, ತರ್ಕ, ಯುಕ್ತಿ, ಪ್ರಶ್ನೆಗಳಿಂದ ತಿಳಿದುಕೊಳ್ಳುವುದು ಅನುಮಾನ––ಈ ಮೂರರಲ್ಲಿ ಪ್ರತ್ಯಕ್ಷ ಪರೀಕ್ಷೆಗೆ ಹೆಚ್ಚು ಪ್ರಾಮುಖ್ಯ.

ಪ್ರತ್ಯಕ್ಷಪರೀಕ್ಷೆಯಲ್ಲಿ ಚಕ್ಷುರಿಂದ್ರಿಯದಿಂದ ಶರೀರದ ವರ್ಣ, ಅಂಗಾಂಗಗಳ ಆಕಾರ ಮತ್ತು ಪ್ರಮಾಣಗಳು ಶ್ರೋತ್ರೇಂದ್ರಿಯದಿಂದ ಸ್ವರ ಮತ್ತು ಅಂಗಾವಯವಗಳಲ್ಲಾಗುವ ಶಬ್ದಗಳೂ ಘ್ರಾಣೇಂದ್ರಿಯದಿಂದ ಗಂಧವೂ ಸ್ಪರ್ಶನೇಂದ್ರಿಯದಿಂದ ಶೀತೋಷ್ಣಾದಿಗುಣಗಳು, ಸ್ಪಂದನಾದಿ ಚೇಷ್ಟೆಗಳು, ರುಜಾ, ಸುಪ್ತಿ ಮುಂತಾದ ವೇದನೆಗಳು ತಿಳಿಯುತ್ತವೆ. ರಸನೇಂದ್ರಿಯವನ್ನೇ ನೇರವಾಗಿ ಪರೀಕ್ಷೆಯಲ್ಲಿ ಉಪಯೋಗಿಸುವುದು ಅನುಚಿತವಾದ ಕಾರಣ ರಸಜ್ಞಾನವನ್ನು ಅನುಮಾನದಿಂದ ತಿಳಿಯಬೇಕು.

ರೋಗದ ಬಗ್ಗೆ ಹೆಚ್ಚು ವಿಷಯಗಳು ಚಕ್ಷುರಿಂದ್ರಿಯ (ದರ್ಶನ) ಮತ್ತು ಸ್ಪರ್ಶನೇಂದ್ರಿಯಗಳ (ಸ್ಪರ್ಶನ) ಪರೀಕ್ಷೆಯಿಂದ ಹಾಗೂ ಪ್ರಶ್ನೆಯಿಂದ ತಿಳಿಯುವುದಾದ್ದರಿಂದ ವಾಗ್ಭಟಾಚಾರ್ಯ (ಪ್ರ.ಶ. 4ನೆಯ ಶತಮಾನ) ಈ ಮೂರರಿಂದಲೇ ರೋಗಿಯನ್ನು ಪರೀಕ್ಷಿಸಬೇಕೆಂದು ಸ್ಪಷ್ಟಪಡಿಸಿದ್ದಾನೆ. ಸುಶ್ರುತಸಂಹಿತೆಯಲ್ಲಿ ಪಂಚೇಂದ್ರಿಯಗಳು ಮತ್ತು ಪ್ರಶ್ನೆಗಳೆಂಬ ಷಡ್ವಿಧ ಪರೀಕ್ಷಾ ಕ್ರಮವನ್ನು ಸೂಚಿಸಲಾಗಿದೆ.

ರೋಗಿಯ ಶರೀರದಲ್ಲಿ ಪರೀಕ್ಷಿಸಿ ನಿರ್ಧರಿಸಬೇಕಾದ ವಿಷಯಗಳನ್ನು ಚರಕ ಸಂಹಿತೆ ವಿವರಿಸುತ್ತದೆ. ರೋಗಿಯ ದೇಹಪ್ರಕೃತಿ, ಸಾರ, ಸಂಹನನ, ಪ್ರಮಾಣಸತ್ವ (ಮನಸ್ಸು), ಸಾತ್ಮ್ಯ (ಹಿತಕರ ಆಹಾರ ವಿಹಾರಗಳು) ಮತ್ತು ಉತ್ಪನ್ನವಾಗಿರುವ ರೋಗ ಇವಿಷ್ಟನ್ನೂ ವೈದ್ಯ ಲಕ್ಷ್ಯವಿಟ್ಟು ಪರೀಕ್ಷಿಸಬೇಕು. ರೋಗವನ್ನು ಪರೀಕ್ಷಿಸುವಾಗ ಅದರ ನಿದಾನ (ಕಾರಣ) ಪೂರ್ವರೂಪ, ರೂಪ, ಉಪಶಯ ಮತ್ತು ಸಂಪ್ರಾಪ್ತಿಗಳೆಂಬ ಪಂಚಲಕ್ಷಣಗಳಿಗೆ ಗಮನ ಕೊಡಬೇಕು.

ಹೀಗೆ ರೋಗಿ ಮತ್ತು ರೋಗಗಳೆರಡರ ಪರೀಕ್ಷೆಯನ್ನೂ ಮಾಡುವುದು ರೋಗನಿರ್ಣಯಕ್ಕೆ ಅತ್ಯಾವಶ್ಯಕ.

**2. ಅಷ್ಟಸ್ಥಾನಪರೀಕ್ಷಾಪದ್ಧತಿ :** ಪ್ರ.ಶ. 13ನೆಯ ಶತಮಾನದ ಅನಂತರ ಈ ಪದ್ಧತಿ ರೂಢಿಗೆ ಬಂದಿದೆ. ರೋಗಿಯ ನಾಡಿ, ಜಿಹ್ವೆ, ಮಲ, ಮೂತ್ರ, ಶಬ್ದ, ಸ್ಪರ್ಶ, ದೃಕ್ (ಕಣ್ಣು) ಮತ್ತು ಆಕೃತಿಗಳೆಂಬ ಎಂಟು ವಿಷಯಗಳ ಪರೀಕ್ಷೆಯಿಂದಲೇ ಸುಲಭವಾಗಿ ರೋಗಜ್ಞಾನವನ್ನು ಪಡೆಯಬಹುದೆಂಬುದೇ ಈ ಕ್ರಮದ ಉದ್ದೇಶ. ಪರೀಕ್ಷ್ಯ ಭಾವಗಳಲ್ಲಿ ಮೊದಲನೆಯದಾದ ನಾಡೀಪರೀಕ್ಷೆ ಇದರ ವೈಶಿಷ್ಟ್ಯ.

ಆಯುರ್ವೇದದ ಆರ್ಷಗ್ರಂಥಗಳಾದ ಚರಕ, ಸುಶ್ರುತ ಅಷ್ಟಾಂಗಸಂಗ್ರಹ ಮತ್ತು ಅಷ್ಟಾಂಗಹೃದಯ ಸಂಹಿತೆಗಳಲ್ಲಿ ನಾಡೀಪರೀಕ್ಷಾ ಕ್ರಮ ಕಂಡುಬರುವುದಿಲ್ಲ. ಪ್ರ.ಶ. 13ನೆಯ ಶತಮಾನದಲ್ಲಿದ್ದ ಶಾರ್ಙ್ಗಧರ ಈ ಕ್ರಮವನ್ನು ತನ್ನ ಗ್ರಂಥದಲ್ಲಿ ಮೊತ್ತಮೊದಲಾಗಿ ವಿವರಿಸಿದ್ದಾನೆ. ಕಾಲಕ್ರಮದಲ್ಲಿ ಈ ಕ್ರಮ ಬಹಳ ಮಾನ್ಯತೆ ಪಡೆಯಿತೆಂಬುದು ಈ ವಿಷಯವನ್ನೇ ಪ್ರತಿಪಾದಿಸುವ ಹಲವಾರು ಗ್ರಂಥಗಳಿರುವುದರಿಂದ ಸ್ಥಿರಪಡುತ್ತದೆ.

ನಾಡೀಪರೀಕ್ಷೆಯೆಂದರೆ ಶರೀರದ ಧಮನಿಗಳಲ್ಲಾಗುತ್ತಿರುವ ಸ್ಪಂದನವನ್ನು (ಮಿಡಿತ) ಪರೀಕ್ಷಿಸುವುದು. ರೋಗಿಯ ಹಸ್ತದ ಅಂಗುಷ್ಠಮೂಲದಲ್ಲಿ ಸುಲಭವಾಗಿ ಸ್ಪರ್ಶಲಭ್ಯವಾಗುವ ಧಮನಿಯ ಸ್ಪಂದನದ ಗತಿ (ರೀತಿ) ಮತ್ತು ವೇಗ (ಸಂಖ್ಯೆ) ಗಳಿಂದ ರೋಗಗಳನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ. ವೀಣೆಯಲ್ಲಿರುವ ತಂತಿ ಹೇಗೆ ಎಲ್ಲ ರಾಗಗಳನ್ನು ಮಿಡಿಯುತ್ತದೊ ಹಾಗೆಯೇ ನಾಡಿ ಎಲ್ಲ ರೋಗಗಳನ್ನೂ ತಿಳಿಸುತ್ತದೆ. ಇಷ್ಟೇ ಅಲ್ಲದೆ ಆರೋಗ್ಯ, ಗ್ರಹಫಲ, ಭೂತಾವೇಶ, ಮೃತ್ಯುಕಾಲ ಇತ್ಯಾದಿಗಳನ್ನೂ ಸೂಚಿಸುತ್ತದೆ. ನಾಡೀಪರೀಕ್ಷೆ ಗಹನವಾದ ವಿಷಯವೆಂದೂ ದೈವಕೃಪೆ, ಗುರೂಪದೇಶ ಮತ್ತು ಸತತಾಭ್ಯಾಸಗಳ ಫಲದಿಂದ ಮಾತ್ರವೇ ಸಿದ್ಧಿಸುವುದೆಂದೂ ತಿಳಿಸಲಾಗಿದೆ. ಆಯುರ್ವೇದ ಶಾಸ್ತ್ರದ ವೈಶಿಷ್ಟ್ಯಪೂರ್ಣಪದ್ಧತಿಯಾದ ಇದರಲ್ಲಿ ನಿಷ್ಣಾತರಾದ ವೈದ್ಯರನೇಕರು ಇಂದಿಗೂ ಇದನ್ನು ರೂಢಿಸುತ್ತಿರುವುದು ಇದರ ಮಹತ್ತ್ವದ ದ್ಯೋತಕವಾಗಿದೆ. (ಕೆ.ಆರ್.ಎಸ್.)

**ಶಸ್ತ್ರಕರ್ಮಾಭ್ಯಾಸ :** ಪೂರ್ವಕಾಲದಲ್ಲಿ ಶಸ್ತ್ರಕರ್ಮಾಭ್ಯಾಸವನ್ನು ಈಗಿನ ಹಾಗೆ ಮೃತದೇಹದ ಮೇಲೆ ಮಾಡುತ್ತಿರಲಿಲ್ಲ. ಫಲಗಳು, ಬಳ್ಳಿಗಳು, ಚರ್ಮಗಳ ಮೇಲೆ ಕತ್ತರಿಸುವುದು, ಸೀಳುವುದು, ಹೊಲೆಯುವುದು ಮುಂತಾದ ಕರ್ಮಗಳನ್ನು ಮಾಡಿಸಿ, ಶಿಷ್ಯನನ್ನು ಯೋಗ್ಯನನ್ನಾಗಿ ಮಾಡುತ್ತಿದ್ದರು. ಹೀಗೆ ಯೋಗ್ಯನನ್ನಾಗಿ ಮಾಡದಿರುವವನಿಗೆ ವೈದ್ಯವೃತ್ತಿಮಾಡಲು ರಾಜನ ಅಪ್ಪಣೆ ಸಿಕ್ಕುತ್ತಿರಲಿಲ್ಲ. ಸೋರೆಕಾಯಿ, ಕುಂಬಳಕಾಯಿ ಮುಂತಾದುವುಗಳಲ್ಲಿ ಕತ್ತರಿಸುವುದು, ಚರ್ಮದ ಚೀಲ, ಪ್ರಾಣಿಗಳ ಮೂತ್ರಾಶಯಗಳಲ್ಲಿ ಸೀಳುವುದು, ರೋಮದಿಂದ ಕೂಡಿದ ಚರ್ಮದಲ್ಲಿ ಲೇಖನ (ಕೆರೆಯುವುದು), ಸತ್ತ ಪಶುಗಳ ರಕ್ತನಾಳಗಳಲ್ಲಿ ಸಿರಾವ್ಯಧ (ರಕ್ತನಾಳ ಕತ್ತರಿಸುವುದು), ಸೂಕ್ಷ್ಮ ಮತ್ತು ದಪ್ಪ ಬಟ್ಟೆ ಅಥವಾ ಚರ್ಮಗಳಲ್ಲಿ ಹೊಲಿಯುವುದು–ಇವನ್ನು ಅಭ್ಯಾಸ ಮಾಡಿಸಲಾಗುತ್ತಿತ್ತು. ದೊಡ್ಡ ಮನುಷ್ಯಾಕಾರದ ಬೊಂಬೆಗಳಲ್ಲಿ ಬಂಧನಗಳನ್ನು (ಬ್ಯಾಂಡೇಜಿಂಗ್) ಮೃದುವಾದ ಮಾಂಸಖಂಡಗಳಲ್ಲಿ ಅಗ್ನಿ ಕರ್ಮ ಮತ್ತು ಕ್ಷಾರಕರ್ಮಗಳನ್ನು ಹೇಳಿಕೊಟ್ಟು ಮಾಡಿಸಲಾಗುತ್ತಿತ್ತು. ಹೀಗೆ ಶಸ್ತ್ರವೈದ್ಯ ರೋಗಗಳಲ್ಲಿ ಮಾಡಬೇಕಾದ ಸಕಲಕೆಲಸಗಳನ್ನು ಇತರ ಪದಾರ್ಥಗಳ ಮೇಲೆ ಮಾಡಿಸಿ ಯೋಗ್ಯನನ್ನಾಗಿ ಮಾಡಿ, ಅನಂತರ ಮನುಷ್ಯರ ಮೇಲೆ ಮಾಡಲು ರಾಜಾಜ್ಞೆ ದೊರಕಿಸುವ ಕ್ರಮ ರೂಢಿಯಲ್ಲಿ ಇದ್ದಿತು.

ಶಾಸ್ತ್ರಜ್ಞಾನ ಮತ್ತು ಕರ್ಮನಿಪುಣತೆಗಳನ್ನು ಪಡೆದವನಿಗೆ ವೈದ್ಯನಾಗುವ ಅಧಿಕಾರವಿದ್ದು, ರಾಜನಿಂದ ಅಂಥವನಿಗೆ ಮಾತ್ರ ಅಪ್ಪಣೆ ಸಿಕ್ಕುತ್ತಿದ್ದ ಆ ಕಾಲದಲ್ಲಿ ಶಸ್ತ್ರಕರ್ಮಾಭ್ಯಾಸ ಅತ್ಯುಚ್ಚಮಟ್ಟದಲ್ಲಿ ನಡೆಯುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. (ಎನ್.ಎಲ್.ಎನ್.)

**ಆಯುರ್ವೇದದ ಮೂಲಸಿದ್ಧಾಂತಗಳು :** ಆಯುರ್ವೇದದ ಮೂಲಸಿದ್ಧಾಂತಗಳೆಲ್ಲವೂ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಮೊದಲಾದ ದರ್ಶನಶಾಸ್ತ್ರಗಳ ಸಿದ್ಧಾಂತದ ಮೇಲೆಯೇ ರೂಪಿಸಲ್ಪಟ್ಟಿವೆ. ಕೆಲವು ಮುಖ್ಯ ಸಿದ್ಧಾಂತಗಳು ಹೀಗಿವೆ:

**1. ಲೋಕ–ಪುರುಷ ಸಾಮ್ಯಸಿದ್ಧಾಂತ :** ಲೋಕದಲ್ಲಿ ಯಾವ ಯಾವ ಭಾವ ವಿಶೇಷಗಳಿವೆಯೋ ಅವೆಲ್ಲವೂ ಮನುಷ್ಯನಲ್ಲಿವೆ. ಯಾವುವು ಮನುಷ್ಯನಲ್ಲಿವೆಯೋ ಅವು ಲೋಕದಲ್ಲಿವೆ. ಅದ್ದರಿಂದ ಮನುಷ್ಯ ಒಂದು ಸೂಕ್ಷ್ಮ ವಿಶ್ವ.

**2. ಪಂಚಮಹಾಭೂತಸಿದ್ಧಾಂತ :** ಲೋಕದ ಮೂರ್ತ ದ್ರವ್ಯಗಳೆಲ್ಲವೂ ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳೆಂಬ ಪಂಚಮಹಾಭೂತಗಳ ಸಂಯೋಗದಿಂದಲೇ ಉತ್ಪನ್ನವಾಗಿವೆ. ಮನುಷ್ಯಶರೀರ, ಆತ ಉಪಯೋಗಿಸುವ ಆಹಾರ, ಔಷಧಾದಿ ದ್ರವ್ಯಗಳೆಲ್ಲವೂ ಪಾಂಚಭೌತಿಕಗಳು. ಪಂಚಮಹಾಭೂತಗಳ ಜೊತೆಯಲ್ಲಿ ಚೇತನಾಸ್ವರೂಪನಾದ ಆತ್ಮನ ಸಂಯೋಗಾನಂತರ ಮನುಷ್ಯ ಶರೀರ ಪ್ರಾಣಲಕ್ಷಣಗಳನ್ನು ವ್ಯಕ್ತಮಾಡುತ್ತದೆ. ಆತ್ಮನ ವಿಯೋಗಾನಂತರ ದೇಹ ಪಂಚಭೂತಗಳಲ್ಲಿಯೇ ಸೇರುತ್ತದೆ. ಜೀವಿತಕಾಲದಲ್ಲಿ ಮಾನವ ಶರೀರ, ಆತ್ಮ ಮತ್ತು ಸತ್ತ್ವಗಳ (ಮನಸ್ಸು) ಅವಿಭಾಜ್ಯಸಂಯೋಗರೂಪಿ.

**3. ದೋಷ–ಧಾತು–ಮಲ ಸಿದ್ಧಾಂತ :** ಶರೀರದ ರಚನೆ ಮತ್ತು ಕಾರ್ಯಗಳಿಗೆ ವಾತ, ಪಿತ್ತ, ಕಫಗಳೆಂಬ ತ್ರಿದೋಷಗಳು, ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜಾ ಶುಕ್ರಗಳೆಂಬ ಧಾತುಗಳು, ಪುರೀಷ, ಮೂತ್ರ, ಸ್ವೇದಾದಿ ಮಲಗಳು –ಮುಖ್ಯ ಘಟಕಗಳಾಗಿವೆ. ಇವು ತಮ್ಮ ಪ್ರಮಾಣ, ಗುಣಕರ್ಮಗಳಲ್ಲಿ ಪ್ರಾಕೃತವಾಗಿರುವಾಗ ಶರೀರ ಆರೋಗ್ಯವಾಗಿರುತ್ತದೆ. ಅಹಿತಾಹಾರವಿಹಾರಗಳಿಂದ ಇವು ವೃದ್ಧಿ ಕ್ಷಯರೂಪವಾದ ವೈಷಮ್ಯವನ್ನು ಹೊಂದಿ ಶರೀರವನ್ನು ರೋಗಕ್ಕೆ ಗುರಿಮಾಡುತ್ತವೆ.

ದೋಷ, ಧಾತು–ಮಲಗಳ ಪೈಕಿ ತ್ರಿದೋಷಗಳು ಹೆಚ್ಚು ಮಹತ್ವವುಳ್ಳವು. ಪ್ರಾಕೃತಾವಸ್ಥೆಯಲ್ಲಿರುವಾಗ ಶರೀರವನ್ನು ಧಾರಣಮಾಡುವುದರಿಂದ ಇವುಗಳಿಗೆ ಧಾತುಗಳೆಂದೂ ಹೆಸರುಂಟು. ಆದರೆ ಜಾಗ್ರತೆಯಾಗಿ ತಾವು ದುಷ್ಟವಾಗಿ ಅನ್ಯವಸ್ತುಗಳನ್ನು ದುಷ್ಟಮಾಡುವ ಸ್ವಭಾವವನ್ನು ಹೊಂದಿರುವುದರಿಂದ ಇವನ್ನು ದೋಷಗಳೆಂದೇ ವ್ಯವಹರಿಸಲಾಗಿದೆ. ಅನಿಲ, ಸೂರ್ಯ ಮತ್ತು ಸೋಮ–ಇವರು ಹೇಗೆ ಜಗತ್ತನ್ನು ಧಾರಣಮಾಡುತ್ತಾರೋ ಹಾಗೆ ವಾತ, ಪಿತ್ತ, ಕಫಗಳು ಶರೀರವನ್ನು ಧಾರಣಮಾಡುತ್ತವೆ.

ಶರೀರವು ವಾತ ವಾಯು ಮತ್ತು ಆಕಾಶ ಭೂತಗಳ ಸಂಯೋಗದಿಂದುತ್ಪನ್ನವಾಗಿ ಪ್ರಾಣ, ಉದಾನ, ಸಮಾನ, ವ್ಯಾನ ಮತ್ತು ಅಪಾನಗಳೆಂಬ ಐದು ವಿಭಾಗಗಳಾಗಿ ಶರೀರದ ಧಾತುಗಳ ಸಮ್ಯಗ್ಗತಿ, ಇಂದ್ರಿಯಪಟುತ್ವ, ಎಲ್ಲ ವಿಧವಾದ ಶಾರೀರಕ ಚೇಷ್ಟೆಗಳು ಮತ್ತು ಮಾನಸಿಕಪ್ರವೃತ್ತಿ ಮುಂತಾದ ಕಾರ್ಯಗಳನ್ನು ಮಾಡುತ್ತವೆ. ಪಿತ್ತ ತೇಜೋಭೂತದಿಂದುತ್ಪನ್ನವಾಗಿ ಪಾಚಕ, ರಂಜಕ, ಸಾಧಕ, ಅಲೋಚಕ, ಭ್ರಾಜಕಗಳೆಂಬ ಐದು ವಿಭಾಗಗಳಾಗಿ ಆಹಾರ ಪಚನ, ದೇಹೌಷ್ಣ, ವರ್ಣ, ಮೇಧಾಶಕ್ತಿ ಮುಂತಾದ ಕಾರ್ಯಗಳನ್ನು ಮಾಡುತ್ತದೆ. ಕಫವು ಅಪ್ ಮತ್ತು ಪೃಥ್ವೀಭೂತಗಳಿಂದ ಉತ್ಪನ್ನವಾಗಿದ್ದು ಶರೀರದ ಸ್ಥಿರತ್ವ, ಸ್ನಿಗ್ಧತ್ವ, ಕ್ಷಮತ್ವ, ಬಲ ಮುಂತಾದುವುಗಳಿಗೆ ಕಾರಣವಾಗಿವೆ.

ತ್ರಿದೋಷಗಳು ಧಾತು ಮಲಗಳಲ್ಲೇ ಆಶ್ರಯ ಪಡೆದಿದ್ದು ತಾವು ದೂಷಿತವಾದಾಗ ಅವನ್ನೂ ದೂಷಿಸಿ ರೋಗಗಳನ್ನುಂಟುಮಾಡುತ್ತವೆ.

ರಜಸ್ ಮತ್ತು ತಮಸ್–ಎಂಬ ಎರಡು ಮಾನಸಿಕ ದೋಷಗಳೂ ಇವೆ.

**ದ್ರವ್ಯ–ರಸ–ಗುಣ–ವೀರ್ಯ–ವಿಪಾಕ–ಪ್ರಭಾವ–ಸಿದ್ಧಾಂತ:** ಔಷಧವಲ್ಲದ ಯಾವ ವಸ್ತುವೂ ಪ್ರಪಂಚದಲ್ಲಿಲ್ಲ. ಪಂಚಮಹಾಭೂತಗಳ ಸಂಯೋಗವೈಶಿಷ್ಟ್ಯದಿಂದ ವಸ್ತುಗಳಲ್ಲಿ ಲಕ್ಷಣ ವೈವಿಧ್ಯ ಉಂಟಾಗುತ್ತದೆ. ವಸ್ತುಗಳಲ್ಲಿರುವ ಭೂತದ ಆಧಿಕ್ಯದ ಮೇರೆಗೆ ದ್ರವ್ಯಗಳನ್ನು ಪಾರ್ಥಿವ, ಅಪ್ಯ, ತೈಜಸ, ವಾಯವೀಯ, ನಾಭಸ ಎಂಬುದಾಗಿ ಐದು ವಿಧವಾಗಿ ವಿಂಗಡಿಸಬಹುದು. ಪ್ರತಿಯೊಂದು ದ್ರವ್ಯದಲ್ಲೂ ರಸ [ನಾಲಗೆಗೆ ಗೋಚರವಾಗುವ ಮಧುರ (ಸಿಹಿ), ಆಮ್ಲ (ಹುಳಿ), ಲವಣ (ಉಪ್ಪು), ಕಟು (ಖಾರ), ತಿಕ್ತ (ಕಹಿ) ಮತ್ತು ಕಷಾಯಗಳೆಂಬ (ಒಗರು) ಆರು] , ಗುಣ (ಗುರು ಲಘು, ರೂಕ್ಷ, ಸ್ನಿಗ್ಧ ಮುಂತಾದ ಇಪ್ಪತ್ತು), ವೀರ್ಯ (ಉಷ್ಣ ಶೀತಗಳೆಂಬ ಶಕ್ತಿಗಳು), ವಿಪಾಕ (ಜಠರಾಗ್ನಿಯಿಂದ ಪಾಕಹೊಂದಿದ ಅನಂತರದ ರಸ), ಪ್ರಭಾವಗಳೆಂಬುವು (ಅಚಿಂತ್ಯಶಕ್ತಿ) ಕಾರ್ಯ ಘಟಕಗಳು.

**ಸಾಮಾನ್ಯ –ವಿಶೇಷ ಸಿದ್ಧಾಂತ :** ಸಮಾನದ್ರವ್ಯ, ಸಮಾನಗುಣ ಮತ್ತು ಕರ್ಮಗಳ ಸೇವನೆಯಿಂದ (ಆಹಾರ, ವಿಹಾರ, ಔಷಧ) ದೋಷ, ಧಾತು, ಮಲಗಳ ವೃದ್ಧಿಯೂ ವಿಶೇಷ (ವಿರುದ್ಧ) ದ್ರವ್ಯ, ಗುಣ, ಕರ್ಮಗಳ ಸೇವನೆಯಿಂದ ಅವುಗಳ ಕ್ಷಯವೂ ಉಂಟಾಗುತ್ತವೆ.

**ತ್ರಿವಿಧರೋಗ ಕಾರಣತ್ವ ಸಿದ್ಧಾಂತ :** ಕಾಲ (ಶಿಶಿರಾದಿ ಷಡ್ ಋತುಗಳು) , ಅರ್ಥ (ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಇಂದ್ರಿಯ ವಿಷಯಗಳು), ಕರ್ಮ (ಕಾಯಿಕ, ವಾಚಿಕ, ಮಾನಸಿಕಗಳೆಂಬ ಮೂರು ವಿವಿಧ ಕಾರ್ಯಗಳು)–ಇವುಗಳ ಸಮ್ಯಗ್ಯೋಗದಿಂದ (ಸರಿಯಾಗಿರುವುದು) ಆರೋಗ್ಯವೂ ಹೀನ ಅತಿ ಅಥವಾ ಮಿಥ್ಯಾಯೋಗಗಳಿಂದ ರೋಗವೂ ಉಂಟಾಗುತ್ತವೆ. ಇವೇ ಅಸಾತ್ಮ್ಯೇಂದ್ರಿಯಾರ್ಥ ಸಂಯೋಗ, ಪ್ರಜ್ಞಾಪರಾಧ ಮತ್ತು ಪರಿಣಾಮಗಳೆಂದೂ ಕರೆಯಲ್ಪಡುತ್ತವೆ.

**ತ್ರಿವಿಧರೋಗಸಿದ್ಧಾಂತ :** ದುಃಖಸಂಯೋಗವೇ ವ್ಯಾಧಿ: ದುಃಖಗಳು ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂದು ಮೂರು ವಿಧ. ಅಂತೆಯೇ ವ್ಯಾಧಿಗಳೂ. ಶರೀರದ ಉತ್ಪತ್ತಿಗೆ ಮೂಲಕಾರಣವಾದ ಶುಕ್ರಶೋಣಿತಗಳ ಕೆಡುವಿಕೆ (ಆದಿಬಲ), ಗರ್ಭಧಾರಣ ಕಾಲದಲ್ಲಿ ತಾಯಿ ಮಾಡುವ ಅಪಚಾರಗಳು (ಜನ್ಮಬಲ), ಜನನಾನಂತರದ ಅಹಿತಾಹಾರ ವಿಹಾರ ಸೇವನೆಗಳ (ದೋಷಬಲ) ಪರಿಣಾಮವಾಗಿ ಉಂಟಾಗುವ ವ್ಯಾಧಿಗಳು–ಇವು ಆಧ್ಯಾತ್ಮಿಕಗಳು; ಶಸ್ತ್ರ ಅಸ್ತ್ರ ಮುಂತಾದ ಆಯುಧಗಳು, ಹಿಂಸ್ರಕ್ಷುದ್ರ ಪ್ರಾಣಿಗಳಿಂದ (ಸಂಘಾತ ಬಲ) ಉಂಟಾಗುವ ವ್ಯಾಧಿಗಳು–ಆಧಿಭೌತಿಕಗಳು. ಪರಿಣಾಮದಿಂದ (ಕಾಲಬಲ), ದೇವತಾಶಕ್ತಿ ವ್ಯಕ್ತಿಗಳ ಶಾಪರೂಪದಿಂದ (ದೈವಬಲ) ಮತ್ತು ಸ್ವಾಭಾವಿಕವಾದ ಹಸಿವು, ಬಾಯಾರಿಕೆ, ನಿದ್ರಾ, ಮುಪ್ಪು (ಸ್ವಭಾವ ಬಲ)–ಮುಂತಾದುವು ಆಧಿದೈವಿಕ ವ್ಯಾಧಿಗಳು.

**ತ್ರಿವಿಧಚಿಕಿತ್ಸಾ ಸಿದ್ಧಾಂತ :** ಚಿಕಿತ್ಸೆ ಮೂರುವಿಧ. 1. ದೈವವ್ಯಪಾಶ್ರಯ–ಮಂತ್ರ, ಔಷಧಧಾರಣ, ಮಣಿಧಾರಣ, ಮಂಗಳ, ಬಲಿ, ಉಪಹಾರ, ಹೋಮ, ನಿಯಮ, ಪ್ರಾಯಶ್ಚಿತ್ತ, ಉಪವಾಸ, ಸ್ವಸ್ತ್ಯಯನ, ಯಾತ್ರಾದಿಗಳಿಂದ ರೋಗ ನಿವಾರಣೆ. 2. ಯುಕ್ತಿವ್ಯಪಾಶ್ರಯ–ರೋಗಕ್ಕೆ ಸೂಕ್ತವಾದ ಔಷಧ, ಆಹಾರ ಮತ್ತು ವಿಹಾರಗಳ ಸೇವನೆಯಿಂದ ವ್ಯಾಧಿ ನಿವಾರಣೆ. 3. ಸತ್ತ್ವಾವಜಯ–ಅಹಿತವಾದ ಇಂದ್ರಿಯಾರ್ಥಗಳಿಂದ ದೂರವಿರುವಿಕೆ, ಮನಸ್ಸನ್ನು ನಿಗ್ರಹಿಸುವುದರಿಂದ ವ್ಯಾಧಿಗಳ ನಿವಾರಣೆ. ಔಷಧ ಯೋಜನೆಯೂ ಮೂರು ವಿಧ: 1. ಅಂತಃಪರಿ ಮಾರ್ಜನ–ಹೊಟ್ಟೆಯೊಳಗೆ ಔಷಧಿಗಳ ಸೇವನೆ; 2 ಬಹಿಃಪರಿಮಾರ್ಜನ–ಶರೀರದ ಮೇಲೆ ಔಷಧಗಳ ಉಪಯೋಗ ಮತ್ತು 3 ಶಸ್ತ್ರಪ್ರಣಿಧಾನ ಶಸ್ತ್ರಗಳಿಂದ ಛೇದನ, ಭೇದನಾದಿಗಳನ್ನು ಮಾಡುವುದು. (ಕೆ.ಆರ್.ಎಸ್.)

## ಆಯುರ್ವೇದ ವಿಭಾಗಕ್ರಮ ಮತ್ತು ವಿಶೇಷ ಅಭ್ಯಾಸ–ಅದರ ಅಷ್ಟಾಂಗಗಳು :

ಸಂಪೂರ್ಣ ಆಯುರ್ವೇದವನ್ನು ಪ್ರತಿಯೊಬ್ಬನೂ ಕಲಿತು, ಕರ್ಮಾಭ್ಯಾಸ ಮಾಡಲು ಸಾಧ್ಯವಾಗುವ ರೀತಿಯಲ್ಲಿ ಆ ಶಾಸ್ತ್ರವನ್ನು ಎಂಟು ವಿಭಾಗಗಳನ್ನಾಗಿ ಮಾಡಿದ್ದಾರೆ. ಅವು ಹೀಗಿವೆ:

**1 ಕಾಯಚಿಕಿತ್ಸಾ :** ಸಮಸ್ತಶರೀರವ್ಯಾಪಿಯಾಗಿರುವ ಜ್ವರ, ಕ್ಷಯ, ಉದರರೋಗ ಮುಂತಾದುವುಗಳ ವರ್ಣನೆ, ಕಾರಣ, ಲಕ್ಷಣ, ಸಾಧ್ಯಾಸಾಧ್ಯ ವಿಚಾರ, ಚಿಕಿತ್ಸಾ ಕ್ರಮ, ಉಪದ್ರವಗಳು, ಪಥ್ಯಾಪಥ್ಯವಿಚಾರ, ಆಹಾರ ವಿಹಾರ, ಉಪಯುಕ್ತ ದ್ರವ್ಯಗಳು, ಔಷಧಗಳನ್ನು ತಯಾರುಮಾಡುವ ಕ್ರಮ ಮತ್ತು ಸೇವನಾವಿಧಿ–ಮುಂತಾದುವುಗಳನ್ನೆಲ್ಲ ವಿವರಿಸುವ ಆಯುರ್ವೇದದ ಭಾಗ (ಮೆಡಿಸಿನ್). ರೋಗಗಳು ಬಾರದಂತೆ ಇರಲು ಮಾಡಬೇಕಾದ ಕ್ರಮವೂ ಇಲ್ಲಿ ಹೇಳಲ್ಪಟ್ಟಿದೆ. ಕಾಯಚಿಕಿತ್ಸೆಯಲ್ಲಿಯೇ ಅನೇಕರು ಹೆಚ್ಚು ಜ್ಞಾನಪಡೆದು, ಅನುಭವಹೊಂದಿ ಗ್ರಂಥಗಳನ್ನು ಬರೆದರು. ಇವುಗಳಲ್ಲಿ ಚರಕಸಂಹಿತಾ, ಭೇಲಸಂಹಿತಾ, ಜತೂಕರ್ಣಾತಿಸಂಹಿತಾ, ಪರಾಶರಸಂಹಿತಾ, ಹಾರೀತಸಂಹಿತಾ, ಅಗಸ್ತ್ಯಸಂಹಿತಾ, ಅತ್ರಿಸಂಹಿತಾ–ಮುಂತಾದುವು ಪ್ರಸಿದ್ಧವಾಗಿವೆ. ಈಗ ಕೆಲವು ಗ್ರಂಥಗಳು ಮಾತ್ರ ಪ್ರಕಟಿತವಾಗಿ, ಉಳಿದವು ಹಸ್ತಪ್ರತಿಗಳಲ್ಲಿಯೇ ಇವೆ. ಆಯುರ್ವೇದ ವೈದ್ಯರೆಲ್ಲರೂ ಕಾಯಚಿಕಿತ್ಸಾಗ್ರಂಥಗಳನ್ನು ಅಧ್ಯಯನ ಮಾಡಿ ಕೇವಲ ಈ ಒಂದು ಭಾಗವನ್ನೇ ರೂಢಿಯಲ್ಲಿಟ್ಟಿರುತ್ತಾರೆ. ಉಳಿದ ಏಳು ಭಾಗಗಳನ್ನು ಅನುಭವದಲ್ಲಿಟ್ಟಿರುವ ವೈದ್ಯರು ಬಹಳ ವಿರಳ.

**2 ಬಾಲರೋಗ :** ಈ ಭಾಗಕ್ಕೆ ಕೌಮಾರಭೃತ್ಯವೆಂದೂ ಹೆಸರು (ಪೀಡಿಯಾಟ್ರಿಕ್ಸ್). ಹುಟ್ಟಿದಾರಭ್ಯ ಹದಿನಾರು ವರ್ಷಗಳ ತನಕ ಆಯಾ ವಯಸ್ಸಿಗೆ ಅನುಗುಣವಾಗಿ ಬರುವ ರೋಗಗಳ ವರ್ಣನೆ, ಚಿಕಿತ್ಸಾಕ್ರಮ, ರೋಗಗಳು ಬರದಂತೆ ನೋಡಿಕೊಳ್ಳುವ ವಿಧಾನಗಳು, ವಯೋನುಗುಣವಾಗಿ ಕೊಡಬೇಕಾದ ಆಹಾರ, ಸ್ತನ್ಯಪರೀಕ್ಷೆ, ದುಷ್ಟಸ್ತನ್ಯ ಶುದ್ಧಮಾಡುವ ಔಷಧಿಗಳು, ಸ್ತನ್ಯಾಭಾವದಲ್ಲಿ ಮಾಡಬೇಕಾದ ಇತರ ಏರ್ಪಾಟುಗಳು, ಧಾತ್ರಿ ಲಕ್ಷಣ, ಮಕ್ಕಳಿಗೆ ಬರುವ ಗ್ರಹಗಳ ಪೀಡೆಗಳ ವಿವರಣೆ–ಮುಂತಾದ ವಿಷಯಗಳನ್ನು ತಿಳಿಸುವ ಭಾಗ. ಗ್ರಂಥಗಳಲ್ಲಿ ಜೀವಿತತಂತ್ರ, ಪಾರ್ವತಕತಂತ್ರ, ಬಂಧಕತಂತ್ರ, ಬಾಲಗ್ರಹತಂತ್ರ ಮೊದಲಾದುವು ಹೇಳಲ್ಪಟ್ಟಿವೆ.

**3 ಗ್ರಹಚಿಕಿತ್ಸಾ :** ಇದಕ್ಕೆ ಮಾನಸರೋಗವಿಜ್ಞಾನ, ಭೂತವಿದ್ಯಾ ಎಂಬ ಹೆಸರುಗಳುಂಟು. ಮನಸ್ಸಿಗೆ ರಜೋಗುಣ ಮತ್ತು ತಮೋಗುಣಗಳೆಂಬ ಎರಡು ದೋಷಗಳುಂಟು. ಸತ್ತ್ವಗುಣವೇ ಮನಸ್ಸಿನ ಆರೋಗ್ಯ ಸಾಧನೆ. ರಜೋಗುಣ ತಮೋಗುಣಗಳಿಂದ ಮನಸ್ಸು ಆವೃತವಾದರೆ ಉನ್ಮಾದ (ಹುಚ್ಚು), ಅಪಸ್ಮಾರ (ಮೂರ್ಛೆ), ಅತತ್ತ್ವಾಭಿನಿವೇಶ (ಹಿಸ್ಟೀರಿಯ)–ಮುಂತಾದ ರೋಗಗಳು ಬರುತ್ತವೆ. ಈ ರೋಗಗಳಲ್ಲದೆ, ಪಿಶಾಚಾದಿ ಅನೇಕ ದೇವ, ರಾಕ್ಷಸ ಮತ್ತು ಪಿತೃಗ್ರಹಗಳೂ ಮನಸ್ಸನ್ನು ಆವರಿಸುವುದುಂಟು. ಈ ರೋಗಗಳ ಕಾರಣ, ಲಕ್ಷಣ, ಚಿಕಿತ್ಸಾಕ್ರಮಗಳನ್ನು ವಿವರಿಸುವ ಮತ್ತು ಯಂತ್ರ ಮಂತ್ರಾದಿ ಪ್ರಯೋಗಗಳನ್ನು ಹೇಳುವ ಶಾಸ್ತ್ರವಿದು. ಈ ಭಾಗವನ್ನು ವಿವರಿಸುವ ಗ್ರಂಥಗಳನೇಕವಿವೆ. ಅವುಗಳಲ್ಲಿ ಅಥರ್ವಣ ತಂತ್ರ ಮುಖ್ಯವಾದದ್ದು.

**4 ಊರ್ಧ್ವಾಂಗರೋಗವಿಜ್ಞಾನ :** ತಲೆಯಲ್ಲಿರುವ ಕಣ್ಣು, ಮೂಗು, ಕಿವಿ, ಗಂಟಲು, ಹಲ್ಲು ಮುಂತಾದ ಅವಯವಗಳಿಗೆ ಬರುವ ರೋಗಗಳನ್ನು ವಿವರಿಸುವ ಭಾಗ. ಇದನ್ನು ಶಾಲಾಕ್ಯತಂತ್ರವೆಂದು ಕರೆಯುವುದುಂಟು. ಈ ವಿಭಾಗದಲ್ಲೂ ತಜ್ಞರಾದ ವೈದ್ಯರುಗಳು

ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ ವಿದೇಹಸಂಹಿತಾ, ನಿಮಿತಂತ್ರ, ಶೌಕತಂತ್ರ, ಚಕ್ಷುಷ್ಯತಂತ್ರ, ಕೃಪಾತ್ರೇಯ ತಂತ್ರ–ಮುಂತಾದವು ಮುಖ್ಯವಾಗಿವೆ. ನೇತ್ರರೋಗಗಳಲ್ಲಿ ಬರುವ ಪೊರೆಯ (ಕ್ಯಾಟರ್ಯಾಕ್ಟ್) ವರ್ಣನೆ ಮತ್ತು ಅದನ್ನು ಶಸ್ತ್ರದಿಂದ ತೆಗೆಯುವ ವರ್ಣನೆ ಈಗಲೂ ಆಧುನಿಕರಿಂದಲೂ ಸ್ಮರಿಸಲ್ಪಡುತ್ತಿದೆ. ಸುಶ್ರುತನೇ ಮೊದಲ ಶಸ್ತ್ರವೈದ್ಯ ನೆಂಬುದು ನಿರ್ವಿವಾದ. ಕತ್ತರಿಸಲ್ಪಟ್ಟ ಮೂಗು ಮತ್ತು ಕಿವಿಗಳ ಮರುಜೋಡಣೆ (ಪ್ಲಾಸ್ಟಿಕ್ ಸರ್ಜರಿ) ಮುಂತಾದ ವಿಶೇಷ ಶಸ್ತ್ರಕರ್ಮಗಳ ವರ್ಣನೆ ಮತ್ತು ಶಸ್ತ್ರಕರ್ಮ ವಿಧಾನಗಳು ಬಹು ವಿಸ್ತಾರವಾಗಿ ವರ್ಣಿತವಾಗಿರುವುದಲ್ಲದೆ ತೊಂಬತ್ತಾರು ವಿಧ ನೇತ್ರರೋಗಗಳ ಕಾರಣ, ಲಕ್ಷಣ, ಚಿಕಿತ್ಸೆ ಮತ್ತು ಅವು ಬಾರದಂತೆ ತಡೆಯುವ ಕ್ರಮಗಳೂ ವಿವರಿಸಲ್ಪಟ್ಟಿವೆ. ಜನಗಳಿಗಿರುವ ಮಹತ್ತರವಾದ ಭಾವನೆ ಆಯುರ್ವೇದ ಪಂಡಿತರು ಕಣ್ಣು, ಕಿವಿ ಮುಂತಾದ ಸೂಕ್ಷ್ಮೇಂದ್ರಿಯಗಳ ಚಿಕಿತ್ಸೆ ಮಾಡಲಾರರೆಂಬುದು. ಶಾಸ್ತ್ರ ತಿಳಿದಿರುವ ವೈದ್ಯ ಈ ಅವಯವಗಳ ವಿಷಯದಲ್ಲಿ ಆಧುನಿಕ ನೇತ್ರವೈದ್ಯರುಗಳಷ್ಟೇ ಉತ್ತಮ ತರದ ಚಿಕಿತ್ಸೆಯನ್ನು ಮಾಡಬಲ್ಲ.

**5 ಶಲ್ಯತಂತ್ರ :** ಈ ಭಾಗವನ್ನು ಶಸ್ತ್ರಚಿಕಿತ್ಸೆಯೆಂದೂ ಕರೆಯುವರು. ಈ ಭಾಗವೂ ಆಯುರ್ವೇದದಲ್ಲಿ ಸಂಪೂರ್ಣವಾಗಿ ವಿವರಿಸಲ್ಪಟ್ಟಿದೆ. ತಲೆಬುರುಡೆಯೊಳಗೆ ಕಪ್ಪೆಯ ಆಕಾರದಲ್ಲಿದ್ದ ಗ್ರಂಥಿಯನ್ನು ವೈದ್ಯರು ಶಸ್ತ್ರದಿಂದ ತೆಗೆದು ರೋಗಿಯನ್ನು ಬದುಕಿಸಿದ ವಿಷಯ ಭೋಜಪ್ರಬಂಧದಿಂದ ತಿಳಿಯುತ್ತದೆ. ಕಠಿಣತರವಾದ ಅವಯವಗಳ ಜೋಡಣೆ ಮಾಡಿದ ಅಂಶಗಳು ವೇದದ ಕಾಲದಿಂದಲೂ ಇತ್ತೆಂದು, ಇಂದ್ರನ ವೃಷಣಗಳು ಕೆಟ್ಟಿರಲಾಗಿ ಅಜ ವೃಷಣವನ್ನು ಇಂದ್ರನಿಗೆ ಜೋಡಿಸಿದರೆಂಬುದೂ ಉಲ್ಲೇಖಿತವಾಗಿದೆ. ಶಲ್ಯತಂತ್ರ ಪ್ರಧಾನವಾದ ಗ್ರಂಥಗಳಲ್ಲಿ ಸುಶ್ರುತ ಸಂಹಿತೆ, ಪೌಷ್ಕಲಾವತಸಂಹಿತೆ, ವತರಣ ತಂತ್ರ, ಭೋಜನ ಸಂಹಿತಾ, ಕರವೀರ್ಯ ತಂತ್ರ, ಕಪಿಲತಂತ್ರ, ಗೌತಮತಂತ್ರ ಮುಂತಾದುವು ಪ್ರಸಿದ್ಧವಾಗಿವೆ.

ಶಸ್ತ್ರಶಾಸ್ತ್ರಕ್ಕೆ ಅಂಗವಾದ ಶಾರೀರಿಕ ರಚನಾ ವಿಜ್ಞಾನದಲ್ಲಿ ಗರ್ಭಸ್ಥಭ್ರೂಣದ ಬೆಳವಣಿಗೆ ಯಿಂದ ಹಿಡಿದು ಸಕಲವೂ ವರ್ಣಿತವಾಗಿದ್ದು, ಮೃತದೇಹವನ್ನು ಛೇದಿಸಿ, ಸಿರಾ, ಸ್ನಾಯು, ಧಮನಿ, ಅಸ್ಥಿ, ಸಂಧಿ ಮುಂತಾದುವುಗಳ ಜ್ಞಾನವನ್ನು ಪಡೆಯುವ ಪೂರ್ಣ ವರ್ಣನೆಯಿದೆ (ನೋಡಿ– ಅಂಗರಚನಾಶಾಸ್ತ್ರ ಆಯುರ್ವೇದದಲ್ಲಿ).

ಶಸ್ತ್ರಕರ್ಮದಲ್ಲಿ ಪೂರ್ವಕರ್ಮ, ಪ್ರಧಾನಕರ್ಮ, ಪಶ್ಚಾತ್‍ಕರ್ಮಗಳನ್ನು ಪ್ರತಿಯೊಂದ ರಲ್ಲೂ ವಿವರಿಸಿದ್ದಾರೆ. ಸದ್ಯೋವ್ರಣ (ಆ್ಯಕ್ಸಿಡೆಂಟಲ್ ವೂಂಡ್ಸ್), ಅಸ್ಥಿಭಗ್ನ (ಫ್ರ್ಯಾಕ್ಚರ್), ಸಂಧಿಭಗ್ನ (ಡಿಸ್‍ಲೊಕೇಷನ್) ಮುಂತಾದುವುಗಳೂ ಪ್ರಮುಖ ಸ್ಥಾನವನ್ನು ಪಡೆದಿವೆ. ಆಧುನಿಕರಲ್ಲಿ ಇನ್ನೂ ಅಸಾಧ್ಯವೆನಿಸಿರುವ ವ್ರಣದ ಉಪದ್ರವಗಳಿಂದ, ಬಣ್ಣ ಬದಲಾವಣೆ ಮತ್ತು ರೋಮ ಬೆಳೆಯದಿರುವಿಕೆ ಮುಂತಾದುವುಗಳಿಗೂ ಉತ್ತಮ ಔಷಧಗಳು ಹೇಳಲ್ಪಟ್ಟಿವೆ. ಈ ಚಿಕಿತ್ಸೆಗಳಿಗೆ ರೋಮಸಂಜನನ ಚರ್ಮಸವರ್ಣೀಕರಣ ಚಿಕಿತ್ಸೆಗಳೆಂದು ಹೆಸರು.

ಈ ಭಾಗದಲ್ಲಿಯೇ ಪ್ರಸೂತಿ ತಂತ್ರವೂ ಸೇರಿಸಲ್ಪಟ್ಟಿದೆ. ಗರ್ಭಿಣಿಗೆ ಮತ್ತು ಗರ್ಭಕ್ಕೆ ಬರುವ ವಿಪತ್ತುಗಳೂ ಪ್ರಸವಕಾಲದಲ್ಲಿ ಆಗುವ ತೊಂದರೆಗಳ ಚಿಕಿತ್ಸೆ, ಶಸ್ತ್ರದಿಂದ ಗರ್ಭಸ್ಥಶಿಶುವನ್ನು ಕತ್ತರಿಸಿ ತೆಗೆದು ತಾಯಿಯನ್ನು ಬದುಕಿಸುವ ರೀತಿ ಮುಂತಾದುವುಗಳೆಲ್ಲ ವಿವರವಾಗಿ ಬಂದಿದೆ. ಹೊಟ್ಟೆಯನ್ನು ಸೀಳಿ, ಮಗುವನ್ನು ಹೊರತೆಗೆದು ಬದುಕಿಸುವ ಶಸ್ತ್ರಕರ್ಮ ಪ್ರಾಯಃ ಸುಶ್ರುತಸಂಹಿತೆಯಲ್ಲಿಯೇ ಮೊದಲು ವರ್ಣಿತವಾಗಿದೆ.

6 ವಿಷತಂತ್ರ (ಟಾಕ್ಸಿಕಾಲಜಿ): ಈ ಭಾಗದಲ್ಲಿ ವಿಷೋತ್ಪತ್ತಿ, ಸ್ಥಾವರ–ಜಂಗಮ ವಿಷಭೇದಗಳು, ವಿಷ ಸೇವಿಸಿದರೆ ಆಗುವ ಲಕ್ಷಣ, ಮಾಡಬೇಕಾದ ಚಿಕಿತ್ಸೆ, ಇವುಗಳಲ್ಲದೆ, ವಿಷವನ್ನು ಕೊಟ್ಟವನನ್ನು ಕಂಡುಹಿಡಿಯುವ ವಿಧಾನಗಳೂ ವರ್ಣಿತವಾಗಿವೆ. ಈ ಭಾಗವನ್ನು ಬೋಧಿಸುವ ಗ್ರಂಥಗಳಲ್ಲಿ ಕಾಶ್ಯಪಸಂಹಿತಾ ಮತ್ತು ಶೌನಕಸಂಹಿತಾ ಮುಖ್ಯವಾದುವು. ಇದನ್ನು ಅಗ್ಗದ ತಂತ್ರವೆಂದೂ ಕರೆಯುವರು.

**7 ರಸಾಯನ ಚಿಕಿತ್ಸೆ :** ಇದಕ್ಕೆ ಕಾಯಕಲ್ಪವೆಂದೂ ಹೆಸರು. ಆಯುಸ್ಸನ್ನು ಹೆಚ್ಚಿಸಿ, ಮುಪ್ಪನ್ನು ಹೋಗಲಾಡಿಸಿ, ಬುದ್ಧಿಶಕ್ತಿ, ಜ್ಞಾಪಕಶಕ್ತಿ, ಮೇಧಾಶಕ್ತಿಗಳನ್ನು ಕೊಟ್ಟು ಶಾರೀರಿಕ ಬಲವನ್ನು ಕುಗ್ಗಿಸದೆ ಸದಾ ಯೌವನ ಸ್ಥಿತಿಯಲ್ಲಿಯೇ ಇರಲು ಆಗಾಗ್ಗೆ ಮಾಡಿಕೊಳ್ಳುವ ಚಿಕಿತ್ಸಾವಿಧಾನ. ಇದರಲ್ಲಿ–ಕುಟೀ ಪ್ರವೇಶ, ಕುಟೀರದಲ್ಲಿದ್ದುಕೊಂಡು ಸೇವಿಸುವ ವಿಧ; ಮತ್ತು ವಾತಾತಪಗಳಲ್ಲಿಯೇ ಸಂಚರಿಸುತ್ತ ಸೇವಿಸುವ ವಿಧಗಳು ವರ್ಣಿತವಾಗಿವೆ. ರಸಾಯನ ಅನೇಕ ನಿಯಮಗಳಿಂದ ಕೂಡಿದ ಆಹಾರ, ವಿಹಾರ ಮತ್ತು ಔಷಧಗಳ ಸೇವನಾಕ್ರಮ. ಈ ಭಾಗದ ಗ್ರಂಥಗಳಲ್ಲಿ ವ್ಯಾಡಿತಂತ್ರ, ಮಾಂಡವ್ಯತಂತ್ರ, ನಾಗಾರ್ಜುನತಂತ್ರ ಮೊದಲಾದುವು ಹೇಳಲ್ಪಟ್ಟಿವೆ.

**8 ವಾಜೀಕರಣ :** ಸತ್ಸಂತಾನವನ್ನು ಪಡೆಯಲು ದಂಪತಿಗಳು ಅನುಸರಿಸಬೇಕಾದ ವಿಧಿ, ಸೇವಿಸಬೇಕಾದ ಔಷಧಿಗಳನ್ನು ವರ್ಣಿಸುವ ಭಾಗ. ಶುಕ್ರಧಾತುವಿನ ದೋಷಗಳನ್ನು ಹೋಗಲಾಡಿಸಿ, ಶುಕ್ರವೃದ್ಧಿಮಾಡಿ ಪ್ರಹರ್ಷಣವಾಗಿ ಕೊಡುವ ವಿಧಾನವನ್ನೂ ತಿಳಿಸುತ್ತದೆ. ಕುಚುಮಾರುತಂತ್ರ, ಶಾಲಿಹೋತ್ರಸಂಹಿತಾ, ಗೌತಮ ಸಂಹಿತಾ ಮುಂತಾದ ಗ್ರಂಥಗಳು ವಾಜೀಕರಣ ಭಾಗದಲ್ಲಿ ಹೇಳಲ್ಪಟ್ಟಿವೆ.

ಈ ಎಂಟು ಭಾಗಗಳಿಗೆ ಸಹಕಾರಿಯಾಗಿರುವ ಪಂಚಭೂತಗಳು, ತ್ರಿದೋಷಗಳು, ಸಪ್ತಧಾತುಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಮನಸ್ಸು, ಆತ್ಮ, ಇವುಗಳ ವಿವರಣೆ ಮತ್ತು ದ್ರವ್ಯಗುಣ ವಿಜ್ಞಾನ, ರೋಗಿ ಪರೀಕ್ಷಾ ವಿಧಾನ, ರಸಶಾಸ್ತ್ರ, ನಾಡೀಪರೀಕ್ಷಾ, ಮಲಮೂತ್ರಾದಿಗಳ ಪರೀಕ್ಷಾಕ್ರಮಗಳೆಲ್ಲವೂ ಆಯುರ್ವೇದ ಶಾಸ್ತ್ರಕ್ಕೆ ಸೇರಿವೆ. (ಎನ್.ಎಲ್.ಎನ್.)

**ಆಯ್ಕೆ :** ವ್ಯಕ್ತಿ ತನ್ನ ಪುರೋಭಿವೃದ್ಧಿಯ ದೃಷ್ಟಿಯಿಂದ ಶಾಲಾ ಕಾಲೇಜುಗಳಲ್ಲಿ ಪಠ್ಯ ಮತ್ತು ಪಠ್ಯೇತರ ವಿಷಯಗಳಲ್ಲಿ ತನಗೊಗ್ಗಿದುವನ್ನು ಆರಿಸಿಕೊಳ್ಳುವುದಕ್ಕೂ ಸರ್ಕಾರ ಮತ್ತು ಇತರ ಸಂಸ್ಥೆಗಳು ಯುಕ್ತ ಅಭ್ಯರ್ಥಿಗಳನ್ನು ಅವರವರ ಯೋಗ್ಯತೆಯ ಮೇಲೆ ಆರಿಸಿಕೊಳ್ಳುವುದಕ್ಕೂ ಈ ಹೆಸರಿದೆ. ಮೊದಲನೆಯ ಅಂಶವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಎರಡನೆಯ ಅಂಶಕ್ಕೆ **ನೋಡಿ– ಅರ್ಹತೆಗಳು**.

ತೀರ ಎಳೆಯ ಮಕ್ಕಳಿಗೆ ಆಯ್ಕೆಮಾಡುವ ವಿವೇಕವಿರುವುದಿಲ್ಲ. ಆದ್ದರಿಂದ ಅವುಗಳಿಗೆ ಎಂಥ ಶಿಕ್ಷಣ ಕೊಡಬೇಕೆಂಬುದನ್ನು ತಜ್ಞರು ತಾವೇ ನಿರ್ಧರಿಸಿರುತ್ತಾರಂತೆ. ಹಾಗೆ ನಿರ್ಧರಿಸುವಾಗ ಮಕ್ಕಳ ಅಭಿರುಚಿಗಳನ್ನೂ ಅವರ ವ್ಯಕ್ತಿತ್ವದ ಪೂರ್ಣ ವಿಕಾಸವನ್ನೂ ಗಮನದಲ್ಲಿಟ್ಟುಕೊಂಡು, ಎಂಥ ವ್ಯಕ್ತಿಗೇ ಆಗಲಿ ಅಗತ್ಯವಾದುದು ಎಷ್ಟೋ ಅಷ್ಟನ್ನು ಪಾಠದಲ್ಲಿ ಕಡ್ಡಾಯವಾಗಿ ಸೇರಿಸುವುದು ಉತ್ತಮ. ಆಯ್ಕೆಯ ವಿಷಯದಲ್ಲಿ ಮಕ್ಕಳ ಜವಾಬ್ದಾರಿ ಏನೂ ಇಲ್ಲವೆಂದು ಹೇಳುವುದು ಸರಿಯಲ್ಲ. ಏಕೆಂದರೆ ಅವು ಅನೇಕ ವೇಳೆ ತಮ್ಮ ಗುಣಲಕ್ಷಣಗಳಿಗೆ ಯೋಗ್ಯವಾದ, ತಮ್ಮ ಶಕ್ತಿ ಸಾಮರ್ಥ್ಯಗಳಿಗೆ ತಕ್ಕ ವಿಷಯಗಳನ್ನೇ ಸಹಜವಾಗಿ ಆರಿಸಿಕೊಳ್ಳುತ್ತವೆ. ತಜ್ಞರ ಗಮನ ಈ ಕಡೆ ಇರಬೇಕಾದುದು ಅನಿವಾರ್ಯ. ಮಗು ಬೆಳೆದು ದೊಡ್ಡವನಾಗುತ್ತಿದ್ದಂತೆ ಅವನ ಅಭಿರುಚಿಗಳು (**ನೋಡಿ**) ಸ್ಥಿರವಾಗತೊಡಗು ತ್ತವೆ. ಲಲಿತಕಲೆಯ ಕಡೆಗೂ ಅವನು ವಾಲುತ್ತಾನೆ. ಆಗ ಅವನ ಮೇಲೆ ಬೇಡದ ವಿಷಯಗಳನ್ನು ಹೇರಬಾರದು. ಅಭಿರುಚಿಯಿಲ್ಲದ ಮಾತ್ರಕ್ಕೇ ಆತ ಮೂಲಭೂತವಾದ, ಸಾಮಾನ್ಯವಾದ ವಿಷಯಗಳ ಕಡೆ ಪೂರ್ಣ ಅನಾಸಕ್ತನಾಗದಂತೆಯೂ ನೋಡಿಕೊಳ್ಳಬೇಕು. ಇದನ್ನು ನಿರ್ಣಯಿಸಲು ವಿದ್ಯಾರ್ಥಿ ನಡೆಸಿದ ಅಭ್ಯಾಸಗಳು (**ನೋಡಿ**) ಸೂಚಿಗಳಾಗಬೇಕು. ಅವನ ಅಭಿವೃದ್ಧಿಯ ಬಗ್ಗೆ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಇಡಬೇಕಾದುದು ಶಾಲೆಯ ಕರ್ತವ್ಯ. ಶಿಕ್ಷಣದಲ್ಲಿ ಪಕ್ಷಪಾತವಿರಬಾರದು. ಯಾವ ವಿದ್ಯಾರ್ಥಿ ಯಾವ ಭಾಗವನ್ನು ವ್ಯಾಸಂಗಮಾಡಲು ಬಯಸುತ್ತಾನೋ, ಅದನ್ನು ಕಲಿಯಲು ಅವನಿಗೆ ಅವಕಾಶವಿರಬೇಕು ಎಂದು ಹೇಳುವುದು ಈ ದೃಷ್ಟಿಯಿಂದಲೇ. (**ನೋಡಿ– ಅವಕಾಶಸಮಾನತೆ, ಶಿಕ್ಷಣದಲ್ಲಿ**) ಈಗಂತೂ ಪ್ರತಿ ಪ್ರೌಢಶಾಲೆಯಲ್ಲೂ ವಿದ್ಯಾರ್ಥಿಗಳಿಗೆ ಈ ಬಗ್ಗೆ ಮಾರ್ಗನಿರ್ದೇಶ ಮಾಡಲು ಯುಕ್ತವ್ಯವಸ್ಥೆ ಮಾಡಲಾಗುತ್ತಿದೆ. ಹೀಗೆ ಮಾಡುವುದರಿಂದ ವಿದ್ಯಾರ್ಥಿಗೆ ವ್ಯಾಸಂಗದಲ್ಲಿನ ಉತ್ಸಾಹ ಹೆಚ್ಚುತ್ತದೆ. ಅನುತ್ತೀರ್ಣರಾಗುವವರ ಸಂಖ್ಯೆ ತಗ್ಗುತ್ತದೆ. ಉತ್ತಮ ವಿದ್ಯಾಭ್ಯಾಸದ ಸತ್ಫಲ ಹೆಚ್ಚುತ್ತದೆ. ವ್ಯಕ್ತಿ ತನಗೂ, ದೇಶಕ್ಕೂ ಉಪಯುಕ್ತನಾಗಿ ಬಾಳುವಂತಾಗುತ್ತದೆ. (ಎಂ.ಜಿ.ಪಿ.)

**ಆಯ್ಕೆ ಹಕ್ಕು :** ಬಂಡವಾಳ ಪತ್ರಗಳನ್ನು (ಷೇರ್ಸ್) ನಿರ್ದಿಷ್ಟ ಅವಧಿಯಲ್ಲಿ ಗೊತ್ತಾದ ಬೆಲೆಗೆ ಕೊಳ್ಳುವ, ಮಾರುವ ಹಕ್ಕು. ಷೇರು ಪೇಟೆಗಳಲ್ಲಿ (ಇತರ ಪದಾರ್ಥಗಳ ಪೇಟೆಗಳಲ್ಲೂ) ಕೆಲವರು ಈ ಬಗೆಯ ವಿಶಿಷ್ಟವಾದ ವ್ಯಾಪಾರವನ್ನು ಮಾಡಲು ಅವಕಾಶ ಕಲ್ಪಿಸಿಕೊಂಡು ಬೆಲೆಗಳು ಏರಲು ಅಥವಾ ಇಳಿಯಲು ದಾರಿ ಮಾಡುತ್ತಾರೆ. ಇದಕ್ಕೆ ಸಟ್ಟಾ ವ್ಯಾಪಾರವೆಂದು ಹೆಸರು. ತೇಜಿಮಂದಿಗಳು (ಬುಲ್ಸ್ ಅಂಡ್ ಬೇರ್ಸ್) ಈ ಸಟ್ಟಾ ವ್ಯಾಪಾರವನ್ನು ನಡೆಸುತ್ತಾರೆ. ಈ ಬಗೆಯ ಸಾಹಸವನ್ನು ಮಾಡುವುದರಿಂದ ಒದಗಬಹುದಾದ ನಷ್ಟವನ್ನು ಕಡಿಮೆ ಮಾಡುವುದು ಸಾಧ್ಯವಾಗುವುದರೊಂದಿಗೆ ಬುದ್ಧಿಗೊಂದು ಆಹಾರ, ಹೃದಯಕ್ಕೆ ಒಂದು ಬಗೆಯ ಸಂತೋಷ ಲಭಿಸುತ್ತದೆ. ಇದೊಂದು ರೀತಿಯ ಜೂಜು ಆಟ. ಈ ವ್ಯಾಪಾರ ಮೂರು ತೆರನಾಗಿರುತ್ತದೆ: ಮಾರಾಟದ ಆಯ್ಕೆ ಹಕ್ಕು, ಕೊಳ್ಳುವ ಆಯ್ಕೆ ಹಕ್ಕು, ಕೊಳ್ಳುವ ಅಥವಾ ಮಾರುವ ಆಯ್ಕೆ ಹಕ್ಕು (ಎರಡೂ ಆಯ್ಕೆಗಳ ಹಕ್ಕು).

ಮಾರಾಟ ಆಯ್ಕೆ ಹಕ್ಕು ಹೆಸರೇ ಸೂಚಿಸುವಂತೆ ಒಂದು ನಿಗದಿಯಾದ ದಿನದೊಳಗೆ ನಿರ್ದಿಷ್ಟವಾದ ಬೆಲೆಗೆ ಇಂತಿಷ್ಟು ಷೇರುಗಳನ್ನು ಮಾರುವ ಹಕ್ಕನ್ನು ಪಡೆಯುವುದು. ಎರಡನೆಯದು ಕೊಳ್ಳುವ ಆಯ್ಕೆ ಹಕ್ಕನ್ನು ಪಡೆದಿರುವಾತ ನಿರ್ದಿಷ್ಟವಾದ ದಿನದೊಳಗೆ ನಿಗದಿಯಾದ ಬೆಲೆಗೆ ಇಂತಿಷ್ಟು ಎಂದು ಷೇರುಗಳನ್ನು ಕೊಳ್ಳುವ ಹಕ್ಕನ್ನು ಪಡೆದಿರುತ್ತಾನೆ. ಮೂರನೆಯದರಲ್ಲಿ ನಿರ್ದಿಷ್ಟವಾದ ಸಂಖ್ಯೆಯ ಷೇರುಗಳನ್ನು ಗೊತ್ತಾದ ದಿನದೊಳಗೆ, ನಿಯಮಿತವಾದ ಬೆಲೆಗೆ ಮಾರುವ ಅಥವಾ ಕೊಳ್ಳುವ ಹಕ್ಕನ್ನು ಪಡೆದಿರುತ್ತಾನೆ. ಈ ಹಕ್ಕನ್ನು ಪಡೆಯಲು ಷೇರಿಗೆ ಇಷ್ಟು ಎಂದು ಒಂದು ಗೊತ್ತಾದ ಶುಲ್ಕವನ್ನು ಸಹ ಕೊಡಬೇಕಾಗುತ್ತದೆ. ಷೇರುಗಳ ಬೆಲೆ ಇಳಿದುಹೋಗುವುದು ಎಂದು ಅಂದಾಜು ಮಾಡಿದಾಗ ಮಾರುವ ಆಯ್ಕೆ ಹಕ್ಕಿನ ಒಪ್ಪಂದವನ್ನು ಷೇರುಗಳ ಬೆಲೆಯಲ್ಲಿ ತುಂಬ ಏರುಪೇರು ಆಗುತ್ತದೆ ಎಂಬ ಅಂಜಿಕೆ ಇರುವಾಗ ಈ ಮೂರನೆಯ ಆಯ್ಕೆಯ ಹಕ್ಕಿನ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು. ಇದು ಕೇವಲ ಜೂಜಿನಂತೆ ಅದೃಷ್ಟವನ್ನು ನಂಬಿ ಮಾಡುವ ಕೆಲಸವಾಗುತ್ತದೆ.

ಆಯ್ಕೆ ಹಕ್ಕನ್ನು ಚಲಾಯಿಸುವ ಕಾಲ ಬಂದಾಗ ಅದನ್ನು ಕೊಳ್ಳುವವರು ಮೊದಲೇ ಹಾಗೆಂದು ಘೋಷಿಸಬೇಕು. ಅಥವಾ ಹಕ್ಕನ್ನು ಚಲಾಯಿಸುವುದಿಲ್ಲವೆಂದಾದರೂ ಪ್ರಕಟಿಸಬೇಕು. ಕೊಳ್ಳುವ ಆಯ್ಕೆ ಹಕ್ಕನ್ನು ಘೋಷಿಸಿದರೆ, ಹಣವನ್ನು ಪಾವತಿ ಮಾಡಿ ಷೇರುಗಳನ್ನು ಪಡೆಯುವುದಾಗಬೇಕು. ಮಾರುವ ಆಯ್ಕೆ ಹಕ್ಕನ್ನು ಚಲಾಯಿಸುತ್ತೇನೆಂದು ಘೋಷಿಸಿದರೆ, ಷೇರುಗಳನ್ನು ಬಿಟ್ಟುಕೊಟ್ಟು ಹಣವನ್ನು ಪಡೆಯಬೇಕು.

ಭಾರತ ದೇಶದಲ್ಲಿ ಈಗ ಈ ಆಯ್ಕೆ ಹಕ್ಕಿನ ವ್ಯಾಪಾರವನ್ನು ಕಾನೂನಿನ ಮೂಲಕ ನಿಷೇಧಿಸಲಾಗಿದೆ. ಈ ವ್ಯಾಪಾರದಲ್ಲಿ ತೊಡಗುವವರನ್ನು ಶಿಕ್ಷಿಸುವ ಹಕ್ಕನ್ನೂ ನ್ಯಾಯಾಲಯಗಳು ಹೊಂದಿವೆ. (ಕೆ.ಎಂ.ಕೆ.)

**ಆಯ್ದಕ್ಕಿ ಮಾರಯ್ಯ :** 12ನೆಯ ಶತಮಾನದಲ್ಲಿ ಬಸವಣ್ಣನವರ ಸಮಕಾಲೀನನಾಗಿ ಕಲ್ಯಾಣದಲ್ಲಿದ್ದ ಒಬ್ಬ ಶರಣ. ಅನುಭವ ಮಂಟಪದ ಅನುಭಾವಿಗಳಲ್ಲಿ ಒಬ್ಬ. ಬಸವಣ್ಣನವರ ಮಹಾಮನೆಯ ಮುಂದೆ ಚೆಲ್ಲಿದ ಅಕ್ಕಿಯನ್ನು ಆಯುವುದು ಆತನ ಕಾಯಕ. ಆದುದರಿಂದಲೇ ಆಯ್ದಕ್ಕಿ ಮಾರಯ್ಯನೆಂದು ಪ್ರಸಿದ್ಧನಾಗಿದ್ದಾನೆ. ಒಮ್ಮೆ ಅನುಭವ ಮಂಟಪದಲ್ಲಿ ಕಾಯಕವನ್ನು ಕುರಿತು ಆತ ಎತ್ತಿದ ಸಂದೇಹವನ್ನೂ ಅದಕ್ಕೆ ಅಲ್ಲಮಪ್ರಭು ಕೊಟ್ಟ ಉತ್ತರವನ್ನೂ ಶೂನ್ಯ ಸಂಪಾದನೆ ಬಹಳ ಅರ್ಥವತ್ತಾಗಿ ಚಿತ್ರಿಸಿದೆ: ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು; ಲಿಂಗಪೂಜೆಯಾದರೂ ಮರೆಯಬೇಕು; ಜಂಗಮ ಮುಂದಿದ್ದರೂ ಹಂಗು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು. ಅವನ ಈ ಮಾತು ಕಾಯಕನಿಷ್ಠೆಯನ್ನು ತೋರಿಸುತ್ತದೆ. ನಿಜ. ಆದರೆ ಅಲ್ಲಿ ಇನ್ನೊಂದು ಧ್ವನಿಯಿದೆ. ಕಾಯಕವೇ ಕೈಲಾಸವಾದುದರಿಂದ ಗುರು ಲಿಂಗ ಜಂಗಮ ಈ ತ್ರಿವಿಧದಾಸೋಹದ ಹಂಗಾದರೂ ಏತಕ್ಕೆ ಎಂಬ ಪ್ರಶ್ನೆಗೆ ಅಲ್ಲಮ ಸರಿಯಾದ ಉತ್ತರ ಕೊಡುತ್ತಾನೆ. ಹೊಟ್ಟೆಪಾಡಿನ ಉದ್ಯೋಗ ಕಾಯಕವಾಗಬೇಕಾದರೆ ತ್ರಿವಿಧದಾಸೋಹದಿಂದ ಮಾತ್ರ ಸಾಧ್ಯ. ಮಾಡುವ ಮಾಟದಿಂದವೆ ಬೇರೊಂದನರಿಯಬೇಕು; ಅರಿವಿಂಗೆ ನೆಮ್ಮುಗೆ ಒಡಗೂಡಬೇಕು. ಇದಕ್ಕೆ ತ್ರಿವಿಧದಾಸೋಹವೇ ಸಾಧನವೆಂದು ಅಲ್ಲಮಪ್ರಭು ಕಾಯಕದ ರಹಸ್ಯವನ್ನು ಬಿತ್ತರಿಸುವುದಕ್ಕೆ ಈತನೆತ್ತಿದ ಸಂದೇಹ ನೆಪಮಾತ್ರವಾಗುತ್ತದೆ. ವಾಸ್ತವವಾಗಿ ಕಾಯಕದ ಪೂರ್ಣಸ್ವರೂಪವನ್ನು ನಿತ್ಯಜೀವನದ ಆಚರಣೆಯಲ್ಲಿ ಸಾಧಿಸಿ ತೋರಿಸುತ್ತಿದ್ದವ ಮಾರಯ್ಯ. ಆತನ ಪತ್ನಿ ಲಕ್ಕಮ್ಮನಂತೂ ಕಾಯಕನಿಷ್ಠೆಯೇ ಮೈವೆತ್ತ ಮೂರ್ತಿ. ಒಮ್ಮೆ ಮಾರಯ್ಯ ಅಗತ್ಯವಾದುದಕ್ಕಿಂತ ಹೆಚ್ಚಿನ ಅಕ್ಕಿಯನ್ನು ಆಯ್ದು ತಂದಾಗ ಈ ಅಕ್ಕಿಯ ಆಶೆ ನಿಮಗೇಕೆ, ಈಶ್ವರನೊಪ್ಪ ಎಂದು ಹೆಚ್ಚಾದ ಅಕ್ಕಿಯನ್ನು ಮತ್ತೆ ಹಿಂದಕ್ಕೆ ಸುರಿಸಿದ ದಿಟ್ಟತನ ಆಕೆಯದು. ಅಂದಂದಿನ ಕಾಯಕವನ್ನು ಅಂದಂದು ಮಾಡಿ ಶುದ್ಧರಾಗಬೇಕು ಎಂಬ ನಿಸ್ಪೃಹ ನಿಷ್ಠೆಯಿಂದ ತಮ್ಮ ಸಾಧನೆಯ ಫಲವನ್ನು ಲೋಕಕ್ಕೆ ವಿನಿಯೋಗಿಸಿದ ಈ ದಂಪತಿಗಳು ವಚನಕಾರರೂ ಹೌದು. ಅಮರೇಶ್ವರ ಲಿಂಗ ಎಂಬ ಅಂಕಿತದಿಂದ ಮಾರಯ್ಯ ವಚನಗಳನ್ನು ಬರೆದು ಶರಣರಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದ್ದಾನೆ. (ಎಚ್.ಟಿ.)

**ಆಯ್ಲರ್, ಲಿಯೊನಾರ್ಡ್ :** 1707–1783. ಸುಪ್ರಸಿದ್ಧ ಗಣಿತ ವಿದ್ವಾಂಸ. ಜನನ ಸ್ವಿಟ್ಜರ್‌ಲೆಂಡಿನ ಬಾಸೆಲ್‌ನಲ್ಲಿ. ಮರಣ ರಷ್ಯದೇಶದ ಪೆಟ್ರೊಗ್ರೇಡ್‌ನಲ್ಲಿ. ಅವನ ಸಾಧನೆಯ ಒಂದು ಗಮನೀಯ ಅಂಶ ಚಲನ ಮತ್ತು ಸಮಾಸ ಕಲನಶಾಸ್ತ್ರ ಉಪಯೋಗದಿಂದ ದೊರೆಯುವ ಫಲಿತಾಂಶಗಳನ್ನು ಕುರಿತದ್ದು. ಇವು ಆಗತಾನೇ ಪ್ರವರ್ಧಮಾನಕ್ಕೆ ಬರುತ್ತಿದ್ದ ಹೊಸ ಶಾಸ್ತ್ರಗಳು. ಅವನು ಶುದ್ಧ ಗಣಿತದ ಎಲ್ಲ ವಿಭಾಗಗಳನ್ನೂ ಹೆಚ್ಚು ಕಡಿಮೆ ಪರಿಶೋಧಿಸಿ ವಿಸ್ತರಿಸಿದ. ಆಗಲೇ $\sqrt{-1}$ ಕ್ಕೆ i ಎನ್ನುವ ಸಂಕೇತವನ್ನು ನಿರೂಪಿಸಿದ. ಊಹಾಜನ್ಯ ಘಾತಾಂಕಗಳನ್ನು ಪ್ರಯೋಗಿಸುವ ಸಾಹಸ ಮಾಡಿದ. ಇದರ ಅಂಗವಾಗಿ 1748 ರಲ್ಲಿ ಅವನು $e^{ix} = \cos x + i \sin x$ ಎನ್ನುವ ಸುಪ್ರಸಿದ್ಧ ಸೂತ್ರವನ್ನು ಸಂಶೋಧಿಸಿದ. $x=\pi$ ಆದಾಗ ಈ ಸೂತ್ರ $e^{i\pi} = -1$ ಎಂದಾಗುವುದು. ಇದು ಗಣಿತಶಾಸ್ತ್ರದಲ್ಲಿಯೇ ಒಂದು ಅತಿ ಸುಂದರವಾದ ಸೂತ್ರ. ಅದುವರೆಗಿನ ಇದು ಗಣಿತಶಾಸ್ತ್ರಜ್ಞರ ಬರೆವಣಿಗೆಯಲ್ಲಿಯೂ ಆಯ್ಲರ್ ಪರಿಣತಿ ಪಡೆದಿದ್ದ. ಫರ್ಮಾಟ್ ಸೂಚಿಸಿದಂಥ ಸಂಖ್ಯಾಸಿದ್ಧಾಂತದ ಹಲವಾರು ಪ್ರಮೇಯಗಳನ್ನು ಇವನು ಯಶಸ್ವಿಯಾಗಿ ಬಿಡಿಸಿದ. ಒಂದು ಸಂಖ್ಯೆಗೆ ಅದ್ವಿತೀಯವಾದ ಒಂದೇ ಪ್ರತಿಘಾತ (ಲಾಗರಿತಂ) ಇದೆ ಎನ್ನುವ ಹಳೆಯ ಭಾವನೆಯನ್ನು ತ್ಯಜಿಸಿ, ಒಂದು ಸಂಖ್ಯೆಗೆ ಅಸಂಖ್ಯಾತ ಪ್ರತಿಘಾತಗಳಿವೆ ಎಂಬ ಭಾವನೆಯನ್ನು ರೂಪಿಸಿ, ಅದಕ್ಕೆ ಸಮರ್ಪಕವಾದ ವಾದವನ್ನು ಮಂಡಿಸಿದ. ಕೆಲವು ಕಲನ ಸಮೀಕರಣಗಳನ್ನು (ಡಿಫರೆನ್ಷಿಯಲ್ ಈಕ್ವೇಷನ್ಸ್) ಬಿಡಿಸುವಾಗ ಸಹಾಯಕಾರಿಯಾಗುವ ಸಮಾಸಕಾರೀ ಅಪವರ್ತನಗಳನ್ನು (ಇಂಟಿಗ್ರೇಟಿಂಗ್ ಫ್ಯಾಕ್ಟರ್ಸ್) ರೂಪಿಸಿದ. ಭಿನ್ನರಾಶಿಗಳ (ಕಂಟಿನ್ಯೂಡ್ ಫ್ರಾಕ್ಷನ್ಸ್) ಸಿದ್ಧಾಂತವನ್ನು ಮೊದಲು ಬೆಳೆಸಿದವ ಈತನೇ. ಎರಡನೆಯ ಘಾತದ ವಲಯಗಳನ್ನು (ಸೆಕೆಂಡ್ ಡಿಗ್ರಿ ಸರ್ಫೇಸಸ್) ಕ್ರಮಬದ್ಧವಾಗಿ ಅಭ್ಯಾಸ ಮಾಡಿದ. ಪ್ರಥಮ ದರ್ಜೆಯ ನೂತನ ಮತ್ತು ಚಿರಕಾಲ ನಿಲ್ಲುವ ಸಿದ್ಧಾಂತಗಳ ಮಂಡನೆಯಲ್ಲಿ ಆಯ್ಲರ್‌ಗೆ ಸರಿಸಮಾನರಾಗುವವರು ಬಲು ವಿರಳ.

ಚಿಕ್ಕ ವಯಸ್ಸಿನಲ್ಲಿಯೇ ಆತ ಬಾಸೆಲ್ ವಿಶ್ವವಿದ್ಯಾನಿಲಯವನ್ನು ಸೇರಿದ. ಆ ಕೂಡಲೇ ಅವನು ಅಲ್ಲಿದ್ದ ಅಂದಿನ ಸುಪ್ರಸಿದ್ಧ ಗಣಿತಶಾಸ್ತ್ರಜ್ಞ ಜಾನ್ ಬರ್ನೂಲಿಯ ನೆಚ್ಚಿನ ಶಿಷ್ಯನಾದ. ಇಪ್ಪತ್ತನೆಯ ಪ್ರಾಯದಲ್ಲಿ ಅವನು ಪೆಟ್ರೊಗ್ರೇಡ್‌ಗೆ ಹೋಗಿ ಅಲ್ಲಿ 1741 ರವರೆಗೂ ಇದ್ದ. ಆಗ ಬರ್ಲಿನ್ ಅಕೆಡೆಮಿಗೆ ಆಹ್ವಾನಿತನಾದ. ಮುಂದೆ 1766ರಲ್ಲಿ ಅವನು ಪೆಟ್ರೊಗ್ರೇಡ್‌ಗೆ ಮರಳಿದ. ಸಾಯುವವರೆಗೂ ಅಲ್ಲಿಯೇ ಇದ್ದ. ಅತಿಯಾದ ಕೆಲಸದಿಂದ 1735ರಲ್ಲಿ ಅವನ ಒಂದು ಕಣ್ಣು ಕುರುಡಾಯಿತು. 1766ರಲ್ಲಿ ಅವನು ಪೂರ್ಣ ಅಂಧನಾದ. ಆದರೆ ಸಾಯುವವರೆಗೂ ಅವನು ತನ್ನ ವೈಜ್ಞಾನಿಕ ಕಾರ್ಯವನ್ನು ಸಮರ್ಥವಾಗಿ ಮುಂದುವರಿಸಿದ್ದ. (ಬಿ.ಬಿ.ಬಿ.; ಎಚ್.ಸಿ.ಕೆ.)

ಕ್ಯಾತರೀನ್ ದಿ ಗ್ರೇಟ್ ಮಹಾರಾಣಿಯ ಆಸ್ಥಾನದಲ್ಲಿ ಡೀಡುರೊ ಎಂಬ ಫ್ರಾನ್ಸಿನ ಆಹ್ವಾನಿತ ವಿದ್ವಾಂಸನಿದ್ದ. ನಾಸ್ತಿಕ ಪಂಥದ ಈ ತರ್ಕಶಿರೋಮಣಿ ವಾದದಲ್ಲಿ ಎಂದೂ ಪರಾಭವ ಅನುಭವಿಸಿದವನಲ್ಲ. ಇವನ ವಿರುದ್ಧ ವಾದಹೂಡಲು ಮಹಾದೈವಭಕ್ತನಾದ ಆಯ್ಲರ್‌ನನ್ನು ರಾಣಿ ವಿಧಿಸಿದಳು. ಈ ಪ್ರಮೇಯ ಬಲು ಲಘುವಾದುದೆಂದು ಆಯ್ಲರ್‌ನಿಗೆ ಅನ್ನಿಸಿತು. ಕಾರಣ, ಡೀಡುರೊನಿಗೆ ಗಣಿತ ಚೀನೀಭಾಷೆ: ಸುಪ್ರಸಿದ್ಧ ಗಣಿತ ವಿದ್ವಾಂಸನೊಬ್ಬ ದೇವರ ಅಸ್ತಿತ್ವವನ್ನು ಕುರಿತು ಬೀಜಗಣಿತದ ರೀತ್ಯಾಸಾಧನೆ ಮಹಾರಾಣಿಯ ಆಸ್ಥಾನದಲ್ಲಿ ಸಾರ್ವಜನಿಕವಾಗಿ ನೀಡಲಿದ್ದಾನೆ ಎಂದು ಪ್ರಚಾರ ನಡೆಯಿತು. ಡೀಡುರೊ ಸಭೆಗೆ ಬಿಗುಮಾನದಿಂದ, ತಾತ್ಸಾರ ಭಾವದಿಂದ ಆಗಮಿಸಿದ. ಗಂಭೀರವದನನಾದ ಆಯ್ಲರ್ ನೇರವಾಗಿ ಅವನೆಡೆಗೆ ಮುನ್ನುಗ್ಗಿ ಸ್ಥಿರವಾಣಿಯಿಂದ ಮಹಾಸ್ವಾಮಿ $\frac{a+b^n}{n} = x$. ಆದ್ದರಿಂದ ದೇವನಿದ್ದಾನೆ. ಉತ್ತರ ಉರುಳಲಿ ಎಂದ. ಡೀಡುರೋನಿಗೆ ಈ ವಾದ ಅತಿಗಹನ ಗಂಭೀರ ಸತ್ವವಾಗಿ ಭಾಸವಾಯಿತು. ತನ್ನ ಸೋಲನ್ನು ಒಪ್ಪಿಕೊಂಡ.

ವಿಶ್ಲೇಷಣ ಗಣಿತದ ಮೂರ್ತಸ್ವರೂಪವೆಂದು ಖ್ಯಾತನಾಮನಾಗಿದ್ದ ಆಯ್ಲರ್‌ನನ್ನು ಕುರಿತು ಮನುಷ್ಯರು ಉಸಿರಾಡುವಷ್ಟೇ, ಹದ್ದುಗಳು ಗಾಳಿಯಲ್ಲಿ ತೇಲುವಷ್ಟೇ ಲಘುವಾಗಿ ಪ್ರಯತ್ನರಹಿತವಾಗಿ ಆಯ್ಲರ್ ಗಣಿಸುತ್ತಿದ್ದ ಎಂದು ಅರಾಗೋ ಹೇಳಿದ್ದಾನೆ. *

**ಆರಂಭವಾದ :** ಕಾರ್ಯಕಾರಣ ಸಂಬಂಧವನ್ನು ಕುರಿತ ವಾದ. ನ್ಯಾಯ, ವೈಶೇಷಿಕ ದರ್ಶನಗಳಲ್ಲಿ ಈ ವಾದವನ್ನು ಪ್ರತಿಪಾದಿಸಿದ್ದಾರೆ; ಇದನ್ನು ಅಸತ್ಕಾರ್ಯವಾದವೆಂದೂ ಕರೆಯುತ್ತಾರೆ. ಈ ವಾದ ಸಾಂಖ್ಯದರ್ಶನದಲ್ಲಿ ಪ್ರತಿಪಾದಿಸಿರುವ ಸತ್ಕಾರ್ಯವಾದಕ್ಕೆ ವಿರುದ್ಧವಾದುದು. ಒಂದೇ ಜಾತಿಯ ಮೂಲದ್ರವ್ಯಗಳು ಒಟ್ಟುಗೂಡಿದಲ್ಲಿ ಅನೇಕ ಸಂದರ್ಭಗಳಲ್ಲಿ ಒಂದು ಹೊಸ ಪರಿಣಾಮ ಹುಟ್ಟುತ್ತದೆ. ಉದಾಹರಣೆಗೆ ದಾರವನ್ನು ಹಾಸುಹೊಕ್ಕಾಗಿ ನೆಯ್ದಾಗ ಬಟ್ಟೆ ಎಂಬ ಒಂದು ಹೊಸ ರೂಪದ ಪರಿಣಾಮ ಉಂಟಾಗುತ್ತದೆ, ಅಂದರೆ ಆರಂಭವಾಗುತ್ತದೆ. ಈ ಪರಿಣಾಮದ ದೃಷ್ಟಿಯಿಂದ ಮೂಲದ್ರವ್ಯಗಳಾದ ಎಳೆಗಳು ಒಂದು ನವೀನ ಸಮವಾಯ ಸಂಬಂಧದಲ್ಲಿ ಮಾರ್ಪಾಡಾಗಿರುತ್ತವೆ. ಎಳೆಗಳೇ ಬಟ್ಟೆಯಲ್ಲಿದ್ದರೂ ಅವು ಈ ಪರಿಣಾಮ ದಿಶೆಯಲ್ಲಿ ಕೇವಲ ಒಂದು ಸಂಯೋಗ ಸಂಬಂಧದಲ್ಲಿರುವುದಿಲ್ಲ. ಅವು ಒಂದು ಹೊಸ ರೂಪರಚನೆಯಲ್ಲಿ ಪರಿಣಾಮಗೊಳ್ಳುತ್ತವೆ. ಅಂದರೆ ಪರಿಣಾಮ ಕಾರಣದಿಂದ ಒಂದು ರೀತಿಯಲ್ಲಿ ಭಿನ್ನವಾಗಿರುತ್ತದೆ. ಪೂರ್ವದಲ್ಲಿ ಇಲ್ಲದೆ, ಅಸತ್ತಾಗಿದ್ದ ಪರಿಣಾಮ ಈಗ ಆವಿರ್ಭವಿಸಿದೆ. ಆದ್ದರಿಂದ ಇಲ್ಲಿ ಹೊಸ ಕಾರ್ಯ ಆರಂಭವಾಗಿದೆ ಎಂದು ಸ್ಪಷ್ಟವಾಗಿ ವಾದಿಸಬಹುದು.

ಮಣ್ಣೇ ಮಡಿಕೆಯಾಗಿದ್ದರೂ ಮತ್ತೆ ಮಡಿಕೆ ಮಣ್ಣೇ ಆಗುವ ಸಂಭವವಿದ್ದರೂ (ಒಡೆದುಹೋಗಿ ನಶಿಸಿದ ಮೇಲೆ) ಮಡಿಕೆಯ ರೂಪ (ಸಮವಾಯ ಸಂಬಂಧದಲ್ಲಿರುವುದರಿಂದ) ವಿಶೇಷವಾಗಿರುತ್ತದೆ, ನೀರನ್ನು ಹಿಡಿಯಲು ಉಪಯುಕ್ತವಾಗಿರುತ್ತದೆ.

ಈ ವಾದಕ್ಕೆ ವಿರುದ್ಧವಾಗಿ, ಕಾರಣದಲ್ಲಿ ಅವ್ಯಕ್ತವಾಗಿದ್ದುದು ಕಾರ್ಯದಲ್ಲಿ ವ್ಯಕ್ತವಾಗುತ್ತದೆ, ವಿಕಾಸಹೊಂದುತ್ತದೆ. ಇಲ್ಲದ್ದರಿಂದ ಇರುವುದು ಹುಟ್ಟುವುದು ಅಸಂಭವವೆಂದು ಸತ್ಕಾರ್ಯವಾದಿಗಳು ವಾದಿಸುತ್ತಾರೆ. (ಆರ್.ಎಸ್.)

**ಆರಕಲ್ :** ಗ್ರೀಕ್ ಮತಧರ್ಮದ ಪ್ರಕಾರ ಮನುಷ್ಯ ಕೇಳುವ ಪ್ರಶ್ನೆಗೆ ದೇವರು ಕೊಡುವ ಉತ್ತರ ಅಥವಾ ಅಂಥ ಕಣಿ ಹೇಳುವ ಸ್ಥಳ. ಒಂದೊಂದು ಸ್ಥಳಕ್ಕೂ ಒಂದೊಂದು ದೇವತೆ ಇರುತ್ತಿತ್ತು. ವೀರ ಆಂಫಿಯಾರಸ್‌ನ ಡೊಡೋನ, ಅಪೊಲೊನ ಡೆಲ್ಫಿ, ಆಮನ್‌ನ ಸೀವ ಮುಂತಾದುವು ಅಂತಹ ಪ್ರಸಿದ್ಧ ಸ್ಥಳಗಳು. ಸಂದಿಗ್ಧ ಸಮಯಗಳಲ್ಲಿ ರಾಜವರ್ಗದವರೂ ಜನರೂ ಕಣಿ ಕೇಳಿ ಅದರಂತೆ ನಡೆಯುತ್ತಿದ್ದರು. ಆ ಸಂದರ್ಭದಲ್ಲಿ ದೇವರು ಮೈಮೇಲೆ ಬಂದು ಮಾತನಾಡುತ್ತಿತ್ತು. ಬಹುಪಾಲು ಪೂಜಾರಿಯ ಮೈಮೇಲೆ ಬರುವುದೇ ರೂಢಿಯಲ್ಲಿತ್ತು. ದೇವವಾಣಿಯಲ್ಲದೆ ಗತಿಸಿದ ವೀರ, ಪಿತೃವಾಣಿಯನ್ನೂ ಕೇಳುತ್ತಿದ್ದುದುಂಟು. ಇದಲ್ಲದೆ ಒಮ್ಮೆ ದೈವವೊ, ಪ್ರೇತವೊ ಯಾರ ಮೈಮೇಲೊ ಬಂದು ಎಲೆಗಳ ಸಪ್ಪಳದಿಂದಲೊ ನೆಲದ ಮೇಲೆ ಮಲಗಿದವರ ಕನಸಿನಲ್ಲೊ ಸೂಚನೆ ನೀಡುತ್ತಿದ್ದುದುಂಟು. ಒಗಟುಗಳಂತೆ ಸಂದಿಗ್ಧವಾಗಿದ್ದ ಆರಕಲ್‌ಗಳ ಅರ್ಥವನ್ನು ಅರ್ಚಕರೇ ವಿವರಿಸುತ್ತಿದ್ದರು. ಅವು ಅನೇಕ ವೇಳೆ ಗೂಢಾರ್ಥದಿಂದ, ದ್ವಂದ್ವಾರ್ಥದಿಂದ ಕೂಡಿರುತ್ತಿ

ದ್ದುವು. ದ್ವಂದ್ವಾರ್ಥ ದಿಂದ ಕೂಡಿದ ಡೆಲ್ಫಿಯ ವಚನ ನಂಬಿ ಯುದ್ಧಕ್ಕೆ ಹೋದ ಕ್ರೋಸಸ್ ದೊರೆ ತನ್ನ ರಾಜ್ಯವನ್ನೇ ನಾಶಮಾಡಿಕೊಂಡ ಕಥೆ ಇತಿಹಾಸಪ್ರಸಿದ್ಧವಾಗಿದೆ. ಆಗಮೆಮ್ನಾನ್ ಕಣಿ ಕೇಳಿ ತನ್ನ ಮಗಳಾದ ಇಫಿಜೀನಿಯಳನ್ನು ವಾಯುದೇವತೆಗೆ ಬಲಿಕೊಡುತ್ತಾನೆ. ಆರಕಲ್‌ಗಳನ್ನು ಕೇಳುವ ಪದ್ಧತಿ ಹಿಂದೆ ಎಲ್ಲ ಜನಾಂಗಗಳಲ್ಲೂ ಇತ್ತೆಂದು ತೋರುತ್ತದೆ. (ಎಚ್.ಆರ್.ಆರ್.)

**ಆರಣ್ಯಕ :** ಶ್ರುತಿಯೆಂದು ಪ್ರಸಿದ್ಧವಿರುವ ಅಪಾರವಾದ ವೇದಸಾಹಿತ್ಯದ ಆದಿಭಾಗ ಸಂಹಿತೆ, ಮಧ್ಯವೇ ಬ್ರಾಹ್ಮಣ, ಉಪಾಂತ್ಯ ಆರಣ್ಯಕ ಮತ್ತು ಅಂತ್ಯ ಉಪನಿಷತ್ತು ಅಥವಾ ವೇದಾಂತವೆನಿಸುತ್ತವೆ. ಸಂಹಿತೆಯಲ್ಲಿ ದೇವತಾಸ್ತುತಿಗಳಾದ ಋಕ್ಕುಗಳಿಗೆ ಪ್ರಾಧಾನ್ಯ. ಬ್ರಾಹ್ಮಣದಲ್ಲಿ ಯಾಗಾದಿ ಕರ್ಮಕಾಂಡದ ವಿವರಣೆ ಮುಖ್ಯ. ಆರಣ್ಯಕದಲ್ಲಿ ಇದೇ ಕರ್ಮದ ಭೌತಿಕಸ್ವರೂಪವಿವೇಚನೆ ಹಿಂದಾಗಿ ಸಾಂಕೇತಿಕ ಇಲ್ಲವೇ ಆಧ್ಯಾತ್ಮಿಕ ತತ್ತ್ವಗಳ ಶೋಧನೆ ಮುಂದಾಗುತ್ತದೆ. ಇದೇ ಪ್ರವೃತ್ತಿ ಮತ್ತೂ ಪ್ರಬಲವಾಗಿ ಕಡೆಗೆ ಜ್ಞಾನಮೀಮಾಂಸೆಯೇ ಮುಖ್ಯವಾಗಿರುವ ಉಪನಿಷತ್ತುಗಳನ್ನು ಕಾಣುತ್ತೇವೆ.

ಹೀಗೆ ಉಪನಿಷತ್ತುಗಳ ಪೂರ್ವರೂಪವೇ ಆರಣ್ಯಕವೆಂದು ತಿಳಿಯಬಹುದು. ಅರಣ್ಯೇ ಅಧ್ಯಯನಾದೇವ ಆರಣ್ಯಕಮುದಾಹೃತಮ್ ಎಂಬ ವಚನದಂತೆ ಅರಣ್ಯದಲ್ಲಿ ಮಾತ್ರ ಅಧ್ಯಯನಕ್ಕೆ ವಿಹಿತವಾದ ವೇದಪ್ರಕಾರವೇ ಆರಣ್ಯಕವೆನ್ನಬಹುದು. ಅಥವಾ ಗೃಹಸ್ಥಾಶ್ರಮವನ್ನು ಮುಗಿಸಿದ ವಾನಪ್ರಸ್ಥರು ಮಾತ್ರ ಕಲಿಯಬಹುದಾದ ಕರ್ಮಜ್ಞಾನ ರಹಸ್ಯಗಳನ್ನೊಳಗೊಂಡ ವೇದಪ್ರಕಾರವೇ ಆರಣ್ಯಕವೆನ್ನಬಹುದು. ಎರಡು ಬಗೆಯ ವ್ಯುತ್ಪತ್ತಿಗಳನ್ನೂ ಸಂಪ್ರದಾಯ ಹಾಗೂ ಆಧುನಿಕ ವಿದ್ವತ್ತು ಸೂಚಿಸಿದೆ.

ಆರಣ್ಯಕಗಳಲ್ಲಿ ಒಮ್ಮೊಮ್ಮೆ ಪ್ರಕ್ಷಿಪ್ತಾಂಶಗಳು ಸೇರಿರಬಹುದಾದರೂ ಪ್ರಾಚೀನ ಆರಣ್ಯಕಗಳ ಕಾಲ ಸು. ಪ್ರ.ಶ.ಪೂ. 1000 ಎನ್ನಬಹುದು. ಭಾಷೆಯಲ್ಲಿ ಒಮ್ಮೆ ಬ್ರಾಹ್ಮಣಗಳ ಮಾರ್ದನಿ, ಇನ್ನೊಮ್ಮೆ ಉಪನಿಷತ್ತುಗಳ ಪ್ರತಿಧ್ವನಿ ಇರುವುದು ಆರಣ್ಯಕಗಳ ವಿಶೇಷ. ಮುಂದಿನ ವ್ಯಾಕರಣ, ನಿರುಕ್ತ, ಕಲ್ಪ ಮುಂತಾದ ವೇದಾಂಗ ವಿಚಾರಗಳೂ ಒಮ್ಮೊಮ್ಮೆ ಇಲ್ಲಿ ಬರುವುದುಂಟು. ಅತ್ತ ಬ್ರಾಹ್ಮಣಗಳಿಗೂ ಇತ್ತ ಉಪನಿಷತ್ತುಗಳಿಗೂ ಮಧ್ಯವರ್ತಿಯೆನಿಸುವ ಆರಣ್ಯಕ ಎರಡರ ಅಂಶಗಳನ್ನೂ ಅಷ್ಟಿಷ್ಟು ಒಳಗೊಳ್ಳುವುದರಿಂದ ಅದು ಬ್ರಾಹ್ಮಣವೆನಿಸಲೂ ಬಲ್ಲುದು, ಉಪನಿಷತ್ತು ಎನಿಸಲೂ ಬಲ್ಲುದು. ಸಾಮವೇದ ಮತ್ತು ಅಥರ್ವ ವೇದಗಳಲ್ಲಿ ಆರಣ್ಯಕವೆಂಬ ಸ್ವತಂತ್ರ ರಚನಾ ಪ್ರಕಾರವೇ ಇಲ್ಲ. ಸಾಮವೇದದ ಆರಣ್ಯಕಸದೃಶ ರಚನೆಗೆ ಛಾಂದೋಗ್ಯ ಉಪನಿಷತ್ ಎಂದೂ ಅಥರ್ವ ವೇದದ್ದಕ್ಕೆ ಮುಂಡಕೋಪನಿಷತ್ ಎಂದೂ ಹೆಸರುಗಳಿವೆ.

ಋಗ್ವೇದಕ್ಕೆ ಐತರೇಯ ಮತ್ತು ಕೌಶೀತಕೀ ಎಂಬ ಆರಣ್ಯಕಗಳೂ ಶುಕ್ಲ ಯಜುರ್ವೇದಕ್ಕೆ ಶತಪಥಬ್ರಾಹ್ಮಣದಲ್ಲಿ ಅಂತರ್ಗತವಾಗಿ ಬೃಹದಾರಣ್ಯಕ ಉಪನಿಷತ್ತೂ, ಕೃಷ್ಣಯಜುರ್ವೇದಕ್ಕೆ ತೈತ್ತಿರೀಯ ಆರಣ್ಯಕವೂ ಪ್ರಸಿದ್ಧವಾಗಿವೆ.

ಐತರೇಯ ಆರಣ್ಯಕದಲ್ಲಿ ಐದು ಖಂಡಗಳಿದ್ದು, ಕಡೆಯ ಎರಡು ಆಶ್ವಲಾಯನ ಹಾಗೂ ಶೌನಕದೃಷ್ಟವೆಂದೂ ಹೇಳಲಾಗಿದೆ. ಇದರ ಎರಡನೆಯ ಖಂಡದ 4,5,6 ಈ ಮೂರು ಅಧ್ಯಾಯಗಳೇ ಐತರೇಯ ಉಪನಿಷತ್ ಎನಿಸುತ್ತದೆ. ಮೊದಲನೆಯ ಖಂಡದಲ್ಲಿ ಮಹಾವ್ರತವೆಂಬ ವಿಧಿಯ ವಿವರಣೆ ಬಂದಿದೆ. ಈ ಆರಣ್ಯಕದ ರಚನಾಕಾಲದ ವೇಳೆಗೆ ಋಗ್ವೇದದ ಪ್ರಚಲಿತ ಸಂಹಿತಾಪಾಠ ಸಿದ್ಧವಾಗಿತ್ತೆಂದು ಸ್ಪಷ್ಟವಾಗುತ್ತದೆ. ಕೌಶೀತಕೀ ಆರಣ್ಯಕದಲ್ಲಿ 15 ಅಧ್ಯಾಯಗಳಿವೆ. 3 ರಿಂದ 6 ಅಧ್ಯಾಯಗಳೇ ಕೌಶೀತಕೀ ಉಪನಿಷತ್ ಎನಿಸುತ್ತದೆ.

ಯಜುರ್ವೇದದಲ್ಲಿ ತೈತ್ತಿರೀಯ ಆರಣ್ಯಕದ 7,8,9 ಈ ಪ್ರಪಾಠಕಗಳೇ ತೈತ್ತಿರೀಯ ಉಪನಿಷತ್ತು, 10 ನೆಯ ಪ್ರಪಾಠಕವೇ ಮಹಾನಾರಾಯಣೋಪನಿಷತ್ತು. ಇದು ಕಡೆಗೆ ಬರೆದು ಸೇರಿಸಿದಂತೆ ತೋರುತ್ತದೆ. ಶತಪಥಬ್ರಾಹ್ಮಣದ ಗ್ರಂಥಾಂತ್ಯವೇ ಬೃಹದಾರಣ್ಯಕವೆಂಬ ಉಪನಿಷತ್ತು. ಹೀಗೆ ಆರಣ್ಯಕಗಳ ನಿಷ್ಕೃಷ್ಟ ಸ್ವರೂಪಜ್ಞಾನಕ್ಕೆ ಬ್ರಾಹ್ಮಣ ಹಾಗೂ ಉಪನಿಷತ್ತುಗಳ ಸ್ಪಷ್ಟ ಪರಿಜ್ಞಾನ ಅತ್ಯವಶ್ಯ. (ಕೆ.ಕೆ.)

**ಆರತಿ:** ಭಾವಪೂರ್ಣ ಅಭಿನಯಕ್ಕೆ ಹೆಸರಾದ ಕನ್ನಡ ಚಲನಚಿತ್ರ ನಟಿ ಮತ್ತು ನಿರ್ಮಾಪಕಿ. ಗೆಜ್ಜೆಪೂಜೆ ಚಿತ್ರದಲ್ಲಿ ಚಿಕ್ಕ ಪಾತ್ರವೊಂದನ್ನು ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. ಕನ್ನಡದಲ್ಲಿ ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಪಾತ್ರವಹಿಸಿದ್ದಾರೆ. ಹೆಸರಾಂತ ನಿರ್ದೇಶಕ ಕಣಗಾಲ್ ಪುಟ್ಟಣ್ಣ (ನೋಡಿ) ಇವರನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ಉಪಾಸನೆ, ನಾಗರಹಾವು, ಎಡಕಲ್ಲು ಗುಡ್ಡದ ಮೇಲೆ, ಶುಭಮಂಗಳ, ಕಥಾಸಂಗಮ, ರಾಜ ನನ್ನ ರಾಜ, ಹೊಂಬಿಸಿಲು, ರಂಗನಾಯಕಿ, ಚಿತ್ರಗಳಲ್ಲಿ ಅಪೂರ್ವ ಅಭಿನಯ ನೀಡಿದ್ದಾರೆ. ಕಥಾಸಂಗಮ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಪ್ರಯೋಗ. ಕನ್ನಡದ ಮೂರು ಪ್ರಸಿದ್ಧ ಕತೆಗಳನ್ನು ಒಂದೇ ಚಿತ್ರದಲ್ಲಿ ಅಳವಡಿಸಿರುವ ಈ ಪ್ರಯೋಗಾತ್ಮಕ ಚಿತ್ರದಲ್ಲಿ ಆರತಿ ಮುನಿತಾಯಿಯಾಗಿ ನೀಡಿದ ಅಂಧ ಗೃಹಿಣಿಯ ಅಭಿನಯಕ್ಕಾಗಿ ಅತ್ಯುತ್ತಮ ನಟಿ ರಾಜ್ಯ ಪ್ರಶಸ್ತಿ ಲಭಿಸಿದೆ (1975–76). ಆರತಿಯವರ ಅಭಿನಯ ಕೌಶಲ್ಯಕ್ಕೆ ಸಾಕ್ಷಿಯಾದ ಇನ್ನೊಂದು ಚಿತ್ರ ರಂಗನಾಯಕಿ. ರಂಗಭೂಮಿಯ ಬದುಕು ಹಾಗೂ ವೈಯಕ್ತಿಕ ಬದುಕಿನ ನಡುವಣ ಸಂಘರ್ಷವನ್ನು ಕುರಿತ ಈ ಚಿತ್ರದಲ್ಲಿನ ಆರತಿಯವರ ಅಭಿನಯ ಅವಿಸ್ಮರಣೀಯವಾದದ್ದು. ಈ ಚಿತ್ರದ ಇವರ ಅಭಿನಯಕ್ಕೆ ಕೂಡ ಅತ್ಯುತ್ತಮ

ನಟಿ ರಾಜ್ಯ ಪ್ರಶಸ್ತಿ ಲಭ್ಯವಾಗಿದೆ (1980–81). ಇವರು ಧರ್ಮಸೆರೆ ಎಂಬ ಚಲನಚಿತ್ರವನ್ನು ನಿರ್ಮಿಸಿ, ಅದರಲ್ಲಿ ನಟಿಸಿದ್ದಾರೆ. ಈ ಚಿತ್ರದ ಅಭಿನಯಕ್ಕೂ ಇವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿದೆ (1978–79). ಇವರು ವಿಧಾನ ಪರಿಷತ್ತಿನ ನಾಮಕರಣ ಸದಸ್ಯೆಯಾಗಿಯೂ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಕಣಗಾಲ್ ಪುಟ್ಟಣ್ಣನವರನ್ನು ಇವರು ವಿವಾಹವಾಗಿದ್ದರು. ಅವರಿಂದ ದೂರ ಸರಿದ ಬಳಿಕ ಮಾಜಿ ಶಿಕ್ಷಣ ಸಚಿವ ಎಂ.ರಘುಪತಿಯವರನ್ನು ವಿವಾಹ ವಾಗಿದ್ದರು. ಈ ದಾಂಪತ್ಯವೂ ಹೆಚ್ಚು ದಿನ ಉಳಿಯಲಿಲ್ಲ. ಕೆಲಕಾಲಾನಂತರ ಬಣ್ಣದ ಬದುಕಿನಿಂದ ಪೂರ್ಣವಾಗಿ ದೂರ ಸರಿದರು. ಕನ್ನಡದ ಹೆಸರಾಂತ ನಾಯಕ ನಟರಾದ ರಾಜಕುಮಾರ್, ಶ್ರೀನಾಥ್, ವಿಷ್ಣುವರ್ಧನ, ಅನಂತನಾಗ್, ಶಂಕರನಾಗ್ ಮೊದಲಾದವರೊಂದಿಗೆ ಇವರು ಅಭಿನಯಿಸಿದ್ದಾರೆ. *

**ಆರಾಧನೆ :** ದೈವದ, ಗುರುಹಿರಿಯರ ಬಗ್ಗೆ ವ್ಯಕ್ತಿ ಇಟ್ಟಿರುವ ಭಕ್ತಿ ಗೌರವಗಳ ಅಭಿವ್ಯಕ್ತಿಗಳಲ್ಲೊಂದು ಬಗೆ. ಮೃತಮಹಾತ್ಮರ ಹೆಸರಿನಲ್ಲಿ ವರ್ಷಕ್ಕೊಂದು ದಿನ ನಡೆಸುವ ಪೂಜಾದಿಗಳು, ಅನ್ನದಾನ, ಸತ್ಕಥಾಕಾಲಕ್ಷೇಪ––ಇವುಗಳಿಗೆ ಆರಾಧನೆ ಎಂಬ ಹೆಸರಿದೆ **(ನೋಡಿ– ಆಚರಣೆ)**. (ಎಂ.ವೈ.)

**ಆರಿಗ್ನೇಷಿಯನ್ ಸಂಸ್ಕೃತಿ :** ಮಧ್ಯ ಫ್ರಾನ್ಸ್‌ನಲ್ಲಿ ಪ್ರಚಲಿತವಾಗಿದ್ದ ಹಳೆ ಶಿಲಾಯುಗದ ಉತ್ತರಭಾಗದ ಒಂದು ಪ್ರವೃದ್ಧ ಸಂಸ್ಕೃತಿ. ಆರಿಗ್ನಾಕ್ ಎಂಬಲ್ಲಿ ಕಂಡು ಬಂದದ್ದರಿಂದ ಆ ಹೆಸರು. ಕಾಲ ಪ್ಲಿಸ್ಟೋಸೀನ್‌ನ ಕಡೆಯ ಹಿಮಯುಗ ವುರ್ಮ್‌ನ ಮಧ್ಯಭಾಗ–ಸು. 30,000–20,000 ವರ್ಷಗಳ ಹಿಂದೆ. ಕ್ರೋಮ್ಯಾಗ್ನಾನ್ ಎಂಬ ನಿಜಮಾನವ ಕುಲದವರು



ಹೆರೆಯುವ ಕಲ್ಲಿನ ಉಪಕರಣ

ಈ ಸಂಸ್ಕೃತಿಯ ಪ್ರವರ್ತಕರು. ಈ ಕಾಲದಲ್ಲಿ ಬರೆಯುವ ಮತ್ತು ಕೊರೆಯುವ ವಿವಿಧ ಕಲ್ಲಿನ ಉಪಕರಣಗಳು ಬಳಕೆಯಲ್ಲಿದ್ದುವು. ಅಲ್ಲದೆ ಎಲುಬಿನ ಆಯುಧಗಳ ವಿಶೇಷ ಬಳಕೆಯೂ ಈ ಕಾಲದಲ್ಲಿ ರೂಢಿಗೆ ಬಂದಿತ್ತು. ಚಿತ್ರ ಮತ್ತು ಶಿಲ್ಪಕಲೆ ಕೂಡ ಈ ಕಾಲದಲ್ಲೇ ಪ್ರಾರಂಭವಾಗಿರಬಹುದೆಂದು ಬಹು ಜನರ ಅಭಿಮತ. ಈ ಕಲಾಕೃತಿಗಳು ಫ್ರಾನ್ಸ್‌ನ ಹಲವು ಸುಣ್ಣಕಲ್ಲು ಗುಹೆಗಳ ಗೋಡೆಗಳ ಮೇಲೂ ಅವರು ವಾಸಿಸುತ್ತಿದ್ದ ಗುಹಾಪ್ರದೇಶಗಳಲ್ಲೂ ದೊರಕಿವೆ. ಈ ಸಂಸ್ಕೃತಿ ಮಧ್ಯಫ್ರಾನ್ಸ್‌ನಲ್ಲಿ ಹೆಚ್ಚಾಗಿ ಕಂಡುಬರುವುದಾದರೂ ಅದರ ಮೂಲ ಅಥವಾ ಶಾಖೆಗಳನ್ನು ಪೂರ್ವಯೂರೋಪ್ ಮತ್ತು ವಾಯವ್ಯ ಏಷ್ಯದಲ್ಲೂ ಕಾಣಬಹುದು. (ಎಸ್.ಎನ್.)

**ಆರಿಯೋಸ್ಟೊ, ಲುಡೋವಿಕೊ :** 1474–1532. ಎಸ್ತಿ ಎಂಬ ಶ್ರೀಮಂತ ಮನೆತನಕ್ಕೆ ಸೇವೆ ಸಲ್ಲಿಸಿದ ಇಟಲಿಯ ಸುಪ್ರಸಿದ್ಧ ಕವಿ. ಆರ್ಲ್ಯಾಂಡೊ ಫ್ಯೂರಿಯೋಸೊ (ನೋಡಿ) ಎಂಬ ಅದ್ಭುತಕಾವ್ಯ ಇವನಿಗೆ ಸಾಹಿತ್ಯದಲ್ಲಿ ಸ್ಥಿರವಾದ ಸ್ಥಾನವನ್ನು ಗಳಿಸಿಕೊಟ್ಟಿದೆ. ಇದು ಆ ಕಾಲದ ಶ್ರೀಮಂತ, ಸುಸಂಸ್ಕೃತ ವರ್ಗದ ಜನರ ಮನರಂಜನೆಗಾಗಿ ರಚಿಸಿದ ಕೃತಿ. ಈ ಕಾವ್ಯ ಬೊಯಾರ್ಡೊ ಎಂಬ ಕವಿ ಆ ಮೊದಲೇ ರಚಿಸಿದ್ದ ಆರ್ಲ್ಯಾಂಡೊ ಇನ್ನಮೊರ‍್ಯಾಟೊ ಎಂಬ ಶೃಂಗಾರಾದ್ಭುತ ರಸಗಳಿಂದ ತುಂಬಿದ, ಆದರೆ ಅಸಂಪೂರ್ಣವಾದ ಭವ್ಯಕಾವ್ಯದ ಉತ್ತರಾರ್ಧ. ಆರ್ಥರ್ ದೊರೆ ಮತ್ತು ಷಾರ್ಲಮನ್ ದೊರೆಗಳನ್ನು ಕುರಿತ ಅದ್ಭುತ ಕಥೆಗಳ ರಸ ಸಮ್ಮಿಳನವನ್ನು ಈ ಮಹತ್ತರವಾದ ಕಾವ್ಯದಲ್ಲಿ ಕಾಣಬಹುದು. ತನಗೆ ಪ್ರಿಯವಾದ ಅದ್ಭುತ ಕಥೆಗಳಿಂದ ಆರಿಸಿ ತೆಗೆದ ಸುಂದರ ಕಥೆಗಳನ್ನು ಕುಶಲತೆಯಿಂದ ಈ ಕಾವ್ಯದಲ್ಲಿ ಕವಿ ಹೆಣೆದಿದ್ದಾನೆ. ಡಾಂಟೆ, ಪೆಟ್ರಾರ್ಕ್ ಕವಿಗಳಿಂದಲೂ ಎರವಲು ಪಡೆದು ಕಾವ್ಯ ಸಂಪತ್ತನ್ನು ಹೆಚ್ಚಿಸಿದ್ದಾನೆ. ಬೊಯಾರ್ಡೊನ ಧಾಟಿಯನ್ನೇ ಆರಿಯೋಸ್ಟೊ ಮುಂದುವರಿಸಿದ್ದಾನೆ. ಏಂಜಲಿಕಳ ಮೇಲಣ ಪ್ರೇಮದಿಂದ ಹುಚ್ಚಾದ ಆರ್ಲ್ಯಾಂಡೊನ

ಕಥೆ ಇದು. ಆದರೆ ಅವಳು ಈ ಕಾವ್ಯದಲ್ಲಿ ಕೇವಲ ಗೌಣ ಪಾತ್ರ. ರುಜಿರೋ ಎಂಬವನಲ್ಲಿ ಅನುರಕ್ತಳಾಗಿರುವ ಬ್ರಾದಮಾಂತೆ ಎಂಬ ಯೋಧಸ್ತ್ರೀಯೇ ಈ ಕಥೆಯ ಪ್ರಧಾನಪಾತ್ರ. ಇವರ ಸಂತತಿಯವರೇ ಎಸ್ತಿ ಮನೆತನದ ಮೂಲಪುರುಷರು. ಸ್ತ್ರೀಸಹಜವಾದ ಲಜ್ಜೆ, ಮಾರ್ದವ, ಕರುಣೆ ಮುಂತಾದ ಸದ್ಗುಣಗಳನ್ನೂ ಪುರುಷಸಹಜವಾದ ಧೈರ್ಯ ಸ್ಥೈರ್ಯಗಳನ್ನೂ ಹೊಂದಿರುವ ಬ್ರಾದಮಾಂತೆಯರ ಪ್ರಣಯಾಂಕುರ, ಅದರ ವಿವಿಧ ಅವಸ್ಥೆಗಳು, ಪರ್ಯವಸಾನ ಇವೇ ಕಥೆಯ ಸುಂದರವಾದ ಭಾಗಗಳು.

ಕಥನಕಲೆಯಲ್ಲಿ ಕವಿಯದು ಸಿದ್ಧಹಸ್ತ. ಘಟನೆಗಳಲ್ಲಿ, ಕಥೆಯ ವಿವಿಧ ಹಂತಗಳಲ್ಲಿ, ಗಾಂಭೀರ್ಯವನ್ನೂ, ಕಟಕಿಯನ್ನೂ ಜಾಣ್ಮೆಯಿಂದ ಬೆರಸುತ್ತಾನೆ. ಸೊಗಸಾದ, ನವಿರಾದ ಹಾಸ್ಯದ ಸನ್ನಿವೇಶಗಳನ್ನು ಕಲ್ಪಿಸುತ್ತಾನೆ. ಅನಂತರ ಬಂದ ಸ್ಪೇನಿನ ಕಥೆಗಾರ ಸರ್‌ವಾಂಟಿಸ್ ಈ ಬಗೆಯ ಹಾಸ್ಯವನ್ನು ಅನ್ಯಾದೃಶವಾಗಿ ಸೃಷ್ಟಿಸಿದ್ದಾನೆ. ಆರ್ಲ್ಲಾಂಡೊವಿನ ಕಳೆದುಹೋದ ಬುದ್ಧಿಯನ್ನು ಹುಡುಕುವುದಕ್ಕಾಗಿ ಆಸ್ಟೊಲ್ಫೊ ಚಂದ್ರನೊಳಕ್ಕೆ ಪ್ರಯಾಣಮಾಡುವುದು, ರಾಣಿ ಏಂಜಲಿಕ ಮಿಡೋರೋ ಎಂಬ ಸಾಮಾನ್ಯ ಸೈನಿಕರಿಗೆ ಮನಸೋಲುವುದು ಇತ್ಯಾದಿ ಸನ್ನಿವೇಶಗಳಲ್ಲಿ ಈ ಭಾವ ಬೆಳೆದಿದೆ. ಭಾವಾವೇಶದ ಪ್ರಸಂಗಗಳನ್ನು ಚಿತ್ತಾಕರ್ಷಕವಾಗಿ ಚಿತ್ರಿಸಬಲ್ಲನಾದರೂ, ಕಥನಶೈಲಿಯಲ್ಲಿ ವಸ್ತುನಿಷ್ಠೆಯನ್ನು ಈತ ಅನುಸರಿಸುತ್ತಾನೆ. ಘಟನೆಗಳ, ದೃಶ್ಯಗಳ ವರ್ಣನೆಯಲ್ಲಿ ಜೀವಂತ ಶಕ್ತಿಯನ್ನೂ ಮೂರ್ತತೆಯನ್ನೂ ಮೂಡಿಸಬಲ್ಲ. ಕಥೆಯ ಆಖ್ಯಾನಕ್ಕೆ ಮೆರಗು ಕೊಡಲು ರೂಪಕ, ಪ್ರತಿಮೆಗಳಿಗಿಂತಲೂ ಉಪಮೆಯನ್ನೇ ಹೆಚ್ಚು ಬಳಸುತ್ತಾನೆ. ನವಿರಾದ ವಿಡಂಬನೆ, ತಿಳಿಹಾಸ್ಯ ಈ ಕಾವ್ಯದ ಮುಖ್ಯ ಲಕ್ಷಣಗಳು. ಈ ಕಾವ್ಯವಲ್ಲದೆ ಈತ ಹಲವಾರು ಪ್ರೇಮಗೀತೆಗಳನ್ನೂ, ಪ್ರಹಸನ, ವಿಡಂಬನ ಕವನಗಳನ್ನೂ ಬರೆದಿದ್ದಾನೆ.

ಕವಿಯದು ಸೌಂದರ್ಯಕ್ಕೆ ಮೀಸಲಾದ ದೃಷ್ಟಿ. ವಿಸ್ತಾರಪ್ರಕೃತಿ ಮತ್ತು ಮಾನವಲೋಕ ದಲ್ಲಿ ಹುದುಗಿರುವ, ಹಬ್ಬಿರುವ ಸೌಂದರ್ಯಸೃಷ್ಟಿಯನ್ನು ಕಾಮನಬಿಲ್ಲಿನಂಥ ಶೈಲಿಯಲ್ಲಿ ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾನೆ. ಕಾವ್ಯದುದ್ದಕ್ಕೂ ಅಲ್ಲಲ್ಲಿ ಮಿಂಚಿ ಹೊಳೆಯುವ, ಯುದ್ಧ, ಕಾಳ್ಗಿಚ್ಚು, ಮಹಾಪೂರ, ಚಂಡಮಾರುತಗಳ ರೌದ್ರವರ್ಣನೆಯನ್ನು ಓದುವಾಗ ನಮಗೆ ಅವನ ಕಾಲದಲ್ಲಿ ಪ್ರಸಿದ್ಧವಾಗಿ ಮೆರೆದ ಟಿಷಿಯನ್ ಮುಂತಾದ ಚಿತ್ರಕಾರರ ನೆನಪಾಗುತ್ತದೆ.

ಈ ಕಥನಕಾವ್ಯ ಅನಂತರ ಬಂದ ನಾನಾ ಭಾಷೆಯ ಕವಿಗಳಿಗೆ, ನಾಟಕಕಾರರಿಗೆ, ಕಾದಂಬರಿಕಾರರಿಗೆ ಸಮೃದ್ಧಭಂಡಾರವಾಗಿದೆ. ಷೇಕ್ಸ್‌ಪಿಯರ್, ಸಿಡ್ನಿ, ಗ್ರೀನ್, ಸ್ಪೆನ್ಸರ್, ಮಿಲ್ಟನ್ ಮತ್ತು 19ನೆಯ ಶತಮಾನದ ಇಂಗ್ಲಿಷ್ ಕವಿಗಳೂ ಆರಿಯೋಸ್ಟೊಗೆ ಋಣಿಯಾಗಿದ್ದಾರೆ. (ಎಚ್.ಕೆ.ಆರ್.)

**ಆರಿಸ್ಟಾರ್ಕಸ್** : ಪ್ರ.ಶ.ಪೂ.ಸು.310-250. ಗ್ರೀಸ್ ದೇಶದ (ಸೇಮೋಸ್‌ನ) ಖಗೋಳಶಾಸ್ತ್ರಜ್ಞ, ಅರ್ಧಗೋಳಾಕಾರದ ನೆರಳುಗಡಿಯಾರವನ್ನು (ಸನ್ ಡಯಲ್) ರೂಪಿಸಿದ. ಸೂರ್ಯನ ಸುತ್ತಲೂ ಭೂಮಿ ಪರಿಭ್ರಮಿಸುತ್ತಿದೆ ಎಂಬುದನ್ನು ಸ್ಥಿರೀಕರಿಸಿದವ ರಲ್ಲಿ ಮೊದಲಿಗ. ಸೂರ್ಯ ಮತ್ತು ಚಂದ್ರ ಇವುಗಳ ದೂರ ಮತ್ತು ಗಾತ್ರಗಳನ್ನು ಅಳೆದ. ಒಂದು ವರ್ಷದ ಅವಧಿ $365\ ^1/_4$ ದಿವಸಗಳೆಂಬುದು ಕೇವಲ ಸರಿಸುಮಾರಾದ ಅವಧಿಯೆಂಬುದಾಗಿ ತಿಳಿಸಿ, ಇದಕ್ಕೆ ಒಂದು ದಿವಸದ 1/1623 ರಷ್ಟನ್ನು ಸೇರಿಸಬೇಕೆಂಬು ದಾಗಿಯೂ ತಿಳಿಸಿಕೊಟ್ಟ. ಖಗೋಳವಿಜ್ಞಾನದಲ್ಲಿ ಗಮನಾರ್ಹ ಲೆಕ್ಕಾಚಾರಗಳನ್ನು ಮಾಡಿದ. ತನ್ನ ಜೀವಿತಾವಧಿಯಲ್ಲಿ ಸಾಕಷ್ಟು ಅವಹೇಳನಕ್ಕೆ ಒಳಗಾದ. ಅನೇಕ ಶತಮಾನಗಳ ತರುವಾಯ ಆತನ ಪರಿಕಲ್ಪನೆಗಳಿಗೆ ಸೂಕ್ತ ಗೌರವ ಸಿಕ್ಕಿತು. *

**ಆರಿಸ್ಟಿಪಸ್** : ಪ್ರ.ಶ.ಪೂ. 430–300. ಸಿರೀನಿನ ಪ್ರಾಚೀನ ಗ್ರೀಕ್ ದಾರ್ಶನಿಕ. ಆದ್ದರಿಂದಲೇ ಇವನ ದರ್ಶನಕ್ಕೆ ಸಿರಿನೇಯಿಕ್ ದರ್ಶನ ಎಂದು ಹೆಸರಾಯಿತು. ಸಾಕ್ರಟೀಸನ ಶಿಷ್ಯ. ಸಿಸಿಲಿಯ ದೊರೆ ಡಯೋನಿಸಿಯಸ್‌ನ ಆಸ್ಥಾನದಲ್ಲಿ ಸ್ವಲ್ಪಕಾಲ ಇದ್ದು, ತನ್ನ ವೃದ್ಧಾಪ್ಯದಲ್ಲಿ ಸಿರೀನಿಗೆ ಹಿಂದಿರುಗಿದ. ಸಾಕ್ರಟೀಸನ ಶಿಷ್ಯರಲ್ಲಿ ವಿದ್ಯಾದಾನಮಾಡಿ ಸಂಭಾವನೆ ತೆಗೆದುಕೊಂಡವರಲ್ಲಿ ಇವನೇ ಮೊದಲನೆಯವ. ಸಾಕ್ರಟೀಸನ ಸಂತುಷ್ಟಿವಾದವನ್ನು ವಿಷಯಸುಖವಾದವನ್ನಾಗಿ ಪರಿವರ್ತಿಸಿದ. ಪ್ರಾಪಂಚಿಕ ಸುಖವನ್ನು ಗಳಿಸುವುದೇ ಜೀವನದ ಗುರಿ. ಕ್ಷಣಿಕವಾದರೂ ಸುಖವೇ ನಮ್ಮ ವ್ಯವಹಾರಗಳೆಲ್ಲದರ ಉದ್ದೇಶ. ಇಷ್ಟಪ್ರಾಪ್ತಿ, ಅನಿಷ್ಟ ನಿವೃತ್ತಿ–ಇವೇ ಜೀವನವೆಲ್ಲದರ ವ್ಯಾಪಕಧರ್ಮ. ನಿಜವಾದ ಜ್ಞಾನವೆಲ್ಲ ಇಂದ್ರಿಯಜನ್ಯ. ಸತ್ಯವೆಂಬುದೆಲ್ಲ ವೈಯಕ್ತಿಕ, ನಿರಪೇಕ್ಷ. ಸತ್ಯ ಅಸಾಧ್ಯ– ಇದು ಅವನ ತತ್ತ್ವ. ಪ್ಲೇಟೊ ಮತ್ತು ಸೆನಫನ್ ಇವನನ್ನು ಖಂಡಿಸಿದ್ದಾರೆ. (ಎಂ.ವೈ.)

**ಆರುಣಿ** : ಅರುಣ ಋಷಿಯ ಮಗ. ಉದ್ದಾಲಕನೆಂದೂ ಹೆಸರು. ಅಪೋದಧೌಮ್ಯ ನೆಂಬ ಮಹರ್ಷಿಯ ಶಿಷ್ಯನಾಗಿದ್ದಾಗ, ಗದ್ದೆಗೆ ಹರಿಯುತ್ತಿದ್ದ ನೀರನ್ನು ಅಡ್ಡಗಟ್ಟಲು ತಾನೇ ಮಲಗಿ ನೀರನ್ನು ಕಟ್ಟಿ, ಗುರು ಹುಡುಕಿಕೊಂಡು ಬಂದು ಕರೆದಾಗ ನೀರಿನಿಂದ ಎದ್ದನಾಗಿ ಇವನಿಗೆ ಉದ್ದಾಲಕನೆಂದು ಹೆಸರು. ಕುಶಿಕಪುತ್ರಿ ಇವನ ಹೆಂಡತಿ. ನಚಿಕೇತನೂ ಶ್ವೇತಕೇತುವೂ ಇವನ ಮಕ್ಕಳು. ಕಹೋಳಮುನಿಯ ಹೆಂಡತಿ ಸುಜಾತಾ ಮಗಳು. ಬ್ರಹ್ಮಜ್ಞಾನಿಯಾದ ಅಷ್ಟಾವಕ್ರ ನೆಂಟ. ಛಾಂದೋಗ್ಯ ಉಪನಿಷತ್ತಿನಲ್ಲಿ ಈ ಉದ್ದಾಲಕ ಆರುಣಿಯೇ ಆಚಾರ್ಯನಾಗಿ ಕಾಣಿಸಿಕೊಳ್ಳುತ್ತಾನೆ. ಆರನೆಯ ಅಧ್ಯಾಯದಲ್ಲಿ ಇವನ ಉಪದೇಶ ಬರುತ್ತದೆ. ಗುರುವಿನ ಬಳಿ ಓದಿ ಗರ್ವದಿಂದ ಹಿಂದಿರುಗಿದ ತನ್ನ ಮಗ ಶ್ವೇತಕೇತುವಿಗೆ ಆತ್ಮಾ ತತ್ತ್ವಮಸಿ ಎನ್ನುವ ಬೋಧೆಯನ್ನು ಮಾಡಿ ಅವನನ್ನು ದಾರಿಗೆ ತರುತ್ತಾನೆ. ಉದ್ದಾಲಕ ವಿವರಿಸಿದ ಆತ್ಮತತ್ತ್ವವೇ ವೇದಾಂತದ ಮುಖ್ಯ ಪ್ರಕ್ರಿಯೆಯಾಗಿ ಪರಿಣಮಿಸಿದೆ (**ನೋಡಿ– ಉದ್ದಾಲಕ**). (ಎಸ್.ಕೆ.ಆರ್.)

**ಆರೆಂಜ್ ನದಿ** : ದಕ್ಷಿಣ ಆಫ್ರಿಕದ ಅತಿಉದ್ದವಾದ ನದಿ. ಲೆಸೊತೊ ಪರ್ವತಗಳಲ್ಲಿ ಉಗಮ ಹೊಂದಿ, ಪ್ರಾರಂಭದಲ್ಲಿ ಪಶ್ಚಿಮ ಮತ್ತು ವಾಯವ್ಯಕ್ಕೆ ಹರಿದು ದಕ್ಷಿಣ ಅಟ್ಲಾಂಟಿಕ್ ಸಾಗರವನ್ನು ಅಲೆಗ್ಸಾಂಡರ್ ಸಾಗರವನ್ನು ಅಲೆಗ್ಸಾಂಡರ್ ಕೊಲ್ಲಿಯ ಸಮೀಪ ಸೇರುತ್ತದೆ. ಇದರ ಮೇಲ್ಗಣಿವೆಯು ಫ್ರೀಸ್ಟೇಟ್ ಮತ್ತು ಕೇಪ್ ಪ್ರಾಂತ್ಯಗಳ ನಡುವೆ ಗಡಿಯಾಗಿ ಹರಿಯುತ್ತದೆ. ಪ್ರಸ್ಥಭೂಮಿಯಲ್ಲಿ ಕಂದರಗಳಲ್ಲಿ ಹರಿಯುತ್ತ ಆಗ್ರೇಬಿಸ್ ಬಳಿ ಜಲಪಾತವನ್ನು ಸೃಷ್ಟಿಸುತ್ತದೆ. ಅನಂತರ ಮೈದಾನದಲ್ಲಿ ಸಾಗುವುದು. ಮುಖಜಭಾಗದ ಮರಳು ಅಡ್ಡಗಟ್ಟೆ ಮತ್ತು ಕಡಿಮೆ ಆಳದಿಂದಾಗಿ ಹಡಗು ಸಂಚಾರಕ್ಕೆ ಅಡ್ಡಿಯುಂಟಾಗುತ್ತದೆ. ವಾಲ್ ಮತ್ತು ಕಾಲೆಡಾನ್ ಉಪನದಿಗಳು, ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ತಯಾರಿಕೆಗೆ ಹೆಚ್ಚು ಉಪಯುಕ್ತ. ಈ ನದಿಯ ಉದ್ದ 2100ಕಿಮೀ ವಾಲ್ ಇದರ ಪ್ರಮುಖ ನದಿ. ಕಾಲೆಡೆನ್, ಮಾಡ್ರನ್ ಮತ್ತು ರಿಯಟ್ ಇತರ ಉಪನದಿಗಳು. (ಪಿ.ಎಂ)

**ಆರೆಂಜ್ ಫ್ರೀಸ್ಟೇಟ್** : ದಕ್ಷಿಣ ಆಫ್ರಿಕದ ಮಧ್ಯಭಾಗದಲ್ಲಿರುವ ಒಂದು ಪ್ರಾಂತ್ಯ. ದಕ್ಷಿಣಕ್ಕೆ ಆರೆಂಜ್ ನದಿ, ಉತ್ತರಕ್ಕೆ ಅದರ ಉಪನದಿಯಾದ ವಾಲ್ ನದಿ, ಪ್ರಾಂತ್ಯದ ಎಲ್ಲೆಗಳು 1848–54ರವರೆಗೆ ಬ್ರಿಟಿಷ್ ಆಡಳಿತಕ್ಕೊಳಪಟ್ಟಿತ್ತು. 1854ರಲ್ಲಿ ಆರೆಂಜ್ ಫ್ರೀಸ್ಟೇಟ್ ಆಗಿ ಅಸ್ತಿತ್ವಕ್ಕೆ ಬಂತು. 1995ರಲ್ಲಿ ಇದನ್ನು ಫ್ರೀಸ್ಟೇಟ್ ಎಂದು ಕರೆಯಲಾಯಿತು. ವಿಸ್ತೀರ್ಣ: 129,152 ಚ.ಕಿ.ಮೀ. ರಾಜಧಾನಿ ಬ್ಲೋಯೆಂಫಾಂಟೀನ್: ಜನಸಂಖ್ಯೆ:333,769 (1996) ಫ್ರೀಸ್ಟೇಟ್‌ನ ಜನರಲ್ಲಿ ಬಹುಪಾಲು ನಗರವಾಸಿಗಳು.

**ಮೇಲ್ಮೈಲಕ್ಷಣ** : ದಕ್ಷಿಣ ಆಫ್ರಿಕದ ಒಳನಾಡಿನ ಅಥವಾ ಉನ್ನತ ವೆಲ್ಡ್ ಪ್ರಸ್ಥಭೂಮಿಯ ಒಂದು ಭಾಗ. ಅಲ್ಲಲ್ಲಿ ಏರಿಳಿತಗಳುಳ್ಳ ಮೈದಾನ ಪ್ರದೇಶ, ಒಳಿದಾದ ಇಳಿಜಾರು, ನಡುವೆ ಬೆಟ್ಟ ಸಾಲುಗಳು ಉಂಟು. ಪಶ್ಚಿಮಾರ್ಧ 1000–1500 ಮೀ ಎತ್ತರವಾಗಿದ್ದರೆ, ಪೂರ್ವಾರ್ಧ ಭಾಗ 1500–2000 ಮೀ ಎತ್ತರವಾಗಿದೆ. ಪೂರ್ವ ಭಾಗದಲ್ಲಿ ಡ್ರೇಕನ್ಸ್ ಬರ್ಗ್ ಪರ್ವತಗಳಿವೆ. ಈಶಾನ್ಯಕ್ಕೆ ರೂಯಿ ಬರ್ಗ್ ಮತ್ತು ಗೋಲ್ಡನ್ ಗೇಟ್ ಶ್ರೇಣಿಗಳಿವೆ. ರಿಬೋಕ್ಕೋಪ್ ಎತ್ತರವಾದ ಶಿಖರ (2840ಮೀ).

**ನದಿಗಳು** : ಆರೆಂಜ್ ಮತ್ತು ವಾಲ್ ಮುಖ್ಯನದಿಗಳು. ಅನೇಕ ಉಪನದಿಗಳನ್ನು ಕೂಡಿಕೊಂಡು ಪಶ್ಚಿಮದ ಕಡೆಗೆ ಹರಿಯುತ್ತವೆ. ಪ್ರಾಂತ್ಯದ ಆರ್ಥಿಕವ್ಯವಸ್ಥೆಯಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಏಕೆಂದರೆ ಈ ನದಿಗಳು ಮತ್ತು ಅವುಗಳನ್ನು ಸೇರುವ ಉಪನದಿಗಳಿಗೆ ಹಲವು ಅಣೆಕಟ್ಟೆಗಳನ್ನು ನಿರ್ಮಿಸಿ ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ಪಡೆಯಲಾಗುತ್ತದೆ.

**ವಾಯುಗುಣ** : ಭೂಸ್ವರೂಪ ಮತ್ತು ಸಮುದ್ರಗಳಿಂದಿರುವ ದೂರಗಳು ಪ್ರಾಂತ್ಯದ ವಾಯುಗುಣ ನಿರ್ಧರಿಸುತ್ತವೆ. ಖಂಡಾಂತರ ಸಮೋಷ್ಣ ಮಾದರಿ ವಾಯುಗುಣ, ಅದು ಹಿತಕರ ಬೇಸಗೆ ಉಷ್ಣಾಂಶ ಹೆಚ್ಚು ಮಳೆ ಬೀಳುತ್ತದೆ. ಹವಾಗುಣ ತಂಪಾಗಿರುತ್ತದೆ. ಚಳಿಗಾಲ ಶೀತ ಮತ್ತು ಶುಷ್ಕವಾಗಿರುತ್ತದೆ. ಎತ್ತರವಾದ ಪರ್ವತ–ಪ್ರಸ್ಥಭೂಮಿಗಳಲ್ಲಿ ಹಿಮ ಮತ್ತು ಮಂಜು ಬೀಳುತ್ತವೆ.

**ಆರ್ಥಿಕತೆ** : ಗಣಿಗಾರಿಕೆ ಮತ್ತು ಕೃಷಿ ಜನರ ಮುಖ್ಯ ವೃತ್ತಿಗಳು. ವಿಪುಲವಾದ ಚಿನ್ನದ ನಿಕ್ಷೇಪದ ಹಂಚಿಕೆಯಿದ್ದು, ಚಿನ್ನದ ಉತ್ಪಾದನೆ ಹೆಚ್ಚು. ಕಲ್ಲಿದ್ದಲು, ವಜ್ರ, ಬೆಳ್ಳಿ, ಯುರೇನಿಯಂ ಮತ್ತು ಸುಣ್ಣಗಳ ಉತ್ಪಾದನೆಯೂ ಸಾಕಷ್ಟಿದೆ.

ಗಸ್ಟೇಟ್‌ನ್ನು ದಕ್ಷಿಣ ಆಫ್ರಿಕದ ಆಹಾರದ ಅಕ್ಷಯವೆನ್ನುವರು. ಪ್ರಾಂತ್ಯದ ಶೇ.90 ಭಾಗ ಕೃಷಿಗಾಗಿ ಬಳಕೆಯಾಗುತ್ತಿದೆ. ಗೋದಿ ಪ್ರಮುಖ ಬೆಳೆ. ಮೆಕ್ಕೆಜೋಳ, ಅಲ್ಫಾಲ್ಫಾ, ಬಾರ್ಲಿ, ಅವರೆ, ಓಟ್ಸ್, ಬಟಾಣಿ, ಆಲೂಗಡ್ಡೆ, ಸೊರ್ಗಾಮ್ ಮತ್ತು ಸೂರ್ಯಕಾಂತಿ. ಇತರೆ ಬೆಳೆಗಳು. ಕೃಷಿಕರು ಉಣ್ಣೆ ಮತ್ತು ಮಾಂಸ ಹಾಗೂ ಹೈನದ ಪದಾರ್ಥಗಳಿಗಾಗಿ ದನಕರು ಮತ್ತು ಕುರಿಗಳನ್ನು ಸಾಕುವರು.

ಕೈಗಾರಿಕೆಗಳ ಅಭಿವೃದ್ಧಿ ಕಡಿಮೆ. ರಾಸಾಯನಿಕ ಮತ್ತು ತೈಲ ಶುದ್ಧೀಕರಣ ಘಟಕಗಳು ಪ್ರಮುಖವಾದವು. (ಪಿ.ಎಂ)

**ಆರೆಂಜ್ ಮನೆತನ** : ಈಗ ಫ್ರಾನ್ಸಿನಲ್ಲಿ ಲೀನವಾಗಿರುವ ಆರೆಂಜ್ ಎಂಬ ಪಾಳೆಯಪಟ್ಟು, ಚಾರಲ್ಸ್ ಮಹಾಶಯನ ಕಾಲದಿಂದಲೂ ಒಂದು ಸ್ವತಂತ್ರ ಸಂಸ್ಥಾನವಾಗಿದ್ದಿ ತೆಂದು ಐತಿಹಾಸಿಕವಾಗಿ ಕಂಡುಬರುತ್ತದೆ. 8ನೆಯ ಶತಮಾನದಲ್ಲಿ ಜೀವಿಸಿದ್ದ ವಿಲಿಯಂ ಎಂಬಾತ ಆರೆಂಜಿನ ಮೊದಲ ರಾಜನಾಗಿದ್ದನೆಂದು ಹೇಳಲಾಗಿದೆ. ಹದಿನಾಲ್ಕನೆಯ ಲೂಯಿ ಈ ಪಾಳೆಯಪಟ್ಟನ್ನು ಜಯಿಸಿದ. ಆದರೆ ರಾಜಮನೆತನದ ಹಕ್ಕುಬಾಧ್ಯತೆಗಳನ್ನೊಪ್ಪಿ ಕೊಂಡ. ಮೂರನೆಯ ವಿಲಿಯಂ ಎಂಬ ಆರೆಂಜ್ ಸಂಸ್ಥಾನಾಧೀಶ 1688ರಲ್ಲಿ ಇಂಗ್ಲೆಂಡಿಗೆ

ಬಂದಿಳಿದು ಎರಡನೆಯ ಜೇಮ್ಸ್‌ನನ್ನು ಹೊರತಳ್ಳಿ 1702ರವರೆಗೂ ಇಂಗ್ಲೆಂಡಿನ ದೊರೆಯಾಗಿದ್ದ. ಆ ಬಳಿಕ ಹಕ್ಕುದಾರಿಕೆಯ ವಿಚಾರವಾಗಿ ಜಿಜ್ಞಾಸೆಯೆದ್ದಿತು. ಕೊನೆಗೆ ಜಾನ್ ವಿಲಿಯಂ ಫ್ರೈಸೋ ಎಂಬಾತನಿಗೆ ಆ ಹುರಳಿಲ್ಲದ ಹಕ್ಕುದಾರಿಕೆ ಲಭಿಸಿತು. ಆತನ ತರುವಾಯ ಐದನೆಯ ವಿಲಿಯಂ, ಆರನೆಯ ವಿಲಿಯಂ ಎಂಬುವರಿಗೆ ಆ ಹಕ್ಕು ದೊರೆಯಿತು. ಅವರಲ್ಲಿ ಆರನೆಯ ವಿಲಿಯಂ 1815ರಲ್ಲಿ ನೆದರ್ಲೆಂಡಿಗೆ ಒಂದನೆಯ ವಿಲಿಯಂ ಎಂಬ ಹೆಸರಿನಲ್ಲಿ ರಾಜನಾದ. (ಎಸ್.ಎಸ್.ಐ.)

**ಆರೈಗ :** ಬರಿಗಣ್ಣಿಗೆ ಸ್ಪಷ್ಟವಾಗಿ ಕಾಣುವ ನಕ್ಷತ್ರಪುಂಜ. ಆಕಾಶದ ಉತ್ತರ ವಲಯದಲ್ಲಿ ಪರ್ಸಿಯಸ್ ಪುಂಜ ಮತ್ತು ಮಿಥುನರಾಶಿಗಳ ನಡುವೆ ಇದೆ. ಸುಪ್ರಸಿದ್ಧ ಮಹಾವ್ಯಾಧ ಪುಂಜದಿಂದ (ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ಸಂಜೆ ಪೂರ್ವಾಕಾಶದಲ್ಲಿ ಕಾಣುವ ಭವ್ಯ ಚಿತ್ರ) ಉತ್ತರಕ್ಕಿದೆ. ಆರೈಗದಲ್ಲಿರುವ ಅತ್ಯಂತ ಪ್ರಕಾಶಮಾನ ನಕ್ಷತ್ರ ಬ್ರಹ್ಮ ಹೃದಯ. (ಕಪೆಲ್ಲಾ) ಇದರ ದೂರ 45 ಜ್ಯೋತಿರ್ವರ್ಷಗಳು. ದೃಗ್ಗೋಚರ ಕಾಂತಿ ಪ್ರಮಾಣದಲ್ಲಿ ಇದರ ಸ್ಥಾನ 6 (ಸೂರ್ಯ1). ಆರೈಗ ಪುಂಜದ ಸ್ವಲ್ಪಾಂಶ ಆಕಾಶಗಂಗೆಯ ಮೇಲೆ ಇದೆ. ಕಪೆಲ್ಲಾದ ಬ್ರಹ್ಮಾಂಡ ರೇಖಾಂಶ (ಗ್ಯಾಲಾಕ್ಟಿಕ್ ಲಾಂಗಿಟ್ಯೂಡ್) ಸುಮಾರು $130^0$. ಆರೈಗ ಪುಂಜದ ಪಂಚಮ ನಕ್ಷತ್ರ ಎಪ್ಸಿಲಾನ್ ಆರೈಗ ಮಹಾದೈತ್ಯ ನಕ್ಷತ್ರಗಳ (ಸುಪರ್ ಜಯಂಟ್ಸ್) ಸಾಲಿಗೆ ಸೇರಿದೆ. ಇದರ ವ್ಯಾಸ ಸೂರ್ಯವ್ಯಾಸದ 2,000 ಪಟ್ಟು, ಅಂದರೆ ಆರೈಗವನ್ನು ಸೂರ್ಯನ ಸ್ಥಾನದಲ್ಲಿಟ್ಟರೆ ಶನಿ, ಯುರೇನಸ್ ಗ್ರಹಗಳ ಕಕ್ಷೆಗಳ ನಡುವಣ ಪ್ರದೇಶದವರೆಗೆ ಈ ನಕ್ಷತ್ರ ವ್ಯಾಪಿಸುತ್ತದೆ. 1891ರಲ್ಲಿ ಆರೈಗಪುಂಜದಲ್ಲಿ ಒಂದು ಹೊಸ ನಕ್ಷತ್ರ ಗೋಚರವಾಯಿತು. ಇಂಥ ನಕ್ಷತ್ರಗಳ ಹೆಸರು ನೋವಾ. ಬರಿಗಣ್ಣಿಂದ ಕಂಡ ಈ ನೋವಾ (ಹೆಸರು ನೋವಾ ಆರೈಗ) ಖಗೋಳ ವಿಜ್ಞಾನಿಗಳ ವಿಶೇಷ ಕುತೂಹಲವನ್ನು ಆರೈಗ ಪುಂಜದೆಡೆಗೆ ಸೆಳೆಯಿತು. ಅಂದು ನೋವಾ ಆರೈಗದ ಕಾಂತಿವರ್ಗ (ಮ್ಯಾಗ್ನಿಟ್ಯೂಡ್) 3.8; ಇಂದು 15 (ನೋಡಿ– ನಕ್ಷತ್ರ–ಲೋಕ) ಲ್ಯಾಟಿನ್ ಭಾಷೆಯಲ್ಲಿ ಆರೈಗ ಪದದ ಅರ್ಥ ರಥಿಕ. ಆ ರಥಿಕ ತನ್ನ ಬಲಗೈಯಲ್ಲಿ ಲಗಾಮನ್ನೂ ಎಡಗೈಯಲ್ಲಿ ಆಡು ಮತ್ತು ಅದರ ಮರಿಗಳನ್ನೂ ಹಿಡಿದಿರುವಂತೆ ಕಾಣಿಸುತ್ತದೆ. ಕಪೆಲ್ಲಾ ನಕ್ಷತ್ರ ಆಡಿನ ದೇಹ. *

**ಆರೋಗ್ಯ ತಿಳಿವಳಿಕೆ :** ವೈದ್ಯ ವಿಜ್ಞಾನ ಬೇಗನೆ ಮುಂದುವರಿದಂತೆಲ್ಲ 1850 ರಿಂದೀಚೆಗೆ ನಿರೋಧಕ ವೈದ್ಯದಲ್ಲೂ ಜನಾರೋಗ್ಯದಲ್ಲೂ ಆ ಮುನ್ನಡೆಯ ಅನುಕೂಲತೆಗಳನ್ನು ಪಡೆಯಲು ಜನರಲ್ಲಿ ವೈದ್ಯಕ ವಿಚಾರಗಳ ತಿಳಿವಳಿಕೆ (ಹೆಲ್ತ್ ಎಜುಕೇಷನ್) ಚೆನ್ನಾಗಿ ಪ್ರಚಾರ ಆಗಬೇಕೆನ್ನುವುದು ಮನದಟ್ಟಾಯಿತು. ಎಷ್ಟೋ ದೇಶಗಳಲ್ಲಿ ಚೀಟಿಗಳು, ಪತ್ರಗಳ ರೂಪದಲ್ಲಿ ಆರೋಗ್ಯ ತಿಳಿವಳಿಕೆಯ ಸಾಧನಗಳು ಬಳಕೆಗೆ ಬಂದುವು. ಒಂದನೆಯ ಮಹಾಯುದ್ಧಕ್ಕೂ ಮೊದಲೇ ಕ್ಷಯ ನಿವಾರಣೆ ಸಂಘದ ತೆರನಾದ ವಿಶಿಷ್ಟ ಕ್ಷೇತ್ರಗಳಲ್ಲಿ ಅಮೆರಿಕದಲ್ಲಿ ಜನರ ಸಂಸ್ಥೆಗಳೇ ಹುಟ್ಟಿದ್ದವು. ಯುದ್ಧ ಮುಗಿದ ಮೇಲೆ ರಷ್ಯದಲ್ಲೂ ಒಂದು ಆರೋಗ್ಯ ತಿಳಿವಳಿಕೆಯ ಇಲಾಖೆ ಏರ್ಪಟ್ಟಿತು. ಹಾಗೆಯೇ ಅಮೆರಿಕದಲ್ಲೂ ಒಂದು ಇಲಾಖೆಯೂ (1918) ಆರೋಗ್ಯ ತಿಳಿವಳಿಕೆಯ ಮಂಡಳಿ ಒಂದು ಬ್ರಿಟನ್ನಿನಲ್ಲೂ (1925) ಹುಟ್ಟಿದುವು. ವಿಶ್ವ ಆರೋಗ್ಯ ಸಂಸ್ಥೆ ಕೂಡ ಒಂದು ವಿಭಾಗವನ್ನು ತೆರೆಯಿತು (1948). ಮುಖ್ಯವಾಗಿ ಮುಂದುವರಿಯುತ್ತಿರುವ ದೇಶಗಳ ಜನರಲ್ಲಿ ಆರೋಗ್ಯವನ್ನು ಕುರಿತ ತಿಳಿವಳಿಕೆಯ ಪ್ರಚಾರ ಆಗಬೇಕೆಂದು ಮನದಟ್ಟು ಮಾಡಿ ಕೊಡುವುದೊಂದು ದೊಡ್ಡ ಕಷ್ಟ.. ಬಹುಮಟ್ಟಿಗೆ ಎಲ್ಲ ದೇಶಗಳಲ್ಲೂ ಆರೋಗ್ಯದ ವಿಚಾರಗಳಲ್ಲಿ ಜನಪದ ಸಾಹಿತ್ಯ, ಶಾಸ್ತ್ರಗಳು, ಮಾಯಾಮಂತ್ರಗಳಿರುತ್ತವೆ. ಸರಿಯಾಗಿ ಯೋಚಿಸಿದರೆ ತಪ್ಪು ಎನಿಸುವುದಾದರೂ ಆರೋಗ್ಯ ವಿಷಯಗಳಲ್ಲಿ ಜನರು ತಮ್ಮ ಎಂದಿನ ನಂಬಿಕೆ, ಪದ್ಧತಿಗಳನ್ನೇ ಬಹುವಾಗಿ ನೆಚ್ಚಿರುವರು. ಆದ್ದರಿಂದಲೇ ಈ ವಿಚಾರಗಳ ಪ್ರಚಾರಕರು ಜನರಲ್ಲಿರುವ ನಂಬಿಕೆಗಳು, ಪದ್ಧತಿಗಳನ್ನು ಮೊದಲು ಚೆನ್ನಾಗಿ ತಿಳಿದುಕೊಳ್ಳಬೇಕು. 20ನೆಯ ಶತಮಾನದಲ್ಲಿ ಎಲ್ಲ ದೇಶಗಳಲ್ಲೂ ಎಳೆಯ ಮಕ್ಕಳ ಆರೋಗ್ಯ ಮುಖ್ಯ ಎನ್ನುವುದು ಚೆನ್ನಾಗಿ ಅರಿವಾಗುತ್ತ ಬಂದು, ಹೆರಿಗೆ ಮುಂಚಿನಿಂದ, ಆಮೇಲೆ ಶಾಲಾ ಕಾಲೇಜುಗಳಲ್ಲೂ ಹೆಚ್ಚಿನ ವೈದ್ಯಕ ಪಾಲನೆಯಲ್ಲೂ ಶಾಲೆಗಳಲ್ಲಿ ಆರೋಗ್ಯ ಪಾಠಗಳನ್ನು ಹೇಳಿಕೊಡುವುದರಲ್ಲೂ ಹೊರದೋರಿದುವು. ಹೆರಿಗೆ ಮುಂಚಿನ, ಹುಟ್ಟಿದ ಮೇಲಿನ ಪಾಲನೆಯಲ್ಲಿ ಕಲಿಕೆ, ವೈದ್ಯಕ ಮೇಲ್ವಿಚಾರಣೆಯೂ ಇರುವುದರಿಂದ, ವಿಶಾಲಾರ್ಥದಲ್ಲಿ ಆರೋಗ್ಯ ಪ್ರಚಾರದ ತಿಳಿವಳಿಕೆಯಲ್ಲಿ ಇವೆರಡು ವಿಚಾರಗಳೂ ಸೇರಿವೆ (ನೋಡಿ – ತಾಯಿಮಕ್ಕಳ ಆರೋಗ್ಯ).

ಶಾಲೆಯಲ್ಲಿ ಆರೋಗ್ಯದ ತಿಳಿವಳಿಕೆ : ಹಿಂದಿನ ಕಾಲದಲ್ಲಿ ಅಂಟುರೋಗಗಳು ಹರಡುವುದನ್ನು ತಡೆದ ಶಾಲಾ ಆರೋಗ್ಯ ಕಾರ್ಯಕ್ರಮಗಳು ಮಾತ್ರ ಇದ್ದುವು. ಮೊದಲಿಗೆ ಫ್ರಾನ್ಸಿನಲ್ಲಿ ಶಾಲಾ ಅಧಿಕಾರಿಗಳು ಶಾಲೆಗಳ ಚೊಕ್ಕಟವನ್ನೂ ನೋಡಿಕೊಳ್ಳುವಂತೆ ನೇಮಕವಾದರು (1833). ಶಾಲೆಯ ಮಕ್ಕಳ ಆರೋಗ್ಯಕ್ಕಾಗಿ ಹಲವು ದೇಶಗಳಲ್ಲಿ ಬೇರೆಬೇರೆ ಕಾಯಿದೆಗಳಿವೆ. ಶಾಲಾ ವೈದ್ಯನೊಬ್ಬ ಮೊದಲು ನೇಮಕವಾದದ್ದು ಸ್ವೀಡನ್ನಿನಲ್ಲಿ. 20ನೆಯ ಶತಮಾನದಲ್ಲಿ. ಅದಕ್ಕೂ ಹಿಂದಿದ್ದ, ಕೇವಲ ಆರೋಗ್ಯ ಜೀವನದ ಕಟ್ಟುಪಾಡುಗಳು, ಆಚರಣೆಯನ್ನು ಮಾತ್ರ ತಿಳಿಸಿಕೊಡುತ್ತಿದ್ದ ಆರೋಗ್ಯಶಾಸ್ತ್ರ ಎನ್ನುವುದರ ಬದಲು ಆರೋಗ್ಯ ತಿಳಿವಳಿಕೆ ಎನ್ನುವುದು ಜಾರಿಗೆ ಬಂತು. ಎಲ್ಲೆಲ್ಲೂ ಒಳ್ಳೆಯ ಭಾವನೆಯನ್ನು, ಶಾಲೆಗಳಲ್ಲಿ ಆರೋಗ್ಯಕರ ಪರಿಸರವನ್ನು ಒದಗಿಸುವುದರಿಂದ ಒಳ್ಳೆಯ ಶಾಲೆಯ ಆರೋಗ್ಯವನ್ನು ಸಾಧಿಸಬಹುದು. ಎಳೆಗೂಸುಗಳ, ಮೊದಲ ಶಾಲೆಗಳ ಮಟ್ಟಗಳಲ್ಲಿ ನಿಜವಾದ ತಿಳಿವಳಿಕೆ ಕೊಡುವುದೇನೂ ಅಷ್ಟಾಗಿ ಇಲ್ಲವಾದರೂ, ಕಾರ್ಯಕ್ರಮದ ಮೂಲಕ ಇದನ್ನು ಚೆನ್ನಾಗಿ ನೆರವೇರಿಸಬಹುದು. ಮಾಧ್ಯಮಿಕ ಶಾಲೆಯ ಮಟ್ಟದಲ್ಲಿ ಬಳಸಲಾಗಿ, ಜೀವಶಾಸ್ತ್ರ, ಗೃಹ ವಿಜ್ಞಾನ, ನಗರವಾಸ, ಆಟಪಾಟಗಳ ಮೂಲಕ ಆರೋಗ್ಯದ ಶಿಕ್ಷಣವನ್ನು ಕೊಡಲಾಗುವುದು. ಈ ಮಟ್ಟದಲ್ಲಿ ಮುಖ್ಯವಾಗಿ ಶಾಲೆಯ ದಾದಿ, ಆರೋಗ್ಯ ಸಂದರ್ಶಕರ ಮೂಲಕ, ಕೆಲಸಗಾರರನ್ನೂ ಆಯ್ದ ಕೆಲವು ಆರೋಗ್ಯದ ವಿಚಾರಗಳನ್ನು ತಿಳಿಸಿಕೊಡಲು ಕೇಳಿಕೊಳ್ಳಬಹುದು. (ಡಿ.ಎಸ್.ಎಸ್.)

**ಆರೋಗ್ಯವಿಮೆ :** ಒಬ್ಬನ ವೈದ್ಯಕೀಯ ಖರ್ಚುಗಳನ್ನು ವಹಿಸಿಕೊಳ್ಳಲು ಮುಂಚೆಯೇ ಮಾಡಿಕೊಂಡಿರುವ ಏರ್ಪಾಡು. ವಿಮೆಯ ಪತ್ರದಲ್ಲೋ ಕಾಯಿದೆಯಲ್ಲೋ ಸೂಚಿಸಿರುವಂತೆ, ಆರೋಗ್ಯ ಸೇವೆಯ ಪೂರ್ತಿ ಇಲ್ಲವೇ ಒಂದು ಪಾಲಿನ ಖರ್ಚು ವಹಿಸುವ ಕೊಡುಗೆಗಳೋ ತೆರಿಗೆಯೋ ಆರೋಗ್ಯವಿಮೆಯ ಅಡಿಗಲ್ಲು. ವಿಮೆ ಮುಂಗಡ ಹಣ, ತೆರಿಗೆಗಳ ಮುಂಚಿನ ಸಲ್ಲಿಕೆ, ನಿಧಿಗಳ ಕೂಡಿಕೆ, ವೈದ್ಯರ ಪಾಲನೆ ದೊರೆಯಲು ದುಡ್ಡಿನ ಕೊರತೆಗಳನ್ನು ಪೂರ್ತಿಯಾಗೋ, ಪಾಲಾಗೋ ನೀಗುವುದು, ಕೊಡುಗೆಗಳ ಆಧಾರದ ಮೇಲೆ ಅನುಕೂಲಗಳನ್ನು ಪಡೆದ ಹಕ್ಕು, ಇಲ್ಲವೇ ಯೋಗ್ಯತೆ ಅಳೆಯದೆ ಉದ್ಯೋಗ ಒದಗಿಸುವುದು. ಇವೇ ಆರೋಗ್ಯ ವಿಮೆಯ ಮುಖ್ಯ ವಿಶೇಷಗಳು. ಬೇನೆ ಬಿದ್ದೋ ಪೆಟ್ಟುಗಾಯಗಳಿಂದ ಊನವಾಗೋ ಸಂಪಾದನೆ ನಿಂತುಹೋದಾಗ ದುಡ್ಡಿನ ನೆರವೂ ಆರೋಗ್ಯವಿಮೆಯಲ್ಲಿ ಸೇರಿರುವುದು. ಈ ತೆರನಾಗಿ ಸಂಪಾದನೆ ತಪ್ಪಿದಾಗ ನೆರವಾಗಲು ಅಮೆರಿಕದಲ್ಲಿ ಸರ್ಕಾರವೂ ಜನರ ಸಂಸ್ಥೆಗಳೂ ಇವೆ. ಆದರೂ ಸಂಪಾದನೆ ಕಡಿತವನ್ನೂ ಆರೋಗ್ಯ ಸೇವೆಗಳನ್ನೂ ಬೇರೆ ಬೇರೆಯಾಗಿ ಪರಿಗಣಿಸುವುದೇ ಹೆಚ್ಚಾಗಿ ರೂಢಿಯಲ್ಲಿ ಬರುತ್ತಿದೆ. ಇಎಸ್ಐಎಸ್ ಮತ್ತು ಸಿಜಿಎಚ್ಎಸ್ ಗಳು ಆರೋಗ್ಯವಿಮೆಗೆ ಒಳ್ಳೆಯ ಉದಾಹರಣೆಗಳು. (ಡಿ.ಎಸ್.ಎಸ್.)

**ಆರೋಗ್ಯಶಾಸ್ತ್ರ :** ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳುವ ವಿಧಾನಗಳನ್ನು ವಿವರಿಸುವ ಶಾಸ್ತ್ರ. ಮಾನವ ಮೈ ಮನಸ್ಸುಗಳು ಎರಡನ್ನೂ ಚೆನ್ನಾಗಿರಿಸಲು ನೆರವಾಗುವ ಇನ್ನೂ ಅನೇಕವಿಭಾಗಗಳೂ ಇದರಲ್ಲಿ ಸೇರುತ್ತವೆ. ಎಲ್ಲಕ್ಕೂ ಮುಖ್ಯವಾಗಿ, ಒಬ್ಬರ ವಿಚಾರವಾಗಿನ ಆಹಾರ, ನೀರು ಮತ್ತಿತರ ಪಾನಗಳು, ಉಡುಗೆತೊಡುಗೆಗಳು, ಕೆಲಸ, ವ್ಯಾಯಾಮ, ನಿದ್ರೆ, ಮೈ ಚೊಕ್ಕಟತೆ, ತಂಬಾಕು, ಮಂಪರಕಾರಿಗಳು ಇತ್ಯಾದಿಗಳ ಹೆಚ್ಚಿನ ಚಟಗಳೂ ಇದರಲ್ಲಿ ವಿವರವಾಗಿ ತಿಳಿಸಿಕೊಡುವುದು. ಒಬ್ಬೊಬ್ಬರ ಆರೋಗ್ಯ ಚೆನ್ನಾಗಿರಲು ಬೇಕೇಬೇಕಿರುವ ಜನಾರೋಗ್ಯದಲ್ಲಿ ಹವಾಗುಣ, ಭೂಮಿಗುಣ, ವಾಸದ ಮನೆ, ವಸತಿಗಳು, ಅವುಗಳ ಸಾಮಾನು ಜೋಡಣೆ, ರೀತಿಗಳು, ಮನೆಗಳಲ್ಲಿ ಗಾಳಿ ಬೆಳಕುಗಳ ಏರ್ಪಾಡು; ಕಸಕಡ್ಡಿ, ಕೊಳಕುಕೊಚ್ಚೆಗಳ ಸಾಗಣೆ, ರೋಗಗಳ ಸಂಭವ, ಅವುಗಳ ತಡೆಗಳ ವೈದ್ಯಕ ತಿಳಿವು, ಸತ್ತವರ ವಿಲೇವಾರಿ ಇವೂ ಸೇರಿವೆ. ಈ ವಿಚಾರಗಳನ್ನೆಲ್ಲ ಬೇರೆಬೇರೆ ಲೇಖನಗಳಲ್ಲಿ ಕೊಟ್ಟಿದೆ. **(ನೋಡಿ– ಏಕಾಣುಜೀವಿಶಾಸ್ತ್ರ; ಕೈಗಾರಿಕಾ ವೈದ್ಯ)** (ಡಿ.ಎಸ್.ಎಸ್.)

**ಆರೋಗ್ಯಶಿಕ್ಷಣ :** ಸತ್ವಪೂರ್ಣವಾಗಿ ತೃಪ್ತಿ ಸಮಾಧಾನಗಳಿಂದ ತುಂಬಿದ ಸಾರ್ಥಕ ಜೀವನ ನಡೆಸಲು ಅವಶ್ಯವಾದ ದೇಹಶಕ್ತಿಯನ್ನೂ ಬುದ್ಧಿಶಕ್ತಿಯನ್ನೂ ವೃದ್ಧಿಪಡಿಸಿಕೊಳ್ಳುವುದೇ ಆರೋಗ್ಯಶಿಕ್ಷಣದ ಗುರಿ. ಉತ್ತಮ ಆರೋಗ್ಯ ಸಾಧಕ ಅಭ್ಯಾಸಗಳನ್ನು ಬೆಳೆಸುವ ಉದ್ದೇಶದಿಂದ ಜನರ ಜ್ಞಾನದಲ್ಲೂ ಮನೋಭಾವದಲ್ಲೂ ಚರ್ಯೆಯಲ್ಲೂ ಪರಿವರ್ತನೆ ಮೂಡಿಸುವುದೇ ಸಾಮಾನ್ಯ ಶಿಕ್ಷಣದ ಉದ್ದೇಶವಷ್ಟೆ. ಆರೋಗ್ಯಶಿಕ್ಷಣದ ಮೂಲೋದ್ದೇಶವೂ ಅದೇ ಆಗಿದೆ. ಆರೋಗ್ಯಶಿಕ್ಷಣ ಇಬ್ಬಗೆಯಾಗಿದೆ: 1. ಜನಸಮುದಾಯದ ಹಿತಾರ್ಥವಾಗಿ ನಡೆಯುವ ಸಾರ್ವಜನಿಕ ಶಿಕ್ಷಣ. 2. ಮಕ್ಕಳ ಆರೋಗ್ಯ ರಕ್ಷಣೆಯ ಸಲುವಾಗಿ ನಡೆಯುವ ಶಾಲಾ ಆರೋಗ್ಯಶಿಕ್ಷಣ.

ವೈದ್ಯಶಾಸ್ತ್ರ ವಿಚಾರದಲ್ಲಿ ಪ್ರಯೋಗಶಾಲೆಗಳಲ್ಲಿ ನಡೆಸಿದ ಪ್ರಯೋಗ ಸಿದ್ಧಾಂತಗಳನ್ನು ಮಾನವಕೋಟಿಯ ದಿನ ದಿನದ ಬಾಳಿಗೆ ಅನ್ವಯಿಸಲು ಬಹು ದೀರ್ಘ ಕಾಲದಿಂದಲೂ ಮಹತ್ವದ ಕಾರ್ಯಕ್ರಮವೆಂದು ಒಪ್ಪಿಕೊಳ್ಳಲಾದ ಈ ಬಗೆಯ ಆಧುನಿಕ ಜನಾರೋಗ್ಯ ನೀತಿಶಿಕ್ಷಣ ಈಚೆಗೆ ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿದೆ. ನಾನಾ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಂದ ಇನ್ನಷ್ಟು ಹೃತ್ಪೂರ್ವಕ ಸಹಕಾರ ಪಡೆಯಲು ಅದರಿಂದ ಅನುಕೂಲವಾದೀತೆಂಬ ನಿರೀಕ್ಷೆಯಿದೆ.

ಆರೋಗ್ಯಶಿಕ್ಷಣಕ್ಕೆ ನಮ್ಮ ದಿನನಿತ್ಯದ ಜೀವನದಲ್ಲಿ ಮನೆ, ಆಸ್ಪತ್ರೆ, ಪಾಠಶಾಲೆ, ಉತ್ಸವ, ಜಾತ್ರೆಗಳು, ವ್ಯವಸ್ಥಿತವಾಗಿ ಏರ್ಪಟ್ಟ ಗೋಷ್ಠಿಗಳು ಇವೇ ಮೊದಲಾಗಿ ಎಷ್ಟೋ ಅವಕಾಶಗಳು ಇವೆ. ವೇತನ ಪಡೆಯುವ ಕಾರ್ಯಕರ್ತರಿಂದ ಹಿಡಿದು, ಸಮಾಜದ ಮುಂದಾಳುಗಳಂಥ ಸ್ವಯಂಸೇವಾಕರ್ತರವರೆಗಿನ ಸಕಲ ಕಲ್ಯಾಣ ಕಾರ್ಯಕರ್ತರೂ ಆರೋಗ್ಯ ಶಿಕ್ಷಕರೇ ಸರಿ.

ಆರೋಗ್ಯಶಿಕ್ಷಣ ಕಾರ್ಯರೂಪಕ್ಕೆ ಬರಲು ಸೂಕ್ತ ಜ್ಞಾನಾರ್ಜನೆಯೂ, ಈ ವಿಚಾರದಲ್ಲಿ ಅತ್ಯಾಧುನಿಕ ಜ್ಞಾನವನ್ನು ಸಂಪಾದಿಸಿಕೊಂಡು ಅದನ್ನು ಬಳಕೆಗೆ ತರುವ ನೈಪುಣ್ಯವೂ ಬೇಕಾಗುವುದು. ಇದರ ಜೊತೆಗೆ, ಆರೋಗ್ಯಶಿಕ್ಷಣದ ವಿಧಾನಗಳನ್ನೂ ಅರಿತಿರಬೇಕು; ಶ್ರವಣ, ವೀಕ್ಷಣ ಸಾಧನಗಳಂಥ ಶಿಕ್ಷಣ ಮಾಧ್ಯಮಗಳನ್ನು ಬಳಸುವ ಕ್ರಮವನ್ನೂ ತಿಳಿದಿರಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ತರುವಾಯ, ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವ ಭಾರತ ಆರೋಗ್ಯ ಶಿಕ್ಷಣಕ್ಕೆ ವಿಶೇಷ ಮಹತ್ತ್ವ ನೀಡಿದೆ. ಸಾರ್ವಜನಿಕ ಆರೋಗ್ಯ ಇಲಾಖೆ, ಗ್ರಾಮಾಂತರ ಆರೋಗ್ಯ ಕೇಂದ್ರಗಳು, ಸರ್ಕಾರದ ಪ್ರಚಾರ ಇಲಾಖೆ, ರೆಡ್‌ಕ್ರಾಸ್ ಸಂಸ್ಥೆ–ಇವೇ ಮೊದಲಾದುವು ಈ ಬಗ್ಗೆ ಸಾಕಷ್ಟು ಕೆಲಸವನ್ನು ನಿರ್ವಹಿಸುತ್ತಿವೆ.
**(ನೋಡಿ– ಅಂಗಸಾಧನೆ; ಕ್ರೀಡೆಗಳು; ದೈಹಿಕ ಚಟುವಟಿಕೆಗಳು)** (ಎಸ್.ಎನ್.)

**ಆರೋಗ್ಯ ಸುರಕ್ಷಣಾ ಕಾಯಿದೆಗಳು :** ಜನತೆಯ ಆರೋಗ್ಯ, ನೆಮ್ಮದಿಗಳನ್ನು ಪಾಲಿಸುವುದು ಒಳ್ಳೆಯ ಸರ್ಕಾರದ, ಕಾನೂನುಗಳ ಮುಖ್ಯ ಜವಾಬ್ದಾರಿಗಳಲ್ಲಿ ಒಂದು. ಹಿಂದಿನ ಕಾಲದಲ್ಲಿ ಒಬ್ಬನಿಂದ ಅಪಾಯದ ಸುಳಿವು ಕಂಡುಬಂದ ಕೂಡಲೇ ಜನತೆಗೆ ಕೆಡುಕಾಗದಿರಲೆಂದು ಅವನನ್ನು ದೂರವಿರಿಸಿ ಅಥವಾ ಕೊಂದು ಅಪಾಯದಿಂದ ಪಾರಾಗುತ್ತಿದ್ದರು. ಕುಷ್ಠರೋಗಿಗಳನ್ನು ಬದುಕಿರುವಾಗಲೇ ಹೂಳುತ್ತಿದ್ದರಂತೆ. ಆಧುನಿಕ ಸಾರ್ವಜನಿಕ ಆರೋಗ್ಯ ರಕ್ಷಣಾ ಕಾಯಿದೆಗಳು ಸಮಾಜ ಶಾಸನಗಳು ಮತ್ತು ರೋಗನಿವಾರಕ ಉಪಾಯಗಳು 19ನೆಯ ಶತಮಾನದಿಂದೀಚಿನ ವಿಜ್ಞಾನದ ಮುನ್ನಡೆಯಿಂದ ಹುಟ್ಟಿ ಬೆಳೆದು ಸ್ಥಾಪಿತವಾಗುತ್ತಿವೆ. ಭಾರತದ ಸಂಸ್ಕೃತಿಯ ಇತಿಹಾಸದಲ್ಲಂತೂ ಜನಾರೋಗ್ಯ, ನೆಮ್ಮದಿ ಮುಖ್ಯಸ್ಥಾನ ಗಳಿಸಿದ್ದುವು. 25 ಶತಮಾನಗಳ ಹಿಂದೆಯೇ ಹರಪ್ಪ ಮತ್ತು ಮೊಹೆಂಜೋದಾರೊಗಳ ಪಂಡಿತರಿಗೆ ಚರಂಡಿಯ ವ್ಯವಸ್ಥೆಯು ಜನಾರೋಗ್ಯ ರಕ್ಷಣೆಗೆ ಮುಖ್ಯವೆಂಬುದು ತಿಳಿದಿತ್ತು. ಆಧುನಿಕ ವೈದ್ಯವಿಜ್ಞಾನ ಪಿತಾಮಹ ಹಿಪೊಕ್ರೆಟಿಸ್ ಹುಟ್ಟುವ ಎಷ್ಟೋ ಕಾಲದ ಮೊದಲೇ, ಅಂದರೆ ವೇದಗಳ ಕಾಲದಲ್ಲಿಯೇ, ಹಿಂದುಗಳು ನೈರ್ಮಲ್ಯದ ಮಹತ್ವ ಅರಿತಿದ್ದರು. ಆಯುರ್ವೇದದ ಚರಕಸಂಹಿತೆ ಸುಶ್ರುತಸಂಹಿತೆಗಳಲ್ಲಿ ಆರೋಗ್ಯಶಾಸ್ತ್ರಕ್ಕೆ ಬೇರೆ ಅಧ್ಯಾಯವೇ ಮುಡಿಪಾಗಿದೆ. ಸುಶ್ರುತ ಸಂಹಿತೆಯಲ್ಲಿ ಆರೋಗ್ಯರಕ್ಷಣೆಯಲ್ಲಿ ನೀರು ಆಹಾರಗಳ ಪಾತ್ರ ಉಲ್ಲೇಖಿಸಿದೆ. ಮಹಾಭಾರತದ ಏಳನೆಯ ಅಧ್ಯಾಯದಲ್ಲಿ (ಪ್ರ.ಶ.ಪೂ. 600) ನೊಣ, ಕಾಗೆ, ಹದ್ದುಗಳ ಉಪದ್ರವ ಮುಂಬರುವ ವಾಂತಿ, ಭೇದಿ ಸಾಂಕ್ರಾಮಿಕದ ಸೂಚನೆ ಎಂದಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ (ಪ್ರ.ಶ.ಪೂ. 350), ಸೈನ್ಯಗಳು ಬೀಡು ಬಿಡುವ ಜಾಗಗಳನ್ನು ತಜ್ಞರು ಪರೀಶೀಲಿಸಿದ ಮೇಲೆ ನೆಲೆಸತಕ್ಕದ್ದೆಂದು ಹೇಳಿದೆ. ಭೂಮಿಯ ಏರುಪೇರು, ನೆಲದ ಗುಣ, ಹವೆ ಹಾಗೂ ಗಾಳಿ ಬಲವಾಗಿ ಬೀಸಿದರೆ ಬಿಸಿಲು ವಿಪರೀತವಾದರೆ ರಕ್ಷಣೆಗೆ ನೆರಳಿನ ಮರ, ಇವನ್ನೆಲ್ಲ ಗಮನಿಸಬೇಕೆಂದಿದೆ. ನೀರು ಸಿಗದ ಕಡೆಗಳಲ್ಲಿ, ಶುಭ್ರವಾದ ನೀರನ್ನು ಗಾಡಿಗಳಲ್ಲಿ ಸಾಕಷ್ಟು ಒಯ್ಯಬೇಕು. ಇಲ್ಲದಿದ್ದರೆ ಕೊಳಕು ನೀರಿನಿಂದ ರೋಗಕ್ಕೆ ತುತ್ತಾಗಬೇಕಾಗುತ್ತದೆ ಎಂದಿದೆ. ರೋಮಿನ ಜೂಲಿಯಸ್ ಸೀಸರ್ ತನ್ನ ಸೈನ್ಯದ ದೈಹಿಕ ಪುಷ್ಟಿ ಅದರಲ್ಲೂ ದಿನವೂ ಸ್ನಾನ, ಬೀಡಿನ ನೈರ್ಮಲ್ಯದ ಕಡೆ ಗಮನಕೊಡುತ್ತಿದ್ದನಂತೆ. ಇಂಗ್ಲೆಂಡಿನ ಮಾರ್ಲ್‌ಬರೋ ಡ್ಯೂಕ್ ತನ್ನ ಸೈನಿಕರ ಉಡುಪು ಆಹಾರಗಳಿಗೆ ಬಹಳ ಮಹತ್ತ್ವ ಕೊಡುತ್ತಿದ್ದ; ಕಾಯಿಲೆ ಬರದಂತೆ ನೋಡಿಕೊಳ್ಳುತ್ತಿದ್ದ. ಹೀಗೆ ಯಾವುದಾದರೂ ಒಂದು ನಡವಳಿಕೆ ಆರೋಗ್ಯ ದೃಷ್ಟಿಯಿಂದ ಅತ್ಯಗತ್ಯವೆಂದೆನಿಸಿದರೆ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕಾನೂನಾಗಿ ಆಚರಣೆಗೆ ತರುವುದು ಸಮಾಜದ ಹೊಣೆ, ಕೇವಲ ರೋಗಿಗಳ ಬೇರ್ಪಡಿಕೆ, ಆರೋಗ್ಯ. ನೈರ್ಮಲ್ಯದ ನಿಯಮಗಳ ಪಾಲನೆ ಹಿಂದಿನಿಂದಲೂ ಬಂದಿದೆ. ಈ ನಿಯಮಗಳು ಸಮಾಜದ ಒಳಿತಿಗೆ ಬೇಕೇಬೇಕೆನಿಸಿದಾಗ ಕಾಯಿದೆಗಳಾಗುತ್ತಿದ್ದುವು. ಹಲವುವೇಳೆ ಕಾಯಿದೆಯಾಗಿ ಅಲ್ಲದಿದ್ದರೂ ನಿಯಮಗಳು ಸಂಪ್ರದಾಯವಾಗೋ ಧರ್ಮನಿಷ್ಠೆಯಾಗೋ ಆಚರಣೆಗೆ ಬರುತ್ತಿದ್ದುವು. ಆರೋಗ್ಯ, ಸುರಕ್ಷಣಾ ಕಾಯಿದೆಗಳ ಮೂಲ ಉದ್ದೇಶಗಳಲ್ಲಿ ಸಮಾಜದ ವ್ಯವಸ್ಥೆ, ಶಾಂತಿ ನೆಲೆಸಿಕೆ, ಜನಬಲದ ಸಂಘಟನೆ, ಹೊಲಸು ಕೆಲಸಗಳಿಗೆ ಎಡೆಗೊಡದಿರುವುದು ಮುಖ್ಯವಾದುವು. ಈ ಕಾಯಿದೆಗಳು ಆಧುನಿಕ ಪೋಲೀಸ್ ಇಲಾಖೆಯ ಕಾರ್ಯಾಚರಣೆಯ ಮುನ್ಸೂಚಕಗಳೆಂದು ಹೇಳಬಹುದು. ಆರೋಗ್ಯ ಮತ್ತು ಕ್ಷೇಮರಕ್ಷಣಾ ಕಾಯಿದೆಗಳ ಚರಿತ್ರೆ ಮುಖ್ಯವಾಗಿ ಜಾತಿ, ಧರ್ಮಗಳ, ರಾಜಕೀಯ, ಆರ್ಥಿಕ ವಿಜ್ಞಾನದ ಪ್ರಭಾವಗಳಿಗೆ ಈಡಾಗಿದೆ. ಸಮಾಜ ಜೀವನದ ಆರೋಗ್ಯ ಸಮಸ್ಯೆಗಳನ್ನು ಅಂದರೆ ಸಾಂಕ್ರಾಮಿಕ ಜಾಡ್ಯಗಳ ಹತೋಟಿ, ನೈರ್ಮಲ್ಯ, ಒಳ್ಳೆಯ ಆಹಾರ, ನೀರಿನ ಪೂರೈಕೆ, ಮಲಮೂತ್ರ ಮತ್ತಿತರ ಕಚರ ಪಾಕೀಜ, ಚರಂಡಿ ವ್ಯವಸ್ಥೆ, ರೋಗಿಗಳ ಚಿಕಿತ್ಸೆ ಇವನ್ನೆಲ್ಲ ನೋಡಿಕೊಳ್ಳಲು, ಆಧುನಿಕ ರೀತಿಯಲ್ಲಿ ಅಲ್ಲದಿದ್ದರೂ, ಆಗಿನ ಕಾಲದ ತಿಳಿವಳಿಗೆ ತಕ್ಕಂತೆ ವ್ಯವಸ್ಥೆ ಮಾಡಲು ಸಾರ್ವಜನಿಕ ಸಂಸ್ಥೆ ಇತ್ತು. ಆರೋಗ್ಯ ನಿಯಮಗಳು ಧಾರ್ಮಿಕ ಸಂಪ್ರದಾಯಗಳೊಂದಿಗೆ ಬೆರೆತಿದ್ದುವು. ಉದಾಹರಣೆಗೆ, ಮನೆಯಲ್ಲಿ ಯಾರಾದರೂ ಸತ್ತರೆ ಹತ್ತು ದಿವಸಗಳ ಸೂತಕವೆಂದು ಹೊರಗಿನವರೊಡನೆ ಸಂಪರ್ಕವಿಲ್ಲ. ಸಾಂಕ್ರಾಮಿಕ ಜಾಡ್ಯದಿಂದಾಗಿ ಸತ್ತಿದ್ದರೆ, ಈ ಸಂಪ್ರದಾಯದಿಂದ ಮತ್ತೊಬ್ಬರಿಗೆ ರೋಗ ಹರಡುವ ಸಂಭವ ಕಡಿಮೆ. 15 ದಿವಸಗಳಿಗೊಂದಾವರ್ತಿ ಏಕಾದಶಿ ಉಪವಾಸ. ಹಬ್ಬ ಹುಣ್ಣಿಮೆಗಳಲ್ಲಿ ಊಟಕ್ಕೆ ಬಡಿಸಬೇಕಾದ ಸಮತೂಕದ ಆಹಾರ, ದಿನಂಪ್ರತಿ ಸ್ನಾನ, ಶುಭ್ರವಾದ ಬಟ್ಟೆ ಹಾಕಿಕೊಳ್ಳುವುದು ಇವೆಲ್ಲ ನಿತ್ಯಕರ್ಮಗಳು. ಚಿಕ್ಕಪ್ಪ, ದೊಡ್ಡಪ್ಪ, ಅಣ್ಣ ತಂಗಿಯರ ಮಕ್ಕಳು, ಸ್ವಗೋತ್ರದವರು, ಹತ್ತಿರ ಸಂಬಂಧಿಗಳ ನಡುವೆ ವಿವಾಹಗಳು ನಿಷಿದ್ಧ. ಇವುಗಳ ನಡುವೆ ಆನುವಂಶಿಕವಾಗಿ ಬರುವ ಕುಂದುಗಳು, ದುರ್ಬಲತೆ, ರೋಗಗಳನ್ನು ತಡೆಗಟ್ಟುವ ಮುಂಜಾಗ್ರತೆಯ ಕ್ರಮಗಳು. ಹೀಗೆ ಇನ್ನೂ ಅನೇಕ ಸಂಪ್ರದಾಯಗಳು ರೂಢಿಯಲ್ಲಿವೆ. ಪಾಶ್ಚಿಮಾತ್ಯರಲ್ಲಿಯೂ ಬಹಳ ಹಿಂದಿನ ಕಾಲದಲ್ಲಿ ಚರ್ಚಿಗೂ, ರಾಜ್ಯಾಡಳಿತ ಕಾರುಬಾರುಗಳಿಗೂ ನಿಕಟ ಸಂಬಂಧವಿದ್ದೇ ಇತ್ತು. ಅನೇಕ ಶತಮಾನಗಳ ತನಕ ವಿದ್ಯಾವಂತರೆಲ್ಲರೂ ಚರ್ಚಿಗೆ ಸಂಬಂಧಿಸಿದವರೇ ಆಗಿದ್ದರು; ಅಂದರೆ ಜ್ಞಾನ, ವಿಜ್ಞಾನ ಚರ್ಚಿನ ಹತೋಟಿಯಲ್ಲಿತ್ತು. ಯುರೋಪಿನಲ್ಲಿ ನಡೆದ ಸುಧಾರಣೆಯ ಅನಂತರವೇ ಚರ್ಚಿನ ನಿಕಟ ಸಂಬಂಧ ದೂರವಾದುದು. ಕಾಲರ, ಪ್ಲೇಗು, ಸಿಡುಬುಗಳ ಉಪದ್ರವಗಳು ದೇವರ ಶಾಪವೆಂಬ ನಂಬಿಕೆಗಳು ಜನಾರೋಗ್ಯ, ಸಾಮಾಜಿಕ ಸುಧಾರಣೆಗಳಿಗೆ ಅಡಚಣೆಗಳು. 19–20ನೆಯ ಶತಮಾನದ ಕೈಗಾರಿಕಾ ಆಂದೋಲನ ಆದಮೇಲೆ ಜನಾರೋಗ್ಯ, ನೈರ್ಮಲ್ಯಗಳಿಗೆ ಅಧಿಕೃತ ಮನ್ನಣೆ ದೊರೆತಿದೆ. ಪ್ರ.ಶ.ಪೂ.5001–500ರ ಕಾಲದಲ್ಲಿ ಆರೋಗ್ಯ, ನೈರ್ಮಲ್ಯಗಳ ಮಟ್ಟ ಇಳಿಯಿತು. ಗ್ರೀಕ್ ಜನರ ನೈರ್ಮಲ್ಯ ರೋಮ್ ಜನಾರೋಗ್ಯ ನೈರ್ಮಲ್ಯ ಆಧುನಿಕ ಕಾನೂನುಗಳಿಗೆ ತಳಹದಿ. ಗ್ರೀಸಿನಲ್ಲಿ ಪ್ರ.ಶ.ಪೂ. 2100–1700ರ ಹೊತ್ತಿಗೆ ಸ್ನಾನದಮನೆ ಹಾಗೂ ಸಾರ್ವಜನಿಕ ಕಚರ ವಿಲೇವಾರಿ ವ್ಯವಸ್ಥೆ ಇತ್ತು. ಗ್ರೀಕರು ಆರೋಗ್ಯ ನಿಯಮಗಳನ್ನೂ ಸೂತ್ರಗಳನ್ನೂ ಜಾರಿಗೆ ತಂದರಲ್ಲದೆ, ವಾತಾವರಣಕ್ಕೂ ರೋಗೋತ್ಪತ್ತಿಗೂ ಇರುವ ನಿಕಟಸಂಬಂಧ ಅರಿತಿದ್ದರು. ಗಾಳಿ, ನೀರು ಮತ್ತು ಸ್ಥಳ ಮಹಾತ್ಮೆ ಎಂಬ ಹಿಪ್ಪೊಕ್ರೆಟಿಸ್‌ನ ಗ್ರಂಥವನ್ನು ಇಲ್ಲಿ ಉಲ್ಲೇಖಿಸಬಹುದು. ರೋಮ್ ದೇಶದವರು ಮಲೇರಿಯ ರೋಗ ಜೌಗುಪ್ರದೇಶದ ಕೆಟ್ಟ ಗಾಳಿಯಿಂದ ಬರುತ್ತದೆಂದುಕೊಂಡಿದ್ದರು. ರೋಗಕಾರಕ ಧೂಳನ್ನು ಕೆಲಸಗಾರರಿಗೆ ಸೇರದಂತೆ ಉಸಿರಾಟಿಕಗಳನ್ನು ಅಣಿಮಾಡಿದ್ದರು. 2ನೆಯ ಶತಮಾನದಲ್ಲಿ ಸಾರ್ವಜನಿಕ ವೈದ್ಯಸೇವಾ ವ್ಯವಸ್ಥೆ ಇತ್ತು. ಒಳಚರಂಡಿ, ಕುಡಿಯುವ ನೀರನ್ನು ಸಾಗಿಸಲು ನೀರ್ಗಾಲುವೆಗಳನ್ನು ಕಟ್ಟಿದ್ದರು. ಆಸ್ಪತ್ರೆಗಳು ಸ್ಥಾಪಿತವಾದುವು. ಟೈಬರ್ ನದಿಯ ಕಾಲುವೆಗಳ ನೀರನ್ನು ಕೊಳಕು ಮಾಡದಂತೆ ಕಾಯಲು, ಒಳಚರಂಡಿಗಳನ್ನೂ ಮಲಮೂತ್ರ ವಿಲೇವಾರಿಯನ್ನೂ ಯಶಸ್ವಿಯಾಗಿ ಆಗುವಂತೆ ಮೇಲ್ವಿಚಾರಣೆ, ಹೊಲಸು ಆಹಾರ ಪದಾರ್ಥಗಳನ್ನು ಮಾರದಂತೆ ಹಾಗೂ ಅವುಗಳನ್ನು ನಾಶಮಾಡಲು ಸಿಬ್ಬಂದಿ, ಅಳತೆ ತೂಕದಲ್ಲಿ ಮೋಸ ನಡೆಯದಂತೆ ಮೇಲ್ವಿಚಾರಣೆ, ಸಾರ್ವಜನಿಕ ಸ್ನಾನಗೃಹಗಳಲ್ಲಿ, ವೇಶ್ಯಾಗೃಹಗಳಲ್ಲಿ, ಸ್ಮಶಾನಗಳಲ್ಲಿ ಮೇಲ್ವಿಚಾರಕರು ಇರುತ್ತಿದ್ದರು. ಬಿಜ಼ಾಂಟಿಯಮ್‌ನಲ್ಲಿ 532ರಲ್ಲಿ ಬಂದ ಅತಿ ಭೀಕರ ಪ್ಲೇಗ್ ಸಾಂಕ್ರಾಮಿಕ ಕಾಲದಲ್ಲಿ ಒಂದನೆಯ ಜಸ್ಟಿನಿಯನ್ ಪ್ಲೇಗ್ ರೋಗಿಯನ್ನು ಮುಟ್ಟಿಕೊಂಡಿದ್ದವರನ್ನು ಬಲಾತ್ಕಾರವಾಗಿ ಹೊರಗಿಟ್ಟಿರುತ್ತಿದ್ದ. ನಗರದೊಳಗೆ ಕಾನೂನುಬದ್ಧ ಪರವಾನಗಿ ಉಳ್ಳವರಿಗೆ ಮಾತ್ರ ಪ್ರವೇಶವಿತ್ತು.

ರೋಮ್ ಮತ್ತು ಗ್ರೀಸ್ ಸಂಸ್ಕೃತಿಗಳು ನಾಶವಾದಂತೆಲ್ಲ ಜನಾರೋಗ್ಯ ಸುರಕ್ಷಣೆ ಸೂತ್ರಗಳು ಸಡಿಲವಾಗಿ ಹೋದುವು. ಆಮೇಲೆ ಬಿಜಾಂಟಿಯಮ್ ಸಾಂಸ್ಕೃತಿಕ ಕೇಂದ್ರವಾಯಿತು. ಗ್ರೀಸ್, ರೋಮ್ ದೇಶಗಳ ವೈದ್ಯವಿಜ್ಞಾನ ಭಂಡಾರ ಅರಬ್ಬೀ ದೇಶಕ್ಕೆ ಬಂದಿತು. ಪಾಶ್ಚಿಮಾತ್ಯರಲ್ಲಿ ಆ ಕಾಲದಲ್ಲಿ ವೈದ್ಯ ಇನ್ನೂ ಮೋಡಿ, ಮಂತ್ರ, ತಂತ್ರಗಳ ಮಟ್ಟದಲ್ಲೇ ಇತ್ತು. ಅಲ್ಲಲ್ಲಿ ಕೆಲವೆಡೆಗಳಲ್ಲಿ ಶುದ್ಧ ನೀರಿನ ಸರಬರಾಜು, ಒಳ್ಳೆ ಗಾಳಿ ಬೆಳಕಿರುವ ವಸತಿಗಳು. ಅವನ್ನು ಬೆಚ್ಚಗಿಡುವ ವ್ಯವಸ್ಥೆಗಳಿದ್ದುವು. ಇದು ಎಲ್ಲರಿಗೂ ನಿಲುಕದ ಸೌಲಭ್ಯ. ಜನರನ್ನು ರೋಗದಿಂದ ರಕ್ಷಿಸುವುದೂ ಅವರಿಗೆ ಸಾಕಷ್ಟು ಕುಡಿಯುವ ನೀರನ್ನು ಒದಗಿಸುವುದೂ ಕಷ್ಟವಾಗಿದ್ದುವು. ಚರ್ಮ ಹದಮಾಡುವ, ಬಣ್ಣದ ಕಾರ್ಖಾನೆಗಳಿಂದ ಬರುವ ಕೆಟ್ಟ ನೀರನ್ನು ಕುಡಿಯುವ ನೀರೊದಗಿಸುವ ನದಿಗಳಿಗೆ ಬಿಡಲು ಅವಕಾಶವಿರಲಿಲ್ಲ.

15ನೆಯ ಶತಮಾನದ ಪೂರ್ವಾರ್ಧದಲ್ಲಿ ಆರೋಗ್ಯ. ವೈದ್ಯಕೀಯ ಸುಧಾರಣೆಯ ಶಾಸನಗಳು ಬಂದುವು. ಆದರೆ, ಅನೇಕವು ಕೇವಲ ಶಾಸನಗಳಾಗಿದ್ದುವೇ ಹೊರತು ಅವನ್ನು ಕಡ್ಡಾಯವಾಗಿ ಆಚರಣೆಗೆ ತಂದಿರಲಿಲ್ಲ. ಬೇಕೆಂದಾಗ ಮಾತ್ರ ಈ ಶಾಸನಗಳು ಜಾರಿಯಾಗುತ್ತಿದ್ದುವು. ಆಹಾರಕಲಬೆರಕೆಗೆ ವಿರುದ್ಧವಾದ ಶಾಸನಗಳು ಸಾಂಕ್ರಾಮಿಕ ರೋಗ ತಲೆದೋರಿದಾಗ ರೋಗಿ ಮತ್ತವನ ಸಂಬಂಧಿಕರನ್ನು, ಹತ್ತಿರ ಇದ್ದವರನ್ನು ಬೇರೆಡೆ ಪ್ರತ್ಯೇಕಿಸುವ ಕಾಯಿದೆಗಳು ಕಡ್ಡಾಯವಾಗಿದ್ದುವು.

ರೋಗಗಳ ವಿಚಾರದಲ್ಲಿ ಕುರುಡು ನಂಬಿಕೆಗಳು ಇದ್ದರೂ ಕೆಲವು ಹರಡುವ ವಿಧಾನಗಳೂ ಆಗ ತಿಳಿದಿದ್ದುವು. ಜಸ್ಟಿನಿಯನ್, ಕಾಲದ ಪ್ಲೇಗ್‍ನಿಂದ ಹಿಡಿದು 1348ರಲ್ಲಿ ಬಂದ ಕರಾಳ ಮೃತ್ಯುವಿನ (ಬ್ಲ್ಯಾಕ್‍ಡೆತ್) ಕಾಲದತನಕ ಅನೇಕ ಭೀಕರ ಸಾಂಕ್ರಾಮಿಕಗಳು ತಲೆಹಾಕಿದ್ದುವು. ಕುಷ್ಠ, ಸಿಡುಬು, ಪ್ಲೇಗು, ದಡಾರ, ಗಂಟಲಮಾರಿ, ಉರಿಶೀತ (ಇನ್‍ಫ್ಲುಯೆನ್‍ಜ) ಮುಂತಾದುವು ಜನಗಳಲ್ಲಿ ಭೀತಿ ಹುಟ್ಟಿಸಿದ್ದುವು. ಅದರಲ್ಲೂ ಕುಷ್ಠರೋಗವನ್ನು ಕಂಡರೆ ಸಾಮಾನ್ಯರಿಗಿದ್ದ ಭೀತಿ ವರ್ಣಿಸಲಸಾಧ್ಯ. 13ನೆಯ ಶತಮಾನದ ಪೂರ್ವಾರ್ಧದಲ್ಲಿ ಫ್ರಾನ್ಸ್ ದೇಶ ಒಂದರಲ್ಲೇ ಸುಮಾರು 2,000 ಕುಷ್ಠರೋಗಿಗಳ ಚಿಕಿತ್ಸಾವಸಾಹತು ಆಸ್ಪತ್ರೆಗಳಿದ್ದುವಂತೆ.

1179ರಲ್ಲಿ ಮೂರನೆಯ ಲ್ಯಾಟಿರಾನ್ ಮಂಡಲ ಸಭೆ ಕುಷ್ಠರೋಗಿಗಳನ್ನು ಶಾಸನಕ್ಕೊಳಪಡಿಸುವ ವಿವರವಾದ ಕಾಯಿದೆ ಜಾರಿಗೆ ತಂದಿತು. ಇದರ ಅನುಭವವೇ ಮುಂದೆ ಸಹಸ್ರಾರು ಜನ ಅಸುನೀಗಿದ 14ನೆಯ ಶತಮಾನದ ಪ್ಲೇಗು ಸಾಂಕ್ರಾಮಿಕದಲ್ಲಿ ಬಳಕೆಯಾಯಿತು. ಸೋಂಕಿನ ಅನುಮಾನವಿದ್ದವರು ಸ್ಥಳೀಯ ಅಧಿಕಾರಿಗಳ ಹತ್ತಿರ ಹೋಗಿ ಪರೀಕ್ಷೆಗೊಳಪಡಬೇಕು. ಸೋಂಕು ಇದ್ದರೆ ಕಡ್ಡಾಯವಾಗಿ ಅವರನ್ನು ಬೇರ್ಪಡಿಸುವುದೊಂದೇ ಅಲ್ಲದೆ ಅವರೊಂದಿಗಿದ್ದವರನ್ನೂ ಬೇರ್ಪಡಿಸಲಾಗುತ್ತಿತ್ತು. ಆಹಾರ ಇತ್ಯಾದಿ ಆವಶ್ಯಕ ವಸ್ತುಗಳನ್ನು ಒದಗಿಸಲಾಗುತ್ತಿತ್ತು. ರೋಗಿಯ ಶವವನ್ನೂ ಅದಕ್ಕೆ ಸೇರಿದ ವಸ್ತುಗಳನ್ನೂ ಊರ ಹೊರಗಡೆ ಹೂಳಲಾಗುತ್ತಿತ್ತು. ರೋಗಿ ಸತ್ತ ಸ್ಥಳವನ್ನು ಕ್ರಿಮಿನಾಶಕ ಹೊಗೆಯಿಂದ ಶುದ್ಧಿಗೊಳಿಸುತ್ತಿದ್ದರು. ಮುಖ್ಯವಾಗಿ ವ್ಯಾಪಾರ, ಕೇಂದ್ರವಾಗಿ ವೆನಿಸ್ ನಗರದಲ್ಲಿ ಈ ಕ್ರಮಗಳೆಲ್ಲ ಮೊದಲು ಜಾರಿಗೆ ಬಂದು, ಉಳಿದ ರೇವು ಪಟ್ಟಣಗಳಲ್ಲೂ ಕ್ರಮೇಣ ಅವಲೋಕನಾ ಕೇಂದ್ರಗಳೂ ಸೋಂಕು ರೋಗಿಗಳಿಗೆ ಬೇರೆಯಾಗಿ ಚಿಕಿತ್ಸೆ ನೀಡುವ ಆಸ್ಪತ್ರೆಗಳೂ ಆರಂಭವಾದುವು. ಇಂಗ್ಲೆಂಡ್ ದೇಶ ಒಂದರಲ್ಲೇ 12–15 ಶತಮಾನಗಳ ನಡುವೆ ಇಂಥ ಆಸ್ಪತ್ರೆಗಳು 720ಕ್ಕೂ ಮೀರಿದ್ದುವು. ಇವುಗಳಲ್ಲಿ 217 ಕುಷ್ಠರೋಗಿಗಳ ಕೇಂದ್ರಗಳು. ಮಧ್ಯಯುಗದ ಉತ್ತರಾರ್ಧದಲ್ಲಿ ನಗರಗಳೂ ಸರ್ಕಾರಗಳೂ ಆಸ್ಪತ್ರೆಗಳನ್ನು ಸ್ಥಾಪಿಸಿ ಅವನ್ನು ನಡೆಸಿಕೊಂಡು ಬರುವುದು ಹೆಚ್ಚಿತು.

ಮಧ್ಯಯುಗ ಮುಗಿಯುವ ವೇಳೆಗೆ ವೈದ್ಯಕೀಯ ಮತ್ತು ಜನಾರೋಗ್ಯ ಚಟುವಟಿಕೆಗಳು ಯುರೋಪ್‍ನಲ್ಲಿ ಸ್ಥಳೀಯ ಸರ್ಕಾರದ ಹತೋಟಿಯಲ್ಲಿದ್ದುವು. ಕುಡಿಯುವ ನೀರನ್ನು ಕೆಡಿಸುವುದನ್ನು ತಡೆಯುವ ಕಾಯಿದೆಯೊಂದಿಗೆ, ರಸ್ತೆಗಳ ನೈರ್ಮಲ್ಯ. ಕಚರದ ವಿಲೇವಾರಿಗಳಿಗೂ ಕಾನೂನುಗಳಾದುವು. ವೈದ್ಯರು ಕೆಲವು ವಿಧಿಗಳನ್ನು ಕಡ್ಡಾಯವಾಗಿ ಅನುಸರಿಸಲೇಬೇಕಾಯಿತು. ಪೌಷ್ಟಿಕ ಆಹಾರವಸ್ತುಗಳ ಮೇಲೆ ಲೇಖನಗಳು ಬರಹತ್ತಿದುವು. ಸಾರ್ವಜನಿಕ ಸ್ನಾನಗೃಹಗಳು ನಿಯಮಗಳಿಗನುಸಾರವಾಗಿರಬೇಕಾದದ್ದಲ್ಲದೆ ಸನ್ನದು ಪಡೆಯಬೇಕಾಗಿತು. 16ನೆಯ ಶತಮಾನದ ಮೊದಲಲ್ಲಿ ಮೇಹರೋಗಗಳು ಹರಡಿದಾಗ ಮೊದಲು ವೇಶ್ಯೆಯರ ಮೇಲೆ ಕಟ್ಟಳೆಗಳನ್ನು ವಿಧಿಸಲಾಯಿತು. ಪೌರಸಭೆಯ ಅಧಿಕಾರಕ್ಕೊಳಪಡಿಸಿದ ಸಾರ್ವಜನಿಕ ಆರೋಗ್ಯ ಪಾಲನೆ ಯಶಸ್ವಿಯಾಗಲಿಲ್ಲ. ಹೊರಗಿನಿಂದ ಹಾಗೂ ರೇವುಗಳಿಂದ ಬರುತ್ತಿದ್ದ ಭೀಕರ ಸಾಂಕ್ರಾಮಿಕ ಜಾಡ್ಯಗಳನ್ನೆದುರಿಸಿ ತಮ್ಮನ್ನು ತಾವು ಕಾಪಾಡಿಕೊಳ್ಳಲಾಗಲಿಲ್ಲ. ದೊಡ್ಡ ನಗರಗಳಲ್ಲಿ ಆರೋಗ್ಯಾಡಳಿತ ಮತ್ತು ಶಾಸನಗಳನ್ನು ಜಾರಿ ಮಾಡುವ ಅಧಿಕಾರ ಸಮಿತಿಗಳು, ಮಂಡಲಿಗಳು, ನಿಯೋಜಿತ ಜನಸಭೆಗಳ ಸದಸ್ಯರು ಮುಂತಾದವರಿಗೆ ನಿಬಂಧನೆಗಳನ್ನು ಕಾರ್ಯಗತ ಮಾಡಲಾಗಲಿಲ್ಲ. ವಸಾಹತು ಅಮೆರಿಕ ದೇಶದಲ್ಲೂ ಸಾಂಕ್ರಾಮಿಕ ಜಾಡ್ಯಗಳನ್ನೆದುರಿಸಲು ರೋಗಿಗಳನ್ನೂ ಅವರೊಂದಿಗೆ ಇದ್ದವರನ್ನೂ ಬೇರೆ ಇರಿಸಲು ಶಾಸನಗಳನ್ನು ವಿಧಿಸಲಾಯಿತು. 1620 ಡಿಸೆಂಬರ್‍ನಲ್ಲಿ ಪ್ಲಿಮತ್‍ಗೆ ಬಂದ 100 ಯಾತ್ರಿಕರಲ್ಲಿ ಅರ್ಧಜನ 3 ತಿಂಗಳಲ್ಲೇ, ಸತ್ತರು. ನ್ಯೂ ಇಂಗ್ಲೆಂಡ್‍ನ 9000 ಸೈನಿಕರಲ್ಲಿ ಭೀಕರ ಸಾಂಕ್ರಾಮಿಕದಿಂದ ಬಹುಮಂದಿ ಸತ್ತು ಕೇವಲ ಕೆಲವೇ ನೂರು ಜನ ಉಳಿದರು. ರೋಗನಿರೋಧ ಚುಚ್ಚುಮದ್ದು ನೀಡುವುದು ಕೆಲವು ವಸಾಹತುಗಳಲ್ಲಿ ಆರಂಭವಾಯಿತು. ಆಮೇಲೆ ಇದು ಶಾಸನವಾಯಿತು. ಅಮೆರಿಕ ದೇಶದಲ್ಲೇ ಮೊದಲಿನ ಆರೋಗ್ಯಸಮಿತಿ 1793ರಲ್ಲಿ ಮೇರಿಲ್ಯಾಂಡ್‍ನ ಬಾಲ್ಟಿಮೋರ್ ನಗರದಲ್ಲಿ ಸ್ಥಾಪನೆ ಆಯಿತು. ಇದೇ ತೆರನ ಸಮಿತಿಗಳು ನ್ಯೂಯಾರ್ಕ್, ಮ್ಯಾಸಚುಸೆಟ್ಸ್‍ಗಳಲ್ಲೂ ಆರಂಭವಾದುವು.

ಕೈಗಾರಿಕೋದ್ಯಮಗಳ ಕ್ರಾಂತಿಯಿಂದಾಗಿ ನಗರಗಳ ಜನನಿಬಿಡತೆ ಒಮ್ಮೆಲೇ ಹೆಚ್ಚಿ ಕಾರ್ಖಾನೆಗಳ ಸುತ್ತಲೂ ಕೊಳಚೆ ಪ್ರದೇಶಗಳು ಹುಟ್ಟಿಕೊಂಡು ಭಯಂಕರ ಅನಾರೋಗ್ಯ ವಾಯಿತು. ಲಂಡನ್ ನಗರದಲ್ಲಿ ಕೊಳಚೆ ಪ್ರದೇಶಗಳ ನಿರ್ಮಲೀಕರಣ ಚಟುವಟಿಕೆ ಆರಂಭವಾಯಿತು (1760). ಕೊಳಚೆ, ರೋಗಗಳ ಜತೆಗೆ ಬಡತನ, ನಿರುದ್ಯೋಗ ತಲೆಹಾಕಿದ್ದುವು. ಎಲಿಜಬೆತ್ ಬಡತನ ನಿವಾರಣಾ ಕಾನೂನು ಆಯಾ ಪ್ಯಾರಿಷ್‍ಗಳಿಗೆ (ಜಿಲ್ಲೆ) ವೈದ್ಯಕೀಯ ನೆರವು ಹಾಗೂ ಇತರ ಉಪಶಮನಗಳಿಗೆ ಜವಾಬ್ದಾರಿ ವಹಿಸಿತು.

**ಸಾಮಾಜಿಕ ಸುಧಾರಣೆಗಳು :** ಬಡತನದಿಂದ ರೋಗ, ರೋಗದಿಂದ ಬಡತನ. ಕೊಳಚೆ ಎಡೆಗಳಲ್ಲಿ ಹೆಚ್ಚು ರೋಗ. ರೋಗ ಹೆಚ್ಚಿದ್ದಲ್ಲಿ ಕೊಳಚೆ, ಹೊಲಸು, ಬಡತನದೊಂದಿಗೆ ಕೆಟ್ಟ ಕೆಲಸ, ಅಪರಾಧ ಇವೇ ಮೊದಲಾದ ಸಂಗತಿಗಳು 19ನೆಯ ಶತಮಾನದ ಮೊದಲಲ್ಲೇ ಮನದಟ್ಟಾಗಿದ್ದುವು. ಈ ಪರಿಸ್ಥಿತಿ ಪ್ರಾರಬ್ಧಕರ್ಮವೇನೂ ಅಲ್ಲ. ಪರಿಹಾರವಿಲ್ಲದಂಥ ಸಮಸ್ಯೆಯೂ ಅಲ್ಲವೆಂಬುದು ಗೋಚರವಾಗತೊಡಗಿತು. ಇಂಗ್ಲೆಂಡಿನಲ್ಲಿ ಸುಪ್ರಸಿದ್ಧ ಸಮಾಜಸುಧಾರಕರು ಜರೆಮೀಬೆಂತ್ಯಾಮ್, ಎಡ್ವಿನ್ ಚಾಡ್‍ವಿಕ್ ಮುಂದಾಳುತನದಲ್ಲಿ ಸುಧಾರಣೆಗಳನ್ನು ತರಲು ತೀವ್ರ ಆಸಕ್ತಿ ವಹಿಸಲಾಯಿತು. ಈ ಸಮಸ್ಯೆಗಳನ್ನು ಬಿಡಿಸಿ ಮುಂದಿನ ಕ್ರಮಗಳನ್ನು ಸೂಚಿಸಲು ಚಕ್ರವರ್ತಿ ಆಯೋಗ ನೇಮಕವಾಯಿತು. ಈ ಸಮಿತಿ ವರದಿ ಒಪ್ಪಿಸಿತು. ಇತರ ಸಂಶೋಧನೆಗಳೂ ನಡೆದುವು. ಅಂಕಿಅಂಶಗಳೂ ಸಂಗ್ರಹವಾಗಿ ಲಂಡನ್ ನಗರದ ಸಮಾಜ ಸುಧಾರಣಾ ಶಾಸನ (1830) ಜಾರಿಗೆ ಬಂದಿತು.

**ಅಂಕಿ ಅಂಶ ಸಂಗ್ರಹಣ :** ಈ ಸಮಾಜ ಸುಧಾರಣಾ ಚಳವಳಿಯಿಂದ ಆರಂಭವಾದ ಅಂಕಿಅಂಶಗಳ ಸಂಕಲನ ಶಾಸನಗಳ ಪ್ರತಿಪಾದನೆಗೆ ಮಾರ್ಗದರ್ಶಕವಾದದ್ದಲ್ಲದೆ ಜನಸಾಮಾನ್ಯರಿಗೆ ಅರಿವು ಜಾಗೃತಿ ಮೂಡಿ ಅವರು ಸುಧಾರಣೆಗಳಿಗೆ ಒತ್ತಾಯಪಡಿಸಿದರು. ಈ ಚಳವಳಿಯಲ್ಲಿ ಹೆಸರಾಂತ ವ್ಯಕ್ತಿ 19ನೆಯ ಶತಮಾನದ ಜೀವಸಂಖ್ಯಾಶಾಸ್ತ್ರಜ್ಞ ವಿಲಿಯಮ್ ಫಾರ್ (1875). ಇವನು ವಿಮರ್ಶಿಸಿದ ಅಂಕಿಅಂಶಗಳು ನಮ್ಮ ಸಮಾಜದ ಜೀವನ, ಆಹಾರ, ಆರ್ಥಿಕಸ್ಥಿತಿ ಇತ್ಯಾದಿಗಳಿಗೂ ಸಮಾಜದ ಜನರ ಆರೋಗ್ಯ ಅನಾರೋಗ್ಯಕ್ಕೂ ಇರುವ ನಿಕಟ ಸಂಬಂಧವನ್ನು ಎಲ್ಲರಿಗೂ ಎತ್ತಿ ತೋರಿದಂತಾಯಿತು. ಮಾನವಕುಲದ ಕಷ್ಟಕಾರ್ಪಣ್ಯಗಳಿಗೆ ಮಿತಿ ಮೀರಿದ ಜನಸಂಖ್ಯೆ ಕಾರಣವಲ್ಲ, ಒಬ್ಬೊಬ್ಬನಲ್ಲೂ ಇದ್ದೇ ಇರುವ ನ್ಯೂನತೆಗಳೇ ಕಾರಣ ಎಂದ. ಜೀವನ ಗಣತಿಯನ್ನು ಇವನು ವಿಜ್ಞಾನದ ಮಟ್ಟಕ್ಕೇರಿಸಿದ. ಇದಕ್ಕೂ ಮುಂಚೆ ಸರ್ ವಿಲಿಯಮ್ ಪೆಟ್ಟಿ ದೇಶದ ಆಡಳಿತದಲ್ಲಿ ಜನಗಳ ಆರೋಗ್ಯ, ಅನಾರೋಗ್ಯಗಳ ಪ್ರಭಾವವನ್ನು ತೋರಿಸಿದ. ರೋಗಬಾರದಂತೆ ತಡೆಗಟ್ಟುವ ಸ್ವಲ್ಪವೇ ಹಣ ದೇಶದ ಹಣಕಾಸಿನ ಹೆಚ್ಚಳಕ್ಕೆ ಬಹಳ ಸಹಾಯಕ. ರೋಗಕ್ಕೀಡಾಗದ ರೋಗದಿಂದ ಸಾಯದೆ ಉಳಿದ ಜನರಿಂದ ಕೈಗಾರಿಕೆ, ಉದ್ಯಮ ಇತ್ಯಾದಿಗಳಲ್ಲಿ ಹೆಚ್ಚು ಉತ್ಪಾದನೆಯೇ ಇದಕ್ಕೆ ಕಾರಣ. 17ನೆಯ ಶತಮಾನದಲ್ಲಿ, ಜಾನ್ ಗ್ರಾಂಟ್ (1662) ಜನಾರೋಗ್ಯದ ವಿಚಾರವಾಗಿ ಅಂಕಿಅಂಶಗಳನ್ನು ಸಂಗ್ರಹಿಸಿ ಅವುಗಳ ಮಹತ್ತ್ವವನ್ನು ತೋರಿಸಿದ. ಜರ್ಮನಿಯ ಇನ್ನೂ ಹೆಸರಾದವರ ಪರಿಶೋಧನೆ, ವರದಿಗಳೇ ಮುಂದೆ ಬಿಸ್ಮಾರ್ಕ್ ಜಾರಿಗೆ ತಂದ ಶಾಸನಗಳಿಗೆ ಆಧಾರ. ಮೊದಲು (1748) ಜನನ, ಮರಣ ಇತ್ಯಾದಿಯ ಜೀವನಗಣತಿಯನ್ನು ಕಡ್ಡಾಯಮಾಡಿದ ಶಾಸನ ಜಾರಿಗೆ ತಂದ ಹೆಸರು ಸ್ವೀಡನ್ ದೇಶದ್ದು. ಮೊಟ್ಟಮೊದಲನೆಯ ಜನಗಣತಿ 1801ರಲ್ಲಿ ಇಂಗ್ಲೆಂಡ್‍ದಲ್ಲೂ, ಭಾರತದಲ್ಲಿ 1867–1872 ರಲ್ಲೂ, ಆಮೇಲೆ 1881ರಲ್ಲೂ ಜರುಗಿತು. ಅಲ್ಲಿಂದೀಚೆಗೆ ಇದು ದಶಕಗಳಿಗೊಮ್ಮೆ ತಪ್ಪದೆ ನಡೆದುಕೊಂಡು ಬಂದಿದೆ. ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಮೊದಲು ಮ್ಯಾಸಚುಸೆಟ್ಸ್ ಸಂಸ್ಥಾನ ಕಾರ್ಮಿಕರ ಅಂಕಿಅಂಶ ಸಂಗ್ರಹದ ಖಾತೆಯನ್ನು ಪ್ರಾರಂಭಿಸಿತು. ನ್ಯೂಯಾರ್ಕ್ ಜನಗಳ ಆರೋಗ್ಯ, ಅನಾರೋಗ್ಯದ ವಿಚಾರವಾಗಿ ಜಾನ್ ಗ್ರಿಸ್ಕೋಮ್ ಅಧ್ಯಯನ ಮಾಡಿ 1845ರಲ್ಲಿ ವರದಿ ಒಪ್ಪಿಸಿದ. ಬಾಸ್ಟನ್ ನಗರದಲ್ಲಿ ಹೊರಬಿದ್ದ ಶ್ಯಾಟಕ್‍ನ ವರದಿಯಿಂದ (1850) ಆರೋಗ್ಯಶಾಸನ ರೂಪುಗೊಂಡಿತು. ಮುಂದಿನ ಶಾಸನಗಳಿಗೆ ಇದೇ ಮಾದರಿಯಾಯಿತು. ಬರಬರುತ್ತಾ ಜೀವನಗಣತಿಗಾಗಿನ ಅಂಕಿಅಂಶಗಳ ಸಂಗ್ರಹಣೆಯ ಮಹತ್ತ್ವದ ಅರಿವು ಜನಸಾಮಾನ್ಯರಿಗೂ ತಿಳಿದುಬಂತು. ಶಾಸನಗಳಲ್ಲಿನ ಕಟ್ಟಳೆಗಳನ್ನು ಜಾರಿಮಾಡಲು ಸುಸಜ್ಜಿತ ಪೋಲೀಸ್ ಖಾತೆ ಸಿದ್ಧವಾಯಿತು. ಮೊದಲು ಸಮಸ್ಯೆಗಳ ಅಂಕಿಅಂಶಗಳನ್ನು ಸಂಗ್ರಹಿಸಿ, ಅಧ್ಯಯನ ಮಾಡಿದ ಮೇಲೆ ಈ ಶಾಸನಗಳೆಲ್ಲವೂ ರೂಪುಗೊಂಡುವು. ಹಿಂದೆಂದೂ ನಡೆಯದ ಈ ಬಗೆಗಳ ರಾಷ್ಟ್ರೀಯ ಮಟ್ಟದ ದಿಸೆಯಲ್ಲಿ ಯುರೋಪ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಬಹಳ ಮುಂದುವರಿದುವು. ಯುರೋಪ್ ದೇಶಗಳಲ್ಲಿ ಶಿಶುಮರಣಗಳು (ಹುಟ್ಟಿದ ಆಮೇಲೆ ಮೊದಲನೆಯ ಹುಟ್ಟಿದ ಹಬ್ಬವನ್ನೂ ಕಾಣದೆ ಸತ್ತ ಹಸುಳೆಗಳ ಸಂಖ್ಯೆ) ಅತಿಯಾಗಿತ್ತು. ಈ ಮಿತಿಮೀರಿದ ಸಾವುಗಳನ್ನು ತಡೆಗಟ್ಟಲೂ ಜನರಲ್ಲಿ ನೈತಿಕ ಮಟ್ಟವನ್ನು ಸುಧಾರಿಸಲೂ ಪಾರ್ಲಿಮೆಂಟಿನಲ್ಲಿ ಕೆಲವು ಕಾಯಿದೆಗಳಾದುವು. ಮ್ಯಾಜಿಸ್ಟ್ರೇಟರುಗಳಿಗೆ ಅನೇಕ ವಿಧದ ಆರೋಗ್ಯಕ್ಕೆ ಸಂಬಂಧಪಟ್ಟ ಕಾರ್ಯಾಚರಣೆಗಳು ಮೇಲ್ವಿಚಾರಣೆಗಾಗಿ ಅನುಜ್ಞೆ ಅಧಿಕಾರವೀವ ಕಾನೂನು (1751) ಜಾರಿಗೆ ಬಂತು. ಮೊಟ್ಟಮೊದಲಿನ ಸಮಾಜ ಸುಧಾರಣಾ ವಿಮಾ ಎನ್ನಬಹುದಾದ ಶಾಸನ ಮಂಡಿತವಾಯಿತು (1757). ಇದರಿಂದ ಥೇಮ್ಸ್ ನದಿಯಲ್ಲಿ ಓಡಾಡುವ ಹಡಗು ಇತ್ಯಾದಿಗಳಿಗೆ ಕಲ್ಲಿದ್ದಲನ್ನು ಹೊರುವ ಕಾರ್ಮಿಕರಿಗೆ ಒಂದು ರೀತಿಯ ಪರಿಹಾರಕ್ಕೆ ಏರ್ಪಾಡಾಯಿತು. ಯಜಮಾನ

ಕಾರ್ಮಿಕನ ಕೂಲಿಯ ಹಣದ ಸ್ವಲ್ಪ ಭಾಗವನ್ನು ಮುರಿದುಕೊಂಡು ಕೂಡಿಟ್ಟ ಹಣದಿಂದ ಕಾರ್ಮಿಕನಿಗೆ ಕಾಯಿಲೆಯಾದಾಗ, ಅಂಗ ಊನವಾದಾಗ, ಮುಪ್ಪಾದಾಗ, ಸತ್ತಾಗ ಪರಿಹಾರ ಹಣ ನೀಡಲು ಕಾನೂನಾಯಿತು. ಈ ಶಾಸನದಲ್ಲಿ ಷರತ್ತುಗಳನ್ನು ಪಾಲಿಸುವಾಗ ಮಾಲೀಕರು ಕಾರ್ಮಿಕರಿಗೆ ಅನ್ಯಾಯ ಮಾಡಿದ್ದರಿಂದ, ಈ ಶಾಸನ ರದ್ದಾಯಿತಾದರೂ (1770), ಅದು ಮತ್ತೆ 1792ರಲ್ಲಿ ಪುನರುದ್ಧಾರವಾಯಿತು. ಈ ನಿಧಿಯ ಮೇಲ್ವಿಚಾರಣೆ, ಆಡಳಿತಗಳು ನ್ಯಾಸಧಾರಿಗಳ (ಟ್ರಸ್ಟಿಗಳ) ವಶಕ್ಕೆ ಹೋಯಿತು.

ಸರ್ ರಾಬರ್ಟ್ ಪೀಲ್ ಮಂಡಿಸಿದ ಉಮೇದುವಾರರ ಆರೋಗ್ಯ ಮತ್ತು ನೈತಿಕ ಸುಧಾರಣಾ ಕಾಯಿದೆ 1802ರಲ್ಲಿ ಜಾರಿಗೆ ಬಂತು. ಇದರಿಂದ ಹತ್ತಿಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಬಾಲ ಕಾರ್ಮಿಕರ ಪರಿಸ್ಥಿತಿಯನ್ನು ಉತ್ತಮಪಡಿಸಲು ಅನುಕೂಲವಾಯಿತು. ಆದರೂ ಈ ಶಾಸನದಿಂದ ಏನೂ ಅನುಕೂಲ ಆಗದಿದ್ದರೂ ಸರ್ಕಾರಕ್ಕೆ ಕಾರ್ಮಿಕರಲ್ಲಿ ಇರುವ ಶ್ರದ್ಧೆಯನ್ನು ತೋರಿದಂತಾಯಿತು. ಬೇರೆ ದೇಶಗಳಲ್ಲೂ ಕೈಗಾರಿಕೋದ್ಯೋಮ ಗಳಲ್ಲೂ ಬಾಲ ಕಾರ್ಮಿಕರಿಗೆ ಅನ್ವಯಿಸುವ ಕಾಯಿದೆಗಳಿಗಾಗಿ ಒತ್ತಾಯ ಆರಂಭವಾಯಿತು.

ಬಡತನ ಪರಿಹಾರ ಕಾನೂನನ್ನೂ (1834) ಜನಾರೋಗ್ಯಪಾಲನೆಯ ಕಾನೂನುಗಳನ್ನೂ (1844–45) ತರಲು ಪ್ರಮುಖ ಪಾತ್ರ ವಹಿಸಿದವ ಎಡ್ವಿನ್ ಚಾಡ್ವಿಕ್. ರೋಗವೇ ಬಡತನಕ್ಕೆ ಕಾರಣವೆಂದು ಇವನಿಗೆ ಚೆನ್ನಾಗಿ ಮನದಟ್ಟಾಗಿತ್ತು. ಬ್ರಿಟನ್ ದೇಶದ ಕಾರ್ಮಿಕ ಜನತೆಯ ನೈರ್ಮಲ್ಯ ಸ್ಥಿತಿಗತಿಗಳ ಪರಿಶೀಲನಾ ಸಮಿತಿಯ ವರದಿ ಹೊರಬಿತ್ತು (1842). ಈ ಸಮಿತಿಯ ಕಾರ್ಯದರ್ಶಿ ಎಡ್ವಿನ್ ಚಾಡ್ವಿಕ್. ಈ ವರದಿಯ ಮೇಲೆ ರಚಿಸಿದ ಶಾಸನಗಳು ಆರೋಗ್ಯ, ಸುರಕ್ಷಣೆ, ಸಮಾಜ ಸಮಸ್ಯೆಗಳ ಮೇಲೆ ರಾಷ್ಟ್ರೀಯಮಟ್ಟದ ಮೇಲ್ವಿಚಾರಣೆ ಮತ್ತು ಹತೋಟಿಗೆ ಆಧಾರವಾದುವು. 1833ರ ಕಾರ್ಖಾನೆ ಕಾಯಿದೆ ಅನಂತರ ಬಂದ ಆಧುನಿಕ ಕೈಗಾರಿಕಾ ಉದ್ಯಮಗಳ ಶಾಸನಕ್ಕೆ ಹಿನ್ನೆಲೆಯಾಯಿತು. ಲಿವರ್‌ಪೂಲಿನ ನೈರ್ಮಲ್ಯ ಕಾಯಿದೆಯಿಂದಾಗಿ (1846) ನಗರಕ್ಕೆ ಆರೋಗ್ಯಾಧಿಕಾರಿ ಹಾಗೂ ಎಂಜಿನಿಯರ್‌ಗಳು ಬರುವಂತಾಯಿತು. ಅದೇ ವರ್ಷ ಜಾರಿಯಾದ ಉಪದ್ರವ ಕಳೆವ ಶಾಸನ, ರೋಗನಿರೋಧಕ ಶಾಸನ ಇವೇ ಮೊದಲಾದವು (1848) ಜಾರಿಗೆಬಂದ ಜನಾರೋಗ್ಯ ಶಾಸನದ ಪೀಠಿಕೆಯಾದವು.

**ಯುರೋಪಿನಲ್ಲಿ :** ಇಂಗ್ಲೆಂಡಿನಲ್ಲಿ ಈ ಸಮಾಜ ಸುಧಾರಣ ಶಾಸನಗಳು ಆಗುತ್ತಿದ್ದಂತೆಯೇ ಜರ್ಮನಿ, ಫ್ರಾನ್ಸ್‌ಗಳಲ್ಲೂ ಚಳುವಳಿ ರಭಸದಿಂದ ಮುಂದುವರಿಯಿತು. ಜರ್ಮನಿಯ ಜೋಹಾನ್ ಪೀಟರ್ ಫ್ರಾಂಕ್ ಆರೋಗ್ಯ ಸಮಸ್ಯೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುಧಾರಿಸಲೂ ಅದರ ಆಡಳಿತಕ್ಕೆ ರಾಷ್ಟ್ರೀಯ ಮಟ್ಟದ ಆರೋಗ್ಯ ಇಲಾಖೆಗಳಿರ ಬೇಕೆಂತಲೂ ಮೊಟ್ಟ ಮೊದಲು ಪ್ರತಿಪಾದಿಸಿದ. ಅದನ್ನು ಕಡ್ಡಾಯವಾಗಿ ಆಚರಣೆಗೆ ತರಲು ವೈದ್ಯಕೀಯ ಪೋಲೀಸ್ ಇಲಾಖೆ ನಿರ್ಮಾಣವಾಗಬೇಕೆಂದು ಶಿಫಾರಸ್ಸಾಯಿತು. ಇದೇ ರೀತಿ ಫ್ರಾನ್ಸಿನಲ್ಲೂ ಕಾರ್ಮಿಕರ ಆರೋಗ್ಯ ಸುರಕ್ಷಣೆ ಸರ್ಕಾರದ ಜವಾಬ್ದಾರಿ ಎಂದಾಯಿತು. ಕೈಗಾರಿಕೋದ್ಯಮಗಳಲ್ಲಿ ಕಾರ್ಮಿಕರಿಗೆ ಉಂಟಾಗುವ ಅಪಘಾತಗಳಲ್ಲಿ ರಕ್ಷಣೆ, ಪರಿಹಾರ ಕೊಡುವುದಲ್ಲದೆ ಗರ್ಭಿಣಿಯರು ಹಡೆದಾಗ ಅವರ ಆರೈಕೆ, ವೇತನ, ರೋಗ ಬಂದಾಗ ವಿಶ್ರಾಂತಿವೇತನ, ಮುಪ್ಪು, ನಿರ್ಬಲತೆ, ಊನ ಹಾಗೂ ಸಾವು ಒದಗಿದಾಗ ನೀಡುವ ಪರಿಹಾರಗಳಿಗೆ ಶಾಸನಗಳಾದವು (1884). ಈ ವಿಷಯದಲ್ಲಿ ಮುಂಬರುವ ಸಮಾಜ ಸುಧಾರಣಾ ಕಾಯಿದೆಗಳಿಗೆಲ್ಲಾ ಅಡಿಗಲ್ಲನ್ನು ಹಾಕಿ, ಜರ್ಮನಿ ಮುಂದಾಳತ್ವ ವಹಿಸಿತು.

**ಅಮೇರಿಕದಲ್ಲಿ :** ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಈ ಶಾಸನಗಳು ಹೆಚ್ಚು ಕಡಿಮೆ ಇಂಗ್ಲೆಂಡಿನಲ್ಲಿ ಆದ ಹಾಗೇ ರೂಪುಗೊಂಡಿತಾದರೂ ಸಾಮಾನ್ಯವಾಗಿ ಹೇಳುವುದಾದರೆ, ಶಾಸನಗಳು ಜಾರಿಗೆ ಬರಲು ಸಾವಕಾಶವಾಯಿತು. 19ನೆಯ ಶತಮಾನದ ಮೊದಲಲ್ಲಿ, ಹೆಂಗಸರು, ಮಕ್ಕಳು ಕೂಲಿ ಮಾಡುವ ಕಾಲ ನಿರ್ಧರಿಸುವ, ಅವರಿಗೆ ಸಾಕಷ್ಟು ರಕ್ಷಣೆ ಕೊಡುವ ಶಾಸನಗಳು ಮೊದಲು ಜಾರಿಗೆ ಬಂದುವು. ಹೀಗೆ ಶಾಸನಗಳಾದರೂ ಅವನ್ನು ಆಚರಣೆಗೆ ತರಲೂ ಆಚರಿಸದವರ ಮೇಲೆ ಕ್ರಮ ಜರುಗಿಸಲೂ ವ್ಯವಸ್ಥೆ ಇರಲಿಲ್ಲ. ಕ್ರಮ ಜರುಗಿಸಿದರೂ ನುಣುಚಿಕೊಳ್ಳಲು ಸಾಕಷ್ಟು ನ್ಯೂನತೆಗಳು ಇದ್ದುವು. ಅಮೇರಿಕದ ಒಳಕಲಹವಾದ ಮೇಲೂ ಸಂಸ್ಥಾನಗಳಲ್ಲಿನ ಶಾಸನಗಳು ಕ್ರಮಬದ್ಧವೆಂದೇ ಎಲ್ಲರೂ ತಿಳಿದಿದ್ದರು. ಸಮಾಜ ಸುಧಾರಣಾ ಶಾಸನಗಳು, ಕರಾರುಗಳಲ್ಲಡಗಿರುವ ನಿಬಂಧನೆಗಳನ್ನು ಕಡ್ಡಾಯ ಮಾಡಬೇಕೆಂದು ಹಾಕಿರುವ ಶರತ್ತುಗಳು, ಸರ್ಕಾರ, ವ್ಯಾಪಾರ, ಕೈಗಾರಿಕೆ ಇತ್ಯಾದಿ ವ್ಯಕ್ತಿ ಪ್ರಯತ್ನಗಳಲ್ಲಿ ಪ್ರವೇಶಿಸಕೂಡದು ಎಂಬ ನ್ಯಾಯಸಮ್ಮತವಾದ ತತ್ತ್ವಕ್ಕೆ ಧಕ್ಕೆ ಎನ್ನುವ ಭಾವನೆ, 1890ರ ವರೆಗೆ ಜನಗಳಲ್ಲಿ ಮೂಡಲಿಲ್ಲ.

20ನೆಯ ಶತಮಾನಕ್ಕೆ ಮುಂಚೆ ಅಮೇರಿಕದ ಕಾಂಗ್ರೆಸ್ ಕೆಲವೇ ಸಮಾಜ ಸುಧಾರಣಾ ಶಾಸನಗಳನ್ನು ಮಂಡಿಸಿತು. 1798ರಲ್ಲಿ ನಾವಿಕರ ಕೂಲಿ ಹಣದಿಂದ 20%ನ್ನು ಹಿಡಿದು ರಾಜ್ಯವಿಮಾ ನಿಧಿಗೆ ಜಮಾಮಾಡಿ, ಅವರು ಅಂಗವಿಕಲರಾದಲ್ಲಿ, ನಿರ್ಬಲರಾದಲ್ಲಿ ಆ ನಿಧಿಯಿಂದ ಪರಿಹಾರ ಕೊಡುವ ಯೋಜನೆಯನ್ನು ಸಂಯುಕ್ತರಾಷ್ಟ್ರ ಸರ್ಕಾರ ಜಾರಿಗೆ ತಂದಿತು. 1870ರಲ್ಲಿ ಸಂಪರ್ಕನಿಷೇಧ ದತ್ತಾಂಶ ಶೇ.20 ಇದ್ದದ್ದು ಶೇ.40ಕ್ಕೆ ಹೆಚ್ಚಿತು. 1878ರಲ್ಲಿ ರಾಷ್ಟ್ರೀಯ ಸಂಪರ್ಕ ನಿಷೇಧ (ಕ್ವಾರಂಟೀನ್) ಶಾಸನ ವಿಧಾಯಕವಾಯಿತು. ಈ ಶಾಸನ ಅಮೇರಿಕದ ಸರ್ಜನ್ ಜನರಲ್‌ನಿಗೆ ಸಂಯುಕ್ತ ಸಂಸ್ಥಾನದ ಬಂದರುಗಳಿಗೆ ಬರುವ ಜನರ ಜಹಜುಗಳಲ್ಲಿ ಸಾಕಷ್ಟು ಕಾಲ ಬೇರೆಯಾಗಿ ಇರಿಸಲು ಅಧಿಕಾರ ದೊರಕಿತು. ಇದಾದ ಮರುವರ್ಷ ರಾಷ್ಟೀಯ ಆರೋಗ್ಯ ಸಮಿತಿ ಸ್ಥಾಪಿತವಾಯಿತು.

**ಭಾರತದಲ್ಲಿ :** ಭಾರತದಲ್ಲೂ ಸುಮಾರು 1860ರಿಂದೀಚೆಗೆ ಜನಾರೋಗ್ಯದ ಆಡಳಿತ ಸುಧಾರಿಸಿತೆನ್ನಬಹುದು. ಈಸ್ಟ್ ಇಂಡಿಯಾ ಕಂಪನಿ 1859ರಲ್ಲಿ ಜನಾರೋಗ್ಯ ಆಡಳಿತವನ್ನು ವಹಿಸಿಕೊಂಡಿತು. ಅದಕ್ಕೆ ಮುಂಚೆ ಬೇರೆಬೇರೆ ರಾಜ್ಯಗಳಲ್ಲಿ ತಮ್ಮವೇ ನಿಬಂಧನೆಗಳಿದ್ದರೂ ಆಚರಣೆಗೆ ಬಂದವು ಕೇವಲ ಅಲ್ಪ. ಆಂಗ್ಲ ಸೈನಿಕರ ಮರಣ ಪ್ರಮಾಣ ಮಿತಿಮೀರಿ ಇಂಗ್ಲೆಂಡ್‌ನ ಪಾರ್ಲಿಮೆಂಟಿನ ಗಮನಕ್ಕೆ ಬಂದದ್ದು ಈಸ್ಟ್ ಇಂಡಿಯಾ ಕಂಪನಿ ಬಂದ ಅನಂತರ. ಕೂಡಲೇ ರಾಜಸನ್ನದಿನ ಪ್ರಕಾರ ರಚಿತವಾದ ಒಂದು ಆಯೋಗ ಭಾರತದ ಸೈನ್ಯದಳ ಹಾಗೂ ನಾಗರಿಕರ ಅಪಾರ ಸಾವುಗಳಿಗೆ ಕಾರಣಗಳನ್ನು ತನಿಖೆ ಮಾಡಿ ಶಿಫಾರಸುಗಳೊಂದಿಗೆ ವರದಿ ಕೊಡಬೇಕೆಂದು ನೇಮಕವಾಯಿತು. 1861ರಲ್ಲಿ ಆಂಗ್ಲಸೈನಿಕರ ಸಾವುಗಳು 100ಕ್ಕೆ 69, ಭಾರತದ ಸೈನಿಕರಲ್ಲಿ ಸಾವಿರಕ್ಕೆ 20 ಇದ್ದುವು. ಜೈಲುಗಳಲ್ಲಿ ಮರಣಸಂಖ್ಯಾಪ್ರಮಾಣ ಸಾವಿರಕ್ಕೆ 84–120 ರವರೆಗೆ ಇದ್ದುವು. ಈ ಅಂಕಿ ಅಂಶಗಳು 1910–1914ರ ಹೊತ್ತಿಗೆ ಕ್ರಮವಾಗಿ 4.36, 4.39, 21––50ಕ್ಕೆ ಇಳಿದಿದ್ದುವು. ಸಮಿತಿ 1863ರ ವರದಿಯಲ್ಲಿ ಆರೋಗ್ಯ ನೈರ್ಮಲ್ಯಗಳ ಮೇಲ್ವಿಚಾರಣೆಗೆ ಬೇರೊಂದು ನಿಯೋಜಿತ ಮಂಡಳಿ ಆಗಬೇಕೆಂದು ಸೂಚಿಸಿತು. ಆ ಪ್ರಕಾರ ಬಂಗಾಲ, ಮುಂಬಯಿ, ಮದರಾಸು ಪ್ರಾಂತ್ಯಗಳಲ್ಲಿ ಮೊದಲಿನ ಮಂಡಳಿಗಳು ಸ್ಥಾಪನೆಯಾದುವು. ಈ ಮಂಡಳಿ ಕೂಡಲೇ ಆರೋಗ್ಯ, ನೈರ್ಮಲ್ಯಗಳನ್ನು ನೋಡಿಕೊಳ್ಳಲು ಜನಾರೋಗ್ಯ ಇಲಾಖೆಗಳು ಏರ್ಪಡಬೇಕೆಂದು ಸಲಹೆಕೊಟ್ಟಿತು. ಈ ಸಲಹೆ ಬಹಳ ವರ್ಷಗಳವರೆಗೆ ಹಾಗೇ ಇತ್ತು. ಮದ್ರಾಸಿನಲ್ಲಿ ಸ್ಥಾಪಿತವಾದ ಮಂಡಳಿ ಮಾತ್ರ ಯಶಸ್ವಿಯಾಗಿ ಕೆಲಸಮಾಡಿ ಮರಣಪ್ರಮಾಣವನ್ನು ಬಹಳಮಟ್ಟಿಗೆ ಕಡಿಮೆ ಮಾಡಲು ಕಾರಣವಾಯಿತು. 1869ರ ಹೊತ್ತಿಗೆ ಈ ಮಂಡಳಿಗಳು ನಿರ್ಬಲವಾಗಿದ್ದುವು. ಆ ಮಂಡಳಿಯ ಸದಸ್ಯ ವೈದ್ಯಾಧಿಕಾರಿ ಮಾತ್ರ ಆರೋಗ್ಯ ಮತ್ತು ನೈರ್ಮಲ್ಯಾಧಿಕಾರಿ (ಸ್ಯಾನಿಟರಿ ಕಮಿಷನರ್) ಎನಿಸಿಕೊಂಡು ಉಳಿದಿದ್ದ.

**ಕೈಗಾರಿಕಾ ಕ್ರಾಂತಿ, ವೈದ್ಯದ ಮುನ್ನಡೆ :** 18ನೆಯ ಶತಮಾನದ ಕೊನೆಯಲ್ಲೂ 19ನೆಯ ಶತಮಾನದ ಮೊದಲಲ್ಲೂ ಯಂತ್ರಸಾಧನಗಳನ್ನು ಕಂಡುಹಿಡಿದುದರ ಫಲವಾಗಿ ಅನೇಕರು ನಿರುದ್ಯೋಗಿಗಳಾಗಿ ಧಣಿಗಳಿಗೂ ಕೂಲಿ ಕೆಲಸಗಾರರಿಗೂ ಇದ್ದ ಪರಸ್ಪರ ಸಂಬಂಧ ವಿರಸಗೊಂಡು ಕೈಗಾರಿಕಾ ಕ್ರಾಂತಿಗೆ ಕಾರಣವಾಯಿತು. ಇದಕ್ಕೂ ಹಿಂದೆ ಕೆಲಸಗಾರರಿಗೆ ಅನ್ವಯಿಸುವ ಕಾಯಿದೆಗಳೆಲ್ಲ ಕುಲಧರ್ಮ, ಜಾತಿಧರ್ಮ ಇತ್ಯಾದಿಗಳ ಮೇಲೆ ರೂಪಿತವಾಗಿದ್ದುವು. ಪ್ರಜಾಪಾಲನೆ ಮಾಡುತ್ತಿದ್ದ ರಾಜ ಪ್ರಜೆಗಳ ತಂದೆ ಎಂಬ ಭಾವನೆ ಬೆಳೆದಿತ್ತು. ಪ್ರ.ಶ. 643ರಲ್ಲಿ ರೊಟಾರಿ ಲೊಂಬಾರ್ಡ್ಸ್ ರಾಜ ಕಟ್ಟಡಗಳನ್ನು ಕಟ್ಟುವಾಗ ಕೂಲಿಯಾಳಿಗೆ ಅಪಘಾತವಾದಲ್ಲಿ ಅವನಿಗೆ ಪರಿಹಾರ ಕೊಡಬೇಕೆಂದು ಆಜ್ಞೆ ಮಾಡಿದ್ದ. ಇವಕ್ಕೆ ಹಿನ್ನೆಲೆಯಾಗಿ ಕೇವಲ ಮಾನವ ಹಿತಸಾಧನೆ ಇತ್ತೇ ಹೊರತು ಬೇರೇನೂ ಇಲ್ಲ. ಕೈಗಾರಿಕಾ ಕ್ರಾಂತಿಯಿಂದೀಚೆಗೆ, ಕೆಲಸಗಾರನ ಆರೋಗ್ಯದ ಕಡೆ ಗಮನ ತೀವ್ರವಾಯಿತು. ಅವನ ಕೆಲಸದ ಸ್ಥಳ, ಕೆಲಸ ಹಾಗೂ ಹುದ್ದೆಯಿಂದಾಗಿ ಬಂದ ರೋಗಗಳ ಅರಿವು ಕ್ರಮವಾಗಿ ಅನುಭವದಿಂದ ತಿಳಿದು ಬಂತು. ಉದಾಹರಣೆಗೆ, ಗಣಿಯ ಆಳದ ಕೆಲಸಗಾರನಿಗೆ ಶ್ವಾಸಕೋಶದ ಸಿಲಿಕಬೇನೆ (ಸಿಲಿಕೋಸಿಸ್), ಸೀಸ, ರೇಡಿಯಮ್ ಮತ್ತಿತರ ರಾಸಾಯನಿಕಗ ಳೊಂದಿಗಿನ ಕೆಲಸಗಾರರಿಗೆ ದೇಹದೊಳಕ್ಕೆ ರಾಸಾಯನಿಕ ಹೊಕ್ಕು ವಿಷವಾಗುವುದು ಇವೇ ಮೊದಲಾದ ಉದ್ಯೋಗಿಕ ರೋಗಗಳೆಂದು ಪರಿಗಣಿಸಲಾಯಿತು. ಈ ಕೈಗಾರಿಕೆ, ಉದ್ಯೋಗಗಳಿಂದಾಗಿ ಬರುವ ರೋಗದ ತನಿಖೆ, ನಿದಾನ ಮತ್ತು ಚಿಕಿತ್ಸೆ ಬಹಳಮಟ್ಟಿಗೆ ಮುಂದುವರಿದುದೇ ಈ ವಿಷಯಗಳಲ್ಲಿ ಶಾಸನಗಳಾಗಲು ಕಾರಣವಾದುವು. ಕಾರ್ಖಾನೆ ಗಳಿಗೂ ಅಲ್ಲಿನ ಕೆಲಸಗಾರರಿಗೂ ಅನ್ವಯಿಸುವ ಕಾಯಿದೆಗಳು, ಇತರ ಕೆಲಸಗಾರರ ಸುರಕ್ಷಣೆ ಕಾಯಿದೆ, ನೊಂದ ಕೆಲಸಗಾರರ ಪರಿಹಾರ ಕಾಯಿದೆ, ಹಾಗೂ ಉದ್ಯೋಗದಿಂದಲೇ ಬರುವ ರೋಗಗಳ ಪರಿಹಾರಕ್ಕಾಗಿ ಕಾಯಿದೆಗಳೇ ಮೊದಲು ಕೈಗಾರಿಕಾ ವಿಪ್ಲವದಿಂದಾಗಿ ಬಂದ ಮುಖ್ಯ ಶಾಸನಗಳು. ಕೈಗಾರಿಕೆಯ ವೈದ್ಯ ತಳಹದಿ ಹಾಕಿದವ ಬರ್ನಾರ್ಡಿನೊ ರಾಮಜ್ಜಿನಿ. ಈತ ಹೊರಡಿಸಿದ ಒಂದು ಗ್ರಂಥದಲ್ಲಿ (1713) ರೋಗಕ್ಕೂ ದಾರಿದ್ರ್ಯಕ್ಕೂ ಇರುವ ಸಂಬಂಧವನ್ನು ಚೆನ್ನಾಗಿ ತೋರಿದ್ದಾನೆ. ರಾಮಜ್ಜಿನಿಗೆ ಮೊದಲು ಹಾಗೂ ಅನಂತರ ಆಮೂಲಾಗ್ರ ಅಧ್ಯಯನ, ಕೈಗಾರಿಕೋದ್ಯಮಗಳಿಗನ್ವಯಿಸುವ ವೈದ್ಯವಿಜ್ಞಾನವನ್ನು ಎತ್ತಿ ಹಿಡಿವ ಅನೇಕ ಪ್ರಕಟಣೆಗಳು ಹೊರಬಿದ್ದುವು. ಅವುಗಳಲ್ಲಿ ಮಹತ್ತ್ವಪೂರಿತವಾದುವು, 1473ರಲ್ಲಿ ಉಲ್‌ರಿಕ್ ಎಲೆನ್‌ಬರ್ಗ್ ಬರೆದ ಕೆಲಸಮಾಡುವ ಕಡೆ ಹುಟ್ಟುವ ವಿಷಪೂರಿತ ಹಾಗೂ ಕೆಡುಕಿನ ಧೂಮದ ಪರಿಣಾಮವಾಗಿ ಅಕ್ಕಸಾಲಿಗರನ್ನು ಕಾಡುವ ರೋಗಗಳು, 1556ರಲ್ಲಿ ಜೆಯಾರ್ಜಿಯಸ್ ಅಗ್ರಿಕೋಲನ ಗಣಿ ಕೆಲಸಗಾರರ ರೋಗಗಳು, 1775ರಲ್ಲಿ

ಪರ್ಸಿವಾಲ್ ಪಾಟ್ ಬರೆದ ಕುಲುಮೆಗಾರರ ರೋಗಗಳು ಹಾಗೂ 1831ರಲ್ಲಿ ಚಾರ್ಲ್ಸ್ ಟರ್ನರ್ ಥಾಕ್ರಾರವರು ಬರೆದ ಕೈಗಾರಿಕೆಗಳಿಂದೇಳುವ ರೋಗಗಳು, ಬಡತನದ ಆಮೂಲಾಗ್ರ ಅಧ್ಯಯನ --ಇವು ಮುಖ್ಯ. ಎಡ್ವಿನ್ ಚಾಡ್ವಿಕ್ ಮೊದಲಾದ ಸಮಾಜಸುಧಾರಕರು ಕಡೆಯ ವರದಿಗೆ ಬಹಳ ಮಹತ್ತ್ವ ಕೊಟ್ಟು ಅದನ್ನು ಆಧಾರವಾಗಿಟ್ಟುಕೊಂಡಿದ್ದರು.

**ಆಕಸ್ಮಿಕಗಳು :** ಅನೇಕರಿಗೆ ಕೆಲಸಮಾಡುವಾಗ ಚಿಕ್ಕಪುಟ್ಟ ಗಾಯಗಳು, ತೀವ್ರತರ ಗಾಯ, ಕೈ ಕಾಲು ಯಂತ್ರದಲ್ಲಿ ಸಿಕ್ಕಿಯೋ ಗಣಿಗಳಲ್ಲಿ ಮೇಲಿನಿಂದ ಒಮ್ಮೆಲೇ ಬೀಳುವ ಕಲ್ಲು ಇತ್ಯಾದಿಗಳಿಂದಲೋ ಅಂಗ ಊನವಾಗುವುದು, ಕುರುಡಾಗುವುದು, ಕಿವುಡಾಗುವುದು ಸಾಮಾನ್ಯ. ಸುರಕ್ಷಣೆಗಾಗಿ ತಕ್ಕ ಸೌಲಭ್ಯಗಳನ್ನು ಧಣಿಗಳು ಒದಗಿಸಿದ್ದರೂ ಅಪಘಾತಗಳಾಗುತ್ತವೆ. ಈ ರೀತಿಯ ಅಪಘಾತಗಳಿಗೆ ಹಣವನ್ನು ಪರಿಹಾರವಾಗಿ ಕೊಡಲು ತೀರ್ಮಾನವಾಯಿತು. ಇದಕ್ಕೆ ಮೊದಲು ಒಬ್ಬ ಕೆಲಸಗಾರ ಪರಿಹಾರ ಪಡೆಯಲು, ನ್ಯಾಯಸ್ಥಾನದಲ್ಲಿ ಅಪಘಾತಕ್ಕೆ ಧಣಿಯ ನಿರ್ಲಕ್ಷ್ಯವನ್ನು ಸಾಬೀತು ಮಾಡಿದ ಹೊರತು ಯಾವ ಪರಿಹಾರವೂ ದೊರಕುತ್ತಿರಲಿಲ್ಲ. ಅಪಾಯವೆಂಬುದು ತಿಳಿದೂ ಕೆಲಸಗಾರನ ಅಲಕ್ಷ್ಯದಿಂದಾದ ಅಪಘಾತಕ್ಕೆ ಯಾವ ತರಹದ ಪರಿಹಾರವೂ ಇರಲಿಲ್ಲ. ಮಾಲೀಕನೇನೋ ಯಂತ್ರೋಪಕರಣಗಳನ್ನು ಸುಸಜ್ಜಿತವಾಗಿ ನ್ಯೂನತೆಗಳಿಲ್ಲದಂತೆ, ನೋಡಿಕೊಳ್ಳಬೇಕೆಂದು ನಮೂದಿಸಿತ್ತಾದರೂ ಹಾಗೆ ಅವನು ನೋಡಿಕೊಳ್ಳದೇ ಆದ ಅಪಘಾತಕ್ಕೆ ಕೆಲಸಗಾರನಿಗೆ ಪರಿಹಾರವಿರಲಿಲ್ಲ. ಮಾಲೀಕ ಸುರಕ್ಷಣೆಗೆ ಸಂಬಂಧಿಸಿದ ಕಟ್ಟಳೆಯನ್ನು ಮೀರಿದ್ದರೂ ಅವನ ಮೇಲೆ ಯಾವ ರೀತಿಯ ಹೊಣೆಯನ್ನೂ ಹೊರಿಸುತ್ತಿರಲಿಲ್ಲ. ಇಂಗ್ಲೆಂಡಿನಲ್ಲಿ 1880 ಪಾರ್ಲಿಮೆಂಟು ಮಾಲೀಕರ ಹೊಣೆಗಾರಿಕೆ ಶಾಸನ ಮಂಡಿಸಿತಾದರೂ ಈ ಶಾಸನ ಕಡತದಲ್ಲೇ ಉಳಿಯಿತು. ಏಕೆಂದರೆ ಇಂಗ್ಲೆಂಡ್‌ನ ನ್ಯಾಯಸ್ಥಾನಗಳು-ಈ ಶಾಸನದಲ್ಲಿ ಮಾಲೀಕರು ತಮ್ಮ ಕೆಲಸಗಾರರನ್ನು ಸೇರಿಸಿಕೊಳ್ಳುವ ಮುಂಚೆ ಶಾಸನದಲ್ಲಿ ಅಡಕವಾಗಿರುವ ಕಟ್ಟಳೆಗಳು ತಮಗೆ ಅನ್ವಯಿಸದೆಂದು ಒಪ್ಪಂದ ಮಾಡಿಕೊಂಡು ಕೆಲಸ ಕೊಡಲು ಅಡಚಣೆಗಳಿಲ್ಲವೆಂದೂ, ಹಾಗೆ ಮಾಡುವುದು ನ್ಯಾಯಬಾಹಿರವಲ್ಲವೆಂದೂ ಪರಿಗಣಿಸಿತು. ಜರ್ಮನಿಯಲ್ಲಿ ಬಿಸ್ಮಾರ್ಕ್ (1884) ಜಾರಿಗೆ ತಂದ ಪರಿಹಾರ ವಿಮಾಶಾಸನ ಮುಂಚೆ ಬಂದ ಶಾಸನಗಳಿಗೆ ಮೂಲಾಧಾರ, ಮಾದರಿ ಆಯಿತು. ಇಂಗ್ಲೆಂಡಿನ ಕೆಲಸಗಾರರ ಪರಿಹಾರ ಶಾಸನ (1897), ಆಮೇಲೆ ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಜಾರಿಗೆ ಬಂದ ಶಾಸನ ಇವೆರಡೂ ಬಿಸ್ಮಾರ್ಕ್ ಮಾಡಿದ ಶಾಸನದ ಮಾದರಿಯನ್ನು ಅನುಸರಿಸಿದ್ದುವು. 1880ರಿಂದ 1910ರೊಳಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, ಎಲ್ಲ ಸಂಸ್ಥಾನಗಳೂ ಕೈಗಾರಿಕೋದ್ಯಮಗಳಲ್ಲಿ ಉಂಟಾಗುವ ಅಪಘಾತಗಳಿಗೆ, ಒಂದಲ್ಲೊಂದು ರೀತಿಯಲ್ಲಿ ಮಾಲೀಕರು ಜವಾಬ್ದಾರರೆಂಬ ತತ್ತ್ವ ಮನದಟ್ಟಾಗಿ ಶಾಸನಗಳಾದುವು. 1906-1908ರಲ್ಲಿ ರೈಲ್ ರಸ್ತೆ ಕೆಲಸಗಾರರಿಗೆ ಪರಿಹಾರ ದೊರಕುವಂತೆ ಮಾಡಿದ ಶಾಸನಗಳೇ ಮುಖ್ಯ. ಈ ಶಾಸನಗಳೂ ಏರುಪೇರುಗಳಿಗೊಳಗಾದರೂ ಕೊನೆಗೆ ಶಾಸನಬದ್ಧವೆಂದು ಪರಿಗಣಿಸಲಾಯಿತು.

**ಜನತೆಯ ಸುರಕ್ಷಣೆ :** 17ನೆಯ ಶತಮಾನದಲ್ಲಿ ಹೊರಬಿದ್ದ ದಾರಿದ್ರ್ಯ ನಿವಾರಣೆ ಶಾಸನ ಜಾರಿಗೆ ಬರುವ ಮುನ್ನ ದರಿದ್ರರನ್ನು ನೋಡಿಕೊಳ್ಳುವ ಜವಾಬ್ದಾರಿ ಪಾಶ್ಚಿಮಾತ್ಯ ದೇಶಗಳಲ್ಲಿ ಚರ್ಚಿನ ಹೊಣೆಯಾಗಿತ್ತು. ಭಾರತದಲ್ಲಂತೂ ದಾರಿದ್ರ್ಯ ನಿವಾರಣೆ ಎಂದರೆ ಎರಡು ಹೊತ್ತು ಊಟಕ್ಕೆ ಭಿಕ್ಷೆ ಬೇಡುವುದೇ ರೂಢಿಯಾಗಿ ಬಿಟ್ಟಿತ್ತು. ಜೊತೆಗೆ ಭಿಕ್ಷೆ ಹಾಕುವುದು ಒಂದು ಧರ್ಮಕಾರ್ಯವೆಂದು ನಂಬಿಕೆ ಇತ್ತು. ಭಾರತದಲ್ಲೆಲ್ಲ, ಅದರಲ್ಲೂ ಯಾತ್ರಾಸ್ಥಳಗಳಲ್ಲಿ ಧರ್ಮಛತ್ರಗಳು ಉಚಿತವಾಗಿ ಊಟ ವಸತಿಗಳನ್ನು ಯಾತ್ರಿಕರಿಗೆ ಒದಗಿಸುವುದು ಮಾತ್ರವಲ್ಲದೆ; ನಿರ್ಗತಿಕರು, ದೀನರು, ದರಿದ್ರರಿಗೆ ದಿನವೂ ಉಚಿತವಾಗಿ ಆಹಾರ ಒದಗಿಸುವುದು ಒಂದು ಸುಯೋಗವೆಂಬ ಭಾವನೆಯಿದೆ. ಹಳ್ಳಿಯಲ್ಲೂ ಮನೆಯಲ್ಲೂ ಊಟಮಾಡುವ ಸಮಯಕ್ಕೆ ಬಂದ ಅತಿಥಿ ಅಭ್ಯಾಗತರಿಗೇ ಅಲ್ಲದೆ ದೀನದರಿದ್ರರಿಗೂ ಆಹಾರ ನೀಡುವುದು ಯಜಮಾನನ ಕರ್ತವ್ಯವೆಂದು ತಿಳಿಯಲಾಗಿತ್ತು. ಇದರಿಂದ ಇಹಲೋಕ ಪರಲೋಕಗಳಲ್ಲಿ ಪಾಪಗಳು ಕಳೆದು ಮೋಕ್ಷ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಇತ್ತು. ಈಗಲೂ ಅನೇಕ ಸಾಂಪ್ರದಾಯಿಕ ಕುಟುಂಬಗಳಲ್ಲಿ ಇದು ಆನುವಂಶಿಕವಾಗಿ ನಡೆದುಕೊಂಡು ಬರುತ್ತಿದೆ. ಯೆಹೂದಿಯರಲ್ಲೂ ಇದೇ ರೀತಿಯ ಭಾವನೆಗಳನ್ನು ಕಾಣಬಹುದು. ರಾಜರು ಕೆಲವರು, ತಮ್ಮ ಅಧೀನಕ್ಕೊಳಪಟ್ಟ ಸಾಮಂತರಲ್ಲಿ ಹಾಗೂ ಶ್ರೀಮಂತರಲ್ಲಿ ಅವರವರ ಆಡಳಿತ ಕ್ಷೇತ್ರದಲ್ಲಿರುವ ದೀನದರಿದ್ರರಿಗೆ ನೆರವುಕೊಟ್ಟು ಕಾಪಾಡುವ ಜವಾಬ್ದಾರಿಯನ್ನು ಹೊರಿಸಿದ್ದರು. ಹಿಂದಿನ ಕಾಲದಿಂದಲೂ, ಸಮಾಜದಲ್ಲಿ ತಮ್ಮ ತಮ್ಮಲ್ಲೇ ಸಂಘಗಳನ್ನು ಕಟ್ಟಿಕೊಂಡು ಅನೇಕ ರೀತಿಯ ಸಾರ್ವಜನಿಕ ಹಿತದೃಷ್ಟಿಯ ಧ್ಯೇಯಗಳನ್ನು ಸಾಧಿಸುವುದು ತಿಳಿದ ವಿಚಾರ. ಉದಾಹರಣೆಗೆ ದಾರಿದ್ರ್ಯ ನೀಗಲು ಉದ್ಯೋಗ ಒದಗಿಸುವುದು. ಧರ್ಮಪಾಲನೆಗೆ ಶವಸಂಸ್ಕಾರದ ಏರ್ಪಾಟು, ವಿಧವೆ ಆದವಳು ಮತ್ತೊಬ್ಬರಿಗೆ ಹೊರೆಯಾಗದ ರೀತಿ ಅವಳಿಗೆ ಕೆಲಸದ ಹವಣಿಕೆ ಇತ್ಯಾದಿ. ಈ ರೀತಿಯ ಧರ್ಮಕಾರ್ಯಗಳು ಎಷ್ಟೇ ನಡೆಯುತ್ತಿದ್ದರೂ ಸಮಸ್ಯೆ ಬೃಹದಾಕಾರವಾದ್ದರಿಂದ ಖಾಸಗಿ ಸಂಸ್ಥೆಗಳಿಗೆ ಪರಿಹಾರ ಏರ್ಪಾಡು ಮಾಡುವುದೂ, ಆಗದ ಕೆಲಸವಾಯಿತು. ಅದರಲ್ಲಿ ಕ್ಷಾಮ ಡಾಮರ, ಆರ್ಥಿಕ ಮುಗ್ಗಟ್ಟುಗಳೇ ಮುಂತಾದ ಕಾಲಗಳಲ್ಲಿ ನಿರುದ್ಯೋಗ ಭೀಕರ ರೂಪವನ್ನು ತಾಳಿ ದಾರಿದ್ರ್ಯ, ಹಸಿವು, ರೋಗರುಜಿನಾದಿಗಳು ತಾಂಡವವಾಡುತ್ತಿದ್ದಾಗ ಸರ್ಕಾರ ಸುಮ್ಮನೆ ಕೂಡಲಾಗಲಿಲ್ಲ. ಸಾರ್ವಜನಿಕರಿಂದ ಮೇಲಿಂದ ಮೇಲೆ ಒತ್ತಾಯ ಆರಂಭವಾಯಿತು. 16ನೆಯ ಶತಮಾನದ ಮೊದಲಲ್ಲೇ ಸರ್ ಥಾಮಸ್ ಮೋರ್ ತಮ್ಮ ಯೂಟೋಪಿಯಾ ಗ್ರಂಥದಲ್ಲಿ ಸಾರ್ವಜನಿಕ ಆರೋಗ್ಯ ರಕ್ಷಣೆಗೆ ಕಾರ್ಯಕ್ರಮಗಳು, ಸಮಾಜಾರೋಗ್ಯ ವಿಮಾ, ಸಾಮಾಜಿಕ ಭದ್ರತೆ ಕಾಪಾಡಲು ಕ್ರಮಗಳು ಹಾಗೂ ಸಾರ್ವಜನಿಕ ವಸತಿನಿರ್ಮಾಣ ಇವೇ ಮೊದಲಾದ ಯೋಜನೆಗಳನ್ನು ಸೂಚಿಸಿದ್ದ. ಇದೇ ರೀತಿ ಡೇನಿಯಲ್ ಡೀಫೊ ಕೂಡ ಸುಧಾರಣೆಗಳನ್ನು ಸೂಚಿಸಿದ್ದ. ಡೆನಿಸ್ ಡೈಡೆರೋ ಬರೆದ ವಿಶ್ವಕೋಶದಲ್ಲಿ ಆಸ್ಪತ್ರೆಗಳ ವಿಚಾರದಲ್ಲಿ ಬರೆಯುತ್ತ ಮುಪ್ಪಿನಕಾಲದ ವಿಮೆ, ವೈದ್ಯಕೀಯ ನೆರವು ಮುಂತಾದ ಸಾರ್ವಜನಿಕ ನೆರವುಗಳ ಯೋಜನೆಗಳ ವಿಚಾರವಾಗಿ ಸ್ಥೂಲವಾಗಿ ವಿವರಿಸಿದ್ದಾನೆ.

ಇಂಗ್ಲೆಂಡಿನಲ್ಲಿ 1948ರ ಹೊತ್ತಿಗೆ ಎಲಿಜಬೆತ್ ಕಾಲದಿಂದಿದ್ದ ದಾರಿದ್ರ್ಯ ನಿವಾರಣ ಶಾಸನ ಮೂಲೆಗೆ ಬಿತ್ತು. ರಾಷ್ಟ್ರೀಯ ನೆರವು ಶಾಸನ ಜಾರಿಗೆಬಂದು, ಮೊದಲಿದ್ದ ಅನೇಕ ಪುರಾತನ ಕಲ್ಪನೆಗಳು ದೂರವಾದುವು. ಒಂದನೆಯ ಮಹಾಯುದ್ಧಕ್ಕೆ ಮೊದಲೇ, 1911ರ ರಾಷ್ಟ್ರೀಯ ಆರೋಗ್ಯ ವಿಮಾ ಶಾಸನ ಮಂಡಿತವಾಗಿತ್ತು. ಇದರಿಂದ ಕೆಲಸಗಾರ ರೋಗಿಯಾದರೆ ವೈದ್ಯಕೀಯ ನೆರವು ಬೇಕಾದರೆ, ಪರಿಹಾರ ಒದಗಿಸಬೇಕೆಂಬ ಮೂಲತತ್ತ್ವ ಅಂಗೀಕೃತವಾಗಿತ್ತು. ಆದರೆ ಈ ಪರಿಹಾರವನ್ನು ಬಳಸಲು ಕೆಲಸಗಾರರು ವಿಮಾ ಯೋಜನೆಗೆ ಒಳಪಟ್ಟಿರುವುದು ಕಡ್ಡಾಯವಾಗಿತ್ತು. ಎರಡನೆಯ ಮಹಾಯುದ್ಧದ ಕೊನೆಯಲ್ಲಿ ರಾಷ್ಟ್ರೀಯ ವಿಮಾ ಶಾಸನ (1944), ಕುಟುಂಬ ಸಂಭಾವನಾ ಶಾಸನ(1945), ರಾಷ್ಟ್ರೀಯ ಜನಾರೋಗ್ಯ ಸೇವಾ ಶಾಸನ (1946), ರಾಷ್ಟ್ರೀಯ ವಿಮಾ ಶಾಸನಗಳನ್ನು (1946) ಪಾರ್ಲಿಮೆಂಟ್ ಅಂಗೀಕರಿಸಿತು. ಇವೆಲ್ಲದರಿಂದ ಸಾರ್ವಜನಿಕ ನೆಮ್ಮದಿಯ ವಿಚಾರದಲ್ಲಿ ಸರ್ವವ್ಯಾಪಕ ಯೋಜನೆಗೆ ವಾತಾವರಣ ಚೆನ್ನಾಗಿತ್ತು.

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 1953ರ ಹೊತ್ತಿಗೆ ಆರೋಗ್ಯ, ವಿದ್ಯೆ, ಸುರಕ್ಷಣೆಯ ಬೇರೆ ಇಲಾಖೆಯೇ ರೂಪುಗೊಂಡರೂ, ಅನೇಕ ಸಮಾಜಶಾಸನಗಳು ಸಂಯುಕ್ತ ರಾಷ್ಟ್ರ ಸರ್ಕಾರ ಹಾಗೂ ಸಂಸ್ಥಾನಗಳ ಪರಸ್ಪರ ಸಹಕಾರದ ಮೇಲೆ ನಿಂತಿತ್ತು. ಇವು ಪೂರ್ಣ ರಾಷ್ಟ್ರೀಯ ಸ್ವತ್ತಾಗಿರಲಿಲ್ಲ. ಮುಖ್ಯವಾಗಿ ಸಂಯುಕ್ತ ರಾಷ್ಟ್ರ ಸರ್ಕಾರ ಸಂಸ್ಥಾನಗಳಿಗೆ ಸಹಾಯದ್ರವ್ಯವನ್ನು ಒದಗಿಸುತ್ತಿತ್ತು. ಉದಾಹರಣೆಗೆ ಬಾಣಂತಿ, ಶಿಶುಶಾಸನ (1921), ರಾಷ್ಟ್ರೀಯ ಶಾಲಾ ಉಪಾಹಾರ ಶಾಸನ (1946) ಇವು ಪರಸ್ಪರ ಸಹಕಾರದಿಂದ ಬದ್ಧವಾದ ಶಾಸನಗಳು. ಇಂಗ್ಲೆಂಡ್, ಸ್ಕಾಂಡಿನೇವಿಯ ದೇಶಗಳಷ್ಟು ಕಲ್ಯಾಣರಾಜ್ಯ ಸ್ಥಾಪನೆಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮುಂದುವರಿದಿಲ್ಲವೆಂದು ಹೇಳಬಹುದು. ಆದರೂ ಎಲ್ಲ ಸಮಾಜ ಶಾಸನಕ್ಕೂ ವಿಮಾ ತತ್ತ್ವವನ್ನು ಅನ್ವಯಿಸಬೇಕೆಂಬ ಅಭಿಪ್ರಾಯ ರೂಪುಗೊಳ್ಳುತ್ತಿರುವ ಹಾಗೆ ಕಂಡುಬರುತ್ತದೆ.

1930ರ ಆರ್ಥಿಕ ಮುಗ್ಗಟ್ಟು, ಸಾರ್ವಜನಿಕರಿಗೆ ನೆರವು, ನಿರುದ್ಯೋಗ ಪರಿಹಾರ, ಸಾಮಾಜಿಕ ಭದ್ರತಾ ವೇತನ ಕೆಲವು ಸಾರ್ವಜನಿಕ ನೆಮ್ಮದಿಯ ರಕ್ಷಣಾ ಕಾಯಿದೆಗಳಿಗೆ ದಾರಿಮಾಡಿ ಕೊಟ್ಟಿತು. ಈ ಕಾಯಿದೆಗಳು ಇಡೀ ರಾಷ್ಟ್ರಕ್ಕೆ ಅನ್ವಯಿಸುವ ಕಾಯಿದೆಗಳು. ಸಮಾಜ ಸುಧಾರಣಾ ಕಾಯಿದೆಗಳ ಪೈಕಿ ಸಮಾಜದ ಭದ್ರತೆ ಕಾಪಾಡಲು ಹಾಗೂ ನ್ಯಾಯಸಮ್ಮತವಾದ ಕಾರ್ಮಿಕರ ಸೇವಾಸ್ಥಿತಿಗಳನ್ನು ನಿಗದಿ ಮಾಡುವ ಶಾಸನಗಳೂ ಮುಖ್ಯವಾದುವು.

1937ರ ಆರಂಭದಲ್ಲಿ ಅಮೆರಿಕ ವರಿಷ್ಠ ನ್ಯಾಯಾಲಯ ಕಾಂಗ್ರೆಸ್ಸಿಗೆ ಶಾಸನಗಳನ್ನು ಮಾಡುವ ಪೂರ್ಣಹಕ್ಕು ಇದೆ ಎಂದು ಸಾರಿತು. ಆದರೂ ಈ ಶಾಸನಗಳ ಸತ್ತ್ವದಲ್ಲೂ ಕಾರ್ಯಕ್ರಮಗಳಲ್ಲೂ ನ್ಯೂನತೆಗಳೂ ಲೋಪದೋಷಗಳು ಇದ್ದೇ ಇದ್ದುವು. ಸಂಸ್ಥಾನಗಳ ರಾಜ್ಯಾಂಗಗಳಲ್ಲಿ ಅಡಕವಾಗಿರುವ ಹಕ್ಕು ಬಾಧ್ಯತೆಗಳ ಮೇಲೆ ಸಂಸ್ಥಾನಗಳಲ್ಲಿರುವ ನ್ಯಾಯಾಂಗ- ಶಾಸನಗಳು ನ್ಯಾಯಸಮ್ಮತ ಅಥವಾ ಅಸಮ್ಮತವೆಂದು ನಿರ್ಧಾರ ಮಾಡುತ್ತವೆ. ಆದರೆ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಶಾಸನಗಳನ್ನು ಆಚರಣೆಗೆ ತರುವಾಗ ಮಾತ್ರ ಅನೇಕ ನ್ಯೂನತೆಗಳು ಕಂಡುಬಂದಿವೆ. ಶಾಸನದ ವಿಧಿಗಳನ್ನು ಚಲಾಯಿಸಲು ಅಧಿಕಾರವನ್ನು ನ್ಯಾಯಾಂಗದಿಂದ ಆರೋಗ್ಯ ಇಲಾಖೆಯ ಸಿಬ್ಬಂದಿಗೆ ವಹಿಸಿಕೊಡುವುದು, ಪ್ರತಿಯೊಂದಕ್ಕೂ ನಿಗದಿಯಾದ ಪ್ರಮಾಣ, ದರ್ಜೆಯನ್ನು ನಿರ್ಧರಿಸಿ ಆಡಳಿತ ವ್ಯವಹಾರಗಳಲ್ಲಿ ತಾವೇತಾವಾಗಿ ವರ್ತಿಸಲು ಎಡೆಯಿಲ್ಲದಂತೆ ಮಾಡುವುದೂ ಇನ್ನೂ ಅನೇಕ ವಿಧದ ಲೋಪದೋಷಗಳ ಪರಿಹಾರ ಅಗತ್ಯವೆಂದೂ ಕಂಡುಬಂದಿತು. ಸಂಸ್ಥಾನದ ಶಾಸನಗಳನ್ನು ಉಲ್ಲಂಘಿಸಿದಾಗ ಆರೋಗ್ಯಾಧಿಕಾರಿಗಳು ಅನೇಕ ವಿಧದ ಕಾರ್ಯಕ್ರಮ ಕೈಗೊಳ್ಳಬೇಕಾಗುತ್ತದೆ. ಉದಾಹರಣೆಗೆ, ತನಿಖೆ, ಕೆಡುಕಾಗಿಸುವ ವಸ್ತುಗಳ, ಜಾಡ್ಯವನ್ನು ಇತರರಿಗೆ ಹರಡಬಲ್ಲ ಪದಾರ್ಥಗಳ ನಾಶ, ಸಾರ್ವಜನಿಕ ಸ್ಥಳಗಳನ್ನು (ಸಿನಿಮಾ, ಹೋಟೆಲ್ ಇತ್ಯಾದಿ) ಮುಚ್ಚುವುದು, ನಿವೇಶನ, ವಸ್ತು ಮುಂತಾದುವಲ್ಲಿ ಸೋಂಕುಕಳೆತ, ಪ್ರತಿಬಂಧಕ ಚುಚ್ಚುಮದ್ದನ್ನು ಹಾಕುವುದು, ರೋಗಿಯೊಡನೆ ಇದ್ದವರನ್ನು ಬೇರೆಯಾಗಿ ಇರಿಸುವುದು, ಇವೇ ಮೊದಲಾದ

ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಕ್ರಮಗಳಿಂದ ನೊಂದವನಿಗೆ ಪರಿಹಾರ ಕೊಟ್ಟರೆ ಸಾಕೇ? ನೊಂದವನ ದೃಷ್ಟಿಯಿಂದ ತೆಗೆದುಕೊಂಡ ಕಾರ್ಯಕ್ರಮ ಅನುಚಿತ, ಅಸಂಬದ್ಧ ಎಂದಿದ್ದರೆ ಅವನು ನ್ಯಾಯಾಲಯದ ಮೊರೆ ಹೋಗಬಹುದೇ? ಹಾಗೆ ಹೋದರೆ ಅದುವರೆಗೆ ಕ್ರಮ ತೆಗೆದುಕೊಳ್ಳುವುದನ್ನು ಮುಂದೂಡಿ ನ್ಯಾಯಾಲಯದ ತೀರ್ಮಾನಕ್ಕೆ ಕಾದಿರಬಹುದೇ? ಇದು ಸಾರ್ವಜನಿಕ ಹಿತದೃಷ್ಟಿಯಿಂದ ಉಚಿತವೇ? ಒಂದು ಸಾಂಕ್ರಾಮಿಕ ಜಾಡ್ಯವಿದ್ದಾಗ ಆ ಮನೆಯ ಯಜಮಾನ ಆರೋಗ್ಯ ಇಲಾಖೆಗೆ ವರದಿ ಸಲ್ಲಿಸದಿದ್ದರೆ, ಅದರಿಂದ ಆಗುವ ಅನಾಹುತ ಎಲ್ಲರಿಗೂ ತಿಳಿದ ವಿಷಯ. ಹೀಗಿದ್ದೂ ಯಜಮಾನ ವರದಿ ಮಾಡದಿದ್ದರೆ ಶಿಕ್ಷೆ ಕೇವಲ ಜುಲ್ಮಾನೆಯೇ ಅಥವಾ ಇನ್ನೂ ಕಠಿಣತರವಾದ ಕ್ರಮವೋ? ಇಷ್ಟೆಲ್ಲ ಶಿಕ್ಷೆಗೆ, ಅನಾನುಕೂಲತೆಗಳಿಗೆ, ಒಳಪಡಿಸಿದ ಅನಂತರ ಕಾರ್ಯಕ್ರಮ ಬೇಕಿರಲಿಲ್ಲವೆಂದು ಗೊತ್ತಾದಲ್ಲಿ ಅದಕ್ಕೆ ಯಾರು ಹೊಣೆ? ಈ ವಿಚಾರಗಳನ್ನೆಲ್ಲಾ ಬಹಳ ಯೋಚಿಸಿ ಹಿಂದು ಮುಂದು ತಿಳಿದು, ಸಾರ್ವಜನಿಕ ಹಿತದೃಷ್ಟಿಯಿಂದ ಏನೇನು ಕ್ರಮ ಅತ್ಯಗತ್ಯವೋ ಅದನ್ನೆಲ್ಲ ತೆಗೆದುಕೊಳ್ಳದೆ ಬೇರೆ ಮಾರ್ಗವೇ ಇಲ್ಲ.

**ಆಹಾರ, ಔಷಧಿಗಳ ಕೀಲ್ಬೆರಕೆ :** ಇಡೀ ಆರೋಗ್ಯಕ್ಷೇತ್ರದಲ್ಲೇ, ಆಹಾರ, ಔಷಧಗಳ ಕೀಲ್ಬೆರಕೆಗೆ ಅಥವಾ ಕಲಬೆರಕೆಗೆ (ಅಡಲ್ಟರೇಷನ್) ಸಂಬಂಧಿಸಿದ ಶಾಸನಗಳು ಅತಿ ಮುಖ್ಯ. ಪ್ರಾಚೀನ ಭಾರತದಲ್ಲಿ, ಕೀಲ್ಬೆರಕೆಯನ್ನು ತಪ್ಪಿಸಲು ರೂಪಿತವಾದ ಶಾಸನಗಳಿಲ್ಲದಿದ್ದರೂ, ರಾಜಮಹಾರಾಜರ ಆಡಳಿತದಲ್ಲಿ ಆಹಾರ ಕೀಲ್ಬೆರಕೆ ಮಾಡಿದರೆ ಅತ್ಯುಗ್ರದಂಡವನ್ನು ವಿಧಿಸಲಾಗುತ್ತಿತ್ತು. ತಪ್ಪಿತಸ್ಥನ ಕೈಗಳನ್ನೂ ಕತ್ತರಿಸಲು ಆಜ್ಞೆ ಹೊರಡುತ್ತಿತ್ತಂತೆ. ರೋಮ್, ಅಥೆನ್ಸ್‌ಗಳಲ್ಲಿ ಹಿಂದೆ ಮಾದಕ ಪದಾರ್ಥಗಳಿಗೆ ಕೀಲ್ಬೆರಸುವುದನ್ನು ನಿಷೇಧಿಸುವ ಶಾಸನಗಳಿದ್ದುವು.

ಇಂಗ್ಲೆಂಡಿನಲ್ಲಿ ಮೂರನೆಯ ಹೆನ್ರಿ ರಾಜನಾಗಿದ್ದಾಗಿನಿಂದಲೂ ಕೆಲವು ಆಹಾರಗಳ ಕೀಲ್ಬೆರಕೆ ನಿಷೇಧಿಸಲಾಗಿತ್ತು. ಟೀ, ಕಾಫಿ, ಬಿಯರ್ ಮಾದಕಗಳ ಕೀಲ್ಬೆರಕೆ ನಿರ್ಬಂಧಿಸಲು ಪಾರ್ಲಿಮೆಂಟ್ ಆಗಾಗ್ಗೆ ಶಾಸನಗಳನ್ನು ಮಂಡಿಸುತ್ತಿತ್ತು. ಆಹಾರ ಕೀಲ್ಬೆರಕೆ ಶಾಸನ (1872) ಜಾರಿಗೆ ಬಂತು. ಇದರಿಂದ ಆಹಾರಪದಾರ್ಥಗಳನ್ನು ವಶಪಡಿಸಿಕೊಂಡು ಅವನ್ನು ತಜ್ಞರಿಂದ ಪರೀಕ್ಷೆ ಮಾಡಿಸಿ ಅವು ಕೀಲ್ಬೆರಕೆ ಎಂದು ರುಜುವಾತಾದಲ್ಲಿ 50 ಪೌಂಡುಗಳ ದಂಡ ವಿಧಿಸಲು ಸಾಧ್ಯವಾಯಿತು. ಹಾಗೂ ಎರಡನೆಯ ಸಲ ಕೀಲ್ಬೆರಕೆ ಮಾಡಿ ಸಿಕ್ಕಿ ಬಿದ್ದಾಗ 6 ತಿಂಗಳ ಕಾರಾಗೃಹವಾಸ, ಕಠಿಣ ಸಜ ವಿಧಿಸಲು ಅವಕಾಶವಿತ್ತು. ಈ ಶಾಸನದ ವ್ಯಾವಹಾರಿಕ ಲೋಪದೋಷಗಳನ್ನು ಸರಿಪಡಿಸಿ ಒಂದು ಸರ್ವವ್ಯಾಪಕ ಆಹಾರ ಮತ್ತು ಔಷಧಿಗಳ ಕೀಲ್ಬೆರಕೆ, ಪ್ರತಿಬಂಧಕ ಶಾಸನ (1955) ಜಾರಿಗೆ ಬಂತು.

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಕಾಂಗ್ರೆಸ್ಸು ಔಷಧಿಗಳ ಕೀಲ್ಬೆರಕೆ ನಿಷೇಧ ಶಾಸನಗಳನ್ನು (1848) ಜಾರಿಗೆ ತಂದು, 1890ರಲ್ಲಿ ಆಹಾರ ಕೀಲ್ಬೆರಕೆ ವಿರುದ್ಧ ಶಾಸನವನ್ನು ಮಂಡಿಸಿತು. 1880ರಿಂದ 1906ರಲ್ಲಿ 103 ಮಸೂದೆಗಳು ಕೇವಲ, ಅಂತರರಾಜ್ಯದ ಆಹಾರ, ಔಷಧಗಳ ಸಾಗಾಣಿಕೆಗೆ ಅನ್ವಯಿಸುವ ಕಾಯಿದೆಗಳೇ ಆಗಿದ್ದುವು. ಆದರೆ 1906ರಲ್ಲಿ ಅಧ್ಯಕ್ಷ ರೂಸ್‌ವೆಲ್ಟ್ ಶುದ್ಧ ಆಹಾರ, ಔಷಧಿಗಳ ಶಾಸನಕ್ಕೆ ಸಹಿ ಹಾಕಿ ಅದು ಅಂಗೀಕಾರ ಆಗುವವರೆಗೆ ಈ ಮಸೂದೆಗಳು ಯಾವುವೂ ಸ್ವೀಕೃತವಾಗಲಿಲ್ಲ. ಈ ಶಾಸನ ಅಂಗೀಕಾರವಾದ ಮೇಲೂ ಅದರಲ್ಲಿ ನಿಯಮಿತವಾದ ವಿಧಿಗಳನ್ನು ಜಾರಿಗೆ ತರಲು ಅನೇಕ ತೊಡಕುಗಳು ಕಂಡು ಬಂದುವು. ಕೀಲ್ಬೆರಕೆ ಎಂಬ ಪದದ ಅರ್ಥ ಸಾಕಷ್ಟು ವ್ಯಾಪಕವಾಗದಿರುವುದು ಒಂದು ಕಾರಣ. ವಿಧಿಸುತ್ತಿದ್ದ ಶಿಕ್ಷೆ ಅಂದರೆ ಮೊದಲ ಉಲ್ಲಂಘನೆಗೆ 20 ಪೌಂಡುಗಳ ದಂಡ, ಎರಡನೆಯದಕ್ಕೆ 300 ಪೌಂಡುಗಳ ದಂಡ ಅಥವಾ ಒಂದು ವರ್ಷ ಸಜಾ, ವ್ಯಾಪಾರಿಗಳಲ್ಲಿ ಸಾಕಷ್ಟು ಭಯ ಹುಟ್ಟಿಸುವಂತಿರಲಿಲ್ಲವೆಂಬುದು ಎರಡನೆಯ ಕಾರಣ.

1937ರಲ್ಲಿ ಒಂದು ವಿಷಾದಕರ ಪ್ರಸಂಗ ಗಮನಕ್ಕೆ ಬಂತು. ಎಲಿಕ್ಸರ್ ಸಲ್ಫೊನಮೈಡ್ ಮದ್ದನ್ನು ಹಂಚಿಕೆ ಹಾಗೂ ಮಾರಾಟವನ್ನು ನಿಯಂತ್ರಿಸುವ ಕಾಯಿದೆ ಯಾವುದೂ ಇರಲಿಲ್ಲ. 1938ರಲ್ಲಿ ಸಂಯುಕ್ತ ರಾಷ್ಟ್ರ ಸರ್ಕಾರದ ಆಹಾರ, ಔಷಧ ಮತ್ತು ಕಾಂತಿವರ್ಧಕಗಳ ಶಾಸನ (ಫೆಡರಲ್ ಫುಡ್, ಡ್ರಗ್ ಅಂಡ್ ಕಾಸ್ಮೆಟಿಕ್ ಆ್ಯಕ್ಟ್, 1938) ಜಾರಿಗೆ ಬಂತು. ಇದರಿಂದ ಆರೋಗ್ಯಕ್ಕೆ ಧಕ್ಕೆ ಬರುವ ಆಹಾರ ಹಾಗೂ ಮದ್ದನ್ನು ಕೊಳಕು ಅಥವಾ ಸೋಂಕಿನಿಂದ ಕೂಡಿರುವ ಸೀಸೆ, ಪಾತ್ರೆ, ಪೆಟ್ಟಿಗೆ ಇತ್ಯಾದಿಗಳಲ್ಲಿ ಹಾಕಿ ಮಾರುವುದನ್ನು ನಿಷೇಧಿಸಲಾಯಿತು. ಈ ಆಜ್ಞೆಗಳನ್ನು ಉಲ್ಲಂಘಿಸಿದವರಿಗೆ 1000 ಪೌಂಡು ಅಥವಾ ಒಂದು ವರ್ಷ ಕಠಿಣ ಸಜಾ ವಿಧಿಸಲು ಅವಕಾಶ ಕಲ್ಪಿಸಿಕೊಡಲಾಯಿತು. ಅಂತಾರಾಷ್ಟ್ರೀಯ ಮಟ್ಟದ ಮೋಸಕ್ಕೆ ಅಥವಾ ಎರಡನೆಯ ಸಲ ಕಾಯಿದೆ ವಿರುದ್ಧ ನಡೆದರೆ 10,000 ಪೌಂಡುಗಳ ದಂಡ ಇಲ್ಲದಿದ್ದಲ್ಲಿ 3 ವರ್ಷ ಕಠಿಣ ಸಜೆಗೆ ಅವಕಾಶವಿತ್ತು. ಈ ಶಾಸನವನ್ನು ಜಾರಿಗೆ ತಂದದ್ದೇ ಅಲ್ಲದೆ ಕಟ್ಟುನಿಟ್ಟಾಗಿ ಆಚರಣೆಗೆ ತರಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು.

**ಸಾರ್ವಜನಿಕ ಕ್ಷೇಮರಕ್ಷಣಾ ಕಾಯಿದೆಗಳು :** ಸಾರ್ವಜನಿಕ ಆರೋಗ್ಯ ರಕ್ಷಣಾ ಕಾಯಿದೆಗಳು ಹಾಗೂ ನೊಂದ ಕೆಲಸಗಾರರಿಗೆ ಪರಿಹಾರ ನೀಡುವ ಕಾಯಿದೆಗಳ ಜೊತೆಗೇ ಸಾರ್ವಜನಿಕ ಕ್ಷೇಮರಕ್ಷಣಾ ಕಾಯಿದೆಗಳೂ ಜಾರಿಗೆ ಬಂದವೆಂದು ಹೇಳಬಹುದು. ಅಪ್ರೇರಿತ ಸ್ವಯಂಸೇವಕ ಮಂಡಳಿಗಳು ಹೆಚ್ಚು ಆಸಕ್ತಿವಹಿಸಿ ಜನಗಳಿಗೆ ತಿಳಿವಳಿಕೆ ಕೊಟ್ಟು ತಾವೇ ಚಟುವಟಿಕೆಗಳನ್ನು ವ್ಯವಸ್ಥೆ ಮಾಡಿದುವು. 20ನೆಯ ಶತಮಾನದಲ್ಲಂತೂ ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಇಂಜಿನಿಯರು ಅನೇಕ ವಿಧದ ರಕ್ಷಣೆಗಳನ್ನು ನಿರೂಪಿಸಿ ಆಚರಣೆಗೆ ತಂದಿದ್ದಾರೆ. ಹಾಗೂ ಕೆಲಸಗಾರ ಆದಷ್ಟು ಸುರಕ್ಷಿತವಾಗಿರಲು ಸೂತ್ರಗಳನ್ನು ವಿಧಿಸಿದ್ದಾರೆ. ಈ ಸೂತ್ರಗಳನ್ನು ಪಾಲಿಸಿದ್ದೇ ಆದರೆ ಕೆಲಸಗಾರ ಬಹುಮಟ್ಟಿಗೆ ಅಪಾಯವೇ ಇಲ್ಲದಂತಿರಬಹುದು. ಇದರಿಂದ ಮಾಲೀಕರೂ ತಮ್ಮ ನುರಿತ ಕೆಲಸಗಾರರಿಂದ ಪೂರ್ಣ ಪ್ರಯೋಜನ ಪಡೆಯುವಂತಾಯಿತು. ಈ ಉದ್ದೇಶದಿಂದಲೇ ಕಾರ್ಖಾನೆಗಳಲ್ಲಿ ಆವಿಯ ಕುದಿಪಾತ್ರೆಗಳನ್ನು ಪರಿಶೀಲಿಸುವುದು ಮೊದಮೊದಲಲ್ಲಿ ರೂಢಿಗೆ ಬಂತು. ಅನಂತರ ಮನೆ ಕಟ್ಟುವ ಮುನ್ನ, ಗಿರಣಿಗಳನ್ನು ಸ್ಥಾಪಿಸುವ ಮೊದಲು ಪೌರಸಭೆಯ ಅಧಿಕಾರಿ ಬಂದು ಕೂಲಂಕಷವಾಗಿ ಪರಿಶೀಲಿಸಿದ ಮೇಲೆ ಕಾರ್ಯ ಪ್ರಾರಂಭ ಮಾಡಲು ಅಪ್ಪಣೆ ದೊರೆಯುತ್ತಿತ್ತು. ಗಣಿಗಳಲ್ಲಿ ಕೆಲಸ ಮಾಡುವವರ ಸಂರಕ್ಷಣೆ, ರೈಲುದಾರಿಗಳನ್ನು ನಿರ್ಮಿಸುವ ಕೆಲಸಗಾರರ ಸಂರಕ್ಷಣೆ ಕಡ್ಡಾಯ ಮಾಡುವ ಕಾನೂನುಗಳು 1887ರಲ್ಲಿ ಜಾರಿಗೆ ಬಂದು ಕ್ರಮೇಣ 1893, 1903, 1910 ಮತ್ತು 1920ರಲ್ಲಿ ವಿಸ್ತಾರವಾಗಿ ತಿದ್ದುಪಡಿಗಳಾಗಿ ಸಂಯುಕ್ತ ರಾಷ್ಟ್ರ ಸರ್ಕಾರದ ಮೊದಲಿನ ಮಹತ್ತ್ವದ ಶಾಸನವಾದುವು. 1936ರ ವಾಲ್‌ಷಿ ಹೀಲಿ ಸಾರ್ವಜನಿಕ ಗುತ್ತಿಗೆದಾರರಿಗೆ ಅನ್ವಯಿಸುವ ಶಾಸನದ ಪ್ರಕಾರ, ಸರ್ಕಾರದ ಕೆಲಸವನ್ನೊಪ್ಪಿಕೊಂಡಿರುವ ಪ್ರತಿಯೊಬ್ಬ ಗುತ್ತಿಗೆದಾರನೂ ಆಯಾ ಸಂಸ್ಥಾನದಲ್ಲಿ ಜಾರಿಯಲ್ಲಿರುವ ಆರೋಗ್ಯ ರಕ್ಷಣಾ ಮತ್ತು ಕ್ಷೇಮ ರಕ್ಷಣಾ ಕಾಯಿದೆಗೆ ಒಳಪಟ್ಟು ಕೆಲಸ ಮಾಡಬೇಕು ಎಂದು ತೀರ್ಮಾನವಾಯಿತು. ಈ ಕಾನೂನುಗಳ ಮಹತ್ತ್ವವನ್ನು ಮಾಲೀಕರು ಅರಿತಿದ್ದಾರೆ; ಅದರಲ್ಲಿ ಅಡಕವಾಗಿರುವ ಸೂತ್ರಗಳ ಪಾಲನೆಯನ್ನು ಈ ಆಧುನಿಕ ಮಾಲೀಕರು ತಮ್ಮ ಕರ್ತವ್ಯವೆಂದು ಪರಿಗಣಿಸಿ ಕೆಲಸಗಾರರಿಗೆ ಪೂರ್ಣ ರಕ್ಷಣೆ ಕೊಡುವುದರಲ್ಲಿ ಸಫಲರಾಗಿದ್ದಾರೆ. ಅಮೆರಿಕದ ಕೈಗಾರಿಕೋದ್ಯಮಗಳಲ್ಲಿ ಅಪಘಾತಗಳಿಗೆ ಎಡೆ ಇಲ್ಲದಂತೆ ಸೂತ್ರಗಳನ್ನು ನಿಯಮಿಸುವುದರಲ್ಲಿ ಅಮೆರಿಕ ಸ್ಟ್ಯಾಂಡರ್ಡ್ ಸಂಘ ಬಹಳ ಆಸಕ್ತಿ ವಹಿಸಿತು. ಅಪಘಾತವನ್ನು ತಡೆಗಟ್ಟಲು ಚಳವಳಿ ಎಲ್ಲೆಲ್ಲಿಯೂ ಕಂಡುಬಂತು. ಅಂತಾರಾಷ್ಟ್ರೀಯ ಕೈಗಾರಿಕಾ ಅಪಘಾತ ನಿರ್ಬಂಧ ಸಂಘ ಹಾಗೂ ನಿಯೋಜಿತ ಆಯೋಗ ಈ ಚಳವಳಿಯ ಮೇಲೆ ಪ್ರಭಾವ ಬೀರಿತು. ಅಮೆರಿಕ ಸಂಯುಕ್ತಸಂಸ್ಥಾನಗಳ ಕಾರ್ಮಿಕ ಇಲಾಖೆ ಹಾಗೂ 1953ರಿಂದ ಆರೋಗ್ಯ, ವಿದ್ಯಾ ಮತ್ತು ನೆಮ್ಮದಿ ಇಲಾಖೆ ಕೈಗಾರಿಕೋದ್ಯಮಗಳಿಗೊಳಪಟ್ಟ ಕೆಲವು ಕ್ಷೇಮರಕ್ಷಣೆಗೆ ಹೊಣೆಯಾಗಿವೆ. ಗಣಿಗಳಲ್ಲಿ ಅಪಘಾತವಾಗದಂತೆ ಆಗಾಗ್ಗೆ ಅಧಿಕೃತ ಪರಿಶೀಲನೆ ನಡೆಸಬೇಕು ಹಾಗೂ ಸುರಂಗದ ಮೇಲ್ಭಾಗ ಕುಸಿಯದಿರಲು, ಸ್ವಚ್ಛ ಗಾಳಿ, ಉಪಯೋಗ ಮಾಡುವ ಸಲಕರಣೆಗಳ ಸ್ಥಿತಿ, ಬೆಂಕಿಯಿಂದ ರಕ್ಷಣೆ ಮೊದಲಾದವು ಯಾವ ರೀತಿ ಇರಬೇಕೆಂಬುದನ್ನು ಕಾನೂನು ನಿರ್ದಿಷ್ಟ ರೀತಿಯಲ್ಲಿ ನಿಗದಿಮಾಡಿದೆ. 1920ಕ್ಕೆ ಮುಂಚೆ ನೊಂದ ಕೆಲಸಗಾರ ನ್ಯಾಯಾಲಯಕ್ಕೆ ಹೋಗಿ ತನಗೆ ಸಂಭವಿಸಿದ ಅಪಘಾತಕ್ಕೆ ಪರಿಹಾರವನ್ನು ಬೇಡಿಕೊಳ್ಳಬೇಕಾಗಿತ್ತು. ಅನಂತರ ಈ ಪರಿಹಾರವನ್ನು ಕೊಡಲು ಆಯಾ ಕೈಗಾರಿಕೆಗೆ ಸಂಬಂಧಪಟ್ಟ ಅಧಿಕೃತ ಮಂಡಳಿಗಳೇ ಕಾನೂನುರೀತ್ಯಾ ಅರ್ಹತೆ ಪಡೆದವು.

ಕೇವಲ ಕೈಗಾರಿಕೋದ್ಯಮಗಳಲ್ಲಿ ಒದಗಬಹುದಾದ ಅಪಘಾತಗಳನ್ನು ತಡೆಗಟ್ಟುವ ನಿಬಂಧನೆಗಳೇ ಅಲ್ಲದೆ ಇನ್ನೂ ಅನೇಕ ರೀತಿಯ ಸುರಕ್ಷಣಾ ಕಾನೂನುಗಳು ಜಾರಿಗೆ ಬಂದುವು. ಉದಾಹರಣೆಗೆ ಜನವಾಹನ ಸಂಚಾರಗಳನ್ನು ನಿಯಂತ್ರಿಸುವ, ಸಿನಿಮಾ ಮಂದಿರಗಳಿಗೆ ಅನ್ವಯಿಸುವ, ಶಾಲೆಗಳಿಗೆ ಅನ್ವಯಿಸುವ ಹೆದ್ದಾರಿ, ಪಕ್ಕದಾರಿ, ಸಾರ್ವಜನಿಕ ವಾಹನ, ಸ್ನಾನಮಾಡುವ ತೀರಪ್ರದೇಶ, ಬೆಂಕಿ ಅನಾಹುತ ಮುಂತಾದವುಗಳಿಗೆ ಅನ್ವಯಿಸುವ ಕಾಯಿದೆಗಳೂ ಬಂದುವು.

ಭಾರತದಲ್ಲಿಯೂ ಆರೋಗ್ಯ ಮತ್ತು ಸಮಾಜ ಕಲ್ಯಾಣ ಹಾಗೂ ಜನತೆಯ ಕ್ಷೇಮರಕ್ಷಣಾ ಶಾಸನಗಳು ಅನೇಕವಿವೆ. ಭಾರತದ ರಾಜ್ಯಾಂಗ 1935ರ ಭಾರತ ಸರ್ಕಾರ ಶಾಸನವನ್ನು ಅಂಗೀಕಾರ ಮಾಡಿದೆ. ಈ ಶಾಸನದಲ್ಲಿ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಜವಾಬ್ದಾರಿಗಳನ್ನು ಮತ್ತು ಶಾಸನಗಳ ವ್ಯಾಪ್ತಿಯನ್ನು ನಿರ್ದಿಷ್ಟವಾಗಿ ನಿರ್ದೇಶಿಸಿದೆ. ಅದೂ ಅಲ್ಲದೆ ಕೆಲವು ಸಮಾನ ಅಧಿಕಾರವುಳ್ಳ ವಿಷಯಗಳ ಪಟ್ಟಿಯನ್ನೂ ನಮೂದಿಸಲಾಗಿದೆ. ಅಂದರೆ ಯಾವುದಾದರೂ ಒಂದು ಶಾಸನ ಅಂಗೀಕಾರವಾದರೆ ಆ ಶಾಸನ ಕಡ್ಡಾಯವಾಗಿದ್ದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಆ ಶಾಸನವನ್ನು ಆಚರಣೆಗೆ ತರುತ್ತವೆ. ಕಡ್ಡಾಯವಲ್ಲದಿದ್ದರೆ, ರಾಜ್ಯಸರ್ಕಾರಗಳು ಆ ಶಾಸನವನ್ನು ಸ್ವೀಕಾರ ಮಾಡುವ ಅಥವಾ ಮಾಡದಿರುವ ಅಧಿಕಾರವನ್ನು ಹೊಂದಿವೆ. ಈ ಸಂದರ್ಭಗಳಲ್ಲಿ ರಾಜ್ಯ ಸರ್ಕಾರ, ಶಾಸನವನ್ನು ಆಚರಣೆಗೆ ತರಬಹುದು, ಅಥವಾ ತರದೆ ಇರಬಹುದು, ಉದಾಹರಣೆಗೆ ಆಹಾರದ ಕೀಲ್ಬೆರಕೆ ತಡೆಗಟ್ಟುವ ಶಾಸನ (1954) ಭಾರತದ ಎಲ್ಲ ಭಾಗಗಳಿಗೂ ಕಡ್ಡಾಯವಾಗಿ ಅನ್ವಯಿಸುವ ಶಾಸನ. ಆದರೆ ಭಾರತದ ಸಾಂಕ್ರಾಮಿಕ ಜಾಡ್ಯ ಹತೋಟಿ ಶಾಸನ (1857) ಕಡ್ಡಾಯ ಶಾಸನವಲ್ಲ. ಅದು ಕೇವಲ ಸ್ವೀಕಾರಾರ್ಹ ಶಾಸನವಷ್ಟೆ.

ಭಾರತ ಸರ್ಕಾರ ಹಾಗೂ ರಾಜ್ಯಸರ್ಕಾರಗಳು ಜಾರಿಗೆ ತಂದಿರುವ ಕೆಲವು ಮುಖ್ಯ ಆರೋಗ್ಯ ಮತ್ತು ಸಮಾಜಕಲ್ಯಾಣ ಶಾಸನಗಳನ್ನು ಈ ಕೆಳಗೆ ಕೊಡಲಾಗಿದೆ:

1 ರೋಗಿಗಳ ಮತ್ತು ರೋಗಿಗಳೊಂದಿಗೆ ಸಂಪರ್ಕ ಹೊಂದಿದವರನ್ನು ಪ್ರತ್ಯೇಕ ಮಾಡಿ ಅವರ ಚಲನವಲನಗಳ ಮೇಲೆ ಹತೋಟಿ ಇಡಲು 1825ರಲ್ಲಿ ಮಂಡಿಸಿದ ಶಾಸನ (ಕ್ವಾರಂಟೀನ್ ಆ್ಯಕ್ಟ್ 1825).
2 ಭಾರತ ಸಾಂಕ್ರಾಮಿಕ ಜಾಡ್ಯಗಳ ಹತೋಟಿ ಶಾಸನ 1857
3 ಭಾರತದ ನೌಕಾವ್ಯಾಪಾರಿಗಳ ಶಾಸನ 1859
4 ಭಾರತೀಯ ದಂಡ ಸಂಹಿತೆ 1860 (ಇಂಡಿಯನ್ ಪೀನಲ್ ಕೋಡ್)
5 ಜನನ ಮರಣಗಳ ದಾಖಲೆ ಶಾಸನ 1873
6 ಸಿಡುಬು ನಿರೋಧ ಚುಚ್ಚುಮದ್ದಿನ ಶಾಸನ 1880
7 ವೈದ್ಯಕೀಯ ಶಾಸನ 1886
8 ಕುಷ್ಠರೋಗಿಗಳಿಗನ್ವಯಿಸುವ ಶಾಸನ 1898
9 ಭಾರತದ ಹುಚ್ಚು ಹಿಡಿದವರಿಗೆ ಅನ್ವಯಿಸುವ ಶಾಸನ 1912
10 ಭಾರತ ರೆಡ್‌ಕ್ರಾಸ್ ಶಾಸನ 1922
11 ಭಾರತ ಗಣಿಗಳ ಶಾಸನ 1923
12 ಕಾರ್ಮಿಕರ ಪರಿಹಾರ ನೀಡುವ ಕಾಯಿದೆ 1923
13 ಕೇಂದ್ರ ಸರ್ಕಾರದ ಆಹಾರ ಶಾಸನ 1940
14 ಭಾರತದ ಗಿರಣಿಗಳ ಶಾಸನ 1948
15 ಕಾರ್ಮಿಕರ ರಾಜ್ಯವಿಮಾ ಶಾಸನ 1948
16 ಕಲ್ಲಿದ್ದಲು ಗಣಿ ಕೆಲಸಗಾರರ ಮಿತವ್ಯಯ ಮತ್ತು ಲಾಭಾಂಶ ಸಂಗ್ರಹ ನಿಧಿ ಯೋಜನೆ 1948
17 ಕೆಲಸಗಾರರ ಮಿತವ್ಯಯ ಸಂಗ್ರಹ ನಿಧಿ ಶಾಸನ 1952
18 ಆಹಾರದ ಕೀಳ್ಬೆರಕೆ ತಡೆಗಟ್ಟುವ ಶಾಸನ 1954
19 ವಿಶೇಷ ರೀತ್ಯಾ ವಿವಾಹಗಳಿಗೆ ಅನ್ವಯಿಸುವ ಶಾಸನ 1954
20 ಹಿಂದೂ ವಿವಾಹ ಶಾಸನ 1955
21 ವರದಕ್ಷಿಣೆ ಮತ್ತು ಕನ್ಯಾದಕ್ಷಿಣೆ ಸ್ವೀಕಾರ ರದ್ದುಗೊಳಿಸಿದ ಶಾಸನ
22 ಕೊಳಚೆ ಪ್ರದೇಶ ನಿರ್ಮೂಲನ ಶಾಸನ
23 ಹೆರಿಗೆ ಸಹಾಯಾರ್ಥ ಪರಿಹಾರ ಶಾಸನ
24 ಅಶಕ್ತರ ಸಹಾಯ ನಿಧಿ ಶಾಸನ
25 ಆಶ್ರಿತರ ಸಹಾಯ ನಿಧಿ ಶಾಸನ
26 ಸ್ತ್ರೀಯರ ಮತ್ತು ಹೆಣ್ಣುಮಕ್ಕಳ ಅನೈತಿಕ ವ್ಯಾಪಾರನಿಗ್ರಹ ಶಾಸನ ಇತ್ಯಾದಿ

ಇವಿಷ್ಟೇ ಅಲ್ಲದೆ ಇನ್ನೂ ಅನೇಕ ಶಾಸನಗಳು ಜಾರಿಯಲ್ಲಿವೆ. ಉದಾಹರಣೆಗೆ, ಪೌರಸಭಾ ಶಾಸನ, ಗ್ರಾಮಪಂಚಾಯತಿ ಶಾಸನ–ಇವು ತಮ್ಮ ತಮ್ಮ ಕ್ಷೇತ್ರಗಳಿಗೆ ಅನ್ವಯಿಸುವಂತೆ ಜನಾರೋಗ್ಯ ಮತ್ತು ನೈರ್ಮಲ್ಯ, ಕುಡಿಯುವ ನೀರು, ಕಕ್ಕಸು ನಿವೇಶನಗಳ ನಿರ್ಮಾಣ, ಕೊಳಚೆ ಪ್ರದೇಶಗಳ ನಿರ್ಮೂಲನ, ಸಾಂಕ್ರಾಮಿಕ ಜಾಡ್ಯಗಳ ಹತೋಟಿ, ವಸತಿ ಸೌಕರ್ಯ, ವೇಶ್ಯಾಗೃಹಗಳ ಹತೋಟಿ ಇತ್ಯಾದಿ ವಿಷಯಗಳಿಗೆ ಅನ್ವಯಿಸುವ ನಿಯಮಗಳನ್ನು ಅಡಕಮಾಡಿ ಜಾರಿಗೆ ತಂದಿವೆ. ಕೆಲವು ರಾಜ್ಯಗಳಲ್ಲಿ ಜನಾರೋಗ್ಯ ಮತ್ತು ನೈರ್ಮಲ್ಯ ಹಾಗೂ ಸಮಾಜ ಕಲ್ಯಾಣಕ್ಕೆ ಅನ್ವಯಿಸುವ ಹಲವಾರು ನಿಯಮಗಳನ್ನು ಕ್ರೋಡೀಕರಿಸಿ ಜನಾರೋಗ್ಯ ಶಾಸನ ಎಂಬ ಸರ್ವವ್ಯಾಪಿ ಶಾಸನವನ್ನೂ ಜಾರಿಗೆ ತಂದಿದ್ದಾರೆ.

ಈ ವಿಷಯದ ಉಪಸಂಹಾರಕ್ಕೆ ಮೊದಲು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಟುವಟಿಕೆಗಳನ್ನು ಸ್ಥೂಲವಾಗಿ ಪರಿಶೀಲಿಸಬಹುದು.

ಆರೋಗ್ಯ ಮತ್ತು ಕ್ಷೇಮರಕ್ಷಣೆಯ ವಿಚಾರ ಅಂತಾರಾಷ್ಟ್ರೀಯ ಹೊಣೆ ಎಂಬುದನ್ನು ಅನೇಕ ಮಹನೀಯರು 17–18ನೆಯ ಶತಮಾನಗಳಲ್ಲಿ ತಾವು ಬರೆದ ಗ್ರಂಥಗಳಲ್ಲಿ ಹಾಗೂ ವರದಿಗಳಲ್ಲಿ ನಮೂದಿಸಿದ್ದಾರೆ. ಈ ವಿಚಾರದಲ್ಲಿ ಲೀಗ್ ಆಫ್ ನೇಷನ್ಸ್, ಸಂಯುಕ್ತ ರಾಷ್ಟ್ರಸಂಸ್ಥೆ ಹಾಗೂ ವಿಶ್ವ ಆರೋಗ್ಯ ಸಂಸ್ಥೆಗಳು ತಮ್ಮ ಸಂಸ್ಥೆಗಳ ಉದ್ದೇಶವನ್ನು ತಮ್ಮ ತಮ್ಮ ರಾಜ್ಯಾಂಗಗಳಲ್ಲಿ ಅಡಕ ಮಾಡಿವೆ ಹಾಗೂ ಸಾಕಷ್ಟು ಪ್ರಾಮುಖ್ಯವನ್ನೂ ಕೊಟ್ಟಿವೆ. ತಿಳಿವಳಿಕೆಯಿಂದ ಪ್ರೇರಿತವಾದ ಜನಾಭಿಪ್ರಾಯ ಹಾಗೂ ಜನತೆಯ ಸಂಪೂರ್ಣ ಸಹಕಾರ ಜನಾರೋಗ್ಯವನ್ನು ಕಾಪಾಡಲು ಅತ್ಯಂತ ಮುಖ್ಯ ಮತ್ತು ಅಗತ್ಯವೆಂದು ಈ ಅಂತಾರಾಷ್ಟ್ರೀಯ ಸಂಸ್ಥೆಗಳು ಒತ್ತಿ ಹೇಳಿವೆ. ಪ್ರತಿಯೊಬ್ಬ ಮಾನವನೂ ತನ್ನ ಆರೋಗ್ಯವನ್ನು ಉನ್ನತ ಮಟ್ಟದಲ್ಲಿಟ್ಟು ಕಾಪಾಡಿ ಪರಸ್ಪರ ನೆರವು ನೀಡುವುದು ತನ್ನ ಕರ್ತವ್ಯ ಎಂದು ತಿಳಿದಿದೆ. ಸಂಯುಕ್ತ ರಾಷ್ಟ್ರಗಳ ಅಂತಾರಾಷ್ಟ್ರೀಯ ಮಕ್ಕಳ ತುರ್ತುನಿಧಿ, ಆಹಾರ ಮತ್ತು ಕೃಷಿಸಂಸ್ಥೆ, ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಈ ಶಾಖೆಗಳೆಲ್ಲವೂ ಇದೇ ಧ್ಯೇಯವನ್ನೊಳಗೊಂಡು ಕಾರ್ಯಮಾಡುತ್ತಿವೆ. ಖಾಸಗಿ ಸಂಸ್ಥೆಗಳ ಪಾತ್ರ ಏನೂ ಕಡಿಮೆ ಇಲ್ಲ. ಉದಾಹರಣೆಗೆ, ಅಮೆರಿಕದ ರಾಕ್‌ಫೆಲ್ಲರ್ ಫೌಂಡೇಷನ್, ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಮುಂತಾದವು ಅತ್ಯಂತ ದಕ್ಷತೆಯಿಂದ ಮಾನವ ಕುಲಕೋಟಿಗೆ ಸೇವೆ ಸಲ್ಲಿಸುತ್ತಿವೆ.

ಮುಂದೆ ಬರುವ ಶಾಸನಗಳು ಮಾನವಕೋಟಿಯನ್ನು ಪರಮಾಣುಶಕ್ತಿಯಿಂದ ಉತ್ಪತ್ತಿಯಾಗುವ ವಿದ್ಯುತ್‌ವಿಕಿರಣ ಕ್ರಿಯಾಶಕ್ತಿಯಿಂದ ಕಾಪಾಡಲು, ಆಧುನಿಕ ಕೈಗಾರಿಕೆ ಉದ್ಯಮಗಳು ಹಾಗೂ ಸ್ವಯಂಚಾಲಿತ ಯಂತ್ರಗಳಿಂದ ವಾತಾವರಣ ಮಲಿನವಾಗದಂತೆ ರಕ್ಷಣೆಕೊಡಲು, ಕೃತಕ ಗರ್ಭಧಾರಣೆಯಿಂದ ಉದ್ಭವವಾಗುವ ವೈಯಕ್ತಿಕ ಸಮಸ್ಯೆಗಳ ಪರಿಹಾರ ಮಾಡಲು, ಬದಲಿ ಅಂಗಗಳ ಜೋಡಣೆಯಿಂದ ಮಾನವ ಅಮರನಾದಲ್ಲಿ ಯಾವ ರೀತಿ ಸಮಾಜ ನಡೆದುಕೊಳ್ಳಬೇಕು, ಯಾರಿಗೆ ಬದಲಿ ಜೋಡಣೆಯ ಅಗತ್ಯ, ಅಂತರಿಕ್ಷದಲ್ಲಿ ಯಾನ ಮಾಡುವವರ ಆರೋಗ್ಯ ಸಂರಕ್ಷಣೆಗೆ ನಿಯಮಗಳಾವುವು–ಇವೇ ಮುಂತಾದ ಗಂಭೀರ ಪ್ರಶ್ನೆಗಳನ್ನು ಎದುರಿಸಿ ಶಾಸನಗಳನ್ನು ರೂಪಿಸಲೇಬೇಕಾಗುತ್ತದೆಂಬುದರಲ್ಲಿ ಅನುಮಾನವೇ ಇರಲಾರದು. (ಆರ್.ಎಸ್.ವಿ.)

**ಆರೋಪ :** ಅಪರಾಧಿಕ (ಕ್ರಿಮಿನಲ್) ಮೊಕದ್ದಮೆಯ ವಿಭಾಗದಲ್ಲಿ ನ್ಯಾಯಾಧೀಶರೇ ನಡೆಸಬೇಕಾದ ಅಧಿಪತ್ರ ವ್ಯಾಜ್ಯಗಳಲ್ಲಿ (ವಾರಂಟ್ ಕೇಸಸ್) ಮತ್ತು ಕ್ಷಿಪ್ರ ಮೊಕದ್ದಮೆಗಳಲ್ಲಿ (ಸಮರಿ ಕೇಸಸ್) ಅಪರಾಧಿ ಮಾಡಿರತಕ್ಕ ಅಪರಾಧವನ್ನು ಆತನಿಗೆ ವಿವರಿಸಿ ನ್ಯಾಯಾಧೀಶರು ಅಪರಾಧವನ್ನು ಆತನ ಮೇಲೆ ಹೊರಿಸುವುದಕ್ಕೆ ಈ ಹೆಸರಿದೆ (ಛಾರ್ಜ್). ಇದು ಅಪರಾಧಿಕ ಮೊಕದ್ದಮೆಗಳ ಇನ್ನೊಂದು ಭಾಗವಾದ ಸಮನ್ಸ್ ಮೊಕದ್ದಮೆಗಳಿಗೂ ವ್ಯಾವಹಾರಿಕ ಮೊಕದ್ದಮೆಗಳಿಗೂ ಅನ್ವಯಿಸುವುದಿಲ್ಲ. ಮೊಕದ್ದಮೆಯ ಪ್ರಾರಂಭದಲ್ಲಿ ಆಪಾದಿತನ ಮೇಲಿನ ಆರೋಪವನ್ನು ಆತನಿಗೆ ತಿಳಿಸಿಬಿಡಬೇಕೆಂದು ನಿಯಮವಿದೆ.

ಈ ರೀತಿ ಮೊಕದ್ದಮೆಯ ಆರಂಭದಲ್ಲೇ ಆರೋಪವನ್ನು ಹೇಳುವುದರ ಉದ್ದೇಶ ಅಪರಾಧಿ ತನ್ನ ಮೇಲೆ ಬಂದಿರುವ ಆಪಾದನೆಗಳನ್ನು ಎದುರಿಸಲು ತಕ್ಕ ವ್ಯವಸ್ಥೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದೇ ಆಗಿದೆ. ಅಪರಾಧಿಯ ಮೇಲೆ ಹೊರಿಸಲಾಗುವ ಆಪಾದನೆಗಳು ಸರಿಯಾಗಿ, ಕ್ರಮಬದ್ಧವಾಗಿ, ಕಾನೂನಿಗೆ ಅನುಗುಣವಾಗಿ ಇಲ್ಲದಿದ್ದರೆ ಅಂಥ ಆರೋಪ ದೋಷಯುಕ್ತವಾದದ್ದಾಗುತ್ತದೆ.

ಭಾರತ ದೇಶದ ಕ್ರಿಮಿನಲ್ ಕಾನೂನಿನ 19ನೆಯ ಅಧ್ಯಾಯದಲ್ಲಿ ಆರೋಪ ಸಾಧಾರಣವಾಗಿ ವಿವರಿಸಲ್ಪಟ್ಟಿದೆ. ಇದು ಇಂಗ್ಲೆಂಡ್ ದೇಶದಲ್ಲಿನ ಕ್ರಮಬದ್ಧ ಆಪಾದನೆ (ಇನ್‌ಡೈಟ್‌ಮೆಂಟ್) ಎಂಬುದಕ್ಕೆ ಸಮನಾಗಿದೆ. ಅಪರಾಧಿ ತನ್ನ ಮೇಲಿನ ಆಪಾದನೆಗಳನ್ನು ಸಕ್ರಮವಾಗಿ ತಿಳಿಯುವ ಹಕ್ಕುಳ್ಳವನಾಗಿರುತ್ತಾನೆ. ಇದು ವಿಶೇಷವಾಗಿ ಅಪರಾಧಿ ಸ್ವತಃ ಅಪರಾಧ ಮಾಡದೆ ಬೇರೆಯವರ ಕಾರ್ಯದಿಂದ ಯಾವುದೇ ಅಪರಾಧದಲ್ಲಿ ಸಿಕ್ಕಿಹಾಕಿಕೊಂಡಿರುವಾಗ ಅತ್ಯಗತ್ಯವಾಗುತ್ತದೆ. ಅಪರಾಧಿ ಮಾಡಿರುವ ಅಕೃತ್ಯದ ಆಪಾದನೆಯೇ ಅಲ್ಲದೆ, ಆತ ಯಾವ ಕಾನೂನಿನ, ಎಷ್ಟನೆಯ ಕಲಂ ಪ್ರಕಾರ ಅಪರಾಧ ಮಾಡಿರಬಹುದೆಂಬುದನ್ನೂ ಆರೋಪದಲ್ಲಿ ಹೇಳಬೇಕು. ಈ ಆರೋಪ ಕ್ರಮಬದ್ಧವಾಗಿಯೂ ವಿವರವಾಗಿಯೂ ಇಲ್ಲದಿದ್ದರೆ ಊರ್ಜಿತವಾಗುವುದಿಲ್ಲ ಮತ್ತು ಅಂಥ ಆರೋಪ ವಿಚಾರಣೆಯನ್ನು ಕಲ್ಮಷಗೊಳಿಸುತ್ತದೆ. ಒಬ್ಬ ಒಂದು ಹುಲ್ಲಿನ ಮೆದೆಗೆ ಬೆಂಕಿ ಹಚ್ಚಿದರೆ, ಅದರಿಂದ ಇತರ ಮೆದೆಗಳು ಸಹ ಹೊತ್ತಿಕೊಂಡು ಉರಿದುಹೋದರೆ, ಅದರ ಎಲ್ಲ ವಿವರವೂ ಬೇಕಿಲ್ಲ. ಮೊದಲನೆಯ ಮೆದೆಗೆ ಬೆಂಕಿ ಹಚ್ಚಿದ ಸಮಯ, ತಾರೀಖು ಸ್ಥಳ ಹೇಳಿದರೆ ಸಾಕು. ಅದು ಕ್ರಮಬದ್ಧವಾದ, ಸರಿಯಾದ ಆರೋಪವಾಗುತ್ತದೆ. ಆದರೆ ಬಲಾತ್ಕಾರಪಡಿಸುವುದು (ಎಕ್ಸ್‌ಟಾರ್ಷನ್), ಅನ್ಯಾಯವಾಗಿ ಇತರರಿಂದ ಹಣವನ್ನು ಕಿತ್ತುಕೊಳ್ಳುವುದು ಮುಂತಾದುವುಗಳಲ್ಲಿ, ಯಾರಿಂದ, ಯಾವಾಗ, ಎಷ್ಟೆಷ್ಟು ಹಣವನ್ನು ಕಿತ್ತುಕೊಂಡಿದ್ದು, ಅಥವಾ ಬಲಾತ್ಕಾರಪಡಿಸಿದ್ದು ಮುಂತಾದುವು ವಿವರವಾಗಿ ಇರಬೇಕು.

ಆದ್ದರಿಂದ ಒಳ್ಳೆಯ ಆರೋಪ ಎಂದರೆ ಅದು ಅಪರಾಧದ ವಿವಿಧ ರೀತಿಯ ವಿವರಗಳನ್ನು ಕ್ರಮವಾಗಿ ಒಳಗೊಂಡು ಅಪರಾಧಿಗೆ ಆತನ ಮೇಲಿನ ಅಪರಾಧದ ಬಗ್ಗೆ ತಿಳುವಳಿಕೆಯನ್ನು ಕೊಡುವಂಥದ್ದಾಗಿರಬೇಕು. ಒಟ್ಟಿನಲ್ಲಿ ಆರೋಪ ಮುಖ್ಯವಾಗಿ ಈ ಕೆಳಗೆ ಕಂಡ ಲಕ್ಷಣಗಳನ್ನೊಳಗೊಂಡಿರಬೇಕೆಂದು ಸ್ಥೂಲವಾಗಿ ಹೇಳಬಹುದು:

1. ಅಪರಾಧಿ ಮಾಡಿರುವ ಅಪರಾಧದ ವಿವರಗಳ ಹೇಳಿಕೆ.

2. ಯಾವ ಕಾನೂನು ಮತ್ತು ಯಾವ ಕಲಂನ ಪ್ರಕಾರ ಅಪರಾಧವಾಗಿದೆ ಎಂಬುದರ ಹೇಳಿಕೆ.

3. ಕೃತ್ಯ ನಡೆದ ಸ್ಥಳ, ಸಮಯ ಅಥವಾ ವೇಳೆಯ ವಿವರಣೆ.

4. ನಡೆದಿರುವ ಕೃತ್ಯದ ವಿವರಣೆ.

ಆರೋಪದಲ್ಲಿ ಅನಾವಶ್ಯಕವಾದ ಫಿರ್ಯಾದುದಾರರು (ಪ್ರಾಸೆಕ್ಯೂಷನ್ನಿನವರು) ಸಾಧಾರಗೊಳಿಸಬೇಕಾಗಿಲ್ಲದ ಅಪರಾಧದ ವಿವರಣೆಯೇನೂ ಬೇಕಾಗಿಲ್ಲ. ಆರೋಪ ನ್ಯಾಯಾಧೀಶರಿಂದಲೇ ಅಪರಾಧಿಗೆ, ಆತನಿಗೆ ಗೊತ್ತಿರುವ ಭಾಷೆಯಲ್ಲಿ, ತಿಳಿಸಲ್ಪಡಬೇಕಾದದ್ದು

ಇನ್ನೊಂದು ಮುಖ್ಯ ಅಂಶವಾಗಿದೆ. ಒಂದು ಪಕ್ಷ ಇಂಗ್ಲಿಷ್‌ನಲ್ಲಿ ಆರೋಪಮಾಡಿದರೆ ಅದನ್ನು ಅಪರಾಧಿ ತಿಳಿದಿರುವ ಭಾಷೆಗೆ ತರ್ಜುಮೆ ಮಾಡಿ ಹೇಳಬೇಕು. ಯಾವುದೇ ಅಪರಾಧಿಗೆ ಹಿಂದೆಯೇ ಶಿಕ್ಷೆ ವಿಧಿಸಲ್ಪಟ್ಟಿದ್ದು, ಅದರ ಆಧಾರದ ಮೇಲೆ ಪ್ರಸಕ್ತ ಅಪರಾಧಕ್ಕೆ ಪರಮಾವಧಿ ಶಿಕ್ಷೆ ವಿಧಿಸಬೇಕಾಗಿದ್ದರೆ ನ್ಯಾಯಾಧೀಶರು ಆ ಹಿಂದಿನ ಅಪರಾಧ ಮತ್ತು ಅದಕ್ಕಾದ ಶಿಕ್ಷೆಯ ವಿವರಣೆಯನ್ನೂ ಆರೋಪದಲ್ಲಿ ಕೊಡಬೇಕು, ಮತ್ತು ಅದು ನಡೆದ ಕಾಲ ಮತ್ತು ರೀತಿಯನ್ನು ವಿವರಿಸಬೇಕು.

ಆರೋಪ ಆಪರಾಧಿಕ ದಾವಾದ ಅಧಿಪತ್ರವ್ಯಾಜ್ಯಗಳಲ್ಲಿ, ಒಂದು ಬಹು ಮುಖ್ಯವಾದ ಹೆಜ್ಜೆ. ಫಿರ್ಯಾದುದಾರರು ಮತ್ತು ಸೆಷನ್ಸ್ ನ್ಯಾಯಾಧೀಶರೇ ನಡೆಸಬೇಕಾದ ಕೇಸುಗಳಲ್ಲಿ, ದಾವೆಯ ಬಗ್ಗೆ ಎಲ್ಲ ಸಾಕ್ಷ್ಯಾಧಾರಗಳನ್ನು ಒದಗಿಸಿದ ಮೇಲೆ ನ್ಯಾಯಾಧೀಶರು ಆ ಸಾಕ್ಷಿಗಳ ಆಧಾರದಮೇಲೆ ಅಪರಾಧಿ ಅಪರಾಧ ಮಾಡಿದ್ದಾನೆ ಎಂಬುದಾಗಿ ನಿರ್ಧರಿಸಿದರೆ ಅಪರಾಧಿಯ ಮೇಲೆ ಆರೋಪ ಹೊರಿಸಬಹುದು. ಒಂದು ಪಕ್ಷ ಅಪರಾಧ ಸಾಬೀತಾಗುವುದಿಲ್ಲ ಎಂದು ನಿರ್ಧರಿಸಿದರೆ ಅಪರಾಧಿಯನ್ನು ಆಗಲೇ ಬಿಟ್ಟುಬಿಡಬಹುದು.

ಆರೋಪ ಮಾಡುವಾಗ ನ್ಯಾಯಾಧೀಶರು ಯಾವುದಾದರೂ ಅಪರಾಧಕ್ಕೆ ಕಾನೂನಿನಲ್ಲಿ ಒಂದು ಹೆಸರಿದ್ದರೆ ಆ ಹೆಸರನ್ನು ಉಪಯೋಗಿಸಿ ಆರೋಪ ಮಾಡಬೇಕು. ಉದಾಹರಣೆಗೆ ದೊಂಬಿ ಎಬ್ಬಿಸುವುದು (ರಯಟಿಂಗ್), ಕಳ್ಳತನ (ತೆಫ್ಟ್) ಇವುಗಳನ್ನು ಅವುಗಳಿಗೆ ಕೊಟ್ಟಿರುವ ಹೆಸರಿನಿಂದಲೇ ಉದಾಹರಿಸಿದರೆ ಸಾಕು. ಹಾಗೆಯೇ ಬಲಾತ್ಕಾರ ಮಾಡುವುದು (ಎಕ್ಸ್‌ಟಾರ್ಷನ್) ಮುಂತಾದವುಗಳನ್ನು ಹೇಳಬೇಕಾಗಿಲ್ಲ.

ಒಬ್ಬ ಮನುಷ್ಯನನ್ನು ಎರಡು ಅಪರಾಧಗಳಿಗೆ ಅಂದರೆ ಅದರಲ್ಲಿನ ಒಂದು ಅಧಿಪತ್ರ ವ್ಯಾಜ್ಯದಂತೆಯೂ ಇನ್ನೊಂದು ಸಮನ್ಸ್ ವ್ಯಾಜ್ಯದಂತೆಯೂ (ಇದರಲ್ಲಿ ಆರೋಪ ಇರಬೇಕಾಗಿಲ್ಲ) ವಿಚಾರಣೆಗಳಿಗೊಳಪಡಿಸಬೇಕಾದರೆ, ಮೊದಲನೆಯದರ ಅಪರಾಧದ ಜೊತೆಗೆ ಎರಡನೆಯದನ್ನೂ ಹೇಳಬೇಕು.

ಒಬ್ಬ ಮನುಷ್ಯ ಒಂದು ಅಪರಾಧದ ಮೇಲೆ ಆಪಾದಿಸಲ್ಪಟ್ಟು ಆ ಅಪರಾಧಕ್ಕೆ, ಒಂದು ಶಿಕ್ಷೆ ಇದ್ದು, ಕೆಲವು ಕಾರಣಗಳಿಗೋಸ್ಕರ, ತೀವ್ರವಾದ ಸಂದರ್ಭಗಳಿದ್ದು, ಅಂಥದಕ್ಕೆ ಹೆಚ್ಚಿನ ಶಿಕ್ಷೆಯನ್ನು ಕೊಡಬೇಕಾದ ಸಂದರ್ಭಗಳಿದ್ದರೆ, ಆ ಸಂದರ್ಭಗಳನ್ನೂ ವಿವರಿಸಬೇಕು. ಉದಾ:

(1) 117 ನೆಯ ಕಲಂನ ಪ್ರಕಾರದ ವಿಚಾರಣೆ.

(2) ಸಮನ್ಸ್ ವ್ಯಾಜ್ಯ.

(3) ಅಪೀಲು ಮಾಡಲವಕಾಶವಿಲ್ಲದ ಕ್ಷಿಪ್ರವ್ಯಾಜ್ಯ.

ದಿವಾಳಿ ಮೊಕದ್ದಮೆಗಳಲ್ಲಿ ಆರೋಪ ಹೊರಿಸಬೇಕೇ, ಬೇಡವೆ ಎನ್ನುವುದು ಸ್ಪಷ್ಟವಾಗಿಲ್ಲ. ಆ ಕಾಯಿದೆಯಲ್ಲಿ, ಆಪರಾಧಿಕ ಕಾನೂನಿನಂತೆ ನಡೆಸಬೇಕು ಎಂದು ಮಾತ್ರ ಹೇಳಿದೆ. ಅಪರಾಧಿ ಸತ್ರನ್ಯಾಯಾಲಯಕ್ಕೆ (ಸೆಷನ್ಸ್ ಕೋರ್ಟ್) ಒಪ್ಪಿಸಲ್ಪಟ್ಟ ಸಂದರ್ಭಗಳಲ್ಲಿ ಆಯಾ ನ್ಯಾಯಾಧೀಶರು ಸರಿಯಾಗಿ ಕ್ರಮಬದ್ಧವಾಗಿ ಆರೋಪಮಾಡದೆ ಅಥವಾ ಆರೋಪವನ್ನು ಮಾಡದೆಯೇ ಅಪರಾಧಿಯನ್ನು ವಿಚಾರಣೆಗೆ ಕಳುಹಿಸಿದ್ದರೆ ಜಿಲ್ಲಾ ನ್ಯಾಯಾಧೀಶರು ಬೇರೆ ಆರೋಪವನ್ನು ಮಾಡಬಹುದು (226ನೆಯ ಕಲಂ). ಇಂಥ ಸಂದರ್ಭಗಳಲ್ಲಿ ಸತ್ರನ್ಯಾಯಾಲಯಕ್ಕೆ ಒಪ್ಪಿಸಿದ ಅಪ್ಪಣೆ ಇದ್ದರೆ ಸಾಕು (ಒಂದು ಪಕ್ಷ ಆರೋಪವನ್ನು ನ್ಯಾಯಾಧೀಶರು ಕಾನೂನುಬದ್ಧವಾಗಿ ಮೊದಲೇ ಮಾಡದಿದ್ದರೆ, ತಪ್ಪಾಗಿ ಮಾಡಿದ್ದರೆ, ಅವರೇ ಅಂಥ ಆರೋಪವನ್ನು ತೀರ್ಮಾನ ಹೇಳುವುದಕ್ಕೆ ಮೊದಲು ತಿದ್ದುಪಡಿಮಾಡಬಹುದು. ಅಥವಾ ಬೇರೆ ಹೊಸ ಆರೋಪವನ್ನು ಅಪರಾಧಿಯ ಮೇಲೆ ಹೊರಿಸಬಹುದು). ಸತ್ರನ್ಯಾಯಾಧೀಶರು ಆರೋಪ ಮಾಡಬಹುದು ಆರೋಪ ಮಾರ್ಪಾಡು ಮಾಡಬಹುದು, ಅಥವಾ ಸೇರಿಸಬಹುದು. ಆದರೆ ನ್ಯಾಯಾಧೀಶರು (ಮ್ಯಾಜಿಸ್ಟ್ರೇಟರು) ಮಾಡಿರುವ ಆರೋಪವನ್ನು ವಜಾ ಮಾಡುವುದಕ್ಕೆ ಅಥವಾ ಹಿಂತೆಗೆದುಕೊಳ್ಳುವುದಕ್ಕೆ ಅವರಿಗೆ ಅಧಿಕಾರವಿಲ್ಲ. ಆದರೆ ಸತ್ರನ್ಯಾಯಾಧೀಶರು ಮಾಡುವ ಯಾವುದೇ ಮೇಲಿನ ವಿಧಾನಗಳಿಂದ ಅಪರಾಧಿಗಳಿಗೆ ಅನ್ಯಾಯವಾಗದಂತಿರಬೇಕು. ಆದರೆ ಕೆಳ ನ್ಯಾಯಾಧೀಶರು ಆರೋಪವನ್ನು ತಪ್ಪಾಗಿ ಮಾಡಿದ್ದರೆ ಅದನ್ನು ತಿದ್ದುಪಡಿ ಮಾಡಲಾಗದು. ಆದರೆ ಆರೋಪ ಮೂರು ಆರೋಪಗಳ ಮೇಲ್ಪಟ್ಟು ಕೂಡಿದ್ದರೆ, ನ್ಯಾಯಾಧೀಶರು ತಮ್ಮ ಅಂತಿಮ ತೀರ್ಮಾನದ ಮುನ್ನ ಅಪರಾಧಿಗೆ ಸಾಕಷ್ಟು ಕಾಲಾವಕಾಶ ಕೊಟ್ಟು, ಮೂರರ ಮೇಲ್ಪಟ್ಟ ಅಪರಾಧಗಳನ್ನು ಕೈಬಿಡಬಹುದು. ವಿಚಾರಣೆ ನಡೆಯುತ್ತಿರುವಾಗ ಹೀಗೆ ಆರೋಪ ತಿದ್ದುಪಡಿಯಾದರೆ, ಹೊಸ ಆರೋಪ ಸೇರಿದ್ದರೆ ಅಥವಾ ಬದಲಾವಣೆ ಮಾಡಬೇಕಾದರೆ, ಅದಕ್ಕೆ ಸಂಬಂಧಪಟ್ಟಂತೆ ಹಿಂದಿನ ಸಾಕ್ಷಿಗಳನ್ನು ನ್ಯಾಯಾಲಯ ಪುನಃ ಕರೆಸಬೇಕು. ತಪ್ಪು ಆರೋಪದಿಂದ ಯಾರಿಗಾದರೂ ಶಿಕ್ಷೆಯಾಗಿದ್ದರೆ ಉಚ್ಚ ನ್ಯಾಯಾಲಯ ಮರುವಿಚಾರಣೆಗೆ ಆಜ್ಞೆ ಮಾಡಬಹುದು.

ಪ್ರತಿಯೊಂದು ಅಪರಾಧಕ್ಕೂ ಪ್ರತ್ಯೇಕವಾದ ಆರೋಪ ಹೊರಿಸಬೇಕು ಮತ್ತು ಪ್ರತಿಯೊಂದು ಆರೋಪಕ್ಕೂ ಬೇರೆ ಬೇರೆ ವಿಚಾರಣೆ ಆಗಲೇಬೇಕು. ಆದರೆ ಒಬ್ಬ ಅಪರಾಧಿ ಒಂದು ವರ್ಷದಲ್ಲಿ ಒಂದೇ ಬಗೆಯ ಅಪರಾಧಗಳನ್ನು ಒಬ್ಬನ ಮೇಲೆ ಅಥವಾ ಅನೇಕರ ಮೇಲೆ ಮಾಡಿದ್ದರೆ, ಮತ್ತು ಅಂಥವು ಮೂರು ಅಪರಾಧಗಳ ಮೇಲಿರದಿದ್ದರೆ, ಅಂಥ ಸಂದರ್ಭಗಳಲ್ಲೂ ಒಂದೇ ಬಗೆಯ ಕೃತ್ಯದ ಸರಣಿಯಲ್ಲಿ ಒಂದೇ ರೀತಿಯ ಅಪರಾಧಗಳು ಒಬ್ಬನಿಂದಲೇ ಆಗಿದ್ದರೆ ಮತ್ತು ಅನೇಕ ಕೃತ್ಯಗಳು ನಡೆದು ಅವೆಲ್ಲವೂ ಸೇರಿ ಒಂದೇ ಅಪರಾಧಕ್ಕೊಳಪಟ್ಟಿದ್ದರೆ ಅಥವಾ ಒಂದು ಕೃತ್ಯ ಅಥವಾ ಅನೇಕ ಕೃತ್ಯಗಳು ನಡೆದು ಅಪರಾಧಿ ಯಾವುದನ್ನು ಮಾಡಿದ್ದಾನೆಂಬುದರಲ್ಲಿ ಸಂದೇಹ ಇದ್ದರೆ ಅಂಥ ವ್ಯಾಜ್ಯಗಳಲ್ಲಿ ಒಂದೇ ಸಾರಿಗೆ ವಿಚಾರಣೆಗೊಳಪಡಿಸಬಹುದು.

ಹಾಗೆಯೇ ಒಂದು ಕೆಲಸದಲ್ಲಿ ಒಂದೇ ತೆರನಾದ ಅಪರಾಧ ಮಾಡಿದ್ದ ಎಲ್ಲ ಜನರೂ ಒಂದು ಅಕೃತ್ಯವನ್ನು ಮಾಡಿದವರೂ ಅವರಿಗೆ ಆ ಅಕೃತ್ಯದಲ್ಲಿ ಸಹಾಯಮಾಡಿದ ವರೂ ಅಕೃತ್ಯವನ್ನು ಪ್ರೇರೇಪಿಸಿದವರೂ ಮತ್ತು ಕ್ರಿಮಿನಲ್ ಕೋಡಿನ 234ನೆಯ ಕಲಂ ಪ್ರಕಾರ ಒಟ್ಟಿಗೆ ಒಂದು ವರ್ಷದಲ್ಲಿ ಒಂದೇ ಬಗೆಯ ಕೃತ್ಯಗಳನ್ನು ಮಾಡಿದರೂ ಒಂದೇ ಕೆಲಸದ ವಿವಿಧ ಅಕೃತ್ಯಗಳಲ್ಲಿ ಭಾಗವಹಿಸಿದವರೂ ಕಳ್ಳತನ, ಅನ್ಯಾಯದ ಸುಲಿಗೆ, ದುರುಪಯೋಗ ಮಾಡಿರುವುದು ಮತ್ತು ಇಂಥ ಕೃತ್ಯಗಳಿಂದ ಬಂದ ಪದಾರ್ಥಗಳನ್ನು ಮುಚ್ಚಿಡುವುದರಲ್ಲಿ ಅವರಿಗೆ ಸಹಾಯಮಾಡಿದವರೂ ಅವುಗಳನ್ನು ಹೊಂದಿರುವವರೂ ಭಾರತೀಯ ದಂಡ ಸಂಹಿತೆಯ 411 ಮತ್ತು 414 ನೆಯ ಕಲಂ ಪ್ರಕಾರ ಅಪರಾಧ ಮಾಡಿದವರೂ ಒಟ್ಟಿಗೆ ಒಂದೇ ಆರೋಪದ ಕೆಳಗೆ ವಿಚಾರಣೆಗೆ ಒಳಪಡುವರು. (ಪಿ.ಎಸ್.)

**ಆ್ಯರೋಮ್ಯಾಟಿಕ್ ಸಂಯುಕ್ತಗಳು :** ಒಂದೇ ರಾಸಾಯನಿಕ ಧಾತುವಿನ ಪರಮಾಣುಗಳಿರುವ ಆವರ್ತ ಯಾವುದೇ ಸಂಯುಕ್ತದ ಅಣು ರಚನೆಯಲ್ಲಿದ್ದರೆ ಅಂಥ ಸಂಯುಕ್ತವನ್ನು ಸಧಾತು ಚಕ್ರೀಯ ಸಂಯುಕ್ತ ಅಥವಾ ಹೋಮೊಸೈಕ್ಲಿಕ್ ಸಂಯುಕ್ತ ಎನ್ನಬಹುದು. ಆದರೆ ಸಾಮಾನ್ಯವಾಗಿ ಹೋಮೊಸೈಕ್ಲಿಕ್ ಸಂಯುಕ್ತಗಳು ಎನ್ನುವುದು ಕಾರ್ಬನ್ ಪರಮಾಣುಗಳ ಆವರ್ತವಿರುವ ಸಂಯುಕ್ತಗಳಿಗೇ.

ಹೋಮೊಸೈಕ್ಲಿಕ್ ಸಂಯುಕ್ತಗಳನ್ನು ಎರಡು ಗುಂಪುಗಳಾಗಿ ವಿಂಗಡಿಸುತ್ತಾರೆ.

1 ಕೆಲವು ಹೋಮೊಸೈಕ್ಲಿಕ್ ಸಂಯುಕ್ತಗಳು ಆ್ಯಲಿಫ್ಯಾಟಿಕ್ ಸಂಯುಕ್ತಗಳ ಗುಣಧರ್ಮಗಳನ್ನು ಹೊಂದಿರುತ್ತವೆ. ಅವುಗಳಿಗೆ ಆಲಿಸೈಕ್ಲಿಕ್ ಸಂಯುಕ್ತಗಳೆಂದು ಹೆಸರು.







ಸೈಕ್ಲೋಹೆಕ್ಸೇನ್




2 ಬೆಂಜೀನ್ ಎಂಬ ಹೋಮೊಸೈಕ್ಲಿಕ್ ಹೈಡ್ರೊಕಾರ್ಬನ್ ಮತ್ತು ಅದರಿಂದ ಜನ್ಯವಾದ ಸಂಯುಕ್ತಗಳನ್ನು ಆ್ಯರೊಮ್ಯಾಟಿಕ್ ಸಂಯುಕ್ತಗಳು ಎಂದು ಕರೆಯುತ್ತಾರೆ. ಬೆಂಜೀನ್ ಹೈಡ್ರೊಕಾರ್ಬನ್ನಿನಲ್ಲಿ ಆರು ಕಾರ್ಬನ್ ಪರಮಾಣುಗಳು ಕ್ರಮ ಷಡ್ಭುಜಾಕಾರದಲ್ಲಿ ಜೋಡಿಸಿಕೊಂಡಿದ್ದು, ಅವುಗಳನ್ನು ಪರಸ್ಪರ ಬಂಧಿಸಿರುವ ಬಂಧಗಳು ಪರ್ಯಾಯವಾಗಿ ಏಕಬಂಧ ಮತ್ತು ದ್ವಿಬಂಧಗಳಾಗಿರುತ್ತವೆ. ಆದ್ದರಿಂದ ಬೆಂಜೀನ್ ಅಣುರಚನೆಯನ್ನು ಕೆಳಗೆ ಕಾಣುವಂತೆ ಬರೆಯುತ್ತಾರೆ:




ಅಥವಾ



ಈ ಬೆಂಜೀನ್ ಆವರ್ತದಲ್ಲಿ ಏಕಬಂಧ ಮತ್ತು ದ್ವಿಬಂಧಗಳು ಚಿತ್ರದಲ್ಲಿ ತೋರಿಸಿರುವಂತೆ ಆಯಾ ಸ್ಥಾನದಲ್ಲಿ ಭದ್ರವಾಗಿರುವುದಿಲ್ಲ, ಸದಾ ತಮ್ಮ ಸ್ಥಾನಗಳನ್ನು ಬದಲಾಯಿಸುತ್ತಿರುತ್ತವೆ ಎಂದು ಹಿಂದೆ ನಂಬಲಾಗಿತ್ತು. ಆದರೆ ಪ್ರಚಲಿತ ವಾದದ ಪ್ರಕಾರ ಚಕ್ರದಲ್ಲಿರುವ ಆರು ಬಂಧಗಳೂ ಸಮಾನ ಗುಣಧರ್ಮಗಳನ್ನು ಹೊಂದಿದ್ದು, ಅವು ತಮ್ಮ ಸ್ವಭಾವದಲ್ಲಿ ಏಕಬಂಧ ಮತ್ತು ದ್ವಿಬಂಧಗಳ ಮಧ್ಯವರ್ತಿ ಗುಣಧರ್ಮವನ್ನು ತೋರಿಸುತ್ತವೆ. ಆದ್ದರಿಂದ ಕೆಲವರು ಬೆಂಜೀನ್ ಆವರ್ತವನ್ನು ಕೆಳಗೆ ಕಾಣುವಂತೆ ಬರೆಯುವುದೂ ಉಂಟು.



ಆ್ಯರೊಮ್ಯಾಟಿಕ್ ಸಂಯುಕ್ತಗಳೆಲ್ಲವೂ ಬೆಂಜೀನಿನಿಂದ ಜನ್ಯವಾದುವಾದ್ದರಿಂದ ಅವುಗಳೆಲ್ಲದರಲ್ಲಿಯೂ ಈ ಬೆಂಜೀನ್ ಆವರ್ತವನ್ನು ಕಾಣಬಹುದು. ರಸಾಯನ ವಿಜ್ಞಾನದ

ಚರಿತ್ರೆಯಲ್ಲಿ ಮೊದಲು ನಮ್ಮ ಗಮನಕ್ಕೆ ಬಂದ ಬೆಂಜೀನ್‌ಜನ್ಯ ಸಂಯುಕ್ತಗಳೆಲ್ಲದಕ್ಕೂ ತೀಕ್ಷ್ಣವಾದ ಸುವಾಸನೆ (ಅರೋಮ) ಇದ್ದುದರಿಂದ ಇವಕ್ಕೆ ಆ್ಯರೋಮ್ಯಾಟಿಕ್ ಸಂಯುಕ್ತಗಳೆಂಬ ಹೆಸರು ಬಂತು. ಆದರೆ ಈಗ ಆ ವಾಸನೆಯೇ ವರ್ಗೀಕರಣಕ್ಕೆ ಆಧಾರವಲ್ಲ. ವಾಸನೆ ಇರಲಿ, ಇಲ್ಲದಿರಲಿ, ಬೆಂಜೀನ್ ಆವರ್ತವಿರುವ ಸಂಯುಕ್ತಗಳೆಲ್ಲ ಆ್ಯರೋಮ್ಯಾಟಿಕ್ ಸಂಯುಕ್ತಗಳೇ.

ಬೆಂಜೀನ್ ಅಣುವಿನಲ್ಲಿಯ ಹೈಡ್ರೊಜನ್ ಪರಮಾಣುಗಳನ್ನು ಬೇರೆ ಬೇರೆ ಪರಮಾಣುಗಳಿಂದ ಅಥವಾ ಪರಮಾಣುಪುಂಜಗಳಿಂದ ಬದಲಿಸಿದರೆ ಉಂಟಾಗುವ ಸಂಯುಕ್ತಗಳು ಆರೋಮ್ಯಾಟಿಕ್ ಸಂಯುಕ್ತಗಳಲ್ಲಿ ಅತ್ಯಂತ ಸರಳವಾದುವು. ಉದಾಹರಣೆಗೆ, ಒಂದು ಹೈಡ್ರೊಜನ್ ಪರಮಾಣುವನ್ನು ಕ್ಲೋರೀನ್ ಪರಮಾಣುವಿನಿಂದ ಬದಲಿಸಿದರೆ ಕ್ಲೋರೊಬೆಂಜೀನ್ ಉಂಟಾಗುತ್ತದೆ. ಅದರ ಅಣು ರಚನೆಯನ್ನು ಹೀಗೆ ಬರೆಯುತ್ತಾರೆ:




ಬೆಂಜೀನ್ ಅಣುರಚನೆಯಲ್ಲಿ ಕಂಡುಬರುವ ಆರು ಹೈಡ್ರೊಜನ್ ಪರಮಾಣುಗಳೂ ಸಮಾನ ಸ್ಥಾನಗಳಲ್ಲಿರುವುದರಿಂದ ಸಮಮಿತಿಯ ಕಾರಣಗಳಿಂದ ಅವುಗಳಲ್ಲಿ ಯಾವುದನ್ನು ಕ್ಲೋರೀನ್ ಪರಮಾಣುವಿನಿಂದ ಬದಲಿಸಿದರೂ ಬರುವುದು ಒಂದೇ ಕ್ಲೋರೋಬೆಂಜೀನ್.

ಎರಡು ಅಥವಾ ಹೆಚ್ಚು ಹೈಡ್ರೊಜನ್ ಪರಮಾಣುಗಳನ್ನು ಇತರ ಪರಮಾಣುಗಳಿಂದ ಅಥವಾ ಪರಮಾಣು ಪುಂಜಗಳಿಂದ ಬದಲಿಸಿದರೆ ಬರುವ ಜನ್ಯ ಸಂಯುಕ್ತಗಳನ್ನು ಹೆಸರಿಸುವಾಗ ಬದಲಿ ಪುಂಜಗಳ ಸ್ಥಾನಗಳನ್ನು ಸೂಚಿಸಬೇಕಾಗುತ್ತದೆ. ಅದಕ್ಕಾಗಿ ಬೆಂಜೀನ್ ಅಣುವಿನಲ್ಲಿ ಯಾವುದಾದರೊಂದು ಸ್ಥಾನವನ್ನು 1 ಎಂದು ಕರೆದು ಅಲ್ಲಿಂದ ಗಡಿಯಾರ ಕ್ರಮದಲ್ಲಿ ಬರುವ ಸ್ಥಾನಗಳಿಗೆ ಕ್ರಮವಾಗಿ 2,3,4,5 ಮತ್ತು 6 ಎಂದು ಕರೆಯುತ್ತಾರೆ.




ಎರಡು ಕ್ಲೋರೀನ್ ಪರಮಾಣುಗಳಿರುವ ಮತ್ತು ಮೂರು ಕ್ಲೋರೀನ್ ಪರಮಾಣುಗಳಿರುವ ಬೆಂಜೀನ್‌ಜನ್ಯ ಸಂಯುಕ್ತಗಳ ರಚನೆಗಳನ್ನು ಮತ್ತು ಹೆಸರುಗಳನ್ನು ಈ ಕೆಳಗೆ ಕೊಟ್ಟಿದೆ.




**1:2–ಡೈಕ್ಲೋರೋಬೆಂಜೀನ್ ಅಥವಾ ಆರ್ಥೊಡೈಕ್ಲೋರೋಬೆಂಜೀನ್**

**1:3–ಡೈಕ್ಲೋರೋಬೆಂಜೀನ್ ಅಥವಾ ಮೆಟ ಡೈಕ್ಲೋರೋಬೆಂಜೀನ್**

**1:4–ಡೈಕ್ಲೋರೋಬೆಂಜೀನ್ ಅಥವಾ ಪ್ಯಾರ ಡೈಕ್ಲೋರೋಬೆಂಜೀನ್**




**1:2:3–ಟ್ರೈಕ್ಲೋರೋ ಬೆಂಜೀನ್ ಅಥವಾ ವಿಸಿನಲ್ ಟ್ರೈಕ್ಲೋರೋ ಬೆಂಜೀನ್**

**1:2:4–ಟ್ರೈಕ್ಲೋರೋ ಬೆಂಜೀನ್ ಅಥವಾ ಅಸಿಮೆಟ್ರಿಕ್ ಟ್ರೈಕ್ಲೋರೋ ಬೆಂಜೀನ್**

**1:3:5–ಟ್ರೈಕ್ಲೋರೋ ಬೆಂಜೀನ್ ಅಥವಾ ಸಿಮೆಟ್ರಿಕ್ ಟ್ರೈಕ್ಲೋರೋ ಬೆಂಜೀನ್**

ಮೇಲಿನಂತೆ ಹೈಡ್ರೊಜನ್ ಪರಮಾಣುವನ್ನು ಒಂದೇ ಒಂದು ಪರಮಾಣುವಿನಿಂದ ಬದಲಿಸದೆ, ಪರಮಾಣುಪುಂಜಗಳಿಂದ ಬದಲಿಸಬಹುದು. ಹಾಗೆ ಮಾಡಿದಾಗ ಪುಂಜಗಳಲ್ಲಿರಬಹುದಾದ ರಾಸಾಯನಿಕ ಗುಂಪುಗಳನ್ನು ಅವಲಂಬಿಸಿ ಎಸ್ಟರುಗಳು, ಈಥರುಗಳು, ಆಲ್ಡಿಹೈಡುಗಳು, ಅಮೀನುಗಳು ಉತ್ಪತ್ತಿಯಾಗುತ್ತವೆ. ಅನೇಕವೇಳೆ ಈ ಪುಂಜಗಳ ಸ್ವಭಾವಗುಣ ಆ್ಯಲಿಫ್ಯಾಟಿಕ್ ಸಂಯುಕ್ತಗಳಲ್ಲಿರುವುದಕ್ಕಿಂತ ಭಿನ್ನವಾಗಿರುತ್ತದೆ. ಉದಾಹರಣೆಗೆ, ಆಲ್ಕೊಹಾಲ್‌ಗಳಲ್ಲಿರುವ -OH ಪುಂಜ ಆ್ಯಲಿಫ್ಯಾಟಿಕ್ ಸಂಯುಕ್ತಗಳಲ್ಲಿದ್ದಾಗ ತೋರುವ ಗುಣಧರ್ಮಕ್ಕೂ ಅದೇ ಪುಂಜ ಬೆಂಜೀನ್ ಚಕ್ರಕ್ಕೆ ನೇರವಾಗಿ ಅಂಟಿಕೊಂಡಿದ್ದಾಗ ತೋರುವ ಗುಣಧರ್ಮಕ್ಕೂ ಬಹಳ ವ್ಯತ್ಯಾಸವಿರುತ್ತವೆ. ಆದುದರಿಂದಲೇ -OH ನೇರವಾಗಿ ಬೆಂಜೀನ್ ಚಕ್ರಕ್ಕೆ ಅಂಟಿಕೊಂಡಿರುವ ಸಂಯುಕ್ತಗಳನ್ನು ಆಲ್ಕೊಹಾಲ್‌ಗಳು ಎನ್ನುವುದಿಲ್ಲ; ಫೀನಾಲ್‌ಗಳು ಎಂದು ಕರೆಯುತ್ತಾರೆ. (ವಿ.ವಿ.ಜಿ.)

**ಆರೋರೂಟ್ :** ಸಸ್ಯಜನ್ಯ ಪಿಷ್ಟ; ರೂಢನಾಮ ಸಬ್ಬಕ್ಕಿ. ಅನೇಕ ತರಹ ಸಸ್ಯಗಳು ತಮ್ಮ ಗೆಡ್ಡೆಗೆಣಸುಗಳಲ್ಲಿ ಶೇಖರಿಸುವ ಪಿಷ್ಟ ಪದಾರ್ಥ ಇದರ ಮೂಲ. ಅಂಗಡಿಗಳಲ್ಲಿ ಮಾರಾಟಕ್ಕೆ ಇಟ್ಟಿರುವ ಸಬ್ಬಕ್ಕಿ ಮಾರಾಂಟ ಮತ್ತು ಕರ್‌ಕ್ಯೂಮ ಎಂಬ ಸಸ್ಯಗಳ ಪಿಷ್ಟ ಮೂಲಗಳಿಂದ ದೊರೆತದ್ದು. ಬೇರೆ ಬೇರೆ ಜಾತಿಯ ಇನ್ನಿತರ ಸಸ್ಯಗಳ ಪಿಷ್ಟ ಮೂಲಗಳನ್ನೂ ಸಬ್ಬಕ್ಕಿಯ ತಯಾರಿಕೆಯಲ್ಲಿ ಉಪಯೋಗಿಸುವುದುಂಟು. ಅಂಗಡಿಗಳಲ್ಲಿ ದೊರೆಯುವ ಸಬ್ಬಕ್ಕಿ ರಾಗಿ ಕಾಳಿನ ಪ್ರಮಾಣದಲ್ಲಿದೆ. ಬಣ್ಣ ಬಿಳುಪು. ನೀರಿನಲ್ಲಿ ಕುದಿಸಿದಮೇಲೆ ಬಿಳುಪು ಬಣ್ಣ ಬದಲಾಗಿ ಬಣ್ಣವೇ ಇಲ್ಲದ ಸ್ಪರ್ಶಿಸಿದರೆ ನುಣುಚಿಕೊಳ್ಳುವ ಪದಾರ್ಥವಾಗಿ ಮಾರ್ಪಾಟು ಹೊಂದುತ್ತದೆ. ರೋಗಿಗಳ ಗಂಜಿಗೂ ಇನ್ನಿತರ ಅಡಿಗೆ ಪದಾರ್ಥಗಳ ತಯಾರಿಕೆಯಲ್ಲೂ ಇದನ್ನು ಬಳಸುವರು. ಅಂಗರಾಗಚೂರ್ಣ ಮತ್ತು ಇತರ ಅಲಂಕಾರ ಸಾಮಗ್ರಿಗಳ ತಯಾರಿಕೆಯಲ್ಲೂ ಇದನ್ನು ಉಪಯೋಗಿಸುವರು. ಬಾರ್ಲಿ ಗಂಜಿಯ ಬದಲಾಗಿ ಸಬ್ಬಕ್ಕಿ ಗಂಜಿಯನ್ನು ಸೇವಿಸುವುದುಂಟು. ಪಿಷ್ಟಪದಾರ್ಥ ಅಗತ್ಯವೆನಿಸುವ ವಸ್ತುಗಳ ತಯಾರಿಕೆಯಲ್ಲಿ ಬಹುಮಟ್ಟಿಗೆ ಆರೋರೂಟನ್ನು ಬಳಸುವರು.

ಭಾರತದಲ್ಲಿ ಆರೋರೂಟ್ ಅಥವಾ ಅದರ ಸಮಾನವೆನಿಸುವ ಬೆರಕೆ ಪದಾರ್ಥಗಳ ತಯಾರಿಕೆಯಲ್ಲಿ ಕೆಲವು ಸಸ್ಯಗಳ ಉತ್ಪನ್ನಗಳನ್ನು ಬಳಸುವರು. ಉದಾ: ಮಾನಿಹಾಟ್ ಎಂಬುದು ಯುಫೋರ್ಬಿಯೇಸಿ ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಗಿಡ. ಹರಳು, ರಬ್ಬರ್, ಜಾಪಾಳ, ಕ್ರೋಟನ್ ಗಿಡಗಳೂ ಈ ಪಂಗಡಕ್ಕೆ ಸೇರಿವೆ. ಆರೋರೂಟನ್ನಾಗಲಿ ಅಥವಾ ಅದನ್ನು ಹೋಲುವ ಇತರ ಪಿಷ್ಟವನ್ನಾಗಲಿ ಕೊಡುವ ಗಿಡಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

1 ಮಾರಾಂಟ ಅರುಂಡನೇಸಿಯ ... ಮಾರಾಂಟೇಸಿ
2 ಕರ್ಕ್ಯೂಮ ಅಂಗುಸ್ಟಿಫೋಲಿಯ ... ಜಿಂಜಿಬರೇಸಿ
3 ಮ್ಯಾನಿಹಾಟ್ ಯೂಟಿಲಿಸ್ಸಿಮ ... ಯೂಫೋರ್ಬಿಯೇಸಿ
4 ಐಪೋಮಿಯ ಬಟಾಟಸ್ ... ಕನ್ವಾಲ್ವುಲೇಸಿ
5 ಡಯಸ್ಕೋರಿಯ ಪ್ರಭೇದಗಳು ... ಡಯಸ್ಕೋರಿಯೇಸಿ
6 ಕೊಳೊಕೇಸಿಯ ಆಂಟಿಕ್ವೋರಂ ... ಎರಾಯ್ಡಿ
7 ಸೌಮಿಯ ಇಂಟೆಗ್ರಿಫೋಲಿಯ ... ಸೈಕ್ಯಾಡೇಸಿ
8 ಕ್ಯಾನ ಎಡುಲಿಸ್ ... ಕ್ಯಾನೇಸಿ
9 ಟಕ್ಕಾ ಪ್ರಭೇದಗಳು ... ಟಕ್ಕೇಸಿ

ಪಶ್ಚಿಮ ಭಾರತ ಆರೋರೂಟ್ : ಮಾರಾಂಟ ಗಿಡ ಭಾರತದ ಕೆಲವು ಕಡೆಗಳಲ್ಲಿ ತಾನಾಗಿ ಬೆಳೆಯುತ್ತದೆ. ಉತ್ತರ ಪ್ರದೇಶ, ಬಿಹಾರ್, ಒರಿಸ್ಸಾ, ಬಂಗಾಳ ಮತ್ತು ಕೇರಳಗಳಲ್ಲಿ ಇದನ್ನು ಬೆಳೆಸುವರು. ಈ ಗಿಡ ಮರಳು ಮಿಶ್ರಿತಭೂಮಿಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಅದನ್ನು ನೆಟ್ಟ 10–11 ತಿಂಗಳಲ್ಲಿ ಗೆಡ್ಡೆ ಬಲಿತು ಸಿದ್ಧವಾಗುತ್ತದೆ. ಎಕರೆಗೆ ಸಾಧಾರಣವಾಗಿ 4 –7 ಟನ್‌ಗಳವರೆಗೂ ಫಸಲು ಕೊಡುತ್ತದೆ. ಗೆಡ್ಡೆಗಳಲ್ಲಿ ನೀಲಿ ಮತ್ತು ಹಳದಿ ಸಿಪ್ಪೆಯ ಹೊದಿಕೆಯುಳ್ಳ ಎರಡು ಬಗೆಗಳಿವೆ. ನೀಲಿ ಛಾಯೆಯ ಗೆಡ್ಡೆ ಹೆಚ್ಚು ಪ್ರಮಾಣದಲ್ಲಿ ಫಸಲು ಕೊಡುತ್ತದೆ.

ಪೂರ್ವ ಭಾರತ ಆರೋರೂಟ್ : ಕರ್ಕ್ಯೂಮ್ ಗಿಡ ಮಧ್ಯಪ್ರದೇಶ, ಬಂಗಾಳ, ಮುಂಬಯಿ, ಮದ್ರಾಸ್ ಮತ್ತು ಹಿಮಾಲಯದ ತಪ್ಪಲು ಪ್ರದೇಶಗಳಲ್ಲಿ ಬೆಳೆಯುತ್ತದೆ. ಗಿಡವನ್ನು ಸಾಧಾರಣವಾಗಿ ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ನೆಟ್ಟು ಜನವರಿ ಹೊತ್ತಿಗೆ ಫಸಲು ತೆಗೆಯುತ್ತಾರೆ. ಸರಾಸರಿ ಎಕರೆಗೆ 1500–1800 ಕೆಜಿಗಳವರೆಗೆ ಗೆಡ್ಡೆ ಉತ್ಪತ್ತಿಯಾಗುತ್ತದೆ. ಮೇಲೆ ಹೇಳಿದ ಈ ಎರಡೇ ಗಿಡಗಳಿಂದ ಸಾಚಾ ಆರೋರೂಟನ್ನು ತಯಾರಿಸಿದರೂ ಇತರ ಕೆಲವು ಸಸ್ಯಗಳ ಗೆಡ್ಡೆಗೆಣಸುಗಳ ಪಿಷ್ಟಮೂಲಗಳಿಂದಲೂ ಆರೋರೂಟನ್ನು ಹೋಲುವ ಪದಾರ್ಥಗಳನ್ನು ತಯಾರಿಸುವರು. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗಿದೆ. ಮರಗೆಣಸು (ಮ್ಯಾನಿಹಾಟ್ ಯೂಟಿಲಿಸ್ಸಿಮ) : ಕೇರಳ ಪ್ರಾಂತ್ಯದ ಜನರಿಗೆ ಅಕ್ಕಿಯ ಬದಲು ಉಪಯೋಗಕ್ಕೆ ಬರುವ ಆಹಾರವೆಂದರೆ ಇದೇ. ಸಮಾನ್ಯವಾಗಿ ಇದನ್ನು ಟ್ಯಾಪಿಯೋಕ

ಎಂದೂ ಕರೆಯುತ್ತಾರೆ. ಕೇರಳದಲ್ಲಿ ಸುಮಾರು 6,18,000 ಎಕರೆಗಳಲ್ಲಿ ಇದನ್ನು ಬೆಳೆಯುತ್ತಾರೆ. ಕೆಲವು ಶತಮಾನಗಳ ಹಿಂದೆ ಪೋರ್ಚುಗೀಸರು ಕೇರಳಕ್ಕೆ ಈ ಸಸ್ಯವನ್ನು ತಂದರಂತೆ. ಇದು ಒಂದು ಎಕರೆಗೆ ಸರಾಸರಿ 3600 ಕೆಜಿಗಳಷ್ಟು ಗೆಡ್ಡೆಯ ಫಸಲನ್ನು ಕೊಡುತ್ತದೆ.

ಬೆಲ್ಲಗೆಣಸು (ಐಪೋಮಿಯ ಬಟಾಟಸ್) : ಬಿಹಾರ್ ರಾಜ್ಯದ ಸರಾಮ್, ಚಂಪಾರಣ್ಯ, ಮಿರ್ಜಾಪುರ, ದರ್ಭಾಂಗ ಜಿಲ್ಲೆಗಳಲ್ಲೂ ಉತ್ತರ ಪ್ರದೇಶದ ಸುಲ್ತಾನ್‌ಪುರ, ಈಟಾ, ಪ್ರತಾಪ್‌ಘಡ, ಫರೂಕಾಬಾದ್ ಮತ್ತು ಗೊಂಡಾ ಜಿಲ್ಲೆಗಳಲ್ಲೂ ಪಶ್ಚಿಮ ಬಂಗಾಳದ ಮಿಡ್ನಾಪುರ ಮತ್ತು ಹೂಗ್ಲಿ ಜಿಲ್ಲೆಗಳಲ್ಲೂ ತಮಿಳುನಾಡಿನ ತಿರುಚಿರಾಪಳ್ಳಿ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳಲ್ಲೂ ಆಂಧ್ರ ಪ್ರದೇಶದ ವಿಶಾಖಪಟ್ಟಣ, ಶ್ರೀಕಾಕುಳಂ, ಕಡಪ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲೂ ಮೈಸೂರಿನ ಬೆಳಗಾಂ, ಕೆನರಾ, ಹಾಸನ ಮತ್ತು ಕೋಲಾರ ಜಿಲ್ಲೆಗಳಲ್ಲೂ ಕೇರಳದ ಮಲಬಾರ್ ಜಿಲ್ಲೆಯಲ್ಲಿಯೂ ಅತ್ಯಧಿಕವಾಗಿ ವ್ಯವಸಾಯದ ಲ್ಲಿದೆ. ಡಯೋಸ್ಕೋರಿಯ ಎಸ್ಕುಲೆಂಟ ಮತ್ತು ಡಯೋಸ್ಕೋರಿಯ ಅಲೇಟ ಎಂಬುವು ಮುಂಬಯಿನ ತೀರ ಪ್ರದೇಶದಲ್ಲೂ ಮಲಬಾರ್, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ್, ಒರಿಸ್ಸಗಳಲ್ಲೂ ಬೆಳೆಯುವ ಗಿಡಗಳು. ಈ ಗಿಡಗಳ ಗೆಣಸುಗಳನ್ನು ಸಹ ಆರೋರೂಟಿನಂತೆ ಪಿಷ್ಟದ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಕೊಲೊಕೇಸಿಯಾ : ಇದು ಕೆಸವು ದಂಟಿನ ಜಾತಿಗೆ ಸೇರಿದ ಗಿಡದ ಗೆಡ್ಡೆ. ಇವುಗಳ ಗೆಡ್ಡೆಗಳಿಂದಲೂ ಆರೋರೂಟ್‌ನಂಥ ವಸ್ತುವನ್ನು ತಯಾರಿಸುತ್ತಾರೆ.

ಆರೋರೂಟನ್ನು ತಯಾರಿಸುವ ಕ್ರಮ : ಚೆನ್ನಾಗಿ ಬಲಿತ ಮ್ಯಾನಿಹಾಟ್ ಅಥವಾ ಕರ್ಕ್ಯೂಮ್‌ಗಳ ಗೆಡ್ಡೆಗಳನ್ನು ಮೊದಲು ಶೇಖರಿಸಿ ಆ ಗೆಡ್ಡೆಗಳ ಉಪಯೋಗಕ್ಕೆ ಬಾರದಿರುವ ಭಾಗಗಳನ್ನು ಕತ್ತರಿಸಿ ತೆಗೆದುಹಾಕಬೇಕು. ಅನಂತರ ಗೆಡ್ಡೆಗಳ ಮೇಲಿನ ಸಿಪ್ಪೆಯನ್ನು ಸುಲಿದು ಚೆನ್ನಾಗಿ ಜಜ್ಜಿ ಹಿಟ್ಟಿನ ರೂಪಕ್ಕೆ ತರಬೇಕು. ಯಂತ್ರಗಳು ಇದನ್ನು ನೆರವೇರಿಸುತ್ತವೆ. ಹಿಟ್ಟನ್ನು ನೀರಿನಲ್ಲಿ ಕದಡಿ ಸ್ವಲ್ಪ ಮದುಡಾಗಿರುವ ಬಟ್ಟೆಗಳ ಮುಖಾಂತರ ಶೋಧಿಸಬೇಕು. ಆಗ ಕಸಕಡ್ಡಿಗಳು ಬೇರೆಯಾಗುತ್ತವೆ. ತಳದಲ್ಲಿ ನಿಲ್ಲುವ ಹಾಲಿನಂಥ ಬಗ್ಗಡವನ್ನು ಅತಿ ನುಣುಪಾದ ಕಡಾಯಿಗಳಲ್ಲಿ ಶೇಖರಿಸಬೇಕು. ಕೆಲವು ಗಂಟೆಗಳ ತರುವಾಯ ಮೇಲೆ ಕಟ್ಟುವ ತಿಳಿ ನೀರನ್ನು ವಿಸರ್ಜಿಸಿ ಮತ್ತೆ ಶುಭ್ರವಾದ ನೀರಿನಿಂದ ಅಡಿಯಲ್ಲಿ ಹೆಕ್ಕಳಿಕೆ ಹೆಕ್ಕಳಿಕೆಯಾಗಿ ನಿಂತಿರುವ ಪಿಷ್ಟವನ್ನು ತೊಳೆದು ಶುದ್ಧಿಪಡಿಸಬೇಕು. ಹೀಗೆ ಶುದ್ಧಿಪಡಿಸಿದ ಪಿಷ್ಟದ ಹೆಕ್ಕಳಿಕೆಗಳನ್ನು ಬಿಸಿಲಲ್ಲಾಗಲಿ, ಬೆಂಕಿಯ ಕಾವಿನಲ್ಲಾಗಲಿ ಒಣಗಿಸಬೇಕು. ಈ ಪದಾರ್ಥವನ್ನು ಶೈತ್ಯ ತಡೆಯುವ ಹೊದಿಕೆಯುಳ್ಳ ಡಬ್ಬಗಳಲ್ಲಿ ಶೇಖರಿಸಬೇಕು. ಆರೋರೂಟನ್ನು ರಾಗಿ ಕಾಳಿನಂತೆಯೋ, ಹಿಟ್ಟಿನ ರೂಪದಲ್ಲೊ ಶೇ. ಮಾರಾಟಕ್ಕೆ ಸಿದ್ಧಪಡಿಸಬಹುದು.

ಭಾರತೀಯ ಆದರ್ಶ ಪ್ರಮಾಣದಂತೆ ಆರೋರೂಟ್‌ನಲ್ಲಿ ಜಲಾಂಶ > ಶೇ.13.0; ಸುಟ್ಟರೆ ಉಳಿಯುವ ಬೂದಿ > ಶೇ.0.03; ದ್ರಾವಕದಲ್ಲಿ ಕರಗದಿರುವ ಬೂದಿ ಅಂಶ > ಶೇ.0.05; pH ಶೇ.4.5 ರಿಂದ ಶೇ.7 ರವರೆಗೆ; ಕಾಳುಗಳ ಗಾತ್ರ > ಶೇ.2 ಇಂಡಿಯನ್ ಸ್ಟಾಂಡರ್ಡ್‌ನ ಜರಡಿ 5ನೆಯ ನಂಬರು ಅಥವಾ > ಶೇ.0.5 ಇಂಡಿಯನ್ ಸ್ಟಾಂಡರ್ಡ್‌ನ ಜರಡಿ 15ನೆಯ ನಂಬರು. (ಡಿ.ಎಂ.ಜಿ.)

**ಆರೋಹಣ–ಅವರೋಹಣ :** ಸ್ವರಗಳ ಏರಿಕೆಗೆ ಆರೋಹಣವೆಂದೂ ಇಳಿಯುವಿಕೆಗೆ ಅವರೋಹಣವೆಂದೂ ಸಂಗೀತದಲ್ಲಿ ಸಂಜ್ಞೆ. ಜಗತ್ತಿನ ಎಲ್ಲ ಸಂಗೀತ ಪದ್ಧತಿಗಳಲ್ಲೂ ಇವು ಮೌಲಿಕ ತತ್ತ್ವಗಳೂ ತಂತ್ರಗಳೂ ಆಗಿವೆ. ಗೇಯಸಾಧ್ಯವಾದುದನ್ನೆಲ್ಲ ವೈಜ್ಞಾನಿಕವಾಗಿ ವ್ಯವಸ್ಥೆಗೊಳಿಸಲು ಮತ್ತು ಶಾಸ್ತ್ರೀಯ ಪ್ರಮಾಣಗಳೊಡನೆ ಹೋಲಿಸಲು ಇವು ಅಗತ್ಯವಾಗುತ್ತವೆ. ರೂಢಿಯಲ್ಲಿರುವ ಸಮಗ್ರಸ್ವರಸ್ಥಾನಗಳನ್ನು ಪ್ರತಿನಿಧಿಸುವ ಏಳು ಸ್ವರಗಳಲ್ಲಿ ಹಿಂದಿನದಕ್ಕಿಂತ ಮುಂದಿನದು ಧ್ವನಿಮಟ್ಟದಲ್ಲಿ ಕ್ರಮವಾಗಿ ಏರುವಂತೆ ವ್ಯವಸ್ಥೆಗೊಳಿಸಿರುವುದನ್ನು ಸ್ವರಸಪ್ತಕವೆಂದೂ ಸ್ವರಸಪ್ತಕದ ಕೊನೆಯಲ್ಲಿ ಮೊದಲನೆಯ ಸ್ವರದ ಪ್ರಥಮ ಊರ್ಧ್ವಾವರ್ತನವನ್ನು ಸೇರಿಸಿಕೊಂಡರೆ ಬರುವುದನ್ನು ಸ್ವರಾಷ್ಟಕವೆಂದೂ ಕರೆಯಲಾಗುತ್ತದೆ. ಮೊದಲನೆಯದು ಸ್ವರಚಲನೆ, ಮೇಳತ್ವ ಮೊದಲಾದುವುಗಳಿಗೆ ಮಾತೃಕೆಯಾದರೆ ಎರಡನೆಯದು ಅವುಗಳಲ್ಲಿ ರಂಜಕಾಂಶಗಳಾದ ಹಿತಾಹಿತಸಂಬಂಧಗಳು, ಇತರ ಸ್ಥಾನಗಳ ಪ್ರಾಪ್ತಿ ಮುಂತಾದವುಗಳಿಗೆ ತಾಯಿಯಾಗುತ್ತದೆ. ಇವೆರಡೂ ಸೇರಿ ರಾಗತತ್ವದ, ಅದರಿಂದ ಗೀತತತ್ತ್ವದ ಹುಟ್ಟಿಗೆ ಕಾರಣವಾಗುತ್ತವೆ.

ಏಳು ಸ್ವರಗಳನ್ನೂ ಕ್ರಮವಾಗಿ ಆರೋಹಿಸುವುದು, ಅನಂತರ ಕ್ರಮವಾಗಿ ಅವರೋಹಿಸುವುದು–ಇಂಥ ಚಲನೆಗೆ ನಮ್ಮ ಪ್ರಾಚೀನರು ಮೂರ್ಛನೆಯೆಂಬ ಹೆಸರಿಟ್ಟಿದ್ದರು. ಇವುಗಳನ್ನು ಸಮಸಾಮಯಿಕ ರಾಗಗಳ ಹೋಲಿಕೆಗಾಗಿ ಬಳಸುತ್ತಿದ್ದರು. ಹೀಗೆ ಒಂದು ರಾಗದ ಆರೋಹಣ–ಅವರೋಹಣಗಳನ್ನು ಮೂರ್ಛನೆಯೆಂದು ಕರೆಯುವ ವಾಡಿಕೆ ಕರ್ಣಾಟಕ ಸಂಗೀತದಲ್ಲಿ ಇಂದಿಗೂ ಉಳಿದುಬಂದಿದೆ. ಮೂರ್ಛನೆಯಲ್ಲಿ ಒಂದು ಅಥವಾ ಎರಡು ಸ್ವರಗಳನ್ನು ಕಳೆದರೆ ಉಳಿಯುವ ಸ್ವರಸಮುಚ್ಚಯಕ್ಕೆ ತಾನವೆಂದು ಹೆಸರು. ತಾನಗಳಲ್ಲಿ ಕ್ರಮಸಂಚಾರದಿಂದಾಗುವ ಶುದ್ಧತಾನ, ಸ್ವರಗಳ ವಕ್ರಸಂಚಾರದಿಂದಾಗುವ ಕೂಟತಾನ ಎಂದು ಎರಡು ಬಗೆ. ಕೂಟತಾನಗಳಲ್ಲಿ ಸ್ವರಸಂಚಾರದ ವಕ್ರತೆಯೇ ಎಲ್ಲ ಸಾಧ್ಯತೆಗಳನ್ನು, ಎಂದರೆ ಸ್ವರವ್ಯುತ್ಕ್ರಮ ಪ್ರಕ್ರಿಯೆಯಿಂದ ಉಂಟಾಗುವ ರೀತಿಗಳನ್ನು ಗಾಢವಾದ ಗಣಿತತತ್ತ್ವದ ಆಧಾರದ ಮೇಲೆ ಏರ್ಪಡಿಸಿರುವ ವೈಜ್ಞಾನಿಕ ವ್ಯವಸ್ಥೆ ವಿಶ್ವಸಂಗೀತಕ್ಕೆ ಭಾರತೀಯ ಸಂಗೀತ ಕೊಟ್ಟ ಹಿರಿಯ ಕಾಣಿಕೆಯಾಗಿದೆ. ಶುದ್ಧತಾನಗಳಲ್ಲಿ ಸ್ವರಗಳ ಕ್ರಮಸಂಚಾರದಿಂದಲೂ ವಕ್ರಸಂಚಾರದಿಂದಲೂ ಗೇಯಸಾಧ್ಯವಾದ ಎಲ್ಲ ಜನ್ಯರಾಗಗಳನ್ನೂ ಎಲ್ಲ ಮೇಳಗಳಲ್ಲೂ ಶಾಸ್ತ್ರೀಯವಾಗಿ ಪಡೆಯಬಹುದು. ರಾಗವೊಂದರಲ್ಲಿ ಬರುವ ಎಲ್ಲ ಬಗೆಯ ಸ್ವರಸಂಚಾರಗಳನ್ನು, ನಿಂತು ನಿಂತು ಮುಂದುವರಿಯುವ ಸ್ಥಾಯೀ ಕ್ರಮವಾಗಿ ಏರುವ ಆರೋಹಿ ಕ್ರಮವಾಗಿ ಇಳಿಯುವ ಅವರೋಹೀ ಇವೆಲ್ಲದರ ಮಿಶ್ರವಾದ ಸಂಚಾರಿ ಎಂಬ ನಾಲ್ಕು ವಿಧದ ವರ್ಣಗಳಲ್ಲಿ ಅಡಗಿಸಿದೆ. ಇವುಗಳನ್ನೂ ತಜ್ಜನ್ಯವಾದ 63 ಅಲಂಕಾರಗಳನ್ನೂ ಶಾಸ್ತ್ರ ವರ್ಣಿಸುತ್ತದೆ. ಇವುಗಳನ್ನು ಆದಿತಾಳದಲ್ಲಿ ಅಳವಡಿಸಿ ರಚಿಸಿರುವ ಸರಳೆವರಸೆ, ಜಂಟಿವರಸೆ, ಹೆಚ್ಚು ಸ್ಥಾಯಿವರಸೆ, ತಗ್ಗುಸ್ಥಾಯಿವರಸೆ ಇತ್ಯಾದಿಗಳೂ ಸುಳಾದಿ ಸಪ್ತತಾಳಗಳಿಗೆ ಅಳವಡಿಸಿ ರಚಿಸಿರುವ ತಾಳಾಲಂಕಾರಗಳೂ ಇವುಗಳನ್ನು ರಾಗಗಳಿಗೆ ಅಳವಡಿಸಿ ರಚಿಸಿರುವ ಸಂಚಾರೀಗೀತೆಗಳೂ ಕರ್ಣಾಟಕಸಂಗೀತದ ಶಿಕ್ಷಣಕ್ರಮಕ್ಕೆ ಅಡಿಪಾಯವಾಗಿವೆ. ಆರೋಹಣ–ಅವರೋಹಣ ರಾಗಸ್ವರೂಪವನ್ನು ಬೋಧಿಸುವ ಭೌತಿಕ ಸೂತ್ರವೂ ಹೌದು. ಆಯಾ ರಾಗದಲ್ಲಿ ಬರುವ ಸ್ವರಗಳನ್ನೂ ಪ್ರಾರಂಭ, ಮುಕ್ತಾಯ ಮೊದಲಾದ ಸ್ವರಗಳನ್ನೂ ಇಂಥದೇ ವಕ್ರಗತಿಯಲ್ಲಿ ಸ್ವರಗಳು ಬರಬೇಕೆಂಬ ವಿಶೇಷ ನಿಯಮಗಳನ್ನೂ ಅದು ತಿಳಿಸುವುದರಿಂದ ಅದು ಭಾರತೀಯ ಸಂಗೀತದ ಅತ್ಯಂತ ಪ್ರಾಥಮಿಕ ತತ್ತ್ವಗಳಲ್ಲಿ ಒಂದಾಗಿದೆ. (ಆರ್.ಎಸ್.ಎನ್.)

**ಆರ್ಕ್‌ಟಿಕ್ ವೃತ್ತ :** 66°33' ಉತ್ತರ ಅಕ್ಷಾಂಶ; ಅಥವಾ ಉತ್ತರ ಮೇರುಕೇಂದ್ರವಾಗಿ 23°27' ತ್ರಿಜ್ಯವಾಗಿ ಎಳೆದ ವೃತ್ತ (ಉತ್ತರ ಮೇರುವೃತ್ತ). ಇದೇ ರೀತಿ ದಕ್ಷಿಣದಲ್ಲಿ ಮೇರುವನ್ನು ಕುರಿತು ಅಂಟಾರ್ಕ್‌ಟಿಕ್ ವೃತ್ತವಿದೆ.




ಭೂಮಿಯ ಅಕ್ಷ ಮತ್ತು ಕಕ್ಷಾತಲಗಳ (ಭೂಮಿ ಸೂರ್ಯನ ಸುತ್ತ ಪರಿಭ್ರಮಿಸುವ ಪಥದ ಹೆಸರು ಭೂಮಿಯ ಕಕ್ಷೆ) ನಡುವೆ 66°33' ಬಾಗು ಇದೆ. ಈ ಕಾರಣದಿಂದ ಭೂಮಿವಾಸಿಗಳಿಗೆ ಒಂದು ವರ್ಷದಲ್ಲಿ (ಭೂಮಿಗೆ ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ) ಸೂರ್ಯ 23°27' (90°–66° 33' = 23° 27') ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳ (ಇವುಗಳಿಗೆ ಸಂಕ್ರಾತಿ ವೃತ್ತಗಳೆಂದು ಹೆಸರು) ನಡುವೆ ಆಂದೋಲಿಸಿದಂತೆ ಭಾಸವಾಗುವುದು. ಅಂದರೆ, ಸೂರ್ಯ ಸಂಕ್ರಾತಿವೃತ್ತಗಳ ಗಡಿಯನ್ನು ಉತ್ತರಿಸಿ ಎಂದೂ ಸಾಗುವುದಿಲ್ಲ. ಇದರ ಪರಿಣಾಮವಾಗಿ ಗಡಿಗಳ ಒಳಗಿರುವವರಿಗೆ (ಉದಾ: ಮೈಸೂರಿನವರಿಗೆ) ವರ್ಷದಲ್ಲಿ ಎರಡು ಸಲ ಸೂರ್ಯ ನೆತ್ತಿಯ ಮೇಲೆ ಬರುವುದು (ಬೇರೆ ಗುಣಗಳೂ ಇವೆ.); ಗಡಿ ವೃತ್ತಗಳ ಮೇಲೆ ಇರುವುವವರಿಗೆ ಒಂದೇ ಸಲ ಬರುವುದು; ಗಡಿಗಳಿಂದ ಹೊರಗೆ ಇರುವವರಿಗೆ ಎಂದೂ ಬರುವುದಿಲ್ಲ–ಇಷ್ಟು ಮಾತ್ರವಲ್ಲ, ಇವರ ರಾತ್ರಿ ಹಗಲುಗಳ ಏರಿಳಿತಗಳ ವ್ಯತ್ಯಾಸ ತೀವ್ರವಾಗಿರುವುದು. ಆರ್ಕ್‌ಟಿಕ್ (ಅದರಂತೆ

ಅಂಟಾರ್ಕ್‌ಟಿಕ್) ವೃತ್ತ ಇನ್ನೊಂದು ಗಡಿ. ಅಲ್ಲಿರುವವರಿಗೆ ವರ್ಷದಲ್ಲಿ ಒಂದು ದಿವಸ (24 ಗಂಟೆ ಕಾಲ) ಸೂರ್ಯ ಮುಳುಗುವುದೇ ಇಲ್ಲ–ಸಂಪೂರ್ಣ ಹಗಲು; ಮುಂದೆ ಒಂದು ದಿವಸ (24 ಗಂಟೆ ಕಾಲ) ಸೂರ್ಯ ಮೂಡುವುದೇ ಇಲ್ಲ–ಪೂರ್ಣ ರಾತ್ರಿ. ಈ ಕಾರಣದಿಂದ ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ವೃತ್ತಗಳಿಗೆ ಪ್ರಾಧಾನ್ಯ ಬಂದಿದೆ. ಈ ವೃತ್ತಗಳ ಒಳಗೆ ($66^0$33' ನಿಂದ ಆಯಾ ಮೇರುವರೆಗೆ) ಇರುವವರಿಗೆ ಹಗಲು, ರಾತ್ರಿಗಳ ವ್ಯತ್ಯಾಸ ಅತಿ ತೀವ್ರ ಮಾತ್ರವಲ್ಲ, ವರ್ಷದಲ್ಲಿ ಹಲವಾರು ದಿವಸ ನಿರಂತರ ಹಗಲು ನಿರಂತರ ರಾತ್ರಿಯೂ ಇರುತ್ತವೆ. ಮೇರುಬಿಂದುಗಳಲ್ಲಿಯೇ ($90^0$ ಉ. ಮತ್ತು ದ.) ಇರುವವರಿಗೆ 6 ತಿಂಗಳು ನಿರಂತರ ಹಗಲೂ 6 ತಿಂಗಳು ನಿರಂತರ ರಾತ್ರಿಯೂ ಇರುತ್ತವೆ.

ಭೂಮಧ್ಯರೇಖೆಯಿಂದ ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ವೃತ್ತಗಳ ದೂರ ಸುಮಾರು 11,82 ಕಿಮೀ. ಆರ್ಕ್‌ಟಿಕ್ ವೃತ್ತ ಉತ್ತರ ಅಮೆರಿಕ, ಯುರೋಪ್ ಮತ್ತು ಏಷ್ಯ ಖಂಡಗಳ ಮೂಲಕ ಹಾದುಹೋಗುತ್ತದೆ. ಆದ್ದರಿಂದ ಈ ಎಲ್ಲ ಖಂಡಗಳ ವಾಯುಗುಣ, ಸಸ್ಯಜೀವನ ಜನಜೀವನಕ್ರಮ ಈ ವೃತ್ತದ ಭಾಗದಲ್ಲಿ ಸಾಮಾನ್ಯವಾಗಿ ಒಂದೇ ರೀತಿ ಇದೆ. ಅತಿ ಶೀತ ಪ್ರದೇಶಗಳಾದ್ದರಿಂದ ಇಲ್ಲಿನ ಜನ ಬೆಚ್ಚಗಿರಲು ವಿಶಿಷ್ಟ ನಮೂನೆಯ ಉಡುಪುಗಳನ್ನು ಧರಿಸುತ್ತಾರೆ. (ಎಂ.ಎಸ್.)

**ಆರ್ಕ್‌ಟಿಕ್ ಸಮುದ್ರ :** ಉತ್ತರಮೇರು ಸುತ್ತಲಿನ (ಉ. ಅ. ಸುಮಾರು $70^0$ ವರೆಗಿನ) ಜಲಭಾಗ. ಇಲ್ಲಿರುವ ಭೂಭಾಗವೂ ಇದೇ ಹೆಸರಿನೊಳಗೆ ಸೇರಿದೆ. ಅತ್ಯಂತ ಶೀತ ವಾಯುಗುಣ ಇರುವ ಪ್ರದೇಶ. ಆರ್ಕ್‌ಟಿಕ್ ಸಮುದ್ರದ ವಿಸ್ತಾರ 14090118 ಚ. ಕಿಮೀ. ಇದು ಗ್ರೀನ್‌ಲ್ಯೆಂಡ್ ಮತ್ತು ನಾರ್ವೆ ಸಮುದ್ರಗಳನ್ನು ಗ್ರೀನ್‌ಲ್ಯೆಂಡ್, ಸೇಂಟ್



ಜೋಸೆಫ್ ಲ್ಯಾಂಡ್, ಆರ್ಕ್‌ಟಿಕ್ ಮುಂತಾದ ದ್ವೀಪ ಸಮುದಾಯಗಳನ್ನು ಒಳಗೊಂಡಿದೆ. ಅದರ ತೀರದ ಜಲಾಂತರ ಭೂಮಿ ವಿಸ್ತಾರವಾಗಿದೆ. ಅಲ್ಲಿ 800ಮೀ ಗಳಿಗಿಂತಲೂ ಹೆಚ್ಚು ಆಳವಿರುವ ತಗ್ಗುಗಳಿವೆ. ಬ್ಯಾಫಿನ್ ಕೊಲ್ಲಿ, ಗ್ರೀನ್‌ಲ್ಯಾಂಡ್ ಸಮುದ್ರ ಮುಂತಾದ ಕಡೆಗಳಲ್ಲಿ ಇಂಥ ತಗ್ಗುಗಳ ಆಳ 1820ಮೀ.ಗಳಿಗಿಂತಲೂ ಹೆಚ್ಚು. ಉತ್ತರಮೇರು ಸುತ್ತಲಿನ ಸಮುದ್ರದ ಪರಿಶೋಧನೆ ಇನ್ನೂ ಸಾಧ್ಯವಾಗಿಲ್ಲವಾದರೂ ಅಂತಾರಾಷ್ಟ್ರೀಯ ಭೂಭೌತವರ್ಷದ ಅವಧಿಯಲ್ಲಿ (1957–58) ಸಹಕಾರೀ ಸಂಶೋಧನೆಗಳು ನಡೆದಿವೆ. ಅಮೆರಿಕದ ನಾಟಿಲಸ್ ಮತ್ತು ಸ್ಕೇಟ್ ಎಂಬ ಪರಮಾಣು ಶಕ್ತಿಯಿಂದ ಚಲಿಸುವ ನೀರ್ಗಲ್ಲ ನೌಕೆಗಳು ಅತಿ ಆಳವಾಗಿರುವ ಸ್ಥಳಗಳ ಪರೀಕ್ಷೆಗಳನ್ನು ನಡೆಸಿವೆ. ಈ ಸಮುದ್ರದಲ್ಲಿ ಅತ್ಯಂತ ಆಳವಾದ ಪ್ರದೇಶಗಳನ್ನು $77^0$ 44' ಉ. ಅ., $175^0$ ಪ.ರೇ.(ಸು.5980ಮೀ) ಗುರುತಿಸಿದ್ದಾರೆ. ಆರ್ಕ್‌ಟಿಕ್ ಸಮುದ್ರವನ್ನೂ ಅಟ್ಲಾಂಟಿಕ್ ಸಾಗರವನ್ನೂ ಪ್ರತ್ಯೇಕಿಸುವ ಮಗ್ನತಟ ಭೂಮಿ (ವೈವಿಲ್ ಥಾಂಪ್ಸನ್ ರಿಡ್ಜ್ ಎಂದು ಇದರ ಹೆಸರು) ಕೇವಲ 550ಮೀ.ಗಳ ಆಳದಲ್ಲಿದೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ಮಧ್ಯೆ ಇರುವ ಇಂಥ ಜಲವಿಭಾಗದ ಆಳ 45ಮೀ ಮಾತ್ರ. ಸಮುದ್ರದ ತಳದಲ್ಲಿ ನಿಂತಿರುವ ಪದಾರ್ಥಗಳಲ್ಲಿ ಪ್ರಾಣಿ ಅಥವಾ ಸಸ್ಯಗಳಿಗೆ ಸಂಬಂಧಿಸಿದ ಪದಾರ್ಥಗಳು ಯಾವುವೂ ಇಲ್ಲ ; ಶೇ. 1–4 ಕ್ಯಾಲ್ಸಿಯಂ ಕಾರ್ಬೊನೇಟ್ ಅವುಗಳಲ್ಲಿರುವುದು ತಿಳಿದುಬಂದಿದೆ. ಗ್ರೀನ್‌ಲೆಂಡ್ ಮತ್ತು ಸ್ಪಿಟ್ಸಬರ್ಗನ್ ಪ್ರಾಂತ್ಯಗಳಲ್ಲಿ ಇದರ ಪ್ರಮಾಣ ಇನ್ನೂ ಹೆಚ್ಚು. ನೀರಿನ ಮೇಲೆ ಸಮುದ್ರಪಾಚಿ (ಅಥವಾ ಶೈವಲ) ಹೆಚ್ಚಾಗಿ ಹರಡಿದೆ. ಅತ್ಯಂತ ಶೀತಪ್ರದೇಶವಾದ್ದರಿಂದ ಇಲ್ಲಿ ನೀರಿನ ಸಾಂದ್ರತೆ ಹೆಚ್ಚಾಗಿಲ್ಲ ; ಇದಕ್ಕೆ ಕಾರಣ, ಅದರ ಅತಿ ಕಡಿಮೆ ಲವಣತ್ವ. ಈ ಸಮುದ್ರಕ್ಕೆ ಬಂದುಸೇರುವ ನದಿಗಳು ಸಿಹಿ ನೀರನ್ನು ತರುತ್ತವೆ; ನೀರು ಆವಿಯಾಗಿ ಲವಣತ್ವ ಹೆಚ್ಚಲು ಅವಕಾಶವೇ ಇಲ್ಲ. ಈ ಕಾರಣದಿಂದ ಆಯಾ ನಿಯತಕಾಲಿಕ ಮಾರುತಗಳ ಹೊಡೆತದಿಂದ ಮೇಲಿನ ನೀರು ಚಲಿಸುತ್ತದೆ ; ಉತ್ತರ ಮೇರು ಹತ್ತಿರ ಸೈಬೀರಿಯ ಮತ್ತು ಅಲಾಸ್ಕ ಕಡೆಯಿಂದ ಗ್ರೀನ್‌ಲ್ಯೆಂಡ್ ಕಡೆಗೆ ಒಂದು ಪ್ರವಾಹವೇರ್ಪಟ್ಟು ಮೇರು ಪ್ರಾಂತ್ಯದ ಹಿಮಗಡ್ಡೆಗಳೂ ಇದರೊಂದಿಗೆ ತೇಲಿಹೋಗಿ, ದಕ್ಷಿಣಕ್ಕೆ ಹೋದಂತೆ ಕರಗಿ ಲ್ಯಾಬ್ರಡಾರ್ ಪ್ರವಾಹಕ್ಕೆ ಸೇರಿಕೊಳ್ಳುತ್ತದೆ. ಬೇರಿಂಗ್ ಜಲಸಂಧಿಯ ಮೂಲಕವೂ ಒಂದು ಪ್ರವಾಹವೇರ್ಪಡುತ್ತದೆ.

ಮೇರು ಪ್ರದೇಶದ ಸಮುದ್ರಜಲದಲ್ಲಿ ಹೆಚ್ಚು ಆಳಕ್ಕೆ ಹೋದಂತೆಲ್ಲ ಉಷ್ಣತೆಯಲ್ಲಾಗಲಿ ಲವಣತೆಯಲ್ಲಾಗಲಿ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ. ಸಮುದ್ರದ ಮೇಲ್ಭಾಗದಿಂದ ಸು. 182ಮೀ. ಆಳದವರೆಗೂ ನೀರು ಘನೀಭವಿಸಲು ಬೇಕಾಗುವ ಉಷ್ಣತೆಗಿಂತಲೂ (ಫ್ರೀಸಿಂಗ್ ಪಾಯಿಂಟ್) ಕಡಿಮೆಯಿರುತ್ತದೆ. ಸುಮಾರು 55ಮೀ. ಆಳದಲ್ಲಿ ಕನಿಷ್ಠ ಉಷ್ಣತೆಯ ಪ್ರಮಾಣ $19^0$ ಸೆಂ. ಗ್ರೇ. ಇರುತ್ತದೆ. ಸುಮಾರು 300–365 ಮೀ. ಆಳದಲ್ಲಿ ಉಷ್ಣತೆ ಸ್ವಲ್ಪ ಹೆಚ್ಚಾಗುತ್ತದೆ. ಬೇಸಗೆ, ಚಳಿಗಾಲಗಳಲ್ಲಿನ ವ್ಯತ್ಯಾಸ (ಮೇಲಿನ ಐದಾರು ಅಡಿ ತಳದ ನೀರಿನಲ್ಲಿ ಹೊರತು) ಬಹಳ ಸ್ವಲ್ಪ, ಪೂರ್ವಭಾಗದಲ್ಲಿ ಶೈತ್ಯ ಕೊಂಚ ಹೆಚ್ಚು.

ಲವಣತೆ ಮೇಲ್ಭಾಗದಲ್ಲಿ ಸಾವಿರಕ್ಕೆ 29 ಅಥವಾ 30 ರಷ್ಟಿದ್ದು ಆಳ ಹೆಚ್ಚಿದಂತೆಲ್ಲ 180ಮೀ. ಆಳದಲ್ಲಿ ಸಾವಿರಕ್ಕೆ 35 ರಷ್ಟಾಗುತ್ತದೆ. ಇನ್ನೂ ಹೆಚ್ಚಿನ ಆಳದಲ್ಲಿ ಯಾವ ಬದಲಾವಣೆಯೂ ಕಂಡುಬರುವುದಿಲ್ಲ. ಕಾರಾ ಸಮುದ್ರದಲ್ಲಿ ಲವಣತೆ ಸಾವಿರಕ್ಕೆ 29 – 30 ರಷ್ಟಿದೆ.

ಆರ್ಕ್‌ಟಿಕ್ ಸಮುದ್ರದ 2/3 ಭಾಗ ಚಳಿಗಾಲದಲ್ಲಿ ಉಂಟಾಗಿ ಚಲಿಸುವ ನೀರ್ಗಲ್ಲು ಅಥವಾ ಹಿಮಗಡ್ಡೆಗಳಿಂದ ಕೂಡಿದೆ. ಗ್ರೀನ್‌ಲೆಂಡಿನ ಹಿಮ ಪ್ರವಾಹಗಳಿಂದಲೂ ನೀರ್ಗಲ್ಲುಗಳು ಬಂದು ಸೇರುತ್ತವೆ. ಒಂದು ಹಿಮಗಡ್ಡೆಯ ಗಾತ್ರ ಸಾಮಾನ್ಯವಾಗಿ ಆರೇಳು ಅಡಿಗಳಷ್ಟಿದ್ದು, ಕೆಲವು ಕಡೆ ಗಾಳಿಯ ಹೊಡೆತದಿಂದಾಗಿ ಅವುಗಳ ಗಾತ್ರ ಹೆಚ್ಚಾಗುತ್ತದೆ. ಬೇಸಗೆಯಲ್ಲಿ ಈ ಹಿಮಗಡ್ಡೆಗಳು ಕರಗುವುವಾದರೂ ಹೆಚ್ಚುಭಾಗ ಉಷ್ಣೋದಕಪ್ರವಾಹಕ್ಕೆ ಸಿಕ್ಕಿ ಕರಗುತ್ತವೆ. ಅಲೆಗಳ ಹೊಡೆತದಿಂದಲೂ ನೀರ್ಗಲ್ಲು ಕರಗುವುದುಂಟು.

ಹಿಮಗಡ್ಡೆಯಿರುವ ಪ್ರದೇಶಗಳಲ್ಲಿ ಸಸ್ಯಗಳಾಗಲಿ, ಪ್ರಾಣಿಗಳಾಗಲಿ ಅತಿ ಕಡಿಮೆ; ಇಂಥ ಪ್ರದೇಶಗಳಲ್ಲಿ ಸಸ್ಯಗಳನ್ನು ಕಾಣಬಹುದು. ತೀರಪ್ರದೇಶಗಳಲ್ಲಿ ಸಸ್ಯಗಳೂ ಪ್ರಾಣಿಗಳೂ ಇರುತ್ತವೆ. ಕಾಡ್, ಹ್ಯಾಲಿಬಟ್, ಸಾಮನ್ (ಸಾಲ್ಮನ್) ಮುಂತಾದ ಮೀನುಗಳು ಹೇರಳವಾಗಿ ದೊರಕುತ್ತವೆ. ಚಲಿಸುವ ಹಿಮಗಡ್ಡೆಗಳೊಂದಿಗೆ ಸೀಲ್ ಎಂಬ ಮೀನುಗಳು ಕೂಡ ಬರುತ್ತವೆ. ತಿಮಿಂಗಿಲಗಳು ವಿಶೇಷವಾಗಿಲ್ಲ. (ಪಿ.ಡಿ.ಎಂ.)

**ಆರ್ಕ್‌ಟೋಟಿಸ್ :** ಸುಂದರ ಬೂದು ಹಸುರು ಬಣ್ಣದ ಎಲೆಗಳನ್ನು ಹೊಂದಿರುವ ಗಿಡ (ಬ್ಲೂ ಐಡ್ ಆರ್ ಟ್ರಾನ್ಸ್‌ವಾಲ್ ಡೈಸಿ). ಹೂಗಳ ಆಕಾರ ದೊಡ್ಡದು. ಜರ್‌ಬೆರ ಹೂಗಳಂತಿವೆ; ನೀಲಿ ಬಿಳುಪು ಬಣ್ಣ. ಎಲೆಗಳಿಗಿಂತ ಮೇಲೆ ಬೆಳೆದಿರುತ್ತವೆ. ಇವು ರಾತ್ರಿವೇಳೆಯಲ್ಲಿ ಮುಚ್ಚಿಕೊಂಡು ಬೆಳಗಿನಲ್ಲಿ ಪುನಃ ಅರಳುತ್ತವೆ. ಹೀಗೆ 4 ದಿವಸಗಳವರೆಗೂ ಇರುತ್ತವೆ. ಅನಂತರ ಬಾಡಿಹೋಗುತ್ತವೆ. ಇವು ಬಿಡಿ ಹೂಗಳಾಗಿ ಉಪಯೋಗಿಸಲು ಉಪಯುಕ್ತವಾಗಿವೆ.

ಗಿಡ ವಸಂತ ಕಾಲದ್ದಾದರೂ ಚಳಿಗಾಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮೈದಾನ ಮತ್ತು ಎತ್ತರ ಪ್ರದೇಶಗಳಲ್ಲಿ ಇದನ್ನು ಚೆನ್ನಾಗಿ ಬೆಳೆಸಬಹುದು. ಹೂಗಳು $3^1/_2$ ತಿಂಗಳಲ್ಲಿ ಬರುತ್ತವೆ. ಗಿಡದಿಂದ ಗಿಡಕ್ಕೆ 10–12 ಅಂತರವಿಟ್ಟು ಇವನ್ನು ಮಡಿಗಳಲ್ಲಿ ಬೆಳೆಸಬಹುದು; ಇಲ್ಲವೆ ಕುಂಡಗಳಲ್ಲಾದರೂ ಬೆಳೆಸಬಹುದು. ಇದರಲ್ಲಿ ಆರ್ಕ್‌ಟೋಟಿಸ್ ಗ್ರಾಂಡಿಸ್ ಬಹು ಉತ್ತಮ ಜಾತಿ. (ಕೆ.)

**ಆರ್ಕ್‌ರೈಟ್, ಸರ್ ರಿಚರ್ಡ್ :** 1732–1792. ಇಂಗ್ಲೆಂಡಿನ ಸಂಶೋಧಕ. 13 ಮಕ್ಕಳಲ್ಲಿ ಈತನೇ ಕಿರಿಯವ. ಚಿಕ್ಕ ವಯಸ್ಸಿನಲ್ಲಿ ಕ್ಷೌರಿಕ ವೃತ್ತಿಯನ್ನು ಈತನಿಗೆ ಕಲಿಸಿತಾದರೂ ತನ್ನ 35ನೆಯ ವಯಸ್ಸಿನಲ್ಲಿ ಇದನ್ನು ತೊರೆದು ನೂಲುವ ಕೆಲಸದಲ್ಲಿ ತನ್ನ ಆಸಕ್ತಿಯನ್ನು ತೋರಿದ. ನೇಯುವ ಚೌಕಟ್ಟನ್ನು ಕಂಡುಹಿಡಿದು (1769), ಹಾರ್ಗ್ರೀವನ ನೇಯುವ ಯಂತ್ರವನ್ನು ಅಭಿವೃದ್ಧಿಗೊಳಿಸಿದ. ಇದರಿಂದಾಗಿ ಒಂದೇ ಸಲಕ್ಕೆ ಅಧಿಕ

ಸಂಖ್ಯೆಯ ದಾರದ ಎಳೆಗಳನ್ನು ಉಪಯೋಗಿಸುವುದು ಸಾಧ್ಯವಾಯಿತು. ಈ ನೇಯುವ ಯಂತ್ರದ ವಿರುದ್ಧ ಆದ ಗೊಂದಲಗಳಿಂದಾಗಿ ಈತ ಲ್ಯಾಂಕಶೈರನ್ನು ತ್ಯಜಿಸಿ ನಾಟಿಂಗ್‌ಹ್ಯಾಂಗೆ ಬಂದು ಸೇರಿದ. ಈತ ರಚಿಸಿದ ಈ ಯಂತ್ರದ ಬಗ್ಗೆ ಅನೇಕ ತೊಂದರೆಗಳನ್ನು ಅನುಭವಿಸಿ, ತಯಾರಿಕಾ ಸ್ವಾಮ್ಯದ ಬಗ್ಗೆ ಹಲವಾರು ಮೊಕದ್ದಮೆಗಳನ್ನೆದುರಿಸಿಯೂ ಶ್ರೀಮಂತನಾಗಿ ಬಾಳಿದ.

**ಆರ್ಕನಿ ದ್ವೀಪಗಳು :** ಸ್ಕಾಟ್‌ಲೆಂಡಿನ ಉತ್ತರ ಕರಾವಳಿಗೆ 102 ಕಿಮೀ ದೂರದಲ್ಲಿವೆ ($59^0$ ಉ.ಅ. ಮತ್ತು $3^0$ ಪ.ರೇ.). ಇವು 90ಕ್ಕಿಂತಲೂ ಹೆಚ್ಚು ದ್ವೀಪಗಳಿಂದ ಕೂಡಿದ ದ್ವೀಪಸ್ತೋಮ. ಇವುಗಳಲ್ಲಿ 24 ದ್ವೀಪಗಳಲ್ಲಿ ಮಾತ್ರ ಜನ ವಾಸಿಸುತ್ತಾರೆ. ಕೆಲವು ದ್ವೀಪಗಳಲ್ಲಿ ಏಕಸ್ವಾಮ್ಯಕೃಷಿಯನ್ನು ಕಾಣಬಹುದು. ಭೂಮಿ ತಗ್ಗು, ನೆಲ ಕಲ್ಲು. ಏನೂ ಬೆಳೆಯದಷ್ಟು ಬಂಜರು. ಮೀನುಗಾರಿಕೆಯೂ ಒಂದು ಉದ್ಯೋಗವಾಗಿದೆ. ಇವುಗಳಲ್ಲಿ ಪೊಮೋನ (ಮೇನ್ ಲ್ಯಾಂಡ್) ಅತಿ ದೊಡ್ಡದು.

ಕಿರ್‌ಕ್ವಾಲ್ ಹಾಗೂ ಸ್ಟ್ರಾಮ್‌ನೆಸ್ ಮುಖ್ಯ ಪಟ್ಟಣಗಳು. ಕಿರ್‌ಕ್ವಾಲ್‌ನಲ್ಲಿ ಹಿಂದಿನ ಕಾಲದ (11–12ನೆಯ ಶತಮಾನದ) ಚರ್ಚುಗಳನ್ನೂ ಶ್ರೀಮಂತರ ನಿವಾಸಗಳನ್ನೂ ಕಾಣಬಹುದು. ಅವುಗಳಲ್ಲಿ ಅನೇಕ ಕಟ್ಟಡಗಳು ಅವಶೇಷಗಳಾಗಿ ಉಳಿದಿವೆ. ಚರಿತ್ರಪೂರ್ವ ಕಾಲದ ಶಿಲಾ ಮತ್ತು ಕಂಚುಯುಗಗಳ ಅವಶೇಷಗಳೂ ಹೇರಳವಾಗಿವೆ.

ಇಲ್ಲಿಯ ವಾಯುಗುಣ ಶೀತವಲಯದ್ದಾದರೂ ಚಳಿಗಾಲದಲ್ಲಿ ಇಲ್ಲಿಗೆ ಸಮೀಪದಲ್ಲಿ ಹರಿಯುವ ಉತ್ತರ ಅಟ್ಲಾಂಟಿಕ್ ಡ್ರಿಫ್ಟ್ ಎಂಬ ಉಷ್ಣೋದಕ ಪ್ರವಾಹ ಮತ್ತು ಪಶ್ಚಿಮ ಮಾರುತಗಳು ಚಳಿಯನ್ನು ಬಹುಮಟ್ಟಿಗೆ ಕಡಿಮೆಮಾಡುತ್ತವೆ. ಬೇಸಗೆಯ ಅವಧಿ ಕೆಲವೇ ವಾರಗಳು ; ಆದರೂ ವಾಯುಗುಣ ಹಿತಕರವಾಗಿರುತ್ತದೆ.

ಆರ್ಕನಿ ದ್ವೀಪಗಳಲ್ಲಿ ದೊರಕುವ ಹಸುರು ಮತ್ತು ಕೆಂಪು ಮರಳು ಕಲ್ಲುಗಳು ಕಟ್ಟಡಗಳ ಕೆಲಸಕ್ಕೆ ಅನುಕೂಲವಾಗಿವೆ. ಕೆಲವೇ ಕಡೆಗಳಲ್ಲಿ ಕಾಣಸಿಗುವ ಮರಳುಮಿಶ್ರಿತ ಮೆಕ್ಕಲುಮಣ್ಣು ಫಲವತ್ತಾದ್ದು ; ಓಟ್ಸ್, ಬಾರ್ಲಿ, ಆಲೂಗಡ್ಡೆ ಮುಖ್ಯ ಕೃಷಿ ಉತ್ಪಾದನೆಗಳು. ಪಶುಪಾಲನೆಯಿಂದ ಹಾಲು, ಮಾಂಸ, ಮೊಟ್ಟೆ ಮುಂತಾದ ಆಹಾರ ಪದಾರ್ಥಗಳು ದೊರಕುತ್ತವೆ. ಅಗಾಧಪ್ರಮಾಣದಲ್ಲಿ ಪ್ರಾಣಿಗಳ ಆಹಾರವನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ.

ಜನಸಂಖ್ಯೆ 19,245 (2001). ಕಿರ್‌ಕ್ವಾಲ್‌ನಲ್ಲಿ ಸುಮಾರು 44 ಸಾವಿರ ಜನರೂ ಸ್ಟ್ರಾಮ್‌ನೆಸ್‌ನಲ್ಲಿ ಸುಮಾರು 14 ಸಾವಿರ ಜನರೂ ಇದ್ದಾರೆ. ಉತ್ತರ ದ್ವೀಪಗಳಿಂದ ಮತ್ತು ಅಬರ್‌ಡೀನ್‌ನಂಥ ಮುಖ್ಯಪಟ್ಟಣಗಳಿಂದ ಕಿರ್‌ಕ್ವಾಲ್‌ಗೆ ಕೆಲವು ನಿರ್ದಿಷ್ಟ ವೇಳೆಯಲ್ಲಿ ನೌಕಾಯಾನ ಸಂಪರ್ಕವಿದೆ. (ಎಂ.ಎಸ್.ಎಂ.)

**ಆರ್ಕಲೇಅಸ್ :** ಪು.ಶ.ಪೂ.5ನೆಯ ಶತಮಾನದಲ್ಲಿದ್ದ ಗ್ರೀಕ್ ದಾರ್ಶನಿಕ. ಅಥೆನ್ಸ್‌ನಲ್ಲಿ ಹುಟ್ಟಿದನೆಂದು ಕೆಲವರ ಅಭಿಪ್ರಾಯ. ಅನ್ಯಾಕ್ಸಗೊರಾಸ್‌ನ (ನೋಡಿ) ಶಿಷ್ಯ. ಸಾಕ್ರಟೀಸ್‌ಗೆ ಗುರುವಾಗಿದ್ದನೆಂದು ಅನೇಕರ ಅಭಿಪ್ರಾಯ. ಒಟ್ಟಿನಲ್ಲಿ ಅನ್ಯಾಕ್ಸಗೊರಾಸ್‌ನ ದಾರ್ಶನಿಕ ಮಾರ್ಗವನ್ನೇ ಅನುಸರಿಸಿದ. ಆದರೆ ವಿಶ್ವಶಾಸ್ತ್ರದಲ್ಲಿ (ಕಾಸ್ಮಾಲಜಿ) ಹಿಂದಿನ ಅಯೋನಿಯನ್ನರ ಅಭಿಪ್ರಾಯಗಳನ್ನು ಅನುಮೋದಿಸಿದ. ಅನ್ಯಾಕ್ಸಗೊರಾಸ್ ಪ್ರತಿಪಾದಿಸಿದ ಮನಸ್ಸು ಮತ್ತು ವಾಯು ಭಿನ್ನವೆಂಬ ದ್ವೈತತತ್ತ್ವವನ್ನು ನಿರಾಕರಿಸಿ, ವಾಯುವಿಗೆ ಉಚ್ಚಸ್ಥಾನ ಕೊಟ್ಟ. ವಾಯು ಮಂದವಾದಾಗ ಚಳಿ, ವಿರಳವಾದಾಗ ಉಷ್ಣತೆ ಅಥವಾ ನೀರು ಮತ್ತು ಅಗ್ನಿ ಉಂಟಾಗುತ್ತವೆ. ಒಂದು ನಿಷ್ಕ್ರಿಯ, ಇನ್ನೊಂದು ಸಕ್ರಿಯ. ಈ ಪೃಥ್ವಿ ಮತ್ತು ಆಕಾಶಸ್ಥ ಕಾಯಗಳು ಅಗ್ನಿ ನೀರು ಸೇರಿ ಉತ್ಪನ್ನವಾಗಿವೆ. ಇದರಿಂದ ಮನುಷ್ಯನ ಮತ್ತು ಇತರ ಪ್ರಾಣಿಗಳ ಉತ್ಪತ್ತಿ. ಮನುಷ್ಯ ನೀತಿಪ್ರಜ್ಞೆ ಮತ್ತು ಕಲಾಭಿಜ್ಞತೆ ಹೊಂದಿರುವುದರಿಂದ ಇತರ ಪ್ರಾಣಿಗಳಿಂದ ಭಿನ್ನನಾಗಿದ್ದಾನೆ. ಇದು ಇವನ ತತ್ತ್ವದ ಸಾರ.

**ಆರ್ಕಾಟ್ :** ತಮಿಳುನಾಡಿನಲ್ಲಿರುವ ವೆಲ್ಲೂರ್ ನಗರದ (ಉ. ಅ. $12^0$ 55', ಪೂ.ರೇ. $79^0$ 24'). ಚೆನ್ನೈ ನಗರದಿಂದ ನೈಋತ್ಯಕ್ಕೆ 56 ಕಿಮಿ. ದೂರದಲ್ಲಿದೆ. ಜನಸಂಖ್ಯೆ 45,205 (1991). ಇಡೀ ವರ್ಷ ಒಣ ಹವೆ. ಮಳೆ 75 ರಿಂದ 90 ಸೆಂಮೀ. ಮುಖ್ಯ ಬೆಳೆ ಬತ್ತ. ಹಿಂದೆ ಔದ್ಯೋಗಿಕ ಮತ್ತು ವಾಣಿಜ್ಯ ಕೇಂದ್ರವಾಗಿತ್ತು. 18ನೆಯ ಶತಮಾನದ ಮಧ್ಯಭಾಗದಲ್ಲಿ ಸಿಂಹಾಸನಕ್ಕಾಗಿ ಎರಡು ಗುಂಪುಗಳ ನಡುವೆ ನಡೆದ ಆಂತರಿಕ ಯುದ್ಧದಲ್ಲಿ ಒಂದು ಗುಂಪನ್ನು ಬ್ರಿಟಿಷರೂ ಇನ್ನೊಂದನ್ನು ಫ್ರೆಂಚರೂ ಬೆಂಬಲಿಸಿದರು. 1751ರಲ್ಲಿ ರಾಬರ್ಟ್ ಕ್ಲೈವ್ ಇದನ್ನು ಮುತ್ತಿ ವಶಪಡಿಸಿಕೊಂಡ. 1758ರಲ್ಲಿ ಫ್ರೆಂಚರ ವಶವಾಯಿತು. ಆದರೆ 1760ರಲ್ಲಿ ಬ್ರಿಟಿಷರು ಪುನಃ ಪಡೆದುಕೊಂಡರು. 1780ರಲ್ಲಿ ಹೈದರ್ ಅಲಿಯ ಕೈಗೆ ಬಂತು. 1801ರಲ್ಲಿ ಬ್ರಿಟಿಷರು ಆರ್ಕಾಟನ್ನೊಳಗೊಂಡ ಸಂಪೂರ್ಣ ಕರ್ನಾಟಕವನ್ನು ವಶಪಡಿಸಿಕೊಂಡರು.

**ಆರ್ಕಾಟ್ ಮುತ್ತಿಗೆ :** ಮೊಗಲರ ಆಳ್ವಿಕೆಯ ಕೊನೆಗಾಲದಲ್ಲಿ ಮರಾಠರು ಪ್ರಬಲರಾಗಿ ದಕ್ಷಿಣಭಾರತ ಮೊಗಲ್ ಆಡಳಿತದಿಂದ ಸ್ವತಂತ್ರವಾಯಿತು. ಹೈದರಾಬಾದಿನ ನಿಜಾಮನೂ ಆರ್ಕಾಟಿನ ನವಾಬನೂ ಸ್ವತಂತ್ರರಾದರು. 1710ರಲ್ಲಿ ಸಾದುತ್ತುಲ್ಲಾಖಾನ್ ಸ್ವತಂತ್ರನಾಗಿ ಆರ್ಕಾಟ್ ಮತ್ತು ತಂಜಾವೂರು ಪ್ರದೇಶಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿ ಆರ್ಕಾಟ್ ನವಾಬೀ ಮನೆತನವನ್ನು ಸ್ಥಾಪಿಸಿದ. ಈತ 1742ರಲ್ಲಿ ಮರಣಹೊಂದಿದ. ಆ ಕಾಲದಲ್ಲೇ ಮರಾಠರ ಪ್ರಾಬಲ್ಯ ವಿಶೇಷವಾಗಿತ್ತು. 1743–1749ರ ವರೆಗೆ ಅನ್ವರುದ್ದೀನ್ ನವಾಬನಾಗಿದ್ದ. ಈತನ ಅನಂತರ ಆರ್ಕಾಟ್ ಮುತ್ತಿಗೆ 1751ರಲ್ಲಿ ನಡೆಯಿತು.

ಅದೇ ಕಾಲದಲ್ಲಿ ಹೈದರಾಬಾದಿನ ನಿಜಾಮ ಮರಣಹೊಂದಿದ. ಅಧಿಕಾರಕ್ಕಾಗಿ ಮಗನಾದ ನಾಸಿರ್‌ಜಂಗನಿಗೂ ಮೊಮ್ಮಗನಾದ ಮುಸಾಫರ್‌ಜಂಗನಿಗೂ ಕದನವೇರ್ಪಟ್ಟಿತು. ಚಂದಾಸಾಹೇಬ ಫ್ರೆಂಚರ ಸಹಾಯದಿಂದ ಆರ್ಕಾಟಿನ ನವಾಬನಾದ ಅನ್ವರುದ್ದೀನನನ್ನು ಕೊಂದುಹಾಕಿದ. ಮುಸಾಫರ್‌ಜಂಗ್, ಚಂದಾಸಾಹೇಬ ಮತ್ತು ಫ್ರೆಂಚರು ಒಂದಾದರು. ಅನ್ವರುದ್ದೀನನ ಮಗನಾದ ಮಹಮ್ಮದಾಲಿ, ನಾಸಿರ್‌ಜಂಗ್ ಹಾಗೂ ಇಂಗ್ಲಿಷರು ಪ್ರತಿಪಕ್ಷವನ್ನು ಹೂಡಿದರು. ಫ್ರೆಂಚರು ಮತ್ತು ಚಂದಾಸಾಹೇಬ ಒಂದಾಗಿ ಮಹಮ್ಮದಾಲಿಯನ್ನು ನಿರ್ನಾಮಮಾಡಲು ತಿರುಚಿರಾಪಳ್ಳಿಯನ್ನು ಮುತ್ತಿದರು. ಆ ಸಮಯದಲ್ಲಿ ಶತ್ರುಪಕ್ಷದವರ ಗಮನ ಸೆಳೆದು ಅವರ ಬಲವನ್ನು ಕುಗ್ಗಿಸಲು ಕ್ಲೈವ್‌ನ ನೇತೃತ್ವದಲ್ಲಿ ಇಂಗ್ಲಿಷ್ ಸೈನ್ಯ ಆರ್ಕಾಟಿಗೆ ಮುತ್ತಿಗೆ ಹಾಕಿತು. ಅವರ ಸಹಾಯಕ್ಕಾಗಿ ಮರಾಠರ ಮುರಾರಿರಾವ್ ಹೋಳ್ಕರ್ ಆರ್ಕಾಟಿಗೆ ಧಾವಿಸಿದ. ಇಂಗ್ಲಿಷರು ಆರ್ಕಾಟನ್ನು ವಶಪಡಿಸಿಕೊಂಡ ಸುದ್ದಿ ತಿಳಿದ ಚಂದಾಸಾಹೇಬ ತಿರುಚನಾಪಳ್ಳಿಯಿಂದ ಅರ್ಧಭಾಗ ಸೈನ್ಯವನ್ನು ಆರ್ಕಾಟಿನತ್ತ ಕಳುಹಿಸಿದ. ಸೈನ್ಯ ಸೋತುಹೋಯಿತಲ್ಲದೆ ಚಂದಾಸಾಹೇಬ ಕೊಲೆಯಾದ. ಹೈದರಾಬಾದಿನ ಸಿಂಹಾಸನಕ್ಕಾಗಿ ಕಾದಾಡುತ್ತಿದ್ದ ನಾಸಿರ್‌ಜಂಗ್ ಹಾಗೂ ಮುಸಾಫರ್‌ಜಂಗರೂ ಕ್ರಮೇಣ ಕೊಲೆಯಾದರು. ಬ್ರಿಟಿಷರ ನೆರವಿನಿಂದ ಮಹಮ್ಮದಾಲಿ ಆರ್ಕಾಟಿನ ನವಾಬನಾದ. ಯುದ್ಧ 1754ರಲ್ಲಿ ಇಂಗ್ಲಿಷ್ ಮತ್ತು ಫ್ರೆಂಚರಿಗೆ ಪರಸ್ಪರ ಒಪ್ಪಂದದಲ್ಲಿ ಕೊನೆಯಾಯಿತು. ಆರ್ಕಾಟ್ ಮುತ್ತಿಗೆಯೆಂದು ಕರೆಯುವ ಘಟನೆಯ ಪರಿಣಾಮಗಳು ಬಹಳ ಮಹತ್ತರವಾದುವು. ಮೊದಲನೆಯದಾಗಿ ದೇಶೀಯ ರಾಜರು ದುರ್ಬಲಗೊಂಡು ಕ್ರಮೇಣ ಇಂಗ್ಲಿಷರ ಆಜ್ಞಾನುವರ್ತಿಗಳಾಗುತ್ತ ಬಂದರು. ಎರಡನೆಯದಾಗಿ ಡೂಪ್ಲೆಯ ಪತನವೂ ಕ್ಲೈವನ ಏಳ್ಗೆಯೂ ಪ್ರಾರಂಭವಾದುವು. ಕೊನೆಯದಾಗಿ ಫ್ರೆಂಚರ ಪ್ರಾಬಲ್ಯ ಕುಂದಿ ಇಂಗ್ಲಿಷರ ಬಲಸಂವರ್ಧನೆಯಾಯಿತು. (ಜಿ.ಆರ್.ಆರ್.)

**ಆರ್ಕಿಕ್ಲ್ಯಾಮಿಡೀ :** ದ್ವಿದಳ ಸಸ್ಯಗಳ ಗುಂಪಿನ ಒಂದು ವಿಶಾಲ ಶಾಖೆ. ಜರ್ಮನ್ ಸಸ್ಯವಿಜ್ಞಾನಿ ಎಂಗ್ಲರ್ ಎಂಬವನ ಪ್ರಕಾರ ಎಂಬ್ರಿಯೋಫೈಟಾ ಸೈಫೊನೋಗ್ಯಾಮ ಎಂಬ ಬೀಜಯುಕ್ತ ಸಸ್ಯ ವಿಭಾಗಕ್ಕೂ ಆಂಜಿಯೋಸ್ಪರ್ಮ್ ಎಂಬ ಆಚ್ಛಾದಿತ ಬೀಜಯುಕ್ತ ಸಸ್ಯಗಳ ಉಪವಿಭಾಗಕ್ಕೂ ಸೇರಿದೆ. ಈ ಪಂಗಡದ ಪುಷ್ಪಗಳಲ್ಲಿ ದಳಗಳು ಬಿಡಿಯಾಗಿವೆ. ಈ ಉಪ ತರಗತಿಗೆ ಸಮನಾದ ಮತ್ತೊಂದು ಉಪತರಗತಿ ಮೆಟಕ್ಲ್ಯಾಮಿಡೀ; ಆದರೆ ಈ ಎರಡನೆಯ ಉಪತರಗತಿಯಲ್ಲಿ ಪುಷ್ಪದಳಗಳು ಕೂಡಿಕೊಂಡಿವೆ. ಆರ್ಕಿಕ್ಲ್ಯಾಮ್ಯಿಡೀ ಗುಂಪಿನಲ್ಲಿ 33 ವರ್ಗಗಳೂ 201 ಕುಟುಂಬಗಳೂ ಸೇರಿವೆ. ಈ ಸಮುದಾಯದಲ್ಲಿ ಮೂಲರೂಪದ ಆಚ್ಛಾದಿತ ಬೀಜಯುಕ್ತ ಸಸ್ಯಗಳನ್ನು ಸೇರಿಸಲಾಗಿದೆ. ಅವುಗಳಲ್ಲಿ ಮರಗಳೇ ಹೆಚ್ಚು; ವಿಕಾಸವಾದಂತೆಲ್ಲ ಮರಗಳು ಕಡಿಮೆ; ಮೇಲ್ದರದ ಕುಲಗಳಲ್ಲಿ ಮೂಲಿಕೆಗಳೇ ಹೆಚ್ಚು; ಕೆಳವರ್ಗದವುಗಳಲ್ಲಿ ಪುಷ್ಪಾಂಗಗಳು ಸುರುಳಿ ಕ್ರಮದಲ್ಲಿಯೂ ಮೇಲ್ದರದ ಕುಲಗಳಲ್ಲಿ ವೃತ್ತಕ್ರಮದಲ್ಲಿಯೂ ಜೋಡಿಸಿವೆ. ಆದಿಕುಲಗಳಲ್ಲಿ ಪುಷ್ಪಾಂಗಗಳು ಅನಿರ್ದಿಷ್ಟವಾಗಿಯೂ ಮುಂದುವರಿದ ಕುಲಗಳಲ್ಲಿ ನಿರ್ದಿಷ್ಟವಾಗಿಯೂ ಇವೆ. ಪುಷ್ಪಗಳು ಆವರಣರಹಿತವಾಗಿಯೊ ಏಕಾವರಣಸಹಿತವಾಗಿಯೊ ಅಥವಾ ದ್ವಯಾವರಣಸಹಿತವಾಗಿಯೊ ಇರುತ್ತವೆ; ಕೆಲವು ಕುಲಗಳಲ್ಲಿ ದಳರಹಿತವಾಗಿರುತ್ತವೆ. ಆದಿ ಕುಲಗಳಲ್ಲಿ ಉಚ್ಚ ಸ್ಥಿತಿಯ ಅಂಡಾಶಯ, ಬಹಳ ಮುಂದುವರಿದ ಕುಲಗಳಲ್ಲಿ ಅಧೋಸ್ಥಿತಿಯ ಅಂಡಾಶಯ ಇರುವುದು. ಈ ಕೆಳಗೆ ಆರ್ಕಿಕ್ಲ್ಯಾಮಿಡೀಯಲ್ಲಿ ಕಂಡುಬರುವ ವರ್ಗಗಳ ಅಥವಾ ವರ್ಗಸಮೂಹಗಳ ಮುಖ್ಯ ಗುಣವಿಶೇಷಗಳನ್ನು ತಿಳಿಸಲಾಗಿದೆ.

**ವರ್ಗಗಳು 1 ರಿಂದ 14:** (ವರ್ಟಿಸಿಲೇಟಿ, ಪೈಪರೇಲೀಸ್, ಹೈಡ್ರೊಸ್ಟಾಕಿಯೇಲೀಸ್, ಸ್ಯಾಲಿಕೇಲೀಸ್, ಗ್ಯಾರಿಯೇಲೀಸ್, ಬೆಲನಾಪ್ಸಿಡೇಲೀಸ್, ಮಿರಿಕೇಲೀಸ್, ಲೈಟ್ನಿರಿಯೇಲೀಸ್, ಜೂಗ್ಲಾಂಡೇಲೀಸ್, ಜೂಲಿಯನೇಲೀಸ್, ಬ್ಯಾಟಿಡೇಲೀಸ್, ಫ್ಯಾಗೇಲೀಸ್, ಅರ್ಟಿಕೇಲೀಸ್ ಮತ್ತು ಪೋಡಾಸ್ಟಿಮೇಲೀಸ್–20 ಕುಟುಂಬಗಳು). ಈ ಸಮೂಹದ ವರ್ಗಗಳನ್ನು ಆದಿರೂಪದ ಅಥವಾ ಕೀಳ್ದರದ (ಪ್ರಿಮಿಟಿವ್) ವರ್ಗಗಳೆಂದು ಪರಿಗಣಿಸಲಾಗಿದೆ. ಈ ವರ್ಗಗಳಲ್ಲಿ ಸಾಮಾನ್ಯವಾಗಿ ಮರಗಳೇ ಹೆಚ್ಚು. (ಉದಾ: ಓಕ್, ಬೀಚ್, ವಾಲ್‌ನಟ್, ನೀರಂಜಿಮರ ಇತ್ಯಾದಿ). ಹಿಂದೆ ಈ ಸಮೂಹವನ್ನು ಅಮೆಂಟಿಫೆರಿ (ಕುಚ್ಚುತೆನೆ ಸಸ್ಯಗಳು) ಎಂದು ಕರೆಯಲಾಗುತ್ತಿತ್ತು. ಪುಷ್ಪಗಳ ನಗ್ನ ಪುಷ್ಪಾವರಣ ಕ್ಷೀಣಪತ್ರದ ತರಹದ್ದು. ಪುಷ್ಪಾಂಗಗಳ ಸಂಖ್ಯೆ ಸಾಮಾನ್ಯವಾಗಿ ಅನಿರ್ದಿಷ್ಟ ಪರಾಗಸ್ಪರ್ಶ ಗಾಳಿಯಿಂದ ನಡೆಯುವುದು. ಈ ವರ್ಗಗಳಿಗೂ ಇತರ ವರ್ಗಗಳಿಗೂ ಇರುವ ಸಂಬಂಧ ಇನ್ನೂ ಸ್ಪಷ್ಟವಾಗಿಲ್ಲ.

ವರ್ಗಗಳು 15 ರಿಂದ 20: (ಪ್ರೋಟಿಯೇಲೀಸ್, ಸ್ಯಾಂಟಲೇಲೀಸ್, ಅರಿಸ್ಟೊಲೋಕಿಯೇಲೀಸ್, ಬೆಲೆನೋಫೊರೇಲೀಸ್, ಪಾಲಿಗೊನೇಲೀಸ್ ಮತ್ತು ಸೆಂಟ್ರೋಸ್ಪರ್ಮಿ–23 ಕುಟುಂಬಗಳು). ಈ ವರ್ಗಸಮೂಹ ಸ್ಥೂಲವಾಗಿ ನೋಡಿದರೆ

ಪ್ರತ್ಯೇಕವಾಗಿ ಉಳಿದಿರುವಂತೆ ಕಾಣುತ್ತದೆ. ಇದರಲ್ಲಿ ಗಂಧದ ಮರದ ಕುಟುಂಬ, ದಂಟು ಕುಟುಂಬ, (ಅಮರಾಂತೇಸೀ), ಚಕ್ಕೋತ ಸೊಪ್ಪು ಕುಟುಂಬ ಮುಂತಾದುವು ಅಡಕವಾಗಿವೆ. ಪುಷ್ಪಪತ್ರಗಳು ಒಂದೇ ತರಹದ್ದಾಗಿ ದಳಕಲ್ಪವಾಗಿವೆ. ಮುಂದುವರಿದ ಕುಟುಂಬಗಳಲ್ಲಿ ಪುಷ್ಪಪತ್ರಕ್ಕೂ ದಳಸಮೂಹಕ್ಕೂ ವ್ಯತ್ಯಾಸ ಕಂಡಿದೆ. ಪುಷ್ಪವಲಯಗಳು ವೃತ್ತಕ್ರಮದಲ್ಲಿ ಕಾಣುತ್ತವೆ; ಪ್ರತಿ ಸುತ್ತಿನಲ್ಲೂ 3 ರಿಂದ 5 ರವರೆಗೆ ಬಿಡಿ ಭಾಗಗಳಿವೆ. ಕೆಲವು ಕುಟುಂಬಗಳಲ್ಲಿ ಕೀಟದಿಂದ ಪರಾಗಸ್ಪರ್ಶ ನಡೆಯುತ್ತದೆ.

**ವರ್ಗ 21 : (ರ್‍ಯಾನೇಲೀಸ್ 19 ಕುಟುಂಬಗಳು) :** ಇತ್ತೀಚಿಗೆ ಈ ವರ್ಗಕ್ಕೆ ಇತರ 6 ಕುಟುಂಬಗಳನ್ನು ಸೇರಿಸಿಕೊಳ್ಳಲಾಗಿದೆ. ಈ ವರ್ಗ ಆರ್ಕಿಕ್ಲ್ಯಾಮಿಡೀ ಉಪತರಗತಿಯಲ್ಲಿ ಬಹು ವಿಶಾಲವಾದ ಮತ್ತು ಮುಖ್ಯವಾದ ವರ್ಗವೆಂದು ಪರಿಗಣಿಸಲಾಗಿದೆ. ಇದರಲ್ಲಿ ಸಾಮಾನ್ಯವಾದ ರ್‍ಯಾನನ್‌ಕ್ಯುಲೇಸೀ, ನಿಂಫಿಯೇಸೀ, ಅನೋನೇಸೀ, ಮ್ಯಾಗ್ನೋಲಿಯೇಸೀ (ತಾವರೆ, ಸೀತಾಫಲ, ಸಂಪಿಗೆ) ಮುಂತಾದ ಕುಲಗಳು ಸೇರಿವೆ. ಪುಷ್ಪಗಳು, ಪುಷ್ಪಪತ್ರ ಮತ್ತು ದಳಸಮೂಹಗಳು ಸ್ಪಷ್ಟವಾದ ವ್ಯತ್ಯಾಸವನ್ನು ತೋರಿಸುವುದಿಲ್ಲ. ಪುಷ್ಪಾಂಗಗಳು ಅಧಿಕ ಸಂಖ್ಯೆಯಲ್ಲಿದ್ದು ಕೀಳ್ತರದ ಕುಟುಂಬಗಳಲ್ಲಿ ಸುರುಳಿ ಕ್ರಮದಲ್ಲಿಯೂ ಮೇಲ್ತರದ ಕುಟುಂಬಗಳಲ್ಲಿ ವೃತ್ತ ಕ್ರಮದಲ್ಲಿಯೂ ಜೋಡಿಸಲ್ಪಟ್ಟಿವೆ. ಅಂಡಕೋಶ ಅಧಿಕ ಶಲಾಕಾಗ್ರಗಳನ್ನೂ ವಿಭಕ್ತ ಆಂಡಕೋಶವನ್ನೂ ಹೊಂದಿದೆ. ಅಂಡಾಶಯ ಉಚ್ಚಸ್ಥಿತಿಯಲ್ಲಿದೆ. ಕೆಲವು ವರ್ಗೀಕರಣಶಾಸ್ತ್ರಜ್ಞರು ಈ ರ್‍ಯಾನೇಲೀಸ್ ವರ್ಗವನ್ನು ಆರ್ಕಿಕ್ಲ್ಯಾಮಿಡೀಯಲ್ಲಿ ಆದಿರೂಪದ ಜೀವಂತ ವರ್ಗ ಎಂದೂ ಈ ವರ್ಗದಿಂದ ಏಕದಳ ಮತ್ತು ದ್ವಿದಳ ಸಸ್ಯಪಂಗಡಗಳು ಉದ್ಭವಿಸಿವೆಯೆಂದೂ ಹೇಳುತ್ತಾರೆ.

**ವರ್ಗಗಳು22 ರಿಂದ 23 :** (ರ್ಹಿಯಡೇಲೀಸ್ ಮತ್ತು ಸ್ಯಾರಾಸಿನಿಯೇಲೀಸ್ 10 ಕುಟುಂಬಗಳು). ಈ ವರ್ಗಗಳ ಕೆಲವು ಕುಟುಂಬಗಳು ರ್‍ಯಾನೇಲೀಸ್ ವರ್ಗದ ವಿಶೇಷ ಶಾಖೆಗಳಾಗಿ ಉದ್ಭವಿಸಿದಂತೆ ಕಾಣುತ್ತವೆ. ಈ ವರ್ಗಗಳಲ್ಲಿ ಕ್ರೂಸಿಫೆರಿ (ಮೂಲಂಗಿ) ಸ್ಯಾರಾಸಿನಿಯೇಸೀ ಮುಂತಾದ ಕುಟುಂಬಗಳು ಸೇರಿವೆ. ಪುಷ್ಪಗಳು ಆರೀಯ ಸಮಾಂಗತೆಯುಳ್ಳ (ಆಕ್ಟಿನೋಮಾರ್ಫಿಕ್) ಪುಷ್ಪಭಾಗಗಳು ವೃತ್ತ ಕ್ರಮದಲ್ಲಿಯೂ ಇವೆ. ಸಂಯುಕ್ತಾಂಡಕೋಶ ಮತ್ತು ಉಚ್ಚಸ್ಥಿತಿಯ ಅಂಡಾಶಯ ಈ ಕುಲಗಳ ಮುಖ್ಯ ಗುಣಗಳು.

**ವರ್ಗ 24:** (ರೊಸೇಲೀಸ್ 17 ಕುಟುಂಬಗಳು) . ಈ ವರ್ಗ ಆರ್ಕಿಕ್ಲ್ಯಾಮಿಡೀಯ ಒಂದು ವಿಶಾಲ ಪಂಗಡ. ಇದರಲ್ಲಿ ಹಿರಿದಾದ 12,000 ಪ್ರಭೇದಗಳಿರುವ ಲೆಗ್ಯುಮಿನೋಸೀ (ಹುರುಳಿ ಇತ್ಯಾದಿ ಜಾತಿಗಳ) ಕುಟುಂಬವೂ ಪ್ರಮುಖವಾದ (ಗುಲಾಬಿ) ಕುಟುಂಬವೂ ಸೇರಿವೆ. ಈ ಎರಡು ಕುಟುಂಬಗಳೂ ರ್‍ಯಾನೇಲೀಸ್ ರೊಸೇಸಿವರ್ಗದಿಂದ ಜನಿಸಿದ ಶಾಖೆಗಳಾಗಿ ಕಾಣುತ್ತವೆ. ಪುಷ್ಪಾಂಗಗಳು ವೃತ್ತ ಕ್ರಮದಲ್ಲಿಯೂ ಪಂಚಾಪವರ್ತ್ಯವಾಗಿಯೂ ಇವೆ. ಅಂಡಾಶಯ ಉಚ್ಚ, ಮಧ್ಯ ಅಥವಾ ಅಧೋಸ್ಥಿತಿಯಲ್ಲಿ ಕಂಡುಬರುತ್ತದೆ. ಲೆಗ್ಯುಮಿನೋಸೀ ಕುಟುಂಬದಲ್ಲಿ ಪುಷ್ಪಗಳು ದ್ವಿಪಾರ್ಶ್ವ ಸಮಾಂಗತೆ ಪಡೆದು ಕೀಟಪರಾಗ ಸ್ಪರ್ಶಕ್ಕಿರುವ ಹೊಂದಾಣಿಕೆಯನ್ನು ತೋರಿಸುತ್ತವೆ.

**ವರ್ಗಗಳು 25 ರಿಂದ 32 :** (ಪ್ಯಾಂಡೇಲೀಸ್, ಜಿರೇನಿಯೇಲೀಸ್, ಸಪಿಂಡೇಲೀಸ್ ರ್‍ಯಾಮ್‌ನೇಲೀಸ್, ಮಾಲ್‌ವೇಲೀಸ್ ಪೆರೈಟೇಲೀಸ್, ಒಪನ್‌ಷಿಯೇಲೀಸ್, ಮತ್ತು ಮಿರ್ಟಿಸೂರೀ 89 ಕುಟುಂಬಗಳು). ಈ ವರ್ಗಗಳು ಹಿಂದಿನ ಕೆಲವು ವರ್ಗಗಳಿಂದ ಶಾಖೆಗಳಾಗಿ ಬೇರ್ಪಟ್ಟು ಪ್ರತಿಯೊಂದೂ ತನ್ನದೇ ಆದ ವಿಶೇಷ ಗುಣಗಳನ್ನು ಹೊಂದಿದೆ. ಎಲಚಿ, ದಾಸವಾಳ, ಪಾಪಾಸುಕಳ್ಳಿ, ಸೀಬೆ ಮುಂತಾದ ಜಾತಿಗಳು ಇದರಲ್ಲಿ ಸೇರಿವೆ. ಪುಷ್ಪಗಳು ಖಚಿತ ವೃತ್ತ ಕ್ರಮವನ್ನು ತೋರಿಸುತ್ತವೆ. ಮುಂದುವರಿದ ವರ್ಗಗಳಲ್ಲಿ ಅಂಡಾಶಯ ಅಧೋಸ್ಥಿತಿಯಲ್ಲಿರುತ್ತದೆ.

**ವರ್ಗ 33:** (ಅಂಬೆಲಿಫ್ಲೋರೀ 3 ಕುಟುಂಬಗಳು). ಆರ್ಕಿಕ್ಲ್ಯಾಮಿಡೀಯಲ್ಲಿ ಈ ವರ್ಗ ಅತ್ಯಂತ ಮುಂದುವರಿದ ವರ್ಗ. ಇದರಲ್ಲಿ ಅಂಬೆಲಿಫ್ಲೋರೀ (ಕೊತ್ತಂಬರಿ) ಕುಟುಂಬ ಪ್ರಮುಖ. ಛತ್ರಮಂಜರಿ, ಪುಷ್ಪಾಂಗಗಳ ಸಂಖ್ಯೆ ಕನಿಷ್ಠವಾಗಿರುವಿಕೆ, ಮತ್ತು ಅವುಗಳಲ್ಲಿ ಗಿಣ್ಣಿರುವಿಕೆ, ಅಧೋಸ್ಥಿತಿಯ ಅಂಡಾಶಯ , ಅಂಡಕೋಶ ಸಂಖ್ಯೆ 2 ಮತ್ತು ಪ್ರತಿ ಅಂಡಕೋಶದಲ್ಲಿಯೂ ಒಂದೇ ಅಂಡಕವಿರುವಿಕೆ; ಛತ್ರಮಂಜರಿಯ ಸುತ್ತಲೂ ಇನ್‌ವಲ್ಯೂಕರ್ ಎಂಬ ಕ್ಷೀಣಪತ್ರಗಳಿವೆ; ಹೂ ಗೊಂಚಲಿನ ಹೊರಾವರಣದ ಹೂಗಳು ಆಕರ್ಷಕ, ಮಧ್ಯದ ಹೂಗಳು ಹೆಚ್ಚು ಫಲಕಾರಿ–ಇವು ಈ ವರ್ಗದ ಮುಖ್ಯ ಗುಣಗಳು.

(ಬಿ.ಎನ್.ಎನ್.ಆರ್.)

**ಆರ್ಕಿಡ್ಡುಗಳು :** ಆರ್ಕಿಡೇಸೀ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ಪರ್ಣ ಸಸ್ಯಗಳು. ಇವು ಕೆಲವು ಅಂಗುಲಗಳಿಂದ ಹಲವು ಅಡಿಗಳ ಎತ್ತರ ಬೆಳೆಯುತ್ತವೆ. ಇವು ಏಕದಳ ಸಸ್ಯಗಳು. ಆರ್ಕಿಡೇಸೀ ಕುಟುಂಬದಲ್ಲಿರುವಷ್ಟು ಹೂ ಬಿಡುವ ಸಸ್ಯಗಳು ಇಡೀ ಸಸ್ಯವರ್ಗದಲ್ಲೇ ಇಲ್ಲ. ಈ ಕುಟುಂಬದಲ್ಲಿ 788ಕ್ಕೂ ಹೆಚ್ಚು ಗುರುತಿಸಲಾದ ಜಾತಿಗಳೂ ಮತ್ತು 18500 ಪ್ರಭೇದಗಳೂ ಇವೆ. ಜೊತೆಗೆ ಸಾವಿರಾರು ಅಡ್ಡತಳಿಗಳಿವೆ. ಆರ್ಕಿಡ್ಡುಗಳು ಬೆಳೆಯುವ ರೀತಿಯಲ್ಲಿ ಬಹಳ ವೈವಿಧ್ಯ ಇದೆ. ನೆಲದ ಮೇಲೆ ಬೆಳೆಯುವ ಭೂಸಸ್ಯಗಳು, ಕೊಳೆತು ಬಿದ್ದಿರುವ ಕೆಲವು ಸಸ್ಯಕಾಂಡಗಳ ಮೇಲೆ ಬೆಳೆಯುವ ಪೂತಿಜನ್ಯ ಸಸ್ಯಗಳು, ಜೀವಂತವಾಗಿರುವ ಸಸ್ಯಗಳ ಮೇಲೆ ಬೆಳೆಯುವ ಅಪ್ಪು ಸಸ್ಯಗಳು, ಬಂಡೆಗಳ ಮೇಲೆ ಬೆಳೆಯುವ ಶಿಲಾ ಸಸ್ಯಗಳು ಆರ್ಕಿಡ್ಡುಗಳ ವಿವಿಧ ಪ್ರಕಾರಗಳಿಗೆ ನಿದರ್ಶನಗಳು.

ಆರ್ಕಿಡ್ಡುಗಳು ಎಲ್ಲ ವಲಯಗಳಲ್ಲಿ ಬೆಳೆದರೂ ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ. ಈ ವಲಯಗಳಲ್ಲಿ ಪ್ರಪಂಚದಲ್ಲಿ ಬೆಳೆಯುವವುಗಳಲ್ಲಿ ಅಪ್ಪು ಸಸ್ಯವಾಗಿ ಬೆಳೆಯುವ ಆರ್ಕಿಡ್ಡುಗಳೇ ಹೆಚ್ಚು. ಕೆಲವು ಆರ್ಕಿಡ್ಡುಗಳು ತಮ್ಮ ತವರೂರನ್ನು ಬಿಟ್ಟು ಬೇರೆ ಕಡೆ ಬೆಳೆಯುವುದಿಲ್ಲ. ಇವುಗಳ ಕಾಂಡ ಕವಲೊಡೆಯುವುದನ್ನು ಅನುಸರಿಸಿ ಆರ್ಕಿಡ್ಡುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿದೆ: ಏಕಕಾಂಡಗಳ ಗುಂಪು, ನಕಲಿ ಏಕಕಾಂಡಗಳ ಗುಂಪು ಮತ್ತು ಬಹು ಕವಲೊಡೆಯುವ ಕಾಂಡಗಳ ಗುಂಪು. ಆರ್ಕಿಡ್ಡುಗಳ ಎಲೆಗಳ ಆಕಾರ, ರಚನೆ, ಬಣ್ಣ ಇತ್ಯಾದಿಗಳಲ್ಲಿ ಬಹು ಭಿನ್ನತೆ ಇದೆ. ಇವು ಹೂಗೊಂಚಲುಗಳು ಮೂಲವಾಗಿ ಅಂತ್ಯಾರಂಭಿ ಮಾದರಿಯವಾಗಿವೆ. ಈ ವಿಧದಲ್ಲಿ ರೇಸೀಮ್, ಸ್ಪೈಕ್ ಮುಂತಾದ ಕೆಲವು ರೀತಿಗಳೂ ಇವೆ. ಆರ್ಕಿಡ್ಡುಗಳ ಹೂಗಳು ಏಕಲಿಂಗಿಗಳು ಇಲ್ಲಿವೆ ದ್ವಿಲಿಂಗಿಗಳು. ಇವುಗಳ ಹೂರಚನೆ ವಿಚಿತ್ರ. ಪುಷ್ಪಪತ್ರ ಮತ್ತು ದಳಗಳು ಕೂಡಿ ಪೆರಿಯಂತ್ ಆಗಿದ್ದು ಎರಡು ಸಾಲುಗಳಲ್ಲಿ ಇರುತ್ತವೆ. ಕೂಡಿಕೆಯ ಹೆಸರು ಲಿಪ್. ಆರ್ಕಿಡ್ ಹೂಗಳ ಗಂಡುಭಾಗ ಮತ್ತು ಹೆಣ್ಣುಭಾಗ ಕೂಡಿಕೊಂಡು ಹೂಕಂಬ ಆಗಿರುತ್ತದೆ. ಹಣ್ಣು ಕ್ಯಾಪ್‌ಸ್ಯೂಲುಗಳು.

**ಆರ್ಕಿಡ್ಡುಗಳ ಮೂರು ಬಗೆಗಳು : 1 ಇಸ್ಸಿ ಸ್ಪೀಸಿಯೋಸ(ಡಾಫೊಲ್) 2 ಕ್ರಿಪ್ಟೊ ಪೊರಾಂಥಸ್ ಡಯನಸ್; 3 ಅಯನೊಪ್ಸಿಸ್ ಪ್ಯಾವಿಕುಲೇಟ**

**ಆರ್ಕಿಡ್ಡುಗಳ ವರ್ಗೀಕರಣ :** ಇದನ್ನು ಶಾಸ್ತ್ರೋಕ್ತವಾಗಿ ಆರಂಭಿಸಿದವರಲ್ಲಿ ಸಸ್ಯವಿಜ್ಞಾನಿ ಲಿನೀಯೆಸ್ ಮೊದಲಿಗ. ಮುಂದೆ ಓಕ್ಸ್ ಎಮ್ಸ್, ಲಿಬರ್ಟಿ ಹೈಡ್ಬೈಲೆ. ಬೆಂತಮ್ ಮತ್ತು ಹೂಕರ್, ಫಿಟ್ಜರ್ ಮತ್ತು ಸ್ಕ್ಲಟ್ಜರ್ ಮುಂತಾದವರು ಹೆಚ್ಚಿನ ಅಧ್ಯಯನ ನಡೆಸಿದರು. ಇಂದು ಬಳಕೆಯಲ್ಲಿರುವ ವರ್ಗೀಕರಣ ಫಿಟ್ಜರ್ ಮತ್ತು ಸ್ಕ್ಲಟ್ಜರ್ ಇವರು ಮಾಡಿರುವ ವಿಧಾನ. ಇದರ ಪ್ರಕಾರ ಆರ್ಕಿಡ್ ಕುಟುಂಬದ ವರ್ಗೀಕರಣ ಆರು ಅಂಶಗಳ ಸಹಾಯದಿಂದ ಮಾಡಲಾಗಿದೆ:

1 ಬೆಳೆವಣಿಗೆಯ ವಿಧ.  2 ಹೂಗೊಂಚಲಿನ ಮತ್ತು ಹೂವಿನ ಆಕಾರ. 3 ಎಲೆ ಇರುವಿಕೆ ಅಥವಾ ಇಲ್ಲದಿರುವಿಕೆ. 4 ನಕಲಿ ಲಶುನ ಇರುವಿಕೆ ಅಥವಾ ಇಲ್ಲದಿರುವಿಕೆ. 5 ಪರಾಗ ಗುಂಪು ಆಗುವ ವಿಧಾನ ಮತ್ತು ಅವುಗಳ ಸಂಖ್ಯೆ ಮತ್ತು ಅಂಟಿಕೊಂಡಿರುವ ವಿಧಾನ. 6 ಗರ್ಭಧಾರಣೆ ವಿಧಾನ.

ಆರ್ಕಿಡೇಸೀ ಕುಟುಂಬವನ್ನು ಕೆಲವು ಕುಲ (ಟ್ರೈಬ್) ಮತ್ತು ಉಪಕುಲಗಳಾಗಿ (ಸಬ್ ಟ್ರೈಬ್) ವರ್ಗೀಕರಿಸಿದ್ದಾರೆ. ಪ್ರತಿ ಉಪಪ್ರಭೇದದಲ್ಲಿ ಕೆಲವು ಜಾತಿ (ಜೀನಸ್) ಮತ್ತು ಅನೇಕ ಪ್ರಭೇದಗಳು (ಸ್ಪಿಷೀಸ್) ಸೇರಿವೆ.

**ಆರ್ಕಿಡ್ಡುಗಳ ವೃದ್ಧಿ :** ಆರ್ಕಿಡ್ಡುಗಳನ್ನು ಬೀಜ, ಬೇರು ತುಂಡು, ಅಥವಾ ಸಕಲಿ ಲಶುನಗಳಿಂದ ವೃದ್ಧಿ ಮಾಡಬಹುದು. ವೃದ್ಧಿ ಸಾಮಾನ್ಯವಾಗಿ ಜಾತಿಗಳನ್ನು ಅನುಸರಿಸಿದೆ. ವೃದ್ಧಿಸಲು ಸಾಧಾರಣವಾಗಿ ಸುಪ್ತಾವಸ್ಥೆ ಯೋಗ್ಯವಾದ ಕಾಲ. ಮಧ್ಯ ಸುಪ್ತಾವಸ್ಥೆ ಕಾಲದಲ್ಲಿ ಇವನ್ನು ಇತರ ಸ್ಥಳಗಳಿಗೆ ಸುಲಭವಾಗಿ ಸಾಗಿಸಿ ವೃದ್ಧಿಸಬಹುದು. ಬೇರು ಅಥವಾ ಕಾಂಡ ಮತ್ತು ನಕಲಿ ಲಶುನಗಳನ್ನು ನೆಡುವುದಕ್ಕೆ ಮುಂಚೆ ಒಣ ಮತ್ತು ರೋಗಪೀಡಿತ ಭಾಗಗಳನ್ನು ತೆಗೆದುಹಾಕಬೇಕು. ತುಂಡುಗಳನ್ನು ತೇವ ಮಾಡಿದ ಸ್ಪಂಜಿನಿಂದ ಒರಸಿ ಕೆಲವು ದಿವಸಗಳ ಕಾಲ ತೇವಾಂಶ ಇರುವ ಸ್ಥಳಗಳಲ್ಲಿ ತೂಗು ಹಾಕಬೇಕು. ತುಂಡುಗಳನ್ನು ನೆಡುವ ಮೊದಲು ಶುದ್ಧೀಕರಣ ಮಾಡಿ ಅನಂತರ ಆರ್ಕಿಡ್ಡುಗಳನ್ನು ಬೆಳೆಸಬೇಕು.

**ಆರ್ಕಿಡ್ಡುಗಳ ಬೇಸಾಯ :** ಆರ್ಕಿಡ್ ಹೂಗಳು ಎಷ್ಟು ಸುಂದರವೋ ಆರ್ಕಿಡ್ಡುಗಳ ಬೇಸಾಯ ಅಷ್ಟೇ ಕಷ್ಟ. ಇತರ ಎಲ್ಲ ಸಸ್ಯಗಳ ಬೇಸಾಯದಲ್ಲಿ ಪರಿಣಿತನಾದ ತೋಟಗಾರ ಆರ್ಕಿಡ್ಡುಗಳ ಬೇಸಾಯದಲ್ಲಿ ಕಷ್ಟ ಅನುಭವಿಸುವಂತಾಗುತ್ತದೆ. ಆರ್ಕಿಡ್ಡುಗಳನ್ನು ಅವು ಬೆಳೆಯುವ ಗುಣಗಳ ಆಧಾರದ ಮೇಲೆ ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು : 1 ಅಪ್ಪು ಸಸ್ಯಗಳು. 2 ಶಿಲಾ ಸಸ್ಯಗಳು 3 ಪೂತಿಜನ್ಯ ಸಸ್ಯಗಳು. 4 ಭೂ ಸಸ್ಯಗಳು.

ಸಾಧ್ಯವಾದಷ್ಟು ಮಟ್ಟಿಗೆ ಆರ್ಕಿಡ್ಡಿನ ಮೂಲಸ್ಥಾನದ ಹವಾ ಪರಿಸ್ಥಿತಿ ಕಲ್ಪಿಸುವ ಪ್ರಯತ್ನ ಮಾಡಬೇಕು. ಪ್ರತಿಜನ್ಯ ಆರ್ಕಿಡ್ಡನ್ನು ಒಣ ಮರದ ತುಂಡಿನ ಮೇಲೆ ಬೆಳೆಸಿ ಕಂಬಿಯಿಂದ ತೂಗುಹಾಕಬೇಕು. ಭೂ ಆರ್ಕಿಡ್ಡುಗಳನ್ನು ಕುಂಡಗಳಲ್ಲಿ ಬೆಳೆಸಬೇಕು. ಇವನ್ನು ಬೆಳೆಸುವ ಕುಂಡಗಳಿಗೆ 10 ಸೆಮೀ. ಅಗಲದ ಅನೇಕ ರಂಧ್ರಗಳು ಇರಬೇಕು. ತೆಂಗಿನ ನಾರು ಅಥವಾ ಪಾಚಿಯನ್ನು ಜೌಗು ರಂಧ್ರದ ಮೇಲೆ ಹಾಕಬೇಕು. 4 ಭಾಗ ಒಣ ಪಾಚಿ, 2 ಭಾಗ ಸಣ್ಣ ಇಟ್ಟಿಗೆ ಚೂರು, 1 ಭಾಗ ಇದ್ದಲು ಪುಡಿ, 1 ಭಾಗ ಗೋಡು ಮಣ್ಣು, 1 ಭಾಗ ಎಲೆ ಗೊಬ್ಬರದ ಮಿಶ್ರಣ ಮಾಡಿ ಕುಂಡಗಳಿಗೆ ತುಂಬಲು ಉಪಯೋಗಿಸಬೇಕು. ಸ್ವಚ್ಛತೆ ಇಲ್ಲದೆ ಆರ್ಕಿಡ್ಡುಗಳ ಬೇಸಾಯ ಸಾಧ್ಯವಿಲ್ಲ. ರೋಗಪೀಡಿತ ವಸ್ತುಗಳನ್ನು ಇವುಗಳ ಬೇಸಾಯಕ್ಕೆ ಉಪಯೋಗಿಸಿದಾಗ ರೋಗಕ್ಕೆ ಬಲಿಯಾಗಿ ನಾಶವಾಗುತ್ತವೆ. ಆದ್ದರಿಂದ ಮರದ ತುಂಡು ಮತ್ತು ಗೊಬ್ಬರ ಇತ್ಯಾದಿಗಳನ್ನು ಶುದ್ಧೀಕರಣ ಮಾಡಿ ಅನಂತರ ಬೇಸಾಯಕ್ಕೆ ಉಪಯೋಗಿಸಬೇಕು. ಸಾಮಾನ್ಯವಾಗಿ ಆರ್ಕಿಡ್ಡುಗಳು ತೇವಾಂಶ ಬಯಸುತ್ತವೆ. ಜಾಗರೂಕತೆಯಿಂದ ನೀರು ಕುಡಿಸಿದರೆ ಅವು ಸಮೃದ್ಧವಾಗಿ ಬೆಳೆಯುತ್ತವೆ.

ಆರ್ಕಿಡ್ಡುಗಳ ಬೆಳವಣಿಗೆಯಲ್ಲಿ ಬಹಳ ವೈವಿಧ್ಯವಿದೆ. ಮಳೆಗಾಲದಲ್ಲಿ ಬೆಳವಣಿಗೆ ಇವುಗಳ ಮೊದಲನೆ ಹಂತ. ಈ ಹಂತದಲ್ಲಿ ಇವು ಆಹಾರ ಮತ್ತು ನೀರನ್ನು ತಮ್ಮ ನಕಲಿ ಲಶುನಗಳಲ್ಲಿ ಶೇಖರಿಸಿಟ್ಟುಕೊಳ್ಳುತ್ತವೆ. ಎರಡನೆಯ ಹಂತದಲ್ಲಿ ನವೆಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ಸುಪ್ತಾವಸ್ಥೆಯನ್ನು ಮುಟ್ಟುತ್ತವೆ. ಕೊನೆಯ ಹಂತದಲ್ಲಿ ಸುಪ್ತಾವಸ್ಥೆಯಿಂದ ಚೇತರಿಸಿಕೊಂಡು ಹೂ ಬಿಡಲು ಪ್ರಾರಂಭಿಸುತ್ತವೆ. ಸುಪ್ತಾವಸ್ಥೆಯ ಕಾಲವನ್ನು ಸರಿಯಾಗಿ ತಿಳಿದ ಬೇಸಾಯಗಾರ ಮಾತ್ರ ಆರ್ಕಿಡ್ಡುಗಳ ಬೇಸಾಯವನ್ನು ಸುಗಮವಾಗಿ ಮಾಡಬಲ್ಲ. ಸುಪ್ತಾವಸ್ಥೆಯಲ್ಲಿ ಆರ್ಕಿಡ್ಡುಗಳಿಗೆ ನೀರು ಕೊಡುವ ಅಗತ್ಯವಿಲ್ಲ. ಆದರೆ ಹೆಚ್ಚು ದಿವಸಗಳ ಅಂತರದಲ್ಲಿ ಸ್ವಲ್ಪ ನೀರು ಕೊಟ್ಟು ಅವುಗಳನ್ನು ಜೀವಿತವಾಗಿಟ್ಟಿರುವುದು ಬಹು ಮುಖ್ಯ ಅಂಶ. ಸುಪ್ತಾವಸ್ಥೆ ಮುಗಿದ ತಕ್ಷಣ ಕುಂಡ ಬದಲಾವಣೆ ಮಾಡಬೇಕು. ಉತ್ತಮ ಗೊಬ್ಬರ ಮಿಶ್ರಣ ಕೊಟ್ಟು ಧಾರಾಳವಾಗಿ ನೀರು ಕೊಡುವುದರಿಂದ ಆರ್ಕಿಡ್ಡುಗಳು ಮತ್ತೆ ತಮ್ಮ ಬೆಳವಣಿಗೆಯನ್ನು ಪ್ರಾರಂಭಿಸುತ್ತವೆ. ಸಾಮಾನ್ಯವಾಗಿ ಕೆಲವನ್ನು ಬಿಟ್ಟರೆ ಉಳಿದ ಆರ್ಕಿಡ್ಡುಗಳು ಪಾರ್ಶ್ವ ನೆರಳಿನಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತವೆ. ಇವುಗಳ ಬೇಸಾಯಕ್ಕೆ ಸರಾಗವಾದ ಗಾಳಿ, ಬೆಳಕು ಅಗತ್ಯ. ಆಗತಾನೆ ವೃದ್ಧಿ ಮಾಡಿದ ಮತ್ತು ಸಣ್ಣ ಎಲೆಯುಳ್ಳ ಆರ್ಕಿಡ್ಡುಗಳು ಬಿಸಿಲನ್ನು ಸಹಿಸುವುದಿಲ್ಲ. ಪ್ರಾಪ್ತ ವಯಸ್ಸಿಗೆ ಬಂದ ಮತ್ತು ಅಗಲ ಎಲೆಯ ಆರ್ಕಿಡ್ಡುಗಳು ಸ್ವಲ್ಪ ಮಟ್ಟಿಗೆ ಬಿಸಿಲಿನ ತಾಪವನ್ನು ಸಹಿಸಬಲ್ಲುವು. ಆರ್ಕಿಡ್ಡುಗಳು ಕೃತಕ ಗೊಬ್ಬರಗಳಿಗೆ ವಿರುದ್ಧ ಪ್ರತಿಕ್ರಿಯೆ ವ್ಯಕ್ತ ಪಡಿಸುತ್ತವೆ. ವರ್ಷಕ್ಕೊಮ್ಮೆ ಅಗತ್ಯವಾಗಿ ಕುಂಡ ಬದಲಾಯಿಸಬೇಕು. ಆರ್ಕಿಡ್ಡುಗಳಿಗೆ ನುಸಿ, ಜೇಡರಹುಳು, ಗೊಂಡೆಹುಳು, ಬಸವನಹುಳು, ಬಿಳಿತಿಗಣೆ, ಜಿರಲೆ, ಶಲ್ಕ ಕೀಟಗಳು ಮುಂತಾದ ಕೀಟಗಳು ಬೀಳುತ್ತವೆ. ಈ ಕೀಟಗಳ ಹಾವಳಿಯನ್ನು ಸ್ವಚ್ಛವಾದ ಮುನ್ನೆಚ್ಚರಿಕೆ ಬೇಸಾಯದಿಂದ ತಪ್ಪಿಸಬಹುದು. ಗಿಡಗಳ ಮೇಲೆ ಆಗಾಗ ನೀರು ಸಿಂಪಡಿಸುವುದರಿಂದ ಆಕಸ್ಮಿಕವಾಗಿ ಬೀಳುವ ಕೀಟಗಳನ್ನು ತಪ್ಪಿಸಬಹುದು. ಆರ್ಕಿಡ್ಡುಗಳನ್ನು ಕಾಡುವ ರೋಗ ಇಲ್ಲ. ಕೆಲವು ಸಾರಿ ಒಣಗುವಿಕೆ ಕಾಣಿಸಿಕೊಳ್ಳುತ್ತದೆ. ಇದನ್ನು ಬೋರ್ಡೋ ದ್ರಾವಣದಿಂದ ತಡೆಗಟ್ಟಬಹುದು. (ಎಂ.ಎಚ್.)

**ಆರ್ಕಿಮಿಡೀಸ್ :** ಪ್ರ.ಶ.ಪೂ.287–212. ಪ್ರಪಂಚದ ಮೂವರು ಸಾರ್ವಕಾಲಿಕ ಅತಿಶ್ರೇಷ್ಠ ಗಣಿತ ವಿದ್ವಾಂಸರ ಯಾದಿಯನ್ನು ಯಾವ ತರಹದಲ್ಲಿ ಸಿದ್ಧಪಡಿಸಿದರೂ ಅದರಲ್ಲಿ ಒಂದು ಅನಿವಾರ್ಯ ಹೆಸರು ಆರ್ಕಿಮಿಡೀಸ್‌ನದು ಎಂದು ಈ.ಟಿ.ಬೆಲ್ ಹೇಳಿದ್ದಾನೆ. ಅವನ ಮಾತಿನಲ್ಲಿ "ಶ್ರೇಷ್ಠ ಗಣಿತವಿದ್ವಾಂಸರ ಶ್ರೇಣಿಯಲ್ಲಿ ಆರ್ಕಿಮಿಡೀಸ್,

ನ್ಯೂಟನ್ ಮತ್ತು ಗಾಸ್ ಇವರ ಸ್ಥಾನ ವಿಶಿಷ್ಟವಾದುದ್ದು. ಶುದ್ಧ ಮತ್ತು ಆನ್ವಯಿಕ ಗಣಿತಗಳೆರಡರಲ್ಲೂ ಈ ಮೂವರು ಪ್ರಚಂಡ ತರಂಗಗಳನ್ನೇ ಎಬ್ಬಿಸಿದರು. ಆರ್ಕಿಮಿಡೀಸ್ ಆನ್ವಯಿಕ ಗಣಿತಕ್ಕಿಂತ ಶುದ್ಧ ಗಣಿತಕ್ಕೆ ಅಧಿಕ ಮೌಲ್ಯವಿತ್ತ. ಪ್ರಾಚೀನಕಾಲದ ಪರಮ ಮೇಧಾವಿ ಆರ್ಕಿಮಿಡೀಸ್ ರೋಮ ರೋಮಕ್ಕೆ ಅತ್ಯಾಧುನಿಕ. ಅವನೂ ನ್ಯೂಟನ್ನನೂ ಆನ್ವಯಿಕ (ಕಾಲಾಂತರ ಸು.2000 ವರ್ಷ) ಪರಸ್ಪರರನ್ನು ಪರಿಪೂರ್ಣವಾಗಿ ಅರ್ಥವಿಸಬಹುದಿತ್ತು. ಸಾಕಷ್ಟು ದೀರ್ಘಕಾಲ ಆರ್ಕಿಮಿಡೀಸ್ ಬದುಕಿದ್ದು ಗಣಿತ ಮತ್ತು

ಭೌತಶಾಸ್ತ್ರಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದಿದ್ದರೆ ಅವನು ಐನ್‌ಸ್ಟೈನ್, ಬೋರ್, ಹೈಸನ್‌ಬರ್ಗ್ ಮತ್ತು ಡಿರಾಕ್‌ರನ್ನು ಅವರೇ ತಮ್ಮನ್ನು ಅರ್ಥಮಾಡಿಕೊಂಡುದಕ್ಕಿಂತಲೂ ಚೆನ್ನಾಗಿ ತಿಳಿದುಕೊಳ್ಳುತ್ತಿದ್ದ" ಪ್ರಾಚೀನ ದೇಹದಲ್ಲಿ ಆಧುನಿಕ ಮನಸ್ಸು ಎಂದು ಆರ್ಕಿಮಿಡೀಸನನ್ನು ಈತ ವರ್ಣಿಸಿದ್ದಾನೆ.

ನಿಲ್ಲಲು ಇನ್ನೊಂದು ನೆಲೆ ತೋರಿಸಿ, ಆಗ ಈ ಭೂಮಿಯನ್ನೇ ನಾನು ಕದಲಿಸಬಲ್ಲೆ ಎಂದು ದಿಟ್ಟತನದಿಂದ ಉದ್ಘೋಷಿಸಿದ ಪ್ರಚಂಡ ಗ್ರೀಕ್ ವಿಜ್ಞಾನಿ ಆರ್ಕಿಮಿಡೀಸ್. ಅವನ ಮೇಧಾಶಕ್ತಿ, ಯಂತ್ರ ಕೌಶಲ ಮತ್ತು ಭರವಸೆಗಳ ಹಿರಿಮೆ ಈ ಘೋಷ ಒಂದರಿಂದಲೇ ಊಹಿಸಬಹುದು. ಆರ್ಕಿಮಿಡೀಸ್‌ನ ತರುವಾಯ 22 ಶತಮಾನಗಳು ಉರುಳಿಹೋಗಿವೆ. ಆದರೆ ಇಂದಿಗೂ ಆತನ ಮೂಲತತ್ತ್ವ, ಪರಿಭ್ರಮಿ (ಸ್ಪೈರಲ್), ತಿರುಪು (ಆರ್ಕಿಮಿಡೀಸ್ ಸ್ಕ್ರೂ) ಇವುಗಳನ್ನು ಅರಿಯದ ವಿದ್ಯಾರ್ಥಿಯಿಲ್ಲ.



ಆರ್ಕಿಮಿಡೀಸ್ ಪ್ರ.ಶ.ಪೂ. 287ರಲ್ಲಿ ಸಿಸಿಲಿಯ ಸಿರಕ್ಯೂಸ್‌ನಲ್ಲಿ ಜನಿಸಿದ. ಅವನ ತಂದೆ ಫೈಡಿಯಾ ಗ್ರೀಸ್ ದೇಶದ ಒಬ್ಬ ಖಗೋಳ ಶಾಸ್ತ್ರಜ್ಞ. ಆರ್ಕಿಮಿಡೀಸನ ವಿದ್ಯಾಭ್ಯಾಸ ಆಗಿನ ಕಾಲದಲ್ಲಿ ಗಣಿತಶಾಸ್ತ್ರ ಕೇಂದ್ರವೆನಿಸಿದ್ದ ಅಲೆಗ್ಸಾಂಡ್ರಿಯದ ಶಾಲೆಯಲ್ಲಿ ನಡೆಯಿತು. ಯೂಕ್ಲಿಡ್ ಎಂಬ ಸುಪ್ರಸಿದ್ಧ ರೇಖಾಗಣಿತಜ್ಞನ ಶಿಷ್ಯನಾಗಿದ್ದ ಸೆನಾನ್ ಎಂಬ ಗಣಿತಶಾಸ್ತ್ರಜ್ಞ ಆರ್ಕಿಮಿಡೀಸ್‌ನ ಅಧ್ಯಾಪಕ. ಎರಟಾಸ್ತನೀಸ್ (ಪ್ರ.ಶ.ಪೂ. 274–194) ಎಂಬ ಮೇಧಾವಿ ಆರ್ಕಿಮಿಡೀಸ್‌ನ ಸ್ನೇಹಿತ. ಆರ್ಕಿಮಿಡೀಸ್ ತನ್ನ ಇಡೀ ಜೀವಿತಕಾಲವನ್ನು ಗಣಿತ ಮತ್ತು ವೈಜ್ಞಾನಿಕ ಶೋಧನೆಗೆ ವಿನಿಯೋಗಿಸಿದ. ಗಣಿತಶಾಸ್ತ್ರವನ್ನು ಯಂತ್ರನಿರ್ಮಾಣಕ್ಕೆ ಪ್ರಯೋಗಿಸುವುದರಲ್ಲಿ ಅವನು ಆ ಕಾಲದಲ್ಲಿ ಅದ್ವಿತೀಯನಾಗಿದ್ದ. ವಿಜ್ಞಾನದ ಪ್ರಗತಿಯನ್ನು ಅತ್ಯಂತ ಭರದಿಂದ ಸಾಧಿಸಿದ ನ್ಯೂಟನ್ (17ನೆಯ ಶತಮಾನ) ಮುಂತಾದ ವಿಜ್ಞಾನಿಗಳೆಲ್ಲರೂ ಅನೇಕ ಮುಖ್ಯ ವಿಷಯಗಳಲ್ಲಿ ಆರ್ಕಿಮಿಡೀಸ್‌ನಿಗೆ ಋಣಿಗಳಾಗಿದ್ದರು. ಗಣಿತಶಾಸ್ತ್ರದಲ್ಲಿ ಆರ್ಕಿಮಿಡೀಸ್ ಬರೆದ ಏಳು ಕೃತಿಗಳು ದೊರೆತಿವೆ. ಸಂಖ್ಯಾರೂಪಣೆ (ನೊಟೇಷನ್), ವರ್ತುಲಗಳ ಪ್ರಮಾಣ, ಪ್ಯಾರಾಬೊಲದ ಕ್ಷೇತ್ರಫಲ ನಿರ್ಣಯ, ಗೋಳ ಮತ್ತು ಸಿಲಿಂಡರ್, ಗೋಳಕಲ್ಪಗಳು, ಪರಿಭ್ರಮಿಗಳು, ಶಾಂಕೇಯಗಳು (ಕೊನಾಯ್ಡ್ಸ್). ಆರ್ಕಿಮಿಡೀಸ್ ಖಗೋಳಶಾಸ್ತ್ರದಲ್ಲೂ ಆಸಕ್ತನಾಗಿದ್ದಂತೆ ಕಾಣುತ್ತದೆ; ಆದರೆ ಅವನ ಖಗೋಳಶಾಸ್ತ್ರ ಲೇಖನವಾವುದೂ ದೊರೆತಿಲ್ಲ. ಸಂಖ್ಯೆಗಳ ಎಣಿಕೆಗೆ ಆರ್ಕಿಮಿಡೀಸ್ ಘಾತಗಳನ್ನು ಉಪಯೋಗಿಸಿ, ಒಂದು ವಿಧಾನವನ್ನು ಕಲ್ಪಿಸಿದ್ದ: $a^m.a^n=a^{m+n}$ ಎಂಬ ಘಾತಗಳ ಮೂಲನಿಯಮವನ್ನು ಅವನು ಅರಿತಿದ್ದ. $1^2+2^2+3^2+\ldots\ ..+n^2$ ಎಂಬ ಶ್ರೇಣಿಯ ಮೊತ್ತವನ್ನು ಕಂಡುಹಿಡಿದ. ವೃತ್ತದ ಕ್ಷೇತ್ರಫಲ ನಿರ್ಣಯದಲ್ಲಿ $\pi$ ಎಂಬ ಸಂಖ್ಯೆಯ ಬೆಲೆ $3\frac{1}{7} < \pi < 3\frac{10}{71}, 3.1408 < \pi < 3.1429$ ಎಂಬ ಅಸಮೀಕರಣಗಳನ್ನು ಪಾಲಿಸುತ್ತದೆಯೆಂದು ಕಂಡುಹಿಡಿದ. ಪ್ಯಾರಾಬೊಲದ ಖಂಡದ ಕ್ಷೇತ್ರಫಲ, ಪರಿಗತಿಸುವ ಸಮಾನಾಂತರ ಚತುರ್ಭುಜದ (ಸರ್ಕಮ್‌ಸ್ಕ್ರೈಬಿಂಗ್ ಪ್ಯಾರಲಲೋಗ್ರಾಂ) ಕ್ಷೇತ್ರಫಲದ ಮೂರನೆಯ ಎರಡರಷ್ಟಿದೆಯೆಂದು ತೋರಿಸಿದ. ಗೋಳ, ಸಿಲಿಂಡರ್, ಮತ್ತು ಶಂಕುಗಳ ಛೇದನಗಳಿಂದ ಮೂರನೆಯ ಘಾತದ ಸಮೀಕರಣಗಳನ್ನು ಬಿಡಿಸಿದ. ಪ್ಯಾರಾಬೊಲ ಮತ್ತು ದೀರ್ಘವೃತ್ತಗಳ ಅಕ್ಷ ಪರಿಭ್ರಮಣದಿಂದ ಉತ್ಪನ್ನವಾಗುವ ಪ್ಯಾರಾಬೊಲಕಲ್ಪ ಮತ್ತು ದೀರ್ಘವೃತ್ತ ಕಲ್ಪಗಳ ಗುಣಗಳನ್ನು ವಿಚಾರಮಾಡಿದ. ಕೆಲವು ಕೃತಿಗಳ ಗುರುತ್ವಕೇಂದ್ರಗಳನ್ನು ಕಂಡುಹಿಡಿದ. ತನ್ನ ವಿದ್ಯಾಗುರುವಾದ ಸೆನಾನ್ ಕಂಡುಹಿಡಿದಿದ್ದ $r=a\theta$ ಎಂಬ ಪರಿಭ್ರಮಿಯ ಗುಣಗಳನ್ನು ವಿಸ್ತಾರವಾಗಿ ಪರಿಶೀಲಿಸಿದ. ಅದು ಈಗ ಆರ್ಕಿಮಿಡೀಸ್‌ನ ಪರಿಭ್ರಮಿಯೆಂದೇ ಪ್ರಸಿದ್ಧವಾಗಿದೆ. ಅಲ್ಲದೆ, ಶಾಂಕೇಯಗಳು (ಕೊನಾಯ್ಡ್ಸ್) ಎಂಬ ರೇಖೆಗಳ ಅನೇಕ ಗುಣಗಳನ್ನು ಕಂಡುಹಿಡಿದ. ಜಲಸ್ಥಿತಿವಿಜ್ಞಾನದಲ್ಲಿ (ಹೈಡ್ರೊಸ್ಟಾಟಿಕ್ಸ್) ಸುಪ್ರಸಿದ್ಧವಾಗಿರುವ ಆರ್ಕಿಮಿಡೀಸನ ಮೂಲತತ್ತ್ವವನ್ನು ಕಂಡುಹಿಡಿಯಲು ಒಂದು

ವಿಶೇಷ ಸಂದರ್ಭ ಕಾರಣವಾಯಿತು. ಹೀರೋ II ಎಂಬ ದೊರೆ ಚಿನ್ನದ ಹೊಸ ಕಿರೀಟವೊಂದನ್ನು ಮಾಡಿಸಿದ. ಆದರೆ ಅದನ್ನು ತಯಾರಿಸಿದ ಅಕ್ಕಸಾಲಿಗ ಚಿನ್ನದ ಜೊತೆಗೆ ಬೆಳ್ಳಿಯನ್ನು ಮಿಶ್ರ ಮಾಡಿರಬಹುದೆಂದು ದೊರೆಗೆ ಸಂಶಯವುಂಟಾಯಿತು. ಕಿರೀಟ ಸುಂದರವಾಗಿದ್ದುದರಿಂದ ಅದನ್ನು ಕರಗಿಸುವುದಕ್ಕೆ ದೊರೆಗೆ ಇಷ್ಟವಿರಲಿಲ್ಲ. ಅದನ್ನು ಕರಗಿಸದೆಯೇ ಅದರ ಚಿನ್ನದ ಪರಿಶುದ್ಧತೆಯನ್ನು ಕಂಡುಹಿಡಿಯುವ ಸಮಸ್ಯೆಯನ್ನು ದೊರೆ ಆರ್ಕಿಮಿಡೀಸನಿಗೆ ಒಡ್ಡಿದ. ಆರ್ಕಿಮಿಡೀಸ್ ಆ ದೊರೆಯ ಒಬ್ಬ ಸಂಬಂಧಿಯೆಂದು ಪ್ಲೂಟಾರ್ಕ್ ಹೇಳಿದ್ದಾನೆ. ಒಂದು ದಿನ ಆರ್ಕಿಮಿಡೀಸ್ ಸ್ನಾನದ ಮನೆಯಲ್ಲಿ ನೀರಿನ ತೊಟ್ಟಿಯಲ್ಲಿಳಿದಾಗ ನೀರಿನ ಮಟ್ಟ ಏರಿದ್ದನ್ನು ಗಮನಿಸಿದ. ಕಿರೀಟವನ್ನು ಕರಗಿಸದೆಯೇ ಅದರ ಘನ ಗಾತ್ರವನ್ನು ಕಂಡುಹಿಡಿಯುವ ಸುಲಭೋಪಾಯ ಅವನಿಗೆ ಕೂಡಲೇ ಹೊಳೆಯಿತು. "ಗೊತ್ತಾಯಿತು, ಗೊತ್ತಾಯಿತು" (ಯೂರೇಕಾ, ಯೂರೇಕಾ) ಎಂದು ಕೂಗುತ್ತ ಸ್ನಾನದ ಮನೆಯಿಂದ ಹೊರಗೆ ಬಂದು ಆರ್ಕಿಮಿಡೀಸ್ ನೇರವಾಗಿ ಅರಮನೆಗೆ ಧಾವಿಸಿದ. ಅಲ್ಲಿ ಒಂದು ಪಾತ್ರೆಯ ತುಂಬ ನೀರು ತುಂಬಿ ಕಿರೀಟವನ್ನು ಅದರೊಳಕ್ಕೆ ಇಳಿಯಬಿಟ್ಟು ಪಾತ್ರೆಯಿಂದ ಹೊರಕ್ಕೆ ಹರಿದ ನೀರನ್ನು ಸಂಗ್ರಹಿಸಿದ. ಆ ನೀರಿನಷ್ಟು ಘನ ಗಾತ್ರವುಳ್ಳ ಶುದ್ಧವಾದ ಚಿನ್ನವನ್ನು ತರಿಸಿ ಕಿರೀಟ ಆ ಚಿನ್ನದಷ್ಟು ತೂಕವಿದ್ದರೆ ಅದರ ಚಿನ್ನ ಶುದ್ಧವಾದುದು ಎಂದು ಹೇಳಿದ. ಆದರೆ ತೂಕಮಾಡಿ ನೋಡಲಾಗಿ ವ್ಯತ್ಯಾಸ ಕಂಡುಬಂದು ಅಕ್ಕಸಾಲಿಗನ ಮೋಸ ಸ್ಪಷ್ಟವಾಯಿತು. ಅಕ್ಕಸಾಲಿಗನಿಗೆ ಮರಣದಂಡನೆಯಾಯಿತು. ಆರ್ಕಿಮಿಡೀಸ್ ತನ್ನ ಯೋಚನೆಯನ್ನು ಮುಂದುವರಿಸಿ ಪದಾರ್ಥಗಳ ಸಾಕ್ಷೇಪ ಸಾಂದ್ರತೆಯ ವಿಚಾರವಾಗಿ ಶೋಧನೆಗಳನ್ನು ನಡೆಸಿ ಆತನ ಹೆಸರಿನಿಂದ ಸುಪ್ರಸಿದ್ಧವಾಗಿರುವ ತತ್ತ್ವವನ್ನು ನಿರೂಪಿಸಿದ.

ಸನ್ನೆಗಳಿಗೆ (ಲಿವರ್ಸ್) ಸಂಬಂಧಿಸಿದ ಗಣಿತವನ್ನು ಕಂಡುಹಿಡಿದು ಸೂಕ್ತವಾದ ಸನ್ನೆಗಳಿಂದ ಎಷ್ಟುದೊಡ್ಡ ಭಾರವನ್ನಾದರೂ ಎತ್ತಬಹುದೆಂದು ತೋರಿಸಿದ. ಈ ವಿಷಯವನ್ನು ಸ್ಥಾಪಿಸುವುದಕ್ಕಾಗಿಯೇ ಅವನು ತನ್ನ ದಿಟ್ಟತನದ ಉದ್ಘೋಷಣೆ ಮಾಡಿದುದು. ಮತ್ತೆ ಆರ್ಕಿಮಿಡೀಸ್ ಅವನ ಹೆಸರಿನಿಂದಲೇ ಪ್ರಸಿದ್ಧವಾಗಿರುವ ತಿರುಪನ್ನು ರಚಿಸಿದ. ಅಲ್ಲದೆ ರಣರಂಗದಲ್ಲಿ ಶತ್ರುನಾಶಕರವಾದ ಕೆಲವು ಯಂತ್ರಗಳನ್ನು ತಯಾರಿಸಿದ. ಪ್ರ.ಶ.ಪೂ.215ರ ಸಿರಕ್ಯೂಸ್ ಮುತ್ತಿಗೆಯಲ್ಲಿ ಆರ್ಕಿಮಿಡೀಸ್ ಭೂತಗನ್ನಡಿಗಳನ್ನು ಬಳಸಿ ಶತ್ರುಗಳ ಹಡಗುಗಳನ್ನು ಸುಟ್ಟು ಹಾಕಿ ಮತ್ತು ಮೀಲಕಗಳನ್ನುಳ್ಳ (ಸನ್ನೆ) ಯಂತ್ರಗಳ ಸಹಾಯದಿಂದ ಅವರನ್ನು ಹಿಮ್ಮೆಟ್ಟಿಸಿದ. ಪಾಲಿಬಸ್ ಎಂಬ ಚರಿತ್ರಕಾರ ಹೇಳುವಂತೆ ಆರ್ಕಿಮಿಡೀಸನ ಬುದ್ಧಿಶಕ್ತಿಯೇ ಒಂದು ಸೈನ್ಯವಾಗಿತ್ತು! ಮೂರುವರ್ಷಗಳ ತರುವಾಯ, ಪ್ರ.ಶ.ಪೂ.212ರಲ್ಲಿ ಮಾರ್ಸೆಲಸ್ ಎಂಬ ರೋಮನ್ ಸೇನಾಧಿಪತಿ ಸಿರಕ್ಯೂಸನ್ನು ಸ್ವಾಧೀನಪಡಿಸಿಕೊಂಡ. ಅವನಿಗೆ ಆರ್ಕಿಮಿಡೀಸ್‌ನ ಮೇಲೆ ವಿಶೇಷವಾದ ಗೌರವವಿದ್ದುದರಿಂದ ಆತನ ಮೇಲೆ ಯಾರೂ ಕೈಮಾಡಕೂಡದೆಂದು ತನ್ನ ಸೈನಿಕರಿಗೆ ಆಜ್ಞಾಪಿಸಿದ. ಅಂದು ಆರ್ಕಿಮಿಡೀಸ್ ತನ್ನ ಮನೆಯಲ್ಲಿ ಗಣಿತ ಸಮಸ್ಯೆಯೊಂದಕ್ಕೆ ಸಂಬಂಧಿಸಿದ ಒಂದು ಆಕೃತಿಯನ್ನು ಪರಿಶೀಲಿಸುತ್ತ ತದೇಕಚಿತ್ತವಾಗಿ ಕುಳಿತಿದ್ದ. ಆ ದಿನ ರೋಮನ್ ಯೋಧರು ಪಟ್ಟಣವನ್ನು ಪ್ರವೇಶಿಸಿದ ಸುದ್ದಿ ಸಹ ಅವನಿಗೆ ಗೊತ್ತಿರಲಿಲ್ಲ. ಆಗ ರೋಮನ್ ಸಿಪಾಯಿಯೊಬ್ಬ ಹಠಾತ್ತಾಗಿ ಅವನ ಮನೆಗೆ ನುಗ್ಗಿ ಅವನ ಎದುರಿಗೆ ನಿಂತುಕೊಂಡ. ಗಣಿತದ ಆಕೃತಿಯನ್ನು ವೀಕ್ಷಿಸುತ್ತಿದ್ದ ಆರ್ಕಿಮಿಡೀಸ್ ತಲೆಯನ್ನು ಸಹ ಎತ್ತದೆ, "ನನ್ನ ಯೋಚನೆಗೆ ಅಡ್ಡಿಯಾಗಬೇಡ, ತೊಲಗಾಚೆ" ಎಂದ. ಸಿಪಾಯಿ "ನೀನು ಈ ಕೂಡಲೇ ಮಾರ್ಸೆಲಸ್ ಸೇನಾಧಿಪತಿಯ ಬಳಿಗೆ ಹೋಗು" ಎಂದ. ಆರ್ಕಿಮಿಡೀಸ್ ಅದಕ್ಕೆ ಒಪ್ಪಲಿಲ್ಲ. ಕೂಡಲೆ ಆ ಸಿಪಾಯಿ ಆರ್ಕಿಮಿಡೀಸನನ್ನು ಕತ್ತಿಯಿಂದ ಹೊಡೆದು ಕೊಂದುಬಿಟ್ಟ. ಈ ದುರಂತವನ್ನು ಕೇಳಿ ಮಾರ್ಸೆಲಸ್ ಸೇನಾಧಿಪತಿಗೆ ಬಹಳ ಖೇದವುಂಟಾಯಿತು. ಅವನು ಆರ್ಕಿಮಿಡೀಸನ ಶವವನ್ನು ವಿಶೇಷ ಮರ್ಯಾದೆಗಳೊಡನೆ ಸಂಸ್ಕಾರ ಮಾಡಿ ಸಮಾಧಿ ಮಾಡಿಸಿ, ಅದರ ಮೇಲೆ ಆರ್ಕಿಮಿಡೀಸನಿಗೆ ಅತ್ಯಂತ ಪ್ರಿಯವಾಗಿದ್ದ ಗೋಳ ಮತ್ತು ಸಿಲಿಂಡರುಗಳನ್ನು ಸ್ಥಾಪಿಸಿದ. ಅಲ್ಲದೆ ಆರ್ಕಿಮಿಡೀಸನ ಸಂಬಂಧಿಯನ್ನು ಬಹುಮಾನಗಳಿಂದ ಆಧರಿಸಿದ.

ಚರಿತ್ರೆಕಾರರು ಆರ್ಕಿಮಿಡೀಸನ ಬುದ್ಧಿಶಕ್ತಿಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಬಾಲ್ಡ ಎಂಬ ಇಟಲಿಯ ಚರಿತ್ರೆಕಾರ ಆರ್ಕಿಮಿಡೀಸನ ಪ್ರತಿಭೆಯಲ್ಲಿ ಮಾನವಾಂಶಕ್ಕಿಂತ ಹೆಚ್ಚಾಗಿ ದೈವಾಂಶವಿತ್ತು ಎಂದು ಹೇಳಿದ್ದಾನೆ. ಪ್ಲಿನಿ ಎಂಬ ಚರಿತ್ರಕಾರ ಆರ್ಕಿಮಿಡೀಸನನ್ನು ಗಣಿತಶಾಸ್ತ್ರದ ದೇವರು ಎಂದು ಕರೆದಿದ್ದಾನೆ. ಫ್ರೆಂಚ್ ಭಾಷಾಂತರಕಾರನೊಬ್ಬ ಈ ವಾಕ್ಯವನ್ನು ರೇಖಾಗಣಿತದ ಹೋಮರ್ ಎಂದು ಭಾಷಾಂತರಿಸಿದ್ದಾನೆ. ತಾನು ಉದ್ದಾಮ ವ್ಯಕ್ತಿಗಳ ಹೆಗಲ ಮೇಲೆ ಕುಳಿತಿರುವುದಾಗಿ ನ್ಯೂಟನ್ ಹೇಳಿದಾಗ, ಆತ ಸ್ಮರಿಸಿದ್ದ ವ್ಯಕ್ತಿಗಳಲ್ಲಿ ಆರ್ಕಿಮಿಡೀಸ್ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದಿರಬೇಕು. ಶಾಸ್ತ್ರದ ಪ್ರಗತಿಯಲ್ಲಿ ಆರ್ಕಿಮಿಡೀಸ್ ಒಬ್ಬ ಉದ್ದಾಮ ವ್ಯಕ್ತಿಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

(ಬಿ.ಎಸ್.ಎಸ್.; ಎಚ್.ಸಿ.ಕೆ.)

**ಆರ್ಕಿಮಿಡೀಸನ ತತ್ತ್ವ :** ದ್ರವದಲ್ಲಿ ಮುಳುಗಿರುವ ವಸ್ತುವಿನ ನಿಜ ಮತ್ತು ತೋರಿಕೆಯ ಭಾರಗಳ ವ್ಯತ್ಯಾಸ ವಸ್ತುವಿನಷ್ಟೇ ಘನಗಾತ್ರ ಇರುವ ದ್ರವದ ಭಾರಕ್ಕೆ ಸಮಾನವೆಂದು ತಿಳಿಸುತ್ತದೆ. ದ್ರವದ ಊರ್ಧ್ವಮುಖ ಸಂಮರ್ದದ (ದ್ರವದ ಈ ಗುಣದ ಹೆಸರು ಪ್ಲವನತೆ, ಪ್ಲವನ ಬಲ ಅಥವಾ ಬಾಯನ್ಸಿ) ಪರಿಣಾಮವಾಗಿ ವಸ್ತುವಿನ ನಿಜಭಾರ ಕಡಿಮೆ ಎಂದು ಭಾಸವಾಗುತ್ತದೆ. ಆರ್ಕಿಮಿಡೀಸನ ತತ್ತ್ವದ ಪ್ರಕಾರ ವಸ್ತುವಿನ ಮುಳುಗಡೆಯಿಂದ ಸ್ಥಾನಪಲ್ಲಟಗೊಂಡ ದ್ರವದ ಭಾರ ಮತ್ತು ಪ್ಲವನಬಲ ಸಮತೋಲನದಲ್ಲಿವೆ. ಪ್ರ.ಶ.ಪೂ.3ನೆಯ ಶತಮಾನದಲ್ಲಿ ಗ್ರೀಕ್ ವಿಜ್ಞಾನಿ ಆರ್ಕಿಮಿಡೀಸನಿಗೆ ಸಿರಕ್ಯೂಸ್‌ನ ದೊರೆ ತನ್ನ ಚಿನ್ನದ ಕಿರೀಟ ಎಷ್ಟರಮಟ್ಟಿಗೆ ಚಿನ್ನದ್ದು ಎಂಬುದನ್ನು ಪರೀಕ್ಷಿಸುವಂತೆ ಆದೇಶವಿತ್ತ. ಇದರ ಪರೀಕ್ಷೆಯ ಸಮಯದಲ್ಲಿ ಮೂಡಿದ ಫಲವೇ ಈ ತತ್ತ್ವ. ಆರ್ಕಿಮಿಡೀಸನ ತತ್ತ್ವವನ್ನು ಪ್ರಮಾಣೀಕರಿಸಲು ಪ್ರಯೋಗಾಲಯಗಳಲ್ಲಿ ಸಾಮಾನ್ಯವಾಗಿ ಸಾಕೆಟ್ ಮತ್ತು ಸಿಲಿಂಡರ್ ಎಂಬ ಪ್ರಯೋಗವನ್ನು ನಡೆಸುತ್ತಾರೆ.

**ಆರ್ಕಿಮಿಡೀಸನ ತಿರುಪು :** ನೀರನ್ನು ಮೇಲೆತ್ತಲು ಬಳಸುವ ಒಂದು ಯಂತ್ರ (ಸ್ಕ್ರೂ ಆಫ್ ಆರ್ಕಿಮಿಡೀಸ್). ಆರ್ಕಿಮಿಡೀಸ್ ಮೊದಲು ಶೋಧಿಸಿದನೆಂದು ಪ್ರತೀತಿ. ಆದ್ದರಿಂದ ಈ ಹೆಸರು. ಒಂದು ನೀಳವಾದ ಸಿಲಿಂಡರಿನ ಸುತ್ತಲೂ ಒಂದು ಕೊಳವೆಯನ್ನು ಗಿಡದ ರೆಂಬೆಗಳನ್ನು ಬಳಸುವ ಬಳ್ಳಿಯಂತೆ ಸುರುಳಿಯಾಗಿ ಸುತ್ತಿದೆ. ಈ ಕೊಳವೆಯ ಕೆಳಗಿನ ಕೊನೆ A ನೀರಿನಲ್ಲಿ ಮುಳುಗಿದೆ. B ಯಲ್ಲಿ ಕಾಣುವ ಕೈಪಿಡಿಯನ್ನು ಗುಂಡಗೆ ತಿರುಗಿಸಿದಾಗ ಸ್ವಲ್ಪ ನೀರು ಕೊಳವಿಯನ್ನು ಒಳಹೊಕ್ಕು ತಿರುಪು ಮೊಳೆಯಂತೆ ತಿರುಗುತ್ತಿರುವ ಸಿಲಿಂಡರನ್ನು ಆವರಿಸಿರುವ ಕೊಳವಿಯಲ್ಲಿ ಒಂದೊಂದು ಸುತ್ತಿಗೆ ಒಂದೊಂದು ನೂಲಿನಂತೆ ಮೇಲೆ ಏರುತ್ತದೆ. ಸಿಲಿಂಡರಿನ ಅಕ್ಷ ನೀರಿನ ಮಟ್ಟಕ್ಕೆ ಸಮತಲವಾಗಿರದೆ ಮೇಲಕ್ಕೆ ವಾಲಿಕೊಂಡಿರುವಂತೆ ಚಿತ್ರದಕ್ಕು ಕಾಣಿಸಿರುವಂತೆ ಸರಿಯಾಗಿ ಜೋಡಿಸಿದಾಗ, ಒಂದು ಸುತ್ತು ತಿರುಗಿದ್ದು ಮುಗಿದಾಗ ಮೇಲಿನ ಬೂಕಲುಗೆ ಹೋಗಿರುವ ನೀರಿನ ಸ್ಥಾನವನ್ನು ಆವರಿಸಲು ಇನ್ನಷ್ಟು ನೀರು ಒಳಕ್ಕೆ ನುಗ್ಗುತ್ತದೆ. ತಿರುಪು ತಿರುಗಿದಂತೆಲ್ಲ ನೀರು ಮೇಲೆ ಮೇಲೆ ಹತ್ತುತ್ತಿರುತ್ತದೆ. ಕೊನೆಗೆ ಕೊಳವೆಯಮೇಲಿನ ಕೊನೆಯಿಂದ ಹೊರಕ್ಕೆ ಚೆಲ್ಲುತ್ತದೆ. ಇಂದಿಗೂ, ಹಾಲೆಂಡಿನಲ್ಲಿ ಹೆಚ್ಚಾಗಿ ಚೌಗು ಪ್ರದೇಶಗಳಲ್ಲಿ ನೀರನ್ನು ತೆಗೆದುಹಾಕಲು ಈ ಸಾಧನವನ್ನು ಉಪಯೋಗಿಸುತ್ತಾರೆ. ಇದೇ ಬಗೆಯ ಯಂತ್ರದಿಂದ ಧಾನ್ಯದ ರಾಶಿಯನ್ನು ಸಹ ಮೇಲಕ್ಕೆ ಕಣಜದ ಬಾಯಿಗೆ ಎತ್ತಲು ಸಾಧ್ಯವಾಗಿದೆ.




(ಪಿ.ಎಸ್.)

**ಆರ್ಕಿಯಾಪ್ಟೆರಿಕ್ಸ್ :** ಮೀಸೊ ಜೋಯಿಕ್ ಅಥವಾ ಜುರಾಸಿಕ್ ಕಲ್ಪದ (ಸು.181 ದಶಲಕ್ಷ ವರ್ಷಗಳಷ್ಟು ಹಿಂದೆ) ಇದ್ದ ಉರಗ ಮತ್ತು ಪಕ್ಷಿ ಲಕ್ಷಣಗಳೆರಡನ್ನೂ ಹೊಂದಿದ ಪ್ರಾಣಿಯ ಪಳೆಯುಳಿಕೆ. ವಾಯುಮಂಡಲವನ್ನು ಜಯಿಸುವ ಸರೀಸೃಪಗಳ ಪ್ರಯತ್ನ ಜುರಾಸಿಕ್ ಕಾಲದಲ್ಲಿ ಫಲಿಸಿದಂತೆ ತೋರುವುದು. ಅದೇ ಕಾಲದಲ್ಲಿ ಪಕ್ಷಿಗಳ ಉದಯವೂ ಆಗಿದೆ. ಜರ್ಮನಿಯ ಬವೇರಿಯ ಪ್ರಾಂತದ ಸೋಲೆನ್ ಹಾಪನ್ ಸುಣ್ಣ ಶಿಲೆಯಲ್ಲಿ ಎರಡು ಪಕ್ಷಿ ಅಸ್ಥಿಪಂಜರಗಳು ದೊರೆತಿವೆ. ಇವೇ ಅತ್ಯಂತ ಪ್ರಾಚೀನ ಪಕ್ಷಿ ಅಸ್ಥಿಪಂಜರಗಳು. ಅವುಗಳಲ್ಲಿ ಒಂದನ್ನು ಆರ್ಕಿಯಾಪ್ಟೆರಿಕ್ಸ್ ಎಂದೂ ಇನ್ನೊಂದನ್ನು ಆರ್ಕಿಯಾರ್ನಿಸ್ ಎಂದೂ ಕರೆಯಲಾಗಿದೆ. ಆರ್ಕಿಯಾಪ್ಟೆರಿಕ್ಸ್ ಬಹು ಚಿಕ್ಕ ಪಕ್ಷಿ. ಬಹುಶಃ ಗಾತ್ರದಲ್ಲಿ ಕಾಗೆಗಿಂತ ದೊಡ್ಡದಿರಲಾರದು. ಅದರ ಹೋಲಿಕೆ ನಮಗೆ ಪರಿಚಿತವಾದ ಪಕ್ಷಿಗಳಿಗಿಂತಲೂ ಹೆಚ್ಚು ಆರ್ಕಿಯೋಸಾರಿಯನ್ ಸರೀಸೃಪ ಗಳದ್ದೇ. ಅಂದರೆ ತಲೆಯ ಬುರುಡೆಯಲ್ಲಿ ಎರಡು ಕಪೋಲ ರಂಧ್ರಗಳಿವೆ. ದವಡೆಯಲ್ಲಿ ಹಲ್ಲುಗಳಿದ್ದು ಅವು ಗುಳಿಗಳಲ್ಲಿವೆ. ಬೆನ್ನೆಲುಬುಗಳು ಆ್ಯಂಫಿಕೋಯಿಲಸ್ ಮಾದರಿಯಲ್ಲಿವೆ. ಎದೆ ಎಲುಬು ಚಿಕ್ಕದಾಗಿದೆ. ಅಂಗೈನಲ್ಲಿ ಪಂಜರಗಳಿಂದ ಕೂಡಿದ ಮೂರು ಬೆರಳುಗಳಿವೆ.

ಬಾಲ ದೇಹಕ್ಕಿಂತ ಉದ್ದ. ಇವೆಲ್ಲ ಸರೀಸೃಪದ ಲಕ್ಷಣಗಳು. ಆರ್ಕಿಯಾಪ್ಟೆರಿಕ್ಸ್‌ನಲ್ಲಿ ಪಕ್ಷಿಜಾತಿಯ ಕೆಲವು ಲಕ್ಷಣಗಳನ್ನೂ ಕಾಣಬಹುದು. ದೊಡ್ಡ ಕಣ್ಣುಗೂಡುಗಳು ಇರುವುದರಿಂದ ಇದರ ತಲೆಬುರುಡೆ ಪಕ್ಷಿಗಳ ತಲೆಬುರುಡೆಯನ್ನು ಹೋಲುತ್ತದೆ. ರೆಕ್ಕೆ ಪುಕ್ಕಗಳು ಈಗಿನ ಪಕ್ಷಿಗಳ ರೆಕ್ಕೆ ಪುಕ್ಕಗಳಂತೆಯೇ ಇವೆ. ಹೀಗೆ ಆರ್ಕಿಯಾಪ್ಟೆರಿಕ್ಸ್ ಎಂಬ ಆದಿಪಕ್ಷಿ ಸರೀಸೃಪ ಮತ್ತು ಪಕ್ಷಿ ಜಾತಿಗಳೆರಡರ ಲಕ್ಷಣಗಳನ್ನು ಅಳವಡಿಸಿಕೊಂಡಿದ್ದ ಜೀವಿ. ಇದಕ್ಕೆ ರೆಕ್ಕೆ ಪುಕ್ಕಗಳಿದ್ದರೂ ಹೆಚ್ಚು ಹಾರಲು ಅಸಮರ್ಥವಾಗಿದ್ದಂತೆ ತೋರುವುದು. ಆದರೆ ಇದು ವೇಗವಾಗಿ ಓಡಬಲ್ಲುದಾಗಿತ್ತು. ಕ್ರಿಟೇಷ ಯುಗದ (ಸು. 63 ದಶಲಕ್ಷ ವರ್ಷಗಳ ಹಿಂದೆ) ಪಕ್ಷಿಗಳು ಆರ್ಕಿಯಾಪ್ಟೆರಿಕ್ಸ್ ಮತ್ತು ನಿಜಪಕ್ಷಿ ವರ್ಗಗಳ ಮಧ್ಯವರ್ತಿಗಳಾಗಿದ್ದುವು. ಆರ್ಕಿಯಾಪ್ಟೆರಿಕ್ಸ್ ಹಾಗೆ ಹಲ್ಲುಗಳನ್ನು ಹೊಂದಿದ್ದರೂ ಉಳಿದ ಲಕ್ಷಣಗಳಲ್ಲಿ ಪಕ್ಷಿ ಜಾತಿಯ ಕಡೆಗೆ ದಿಟ್ಟ ಹೆಜ್ಜೆ ಇಟ್ಟಿದ್ದುವು. ಬಾಲ ಚಿಕ್ಕದಾಗಿತ್ತು. ಎಲುಬುಗಳು ಟೊಳ್ಳಾಗಿದ್ದು, ಗಾಳಿಯಿಂದ ತುಂಬಿಕೊಂಡಿದ್ದವು. ಕಪೋಲರಂಧ್ರ, ಪಾದಗಳು ಮತ್ತು ಟೊಂಕದ ಎಲುಬು ಮುಂತಾದವುಗಳು ಪಕ್ಷಿಯಲ್ಲಿರು ವಂತೆಯೇ ಇದ್ದವು. ಕ್ರಿಟೇಷ ಯುಗದಲ್ಲಿ ಎರಡು ಬಗೆಯ ಪಕ್ಷಿಗಳಿದ್ದವು. ಒಂದು ದೊಡ್ಡದು, ಮತ್ತೊಂದು ಚಿಕ್ಕದು. ದೊಡ್ಡದು ಕನ್ಸಾಸ್ ಪ್ರಾಂತ್ಯದ ನಿಯೋಬ್ರಾರ ಶಿಲೆಗಳಲ್ಲಿ ಸಿಕ್ಕಿರುವ ಹೆಸರಾರ್ನಿಸ್. ಇದು ಹಾರಲು ಅಸಮರ್ಥವಾಗಿತ್ತು. ಚಿಕ್ಕದಾದ ಇಕ್ತಿಯಾರ್ನಿಸ್ ದೊಡ್ಡ ರೆಕ್ಕೆಗಳನ್ನು ಹೊಂದಿ ಹಾರಬಲ್ಲದಾಗಿತ್ತು. ಇವೆರಡೂ ಜಲಪಕ್ಷಿಗಳು. ಆಧುನಿಕ ಜೀವಕಲ್ಪದ ಆದಿಯ ವೇಳೆಗೆ ಈಗಿನ ಪಕ್ಷಿಗಳ ಅವತರಣಿಕೆ ಆಗಿರುವ ಪ್ರಯುಕ್ತ, ಅವುಗಳಿಗೂ ಈಗಿನ ಪಕ್ಷಿಗಳಿಗೂ ಅಷ್ಟು ವ್ಯತ್ಯಾಸ ಕಾಣುವುದಿಲ್ಲ. (ಡಿ.ಆರ್.)

**ಆರ್ಕಿಯೊಮ್ಯಾಗ್ನೆಟಿಸಂ :** ಪುರಾತನ ವಸ್ತುಗಳ ಕಾಲನಿರ್ಧಾರ ಮಾಡಬಹುದಾದ ಇತ್ತೀಚಿನ ವೈಜ್ಞಾನಿಕ ವಿಧಾನ. ಇದಕ್ಕೆ ರೆಮ್ನಂಟ್ ಮ್ಯಾಗ್ನೆಟಿಸಂ ಎಂದು ಹೆಸರು (ಪುರಾ ಕಾಂತೀಯತೆ). ಪ್ರಪಂಚದ ಕಲ್ಲು ಮಣ್ಣುಗಳಲ್ಲೆಲ್ಲ ಕಬ್ಬಿಣದ ಆಕ್ಸೈಡ್‌ಗಳಿರುವುದರಿಂದ ಅವುಗಳು ಸೂಕ್ಷ್ಮವಾದರೂ ಸಾಕಷ್ಟು ಶಕ್ತಿಯುತವಾದ ಕಾಂತತ್ವವನ್ನು ಪಡೆದಿರುತ್ತವೆ. ಒಮ್ಮೆ ಈ ಪದಾರ್ಥಗಳನ್ನಾಗಲಿ ಅವುಗಳಿಂದ ತಯಾರಿಸಲ್ಪಟ್ಟ ವಸ್ತುಗಳನ್ನಾಗಲಿ ಬೆಂಕಿಯಲ್ಲಿ ಕಾಯಿಸಿದರೆ ಆಕರ್ಷಣ ಶಕ್ತಿ ನಶಿಸಿಹೋಗುತ್ತದೆ. ಈ ಆಕರ್ಷಣಶಕ್ತಿ ಪುರಾತನ ಅವಶೇಷಗಳಲ್ಲಿ ಬಹಳ ಮುಖ್ಯ. ಹೆಚ್ಚಿಗೆ ದೊರೆಯುವ ಮಡಕೆ ಚೂರುಗಳಲ್ಲಿ $675^0$ ಸೆಂ.ಗ್ರೇಡಿಗಿಂತ ಹೆಚ್ಚಿನ ಉಷ್ಣತೆಯಲ್ಲಿ ಈ ಶಕ್ತಿ ಪೂರ್ಣವಾಗಿ ನಾಶ ಹೊಂದುತ್ತದೆ. ಇದಕ್ಕೆ ಕ್ಯೂರಿಪಾಯಿಂಟ್ ಎಂದು ಹೆಸರು. ಅನಂತರ ಈ ವಸ್ತುಗಳು ನಿಧಾನವಾಗಿ ಆರುತ್ತಿರುವಾಗ ಅಲ್ಲಿನ ಭೂಮಿಯ ಆಕರ್ಷಣ ಶಕ್ತಿಯ ಸಾಂದ್ರತೆಯನ್ನೂ ದಿಕ್ಕನ್ನೂ ಪುನಃ ಪಡೆಯುತ್ತವೆ. ಆದರೆ ಭೂಮಿಯ ಆಕರ್ಷಣದ ಸಾಂದ್ರತೆ ಮತ್ತು ದಿಕ್ಕು ಕಾಲ ಕಾಲಕ್ಕೆ ಬದಲಾಗುವುದರಿಂದ ಆ ವ್ಯತ್ಯಾಸ ಆ ವಸ್ತುಗಳಲ್ಲೂ ಪ್ರತಿಬಿಂಬಿತವಾಗುತ್ತದೆ. ಭೂಮಿಯ ನಿಜ ಧ್ರುವಗಳ ದಿಕ್ಕಿನಿಂದ ಹಲವು ವರ್ಷಗಳ ಅಂತರದಲ್ಲಿ ತಕ್ಕಮಟ್ಟಿಗೆ ಬದಲಾಗುತ್ತಿರುವ ಆಕರ್ಷಣದ ದಿಕ್ಕು ಮತ್ತು ವಿವಿಧ ಪ್ರದೇಶಗಳ ಆಕರ್ಷಣದ ಸಾಂದ್ರತೆಯ ಒಂದು ನಕ್ಷೆಯನ್ನು ತಯಾರಿಸಿಕೊಂಡು ಪ್ರಾಕ್ತನ ಅವಶೇಷಗಳ ಕಾಂತತ್ವದ ಸಾಂದ್ರತೆ ಮತ್ತು ದಿಕ್ಕುಗಳನ್ನು ಪ್ರಯೋಗಶಾಲೆಯಲ್ಲಿ ಅಳೆದು ನಿರ್ಧರಿಸಿಕೊಂಡು ನಕ್ಷೆಯೊಡನೆ ಹೋಲಿಸಿದ್ದೇ ಆದರೆ ಆ ಅವಶೇಷಗಳು ಕಡೆಯದಾಗಿ ಯಾವ ಕಾಲದಲ್ಲಿ ಕಾಯಿಸಲ್ಪಟ್ಟವೆಂಬುದನ್ನು ಸ್ವಲ್ಪ ಹೆಚ್ಚು ಕಡಿಮೆ ನಿರ್ಧರಿಸಬಹುದು. ಪುರಾತತ್ತ್ವ ಸಂಶೋಧಕರಿಗೆ ಇದರ ಅಗತ್ಯ ಹೆಚ್ಚು.

ಈ ಕಾಲನಿರ್ಣಾಯಕ ಪದ್ಧತಿಗೆ ಹಲವು ಬಾಧಕಗಳಿದ್ದರೂ ಪುರಾತತ್ತ್ವ ಶೋಧಕರಿಗೆ ಅದರಿಂದ ಹೆಚ್ಚು ಸಹಾಯವಾಗಿದೆ. ಈ ಪದ್ಧತಿಯನ್ನು ಪ್ಯಾರಿಸ್ ವಿಶ್ವವಿದ್ಯಾಲಯದ ಇಥೆಲ್ಲೀರ್, ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದ ಆರ್. ಇ. ಕುಕ್ ಮತ್ತು ಜೆ. ಸಿ. ಬೆಲ್ಷರವರೂ ಬೇರೆ ಬೇರೆಯಾಗಿ ಏಕಕಾಲದಲ್ಲಿ ನಿರೂಪಿಸಿದರು. ಈ ಪದ್ಧತಿಯನ್ನು ಉತ್ತಮಗೊಳಿಸಲು ಹೆಚ್ಚಿನ ಸಂಶೋಧನೆಗಳು ಮುಂದುವರಿದಿವೆ. (ಬಿ.ಕೆ.ಜ.)

**ಆರ್ಕೇಂಜಲ್ :** ಹಿಂದೆ ಯುರೋಪಿಯನ್ ರಷ್ಯಕ್ಕೆ ಸೇರಿದ್ದ, ಈಗ ಸೋವಿಯತ್ ಒಕ್ಕೂಟದ ಒಂದು ಭಾಗ. ವಿಸ್ತೀರ್ಣ 2.28.610 ಚ.ಕಿಮೀ. ಜನಸಂಖ್ಯೆ 366,200 (1999). ವಾಯುಗುಣ ತೀಕ್ಷ್ಣ ಚಳಿಯಿಂದ ಕೂಡಿದೆ. ಗಲ್ಫ್ ಸ್ಟ್ರೀಂ ಉಷ್ಣೋದಕ ಪ್ರವಾಹ ಇದರ ಬಳಿ ಹರಿದರೂ ವರ್ಷದ 190 ದಿವಸಗಳ ಕಾಲ ನೀರು ಗಡ್ಡೆಕಟ್ಟಿರುತ್ತದೆ. ಉತ್ತರದ ತಂಡ್ರ ವಲಯದಲ್ಲಂತೂ ಜೀವನ ಸ್ಥಗಿತಗೊಳ್ಳುತ್ತದೆ. ಉಳಿದ ತೀರ ಪ್ರದೇಶಗಳಲ್ಲಿ ಮೀನುಗಾರಿಕೆ ಮುಖ್ಯ ಉದ್ಯೋಗ. ದಕ್ಷಿಣ ಅಥವಾ ಒಳನಾಡಿನಲ್ಲಿ ಪೈನ್ ಮರಗಳ ಕಾಡುಗಳಿರುವುದರಿಂದ ಮೀನುಗಾರಿಕೆ, ಬೇಟೆ, ಅಣಬೆಗಳ ಸಂಗ್ರಹ ಮತ್ತು ನಗರಗಳಿಗೆ ರವಾನೆ ನಡೆಯುತ್ತದೆ. ಬಾರ್ಲಿ, ಚಳಿಗಾಲದ ರೈ, ಓಟ್ಸ್, ಅಗಸೆಗಳನ್ನು ದಕ್ಷಿಣ ಭಾಗಗಳಲ್ಲಿ ಬೆಳೆಯುತ್ತಾರೆ. $65^o$ ಉತ್ತರ ಅಕ್ಷಾಂಶದ ದಕ್ಷಿಣಕ್ಕೆ ಆಲೂಗಡ್ಡೆ ಬೆಳೆಯುತ್ತಾರೆ. ಕಾಡುಗಳಿಂದ ಮರದ ದಿಮ್ಮಿ ಟಾರ್‌ಗಳನ್ನು ಪಡೆಯಲಾಗುವುದು. ತೀರಪ್ರದೇಶಗಳಲ್ಲಿ ಹಡಗುನಿರ್ಮಾಣ ಕೇಂದ್ರಗಳಿವೆ. ನ್ಯಾಫ್ತ, ಉಪ್ಪುಗಳು, ಪಿನೆಗ ಪ್ರದೇಶದಲ್ಲೂ ಮೈಕ ಮತ್ತು ಲಿಗ್ನೈಟ್‌ಗಳನ್ನು ಮೆಜೆನ್‌ನಲ್ಲೂ ಗಂಧಕದ ಚಿಲುಮೆಗಳಿಂದ ಗಂಧಕವನ್ನೂ ಷೆನ್ ಕುರಸ್ಕ್ ಮತ್ತು ಖೊಲ್ಮೊಗೊರಿಯಲ್ಲೂ ತಯಾರಿಸುತ್ತಾರೆ. ರಷ್ಯನ್ನರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇವರು ನೆನ್ಸೆ, ಲ್ಯಾಪ್, ಕಾರೇಲಿಯನ್ ಇತ್ಯಾದಿ ಆದಿ ಜನಾಂಗದವರೊಂದಿಗೆ ಸೇರಿಹೋಗಿದ್ದಾರೆ.

ಈ ಪ್ರಾಂತ್ಯದ ರಾಜಧಾನಿ, ಬಂದರು, ಮಹಾನಗರವಾಗಿರುವ ಆರ್ಕೇಂಜಲ್ ಉತ್ತರ ಡ್ವಿನಾದ ಮುಖಜಭೂಮಿಯ ಬಳಿಯ ಬಲದಂಡೆಯ ಮೇಲೆ $64^0$ 33' ಉ.ಅ. ಮತ್ತು $40^0$ 33' ಪೂ.ರೇ. ದಲ್ಲಿದೆ. 1553ರಲ್ಲಿ ರಿಚರ್ಡ್ ಛಾನ್‌ಸಲರ್ ಎಂಬ ಇಂಗ್ಲಿಷ್ ನಾವಿಕ ಇದನ್ನು ನಿರ್ಮಿಸಿದ. ಅನೇಕ ವರ್ಷಗಳವರೆಗೆ ಮಸ್ಕೋವಿಯ ನೇರ ಬಂದರಾಗಿತ್ತು. ಲೆನಿನ್‌ಗ್ರಾಡ್ ಬಂದರಾದ ಮೇಲೆ ಈ ನಗರದ ಪ್ರಾಮುಖ್ಯ ಕುಗ್ಗಿತು. ಇಲ್ಲಿನ ಅತ್ಯಂತ ಕಿರುದಿನ 3 ಗಂ. 12 ನಿಮಿಷ ಮತ್ತು ವಿಸ್ತೃತದಿನ 21 ಗಂ. 48 ನಿಮಿಷ. ನವೆಂಬರ್‌ನಿಂದ ಮೇವರೆಗೆ ನದೀ ಮುಖಜ ಭೂಮಿ ಹಿಮಾಚ್ಛಾದಿತವಾಗಿರುತ್ತದೆ. ಹಿಮಭಂಜಕಯಂತ್ರಗಳಿಂದ ವರ್ಷಪೂರ್ತಿ ವ್ಯಾಪಾರ ಸಾಧ್ಯ. ನದಿ, ರೈಲು ಮತ್ತು ಕಾಲುವೆಗಳ ಮುಖಾಂತರ ದಕ್ಷಿಣ ಭಾಗಗಳನ್ನು ಸೇರಿಸಲಾಗಿದೆ. ಮುಖ್ಯ ರಫ್ತು ಮರದ ದಿಮ್ಮಿ, ಟಾರ್, ಅಗಸೆನಾರು, ಚರ್ಮ, ಮರಕೊಯ್ಯುವಿಕೆ, ಮೀನಿನೆಣ್ಣೆ, ಸೆಲ್ಯುಲೋಸ್, ಚರ್ಮತಯಾರಿಕೆ ಇಲ್ಲಿನ ಕೈಗಾರಿಕೆಗಳು. ಇಲ್ಲಿ ಒಂದು ನಾವಿಕಶಾಲೆ ಇದೆ. (ಎಂ.ಎಸ್.; ಕೆ.ಆರ್.ಆರ್.)

**ಆರ್ಗಾಂಡ್, ಜೀನ್ ರಾಬರ್ಟ್ :** 1768–1822. ಸ್ವಿಟ್ಜರ್ಲೆಂಡಿನಲ್ಲಿ ಜನಿಸಿದ ಗಣಿತವಿಜ್ಞಾನಿ. ಮಿಶ್ರ ಸಂಖ್ಯೆಗಳ (ಕಾಂಪ್ಲೆಕ್ಸ್ ನಂಬರ್ಸ್) ಮೇಲಿನ ಇವನ ಪ್ರೌಢ ಲೇಖನ (1806) ಇವನಿಗೆ ಖ್ಯಾತಿಯನ್ನು ತಂದುಕೊಟ್ಟಿತು. ಎಲ್ಲ ಬೀಜಗಣಿತೀಯ ಸಮೀಕರಣಗಳೂ ಮೂಲವನ್ನು (ರೂಟ್ಸ್) ಹೊಂದಿವೆ ಎಂಬುದನ್ನು ತೋರಿಸಲು ಮಿಶ್ರಸಂಖ್ಯೆಗಳನ್ನು ಈತ ಮೊಟ್ಟಮೊದಲಿಗೆ ಬಳಸಿಕೊಂಡ. ಈ ಸಂಖ್ಯೆಯನ್ನು ನಿರ್ದೇಶಿಸಲು ಆರ್ಗಾಂಡ್ ಚಿತ್ರ ಬಲು ಸಹಾಯಕಾರಿ. ಈತ ಪ್ಯಾರಿಸ್‌ನಲ್ಲಿ ನಿಧನನಾದ. **(ನೋಡಿ–ಮಿಶ್ರ ಸಂಖ್ಯೆಗಳು)**.

**ಆರ್ಗಾನ್ :** ಒಂದು ಮೂಲವಸ್ತು. ವಿರಳ ಅನಿಲಗಳಲ್ಲಿ (ಅಥವಾ ನಿಷ್ಕ್ರಿಯ ಅನಿಲಗಳು, ಇನರ್ಟ್ ಗ್ಯಾಸಸ್) ಒಂದು. ರಾಸಾಯನಿಕ ಚಿಹ್ನೆ Ar.; ಪರಮಾಣು ಸಂಖ್ಯೆ 18; ಪರಮಾಣು ತೂಕ 39.944. ಇದನ್ನು ಸಾಮಾನ್ಯವಾಗಿ ದ್ರವಗಾಳಿಯ ಆಂಶಿಕಬಟ್ಟಿ ಇಳಿಸುವ ಮೂಲಕ ಪಡೆಯುತ್ತಾರೆ. ಇದನ್ನು ಆವರ್ತಕೋಷ್ಟಕದ ಸೊನ್ನೆಗುಂಪಿನಲ್ಲಿ (ಜಿರೊ ಗ್ರೂಪ್) ಸೇರಿಸಲಾಗಿದೆ.

ಆರ್ಗಾನ್ ಬಣ್ಣ, ವಾಸನೆ, ರುಚಿ ಇಲ್ಲದ ಅನಿಲ. ಸಾಂದ್ರತೆ 19.95. ವಿರಳಾನಿಲಗಳಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿರುವ ಇದನ್ನು ಇತರ ಅನಿಲಗಳೊಡನೆ ಬೆರಸಿ ಜಾಹೀರಾತು ದೀಪಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಾರೆ (ನೋಡಿ– ವಿರಳಾನಿಲಗಳು).

**ಆರ್ಗಿರೊಡರ್ಮ :** ಆರ್ಗಿರೊಡರ್ಮ ಉದ್ಯಾನವನದ ಒಂದು ರಸಭರಿತ ಕುಳ್ಳು ಸಸ್ಯ. ಗುಂಪಾಗಿ ಬೆಳೆದಿರುವ ಈ ಗಿಡದ ದೃಶ್ಯ ನೋಡುವವರಿಗೆ ಬಹಳ ವಿಚಿತ್ರ. ಆರ್ಗಿರೊಡರ್ಮ ಸಸ್ಯಗಳನ್ನು ಕುಂಡಸಸ್ಯಗಳಾಗಿಯೂ ಮನೆಯ ಅಲಂಕಾರ ಸಸ್ಯಗಳಾಗಿಯೂ ಬೆಳೆಸುತ್ತಾರೆ. ಈ ಜಾತಿಯ ಗಿಡಗಳು ಕಾಂಡವಿಲ್ಲದ, ಒಂದೇ ಸಸ್ಯದಿಂದ ಮೋಸುಗಳು ಹೊರಬಂದು ಗುಂಪಾಗಿ ಬೆಳೆಯುವ, ರಸಭರಿತ ಸಸ್ಯಗಳು. ಇವುಗಳ ಎಲೆಗಳು ಕಾಂಡದಂತೆ ಗುಂಪಾಗಿ ಕೊಳವೆಯಾಕಾರವಾಗಿ ಬೆಳೆಯುತ್ತವೆ. ಅಭಿಮುಖ ಸಂಯೋಗದಲ್ಲಿ ಜೋಡಿಸಿರುತ್ತವೆ. ಎಲೆಯ ಮೈ ಮೃದುವಾಗಿದೆ. ಅವುಗಳ ಆಕಾರ ಗಾತ್ರ ಮತ್ತು ಬಣ್ಣ ಪ್ರಭೇದಗಳನ್ನು ಅನುಸರಿಸುತ್ತವೆ. ತುದಿಯಲ್ಲಿ ಬಿಡುವ ಇದರ ಹೂವುಗಳು ತೊಟ್ಟಿಲ್ಲದವು; ಹೂವು ಎಲ್ಲ ಪ್ರಭೇದಗಳಲ್ಲೂ ದ್ವಿಲಿಂಗಿ. ಆದರೆ ಬಣ್ಣದಲ್ಲಿ ವ್ಯತ್ಯಾಸ ಇದೆ.

ಆರ್ಗಿರೊಡರ್ಮ ಅಂಗುಸ್ಟಿ ಪೆಟಲಮ್ ಎಂಬ ಪ್ರಭೇದಗಳ ಎಲೆಗಳು ದಪ್ಪವಾಗಿ ಮೊಟ್ಟೆಯಾಕಾರದಲ್ಲಿವೆ. ಬೂದಿ ಮಿಶ್ರಿತ ಹಸಿರು ಬಣ್ಣದ ಎಲೆಯ ಮೇಲುಭಾಗದ ಮಧ್ಯದ ಸೀಳು ಆಳವಾಗಿದ್ದು, ತಳಭಾಗದಲ್ಲಿ ಅಂಟಿಕೊಂಡಿದೆ. ಈ ಸೀಳಿನ ಮಧ್ಯದಲ್ಲಿ ತೊಟ್ಟಿಲ್ಲದ ಹಳದಿ ಹೂಗಳು ಮೂಡಿರುತ್ತವೆ.

ಆರ್ಗಿರೊಡರ್ಮ ಆಕ್ಟೊಫೈಲಮ್ ಎಂಬ ಇನ್ನೊಂದು ಪ್ರಭೇದದಲ್ಲಿ ನಾಲ್ಕು ಅಥವಾ ಎರಡು ನೀಲಿ ಮಿಶ್ರಿತ ಹಸುರು ಬಣ್ಣದ ಎಲೆಗಳಿದ್ದು, ತೊಟ್ಟಿಲ್ಲದ ಹಳದಿ ಬಣ್ಣದ ಸುಂದರವಾದ ಒಂಟೊಂಟಿ ಹೂ ಬಿಡುತ್ತದೆ. ಇದು ಎಲ್ಲ ಹವಾಗುಣಗಳಿಗೂ ಹೊಂದಿ ಕೊಂಡು ಬೆಳೆಯುವುದರಿಂದ ಹೆಚ್ಚಿನ ಜನಪ್ರಿಯತೆಗಳಿಸಿದೆ. ಇದರ ಉಗಮಸ್ಥಾನದ ಕೇಪ್ ಪ್ರಾವಿನ್ಸ್. ಈ ಕುಲದ ಸಸ್ಯಗಳನ್ನು ಬೀಜಗಳಿಂದ ಸುಲಭವಾಗಿ ಬೆಳೆಸಬಹುದು. (ಡಿ.ಎಮ್.)

**ಆರ್ಗೋನಾಟ್ :** ಒಂದು ಜಾತಿಯ ವಲ್ಕವಂತ ಮೃದ್ವಂಗಿ (ಚಿಪ್ಪಿನ ಪ್ರಾಣಿ). ಸಮುದ್ರದಲ್ಲಿ ಕಾಣದೊರೆಯುತ್ತದೆ. ಇದಕ್ಕೆ ಇರುವ ಎಂಟು ಶಿರಪಾದಗಳಲ್ಲಿ ಎರಡು ವಿಸ್ತಾರಗೊಂಡು ಜಾಲವಾಗಿ ಮಾರ್ಪಾಟಾಗಿವೆ. ಬಹು ಸುಂದರವಾದ ಚಿಪ್ಪನ್ನು (ಹೆಣ್ಣಿನಲ್ಲಿ ಮಾತ್ರ) ಹೊಂದಿದೆ. ಮೊಟ್ಟೆ ಮತ್ತು ಮರಿಗಳಿಗೆ ಚಿಪ್ಪು ತೊಟ್ಟಿಲಿನಂಥ ರಕ್ಷಣೆ. ಆರ್ಗೋನಾಟ್‌ನ ಚಿಪ್ಪು ಮುತ್ತಿನ ಚಿಪ್ಪಿನ ಪ್ರಾಣಿಗಳ ಚಿಪ್ಪಿನಂತೆ ಗೂಡಲ್ಲ; ಪ್ರಾಣಿ ವಾಸಿಸುವ ಮನೆಯೂ ಅಲ್ಲ; ಕೇವಲ ತೊಟ್ಟಿಲು ಮಾತ್ರ. ಇತರ ಎಲ್ಲ ಮೃದ್ವಂಗಿಗಳಂತೆ ಇದರ ಚಿಪ್ಪು ಮ್ಯಾಂಟಲ್ ಚರ್ಮದ ಮಡಿಕೆಯಿಂದ ಸ್ರವಿಸಿದ್ದಲ್ಲ; ಕರುಳು

ಮೊದಲಾದವುಗಳನ್ನೊಳಗೊಂಡ ಚರ್ಮದ ಹೊರ ಮಡಿಕೆಯಿಂದ ಮಾಡಿದುದೂ ಅಲ್ಲ; ತನ್ನ ಎರಡು ಕೈಗಳಿಂದ ತಯಾರಾದ ಚಿಪ್ಪು. ಗಂಡು ಆರ್ಗೋನಾಟ್‌ಗಳಿಗೆ ಚಿಪ್ಪು ಇಲ್ಲದಿರುವುದೇ ಈ ಪ್ರಾಣಿಯ ವೈಶಿಷ್ಟ್ಯ. ಗಂಡು ಗುಜ್ಜಾರಿ. ಅಂದ ಮಾತ್ರಕ್ಕೆ ಹೆಣ್ಣು ಅತಿ ದೊಡ್ಡದೆಂದು ಅರ್ಥವಲ್ಲ. ಕೇವಲ ಹತ್ತು ಹನ್ನೆರಡು ದಿವಸಗಳ ಮರಿಯಾದಾಗಿನಿಂದಲೇ, ಚಿಪ್ಪು ರೂಪುಗೊಳ್ಳುತ್ತದೆ. ದೇಹ ಬೆಳೆದಂತೆಲ್ಲ ಚಿಪ್ಪು ಕ್ರಮವಾಗಿ ಬೆಳೆಯುವುದು. ಚಿಪ್ಪಿನ



ಬೆಳೆವಣಿಗೆಗೆ ಆರ್ಗೋನಾಟ್‌ನ ಎರಡು ಕೈಗಳೂ ಸ್ರವಿಸುವ ದ್ರವವೇ ಕಾರಣ. ದೊಡ್ಡ ಚಿಪ್ಪು ಸುಮಾರು ಒಂದು ಅಂಗುಲ ಉದ್ದವಿರುವುದು. ಹೆಣ್ಣು ಸಮುದ್ರದ ಆಳದಲ್ಲಿ ವಾಸಿಸುತ್ತ ಮೊಟ್ಟೆ ಇಡುವ ಕಾಲದಲ್ಲಿ ಮಾತ್ರ ಮೇಲಕ್ಕೆ ಬರುತ್ತದೆ. ಇವುಗಳಲ್ಲಿ ಸೈಡಮೆಂಟಲ್ ಗ್ರಂಥಿಗಳು ಇರುವುದಿಲ್ಲ. ಶ್ವಾಸಾಂಗಗಳನ್ನುಳ್ಳ ಈ ಪ್ರಾಣಿಗಳಿಗೆ ಎಂಟು ಕೈಗಳಿವೆ. ಸೂಕ್ಷ್ಮ ತಂತುಗಳನ್ನುಳ್ಳ ಬೇರೆ ಕೈಗಳಿಲ್ಲ. ಇದರ ದೇಹ ಚಿಕ್ಕದಾಗಿದ್ದು ದುಂಡಗಿರುವ ತಳಭಾಗವನ್ನು ಹೊಂದಿದೆ. ಹೀರುಬಟ್ಟಲುಗಳಲ್ಲಿ ಮಾಂಸಭರಿತವಾದ ಉಂಗುರಗಳಿಲ್ಲ. ಹೆಣ್ಣು ಆರ್ಗೋನಾಟನ್ನು ಪೇಪರ್ ನಾಟಿಲಸ್ ಎಂದು ಕರೆಯುವರು. (ಪಿ.ಎ.ಆರ್.)

**ಆರ್ಚ್ ಡೀಕನ್ :** ಚರ್ಚಿನ ಅಧಿಕಾರಿವರ್ಗದಲ್ಲಿ ಒಬ್ಬ. ಡೀಕನ್‌ರ ವರ್ಗಕ್ಕೆ ಸೇರಿದ್ದರೂ ಡೀಕನ್‌ರಿಗೆ ಮೇಲಧಿಕಾರಿಯಿಲ್ಲ. ತನ್ನ ಬಿಷಪ್‌ನಿಗೆ ಪ್ರಾಪಂಚಿಕ ವ್ಯವಹಾರಗಳಲ್ಲಿ ಸಹಾಯ ಮಾಡುವುದೇ ಇವನ ಮುಖ್ಯ ಕೆಲಸ. ಸಭೆಯ ಸ್ಥಿರ ಆಸ್ತಿಯ ಪಾಲನೆ, ವಿದ್ಯಾಸಂಸ್ಥೆಗಳು, ಆಸ್ಪತ್ರೆಗಳು ಅಥವಾ ಶಾಲೆಗಳು, ದಾನಧರ್ಮ ಈ ಮೊದಲಾದ ಸೇವಾಕಾರ್ಯಗಳ ಜವಾಬ್ದಾರಿ ಈತನದು. (ಎಚ್.ಎಸ್.)

**ಆರ್ಚ್‌ಬಿಷಪ್ :** ಪ್ರಧಾನ ಬಿಷಪ್. ಡಯೊಸಿಸಿಗೆ ಅಧಿಕಾರಿಗಳಾದ ಬಿಷಪ್‌ಗಳ ಮೇಲಧಿಕಾರಿ, ಅವನ ಅಧಿಕಾರದ ಸೀಮೆಗೆ ಪ್ರಾಂತ್ಯ ಎಂದು ಹೆಸರು. ಒಂದು ಪ್ರಾಂತ್ಯದಲ್ಲಿರುವ ಬಿಷಪ್‌ರೆಲ್ಲರೂ ಸೇರಿ ಆರ್ಚ್‌ಬಿಷಪ್‌ನ ಆಡಳಿತದಲ್ಲಿ ತಮ್ಮ ಪ್ರಾಂತ್ಯದಲ್ಲಿನ ಕಾರ್ಯಗಳನ್ನೆಲ್ಲ ನಿರ್ವಹಿಸುವರು. ಇಂಗ್ಲೆಂಡಿನ ಆಂಗ್ಲಿಕನ್ ಸಭೆಯಲ್ಲಿ ಆರ್ಚ್ ಬಿಷಪ್ ಆಫ್ ಕ್ಯಾಂಟರ್‌ಬರಿ ಮತ್ತು ಆರ್ಚ್ ಬಿಷಪ್ ಆಫ್ ಯಾರ್ಕ್ ಎಂಬುವರು ಬಹು ಪುರಾತನವಾದ ಮತ್ತು ಮಾನ್ಯವಾದ ಸ್ಥಾನಗಳನ್ನು ವಹಿಸಿರುವರು. (ಎಚ್.ಎಸ್.)

**ಆರ್ಜಿತಗುಣಗಳು:** ಜೀವಿ ಹುಟ್ಟಿದ ಮೇಲೆ ತನ್ನ ಪರಿಸರ ಮತ್ತು ಬುದ್ಧಿಶಕ್ತಿಯ ಬಳಕೆಯಿಂದ ಕಲಿಯುವ ಗುಣಗಳಿಗೆ ಈ ಹೆಸರಿದೆ. ಹುಟ್ಟುವಾಗಲೇ ಪಡೆದು ಬಂದವುಗಳಿಗೆ ಆನುವಂಶಿಕ ಗುಣಗಳೆಂದು ಹೆಸರು. ಶ್ರಮ ವಹಿಸಿ ಅಭ್ಯಾಸ ಮಾಡಿ ಕರಗತ ಮಾಡಿಕೊಳ್ಳುವ ಗುಣಗಳೇ ಆರ್ಜಿತ ಗುಣಗಳು. ಉದಾ: ಸಂಗೀತ, ಅಕ್ಷರಭ್ಯಾಸ, ವಿವಿಧ ಆಟಪಾಠಗಳು ಇತ್ಯಾದಿ. ಅಭ್ಯಾಸದ ಮೂಲಕ ಕಲಿತ ಒಂದು ಹೊಸ ಅಭ್ಯಾಸ ಅಥವಾ ಗುಣ ಕಲಿತ ಪ್ರಾಣಿಯಲ್ಲಿ ಮಾತ್ರ ಇರುವುದೊ ಅಥವಾ ಆ ಪ್ರಾಣಿಯ ಮಕ್ಕಳು, ಮೊಮ್ಮಕ್ಕಳಲ್ಲಿ ಅನುವಂಶೀಯವಾಗಿ ಕಾಣಿಸಿಕೊಳ್ಳುವುದೊ ಎಂಬ ವಿಷಯ ಬಹಳ ಮುಖ್ಯವಾದುದು. ಒಬ್ಬ ವ್ಯಕ್ತಿ ವಿದ್ಯಾಭ್ಯಾಸದಲ್ಲಿ ಮುಂದುವರಿದಿದ್ದರೆ ಅವನ ವಿದ್ಯಾಭ್ಯಾಸದ ಫಲ ಆತನ ವಂಶವಾಹಿ ಕಣಗಳಲ್ಲಿ ಬದಲಾವಣೆಯನ್ನುಂಟು ಮಾಡಿ ಆತನ ಮಕ್ಕಳು, ಮೊಮ್ಮಕ್ಕಳು ಸಹ ಬೇಗ ವಿದ್ಯಾವಂತರಾಗುವುದು ಸಾಧ್ಯವಾದರೆ ಅವರಿಗೆ ಅಕ್ಷರಾಭ್ಯಾಸವೇ ಬೇಕಾಗುವುದಿಲ್ಲ. ಅಭ್ಯಾಸವಿಲ್ಲದೆ ಅವರು ಪುಸ್ತಕಗಳನ್ನು ಓದಬಹುದು. ಈ ವಿಧವಾಗಿ ಕಲಿತ ಗುಣಗಳು ಅನುವಂಶೀಯವಾದರೆ ಮಾನವ ಕೋಟಿ ಬಹು ಸುಲಭವಾಗಿ ಸಂಸ್ಕೃತಿಯ ಉನ್ನತಮಟ್ಟವನ್ನು ಪಡೆಯಲು ಸಾಧ್ಯ. ಆದ್ದರಿಂದ 19ನೆಯ ಶತಮಾನದಲ್ಲಿ ಶಿಕ್ಷಣಶಾಸ್ತ್ರಜ್ಞರು ಈ ವಿಷಯವನ್ನು ಕುರಿತು ದೀರ್ಘ ಚರ್ಚೆ ನಡೆಸಿದರು. ಇದಕ್ಕೆ ಕಾರಣ ವಿಕಾಸವಾದದಲ್ಲಿ ಅವರಿಗೆ ಇದ್ದ ವಿಶೇಷ ಆಸಕ್ತಿ. ಫ್ರಾನ್ಸ್ ದೇಶದ ಶ್ರೇಷ್ಠ ಜೀವವಿಜ್ಞಾನಿಯಾದ ಲಾ ಮಾರ್ಕ್ (1744–1829) 1809ರಲ್ಲಿ ಜೀವವಿಕಾಸವನ್ನು ಕುರಿತು ಒಂದು ಆಧಾರಭಾವನೆಯನ್ನು ಮಾಡಿದ. ಈತನ ಪ್ರಕಾರ ಒಂದು ಪ್ರಾಣಿ ಅಭ್ಯಾಸದ ಮೂಲಕ ಒಂದು ಲಕ್ಷಣವನ್ನು ಪಡೆದರೆ ಆ ಲಕ್ಷಣ ಆವರಣಕ್ಕೆ ಅನುಗುಣವಾಗಿ ತನ್ನ ಜೀವನವನ್ನು ಸಾಗಿಸಲು ಸಾಧ್ಯವಾದರೆ ಆಗ ಆ ಲಕ್ಷಣ ಅನುವಂಶೀಯ ವಾಗಿ ಅದರ ಮಕ್ಕಳು, ಮೊಮ್ಮಕ್ಕಳಲ್ಲಿ ಕಾಣಿಸಿಕೊಂಡು ಅವು ಆ ಲಕ್ಷಣಗಳನ್ನು ಅಭ್ಯಾಸವಿಲ್ಲದೆಯೇ ಪ್ರಕೃತಿದತ್ತವಾಗಿ ಪಡೆಯುವದು ಸಾಧ್ಯ. ಈ ಮೂಲಕವೇ ಹೊಸ ಹೊಸ ಪ್ರಾಣಿಗಳು ಲೋಕದಲ್ಲಿ ಉತ್ಪನ್ನವಾಗುವುದಕ್ಕೆ ಸಾಧ್ಯವಾಯಿತೆಂದು ಲಾ ಮಾರ್ಕ್ ವಾದಿಸಿದ. ಉದಾಹರಣೆಗೆ, ಒಂದು ಗುಂಪಿನ ಜಿಂಕೆಗಳು ಅರಣ್ಯದಲ್ಲಿ ನೆಲದ ಮೇಲೆ ಹುಲ್ಲು ಸಿಕ್ಕದೆ ಕತ್ತೆತ್ತಿ ಮರದ ಎಲೆಗಳನ್ನು ತಿನ್ನುವುದಕ್ಕೆ ಪ್ರಾರಂಭಿಸುವುವು. ಹೀಗೆಯೇ ಕೆಲವು ವರ್ಷಗಳ ಕಾಲ ಸಂತಾನ ಪರಂಪರೆಯಾಗಿ ಮಾಡುತ್ತ ಹೋದುದರಿಂದ ಜಿರಾಫೆ ಪ್ರಾಣಿವರ್ಗ ಉಂಟಾಗಿರಬಹುದೆಂದು ಊಹಿಸಬಹುದು. ಇದೇ ವಿಧವಾಗಿ ಗಿಡ್ಡಾಗಿರುವ ಪಕ್ಷಿಗಳು ಆಳವಿಲ್ಲದ ನೀರಿನಲ್ಲಿ ಮೀನುಗಳನ್ನು ಹಿಡಿದು ತಿನ್ನುತ್ತಿದ್ದು ಆ ಪ್ರದೇಶದಲ್ಲಿ ಮೀನುಗಳು ಕಡಿಮೆಯಾದರೆ ಇನ್ನೂ ಸ್ವಲ್ಪ ಆಳದ ನೀರಿನಲ್ಲಿ ನಿಂತು ಮೀನನ್ನು ಹಿಡಿಯಲು ಪ್ರಯತ್ನಿಸುವುವು. ಹೀಗೆ ಪರಂಪರೆಯಾಗಿ ಮಾಡುತ್ತ ಹೋದರೆ ಗಿಡ್ಡಗಿರುವ ಪಕ್ಷಿ ಉದ್ದ ಕಾಲುಗಳನ್ನು ಪಡೆದು ಕ್ರೌಂಚ್ ಪಕ್ಷಿಯಾಗುವುದು ಸಾಧ್ಯ. ಆದರೆ ಲಾ ಮಾರ್ಕನ ಈ ಊಹೆ ನಿರಾಧಾರವೆಂದು ಅನೇಕ ಪ್ರಯೋಗಗಳ ಮೂಲಕ ವಿಶದವಾಯಿತು. ಚಾರ್ಲ್ಸ್ ಡಾರ್ವಿನ್ (1809–82) ಬೇರೆ ವಿಧವಾಗಿ ಜೀವವಿಕಾಸಕ್ಕೆ ಕಾರಣವನ್ನು ತೋರಿಸಿಕೊಟ್ಟ.

ಮುಖ್ಯವಾಗಿ ಜರ್ಮನ್ ದೇಶದ ವೈಮಾನ್ (1834–1914) ತೋರಿಸಿಕೊಟ್ಟಿರುವ ಹಾಗೆ ಅನುವಂಶೀಯ ಜೀವವಾಹಿ ಕಣಗಳು ಬದಲಾವಣೆಯನ್ನು ಹೊಂದಿದರೆ ಮಾತ್ರ ಸಾಧ್ಯ. ಆರ್ಜಿತಗುಣಗಳು ಜೀವವಾಹಿನಿ ಕಣಗಳಲ್ಲಿ ಮಾರ್ಪಾಟನ್ನು ಉಂಟುಮಾಡಲಾರವು. ಆದ್ದರಿಂದ ಅವು ಅನುವಂಶೀಯವಾಗಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಪ್ರತ್ಯೇಕ ಅಭ್ಯಾಸಗಳನ್ನು ಸ್ವತಃ ಕಲಿಯಬೇಕಾಗುವುದು. ಹೀಗೆ ಕಲಿಯುವುದರಲ್ಲಿ ತಂದೆ ತಾಯಿಗಳು ವಿದ್ಯಾವಂತರಾದರೆ ಮಗುವಿನ ಪೋಷಣೆಯನ್ನು ಕ್ರಮಬದ್ಧವಾಗಿ ಮಾಡಿ ಮಗು ಸ್ವಲ್ಪಕಾಲದಲ್ಲಿಯೇ ನಿಪುಣತೆಯನ್ನು ಪಡೆಯುವ ಹಾಗೆ ಸಹಾಯ ಮಾಡಬಹುದು. ಸ್ವಪ್ರಯತ್ನವಿಲ್ಲದೆ ಮಗು ಹೊಸ ಅಭ್ಯಾಸಗಳನ್ನು ಕಲಿಯಲು ಸಾಧ್ಯವಿಲ್ಲ. ಆದರೆ ಆರ್ಜಿತಗುಣಪರಂಪರೆಯನ್ನುಳ್ಳ ವಂಶದಲ್ಲಿ ಮಕ್ಕಳು ಮೊಮ್ಮಕ್ಕಳ ಸಾಮಾನ್ಯ ಗ್ರಹಣ ಶಕ್ತಿ, ಆಸಕ್ತಿಗಳು ಚೆನ್ನಾಗಿ ಬೆಳೆದು ಬಂದಿರುತ್ತವೆ ಎಂಬ ಅಂಶ ಮಾತ್ರ ನಿಜ. (ಬಿ.ಕೆ.)

**ಆರ್ಜೆಂಟೀನ:** ದಕ್ಷಿಣ ಅಮೆರಿಕದ ರಾಜ್ಯಗಳಲ್ಲಿ ಒಂದು ($35^0$–$55^0$ ದಕ್ಷಿಣ ಅಕ್ಷಾಂಶ, $54^022'$–$73^030'$ ಪಶ್ಚಿಮ ರೇಖಾಂಶ). ಉತ್ತರದಲ್ಲಿ ಬೊಲಿವಿಯ, ಪರಗ್ವೆ, ಪಶ್ಚಿಮದಲ್ಲಿ ಚಿಲಿ, ಪೂರ್ವ ಮತ್ತು ಈಶಾನ್ಯದಲ್ಲಿ ಬ್ರೆಜಿಲ್ ಮತ್ತು ಉರುಗ್ವೆ ದೇಶಗಳೂ ದಕ್ಷಿಣ ಮತ್ತು ಪೂರ್ವದಲ್ಲಿ ದಕ್ಷಿಣ ಅಂಟ್ಲಾಂಟಿಕ್ ಸಾಗರ ಸುತ್ತುವರೆದಿರುವ ಈ ದೇಶದ ವಿಸ್ತೀರ್ಣ 2,780,400.ಚ.ಕಿಮೀ. ಜನಸಂಖ್ಯೆ 39,921,833 (2002). ಉತ್ತರಕ್ಕೆ ಸ್ವಲ್ಪ ವಿಶಾಲವಾಗಿದ್ದು ದಕ್ಷಿಣಕ್ಕೆ ಹೋದಂತೆ ಇಕ್ಕಟ್ಟಾಗುತ್ತ ಹೋಗುತ್ತದೆ. ರಾಜಧಾನಿ ಬ್ಯೂನೆಸ್ ಏರಿಸ್. ಇದರ ಜನಸಂಖ್ಯೆ 12,431,000. ಶೇ 89ರಷ್ಟು ಜನ ನಗರಗಳಲ್ಲಿ ವಾಸಿಸುತ್ತಾರೆ. ಉಳಿದ ಜನ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಪ್ರತಿ ಸಾವಿರಕ್ಕೆ ಜನನ ಮರಣ ದರಗಳು ಕ್ರಮವಾಗಿ 29 ಮತ್ತು 9 ಆಗಿವೆ. ಈ ದೇಶದ ಜನ ವಿದ್ಯಾವಂತರು. ಅಕ್ಷರಸ್ಥರ ಸಂಖ್ಯೆ ಶೇ 87ರಷ್ಟಿದೆ. ಒಕ್ಕಲುತನದಲ್ಲಿ ತೊಡಗಿದವರ ಸಂಖ್ಯೆ ಶೇ 25 ರಷ್ಟು ಮಾತ್ರ. ಆದರೂ ಇದು ಕೃಷಿ ಪ್ರಧಾನ ರಾಷ್ಟ್ರ. ಇಲ್ಲಿನ ನಾಣ್ಯ ಪೆಸೊ. ಮುಖ್ಯ ಬೆಳೆಗಳು ಗೋದಿ, ಮೆಕ್ಕೆಜೋಳ, ರೈ, ಓಟ್ಸ್ ಮತ್ತು ಅಗಸೆನಾರು.

ಈ ದೇಶದ ಪಶ್ಚಿಮ ಆಂಡೀಸ್ ಪರ್ವತ ಉತ್ತರ ದಕ್ಷಿಣವಾಗಿ ಹಬ್ಬಿದೆ. ಬಹಳ ಎತ್ತರವಾಗಿರುವುದರಿಂದ ಹಿಮಾವೃತವಾಗಿರುತ್ತದೆ. ಉತ್ತರ ಭಾಗದಲ್ಲಿ ಅರಣ್ಯ ಪ್ರದೇಶವಿದೆ. ನೈರುತ್ಯಕ್ಕೆ ಫಲವತ್ತಾದ ಪಂಪಾಸ್ ಹುಲ್ಲುಗಾವಲು, ದಕ್ಷಿಣಕ್ಕೆ ಮರುಭೂಮಿ. 1580ರಲ್ಲಿ ಸ್ಪೇನ್ ದೇಶದವರು ಇದನ್ನು ಆಕ್ರಮಿಸಿಕೊಂಡರು. ಈ ವಸಾಹತುಗಾರರು ಇಲ್ಲಿಗೆ ಬಂದಕೂಡಲೆ ಇಲ್ಲಿಯ ಜನ ಬೆಳ್ಳಿಯ ಆಭರಣಗಳನ್ನು ಧರಿಸುವುದನ್ನು ಕಂಡು ಇಲ್ಲಿ ಬೆಳ್ಳಿ ಸಿಗಬಹುದೆಂದು ತಿಳಿದು ಇದನ್ನು ಬೆಳ್ಳಿಯ ನಾಡೆಂದು ಕರೆದರು. ಸ್ವಲ್ಪ ಕಾಲಾನಂತರ, ಬೆಳ್ಳಿ ಹೊರದೇಶಗಳಿಂದ ಆಮದಾಗುತ್ತಿದೆ ಎಂಬುದು ತಿಳಿದುಬಂತು.

ಈ ದೇಶವನ್ನು ಸ್ವಾಭಾವಿಕವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. 1 ಉತ್ತರ ಜಾಕೊ ಪ್ರದೇಶ. 2 ಪಂಪಾಸ್ ಹುಲ್ಲುಗಾವಲು ಪ್ರದೇಶ. 3 ಜಾಕೊ, ಪಂಪಾಸ್ ಮತ್ತು ಪಶ್ಚಿಮದ ಆಂಡೀಸ್ ಪರ್ವತಗಳ ನಡುವಿನ ಸೀಮೆ. 4 ಪಟಗೋನಿಯ ತಪ್ಪಲು.

1 ಉತ್ತರದ ಜಾಕೊ ಪ್ರದೇಶ : ಪಶ್ಚಿಮಕ್ಕಿರುವ ಪರ್ವತಗಳ ತಪ್ಪಲಿನಿಂದ ಪೂರ್ವಕ್ಕಿರುವ ಪರಗ್ವೆ ನದಿಯ ಬಯಲಿನವರೆಗೆ ಹಬ್ಬಿ ಹೆಚ್ಚಾಗಿ ಅರಣ್ಯದಿಂದ ತುಂಬಿದೆ. ವಾಣಿಜ್ಯ ಮಾರುತಗಳ ಭಾಗದಲ್ಲಿ ಬರುವುದರಿಂದ ಮಳೆಯಾಗುತ್ತದೆ. ಮಳೆ ಪೂರ್ವಕ್ಕೆ ಹೆಚ್ಚಾಗಿ,

ಪಶ್ಚಿಮಕ್ಕೆ ಹೋದಂತೆ ಕಡಿಮೆಯಾಗುತ್ತ ಹೋಗುತ್ತದೆ. ಆದುದರಿಂದ ಪೂರ್ವಕ್ಕೆ ಕಾಡುಗಳು ಹೆಚ್ಚು ದಟ್ಟವಾಗಿ ಬೆಳೆದಿವೆ. ಸಮುದ್ರ ಸಮೀಪವಾಗಿರುವುದರಿಂದ ಹವೆ ಹಿತಕಾರಿಯಾಗಿದೆ. ನದಿಗಳು ಸದಾ ತಮ್ಮ ದಿಕ್ಕನ್ನು ಬದಲಿಸುತ್ತಿರುತ್ತವೆ. ಆದ್ದರಿಂದ ವಿದ್ಯುತ್ತು ಮತ್ತು ನೀರಿನ ಸೌಕರ್ಯ ಪಡೆಯುವುದು ಕಷ್ಟ. ವಸಾಹತುಗಾರರಿಗೆ ಇಲ್ಲಿನ ಮೂಲ ನಿವಾಸಿಗಳ ಭಯ ಹೆಚ್ಚು. ದಕ್ಷಿಣ ಭಾಗದಲ್ಲಿ ಅರಣ್ಯ ಪ್ರದೇಶ ಕಡಿಮೆ. ಕುರಿಗಳನ್ನೂ ಪರ್ವತಗಳ ತಳಭಾಗಗಳಲ್ಲಿ ದನಗಳನ್ನೂ ಸಾಕುತ್ತಾರೆ. ಈ ಸ್ವಾಭಾವಿಕ ಪ್ರದೇಶ ಒಕ್ಕಲುತನ ಮತ್ತು ಔದ್ಯೋಗಿಕ ಬೆಳವಣಿಗೆಗೆ ಯೋಗ್ಯವಾಗಿಲ್ಲ. ಕ್ವೆಬ್ರೊಕೊ ಎಂಬ ಜಾತಿಯ ಗಿಡ ಇಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಮರ ಬಹಳ ಗಟ್ಟಿ. ಹುಳು ಹತ್ತುವುದಿಲ್ಲ. ಪರಗ್ವೆ ನದಿಯ ದಡದಲ್ಲಿ ಕಟ್ಟಿಗೆಯ ಉದ್ಯೋಗ ನಡೆಯುತ್ತದೆ. ಇಲ್ಲಿ ದಟ್ಟ ಜನಸಾಂದ್ರತೆ ಇರುವ ಪಟ್ಟಣಗಳು ಬಹಳ ಕಡಿಮೆ.




2 ಪಂಪಾಸ್ ಹುಲ್ಲುಗಾವಲು ಪ್ರದೇಶ : ಸಮಶೀತೋಷ್ಣವಲಯ ಭಾಗದಲ್ಲಿ ಸಮುದ್ರ ತೀರದಲ್ಲಿದೆ. ಹವಾಗುಣ ಬಹಳ ಸೌಮ್ಯ. ಹಿತಕರ, ಮೇಲಾಗಿ ಭೂಮಿ ಬಹಳ ಫಲವತ್ತಾಗಿರುವುದರಿಂದ ಆರ್ಜೆಂಟೀನದ ಜನದಟ್ಟಣೆಯ ಅತಿ ಮುಖ್ಯ ಪ್ರದೇಶವಾಗಿದೆ. ಬೇಸಗೆಯ ಸರಾಸರಿ ಶಾಖ ಪ್ರಮಾಣ $80^0$ ಫ್ಯಾ. ಮತ್ತು ಚಳಿಗಾಲದ ಸರಾಸರಿ ಶಾಖಪ್ರಮಾಣ $60^0$ ಫ್ಯಾ. ವಾಣಿಜ್ಯ ಮಾರುತಗಳಿಂದ ಬೇಸಗೆಯಲ್ಲಿ 50"–100".ಸೆಂ.ಮೀ ಮಳೆಯಾಗುತ್ತದೆ. ಪಶ್ಚಿಮಕ್ಕೆ ಹೋದಂತೆ ಮಳೆಯ ಪ್ರಮಾಣ ಕಡಿಮೆ ಆಗುತ್ತ ಹೋಗುತ್ತದೆ. $40^0$ ಅಕ್ಷಾಂಶದಿಂದ ದಕ್ಷಿಣಕ್ಕೆ ಎಂದರೆ ರಿಯೊ, ಕೊಲರಾಡೊ ಪ್ರಾಂತ್ಯದಿಂದ ದಕ್ಷಿಣಕ್ಕೆ ಮಳೆ ತೀರ ಕಡಿಮೆ. ಏಕೆಂದರೆ ಈ ಪ್ರದೇಶ ವಾಣಿಜ್ಯ ಪ್ರತಿ ಮಾರುತಗಳ ಪ್ರದೇಶದಲ್ಲಿದೆ. ಈ ಮಾರುತಗಳು ಆಂಡೀಸ್ ಪರ್ವತಗಳನ್ನು ದಾಟಿ ಬರುವಾಗ ತಮ್ಮ ತೇವಾಂಶವನ್ನು ಕಳೆದುಕೊಂಡಿರುತ್ತವೆ. ಇದನ್ನು ಪಂಪಾಸ್ ಪ್ರದೇಶವೆಂದು ಹೇಳಲಾಗುವುದಿಲ್ಲ. ನಿಜವಾದ ಪಂಪಾಸ್ ಪ್ರದೇಶವೆಂದರೆ ಬ್ಯೂನೆಸ್ ಐರಿಸ್ ಪ್ರಾಂತ್ಯ. ಇದು ಸಮುದ್ರಮಟ್ಟದಿಂದ ಸು. 150ಮೀ ಎತ್ತರದಲ್ಲಿದೆ. ಇಲ್ಲಿ ಖನಿಜ ಸಂಪತ್ತು ಸಿಗುವುದಿಲ್ಲ. ಭೂಮಿ ಬಹಳ ಫಲವತ್ತಾಗಿರುವುದರಿಂದ ಒಕ್ಕಲುತನವೇ ಇಲ್ಲಿಯ ಮುಖ್ಯ ಉದ್ಯೋಗ.

ಇಲ್ಲಿಯ ಮಳೆ ಮತ್ತು ಫಲವತ್ತಾದ ಭೂಮಿ ಒಕ್ಕಲುತನ ಮತ್ತು ನಿವಾಸಕ್ಕೆ ಅನುಕೂಲವಾದುದರಿಂದ ಸ್ಪೇನಿನಿಂದ ಬಂದ ವಲಸೆಗಾರರು ಇಲ್ಲೇ ನೆಲಸಿದರು. ವಾಸಕ್ಕೆ ಅಡಚಣೆಗಳೇನೋ ಇದ್ದವು. ಅದು ಕೇವಲ ಹುಲ್ಲುಗಾವಲು. ಚಿಗರೆ ಮುಂತಾದ ಕೆಲವು ಪ್ರಾಣಿಗಳ ಹೊರತು ಕೃಷಿಗೆ ಉಪಯುಕ್ತ ಪ್ರಾಣಿಗಳೇ ಇರಲಿಲ್ಲ. ಆದ್ದರಿಂದ ಬಿತ್ತಲು ಬೀಜಗಳನ್ನು, ವ್ಯವಸಾಯದ ಸಲುವಾಗಿ ಕುದುರೆಗಳನ್ನು, ದನಕರುಗಳನ್ನು ಇವರು ಮೊದಲು ತಮ್ಮ ದೇಶದಿಂದ ತರಬೇಕಾಯಿತು. ಅಲ್ಲದೆ ಇಲ್ಲಿಯ ಮೂಲನಿವಾಸಿಗಳ ಪ್ರತಿಭಟನೆ ಬಲವತ್ತರವಾಗಿತ್ತು. ಬರುಬರುತ್ತ ಇವರು ಪರಸ್ಪರ ಹೊಂದಿಕೊಂಡು ಬಾಳುವುದನ್ನು ಕಲಿತರು. ಒಕ್ಕಲುತನದಲ್ಲಿ ಈ ಮೂಲ ನಿವಾಸಿಗಳನ್ನು ಕೂಲಿಗಳಂತೆ ದುಡಿಸಿಕೊಳ್ಳಲು ಪ್ರಾರಂಭಿಸಿದರು. ತಂಪು ಭಾಗಗಳಲ್ಲಿ ಗೋದಿಯನ್ನು, ಸ್ವಲ್ಪ ಬೆಚ್ಚಗಿರುವ ಕಡೆಗಳಲ್ಲಿ ಗೋವಿನಜೋಳ ಮತ್ತು ತೀರ ತಂಪಾಗಿರುವ ಕಡೆ ತೋಕೆ ಗೋದಿ (ಓಟ್ಸ್) ಧಾನ್ಯಗಳನ್ನು ಬೆಳೆಯತೊಡಗಿದರು.

ಈಗ ಅರ್ಜೆಂಟೀನ ತನ್ನ ಒಟ್ಟು ಗೋದಿ ಹುಟ್ಟುವಳಿಯ 3/4 ಭಾಗವನ್ನು ರಫ್ತು ಮಾಡುತ್ತದೆ. 1870ರಿಂದ ಈ ಪ್ರದೇಶ ಭರದಿಂದ ಪ್ರಗತಿ ಹೊಂದುತ್ತಲಿದೆ. ಇದಕ್ಕೆ ಕಾರಣ ಪಶುಪಾಲನೆ, ಸಾಕುಪ್ರಾಣಿಗಳು. ಮೊದಲು ದನಗಳನ್ನು ತೊಗಲಿನ ಸಲುವಾಗಿ ಸಾಕುತ್ತಿದ್ದರು. ಆದರೆ ಈಗ ವೈಜ್ಞಾನಿಕ ಶೋಧನೆಗಳಿಂದ ಹಾಲು, ಬೆಣ್ಣೆ ಮತ್ತು ಮಾಂಸಗಳನ್ನು ತಯಾರಿಸಿ ಶಿತೀಕರಣ ಮಾಡಿ ಪರದೇಶಗಳಿಗೆ ರಫ್ತು ಮಾಡುತ್ತಾರೆ. ಒಕ್ಕಲುತನಕ್ಕಿಂತ ಈ ಉದ್ಯೋಗದಲ್ಲಿ ಹೆಚ್ಚು ಜನರಿದ್ದಾರೆ. ಇಲ್ಲಿಯ ಜನರು ಕುಟುಂಬ ಪ್ರಿಯರು. ಅವರದು ಅವಿಭಕ್ತಕುಟುಂಬಗಳು. ಒಂದೇ ಕುಟುಂಬದಲ್ಲಿ ಇನ್ನೂರು ಮುನ್ನೂರು ಜನ ವಾಸಿಸುತ್ತಾರೆ. ಇವರ ಮನೆಗಳು ದೊಡ್ಡ ರಾಜ ಮಹಲನ್ನು ಹೋಲುತ್ತವೆ. ಮನೆಯ ಸುತ್ತಲೂ ತೋಟಗಳು; ಅವುಗಳ ಆಚೆ ಸೇವಕರ ಮನೆಗಳು. ಇವರು ನಗರ ವಾಸಿಗಳು. ಮಹಿಳೆಯರು ಯುರೋಪಿನಲ್ಲಿ ಶಿಕ್ಷಣ ಪಡೆದು ಬರುತ್ತಾರೆ. ಆದರೂ ಹೆಚ್ಚಾಗಿ ಸಾರ್ವಜನಿಕ ರಂಗಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಮಧ್ಯಮ ವರ್ಗದ ಹೆಣ್ಣು ಮಕ್ಕಳು ಶಿಕ್ಷಕಿಯರಾಗಿ ಅಥವಾ ಕಾರಕೂನರಾಗಿ ಕೆಲಸ ಮಾಡುತ್ತಾರೆ. ಪ್ರತಿಯೊಂದು ದೃಷ್ಟಿಯಿಂದ ಈ ಪ್ರದೇಶ ಇಡೀ ದೇಶದಲ್ಲೇ ಅತಿ ಪ್ರಗತಿಪರಭಾಗವೆಂದು ಹೇಳಬಹುದು.

3. ಪೂರ್ವದ ಚಾಕೋ, ಪಂಪಾಸ್ ಮತ್ತು ಆಂಡೀಸ್ ಪರ್ವತಗಳ ಮಧ್ಯಭಾಗ : ಬೆಟ್ಟಗಳಿಂದ ಹಾಗೂ ಕೊಳ್ಳಗಳಿಂದ ಕೂಡಿದೆ. ಇದೊಂದು ಬರಡು ಪ್ರದೇಶ : ಕಾರಣ, ಆಗ್ನೇಯದಿಂದ, ಬೀಸುವ ವಾಣಿಜ್ಯ ಮಾರುತಗಳು ಇಲ್ಲಿಗೆ ಬರುವುದರೊಳಗಾಗಿ ತಮ್ಮ ತೇವಾಂಶವನ್ನು ಕಳೆದುಕೊಂಡಿರುತ್ತವೆ. ಕೇವಲ 12–15ಸೆಂ.ಮೀ ವರೆಗೆ ಮಳೆಯಾಗುತ್ತದೆ. ಅದೂ ಕೇವಲ $30^0$ ಯಿಂದ $40^0$ ಅಕ್ಷಾಂಶದವರೆಗೆ ಮಾತ್ರ. $45^0$ ಅಕ್ಷಾಂಶದಿಂದ ದಕ್ಷಿಣಕ್ಕೆ ಮಳೆಯೇ ಇಲ್ಲ. $30^0$ ರಿಂದ $40^0$ ಅಕ್ಷಾಂಶದ ನಡುವೆ ಚಳಿಗಾಲದಲ್ಲಿ ಮಳೆಯಾಗುವುದರಿಂದ ಮೆಡಿಟರೇನಿಯನ್ ವಾಯುಗುಣವಿದೆ. ದ್ರಾಕ್ಷಿ, ಕಿತ್ತಳೆ ಮುಂತಾದ ಹಣ್ಣುಗಳು ಮತ್ತು ಗೋದಿ ಬೆಳೆಯುತ್ತದೆ. ಈ ಪ್ರದೇಶದ ಉತ್ತರಕ್ಕೆ ಉಷ್ಣವಲಯದಲ್ಲಿ ಕಬ್ಬು ಬೆಳೆಯುತ್ತಾರೆ. ಕಡಿಮೆ ಮಳೆಯಾಗುವ ಭಾಗಗಳಲ್ಲಿ ಮತ್ತು ಕೊಳ್ಳಗಳಲ್ಲಿ ಹುಲ್ಲು ಬೆಳೆಯುತ್ತಾರೆ. ಕಡಿಮೆ ಮಳೆಯಾಗುವ ಭಾಗಗಳಲ್ಲಿ ಮತ್ತು ಕೊಳ್ಳಗಳಲ್ಲಿ ಹುಲ್ಲು ಬೆಳೆಯುವುದರಿಂದ ದನಗಳನ್ನು ಸಾಕುತ್ತಾರೆ. ಮಾಂಸದ ಉತ್ಪಾದನೆಯೇ ಮುಖ್ಯ ಉದ್ಯೋಗ. ಈ ಪ್ರದೇಶದ ಮುಖ್ಯ ನಗರವೆಂದರೆ ಮೆಂಡೋಸಾ, ಬ್ಯೂನೆಸ್ ಐರಿಸ್ ಇಲ್ಲಿಗೆ ಒಂದು ರೈಲು ಮಾರ್ಗವಿದೆ.

4. ಪಟಗೋನಿಯದ ತಪ್ಪಲು ಪ್ರದೇಶ : ರಿಯೋಕೊಲರಾಡೊ ಪ್ರಾಂತ್ಯದಿಂದ ಖಂಡದ ದಕ್ಷಿಣ ತುದಿಯವರೆಗೆ ಹಬ್ಬಿದೆ. ದಕ್ಷಿಣಕ್ಕೆ ಬಂದಂತೆ ಬಹಳ ಇಕ್ಕಟ್ಟಾಗುತ್ತ ಹೋಗುತ್ತದೆ. ಸಂಪೂರ್ಣ ಮರುಭೂಮಿ. ದಕ್ಷಿಣ ಅಮೆರಿಕದ ಸಮಶೀತೋಷ್ಣವಲಯದಲ್ಲಿದೆ. ಆಂಡೀಸ್ ಪರ್ವತಕ್ಕೆ ಹೊಂದಿಕೊಂಡಿರುವ ಪಶ್ಚಿಮ ಭಾಗದಲ್ಲಿ ಚಳಿಗಾಲದಲ್ಲಿ ಸ್ವಲ್ಪ ಮಳೆಯಾಗುವುದರಿಂದ ಕುರಿಗಳನ್ನು ಸಾಕುತ್ತಾರೆ. ಜನಸಂಖ್ಯೆ ಕೇವಲ 1½ ಲಕ್ಷ. ಕೆಲವೆಡೆಗಳಲ್ಲಿ ನೀರಾವರಿಯ ಸಹಾಯದಿಂದ ಒಕ್ಕಲುತನ ಮಾಡುತ್ತಾರೆ. ಸಮುದ್ರ ಮಟ್ಟದಿಂದ 300–900 ಮೀ ಎತ್ತರವಾಗಿದ್ದು ಅಲ್ಲಲ್ಲಿ ಗುಡ್ಡಗಳಿಂದ ಕೂಡಿದೆ. ಸಾಗುವಳಿಗೆ ಯೋಗ್ಯವಾದ ಪ್ರದೇಶ ಬಹಳ ಕಡಿಮೆ. ಅಭಿವೃದ್ಧಿ ಸಾಲದು. ಬೆಟ್ಟಗಳಲ್ಲಿ ಇತ್ತೀಚೆಗೆ ಎಣ್ಣೆಯನ್ನು ತೆಗೆಯುತ್ತಾರೆ.

ಪಂಪಾಸ್ ಪ್ರದೇಶವೇ ಮುಖ್ಯ ಪ್ರಾಂತ್ಯ. ವ್ಯವಸಾಯವೇ ಪ್ರಧಾನ ಕಸುಬು. ಬ್ಯೂನೆಸ್ ಐರಿಸ್ ಪ್ರಪಂಚದ ಪ್ರಮುಖ ನಗರದಲ್ಲಿ ಒಂದು. ರೋಜಾರಿಯೊದಲ್ಲಿ ಪ್ರಾಚೀನವಾದ ಒಂದು ವಿಶ್ವವಿದ್ಯಾಲಯವಿದೆ. ಈ ಪ್ರದೇಶದಲ್ಲಿ ಯುರೋಪ್ ಖಂಡದ ಎಲ್ಲ ಜನರೂ ಇದ್ದಾರೆ.

ನಾಗರಿಕರಾಗಬೇಕೆನ್ನುವ ಎಲ್ಲರಿಗೂ ಸರ್ಕಾರ ಅನೇಕ ಬಗೆಯ ಸೌಲಭ್ಯಗಳನ್ನು ಒದಗಿಸಿದೆ. ಹೆಚ್ಚು ಸೌಲಭ್ಯಗಳಿರುವುದು ವಿಶೇಷವಾಗಿ ಇಟಾಲಿಯನ್ ಮತ್ತು ಸ್ಪಾನಿಷ್ ಜನರಿಗೆ. ಇಲ್ಲಿ 42000ಕಿಮೀ ಉದ್ದದ ರೈಲುಮಾರ್ಗವಿದೆ. ಈ ದೇಶ ಶಿಕ್ಷಣರಂಗದಲ್ಲಿ ಬಹಳ ಪ್ರಗತಿಹೊಂದಿದೆ. ಆರು ವಿಶ್ವವಿದ್ಯಾನಿಲಯಗಳು, ಎರಡು ಸಾವಿರ ಮಾಧ್ಯಮಿಕ ಶಾಲೆಗಳು ಮತ್ತು ಹದಿನಾಲ್ಕು ಸಾವಿರ ಪ್ರಾಥಮಿಕ ಶಾಲೆಗಳು ಇವೆ. ಈ ದೇಶದಲ್ಲಿ ರೋಮನ್ ಕೆಥೊಲಿಕ್ ಪಂಥದವರೇ ಹೆಚ್ಚು. ಇಲ್ಲಿಯ ನಿರ್ಯಾತಗಳು ದಕ್ಷಿಣ ಅಮೆರಿಕದ ಒಟ್ಟು ನಿರ್ಯಾತದ ಶೇ 12 ರಷ್ಟಿದೆ. ಇಲ್ಲಿಂದ ಗೋದಿ, ಗೋವಿನ ಜೋಳ, ಅಗಸೆ,

ಮಾಂಸ ಮತ್ತು ಮಾಂಸದ ಪದಾರ್ಥಗಳು, ಉಣ್ಣೆ, ಚರ್ಮ, ಎಣ್ಣೆಕಾಳುಗಳು ರಫ್ತಾಗುವ ಮುಖ್ಯ ಪದಾರ್ಥಗಳು. ಇವುಗಳ ಪೈಕಿ ಶೇ 23ರಷ್ಟು ಇಂಗ್ಲೆಂಡಿಗೆ, ಶೇ 20 ರಷ್ಟು ಬ್ರಿಟಿಷ್ ರಾಜ್ಯಗಳಿಗೆ, ಶೇ 11 ರಷ್ಟು ಜರ್ಮನಿಗೆ, ಶೇ 7 ರಷ್ಟು ಇಟಲಿಗೆ, ಶೇ 7 ರಷ್ಟು ಬ್ರೆಜಿಲ್‌ಗೆ ಮತ್ತು ಶೇ 32 ರಷ್ಟು ಇತರ ರಾಷ್ಟ್ರಗಳಿಗೆ ಹೋಗುತ್ತವೆ.

ಆಮದಾಗುವ ವಸ್ತುಗಳಲ್ಲಿ ಶೇ 20 ರಷ್ಟು ಬ್ರಿಟಿಷ್ ರಾಷ್ಟ್ರಗಳಿಂದ, ಶೇ 12 ರಷ್ಟು ಜರ್ಮನಿಯಿಂದ, ಶೇ 8ರಷ್ಟು ಬ್ರೆಜಿಲ್‌ನಿಂದ, ಶೇ 7 ರಷ್ಟು ವೆನಿಜೂಲದಿಂದ, ಶೇ 7 ಜಪಾನಿನಿಂದ ಮತ್ತು ಶೇ 46ರಷ್ಟು ಉಳಿದ ರಾಷ್ಟ್ರಗಳಿಂದ ಬರುತ್ತವೆ. (ಬಿ.ಒ.)

**ಚರಿತ್ರೆ** : 16ನೆಯ ಶತಮಾನದ ಮೊದಲ ದಶಕಗಳಲ್ಲಿ ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳ ಸಾಹಸಿಗ ನಾವಿಕರು ದಕ್ಷಿಣ ಅಮೆರಿಕಕ್ಕೆ ಹೋಗಿ ಅಲ್ಲಿನ ದೇಶಗಳ ಸಂಪತ್ತನ್ನು ಸೂರೆಗೊಳ್ಳಲುಪಕ್ರಮಿಸಿದಾಗ ಪೆರು ಮುಂತಾದ ದೇಶಗಳಲ್ಲಿ ಅವರು ಕಂಡ ಬೆಳ್ಳಿ ಮತ್ತು ಚಿನ್ನದ ಗಣಿಗಳನ್ನಾಗಲಿ, ಬಹುಕಾಲದಿಂದ ಬೆಳೆದು ಬಂದಿದ್ದ ನಾಗರಿಕತೆಯನ್ನಾಗಲಿ ಆರ್ಜೆಂಟೀನದಲ್ಲಿ ಕಾಣಲಿಲ್ಲ. ಅಲ್ಲದೆ ಸಣ್ಣ ಸಣ್ಣ ಪಂಗಡಗಳನ್ನು ಮಾಡಿಕೊಂಡು ಅಲ್ಲಿ ವಾಸಿಸುತ್ತಿದ್ದ ಇಂಡಿಯನ್ನರಿಂದ ಪ್ರಬಲ ಪ್ರತಿಭಟನೆಯನ್ನೆದುರಿಸಬೇಕಾಯಿತು. ಜುಆನ್ ದ ಗಾರೆ ಎಂಬ ಸ್ಪೇನಿನ ಅಧಿಕಾರಿ 1580ರಲ್ಲಿ ಬ್ಯೂನೆಸ್ ಐರಿಸ್ ನಗರವನ್ನು ಸ್ಥಾಪಿಸಿ ಇಂಡಿಯನ್ನರ ಪ್ರಾಬಲ್ಯವನ್ನು ಮುರಿದ ಮೇಲೆ ಅರ್ಜೆಂಟೈನ ಸ್ಪೇನಿನ ಆಡಳಿತಕ್ಕೆ ಸೇರಿತೆನ್ನಬಹುದು. 1776ರಲ್ಲಿ ದಕ್ಷಿಣ ಅಮೆರಿಕದಲ್ಲಿ ಸ್ಪೇನಿಗೆ ಸೇರಿದ ದೇಶಗಳನ್ನೆಲ್ಲ ಒಂದು ಪ್ರಾಂತ್ಯವನ್ನಾಗಿ ಮಾಡಿದಾಗ ಬ್ಯೂನೆಸ್ ಐರಿಸ್ ಅದರ ರಾಜಧಾನಿಯಾಯಿತು. ನೆಪೋಲಿಯನ್ನನ ಕಾಲದಲ್ಲಿ ಬ್ರಿಟಿಷರು ದೇಶವನ್ನು ಸ್ವಾಧೀನಪಡಿಸಿಕೊಳ್ಳಲೆತ್ನಿಸಿ ವಿಫಲರಾದರು. ಈ ವಿಜಯದಿಂದ ಉತ್ತೇಜಿತರಾದ ಆರ್ಜೆಂಟೀನದ ಪ್ರಜೆಗಳು ಸ್ವಾತಂತ್ರ್ಯಕ್ಕಾಗಿ ಸ್ಪೇನಿನ ವಿರುದ್ಧ ಹೋರಾಡತೊಡಗಿದರು. ಕೊನೆಗೆ 1810ರಲ್ಲಿ ಪ್ರಜಾಧಿಪತ್ಯ ಸ್ಥಾಪಿತವಾಯಿತು. ಆದರೂ ಸುಲಭವಾಗಿ ದೊರೆತಿದ್ದ ಇಂಥ ಸಂಪದ್ಭರಿತ ದೇಶವನ್ನು ಬಿಟ್ಟು ಕೊಡಲು ಸ್ಪೇನ್ ಒಪ್ಪಲಿಲ್ಲ; ಹೋರಾಟ ಮುಂದುವರೆಯಿತು. 1842ರ ಕೊನೆಗೆ ಅರ್ಜೆಂಟೀನದ ಸ್ವಾತಂತ್ರ್ಯವನ್ನು ಸ್ಪೇನ್ ಒಪ್ಪಲೇಬೇಕಾಯಿತು. ಸ್ವಾತಂತ್ರ್ಯವನ್ನು ಗಳಿಸಿದರೂ ದೇಶದಲ್ಲಿ ಅಂತರ್ಯುದ್ಧಗಳು ನಡೆಯುತ್ತಲೇ ಬಂದವು. ನೆರೆ ದೇಶಗಳೊಂದಿಗೆ ಹೋರಾಟವೂ ನಡೆಯಿತು. ಇದು 19ನೆಯ ಶತಮಾನದ ಉತ್ತರಾರ್ಧದಲ್ಲೆಲ್ಲ ನಡೆಯಿತು. ಚಿಲಿ ದೇಶದೊಂದಿಗೆ ನಡೆದ ಯುದ್ಧ ನಿಂತು, ಎರಡು ದೇಶಗಳ ಗಡಿಯ ಉಸ್ಪಲಾಟ ಕಣಿವೆಯಲ್ಲಿ, ಕ್ರೈಸ್ತನ ಬೃಹತ್ ಶಿಲಾವಿಗ್ರಹವೊಂದು 1902ರಲ್ಲಿ ಸ್ಥಾಪಿತವಾದಾಗ ನೆರೆ ದೇಶಗಳೊಡನೆ ಯುದ್ಧ ನಿಂತಿತೆನ್ನಬಹುದು. ದೇಶದ ರಾಜಕೀಯ ಪರಿಸ್ಥಿತಿ ಮಾತ್ರ ಮುಂದೂ ಸ್ಥಿಮಿತಕ್ಕೆ ಬರಲಿಲ್ಲ. ಸೈನ್ಯದ ಸಹಾಯದಿಂದ ನಿರಂಕುಶಪ್ರಭುತ್ವ ಮುಂದುವರಿಯಿತು. ಮೊದಲ ಮಹಾಯುದ್ಧದಲ್ಲಿ ಅರ್ಜೆಂಟೈನ ತಟಸ್ಥವಾಗುಳಿದರೂ ಎರಡನೆಯ ಮಹಾಯುದ್ಧದ ಕೊನೆಯ ಕಾಲದಲ್ಲಿ ಮಿತ್ರ ರಾಷ್ಟ್ರಗಳ ಪಕ್ಷವಹಿಸಿ ಹೋರಾಟಕ್ಕಿಳಿಯಬೇಕಾಯಿತು. 1945ರಲ್ಲಿ ಅದಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವ ದೊರಕಿತು. ಸೈನ್ಯದ ಬೆಂಬಲ ಪಡೆದ ನಿರಂಕುಶಾಧಿಕಾರವಂತೂ ಇಂದಿಗೂ ಮುಂದುವರಿದಿದೆ.

**ಸರ್ಕಾರ ಪದ್ಧತಿ** : ಈ ದೇಶವನ್ನು 22 ರಾಜಕೀಯ ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಇಲ್ಲಿಯ ರಾಜ್ಯವ್ಯವಸ್ಥೆಯನ್ನು ಸಂಯುಕ್ತ ರಾಜ್ಯವ್ಯವಸ್ಥೆಯೆಂದು ಹೇಳಬಹುದು. ಪ್ರಾಂತ್ಯಗಳ ರಾಜ್ಯವ್ಯವಸ್ಥೆಯೇ ಬೇರೆ. ಇದೂ ಕೂಡ ಸಂವಿಧಾನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಆರ್ಜೆಂಟೀನದ ರಾಷ್ಟ್ರೀಯ ಸರ್ಕಾರದ ಕಾರ್ಯಾಂಗದ ಶ್ರೇಷ್ಠ ಅಧಿಕಾರಿಯಾದ ಅಧ್ಯಕ್ಷ ಪರೋಕ್ಷವಾಗಿ ಚುನಾಯಿಸಲ್ಪಡುತ್ತಾನೆ. ಉಪಾಧ್ಯಕ್ಷರೂ ಇದ್ದಾರೆ. ಇವರ ಅಧಿಕಾರಾವಧಿ ಆರು ವರ್ಷ. ಶಾಸನಾಂಗದಲ್ಲಿ ಸೆನೆಟ್ ಮತು ಪ್ರತಿನಿಧಿ ಸಭೆಯೆಂಬ ಎರಡು ಸಭೆಗಳಿವೆ. ಸೆನೆಟ್ ಸದಸ್ಯರನ್ನು ಪರೋಕ್ಷವಾಗಿಯೂ ಪ್ರತಿನಿಧಿ ಸಭೆಯ ಸದಸ್ಯರನ್ನು ನೇರವಾಗಿಯೂ ಆರಿಸಲಾಗುತ್ತದೆ. ಶಾಸಕರ ಅಧಿಕಾರಾವಧಿ ಆರು ವರ್ಷ. ಕಡೆಯದಾಗಿ, ಆರ್ಜೆಂಟೀನದಲ್ಲಿ ಸುಪ್ರೀಮ್‌ಕೋರ್ಟಿನ ಹಿರಿಯತನದಲ್ಲಿ ನ್ಯಾಯಾಂಗ ಇಲಾಖೆ ಕಾರ್ಯ ನಿರ್ವಹಿಸುವುದು.

ಆರ್ಜೆಂಟೀನ ಅಮೆರಿಕ ಸಂಸ್ಥಾನದ ಸರ್ಕಾರ ವ್ಯವಸ್ಥೆಯನ್ನು ರೂಪಿಸಿಕೊಂಡರೂ ಈ ರಾಷ್ಟ್ರದಲ್ಲಿ ಭದ್ರ ಸರ್ಕಾರಗಳೇರ್ಪಡಲು ಆತಂಕಗಳುಂಟಾಗಿವೆ. ಆಗಾಗ್ಗೆ ಸೈನಿಕ ಕ್ರಾಂತಿಗಳು ಸಂಭವಿಸುತ್ತಿವೆ. ಅಧಿಕಾರದ ಹೋರಾಟ ತೀವ್ರವಾಗಿ ನಡೆದಿದೆ. 1943ರಲ್ಲಿ ಸೈನಿಕ ಕ್ರಾಂತಿ ಸಂಭವಿಸಿತು. ಇದರ ಫಲವಾಗಿ ರಾಜಕೀಯ ಪಕ್ಷಗಳು ಕಾನೂನುಬಾಹಿರ ಸಂಸ್ಥೆಗಳಾದವು. ಚುನಾವಣೆಗಳು ರದ್ದಾದವು. ಚುನಾಯಿತ ಸಭೆಗಳಿಲ್ಲದಾದವು. ಈ ಸಂದರ್ಭದಲ್ಲಿ ಮಹತ್ತ್ವಾಕಾಂಕ್ಷೆಯ ವ್ಯಕ್ತಿ ಪೆರೋನ್ ಅಧಿಕಾರಕ್ಕೆ ಬಂದ. 1946ರಲ್ಲಿ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟ, ತನ್ನ ಅಧಿಕಾರವನ್ನು ಕಾಯ್ದುಕೊಳ್ಳಲು ಹೊಸ ಸಂವಿಧಾನವನ್ನು ರಚಿಸಿದ. ಈ ಪ್ರಕಾರವಾಗಿ ಅಧ್ಯಕ್ಷ ಎಷ್ಟು ಬಾರಿಯಾದರೂ ಚುನಾವಣೆಗೆ ನಿಲ್ಲಲು ಅವಕಾಶವಾಯಿತು. ವಾಸ್ತವವಾಗಿ ಪೆರೋನ್ ಸರ್ವಾಧಿಕಾರಿಯಾದ. ಇವನ ಹೆಂಡತಿ ಅನಧಿಕೃತ ರಾಜತಾಂತ್ರಿಕ ವ್ಯಕ್ತಿಯಾಗಿ ಪ್ರಸಿದ್ಧಿ ಗಳಿಸಿದಳು.

ಆರ್ಜೆಂಟೀನ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಇಲ್ಲಿಯ ಬಹುಸಂಖ್ಯಾತ ಜನ ರೋಮನ್ ಕೆಥೊಲಿಕ್ ಪಂಥಕ್ಕೆ ಸೇರಿದವರು. ಸಂವಿಧಾನ ಸರ್ವರಿಗೂ ಧಾರ್ಮಿಕ ಸ್ವಾತಂತ್ರ್ಯ ಕೊಟ್ಟಿದೆ. ನೆರೆಹೊರೆಯ ದೊಡ್ಡ ರಾಷ್ಟ್ರಗಳೊಡನೆ ಹೆಚ್ಚಿನ ಸೌಹಾರ್ದವನ್ನು ಸಾಧಿಸಿದಲ್ಲಿ ದೇಶ ಆರ್ಥಿಕವಾಗಿ ಮುಂದುವರಿಯಲು ಸಾಕಷ್ಟು ಅವಕಾಶಗಳಿವೆ. (ಜಿ.ಎಸ್.ಎಚ್.)

**ಆರ್ಜೆಷ್ಕೊವ ಎಲಿಜ** : 1842–1910. ಪೋಲೆಂಡಿನ ಕಾದಂಬರಿಕಾರ್ತಿ. ವಾರ್ಸದಲ್ಲಿ ವಿದ್ಯಾಭ್ಯಾಸ. ಗಂಡ ರಾಜಕೀಯ ಕಾರಣಗಳಿಗಾಗಿ ಪೋಲೆಂಡನ್ನು ಬಿಟ್ಟ ಮೇಲೆ, ಗ್ರಾಡ್ನೊದಲ್ಲಿ ವಾಸಮಾಡಿದಳು. ಕಾದಂಬರಿಗಳ ರಚನೆಯನ್ನು ಪ್ರಾರಂಭಿಸಿದುದು ಇಲ್ಲಿಯೇ (1866). ಪ್ರತ್ಯಕ್ಷೈಕ ಪ್ರಮಾಣವಾದದ ವಾಸ್ತವಿಕತೆ (ಪಾಸಿಟಿವಿಸ್ಟ್ ರಿಯಲಿಸಂ) ಇವಳ ಕೃತಿಗಳಲ್ಲಿ ಕಾಣುತ್ತದೆ. ಸಂಕುಚಿತ ರಾಷ್ಟ್ರೀಯತೆ ಮತ್ತು ಯೆಹೂದ್ಯ ದ್ವೇಷಗಳನ್ನು ಖಂಡಿಸಿದಳು. ಸ್ತ್ರೀ ವಿದ್ಯಾಭ್ಯಾಸ ಮತ್ತು ಯೆಹೂದ್ಯರಿಗೆ ನ್ಯಾಯ ಇವುಗಳನ್ನು ಸಮರ್ಥಿಸಿದಳು. ರೈತರ ಮತ್ತು ಶ್ರೀಮಂತವರ್ಗದ ಜೀವನಗಳನ್ನು ಚಿತ್ರಿಸಿ, ಶ್ರೀಮಂತರು ರೈತರನ್ನು ಕೀಳಾಗಿ ಕಾಣುವ ಬಗೆಯನ್ನೂ ರೈತರ ಅಜ್ಞಾನದಿಂದ ಆಗುವ ಅನಾಹುತಗಳನ್ನೂ ನಿರೂಪಿಸಿದಳು. ಲೋಕಾಯಿತವಾದವನ್ನು ಖಂಡಿಸಿದಳು. ಪ್ರಗತಿಶೀಲ ಯೆಹೂದ್ಯರು ನ್ಯಾಯ ದೊರಕಿಸಿಕೊಳ್ಳಲು ನಡೆಸಿದ ಹೋರಾಟವನ್ನು ಚಿತ್ರಿಸಿದಳು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಲಿಥುಯೇನಿಯನ್ ಪೋಲಿಷರ ಜೀವನವನ್ನು ಚಿತ್ರಿಸುವ ನೀಮೆನ್‌ನ ದಡದ ಮೇಲೆ ಎಂಬ ಕಾದಂಬರಿ ಈಕೆಯ ಮಹಾಕೃತಿ. ಸಮರ್ಥವೂ ವಿಶಿಷ್ಟವೂ ಆದ ಶೈಲಿ, ಅನ್ಯಾಯಕ್ಕೊಳ್ಳಗಾದವರ ಬಗೆಗೆ ನೈಜವಾದ ಮರುಕ ಇವು ಇವಳ ಕಾದಂಬರಿಗಳಿಗೆ ಸತ್ತ್ವ ನೀಡಿವೆ. ಸ್ಟೀಫನ್ ಪೆರೊಮ್‌ಸ್ಕಿ ಮೊದಲಾದ ಬರೆಹಗಾರರು ಇವಳ ಪ್ರಭಾವಕ್ಕೆ ಒಳಗಾದರು. (ಎಲ್.ಎಸ್.ಎಸ್.)

**ಆರ್ಟಾಸರ್ಕ್ಸೀಸ್** : ಪರ್ಷಿಯದ ಅಕೇಮೆನಿಡೇ (ನೋಡಿ) ರಾಜವಂಶದ ಮೂರು ದೊರೆಗಳ ಹೆಸರು. ಈ ಹೆಸರು ಆರ್ತಕ್ಷತ್ರ ಎಂಬ ಪರ್ಷಿಯನ್ ನಾಮಪದದ ಅಪಭ್ರಂಶ.

**ಮೊದಲನೆಯ ಆರ್ಟಾಸರ್ಕ್ಸೀಸ್** : ಪ್ರ.ಶ.ಪೂ. 465–424ರವರೆಗೆ ಪರ್ಷಿಯ ಸಾಮ್ರಾಜ್ಯವನ್ನಾಳಿದ. ತಂದೆ ಸರ್ಕ್ಸೀಸ್; ತಂದೆಯನ್ನು ಕೊಂದ ಆರ್ಟಬಾಸಸ್ ಎಂಬ ಸೇನಾಧಿಪತಿಯನ್ನು ಕೊಲ್ಲಿಸಿ ಸೇಡು ತೀರಿಸಿಕೊಂಡ. ಅಕೇಮೆನಿಡೇ ಸಾಮ್ರಾಜ್ಯದ ಅವನತಿ ಇವನ ಕಾಲದಲ್ಲಿ ಪ್ರಾರಂಭವಾಯಿತೆಂದು ಕೆಲವರ ಅಭಿಪ್ರಾಯ. ಈಜಿಪ್ಟ್, ಬ್ಯಾಕ್ಟ್ರಿಯ ಮುಂತಾದ ಪ್ರಾಂತ್ಯಗಳಲ್ಲಿ ಪ್ರಾರಂಭವಾದ ದಂಗೆಗಳನ್ನಡಗಿಸುವುದು ಇವನಿಗೆ ಕಷ್ಟವಾಯಿತು. ಗ್ರೀಕರೊಂದಿಗೂ ನೌಕಾಯುದ್ಧ ನಡೆದು ಒಪ್ಪಂದದಲ್ಲಿ ಪರ್ಯವಸಾನಗೊಂಡಿತು. ರಾಜ್ಯಭಾರದಲ್ಲಿ ಅವನ ತಾಯಿಯ ಕೈವಾಡ ಹೆಚ್ಚಾಗಿ ಆಡಳಿತ ಸಡಿಲವಾಯಿತು.

**ಎರಡನೆಯ ಆರ್ಟಾಸರ್ಕ್ಸೀಸ್** : ಎರಡನೆಯ ಡೇರಿಯಸ್ಸನ ಮಗ. ಪ್ರ.ಶ.ಪೂ. 404–358 ರವರೆಗೆ ರಾಜ್ಯವನ್ನಾಳಿದ. ಆ ಪರ್ಷಿಯನ್ ಹೆಸರು ಆರ್ಡಾಷೇರ್. ಸಿಂಹಾಸನಕ್ಕೆ ಬಂದ ಕೆಲವೇ ದಿನಗಳಲ್ಲಿ ಕೈರಸ್ ದಂಗೆಯೆದ್ದು ಕುನಾಸ ಕದನದಲ್ಲಿ ಸೋತು ಮಡಿದ. ಆರ್ಟಾಸರ್ಕ್ಸೀಸ್ ಆಡಳಿತ ಭಾರವನ್ನೆಲ್ಲ ಮುಖ್ಯಾಧಿಕಾರಿಗಳಿಗೆ ವಹಿಸಿದ್ದ. ಅಧಿಕಾರವೆಲ್ಲ ಮಾಂಡಲಿಕರಾಗಿದ್ದ ಫಾರ್ನಬಾಸಸ್ ಮತ್ತು ಟಿಸ್ಸಾಫರ್ನೆಸ್‌ರ ಕೈಯ್ಯಲ್ಲಿತ್ತು. ಅವರು ಗ್ರೀಕರಿಗೆ ಅಪಾರ ಹಣಕೊಟ್ಟು ಅವರ ನಗರರಾಜ್ಯಗಳನ್ನೆಲ್ಲ ತಮ್ಮ ಹತೋಟಿಯಲ್ಲಿಟ್ಟು ಕೊಂಡರು. ಆದರೆ ಸಾಮ್ರಾಜ್ಯದಲ್ಲೇ ಅಲ್ಲಲ್ಲಿ ಅಶಾಂತಿಯುಂಟಾಗಿ ಅವುಗಳನ್ನಡಗಿಸುವುದು ಕಷ್ಟವಾಯಿತು. ಆರ್ಟಾಸರ್ಕ್ಸೀಸ್‌ನ ಕಾಲದಲ್ಲಿ ಪರ್ಷಿಯನ್ ಸೂರ್ಯದೇವತಾರಾಧನೆ ಹೆಚ್ಚಾಗಿ ಹರಡಿತು.

**ಮೂರನೆಯ ಆರ್ಟಾಸರ್ಕ್ಸೀಸ್** : ಎರಡನೆಯ ಆರ್ಟಾಸರ್ಕ್ಸೀಸ್‌ನ ಮಗ. ಪ್ರಶ.ಪೂ. 358–338ರವರೆಗೆ ಆಳಿದ. ಪರ್ಷಿಯನ್ ಹೆಸರು ಆರ್ಡಾಷೇರ್. ಸಿಂಹಾಸನಕ್ಕೆ ಬಂದಕೂಡಲೆ ತನಗೆ ವಿರೋಧಿಗಳಾಗಿದ್ದವರನ್ನೂ ಬಂಧುಬಳಗದವರನ್ನೂ ಕೊಲ್ಲಿಸಿದ. ರಾಜ್ಯಭಾರದಲ್ಲೂ ಕ್ರೂರಿ, ನಿರ್ದಯಿ. ತನ್ನ ಇಚ್ಛೆಗೆ ವಿರೋಧವಾಗಿ ವರ್ತಿಸಿದವರನ್ನು ಉಗ್ರವಾಗಿ ದಂಡಿಸುತ್ತಿದ್ದ. ಈಜಿಪ್ಟಿನ ಮೇಲೆ ನಡೆಸಿದ ದಂಡಯಾತ್ರೆಯಲ್ಲಿ ಅನೇಕ ನಗರಗಳನ್ನು ನೆಲಸಮ ಮಾಡಿ ಅಸಂಖ್ಯಾತ ಜನರನ್ನು ಕೊಲ್ಲಿಸಿದ. ಪುಂಡಾಟದ ಮಾಂಡಲಿಕರನ್ನು ತುಂಬ ಕ್ರೌರ್ಯದಿಂದ ಅಡಗಿಸಿದ. ಮಂತ್ರಿಗಳಲ್ಲೊಬ್ಬನಾದ ನಪುಂಸಕ ಬಗೋಅಸ್ ಕೊನೆಗೆ ಇವನಿಗೆ ವಿಷವಿಟ್ಟು ಕೊಂದ. *

**ಆರ್ಟಿಚೋಕ್** : ಖಾದ್ಯಯೋಗ್ಯ ಗಡ್ಡೆಗಳಿರುವ ಬೇರೆ ಬೇರೆ ವಿಧದ ಮೂರು ತರಕಾರಿಗಿಡಗಳ ಹೆಸರು. ಇದನ್ನು ಹೆಚ್ಚು ಶ್ರಮವಿಲ್ಲದೆ ಬೆಳೆಸಬಹುದು.

1. ಗ್ಲೋಬ್ ಆರ್ಟಿಚೋಕ್ : ಆಸ್ಟರೇಸೀ (ಕಂಪಾಸಿಟೀ) ಕುಟುಂಬಕ್ಕೆ ಸೇರಿದ ಸೈನಾರ ಸ್ಕಾಲಿಮಸ್ ಎಂಬುದು. ಇದರ ಮೂಲಸ್ಥಳ ಏಷ್ಯಖಂಡ. ಕಾಲ ಕ್ರಮದಲ್ಲಿ ಇದು ಬೇರೆ ಬೇರೆ ದೇಶಗಳಿಗೆ ಹರಡಿದೆ. ಇಟಲಿ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಅಮೆರಿಕ

ದೇಶಗಳಲ್ಲೂ ಇದನ್ನು ಸಾಗುವಳಿ ಮಾಡುವರು. ಇದರ ಗೋಳಾಕಾರದ ಹೂಗೊಂಚಲನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಎಳಸಾದ ಹೂಗೊಂಚಲನ್ನು ಹಸಿ ತರಕಾರಿಯಾಗಿ, ಇಲ್ಲವೆ ಬೇಯಿಸಿ ಅಥವಾ ಕರಿದು ಆಹಾರವಾಗಿ ಬಳಸುವರು. ಇದರಲ್ಲಿ ಕಬ್ಬಿಣ, ಅಯೊಡೀನ್, ಮತ್ತಿತರ ಖನಿಜ ಪೌಷ್ಟಿಕಾಂಶಗಳು ಹೆಚ್ಚು ಪ್ರಮಾಣದಲ್ಲಿವೆ. ಇದರಂತೆಯೇ3 ಇರುವ ಇನ್ನೊಂದು. ಕಾರಡೂನ್‌ ಎಂಬುದು. ಇದು ಗುಂಡು ಆರ್ಟಿಚೋಕ್ ಗಿಡದ ಸಮೀಪ ಬಂಧು. ಆದರೆ ಇದರ ಬುಡ ಮತ್ತು ಎಲೆತೊಟ್ಟುಗಳನ್ನು ಮಾತ್ರ ತರಕಾರಿಯಾಗಿ ಉಪಯೋಗಿಸುತ್ತಾರೆ.



ಮೊದಲನೆಯದು ಗ್ಲೋಬ್ ಆರ್ಟಿಚೋಕ್
ಎರಡನೆಯದು ಜೆರೂಸಲಂ ಆರ್ಟಿಚೋಕ್

2. ಜೆರೂಸಲಂ ಆರ್ಟಿಚೋಕ್ : ಇದು ಕೂಡ ಆಸ್ಟರೇಸೀ ಕುಟುಂಬಕ್ಕೆ ಸೇರಿದೆ. ಸೂರ್ಯಕಾಂತಿ ಗಿಡದ ಹತ್ತಿರ ಸಂಬಂಧಿ. ಇದರ ವೈಜ್ಞಾನಿಕ ಹೆಸರು ಹೀಲಿಯಾಂತಸ್ ಟ್ಯೂಬರೋಸಸ್. ಜೆರೂಸಲಂ ಪಟ್ಟಣಕ್ಕೂ ಇದರ ಹೆಸರಿಗೂ ಯಾವ ಸಂಬಂಧವೂ ಇಲ್ಲ. ಪ್ರಾಯಶಃ ಇಟ್ಯಾಲಿಯನ್ ಗೀರಾಸೋಲ್ (ಸೂರ್ಯಕಾಂತಿ ಹೂ) ಅಪಭ್ರಂಶವಾಗಿ ಈ ಹೆಸರು ಬಂದಿರಬಹುದು. ಇದರ ಗಡ್ಡೆಗಳಲ್ಲಿ ಇನ್ಯೂಲಿನ್ ಎಂಬ ಪಿಷ್ಟಪದಾರ್ಥ ಇದೆ. ಗಡ್ಡೆಗಳನ್ನು ಬೇಯಿಸಿ ತಿನ್ನುವುದುಂಟು. ಇದು ದನಕರುಗಳಿಗೆ ಒಳ್ಳೆಯ ಮೇವು.

3. ಚೀನಿ ಆರ್ಟಿಚೋಕ್ : ಇದು ಲೇಬಿಯೇಟೀ (ಲ್ಯಾಮಿಯೇಸೀ) ಕುಟುಂಬಕ್ಕೆ ಸೇರಿದ ಸ್ಟ್ಯಾಕಿಸ್ ಅಫಿನಿಸ್ ಎಂಬುದು. ಇದರ ತವರು ದೂರ ಪೂರ್ವ ಪ್ರದೇಶ. ಈ ಕಾರಣದಿಂದಲೇ ಇದಕ್ಕೆ ಈ ಹೆಸರು. ಇದರ ಗಡ್ಡೆಗಳು ಮೂಲಂಗಿಯನ್ನು ಹೋಲುವುವು. ಈ ಗಡ್ಡೆಗಳನ್ನು ಹಸಿ ತರಕಾರಿಯಾಗಿಯೂ ಬೇಯಿಸಿ ಅಥವಾ ಖಾದ್ಯ ತಯಾರಿಸಿ ಉಪಯೋಗಿಸಬಹುದು. (ಬಿ.ಎಸ್.ಆರ್.)

**ಆರ್ಟಿಯೊಡ್ಯಾಕ್ಟೈಲ :** ಸಾಮಾನ್ಯವಾಗಿ ಸೀಳುಗೊರಸುಳ್ಳ ನೀರಾನೆ, ಒಂಟೆ, ಲಾಮ, ಜಿಂಕೆ, ಜಿರಾಫೆ, ಎರಳೆ, ಕುರಿ, ಆಡು, ದನ ಮುಂತಾದ ಪ್ರಾಣಿಗಳನ್ನೊಳಗೊಂಡ ಸ್ತನಿಗಳ ಗುಂಪು. (ಆರ್ಟಿಯೊ=ಜೊತೆ, ಡ್ಯಾಕ್ಟುಲಸ್=ಬೆರಳು). ಇವು ಹುಲ್ಲು, ಸೊಪ್ಪು ಹಾಗೂ ಇತರ ಸಸ್ಯಗಳನ್ನು ತಿಂದು ಜೀವಿಸುವ ಶಾಕಾಹಾರಿಗಳು. ಮುಂದಿನ ಹಾಗೂ ಹಿಂದಿನ ಕಾಲುಗಳಲ್ಲಿ ಎರಡು ಅಥವಾ ನಾಲ್ಕು ಸಮಸಂಖ್ಯೆಯ ಕಾಲ್ಬೆರಳುಗಳಿರುತ್ತವೆ. ಕಾಲುಗಳ ಮುಖ್ಯ ಅಕ್ಷ (ಆ್ಯಕ್ಸಿಸ್) ಮೂರು ಮತ್ತು ನಾಲ್ಕನೆಯ ಕಾಲ್ಬೆರಳುಗಳ ಮಧ್ಯೆ ಸಾಗಿರುತ್ತದೆ. ಪ್ರತಿಯೊಂದು ಕಾಲ್ಬೆರಳೂ ಚೆನ್ನಾಗಿ ಬೆಳೆದಿದ್ದು, ಹೆಚ್ಚು ಕಡಿಮೆ ಒಂದೇ ಗಾತ್ರದಲ್ಲಿರುತ್ತದೆ. ಸಾಮಾನ್ಯವಾಗಿ ಎರಡನೆಯ ಮತ್ತು ಐದನೆಯ ಅಥವಾ ಹೊರಗಿನ ಕಾಲ್ಬೆರಳುಗಳು ಚಿಕ್ಕದಾಗಿರುತ್ತವೆ. ಕೆಲವುವೇಳೆ ಅವು ಪೂರ್ಣವಾಗಿ ಇರುವುದಿಲ್ಲ. ಇಂದಿನ ಆರ್ಟಿಯೊಡ್ಯಾಕ್ಟೈಲದ ಮೊದಲನೆಯ ಕಾಲ್ಬೆರಳು ಇಲ್ಲವಾದರೂ ಹಂದಿಯಂತಿದ್ದ ಕೆಲವು ಪ್ರಾಣಿಗಳ ಮುಂದಿನ ಪಾದದಲ್ಲಿ ಅದು ಉಳಿದುಕೊಂಡಿರಬೇಕು.

ಆರ್ಟಿಯೊಡ್ಯಾಕ್ಟೈಲಗಳಲ್ಲಿ ಹಿಂದಿನ ಪಾದದಲ್ಲಿ ಮೂರು ಕಾಲ್ಬೆರಳುಗಳನ್ನುಳ್ಳ ವರಾಹಗಳನ್ನು (ಪೆಕರೀಸ್) ಬಿಟ್ಟರೆ, ಈ ಗುಂಪಿನ ಜೀವಿಸಿರುವ ಎಲ್ಲ ಪ್ರಾಣಿಗಳಲ್ಲೂ ಮುಂದಿನ ಮತ್ತು ಹಿಂದಿನ ಪಾದಗಳಲ್ಲಿ ಎರಡು ಅಥವಾ ನಾಲ್ಕು ಕಾಲ್ಬೆರಳುಗಳಿರುತ್ತವೆ. ಈ ಜೀವಿಗಳ ಗುಂಪಿಗೆ ಅನ್ವಯಿಸಿರುವ ಪ್ಯಾರಾಕ್ಸೋನಿಯ ಎಂಬ ಹೆಸರು ಸಹ ಇವುಗಳಲ್ಲಿ ಇಡೀ ಪಾದದ ಮುಖ್ಯ ಅಕ್ಷ ಪ್ರತಿಯೊಂದು ಪಾರ್ಶ್ವದಲ್ಲಿ ಅನುಕ್ರಮವಾಗಿರುವ ಮೂರು ಹಾಗೂ ನಾಲ್ಕನೆಯ ಕಾಲ್ಬೆರಳುಗಳ ವ್ಯವಸ್ಥೆಯನ್ನು ಸೂಚಿಸುತ್ತದೆ. ಪೆರಿಸೊಡ್ಯಾಕ್ಟೈಲ ಎಂಬ ಪಂಗಡದ ಪ್ರಾಣಿಗಳಲ್ಲಿ ಬೆಸಸಂಖ್ಯೆಯ ಕಾಲ್ಬೆರಳಿನ ವ್ಯವಸ್ಥೆಯುಂಟು. ಇವುಗಳಲ್ಲಿ ಪ್ರತಿಯೊಂದು ಪಾದದ ಮುಖ್ಯ ಅಕ್ಷ ಯಾವಾಗಲೂ ಇನ್ನಿತರ ಕಾಲ್ಬೆರಳುಗಳಿಗಿಂತ ದೊಡ್ಡದಾಗಿರುವ ಮೂರನೆಯ ಕಾಲ್ಬೆರಳಿನ ಒಂದು ಪಾರ್ಶ್ವಕ್ಕೆ ಹೋಗದೆ ಮಧ್ಯೆ ಸಾಗುತ್ತದೆ.

ಇವುಗಳ ಪಾದಗಳ ರಚನೆ ಆಶ್ಚರ್ಯಕರವಾಗಿದೆ. ಪ್ರತಿಯೊಂದು ಪಾದದ ನಾಲ್ಕು ಕಾಲ್ಬೆರಳುಗಳು ನೆಲವನ್ನು ಮುಟ್ಟುವ ನೀರಾನೆಯನ್ನು (ಹಿಪಪಾಟಮಸ್) ಬಿಟ್ಟರೆ, ಆರ್ಟಿಯೊಡ್ಯಾಕ್ಟೈಲ ಗುಂಪಿನ ಇತರ ಪಾಣಿಗಳಲ್ಲಿ, ನಡೆಯುವಾಗ ಪ್ರತಿಯೊಂದು ಪಾದದ ಮಧ್ಯದ ಎರಡು ಕಾಲ್ಬೆರಳುಗಳು ತುದಿಯ ಮೇಲೆ ಆಧಾರವಾಗಿರುತ್ತವೆ. ಒಂಟೆಗಳ ಹೊರತು. ಇತ್ತೀಚಿನ ಎಲ್ಲ ಆರ್ಟಿಯೊಡ್ಯಾಕ್ಟೈಲಗಳ ಕಾಲ್ಬೆರಳುಗಳು ಗೊರಸುಗಳಲ್ಲಿ ಅಳವಟ್ಟಿವೆ. ಆದರೆ ಒಂಟೆಗಳಲ್ಲಿ, ಮಧ್ಯದ ಎರಡು ಕಾಲ್ಬೆರಳುಗಳು ಪಾದದ ಅಂಗಾಲೆನಿಸಿರುವ ಒಂದು ಅಗಲವಾದ ಸಿಂಬಿಯಲ್ಲಿ ಸೇರಿರುವವು. ಉತ್ತರ ಅಮೆರಿಕದ ಅಳಿದುಹೋದ ಅಗ್ರಿಯೊಖೀರಸ್‌ನ ಗೊರಸುಗಳು ಮೊನಚಾದ ಉಗುರುಗಳಂತಿದ್ದವು. ಇಂದು ಬದುಕುಳಿದಿರುವ ಸಂಬಂಧಿಗಳಲ್ಲಿ ಪಾದಗಳ ಮೂಳೆಗಳ ಮಾರ್ಪಾಡಿನೊಂದಿಗೆ, ಮುಂಗಾಲಿನ ಅಲ್ನ ಕ್ಷೀಣಿಸಿವೆ. ಶೆವ್ರೋಟೇನ್ ಎಂಬ ಸಣ್ಣ ಕಸ್ತೂರಿ ಮೃಗಗಳನ್ನು ಹೊರತುಪಡಿಸಿ ಇಂದಿನ ಇನ್ನಿತರ ಆರ್ಟಿಯೊಡ್ಯಾಕ್ಟೈಲಗಳ ತೋಳು ಮೂಳೆಗಳಲ್ಲಿ ಎಂಟೆಪಿಕಾಂಡೈಲಾರ್ ರಂಧ್ರಗಳಿರುವುದಿಲ್ಲ. ಆದರೆ ಹಿಂಗಾಲಿನಲ್ಲಿ ಫಿಬ್ಯುಲ ಅವಶೇಷವಾಗಿ ಉಳಿದುಕೊಂಡರೂ ತೊಡೆ ಮೂಳೆಯ (ಫೀಮರ್) ಮೂರನೆಯ ಟ್ರೊಕ್ಯಾಂಟರ್ ಸಂಪೂರ್ಣವಾಗಿ ಇಲ್ಲವಾಗಿದೆ.

ಇವುಗಳ ದೇಹದ ರಚನಾವೈಖರಿ ಕುತೂಹಲಕಾರಿಯಾಗಿದೆ. ಬಹು ಸಂಖ್ಯೆಯ ಆರ್ಟಿಯೊಡ್ಯಾಕ್ಟೈಲಗಳು ತಮ್ಮ ತಲೆಯ ಮುಂಭಾಗದಲ್ಲಿ ಜೋಡಿ ಕೊಂಬುಗಳನ್ನು ಪಡೆದಿವೆ. ಆದರೆ ಅಳಿದುಹೋದ ಹಲವು ಜಿಂಕೆಗಳಲ್ಲಿ ಮೂರನೆಯ ಕೊಂಬು ಇದ್ದಿರಬೇಕು. ಇವುಗಳಲ್ಲಿ ಗಂಡು ಪ್ರಾಣಿಗಳಲ್ಲಿ ಮಾತ್ರ ಕೊಂಬುಗಳು ಇರುವುದು ಕಂಡುಬರುತ್ತದೆ. ಇಂದಿನ ಕುರಿಗಳಲ್ಲೂ ಈ ವೈಶಿಷ್ಟ್ಯವನ್ನು ಕಾಣಬಹುದು. ಆರ್ಟಿಯೊಡ್ಯಾಕ್ಟೈಲಗಳ ಮೂತಿ ಉದ್ದ. ಬುರುಡೆಯ ಪಟ್ಟಿ ಚಿಕ್ಕದು. ಮೂಗಿನ ಮೂಳೆಗಳು ಹಿಂದಕ್ಕೆ ವಿಸ್ತರಿಸಿಲ್ಲ; ಕಣ್ಣಿನ ಗುಳಿ ಮೂಳೆಯಿಂದ ಸಂಪೂರ್ಣವಾಗಿ ಆವರಿಸಿದೆ. ಇವುಗಳಲ್ಲಿ ಕತ್ತಿನ ಕೆಳಗಣ ಅಡ್ಡೆಲುಬು (ಕ್ಲಾವಿಕಲ್) ಇರುವುದಿಲ್ಲ. ಜಿರಾಫೆಯನ್ನೂ ಒಳಗೊಂಡು ಇವುಗಳೆಲ್ಲದರಲ್ಲೂ ಕತ್ತಿನ ಏಳು ಕಶೇರು ಮಣಿ (ವರ್ಟಿಬ್ರೇ)ಗಳಿರುವುವು. ಸಾಮಾನ್ಯವಾಗಿ ಎದೆಯ ಕಶೇರುಮಣಿಗಳ ಸಂಖ್ಯೆ ಒಂಟೆಯಲ್ಲಿ 12 ಇದ್ದರೆ ನೀರಾನೆಯಲ್ಲಿ 15 ಅಥವಾ 16ರವರೆಗೆ ಇರುತ್ತದೆ. ಇಂದು ಬದುಕುಳಿದಿರುವ ಆರ್ಟಿಯೊಡ್ಯಾಕ್ಟೈಲಗಳಲ್ಲಿ ಎದೆಯ ಹಾಗೂ ನಡುವಿನ ಕಶೇರುಮಣಿಗಳ ಒಟ್ಟು ಸಂಖ್ಯೆ 19ನ್ನು ಮೀರುವುದಿಲ್ಲ. ಇವುಗಳಲ್ಲಿ ಐದು ಲಾಂಗೂಲ ಕಶೇರುಮಣಿಗಳಿರುತ್ತವೆ. ಬಾಲದ ಕಶೇರುಮಣಿಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ.

ಮೇಲಿನ ದವಡೆ ಹಾಗೂ ಕೆಳದವಡೆಯ ಪ್ರತಿಯೊಂದು ಪಾರ್ಶ್ವದಲ್ಲಿರುವ ಮೂರು ಬಾಚಿಹಲ್ಲುಗಳೂ ಒಂದು ಕೋರೆಹಲ್ಲೂ ನಾಲ್ಕು ಮುಂದವಡೆಯ ಹಲ್ಲುಗಳೂ ಮೂರು ಹಿಂದವಡೆ ಹಲ್ಲುಗಳೂ ಸೇರಿ ಒಟ್ಟು 44 ಹಲ್ಲುಗಳಿವೆ. ಅನೇಕ ಮೆಲುಕುಹಾಕುವ ಪ್ರಾಣಿಗಳಲ್ಲಿ ಮೇಲಿನ ಕೋರೆ ಹಲ್ಲುಗಳೂ ಮೊದಲಿನ ಮುಂದವಡೆ ಹಲ್ಲುಗಳೂ ಸಾಮಾನ್ಯವಾಗಿ ಇರುವುದಿಲ್ಲ. ಇವುಗಳಲ್ಲಿ ಮುಂದಿನ ಬಾಚಿ ಹಲ್ಲುಗಳಲ್ಲೊಂದು ಉದ್ದವಾದ ದಂತವಾಗಿ ಬೆಳೆಯಬಹುದಾದರೂ ಕೆಲವು ವೇಳೆ ಅದು ಇರುವುದೇ ಇಲ್ಲ. ಹಂದಿ ಮತ್ತು ನೀರಾನೆಗಳಲ್ಲಿಯ ಕೆಳಗಿನ ಕೋರೆಹಲ್ಲು ಚೆನ್ನಾಗಿ ಬೆಳೆದಿರುವುದುಂಟು. ಆದರೆ ಮೆಲಕು ಪ್ರಾಣಿಗಳಲ್ಲಿ ಅದು ಕ್ಷೀಣಿಸಿರುತ್ತದೆ. ಹಲವು ವೇಳೆ ಅದು ಬಾಚಿ ಹಲ್ಲಿನಂತೆ ಮಾರ್ಪಟ್ಟಿರುವುದುಂಟು.

ಆರ್ಟಿಯೊಡ್ಯಾಕ್ಟೈಲಗಳ ದವಡೆ ಹಲ್ಲುಗಳ ರಚನೆಯಲ್ಲಿ ಎರಡು ವಿಧಗಳುಂಟು. ಬ್ರಾಕಿಯೊಡಾಂಟ್ ವಿಧದ ದವಡೆ ಹಲ್ಲುಗಳು ಸಾಮಾನ್ಯವಾಗಿ ತಗ್ಗಿದ ಶಿಖರವನ್ನುಳ್ಳವು. ಆದರೆ ಹಿಪ್ಸೊಡಾಂಟ್ ಎಂಬ ವಿಧದ ದವಡೆ ಹಲ್ಲುಗಳು ಎತ್ತರದ ಶಿಖರವನ್ನು ಪಡೆದಿರುವುವು. ಈ ದವಡೆ ಹಲ್ಲುಗಳ ಶೃಂಗವನ್ನು ನಿರೂಪಿಸುವ ಮಿನಾಯಿಯ ಎನಾಮಲ್ ಪದರಗಳ ತಳಗಳು ಅರೆಯುವ ಹೊರಭಾಗದಿಂದ ಕಾಣಿಸುವುದಿಲ್ಲ. ಬ್ರಾಕಿಯೋಡಾಂಟ್ ದವಡೆ ಹಲ್ಲುಗಳ ಮೂರು ಇಲ್ಲವೆ ನಾಲ್ಕು ಮುಖ್ಯಶೃಂಗಗಳು ಸಾಮಾನ್ಯವಾಗಿ ಶಂಖದ ರೀತಿಯಲ್ಲಿವೆ. ಈ ರೀತಿ ಇದ್ದಾಗ ಇವುಗಳನ್ನು ಬ್ಯೂನೊಡಾಂಟ್ ಎಂದು ಕರೆಯುತ್ತಾರೆ. ಶೃಂಗಗಳ ಇನ್ನೊಂದು ವಿಧದ ರಚನೆ ಹಿಪ್ಸೊಡಾಂಟ್ ದವಡೆ ಹಲ್ಲುಗಳಲ್ಲಿದೆ. ಈ ಹಿಪ್ಸೊಡಾಂಟ್ ದವಡೆ ಹಲ್ಲುಗಳ ಮುಖ್ಯ ಶೃಂಗಗಳು ಸಾಧಾರಣವಾಗಿ ಅರ್ಧಚಂದ್ರಾಕೃತಿಯಲ್ಲಿವೆ. ಇಂಥ ದವಡೆ ಹಲ್ಲುಗಳನ್ನು ಸೆಲೆನೊಡಾಂಟ್ ಎನ್ನುತ್ತಾರೆ. ಆದರೆ ಮಧ್ಯಮ ಎತ್ತರದ ದವಡೆ ಹಲ್ಲಿನ ಶಿಖರಗಳಲ್ಲಿ ಒಂದು ಪಾರ್ಶ್ವದ ಶೃಂಗಗಳು ಬ್ಯೂನೊಡಾಂಟ್ ಆಗಿದ್ದು ಎದುರು ಪಾರ್ಶ್ವದ ಶೃಂಗಗಳು ಸೆಲಿನೊಡಾಂಟ್ ಆಗಿರುವುದೂ ಉಂಟು. ಈ ಮಾದರಿಯ ದವಡೆ ಹಲ್ಲನ್ನು ಬ್ಯೂನೊಸೆಲಿನೊಡಾಂಟ್ ಎಂದು ಕರೆಯುತ್ತಾರೆ, ಆರ್ಟಿಯೊಡ್ಯಾಕ್ಟೈಲ್‌ಗಳ ವರ್ಗೀಕರಣದಲ್ಲಿ ದವಡೆ ಹಲ್ಲುಗಳ ಹಾಗೂ ಕೈ ಕಾಲು ಮೂಳೆಗಳ ರಚನೆ ಉಪಯುಕ್ತ ಆಧಾರಗಳೆನಿಸಿವೆ.

ಸಾಮಾನ್ಯವಾಗಿ ಎಲ್ಲ ಆರ್ಟಿಯೊಡ್ಯಾಕ್ಟೈಲ್‌ಗಳಲ್ಲಿ ಜೀರ್ಣಾಂಗ ದೀರ್ಘವಾಗಿಯೂ ವಿಸ್ತಾರವಾಗಿಯೂ ಇದೆ. ಅವೆಲ್ಲ ಸಸ್ಯಾಹಾರಿಗಳಾಗಿದ್ದುದರಿಂದ ಹೆಚ್ಚಿನ ಪ್ರಮಾಣದಲ್ಲಿ ಆಹಾರ ತೆಗೆದುಕೊಳ್ಳುವುದರಿಂದ ಅಂಥ ಅಂಗವ್ಯೂಹ ಅಗತ್ಯ. ಮೆಲುಕು ಹಾಕುವ ಆರ್ಟಿಯೊಡ್ಯಾಕ್ಟೈಲಗಳು ಆಹಾರವನ್ನು ಜೀರ್ಣಿಸಲು ನೆರವಾಗುವ ವಿಶಿಷ್ಟ ಅಂಗರಚನೆಯನ್ನು ಪಡೆದುಕೊಂಡಿವೆ. ಜೀವಿಸಿರುವ ಮೆಲಕುಪ್ರಾಣಿಗಳಲ್ಲಿ ಜಠರ ಸಾಧಾರಣವಾಗಿ ನಾಲ್ಕು ಗೂಡು (ಭಾಗ)ಗಳಾಗಿ ವಿಭಾಗವಾಗಿರುತ್ತದೆ. ಒಮ್ಮೆ ನುಂಗಿದ ಆಹಾರವನ್ನು ಬಾಯಿಗೆ ಮತ್ತೆ ತೆಗೆದುಕೊಂಡು ಅಗಿದು ನುಂಗಲು ಅನುಕೂಲಿಸುವಂತಿದೆ. ಜಠರದ ಮೊದಲಿನ ಎರಡು ಗೂಡುಗಳಲ್ಲಿ ಆಹಾರ ಸೂಕ್ಷ್ಮಜೀವಿಗಳಿಂದ ವಿಭಜನೆಯಾಗುವುದುಂಟು. ಹಂದಿ ಮತ್ತು ನೀರಾನೆಗಳಲ್ಲಿ ಜಠರ ಸರಳವಾಗಿದ್ದು, ಮೆಲುಕು ಹಾಕುವುದಕ್ಕೆ ಅನುಕೂಲವಿಲ್ಲ. ಆರ್ಟಿಯೊಡ್ಯಾಕ್ಟೈಲಗಳು ಸಾಮಾನ್ಯವಾಗಿ ಒಂದು ಅಂಧಾಂತ್ರವನ್ನೂ (ಸೀಕಂ) ಒಂದು

ಪಿತ್ತಕೋಶವನ್ನೂ ಪಡೆದಿರುವುದುಂಟು. ಇವುಗಳಲ್ಲಿ ಕೆಲವೇ ಸ್ತನ್ಯಗ್ರಂಥಿಗಳಿವೆ. ಅವು ಹೊಟ್ಟೆ ಮತ್ತು ತೊಡೆಯ ನಡುವಿನ ತನಕ ತಗ್ಗಿನ ಭಾಗದಲ್ಲಿರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅವು ಹೊಟ್ಟೆಯ ಭಾಗದಲ್ಲಿರುವುವು. ಗರ್ಭಕೋಶ ಇಬ್ಭಾಗವಾಗಿರುತ್ತದೆ. ನೀರಾನೆಯ ವಿನಾ ಎಲ್ಲಾ ಆರ್ಟಿಯೊಡ್ಯಾಕ್ಟೈಲಗಳಲ್ಲಿ ವೃಷಣಗಳು ವೃಷಣಕೋಶದಲ್ಲಿ ಇಳಿದಿರುವುದುಂಟು. ನೀರಾನೆಯಲ್ಲಿ ಹಾಗೆ ಇಳಿಯದೆ ಉದರದಲ್ಲೇ ಉಳಿದಿದೆ. ವಿವಿಧ ನಮೂನೆಯ ಗರ್ಭವೇಷ್ಟನಗಳು (ಪ್ಲ್ಯಾಸೆಂಟ) ಇವುಗಳಲ್ಲಿರುವುದುಂಟು.

ಆರ್ಟಿಯೊಡ್ಯಾಕ್ಟೈಲಗಳಲ್ಲಿ ಚರ್ಮಗ್ರಂಥಿಗಳು ಚೆನ್ನಾಗಿ ರೂಪುಗೊಂಡಿವೆ. ಇವುಗಳಲ್ಲಿ ಸ್ತನ್ಯಗ್ರಂಥಿಗಳು ಯಾವಾಗಲೂ, ಹೊಟ್ಟೆ ಹಾಗೂ ತೊಡೆಯ ಮಧ್ಯದ ತಗ್ಗಿನ ಭಾಗದಲ್ಲಿರುವುದು ಕಂಡುಬರುತ್ತದೆ. ಕೆಲವು ವೇಳೆ ಹಂದಿಯಲ್ಲಿರುವಂತೆ ಉದರ ಭಾಗದಲ್ಲಿಯೂ ಇರಬಹುದು. ಪ್ರಾಣಿಗಳಲ್ಲಿ ವಾಸನೆಯ (ಓಡರಿಫೆರಸ್) ಗ್ರಂಥಿಗಳೂ ಕಂಡುಬರುತ್ತವೆ. ಹೊಟ್ಟೆ, ತೊಡೆಯ ಮಧ್ಯದಭಾಗ, ಉದರದ ಭಾಗಗಳು, ಬೆನ್ನಿನ ಮಧ್ಯಭಾಗ, ಕಣ್ಣಿನ ಮುಂಭಾಗ, ಹಣೆ, ಪಾದ ಮುಂತಾದ ದೇಹದ ಅನೇಕ ಭಾಗಗಳಲ್ಲಿ ಅವು ಇರುವುವು. ಈ ಗುಂಪಿನ ಪ್ರಾಣಿಗಳಲ್ಲಿ ಘ್ರಾಣೇಂದ್ರಿಯ ತೀರ ಚುರುಕಾಗಿದೆ. ಈ ಪ್ರಾಣಿಗಳ ಶ್ರವಣಶಕ್ತಿಯೂ ಚುರುಕು, ಆದರೆ ದೃಷ್ಟಿಶಕ್ತಿ ಅಷ್ಟೇನೂ ಚೆನ್ನಾಗಿ ವೃದ್ಧಿಯಾಗಿಲ್ಲ. ಬಹುಪಾಲು ಆರ್ಟಿಯೊಡ್ಯಾಕ್ಟೈಲಗಳು ನಿಶಾಚರಿಗಳು; ಈ ಕಾರಣದಿಂದಲೇ ಅವು ಆಹಾರವನ್ನು ಹುಡುಕುವಾಗಲೂ ಹಾಗೂ ಸ್ವಂತ ಮತ್ತು ಇತರ ಕುಲಗಳ ಪ್ರಾಣಿಗಳನ್ನು ಗುರುತಿಸುವುದಕ್ಕೂ ವಾಸನೆಯನ್ನೇ ಅವಲಂಬಿಸಿವೆ. ಹಗಲಿನಲ್ಲಿ ಹಾಗೂ ಬಯಲಿನಲ್ಲಿ ವಾಸಿಸುವ ಆರ್ಟಿಯೊಡ್ಯಾಕ್ಟೈಲಗಳು, ತಾವು ಬದುಕಿ ಉಳಿಯಲು ದೃಷ್ಟಿಗಿಂತ ವಾಸನೆ ಮತ್ತು ಧ್ವನಿಗಳ ಸಹಾಯವನ್ನು ಅವಲಂಬಿಸಿವೆ. ವಾಸನೆ ಇವುಗಳಲ್ಲಿ ಸಂಘಜೀವನವನ್ನು ಉತ್ತೇಜಿಸುವದೂ ಅಲ್ಲದೆ ಅದನ್ನು ಸಾಂಕೇತಿಕ ವಿನಿಮಯಕ್ಕೂ ಬಳಸುತ್ತವೆ.

ಜೀವಂತ ಆರ್ಟಿಯೊಡ್ಯಾಕ್ಟೈಲಗಳು ನೆಲವಾಸಿಗಳು. ಮೇಕೆಗಳಂತೆ ಕೆಲವು ಬೆಟ್ಟ, ಗುಡ್ಡಗಳನ್ನು ಹತ್ತಬಲ್ಲವಾದರೆ. ಇನ್ನು ಕೆಲವು ನೀರಾನೆಯಂತೆ ನೀರಿನಲ್ಲಿರಬಲ್ಲವು. ಅವುಗಳಲ್ಲಿ ಆಹಾರವನ್ನು ಅಗಿಯುವ ಸ್ವಭಾವವಂತೂ ಇಲ್ಲವೇ ಇಲ್ಲ. ಎಲ್ಲ ಆರ್ಟಿಯೊಡ್ಯಾಕ್ಟೈಲಗಳೂ ಸಾಮಾನ್ಯವಾಗಿ ಸಸ್ಯಾಹಾರಿಗಳು. ಆದರೆ ಹಂದಿಗಳು ಮಾತ್ರ ಸರ್ವಭಕ್ಷಕಗಳು. ಹೆಚ್ಚಿನ ಆರ್ಟಿಯೊಡ್ಯಾಕ್ಟೈಲಗಳು ಗುಂಪಿನಲ್ಲಿ ಜೀವಿಸುತ್ತವೆ. ಕೆಲವು ಜಾತಿಗಳು ಗಮನಾರ್ಹವಾಗಿ ಹಲವು ಎರಳೆಗಳು (ಆಂಟಿಲೋಪ್), ಕಾಟಿಗಳು (ಬೈಸನ್), ಕ್ಯಾರಿಬೊ ಹಾಗೂ ಬೆಳ್ದುಟಿಯ ಪೆಕರೀಸ್‌ಗಳು ನೂರು ಇಲ್ಲವೆ ಸಾವಿರಾರು ಸಂಖ್ಯೆಯ ಮಂದೆಗಳಲ್ಲಿ ಜೀವಿಸುತ್ತವೆ.

ಸಾಧಾರಣವಾಗಿ ಗಂಡು ಮತ್ತು ಹೆಣ್ಣುಗಳು ಋತುಕಾಲದಲ್ಲಿ ಒಟ್ಟಿಗಿರುವುದನ್ನು ಬಿಟ್ಟರೆ, ಯಾವಾಗಲೂ ಪ್ರತ್ಯೇಕವಾಗಿಯೇ ಜೀವಿಸುತ್ತವೆ. ಸಂತಾನವೃದ್ಧಿಯ ಕಾಲದಲ್ಲಿ ಸಹಜವಾಗಿ ಗಂಡುಗಳು ಹೆಣ್ಣುಗಳ ಮೇಲಿನ ಪ್ರಭುತ್ವಕ್ಕೋಸ್ಕರ ಒಂದರೊಡನೊಂದು ಹೋರಾಡುವುದುಂಟು. ಸಾಮಾನ್ಯವಾಗಿ ಸಮಶೀತೋಷ್ಣವಲಯದ ಪ್ರಾಣಿಗಳಲ್ಲಿ ಕಾಮೋದ್ರೇಕ ಮಾಗಿ ಕಾಲದಲ್ಲಿ ಉಂಟಾದರೆ, ಉಷ್ಣವಲಯದ ಪ್ರಾಣಿಗಳಲ್ಲಿ ವರ್ಷದ ವಿವಿಧ ಕಾಲಗಳಲ್ಲಿ ಸಂಭವಿಸಬಹುದು. ಗರ್ಭಧಾರಣೆಯ ಕಾಲ ಸಾಮಾನ್ಯವಾಗಿ ಸಣ್ಣ ಗಾತ್ರದ ಆರ್ಟಿಯೊಡ್ಯಾಕ್ಟೈಲಗಳಿಗಿಂತ ದೊಡ್ಡ ಗಾತ್ರದವುಗಳಲ್ಲಿ ದೀರ್ಘವಾಗಿರುತ್ತದೆ. ಸಮಶೀತೋಷ್ಣವಲಯದಲ್ಲಿರುವ ಮೆಲುಕುಪ್ರಾಣಿಗಳಿಗೆ ವಸಂತಕಾಲದಲ್ಲೂ ಉಷ್ಣವಲಯಗಳಲ್ಲಿರುವ ಪ್ರಾಣಿಗಳಿಗೆ ಮಳೆಗಾಲದ ಪ್ರಾರಂಭದ ಸರಿಸುಮಾರಿಗೂ ಒಂದು, ಎರಡು ಇಲ್ಲವೆ ಅಪರೂಪವಾಗಿ ಮೂರು ಮರಿಗಳು ಹುಟ್ಟುವುದುಂಟು. ಸಾಕಿದ ಹಂದಿಗಳು ಒಂದು ಸೂಲಿಗೆ ಸಾಮಾನ್ಯವಾಗಿ ಹದಿನಾಲ್ಕರವರೆಗೆ ಮರಿಗಳನ್ನು ಹಾಕಬಹುದು. ಗೊರಸುಳ್ಳ ಈ ಎಳೆಯ ಸಸ್ತನಿಗಳು ಹುಟ್ಟಿದ ಕೆಲವೇ ಗಂಟೆಗಳೊಳಗೆ ತಮ್ಮ ತಾಯಿಯನ್ನು ಹಿಂಬಾಲಿಸುವುವು. ಆಸ್ಟ್ರೇಲಿಯ, ಅಂಟಾರ್ಕ್‌ಟಿಕ್ ಪ್ರದೇಶಗಳನ್ನು ಬಿಟ್ಟರೆ ಆರ್ಟಿಯೊಡ್ಯಾಕ್ಟೈಲಗಳು ಎಲ್ಲ ಭೂಖಂಡಗಳಲ್ಲೂ ವಾಸಿಸುತ್ತವೆ. ಹಂದಿ, ಜಿಂಕೆ ಮತ್ತು ಎಮ್ಮೆಗಳು ನ್ಯೂಗಿನಿ, ನ್ಯೂಜಿಲೆಂಡ್, ಟಾಸ್ಮೇನಿಯ ಹಾಗೂ ಅಂಟಾರ್ಕ್‌ಟಿಕ್ ಪ್ರದೇಶದ ದ್ವೀಪಗಳನ್ನು ಬಿಟ್ಟರೆ, ಹಲವು ದೊಡ್ಡ ದ್ವೀಪಗಳಲ್ಲೂ ಸಾಕುಪ್ರಾಣಿಗಳಾಗಿ ಜೀವಿಸುತ್ತವೆ. ಬೇಸಾಯ ಹಾಗೂ ಬೇಟೆಯ ಆರ್ಟಿಯೊಡ್ಯಾಕ್ಟೈಲಗಳನ್ನು ಮಾನವ ಸರಿಯಾಗಿ ಮೇವು ದೊರಕುವ ಎಲ್ಲ ಭಾಗಗಳಿಗೂ ತಂದು ಸಾಕುತ್ತಿದ್ದಾನೆ.

**ವರ್ಗೀಕರಣ :** ಇಂದು ಕಾಣಸಿಗುವ ಹಾಗೂ ಅಳಿದುಹೋದ ಆರ್ಟಿಯೊಡ್ಯಾಕ್ಟೈಲಗಳನ್ನು ಸಾಮಾನ್ಯವಾಗಿ ಸೂಯಿಫಾರಮ್‌ಗಳು, ಟೈಲೊಪೋಡಗಳು ಮತ್ತು ರೂಮಿನೆನ್ಷಿಯ ಎಂಬ ಮೂರು ಉಪಗಣಗಳನ್ನು ಗುರುತಿಸಲಾಗಿದೆ.

**ಸೂಯಿಫಾರಮ್‌ಗಳು :** ಜೀವಿಸಿರುವ ಆರ್ಟಿಯೊಡ್ಯಾಕ್ಟೈಲಗಳಲ್ಲಿ, ಹಂದಿ, ಪೆಕರೀಸ್, ನೀರಾನೆ– ಈ ಪ್ರಾಣಿಗಳನ್ನು ಸೂಯಿಫಾರಮ್ ಗುಂಪಿಗೆ ಸೇರಿಸಲಾಗಿದೆ. ಇವುಗಳ ಜಠರಗಳು ಹೆಚ್ಚು ಕಡಿಮೆ ವಿಶೇಷಭಾಗಗಳಾಗಿ ಪುನರ್ ವಿಭಾಗಿಸಲ್ಪಟ್ಟಿದ್ದರೂ ಇವು ಮೆಲುಕುಹಾಕುವುದಿಲ್ಲ. ಇವುಗಳಲ್ಲಿ ಸಾಮಾನ್ಯವಾಗಿ ಒಂದರಿಂದ ಮೂರರವರೆಗೆ ಮೇಲ್ದವಡೆಯ ಪ್ರತಿ ಪಾರ್ಶ್ವದಲ್ಲೂ ಬಾಚಿ ಹಲ್ಲುಗಳಿವೆ. ಇವುಗಳಲ್ಲಿ ಕೆಳಗಿನ ಬಾಚಿ ಹಲ್ಲುಗಳು ಮುಂದಕ್ಕೆ ಚಾಚಿಕೊಂಡಿವೆ. ಇವುಗಳ ಕೋರೆಹಲ್ಲುಗಳು ಚೆನ್ನಾಗಿ ಬೆಳೆದಿದ್ದು, ದಾಡೆಯಂತಿರುವುದನ್ನು ನೋಡಬಹುದು. ಸಾಮಾನ್ಯವಾಗಿ ಯಾವಾಗಲೂ ಬೆಳೆಯುತ್ತಿರುವದೇ ಕೋರೆ ಹಲ್ಲುಗಳ ವೈಶಿಷ್ಟ್ಯ. ಸೂಯಿಫಾರಮ್‌ಗಳ ದವಡೆಗಳು ಬ್ಯೂನೋಡಾಂಟ್ ಮಾದರಿಯದು. ಕಣ್ಣಿನ ಗೂಡು ಟೆಂಪೊರಲ್ ಫಾಸದಿಂದ ಬೇರ್ಪಟ್ಟಿರುವುದಿಲ್ಲ. ಇವುಗಳಿಗೆ ಕೊಂಬುಗಳಿರುವುದಿಲ್ಲ. ಸೂಯಿಫಾರಮ್‌ಗಳಲ್ಲಿ ಅಲ್ನ ಹಾಗೂ ಫಿಬ್ಯುಲ ವಿಶೇಷವಾಗಿ ರೂಪುಗೊಂಡಿಲ್ಲವೆಂದೇ ಹೇಳಬಹುದು. ಪಾದದಲ್ಲಿರುವ ಮಧ್ಯದ ಎರಡು ಮೂಳೆಗಳು, ಕ್ಯಾನನ್ ಮೂಳೆಯಾಗಿ ರಚನೆಹೊಂದಲು, ಸಂಪೂರ್ಣವಾಗಿ ಒಂದುಗೂಡಿಲ್ಲ.

ಹಂದಿಗಳು ಯುರೋಪಿನಲ್ಲಿ ಸು. 25,000,000–30,000,000 ವರ್ಷಗಳ ನಡುಗಾಲದ ಪೂರ್ವದಲ್ಲಿ ಕಾಣಿಸಿಕೊಂಡವು. ಆಲಿಗೊಸೀನ್ ಕಾಲದ ಪೇಲಿಯೋಕೀರಸ್ ಅನ್ನು ಸೂಯಿಡೀ ಎಂಬ ನೈಜ ಹಂದಿಯ ಬಳಗದ ಮೂಲವೆಂದೇ ಪರಿಗಣಿಸಬಹುದು. ಇದು ಅಳಿದುಹೋಗುವುದಕ್ಕಿಂತ ಮುಂಚೆ, ಭಾರತ ಹಾಗೂ ಆಫ್ರಿಕಗಳಲ್ಲಿ ಮಯೊಸೀನ್ ಕಾಲದ ಪ್ರಾರಂಭದಲ್ಲಿ ಕಾಣಿಸಿಕೊಂಡಿತು. ಇದು ಅನಂತರ ಏಷ್ಯ ಖಂಡಕ್ಕೆ ಮತ್ತು ಪ್ಲೈಯೊಸೀನ್ ಕಾಲದಲ್ಲಿ ಭಾರತಕ್ಕೂ ಹರಡಿತು. ಏಷ್ಯಾದ ಪಿಗ್ಮಿ ಹಂದಿ (ಪೋರ್ಕುಲ), ಈಸ್ಟ್ ಇಂಡಿಯಾದ ಬ್ಯಾಬಿರುಸ್ಸ, ಆಫ್ರಿಕದ ನದಿಹಂದಿ (ಪೋಟಮೋಕೀರಸ್) ಹಾಗೂ ಫ್ರೆಷ್ ಹಂದಿ, ಹೈಲೋಕೀರಸ್ ಮುಂತಾದವುಗಳೇ ಹಂದಿಯ ಬಳಗದ ಬದುಕಿರುವ ಇನ್ನಿತರ ಪ್ರತಿನಿಧಿಗಳು.

ಟಯಸ್ಸೂಯಿಡೀ ಬಳಗದ ನೈಜಪೆಕರಿಗಳು ಯುರೋಪಿನಲ್ಲಿ ಇದೇ ಸರಿಸುಮಾರಿನ ಸಮಯದಲ್ಲಿ ವಿಕಾಸಗೊಂಡಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇವು ನೈಜ ಹಂದಿಗಳಿಗಿಂತ ಮುಂಚಿತವಾಗಿಯೇ ಕಾಣಿಸಿಕೊಂಡಿರಬೇಕೆಂಬ ಅಭಿಪ್ರಾಯವೂ ಉಂಟು. ಆದರೆ ಈಗ ಜೀವಿಸಿರುವ ಪೆಕ್ಕರಿಗಳು ಅಮೆರಿಕದ ಉಷ್ಣವಲಯದಲ್ಲಿರುವ ಕೇವಲ ಎರಡು ಜಾತಿಗಳಿಂದ ಪ್ರತಿನಿಧಿಸಲ್ಪಟ್ಟಿವೆ. ಕೊರಳುಪಟ್ಟಿಯ ಪೆಕರಿ–ಪಕರಿ ಜಾಕು ಹಾಗೂ ದೊಡ್ಡದಾದ ಬೆಳ್ದುಟಿಯ ಪೆಕರಿ (ಟಯಸ್ಸು ಪೆಕರಿ) ಇವುಗಳೇ ಈಗ ಜೀವಿಸಿರುವ ಪ್ರತಿನಿಧಿಗಳು.

ನೀರಾನೆಗಳ ಬಳಗ ಮೂರು ಜಾತಿಗಳನ್ನೊಳಗೊಂಡಿದೆ. ಇವುಗಳ ಪೈಕಿ ಹೆಕ್ಸಪ್ರೋಟೋಡಾನ್ ಎಂಬುದು ಮಾತ್ರ ನಿರ್ನಾಮವಾಗಿಹೋಗಿದೆ. ಈ ಜಾತಿ ಸು. 20,000,000 ವರ್ಷಗಳ ಹಿಂದೆ, ಮಯೋಸೀನ್ ಕಾಲದ ಕೊನೆಯಲ್ಲಿ ಮೆಡಿಟರೇನಿಯನ್ ಪ್ರದೇಶ ಹಾಗು ಭಾರತದಲ್ಲಿ ಕಾಣಿಸಿಕೊಂಡಿತೆನ್ನುವರು. ಇದು ಪ್ಲೈಸ್ಟೋಸೀನ್ ಕಾಲದವರೆಗೂ ಮುಂದುವರಿಯಿತೆಂದು ತರ್ಕಿಸಿದ್ದಾರೆ. ಈಗ ಜೀವಿಸಿರುವ ನೀರಾನೆಗಳಲ್ಲಿ ಒಂದಾದ ಹಿಪಪಾಟಮಸ್ ಆ್ಯಂಫೀಬಿಯಸ್ ಎನ್ನುವ ನೀರಾನೆ ಈಗ ಆಫ್ರಿಕದಲ್ಲಿ ಸಹರದ ದಕ್ಷಿಣ ಭಾಗಕ್ಕೆ ಮಿತಿಗೊಳಿಸಲ್ಪಟ್ಟಿದೆ. ಈ ನೀರಾನೆ ಪ್ಲೈಯೋಸೀನ್ ಕಾಲದ ಪ್ರಾರಂಭದಲ್ಲಿ ಆಫ್ರಿಕ ಹಾಗೂ ಯುರೋಪ್‌ಗಳಿಗೆ ವಲಸೆ ಹೋಗಿ ಇಂಗ್ಲೆಂಡನ್ನು ಪ್ಲೈಸ್ಟೋಸೀನ್ ಕಾಲದಲ್ಲಿ ತಲುಪಿತೆಂದು ನಿರ್ಣಯಿಸಿದ್ದಾರೆ. ಕೆಲವು ವೇಳೆ ನದಿಯ ಕುದುರೆ ಎಂದು ಕರೆಸಿಕೊಳ್ಳುವ ನೀರಾನೆ ಸು. 3 1/3' ಉದ್ದವಿರುವುದುಂಟು. ಇದು ಚೆನ್ನಾಗಿ ಈಜಬಲ್ಲದು. ಈ ಬಳಗದ ಮೂರನೆಯ ಪ್ರತಿನಿಧಿ ಪಶ್ಚಿಮ ಆಫ್ರಿಕದ ಗಿಡ್ಡ ನೀರಾನೆಯಾದ ಕೀರೋಪ್ಸಿಸ್ ಲೈಬೀರಿಯಾನ್ಸಿಸ್. ಇದು ಸಾಮಾನ್ಯವಾಗಿ ನಾಲ್ಕು ಟನ್‌ಗಳಷ್ಟು ತೂಕವಿರಬಹುದು.

**ಟೈಲೊಪೋಡ :** ಟೈಲೊಪೋಡ ಉಪಕ್ರಮ ಕ್ಯಾಮಿಲಿಡೀ ಮತ್ತು ಸಿಫೋಡಾಂಟಿಡೀ ಎಂಬ ಎರಡು ಬಳಗಗಳಿಂದ ಕೂಡಿದೆ. ಕ್ಯಾಮಿಲಿಡೀ ಬಳಗ ಇತ್ತೀಚಿನ ಒಂಟೆಗಳನ್ನು ಹಾಗೂ ಲಾಮಗಳನ್ನು ಒಳಗೊಂಡಿದೆ. ಆದರೆ ಸಿಫೋಡಾಂಟಿಡೀ ಎಂಬುದು ಕಣ್ಮರೆಯಾದ ಪ್ರಾಣಿಗಳ ಗುಂಪು. ಒಂಟೆಗಳು ತಮ್ಮ ಕಾಲುಗಳಲ್ಲಿ ಸಿಂಬಿಯಿರುವ ಕಾಲ್ಬೆರಳುಗಳನ್ನು ಪಡೆದಿವೆ. ಅವಕ್ಕೆ ಮೆಲುಕಾಡಲು ಅನುಕೂಲಕರ ಜಠರವಿದೆ. ಇತರೆ ಎಲ್ಲ ಸಸ್ತನಿಗಳಲ್ಲಿ ಗೋಳಾಕಾರದ ಕೆಂಪುರಕ್ತಕಣಗಳಿದ್ದರೆ, ಒಂಟೆಗಳಲ್ಲಿ ಅವು ಅಂಡಾಕಾರವಾಗಿರುತ್ತವೆ. ಒಂಟೆಮರಿಗಳಲ್ಲಿ ಪ್ರತಿಯೊಂದು ದವಡೆಗಳಲ್ಲೂ ಮೂರು ಮೇಲಿನ ಬಾಚಿಹಲ್ಲುಗಳಿರುತ್ತವೆ. ಪ್ರಾಯಕ್ಕೆ ಬಂದ ಒಂಟೆಗಳಲ್ಲಿ ಮೂರನೆಯ ಪಾರ್ಶ್ವದ ಬಾಚಿಹಲ್ಲು ಮಾತ್ರ ದೃಢವಾಗಿ ಉಳಿದುಕೊಂಡಿರುತ್ತದೆ. ಬಾಚಿಹಲ್ಲುಗಳಿಂದ ಭಿನ್ನವಾಗಿರುವ ಕೋರೆಹಲ್ಲುಗಳು ಮೇಲಿನ ಹಾಗೂ ಕೆಳಗಿನ ದವಡೆಗಳಲ್ಲಿವೆ. ಇವುಗಳ ದವಡೆ ಹಲ್ಲುಗಳು ಸೆಲಿನೋಡಾಂಟ್ ಹಾಗೂ ಹಿಪ್ಸೊಡಾಂಟ್ ರೀತಿಯವಾಗಿವೆ. ಒಂಟೆಗಳ ಹೊಟ್ಟೆಯಾಗಲಿ ಡುಬ್ಬವಾಗಲಿ ಜನಸಾಮಾನ್ಯರು ಹೇಳುವಂತೆ ನೀರಿನ ಕೋಶವಾಗಿ ಉಪಯೋಗವಾಗುವುದಿಲ್ಲ.

ಮರುಭೂಮಿಯ ಹಡಗು ಎನಿಸಿಕೊಂಡಿರುವ ಒಂಟೆಗಳು ಉತ್ತರ ಅಮೆರಿಕದಲ್ಲಿ ಇಯೊಸೀನ್ ಕಾಲದ ಪ್ರಾರಂಭದಲ್ಲಿ, ಸುಮಾರು 40,000,000 ವರ್ಷಗಳ ಹಿಂದೆ ಹುಟ್ಟಿದವೆಂದು ವಿಜ್ಞಾನಿಗಳ ಅಭಿಪ್ರಾಯ. ಅವುಗಳು ಪ್ಲೈಸ್ಟೋಸೀನ್ ಏಷ್ಯಾ ಹಾಗೂ ದಕ್ಷಿಣ ಅಮೆರಿಕಗಳಲ್ಲಿ ಹರಡುವುದಕ್ಕೆ ಮುಂಚೆ ಕುದುರೆಗಳಂತೆ, ಉತ್ತರ ಅಮೆರಿಕ ಖಂಡದಲ್ಲಿಯೇ ವಿಕಾಸ ಹೊಂದಿರಬೇಕು. ಒಂಟೆಗಳಲ್ಲಿ ಎರಡು ಪ್ರಭೇದಗಳಿವೆ: ಅರೇಬಿಯದ ಒಂದು ಡುಬ್ಬವುಳ್ಳ, ಕ್ಯಾಮೆಲಸ್ ಡ್ರೊಮೆಡೇರಿಯಸ್ ಮತ್ತು ತುರ್ಕಿಸ್ತಾನದ ಎರಡು

ಡುಬ್ಬವುಳ್ಳ, ಕ್ಯಾಮೆಲಸ್ ಬ್ಯಾಕ್ಟ್ರಿಯಾನಸ್. ದಕ್ಷಿಣ ಅಮೆರಿಕಕ್ಕೆ ಸೀಮಿತವಾಗಿರುವ ಲಾಮ ಕ್ಯಾಮಿಲಿಡೀ ಬಳಗಕ್ಕೆ ಸೇರಿದ ಇನ್ನೊಂದು ಜೀವಿ. ಲಾಮ ಒಂಟೆಗಿಂತ ಗಾತ್ರದಲ್ಲಿ ಚಿಕ್ಕದು. ಒಂಟೆಗಿರುವಂತೆ ಡುಬ್ಬವಿಲ್ಲ. ತುಪ್ಪಟವನ್ನು ಹೊಂದಿರುವ ಈ ಲಾಮ ದಕ್ಷಿಣ ಅಮೆರಿಕದ ಹೇರು ಹೊರುವ ಪ್ರಾಣಿಯಾಗಿದೆ.

ಯುರೋಪಿನ ಇಯೋಸೀನ್‌ನ ನಡುಗಾಲ ಹಾಗೂ ಆಲಿಗೋಸೀನ್‌ಗಳಲ್ಲಿದ್ದ, ಪ್ರಾಚೀನ ಚಂದ್ರ–ದಂತ (ಸೆಲಿನೊಡಾಂಟ್) ಸ್ತನಿಗಳು ಸಿಫೊಡಾಂಟೀಡೀ ಕುಟುಂಬಕ್ಕೆ ಸೇರಿವೆ. ಒಂಟೆಗಳಿಗೆ ಬಹು ಸಮೀಪವಾಗಿ ಕಂಡರೂ ಇವು ಒಂಟೆಗಳ ಪೂರ್ವಿಕರಲ್ಲ. ಟೈಲೊಪೋಡಗಳಿಗೆ ಕೊಂಬಿಲ್ಲದಿರುವುದೇ ವೈಶಿಷ್ಟ್ಯ.

**ರೂಮಿನೆನ್ಷಿಯ :** ಮೆಲುಕು ಹಾಕುವ ಈ ಪ್ರಾಣಿಸಮೂಹ ಬಹು ವಿಸ್ತಾರವಾಗಿ ಪಸರಿಸಿ, ಬಹಳವಾಗಿ ಮಾರ್ಪಟ್ಟು ಅತ್ಯಧಿಕ ಸಂಖ್ಯೆಯಲ್ಲಿರುವ ಗೊರಸುಳ್ಳ ಪ್ರಾಣಿಗಳೆನಿಸಿವೆ. ಇವು ಪ್ರಪಂಚದ ಸಸ್ಯಾಹಾರಿ ಪ್ರಾಣಿಗಳಲ್ಲೇ ಮುಖ್ಯವಾದವು. ಸುಮಾರು 30,000,000 ವರ್ಷಗಳಿಗಿಂತಲೂ ಹಿಂದಿನ ಇತಿಹಾಸ ಹೊಂದಿವೆ. ಇವುಗಳ ಮೆಲುಕು ಹಾಕುವ ಸ್ವಭಾವದಿಂದಾಗಿ ರೂಮಿನೆನ್ಷಿಯ ಎಂಬ ಹೆಸರು ಇವಕ್ಕೆ ಅನ್ವಯಿಸುತ್ತದೆ. ಇವುಗಳ ಜಠರ ಪರಸ್ಪರ ಸಂಬಂಧವಿರುವ ನಾಲ್ಕು ಕೋಣೆಗಳಾಗಿದ್ದು, ಮೆಲುಕಾಡುವುದಕ್ಕೆ ಸಹಾಯಕವಾಗಿದೆ. ಅವಸರದಲ್ಲಿ ತಿಂದ ಆಹಾರವನ್ನು, ಅನಂತರ ಪುನಃ ಹೊಟ್ಟೆಯಿಂದ ಬಾಯಿಗೆ ತೆಗೆದುಕೊಂಡು ಹಲ್ಲುಗಳಿಂದ ಅರೆದು ತಿನ್ನುವುದೇ ಮೆಲುಕು ಹಾಕುವುದು. ಆಹಾರವನ್ನು ನುಂಗಿದಾಗ, ಮೊದಲು ರೂಮೆನ್ ಎಂಬ ಮೊದಲಿನ ಕೋಣೆಗೆ ಬರುತ್ತದೆ. ಆಹಾರ ಇಲ್ಲಿ ಕಿಣ್ವನದಿಂದ (ಫರ್ಮೆಂಟೇಷನ್) ಮೃದುವಾಗುತ್ತದೆ. ಈ ರೀತಿ ಮೃದುವಾದ ಆಹಾರ ಅನಂತರ ಜೇನುಗೂಡಿನಂತಿರುವ ರೆಟಿಕ್ಯುಲಮ್ ಎಂಬ ಎರಡನೆಯ ಕೋಣೆಯನ್ನು ಪ್ರವೇಶಿಸುತ್ತದೆ. ಇಲ್ಲಿ ಆಹಾರ ಮತ್ತಷ್ಟು ಹುಳಿಯುತ್ತದೆ. ಇಲ್ಲಿಂದ ಆಹಾರ ಉಂಡೆಗಳ ರೂಪದಲ್ಲಿ ಬಾಯಿಗೆ ಬರುತ್ತದೆ. ಪ್ರತಿಯೊಂದು ಉಂಡೆಯನ್ನೂ ಅದು ಪೂರ್ಣವಾಗಿ ಜಗಿದು, ಪುನಃ ನುಂಗುತ್ತದೆ. ಸ್ರಾವ ದ್ರವ ರೂಪದ ಆಹಾರ ರೆಟಿಕ್ಯುಲಮ್ ಒರಟು ಭಾಗಗಳ ಮೂಲಕ ಸೋಸಲ್ಪಟ್ಟು, ಮೂರು ಹಾಗೂ ನಾಲ್ಕನೆಯ ಕೋಣೆಗಳಿಗೆ ಬರುತ್ತದೆ. ಸಾಲ್ಟೇರಿಯಮ್ ಎಂಬ ಮೂರನೆಯ ಹಾಗೂ ಅಬೋಮೇಸಮ್ ಎಂಬ ನಾಲ್ಕನೆಯ ಕೋಣೆಗಳಲ್ಲಿ ಆಹಾರದ ಜೀರ್ಣಕ್ರಿಯೆ ಮುಂದುವರಿಯುತ್ತದೆ.

ಮೆಲುಕುಹಾಕುವ ಪ್ರಾಣಿಗಳನ್ನು ಮುಖ್ಯವಾಗಿ ಐದು ಬಗೆಯಾಗಿ ಗುರುತಿಸಬಹುದು. ಅತ್ಯಂತ ಪ್ರಾಚೀನವಾದವುಗಳೇ ಟ್ರಾಗುಲಿಡೀ ಬಳಗದ ಷೆವ್ರೋಟೈನ್‌ಗಳು. ಇವುಗಳ ಪಳೆಯುಳಿಕೆಗಳನ್ನು ಮಯೋಸೀನ್ ಕಾಲದವರೆಗೆ ಗುರುತಿಸಬಹುದು. ಇನ್ನೂ ಪ್ರಾಚೀನವೆನ್ನ ಬಹುದಾದ 40,000,000 ವರ್ಷಗಳ ಹಿಂದೆ ಇಯೋಸೀನ್‌ನ ಪ್ರಾರಂಭದಲ್ಲಿದ್ದ ಜಿಲೋಸಿಡೀ ಎಂಬ ಗುಂಪಿನಿಂದ ಇದು ವಿಕಾಸಗೊಂಡಿರುವಂತೆ ಕಂಡುಬರುತ್ತದೆ.

ಸೆರ್‌ವಿಡೀ ಕುಟುಂಬ ಜಿಂಕೆಗಳನ್ನೊಳಗೊಂಡಿದೆ. ಈ ಕುಟುಂಬ ಸು. 30,000,000–40,000,000 ವರ್ಷಗಳ ಹಿಂದೆ ಆಲಿಗೋಸೀನ್‌ನ ನಡುಗಾಲದಲ್ಲಿದ್ದ ಮುಂಚಿನ ಟ್ರಾಗುಲಾಯಿಸಿಗಳಿಂದ ವಿಕಾಸ ಹೊಂದಿರಬೇಕು. ಜಿಂಕೆಗಳಿಗೆ ಕಾಲಕಾಲಕ್ಕೆ ಉದುರಿ ಪುನಃ ಬೆಳೆಯುವಂಥ ಗಟ್ಟಿಯಾದ ಕೊಂಬುಗಳಿರುತ್ತವೆ. ಸಾಮಾನ್ಯವಾಗಿ ಗಂಡು ಜಿಂಕೆಗಳಿಗೆ ಮಾತ್ರ ಕೊಂಬುಗಳಿರುತ್ತವೆ. ಹೆಣ್ಣು ಜಿಂಕೆಗಳಿಗೆ ಸಾಧಾರಣವಾಗಿ ಕೊಂಬುಗಳಿರುವುದಿಲ್ಲ. ಈ ಕುಟುಂಬಕ್ಕೆ ಚುಕ್ಕೆಜಿಂಕೆ (ಸ್ಪಾಟೆಡ್ ಡೀರ್), ಸಾಂಬಾರ್ (ಕಡವೆ) ಹಿಮ ಸಾರಂಗ (ರೇನ್‌ಡೀರ್), ಮೂಸ್, ಕ್ಯಾರಿಬೂ ಮತ್ತು ಎಲ್ಕ್‌ಗಳನ್ನು ಸೇರಿಸಲಾಗಿದೆ.

ಜಿರಾಫೆಯ ಬಳಗ ಏಷ್ಯಾದಲ್ಲಿ ಸುಮಾರು 25,000,000 ವರ್ಷಗಳ ಹಿಂದೆ ಮಯೋಸೀನ್ ಕಾಲದಲ್ಲಿ ಕಾಣಿಸಿಕೊಂಡಿತು. ಅನಂತರ ಯುರೋಪ್ ಹಾಗೂ ಆಫ್ರಿಕಕ್ಕೂ ವ್ಯಾಪಿಸಿತು. ಜಿರಾಫೆಗಳು ಸಾಮಾನ್ಯವಾಗಿ ಸೆರ್‌ವಿಡೀ ಮತ್ತು ಬೋವಿಡೀ ಕುಟುಂಬಗಳಿಗೆ ಸಮೀಪ ಬಾಂಧವ್ಯವನ್ನು ಪಡೆದಿವೆ. ಆದರೆ ಅವುಗಳ ಸಂಬಂಧ ಸೆರ್‌ವಿಡೀಗೆ ಹತ್ತಿರವಾಗಿದೆ. ಜೀವಜಗತ್ತಿನ ಅತ್ಯಂತ ಎತ್ತರದ ಪ್ರಾಣಿಯೆನಿಸಿರುವ ಜಿರಾಫೆ ಸುಮಾರು ಇಪ್ಪತ್ತು ಅಡಿ ಎತ್ತರಕ್ಕೆ ಬೆಳೆಯಬಲ್ಲದು. ಗಂಡು ಹಾಗೂ ಹೆಣ್ಣು ಜಿರಾಫೆಗಳ ಹಣೆಯ ಮೇಲ್ಭಾಗದಲ್ಲಿ ಒಂದು ಜೊತೆ ಮೋಟು ಕೊಂಬುಗಳಿರುವುದುಂಟು. ಈಗ ಜಿರಾಫೆಗಳು ಆಫ್ರಿಕಕ್ಕೆ ಮಾತ್ರ ಸೀಮಿತವಾಗಿವೆ. ಜಿರಾಫೆಗಳು (ಜಿರಾಫ ಕುಲ) ಹಾಗೂ ಒಕಾಪಿ (ಒಕಾಪಿ ಕುಲ) ಗಳೇ ಇಂದು ಜೀವಂತವಾಗಿರುವ ಜಿರಾಫೆ ಕುಟುಂಬದ ಪ್ರಾಣಿಗಳು. ನೀಳ್ಗತ್ತಿನ ಸ್ತನಿಗಳಾದ ಜಿರಾಫೆಗಳು ನಡೆಯುವಾಗ ಒಂದು ಪಾರ್ಶ್ವದ ಮುಂಗಾಲು ಹಾಗೂ ಹಿಂಗಾಲುಗಳನ್ನು ಒಟ್ಟಿಗೆ ಚಲಿಸುತ್ತವೆ.

ಉತ್ತರ ಅಮೆರಿಕದಲ್ಲಿ, ಆಟಿಲೊಕ್ಯಾಪ್ರಿಡೀ ಕುಟುಂಬ ಮಯೋಸೀನ್ ಕಾಲದಲ್ಲಿ ಕಂಡುಬಂದಿತು. ಈ ಬಳಗದ ಜೀವಿಯಾದ ಪ್ರಾಂಗ್‌ಹಾರ್ನ್‌ನ ಕೊಂಬುಗಳು, ಜಿಂಕೆಗಳಲ್ಲಿರುವಂತೆ ಎರಡಾಗಿ ಕವಲೊಡೆದಿವೆ. ಇವುಗಳ ಕೊಂಬಿನ ಹೊರಹೊದಿಕೆ ವರ್ಷಂಪ್ರತಿ ಉದುರಿ ಬೀಳುತ್ತದೆ. ನೈಜ ಎರಳೆಗಳಲ್ಲಿರುವಂತೆ ಇವುಗಳಲ್ಲಿ ಪ್ರತಿಯೊಂದು ಕೊಂಬಿನಲ್ಲಿರುವ ಮಧ್ಯಭಾಗದ ಅಸ್ಥಿ ಏನೇ ಆದರೂ ತಲೆಬುರುಡೆ ಸ್ಥಿರವಾಗಿ ನಾಟಿಕೊಂಡಿರುತ್ತದೆ. ಮೊದಲು ಈ ಬಳಗದಲ್ಲಿ ವಿಲಕ್ಷಣವಾದ ಕೊಂಬುಗಳನ್ನುಳ್ಳ ಹಲವು ಪ್ರಾಣಿಗಳು ಹುಟ್ಟಿದ್ದವು. ಆದರೆ ಈಗ ಪ್ರಾಂಗ್‌ಹಾರ್ನ್ ಎರಳೆಯ ಒಂದು ಜಾತಿ ಮಾತ್ರ ಜೀವಂತವಾಗಿದೆ. ಮೆಲುಕುಹಾಕುವ ಪ್ರಾಣಿಗಳಲ್ಲಿ ಅತ್ಯಂತ ವಿಶೇಷವಾದ ವೈಶಿಷ್ಟ್ಯವನ್ನುಳ್ಳದ್ದೂ ವೈವಿಧ್ಯವನ್ನುಳ್ಳದ್ದೂ ಎಂದರೆ ಬೋವಿಡೀ ಕುಟುಂಬ. ಇವು ಟೊಳ್ಳುಗೊಂಬಿನ ಮೆಲುಕುಹಾಕುವ ಸ್ತನಿಗಳು. ಈ ಕುಟುಂಬ ಏಷ್ಯಾದಲ್ಲಿ ಮಯೋಸೀನ್‌ನ ಕಾಲಾವಧಿಯಲ್ಲಿ ಕಾಣಿಸಿಕೊಂಡಿತು. ಅನಂತರ ಇದು ಯುರೋಪ್, ಆಫ್ರಿಕ ಮತ್ತು ಹೊಸ ಪ್ರಪಂಚಕ್ಕೂ ಹರಡಿತು. ಈ ಕುಟುಂಬದ ಜೀವಿಸಿರುವ ಪ್ರತಿನಿಧಿಗಳೆಂದರೆ– ಸಾಕಿದ ದನಕರುಗಳು, ಆಡುಗಳು, ಕುರಿಗಳು, ಎರಳೆಗಳು, ನೀಲಗಾಯಿಗಳು, ಚಿಗರೆಗಳು. ಸಾಮಾನ್ಯವಾಗಿ ಗಂಡು ಮತ್ತು ಹೆಣ್ಣುಗಳೆರಡರಲ್ಲೂ ಒಂದು ಜೊತೆ ಟೊಳ್ಳು ಕೊಂಬುಗಳಿರುತ್ತವೆ. ಇವುಗಳಲ್ಲಿ ಕವಲೊಡೆಯುವ ಕೊಂಬುಗಳು ಉದುರಿಬೀಳುವುದಿಲ್ಲ. ಬೋವಿಡೀ ಕುಟುಂಬದಲ್ಲಿ ಸಾಕುವ ಪ್ರಾಣಿಗಳೇ ಅಧಿಕ. (ಬಿ.ಎಚ್.ಎಮ್.)

**ಆರ್ಟೀಸಿಯನ್ ಬಾವಿ :** ಆರ್ಟೀಸಿಯನ್ ಚಿಲುಮೆ ಎಂದು ಕರೆಯುತ್ತಾರೆ. ಪ್ರಪಂಚದ ಅನೇಕ ಕಡೆ ಇವು ಜನರಿಗೆ ಮತ್ತು ಬೇಸಾಯಕ್ಕೆ ವರ್ಷದುದ್ದಕ್ಕೂ ನೀರನ್ನು ಒದಗಿಸುತ್ತ ಪ್ರಕೃತಿ ನಮಗೆ ದಯಪಾಲಿಸಿದ ಅಕ್ಷಯಪಾತ್ರೆಗಳೆನಿಸಿವೆ.

ಪ್ರಖ್ಯಾತ ಅಂತರ್ಜಲ ವಿಜ್ಞಾನಿ ಮೆಯಿನ್‌ಜರ್ ಶಾಶ್ವತ ಜಲಮಟ್ಟಕ್ಕಿಂತ ಮೇಲ್ಭಾಗದಲ್ಲಿ ನೀರು ದೊರೆಯುವ ಬಾವಿಯನ್ನು ಆರ್ಟೀಸಿಯನ್ ಬಾವಿ ಎಂದು ಕರೆಯುತ್ತಾರೆ. ಆಳದಲ್ಲಿ ಹುದುಗಿರುವ ನೀರು ಈ ಬಾವಿಗಳ ಮೂಲಕ ನಮಗೆ ಒದಗುತ್ತದೆ. ಇವು ಉಂಟಾಗಲು ಭೂಭಾಗದಲ್ಲಿ ಅಡಕವಾಗಿರುವ ಶಿಲೆಗಳ ಒಂದು ವಿಶೇಷ ವಿನ್ಯಾಸವು ಮುಖ್ಯ ಕಾರಣ. ಹೀಗಾಗಿ ಎಲ್ಲೆಂದರಲ್ಲಿ ಆರ್ಟೀಸಿಯನ್ ಬಾವಿಯನ್ನು ತೋಡಲು ಸಾಧ್ಯವಾಗಲಾರದು. ಒಂದು ನಿರ್ದಿಷ್ಟವಾದ ಶಿಲಾವಿನ್ಯಾಸವಿದ್ದ ಕಡೆ ಮಾತ್ರ ಇವು ಸಾಧ್ಯ. ಶಿಲೆಗಳು ಪ್ರಸ್ತರೀ ಸ್ವರೂಪವನ್ನು ಹೊಂದಿದ್ದು ಅಷ್ಟು ಅಡಕವಲ್ಲದ ರಚನೆಯುಳ್ಳ ಜಲಜ ಶಿಲೆಗಳಾಗಿರಬೇಕು. ಮರಳು ಶಿಲೆ ಇದಕ್ಕೆ ಉತ್ತಮ ಉದಾಹರಣೆ. ಇದು ವಿವಿಧ ಗಾತ್ರದ ಮರಳಿನ ಕಣಗಳಿಂದ ಕೂಡಿ ಕಣಗಳ ಮಧ್ಯೆ ನೀರು ಸುಲಭವಾಗಿ ಜಿನುಗಲು ಅಥವಾ ಪ್ರವೇಶಿಸಲು ಅವಕಾಶವಿದೆ. ಈ ಬಗೆಯ ಸರಂಧ್ರ ಮತ್ತು ವ್ಯಾಪ್ಯಶಿಲೆಗಳು ಉತ್ತಮ ಜಲವಾಹಕಗಳೂ ಹೌದು. ಇವುಗಳ ಇಕ್ಕೆಲಗಳಲ್ಲೂ ಅವ್ಯಾಪ್ಯ ಶಿಲೆಗಳು ಹರಡಿದ್ದಲ್ಲಿ ಇವುಗಳಲ್ಲಿ ಜಿನುಗುವ ನೀರು ಪೋಲಾಗದೆ ಶೇಖರವಾಗುತ್ತ ಹೋಗುತ್ತದೆ. ಸುಣ್ಣಶಿಲೆ, ಜೇಡು ಶಿಲೆ ಇತ್ಯಾದಿ ಜಲಜ ಶಿಲೆಗಳು ಅವ್ಯಾಪ್ಯ ಶಿಲೆಗಳು ಅಂದರೆ ಮಧ್ಯದಲ್ಲಿನ ಪ್ರಸ್ತರ ಮರಳು ಶಿಲೆ ಅದರ ಕೆಳಗೆ ಜೇಡು ಅಥವಾ ಸುಣ್ಣಶಿಲೆ ಅಲ್ಲದೆ ಅದರ ಮೇಲುಗಡೆಯೂ ಅಂಥದೇ ಶಿಲೆ. ಆದರೆ ಕೇವಲ ಇಷ್ಟಾದರೆ ಸಾಲದು. ನೀರು ಜಿನುಗಿ ಶೇಖರವಾಗಬೇಕಾದರೆ ಈ ಶಿಲಾಪ್ರಸ್ತರಗಳು ಮಡಿಕೆ ಬಿದ್ದು ಬಾಣಲೆಯಂತಾದರೆ ಬಹು ಉತ್ತಮ. ಆಗ ನೆಲದ ಮೇಲಿನ ನೀರು ಮರಳು ಶಿಲಾಪ್ರಸ್ತರದ ಇಕ್ಕೆಲಗಳಲ್ಲೂ ಜಿನುಗಿ ತಗ್ಗಿದ್ದಲ್ಲಿ ಶೇಖರವಾಗುತ್ತ ಹೋಗುತ್ತದೆ. ನೀರಿನ ಶೇಖರಣೆ ಹೆಚ್ಚಿದಂತೆಲ್ಲ ದ್ರವ ಒತ್ತಡವೂ ಅಧಿಕವಾಗುತ್ತ ಹೋಗುತ್ತದೆ. ಅಂಥ ಸ್ಥಳದಲ್ಲಿ ಬಾವಿಯನ್ನು ತೋಡಿದಲ್ಲಿ ಶೇಖರವಾಗಿರುವ ನೀರು ಒತ್ತಡ ಕಡಿಮೆಯಾಗುವ ಕಾರಣ ಮೇಲಕ್ಕೆ ಚಿಮ್ಮಿ ಬರುತ್ತದೆ. ಈ ಬಗೆಯ ಆರ್ಟೀಸಿಯನ್ ಬಾವಿಗಳನ್ನು ಅಧಿಕ ಒತ್ತಡ ಬಾವಿಗಳೆಂದು ಕರೆಯುತ್ತಾರೆ.

ಘರ್ಷಣೆಯಿಲ್ಲದೆ ನೀರು ಮೇಲೇಳುವ ಮಟ್ಟ



**1 ಅವ್ಯಾಪ್ಯ ಶಿಲಾಪದರ; 2 ವ್ಯಾಪ್ಯ ಶಿಲಾಪದರ; 3 ಕೊರೆದ ರಂಧ್ರ**

ಕೆಲವು ಪ್ರದೇಶಗಳಲ್ಲಿ ಇಂಥ ಶಿಲಾಪ್ರಸ್ತರಗಳು ಬಾಣಲೆಯಂತಿರುವ ತಗ್ಗನ್ನು ತೋರ್ಪಡಿಸದೆ ಕೇವಲ ಒಂದೇ ದಿಕ್ಕಿಗೆ ನೆಲಮಟ್ಟದಿಂದ ವಾಲಿರುವುದೂ ಉಂಟು. ಈ ಬಗೆಯ ಶಿಲಾವಿನ್ಯಾಸವೂ ಆರ್ಟೀಸಿಯನ್ ಬಾವಿಗೆ ಉತ್ತಮವಾದದ್ದೇ. ಒತ್ತಡ ಅಧಿಕವಾಗಿದ್ದಲ್ಲಿ ಈ ಸನ್ನಿವೇಶದಲ್ಲೂ ನೀರು ಮೇಲಕ್ಕೆ ಚಿಮ್ಮುತ್ತದೆ.

ಅಮೆರಿಕ ಸಂಯುಕ್ತಸಂಸ್ಥಾನದ ಡಕೋಟ ಪ್ರಾಂತ್ಯದಲ್ಲಿ ಕೆಲವು ಚಿಲುಮೆಗಳ ನೀರು ಇನ್ನೂರು ಅಡಿಗಳಿಗೂ ಹೆಚ್ಚು ಎತ್ತರಕ್ಕೆ ಚಿಮ್ಮುತ್ತದೆ. ಇದೇ ಪ್ರಾಂತ್ಯದ ವೂನ್‌ಸಾಕೆಟ್ ಎಂಬಲ್ಲಿನ ಆರ್ಟೀಸಿಯನ್ ಬಾವಿಯ ಮೂಲಕ ಚಿಮ್ಮುವ ನೀರು ಬಹು ರಭಸದಿಂದ ಹೊರಬರುತ್ತದೆ. ರಭಸದಲ್ಲಿನ ದ್ರವ ಒತ್ತಡವನ್ನು ರೂಢಿಸಿಕೊಂಡು ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಯಿತು. ಅಲ್ಲದೆ ಒಂದು ಹಿಟ್ಟಿನ ಗಿರಣಿಯನ್ನೂ ಈ ವಿದ್ಯುಚ್ಛಕ್ತಿಯ ಮೂಲಕ

ನಡೆಸುತ್ತಿದ್ದರು. ಆದರೆ ಈ ತೆರನಾದ ಬಾವಿಗಳ ವಿಸ್ತೀರ್ಣ ಅಷ್ಟಾಗಿರುವುದಿಲ್ಲ. ದ್ರವ ಒತ್ತಡ ಕಡಿಮೆ ಇರುವ ಆರ್ಟೀಸಿಯನ್ ಬಾವಿಗಳನ್ನು ಕಡಿಮೆ ಒತ್ತಡದ ಆರ್ಟೀಸಿಯನ್ ಪ್ರವಾಹಗಳೆಂದೂ ಕರೆಯುತ್ತಾರೆ. ಇವುಗಳ ನೀರು ಎತ್ತರಕ್ಕೆ ಚಿಮ್ಮಲಾರದು; ಆದರೆ ವಿಸ್ತಾರವಾದ ಪ್ರದೇಶಗಳನ್ನು ಆಕ್ರಮಿಸುತ್ತದೆ. ಇವು ಹೆಚ್ಚು ನೀರನ್ನೂ ಒದಗಿಸುತ್ತವೆ. ಅಮೆರಿಕಾದ ನ್ಯೂ ಮೆಕ್ಸಿಕೊ ಪ್ರಾಂತ್ಯದ ಈ ಬಗೆಯ ಆರ್ಟೀಸಿಯನ್ ಬಾವಿಯಲ್ಲಿ ತಿಂಗಳಿಗೆ 6,000 ಗ್ಯಾಲನ್‌ಗಳಷ್ಟು ಹೆಚ್ಚಿನ ಪ್ರಮಾಣದಲ್ಲಿ ನೀರು ದೊರೆತ ದಾಖಲೆಗಳಿವೆ.

ಆರ್ಟೀಸಿಯನ್ ಬಾವಿಗಳನ್ನು ತೋಡುವ ಕ್ರಮ ಮತ್ತು ಅವುಗಳ ಬಳಕೆ ಪ್ರಾಚೀನ ಕಾಲದ (ಪ್ರ.ಶ.ಪೂ.2000 ವರ್ಷಕ್ಕೂ ಮುಂಚೆ) ಈಜಿಪ್ಟಿನವರಿಗೆ ತಿಳಿದಿತ್ತು. ಕ್ರೈಸ್ತಧರ್ಮದ ಇತಿಹಾಸದಲ್ಲಿ ಕೇಳಿಬರುವ ಮೋಸೆಸ್ ಇವರಿಂದಲೇ ಬಂಡೆಗಳಲ್ಲಿ ನೀರನ್ನು ಪಡೆಯುವ ವಿದ್ಯೆಯನ್ನು ಕಲಿತನೆಂದು ಪ್ರತೀತಿ. ಅದೇ ಕಾಲದ ಥೀಬನ್, ಷಾಬ್ ಮತ್ತು ಡಾಷೆಲ್ ಓಯಸಿಸ್‌ಗಳಿಗೆ ಅಸಂಖ್ಯಾತ ಆರ್ಟೀಸಿಯನ್ ಬಾವಿಗಳಿಂದ ನೀರು ಒದಗುತ್ತಿತ್ತೆಂಬ ಅಂಶವನ್ನೂ ಪತ್ತೆ ಹಚ್ಚಲಾಗುತ್ತದೆ. ಅಲ್ಲದೆ ಆ ಕಾಲದಲ್ಲೇ ಕೆಲವು ಆರ್ಟೀಸಿಯನ್ ಬಾವಿಗಳನ್ನು 150 ಮೀ ಮೀರಿದ ಆಳಕ್ಕೆ ತೋಡಲಾಗಿತ್ತು.

ಯುರೋಪಿನಲ್ಲಿ 12ನೆಯ ಶತಮಾನದಲ್ಲಿ ಆರ್ಟೀಸಿಯನ್ ಬಾವಿಗಳನ್ನು ತೋಡುವುದು ಮೊದಲಾಯಿತು. ಮೊತ್ತಮೊದಲನೆಯ ಬಾವಿಯನ್ನು ದಕ್ಷಿಣ ಫ್ರಾನ್ಸ್‌ನ ಆರ್ಟಾಯ್ಸ್ ಪ್ರಾಂತ್ಯದ ಲಿಲಿಯರ್ಸ್ ಬಳಿ 1126ರಲ್ಲಿ ತೋಡಲಾಯಿತು. ಹೀಗಾಗಿ ಆ ಪ್ರಾಂತ್ಯದ ಹೆಸರಿನ ನಂಟು ಈ ಬಗೆಯ ಬಾವಿಗಳಿಗೆ ಅಂಟಿತು. ಮುಂದೆ 17ನೆಯ ಶತಮಾನದಲ್ಲಿ ಇಟಲಿ ಮತ್ತು ಆಸ್ಟ್ರಿಯ ದೇಶಗಳಲ್ಲಿ ಅಸಂಖ್ಯಾತ ಬಾವಿಗಳನ್ನು ತೋಡಿದರು. ಇಂದಿಗೂ ಈ ಬಾವಿಗಳಿಂದ ಅಲ್ಲಿನ ಜನರಿಗೆ ಮಹೋಪಕಾರವಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಆಧುನಿಕ ವೈಜ್ಞಾನಿಕ ವಿಧಾನಗಳನ್ನನುಸರಿಸಿ ಹೊಸ ಹೊಸ ಭೂಭೌತ ಯಂತ್ರೋಪಕರಣಗಳ ಸಹಾಯದಿಂದ ಆಧುನಿಕ ಭಗೀರಥರು ಪಾತಾಳ ಗಂಗೆಯನ್ನು ಕರಗತ ಮಾಡಿಕೊಂಡಿದ್ದಾರೆ. ಈ ಮೂಲಕ ಪ್ರಪಂಚದ ಅನೇಕ ಭಾಗಗಳಲ್ಲಿ ಸಹಸ್ರಾರು ಆರ್ಟೀಸಿಯನ್ ಬಾವಿಗಳ ಜನಕರಾಗಿದ್ದಾರೆ. ಇದು ಸಾಲದೆ ಹಲವಾರು ಆರ್ಟೀಸಿಯನ್ ಪ್ರವಾಹಗಳನ್ನೇ (ಗುಪ್ತನದಿ) ಪತ್ತೆ ಹಚ್ಚಿದ್ದಾರೆ. ಉತ್ತರ ಅಮೆರಿಕ ಮತ್ತು ಕೆನಡ ದೇಶಗಳಲ್ಲಿ ಕಂಡುಬರುವ ಡಕೋಟ ಮರಳು ಶಿಲಾಪ್ರಸ್ತರ ಈ ದಿಸೆಯಲ್ಲಿ ಮಹತ್ವಪೂರ್ಣವಾದುದು. ಇದು ಮಧ್ಯ ಅಮೆರಿಕ, ಪಶ್ಚಿಮ ಅಮೆರಿಕ ಮತ್ತು ಕೆನಡಗಳಲ್ಲೂ ಸಹಸ್ರಾರು ಮೈಲಿ ವಿಸ್ತೀರ್ಣವಾದ ಪ್ರದೇಶಗಳಲ್ಲಿ ವ್ಯಾಪಿಸಿದೆ. ಇದು ಎತ್ತರದ ರಾಕಿ ಪರ್ವತಶ್ರೇಣಿಗಳಲ್ಲಿ ಮೊದಲಾಗಿ ಪೂರ್ವದ ಕಡೆಗೆ ಇಳಿವೋರೆಯನ್ನು ತೋರಿಸುತ್ತ ಸಾಸ್ಕಚವಾನ್, ಮಾಂಟಾನ, ಡಕೋಟ, ವ್ಯೋಮಿಂಗ್, ನೆಬ್ರಾಸ್ಕ ಮತ್ತು ಕಾನ್ಸಾಸ್ ಪ್ರಾಂತ್ಯಗಳಲ್ಲೆಲ್ಲ ನೆಲಮಟ್ಟದಿಂದ ಆಳಕ್ಕೆ ಹುದುಗಿದೆ. ಪರ್ವತ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ಮರಳುಶಿಲೆಯಲ್ಲಿ ಸುಲಭವಾಗಿ ವ್ಯಾಪಿಸಿ ಆ ಮೂಲಕ ನಾನಾಕಡೆ ತೋಡಿರುವ ಸಹಸ್ರಾರು ಆರ್ಟೀಸಿಯನ್ ಬಾವಿಗಳಿಗೆ ಮೂಲಕಾರಣವಾಗಿದೆ. ಇದಲ್ಲದೆ ಅರ್ಜೆಂಟೀನ ಮತ್ತು ಆಸ್ಟ್ರೇಲಿಯದ ಅನೇಕ ಪ್ರಾಂತ್ಯಗಳಲ್ಲಿ ಇಂದಿಗೂ ಆರ್ಟೀಸಿಯನ್ ಬಾವಿಗಳೇ ಜನರಿಗೆ ಮತ್ತು ಬೇಸಾಯಕ್ಕೆ ಮುಖ್ಯ ಆಸರೆ. ನಮ್ಮ ದೇಶದ ಪಾಂಡಿಚೆರಿಯ ಸುತ್ತಮುತ್ತ ಹಲವಾರು ಆರ್ಟೀಸಿಯನ್ ಬಾವಿಗಳಿವೆ. (ಬಿ.ವಿ.ಜ.)

**ಆರ್ಟೆಮಿಸ್ :** ಗ್ರೀಕ್ ಪುರಾಣಗಳಲ್ಲಿ ವನ್ಯಮೃಗಗಳ, ಸಸ್ಯಗಳ ಮತ್ತು ಬೇಟೆಯ ಅಧಿದೇವತೆ. ಕನ್ನೆತನ ಹಾಗೂ ಹೆರಿಗೆಗೆ ಸಂಬಂಧಿಸಿದ ದೇವಿ, ಸ್ತ್ರೀರಕ್ಷಕಿ. ರೋಮನ್ನರ ಪ್ರಕಾರ ಈಕೆಯೇ ಡಯಾನ. ಸಾಮಾನ್ಯರ ದೃಷ್ಟಿಯಿಂದ, ಹೆಣ್ಣು ದೇವತೆಗಳಲ್ಲೇ ಅತ್ಯಂತ ಜನಪ್ರಿಯಳು. ಜ್ಯೂಸ್ ಮತ್ತು ಲೀಟೋರ ಮಗಳು. ಅಪೋಲೊ ದೇವತೆಯ ಅವಳಿ ಸೋದರಿ. ಅಪೋಲೊ ಸೂರ್ಯ ದೇವತೆಯಾದರೆ ಆರ್ಟೆಮಿಸ್ ಚಂದ್ರ ದೇವತೆ. ಇರುಳಿನ ದೈವ. ಸಾಮಾನ್ಯವಾಗಿ ಅಪ್ಸರೆಯರ ಪರಿವಾರದೊಡನೆ ಗಿರಿಕಾನನಗಳಲ್ಲಿ ನರ್ತಿಸುತ್ತಾಳೆ.

ಇವಳ ಪೂಜೆ ಪ್ರಾಯಃ ಪ್ರ.ಶ.ಪೂ. ದ್ವಿತೀಯ ಶತಮಾನದ ಅವಧಿಯಲ್ಲಿ ಕ್ರೀಟ್ ಅಥವಾ ಗ್ರೀಕ್ ಭೂಭಾಗದಲ್ಲಿ ಪ್ರಚಲಿತವಾಗಿತ್ತೆಂದು ಹೇಳಲಾಗಿದೆ.

ಹೋಮರ್ ಕವಿಯ ಪ್ರಕಾರ, ಆರ್ಟೆಮಿಸ್ ಪ್ರಧಾನವಾಗಿ ಬೇಟೆಗಾತಿ; ಮೃಗಗಳ ಅಧಿದೇವತೆ. ಬೇಟೆಯನ್ನು ಕೊಲ್ಲುವವಳು ಮಾತ್ರವಲ್ಲ, ಕಾಪಾಡುವವಳೂ ಹೌದು. ಅದರಲ್ಲೂ ಎಳೆಯ ಪ್ರಾಣಿಗಳಿಗೆ ಅವಳಿಂದ ರಕ್ಷಣೆ. ಧನುರ್ಧಾರಿಣಿಯಾದುದರಿಂದ, ಹೆಂಗಸರಿಗೆ ಕೋಮಲ ಬಾಣಗಳ ಮೂಲಕ ಹಠಾತ್ ಮೃತ್ಯುವನ್ನುಂಟುಮಾಡುವವಳು ಅವಳೇ. ಬಿಲ್ಗಾರನಾದ ಅವಳ ಸೋದರ ಅಪೋಲೊ ಪುರುಷರ ಹಠಾತ್ ಮರಣಕ್ಕೆ ಕಾರಣನಾಗುತ್ತಾನೆ. ಆತ ನಿಯೋಬನ ಗಂಡು ಮಕ್ಕಳನ್ನೂ ಆರ್ಟೆಮಿಸ್ ಹೆಣ್ಣುಮಕ್ಕಳನ್ನೂ ಕೊಲ್ಲುತ್ತಾರೆ. ಒಡಿಸ್ಸಿ ಕಾವ್ಯದಲ್ಲಿ ಸ್ತ್ರೀಸೌಂದರ್ಯದ ಮಾದರಿಯಾಗಿ ಅಪ್ರೋದಿತೆಯೊಡನೆ ಚಿತ್ರಿತಳಾಗಿದ್ದಾಳೆ, ಆರ್ಟೆಮಿಸ್. ಆರ್ಟೆಮಿಸ್ ಗ್ರಾಮೀಣ ದೇವತೆಯೇ ವಿನಾ ನಾಗರಿಕ ದೇವತೆಯಲ್ಲ. ನರ್ತನ ಹಾಗೂ ಅಪ್ಸರೆಯರೊಡನೆ ಅವಳಿಗಿರುವ ಸಂಬಂಧ ಮುಂತಾದ ವಿವರಗಳು ಹುಟ್ಟಿ ಕೊಂಡದ್ದು ಕವಿಕಲ್ಪನೆಯಿಂದಲ್ಲ ಆರಾಧನಾ ವಿಧಿಯಿಂದ. ವೃಕ್ಷಾರಾಧನೆ ಸಸ್ಯವರ್ಗದ ಅಧಿದೇವತೆಯಾದ ಆರ್ಟೆಮಿಸ್‌ಳ ಆರಾಧನೆಯ ಒಂದು ಪ್ರಕಾರ. ಅದರಲ್ಲಿ ಅಪ್ಸರೆಯರ ನೃತ್ಯ ವಿಶೇಷವಾಗಿ ಕಂಡುಬರುತ್ತದೆ.

ಆರ್ಟೆಮಿಸ್‌ಳ ಅತ್ಯಂತ ಪರಿಚಿತವಾದ ರೂಪವೆಂದರೆ ಮೃಗಗಳ ಅಧಿದೇವತೆಯದು. ಕವಿಗಳು ಮತ್ತು ಕಲಾವಿದರು ಅವಳನ್ನು ಒಂದು ಜಿಂಕೆಯೊಡನೆ ಅಥವಾ ಬೇಟೆಯ ನಾಯಿಯೊಡನೆ ಇರುವಂತೆ ಚಿತ್ರಿಸುವುದು ವಾಡಿಕೆ. ಆದರೆ ಆರಾಧನ ವಿಧಿಗಳಲ್ಲಿ ಸಾಕಷ್ಟು ವೈವಿಧ್ಯಕ್ಕೆ ಅವಕಾಶವಿದೆ.

ಮೂಲತಃ ಆರ್ಟೆಮಿಸ್ ಮಾತೃದೇವತೆಯಾಗಿದ್ದಿರಬೇಕೆಂದು ಹಲವು ವಿದ್ವಾಂಸರ ಮತ. ಆಕೆಯ ಪರಿವಾರದವರಿಗೆ ಸಂಬಂಧಿಸಿದ ಪ್ರಣಯ ಕಥೆಗಳು ಮೂಲತಃ ಆರ್ಟೆಮಿಸ್‌ಳಿಗೆ ಅವಳು ಮಾತೃದೇವತೆಯಾಗಿದ್ದಾಗ ಸಂಬಂಧಿಸಿದ್ದಿರಬಹುದೆಂದು ಕೆಲವರ ಊಹೆ. ಆದರೆ ಹೋಮರನ ಅನಂತರ ಬಂದ ಕವಿಗಳು ಆರ್ಟೆಮಿಸ್‌ಳನ್ನು ಚಿತ್ರಿಸುವಾಗ ಅವಳ ಕೌಮಾರ್ಯಕ್ಕೆ ಬಹಳ ಪ್ರಾಶಸ್ತ್ಯ ಕೊಟ್ಟರು.

ಆರ್ಟೆಮಿಸ್‌ಳ ಕೋಪ ಮನೆಮಾತಾಗಿ ಪರಿಣಮಿಸಿದೆಯಂತೆ. ಏಕೆಂದರೆ ಅದು ಮಾನವನ ಬಗೆಗೆ ಪ್ರಕೃತಿಯಲ್ಲಿರುವ ದ್ವೇಷವನ್ನು ಸಂಕೇತಿಸುತ್ತದೆ. ಆಗಮೆಮ್ನಾನ್, ನಿಯೋಬ್ ಮೊದಲಾದವರು ಅವಳ ಕ್ರೋಧದ ಫಲವನ್ನನುಭವಿಸಬೇಕಾಯಿತು. (ಸಿ.ಪಿ.ಕೆ.)

**ಆರ್ಡ್‌ವಾರ್ಕ್ :** ಈಡೆಂಟೇಟ ಉಪವರ್ಗದ, ಆರಿಕ್ಟೆರೊಪೋಡಿಡೀ ಕುಟುಂಬಕ್ಕೆ ಸೇರಿದ, ಒಂದು ಗೆದ್ದಲು ಬಾಕ ಸ್ತನಿ. ಆರಿಕ್ಟೆರೊಪಸ್ ಏಫರ್ ಇದರ ಶಾಸ್ತ್ರೀಯ ಹೆಸರು. ಇದು ದಕ್ಷಿಣ ಆಫ್ರಿಕ ಖಂಡಕ್ಕೆ ಮಾತ್ರ ಮೀಸಲಾಗಿದೆ.

ಪ್ಲೈಯೋಸೀನ್ ಕಾಲದ ಕಡೆಯ ಭಾಗದಿಂದಲೂ ಇದರ ಉತ್ತಮ ಅವಶೇಷಗಳು ದೊರೆತಿವೆ. ಅತ್ಯಂತ ದೊಡ್ಡ ಶರೀರ, ಉದ್ದವಾದ ಮೂತಿ. ಶರೀರದ ಮೇಲೆ ತೆಳುವಾಗಿ ರೋಮಗಳು ಹರಡಿಕೊಂಡಿವೆ. ಕಿವಿಗಳು ಉದ್ದ. ಬೆನ್ನು ಕಮಾನಿನಂತೆ ಬಾಗಿದೆ. ಮುಂದಿನ



ಕಾಲಿನಲ್ಲಿ 4 ಬೆರಳು, ಹಿಂದಿನ ಕಾಲಿನಲ್ಲಿ 5 ಬೆರಳು. ಹಲ್ಲುಗಳಿಗೆ ಬೇರುಗಳಿಲ್ಲ. ಮೇಲುದವಡೆಯಲ್ಲಿ 8–10 ಹಲ್ಲುಗಳು ಇವೆ. ಹಗಲು ವೇಳೆಯಲ್ಲಿ ಚಿಕ್ಕ ಚಿಕ್ಕ ಗುಹೆಗಳಲ್ಲಿ ನಿದ್ರಿಸಿದ್ದು ರಾತ್ರಿಯ ಕಾಲದಲ್ಲಿ ಮಾತ್ರ ಹೊರಗೆ ಬಂದು ಗೆದ್ದಲು ಮತ್ತು ಇರುವೆಗಳನ್ನು ತಿಂದು ಬದುಕುತ್ತದೆ. ಇತ್ತೀಚೆಗೆ ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ. (ಎಲ್.ಎಸ್.ಜಿ.)

**ಆರ್ಡ್‌ವಿಂಗೇಟ್ :** ಶತ್ರುವಿಗೆ ಬೆನ್ನಹಿಂದೆ ಕಿರುಕುಳ ಕೊಡುವ ಕಲೆಯನ್ನು ಬೆಳೆಸಿದಾತ. ಟಿ.ಇ.ಲಾರೆನ್ಸ್ ಎಂಬುವನು ಕೇವಲ ಅಲ್ಪಬಲದ ಸಹಾಯದಿಂದ ತುರ್ಕಿ ಸೈನ್ಯದ ಸಂಚಾರ ಮತ್ತು ಸಂಪರ್ಕ ವ್ಯವಸ್ಥೆಯನ್ನು ಹೇಗೆ ಧ್ವಂಸ ಮಾಡಿದನೋ ಅಂಥದೇ ಕೃತ್ಯವನ್ನು ಆರ್ಡ್‌ವಿಂಗೇಟ್ ಎರಡನೆಯ ಮಹಾಯುದ್ಧದಲ್ಲಿ ಶತ್ರುಸೈನ್ಯದ ಹಿಂಭಾಗದಲ್ಲಿದ್ದು ಜಯಪ್ರದವಾಗಿ ಮಾಡಿದ. ದಿಲ್ಲಿಯನ್ನೂ ಕಲ್ಕತ್ತವನ್ನೂ ತನ್ನ ಮುಖ್ಯ ನೆಲೆಯನ್ನಾಗಿ ಮಾಡಿಕೊಂಡು ಮಧ್ಯಪ್ರಾಚ್ಯದ ರಂಗದಲ್ಲಿ ತಾನು ಕೈಕೊಂಡ ಪ್ರಯೋಗಗಳನ್ನು ಬರ್ಮದಲ್ಲಿ ಸಮಂಜಸವಾಗಿ ಮುಂದುವರಿಸಿದ. ಭಾರತವನ್ನು ಆಕ್ರಮಿಸಿದ ಉದ್ದೇಶದಿಂದ ಮುಂದುವರಿಯುತ್ತಿದ್ದ ಜಪಾನೀಯರ ಹಿಂಭಾಗದಲ್ಲಿ ಆಕಾಶಯಾನಗಳಲ್ಲೂ ಫಲಕ ವಿಮಾನಗಳಲ್ಲೂ ಸೈನಿಕರನ್ನು ತಂದು ಇಳಿಸಲಾಗುತ್ತಿತ್ತು. ಈತನೂ, ಈತನ ಅನುಯಾಯಿಗಳೂ ಆಹಾರ ಮತ್ತು ಇತರ ವಸ್ತುಗಳ ಸರಬರಾಜು ಬಹಳ ಕಡಿಮೆಯಾಗಿದ್ದರೂ ಎದೆಗುಂದದೆ ಶತ್ರುವಿನ ಆಕಾಶಯಾನಗಳು, ಮದ್ದುಗುಂಡುಗಳ ಗುಪ್ಪೆಗಳು, ಯುದ್ಧಸಾಮಗ್ರಿಗಳು ಮೊದಲಾದುವನ್ನೆಲ್ಲ ಧ್ವಂಸ ಮಾಡುತ್ತಿದ್ದರು. ಶತ್ರುವಿನೊಂದಿಗೆ ಮಾಡಿದ ಅನೇಕ ಸಣ್ಣ ಪುಟ್ಟ ಕಾದಾಟಗಳಲ್ಲಿ ಇವರು ಅಸಂಖ್ಯ ಜಪಾನೀಯರನ್ನು ಕೊಂದರು. ವಿಂಗೇಟ್ ಹೊಸ ಪರಿಯ ಸಾಹಸದ ಈ ಯುದ್ಧಕ್ರಮದಲ್ಲಿ ತನ್ನ ಜೊತೆಗಾಗಿ ಶತ್ರುವಿನೊಂದಿಗೆ ಕಾದಾಡಲು ಮುಂದೆ ಬಂದ ಅನೇಕ ಮಿತ್ರವರ್ಗ ಮತ್ತು ಭಾರತದ ಸೈನಿಕರ ಸಹಿತ ಮಾಯನ್ಮಾರ್‌ನ ಕಾಡುಗಳಲ್ಲಿ ಪ್ರಾಣಕೊಟ್ಟ. (ಎ.ಎನ್.ಎಸ್.ಎಂ.)

**ಆರ್ಡ್‌ವುಲ್ಫ್ :** ಮಾಂಸಾಹಾರಿ ಸ್ತನಿ (ಪ್ರೊಟಿಲಿಸ್ ಕ್ರಿಸ್ಟೇಟಸ್). ನೆಲತೋಳ; ಇಳಾವ್ಸ್‌ಕ್ ದಕ್ಷಿಣ ಮತ್ತು ಪೂರ್ವ ಆಫ್ರಿಕ ದೇಶಗಳಲ್ಲಿ ವಾಸಿಸುತ್ತದೆ. ಆಕಾರದಲ್ಲಿ ಕತ್ತೆಕಿರುಬವನ್ನು ಹೋಲುತ್ತದೆ. ಆದರೆ ಹಿಂಗಾಲುಗಳು ಎತ್ತರವಾಗಿರುವುದರಿಂದ ತೋಳಕ್ಕಿಂತ ಎತ್ತರವಾಗಿ ನಿಲ್ಲುತ್ತದೆ. ಅದರ ಕೂದಲು ಹಳದಿ ಅಥವಾ ಕೆಂಪುಮಿಶ್ರ ಕಂದುಬಣ್ಣದಿಂದ

ಕೂಡಿದ್ದು, ಒರಟಾಗಿ ಉಣ್ಣೆಯಂತಿರುತ್ತದೆ. ಎರಡು ಪಕ್ಕದಲ್ಲೂ ಆರು ಪಟ್ಟೆಗಳಿವೆ. ಬಾಲ ಸುಮಾರು ಉದ್ದವಾಗಿ ದಪ್ಪವಾಗಿರುತ್ತದೆ. ಕತ್ತಿನ ಮತ್ತು ಬೆನ್ನಿನ ಬಳಿ ಕೇಸರಿ ಕೂದಲು ಇದೆ. ಕತ್ತೆ ಕಿರುಬಕ್ಕಿಂತ ಇದರ ದವಡೆಗಳು ಬಲಹೀನವಾಗಿವೆ; ಮುಸುಡಿ ಮೊನಚಾಗಿದೆ; ಕಿವಿಗಳು ಇನ್ನೂ ಉದ್ದವಾಗಿವೆ. ಮಾಂಸಾಹಾರಿ ಮತ್ತು ಕೀಟಾಹಾರಿ; ಇದರ ಮುಖ್ಯ ಆಹಾರ ಗೆದ್ದಲು ಹುಳು, ನೊಣಗಳು, ಮರಿಹುಳುಗಳು ಮತ್ತು ಹಣ್ಣು. ನೆಲದಲ್ಲಿ ಹಳ್ಳತೋಡಿ ಅದರಲ್ಲಿ ವಾಸಿಸುತ್ತದೆ. ಇತರ ಹಳ್ಳವಾಸಿಗಳಂತೆ ಆರ್ಡ್‌ವುಲ್ಫ್ ತುಂಬ ಭಯಪಡುವ ಮತ್ತು ಹೇಡಿಯಾದ ಪ್ರಾಣಿ. ರಾತ್ರಿಸಂಚಾರಿಯಾದುದರಿಂದ ಇದು ಸಾಧಾರಣವಾಗಿ ಕಣ್ಣಿಗೆ ಬೀಳುವುದಿಲ್ಲ. (ಎಸ್.ಎನ್.ಕೆ.)

**ಆರ್ದುನೊ ಜೊವಾನಿ: 1714–95 :** ಇಟಲಿಯಭೂವಿಜ್ಞಾನಿ. ಕೇಪ್ರಿನೊ ಎಂಬಲ್ಲಿ ಜನಿಸಿದ. ಉತ್ತರ ಇಟಲಿಯಲ್ಲಿ ಕಂಡುಬರುವ ಶಿಲೆಗಳ ವರ್ಗೀಕರಣಕ್ಕೆ ಈತ ಹೆಸರು ಗಳಿಸಿದ್ದಾನೆ. ಇವುಗಳಲ್ಲಿ ಪ್ರಾಥಮಿಕಶಿಲೆಗಳು (ಪ್ರೈಮರಿ ರಾಕ್ಸ್), ದ್ವಿತೀಯಕ ಶಿಲೆಗಳು (ಸೆಕೆಂಡರಿ ರಾಕ್ಸ್) ಮತ್ತು ತೃತೀಯಕ ಶಿಲೆಗಳು (ಟರ್ಷಿಯರಿ ರಾಕ್ಸ್) ಎಂಬುವೇ ಈತ ಮಾಡಿದ ವರ್ಗೀಕರಣ. ಅಗ್ನಿಪರ್ವತಗಳ ಬಗ್ಗೆ ಅನೇಕ ಕೃತಿಗಳನ್ನು ಈತ ರಚಿಸಿದ್ದಾನೆ.*

**ಆರ್ಡೆನ್ :** ಉತ್ತರ ಫ್ರಾನ್ಸಿನ ಒಂದು ಜಿಲ್ಲೆ. ಹೆಚ್ಚಾಗಿ ಬೆಲ್ಜಿಯಂನ ಆಗ್ನೇಯ ಪ್ರಾಂತ್ಯ ಮತ್ತು ಲಕ್ಸಂಬರ್ಗ್‌ನ ಉತ್ತರಭಾಗದಲ್ಲಿ ಹರಡಿರುವ ಅರಣ್ಯದಿಂದ ಕೂಡಿದ ಪ್ರಸ್ಥಭೂಮಿ ಪ್ರದೇಶ. ಇದು ಮ್ಯೂಸ್ ನದಿಯ ಪೂರ್ವ ಮತ್ತು ದಕ್ಷಿಣಪಾರ್ಶ್ವದಲ್ಲಿದೆ. ಇಳಿಜಾರು ಪ್ರವಾಹವುಳ್ಳ ನದಿಗಳು ಈ ಪ್ರದೇಶದಲ್ಲಿ ಹರಿಯುವುದರಿಂದ ಆಳವಾದ ಅನೇಕ ಕಮರಿಗಳು, ಕಡಿದಾದ ಬಂಡೆಗಳಿಂದ ಕೂಡಿದೆ. ಜನ ಹೆಚ್ಚಾಗಿ ವೆಲೂನ್ (ನೋಡಿ) ಜನಾಂಗಕ್ಕೆ ಸೇರಿದವರು. ಈ ಪ್ರದೇಶದ ವಿಸ್ತೀರ್ಣಕ್ಕಿಂತಲೂ ಜನಸಂಖ್ಯೆಯೇ ಅಧಿಕಪ್ರಮಾಣದಲ್ಲಿದೆ. ಪಶುಪಾಲನೆ, ವ್ಯವಸಾಯ–ಇವು ಇಲ್ಲಿನ ಜನರ ಮುಖ್ಯ ಉದ್ಯೋಗಗಳು. ಹುಲ್ಲು ಬಯಲಿರುವ ಕಡೆಗಳಲ್ಲಿ ಮಾಂಸಕ್ಕಾಗಿ ದನಗಳನ್ನು ಸಾಕುತ್ತಾರೆ. ನೆಲ ಸಾಕಷ್ಟು ಫಲವತ್ತಾಗಿಲ್ಲದಿರುವುದರಿಂದ ಆಲೂಗಡ್ಡೆ, ತೋಕೆಗೋದಿ, ರೈ ಎಂಬ ಚಿಕ್ಕಗೋದಿ, ಟ್ರಿಫಾಯಲ್ ಎಂಬ ತ್ರಿಪತ್ರಕ ಸಸ್ಯ ಇಂಥವೇ ಮುಖ್ಯ ಬೆಳೆಗಳು. ಕಣಿವೆ ಪ್ರದೇಶದ ಕೆಲವು ಕಡೆ ಹಾಲಿಗಾಗಿ ದನಗಳನ್ನು ಸಾಕುತ್ತಾರೆ. ಕೈಗಾರಿಕೆ ಗಣನೀಯ ಪ್ರಮಾಣದಲ್ಲಿ ಬೆಳೆದಿಲ್ಲ. ರಸ್ತೆ ನಿರ್ಮಾಣಕ್ಕೆ ಬೇಕಾದ ಕಲ್ಲು ಚಚ್ಚುವುದು, ಮರಗಳನ್ನು ಕಡಿದು ಸಾಗಿಸುವುದು, ಚರ್ಮ ಹದ ಮಾಡುವುದು, ಉಣ್ಣೆತೆಗೆಯುವುದು–ಇವೇ ಮುಂತಾದ ಉದ್ಯೋಗಗಳು ಇಲ್ಲಿ ಬೆಳೆದಿವೆ. ರೈಲಿನ ಸೌಕರ್ಯ ಇರುವ ಬಟ್ಟೆನ್‌ಬಾಕ್, ಬಲಾಂಜ್, ಬೋವಿನಿ ಮುಂತಾದ ಕಡೆಗಳಲ್ಲಿ ಕೆಲವು ಸಣ್ಣ ವ್ಯಾಪಾರ ಕೇಂದ್ರಗಳಿವೆ. ಇವಲ್ಲದೆ ಕೆಲವು ಆಕರ್ಷಕ ಪ್ರವಾಸಿ ಕೇಂದ್ರಗಳೂ ಇವೆ. ಇವುಗಳಲ್ಲಿ ಸ್ಪಾ ಎಂಬ ಸ್ಥಳ ಖನಿಜಜಲದ ಚಿಲುಮೆಗಳನ್ನು ಹೊಂದಿದೆ. ಫ್ರಾನ್ಸ್ ಮತ್ತು ಬೆಲ್ಜಿಯಂಗಳ ನಡುವೆ ಇರುವ ಈ ಪ್ರದೇಶ ಎರಡು ಮಹಾಯುದ್ಧಗಳ ಕಾಲದಲ್ಲೂ ಭೀಕರ ಕದನಗಳ ಕೇಂದ್ರವಾಯಿತು. 1944ರ ಡಿಸೆಂಬರ್, 1945ರ ಜನವರಿ ಕಾಲದಲ್ಲಿ ನಡೆದ ಬ್ಯಾಟ್ಲ್ ಆಫ್ ದಿ ಬಲ್ಜ್ ಎಂಬ ಪರಿಣಾಮಕಾರಿ ಕದನ ನಡೆದದ್ದು ಇಲ್ಲಿಯೇ. *

**ಆರ್ಡೋವಿಷಿಯನ್ ಸ್ತೋಮ :** ಪುರಾತನ ಜೀವಿಯುಗದ (ಪೇಲಿಯೊಜೋಯಿಕ್) (ಸು.230–600 ದಶಲಕ್ಷ ವರ್ಷಗಳವರೆಗೆ ಹಿಂದಿನ ಕಾಲ) ಎರಡನೆಯ ವ್ಯವಸ್ಥೆಯ ಕಲ್ಲುಗಳಿಗೆ ಭೂವಿಜ್ಞಾನದಲ್ಲಿ ಇರುವ ಹೆಸರು. ಕೇಂಬ್ರಿಯನ್ ಅನಂತರ ಆರ್ಡೋವಿಷಿಯನ್ ಮತ್ತು ಇದರ ಅನಂತರ ಸೈಲೂರಿಯನ್ ಬರುತ್ತವೆ. ಆರ್ಡೋವಿಷಿಯನ್ ಯುಗದ ಕಾಲ ಸು. 425–500 ದಶಲಕ್ಷ ವರ್ಷಗಳಷ್ಟು ಹಿಂದೆ. 19ನೆಯ ಶತಮಾನದ ಆದಿಯಲ್ಲಿ ಹಳೆಯ ಕೆಂಪು ಮರಳು ಶಿಲಾಸ್ತೋಮದ ಕೆಳಗಿನ ಶಿಲೆಗಳನ್ನು ಮಧ್ಯಂತರ ಶಿಲೆಗಳೆಂದು ಪರಿಗಣಿಸಲಾಗಿತ್ತು. 1831ರಲ್ಲಿ ಮರ್ಚಿಸನ್ ಈ ಶಿಲಾಸ್ತೋಮಗಳ ತುದಿಯಿಂದ ಕೆಳಮುಖವಾಗಿ ಪರಿಶೋಧಿಸಿ ದೊರೆತ ಶಿಲೆಗಳನ್ನೆಲ್ಲ ಸೈಲೂರಿಯನ್ ಸ್ತೋಮಗಳಲ್ಲಿ ಸೇರಿಸಿದ. ಅದೇ ಕಾಲದಲ್ಲಿ ಆ್ಯಡಂ ಸೆಡ್ಜ್‌ವಿಕ್ ಮಧ್ಯಂತರ ಶಿಲಾಸ್ತೋಮಗಳ ತಳದಿಂದ ಮೇಲ್ಮುಖವಾಗಿ ಪರಿಶೋಧಿಸಿ ದೊರೆತ ಶಿಲೆಗಳಿಗೆ ಕೇಂಬ್ರಿಯನ್ ಸ್ತೋಮಗಳೆಂದು ಹೆಸರಿಸಿದ. ಮರ್ಚಿಸನ್ ಸೈಲೂರಿಯನ್ ಸ್ತೋಮದ ಕೆಳಭಾಗದಲ್ಲಿ ಸೇರಿಸಿದ್ದ ಶಿಲೆಗಳನ್ನು ಸೆಡ್ಜ್‌ವಿಕ್ ಕೇಂಬ್ರಿಯನ್ ಸ್ತೋಮದ ಅಂತ್ಯಭಾಗವಾಗಿ ಸೇರಿಸಿದ್ದ. ಇದರಿಂದ ಕೇಂಬ್ರಿಯನ್–ಸೈಲೂರಿಯನ್ ಸೀಮಾ ಸಮಸ್ಯೆ ಉಂಟಾಯಿತು. 1879ರಲ್ಲಿ ಲ್ಯಾಪ್‌ವರ್ತ್ ಒಂದು ರಾಜಿಸೂತ್ರ ಮುಂದಿಟ್ಟ. ಸೆಡ್ಜ್‌ವಿಕ್– ಮರ್ಚಿಸನ್ ಮಧ್ಯೆ ವಿವಾದಕ್ಕೆ ಎಡೆಗೊಟ್ಟ ಶಿಲೆಗಳನ್ನು ಕೇಂಬ್ರಿಯನ್ ಮತ್ತು ಸೈಲೂರಿಯನ್ ಎರಡರಿಂದಲೂ ಬೇರ್ಪಡಿಸಿ ಅವುಗಳಿಗೆ ಆರ್ಡೋವಿಷಿಯನ್ ಸ್ತೋಮಗಳು ಎಂದು ಹೆಸರಿಟ್ಟ. ಹೀಗೆ ಮಧ್ಯಂತರ ಸ್ತೋಮಗಳನ್ನು ಕೇಂಬ್ರಿಯನ್, ಆರ್ಡೋವಿಷಿಯನ್ ಮತ್ತು ಸೈಲೂರಿಯನ್ ಎಂಬ ಮೂರು ಭಾಗಗಳನ್ನಾಗಿ ವಿಭಜಿಸುವ ಸೂತ್ರಕ್ಕೆ ಎಲ್ಲೆಲ್ಲಿಯೂ ಮನ್ನಣೆ ದೊರೆತಿದೆ. ಆದರೆ ಜರ್ಮನಿಯಲ್ಲಿ ಆರ್ಡೋವಿಷಿಯನ್ ಸ್ತೋಮಗಳನ್ನು ಈಗಲೂ ಸೈಲೂರಿಯನ್ ಸ್ತೋಮದ ಕೆಳಭಾಗವೆಂದು ಕರೆಯಲಾಗುತ್ತಿದೆ.

ಆರ್ಡೋವಿಷಿಯನ್ ಸ್ತೋಮದ ಎಲ್ಲೆಗಳು ಅಷ್ಟು ಖಚಿತವಾಗಿಲ್ಲ. ಬ್ರಿಟಿಷ್ ಭೂವಿಜ್ಞಾನಿಗಳು ಈ ಸ್ತೋಮಗಳ ಕೆಳ ಎಲ್ಲೆಯನ್ನು ಟ್ರಿಮಡಾಕ್ ಶಿಲೆಗಳ ಮೇಲೆ ಎಳೆಯುತ್ತಾರೆ. ಈ ಶಿಲೆಗಳ ಅನುರೂಪತೆಯೇ ಇಂಥ ನಿರ್ಧಾರಕ್ಕೆ ಆಧಾರ. ಹೀಗೆ ಬ್ರಿಟಿಷ್ ದ್ವೀಪಗಳಲ್ಲಿ ಆರ್ಡೋವಿಷಿಯನ್ ಸ್ತೋಮ ಟ್ರಿಮಡಾಕ್ ಶಿಲೆಗಳ ಅನಂತರ ಪ್ರಾರಂಭವಾಗಿ ನಿಯೋಬೆ ಮತ್ತು ಯುಲೊಮ ಎಂಬ ವಿಶಿಷ್ಟ ಟ್ರೈಲೊಬೈಟ್‌ಗಳ ಅವಶೇಷಗಳಿಂದ ಕೂಡಿದೆ. ಆದರೆ ಟ್ರಿಮಡಾಕ್ ಶಿಲೆಗಳ ಮೇಲ್ಪದರಗಳಲ್ಲಿ ಡಿಕ್ಟಿಯೊನೀಮ ಫಾಬೆಲಿಫಾರ್ಮೆ ಎಂಬ ಗ್ರಾಪ್ಟೊಲೈಟ್ ಪ್ರಾಣಿಗಳ ಅವಶೇಷಗಳಿವೆ. ಸ್ಕ್ಯಾಂಡಿನೇವಿಯ ಮತ್ತು ಯುರೋಪ್ ಖಂಡಭಾಗಗಳಲ್ಲಿ ಡಿಕ್ಟಿಯೊನೀಮ ಇರುವ ಪದರುಗಳನ್ನು ಆರ್ಡೋವಿಷಿಯನ್ ಪದರಗಳಲ್ಲಿ ಸೇರಿಸಲಾಗಿದೆ.

ಉತ್ತರ ಅಮೆರಿಕದಲ್ಲಿ ಪ್ರಿಕೇಂಬ್ರಿಯನ್ ಕಾಲದ ಅನಂತರ, ಆರ್ಡೋವಿಷಿಯನ್ ಕಾಲದ ಮಧ್ಯಭಾಗದಲ್ಲಿ ಗಮನಾರ್ಹ ಜ್ವಾಲಾಮುಖಿ ಬೂದಿಯನ್ನು ಹೊರಚೆಲ್ಲಿತು. ಈ ಬೂದಿ ಸಾಗರನಿಕ್ಷೇಪಗಳ ಮಧ್ಯೆ ನೆಲೆನಿಂತು ಬೆಂಟೊನೈಟ್ ಶಿಲೆಗಳಾಗಿ ಮಾರ್ಪಟ್ಟಿರುತ್ತದೆ. ಆರ್ಡೋವಿಷಿಯನ್ ಕೊನೆಯ ಕಾಲದಲ್ಲಿ ಭೂಚಲನೆಯೂ ಉಂಟಾಯಿತು. ಕೇಂಬ್ರಿಯನ್ ಮತ್ತು ಆರ್ಡೋವಿಷಿಯನ್ ಶಿಲೆಗಳು ಈ ಚಲನೆಗೆ ಸಿಕ್ಕಿ ಪರ್ವತಗಳ ರೂಪದಲ್ಲಿ ಮೇಲೆ ಒಗೆಯಲ್ಪಟ್ಟವು. ಈ ಭೂಚಲನೆಯನ್ನು ಟಕೋನಿಯನ್ ಪ್ರಳಯಕಾಲವೆಂದು ಕರೆಯಲಾಗಿದೆ.

ಬ್ರಿಟಿಷ್ ದ್ವೀಪಗಳಲ್ಲಿ ಈ ಕಾರ್ಯ ಆರ್ಡೋಷಿಯನ್ ಕಾಲದ ಆದಿಯಲ್ಲೇ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಶಿಲೆಗಳಲ್ಲಿ ತೀವ್ರತರ ಮಡಿಕೆಗಳುಂಟಾಗಿರುವುದೇ ಅಲ್ಲದೆ, ನಿಕ್ಷೇಪಕಾರ್ಯವೂ ನಿಂತುಹೋಗಿರುತ್ತದೆ. ಈ ಮಡಿಕೆಗಳು ಈಶಾನ್ಯ–ನೈರುತ್ಯಾಭಿಮುಖವಾಗಿದ್ದು, ಸೈಲೂರಿಯನ್ ಕಾಲದ ಅಂತ್ಯದಲ್ಲಿ ನಡೆದ ಕಲೆಡೋನಿಯನ್ ಭೂಚಲನೆಯನ್ನು ಮುನ್ಸೂಚಿಸುತ್ತವೆ. ಬ್ರಿಟಿಷ್ ದ್ವೀಪಗಳಲ್ಲಿ ಜ್ವಾಲಾಮುಖಿ ಕಾರ್ಯಾಚರಣೆ ಎರಡು ಹಂತಗಳಲ್ಲಿ ನಡೆದಿದೆ. ಮೊದಲನೆಯದು ಲೇನೊವರ್ನಿಯನ್ ಕಾಲದಲ್ಲಿ. ಇದು ಮುಖ್ಯವಾಗಿ ದಕ್ಷಿಣ ಭಾಗಕ್ಕೆ ಮಿತಿಗೊಂಡಿದೆ. ಗ್ರೀನ್‌ಸ್ಟೋನ್ ಮತ್ತು ಪೆಲ್ಸೈಟ್‌ಗಳು ಇಲ್ಲಿನ ಮುಖ್ಯ ಜ್ವಾಲಾಮುಖಿ ಶಿಲೆಗಳು. ಈ ಶಿಲೆಗಳಿಗೆ ಸ್ಪಿಲಿಟಿಕ್ ಶಿಲಾವರ್ಗವೆಂದು ಹೆಸರು. ಶಿಲಾರಸದ ಉಗುಳುವಿಕೆಯಿಂದ ನಿಕ್ಷೇಪ ಪ್ರದೇಶದ ತಳ ಕುಸಿಯತೊಡಗಿತು. ಎರಡನೆಯ ಲ್ಯಾಂಡೈಲೊ ಕಾಲದಲ್ಲಿ ಪ್ರಾರಂಭವಾಗಿ ಬಾಲಾ ಕಾಲದ ಆದಿಯಲ್ಲಿ ಕೊನೆಗೊಂಡಿತು. ಈ ಕಾಲದಲ್ಲಾದ ಜ್ವಾಲಾಮುಖಿಜ ಶಿಲೆಗಳಿಗೆ ಆಂಡೆಸಿಟಿಕ್ ಅಥವಾ ಪೆಸಿಫಿಕ್ ಶಿಲಾವರ್ಗವೆಂದು ಹೆಸರು. ಈ ಕಾರ್ಯಾಚರಣೆ ಶಿಲೆಯನ್ನು ಸ್ತರಭಂಗಗೊಳಿಸಿ, ಬೇರ್ಪಟ್ಟ ಶಿಲಾಭಾಗಗಳು ಬಹುದೂರ ನುಣುಚಿ ಹೋಗುವಂತೆ ಮಾಡಿದೆ. ಈ ಕಾಲದ ಅಂತ್ಯದಲ್ಲಿ ವಿಶೇಷ ಭೂಚಲನೆಯುಂಟಾಗಿ, ವಿಶಾಲ ಭೂಪ್ರದೇಶಗಳು ನಿರ್ಮಾಣವಾದವು.

ಆರ್ಡೋವಿಷಿಯನ್ ಕಾಲದಲ್ಲಿ ಸಾಗರಗಳು ವಿಶಾಲವಾಗಿಯೂ ಭೂಭಾಗಗಳು ಕಿರಿದಾಗಿಯೂ ಇದ್ದುದರಿಂದ ಸಾಗರಾಂತರ ವಾಯುಗುಣವಿದ್ದಿರಬೇಕೆಂದು ಹೇಳಬಹುದು. ಈ ವಾಯುಗುಣ ಸಮಶೀತೋಷ್ಣವಾಗಿ ಇದ್ದಿರಬೇಕು; ಏಕೆಂದರೆ ಉತ್ತರ ಅಮೆರಿಕದ ಶೀತಲವಯ ಪ್ರದೇಶಗಳಲ್ಲಿ ಸಹ, ಸಾಮೂಹಿಕವಾಗಿ ಹವಳಗಳಿರುವುದು ಕಂಡುಬಂದಿದೆ. ಪ್ರಪಂಚದ ನಾನಾಕಡೆಗಳಲ್ಲಿ ಸುಣ್ಣಶಿಲೆ, ಡಾಲೊಮೈಟ್ ಮತ್ತು ಕೆಲವು ಜೀವ್ಯವಶೇಷಗಳನ್ನೊಳಗೊಂಡ ಶಿಲೆಗಳು ಇರುವ ಪ್ರಯುಕ್ತ, ಪ್ರಪಂಚದಲ್ಲೆಲ್ಲ ಏಕ ರೀತಿಯ ವಾಯುಗುಣವಿದ್ದಿರಬೇಕೆಂದು ಹೇಳಬಹುದು.

ಈ ಕಾಲದಲ್ಲಾದ ಭೂಚಲನೆಗಳು ಮತ್ತು ಪರ್ವತಗಳ ಅವತರಣಿಕೆ ನಿಕ್ಷೇಪ ಕಾರ್ಯಗಳಲ್ಲೂ ಭೂ ಮತ್ತು ಜಲಸನ್ನಿವೇಶಗಳ ಮೇಲೂ ಸಾಕಷ್ಟು ಪ್ರಭಾವ ಬೀರಿವೆ. ಇದರಿಂದ ಪ್ರಾಣಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆಹೋಗಲು ಅಡ್ಡಿಯುಂಟಾಯಿತು. ಆದ್ದರಿಂದ ಈ ಕಾಲದ ನಿಕ್ಷೇಪಗಳಲ್ಲಿ ವಿವಿಧ ಮುಖಗಳುಂಟಾದವು. ಅವುಗಳಲ್ಲಿ ಮುಖ್ಯವಾದವು ಎರಡು. ಒಂದನೆಯದು ಸಾಗರ ಆಳದ ನಿಕ್ಷೇಪ. ಈ ನಿಕ್ಷೇಪವು ಮುಖ್ಯವಾಗಿ ಜೇಡಿನಿಂದ ಕೂಡಿ, ಗ್ರಾಪ್ಟೊಲೈಟ್ ಅವಶೇಷಗಳನ್ನು ಹೊಂದಿದೆ. ಎರಡನೆಯದು ತೀರನಿಕ್ಷೇಪ. ಇದು ಮರಳುಶಿಲೆ ಅಥವಾ ಸುಣ್ಣಶಿಲೆಗಳಿಂದ ಕೂಡಿದೆ. ಕೆಲವು ಕಡೆ ಅವೆರಡೂ ಕೂಡಿ ಇರುವುದೂ ಉಂಟು. ಇದರಲ್ಲಿ ಗ್ರಾಪ್ಟೊಲೈಟ್‌ಗಳ ಅವಶೇಷಗಳಿರುವುದಿಲ್ಲ; ಟ್ರೈಲೊಬೈಟ ಮತ್ತು ಬ್ರೇಕಿಯೊಪೋಡಗಳ ಅವಶೇಷಗಳೇ ಹೆಚ್ಚಾಗಿವೆ.

ಮರ್ಚಿಸನ್ ಮೊತ್ತಮೊದಲಿಗೆ ಪರಿಶೋಧಿಸಿದ ಪ್ರೋಪ್‌ಷೈರ್ ಮತ್ತು ವೇಲ್ಸ್ ಪ್ರದೇಶಗಳಲ್ಲಿ ಆರ್ಡೊಷಿಯನ್ ಸ್ತೋಮದ ಶಿಲಾಪರಂಪರೆ ಕೆಳಕಂಡಂತೆ ಇರುವುದು:

| | | |
|---|---|---|
| | ಚಿಕ್ಕ ಕ್ಲೈಮಕೊಗ್ರಾಪ್ಟಿಡ್ಸ್ | |
| | ಡೈಸೆಲೊಗ್ರ್ಯಾಪ್ಟಸ್ ಅನ್ಸೆಪ್ಸ್ | ಆಷ್‌ಗಿಲಿಯನ್ |
| ಬಾಲಾ ಅಥವಾ | ಡೈಸೆಲೊಗ್ರ್ಯಾಪ್ಟಸ್ ಕಂಪ್ಲನೇಟಸ್ | |
| ಕರಡಾಕ್ | ಪ್ಲೂರೊಗ್ರ್ಯಾಪ್ಟಸ್ ಲಿನಿಯಾರಿಸ್ | |
| | ಡೈಕ್ರನೊಗ್ರ್ಯಾಪ್ಟಸ್ ಎಲಿಂಗಿನಿ | ಕರಡೋಸಿಯನ್ |
| | ಕೈಮಕೊಗ್ರ್ಯಾಪ್ಟಸ್‌ವಿಲ್ಸೊನಿ | |
| | ಕೈಮಕೊಗ್ರ್ಯಾಪ್ಟಸ್ ಪೆಲ್ಟಿಫೆರ್ | |
| ಲ್ಯಾಂಡೈಲೊ ಅಥವಾ | ನೆಮಗ್ರ್ಯಾಪ್ಟಸ್ ಗ್ರೆಸಿಲಿಸ್ | ಲ್ಯಾಂಡೆಲಿಯನ್ |
| ಗ್ಲೆನ್‌ಕಿಲ್ನ್ | ಗಿಪ್ಟೊಗ್ರ್ಯಾಪ್ಟಸ್ ಟೆರೆಟಿಯಸ್ಕುಲಸ್ | |
| | ಡಿಡಿಮೊಗ್ರ್ಯಾಪ್ಟಸ್ ಮರ್ಚಿಸೋನಿ | ಲ್ಯಾನ್ವರಿಯನ್ |
| ಅರನಿಗ್ ಅಥವಾ | ಡಿಡಿಮೊಗ್ರ್ಯಾಪ್ಟಸ್ ಬೈಪಿಡಸ್ | |
| ಸ್ಕಿದ್ದವಿಯನ್ | ಡಿಡಿಮೊಗ್ರ್ಯಾಪ್ಟಸ್ ಹಿರುಂಡೊ | ಅರೆನಿಗಿಯನ್ |
| | ಡಿಡಿಮೊಗ್ರ್ಯಾಪ್ಟಸ್ ಎಕ್ಸೆಟೆನ್ಸಸ್ | |

ಉತ್ತರ ಅಮೆರಿಕದಲ್ಲಿ ಕೇಂಬ್ರಿಯನ್ ಯುಗದ ಅಂತ್ಯದಲ್ಲಿ ಸಾಗರಗಳು ಭೂಭಾಗಗಳಿಂದ ನಿರ್ಗಮಿಸಿದವು. ಆದರೆ ಈ ನಿರ್ಗಮನವಾದ ಸ್ವಲ್ಪ ಕಾಲದಲ್ಲಿಯೇ ಅಂದರೆ ಆರ್ಡೊವಿಷಿಯನ್ ಕಾಲದ ಆದಿಯಲ್ಲಿ ಭೂಭಾಗದ ಮೇಲೆ ಸಾಗರಾಕ್ರಮಣವಾಯಿತು. ಈ ಬಾರಿ ಕೇಂಬ್ರಿಯನ್ ಕಾಲದಲ್ಲಿದ್ದ ಕಾರ್ಡಿಲೆರಾನ್ ಮತ್ತು ಅಪಲೇಷಿಯನ್ ನಿಕ್ಷೇಪ ಪ್ರಾಂತ್ಯಗಳನ್ನಷ್ಟೇ ಅಲ್ಲದೆ ಅವುಗಳನ್ನು ಬೇರ್ಪಡಿಸಿದ್ದ ಕ್ಯಾಸ್ಕಡಿಯನ್ ಭೂಭಾಗವನ್ನು ಸಾಗರಗಳು ಆಕ್ರಮಿಸಿಕೊಂಡವು. ಆದರೆ ಪೂರ್ವಭಾಗದಲ್ಲಿನ ಅಪಲೇಷಿಯನ್ ಪ್ರಾಂತವೊಂದನ್ನುಳಿದು ಮಿಕ್ಕ ಕಡೆಗಳಲ್ಲಿ, ಆರ್ಡೊವಿಷಿಯನ್ ಮಧ್ಯಭಾಗದಲ್ಲಿ ಈ ಆಕ್ರಮಣ ತೆರವು ಮಾಡಲ್ಪಟ್ಟಿತು. ಅರ್ಡೊವಿಷಿಯನ್ ಯುಗದ ಅಂತ್ಯಕಾಲದಲ್ಲಿ ಉಳಿದ ಸಾಗರ ಸ್ವಲ್ಪಸ್ವಲ್ಪವಾಗಿ ವಿಸ್ತಾರಗೊಂಡು ಕೊನೆಗೆ ಸುಮಾರು 2/3 ಖಂಡಭಾಗವನ್ನು ಆಕ್ರಮಿಸಿತು. ಆ ಕಾಲದಲ್ಲಿದ್ದ ಭೂಭಾಗಗಳೆಂದರೆ ಗಡಿ ಪ್ರಾಂತ್ಯಗಳಾದ ಕ್ಯಾಸ್ಕಡಿಯ, ಅಪಲೇಷಿಯ ಲ್ಯಾವೊರಿಯ ಮತ್ತು ಕೆಲವು ನಡುಗಡ್ಡೆ ದ್ವೀಪಗಳು. ಸಾಗರಾಕ್ರಮಣ ಮತ್ತು ನಿರ್ಗಮನಗಳ ಆಧಾರದ ಮೇಲೆ ಆರ್ಡೊವಿಷಿಯನ್ ಸ್ತೋಮವನ್ನು ಮೂರು ಭಾಗಗಳನ್ನಾಗಿ ವಿಭಜಿಸಬಹುದು.

| | |
|---|---|
| | ಮೇಲ್ಭಾಗ ಅಥವಾ ಸಿನ್ಸಿನೇಟಿಯನ್ |
| ಆರ್ಡೊವಿಷಿಯನ್ ಸ್ತೋಮ | ಮಧ್ಯಭಾಗ ಅಥವಾ ಚಂಪ್ಲನಿಯನ್ |
| | ಕೆಳಭಾಗ ಅಥವಾ ಕೆನಡಿಯನ್ |

ಆರ್ಡೊವಿಷಿಯನ್ ಕಾಲದ ಜೀವವರ್ಗಗಳಲ್ಲಿ ಅನೇಕ ವಿಶಿಷ್ಟ ಅಂಶಗಳಿವೆ. ಕೇಂಬ್ರಿಯನ್ ಇಂದ ಆರ್ಡೊವಿಷಿಯನ್‌ವರೆಗೆ ಮತ್ತು ಆರ್ಡೊವಿಷಿಯನ್‌ನಿಂದ ಸೈಲೂರಿಯನ್‌ವರೆಗೆ ಬದಲಾವಣೆಗಳು ಹಂತಹಂತದಲ್ಲಿ ಆಗಿರುತ್ತವೆ. ಆರ್ಡೊವಿಷಿಯನ್ ಜೀವವರ್ಗಗಳಲ್ಲಿ ಟ್ರೈಬೊಲೈಟ್‌ಗಳು, ಸಾದಾ ಕೀಲುಳ್ಳ ಬ್ರೇಕ್ರಿಯೋಪೋಡಗಳು ಮತ್ತು ದ್ವಿಪಂಕ್ತಿ ಹಾಗೂ ಕವಲು ಗ್ರ್ಯಾಪ್ಟೊಲೈಟ್‌ಗಳು ಅಗ್ರಗಣ್ಯವಾದವುಗಳು. ಕೇಂಬ್ರಿಯನ್ ಕಾಲದಲ್ಲಿ ಅತಿ ಪ್ರಾಮುಖ್ಯಗಳಿಸಿದ್ದ ಟೈಲೊಬೈಟ್‌ಗಳು ಆರ್ಡೊವಿಷಿಯನ್ ಕಾಲದಲ್ಲಿ ಉನ್ನತಮಟ್ಟಕ್ಕೇರಿದುವು; ಆದರೆ ಈ ಕಾಲದ ಅಂತ್ಯದಲ್ಲಿಯೇ ಅವುಗಳ ಅವನತಿಯೂ ಪ್ರಾರಂಭವಾಯಿತು. ಈ ಕಾಲದ ಕೆಲವು ಟ್ರೈಲೊಬೈಟ್‌ಗಳು ದೇಹದ ಕೆಳಭಾಗವನ್ನು ರಕ್ಷಿಸಿಕೊಳ್ಳಲು ಸುರುಳಿ ಸುತ್ತಿಕೊಳ್ಳುತ್ತಿದ್ದವು. ಅವು ಆವಸ್ಥೆಯಲ್ಲಿಯೇ ರಕ್ಷಿಸಲ್ಪಟ್ಟಿವೆ. ಟ್ರೈನ್ಯೂಕ್ಲಿಯಸ್ ಮತ್ತು ಅಸಪಸ್‌ಗಳು ಈ ಕಾಲದ ವಿಶಿಷ್ಟ ಟ್ರೈಲೊಬೈಟಗಳು ಆರ್ಡೊವಿಶಿಯನ್ ಕಾಲದ ತೀರನಿಕ್ಷೇಪಗಳನ್ನು ಶಿಲಾಪದರಗಳನ್ನಾಗಿ ವಿಭಜಿಸಲು ಟ್ರೈಲೊಬೈಟ್‌ಗಳು ಸಹಕಾರಿಯಾಗಿವೆ. ಏಗ್ಲಿನ ಮತ್ತು ರೆಮೊಪ್ಲೂರಿಡೆ ಎಂಬ ವಿಚಿತ್ರ ಟ್ರೈಲೊಬೈಟ್‌ಗಳು ಈ ಸ್ತೋಮಕ್ಕೆ ಮಾತ್ರ ಸೀಮಿತಗೊಂಡಿವೆ. ಅಗ್ನಾಸ್ಟಿಡೆ, ಕ್ಯಾಲಿಮಿನಿಡೆ, ಇಲೆನಿಡೆ, ಹೋಮೊಡಾಂಟಿಡೆ ಮೊದಲಾದ ದೀರ್ಘಾವಧಿ ಟ್ರೈಲೊಬೈಟ್‌ಗಳೂ ಈ ಕಾಲದಲ್ಲಿದ್ದವು. ಆಸ್ಟ್ರಕೋಡ ಪ್ರಾಣಿಗಳು ಈ ಕಾಲದಲ್ಲಿ ಮೊದಲಬಾರಿಗೆ ಕಾಣಿಸಿಕೊಂಡುದು ಒಂದು ವಿಶೇಷ.

ಗ್ರ್ಯಾಪ್ಟೊಲೈಟ್‌ಗಳು ಈ ಕಾಲದ ಜೀವವರ್ಗಗಳಲ್ಲಿ ಅತಿ ಮುಖ್ಯವಾದವು. ಜೇಡು ನಿಕ್ಷೇಪಗಳನ್ನು ಇವುಗಳ ಆಧಾರದ ಮೇಲೆ ಅನೇಕ ಶಿಲಾಪಾದಗಳನ್ನಾಗಿ ವಿಭಜಿಸಲಾಗಿದೆ. ಗ್ರ್ಯಾಪ್ಟೊಲೈಟ್‌ಗಳು ತೇಲುವ ಸ್ವಭಾವದವುಗಳಾದುದರಿಂದ ಪ್ರಪಂಚದ ನಾನಾ ಕಡೆಯ ಶಿಲೆಗಳಲ್ಲಿ ಅವುಗಳ ಕೆಲವು ಪ್ರಕಾರಗಳು ಕಂಡುಬರುತ್ತವೆ. ಇದರಿಂದ ಪ್ರಪಂಚದ ಜೇಡು ನಿಕ್ಷೇಪಗಳನ್ನೆಲ್ಲ ಸರಿದೂಗಿಸಲು ಸಾಧ್ಯವಾಗಿದೆ.

ಆರ್ಥಿಸ್ ಮತ್ತು ಸ್ಟ್ರೊಪೊಮಿನಿಡ್ಸ್ ಗಳು ಈ ಕಾಲದ ಮುಖ್ಯ ಬ್ರೇಕಿಯೋಪೋಡಗಳು. ಸುಣ್ಣ ಮತ್ತು ಮರಳು ನಿಕ್ಷೇಪಗಳಲ್ಲಿ ಲೆಮಲಿ ಬ್ರ್ಯಾಂಕ್ಸ್, ಶಂಖಗಳು, ಕೆಪಲೊಪೋಡಗಳು, ಬ್ರಿಯೋಜೋವನ್ಸ್ ಸಿಸ್ಟಿಡ್ ಮತ್ತು ರೂಗೋಸ ಹವಳಗಳು ಅಲ್ಲಲ್ಲಿ ನಿಬಿಡವಾಗಿ ಬೀಡುಬಿಟ್ಟಿದ್ದವು. ಹವಳದಲ್ಲಿ ಆಲ್ಸಿಯೊನೇರಿಯ, ಟ್ಯಾಬುಲೇಟ ಮತ್ತು ರೂಗೋಸವರ್ಗಗಳು ಉದಯಿಸಿ ಉನ್ನತಮಟ್ಟಕ್ಕೆರಿದವು. 1891ರಲ್ಲಿ ವಾಲ್ಕಾಟ್ ಕೊಲೆರೇಡ್ ಹತ್ತಿರ ಹಾರ್ಡಿಂಗ್ ಮರಳುಶಿಲೆಯಲ್ಲಿ ಆಸ್ಟ್ರಕೊಡರ್ನ್ ಜಾತಿಯ ಮೀನುಗಳ ಫಲಕಗಳನ್ನು ಗುರುತಿಸಿ ವರದಿಮಾಡಿದರು. ಅನಂತರ ಅಮೆರಿಕ ಸಂಯುಕ್ತಸಂಸ್ಥಾನಗಳ ಬ್ಲ್ಯಾಕ್‌ಹಿಲ್ ಮತ್ತು ಬಿಗ್‌ಹಾರ್ನ್ ಪರ್ವತಪ್ರದೇಶಗಳಲ್ಲಿ ಮೀನು ಫಲಕಗಳ ವಿಚಾರವಾಗಿ ವರದಿಮಾಡಲಾಗಿದೆ.

ಆರ್ಡೊವಿಷಿಯನ್ ಸ್ತೋಮಗಳು ಸ್ಪಿತಿ ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಹೊರಕಂಡಿವೆ. ಸ್ಪಿತಿ ಪ್ರದೇಶಗಳಲ್ಲಿ ಈ ಶಿಲಾಸಮುದಾಯ ಹೈಮಂತ ಶಿಲಾಸಮುದಾಯದ ಮೇಲೆ ನಿಕ್ಷೇಪಗೊಂಡಿದೆ. ಇದರ ಕೆಳಭಾಗ ಬೆಣಚುಶಿಲೆ, ಮರಳುಶಿಲೆ ಮತ್ತು ಗ್ರಿಟ್ ಶಿಲೆಗಳಿಂದಲೂ ಮೇಲ್ಭಾಗದ ಸುಣ್ಣಶಿಲೆಯಿಂದಲೂ ಕೂಡಿದೆ. ಈ ಶಿಲಾಸಮುದಾಯದಲ್ಲಿ ಜೀವ್ಯವಶೇಷಗಳು ಯಥೇಚ್ಛವಾಗಿ ಸಿಕ್ಕುತ್ತವೆ. ಅವುಗಳಲ್ಲಿ ಬ್ರೇಕಿಯೋಪೋಡ ಹೇರಳವಾಗಿಯೂ ಟ್ರೈಲೊಬೈಟ್‌ಗಳು ಅಷ್ಟು ಹೆಚ್ಚಿಲ್ಲದೆ ಸ್ವಲ್ಪ ಕಡಿಮೆ ಪ್ರಮಾಣದಲ್ಲೂ ಮೊಲಸ್ಕಗಳು ಅಪೂರ್ವವಾಗಿಯೂ ಪ್ರತಿನಿಧಿಸಲ್ಪಟ್ಟಿವೆ. (ಡಿ.ಆರ್.)

**ಆರ್ಥೋಸಿಫೊನ್ ಸ್ಟಾಮಿನಿಯಸ್ :** ಸುಂದರವಾದ ನಸುನೀಲಿ ಬಣ್ಣದ ಹೂಗಳನ್ನು ಬಿಡುವ ಬಹುವಾರ್ಷಿಕ ಸಸ್ಯ. ಉದ್ಯಾನವನದ ಮಡಿ ಮತ್ತು ಕುಂಡ ಸಸ್ಯ ಮತ್ತು ಕಲ್ಲೇರಿ ಸಸ್ಯವಾಗಿ ಬೆಳೆಸುತ್ತಾರೆ. ಕುಂಡದಲ್ಲಿ ಬೆಳೆಸಿ ಮನೆಯಮುಂದೆ ಇಟ್ಟರೆ ಮನಮೋಹಕವಾಗಿರುತ್ತದೆ. ಹೂವಿನಲ್ಲಿರುವ ಉದ್ದವಾದ ಬಿಳಿಯ ಕೇಸರಗಳ ಸೊಗಸಿಗಾಗಿ ಈ ಗಿಡಗಳು ಪ್ರಸಿದ್ಧಿ ಪಡೆದಿವೆ. ಆರ್ಥೋಸಿಫೊನ್ ಜಾತಿಯಲ್ಲಿ 100ಕ್ಕೂ ಹೆಚ್ಚು ಕುಳ್ಳಾದ ಬಹುವಾರ್ಷಿಕ ಪರ್ಣಸಸಿ ಪ್ರಭೇದಗಳುಂಟು. ಆದರೆ ಇವುಗಳ ಪೈಕಿ ಅರ್ಥೋಸಿಫೊನ್ ಸ್ಟಾಮಿನಿಯಸ್ ಎಂಬುದು ಬಹು ಅಲಂಕಾರವಾದ ಹೂ ಬಿಡುವುದರಿಂದ ಉದ್ಯಾನಗಾರಿಕೆಯಲ್ಲಿ ಪ್ರಾಮುಖ್ಯ ಪಡೆದಿದೆ. ನಾಲ್ಕುಮುಖದ ಇದರ ಕಾಂಡದ ಮೇಲೆ ನವುರಾದ ರೋಮಗಳುಂಟು. ಎಲೆಯ ತೊಟ್ಟಿದೆ; ಅದು ವೃತ್ತಾಕಾರದ ಜೋಡಣೆಯಲ್ಲಿದೆ. ಕರನೆಯಾಕಾರದ ಹಲ್ಲು ಅಂಚುಳ್ಳ ಅವುಗಳ ತುದಿ ಚೂಪಾಗಿದೆ. ಹೂಗೊಂಚಲು ತುದಿಯಲ್ಲಿದ್ದು ವಿಶೇಷವಿಧದ್ದಾಗಿದೆ. ಹೂತೊಟ್ಟಿಲ್ಲದ ದ್ವಿಲಿಂಗ ಪುಷ್ಪ, ನಸುನೀಲಿ ಬಣ್ಣದ ಹೂ ಪುಷ್ಪಪತ್ರ; ದಳಗಳಿಗೆ ಎರಡು ತುಟಿ ಇವೆ. ಮೇಲು ತುಟಿ 3–4 ಭಾಗವಾಗಿಯೂ ಕೆಳತುಟಿ ದೋಣಿಯಾಕಾರವಾಗಿಯೂ ಇದೆ. 4 ಕೇಸರಗಳು ಬಿಳಿಬಣ್ಣವಾಗಿದ್ದು, ದಾರದಂತೆ ಉದ್ದವಾಗಿರುವುದರಿಂದ ಸುಂದರವಾಗಿ ಕಾಣುತ್ತದೆ. ಅಂಡಾಶಯ 4 ಕೋಶಗಳುಳ್ಳದ್ದು. ಅರ್ಥೋಸಿಫೊನ್ ಸಸ್ಯಗಳನ್ನು ಬೀಜ ಮತ್ತು ಕಾಂಡದ ತುಂಡುಗಳಿಂದ ವೃದ್ಧಿಮಾಡಬಹುದು. ಅರ್ಥೋಸಿಫೊನ್ ಬಹುವಾರ್ಷಿಕ ಸಸ್ಯಗಳನ್ನು ಬೀಜಗಳಿಂದ ವೃದ್ಧಿಮಾಡುವಾಗ ಹೂ ಬಿಟ್ಟ ಅನಂತರ ಕಿತ್ತುಹಾಕಿ ಏಕ ಋತುವಿನ ಸಸ್ಯಗಳಂತೆ ಬೆಳೆಸುತ್ತಾರೆ. ಫಲವತ್ತಾದ ಮಣ್ಣಿನಲ್ಲಿ ಇವು ಸಮೃದ್ಧಿಯಾಗಿ ಬೆಳೆಯುತ್ತವೆ. ಸರಾಗವಾಗಿ ಗಾಳಿ ಮತ್ತು ಬೆಳಕು ಬರುವ ನೆರಳು ಅಥವಾ ಪಾರ್ಶ್ವನೆರಳಿನಲ್ಲಿ ಇವುಗಳ ಬೇಸಾಯ ಯಶಸ್ವಿಯಾಗುತ್ತದೆ. (ಡಿ.ಎಂ.)

**ಆರ್ತ್ಯಾಪ್ಟರ :** ಕೀಟವರ್ಗದ ಒಂದು ಗಣ. ಮಿಡತೆ (ಗ್ರಾಸ್‌ಹಾಪರ್) ಚಿಮ್ಮಂಡೆ, ಹೆಮ್ಮಿಡತೆ ಮುಂತಾದ ಕೀಟಗಳನ್ನೊಳಗೊಂಡಿದೆ. ಇವುಗಳಲ್ಲಿ ಮುಂದಿನ ರೆಕ್ಕೆ ಕಿರಿದಾಗಿದ್ದು ಅಪಾರದರ್ಶಕವಾಗಿದೆ. ಹಿಂದಿನ ರೆಕ್ಕೆಗಳು ಅಗಲವಾಗಿ ಪಾರದರ್ಶಕವಾಗಿವೆ. ಅವು ಬೀಸಣಿಗೆಯಂತೆ ಮಡಚಿಕೊಳ್ಳಬಲ್ಲವು. ಬಾಯಲ್ಲಿನ ಅಂಗಗಳು ಆಹಾರವನ್ನು ಕತ್ತರಿಸಲು ಅನುಕೂಲವಾಗುವಂತೆ ಮಾರ್ಪಟ್ಟಿವೆ. ಹಿಂಭಾಗದ ಮೂರನೆಯ ಜೊತೆಯ ಕಾಲುಗಳು ಉದ್ದವಾಗಿದ್ದು ಕುಪ್ಪಳಿಸಲು ಅಥವಾ ಜಿಗಿಯಲು ಸಹಾಯಕ. ರೂಪಾಂತರಣ ಅಪೂರ್ಣ ರೀತಿಯದ್ದು. ಈ ಗಣದ ಕೀಟಗಳು ಶಬ್ದವನ್ನುಂಟುಮಾಡುವ ವಿಶೇಷ ಅಂಗಗಳನ್ನು

ಹೊಂದಿವೆ. ವರ್ಣಮಯವಾಗಿ ಎಕ್ಕದ ಗಿಡಗಳ ಮೇಲೆ ಜೀವಿಸುವ ಪೊಸೆಲಿಸಿರಾಷ್ಟಿಕ ಸಾಮನ್ಯವಾಗಿ ಕಾಣಬಹುದಾದ ಕುಪ್ಪಳಿಸುವ ಮಿಡತೆ. ಹಸಿರು ಬಣ್ಣದ, ಉದ್ದ ಕುಡಿಮೀಸೆಗಳಿರುವ ಅನೇಕ ಪ್ರಭೇದದ ಮಿಡತೆಗಳನ್ನು ಹುಲ್ಲಿನ ಮೇಲೆ ಕುಪ್ಪಳಿಸುವುದನ್ನು ನೋಡಬಹುದು.



1 ಜಿರಳೆ (ಕಾಕ್ರೋಚ್); 2 ಕಾಡಿಸ್ ಚಿಟ್ಟೆ; 3 ಚಿಮ್ಮಂಡೆ (ಗ್ರೈಲಸ್ ಡೊಮೆಸ್ಟಿಕಸ್); 4 ಎಲೆಮಿಡತೆ (ಫಿಲ್ಲಿಯಂಸ್ಸೈತ್); 5 ದಂಡಿನ ಮಿಡತೆ (ಲೋಕಸ್ಟ್ ಮೈಗ್ರೊಟೋರಿಯ); 6 ಫಾರ್ಫಿಕುಲ ಆರಿಕುಲೇರಿಯ.

ಸಣ್ಣ ಕುಡಿಮೀಸೆಯ ಕುಪ್ಪಳಿಸುವ ಮಿಡತೆಗಳನ್ನೇ ಹೋಲುವ ಗುಂಪುಗುಂಪಾಗಿ ವಲಸೆ ಹೋಗುವ ಮಿಡತೆಗಳಿವೆ. ಏಕಾಏಕಿ ಪಿಡುಗಿನಂತೆ ಕಾಡಿ ಸಸ್ಯಸಂಪತ್ತನ್ನು ನಾಶಮಾಡುವ ಕೆಲವೊಂದು ವಿಶಿಷ್ಟ ಮಿಡತೆಗಳಿರುತ್ತವೆ. ಉದಾಹರಣೆ: ಲೇಕಸ್ಯ ಮೈಗ್ರಟೋರಿಯ, (ವಲಸೆಮಿಡತೆ), ಸಿಸ್ಟೋಸೆರ್ಕ ಗ್ರೀಗೇರಿಯ, (ಮರು ಭೂಮಿಮಿಡತೆ) ನೋಮಡಕ್ರಿಸ್ ಸೆಪ್ಟೆಮ್‌ಫಾಸಿಯೋಟ (ಕೆಂಪುಮಿಡತೆ).

ಒಂಟಿಹುಳು (ಮ್ಯಾಂಟಿಸ್)

ಚಿಮ್ಮಂಡೆಗಳಲ್ಲಿ ಕೆಲವಕ್ಕೆ ಸಣ್ಣ ರೆಕ್ಕೆಗಳಿದ್ದರೆ, ಕೆಲವೊಂದರಲ್ಲಿ ಅವು ಸಂಪೂರ್ಣವಾಗಿ ಕ್ಷೀಣಿಸಿರಬಹುದು. ಗೃಹ ಚಿಮ್ಮಂಡೆ (ಹೌಸ್‌ಕ್ರಿಕೆಟ್) ಗ್ರಿಲ್ಲಸ್ ಡೊಮೆಸ್ಟಿಕಸ್ ನಿಶಾಚರಿ. ಸಂದುಗೊಂದುಗಳಲ್ಲಿ ಅಡಗಿಕೊಂಡು ಒಂದೇ ಸಮನೆ ಶಬ್ದ ಮಾಡುವುದು. ಬಟ್ಟೆ, ಕಾಗದ, ಹಣ್ಣು ಮುಂತಾದ ಯಾವುದೇ ವಸ್ತುವನ್ನು ತಿಂದು ಹಾಳುಮಾಡುತ್ತದೆ.*

**ಆರ್ಥಿಕ ಅಂತಾರಾಷ್ಟ್ರೀಯತೆ :** ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಂತೆ ಆರ್ಥಿಕ ಕ್ಷೇತ್ರದಲ್ಲೂ ಅಂತಾರಾಷ್ಟ್ರೀಯವಾಗಿ ಸೌಹಾರ್ದಯುತ ವ್ಯವಹಾರಗಳಿರಬೇಕೆಂಬ ಭಾವನೆ. ಎಕನಾಮಿಕ್ ಇಂಟರ್‌ನ್ಯಾಷನಲಿಸಂ ಅಂದರೆ ಸರಕು ಸೇವೆಗಳ ವ್ಯಾಪಾರ, ಬಂಡವಾಳ ಹಾಗೂ ಶ್ರಮ ಇಂಥ ಉತ್ಪಾದನಾಂಗಗಳ ಚಲನೆ ಇತ್ಯಾದಿ ಆರ್ಥಿಕ ವ್ಯವಹಾರಗಳೆಲ್ಲವೂ ಎಲ್ಲ ಜನಾಂಗಗಳ ಅನ್ಯೋನ್ಯ ಹಿತದೃಷ್ಟಿಯಿಂದ ನಡೆಯುವಂತೆ ನೋಡಿಕೊಳ್ಳಲು ಕೆಲವು ಪ್ರಧಾನ ರೀತಿನೀತಿಗಳನ್ನು ರೂಪಿಸುವುದೇ ಇದರ ಉದ್ದೇಶ. ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗಳಿಗೆ ವಿಶೇಷವಾದ ಕೆಲವು ಕಟ್ಟುನಿಟ್ಟುಗಳಿರುವುದು ಗಮನಿಸಬೇಕಾದ ವಿಷಯ. ಇವುಗಳಲ್ಲಿ ಕೆಲವು ರಾಜಕೀಯ ಪ್ರತ್ಯೇಕತೆಯಿಂದ ಉದ್ಭವಿಸಿವೆ. ಪ್ರಜೆಗಳಿಗೆ ತಮ್ಮ ತಮ್ಮ ದೇಶದಲ್ಲಿರುವ ಆರ್ಥಿಕ ಹಕ್ಕುಗಳು ವಿದೇಶಗಳಲ್ಲಿರಲು ಸಾಧ್ಯವಿಲ್ಲ. ಅಲ್ಲದೆ ಮತ, ಭಾಷೆ, ಸಮಾಜ ಪದ್ಧತಿ, ರಾಜಕೀಯ ಅಭಿಪ್ರಾಯ–ಇತ್ಯಾದಿ ಅಂಶಗಳಲ್ಲಿ ದೇಶ ದೇಶಗಳಿಗೆ ಇರುವ ವ್ಯತ್ಯಾಸಗಳೂ ಆರ್ಥಿಕ ಸಂಬಂಧಗಳಿಗೆ ಸ್ವಲ್ಪ ಮಟ್ಟಿಗೆ ಅಡಚಣೆಯಾಗಬಹುದು. ಹೀಗೆ ಇರತಕ್ಕ ರಾಜಕೀಯ, ಸಾಮಾಜಿಕ, ಭೌಗೋಳಿಕ ಹಾಗೂ ಇತರ ಆವಶ್ಯಕ ವ್ಯತ್ಯಾಸಗಳಿಂದುಂಟಾಗಬಹುದಾದ ಮಿತಿಗಳಿಗೊಳಪಟ್ಟು ಪ್ರತಿಯೊಂದು ರಾಷ್ಟ್ರವೂ ಸ್ವರಾಷ್ಟ್ರ ಹಿತವನ್ನು ಇತರ ಎಲ್ಲ ರಾಷ್ಟ್ರಗಳ ಹಿತಗಳೊಡನೆ ಸಮ್ಮಿಳನಗೊಳಿಸಿ ಪರಸ್ಪರ ಕ್ಷೇಮಾಭ್ಯುದಯವಾಗುವಂತೆ ಆರ್ಥಿಕ ಸಂಬಂಧಗಳನ್ನು ಪೋಷಿಸಬೇಕೆಂಬ ಉದಾತ್ತ ಭಾವನೆಯೇ ಸಹಜವಾದ ಆರ್ಥಿಕ ಅಂತಾರಾಷ್ಟ್ರೀಯತೆ ಎನ್ನಿಸುವುದು.

ಆರ್ಥಿಕ ಅಂತಾರಾಷ್ಟ್ರೀಯತೆ, ಆಧುನಿಕ ಯುಗದ ಮುಖ್ಯ ಲಕ್ಷಣ. ಪ್ರತಿ ರಾಷ್ಟ್ರವೂ ತನ್ನ ಆವಶ್ಯಕತೆಗಳಿಗನುಸಾರವಾಗಿ ಪ್ರಕೃತಿದತ್ತ ಸಂಪತ್ತು ಮತ್ತು ಇತರ ಉತ್ಪನ್ನ ಸಾಧನಗಳನ್ನು ಹೊಂದಿರುವುದಿಲ್ಲ. ಆಹಾರ, ಬಟ್ಟೆ, ವಸತಿ, ಭೋಗ ಇವುಗಳಿಗೆ ಬೇಕಾಗುವ ಅನೇಕ ಸರಕುಗಳು ಪ್ರಪಂಚದ ಎಲ್ಲ ಭಾಗದ ಜನರಿಗೂ ಬೇಕಾಗಿದ್ದರೂ, ಇವುಗಳೆಲ್ಲವನ್ನೂ ಆಯಾ ದೇಶದಲ್ಲಿಯೇ ತಯಾರಿಸಿ ಬೇಡಿಕೆಯನ್ನು ಪೂರೈಸಲು ಅನುಗುಣವಾದ ಪ್ರಕೃತಿದತ್ತ ಸೌಕರ್ಯಗಳು ಇರುವುದಿಲ್ಲ. ಆದ್ದರಿಂದ ಅಂತಾರಾಷ್ಟ್ರೀಯ ಶ್ರಮವಿಭಜನೆ ಹಾಗೂ ಪರಸ್ಪರ ಅವಲಂಬನೆ ಸ್ವಾಭಾವಿಕವಾಗಿಯೇ ಬೆಳೆದು ಬಂದಿವೆ. ಅಲ್ಲದೆ ಇವು ಆಧುನಿಕ ಆರ್ಥಿಕ ಜೀವನದ ಮುಖ್ಯ ಲಕ್ಷಣಗಳಾಗಿವೆ. ನಾವು ದಿನನಿತ್ಯ ಉಪಯೋಗಿಸುವ ಅನೇಕ ವಿದೇಶಿ ವಸ್ತುಗಳನ್ನೂ ಮತ್ತು ವಿದೇಶೀಯರಿಗಾಗಿ ನಾವು ತಯಾರಿಸುವ ವಸ್ತುಗಳನ್ನೂ ಎಣಿಸಿದರೆ ಎಷ್ಟರ ಮಟ್ಟಿಗೆ ನಮ್ಮ ನಾಗರಿಕ ಜೀವನ ಅಂತಾರಾಷ್ಟ್ರೀಯ ಸಂಬಂಧದ ಮೇಲೆ ನಿಂತಿದೆ ಎಂಬುದು ವ್ಯಕ್ತವಾಗುವುದು. ಇಂಥ ಸಂಬಂಧಗಳನ್ನು ಸ್ಪಷ್ಟ ಮಾರ್ಗಗಳಲ್ಲಿ ರೂಪಿಸಬೇಕಾದರೆ ಎಲ್ಲ ರಾಷ್ಟ್ರಗಳಲ್ಲೂ ಉದಾತ್ತವಾಗಿ ಅಂತಾರಾಷ್ಟ್ರೀಯತೆಯ ಭಾವನೆ ನೆಲೆಸಬೇಕು, ಹಾಗೂ ಈ ಭಾವನೆಗನುಸಾರವಾದ ರೀತಿ ನೀತಿಗಳು ಆಚರಣೆಗೆ ಬರಬೇಕು.

ಆಧುನಿಕ ಪ್ರಪಂಚದ ಆರ್ಥಿಕ ಚರಿತ್ರೆಯನ್ನು ವೀಕ್ಷಿಸಿದರೆ ಆರ್ಥಿಕ ಅಂತಾರಾಷ್ಟ್ರೀಯತೆ ಹಾಗೂ ಅದರ ವಿರುದ್ಧ ಶಕ್ತಿಗಳು ಹೇಗೆ ಅತ್ತ ಇತ್ತ ಹೊಯ್ದಾಡಿವೆ ಎಂಬುದು ಗೋಚರವಾಗುವುದು. ಮಧ್ಯಯುಗದಲ್ಲಿ ಕೊಲಂಬಸ್, ವಾಸ್ಕೋಡಗಾಮ, ಮೆಗಲನ್ ಇತ್ಯಾದಿ ಸಾಹಸಿಗಳ ಶ್ರಮದಿಂದ ಫಲಿಸಿದ ಹೊಸ ಅಂತಾರಾಷ್ಟ್ರೀಯ, ಸಂಪರ್ಕಗಳ ಬೆಳವಣಿಗೆ ಹಾಗೂ ಪ್ರಪಂಚದ ಐಕ್ಯದ ಅರಿವು–ಇವು ಆಧುನಿಕ ಅಂತಾರಾಷ್ಟ್ರೀಯತೆಯ ಮುಖ್ಯ ಹಿನ್ನಲೆಯಾದವು. ಆದರೆ ಅನೇಕ ಐರೋಪ್ಯ ರಾಷ್ಟ್ರಗಳು ಅಂದಿನ ಕಾಲದಲ್ಲಿ ಅನುಸರಿಸುತ್ತಿದ್ದ ಮರ್ಕೆಂಟೈಲಿಸಮ್ ಎಂಬ ರಾಷ್ಟ್ರೀಯ ಧೋರಣೆಯ ಆರ್ಥಿಕ ಅಂತಾರಾಷ್ಟ್ರೀಯತೆಯ ಬೆಳವಣಿಗೆಗೆ ವಾತಾವರಣ ಅನುಕೂಲವಾಗಿರಲಿಲ್ಲ.

18ನೆಯ ಶತಮಾನದ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ ಮತ್ತು ಆ್ಯಡಮ್ ಸ್ಮಿತ್ **(ನೋಡಿ- ಆ್ಯಡಮ್‌ಸ್ಮಿತ್)** ಎಂಬ ಪ್ರಥಮ ಅರ್ಥಶಾಸ್ತ್ರಜ್ಞ ಉಪದೇಶಿಸಿದ ವೈಯಕ್ತಿಕ ಸ್ವಾತಂತ್ರ್ಯ ತತ್ತ್ವ (ಲೇಸಿಫೇರ್ ಡಾಕ್ಟ್ರಿನ್) ಇವು ಹೊಸ ಅಂತಾರಾಷ್ಟ್ರೀಯ ಆರ್ಥಿಕ ಪದ್ಧತಿಯ ಬೆಳವಣಿಗೆಗೆ ತಳಹದಿಯಾದವು. ಮರ್ಕೆಂಟೈಲಿಸಮ್ ಕಾಲದಲ್ಲಿ ಸರ್ಕಾರ ವಿಧಿಸಿದ್ದ ಅನೇಕ ಆರ್ಥಿಕ ನಿರ್ಬಂಧಗಳು ಸಡಿಲವಾದುದರಿಂದ ಆರ್ಥಿಕ ಶಕ್ತಿಗಳು ಸ್ವಂತಸ್ಥಾನವನ್ನು ಪಡೆದವು. ಪ್ರಪಂಚದಲ್ಲಿ ವಿವಿಧ ಭಾಗಗಳೂ ಬೇಡಿಕೆ–ನೀಡಿಕೆಗಳ ಪರಸ್ಪರ ತಾಕಲಾಟದಿಂದ ಹೊಂದಿಕೆಗೊಂಡು ಒಂದೇ ವಿಸ್ತಾರವಾದ ಆರ್ಥಿಕ ಕ್ಷೇತ್ರವಾಯಿತು. ಅಂತಾರಾಷ್ಟ್ರೀಯ ಬಂಡವಾಳ ಚಲನೆ, ಜನರು ವಿದೇಶಗಳಲ್ಲಿ ನೆಲೆಸುವುದು, ಸರಕುಗಳ ವ್ಯಾಪಾರ–ಇವು ಹಿಂದೆ ಎಂದೂ ಇಲ್ಲದ ಪ್ರಮಾಣದಲ್ಲಿ ಬೆಳೆದವು. ವಿವಿಧ ರಾಷ್ಟ್ರಗಳ ಆರ್ಥಿಕ ಸ್ಥಿತಿಗತಿಗಳು ಸ್ವರ್ಣಮಾನ ಮುಖಾಂತರ ಸಂಬಂಧ ಹೊಂದಿದ್ದವು. ಅಂತಾರಾಷ್ಟ್ರೀಯ ವ್ಯಾಪಾರ ಹಾಗೂ ಉತ್ಪಾದನಾಂಗಗಳ ಚಲನವಲನ ಮತ್ತು ಚಿನ್ನದ ಆಮದು ರಫ್ತು ಇವುಗಳ ಮೇಲೆ ಹೆಚ್ಚು ಪ್ರತಿಬಂಧಕಗಳಿಲ್ಲದ್ದುದರಿಂದ ಬೆಲೆಗಳ ತಾರತಮ್ಯಕ್ಕನುಸಾರವಾಗಿ ಸರಕುಗಳ ಹಾಗೂ ಚಿನ್ನದ ರಫ್ತು ಆಮದು ವ್ಯಾಪಾರ ವ್ಯವಹಾರಗಳೂ ನಡೆದು ವಿವಿಧರಾಷ್ಟ್ರಗಳ ಬೆಲೆಮಟ್ಟಗಳು ಸಂಘಟಿತವಾದವು. ಹೀಗೆ 1914ಕ್ಕೆ ಹಿಂದಿನ ಶತಮಾನದಲ್ಲಿ ಆರ್ಥಿಕ ಅಂತಾರಾಷ್ಟ್ರೀಯತೆ ಚೆನ್ನಾಗಿ ಪ್ರಕಾಶಗೊಂಡು ಅದು ಆರ್ಥಿಕ ಅಂತಾರಾಷ್ಟ್ರೀಯತೆಯ ಸ್ವರ್ಣಯುಗವೆನಿಸಿಕೊಂಡಿತ್ತು.

19ನೆಯ ಶತಮಾನದ ಉದಾತ್ತ ಆರ್ಥಿಕ ಅಂತಾರಾಷ್ಟ್ರೀಯ ಸಾಮ್ರಾಜ್ಯ ಶಾಹಿ ರಾಜಕೀಯ ಪರಿಸ್ಥಿತಿಯೊಡನೆ ಸೇರಿಕೊಂಡಿದ್ದುದು ಗಮನಿಸಬೇಕಾದ ಅಂಶ. ಬ್ರಿಟನ್, ಫ್ರಾನ್ಸ್, ಜರ್ಮನಿ, ಪೋರ್ಚುಗಲ್, ಇಟಲಿ ಇತ್ಯಾದಿ ರಾಷ್ಟ್ರಗಳು ವಸಾಹತುಗಳನ್ನು ಹೆಚ್ಚಿಸಿಕೊಳ್ಳಲು ಹವಣಿಸುತ್ತಲೇ ಇದ್ದವು. ಅಲ್ಲದೆ ಆಯಾ ಸಾಮ್ರಾಜ್ಯ ರಾಷ್ಟ್ರಗಳೊಳಗೆ ಹೆಚ್ಚು ನಿಕಟವಾದ ಆರ್ಥಿಕ ಸಂಬಂಧಗಳು ಬೆಳೆದುಬಂದವು. ಶ್ರಮ ವಿಭಜನೆ ತತ್ತ್ವ ಈ

ಆಯಕಟ್ಟಿನೊಳಗೆ ವಿಸ್ತೃತಗೊಂಡು ಅಂದಿನ ಪ್ರಪಂಚದ ಆರ್ಥಿಕತೆಯಲ್ಲಿ ಸಮನ್ವಯ ಹಾಗೂ ಸ್ತಿಮಿತತೆಯನ್ನು ಉಂಟುಮಾಡಿತು. ಅಧೀನ ಜನಾಂಗದವರ ಆರ್ಥಿಕ ಏಳಿಗೆಯ ದೃಷ್ಟಿಯಿಂದ ಈ ವಿಧದ ಸ್ಥಿಮಿತತೆ ಎಷ್ಟರಮಟ್ಟಿಗೆ ಅಪೇಕ್ಷಣೀಯವಾಗಿತ್ತೆಂಬುದರ ಚರ್ಚೆ ಇಲ್ಲಿ ಅಪ್ರಕೃತ.

1914–18ರ ಒಂದನೆಯ ಮಹಾಯುದ್ಧ, 1920–32ರಲ್ಲಿ ಉಂಟಾದ ಘೋರ ಆರ್ಥಿಕ ಮುಗ್ಗಟ್ಟು, ಹಾಗೂ ಕಾಲಕ್ರಮೇಣ ಉಂಟಾದ ಆರ್ಥಿಕ ರಚನೆಯ ಬದಲಾವಣೆಗಳು ಇತ್ಯಾದಿ ಕಾರಣಗಳಿಂದ ಅಂತಾರಾಷ್ಟ್ರೀಯ ಆರ್ಥಿಕ ಐಕ್ಯಕ್ಕೆ ಭಂಗವುಂಟಾಯಿತು. ಎರಡು ಮಹಾಯುದ್ಧಗಳ ಅಂತರದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ–ವ್ಯವಹಾರಗಳು ಹಿಂದಿನಂತೆ ನಿರಾತಂಕವಾಗಿ ನಡೆಯಲಿಲ್ಲ. ಆರ್ಥಿಕ ರಾಷ್ಟ್ರೀಯತೆಯ ಪ್ರಭಾವ ಹೆಚ್ಚಾಯಿತು. ಅನೇಕ ರಾಷ್ಟ್ರಗಳು ರಕ್ಷಣಾ ಸುಂಕ, ವಿನಿಮಯ ಹತೋಟಿ, ದ್ವಿರಾಷ್ಟ್ರೀಯ ವ್ಯಾಪಾರ (ಬೈಲ್ಯಾಟರಲ್ ಟ್ರೇಡ್) ಹಾಗೂ ವಿನಿಮಯದ ಒಪ್ಪಂದ–ಇಂಥ ಕ್ರಮಗಳನ್ನು ಅನುಸರಿಸಿದವು. ಇವುಗಳ ಪರಿಣಾಮವಾಗಿ ವಿಶ್ವ ಆರ್ಥಿಕತೆಯ ಸಂಘಟನೆ ಸಡಿಲಿಸಿತು.

ಎಡರನೆಯ ಮಹಾಯುದ್ಧ ಕಾಲದಿಂದ ಆರ್ಥಿಕ ಅಂತಾರಾಷ್ಟ್ರೀಯತೆ ಆಶಾಜನಕ ರೀತಿಯಲ್ಲಿ ಬೆಳೆಯುತ್ತಿದೆ. ಇನ್ನೊಂದು ಮಹಾಯುದ್ಧ ಸಂಭವಿಸದಂತೆ ನೋಡಿಕೊಳ್ಳ ಬೇಕೆಂಬ ಸಾರ್ವತ್ರಿಕ ಆಕಾಂಕ್ಷೆ, ಎರಡು ಯುದ್ಧಗಳ ನಡುವಣ ಕಾಲದ ಸಂಕುಚಿತರಾಷ್ಟ್ರೀಯ ಆರ್ಥಿಕನೀತಿಗಳ ದುಷ್ಪರಿಣಾಮಗಳ ಅರಿವು– ಇವುಗಳ ಆಧಾರದ ಮೇಲೆ ಯುದ್ಧೋತ್ತರ ವಿಶ್ವ ಆರ್ಥಿಕ ಪದ್ಧತಿ ರೂಪುಗೊಳ್ಳುತ್ತಿದೆ.

ಇಂದಿನ ಆರ್ಥಿಕ ಅಂತಾರಾಷ್ಟ್ರೀಯತೆ ಕೆಲವು ಅಂಶಗಳಲ್ಲಿ ಮುಖ್ಯವಾದುದಾಗಿದೆ. ಮೊದಲನೆಯದಾಗಿ, ಅಧೀನ ಹಾಗೂ ವಸಾಹತು ಭಾಗಗಳಾಗಿದ್ದ ಅನೇಕ ರಾಷ್ಟ್ರಗಳು ರಾಜಕೀಯ ಸ್ವಾತಂತ್ರ್ಯ ಪಡೆದು ತಮ್ಮ ತಮ್ಮ ರಾಷ್ಟ್ರೀಯ ಹಿತಕ್ಕನುಸಾರವಾಗಿ ಆರ್ಥಿಕಾಭಿವೃದ್ಧಿ ಸಾಧಿಸಲು ಹವಣಿಸುತ್ತಿರುವುದು ಇಂದಿನ ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧಗಳಿಗೆ ವಿಶೇಷ ಲಕ್ಷಣವನ್ನು ಕೊಟ್ಟಿದೆ. ಎರಡನೆಯದಾಗಿ, ಹೀಗೆ ಆರ್ಥಿಕೋನ್ನತಿ ಸಾಧಿಸಬೇಕೆಂಬ ದೃಢಸಂಕಲ್ಪ ಮಾಡಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿರುವ ಹಿಂದುಳಿದಿರುವ ರಾಷ್ಟ್ರಗಳಿಗೆ ಬೆಂಬಲ ಕೊಟ್ಟು ಬಂಡವಾಳ, ಯಾಂತ್ರಿಕ ಸಹಾಯ ಇವುಗಳನ್ನು ಒದಗಿಸುವುದು ತಮ್ಮ ಮುಖ್ಯ ಹೊಣೆ ಎಂದು ಮುಂದುವರಿದಿರುವ ರಾಷ್ಟ್ರಗಳು ಒಪ್ಪಿರುವ ಸದ್ಭಾವನೆ ಅಂತಾರಾಷ್ಟ್ರೀಯ ಆರ್ಥಿಕಸಂಬಂಧಗಳಿಗೆ ಹೊಸ ಸ್ವರೂಪ ಕೊಟ್ಟಿದೆ. ಮೂರನೆಯದಾಗಿ, ಇಂದಿನ ಅಂತಾರಾಷ್ಟ್ರೀಯ ಸಹಕಾರ ಅನೇಕ ಶತಮಾನಗಳ ಅನುಭವ ಆಲೋಚನೆಗಳ ಫಲ. ಹಿಂದೆ 19ನೆಯ ಶತಮಾನದಲ್ಲಿ ನಿರಾತಂಕವಾಗಿ ಚಲಿಸುತ್ತಿದ್ದ ಆರ್ಥಿಕ ಶಕ್ತಿಗಳ ಮೂಲಕ ವಿವಿಧ ರಾಷ್ಟ್ರಗಳ ಆರ್ಥಿಕತೆಗಳಲ್ಲಿ ಪರಸ್ಪರವಾಗಿ ಹೊಂದಾಣಿಕೆಯಾಗುತ್ತಿತ್ತು. ಆಗ ಸ್ವರ್ಣಮಾನ ಮುಖ್ಯ ಪಾತ್ರ ವಹಿಸಿತ್ತು. ಬದಲಿಸಿರುವ ಈ ಶತಮಾನದ ವಾತಾವರಣದಲ್ಲಿ ಆರ್ಥಿಕ ಶಕ್ತಿಗಳ ಸ್ವಾಭಾವಿಕ ಕ್ರಿಯೆ, ಪ್ರತಿಕ್ರಿಯೆಗಳು ಅನೇಕ ಕಟ್ಟುಗಳಿಗೆ ಒಳಗಾಗಿವೆ. ದೇಶ ವಿದೇಶಗಳ ವ್ಯಾಪಾರ, ವಿನಿಮಯ, ಬಂಡವಾಳ, ಸಂಚಾರ ಇತ್ಯಾದಿ ಅನೇಕ ಆರ್ಥಿಕವಿಷಯಗಳಲ್ಲಿ ಸರ್ಕಾರಗಳ ಕೈವಾಡ ಹಾಗೂ ಪ್ರಭಾವ ಹೆಚ್ಚಾಗಿವೆ. ಇದರಿಂದ ಅಂತಾರಾಷ್ಟ್ರೀಯ ಆರ್ಥಿಕ ಚಟುವಟಿಕೆಗಳು ವಿವಿಧ ರಾಷ್ಟ್ರ ಸರ್ಕಾರಗಳು ಕಲೆತು ಗೊತ್ತು ಮಾಡುವ ಮಾರ್ಗಗಳಲ್ಲಿ ನಡೆಯಬೇಕಾಗಿವೆ. ಇದಕ್ಕಾಗಿ ಅನೇಕ ಅಂತಾರಾಷ್ಟ್ರೀಯ ಆರ್ಥಿಕ ಸಂಸ್ಥೆಗಳು ಎರಡನೇ ಮಹಾ ಯುದ್ಧೋತ್ತರ ಕಾಲದಲ್ಲಿ ಸ್ಥಾಪನೆಯಾಗಿವೆ.

ವಿಶ್ವಸಂಸ್ಥೆಯ ಆರ್ಥಿಕ ಧ್ಯೇಯಗಳನ್ನು ನೋಡಿದರೆ ಇಂದಿನ ಅಂತಾರಾಷ್ಟ್ರೀಯ ಆರ್ಥಿಕತೆಯ ವೈಶಿಷ್ಟ್ಯ ವ್ಯಕ್ತವಾಗುವುದು: ಉನ್ನತ ಜೀವನ ಮಟ್ಟವನ್ನು ಹೊಂದುವಂತೆ ಪ್ರಪಂಚದ ಸಾಧನಗಳನ್ನೂ ಜ್ಞಾನವನ್ನೂ ಅತ್ಯುತ್ತಮ ರೀತಿಯಲ್ಲಿ ಉಪಯೋಗಿಸುವುದು. ಕೆಲಸ ಮಾಡಬಲ್ಲ ಹಾಗೂ ಮಾಡಬಯಸುವ ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗ ದೊರಕಿಸುವುದು. ಎಲ್ಲ ವರ್ಗದ ಜನತೆಗೂ ಒಂದು ಕನಿಷ್ಠ ಸಾಮಾಜಿಕ ರಕ್ಷಾನುಕೂಲಗಳನ್ನು ಕಲ್ಪಿಸುವುದು, ಅಂತಾರಾಷ್ಟ್ರೀಯ ಅಭಿವೃದ್ಧಿಗಾಗಿ ಮುಖ್ಯವಾಗಿ ಹಿಂದುಳಿದಿರುವ ರಾಷ್ಟ್ರಗಳಲ್ಲಿ ದೊಡ್ಡ ಯೋಜನೆಗಳನ್ನು ಹಾಕಿ ಕೊಡುವುದು ಇಂಥ ಉದಾತ್ತ ಧ್ಯೇಯಗಳ ಸಾಧನೆಗಾಗಿ ಈ ಸಂಸ್ಥೆಯ ಅಂಗವಾಗಿಯೂ ಆಶ್ರಯದಲ್ಲೂ ಅನೇಕ ಉಪ ಸಂಸ್ಥೆಗಳು ಏರ್ಪಟ್ಟಿವೆ. ಇವೆಲ್ಲವೂ ಸೇರಿ ಇಂದಿನ ಅಂತಾರಾಷ್ಟ್ರೀಯ ಆರ್ಥಿಕ ರಚನೆಯನ್ನು ಪರಿಪೂರ್ಣಗೊಳಿಸಿವೆ ಎನ್ನಬಹುದು.

ಅಂತಾರಾಷ್ಟ್ರೀಯ ಆರ್ಥಿಕತೆ ಹೊಸ ಸ್ವರೂಪವನ್ನು ತಳೆದು ಬೆಳೆಯುತ್ತಿರುವ ಸಂದರ್ಭದಲ್ಲಿಯೇ ರಾಷ್ಟ್ರೀಯ ಆರ್ಥಿಕ ಯೋಜನೆಯ ಅನುಸರಣೆಯೂ ಪ್ರಪಂಚದಲ್ಲಿ ಹಬ್ಬುತ್ತ ಇದೆ. ರಷ್ಯ, ಬಲ್ಗೇರಿಯ, ಯೂಗೋಸ್ಲಾವಿಯ, ಪೋಲೆಂಡ್, ರೊಮೇನಿಯ, ಚೆಕೊಸ್ಲೊವೇಕಿಯ ಪೂರ್ವ ಜರ್ಮನಿ, ಹಂಗರಿ, ಚೀನ ಈ ರಾಷ್ಟ್ರಗಳು ಕೇಂದ್ರಾಡಳಿತ ಯೋಜನೆಯ ಆರ್ಥಿಕ ವ್ಯವಸ್ಥೆಯುಳ್ಳ ರಾಷ್ಟ್ರಗಳಾಗಿವೆ. ಖಾಸಗಿ ಉದ್ಯಮಕ್ಕೆ ಹೆಚ್ಚು ಸ್ವಾತಂತ್ರ್ಯವಿರುವ ಇತರ ರಾಷ್ಟಗಳೂ ಆರ್ಥಿಕ ಯೋಜನಾಕ್ರಮವನ್ನು ಕೈಗೊಂಡಿವೆ. ಹಿಂದುಳಿದಿರುವ ರಾಷ್ಟ್ರಗಳು ಶೀಘ್ರ ಆರ್ಥಿಕ ಅಭಿವೃದ್ಧಿಗೂ ಮುಂದುವರಿದಿರುವ ರಾಷ್ಟ್ರಗಳು ಆರ್ಥಿಕಸ್ಥಿಮಿತತೆ ಹಾಗೂ ಪೂರ್ಣೋದ್ಯೋಗ ಉದ್ದೇಶಗಳಿಗಾಗಿಯೂ ಆರ್ಥಿಕ ಯೋಜನೆಯನ್ನು ಅನುಸರಿಸುತ್ತವೆ. ಹೀಗೆ ರಚಿಸಲಾಗುವ ವಿವಿಧ ರಾಷ್ಟ್ರೀಯ ಆರ್ಥಿಕ ಯೋಜನೆಗಳು ಪರಸ್ಪರವಾಗಿ ಹೊಂದಿಕೊಳ್ಳುವಂತೆಯೂ ಆರ್ಥಿಕ ಅಂತಾರಾಷ್ಟ್ರೀಯತೆಗೆ ಕುಂದು ಬಾರದಂತೆಯೂ ನೋಡಿಕೊಳ್ಳಬೇಕು. ಇದು ಆರ್ಥಿಕ ರಾಷ್ಟ್ರೀಯತೆಯ ಒಂದು ದೊಡ್ಡ ಸಮಸ್ಯೆ. ಹೆಚ್ಚಿನ ಮಾಹಿತಿಗೆ ಈ ಮುಂದಿನ ಶಿರ್ಷಿಕೆಗಳನ್ನು ನೋಡಿ:

**(ಅಂತಾರಾಷ್ಟ್ರೀಯ–ಅರ್ಥಶಾಸ್ತ್ರ; ಅಂತಾರಾಷ್ಟ್ರೀಯಆರ್ಥಿಕ ಮಂಡಲಿ; ಅಂತಾರಾಷ್ಟ್ರೀಯಆರ್ಥಿಕ ಸಂಘಗಳು; ಅಂತಾರಾಷ್ಟ್ರೀಯತೀರುವೆ ಬ್ಯಾಂಕು; ಅಂತಾರಾಷ್ಟ್ರೀಯ ದ್ರವ್ಯನಿಧಿ)** (ಎ.ವಿ.ಎಸ್.)

**ಆರ್ಥಿಕ ಅಧ್ಯಯನ ಕ್ರಮಗಳು :** ಅರ್ಥಶಾಸ್ತ್ರವನ್ನು ವೈಜ್ಞಾನಿಕ ರೀತಿಯಲ್ಲಿ ಅಭ್ಯಾಸ ಮಾಡಲು ಅನುಸರಿಸಬೇಕಾದ ಶಾಸ್ತ್ರೀಯ ಕ್ರಮಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸ ಲಾಗಿದೆ (ಎಕನಾಮಿಕ್ ಮೆಥೆಡ್ಸ್). ಶುದ್ಧ ವಿಜ್ಞಾನ ವಿಷಯಗಳಿಗೂ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮನಶ್ಶಾಸ್ತ್ರಗಳಂಥ ಮಾನವಿಕ ವಿಷಯಗಳಿಗೂ ಸ್ವರೂಪದಲ್ಲೇ ಮೂಲಭೂತವಾದ ವ್ಯತ್ಯಾಸವಿದೆ. ಜೀವನವನ್ನು ಕುರಿತಾದ ಭೌತ, ರಾಸಾಯನಿಕ ವಿಜ್ಞಾನಗಳಷ್ಟು ನಿರ್ದಿಷ್ಟವಾಗಲು ಸಾಧ್ಯವಿಲ್ಲ. ಏಕೆಂದರೆ ಜೀವನ ನಿತ್ಯವರ್ತನಶೀಲವಾದುದು. ಅದಕ್ಕೆ ಆಧಾರವಾಗಿರುವ ಅಂಶಗಳೂ ಅಷ್ಟೆ. ಕಾಲ, ದೇಶ, ಜನಾಂಗ, ಸನ್ನಿವೇಶಗಳಿಗೆ ತಕ್ಕಂತೆ ಜೀವನ ಬದಲಾಗುತ್ತಿರುತ್ತದೆ. ಅದರಲ್ಲಿ ನಿತ್ಯ ಸತ್ಯಗಳನ್ನು ಸೂತ್ರೀಕರಿಸುವುದು ಕಷ್ಟದ ಕೆಲಸವೇ. ವೈಜ್ಞಾನಿಕ ಕ್ರಮವೆಂದರೆ ಶೋಧನೆ, ವಿಶ್ಲೇಷಣೆ, ವಿಂಗಡಣೆ, ಸೂತ್ರೀಕರಣ, ಸಿದ್ಧಾಂತ, ಹೀಗೆ ಮಾಡುವಾಗ ಅನುಗಮನ ನಿಗಮನ ವಿಧಾನಗಳೆರಡೂ ಅಗತ್ಯ.

ಆರ್ಥಿಕ ವಿಷಯಗಳ ವಿಶ್ಲೇಷಣೆಗೆ ಯಾವ ಕ್ರಮ ಯುಕ್ತವೆಂಬ ವಿಚಾರದಲ್ಲಿ 19ನೆಯ ಶತಮಾನದಿಂದಲೂ ವಾದವಿವಾದಗಳು ನಡೆಯುತ್ತಲೇ ಇವೆ.

ಪ್ರೌಢ ಪ್ರಾಚೀನ (ಕ್ಲಾಸಿಕಲ್) ಮತ್ತು ಆಧುನಿಕ ಪ್ರೌಢ ಪ್ರಾಚೀನ (ನಿಯೋಕ್ಲಾಸಿಕಲ್) ಪಂಥದ ಅರ್ಥಶಾಸ್ತ್ರ ಪಂಡಿತರು, ತಮ್ಮ ಶೋಧನೆಗಳಲ್ಲಿ ಹೆಚ್ಚು ಕಡಿಮೆ ನಿಗಮನ ಅಥವಾ ಬುದ್ಧಿರೂಢ ವಿಧಾನವನ್ನೇ ಅನುಸರಿಸಿದರು. ಈ ವಿಧಾನ ತರ್ಕಬದ್ಧ ವಿಚಾರಸರಣಿ ಯಿಂದ ಸಮರ್ಥನೆ ಪಡೆದು ಸ್ವತಸ್ಸಿದ್ಧವೆಂದು ಪರಿಗಣಿತವಾದ ಆಧಾರಭಾವನೆಗಳಿಂದ ತನ್ನ ನಿರ್ಣಯ, ಸಿದ್ಧಾಂತಗಳನ್ನು ರೂಪಿಸುತ್ತದೆ. ಪ್ರಾಯಿಕ ವಿಷಯಗಳಿಂದ ಪ್ರಾರಂಭಿಸಿ ನಿರ್ದಿಷ್ಟವಿಷಯಗಳಿಗೆ ಹೋಗುತ್ತದೆ. ಕೆಲವು ಸಂದರ್ಭಗಳಲ್ಲಿ ಆಧಾರ ಭಾವನೆಗಳಿಗೂ ವಾಸ್ತವಾಂಶಗಳಿಗೂ ಹೊಂದಿಕೆಯಿಲ್ಲದಿರಬಹುದಾದ್ದರಿಂದ, ಅದನ್ನು ಕಾಲ್ಪನಿಕ (ಹೈಪೊಥೆಟಿಕಲ್) ವಿಧಾನವೆಂದು ಕರೆಯುತ್ತಾರೆ. ಆದಾಗ್ಯೂ ಈ ಆಧಾರ ಭಾವನೆಗಳೂ, ವಾಸ್ತವಾಂಶಗಳೂ ಸಮಾನ ಧರ್ಮ ಅಥವಾ ಲಕ್ಷಣಗಳನ್ನು ಹೊಂದಿರಬಹುದು. ಆದ್ದರಿಂದ ಅವುಗಳನ್ನು ತರ್ಕಬದ್ಧ ವಿಚಾರಣೆಗೆ, ನಿರ್ಣಯಗಳಿಗೆ, ಆಧಾರವಚನಗಳನ್ನಾಗಿ ಉಪಯೋಗಿ ಸುವುದು ಆವಶ್ಯಕವಾಗಬಹುದು. ಇದರಿಂದ ವಿಷಯ ಶೋಧನೆ ಸರಳವಾಗುತ್ತದಲ್ಲದೆ, ಅಸಂಬದ್ಧ ವಿಚಾರಗಳಿಗೂ ಅವಕಾಶವಿರುವುದಿಲ್ಲ. ಈ ಕಾರಣದಿಂದ ಈ ವಿಧಾನವನ್ನು ಭಾವನಾರೂಪವೆಂದೂ ಹೇಳುತ್ತಾರೆ.

ಪ್ರೌಢ ಪ್ರಾಚೀನ ಮಾರ್ಗದ ಅರ್ಥಶಾಸ್ತ್ರ ಪಂಡಿತರೇ ನಿಗಮನ ವಿಧಾನದ ಉಗಮ ಮತ್ತು ವಿಕಾಸಕ್ಕೆ ಕಾರಣರು ಎಂಬ ಅಭಿಪ್ರಾಯವಿದೆ. ಆ್ಯಡಂಸ್ಮಿತ್ ಎರಡು ವಿಧಾನಗಳನ್ನು ಬಳಸಿದ್ದಾನೆ. ಜನಸಾಂದ್ರತೆಗೆ ಸಂಬಂಧಿಸಿದ ತನ್ನ ಪ್ರೌಢ ಪ್ರಬಂಧದ ವಿಷಯ ಸಮರ್ಥನೆಗೆ ಮಾಲ್ಥಸ್ ಅನುಗಮನ ವಿಧಾನವನ್ನನುಸರಿಸಿದ್ದಾನೆ. ರಿಕಾರ್ಡೊ, ಸೀನಿಯರ್, ಮಿಲ್, ಕೇನ್ಸ್, ಬೇಜ್‌ಹಾಟ್–ಇವರು ನಿಗಮನ ವಿಧಾನದ ತರ್ಕಸರಣಿಯನ್ನು ಸಮಗ್ರಗೊಳಿಸಿದರಲ್ಲದೆ, ಅರ್ಥಶಾಸ್ತ್ರ ಶುದ್ಧವಿಜ್ಞಾನವೆಂದೂ ಅದರ ವಿಷಯಗಳ ಪರಿಶೀಲನೆಗೆ ನಿಗಮನ ವಿಧಾನವೇ ಯುಕ್ತ, ಅನುಗಮನ ವಿಧಾನವಲ್ಲ, ಎಂದು ವಾದಿಸಿದರು. ಅವರ ದೃಷ್ಟಿಯಲ್ಲಿ ಅರ್ಥಶಾಸ್ತ್ರ, ಅಮೂರ್ತ ಅಥವಾ ಭಾವನಾ ವಿಜ್ಞಾನ; ಅದರ ಸಿದ್ಧಾಂತಗಳು, ನಿರ್ಣಯಗಳು, ಕೆಲವು ಪ್ರಧಾನವಾದ ಪೂರ್ಣಧಾರಣಗಳಿಂದ ಬಂದವು. ಆರ್ಥಿಕ ನೆಮ್ಮದಿಯೇ ತನ್ನ ಐಹಿಕ ಚಟುವಟಿಕೆಗಳಿಗೆ ಚಾಲಕಶಕ್ತಿಯಾಗಿರುವ ಆರ್ಥಿಕ ಮಾನವ ಎಂಬ ಸಾರ್ವತ್ರಿಕ ಕಲ್ಪನೆಯೊಂದು ಪ್ರಕೃತ ದೃಷ್ಟಾಂತ. ಪ್ರೌಢಪ್ರಾಚೀನ ಅರ್ಥಶಾಸ್ತ್ರ ವಿದ್ವಾಂಸರು, ಆರ್ಥಿಕೇತರ ಶಕ್ತಿಗಳು ಮನುಷ್ಯನ ಆರ್ಥಿಕ ಚಟುವಟಿಕೆಗಳ ಮೇಲೆ ಪ್ರಭಾವವನ್ನು ಬೀರಲಾರವು, ಹಾಗೆ ಬೀರಿದಾಗಲೂ ಆ ಪ್ರಭಾವ ಕೃಶವಾಗಿ ಅನಿರ್ದಿಷ್ಟವಾಗಿ ಗಣನೆಗೆ ತೆಗೆದುಕೊಳ್ಳುವಂತಿಲ್ಲ ಎಂದು ನಂಬಿದ್ದರು. ಅವರ ಅರ್ಥಶಾಸ್ತ್ರದ ಕೆಲವು ಸಾಮಾನ್ಯ ಆಧಾರ ಪ್ರತಿಜ್ಞೆಗಳಿವು (ಪಾಸ್ಚ್ಯುಲೇಟ್ಸ್): 1 ಮಾನವ ಸ್ವಾರ್ಥಿ. ತನ್ನ ಸ್ವಾರ್ಥಕ್ಕಾಗಿ ಪಡೆದ ಲಾಭಗಳನ್ನು ಬೆಳೆಸಲೆತ್ನಿಸು ತ್ತಾನೆ. 2 ಅತ್ಯಲ್ಪ ಶ್ರಮದಿಂದ ಅತಿ ಹೆಚ್ಚಿನ ಸಂತೃಪ್ತಿ ಪಡೆಯಬೇಕೆಂಬುದು ಅವನ ಗುರಿ. 3 ಜನಸಂಖ್ಯೆ ಜ್ಯಾಮಿತೀಯ ಪ್ರಮಾಣದಲ್ಲಿ ಹೆಚ್ಚುತ್ತದೆ. 4 ಭೂಮಿಯಿಂದ ಉತ್ಪಾದನೆ ಕಡಿಮೆಯಾಗುತ್ತ ಹೋಗುತ್ತದೆ. ಈ ಆಧಾರ ಪ್ರತಿಜ್ಞೆಗಳು ಸಾರ್ವಲೌಕಿಕ ಮತ್ತು ಸತ್ಯ ಎಂದು ಅವರು ನಂಬಿದ್ದರು. ಇವುಗಳಿಂದ ಹೊಮ್ಮಿದ ಸಿದ್ಧಾಂತಗಳೂ ಅಷ್ಟೇ ವಿಶುದ್ಧ ಎಂದರು.

ನಿಗಮನ ವಿಧಾನ ಆರ್ಥಿಕ ವಿಷಯಗಳ ವಿಶ್ಲೇಷಣೆಗೂ ಉಪಯುಕ್ತ. ಇದು ವಿಜ್ಞಾನ ಪ್ರಪಂಚದ ರಾಣಿಯೆನಿಸಿರುವ ನೆಚ್ಚಿಕೆಯ, ತರ್ಕಶಾಸ್ತ್ರದ ನೆರವನ್ನು ಪಡೆಯುತ್ತದೆ. ಇದು ಸರಳ. ಅಂಕಿ ಅಂಶಗಳು ಮುಂತಾದ ಆಧಾರಾಂಶಗಳನ್ನು ಸಂಗ್ರಹಿಸುವ ತೊಡಕಿನ ಮತ್ತು ಪ್ರಯಾಸದ ಪೇಚಾಟ ಅದಕ್ಕಿಲ್ಲ. ಚಾರಿತ್ರಿಕ ಆಧಾರ ವಿಷಯಗಳು ದೊರಕುವುದು ಕಷ್ಟ, ದೊರಕಿದರೂ ಅವು ಅಪೂರ್ಣ! ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಸಾಮಾಜಿಕ ನಡುವಳಿಯನ್ನು ಪ್ರಯೋಗ ಪರೀಕ್ಷೆಗೊಳಪಡಿಸುವುದು ಕಷ್ಟಸಾಧ್ಯ. ಈ ಪ್ರತಿಬಂಧಕಗಳು ನಿಗಮನ ವಿಧಾನದ ಅಗತ್ಯತೆಯನ್ನು ಸ್ಥಾಪಿಸಿವೆ.

ನಿಗಮನವಿಧಾನವನ್ನು ಎರಡು ಮಾದರಿಯಾಗಿ ವಿಭಾಗಿಸಬಹುದು: ಗಣಿತಸಂಬಂಧಿ ಮತ್ತು ಗಣಿತಸಂಬಂಧಿಯಲ್ಲದ್ದು. ಎರಡನೆಯ ವಿಧಾನ ಪ್ರೌಢಪ್ರಾಚೀನ ಮತ್ತು ಆಧುನಿಕ ಪ್ರೌಢಪ್ರಾಚೀನ ಅರ್ಥಶಾಸ್ತ್ರ ಪಂಡಿತರಿಗೆ ಪ್ರಯೋಗಸಾಧನವಾಯಿತು. ಆರ್ಥಿಕ ಸಮಸ್ಯೆಗಳ ವಿಶ್ಲೇಷಣೆಯಲ್ಲಿ, 19ನೆಯ ಶತಮಾನದಲ್ಲಿ ಎಡ್ಜ್‌ವರ್ತ್ ಎಂಬ ಪಂಡಿತ ಗಣಿತ ಸಂಬಂಧಿ ನಿಗಮನ ವಿಧಾನವನ್ನು ಜನರಲ್ಲಿ ಹರಡಿದ. ಈ ವಿಶ್ಲೇಷಣೆಗೆ ಗಣಿತ ಮತ್ತು ರೇಖಾಚಿತ್ರಗಳ ಬಳಕೆ ಹೆಚ್ಚಾದುದು ಆ ಶತಮಾನದ ವೈಶಿಷ್ಟ್ಯ. ಒಂದು ಆರ್ಥಿಕ ಸಮಸ್ಯೆಯನ್ನು ಗಣಿತದ ಸಂಕೇತಗಳಾಗಿ ಪ್ರಸ್ತಗೊಳಿಸಿ ತೋರಿಸುವುದು, ಬೀಜಗಣಿತ ಮತ್ತು ಸಂಕಲನಶಾಸ್ತ್ರಗಳ ನೆರವಿನಿಂದ ದೊರಕಿದ ಪರಿಣಾಮಗಳಿಂದ ತೀರ್ಮಾನಿಸುವುದು – ಇದೇ ನಿಗಮವಿಧಾನ ಪ್ರಯೋಗದ ರೀತಿ. ಇದರ ಉಪಯುಕ್ತತೆ ಮೂರು ಬಗೆ. ಮೊದಲನೆಯದಾಗಿ, ಆರ್ಥಿಕ ತತ್ತ್ವಗಳ ಪ್ರತಿಪಾದನೆಗೆ ಇದು ಸಹಾಯಕ; ಎರಡನೆಯದಾಗಿ, ಕ್ರಮಬದ್ಧವಾದ ರೀತಿಯಲ್ಲಿ ತರ್ಕಿಸುವುದು ತುಂಬ ತೊಡಕಿನ ವಿಷಯವಾದ್ದರಿಂದ, ವಿವಾದಾಂಶಗಳನ್ನು ವಿಶದಪಡಿಸುವುದಕ್ಕೆ ಗಣಿತ ಸಂಕೇತಗಳು ಆವಶ್ಯಕವಾದ ನೆರವು ನೀಡುತ್ತವೆ. ಅದೂ ಅಲ್ಲದೆ, ಗಣಿತ ರೀತಿಯ ಪ್ರತಿಪಾದನೆ ಅರ್ಥಶಾಸ್ತ್ರದ ವಿಚಾರಗಳಿಗೆ ಸ್ಪಷ್ಟತೆ ನಿಷ್ಕೃಷ್ಟತೆಗಳನ್ನು ಕೊಡುತ್ತದೆ. ಆದರೆ, ಕೆಲವರು ಅರ್ಥಶಾಸ್ತ್ರಜ್ಞರು ಮಾತ್ರ, ವಿಸ್ತಾರವಾದ ಗಣಿತ ವಿಶ್ಲೇಷಣೆಯನ್ನು ಅರ್ಥಶಾಸ್ತ್ರದ ವಿಷಯಗಳಿಗೆ ಪ್ರಯೋಗಿಸಿದರೆ ಅದು ಕೇವಲ ಕಾಲ್ಪನಿಕವಾಗುತ್ತದೆ. ವಿನೋದ ವಸ್ತುವಾಗಿ ಕ್ಷೀಣಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇಂದಿನ ಸುಪ್ರಸಿದ್ಧ ಅರ್ಥಶಾಸ್ತ್ರ ಪಂಡಿತರೆಲ್ಲ ಈ ವಿಧಾನದ ಪ್ರತಿಪಾದಕರು.

ಅನುಗಮನ ವಿಧಾನ ಬೆಳೆದದ್ದು, ನಿಗಮನ ವಿಧಾನ ಪಡೆದ ಪ್ರಾಮುಖ್ಯಕ್ಕೆ ಪ್ರತಿಕ್ರಿಯೆಯಾಗಿ. ಈ ಪ್ರತಿಕ್ರಿಯೆ ಜರ್ಮನಿಯ ಚಾರಿತ್ರಿಕಪಂಥದ ರೂಪದಲ್ಲಿ ಹೊರಹೊಮ್ಮಿತು. ಷ್ಮೊಲರ್, ನೀಸ್, ಹಿಲ್ಡಬ್ರಾಂಡ್, ರಾಷಾರ್– ಇವರು ಈ ಪಂಥದ ಪ್ರತಿಪಾದಕರು. ಇಂಗ್ಲೆಂಡಿನಲ್ಲಿ ಆರ್.ಜೋನ್ಸ್, ಅಷೆ ಮತ್ತು ಸಿ.ಲೆಸ್ಲಿ ಅನುಗಮನ ವಿಧಾನವನ್ನು ಬೆಳೆಸಿದರು.

ಅನುಗಮನ ಅಥವಾ ಚಾರಿತ್ರಿಕ ವಿಧಾನ ನೆಲೆಗೊಂಡಿರುವುದು, ಮುಂಚಿನ ವಿಷಯ ಪರಿಶೀಲನೆಯ ಮೇಲೆ ಸಂಗ್ರಹಿಸಿದ ಆಧಾರಾಂಶಗಳು ಅಥವಾ ವಾಸ್ತವ ಸ್ಥಿತಿಗಳಿಂದ ಪ್ರಾರಂಭಿಸಿ ಅದು ಸಾಮಾನ್ಯೀಕರಣಕ್ಕೆ ಮುಂದುವರಿಯುತ್ತದೆ. ನಿರ್ದಿಷ್ಟದಿಂದ ಪ್ರಾರಂಭಿಸಿ ಸಾಮಾನ್ಯಕ್ಕೆ ಹೋಗುತ್ತದೆ. ವಸ್ತುಗಳ ನಿಜ ಸ್ವರೂಪವನ್ನು ಪರಿಗಣಿಸುವುದರಿಂದ ಅದು ವಸ್ತುಸತ್ವಾವಾದವೆಂದು ಹೆಸರು ಪಡೆದಿದೆ. ಅದನ್ನೇ ವಾಸ್ತವಿಕ ವಿಧಾನವೆನ್ನುತ್ತಾರೆ ಕೆಲವರು. ಏಕೆಂದರೆ, ಅದರ ಪರಿಶೀಲನೆ ಒಂದು ಪೂರ್ತಿ ವಿಷಯದ ನಿಜಸ್ವರೂಪವನ್ನು, ಕೃತಕ ವಿಭಜನೆಗಳನ್ನು ದೂರವಿಡುತ್ತದೆ. ಒಂದು ದೇಶದ ರಾಷ್ಟ್ರೀಯ ಆರ್ಥಿಕ ವ್ಯವಹಾರ ಅಂದರೆ ಸಂಪತ್ತಿನ ಉತ್ಪಾದನೆ, ಹಂಚಿಕೆಗಳು ಮತ್ತು ಬಳಕೆಗಳು, ಒಂದು ದೀರ್ಘ ಕಾಲದ ವಿಕಸನ ಪರಂಪರೆಯ ಪರಿಣಾಮ. ಆದ್ದರಿಂದ ಅದರ ವಿಶ್ಲೇಷಣೆ ವಾಸ್ತವಿಕ ಚಾರಿತ್ರಿಕ ವಿಷಯಗಳಿಗೆ ಮತ್ತು ಸಮಾಜದ ಸಾಮಾನ್ಯನಿಯಮಗಳಿಗೆ, ಅದರ ವಿಕಸನಕ್ಕೆ ಸಂಬಂಧಿಸಿರಬೇಕು ಎಂದು ಜರ್ಮನಿಯ ಚಾರಿತ್ರಿಕ ಪಂಥದವರು ನಂಬಿದ್ದರು.

ಅನುಗಮನ ವಿಧಾನ ಕೆಲವು ಶ್ರೇಷ್ಠ ಗುಣಗಳನ್ನು ಹೊಂದಿದೆ. ಈ ವಿಧಾನದ ಸಮರ್ಥಕರು ನಿಗಮನ ವಾದಿಗಳ ನಿರ್ಣಯಗಳನ್ನು ಪರೀಕ್ಷಿಸಿ ಸರಿ ನೋಡಿದ್ದಾರೆ. ತಮ್ಮ ಪರೀಕ್ಷೆಯಲ್ಲಿ ಆ ನಿರ್ಣಯಗಳನ್ನು ಸಮರ್ಥಿಸಿದ್ದಾರೆ, ಖಂಡಿಸಿದ್ದಾರೆ, ಬದಲಾಯಿಸಿದ್ದಾರೆ, ವಿಸ್ತರಿಸಿದ್ದಾರೆ. ಆರ್ಥಿಕ ಕಲ್ಪನೆಗಳ ಮತ್ತು ಸಂಸ್ಥೆಗಳ ಇತಿಹಾಸ ಹುಟ್ಟಿದ್ದು ಚಾರಿತ್ರಿಕ ವಿಧಾನದ ಪ್ರತಿಪಾದಕರಿಂದ. ಮೇಲಾಗಿ, ಅನುಗಮನ ವಿಧಾನದ ಗುಣವಿಶೇಷ ಕಂಡುಬರುವುದು ಸಾಪೇಕ್ಷಕತ್ವಕ್ಕೆ ಅದು ಕೊಟ್ಟಿರುವ ಪ್ರಾಮುಖ್ಯದಲ್ಲಿ. ಯಾವುದಾದರೊಂದು ಚಾರಿತ್ರಿಕ ಸಂದರ್ಭದಿಂದುಂಟಾದ ಮತ್ತು ಯಾವುದಾದರೊಂದು ವಿಶಿಷ್ಟಕಾಲಕ್ಕೆ ಮಾತ್ರ ಸಮಂಜಸವಾದ, ಒಂದು ಆರ್ಥಿಕ ಸಾಮಾನ್ಯ ಸೂತ್ರವನ್ನು ಎಲ್ಲ ಕಾಲಕ್ಕೂ ಎಲ್ಲ ಸ್ಥಳಗಳಿಗೂ ಅನ್ವಯಿಸುವ ಸೂತ್ರಕ್ಕೆ ಸಮವೆಂದು ಪರಿಗಣಿಸಲಾಗುವುದಿಲ್ಲ. ಅದರ ಕೊರತೆ ಇರುವುದು ಈ ವಿಷಯದಲ್ಲಿ. ಈ ವಿಧವನ್ನನುಸರಿಸುವವರು, ವಿಶ್ಲೇಷಣೆಯಲ್ಲಿ ಅವರಿಗೆ ಮಾರ್ಗದರ್ಶಿಯಾಗಿರಲು ಒಂದು ಆಧಾರಭಾವನೆಯಿಲ್ಲದಿರುವುದರಿಂದ, ವಾಸ್ತವಿಕ ಆಧಾರಾಂಶಗಳ ತೊಡಕಿಗೆ ಸಿಕ್ಕ ಸ್ಪಷ್ಟ ಅನುಮಿತಿಗಳನ್ನು ಪಡೆಯಲು ಸಾಧ್ಯವಾಗದಿರಬಹುದು.

ಅನೇಕ ಪ್ರಖ್ಯಾತ ಅರ್ಥಶಾಸ್ತ್ರ ಪಂಡಿತರು, ವಿಶೇಷವಾಗಿ ಆಲ್‌ಫ್ರೆಡ್ ಮಾರ್ಷಲ್ ಎರಡು ವಿಧಾನಗಳನ್ನು ಅನುಸರಿಸಿದರು. ವಾಸ್ತವವಾಗಿ ಎರಡು ವಿಧಾನಗಳೂ ಪರಸ್ಪರ ವಿರೋಧಿಗಳಲ್ಲ, ಪೂರಕಗಳು. ನಿಗಮನ ವಿಧಾನ ಸೂತ್ರ ಪ್ರತಿಪಾದನೆಗೆ ಉಪಯುಕ್ತವಾಗಿದ್ದರೆ, ಅನುಗಮನ ವಿಧಾನ ವ್ಯಾವಹಾರಿಕ ಅರ್ಥಕ್ಷೇತ್ರದಲ್ಲಿ ಪ್ರಯೋಜನಕಾರಿ. ನಿಗಮನ ಮತ್ತು ಅನುಗಮನ ವಿಧಾನಗಳೆರಡೂ ವೈಜ್ಞಾನಿಕ ಪರ್ಯಾಲೋಚನೆಗೆ ಆವಶ್ಯಕ. ಅವೆರಡೂ ಸರಿಯಾಗಿ ನಡೆಯಲು ಬೇಕಾದ ಬಲಗಾಲು ಎಡಗಾಲುಗಳಿದ್ದಂತೆ ಎಂದು ಆಲ್‌ಫ್ರೆಡ್ ಮಾರ್ಷಲ್ ಹೇಳಿರುವುದು ಯುಕ್ತ **(ನೋಡಿ– ಆರ್ಥಿಕ ನಿಯಮಗಳು)**. (ಎಂ.ಎಸ್.ಕೆ.)

**ಆರ್ಥಿಕ ಅನಭಿವೃದ್ಧಿ :** ಒಂದು ದೇಶದ ಆರ್ಥಿಕ ಅಭಿವೃದ್ಧಿಯನ್ನು ಅಲ್ಲಿನ ವೈಯಕ್ತಿಕ ಹಾಗೂ ರಾಷ್ಟ್ರೀಯ ವರಮಾನದ ಮೇಲೆ ಅಳೆಯುವುದಾದರೆ ಸ್ಥೂಲವಾಗಿ ಎಲ್ಲ ದೇಶಗಳನ್ನೂ ಅಭಿವೃದ್ಧಿ ಮತ್ತು ಅನಭಿವೃದ್ಧಿ ಎಂದು ಎರಡು ಭಾಗ ಮಾಡಬಹುದು. ಅನಭಿವೃದ್ಧಿ (ಅಂಡರ್ ಡೆವಲಪ್‌ಮೆಂಟ್) ಎಂಬ ಪದವನ್ನು ಅಲ್ಪಾಭಿವೃದ್ಧಿ, ಹಿಂದುಳಿಕೆ ಎಂಬ ಅರ್ಥದಲ್ಲಿ ಬಳಸಲಾಗಿದೆ. ಈಚೆಗೆ ಆರ್ಥಿಕವಾಗಿ ಹಿಂದುಳಿದ ಅನೇಕ ರಾಷ್ಟ್ರಗಳು ಮುಂದುವರಿಯಲು ಯೋಜನಾಬದ್ಧ ರೀತಿಯಲ್ಲಿ ಪ್ರಯತ್ನಿಸುತ್ತಿರುವುದರಿಂದ ಅಂಥವನ್ನು ಮುಂದುವರಿಯುತ್ತಿರುವ ರಾಷ್ಟ್ರಗಳೆಂದು ಕರೆಯುವುದು ವಾಡಿಕೆ. ವಿಶ್ವಸಂಸ್ಥೆ ಆರ್ಥಿಕ ದೃಷ್ಟಿಯಿಂದ ಎಲ್ಲ ರಾಷ್ಟ್ರಗಳನ್ನೂ ಮೂರು ಬಗೆಯಾಗಿ ವಿಂಗಡಿಸಿದೆ. 1 ತಲಾ ಆದಾಯ 915 ಡಾಲರುಗಳಿಗಿಂತ ಹೆಚ್ಚು ಇರುವ ದೇಶಗಳು ಹೆಚ್ಚು ವರಮಾನದ ರಾಷ್ಟ್ರಗಳು. 2 ತಲಾ ಆದಾಯ 310 ಡಾಲರುಗಳಷ್ಟಿರುವ ದೇಶಗಳು ಮಧ್ಯಮ ವರಮಾನದ ರಾಷ್ಟ್ರಗಳು. 3 ತಲಾ ಆದಾಯ 54 ಡಾಲರುಗಳಷ್ಟಿರುವುವು ಕಡಿಮೆ ವರಮಾನದ ರಾಷ್ಟ್ರಗಳು. ಹೀಗೆ ರಾಷ್ಟ್ರಗಳಲ್ಲಿನ ಆರ್ಥಿಕ ಹಿಂದುಳಿಕೆಗೆ ಕಾರಣಗಳೇನು, ಮುಂದುವರಿದ ರಾಷ್ಟ್ರಗಳು ತಮ್ಮ ಪ್ರಗತಿಗೆ ಅನುಸರಿಸಿರುವ ಕ್ರಮಗಳೇನು, ಮುಂದುವರಿಯುತ್ತಿರುವ ರಾಷ್ಟ್ರಗಳು ಯಾವ ದಾರಿಯಲ್ಲಿ ಸಾಗುತ್ತಿವೆ ಎಂಬ ವಿಷಯಗಳನ್ನು ಇಲ್ಲಿ ಸೂಕ್ಷ್ಮವಾಗಿ ವಿವೇಚಿಸಲಾಗಿದೆ.

ಒಂದು ದೇಶದ ಆರ್ಥಿಕ ಅಭಿವೃದ್ಧಿಗೆ ಕಾರಣವಾದ ಅಂಶಗಳು ಅನೇಕ ಇವೆ. ಅಲ್ಲಿನ ವಾತಾವರಣ, ಪ್ರಾಕೃತಿಕ ಸಂಪತ್ತು, ವ್ಯವಸಾಯ, ಕೈಗಾರಿಕೆಗಳು, ಅವುಗಳಿಗೆ ಬಳಸಲಾಗುವ ಯಾಂತ್ರಿಕ ತಾಂತ್ರಿಕ ಸಲಕರಣೆಗಳು, ಆಮದು ರಫ್ತುಗಳು, ಜನಸಂಖ್ಯೆ ಮತ್ತು ಅಭಿವೃದ್ಧಿ ಹೊಂದಲು ಒದಗುವ ಜನಶಕ್ತಿ, ಅವರಲ್ಲಿರುವ ಕ್ರಿಯಾಶಕ್ತಿ, ಅವರ ಸಾಮಾನ್ಯ ಮತ್ತು ತಾಂತ್ರಿಕ ವಿದ್ಯಾಸಂಪತ್ತು, ಆರೋಗ್ಯ, ಅವರ ಸಾಂಸ್ಕೃತಿಕ ಮಟ್ಟ, ರಾಜಕೀಯ ಸಂಬಂಧ, ಪ್ರಗತಿಯ ಬಗ್ಗೆ ಅಲ್ಲಿನ ಸರ್ಕಾರಗಳಿಗಿರುವ ಆಸಕ್ತಿ–ಇತ್ಯಾದಿಗಳೆಲ್ಲ ಆ ದೇಶದ ಬೆಳವಣಿಗೆಗೆ ಸಹಾಯಕವಾಗಿವೆ. ಇವುಗಳಲ್ಲಿ ಯಾವುದು ಕುಂಠಿತವಾದರೂ ದೇಶ ಅಭಿವೃದ್ಧಿ ಹೊಂದಲಾರದು. ಜೊತೆಗೆ ಚರಿತ್ರೆ ಈ ಬಗ್ಗೆ ತಿಳಿಸುತ್ತಿರುವ ಪಾಠ ಗಮನಾರ್ಹವಾಗಿದೆ. ವ್ಯಾಪಾರ ಮತ್ತು ವಸಾಹತುಶಾಹಿ ಧೋರಣೆಗಳುಳ್ಳ ಪಾಶ್ಚಾತ್ಯ ರಾಷ್ಟ್ರಗಳು 16ನೆಯ ಶತಮಾನದಲ್ಲಿ ನಡೆಸಿದ ಆರ್ಥಿಕ ಹಾಗೂ ರಾಜಕೀಯ ಆಕ್ರಮಣಗಳಿಂದಾಗಿ ಅನೇಕ ಪೌರಸ್ತ್ಯ ರಾಷ್ಟ್ರಗಳು ತೀವ್ರ ಶೋಷಣೆಗೆ ಒಳಗಾಗಿ ಹಿಂದುಳಿದಿವೆ. 20ನೆಯ ಶತಮಾನದಲ್ಲಿ ಹೊಸ ಪ್ರಜ್ಞೆ ಬೆಳೆದ ಮೇಲೆ ಶೋಷಿತ ರಾಷ್ಟ್ರಗಳು ಪ್ರತಿಭಟಿಸಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದವಾದರೂ ಅವುಗಳಲ್ಲಿ ಬಹುಪಾಲಿನವಕ್ಕೆ ಆರ್ಥಿಕ ಸ್ವಾತಂತ್ರ್ಯ ಇನ್ನೂ ದೊರೆತಿಲ್ಲ. ಈಚೆಗೆ ಅಭಿವೃದ್ಧಿಗಾಗಿ ರಾಷ್ಟ್ರಮಟ್ಟದ ಆಸಕ್ತಿ ಹೆಚ್ಚುತ್ತಿರುವಂತೆ ಅಂತಾರಾಷ್ಟ್ರೀಯ ಸೌಹಾರ್ದವೂ ಕಂಡುಬರುತ್ತಿರುವುದರಿಂದ ಪರಿಸ್ಥಿತಿ ಆಶಾದಾಯಕವಾಗಿದೆ.

**ಅಭಿವೃದ್ಧಿಗಾಗಿ ಒಂದು ರಾಷ್ಟ್ರ ಕೈಕೊಳ್ಳಬೇಕಾದ ಕಾರ್ಯಕ್ರಮಗಳು ಹೀಗಿವೆ :**

1. ದೇಶದ ಬಂಡವಾಳವನ್ನು ರಚನಾತ್ಮಕ ಕಾರ್ಯಗಳಲ್ಲಿ ವಿನಿಯೋಗಿಸುವುದು. ಉಳಿತಾಯ ಯೋಜನೆಗಳಿಂದ, ರಾಷ್ಟ್ರೀಯ ಸಾಲಗಳಿಂದ, ಲಾಟರಿಗಳಿಂದ, ವಿದೇಶೀ ಸಾಲಗಳಿಂದ ಬಂಡವಾಳ ತುಂಬುವುದು. 2. ಅಭಿವೃದ್ಧಿ ತ್ವರಿತಗೊಳ್ಳಬೇಕಾಗಿರುವುದರಿಂದ ಯೋಜನೆಗಳನ್ನು ಹಾಕಿಕೊಂಡು ಅತಿ ಶೀಘ್ರವಾಗಿ ಕೆಲಸ ನೆರವೇರುವಂತೆ ನೋಡಿಕೊಳ್ಳುವುದು. 3. ದೇಶದ ಸಂಪನ್ಮೂಲಗಳನ್ನು ಮುಖ್ಯವಾಗಿ ಪ್ರಾಕೃತಿಕ ಮತ್ತು ಜನರೂಪ ಇವುಗಳನ್ನು ಪೂರ್ಣ ಬಳಸುವುದು. 4. ಬೇಕಾದ ಯಾಂತ್ರಿಕ ಮತ್ತು ತಾಂತ್ರಿಕ ಸಹಾಯ ಸಹಕಾರಗಳನ್ನು ತಜ್ಞ ರಾಷ್ಟ್ರಗಳಿಂದ ಎರವಲು ಪಡೆಯುವುದು. 5. ಸ್ಥಳೀಯ ಯೋಗ್ಯತೆಗಳನ್ನು ಯುಕ್ತ ರೀತಿಯಲ್ಲಿ ಬಳಸುವುದು. 6. ಜನಸಂಖ್ಯೆಯನ್ನು ನಿಯಂತ್ರಿಸಿ ಇರುವ ಜನಬಲ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು. 7. ಉಳುಮೆಯ ಕ್ರಮ, ವ್ಯಾಪ್ತಿಗಳನ್ನು ಸ್ಥಳೀಯ ಅಗತ್ಯಗಳಿಗನುಸಾರ ಬದಲಾಯಿಸುವುದು. 8. ಜನರ ವಿದ್ಯಾಭ್ಯಾಸದ ಮಟ್ಟ ಹೆಚ್ಚುವಂತೆ ಮಾಡುವುದು. 9. ಸಾಧಾರಣವಾಗುತ್ತಿರುವ ವಿನಾಶಕಾರಿ ಒಳಜಗಳಗಳು, ಯುದ್ಧಗಳು, ಮುಷ್ಕರಗಳು, ಮುಂತಾದವುಗಳನ್ನು ನಿವಾರಿಸಲು ಯತ್ನಿಸುವುದು. 10 ರಾಷ್ಟ್ರೀಯ ಆಮದು ರಫ್ತುಗಳನ್ನು ದೇಶದ ಹಿತದೃಷ್ಟಿಯಿಂದ ರೂಪಿಸುವುದು. ಭಾರತ ಸ್ವತಂತ್ರವಾದ ಮೇಲೆ ಈ ಎಲ್ಲ ಕ್ಷೇತ್ರಗಳಲ್ಲೂ ಪ್ರಗತಿ ಸಾಧಿಸುತ್ತಿರುವುದನ್ನು ಒಂದು ನಿದರ್ಶನವಾಗಿ ತೆಗೆದುಕೊಳ್ಳಬಹುದು. ಮುಖ್ಯವಾಗಿ ದೇಶದ ಆರ್ಥಿಕ ಪ್ರಗತಿ ಅಲ್ಲಿನ ಜನರ ಕ್ರಿಯಾಶಕ್ತಿಯನ್ನು ಅವಲಂಬಿಸಿದೆ ಎನ್ನಬಹುದು.

**(ನೋಡಿ– ಆರ್ಥಿಕ ಬೆಳವಣಿಗೆ; ಆರ್ಥಿಕ ಯೋಜನೆಗಳು; ಆರ್ಥಿಕ ರಾಷ್ಟ್ರೀಯತೆ; ಆರ್ಥಿಕ ಸಂಪನ್ಮೂಲಗಳು; ಆರ್ಥಿಕ ಸ್ವಾತಂತ್ರ್ಯ)** (ಜಿ.ಟಿ.ಎಚ್.)

**ಆರ್ಥಿಕ ಉತ್ತೇಜಕಗಳು :** ಉದ್ಯಮ ವ್ಯವಸ್ಥಾಪಕ ಶಕ್ತಿ ಮತ್ತು ಸದವಕಾಶಗಳ ಜೊತೆಗೆ ಆರ್ಥಿಕ ಪ್ರಗತಿಯನ್ನು ತ್ವರೆಗೊಳಿಸಲು ಅಗತ್ಯವಾಗಿ ಇರಬೇಕಾದ ಉತ್ತೇಜಕಗಳು. ಎಕನಾಮಿಕ್ ಇನ್‌ಸೆಂಟಿವ್ಸ್ ವ್ಯವಸ್ಥಾಪಕರು ತಮ್ಮ ಶಕ್ತಿಯನ್ನು ಹೇಗೆ ಉಪಯೋಗಿಸಿ ಕೊಳ್ಳುತ್ತಾರೆಂಬುದು ಅವರ ಉತ್ತೇಜಕಗಳಿಗೆ ಹೇಗೆ ಎಂಥ ಪ್ರತಿಕ್ರಿಯೆ ತೋರಿಸುತ್ತಾರೆಂಬು ದನ್ನು ಅವಲಂಬಿಸಿರುತ್ತದೆ. ದುಡಿಮೆ, ಉಳಿತಾಯ ಮತ್ತು ಬಂಡವಾಳ ಹೂಡುವಿಕೆ– ಇವು ಬೆಳೆವಣಿಗೆ ಚಟುವಟಿಕೆಗಳು, ಉದ್ಯಮ ವ್ಯವಸ್ಥಾಪಕ, ಬಂಡವಾಳ ಹೂಡುವವ ಹೊಸದನ್ನು ಕಂಡುಹಿಡಿಯುವವ ಮತ್ತು ಅಭಿವೃದ್ಧಿಗೆ ಸಹಾಯಕವಾಗುವ ಅಭಿಪ್ರಾಯಗಳನ್ನು ಪ್ರಚಾರಮಾಡುವವ– ಇವರೆಲ್ಲರೂ ಬೆಳೆವಣಿಗೆಯ ನಿಯೋಗಿಗಳು. ಇವರೆಲ್ಲರ ಕಾರ್ಯ ಚಟುವಟಿಕೆಗಳಿಗೆ ಸಾಕಷ್ಟು ಉತ್ತೇಜನವಿಲ್ಲದಿದ್ದರೆ ಆರ್ಥಿಕ ಪ್ರಗತಿ ತ್ವರಿತಗತಿಯಲ್ಲಿ ನಡೆಯುವುದಿಲ್ಲ. ವೈಯಕ್ತಿಕ ಸ್ವಾತಂತ್ರ್ಯವಿರುವ ಹಾಗೂ ವೈಯಕ್ತಿಕ ಲಾಭದೃಷ್ಟಿ ಪ್ರಧಾನವಾಗಿ ರುವ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜಕಗಳು ಮಾರುಕಟ್ಟೆಯ ಅಗೋಚರ ಶಕ್ತಿಗಳ ತಾಕಲಾಟದಿಂದ ತಾವಾಗಿಯೇ ಉದಿಸುವುವು. ಆದರೆ ಇಂದಿನ ಪ್ರಪಂಚದಲ್ಲಿ ಮುಖ್ಯವಾಗಿ ಯೋಜನಾನುಸಾರವಾಗಿ ಅಭಿವೃದ್ಧಿಯಾಗುತ್ತಿರುವ ರಾಷ್ಟ್ರಗಳಲ್ಲಿ ಉತ್ತೇಜಕಗಳು ಸರ್ಕಾರದ ರೀತಿನೀತಿಯನ್ನು ಅವಲಂಬಿಸಿರುವುವು.

ಉತ್ತೇಜಕಗಳನ್ನು ಆರ್ಥಿಕ ಉತ್ತೇಜಕಗಳು ಮತ್ತು ಆರ್ಥಿಕೇತರ ಉತ್ತೇಜಕಗಳೆಂದು ವರ್ಗೀಕರಿಸಬಹುದು. ಆರ್ಥಿಕ ಉತ್ತೇಜಕ ಆದಾಯ ಅಥವಾ ಫಾಯಿದೆ ತರುವ ಯೋಜನೆ ಅಥವಾ ಕ್ರಮಗಳಿಗೆ ಅನ್ವಯಿಸುತ್ತದೆ. ಅಂದರೆ ಲಾಭದ ನಿರೀಕ್ಷೆಯನ್ನು ಹೆಚ್ಚಿಸುವ ಉತ್ತೇಜಕಗಳು ಆರ್ಥಿಕ ಉತ್ತೇಜಕಗಳು. ಲಾಭದ ನಿರೀಕ್ಷೆ ಹೆಚ್ಚಿದಾಗ ಕೆಲಸ ಮಾಡುವ ಪ್ರೇರಣೆ ಚುರುಕಾಗುತ್ತದೆ ಮತ್ತು ಇದರಿಂದ ಆರ್ಥಿಕ ಪ್ರಗತಿಯುಂಟಾಗುತ್ತದೆ. ಆರ್ಥಿಕೇತರ ಉತ್ತೇಜಕಗಳು ಹಣದ ರೂಪದ ಲಾಭಕ್ಕೆ ಅನ್ವಯಿಸುವುದಿಲ್ಲ. ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳನ್ನು ದೊರಕಿಸಿಕೊಳ್ಳುವುದಕ್ಕೆ, ಪ್ರಶಂಸೆ ಪಡೆಯುವುದಕ್ಕೆ ಅಥವಾ ಲೋಕಹಿತಾರ್ಥವಾಗಿ ಹೆಚ್ಚು ಕೆಲಸ ಮಾಡಿ ಪ್ರಗತಿ ಸಾಧಿಸುವುದಕ್ಕೆ ಅನ್ವಯಿಸುತ್ತದೆ. ಇವೆರಡರಲ್ಲಿ ಆರ್ಥಿಕ ಉತ್ತೇಜಕಗಳೇ ಆರ್ಥಿಕ ಬೆಳೆವಣಿಗೆಗೆ ಹೆಚ್ಚು ಸಹಾಯಕವೆಂಬುದು ಅನುಭವದಿಂದ ತಿಳಿದುಬಂದಿದೆ.

ಆರ್ಥಿಕ ಉತ್ತೇಜಕಗಳು ಎರಡು ಬಗೆಯವಾಗಿವೆ. ಆದಾಯ ಅಥವಾ ಫಾಯಿದೆಯ ನಿರೀಕ್ಷೆಯನ್ನು ಸೂಚಿಸುವ ಉತ್ತೇಜಕಗಳು ಫಲಾಶ್ವಾಸನಾ ಉತ್ತೇಜಕಗಳು. ನಿಯಮಿತವಾದ ಕೆಲಸವನ್ನು ಮಾಡಿದ್ದರೆ ದಂಡ ತೆರಬೇಕಾದ ಪ್ರಸಂಗವಿದ್ದರೆ ಅಥವಾ ಮತ್ತಾವ ರೀತಿಯಲ್ಲಾದರೂ ನಷ್ಟ ಅನುಭವಿಸಬೇಕಾಗಿದ್ದರೆ ಸರಿಯಾಗಿ ಕೆಲಸಮಾಡಬೇಕೆಂಬ ಪ್ರೇರಣೆ ಉಂಟಾಗುತ್ತದೆ. ಇಂಥ ಉತ್ತೇಜಕ ಶಿಕ್ಷಾರೂಪ ಉತ್ತೇಜಕವೆನಿಸಿಕೊಳ್ಳುತ್ತದೆ.

ಲೈಬಿನ್‌ಸ್ಟಿನ್ ಫಲಾತ್ಮಕ ಉತ್ತೇಜಕಗಳನ್ನು ಎರಡು ಬಗೆಯಾಗಿ ವಿಂಗಡಿಸಿದ್ದಾರೆ. ಒಂದು ವೈಯಕ್ತಿಕ ಲಾಭ ತರುವಂಥದು. ಇನ್ನೊಂದು ದೇಶಕ್ಕೆ ಲಾಭ ತರುವಂಥದು. ಬಂದ ಲಾಭ ಉದ್ಯಮಿಗಳಲ್ಲೇ ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ ಸ್ಥಳಾಂತರ ಹೊಂದುವುದರಿಂದ ಯಾವುದಾದರೊಂದು ವರ್ಗಕ್ಕೆ ಲಾಭವಾಗುತ್ತದೆ. ಆದರೆ ಇದರಿಂದ ರಾಷ್ಟ್ರದ ಒಟ್ಟು ಉತ್ಪಾದನೆ ಹೆಚ್ಚಿದಂತಾಗುವುದಿಲ್ಲ. ಇಂಥ ಉತ್ತೇಜಕದಿಂದ ಆರ್ಥಿಕ ಪ್ರಗತಿಗೆ ಅನುಕೂಲವಾಗುವುದಿಲ್ಲ. ಯಾವ ಉತ್ತೇಜಕಗಳು ರಾಷ್ಟ್ರದ ಒಟ್ಟು ಉತ್ಪಾದನೆಯನ್ನು ಹೆಚ್ಚುವಂತೆ ಮಾಡುತ್ತವೆಯೋ ಅವು ಸಮಷ್ಟಿ ಉತ್ತೇಜಕಗಳೆನಿಸುತ್ತವೆ. ಆರ್ಥಿಕ ಪ್ರಗತಿಗೆ ಇಂಥ ಉತ್ತೇಜಕಗಳ ಆವಶ್ಯಕತೆ ಇದೆಯೇ ಹೊರತು ವ್ಯಕ್ತಿನಿಷ್ಠ ಉತ್ತೇಜಕಗಳದ್ದಲ್ಲ.

ಬಂಡವಾಳಶಾಹಿಯಲ್ಲಿ ವ್ಯವಸ್ಥಾಪಕನ ಮೂಲ ಉದ್ದೇಶ ಲಾಭಗಳಿಕೆಯೇ ಆಗಿರುವುದ ರಿಂದ ಅವನು ದುಡಿದಷ್ಟೂ ಆದಾಯ ಹೆಚ್ಚುವ ಸಂಭವವಿರುವುದರಿಂದ ಅವನಿಗೆ ಸಹಜವಾದ ಆರ್ಥಿಕ ಉತ್ತೇಜನವಿರುತ್ತದೆ. ಅವನ ದಕ್ಷತೆಗೂ ಲಾಭಕ್ಕೂ ನೇರ ಸಂಬಂಧ ವಿರುವುದರಿಂದ ಅದಕ್ಷತೆಗೆ ಅಲ್ಲಿ ಅವಕಾಶವಿಲ್ಲ. ಸಂಬಳಕ್ಕಾಗಿ ದುಡಿಯುವ ಕಾರ್ಯನಿರ್ವಾಹಕನಂತೆ ಅವನು ದಕ್ಷತೆಯ ಕಡೆಗೆ ಹೆಚ್ಚು ಗಮನ ಕೊಡದೆ ಇರುವುದಕ್ಕೆ ಸಾಧ್ಯವಿಲ್ಲ. ಒಬ್ಬನದೇ ಜವಾಬ್ದಾರಿ ಇರುವ ಉದ್ಯಮಗಳಲ್ಲಿ ಆರ್ಥಿಕ ಉತ್ತೇಜಕ ಈ ರೀತಿಯಾಗಿ ತಾನಾಗಿಯೇ ಇರುತ್ತದೆಯಾದ್ದರಿಂದ ಬಂಡವಾಳಶಾಹಿಯಲ್ಲಿ ಆರ್ಥಿಕ ಉತ್ತೇಜನ ಹೆಚ್ಚಾಗಿ ಇದೆಯೆಂಬ ಅಭಿಪ್ರಾಯವಿದೆ. ಆದರೆ ಬಂಡವಾಳಶಾಹಿಯ ಬೆನ್ನೆಲುಬಾದ ಕೂಡು ಬಂಡವಾಳ ಸಂಸ್ಥೆಗಳ ವಿಷಯದಲ್ಲಿ ಈ ಅಭಿಪ್ರಾಯ ಸಮಂಜಸವಾಗಿ ಕಾಣುವುದಿಲ್ಲ. ಷೇರುಗಳ ಮೂಲಕ ಬಂಡವಾಳವನ್ನು ಒದಗಿಸಿ ಉದ್ಯಮದ ಸ್ವಾಮ್ಯವನ್ನು ಹಲವಾರು ಮಂದಿ ಹೊಂದಿದ್ದರೂ ಅವರೆಲ್ಲ ನೇರವಾಗಿ ಉದ್ಯಮದ ಆಡಳಿತದಲ್ಲಿ ಭಾಗವಹಿಸುವುದಿಲ್ಲ. ಕಾರ್ಯನಿರ್ವಾಹಕನ ದಕ್ಷತೆಗೂ ಅವನ ಆದಾಯಕ್ಕೂ ನೇರ ಸಂಬಂಧ ಇಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಕಾರ್ಯನಿರ್ವಾಹಕ ಉದ್ಯಮ ಲಾಭ ನಷ್ಟಗಳಿಗೆ ನೇರ ಬಾಧ್ಯಸ್ಥನಾಗಿರುವುದಿಲ್ಲ. ಆದರೂ ಕೂಡು ಬಂಡವಾಳ ಸಂಸ್ಥೆಯ ಕಾರ್ಯನಿರ್ವಾಹಕ ಸರ್ಕಾರಿ ಉದ್ಯಮ ಸಂಸ್ಥೆಯ ಕಾರ್ಯನಿರ್ವಾಹಕನಷ್ಟು ಬೇಜವಾಬ್ದಾರಿ ಯಿಂದ ಇರಲು ಸಾಧ್ಯವಿಲ್ಲ. ತನ್ನ ಪ್ರಗತಿಗೂ ತಾವು ಕೆಲಸಮಾಡುತ್ತಿರುವ ಸಂಸ್ಥೆಯ ಪ್ರಗತಿಗೂ ಬಹುಮಟ್ಟಿಗೆ ಸಂಬಂಧವಿರುವುದರಿಂದ ದಕ್ಷತೆಯಿಂದ ಕೆಲಸಮಾಡುವುದಕ್ಕೆ ಉತ್ತೇಜನವಿದೆ. ಆದ್ದರಿಂದ ಒಟ್ಟಿನಲ್ಲಿ ಬಂಡವಾಳಶಾಹಿಯಲ್ಲಿ ಹೆಚ್ಚು ದುಡಿಯಲು ಉತ್ತೇಜನವಿದೆ ಎಂದ ಹಾಗಾಯಿತು. ಆದರೆ ಕಾರ್ಮಿಕರ ದೃಷ್ಟಿಯೇ ಬೇರೆ. ಅವರ ಅಭಿಪ್ರಾಯದಲ್ಲಿ ಬಂಡವಾಳಶಾಹಿಯಲ್ಲಿ ಕಾರ್ಮಿಕರಿಗೆ ಸಾಕಷ್ಟು ಉತ್ತೇಜನ ದೊರಕುವುದಿಲ್ಲ. ಬಂಡವಾಳಗಾರರು ಕಾರ್ಮಿಕರನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವ ಪ್ರಸಂಗಗಳೇ ಹೆಚ್ಚು. ಕಾರ್ಮಿಕರ ದುಡಿಮೆಗೆ ಸರಿಯಾದ ಕೂಲಿ ಕೊಡದೆ, ಅವರಿಗೆ ವಸತಿ, ವೈದ್ಯಕೀಯ ಮುಂತಾದ ಅನುಕೂಲತೆಗಳನ್ನು ಕಲ್ಪಿಸದೆ ಮತ್ತು ಅವರ ಭದ್ರತೆಗೆ ಬೇಕಾದ ಯೋಜನೆಗಳನ್ನು ಕೈಗೊಳ್ಳದೆ ಇರುವುದರಿಂದ ಅವರು ಯಾವಾಗಲೂ ಅತೃಪ್ತರಾಗಿರುತ್ತಾರೆ. ಅವರಿಗೆ ತೃಪ್ತಿಯಿಲ್ಲದೆ ಅವರು ಕೆಲಸ ಮಾಡುತ್ತಿರುವ ಸಂಸ್ಥೆಯ ಪ್ರಗತಿ ಸಾಧ್ಯವಿಲ್ಲ. ಕಾರ್ಮಿಕರಿಗೆ ಬಂಡವಾಳಶಾಹಿ ಸಾಕಷ್ಟು ಉತ್ತೇಜನಗಳನ್ನು ಕೊಡುವುದಿಲ್ಲ ವೆಂಬ ಆರೋಪವಿದೆ. ಆದರೂ ಈ ಪದ್ಧತಿಯಲ್ಲಿಯೂ ದಕ್ಷ ಕಾರ್ಮಿಕರಿಗೆ ಉತ್ತೇಜನ ನೀಡಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಮತಾವಾದಿ ಸಮಾಜ ಹೆಚ್ಚು ಆರ್ಥಿಕ ಉತ್ತೇಜನಗಳನ್ನು ಒದಗಿಸುತ್ತದೆಂಬುದು ಹಲವರ ಅಭಿಪ್ರಾಯ. ವಿವಿಧ ವರ್ಗಗಳ ನಡುವಣ ಅಂತರ ಕಡಿಮೆ ಇರುವ, ಮಾಲೀಕರು ಮತ್ತು ಕಾರ್ಮಿಕರು ಎಂಬ ವರ್ಗಗಳಿಲ್ಲದಿರುವ ಮತ್ತು ದುಡಿಮೆಯಿಲ್ಲದೆ ಸಂಪಾದನೆ ಸಾಧ್ಯವಿಲ್ಲದಿರುವ ಸಮಾಜದಲ್ಲಿ ಕೆಲಸಮಾಡಿ ಆರ್ಥಿಕ ಪ್ರಗತಿ ಸಾಧಿಸಲು ಉತ್ತೇಜನವಿರುವ ಸಂಭವ ಹೆಚ್ಚು. ಸಾಮಾಜಿಕ ಒಡೆತನ ಒಂದೇ ವರ್ಗಕ್ಕೆ ಹೆಚ್ಚು ಆದಾಯ ದೊರಕುವುದನ್ನು ತಪ್ಪಿಸುವುದರಿಂದ ಅದು ಕೆಲಸಗಾರರ ದಕ್ಷತೆಯನ್ನು ಹೆಚ್ಚಿಸುವದರಲ್ಲಿ ಸಂಶಯವಿಲ್ಲ. ಮಾಲೀಕರು ಮತ್ತು ಕಾರ್ಮಿಕರ ನಡುವಣ ತಿಕ್ಕಾಟ ತಪ್ಪುವುದರಿಂದ ಕಾರ್ಮಿಕರ ಶಕ್ತಿ ಮತ್ತು ಕಾಲ ಅಪವ್ಯಯವಾಗುವುದು ತಪ್ಪಿ ಉತ್ಪಾದನೆ ಹೆಚ್ಚಲು ಸಹಾಯಕವಾಗುತ್ತದೆ. ಸಮತಾವಾದಿ ಸಮಾಜದಲ್ಲಿ ವೈಯಕ್ತಿಕ ಲಾಭದ ಪ್ರೇರಣೆ ಇಲ್ಲದಿರುವುದರಿಂದ ಕೂಲಿ ಮತ್ತು ಇತರ ರೀತಿಯ ಉತ್ತೇಜನಗಳೇ ಮುಖ್ಯ ಆರ್ಥಿಕ ಉತ್ತೇಜನಗಳು. ದಕ್ಷತೆಯಿಂದ ಕೆಲಸಮಾಡಿ ಯಶಸ್ಸು ಗಳಿಸಿದವರಿಗೆ ಸಾರ್ವಜನಿಕವಾಗಿ ಸರ್ಕಾರ ಗೌರವ ತೋರಿಸುವುದು ಮತ್ತು ಅದಕ್ಷರಾದವರನ್ನು ಸಾರ್ವಜನಿಕವಾಗಿ ಖಂಡನೆಗೆ ಗುರಿ ಮಾಡುವುದು ಸಮತಾವಾದಿ ಸಮಾಜದಲ್ಲಿ ಒಂದು ಮುಖ್ಯ ಉತ್ತೇಜನವಾಗಿದೆ. ಕಾರ್ಮಿಕರಿಗೆ ಒದಗಿಸುವ ವಸತಿ, ವೈದ್ಯಕೀಯ ಸಹಾಯ, ಮನರಂಜನೆ, ಭದ್ರತೆ ಮುಂತಾದ ಅನುಕೂಲತೆಗಳು ಬಂಡವಾಳ ಶಾಹಿಯಲ್ಲಿರುವಂತೆಯೇ ಇರುತ್ತವೆ. ಆದರೆ ಇಲ್ಲಿ ಅನುಕೂಲತೆಗೆ ಬಂಡವಾಳ ಶಾಹಿಯಲ್ಲಿ ಕೊಡುವ ಗಮನಕ್ಕಿಂತ ಹೆಚ್ಚು ಗಮನ ಕೊಡಲಾಗುತ್ತದೆ. ಈ ರೀತಿಯ ಉತ್ತೇಜನಗಳಿಗೆ ಒಂದು ಹೊಸ ರೂಪವೇ ದೊರಕುತ್ತದೆ. ಆದ್ದರಿಂದಲೇ ಕಾರ್ಮಿಕರ ದೃಷ್ಟಿಯಲ್ಲಿ ಸಮತಾವಾದಿ ಸಮಾಜ ಹೆಚ್ಚು ಆರ್ಥಿಕ ಉತ್ತೇಜನಗಳನ್ನು ದೊರಕಿಸುತ್ತದೆ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಲೋಕಹಿತಾರ್ಥ ಉದ್ದೇಶದ ಆಧಾರದ ಮೇಲೆ ಪ್ರಯತ್ನಿಸುತ್ತದೆ. ಮೊದಲನೆಯ ದೃಷ್ಟಿಗಿಂತ ಎರಡನೆಯ ದೃಷ್ಟಿ ಕಾರ್ಮಿಕ ವರ್ಗಕ್ಕೆ ಹೆಚ್ಚು ಹಿತವಾಗಿ ಕಾಣುತ್ತದೆ.

ಸಾಮಾನ್ಯವಾಗಿ ಆರ್ಥಿಕ ಬೆಳೆವಣಿಗೆಗೆ ಸಹಾಯಕವಾಗುವ ಉತ್ತೇಜನಗಳನ್ನು 1. ಕಾರ್ಮಿಕರಿಗೆ ಕೊಡುವ ಉತ್ತೇಜನಗಳು; 2. ಸಂಶೋಧನೆಗೆ ನೀಡುವ ಉತ್ತೇಜನಗಳು; 3. ವ್ಯವಸ್ಥಾಪನ ಕಾರ್ಯಕ್ಕೆ ಕೊಡುವ ಉತ್ತೇಜನಗಳು; 4. ಉಳಿತಾಯ ಮತ್ತು ಬಂಡವಾಳ ಹೂಡುವಿಕೆಗೆ ಕೊಡುವ ಉತ್ತೇಜನಗಳು ಎಂಬುದಾಗಿ ವರ್ಗೀಕರಿಸಬಹುದು.

ಕಾರ್ಮಿಕರಿಗೆ ಫಲಾಶ್ವಾಸನಾ ಉತ್ತೇಜಕಗಳು ಮತ್ತು ಶಿಕ್ಷಾರೂಪ ಉತ್ತೇಜಕಗಳು ಎರಡನ್ನೂ ಒದಗಿಸಬಹುದು. ಸರಿಯಾದ ರೀತಿಯಲ್ಲಿ ಕೆಲಸಮಾಡದಿದ್ದರೆ ದಂಡ ತೆರಬೇಕಾದರೆ ಅಥವಾ ಕೆಲಸ ಕಳೆದುಕೊಳ್ಳುವ ಭಯವಿದ್ದರೆ ಕೆಲಸಗಾರರು ದಕ್ಷತೆಯ ಕಡೆಗೆ ಹೆಚ್ಚು ಗಮನಕೊಡುತ್ತಾರೆ. ಇಂಥ ಶಿಕ್ಷಾರೂಪ ಉತ್ತೇಜಕಗಳು ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ಸಹಕಾರಿಯಾಗಿರುವುದು ನಿಜ. ಆದರೆ ಉತ್ಪಾದನೆಯನ್ನು ಹೆಚ್ಚಿಸಲು ಇವುಗಳನ್ನೇ ಅವಲಂಬಿಸಬಾರದು. ಫಲಾಶ್ವಾಸನಾ ಉತ್ತೇಜಕಗಳು ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ಬಹಳ ಸಹಕಾರಿಯಾಗಿವೆ. ದಕ್ಷತೆಯ ಆಧಾರದ ಮೇಲೆ ಕೆಲಸಗಾರರ ವೇತನವನ್ನು ನಿಗದಿಮಾಡುವುದು, ಉದ್ಯಮ ಸಂಸ್ಥೆಯ ಆಡಳಿತದಲ್ಲಿ ಕೆಲಸಗಾರರು ಭಾಗವಹಿಸಲು ಅವಕಾಶ ಕಲ್ಪಿಸುವುದು, ಕೆಲಸಗಾರರು ಸಂಸ್ಥೆಯ ಲಾಭದಲ್ಲಿ ಪಾಲ್ಗೊಳ್ಳಲು ಅವಕಾಶಮಾಡುವುದು, ಬೋನಸ್ ಕೊಡುವುದು, ವಸತಿ, ವೈದ್ಯಕೀಯ, ಮನರಂಜನೆ ಮುಂತಾದ ಅನುಕೂಲತೆಗಳನ್ನು ಕಲ್ಪಿಸಿಕೊಡುವುದು ಇಂಥ ಉತ್ತೇಜಕಗಳ ಮೂಲಕ ಕಾರ್ಮಿಕರು ಉತ್ಪಾದನೆಯನ್ನು ಹೆಚ್ಚಿಸುವಂತೆ ಮಾಡಬಹುದು.

ಉದ್ಯಮ ವ್ಯವಸ್ಥಾಪಕರು ವಿವಿಧ ಉತ್ಪಾದನಾಂಗಗಳನ್ನು ಸರಿಯಾಗಿ ಉಪಯೋಗಿಸಿ ಕೊಂಡು ಪ್ರಗತಿ ಸಾಧಿಸಬೇಕು. ವ್ಯವಸ್ಥಾಪಕರು ಮತ್ತು ನಿರ್ವಾಹಕರಿಗೆ ಲಾಭದ ನಿರೀಕ್ಷೆಯಿಂದ ಉತ್ತೇಜನ ದೊರಕುತ್ತದೆ ಮತ್ತು ಪೈಪೋಟಿಯೂ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವ ಕಡೆ ಗಮನ ಕೊಡುವಂತೆ ಮಾಡುತ್ತದೆ. ಸರ್ಕಾರದ ತೆರಿಗೆ ವಿನಾಯಿತಿ ಮುಂತಾದುವುಗಳ ಮೂಲಕ ಉದ್ಯಮ ವ್ಯವಸ್ಥಾಪಕರಿಗೆ ಸಾಕಷ್ಟು ಲಾಭ ಕೈಸೇರುವಂತೆ ಮಾಡಬಹುದು

ಮತ್ತು ಏಕಸ್ವಾಮ್ಯ ಪ್ರವೃತ್ತಿಯನ್ನು ತಡೆಹಿಡಿಯುವ ಮೂಲಕ ಉತ್ಪಾದನೆಗೆ ಸಹಾಯಕವಾಗುವ ಪೈಪೋಟಿ ಕಡಿಮೆಯಾಗದಂತೆ ಮಾಡಬಹುದು. ಆರ್ಥಿಕ ಪ್ರಗತಿಯಲ್ಲಿ ಸಂಶೋಧನೆ ಮಹತ್ತರ ಪಾತ್ರ ವಹಿಸುತ್ತದೆ. ಹೊಸ ಉತ್ಪಾದನಾ ವಿಧಾನಗಳನ್ನು ಕಂಡುಹಿಡಿಯುವುದು ಮತ್ತು ಆ ಮೂಲಕ ತಾಂತ್ರಿಕ ಪ್ರಗತಿಯನ್ನು ಸಾಧಿಸುವುದು ಆವಶ್ಯಕ. ಇದಕ್ಕೂ ಸಾಕಷ್ಟು ಉತ್ತೇಜನವಿರಬೇಕು. ಹೊಸದನ್ನು ಕಂಡುಹಿಡಿದ ವರಿಗೆ ಸಂಭಾವನೆ ಕೊಡುವುದು, ಪಾರಿತೋಷಕ ಮುಂತಾದುವುಗಳಿಂದ ಪುರಸ್ಕರಿಸುವುದು–ಇವುಗಳಿಂದ ಸಂಶೋಧಕರಿಗೆ ಉತ್ತೇಜನ ದೊರಕುತ್ತದೆ. ಸದಾ ಕೆಲಸದಲ್ಲಿ ತೊಡಗಿರುವ ಕಾರ್ಮಿಕ ತನ್ನ ಅನುಭವದ ಆಧಾರದ ಮೇಲೆ ಕಾರ್ಯವಿಧಾನದಲ್ಲಿ ಹೊಸ ಮಾರ್ಗವನ್ನು ತೋರಿಸಬಹುದು. ಅಂಥ ಕಾರ್ಮಿಕರ ಕೆಲಸವನ್ನು ಮೆಚ್ಚಿ ಯೋಗ್ಯ ಪುರಸ್ಕಾರ ಕೊಟ್ಟರೆ ಆ ಕಾರ್ಯಕ್ಕೆ ಉತ್ತೇಜನ ದೊರಕುತ್ತದೆ.

ರಾಷ್ಟ್ರದ ಆರ್ಥಿಕ ಪ್ರಗತಿಯಾಗಬೇಕಾದರೆ ಜನ ಹೆಚ್ಚು ಉಳಿತಾಯ ಮಾಡಿ ಬಂಡವಾಳ ಹೂಡಲು ಹಣ ಒದಗಿಸಬೇಕು. ಉಳಿಸಿದ ಹಣವನ್ನು ಬಚ್ಚಿಡದೆ ಬಂಡವಾಳ ಹೂಡಲು ಒದಗಿಸಬೇಕಾದರೆ ಅದರಿಂದ ಸಾಕಷ್ಟು ಪ್ರತಿಫಲ ಬರುವಂತಿರಬೇಕು. ಅಂದರೆ ಬಡ್ಡಿಯ ದರ ಆಕರ್ಷಕವಾಗಿರಬೇಕು. ಬಂಡವಾಳ ಹೂಡುವವರಿಗೆ ಆಕರ್ಷಕ ಲಾಭ ದೊರುಕುವಂತಿರಬೇಕು. ಅವಶ್ಯವಾದ, ಆದರೆ ತತ್‌ಕ್ಷಣದಲ್ಲಿ ಸಾಕಷ್ಟು ಪ್ರತಿಫಲ ನೀಡದಿರುವ ಕೈಗಾರಿಕೆಗಳಲ್ಲಿ ಬಂಡವಾಳ ಹೂಡುವವರಿಗೆ ಉತ್ತೇಜನ ಕೊಡಲು ಸರ್ಕಾರ ಸಹಾಯಧನ ನೀಡುವುದು ಮತ್ತು ತೆರಿಗೆ ವಿನಾಯಿತಿ ಕೊಡುವುದು ಮುಂತಾದ ಕ್ರಮಗಳನ್ನು ಅನುಸರಿಸಬೇಕು. ಅಂದರೆ ಉತ್ತೇಜನಗಳನ್ನೊಳಗೊಂಡ ಖಜಾನೆ ನೀತಿಯನ್ನು ಸರ್ಕಾರ ಅನುಸರಿಸಬೇಕು. ಉದ್ಯಮಿಗಳ ಅಂಚಿನ ಲಾಭದ ಮೇಲೆ ಬೀಳುವ ತೆರಿಗೆಯ ಭಾರವನ್ನು ಇಳಿಸುವುದರಿಂದ ಖಾಸಗಿ ಉದ್ಯಮಿಗಳಿಗೆ ಉತ್ತೇಜನ ದೊರಕುತ್ತದೆ. ರಾಷ್ಟ್ರದ ಹಿಂದುಳಿದ ಭಾಗಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಂಡವಾಳ ಹೂಡಲು ಉದ್ಯಮಿಗಳು ಹಿಂಜರಿಯುತ್ತಾರೆ. ಅಂಥ ಸ್ಥಳಗಳಿಗೆ ಉದ್ಯಮಿಗಳನ್ನು ಆಕರ್ಷಿಸಲು ಸರ್ಕಾರ ಪುಕ್ಕಟೆಯಾಗಿ ಅಥವಾ ಕಡಿಮೆ ದರದಲ್ಲಿ ಆವಶ್ಯಕ ಅನುಕೂಲತೆಗಳನ್ನು ಒದಗಿಸಿಕೊಡಬೇಕು ಮತ್ತು ಸಹಾಯಧನ ನೀಡುವುದರ ಮೂಲಕ ಉತ್ತೇಜನ ಕೊಡಬೇಕು. ಅಂತರಿಕವಾಗಿ ದೊರಕುವ ಬಂಡವಾಳವೇ ಹೆಚ್ಚಿನ ಪ್ರಮಾಣದ ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಲದೇ ಇರುವುದರಿಂದ ವಿದೇಶೀ ಬಂಡವಾಳವನ್ನು ಆಕರ್ಷಿಸಲು ಸರಿಯಾದ ಉತ್ತೇಜನಗಳನ್ನು ದೊರಕಿಸಬೇಕು. ಖಾಸಗೀ ಉದ್ಯಮವನ್ನು ರಾಷ್ಟ್ರೀಕರಿಸಬಹುದೆಂಬ ಭಯವನ್ನು ನಿವಾರಿಸುವುದು, ಗಳಿಸಿದ ಲಾಭವನ್ನು ಸ್ವದೇಶಕ್ಕೆ ಕಳುಹಿಸಲು ವಿದೇಶೀ ವಿನಿಮಯದ ತೊಂದರೆ ಇಲ್ಲದಂತೆ ಮಾಡುವುದು– ಮುಂತಾದ ಅನುಕೂಲತೆಗಳನ್ನು ಕೊಡುವುದರ ಜೊತೆಗೆ ತೆರಿಗೆ ವಿನಾಯಿತಿ ಕೊಡುವುದರ ಮೂಲಕ ಲಾಭದ ನಿರೀಕ್ಷೆಯನ್ನು ಹೆಚ್ಚಿಸಿ ಉತ್ತೇಜನ ಕೊಡಬೇಕು.

ಆರ್ಥಿಕಪ್ರಗತಿಗೆ ನೆರವಾಗುವ ಉತ್ತೇಜಕಗಳನ್ನು ಒದಗಿಸುವುದು ಆಧುನಿಕ ಸರ್ಕಾರದ ಒಂದು ಮುಖ್ಯ ಹೊಣೆಯಾಗಿದೆ. ಮಾರುಕಟ್ಟೆಯ ಅಗೋಚರ ಶಕ್ತಿಗಳ ತಾಕಲಾಟದಿಂದ ಉತ್ತೇಜಕಗಳು ತಾವಾಗಿಯೇ ದೊರಕುವುದು ಸ್ವತಂತ್ರ ಆರ್ಥಿಕತೆಯಲ್ಲಿ ಮಾತ್ರ ಸಾಧ್ಯ. ಆದರೆ ಸ್ವತಂತ್ರ ಆರ್ಥಿಕತೆ ಅದರ ಪೂರ್ಣಾರ್ಥದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ ಮತ್ತು ಆರ್ಥಿಕ ಚಟುವಟಿಕೆಗಳು ಬರಿಯ ಅಗೋಚರ ಶಕ್ತಿಗಳಿಂದಲೇ ನಿರ್ಣಯವಾಗುವುದಿಲ್ಲ. ಆದ್ದರಿಂದ ಇಂದಿನ ಆರ್ಥಿಕತೆಯಲ್ಲಿ, ಅದರಲ್ಲೂ ಯೋಜನಾನುಸಾರವಾಗಿ ಪ್ರಗತಿ ಸಾಧಿಸುತ್ತಿರುವ ರಾಷ್ಟ್ರಗಳಲ್ಲಿ ಸರ್ಕಾರ ಉದ್ದೇಶಪೂರ್ವಕವಾಗಿ ಉತ್ತೇಜಕಗಳನ್ನು ಒದಗಿಸಬೇಕಾಗಿದೆ. ಸರ್ಕಾರ ಉತ್ತೇಜಕಗಳನ್ನು ಒದಗಿಸುವುದರಲ್ಲಿ ಯಶಸ್ವಿಯಾದರೆ ಹೆಚ್ಚಿನ ಆರ್ಥಿಕ ಪ್ರಗತಿಯಾಗುವುದರಲ್ಲಿ ಸಂಶಯವಿಲ್ಲ. (ಬಿ.ಎಸ್.ಎಸ್.ಎ.)

**ಆರ್ಥಿಕ ಗೇಣಿ :** ಸಾಧಾರಣವಾದ ಅರ್ಥದಲ್ಲಿ ಗೇಣಿ ಎಂದರೆ ಒಂದು ವಸ್ತುವಿನ ಉಪಯೋಗಕ್ಕಾಗಿ ನಿರ್ದಿಷ್ಟ ಕಾಲದಲ್ಲಿ ಕೊಡಬೇಕಾಗುವ ಹಣ. ಆದರೆ ಆರ್ಥಿಕ ಪರಿಭಾವನೆಯಲ್ಲಿ ಗೇಣಿಯ ಅರ್ಥ ಬೇರೆ (ಎಕನಾಮಿಕ್ ರೆಂಟ್). ಕ್ಲಾಸಿಕಲ್ ಅರ್ಥಶಾಸ್ತ್ರಜ್ಞನಾದ ರಿಕಾರ್ಡೊ ಗೇಣಿಯನ್ನು ಮೂಲ ಹಾಗೂ ಅವಿನಾಶಿ ಭೂಮಿಯ ಉಪಯೋಗಕ್ಕಾಗಿ ಜಮೀನಿನ ಒಡೆಯನಿಗೆ ಕೊಡಲಾಗುವ ಭಾಗ ಎಂದು ವಿವರಿಸಿದ. ರಿಕಾರ್ಡೊ ಪ್ರಕಾರ ಗೇಣಿ ಭೂಮಿಯ ವಿವಿಧ ಫಲಗುಣದ ಸ್ವಭಾವದಿಂದಾಗಿ ಉದ್ಭವಿಸುತ್ತದೆ. ಮೊಟ್ಟಮೊದಲು ಅತ್ಯಂತ ಫಲವತ್ತಾದ ಭೂಮಿಯಲ್ಲಿ ಫಸಲು ತೆಗೆಯಲಾಗುತ್ತದೆ. ಭೂಮಿಯಲ್ಲಿ ಸಹ ಫಸಲು ತೆಗೆಯಲಾಗುತ್ತದೆ. ಕಾಲ ಕಳೆದಂತೆ ಪ್ರಜಾಸಂಖ್ಯೆ ಹೆಚ್ಚಿ ಆಹಾರಕ್ಕೆ ಬೇಡಿಕೆ ಹೆಚ್ಚಾದಾಗ ಕಡಿಮೆ ಫಲವತ್ತಾದ ಭೂಮಿಯಲ್ಲಿ ಸಹ ಫಸಲು ತೆಗೆಯಲಾಗುತ್ತದೆ. ಆದರೆ ಕಡಿಮೆ ಫಲವತ್ತಾದ ಭೂಮಿಯುಳ್ಳ ಮಾಲೀಕರಿಗೆ ಸ್ವಲ್ಪ ಅಧಿಶೇಷ ಪ್ರಾಪ್ತವಾಗುತ್ತದೆ. ಈ ಅಧಿಶೇಷವೇ ಆರ್ಥಿಕ ಗೇಣಿ. ಕಡಿಮೆ ಫಲವತ್ತಾದ ಭೂಮಿಗಳಲ್ಲಿ ಅಧಿಶೇಷ ಉದ್ಭವಿಸುತ್ತ ಹೋಗುತ್ತದೆ. ಸೀಮಾಂತ ಭೂಮಿಯಲ್ಲಿ (ಕೊಟ್ಟಕೊನೆಯಲ್ಲಿ ವ್ಯವಸಾಯ ಮಾಡಿದ) ಗೇಣಿ ಉದ್ಭವಿಸುವುದಿಲ್ಲ. ಏಕೆಂದರೆ ಈ ಭೂಮಿಯಲ್ಲಿ ಬೆಳೆಯಲಾಗುವ ಬೆಳೆಯ ಉತ್ಪಾದನಾ ವೆಚ್ಚ ಆ ಬೆಳೆಯ ಮಾರುಕಟ್ಟೆಯ ಬೆಲೆಗೆ ಸಮವಾಗಿರುತ್ತದೆ. ಆದ್ದರಿಂದ ಸೀಮಾಂತ ಭೂಮಿಯ ಬೆಳೆ ಮತ್ತು ಅದರ ಉತ್ಪಾದನಾ ವೆಚ್ಚ ಉಳಿದ ಭೂಮಿಗಳಲ್ಲಿ ಉದ್ಭವಿಸಬಹುದಾದ ಗೇಣಿಗೆ ಅಳತೆಗೋಲು. ಈ ರೀತಿ ವಿವಿಧ ಫಲಗಳಿಂದ ಉದ್ಭವಿಸುವ ಗೇಣಿಗೆ ವಿವಿಧ ಫಲ ಪರಿಣಾಮ ಗೇಣಿ (ಡಿಫರೆನ್ಷಿಯಲ್ ರೆಂಟ್) ಎಂದು ಕರೆಯಬಹುದು.

ಭೂಮಿ ಉತ್ಪಾದಕ ಅವಯವಗಳಲ್ಲೊಂದು. ಬೇರೆ ಅವಯವಗಳಿಗೂ ಗೇಣಿ ಇರುವ ಸಾಧ್ಯತೆಯುಂಟು ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟರು.

ಆದ್ದರಿಂದ ಗೇಣಿ ವಿರಳತೆ ಆದಾಯವಾಗುವುದೂ ಉಂಟು. ಒಂದು ವಸ್ತು ಹೇರಳವಾಗಿ ಲಭಿಸುವುದಾದರೆ ಅದಕ್ಕೆ ಗೇಣಿಯ ಪ್ರಶ್ನೆಯೇ ಬರುವುದಿಲ್ಲ. ಅದರಿಂದ ನೀಡಿಕೆಗೆ ಸಂಬಂಧಪಟ್ಟಂತೆ ಅಪರಿಪೂರ್ಣ ಸ್ಥಿತಿಸ್ಥಾಪಕತ್ವವಿರುವ ಉತ್ಪಾದಕ ಅವಯವಗಳೆಲ್ಲದಕ್ಕೂ ಗೇಣಿ ಪ್ರಾಪ್ತವಾಗುವ ಸಾಧ್ಯತೆ ಉಂಟು. ಹೀಗೆ ವಿರಳತೆಯಿಂದಾಗಿ ಉದ್ಭವಿಸುವ ಗೇಣಿಗೆ ವಿರಳತೆಯ ಪರಿಣಾಮ ಗೇಣಿ (ಸ್ಕೇರ್ಸಿಟಿ ರೆಂಟ್) ಎಂದು ಕರೆಯಬಹುದು. ನೀಡಿಕೆಯ ದೃಷ್ಟಿಯಿಂದ ಭೂಮಿ ಸ್ಥಾಯಿಯಾಗಿರುವುದರಿಂದ ಮತ್ತು ಅದರ ನೀಡಿಕೆಯ ಬೆಲೆ ಸೊನ್ನೆಯಾಗಿರುವುದರಿಂದ ಅದರಿಂದ ಬರುವ ಇಡೀ ಉತ್ಪನ್ನವನ್ನು ಆರ್ಥಿಕದೃಷ್ಟಿಯಿಂದ ಗೇಣಿ ಎಂದು ಕರೆಯಬಹುದು. ಹಾಗೆಯೇ ಬೇರೆಯ ವಸ್ತುಗಳಿಂದ ಬರುವ ಇಡೀ ಪ್ರತಿಫಲ ಸಹ ಅವುಗಳ ಬೇಡಿಕೆ ಸ್ಥಾಯಿಯಾಗಿದ್ದರೆ ಮತ್ತು ಬೇಡಿಕೆಯ ಬೆಲೆ ಸೊನ್ನೆಯಾಗಿದ್ದರೆ ಗೇಣಿಯಾಗಬಹುದು. ಭೂಮಿಯಿಂದ ಬರುವ ಇಡೀ ಉತ್ಪನ್ನವನ್ನು ನಾವು ಗೇಣಿ ಎಂದು ಕರೆದರೆ ಅದರ ಉಪಯೋಗಕ್ಕೆ ಏಕೆ ಯಾವಾಗಲೂ ಬೆಲೆ ತೆರಬೇಕಾಗುತ್ತದೆ ಎನ್ನುವ ಪ್ರಶ್ನೆ ಬರುತ್ತದೆ. ಇದಕ್ಕೆ ಉತ್ತರ ಮೇಲೆ ನೋಡಿದ ವಿರಳತೆಯ ಪರಿಣಾಮ. ಭೂಮಿಯ ಬೇಡಿಕೆಗೆ ಸಂಬಂಧಪಟ್ಟಂತೆ ನೀಡಿಕೆ ಕಡಿಮೆಯಿರುವುದರಿಂದ ಅದರ ಉಪಯೋಗಕ್ಕೆ ಸ್ವಲ್ಪ ಬೆಲೆ ಕೊಡಬೇಕಾಗುತ್ತದೆ.

ಕೆಲವು ಅರ್ಥಶಾಸ್ತ್ರಜ್ಞರು ಆರ್ಥಿಕ ಗೇಣಿಯನ್ನು ವಿವರಿಸಲು ವರ್ಗಾವಣೆ ಆದಾಯ ಸಾಧ್ಯತೆಯೆಂದರೆ, ಒಂದು ಉತ್ಪಾದನಾ ಅವಯವವನ್ನು ಅದರ ಪ್ರಸ್ತುತ ಉಪಯೋಗದಿಂದ ಮತ್ತೊಂದು ಉಪಯೋಗಕ್ಕೆ ವರ್ಗಾಯಿಸಿದಾಗ ಅದರಿಂದ ಬರುವ ಆದಾಯ ಸಾಧ್ಯತೆ. ಉದಾಹರಣೆಗೆ ಒಂದು ಭಾಗದ ಭೂಮಿ ವರ್ಷಕ್ಕೆ ಅದರ ಪ್ರಸ್ತುತ ಬೆಳೆಯಲ್ಲಿ 1,000 ರೂಪಾಯಿನಷ್ಟು ಉತ್ಪಾದಿಸುತ್ತದೆಂದು ಭಾವಿಸೋಣ. ಇದನ್ನು ಮತ್ತೊಂದು ಉಪಯುಕ್ತ ಬೆಳೆಗೆ ಉಪಯೋಗಿಸಿದರೆ ಅದು ವರ್ಷಕ್ಕೆ 900 ರೂಪಾಯಿನಷ್ಟು ಉತ್ಪಾದಿಸುತ್ತದೆ ಎಂದುಕೊಳ್ಳೋಣ. ಹೀಗಾದಾಗ ಅದರ ಪ್ರಸ್ತುತ ಉಪಯೋಗದಲ್ಲಿ ಅದು 100 ರೂಪಾಯಿ ಹೆಚ್ಚು ಆದಾಯ ಸಂಪಾದಿಸುತ್ತದೆ ಎಂದ ಹಾಗಾಯಿತು. ಈ 100 ರೂ. ಒಂದು ರೀತಿಯ ಅಧಿಶೇಷ. ಈ ಅಧಿಶೇಷವನ್ನು ಒಂದು ರೀತಿಯ ಗೇಣಿ ಎಂದು ಕರೆಯಬಹುದು. ಈ ರೀತಿಯ ಅಧಿಶೇಷ ಎಲ್ಲ ಉತ್ಪಾದಕ ಅವಯವಗಳ ವಿಷಯದಲ್ಲೂ ಉದ್ಭವವಾಗಬಹುದು.

ಭೂಮಿಯ ಗೇಣಿಗೂ ಇತರ ಉತ್ಪಾದನಾ ಸಾಧನೆಗಳಿಂದ ಬರುವ ಅಧಿಶೇಷಕ್ಕೂ ಇರುವ ವ್ಯತ್ಯಾಸವನ್ನು ಮಾರ್ಷಲ್ ಪ್ರಸ್ತಾಪಿಸುತ್ತಾನೆ. ಭೂಮಿಯ ನೀಡಿಕೆ ಸ್ಥಾಯಿ. ಇದರ ನೀಡಿಕೆಯನ್ನು ಮಾನವ ವೃದ್ಧಿಗೊಳಿಸಲಾರ. ಉತ್ಪಾದನಾ ಸಾಮಗ್ರಿಗಳನ್ನು ಬೇಡಿಕೆ ಹೆಚ್ಚಿದಂತೆ ಹೆಚ್ಚು ಉತ್ಪಾದಿಸಲು ಸಾಧ್ಯ. ಭೂಮಿಯ ನೀಡಿಕೆ ಸ್ಥಾಯಿಯಾಗಿರುವುದರಿಂದ ಅದರಿಂದ ಬರುವ ಆದಾಯವನ್ನು ಗೇಣಿ ಎಂದು ಕರೆಯಬಹುದು. ಉತ್ಪಾದನಾ ಸಾಮಗ್ರಿಗಳ ನೀಡಿಕೆಯನ್ನು ಅತ್ಯಲ್ಪ ಕಾಲದಲ್ಲಿ ವೃದ್ಧಿಗೊಳಿಸುವುದು ಸಾಧ್ಯವಿಲ್ಲ. ಈ ಪರಿಸ್ಥಿತಿಯಲ್ಲಿ ಅವುಗಳ ಬೇಡಿಕೆ ಹೆಚ್ಚಾದರೆ ಅದು ಬೆಲೆಯ ಏರಿಕೆಯಲ್ಲಿ ಪರ್ಯವಸಾನವಾಗುತ್ತದೆ. ಈ ಬೆಲೆ ಏರಿಕೆ ಹೊಸ ಸಾಧನಗಳು ನಿರ್ಮಾಣವಾಗುವವರೆಗೂ ಮುಂದುವರಿಯುತ್ತದೆ. ಈ ಅವಧಿಯಲ್ಲಿ ಇವುಗಳಿಂದ ಬರುವ ಆದಾಯದಲ್ಲಿ ಇರುವ ಅಧಿಶೇಷವನ್ನು ಅರೆಗೇಣಿ ಎಂದು ಕರೆಯಬಹುದು. ಈ ಗೇಣಿಯ ಅಧಿಶೇಷ ತಾತ್ಕಾಲಿಕ. ನೀಡಿಕೆ ಅಧಿಕವಾದ ಅನಂತರ ಇದು ಮಾಯವಾಗುತ್ತದೆ **(ನೋಡಿ– ಗೇಣಿ,ಗೇಣಿ ಸಿದ್ಧಾಂತ)**. (ಸಿ.ಕೆ.ಆರ್.)

**ಆರ್ಥಿಕ ತತ್ತ್ವಸಮೀಕ್ಷೆ :** ಸರಳವಾಗಿದ್ದ ಬದುಕಿನ ಪ್ರಶ್ನೆ ಜಟಿಲವಾಗುತ್ತ ಬಂದಂತೆಲ್ಲ ಮಾನವನ ಸಾಮಾಜಿಕ ಮತ್ತು ಆರ್ಥಿಕ ಪ್ರಜ್ಞೆ ಹೇಗೆ ಬೆಳೆದುಬಂದಿತೆಂಬುದನ್ನು ಇಲ್ಲಿ ಚಾರಿತ್ರಿಕವಾಗಿ ಪರಿಶೀಲಿಸಲಾಗಿದೆ. ಆಹಾರಕ್ಕಾಗಿ ಬೇಟೆಯನ್ನೂ ಗೆಡ್ಡೆ ಗೆಣಸುಗಳ ಆಯ್ಕೆಯನ್ನೂ ನಂಬಿ ಅಲೆಮಾರಿಯಾಗಿದ್ದ ಮಾನವ ಬರಬರುತ್ತ ನೆಲೆನಿಂತು ಬೇಸಾಯ, ಪಶುಪಾಲನಾದಿ ವೃತ್ತಿಗಳನ್ನವಲಂಬಿಸಿದ. ಸಂಸಾರಿಯಾದ. ಮನೆ, ಹಳ್ಳಿಗಳು ಬೆಳೆದುವು. ಪದಾರ್ಥಗಳ ಉತ್ಪತ್ತಿ, ಸಂಗ್ರಹಣೆ, ವಿನಿಮಯಗಳಿಂದ ಆರ್ಥಿಕ ವ್ಯವಹಾರವನ್ನು ಕುದುರಿಸಿದ. ಚಣಿ, ಆಳು ಎಂಬ ಭಾವನೆ ಬೆಳೆಯಿತು. ಹೀಗೆ ಮಾನವನ ಜೀವನದಲ್ಲಿ ಬದಲಾವಣೆ ಉಂಟಾದ ಹಾಗೆಲ್ಲ, ಜನಾಂಗ ಬೆಳೆಯಿತು. ಆರ್ಥಿಕ ವಿಧಾನಗಳು ಒಂದೊಂದಾಗಿ ತಲೆದೋರುತ್ತ ಬಂದುವು. ಮಾನವ ಜೀವನಕ್ಕೂ ಆರ್ಥಿಕ ವಿಭಾಗಕ್ಕೂ ನಿಕಟ ಸಂಬಂಧ ಬೆಳೆದುಬಂದಿತು. ಜೀವನಶಾಸ್ತ್ರವೇ ಅರ್ಥಶಾಸ್ತ್ರದ ಮೂಲ. ಮಾನವನ ಆರ್ಥಿಕ

ಚಲನವಲನಗಳು ಅರ್ಥಶಾಸ್ತ್ರದ ವಿಷಯ. ಇದೇ ಸಮಾಜಶಾಸ್ತ್ರದ ಒಂದು ಭಾಗವೂ ಆಗಿದೆ. ಆರ್ಥಿಕ ಚಟುವಟಿಕೆ ವೃದ್ಧಿಯಾದಂತೆಲ್ಲ, ಆರ್ಥಿಕ ಸಂಸ್ಥೆಗಳ ನಿರ್ಮಾಣ ಮೊದಲಾಯಿತು.

ಆರ್ಥಿಕ ಸಂಸ್ಥೆಗಳನ್ನು ವೈಯಕ್ತಿಕ (ಪ್ಯಾಕ್ ಟೈಪ್), ಸಾಮಾಜಿಕ (ಹರ್ಡ್ ಟೈಪ್) ಎಂದು ವಿಭಾಗಿಸಲಾಗಿದೆ. ಕೇಂದ್ರೀಕೃತ ಅಧಿಕಾರ, ಕಠಿಣಶಿಸ್ತು, ಲಾಭದಾಶೆ ಮುಖ್ಯ ಲಕ್ಷಣಗಳು. ಸಂಪಾದನೆಯೇ ಈ ಸಂಸ್ಥೆಯ ಗುರಿ. ಈ ಕುರುಹುಗಳೆಲ್ಲ ಪಾಶ್ಚಾತ್ಯ ದೇಶಗಳ ಆರ್ಥಿಕ ಸಂಸ್ಥೆಗಳಲ್ಲಿ ಮುಖ್ಯವಾಗಿ ಕಂಡುಬರುತ್ತವೆ.

ಸಾಮಾಜಿಕ ಆರ್ಥಿಕಸಂಸ್ಥೆಗಳಲ್ಲಿ ಪ್ರಜಾಸತ್ತಾತ್ಮಕ ಅಧಿಕಾರ ಬಡವರ ಬಲಹೀನರ ರಕ್ಷಣೆ, ಆದಾಯ ವಿಭಜನೆ, ವ್ಯಕ್ತಿಸ್ವಾತಂತ್ರ್ಯ ಇವೆಲ್ಲ ಇವೆ. ಇವು ಪ್ರತಿಯೊಂದೂ ಸಾಮಾಜಿಕ, ಆರ್ಥಿಕ ಜೀವನದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ.

ಪಾಶ್ಚಾತ್ಯದೇಶಗಳು ವ್ಯವಸಾಯ ವೃತ್ತಿಯನ್ನು ಅಭಿವೃದ್ಧಿಪಡಿಸದೆ ಕೈಗಾರಿಕಾ ಸ್ಥಾಪನೆಯನ್ನು ಬಲಪಡಿಸಿ ವೃದ್ಧಿಪಡಿಸಿದುವು. ಇಂಥ ಆರ್ಥಿಕ ಚರಿತ್ರೆಯನ್ನು ಶಕ್ತಿಯುಗ, ಆರ್ಥಿಕಯುಗ ಮತ್ತು ಯಂತ್ರಯುಗ ಎಂದು ವಿಂಗಡಿಸಬಹುದು. ಒಂದಾನೊಂದು ಕಾಲದಲ್ಲಿ ಜಹಗೀರ್‌ದಾರರು, ಕೆಲಸಗಾರರನ್ನು ನಿರ್ಬಂಧಪಡಿಸಿ ಅವರ ಶಕ್ತಿಸಾಮರ್ಥ್ಯದ ಸಂಪಾದನೆಯನ್ನು ತಾವು ಉಪಯೋಗಿಸಿಕೊಂಡು ಶ್ರೀಮಂತರಾಗುತ್ತಿದ್ದರು. ಅನಂತರ ವಿದೇಶಗಳಿಗೆ ವ್ಯಾಪಾರಕ್ಕಾಗಿ ಹೋಗಿ ಅಪಾರ ಧನಸಂಪಾದನೆ ಮಾಡುತ್ತಿದ್ದರು. ಹೀಗೆ ಗಂಗಾನದಿ ತೀರದಿಂದ ಥೇಮ್ಸ್ ನದಿ ದಡದವರೆಗೆ ಹೊನ್ನಿನ ಹೊಳೆ ಹರಿಯಿತು. ಇತರ ದೇಶಗಳನ್ನು ಸೂರೆಮಾಡಿ ಸಂಪಾದಿಸಿದ ಹಣದಿಂದ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿ, ಸಂಪಾದನೆಯನ್ನು ವೃದ್ಧಿಪಡಿಸಲಾಯಿತು. ಇಂಥ ಯಂತ್ರಯುಗದ ಫಲವಾಗಿ ವೈಯಕ್ತಿಕ ಆರ್ಥಿಕ ಸಂಸ್ಥೆಗಳು ಬೆಳೆಯುತ್ತ ಬಂದುವು. ಇವು ವೃದ್ಧಿಹೊಂದಿದಂತೆ ಮಾನವನ ಕ್ರಿಯಾತ್ಮಕ ಶಕ್ತಿ ಕುಗ್ಗಿತು. ಬಂಡವಾಳ ಪ್ರಭುತ್ವ ತಾನೇತಾನಾಗಿ ವೃದ್ಧಿಹೊಂದಿತು. ಕೇಂದ್ರೀಕೃತ ವಸ್ತುರಚನೆ ಆಯಿತು. ಪ್ರಪಂಚದಲ್ಲಿ ಇಂದು ಒಂದು ಕಡೆ ಅಪಾರ ವಸ್ತು ಉತ್ಪಾದನೆಯಾದರೆ, ಇನ್ನೊಂದು ಕಡೆ ಹಸಿವಿನ ಆತುರ ಕಂಡುಬರುತ್ತದೆ. ರಾಜಕೀಯದಲ್ಲಿರುವಂತೆ ಆರ್ಥಿಕ ವಿಚಾರದಲ್ಲೂ ಒಂದು ಬಗೆಯ ಸ್ವಾತಂತ್ರ್ಯ ಇದ್ದರೆ ಒಳ್ಳೆಯದು. ಆದರೆ ವೈಯಕ್ತಿಕ ಆರ್ಥಿಕಸಂಸ್ಥೆಗಳಲ್ಲಿ ಇಂಥ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲ.

ಸಾಮಾಜಿಕ, ಆರ್ಥಿಕ ಸಂಸ್ಥೆಗಳಲ್ಲಿ ಸಾಮೂಹಿಕ ರಕ್ಷಣೆ ಸಂಯೋಜನಾಶಕ್ತಿಗಳಿವೆ. ಇದರ ಫಲವಾಗಿ, ಜಾತಿಭೇದ, ಅವಿಭಕ್ತಕುಟುಂಬ, ಲಾಭವಿಭಜನಾ ಸಂಸ್ಥೆ, ಗ್ರಾಮಸಭೆ ಮುಂತಾದುವು ಭದ್ರವಾಗಿ ತಳವೂರಿದವು. ಒಂದು ಸಂಸಾರದಲ್ಲಿ ಒಬ್ಬ ಸಂಪಾದಿಸಿದರೆ, ಇನ್ನೊಬ್ಬ ಅದರ ಭಾಗಕ್ಕೆ ಹಕ್ಕುದಾರನಾಗುತ್ತಾನೆ. ಹೆಚ್ಚು ಹಣ ಒಂದೇ ಕಡೆ ಸೇರುವುದಕ್ಕೆ ಅವಕಾಶವಿಲ್ಲ. ಒಂದೊಂದು ಜಾತಿಯೂ ಆಯಾ ಪಂಗಡದ ಯುವಕರ ಶಿಕ್ಷಣ, ವ್ಯಾಜ್ಯ ತೀರ್ಮಾನ, ಲಾಭವಿತರಣೆ ಮುಂತಾದುವನ್ನು ಅವೇ ನಿರ್ವಹಿಸುತ್ತಿದ್ದುವು. ಇಂಥ ಸಾಮಾಜಿಕ ಸಂಸ್ಥೆಗಳು ಪರಸ್ಪರ ಸಹಾಯವನ್ನು ವೃದ್ಧಿಪಡಿಸಿ, ಐಕ್ಯವನ್ನುಂಟುಮಾಡುತ್ತಿದ್ದುವು. ಆದರೆ ಪಾಶ್ಚಾತ್ಯ ಸಂಪರ್ಕ ಹೆಚ್ಚಿದಂತೆ, ಅಲ್ಲಿಯ ಆಡಳಿತಪದ್ಧತಿ ಆಚರಣೆಗೆ ಬಂದುದರ ಫಲವಾಗಿ, ಇಲ್ಲಿಯ ಹಿಂದಿನ ಕಟ್ಟುಪಾಡುಗಳು ಸಡಿಲವಾದುವು. ಕಸಬಿನ ಸ್ವಾತಂತ್ರ್ಯ ಕ್ಷೀಣವಾಯಿತು. ಪಾಶ್ಚಾತ್ಯ ಆರ್ಥಿಕ ಸಂಸ್ಥೆಗಳ ಪ್ರಭಾವ ಎಲ್ಲ ಕಡೆ ವಿಸ್ತರಿಸುತ್ತ ಬಂತು. ಇಂದು ಜಗತ್ತಿನ ಎಲ್ಲ ಭಾಗದಲ್ಲೂ ವೈಯಕ್ತಿಕ ಆರ್ಥಿಕ ಸಂಸ್ಥೆಯ ವಿಧಾನ ಹಬ್ಬಿದೆ. ಸಾಮಾಜಿಕ ಆರ್ಥಿಕ ಸಂಸ್ಥೆಗಳಿದ್ದ ದೇಶಗಳೂ ವೈಯಕ್ತಿಕ ಆರ್ಥಿಕ ತತ್ತ್ವವನ್ನೇ ಅಂಗೀಕರಿಸಿವೆ.

ಅರ್ಥಶಾಸ್ತ್ರ ಎಂಬ ಪದ 20ನೆಯ ಶತಮಾನದಲ್ಲಿ ಹೆಚ್ಚು ಬಳಕೆಗೆ ಬಂತು. ಅದಕ್ಕೆ ಮುಂಚೆ ರಾಜಕೀಯ ಅರ್ಥಶಾಸ್ತ್ರ ಎಂಬ ಪದ ರೂಢಿಯಲ್ಲಿತ್ತು. ಈ ಪದವೂ ಆಧುನಿಕವಾದುದೇ. 17ನೆಯ ಶತಮಾನದಲ್ಲಿ ಈ ಪದ ರೂಢಿಗೆ ಬಂತು. ರಾಜ್ಯಗಳ ಆದಾಯ, ಮತ್ತು ಸಾಧನಸಂಪತ್ತು ಹೆಚ್ಚಿಸುವ ಅರ್ಥದಲ್ಲಿ ಈ ಪದವನ್ನು ಬಳಸಲಾಯಿತು. ಅರ್ಥಶಾಸ್ತ್ರ ವಿಕಸನದಲ್ಲಿ ಮುಖ್ಯವಾಗಿ ನಾಲ್ಕು ವಿಭಾಗಗಳಿವೆ–ಗ್ರೀಕರ ಕಾಲ, ಮಧ್ಯಯುಗದ ಕಾಲ, ಅನಂತರದ ಕಾಲ (16–18 ಶತಮಾನ) ಮತ್ತು ಆಧುನಿಕ ಕಾಲ. ಈ ವಿಭಾಗಗಳು ಯುರೋಪ್ ಖಂಡದ ಇತಿಹಾಸ ವಿಭಾಗಕ್ಕೆ ಸರಿಹೊಂದುವಂತಿವೆ.

ಗ್ರೀಕರ ಕಾಲದ ಅರ್ಥಶಾಸ್ತ್ರ ಸಾಹಿತ್ಯವನ್ನು ಅಲ್ಲಿಯ ತತ್ತ್ವವೇತ್ತರು ಅಂದಿನ ನೈತಿಕ ದೃಷ್ಟಿಗನುಗುಣವಾಗಿ ರಚಿಸಿದರು. ಅರಿಸ್ಟಾಟಲ್, ಪ್ಲೇಟೊ ಮುಂತಾದ ಬರೆಹಗಾರರು ಕೂಲಿ ವಿಭಜನೆ, ಹಣದ ಉಪಯೋಗ ಮುಂತಾದ ಆರ್ಥಿಕ ವಿಷಯವಾಗಿ ಬರೆದಿದ್ದಾರೆ.

ಮಧ್ಯಮಯುಗದ ಆರ್ಥಿಕ ಆಲೋಚನೆಗಳು ಅಂದಿನ ನೈತಿಕ ಭಾವನೆಗಳನ್ನೊಳಗೊಂಡಿದ್ದುವು. ಈ ಬಗೆಯ ಸಾಹಿತ್ಯವನ್ನು ಕ್ರೈಸ್ತಪಾದ್ರಿಗಳು ರಚಿಸಿದ್ದರು. ಅವರ ಬರೆಹಗಳಲ್ಲಿ ಆರ್ಥಿಕ ಜೀವನ ಮತ್ತು ಐಹಿಕ ಜೀವನಗಳ ಪರಾಮರ್ಶೆ ಬರುತ್ತದಾದರೂ ಎಲ್ಲ ಅಭಿಪ್ರಾಯಗಳೂ ಕ್ರೈಸ್ತಧರ್ಮದತ್ತ, ವೈರಾಗ್ಯದತ್ತ ವಾಲುತ್ತವೆ.

ಮೂರನೆಯ ಯುಗ ಆರ್ಥಿಕ ರಾಷ್ಟ್ರೀಕರಣದ ಕಾಲ. ಇದನ್ನು ವ್ಯಾಪಾರೋದ್ಯಮದ ಕಾಲ ಎಂದೂ ಹೇಳಬಹುದು. ಈ ಕಾಲದಲ್ಲಿ ಮಧ್ಯಯುಗದ ಜಹಗೀರಿಯನ್ನು ಕಿತ್ತೊಗೆದು ರಾಷ್ಟ್ರೀಯಭಾವನೆಯಿಂದ ಕೂಡಿದ ಆರ್ಥಿಕತತ್ತ್ವವನ್ನು ಆಚರಣೆಗೆ ತರಲಾಯಿತು. ಇದರ ಫಲವಾಗಿ ಸಾಮಾಜಿಕ ಜೀವನದಲ್ಲಿ ಬದಲಾವಣೆಗಳುಂಟಾದುವು. ಇಟಲಿ ಮತ್ತು ಉತ್ತರ ಯುರೋಪ್ ರಾಜ್ಯಗಳಲ್ಲಿ ಸಂಸ್ಕೃತಿ, ಸಾಹಿತ್ಯ, ಕಲೆಯ ಪುನರುಜ್ಜೀವನವಾಯಿತು. ಔದ್ಯೋಗಿಕ ಪ್ರಗತಿ ಆಯಿತು. ಅಚ್ಚುಕೂಟ, ಪ್ರಕಟಣೆ, ವಿಜ್ಞಾನ, ವ್ಯಾಪಾರಗಳನ್ನು ಮುಖ್ಯವೆಂದು ಪರಿಗಣಿಸಲಾಯಿತು. ಈ ಯುಗವನ್ನು ವಾಣಿಜ್ಯದ ಕ್ರಾಂತಿಕಾಲ ಎಂದು ಹೇಳಬಹುದು. ವಾಣಿಜ್ಯ, ವ್ಯಾಪಾರ 16ನೆಯ ಶತಮಾನದಿಂದ 18ರವರೆಗೆ ಯುರೋಪಿನಲ್ಲಿ ಅಭಿವೃದ್ಧಿ ಹೊಂದಿತು. ಬಾರ್ಕ್ಲಿ, ಕ್ರಾಂವೆಲ್ ಮುಂತಾದ ರಾಜಕಾರಣಿಗಳು ಬರೆದ ಪುಸ್ತಕಗಳು ಈ ವಿಚಾರವನ್ನು ವಿಶದವಾಗಿ ತಿಳಿಸಿವೆ. ವಿದೇಶೀ ವ್ಯಾಪಾರದಲ್ಲಿ ಉಳಿತಾಯ ಮಾಡುವುದು ಆ ರಾಷ್ಟ್ರಗಳ ಉದ್ದೇಶವಾಗಿತ್ತು. ಹೊಸದೇಶದ ವ್ಯಾಪಾರದಿಂದ ತಮ್ಮ ದೇಶದೊಳಕ್ಕೆ ಹಣವನ್ನಾಗಲಿ, ಚಿನ್ನವನ್ನಾಗಲಿ ತರುವುದು, ಬಡ್ಡಿದರ ಕಡಿಮೆ ಮಾಡುವುದು, ಕಡಿಮೆ ಕೂಲಿ, ಜನಸಂಖ್ಯೆ ಹೆಚ್ಚಿಸುವುದಕ್ಕೆ ಉತ್ತೇಜನ, ವಸಾಹತು ನಿರ್ಮಾಣ ಇತ್ಯಾದಿ ಉದ್ದೇಶಗಳನ್ನು ಆ ರಾಷ್ಟ್ರಗಳು ಹೊಂದಿದ್ದುವು.

ಆಧುನಿಕ ಅರ್ಥಶಾಸ್ತ್ರದ ವಿಕಸನ ಆಧುನಿಕ ಮಾನವನ ಆಲೋಚನೆಯ ಫಲಿತಾಂಶ. ಆರ್ಥಿಕ ರೀತಿಯಲ್ಲಿ ಈ ಯುಗವನ್ನು ಬಂಡವಾಳ, ಪೈಪೋಟಿ ಅಥವಾ ಸ್ವತಂತ್ರ ವ್ಯಾಪಾರದ ಪ್ರಯತ್ನ ಎಂದು ಹೇಳಬಹುದು. ರಾಜಕೀಯವಾಗಿ ಇದು ಪ್ರಜಾಪ್ರಭುತ್ವ ಕಾಲ. ನಾಲ್ಕನೆಯದಾದ ಈ ಆರ್ಥಿಕಯುಗವನ್ನು ಆರ್ಥಿಕ ಜ್ಞಾನೋದಯ ಕಾಲ ಅಥವಾ ವಿಮರ್ಶಾತ್ಮಕ ವಿಚಾರಕಾಲ ಎಂದು ಹೇಳಲಾಗಿದೆ, ಇಂಥ ಅಭಿವೃದ್ಧಿ ಕಾಲದಲ್ಲಿ ಆರ್ಥಿಕ ಮುಖಂಡತ್ವ ಮೆಡಿಟರೇನಿಯನ್ ಭಾಗದಿಂದ ಯುರೋಪ್ ಖಂಡದ ಉತ್ತರಭಾಗದಲ್ಲಿರುವ ಇಂಗ್ಲೆಂಡಿಗೆ ವರ್ಗವಾಯಿತು. ಅಲ್ಲಿಂದ ಉತ್ತರ ಅಮೆರಿಕ ವಸಾಹತುಗಳಿಗೆ ಹರಡಿತು. ಆಧುನಿಕ ಅರ್ಥಶಾಸ್ತ್ರವನ್ನು ಸ್ವತಂತ್ರ್ಯ ಉದ್ಯಮದ ವಿಜಯ ಎಂದು ಹೇಳಬಹುದು. ಹಣವೇ ಎಲ್ಲ ಬಗೆಯ ಅಭಿವೃದ್ಧಿಗೂ ಮೂಲ. ಹಣ ಸಂಪಾದನೆ ಮುಖ್ಯ. ಈ ವಿಚಾರವಾಗಿ ಅರ್ಥಶಾಸ್ತ್ರ ಸಾಹಿತ್ಯರಚನಕರಾದ ಜೇಮ್ಸ್ ಅಪ್ಲಿ, ಥಾಮಸ್ ಮ್ಯಾನ್ ಮುಂತಾದವರು, ವಿದೇಶೀ ಮತ್ತು ಸ್ವತಂತ್ರ ವ್ಯಾಪಾರಗಳ ವಿಷಯವಾಗಿ ಪುಸ್ತಕ ಬರೆದು ಹಂಚಿದರು.

ಹಣ ಸಂಪಾದನೆಯೇ ಮುಖ್ಯ ಎಂಬ ಭಾವನೆ ಬೇರೂರಿದಂತೆ, ಆರ್ಥಿಕ ವಿಚಾರದಲ್ಲಿ ಸ್ವತಂತ್ರ ಪ್ರವೃತ್ತಿ ಹೆಚ್ಚಿತು. ನಿಯಂತ್ರಣ ಹೋಯಿತು. ಆ್ಯಡಂ ಸ್ಮಿತ್ ಮುಂತಾದ ಅರ್ಥಶಾಸ್ತ್ರಕಾರರ ಬರೆಹದ ಪ್ರಭಾವಕ್ಕೆ ಇಂಗ್ಲೆಂಡ್ ಒಳಗಾಯಿತು. ಇಂಗ್ಲೆಂಡಿನ ಕೈಗಾರಿಕಾಕ್ರಾಂತಿ, ಫ್ರಾನ್ಸ್‌ನ ಮಹಾಕ್ರಾಂತಿ, ನೆಪೋಲಿಯನ್ನನ ಯುದ್ಧಗಳು ಇವೆಲ್ಲದರ ಫಲವಾಗಿ , ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮುಂತಾದ ಆರ್ಥಿಕ ಉದ್ಯಮಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಇಂಥ ಉತ್ತೇಜನ, ರಾಜಕೀಯ ಅರ್ಥಶಾಸ್ತ್ರ ಮತ್ತು ತೆರಿಗೆಯ ತತ್ತ್ವಗಳನ್ನು ಕುರಿತು ಪುಸ್ತಕ ಪ್ರಕಟಣೆಯಿಂದ ಪ್ರಾರಂಭವಾಯಿತು. ಜಾನ್ ಸ್ಟೂಯರ್ಟ್ ಮಿಲ್ 1848ರಲ್ಲಿ ರಾಜಕೀಯ ಅರ್ಥಶಾಸ್ತ್ರ ತತ್ತ್ವ ಎಂಬ ಗ್ರಂಥವನ್ನು ಪ್ರಕಟಿಸಿದ. ಹೀಗೆಯೇ ಬಂಡವಾಳ, ಉತ್ಪನ್ನ, ಲಾಭ, ವಿತರಣೆ ಮುಂತಾದ ವಾಣಿಜ್ಯ, ವ್ಯಾಪಾರ ಲಾಭ ಸಂಪಾದನೆ ಮುಂತಾದ ಆರ್ಥಿಕ ಹವ್ಯಾಸಗಳು ಬಳಕೆಗೆ ಬಂದುವು. ಹಣಸಂಪಾದನೆ, ಬೆಲೆ, ಅಪೇಕ್ಷೆ, ಸರಬರಾಜು ಇತ್ಯಾದಿ ಅರ್ಥಶಾಸ್ತ್ರದ ವಿಷಯವಾಗಿ ವಿಪುಲಸಾಹಿತ್ಯ ಸೃಷ್ಟಿಯಾಯಿತು. ಇದರ ಫಲವಾಗಿ ಹೊಸಭಾವನೆ, ಹೊಸ ಪ್ರವೃತ್ತಿ, ಹೊಸ ಸಂಸ್ಥೆಗಳು ಹುಟ್ಟಿದುವು. ಪೇಟೆ, ಪೇಟೆಧಾರಣೆ, ಉತ್ಪಾದನೆ ಮತ್ತು ಅದರ ಅಂಗಗಳು, ವಿತರಣೆಯ ವಿಭಾಗ ಮುಂತಾದ ಆರ್ಥಿಕ ವಿಷಯಗಳು ಅರ್ಥಶಾಸ್ತ್ರಕಾರರ ಗಮನವನ್ನು ವಿಶೇಷವಾಗಿ ಆಕರ್ಷಿಸಿದುವು. ಇದರ ಪರಿಣಾಮವಾಗಿಯೊ ಎಂಬಂತೆ ಆಲ್‌ಫ್ರೆಡ್ ಮಾರ್ಷಲ್‌ನ ಉದ್ಗ್ರಂಥ ಪ್ರಕಟವಾಯಿತು. ಇಂಥ ಪ್ರಭಾವಯುತ ಪ್ರಚೋದನಾತ್ಮಕ ಅರ್ಥಶಾಸ್ತ್ರ ಕೃತಿಯನ್ನು ಎಲ್ಲರೂ ಆದರದಿಂದ ಸ್ವಾಗತಿಸಿದರು. ಈ ಪುಸ್ತಕವನ್ನು ಅನೇಕ ಸಲ ಅಚ್ಚು ಹಾಕಿಸಿ ಹಂಚಬೇಕಾಯಿತು.

ಅರ್ಥಶಾಸ್ತ್ರದ ತಾತ್ವಿಕ ವಿಭಾಗದಲ್ಲಿ ಸಾಹಿತ್ಯ ರಚನೆಯಾದಂತೆ, ಪ್ರಾಯೋಗಿಕ ವಿಭಾಗದಲ್ಲಿ ತಲೆದೋರಿದ ಸಮಸ್ಯೆಗಳನ್ನು ಬಗೆಹರಿಸಲಾಯಿತು. ಇಂಥ ಸಮಸ್ಯೆಗಳಲ್ಲಿ ಅತಿ ಮುಖ್ಯವಾದುವು ಎರಡು. ಒಂದು ಬೃಹತ್ ಕೈಗಾರಿಕೆಗಳ ಮತ್ತು ವ್ಯಾಪಾರ ಸಂಸ್ಥೆಗಳ ಸ್ಥಾಪನೆ. ಕೇಂದ್ರೀಕೃತ ಅಧಿಕಾರ ಉತ್ಪನ್ನ ವಸ್ತುವಿನ ಮಾರಾಟದ ಸಂಪೂರ್ಣ ಅಧಿಕಾರ ಎಂದು ಇದನ್ನು ಹೇಳಬಹುದು. ಇನ್ನೊಂದು ಹಣಕಾಸು ಸಾಲ, ವಾಣಿಜ್ಯ, ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಮತ್ತು ಅವುಗಳ ಪರಿಹಾರ, ಸರ್ಕಾರದ ಪ್ರವೇಶ ಇವೇ ಮುಂತಾದುವು. ಈ ವಿಷಯಗಳನ್ನು ಅರ್ಥಶಾಸ್ತ್ರಜ್ಞರು ಕೂಲಂಕಷವಾಗಿ ವಿಮರ್ಶೆಮಾಡಿ, ಭವಿಷ್ಯಸೂಚಿಸಿ ಆ ಬಗ್ಗೆ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಹಾಗೆಯೇ ಹಣದ ಉಬ್ಬರ, ಅದನ್ನು ನಿವಾರಿಸುವ ವಿಧಾನವನ್ನೂ ಅರ್ಥಶಾಸ್ತ್ರ ನಿಪುಣರು ವಿಚಾರ ಮಾಡದೇ ಇಲ್ಲ. ಜೆ.ಎಮ್. ಕೇನ್ಸ್ ಎಂಬ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಉದ್ಯೋಗ, ಬಡ್ಡಿ, ಹಣಕಾಸಿನ ತತ್ತ್ವಗಳನ್ನು ಕುರಿತು ವಿಚಾರಾತ್ಮಕ ಅರ್ಥಶಾಸ್ತ್ರ ಪುಸ್ತಕವನ್ನು 1936ರಲ್ಲಿ ಪ್ರಕಟಿಸಿದ. ಇವನ ಅನುಯಾಯಿಗಳಾದ ಇತರ

ಅರ್ಥಶಾಸ್ತ್ರನಿಪುಣರು ಇಂಥ ಸಾಹಿತ್ಯರಚನೆ ಮಾಡಿ ಅಂತಾರಾಷ್ಟ್ರೀಯ ಆರ್ಥಿಕ ಭಾವನೆ ಮತ್ತು ಸಮಸ್ಯೆಗಳ ವಿಚಾರವಾಗಿ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಅರ್ಥಶಾಸ್ತ್ರದಲ್ಲಿ ಉದ್ಭವಿಸಿರುವ ಇಂದ್ರಿಯಗೋಚರವಾದ ವಿಷಯಗಳಲ್ಲಿ ಅತಿಮುಖ್ಯವಾದುದು ದುಡಿಮೆ. ಇದೊಂದು ದೊಡ್ಡ ಸಮಸ್ಯೆ. ಇದನ್ನು ಸಮರ್ಪಕವಾಗಿ ಬಗೆಹರಿಸದೆ ಯಾವ ಬಗೆಯ ಆರ್ಥಿಕ ಯೋಜನೆಯನ್ನೂ ಕಾರ್ಯಗತ ಮಾಡಲು ಸಾಧ್ಯವಿಲ್ಲ. ದುಡಿಮೆ, ಕೂಲಿ ಕೂಲಿಗಾರರ ಸಂಘ, ಕೂಲಿಯ ದರ, ಕೆಲಸದ ಕಾಲ, ಕಾರ್ಖಾನೆಯ ಕಾನೂನು, ಲಾಭದ ಹಂಚಿಕೆ, ಕೈಗಾರಿಕಾವ್ಯಾಜ್ಯ ತೀರ್ಮಾನ, ಮಧ್ಯಸ್ಥಗಾರರ ತೀರ್ಪು, ವಿಮೆ, ನಿರುದ್ಯೋಗ ಅದರ ಪರಿಹಾರ ಇತ್ಯಾದಿ ವಿಷಯಗಳೆಲ್ಲವೂ ಅರ್ಥಶಾಸ್ತ್ರದ ವ್ಯಾಪ್ತಿಗೆ ಬಂದು ಪರಿಶೀಲಿಸತಕ್ಕ ವಿಷಯಗಳಾಗಿರುವುದಲ್ಲದೆ ಪ್ರಾಯೋಗಿಕ ಪ್ರಶ್ನೆಗಳೂ ಆಗಿವೆ. ಇದರಿಂದ ಅರ್ಥಶಾಸ್ತ್ರದ ವೈಶಾಲ್ಯ ಎಷ್ಟು ಎಂಬುದು ಗೊತ್ತಾಗುವುದು.

ಆಧುನಿಕ ಅರ್ಥಶಾಸ್ತ್ರದಲ್ಲಿ ಸಮೀಕ್ಷಿಸಬೇಕಾದ ಮುಖ್ಯ ವಿಷಯ ಅಂಕಿಅಂಶಗಳ ಸಂಗ್ರಹ. ಇತ್ತೀಚೆಗೆ ಇದಕ್ಕೆ ವಿಶೇಷ ಪ್ರಾಶಸ್ತ್ಯ ದೊರೆತಿದೆ. ಆರ್ಥಿಕ ಚಟುವಟಿಕೆಗಳ ಫಲಿತಾಂಶವಾದ ಅಂಕಿಅಂಶಗಳನ್ನು ಪ್ರಾಮಾಣಿಕವಾಗಿ ಸಂಗ್ರಹಿಸಿ ಪ್ರಕಟಿಸಲಾಗುತ್ತಿದೆ. ಸರ್ಕಾರಗಳೂ ಖಾಸಗಿ ವಾಣಿಜ್ಯಸಂಸ್ಥೆಗಳೂ ಈ ಬಗೆಯ ಕೆಲಸ ಕೈಗೊಂಡಿವೆ. ಮುಂಚಿನ ಅರ್ಥಶಾಸ್ತ್ರ ನಿಪುಣರು ಈ ವಿಷಯವನ್ನು ಅಷ್ಟಾಗಿ ಗಮನಿಸಿರಲಿಲ್ಲ. ಈ ಅಂಕಿಅಂಶಗಳು ಆರ್ಥಿಕ ಅನುಭವದ ಕುರುಹಾಗಿ, ಆರ್ಥಿಕ ಸಮಸ್ಯೆಗಳ ವ್ಯಾಸಂಗ, ವಿಭಜನೆ ಪರಿಹಾರಕ್ಕೆ ವಿಶೇಷವಾಗಿ ಸಹಾಯ ಮಾಡುತ್ತಿವೆ.

ಹೀಗೆ ಆಧುನಿಕ ಅರ್ಥಶಾಸ್ತ್ರದ ಆಸಕ್ತಿ ವಿಶೇಷರೀತಿಯ ವೈವಿಧ್ಯ ವಾಸ್ತವಿಕತೆಯಿಂದ ಕೂಡಿದ್ದರೂ ಅದರ ಕಲ್ಪನೆಗಳು ಆರ್ಥಿಕ ಜೀವನದ ವಾಸ್ತವಾಂಶಗಳನ್ನು ವಿಮರ್ಶಿಸುವುದಕ್ಕೆ ಸಹಾಯ ಮಾಡಿದರೂ ಅರ್ಥಶಾಸ್ತ್ರ, ರಾಜಕೀಯ ಅಥವಾ ಸಾಮಾಜಿಕಶಾಸ್ತ್ರದ ಅಂಗವಾಗಿಯೇ ಉಳಿದಿದೆ. ಈ ದೃಷ್ಟಿಯಿಂದ ಇದು ತಾತ್ತ್ವಿಕದ ಮಾನಸಿಕಶಿಕ್ಷಣವಾಗಿದೆ. ನಿರ್ದಿಷ್ಟವಾದ ತೀರ್ಪುಗಳು ಅಥವಾ ಸಿದ್ಧಾಂತಗಳು ತಿರಸ್ಕೃತವಾಗಿರಬಹುದು ಅಥವಾ ಬದಲಾವಣೆ ಉಂಟಾಗಿರಬಹುದು. ಅಥವಾ ಪ್ರಧಾನವಾಗಿ ಪುನಾರಚಿತವಾಗಿರಬಹುದು. ಗಂಭೀರವಾದ ಅನುಬಂಧಗಳು ಸೇರಿಸಲ್ಪಟ್ಟಿರಬಹುದು. ಆದರೆ ಸಮಾಜದ ಆರ್ಥಿಕಜೀವನ ಕ್ರಮದ ಸಾಮಾನ್ಯಚಿತ್ರ ಯಾವಾಗಲೂ ವಿಭಜನೆ ಮತ್ತು ಭವಿಷ್ಯನಿರ್ಧಾರಕ್ಕೆ ಸಹಾಯ ವಾಗಿಯೇ ಉಳಿದಿರುತ್ತದೆ. ಅಭಿಪ್ರಾಯಭೇದ ಮಾರ್ಗಭೇದಗಳಿದ್ದರೂ, ಅರ್ಥಶಾಸ್ತ್ರ ಸದಾ ಮುಂದುವರಿಯುತ್ತಿರುವ, ಉತ್ಕೃಷ್ಟರೀತಿಯ ವಿಸ್ತಾರವಾದ ವ್ಯಾಸಂಗ ಎಂಬುದನ್ನು ಅರ್ಥಶಾಸ್ತ್ರ ಸಮೀಕ್ಷೆಯಿಂದ ಚೆನ್ನಾಗಿ ತಿಳಿಯಬಹುದು. **(ಕೆ.ಡಿ.)**

**ಆರ್ಥಿಕ ದಕ್ಷತೆ :** ಖರ್ಚು ಆದಷ್ಟು ಕಡಿಮೆಯಾಗಿ, ಕೆಲಸ ಸಮರ್ಪಕವಾಗಿ ನಡೆದು, ಲಾಭ ಹೆಚ್ಚುವಂತೆ ಮಾಡುವ ಕೆಲಸದ ಜಾಣ್ಮೆ (ಎಕನಾಮಿಕ್ ಎಫಿಷಿಯೆನ್ಸಿ). ಹೂಡುವ ಉದ್ಯಮ ಸರಿಯಾದ ಸನ್ನಿವೇಶದಲ್ಲಿರಬೇಕು. ಜನವಸತಿ, ವಾಹನ ಸೌಕರ್ಯ, ವಸತಿ ಸೌಕರ್ಯ ಬಡಾವಣೆಗೆ ಅವಕಾಶ–ಇವೆಲ್ಲ ಇರುವ ಕಡೆ ಉದ್ಯಮ ಚೆನ್ನಾಗಿ ನಡೆಯುತ್ತದೆ. ಅನಂತರ ಕೆಲಸಗಾರರ ಆಯ್ಕೆ ಮತ್ತು ಕೆಲಸದ ಮೇಲ್ವಿಚಾರಣೆ ಚೆನ್ನಾಗಿರಬೇಕು. ಕೆಲಸದ ಅಳತೆ ಇಟ್ಟುಕೊಡುವ ಕೂಲಿಗಿಂತ ಬರುವ ಆದಾಯ ಹೆಚ್ಚಿರುವಂತೆ ನೋಡಿಕೊಳ್ಳ ಬೇಕು. ಉದ್ದೇಶಿತ ಸಿದ್ಧವಸ್ತುಗಳ ಯೋಗ್ಯತೆ ನಿಖರವಾಗಿದ್ದು ಅವುಗಳ ಮಾರಾಟದ ಹಂಚಿಕೆಗೆ ಸರಿಯಾದ ವ್ಯವಸ್ಥೆ ಇರಬೇಕು. ಇಲ್ಲದಿದ್ದಲ್ಲಿ ನಷ್ಟವಾಗುವ ಸಂಭವ ಹೆಚ್ಚುತ್ತದೆ. ಉದ್ದೇಶಿತ ವಸ್ತುಗಳ ಜೊತೆ ಉಪವಸ್ತುಗಳು ಸಿಗುವಂತಿದ್ದಲ್ಲಿ ಅವನ್ನೂ ಬಳಸಿ ಲಾಭ ತೆಗೆಯಬೇಕು. ಆಡಳಿತದ ಖರ್ಚು ಲಾಭದ ಪ್ರಮಾಣಕ್ಕೆ ತಕ್ಕಂತಿರಬೇಕು. ಸದಾ ಪೈಪೋಟಿ ಇರುತ್ತದಾದ ಕಾರಣ ತಯಾರಾಗುವ ವಸ್ತುವಿನ ಗುಣ, ಯೋಗ್ಯತೆಗಳನ್ನು ಸಂಶೋಧನೆಗ ಳಿಂದ ಉತ್ತಮಪಡಿಸುವ ಕೆಲಸ ನಿರಂತರವಾಗಿ ನಡೆಯುತ್ತಿರಬೇಕು. ಒಳ್ಳೆಯ ಪದಾರ್ಥವನ್ನು ಸುಲಭ ಖರ್ಚಿನಲ್ಲಿ ತಯಾರಿಸಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಹುಬೇಗ ಮಾರಾಟ ಮಾಡುವುದೇ ಎಲ್ಲ ಆರ್ಥಿಕ ಉದ್ಯಮಗಳ ಮುಖ್ಯ ಧ್ಯೇಯ.

ಇದಕ್ಕೆ ಬೇಕಾದ ಪ್ರಚಾರ, ಹಂಚಿಕೆ ವ್ಯವಸ್ಥೆ ಸರಿಯಾಗಿರಬೇಕಾದುದು ಅಗತ್ಯ. ಈ ಮಾತು ಖಾಸಗಿ ಉದ್ಯಮಗಳಿಗಿಂತ ಸರ್ಕಾರಿ ಉದ್ಯಮಗಳಿಗೆ ಹೆಚ್ಚು ಅನ್ವಯಿಸುತ್ತದೆ. ರಾಷ್ಟ್ರೀಕರಣಗೊಂಡಿರುವ ಅನೇಕ ಉದ್ಯಮಗಳಲ್ಲಿ ಆರ್ಥಿಕ ದಕ್ಷತೆ ಕಂಡುಬರುತ್ತಿಲ್ಲ. ಅದಕ್ಕೆ ಕಾರಣಗಳು ಅನೇಕ. ಮೊದಲನೆಯದು ಆಡಳಿತ ವ್ಯವಸ್ಥೆ ಸರಿಯಿಲ್ಲದಿರುವುದು. ಎರಡನೆಯದಾಗಿ ಬಂದ ಲಾಭ ಸೋರಿಹೋಗುತ್ತಿರುವುದು, ಮೂರನೆಯದಾಗಿ ಪ್ರಚಾರ, ಹಂಚಿಕೆಗಳು ಸಮರ್ಪಕವಾಗಿಲ್ಲದಿರುವುದು. **(ಎಸ್.ಎಸ್.ಆರ್.ಯು.)**

**ಆರ್ಥಿಕ ನಿಯಮಗಳು :** ಆರ್ಥಿಕ ಸಮಸ್ಯೆಗಳ ಕಾರಣ ಮತ್ತು ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಮಾರ್ಗದರ್ಶನ ನೀಡುವಂಥ ನಿಯಮಗಳು (ಎಕನಾಮಿಕ್ ಲಾಸ್). ಅರ್ಥವಿಜ್ಞಾನಿ ಪ್ರಥಮತಃ ಕೆಲವು ಊಹಾನಿಯಮಗಳನ್ನು ರಚಿಸಿಕೊಳ್ಳುತ್ತಾನೆ. ವಾಸ್ತವ ಪ್ರಪಂಚದ ಆಗುಹೋಗುಗಳಲ್ಲಿ ಇವುಗಳಿಗೆ ವಿರೋಧ ಕಂಡುಬಂದಿದ್ದಲ್ಲಿ ಮತ್ತು ಸಾರ್ವತ್ರಿಕ ಪ್ರಾಮುಖ್ಯಕ್ಕೆ ಹೊಂದುವ ಹಾಗೆ ತೋರಿಬಂದಲ್ಲಿ ಈ ಊಹಾನಿಯಮಗಳೇ ಸ್ಥಾಪಿತ ನಿಯಮಗಳಾಗುತ್ತವೆ. ಕಾಲಕ್ರಮದಲ್ಲಿ ಇವು ಪರೀಕ್ಷಿಸಲ್ಪಟ್ಟು ಸಿದ್ಧಾಂತಗಳಾಗುತ್ತವೆ. ಸದಾಕಾಲವೂ ಏಕಪ್ರಕಾರವಾಗಿ ಅನ್ವಯಿಸುವ ನಿಯಮ ರಚನೆಯೇ ಎಲ್ಲ ವಿಜ್ಞಾನಿಗಳ ಗುರಿ. ನಿಯಮಗಳ ನಿರ್ದಿಷ್ಟತೆ ಹೆಚ್ಚಿದಂತೆ ವಿಜ್ಞಾನ ನಿರ್ದಿಷ್ಟತೆಯೂ ಹೆಚ್ಚುತ್ತದೆ.

ವಿಜ್ಞಾನದ ನಿಯಮ ಒಂದು ಸಾಮಾನ್ಯ ಸಿದ್ಧಾಂತ ಅಥವಾ ಪ್ರವೃತ್ತಿಯ ನ್ಯಾಸ; ಇದು ಹೆಚ್ಚು ಕಡಿಮೆ ಸತ್ಯ ಹಾಗೂ ನಿರ್ದಿಷ್ಟ ಎಂದು ಆಲ್‌ಫ್ರೆಡ್ ಮಾರ್ಷಲ್ ಹೇಳಿದ್ದಾನೆ. ಯಾವ ಅಡಚಣೆಯೂ ಇಲ್ಲದಲ್ಲಿ ಪ್ರತಿಯೊಂದು ಕಾರಣವೂ ತನ್ನದೇ ಆದ ಫಲಿತಾಂಶವನ್ನು ಹೊಂದಿರುತ್ತವೆ. ಇತರ ಸಂದರ್ಭಗಳು ವ್ಯತ್ಯಾಸವಾಗಿದ್ದಲ್ಲಿ, ಒಂದು ಆರ್ಥಿಕ ಬದಲಾವಣೆ ಯಿಂದ ಏನು ಪರಿಣಾಮ ಉಂಟಾಗುತ್ತದೆ ಎಂಬುದನ್ನು ಅರ್ಥಶಾಸ್ತ್ರದ ನಿಯಮಗಳು ತೋರಿಸುತ್ತವೆ. ಮಾರ್ಷಲ್ ಹೇಳುವಂತೆ, ಒಂದು ಸಮಾಜಶಾಸ್ತ್ರದ ನಿಯಮ ಅಥವಾ ಒಂದು ಸಾಮಾಜಿಕ ನಿಯಮ ಆ ಸಮಾಜದಲ್ಲಿನ ಪ್ರವೃತ್ತಿಯ ನ್ಯಾಸ. ಅಂದರೆ, ಒಂದು ನಿರ್ದಿಷ್ಟ ಸಂದರ್ಭದಲ್ಲಿ, ಒಂದು ಸಮಾಜದ ಗುಂಪಿನಲ್ಲಿ ಒಂದು ನಿರ್ದಿಷ್ಟ ಕ್ರಿಯೆ ಉಂಟಾಗುತ್ತದೆ ಎಂದು ತೋರಿಸುವ ಹೇಳಿಕೆಯಾಗಿರುತ್ತದೆ. ಆರ್ಥಿಕ ನಿಯಮಗಳ, ಆರ್ಥಿಕ ಪ್ರವೃತ್ತಿಗಳ ಹೇಳಿಕೆಗಳು ಹಣದ ಸಹಾಯದಿಂದ ಅಳೆಯಬಹುದಾದ ಸಮಾಜ ನಿಯಮಗಳ ಒಂದು ಭಾಗ.

ಸಂಪತ್ತು ಅಥವಾ ಸರಕುಗಳೊಂದಿಗೆ ಮಾನವನ ವ್ಯವಹಾರಿಕ ಮತ್ತು ಸಾಮಾನ್ಯ ಸಂಬಂಧಗಳೇನು ಎಂಬುದನ್ನು ಅರ್ಥಶಾಸ್ತ್ರದ ನಿಯಮಗಳು ತೋರಿಸಿಕೊಡುತ್ತವೆ. ಅಂದರೆ ಮಾನವ ಮಾರುಕಟ್ಟೆಯಲ್ಲಿ ನಡೆಸುವ ವ್ಯವಹಾರಗಳನ್ನು ವಿವರಿಸುವುದೇ ಆರ್ಥಿಕ ನಿಯಮಗಳ ಮುಖ್ಯ ಉದ್ದೇಶ. ಮಾನವನ ಸಾಮಾನ್ಯ ಚಟುವಟಿಕೆಗಳು ಅವನ ವಿಚಾರಶೀಲತೆಯನ್ನವಲಂಬಿಸಿರುವುದರಿಂದ, ಅವು ಎಲ್ಲ ಸಂದರ್ಭಗಳಲ್ಲೂ ಒಂದೇ ರೀತಿ ಇರುತ್ತವೆಂದು ಹೇಳಲಾಗುವುದಿಲ್ಲ. ಆರ್ಥಿಕ ನಿಯಮಗಳು ಮಾನವನ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದುವಾದುದರಿಂದ ಮತ್ತು ಆ ಚಟುವಟಿಕೆಗಳು ನಿರ್ದಿಷ್ಟವಾಗಿರು ವುದಿಲ್ಲವಾದ್ದರಿಂದ, ಆರ್ಥಿಕ ನಿಯಮಗಳೂ ನಿರ್ದಿಷ್ಟವಾಗಿರುವುದಿಲ್ಲ. ಅರ್ಥಶಾಸ್ತ್ರ ಮಾನವನ ಆರ್ಥಿಕ ಚಟುವಟಿಕೆಗಳನ್ನು ಸಾಮಾನ್ಯವಾಗಿ ತಿಳಿಸಬಹುದೇ ವಿನಾ ನಿರ್ದಿಷ್ಟವಾಗಿ ತಿಳಿಸಲಾರದು. ಆದ್ದರಿಂದಲೇ ಅರ್ಥಶಾಸ್ತ್ರದ ನಿಯಮಗಳ ಸ್ವರೂಪ, ಪ್ರಕೃತಿ ಹಾಗೂ ಭೌತವಿಜ್ಞಾನಿಗಳ ಸ್ವರೂಪದಿಂದ ಬೇರೆಯಾಗಿದೆ. ಉದಾಹರಣೆಗೆ, ಗುರುತ್ವಾಕರ್ಷಣ ನಿಯಮ ಒಂದು ನಿರ್ದಿಷ್ಟವಾದ ಹೇಳಿಕೆ. ಯಾವ ಊಹೆಗಳ ಮೇಲೆ ಈ ನಿಯಮ ರಚಿತವಾಗಿದೆಯೋ ಅವು ಹೆಚ್ಚು ಬದಲಾವಣೆಗೆ ಒಳಗಾಗುವುದಿಲ್ಲವಾದ್ದರಿಂದ ಇದರ ನಿರ್ದಿಷ್ಟತೆ ಹೆಚ್ಚಾಗಿರುತ್ತದೆ. ಆದರೆ ಆರ್ಥಿಕ ನಿಯಮಗಳಿಗೆ ಆಧಾರವಾಗಿರುವ ಊಹೆಗಳು ಹೆಚ್ಚು ಬದಲಾವಣೆ ಹೊಂದುವುದಕ್ಕೆ ಅವಕಾಶವಿರುವುದರಿಂದ ಈ ನಿಯಮಗಳ ನಿರ್ದಿಷ್ಟತೆ ಕಡಮೆಯಾಗುತ್ತದೆ. ಊಹೆಗಳು ಬದಲಾದಾಗ ಅವುಗಳ ಆಧಾರದ ಮೇಲೆ ರಚಿತವಾಗಿರುವ ನಿಯಮಗಳೂ ಬದಲಾಗುತ್ತವೆ. ಎಲ್ಲ ವಿಜ್ಞಾನಗಳ ನಿಯಮಗಳೂ ಆಯ್ದ ಪರಿಸ್ಥಿತಿಗಳಿಗೆ ಮಾತ್ರ ಅನ್ವಯಿಸುತ್ತವೆಂದು ಹೇಳುವುದುಂಟು. ಈ ಹೇಳಿಕೆ ಪ್ರಕೃತಿ ಹಾಗೂ ಭೌತವಿಜ್ಞಾನಿಗಳ ನಿಯಮಗಳಿಗಿಂತ ಹೆಚ್ಚಾಗಿ ಅರ್ಥಶಾಸ್ತ್ರದಂಥ ಸಮಾಜ ವಿಜ್ಞಾನದ ನಿಯಮಗಳಿಗೆ ಅನ್ವಯಿಸುತ್ತದೆ. ಆರ್ಥಿಕ ನಿಯಮಗಳು ಹೆಚ್ಚು ನಿರ್ದಿಷ್ಟವಾಗಿರುವುದಿಲ್ಲವೆಂಬುದನ್ನು ಬೇಡಿಕೆ ನಿಯಮದ ಮೂಲಕ ನಿದರ್ಶಿಸಬಹುದು. ಇತರ ಸಂದರ್ಭಗಳು ಏಕರೀತಿಯಲ್ಲಿರು ವಾಗ, ಬೇಡಿಕೆ ನಿಯಮ ಸೂಚಿಸುತ್ತದೆ. ಆದರೆ, ಕೆಲವು ಸಂದರ್ಭಗಳಲ್ಲಿ ಬೇಡಿಕೆ ಹೆಚ್ಚಿದರೂ ಬೆಲೆಗಳು ಏರದಿರಬಹುದು. ಹೀಗೆ ಸಂಭವಿಸಿದಾಗ ಈ ನಿಯಮ ಸುಳ್ಳೆಂದು ಭಾವಿಸುವುದು ಸರಿಯಲ್ಲ. ಇತರ ಸಂದರ್ಭಗಳು ಬದಲಾವಣೆ ಹೊಂದಿರುವುದರಿಂದ ಈ ನಿಯಮದಲ್ಲಿ ಪರಿಣಾಮ ಉಂಟಾಗದಿರಬಹುದು. ಹೀಗೆ ಸಂದರ್ಭಗಳು ವ್ಯತ್ಯಾಸವಾಗುವುದರಿಂದ ಆರ್ಥಿಕ ನಿಯಮಗಳು ಆಯ್ದ ಪರಿಸ್ಥಿತಿಗಳಿಗೆ ಮಾತ್ರ ಅನ್ವಯಿಸುತ್ತವೆ.

ಆರ್ಥಿಕ ನಿಯಮಗಳು ಪ್ರಕೃತಿ ಹಾಗೂ ಭೌತವಿಜ್ಞಾನಗಳ ನಿಯಮಗಳಷ್ಟು ನಿರ್ದಿಷ್ಟವಾಗಿಲ್ಲದಿದ್ದರೂ ಸಮಾಜವಿಜ್ಞಾನಗಳ ಪೈಕಿ ಹೆಚ್ಚು ನಿರ್ದಿಷ್ಟವಾದ ನಿಯಮಗಳನ್ನು ಳ್ಳದ್ದು ಅರ್ಥಶಾಸ್ತ್ರವೇ. ಇತರ ಸಮಾಜವಿಜ್ಞಾನಗಳ ನಿಯಮಗಳಿಗಿಂತ ಆರ್ಥಿಕ ನಿಯಮಗಳು ಹೆಚ್ಚು ನಿರ್ದಿಷ್ಟವಾಗಿರಲು ಕೆಲವು ಕಾರಣಗಳಿವೆ. ಆರ್ಥಿಕ ಚಟುವಟಿಕೆಗಳ ಮಾಪನ ಹಣದ ಅಳತೆಗೋಲಿನಿಂದ ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ಅರ್ಥಶಾಸ್ತ್ರದಲ್ಲಿ ಇತ್ತೀಚೆಗೆ ಗಣಿತ ಮತ್ತು ಸಂಖ್ಯಾಶಾಸ್ತ್ರಗಳ ಬಳಕೆ ಹೆಚ್ಚಿರುವುದರಿಂದ ಆರ್ಥಿಕ ನಿಯಮಗಳ ನಿರ್ದಿಷ್ಟತೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ **(ನೋಡಿ– ಆರ್ಥಿಕ ಅಧ್ಯಯನ ಕ್ರಮಗಳು; ಆರ್ಥಿಕ ಸಂಖ್ಯಾಶಾಸ್ತ್ರ)** *

**ಆರ್ಥಿಕ ಪದ್ಧತಿಗಳು :** ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಜೀವನವನ್ನು ಸುಗಮವನ್ನಾಗಿ ಮಾಡಲು ಮನುಷ್ಯ ಕಾಲಕಾಲಕ್ಕೆ ಮಾಡಿಕೊಂಡಿರುವ ವ್ಯವಸ್ಥೆಗಳ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಇವೇ ಆರ್ಥಿಕ ಪದ್ಧತಿಗಳು (ಎಕನಾಮಿಕ್ ಸಿಸ್ಟಮ್ಸ್). ಮನುಷ್ಯ ನಿತ್ಯಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳಲ್ಲಿ ಅತಿ ಕಠಿಣವಾದುದು ಆರ್ಥಿಕ ಸಮಸ್ಯೆ. ಆರ್ಥಿಕ ಸಮಸ್ಯೆಯೆಂದರೆ ಜೀವನ ನಿರ್ವಹಣೆಯ ಸಮಸ್ಯೆಯೆನ್ನಬಹುದು.

ಈ ಸಮಸ್ಯೆ ಹುಟ್ಟಲು ಕಾರಣ ಮನುಷ್ಯನ ಅಪೇಕ್ಷೆಗಳಿಗೂ ಅವನ ಸಾಧನ ಸಾಮಗ್ರಿಗಳಿಗೂ ಇರುವ ಅಪಾರ ಅಂತರ. ಅಪೇಕ್ಷೆಗಳು ಅಮಿತವಾಗಿದ್ದರೂ ಸಾಧನ ಸಾಮಗ್ರಿಗಳು ಮಾತ್ರ ಅತ್ಯಂತ ಮಿತವಾಗಿದೆ. ಆದುದರಿಂದ ಮಿತ ಸಾಧನ ಸಾಮಗ್ರಿಗಳಿಂದ ತನ್ನ ಅಪೇಕ್ಷೆಗಳನ್ನು ತೃಪ್ತಿಪಡಿಸಲು ಅತ್ಯುತ್ತಮ ಮಾರ್ಗ ಯಾವುದೆಂಬುದನ್ನು ನಿರ್ಧರಿಸುವುದೇ ಮನುಷ್ಯ ಸತತವೂ ಎದುರಿಸಬೇಕಾದ ಮಹಾ ಆರ್ಥಿಕ ಸಮಸ್ಯೆ.

ಆರ್ಥಿಕ ಪದ್ಧತಿ ಕಾಲ ದೇಶಗಳಿಗನುಗುಣವಾಗಿ ವ್ಯತ್ಯಾಸ ಹೊಂದುವುದು. ಇದನ್ನು ಮಾರ್ಕ್ಸ್‌ವಾದಿಗಳು 1. ಆದಿ–ಸಾಮುದಾಯಿಕ, 2. ಪ್ರಾಚೀನ–ಗುಲಾಮಗಿರಿ, 3. ಮಧ್ಯಕಾಲಿಕ–ಜೀತಗಾರಿಕೆ, 4. ಆಧುನಿಕ – ಬಂಡವಾಳಗಾರಿಕೆ ಮತ್ತು 5. ಭವಿಷ್ಯ–ಸಮಾಜಸ್ವಾಮ್ಯ ಎಂದು ಐದು ಬಗೆಯಾಗಿ ವಿಂಗಡಿಸಿರುವರು.

ಆರ್ಥಿಕ ಪದ್ಧತಿ ಯಾವುದೇ ಆದರೂ ಅದು ಉತ್ಪಾದನೆ, ಅನುಭೋಗ ಮತ್ತು ಹಂಚಿಕೆಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳನ್ನು ತೀರ್ಮಾನಿಸಬೇಕಾಗುವುದು. ಈ ತೀರ್ಮಾನಗಳಿಗೆ ಸಂಪ್ರದಾಯ, ನಿರ್ಬಂಧ, ವೈಯಕ್ತಿಕ ಪ್ರತಿಫಲದ ಆಕರ್ಷಣೆ ಮುಂತಾದವು ಆಧಾರವಾಗಿರುವುವು.

ಪ್ರಾಚೀನ ಕಾಲದಲ್ಲಿ ಆರ್ಥಿಕ ಜೀವನದ ವ್ಯವಸ್ಥೆ ಸುಲಭವಾಗಿತ್ತು. ಕುಟುಂಬ ಆರ್ಥಿಕ ಘಟಕವಾಗಿ, ಸ್ವಪರಿಪೂರ್ಣತೆಯ ಗುರಿಯನ್ನು ಹೊಂದಿತ್ತು. ಕುಟುಂಬದ ಜನರಲ್ಲಿಯೇ ಅತಿ ಸರಳ ರೀತಿಯ ಕಾರ್ಯವಿಭಜನೆ ರೂಢಿಯಲ್ಲಿತ್ತು. ಇಂಥ ಪರಿಸ್ಥಿತಿಯಲ್ಲಿ ಆರ್ಥಿಕ ಜೀವನವನ್ನು ವ್ಯವಸ್ಥೆಗೊಳಿಸುವುದು ಕಷ್ಟವಿರಲಿಲ್ಲ.

ಆದರೆ ಆಧುನಿಕ ಕಾಲದಲ್ಲಿ, ಅದರಲ್ಲೂ 18ನೆಯ ಶತಮಾನದ ಕೈಗಾರಿಕಾ ಕ್ರಾಂತಿಯಿಂದೀಚೆಗೆ, ಆರ್ಥಿಕ ಜೀವನ ವ್ಯವಸ್ಥೆ ಅತಿ ತೊಡಕಾಯಿತು. ಈ ಪರಿಸ್ಥಿತಿಯಲ್ಲಿ ಆರ್ಥಿಕ ಜೀವನವನ್ನು ಸುವ್ಯವಸ್ಥೆಗೊಳಿಸಲು ಮಾಡಿದ ಏರ್ಪಾಡುಗಳೇ ವಿವಿಧ ಆರ್ಥಿಕ ಪದ್ಧತಿಗಳೆನಿಸಿಕೊಂಡಿವೆ. ಅವುಗಳಲ್ಲಿ ಮುಖ್ಯವಾದವು:

1. ಸ್ವತಂತ್ರ ಉದ್ಯಮ ಅಥವಾ ಬಂಡವಾಳ ಪದ್ಧತಿ 2. ಸಮಾಜವಾದಿ ಪದ್ಧತಿ 3. ಮಿಶ್ರ ಆರ್ಥಿಕಪದ್ಧತಿ 4. ಸಹಕಾರ ಪದ್ಧತಿ.

ಸ್ವತಂತ್ರ ಉದ್ಯಮ ಪದ್ಧತಿ ಆರ್ಥಿಕಕ್ಷೇತ್ರದಲ್ಲಿ ವ್ಯಕ್ತಿಸ್ವಾತಂತ್ರ್ಯವನ್ನು ಪ್ರತಿಪಾದಿಸುವುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆರ್ಥಿಕ ಕೆಲಸ ಕಾರ್ಯಗಳನ್ನು ತನಗೆ ಅತ್ಯಂತ ಹೆಚ್ಚಿನ ಪ್ರತಿಫಲ ಬರುವ ರೀತಿಯಲ್ಲಿ, ತನ್ನ ಇಚ್ಛೆ ಬಂದಂತೆ ನಡೆಸಬಹುದು. ಸರ್ಕಾರದ ನಿರ್ಬಂಧವಾಗಲೀ, ಇತರರ ಅಡಚಣೆಯಾಗಲೀ ಇರುವುದಿಲ್ಲ. ಪ್ರತಿಯೊಬ್ಬನ ಗಮನವೂ ತನ್ನ ಏಳಿಗೆಯ ಕಡೆ ಮಾತ್ರ ಇರುವುದು; ಇತರರ ಮೇಲೆ ಅದರ ಪರಿಣಾಮವೇನೆಂಬುದನ್ನು ಲೆಕ್ಕಿಸುವುದಿಲ್ಲ.

ಈ ಬಗೆಯ ವ್ಯಕ್ತಿಸ್ವಾತಂತ್ರ್ಯ ಸ್ಪರ್ಧೆಗೆ ಎಡೆಕೊಡುವುದು. ಸ್ಪರ್ಧೆಯ ಬೆದರಿಕೆ ಮತ್ತು ವೈಯಕ್ತಿಕ ಪ್ರತಿಫಲದ ಆಕರ್ಷಣೆ ದಕ್ಷತೆಯನ್ನು ಹೆಚ್ಚಿಸುವುದು. ಇದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗಿ ಬಳಕೆದಾರನಿಗೆ ಪದಾರ್ಥಗಳು ಅತ್ಯಂತ ಕಡಿಮೆ ಬೆಲೆಗೆ ದೊರಕುವುವು. ಅಲ್ಲದೆ ಸ್ಪರ್ಧೆಯ ಫಲವಾಗಿ ಸರಬರಾಜು ಮತ್ತು ಬೇಡಿಕೆಗಳ ಸಮತೋಲನ ತಾನಾಗಿಯೇ ಉಂಟಾಗುವುದು. ಯೋಜನಾ ಮಂಡಲಿ ಮುಂತಾದ ಬಾಹ್ಯಸಂಸ್ಥೆಗಳ ಆವಶ್ಯಕತೆಯಿರುವುದಿಲ್ಲ.

ಸ್ವತಂತ್ರ ಉದ್ಯಮ ಪದ್ಧತಿಯಲ್ಲಿ ಎಲ್ಲ ಉದ್ಯಮಗಳ ಒಡೆತನ ಮತ್ತು ಮೇಲ್ವಿಚಾರಣೆಯೂ ಖಾಸಗಿ ವ್ಯಕ್ತಿಗಳಿಗೆ ಸೇರಿರುವುದು. ಹೀಗೆ ಎಲ್ಲ ಆರ್ಥಿಕ ಅಧಿಕಾರವೂ ಖಾಸಗಿ ಬಂಡವಾಳ ಗಾರರ ಕೈಯಲ್ಲಿರುವುದರಿಂದ ಇದನ್ನು ಬಂಡವಾಳ ಪದ್ಧತಿಯೆಂದೂ ಕರೆಯುವರು.

19ನೆಯ ಶತಮಾನದಲ್ಲಿ ಸ್ವತಂತ್ರ ಉದ್ಯಮ ಪದ್ಧತಿ ಬಹಳ ಜನಪ್ರಿಯವಾಗಿತ್ತು. ಆದರೆ ಕಾಲಕ್ರಮದಲ್ಲಿ ಅದರ ನ್ಯೂನತೆಗಳು ಗೋಚರವಾದವು.

ವ್ಯಕ್ತಿ ತನ್ನ ಹಿತದಲ್ಲಿ ಅತಿಯಾದ ಆಸಕ್ತಿ ವಹಿಸಿ ಸಮಾಜದ ಹಿತವನ್ನು ಕಡೆಗಣಿಸುವುದು, ಖಾಸಗಿ ಲಾಭಗಳಿಕೆಯನ್ನು ಪ್ರೋತ್ಸಾಹಿಸಿ ಐಶ್ವರ್ಯದ ಅಸಮಾನ ಹಂಚಿಕೆಗೆ ಅವಕಾಶ ಕೊಡುವುದು, ಉದ್ಯಮ ಸ್ವಾತಂತ್ರ್ಯದ ಹೆಸರಿನಲ್ಲಿ ಸರ್ವಸ್ವಾಮ್ಯಗಳಿಗೆ ಅವಕಾಶ ಕೊಡುವುದು, ವ್ಯಾಪಾರದ ಕಾಲಕಾಲಿಕ ಏರುಪೇರುಗಳಿಂದ ಆರ್ಥಿಕ ಜೀವನದ ಸಮಸ್ಥಿತಿಯನ್ನು ಕೆಡಿಸುವುದು, ಸಮಾಜವನ್ನು ಛಿದ್ರಗೊಳಿಸುವ ವರ್ಗ ಕಲಹಕ್ಕೂ ಕಾರ್ಮಿಕರ ಶೋಷಣೆಗೂ ಅವಕಾಶ ಕೊಡುವುದು–ಇವು ಸ್ವತಂತ್ರ ಉದ್ಯಮ ಪದ್ಧತಿಯ ಮುಖ್ಯ ನ್ಯೂನತೆಗಳು.

ಈ ನ್ಯೂನತೆಗಳನ್ನು ಹೋಗಲಾಡಿಸಲು ಕೆಲವು ದೇಶಗಳು ಸಮಾಜವಾದ ಪದ್ಧತಿಯನ್ನು ಆಚರಣೆಗೆ ತಂದಿವೆ. ಇದು ಸ್ವತಂತ್ರ ಉದ್ಯಮ ಪದ್ಧತಿಗೆ ವಿರುದ್ಧವಾದುದು. ಇಲ್ಲಿ ವ್ಯಕ್ತಿ ಹಿತಕ್ಕಿಂತಲೂ ಸಮಾಜದ ಹಿತಕ್ಕೇ ಪ್ರಾಧಾನ್ಯ. ಆದುದರಿಂದ ಖಾಸಗಿ ಒಡೆತನಕ್ಕೆ ಪ್ರತಿಯಾಗಿ ಸಾರ್ವಜನಿಕ ಒಡೆತನವಿರುವುದು. ಸಂಪತ್ತಿನ ಉತ್ಪಾದನೆ ಮತ್ತು ಹಂಚಿಕೆ ಇಡೀ ಸಮಾಜವನ್ನು ಪ್ರತಿನಿಧಿಸುವ ಸರ್ಕಾರದ ಹತೋಟಿಯಲ್ಲಿರುವುದು. ಸರ್ಕಾರ ತನ್ನ ಗುರಿಸಾಧನೆಗೆ ಯೋಜಿತ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು.

ಸಮಾಜವಾದ ಪದ್ಧತಿಯಲ್ಲಿ ಸರ್ಕಾರ ಸದಾ ಸಮಾಜದ ಹಿತವನ್ನು ಗಮನದಲ್ಲಿಟ್ಟು ತನ್ನ ಆರ್ಥಿಕ ಕಾರ್ಯಕ್ರಮಗಳನ್ನು ನಿರ್ಧರಿಸುವುದು. ಉತ್ಪನ್ನ ಸಾಧನಗಳನ್ನು ಸಮಾಜಕ್ಕೆ ಅತ್ಯಂತ ಉಪಯುಕ್ತವೆನಿಸುವ ಉದ್ಯಮಗಳಿಗೆ ಒದಗಿಸುವುದು. ಸಂಪತ್ತಿನ ಅಸಮಾನ ಹಂಚಿಕೆಯನ್ನು ಹೋಗಲಾಡಿಸಿ ಸರ್ವರಿಗೂ ಸಮಾನ ನ್ಯಾಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ದೊರಕಿಸಲು ಪ್ರಯತ್ನಿಸುವುದು. ಆದುದರಿಂದಲೇ ಸಮಾಜವಾದವನ್ನು ಪ್ರಜಾಪ್ರಭುತ್ವದ ಆರ್ಥಿಕ ಪೂರಕವೆನ್ನುವರು. ಕಾರ್ಮಿಕ ವರ್ಗಕ್ಕೆ ಗೌರವ ಸ್ಥಾನವನ್ನು ಯೋಗ್ಯ ಪ್ರತಿಫಲವನ್ನು ದೊರಕಿಸಿ ಶೋಷಣೆಯನ್ನು ತಪ್ಪಿಸುವುದು. ಇದರಿಂದ ಪ್ರೋತ್ಸಾಹಿತರಾಗಿ ಕಾರ್ಮಿಕರು ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ಕೆಲಸ ಮಾಡಿ ಉತ್ಪಾದನೆಯನ್ನು ಹೆಚ್ಚಿಸುವರು. ಈ ಅಧಿಕ ಉತ್ಪಾನೆಯ ಫಲ ಇಡೀ ಸಮಾಜಕ್ಕೇ ದೊರಕುವುದು.

ಆದರೆ ಸಮಾಜದಲ್ಲಿ ಸರ್ಕಾರದ ಹತೋಟಿ ಅತಿಯಾಗಿ ವ್ಯಕ್ತಿ ಸ್ವಾತಂತ್ರ್ಯ ನಾಶವಾಗುವುದು. ಎಲ್ಲ ಆರ್ಥಿಕ ನಿರ್ಧಾರಗಳನ್ನು ಸರ್ಕಾರವೇ ಕೈಗೊಳ್ಳುವುದರಿಂದ ವೈಯಕ್ತಿಕ ಪ್ರತಿಭೆಗೆ ಅವಕಾಶವಿರುವುದಿಲ್ಲ. ಆದುದರಿಂದ ಸಮಾಜವಾದ ಪದ್ಧತಿಯನ್ನು ದಾಸ್ಯಕ್ಕೆ ಹೆದ್ದಾರಿಯೆಂದು ಕೆಲವರು ಟೀಕಿಸುವರು. ಅಧಿಕಾರಿಗಳ ಪ್ರಾಬಲ್ಯ ಅಧಿಕವಾಗಿ ನೌಕರಶಾಹಿಯ ದುಷ್ಪವೃತ್ತಿಗಳಾದ ಲಂಚಗುಳಿತನ, ಸ್ವಜನ ಪಕ್ಷಪಾತ, ವೈಯಕ್ತಿಕ ನಿರಾಸಕ್ತಿ, ಆಡಳಿತ ವಿಳಂಬ ಮುಂತಾದವು ತಲೆದೋರುವುವು. ಇದರಿಂದ ದಕ್ಷತೆ ಕ್ಷೀಣಿಸಿ ಉತ್ಪಾದನೆ ಕಡಿಮೆಯಾಗುವುದು. ಈ ನಷ್ಟದ ಹೊರೆ ಇಡೀ ಸಮಾಜದ ಮೇಲೆ ಬೀಳುವುದು.

ಸ್ವತಂತ್ರ ಉದ್ಯಮ ಮತ್ತು ಸಮಾಜವಾದ ಪದ್ಧತಿಗಳೆರಡರ ಪ್ರಯೋಜನಗಳನ್ನೂ ಸಾಧ್ಯವಾದಮಟ್ಟಿಗೆ ಪಡೆಯಲು ಅನುಸರಿಸುವ ಮಧ್ಯಮಾರ್ಗಕ್ಕೆ ಮಿಶ್ರ ಆರ್ಥಿಕ ಪದ್ಧತಿಯೆಂದು ಹೆಸರು. ಇಲ್ಲಿ ಖಾಸಗಿ ಮತ್ತು ಸಾರ್ವಜನಿಕ ಉದ್ಯಮಗಳೆರಡೂ ಏಕಕಾಲದಲ್ಲಿಯೇ ಕೆಲಸ ಮಾಡುತ್ತಿರುವುವು. ಸಾರ್ವಜನಿಕ ಹಿತರಕ್ಷಣೆಗೆ ಅವಶ್ಯವೆನಿಸುವ ಮತ್ತು ಖಾಸಗಿಯವರಿಂದ ಅಭಿವೃದ್ಧಿಪಡಿಸಲಾಗದ ಉದ್ಯಮಗಳನ್ನು ಸಾರ್ವಜನಿಕವಲಯದಲ್ಲಿಟ್ಟುಕೊಂಡು ಉಳಿದವರನ್ನು ಖಾಸಗಿ ವಲಯಕ್ಕೆ ಬಿಡಲಾಗುವುದು. ಖಾಸಗಿ ಉದ್ಯಮಗಳ ಮೇಲೆ ಸರ್ಕಾರ ಸಾಮಾನ್ಯ ಹತೋಟಿಯನ್ನು ಮಾತ್ರ ಇಟ್ಟುಕೊಂಡಿರುವುದು. ಇವಕ್ಕೆ ಅವಶ್ಯವೆನಿಸುವ ನೆರವು ಮತ್ತು ಪ್ರೋತ್ಸಾಹವನ್ನು ಸರ್ಕಾರ ನೀಡುವುದು. ಯಾವುದೇ ಖಾಸಗಿ ಉದ್ಯಮವನ್ನಾಗಲೀ ಸಾರ್ವಜನಿಕ ಹಿತದೃಷ್ಟಿಯಿಂದ ರಾಷ್ಟ್ರೀಕರಣ ಮಾಡಿದಲ್ಲಿ ಸೂಕ್ತ ಪರಿಹಾರ ನೀಡಲಾಗುವುದು.

ಮಿಶ್ರ ಆರ್ಥಿಕ ಪದ್ಧತಿ ಉತ್ತಮವೆನಿಸಿದರೂ ಆಚರಣೆಗೆ ತರುವುದು ಬಹು ಕಷ್ಟ. ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಪರಸ್ಪರ ಸಂಶಯ ಮತ್ತು ಅಹಿತ ಸ್ಪರ್ಧೆಯ ಪ್ರವೃತ್ತಿ ಕಾಣಬರುವುದು. ಆದುದರಿಂದ ಇವು ಉದ್ಯಮಗಳ ದಕ್ಷತೆಗೆ ಗಮನ ಕೊಡುವುದಕ್ಕಿಂತಲೂ ತಮ್ಮ ಕ್ಷೇತ್ರ ವಿಸ್ತರಣೆಯಲ್ಲಿಯೇ ಹೆಚ್ಚು ಆಸಕ್ತಿ ವಹಿಸುವ ಸಂಭವವಿದೆ.

ವ್ಯಕ್ತಿಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ನಿಯಮಗಳನ್ನು ಸಂಪೂರ್ಣವಾಗಿ ಪ್ರತಿಪಾದಿಸುವ ಆರ್ಥಿಕ ಪದ್ಧತಿಯೇ ಸಹಕಾರಿ ಪದ್ಧತಿ. ಸ್ಪರ್ಧೆಯ ದುಷ್ಪರಿಣಾಮಗಳಿಗೂ ಕೇಂದ್ರೀಕೃತ ಸರ್ಕಾರಿ ಆಡಳಿತದ ದಬ್ಬಾಳಿಕೆಗೂ ಅವಕಾಶ ಕೊಡದೆ, ಜನಸಾಮಾನ್ಯರೂ ಸಮಾನ ಹಕ್ಕು ಬಾಧ್ಯತೆಗಳ ಆಧಾರದ ಮೇಲೆ ಸ್ವಪ್ರಯತ್ನದಿಂದಲೇ ತಮ್ಮ ಭೌತಿಕ ಹಾಗೂ ನೈತಿಕ ಜೀವನದ ವಿಕಾಸವನ್ನು ಸಾಧಿಸಲು ಸಹಕಾರ ಸರ್ವಶ್ರೇಷ್ಠಮಾರ್ಗವೆಂದು ನಂಬಲಾಗಿದೆ. ಸ್ವಸಹಾಯ ಮತ್ತು ಪರಸ್ಪರ ಸಹಾಯ, ಸ್ವಯಮಾಡಳಿತ, ಮಿತವ್ಯಯ, ಪ್ರಾಮಾಣಿಕತೆ ಮುಂತಾದ ಉನ್ನತ ಧ್ಯೇಯಗಳನ್ನು ಸಹಕಾರ ಪ್ರತಿಪಾದಿಸುವುದು. ಸಹಕಾರ ಜನಪ್ರಿಯ ಚಳುವಳಿಯಾಗಿದ್ದರೆ ಮಾತ್ರ ಪ್ರಯೋಜನ. ಸರ್ಕಾರದ ಮಾರ್ಗದರ್ಶನವಿದ್ದರೂ ಹತೋಟಿಯಿರಬಾರದು. ಸಹಕಾರದ ಯಶಸ್ಸಿಗೆ ವಿದ್ಯಾಪ್ರಗತಿ ಅತ್ಯಾವಶ್ಯಕ. ಸಹಕಾರ ಪದ್ಧತಿಯನ್ನು ನಾನಾ ಕ್ಷೇತ್ರಗಳಲ್ಲಿ ಆಚರಣೆಗೆ ತರಲಾಗಿದೆ. ಪದಾರ್ಥಗಳ ಮಾರಾಟ, ಲೇವಾದೇವಿ ಮುಂತಾದ ಕ್ಷೇತ್ರಗಳಲ್ಲಿ ಇದು ವಿಶೇಷ ಪ್ರಗತಿಯನ್ನು ಸಾಧಿಸಿದ್ದರೂ ಉತ್ಪಾದನಾ ಕ್ಷೇತ್ರದಲ್ಲಿ ಅದರಲ್ಲಿಯೂ ಅಧಿಕ ಬಂಡವಾಳ ಹೂಡಬೇಕಾದ ಆಧುನಿಕ ಕೈಗಾರಿಕಾ ಕ್ಷೇತ್ರದಲ್ಲಿ ಇದರ ಪ್ರಗತಿ ತೃಪ್ತಿಕರವಾಗಿಲ್ಲ. ಆದರೆ ರೈತರ ಹಿತಸಾಧನೆಗೆ ಸಹಕಾರ ಅತ್ಯುತ್ತಮ ಮಾರ್ಗವೆಂದು ಹೇಳಲಾಗಿದೆ. (ಕೆ.ಎನ್.ಎಂ.)

**ಆರ್ಥಿಕ ಬೆಳೆವಣಿಗೆ :** ವ್ಯಕ್ತಿಯ ಜೀವನ ಮಟ್ಟ ಸುಧಾರಿಸಿ, ದೇಶದ ಸಂಪನ್ಮೂಲಗಳು ಹೆಚ್ಚಿದಲ್ಲಿ ಅದನ್ನು ಆರ್ಥಿಕ ಬೆಳೆವಣಿಗೆ (ಎಕನಾಮಿಕ್ ಗ್ರೋತ್) ಎನ್ನಬಹುದು. ಇದು ಮಾನವನ ಅನೇಕ ಆಕಾಂಕ್ಷೆಗಳ ಸಾಧನೆಗೆ ಕೀಲಿಕೈನಂತಿದೆಯೆಂಬ ದೃಢನಂಬಿಕೆ ಎಲ್ಲೆಡೆ ಬೆಳೆಯುತ್ತಿದೆ. ಇಂಥ ನಂಬಿಕೆ ಕೇವಲ ಆರ್ಥಿಕ ಪ್ರಗತಿಯಲ್ಲಿ ಹಿಂದುಳಿದ ದೇಶಗಳಿಗಷ್ಟೇ ಸೀಮಿತವಾಗಿಲ್ಲ. ಪ್ರಗತಿಹೊಂದಿದ ರಾಷ್ಟ್ರಗಳೂ ಆರ್ಥಿಕ ಬೆಳೆವಣಿಗೆಗೆ ನಿರ್ಯಾತಮೌಲ್ಯವಿದೆಯೆಂದು ಕಂಡುಕೊಂಡಿರುವರು.

ಆರ್ಥಿಕ ಬೆಳೆವಣಿಗೆಯ ವಿಷಯ ಕೇವಲ ಒಂದು ದೇಶದ ಆರ್ಥಿಕ ಬೆಳೆವಣಿಗೆಯ ಪ್ರಶ್ನೆಯಾಗಿರದೆ ಅಂತಾರಾಷ್ಟ್ರೀಯ ರಾಜಕೀಯದಲ್ಲಿಯೂ ಇಂದು ಮಹತ್ವದ ಪ್ರಶ್ನೆಯಾಗಿದೆ. 19ನೆಯ ಶತಮಾನದಂತೆಯೇ ದೀರ್ಘಕಾಲೀನ ಆರ್ಥಿಕ ಬದಲಾವಣೆಯ ಸಮಸ್ಯೆಯನ್ನು

ಅರ್ಥಶಾಸ್ತ್ರಜ್ಞರು ಮುಖ್ಯವಾಗಿ ಚರ್ಚಿಸುವ ಸಮಯ ಬಂದಿದೆ. ಇಲ್ಲಿಯವರೆಗಿನ ಅರ್ಥಶಾಸ್ತ್ರದ ಕೃತಿಗಳಲ್ಲಿ ಆರ್ಥಿಕ ಬೆಳವಣಿಗೆಯ ವಿಷಯ ಗೌಣಸ್ಥಾನ ಹೊಂದಿತ್ತು. ಕೆಲವು ಸಂದರ್ಭಗಳಲ್ಲಿ ಅರ್ಥಶಾಸ್ತ್ರಜ್ಞರು ಈ ವಿಷಯ ಉಳಿದೆಲ್ಲ ವಿಷಯಗಳಲ್ಲಿ ಸಮಾವೇಶಗೊಂಡಿರುವುದರಿಂದ ಅದನ್ನು ಪ್ರತ್ಯೇಕವಾಗಿ ವಿವೇಚಿಸುವುದು ಅನಾವಶ್ಯಕ ಎಂದು ತಿಳಿದರು. ಇನ್ನು ಕೆಲವು ಸಂದರ್ಭಗಳಲ್ಲಿ ವಿಷಯಗಳನ್ನು ಚರ್ಚಿಸಿದ ಅನಂತರ ಹಿನ್ನೆಲೆಯಂತೆ ಅದನ್ನು ಚರ್ಚಿಸಿದರು. ಈ ನಡುವೆ ನಿರುದ್ಯೋಗ ಸಮಸ್ಯೆ, ಬಂಡವಾಳ ವಿನಿಯೋಗ ಸಮಸ್ಯೆ, ಬಡ್ಡಿ ಹಾಗೂ ಲಾಭಗಳ ಸಮಸ್ಯೆ, ಬಂಡವಾಳ ನಿರ್ಮಾಣ ಮತ್ತು ವ್ಯಾಪಾರೀ ಚಕ್ರ ಸಮಸ್ಯೆ ಇತ್ಯಾದಿ ಅನೇಕ ಉದ್ವೇಗಕಾರಕ ಸಮಸ್ಯೆಗಳನ್ನು ಉತ್ಸಾಹದಿಂದ ಚರ್ಚಿಸುತ್ತ ಮುಂದುವರಿಯಲಾಗಿದೆ. ಆದರೆ ಇವೆಲ್ಲವುಗಳ ವಿಶ್ಲೇಷಣೆಗೆ ಆರ್ಥಿಕ ಬೆಳವಣಿಗೆಯ ಸಿದ್ಧಾಂತದ ಚರ್ಚೆ ಅಗತ್ಯ ಎಂಬ ಕಲ್ಪನೆ ದೃಢವಾಗುತ್ತಿರುವುದು ಕೇವಲ ಇತ್ತೀಚಿನ ಕಾಲದಲ್ಲಿ.

ಆರ್ಥಿಕ ಬೆಳವಣಿಗೆಯ ಸಿದ್ಧಾಂತ ಅರ್ಥಶಾಸ್ತ್ರದಲ್ಲಿ ಹೊಸ ವಿಷಯವೇನಲ್ಲ. ಹಿಂದಿನ ಶತಮಾನದಲ್ಲಿ ಅರ್ಥಶಾಸ್ತ್ರಜ್ಞರು ಅದನ್ನು ನಿರ್ಲಕ್ಷಿಸಿರಲಿಲ್ಲ. ಆ್ಯಡಂ ಸ್ಮಿತ್, ಜೆ.ಎಸ್.ಮಿಲ್ ಹಾಗೂ ಮಾರ್ಷಲ್ ಮುಂತಾದ ಅರ್ಥಶಾಸ್ತ್ರಜ್ಞರು ಈ ವಿಷಯದ ಮೇಲೆ ವಿಚಾರಪೂರ್ಣವಾದ ಅಧ್ಯಾಯಗಳನ್ನು ಬರೆದಿರುವರು. ಕೆಲವರಂತೂ ಸ್ಥಿರಪರಿಸ್ಥಿತಿಯಲ್ಲಿ ಸಂಪನ್ಮೂಲಗಳ ವಿನಿಯೋಗದ ವಿಷಯವಾಗಿ ಸಂಕೀರ್ಣವಾಗಿ ಸಿದ್ಧಾಂತಗಳನ್ನೇ ರಚಿಸಿರುವರು. ಆದರೆ ಇತ್ತೀಚಿನ ಕೆಲವು ದಶಕಗಳಲ್ಲಿ ಆರ್ಥಿಕ ಬೆಳವಣಿಗೆಯ ಬಗೆಗೆ ಹೆಚ್ಚಿನ ಕುತೂಹಲ ಅರ್ಥಶಾಸ್ತ್ರದಲ್ಲಿ ಕೇನ್ಸ್ ಮಹಾಶಯನ ಲೇಖನಗಳಿಂದಾದ ವಿಚಾರಕ್ರಾಂತಿಯ ಅನಂತರವೇ ಹುಟ್ಟಿಕೊಂಡಿತು. 20ನೆಯ ಶತಮಾನದಲ್ಲಿ ಆರ್ಥಿಕ ಬೆಳವಣಿಗೆಯ ಸಿದ್ಧಾಂತದ ಚರ್ಚೆಯನ್ನು ಪ್ರಾರಂಭಿಸಿದವರಲ್ಲಿ ಶಂಪೀಟರ್ ಎಂಬ ಜರ್ಮನ್ ಅರ್ಥಶಾಸ್ತ್ರಜ್ಞ ಅಗ್ರಗಣ್ಯ.

ಈ ವಿಷಯವಾಗಿ ಅನೇಕ ಅರ್ಥಶಾಸ್ತ್ರಜ್ಞರು ತಮ್ಮ ಮಾದರಿಗಳನ್ನು ಇತ್ತೀಚೆಗೆ ಪ್ರಕಟಪಡಿಸಿರುವರು. ಇದರ ವಿಷಯವಾಗಿ ಕಂಡುಬರುತ್ತಿರುವ ಸದ್ಯದ ಅಭಿರುಚಿ ಕೇವಲ ಆಕಸ್ಮಿಕವೇನಲ್ಲ. ಈ ದಶಕದಲ್ಲಿ ಚರ್ಚಿತ ವಿಷಯವಾದ ಪೂರ್ಣೋದ್ಯೋಗ ಗುರಿ ಆರ್ಥಿಕ ಬೆಳವಣಿಗೆಯಿಲ್ಲದೆ ಅಸಾಧ್ಯವೆಂದು ಕಂಡುಬಂದಿದೆ. ಅಲ್ಲದೆ ಮೇಲೆ ವಿವರಿಸಿದಂತೆ ಸದ್ಯದ ಜಾಗತಿಕ ಸಂಘರ್ಷಣೆಯ ಪರಿಸ್ಥಿತಿಯಲ್ಲಿ ಅದೊಂದೇ ಬದುಕುವ ದಾರಿ ಎಂಬುದೂ ಎಲ್ಲೆಡೆ ಮನವರಿಕೆಯಾಗಿದೆ.

ಆರ್ಥಿಕ ಬೆಳವಣಿಗೆ ಸಮಾಜದ ಮೂಲಭೂತ ರಚನೆಯಿಂದ ನಿರ್ಣಯವಾಗುವುದು. ಅದರಿಂದ ಈ ಸಿದ್ಧಾಂತ ನಿಜವಾಗಿ ವ್ಯಾಪಕವಾಗಿರಬೇಕಿದ್ದರೆ ಅದರಲ್ಲಿ ಭೌತಿಕ ಪರಿಸರ, ರಾಜಕೀಯ ಸಂಘಟನೆ, ಪ್ರೇರಣೆ, ಶಿಕ್ಷಣಪದ್ಧತಿ, ಕಾಯಿದೆಯ ಚೌಕಟ್ಟು, ವೈಜ್ಞಾನಿಕ ಮನೋವೃತ್ತಿ, ಹಾಗೂ ಉಳಿತಾಯದ ಬಗೆಗಿನ ಭಾವನೆಯಲ್ಲಿ ಬದಲಾವಣೆ–ಹೀಗೆ ಇನ್ನೂ ಅನೇಕ ವಿಷಯಗಳ ವಿವೇಚನೆಯನ್ನು ಅದು ಒಳಗೊಂಡಿರಬೇಕು. ಈ ಅನೇಕ ಬದಲಾವಣೆಗಳನ್ನು ಹೊಂದುವ ಘಟಕಗಳನ್ನು ಪ್ರತ್ಯೇಕ ವಿಂಗಡಿಸಿ ಅವುಗಳ ಪರಿಣಾಮವನ್ನು ಕೇವಲ ಸಂಕೇತಗಳ ರೂಪದಲ್ಲಿಯಾಗಲಿ, ಅಥವಾ ಕೇವಲ ಶಬ್ದಗಳಲ್ಲಿಯಾಗಲಿ ವಿವೇಚಿಸುವುದು ಅಸಾಧ್ಯ; ಅಲ್ಲದೆ ನಿರುಪಯುಕ್ತ ಆದರೂ ಸದ್ಯದ ವಿಶ್ಲೇಷಣೆಗಳು ಈ ಎರಡು ದಾರಿಗಳನ್ನೂ ಅನುಸರಿಸಿವೆ. ಡೋಮಾರ ಎಂಬ ಲೇಖಕನ ಅಭಿಪ್ರಾಯದಂತೆ ಈ ಎರಡು ಪದ್ಧತಿಗಳು ಒಂದು ಸೇತುವೆಯ ಎರಡು ತುದಿಗಳಂತಿವೆ. ಅವುಗಳನ್ನು ಕೂಡಿಸುವಂಥ ರಚನೆ ಇನ್ನೂ ಆಗಬೇಕಾಗಿದೆ.

ಆರ್ಥಿಕ ಬೆಳವಣಿಗೆಯ ಸರಿಯಾದ ಅರ್ಥ ಹಾಗೂ ವ್ಯಾಖ್ಯೆಯನ್ನು ಮಂದಗತಿಯಿಂದ ಬದಲಾಗುತ್ತಿರುವ ಉತ್ಪಾದನೆ ಮತ್ತು ಸ್ಥಿರ ಪರಿಸ್ಥಿತಿಯಲ್ಲಿರುವ ರಾಷ್ಟ್ರಗಳ ಅನುಭವದೊಡನೆ ಹೋಲಿಸಿ ನೋಡಬೇಕು. ಆಗ ಆರ್ಥಿಕ ಬೆಳವಣಿಗೆಯನ್ನು ಕೇವಲ ಅಸ್ತಿತ್ವ ಮಟ್ಟದಲ್ಲಿರುವ ಹಿಂದುಳಿದ ರಾಷ್ಟ್ರವನ್ನು ಕೆಲವೇ ದಶಕಗಳಲ್ಲಿ–ಶತಮಾನಗಳಲ್ಲಿ–ಸ್ಪಷ್ಟವಾಗಿ ಗುರುತಿಸಬಹುದಾದ ಬೆಳವಣಿಗೆಯ ವೇಗ–ಎಂದು ಅರ್ಥ ಮಾಡಬಹುದು. ಆರ್ಥಿಕ ಬೆಳವಣಿಗೆಯನ್ನು ಔದ್ಯಮೀಕರಣ ಎಂದೂ ವರ್ಣಿಸಲಾಗಿದೆ. ಐತಿಹಾಸಿಕ ದೃಷ್ಟಿಯಿಂದ ತೀವ್ರ ವೇಗದ ಆರ್ಥಿಕ ಬೆಳವಣಿಗೆ ಔದ್ಯಮೀಕರಣದಿಂದಲೇ ಉಂಟಾಯಿತೆಂದು ಕಂಡುಬರುವುದು. ಆದರೆ ಆರ್ಥಿಕ ಬೆಳವಣಿಗೆಯನ್ನು ಸಾಮಾನ್ಯವಾಗಿ, ಆರ್ಥಿಕ ವ್ಯವಹಾರಗಳ ವ್ಯಾಪಾರೀಕರಣ ಎನ್ನುವುದು ಹೆಚ್ಚು ಸೂಕ್ತ. ಏಕೆಂದರೆ ಕೇವಲ ಅಸ್ತಿತ್ವ ಮಟ್ಟದಲ್ಲಿರುವ, ಕೃಷಿಯೇ ಮುಖ್ಯ ಉದ್ದಿಮೆಯಾಗಿರುವ ದೇಶವೂ ಉತ್ಪಾದನೆಯ ತಾಂತ್ರಿಕತೆಯಲ್ಲಿ ಬದಲಾವಣೆಗಳನ್ನು ಮಾಡಿ ಪೇಟೆಯ ನಿಯಮಗಳನ್ನು ಸುಧಾರಿಸಿ, ದೇಶದ ಪ್ರದೇಶಗಳಲ್ಲಿಯ ಪರಸ್ಪರ ಅವಲಂಬನೆ ಹಾಗೂ ವ್ಯವಹಾರಗಳನ್ನು ಹೆಚ್ಚಿಸಿ ಔದ್ಯಮೀಕರಣವಿಲ್ಲದಿದ್ದರೂ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬಹುದು.

ಇನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮಟ್ಟಿಗೆ ಆರ್ಥಿಕ ಬೆಳವಣಿಗೆ ಸದ್ಯದ ಬೆಳವಣಿಗೆಯ ವೇಗವನ್ನು ಸ್ಥಿರಗೊಳಿಸುವ ಅಥವಾ ತೀವ್ರಗೊಳಿಸುವ ಅರ್ಥವನ್ನು ಸೂಚಿಸುವುದು.

ಆರ್ಥಿಕ ಬೆಳವಣಿಗೆಗೆ ಸಾಮಾನ್ಯವಾಗಿ ಯಾವುದೇ ಒಂದು ಗುರಿ ಎಂದು ಪರಿಗಣಿಸಬಾರದು. ಅದೊಂದು ಬೇರೆ ಉದ್ದೇಶಸಾಧನೆಯ ಮಾರ್ಗವಷ್ಟೆ. ಅದರಿಂದ ಗುರಿಗಳಿಗನು ಗುಣವಾಗಿ ವ್ಯಾಖ್ಯೆ ಮಾಡುವುದು ಮಹತ್ತ್ವದ್ದಾಗಿದೆ. ಇದೊಂದು ಬಿಕ್ಕಟ್ಟನ್ನುಂಟುಮಾಡಬಹುದು. ಆದರೆ ಇಂಥ ಬಿಕ್ಕಟ್ಟು ಕೇವಲ ಕಾಲ್ಪನಿಕ. ಏಕೆಂದರೆ ಅಂತಿಮ ಗುರಿ ಯಾವುದೇ ಇದ್ದರೂ ಆರ್ಥಿಕ ಬೆಳವಣಿಗೆಗೆ ಆವಶ್ಯಕವಾದದ್ದು ದುರ್ಲಭವಾದ ಸರಕುಗಳ ಹಾಗೂ ಸೇವೆಗಳ ಉತ್ಪಾದನೆಯನ್ನು ಹೆಚ್ಚಿಸುವುದು. ಈ ವಿಚಾರವನ್ನು ಎಲ್ಲರೂ ಒಪ್ಪುವರು. ಅದರಿಂದ ಆರ್ಥಿಕ ಅಭಿವೃದ್ಧಿ ಎಂಬ ಪದವನ್ನು ಯಾವುದೇ ದೇಶದ ಜನರು ಅಲ್ಲಿ ದೊರೆಯಬಹುದಾದ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸರಕುಸೇವೆಗಳ ಉತ್ಪಾದನೆಯನ್ನು ಸತತವಾಗಿ ಹೆಚ್ಚಿಸುವ ಕ್ರಮಕ್ಕೆ ಅನ್ವಯಿಸಬಹುದು.

ಕೇವಲ ಪದದ ಅರ್ಥವನ್ನೇ ಗಮನಿಸಿದರೆ ಈ ವ್ಯಾಖ್ಯೆ ಇಡೀ ಸಮಾಜವನ್ನೇ ಆರ್ಥಿಕ ಉತ್ಪಾದನೆಯ ಒಂದು ಘಟಕವನ್ನಾಗಿ ಪರಿವರ್ತಿಸುವ ವಿಚಾರವನ್ನು ಸೂಚಿಸುತ್ತದೆ. ಆದುದರಿಂದ ಆರ್ಥಿಕ ಬೆಳವಣಿಗೆ ಸಾಮಾನ್ಯ ಗ್ರಾಹಕರನ್ನು ಸಮಾಧಾನಗೊಳಿಸಬಲ್ಲ ಸರಕುಗಳ ಅಂದರೆ ಆಹಾರ, ಅರಿವೆ, ವಸತಿ ಸೌಕರ್ಯ, ಔದ್ಯೋಗಿಕ ಸಲಕರಣೆ, ರೇಡಿಯೊ ಕಾರ್ಯಕ್ರಮ, ಸರಕಾರದ ಸೇವೆಗಳು ಮುಂತಾದವುಗಳ ಉತ್ಪಾದನೆಯ ಸಾಮರ್ಥ್ಯವನ್ನು ಅಳೆಯುವುದು. ಕೆಲವು ಸಲ ಒಟ್ಟು ಆದಾಯದ ಬದಲು ತಲಾ ಆದಾಯದ ಸಹಾಯದಿಂದ ಆರ್ಥಿಕ ಬೆಳವಣಿಗೆಯನ್ನು ಅಳೆಯುವ ಪದ್ಧತಿಗೆ ಆಕ್ಷೇಪಣೆ ಎತ್ತಲಾಗಿದೆ. ಕೆಲವು ದೇಶಗಳು ಸೈನಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಜನಸಂಖ್ಯೆಯ ಹೆಚ್ಚಳವನ್ನು ಪ್ರೋತ್ಸಾಹಿಸಿದರೆ ತಲಾ ಆದಾಯದಲ್ಲಿ ಹೆಚ್ಚಳವಾಗದಿರಬಹುದು. ಆದರೆ ಇದು ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ, ಬಹಳ ವಿರೋಧವಾದುದೇನಲ್ಲ. ತಲಾ ಆದಾಯವೇ ಇರಲಿ ಒಟ್ಟು ಆದಾಯವೇ ಇರಲಿ ಅವುಗಳಲ್ಲಿ ಸಂಬಂಧವಿದ್ದೇ ಇದೆ. ಅವುಗಳಲ್ಲಿ ಯಾವುದೇ ಒಂದು ಸಾಧನವೂ ಆರ್ಥಿಕ ಬೆಳವಣಿಗೆಯ ಅಳತೆಗೋಲಾಗಿರಬಹುದು. ಇತ್ತೀಚೆಗೆ ರಾಷ್ಟ್ರೀಯ ಆದಾಯವನ್ನು ಗಣಿಸುವ ಪದ್ಧತಿಯಲ್ಲಾದ ಸುಧಾರಣೆಯಿಂದ ಅದನ್ನು ಹೆಚ್ಚು ಅಚ್ಚುಕಟ್ಟಾಗಿ ಉಪಯೋಗಿಸಿ ಯಾವುದೇ ಪ್ರದೇಶ ಅಥವಾ ದೇಶದ ನಿಜ ಆದಾಯದ ಪ್ರವಾಹವನ್ನು ಹಾಗೂ ಅವುಗಳ ರಚನೆಯನ್ನು ಹಣದ ಮೌಲ್ಯಕ್ಕೆ ಪರಿವರ್ತಿಸಿ ಅಳೆಯುವುದು ಶಕ್ಯ. ಬೆಲೆಗಳಲ್ಲಾಗಬಹುದಾದ ಬದಲಾವಣೆಗಳನ್ನು ಸರಿಪಡಿಸಿಕೊಂಡು ಒಟ್ಟು ಜನಸಂಖ್ಯೆಯಿಂದ ವಿಭಾಗಿಸಿದರೆ ತಲಾ ಆದಾಯದ ಕಲ್ಪನೆ ಬರುವುದು. ರಾಷ್ಟ್ರೀಯ ಆದಾಯವನ್ನು ಲೆಕ್ಕಿಸುವ ಅನೇಕ ಪದ್ಧತಿಗಳು ಪ್ರಚಲಿತವಾಗಿದ್ದರೂ ಎಲ್ಲ ಪದ್ಧತಿಗಳ ಮೂಲಭೂತ ಉದ್ದೇಶ ಒಂದೇ. ಅಂದರೆ ಯಾವುದೇ ಒಂದು ನಿರ್ದಿಷ್ಟ ಅವಧಿಯಲ್ಲಿ ಉತ್ಪಾದನೆಗೆ ಉಪಯೋಗಿಸಿದ ಸಂಪನ್ಮೂಲಗಳನ್ನು ಹಾಗೂ ಉತ್ಪಾದನೆಯ ಸಾಮರ್ಥ್ಯದಲ್ಲಿಯ ಹೆಚ್ಚಳಗಳನ್ನು ಗಮನಕ್ಕೆ ತೆಗೆದುಕೊಂಡು ಉತ್ಪಾದಿತ ಸರಕು ಸೇವೆಗಳಲ್ಲಿರುವ ನಿರ್ದಿಷ್ಟವಾದ ಹೆಚ್ಚಳವನ್ನು ಅಳೆಯುವುದು. ಆದರೆ ನಾವು ನೆನಪಿನಲ್ಲಿಡಬೇಕಾದ ವಿಷಯ ರಾಷ್ಟ್ರೀಯ ಆದಾಯದ ಲೆಕ್ಕಾಚಾರವನ್ನು ಎಷ್ಟು ದಕ್ಷತೆಯಿಂದ ಮಾಡಿದರೂ ಅದು ಆರ್ಥಿಕ ಬೆಳವಣಿಗೆಯ ಎಲ್ಲ ಮುಖಗಳನ್ನು ವ್ಯಾಪಿಸಿರಲಾರದು ಎಂಬುದು. ಏಕೆಂದರೆ ಜನರ ಶ್ರಮದ ವೇಳೆಯಲ್ಲಾದ ಕಡಿತ ಅಥವಾ ಮನೆ ಗೃಹಿಣಿಯರ ಕಾರ್ಯಗಳು ಮುಂತಾದ ವಿಷಯಗಳ ಮೌಲ್ಯವನ್ನು ಊಹಿಸುವುದು ಸಾಧ್ಯವಾಗಲಾರದು. ಅದರಂತೆ ತಲಾ ಆದಾಯದಲ್ಲಿಯ ಸರಾಸರಿ ಹೆಚ್ಚಳ ಉತ್ಪಾದನೆಯ ನಿಜವಾದ ವಿತರಣೆಯ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಡಲಾರದು. ಅದರಿಂದ ಕೇವಲ ರಾಷ್ಟ್ರೀಯ ಆದಾಯದ ಅಂಕಿಸಂಖ್ಯೆಗಳೂ ಆರ್ಥಿಕ ಬೆಳವಣಿಗೆಯ ಪೂರ್ಣ ಕಲ್ಪನೆಯನ್ನು ಮಾಡಿಕೊಡಲಾರವೆಂಬುದು ಸ್ಪಷ್ಟವಾಗುತ್ತದೆ. ಕೆಲವು ದೇಶಗಳ ಮಟ್ಟಿಗೆ ರಾಷ್ಟ್ರೀಯ ಆದಾಯವನ್ನು ಅಳೆಯುವ ಅಂಕಿಸಂಖ್ಯೆಗಳು ಸಿಗಲಾರವು. ಅದಕ್ಕೆ ಬೇರೆ ಪ್ರಯೋಗತಂತ್ರವನ್ನು ಉಪಯೋಗಿಸುವುದು ಸಾಧ್ಯವಿದೆ.

ಅದೆಂದರೆ ಸರಾಸರಿ ಆಯುಷ್ಯದಲ್ಲಿ ಆಗುವ ಹೆಚ್ಚಳ ಮಾನವ ಶಕ್ತಿಯ ಹೆಚ್ಚಿನ ಪರಿಣಾಮಕಾರಿ ಉಪಯೋಗವನ್ನು ತೋರಿಸುತ್ತದೆ; ಮತ್ತು ಉತ್ಪಾದನೆಯ ಸಾಮರ್ಥ್ಯವನ್ನು ಸ್ಪಷ್ಟವಾಗಿ ಕಾಣುವಂತೆ ಬದಲಾವಣೆ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿನ ಭಾಗದೊಡನೆ, ಅಂದರೆ ಕೆಲಸಗಾರರ ಪ್ರಮಾಣ ಅಥವಾ ಉದ್ದಿಮೆ ಅಥವಾ ಕೃಷಿ ಇವುಗಳೊಡನೆ ಹೊಂದಿಸುವುದು. ಐತಿಹಾಸಿಕ ಉದ್ದೇಶಗಳಿಗೆ ಮತ್ತು ಸರಿಯಾದ ಅಂಕಿಸಂಖ್ಯೆ ಸಿಗದಿರುವಾಗ ಇಂಥ ಪದ್ಧತಿಗಳನ್ನು ಉಪಯೋಗಿಸಬೇಕಾಗುವುದು.

ಆ್ಯಡಂ ಸ್ಮಿತ್‌ನಿಂದ ಮಾರ್ಷಲ್‌ವರೆಗಿನ ಎಲ್ಲ ಅರ್ಥಶಾಸ್ತ್ರಜ್ಞರು ಸಾಮಾನ್ಯವಾಗಿ ಆರ್ಥಿಕ ಬೆಳವಣಿಗೆಯ ಸಿದ್ಧಾಂತವನ್ನು ರಚಿಸುವ ಪ್ರಯತ್ನವನ್ನು ಮಾಡಿರುವರು. ಇವರು ಬದುಕಿದ್ದ ಕಾಲ ಯುರೋಪಿನ ಔದ್ಯೋಗಿಕ ಕ್ರಾಂತಿಯ ಕಾಲ. ಆ್ಯಡಂ ಸ್ಮಿತ್ ಮುಂತಾದ ಅರ್ಥಶಾಸ್ತ್ರಜ್ಞರು ಹಾಗೂ ಕಾರ್ಲ್ ಮಾರ್ಕ್ಸ್ ಯುರೋಪಿನ ಆರ್ಥಿಕ ವ್ಯವಸ್ಥೆ ಸ್ವಯಂ ಶಕ್ತಿಯಿಂದ ಪ್ರಗತಿ ಹೊಂದುತ್ತಿದ್ದ ಕಾಲದಲ್ಲೇ ಬದುಕಿದ್ದರು. ಯುರೋಪು ಬೆಳವಣಿಗೆಯ ಶಿಖರವನ್ನು ಮುಟ್ಟಿದ್ದನ್ನು ಕಣ್ಣಾರೆ ಕಂಡಿದ್ದರು. ಈ ಕಾರಣಗಳಿಂದ ಅವರು ಬರೆದ

ಆರ್ಥಿಕ ಬೆಳೆವಣಿಗೆಯ ಮಾದರಿಯನ್ನು ಹಾಗೂ ಪ್ರಗತಿಯ ವಿಷಯದ ಅಭಿಪ್ರಾಯಗಳು ತುಂಬ ಕುತೂಹಲಕಾರಿಯಾಗಿವೆ. ಇವರ ಅಭಿಪ್ರಾಯಗಳನ್ನೇ ಸಂಗ್ರಹಿಸಿದರೆ ಒಂದು ಬೆಳೆವಣಿಗೆಯ ಮಾದರಿಯನ್ನು ರಚಿಸುವುದು ಸಾಧ್ಯ. ಇಂಥ ಮಾದರಿಗೆ ಕ್ಲಾಸಿಕಲ್ ಮಾದರಿ ಎನ್ನುವರು ಮತ್ತು ಬಂಡವಾಳಗಾರಿಕೆಯಿಂದ ಬೆಳೆವಣಿಗೆಯ ಸಿದ್ಧಾಂತ ಎಂತಲೂ ಅನ್ನುವರು. ಇದರ ಮೂಲತತ್ತ್ವ ಬೆಳೆವಣಿಗೆ ಮತ್ತು ಜಡತೆ. ಈ ಹಿರಿಯ ಅರ್ಥಶಾಸ್ತ್ರಜ್ಞರ ವಿಚಾರದಂತೆ ಬಂಡವಾಳಶಾಹಿ ಪದ್ಧತಿಯ ಅರ್ಥವ್ಯವಸ್ಥೆಯ ಬೆಳೆವಣಿಗೆ ತಾಂತ್ರಿಕ ಕೌಶಲದ ಪ್ರಗತಿ ಹಾಗೂ ಜನಸಂಖ್ಯೆಗಳ ಹೆಚ್ಚಳಗಳಲ್ಲಿನ ಸ್ಪರ್ಧೆಯನ್ನು ಸೂಚಿಸುವುದು. ಈ ಸ್ಪರ್ಧೆಯಲ್ಲಿ ಕೆಲವು ಕಾಲದವರೆಗೆ ತಾಂತ್ರಿಕ ಪ್ರಗತಿ ಮುನ್ನಡೆಯಲ್ಲಿದ್ದು ಅನಂತರ ಅದು ತೀವ್ರವಾದ ಜಡತ್ವದಲ್ಲಿ ಕೊನೆಗೊಳ್ಳುವುದು. ತಾಂತ್ರಿಕ ಪ್ರಗತಿ ಬಂಡವಾಳ ಶೇಖರಣೆಯನ್ನು ಅವಲಂಬಿಸಿದ್ದರೆ ಬಂಡವಾಳದ ಹೆಚ್ಚಳದಿಂದ ಯಾಂತ್ರೀಕರಣ ಹಾಗೂ ಶ್ರಮ ವಿಭಜನೆ ಹೆಚ್ಚಾಗುವುದು. ಬಂಡವಾಳ ಶೇಖರಣೆಯ ಪ್ರಮಾಣ ಲಾಭದಮಟ್ಟ ಹಾಗೂ ಪ್ರವಣತೆಯನ್ನು (ಟ್ರೆಂಡ್) ಅವಲಂಬಿಸಿರುವುದು.

ಆರ್ಥಿಕ ಬೆಳೆವಣಿಗೆಯ ಮಾದರಿಯನ್ನು ಗಣಿತಶಾಸ್ತ್ರದ ಪರಿಣಾಮವಾಗಿ ತಯಾರಿಸ ಬಹುದು. ಮೇಲೆ ವಿವರಿಸಿದ ಅಂಶಗಳನ್ನು ಅವುಗಳ ಪರಿಣಾಮವಾಗಿ ಉಂಟಾಗುವ ಬದಲಾವಣೆಗಳನ್ನು ಸಮೀಕರಣ ಪದ್ಧತಿಯಿಂದ ಬರೆಯಬಹುದು. ಇಲ್ಲಿ ಎಷ್ಟು ನಿರ್ದಿಷ್ಟ ಅಂಶಗಳಿರುವುವೋ ಅಷ್ಟೇ ಅನಿರ್ದಿಷ್ಟ ಅಂಶಗಳೂ ಇರಬೇಕು. ಈ ಹಿರಿಯ ಲೇಖಕರನ್ನನುಸರಿಸಿ ಬೆಳೆವಣಿಗೆಯ ಮಾದರಿಗಳನ್ನು ಇನ್ನೂ ಅನೇಕರು ರಚಿಸಿರುವರು ಹಾಗೂ ರಚಿಸುತ್ತಲಿದ್ದಾರೆ. ಅದರಿಂದ ಪ್ರಾರಂಭದ ಮಾದರಿಯ ಸ್ಥೂಲವಾದ ರೂಪರೇಖೆಗಳನ್ನು ತಿಳಿಯುವುದು ಆವಶ್ಯಕ.

**ಮಾದರಿ**

ಸಿದ್ಧಾಂತ 1 : ಒಟ್ಟು ಉತ್ಪಾದನೆ O. ಕಾರ್ಮಿಕವರ್ಗದ ಗಾತ್ರ I, ಬಂಡವಾಳ ಸಂಗ್ರಹ Q. ಉತ್ಪಾದನೆಗೆ ದೊರೆಯಬಹುದಾದ ಭೂಮಿ A, ತಾಂತ್ರಿಕತೆಯ ಮಟ್ಟ T.

ಇವೆಲ್ಲವನ್ನೂ ಉತ್ಪಾದನೆಯ ಕಾರ್ಯ ಅವಲಂಬಿಸಿದೆ. ಈ ಭಾವನೆಯನ್ನು ಗಣಿತದ (ಉತ್ಪನ್ನ ಫಂಕ್ಷನ್) ರೂಪದಲ್ಲಿ $f$ ವನ್ನು ಸಂಕೇತ ಬಳಸಿ ಹೀಗೆ ಬರೆಯಬಹುದು.

$$O = f\,(L, K, Q, T) \qquad \dots (1)$$

ಸಿದ್ಧಾಂತ 2 : ಬಂಡವಾಳ ಸಂಗ್ರಹ ತಾಂತ್ರಿಕ ಪ್ರಗತಿಯನ್ನುಂಟುಮಾಡಬಲ್ಲುದು:

$$T = T\,(I) \qquad \dots (2)$$

ಈ ಸಮೀಕರಣವನ್ನು ತಾಂತ್ರಿಕ ಪ್ರಗತಿ, ಬಂಡವಾಳದ ವಿನಿಯೋಗವನ್ನು ಅವಲಂಬಿಸಿದೆ ಎಂದು ಮಾಡಬೇಕು. ಇದಕ್ಕಾಗಿಯೇ ಈ ಅರ್ಥಶಾಸ್ತ್ರಜ್ಞರು ತಾಂತ್ರಿಕ ಪ್ರಗತಿ ಪೂರ್ಣಸ್ವತಂತ್ರ ಘಟಕವೆಂದು ಬಗೆಯದೆ ಬಂಡವಾಳ ಶೇಖರಣೆಗೂ ಉಳಿತಾಯಕ್ಕೂ ಮಹತ್ವ ಕೊಟ್ಟಿರುವರು.

ಸಿದ್ಧಾಂತ 3 : ಬಂಡವಾಳ ವಿನಿಯೋಗ ಲಾಭವನ್ನು ಅವಲಂಬಿಸಿರುವುದು

$$I = dQ = I(R) \qquad \dots (3)$$

ಈ ಶಾಸ್ತ್ರಜ್ಞರು ಬಂಡವಾಳಗಾರರು ಲಾಭದಾಶೆಗಾಗಿ ಬಂಡವಾಳವನ್ನು ತೊಡಗಿಸುವರೆಂದು ನಿಶ್ಚಿತವಾಗಿ ತಿಳಿದಿದ್ದರು. ಅವರು ಭವಿಷ್ಯದಲ್ಲಿ ನಿರೀಕ್ಷಿಸುವ ಲಾಭ ಬಹಳಮಟ್ಟಿಗೆ ಸದ್ಯದಲ್ಲಿಯ ಲಾಭದ ಪ್ರಮಾಣವನ್ನೇ ಅವಲಂಬಿಸಿರುವುದು. ಮೇಲಿನ ಸಮೀಕರಣದಲ್ಲಿ R ನಿರ್ದಿಷ್ಟಪಡಿಸಿದ ಸಾಧನಗಳಿಂದ ಸಿಗುವ ಉತ್ಪಾದನೆ ಅಥವಾ ಲಾಭ (ಅಂದರೆ – ಭೂಮಿ ಹಾಗೂ ಬಂಡವಾಳಗಳಿಂದ) I ಬಂಡವಾಳ ವಿನಿಯೋಗ : dQ ಬಂಡವಾಳದಲ್ಲಾಗಬಹುದಾದ ನಿಕ್ಕಿ ಹೆಚ್ಚಳ (ವ್ಯಾಖ್ಯೆಯ ಪ್ರಕಾರ, ನಿಕ್ಕಿ ಬಂಡವಾಳ ವಿನಿಯೋಗ) ಹೆಚ್ಚಾದ ಬಂಡವಾಳಕ್ಕೆ d ಸರಿಯಾಗಿರಬೇಕು.

ಸಿದ್ಧಾಂತ 4 : ಲಾಭ ಶ್ರಮಿಕರ ಪೂರೈಕೆ ಮತ್ತು ತಾಂತ್ರಿಕ ಮಟ್ಟ ಇವುಗಳನ್ನು ಅವಲಂಬಿಸಿರುವುದು.

$$R = R\,(T, L) \qquad \dots (4)$$

ಲಾಭದ ಮಟ್ಟ ತಾಂತ್ರಿಕ ಕುಶಲತೆಯ ಮಟ್ಟ ಹಾಗೂ ಶ್ರಮಿಕರ ಸಂಖ್ಯೆ ಇವುಗಳಿಂದ ನಿರ್ಣಯಿಸಲ್ಪಡುವುದು.

ಸಿದ್ಧಾಂತ 5 : ಶ್ರಮಿಕರ ಸಂಖ್ಯೆ ಅವರ ವೇತನದ ಮೊತ್ತದ ಗಾತ್ರವನ್ನು ಅವಲಂಬಿಸಿದೆ.

$$L = L\,(W) \qquad \dots (5)$$

ಇದಕ್ಕೆ ಅಸ್ತಿತ್ವಮಟ್ಟದ ವೇತನ ಎನ್ನುವರು.

ಸಿದ್ಧಾಂತ 6 : ವೇತನ ಮೊತ್ತದ ಗಾತ್ರ ಬಂಡವಾಳ ವಿನಿಯೋಗದ ಮಟ್ಟವನ್ನು ಅವಲಂಬಿಸಿರುವುದು.

$$W = W\,(I) \qquad \dots (6)$$

ಅಂದರೆ ಜನರು ಸಾಮಾನ್ಯವಾಗಿ ತಮ್ಮ ಆದಾಯದಲ್ಲಿ ಮಾಡುವ ಎಲ್ಲ ಉಳಿತಾಯವೂ ಬಂಡವಾಳ ವಿನಿಯೋಗದಲ್ಲಿ ಪರಿವರ್ತನೆ ಹೊಂದುವುದೆಂಬ ಸಿದ್ಧಾಂತವನ್ನು ಹಿರಿಯ ಶಾಸ್ತ್ರಜ್ಞರು ಗ್ರಹಿಸಿದ್ದರು.

ಈಗ ಈ ಮಾದರಿಯನ್ನು ಪೂರ್ಣಗೊಳಿಸುವುದು ಮಹತ್ವದ್ದಾಗಿದೆ. ಇಲ್ಲಿಗೆ ಕ್ಲಾಸಿಕಲ್ ಮಾದರಿಯ ಎಲ್ಲ ಕಾರ್ಯಕಾರಿ ಸಮೀಕರಣಗಳು ಸಿಕ್ಕಂತಾದುವು. ಅಂದರೆ ಈ ಆರು ಸಮೀಕರಣಗಳು ಆರ್ಥಿಕ ಬೆಳೆವಣಿಗೆಯಲ್ಲಿಯ ಕಾರ್ಯಕಾರಣ ಸಂಬಂಧಗಳನ್ನು ಕಲ್ಪಿಸುವುವು. ಆದರೆ ಈ ಮಾದರಿಯಲ್ಲಿ 7 ಬದಲಾಗುವ ಅಂಶಗಳ ಪಟ್ಟಿ ಮಾಡಲಾಗಿದೆ. ಮಾದರಿ ರಚನೆ ಪೂರ್ಣವಾಗಬೇಕಾದರೆ ನಾವು ಇನ್ನೊಂದು ಸಾರೂಪ ಸಮೀಕರಣವನ್ನು ಸೇರಿಸಬೇಕು.

$$O = R + W \qquad \dots (7)$$

ಈ ಸಮೀಕರಣವನ್ನು ಎರಡು ಪ್ರಕಾರವಾಗಿ ಅರ್ಥಮಾಡಬಹುದು. ಲಾಭವನ್ನು ಮೇಲೆ ವಿವರಿಸಿದಂತೆ ಸ್ಥಿರ ಉತ್ಪಾದಕ ಸಾಧನ ಹಾಗೂ ಬಂಡವಾಳದ ಮೇಲಿನ ಉತ್ಪನ್ನ ಎಂದು ನಾವು ಭಾವಿಸಿದರೆ ಅದು ವ್ಯಾಖ್ಯೆಯ ಪ್ರಕಾರವೇ ಸಾರೂಪ್ಯ ಸಮೀಕರಣವಾಗಬಲ್ಲದು. ಇನ್ನೊಂದು ಅರ್ಥದಲ್ಲಿ ಒಟ್ಟು ರಾಷ್ಟ್ರೀಯ ಆದಾಯ ಒಟ್ಟು ಉತ್ಪಾದನೆಯ ವೆಚ್ಚ ಅಥವಾ ಎಲ್ಲ ಉತ್ಪಾದಿಕ ವಸ್ತುಗಳ ಹಾಗೂ ಸೇವೆಗಳ ಬೆಲೆ ಮತ್ತು ಈ ಮೊತ್ತ ಕಾರ್ಮಿಕರಲ್ಲಿ ಹಾಗೂ ಉಳಿದವರಲ್ಲಿ ಹಂಚಿಹೋಗುವುದೆಂದು ಅರ್ಥಮಾಡಬೇಕು.

ಈಗ ಒಂದು ನಿರ್ಧಾರಿತ ರಚನೆಯಾಯಿತು. ಇದರಲ್ಲಿ ಏಳು ಸಮೀಕರಣಗಳೂ ಏಳು ಗೊತ್ತಿಲ್ಲದ ಬದಲಾಗುವ ಅಂಶಗಳೂ ಇರುವುವು. ಇನ್ನು ದೀರ್ಘಕಾಲೀನ ಬೆಳೆವಣಿಗೆಯನ್ನು ಸೂಚಿಸುವ ಸಲುವಾಗಿ ಕೆಳಗಿನ ಸಮೀಕರಣವನ್ನು ಕೂಡಿಸಿಕೊಳ್ಳಬೇಕು.

$$W = WL \qquad \dots (8)$$

ಅಂದರೆ W ಕನಿಷ್ಠವೇತನವನ್ನು ತೋರಿಸುವುದು. ಇದೊಂದು ಸ್ಥಿರ ಅಂಶ.

ಮೇಲೆ ವಿವರಿಸಿದ ಎಲ್ಲ ಸಮೀಕರಣಗಳನ್ನು ಒಂದುಗೂಡಿಸಿದರೆ ಮಾದರಿಯ ಸಿದ್ಧಾಂತವಾಗುವುದು.

$$O = f\,(L, K, Q, T) \qquad \dots (1)$$
$$T = T\,(1) \qquad \dots (2)$$
$$I = dQ = I(R) \qquad \dots (3)$$
$$R = R = (T, L) \qquad \dots (4)$$
$$L = L\,(W) \qquad \dots (5)$$
$$W = W\,(I) \qquad \dots (6)$$
$$O = R + W \qquad \dots (7)$$

ಹಾಗೂ ದೀರ್ಘಕಾಲದ ಪರಿಸ್ಥಿತಿಯಲ್ಲಿ

$$W = WL \qquad \dots (8)$$

ಈ ಮಾದರಿಯಿಂದ ನಮಗೆ ಆರ್ಥಿಕ ಬೆಳೆವಣಿಗೆಯಲ್ಲಿನ ವರ್ತುಲಾಕಾರದ ಚಲನೆಯ ಸ್ಪಷ್ಟ ಕಲ್ಪನೆಯಾಗುವುದು. ಈ ವರ್ತುಲಾಕಾರದ ರಚನೆಯನ್ನು ಮಧ್ಯದಲ್ಲಿಯೇ ಒಡೆದು ಬೇರೆ ಬೇರೆ ಅಂಶಗಳಲ್ಲಿನ ಸಂಬಂಧವನ್ನು ತಿಳಿದುಕೊಳ್ಳುವುದು ಸಾಧ್ಯ. ಬಂಡವಾಳ ಗಾರಿಕೆಯ ಪದ್ಧತಿಯಲ್ಲಿ, ಲಾಭ ಮುಖ್ಯ ಅಂಶವಾಗಿದ್ದು ಅಲ್ಲಿಂದ ಪ್ರಾರಂಭಿಸಿದರೆ ಹೀಗೆ ಅಡಕವಾಗಿ ಬರೆಯಬಹುದು :

$dR \rightarrow dI \rightarrow dQ \rightarrow dT \rightarrow dW \rightarrow dL \rightarrow dR$ ಅಂದರೆ ಲಾಭ ಹೆಚ್ಚಿದಹಾಗೆಲ್ಲ ಬಂಡವಾಳ ವಿನಿಯೋಗ ಹೆಚ್ಚಾಗುವುದು. ಇದರಿಂದ ಬಂಡವಾಳಗಾರರಿಗೆ ಏಕಪ್ರಕಾರವಾಗಿ ಸುಧಾರಿಸುತ್ತಲಿರುವ ತಾಂತ್ರಿಕತೆಯ ಲಾಭ ಪಡೆಯುವುದಕ್ಕೆ ಅವಕಾಶ ಕಲ್ಪಿಸುವುದು. ಇದರಿಂದ ವೇತನ ಮೊತ್ತದಲ್ಲಿ ಹೆಚ್ಚಳವಾಗುವುದು. ವೇತನದಲ್ಲಿಯ ಈ ಹೆಚ್ಚಳ ಜನಸಂಖ್ಯೆಯ ಬೆಳೆವಣಿಗೆಯನ್ನು ಹೆಚ್ಚಿಸುವುದು. ಇದರಿಂದ ಭೂಮಿಯ ಫಲ ಕೊಡುವಶಕ್ತಿ ಕುಗ್ಗುವುದು. ಅಂದರೆ ಭೂಮಿಯಲ್ಲಿ ದುಡಿಯುವ ಕಾರ್ಮಿಕರ ಶ್ರಮಕ್ಕೆ ಪ್ರತಿಫಲದ ಪ್ರಮಾಣ ಕುಗ್ಗುವುದು. ಇದರಿಂದ ಶ್ರಮದ ಬೆಲೆ ಹೆಚ್ಚಾಗಿ ಲಾಭದ ಪ್ರಮಾಣ ಕಡಿಮೆಯಾಗುವುದು. ಹೀಗೆಯೇ ನಾವು ಕಡಿಮೆಯಾದ ಲಾಭದ ಪರಿಣಾಮವನ್ನು ಊಹಿಸಬಹುದು. ಈ ವಿಶ್ಲೇಷಣೆಯಿಂದ ಕ್ಲಾಸಿಕಲ್ ಲೇಖಕರ ದೃಷ್ಟಿಯಲ್ಲಿ ಬಂಡವಾಳವಿನಿಯೋಗ ಲಾಭದಲ್ಲಿ ಆಗುವ ಬದಲಾವಣೆಯ ಪರಿಣಾಮವೇ ಹೊರತು ಅದರ ಮಟ್ಟವನ್ನು ಅವಲಂಬಿಸಿರುವುದಿಲ್ಲ. ಬಂಡವಾಳದ ಶೇಖರಣೆ ಹೆಚ್ಚಲು ಲಾಭ ಹೆಚ್ಚಾಗಬೇಕು. ಬಂಡವಾಳದ ಹ್ರಾಸ, ಲಾಭದ ಇಳಿತದಿಂದ ಉಂಟಾಗುವುದು.

ಮಾರ್ಕ್ಸ್ ಹೇಳಿರುವ ಬೆಳೆವಣಿಗೆ ಮಾದರಿ ಕ್ಲಾಸಿಕಲ್ ಮಾದರಿಗಿಂತ ಭಿನ್ನವಾಗಿದೆ. ಆತ ತನ್ನ ರಚನೆಯಲ್ಲಿ ಬಂಡವಾಳಗಾರಿಕೆಯ ಬೆಳೆವಣಿಗೆ ಮುಂದುವರಿದಂತೆ ಯಾವ ರೀತಿಯಿಂದ ತನ್ನ ನಾಶವನ್ನು ತಾನೇ ತಂದುಕೊಳ್ಳಬಹುದೆಂಬುದನ್ನೂ ವಿವರಿಸಿದ್ದಾನೆ. ಅವನ ಮಾದರಿಗೆ ಬೆಳೆವಣಿಗೆ ಹಾಗೂ ಕುಸಿದುಬೀಳುವಿಕೆಯ ತತ್ತ್ವ ಎನ್ನುವರು. ತನ್ನ ಶ್ರೇಷ್ಠಕೃತಿಯಾದ ಕ್ಯಾಪಿಟಲ್ ಎಂಬ ಪುಸ್ತಕದಲ್ಲಿ ಆತ ಮೂರು ತತ್ತ್ವಗಳನ್ನೂ ಪ್ರತಿಪಾದಿಸಿದ್ದಾನೆ: 1. ಬಂಡವಾಳಗಾರರ ಆದಾಯ ಅಥವಾ ಲಾಭ ಶ್ರಮಿಕರ ಅನುಭೋಗಕ್ಕೆ ಸಿಗುವ ಆದಾಯವನ್ನು ಕಡಿಮೆಮಾಡುವುದರಿಂದಲೇ ಹೆಚ್ಚಬಲ್ಲುದು. 2. ಈ ರೀತಿಯಲ್ಲಿ

ಬಂಡವಾಳಗಾರರ ಆದಾಯವೂ ಹೆಚ್ಚಿದಾಗ ಲಾಭದ ಆಶೆಯೂ ಬಂಡವಾಳಗಾರರಲ್ಲಿ ಪೈಪೋಟಿಯನ್ನುಂಟುಮಾಡಿ ಬಂಡವಾಳ ವಿನಿಯೋಗ ಅವಕಾಶಕ್ಕೆ ಇಲ್ಲದಂತೆ ಮಾಡುವುದು. 3. ಜನಸಂಖ್ಯೆಯ ಗಾತ್ರ ಸಾಮಾಜಿಕ ಪರಿಸ್ಥಿತಿಯನ್ನು ಅವಲಂಬಿಸಿದೆ ಹಾಗೂ ಶ್ರಮಿಕರ ಸಾಮರ್ಥ್ಯ ತಾಂತ್ರಿಕತೆಯ ಮಟ್ಟವನ್ನು ಅವಲಂಬಿಸಿದೆ. ಇವು ಮಾರ್ಕ್ಸ್‌ನ ಮಾದರಿಯಲ್ಲಿಯ ಮುಖ್ಯ ನಿರ್ಣಯಗಳು. ಈ ತತ್ತ್ವ ಅನೇಕ ರೀತಿಯಲ್ಲಿ ವಿವಾದಾತ್ಮಕವಾಗಿ ಪರಿಣಮಿಸಿದ್ದರೂ ಅದರ ಮಹತ್ತ್ವವೆಂದರೆ 20ನೆಯ ಶತಮಾನದ ಅನೇಕ ಅರ್ಥಶಾಸ್ತ್ರಜ್ಞರು ತಮ್ಮ ವಿವೇಚನೆಗಳಲ್ಲಿ ಮಾರ್ಕ್ಸ್‌ನ ಮಾದರಿಯಿಂದ ಮುಖ್ಯವಾಗಿ ಪ್ರಭಾವಿತರಾಗಿದ್ದಾರೆ. ಸುಮಾರು 1870–1935ರ ವರೆಗೆ ಈ ವಿಷಯದ ಮೇಲೆ ಯಾವುದೇ ಗಮನಾರ್ಹ ಕೃತಿಯೂ ಕಂಡುಬರುವುದಿಲ್ಲ. ಆರ್ಥಿಕ ಬೆಳೆವಣಿಗೆಯ ವಿಷಯವನ್ನು ಈ ಶತಮಾನದಲ್ಲಿ ಪುನಶ್ಚೇತನಗೊಳಿಸಿದ ಶ್ರೇಯಸ್ಸು ಜೋಸೆಫ್ ಷಂಪೀಟರ್‌ಗೆ ಸಲ್ಲಬೇಕು. ಅವನ ಮಾದರಿಯಲ್ಲಿ ಬೆಳವಣಿಗೆಯ ಅಸ್ಥಿರತೆ–ತತ್ತ್ವ ಎನ್ನಬಹುದು. ಶಂಪೀಟರ್ ಕೂಡ ತನ್ನ ವಿಶ್ಲೇಷಣೆಗೆ ಕ್ಲಾಸಿಕಲ್ ಸಿದ್ಧಾಂತವನ್ನೇ [O = f (L, K, Q, T)] ಆಧಾರ ವಾಗಿರಿಸಿಕೊಂಡಿದ್ದಾನೆ. ಉಳಿತಾಯದ ವ್ಯಾಖ್ಯೆಯನ್ನು ಬದಲಿಸಿದ್ದಲ್ಲದೇ ಅದರ ಮೇಲೆ ಬಡ್ಡಿದರದ ಪ್ರಭಾವವನ್ನೂ ವಿವೇಚಿಸಿದ್ದಾನೆ. ಬಡ್ಡಿ ದರದಲ್ಲಿ ಹೆಚ್ಚಳ, ಲಾಭದ ಹೆಚ್ಚಿಗೆ ಅಂಶವನ್ನು ಉಳಿತಾಯದ ಕಡೆಗೆ ಹೊರಳಿಸಬಲ್ಲದು. ಬಂಡವಾಳ ವಿನಿಯೋಗದಲ್ಲಿ ಪ್ರೇರಿತ ವಿನಿಯೋಗ ಮತ್ತು ಸ್ವಯಂ ನಿರ್ಧಾರಿತ ವಿನಿಯೋಗವೆಂಬುದಾಗಿ ವಿಭಾಗಿಸಿದುದು ಅವನ ಮಹತ್ತ್ವದ ಕೊಡುಗೆ. ಪ್ರೇರಿತ ವಿನಿಯೋಗ ಲಾಭದ ಮಟ್ಟವನ್ನೂ ಸ್ವಯಂ ನಿರ್ಧಾರಿತ ವಿನಿಯೋಗ ಹೊಸ ಸಂಪನ್ಮೂಲಗಳ ಶೋಧ ಹಾಗೂ ಉತ್ಪಾದನೆಗಳನ್ನೂ ಅವಲಂಬಿಸಿವೆ. ಬಂಡವಾಳ ವಿನಿಯೋಗದ ದೊಡ್ಡಭಾಗ ದೀರ್ಘಕಾಲೀನ ಅಂಶಗಳನ್ನೇ ಅವಲಂಬಿಸಿದೆ ಎಂದು ಒತ್ತಿ ಹೇಳಿದ್ದಾನೆ. ಈ ದೀರ್ಘಕಾಲೀನ ಅಂಶಗಳೇ ಅವನ ನವೀನತೆ. ಇದು ಹೊಸ ಸಂಪನ್ಮೂಲಗಳ ಪರಿಶೋಧ ಇಲ್ಲವೆ ತಾಂತ್ರಿಕತೆಯ ಸುಧಾರಣೆ ಅಥವಾ ಇವೆರಡರ ಮಿಶ್ರಣ. ಒಂದೇ ವಾಕ್ಯದಲ್ಲಿ ಉತ್ಪಾದನೆಯ ಪ್ರಮಾಣದಲ್ಲಿ ಗಣನೀಯ ಹೆಚ್ಚಳವನ್ನುಂಟು ಮಾಡುವುದೇ ಮಾರ್ಪಾಟು. ಸ್ವಯಂ ನಿರ್ಧಾರಿತ ಬಂಡವಾಳಕ್ಕೂ ಮಾರ್ಪಾಟಿಗೂ ತೀರ ಸಂಬಂಧವಿದೆ. ಇಂಥ ಮಾರ್ಪಾಟುಗಳನ್ನು ಶೋಧಕ ಪರಿಶೋಧಿಸಿದರೆ ಅವುಗಳನ್ನು ಉದ್ದಿಮೆಗಳಲ್ಲಿ ಅಳವಡಿಸುವ ಸಾಹಸವನ್ನು ತೋರಿಸುವವ ಸಾಹಸಿಯಾದ ವ್ಯವಸ್ಥಾಪಕ (ಆಂಟ್ರಪ್ರನರ್). ಈತನ ಚಾಲಕಶಕ್ತಿ ಲಾಭದ ಪ್ರಮಾಣ ಎಂದು ಅವರ ಸಿದ್ಧಾಂತ.

ಷಂಪೀಟರನ ಅನಂತರದ ಇನ್ನೂ ಅನೇಕ ಅರ್ಥಶಾಸ್ತ್ರಜ್ಞರು ಈ ವಿಷಯದ ವಿವೇಚನೆಯ ಕ್ಷಿತಿಜದಲ್ಲಿ ಕಾಣಿಸಿಕೊಂಡಿರುವರು.

ಪೂರ್ಣ ಪ್ರಗತಿಯನ್ನು ಸಾಧಿಸಿದ ಪರಿಪಕ್ವ ಆರ್ಥಿಕ ವ್ಯವಸ್ಥೆ ಎದುರಿಸುವ ಸಾಮಾನ್ಯ ಜಡತ್ವ ಎಂಬ ಸಮಸ್ಯೆಯ ವಿಶ್ಲೇಷಣೆಯಿಂದ, ಅಭಿವೃದ್ಧಿ ಹೊಂದಿದ ಔದ್ಯಮಿಕ ರಾಷ್ಟ್ರದಲ್ಲಿ ಏಕಪ್ರಮಾಣದ ಬೆಳೆವಣಿಗೆಯನ್ನು ಸ್ಥಿರಗೊಳಿಸುವುದು ಹೇಗೆ ಎಂಬ ವಿವೇಚನೆಯನ್ನು ಹೆರಾಡ್ ಮತ್ತು ಕೆಲವು ಅರ್ಥಶಾಸ್ತ್ರಜ್ಞರು ಮಾಡಿರುವರು. ಒಂದು ದೃಷ್ಟಿಯಿಂದ ಇವು ವಿಶಿಷ್ಟ ತತ್ತ್ವಗಳಾಗಿದ್ದು ಸಾಮಾನ್ಯ ಬೆಳೆವಣಿಗೆಯ ಚರ್ಚೆಯಲ್ಲಿ ಅವನ್ನು ಸೇರಿಸುವುದು ಉಚಿತವಲ್ಲ. ಆದರೆ ಕ್ಲಾಸಿಕಲ್ ಮಾದರಿಯನ್ನು ಅನುಸರಿಸಿ ಅದರಲ್ಲಿನ ಆರ್ಥಿಕ ಬೆಳೆವಣಿಗೆಯ ಜಡತ್ವಕ್ಕೆ ಕಾರಣಗಳನ್ನು ಕಲ್ಪನಾಶಕ್ತಿಯಿಂದ ಇಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಆರ್ಥಿಕ ಬೆಳೆವಣಿಗೆಯಲ್ಲಿ ಸ್ವಯಪೋಷಕ ಹಂತವನ್ನು ತಲಪುವಾಗ ಅವಶ್ಯವಾಗುವ ಮೇಲೇರುವ (ಟೇಕ್‌ಆಫ್) ಪರಿಸ್ಥಿತಿಯಲ್ಲಿ ಉಂಟಾಗುವ ಸಮಸ್ಯೆಗಳ ಮೇಲೆ ತುಂಬ ಪರಿಣಾಮಕಾರಿಯಾಗಿದೆ. ವಾಲ್ಟರ್ ಸ್ಟೋವ್ ಎಂಬ ಆರ್ಥಿಕ ಇತಿಹಾಸಕಾರರ 'ಮೇಲಕ್ಕೆ ಏರು' ಎಂಬ ಪದವನ್ನು ಆರ್ಥಿಕ ಬೆಳೆವಣಿಗೆಯ ವಿಶ್ಲೇಷಣೆಗೆ ದೊರಕಿಸಿಕೊಟ್ಟ. ಈತ ಆರ್ಥಿಕ ವಿಶ್ಲೇಷಣೆಯ ಮೇಲೆ ಇತಿಹಾಸದ ಅಭ್ಯಾಸದ ಪ್ರಭಾವವನ್ನು ಕಂಡಿದ್ದಾನೆ. ಆರ್ಥಿಕ ಬೆಳೆವಣಿಗೆಯನ್ನು ಹಂತಗಳಲ್ಲಿ ವಿಂಗಡಿಸಿ ಪ್ರತಿಯೊಂದು ಹಂತದಲ್ಲಿರುವ ಸಮಸ್ಯೆಗಳನ್ನು ಐತಿಹಾಸಿಕ ಸಂದರ್ಭಗಳ ಸಹಾಯದಿಂದ ವಿಶ್ಲೇಷಿಸಿದ್ದಾನೆ. ಅದರಲ್ಲಿ ಮುಖ್ಯವಾಗಿ ಸ್ವಯಂಚಾಲಿತ ಬೆಳೆವಣಿಗೆಗಾಗಿ ಮೇಲೇರುವಿಕೆ ಎಂಬ ವಿಶ್ಲೇಷಣೆ ಅನೇಕ ಅರ್ಥಶಾಸ್ತ್ರಜ್ಞರ ಮೇಲೆ ಪ್ರಭಾವಬೀರಿದೆ.

ಆರ್ಥಿಕ ಬೆಳೆವಣಿಗೆಯಲ್ಲಿ ಹಂತ ಹಂತದ ಅಭಿವೃದ್ಧಿ ಮತ್ತು ಕ್ರಮೇಣ ಬೆಳೆವಣಿಗೆ ಈ ಎರಡೂ ತತ್ತ್ವಗಳು ಮಹತ್ವ ಕಳೆದುಕೊಂಡಿವೆ. ಇಂಥ ಯಾವುದೇ ದಾರಿಯಿಂದ ಆರ್ಥಿಕ ಬೆಳೆವಣಿಗೆ ವಿಫಲವಾಗುವುದು ನಿಶ್ಚಿತ ಎಂಬುದು ಈಗಿನ ಲೇಖಕರ ಅಭಿಪ್ರಾಯ. ಆರ್ಥಿಕ ಬೆಳೆವಣಿಗೆ ಸ್ವಾಭಾವಿಕವಾಗಿಯೇ ಅನೇಕ ಪರಸ್ಪರ ಸಂಬಂಧವಿಲ್ಲದ ನೆಗೆತಗಳನ್ನು ಒಳಗೊಂಡಿದೆ. ಆರ್ಥಿಕ ಬೆಳೆವಣಿಗೆಗೆ ಕಾರಣವಾಗುವ ಅಂಶಗಳಲ್ಲಿ ಪರಸ್ಪರ ಕಾರ್ಯ ಸಂಬಂಧವನ್ನು ಗಮನಿಸಿದಾಗ ನಮಗೆ ಕಂಡುಬರುವುದು ಈ ಸಂಬಂಧಗಳ ನಡುವೆ ಅನೇಕ ಬಿಡಿಸಲಾಗದಂಥ ಗಂಟುಗಳು ಮತ್ತು ಸಂಬಂಧವಿಲ್ಲದ ಅಂಶಗಳು. ಆದುದರಿಂದ ಇಂಥ ಜಡತ್ವದಲ್ಲಿರುವ ಆರ್ಥಿಕ ವ್ಯವಸ್ಥೆಯನ್ನು ಮೇಲಿನ ಉತ್ಪಾದನೆಯ ಮಟ್ಟ ಹಾಗೂ ಹೆಚ್ಚಿನ ಆದಾಯದ ಸ್ತರಕ್ಕೆ ಒಯ್ಯುವಾಗ ಪ್ರಾರಂಭದಲ್ಲಿಯ ಜಾಡ್ಯವನ್ನು ಹೊಡೆದೋಡಿಸಲು ಕನಿಷ್ಠ ಪ್ರಯತ್ನ ಅಥವಾ ಬಲವಾದ ಪ್ರಚೋದನೆ ಅತ್ಯವಶ್ಯವಾಗಿದೆ.

ಇಂಥ ಪ್ರಾರಂಭದ ಬಲವಾದ ಪ್ರಚೋದನೆಯನ್ನು ಪ್ರತಿಪಾದಿಸುವ ಎಲ್ಲ ಚರ್ಚೆಗಳೂ ಹಿಂದಿನಿಂದಲೂ ರೂಢಿಯಲ್ಲಿದ್ದ ಬಾಹ್ಯ ಆರ್ಥಿಕಸೌಲಭ್ಯ ವಿಷಯವನ್ನೇ ಪ್ರತಿಪಾದಿಸುತ್ತಿರುವುವು. ಇಂಥ ಕಾರ್ಯಗಳಲ್ಲಿ ಬಂಡವಾಳ ತೊಡಗಿಸುವುದರಿಂದ ನೇರ ಪ್ರತಿಫಲ ದೊರೆಯಲಾರದು. ಆದರೆ ಈ ಬಂಡವಾಳ ವಿನಿಯೋಗ ಇಡೀ ಸಮಾಜಕ್ಕೆ ಅಲ್ಲದೆ ಅದರೊಳಗಿನ ಕೆಲವು ಮಹತ್ತ್ವದ (ಆರ್ಥಿಕ ಬೆಳೆವಣಿಗೆಯ ದೃಷ್ಟಿಯಿಂದ) ಭಾಗಕ್ಕೆ ಪ್ರತಿಫಲ ಕೊಡಬಲ್ಲುದು. ಆದುದರಿಂದ ಕನಿಷ್ಠ ಪ್ರಯತ್ನದ ಕಲ್ಪನೆ ಹಳೆಯದೇ ಆಗಿದೆ. ಆದರೆ ಹೊಸತನ ಆರ್ಥಿಕ ಬೆಳೆವಣಿಗೆಯ ಸಂದರ್ಭದಲ್ಲಿ ಅಷ್ಟೆ.

ಈ ವಿಚಾರಕ್ಕೆ ಮಹತ್ವ ಕೊಟ್ಟವರಲ್ಲಿ ರೋಸೆನ್‌ಸ್ಟೈನ್ ರೊಡಾನ್ ಎಂಬ ಅರ್ಥಶಾಸ್ತ್ರಜ್ಞ ಮೊದಲಿಗ. ಈತ ಆರ್ಥಿಕ ಬೆಳೆವಣಿಗೆಯ ವಿಷಯವಾಗಿ ಬರೆದ ಗ್ರಂಥ 1943ರಲ್ಲಿ ಪ್ರಕಟವಾಯಿತು. ಆರ್ಥಿಕ ಬೆಳೆವಣಿಗೆಗೆ ಆತಂಕವಾಗಿರುವ ಮೂರು ಅಂಶಗಳನ್ನು ಈತ ಎತ್ತಿ ತೋರಿಸಿದ: 1. ಪೇಟೆಯ ಅಭಾವ: 2. ಸಾಮಾಜಿಕ ಸೌಲಭ್ಯಗಳ ಅಭಾವ: 3. ಬಂಡವಾಳದ ಅಭಾವ : ಈ ಕಾರಣಗಳಿಂದಾಗಿ ಕೇವಲ ಅಲ್ಪಸ್ವಲ್ಪ ಪ್ರಯತ್ನಗಳನ್ನು ಮಾಡುತ್ತ ಸಾಗಿದರೆ ಆರ್ಥಿಕ ಬೆಳೆವಣಿಗೆ ಸಾಧ್ಯವಿಲ್ಲ. ಯಾವುದೇ ಕನಿಷ್ಠ ಪ್ರಮಾಣದ ಬಂಡವಾಳ ವಿನಿಯೋಗ ಪ್ರಾರಂಭದಲ್ಲಿ ಅತ್ಯವಶ್ಯ. ಸ್ವಲ್ಪದರಲ್ಲಿ ಹೇಳುವುದಾದರೆ ಇದೇ ಮೇಲೇರುವ ಸಿದ್ಧಾಂತದ ಮೂಲ ಭಾವನೆ.

ಇವರಂತೆಯೇ ಹಾರ್ವೆ ಲೆಬೆನ್‌ಸ್ಟೈನ್ ಎಂಬ ಲೇಖಕನೂ ಕನಿಷ್ಠ ಪ್ರಯತ್ನದ ವಿಷಯವಾಗಿ ಇನ್ನೂ ಹೆಚ್ಚು ತರ್ಕಬದ್ಧವಾದ ಸಿದ್ಧಾಂತವನ್ನು ಒದಗಿಸಿದ್ದಾನೆ. ಯಾವುದೊಂದು ದೇಶದ ಜನಸಂಖ್ಯೆ ಏರುತ್ತಿರುವಾಗ ಅವಶ್ಯವಾದ ಕನಿಷ್ಠ ಪ್ರಯತ್ನದ ಪ್ರಮಾಣ ಎಷ್ಟಿರಬೇಕು ಎಂಬುದನ್ನು ಕೂಡ ಆತ ಅಂದಾಜು ಮಾಡಿದ್ದಾನೆ.

ನರ್ಕ್ಸ್ ಹಾಗೂ ಸಿಂಗರ್ ಎಂಬ ಲೇಖಕರೂ ತಮ್ಮ ಸಿದ್ಧಾಂತಗಳಲ್ಲಿ ಕನಿಷ್ಠ ಪ್ರಯತ್ನ ತತ್ತ್ವವನ್ನು ಎತ್ತಿ ಹಿಡಿದಿರುವರು. ನರ್ಕ್ಸ್ ಆರ್ಥಿಕ ಬೆಳೆವಣಿಗೆಯ ಅನೇಕ ರಂಗಗಳಲ್ಲಿ ಏಕಕಾಲದ ಬಂಡವಾಳ ವಿನಿಯೋಗವನ್ನು ಸಮರ್ಥಿಸಿದ್ದಾನೆ. ಈತನ ಸಿದ್ಧಾಂತಕ್ಕೆ ಸಮತೋಲ ಬೆಳೆವಣಿಗೆಯ ಸಿದ್ಧಾಂತ ಎನ್ನಬಹುದು. ಅನಭಿವೃದ್ಧಿ ದೇಶಗಳಲ್ಲಿಯ ಬಡತನದ ದುಷ್ಟ ವರ್ತುಲ ಹಾಗೂ ಮರೆಮಾಚಿರುವ ನಿರುದ್ಯೋಗಗಳನ್ನು ಕುರಿತು ಇವರ ವಿಶ್ಲೇಷಣೆಗಳು ತುಂಬ ನವೀನವಾಗಿವೆ. ಬಲವಾದ ಪ್ರಚೋದನೆಯ ತಂತ್ರ ಜನಸಂಖ್ಯೆಯಲ್ಲಿಯ ಶೇ.70 ರಿಂದ ಶೇ.90 ಕೃಷಿ ಉದ್ಯೋಗದಲ್ಲಿರುವಂಥ ಆರ್ಥಿಕವ್ಯವಸ್ಥೆಗೆ ಹೆಚ್ಚಿಗೆ ಹೊಂದಿಕೆಯಾಗುವ ಸಿದ್ಧಾಂತ ಎಂದು ಸಿಂಗರ್ ಹೇಳಿದ್ದಾನೆ. ಶೇ.80 ರಿಂದ ಶೇ.15 ಪ್ರಮಾಣಕ್ಕೆ ಬದಲಾಯಿಸುವ ಕ್ರಮ ಎಂಬ ಆರ್ಥರ್ ಲೇವಿಸ್‌ನ ವ್ಯಾಖ್ಯೆಯನ್ನು ಸಿಂಗರ್ ಸಮರ್ಥಿಸಿದ್ದಾನೆ.

ಹರ್ಷ್‌ಮನ್ ಎಂಬ ಲೇಖಕ ಸೂಚಿಸುವ ತಂತ್ರ ಬಹುಮಟ್ಟಿಗೆ ನರ್ಕ್ಸ್ ಹಾಗೂ ಸಿಂಗರ್ ಮಹಾಶಯರ ವಿಚಾರಗಳ ಸಮನ್ವಯವೆನ್ನಬಹುದು. ಆದರೆ ಆತ ನರ್ಕ್ಸ್‌ನ ಸಮತೋಲ ಬೆಳೆವಣಿಗೆಯ ವಿಚಾರವನ್ನು ಒಪ್ಪುವುದಿಲ್ಲ. ಅದು ಕೇವಲ ಬೆಳೆವಣಿಗೆ ಹೊಂದಿದ ಆದರೆ ತಾತ್ಪೂರ್ತಿಕವಾಗಿ ಉದ್ಯೋಗದಲ್ಲಿ ಮಂದಗತಿಯನ್ನನುಭವಿಸುವ ಆರ್ಥಿಕಪರಿಸ್ಥಿತಿಗೆ ಹೆಚ್ಚು ಹೊಂದಿಕೆಯಾಗಬಲ್ಲುದು ಎಂಬುದು ಆತನ ಅಭಿಪ್ರಾಯ. ಅವನ ವಿಚಾರದಂತೆ ಬಲವಾದ ಪ್ರಚೋದನೆ ತಂತ್ರವನ್ನು ಮುಂದಿನ ಬೆಳೆವಣಿಗೆಯ ದೃಷ್ಟಿಯಿಂದ ಮಹತ್ವವಾದ ಉದ್ದಿಮೆಗಳಲ್ಲಿ ಅಥವಾ ಆರ್ಥಿಕ ರಂಗಗಳಲ್ಲಿ ಉಪಯೋಗಿಸಬೇಕು. ಇಂಥ ರಂಗಗಳಲ್ಲಿ ಬಂಡವಾಳ ವಿನಿಯೋಗದಿಂದ ಅವು ತಮ್ಮ ಬೆಳೆವಣಿಗೆಯ ಪ್ರಮಾಣವನ್ನು ಉಳಿದ ರಂಗಗಳಿಗೆ ಮುಟ್ಟಿಸುತ್ತ ಒಟ್ಟು ಬೆಳೆವಣಿಗೆಯ ವೇಗವನ್ನು ಹೆಚ್ಚಿಸಬಲ್ಲುವು. ಆದುದರಿಂದ ಕೆಲವು ಯೋಜನೆಗಳನ್ನು ಕೈಗೊಂಡಾಗ ಸದ್ಯದ ಲಾಭದ ಕಡೆಗಷ್ಟೇ ಗಮನ ಕೊಡುವುದು ಸರಿಯಲ್ಲ. ಬಡದೇಶಗಳು ವಾಸ್ತವವಾಗಿ ಮಿತವ್ಯಯಿಗಳಾಗುವುದು ಸರಿಯಲ್ಲ. ಅವರು ನೇರ ಉತ್ಪಾದನೆಯಲ್ಲಿ ಆಗಬಹುದಾದ ಹೆಚ್ಚಳ, ಸಾಮಾಜಿಕ ಮಹತ್ವದ ಬಂಡವಾಳ ನಿರ್ಮಾಣ ಇವುಗಳ ತುಲನೆಮಾಡಿ ಸಾಮಾಜಿಕ ಮಹತ್ವದ ಬಂಡವಾಳ ನಿರ್ಮಾಣಕ್ಕೇ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಏಕೆಂದರೆ ನೇರವಾದ ಉತ್ಪಾದನೆಯ ದೃಷ್ಟಿಯಿಂದಲೂ ಇದು ಅವಶ್ಯವಿದೆ ಎಂಬುದನ್ನು ಪ್ರತಿಪಾದಿಸಿದ್ದಾರೆ.

ಆದುದರಿಂದ ಹೆಚ್ಚಿನ ಪ್ರಮಾಣದ ಬೆಳೆವಣಿಗೆಯನ್ನು ಹೊಂದಬೇಕಾದರೆ ಹಿಂದುಳಿದ ದೇಶಗಳು ಬುದ್ಧಿಪೂರ್ವಕವಾಗಿಯೇ ಸಮತೋಲವನ್ನು ತಪ್ಪಿಸಬೇಕು. ಆರ್ಥಿಕ ವ್ಯವಸ್ಥೆಯ ಯಾವ ರಂಗಗಳಲ್ಲಿ ಈ ಅಸಮತೋಲ ಬೆಳೆವಣಿಗೆಯ ತಂತ್ರವನ್ನು ಉಪಯೋಗಿಸಬೇಕು ಎಂಬ ವಿಚಾರವಾಗಿ ವಿಸ್ತೃತವಾದ ಚರ್ಚೆಯನ್ನು ಮಾಡಿದ್ದಾನೆ. ಈ ಚರ್ಚೆಯಲ್ಲಿ ಅವನು ಸಂಬಂಧ (ಲಿಂಕೇಜ್) ಎಂಬ ಪದದ ಉಪಯೋಗವನ್ನು ಮಾಡಿದ್ದಾನೆ. ಲಿಂಕೇಜ್ ಅಂದರೆ ಉದ್ದಿಮೆಗಳ ಪರಸ್ಪರ ಸಂಬಂಧ ಎಂದು ಅರ್ಥಮಾಡಬಹುದು. ಕೆಲವು ಅನೇಕ ಮೂಲ ಉದ್ದಿಮೆಗಳಿಗೆ ತಳಪಾಯದಂತಿರುವುವು. ಇವುಗಳ ಬೆಳೆವಣಿಗೆ ಅನೇಕ ಉದ್ದಿಮೆಗಳನ್ನು ಪ್ರಚೋದಿಸಬಹುದು. ಇಂಥ ಉದ್ದಿಮೆಗಳಿಗೆ ಹೊಸ ಉದ್ದಿಮೆ ಪ್ರಚೋದಕಗಳು ಅಂದರೆ ಯಾವ ಉದ್ದಿಮೆಗಳು ಅದಕ್ಕೆ ಬೇಕಾಗುವ ಕಚ್ಚಾ ಸರಕುಗಳನ್ನು ಉತ್ಪಾದಿಸುವ ಉದ್ದಿಮೆಗಳನ್ನು ಪ್ರಚೋದಿಸುವುವೂ ಅವು.

ಹೀಗೆ ಉದ್ದಿಮೆಗಳನ್ನು ವಿಂಗಡಿಸಿದ ಮೇಲೆ ಮುಖ್ಯ ಕಾರ್ಯಕ್ರಮವೆಂದರೆ ಯಾವ ಉದ್ದಿಮೆಗಳಲ್ಲಿ ಅತಿ ಹೆಚ್ಚು ಸಂಬಂಧ ಪರಿಣಾಮ ಇರುವುದೋ ಅಂಥ ಉದ್ದಿಮೆಗಳಲ್ಲಿ ಹೆಚ್ಚು ಬಂಡವಾಳ ವಿನಿಯೋಗ ಮಾಡುವುದು. ಅತಿ ಹೆಚ್ಚು ಸಂಬಂಧ ಪರಿಣಾಮವಿರುವ ಉದ್ದಿಮೆ ದೇಶ ಕಾಲ ಹಾಗೂ ಪರಿಸ್ಥಿತಿಗನುಗುಣವಾಗಿ ಬದಲಾಗಬಹುದು. ಹರ್ಷ್‌ಮನ್‌ನ ವಿಚಾರದಂತೆ ಉತ್ಪಾದನೆಯ ಮಧ್ಯವರ್ತಿ ಸ್ಥಾನದಲ್ಲಿರುವ ಉದ್ದಿಮೆಗಳಿಗೆ ಪ್ರಾರಂಭದ ಅಥವಾ ಅಂತ್ಯದ ಉದ್ದಿಮೆಗಳಿಗಿಂತ ಹೆಚ್ಚಿನ ಸಂಬಂಧ ಪರಿಣಾಮ ಕಂಡುಬರುವುದು. ಕಬ್ಬಿಣ ಮತ್ತು ಉಕ್ಕಿನ ಉದ್ದಿಮೆಯಲ್ಲಿ ಅತಿ ಹೆಚ್ಚು ಸಂಬಂಧ ಪರಿಣಾಮವಿದೆಯೆಂದು ಹರ್ಷ್‌ಮನ್‌ನ ಅಭಿಪ್ರಾಯ. ಅದರಿಂದ ಹಿಂದುಳಿದ ದೇಶಗಳು ಇಂಥ ಕಾರ್ಖಾನೆಗಳನ್ನು ಬಯಸುವುದು ಕೇವಲ ಪ್ರತಿಷ್ಠೆಯ ಮಬ್ಬು ಅಲ್ಲ ಎಂದು ಅವನು ತಿಳಿದಿದ್ದಾನೆ.

ಲಿಂಕೇಜ್ ವಿಶ್ಲೇಷಣೆ ಹಿಂದುಳಿದ ರಾಷ್ಟ್ರಗಳ ವಿಷಯದಲ್ಲಿ ತುಂಬ ಮಹತ್ತದ್ದಾಗಿದೆ. ಕೃಷಿಯನ್ನೇ ಅವಲಂಬಿಸಿರುವ ಈ ದೇಶಗಳು ಲಿಂಕೇಜ್ ದೃಷ್ಟಿಯಿಂದ ತುಂಬ ನಿಶ್ಶಕ್ತವಾಗಿವೆ. ರೈತವಾರಿ ಪದ್ಧತಿಯ ಕೃಷಿಯಲ್ಲಂತೂ ತೀರ ಕಡಿಮೆ ಲಿಂಕೇಜ್ ಇರುವುದು ಸಾಮಾನ್ಯವಾಗಿ ಮೂಲವಸ್ತುಗಳನ್ನು ಉತ್ಪಾದಿಸುವ ಎಲ್ಲ ಉದ್ದಿಮೆಗಳಲ್ಲಿಯೂ–ಅಂದರೆ ಕೃಷಿ, ಖನಿಜ, ಇತರ ಸಣ್ಣ ಉದ್ದಿಮೆಗಳು ಇವುಗಳಲ್ಲಿ–ಲಿಂಕೇಜ್ ಪರಿಣಾಮ ಅಲ್ಪ. ಅದರಿಂದ ಇಂಥ ಸಾಮಾನ್ಯವಾಗಿ ಬೆಳೆಯುವ ಉದ್ದಿಮೆಗಳಲ್ಲಿ ಬಂಡವಾಳ ವಿನಿಯೋಗ ಪರಿಣಾಮಕಾರಿ ಯಾಗಲಾರದು.

ಆಮದು ಉದ್ದಿಮೆಗಳಲ್ಲಿನ ಲಿಂಕೇಜ್ ಪರಿಣಾಮವನ್ನು ಉಪಯೋಗಿಸಿ ಆರ್ಥಿಕ ಬೆಳೆವಣಿಗೆಯನ್ನು ಸಾಧಿಸುವ ರೀತಿಯ ವಿಶ್ಲೇಷಣೆಯನ್ನು ಮಾಡಿರುವುದು, ಆರ್ಥಿಕ ಬೆಳೆವಣಿಗೆಯ ಪುಸ್ತಕಗಳಲ್ಲಿ ಹರ್ಷಮನ್‌ನ ತಂತ್ರ ಎಂದು ಪ್ರಸಿದ್ಧಿ ಪಡೆದಿದೆ. ಪ್ರಾರಂಭದಲ್ಲಿ ಆಮದು ವಸ್ತುಗಳನ್ನು ಉಪಯೋಗಿಸುವ ಉದ್ದಿಮೆ ಪ್ರಚೋದನೆ ಪರಿಣಾಮದ ದೃಷ್ಟಿಯಿಂದ ಉಪಯೋಗಿಸಿಕೊಂಡು ಅನಂತರ ಆಮದು ವಸ್ತುಗಳ ಪೇಟೆ ಸಾಕಷ್ಟು ವೃದ್ಧಿಯಾದೊಡನೆ ಆಮದು ಮಾಡುತ್ತಿದ್ದ ವಸ್ತುಗಳನ್ನು ಉತ್ಪಾದಿಸುವ ಉದ್ದಿಮೆಗಳನ್ನು ನೇರವಾಗಿ ಪ್ರಾರಂಭಿಸ ಬೇಕು. ಇಂಥ ಪ್ರಯತ್ನದಿಂದ ಆರ್ಥಿಕ ಪರಿಸ್ಥಿತಿಯನ್ನು ಪರಿಶ್ರಮದಿಂದ ಮೇಲಕ್ಕೆತ್ತುವ ಕ್ರಮವನ್ನು ಮನಸ್ಸಿನಲ್ಲಿ ರೂಪಿಸಿಕೊಂಡಿರುವವರು ಒಮ್ಮೆ ಬೆಳೆವಣಿಗೆಯ ಹೊಸ್ತಿಲನ್ನು ಮುಟ್ಟಿದೊಡನೆ ಆಮದು ವಸ್ತುಗಳ ಬದಲಾಗಿ ಅವುಗಳನ್ನು ದೇಶದಲ್ಲಿಯೇ ಉತ್ಪಾದಿಸುವ ಉದ್ದಿಮೆಗಳಿಗೆ ರಕ್ಷಣೆಯನ್ನು ಅಥವಾ ಸಹಾಯ ಧನವನ್ನು ಕೊಡುವುದು ಸರಿಯಾದ ನೀತಿಯಾಗುವುದು ಎಂಬುದು ಅವರೆಲ್ಲರ ಅಭಿಪ್ರಾಯ. ದೇಶಗಳು ಆಯಾತ ಮಾಡುತ್ತಿರುವ ವಸ್ತುಗಳನ್ನು ಉತ್ಪಾದಿಸುವುದರಲ್ಲೇ ಹೆಚ್ಚಿನ ಪ್ರಯೋಜನವಿದೆ ಎಂಬ ಸಿದ್ಧಾಂತ ಎಲ್ಲ ಕ್ರಮಗಳನ್ನೂ ಕ್ರಿಯಾತ್ಮಕ ಅಥವಾ ಪ್ರಗತಿಪರ ಸಂದರ್ಭದಲ್ಲಿ ನೋಡಿದಾಗ ಹೊಳೆಯಬಲ್ಲುದೇ ಹೊರತು ಸಾಂಪ್ರದಾಯಿಕ ತತ್ತ್ವದಿಂದ ಹುಡುಕಿ ತೆಗೆಯುವುದು ಅಸಾಧ್ಯ ಎಂಬುದು ಹರ್ಷಮನ್‌ರ ಅಭಿಪ್ರಾಯ.

ಮೇಲೆ ವಿವರಿಸಿದ ಆರ್ಥಿಕ ಬೆಳೆವಣಿಗೆಯನ್ನು ವಿವರಿಸುವ ಈ ಎಲ್ಲ ಸಿದ್ಧಾಂತವನ್ನೂ ಹೋಲುವ ವಿವೇಚನೆಗಳು ಸಾಕಷ್ಟು ಸಮಾಧಾನಕಾರಿಯಾಗಿಲ್ಲ. ಇದಕ್ಕೆ ಮುಖ್ಯಕಾರಣ ಯುರೋಪಿನ ಸ್ಥಿರಪರಿಸ್ಥಿತಿಯಲ್ಲಿ ಬೆಳೆದ ಈ ವಿವೇಚನೆಗಳು ಆರ್ಥಿಕ ಬೆಳೆವಣಿಗೆಯನ್ನು ರೂಪಿಸುವ ಇನ್ನೂ ಅನೇಕ ಸಾಮಾಜಿಕ, ರಾಜಕೀಯ, ನೈಸರ್ಗಿಕ ಮುಂತಾದ ಅಂಶಗಳನ್ನು ಬದಲಾಗದ ಅಂಶಗಳು ಎಂದು ನಂಬಿದೆ. ಇದರಿಂದ ವಿವೇಚನೆಯ ವ್ಯಾಪ್ತಿ ಚಿಕ್ಕದಾಗಿದೆ. ಇಂಥ ಸೂತ್ರಗಳಂತಿರುವ ಮಾದರಿಗಳನ್ನು ಯುರೋಪಿನ ಹೊರಗಿನ ಸಂಸ್ಕೃತಿಯ ರಾಷ್ಟ್ರಗಳ ಆರ್ಥಿಕ ಬೆಳೆವಣಿಗೆಯನ್ನು ಪ್ರಚೋದಿಸುವ ಸಂದರ್ಭದಲ್ಲಿ ಅಭ್ಯಸಿಸಿದಾಗ ವಿಷಯ ಸಂಕೀರ್ಣತೆಯ ಅರಿವಾಗುವುದು. ಹಾಗೂ ಈ ಮಾದರಿಗಳ ನಿಜವಾದ ಅಪೂರ್ಣತೆ ಕಂಡುಬರುವುದು. ಆದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಆರ್ಥಿಕ ಬೆಳೆವಣಿಗೆಯ ವಿವೇಚನೆ ಹೆಚ್ಚು ವ್ಯಾಪಕವೂ ವಿಶ್ಲೇಷಣಾತ್ಮಕವೂ ಆಗಿರುವುದು ಅವಶ್ಯ. ಅಂದರೆ ಆರ್ಥಿಕ ಬೆಳೆವಣಿಗೆ ಯನ್ನು ಸಮಾಜದಲ್ಲಿ ಮೂಲ ಬದಲಾವಣೆಯನ್ನುಂಟುಮಾಡುವ ತತ್ತ್ವ ಎಂದು ಪರಿಗಣಿಸಿ ಅದರಿಂದ ಬದಲಾವಣೆ ಹೊಂದುವ ಹಾಗೂ ಬದಲಾವಣೆಗೆ ಕಾರಣವಾಗುವ ರಾಜಕೀಯ ದೃಷ್ಟಿಯಿಂದ ಈ ಎಲ್ಲ ಅಂಶಗಳನ್ನು ಅನೇಕ ರೀತಿಯಲ್ಲಿ ವರ್ಗೀಕರಿಸುವುದು ಸಾಧ್ಯ. ಆರ್ಥಿಕ ಬೆಳೆವಣಿಗೆಗೆ ತೀರ ಸಮೀಪದ ಮೂರು ಕಾರಣಗಳೆಂದರೆ ಅರ್ಥಿಕ ಚಟುವಟಿಕೆ, ಜ್ಞಾನವೃದ್ಧಿ ಹಾಗೂ ಬಂಡವಾಳದ ಹೆಚ್ಚಳ ಎಂದು ಆರ್ಥರ್ ಲೇವಿಸ್ ಹೇಳಿದ್ದಾನೆ.

ಆರ್ಥಿಕ ಬೆಳೆವಣಿಗೆಗೆ ಆರ್ಥಿಕ ಚಟುವಟಿಕೆ ಆವಶ್ಯಕ. ಇದರ ಅರ್ಥ ಯಾವುದೇ ಮನುಷ್ಯ ವ್ಯವಹಾರದಲ್ಲಿ ಹೆಚ್ಚು ಪ್ರತಿಫಲ ಪಡೆಯಲು ಪ್ರಯತ್ನಿಸಿದ ಹೊರತು ಅಂಥ ಪ್ರತಿಫಲವನ್ನು ಪಡೆಯಲಾರ ಎಂದು. ಆರ್ಥಿಕ ಬೆಳೆವಣಿಗೆ ಮನುಷ್ಯನ ಪ್ರಯತ್ನದಿಂದಲೇ ಸಾಧಿಸಬೇಕಾದುದು. ನಿಸರ್ಗ ಮನುಷ್ಯನಿಗೆ ಯಾವುದೇ ರೀತಿಯ ಕರುಣೆಯನ್ನೂ ತೋರಿಸುತ್ತಿಲ್ಲ. ಅದನ್ನು ಹಾಗೆಯೇ ಬಿಟ್ಟಿದ್ದಾದರೆ ಅದು ಭೂಮಿಯಲ್ಲಿ ಕಳೆಯನ್ನು ಹೆಚ್ಚಿಸಿಯೋ ಮಹಾಪೂರಗಳಿಂದಲೊ ಸಾಂಕ್ರಾಮಿಕ ರೋಗಗಳಿಂದಲೊ ಇಂಥ ಇನ್ನೂ ಅನರ್ಥ ಪರಂಪರೆಗಳಿಂದಲೋ ಮನುಷ್ಯಜೀವನವನ್ನು ಮುತ್ತಿಬಿಡಬಹುದು. ಆದುದರಿಂದ ಮನುಷ್ಯ ತನ್ನ ಬುದ್ಧಿಶಕ್ತಿಯ ಹಾಗೂ ಕಾರ್ಯಶಕ್ತಿಯ ಬಲದಿಂದ ಇಂಥ ಅನಿಷ್ಟ ಪರಿಸ್ಥಿತಿಯನ್ನು ಪರಿಹರಿಸಿಕೊಳ್ಳಬೇಕಾಗುವುದು. ಪ್ರಕೃತಿಯ ಆಹ್ವಾನಗಳನ್ನು ಎದುರಿಸಿಯೇ ಆತ ಪ್ರಕೃತಿಯ ಕೈಯಿಂದ ತನ್ನ ಪ್ರಯತ್ನಕ್ಕೆ ಹೆಚ್ಚಿನ ಪ್ರತಿಫಲ ಪಡೆಯಬಲ್ಲ. ಇಲ್ಲಿ ಅವನ ದಕ್ಷತೆ, ಕಷ್ಟ ಸಹಿಷ್ಣುತೆ, ಸಾಹಸ ಮುಂತಾದ ಗುಣಗಳ ಉಪಯೋಗ ಆವಶ್ಯಕ. ಹೊಸದಾಗಿ ಆರ್ಥಿಕ ಅಭಿವೃದ್ಧಿ ಸಾಗುತ್ತಿರುವ ಎಲ್ಲ ದೇಶಗಳಲ್ಲಿ ಇಂಥ ಮನುಷ್ಯಪ್ರಯತ್ನ ಒಂದೇ ಪ್ರಮಾಣದಲ್ಲಿ ಇರಲಾರದು. ಈ ವಿಷಮತೆಗೆ ಅಲ್ಲಿಯ ಸಮಾಜರಚನೆ ಹಾಗೂ ಸಾಮಾಜಿಕ ಸಂಸ್ಥೆಗಳು ಕಾರಣ. ಅದರಿಂದ ಸಮಾಜ ಸುಧಾರಣೆ ಆರ್ಥಿಕ ಬೆಳೆವಣಿಗೆಗೆ ತಳಪಾಯದಂತಿದೆ.

ಮನುಷ್ಯ ಪ್ರಯತ್ನಕ್ಕೂ ದೇಶದ ಸಂಪನ್ಮೂಲಗಳ ಲಭ್ಯತೆಗೂ ಹತ್ತಿರ ಸಂಬಂಧವಿದೆ. ಆದರೆ ಸಂಪನ್ಮೂಲಗಳ ಉಪಯುಕ್ತತೆ ಸಮಾಜದ ಅಭಿರುಚಿ, ತಾಂತ್ರಿಕ ಜ್ಞಾನದ ಮಟ್ಟ ಇವುಗಳನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಸಂಪನ್ಮೂಲಗಳು ಹೇರಳವಾಗಿರುವ ದೇಶ ಹೆಚ್ಚಿನ ಬೆಳೆವಣಿಗೆಯ ಪ್ರಮಾಣವನ್ನು ತೋರಿಸಬಲ್ಲುದು. ಸಂಪನ್ಮೂಲಕ್ಕೂ ಅವುಗಳನ್ನು ಉಪಯೋಗಿಸುವ ಜ್ಞಾನಕ್ಕೂ ಸ್ಪಷ್ಟವಾದ ಸಂಬಂಧವಿದೆ. ಯಾವುದು ಒಬ್ಬನ ಹತ್ತಿರ ಲಭ್ಯವಿರುವುದೋ ಅದನ್ನು ಉಪಯೋಗಿಸುವುದನ್ನು ಆತ ಕಲಿತಿರಲೇಬೇಕು. ಕಲ್ಲಿದ್ದಲು ಇಲ್ಲದ ದೇಶಗಳಲ್ಲಿ ಅದನ್ನು ಉಪಯೋಗಿಸುವ ಜ್ಞಾನ ಬೆಳೆಯಲಾರದು. ಅದರಂತೆ ಯೋಗ್ಯವಾದ ಕಲ್ಲುಗಳು ಸಿಗದ ದೇಶದಲ್ಲಿ ಶಿಲ್ಪಕಲೆ ಅಭಿವೃದ್ಧಿ ಹೊಂದಲಾರದು.

ಆರ್ಥಿಕ ಬೆಳೆವಣಿಗೆಯಲ್ಲಿ ಕೆಲವು ಸಾಮಾಜಿಕ ಸುಸ್ಥಿತಿಗಳು ಮಹತ್ವದ ಪಾತ್ರ ವಹಿಸುತ್ತವೆ. ಆಸ್ತಿಯ ಮೇಲಿನ ಹಕ್ಕು ಈ ವಿಷಯದಲ್ಲಿ ಮಹತ್ವದ್ದು. ಆರ್ಥಿಕ ಬೆಳೆವಣಿಗೆಗೆ ಬಂಡವಾಳ ನಿರ್ಮಾಣ ಮಹತ್ವದ್ದು. ಯಾವುದೇ ಮನುಷ್ಯನಿಗೆ ಆಸ್ತಿಯನ್ನು ಗಳಿಸಿದರೆ ಅದನ್ನು ತಾನೂ ತನ್ನ ವಾರಸುದಾರರೂ ಅನುಭೋಗಿಸಬಹುದೆಂಬ ಅಸೆಯಿರದಿದ್ದರೆ ಆತ ನಿಷ್ಕ್ರಿಯನಾಗುತ್ತಾನೆ. ಅದರಿಂದ ಆಸ್ತಿಗೆ ಕಾನೂನಿನ ರಕ್ಷಣೆ ದೊರೆಯಬೇಕು. ಆಸ್ತಿಯ ಹಕ್ಕುದಾರರನ್ನು ಕೊಳ್ಳೆಗಾರರಿಂದ ಅಥವಾ ದಂಗೆಕೋರರಿಂದ ರಕ್ಷಿಸಲು ಸರ್ಕಾರ ವಿಫಲವಾದರೆ ಆರ್ಥಿಕ ಬೆಳೆವಣಿಗೆಗೆ ಧಕ್ಕೆ ತಗಲುವುದು ನಿಶ್ಚಿತ. ನಿಯಮವಿಲ್ಲದ ತೆರಿಗೆಗಳು ಸಂಪತ್ತನ್ನು ಬಚ್ಚಿಡುವ ಇಲ್ಲವೇ ಹೆಚ್ಚು ಉಪಯೋಗಿಸುವ ಪ್ರವೃತ್ತಿಗಳನ್ನು ಬೆಳೆಸುವುದರಿಂದ ಬಂಡವಾಳ ನಿರ್ಮಾಣ ಕುಗ್ಗುವುದು.

ಆರ್ಥಿಕ ಬೆಳೆವಣಿಗೆಯಲ್ಲಿ ವ್ಯಾಪಾರ ಹಾಗೂ ವಿಶೇಷ ಪರಿಶ್ರಮಗಳಿಗೆ ಪ್ರಾಮುಖ್ಯವಿದೆ. ವ್ಯಾಪಾರ ಹೊಸ ಸರಕುಗಳನ್ನು ಪೂರೈಸುವುದರಿಂದಲೂ ಇದ್ದ ಸರಕುಗಳ ಮೌಲ್ಯವನ್ನು ಹೆಚ್ಚಿಸಿ ಜನರಲ್ಲಿ ಹೊಸ ಜೀವನದ ಹೊಳಪನ್ನುಂಟುಮಾಡಬಲ್ಲುದು. ಪ್ರಾಚೀನ ಪದ್ಧತಿಯ ಸಮಾಜಗಳಲ್ಲಿ ವ್ಯಾಪಾರವೃದ್ಧಿಯ ಕ್ರಾಂತಿಕಾರಿ ಪರಿಣಾಮಗಳನ್ನು ತರಬಲ್ಲುದು. ವ್ಯಾಪಾರ ದಿಂದಲೇ ಶ್ರಮವಿಭಜನೆ ಹಾಗೂ ತಜ್ಞತೆಗಳು ಬೆಳೆಯಬಲ್ಲುವು. ಆ್ಯಡಂ ಸ್ಮಿತ್ ಹೇಳುವಂತೆ ಶ್ರಮವಿಭಜನೆ ಪೇಟೆಯ ವೈಶಾಲ್ಯವನ್ನು ಅವಲಂಬಿಸಿದೆ, ಅನೇಕ ರೀತಿಯಿಂದ ಉತ್ಪಾದನೆ ಯನ್ನು ಹೆಚ್ಚಿಸಲು ಸಹಾಯಕಾರಿಯಾಗಿದೆ. ಆರ್ಥಿಕ ಬೆಳೆವಣಿಗೆ ಮುಂದುವರಿದಂತೆ ಶ್ರಮವಿಭಜನೆ ಹಾಗೂ ವಿಶೇಷ ಪರಿಶ್ರಮ ಹೆಚ್ಚುತ್ತದೆ. ಪೇಟೆಯ ವಿಸ್ತರಣೆ ಆರ್ಥಿಕ ಬೆಳೆವಣಿಗೆಗೆ ಆವಶ್ಯಕ. ಅನೇಕ ಪ್ರಕಾರದ ಪೇಟೆಗಳು ಅಂದರೆ ಶ್ರಮದಪೇಟೆ, ಸಾಲಗಳಪೇಟೆ, ಪರದೇಶ ವಿನಿಮಯಗಳಪೇಟೆ, ಷೇರುಗಳಪೇಟೆ ಮುಂತಾದವು ಬೆಳೆಯಬೇಕು. ಪೇಟೆಯ ವಿಸ್ತಾರದಿಂದ ಹಣದ ಚಲಾವಣೆ ಹೆಚ್ಚಾಗಿ ಲಾಭದ ಹಾಗೂ ಸಂಗ್ರಹದ ಆಶೆ ಮನುಷ್ಯನ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸುತ್ತದೆ. ಇವಲ್ಲದೆ ಇನ್ನೂ ಅನೇಕ ಸಾಮಾಜಿಕ ಸಂಸ್ಥೆಗಳಾದ ಧರ್ಮ, ಕುಟುಂಬ, ಸಮಾಜ ರಚನೆ, ರೂಢಿ, ರಿವಾಜು, ಹಾಗೂ ನಿಷಿದ್ಧಗಳು ಮನುಷ್ಯನ ಆರ್ಥಿಕ ಚಟುವಟಿಕೆಗಳ ಮೇಲೆ ತಮ್ಮ ಪ್ರಭಾವವನ್ನು ಬೀರಬಲ್ಲುವು. ಆರ್ಥಿಕ ಬೆಳೆವಣಿಗೆಗೆ ವಿರೋಧಿಗಳಾದ ಅವುಗಳ ಗುಣಗಳನ್ನು ಪರಿಹರಿಸುವುದು ಅಗತ್ಯ.

ಇನ್ನು ಜ್ಞಾನವೃದ್ಧಿಯ ವಿಷಯವಾಗಿ ವಿವೇಚಿಸುವಾಗ ಕೇವಲ ತಾಂತ್ರಿಕಜ್ಞಾನವನ್ನಷ್ಟೇ ವಿಚಾರಮಾಡುವುದು ಸರಿಯಲ್ಲ. ಸಮಾಜದ ವಿಷಯಜ್ಞಾನವೂ ಮುಖ್ಯಾಂಶ. ಜ್ಞಾನದ ಬೆಳೆವಣಿಗೆಗೆ ಕುತೂಹಲ ಬುದ್ಧಿಯನ್ನು ವಿಕಾಸಗೊಳಿಸುವ ವಾತಾವರಣ ಅಗತ್ಯ. ಧರ್ಮದ ಪ್ರಭಾವ ಬಹಳ ಇರುವಲ್ಲಿ ಜನರ ಕುತೂಹಲ ಬುದ್ಧಿಯ ವಿಕಾಸವಾಗುವುದು ಕಷ್ಟಸಾಧ್ಯ. ಅನೇಕ ಮತ ಪಂಥಗಳಿಂದ ದೇಶದ ಜನರು ಒಂದೇ ಧರ್ಮದ ಪ್ರಭುತ್ವವಿರುವ ದೇಶದ ಜನರಿಗಿಂತ ಹೆಚ್ಚು ಪ್ರಗತಿಪರರಾಗಿರುವರು. ಅದರಂತೆ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ವಾತಂತ್ರ್ಯಗಳು ಹೆಚ್ಚಿಗೆ ಇರುವ ದೇಶದಲ್ಲಿ ಜ್ಞಾನವೃದ್ಧಿಗೆ ತುಂಬ ಅವಕಾಶವಿರುವುದು. ಜ್ಞಾನವೃದ್ಧಿಯಲ್ಲಿ ಯುರೋಪಿನ ಪುನರುಜ್ಜೀವನಕಾಲದ ಕೊಡುಗೆ ಹಿರಿದು. ಇತಿಹಾಸವನ್ನು ನೋಡಿದರೆ ತಾಂತ್ರಿಕಶೋಧಗಳು ಕಾರ್ಯನಿರತನಾದ ಕೆಲಸಗಾರನಿಂದ ಇಲ್ಲವೆ ಸಂಶೋಧನಾವೃತ್ತಿಯಲ್ಲಿ ತೊಡಗಿದ ವ್ಯಕ್ತಿಯಿಂದ ಮಾಡಲ್ಪಟ್ಟಿವೆ ಎಂಬುದು ವಿಶದವಾಗುತ್ತದೆ. ಆದರೆ 20ನೆಯ ಶತಮಾನದಲ್ಲಿ ಶೋಧನಾಕಾರ್ಯ ಒಬ್ಬ ಸ್ವತಂತ್ರ ವ್ಯಕ್ತಿ ತನ್ನ ಪ್ರಯೋಗಶಾಲೆಯಲ್ಲಿ ತಾನೇ ದುಡಿಯುವುದಕ್ಕಿಂತ ತನ್ನಂಥ ತಜ್ಞರ ಸಹಕಾರದಿಂದ ಕೆಲಸ ಮಾಡಿದಾಗ ಹೆಚ್ಚಿನ ಬಲ ಕೊಡಬಲ್ಲದೆಂಬುದು ಕಂಡುಬಂದಿದೆ. ಪರಿಶೋಧಗಳು

ಒಬ್ಬ ವ್ಯಕ್ತಿಯ ಅಳತೆ ಮೀರಿ ಬೆಳೆದಿರುವುದು ಇದಕ್ಕೆ ಕಾರಣ. ರಸಾಯನವಿಜ್ಞಾನ, ರೇಡಿಯೊ ಯಂತ್ರಗಳ ಭೌತವಿಜ್ಞಾನ ಹಾಗೂ ಅಣುಶಕ್ತಿವಿಜ್ಞಾನ–ಇವುಗಳಲ್ಲಿ ಇಂಥ ಪರಿಶೋಧನೆ ತುಂಬ ಉತ್ತಮ ಪರಿಣಾಮಕೊಟ್ಟಿದೆ.

ಸಾಮುದಾಯಿಕ ಸಂಶೋಧನೆ ಮೇಲಿನ ವೆಚ್ಚವನ್ನು ಹೆಚ್ಚಿಸಿದೆ. ಹೀಗಾಗಿ ಚಿಕ್ಕ ಉದ್ದಿಮೆಗಳು ವೆಚ್ಚವನ್ನು ಸಹಿಸಲಾರದೆ ದೊಡ್ಡ ಉದ್ದಿಮೆಗಳ ಪೈಪೋಟಿಗೆ ತುತ್ತಾಗಿ ಗುತ್ತಿಗೆದಾರಿ ಪದ್ಧತಿಗೆ ಅನುವು ಮಾಡಿಕೊಡುತ್ತವೆ. ಅದರಿಂದ ಇಂಥ ಸಂಶೋಧನೆಯ ಕಾರ್ಯಕ್ಕೆ ಸರ್ಕಾರದ ಪ್ರೇರಣೆ ಹಾಗೂ ನೇತೃತ್ವ ಬೆಳವಣಿಗೆ ಹೊಂದುತ್ತಿರುವ ದೇಶಗಳ ದೃಷ್ಟಿಯಿಂದ ಮುಖ್ಯ.

ಆರ್ಥಿಕ ಬೆಳವಣಿಗೆಯಲ್ಲಿ ಮೂರನೆಯ ಮುಖ್ಯ ಅಂಶ ಬಂಡವಾಳ. ಇದನ್ನು ಚರ್ಚಿಸುವಾಗ ಬಂಡವಾಳದ ಪ್ರಮಾಣ, ಉಳಿತಾಯದ ಮೂಲ ಹಾಗೂ ಬಂಡವಾಳ ವಿನಿಯೋಗದ ಹೆಚ್ಚಳ–ಇವನ್ನು ಮರೆಯುವಂತಿಲ್ಲ. ಔದ್ಯಮಿಕ ರಾಷ್ಟ್ರಗಳಲ್ಲಿ ಬಂಡವಾಳದ ಬೆಲೆಗೆ ಉತ್ಪಾದನೆಯ ಬೆಲೆಯ ಪ್ರಮಾಣ ಸಾಮಾನ್ಯ ಅಂಚಿನಲ್ಲಿ ಸ್ಥಿರವಾಗಿರುವುದು. ಇಂಥ ಅಂಚಿನ ಪ್ರಮಾಣ 1:3 ಅಥವಾ 1:4 ಇರುವುದು. ಅಂದರೆ ಸರಾಸರಿ 100 ರೂ. ಬಂಡವಾಳ ವಿನಿಯೋಗಕ್ಕೆ ರಾಷ್ಟ್ರೀಯ ಆದಾಯದಲ್ಲಿ 33 ಇಲ್ಲವೆ 25 ರೂಪಾಯಿಗಳ ಹೆಚ್ಚಳವಾಗುವುದು. ಅಂದರೆ ರಾಷ್ಟ್ರೀಯ ಆದಾಯ ಶೇ.3 ಬೆಳೆಯುವುದು. ಇದರಿಂದ ರಾಷ್ಟ್ರೀಯ ಆದಾಯದ ಶೇ.9 – 12 ಪ್ರಮಾಣ ಬಂಡವಾಳವಾಗಿ ಉಪಯೋಗಿಸಲ್ಪಡುವುದು ಎಂದಾಯಿತು. ಔದ್ಯೋಗಿಕ ರಾಷ್ಟ್ರಗಳು ಸಹಜವಾಗಿ ಶೇ.10–15 ರಾಷ್ಟ್ರೀಯ ಆದಾಯವನ್ನು ಬಂಡವಾಳ ವಿನಿಯೋಗಕ್ಕೆ ಉಪಯೋಗಿಸುವುದು. ವಾರ್ಷಿಕ ನಿಕ್ಕೀ ಬಂಡವಾಳ ಶೇ.5 – 12 ಪ್ರಮಾಣಕ್ಕೆ ಮುಟ್ಟುವಂತೆ ಮಾಡಿದ ಪ್ರಯತ್ನಕ್ಕೆ ಔದ್ಯೋಗಿಕ ಕ್ರಾಂತಿ ಎಂದು ಕರೆಯಲಾಗಿದೆ. ಆದರೆ ಇಂಥ ಬದಲಾವಣೆ ಎಷ್ಟು ವರ್ಷಗಳವರೆಗೆ ನಡೆಯಿತು ಹಾಗೂ ಬಂಡವಾಳದ ನಿರ್ಮಾಣದ ಶಕ್ತಿಯ ಮೇಲೆ ಯಾವ ರೀತಿ ಪರಿಣಾಮ ಮಾಡಿತು ಎಂಬ ಬಗ್ಗೆ ಅಂಕಿ ಸಂಖ್ಯೆಗಳ ಆಧಾರ ಸಿಗಲಾರದು. ಆದರೂ ಸಾಮಾನ್ಯವಾಗಿ ಉದ್ದಿಮೆಗಳ ತಾಂತ್ರಿಕ ಕೌಶಲ್ಯದ ಹಾಗೂ ಸಾರ್ವಜನಿಕ ಉಪಯೋಗದ ಬಂಡವಾಳಗಳ ಅಭಾವವೇ ಆರ್ಥಿಕ ಹಿಂದುಳಿಯುವಿಕೆಯ ಮುಖ್ಯ ಕಾರಣಗಳೆನ್ನಬಹುದು. ತಾಂತ್ರಿಕ ಕೌಶಲ್ಯವನ್ನು ಪರದೇಶಗಳಿಂದ ಆಯಾತ ಮಾಡುವುದು ಸಾಧ್ಯವಿದೆ. ಆದರೆ ಪ್ರಾರಂಭದಲ್ಲಿ ಸಾರ್ವಜನಿಕ ಬಂಡವಾಳಗಳ ನಿರ್ಮಾಣಕ್ಕೆ ಹೆಚ್ಚು ಪ್ರಮಾಣದ ಬಂಡವಾಳ ವಿನಿಯೋಗ ಅನಿವಾರ್ಯ. ನಾವು ಸದ್ಯದಲ್ಲಿ ಬೆಳವಣಿಗೆ ಹೊಂದಿದಂಥ ದೇಶಗಳನ್ನು ಗಮನಿಸಿದರೆ ಪ್ರಾರಂಭದಲ್ಲಿ ಒಟ್ಟು ಬಂಡವಾಳ ವಿನಿಯೋಗದ ಶೇ.35 ಪ್ರಮಾಣ ಸಾಮಾಜಿಕ ಉಪಯೋಗದ ಕಾರ್ಯ ಹಾಗೂ ಸಾರ್ವಜನಿಕ ಉಪಯುಕ್ತತೆಗಳ ಮೇಲೆ ವಿನಿಯೋಗವಾದದ್ದು ಕಂಡುಬರುವುದು. ಆರ್ಥಿಕ ಬೆಳವಣಿಗೆ ಮುಂದುವರಿದಂತೆ ಉದ್ದಿಮೆಗಳು ತಯಾರಿಸಿದ ಸರಕುಗಳಿಗೆ ಬೇಡಿಕೆ ಹೆಚ್ಚಾಗುವುದರಿಂದ ಉದ್ದಿಮೆಗಳಲ್ಲಿನ ಬಂಡವಾಳ ವಿನಿಯೋಗದ ಪ್ರಮಾಣ ಹೆಚ್ಚಾಗಲೇ ಬೇಕಾಗುವುದು.

ಹೀಗೆ ಆರ್ಥಿಕ ಬೆಳವಣಿಗೆಗೆ ಬಂಡವಾಳ ವಿನಿಯೋಗ ಮಹತ್ವದ ವಿಷಯ. ಆದರೆ ಈ ಬಂಡವಾಳ ವಿನಿಯೋಗಕ್ಕೆ ಉಳಿತಾಯ ಅಷ್ಟೇ ಮುಖ್ಯ. ಇವೆರಡೂ ಪರಸ್ಪರ ಹೊಂದುವಂತೆ ಮಾಡಬೇಕು. ಇವುಗಳಲ್ಲಿ ಸಮತೋಲ ತಪ್ಪಿದರೆ ಆರ್ಥಿಕಸ್ಥಿರತೆ ಇರಲಾರದು. ಉಳಿತಾಯ ಕಡಿಮೆಯಾದರೆ ಬೆಲೆ ಏರಿಕೆ ಪರಿಸ್ಥಿತಿ ಉಂಟಾಗುವುದು. ಏಕೆಂದರೆ ಜನ ಗಳಿಸುವ ಆದಾಯ ಉಪಭೋಗ್ಯ ವಸ್ತುಗಳನ್ನೂ ಬಂಡವಾಳ ವಸ್ತುಗಳನ್ನೂ ಉತ್ಪಾದಿಸುವುದ ರಿಂದ ಉಂಟಾಗುತ್ತದೆ. ಆದುದರಿಂದ ಬಂಡವಾಳ ವಸ್ತುಗಳಿಂದ ಉಂಟಾದ ಆದಾಯ ಉಳಿತಾಯವಾಗಬೇಕು. ಏಕೆಂದರೆ ಜನ ತಮ್ಮ ಆದಾಯದಿಂದ ಕೇವಲ ಉಪಭೋಗ್ಯ ವಸ್ತುಗಳನ್ನು ಕೊಂಡಕೊಳ್ಳಬಲ್ಲರು. ಅದರ ಉತ್ಪಾದನೆಯ ಪ್ರಮಾಣಕ್ಕಿಂತ ಹೆಚ್ಚು ಆದಾಯವನ್ನು ಉಪಭೋಗ್ಯ ವಸ್ತುಗಳಿಗಾಗಿ ಉಪಯೋಗಿಸುವುದರಿಂದ ಬೆಲೆ ಏರಿಕೆಯುಂಟಾಗುವುದು. ಇಂಥ ಬೆಲೆಯೇರಿಕೆ ಉತ್ಪಾದನೆಯನ್ನು ಹೆಚ್ಚಿಸುವ ಅವಕಾಶವಿದ್ದರೆ ಅದು ಮಹತ್ವದ್ದಲ್ಲ. ಆದರೆ ಉತ್ಪಾದಕ ವಸ್ತುಗಳ ಕೊರತೆಯಿದ್ದಾಗ ಇಲ್ಲವೇ ಅವುಗಳನ್ನು ಉಪಯೋಗಿಸುವಲ್ಲಿ ಅಡೆತಡೆಗಳು ಇದ್ದಾಗ ಬೆಲೆ ಏರಿಕೆ ಕೆಟ್ಟ ಪರಿಣಾಮವನ್ನುಂಟುಮಾಡ ಬಹುದು. ಅದರಂತೆಯೇ ಉಳಿತಾಯದಲ್ಲಿ ಹೆಚ್ಚಳವಾದಾಗ ಬೆಲೆ ಇಳಿತದ ಸಮಸ್ಯೆ ಉದ್ಭವಿಸುವುದು. ಆದ್ದರಿಂದ ಉಳಿತಾಯ ಹಾಗೂ ಬಂಡವಾಳ ವಿನಿಯೋಗದಲ್ಲಿ ಸಮಾನತೆ ಮುಖ್ಯ ವಿಷಯ.

ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಆದಾಯ ಕಡಿಮೆಯಿರುವುದರಿಂದ ಉಳಿತಾಯ ಪ್ರಮಾಣ 4%–5% ಇರಬಲ್ಲದು. ಆದರೆ ಆರ್ಥಿಕ ಬೆಳವಣಿಗೆಗೆ ಶೇ.12 ರಷ್ಟಾದರೂ ಬಂಡವಾಳ ಅಗತ್ಯ. ಆದ್ದರಿಂದ ಇಂಥ ಸಂದರ್ಭಗಳಲ್ಲಿ ಸರಕಾರವು ಮೂಲ ಹಣವನ್ನು ಬಂಡವಾಳ ಹೂಡುವುದು. ಇಂಥ ಮೂಲ ಹಣದ ಹೂಡಿಕೆಯಿಂದ ಜನರ ಆದಾಯದಲ್ಲಿ ಹೆಚ್ಚಳವಾಗಿ ಉಳಿತಾಯದ ಪ್ರವೃತ್ತಿ ಬೆಳೆಯದೆ ಉಪಭೋಗ ವಸ್ತುಗಳ ಬೇಡಿಕೆ ಹೆಚ್ಚುವುದು. ಆದರೆ ಇಂಥ ಮೂಲ ಹಣದ ಉಪಯೋಗವನ್ನು ಬಹಳ ದಕ್ಷತೆಯಿಂದ ಮಾಡಿದರೆ ಮಾತ್ರ ಅದು ಆರ್ಥಿಕ ಬೆಳವಣಿಗೆಗೆ ಸಹಾಯಕವಾಗ ಬಲ್ಲುದು. ಈ ಹಣದ ಉಪಯೋಗವನ್ನು ಬೇಗ ಫಲಕೊಡುವ ಉದ್ದಿಮೆಗಳಲ್ಲಿ, ಇಲ್ಲವೆ ಸಮಯಕ್ಕನುಸಾರವಾಗಿ ಮಾಡಬೇಕು. ಇಲ್ಲದಿದ್ದರೆ ಉತ್ಪಾದಕ ಸಾಮಗ್ರಿಗಳ ತೀವ್ರ ಕೊರತೆಯಿರುವ ಈ ದೇಶಗಳಲ್ಲಿ ಅದು ವಿಪರೀತ ಬೆಲೆ ಏರಿಕೆಗೆ ಕಾರಣವಾಗಿ ಉತ್ಪಾದನೆಯ ವೆಚ್ಚದಲ್ಲಿ ಹೆಚ್ಚಳವನ್ನೂ ಜನರಲ್ಲಿ ಸರಕು ಸಾಧನಗಳ ಸಂಗ್ರಹಪ್ರವೃತ್ತಿಯನ್ನೂ ಹೆಚ್ಚಿಸಬಹುದು. ಅಲ್ಲದೆ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಇನ್ನೂ ಅನೇಕ ಸಾಮಾಜಿಕ ಹಾಗೂ ರಾಜಕೀಯ ಗೊಂದಲಗಳಿಗೆ ಕಾರಣವಾಗಬಹುದು.

ಬಂಡವಾಳ ನಿರ್ಮಾಣ ಕಾರ್ಯದಲ್ಲಿ ದೇಶೀಯ ಉಳಿತಾಯದ ದೊಡ್ಡ ಪಾತ್ರವಹಿಸಬೇಕಾಗುವುದು. ಬಂಡವಾಳ ವಿನಿಯೋಗದ ದೃಷ್ಟಿಯಿಂದ ಭೂಮಿಯ ಉತ್ಪನ್ನ ಪಡೆಯುವವರ ಇಲ್ಲವೇ ಮಧ್ಯಮವರ್ಗದ ನೌಕರರು ಹಾಗೂ ಕೆಲಸಗಾರರು ಮಾಡುವ ಉಳಿತಾಯ ಏನೂ ಹೇಳಿಕೊಳ್ಳುವಂಥದ್ದಲ್ಲ. ಅಭಿವೃದ್ಧಿಹೊಂದಿದ ದೇಶಗಳಲ್ಲೂ ಈ ವರ್ಗ ಶೇ.4 ಕ್ಕಿಂತ ಹೆಚ್ಚಿಗೆ ಬಂಡವಾಳ ಒದಗಿಸಲಾರದು. ಕೃಷಿಪ್ರಧಾನ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆಗೆ ಬೇಕಾಗುವ ಬಂಡವಾಳ ಕೃಷಿಯಿಂದ ಬರುವುದು ಅನಿವಾರ್ಯ. ಕೃಷಿಯ ರಂಗದಲ್ಲಿ ಉಳಿತಾಯ ಹೆಚ್ಚುವಂತೆ ಎಲ್ಲ ಪ್ರಯತ್ನ ಮಾಡಬೇಕು. ಇದಕ್ಕಾಗಿ ಪ್ರಚಾರಕಾರ್ಯ, ಉಳಿತಾಯ ಸಂಸ್ಥೆಗಳನ್ನು ಹಳ್ಳಿಗಳಿಗೆ ವಿಸ್ತರಿಸುವುದು ಬಹು ಮುಖ್ಯ. ಆರ್ಥಿಕ ಬೆಳವಣಿಗೆಯಿಂದ ಉಂಟಾಗುತ್ತಿರುವ ಹೆಚ್ಚಿನ ಉತ್ಪನ್ನದ ಕೆಲವು ಭಾಗವನ್ನು ತೆರಿಗೆಯ ಮೂಲಕ ಅಭಿವೃದ್ಧಿಯ ಕಡೆಗೆ ಎಳೆದುಕೊಳ್ಳುವುದು ಅಗತ್ಯ. ಜಪಾನ್ ಹಾಗೂ ರಷ್ಯದೇಶಗಳು ಇಂಥ ನೀತಿಯನ್ನು ಯಶಸ್ವಿಯಾಗಿ ಪ್ರಯೋಗಿಸಿವೆ. ಬಂಡವಾಳ ನಿರ್ಮಾಣದ ಇನ್ನೊಂದು ಮೂಲ ಉದ್ದಿಮೆಗಳಲ್ಲಿಯ ಲಾಭ–ಇವು ಆರ್ಥಿಕ ಬೆಳವಣಿಗೆ ಮುಂದುವರಿದಂತೆ ಹೆಚ್ಚಾಗುವುವು. ಆದರೆ ಪ್ರಾರಂಭದಲ್ಲಿ ಬಂಡವಾಳ ಕೃಷಿಯಿಂದಲೇ ಬರಬೇಕು. ಏಕೆಂದರೆ ರಾಷ್ಟ್ರೀಯ ಆದಾಯದಲ್ಲಿ ಶೇ.50–ಶೇ.60 ರಷ್ಟು ಕೃಷಿಯ ಉತ್ಪನ್ನ. ಉದ್ದಿಮೆಗಳ ಲಾಭದ ವಿಚಾರದಲ್ಲಿ ಉದ್ದಿಮೆದಾರ ಅಥವಾ ಬಂಡವಾಳದಾರವರ್ಗದ ಮಹತ್ವವನ್ನು ಅರಿಯಬೇಕು. ಈ ವರ್ಗದ ಜನರಲ್ಲಿ ಮಧ್ಯಮವರ್ಗದ ಜನರಂತೆ ಪ್ರದರ್ಶನಪ್ರಿಯ ಉಪಭೋಗಕ್ಕೆ ಮಹತ್ವವಿರುವುದಿಲ್ಲ. ಅವರ ಸ್ವಂತ ಉದ್ಯೋಗವೇ ಸಾಕಷ್ಟು ಮಹತ್ವವನ್ನು ತಂದುಕೊಟ್ಟಿರು ವುದು. ಅದರಂತೆ ಭೂಮಿಯ ಒಡೆಯರಲ್ಲಿರುವ ರಾಜಕೀಯ ಪ್ರತಿಷ್ಠೆಯ ಭಾವನೆಯೂ ಇರಲಾರದು. ಇಂಥ ಪ್ರತಿಷ್ಠೆ ಬರಬೇಕಾದರೆ ಉದ್ದಿಮೆಗಳ ಲಾಭವನ್ನು ಹೆಚ್ಚಿಸಿಕೊಂಡೇ ತಮ್ಮ ರಾಜಕೀಯ ವರ್ಚಸ್ಸು ಅಥವಾ ಪ್ರತಿಷ್ಠೆ ಬೆಳೆಸುವ ಹಂಬಲವಿರುವುದರಿಂದ ಇಂಥ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಆರ್ಥರ್ ಲೆವಿಸ್ ಹೇಳುವಂತೆ, ಆತ ತನ್ನ ಆದಾಯವನ್ನು ಇಟ್ಟಿಗೆ ಹಾಗೂ ಉಕ್ಕಿನ ಸಾಮ್ರಾಜ್ಯವನ್ನು ಕಟ್ಟಲು ಉಪಯೋಗಿಸುವನು. ಉಳಿದೆಲ್ಲ ವರ್ಗದವರೂ ತಮ್ಮ ಆಕಾಂಕ್ಷೆಗಳನ್ನು ಬೇರೆ ಬೇರೆ ರೀತಿಯಿಂದ ಪೂರೈಸಿಕೊಳ್ಳುವರು. ಆದ್ದರಿಂದ ಬೆಳವಣಿಗೆ ಮುಂದುವರಿದಂತೆ ರಾಷ್ಟ್ರೀಯ ಆದಾಯದಲ್ಲಿ ಲಾಭದ ಪಾಲು ಹೆಚ್ಚಾಗುವುದು ಅನಿವಾರ್ಯ. ಇಂಥ ಲಾಭ ಬಂಡವಾಳಗಾರರ ಕೈಸೇರಿ, ಬಂಡವಾಳ ವಿನಿಯೋಗ ಹೆಚ್ಚಾದಂತೆಲ್ಲ, ಉದ್ಯೋಗಾವಕಾಶಗಳು ಹೆಚ್ಚಾಗಿ ಕೃಷಿ ಮತ್ತು ಕೆಲಸಗಳಲ್ಲಿಯ ಜನಸಂಖ್ಯೆಯ ಒತ್ತಡ ಕಡಿಮೆಯಾಗುವಂತೆ ಅಲ್ಲಿಯ ಹೆಚ್ಚಿನ ಜನಸಂಖ್ಯೆಯನ್ನು ತನ್ನೆಡೆಗೆ ಎಳೆದುಕೊಳ್ಳುವುದರಿಂದ ಆ ಉದ್ದಿಮೆಗಳೂ ಸುಧಾರಿಸಬಲ್ಲವು. ಆದ್ದರಿಂದ ಬಂಡವಾಳಗಾರಿಕೆ ಸಂಸ್ಥೆ ಆರ್ಥಿಕ ಬೆಳವಣಿಗೆಗೆ ಆವಶ್ಯಕ. ಕೆಲದೇಶಗಳಲ್ಲಿ ಖಾಸಗೀ ಬಂಡವಾಳಗಾರಿಕೆ ಬೆಳೆದರೆ ಇನ್ನು ಕೆಲವು ದೇಶಗಳಲ್ಲಿ ಸರ್ಕಾರವೇ ಬಂಡವಾಳಗಾರನಾಗಬಹುದು. ಆದರೆ ಉತ್ಪಾದನೆಯ ಪದ್ಧತಿ ಹಾಗೂ ಬಂಡವಾಳ ವಿನಿಯೋಗಗಳ ನೀತಿಯ ವಿಷಯವಾಗಿ ಅವುಗಳ ಅಭಿಪ್ರಾಯಗಳಲ್ಲಿ ಅಂತರವೇನಿಲ್ಲ. ರಾಷ್ಟ್ರೀಯ ಭಾವನೆ, ಸೈನಿಕ ಶಕ್ತಿಯನ್ನು ಹೆಚ್ಚಿಸುವ ಆಶೆ ಅಥವಾ ಜನಸಾಮಾನ್ಯರ ಬಡತನದ ವಿರುದ್ಧ ಹೋರಾಟ–ಈ ಆಕಾಂಕ್ಷೆಗಳು ರಾಷ್ಟ್ರೀಯ ಬಂಡವಾಳಗಾರಿಕೆಯ ಪ್ರವೃತ್ತಿಯನ್ನು ಬಲಗೊಳಿಸುವುವು.

ಪರದೇಶ ಬಂಡವಾಳಗಳಿಗೂ ಆರ್ಥಿಕ ಬೆಳವಣಿಗೆಯಲ್ಲಿ ಹೆಚ್ಚಿನ ಪಾತ್ರವಿದೆ. ಸದ್ಯದ ಎಲ್ಲ ಯುರೋಪಿನ ಅಭಿವೃದ್ಧಿ ಹೊಂದಿದ ದೇಶಗಳು ಪರದೇಶೀ ಬಂಡವಾಳದ ಸಹಾಯದಿಂದಲೇ ಮುಂದುವರಿದುವು. ಪರದೇಶಿ ಬಂಡವಾಳ ತನ್ನೊಡನೆ ತಾಂತ್ರಿಕ ಜ್ಞಾನವನ್ನು ತರಬಲ್ಲದು. ಅಭಿವೃದ್ಧಿ ಹೊಂದಿದ ದೇಶಗಳು ಪರದೇಶಗಳಲ್ಲಿ ಬಂಡವಾಳ ತೊಡಗಿಸುವುದಕ್ಕೆ ಒಂದು ಮುಖ್ಯ ಕಾರಣ, ತಮ್ಮ ದೇಶದಲ್ಲಿಯ ಬಂಡವಾಳದ ಮೇಲಿನ ಲಾಭದ ಪ್ರಮಾಣ ಬಂಡವಾಳ ಸಂಗ್ರಹ ಹೆಚ್ಚಾದಂತೆ ಲಾಭದ ಪ್ರಮಾಣ ಕಡಿಮೆಯಾಗುವುದು. ಅದರಿಂದ ಹಿಂದುಳಿದ ದೇಶಗಳಲ್ಲಿ ಲಾಭದ ಪ್ರಮಾಣ ಹೆಚ್ಚಿರುವಾಗ ಬಂಡವಾಳ ನಿರ್ಗಮನಕ್ಕೆ ಅವಕಾಶವುಂಟಾಗುವುದು. ಹೆಚ್ಚು ಬಂಡವಾಳ ನಿರ್ಗಮನಕ್ಕೆ ಪ್ರೋತ್ಸಾಹಿಸುವ ಅಂಶಗಳು–ಹಿಂದುಳಿದ ದೇಶಗಳಲ್ಲಿಯ ಸರಕಾರ ನೀತಿ, ಅಲ್ಲಿಯ ನಿಸರ್ಗ ಸಂಪತ್ತುಗಳ ವಿಪುಲತೆ ಮತ್ತು ಅವು ನೀಡಬಹುದಾದ ಲಾಭದ ಪ್ರಮಾಣ ಹಾಗೂ ಬಂಡವಾಳ ವಿನಿಯೋಗಕ್ಕೂ ಪ್ರತಿಫಲಕ್ಕೂ ಮಧ್ಯದ ಕಾಲಾವಕಾಶ. ಎರಡನೆಯ ಮಹಾಯುದ್ಧದವರೆಗೂ ಪರದೇಶೀ ಬಂಡವಾಳ ಖಾಸಗಿ ವ್ಯಕ್ತಿಗಳಿಂದಲೇ ಬರುತ್ತಿತ್ತು. ಆದರೆ ಅದರ ಮುಂದಿನ

ಕಾಲದಲ್ಲಿ ವಿದೇಶಿ ಸರಕಾರಗಳ ಸ್ವೇಚ್ಛಾವರ್ತನೆ, ಲಾಭದ ಮತ್ತು ಬಂಡವಾಳದ ವರ್ಗಾವಣೆ ವಿಷಯದ ನೀತಿ ಹಾಗೂ ರಾಷ್ಟ್ರೀಕರಣದ ಹೆದರಿಕೆ, ಇವುಗಳಿಂದ ಖಾಸಗೀ ಬಂಡವಾಳದ ಚಲನವಲನ ಕುಂಠಿತವಾಯಿತು. ಅದರಿಂದ ಎರಡು ಸರ್ಕಾರಗಳ ಮಧ್ಯದ ಸಾಲಕ್ಕೆ ಮಹತ್ವ ಬಂತು. ಮೊಟ್ಟಮೊದಲು ಈ ಪದ್ಧತಿಯನ್ನು ಅಮೆರಿಕ ಆಮದುರಫ್ತು ಬ್ಯಾಂಕ್ ಎಂಬ ಸಂಸ್ಥೆ ಆಚರಣೆಗೆ ತಂದಿತು. ಇದಲ್ಲದೆ ಇನ್ನೂ ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳು ಹುಟ್ಟಿಕೊಂಡವು. ಆದರೆ ಅವುಗಳ ಉಪಯುಕ್ತತೆ ಸೀಮಿತವಾಗಿದೆ.

ಆರ್ಥಿಕ ಬೆಳವಣಿಗೆಯ ಮೇಲೆ ಜನಸಂಖ್ಯೆಯ ಬೆಳವಣಿಗೆಯ ಪರಿಣಾಮ ಮೊದಲಿನಿಂದಲೂ ಚರ್ಚಿಸಲ್ಪಟ್ಟ ವಿಷಯ. ಆಂಗ್ಲ ಲೇಖಕ ಮಾಲ್ಥಸ್ 19ನೆಯ ಶತಮಾನದಲ್ಲಿ ಮಂಡಿಸಿದ ಸೂತ್ರದಿಂದ ವಾದ ವಿವಾದ ಹುಟ್ಟುಕೊಂಡಿದೆ. ಅವರ ಬೆಂಬಲಿಗರು ಜನಸಂಖ್ಯೆ ಹೆಚ್ಚಲು ಮುಖ್ಯ ಕಾರಣ ಜೀವನಮಟ್ಟ ಬೆಳೆದಂತೆ ಮದುವೆಯ ವಯಸ್ಸು ಕಡಿಮೆಯಾಗುವುದೇ ಕಾರಣ ಎಂದಿದ್ದಾರೆ. ಆದರೆ ಇದು ಸರಿಯಾದ ಕಾರಣವಲ್ಲ. ಈಗ ನಮಗೆ ತಿಳಿದುಬಂದಿರುವಂತೆ, ಮರಣಪ್ರಮಾಣದ ಇಳಿತವೇ ಇದಕ್ಕೆ ಕಾರಣ ಎಂದು ಹೇಳಬಹುದು. ಮರಣಪ್ರಮಾಣ ಕಡಿಮೆಯಾಗಲು ಜೀವನಮಟ್ಟದಲ್ಲಿ ಸುಧಾರಣೆ, ಸಾಮಾಜಿಕ ಹಾಗೂ ಖಾಸಗೀ ವೈದ್ಯಕೀಯ ಸೌಕರ್ಯ ಸಾರ್ವಜನಿಕ ಆರೋಗ್ಯಕಾರ್ಯಕ್ರಮಗಳಿಂದ ಸಾಧ್ಯವಾಗಿರುವ ಸೋಂಕು ರೋಗಗಳ ನಿರ್ಮೂಲನ ಮುಂತಾದವು ಕಾರಣಗಳು. ಹಿಂದುಳಿದ ಪರಿಸ್ಥಿತಿಯಲ್ಲಿದ್ದಾಗ ಜನನ ಮರಣ ಪ್ರಮಾಣಗಳು ಸುಮಾರು 1000ಕ್ಕೆ 40 ರಷ್ಟಿದ್ದು ಜನನ ಪ್ರಮಾಣ ಕೊಂಚ ಹೆಚ್ಚಿರುತ್ತದೆ. ಅಭಿವೃದ್ಧಿಯಿಂದ ಮರಣ ಪ್ರಮಾಣ 1000ಕ್ಕೆ 10ರಷ್ಟು ಇಳಿಯಬಲ್ಲದು. ಆಗ ಜನನ ಪ್ರಮಾಣ ಮೊದಲಿನಂತೆಯೇ ಉಳಿದುಕೊಂಡರೆ ಜನಸಂಖ್ಯೆಯ ಬೆಳವಣಿಗೆ ಹೆಚ್ಚುವುದು. ಮೊದಲಿನ ಪ್ರಮಾಣ 1000ಕ್ಕೆ 40ರಂತೆ ಇದ್ದರೆ ವರ್ಷಕ್ಕೆ ಶೇಕಡ 4ರಷ್ಟು ಹೆಚ್ಚಾಗುವುದು. ಇದರಿಂದ 25 ವರ್ಷಗಳಲ್ಲಿ ಜನಸಂಖ್ಯೆ ಎರಡು ಪಟ್ಟು ಹೆಚ್ಚಾಗಬಹುದು.

ಆದರೆ ಯಾವುದೇ ದೇಶದಲ್ಲಿ ಜನನ ಪ್ರಮಾಣ ಹೆಚ್ಚಿದ್ದು ಮರಣ ಪ್ರಮಾಣ ಕಡಿಮೆಯಾಗುತ್ತ ಹೋದಂತೆ ಆರ್ಥಿಕ ಬೆಳವಣಿಗೆಯ ಪರಿಣಾಮ ಉಂಟಾಗಲಾರದು. ಮೊದಲನೆಯದಾಗಿ ಮಕ್ಕಳ ವಿಷಯದಲ್ಲಿ ವೆಚ್ಚ ಹೆಚ್ಚಾಗುವುದು. ಅಭಿವೃದ್ಧಿ ಪಡೆದ ರಾಷ್ಟ್ರಗಳಲ್ಲಿ ಮಕ್ಕಳ ಪ್ರಮಾಣ ಒಟ್ಟು ಜನಸಂಖ್ಯೆಯಲ್ಲಿ ಶೇ.15 ಅಥವಾ ಶೇ.20 ರಷ್ಟು ಇದ್ದರೆ ಅನಭಿವೃದ್ಧಿ ರಾಷ್ಟ್ರಗಳಲ್ಲಿ ಅವರ ಪ್ರಮಾಣ ಶೇ.40 ರಷ್ಟು ಇರುವುದು. ಇಂಥ ಅಸಮಾನ ಬೆಳವಣಿಗೆಯ ಪರಿಣಾಮವಾಗಿ ರಾಷ್ಟ್ರೀಯ ಆದಾಯದಲ್ಲಾದ ಹೆಚ್ಚಳ ಬಂಡವಾಳವಿನಿಯೋಗಕ್ಕೆ ಸಿಗದೆ ಮಕ್ಕಳ ಪೋಷಣೆಗೆ ಉಪಯೋಗಿಸಲ್ಪಡುವುದು. ಜನಸಂಖ್ಯೆ ಹೆಚ್ಚದಿದ್ದರೆ ಇದೇ ಬಂಡವಾಳವನ್ನು ತಲಾ ಆದಾಯದಲ್ಲಿ ಹೆಚ್ಚಳ ಸಾಧಿಸಲು ಉಪಯೋಗಿಸಬಹುದು. ಬಂಡವಾಳಕ್ಕೆ ಆದಾಯದ ಪ್ರಮಾಣ 4.1 ಇದ್ದು ಆಗ ದೇಶದ ಜನಸಂಖ್ಯೆ ಶೇ.1 ರಷ್ಟು ಹೆಚ್ಚಾದರೆ ರಾಷ್ಟ್ರೀಯ ಆದಾಯದ ಶೇ.4 ರಷ್ಟು ಬಂಡವಾಳವನ್ನು ಶೇ.2 ಹೆಚ್ಚಾದರೆ ಶೇ.8 ರಷ್ಟನ್ನು ಜನರ ಜೀವನ ಮಟ್ಟ ಕಾಯ್ದುಕೊಳ್ಳಲು ಉಪಯೋಗಿಸ ಬೇಕಾಗುತ್ತದೆ. ಅದರಿಂದ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಬಂಡವಾಳ ವಿನಿಯೋಗ ಕೇವಲ 5%ಕ್ಕಿಂತ ಕಡಿಮೆಯಿರುವಾಗ ಜನಸಂಖ್ಯೆ ಶೇ.2 ಅಥವಾ ಶೇ.3 ಪ್ರಮಾಣದಲ್ಲಿ ಬೆಳೆಯುವುದರಿಂದ ಜೀವನಮಟ್ಟದಲ್ಲಿ ಕಡಿತವನ್ನು ತಡೆಯುವುದು ಸಾಧ್ಯವಿಲ್ಲ.

ಆದರೆ ಸದ್ಯ ದೊರೆಯುವ ಎಲ್ಲ ಪ್ರಮಾಣಗಳ ಪ್ರಕಾರ ಮರಣ ಪ್ರಮಾಣದಲ್ಲಿ ಕಡಿತವಾಗುತ್ತಿದ್ದಂತೆ ಜನನ ಪ್ರಮಾಣ ಕಡಿಮೆಯಾಗುತ್ತ ಹೋಗುವುದನ್ನು ಕಾಣಬಹುದು. ಇದನ್ನು ಖಂಡಿತವಾಗಿ ಹೇಳುವುದು ಕಠಿಣವಾದರೂ ಯುರೋಪ್ ದೇಶಗಳ ಅನುಭವದಂತೆ ಜನನ ಪ್ರಮಾಣ 35–15ಕ್ಕೆ ಇಳಿದಿದೆ. ಇದಕ್ಕೆ ಅನೇಕ ಕಾರಣಗಳನ್ನು ಕೊಡಬಹುದು. ಆರ್ಥಿಕ ಬೆಳವಣಿಗೆ ಮುಂದುವರಿದಂತೆ ಜನರ ಜೀವನಮಟ್ಟ ಸುಧಾರಿಸಿ ತಮ್ಮ ಜೀವನಮಟ್ಟವನ್ನು ಕಾಯ್ದುಕೊಳ್ಳುವ ಹಾಗೂ ಮಕ್ಕಳ ಭವಿಷ್ಯದ ಚಿಂತೆ, ಸ್ತ್ರೀಯರಲ್ಲಿಯ ಸ್ವಾತಂತ್ರ್ಯಪ್ರಿಯತೆ ಹಾಗೂ ಮಕ್ಕಳನ್ನು ಪಡೆಯುವುದರಲ್ಲಿ ಅನಾಸಕ್ತಿ, ಮುಂತಾದ ಕಾರಣಗಳಿಂದ ಮರಣ ಪ್ರಮಾಣ ಕಡಿಮೆಯಾಗುತ್ತದೆ. ಯಾವ ಸಮಾಜದಲ್ಲಿ ಹುಟ್ಟಿದ ಮಕ್ಕಳು 100ಕ್ಕೆ 60ರಷ್ಟು ಬದುಕಲಾರರೋ ಅಂಥ ಸಮಾಜದಲ್ಲಿ ಬೆಳೆಯಬಹುದಾದ ಮಕ್ಕಳನ್ನು ಪಡೆಯಲು ಹೆಣ್ಣಿನ ಸಾಮರ್ಥ್ಯದ ಸೀಮೆಯಾದ ಎಂಟು ಮಕ್ಕಳನ್ನು ಪಡೆಯುವುದು ಆವಶ್ಯಕವೆನಿಸುವುದು ಮತ್ತು ಸರಾಸರಿ ಜೀವಮಾನ ಪ್ರಮಾಣ 68 ವರ್ಷಕ್ಕೆ ಮುಟ್ಟಿದೊಡನೆ ಜನಸಂಖ್ಯೆಯ ಜನನ ಮರಣ ಪ್ರಮಾಣಗಳು 1000ಕ್ಕೆ 15ರಷ್ಟು ಆಗಿ ಜನಸಂಖ್ಯೆಯಲ್ಲಿ ಸ್ಥಿರತೆಯುಂಟಾಗುವುದು. ಇವೆಲ್ಲ ಕಾರಣಗಳಿಂದ ಆರ್ಥಿಕ ಬೆಳವಣಿಗೆಯಲ್ಲಿ ಜನಸಂಖ್ಯೆಯ ಶೇ.3 ಅಥವಾ ಶೇ.4 ರಷ್ಟು ಹೆಚ್ಚಳ ತಾತ್ಕಾಲಿಕವಾದದ್ದು ಎಂದು ಕಂಡುಬರುವುದು. ಆದರೆ ಈ ತಾತ್ಕಾಲಿಕತೆ ದೇಶಗಳಿಗನುಸಾರವಾಗಿ 2 ಅಥವಾ 3 ಪೀಳಿಗೆಗಳವರೆಗೆ ಇರುವ ಸಂಭವವಿದೆ.

ಜನಸಂಖ್ಯೆಯ ಪ್ರಮಾಣಕ್ಕೂ ದೇಶದ ಸಂಪನ್ಮೂಲಕ್ಕೂ ನಿಕಟ ಸಂಬಂಧವಿದೆ. ಯಾವ ಜನಸಂಖ್ಯೆ ಆ ದೇಶದಲ್ಲಿ ಸಾಧ್ಯವಿದ್ದಷ್ಟೆಲ್ಲ ತಲಾ ಉತ್ಪಾದನೆಯನ್ನು ಹೆಚ್ಚು ಮಾಡಬಲ್ಲುದೋ ಅದು ಯೋಗ್ಯ ಜನಸಂಖ್ಯೆ. ದೊಡ್ಡ ಉದ್ದಿಮೆಗಳ ಸ್ಥಾಪನೆಗೂ ತಜ್ಞತೆಯ ಬೆಳವಣಿಗೆಗೂ ದೊಡ್ಡ ಜನಸಂಖ್ಯೆ ಆವಶ್ಯಕ. ಕೇವಲ ಆಹಾರ ಸಾಮಗ್ರಿಗಳ ಕೊರತೆಯಿಂದಾಗಿ ಜನಸಂಖ್ಯೆ ಹೆಚ್ಚಾಗಿದೆ ಎಂದು ಬಗೆಯುವುದು ಸರಿಯಲ್ಲ. ಉದ್ದಿಮೆಗಳನ್ನು ಹೆಚ್ಚಿಸಬಹುದಾದ ಖನಿಜ ಮುಂತಾದ ನೈಸರ್ಗಿಕ ಸಂಪನ್ಮೂಲಗಳು ಸಾಕಷ್ಟಿದ್ದ ದೇಶ ರಫ್ತು ಮೌಲ್ಯವನ್ನು ಹೆಚ್ಚಿಸಿ ಸಮೃದ್ಧಿಯನ್ನು ಪಡೆಯಬಹುದು. ಉದ್ಯೋಗಗಳ ದೃಷ್ಟಿಯಿಂದ ನೋಡಿದರೆ ದೇಶ ಆರ್ಥಿಕ ಬೆಳವಣಿಗೆ ಹೊಂದುತ್ತಿದ್ದಂತೆ ಕೃಷಿಯಲ್ಲಿ ನಿರತರಾದ ಜನರ ಪ್ರಮಾಣ ಹೆಚ್ಚುತ್ತ ಸಾಗುವುದು. ಅತಿ ಬಡದೇಶಗಳಲ್ಲಿ ಶೇ.70 ರಷ್ಟು ಜನ ಕೃಷಿಯಲ್ಲಿ ನಿರತರಾಗಿದ್ದರೆ ಅತಿ ಶ್ರೀಮಂತ ರಾಷ್ಟ್ರದಲ್ಲಿ ಶೇ.12–15 ಜನರು ಎಲ್ಲರಿಗೆ ಬೇಕಾದ ಆಹಾರವನ್ನು ಒದಗಿಸಬಲ್ಲರು. ಆದ್ದರಿಂದ ಉದ್ದಿಮೆಗಳಲ್ಲಿ ನಿರತರಾದ ಜನರ ಪ್ರಮಾಣ ಹೆಚ್ಚಾಗುವುದು. ಆರ್ಥಿಕ ಬೆಳವಣಿಗೆ ಮುಂದುವರಿದಂತೆ ಉದ್ದಿಮೆಗಳಿಗೆ ಬೇಕಾಗುವ ವಿವಿಧ ಸೇವೆಗಳನ್ನು ಒದಗಿಸುವ ಸ್ವತಂತ್ರ ಕೆಲಸಗಾರರ ಪ್ರಮಾಣ ಹೆಚ್ಚಾಗಿ ಸಮಾಜದಲ್ಲಿ ಕೇವಲ ನೌಕರಿಯಿಂದ ವೇತನಗಳಿಸುವವರ ಸಂಖ್ಯೆ ಕಡಿಮೆಯಾಗುವುದು. ಇದು ಕಾರ್ಲ್ ಮಾರ್ಕ್ಸ್ ಊಹಿಸಿದ ತೀರ ವಿರುದ್ಧವಾದ ಪರಿಸ್ಥಿತಿ ಎಂಬುದನ್ನು ಗಮನಿಸಬಹುದು.

ಆರ್ಥಿಕ ಬೆಳವಣಿಗೆಯನ್ನು ಉಪಕ್ರಮಿಸುವುದರಲ್ಲಿ ಸರ್ಕಾರ ಮಹತ್ವದ ಪಾತ್ರವನ್ನು ವಹಿಸಬಲ್ಲದೆಂಬುದು ನಿಜವಾದರೂ ಈ ವಿಷಯ ಕೆಲವು ರಾಜಕೀಯ ಪಕ್ಷಪಾತ ದೃಷ್ಟಿಯಿಂದ ಸರಿಯಾಗಿ ಗುರುತಿಸಲ್ಪಡದಿರಬಹುದು. ಆದರೆ ಹಿಂದಿನ ಕಾಲದಲ್ಲಿ ಹಾಗೂ ಇತ್ತೀಚೆಗೆ ಸರ್ಕಾರದ ಪಾತ್ರ ತುಂಬ ಪರಿಣಾಮಕಾರಿಯಾಗಿದೆ ಎಂಬುದನ್ನು ಕಂಡುಕೊಳ್ಳಬಹುದು.

ಆರ್ಥಿಕ ಬೆಳವಣಿಗೆಯ ಕಾರ್ಯ ತೀರ ವ್ಯಾಪಕವಿರುವುದರಿಂದ ಸರ್ಕಾರದ ಪಾತ್ರಕ್ಕೆ ಹೆಚ್ಚು ಮಹತ್ವ ಬಂದಿರುವುದು. ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಜನರ ಮನೋವೃತ್ತಿಗಳನ್ನು ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುಂತೆ ಪರಿವರ್ತಿಸುವಲ್ಲಿ ಆದಾಯದ ಹೆಚ್ಚಳವನ್ನು ಸರಿಯಾಗಿ ವಿತರಣೆ ಮಾಡಿ ಸಾಮಾಜಿಕ ನ್ಯಾಯ ನೀಡುವಲ್ಲಿ, ವ್ಯಾಪಾರೀಚಕ್ರದ ಪರಿಣಾಮಗಳನ್ನು ತಡೆಯುವುದರಲ್ಲಿ, ಸರ್ಕಾರ ದೊಡ್ಡ ಪಾತ್ರವಹಿಸಬಲ್ಲದು. ಸರ್ಕಾರ ಕೈಗೊಳ್ಳಬಹುದಾದ ಹಾಗೂ ಕೆಲವು ದೇಶಗಳಲ್ಲಿ ಕೈಗೊಂಡ, ವ್ಯಾಪಕವಾದ ಉತ್ಪಾದನಾ ಕಾರ್ಯಕ್ರಮದ ವಿಚಾರ ಯೋಜನಾಬದ್ಧ ಆರ್ಥಿಕ ವ್ಯವಸ್ಥೆಯ ಚರ್ಚೆಯಾಗಿ ಪರಿಣಮಿಸುವುದು.

ಆರ್ಥಿಕ ಬೆಳವಣಿಗೆ ಯಾವ ಉದ್ದೇಶ ಸಾಧನೆಗೂ ತಳಪಾಯವಾಗಬಲ್ಲುದು. ಉದ್ದೇಶಗಳು ಎರಡು ಬಗೆಯಾಗಿರುತ್ತವೆ. ಒಂದು ಸಮಾಜ ಕಲ್ಯಾಣ, ಎರಡು ಯುದ್ಧಸಿದ್ಧತೆ. ಎರಡನೆಯದರ ಉದ್ದೇಶವೂ ಎರಡು ಬಗೆ: ಆತ್ಮರಕ್ಷಣೆ ಮತ್ತು ಆಕ್ರಮಣ. ಈಗಿನ ಕಾಲದಲ್ಲಿ ಯಾವುದೇ ದೇಶವೂ ನೆರೆಯ ದೇಶದಮೇಲೆ ದಾಳಿ ಮಾಡಲು ಸಿದ್ಧತೆ ನಡೆಸಿದೆ ಎಂದು ಪ್ರಕಟವಾಗಿ ಒಪ್ಪಿಕೊಳ್ಳಲಾರದು. ಆದರೆ ಆರ್ಥಿಕ ಬೆಳವಣಿಗೆ ಸೈನಿಕ ಶಕ್ತಿಯ ಹೆಚ್ಚಳಕ್ಕೆ ಅವಕಾಶ ಕೊಡಬಲ್ಲದೆಂಬುದು ನಿರ್ವಿವಾದ. ತಲಾ ಉತ್ಪಾದನೆ ಹೆಚ್ಚಾದಂತೆ ದೇಶದ ಸಾಮಾನ್ಯ ಆರ್ಥಿಕ ವ್ಯವಸ್ಥೆಗೆ ತೊಡಕುಂಟಾಗದಂತೆಯೇ ಸೈನಿಕ ಶಕ್ತಿಯ ಬೆಳವಣಿಗೆಗೆ ಸಾಕಷ್ಟು ಶಕ್ತಿ ಸಾಮಗ್ರಿಗಳನ್ನು ತೊಡಗಿಸುವ ಸಾಮರ್ಥ್ಯ ತಾನಾಗಿಯೇ ಉಂಟಾಗುವುದು. ಈ ಶಕ್ತಿಯನ್ನು ಪಾತಕ ಕೆಲಸಗಳಿಗೆ ಬಳಸುವುದು ಉಚಿತವಾಗಲಾರದು. ಆದರೆ ಪ್ರಪಂಚದ ಎಲ್ಲ ರಾಷ್ಟ್ರಗಳೂ ತಮ್ಮ ಆರ್ಥಿಕ ಬೆಳವಣಿಗೆಯ ಉದ್ದೇಶ ಕೇವಲ ಜನಸಾಮಾನ್ಯರ ಹಿತಸಾಧನೆಯೆಂದು ಘಂಟಾಘೋಷವಾಗಿ ಸಾರುತ್ತಿರುವುವು.

ಇನ್ನು ಆರ್ಥಿಕ ಬೆಳವಣಿಗೆ ಸಾಮಾನ್ಯವಾದ ಉದ್ದೇಶವೆಂದು ಭಾವಿಸಲಾದ ಸಾರ್ವಜನಿಕ ಕಲ್ಯಾಣವನ್ನು ಎಷ್ಟರಮಟ್ಟಿಗೆ ಕೊಡಬಲ್ಲುದು ಎಂಬ ವಿಷಯದಲ್ಲೂ ಒಮ್ಮತ ಸಾಧ್ಯವಿಲ್ಲ. ಅದು ಸಮಾಜದಲ್ಲಿಯ ದುರ್ಲಭ ಸರಕು–ಸೇವೆಗಳ ಹೆಚ್ಚಳವನ್ನು ಸಾಧಿಸುವುದೇನೋ ನಿಜ. ಆದರೆ ಅವು ಮನುಷ್ಯರಿಗೆ ನೀಡಬಹುದಾದ ಸಂತೃಪ್ತಿಯನ್ನೂ, ಅವುಗಳಲ್ಲಿ ಆಗಬಹುದಾದ ಬದಲಾವಣೆಗಳನ್ನೂ ತುಲನಾತ್ಮಕವಾಗಿ ಅಳೆದು ನೋಡುವುದು ಅಸಾಧ್ಯ. ಆದರೆ ಹೆಚ್ಚಾಗುತ್ತಿರುವ ರಾಷ್ಟ್ರೀಯ ಆದಾಯದ ವಿತರಣೆ ಸರಿಯಾಗಿ ಯಾರೊಬ್ಬರಿಗೂ ಮೊದಲಿಗಿಂತ ಕಡಿಮೆ ಆದಾಯ ಇರದಂತೆ ಆಗುವಂತಿದ್ದರೆ ಆರ್ಥಿಕ ಬೆಳವಣಿಗೆ ಸಮಾಜ ಕಲ್ಯಾಣವನ್ನು ಸಾಧಿಸಿದೆ ಎಂಬುದಕ್ಕೆ ಯಾವ ಅಭ್ಯಂತರವೂ ಇಲ್ಲ. ಇದನ್ನು ಅಳೆದು ತೋರಿಸುವುದು ಅಸಾಧ್ಯವಾದ ಮಾತು. ಆರ್ಥಿಕ ಬೆಳವಣಿಗೆ ಸಮಾಜ ಕಲ್ಯಾಣ ಎರಡೂ ಒಂದೇ ಎಂದು ಬಗೆಯಲಾರೆವಾದರೂ ರಾಷ್ಟ್ರೀಯ ಆದಾಯದ ಅಂಕಿ ಸಂಖ್ಯೆಗಳು ಆರ್ಥಿಕ ಬೆಳವಣಿಗೆಯ ಪ್ರಾರಂಭಕಾಲದಲ್ಲಿ ಉಪಯುಕ್ತವಾದ ಪ್ರಗತಿಯ ಸೂಚಕಗಳಾಗಿವೆ. ಅಲ್ಲದೆ ಯಾವುದೇ ದೇಶದ ಜನಸಂಖ್ಯೆಯ ಹೆಚ್ಚು ಭಾಗ ಜನರು ಉಪವಾಸ ಸಾಯುವ ಅಥವಾ ಕೇವಲ ಅಸ್ತಿತ್ವ ಮಟ್ಟದಲ್ಲಿರುವಾಗ ರಾಷ್ಟ್ರೀಯ ಆದಾಯದ ಹೆಚ್ಚಳದಿಂದ ಇಂಥ ಜನರ ಪರಿಸ್ಥಿತಿ ಸುಧಾರಿಸಹತ್ತಿದರೆ, ತಲಾ ಆದಾಯದಲ್ಲಿಯ ಹೆಚ್ಚಳ ಅವಶ್ಯವಾಗಿಯೂ ಸಮಾಜ ಕಲ್ಯಾಣ ವೃದ್ಧಿಯ ಸೂಚಕವಾಗಬಲ್ಲದು.

ಆರ್ಥಿಕ ಬೆಳವಣಿಗೆಯಿಂದ ಜನರು ತಮ್ಮ ಭೌತಿಕ ವಾತಾವರಣಕ್ಕೆ ಹೆಚ್ಚು ದಕ್ಷತೆಯಿಂದ ಹೊಂದಿಕೊಳ್ಳುವುದನ್ನು ಕಾಣಬಹುದು. ಆರ್ಥರ್ ಲೇವಿಸ್ ಎಂಬ ಲೇಖಕ ಹೇಳುವಂತೆ ಆರ್ಥಿಕ ಬೆಳವಣಿಗೆ ಪರಿಸ್ಥಿತಿಯ ಮೇಲಿನ ಮನುಷ್ಯನ ಪ್ರಭುತ್ವವನ್ನು ಹೆಚ್ಚಿಸುವುದು. ಈ

ವಿಷಯದಲ್ಲಿ ಮನುಷ್ಯನಿಗೂ ನಿಸರ್ಗಕ್ಕೂ ಇರುವ ಪುರಾತನ ಸಂಬಂಧವನ್ನು ಗಮನಿಸಬೇಕು. ಪ್ರಾಚೀನಕಾಲದಲ್ಲಿ ಮನುಷ್ಯ ಮೇಲಿಂದ ಮೇಲೆ ಬರಗಾಲ, ಕ್ರಿಮಿಕೀಟ ಹಾಗೂ ಸಾಂಕ್ರಮಿಕ ರೋಗಗಳಿಗೆ ಗುರಿಯಾಗಬೇಕಾಗುತ್ತಿತ್ತು. ಅವನ ಅರ್ಧದಷ್ಟು ಮಕ್ಕಳು ಹತ್ತುವರ್ಷದವರಾಗುವಷ್ಟರಲ್ಲಿ ಸಾಯುತ್ತಿದ್ದರು. ನಲವತ್ತು ವರ್ಷಗಳಿಗೇ ಅವನ ಪತ್ನಿಯ ಮುಖದ ಮೇಲೆ ಸುಕ್ಕು ಮೂಡಿ ಮುಪ್ಪಿನ ಛಾಯೆ ಮುಸುಕುತ್ತಿತ್ತು. ಆರ್ಥಿಕ ಬೆಳವಣಿಗೆ ಇಂಥ ದಾಸ್ಯದಿಂದ ಪಾರಾಗುವ ಸಾಮರ್ಥ್ಯವನ್ನು ಕೊಡಬಲ್ಲುದು. ಸ್ತ್ರೀಯರಿಗಂತೂ ಆರ್ಥಿಕ ಬೆಳವಣಿಗೆಯ ಪ್ರಯೋಜನ ಅಷ್ಟಿಷ್ಟಲ್ಲ. ಹಿಂದುಳಿದ ಸಮಾಜಗಳಲ್ಲಿ ಸ್ತ್ರೀಯರು ಕೇವಲ ಮನೆಯಲ್ಲಿ ದುಡಿಯುವ, ತಾಸುಗಟ್ಟಲೆ ಬೀಸುವ, ಮೈಲುಗಟ್ಟಲೆ ಹೋಗಿ ನೀರುತರುವ ಮುಂತಾದ ಕೆಲಸಗಳಲ್ಲಿ ಜೀವನ ಕಳೆಯುವರು. ಆರ್ಥಿಕ ಬೆಳವಣಿಗೆ ಅವರನ್ನು ಇಂಥ ಕೆಲಸಗಗಿಂತ ಹೆಚ್ಚು ಆಕರ್ಷಕವಾದ ಮಕ್ಕಳಿಗೆ ಪಾಠ ಹೇಳುವುದು, ರೋಗಿಗಳನ್ನು ಉಪಚರಿಸುವುದು ಅಥವಾ ಮಾರುಕಟ್ಟೆಗಳಲ್ಲಿ ದುಡಿಯುವುದೇ ಮೊದಲಾದ ಕೆಲಸಗಳಿಗೆ ವರ್ಗಾಯಿಸಬಲ್ಲದು. ಇದರಿಂದ ಅವರು ಬೇಸರ ತರುವಂಥ ಶ್ರಮ ಹಾಗೂ ಏಕಾಂಗಿಜೀವನದಿಂದ ಮುಕ್ತರಾಗಿ ಬುದ್ಧಿಯ ಉಪಯೋಗವನ್ನು ಪುರುಷರಂತೆಯೇ ಸಾಧಿಸುವ ಅವಕಾಶವನ್ನು ಪಡೆಯುವರು.

ಆದರೆ ಆರ್ಥಿಕ ಬೆಳವಣಿಗೆಯಿಂದ ಉಂಟಾಗುವ ಕೆಲವು ಮೂಲಭೂತ ಬದಲಾವಣೆಗಳನ್ನು, ಭೌತಿಕ ಸಂಪನ್ಮೂಲಗಳ ಹೆಚ್ಚು ಹೆಚ್ಚು ಉಪಯೋಗವನ್ನು, ಮುಂದಿನ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದಲೂ, ಸಾಮಾಜಿಕ ದೃಷ್ಟಿಯಿಂದಲೂ ಕೆಲವು ಲೇಖಕರು ಪ್ರಶ್ನಿಸುತ್ತಾರೆ. ಒಬ್ಬ ಹೇಳುವಂತೆ, ನಮ್ಮ ಅರ್ಥ ವ್ಯವಸ್ಥೆ ಸದ್ಯದಲ್ಲಿ ವಿಸ್ತರಿಸುತ್ತಿರುವ ರೀತಿ ಮುಂದಿನ ಜನಾಂಗಗಳನ್ನು ಅವನತಿಗೆ ಗುರಿಮಾಡಬಲ್ಲುದು. ಅದು ಕೇವಲ ಮಣ್ಣಿನ ಫಲವತ್ತತೆಯನ್ನು, ಗಣಿಗಳನ್ನು ಬರಿದು ಮಾಡುವುದಷ್ಟೇ ಅಲ್ಲ; ಅದಕ್ಕಿಂತ ಮಹತ್ವದ್ದೆಂದರೆ ಈ ದಿನಗಳಲ್ಲಿ ಆರ್ಥಿಕ ವ್ಯವಸ್ಥೆ ಮುಂದುವರಿಯಲು ಅಡಿಗಲ್ಲಿನಂತಿರುವ ಸಾಮಾಜಿಕ, ನೈತಿಕ ಮಟ್ಟಗಳನ್ನು ಸವೆಸಿಬಿಡುತ್ತದೆ. ಆರ್ಥಿಕ ಬೆಳವಣಿಗೆ ಎಷ್ಟರಮಟ್ಟಿಗೆ ಸಾಮಾಜಿಕ ಅವ್ಯವಸ್ಥೆಗೆ ಕಾರಣವಾಗುವುದೆಂಬುದನ್ನು ಅಳೆಯುವಂಥ ಯಾವುದೇ ಪ್ರಮಾಣ ಸಿಗಲಾರದು. ಉತ್ಸಾಹ ಹಾಗೂ ಪ್ರೇರಣ ಶಕ್ತಿಯಿಂದ ಕೂಡಿದ ತರುಣನ ಭಾವನಾಮಯ ಜೀವನ ಪಟ್ಟಣಗಳ ಔದ್ಯೋಗಿಕ ಸಮಾಜದಲ್ಲಿ ಯಾವ ರೀತಿಯಿಂದ ಹೆಚ್ಚು ಹೆಚ್ಚಾಗಿ ನಿರಾಶೆಯನ್ನುಂಟುಮಾಡುವ ಮಾನಸಿಕ ಹಾಗೂ ಸಾಮಾಜಿಕ ವಾತಾವರಣಕ್ಕೆ ಹೆಚ್ಚು ಹೆಚ್ಚಾಗಿ ಹೊಂದಿಕೊಳ್ಳುವಂತೆ ಬದಲಾವಣೆಗಳನ್ನುಂಟುಮಾಡುತ್ತಿದೆ ಎಂಬುದನ್ನು ಒಬ್ಬ ವಿದ್ವಾಂಸ ಎತ್ತಿತೋರಿಸಿದ್ದಾನೆ. ಇಂಥ ತೊಡಕುಗಳನ್ನು ಸರಿಯಾಗಿ ಶೋಧಿಸುವ ಹಾಗೂ ಅಳೆಯುವ ಸಾಧನೆಗಳು ಪರಿಪೂರ್ಣವಿಲ್ಲದಾಗ ಆರ್ಥಿಕ ಕಾರ್ಯಸಾಮರ್ಥ್ಯದೊಡನೆ ಇವುಗಳ ಸಂಬಂಧವನ್ನು ತೋರಿಸುವುದು ಅಸಾಧ್ಯ. ಆದರೆ ಇಂಥ ವ್ಯವಸ್ಥೆಗೆ ಪರಿವರ್ತನೆಗೊಳ್ಳುತ್ತಿರುವಂಥ ಸಮಾಜಗಳಲ್ಲಿ ಕಂಡುಬರುತ್ತಿರುವುದರಿಂದ ಆರ್ಥಿಕ ಬೆಳವಣಿಗೆಗೆ ಮನುಷ್ಯ ಮಾನಸಿಕವಾಗಿ ಹೆಚ್ಚಿನ ಬೆಲೆ ತೆರಬೇಕಾಗುವುದೆಂಬುದನ್ನು ತೋರಿಸುತ್ತವೆ.

ಆರ್ಥಿಕ ಬೆಳವಣಿಗೆಯು ನಿಜವಾದ ಪ್ರಗತಿಯನ್ನುಂಟುಮಾಡಬಹುದೇ? ಎಂಬ ವಿಷಯವಾಗಿ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಆರ್ಥಿಕ ಬೆಳವಣಿಗೆ ನೈತಿಕ ದೃಷ್ಟಿಯಿಂದ ಒಳ್ಳೆಯದೆ? ಅದು ಯುದ್ಧ ಸಾಮಗ್ರಿಗಳನ್ನು ಉತ್ಪಾದಿಸುವ ಸಾಧನವಾದರೆ ಅಥವಾ ಆಟಮ್‌ಬಾಂಬ್, ಹೈಡ್ರೊಜನ್ ಬಾಂಬುಗಳ ಉತ್ಪಾದನೆಗೆ ಉಪಯೋಗಿಸಲ್ಪಟ್ಟರೆ ಅಂಥ ಆರ್ಥಿಕ ಬೆಳವಣಿಗೆಯ ನೈತಿಕ ಬೆಲೆಯೇನು? ಅದು ಕ್ಷುಲ್ಲಕವಾದ ನಾಟಕಗಳನ್ನಾಗಲಿ, ಪತ್ತೇದಾರಿ ಕಾದಂಬರಿಗಳನ್ನಾಗಲಿ ಕೆಳದರ್ಜೆಯ ಸಾಮಾನ್ಯ ಸಂಗೀತವನ್ನಾಗಲಿ ಹೆಚ್ಚಿಸುವಂಥಾದರೆ ಅಂಥ ಆರ್ಥಿಕ ಬೆಳವಣಿಗೆ ಎಷ್ಟರಮಟ್ಟಿಗೆ ಸಾರ್ಥಕ? ಸಮಾಜದಲ್ಲಿ ಆಧ್ಯಾತ್ಮಿಕ ದೃಷ್ಟಿಕೋನ ಹಾಗೂ ಸೌಂದರ್ಯ ಮೌಲ್ಯಗಳನ್ನು ಕಡೆಗಣಿಸುವಂಥ ಭೌತಿಕ ದೃಷ್ಟಿಕೋನವನ್ನು ಬೆಳೆಸುವುದು ಎಷ್ಟರಮಟ್ಟಿಗೆ ಯೋಗ್ಯವೆನಿಸಿತು? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಪ್ರತಿಯೊಂದು ವ್ಯಕ್ತಿಯ ಸ್ವಂತ ವಿಚಾರಶಕ್ತಿ ಹಾಗೂ ಅವನ ಹಿನ್ನೆಲೆಗಳನ್ನು ಅವಲಂಬಿಸಿರುವುದು. ಬೋಲ್ಡಿಂಗ್ ಹೇಳುವಂತೆ ಆರ್ಥಿಕ ಬೆಳವಣಿಗೆ ನಮಗೆ ಬೇಕಾದುದನ್ನು ದೊರಕಿಸಿಕೊಳ್ಳುವ ಸಾಮರ್ಥ್ಯವನ್ನು ಕೊಡುವುದು. ನಾವು ಅಪಾಯಕಾರಿ ವಸ್ತುಗಳನ್ನೇ ಬಯಸಿದರೆ ಅವುಗಳನ್ನೇ ದೊರಕಿಸಿಕೊಟ್ಟು ನಮ್ಮ ನಾಶಕ್ಕೆ ನಾವೇ ದಾರಿಮಾಡಿಕೊಳ್ಳುವಂತೆ ಮಾಡಬಲ್ಲುದು. ಆರ್ಥಿಕ ಬೆಳವಣಿಗೆಯ ಮೌಲ್ಯ ಆಯಾ ಯುಗಧರ್ಮದಿಂದ ನಿರ್ಣಯಿಸಲ್ಪಡಬಹುದು. ಯುದ್ಧಗಳೇ ಸಾಮಾನ್ಯವಾಗಿರುವಂಥ ಪ್ರಪಂಚದಲ್ಲಿ ರಾಷ್ಟ್ರೀಯ ಪ್ರಭುತ್ವವನ್ನು ರಕ್ಷಿಸುವುದು ಉಳಿದೆಲ್ಲ ವಿಚಾರಕ್ಕಿಂತ ಮಹತ್ವದ್ದೆಂದು ಹಲವರ ಅಭಿಪ್ರಾಯ. ವಸ್ತುಗಳ ಮೌಲ್ಯಗಳನ್ನು ಒಂದೇ ದೃಷ್ಟಿಯಿಂದ ಅಳೆಯುವುದೂ ಸಾಧ್ಯವಿಲ್ಲ. ಆಧ್ಯಾತ್ಮಿಕ ಮೌಲ್ಯಗಳೂ ಸೌಂದರ್ಯ ದೃಷ್ಟಿ ಮೌಲ್ಯಗಳೂ ಭೌತಿಕ ಮೌಲ್ಯಗಳೊಡನೆ ಕೆಲವು ಸಲ ಹೊಂದಿಕೊಳ್ಳಲೂಬಹುದು. ಆದರಿಂದ ಈ ಎಲ್ಲ ಪ್ರಶ್ನೆಗಳನ್ನು ಬೇರೆ ದೃಷ್ಟಿಕೋನದಿಂದಲೂ ನೋಡಬೇಕು. ಇವೆಲ್ಲ ವಾದಗಳಿಗಿಂತ ಹೆಚ್ಚು ಪ್ರಬಲವಾದ ವಾದವೆಂದರೆ, ಸದ್ಯದ ಜಗತ್ತಿನ ಬಹು ದೊಡ್ಡಭಾಗ ಎದುರಿಸುತ್ತಿರುವ ಗಂಡಾಂತರವನ್ನುಂಟುಮಾಡಬಹುದಾದ ಸಮಸ್ಯೆಯೆಂದರೆ ಅಲ್ಲಿಯ ಜನಸಾಮಾನ್ಯರ ಉಪವಾಸ ಮಟ್ಟದಲ್ಲಿರುವ ಜೀವನಕ್ಕೂ ಅವರೇ ತಿಳಿದುಕೊಳ್ಳಹತ್ತಿರುವ ಕನಿಷ್ಠ ಜೀವನಮಟ್ಟಕ್ಕೂ ಇರುವ ಅಂತರವನ್ನು ಕಡಿಮೆ ಮಾಡುವುದೇ ಆಗಿದೆ.

ಅಲ್ಲದೆ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ ವಿಚಾರ, ಇಂಥ ಪ್ರಶ್ನೆಗಳಿಗೆ ಉತ್ತರ ಹುಡುಕುವಾಗ ಮೌಲ್ಯಗಳ ಬಗ್ಗೆ ನಿರ್ಣಯಿಸುವುದು ಅನಿವಾರ್ಯವಾಗುತ್ತದೆ. ಇಂಥ ಮೌಲ್ಯಗಳನ್ನು ಶಾಸ್ತ್ರೀಯ ಪದ್ಧತಿಯಿಂದ ಪ್ರಮಾಣೀಕರಿಸುವುದಾಗಲಿ ಖಂಡಿಸುವುದಾಗಲಿ ಸಾಧ್ಯವಿಲ್ಲ. ಬೋಲ್ಡಿಂಗ್ ಹೇಳುವಂತೆ ಅಂತಿಮಗುರಿಯ ವಿಮರ್ಶೆ, ಅಂದರೆ ಯಾವುದು ಸರಿಯಾದ ಇಚ್ಛೆ ಎಂಬ ವಿಷಯದ ಅಭ್ಯಾಸ ಅರ್ಥಶಾಸ್ತ್ರದ ವಿಶ್ಲೇಷಣೆಯ ನಕ್ಷೆಯೊಳಗಿನ ವಿಚಾರವಲ್ಲ. ಅದು ನಿಜವಾಗಿ ಮನುಷ್ಯನ ಪ್ರಜ್ಞೆಯ ವಿಷಯವೇ ಹೊರತು ತಿಳಿವಳಿಕೆಯಿಂದ ಹುಟ್ಟುವುದಿಲ್ಲ; ಧರ್ಮವಿಷಯವೇ ಹೊರತು ಶಾಸ್ತ್ರ ವಿಷಯವಲ್ಲ. (ಡಿ.ಎ.ಎಚ್.)

**ಆರ್ಥಿಕ ಭದ್ರತೆ :** ಆದಾಯದ ಗತಿಯಲ್ಲಿ ಇಳಿಮುಖವಾದರೆ ಅಥವಾ ಆದಾಯಕ್ಕೆ ಕಾರಣಾಂತರದಿಂದ ಧಕ್ಕೆ ಬಂದರೆ, ಜನತೆಗೆ ಅತ್ಯಗತ್ಯವಾದ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದೇ ಹೋಗುವ ಪರಿಸ್ಥಿತಿ ಉದ್ಭವಿಸಬಹುದು. ಆದ್ದರಿಂದ ಜನತೆಗೆ ನಿರ್ದಿಷ್ಟವಾದ ಒಂದು ಪ್ರಮಾಣದ ಆರ್ಥಿಕಭದ್ರತೆ ಎಲ್ಲ ಸಮಯದಲ್ಲೂ ಎಲ್ಲ ಸಮಾಜದಲ್ಲೂ ಅಗತ್ಯ. ಆರ್ಥಿಕರಕ್ಷಣೆ ಹಾಗೂ ಸಾಮಾಜಿಕರಕ್ಷಣೆ (ಎಕನಾಮಿಕ್ ಸೆಕ್ಯೂರಿಟಿ; ಸೋಷಿಯಲ್ ಸೆಕ್ಯೂರಿಟಿ) ಎಂಬ ಪದಗಳನ್ನು ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಬಳಸಲಾಗುತ್ತದೆ. 20ನೆಯ ಶತಮಾನದ ಪ್ರಥಮಾರ್ಧದಲ್ಲಿ ಈ ರೀತಿಯ ಭದ್ರತೆಯ ಕ್ರಮದ ಅಗತ್ಯವನ್ನು ಪ್ರಪಂಚದ ಎಲ್ಲ ರಾಷ್ಟ್ರಗಳೂ ಮನಗಂಡವೆಂದು ಹೇಳಬಹುದು. ಅತ್ಯಂತ ಅಗತ್ಯವಾದ ಆದಾಯವನ್ನು ಒದಗಿಸಲು, ಆರ್ಥಿಕ ಸಂಪತ್ತಿನ ಕೊರತೆಯಿಂದಾಗಿ ಅಸಮರ್ಥವಾದ ರಾಷ್ಟ್ರಗಳ ವಿಷಯದಲ್ಲಿ ಆರ್ಥಿಕ ಭದ್ರತೆಯ ಆವಶ್ಯಕತೆ ತೀರಾ ಹೆಚ್ಚು. ಜನಸಂಖ್ಯೆ ವೃದ್ಧಿಯಾಗುತ್ತಿದ್ದು ಅದಕ್ಕೆ ಅನುಗುಣವಾಗಿ ರಾಷ್ಟ್ರೀಯ ವರಮಾನ ಬೆಳೆಯಲು ಸಾಧ್ಯವಿಲ್ಲದೆ ಹೋಗುವ, ಇನ್ನೂ ಪ್ರಗತಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸ್ವಲ್ಪಮಟ್ಟಿನ ಆರ್ಥಿಕ ಭದ್ರತೆಯನ್ನು ಒದಗಿಸಿಕೊಡುವುದು ಸರ್ಕಾರದ ಜವಾಬ್ದಾರಿಯಾಗುತ್ತದೆ. ಕೈಗಾರಿಕೆಯೇ ಪ್ರಧಾನವಾದ ರಾಷ್ಟ್ರಗಳಲ್ಲಂತೂ ಹೆಚ್ಚಿನ ಜನರ ಆದಾಯ ವೇತನ ರೂಪದಲ್ಲೊ ಕೂಲಿಯ ರೂಪದಲ್ಲೊ ಇರುವುದರಿಂದ ಆದಾಯ ಯಾವಾಗಲೂ ಅನಿಶ್ಚಿತತೆಯ ಅಂಶಗಳನ್ನು ಒಳಗೊಂಡಿರುತ್ತದೆ. ಈ ಅನಿಶ್ಚಿತತೆ ನಿರುದ್ಯೋಗ, ಅಪಘಡ, ಅಕಾಲಮರಣ, ವೃದ್ಧಾಪ್ಯ ಇವುಗಳ ರೂಪದಲ್ಲಿರುತ್ತದೆ.

ಇಂಥ ಅನಿಶ್ಚಿತತೆಯ ಭಯವನ್ನು ಕಡಿಮೆ ಮಾಡಲು ಆರ್ಥಿಕ ಭದ್ರತೆ ತೀರಾ ಅಗತ್ಯವಾಗುತ್ತದೆ. ಹಿಂದೆ, ಇದನ್ನು ಎದುರಿಸಲು ವೈಯಕ್ತಿಕ ಉಳಿತಾಯ, ಆಸ್ತಿಗಳಿಕೆ, ವಿಮೆ ಮೊದಲಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಆದರೆ ಈ ಕ್ರಮಗಳು ಜನಸಾಮಾನ್ಯರ ನಿಲುಕಿನಲ್ಲಿರಲು ಸಾಧ್ಯವಿರುತ್ತಿರಲಿಲ್ಲ. ಅದರಲ್ಲೂ ವೇತನದ ಮೂಲಕ ಆದಾಯವನ್ನು ಗಳಿಸುವವರು ಉಳಿತಾಯ ಮಾಡುವುದು ತೀರ ಕಷ್ಟದ ವಿಷಯವಾಗಿತ್ತು. ಹೀಗಾಗಿ ಆರ್ಥಿಕ ಭದ್ರತೆಯನ್ನು ಒದಗಿಸುವುದರ ಅಗತ್ಯವನ್ನು ಸರ್ಕಾರಗಳು ಮನಗಂಡವು.

ಈಗ ಹೆಚ್ಚು ಕಡಿಮೆ ಎಲ್ಲ ರಾಷ್ಟ್ರಗಳೂ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಜನತೆಗೆ ಆರ್ಥಿಕ ಭದ್ರತೆಯನ್ನು ಒದಗಿಸುತ್ತಿವೆ. ತಮ್ಮ ರಾಷ್ಟ್ರೀಯ ಆದಾಯದ ಒಂದು ಅಂಶವನ್ನು ಈ ಕಾರ್ಯಕ್ಕಾಗಿ ಮೀಸಲಾಗಿಡುತ್ತವೆ. ಸಾಧಾರಣವಾಗಿ, ನಿರುದ್ಯೋಗ ಪರಿಹಾರಧನ, ವೃದ್ಧಾಪ್ಯವೇತನ, ಹೆಂಗಸರಿಗೆ ತಾಯ್ತನ ಸಮಯದಲ್ಲಿ ವೇತನ, ಅಪಘಡಕ್ಕಾಗಿ ಪರಿಹಾರಗಳ ಮೂಲಕ ಖಚಿತ ಆರ್ಥಿಕ ಭದ್ರತೆಯನ್ನು ಒದಗಿಸಲಾಗುತ್ತಿದೆ. ಹೆಚ್ಚಿನ ರಾಷ್ಟ್ರಗಳು ವೃದ್ಧರಿಗೆ, ವಿಧವೆಯರಿಗೆ ಮತ್ತು ಅವರ ಅವಲಂಬಿಗಳಿಗೆ, ಮತ್ತು ನಿರುದ್ಯೋಗಿಗಳಿಗೆ ಧನಸಹಾಯ ಮಾಡುವುದರ ಮೂಲಕ ಆರ್ಥಿಕಭದ್ರತೆಯನ್ನು ಒದಗಿಸುತ್ತವೆ. ಆರ್ಥಿಕಭದ್ರತೆಯ ಮೂರು ಮುಖ್ಯ ವಿಧಾನಗಳೆಂದರೆ; 1. ಸಾಮಾಜಿಕ ವಿಮೆ (ಸೋಷಿಯಲ್ ಇನ್‌ಷೂರೆನ್ಸ್) 2. ಸರ್ಕಾರಿ ಸಹಾಯ (ಪಬ್ಲಿಕ್ ಅಸಿಸ್ಟೆನ್ಸ್) 3. ಸರ್ಕಾರದ ಸೇವೆ (ಪಬ್ಲಿಕ್ ಸರ್ವಿಸಸ್).

ಸಾಮಾಜಿಕ ವಿಮೆಗೆ ಉತ್ಪಾದಕ, ಕೆಲಸಗಾರ, ಸರ್ಕಾರ, ಈ ಮೂರು ಅಥವಾ ಮೂರರಲ್ಲಿ ಮೊದಲೆರಡು ಹಣವನ್ನು ತುಂಬುತ್ತವೆ. ಈ ವಿಮೆ ಕೆಲಸಗಾರನಿಗೆ ಒಂದು ನಿರ್ದಿಷ್ಟವಾದ ರೂಪದಲ್ಲಿ ಆರ್ಥಿಕಭದ್ರತೆಯನ್ನು ಒದಗಿಸುತ್ತದೆ. ಇದರಿಂದ ಬರಬಹುದಾದ ಲಾಭ ಕೆಲಸಗಾರನ ವೈಯಕ್ತಿಕ ಆದಾಯ, ವಿಮೆಗೆ ಆತನ ಕೊಡುಗೆ–ಇವನ್ನು ಹೊಂದಿಕೊಂಡಿರುತ್ತದೆ. ಅಗತ್ಯವಿರುವ ವ್ಯಕ್ತಿಗಳಿಗೆ ಸರ್ಕಾರಿ ಸಹಾಯದ ಕಾರ್ಯಕ್ರಮ ಧನಸಹಾಯದ ರೂಪದಲ್ಲಿರುತ್ತದೆ. ಉದಾಹರಣೆಗೆ ಸರ್ಕಾರ ವಿಧವೆಯರಿಗೆ ಮತ್ತು ಅವರನ್ನು ಅವಲಂಬಿಸಿರುವ ಮಕ್ಕಳಿಗೆ ಅಗತ್ಯ ಆವಶ್ಯಕತೆಗಳನ್ನು ಪೂರೈಸುವಷ್ಟು ಹಣ ಕೊಟ್ಟು ಆರ್ಥಿಕ ಭದ್ರತೆಯನ್ನು ಒದಗಿಸಬಹುದು. ಸರ್ಕಾರಿ ಸೇವೆಯ ರೂಪದಲ್ಲಿ ಒಂದು ರಾಷ್ಟ್ರದ ಪ್ರಜೆಗಳಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ಕಾರ್ಯಕ್ರಮ, ಎಲ್ಲ ಕೆಲಸಗಾರರಿಗೂ ಅಗತ್ಯಬಿದ್ದಾಗ ಹಣ ಸಹಾಯಮಾಡುವುದು, ಬೇರೆ ರೀತಿಯ ಸೇವೆಗಳನ್ನು ಒದಗಿಸುವುದು–ಈ ಮೂಲಕ ಆಗುತ್ತದೆ.

ಕ್ಷೇಮರಾಜ್ಯದ ಉದ್ದೇಶವಿರುವ ಭಾರತ ತನ್ನ ಪ್ರಜೆಗಳಿಗೆ ಸ್ವಲ್ಪಮಟ್ಟಿನ ಆರ್ಥಿಕ ಭದ್ರತೆಯನ್ನು ಒದಗಿಸುವ ಕಾರ್ಯಕ್ರಮಗಳನ್ನಿಟ್ಟುಕೊಂಡಿದೆ. ಸಾಮಾಜಿಕ ವಿಮೆ ಹೆಂಗಸರಿಗೆ ತಾಯ್ತನದ ಕಾಲದಲ್ಲಿ ಪರಿಹಾರಗಳ ಮೂಲಕ ಆರ್ಥಿಕ ಭದ್ರತೆಯನ್ನು ಒದಗಿಸಲಾಗುತ್ತಿದೆ.

ಮೇಲೆ ಹೇಳಿದ ವಿಷಯ ಒಂದು ರಾಷ್ಟ್ರದ ಜನತೆಗೆ ದೊರೆಯಬಹುದಾದ ಆರ್ಥಿಕ ಭದ್ರತೆಗೆ ಸಂಬಂಧಿಸಿದ್ದು. ಹಾಗೆಯೇ ಒಂದು ರಾಷ್ಟ್ರದ ಆರ್ಥಿಕ ಭದ್ರತೆ ಮತ್ತು ವಿಶ್ವ ಆರ್ಥಿಕ ಭದ್ರತೆ ಮತ್ತು ಇವೆರಡರ ನಡುವಿನ ಸಂಬಂಧವನ್ನು ವಿವೇಚಿಸುವುದು ಸಾಧ್ಯ. ಪ್ರತಿಯೊಂದು ರಾಷ್ಟ್ರವೂ ಸ್ವಲ್ಪಮಟ್ಟಿನ ಆರ್ಥಿಕ ಭದ್ರತೆಯನ್ನು ಕಾಪಾಡಿಕೊಂಡು ಹೋಗುವುದು ಅತ್ಯಾವಶ್ಯಕವಾಗುತ್ತದೆ.

ಒಂದು ರಾಷ್ಟ್ರದ ಆರ್ಥಿಕ ಭದ್ರತೆ ಆ ರಾಷ್ಟ್ರದಲ್ಲಿರುವ ಪ್ರಕೃತಿಸಂಪತ್ತು, ಶ್ರಮಸಂಪತ್ತು, ಬಂಡವಾಳಗಳ ಮೇಲೆ ನಿರ್ಧಾರವಾಗುತ್ತದೆ ಎಂದು ಹೇಳಬಹುದು. ಇವು ವಿಪುಲವಾಗಿದ್ದರೆ ಆ ರಾಷ್ಟ್ರದ ಆರ್ಥಿಕ ಭದ್ರತೆ ಹೆಚ್ಚು ಸುರಕ್ಷಿತ. ಪ್ರಗತಿಶೀಲ ರಾಷ್ಟ್ರಗಳ ಆರ್ಥಿಕ ಭದ್ರತೆ, ಪ್ರಗತಿ ಹೊಂದಿದ ರಾಷ್ಟ್ರಗಳ ಸಹಕಾರದಿಂದ ನಿರ್ಧಾರವಾಗುತ್ತದೆ. ಪ್ರಗತಿ ಹೊಂದಿರುವ ರಾಷ್ಟ್ರಗಳು ಪ್ರಗತಿ ಹೊಂದುತ್ತಿರುವ ರಾಷ್ಟ್ರಗಳಿಗೆ ಬಂಡವಾಳ ಸರಬರಾಜು ಮಾಡಿ ಅವುಗಳ ಆರ್ಥಿಕ ಭದ್ರತೆಯನ್ನು ವೃದ್ಧಿಗೊಳಿಸುವುದು ಸಾಧ್ಯ. ಒಂದು ರಾಷ್ಟ್ರ ತನ್ನ ರಾಷ್ಟ್ರೀಯ ವರಮಾನವನ್ನು ಯಾವ ರೀತಿ ಪಡೆಯುತ್ತಿದೆ ಎನ್ನುವುದೂ ಆರ್ಥಿಕ ಭದ್ರತೆಯ ದೃಷ್ಟಿಯಿಂದ ತಿಳಿಯುವುದು ಅಗತ್ಯ. ಉದಾಹರಣೆಗೆ, ಒಂದು ರಾಷ್ಟ್ರೀಯ ವರಮಾನದ ಅತ್ಯಧಿಕ ಭಾಗವನ್ನು ವಿದೇಶೀ ವ್ಯಾಪಾರದಿಂದ ಗಳಿಸುತ್ತಿದ್ದರೆ, ಆ ರಾಷ್ಟ್ರದ ಆರ್ಥಿಕ ಭದ್ರತೆ ಹೆಚ್ಚಾಗಿ ಬೇರೆ ರಾಷ್ಟ್ರಗಳ ವ್ಯಾಪಾರನೀತಿಯಿಂದ ಪ್ರಭಾವ ಹೊಂದುತ್ತದೆ. ಒಂದು ಅತ್ಯಂತ ಗಮನಾರ್ಹ ಅಂಶವೆಂದರೆ ಒಂದು ರಾಷ್ಟ್ರದ ಆರ್ಥಿಕ ಭದ್ರತೆ ಇತರ ರಾಷ್ಟ್ರಗಳ ಸಹಕಾರದಿಂದ ವೃದ್ಧಿಹೊಂದುತ್ತ ಹೋಗಬಹುದು. ಎಲ್ಲ ರಾಷ್ಟ್ರಗಳೂ ವ್ಯಾಪಾರ, ಶ್ರಮ, ಆಮದು ರಫ್ತುಗಳನ್ನು ಮುಕ್ತವಾಗಿ ಮಾಡಿದ್ದೇ ಆದರೆ ಪ್ರಪಂಚದ ಒಟ್ಟಾರೆ ಸಂಪತ್ತು ತೀವ್ರವಾಗಿ ವೃದ್ಧಿಯಾಗಿ ಇಡೀ ವಿಶ್ವದ ಆರ್ಥಿಕ ಭದ್ರತೆ ಅತ್ಯಂತ ತೀವ್ರವಾಗಿ ವೃದ್ಧಿಯಾಗುತ್ತ ಹೋಗಲು ಸಾಧ್ಯ. ಈ ವಿಷಯ ವಿಶ್ವಶಾಂತಿಯ ದೃಷ್ಟಿಯಿಂದಲೂ ಮುಖ್ಯ ಎಂಬ ಅಂಶ ಗಮನಾರ್ಹ. (ಪಿ.ಕೆ.ಆರ್.)

**ಆರ್ಥಿಕ ಯೋಜನೆಗಳು :** ವ್ಯಾಪಕಾರ್ಥದಲ್ಲಿ ಈ ಪದವನ್ನು, ಒಂದು ರಾಷ್ಟ್ರದ ಸಮಗ್ರ ಆರ್ಥಿಕ ವ್ಯವಸ್ಥೆಯನ್ನು ಸಮಾಜವಾದಿ ತತ್ತ್ವದ ತಳಹದಿಯ ಮೇಲೆ ಪುನಾರಚಿಸುವ ಪ್ರಯತ್ನಕ್ಕೆ ಅನ್ವಯಿಸಲಾಗಿದೆ. ಸಂಕುಚಿತಾರ್ಥದಲ್ಲಿ, ಒಂದು ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿಯ ಕೆಲವೇ ವಿಭಾಗಗಳನ್ನು, ಅಂದರೆ ಸಂಪತ್ತಿನ ಉತ್ಪಾದನೆ ಹಾಗೂ ವಿತರಣೆಗಳನ್ನಷ್ಟೇ ಯೋಜನಾಬದ್ಧ ವ್ಯವಸ್ಥೆಗೆ ಒಳಪಡಿಸುವ ಪ್ರಯತ್ನಕ್ಕೆ ಅನ್ವಯಿಸಲಾಗಿದೆ. ಆರ್ಥಿಕ ಯೋಜನೆಗಳು ಸಾಮಾನ್ಯವಾಗಿ ಒಂದು ರಾಷ್ಟ್ರದ ಪರಿಮಿತಿಗೆ ಒಳಗಾಗಿರುವುದರಿಂದ ಅಂಥ ಯೋಜನೆಗಳನ್ನು ರಾಷ್ಟ್ರೀಯ ಆರ್ಥಿಕ ಯೋಜನೆಗಳೆಂದು ಹೇಳಬಹುದು.

ಇಂಥ ಯಾವುದೇ ಯೋಜನೆಯಿರಲಿ, ಅದು ಒಂದು ಸಾಮಾನ್ಯ ಊಹೆಯ ಮೇಲೆ ಆಧಾರಿತವಾಗಿರುತ್ತದೆ. ಇಂಥ ಊಹೆ ಬಂಡವಾಳಗಾರಿಕೆಯ ಮುಖ್ಯ ದುರ್ಬಲತೆಯಾದ ವಾಣಿಜ್ಯ ಆವರ್ತದ (ಟ್ರೇಡ್ ಸೈಕಲ್) ದುಷ್ಪರಿಣಾಮಗಳ ವಿಚಾರವಾಗಿ ಇರುವುದು. ಬಂಡವಾಳಶಾಹಿ ಪದ್ಧತಿಯ ಆರ್ಥಿಕ ವ್ಯವಸ್ಥೆಯಲ್ಲಿ ತಾತ್ಪೂರ್ತಿಕ ಆರ್ಥಿಕ ಸಮೃದ್ಧಿಕಾಲ (ಬೂಮ್) ಹಾಗೂ ಆರ್ಥಿಕ ಮುಗ್ಗಟ್ಟಿನ ಕಾಲ (ಡಿಪ್ರೆಷನ್)ಗಳು ಒಂದನ್ನೊಂದು ಹಗಲು ರಾತ್ರಿಗಳಂತೆ ಅನುಸರಿಸುತ್ತ ಸ್ವಯಂನಿರ್ಧಾರಿತ ಗತಿಯಲ್ಲಿ ಬರುವುವು. ಈ ವಾಣಿಜ್ಯ ಆವರ್ತ ಒಂದೇ ದೇಶದ ಪರಿಮಿತಿಗೆ ಒಳಗಾಗದೆ ಬಂಡವಾಳಗಾರಿಕೆಯ ಪದ್ಧತಿಯ ಮೇಲೆ ಆಧರಿಸಿದ ಹಾಗೂ ಅಂತಾರಾಷ್ಟ್ರೀಯ ಅನಿರ್ಬಂಧಿತ ವ್ಯಾಪಾರದಲ್ಲಿ ಭಾಗವಹಿಸುವ ಎಲ್ಲ ದೇಶಗಳ ಆರ್ಥಿಕ ವ್ಯವಸ್ಥೆಯನ್ನೂ ಬಾಧಿಸುವುದು.

ವಾಣಿಜ್ಯ ಆವರ್ತನೆಯಲ್ಲಿ ಮುಖ್ಯವಾಗಿ ಆರ್ಥಿಕ ಮುಗ್ಗಟ್ಟಿನ ಕಾಲ ಮುಗಿದು ತಿರುಗಿ ಆರ್ಥಿಕ ವ್ಯವಸ್ಥೆ ಚೇತನಗೊಳ್ಳುವಾಗಿನ ಪರಿಸ್ಥಿತಿ ಬಹಳ ಕಷ್ಟದಾಯಕವಾಗುವುದು. ಕೂಲಿಕಾರವರ್ಗ ಹಾಗೂ ಸಾಮಾನ್ಯ ಜನತೆ ನಿರುದ್ಯೋಗ ಹಾಗೂ ಬಡತನದ ಪರಿಸ್ಥಿತಿಯಿಂದ ಘಾಸಿಗೊಳ್ಳುವುದು. ಇಂಥ ದುಃಸ್ಥಿತಿಯಿಂದ ಅನೇಕ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳು ಉದ್ಭವಿಸುವುವು. ದೇಶದಲ್ಲಿಯ ಇಂಥ ಪ್ರಕ್ಷುಬ್ಧ ಪರಿಸ್ಥಿತಿಗೆ ಪರಿಹಾರವನ್ನು ಯೋಚಿಸುವುದು ಬಂಡವಾಳಶಾಹಿ ಪದ್ಧತಿಗೆ ನಿಲುಕದ ಮಾತಾಗಿತ್ತು. ಬಂಡವಾಳಶಾಹಿಯ ಮುಖ್ಯ ಚಾಲಕಶಕ್ತಿ, ಲಾಭದ ಧೋರಣೆ, ಆರ್ಥಿಕ ಮುಗ್ಗಟ್ಟು ಉಂಟಾದಾಗ ಬೆಲೆಗಳು ನಿರಂತರ ಇಳಿಮುಖವಾಗುವುವು. ಇಂಥ ಪರಿಸ್ಥಿತಿಯಲ್ಲಿ ಉತ್ಪಾದನೆಯನ್ನು ಮುಂದುವರಿಸುವುದು ಅಥವಾ ಹೊಸ ಉತ್ಪಾದನೆಯನ್ನು ಕೈಗೊಳ್ಳುವುದು ಲಾಭಧೋರಣೆಗೆ ವಿಸಂಗತ. ಇದರಿಂದ ಕಾರ್ಖಾನೆಗಳು ಮುಚ್ಚುವುವು. ನಿರುದ್ಯೋಗ ಹೆಚ್ಚಿದಾಗ ಜನರ ಆದಾಯದ ಮೇಲೆ ಪರಿಣಾಮವಾಗುವುದರಿಂದ ಪೇಟೆಯಲ್ಲಿ ಬೇಡಿಕೆ ಕುಗ್ಗುವುದು. ಇಂಥ ಬೇಡಿಕೆಯ ಕುಗ್ಗು ಪುನಃ ಬೆಲೆಯ ಇಳಿಮುಖ ಪ್ರವೃತ್ತಿಯನ್ನು ಮತ್ತಷ್ಟು ತೀವ್ರಗೊಳಿಸುವುದು. ಇಂಥ ಪರಿಸ್ಥಿತಿಗೆ ಬಂಡವಾಳಶಾಹಿ ಸೂಚಿಸುವ ಚಿಕಿತ್ಸೆ–ಕೂಲಿಕಾರರ ವೇತನದಲ್ಲಿ ಕಡಿತ ಮತ್ತು ಬಂಡವಾಳದ ಮೇಲಿನ ಬಡ್ಡಿದರದಲ್ಲಿ ಹೆಚ್ಚಳ ಇವೆರಡೂ–ಬಂಡವಾಳಗಾರರಿಗೇ ಲಾಭದಾಯಕವಾದುವು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭವಾದ ಕೂಲಿಕಾರ ಆಂದೋಲನ ಈ ಚಿಕಿತ್ಸೆಗಳಿಗೆ ತೀವ್ರವಾದ ವಿರೋಧವನ್ನು ತೋರಿದುದರಿಂದ ಪರಿಸ್ಥಿತಿ ಮತ್ತೂ ಜಟಿಲವಾಗತೊಡಗಿತು.

ಒಂದನೆಯ ಮಹಾಯುದ್ಧದ ಅನಂತರ 1929ರ ಸುಮಾರಿಗೆ ಇಡೀ ಯುರೋಪ್ ಖಂಡವೇ ಬಹು ತೀವ್ರವಾದ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಯಿತು. ಇದರಿಂದ ಅನೇಕ ರಾಷ್ಟ್ರಗಳಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿ ಸರ್ವಾಧಿಕಾರ ರಾಜ್ಯಪದ್ಧತಿಗೆ ಅನುವು ಮಾಡಿಕೊಟ್ಟಿತು. ಈ ಆರ್ಥಿಕ ಮುಗ್ಗಟ್ಟು ಬಂಡವಾಳಶಾಹಿ ಪದ್ಧತಿಯ ಅಳತೆಗೋಲಾಗಿ ಪರಿಣಮಿಸಿತು. ಇದೇ ಸಮಯದಲ್ಲಿ ಸೋವಿಯತ್ ರಷ್ಯ ಆರ್ಥಿಕ ಯೋಜನೆಯನ್ನು ಪ್ರಾರಂಭಿಸಿದುದರಿಂದ ಯುರೋಪಿನ ಆರ್ಥಿಕ ಮುಗ್ಗಟ್ಟು ಆ ದೇಶದ ಮೇಲೆ ಏನೂ ಪರಿಣಾಮ ಮಾಡಲಿಲ್ಲ. ಈ ಘಟನೆಯಿಂದ ಯುರೋಪಿನ ಅನೇಕ ಅರ್ಥಶಾಸ್ತ್ರಜ್ಞರು ಪ್ರಭಾವಿತರಾದರು.

ವ್ಯಾಪಾರೀ ಧೋರಣೆಯ ದುಷ್ಪರಿಣಾಮಗಳನ್ನು ಕಡಿಮೆ ಮಾಡುವಲ್ಲಿ ಸರ್ಕಾರ ಕ್ರಿಯಾತ್ಮಕ ಹೆಜ್ಜೆಯನ್ನಿಡುವುದು ಅವಶ್ಯ ಎಂಬ ತತ್ತ್ವವನ್ನು ಪ್ರತಿಪಾದಿಸಿದವರಲ್ಲಿ ಇಂಗ್ಲೆಂಡಿನ ಲಾರ್ಡ್ ಕೇನ್ಸ್ ಎಂಬ ಅರ್ಥಶಾಸ್ತ್ರಜ್ಞರು ಮೊದಲಿಗರೆನ್ನಬಹುದು. ಲಾರ್ಡ್ ಕೇನ್ಸ್‌ರ ಪ್ರತಿಪಾದನೆ ಅರ್ಥಶಾಸ್ತ್ರದಲ್ಲಿ ಈವರೆಗೆ ಪ್ರಚಲಿತವಾಗಿದ್ದ ಬಂಡವಾಳಶಾಹಿಯ ತತ್ತ್ವವಾದ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ಸಕ್ರಿಯ ಭಾಗವಹಿಸುವುದು ಅನಪೇಕ್ಷ (ಲೇಜ಼ೆಫೇರ್) ಅಥವಾ ವೈಯಕ್ತಿಕ ಸ್ವಾತಂತ್ರ್ಯ ತತ್ತ್ವವನ್ನು ಬುಡಮೇಲು ಮಾಡಿತು. ಇವರ ವಿಚಾರಧಾರೆಯಿಂದ ಪ್ರಭಾವಿತನಾದ ಅಮೆರಿಕದ ಆಗಿನ ಅಧ್ಯಕ್ಷ ರೂಸ್‌ವೆಲ್ಟ್ ಆರ್ಥಿಕ ಮುಗ್ಗಟ್ಟಿನಿಂದುಂಟಾದ ಪರಿಸ್ಥಿತಿಯನ್ನು ಪರಿಹರಿಸಲು ನ್ಯೂ ಡೀಲ್ ಎಂಬ ತಾತ್ಪೂರ್ತಿಕ ಯೋಜನೆಯನ್ನು ಪ್ರಾರಂಭಿಸಿದ. ಆಗ ಸರ್ಕಾರ ಆರಂಭಿಸಿದ ಟಿ.ವಿ.ಎ. ಅಥವಾ ಟೆನಸ್ಸಿ ವ್ಯಾಲಿ ಅಥಾರಿಟಿ ಸಂಸ್ಥೆ ಇನ್ನೂ ಅಮೆರಿಕದ ಯೋಜನಾ ಸಾಹಸದ ಮಧುರ ಸ್ಮೃತಿಯಾಗಿ ನಿಂತಿದೆ. ಅನಂತರ ನಾಜಿ ಜರ್ಮನಿಯಲ್ಲಿ ಸರ್ವಾಧಿಕಾರಿಯಾದ ಹಿಟ್ಲರ್ ನಾಲ್ಕು ವರ್ಷಗಳ ಯೋಜನೆಯನ್ನು ಆರಂಭಿಸಿದ. ಅಲ್ಲದೆ ಇಂಗ್ಲೆಂಡಿನಲ್ಲೂ ಕೂಲಿಕಾರ ಹಿತವನ್ನು ಸಾಧಿಸುವ ಬೆವರಿಡ್ಜ್ ಪ್ಲಾನ್ ಎಂಬ ಕಾರ್ಯಕ್ರಮವೂ ಪ್ರಾರಂಭಿಸಲ್ಪಟ್ಟಿತು.

20ನೆಯ ಶತಮಾನವನ್ನು ನಾವು ಯೋಜನಾಯುಗವೆಂದು ಕರೆದರೆ ಅತಿಶಯೋಕ್ತಿಯೆನಿಸದು. ಯೋಜನಾಬದ್ಧ ಆರ್ಥಿಕ ವ್ಯವಸ್ಥೆ ಒಂದಲ್ಲ ಒಂದು ಹೆಸರಿನಿಂದ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಆವಿರ್ಭಾವಗೊಂಡಿದೆ. ಸಾಮ್ರಾಜ್ಯಶಾಹಿಯ ಹಿಡಿತದಿಂದ ಮುಕ್ತವಾದ ಏಷ್ಯ ಹಾಗೂ ಆಫ್ರಿಕದ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಂತೂ ಯೋಜನಾತಂತ್ರ ಪ್ರಗತಿಯ ಆಶಾಕಿರಣವಾಗಿ ಪರಿಣಮಿಸಿದೆ. ಬಂಡವಾಳಶಾಹಿಯ ಪದ್ಧತಿಯನ್ನು ಅನುಸರಿಸುವ ಅಭಿವೃದ್ಧಿ ರಾಷ್ಟ್ರಗಳಲ್ಲಿ ಆರ್ಥಿಕ ಆವರ್ತದಿಂದ ಉಂಟಾಗುವ ಪರಿಸ್ಥಿತಿಗೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಮಾನ್ಯ ಆರ್ಥಿಕ ಪರಿಸ್ಥಿತಿಗೂ ಬಹಳ ಸಾಮ್ಯವಿದೆ. ನಿರುದ್ಯೋಗ, ಬಡತನ, ಬೇಡಿಕೆಯಲ್ಲಿ ಜನರ ಹಾಗೂ ಬಂಡವಾಳಶಾಹಿಯ ನಿರುತ್ಸಾಹ–ಇವು ಸಾಮಾನ್ಯ ಅಂಶಗಳು. ಜನಸಾಮಾನ್ಯರ ಸಾಂಪ್ರದಾಯಿಕತೆ, ಸಾಮಾಜಿಕ ಹಿಂದುಳಿಕೆ, ನಿರಕ್ಷರತೆ ಹಾಗೂ ಬಂಡವಾಳದ ಅಭಾವ–ಇವು ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿನ ಹೆಚ್ಚಿನ ಅಂಶಗಳು.

ಆರ್ಥಿಕ ಯೋಜನೆಯನ್ನು ಕೈಗೊಳ್ಳುವ ದೇಶದಲ್ಲಿ ಮುಖ್ಯವಾಗಿ ಉತ್ಪಾದನೆಯನ್ನು ಸರ್ಕಾರವೇ ನಿರ್ವಹಿಸಬಹುದು ಅಥವಾ ಪ್ರೋತ್ಸಾಹಿಸಬಹುದು. ಇಲ್ಲಿ ಉತ್ಪಾದನೆಯ ಮುಖ್ಯ ಗುರಿ ವೈಯಕ್ತಿಕ ಲಾಭದ ಆಸೆಯಲ್ಲ, ದೇಶದ ಆವಶ್ಯಕತೆ. ಇದರಿಂದ ಯೋಜನಾಬದ್ಧ ಆರ್ಥಿಕ ವ್ಯವಸ್ಥೆ ಆರ್ಥಿಕ ಆವರ್ತದಿಂದ ಉಂಟಾಗುವ ಪರಿಸ್ಥಿತಿಯನ್ನು ತಡೆಗಟ್ಟಿ ಮುಂದೆ ಆರ್ಥಿಕ ಆವರ್ತ ಪರಿಣಾಮವನ್ನು ಮಾಡುವಂತೆ ಉಪಾಯ ಯೋಜಿಸಲು ಸಹಾಯಕ ಎಂಬುದು ಅನುಭವಿಸಿದ್ದ ಮಾತಾಗಿದೆ.

ಬಂಡವಾಳಗಾರಿಕೆಯ ಪದ್ಧತಿಯೂ ಒಂದು ಸುವ್ಯವಸ್ಥಿತ ಯೋಜನೆಯನ್ನೊಳಗೊಂಡಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅದಕ್ಕೆ ಬೆಲೆಯ ಯಾಂತ್ರಿಕತೆ ಎನ್ನುವರು. ಬೆಲೆಯ ಯಾಂತ್ರಿಕತೆಯ ತತ್ತ್ವ ಸಫಲವಾಗಬೇಕಾದರೆ ಆರ್ಥಿಕ ವ್ಯವಸ್ಥೆಯಲ್ಲಿ ಗ್ರಾಹಕರ ಪ್ರಭುತ್ವ, ಅನಿರ್ಬಂಧಿತ ವ್ಯಾಪಾರ, ಉತ್ಪಾದಕರ ಹಾಗೂ ಗ್ರಾಹಕರ ವರ್ಗದಲ್ಲಿ ಪರಸ್ಪರ ಪೈಪೋಟಿ ಅಥವಾ ಸ್ಪರ್ಧೆ (ಫ್ರೀ ಕಾಂಪಿಟಿಷನ್) ಇವು ಅತ್ಯಾವಶ್ಯಕ ಅಂಶಗಳು. ಆದರೆ ಬಂಡವಾಳಶಾಹಿ ತನ್ನ ಐತಿಹಾಸಿಕ ಉದ್ದೇಶವಾದ ಕೇವಲ ಉತ್ಪಾದನೆಯ ಹೆಚ್ಚಳವನ್ನು ಸಾಧಿಸುವ ಪ್ರಯತ್ನದಿಂದ ಅನಿರ್ಬಂಧಿತ ವ್ಯಾಪಾರ ಹಾಗೂ ಉತ್ಪಾದಕರ ಸ್ಪರ್ಧೆಯ ಅಂಶಗಳನ್ನು ಬದಿಗೊತ್ತಿ ಗುತ್ತಿಗೆದಾರಿ ಅಥವಾ ಏಕಸ್ವಾಮ್ಯ ಪದ್ಧತಿಗೆ ಎಡೆಮಾಡಿಕೊಟ್ಟಿದೆ. ಇದರಿಂದ ಉತ್ಪಾದಿತ ಸಂಪತ್ತಿನ ವಿತರಣೆಯಲ್ಲೂ ವಿಷಮತೆ ಉಂಟಾಗಿ ಬಂಡವಾಳಶಾಹಿ ಪ್ರಭುತ್ವಕ್ಕೆ ಎಡೆಮಾಡಿಕೊಟ್ಟಿದೆ. ಇಂಥ ಪರಿಸ್ಥಿತಿಗೆ ಔದ್ಯೋಗಿಕ ಕ್ರಾಂತಿಯ ತರುವಾಯ ಉಂಟಾದ ಬಂಡವಾಳದ ಪ್ರಾಬಲ್ಯವುಳ್ಳ ಯಾಂತ್ರೀಕೃತ

ಉತ್ಪಾದನೆಯ ಪದ್ಧತಿಯೂ ಕೆಲಮಟ್ಟಿಗೆ ಕಾರಣ. ಉತ್ಪಾದನೆ ಏಕಸ್ವಾಮಿತ್ವದ ಕೈಯಲ್ಲಿ ಸಿಕ್ಕುವುದರಿಂದ ಪೇಟೆಗಳ ಮೇಲೆ ಅವುಗಳ ಪ್ರಭುತ್ವ ಹೆಚ್ಚಾಗಿ ಬೆಲೆಯ ಯಾಂತ್ರಿಕತೆಗೆ ವ್ಯತ್ಯಯ ಉಂಟಾಗುವುದು. ಏಕಸ್ವಾಮ್ಯ ಬಂಡವಾಳಗಾರರು ಕೇವಲ ಹೆಚ್ಚಿನ ಲಾಭದ ಆಸೆಯಿಂದಲೇ ಉತ್ಪಾದನೆಯನ್ನು ಪ್ರಾರಂಭಿಸುವರು. ಹಾಗೂ ಯಾವ ವಸ್ತುಗಳ ಉತ್ಪಾದನೆ ಹೆಚ್ಚು ಲಾಭಕಾರಕವೋ ಅಂಥ ವಸ್ತುಗಳ ಉತ್ಪಾದನೆಯನ್ನೇ ಹೆಚ್ಚಿಸುವರು. ಇಂಥ ಪರಿಸ್ಥಿತಿ ಆರ್ಥಿಕ ಮುಗ್ಗಟ್ಟನ್ನು ತೀವ್ರಗೊಳಿಸುವುದು. ಆದರೆ ಆರ್ಥಿಕ ಯೋಜನೆಯನ್ನು ಅನುಸರಿಸುವುದರಿಂದ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರದ ವರ್ಚಸ್ಸು ಹೆಚ್ಚಾಗಿ ಉತ್ಪಾದನೆ ಹಾಗೂ ವಿತರಣೆಗಳು ಸಾಮಾಜಿಕ ಹಿತವನ್ನೇ ಹೆಚ್ಚಿಸುವ ರೀತಿಯಲ್ಲಿ ಮಾರ್ಪಡುತ್ತವೆ. ಅಲ್ಲಿ ಕೆಲವೇ ವ್ಯಕ್ತಿಗಳ ಹಾಗೂ ಗುಂಪುಗಳ ಹಿತಕ್ಕಿಂತ ಸಮಾಜದ ಆವಶ್ಯಕತೆಯ ಕಡೆಗೇ ಹೆಚ್ಚು ಗಮನವಿರುವುದು. 20ನೆಯ ಶತಮಾನದಲ್ಲಿ ಇಡೀ ಜಗತ್ತಿನ ಗಮನವನ್ನೇ ಸೆಳೆದ ಸಮಾಜವಾದ, ಆರ್ಥಿಕ ರಾಷ್ಟ್ರೀಯತೆ (ಎಕನಾಮಿಕ್ ನ್ಯಾಷನಲಿಸಂ) ಮತ್ತು ಕ್ಷೇಮರಾಜ್ಯ ಈ ಮೂರು ರಾಜಕೀಯ ತತ್ತ್ವಗಳು ಆರ್ಥಿಕ ಯೋಜನೆಯ ಅಡಿಗಲ್ಲುಗಳಾಗಿವೆ.

ಆರ್ಥಿಕ ಯೋಜನೆಯೆಂದರೆ ಸಾಮಾನ್ಯವಾಗಿ ಒಂದು ಆರ್ಥಿಕ ಕಾರ್ಯಕ್ರಮವನ್ನು ನಿರ್ದಿಷ್ಟ ಅವಧಿಯಲ್ಲಿ ಪೂರ್ತಿಗೊಳಿಸಲು ನಿಶ್ಚಯಿಸಿ ಅದಕ್ಕಾಗಿ ಕೈಗೊಳ್ಳುವ ಸಮಗ್ರ ವ್ಯವಸ್ಥೆ ಅಥವಾ ಕ್ರಮ ಎಂದು ಅರ್ಥ ಮಾಡಬಹುದು. ಯಾವುದೇ ಯೋಜನೆಯಲ್ಲಿ ಎರಡು ಮೂಲತತ್ತ್ವಗಳು ಅಡಕವಾಗಿರಬೇಕು. ಒಂದು ನಿರ್ದಿಷ್ಟ ಗುರಿ; ಅದನ್ನು ಸಾಧಿಸಲು ಅಷ್ಟೇ ನಿರ್ದಿಷ್ಟ ಸಾಧನ. ಇವು ಪ್ರತಿಯೊಂದು ಯೋಜನೆಯಲ್ಲಿರತಕ್ಕ ಮುಖ್ಯ ಗುಣಗಳು. ಇದೇ ಒಂದು ಯೋಜನೆಗೂ ಕೇವಲ ಒಂದು ಕಾರ್ಯಕ್ರಮಕ್ಕೂ ಇರುವ ಅಂತರ. ಬೇರೆ ಬೇರೆ ಯೋಜನೆಗಳನ್ನು ಸಾಧಿಸಲು ಬೇರೆ ಬೇರೆ ಚಟುವಟಿಕೆಗಳಿಗೆ ಸಂಬಂಧಿಸಿದ ಒಂದು ಕಾರ್ಯಕ್ರಮವನ್ನು ಪೂರೈಸುವುದಕ್ಕಾಗಿ ನಿಶ್ಚಯಿಸಿದ ಸಮಗ್ರ (ಆರ್ಥಿಕ ವ್ಯವಸ್ಥೆಯ ವಿವಿಧ ಭಾಗಗಳಿಗೂ ಅನ್ವಯಿಸುವ) ಒಂದು ಏರ್ಪಾಡು ಎಂದು ಮಾಡಬಹುದು. ಇದರಿಂದ ಆರ್ಥಿಕ ಯೋಜನೆ ಜನರ ಸಮಸ್ತ ಆರ್ಥಿಕ ಜೀವನಕ್ಕೆ, ಅಂದರೆ ಉತ್ಪಾದನೆ ವಿತರಣೆ ಹಾಗೂ ಬಂಡವಾಳ ವಿನಿಯೋಗ ಮುಂತಾದ ಎಲ್ಲ ಆರ್ಥಿಕ ಚಟುವಟಿಕೆಗಳಿಗೂ ಅನ್ವಯಿಸುವ ಒಂದು ವಿಶಾಲವಾದ ಕಾರ್ಯಕ್ರಮವೆಂಬುದು ಸ್ಪಷ್ಟವಾಗುವುದು. ಉತ್ಪಾದನೆಯನ್ನು ಸಾಮಾಜಿಕ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳುವುದೇ ಯೋಜನೆ ಎಂದೂ ವ್ಯಾಖ್ಯೆಯನ್ನು ಮಾಡಬಹುದಾಗಿದೆ.

ಯೋಜನೆಯ ತಂತ್ರದಲ್ಲಿ ವಿರಳವಾದ ಸಂಪನ್ಮೂಲಗಳನ್ನು ಕಡಿಮೆ ಸಮಯದಲ್ಲಿಯೇ ತೀವ್ರವಾದ ಆರ್ಥಿಕ ಬೆಳೆವಣಿಗೆಗಾಗಿ ಉಪಯೋಗಿಸುವ ಪ್ರಯತ್ನವಿರುವುದರಿಂದ ಹೆಚ್ಚಿನ ಶಿಸ್ತು ಹಾಗೂ ಎಲ್ಲ ಆರ್ಥಿಕ ಚಟುವಟಿಕೆಗಳಲ್ಲಿಯ ಹೊಂದಾಣಿಕೆ ಮುಖ್ಯವಾಗಿದೆ. ಯೋಜನೆಯಲ್ಲಿ ಆರ್ಥಿಕ ಬೆಳೆವಣಿಗೆಯನ್ನು ನಿರ್ದೇಶಿಸಲು ಕೆಲವು ಸಲ ಒಂದು ಬೆಳೆವಣಿಗೆಯ ಮಾದರಿಯನ್ನು (ಗ್ರೋತ್ ಮಾಡೆಲ್) ರಚಿಸುವರು. ಆದರೆ ಆರ್ಥಿಕ ಬೆಳೆವಣಿಗೆಯಲ್ಲಿ ಅನೇಕ ಸ್ಥಿತ್ಯಂತರ ಹೊಂದುವಂಥ ಘಟಕಗಳು ಬೆಳೆವಣಿಗೆಯ ಮೇಲೆ ಪರಿಣಾಮ ಬೀರುವುದರಿಂದ ಅಂಥ ಘಟಕಗಳನ್ನೆಲ್ಲ ಒಂದುಗೂಡಿಸಿ ಒಂದು ಮಾದರಿಯನ್ನು ರಚಿಸುವುದು ಬೆಳೆವಣಿಗೆಯಲ್ಲಿ ಹುದುಗಿರುವ ಕ್ಲಿಷ್ಟ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳ ದೃಷ್ಟಿಯಿಂದ ಬಹಳ ಕಾಲ್ಪನಿಕವೂ ಅವಾಸ್ತವಿಕವೂ ಆಗಬಹುದು. ಯೋಜನೆ ಕೇವಲ ವ್ಯಾಪಾರೀ ಜನರಿಂದ ಉಂಟಾದ ಸಮತೋಲದಲ್ಲಿನ ವ್ಯತ್ಯಯವನ್ನು ಸರಿಪಡಿಸಲು ಕೈಗೊಳ್ಳುವ ಉಪಾಯವಲ್ಲ. ಅದು ಶೀಘ್ರವಾದ ಆರ್ಥಿಕ ಬೆಳೆವಣಿಗೆಯನ್ನು ಸಾಧಿಸುವ ಉದ್ದೇಶದಿಂದ ಒಂದು ದೇಶದೊಳಗಿನ ಆರ್ಥಿಕ ಸಂಸ್ಥೆಗಳನ್ನೂ ಜನರ ಪ್ರವೃತ್ತಿಗಳನ್ನೂ ನಿರ್ದಿಷ್ಟವಾದ ಶಿಸ್ತಿಗೆ ಒಳಪಡಿಸುವ ಒಂದು ಕ್ರಮ. ಒಂದು ದೃಷ್ಟಿಯಿಂದ ಅದೊಂದು ಸಮಾಜದ ರಚನೆಯಲ್ಲಿಯೇ ಮೂಲಭೂತ ಸಾಮಾಜಿಕ ಆರ್ಥಿಕ ಬದಲಾವಣೆಗಳನ್ನು ಪ್ರಚಾರ ಮಾಡುವ ಸಕ್ರಿಯ ಆಂದೋಲನವೇ ಆಗಿರಬೇಕು. ಇಚ್ಛಿತ ಬದಲಾವಣೆಗಳನ್ನು ಸಾಧಿಸುವುದಕ್ಕೋಸ್ಕರ ಮೇಲಿಂದ ಮೇಲೆ ವಸ್ತುನಿಷ್ಠವಾಗಿ ಆರ್ಥಿಕ ವಿಶ್ಲೇಷಣೆಯನ್ನು ಮಾಡಿ ಯೋಗ್ಯ ನೀತಿಯನ್ನು ಪ್ರತಿಪಾದಿಸುವ ನಿರ್ದೇಶನಗಳನ್ನು ನೀಡುತ್ತಿರಬೇಕು. ಯಾವುದೇ ಯೋಜನೆಯಲ್ಲಿ ಒಂದಲ್ಲ ಒಂದು ರೀತಿಯಿಂದ ಮುನ್ನೋಟ ಹಾಗೂ ಮಾರ್ಗದರ್ಶನಗಳ ಸಂಯೋಜನವಿರಬೇಕು. ಐತಿಹಾಸಿಕ ಕಾರ್ಯಗತಿಯಂತೆಯೇ ಯೋಜನೆ ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ ತತ್ತ್ವಗಳ ಸಮ್ಮಿಶ್ರಣವಾಗಿರುವುದು ಆವಶ್ಯಕ. ಐತಿಹಾಸಿಕ ಸಮಯದಿಂದಲೂ ನಡೆದುಬಂದ ಆರ್ಥಿಕ ಬೆಳೆವಣಿಗೆಯನ್ನು ಸದ್ಯದ ಕೆಲವೇ ತೀವ್ರ ಕ್ರಿಯಾತ್ಮಕ ವರ್ಷಗಳಲ್ಲಿ ಸಾಧಿಸುವ ಒಂದು ಪ್ರಯತ್ನ ಯೋಜನಾಕ್ರಮ. ಆದ್ದರಿಂದ ಪ್ರತಿಯೊಂದು ಯೋಜನೆಯೂ ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದಾಗ ಯಾವುದು ಅನಿವಾರ್ಯವೋ ಅಂಥ ಪರಿಸ್ಥಿತಿಗಳನ್ನು ಕುರಿತು ಮುಂದಾಲೋಚನೆ ಹಾಗೂ ಅಪೇಕ್ಷಿತ ವಿಷಯಗಳ ಬಗ್ಗೆ ಯೋಜನೆ ಈ ಎರಡೂ ತತ್ತ್ವಗಳ ಸಮ್ಮಿಶ್ರಣ.

ಆರ್ಥಿಕ ಯೋಜನೆಗಳು ವ್ಯಕ್ತಿಸ್ವಾತಂತ್ರ್ಯಕ್ಕೆ ಬಾಧಕವಾದ್ದರಿಂದ ಪ್ರಜಾಪ್ರಭುತ್ವ ಮತ್ತು ಆರ್ಥಿಕಯೋಜನೆಗಳು ಒಟ್ಟಿಗೆ ಬಾಳುವುದು ಅಸಾಧ್ಯ ಎಂಬ ತರ್ಕ ಸ್ವಲ್ಪಮಟ್ಟಿಗೆ ಕೇಳಿಬರುತ್ತಿತ್ತು. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಸ್ವಾತಂತ್ರ್ಯ ಒಂದು ಮೂಲತತ್ತ್ವ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನಸ್ಸಿಗೆ ಸರಿಯೆನಿಸಿದ ಆರ್ಥಿಕ ವ್ಯವಹಾರವನ್ನು ನಡೆಸಲು ಸಂಪೂರ್ಣ ಸ್ವತಂತ್ರನಾಗಿರುತ್ತಾನೆ. ಆದರೆ ಯೋಜನಾಬದ್ಧ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನೆ ಹಾಗೂ ವಿತರಣೆಗಳು ಪೂರ್ವ ನಿರ್ದಿಷ್ಟವಾದುವು. ವ್ಯಕ್ತಿಗಳೂ ಸಂಸ್ಥೆಗಳೂ ತಮ್ಮ ಆರ್ಥಿಕ ಚಟುವಟಿಕೆಗಳನ್ನು ಯೋಜನೆಯ ನಿರ್ದೇಶನಕ್ಕನುಗುಣವಾಗಿ ರೂಪಿಸಿಕೊಳ್ಳುವುದು ಅನಿವಾರ್ಯ. ಕೆಲವೊಮ್ಮೆ ಒಬ್ಬ ವ್ಯಕ್ತಿ ಯಾವ ಸರಕುಗಳನ್ನು ಎಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕೆಂಬುದನ್ನು ಯೋಜನಾಮಂಡಳಿಯೇ ನಿರ್ಣಯಿಸಬಹುದು. ಯೋಜನೆಯಲ್ಲಿ ವ್ಯಕ್ತಿಯ ಆವಶ್ಯಕತೆಗಿಂತ ಒಟ್ಟು ಸಮಾಜದ ಆವಶ್ಯಕತೆಯ ಕಡೆಗೇ ಹೆಚ್ಚು ಗಮನವಿರು ವುದು. ಸಮಾಜದ ಆವಶ್ಯಕತೆಗಳನ್ನು ನಿರ್ಧರಿಸುವ ಸಂಸ್ಥೆ ಸರ್ಕಾರದಿಂದ ರಚಿಸಲ್ಪಟ್ಟ ಯೋಜನಾಮಂಡಳಿ. ಇದರಿಂದ ವ್ಯಕ್ತಿಸ್ವಾತಂತ್ರ್ಯಕ್ಕೆ ಚ್ಯುತಿಯುಂಟಾಗುವ ಸಂಭವವಿದೆ ಎಂಬುದು ಆ ವಾದ.

ಆದರೆ ನಿಷ್ಪಕ್ಷಪಾತ ಭಾವನೆಯಿಂದ ವಿಚಾರ ಮಾಡಿದಾಗ ಆರ್ಥಿಕಜೀವನದಲ್ಲಿ ವ್ಯಕ್ತಿಸ್ವಾತಂತ್ರ್ಯವೆಂಬುದು ಕೇವಲ ಕಾಲ್ಪನಿಕವೇ ಹೊರತು ವಾಸ್ತವಿಕವಲ್ಲವೆಂಬುದು ಕಂಡುಬರುವುದು. ವಾಸ್ತವಿಕ ಜಗತ್ತಿನಲ್ಲಿ ವ್ಯಕ್ತಿ ಯಾವ ವಸ್ತುಗಳನ್ನು ಅನುಭೋಗಿಸುವನೆಂಬುದು, ಅವನ ಆದಾಯ, ಅನುಭೋಗದ ಅಭ್ಯಾಸ ಹಾಗೂ ಸುತ್ತಲಿನ ವಾತಾವರಣ ಇವುಗಳನ್ನು ಅವಲಂಬಿಸಿರುವುದು. ಅಂಚಿನ ತತ್ತ್ವದ ಪ್ರತಿಪಾದಕರ ವಿಚಾರದಂತೆ ಬಂಡವಾಳಗಾರನ ಸ್ವತಂತ್ರ ಆರ್ಥಿಕವ್ಯವಸ್ಥೆಯಲ್ಲಿ ಗ್ರಾಹಕರ ಪ್ರಭುತ್ವ, ಅವರಿಗೆ ಸ್ವತಂತ್ರ ಆಯ್ಕೆಗೆ ಅವಕಾಶ ಕಲ್ಪಿಸಿಕೊಡುವುದರಿಂದ ಉತ್ಪಾದಕ ಹಾಗೂ ಮಾರಾಟಗಾರ ಗ್ರಾಹಕ ವರ್ಗದ ಅಭಿರುಚಿಗೆ ಅನುಗುಣವಾಗಿ ಉತ್ಪಾದಕ ಹಾಗೂ ಮಾರಾಟವನ್ನು ಕೈಗೊಳ್ಳುವರು. ಗ್ರಾಹಕರು ಸಾಮಾನ್ಯವಾಗಿ ಹೆಚ್ಚು ಬೆಲೆ ತೆರಲು ಸಿದ್ಧವಿರುವುದರಿಂದ ತಮ್ಮ ಅಭಿರುಚಿಯನ್ನು ಪ್ರದರ್ಶಿಸುವರು. ಆದರೆ ಇಂದಿನ ಉತ್ಪಾದನೆಯಲ್ಲಿಯ ಯಂತ್ರೀಕರಣ ಹಾಗೂ ಏಕಸ್ವಾಮಿತ್ವದ ಪ್ರಾಬಲ್ಯದಿಂದ ಪೇಟೆಯ ಗ್ರಾಹಕರ ಪ್ರಭುತ್ವ ಕೇವಲ ಕಾಲ್ಪನಿಕಸಿದ್ಧಾಂತವಾಗಿದೆ. ಅದಲ್ಲದೆ ಯೋಜನಾಬದ್ಧ ಆರ್ಥಿಕವ್ಯವಸ್ಥೆಯ ಮುಖ್ಯ ಉದ್ದೇಶ ಸಾಮಾನ್ಯ ಗ್ರಾಹಕರ ಗಳಿಕೆಯನ್ನು ಹೆಚ್ಚಿಸಿ ಉತ್ಪಾದನೆಗೆ ಪ್ರೋತ್ಸಾಹ ನೀಡುವುದೇ ಆಗಿದೆ. ಆದ್ದರಿಂದ ಎಲ್ಲ ತರ್ಕಬದ್ಧ ಯೋಜನೆಗಳೂ ಸಾಮಾನ್ಯ ಗ್ರಾಹಕರ ಸ್ವಾತಂತ್ರ್ಯವನ್ನು ಪುರಸ್ಕರಿಸುವುದು.

ಇನ್ನು ಪ್ರಜಾಪ್ರಭುತ್ವದಲ್ಲಿಯ ಉದ್ಯೋಗ ಉತ್ಪಾದನಾ ಸ್ವಾತಂತ್ರ್ಯ ಕೇವಲ ಐತಿಹಾಸಿಕ ಸತ್ಯವಾಗಿದೆ. ಇಂದಿನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಾಮುದಾಯಿಕ ಸಂಸ್ಥೆಗಳು ಪ್ರಬಲವಾಗಿದ್ದು ದೊಡ್ಡ ಬಂಡವಾಳಗಾರರಿಗಷ್ಟೇ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಟ್ಟಿವೆ. ಲಕ್ಷಾಂತರ ಗ್ರಾಹಕರನ್ನು ತೃಪ್ತಿಗೊಳಿಸುವ ದೊಡ್ಡ ಉದ್ದಿಮೆಗಳು ಯಂತ್ರಗಳ ಉಪಯೋಗವನ್ನು ಅವಲಂಬಿಸಿವೆ. ಅಂಥ ಉದ್ಯೋಗಗಳನ್ನು ಕೇವಲ ದೊಡ್ಡ ಬಂಡವಾಳಗಾರರೇ ಕೈಗೊಳ್ಳಬಲ್ಲರು. ಕೂಲಿಕಾರ ವರ್ಗದವರು ಯಂತ್ರಗಳ ಬಳಕೆಯಿಂದ ಉಂಟಾಗುವ ನಿರುದ್ಯೋಗವನ್ನು ತಪ್ಪಿಸಿಕೊಳ್ಳಲು ಯಾವುದೇ ಉದ್ಯೋಗವನ್ನು ಅನುಸರಿಸಬೇಕಾಗುವುದು ಅಲ್ಲದೆ ಇಂದಿನಿಂದ ಕೆಲವು ಉದ್ಯೋಗಗಳಿಗೆ ಪೂರ್ವ ತಯಾರಿಯಾಗಿ ಪಡೆಯುವ ಶಿಕ್ಷಣ ಕೂಡ ಬಹಳ ವೆಚ್ಚದ್ದೂ ದೀರ್ಘವಾದದ್ದೂ ಆಗಿದ್ದು, ಅವು ಕೇವಲ ಶ್ರೀಮಂತವರ್ಗಕ್ಕೆ ಮೀಸಲಾಗಿವೆ. ಆರ್ಥಿಕ ವಿಷಮತೆ ಹೆಚ್ಚಿಗೆ ಇರುವ ದೇಶಗಳಲ್ಲಿ ಹಾಗೂ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಉದ್ಯೋಗಸ್ವಾತಂತ್ರ್ಯಕ್ಕೆ ಸಾಕಷ್ಟು ಅವಕಾಶವಿರದು. ಆದರೆ ಯೋಜನಾಬದ್ಧ ಆರ್ಥಿಕವ್ಯವಸ್ಥೆ ಸಮಾಜವಾದೀ ತತ್ತ್ವದ ಮೇಲೆ ಆಧಾರಿತವಾಗಿರುವುದರಿಂದ ಸಾಮಾನ್ಯ ವ್ಯಕ್ತಿಗೂ ಸಹ ತನ್ನ ಯೋಗ್ಯತೆಗೆ ತಕ್ಕಂತೆ ಉದ್ಯೋಗವನ್ನು ದೊರಕಿಸುವ ಅವಕಾಶವಿರುವುದು.

ಯೋಜನೆಗಳಲ್ಲಿ ಸಾಮಾನ್ಯವಾಗಿ ಕೇಂದ್ರೀಕೃತ ಹಾಗೂ ವಿಕೇಂದ್ರೀಕೃತ ಯೋಜನೆಗಳೆಂಬ ಎರಡು ಪ್ರಕಾರಗಳನ್ನು ಕಲ್ಪಿಸುವರು. ಕೇಂದ್ರೀಕೃತಯೋಜನೆಯಲ್ಲಿ ಒಂದೇ ಒಂದು ಆರ್ಥಿಕ ಯೋಜನಾಮಂಡಳಿ ರಚಿಸಲ್ಪಟ್ಟಿರುವುದು. ಮಂಡಳಿ ಎಲ್ಲ ಮಹತ್ವದ ಆರ್ಥಿಕ ನಿರ್ಣಯಗಳನ್ನು ಮಾಡುವುದು. ಅಂಥ ಮಹತ್ವದ ನಿರ್ಣಯಗಳಾವುವು ಎಂಬುದು ಕಾಲ ಮತ್ತು ಪರಿಸ್ಥಿತಿಯನ್ನು ಅನುಸರಿಸಿ ಬದಲಾಗಬಹುದು. ಆದರೆ ಮುಖ್ಯವಾದ ನಿಷ್ಕರ್ಷೆಗಳು ಬೆಲೆಗಳ ನಿರ್ಣಯ, ಬಂಡವಾಳ ವಿನಿಯೋಗದ ಪರಿಮಾಣ ಕೂಲಿಕಾರರಿಗೆ ಸಲ್ಲತಕ್ಕ ವೇತನ ಅಥವಾ ಉತ್ಪಾದನೆ ಮತ್ತು ಬಂಡವಾಳ ವಿನಿಯೋಗದ ಸ್ಥೂಲರೂಪುರೇಷೆಗೆ ಸಂಬಂಧಿಸಿದುದಾಗಿರಬಹುದು. ಕೇಂದ್ರೀಕೃತ ಯೋಜನೆಯಲ್ಲಿ ನಿಷ್ಕರ್ಷೆಗಳನ್ನು ಮಾಡುವ ಪೂರ್ಣ ಉಪಕ್ರಮ ಕೇಂದ್ರೀಯ ಯೋಜನಾಮಂಡಳಿಗೇ ಇರುವುದೆಂದು ಭಾವಿಸುವುದು ಸರಿಯಲ್ಲ. ದೇಶದಲ್ಲಿ ಅನೇಕ ಔದ್ಯೋಗಿಕ ಸಂಸ್ಥೆಗಳು ಹಾಗೂ ಸ್ಥಾನಿಕಸರ್ಕಾರಗಳು ತಮ್ಮ ಆವಶ್ಯಕತೆಗಳಿಗನುಸಾರವಾಗಿ ಸೂಚನೆಗಳನ್ನು ಕೇಂದ್ರಯೋಜನಾಮಂಡಳಿಗೆ

ಕಳಿಸುವರು. ಅಂಥ ಯೋಜನೆಗಳನ್ನು ಕೂಡಿಸಿ ದೇಶದ ಸಮಗ್ರ ಆವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಾಧ್ಯತೆಯನ್ನು ಗಮನಿಸಿ ಕೇಂದ್ರ ಯೋಜನಾಮಂಡಳಿ ನಿರ್ಧರಿಸುವುದು. ಇಲ್ಲಿ ಆಯ್ಕೆ ಕೇಂದ್ರೀಕೃತವಾದರೂ ನಿಷ್ಕರ್ಷೆಯು ಸಾಮಾಜಿಕವಾದುದು. ಸಮಾಜವಾದೀ ತತ್ತ್ವದ ಮೇಲೆ ಆಧರಿಸಿದ ದೇಶಕ್ಕೆ ಯೋಗ್ಯವಾದ ಆರ್ಥಿಕರಚನೆ ಇದೊಂದೇ. ಕೇಂದ್ರೀಯ ಯೋಜನೆಯಲ್ಲಿ ದೇಶದ ಆರ್ಥಿಕ ವ್ಯವಸ್ಥೆಯನ್ನು ಸಮಾಜದ ರಚನೆಗೆ ಅನುಗುಣವಾಗಿ ಹೊಂದಿಸಿಕೊಳ್ಳಲು ಅವಕಾಶವಿರುವುದು. ಅದು ತೀವ್ರ ಆರ್ಥಿಕ ಅಸ್ಥಿರತೆಯಿಂದ ಉಂಟಾಗುವ ಸಂಪನ್ಮೂಲಗಳ ನಷ್ಟವನ್ನೂ ತಪ್ಪಿಸಬಲ್ಲುದು.

ವಿಕೇಂದ್ರೀಕೃತ ಯೋಜನೆಯಲ್ಲಿ ಯೋಜನೆಯನ್ನು ತಯಾರಿಸುವ ಹೊಣೆ ಒಂದೇ ನಿರ್ದಿಷ್ಟ ಯೋಜನಾಮಂಡಳಿಯ ಮೇಲಿರದೆ ಅನೇಕ ಸ್ಥಾನಿಕಸಂಸ್ಥೆಗಳಲ್ಲಿ ಹಾಗೂ ಖಾಸಗೀ ಸಂಸ್ಥೆಗಳಲ್ಲಿ ಹಂಚಿಹೋಗಿರುವುದು. ಇಂಥ ಯೋಜನೆಗಳು ಹೆಚ್ಚು ವಾಸ್ತವಿಕವೂ ದೇಶದ ಪ್ರತಿಯೊಂದು ಭಾಗವೂ ಬೆಳವಣಿಗೆ ಹೊಂದಲು ಅವಕಾಶ ಕಲ್ಪಿಸಿಕೊಡುವಂಥವೂ ಆಗಿವೆ. ಆಡಳಿತ ವೆಚ್ಚದಲ್ಲಿ ಮಿತವ್ಯಯ ಸಾಧಿಸಬಹುದು. ಏಕೆಂದರೆ ಯೋಜನೆಯನ್ನು ರಚಿಸುವ ಕಾರ್ಯ ಅನೇಕ ಸಂಸ್ಥೆಗಳಲ್ಲಿ ಹಂಚಿಹೋಗಿರುವುದು. ಇಂಥ ಯೋಜನೆಗಳು ಪ್ರಜಾಪ್ರಭುತ್ವ ಪದ್ಧತಿಗೆ ಹೆಚ್ಚು ಹೊಂದುತ್ತವೆ. ಆದರೆ ಇಂಥ ಯೋಜನೆಗಳಲ್ಲಿ ದೇಶದ ಸಮಗ್ರತೆಗೆ ಧಕ್ಕೆ ತಗಲುವ ಸಂಭವವೂ ಇದೆ. ಯೋಜನೆ ತಯಾರಿಸಲು ಹಾಗೂ ಕಾರ್ಯಗತಗೊಳಿಸಲು ಸುಸಂಘಟಿತ ಮತ್ತು ಸಮರ್ಥ ಆಡಳಿತವರ್ಗದ ಆವಶ್ಯಕತೆಯಿದೆ. ಇಂಥ ಯೋಜನೆಗಳು ತಮ್ಮ ಗುರಿಯನ್ನು ಸಾಧಿಸಲು ಬಂಡವಾಳಶಾಹಿಯ ಅನಿರ್ಬಂಧಿತ ವ್ಯಾಪಾರ ಹಾಗೂ ಬೆಲೆಯ ಯಾಂತ್ರಿಕತೆಯ ತತ್ತ್ವಗಳನ್ನು ಅವಲಂಬಿಸಿರಬೇಕು. ಪೇಟೆಯ ಮುಖ್ಯ ಸಾಧನಗಳಾದ ಬೇಡಿಕೆ ಹಾಗೂ ಪುರವಟೆಗಳಲ್ಲಿ ಬದಲಾವಣೆಗಳನ್ನುಂಟುಮಾಡಿ ತನ್ನ ಗುರಿ ಸಾಧಿಸಬೇಕಾಗುವುದು. ಈ ಪದ್ಧತಿಯಲ್ಲಿ ಮುಂಚಿತವಾಗಿ ಆರ್ಥಿಕ ಲೆಕ್ಕಾಚಾರ ಮಾಡುವುದು ಸಾಧ್ಯವಿಲ್ಲ. ಹೀಗಾಗಿ ಆರ್ಥಿಕ ನಿಯಮಗಳು ತರ್ಕಬದ್ಧವಾಗಿರುವುದು ಕಠಿಣ. ಅನೇಕ ಸಲ ತಪ್ಪು ನಿರ್ಣಯಗಳಿಂದಾಗಬಹುದಾದ ಸಂಪನ್ಮೂಲದ ನಷ್ಟದ ಅನಂತರವೇ ಹೊಂದಾಣಿಕೆಯನ್ನು ಸಾಧಿಸುವ ಪ್ರಸಂಗ ಬರಬಹುದು. ಇದು ಯೋಜನಾ ತತ್ತ್ವಕ್ಕೆ ವಿಸಂಗತ. ವಿಕೇಂದ್ರೀಕೃತ ಯೋಜನೆಯಲ್ಲಿ ಯೋಜನಾಮಂಡಳಿ ಕೇವಲ ಒಂದು ಸಲಹಾಮಂಡಳಿಯಲ್ಲದೆ ಕಾರ್ಯಗತಗೊಳಿಸುವಂಥದಲ್ಲ. ವಿಕೇಂದ್ರೀಕೃತ ಯೋಜನೆಯ ಯಶಸ್ಸಿಗೆ ಮುಂದುವರಿದ ಸುಶಿಕ್ಷಿತ ಸಮಾಜ ಹಾಗೂ ಯೋಜನಾ ಘಟಕಗಳಲ್ಲಿ ಪರಸ್ಪರ ಸಹಕಾರ ಆವಶ್ಯಕ.

ಯೋಜನೆಗಳಲ್ಲಿ ಹಣಕಾಸಿನ ಯೋಜನೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಯೋಜನೆಯೆಂದು ಪ್ರಕಾರಗಳನ್ನು ಕಲ್ಪಿಸಬಹುದು. ನೈಸರ್ಗಿಕ ಸಂಪನ್ಮೂಲಗಳ ಯೋಜನೆಯಲ್ಲಿ ದೇಶದಲ್ಲಿ ಸದ್ಯದಲ್ಲೇ ಇರುವ ಸಂಪನ್ಮೂಲಗಳನ್ನು ನಿರ್ದಿಷ್ಟ ಗುರಿಯನ್ನು ಸಾಧಿಸುವುದಕ್ಕಾಗಿ ಹೆಚ್ಚು ಲಾಭದಾಯಕವಾಗುವಂತೆ ಉಪಯೋಗಿಸುವುದಕ್ಕೆ ಮಹತ್ತ್ವವಿದೆಯೇ ಹೊರತು ಕೇವಲ ಬಂಡವಾಳದ ವಿನಿಯೋಗಕ್ಕಲ್ಲ.

ಇಂಥ ಯೋಜನೆಗಳಲ್ಲಿ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚಾಗಿ ಬಳಕೆಗೆ ತರುವುದೇ ಮುಖ್ಯ ಉದ್ದೇಶ. ಆದುದರಿಂದ ಪ್ರತಿಯೊಂದು ಆರ್ಥಿಕ ವಿಭಾಗಗಳಲ್ಲೂ ಒಂದಕ್ಕೊಂದು ಹೊಂದಿಕೆಯಾಗುವಂಥ ಲಕ್ಷ್ಯಗಳನ್ನು ನಿರ್ಧರಿಸಿ ಅವುಗಳನ್ನು ಸಾಧಿಸಲು ಯೋಗ್ಯವಾಗುವಂತೆ ಬಹು ವ್ಯಾಪಕವಾದ ನಿಯಮ ಹಾಗೂ ಕಟ್ಟಳೆಗಳನ್ನು ನಿರ್ಮಿಸಬೇಕಾಗುವುದು. ಈ ಲಕ್ಷ್ಯಗಳು ಕೇವಲ ಪ್ರಗತಿಯ ದರ್ಶಕಗಳಾಗಿರದೆ ಸಂಪತ್ತಿಯಲ್ಲಿ ನಿರ್ದಿಷ್ಟ ಹೆಚ್ಚಳವನ್ನು ಸಾಧಿಸುವಂತಿರಬೇಕು. ಆದ್ದರಿಂದ ಇಂಥ ಯೋಜನೆಗಳನ್ನು ರಚಿಸುವಾಗ ದೇಶದ ನೈಸರ್ಗಿಕ ಸಂಪನ್ಮೂಲಗಳ ವಿಷಯವಾಗಿ ಪೂರ್ಣ ಪರಿಜ್ಞಾನವಿರುವುದು ಆವಶ್ಯಕ. ಅದಕ್ಕಾಗಿ ಯೋಜನೆಯ ರಚನೆಯ ಪೂರ್ವದಲ್ಲಿ ವಿವರವಾದ ನೈಸರ್ಗಿಕ ಸಂಪನ್ಮೂಲಗಳ ವೀಕ್ಷಣೆ ಮಾಡಿ ಅಂಕೆ ಸಂಖ್ಯೆಗಳನ್ನು ಕಲೆಹಾಕಬೇಕಾಗುವುದು. ಹಣಕಾಸಿನ ಯೋಜನೆಗಳಲ್ಲಿ ಮುಖ್ಯವಾಗಿ ಬೇಡಿಕೆ ಹಾಗೂ ಪೂರೈಕೆಗಳಲ್ಲಿಯ ಅಂತರ ಕಡಿಮೆಯಾಗುವಂತೆ ಉತ್ಪಾದನೆಯನ್ನು ಏರಿಸಲು ನೈಸರ್ಗಿಕ ಸಂಪನ್ಮೂಲಗಳನ್ನು ಅತಿ ಹೆಚ್ಚಿನ ಉಪಯೋಗಕ್ಕೆ ತೊಡಗಿಸುವುದು ಮುಖ್ಯ ಗುರಿ. ಅದಕ್ಕಾಗಿ ನಿರ್ದಿಷ್ಟ ಸಮಯದಲ್ಲಿ ವಿನಿಯೋಗಿಸುವ ಹಣಕಾಸಿನ ಬಂಡವಾಳ ಲಕ್ಷ್ಯಗಳು ಮೊದಲು ನಿರ್ಣಯಿಸಲ್ಪಡುವುವು. ಈ ಲಕ್ಷ್ಯಗಳನ್ನು ಪೂರೈಸಲು ಬೇಕಾಗಿರುವ ಹಣಕಾಸಿನ ಬಂಡವಾಳವನ್ನು ದೇಶದಲ್ಲಿಯ ತೆರಿಗೆಗಳನ್ನು ಹೆಚ್ಚಿಸಿ ಪರದೇಶಗಳಿಂದ ಸಾಲ ಪಡೆದು ಹಾಗೂ ಕೊರತೆಯ ಧನ ವಿನಿಯೋಗ ಪದ್ಧತಿಯಿಂದ (ಡೆಫಿಸಿಟ್ ಫಿನಾನ್ಸಿಂಗ್) ಕೂಡಿಸಲಾಗುವುದು. ಇಂಥ ಯೋಜನೆಗಳಲ್ಲಿ ರಾಷ್ಟ್ರೀಯ ಆದಾಯದ ಹೆಚ್ಚಳ ಮತ್ತು ಜನರ ತಲಾ ಆದಾಯದಲ್ಲಿ ಹೆಚ್ಚಳ ಇವು ಆರ್ಥಿಕಪ್ರಗತಿಯ ದರ್ಶಕಗಳೆಂದು ಪರಿಗಣಿಸಲಾಗುವುದು.

ಇಂಥ ಯೋಜನೆಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ವಿನಿಯೋಗ ಆವಶ್ಯಕವಾಗಿದ್ದರೂ ಹಣಕಾಸಿನ ಲಕ್ಷ್ಯಗಳ ಪೂರ್ತಿಗೇ ಹೆಚ್ಚಿನ ಪ್ರಾಮುಖ್ಯ ನೀಡಲಾಗುವುದು. ಆದರೂ ನೈಸರ್ಗಿಕ ಸಂಪನ್ಮೂಲಗಳ ಯೋಗ್ಯ ಬೆಳವಣಿಗೆಯಾಗದೆ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ ಸಾಧಿಸುವುದಸಾಧ್ಯ. ಆದ್ದರಿಂದ ಎರಡೂ ಪ್ರಕಾರಗಳ ಯೋಜನೆಗಳ ಗುಣಾವಗುಣಗಳೇನೇ ಇದ್ದರೂ ಇವುಗಳ ಉದ್ದೇಶ ವಿವಿಧ ಆರ್ಥಿಕ ವಿಭಾಗಗಳ ಬೆಳವಣಿಗೆಯ ಪ್ರತಿಯೊಂದು ಮೇಲಿನ ಸ್ತರದಲ್ಲಿಯೂ ಸಮತೋಲನ ಕಾಯ್ದುಕೊಳ್ಳುವುದೇ ಆಗಿರುವುದರಿಂದ ಎರಡೂ ಯೋಜನೆಗಳು ಒಂದಕ್ಕೊಂದು ಪೂರಕವಾಗಿರುವುದು.

ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಸಾಧಿಸುವಲ್ಲಿ ಯೋಜನೆಯ ಮಹತ್ವ ಭಾರತದಲ್ಲಿ ಸುಮಾರು ಮೂರು ದಶಕಗಳ ಹಿಂದೆಯೇ ಪ್ರಚಾರಗೊಂಡಿತು. 1943ರಲ್ಲಿ ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯನವರು ಪ್ಲಾನ್ಡ್ ಇಕಾನಮಿ ಫಾರ್ ಇಂಡಿಯ ಎಂಬ ಪುಸ್ತಕದಲ್ಲಿ ಹತ್ತು ವರ್ಷಗಳ ಯೋಜನೆಯನ್ನು ಪ್ರತಿಪಾದಿಸಿ ರಾಷ್ಟ್ರೀಯ ಆದಾಯವನ್ನು ಎರಡು ಪಟ್ಟು ಬೆಳೆಸುವ ಸಾಧ್ಯತೆಯನ್ನು ಸೂಚಿಸಿದರು. ಅವರು ಸೋವಿಯೆತ್ ರಷ್ಯದಲ್ಲಿ 1927ರಿಂದ 32ರವರೆಗೆ ನಡೆದ ಪಂಚವಾರ್ಷಿಕ ಯೋಜನೆಯ ಯಶಸ್ಸಿನಿಂದ ತುಂಬ ಪ್ರಭಾವಿತರಾಗಿದ್ದರು. ಇದಾದ ಐದು ವರ್ಷಗಳ ಅನಂತರ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಜವಾಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಯೋಜನಾಮಂಡಳಿಯೊಂದನ್ನು ರಚಿಸಿತು. ಆದರೆ ಮುಂದೆ ರಾಷ್ಟ್ರೀಯ ಆಂದೋಲನ ಪ್ರಾರಂಭವಾಗಿ ಈ ಮಂಡಳಿಯ ಕಾರ್ಯ ಕುಂಠಿತವಾಯಿತು. 1944ರಲ್ಲಿ ಮುಂಬಯಿಯ ಕೆಲವು ಪ್ರಗತಿಪರ ಉದ್ದಿಮೆದಾರರು ಒಂದು ಯೋಜನೆಯನ್ನು ಸಿದ್ಧಪಡಿಸಿದರು. ಇದಲ್ಲದೆ ಎಂ.ಎನ್.ರಾಯ್ ಅವರು ದಿ ಪೀಪಲ್ಸ್ ಪ್ಲ್ಯಾನ್ ಎಂಬ ಯೋಜನೆಯನ್ನೂ ಶ್ರೀಮನ್ನಾರಾಯಣ್ ಗಾಂಧಿಯನ್ ಪ್ಲ್ಯಾನ್ ಎಂಬ ಯೋಜನೆಯನ್ನು ತಯಾರಿಸಿದರು. ಹೀಗೆ ಯೋಜನೆಗಳ ವಿಷಯವಾಗಿ ಸಾಕಷ್ಟು ವರ್ಷಗಳವರೆಗೆ ನಮ್ಮ ದೇಶದಲ್ಲೂ ನಡೆದಿದ್ದವು.

ಸ್ವಾತಂತ್ರ್ಯಾನಂತರ ಮೊದಲಿನ ಕೆಲವು ವರ್ಷಗಳವರೆಗೆ ಪೂರ್ವಸಿದ್ಧತೆ ನಡೆದು ಮಾರ್ಚ್ 15, 1950ರಲ್ಲಿ ಭಾರತದಲ್ಲಿ ಯೋಜನಾ ಆಯೋಗ ರಚಿಸಲ್ಪಟ್ಟಿತು. ಭಾರತದ ಯೋಜನಾ ಆಯೋಗ ಕೇವಲ ಸಲಹಾಮಂಡಳಿಯಾಗಿದೆ. ಆದರೆ ಸಲಹೆಗಳನ್ನು ಕಾರ್ಯಗತ ಮಾಡುವಲ್ಲಿ ಸರ್ಕಾರದ ಪಾತ್ರವೇ ಮುಖ್ಯ. ಭಾರತದ ಯೋಜನೆಯ ಒಂದು ವೈಶಿಷ್ಟ್ಯವೆಂದರೆ ಸಮ್ಮಿಶ್ರ ಆರ್ಥಿಕವ್ಯವಸ್ಥೆಯ ತತ್ತ್ವವನ್ನು ಅನುಸರಿಸುವುದು. ಆದ್ದರಿಂದ ಯೋಜನೆಗಳು ಆರ್ಥಿಕ ವ್ಯವಸ್ಥೆಯಲ್ಲಿ ಸರಕಾರೀ ರಂಗ ಹಾಗೂ ಖಾಸಗೀ ರಂಗ ಎಂಬ ಎರಡು ವಿಭಾಗಗಳನ್ನು ಕಲ್ಪಿಸುವುವು. ಸರ್ಕಾರೀ ರಂಗದ ವಿಷಯವಾಗಿ ಯೋಜನೆ ವಿವರವಾಗಿ ತಯಾರಿಸಲ್ಪಡುವುದು. ಖಾಸಗೀ ರಂಗಗಳ ವಿಷಯದಲ್ಲಿ ಕೇವಲ ಲಕ್ಷ್ಯಗಳನ್ನು ನಿರ್ಧರಿಸಿ ಅವುಗಳನ್ನು ಪೂರ್ತಿಗೊಳಿಸಲು ಸರ್ಕಾರ ಸಹಾಯಕವಾಗುವುದು. ಭಾರತದ ಯೋಜನೆಗಳೂ ರಷ್ಯ ದೇಶದ ಯೋಜನೆಗಳಂತೆ ಐದು ವರ್ಷಗಳ ಯೋಜನೆಗಳು. ಈ ಯೋಜನೆಗಳನ್ನು ಪಂಚವಾರ್ಷಿಕ ಯೋಜನೆಗಳೆಂದು ಕರೆಯುವರು. ಯೋಜನಾ ಆಯೋಗ ತಜ್ಞ ಆಡಳಿತಗಾರರು, ಅರ್ಥಶಾಸ್ತ್ರಜ್ಞರು ಹಾಗೂ ಸಂಖ್ಯಾಶಾಸ್ತ್ರಜ್ಞರನ್ನು ಒಳಗೊಂಡಿರುವುದು. ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸುವ ಹೊಣೆ ಹಾಗೂ ಅವುಗಳ ಪ್ರಗತಿಯನ್ನು ಅವಲೋಕಿಸುವ ಹೊಣೆ ಯೋಜನಾ ಆಯೋಗದ್ದು. ಮೊದಲಿಗೆ ದೇಶದ ಸಂಪನ್ಮೂಲ ಮತ್ತು ಬಂಡವಾಳದ ವಿನಿಯೋಗದ ಸಾಧ್ಯತೆಯನ್ನು ಲಕ್ಷಿಸಿ ಐದು ವರ್ಷಗಳಲ್ಲಿ ಸಾಧಿಸಬಹುದಾದ ಲಕ್ಷ್ಯಗಳನ್ನು ನಿರ್ಧರಿಸಿ, ಒಂದು ಕರಡು ಯೋಜನೆಯನ್ನು ತಯಾರಿಸಿ ಪ್ರಕಟಿಸುವರು. ದೇಶದ ಅನೇಕ ತಜ್ಞರ ಹಾಗೂ ಆರ್ಥಿಕಸಂಸ್ಥೆಗಳ ಸಲಹೆ ಸೂಚನೆಗಳನ್ನು ಗಮನಿಸಿ ಈ ಕರಡು ಯೋಜನೆಯಲ್ಲಿ ತಿದ್ದುಪಡಿ ಮಾಡಿದ ಮೇಲೆಯೇ ನಿಜವಾದ ಪಂಚವಾರ್ಷಿಕ ಯೋಜನೆ ತಯಾರಾಗುವುದು. ಅಂಥ ಯೋಜನೆಗೆ ಪಾರ್ಲಿಮೆಂಟಿನ ಒಪ್ಪಿಗೆ ದೊರೆತ ಮೇಲೆ ಪಂಚವಾರ್ಷಿಕ ಯೋಜನೆ ಏಪ್ರಿಲ್ 1 1951ರಂದು ಜಾರಿಯಲ್ಲಿ ಬಂದಿತು. 2002–2007ರ ವರೆಗೆ ಹತ್ತು ಪಂಚವಾರ್ಷಿಕ ಯೋಜನೆಗಳು ಆಗಿವೆ. ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಧಿಸಬೇಕಾದ ಪ್ರಗತಿಯನ್ನು ಪ್ರಾರಂಭದಲ್ಲಿಯೇ ನಿರ್ಧರಿಸಲಾಗಿದೆ. ಅದಕ್ಕೆ ನಿರೀಕ್ಷಿತ ಯೋಜನೆ (ಪ್ರಾಸ್ಪೆಕ್ಟಿವ್ ಪ್ಲ್ಯಾನಿಂಗ್) ಎನ್ನುವರು. ಪ್ರತಿಯೊಂದು ಯೋಜನೆಯೂ ಮುಂದಿನ ಯೋಜನೆಗೆ ಪೂರ್ವ ಪೀಠಿಕೆಯಾಗಿರುವುದು. ಅದರಿಂದ ಎಲ್ಲ ಯೋಜನೆಗಳೂ ಒಂದಕ್ಕೊಂದು ಹೊಂದಿಕೊಂಡಿವೆ. ಪಂಚವಾರ್ಷಿಕ ಯೋಜನೆಗಳನ್ನು ಪೂರ್ತಿಗೊಳಿಸುವಲ್ಲಿ ಅನೇಕ ಅಡೆತಡೆಗಳು ಉಂಟಾಗಿದ್ದರೂ ಯೋಜನೆಯ ಪದ್ಧತಿಯನ್ನು ಅನುಸರಿಸಿ ಕೆಲವೇ ವರ್ಷಗಳಲ್ಲಿ ಭಾರತ ಗಣನೀಯ ಆರ್ಥಿಕ ಪ್ರಗತಿಯನ್ನು ಸಾಧಿಸುತ್ತಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. **(ನೋಡಿ– ಭಾರತದ ಪಂಚವಾರ್ಷಿಕ ಯೋಜನೆಗಳು; ರಷ್ಯದ ಆರ್ಥಿಕ ಯೋಜನೆಗಳು; ಟೆನೆಸ್ಸಿ ವ್ಯಾಲಿ ಅಥಾರಿಟಿ).** (ಡಿ.ಎ.ಎಚ್.)

**ಆರ್ಥಿಕ ರಾಷ್ಟ್ರೀಯತೆ :** ರಾಷ್ಟ್ರೀಯ ಹಿತಾಸಕ್ತಿಗಳನ್ನೇ ಪ್ರಧಾನವಾಗುಳ್ಳ ರಾಜಕೀಯ ಹಾಗೂ ಸಾಮಾಜಿಕ ತತ್ತ್ವವನ್ನು ರಾಷ್ಟ್ರೀಯತೆ ಎನ್ನುವ ಪಕ್ಷದಲ್ಲಿ ರಾಷ್ಟ್ರದ ಧ್ಯೇಯಗಳಲ್ಲೊಂದಾದ ಆರ್ಥಿಕ ಪ್ರಗತಿಯನ್ನೇ ಪ್ರಧಾನವಾಗುಳ್ಳ ರಾಷ್ಟ್ರೀಯ ಮನೋಧರ್ಮವನ್ನು ಆರ್ಥಿಕ ರಾಷ್ಟ್ರೀಯತೆ ಎನ್ನಬಹುದು (ಎಕನಾಮಿಕ್ ನ್ಯಾಷನಲಿಸಂ). ಇತರ ರಾಷ್ಟ್ರಗಳಿಗೆ ಆಗಬಹುದಾದ ಕಷ್ಟನಷ್ಟಗಳಿಗೆ ಸ್ವಲ್ಪವೂ ಗಮನ ಕೊಡದೆ ಸ್ವರಾಷ್ಟ್ರ ಲಾಭವನ್ನು ಪರಮಾವಧಿ

ಗೊಳಿಸುವ ಕಾರ್ಯಾಚರಣೆಗಳಲ್ಲಿ ತೊಡಗುವುದು ಅತ್ಯುಗ್ರ ಆರ್ಥಿಕ ರಾಷ್ಟ್ರೀಯತೆ ಎನ್ನಿಸಿಕೊಳ್ಳುವುದು. ಇಷ್ಟು ತೀವ್ರ ಸ್ವರೂಪದಲ್ಲಿಲ್ಲದಿದ್ದರೂ ಅಂತಾರಾಷ್ಟ್ರೀಯ ಹಿತಾಸಕ್ತಿಗಳಿಗೆ ಸಾಕಷ್ಟು ಮಾನ್ಯತೆ ನೀಡದೆ ಕೇವಲ ಸ್ವರಾಷ್ಟ್ರ ಹಿತಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟು ಕೈಗೊಳ್ಳುವ ನೀತಿಗಳೂ ನಡೆಸುವ ಕಾರ್ಯಾಚರಣೆಗಳೂ ಆರ್ಥಿಕ ರಾಷ್ಟ್ರೀಯತೆ ಎನ್ನಿಸುವುವು. ಇದನ್ನು ಲಘು ಸ್ವರೂಪದ ಆರ್ಥಿಕ ರಾಷ್ಟ್ರೀಯತೆ ಎಂದು ಹೇಳಬಹುದು. ಅತ್ಯಂತ ಉಗ್ರ ಹಾಗೂ ಅತ್ಯಂತ ಲಘು ಸ್ವರೂಪದ ಆರ್ಥಿಕ ರಾಷ್ಟ್ರೀಯತೆಯ ನಡುವೆ ಆರ್ಥಿಕ ರಾಷ್ಟ್ರೀಯತೆಯ ವಿವಿಧ ಹಂತಗಳನ್ನು ಕಾಣಬಹುದು.

ಪ್ರಪಂಚದ ಇತಿಹಾಸದಲ್ಲಿ ಕೆಲವು ಕಾಲಗಳಲ್ಲಿ ಆರ್ಥಿಕ ರಾಷ್ಟ್ರೀಯತೆ ಎದ್ದು ಕಾಣುವುದನ್ನು ಗಮನಿಸದಿರಲಾಗುವುದಿಲ್ಲ. ಆರ್ಥಿಕ ರಾಷ್ಟ್ರೀಯತೆ ಪ್ರೇರಕಶಕ್ತಿ, ಸ್ವರೂಪ, ಪರಿಣಾಮ ಇತ್ಯಾದಿ ಅಂಶಗಳ ಬಗ್ಗೆ ಮುಖ್ಯ ವಿಷಯಗಳನ್ನು ತಿಳಿಯಲು ಆ ಕಾಲದ ಅನುಭವಗಳ ಅವಲೋಕನ ಉಪಯುಕ್ತ. ಆಧುನಿಕ ಯುಗಕ್ಕೆ ಮುನ್ನ ಅಂದರೆ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಗೆ ಮುನ್ನ ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್, ಹಾಲೆಂಡ್ ಇತ್ಯಾದಿ ಐರೋಪ್ಯ ರಾಷ್ಟ್ರಗಳು ಸುಮಾರು ಎರಡು ಶತಮಾನಗಳ ಕಾಲ ಅನುಸರಿಸುತ್ತಿದ್ದ ವಾಣಿಜ್ಯ ಪದ್ಧತಿಯ ನೀತಿ (ಮರ್ಕಂಟೈಲಿಸಂ) ಆರ್ಥಿಕ ರಾಷ್ಟ್ರೀಯತೆಯ ಒಂದು ಉಗ್ರಸ್ವರೂಪವೆಂದು ಹೇಳಬಹುದು.

ವಾಣಿಜ್ಯ ಪದ್ಧತಿಯ ವಾದಸರಣಿ ಈ ರೀತಿ ಇದೆ: ಇತರ ರಾಷ್ಟ್ರಗಳಿಗಿಂತ ತಮ್ಮ ರಾಷ್ಟ್ರ ಹೆಚ್ಚು ಪ್ರಭಾವಶಾಲಿ ರಾಜ್ಯವಾಗಬೇಕು. ಚಿನ್ನ, ಬೆಳ್ಳಿ ಇತ್ಯಾದಿ ಅಮೂಲ್ಯ ವಸ್ತುಗಳೇ ಇಂಥ ರಾಜಕೀಯ ಶಕ್ತಿಯ ಮೂಲಾಧಾರ. ವಿದೇಶೀವ್ಯಾಪಾರದ ಲೆಕ್ಕದಲ್ಲಿ ಹೆಚ್ಚಳವೇ ಅಂದರೆ ಆಮದು ಬೆಲೆಯನ್ನು ಮೀರಿದ ರಫ್ತು ಬೆಲೆ ಇರುವ ಅನುಕೂಲ ಪರಿಸ್ಥಿತಿಯೇ ಹೆಚ್ಚು ಅಮೂಲ್ಯ ವಸ್ತುಸಂಗ್ರಹಕ್ಕೆ ಮಾರ್ಗ. ದೇಶದ ಉತ್ಪನ್ನ ವ್ಯವಸ್ಥೆಯೂ ಹಣಕಾಸಿನ ಪದ್ಧತಿಯೂ ಮಿತಿಯಂತೆ ಅನುಭೋಗ ಪ್ರವೃತ್ತಿಯೂ ಆಮದು ರಫ್ತು ನೀತಿಯೂ ಇಂಥ ವಿದೇಶೀವ್ಯಾಪಾರ ಅನುಕೂಲಸ್ಥಿತಿಗೆ ಅನುಗುಣವಾಗಿರಬೇಕು. ಈ ಬಗ್ಗೆ ಆವಶ್ಯಕ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು ಸರ್ಕಾರದ ಮುಖ್ಯ ಹೊಣೆ. ಅದು ಆರ್ಥಿಕ ಚಟುವಟಿಕೆಗಳನ್ನು ಸೂಕ್ತವಾಗಿ ನಿಯಂತ್ರಿಸುವುದರ ಮೂಲಕ. ಇತರ ದೇಶಗಳಿಂದ ಹೆಚ್ಚು ಹೆಚ್ಚಾಗಿ ಅಮೂಲ್ಯಸರಕುಗಳನ್ನು ಪಡೆದು, ತನ್ಮೂಲಕ ಅದರ ರಾಜಕೀಯ ಪ್ರಭಾವ, ಪ್ರತಿಷ್ಠೆಗಳನ್ನು ಬಲಪಡಿಸಿಕೊಳ್ಳಬೇಕು. ಈ ವಾದಸರಣಿಯ ಅನುಸಾರವಾಗಿ, ವಾಣಿಜ್ಯ ಪದ್ಧತಿಯನ್ನುಳ್ಳ ರಾಷ್ಟ್ರಗಳ ಧ್ಯೇಯ ಕೇವಲ ಆರ್ಥಿಕ ಸ್ವಸಂಪೂರ್ಣತೆಯಷ್ಟೇ ಆಗಿರಲಿಲ್ಲ. ಇತರ ರಾಷ್ಟ್ರಗಳಿಂದಲೂ ಆದಷ್ಟು ಆರ್ಥಿಕ ಪ್ರಯೋಜನ ಪಡೆಯುವುದೂ ಇದಕ್ಕಾಗಿ ಆವಶ್ಯಕವಾದ ಎಲ್ಲ ರಾಷ್ಟ್ರೀಯ ಕ್ರಮಗಳನ್ನು ಅನುಸರಿಸುವುದೂ ಇದರ ಆರ್ಥಿಕ ರಾಷ್ಟ್ರೀಯತೆಯ ಲಕ್ಷಣವಾಗಿತ್ತು. ಇತರ ರಾಷ್ಟ್ರಗಳ ಹಿತಾಸಕ್ತಿಗಳನ್ನು ಗಮನಿಸದೆ, ಕೇವಲ ಸ್ವರಾಷ್ಟ್ರಪ್ರತಿಷ್ಠೆ ಹಾಗೂ ಮೇಲ್ಮೈಗಳ ಸಾಧನೆಗಾಗಿ ಅನೇಕ ಐರೋಪ್ಯರಾಷ್ಟ್ರಗಳು ಕೈಕೊಂಡ ವಾಣಿಜ್ಯ ನೀತಿ ಮುಯ್ಯಿಗೆ ಮುಯ್ಯಿ ನ್ಯಾಯಕ್ಕೆ ಎಡೆಗೊಟ್ಟಿತು. ತತ್ಪರಿಣಾಮವಾಗಿ ಅವುಗಳೊಳಗೆ ಪರಸ್ಪರ ವೈಮನಸ್ಯ ಅಂಕುರಿಸಿ ಕಲಹ ಹಾಗೂ ಯುದ್ಧಗಳಲ್ಲಿ ಪರಿಣಮಿಸಿತು. ಇದರಿಂದ ಆ ಎಲ್ಲ ರಾಷ್ಟ್ರಗಳ ಕ್ಷೇಮಾಭ್ಯುದಯಕ್ಕೂ ಧಕ್ಕೆಯುಂಟಾಯಿತು. ಹೀಗೆ ಉಗ್ರಸ್ವರೂಪದ ಆರ್ಥಿಕರಾಷ್ಟ್ರೀಯತೆಯ ವಾಣಿಜ್ಯ ನೀತಿ ಸಾರ್ವತ್ರಿಕ ಹಿತಕ್ಕೆ ವಿರೋಧವಾದುದರಿಂದ ಇಂಥ ಭಾವನೆಗೆ ಕ್ರಮೇಣವಾಗಿ ವಿರೋಧ ಬೆಳೆದು ಆರ್ಥಿಕರಾಷ್ಟ್ರೀಯತೆಗೆ ಹೆಚ್ಚು ಮಾನ್ಯತೆ ದೊರೆತುದು ಸ್ವಾಭಾವಿಕ **(ನೋಡಿ– ಅಂತಾರಾಷ್ಟ್ರೀಯತೆ; ರಾಷ್ಟ್ರೀಯತೆ)**.

19ನೆಯ ಶತಮಾನದ ಅಂತ್ಯಭಾಗದಲ್ಲಿ ಅಮೆರಿಕ ಮತ್ತು ಕೆಲವು ಐರೋಪ್ಯ ರಾಷ್ಟ್ರಗಳು ಶೀಘ್ರ ಕೈಗಾರಿಕಾಭಿವೃದ್ಧಿ ಹೊಂದುವ ಸಲುವಾಗಿ ಒಂದು ರೀತಿಯ ಆರ್ಥಿಕ ರಾಷ್ಟ್ರೀಯತಾ ನೀತಿಯನ್ನು ಕೈಕೊಂಡವು. ಅಂದು ಜರ್ಮನಿಯಲ್ಲಿ ಫ್ರೆಡರಿಕ್ ಲಿಸ್ಟ್, ಅಮೆರಿಕದಲ್ಲಿ ಹ್ಯಾಮಿಲ್ಟನ್ ಇತ್ಯಾದಿ ರಾಷ್ಟ್ರೀಯತಾವಾದಿಗಳು ತಂತಮ್ಮ ರಾಷ್ಟ್ರಗಳು ಅಂದಿನ ಸಂದರ್ಭದಲ್ಲಿ ವಿಶೇಷ ರಾಷ್ಟ್ರೀಯತಾ ಕ್ರಮಗಳನ್ನು ಅನುಸರಿಸದೆ ಇದ್ದರೆ ಕೈಗಾರಿಕಾಕ್ರಾಂತಿ ಸಾಧ್ಯವಾಗದೆಂದು ಸಾರಿದರು. ರಾಷ್ಟ್ರದ ಆರ್ಥಿಕ ಸ್ವಾವಲಂಬನೆಗೆ ಶ್ರಮಿಸಿ, ಸ್ವದೇಶಿ ಮಾಲನ್ನೇ ಕೊಳ್ಳಬೇಕೆಂಬ ಘೋಷಣೆಗಳು ಆಯಾ ದೇಶದ ಆರ್ಥಿಕಾಭಿವೃದ್ಧಿಗೆ ಆವಶ್ಯಕವಾದ ಸ್ಫೂರ್ತಿಯನ್ನು ನೀಡಿದವು. ಹೀಗೆ ಅನುಸರಿಸಲಾದ ರಕ್ಷಣಾ ವಾಣಿಜ್ಯನೀತಿ ಮತ್ತು ಸ್ವದೇಶಿ ಹಾಗೂ ಸ್ವಾವಲಂಬನೆಯ ತತ್ತ್ವಪ್ರಚಾರಗಳು ವಿದೇಶಿ ಪೈಪೋಟಿಯ ಭಯ ತಪ್ಪಿಸುವುದರ ಮೂಲಕ ಆಯಾ ರಾಷ್ಟ್ರದ ಕೈಗಾರಿಕಾಭಿವೃದ್ಧಿಗೆ ಸಹಾಯ ಮಾಡಿದುವು. ಆದರೆ, ಆಯಾ ದೇಶದ ಪ್ರಾಕೃತಿಕ ಸಂಪತ್ಸಾಧನಗಳ ಆಧಾರದ ಮೇಲೆ ತೀವ್ರ ಆರ್ಥಿಕಾಭಿವೃದ್ಧಿ ಸಾಧಿಸಲು ಕೈಗೊಂಡ ಇಂಥ ಕ್ರಮಗಳು ಆ ಶತಮಾನದಲ್ಲಿ ವಿಕಾಸವಾಗುತ್ತಿದ್ದ ಅಂತಾರಾಷ್ಟ್ರೀಯ ಆರ್ಥಿಕತೆಯ ಚೌಕಟ್ಟನ್ನು ಅಳಿಸಲಿಲ್ಲ. ಆದುದರಿಂದ ಅದು ಆರ್ಥಿಕ ರಾಷ್ಟ್ರೀಯತೆಯ ಒಂದು ಲಘುಸ್ವರೂಪವೆನ್ನಬಹುದು.

ಇಂದಿನ ಪ್ರಪಂಚದಲ್ಲಿ ಹೊಸದಾಗಿ ರಾಜಕೀಯ ಸ್ವಾತಂತ್ರ್ಯ ಪಡೆದು ಶೀಘ್ರ ಆರ್ಥಿಕಾಭಿವೃದ್ಧಿಗೆ ಹವಣಿಸುತ್ತಿರುವ ಅನೇಕ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲೂ ಮೇಲೆ ಹೇಳಿರುವ ರೀತಿಯ ಆರ್ಥಿಕ ರಾಷ್ಟ್ರೀಯತೆಯನ್ನು ಗುರುತಿಸಬಹುದು. ತಾವೇ ಆರ್ಥಿಕವಾಗಿ ಉತ್ಪಾದಿಸಬಹುದಾದ ಅನೇಕ ಸರಕುಗಳ ಬಗ್ಗೆ ಮುಂದುವರಿದಿರುವ ರಾಷ್ಟ್ರಗಳ ಮೇಲಿನ ಅವಲಂಬನೆ ತಪ್ಪಿಸುವ ಮತ್ತು ವಾಸ್ತವವಾದ ಹೋಲಿಕೆ ವೆಚ್ಚನಿಯಮದ ಪ್ರಕಾರ ತಮಗೆ ಅನುಕೂಲವಿರುವ ಸರಕುಗಳ ರಫ್ತು ಹೆಚ್ಚಿಸುವ ಉದ್ದೇಶದಿಂದ ಈ ಅಭಿವೃದ್ಧಿ ಹೊಂದದ ರಾಷ್ಟ್ರಗಳು ರಕ್ಷಣಾವಾಣಿಜ್ಯನೀತಿ ಮತ್ತು ಇತರ ವಿದೇಶಿವ್ಯಾಪಾರ–ವ್ಯವಹಾರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತಿವೆ. ಈ ಕ್ರಮಗಳು ಕೇವಲ ರಾಷ್ಟ್ರೀಯತಾ ಪ್ರಧಾನತೆಯ ದೃಷ್ಟಿಯಿಂದ ಕೈಗೊಂಡ ಕ್ರಮಗಳೆಂದು ತೋರಿದರೂ ವಾಸ್ತವವಾಗಿ ದೀರ್ಘಕಾಲಾವಧಿಯ ದೃಷ್ಟಿಯಿಂದ ಇವು ಸಹಜವಾದ ಅಂತಾರಾಷ್ಟ್ರೀಯ ಆರ್ಥಿಕತೆಯ ವಿಕಾಸಕ್ಕೆ ಪ್ರತಿಕೂಲವಾಗುವುದಿಲ್ಲವೆಂದು ಹೇಳಬಹುದು. ಏಕೆಂದರೆ, ಅಂತಾರಾಷ್ಟ್ರೀಯತೆಗೆ ವಿರೋಧವೆಂದು ತೋರಬಹುದಾದ ಈ ಕ್ರಮಗಳು, ಹಿಂದುಳಿದ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೆ ಅತ್ಯಾವಶ್ಯಕವಾದ ಕೇವಲ ತಾತ್ಕಾಲಿಕ ಕ್ರಮಗಳು. ಭಾರತವೂ ಸೇರಿ ಇಂದಿನ ಅನೇಕ ಅಭಿವೃದ್ಧಿ ಹೊಂದದ ರಾಷ್ಟ್ರಗಳು ಪ್ರಪಂಚ ಆರ್ಥಿಕತೆಯ ವಿಶಾಲತತ್ತ್ವಗಳಿಗೆ ಒಪ್ಪಿಗೆ ನೀಡಿವೆ. ಅಂದಮೇಲೆ, ಅಭಿವೃದ್ಧಿ ಪಥದಲ್ಲಿ ಮುಂದುವರಿದಂತೆ ಈ ರಾಷ್ಟ್ರಗಳು ಸಂಬಂಧ ಹೊಂದುವ ಗುರಿ ಹೊಂದಿವೆ ಎಂದು ಹೇಳಿದಂತಾಯಿತು. ಆದುದರಿಂದ ಇವುಗಳು ಅನುಸರಿಸುತ್ತಿರುವ ರಾಷ್ಟ್ರೀಯತೆ ದುಷ್ಪರಿಣಾಮವುಳ್ಳ ತೀವ್ರ ರಾಷ್ಟ್ರೀಯತೆಯ ಜಾತಿಗೆ ಸೇರುವುದಿಲ್ಲ. ಇಂದು ಭಾರತದ ಯೋಜನೆಗಳು ಸ್ವಾವಲಂಬನೆಯ ಉದ್ದೇಶವನ್ನು ಸಾರುತ್ತಿರುವುದು ಇಂಥ ಒಂದು ಆರ್ಥಿಕ ರಾಷ್ಟ್ರೀಯತೆಗೆ ಪುಷ್ಟಿಕೊಟ್ಟಂತಿದೆ. ಇದೇ ಸ್ವರೂಪದ ಆರ್ಥಿಕ ರಾಷ್ಟ್ರೀಯತೆಯನ್ನು ಅಭಿವೃದ್ಧಿ ಪಥದಲ್ಲಿರುವ ಎಲ್ಲ ರಾಷ್ಟ್ರಗಳಲ್ಲೂ ಕಾಣಬಹುದು. ಇಂಥ ಲಘುಸ್ವರೂಪದ ಆರ್ಥಿಕ ರಾಷ್ಟ್ರೀಯತೆಯಿಂದ ಮುಂದುವರಿಯುವ ರಾಷ್ಟ್ರಗಳಿಗೆ 19ನೆಯ ಶತಮಾನದಲ್ಲಿ ಹೇಗೆ ಆರ್ಥಿಕಾಭಿವೃದ್ಧಿಗೆ ಸಹಾಯವಾಯಿತೋ ಹಾಗೆಯೇ ಇಂದಿನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೂ ಈ ರೀತಿಯ ಆರ್ಥಿಕ ರಾಷ್ಟ್ರೀಯತೆ ಸಹಾಯಕವಾಗಿದೆ.

ಎರಡು ಮಹಾಯುದ್ಧಗಳ ಅಂತರದ ಅವಧಿಯಲ್ಲಿ ಹಲವಾರು ರಾಷ್ಟ್ರಗಳಲ್ಲಿ ವಿವಿಧ ಸ್ವರೂಪದ ಆರ್ಥಿಕ ರಾಷ್ಟ್ರೀಯತೆ ಬೆಳೆದುದನ್ನು ಕಾಣಬಹುದು. ಮೊದಲ ಪ್ರಪಂಚ ಯುದ್ಧಾನಂತರದ ಶಾಂತಿ ಕೌಲಿನ ಪ್ರಕಾರ ಉದ್ಭವಿಸಿದ ಸಣ್ಣಪುಟ್ಟ ಐರೋಪ್ಯ ರಾಷ್ಟ್ರಗಳು ಹಿಂದಿನ ವಿಶಾಲ ಆರ್ಥಿಕ ತಳಹದಿಯನ್ನು ಕಳೆದುಕೊಂಡುದೇ ಅಲ್ಲದೆ ಸಂಕುಚಿತ ರಾಷ್ಟ್ರೀಯತಾಭಾವನೆಯನ್ನೂ ತೋರಿಸಿದುವು. ಈ ಚಿಕ್ಕ ರಾಷ್ಟ್ರಗಳು ಹೋಲಿಕೆ ವೆಚ್ಚನಿಯಮವನ್ನು ಧಿಕ್ಕರಿಸಿ, ಎಷ್ಟೇ ವೆಚ್ಚವಾದರೂ ಸರಿ ತಾವು ಕೈಗಾರಿಕೋದ್ಯಮ ಬೆಳೆಸಬೇಕೆಂಬ ಉದ್ದೇಶದಿಂದ 1920ರ ದಶಕದಲ್ಲಿ ಕೈಗೊಂಡ ನೀತಿಗಳು ತೀವ್ರ ರಾಷ್ಟ್ರೀಯತಾಧೋರಣೆಯವಾಗಿದ್ದುವು.

ಅಂತೆಯೇ ನಾಜಿ ಜರ್ಮನಿ, ಫ್ಯಾಸಿಸ್ಟ್ ಇಟಲಿ 1930ರ ದಶದಲ್ಲಿ ಅನುಸರಿಸಿದ ಆರ್ಥಿಕ ಕ್ರಮಗಳೂ ಉಜ್ವಲ ಆರ್ಥಿಕ ರಾಷ್ಟ್ರೀಯತೆಯನ್ನೇ ಆಧರಿಸಿದ್ದುವು. ಆದಷ್ಟು ಶೀಘ್ರವಾಗಿ ಅತ್ಯುನ್ನತ ಯುದ್ಧಬಲವನ್ನು ಸಂಪಾದಿಸಿಕೊಳ್ಳುವುದೇ ಈ ರಾಷ್ಟ್ರಗಳ ಉಜ್ವಲ ರಾಷ್ಟ್ರೀಯತೆಗೆ ಪ್ರೇರಕವಾಗಿತ್ತು, ಹಿಟ್ಲರ್, ಮುಸೋಲನಿಯಂತಹವರ ನೇತೃತ್ವದಲ್ಲಿ ಬೆಳೆದ ಈ ಉಗ್ರಸ್ವರೂಪದ ಆರ್ಥಿಕ ರಾಷ್ಟ್ರೀಯತೆಯು ಶಾಂತಿ, ಸಮೃದ್ಧಿ, ಉತ್ತಮ ಜೀವನಧ್ಯೇಯಗಳನ್ನು ಬದಿಗೊತ್ತಿ, ಪ್ರಪಂಚವನ್ನು ಘೋರಯುದ್ಧಕ್ಕೆ ಎಳೆದೊಯ್ಯಲು ಕಾರಣವಾಯಿತು.

ಯುದ್ಧಮನೋಭಾವ ಬೆಳೆದಿದ್ದ ಆ ಪರಿಸ್ಥಿತಿಯಲ್ಲಿ ಅನೇಕ ಪ್ರಮುಖರಾಷ್ಟ್ರಗಳು, ಕೆಲವು ಆವಶ್ಯಕ ಸರಕುಗಳ ಬಗ್ಗೆ ಸ್ವಸಂಪೂರ್ಣತೆ ಹೊಂದುವ ಉದ್ದೇಶದಿಂದ ಆರ್ಥಿಕ ರಾಷ್ಟ್ರೀಯತಾ ನೀತಿಯನ್ನು ಅನುಸರಿಸಿದವು. ಈ ವಿಧದ ಆರ್ಥಿಕ ರಾಷ್ಟ್ರೀಯತೆ ಇಂದಿನ ಪ್ರಪಂಚದಲ್ಲೂ ಇರುವುದನ್ನು ಕಾಣಬಹುದು. ಪ್ರಪಂಚದಲ್ಲಿ ವಿವಿಧ ಶಕ್ತಿಕೂಟಗಳೊಳಗೆ ರಾಜಕೀಯ ರಾಜತಾಂತ್ರಿಕ ಪೈಪೋಟಿ ಇರುವವರೆಗೂ ಹಿರಿಯ ರಾಷ್ಟ್ರಗಳು ಸೈನಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಆಸಕ್ತಿ ಹೊಂದಿರುವವರೆಗೂ ಇಂಥ ರಾಷ್ಟ್ರೀಯತಾ ಭಾವನೆ ತಪ್ಪದು. ಅಣುಶಕ್ತಿರಾಷ್ಟ್ರವಾಗಬೇಕೆಂಬ ಆಕಾಂಕ್ಷೆಯಿಂದ ಕೆಲವು ರಾಷ್ಟ್ರಗಳು ರಾಷ್ಟ್ರೀಯತಾ ಮನೋಭಾವವನ್ನು ವಿಶೇಷವಾಗಿ ಪೋಷಿಸುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಈ ಮನೋಭಾವ ಒಂದು ರೀತಿಯಲ್ಲಿ ಪೂರ್ವದ ವಾಣಿಜ್ಯಪಂಥದ ನೀತಿಯ ಆಧುನಿಕ ಸ್ವರೂಪವೆಂದು ಹೇಳಬಹುದು.

1930ರ ದಶಕದಲ್ಲಿ ಘೋರ ಆರ್ಥಿಕ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳಲು ಅನೇಕ ಪ್ರಮುಖ ರಾಷ್ಟ್ರಗಳು ಅನುಸರಿಸಿದ ಕ್ರಮಗಳನ್ನು ತೀವ್ರ ಆರ್ಥಿಕ ರಾಷ್ಟ್ರೀಯತೆಯ ಇನ್ನೊಂದು ಸ್ವರೂಪವೆಂದು ಹೇಳಬಹುದು. ಅಮೆರಿಕದ ರಕ್ಷಣಾ ವಾಣಿಜ್ಯನೀತಿ, ಬ್ರಿಟನ್ ಪೌಂಡಿನ ಮೌಲ್ಯ ಇಳಿತಾಯ ಮಾಡಿದುದು ಹಾಗೂ ಸುಂಕನಿರ್ಬಂಧಗಳನ್ನು ಬಿಗಿಗೊಳಿಸಿದುದು, ಐರೋಪ್ಯ ರಾಷ್ಟ್ರಗಳು ಕೈಗೊಂಡ ವ್ಯವಸಾಯ ರಕ್ಷಣಾನಿಧಿ ಮತ್ತು ವಿದೇಶಿವಿನಿಮಯದ ಅನೇಕ ರೀತಿಯ ನಿಯಂತ್ರಣಗಳು ಇತ್ಯಾದಿ ಆರ್ಥಿಕ ಪುನರುಜ್ಜೀವನ ಕ್ರಮಗಳು ಕೇವಲ ವರ್ತಮಾನದೃಷ್ಟಿ ಹಾಗೂ ರಾಷ್ಟ್ರೀಯತಾ ಭಾವನೆಯಿಂದ ಕೈಗೊಂಡ ಕ್ರಮಗಳಾಗಿದ್ದುವು. ಒಂದೊಂದು ದೇಶವೂ ಅದರ ಅವಸರದ ನಿರುದ್ಯೋಗ ಸಮಸ್ಯೆಯನ್ನೇ ಪ್ರಧಾನವಾಗಿ

ಚಿಂತಿಸಿದ್ದು ಸ್ವಾಭಾವಿಕವೆನ್ನಬಹುದು. ಆದರೆ ನೆರೆರಾಷ್ಟ್ರದವರು ಭಿಕ್ಷುಕರಾದರೂ ಪರವಾಗಿಲ್ಲ ನಮ್ಮ ರಾಷ್ಟ್ರದ ಜನರು ಸಂಪದ್ಯುಕ್ತರಾದರೆ ಸರಿ ಎಂಬ ಧೋರಣೆ ಸಾಧುವೆಂದು ಹೇಳಲಾಗುವುದಿಲ್ಲ. ಈ ರೀತಿಯ ಆರ್ಥಿಕ ರಾಷ್ಟ್ರೀಯತೆ ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧಗಳನ್ನು ಹೊಂದಿಕೆಯ ಪಥದಲ್ಲಿ ಕೊಂಡೊಯ್ಯಲಿಲ್ಲವೆಂದು ಹೇಳಬಹುದು.

ಹೀಗೆ ಎರಡು ಮಹಾಯುದ್ಧಗಳ ಮಧ್ಯಕಾಲದಲ್ಲಿ ಅನೇಕ ಶಕ್ತಿಗಳಿಂದ ಪ್ರೇರಿತವಾಗಿ ಆರ್ಥಿಕರಾಷ್ಟ್ರೀಯತೆ ವಿವಿಧ ಸ್ವರೂಪಗಳನ್ನು ತಾಳಿತು. 19ನೆಯ ಶತಮಾನದಲ್ಲಿ ರಚಿತವಾದ ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಶಿಥಿಲವಾಗಲು ಈ ರಾಷ್ಟ್ರೀಯತೆಯೇ ಕಾರಣ ಎಂದು ಕೆಲವರ ಅಭಿಪ್ರಾಯ. ಆದರೆ, ಎಚ್.ಡಬ್ಲ್ಯು. ಆರನ್ಸ್ ಹೇಳಿರುವಂತೆ ಅಂದಿನ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಅಂತಾರಾಷ್ಟ್ರೀಯ ಹಿತಾಸಕ್ತಿಗಳೊಡನೆ ಹೊಂದಿಸುವುದು ಎಷ್ಟರ ಮಟ್ಟಿಗೆ ಸಾಧ್ಯವಿತ್ತು ಎಂಬುದು ಚರ್ಚಾಸ್ಪದ ವಿಷಯ. ಹಿರಿಯ ಬಂಡವಾಳಶಾಹಿ ರಾಷ್ಟ್ರಗಳ ಆರ್ಥಿಕತೆಗಳಲ್ಲಿ ಆಂತರಿಕ ಅಸ್ಥಿಮಿತತೆ ಮತ್ತು ಪ್ರಪಂಚ ಹಣಕಾಸುವ್ಯವಸ್ಥೆಯ ಲೋಪದೋಷಗಳ ಪರಿಣಾಮವಾಗಿ ಅಂತಾರಾಷ್ಟ್ರೀಯ ಆರ್ಥಿಕ ಹಿನ್ನೆಲೆ ತೀವ್ರವಾಗಿ ಬದಲಾಯಿಸಿತ್ತು. ಹಿಂದಿನ ಸ್ವರ್ಣಪ್ರಮಿತಿ ಕುಸಿದುದರಿಂದ ವಿವಿಧ ರಾಷ್ಟ್ರಗಳ ಆರ್ಥಿಕತೆಗಳನ್ನು ಒಂದು ವ್ಯೂಹದಲ್ಲಿ ಇಡಬಲ್ಲ ಮುಖ್ಯ ಯಂತ್ರವಿಲ್ಲದಂತಾಯಿತು. ಜೊತೆಗೆ ಆ ರಾಷ್ಟ್ರಗಳು ಘೋರ ಮುಗ್ಗಟ್ಟಿನ ತೆಕ್ಕೆಯಲ್ಲಿ ಸಿಕ್ಕಿಬಿದ್ದಿದ್ದುವು. ಹೀಗೆ ಕದಡಿದ ಈ ಆರ್ಥಿಕ ಪರಿಸ್ಥಿತಿಯಲ್ಲದೆ ರಾಜಕೀಯ ಅಭದ್ರತೆಯೂ ಉಂಟಾದ್ದರಿಂದ ಪ್ರಪಂಚದ ವಾತಾವರಣ ತೊಡಕಿನ ಸಮಸ್ಯೆಗಳಿಂದ ತುಂಬಿತ್ತು. ಇಂಥ ಸಂದರ್ಭಗಳಲ್ಲಿ ವಿವಿಧ ರಾಷ್ಟ್ರಗಳು ತಮ್ಮ ತಮ್ಮ ವಿಶೇಷ ಆಕಾಂಕ್ಷೆಗಳನ್ನೂ ಅವಸರದ ಸಮಸ್ಯೆಗಳನ್ನೂ ಪ್ರಧಾನವಾಗಿಟ್ಟುಕೊಂಡು ಕೈಗೊಂಡ ಕ್ರಮಗಳು ಮೇಲೆ ಹೇಳಿದ ವಿವಿಧ ಸ್ವರೂಪದ ರಾಷ್ಟ್ರೀಯತಾ ಕ್ರಮಗಳಾದುವು. ಆದರೆ ಒಟ್ಟಿನಲ್ಲಿ ಅಂಥ ರಾಷ್ಟ್ರೀಯತೆ ದೀರ್ಘಕಾಲಾವಧಿಯ ದೃಷ್ಟಿಯಿಂದ ಯಾವ ಹಿರಿಯ ಪ್ರಪಂಚ ಸಮಸ್ಯೆಯನ್ನೂ ಬಗೆಹರಿಸಲಿಲ್ಲವೆಂಬುದು ಅನುಭವವೇದ್ಯವಾಗಿದೆ.

ಆರ್ಥಿಕ ರಾಷ್ಟ್ರೀಯತೆಗೆ ಹಲವಾರು ಪ್ರೇರಕ ಶಕ್ತಿಗಳಿರುವುದನ್ನೂ ಅದು ವಿವಿಧ ಸ್ವರೂಪ ತಾಳಿರುವುದನ್ನೂ ಇವುಗಳಿಗನುಗುಣವಾಗಿ ವಿವಿಧ ಪರಿಣಾಮಗಳು ಉಂಟಾಗಿರುವುದನ್ನೂ ವಿವರಿಸಲಾಯಿತು. ವಿವಿಧ ರಾಷ್ಟ್ರಗಳ ಹಿತಾಸಕ್ತಿಗಳು ಭಿನ್ನಭಿನ್ನವಾಗಿರುವ ಮತ್ತು ಅವು ಅಂತಾರಾಷ್ಟ್ರೀಯ ಹಿತಾಸಕ್ತಿಗಳೊಡನೆ ಸಮ್ಮಿಳಿತಗೊಳಿಸಲು ಸಾಧ್ಯವಾಗದ ಪರಿಸ್ಥಿತಿಯಿರುವವರೆಗೆ ಒಂದಲ್ಲ ಒಂದು ರೀತಿಯ ಆರ್ಥಿಕ ರಾಷ್ಟ್ರೀಯತೆ ತಲೆದೋರುವುದು ಅನಿವಾರ್ಯ. ಇಂದಿನ ಪ್ರಪಂಚದಲ್ಲಿ ಅಂತಾರಾಷ್ಟ್ರೀಯ ಸಹಕಾರಯಂತ್ರವಾದ ವಿಶ್ವಸಂಸ್ಥೆಯ ಆಶ್ರಯದಲ್ಲಿ ಅಂತಾರಾಷ್ಟ್ರೀಯತೆ ರೂಪುಗೊಳ್ಳುತ್ತಿದೆ. ಅದರ ಸದಸ್ಯರಾಷ್ಟ್ರಗಳು ಉದಾತ್ತ ಆರ್ಥಿಕನೀತಿಗಳ ಧ್ಯೇಯವನ್ನು ಒಪ್ಪಿಕೊಂಡಿವೆ. ಆದರೂ ಆರ್ಥಿಕ ಸ್ವಸಂಪೂರ್ಣತೆಯ ಹಂಬಲ, ತೀವ್ರ ಆರ್ಥಿಕಾಭಿವೃದ್ಧಿಯ ಆಕಾಂಕ್ಷೆ, ಕಮ್ಯೂನಿಸಂ ಧ್ಯೇಯ, ವಸಾಹತುಶಾಹಿ ವಿರೋಧ ಇತ್ಯಾದಿ ಪ್ರೇರಕಶಕ್ತಿಗಳು, ವಿವಿಧ ರೀತಿಯ ಆರ್ಥಿಕರಾಷ್ಟ್ರೀಯತೆಗೆ ಪೋಷಕವಾಗಿ ನಿಂತಿವೆ. ಅಂತಾರಾಷ್ಟ್ರೀಯ ವೈಮನಸ್ಯವನ್ನು ಬೆಳೆಸದೆ, ಈ ಆರ್ಥಿಕ ರಾಷ್ಟ್ರೀಯತೆ ಕೇವಲ ಅಭಿವೃದ್ಧಿಗೆ ಪೋಷಕವಾಗಿರುವುದಾದರೆ, ಅದು ಅಪೇಕ್ಷಣೀಯ ಶಕ್ತಿಯಾಗುತ್ತದೆ. ಮಿತಿಮೀರಿದರೆ ರಾಷ್ಟ್ರಗಳೊಳಗೆ ವೈಮನಸ್ಯ, ಕಲಹ, ದುಷ್ಪರಿಣಾಮಗಳು ಉಂಟಾಗಿ ಆರ್ಥಿಕರಾಷ್ಟ್ರೀಯತೆ ಸಾರ್ವತ್ರಿಕವಾಗಿ ಅನಿಷ್ಟಕರವಾಗಬಹುದು. (ಎ.ಸಿ.ಎಸ್.)

**ಆರ್ಥಿಕ ಸಂಖ್ಯಾಶಾಸ್ತ್ರ :** ಅರ್ಥವಿಜ್ಞಾನವೇ ಮೊದಲಾದ ಸಮಾಜಶಾಸ್ತ್ರಗಳ ಕೆಲವು ಕ್ಲಿಷ್ಟ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಹೊಸದಾದ ಫಲಗಳನ್ನು ತರ್ಕದ ರೀತಿಯಲ್ಲಿ ಸಿದ್ಧಗೊಳಿಸಲು ಸಂಖ್ಯಾಶಾಸ್ತ್ರದ ನೆರವಿನಿಂದ ಮಾಡುವ ಅಭ್ಯಾಸ (ಎಕನಾಮಿಕ್ ಸ್ಟ್ಯಾಟಿಸ್‌ಟ್ರಿಕ್ಸ್). ಸಂಖ್ಯಾಶಾಸ್ತ್ರದ ಸಿದ್ಧಾಂತಗಳನ್ನೂ ಶೋಧನಾ ಕ್ರಮಗಳನ್ನೂ ಪ್ರಯೋಗ ಮಾಡಿ ಇತರ ಶಾಸ್ತ್ರಗಳ ಬೆಳೆವಣಿಗೆಯನ್ನು ತೀವ್ರಗೊಳಿಸಬಹುದು. ಅಂಥ ಪ್ರಯೋಗಗಳು ಅರ್ಥವಿಜ್ಞಾನಕ್ಕೆ ಯಾವ ರೀತಿ ಅನ್ವಯಿಸುವುವು ಮತ್ತು ಯಾವ ಫಲವನ್ನು ದೊರಕಿಸಿ ಕೊಡಬಹುದು ಎಂಬುದನ್ನು ಇಲ್ಲಿ ಪರಿಶೀಲಿಸಲಾಗಿದೆ.

ರಾಜ್ಯಾಡಳಿತದಲ್ಲಿ ಆನುಷಂಗಿಕವಾಗಿ ಆರ್ಥಿಕ ಮತ್ತು ಸಾಮಾಜಿಕ, ಔದ್ಯೋಗಿಕ ಮತ್ತು ವಾಣಿಜ್ಯ ಮುಂತಾದ ಕ್ಷೇತ್ರಗಳಿಗೆ ಸಂಬಂಧಪಟ್ಟ ಅಂಕಿಅಂಶಗಳು ಹೇರಳವಾಗಿ ಶೇಖರಣೆಯಾಗುತ್ತವೆ. ಕೃಷಿ ಮತ್ತು ಹೈನುಗಳಿಂದ ಉತ್ಪತ್ತಿ, ಖನಿಜ ಪದಾರ್ಥಗಳ ಎತ್ತುವಳಿ, ಕಾರ್ಖಾನೆಗಳ ಹುಟ್ಟುವಳಿ, ವ್ಯಾಪಾರ ಮತ್ತು ಸಂಚಾರ ಸಾರಿಗೆಗಳ ಮಾಹಿತಿ, ತೆರಿಗೆಗಳು ಮತ್ತು ಸುಂಕಗಳ ವಸೂಲಿ, ಹೊರನಾಡುಗಳೊಡನೆ ನಡೆಸುವ ವ್ಯಾಪಾರದ ಮೊಬಲಗು, ನಿರುದ್ಯೋಗಿಗಳ ಸಂಖ್ಯೆ ಮುಂತಾದ ಅನೇಕ ತರಹದ ಸಂಖ್ಯಾತ್ಮಕ ವಿವರಗಳು ಆಡಳಿತದ ಉಪಫಲವಾಗಿ (ಬೈಪ್ರಾಡಕ್ಟ್) ದೊರೆಯುತ್ತವೆ. ಹಲಕೆಲವು ವಿಶಿಷ್ಟ ಸಂಶೋಧನೆ ಮತ್ತು ಅಧ್ಯಯನಕ್ಕಾಗಿ ನಡೆಸುವ ತಪಾಸಣೆಗಳಿಂದಲೂ (ಇನ್‌ಕ್ವೈರಿ) ಅಂಕಿಸಂಖ್ಯೆಗಳು ದೊರೆಯುತ್ತವೆ. ಜನಗಣತಿ, ಜಾನುವಾರು ಗಣತಿ, ಔದ್ಯೋಗಿಕ ಹುಟ್ಟುವಳಿಯ ಗಣತಿ ಮೊದಲಾದುವು ಈ ವರ್ಗಕ್ಕೆ ಸೇರಿದವು.

ಭಾರತದ ಕೇಂದ್ರ ಸರ್ಕಾರದ ಕೇಂದ್ರೀಯ ಸಾಂಖ್ಯಿಕೀಯ ಸಂಸ್ಥೆ, ಆರ್ಥಿಕ ಮತ್ತು ಇತರ ಅಂಕಿಅಂಶಗಳನ್ನು ಶೇಖರಿಸಿ, ಅವುಗಳನ್ನು ವರ್ಗೀಕರಿಸಿ ಭಾರತದ ಸಾಂಖ್ಯಿಕೀಯ ಗೋಷ್ವಾರೆ (ಸ್ಟ್ಯಾಟಿಸ್ಟಿಕಲ್ ಅಬ್‌ಸ್ಟ್ರಾಕ್ಟ್ ಆಫ್ ಇಂಡಿಯ) ಎಂಬ ಅಭಿಧಾನದ ಪ್ರಕಟಣೆಯನ್ನು ವರ್ಷಂಪ್ರತಿ ಮಾಡುತ್ತಲಿದೆ. ಈ ಪ್ರಕಟಣೆಯ ಮೂಲಕ ದೇಶದ ಆರ್ಥಿಕ ಯೋಜನೆಗೆ ಬೇಕಾದ ಮೂಲಸಾಮಗ್ರಿಗಳು ಕಾಲಕಾಲಕ್ಕೆ ದೊರೆಯುವಂತಾಗುತ್ತದೆ. ಅರ್ಥಶಾಸ್ತ್ರಜ್ಞರಿಗೂ ಇತರ ಸಂಶೋಧಕರಿಗೂ ಇವು ಬಹಳ ಅಗತ್ಯ. ಆರ್ಥಿಕನೀತಿ ಮತ್ತು ಯೋಜನೆಗಳ ಸಫಲತೆ ಮೊದಲಾದುವುಗಳನ್ನು ನಿರ್ಧರಿಸಲು ಇದು ಬಹಳ ಉಪಯೋಗವಾಗುವುದು. ಆರ್ಥಿಕಕ್ಷೇತ್ರಕ್ಕೆ ಸಂಬಂಧಿಸಿದ ಯಾವ ಗೋಷ್ವಾರೆಗಳು ಹೊರಬೀಳುತ್ತವೆ ಮತ್ತು ಅವುಗಳನ್ನು ಹೇಗೆ ಬಳಸಬಹುದು ಎಂಬುದನ್ನು ಕುರಿತು ಸಂಕ್ಷಿಪ್ತವಾಗಿ ಇಲ್ಲಿ ವಿಮರ್ಶಿಸಲಾಗಿದೆ.

**1. ದೇಶದ ವಿಸ್ತೀರ್ಣ ಮತ್ತು ಜನಸಂಖ್ಯೆ :** ಇದು ಎಲ್ಲ ವಿಧವಾದ ಯೋಜನೆಗಳಿಗೂ ತಳಹದಿಯಂಥ ಅಂಶ. ಗ್ರಾಮಾಂತರಗಳಲ್ಲೂ ಪಟ್ಟಣವಾಸಗಳಲ್ಲೂ ಯಾವ ಪ್ರಮಾಣದ ಜನತೆ ಹೆಚ್ಚಿದೆ, ಜನನಿಬಿಡವಾದ ಪ್ರದೇಶಗಳಾವುವು, ದೇಶದ ಜನಸಂಖ್ಯೆ ಯಾವ ಪ್ರಮಾಣದಲ್ಲಿ ಹೆಚ್ಚುತ್ತಲಿದೆ, ಯಾವ ರಾಜ್ಯಗಳಲ್ಲಿ ಜನವೃದ್ಧಿಯ ಪ್ರಮಾಣ ಆತಂಕಕಾರಿಯಾಗಿ ಏರುತ್ತಿದೆ ಇವೇ ಮುಂತಾದ ವಿಷಯಗಳನ್ನು ಈ ಅಂಕಿಸಂಖ್ಯೆಗಳಿಂದ ತಿಳಿಯಬಹುದಾಗಿದೆ. ಭಾರತದ ವಿಸ್ತೀರ್ಣ 32.76 ಲಕ್ಷ ಚದರ ಕಿಲೋಮಿಟರುಗಳು (12.6 ಲಕ್ಷ ಮೈಲಿಗಳು) ಇರುವುದು, ಮತ್ತು ಮೇ 11, 2000ರಲ್ಲಿ ಭಾರತದ ಜನಸಂಖ್ಯೆ 1 ಬಿಲಿಯನ್ ತಲುಪಿತು. ವಿಸ್ತೀರ್ಣದಲ್ಲಿ ಎಲ್ಲಕ್ಕಿಂತ ದೊಡ್ಡ ರಾಜ್ಯವೆಂದರೆ ರಾಜಸ್ತಾನ (342,236 ಚ ಕಿ.ಮೀ) ಅನಂತರ ಮಧ್ಯಪ್ರದೇಶ 308,144 ಚದರ ಕಿಲೋಮೀಟರುಗಳು). ಎಲ್ಲಕ್ಕಿಂತ ಕಡಿಮೆ ವಿಸ್ತೀರ್ಣದ ಎರಡು ರಾಜ್ಯಗಳೆಂದರೆ, ಕೇರಳ (863ಚದರ ಕಿಲೋಮೀಟರುಗಳು), ಮತ್ತು ಪಶ್ಚಿಮ ಬಂಗಾಲ (88,752 ಚದರ ಕಿಲೋಮೀಟರುಗಳು), ಕರ್ನಾಟಕ ರಾಜ್ಯದ ವಿಸ್ತೀರ್ಣ 197,791 ಚದರ ಕಿಲೋಮೀಟರುಗಳು.

ಜನಸಂಖ್ಯೆಯಲ್ಲಿ ಎಲ್ಲಕ್ಕಿಂತ ದೊಡ್ಡ ರಾಜ್ಯ ಉತ್ತರಪ್ರದೇಶ (166,19800) ಎರಡನೆಯದು ಮಹಾರಾಷ್ಟ್ರ (96,87900 ಲಕ್ಷ), ಮೂರನೆಯದು ಬಿಹಾರ (82,999000 ಲಕ್ಷ), ಮತ್ತು ನಾಲ್ಕನೆಯದು ಪಶ್ಚಿಮ ಬಂಗಾಲ (80,76000 ಲಕ್ಷ).

**2. ಜನವೃದ್ಧಿಯ ದರ :** ಹಿಂದಿನ ಜನಗಣತಿಯ ಅಂಕಿಸಂಖ್ಯೆಗಳ ಆಧಾರದ ಮೇಲೆ ಯಾವ ದರದಲ್ಲಿ ಜನವೃದ್ಧಿ ಆಗುತ್ತಲಿದೆ ಎಂದು ತಿಳಿಯುವುದು ಮತ್ತೊಂದು ಮುಖ್ಯ ವಿಷಯ. ರಾಷ್ಟ್ರದ ಜನಬಲ ಹೇಗೆ ಉಳಿಯುತ್ತಿದೆ, ವಾಂಛನೀಯ ದರಕ್ಕಿಂತ ಹೆಚ್ಚೋ ಕಡಿಮೆಯೋ, ಇದಕ್ಕನುಸಾರವಾಗಿ ಆರ್ಥಿಕ ಯೋಜನೆಗಳಲ್ಲಿ ಏನೇನು ಮಾರ್ಪಾಡುಗಳನ್ನು ಮಾಡಬೇಕು ಎನ್ನುವುದನ್ನೆಲ್ಲ ವಿಮರ್ಶಿಸಬೇಕಾಗುವುದು.

1941–51ರ ದಶಕದಲ್ಲಿ ಭಾರತದ ಜನಸಂಖ್ಯೆ 31.9 ಕೋಟಿಯಿಂದ 36.1 ಕೋಟಿ ಹೆಚ್ಚಿತು. ಅಂದರೆ ಶೇ.13.3 ವೃದ್ಧಿಹೊಂದಿತು. ಮುಂದಿನ ದಶಕದಲ್ಲಿ 36.1 ಕೋಟಿಯಿಂದ 43.8 ಕೋಟಿಗೆ ಹೆಚ್ಚಿತು ಮತ್ತು ಹೆಚ್ಚಿಗೆಯ ದರ ದಶಕದಲ್ಲಿ ಶೇ.21.5 ಏರಿತು. ಹೆಚ್ಚಿನ ದರದಲ್ಲಿ ಜನಸಂಖ್ಯೆ ಬೆಳೆದಿರುವ ರಾಜ್ಯಗಳೆಂದರೆ ಅಸ್ಸಾಂ ಶೇ.34.5, ಪಶ್ಚಿಮ ಬಂಗಾಲ ಶೇ.32.8, ಗುಜರಾತ್ ಶೇ.26.9 ಮತ್ತು ರಾಜಸ್ಥಾನ ಶೇ.26.2. ಕರ್ನಾಟಕ ರಾಜ್ಯದ ಜನಸಂಖ್ಯೆ ಶೇ.21.6 ಬೆಳೆದಿದೆ.

ಬಹುಶಃ ಇದೇ ದರದಲ್ಲಿ ಮುಂದೆಯೂ ದೇಶದ ಜನಸಂಖ್ಯೆ ಹೆಚ್ಚುತ್ತಲಿದೆ ಎನ್ನಬಹುದು. 2011ರಲ್ಲಿ 1,193,458,000ರಷ್ಟು ಆಗುವುದೆಂದು ಅಂದಾಜು ಮಾಡಿದ್ದಾರೆ. ಇಷ್ಟು ಜನಕ್ಕೂ ಆಹಾರ ಪದಾರ್ಥಗಳನ್ನೂ ಸುಖದ ಬಾಳುವೆಗೆ ಬೇಕಾದ ಇತರ ಸಾಮಗ್ರಿಗಳನ್ನೂ ಸೌಲಭ್ಯಗಳನ್ನೂ ಒದಗಿಸಲು ನಾಡಿನಲ್ಲಿ ಯೋಜನೆಗಳನ್ನು ಅಳವಡಿಸ ಬೇಕಾಗುವುದು. ಅಲ್ಲದೆ ಜನಸಂಖ್ಯೆಯನ್ನು ಹತೋಟಿಗೆ ತರಲು ಮಿತ ಸಂತಾನ, ಕುಟುಂಬ ಯೋಜನಾಕ್ರಮ ಮೊದಲಾದವುಗಳಿಂದ ಜನಸಂಖ್ಯಾ ನಿಯಂತ್ರಣ ಮಾಡಬೇಕಾಗುವುದು.

**3. ಪುರುಷ–ಸ್ತ್ರೀ ನಿಷ್ಪತ್ತಿ :** ಜನಸಂಖ್ಯೆಯ ವೃದ್ಧಿ ತರುಣಸ್ತ್ರೀಯರ ಸಂಖ್ಯೆಯನ್ನು ಅವಲಂಬಿಸಿರುವುದರಿಂದ ಜನತೆಯಲ್ಲಿ ಪುರುಷ–ಸ್ತ್ರೀಯರ ಪ್ರಮಾಣವನ್ನು ಪರಿಶೀಲಿಸಬೇಕಾಗುವುದು. 1961ರ ಜನಗಣತಿಯ ಅಂಕಿಅಂಶಗಳ ಮೇರೆಗೆ ಭಾರತ ದೇಶದಲ್ಲಿ 1000 ಪುರುಷರಿಗೆ 941 ಸ್ತ್ರೀಯರು ಇದ್ದರು. 2001ರಲ್ಲಿ 1000 ಪುರುಷರಿಗೆ 933 ಸ್ತ್ರೀಯರಿದ್ದರು. ಒಟ್ಟಿನಲ್ಲಿ ಹೇಳುವುದಾದರೆ, 1000 ಗಂಡಸರಿದ್ದರೆ 943 ಹೆಂಗಸರಿರುವರು. ಈ ಪ್ರಮಾಣಕ್ಕೆ ಪುರುಷ–ಸ್ತ್ರೀಯರ ನಿಷ್ಪತ್ತಿ ಎಂದು ಹೆಸರು. ಕರ್ನಾಟಕ ರಾಜ್ಯದಲ್ಲಿ ಈಗ ಪುರುಷ–ಸ್ತ್ರೀಯರ ಪ್ರಮಾಣ 1000ಕ್ಕೆ 964 ಇರುವುದು. ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ದೇಶಗಳಲ್ಲಿ ಪುರುಷ–ಸ್ತ್ರೀಯರ ಪ್ರಮಾಣ 1000ಕ್ಕಿಂತ ಹೆಚ್ಚಿರುವುದು. ಆದರೆ ಭಾರತದಲ್ಲೂ ಮತ್ತು ಇತರ ಕೆಲವು ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಲ್ಲೂ ಇದು ಕಡಿಮೆಯಾಗಿರುವುದು. ಭಾರತ ದೇಶದಲ್ಲಿ 1941ರಲ್ಲಿ ನಡೆದ ಜನಗಣತಿಯ ಪ್ರಕಾರ ಈ ಪುರುಷ–ಸ್ತ್ರೀ ಪ್ರಮಾಣ 945 ಆಗಿದ್ದು 1951ರಲ್ಲಿ 946 ಆಯಿತು. 1961ರಲ್ಲಿ ಮತ್ತೆ ಸ್ವಲ್ಪ ಇಳಿಮುಖವಾಗಿ 941ಕ್ಕೆ ಬದಲಾಯಿಸಿತು. 2001ರಲ್ಲಿ 933 ಆಗಿದೆ. ಈ ವಿಧದ ಬದಲಾವಣೆಗೆ ಖಚಿತವಾದ ಕಾರಣಗಳಾವುವೂ ತಿಳಿದುಬಂದಿಲ್ಲ.

**4. ವಯೋನಿಷ್ಪತ್ತಿ** : ರಾಷ್ಟ್ರದ ಜನಸಮೂಹದಲ್ಲಿ ವಯೋಮಾನದ ವಿತರಣೆ ಹೇಗಿದೆ ಎಂದು ತಿಳಿಯುವುದೂ ಅಗತ್ಯ. ವಯೋಮಾನಕ್ಕನುಸಾರವಾಗಿ ಜನರನ್ನು ನಾಲ್ಕು ಸ್ಥೂಲ ಸಮೂಹಗಳನ್ನಾಗಿ ವಿಭಾಗಿಸಬಹುದು. ಹೇಗೆಂದರೆ: 0–14 ವರ್ಷ, 15–34 ವರ್ಷ, 35–54 ವರ್ಷ ಮತ್ತು ಅಧಿಕ ವಯಸ್ಸಿನವರು. ವಯೋಮಾನ ವಿತರಣೆಯನ್ನು ಶತಕಾಂಶ ಪ್ರಮಾಣದಲ್ಲಿ ಕೆಳಕಂಡಂತೆ ಕೋಷ್ಟಕ ರೂಪದಲ್ಲಿ ಪ್ರದರ್ಶಿಸಬಹುದು. ತುಲನಾತ್ಮಕ ವಿಮರ್ಶೆಗಾಗಿ ಇತರ ಕೆಲವು ದೇಶಗಳ ಅಂಕಿ ಸಂಖ್ಯೆಗಳನ್ನೂ ಕೊಟ್ಟಿದೆ.

ಶತಾಂಶ ವಯೋಮಾನ ವಿತರಣೆ

ವಯೋಮಿತಿ

| ದೇಶ | 0–14 | 15–29 | 30–54 | | 55+ |
|---|---|---|---|---|---|
| ಭಾರತ | 1961 | 50.9 | 29.2 | 15.0 | 4.9 |
| ಭಾರತ | 1951 | 38.3 | 33 | 20.4 | 8.3 |
| ಕರ್ನಾಟಕ ರಾಜ್ಯ | 1951 | 39.0 | 35.7 | 19.0 | 6.3 |
| ಅಮೆರಿಕ ಸಂಯುಕ್ತ ಸಂಸ್ಥಾನ | | 27.1 | 30.4 | 25.6 | 16.9 |

ಮುಂದುವರಿದ ದೇಶಗಳಲ್ಲಿ ವಯೋವೃದ್ಧರು ಹೆಚ್ಚು ಪ್ರಮಾಣದಲ್ಲಿರುವರು. ಅಲ್ಲಿಯ ಜನರು ದೃಢಕಾಯರಾಗಿ ದೀರ್ಘಜೀವಿಗಳಾಗಿರುವುದೇ ಇದಕ್ಕೆ ಕಾರಣ. ಚಿಕ್ಕ ವಯಸ್ಸಿನವರ (0–14 ವಯಸ್ಸಿನವರ) ಪ್ರಮಾಣವೂ ಅವರಲ್ಲಿ ಕಡಿಮೆ. ನಮ್ಮಲ್ಲಿ ಇದಕ್ಕೆ ನೇರೆದುರಾಗಿ ಚಿಕ್ಕ ವಯಸ್ಸಿನವರ ಪ್ರಮಾಣ ಹೆಚ್ಚಾಗಿಯೂ ವೃದ್ಧರ ಪ್ರಮಾಣ ಕಡಿಮೆಯಾಗಿಯೂ ಇರುವುದು.

**5. ಜನತೆಯ ಆರ್ಥಿಕ ವರ್ಗೀಕರಣ** : ರಾಷ್ಟ್ರದ ಸಂಪದಭಿವೃದ್ಧಿಯನ್ನು ಪರಿಶೀಲಿಸ ಬೇಕಾದರೆ, ದೇಶಾದ್ಯಂತ ಅರ್ಥ ಸಂಪಾದನೆಯಲ್ಲಿ ತೊಡಗಿರುವವರು ಎಷ್ಟು ಜನ, ಕಸಬು ಮತ್ತು ಇತರ ವೃತ್ತಿಗಳಿಂದ ಸಂಪಾದನೆ ಇಲ್ಲದಿರುವವರು ಎಷ್ಟು ಜನ ಎಂದು ತಿಳಿಯಬೇಕು. ಇದಕ್ಕೆ ಸಂಬಂಧಪಟ್ಟ ಅಂಕಿಅಂಶಗಳನ್ನು ಜನಗಣತಿಯ ಸಮಯದಲ್ಲಿ ಶೇಖರಿಸಲಾಗುವುದು. ಆರ್ಥಿಕ ಪ್ರಗತಿಯನ್ನು ಒರೆಹಚ್ಚಬೇಕಾದರೆ, ರಾಷ್ಟ್ರದ ಜನರು ಶೇಕಡಾವಾರು ಯಾವ ಪ್ರಮಾಣದಲ್ಲಿ ವಿವಿಧ ಉದ್ಯೋಗಗಳಲ್ಲೂ ಕಸುಬುಗಳಲ್ಲೂ ವೃತ್ತಿಗಳಲ್ಲೂ ತೊಡಗಿರುವರು ಎಂಬುದನ್ನು ಈ ಅಂಕಿ ಸಂಖ್ಯೆಗಳು ತಿಳಿಸುತ್ತವೆ. ಈ ದೃಷ್ಟಿಯಿಂದ ಅಧ್ಯಯನ ಮಾಡಲು ಅನುಕೂಲಿಸುವಂತೆ ವೃತ್ತಿ ಅಥವಾ ಉದ್ಯೋಗದ ಮೇರೆಗೆ ಜನಸಂಖ್ಯೆಯ ವಿತರಣೆಯನ್ನು ಜನಗಣತಿಯ ವರದಿಯಲ್ಲಿ ಕೊಡಲಾಗುತ್ತದೆ. ಮುಖ್ಯವಾದ ಆರ್ಥಿಕ ಸಂಪಾದನೆಯ ವೃತ್ತಿಗಳನ್ನು ಹೀಗೆ ವಿಂಗಡಿಸಿರುವರು: 1. ಸಾಗುವಳಿದಾರರು 2. ವ್ಯವಸಾಯ ಕಾರ್ಮಿಕರು 3. ಖನಿಜಗಳ ಕೆಲಸ, ಕಾಡುಗಳಲ್ಲಿ ಬೇಟೆಯಾಡುವುದು, ಮರಗಳನ್ನು ಕಡಿಯುವುದು, ಪ್ಲಾಂಟೇಷನ್ ಕೆಲಸ, ದನಕರುಗಳ ವ್ಯಾಪಾರ, ಹೈನು ವ್ಯಾಪಾರ, ಮೀನುಗಾರಿಕೆ 4. ಕುಟುಂಬ ಕೈಗಾರಿಕೆಯಲ್ಲಿ ಕೆಲಸ 5. ಸರಕು ತಯಾರು ಮಾಡುವ ಇತರ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು 6. ಕಟ್ಟಡಗಳ ನಿರ್ಮಾಣ 7. ವಾಣಿಜ್ಯ ಮತ್ತು ವ್ಯಾಪಾರ 8. ಸಾರಿಗೆ ಸಂಚಾರ ಮತ್ತು ವಾಹನ, ವಹಿವಾಟು ಮತ್ತು 9. ಇತರ ನೌಕರಿ ಮತ್ತು ಸೇವೆಗಳು.

**6. ರಾಷ್ಟ್ರಾದಾಯ** : ಭಾರತದ ಕೇಂದ್ರೀಯ ಸಾಂಖ್ಯಿಕೀಯ ಸಂಸ್ಥೆ ರಾಷ್ಟ್ರಾದಾಯವನ್ನೂ ವರ್ಷವರ್ಷಕ್ಕೂ ಇದರಲ್ಲಾಗುವ ಬದಲಾವಣೆಯನ್ನೂ ಲೆಕ್ಕಾಚಾರ ಮಾಡಿ ಅಂಕಿಸಂಖ್ಯೆಗ ಳನ್ನು ಪ್ರಕಟಿಸುತ್ತದೆ. ರಾಷ್ಟ್ರಾದಾಯವನ್ನು ಉಗಮಸ್ಥಾನಕ್ಕೆ ಅನುಸಾರವಾಗಿ ವಿಂಗಡಿಸಿ ಗಣನೆ ಮಾಡುವುದು ರೂಢಿ. ಮುಖ್ಯವಾದ ಉಗಮಸ್ಥಾನಗಳೆಂದರೆ 1. ಒಕ್ಕಲುತನ : ಇದರಲ್ಲಿ ಸಾಗುವಳಿ, ದನಕರುಗಳು ಕುರಿ ಕೋಳಿ ಮುಂತಾದವುಗಳ ಸಾಕಣೆ, ಕಾಡಾಡಿ ಕಸುಬುಗಳು, ಪ್ಲಾಂಟೇಷನ್ ಕೆಲಸ ಮತ್ತು ಮೀನುಗಾರಿಕೆ ಇವೆಲ್ಲ ಸೇರಿವೆ. 2. ಖನಿಜಗಳ ಕೆಲಸ, ಸಿದ್ಧವಸ್ತು ತಯಾರಿಕೆ, ಗಿರಣಿ ಮತ್ತು ಸಣ್ಣ ಕೈಗಾರಿಕೆಗಳು, 3. ವ್ಯಾಪಾರ, ವಾಣಿಜ್ಯ, ಮಾರಾಟ, ಸಾರಿಗೆ ಸಂಚಾರ, ಸಾಗಾಣಿಕೆ ರೈಲು, ತಂತಿ ಟಪಾಲು, 4. ಸೇವೆ ಮತ್ತು ಕಲಾಕೃತಿಗಳು, ಸರಕಾರಿ ಉದ್ಯೋಗ, ಮನೆ ಊಳಿಗ, ಮನೆಮಠಗಳಿಂದ ಬರುವ ವರಮಾನ. ಹೀಗೆ ವಿಂಗಡಿಸಿದ ತರುವಾಯ ಚಾಲ್ತಿಯ ಧಾರಣೆಯ ಮೇರೆಗೆ ಇವುಗಳ ಒಟ್ಟು ಬೆಲೆಯನ್ನು ಲೆಕ್ಕ ಹಾಕಿ ರಾಷ್ಟ್ರಾದಾಯವನ್ನು ಪಡೆಯುತ್ತೇವೆ. ಇದರ ಜೊತೆಗೆ ಹೊರದೇಶಗಳಿಂದ ಬರತಕ್ಕ ವರಮಾನ ಅಥವಾ ಆದಾಯಗಳು ಏನಾದರೂ ಇದ್ದರೆ ಅದನ್ನೂ ಸೇರಿಸಿಕೊಳ್ಳಬೇಕು.

**7. ವ್ಯಕ್ತಿವರಮಾನದ ವಿತರಣೆ** : ರಾಷ್ಟ್ರಾದಾಯವನ್ನು ಕುರಿತು ಮೇಲೆ ಹೇಳಿದ್ದೇವೆ. ಇದು ರಾಷ್ಟ್ರಕ್ಕೆ ಸಮಷ್ಟಿಯಲ್ಲಿ ದೊರೆಯುವ ಆದಾಯವಾಗುವುದು. ಕೆಲಸಗಾರರಿಗೆ, ದುಡಿಯುವವರಿಗೆ ಇದರ ಯಾವ ಅಂಶ ಸಿಗುವುದು, ಅದರಲ್ಲಿ ಪ್ರತಿಯೊಬ್ಬರ ವರಮಾನವೂ ಎಷ್ಟು, ಲಕ್ಷಗಟ್ಟಲೆ ಸಂಪಾದಿಸುವವರು ಎಷ್ಟು ಮಂದಿ ಎಂದು ವಿಚಾರ ಮಾಡಬೇಕಾದ ಸಂದರ್ಭಗಳು ಒದಗುತ್ತವೆ. ಇದಕ್ಕೆ ವ್ಯಕ್ತಿವರಮಾನ ಎನ್ನಬಹುದು. ಸಮಾಜವಾದವನ್ನು ಗುರಿಯಾಗಿಟ್ಟುಕೊಂಡಿರುವ ರಾಷ್ಟ್ರದಲ್ಲಿ ವ್ಯಕ್ತಿವರಮಾನ ಆದಷ್ಟು ಸಮಾನವಾಗಿರಬೇಕು. ಅಂದರೆ ವ್ಯಕ್ತಿವರಮಾನ ಹಂಚಿಕೆ ಅಥವಾ ವಿತರಣೆಯಲ್ಲಿ ಹೆಚ್ಚಿನ ಏರುಪೇರುಗಳು ಇರಕೂಡದು. ಅಸಮತೆ ಆದಷ್ಟು ಕಡಿಮೆ ಇರಬೇಕು.

ವ್ಯಕ್ತಿವರಮಾನವನ್ನು ಕುರಿತು ಪರೇಟೊ ತಕ್ಕ ಮಾಹಿತಿಗಳನ್ನು ಶೇಖರಿಸಿ, ಪರಿಶೀಲಿಸಿದ್ದಾನೆ. ಅದರ ಫಲವಾಗಿ ಒಂದು ನಿಯಮವನ್ನು ನಿರೂಪಿಸಿದ್ದಾನೆ. ಇದಕ್ಕೆ ಪರೇಟೊ ನಿಯಮ ಎಂದು ಹೆಸರು. ಆದಾಯ x ಗಿಂತ ಹೆಚ್ಚು ಇರುವ ವ್ಯಕ್ತಿಗಳ ಸಂಖ್ಯೆಯು N ಆದರೆ, ಇವೆರಡಕ್ಕೂ ನಿರ್ದಿಷ್ಟವಾದ ಒಂದು ಸಂಬಂಧವಿರುವುದು. $N=cx^{a}$ ಎಂದು N ನ್ನು x ನ ಬೀಜಗಣಿತ ಉತ್ಪನ್ನವನ್ನಾಗಿ ನಿರೂಪಿಸಬಹುದು ಎಂಬುದೇ ಪರೇಟೊ ನಿಯಮ. ಇಲ್ಲಿ c ಮತ್ತು a ಪ್ರಾಚಲಗಳು; ಇವು ದೇಶ ಮತ್ತು ಕಾಲಕ್ಕೆ ಅನುಸಾರವಾಗಿ ಬೇರೆ ಬೇರೆ ಬೆಲೆಗಳನ್ನು ತಾಳುವುವು. a ಹೆಚ್ಚಾದರೆ ವ್ಯಕ್ತಿ ವರಮಾನದ ವಿತರಣೆಯ ಅಸಮತೆ ಕಡಿಮೆಯಾಗುವುದು. ಆದಾಯ ತೆರಿಗೆ ಮಾಹಿತಿಗಳ ಆಧಾರದ ಮೇಲೆ c ಮತ್ತು a ಇವುಗಳ ಬೆಲೆಗಳನ್ನು ಕಂಡುಹಿಡಿಯಬಹುದು.

**8. ನೆಲಹೊಲಗಳ ಉಪಯೋಗ** : ಸಾಗುವಳಿಗೆ ತಕ್ಕುದಾದ ಭೂಮಿಯನ್ನು ಪೂರ್ಣವಾಗಿ ಉಪಯೋಗಿಸಿ ಧಾನ್ಯ ಮತ್ತು ಇತರ ಪೈರುಗಳನ್ನು ಬೆಳೆದರೆ ದೇಶದಲ್ಲಿ ಸಮೃದ್ಧಿ ನೆಲೆಸುವುದು ಮತ್ತು ಸಂಪದಭಿವೃದ್ಧಿಗೆ ದಾರಿಯಾಗುವುದು. ನಮಗೆ ಬೇಕಾಗುವ ದವಸಧಾನ್ಯ ಗಳನ್ನು ನಾವೇ ಬೆಳೆಸಿಕೊಂಡು ನಮ್ಮ ರಾಷ್ಟ್ರದ ಜನರಿಗೆ ಸಾಕಷ್ಟು ಹಂಚಬಹುದು. ಆದರೆ, ಕಾರಣಾಂತರಗಳಿಂದ ಕೆಲವು ಕಡೆ ಜಮೀನುಗಳು ಸಾಗುವಳಿಯಾಗದೆ ಪಾಳುಬಿದ್ದಿರುತ್ತವೆ. ಜಮೀನಿನ ಉಪಯೋಗದ ವಿವರಗಳನ್ನು ಗ್ರಾಮದ ಶಾನುಭೋಗರ ಲೆಕ್ಕಗಳ ಆಧಾರದ ಮೇಲೆ ಆಹಾರ ಮತ್ತು ಕೃಷಿ ಮಂತ್ರಾಲಯದ ಆರ್ಥಿಕ ಮತ್ತು ಸಾಂಖ್ಯಿಕೀಯ ಶಾಖೆಯಿಂದ ಶೇಖರಿಸಲಾಗುತ್ತದೆ. ಈ ಅಂಕಿಸಂಖ್ಯೆಗಳನ್ನು ಸಂಕಲಿಸಿ ಈ ಶಾಖೆಯವರು ಪ್ರಕಟಗೊಳಿಸುತ್ತಾರೆ.

ಭಾರತ ದೇಶದ ಒಟ್ಟು ಜಮೀನಿನ ವಿಸ್ತೀರ್ಣ 32.63 ಕೋಟಿ ಹೆಕ್ಟೇರುಗಳು (80.67 ಕೋಟಿ ಎಕರೆಗಳು). ಇದರ ಪೈಕಿ ಗ್ರಾಮಗಳ ಲೆಕ್ಕಪತ್ರದ ಪ್ರಕಾರ ಸಾಗುವಳಿ ಜಮೀನು 29.83 ಕೋಟಿ ಹೆಕ್ಟೇರುಗಳು: ಕಾಡುಗಳು 5,88 ಕೋಟಿ ಹೆಕ್ಟೇರುಗಳು; ಬಂಜರುಭೂಮಿ (ಖರಾಬು) 4.87 ಕೋಟಿ ಹೆಕ್ಟೇರುಗಳು; ಪಡಬಿದ್ದ ಜಮೀನು 2.12 ಕೋಟಿ ಹೆಕ್ಟೇರುಗಳು; ಸಾಗುವಳಿ ಮಾಡದ ಇತರ ಜಮೀನು 3.77 ಕೋಟಿ ಹೆಕ್ಟೇರುಗಳು. ಇದರ ಪೈಕಿ 13.52 ಕೋಟಿ ಹೆಕ್ಟೇರುಗಳು ಸಾಗುವಳಿಯಾಗಿರುತ್ತವೆ.

ಆಹಾರಧಾನ್ಯಗಳಿಗೆ 11.58 ಕೋಟಿ ಹೆಕ್ಟೇರುಗಳೂ ಎಣ್ಣೆಬೀಜಗಳಿಗೆ 1.45 ಕೋಟಿ ಹೆಕ್ಟೇರುಗಳೂ ಹತ್ತಿ, ಕಬ್ಬು, ಸೆಣಬು, ಮೆಣಸಿನಕಾಯಿ, ಹೊಗೆಸೊಪ್ಪು ಮೊದಲಾದವಕ್ಕೆ ಉಳಿದ ಜಮೀನು ಬಿತ್ತನೆಯಾಗಿರುವುದು. 1963–64ರಲ್ಲಿ ಆಹಾರಧಾನ್ಯಗಳ ಉತ್ಪತ್ತಿ 79 ಲಕ್ಷ (ಮೆಟ್ರಿಕ್) ಟನ್ನುಗಳೂ ಎಣ್ಣೆ ಬೀಜಗಳು 71 ಲಕ್ಷ ಟನ್ನುಗಳು ಇದ್ದುವು. ಆಹಾರಧಾನ್ಯಗಳ ಈ ಉತ್ಪತ್ತಿ ಸುಮಾರು 40 ಕೋಟಿ ಜನರಿಗೆ ಸಾಕಾಗುವುದು. ಉಳಿದ ಸುಮಾರು 10 ಕೋಟಿ ಜನರಿಗೆ ಹೊರದೇಶಗಳಿಂದ ಆಹಾರ ಧಾನ್ಯಗಳನ್ನು ಆಮದು ಮಾಡಬೇಕಾದ ನಿರ್ಬಂಧವೊದಗಿರುವುದು.

**9. ಉತ್ಪತ್ತಿಯ ತೋರಂಕ** : ಆಹಾರಧಾನ್ಯಗಳು ಮತ್ತು ವ್ಯವಸಾಯದ ಇತರ ಉತ್ಪತ್ತಿ ವರ್ಷ ವರ್ಷಕ್ಕೆ ಹೇಗೆ ಹೆಚ್ಚುತ್ತಿರುವುದು, ಕೈಗಾರಿಕೆಯ ಸಿದ್ಧವಸ್ತುಗಳ ಮತ್ತು ಗಿರಣಿಗಳಲ್ಲಿ ತಯಾರಾದ ಸರಕುಗಳ ಪ್ರಮಾಣ ಹೇಗೆ ಬದಲಾವಣೆಯಾಗುತ್ತಿದೆ ಎಂಬುದನ್ನು ಪರಿಶೀಲನೆ ಮಾಡಿದ ಹೊರತು ಸಮರ್ಪಕವಾಗಿ ಆರ್ಥಿಕ ಯೋಜನೆಗಳನ್ನು ಅಳವಡಿಸಲು ಸಾಧ್ಯವಾಗುವುದಿಲ್ಲ. ಹಲವಾರು ವಸ್ತುಗಳ ಉತ್ಪತ್ತಿ ಪ್ರಮಾಣದ ಏರಿಳಿತಗಳನ್ನು ತಿಳಿದು ಅರ್ಥ ಮಾಡಿಕೊಳ್ಳುವುದು ಕಷ್ಟತರವಾದ ಕೆಲಸವೇ ಹೌದು. ಬದಲಾವಣೆಗಳೆಲ್ಲವನ್ನೂ ಒಮ್ಮೆಲೆ ಗ್ರಹಿಸುವುದು ಮನಸ್ಸಿಗೆ ಆಗದ ಕೆಲಸ. ಆದ್ದರಿಂದ ಇದನ್ನು ಸರಳೀಕರಿಸಲು ಸೂಚ್ಯಂಕ ಅಥವಾ ತೋರಂಕಗಳನ್ನು ಬಳಸುತ್ತೇವೆ. ಯಾವುದಾದರೂ ಒಂದು ವರ್ಷವನ್ನು ಮೂಲವರ್ಷವೆಂದು ಆರಿಸಿಕೊಂಡು ಆ ವರ್ಷದಲ್ಲಿನ ಉತ್ಪತ್ತಿಯ ಮಾನವನ್ನು 100 ಎಂದಿಟ್ಟುಕೊಂಡು ಪ್ರಸ್ತುತ ವರ್ಷದ ಉತ್ಪತ್ತಿ ಎಷ್ಟೆಂದು ಸೂಚಿಸುವ ಸಂಖ್ಯೆಗೆ ತೋರಂಕ ಎಂದು ಹೆಸರು.

ಭಾರತವು 2010ರಲ್ಲಿ 151.2 ಮಿಲಿಯನ್ ಟನ್ನುಗಳಷ್ಟು ಸಿಮೆಂಟ್ ಉತ್ಪಾದನೆಯ ಸಾಮರ್ಥ್ಯ ಹೊಂದಿದ್ದು ವಿಶ್ವದಲ್ಲೇ ಎರಡನೆಯ ಸ್ಥಾನ ಪಡೆದಿದೆ. ಇದು 2011ರಲ್ಲಿ 236.16 ಮಿಲಿಯನ್ ಟನ್‌ಗಳಾಗುವ ನಿರೀಕ್ಷೆ ಇದೆ.

ಇದೇ ರೀತಿಯಾಗಿ ಇತರ ಸಾಮಾನುಗಳ ಉತ್ಪತ್ತಿಯ ತೋರಂಕಗಳನ್ನು ಲೆಕ್ಕ ಮಾಡಬಹುದು. ಅವುಗಳಿಂದ ಒಂದು ಸರಕಿನ ತಯಾರಿಕೆ ಯಾವ ವರ್ಷದಲ್ಲಿ ಹೆಚ್ಚು ಪ್ರಗತಿ ಹೊಂದುವುದು ಎನ್ನುವುದನ್ನು ತಿಳಿಯಬಹುದು ಮತ್ತು ಹಲವಾರು ಸರಕುಗಳ ಸಾಪೇಕ್ಷ ಪ್ರಗತಿಗಳನ್ನು ತುಲನೆ ಮಾಡಲು ಅನುಕೂಲವಾಗುವುದು. ಉದಾಹರಣೆಗೆ 1963ರಲ್ಲಿ ಇತರ ಕೆಲವು ತೋರಂಕಗಳು ಈ ಪ್ರಕಾರ ಇದ್ದವು: ಜವಳಿ: 129, ಕಬ್ಬಿಣ ಮತ್ತು ಉಕ್ಕು: 269, ಯಂತ್ರೋಪಕರಣಗಳು: 363, ಮೋಟಾರು ವಾಹನಗಳು: 162. ಮೇಲಿನ ತೋರಂಕಗಳನ್ನು ಪರಿಶೀಲಿಸಿದರೆ, 1963ರಲ್ಲಿ ಯಂತ್ರೋಪಕರಣಗಳ ತಯಾರಿಕೆ ಬಹಳ ಪ್ರಗತಿಪರವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ಅಂಕಿಸಂಖ್ಯೆಗಳನ್ನು ಕೇಂದ್ರ ಸಾಂಖ್ಯಿಕೀಯ ಸಂಸ್ಥೆ ಶೇಖರಿಸಿ, ತೋರಂಕಗಳನ್ನು ಲೆಕ್ಕ ಹಾಕಿ ಪ್ರಕಟಿಸುತ್ತದೆ.

ಧಾರಣೆವಾಸಿಗಳ ವಿಷಯದಲ್ಲೂ ಇಂಥ ತೋರಂಕಗಳನ್ನು ಬಳಸಿ ಬೆಲೆಗಳ ಏರಿಳಿತವನ್ನು ಸೂಚಿಸಬಹುದು. ಅಂದಿನ ಮೈಸೂರು ರಾಜ್ಯದ ಸಾಂಖ್ಯಿಕೀಯ ವಿಭಾಗ ಸಿದ್ಧಪಡಿಸಿದ್ದ ಕೆಲವು ವಸ್ತುಗಳ ಠೋಕುಧಾರಣೆಯ (ಹೋಲ್‌ಸೇಲ್ ಪ್ರೈಸ್) ತೋರಂಕಗಳನ್ನು ಇಲ್ಲಿ ನಿದರ್ಶನವಾಗಿ ಕೊಟ್ಟಿದೆ–

ಮೂಲವರ್ಷ : 1952 ಏಪ್ರಿಲ್—1953 ಮಾರ್ಚ್‌ವರೆಗೆ = 100.

| ವಸ್ತು | 1956 | 1957 | 1958 | 1959 | 1960 |
|---|---|---|---|---|---|
| ಅಕ್ಕಿ (ಸಣ್ಣಕ್ಕಿ) | 103 | 110 | 113 | 125 | 129 |
| ಗೋದಿ | 170 | 175 | 172 | 182 | 169 |
| ರಾಗಿ | 127 | 149 | 146 | 166 | 192 |

ಈ ಗೋಷ್ವಾರೆಯನ್ನು ಗಮನಿಸಿ ನೋಡಿದರೆ ಗೋದಿಯ ಧಾರಣೆಯಲ್ಲಿ ಏರಿಳಿತಗಳು ಕಡಿಮೆಯಾಗಿರುವುದೆಂದೂ ರಾಗಿಯ ಧಾರಣೆ ಈ ಐದು ವರ್ಷಗಳ ಅವಧಿಯಲ್ಲಿ ಒಂದೇ ಸಮನೆ ಏರುತ್ತಹೋಗಿದೆ ಎಂದೂ ಅಕ್ಕಿಯ ಧಾರಣೆಯಲ್ಲಿ ಅಷ್ಟು ಏರಿಕೆ ಇರುವುದಿಲ್ಲವೆಂದೂ ತಿಳಿಯಬಹುದು.

ಕೂಲಿಗಾರರ, ಕಾರ್ಮಿಕರ, ಸಂಸಾರ ನಿರ್ವಹಣೆಯ ಖರ್ಚಿನ ಏರಿಳಿತವನ್ನು ಇದೇ ರೀತಿಯಾಗಿ ತೋರಂಕಗಳ ಮೂಲಕ ನಿರೂಪಿಸಬಹುದು. ನಡುತರದ ಒಬ್ಬ ಕಾರ್ಮಿಕ ತನ್ನ ಸಂಸಾರವನ್ನು ನಡೆಸಲು ಏನೇನು ಸಾಮಾನುಗಳನ್ನು ಎಷ್ಟೆಷ್ಟು ಕೊಳ್ಳುತ್ತಾನೆ ಎಂಬುದನ್ನು ಒಂದು ಸರ್ವೇಕ್ಷಣೆಯಿಂದ ಮೊದಲು ನಿರ್ಧರಿಸಿಕೊಳ್ಳುತ್ತೇವೆ. ಆಯಾ ಸಾಮಾನುಗಳ ಧಾರಣೆಗಳಲ್ಲಿ ತಿಂಗಳು ತಿಂಗಳಿಗೆ ಏನು ಬದಲಾವಣೆಯಾಗುತ್ತದೆ ಎಂಬುದನ್ನು ವಿಚಾರಿಸಿ ತಿಳಿದು ಈ ಏರಿಕೆಯಿಂದ ಕಾರ್ಮಿಕನ ಸಂಸಾರ ನಿರ್ವಹಣೆಯ ಖರ್ಚು ಹೇಗೆ ಬದಲಾಗುತ್ತದೆಂದು ಲೆಕ್ಕ ಹಾಕುತ್ತೇವೆ. ಮೂಲವರ್ಷದಲ್ಲಿ ಮಾಹೆಯಾನ ಖರ್ಚನ್ನು 100 ಎಂದಿಟ್ಟುಕೊಂಡು ಪ್ರಸ್ತುತ ತಿಂಗಳ ಖರ್ಚನ್ನು ನಿರ್ಧರಿಸುತ್ತೇವೆ. ಇದಕ್ಕೆ, ಕಾರ್ಮಿಕ ಬದುಕಿನ ವೆಚ್ಚದ ತೋರಂಕ (ಲಿವಿಂಗ್ ಇಂಡೆಕ್ಸ್) ಎಂದು ಹೆಸರು. ಈ ತೋರಂಕಗಳ ಆಧಾರದ ಮೇಲೆ ಕಾರ್ಮಿಕರಿಗೆ ಕೊಡಲಾಗುವ ತುಟ್ಟಿಭತ್ಯವನ್ನು ಹೆಚ್ಚಿಸಬೇಕಾಗುವುದು. ಕಾರ್ಮಿಕ ಶಾಖೆಯವರು ಈ ತೋರಂಕಗಳನ್ನು ಪ್ರತಿಯೊಂದು ಮುಖ್ಯ ಪಟ್ಟಣಕ್ಕೂ ಅನ್ವಯಿಸುವಂತೆ ಬೇರೆ ಬೇರೆಯಾಗಿ ಲೆಕ್ಕ ಮಾಡಿ ಪ್ರತಿ ತಿಂಗಳೂ ಪ್ರಕಟಿಸುವರು.

**10. ಕಾಲಸರಣಿ** : ಕಾಲಕಾಲಕ್ಕೆ ಪ್ರಾಪ್ತವಾಗುವ ಅವೇಕ್ಷಣೆಗಳಿಗೆ ಕಾಲಸರಣಿ ಎಂದು ಹೆಸರು. ಒಂದು ರಾಜ್ಯದ ಜನಸಂಖ್ಯೆ ರೇಷ್ಮೆದಾರದ ಉತ್ಪತ್ತಿ, ಆಹಾರ ಧಾನ್ಯಗಳ ಹುಟ್ಟುವಳಿ, ಆಮದು ರಫ್ತು, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಸಂಖ್ಯೆ, ವಿಶ್ವವಿದ್ಯಾನಿಲಯಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ, ಸರಕುಗಳ ಧಾರಣೆ ಮುಂತಾದುವು ಕಾಲಸರಣಿಗೆ ಉದಾಹರಣೆಗಳು. ಭಾರತದಲ್ಲಿ ಚಹದ ಎಲೆಯ ಉತ್ಪತ್ತಿಯ ಅಂಕಿಸಂಖ್ಯೆಗಳನ್ನು ತೆಗೆದುಕೊಂಡರೆ ಅವುಗಳಲ್ಲಾಗುತ್ತಿರುವ ಬದಲಾವಣೆಗಳನ್ನು ರೇಖಾಚಿತ್ರದಿಂದ ಪ್ರದರ್ಶಿಸಬಹುದು. ಸಗಟಿನಲ್ಲಿ ವರ್ಷ ವರ್ಷಕ್ಕೆ ಉತ್ಪತ್ತಿ ಹೇಗೆ ಹೆಚ್ಚುತ್ತಿದೆ ಎಂಬುದನ್ನು ಲೆಕ್ಕ ಹಾಕಿ




ಆರ್ಥಿಕ ಸಂಖ್ಯಾಶಾಸ್ತ್ರ

ತಿಳಿಯಲೂಬಹುದು. ವರ್ಷಂಪ್ರತಿ ಆಗತಕ್ಕ ಈ ಬದಲಾವಣೆಗೆ ದೀರ್ಘಕಾಲ ಪ್ರವೃತ್ತಿ (ಸೆಕ್ಯುಲರ್ ಟ್ರೆಂಡ್) ಎಂದು ಹೆಸರು.

ದತ್ತ ಅವೇಕ್ಷಣೆಗಳ ಆಧಾರದ ಮೇಲೆ ದೀರ್ಘಕಾಲ ಪ್ರವೃತ್ತಿಯನ್ನು ಕಂಡುಹಿಡಿಯಲು ಮೂರು ವಿಧಾನಗಳಿವೆ. ಅವನ್ನು ಈ ಕೆಳಗೆ ವಿವರಿಸಲಾಗಿದೆ.

1. ರೇಖಾಚಿತ್ರ ವಿಧಾನ : ಕಾಲವನ್ನು x ಅಕ್ಷದ ಕಡೆಯೂ ಅವೇಕ್ಷಣೆಯನ್ನು y ಅಕ್ಷದ ಕಡೆಯೂ ತೆಗೆದುಕೊಂಡು ಚುಕ್ಕೆಗಳನ್ನು ಗುರುತಿಸಿ. ಈ ಚುಕ್ಕೆಗಳ ಮೂಲಕ ಹಾಯ್ದು ಹೋಗುವ ಸರಳರೇಖೆಯ ಅಂದಾಜಿನ ಮೇಲೆ ಕೈಯಿಂದ ಎಳೆಯಬಹುದು. ಈ ರೇಖೆಗೆ ದೀರ್ಘಕಾಲ ಪ್ರವೃತ್ತಿರೇಖೆ ಎಂದು ಹೆಸರು. ಈ ರೇಖೆಯ (ಸ್ಲೋಪ್) ಪ್ರವಣತೆಯನ್ನು ಕಂಡುಹಿಡಿದರೆ, ಅದೇ ದೀರ್ಘಕಾಲ ಪ್ರವೃತ್ತಿಯಾಗಬಹುದು. ಇದು ಸುಲಭವಾದ ಕ್ರಮ: ಆದರೆ ಕೇವಲ ಸ್ಥೂಲವಾದ ಫಲವನ್ನೇ ಇದರಿಂದ ಪಡೆಯಬಹುದು. (ಚಿತ್ರ ನೋಡಿ).

2. ಸಂಚಾರಿ ಸರಾಸರಿ ಕ್ರಮ: ಮತ್ತೊಂದು ರೀತಿಯಲ್ಲಿ ದೀರ್ಘಕಾಲ ಪ್ರವೃತ್ತಿಯನ್ನು ಸಾಧಿಸಬಹುದು. ಅನುಕ್ರಮವಾಗಿ ಮೂರು ಮೂರು ಬೆಲೆಗಳನ್ನು ತೆಗೆದುಕೊಂಡು ಅವುಗಳ ಸರಾಸರಿಯನ್ನು ಕಂಡುಹಿಡಿಯಿರಿ. ಪ್ರತ್ಯೇಕ ಬೆಲೆಯ ಏರಿಳಿತಗಳು ಇದರಿಂದ ಕಡಿಮೆಯಾಗುವುದು. ಇದಕ್ಕೆ ಸಂಚಾರಿ ಸರಾಸರಿ ಕ್ರಮ ಎಂದು ಹೆಸರು. ಮುಮ್ಮಡಿ ಮೊತ್ತವನ್ನು 3ನೆಯ ಸ್ತಂಭದಲ್ಲಿ ತೋರಿಸಿದೆ. ಇದನ್ನು 3 ರಿಂದ ಭಾಗಿಸಿದರೆ ಬರುವ ಲಬ್ಧ ಮಧ್ಯವರ್ತಿ ಪ್ರವೃತ್ತಿಯಾಗುವುದು. ಇದನ್ನು 4ನೆಯ ಸ್ತಂಭದಲ್ಲಿ ಕೊಟ್ಟಿದೆ. ಈ ಬೆಲೆಗಳನ್ನು ಚೌಕಳಿ ಕಾಗದದ ಮೇಲೆ ಗುರುತಿಸಿ ಅವುಗಳನ್ನು ಸೇರಿಸಿದರೆ ಪ್ರವೃತ್ತಿ ರೇಖೆ ದೊರೆಯುವುದು. ಒಟ್ಟು 11 ಅವೇಕ್ಷಣೆ.

| ವರ್ಷ | ಉತ್ಪತ್ತಿ | ಮುಮ್ಮಡಿ ಮೊತ್ತ | ಮಧ್ಯವರ್ತಿ ಪ್ರವೃತ್ತಿ | ನಾಲ್ಮಡಿ ಮೊತ್ತ | ಮಗದಿಮ್ಮಡಿ ಮೊತ್ತ | ಮಧ್ಯವರ್ತಿ ಪ್ರವೃತ್ತಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1952 | 61.4 | – | – | – | – | – |
| 1953 | 61.5 | 188.1 | 62.7 | 255.9 | 518.5 | 64.8 |
| 1954 | 65.2 | 194.5 | 64.8 | 262.6 | 532.2 | 66.5 |
| 1955 | 67.8 | 201.1 | 67.0 | 269.6 | 545.7 | 68.2 |
| 1956 | 68.1 | 204.4 | 68.1 | 276.1 | – | – |
| 1957 | 68.5 | 208.3 | 69.4 | 280.2 | 556.3 | 69.5 |
| 1958 | 71.7 | 212.2 | 70.4 | 282.9 | 563.1 | 70.4 |
| 1959 | 71.9 | 214.4 | 71.5 | 292.3 | 575.2 | 71.9 |
| 1960 | 70.8 | 220.6 | 73.5 | 296.3 | 589.6 | 73.6 |
| 1961 | 77.9 | 224.4 | 74.8 | – | – | – |
| 1962 | 75.7 | – | – | – | – | – |

ವಾರ್ಷಿಕ ಬೆಲೆಗಳಲ್ಲಿನ ಓರೆಕೋರೆಗಳನ್ನು ಬಿಡಿಸಿ ಮತ್ತಷ್ಟು ನುಣುಪು ಮಾಡಬೇಕಾದರೆ, ನಾಲ್ಕು ನಾಲ್ಕರಂತೆ ಅನುಕ್ರಮ ಬೆಲೆಗಳನ್ನು ತೆಗೆದುಕೊಂಡು ಸಂಚಾರಿ ಸರಾಸರಿ ಕ್ರಮವನ್ನು ಕೈಗೊಳ್ಳಬೇಕು. ನಾಲ್ಕರ ಮಧ್ಯವರ್ತಿಕಾಲ ಎರಡು ವರ್ಷಗಳ ಸಂಧಿ ಕಾಲದಲ್ಲಿ ಬರುವುದು. ಆದುದರಿಂದ ಮತ್ತೊಮ್ಮೆ ಎರಡೆರಡು ಸಾಲುಗಳನ್ನು ತೆಗೆದುಕೊಂಡು ಸಂಚಾರಿ ಸರಾಸರಿಯನ್ನು ಕಂಡುಹಿಡಿದರೆ ಆಯಾ ವರ್ಷಕ್ಕೆ ಸರಿಯಾದ ಬೆಲೆಗಳು ದೊರೆಯುವುವು. ನಾಲ್ಮಡಿ ಮೊತ್ತವನ್ನು 5ನೆಯ ಸ್ತಂಭದಲ್ಲೂ ಮಗದಿಮ್ಮಡಿ 6ನೆಯ ಸ್ತಂಭದಲ್ಲೂ ಕೊಟ್ಟಿದೆ. ಇದನ್ನು 8 ರಿಂದ ಭಾಗಿಸಿದರೆ ದೊರೆವ ಭಾಗಲಬ್ಧ ಮಧ್ಯವರ್ತಿ ಪ್ರವೃತ್ತಿಯಾಗುವುದು. ಇದನ್ನು 7ನೆಯ ಸ್ತಂಭದಲ್ಲಿ ಕೊಟ್ಟಿದೆ.

ಹೀಗೆ ನಾಲ್ಮಡಿ ಮೊತ್ತವನ್ನು ಗುಣಿಸಿ ಮಧ್ಯ ಪ್ರವೃತ್ತಿಯನ್ನು ಕಾಣುವಾಗ ಮೊದಲನೆಯ ಎರಡು ವರ್ಷಗಳಿಗೆ ಮತ್ತು ಕಡೆಯ ಎರಡು ವರ್ಷಗಳಿಗೆ ಸಂವಾದಿಯಾದ ಬೆಲೆಗಳು ದೊರೆಯುವುದಿಲ್ಲ. ಕೇವಲ ನಡುವಿನ 7 ವರ್ಷಗಳ ಬೆಲೆಗಳು ಮಾತ್ರ ದೊರೆಯುವುವು. ಇವನ್ನುಪಯೋಗಿಸಿ ರೇಖಾಚಿತ್ರವನ್ನು ಬರೆಯಬಹುದು.

3. ಬೀಜಗಣಿತ ಕ್ರಮ: ಮೇಲೆ ಹೇಳಿದ ಕ್ರಮಗಳಿಗಿಂತಲೂ ಇನ್ನೂ ಖಚಿತವಾಗಿ ಪ್ರವೃತ್ತಿರೇಖೆಯನ್ನು ನಿರ್ಧರಿಸಬೇಕೆಂದರೆ ಬೀಜಗಣಿತ ಕ್ರಮವನ್ನು ಬಳಸಬೇಕು. ಉಪಯುಕ್ತವಾದ ರೇಖೆಯನ್ನು ದತ್ತ ಅವೇಕ್ಷಣೆಗಳಿಗೆ ಹಾಳತವಾಗಿ ಹೊಂದಿಸಲು ಕನಿಷ್ಠತಮ ವರ್ಗ (ಲೀಸ್ಟ್ ಸ್ಕ್ವೇರ್ಸ್) ಸಿದ್ಧಾಂತವನ್ನು ಪ್ರಯೋಗಿಸುತ್ತೇವೆ.

ಕಾಲಮಾನವನ್ನು x ಎಂದು ಸೂಚಿಸಿ, 1957ನೆಯ ಇಸವಿಯನ್ನು ಇದರ ಮೂಲಬಿಂದು ಎಂದಿಟ್ಟುಕೊಳ್ಳೋಣ. ಉತ್ಪತ್ತಿಯನ್ನು y ಎಂದಿಟ್ಟುಕೊಂಡರೆ ಪ್ರವೃತ್ತರೇಖೆಯ ಸಮೀಕರಣವನ್ನು $y=a+bx$ ಎಂದು ಬರೆಯಬಹುದು. ಕನಿಷ್ಠತಮ ವರ್ಗಸಿದ್ಧಾಂತದ ಮೇರೆಗೆ a,b ಅಚರಗಳನ್ನು ಕಂಡುಹಿಡಿಯಲು ಈ ಸಮೀಕರಣಗಳು ಉಪಲಬ್ಧವಾಗುವುವು.

$$\sum y=\sum a+\sum bx$$

$$\sum xy=\sum ax+\sum bx^2$$

ಗೋಷ್ವಾರೆಯನ್ನೂ ನ್ಯಾಸವನ್ನೂ ಬದಿಯಲ್ಲಿ ತೋರಿಸಿದೆ. ಮೇಲ್ಕಂಡ ಸಮೀಕರಣಗಳಲ್ಲಿ $\sum y$, $\sum ax$ ಮುಂತಾದುವುಗಳ ಬೆಲೆಗಳನ್ನು ಆದೇಶಿಸಲು

760.5 = 11 a
165.71 = 10 b

ಆದ್ದರಿಂದ, a=64.1, b=1.506 ಹಾಳತವಾಗಿ ಪೊರ್ದಿದ ರೇಖೆ

y=64.1+1.506*x*

| ವರ್ಷ | x | y | xy |
|---|---|---|---|
| 1 | 2 | 3 | 4 |
| 1952 | –5 | 61.4 | –317.0 |
| 1953 | –4 | 61.5 | –246.0 |
| 1954 | –3 | 65.2 | –195.6 |
| 1955 | –2 | 67.8 | –165.6 |
| 1956 | –1 | 68.1 | –68.1 |
| 1957 | 0 | 68.5 | 0 |
| 1958 | 1 | 71.7 | 71.7 |
| 1959 | 2 | 71.9 | 143.8 |
| 1960 | 3 | 70.8 | 212.4 |
| 1961 | 4 | 77.9 | 311.6 |
| 1962 | 5 | 75.7 | 378.5 |
| ಮೊತ್ತ | 0 | 760.5 | 165.7 |

**II. ಕಾಲಶ್ರೇಣಿಯ ಘಟಕಗಳು :**

ಆರ್ಥಿಕ ಮಾಹಿತಿಗಳು ಕಾಲಸರಣಿಯ ನಾಲ್ಕು ಘಟಕಾಂಶಗಳನ್ನು ಒಳಗೊಂಡಿರುತ್ತದೆ.

1. ದೀರ್ಘಕಾಲ ಪ್ರವೃತ್ತಿ (ಸೆಕ್ಯುಲರ್ ಟ್ರೆಂಡ್), T

2. ಪರ್ವಕಾಲದ ಬದಲಾವಣೆಗಳು ಅಥವಾ ಪಾರ್ವಣ ಚಲನೆಗಳು (ಸೀಸನಲ್ ವೇರಿಯೇಷನ್ಸ್), S

3. ಚಕ್ರೀಯ ಚಲನೆಗಳು ಅಥವಾ ಚಕ್ರೀಯ ಏರುಪೇರು (ಸೈಕ್ಲಿಕಲ್ ಫ್ಲಕ್ಚುಯೇಷನ್ಸ್),C

4. ಕ್ರಮರಹಿತ ಪಲ್ಲಟಗಳು (ಇರೆಗ್ಯುಲರ್ ವೇರಿಯೇಷನ್ಸ್), I

ಈ ಸಂಕೇತಗಳನ್ನು ಕಲ್ಪಿಸಿಕೊಂಡು, ಕಾಲಸರಣಿಯ ಒಟ್ಟು ಪರಿಣಾಮವನ್ನು TxSxCxI ಎಂದು ಘಟಕ ಸಂಯೋಜನ ರೂಪದಲ್ಲಿ ನಿರೂಪಿಸಬಹುದು. ಘಟಕಗಳ ಫಲಗಳ ಕೂಡಿಕೆಯಾಗಿ ನಿರೂಪಿಸುವ ಬದಲು ಹೀಗೆ ಗುಣನಫಲವಾಗಿ ನಿರೂಪಿಸುವುದರಲ್ಲಿ ಕೆಲವು ಸೌಲಭ್ಯಗಳಿವೆ. ಮೇಲಿನ ಪ್ರಕರಣದಲ್ಲಿ ಹೇಳಿರುವ ಪ್ರಕಾರ ದೀರ್ಘಕಾಲಿಕ ಪ್ರವೃತ್ತಿಯನ್ನು ಕಂಡುಹಿಡಿದು ಅದರಿಂದ ಕಾಲಶ್ರೇಣಿಯ ಸಂವಾದಿ ಬೆಲೆಗಳನ್ನು ಭಾಗಿಸಿದರೆ ಬರುವ ಭಾಗಲಬ್ಧ SxCxI ಇದಕ್ಕೆ ಸಮಾನವಿರುವುದು. ಈಗ S ಘಟಕಾಂಶವನ್ನೂ C ಘಟಕಾಂಶವನ್ನೂ ಬೇರೆ ಬೇರೆ ಕಂಡುಹಿಡಿದು, ಅನಂತರ, ಉಳಿಕೆಯ ಘಟಕವಾದ I ನ್ನೂ ಸಹ ಕಾಣಬಹುದು. ಪಾರ್ವಣ ಚಲನೆಗಳನ್ನು ಪ್ರತ್ಯೇಕಿಸಿ ಇಳಿಸುವ ಕ್ರಮವನ್ನು ಈಗ ನೋಡೋಣ.

**12. ಪಾರ್ವಣ ಚಲನೆಗಳು** : ಕೆಲವು ಸಂದರ್ಭಗಳಲ್ಲಿ ಕಾಲಸರಣಿಯ ಬೆಲೆಗಳು ತಿಂಗಳು ತಿಂಗಳಿಗೆ ಬದಲಾವಣೆಯಾಗುವುವು. ಮತ್ತು ಕ್ಲುಪ್ತವಾದ ಕೆಲವು ತಿಂಗಳಲ್ಲಿ ಹೆಚ್ಚೂ ಮತ್ತೆ ಕೆಲವು ತಿಂಗಳಲ್ಲಿ ಕಡಿಮೆಯೂ ಇರುವುವು. ಹೀಗೆ ಋತುಗಳಿಗನುಸಾರವಾಗಿ ಸಂಭವಿಸುವ ಏರಿಳಿತಕ್ಕೆ ಪರ್ವಕಾಲದ ಚಲನೆ ಅಥವಾ ಪಾರ್ವಣಚಲನೆ ಎಂದು ಹೆಸರು. ಕಾಲಸರಣಿಯ ಅಂಕಿಸಂಖ್ಯೆಗಳಿಂದ ಪಾರ್ವಣ ಚಲನೆಗಳನ್ನು ಕಂಡುಹಿಡಿದರೆ ಭವಿಷ್ಯದ ಬೆಲೆಗಳ ಮುನ್ಸೂಚನೆಯನ್ನು ಒದಗಿಸಲು ಸಾಧ್ಯವಾದೀತು. ಉದಾಹರಣೆಗೆ, ದವಸಧಾನ್ಯಗಳ ಬೆಲೆ ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಹೆಚ್ಚಾಗುವುದೆಂದು ತಿಳಿದಿದೆ. ಅದಕ್ಕೆ ತಕ್ಕಂತೆ ಪೂರ್ವಭಾವಿಯಾಗಿ ದವಸವನ್ನು ಕೊಳ್ಳಬಹುದು. ಮಾರುವುದಾದರೆ, ಅಲ್ಲಿಯವರೆಗೆ ಕಾದಿದ್ದು ಮಾರಾಟ ಮಾಡಿದರೆ ಹೆಚ್ಚು ಲಾಭ ಸಿಗುವುದು.

13. **ಪಾರ್ವಣ ಚಲನೆಗಳನ್ನು ಕಂಡುಹಿಡಿಯಲು ಕರಣ ಪದ್ಧತಿ** : ಒಂದು ರಾಜ್ಯದ ಆದಾಯ ಖರ್ಚನ್ನು ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ. 1965–66ರಿಂದ 1968–69ನೆಯ ವರ್ಷದವರೆಗೆ ಪ್ರತಿ ಮೂರು ತಿಂಗಳಿಗೂ ವೆಚ್ಚವಾದ ಮೊಬಲಗನ್ನು 1, 2ನೆಯ ಕಾಲಂಗಳಲ್ಲಿ ತೋರಿಸಿದೆ. ಈ ಅಂಕಿಸಂಖ್ಯೆಗಳ ಆಧಾರದ ಮೇಲೆ ಪಾರ್ವಣ ಚಲನೆಯ ತೋರಂಕಗಳನ್ನು ಕಂಡುಹಿಡಿಯುವ ವಿಧಾನವನ್ನು ಇಲ್ಲಿ ವಿವರಿಸಿದೆ.

ಮೊದಲು ನಾಲ್ಕು ಪದಗಳ ಸಂಚಾರಿ ಮೊತ್ತವನ್ನು ಕಂಡುಹಿಡಿದು 3ನೆಯ ಕಾಲಂನಲ್ಲಿ ಕೊಟ್ಟಿದೆ. ಮುಂದಿನ ಕಾಲಂನಲ್ಲಿ ಇದರ ಇಮ್ಮಡಿ ಸಂಚಾರಿ ಮೊತ್ತವನ್ನು ಕೊಟ್ಟಿದೆ. ಇದನ್ನು 8ರಿಂದ ಭಾಗಿಸಿ ಬಂದದ್ದೇ ಪ್ರವೃತ್ತಿಬೆಲೆಯಾಗುವುದು (5ನೇ ಕಾಲಂ). ಮೊದಲನೆಯ ಮತ್ತು ಎರಡನೆಯ ಸಾಲಿನಲ್ಲೂ ಮತ್ತು ಕೊನೆಯ ಎರಡು ಸಾಲಿನಲ್ಲೂ ಈ ಕಾಲಂನ ಸ್ಥಾನಗಳು ರಿಕ್ತವಾಗಿರುವುದನ್ನು ಗಮನಿಸಬೇಕು. 2ನೆಯ ಕಾಲಂನ ಬೆಲೆಯನ್ನು ಅದಕ್ಕೆ ಸಂವಾದಿಯಾದ 5ನೆಯ ಕಾಲಂನ ಬೆಲೆಯಿಂದ ಭಾಗಿಸಿದರೆ ಪ್ರವೃತ್ತ ನಿಷ್ಪತ್ತಿ (ಟ್ರೆಂಡ್ ರೇಷಿಓ) ದೊರೆಯುವುದು. ಇದನ್ನು 100 ರಿಂದ ಗುಣಿಸಿ 6ನೆಯ ಕಾಲಂನಲ್ಲಿ ನಮೂದಿಸಿದೆ. ಮೊದಲನೆಯ ಕಾಲುವರ್ಷದ ಪ್ರವೃತ್ತ ನಿಷ್ಪತ್ತಿಯ 3 ಬೆಲೆಗಳು ದೊರೆಯುತ್ತವೆ. ಇವುಗಳ ಸರಾಸರಿಯನ್ನು ಕಂಡುಹಿಡಿದು ಬೇರೆಯಾಗಿ ಕೆಳಕಂಡ ಪಟ್ಟಿಯಲ್ಲಿ ನಮೂದಿಸಿದೆ. ಇದರಂತೆಯೇ 2ನೆಯ 3ನೆಯ ಮತ್ತು 4ನೆಯ ಕಾಲು ವರ್ಷಗಳ ಸರಾಸರಿ ಪ್ರವೃತ್ತ ಬೆಲೆಗಳನ್ನು ಬರೆದಿದ್ದೇವೆ.

ಒಂದು ರಾಜ್ಯದ ಆದಾಯ ಖರ್ಚು – (ಕೋಟಿ ರೂಪಾಯಿಗಳು)

| ಕಾಲಾವಧಿ ಇಸ್ವಿ ಕಾಲಂ ವರ್ಷ | | ಆದಾಯ ಖರ್ಚು ಕೋಟಿ ರೂ | 4ರ ಸಂಚಾರಿ ಮೊತ್ತ | 2ರ ಸಂಚಾರಿ ಮೊತ್ತ | ಪ್ರವೃತ್ತಿ ಬೆಲೆ | ಪ್ರವೃತ್ತಿ ನಿಷ್ಪತ್ತಿ | ಕುಣಿಕೆ ಬಂಧ |
|---|---|---|---|---|---|---|---|
| 1 | | 2 | 3 | 4 | 5 | 6 | 7 |
| 1965–66 | I | 47 | ... | ... | ... | ... | ... |
| | II | 53 | 261 | ... | ... | ... | 112.8 |
| | III | 58 | 262 | 523 | 65.4 | 92.2 | 109.4 |
| | IV | 104 | 275 | 537 | 67.1 | 155.0 | 179.4 |
| 1966–67 | I | 47 | 267 | 542 | 67.8 | 69.3 | 45.2 |
| | II | 56 | 293 | 560 | 70.0 | 80.0 | 119.1 |
| | III | 60 | 301 | 594 | 74.2 | 80.9 | 107.2 |
| | IV | 130 | 314 | 615 | 76.9 | 169.0 | 216.6 |
| 1967–68 | I | 55 | 332 | 646 | 80.7 | 68.2 | 42.3 |
| | II | 69 | 399 | 731 | 91.4 | 75.5 | 125.4 |
| | III | 78 | 409 | 808 | 101.0 | 77.2 | 113.1 |
| | IV | 197 | 448 | 857 | 107.1 | 183.4 | 252.4 |
| 1968–69 | I | 65 | 461 | 909 | 113.6 | 57.2 | 33.0 |
| | II | 98 | 519 | 980 | 122.5 | 80.0 | 150.8 |
| | III | 101 | ... | ... | ... | ... | 103.0 |
| | IV | 255 | ... | ... | ... | ... | 252.4 |

ಪಾರ್ವಣ ಚಲನೆಗಳಿಲ್ಲದಿದ್ದರೆ 4 ಕಾಲು ವರ್ಷಗಳಲ್ಲೂ ಸುಸಮವಾದ ಬೆಲೆ ದೊರೆಯಬೇಕು. ಪ್ರತಿಯೊಂದು ನಿಷ್ಪತ್ತಿಯ ಬೆಲೆಯೂ 100 ಇರುವುದು.

| ಎಷ್ಟನೆಯ ಕಾಲುವರ್ಷ | ಸರಾಸರಿ ಬೆಲೆ | ತಿದ್ದಿದ ಬೆಲೆ |
|---|---|---|
| I | 64.9 | 65.5 |
| II | 78.5 | 79.3 |
| III | 83.4 | 84.3 |
| IV | 169.1 | 170.9 |
| ಮೊತ್ತ | 395.9 | 400.00 |

ಪಾರ್ವಣ ಚಲನೆಯ ಕಾರಣವಾಗಿ ವ್ಯತ್ಯಾಸಗಳು ಕಂಡುಬರುತ್ತವೆ. ಇವುಗಳ ಮೊತ್ತ 395.9 ಆಗುತ್ತದೆ. ಪ್ರತಿಯೊಂದು ಸರಾಸರಿ ಬೆಲೆಯನ್ನು 400:395.9 ಪ್ರಮಾಣದಲ್ಲಿ ಪರಿವರ್ತಿಸಿ ಮುಂದಿನ ಕಾಲಂನಲ್ಲಿ ನಮೂದಿಸಲಾಗಿದೆ. ಈಗ ಅವುಗಳ ಮೊತ್ತ 400 ಇರುವುದು. ಕೊನೆಯ ಕಾಲಂನ ತಿದ್ದಿದ ಬೆಲೆಗಳೇ ನಮಗೆ ಬೇಕಾದ ಪಾರ್ವಣ ಚಲನೆಗಳ ತೋರಂಕಗಳು.

ಮೊದಲನೆಯ ಮೂರು ಕಾಲು ವರ್ಷಗಳಲ್ಲಾಗುವ ಸರಾಸರಿ ಖರ್ಚಿನ ಎರಡರಷ್ಟು ಖರ್ಚು ವರ್ಷದ ಕೊನೆಯ ಕಾಲು ವರ್ಷದಲ್ಲಿ ಆಗುತ್ತಿರುವುದೆಂಬುದು ಈ ಪಾರ್ವಣ ಚಲನೆಗಳ ತೋರಂಕಗಳಿಂದ ಸ್ಪಷ್ಟವಾಗಿ ಕಾಣುವುದು.

**14. ಕುಣಿಕೆ ಬಂಧಕ್ರಮ** : ಪಾರ್ವಣ ಚಲನೆಗಳನ್ನು ಮತ್ತೊಂದು ರೀತಿಯಲ್ಲಿ ಕಂಡುಹಿಡಿಯಲು ಕುಣಿಕೆ ಬಂಧಗಳನ್ನು ಬಳಸಬಹುದು. ಪ್ರತಿಯೊಂದು ಬೆಲೆಯನ್ನು ಅದರ ಹಿಂದಿನ ವರ್ಷದ ಬೆಲೆಯಿಂದ ಭಾಗಿಸಿ 100ರಿಂದ ಗುಣಿಸಿದರೆ ಬರುವ ಸಂಖ್ಯೆಗೆ ಕುಣಿಕೆ ಬಂಧ (ಲಿಂಕ್ ರಿಲೆಟಿವ್) ಎಂದು ಹೆಸರು. ಕುಣಿಕೆ ಬಂಧ ಪಾರ್ವಣ ಚಲನೆಯ ತೋರಂಕಗಳ ನಿಷ್ಪತ್ತಿಗಳಾಗಿರುವುದು.

ಮೇಲೆ ಕೊಟ್ಟಿರುವ ಕೋಷ್ಟಕದ 7ನೆಯ ಕಾಲಂನಲ್ಲಿ ಕುಣಿಕೆ ಬಂಧದ ಬೆಲೆಗಳನ್ನು ತೋರಿಸಿದ್ದೇವೆ. ಇದರ ಫಲವಾಗಿ 1ನೆಯ ಕಾಲು ವರ್ಷದ ಕುಣಿಕೆ ಬಂಧಗಳು 3 ಇದ್ದು, ಉಳಿದ ಪ್ರತಿ ಕಾಲು ವರ್ಷದ ಕುಣಿಕೆ ಬಂಧಗಳು 4 ಇರುವುವು. ಇವುಗಳ ಸರಾಸರಿಯನ್ನು $m_1$, $m_2$, $m_3$, ಮತ್ತು $m_4$ ಎಂದಿಟ್ಟುಕೊಳ್ಳಿ. ಮೊದಲನೆಯ ಕಾಲು ವರ್ಷದ ಪಾರ್ವಣ ಚಲನೆಯ ತೋರಂಕವನ್ನು 100 ಎಂದಿಟ್ಟುಕೊಂಡು, ಉಳಿದವುಗಳನ್ನು ಕೆಳಗಿನ ಸರಪಳಿ ಸಂಬಂಧಗಳಿಂದ ಕಂಡುಹಿಡಿಯತಕ್ಕದ್ದು. $c_2 m_3/100$, $c_3 m_4/$

100 ಮತ್ತು $c_4m_1/100$, ಇವುಗಳ ಗುಣಲಬ್ಧ 100ಕ್ಕೆ ಸಮವಿರಬೇಕು. ಹಾಗಿಲ್ಲದಿದ್ದರೆ ಪ್ರತಿ ಒಂದರ ಬೆಲೆಯನ್ನು ಗುಣೋತ್ತರ ನಿಷ್ಪತ್ತಿಯಲ್ಲಿ ಬದಲಾಯಿಸಿ, ಈ ಸಾಮ್ಯ ಸರಿಹೋಗುವಂತೆ ಮಾಡಬೇಕು. ಕೆಳಗಿನ ಕೋಷ್ಟಕದಲ್ಲಿ $m_1, m_2, m_3, m_4$ ಮತ್ತು $c_1, c_2, c_3, c_4$ಗಳ ಬೆಲೆಯನ್ನು ಕಾಣಿಸಿದ್ದೇವೆ. ಈಗ $c_4 x m_1/೧೦೦$ ಇದರ ಬೆಲೆ 123.2 ಆಗುತ್ತದೆ. 100ಕ್ಕೆ ಸಮವಿರಬೇಕೆಂದು ತಾತ್ವಿಕ ಆಧಾರದ ಮೇರೆಗೆ ಮೇಲೆ ಹೇಳಲಾಗಿದೆ. 100/123.2=r ಎಂಬ ಗುಣೋತ್ತರ ನಿಷ್ಪತ್ತಿಯನ್ನು ಗಣನೆ ಮಾಡಿ, $c_2$, $c_3$ ಮತ್ತು $c_4$ನ್ನು ಕ್ರಮವಾಗಿ $r$, $r^2$ ಮತ್ತು $r^3$ ಇಂದ ಗುಣಿಸಿ ಬಂದ ಫಲಗಳೇ ತಿದ್ದಿದ ಸರಪಳಿ ಬಂಧಗಳು. ಇವುಗಳನ್ನು 4ನೆಯ ಕಾಲಂನಲ್ಲಿ ತೋರಿಸಿದ್ದೇವೆ.

| ಕಾಲು ವರ್ಷ | ಸರಾಸರಿ ಕುಣಿಕೆ ಸಂಬಂಧ | ಸರಪಳಿ ಸಂಬಂಧ | ತಿದ್ದಿದ ಸರಪಳಿ ಸಂಬಂಧ | ತಿದ್ದಿದ ಪಾರ್ವಣ ತೋರಂಕ |
|---|---|---|---|---|
| 1 | 2 | 3 | 4 | 5 |
| I | $M_1$ 40.2 | $C_1$ 100.0 | 100 | 66.1 |
| II | $M_2$ 127.0 | $C_2$ 127.0 | 120.5 | 79.5 |
| III | $M_3$ 108.2 | $C_3$ 136.5 | 122.8 | 81.1 |
| IV | $M_4$ 225.2 | $C_4$ 307.2 | 262.2 | 173.3 |
| | 500.6 | $C_1$ 123.2 | 605.5 | 400.0 |

ಇವುಗಳ ಮೊತ್ತ 400 ಬರಬೇಕು. ಹಾಗಿಲ್ಲದಿದ್ದರೆ 13ನೆಯ ಪ್ರಕರಣದಲ್ಲಿ ಹೇಳಿರುವಂತೆ, ಸಂಸ್ಕಾರಮಾಡಿ ಒಟ್ಟು 400 ಬರುವಂತೆ ಮಾಡಬೇಕು. 4ನೆಯ ಕಾಲಂನ ಮೊತ್ತ 605.5 ಇರುವುದು. ಆದುದರಿಂದ ಈ ಕಾಲಂನ ಪ್ರತಿ ಬೆಲೆಯನ್ನು 400/65.5 ಇಂದ ಗುಣಿಸಿ ಸಂಸ್ಕರಿಸಬೇಕು. ಫಲಿತಗಳನ್ನು 5ನೆಯ ಕಾಲಂನಲ್ಲಿ ಕಾಣಿಸಿದ್ದೇವೆ. ಇವೇ ಬೇಕಾದ ಪಾರ್ವಣ ತೋರಂಕಗಳು.

ಮೇಲೆ ಹೇಳಿದ ಎರಡು ಕ್ರಮಗಳಿಂದ ದೊರೆತ ಪಾರ್ವಣ ಚಲನೆಯ ಸೂಚಿಗಳು ಒಂದೇಯಾಗಿಲ್ಲದಿದ್ದರೂ ಅವುಗಳಲ್ಲಿ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ.

**15. ಚಕ್ರೀಯ ಏರಿಳಿತಗಳು** : ಕಾಲಸರಣಿಯ ಅವೇಕ್ಷಣೆಗಳನ್ನು ನಾಲ್ಕು ಘಟಕಾಂಶಗಳಿಂದ ಕೂಡಿದೆ ಎಂದು ಹಿಂದೆಯೇ ಹೇಳಿದ್ದೇವೆ. ಅಂದರೆ, y= TxSxCxI ಎಂದು ನಿರೂಪಿಸಬಹುದು. ಇಲ್ಲಿ T ಮತ್ತು S ದೀರ್ಘಕಾಲ ಪ್ರವೃತ್ತಿ ಮತ್ತು ಪಾರ್ವಣ ಚಲನೆಗಳು– ಇವುಗಳ ಬೆಲೆಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಕಂಡುಹಿಡಿದು yನ್ನು T, S ಗಳಿಂದ ಅನುಕ್ರಮವಾಗಿ ಭಾಗಿಸಿದರೆ CxI ಅಂಶ ಉಳಿಯುವುದು. ಈ ಬೆಲೆಗಳ ಸರಣಿಯನ್ನು ಯಾವುದಾದರೊಂದು ವಿಧಾನದಲ್ಲಿ ಸುಸಮ ಮಾಡಿದರೆ I ಅಂಶವನ್ನು ವಿಸರ್ಜಿಸಬಹುದು. ಉಳಿಯುವುದು ಚಕ್ರೀಯ ಏರುಪೇರಿನ ಅಂಶವೆಂದು ತಿಳಿಯತಕ್ಕದ್ದು.

ಆಧುನಿಕ ಕಾಲಸರಣಿಯ ವಿಶ್ಲೇಷಣದಲ್ಲಿ ಉಳಿಯುವ ಈ ಅಂಶವನ್ನು ಆಂದೋಲನ (ಆಸಿಲೇಷನ್) ಎಂದು ಕರೆಯುವುದು ರೂಢಿಯಾಗಿದೆ. ಚಕ್ರೀಯ ಏರುಪೇರನ್ನು ಆಂದೋಲನದ ಒಂದು ವಿಶಿಷ್ಟ ರೂಪ ಎಂದು ಭಾವಿಸಬಹುದು. ಇದಕ್ಕೆ ನಿಯಮಿತ ಅಂಶ ಎಂಬ ಹೆಸರುಂಟು. I ಅಂಶವನ್ನು ಅನಿಯಮಿತ ಅಥವಾ ಯಾದೃಚ್ಛಿಕಾಂಶವೆಂದು ಕರೆಯುವುದು ಹೆಚ್ಚು ಉಪಯುಕ್ತವಾಗಿ ಕಂಡುಬರುತ್ತದೆ.

ಪ್ರೌಢಗಣಿತದ ಸಹಾಯದಿಂದ ಮತ್ತು ಕೆಲವು ಇಚ್ಛಾಕಲ್ಪನೆಯ ಆಧಾರದ ಮೇಲೆ ನಿಯಮಿತ ಅಥವಾ ಆಂದೋಲನಾಂಶವನ್ನು ಕಂಡುಹಿಡಿಯಬಹುದು. ವೇಳಾಂತರ ವಿಶ್ಲೇಷಣದಿಂದಲೂ (ಪೀರಿಯಾಡಿಕಲ್ ಅನ್ಯಾಲಿಸಿಸ್) ಈ ಅಂಶವನ್ನು ಬೇರ್ಪಡಿಸಬಹುದು. ಅದಕ್ಕೆ ಜಟಿಲ ಗಣಿತಪ್ರಮೇಯಗಳ ಪರಿಜ್ಞಾನ ಬೇಕಾಗಿರುವುದರಿಂದ ಅದನ್ನು ಇಲ್ಲಿ ವಿವರಿಸಿಲ್ಲ.

ಈ ಪ್ರಕಾರವಾಗಿ ದೀರ್ಘಕಾಲ ಪ್ರವೃತ್ತಿ, ಪಾರ್ವಣ ಚಲನೆ ಮತ್ತು ಚಕ್ರೀಯ ಏರುಪೇರುಗಳನ್ನು ಬೇರ್ಪಡಿಸಿ ತಿಳಿಯಬಹುದು. ಮೇಲಿನ ಹದಿನೈದು ಉದಾಹರಣೆಗಳನ್ನು ನೋಡಿದರೆ ಆರ್ಥಿಕ ಸಂಖ್ಯಾಶಾಸ್ತ್ರದ ಉದ್ದೇಶ, ವ್ಯಾಪ್ತಿ ಸ್ವಯಂಸ್ಪಷ್ಟವಾಗುತ್ತದೆ. (ಎಂ.ವಿ.ಜೆ.)

**ಆರ್ಥಿಕ ಸಂಘಟನೆ** : ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಾಣಬರುವ ಅನೇಕಾನೇಕ ಆರ್ಥಿಕ ಸಮಸ್ಯೆಗಳನ್ನು, ವಿಷಯಗಳನ್ನು, ಕಾರ್ಯವ್ಯವಸ್ಥೆಗಳನ್ನು ಸುಸಂಬದ್ಧವೂ ಏಕಮುಖವೂ ಸರ್ವಜನೋಪಯೋಗಿಯೂ ಆಗುವ ರೀತಿಯಲ್ಲಿ ಒಂದುಗೂಡಿಸುವಿಕೆ ಎಂದು ಅರ್ಥ (ಎಕನಾಮಿಕ್ ಇಂಟಿಗ್ರೇಷನ್).

ಒಂದು ದೇಶದ ಆರ್ಥಿಕತೆಯ ವಿವಿಧ ಘಟಕಗಳೊಳಗೆ ತಾರತಮ್ಯಕ್ಕೆ ಎಡೆಕೊಡದೆ ಸಮಾನಾವಕಾಶಗಳ ಧ್ಯೇಯದ ಆಧಾರದ ಮೇಲೆ ಎಲ್ಲ ಭಾಗ ಹಾಗೂ ಉಪಭಾಗಗಳು ಪರಸ್ಪರವಾಗಿ ಹೊಂದಿಕೊಂಡಿರುವಂತೆ ಆರ್ಥಿಕಚಟುವಟಿಕೆಗಳು ನಡೆಯುವಂತಿದ್ದಲ್ಲಿ ಅಂಥ ಪರಿಸ್ಥಿತಿಯನ್ನು ಸಂಘಟಿತ ರಾಷ್ಟ್ರೀಯ ಆರ್ಥಿಕತೆಯೆಂದು ಹೇಳಬಹುದು. ಇದೇ ರೀತಿ ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗಳಿಗೆ ರಾಜಕೀಯ ಪ್ರತ್ಯೇಕತೆಯಿಂದ ಪ್ರಾಪ್ತವಾಗುವ ಅಡಚಣೆಗಳನ್ನು (ಆಮದು ಹಾಗೂ ರಫ್ತು ಸುಂಕ ಪ್ರತ್ಯೇಕ ಹಣ ಮತ್ತು ವಿದೇಶೀ ವಿನಿಮಯ ಬಂಡವಾಳ ಮತ್ತು ಜನರ ಓಡಾಟಕ್ಕೆ ಇರುವ ಕಟ್ಟುಪಾಡುಗಳು ಇತ್ಯಾದಿ) ತೊಡೆದುಹಾಕಿ ವಿವಿಧ ರಾಷ್ಟ್ರಗಳು ಪರಸ್ಪರ ಸಮಾನಾವಕಾಶವಿರುವಂತೆ ಆರ್ಥಿಕ ಸಂಬಂಧಗಳನ್ನು ಬೆಳೆಸಿಕೊಂಡು ಬರುವ ಪರಿಸ್ಥಿತಿಯನ್ನು ಸಂಘಟಿತ ಅಂತಾರಾಷ್ಟ್ರೀಯ ಆರ್ಥಿಕತೆಯೆಂದು ಹೇಳಬಹುದು.

**ರಾಷ್ಟ್ರೀಯ ಆರ್ಥಿಕ ಸಂಘಟನೆ** : ಆರ್ಥಿಕವಾಗಿ ಮುಂದುವರಿದಿರುವ ರಾಷ್ಟ್ರಗಳಲ್ಲಿ ಆರ್ಥಿಕ ಸಂಘಟನೆ ಹೆಚ್ಚಿನ ಅಂಶದಲ್ಲಿ ಇರುವುದೂ ಹಿಂದುಳಿದಿರುವ ರಾಷ್ಟ್ರಗಳಲ್ಲಿ ಆರ್ಥಿಕ ಸಂಘಟನೆ ದುರ್ಬಲವಾಗಿರುವುದೂ ಎಲ್ಲೆಲ್ಲೂ ಕಂಡುಬರುವ ವಿಷಯ. ಅಂದಮೇಲೆ, ಆರ್ಥಿಕಾಭಿವೃದ್ಧಿಗೂ ರಾಷ್ಟ್ರೀಯ ಆರ್ಥಿಕ ಸಂಘಟನೆಗೂ ನಿಕಟಸಂಬಂಧವಿದೆ ಎಂದು ಹೇಳಬಹುದು. ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ನೀಡಿಕೆ ಬೇಡಿಕೆ ಶಕ್ತಿಗಳು ರಾಷ್ಟ್ರಾದ್ಯಂತವೂ ವ್ಯಾಪಕವಾಗಿ ವರ್ತಿಸುವುದಿಲ್ಲ. ಹಳ್ಳಿಗಳೂ, ಪಟ್ಟಣಗಳೂ ಹೆಚ್ಚು ಸ್ಥಳೀಯ ಆರ್ಥಿಕ ಸ್ವಸಂಪೂರ್ಣತೆ ಹೊಂದಿರುವ ಬಿಡಿ ಭಾಗಗಳು. ಆರ್ಥಿಕಾಭಿವೃದ್ಧಿಯ ಸಾಗಣೆಯಲ್ಲಿ ಇಂಥ ಬಿಡಿಭಾಗಗಳೊಳಗೆ ಆರ್ಥಿಕತೆಯ ಸುಸಂಬದ್ಧ ಭಾಗಗಳಾಗುವುವು. ಇವುಗಳ ಆರ್ಥಿಕ ಆಗುಹೋಗುಗಳು ವಿಶಾಲವಾದ ಆರ್ಥಿಕಶಕ್ತಿಗಳ ಪ್ರಭಾವಕ್ಕೆ ಒಳಗಾಗುವುವು. ಅಲ್ಲದೆ ಪರಸ್ಪರ ಅವಲಂಬನೆಗಳು ನಿಕಟವಾಗುವುವು. ಹೀಗೆ, ಆರ್ಥಿಕಾಭಿವೃದ್ಧಿಯಾದಂತೆ ರಾಷ್ಟ್ರದ ಆರ್ಥಿಕ ಸಂಘಟನೆಯೂ ಸ್ಪಷ್ಟ ಸ್ವರೂಪ ತಾಳುವುದು.

ಇನ್ನೊಂದು ದೃಷ್ಟಿಯಿಂದ ನೋಡಿದರೆ ಆರ್ಥಿಕ ಸಂಘಟನೆಯ ಸಾಧನೆಗೆ ಕೈಗೊಳ್ಳುವ ಕ್ರಮಗಳು ರಾಷ್ಟ್ರದ ಆರ್ಥಿಕಾಭಿವೃದ್ಧಿಗೆ ಕಾರಣವಾಗುವುವು. ರಾಷ್ಟ್ರೀಯ ಆರ್ಥಿಕ ಯೋಜನೆಗಳನ್ನು ಅನುಸರಿಸುತ್ತಿರುವ ಅನೇಕ ರಾಷ್ಟ್ರಗಳು ರಾಷ್ಟ್ರೀಯ ಸಂಘಟನೆಗೆ ವಿಶೇಷ ಕ್ರಮಗಳನ್ನು ಕೈಗೊಳ್ಳುತ್ತಿವೆ. ಆರ್ಥಿಕ ಸಂಘಟನೆ ಹೆಚ್ಚು ವಿಶಾಲವಾದ ಜನಾಂಗಸಂಘಟನೆಯ ಕೇವಲ ಒಂದು ಮುಖವಾದುದರಿಂದ ಸಂಘಟನೆಯ ಕ್ರಮಗಳೂ ಅವಶ್ಯವಾಗಿಯೇ ಹೆಚ್ಚು ವ್ಯಾಪಕವಾಗಿರುವುವು. ಉದಾಹರಣೆಗೆ, ಭಾರತ ಸರ್ಕಾರ ರಾಷ್ಟ್ರೀಯ ಸಂಘಟನೆಗೆ ಪ್ರಾಮುಖ್ಯ ನೀಡಿದೆ. ರಾಷ್ಟ್ರದಲ್ಲಿ ಭಾಷೆ, ಪ್ರಾಂತ್ಯ, ಮತ ಇತ್ಯಾದಿ ಸಂಕುಚಿತ ಭಾವನೆಗಳನ್ನೇ ಪ್ರಧಾನವಾಗಿ ಇಟ್ಟುಕೊಳ್ಳುವುದರಿಂದ ಉದ್ಭವಿಸುವ ರಾಷ್ಟ್ರೀಯ ಸಮಸ್ಯೆಗಳನ್ನು ನಿವಾರಿಸಿ ರಾಷ್ಟ್ರದ ಜನರಲ್ಲಿ ಏಕತಾಭಾವನೆ ಮೂಡಿಸುವುದು ಭಾರತ ಸರ್ಕಾರದ ನೀತಿಯ ಒಂದು ಮುಖ್ಯ ಅಂಶವಾಗಿದೆ. ಇಂಥ ಭಾವನೆ ಆರ್ಥಿಕೋದ್ಯಮಗಳ ಪೋಷಣೆಗೆ ಸಹಾಯಕವಾಗಿ ದೇಶದ ಆರ್ಥಿಕಾಭಿವೃದ್ಧಿಗೆ ಕಾರಣವಾಗುವುದು.

ಪ್ರಾದೇಶಿಕ ಆರ್ಥಿಕ ಸಮಾನತೆ ಹೆಚ್ಚಾಗಿಲ್ಲದಿರುವುದು ಆರ್ಥಿಕ ಸಂಘಟನೆಯ ಇನ್ನೊಂದು ಚಿಹ್ನೆ. ಬಂಡವಾಳ, ಶ್ರಮಬಲ, ಉದ್ಯಮಶೀಲತೆಗಳಂಥ ಉತ್ಪಾದನಾಂಗಗಳು ಪ್ರಾದೇಶಿಕ ಪ್ರಕೃತಿಸಂಪತ್ತಿಗೆ ಅನುಗುಣವಾಗಿಯೂ ಇತರ ಆರ್ಥಿಕ ಶಕ್ತಿಗಳ ಪ್ರೇರಣಾನುಸಾರವಾಗಿಯೂ ಚಲಿಸುವುದರ ಪರಿಣಾಮವಾಗಿ ಸಂಘಟಿತ ಆರ್ಥಿಕತೆಯಲ್ಲಿ ಆರ್ಥಿಕ ಅಸಮಾನತೆ ಹೆಚ್ಚಾಗಿ ಇರಲು ಅವಕಾಶವಿರುವುದಿಲ್ಲ. ಅಭಿವೃದ್ಧಿಯಲ್ಲಿ ಪ್ರಾದೇಶಿಕ ಸಮತೋಲನವೂ ಆರ್ಥಿಕಪ್ರಗತಿಯ ಪ್ರಯೋಜನಗಳ ಹಂಚಿಕೆಯಲ್ಲಿ ಅಂತರಪ್ರದೇಶ ಸಮಾನತೆಯೂ ಯೋಜನಾಮಾರ್ಗ ಹಿಡಿದಿರುವ ರಾಷ್ಟ್ರಗಳ ಯೋಜನೆಗಳ ಮುಖ್ಯ ಉದ್ದೇಶಗಳಲ್ಲಿ ಸೇರಿವೆ. ಈ ಉದ್ದೇಶಗಳಿಗೆ ಅನುಸಾರವಾಗಿ ಯುಕ್ತಕ್ರಮಗಳನ್ನು ಯೋಜನೆಗಳು ಒಳಗೊಳ್ಳುವುವು. ಹೀಗೆ ರಾಷ್ಟ್ರದ ವಿವಿಧಪ್ರದೇಶಗಳ ಪ್ರಾಕೃತಿಕ ಹಾಗೂ ಇತರ ಸಾಧನಗಳ ಅನುಕೂಲತೆಗೂ ಜನರ ಆವಶ್ಯಕತೆಗಳಿಗೂ ಅನುಸಾರವಾಗಿ ಸಮಾನಾವಕಾಶಗಳನ್ನು ಕಲ್ಪಿಸುವುದರ ಮೂಲಕ ಆರ್ಥಿಕಸಂಘಟನೆ ಸಾಧಿಸುವುದು ಅಭಿವೃದ್ಧಿಪಥದಲ್ಲಿರುವ ಎಲ್ಲ ರಾಷ್ಟ್ರಗಳ ಗುರಿ.

**ಅಂತಾರಾಷ್ಟ್ರೀಯ ಆರ್ಥಿಕ ಸಂಘಟನೆ** : 1914ಕ್ಕೆ ಮುನ್ನ ಅಂತಾರಾಷ್ಟ್ರೀಯ ರಂಗದಲ್ಲಿ ಸ್ವರ್ಣ ಪ್ರಮಿತಿ, ನಿರಾತಂಕ ವ್ಯಾಪಾರ ನೀತಿ, ಬಂಡವಾಳ ಚಲನೆ ಹಾಗೂ ಜನರ ವಲಸೆ ಇವು ವಿವಿಧ ರಾಷ್ಟ್ರಗಳ ಆರ್ಥಿಕಸ್ಥಿತಿಯಲ್ಲಿ ಒಂದು ರೀತಿಯ ಸಂಘಟನೆಯನ್ನು ಉಂಟುಮಾಡಿದ್ದುವು. ಆದರೆ ವಸಾಹತುಶಾಹಿ ಹಾಗೂ ಸಾರ್ವಭೌಮತ್ವಯುಗವಾದ ಅಂದಿನ ಪ್ರಪಂಚದಲ್ಲಿ ಅನೇಕ ಜನಾಂಗಗಳಿಗೆ ಸಮಾನಾವಕಾಶಕ್ಕೆ ಮಾರ್ಗವಿರಲಿಲ್ಲ. ಎರಡನೇ ಮಹಾಯುದ್ಧದ ತರುವಾಯ ಪ್ರಪಂಚದಲ್ಲಿ ವಸಾಹತುಗಳು ಮಾಯವಾಗಿ ಎಲ್ಲ ಜನಾಂಗಗಳಿಗೂ ರಾಜಕೀಯ ಸ್ವಾತಂತ್ರ್ಯ ಲಭಿಸಿದೆ. ಈ ಹೊಸ ವಾತಾವರಣದಲ್ಲಿ ಅಂತಾರಾಷ್ಟ್ರೀಯ ಆರ್ಥಿಕ ಸಂಘಟನೆ ಅನೇಕ ರೂಪಗಳನ್ನು ತಾಳಿ ಮುಂದುವರಿಯುತ್ತಿದೆ. ಇವುಗಳಲ್ಲಿ ಮುಖ್ಯವಾಗಿ ಐದು ಪ್ರಭೇದಗಳನ್ನು ಗುರುತಿಸಬಹುದು: 1. ಐರೋಪ್ಯ ನಿರಾತಂಕವ್ಯಾಪಾರಕ್ಷೇತ್ರ (ಯುರೋಪಿಯನ್ ಫ್ರೀ ಟ್ರೇಡ್ ಏರಿಯ) ಒಂದು ಮಾದರಿ. ಇದರಲ್ಲಿ ಸದಸ್ಯ ರಾಷ್ಟ್ರಗಳು ಸುಂಕ ಮತ್ತು ಪ್ರಮಾಣಬದ್ಧ ವ್ಯಾಪಾರ ನಿರ್ಬಂಧಗಳಿಲ್ಲದೆ ಪರಸ್ಪರ ವ್ಯಾಪಾರವನ್ನು ನಡೆಸುವುವು. ಆದರೆ ಸದಸ್ಯೇತರ ರಾಷ್ಟ್ರಗಳೊಡನೆ ನಡೆಸುವ ವ್ಯಾಪಾರದ ಬಗ್ಗೆ ಒಂದೊಂದು ರಾಷ್ಟ್ರವೂ ತನ್ನದೇ ಆದ ಸುಂಕನೀತಿಯನ್ನು ಹೊಂದಿರಬಹುದು. 2. ಕಸ್ಟಮ್ಸ್ ಒಕ್ಕೂಟ ಮಾದರಿಯ ಸಂಘಟನೆಯಲ್ಲಿ ಸದಸ್ಯರಾಷ್ಟ್ರಗಳು

ಒಕ್ಕೂಟದೊಳಗೆ ವ್ಯಾಪಾರದ ಬಗ್ಗೆ ಇರುವ ತಾರತಮ್ಯಗಳನ್ನು ತೊಡೆದುಹಾಕುವುದರ ಜೊತೆಗೆ ಹೊರ ರಾಷ್ಟ್ರಗಳೊಡನೆ ನಡೆಸುವ ವ್ಯಾಪಾರದ ಬಗ್ಗೆ ಏಕರೂಪದ ವಾಣಿಜ್ಯನೀತಿಯನ್ನು ಹೊಂದಿರುವುವು. 3. ಸಾಮಾನ್ಯ ಮಾರುಕಟ್ಟೆಯೋಜನೆ ಇನ್ನೂ ಒಂದು ಹೆಜ್ಜೆ ಮುಂದಿನ ಸಂಘಟನೆ. ಈ ಏರ್ಪಾಡಿನಲ್ಲಿ ಒಕ್ಕೂಟದ ಒಳಗಡೆ ಬಂಡವಾಳ, ಕಾರ್ಮಿಕ ಬಲ–ಇಂಥ ಉತ್ಪಾದನಾಂಗಗಳ ಚಲನೆಗೆ ಯಾವ ನಿರ್ಬಂಧವೂ ಇರುವುದಿಲ್ಲ. 4. ಆರ್ಥಿಕ ಒಕ್ಕೂಟ ಮಾದರಿ ಸಂಘಟನೆಯಲ್ಲಿ ಸರಕು ಹಾಗೂ ಉತ್ಪಾದನಾಂಗಗಳ ಚಲನೆಗೆ ಆಂತರಿಕ ನಿರ್ಬಂಧಗಳಿಲ್ಲದಿರುವಷ್ಟೇ ಅಲ್ಲದೆ ಸದಸ್ಯರಾಷ್ಟ್ರಗಳ ವಿವಿಧ ಆರ್ಥಿಕ ನೀತಿಗಳಲ್ಲೂ ಸ್ವಲ್ಪಮಟ್ಟಿನ ಸಮನ್ವಯವನ್ನೇರ್ಪಡಿಸುವ ಪ್ರಯತ್ನವಿರುವುದು. 5. ಸಂಪೂರ್ಣ ಆರ್ಥಿಕಸಂಘಟನೆಯಲ್ಲಿ ಸದಸ್ಯರಾಷ್ಟ್ರಗಳ ಆರ್ಥಿಕ ಹಾಗೂ ಸಾಮಾಜಿಕ ನೀತಿಗಳ ಬಗ್ಗೆ ಹೆಚ್ಚಿನ ಏಕರೂಪತೆ ಏರ್ಪಾಡಾಗಬೇಕಾಗುವುದು. ಅಲ್ಲದೆ ಸಾಮಾಜಿಕ ಹಾಗೂ ರಾಜಕೀಯ ಸಂಘಟನೆಗಳಿಲ್ಲದೆ ಈ ಹಂತದ ಆರ್ಥಿಕ ಸಂಘಟನೆ ಸಾಧ್ಯವಾಗಲಾರದು.

ಇಂದಿನ ಪ್ರಪಂಚದಲ್ಲಿ ಅಂತಾರಾಷ್ಟ್ರೀಯ ಆರ್ಥಿಕಸಂಘಟನೆ ಬೆಳೆಯುತ್ತಿರುವುದಕ್ಕೆ ಕೆಲವು ಮುಖ್ಯ ಕಾರಣಗಳಿವೆ. ರಾಜಕೀಯವಾಗಿ, ಪ್ರಪಂಚ ಕಮ್ಯೂನಿಸಂ ಮತ್ತು ಕಮ್ಯೂನಿಸಂ ವಿರೋಧಿ ಎಂಬ ಎರಡು ಪಂಗಡಗಳಾಗಿ ಪ್ರತ್ಯೇಕಿಸಲ್ಪಟ್ಟಿದೆ. ಈ ಎರಡು ಧ್ಯೇಯಗಳ ಸ್ಪರ್ಧೆಯ ಪರಿಣಾಮವಾಗಿ ಒಂದೊಂದು ಗುಂಪಿನ ರಾಷ್ಟ್ರಗಳಲ್ಲೂ ತಮ್ಮಗಳೊಳಗೆ ಹೆಚ್ಚು ನಿಕಟಬಾಂಧವ್ಯ ಬೆಳೆಸುವ ಒಲವು ಕಾಣಬರುತ್ತಿದೆ. ಜೊತೆಗೆ ಎರಡು ಗುಂಪಿನವರೂ ಪರಸ್ಪರ ಒಳ್ಳೆಯ ವಿಧಾನಗಳನ್ನು ರೂಢಿಗೆ ತರಲು ಯತ್ನಿಸುತ್ತಿವೆ. ಉದಾಹರಣೆಗೆ, ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಸ್ಥೆ ಅಮೆರಿಕ, ಕೆನಡ ಮತ್ತು ಹನ್ನೊಂದು ಪಾಶ್ಚಾತ್ಯ ಯುರೋಪ್ ರಾಷ್ಟ್ರಗಳನ್ನು ಪರಸ್ಪರವಾಗಿ ಸೈನಿಕದೃಷ್ಟಿಯಿಂದ ಸಂಘಟಿಸಿರುವುದೇ ಅಲ್ಲದೆ ಸದಸ್ಯ ರಾಷ್ಟ್ರಗಳ ಆರ್ಥಿಕಸಂಬಂಧಗಳ ಬೆಳೆವಣಿಗೆಗೆ ಅಡ್ಡಿಬರುವ ಕಟ್ಟುಪಾಡುಗಳನ್ನು ತೆಗೆದುಹಾಕಬೇಕೆಂದೂ ಸದಸ್ಯರಾಷ್ಟ್ರಗಳಿಗೆ ಆದೇಶ ನೀಡಿದೆ. ಹೀಗೆಯೇ ಸೋವಿಯತ್ ರಷ್ಯ ಮತ್ತು ಪೂರ್ವ ಯುರೋಪಿನ ರಾಷ್ಟ್ರಗಳು ಅವುಗಳ ಆರ್ಥಿಕತೆಗಳನ್ನು ಸಂಘಟಿಸುವ ಕ್ರಮಗಳನ್ನು ಕೈಗೊಂಡಿದೆ. ಹೀಗೆ ಮೂಲಭೂತ ಧ್ಯೇಯಗಳ ವ್ಯತ್ಯಾಸ ಪ್ರಪಂಚದಲ್ಲಿ ಎರಡು ಪಂಗಡದ ರಾಷ್ಟ್ರಗಳೊಳಗೆ ಆರ್ಥಿಕಸಂಘಟನೆ ಬೆಳೆಸಲು ಮುಖ್ಯ ಪ್ರೇರಕಶಕ್ತಿಯಾಗಿ ಪರಿಣಮಿಸಿದೆ.

ಆರ್ಥಿಕ ವ್ಯವಸ್ಥಾಕ್ಷೇತ್ರ ವಿಸ್ತರಣೆಯ ಲಾಭ ರಾಷ್ಟ್ರ–ರಾಷ್ಟ್ರಗಳ ಆರ್ಥಿಕ ಸಂಘಟನೆಗೆ ಇನ್ನೊಂದು ಮುಖ್ಯ ಪ್ರೇರಕಶಕ್ತಿ. ಆಧುನಿಕ ತಂತ್ರಜ್ಞಾನದ ಹೆಚ್ಚಿನ ಪ್ರಯೋಜನ ಪಡೆಯಬೇಕಾದರೆ ಉತ್ಪಾದನಾ ಘಟಕಗಳು ಸಾಕಷ್ಟು ದೊಡ್ಡಪ್ರಮಾಣ ಹೊಂದಿರಬೇಕು. ಸಣ್ಣಪುಟ್ಟ ರಾಷ್ಟ್ರಗಳು ತಮ್ಮ ತಮ್ಮ ರಾಷ್ಟ್ರದ ಉತ್ಪನ್ನಸಾಧನೆ ಮತ್ತು ಆಂತರಿಕ ಮಾರುಕಟ್ಟೆಗಳಿಗೆ ಅನುಗುಣವಾಗಿ ಕೈಗಾರಿಕಾವ್ಯವಸ್ಥೆ ಮಾಡುವುದಾದರೆ ಉದ್ಯಮಘಟನೆ ದೊಡ್ಡದಾಗಲು ಸಾಧ್ಯವಿಲ್ಲ. ಇಂಥ ಸಂದರ್ಭಗಳಲ್ಲಿ ಕೆಲವು ರಾಷ್ಟ್ರಗಳು ಒಂದುಗೂಡುವುದರಿಂದ ಕೈಗಾರಿಕೆಯ ಪ್ರಮಾಣ, ವಿಸ್ತರಣೆಗಳಿಗೆ ಅವಕಾಶವಾಗುವುದು. ಇದರಿಂದ ಶ್ರಮ ವಿಭಜನೆ, ಆಂತರಿಕ ಹಾಗೂ ಬಾಹ್ಯ ಆರ್ಥಿಕ ಲಾಭಗಳ ಅವಕಾಶ ಹೆಚ್ಚಿಸಿದಂತಾಗುವುದು. ಫ್ರಾನ್ಸ್, ಪಶ್ಚಿಮ ಜರ್ಮನಿ ಇತ್ಯಾದಿ ರಾಷ್ಟ್ರಗಳು ಮುಖ್ಯವಾಗಿ ಕಲ್ಲಿದ್ದಲು ಮತ್ತು ಉಕ್ಕಿನ ಕೈಗಾರಿಕೆಗಳನ್ನು ಈಚಿನ ಯುದ್ಧೋತ್ತರ ಕಾಲದಲ್ಲಿ ಒಕ್ಕೂಟ ಕ್ಷೇತ್ರದ ವಿಸ್ತೃತ ಚೌಕಟ್ಟಿಗೆ ಅನುಗುಣವಾಗಿ ಪುನರ್ವ್ಯವಸ್ಥೆಗೊಳಿಸಿದುದರ ಗಣನೀಯಲಾಭ ಇಂಥ ಸಂಘಟನೆಯ ಪ್ರಯೋಜನಕ್ಕೆ ಒಂದು ಉತ್ತಮನಿದರ್ಶನ. ಉತ್ಪಾದನಾಂಗಗಳ ಚಲನೆ, ತಾಂತ್ರಿಕ ಬೆಳೆವಣಿಗೆಯ ಗತಿಯನ್ನು ಚುರುಕುಗೊಳಿಸುವಿಕೆ ಇತ್ಯಾದಿ ಅಂಶಗಳ ಮೂಲಕ ಆರ್ಥಿಕಸಂಘಟನೆ ಆರ್ಥಿಕಾಭಿವೃದ್ಧಿಗೂ ಆರ್ಥಿಕ ಏರಿಳಿತಗಳ ಹೊಡೆತವನ್ನು ಕಡಿಮೆ ಮಾಡುವುದಕ್ಕೂ ಸಹಾಯವಾಗುವುದು.

ಇತ್ತೀಚಿನ ಅಂತಾರಾಷ್ಟ್ರೀಯ ಆರ್ಥಿಕಸಂಘಟನೆಗೆ ಕೆಲವು ಐತಿಹಾಸಿಕ ಸಂದರ್ಭಗಳು ವಿಶೇಷವಾದ ಪ್ರೇರಕಶಕ್ತಿಗಳಾಗಿವೆ. ಎರಡನೆಯ ಮಹಾಯುದ್ಧದ ತರುವಾಯ ಐರೋಪ್ಯ ರಾಷ್ಟ್ರಗಳ ಆರ್ಥಿಕಭದ್ರತೆ ಮುರಿದುಬಿದ್ದ ದುಃಸ್ಥಿತಿಯಲ್ಲಿ ಅವುಗಳ ಹಿತಚಿಂತನೆಗಳು ಏಕರೂಪ ಹೊಂದಿದ್ದು ಅವುಗಳೊಳಗೆ ಪರಸ್ಪರ ನಿಕಟ ಬಾಂಧವ್ಯದ ಆವಶ್ಯಕತೆ ಎಂದಿಗಿಂತಲೂ ಹೆಚ್ಚಾಗಿತ್ತು. ಪುನರ್ವ್ಯವಸ್ಥೆಗೆ ಮಾರ್ಷಲ್ ಯೋಜನೆಯ ಮೂಲಕ ಉದಾರವಾಗಿ ಸಹಾಯ ನೀಡಿದ ಅಮೆರಿಕ ಐರೋಪ್ಯ ಆರ್ಥಿಕಸಂಘಟನೆಗೆ ಉತ್ತೇಜನ ನೀಡಿದುದು ಸಂಘಟನೆ ಶೀಘ್ರವಾಗಿ ಮುಂದುವರಿಯಲು ಅವಕಾಶಕೊಟ್ಟಿತು. ರೋಮ್ ಒಪ್ಪಂದದ ಪ್ರಕಾರ (1957) ಆರು (ಬೆಲ್ಜಿಯಂ, ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಲಕ್ಸಂಬರ್ಗ್ ಮತ್ತು ನೆದರ್‌ಲೆಂಡ್ಸ್) ಪಾಶ್ಚಾತ್ಯ ಯುರೋಪು ರಾಷ್ಟ್ರಗಳು ಐಕ್ಯಮಾರುಕಟ್ಟೆಯನ್ನೂ ಸ್ಟಾಕ್‌ಹೋಮ್ ಒಪ್ಪಂದದ (1959) ಪ್ರಕಾರ ಏಳು (ಬ್ರಿಟನ್, ಡೆನ್ಮಾರ್ಕ್, ಸ್ವೀಡನ್, ನಾರ್ವೆ, ಆಸ್ಟ್ರಿಯ, ಸ್ವಿಟ್ಜರ್‌ಲೆಂಡ್ ಮತ್ತು ಪೋರ್ಚುಗಲ್) ಪಾಶ್ಚಾತ್ಯ ಯುರೋಪು ರಾಷ್ಟ್ರಗಳು ನಿರಾತಂಕ ವ್ಯಾಪಾರ ಸಂಘವನ್ನೂ ಸ್ಥಾಪಿಸಿಕೊಂಡವು. ಈ ಒಪ್ಪಂದಗಳ ತಳಹದಿಯಮೇಲೆ ಐರೋಪ್ಯ ಆರ್ಥಿಕಸಂಘಟನೆ ಮುಂದುವರಿಯುತ್ತಿದೆ.

ಪ್ರಪಂಚದ ಇತರ ಭಾಗಗಳಲ್ಲೂ ಕೆಲ ಹಲವು ರಾಷ್ಟ್ರಗಳು ಕೂಡಿಕೊಂಡು ಒಂದಲ್ಲ ಒಂದು ರೀತಿಯ ಆರ್ಥಿಕಸಂಘಟನೆಯನ್ನು ಏರ್ಪಡಿಸಿಕೊಳ್ಳುತ್ತಿರುವುದು ಭವಿಷ್ಯ ಪ್ರಪಂಚದ ಆರ್ಥಿಕತೆಗೆ ಅತ್ಯಂತ ಗಮನಾರ್ಹವಾದ ವಿಷಯವಾಗಿದೆ. ನಾರ್ಡಿಕ್ ಐಕ್ಯಮಾರುಕಟ್ಟೆ, ಕೇಂದ್ರ ಅಮೆರಿಕ ನಿರಾತಂಕ ವ್ಯಾಪಾರಕ್ಷೇತ್ರ, ಲ್ಯಾಟಿನ್ ಅಮೆರಿಕ ನಿರಾತಂಕ ವ್ಯಾಪಾರಕ್ಷೇತ್ರ, ಪಶ್ಚಿಮ ಆಫ್ರಿಕ ಸಂಘ, ಆಫ್ರಿಕ ಮಾರುಕಟ್ಟೆ, ವೆಸ್ಟ್ ಇಂಡೀಸ್ ಫೆಡರೇಷನ್ನಿನ ಕಸ್ಟಮ್ಸ್ ಸಂಘ, ಅರಬ್ಬೀ ಐಕ್ಯಮಾರುಕಟ್ಟೆಗಳು ಉದ್ಭವಿಸಿವೆ. ಈ ಯೋಜನೆಗಳು ವಿವಿಧ ಹಂತಗಳಲ್ಲಿವೆ. ಒಟ್ಟಿನಲ್ಲಿ ಹೇಳುವುದಾದರೆ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಅನೇಕ ಪ್ರಾದೇಶಿಕ ಆರ್ಥಿಕ ಸಂಘಟನಾ ಯೋಜನೆಗಳು ಹುಟ್ಟಿಕೊಂಡಿವೆ.

ವಿಶಾಲವಾದ ಅಂತಾರಾಷ್ಟ್ರೀಯ ಆರ್ಥಿಕಸಂಘಟನೆಗೆ ಈ ಮೇಲೆ ಹೇಳಿರುವ ಪ್ರಾದೇಶಿಕ ಸಂಘಟನಾ ಯೋಜನೆಗಳು ಮಾರ್ಗ ನೀಡುತ್ತಿವೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಅಂತಾರಾಷ್ಟ್ರೀಯ ನಿರ್ದೇಶನಾಯಂತ್ರಗಳಲ್ಲಿ ಮುಖ್ಯವಾದ ಸುಂಕಗಳ ಹಾಗೂ ವ್ಯಾಪಾರದ ಸಾರ್ವತ್ರಿಕ ಒಪ್ಪಂದ (ಗ್ಯಾಟ್ ಅಥವಾ ಜನರಲ್ ಅಗ್ರಿಮೆಂಟ್ ಆನ್ ಟ್ಯಾರಿಫ್ಸ್ ಅಂಡ್ ಟ್ರೇಡ್). ಅಂತಾರಾಷ್ಟ್ರೀಯ ಹಣಕಾಸು ವ್ಯವಹಾರಗಳನ್ನು ಸುಸೂತ್ರವಾಗಿ ನಡೆಸುವುದಕ್ಕಾಗಿ ಏರ್ಪಾಡಾಗಿರುವ ಅಂತಾರಾಷ್ಟ್ರೀಯ ದ್ರವ್ಯನಿಧಿ (ಐ.ಎಂ.ಎಫ್. ಅಥವಾ ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್), ವಿಶ್ವಬ್ಯಾಂಕು ಇತ್ಯಾದಿ ಸಂಸ್ಥೆಗಳ ವಿಧಾಯಕ ಚೌಕಟ್ಟಿನೊಳಗೆ ಪ್ರಾದೇಶಿಕ ಸಂಘಟನಾ ಯೋಜನೆಗಳು ವಿಕಾಸವಾಗುತ್ತಿರುವುದರಿಂದ ಇವು ಸಹಜವಾಗಿಯೂ ವಿಶಾಲ ವ್ಯಾಪ್ತಿಯ ಅಂತಾರಾಷ್ಟ್ರೀಯ ಸಂಘಟನೆಗೆ ಮಾರ್ಗ ಮಾಡಿಕೊಡುವುದೆಂದು ಆಶಿಸಬಹುದು. (ಎ.ಪಿ.ಎಸ್.)

**ಆರ್ಥಿಕ ಸಂಪನ್ಮೂಲಗಳು :** ದೇಶದ ಅಥವಾ ವ್ಯಕ್ತಿಯ ಆರ್ಥಿಕಾಭಿವೃದ್ಧಿಗೆ ಕಾರಣವಾದ ಶ್ರಮ, ಬಂಡವಾಳ ಮತ್ತು ಪ್ರಕೃತಿಸಂಪತ್ತುಗಳು (ಇಕನಾಮಿಕ್ ರಿಸೋರ್ಸಸ್).

ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಗಳಾಗಿರುವ ಎಲ್ಲ ವ್ಯಕ್ತಿಗಳ ಶಕ್ತಿ ಮತ್ತು ಕೌಶಲಗಳೇ ಶ್ರಮ. ಒಂದು ದೇಶದಲ್ಲಿ ವಾಸಿಸುವ ಜನಸಂಖ್ಯೆಯ ಮೇಲೆ ಅಲ್ಲಿನ ಶ್ರಮಸಂಪತ್ತು ನಿರ್ಧಾರವಾಗುವುದಿಲ್ಲ. ಅಲ್ಲಿನ ಕೆಲಸ ಮಾಡಬಲ್ಲ ಜನಸಂಖ್ಯೆ, ಅವರ ವಿದ್ಯಾಭ್ಯಾಸದ ಮಟ್ಟ, ವಿವಿಧಕಾರ್ಯಗಳಲ್ಲಿ ಇರುವ ಅರ್ಹತೆ ಮತ್ತು ಪ್ರಾವೀಣ್ಯ, ಭೌಗೋಳಿಕ ಅನುಕೂಲತೆ–ಈ ವಿಷಯಗಳಿಂದ ಅದು ನಿರ್ಧಾರವಾಗುತ್ತದೆ.

ಬಂಡವಾಳ ಮುಂದಿನ ಉತ್ಪಾದನಾಹಂತಕ್ಕೆ ಸಹಾಯವಾಗುವ ಸಾಮಗ್ರಿಗಳು, ಯಂತ್ರಗಳು, ಕಟ್ಟಡಗಳು ಇವುಗಳಿಂದ ಕೂಡಿರುತ್ತದೆ. ಸಂಪನ್ಮೂಲಗಳಲ್ಲಿ ಬಂಡವಾಳಕ್ಕೆ ಎರಡನೆಯ ಸ್ಥಾನ. ಬಂಡವಾಳದ ಕ್ರೋಡೀಕರಣೆ ಎಲ್ಲ ರಾಷ್ಟ್ರಗಳಲ್ಲೂ ಅತಿ ಮುಖ್ಯ ಸ್ಥಾನ ಪಡೆದುಕೊಂಡಿದೆ. ಅದರ ಶೇಖರಣೆ ಆರ್ಥಿಕಪ್ರಗತಿಯ ಮುಖ್ಯ ಚಿಹ್ನೆ. ಬಂಡವಾಳಶಾಹಿ ರಾಷ್ಟ್ರವಾಗಲಿ, ಸಮಾಜವಾದಿ ರಾಷ್ಟ್ರವಾಗಲಿ ಸಾಕಷ್ಟು ಬಂಡವಾಳವಿಲ್ಲದೆ ಯಾವ ಕೆಲಸವನ್ನೂ ಮಾಡಲಾಗುವುದಿಲ್ಲ.

ಪ್ರಕೃತಿಸಂಪತ್ತು ಪ್ರಕೃತಿದತ್ತವಾದ ಕೊಡುಗೆ. ಭೂಮಿ, ಖನಿಜ, ಸಸ್ಯ, ನೀರು, ವಾಯುಗುಣ ಇತ್ಯಾದಿಗಳನ್ನು ಇದು ಒಳಗೊಂಡಿದೆ.

ಈ ಮೂರು ಸಂಪನ್ಮೂಲಗಳ ಲಕ್ಷಣವೆಂದರೆ ಅವು ಪರಸ್ಪರ ಪ್ರತಿನಿಧಿಸಲು ಸಾಧ್ಯವಾದುವು. ಶ್ರಮವನ್ನು ಸಾಹಸ ಅಥವಾ ವ್ಯವಸ್ಥಾಪಕತ್ವಕ್ಕೆ ಸಂಬಂಧಿಸಿದ್ದೆಂದೂ ಕುಶಲ ಮತ್ತು ಅಕುಶಲ ದುಡಿಮೆ ಎಂದೂ ಎರಡು ಭಾಗಗಳಾಗಿ ವಿಂಗಡಿಸಬಹುದು. ಅತ್ಯಂತ ಹೆಚ್ಚು ಉತ್ಪಾದನೆಯಾಗುವಂಥ ದೇಶದ ಶ್ರಮಶಕ್ತಿಯ ಉಪಯೋಗ ಪಡೆದುಕೊಳ್ಳಲು ಶ್ರಮವಿಭಜನೆ ಮತ್ತು ಶ್ರಮ ವೈಶಿಷ್ಟ್ಯಗಳನ್ನು ಸಂಯೋಜನೆ ಗೊಳಿಸಬೇಕಾಗುತ್ತದೆ.

ಬಂಡವಾಳ ಸಂಪತ್ತು ವೃತ್ತಿಕೌಶಲ, ಅಲ್ಲಿನ ಜನರ ಉತ್ಪಾದನಾ ಶಕ್ತಿ, ಹಣ, ನಿವೇಶನದ ಸಾಮರ್ಥ್ಯ–ಇವುಗಳನ್ನು ಹೊಂದಿಕೊಂಡು ಹೋಗುತ್ತದೆ. ಅತ್ಯಂತ ಸಮರ್ಪಕ ರೀತಿಯಲ್ಲಿ ಬಂಡವಾಳ ಸಂಪತ್ತನ್ನು ವೃದ್ಧಿಪಡಿಸುವುದು ಒಂದು ಸಮಸ್ಯೆಯೇ. ಆಧುನಿಕ ಯುಗದಲ್ಲಿ ಉತ್ಪಾದನೆ ಸಂಕೀರ್ಣ ವಿಧಾನದ್ದಾಗಿರುವುದರಿಂದ ತಪ್ಪು ಲೆಕ್ಕಾಚಾರ ಬಂಡವಾಳ ಶೇಖರಣೆಗೆ ಅಡ್ಡಿಯನ್ನು ತರಬಹುದು.

ಈ ಸಂಪನ್ಮೂಲಗಳನ್ನು ಸಮರ್ಪಕ ರೀತಿಯಲ್ಲಿ ಸಂಯೋಜಿಸುವ ಕೆಲಸ ಉದ್ದಿಮೆ ಸಾಹಸಿಯದಾಗುತ್ತದೆ. ಆತನ ತೀರ್ಮಾನ ಸಾಧಾರಣವಾಗಿ ಒಂದು ಅಂಶದ ಉತ್ಪಾದನೆಗೆ ಅಗತ್ಯವಿರುವ ಸಂಪನ್ಮೂಲದ ಅಂಶದಮೇಲೆ ನಿರ್ಧಾರವಾಗುತ್ತದೆ. ಉತ್ಪಾದನಾ ವೆಚ್ಚ ಖಚಿತವಾಗಿ ಸಂಪನ್ಮೂಲದ ಇರುವಿಕೆಯ ಮೇಲೆ ನಿರ್ಧಾರವಾಗುತ್ತದೆ. ಅತ್ಯಂತ ಹೆಚ್ಚಿನ ಬಂಡವಾಳ ಶೇಖರಣೆ ಆ ಪ್ರದೇಶದಲ್ಲಿ ಪ್ರಕೃತಿಸಂಪತ್ತು ಮತ್ತು ಶ್ರಮಸಂಪತ್ತಿಲ್ಲದೆ ಅಸಾಧ್ಯ. ಉದಾಹರಣೆಗೆ, ಸಂಪನ್ಮೂಲಗಳಿಂದ ಶ್ರೀಮಂತವಿರುವ ರಾಷ್ಟ್ರಗಳು ಮಾತ್ರ ಇಂದಿನ ಅತ್ಯಂತ ಮುಂದುವರಿದ ರಾಷ್ಟ್ರಗಳಾಗಿವೆ. ಹಿಂದುಳಿದಿರುವ ರಾಷ್ಟ್ರಗಳಲ್ಲಿನ ಮುಖ್ಯ ಕೊರತೆಯೆಂದರೆ ಸಂಪನ್ಮೂಲಗಳು. ಔದ್ಯೋಗೀಕರಣ ಸಂಪನ್ಮೂಲಗಳ ಉಪಯುಕ್ತ ಸಂಯೋಜನೆಯ ಫಲ.

ಆವಿಷ್ಕಾರ ಮತ್ತು ಉದ್ಯಮಪ್ರಗತಿ ಸಂಪನ್ಮೂಲಗಳ ಉಪಯೋಗದ ವೇಗವರ್ಧಕಗಳಾಗಬಹುದು. ಉದಾಹರಣೆಗೆ ಯಂತ್ರಯುಗ ಭೂಮಿಯ ಉತ್ಪಾದನೆಯಲ್ಲಿ ಕ್ರಾಂತಿಯನ್ನೇ ಉಂಟುಮಾಡಿದೆ. ಅದು ಭೂಮಿಯ ಮೇಲೆ ಮಾನವಶ್ರಮದ ವೆಚ್ಚವನ್ನು ಕಡಿಮೆಮಾಡಿದೆ. ಸಂಪನ್ಮೂಲಗಳ ಮೇಲಿನ ಹಕ್ಕು ಸಮಾಜಸ್ಥಿತಿಯ ಮೇಲೆ ನಿರ್ಧಾರವಾಗುತ್ತದೆ. ಬಂಡವಾಳಶಾಹಿ ರಾಷ್ಟ್ರದಲ್ಲಿ ಇದರ ಮೇಲಿನ ಹಕ್ಕು ಹೆಚ್ಚಾಗಿ ವ್ಯಕ್ತಿಗಳದ್ದಾಗಿರುತ್ತದೆ. ಅವರು ಸಂಪನ್ಮೂಲಗಳ ಉಪಯೋಗವನ್ನು ಅವುಗಳ ಸಂಯೋಜನೆ, ಲಾಭನಷ್ಟದ ಲೆಕ್ಕಾಚಾರದಿಂದ ನಿರ್ಧರಿಸುತ್ತಾರೆ. ಇಂಥ ಕಡೆ ಪರಸ್ಪರ ಪೈಪೋಟಿ ಅನುಭೋಗಿಗಳ ಹಾಗೂ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ. ಸಂಪನ್ಮೂಲಗಳ ಹಂಚಿಕೆಯ ವಿಷಯದಲ್ಲಿ ಅನುಭೋಗಿಗೆ ನಿರ್ಧಾರ ಸ್ವಾತಂತ್ರ್ಯವಿರುತ್ತದೆ.

ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಸಂಪನ್ಮೂಲಗಳ ಮೇಲಿನ ಅಧಿಕಾರ ಸರ್ಕಾರದ ಮೂಲಕ ಇಡೀ ಜನತೆಯ ಕೈಯಲ್ಲಿರುತ್ತದೆ. ಸಂಪನ್ಮೂಲಗಳ ಹಂಚಿಕೆಯ ವಿಷಯದಲ್ಲಿ ಸರ್ಕಾರದ ತೀರ್ಮಾನ ಕೊನೆಯದಾಗಿರುತ್ತದೆ. ಮಿಶ್ರ ಆರ್ಥಿಕ ವ್ಯವಸ್ಥೆಯ (ಮಿಕ್ಸೆಡ್ ಎಕಾನಮಿ) ರಾಷ್ಟ್ರಗಳಲ್ಲಿ ಸಂಪನ್ಮೂಲಗಳ ಮೇಲಿನ ಅಧಿಕಾರ ಸರ್ಕಾರ ಹಾಗೂ ವ್ಯಕ್ತಿ ಇಬ್ಬರ ಕೈಯಲ್ಲೂ ಇರುತ್ತದೆ. ಅತ್ಯಂತ ಮುಖ್ಯವಾದ ಅಂಶವೆಂದರೆ, ಸಂಪನ್ಮೂಲಗಳ ಸಮರ್ಪಕ ಸಂಯೋಜನೆಯು ಆರ್ಥಿಕಪ್ರಗತಿಯ ಮುಖ್ಯ ರಹಸ್ಯ. (ಸಿ.ಕೆ.ಆರ್.)

**ಆರ್ಥಿಕ ಸರಕುಗಳು :** ಹಣ ಕೊಡದೆ ಪುಕ್ಕಟೆ ಸಿಕ್ಕುವ ಪದಾರ್ಥಗಳಿಂದ ಭಿನ್ನವಾದುದನ್ನು ಈ ಹೆಸರಿನಿಂದ ಕರೆಯಲಾಗಿದೆ (ಎಕನಾಮಿಕ್ ಗೂಡ್ಸ್). ಪುಕ್ಕಟೆಯಾಗಿ ಸಿಗುವ ಸರಕುಗಳಿಗೆ ಉದಾಹರಣೆಯೆಂದರೆ ಗಾಳಿ, ಸೂರ್ಯನ ಬಿಸಿಲು, ಬೆಳಕು ಇತ್ಯಾದಿ. ಸಂದರ್ಭಕ್ಕೆ ತಕ್ಕಂತೆ ಸರಕುಗಳನ್ನು ಈ ರೀತಿ ವಿಭಾಗ ಮಾಡಬೇಕಾಗುತ್ತದೆ. ಏಕೆಂದರೆ ಸಾಧಾರಣ ಸಂದರ್ಭಗಳಲ್ಲಿ ಗಾಳಿ, ಸೂರ್ಯನ ಬೆಳಕು, ಜೊತೆಗೆ ನೀರು ಇವೆಲ್ಲ ಪುಕ್ಕಟೆ ಸಿಗುವ ಸರಕುಗಳೇ ನಿಜ. ಆದರೆ ಕೊಳಾಯಿಯಲ್ಲಿ ಬರುವ ನೀರು, ಯಂತ್ರಗಳಿಂದ ನಾವೇ ಪುಕ್ಕಟೆಕೊಳ್ಳುವ ಗಾಳಿ–ಇವು ಆರ್ಥಿಕ ಸರಕುಗಳಾಗುತ್ತವೆ. ಏಕೆಂದರೆ ಹಾಗಾದಾಗ ಅವಕ್ಕೆ ಹಣದಬೆಲೆ ಬರುತ್ತದೆ. ಪುಕ್ಕಟೆವಸ್ತುಗಳಿಗೆ ಹಣದಬೆಲೆ ಇಲ್ಲವಾಗಿ ಅವು ಅರ್ಥಶಾಸ್ತ್ರದ ಪರಿಮಿತಿಗೆ ಒಳಪಡುವುದಿಲ್ಲ. ಆರ್ಥಿಕ ಸರಕುಗಳು ಮಾತ್ರ ಈ ಪರಿಮಿತಿಗೆ ಒಳಪಡುತ್ತವೆ.

ಆರ್ಥಿಕ ಸರಕುಗಳು ವಸ್ತು, ಸೇವೆ–ಹೀಗೆ ಎರಡು ರೂಪದಲ್ಲೂ ಇರಬಹುದು. ಆಸ್ತಿಯ ಹಕ್ಕಿನ ಪತ್ರ, ಬಂಧಪತ್ರ, ಕರಾರುಪತ್ರ ಇತ್ಯಾದಿಗಳು ಪರೋಕ್ಷ ಸರಕುಗಳೆನಿಸುತ್ತವೆ. ಸರ್ಕಾರ ಮೊದಲಾದ ಸಂಸ್ಥೆಗಳು ಒದಗಿಸುವ ಸಲಹೆ, ಸೇವೆಗಳು ಹೊರನೋಟಕ್ಕೆ ಪುಕ್ಕಟೆಯಾಗಿ ಕಂಡರೂ ಅವಕ್ಕೆ ಜನ ತೆರಿಗೆ ರೂಪದಲ್ಲಿ ಹಣ ತೆತ್ತಿರುತ್ತಾರಾದ ಕಾರಣ ಅಂಥವೂ ಆರ್ಥಿಕ ಸರಕುಗಳಾಗುತ್ತವೆ.

ವಸ್ತುರೂಪವಾದ ಆರ್ಥಿಕ ಸರಕುಗಳನ್ನು ಅನೇಕ ಅರ್ಥಶಾಸ್ತ್ರಜ್ಞರು ಸಂಪತ್ತು ಎಂದು ಕರೆದಿದ್ದಾರೆ. ಅದು ಎರಡು ಬಗೆ : ಅನುಭೋಗಿಗಳ ಸರಕು ಮತ್ತು ಉತ್ಪಾದಕರ ಸರಕು. ಅನುಭೋಗಿಗಳಿಗೆ ನೇರ ಭೋಗಕ್ಕೆ ಒದಗುವುವು ಅನುಭೋಗಿಗಳ ಸರಕುಗಳಾಗುತ್ತವೆ. ಅಂಥ ವಸ್ತುಗಳ ಉತ್ಪಾದನೆಗಾಗಿ ಉತ್ಪಾದಕರು ಬಳಸುವುದೇ ಉತ್ಪಾದಕರ ಸರಕುಗಳು. ಸರಕು ಯಾರ ಸ್ವಾಮ್ಯದಲ್ಲಿದೆ ಎಂಬುದರ ಮೇಲೆ ಈ ವಿಂಗಡಣೆಯನ್ನು ಮಾಡಲಾಗಿದೆ. ಇದ್ದಿಲು, ಬಟ್ಟೆ ಮುಂತಾದವನ್ನು ಎರಡೂ ಬಗೆಯವೆಂದು ಹೇಳಬಹುದು. ಇವು ಮನೆಯಲ್ಲಿದ್ದರೆ ಅನುಭೋಗಿಯ ಸರಕುಗಳಾಗುತ್ತವೆ. ಅಂಗಡಿಯಲ್ಲೋ ಕಾರ್ಖಾನೆಯಲ್ಲೋ ಇದ್ದರೆ ಉತ್ಪಾದನಾ ಸರಕುಗಳಾಗುತ್ತವೆ. (ಸಿ.ಕೆ.ಆರ್.)

**ಆರ್ಥಿಕ ಸ್ವಾತಂತ್ರ್ಯ :** ಆರ್ಥಿಕ ಕ್ಷೇತ್ರದಲ್ಲಿ ಯಾವುದೇ ರೀತಿಯ ಪಾತ್ರವಹಿಸುವವರಿಗೆ ವ್ಯವಸ್ಥಿತ ಸಮಾಜದ ಚೌಕಟ್ಟಿನೊಳಗೆ ಅವರವರ ಇಷ್ಟಾನುಸಾರವಾಗಿ ವರ್ತಿಸಲು ಇರುವ ಅವಕಾಶವನ್ನು ವೈಯಕ್ತಿಕ ಆರ್ಥಿಕ ಸ್ವಾತಂತ್ರ್ಯ (ಎಕನಾಮಿಕ್ ಫ್ರೀಡಂ) ಎಂದು ಹೇಳಬಹುದು. ಆರ್ಥಿಕ ಸ್ವತಂತ್ರತೆಯಲ್ಲಿ ಅಡಕವಾಗಿರುವ ಮುಖ್ಯ ಅಂಶಗಳನ್ನು ಕೆಳಕಂಡಂತೆ ವಿಂಗಡಿಸಿ ವಿಶದಪಡಿಸಲಾಗುವುದು: 1. ಉದ್ಯಮಶೀಲತೆಯ ಸ್ವತಂತ್ರತೆ. 2. ಅಪೇಕ್ಷಿತ ಉದ್ಯೋಗ ಕೈಗೊಳ್ಳಲು ಜನರಿಗೆ ಇರುವ ಸ್ವತಂತ್ರತೆ. 3. ಸಂಘ ಸ್ಥಾಪನೆ ಹಾಗೂ ಸಂಘಬಲದ ಮೂಲಕ ಆರ್ಥಿಕ ಷರತ್ತುಗಳನ್ನು ಸರಿಪಡಿಸಿಕೊಳ್ಳುವ ಸ್ವತಂತ್ರತೆ. 4. ಅನುಭೋಗಿಗಳಿಗೆ ಆಯ್ಕೆಯ ಸ್ವತಂತ್ರತೆ. 5. ರಾಷ್ಟ್ರದ ಆರ್ಥಿಕ ಸ್ವತಂತ್ರತೆ.

ಅವರವರ ಇಷ್ಟಾನುಸಾರವಾಗಿ ಉದ್ಯಮಗಳನ್ನು ಆರಂಭಿಸುವ, ವ್ಯವಸ್ಥೆಗೊಳಿಸುವ ಮತ್ತು ನಡೆಸುವ ಸ್ವಾತಂತ್ರ್ಯ ಆರ್ಥಿಕ ಸ್ವಾತಂತ್ರ್ಯದ ಒಂದು ಮುಖ. ಈ ವಿಧದ ಸ್ವತಂತ್ರತೆ ಸಮಾಜದ ರಾಜಕೀಯ ಆರ್ಥಿಕ ಪದ್ಧತಿಯನ್ನು ಅವಲಂಬಿಸಿದೆ. ಬಂಡವಾಳಶಾಹಿ ರಾಷ್ಟ್ರದಲ್ಲಿ ಭೂಮಿ, ಬಂಡವಾಳ ಮತ್ತು ಇತರ ರೂಪದ ಆಸ್ತಿಗಳನ್ನು ಕೂಡಿಸುವ ಮತ್ತು ಅವರವರ ಇಷ್ಟಾನುಸಾರ (ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಲಾಗುವ ಕೆಲವು ನಿಯಮಗಳಿಗೆ ಒಳಪಟ್ಟು) ಉಪಯೋಗಿಸುವ ಹಕ್ಕು, ಕ್ರಿಯಾಸ್ವಾತಂತ್ರ್ಯದ ಖಾಸಗಿ ವ್ಯಕ್ತಿಗಳಿಗೆ ಹೆಚ್ಚು ಹೆಚ್ಚಾಗಿರುತ್ತದೆ. ಖಾಸಗಿ ಆಸ್ತಿ ಪದ್ಧತಿಯನ್ನು ರದ್ದುಮಾಡಿ, ಉತ್ಪಾದನಾಂಗಗಳಾದ ಭೂಮಿ ಹಾಗೂ ಬಂಡವಾಳಗಳನ್ನು ರಾಷ್ಟ್ರೀಕರಣಮಾಡಿ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಪದ್ಧತಿಗಳಲ್ಲಿ ಖಾಸಗಿ ಉದ್ಯಮ ಸ್ವಾತಂತ್ರ್ಯಕ್ಕೆ ಅವಕಾಶವಿರುವುದಿಲ್ಲ. ಹೀಗೆ ಉತ್ಪಾದನಾಂಗಗಳ ರಾಷ್ಟ್ರೀಕರಣವಾಗದೆ ಆಸ್ತಿಯ ಖಾಸಗಿ ಒಡೆತನವಿರುವ ರಾಷ್ಟ್ರಗಳಲ್ಲೂ ಆರ್ಥಿಕ ಯೋಜನಾ ಪದ್ಧತಿ ಅನುಷ್ಠಾನದಲ್ಲಿ ಇರುವುದಾದರೆ ಉದ್ಯಮ ಸ್ವಾತಂತ್ರ್ಯ ಮೊಟಕಾಗುವುದು ಖಂಡಿತ. ಇಂದಿನ ಪ್ರಪಂಚದಲ್ಲಿ ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪದ್ಧತಿಯ ರಾಷ್ಟ್ರಗಳನ್ನು ಬಿಟ್ಟರೂ ಇತರ ಅನೇಕ ರಾಷ್ಟ್ರಗಳು ಆರ್ಥಿಕಯೋಜನೆಯನ್ನು ಅನುಸರಿಸುವುದರಿಂದ ಉದ್ಯಮ ಸ್ವಾತಂತ್ರ್ಯವನ್ನು ಮಿತಿಗೊಳಿಸಿದಂತಾಗಿದೆ. ಉದಾಹರಣೆಗೆ ಭಾರತದಲ್ಲಿ 1956ರಲ್ಲಿ ಘೋಷಿತವಾದ ಕೈಗಾರಿಕಾನೀತಿಯ ಪ್ರಕಾರ ಅನೇಕ ಹಿರಿಯ ಕೈಗಾರಿಕೆಗಳಲ್ಲಿ ಖಾಸಗಿ ಉದ್ಯಮಿಗಳಿಗೆ ಪ್ರವೇಶವಿಲ್ಲದಂತಾಗಿದೆ. ಇತರ ಕೈಗಾರಿಕೆಗಳ ಬಗ್ಗೆಯೂ ಯೋಜನೆಯ ಉದ್ದೇಶ ಹಾಗೂ ಆವಶ್ಯಕತೆಗಳಿಗೆ ಅನುಸಾರವಾಗಿ ವಿವಿಧ ನಿಯಂತ್ರಣಗಳು ಇರುವುದರಿಂದ ಈ ಕ್ಷೇತ್ರದಲ್ಲಿಯೂ ಪೂರ್ಣ ಉದ್ಯಮ ಸ್ವಾತಂತ್ರ್ಯವಿರುವುದಿಲ್ಲ. ಆದರೆ ಇಂಥ ಯೋಜಿತ ನಿಯಂತ್ರಣಗಳಿಂದ ಉಂಟಾಗುವ ಇತಿಮಿತಿಗಳು ಒಂದು ಹಿರಿಯ ಉದ್ದೇಶದ ಸಾಧನೆಗಾಗಿ ವಿಧಿಸಲಾಗುವುದರಿಂದ ಉದ್ಯಮ ಸ್ವಾತಂತ್ರ್ಯ ಈ ರೀತಿ ಕಡಿಮೆಯಾದುದರ ಬಗ್ಗೆ ಸಮಾಜ ವಿಷಾದಿಸಬೇಕಾಗಿಲ್ಲ ಎಂದು ಹೇಳುವುದು ಒಂದು ವಾದ. ಆದರೆ ಇದೇ ಉದ್ದೇಶಗಳ ಸಾಧನೆಗೆ ಉದ್ಯಮ ಸ್ವಾತಂತ್ರ್ಯದ ಇಷ್ಟುಮಟ್ಟಿನ ನಿಯಂತ್ರಣ ಅನಾವಶ್ಯಕ ಎಂಬುದು ಇನ್ನೊಂದು ವಾದ. ಎಷ್ಟುಮಟ್ಟಿನ ಮತ್ತು ಯಾವ ರೀತಿಯ ಉದ್ಯಮ ಸ್ವಾತಂತ್ರ್ಯ ಅಪೇಕ್ಷಣೀಯ ಎಂಬುದು ಹೀಗೆ ಒಂದು ವಿವಾದಾಸ್ಪದ ಪ್ರಶ್ನೆಯಾಗಿ ಉಳಿದಿದೆ.

ಅಪೇಕ್ಷಿತ ಉದ್ಯೋಗ ಕೈಗೊಳ್ಳುವ ಸ್ವಾತಂತ್ರ್ಯ ಜನರ ಆರ್ಥಿಕ ಸ್ವಾತಂತ್ರ್ಯದ ಇನ್ನೊಂದು ಮುಖ್ಯ ಭಾಗ. ಯಾವುದೇ ಆಧುನಿಕ ಸಮಾಜ ವ್ಯವಸ್ಥೆಯಲ್ಲಿಯೇ ಆಗಲಿ ಪ್ರತಿಯೊಬ್ಬರಿಗೂ ಅವರವರ ಇಷ್ಟಾನುಸಾರವಾದ ಉದ್ಯೋಗ ಲಭಿಸುವ ಅವಕಾಶವಿರುವುದು ಅಸಂಭವ. ಸಂದರ್ಭಗಳ ಆವಶ್ಯಕತೆಗೆ ಕಟ್ಟುಬಿದ್ದು, ಅವರ ವಾಸ್ತವ ಅಭಿರುಚಿಗೆ ಅನುಗುಣವಾಗಿಲ್ಲದಿದ್ದರೂ ಸಂಪಾದನೆಗೋಸ್ಕರ ಒಂದು ಉದ್ಯೋಗ ಹಿಡಿಯಬೇಕಾಗಿ ಬರುವುದು ಲೋಕದ ಅನುಭವ. ವೈದ್ಯನಾಗಬಯಸಿದವ ಕೇವಲ ಗುಮಾಸ್ತನಾಗಿಯೂ ಎಂಜಿನಿಯರಾಗಬಯಸಿದವ ಉಪಾಧ್ಯಾಯನಾಗಿಯೂ ಜೀವನ ಕಳೆಯುವಂಥ ಅನೇಕ ನಿದರ್ಶನಗಳಿರಬಹುದು. ಹೀಗೆ ಕೇವಲ ಆರ್ಥಿಕ ಸಂದರ್ಭಗಳ ಒತ್ತಡಗಳಿಗೆ ಒಳಗಾಗಬೇಕಾಗಿ ಬರುವುದರಿಂದ ಉದ್ಯೋಗ ಆಯ್ಕೆ ಸ್ವಾತಂತ್ರ್ಯ ಮೂಲತಃ ಒಂದು ಮಿತಿಗೆ ಒಳಗಾಗಿರುವುದು. ಎಲ್ಲರಿಗೂ ಸಮಾನಾವಕಾಶ ಒದಗಿಸುವಂತೆ ವಿಕಾಸವಾಗುವ ಸಂಪದ್ಯುಕ್ತ ಸಮಾಜಗಳಲ್ಲಿ ಇಂಥ ಒತ್ತಡಗಳು ಕಡಿಮೆಯಾಗುವುವು.

ಉದ್ಯೋಗ ಆಯ್ಕೆಯ ಸ್ವಾತಂತ್ರ್ಯದ ಮೇಲಿನ ಇನ್ನೊಂದು ರೀತಿಯ ಮಿತಿ ಕಾನೂನು ನಿರ್ಮಿತವಾದುದು. ಸಾಮಾನ್ಯವಾಗಿ ಯುದ್ಧಕಾಲದಲ್ಲಿ ಸೈನ್ಯ ಹಾಗೂ ಇತರ ಜರೂರು ಸೇವೆಗಳಿಗೆ ಒತ್ತಾಯಪೂರ್ವಕವಾಗಿ ಜನರನ್ನು ಸೇರಿಸಿಕೊಳ್ಳಬೇಕಾಗಿ ಬರುವುದು. ಆದರೆ ಇಂಥ ಸಂದರ್ಭಗಳು ವಿಶೇಷ ಹಾಗೂ ತಾತ್ಕಾಲಿಕ. ಇವುಗಳಿಂದ ಉಂಟಾಗುವ ಆಯ್ಕೆಯ ಸ್ವಾತಂತ್ರ್ಯ ಮಿತಿಯನ್ನು ರಾಷ್ಟ್ರೀಯ ರಕ್ಷಣೆ ಹಾಗೂ ಹಿತದೃಷ್ಟಿಯಿಂದ ಜನರು ತಾತ್ಕಾಲಿಕವಾಗಿ ಸಹಿಸಬೇಕಾಗುವುದು. ಜನಬಲವನ್ನು ವಿವಿಧ ಉದ್ಯೋಗಗಳಿಗೆ ಈ ರೀತಿ ಒತ್ತಾಯಪೂರ್ವಕವಾಗಿ ಹಂಚುವ ಏರ್ಪಾಡು ಶಾಂತಿಕಾಲದಲ್ಲೂ ಇರುವುದಾದರೆ ಅದು ಅಸಹನೀಯವೇ ಸರಿ. ಈ ರೀತಿ ಜನರನ್ನು ಪ್ರತಿಯೊಂದು ಉದ್ಯೋಗಕ್ಕೂ ಬಲವಂತದಿಂದ ಸೇರಿಸುವ ಆವಶ್ಯಕತೆ ಇಲ್ಲದಿರುವುದಾದರೂ ಸಮಾಜವಾದಿ, ಕಮ್ಯುನಿಸ್ಟ್ ಮತ್ತು ಇತರ ಆರ್ಥಿಕ ಯೋಜಿತಪದ್ಧತಿಗಳಲ್ಲಿ ಜನರ ಉದ್ಯೋಗ ಸ್ವಾತಂತ್ರ್ಯವನ್ನು ಒಂದು ರೀತಿಯಲ್ಲಿ ಮಿತಿಗೊಳಿಸುವುದು ಅನಿವಾರ್ಯವಾಗುವುದು. ಯೋಜಿತ ಗುರಿಗಳ ಸಾಧನೆಗೆ ಉಪಯುಕ್ತವಾಗುವಂತೆ ದೇಶದ ಜನಬಲವನ್ನು ರೂಢಿಸಬೇಕಾದರೆ ಒಂದು ನಿಯಮಿತ ರೀತಿಯಲ್ಲಿ ಶ್ರಮಬಲವನ್ನು ಹಂಚಬೇಕಾಗಿ ಬರುವುದು. ವಿವಿಧ ಉದ್ಯೋಗ ಕ್ಷೇತ್ರಗಳಿಗೆ ಪ್ರವೇಶಿಸುವ ಜನಸಂಖ್ಯೆಯನ್ನು ಸ್ಥೂಲವಾಗಿಯಾದರೂ ನಿಯಂತ್ರಿಸಬೇಕಾಗುವುದು. ಈ ಪ್ರಕಾರವಾಗಿ ಜನಬಲ ಹಂಚಿಕೆಯಾಗಲು ಅನುಕೂಲವಾಗುವಂತೆ ವಿದ್ಯಾಭ್ಯಾಸ, ಶಿಕ್ಷಣ ಮತ್ತು ವಿವಿಧ ಪ್ರೇರಕಶಕ್ತಿಗಳೂ ರೂಪಿಸಲ್ಪಡಬೇಕಾಗುವುವು. ಇವೆಲ್ಲವೂ ಜನಬಲದ ಯೋಜನೆಗೆ ಸಂಬಂಧಿಸಿದ ವಿಷಯಗಳು. ಇಂಥ ಯೋಜನೆಗಳು ಇರುವಲ್ಲಿ ಉದ್ಯೋಗ ಆಯ್ಕೆಯ ಸ್ವಾತಂತ್ರ್ಯಕ್ಕೆ ಸಮಾಜ ಒಂದು ವ್ಯವಸ್ಥಿತ ನಿರ್ದಿಷ್ಟಚೌಕಟ್ಟನ್ನು ನಿರ್ಮಿಸಿದಂತೆ ಆಗುವುದು.

ಯೋಜನಾಪದ್ಧತಿಯನ್ನು ಅನುಸರಿಸಿದ ಅಥವಾ ಸುಲಭರೂಪದ ಯೋಜನೆ ಹೊಂದಿರುವ ರಾಷ್ಟ್ರಗಳಲ್ಲಿ ಮಾರುಕಟ್ಟೆಯ ಬೇಡಿಕೆ ನೀಡಿಕೆ ಶಕ್ತಿಗಳಿಗೆ ಅನುಸಾರವಾಗಿ ಜನಬಲ ತಾನಾಗಿಯೇ ಹಂಚಿಕೊಳ್ಳುವುದು. ಇಂಥ ವ್ಯವಸ್ಥೆಯಲ್ಲಿ ಜನರ ಉದ್ಯೋಗ ಆಯ್ಕೆಗೆ ಕಾನೂನುನಿರ್ಮಿತ ಮಿತಿ ಅಷ್ಟಾಗಿ ಇರುವುದಿಲ್ಲ.

ಕಾರ್ಮಿಕರು ಮತ್ತು ಮಾಲೀಕರು ಅವರವರ ಹಿತಾಸಕ್ತಿಗಳ ಪೋಷಣೆಗಾಗಿ ಸಂಘಗಳನ್ನು ಏರ್ಪಡಿಸಿಕೊಳ್ಳುವ ಪ್ರವೃತ್ತಿ ಬೆಳೆದು ಬಂದುದು ಆಧುನಿಕ ಆರ್ಥಿಕ ವ್ಯವಸ್ಥೆಯ ಒಂದು ಅಂಶ. ಇಂಥ ಪ್ರವೃತ್ತಿಗಳು ಅನೇಕ ಸಾರ್ವಜನಿಕ ಸಮಸ್ಯೆಗಳಿಗೆ ಕಾರಣವಾದುದರಿಂದ ಸಂಘಗಳನ್ನು ಒಂದು ಶಿಸ್ತಿಗೆ ಒಳಪಡಿಸುವ ಆವಶ್ಯಕತೆ ಕಂಡುಬಂದಿತು. ಆದುದರಿಂದ ಉತ್ಪಾದಕರ ಹಾಗೂ ವಿವಿಧ ಸಂಘಗಳ ಸ್ಥಾಪನೆ ಹಾಗೂ ನಡೆವಳಿಕೆಗಳ ಬಗ್ಗೆ ಆಧುನಿಕ ಸರ್ಕಾರ ಕಾನೂನುಗಳ ಮೂಲಕ ಒಂದು ಕ್ರಮಬದ್ಧ ಮಾರ್ಗವನ್ನು ನಿರ್ಮಿಸಿದೆ. ಉತ್ಪಾದಕರ ಗುಂಪಿಗೆ ಸೇರುವ ವಿವಿಧಪಂಗಡಗಳಲ್ಲಿ ಸೌಹಾರ್ದವಿರುವಂತೆ ಮಾಡುವುದೇ ಈ ಕಾನೂನು ನಿಬಂಧನೆಗಳ ಉದ್ದೇಶವಾಗಿರುವುದರಿಂದ ಇಂಥ ಮಿತಿಗಳು ಆದರಣೀಯವಾದುವೆಂದು ಹೇಳಬಹುದು.

ಅನುಭೋಗಸ್ವಾತಂತ್ರ್ಯ ಇತರ ವಿವಿಧ ಆರ್ಥಿಕ ಸ್ವಾತಂತ್ರ್ಯಗಳಿಗಿಂತ ಹೆಚ್ಚು ನೇರವಾಗಿ ಸಾರ್ವಜನಿಕರೆಲ್ಲರ ಜೀವನಕ್ಕೂ ಸಂಬಂಧಿಸಿದ ವಿಷಯ. ಸಂಪಾದಿಸುವ ವರಮಾನದಲ್ಲಿ ವೆಚ್ಚ ಹಾಗೂ ಉಳಿತಾಯಗಳ ಭಾಗ ನಿರ್ಣಯಿಸುವ ಮತ್ತು ಬಯಸಿದುದನ್ನು ಬೇಕೆನ್ನಿಸಿದಾಗ ವಿನಿಮಯದ ಮೂಲಕ ಪಡೆಯುವ ಅವಕಾಶವೇ ಅನುಭೋಗಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶವಿರುವುದು. ಅಂದಮೇಲೆ ಇಂಥ ಸಮಾಜಗಳಲ್ಲಿ ಬೇಡಿಕೆಗಳ ಸ್ವರೂಪ ಅನುಭೋಗಿಗಳ ನಿರ್ಣಯಗಳನ್ನೇ ಪ್ರಧಾನವಾಗಿ ಅವಲಂಬಿಸಿರುವುವು. ಈ ಬೇಡಿಕೆಗಳಿಗೆ ಅನುಗುಣವಾಗಿ ಉತ್ಪಾದಕರು ಅವರ ಉತ್ಪಾದನಾಕಾರ್ಯವನ್ನು ವ್ಯವಸ್ಥೆಗೊಳಿಸುವರು. ಆದುದರಿಂದ ಬಂಡವಾಳಶಾಹಿ ಪದ್ಧತಿಯಲ್ಲಿ ಅನುಭೋಗಿಯೇ ಸಾರ್ವಭೌಮ ಎಂಬ ನಾಣ್ನುಡಿ ಹುಟ್ಟಿತು. ಆದರೆ ಈ ಅನುಭೋಗಿಯ ಸಾರ್ವಭೌಮತ್ವದ ಬಗ್ಗೆ ಸಮಾಜವಾದಿ ಅರ್ಥಶಾಸ್ತ್ರಜ್ಞರು ಶಂಕೆ ವ್ಯಕ್ತಪಡಿಸಿದ್ದಾರೆ. ಅನುಭೋಗಿಗಳ ಆಯ್ಕೆಯ ಸ್ವಾತಂತ್ರ್ಯ ವಾಸ್ತವವಾದದಲ್ಲ, ಕೇವಲ ಕಾಲ್ಪನಿಕ ಎಂಬುದು ಅವರ ಅಭಿಪ್ರಾಯ. ಜಾಹೀರಾತುಗಳು, ಸರಕುಗಳಲ್ಲಿ ಪ್ರಭೇದವಿರುವಂತೆ ತೋರಿಸುವ ಜಾಣತನ ಇತ್ಯಾದಿಗಳ ಮೂಲಕ ಉತ್ಪಾದಕರು ಅನುಭೋಗಿಗಳ ಆಯ್ಕೆ ನಿರ್ಣಯಗಳ ಮೇಲೆ ವಿಶೇಷ ಪ್ರಭಾವ ಬೀರುತ್ತಾರೆ. ಕೇವಲ ಆಸಕ್ತಿ ಹುಟ್ಟಿಸುವ ಹಾಗೂ ವಿಷಯ ತಿಳಿಸುವ ಜಾಹೀರಾತುಗಳಿಂದ ಅನುಭೋಗಿಗಳಿಗೆ ಅನುಕೂಲವಾಗುವುದಾದರೂ ಸ್ಪರ್ಧೆ ನಡೆಸುವ ಭರದಲ್ಲಿ ಉತ್ಪಾದಕರು ಯಾವುದೇ ರೀತಿಯಿಂದಾದರೂ ಸರಿ ಗ್ರಾಹಕರನ್ನು ಒಲಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕೈಗೊಳ್ಳುವ ಜಾಹಿರಾತು ಕ್ರಮಗಳು ಉಚಿತ ಎಂದು ಹೇಳಲಾಗದು; ಮತ್ತು ಪ್ರತಿ ಸರಕಿನ ಬಗ್ಗೆಯೂ ಅನಾವಶ್ಯಕ ಪ್ರಭೇದಗಳನ್ನು ದ್ವಿಗುಣಿಸಿರುವುದು ಅನುಭೋಗಿಗಳನ್ನು ಗೊಂದಲಕ್ಕೆ ಸಿಕ್ಕಿಸಿ ಆಲೋಚನಾಯುತ ಆಯ್ಕೆಗೆ ಅಡ್ಡಿಯಾಗಿದೆ ಎಂದೂ ಹೇಳಲಾಗಿದೆ.

ಬಂಡವಾಳಶಾಹಿ ಪದ್ಧತಿಯಲ್ಲಿ ವರಮಾನ ಅಸಮಾನತೆ ಹೆಚ್ಚಾಗಿರುವುದರಿಂದಲೂ ಕಡಿಮೆ ವರಮಾನ ವರ್ಗದ ಜನ ಅಧಿಕ ಪ್ರಮಾಣದಲ್ಲಿ ಇರುವುದರಿಂದಲೂ ಅನುಭೋಗಿಯ ಆಯ್ಕೆಯ ಸ್ವಾತಂತ್ರ್ಯದಲ್ಲಿ ನಿಜವಾಗಿ ಹುರುಳಿಲ್ಲ ಎಂಬುದು ಸಮಾಜವಾದಿಗಳ ಇನ್ನೊಂದು ವಾದ. ಏಕೆಂದರೆ ಇಂಥ ಸನ್ನಿವೇಶದಲ್ಲಿ ಕೆಲವೇ ಧನಿಕರ ಬಯಕೆಗಳೆಲ್ಲವೂ ತೃಪ್ತಿಯಾಗ ಬಹುದಾದರೂ ಬಹುಮಂದಿಯ ಬಯಕೆಗಳು ವರಮಾನ ಮತ್ತು ಎಲ್ಲರ ಹಿತಾಸಕ್ತಿಗಳನ್ನೂ ಪರಮಾವಧಿಯಲ್ಲಿ ರಕ್ಷಿಸಬಲ್ಲ ಸನ್ನಿವೇಶದಲ್ಲಿ ಮಾತ್ರ ಅನುಭೋಗಿಯ ಆಯ್ಕೆಯ ಸ್ವಾತಂತ್ರ್ಯಕ್ಕೆ ಸಹಜವಾದ ಅರ್ಥ ಸಲ್ಲುವುದು ಮತ್ತು ಇಂಥ ಸನ್ನಿವೇಶದಲ್ಲಿ ಸಮಾಜವಾದ ಪದ್ಧತಿ ಉಂಟುಮಾಡುವುದರಿಂದ ಈ ಪದ್ಧತಿಯಲ್ಲಿ ಅನುಭೋಗಿಗಳ ಆಯ್ಕೆಸ್ವಾತಂತ್ರ್ಯ ವಾಸ್ತವವಾಗಿರುವುದು ಎಂದು ವಾದಿಸಲಾಗಿದೆ.

ಬಂಡವಾಳಶಾಹಿ ಪದ್ಧತಿ ನೀಡುವ ಅನುಭೋಗಿಗಳ ಆಯ್ಕೆಯ ಸ್ವಾತಂತ್ರ್ಯದ ವಿರುದ್ಧ ಹೂಡಿರುವ ಮೇಲಿನ ಆಕ್ಷೇಪಣೆಗಳು ಇಂದಿನ ಸುಧಾರಿತ ಬಂಡವಾಳಶಾಹಿ ಪದ್ಧತಿಗೆ ಹೆಚ್ಚಾಗಿ ಅನ್ವಯಿಸಲಾರವು ಎಂಬುದು ಇನ್ನೊಂದು ಅಭಿಪ್ರಾಯ. ಈ ಪದ್ಧತಿಯ ಮೂಲಲಕ್ಷಣಗಳನ್ನು ಹೊಂದಿರುವ ಅಮೆರಿಕದಂಥ ರಾಷ್ಟ್ರಗಳಲ್ಲಿ ಕೆಲವು ಮುಖ್ಯ ಬದಲಾವಣೆಗಳಾಗಿವೆ. ಎಲ್ಲರ ವರಮಾನ ಮಟ್ಟ ಹೆಚ್ಚಿರುವುದು, ವರಮಾನ ಹಂಚಿಕೆಯಲ್ಲಿ ಅಸಮಾನತೆ ಕಡಿಮೆಯಾಗಿರುವುದು, ಜಾಹೀರಾತು ನಿಯಂತ್ರಣ, ಸಾರ್ವಜನಿಕ ಕ್ಷೇಮಾಭ್ಯುದಯಕ್ಕೆ ಸರ್ಕಾರದ ತೀವ್ರ ಗಮನ-ಇತ್ಯಾದಿ ಅಂಶಗಳು ಮೇಲೆ ಹೇಳಿದ ಆಕ್ಷೇಪಣೆಗಳ ತೀವ್ರತೆಯನ್ನು ಬಹುಮಟ್ಟಿಗೆ ಕಡಿಮೆ ಮಾಡಿವೆ ಎಂದು ಹೇಳಬಹುದು.

ಯುದ್ಧ ಮತ್ತು ಅಭಾವವಿರುವ ಇತರ ಕಾಲದಲ್ಲಿ ನ್ಯಾಯರೀತಿಯಲ್ಲಿ ಸರಕುಗಳನ್ನು ಹಂಚುವುದಕ್ಕಾಗಿ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಬಹುದು. ಇಂಥ ವಿಶೇಷ ಸಂದರ್ಭಗಳಲ್ಲಿ ಅನುಭೋಗಿಗಳ ಆಯ್ಕೆ ಸ್ವಾತಂತ್ರ್ಯವನ್ನು ತಾತ್ಕಾಲಿಕವಾಗಿ ಮಿತಿಗೊಳಿಸಿದಂತೆ ಆಗುವುದು. ಅಭಾವ ಪರಿಸ್ಥಿತಿ ಕೊನೆಯಾದೊಡನೆಯೇ ಪಡಿತರ ರದ್ದು ಮಾಡುವುದರಿಂದ ಅನುಭೋಗಿಗಳ ಆಯ್ಕೆ ಹಕ್ಕನ್ನು ಪುನಃ ಸ್ಥಾಪನೆಗೊಳಿಸಿದಂತೆ ಆಗುವುದು. ಆದರೆ ಪಡಿತರ ಪದ್ಧತಿ ಶಾಶ್ವತವಾಗಿರುವ ಕಮ್ಯೂನಿಸ್ಟ್ ಪದ್ಧತಿಯಂಥ ಸಮಾಜ ವ್ಯವಸ್ಥೆಗಳಲ್ಲಿ ಅನುಭೋಗಿಗಳ ಆಯ್ಕೆಯ ಸ್ವಾತಂತ್ರ್ಯವನ್ನು ಶಾಶ್ವತವಾಗಿಯೇ ಮಿತಿಗೊಳಿಸಿದಂತೆ ಆಗುವುದು. ಇಂಥ ಪಡಿತರ ಪದ್ಧತಿಯ ಮೂಲಕ ಜನರಿಗೆ ಬೇಕಾಗುವಷ್ಟು ಸರಕುಗಳು ದೊರೆಯಬಹುದಾದ ಸಮೃದ್ಧ ಸಮಾಜದಲ್ಲಿ ಹೀಗೆ ನಿರ್ಮಿತವಾಗುವ ಮಿತಿ ನಿಬಂಧನೆ ವಾಸ್ತವವಾಗಿ ಜನರ ಕ್ಷೇಮಾಭ್ಯುದಯಕ್ಕೆ ವಿರೋಧವಾಗುವುದಿಲ್ಲ.

ಒಟ್ಟಿನಲ್ಲಿ ವೈಯಕ್ತಿಕ ಆರ್ಥಿಕ ಸ್ವಾತಂತ್ರ್ಯಕ್ಕೆ ಮೇಲೆ ವಿವರಿಸಿರುವಂತೆ ಅನೇಕ ಮುಖಗಳಿವೆ. ವಿವಿಧ ಭಾಗಗಳಲ್ಲಿ ಎಷ್ಟು ಮಟ್ಟಿನ ವೈಯಕ್ತಿಕ ಸ್ವಾತಂತ್ರ್ಯವಿರುವುದು ಎಂಬುದು ಆಯಾ ಸಮಾಜ ವ್ಯವಸ್ಥೆಯ ಸ್ವರೂಪವನ್ನು ಅವಲಂಬಿಸಿದೆ.

ರಾಷ್ಟ್ರದ ಆರ್ಥಿಕ ಸ್ವಾತಂತ್ರ್ಯ ಅಂತಾರಾಷ್ಟ್ರೀಯ ಸಂಬಂಧಗಳನ್ನು ಕುರಿತ ಅನೇಕ ಸೂಕ್ಷ್ಮ ಪ್ರಶ್ನೆಗಳನ್ನು ಒಳಗೊಳ್ಳುವುದು. ಶತಮಾನಕ್ಕೂ ಹೆಚ್ಚು ಕಾಲ ನಡೆದು ಬಂದ ಸಾಮ್ರಾಜ್ಯಶಾಹಿ ಪ್ರಪಂಚದಲ್ಲಿ ಅಧೀನ ರಾಷ್ಟ್ರಗಳಿಗೂ ವಸಾಹತುಗಳಿಗೂ ರಾಜಕೀಯ ಸ್ವಾತಂತ್ರ್ಯವಿಲ್ಲದುದರ ಜೊತೆಗೆ ಆರ್ಥಿಕ ಸ್ವಾತಂತ್ರ್ಯ ಇರಲಿಲ್ಲ. ಎರಡನೆಯ ಮಹಾಯುದ್ಧದ ತರುವಾಯ ಸಾಮ್ರಾಜ್ಯಶಾಹಿ ಕೊನೆಗೊಂಡಿರುವುದರಿಂದ ಉದ್ಭವಿಸಿರುವ ಹೊಸ ಸ್ವತಂತ್ರರಾಷ್ಟ್ರಗಳು ಶೀಘ್ರ ಆರ್ಥಿಕಾಭಿವೃದ್ಧಿಗೆ ಹವಣಿಸುತ್ತಿರುವಂತೆಯೇ, ಆರ್ಥಿಕ ಸ್ವಾತಂತ್ರ್ಯಕ್ಕೂ ಹಂಬಲಿಸುತ್ತಿವೆ. ವಿದೇಶಿಯರು ಹೊಂದಿರುವ ಅಥವಾ ಸ್ಥಾಪಿಸಬಹುದಾದ ಪಟ್ಟಭದ್ರಹಿತಗಳ ಮೂಲಕ ಒಂದು ರಾಷ್ಟ್ರದ ಆರ್ಥಿಕ ಆಗುಹೋಗುಗಳ ಮೇಲೆ ಸಲ್ಲದ ಪ್ರಭಾವ ಬೀರುವುದನ್ನು ತಪ್ಪಿಸುವುದೂ ಇತರ ಯಾವುದೇ ರೀತಿಯಲ್ಲಿ ರಾಷ್ಟ್ರಗಳ ಸಲ್ಲದ ಪ್ರಭಾವಕ್ಕೆ ಸಿಕ್ಕಿಬೀಳದೆ, ಸ್ವಯಂ ನಿರ್ಣಯಾಧಿಕಾರದಿಂದ ಒಂದು ರಾಷ್ಟ್ರ ಅದರ ಇಷ್ಟಾನುಸಾರವಾಗಿ ಇತರ ರಾಷ್ಟ್ರಗಳೊಡನೆ ಆರ್ಥಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳು ವುದೂ ರಾಷ್ಟ್ರದ ಆರ್ಥಿಕ ಸ್ವಾತಂತ್ರ್ಯ ಎಂದು ಹೇಳಬಹುದು. ಅಂತಾರಾಷ್ಟ್ರೀಯ ವ್ಯಾಪಾರ, ಬಂಡವಾಳ ಚಾಲನೆ, ತಾಂತ್ರಿಕ ಜ್ಞಾನ ಪ್ರಸರಣೆ-ಇವುಗಳು ಒಂದು ಪ್ರಬಲ ರಾಷ್ಟ್ರ ನಿರ್ಬಲ ಹಾಗೂ ದೀನರಾಷ್ಟ್ರಗಳ ಮೇಲೆ ಒಂದು ನಿರ್ದಿಷ್ಟ ನೀತಿಯನ್ನು ಹೇರುವ ಸಾಧನಗಳಾಗುವುದಾದರೆ ಈ ರಾಷ್ಟ್ರಗಳ ಸಂಬಂಧದಲ್ಲಿ ಒಂದು ರೀತಿಯ ಆರ್ಥಿಕ ಸಾಮ್ರಾಜ್ಯಶಾಹಿಯನ್ನು ಕಾಣಬಹುದು. ಹೀಗಿರದೆ ಅಂತಾರಾಷ್ಟ್ರೀಯ ಶ್ರಮವಿಭಜನೆ ತತ್ತ್ವದ ಅನುಸಾರವಾಗಿಯೂ ಸ್ವರಾಷ್ಟ್ರಹಿತವನ್ನು ಸಾರ್ವತ್ರಿಕ ಹಿತದೊಡನೆ ಸಮ್ಮಿಳನವಾಗು ವಂತೆಯೂ ಎಲ್ಲ ರಾಷ್ಟ್ರಗಳೂ ಅಂತಾರಾಷ್ಟ್ರೀಯ ಆರ್ಥಿಕ ವಹಿವಾಟುಗಳನ್ನು ನಡೆಸುವುದಾದರೆ ಪ್ರತಿಯೊಂದು ರಾಷ್ಟ್ರದ ಆರ್ಥಿಕ ಸ್ವಾತಂತ್ರ್ಯವನ್ನು ರಕ್ಷಿಸಿದಂತೆ ಆಗುವುದು. ಅಂದಮೇಲೆ ಕೇವಲ ಉಜ್ವಲ ರಾಷ್ಟ್ರೀಯತಾ ಭಾವನೆಯಿಂದಾಗಲಿ ಅಥವಾ ಕೇವಲ ಆರ್ಥಿಕ ಸ್ವಸಂಪೂರ್ಣ ತೆಯನ್ನೇ ಪ್ರಧಾನ ಗುರಿಯಾಗಿಟ್ಟುಕೊಂಡಾಗಲಿ ಅಂತಾರಾಷ್ಟ್ರೀಯ ಆರ್ಥಿಕ ವ್ಯವಹಾರಗ ಳಿಂದ ಲಭಿಸಬಲ್ಲ ಪ್ರಯೋಜನಗಳನ್ನು ಅಲಕ್ಷಿಸಿ ಆರ್ಥಿಕ ಪ್ರತ್ಯೇಕತೆಯತ್ತ ಸಾಗುವುದು ವಾಸ್ತವವಾದ ಆರ್ಥಿಕ ಸ್ವಾತಂತ್ರ್ಯಕ್ಕೆ ಅನುಸಾರವಾದ ಮಾರ್ಗವಾಗಲಾರದು. (ಎ.ಪಿ.ಎಸ್.)

**ಆರ್ಥೋಡಾಕ್ಸ್ ಈಸ್ಟರ್ನ್ ಚರ್ಚ್ :** ಗ್ರೀಸ್, ರೊಮೇನಿಯ, ಬಲ್ಗೇರಿಯ, ಯುಗೊಸ್ಲಾವಿಯ, ಸೈಪ್ರಸ್, ರಷ್ಯಗಳಲ್ಲಿರುವ 13 ಚರ್ಚುಗಳಿಗೆ ಈ ಹೆಸರಿದೆ. ಇವು ಸ್ವಯಮಾಡಳಿತ ಸ್ವಾತಂತ್ರ್ಯ ಉಳ್ಳವು. ಇವನ್ನು ಗ್ರೀಕ್ ಆರ್ಥೊಡಾಕ್ಸ್ ಚರ್ಚುಗಳೆಂದೂ ಕರೆಯುತ್ತಾರೆ. ಪ್ರಪಂಚದ ಕ್ರೈಸ್ತ ಜನರಲ್ಲಿ $1/6$ ಭಾಗ ಈ ಚರ್ಚುಗಳಿಗೆ ಸೇರಿದವರಾಗಿದ್ದಾರೆ. ಆದಿಕಾಲದ ಮತ್ತು ಈಗಿನ ರೋಮನ್ ಕೆಥೊಲಿಕ್ ಮತೀಯರ ಸಾಮಾನ್ಯ ಮಂಡಲಿಗಳ ವಿಷಯದಲ್ಲಿ ಸಮಸ್ತ ಕ್ರೈಸ್ತ ಪ್ರಪಂಚಕ್ಕೆ ಸೇರಿದ ಮೊದಲ ಏಳು ವಿಧಿಗಳನ್ನು ಈ ಚರ್ಚು ಪಂಗಡಗಳು ಅಂಗೀಕರಿಸುತ್ತವೆ. ಆದರೆ ರೋಮಿನ ಗುರುವಾದ ಪೋಪ್ ಜಗದ್ಗುರುವಿನ ಆಧಿಪತ್ಯವನ್ನು ಮಾತ್ರ ತಿರಸ್ಕರಿಸುತ್ತವೆ. ನೆಸ್ಟೋರಿಯನ್, ಕಾಪಟಿಕ್, ಜಾಕೊಬೈಟ್ ಮತ್ತು ಆರ್ಮೀನಿಯನ್ ಚರ್ಚ್ ಭಕ್ತರು ಇವರ ದೃಷ್ಟಿಯಲ್ಲಿ ನಾಸ್ತಿಕರು.

ಚರ್ಚು ಚರ್ಚುಗಳ ಮಧ್ಯೆ ಪೂರ್ವಕಾಲದಿಂದಲೂ ಭಿನ್ನಾಭಿಪ್ರಾಯಗಳಿದ್ದುವು. ಆದರೆ ಪೂರ್ವಪಶ್ಚಿಮ ಚರ್ಚುಗಳಲ್ಲಿನ ಒಡಕು ಬಹಿರಂಗವಾದದ್ದು 5ನೆಯ ಶತಮಾನದಲ್ಲಿ; ಆ ಒಡಕು ಪೂರ್ತಿ ಆದದ್ದು 9ನೆಯ ಶತಮಾನದಲ್ಲಿ. ಪೋಪರ ಅಧಿಕಾರ ವನ್ನು ಫೋಟಿಯನ್ ಪ್ರತಿಭಟಿಸಿದಾಗ, ಅಂತೆಯೇ ಪ್ರತಿಯಾಗಿ ಕಾನ್‌ಸ್ಟಾಂಟಿನೋಪಲ್‌ನ ಹಿರಿಯ ಮಠಾಧಿಪತಿಯನ್ನು ಪೋಪ್ 1054ರಲ್ಲಿ ಭರ್ತ್ಸನೆ ಮಾಡಿದಾಗ, ಅನಂತರ ನಡೆದ ಕ್ರೈಸ್ತ ಧರ್ಮಯುದ್ಧಗಳು (ಕ್ರೂಸೇಡ್ಸ್) ಪರಸ್ಪರ ವಿರಸವನ್ನು ಇನ್ನೂ ಹೆಚ್ಚು ಮಾಡಿದವು. ಈ ಒಡಕನ್ನು ಮುಚ್ಚಲು ಮಾಡಿದ ಅನೇಕ ಯತ್ನಗಳು ವಿಫಲವಾದವು.

ಪೂರ್ವಪಶ್ಚಿಮ ಚರ್ಚುಗಳಲ್ಲಿ ಸಂಪ್ರದಾಯಭೇದಗಳಿವೆ. ಶತಮಾನಗಳ ಕಾಲ ಪ್ರಭಾವ ಹೊಂದಿದ್ದದ್ದು ರಷ್ಯದ ಗ್ರೀಕ್ ಚರ್ಚು. ರಾಜ್ಯಕ್ಕೂ ಚರ್ಚಿಗೂ ಮೊದಲು ಹಿತಸಂಬಂಧವಿತ್ತು. ಈ ಚರ್ಚಿನ ಚರಿತ್ರೆಯಲ್ಲಿನ ಮಹಾಘಟನೆಯೆಂದರೆ ನಿಕೊನ್ ನಾಯಕತ್ವದಲ್ಲಿ ಜರುಗಿದ ಸುಧಾರಣಾ ಚಳವಳಿ. ರಷ್ಯದ ಕ್ರಾಂತಿಯಲ್ಲಿ ಈ ಚರ್ಚು ಪೂರ್ತಿ ಅಳಿಯಿತು. ಎರಡನೆಯ ಮಹಾಯುದ್ಧ ಮುಗಿದು ಸಮತಾವಾದ ತನ್ನ ಪ್ರಭಾವ ಬೀರಿದ ಮೇಲೆ ಬಲ್ಗೇರಿಯ, ಯೂಗೊಸ್ಲಾವಿಯ, ರೊಮೇನಿಯ, ಫಿನ್ಲೆಂಡ್, ಪೋಲೆಂಡ್‌ಗಳಲ್ಲೂ ಚರ್ಚುಗಳು ದುರ್ಬಲವಾದವು. ಈಗ ಪರಿಸ್ಥಿತಿ ಸುಧಾರಿಸಿದೆ. (ಬಿ.ಎಸ್.ಆರ್.ಆರ್.)

**ಆರ್ಥ್ರೋಡೈರ :** ಡಿವೋನಿಯನ್ ಯುಗದ ಉತ್ತರಾರ್ಧದಲ್ಲಿ ಹೇರಳವಾಗಿದ್ದು, ಅಮೆರಿಕದ ಸಂಯುಕ್ತ ಸಂಸ್ಥಾನದ ಕ್ಲೀವ್‌ಲೆಂಡ್ ಪ್ರದೇಶದಲ್ಲಿ ತಮ್ಮ ಪಳೆಯುಳಿಕೆಗಳನ್ನು ಬಿಟ್ಟಿರುವ ಪ್ರಾಚೀನ ಕಾಲದಲ್ಲಿ ಬದುಕಿದ್ದ ಮೀನುಗಳ ವರ್ಗ. ತಟ್ಟೆಯಂಥ ಮೂಳೆ ಹೊದಿಕೆಯನ್ನು ಹೊಂದಿದ ಪ್ಲ್ಯಾಕೊಡರ್ಮ ಮತ್ಸ್ಯವಂಶಕ್ಕೆ ಸೇರಿದ್ದೆಂದು ಊಹಿಸಲಾಗಿದೆ. ಇವುಗಳಲ್ಲಿ ಡೈನಿಕ್ಟಿಸ್ ಎಂಬ ಮೀನು ಸುಮಾರು 10 ಮೀ ಉದ್ದವಿದ್ದು, ಎದೆ ಮತ್ತು ತಲೆಯ ಭಾಗಗಳಲ್ಲಿ ಬಲವಾದ ಮೂಳೆಯ ಹೊದಿಕೆಯನ್ನು ಹೊಂದಿತ್ತು. ತಲೆಯ ಮತ್ತು ಎದೆಯ ಹೊದಿಕೆಗಳು ಚಲಿಸಬಹುದಾದ ರೀತಿಯಲ್ಲಿ ಕತ್ತಿನಂಥ ಒಂದು ಸಂಧಿಯ ಮೂಲಕ ಕೂಡಿಕೊಂಡಿದ್ದವು. ಆದ್ದರಿಂದಲೇ ಈ ಗುಂಪಿನ ಮೀನುಗಳಿಗೆ ಸಂಧಿಕಂಠಿ (ಆರ್ಥ್ರೋ=ಸಂಧಿ: ಡೈರ=ಕಂಠ) ಎಂಬ ಹೆಸರು ಬಂದಿರುವುದು. ಡೈನಿಕ್ಟಿಸ್ ಮೀನಿಗೆ ದೇಹದ ಹಿಂಭಾಗದಲ್ಲಿ ಮೂಳೆಯ ಹೊದಿಕೆಯಿರಲಿಲ್ಲ. ಮುಂದಿನ ಜೊತೆರೆಕ್ಕೆಗಳು ಚಿಕ್ಕವಾಗಿದ್ದುವು. ಈ ಮೀನಿನ ಡಿವೋನಿಯನ್ ಕಾಲದವೇ ಆದ ಪೂರ್ವಜರಲ್ಲಿ ದೇಹ ಚಪ್ಪಟೆಯಾಗಿದ್ದು ವಿಶಾಲವಾದ ಮೂಳೆಯ ಹೊದಿಕೆಯಿತ್ತು. ಅವುಗಳ ದೇಹ ತೀರ ಸಣ್ಣದಾಗಿದ್ದು ಜೊತೆರೆಕ್ಕೆಗಳು ಇನ್ನೂ ಮೂಡಿರಲಿಲ್ಲ. ಅವುಗಳ ಸ್ಥಳದಲ್ಲಿ ಬಾಗಿದ ದೀರ್ಘವಾದ ಮುಳ್ಳುಗಳು ಮಾತ್ರ ಇದ್ದುವು.



ಡೈನಿಕ್ಟಿಸ್

ಆರ್ಥ್ರೋಡೈರ ಗುಂಪಿಗೆ ಸೇರಿದ ಹಲವಾರು ಬಗೆಯ ಮೀನುಗಳ ಪಳೆಯುಳಿಕೆಗಳು ದೊರೆತಿವೆ. ಆಂಟಿಯಾರ್ಕ್ ಪಂಗಡದ ಸಿಹಿನೀರಿನ ಮೀನುಗಳಲ್ಲಿ ಬೋತ್ರಿಯೊಲೆಪಿಸ್ ಎಂಬ ಮೀನುಗಳು ಆ ಕಾಲದಲ್ಲಿ ಹೇರಳವಾಗಿದ್ದುವು. ಅವುಗಳ ಮೈಮೇಲಿನ ಮೂಳೆಯ ಕವಚ ಸಾಮಾನ್ಯ ಆರ್ಥ್ರೋಡೈರ ಮೀನುಗಳ ಕವಚದ ಮಾದರಿಯಲ್ಲಿತ್ತು. ಭುಜದ ಭಾಗದಲ್ಲಿ ಆರ್ಥ್ರೋಡೈರಗಳಂತೆ ಪಾರ್ಶ್ವದ ಮೂಳೆಯ ಚಿಪ್ಪುಗಳಿದ್ದುವು: ಆ್ಯಂಟಿಯಾರ್ಕ್ ಮೀನುಗಳಲ್ಲಿದ್ದಂತೆ ಚಲಿಸಲು ಅನುಕೂಲಿಸುವಂತೆ ಕೂಡಿಕೊಂಡಿದ್ದುವು.



ಬೋತ್ರಿಯೊಲೆಪಿಸ್

ಜೆಮುಂಡಿನ ಎಂಬ ರೀತಿಯದು ಸಾಗರದಲ್ಲಿ ವಾಸಿಸುತ್ತಿದ್ದ ಮೀನು. ಅದರಲ್ಲಿ ಎರಡು ಜೊತೆ ರೆಕ್ಕೆಗಳಿದ್ದುವು; ಅವುಗಳಲ್ಲಿ ಮುಂದಿನ ಜೊತೆ ರೆಕ್ಕೆಗಳು ಚೆನ್ನಾಗಿ ಅಭಿವೃದ್ಧಿಯಾಗಿದ್ದುವು; ಮೂಳೆಯ ಕವಚ ಕ್ಷೀಣಿಸುತ್ತ ಬರುತ್ತಿತ್ತು. ಬಹುಶಃ ಈ ಮೀನುಗಳು ಕ್ರಮಕ್ರಮವಾಗಿ ನಾಯಿತಲೆ ಮೀನುಗಳ (ಷಾರ್ಕ್‌ಮೀನು) ರೂಪಕ್ಕೆ ವಿಕಾಸವಾಗಿದ್ದಿರಬೇಕು.

(ಎನ್.ಎಸ್.ವಿ.)

**ಆರ್ಥೋರಾಂಬಿಕ್ ವರ್ಗ :** ಖನಿಜಗಳು ಸ್ಫಟಿಕಾಕಾರಗೊಳ್ಳುವ ಆರು ವರ್ಗಗಳಲ್ಲಿ ಒಂದು. ಇದರಲ್ಲಿ ಮೂರು ಬೇರೆ ಬೇರೆ ಉದ್ದವುಳ್ಳ ಮತ್ತು ಸಮಕೋನ ಸಂಬಂಧವಿರುವ ಸ್ಫಟಿಕಾಕ್ಷಗಳಿವೆ. ಸ್ಫಟಿಕದ ಮೇಲಿನ ತುದಿಯಿಂದ ಕೆಳ ತುದಿಯವರೆಗೆ ಹಾದುಹೋಗಿರುವ ಅಕ್ಷವೇ ಊರ್ಧ್ವಾಕ್ಷ. ಉಳಿದೆರಡು ಸಮತಲ ಅಕ್ಷಗಳಲ್ಲಿ, ಉದ್ದವಾಗಿ ಎಡದಿಂದ ಬಲಕ್ಕೆ ಹಾದು ಹೋಗುವುದನ್ನು ಮ್ಯಾಕ್ರೋ ಅಕ್ಷವೆಂದೂ ಕಿರಿದಾಗಿ ಹರಳಿನ ಹಿಂದಿನಿಂದ ಮುಂದಕ್ಕೆ ಹಾದು ಬರುವುದನ್ನು ಬ್ರ್ಯಾಕಿ ಅಕ್ಷವೆಂದೂ ಕರೆಯುತ್ತೇವೆ. ಸ್ಫಟಿಕ ಬೆರೈಟ್ ಖನಿಜ ಈ ವರ್ಗದ ಒಂದು ಮಾದರಿ. ಇದರಲ್ಲಿ ಸಮಸೂತ್ರ ಕೇಂದ್ರವೂ ಮೂರು ಉಪಸಮಸೂತ್ರ ಕ್ಷೇತ್ರಗಳೂ ಮೂರು ದ್ವಿಸಮಸೂತ್ರ ಅಕ್ಷಗಳೂ ಇವೆ. ಸ್ಫಟಿಕಾಕ್ಷಗಳನ್ನಾಗಿ ಮೂರು ದ್ವಿಸಮಸೂತ್ರ ಅಕ್ಷಗಳನ್ನೇ ಚುನಾಯಿಸಬೇಕು. ಆರ್ಥೋರಾಂಬಿಕ್ ವರ್ಗದಲ್ಲಿ ಏಳು ವಿವಿಧ ಸ್ವರೂಪಗಳಿವೆ. ಪಿರಮಿಡ್ಡು $(a:\bar{b}:c)$ ಈ ವರ್ಗದ ಮೂಲ ಸ್ವರೂಪ. ಇದರಲ್ಲಿ ಎಂಟು ಸದೃಶ ಸಮದ್ವಿಬಾಹು ತ್ರಿಭುಜಗಳಿದ್ದು ಪ್ರತಿಮುಖವೂ ಮೂರು ಸ್ಫಟಿಕಾಕ್ಷಗಳನ್ನು ಮೂಲಮಾನದಲ್ಲಿ ಸಂಧಿಸುತ್ತದೆ. ಬ್ರ್ಯಾಕಿಡೋಮ್ $(\infty\breve{a}:\bar{b}:c)$ ಮತ್ತು ಮ್ಯಾಕ್ರೋಡೋಮ್‌ಗಳಲ್ಲಿ $(a:\infty\bar{b}:c)$ ನಾಲ್ಕು ಸದೃಶ ಸಮದ್ವಿಬಾಹು ತ್ರಿಭುಜಗಳಿದ್ದು ಪ್ರತಿಮುಖವೂ ಸಮತಲ ಅಕ್ಷಗಳಲ್ಲಿ ಒಂದಕ್ಕೆ ಸಮಾಂತರವಾಗಿ ಮತ್ತು ಮತ್ತೊಂದಕ್ಕೂ ಶೀರ್ಷಾಕ್ಷಕ್ಕೂ ಮೂಲಮಾನದಲ್ಲಿ ಮುಟ್ಟುತ್ತದೆ. ಅಶ್ರಗದಲ್ಲಿ (ಪ್ರಿಸಂ)ನಲ್ಲಿ $(a:\bar{b}:\ c)$ನಾಲ್ಕು ಆಯಾಕಾರದ ಸದೃಶ ಮುಖಗಳಿದ್ದು ಪ್ರತಿಮುಖವೂ ಸಮತಲ ಅಕ್ಷಗಳನ್ನು ಮೂಲಮಾನ ದೂರದಲ್ಲಿ ಸಂಧಿಸಿ, ಶೀರ್ಷಾಕ್ಷಕ್ಕೆ ಸಮಾಂತರವಾಗಿರುತ್ತದೆ. (ಬ್ರ್ಯಾಕಿಪಿನಕೈಡ್) $(\infty\breve{a}:\bar{b}:\ c)$ ಎರಡು ಆಯಾಕಾರದ ಸದೃಶ ಮುಖಗಳಿದ್ದು, ಪ್ರತಿಮುಖವೂ ಬ್ರ್ಯಾಕಿ ಮತ್ತು ಶೀರ್ಷಾಕ್ಷಗಳಿಗೆ ಸಮಾಂತರವಾಗಿಯೂ, ಮ್ಯಾಕ್ರೋ ಅಕ್ಷವನ್ನು ಮೂಲವಮಾನದಲ್ಲೂ ಸಂಧಿಸುತ್ತದೆ. ಮ್ಯಾಕ್ರೊಪಿನಕೈಡ್‌ನಲ್ಲೂ $(a:\infty\bar{b}:\ c)$ ಎರಡು ಆಯಾಕಾರದ ಸದೃಶ ಮುಖಗಳಿದ್ದು, ಪ್ರತಿಮುಖವೂ ಬ್ರ್ಯಾಕಿ ಅಕ್ಷವನ್ನು ಮೂಲವಮಾನದಲ್ಲಿ ಸಂಧಿಸಿ ಮ್ಯಾಕ್ರೋ ಮತ್ತು ಶೀರ್ಷಾಕ್ಷಗಳಿಗೆ ಸಮಾಂತರವಾಗಿಯೂ, ಮ್ಯಾಕ್ರೋ ಅಕ್ಷವನ್ನು ಮೂಲಮಾನದಲ್ಲಿ ಸಂಧಿಸುತ್ತದೆ. ಮ್ಯಾಕ್ರೊಪಿನ ಕೈಡ್‌ನಲ್ಲೂ $(\infty a:\bar{b}:\ c)$ ಎರಡು ಆಯಾಕಾರದ ಸದೃಶ ಮುಖಗಳಿದ್ದು ಪ್ರತಿ ಮುಖವೂ ಬ್ರ್ಯಾಕಿ ಮತ್ತು ಶೀರ್ಷಾಕ್ಷಗಳಿಗೆ ಸಮಾಂತರವಾಗಿಯೂ, ಮ್ಯಾಕ್ರೋ ಅಕ್ಷವನ್ನು ಮೂಲಮಾನದಲ್ಲೂ ಸಂಧಿಸುತ್ತದೆ. ಬೇಸಲ್ ಪ್ಲೇನ್‌ನಲ್ಲಿ $(\ a:\ \bar{b}:c)$ ಎರಡು ಆಯಾಕಾರದ ಸದೃಶ ಮುಖಗಳಿದ್ದು, ಸಮಾಂತರವಾಗಿದ್ದು, ಶೀರ್ಷಾಕ್ಷಕ್ಕೆ ಮೂಲಮಾನದಲ್ಲಿ ಸಂಧಿಸುತ್ತವೆ. ಇದಲ್ಲದೆ ಸಹಜವಾಗಿರಬೇಕಾದ ಸದೃಶ ಮುಖಗಳಲ್ಲಿ ಅರ್ಧ ಸಂಖ್ಯೆ ಮಾತ್ರವಿರುವ ಎಪ್ಸೋಮೈಟ್ ಮಾದರಿ ಹೆಮಿಹೆಡ್ರಲ್ ಸ್ಫಟಿಕಗಳೂ ಅಪೂರ್ಣ ರೂಪಗೊಂಡಿರುವ ಕ್ಯಾಲಮೀನ್ ಮಾದರಿ ಹೆಮಿ ಮಾರ್ಫಿಕ್ ಸ್ಫಟಿಕಗಳೂ ಈ ವರ್ಗದಲ್ಲಿವೆ.

*

**ಆರ್ದ್ರತೆ :** ಗಾಳಿಯಲ್ಲಿ ಲೀನವಾಗಿರುವ ನೀರಾವಿಯ ಅಂಶ (ಹ್ಯುಮಿಡಿಟಿ). ಈ ಅಂಶ ಹೆಚ್ಚಾದಂತೆ ಹವೆ ಆರ್ದ್ರವಾಗಿದೆಯೆಂದೂ ಕಡಿಮೆ ಆದಂತೆ ಶುಷ್ಕ (ಒಣ) ಆಗಿದೆಯೆಂದೂ ಹೇಳುತ್ತೇವೆ. ನೈಸರ್ಗಿಕ ಮತ್ತು ಮನುಷ್ಯ ಕಾರಣಗಳಿಂದ ನೀರು ಕಾದು ಬಾಷ್ಪವಾಗಿ ವಾಯುಮಂಡಲದಲ್ಲಿ ಲೀನವಾಗುವುದು. ತಾತ್ತ್ವಿಕವಾಗಿ ಹೇಳುವುದಾದರೆ ಗಾಳಿಗೆ ಒಡ್ಡಿದ ನೀರು ಸಾಮಾನ್ಯವಾಗಿ ಆರಿಹೋಗುವುದು, ಅಂದರೆ ಬಾಷ್ಪವಾಗುವುದು. ಇಂಥ ಕ್ರಿಯೆಯ ನಿಯಮ ತಿಳಿಯಲು ಡಾಲ್ಟನ್ ಒಂದು ಪ್ರಯೋಗ ನಡೆಸಿದ: ವಾಯುಭಾರ ಮಾಪಕದ (ಬರಾ ಮೀಟರ್) ಪಾದರಸದ ಮೇಲುಭಾಗದ ನಿರ್ವಾತ ಪ್ರದೇಶದಲ್ಲಿ ನೀರನ್ನು ಬಾಷ್ಪವಾಗಲು ವಿಧಿಸಿದ; ಒಂದೊಂದೇ ಹನಿ ನೀರನ್ನು ಪಾದರಸ ಸ್ತಂಭದ ಮೇಲುಭಾಗಕ್ಕೆ ಏರುವಂತೆ ಮಾಡಿದಾಗ ಮೊದಲಿನ ಕೆಲವು ಹನಿಗಳು ಬೇಗನೆ ಆರಿ, ಬಾಷ್ಪ ನಿರ್ವಾತ ಪ್ರದೇಶದಲ್ಲಿ ಲೀನವಾಯಿತು; ಜೊತೆಯಲ್ಲಿಯೇ ಬಾಷ್ಪದ ಸಂಮರ್ದದಿಂದ ಸ್ತಂಭದ ಮಟ್ಟ ತಗ್ಗಿತು; ಒಂದು ಮಿತಿಗೆ ಬರುವಾಗ ಹನಿ ಆರಲಿಲ್ಲ; ಸ್ತಂಭದ ಮೇಲುಭಾಗದಲ್ಲಿ ತೆಳುಪದರವಾಗಿ ಹರಡಿತು; ಮಟ್ಟ ಮತ್ತೆ ತಗ್ಗಲಿಲ್ಲ. ಮುಂದಿನ ಹನಿಗಳು ಪದರದ ದಪ್ಪವನ್ನು ವರ್ಧಿಸಿದುವೇ ವಿನಾ ಬೇರೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ಪ್ರಯೋಗ ನಡೆದದ್ದು ಸ್ಥಿರ ಉಷ್ಣತೆಯಲ್ಲಿ. ಸ್ವಾಭಾವಿಕವಾಗಿ ಡಾಲ್ಟನ್ ತರ್ಕಿಸಿದ: ನೀರ ಪದರ ಮೊದಲು ತೋರಿದಾಗ ನಿರ್ವಾತ ಪ್ರದೇಶದ ಬಾಷ್ಪ ಪರ್ಯಾಪ್ತ (ಸ್ಯಾಚುರೇಟೆಡ್) ಸ್ಥಿತಿ ಮುಟ್ಟಿತ್ತು; ಮುಂದೆ (ಆ ಉಷ್ಣತೆಯಲ್ಲಿ) ಅದು ಹೆಚ್ಚು ಬಾಷ್ಪವನ್ನು ಸ್ವೀಕರಿಸದು. ಇಂಥ ಪರ್ಯಾಪ್ತ ಸ್ಥಿತಿಯ ಬಾಷ್ಪದಸಂಮರ್ದದ ಹೆಸರು ಪರಮಾವಧಿ ಬಾಷ್ಪ

ಸಂಮರ್ದ (ಮ್ಯಾಕ್ಸಿಮಮ್ ವೇಪರ್ ಪ್ರೆಷರ್). ಇದರ ಬೆಲೆ ಉಷ್ಣತೆಯ ಏರಿಕೆಯೊಡನೆ ಏರುತ್ತದೆ. ಇತರ ಅನಿಲಗಳ ಇರವು ಈ ಸಂಮರ್ದದ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ. ಒಂದು ದತ್ತ ಉಷ್ಣತೆಯಲ್ಲಿನ ಬಾಷ್ಪಸಂಮರ್ದ ಅದೇ ಉಷ್ಣತೆಗೆ ಅನ್ವಯಿಸುವಂಥ ಪರಮಾವಧಿ ಬಾಷ್ಪ ಸಂಮರ್ದಕ್ಕಿಂತ ಕಡಿಮೆಯಾಗಿದ್ದರೆ ಆ ಬಾಷ್ಪ ಅಪರ್ಯಾಪ್ತವಾಗಿದೆ (ಅನ್‌ಸ್ಯಾಚುರೇಟೆಡ್) ಎನ್ನುತ್ತೇವೆ. ವಿವಿಧ ಉಷ್ಣತೆಗಳಲ್ಲಿ ನೀರಿನ ಪರಮಾವಧಿ ಬಾಷ್ಪ ಸಂಮರ್ದಗಳನ್ನು ಮೇಲೆ ವಿವರಿಸಿದ ವಾಯುಭಾರಮಾಪಕ ಪ್ರಯೋಗದಿಂದ ರೀನಾಲ್ಟ್ ಅಳೆದ. ಒಂದು ದತ್ತ ಪ್ರದೇಶವನ್ನು ಪರ್ಯಾಪ್ತಗೊಳಿಸಲು ಬೇಕಾಗುವ ಆವಿಯ ಪ್ರಮಾಣ ಉಷ್ಣತೆಯನ್ನು ಮಾತ್ರ ಅವಲಂಬಿಸಿದೆ.

ಗಾಳಿಯ ಆರ್ದ್ರತೆ ಅಳೆಯುವುದು ಮುಂದಿನ ಘಟ್ಟ. ಗಾಳಿಯಲ್ಲಿ ಲೀನವಾಗಿರುವ ನೀರಾವಿಯ ಪ್ರಮಾಣ ಕಾಲಕಾಲಕ್ಕೂ ದೇಶದೇಶಕ್ಕೂ ವ್ಯತ್ಯಾಸ ಹೊಂದುತ್ತದೆ. ಆದ್ದರಿಂದ ಗಾಳಿಯ ಆರ್ದ್ರತೆಯ ಖಚಿತ ನಿರ್ಧಾರ ಅಸಾಧ್ಯ. ಇಂಥಲ್ಲೆಲ್ಲ ಅಪ್ರತ್ಯಕ್ಷ ವಿಧಾನಗಳ ಮತ್ತು ಸಂಖ್ಯಾಶಾಸ್ತ್ರದ ನೆರವು ಪಡೆಯಲೇಬೇಕು. ನೀರಾವಿಯ ಮತ್ತು ಶುಷ್ಕಗಾಳಿಯ ರಾಶಿಗಳ ನಿಷ್ಪತ್ತಿಯ ಹೆಸರು ಮಿಶ್ರಣ ನಿಷ್ಪತ್ತಿ (ಮಿಕ್ಸಿಂಗ್ ರೇಷಿಯೋ); ಅದೇ ಉಷ್ಣತೆಯಲ್ಲಿ ನೀರಿನ ಸಮತಲ ಮೇಲ್ಮೈ ಮೇಲೆ ನೀರಾವಿಯನ್ನು ಪರ್ಯಾಪ್ತಗೊಳಿಸಿದರೆ ಇದನ್ನು ನೀರನ್ನು ಕುರಿತ ಪರ್ಯಾಪ್ತ ಮಿಶ್ರಣ ನಿಷ್ಪತ್ತಿ ಎಂದು ಕರೆಯುತ್ತೇವೆ. ಗಾಳಿಯಲ್ಲಿ ವಾಸ್ತವಿಕವಾಗಿ ಇರುವ ನೀರಾವಿಯ ಸಾಂದ್ರತೆ ಮತ್ತು ಅದೇ ಉಷ್ಣತೆಯಲ್ಲಿ ಪರ್ಯಾಪ್ತ ನೀರಾವಿಯ ಆರ್ದ್ರತೆ ಇವುಗಳ ಶೇಕಡ ನಿಷ್ಪತ್ತಿಗೆ ಸಾಪೇಕ್ಷ ಆರ್ದ್ರತೆ ಎಂದು ಹೆಸರು.

ಗಾಳಿಯ ಉಷ್ಣತೆ ತಿಳಿದಿರುವಾಗ ಮಿಶ್ರಣ ನಿಷ್ಪತ್ತಿ ಅಥವಾ ಸಾಪೇಕ್ಷ ಆರ್ದ್ರತೆ ಗಾಳಿಯಲ್ಲಿ ಲೀನಗೊಂಡಿರುವ ನೀರಾವಿಯ ಪ್ರಮಾಣವನ್ನು ನೀಡಬಲ್ಲುವು. ಗಾಳಿಯನ್ನು ತಂಪುಗೊಳಿಸಿದಂತೆ ಪರ್ಯಾಪ್ತ ನೀರಾವಿಯ ಮತ್ತು ನೀರಾವಿಯ ಸಂಮರ್ದಗಳು ಸಮಾನವಾಗಿರುವ ಸ್ಥಿತಿ ತಲುಪುತ್ತವೆ. ಇಲ್ಲಿಂದ ಮುಂದೆ ದ್ರವೀಕರಣ ಪ್ರಾರಂಭವಾಗುವುದು. ಇದು ಇಬ್ಬನಿ ಬಿಂದು (ಡ್ಯೂ ಪಾಯಿಂಟ್). ಅಂದರೆ ಜಲಬಾಷ್ಪದ ಸಾಂದ್ರೀಕರಣ ಆರಂಭವಾಗುವ ಉಷ್ಣತೆ, ಇಲ್ಲಿಂದ ಮುಂದೆ ತೇವ ಸಾಂದ್ರೀಕರಿಸಿ ಹನಿಹನಿಯಾಗಿ ನೆಲಕ್ಕೆ ಬೀಳುತ್ತದೆ. ಇಬ್ಬನಿ ಬಿಂದು ವಾಯುಮಂಡಲದ ಆರ್ದ್ರತೆಯ ಮಾನವೂ ಹೌದು. *



ಆರ್ದ್ರ ಮತ್ತು ಶುಷ್ಕ ಬುರುಡೆಯ ಆರ್ದ್ರತಾಮಾಪಕ

**ಆರ್ದ್ರತಾ ಮಾಪನ:** ಗಾಳಿಯ ಆರ್ದ್ರತೆಯನ್ನು ಅಳೆಯುವ ಕ್ರಿಯೆ (ಹೈಗ್ರೊ ಮೆಟ್ರಿ): ಅಳೆಯುವ ಸಾಧನದ ಹೆಸರು ಆರ್ದ್ರತಾ ಮಾಪಕ (ಹೈಗ್ರೊ ಮೀಟರ್). ಆರ್ದ್ರತಾ ಮಾಪಕಗಳಲಿ ಮುಖ್ಯವಾದವು ಕೂದಲು ಆರ್ದ್ರತಾ ಮಾಪಕ (ಹೇರ್ ಹೈಗ್ರೊಮೀಟರ್). ಇಬ್ಬನಿ ಬಿಂದು ಆರ್ದ್ರತಾಮಾಪಕ, ರೀನಾಲ್ಟನ ಆರ್ದ್ರತಾಮಾಪಕ, ಡಾಬ್ಸನ್–ಬ್ರೂವರ್‌ರ ನೀರ್ಗಲ್ಲುವಿಂದು (ಫ್ರಾಸ್ಟ್‌ಪಾಯಿಂಟ್) ಆರ್ದ್ರತಾ ಮಾಪಕ, ಆರ್ದ್ರ ಮತ್ತು ಶುಷ್ಕಬುರುಡೆಯ (ವೆಟ್ ಅಂಡ್ ಡ್ರೈ ಬಲ್ಬ್) ಆರ್ದ್ರತಾಮಾಪಕ.

ಪ್ರಪಂಚದ ಬಹುಪಾಲು ಹವಾಮಾನ ಕೇಂದ್ರಗಳಲ್ಲಿಯೂ ಬಳಸುವ ಆರ್ದ್ರ ಮತ್ತು ಶುಷ್ಕ ಬುರುಡೆಯ ಆರ್ದ್ರತಾ ಮಾಪಕವನ್ನು ಇಲ್ಲಿ ವಿವರಿಸಬಹುದು. ಸೈಕ್ರೊಮೀಟರ್ ಎಂದು ಈ ಉಪಕರಣಕ್ಕೆ ಹೆಸರಿದೆ. ಇದರಲ್ಲಿ ಪಆದರಸದ ಎರಡು ಉಷ್ಣತಾಮಾಪಕಗಳಿವೆ. ಒಂದರ ಬುರುಡೆಯನ್ನು ಗಾಳಿಗೆ ತೆರೆದಿಟ್ಟಿದೆ– ಇದರ ಹೆಸರು ಶುಷ್ಕ ಬುರುಡೆ ಉಷ್ಣತಾ ಮಾಪಕ. ಇನ್ನೊಂದರ ಬುರುಡೆಗೆ ಒದ್ದೆ ಬಟ್ಟೆಯನ್ನು ಕಟ್ಟಿದೆ; ಮತ್ತು ಅದು ನಿರಂತರ ಒದ್ದೆಯಾಗಿರುವಂತೆ ವ್ಯವಸ್ಥೆ ಮಾಡಲಾಗಿದೆ. ಇದರ ಹೆಸರು ಆರ್ದ್ರ ಬುರುಡೆ ಉಷ್ಣತಾ ಮಾಪಕ. ಆರ್ದ್ರತೆ ಅಳೆಯಬೇಕಾಗಿರುವ ಗಾಳಿಯನ್ನು ಈ ಉಷ್ಣತಾ ಮಾಪಕಗಳ ಬುರುಡೆಗಳ ಮೇಲೆ ವೇಗವಾಗಿ ಹಾದುಹೋಗುವಂತೆ ಮಾಡಿದಾಗ ಆರ್ದ್ರ ಬುರುಡೆಯ ಉಷ್ಣತಾ ಮಾಪಕದಲ್ಲಿ (ಪ್ರಸರಣದಿಂದ ಉಷ್ಣನಶಿಸುವುದರಿಂದ) ಪಾದರಸದ ಮಟ್ಟ ತಗ್ಗುವುದು. ಈಗ ಎರಡು ಉಷ್ಣತಾಮಾಪಕಗಳೂ ತೋರಿಸುವ ಉಷ್ಣತೆ ಮಟ್ಟಗಳ ಮತ್ತು ಆರ್ದ್ರತಾಮಾಪಕದ ರೇಖಾಪಟದ (ಸೈಕ್ರೊಮೆಟ್ರಿಕ್ ಚಾರ್ಟ್) ಸಹಾಯದಿಂದ ಗಾಳಿಯ ಆರ್ದ್ರತೆಯನ್ನು ಗಣೀಸಬಹುದು. ಅಂದರೆ ಇಬ್ಬನಿ ಬಿಂದು ಉಷ್ಣತೆಯನ್ನು ಸಾಪೇಕ್ಷ ಆರ್ದ್ರತೆಯನ್ನು ತಿಳಿಯಬಹುದು.

**ಆರ್ದ್ರತಾ ಲೇಖಕ:** ಗಾಳಿಯಲ್ಲಿರುವ (ತೇವದ ಮಾಯಿಸ್ಚರ್) ಸಾಪೇಕ್ಷ ಪ್ರಮಾಣವನ್ನು ತೋರಿಸುವ ಒಂದು ಸಾಧನ (ಹೈಗ್ರೊಸ್ಕೋಪ್); ತೇವದ ವಾಸ್ತವಿಕಾಂಶವನ್ನು ಇದು ತೋರಿಸದು. (ಎಂ.ಆರ್.ಕೆ.;ಎಂ.ಸಿಜಿ.;ಎ.ಆರ್.ಸಿ.)

**ಆದ್ರಾ೯ :** ಮಹಾವ್ಯಾಧ ನಕ್ಷತ್ರಮಂಜದ ಪ್ರಥಮ ನಕ್ಷತ್ರ (ಬೆಟಲ್‌ಗ್ಯೂಸ್ ಅಥವಾ ∝–ಒರೈಯಾನಿಸ್). ಡಿಸೆಂಬರ್ ಜನವರಿ ತಿಂಗಳ ಸಂಜೆ ಪೂರ್ವಾಕಾಶದಲ್ಲಿ ಕಾಣುವ ನಾಲ್ಕು ಸ್ಪಷ್ಟ ನಕ್ಷತ್ರಗಳ ಸಮಲಂಬಾಕೃತಿ ಮಹಾವ್ಯಾಧ. ಇದರ ಪೂರ್ವ ಬಾಹುವಿನ (ಈಶಾನ್ಯ ಮೂಲೆಯ) ಕೆಂಪು ನಕ್ಷತ್ರ ಆದ್ರಾ೯. ಗೋಚರ ಕಾಂತಿ ಪ್ರಮಾಣದಲ್ಲಿ ಇದರ ಸ್ಥಾನ 13 (ಸೂರ್ಯ 1). ದೂರ 300–600 ಜ್ಯೋತಿರ್ವರ್ಷಗಳೆಂದು ಅಂದಾಜು. 5.8 ವರ್ಷಗಳ ಅವಧಿಯಲ್ಲಿ ಈ ನಕ್ಷತ್ರದ ಕಾಂತಿ ಸುಮಾರು 0.3 ಮತ್ತು 1.3 ಕಾಂತಿವರ್ಗಗಳ ನಡುವೆ ಆಂದೋಲಿಸುತ್ತದೆ. ಆದ್ರಾ೯ ಕೆಂಪು ಮಹಾ ದೈತ್ಯ ನಕ್ಷತ್ರ (ರೆಡ್ ಸೂಪರ್ ಜಯಂಟ್ ಸ್ಟಾರ್). ಇದರ ವ್ಯಾಸ ಸೂರ್ಯವ್ಯಾಸದ 300ರಿಂದ 400ರಷ್ಟು ಪಟ್ಟು ದೊಡ್ಡದು. (ಸಿ.ಎನ್.ಎಸ್.)

**ಆರ್ದ್ರೀಕರಣ :** ಆರ್ದ್ರವಾತಾವರಣದಿಂದ ನೀರನ್ನು ಹೀರಿ ಕೊನೆಗೆ ಕರಗಿಹೋಗುವಂಥ ಕೆಲವು ಸ್ಫಟಿಕೀಯ ರಾಸಾಯನಿಕಗಳ ಗುಣ (ಡೆಲಿಕ್ವೆಸೆನ್ಸ್). ಕ್ಯಾಲ್ಸಿಯಂ ಕ್ಲೋರೈಡ್ ($CaCl_2$), ಸತುವಿನ ಕ್ಲೋರೈಡ್ ($ZnCl_2$) ಉದಾಹರಣೆಗಳು. ಸ್ಫಟಿಕೀಯ ವಸ್ತು ನೀರನ್ನು ಹೀರುತ್ತದೋ ಇಲ್ಲವೋ ಎನ್ನುವುದು ಗಾಳಿಯಲ್ಲಿ ನೀರಿನ ಆವಿಯ ಒತ್ತಡ (ವೇಪರ್ ಪ್ರೆಷರ್), ಆ ವಸ್ತುವಿನ ಪರ್ಯಾಪ್ತ ದ್ರಾವಣದ (ಸ್ಯಾಚುರೇಟೆಡ್ ಸಲ್ಯೂಷನ್) ನೀರಿನ ಆವಿಯ ಒತ್ತಡ–ಇವುಗಳನ್ನು ಅವಲಂಬಿಸುತ್ತವೆ. ವಸ್ತು ನೀರಿನಲ್ಲಿ ವಿಲೀನವಾಗುವ ಗುಣ ಹೆಚ್ಚಾಗಿದ್ದಷ್ಟೂ ಅದು ಆರ್ದ್ರೀಕರಣ ತೋರುವುದು ಹೆಚ್ಚು. ಗಾಳಿಯಲ್ಲಿನ ಸಾಪೇಕ್ಷ ಆರ್ದ್ರತೆ (ರಿಲೇಟಿವ್ ಹ್ಯುಮಿಡಿಟಿ) ಶೇ.30 ಭಾಗಕ್ಕೆ ಹೆಚ್ಚಾದಾಗ ಕ್ಯಾಲ್ಸಿಯಂ ಕ್ಲೋರೈಡ್ ಆರ್ದ್ರೀಕರಣ ತೋರುತ್ತದೆ. ಸಕ್ಕರೆ ಈ ಆರ್ದ್ರತೆ ಶೇ.80 ಭಾಗಕ್ಕೆ ಹೆಚ್ಚಾದಾಗ ಆರ್ದ್ರೀಕರಣ ತೋರುತ್ತದೆ. (ವೈ.ಎಸ್.ಎಲ್.)

**ಆರ್ನಲ್ಡ್, ಥಾಮಸ್ :** 1795–1842 ಪ್ರಸಿದ್ಧ ಇತಿಹಾಸಕಾರ, ಶಿಕ್ಷಣತಜ್ಞ, ವಿಂಚೆಸ್ಟರ್‌ನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ. 1807ರಲ್ಲಿ ವಿನ್ಚೆಸ್ಟರ್‌ಗೆ ತೆರಳಿ, ಆಕ್ಸ್‌ಫರ್ಡಿನಲ್ಲಿ ಕಾರ್ಪಸ್ ಕ್ರಿಸ್ತಿ ಕಾಲೇಜ್ ಸೇರುವವರೆಗೂ ಅಲ್ಲಿಯೇ ಉಳಿದ. ನಾಲ್ಕು ವರ್ಷಗಳ ಅನಂತರ ಓರಿಯಲ್ ಕಾಲೇಜಿನ ಫೆಲೋ ಎಂದು ಆಯ್ಕೆಯಾದ. ವಿಶ್ವವಿದ್ಯಾಲಯ ಬಿಟ್ಟ ಅನಂತರ ಲಾಲ್ ಹಾಮ್‌ನಲ್ಲಿ ಉಳಿದು, ವಿದ್ಯಾರ್ಥಿಗಳಿಗೆ ಬೋಧಿಸುವುದರಲ್ಲಿ ಮತ್ತು ಅಧ್ಯಯನದಲ್ಲಿ ನಿರತನಾದ. ರೋಮ್ ಚರಿತ್ರೆ ಬರೆಯಲು ಪ್ರಾರಂಭಿಸಿದ. 1828 ರಿಂದ 1842ರವರೆಗೆ ರಗ್‌ಬಿ ಶಾಲೆಯ ಮುಖ್ಯೋಪಾಧ್ಯಾಯನಾಗಿದ್ದ. ಶಾಲೆ ಕೇವಲ ಸಾಮಾನ್ಯ ಜ್ಞಾನ ಮತ್ತು ಸಾಹಿತ್ಯವನ್ನು ಬೋಧಿಸುವ ಸಂಸ್ಥೆಯಲ್ಲವೆಂದು ಹೇಳಿ ವ್ಯಕ್ತಿತ್ವದ ತರಬೇತಿಗೆ ಮಹತ್ತ್ವ ನೀಡಿದ. ಸಾರ್ವಜನಿಕ ಶಾಲೆಗಳ ಹೊರಗೂ ಇವನ ಪ್ರಭಾವ ಹರಡಿದ್ದು ಕಂಡುಬರುತ್ತದೆ. 1841ರಲ್ಲಿ ಆಕ್ಸ್‌ಫರ್ಡ್ ಕಾಲೇಜೊಂದರಲ್ಲಿ ಚರಿತ್ರೆಯ ಪ್ರಾಧ್ಯಾಪಕನಾಗಿ ನೇಮಕಗೊಂಡ. ಇವನು ಪ್ರಸಿದ್ಧ ಕವಿ ಮ್ಯಾಥ್ಯೂ ಆರ್ನಲ್ಡ್‌ನ ತಂದೆ. ಸ್ವತಃ ಹಲವಾರು ಕೃತಿಗಳನ್ನೂ ರಚಿಸಿದ್ದಾನೆ. ನೀತಿಬೋಧೆಯ (ಸರ್ಮನ್ಸ್) ಹಲವು ಸಂಪುಟ ರಚಿಸಿದ. ಎ ಹಿಸ್ಟರಿ ಆಫ್ ರೋಮ್ ಟು ದಿ ಸೆಕೆಂಡ್ ಪ್ಯೂನಿಕ್ ವಾರ್ (3 ಸಂಪುಟಗಳು 1838–43), ಇಂಟ್ರಡಕ್ಟರಿ ಲೆಕ್ಚರ್ಸ್ ಆನ್ ಮಾಡರ್ನ್ ಹಿಸ್ಟರಿ (1842) ಮೊದಲಾದವು ಇವನ ಮುಖ್ಯ ಕೃತಿಗಳು. ಪ್ರಾಧ್ಯಾಪಕನಾಗಿ ಈತ ಶಾಲೆಯನ್ನು ನಡೆಸಿದ ಕ್ರಮ ಬಹು ಪ್ರಸಿದ್ಧವಾಯಿತಲ್ಲದೆ ಮುಂದೆ ಬಂದ ಅನೇಕರಿಗೆ ಮಾದರಿಯಾಯಿತು. ಥಾಮಸ್ ಹ್ಯೂಗ್ಸ್ (1822–96) ಟಾಮ್‌ಬ್ರನ್ಸ್ ಸ್ಕೂಲ್ ಡೇಸ್ ಎಂಬ ಕಾದಂಬರಿ ಅಂದಿನ ರಗ್‌ಬಿ ಶಾಲೆಯ ಜೀವನವನ್ನು ಬಹು ಸ್ವಾರಸ್ಯವಾಗಿ ಚಿತ್ರಿಸುತ್ತದೆಯಲ್ಲದೆ ಥಾಮಸ್ ಆರ್ನಲ್ಡನ ಪ್ರಾಧ್ಯಾಪಕಗಿರಿಯನ್ನು ವರ್ಣಿಸುತ್ತದೆ. (ಎಲ್. ಎಸ್. ಎಸ್)

**ಆರ್ನಲ್ಡ್, ಮ್ಯಾಥ್ಯೂ :** 1822–1888. ಇಂಗ್ಲೆಂಡಿನ ಕವಿ ಮತ್ತು ವಿಮರ್ಶಕ. ರಗ್‌ಬಿ ಪಬ್ಲಿಕ್ ಸ್ಕೂಲಿನ ಪ್ರಸಿದ್ಧ ಮುಖ್ಯೋಪಾಧ್ಯಾಯನಾಗಿದ್ದ ಥಾಮಸ್ ಆರ್ನಲ್ಡ್‌ನ ಹಿರಿಯ ಮಗ. ಪ್ರಥಮ ಕವನ ಆಲರಿಕ್ ಅಟ್ ರೋಮ್ (1840) ರಗ್‌ಬಿ ಶಾಲೆಯಲ್ಲಿ ಬಹುಮಾನ ಗಳಿಸಿತು. ಬ್ಯಾಲಿಯೊಲ್ ಕಾಲೇಜಿನ ಪ್ರೌಢ ವಿದ್ಯಾರ್ಥಿಯೆನಿಸಿ ಆಕ್ಸ್‌ಫರ್ಡಿಗೆ ಹೋದ. ಅಲ್ಲಿ ಕ್ರಾಮ್‌ವೆಲ್‌ನನ್ನು ಕುರಿತು ಬರೆದ ಕವನಕ್ಕೆ ನ್ಯೂಡಿಗೇಟ್ ಬಹುಮಾನ ಬಂತು. ಓರಿಯೆಲ್ ಕಾಲೇಜಿನಲ್ಲಿ ಸ್ವಲ್ಪಕಾಲ ಫೆಲೋ ಆಗಿದ್ದ. 1849ರಲ್ಲಿ ಹೊರಬಿದ್ದ ಪ್ರಥಮ ಕವನ ಸಂಕಲನದ ಸ್ಟ್ರೇಯ್ಡ್ ರೆವೆಲ್ಲರ್ ಅಂಡ್ ಅದರ್ ಪೋಯೆಮ್ಸ್ ಜನಪ್ರಿಯತೆ ಗಳಿಸಲಿಲ್ಲವಾದರೂ ಅದರಲ್ಲಿ ಪ್ರಸಿದ್ಧವಾದ ದಿ ಫರ್‌ಸೇಕನ್ ಮರ್‌ಮನ್, ದಿ ಸಿಕ್ ಕಿಂಗ್ ಇನ್ ಬೊಖಾರ ಮತ್ತು ಷೇಕ್ಸ್‌ಪಿಯರ್‌ನನ್ನು ಕುರಿತು ಸುನೀತಗಳು ಇದ್ದುವು. ಎಂಪಿಡೋಕ್ಲೀಸ್ ಆನ್ ಎಟ್ನಾ ಆಂಡ್ ಅದರ್ ಪೋಯೆಮ್ಸ್ (1852) ಕೂಡ ಅಷ್ಟು ಪ್ರಸಿದ್ಧವಾಗಲಿಲ್ಲ. ಸ್ವಲ್ಪ ದಿವಸಗಳಲ್ಲೇ ಇವೆರಡನ್ನೂ ಮಾರುಕಟ್ಟೆಯಿಂದ ಹಿಂತೆಗೆದುಕೊಳ್ಳಲಾಯಿತು. 1853ರಲ್ಲಿ ಪೋಯೆಮ್ಸ್ ಹೊರಬಂತು. ಮೊದಲ ಸಂಕಲನಗಳಿಂದ ಆಯ್ದ ಕೆಲವು ಕವನಗಳು, ಸೊಹ್ರಾಬ್ ಅಂಡ್ ರುಸ್ತುಂ ಮತ್ತು ದಿ ಸ್ಕಾಲರ್ ಜಿಪ್ಸಿ ಮೊದಲಾದ ಶ್ರೇಷ್ಠ ಕೃತಿಗಳು ಈ ಕವನ ಸಂಕಲನದಲ್ಲಿ ಇದ್ದುವು. ಬಾಲ್ಡರ್ ಡೆಡ್ ಕವನವಿರುವ ಪೋಯೆಮ್ಸ್, ಸೆಕೆಂಡ್ ಸೀರೀಸ್ 1855ರಲ್ಲೂ ಮೆರೊಪಿ–ಎ ಟ್ರಾಜಿಡಿ ಎಂಬ ನಾಟಕ 1858ರಲ್ಲೂ ಪ್ರಕಟವಾದುವು. ಸ್ನೇಹಿತನಾದ ಆರ್ಥರ್ ಕ್ಲೋನನ್ನು ಕುರಿತ ಥರ್‌ಸಿಸ್ ಎಂಬ ಪ್ರಸಿದ್ಧ ಶೋಕಗೀತೆಯನ್ನು ರಗ್‌ಬಿ ಚಾಪೆಲ್ ಕವನವನ್ನೂ ಒಳಗೊಂಡ ನ್ಯೂ ಪೋಯೆಮ್ಸ್ 1867ರಲ್ಲಿ ಮುದ್ರಣವಾಯಿತು. ಕೆಲಕಾಲ ಶಾಲೆಗಳ ತನಿಖಾಧಿಕಾರಿಯಾಗಿದ್ದ ಆರ್ನಲ್ಡ್ 1857ರಿಂದ 1867ರವರೆಗೆ ಆಕ್ಸ್‌ಫರ್ಡ್‌ನಲ್ಲಿ ಕಾವ್ಯದ ಪ್ರಾಧ್ಯಾಪಕ ಪೀಠವನ್ನು ಅಲಂಕರಿಸಿದ.

ಆರ್ನಲ್ಡನದು ವಿಚಾರ ಪ್ರಧಾನ ದೃಷ್ಟಿ. ರಮ್ಯಕಾವ್ಯಕ್ಕೆ ವಿರೋಧಿಯೂ ವಿಕ್ಟೋರಿಯನ್ ಯುಗದ ಕಾವ್ಯದ ಹೊಸ ಅಂಶಕ್ಕೆ ಹೊಂದಿಕೊಂಡಿದ್ದೂ ಆದ ವೈಚಾರಿಕತೆಯನ್ನು ಇವನಂತೆ ಬೇರೆ ಯಾರೂ ಪ್ರತಿನಿಧಿಸಿಲ್ಲ. ವಿಕ್ಟೋರಿಯನ್ ಕವಿಗಳಲ್ಲಿ ಆರ್ನಲ್ಡ್‌ಗೆ ದೊಡ್ಡ ಸ್ಥಾನವಿದೆ. ಆವೇಶವಿಲ್ಲದ, ಗಂಭೀರವೂ ಉದಾತ್ತವೂ ಆದ ಶೈಲಿ ಇವನದು. ಇವನ ಗೀತೆಗಳ ಆಳದಲ್ಲಿ ಏನೋ ಭಿನ್ನತೆ ಮಿಡಿಯುತ್ತದೆ. ಸಮಾಜ ಮತ್ತು ಮತತತ್ತ್ವಗಳ

ಮೇಲೆ ಈತ ಬರೆದ ಸಾಹಿತ್ಯ ಆಗಲೇ ಚರ್ಚಾಸ್ಪದವಾಗಿದ್ದು ಇವನ ಅನಂತರ ತಮ್ಮ ಪ್ರಾಶಸ್ತ್ಯ ಕಳೆದುಕೊಂಡವು. ಆದರೆ ಇವನ ಸಾಹಿತ್ಯ ವಿಮರ್ಶೆ ಮತ್ತು ಕೆಲವು ಕವನಗಳು ಇಂದೂ ಕೂಡ ಪುರಸ್ಕಾರಯೋಗ್ಯವಾಗಿವೆ.

ಮ್ಯಾಥ್ಯೂ ಆರ್ನಲ್ಡ್ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗಾಗಿ ಗ್ಲಾಡ್‌ಸ್ಟನ್ ಮಂತ್ರಿಮಂಡಲದಿಂದ ವರ್ಷಕ್ಕೆ 250 ಪೌಂಡುಗಳಂತೆ ವಿಶ್ರಾಂತಿ ವೇತನ ಪಡೆದ (1883). 1886ರಲ್ಲಿ ಉದ್ಯೋಗ ದಿಂದ ನಿವೃತ್ತನಾಗಿ 1888ರಲ್ಲಿ ಹೃದಯರೋಗದಿಂದ ನಿಧನ ಹೊಂದಿದ. (ಎನ್.ಎಸ್.ಎಲ್.)

ಆರ್ನಲ್ಡ್‌ನ ಮೆರಪಿ ನಾಟಕದ ಬಗ್ಗೆ ಒಂದು ಮಾತು. ಮೆರಪಿಯ ಗಂಡನಾದ ಮೆಸಿನಿಯಾ ಅರಸನನ್ನು ಕೊಂದು ಅವಳನ್ನು ರಾಜಕೀಯ ಕಾರಣಗಳಿಗಾಗಿ ಮದುವೆಯಾ ಗಲು ಪ್ರಯತ್ನಿಸಿದ ಫಾಲಿಫಾನ್‌ಟೀಸ್‌ನ ಮೇಲೆ ಮೆರಪಿಯ ಮಗ ಮುಯ್ಯಿ ತೀರಿಸಿದುದು ನಾಟಕದ ವಸ್ತು. ನಾಟಕದಲ್ಲಿ ಸತ್ತ್ವವಿಲ್ಲ. ಇಲ್ಲಿ ಆರ್ನಲ್ಡ್ ಮೇಳಗೀತೆಗಳಿಗೆ ಪ್ರಾಸರಹಿತ ಪದ್ಯವನ್ನು ಬಳಸಿದ್ದಾನೆ. ಈ ಗೀತೆಗಳನ್ನು ಆರ್ನಲ್ಡ್ ಬಹು ಎಚ್ಚರಿಕೆಯಿಂದ ರಚಿಸಿದ. ಇವು ಗ್ರೀಕ್ ಮೇಳಗೀತದ ಲಯದ ಪರಿಣಾಮವನ್ನೇ ಉಂಟು ಮಾಡುವುದೆಂದು ಆರ್ನಲ್ಡ್ ಹೇಳಿದ್ದರೂ ಇವು ನೀರಸವಾಗಿಯೇ ಉಳಿದಿವೆ. ಈ ಕೃತಿಗೆ ಆರ್ನಲ್ಡ್ ಸೇರಿಸಿದ ಮುನ್ನುಡಿಯಲ್ಲಿ ಗ್ರೀಕ್ ದುರಂತನಾಟಕದ ಕಲೆಯ ಸ್ಪಷ್ಟ ಸುಂದರ ನಿರೂಪಣೆ ಇದೆ. ನಾಟಕ ಕಲೆ ಆರ್ನಲ್ಡ್‌ನಿಗೆ ಸಿದ್ಧಿಸಲಿಲ್ಲ. (ಎಲ್.ಎಸ್.ಎಸ್.)

ಮ್ಯಾಥ್ಯೂ ಆರ್ನಲ್ಡ್ ಯುಗವು ವಿಜ್ಞಾನವು ಗೆದ್ದುಕೊಂಡ ಹೊಸ ತಿಳಿವಳಿಕೆಯಿಂದ ಜನರ ಧಾರ್ಮಿಕ ನಂಬಿಕೆಗಳು ಅಲ್ಲಾಡಿ, ಮನಸ್ಸುಗಳು ತತ್ತರಿಸಿದ ಕಾಲ. ಟೆನಿಸನ್, ಬ್ರೌನಿಂಗ್ ಮತ್ತು ಆರ್ನಲ್ಡರು ಈ ಅನುಭವಕ್ಕೆ ವಿಭಿನ್ನ ರೀತಿಗಳಲ್ಲಿ ಸ್ಪಂದಿಸಿದರು. ಆರ್ನಲ್ಡ್ ಅಜ್ಞೇಯತಾವಾದಿ (ಅಗ್ನಾಸ್ಟಿಕ್) ಆದ; ದೇವರಿದ್ದಾನೆಯೋ ಇಲ್ಲವೋ ಮನುಷ್ಯನು ನಿರ್ಧರಿಸಲಾರ ಎನ್ನುವುದು ಇವನ ನಿಲುವು. ಈ ಆಧ್ಯಾತ್ಮಿಕ ತುಮುಲದಿಂದಾಗಿ ಇವನ ಕಾವ್ಯದಲ್ಲಿ ವಿಷಾದವಿದೆ. ಇವನು ನೆಮ್ಮದಿಯನ್ನು ಕಂಡುಕೊಂಡದ್ದು ಪ್ರೇಮದಲ್ಲಿ, ಸ್ನೇಹದಲ್ಲಿ. ಇಂದಿಗೂ ಜನಪ್ರಿಯವಾಗಿರುವ ಇವನ ಡೋವರ್ ಬಂಕ್ ಕವನದಲ್ಲಿ ಇದನ್ನು ಕಾಣಬಹುದು. ಥರ್ಸಿಸ್ ಮತ್ತು ದಿ ಸ್ಕಾಲರ್ ಜಿಪ್ಸಿ ಇವನ ಸ್ನೇಹಿತ ಆರ್ಥರ್ ಹ್ಯೂ ಕ್ಲಫ್ ತೀರಿಕೊಂಡಾಗ ಬರೆದ ಕವನಗಳು ಇವನ ಶ್ರೇಷ್ಠ ಕವನಗಳಲ್ಲಿ ಸೇರಿವೆ. ಥರ್ಸಿಸ್ ಒಂದು ಪ್ಯಾಸ್ಟರಲ್ ಕವನ. ಇವನ ರಗ್‌ಬಿ ಚ್ಯಾಪೆಲ್ ತಂದೆಯ ನೆನಪಿಗಾಗಿ ಬರೆದದ್ದು, ಮತ್ತೊಂದು ಶ್ರೇಷ್ಠ ಕವನ. ಇವನ ಸಾಧನೆ ಮಿತವಾದರೂ ಹುಟ್ಟುಕವಿ ಎನ್ನುವುದರಲ್ಲಿ ಅನುಮಾನವಿಲ್ಲ. ಸೊಹ್ರಾಬ್ ಅಂಡ್ ರುಸ್ತುಂ ಕವನ ಇವನ ಕಥೆ ಹೇಳುವ ಕೌಶಲಕ್ಕೆ ಸಾಕ್ಷಿ. ವಿ.ಸೀ ಅವರು ಕನ್ನಡದಲ್ಲಿ ಬರೆದ ಇದೇ ಹೆಸರಿನ ನಾಟಕದಿಂದ ಇದರ ಕಥೆ ಕನ್ನಡಿಗರಿಗೆ ಪರಿಚಿತ. ಇವನ ಕಾವ್ಯದಲ್ಲಿ ವಿಷಾದ ಸ್ಥಾಯಿಯಾದರೂ ಇದು ನಿರಾಶೆಯ ಕಾವ್ಯವಲ್ಲ.

ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಮ್ಯಾಥ್ಯೂ ಆರ್ನಲ್ಡ್ ಬಹುದೊಡ್ಡ ಹೆಸರು. 17ನೆಯ ಶತಮಾನದ ಡ್ರೈಡನ್‌ನಂತೆ ಇವನೂ ಕವಿ ಮತ್ತು ವಿಮರ್ಶಕ. ಇವನ ಕಾಲಕ್ಕೆ ಇಂಗ್ಲಿಷ್ ಸಾಹಿತ್ಯ ವಿಮರ್ಶೆ ಬಹಳ ನೀರಸವಾಗಿ ಪ್ರಾಂತೀಯತೆಯಿಂದ ಕೂಡಿತ್ತು. ಅದಕ್ಕೆ ಸಾರ್ವತ್ರಿಕ ಹಾಗೂ ಸಾರ್ವಸಾಹಿತ್ಯಕ ರೂಪವನ್ನು ಕೊಟ್ಟವನು ಇವನೇ. ಒಂದು ಸಾಹಿತ್ಯವನ್ನು ಕುರಿತು ವಿಮರ್ಶಿಸಬೇಕಾದರೆ ಪ್ರಪಂಚದ ಇನ್ನಿತರ ಸಾಹಿತ್ಯಗಳನ್ನೂ ಅಭ್ಯಸಿಸಿರಬೇಕು ಎಂದು ಇವನ ಪ್ರತಿಪಾದನೆ. ಆಧುನಿಕ ವಿಮರ್ಶೆ ಹುಟ್ಟಿದ್ದೇ ಆರ್ನಲ್ಡ್‌ನಿಂದ ಎಂದು ಹೇಳಬಹುದು.

ಆಗಿನ ಕಾಲಕ್ಕೆ ಆರ್ನಲ್ಡ್ ತನ್ನ ಕವನ ಸಂಕಲನಗಳಿಗೆ ಬರೆದಿರುವ ಪೀಠಿಕಾರೂಪವಾದ ಬರೆಹಗಳು ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಅತ್ಯುತ್ತಮ ಬರೆವಣಿಗೆಗಳಲ್ಲಿ ಶ್ರೇಷ್ಠವೆಂದು ಪರಿಗಣಿತವಾಗಿವೆ. ಕಾವ್ಯ ವಸ್ತುವನ್ನು ಅವಲಂಬಿಸಿದೆಯೇ ವಿನಾ ಆಕಾರ ಅಲಂಕಾರಗಳನ್ನಲ್ಲ ಎಂಬುದನ್ನು ಆರ್ನಲ್ಡ್ ತನ್ನ ಈ ಬರೆಹಗಳಲ್ಲಿ ಸಾಧಿಸಿದ್ದಾನೆ. ಕಾವ್ಯದಲ್ಲಿ ಮಹೋನ್ನತಿಯಿಂದ ಕೂಡಿದ ಮಹಾಶೈಲಿ ಇರಬೇಕೆಂದು ಹೇಳಿದ್ದಾನೆ. ಈ ಎರಡು ವಿಷಯಗಳಲ್ಲೂ ಗ್ರೀಕರು ಇಂಗ್ಲಿಷಿನವರಂತೆ ಮುಂದುವರೆದಿದ್ದಾರೆಂದು ಇವನ ಅಭಿಪ್ರಾಯ. ಆರ್ನಲ್ಡ್‌ನ ವಿಮರ್ಶೆಗೆ, ನಿಷ್ಪಕ್ಷಪಾತ, ಸಂಯಮ, ವಾಕ್‌ಶಕ್ತಿ ಇವುಗಳ ಕೊರತೆ ಇದ್ದುದರಿಂದ ಅದು ಇವನ ವಿಮರ್ಶಾಸಿದ್ಧಿ ಹಾಗೂ ಕಾವ್ಯರಚನೆಗೆ ಮಿತಿಯನ್ನುಂಟುಮಾಡಿತು.

1857ರಲ್ಲಿ ಆರ್ನಲ್ಡ್ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಕಾವ್ಯಭಾಗಕ್ಕೆ ಪ್ರಾಧ್ಯಾಪಕನಾಗಿ ಚುನಾಯಿಸಲ್ಪಟ್ಟ ಮೇಲೆ ಹತ್ತುವರ್ಷಗಳ ಕಾಲ ತನ್ನ ಹಿಂದಿನ ಸ್ಕೂಲ್ ಇನ್ಸ್‌ಪೆಕ್ಟರ್ ಕೆಲಸದ ಜೊತೆಗೆ ಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ. ಈತ ವಿಶ್ವವಿದ್ಯಾಲಯದ ತನ್ನ ಭಾಷಣಗಳಲ್ಲಿ ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಕುಂದುಕೊರತೆಗಳನ್ನು ಹೋಗಲಾಡಿಸಲು ಫ್ರಾನ್ಸ್ ದೇಶದ ವಿಮರ್ಶಕರ ರೀತಿ ನೀತಿಗಳ ಜೊತೆಗೆ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿಸಿದ್ದಾನೆ.

ಈ ಭಾಷಣಗಳಲ್ಲಿ ಕೆಲವು ಇವನ ಈ ಎರಡು ಪುಸ್ತಕಗಳಲ್ಲಿ ಕಂಡುಬರುತ್ತವೆ. 1. ಆನ್ ಟ್ರಾನ್ಸ್‌ಲೇಟಿಂಗ್ ಹೋಮರ್ (1861); 2. ಆನ್ ದಿ ಸ್ಟಡಿ ಆಫ್ ಕೆಲ್ಟಿಕ್ ಲಿಟರೇಚರ್ (1867). ಇಂಗ್ಲಿಷ್ ಸಾಹಿತ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಪುರಾತನ ಹಾಗೂ ಅರ್ವಾಚೀನ ಸಾಹಿತ್ಯಕ್ಕೆ ತೀರ ಹತ್ತಿರದ ಸಂಬಂಧವನ್ನು ಈ ಪುಸ್ತಕಗಳಲ್ಲಿ ತರಲಾಯಿತು. ಕಾವ್ಯದಲ್ಲಿ ಅತ್ಯಗತ್ಯವಾದುದೂ ಅನಿವಾರ್ಯವಾದುದೂ ಏನು, ಕಾವ್ಯದ ಹಿರಿಮೆ ಏತರಲ್ಲಿದೆ ಎಂಬ ಸಮಸ್ಯೆಗಳಿಗೆ ಈ ಬರೆಹಗಳಲ್ಲಿ ವಿವರಣೆಯನ್ನು ನೀಡಿದ್ದಾನೆ. ವಿಮರ್ಶೆಯ ಧ್ಯೇಯವನ್ನು ಕುರಿತು ಹೇಳುತ್ತಾ ವಿಶ್ವದಲ್ಲೇ ನಿರ್ಲಿಪ್ತವಾದ ಯತ್ನದಿಂದ ಕೂಡಿದ ಅತ್ಯುತ್ತಮವಾದ ಆಲೋಚನೆಗಳೂ ಉಕ್ತಿಗಳೂ ಶ್ರೇಷ್ಠ ವಿಮರ್ಶೆಯ ಅಡಿಗಲ್ಲುಗಳೆಂದು ಆರ್ನಲ್ಡ್ ಪರಿಗಣಿಸಿದ್ದಾನೆ. ಜಗತ್ತಿನಲ್ಲಿ ಚಿಂತನೆ ಮತ್ತು ಅಭಿವ್ಯಕ್ತಿಯಲ್ಲಿ ಅತಿ ಶ್ರೇಷ್ಠವಾದುದರ ಅನ್ವೇಷಣೆಯೇ ಸಾಹಿತ್ಯ ವಿಮರ್ಶೆ ಎಂದ. ಆರ್ನಲ್ಡ್ ಪಾಶ್ಚಾತ್ಯ ಪ್ರಪಂಚದ ಎಲ್ಲ ಅತ್ಯುತ್ತಮ ಕಾವ್ಯಗಳನ್ನೂ ನಿಷ್ಪಕ್ಷಪಾತವಾಗಿ ಅವಲೋಕಿಸಿ, ಆಲೋಚಿಸಿ ಆ ಮೂಲಕ ಶ್ರೇಷ್ಠ ಕಾವ್ಯಗಳ ಮೂಲತತ್ತ್ವಗಳನ್ನು ಗುರುತಿಸಿದ್ದಾನಲ್ಲದೆ ಕಾವ್ಯದ ಅಭಿವ್ಯಕ್ತಿ ಅಥವಾ ಶೈಲಿಯ ವಿವಿಧ ವಿಧಾನಗಳನ್ನು ಸಾಹಿತ್ಯ ಚಿಂತಕರಿಗೆ ತೋರಿಸಿಕೊಟ್ಟಿದ್ದಾನೆ.

1865ರಲ್ಲಿ ತನ್ನ ವಿಮರ್ಶಾತ್ಮಕ ಕೃತಿಗಳಲ್ಲೆಲ್ಲ ಮುಖ್ಯವಾದ ಪ್ರಬಂಧಗಳನ್ನು ಪುಸ್ತಕರೂಪವಾಗಿ ಪ್ರಕಟಿಸಿದ ಇವುಗಳಲ್ಲಿ ಕೆಲವು ಪ್ರಬಂಧಗಳು ಆಕ್ಸ್‌ಫರ್ಡಿನಲ್ಲಿ ಪ್ರಾಧ್ಯಾಪಕನಾಗಿ ಮಾಡಿದ ಭಾಷಣಗಳ ಆಧಾರದ ಮೇಲೆ ರಚಿತವಾದವು. 1867ರಿಂದ 1877ರವರೆಗೆ ಇವನ ಮನಸ್ಸು ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ನ್ಯೂನತೆಗಳನ್ನು ತೊಡೆದುಹಾಕುವ ಪ್ರಯತ್ನಕ್ಕೆ ತಿರುಗಿತ್ತು. ಈ ಸಮಯದಲ್ಲಿ ಹೊರಬಂದ ಕೃತಿಗಳೆಂದರೆ ಕಲ್ಚರ್ ಅಂಡ್ ಆನರ್ಕಿ, ಸೇಂಟ್ ಪಾಲ್ ಅಂಡ್ ಪ್ರಾಟೆಸ್ಟಾಂಟಿಸಮ್, ಲಿಟರೇಚರ್ ಅಂಡ್ ಡಾಗ್ಮ, ಗಾಡ್ ಅಂಡ್ ದಿ ಬೈಬಲ್, ಲಾಸ್ಟ್ ಎಸ್ಸೇಸ್ ಆನ್ ಚರ್ಚ್ ಅಂಡ್ ರಿಲಿಜನ್, ಫ್ರೆಂಡ್‌ಷಿಪ್ಸ್, ಗಾರ್ಲೆಂಡ್ಸ್ ಅಂಡ್ ಐರಿಷ್ ಎಸ್ಸೇಸ್. ಕೊನೆಯದಾಗಿ ಎರಡನೆಯ ವಿಮರ್ಶೆಯ ಪ್ರಬಂಧಗಳ ಸಂಕಲನ ಪ್ರಕಟವಾಯಿತು (ಎಸ್ಸೇಸ್ ಇನ್ ಕ್ರಿಟಿಸಿಸಮ್–ಸೆಕೆಂಡ್ ಸೀರೀಸ್). ಈ ಸಂಕಲನದಲ್ಲಿ ಅಮೆರಿಕಕ್ಕೆ ಪ್ರವಾಸ ಕೈಗೊಂಡು ಅಲ್ಲಿ 1883–84ರಲ್ಲಿ ಮಾಡಿದ ಭಾಷಣಗಳು ಸೇರಿವೆ.

ಮ್ಯಾಥ್ಯೂ ಆರ್ನಲ್ಡ್‌ನ ವಿಮರ್ಶೆ ದೋಷರಹಿತವೇನಲ್ಲ. ರೊಮ್ಯಾಂಟಿಕ್ ಕವಿಗಳ ಬಗ್ಗೆ ಪೂರ್ವಗ್ರಹದಿಂದ ದುರಭಿಮಾನವುಳ್ಳವನಾಗಿ, ಷೆಲ್ಲಿಯ ವಿಷಯದಲ್ಲಿ ಬರೆಯುತ್ತ ಷೆಲ್ಲಿಗೆ ತುಂಬ ಅನ್ಯಾಯ ಮಾಡಿದ್ದಾನೆ. ಷೆಲ್ಲಿ ತನ್ನ ಕವಿತೆಯಲ್ಲೂ ಮತ್ತು ಜೀವನದಲ್ಲೂ ನಿಷ್ಪರಿಣಾಮಕಾರಿಯಾದ ಗಂಧರ್ವ, ಶೂನ್ಯದಲ್ಲಿ ವೃಥಾ ತನ್ನ ರೆಕ್ಕೆಗಳನ್ನು ಬಡಿಯುತ್ತ ಹಾರುತ್ತಿದ್ದಾನೆ ಎಂದು ಖಂಡಿಸಿದ್ದಾನೆ. ಈ ವಿಮರ್ಶೆ ಅಸಮರ್ಪಕವೆಂದು ಅನೇಕರು ಮನಗಂಡಿದ್ದಾರೆ. ಆರ್ನಲ್ಡ್‌ನ ವಿಮರ್ಶೆ ತನ್ನ ತತ್ತ್ವದಲ್ಲಿ ಹಾಗೂ ಬೆಲೆಗಟ್ಟುವ ಕೆಲಸದಲ್ಲಿ ರಚನಾತ್ಮಕವಾಗಿಯೇ ಇದೆ. ಇವನಿಗೆ ಧಾರ್ಮಿಕ ದೃಷ್ಟಿ ಅಧಿಕವಾಗಿ ಇದ್ದುದರಿಂದ ಕಾವ್ಯದ ಬೆಲೆ ನಿರ್ಣಯಿಸುವ ಕೆಲಸದಲ್ಲಿ ಇವನದೇ ಆದ ವಿಶಿಷ್ಟತೆಯನ್ನು ಕಾಣಬಹುದು. ಉದಾಹರಣೆಗಾಗಿ ಕಾವ್ಯಕ್ಕೆ ತನ್ನದೇ ಆದ ಲಕ್ಷಣವನ್ನು ಹೀಗೆ ನಿರೂಪಿಸಿದ್ದಾನೆ: ಕಾವ್ಯಸತ್ಯ ಮತ್ತು ಕಾವ್ಯಸೌಂದರ್ಯದ ನಿಯಮಾನುಸಾರವಾಗಿ ರೂಪುಗೊಳ್ಳುವ ಜೀವನವಿಮರ್ಶೆ ಕಾವ್ಯ. ಈ ಸಾರೋಕ್ತಿ ಸಾಧಾರಣವಾಗಿ ಸಾಹಿತ್ಯ ಜೀವನವಿಮರ್ಶೆಯಾಗಿದೆ ಎಂಬ ಉಕ್ತಿಯನ್ನು ಇನ್ನೂ ಬೆಳಗಿಸಿದೆ.

ಕಾವ್ಯದ ಗುಣಗಳಲ್ಲಿ ಗಾಢಗಾಂಭೀರ್ಯ (ಹೈ ಸೀರಿಯಸ್‌ನೆಸ್) ಇರಬೇಕೆಂದು ಆರ್ನಲ್ಡ್ ಹೇಳಿದ್ದಾನೆ. ಅದಲ್ಲದೆ ಸ್ಟಡಿ ಆಫ್ ಪೊಯಟ್ರಿ ಎಂಬ ತನ್ನ ಪ್ರಬಂಧದಲ್ಲಿ ಚಾರಿತ್ರಿಕ ವಿಮರ್ಶೆಗೆ ಪ್ರಾಧಾನ್ಯ ಕೊಟ್ಟಿಲ್ಲ. ಒಬ್ಬ ಕವಿಯ ಕೃತಿಯನ್ನು ಕುರಿತು ವಿಮರ್ಶಿಸುವಾಗ ಅಂಥವೇ ಕಾವ್ಯಗಳು ಇರುವುದಾದರೆ ಅವುಗಳೊಡನೆ ಹೋಲಿಸಿ ವಿಸ್ತೃತವಾಗಿಯೂ ಗಂಭೀರವಾಗಿಯೂ ವಿಮರ್ಶಿಸುವುದು ಚಾರಿತ್ರಿಕ ವಿಮರ್ಶೆ ಎನಿಸಿಕೊಳ್ಳುವುದು. ಹೀಗೆ ಚಾರಿತ್ರಿಕವಾಗಿ ವಿಮರ್ಶೆ ಮಾಡುವುದರಿಂದ ಕಾವ್ಯದ ವಿಷಯವನ್ನೇ ಮರೆತು ಅನಾವಶ್ಯಕವಾದ ಇತರ ವಿಷಯಗಳಿಗೆ ಪ್ರಾಧಾನ್ಯ ಕೊಡುತ್ತೇವೆ ಎಂಬುದು ಅವನ ವಾದ. ಇದು ವಿವಾದಾಸ್ಪದವಾದ ಸಂಗತಿ.

ಆರ್ನಲ್ಡ್ ಕಾವ್ಯಕ್ಕೆ ಬಹು ಎತ್ತರದ ಸ್ಥಾನವನ್ನು ನೀಡಿದ. ವಿಜ್ಞಾನವು ಮುಂದುವರೆದು ಧರ್ಮದ ಪ್ರಭಾವ ದುರ್ಬಲವಾದಂತೆ ಕಾವ್ಯವು ಅದರ ಸ್ಥಾನವನ್ನು ಪಡೆಯುತ್ತದೆ ಎನ್ನುವ ಅಭಿಪ್ರಾಯವನ್ನು ಪ್ರತಿಪಾದಿಸಿದ. 'ಬೇರಾವುದೂ ಮಾಡದ ರೀತಿಯಲ್ಲಿ ಶ್ರೇಷ್ಠ

ಕಾವ್ಯವು ನಮ್ಮನ್ನು ರೂಪಿಸುತ್ತದೆ, ನಮಗೆ ಆಧಾರವಾಗುತ್ತದೆ ಆನಂದವನ್ನು ನೀಡುತ್ತದೆ' ಎಂದ ಆತ ವರ್ಡ್ಸ್‌ವರ್ತ್‌ನ ಶ್ರೇಷ್ಠ ಕವನಗಳನ್ನು ಆರಿಸಿ, ಸಂಗ್ರಹದ ಮುನ್ನುಡಿಯಲ್ಲಿ ಅವನ ಕಾವ್ಯದ ಸ್ವರೂಪವನ್ನು, ಮಹತ್ವವನ್ನು ವಿವರಿಸಿ, ವರ್ಡ್ಸ್‌ವರ್ತ್‌ನ ಕಾವ್ಯವನ್ನು ಸವಿಯುವುದನ್ನು ತನ್ನ ಕಾಲದ ಓದುಗರಿಗೆ ಕಲಿಸಿಕೊಟ್ಟ.

ಆರ್ನಲ್ಡ್‌ನದು ಅತಿ ನೈತಿಕತೆ. ಇವನು ಕಾವ್ಯದ ಒಳ ಅಂಶ (ಕಂಟೆಂಟ್)ಕ್ಕೆ ಪ್ರಾಧಾನ್ಯ ನೀಡಿದ, ಕಾವ್ಯಾಂಶಕ್ಕೆ ಸಾಕಷ್ಟು ಪ್ರಾಧಾನ್ಯ ನೀಡಲಿಲ್ಲ ಎಂಬ ಆಕ್ಷೇಪಣೆಯುಂಟು. ಇವನು ಕಾವ್ಯವು ಬದುಕಿನ ವಿಮರ್ಶೆ ಎಂದು ಹೇಳಿದ ಎನ್ನುವುದು ಈ ಆಕ್ಷೇಪಣೆಗೆ ಮುಖ್ಯ ಆಧಾರ. ಆದರೆ ಇವನ ಪೂರ್ತಿ ವಾಕ್ಯವನ್ನು ಗಮನಿಸಬೇಕು: ಕಾವ್ಯ ಸೌಂದರ್ಯ ಮತ್ತು ಕಾವ್ಯ ಸತ್ವಗಳ ನಿಯಮಗಳಿಗೆ ಒಳಪಟ್ಟಂತೆ ಕಾವ್ಯವು ಬದುಕಿನ ವಿಮರ್ಶೆ.

ಆರ್ನಲ್ಡ್‌ನ ಅನಂತರ ಬಂದ ಟಿ.ಎಸ್.ಎಲಿಯೆಟ್ ಇವನನ್ನು ಉಗ್ರವಾಗಿ ಟೀಕಿಸಿದ್ದರೂ ಇವನ ಪ್ರಭಾವಕ್ಕೆ ಒಳಗಾಗಿದ್ದಾನೆ. ಆರ್ನಲ್ಡ್‌ನ ವಿಮರ್ಶೆಯ ಹಲವು ಅಂಶಗಳು ಎಲಿಯೆಟ್‌ನ ವಿಮರ್ಶೆಯಲ್ಲಿ ಸೇರಿವೆ. (ಎಲ್.ಎಸ್.ಎಸ್.)

**ಆರ್ನಲ್ಡ್, ಸರ್ ಎಡ್ವಿನ್ :** 1832–1904. ದ ಲೈಟ್ ಆಫ್ ಏಷ್ಯ ಆರ್ ದಿ ಗ್ರೇಟ್ ರಿನನ್ಸಿಯೇಷನ್ (1870) ಎಂಬ ಬುದ್ಧಜೀವನವನ್ನು ಕುರಿತ ಖ್ಯಾತ ಕವನದ ಕರ್ತೃ. ಇಂಗ್ಲೆಂಡಿನ ಸಸೆಕ್ಸ್‌ನಲ್ಲಿನ ಒಬ್ಬ ಮ್ಯಾಜಿಸ್ಟ್ರೇಟನ ಮಗನಾಗಿ ಜನಿಸಿ ಲಂಡನ್, ಆಕ್ಸ್‌ಫರ್ಡ್‌ಗಳಲ್ಲಿ ಓದಿ, ಪುಣೆಯ ಡೆಕನ್ ಕಾಲೇಜಿನಲ್ಲಿ ಮುಖ್ಯಾಧಿಕಾರಿಯಾಗಿ ಕೆಲಸ ಮಾಡಿದ (1856–61). ಈತ ಸಂಸ್ಕೃತದಿಂದ ಅನುವಾದಿಸಿದ ಮೊದಲಕೃತಿ ಹಿತೋಪದೇಶ (1861). ಭಗವದ್ಗೀತೆಯನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾನೆ. (ಎನ್.ಎಸ್.ಎಲ್.)

ಈತ 1861ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿ ಡೇಲಿ ಟೆಲಿಗ್ರಾಫ್ ಪತ್ರಿಕೆಯ ಸಂಪಾದಕ ಮಂಡಲಿಯನ್ನು ಸೇರಿದ. ಮುಂದೆ ಅದರ ಸಂಪಾದಕನಾದ. ಪೂರ್ವ ಜಗತ್ತಿನ ಬದುಕಿನ ರೀತಿ ಮತ್ತು ಚಿಂತನೆಗಳನ್ನು ಪಶ್ಚಿಮ ಜಗತ್ತಿಗೆ ಪರಿಚಯ ಮಾಡಿಕೊಡುವುದು ಇವನ ಗುರಿ. **ದ ಲೈಟ್ ಆಫ್ ಏಷ್ಯ** ಎನ್ನುವ ದೀರ್ಘ ಕವನವನ್ನು ಬರೆದ. ಇವನ ಇತರ ಕೃತಿಗಳು ದ ಸಾಂಗ್ ಆಫ್ ಸಾಂಗ್ಸ್ ಆಫ್ ಇಂಡಿಯ, **ವಿತ್ ಸಾದಿ ಇನ್ ದ ಗಾರ್ಡನ್**, ಮತ್ತು ದಿ ಟೆನ್ತ್ ಮ್ಯಾನ್'.

ಈತನ ದ ಲೈಟ್ ಆಫ್ ಏಷ್ಯ ಕೃತಿ ಬಹು ಜನಪ್ರಿಯವಾಯಿತು. ಪಾಶ್ಚಾತ್ಯ ಜಗತ್ತಿಗೆ ಬುದ್ಧನ ಜೀವನ ಮತ್ತು ಉಪದೇಶವನ್ನು ಸರಳವಾದ ಭಾಷೆಯಲ್ಲಿ ಮೂರ್ತವಾದ ಪ್ರಸಂಗಗಳಿಗೆ ಪ್ರಾಧಾನ್ಯ ನೀಡಿ ಪರಿಚಯ ಮಾಡಿಕೊಟ್ಟಿತು. ಭಾರತದಲ್ಲಿ ಇಂಗ್ಲಿಷ್ ಬಲ್ಲವರೂ ಈ ಕವನವನ್ನು ಮೆಚ್ಚಿಕೊಂಡರು. ದ ಲೈಟ್ ಆಫ್ ದಿ ವರ್ಲ್ಡ್ ಎನ್ನುವ ದೀರ್ಘ ಕವನದಲ್ಲಿ ಯೇಸು ಕ್ರಿಸ್ತನ ಬದುಕನ್ನು, ಉಪದೇಶವನ್ನು ನಿರೂಪಿಸಲು ಪ್ರಯತ್ನಪಟ್ಟಿದ್ದಾನೆ. ಆದರೆ ಈ ರಚನೆ ಹೆಚ್ಚು ಯಶಸ್ವಿಯಾಗಲಿಲ್ಲ. (ಎಲ್. ಎಸ್. ಎಸ್)

**ಆರ್ನೀಮ್, ಆಖಿಂ ಫಾನ್ :** 1781–1831. ಹತ್ತೊಂಬತ್ತನೆಯ ಶತಮಾನದ ರೊಮ್ಯಾಂಟಿಕ್ ಯುಗದ ಜರ್ಮನಿಯ ಕವಿ. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಗಯಟೆ ಹಾಗೂ ಹರ್ಡರ್ ಮುಂತಾದ ಜರ್ಮನ್ ಕವಿಗಳ ಪ್ರಭಾವಕ್ಕೊಳಗಾಗಿ ಜರ್ಮನಿಯ ಜನಪದ ಕಥೆಗಳನ್ನು, ಐತಿಹ್ಯ ಪರಂಪರೆಯನ್ನು ಆಳವಾಗಿ ಅಭ್ಯಸಿಸಿದ. ಯುರೋಪಿನಲ್ಲೆಲ್ಲ ಪ್ರವಾಸ ನಡೆಸಿ ಹೈಡೆಲ್‌ಬರ್ಗ್ ಪಟ್ಟಣದಲ್ಲಿ ಬ್ರೆಂಟಾನೋ ಎಂಬ ಇನ್ನೊಬ್ಬ ಪ್ರತಿಭಾವಂತ ಕವಿಯೊಡನೆ ಕಲೆತು ಜರ್ಮನ್ ಜನಪದ ಗೀತೆಗಳ, ಐತಿಹ್ಯಗಳ ಅತ್ಯಮೂಲ್ಯ ಸಂಗ್ರಹವೊಂದನ್ನು ಸಂಪಾದಿಸಿದ. ಜರ್ಮನಿಯ ಕವಿಗಳಿಬ್ಬರೂ ಜರ್ಮನಿಯ ಕಿರಿಯ, ಕ್ರಾಂತಿಕಾರಕ ಸಾಹಿತಿಗಳ ನೇತಾರರಾಗಿ, ರೊಮ್ಯಾಂಟಿಕ್ ಚಳವಳಿಯ ಆದ್ಯಪ್ರವರ್ತಕರಾದರು. ಜರ್ಮನಿಯ ಪುರಾತನ ಜಾನಪದ ಪರಂಪರೆಯತ್ತ ಕವಿಗಳ ಕಣ್ಣು ಸೆಳೆದು, ಇವರು ಜರ್ಮನಿಯ ಸಾಹಿತ್ಯದ ಉತ್ಕರ್ಷಕ್ಕೆ ಪರೋಕ್ಷವಾಗಿಯೂ ನೆರವಾದರು. ಇವೆಲ್ಲದರ ಜತೆಗೆ ಆರ್ನೀಮ್ ಬರೆದ ಹಲವು ಕಿರುಕಾದಂಬರಿಗಳೂ ಎರಡು ಸಂಪುಟಗಳುಳ್ಳ ರಮ್ಯಕಥೆಯೂ ಇವನಿಗೆ ಅಪಾರ ಕೀರ್ತಿ ಗಳಿಸಿಕೊಟ್ಟವು. (ಎಚ್.ಕೆ.ಆರ್.)

**ಆರ್ನೆ, ಆಂಟಿ :** 1867–1925. ಜಾನಪದ ಸಂಶೋಧನೆಯಲ್ಲಿ ಬಹು ಗಣನೀಯ ಸ್ಥಾನವನ್ನು ಪಡೆದಿರುವ ಫಿನ್‌ಲೆಂಡ್‌ನ ಶ್ರೇಷ್ಠ ಜಾನಪದ ವಿದ್ವಾಂಸರ ಸಾಲಿನಲ್ಲಿ ಅಗ್ರಗಣ್ಯ. ಅಲ್ಲಿನ ಜಾನಪದ ವಿದ್ವತ್ತಿಗೆ ಚೈತನ್ಯವನ್ನು ತುಂಬಿದವರಲ್ಲಿ ಪ್ರಮುಖ. ಆಧುನಿಕ ಜಾನಪದ ಚಳವಳಿಯ ನೇತಾರ. ಈತನ ವಿದ್ವತ್ತು ಕೇವಲ ಫಿನ್‌ಲೆಂಡ್‌ನ ಜಾನಪದ ಕ್ಷೇತ್ರಕ್ಕೇ ಮೀಸಲಾಗದೆ ಇಡೀ ವಿಶ್ವದ ಜಾನಪದ ಸಂಶೋಧನೆಗೆ ಮಾರ್ಗದರ್ಶಕವಾಯಿತು. ಜನಪದ ಕಥೆಗಳ ವರ್ಗೀಕರಣದಲ್ಲಿ ಈತನ ಪಾತ್ರ ದೊಡ್ಡದು. 1913ರಲ್ಲಿ ಚಾರಿತ್ರಿಕ ಭೌಗೋಳಿಕ ಮಾರ್ಗದ ಮಹತ್ತ್ವವನ್ನು ಕುರಿತು ಬರೆದ ಮೇಲೆ ಜನಪದ ಕಥೆಗಳ ಒಂದೊಂದರ ಮೂಲವನ್ನೂ ಶೋಧಿಸತೊಡಗಿದ. ಇದರ ವಿವರವಾದ ಅಭ್ಯಾಸಕ್ಕಾಗಿ ದೇಶವಿದೇಶಗಳನ್ನು ಸುತ್ತಿ ಸಾಮಗ್ರಿಯನ್ನು ಕಲೆಹಾಕಿದ. ಯುರೋಪಿನ ಸಂಪ್ರದಾಯಕ್ಕೆ ಒಳಪಡುವ ಎಲ್ಲ ಕಥೆಗಳ ಅಭ್ಯಾಸವನ್ನೂ ನಡೆಸಿ ಪ್ರತಿಯೊಂದಕ್ಕೂ ನಿರ್ದಿಷ್ಟ ಸಂಖ್ಯೆಯೊಂದನ್ನು ಗೊತ್ತುಪಡಿಸಿದ. ಈ ವರ್ಗಸೂಚಿ (ಟೈಪ್ ಇಂಡೆಕ್ಸ್) ಸಂಶೋಧನಾ ರಂಗದಲ್ಲಿ ತುಂಬ ಉಪಯುಕ್ತವಾಯಿತು. ಸುಪ್ರಸಿದ್ಧ ಜಾನಪದ ವಿದ್ವಾಂಸ ಸ್ಟಿತ್‌ಥಾಮ್ಸನ್ ಈತನೊಡನೆ ಕಲೆತು ಈ ಕ್ರಮವನ್ನು ಇನ್ನೂ ಬೆಳೆಸಿದ.

ಒಂದೊಂದು ಕಥೆಗೂ ತನ್ನದೇ ಆದ ಆತ್ಮಕಥೆಯಿದೆ, ತಂತ್ರವಿದೆ ಎಂದು ಗುರುತಿಸಿದ ಮೊದಲ ವ್ಯಕ್ತಿ ಆರ್ನೆ. ಜನಪದ ಕಥೆಗಳ ಮೂಲವನ್ನು ವಿಶೇಷವಾಗಿ ಭಾರತಕ್ಕೆ ಅನ್ವಯಿಸಿದ ಬೆನ್ಫೆಯ ಸಿದ್ಧಾಂತವನ್ನು ಈತ ಅನುಮೋದಿಸಿ ಕೆಲವು ಕಥೆಗಳು ಮಧ್ಯಯುಗದ ಪಶ್ಚಿಮ ಯುರೋಪಿನ ಸೃಷ್ಟಿ ಎನ್ನುವುದನ್ನೂ ಸ್ಪಷ್ಟಪಡಿಸಿದ. ಐತಿಹ್ಯ ಹಾಗೂ ಒಗಟುಗಳಿಗೂ ಚಾರಿತ್ರಿಕ ಭೌಗೋಳಿಕ ಮಾರ್ಗವನ್ನು ಅನ್ವಯಿಸಿ ಯಶಸ್ವಿಯಾದ.

ಆರ್ನೆಯ ಆರೋಗ್ಯ ಅಷ್ಟೇನೂ ಉತ್ತಮಸ್ಥಿತಿಯಲ್ಲಿರಲಿಲ್ಲ. ಮೊದಮೊದಲು ತುಂಬ ತೊಂದರೆಯನ್ನೇ ಅನುಭವಿಸಿದ. ಪ್ರಾಧ್ಯಾಪಕ ಪದವಿಯನ್ನು ಪಡೆಯುವ ಮುನ್ನ ಶಾಲೆಗಳಲ್ಲಿ ಪಾಠ ಹೇಳುತ್ತ ಬಡತನವನ್ನು ಕಂಡ ವ್ಯಕ್ತಿ. ತನ್ನೆಲ್ಲ ಕಷ್ಟಗಳ ನಡುವೆಯೂ ಜಾನಪದ ಸಂಶೋಧನೆಯನ್ನು ನಡೆಸಿ ಮುಂದಿನ ಅನೇಕ ವಿದ್ವಾಂಸರಿಗೆ ಮಾರ್ಗದರ್ಶನ ಮಾಡಿದ ಕೀರ್ತಿ ಈತನದು. (ಜಿ.ಎಸ್.ಪಿ.)

**ಆರ್ನೆಟ್, ಇ. ಎಂ. :** 1769–1860. ಜರ್ಮನಿಯ ಕ್ರಾಂತಿಕಾರಕ ಕವಿ. ವೃತ್ತಿಯಿಂದ ಇತಿಹಾಸ ಪ್ರಾಧ್ಯಾಪಕ. ತನ್ನ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ, ವ್ಯಾಪಕವಾಗಿ ದೇಶಾಟನೆ ನಡೆಸುತ್ತಿದ್ದಾಗ, ರೈನ್ ನದಿಯ ದಂಡೆಯುದ್ದಕ್ಕೂ ಫ್ರೆಂಚರು ಜರ್ಮನಿಯ ಮೇಲೆ ನಡೆಸಿದ ದಾಳಿಯ ಫಲವಾಗಿ ಕಾಣಿಸಿದ ಭಗ್ನಾವಶೇಷಗಳು–ಕೋಟೆಕೊತ್ತಲಗಳು, ಹರಕುಮುರುಕು ಅರಮನೆಗಳು – ಇವೆಲ್ಲ ಫ್ರೆಂಚರ ವಿರುದ್ಧ ಕೆರಳಿಸಿದುವು. ನೆಪೋಲಿಯನ್‌ನ ವಿರುದ್ಧವಾಗಿ ಪ್ರಬಲವಾದ ಹೋರಾಟ ಪ್ರಾರಂಭಿಸಲು ಸಂಕಲ್ಪಮಾಡಿದ. ತನ್ನ ಈ ಪರ್ಯಟನದ ಅನುಭವಗಳನ್ನು ಹಲವಾರು ಕವನಗಳಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಹಲವು ಕಾಲ ಬಾನ್ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಪ್ರಾಧ್ಯಾಪಕನಾಗಿದ್ದು ತನ್ನ ಕ್ರಾಂತಿಕಾರಕ ಹಾಗೂ ಪ್ರಗತಿಪರ ಮನೋಭಾವದಿಂದ ವಿಶೇಷ ಜನಾದರಣೆ ಗಳಿಸಿದ. ಆದರೆ ಆ ಕಾರಣಗಳಿಂದಲೇ ಜರ್ಮನ್ ಸರ್ಕಾರದ ಆಗ್ರಹಕ್ಕೂ ಗುರಿಯಾಗಬೇಕಾಯಿತು. ಅಧಿಕಾರದಿಂದ ನಿವೃತ್ತನಾಗಿ ಇಪ್ಪತ್ತು ವರ್ಷ ಏಕಾಂತವಾಸ ಅನುಭವಿಸಬೇಕಾಗಿ ಬಂತು. ಆ ಕಾಲದಲ್ಲಿ ಬರೆದ ಹಲವು ಕವನಗಳಲ್ಲಿ ಅವನ ದೇಶಪ್ರೇಮ ಹಾಗೂ ಪ್ರಗತಿಪ್ರಜ್ಞೆ ಉಕ್ಕಿ ಹರಿಯುವುದನ್ನು ಗಮನಿಸಬಹುದು. ಫ್ರಾನ್ಸಿನ ವಿರುದ್ಧ ನಡೆದ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ ಈತನನ್ನು ಇವನ ದೇಶದ ಜನ ಎಲ್ಲ ಜರ್ಮನರನ್ನೂ ಮೀರಿಸಿದ ಪ್ರಚಂಡ ಎಂದು ಕರೆದುದು ಆಶ್ಚರ್ಯವಲ್ಲ. ರಾಜಕೀಯಕ್ಕೆ ಸಂಬಂಧಿಸಿದ ವಸ್ತುವನ್ನಲ್ಲದೆ ಹಲವು ತಾತ್ತ್ವಿಕ ವಿಚಾರಗಳನ್ನು ಕುರಿತು ಬರೆದ ಇವನ ಕವನಗಳಲ್ಲಿ ಸೊಗಸಾದ ಅಭಿವ್ಯಕ್ತಿಯ ಚೆಲುವನ್ನು ಗುರುತಿಸಬಹುದು. (ಎಚ್.ಕೆ.ಆರ್.)

**ಆರ್ಮ್‌ಸ್ಟ್ರಾಂಗ್ ಮತ್ತು ಅನುಯಾಯಿಗಳು :** ಅಮೆರಿಕದ 'ಮಾನವ, ಚಂದ್ರನ ಮೇಲೆ' ಯೋಜನೆಯಲ್ಲಿ ಉದ್ದೇಶಿಸಲಾಗಿದ್ದಚಂದ್ರಲೋಕ ಯಾತ್ರೆಯನ್ನು 1969ರ ಜುಲೈ ತಿಂಗಳಲ್ಲಿ ಯಶಸ್ವಿಯಾಗಿ ಪೂರೈಸಿದ ಮೂವರು ಖಗೋಳಯಾತ್ರಿಗಳು. ಅಪೊಲೊ 11 (ನೋಡಿ) ಎಂಬ ಆಕಾಶ ನೌಕೆಯಲ್ಲಿ ಈ ಅದ್ವಿತೀಯ ಯಾತ್ರೆಯನ್ನು ಕೈಗೊಂಡು, ಸಮರ್ಪಕ ರೀತಿಯಲ್ಲಿ ನೆರವೇರಿಸಿದ, ಉದ್ದೇಶಿಕ ಧ್ಯೇಯವನ್ನು ಸಾಧಿಸಿ, ಯುಗಪುರುಷರೆನಿಸಿಕೊಂಡ ಈ ಮೂವರೂ ಅಮೆರಿಕದ ಪ್ರಜೆಗಳು. ಸಮವಯಸ್ಕರು. ಜನನ: 1930–31. ವಿವಾಹಿತರು. ಇವರಲ್ಲಿ ಇಬ್ಬರು ಚಂದ್ರನ ಮೇಲಿಳಿದು ವಿಜ್ಞಾನಯುಗದಲ್ಲಿ ದಾಖಲೆಯೊಂದನ್ನು ಸ್ಥಾಪಿಸಿದ್ದಾರೆ.

**ಆರ್ಮ್‌ಸ್ಟ್ರಾಂಗ್, ನೀಲ್ ಎ :** ಚಂದ್ರನ ಮೇಲೆ ಕಾಲಿಟ್ಟ ಮೊಟ್ಟ ಮೊದಲ ಮಾನವ. 1930ರಲ್ಲಿ ಅಮೆರಿಕದ ಓಹಿಯೋನಲ್ಲಿನ ವಪಕೋನೆಟಾ ಎಂಬ ಒಂದು ಚಿಕ್ಕ ಪಟ್ಟಣದಲ್ಲಿ ಜನನ ಚಿಕ್ಕಂದಿನಿಂದಲೇ ಭೂಮಿಯನ್ನು ಬಿಟ್ಟು ಗಾಳಿಯಲ್ಲಿ ತೇಲಬೇಕೆಂಬ ಹಂಬಲ ಇವನಲ್ಲಿತ್ತು. ಇದಲ್ಲದೆ ತನ್ನ 9ನೆಯ ವಯಸ್ಸಿನಿಂದಲೂ ನಾನಾಬಗೆಯ ವಿಮಾನಗಳನ್ನು ನೋಡಿ ಅದರಲ್ಲಿ ಕುಳಿತು ಹಾರಾಡಬೇಕೆಂಬ ಬಯಕೆಯಿತ್ತು. ವಿಮಾನ ನಡೆಸುವುದರಲ್ಲಿ ವಿಶೇಷ ಅಭಿರುಚಿಯನ್ನು ಹೊಂದಿದ್ದು, ಆ ವಿಭಾಗದಲ್ಲಿ ಶಿಕ್ಷಣ ಪಡೆದು ತನ್ನ 16ನೆಯ ವಯಸ್ಸಿನಲ್ಲೇ ವಿಮಾನಚಾಲಕನ ರಹದಾರಿಯನ್ನು ಪಡೆದ. ಅಮೆರಿಕದ ಪರ್ಡ್ಯೂವಿಶ್ವವಿದ್ಯಾನಿಲಯದಲ್ಲಿ ಎರಡು ವರ್ಷಗಳ ಅಧ್ಯಯನ ನಡೆಸಿ ಏರೊನಾಟಿಕಲ್ ಎಂಜಿಯರಿಂಗ್‌ನಲ್ಲಿ (ವಾಯುಯಾನವಿಜ್ಞಾನ) ಪದವಿ ಪಡೆದು ವಾಯುಯಾನ ಶಿಕ್ಷಣ ಪಡೆವ ಸಲುವಾಗಿ ಪೆನ್ಸ್‌ಕೊಲಕ್ಕೆ ಹೋದ. ಶಿಕ್ಷಣ ಮುಗಿಸಿ ದವಿಗಳಿಸುವ ವೇಳೆಗೆ ಕೊರಿಯ ಯುದ್ಧ ಪ್ರಾರಂಭವಾಗಿತ್ತು. ತನ್ನ 21ನೆಯ ವಯಸ್ಸಿನಲ್ಲೇ ಕೊರಿಯ ಯುದ್ಧದಲ್ಲಿ ಪ್ಯಾಂಥರ್ ಜೆಟ್ ವಿಮಾನಗಳನ್ನು ಈತ ನಡೆಸಿದ್ದ. ಈತ ನಡೆಸಿದ 78 ಕಾಂಬ್ಯಾಟ್ ವಿಮಾನಹಾರಾಟಗಳ ಸಲುವಾಗಿ ಪ್ರಶಂಸೆಗೆ ಒಳಗಾಗಿ ಮೂರು ವಾಯುಪದಕಗಳನ್ನು ಗಳಿಸಿದ. ಇಂಥ ಹಾರಾಟಗಳ ಸಮಯದಲ್ಲಾದ ಆಕಸ್ಮಿಕಗಳನ್ನು ಧೈರ್ಯದಿಂದ ಎದುರಿಸಿದ

ವ್ಯಕ್ತಿ. ಇದರಿಂದಾಗಿ ಅಮೆರಿಕ ನಾಸಾ ಸಂಸ್ಥೆಯಲ್ಲಿ ಏರೊನಾಟಿಕಲ್ ಸಂಶೋಧನಾಚಾಲಕನ ಹುದ್ದೆ ಈತನಿಗೆ ಲಭಿಸಿತು. ಪ್ರಪಂಚದಲ್ಲಿಯೇ ಅತ್ಯಧಿಕ ವೇಗದಿಂದ ಹಾರಾಟ ನಡೆಸುವ X - 15 ಎಂಬ ರಾಕೆಟ್ ವಿಮಾನವನ್ನು ಈತ ಅನೇಕ ಸಲ ನಡೆಸಿದ್ದಾನೆ. 1962ರಲ್ಲಿ ಇವನು ನಡೆಸಿದ X - 15 ಹಾರಾಟದಲ್ಲಿ ಅದು ಭೂಮಿಯಿಂದ ಸುಮಾರು 40 ಮೈಲಿಗಳೆತ್ತರದವರೆಗೂ ಹೋಗಿ ಗಂಟೆಗೆ ಸುಮಾರು 4000 ಮೈಲಿ ವೇಗದಲ್ಲಿ ಹಾರಿತು. ಇದಲ್ಲದೆ F - 100 , F - 101, F - 102, F - 104, B - 47 ಮುಂತಾದ ಕಠಿಣ ತರಹೆಯ ವಿಮಾನಗಳನ್ನೂ ನಡೆಸಿದ್ದಾನೆ. B - 29 ಎಂಬ ಬೃಹತ್ ವಿಮಾನದಲ್ಲಿ ನೂರಕ್ಕೂ ಹೆಚ್ಚು ಸಲ ಹಾರಿದ್ದಾನೆ. 1966ರ ಮಾರ್ಚಿನಲ್ಲಿ ಅಮೆರಿಕ ನಡೆಸಿದ ಜೆಮಿನಿ 8 ಅಂತರಿಕ್ಷ ನೌಕೆಯ ಪ್ರಧಾನಚಾಲಕ ನಾಗಿದ್ದ. ಇವನೊಡನಿದ್ದ ಸಹಚಾಲಕ ಡೇವಿಡ್ ಸ್ಕಾಟ್‌ನೊಂದಿಗೆ ಭೂಕಕ್ಷೆ ಯಲ್ಲಿ ಸಂಚರಿಸುತ್ತಿದ್ದ (ಭೂಮಿ ಯಿಂದ ನೂರುಮೈಲುಗಳೆತ್ತರದಲ್ಲಿ) ಅಜೆನಾ ರಾಕೆಟ್ ಗುರಿವಾಹನವನ್ನು ಗುರುತಿಸಿ. ಮೊದಲಬಾರಿಗೆ ಕೂಡಿಕೆ ಯನ್ನು (ಡಾಕಿಂಗ್) ಯಶಸ್ವಿಯಾಗಿ ಸಾಧಿಸಿದ. ದುರದೃಷ್ಟವಶಾತ್ ಜೆಟ್‌ನೂಕುಯಂತ್ರದಲ್ಲಿ (ಜೆಟ್ ಥ್ರಸ್ಟರ್) ಕಂಡುಬಂದ ವಿದ್ಯುತ್ ದೋಷದಿಂದಾಗಿ, ಆತ ನಡೆಸುತ್ತಿದ್ದ ವಾಹನ ಹತೋಟಿತಪ್ಪಿ, ಬೆಂಕಿ ಕಾರಿಕೊಂಡು ಗಿರಗಿರನೆ ಸುತ್ತತೊಡಗಿತು. ಇದರಿಂದಾಗಿ ಮೂರು ದಿವಸಗಳಿಗೆಂದು ಮೊದಲು ಗೊತ್ತುಪಡಿಸಿದ್ದ ಹಾರಾಟವನ್ನು ಮೊಟಕುಮಾಡಿ ಧರೆಗಿಳಿದ. ಈ ಪರಿಸ್ಥಿತಿಯಲ್ಲಿ ಆತನ ಅದ್ಭುತ ಕೌಶಲ, ಸಮಯ ಸ್ಫೂರ್ತಿ ಪ್ರಕಟವಾದಂತಾಯಿತು. ಈ ಧೈರ್ಯಸಾಹಸ, ಸಮಯ ಪ್ರಜ್ಞೆಗಳಿಂದಾಗಿ ಈತನಿಗೆ ಅಮೆರಿಕದ ಅಂತರಿಕ್ಷಯಾನ ವಿಜ್ಞಾನದ ಸಂಸ್ಥೆಯ ಆಕ್ಟೀವ್ ಛಾನ್ಯೂಟ್ ಬಹುಮಾನ ದೊರೆಯಿತು. 1969ರ ಜುಲೈ 18ರಂದು ಅಮೆರಿಕ ಹಾರಿಸಿದ ಅಪೊಲೊ 11 ಅಂತರಿಕ್ಷನೌಕೆಯಲ್ಲಿ ಎಡ್ವಿನ್ ಆಲ್ಡ್ರಿನ್ ಮತ್ತು ಮೈಕೇಲ್ ಕಾಲಿನ್ಸ್‌ರೊಡನೆ ಆರ್ಮ್‌ಸ್ಟ್ರಾಂಗ್ ಚಂದ್ರ ಲೋಕಪ್ರಯಾಣ ಮಾಡಿದ. ಜುಲೈ 21ರಂದು ಚಂದ್ರನ ಮೇಲಿಳಿದು ವಿಶ್ವದ ಇತಿಹಾಸದಲ್ಲೇ ಒಂದು ಮಹತ್ಸಾಧನೆಯನ್ನು ಮಾಡಿ ಭೂಮಿಗೆ ಸುರಕ್ಷಿತವಾಗಿ ಹಿಂತಿರುಗಿದ. ಈ ಯಶಸ್ವೀ ಸಾಧನೆಗೋಸ್ಕರ ನೀಡಲಾದ ಗಾಲ್‌ಬರ್ಟ್ ಅಂತರ ರಾಷ್ಟ್ರೀಯ ವೈಮಾನಿಕ ಬಹುಮಾನದ ಒಬ್ಬ ಪಾಲುಗಾರ, ಬಹುಮಾನದ ಮೊತ್ತ 4000 ಡಾಲರುಗಳು.



**ಆಲ್ಡ್ರಿನ್, ಎಡ್ವಿನ್** : ಚಂದ್ರನ ಮೇಲೆ ಕಾಲಿಟ್ಟ ಎರಡನೆಯವ, ಅಪೊಲೊ 11ರ ಚಂದ್ರ ಕೋಶದ (ಲೂನಾರ್ ಮಾಡ್ಯೂಲ್) ಚಾಲಕನಾಗಿದ್ದ. ಬಸ್ ಎಂಬುದು ಇವನ ಅಡ್ಡ ಹೆಸರು. ಈತನಿಗೂ ಚಿಕ್ಕಂದಿನಿಂದಲೇ ವಿಮಾನಗಳನ್ನು ನಡೆಸುವುದರಲ್ಲಿ ಆಸಕ್ತಿ, ಪ್ರೌಢ ಶಾಲೆಗೆ ಸೇರುವ ಮೊದಲೇ ವಿಮಾನ ಚಾಲಕನಾಗಬೇಕೆಂದುಬಾಗಿ ನಿರ್ಧರಿ ಸಿದ್ದ. ಅಮೆರಿಕದ ವಿಮಾನ ಶಿಕ್ಷಣ ಶಾಲೆಗೆ ಸೇರಿ 1951 ರಲ್ಲಿ ಪದವೀಧರ ನಾದ. ಇದಕ್ಕೆ ಮೊದಲು ಅಮೆರಿಕದ ಬ್ರಯನ್, ಟೆಕ್ಸಾಸ್‌ಗಳಲ್ಲಿ ಒಂದು ವರ್ಷದ ಶಿಕ್ಷಣವನ್ನು ಪೂರೈಸಿದ್ದನಲ್ಲದೆ ಕೊರಿಯ ಯುದ್ಧ ಕಾರ್ಯಾಚರಣೆ ಯಲ್ಲೂ ಪಾಲ್ಗೊಂಡಿದ್ದ. 66ಸಲ ಯುದ್ಧ ಕಾರ್ಯಾಚರಣೆಯ ಕಾಂಬ್ಯಾಟ್ ವಿಮಾನಗಳನ್ನು ನಡೆಸಿ ರುವುದಲ್ಲದೆ ಅತ್ಯಂತ ಶಕ್ತಿಯುವಾದ ಮಿಗ್ ವಿಮಾನಗಳನ್ನು ಕೊರಿಯ ಯುದ್ಧ ಸಮಯದಲ್ಲಿ ಹೊಡೆದುರು ಳಿಸಿ ಒಂದು ಮಿಗ್ ವಿಮಾನವನ್ನು ಪೂರ್ಣವಾಗಿ ನಾಶಪಡಿಸಿದ ಖ್ಯಾತಿ ಇವನದು. ಜರ್ಮನಿಯಲ್ಲಿ F-100 ಎಂಬ ಕದನ ವಿಮಾನಗಳನ್ನು ನಡೆಸಿ, ಅಲ್ಲಿ ಕಂಡುಬಂದ ಸಾಮರ್ಥ್ಯದ ಕೊರತೆಯ ಸಲುವಾಗಿ ಅಮೆರಿಕ ಮೆಸಾಚುಸೆಟ್ಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಉನ್ನತಶಿಕ್ಷಣ ಪಡೆಯಲವಕಾಶವಾಯಿತು. ಆರ್ಬಿಟಲ್ ಮೆಕ್ಯಾನಿಕ್ಸ್ ಎಂಬ ವಿಷಯದ ಮೇಲೆ ಈತ ಬರೆದ ಒಂದು ಪ್ರೌಢ ಪ್ರಬಂಧದ ಸಲುವಾಗಿ ಈತನಿಗೆ ಡಾಕ್ಟೊರೇಟ್ ಪದವಿ ಲಭಿಸಿತು (1963).

1966ರ ನವೆಂಬರ್ ನಲ್ಲಿ ಅಮೆರಿಕ ನಡೆಸಿದ 12 ಅಂತರಿಕ್ಷನೌಕೆಯ ಸಹಚಾಲಕನಾಗಿದ್ದ. ನಾಲ್ಕು ದಿವಸದ ಈ ಹಾರಾಟದಲ್ಲಿ 59 ಸಲ ಭೂಮಿಯನ್ನು ಸುತ್ತಿದ. ಅಂತರಿಕ್ಷ ನೌಕೆಯ ತೆರೆದ ಕಿಂಡಿಯಲ್ಲಿ ನಿಂತು ಸುಮಾರು 200 ಮಿನಿಟುಗಳವರೆಗೆ ಭೂಮಿಯ ಛಾಯಾಚಿತ್ರಗಳನ್ನು ತೆಗೆದ. ಅನಂತರ ನೌಕೆಯಿಂದ ಹೊರಬಂದು ಸುಮಾರು 130 ಮಿನಿಟುಗಳ ಕಾಲ ಅಂತರಿಕ್ಷದಲ್ಲಿ ನಡೆದ. 1969ರ ಜುಲೈ 18 ರಂದು ಅಪೊಲೊ–11 ಅಂತರಿಕ್ಷನೌಕೆಯಲ್ಲಿ ಚಂದ್ರಲೋಕಪ್ರಯಾಣಮಾಡಿ, ಆರ್ಮ್‌ಸ್ಟ್ರಾಂಗ್‌ನಂತೆಯೇ ಚಂದ್ರನ ಮೇಲಿಳಿದ. ಇವರಿರ್ವರೂ ಚಂದ್ರನ ಮೇಲಿಳಿದು, ಅಲ್ಲಿ ಕೆಲವು ವೈಜ್ಞಾನಿಕ ಸಾಧನೋಪಕರಣಗಳನ್ನು ನೆಟ್ಟು, ವೈಜ್ಞಾನಿಕ ಪರೀಕ್ಷೆಗಳನ್ನು ನಡೆಸಿ, ಚಂದ್ರ ಕಲ್ಲು ಮಣ್ಣುಗಳನ್ನು ಭೂಮಿಗೆ ತಂದಿದ್ದಾರೆ. ಈ ಅದ್ಭುತ ಸಾಧನೆಗೋಸ್ಕರ ನೀಡಲಾಗಿರುವ ಗಾಲ್‌ಬರ್ಟ್ ಅಂತರರಾಷ್ಟ್ರೀಯ ಬಹುಮಾನದ ಎರಡನೆಯ ಪಾಲುಗಾರ.

**ಕಾಲಿನ್ಸ್, ಮೈಕೇಲ್** : ಚಂದ್ರನ ಮೇಲೆ ಅರ್ಮ್ ಸ್ಟ್ರಾಂಗ್ ಮತ್ತು ಆಲ್ಡ್ರಿನ್ ಇಳಿದು, ಅಲ್ಲಿ ಹಲವು ಗಂಟೆಗಳು ತಂಗಿದ್ದ ಸಮಯದಲ್ಲಿ ಚಂದ್ರನ ಸುತ್ತಲೂ ಸುಮಾರು 70 ಮೈಲು ಎತ್ತರದಲ್ಲಿ ಅಪೊಲೊ 11ರ ಪ್ರಧಾನ ನೌಕೆಯಲ್ಲಿ ಕುಳಿತು, ಅದರ ಚಾಲಕನಾಗಿದ್ದು, ಅನಂತರ ಅವರೊಡಗೂಡಿ ಭೂಮಿಗೆ ಹಿಂತಿರುಗಿದ ಧೈರ್ಯಶಾಲಿ, ಇಟಲಿಯ ರೋಮ್‌ನಲ್ಲಿ ಒಂದು ಮಿಲಿಟರಿ ಕುಟುಂಬದಲ್ಲಿ ಜನನ (1931). ಅಮೆರಿಕದ ವೆಸ್ಟ್ ಪಾಯಿಂಟ್ ವಿಮಾನ ಶಿಕ್ಷಣ ಶಾಲೆಗೆ ಸೇರಿ 1952ರಲ್ಲಿ ಪದವೀಧರನಾದ. ಅನಂತರ ವಾಯುಪಡೆಯನ್ನು ಸೇರಿ ಅನೇಕ ಯುದ್ಧ ಕಾರ್ಯಾಚರಣೆಯ ವಿಮಾಗಳನ್ನು ನಡೆಸಿದ್ದಾನೆ. X - 15 ರಾಕೆಟ್ ವಿಮಾನದ ಪ್ರಯೋಗಾರ್ಥ ಹಾರಾಟದ ಪರೀಕ್ಷಾಧಿಕಾರಿಯಾಗಿ ಕೆಲಸವಾಡಿ ಹಾರಾಟವನ್ನು ನಡೆಸಿದ್ದಾನೆ. 1966ರ ಜೆಮಿನಿ 10 ಅಂತರಿಕ್ಷನೌಕೆಯ ಸಹಚಾಲಕನಾಗಿದ್ದ ಜಾನ್ ಯಂಗ್‌ನೊಡಗೂಡಿ ಭೂಕಕ್ಷೆಯಲ್ಲಿ ಸುತ್ತುತ್ತಿದ್ದ ಅಜೆನಾ ಗುರಿವಾಹಕದೊಂದಿಗೆ ಕೂಡಿಕೆ ಯನ್ನು ನಡೆಸಿದ, ಅನಂತರ ತಮ್ಮ ಕಕ್ಷೆಯನ್ನು ಬದಲಾಯಿಸಲು ಆ ವಾಹನವನ್ನು ಭೂಮಿಯಿಂದ 475 ಮೈಲುಗಳೆತ್ತರಕ್ಕೆ ಕೊಂಡೊಯ್ದು ದಾಖಲೆಯನ್ನು ಸ್ಥಾಪಿಸಿದ. ಈತ ನಡೆಸಿದ ಅಂತರಿಕ್ಷನಡಿಗೆಯ ಸಮಯದಲ್ಲಿ ಅಜೆನಾ ರಾಕೆಟ್ಟನ್ನು ಸಂಧಿಸಿ ಅದರೊಳಗಿನಿಂದ ಒಂದು ಸೂಕ್ಷ್ಮುಲ್ಕಾಪೆಟ್ಟಿಗೆಯನ್ನು ತೆಗೆದು ಪುನಃ ತನ್ನ ನೌಕೆಯನ್ನು ಸೇರಿಕೊಂಡ. 1969ರ ಜುಲೈನಲ್ಲಿ ಅಮೆರಿಕ ನಡೆಸಿದ ಅಪೊಲೊ 11 ರ ಚಂದ್ರ ಲೋಕಯಾತ್ರೆಯಲ್ಲಿ ಪಾಲ್ಗೊಂಡ ಚಂದ್ರನಲ್ಲಿಳಿದ ಖಗೋಳಯಾತ್ರಿಗಳಿಗೆ ಮಾತೃನೌಕೆಗೆ ಹಿಂತಿರುಗಲು ಯಾವುದಾದರೂ ತೊಮದರೆ ಸಂಭವಿಸಿದ ಪಕ್ಷಕ್ಕೆ ಅವರಿಗೆ ಈತ ಸಹಾಯಮಾಡಬೇಕೆಂಬ ಒಂದು ದೊಡ್ಡ ಕಾರ್ಯವನ್ನು ನಿಗದಿಮಾಡಲಾಗಿತ್ತು. ಚಂದ್ರಕೋಶ ಚಂದ್ರನನ್ನು ಬಿಟ್ಟು ಬಂದು ಮತ್ತೆ ಪ್ರಧಾನನೌಕೆಗೆ ಕೂಡಿಕೊಳ್ಳುವ ಸಮಯದಲ್ಲಿ ಕಾಲಿನ್ಸ್ ಬಹು ಜಾಗರೂಕತೆಯಿಂದ ಕಾರ್ಯನಿರ್ವಹಣೆ ಮಾಡಿದ.

**ಆರ್ಮಡ (ಸ್ಪೇನಿನ)** : ಇಂಗ್ಲೆಂಡನ್ನು ಸದೆಬಡಿಯಲು (1588) ಸ್ಪೇನ್ ಸಿದ್ಧಗೊಳಿಸಿದ ಪ್ರಸಿದ್ಧ ನೌಕಾಪಡೆ (ದಿ ಇನ್‌ವಿನ್ಸಿಬಲ್ ಆರ್ಮಡ). ಹದಿನಾರನೆಯ ಶತಮಾನದಲ್ಲಿ ಸ್ಪೇನಿನ ದೊಡ್ಡ ಚಕ್ರಾಧಿಪತ್ಯಕ್ಕೆ ಚಕ್ರವರ್ತಿಯಾಗಿದ್ದ ಫಿಲಿಪ್‌ನಿಗೂ ಇಂಗ್ಲೆಂಡಿನ ಪ್ರಾಟೆಸ್ಟಂಟ್ ರಾಣಿ ಎಲಿಜಬೆತ್‌ಗೂ ಬದ್ಧದ್ವೇಷವಿದ್ದು ಅದು ಪ್ರಕೋಪಗೊಳ್ಳುವ ಒಂದು ಸನ್ನಿವೇಶ ಒದಗಿತು.

ಇಂಗ್ಲೆಂಡಿನ ಪ್ರಸಿದ್ಧ ನಾವಿಕನಾದ ಫ್ರಾನ್ಸಿಸ್ ಡ್ರೇಕ್ 1585–86ರಲ್ಲಿ ಸ್ಪೇನ್ ಸಾಮ್ರಾಜ್ಯಕ್ಕೆ ಒಳಪಟ್ಟ ಅಮೆರಿಕದ ಅಧೀನ ರಾಜ್ಯಗಳ ಮೇಲೆ ದಂಡೆತ್ತಿ ಹೋದುದೂ ಈತನ ದಾಳಿಗಳಿಗೆ ಎಲಿಜಬೆತ್ ರಾಣಿ ಉತ್ತೇಜನ ಕೊಡುತ್ತಿದ್ದುದೂ ಫಿಲಿಪ್‌ನ ಆಗ್ರಹವನ್ನು ಹೆಚ್ಚಿಸಿದುವು. ಯುರೋಪ್ ಖಂಡದ ಇತರ ರೋಮನ್ ಕೆಥೊಲಿಕ್ ಜನರನ್ನೂ ತನ್ನ ಕಡೆಗೆ ಸೆಳೆದು ಇಂಗ್ಲೆಂಡಿನ ಮೇಲೆ ಯುದ್ಧ ಮಾಡಲು ಆರ್ಮಡ ಪಡೆ ಸಿದ್ಧವಾಯಿತು.

ಮೊಟ್ಟಮೊದಲು ಈ ಪಡೆಯಲ್ಲಿ 24 ಯುದ್ಧದ ಹಡಗುಗಳು ಮಾತ್ರ ಇದ್ದವು. ಕೊನೆಗೆ ಒಟ್ಟು 130 ಹಡಗುಗಳೂ 2,500 ಫಿರಂಗಿಗಳೂ 8,000 ನಾವಿಕರೂ 20,000 ಯೋಧರೂ ಕೂಡಿದರು. ಡೋವರ್ ಜಲಸಂಧಿಯಲ್ಲಿದ್ದ ಇಂಗ್ಲಿಷ್ ನೌಕೆಯನ್ನು ಹೊಡೆದಟ್ಟಿ ಸ್ಪೇನ್ ಸೈನ್ಯ ದಾಟಿ ಹೋಗಲು ದಾರಿ ಮಾಡಬೇಕೆಂಬುದು ಮೊದಲನೆಯ ಉದ್ದೇಶ. ಪಡೆಯ ಮೊದಲ ನಾಯಕ ಸಾಂತಾಕ್ರೂಜ್. ಈತ ಯುದ್ಧದ ಆರಂಭದಲ್ಲೇ ಮೃತಪಟ್ಟ (1588). ಆಮೇಲೆ ಪಡೆಯ ನಾಯಕತ್ವವನ್ನು ಮೆಡೀನ ಸಿಡೋನಿ ವಹಿಸಿಕೊಂಡ.

29 ಜುಲೈ 1588 ರಂದು ನೌಕಾದಾಳಿ ಆರಂಭವಾಯಿತು. ಒಂದು ವಾರದೊಳಗೆ ಪ್ಲಿಮತ್, ಪೋರ್ಟ್‌ಲೆಂಡ್ ಮತ್ತು ವೈಟ್ ದ್ವೀಪಗಳಲ್ಲಿ ಕದನ ನಡೆಯಿತು. ಆದರೆ ಯಾವ ಕದನದಲ್ಲೂ ಸ್ಪೇನಿಗೆ ಖಚಿತವಾದ ಜಯ ದೊರೆಯಲಿಲ್ಲ. ಕೊನೆಗೆ ಆಗಸ್ಟ್ 6ರಂದು ಡೋವರ್ ತಲುಪಿ ಸ್ಪೇನ್ ಪಡೆ ಕೆಲೆ ಹತ್ತಿರ ಬೀಡು ಬಿಟ್ಟಿತು.

ಇಂಗ್ಲೆಂಡಿನ ಕೆಥೊಲಿಕ್ ಪಂಗಡ ದಂಗೆಯೆದ್ದಲ್ಲಿ ತನಗೆ ಸಹಾಯವಾದೀತೆಂದು ಫಿಲಿಪ್ ನಂಬಿದ್ದ. ಆದರೆ ಅವರು ತಾಯಿನಾಡಿಗೆ ವಿರೋಧವಾಗಿ ನಡೆದುಕೊಳ್ಳಲಿಲ್ಲ. ಅಲ್ಲದೆ ಫ್ರಾನ್ಸಿಸ್ ಡ್ರೇಕ್, ಹಾಕಿನ್ಸ್ ಮತ್ತು ಫ್ರಾಬಿಷರ್ ಎಲ್ಲರೂ ಒಟ್ಟುಗೂಡಿ ಬಿರುಸಾಗಿ ಕಾದಿದರು. ಮೂರನೆಯದಾಗಿ ಆಗಸ್ಟ್ 7 ಮತ್ತು 8ರಂದು ಪಡೆಗೆ ವಿರೋಧವಾಗಿ ಸಮುದ್ರದಲ್ಲಿ ಬಿರುಗಾಳಿ ಎದ್ದಿತು. ಪಡೆಯ ನಾವಿಕರಲ್ಲನೇಕರಿಗೆ ಕಾಯಿಲೆ ಬಂತು. ಆಹಾರ ಮತ್ತು ನೀರಿನ ಸರಬರಾಜು ಕುಗ್ಗಿಹೋಯಿತು. ಇಂಥ ದುಃಸ್ಥಿತಿ ಒದಗಿದ್ದುದರಿಂದ ಪಡೆಯ ಹೆಚ್ಚು ಭಾಗ ತಿರುಗಿ ಸ್ಪೇನನ್ನು ಮುಟ್ಟಲೂ ಆಗಲಿಲ್ಲ.

ಇಂಗ್ಲೆಂಡು ಬದುಕಿತು. ದಿಗ್ವಿಜಯದ ಉತ್ಸಾಹದಲ್ಲಿ ರಾಣಿ ಎಲಿಜಬೆತ್ "ದೇವರು ಬೀಸಿದ, ಅವು ಚದರಿಹೋದುವು" ಎಂಬ ಅರ್ಥ ಬರುವ ಫಲಕವೊಂದನ್ನು ಮಾಡಿಸಿ ಹಾಕಿಸಿದಳು. ಸಮುದ್ರದ ಮೇಲೆ ತನ್ನ ಪ್ರಾಬಲ್ಯವನ್ನು ಬೆಳೆಸಿಕೊಂಡ ಹೊರತು ಸ್ವಾತಂತ್ರ್ಯಕ್ಕೆ ಉಳಿಗಾಲವಿಲ್ಲ ಎಂಬ ಪಾಠವನ್ನು ಇಂಗ್ಲೆಂಡ್ ಕಲಿತಿತು. (ಬಿ.ಎಸ್.ಎನ್.)

**ಆರ್ಮಡಿಲೊ :** ಈಡೆಂಟೇಟ ವರ್ಗಕ್ಕೆ ಸೇರಿದ ಹೆಗ್ಗಣದಂತೆ ನೆಲಕೊರೆಯುವ ಒಂದು ಜಾತಿಯ ಪ್ರಾಣಿ. ಈ ಜಾತಿಯ ಪ್ರಾಣಿಗಳೆಲ್ಲ ಅಮೆರಿಕದ ನಿವಾಸಿಗಳು. ಇವುಗಳ ಹಲವಾರು ಮೂಳೆಚಕ್ಕೆಗಳು ಹೆಚ್ಚು ಕಡಿಮೆ ಮೈಯನ್ನೆಲ್ಲ ಪೂರ್ಣವಾಗಿ ಮುಚ್ಚುವ ಕವಚದಂತಿವೆ. ಹೆಗಲಿನಲ್ಲಿ ಒಂದು ಮೂಳೆಯ ಗುರಾಣಿ ಇದೆ. ಸೊಂಟದಲ್ಲಿ ಮತ್ತೊಂದಿದೆ. ಇವುಗಳ ನಡುವೆ ಚಲಿಸುವಂಥ ಹಲವಾರು ಮೂಳೆಯ ಒಡ್ಯಾಣ ಅಥವಾ ಚುಕ್ಕೆಗಳು



ಇದ್ದು ಮೈ ಬಾಗಿ ಬಳುಕಲು ಸಾಕಷ್ಟು ಅವಕಾಶವಿದೆ. ತಲೆಯಮೇಲೆ ಮತ್ತೊಂದು ಮೂಳೆಯ ಗುರಾಣಿ ಇದೆ. ಬಾಲದುದ್ದಕ್ಕೂ ಚಿಕ್ಕ ಮೂಳೆಗಳಿವೆ. ಇವನ್ನು ಬಿಟ್ಟರೆ ಚರ್ಮದಮೇಲೆ ಮೂಳೆಗಳಿರುವ ಪ್ರಾಣಿಗಳು ಇನ್ನಾವುವೂ ಇಲ್ಲ. ಇವುಗಳ ಹೆಸರು ಮೂಳೆಪಟ್ಟಿಗಳ ಲೆಕ್ಕವನ್ನವಲಂಬಿಸಿದೆ. ಉದಾಹರಣೆಗೆ, ಮೂರು ಪಟ್ಟೆ, ಆರು ಪಟ್ಟೆ, ಒಂಬತ್ತುಪಟ್ಟೆ ಇತ್ಯಾದಿ. ಹೊರ ಕವಚ ಬಹಳ ಬಲವಾಗಿರುವುದಲ್ಲದೆ ಅದರೊಳಕ್ಕೆ ಪ್ರಾಣಿ ತನ್ನ ತಲೆಯನ್ನೂ ಬಾಲವನ್ನೂ ಎಳೆದುಕೊಂಡು ಒಂದು ದುರ್ಭೇದ್ಯವಾದ ಚೆಂಡಿನಂತೆ ಗುಂಡಾಗಿ ಉರುಳುತ್ತಿರಬಲ್ಲದು.

ಇದು ಸ್ಲಾತ್ ಎಂಬ ಪ್ರಾಣಿಯ ಗುಂಪಿಗೆ ಸೇರಿದೆ. ಸ್ಲಾತ್ ಪ್ರಾಣಿಯು ಮರದ ರೆಂಬೆಗಳನ್ನು ಆಶ್ರಯಿಸಿದರೆ ಇದು ತನ್ನ ಕವಚವನ್ನೂ ತೋಡುವ ಸಾಮರ್ಥ್ಯವನ್ನು ಅವಲಂಬಿಸಿ ನೆಲವನ್ನು ಆಶ್ರಯಿಸಿದೆ. ಇದಕ್ಕೆ ಒಳ್ಳೆಯ ಬಲವಾದ ಉಗುರುಗಳಿರುವುದರಿಂದ ನೆಲವನ್ನು ಬೇಗನೆ ತೋಡಿ ನೆಟ್ಟನೆ ಒಳಕ್ಕಿಳಿದು ಕಣ್ಮರೆಯಾಗಬಲ್ಲದು. ಕವಚದ ರಕ್ಷಣೆಯ ಜೊತೆಗೆ ಇದು ವೇಗವಾಗಿ ಓಡಲೂಬಲ್ಲದು; ಚುರುಗುಟ್ಟುವಂತೆ ಕಡಿಯಲೂ ಬಲ್ಲದು. ಸಾಮಾನ್ಯವಾಗಿ ಇದು ದುಷ್ಟ ಜಂತುವಲ್ಲ. ಬೆದೆಗಾಲದಲ್ಲಿ ಹೊರತು, ಮಿಕ್ಕ ಸಮಯಗಳಲ್ಲಿ ಒಂಟಿಯಾಗಿಯೇ ಇರುತ್ತದೆ. ತಗ್ಗು ಏರು ಇಲ್ಲದ ಬಯಲು ಕಾಡುಗಳಲ್ಲೂ ನೆಲಗಳಲ್ಲೂ ಇರಲು ಇದಕ್ಕೆ ಇಷ್ಟ. ಇರುವೆ, ಹುಳು ಹುಪ್ಪಟೆ, ಸಸ್ಯ, ಕೊಳೆತ ಮಾಂಸ ಇವು ಇದರ ಆಹಾರ. ನಸುಹಳಸಿದ ಮಾಂಸವೆಂದರೆ ಇದಕ್ಕೆ ತುಂಬ ಪ್ರೀತಿ. ಕೆಲವು ಆರ್ಮಡಿಲೊಗಳು ಹಾವುಗಳನ್ನು ತಿನ್ನುತ್ತವೆ. ಒಟ್ಟಿನಲ್ಲಿ ಆರ್ಮಡಿಲೊ ತಿನ್ನದ ವಸ್ತುವಿಲ್ಲ ಎನ್ನಬಹುದು. ಇವು ರಾತ್ರಿಯಲ್ಲಿ ತಮ್ಮ ಗೂಡುಗಳಿಂದ ಹೊರಬಿದ್ದು ಹುಳು ಹುಪ್ಪಟೆ, ಸಣ್ಣದಂಶಕ ಪ್ರಾಣಿಗಳು ಮತ್ತು ಸತ್ತ ಪ್ರಾಣಿಗಳನ್ನು ಹುಡುಕಿಕೊಂಡು ಹೊರಡುತ್ತವೆ. ತಲೆಯಿಂದ ಬಾಲದ ಕೊನೆಯವರೆಗೆ ಐದು ಅಡಿಗಳಷ್ಟಿರುವ ರಾಕ್ಷಸ ಆರ್ಮಡಿಲೊ ಈ ಜಾತಿಯಲ್ಲಿ ಅತ್ಯಂತ ದೊಡ್ಡ ಪ್ರಾಣಿ. ಒಂಬತ್ತು ಪಟ್ಟೆಗಳುಳ್ಳ ಆರ್ಮಡಿಲೊ ಒಂದೇ ದಕ್ಷಿಣ ಟೆಕ್ಸಾಸ್, ಆರಿಜೋನ, ಅಲ್ಲಿಂದ ದಕ್ಷಿಣಕ್ಕೆ ಬ್ರೆಜಿಲ್‌ವರೆಗೂ ಅರ್ಜಂಟೀನದ ಬಯಲು ಕಾಡಿನಿಂದ ಹಿಡಿದು ಪನಾಮಾದವರೆಗೂ ದಕ್ಷಿಣ ಅಮೆರಿಕದ ಎಲ್ಲೆಡೆಯಲ್ಲೂ ಹರಡಿದೆ. ಮನುಷ್ಯರ ಕೈಗೆ ಸಿಕ್ಕು ಬಾಳಬೇಕಾಗಿ ಬಂದಾಗ ಇವುಗಳಲ್ಲಿ ಅನೇಕವು ಕೊಚ್ಚಿದ ಮಾಂಸ, ಕೋಳಿ ಮೊಟ್ಟೆ, ಅನ್ನ ತಿಂದು ಬದುಕಬಲ್ಲವು. (ಎ.)

**ಆರ್ಮೇನಿಯ :** ಸೋವಿಯತ್ ಗಣರಾಜ್ಯಗಳಲ್ಲೊಂದು ಹಳೆಯ ಆರ್ಮೇನಿಯ ದೇಶದ ವಿಸ್ತಾರ 103,600 ಚ.ಕಿಮೀ. ಈ ರಾಜ್ಯ ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಸ್ವತಂತ್ರ್ಯ ರಾಜ್ಯವಾಗಿತ್ತು. ಕೆಲವು ಕಾಲದ ಮೇಲೆ ಇದು ರೋಮ್‌ರಾಜ್ಯದ ಒಂದು ಅಂಗವಾಯಿತು. ಮಧ್ಯಯುಗದಲ್ಲಿ ಮತ್ತೆ ಸ್ವತಂತ್ರ್ಯವಾದ ಈ ರಾಜ್ಯದಲ್ಲಿ ಅಲ್ಲಿಯ ಅರಸರು ಆಳುತ್ತಿದ್ದರು. 1400ರಿಂದ ಮುಂದೆ ಇದನ್ನು ತುರುಕರು ಮತ್ತು ಪಾರ್ಸಿಗಳು ತಮ್ಮ ತಮ್ಮೊಳಗೆ ಹಂಚಿಕೊಂಡರು. 19ನೆಯ ಶತಮಾನದ ಆರಂಭದ ಇದರ ಬಹಳ ಭಾಗವನ್ನು ರಷ್ಯದವರು ಗೆದ್ದುಕೊಂಡರು. ಒಂದನೆಯ ಮಹಾಯುದ್ಧದ ಕಾಲದವರೆಗೆ ಇದರಲ್ಲಿ ತುರುಕರು, ಪಾರ್ಸಿಗಳು ಮತ್ತು ರಷ್ಯನ್ನರಿಗೆ ಸೇರಿದ ಮೂರು ಭಾಗಗಳಿದ್ದುವು.

19ನೆಯ ಶತಮಾನದ ಅಂತ್ಯಕ್ಕೆ ತುರುಕರು ಆರ್ಮೇನಿಯರ ಕೊಲೆ ಮಾಡತೊಡಗಿದರು. ಆದುದರಿಂದ ಯುರೋಪಿನಲ್ಲಿ ಆರ್ಮೇನಿಯನ್ನರ ಬಗೆಗೆ ಸಹಾನುಭೂತಿ ಮತ್ತು ಆತ್ಮೀಯ ಭಾವಗಳು ಹುಟ್ಟಿದುವು. 1908ರಲ್ಲಿ ತುರುಕ ಯುವಕರು ಹೆಚ್ಚಾದ ವ್ಯವಸ್ಥಿತ ರೀತಿಯಲ್ಲಿ ಆರ್ಮೇನಿಯರ ಕೊಲೆಯ ಕಾರ್ಯವನ್ನು ಕೈಗೊಂಡರು. ಆಗ ಸು. 80,000 ಆರ್ಮೇನಿಯನ್ನರು ಕೊಲ್ಲಲ್ಪಟ್ಟರೆಂದು ತಿಳಿದುಬಂದಿದೆ.

ಆ ರೀತಿಯಲ್ಲಿ ಆರ್ಮೇನಿಯ ಗಣರಾಜ್ಯ 1918ರಲ್ಲಿ ತಲೆಯೆತ್ತಿತು. ಯುರೋಪಿನ ಶಕ್ತಿಕೂಟದವರು ಇದನ್ನು 1920ರಲ್ಲಿ ಮನ್ನಿಸಿದರು. ಆದರೆ ಇದರ ಬಾಳ್ವೆ ನಾನಾ ಬಗೆಯಾಗಿ ಕೆಲವೇ ವರ್ಷಗಳಲ್ಲಿ ಕೊನೆಗೊಂಡಿತು. ಆಗ ಇಲ್ಲಿ ಬೋಲ್ಷೆವಿಸ್ಟರ ಪ್ರಭಾವ ಬೆಳೆಯುತ್ತಿದ್ದುದರಿಂದ 1921ರಲ್ಲಿ ಸೋವಿಯತ್ ಮಾದರಿಯ ಗಣರಾಜ್ಯ ರೂಪುಗೊಂಡಿತು.

ಕ್ರೈಸ್ತಪಂಥ 3ನೆಯ ಶತಮಾನದಲ್ಲಿ ಮೊದಲು ಇಲ್ಲಿ ತಳವೂರಿತು. ಆಡಳಿತ ಮತ್ತು ನಿಯಮಾಚರಣೆಗಳಲ್ಲಿ ಇದು ಗ್ರೀಕರ ಕ್ರೈಸ್ತಪಂಥವನ್ನು ಹೋಲುತ್ತದೆಯಾದರೂ ತಮ್ಮ ಧರ್ಮದ ಹಿರಿಯರ ಅಧಿಕಾರದಲ್ಲಿ ಇದು ಬೇರೆಯಾಗಿಯೇ ಇದೆ. ಜಗತ್ತಿನಲ್ಲಿ ಇದೇ ಅತಿ ಪ್ರಾಚೀನವಾದ ಕ್ರೈಸ್ತಪಂಥವೆಂದು ಪ್ರತೀತಿ. (ಎಚ್.ಜಿ.ಬಿ.)

**ಆರ್ಮೊನಿಕ :** ಇದೊಂದು ಸಂಗೀತವಾದ್ಯ. ಇದಕ್ಕಿರುವ ಗಾಜಿನ ಅಥವಾ ಲೋಹದ ಕೊಳವೆಗಳ ಮೇಲೆ ಒದ್ದೆ ಬೆರಳನ್ನು ಆಡಿಸಿದಾಗ ಉಂಟಾಗುವ ಘರ್ಷಣೆಯಿಂದಾಗಿ ಶಬ್ದೋತ್ಪತ್ತಿಯಾಗುತ್ತದೆ. ಬಹಳ ಹಿಂದಿನ ಕಾಲದಿಂದಲೇ ಪೌರಸ್ತ್ಯ ದೇಶಗಳಲ್ಲಿ



ಮತ್ತು 15ನೆಯ ಶತಮಾನದಿಂದ ಯುರೋಪಿನಲ್ಲಿ ಈ ವಾದ್ಯದ ಪರಿಚಯ ಸಾಕಷ್ಟಿತ್ತು. ಜರ್ಮನಿಯ ಖ್ಯಾತ ಸಂಗೀತಕೃತಿಕಾರ ಗ್ಲೂಕ್ ತನ್ನ ಲಂಡನ್ನಿನ ಭೇಟಿಯ ಸಮಯದಲ್ಲಿ (1745) ಈ ವಾದ್ಯವನ್ನು ನುಡಿಸಿದ. ಆಸ್ಟ್ರಿಯದ ಖ್ಯಾತ ಸಂಗೀತಕೃತಿಕಾರ ಮೊಜ಼ಾರ್ಟ್ ಈ ವಾದ್ಯವೂ ಸೇರಿದಂತೆ ಅಳವಡಿಸಿದ ಗೀತೆ (ಪಂಚಮೇಳ, ಕ್ವಿಂಟೆಟ್) ಒಂದನ್ನು

ಸೂಚಿಸಿದ. ಅನಂತರ ಕೀಲಿಮಣೆಯನ್ನುಳ್ಳ ಈ ವಾದ್ಯದ ಮತ್ತೊಂದು ಬಗೆ ಬಂತು. ಬೆಂಜ಼ಮಿನ್ ಫ್ರ್ಯಾಂಕ್ಲಿನ್ ಸುಧಾರಣೆ ಮಾಡಿದ ಗಾಜಿನ ವಾದ್ಯಗಳ ಗುಂಪಿಗೆ ಇದು ಸೇರಿದೆ. *

**ಆರ್ಯದೇವ :** ಪ್ರ.ಶ.ಸು. 2–3ನೆಯ ಶತಮಾನ. ಪ್ರಾಚೀನ ಬೌದ್ಧಾಚಾರ್ಯರಲ್ಲಿ ಒಬ್ಬ. ಪ್ರಸಿದ್ಧ ವಿದ್ವಾಂಸನಾದ ನಾಗಾರ್ಜುನನ ಶಿಷ್ಯ. ಮಾತೃಚೇಟ ಎಂಬ ಬ್ರಾಹ್ಮಣ ಪಂಡಿತನನ್ನು ವಾದದಲ್ಲಿ ಸೋಲಿಸಲು ನಾಲಂದ ವಿದ್ಯಾಪೀಠದ ಭಿಕ್ಷುಗಳು ದಕ್ಷಿಣದ ಶ್ರೀಪರ್ವತದಲ್ಲಿದ್ದ ನಾಗಾರ್ಜುನನನ್ನು ಕರೆಸಿದಾಗ, ನಾಗಾರ್ಜುನ ತನ್ನ ಶಿಷ್ಯನಾದ ಇವನನ್ನು ಕಳುಹಿಸಿಕೊಟ್ಟ. ಈತ ಚತುಶ್ಶತಕ, ಮಾಧ್ಯಮಿಕ ಹಸ್ತಬಾಲ ಪ್ರಕರಣ, ಸ್ಖಲಿತ ಪ್ರಮಥನ ಯುಕ್ತಿಹೇತುಸಿದ್ಧಿ, ಜ್ಞಾನಸಾರಖಸಮುಚ್ಚಯ, ಚರ್ಯಾಮೇಳಾಯನ ಪ್ರದೀಪ, ಚಿತ್ತಾವರಣ ವಿಶೋಧನ, ಚತುಃಪೀಠ ತಂತ್ರರಾಜ, ಚತುಃಪೀಠಸ್ಥಾನ, ಜ್ಞಾನಡಾಕಿನೀಸಾಧನ, ಏಕದ್ರುಮ ಪಂಚಿಕಾ ಎಂಬ ಗ್ರಂಥಗಳನ್ನು ಬರೆದಿದ್ದಾನೆ.

ಆದರೆ ಮಹಾವ್ಯುತ್ಪತ್ತಿ ಎಂಬ ಗ್ರಂಥದಲ್ಲಿ ನಾಗಾರ್ಜುನ, ನಾಗಾಹ್ವಯ, ಆರ್ಯದೇವ ಎಂದು ಕ್ರಮಪಡಿಸಿರುವುದನ್ನು ನೋಡಿದರೆ ಆರ್ಯದೇವ ನಾಗಾರ್ಜುನನ ಸಾಕ್ಷಾತ್ ಶಿಷ್ಯನಿರಲಾರನೆಂದು ತೋರುತ್ತದೆ. (ಕೆ.ಎಸ್.ವಿ.)

**ಆರ್ಯಪುದ್ಗಲ :** ಹಿಂದೂಧರ್ಮದಲ್ಲಿ ಮಹಾತ್ಮರು ಎಂಬ ಪದವನ್ನು ಯಾವ ಅರ್ಥದಲ್ಲಿ ಬಳಸುತ್ತೇವೋ ಆ ಅರ್ಥದಲ್ಲಿ ಆರ್ಯಪುದ್ಗಲ ಎಂಬ ಪದವನ್ನು ಬೌದ್ಧರು ಬಳಸಿದ್ದಾರೆ. ರಾಜಾ ಆರ್ಯ ಪುದ್ಗಲಾನಾಂ ಇತ್ಯಾದಿ ಮಹಾವ್ಯುತ್ಪತ್ತಿ ಎಂಬ ಗ್ರಂಥದಿಂದ ಗೊತ್ತಾಗುತ್ತದೆ. ಜೈನರ ಪುದ್ಗಲವಾದಕ್ಕೂ ಬೌದ್ಧರ ಪುದ್ಗಲವಾದಕ್ಕೂ ಮಹದಂತರವಿದೆ. ಬೌದ್ಧರಲ್ಲಿ ಪುದ್ಗಲವೆಂದರೆ ಜೀವ. ಅಂದರೆ ಬೌದ್ಧರು ಆತ್ಮತತ್ತ್ವವನ್ನು ಒಪ್ಪದಿದ್ದರೂ ವ್ಯವಹಾರವನ್ನು ಕೈಬಿಡುವಂತಿಲ್ಲ. ರೂಪ, ವಿಜ್ಞಾನ, ವೇದನಾ, ಸಂಜ್ಞಾ, ಸಂಸ್ಕಾರವೆಂಬ ಐದು ಸ್ಕಂಧಗಳಿಗಿಂತಲೂ ಆತ್ಮ ಬೇರೆ ಅಲ್ಲ ಎಂಬುದು ಅವರ ವಾದ. ಆದರೆ ವಾತ್ಸೀ ಪುತ್ರೀಯರೆಂಬ ಬೌದ್ಧ ಏಕದೇಶಿಗಳು ಇದಕ್ಕಿಂತಲೂ ಹೆಚ್ಚಿನದು ಒಂದು ಉಂಟೆಂದು ಅಂಗೀಕರಿಸುವರು. ಇದಕ್ಕೇ ಪುದ್ಗಲವೆಂದು ಹೆಸರು. ಎಂದರೆ ಹಿಂದೂಗಳಲ್ಲಿ ಒಪ್ಪಿರುವ ಜೀವ ಎಂಬ ಚೇತನದ ಸ್ಥಾನದಲ್ಲಿ ಪುದ್ಗಲವನ್ನು ಅವರು ಒಪ್ಪಿರುವರು. (ಕೆ.ಎಸ್.ವಿ.)

**ಆರ್ಯಭಟ :** ಪ್ರ.ಶ.ಸು.476. ಭಾರತೀಯ ಗಣಿತಶಾಸ್ತ್ರದ ಚರಿತ್ರೆಯಲ್ಲಿ (ಇಂದು ನಮಗೆ ತಿಳಿದಿರುವಮಟ್ಟಿಗೆ) ಮೊತ್ತ ಮೊದಲನೆಯ ಸುಪ್ರಸಿದ್ಧ ಗಣಿತವಿದ್ವಾಂಸ. ಇವನನ್ನು ಕುಸುಮಪುರದ ಆರ್ಯಭಟನೆಂದು ಕರೆಯುತ್ತಾರೆ. ಕುಸುಮಪುರ ಈಗಿನ ಪಟಣದ ಬಳಿ ಇತ್ತು. ಪ್ರ.ಶ 476. ತನ್ನ ಸುಪ್ರಸಿದ್ಧ ಗ್ರಂಥವಾದ ಆರ್ಯಭಟೀಯವನ್ನು ಪ್ರ.ಶ. 499ರಲ್ಲಿ ಬರೆದ. ಇದೇ ಹೆಸರಿನ ಮತ್ತೊಬ್ಬ ಪ್ರ.ಶ. ಸು. 950ರಲ್ಲಿ ಆರ್ಯಸಿದ್ಧಾಂತವೆಂಬ ಖಗೋಳಶಾಸ್ತ್ರ ಗ್ರಂಥವನ್ನು ಬರೆದ. ಕುಸುಮಪುರದ ಆರ್ಯಭಟನಿಗೆ ಹಿಂದೆ ಮತ್ತೊಬ್ಬ ಆರ್ಯಭಟನಿದ್ದಿರಬಹುದು. ಈ ಜಿಜ್ಞಾಸೆ ಬಗೆಹರಿದಿಲ್ಲ. ಆರ್ಯಭಟನ ಹೆಸರು ಹೇಳಿದಾಗಲೆಲ್ಲ ಸಾಮಾನ್ಯವಾಗಿ ಕುಸುಮಪುರದ ಆರ್ಯಭಟನನ್ನೇ ಕುರಿತು ಹೇಳುವುದು. ಆರ್ಯಭಟೀಯವೆಂಬ ಗ್ರಂಥ 108 ಶ್ಲೋಕಗಳನ್ನೊಳಗೊಂಡ ಸಣ್ಣ ಗ್ರಂಥ. ಇದಕ್ಕೆ ಪೀಠಿಕೆಯಾಗಿ 10 ಶ್ಲೋಕಗಳಿವೆ. ಗ್ರಂಥದಲ್ಲಿ ಶುದ್ಧ ಗಣಿತಕ್ಕೆ ಅನ್ವಯಿಸುವ ಶ್ಲೋಕಗಳು 33 ಮಾತ್ರ. ಉಳಿದವು ಖಗೋಳಶಾಸ್ತ್ರಕ್ಕೆ ಸೇರಿದುವು. ಭೂಮಿ ತನ್ನ ಅಕ್ಷದ ಸುತ್ತಲೂ ಸುತ್ತುವುದರಿಂದ ಸೂರ್ಯಚಂದ್ರಾದಿಗಳ ದೈನಂದಿನ ಚಲನೆ ಆಗುವುದೆಂದು ಆರ್ಯಭಟ ಸಿದ್ಧಾಂತಿಸಿದರೂ ಈ ಸಿದ್ಧಾಂತ ಪ್ರಾಚೀನ ಭಾರತೀಯರ ಮನ್ನಣೆಯನ್ನು ಪಡೆಯಲಿಲ್ಲ. ಪದ್ಯರೂಪದಲ್ಲಿ ಬರೆಯುವಾಗ ದೊಡ್ಡ ದೊಡ್ಡ ಸಂಖ್ಯೆಗಳನ್ನು ಬರೆಯಲು ಆರ್ಯಭಟ ಅಕ್ಷರಸಂಖ್ಯೆಗಳೆಂಬುವನ್ನು ನಿರ್ಮಿಸಿದ. ಇದರಿಂದ ದಾಶಮಿಕ ಸಂಖ್ಯಾಕ್ರಮ ಆಗಿನ ಕಾಲದಲ್ಲಿ ಜಾರಿಯಲ್ಲಿರಲಿಲ್ಲ ಎಂಬ ತಪ್ಪು ಅರ್ಥವನ್ನು ಮಾಡಬಾರದು. ಅಕ್ಷರ ಸಂಖ್ಯೆಗಳನ್ನು (ಆರ್ಯಭಟನವಲ್ಲ) ಉಪಯೋಗಿಸುವ ಪದ್ಧತಿ ಈಗಲೂ ನಮ್ಮ ಪದ್ಯ ಗ್ರಂಥಗಳಲ್ಲಿವೆ. ಉದಾ: ಕರಿ=8, ರವಿ=12, ಅಗ್ನಿ=5 ಇತ್ಯಾದಿ.

ಆರ್ಯಭಟನ ಶುದ್ಧ ಗಣಿತದ ಮುಖ್ಯ ವಿಷಯಗಳು ಈ ಕೆಳಗೆ ನಿರೂಪಿತವಾಗಿವೆ.

$$1^2+2^2+\cdots+n^2=\frac{1}{6}n(n+1)\ (2n+1)$$

$$1^2+2^3+\cdots+n^3=(1+2+\cdots n)^2$$

$$=\frac{1}{4}n^2(n+1)^2$$

ವೃತ್ತದ ಪರಿಧಿ ವ್ಯಾಸ = 62,832/20,000 ಎಂದರೆ π ಸಂಖ್ಯೆಗೆ 3.1416 ಎಂಬ ಸನ್ನಿಹಿತ ಬೆಲೆಯನ್ನು ಮೊತ್ತಮೊದಲು ಕೊಟ್ಟವನು ಆರ್ಯಭಟ. ವೃತ್ತದಲ್ಲಿ ಬಹು ಬಾಹುಗಳುಳ್ಳ ಬಹುಭುಜಾಕೃತಿಯನ್ನೆಳೆದು ಬಹುಭುಜಾಕೃತಿಯ ಸುತ್ತಳತೆಯನ್ನು ವೃತ್ತದ ಸುತ್ತಳತೆಯೆಂದು ಸ್ಥೂಲವಾಗಿ ಭಾವಿಸುವುದರಿಂದ ಈ ಸನ್ನಿಹಿತ ಬೆಲೆ ಬರುತ್ತದೆ. π ಗೆ ಭಿನ್ನರಾಶಿಯ ರೂಪದಲ್ಲಿ ನಿಖರವಾದ ಬೆಲೆ ದೊರಕುವುದಿಲ್ಲವೆಂದು ಆರ್ಯಭಟನಿಗೆ ತಿಳಿದಿದ್ದಿತೆಂದು ಭಾವಿಸಬಹುದು.

**ಜ್ಯಾ ಸಂಖ್ಯೆಗಳು :** ಆಧುನಿಕ ತ್ರಿಕೋನಮಿತಿಯಲ್ಲಿ $\sin\theta$ ಎಂಬುದಕ್ಕೆ ಬದಲಾಗಿ ಭಾರತೀಯರು r ತ್ರಿಜ್ಯವುಳ್ಳ ವೃತ್ತವನ್ನೆಳೆದು $r\sin\theta$ ಎಂಬುದನ್ನು $r\frac{3}{2}$ ಜ್ಯಾ$\theta$ ಎಂದು ಕರೆಯುತ್ತಿದ್ದರು. ಆರ್ಯಭಟ r=3438 ಎಂದು ತೆಗೆದುಕೊಂಡು $\theta$ಕ್ಕೆ $0^\circ$ ಯಿಂದ $90^0$ ವರೆಗೆ $3\frac{3}{4}^0$ ಅಂತರವಿರುವಂತೆ 24 ಬೆಲೆಗಳನ್ನು ತೆಗೆದುಕೊಂಡು ಇವುಗಳಿಗೆ ಜ್ಯಾಡ ಬೆಲೆಯನ್ನು ಕೊಟ್ಟಿದ್ದಾನೆ. 3438 ಎಂಬ ಸಂಖ್ಯೆ ಬಂದ ಕ್ರಮವೇನೆಂದರೆ ಒಂದು ಬಿಂದುವಿನ ಸುತ್ತ $360^0=360\times60=21600$ ಕಲೆಗಳು ಇವೆ. ವೃತ್ತದ ಪರಿಧಿಯನ್ನು 21600 ಭಾಗಗಳನ್ನಾಗಿ ಮಾಡಿ ಪ್ರತಿಯೊಂದು ಭಾಗವೂ ಒಂದು ಅಳತೆಯ ಏಕಮಾನವಿರಬೇಕಾದರೆ (ಯೂನಿಟ್ ಆಫ್ ಲೆಂತ್) $r=21600/2\pi$. ಇದು ಸ್ಥೂಲವಾಗಿ 3438 ಆಗುತ್ತದೆ.

ಆಧುನಿಕ ಜ್ಯಾಕೋಷ್ಟಕಗಳೊಡನೆ ಆರ್ಯಭಟನ ಜ್ಯಾಸಂಖ್ಯೆಗಳ ಹೋಲಿಕೆ ಬಹಳ ಚೆನ್ನಾಗಿದೆ. ವ್ಯತ್ಯಾಸ 1/3438 ಅಥವಾ 0.0003ಕ್ಕಿಂತ ಹೆಚ್ಚಾಗಿಲ್ಲ. ಈ ಕೋಷ್ಟಕಗಳನ್ನು ಪಡೆಯಲು ಆರ್ಯಭಟ ಒಂದು ತೊಡಕಾದ ವಿಧಾನವನ್ನು ಕೊಟ್ಟಿದ್ದಾನೆ. ಶ್ಲೋಕವನ್ನು ಅರ್ಥ ಮಾಡಿಕೊಳ್ಳುವುದು ಬಹಳ ತೊಡಕು. ಎಸ್. ಎನ್. ನರಹರಯ್ಯನವರೂ ಎ. ಎ. ಕೃಷ್ಣಸ್ವಾಮಯ್ಯಂಗಾರ್ಯರೂ ಎರಡು ಬೇರೆ ಬೇರೆ ಅರ್ಥಗಳನ್ನು ನಿರೂಪಿಸಿರುತ್ತಾರೆ. ವಿಧಾನದ ಹಿಂದಿರುವ ಗಣಿತಕ್ರಮದ ವಿಚಾರವಾಗಿ ಸಮರ್ಪಕವಾದ ಅರಿವು ಇನ್ನೂ ಮೂಡಿಲ್ಲ.

ಕುಟ್ಟಕ ವಿಧಾನದ ಹಿಂದಿರುವ ಗಣಿತಕ್ರಮದ ವಿಚಾರವಾಗಿ ಸಮರ್ಪಕವಾಗಿ ಅರಿವು ಇನ್ನೂ ಮೂಡಿಲ್ಲ ಅಥವಾ ax-by=c ಎಂಬ ಅನಿರ್ದಿಷ್ಟ ಸಮೀಕರಣ ಸಾಧನೆ. ಪಾಶ್ಚಾತ್ಯ ಗಣಿತದಲ್ಲಿ ಇದಕ್ಕೆ ಡಯೋಫಾಂಟೈನ್ ಸಮೀಕರಣ ಎಂಬ ಹೆಸರು ರೂಢಿಯಲ್ಲಿದೆ. ಪಾಶ್ಚಾತ್ಯ ವಿಧಾನಕ್ಕೂ ಭಾರತೀಯ ವಿಧಾನಕ್ಕೂ ಈ ವಿಷಯದಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ. ಪಾಶ್ಚಾತ್ಯ ವಿಧಾನವೂ ಸತತ ಭಿನ್ನರಾಶಿಗಳ (ಕಂಟಿನ್ಯೂಡ್ ಫ್ರಾಕ್ಷನ್) ಸಿದ್ಧಾಂತವನ್ನು ಅವಲಂಬಿಸಿದೆ. ಭಾರತೀಯ ವಿಧಾನ ಈ ಸಿದ್ಧಾಂತವನ್ನು ಉಪಯೋಗಿಸದೆ ಕೇವಲ ಮಹತ್ತಮ ಸಾಮಾನ್ಯ ಅಪವರ್ತನ ಕ್ರಿಯೆಯ ಮೇಲೆ ನಿಂತಿದೆ. ತತ್ತ್ವಶಃ ಎರಡೂ ಒಂದೇ ಆಗಿ ಪರಿಣಮಿಸುವುದಾದರೂ ವ್ಯವಹಾರಕ್ರಮ ಬೇರೆ ಬೇರೆ. *

**ಆರ್ಯರು :** ಆರ್ಯ ಎಂಬ ಪದದ ಅರ್ಥ ಪೂಜ್ಯ ಎಂದೂ ಈ ಪದ ಉರ್ ಎಂಬ ಮೂಲದಿಂದ ಬಂದುದೆಂದೂ ವಿದ್ವಾಂಸರ ಅಭಿಪ್ರಾಯ. 16ನೆಯ ಶತಮಾನದ ಕೊನೆಯಲ್ಲಿ ಭಾರತಕ್ಕೆ ಬಂದು ಗೋವದಲ್ಲಿ ಹಲವು ವರ್ಷಗಳ ಕಾಲ ತಂಗಿದ್ದ ಫಿಲಿಪೋ ಸಸೆಟ್ಟಿ ಎಂಬ ಫ್ಲಾರೆಂಟೈನಿನ ವ್ಯಾಪಾರಿ ಸಂಸ್ಕೃತ ಮತ್ತು ಯೂರೋಪಿನ ಕೆಲವು ಭಾಷೆಗಳಿಗೆ ನಿಕಟವಾದ ಸಂಬಂಧವಿದೆಯೆಂದು ಅಭಿಪ್ರಾಯಪಟ್ಟ. 1784ರಲ್ಲಿ ವಿಲಿಯಂ ಜೋನ್ಸ್ ಗ್ರೀಕ್ ಮತ್ತು ಲ್ಯಾಟಿನ್, ಗಾಥಿಕ್ ಮತ್ತು ಕೆಲ್ಟಿಕ್, ಸಂಸ್ಕೃತ ಮತ್ತು ಪುರಾತನ ಪಾರಸಿ ಭಾಷೆಗಳು ಒಂದೇ ಮೂಲದಿಂದ ಉತ್ಪನ್ನವಾದವುಗಳೆಂದು ಪ್ರತಿಪಾದಿಸಿದ. ಈ ತತ್ತ್ವದ ಆಧಾರದಮೇಲೆ ಒಂದೇ ಮೂಲಪ್ರದೇಶದಲ್ಲಿ ವಾಸವಾಗಿದ್ದು, ಕಾಲಕ್ರಮೇಣ ಯುರೋಪು ಮತ್ತು ಏಷ್ಯ ಖಂಡಗಳಲ್ಲಿ ಪ್ರಸರಿಸಿಕೊಂಡ ಕೆಲವು ಪಂಗಡಗಳಲ್ಲಿ ಒಂದರ ಭಾಷೆ ಇಂಡೋ–ಯುರೋಪಿಯನ್ ಭಾಷೆಯೆಂದೂ ಆ ಪಂಗಡದವರು ನೆಲೆ ನಿಂತ ಭಾಗಗಳಿಗನುಗುಣವಾಗಿ ಅವರ ಜೀವನ ಮತ್ತು ಭಾಷೆಯಲ್ಲಿ ವ್ಯತ್ಯಾಸಗಳಾದುವೆಂದೂ ವಿದ್ವಾಂಸರು ಅನುಮಾನಿಸಿದರು.

ಮ್ಯಾಕ್ಸ್‌ಮುಲರ್ ಮತ್ತು ಇನ್ನೂ ಅನೇಕ ವಿದ್ವಾಂಸರ ಪ್ರಕಾರ ಆರ್ಯರು ಮೂಲತಃ ಆಸ್ಟ್ರಿಯ, ಹಂಗರಿ ಮತ್ತು ಬೊಹೀಮಿಯ ಪ್ರದೇಶಗಳಲ್ಲಿ ವಾಸವಾಗಿದ್ದು ಕ್ರಮೇಣ ವಲಸೆ ಹೊರಟು, ಅವರಲ್ಲಿ ಒಂದು ಗುಂಪು ಜರ್ಮನಿ, ಇಟಲಿ ಮತ್ತು ಗ್ರೀಸ್ ದೇಶಗಳಲ್ಲಿ ಪ್ರಸರಿಸಿತು. ಮತ್ತೊಂದು ಗುಂಪು ಪೂರ್ವಾಭಿಮುಖವಾಗಿ ಬಂದು ಟರ್ಕಿ, ಇರಾನ್ ಮತ್ತು ಭಾರತ ದೇಶಗಳಲ್ಲಿ ನೆಲೆಸಿತು. ಏಷ್ಯಮೈನರ್ ಪ್ರದೇಶದಲ್ಲಿ ಸಿಕ್ಕಿರುವ ಅತಿ ಪ್ರಾಚೀನವಾದ ಬೋಗಸ್‌ಕಾಯ್ ಶಾಸನದ ವಿವರಗಳು ಆರ್ಯರು ವಲಸೆ ಬಂದುದಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನೊದಗಿಸುತ್ತವೆ ಎಂದು ನಂಬಲಾಗಿದೆ. ಆರ್ಯರ ಮೂಲನಿವಾಸ ಕಪ್ಪು ಸಮುದ್ರ ತೀರಪ್ರದೇಶ ಮತ್ತು ಉಕ್ರೇನ್ ಪರ್ಯಾಯ ದ್ವೀಪವಾಗಿರಬೇಕೆಂದು ಹಲವು ವಿದ್ವಾಂಸರ ಅಭಿಪ್ರಾಯ.

ಲೋಕಮಾನ್ಯ ಬಾಲಗಂಗಾಧರ ಟಿಳಕ್ ಮತ್ತು ಜಾಕೊಬಿ ಇವರು ಖಗೋಳಶಾಸ್ತ್ರಾಧ್ಯಯನದ ಆಧಾರದ ಮೇಲೆ ಆರ್ಯರು ಆರ್ಕ್‌ಟಿಕ್ ಪ್ರದೇಶದಲ್ಲಿ ವಾಸವಾಗಿದ್ದರೆಂದು ಹೇಳಿರುವರು. ಆದರೆ ಅನೇಕ ವಿದ್ವಾಂಸರು ಖಗೋಳಶಾಸ್ತ್ರಾಧಾರ ಮತ್ತು ಅದಕ್ಕೆ ಸಂಬಂಧಿಸಿದ ಹೇಳಿಕೆಯನ್ನು ಒಪ್ಪುವುದಿಲ್ಲ. ಆರ್ಯರು ಹೊರಗಿನಿಂದ ಬಂದವರಲ್ಲ. ಅವರು ಭಾರತದ ಮೂಲನಿವಾಸಿಗಳು, ಪ್ರಾರಂಭದಲ್ಲಿ ಸರಸ್ವತಿ ಮತ್ತು ದೃಷದ್ವತೀ ನದಿಗಳ ಮಧ್ಯಪ್ರದೇಶವಾದ ಆರ್ಯಾವರ್ತದಲ್ಲಿ ವಾಸವಾಗಿದ್ದು ಕ್ರಮೇಣ

ಭಾರತದ ಎಲ್ಲ ಭಾಗಗಳಲ್ಲೂ ಪ್ರಸರಿಸಿದುದಲ್ಲದೆ ಪಶ್ಚಿಮ ದೇಶಗಳಿಗೂ ಹೋಗಿ ನೆಲೆಸಿದರು ಎಂಬುದಾಗಿ ಹಲವು ವಿದ್ವಾಂಸರು ವಾದಿಸಿದ್ದಾರೆ. ವೇದವಾಙ್ಮಯದಲ್ಲಿ ಒಂದು ಸಾರಿಯಾದರೂ ಆರ್ಯರು ತಮ್ಮ ಪರಕೀಯ ಮೂಲವನ್ನು ಹೇಳಿಲ್ಲವೆಂಬುದು ಈ ವಿದ್ವಾಂಸರ ವಾದದ ಮುಖ್ಯ ಆಧಾರ. ಆದರೆ ಈ ವಾದವನ್ನು ಬಹುಮಂದಿ ವಿದ್ವಾಂಸರು ತಿರಸ್ಕರಿಸಿದ್ದಾರೆ. ವೇದಗಳ ರಚನೆಯ ಕಾಲವನ್ನು ಪ್ರ.ಶ.ಪೂ. 2000 ವರ್ಷಗಳ ಹಿಂದಕ್ಕೆ ಹಾಕಲು ಆಧಾರಗಳಿಲ್ಲ. ಅಲ್ಲದೆ ಸಿಂಧೂ ಸರಸ್ವತಿ ನಾಗರಿಕತೆ ಪ್ರ.ಶ.ಪೂ. 2500 ವರ್ಷಗಳಿಗಿಂತ ಹಿಂದೆಯೇ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬ ಅಂಶವನ್ನು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಸೈಂಧವ ಮತ್ತು ಆರ್ಯರ ನಾಗರಿಕತೆಗಳು ಭಿನ್ನ ಎಂಬುದು ಸರ್ವವಿದಿತ. ಇವುಗಳಲ್ಲಿ ಹೋಲಿಕೆಗಳಿಗಿಂತಲೂ ವ್ಯತ್ಯಾಸಗಳೇ ಹೆಚ್ಚು. ಮೂರ್ತಿಪೂಜೆ, ಬರೆವಣಿಗೆ, ನಗರೀಕರಣ, ವೈವಿಧ್ಯಮಯ ಮಾತೃದೇವತಾ ಮತ್ತು ಪಶುಪತಿಯ ಆರಾಧನೆ, ಪರದೇಶಗಳೊಡನಿದ್ದ ನಿಕಟ ವಾಣಿಜ್ಯಸಂಪರ್ಕ, ಕೈಗಾರಿಕೆ ಮತ್ತು ಕಲಾಸಂಪನ್ನತೆ-ಇವುಗಳು ಸಿಂಧೂನದಿ ಬಯಲಿನ ಸಂಸ್ಕೃತಿಯ ಮುಖ್ಯ ಲಕ್ಷಣಗಳು. ವೈದಿಕ ನಾಗರಿಕತೆಯಲ್ಲಿ ಈ ಅಂಶಗಳು ಕಾಣಬರುವುದಿಲ್ಲ. ಅಲ್ಲದೆ ಇಲ್ಲಿನ ಮೂಲನಿವಾಸಿಗಳು ಚಪ್ಪಟೆಯಾದ ಮೂಗುಳ್ಳ ಕಪ್ಪು ಬಣ್ಣದ ದಸ್ಯುಗಳೆಂದೂ (ದ್ರಾವಿಡ) ಅವರನ್ನು ಸೋಲಿಸಿ ದಕ್ಷಿಣಾಪಥದ ಕಡೆಗೆ ಓಡಿಸಿದುದಾಗಿಯೂ ತಮ್ಮ ಗ್ರಂಥಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಆರ್ಯರು ಪ್ರಪಂಚದ ಯಾವ ಭಾಗದಲ್ಲಿ ಮೂಲತಃ ವಾಸಿಸುತ್ತಿದ್ದರೆಂಬ ವಿಷಯವಾಗಿ ಭಿನ್ನಾಭಿಪ್ರಾಯಗಳಿದ್ದರೂ ಅವರು ಭಾರತಕ್ಕೆ ವಲಸೆ ಬಂದರೆಂಬ ಅಭಿಪ್ರಾಯವನ್ನು ಬಹುಮಂದಿ ವಿದ್ವಾಂಸರು ಅನುಮೋದಿಸಿದ್ದಾರೆ.

ಆರ್ಯರು ವಲಸೆ ಬಂದು ಸಿಂಧೂ ಮತ್ತು ಗಂಗಾ ನದಿಗಳ ಬಯಲಿನಲ್ಲಿ ನೆಲೆಸಿದ ಪ್ರಾರಂಭದಲ್ಲಿ ಅವರು ಬೆಳೆಸಿದ ಸಂಸ್ಕೃತಿಯನ್ನು ತಿಳಿಯಲು ವೇದಗಳೂ ಅವಕ್ಕೆ ಸಂಬಂಧಿಸಿದ ಬ್ರಾಹ್ಮಣಗಳೂ ಆರಣ್ಯಕಗಳೂ ಉಪನಿಷತ್ತುಗಳೂ ಮತ್ತು ವೇದಾಂಗಗಳೇ ಮುಂತಾದ ಸಂಸ್ಕೃತಕಾವ್ಯಗಳೂ ಆಧಾರಗಳು. ವೇದ ಎಂದರೆ ಜ್ಞಾನ. ವೇದಗಳಲ್ಲಿ ಆರ್ಯರ ರಾಜಕೀಯ, ಸಾಮಾಜಿಕ ಮತ್ತು ಮತೀಯ ಜೀವನದ ಮುಖ್ಯಾಂಶಗಳ ಚಿತ್ರ ಅಡಕವಾಗಿದೆ. ಕಂದುಮಿಶ್ರಿತ ಬಣ್ಣ, ದೃಢಕಾಯ ಹಾಗೂ ನೀಳವಾದ ಮೂಗು-ಇವು ಅವರ ಮುಖ್ಯ ಲಕ್ಷಣಗಳು. ಅವರು ಸಣ್ಣಪುಟ್ಟ ಹಳ್ಳಿಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ಕುಟುಂಬವ್ಯವಸ್ಥೆ ಆರ್ಯರ ರಾಜಕೀಯ ಮತ್ತು ಸಾಮಾಜಿಕ ಜೀವನದ ಅಡಿಗಲ್ಲು. ರಕ್ತಸಂಬಂಧವನ್ನು ಹೊಂದಿದ್ದ ಅನೇಕ ಕುಟುಂಬಗಳ ಗುಂಪಿಗೆ ಒಬ್ಬ ಯಜಮಾನನಿರುತ್ತಿದ್ದ. ಅವರು ದಸ್ಯುಗಳೊಡನೆ ಹೋರಾಡಬೇಕಾಗಿತ್ತು. ಅನೇಕ ಸಲ ಅವರವರಲ್ಲೇ ಕಲಹಗಳಾಗುತ್ತಿದ್ದವು. ಯುದ್ಧದಲ್ಲಿ ಮುಖಂಡನ ಆವಶ್ಯಕತೆಯಿತ್ತು. ಆದ್ದರಿಂದ ಕೆಲವು ಹಳ್ಳಿಗಳ ಗುಂಪಿಗೆ ಒಬ್ಬೊಬ್ಬ ಮುಖಂಡನಿರುತ್ತಿದ್ದ. ಕಾಲಕ್ರಮೇಣ ಮುಖಂಡರ ಪ್ರಭಾವ ಬೆಳೆದು ಅವರು ರಾಜರಾದರು. ಪ್ರಾರಂಭದಲ್ಲಿ ರಾಜ ಅಥವಾ ಮುಖಂಡನನ್ನು ಚುನಾಯಿಸುತ್ತಿದ್ದರು. ಈ ಪದ್ಧತಿ ಕೊನೆಗೊಂಡ ಮೇಲೆ ರಾಜತ್ವ ವಂಶಪಾರಂಪರ್ಯ ಪದ್ಧತಿಯಾಯಿತು. ಸಿಂಧೂ ಮತ್ತು ಗಂಗಾನದಿಗಳ ಫಲವತ್ತಾದ ಬಯಲಿನಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳುದಯಿಸಿದವು. ರಾಜ್ಯದಲ್ಲಿ ಶಾಂತಿ ಸ್ಥಾಪಿಸುವುದು ಮತ್ತು ಹೊರಗಿನವರ ದಾಳಿಗಳಿಂದ ರಾಜ್ಯವನ್ನು ರಕ್ಷಿಸುವುದು ರಾಜನ ಮುಖ್ಯಕರ್ತವ್ಯಗಳಾದುವು. ಆಡಳಿತದಲ್ಲಿ ರಾಜನ ಸಹಾಯಕ್ಕೆ ಪುರೋಹಿತ, ಸೇನಾನಿ ಮತ್ತು ಗ್ರಾಮವೃದ್ಧರಿರುತ್ತಿದ್ದರು. ಯುದ್ಧಕಾಲದಲ್ಲಿ ಯೋಧರು ಕತ್ತಿ, ಗುರಾಣಿ, ಶಿರಸ್ತ್ರಾಣ ಮತ್ತು ಬಿಲ್ಲುಬಾಣಗಳನ್ನು ಉಪಯೋಗಿಸುತ್ತಿದ್ದರು. ಪ್ರಜೆಗಳು ತಮ್ಮ ಉತ್ಪತ್ತಿಯ ಒಂದು ಭಾಗವನ್ನು ರಾಜನಿಗೆ ಸಲ್ಲಿಸುತ್ತಿದ್ದರು. ರಾಜ ನಿರಂಕುಶ ಪ್ರಭುವಾಗಿರಲಿಲ್ಲ. ಸಭಾ ಮತ್ತು ಸಮಿತಿ ಎಂಬ ಪ್ರಜಾಮುಖ್ಯರ ಎರಡು ಸಭೆಗಳಿರುತ್ತಿದ್ದುವು. ರಾಜ್ಯದ ಮುಖ್ಯ ಸಮಸ್ಯೆಗಳನ್ನು ಈ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುತ್ತಿತ್ತು. ಪ್ರ.ಶ.ಪೂ. 1500ರ ಅನಂತರ ರಾಜರು ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳುತ್ತ ಬಂದರು. ಸಣ್ಣ ಪುಟ್ಟ ರಾಜ್ಯಗಳಿಗೆ ಬದಲಾಗಿ ಕ್ರಮೇಣ ಸಾಮ್ರಾಜ್ಯಗಳು ತಲೆಯೆತ್ತತೊಡಗಿದ್ದುವು. ರಾಜರು ಅಶ್ವಮೇಧ, ರಾಜಸೂಯ ಮುಂತಾದ ಯಾಗಗಳನ್ನು ಆಚರಿಸುತ್ತಿದ್ದರು.

ಆರ್ಯಪಂಗಡ ಕುಟುಂಬಗಳಿಂದೊಡಗೂಡಿತ್ತು. ತಂದೆಗೆ ಕುಟುಂಬದ ಯಜಮಾನ ಸ್ಥಾನವೂ ತಾಯಿಗೆ ಗೌರವದ ಆದರೆ ಗೌಣಸ್ಥಾನವೂ ಇದ್ದುವು. ವ್ಯವಸಾಯ ಮತ್ತು ಪಶುಪಾಲನೆ ಮುಖ್ಯ ಕಸುಬಾಗಿತ್ತು. ಅವರಿಗೆ ನೇಗಿಲಿನ ಉಪಯೋಗ ತಿಳಿದಿತ್ತು. ಗೋಧಿ, ಬಾರ್ಲಿ, ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುತ್ತಿದ್ದರು. ದನಕರುಗಳೇ ಅವರ ಅತಿ ಮಹತ್ತ್ವದ ಪ್ರಾಣಿಗಳು. ಅವುಗಳೇ ಅವರ ಸಂಪತ್ತು. ಎಮ್ಮೆ, ಕುರಿ, ಮೇಕೆ, ಕುದುರೆ ಮತ್ತು ನಾಯಿ ಇವುಗಳು ಅವರ ಇತರ ಸಾಕುಪ್ರಾಣಿಗಳು. ಸಸ್ಯಾಹಾರ ಹಾಗೂ ಮಾಂಸಾಹಾರ ರೂಢಿಯಲ್ಲಿದ್ದುವು. ಅವರು ಹತ್ತಿ ಮತ್ತು ಉಣ್ಣೆಯ ಬಟ್ಟೆಗಳನ್ನೂ ನಯ ಮಾಡಿದ ಚರ್ಮಗಳನ್ನೂ ತೊಡುತ್ತಿದ್ದರೆಂದು ತಿಳಿಯುತ್ತದೆ. ಚಿನ್ನ ಬೆಳ್ಳಿಯ ಒಡವೆಗಳನ್ನೂ ಧರಿಸುತ್ತಿದ್ದರು. ಸಂಭ್ರಮದ ದಿನಗಳಲ್ಲಿ ಸುರೆ ಹಾಗೂ ಸೋಮ ಎಂಬ ಮಾದಕ ಪಾನೀಯಗಳನ್ನು ಸೇವಿಸುತ್ತಿದ್ದರು. ನೂಲುವುದು, ನೇಯುವುದು, ನಗನಾಣ್ಯ ತಯಾರಿಕೆ, ಮನೆಕಟ್ಟುವುದು ಮತ್ತು ಲೋಹಗಳ ಕೆಲಸ-ಇವು ಇತರ ಉಪಕಸಬುಗಳಾಗಿದ್ದುವು. ಕ್ರಮೇಣ ವ್ಯಾಪಾರ ಬೆಳೆಯಿತು. ಪ್ರಾರಂಭದಲ್ಲಿ ಹಸು ವಸ್ತುವಿನಿಮಯದ ಮಾನದಂಡವಾಗಿತ್ತು. ಅನಂತರ ನಿಷ್ಕ, ಕಾರ್ಷಪಣ ಮುಂತಾದ ಚಿನ್ನ ಬೆಳ್ಳಿಯ ನಾಣ್ಯಗಳು ಬಳಕೆಗೆ ಬಂದುವು. ಕುದುರೆ ಜೂಜು, ರಥ ಪಂದ್ಯ ಮತ್ತು ಬೇಟೆಯಾಡುವುದು-ಇವು ಆರ್ಯರ ಮುಖ್ಯ ವಿನೋದ ಮತ್ತು ಜೂಜಾಟದ ಮಾರ್ಗಗಳಾಗಿದ್ದುವು.

ವೈದಿಕಯುಗದ ಅಂತ್ಯದ ವೇಳೆಗೆ ಜಾತಿಪದ್ಧತಿ ಆಚರಣೆಗೆ ಬಂತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಾದುವು. ಕಸಬು ಜಾತಿಗೆ ಆಧಾರವಾಗಿತ್ತು. ಕ್ರಮೇಣ ಜಾತಿಪದ್ಧತಿ ವಂಶಪರಂಪರಾನುಗತವಾಗುತ್ತ ಬಂತು.

ಆರ್ಯರು ಸಚೇತನವೆಂದೆಣಿಸಿದ್ದ ಪ್ರಕೃತಿಯ ಅದ್ಭುತ ಶಕ್ತಿಗಳಾದ ಆಕಾಶ, ಸೂರ್ಯ, ಸಿಡಿಲು, ಮಿಂಚು, ಅಗ್ನಿ ಮುಂತಾದ ದೇವತೆಗಳನ್ನು ಆರಾಧಿಸುತ್ತಿದ್ದರು. ಆ ಶಕ್ತಿಗಳು ದಯಾಪೂರ್ಣವೆಂಬ ಭಾವನೆಯಿದ್ದು, ಯಜ್ಞಯಾಗಾದಿಗಳಿಂದ ಅವುಗಳ ಕೃಪೆಯನ್ನು ಗಳಿಸಬಹುದೆಂಬ ನಂಬಿಕೆಯಿತ್ತು. ಮೂರ್ತಿಪೂಜೆ ಆಚರಣೆಯಲ್ಲಿರಲಿಲ್ಲ. ದೇವತೆಗಳಿಗೆ ಬಲಿಯನ್ನು ಅಗ್ನಿಯ ಮುಖಾಂತರ ಅರ್ಪಿಸುತ್ತಿದ್ದರು. ಯಜ್ಞಯಾಗಾದಿಗಳಿಗೆ ಸಂಬಂಧಿಸಿದ ವಿಧಿಗಳು ವಿಶದವಾಗಿ ರೂಪಿತವಾಗಿದ್ದುವು. ಕಾಲಕ್ರಮೇಣ ಅನೇಕ ದೇವ ದೇವತೆಗಳನ್ನು ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ಆದರೂ ಸರ್ವಾಂತರ್ಯಾಮಿಯೂ ಸರ್ವಶಕ್ತನೂ ಆದ ಜಗನ್ನಿಯಾಮಕನೊಬ್ಬನೇ ಎಂಬ ಭಾವನೆ ಅವರಲ್ಲಿತ್ತು. ಶವಗಳನ್ನು ಸುಡುವ ಪದ್ಧತಿಯಿತ್ತು. ಸ್ವರ್ಗ ನರಕಗಳ ಕಲ್ಪನೆ ಪೂರ್ಣವಾಗಿ ಬೆಳೆದಿರಲಿಲ್ಲ.

ವೇದಯುಗದಿಂದ ಇತಿಹಾಸಯುಗಕ್ಕೆ ಮುಂದುವರಿದಂತೆ ಅನೇಕ ಮಾರ್ಪಾಟುಗಳಾದುವು. ಆರ್ಯರು ದಕ್ಷಿಣದಲ್ಲೂ ನೆಲೆಸಿದರು. ವರ್ಣಾಶ್ರಮಧರ್ಮಪದ್ಧತಿ ಅನೂಚಾನವಾಗಿ ಬೇರೂರಿತು. ಜನಸಂಖ್ಯೆ ವೃದ್ಧಿಸಿತು. ಸಂಪದ್ಭರಿತವಾದ ಪಟ್ಟಣಗಳೂ ಸಾಮ್ರಾಜ್ಯಗಳೂ ಬೆಳೆದುವು. ಸಾಹಿತ್ಯ, ವಿಜ್ಞಾನ ಮತ್ತು ಧಾರ್ಮಿಕ ಗ್ರಂಥಗಳ ನಿರ್ಮಾಣ ಮುಂದುವರಿಯಿತು. ಮೂರ್ತಿಪೂಜೆ ಆಚರಣೆಗೆ ಬಂತು. ಆರ್ಯ ದ್ರಾವಿಡ ಪದ್ಧತಿಗಳ ಸಮ್ಮಿಳನದಿಂದ ಹಿಂದೂ ಸಂಸ್ಕೃತಿ ಅಖಂಡವಾಗಿ ಬೆಳೆಯಲು ಪ್ರಾರಂಭಿಸಿತು. (ಜಿ.ಆರ್.ಆರ್.)

ಆರ್ಯರ ಧರ್ಮ ಪ್ರಪಂಚದ ಅತಿ ಪ್ರಾಚೀನ ಧರ್ಮಗಳ ಪೈಕಿ ಒಂದು. ಆರ್ಯರ ಧರ್ಮವನ್ನು ತಿಳಿಯಲು ಋಗ್ವೇದ, ಜೆಂಡವೆಸ್ತ, ಜನಪದ ಸಾಹಿತ್ಯ, ಪೌರಾಣಿಕ ಪರಂಪರೆ, ಪ್ರಾಚೀನ ಸಂಪ್ರದಾಯಗಳು, ಪ್ರಾಚೀನ ಭಾಷೆಗಳು ಇತ್ಯಾದಿ ಮುಖ್ಯ ಸಾಧನಗಳಾಗಿವೆ. ಆರ್ಯರು ನಾಗರಿಕರೂ ಸುಸಂಸ್ಕೃತರೂ ಆದ ಜನಾಂಗವಾಗಿದ್ದರು. ಅವರಿಗೆ ಜೀವ-ಆತ್ಮ, ಜನ್ಮಾಂತರ, ಸ್ವರ್ಗ-ನರಕ, ಪುಣ್ಯ-ಪಾಪ, ಅದೃಷ್ಟ-ವಿಧಿ ಇವುಗಳ ಬಗೆಗೆ ನಿರ್ದಿಷ್ಟವಾದ ಕಲ್ಪನೆ ಮತ್ತು ನಂಬಿಕೆಗಳಿದ್ದುವು. ಸತ್ತವರನ್ನು ಹೂಳುವ ಇಲ್ಲವೇ ಸುಡುವ ಪದ್ಧತಿ ಇತ್ತು. ಆತ್ಮ ಅವಿನಾಶಿ ಎಂದು ನಂಬಿದ್ದರಿಂದ ಆತ್ಮನ ಮುಂದಿನ ಜೀವನಕ್ಕೆ ಸಹಾಯಕವಾಗಲಿ ಎಂಬ ನಂಬಿಕೆ ಅವರಿಗಿದ್ದಿರಬೇಕು. ಆದ್ದರಿಂದ ಸತ್ತವನನ್ನು ಹೂಳುವಾಗ ಆತನೊಂದಿಗೆ ಆತನಿಗೆ ಪ್ರಿಯವಾಗಿದ್ದ ವಸ್ತುಗಳನ್ನು ಇಡುತ್ತಿದ್ದರು. ದಹನ ಮಾಡಿದರೆ ಚಿತೆಯೊಂದಿಗೆ ಅವನ್ನು ಸೇರಿಸುತ್ತಿದ್ದರು; ಅಥವಾ ಚಿತಾಭಸ್ಮದೊಂದಿಗೆ ಇರಿಸುತ್ತಿದ್ದರು. ಅನೇಕ ಬಗೆಯ ವ್ರತ, ಹಬ್ಬಗಳನ್ನು ಆಚರಿಸುತ್ತಿದ್ದರು. ಸೂರ್ಯಚಂದ್ರರ ಆಧಾರದ ಮೇಲೆ ಕಾಲಗಣನೆ ಮಾಡುತ್ತಿದ್ದರು. ಅಗ್ನಿ ಮತ್ತು ವರುಣ ದೇವನ ಆರಾಧನೆಯನ್ನು ಮದುವೆ, ಅಗ್ನಿಷ್ಟೋಮಯಾಗ ಇತ್ಯಾದಿ ಅನೇಕ ಸಂದರ್ಭಗಳಲ್ಲಿ ಕಾಣಬಹುದಿತ್ತು. ಯಾವುದೇ ವ್ಯಕ್ತಿ ಅಪರಾಧಕ್ಕೆ ಸಮಾಜ ಹೊಣೆ ಹೊರುತ್ತಿರಲಿಲ್ಲ. ಅಕೃತ್ಯಕ್ಕೆ ಒಳಗಾದವನ ಕುಟುಂಬವೇ ಸೇಡು ತೀರಿಸುತ್ತಿತ್ತು. ಪಾಪಕೃತ್ಯ ಮಾಡಿದವರನ್ನು ಕಲ್ಲೇಟಿನಿಂದ ಶಿಕ್ಷಿಸುತ್ತಿದ್ದುದೂ ಉಂಟು. ಹಂದಿ, ಮೇಕೆ, ಹಸು, ಕುದುರೆ ಮೊದಲಾದ ಪ್ರಾಣಿಗಳ ಬಲಿಪೂಜೆ ಬಳಕೆಯಲ್ಲಿತ್ತು. ಪ್ರಾಣಿಬಲಿಯ ಜೊತೆಗೆ ನರಬಲಿಯೂ ನಡೆಯುತ್ತಿದ್ದುದು ಉಂಟು. ಆಣೆ ಇಡುವ, ಶಪಥ ಮಾಡುವ, ಕಣಿ ಕೇಳುವ, ಕನಸು, ಶುಭ ಶಕುನ-ಅಪಶಕುನಗಳ ಬಗ್ಗೆ ಅವರದೇ ಆದ ಪದ್ಧತಿ-ಪರಂಪರೆಗಳಿದ್ದುವು. ಆರ್ಯರು ಪಿತೃವರ್ಗದ ಆರಾಧಕರೂ ಪ್ರಕೃತಿಯ ಆರಾಧಕರೂ ಆಗಿದ್ದರು. ಮಂತ್ರ-ಮಾಟ, ಆರಾಧನೆ-ಪೂಜೆ, ಜಪ-ತಪ ಮೊದಲಾದ ಕಾರ್ಯಗಳಿಗೆ ಪ್ರತ್ಯೇಕ ಪುರೋಹಿತವರ್ಗವಿತ್ತು. ಮದ್ಯಪಾನ, ಮಾಂಸಾಹಾರ ಮೊದಲಾದ ಆಹಾರ ಪದ್ಧತಿಗಳೂ ಬಳಕೆಯಲ್ಲಿದ್ದುವು. ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳ ಬಗ್ಗೆ ಪುರಾಣ ಕಲ್ಪನೆಗಳು ಬೆಳೆದಿದ್ದುವು. ಸಾಕಷ್ಟು ಲೈಂಗಿಕ ಸ್ವಾತಂತ್ರ್ಯ ಇರುತ್ತಿತ್ತು. ಸರ್ಪಪೂಜೆ, ಅಗ್ನಿಪೂಜೆ, ಆಕಾಶಪೂಜೆ, ವೃಕ್ಷಪೂಜೆಗಳೂ ಕಲ್ಲು, ಮರ, ಮಣ್ಣುಗಳಲ್ಲಿ ನಿರ್ಮಿಸಿದ ಮೂರ್ತಿಪೂಜೆಯೂ ಆರ್ಯರಲ್ಲಿತ್ತು. ಪೂಜಾಕಾಲದಲ್ಲಿ ನೃತ್ಯ ಸಂಗೀತಗಳು ಜರುಗುತ್ತಿದ್ದುವು. ಪ್ರಪಂಚದ ಅತಿ ಪ್ರಾಚೀನತಮ ಧರ್ಮಗಳಲ್ಲಿ ಒಂದಾದ ಆರ್ಯಧರ್ಮ ಶುದ್ಧರೂಪದಲ್ಲಿ ಅಲ್ಲವಾದರೂ ಮಿಶ್ರರೂಪದಲ್ಲಿ ಉಳಿದುಬಂದಿದೆ. ಆರ್ಯಧರ್ಮವನ್ನು ವಿಶೇಷವಾಗಿ ಹಿಂದೂ ಧರ್ಮದಲ್ಲಿ ಕಾಣಬಹುದು. ಇತ್ತೀಚೆಗೆ ಆರ್ಯ-ದ್ರಾವಿಡ ಸಂಸ್ಕೃತಿಯ ಬಗೆಗೆ ಸಾಕಷ್ಟು ಚರ್ಚೆ ನಡೆದಿದೆ ಆಸ್ಕೊಪರ್ಪೊಲ ಎಂಬ ವಿದ್ವಾಂಸ ಈ ಕುರಿತು ಹೊಸ ಹೊಸ ವಿಚಾರಗಳನ್ನು ಹೊರಡಿಸಿದ್ದಾನೆ. (ಜಿ.ಎ.)

**ಆರ್ಯಶೂರ :** ಸು. 4ನೆಯ ಶತಮಾನ. ಸುಪ್ರಸಿದ್ಧ ಜಾತಕಮಾಲೆಯನ್ನು ಬರೆದವ. ಅಶ್ವಘೋಷನೇ ಈತನೆಂದು ಟಿಬೆಟನ್ ಧಾರ್ಮಿಕ ಇತಿಹಾಸವನ್ನು ಬರೆದ ತಾರಾನಾಥ ಲಾಮಾ ವಾದಿಸುತ್ತಾನೆ. ಈ ಗ್ರಂಥದಲ್ಲಿ ಮೂವತ್ತ ನಾಲ್ಕು ಜಾತಕ ಕಥೆಗಳಿವೆ. ಇವು ಬೋಧಿಸತ್ತ್ವನ ಪಾರಮಿತಗಳನ್ನು ನಿರೂಪಿಸುವ ಕಥೆಗಳು. ಬಹುಮಟ್ಟಿಗೆ ಚರಿಯಾಪಿಟಕದಲ್ಲಿ ಅಡಕವಾಗಿರುವ ಹಳೆಯ ಕಥೆಗಳನ್ನೇ ಆರ್ಯಶೂರ ಆಯ್ದುಕೊಂಡು ತನ್ನ ಸಾರಸ್ವತ ಪ್ರತಿಭೆಯಿಂದ ಹೊಸರೂಪ ಕೊಟ್ಟಿದ್ದಾನೆ. ಪ್ರವಚನಕಾರರಿಗೆ ಉಪಯೋಗವಾಗುವ ಕಥೆಗಳನ್ನು ಅದೇ ದೃಷ್ಟಿಯಿಂದ ಹೆಣೆದಿದ್ದಾನೆ. ಕಥೆ ಹಳತಾದರೂ ಶೈಲಿ ಸೊಗಸಾಗಿದೆ. ಗದ್ಯ ಪದ್ಯ ಸೇರಿದ ಈ ಸಂಸ್ಕೃತ ಉತ್ತಮವಾಗಿದೆ, ಕಾವ್ಯರಸಭೂಯಿಷ್ಠವಾಗಿದೆ. ಇಲ್ಲಿಗೆ ಯಾತ್ರಿಕನಾಗಿ ಬಂದಿದ್ದ ಇತ್ಸಿಂಗ್ ಅವನ ಕಾಲದಲ್ಲಿ ಆರ್ಯಶೂರನ ಗ್ರಂಥ ನಾಡಿನಾದ್ಯಂತವೂ ಬಳಕೆಯಲ್ಲಿತ್ತೆಂದು ಹೊಗಳಿ ಬರೆದಿದ್ದಾನೆ. 6ನೆಯ ಶತಮಾನದಲ್ಲಿ ನಿರ್ಮಿತವಾದ ಅಜಂತ ಭಿತ್ತಿಚಿತ್ರಗಳು ಕೆಲವು ಆರ್ಯಶೂರನ ಗ್ರಂಥದ ಪ್ರಸಂಗಗಳನ್ನು ನಿರೂಪಿಸುತ್ತವೆ. ಆರ್ಯಶೂರನ ಮಾತುಗಳನ್ನೇ ಆ ಚಿತ್ರಗಳ ಅಡಿಯಲ್ಲಿ ಬರೆದಿದ್ದಾರೆ. ಟಿಬೆಟನ್ ಸಂಪ್ರದಾಯ ದಲ್ಲಿ ಆರ್ಯಶೂರ ಜಾತಕಮಾಲೆಯಲ್ಲದೆ ಇನ್ನೂ ಐದು ಗ್ರಂಥಗಳನ್ನು ಬರೆದಿದ್ದಾನೆಂದು ನಂಬುತ್ತಾರೆ. (ಎಸ್.ಕೆ.ಆರ್.)

**ಆರ್ಯಸತ್ಯ :** ಸಂಸಾರಬಂಧದಿಂದ ಬಿಡುಗಡೆಯನ್ನು ಅಪೇಕ್ಷಿಸುವವರು ಅವಶ್ಯ ತಿಳಿಯತಕ್ಕದ್ದನ್ನು ಬೌದ್ಧಧರ್ಮದಲ್ಲಿ ಹೀಗೆ ಹೆಸರಿಸಲಾಗಿದೆ. ಇದು ದುಃಖ, ಸಮುದಯ, ನಿರೋಧ, ಮಾರ್ಗ ಎಂದು ನಾಲ್ಕುವಿಧ. ಮೋಕ್ಷವನ್ನು ಅಪೇಕ್ಷಿಸುವಾತ ಮೊದಲು ದುಃಖದ ಸ್ವರೂಪವನ್ನು ತಿಳಿಯಬೇಕು. ಹಾಗೇ ಅದರ ಕಾರಣವನ್ನೂ ನಿವೃತ್ತ್ಯುಪಾಯವನ್ನೂ ಸಾಧನೆಯ ಮಾರ್ಗವನ್ನೂ ತಿಳಿಯಬೇಕು. ಇದನ್ನೇ ಚತುರಾರ್ಯಸತ್ಯ ಎಂದು ಹೇಳುವರು. ಬುದ್ಧನೇ ಈ ಅಂಶವನ್ನು ಉಪದೇಶಿಸಿದ (ಪ್ರಮಾಣವಾರ್ತಿಕ ಇತ್ಯಾದಿ). ಈ ನಾಲ್ಕು ವಿಧ ಆರ್ಯಸತ್ಯಗಳನ್ನು ಯಥಾವತ್ತಾಗಿ ಅರಿತವರನ್ನೂ ಆರ್ಯಸತ್ಯ ಎಂದು ಹೇಳುವ ಪದ್ಧತಿ ಮಹಾವ್ಯುತ್ಪತ್ತಿಯಲ್ಲಿ ಕಂಡುಬರುತ್ತದೆ. (ಕೆ.ಎಸ್.ವಿ.)

**ಆರ್ಯಸಮಾಜ :** ಭಾರತದ ಧಾರ್ಮಿಕ ಪುನರುಜ್ಜೀವನದ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಸಂಸ್ಥೆಗಳಲ್ಲಿ ಒಂದು. ಇದರ ಸಂಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿ ಪಂಜಾಬಿನ ಉಜ್ವಲ, ಪ್ರತಿಭಾವಂತ ಯತಿಗಳು (1824–83). ವೈದಿಕಧರ್ಮವೇ ನಿಜವಾದ ನಿಷ್ಠೆಯೆಂದು ಅವರು ಗ್ರಹಿಸಿ ಅದರ ಪುನರುಜ್ಜೀವನಕ್ಕೆಂದು ಆರ್ಯಸಮಾಜದಲ್ಲಿ 1875 ಏಪ್ರಿಲ್ 10ರಂದು ಮುಂಬಯಿ ನಗರದಲ್ಲಿ ವ್ಯವಸ್ಥೆ ಮಾಡಿದರು. ಎರಡು ವರ್ಷಗಳ ಅನಂತರ ಲಾಹೋರದಲ್ಲಿ ಒಂದು ಶಾಖೆ ಪ್ರವರ್ತಿತವಾಯಿತು. ಕಾಲಕ್ರಮದಲ್ಲಿ ಭಾರತದ ಎಲ್ಲ ನಗರಗಳಲ್ಲೂ ಆರ್ಯಸಮಾಜದ ಚಳವಳಿ ಬಲಗೊಂಡಿತು. ಆದರೆ ಪಂಜಾಬ್ ಅದರ ಕೇಂದ್ರ ಸ್ವರೂಪವಾಗಿ ಉಳಿದು ಕಾಂಗಡಿ, ಬೃಂದಾವನ, ಜ್ವಾಲಾಪುರಗಳಲ್ಲಿನ ಗುರುಕುಲಗಳಿಂದ ಅದರ ಪ್ರಶಸ್ತಿ ಹೆಚ್ಚಿತು. ಮಹರ್ಷಿ ದಯಾನಂದ ಸರಸ್ವತಿ ತಮ್ಮ ಜೀವಮಾನಪರ್ಯಂತವೂ ಅದರ ಪ್ರಾಣವಾಗಿ ಉಳಿದರು. ಮುಂದೆ ಶ್ರದ್ಧಾನಂದ, ಲಾಲಾ ಲಜಪತರಾಯ್, ಗಂಗಾಪ್ರಸಾದ ಉಪಾಧ್ಯಾಯ, ಲಾಲಾ ಹಂಸರಾಜ, ಗುರುದತ್ತ ಮೊದಲಾದವರ ಬೆಂಬಲದಿಂದ ಈ ಸಂಸ್ಥೆ ಬೆಳೆಯಿತು.

ಆರ್ಯಸಮಾಜ ವ್ಯವಸ್ಥೆಗೊಂಡಾಗ ಈ ಪ್ರಮುಖ ವಿಧಿಗಳು ಅದರ ಅಂಗವಾಗಿ ಮೈದಳೆದುವು. ಸರ್ವಜನರ ಪ್ರಯೋಜನಕ್ಕೆಂದೇ ಈ ಸಮಾಜ ವ್ಯವಸ್ಥಾಪಿತವಾಯಿತು. ಮನುಷ್ಯ ಜೀವನದಲ್ಲಿ ಶೀಲ, ಧರ್ಮ, ಉದ್ಯಮ ಇವುಗಳಿಗೆ ಸಂಬಂಧಿಸಿದ ಎಲ್ಲ ವಿವರಗಳಲ್ಲಿಯೂ ವೇದವೇ ಮುಖ್ಯ ಪ್ರಮಾಣ. ಶತಪಥಾದಿ ಬ್ರಾಹ್ಮಣಗಳೂ ಶಿಕ್ಷಾದಿ ಷಡಂಗಗಳೂ ನಾಲ್ಕು ಉಪವೇದಗಳೂ ಷಡ್ದರ್ಶನಗಳೂ ವೈದಿಕ ಶಾಖೆಗಳೂ ವೇದಪ್ರಾಮಾಣ್ಯದ ಪರಿಧಿಯಲ್ಲೇ ಸೇರುತ್ತವೆ. ಜಗತ್ತಿನ ಪ್ರತಿ ರಾಷ್ಟ್ರದ ಮುಖ್ಯನಗರದಲ್ಲೂ ಒಂದೊಂದು ಶಾಖೆಯನ್ನು ವ್ಯವಸ್ಥೆ ಮಾಡಬೇಕು. ಶೀಲವಂತನಾದ ಯಾವ ಮನುಷ್ಯನಾದರೂ ಸಮಾಜದ ಸದಸ್ಯನಾಗಬಹುದು. ಸಮಾಜದ ಸಂನ್ಯಾಸಿ ಸದಸ್ಯರು ತಂತಮ್ಮ ಸಂಸಾರ ನಿರ್ವಹಣೆಗೆ ವ್ಯವಸ್ಥೆಮಾಡಿ ಉಳಿದ ಕಾಲವನ್ನೂ ಶಕ್ತಿಯನ್ನೂ ಸಮಾಜಕ್ಕೆ ಉತ್ಸಾಹದಿಂದ ಸಮರ್ಪಿಸಬೇಕು. ಸಮಾಜ ವಾರಕ್ಕೊಮ್ಮೆ ಸಭೆ ಸೇರತಕ್ಕದ್ದು. ಪ್ರತಿಯೊಬ್ಬ ಸದಸ್ಯನೂ ತನ್ನ ಮಾಸಿಕ ಉತ್ಪಾದನೆಯಲ್ಲಿ ಕನಿಷ್ಠಪಕ್ಷ ನೂರಕ್ಕೆ ಒಂದರಂತೆ ಸಮಾಜಕ್ಕೆ ಕೊಡಬೇಕು. ಹೀಗೆ ಬಂದ ಹಣದಿಂದ ಸಮಾಜ ತನ್ನ ಮುಖಪತ್ರಿಕೆಯನ್ನೂ ಶಾಲೆಯನ್ನೂ (ಆರ್ಯವಿದ್ಯಾಲಯ) ನಡೆಸತಕ್ಕದ್ದು. ಸದಸ್ಯರು ಏಕದೇವವಾದಿಗಳು; ದೇವರು ನಿರಾಕಾರ, ಸರ್ವಶಕ್ತ, ಅಜಾತ, ಅನಂತ, ಅವಿಕಾರ್ಯ, ಅದ್ವಿತೀಯ, ದಯಾಳು, ಜಗನ್ನಿಯಾಮಕ, ಸ್ವತಂತ್ರ ಪರಿಶುದ್ಧ, ಚತುರ್ವರ್ಗಫಲದಾಯಕ, ಮಾತಾಪಿತೃಸ್ವರೂಪ, ಅವನೊಬ್ಬನೇ ಪೂಜಾರ್ಹ. ಸ್ತುತಿಯಿಂದ, ಪ್ರಾರ್ಥನೆಯಿಂದ, ಭಕ್ತಿಯಿಂದ ಅವನನ್ನು ಆರಾಧಿಸಬೇಕು. ಆರ್ಯಸಮಾಜದವರು ವಿಗ್ರಹಾರಾಧನೆಯನ್ನು ಅನುಮೋದಿಸುವುದಿಲ್ಲ. ನಿರಾಕಾರನಾದ ಭಗವಂತನನ್ನೇ ಅವರು ನ ಸತ್ಯ ಪ್ರತಿಮಾ ಭವತಿ–ಎನ್ನುವ ವೇದವಾಕ್ಯಕ್ಕೆ ವಿಷಯವನ್ನಾಗಿ ಗ್ರಹಿಸುತ್ತಾರೆ. ವೈದಿಕಸಂಸ್ಕಾರಗಳಲ್ಲಿ ಅವರಿಗೆ ಅಚಲವಾದ ಶ್ರದ್ಧೆ. ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿಯವರೆಗೆ ಎಲ್ಲ ಸಂಸ್ಕಾರಗಳನ್ನೂ ವೈದಿಕಮಂತ್ರಗಳಿಂದಲೇ ನಡೆಸಬೇಕೆಂದು ಅವರ ಆಗ್ರಹ. ವೇದಗಳಲ್ಲಿ ಮತ್ತು ಇತರ ಆರ್ಷಗ್ರಂಥಗಳಲ್ಲಿ ಅಡಗಿರುವ ತತ್ತ್ವವನ್ನು ಎಲ್ಲ ಶಾಲೆಗಳಲ್ಲೂ ಬಾಲಕ–ಬಾಲಕಿಯರಿಗೆ ಕಲಿಸಬೇಕೆಂದು ಅವರ ಕಾತರ. ಪ್ರಾಪಂಚಿಕ ವ್ಯವಹಾರದಲ್ಲೂ ಪಾರಮಾರ್ಥಿಕ ವಿಚಾರಗಳಲ್ಲೂ ಅಭ್ಯುದಯವನ್ನು ಸಾಧಿಸುವುದು ಆರ್ಯಸಮಾಜದ ಉದ್ದೇಶ. ಈ ದೃಷ್ಟಿಯಿಂದ ಎಲ್ಲ ಕೆಲಸಗಳನ್ನು ಮಾಡುವಾಗಲೂ ಧಾರ್ಮಿಕ ಅಥವಾ ಆಧ್ಯಾತ್ಮಿಕ ಮನೋವೃತ್ತಿಯಿಂದಲೇ ಮಾಡಬೇಕೆಂದು ಆರ್ಯಸಮಾಜದ ವಿಧಿ. ಮೌಢ್ಯವನ್ನು ತೊಲಗಿಸಿ ಜನಕ್ಕೆ ಜ್ಞಾನದಾನ ಮಾಡಬೇಕೆಂಬ ಹಂಬಲದೊಂದಿಗೆ ಜನ ಸತ್ಯವನ್ನೇ ನಿಷ್ಠುರವಾಗಿ ಅನ್ವೇಷಣೆ ಮಾಡಬೇಕೆಂದೂ ಅಸತ್ಯವನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕೆಂದೂ ದಯಾನಂದರು ಸಾರಿ ಅದನ್ನು ಆರ್ಯಸಮಾಜದ ವಿಧಿಗಳಲ್ಲಿ ಸೇರಿಸಿದರು. ಈ ನೆಲೆಯಲ್ಲಿ ಅವರು ಸಂಪ್ರದಾಯದಿಂದ ಬಂದ ಪುರಾಣಗ ಳನ್ನೂ, ತಂತ್ರಗಳನ್ನೂ ಅಸಾಧುವೆಂದು ತಿರಸ್ಕರಿಸಿದರು. ಪುರಾಣಗಳೆಲ್ಲವೂ ಕಟ್ಟುಕಥೆ, ಪುರಾಣಕಾರರು ಧೂರ್ತರು ಎಂದು ಅವರ ವಿಶ್ವಾಸ. ಅವರ ದೃಷ್ಟಿಯಲ್ಲಿ ಶುದ್ಧವೈದಿಕ ಸಿದ್ಧಾಂತವೇ ಪ್ರಮಾಣ, ಉಳಿದುದೆಲ್ಲ ಅಲ್ಲ.

ಈ ಸಮಾಜಧೋರಣೆಯಲ್ಲಿ ಸಾಮಾಜಿಕದೃಷ್ಟಿ ದೃಢವಾಗಿ ಬೇರೂರಿ ಬಂದಿತು. ಯಾವ ವ್ಯಕ್ತಿಯೂ ತನ್ನ ವೈಯಕ್ತಿಕ ಪ್ರಗತಿಯನ್ನೇ ಪುರುಷಾರ್ಥವೆಂದು ಬಗೆಯದೆ, ಎಲ್ಲರ ಅಭ್ಯುದಯದ ಸಾಧನೆಯಿಂದ ತನ್ನ ಸಮಾಧಾನವನ್ನು ಪಡೆದುಕೊಳ್ಳಬೇಕು ಎನ್ನುವ ವಿಧಿಯಿದೆ. ಸರ್ವರ ಹಿತ, ಸುಖಗಳಿಗೆ ನೆರವಾಗುವಂಥ ಸಾಂಘಿಕ ಕಟ್ಟಳೆಗಳನ್ನು ಅವಶ್ಯವಾಗಿ ಅನುಸರಿಸಬೇಕು. ಆರ್ಯಸಮಾಜ ಇಡೀ ಮಾನವ ಸಮಾಜದ ಭೌತಿಕ, ಸಾಮಾಜಿಕ, ಆಧ್ಯಾತ್ಮಿಕ ಪ್ರಗತಿಗೆ ಸಾಧನವಾಗಬೇಕು. ಆರ್ಯಸಮಾಜದ ಸದಸ್ಯ ಆರ್ಯನೆನಿಸಿಕೊಳ್ಳುತ್ತಾನೆ. ಆರ್ಯರೆಲ್ಲರೂ ಸಮಾನರು. ದಯಾನಂದರು ಸಮಾಜದ ಸಾಮಾನ್ಯ ಸದಸ್ಯರಾಗಿಯೇ ಉಳಿದರಲ್ಲದೆ ಅದರ ಅಧ್ಯಕ್ಷರಾಗಲು ಒಪ್ಪಲಿಲ್ಲ. ಅವರ ಭಾವಚಿತ್ರವನ್ನು ಯಾವ ಆರ್ಯಸಮಾಜದ ಭವನದಲ್ಲೂ ಹಾಕಬಾರದೆಂದು ಅವರು ಸೂಚನೆಯಿತ್ತರು. ತಾವು ಸಭಾಭವನಕ್ಕೆ ಬಂದಾಗ ನೆರೆದಿದ್ದ ಜನ ಎದ್ದುನಿಲ್ಲುವುದನ್ನೂ ನಿಷೇಧಿಸಿದರು. ಭಗವಂತನೊಬ್ಬನೇ ಸರ್ವೋತ್ತಮ. ಉಳಿದ ಯಾವುದೂ ಅವನಿಗೆ ಸಮನಾಗಲಾರದು. ಎಲ್ಲ ಜನರೂ ಸಮಾನರು ಎಂಬುದು ಅವರ ಉಪದೇಶ.

ಮೂಢನಂಬಿಕೆಗಳನ್ನು ಖಂಡಿಸುವುದರಲ್ಲಿ ಆರ್ಯಸಮಾಜ ಸಿದ್ಧವಾಯಿತು. ಸಮಾಜಸುಧಾರಣೆಯೂ ಇದರಿಂದ ಆಯಿತು. ಆ ಕಾಲಕ್ಕೆ ಬಲಗೊಳ್ಳುತ್ತಿದ್ದ ಕ್ರೈಸ್ತ ಪ್ರಚಾರಕರಿಗೆ ಆರ್ಯ ಸಮಾಜದ ಸ್ಥಾಪನೆಯಿಂದ ಆತಂಕವುಂಟಾಯಿತು. ಕ್ರೈಸ್ತರು ಹಿಂದೂಧರ್ಮದ ಹುಳುಕೆಂದು ಪುರಾಣಗಳಿಂದ ಬಲಗೊಂಡ ನಂಬಿಕೆಗಳನ್ನೂ ಕಲ್ಪನೆಗ ಳನ್ನೂ ಎತ್ತಿ ತೋರಿಸುತ್ತಿದ್ದರು. ಆದ್ದರಿಂದ ಅವರ ಪ್ರಚಾರಕ್ಕೆ ನೆರವಾಗುತ್ತಿತ್ತು. ಆದರೆ ದಯಾನಂದರು ಇವು ನಿಜವಾದ ಹಿಂದೂಧರ್ಮವಲ್ಲವೆಂದೂ ವೈದಿಕನಿಷ್ಠೆಯಲ್ಲಿ ಪುರಾಣಗಳು ಅಸಂಬದ್ಧವೆಂದೂ ತಾವೇ ಎತ್ತಿ ತೋರಿಸಿದುದರಿಂದ ಅವರ ಬಾಯಿಕಟ್ಟಿತು. ಮಹಮ್ಮದೀಯರ ಪ್ರಚಾರವೂ ಹೀಗೆಯೇ ಬಲಗೊಂಡಿತ್ತು. ಹಿಂದೂಗಳಾಗಿದ್ದವರು ಬಲವಂತದಿಂದ ಮುಸಲ್ಮಾನರಾಗಿ ಪರಿವರ್ತಿತರಾಗಿದ್ದು ಅಂಥವರನ್ನು ಮತ್ತೆ ಹಿಂದೂ ಸಮಾಜಕ್ಕೆ ಸೇರಿಸಿಕೊಳ್ಳಲು ಯಾವ ಕ್ರಮವೂ ಇರದಿದ್ದಾಗ, ಆರ್ಯಸಮಾಜ ಶುದ್ಧೀಕರಣದ ವಿಧಿಯನ್ನು ಏರ್ಪಡಿಸಿ ಕೃತಕೃತ್ಯವಾಯಿತು. ಇದರಿಂದ ಉತ್ತರ ಭಾರತದಲ್ಲಿ ಮಹಮ್ಮದೀಯರ ಮತ್ತು ಕ್ರೈಸ್ತರ ಮತಾಂತರ ಕಾರ್ಯಗಳು ಸಾಕಷ್ಟು ಕುಂಠಿತವಾದವು. ಈ ಸಮಾಜದಿಂದ ದೇಶದಲ್ಲಿ ರಾಷ್ಟ್ರಭಾವನೆಯೂ ಬಲಗೊಂಡಿತು.

ಗುರುಕುಲಗಳಲ್ಲಿ ಆರ್ಯಸಮಾಜ ಏರ್ಪಡಿಸಿದ ವಿದ್ಯಾಭ್ಯಾಸಕ್ರಮ ಮಾದರಿಯಾಗಿತ್ತು. ಹರಿಜನೋದ್ಧಾರಕಾರ್ಯ ಹೊಸತಾಗಿದ್ದ ಆ ಕಾಲದಲ್ಲಿ ಹರಿಜನ ಬಾಲಕರು ಗುರುಕುಲಗಳಲ್ಲಿ ವ್ಯಾಸಂಗಮಾಡುತ್ತಿದ್ದರು. ಪ್ರಾಥಮಿಕ ಶಾಲೆಯಿಂದ ಕಾಲೇಜಿನವರೆಗಿನ ವಿವಿಧಬಗೆಯ ಶಾಲೆಗಳು ಸಮಾಜದ ಹೆಸರಿನಲ್ಲಿ ನಡೆಯುತ್ತಿವೆ. ಅನಾಥಾಲಯಗಳು, ವನಿತಾಶ್ರಮಗಳು, ಶಾಲೆಗಳು, ಚಿಕಿತ್ಸಾಲಯಗಳು, ಅತಿಥಿಭವನಗಳು, ವ್ಯಾಯಾಮಶಾಲೆಗಳು, ಮುದ್ರಣಾಲಯ ಗಳು, ಪುಸ್ತಕ ಭಂಡಾರಗಳು, ಪತ್ರಿಕೆಗಳು–ಬಹು ಸಂಖ್ಯೆಯಲ್ಲಿ ಸಮಾಜದ ವತಿಯಿಂದ ಯಶಸ್ವಿಯಾಗಿ ನಡೆಯುತ್ತಿವೆ. ಆರ್ಯಸಮಾಜದ ಸಾಹಿತ್ಯವೂ ವಿಸ್ತಾರವಾಗಿ ಬೆಳೆದಿದೆ. ವೇದ ವೇದಾಂಗಗಳನ್ನು ಭಾರತೀಯ ದೇಶಭಾಷೆಯಲ್ಲಿ ತಂದ ಮೊದಲ ಕೀರ್ತಿ ಸಮಾಜಕ್ಕೆ ಸೇರುತ್ತದೆ. ಇತಿಹಾಸ, ಗಣಿತ, ವಿಜ್ಞಾನ ಮೊದಲಾದುವನ್ನೂ ಸಮಾಜ ಕಡೆಗಣಿಸಿಲ್ಲ. ಮೇಲಾಗಿ ಸ್ವಾತಂತ್ರ್ಯಸಮರದಲ್ಲಿ ಭಾರತದ ಇತರರೊಂದಿಗೆ ಸಮಾಜ ಕೈಗೆ ಕೈಕೊಟ್ಟು ಹೋರಾಡಿದೆ. ಭಾರತದಲ್ಲಿ ಸುಮಾರು ನಾನೂರು ಸಮಾಜಗಳೂ ಹನ್ನೆರಡು ಪ್ರತಿನಿಧಿಸಭೆಗಳೂ ಇವೆ. ಹೊರದೇಶಗಳಾದ ನೆಟಾಲ್, ನೆರೋಬಿ, ಮಾರಿಷಸ್, ಫಿಜಿ, ಸುರಿನಾಮ್ ಮೊದಲಾದ ಸ್ಥಳಗಳಲ್ಲಿ ಆರ್ಯಸಮಾಜ ವಿಸ್ತರಿಸಿದೆ. ಮೂಲತಃ 100 ಜನ ಸದಸ್ಯರಿಂದ ಆರಂಭವಾದ ಆರ್ಯಸಮಾಜದಲ್ಲಿ ಪ್ರಪಂಚಾದ್ಯಂತ ಈಗ 3 ರಿಂದ 4

ಮಿಲಿಯನ್ ಅನುಯಾಯಿಗಳಿದ್ದಾರೆ ಅಂತಾರಾಷ್ಟ್ರೀಯ ಪ್ರತಿನಿಧಿಗಳನ್ನೊಳಗೊಂಡ ಸಭೆ ದೆಹಲಿಯಲ್ಲಿದೆ. ಮೂಲತಃ 100 ಜನ ಸದಸ್ಯರಿಂದ ಆರಂಭವಾದ ಆರ್ಯಸಮಾಜದಲ್ಲಿ ಪ್ರಪಂಚದಾದ್ಯಂತ ಈಗ 3 ರಿಂದ 4 ಮಿಲಿಯನ್ ಅನುಯಾಯಿಗಳಿದ್ದಾರೆ.

(ಎಸ್.ಕೆ.ಆರ್.; ಎಸ್.ಎಂ.ಎಚ್.; ಬಿ.ಪಿ.ಎಸ್.)

**ಆರ್ಯಾವರ್ತ[1] :** ಭಾರತಕ್ಕೆ ಬಂದ ಆರ್ಯರು ತಾವು ನೆಲೆಸಿದ ನೆಲವನ್ನು ಈ ಹೆಸರಿನಿಂದ ಕರೆದರು. ವಾಯವ್ಯ ಸರಹದ್ದಿನ ಕಣಿವೆಗಳ ಮೂಲಕ ವಲಸೆ ಬಂದ ಆ ಜನ ಮೊದಲು ಪಂಜಾಬಿನಲ್ಲಿ ನಿಂತರು. ಆ ಕಾಲಕ್ಕೆ ಋಗ್ವೇದ ಕಾಲವೆಂದು ಹೆಸರು. ಕ್ರಮೇಣ ಅವರು ಗಂಗಾನದಿ ಬಯಲಿನಲ್ಲಿ ನೆಲೆನಿಂತು ಅವರ ಸಂಸ್ಕೃತಿಯನ್ನು ಪಸರಿಸಿದರು. ಗಂಗಾ ಮತ್ತು ಯಮುನಾ ನದಿಗಳ ವಿಸ್ತಾರವಾದ ಬಯಲು ಪ್ರದೇಶವನ್ನು ಆರ್ಯಾವರ್ತ ಎಂದು ಕರೆಯಲಾಗಿದೆ. ಅವರು ಪೂರ್ವದಲ್ಲಿ ಬಿಹಾರದವರೆಗೂ ದಕ್ಷಿಣದಲ್ಲಿ ವಿಂಧ್ಯ ಪರ್ವತದವರೆಗೂ ಹರಡಿದರು. ಸಿಂಧು, ಗಂಗಾ, ಯಮುನಾ ನದಿಗಳ ಫಲವತ್ತಾದ ಬಯಲುಪ್ರದೇಶವನ್ನು ಅವರು ಪುಣ್ಯಭೂಮಿಯೆಂದು ವರ್ಣಿಸಿದ್ದಾರೆ. ಆರ್ಯಾವರ್ತ ಪೂರ್ವಸಮುದ್ರದಿಂದ ಪಶ್ಚಿಮಸಮುದ್ರದವರೆಗೂ ಉತ್ತರದಲ್ಲಿ ಹಿಮಾಲಯ ಪರ್ವತದಿಂದ ದಕ್ಷಿಣದಲ್ಲಿ ವಿಂಧ್ಯಪರ್ವತಗಳವರೆಗೂ ಹಬ್ಬಿವೆ. (ಜಿ.)

**ಆರ್ಯಾವರ್ತ[2] :** ಬಿಹಾರ, ಪಶ್ಚಿಮ ಬಂಗಾಲ, ಉತ್ತರ ಪ್ರದೇಶ ಮತ್ತು ನೇಪಾಲಗಳಲ್ಲಿ ಪ್ರಸಾರ ಹೊಂದಿರುವ ಜನಪ್ರಿಯ, ಪ್ರಗತಿಪರ ದಿನಪತ್ರಿಕೆ. 1940ರಿಂದ ಪಾಟ್ನದ ಇಂಡಿಯನ್ ನೇಷನ್ ಪತ್ರಿಕಾ ಗುಂಪಿನ ಅಂಗವಾಗಿ ಹಿಂದಿ ಭಾಷೆಯಲ್ಲಿ ಪ್ರಕಟವಾಗುತ್ತಿದೆ. ನಗರವಾಸಿಗಳ ಮತ್ತು ಹಳ್ಳಿಗರ ಅಭಿರುಚಿಗೆ ತಕ್ಕಂತೆ ಸುದ್ದಿಯನ್ನು ಸಾರುತ್ತ ಹಿಂದಿ ಪತ್ರಿಕೆಗಳ ಗುಂಪಿನ ಪ್ರಭಾವೀ ಪತ್ರಿಕೆಗಳಲ್ಲೊಂದೆನಿಸಿದೆ. (ಎನ್.ಕೆ.)

**ಆರ್ಲ್ಯಾಂಡೊ ಫ್ಯೂರಿಯೋಸ :** ಇಟಲಿ ದೇಶದ ಅರಿಯೋಸ್ಟೊ ಕವಿಯ ಉತ್ತಮ ಕಥನ ಕಾವ್ಯ. ಇದು 1516ರಲ್ಲಿ ಮೊದಲು ಪ್ರಕಟವಾಯಿತು. ಯುರೋಪಿನ ಕಲೆ ಮತ್ತು ಸಾಹಿತ್ಯ ಪುನರುತ್ಥಾನ ಕಾಲದ ಪೂರ್ವ ಸಂಪ್ರದಾಯದ ಉತ್ತಮ ಕೃತಿಯೆಂದು ಪರಿಗಣಿಸಲ್ಪಟ್ಟಿದೆ. ಇದನ್ನು ಪೂರೈಸಲು ಸುಮಾರು ಮೂವತ್ತು ವರ್ಷಗಳ ಕಾಲ ಹಿಡಿಯಿತು (1502–33). ಇದು ಯುರೋಪಿನಲ್ಲಿ ಬಹಳ ಬೇಗ ಜನರ ಮೆಚ್ಚುಗೆಯನ್ನು ಗಳಿಸಿದುದಲ್ಲದೆ ಆ ಕಾಲದ ಸಾಹಿತ್ಯದ ಮೇಲೆ ಪ್ರಭಾವ ಬೀರಿತು.

ಆರ್ಲ್ಯಾಂಡೊ ಫ್ಯೂರಿಯೋಸ ಎಂದರೆ ಉನ್ಮತ್ತ ಆರ್ಲ್ಯಾಂಡೊ ಎಂದು ಅರ್ಥ. ಕವಿಯು ನಾಯಕ ಆರ್ಲ್ಯಾಂಡೊವನ್ನು ಬೇರೆ ಬೇರೆ ಕಾಲ್ಪನಿಕ ಸನ್ನಿವೇಶಗಳಲ್ಲಿ ಚಿತ್ರಿಸಿದ್ದಾನೆ. ಅನೇಕ ಪ್ರಕರಣಗಳು ಇದರಲ್ಲಿ ಸೇರಿಕೊಂಡಿವೆ. ಇವನ್ನು ಕವಿ ಜಾಣ್ಮೆಯಿಂದ ಹೆಣೆದು ಕೃತಿಗೆ ಒಂದು ಏಕರೂಪತೆಯನ್ನು ಕೊಟ್ಟಿದ್ದಾನೆ. ಇದರಲ್ಲಿ ಕಾಣಬರುವುದು ಮೂರು ಮುಖ್ಯ ಎಳೆಗಳು: ಏಂಜಲಿಕಳ ಬಗ್ಗೆ ಆರ್ಲ್ಯಾಂಡೊವಿನ ಪ್ರೇಮ, ಕ್ರೈಸ್ತರಿಗೂ ಪೇಗನ್ನರಿಗೂ ನಡೆಯುವ ಯುದ್ಧ, ರಗೇರೊ ಮತ್ತು ಬ್ರಡಮಂಟೊ ಪ್ರಣಯಿಗಳ ಪ್ರಕರಣ.

ಮೊದಲನೆಯದೇ ಅತಿ ಮುಖ್ಯವಾದ ಭಾಗ. ಎರಡನೆಯದು ಇಡೀ ಕಾವ್ಯಕ್ಕೆ ಶೌರ್ಯದ ಹಿನ್ನೆಲೆಯನ್ನು ಕೊಡುತ್ತದೆ. ಮೂರನೆಯದು ರಗೇರೊ ಮತ್ತು ಬ್ರಡಮಂಟೊ ಮದುವೆಯಾಗಿ ಅಲಿಯೊಸ್ಟೊವಿನ ಆಶ್ರಯದಾತರ ಪೂರ್ವಜರಾಗಿ ವರ್ಣಿಸಲ್ಪಟ್ಟಿರುವುದು. ಹದಿನಾರನೆಯ ಶತಮಾನದ ಜನಕ್ಕೆ ಆಸಕ್ತಿ ಇದ್ದ ವಿಚಾರಗಳೆಲ್ಲ ಇಲ್ಲಿವೆ–ಅತಿಭೌತಿಕ, ಸಾಂಕೇತಿಕ ಮತ್ತು ಸಾಹಸಮಯವಾದ ಘಟನೆಗಳು, ಚಂದ್ರಲೋಕದ ಪ್ರವಾಸ, ಮಾಯಾ ಉಂಗುರಗಳು, ಖಡ್ಗಗಳು ಎಲ್ಲವೂ ಬರುತ್ತವೆ. ಇವೆಲ್ಲ ವಿಚಾರಗಳನ್ನು ಬೆಸೆದು ಒಂದಾಗಿ ಸೇರಿಸಿರುವುದು ಕವಿಯ ವಿಶಿಷ್ಟ ವ್ಯಕ್ತಿತ್ವ. ಕವಿ ಉಪಯೋಗಿಸಿರುವ ಛಂದಸ್ಸು ಅಟ್ಟರೀಮಾ ಎಂಬ ಅಷ್ಟಪದಿ. (ಎಚ್.ಜಿ.ಎಸ್.ಆರ್.)

**ಆರ್ಲಿಂಗ್‍ಟನ್ :** ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇದೇ ಹೆಸರಿನ 7 ಸ್ಥಳಗಳಿವೆ, ಅವುಗಳಲ್ಲಿ ಮ್ಯಾಸಚೂಸೆಟ್ಸ್ ಪ್ರಾಂತ್ಯದ ಒಂದು ಪಟ್ಟಣ. ಬಾಸ್ಟನ್ ನಗರದ ವಾಯವ್ಯಕ್ಕೆ ಸು. 13 ಕಿಮೀ ದೂರದಲ್ಲಿದೆ. ಬಾಸ್ಟನ್ ಹಾಗೂ ಮೇನ್ ರೈಲು ಮಾರ್ಗ ಇದಕ್ಕೆ ಸಂಪರ್ಕವನ್ನು ಕಲ್ಪಿಸುವುದು. ಇದರ ಒಟ್ಟು ವಿಸ್ತೀರ್ಣ 14.2 ಚಕಿಮೀ. ಜನಸಂಖ್ಯೆ 42389 (2001). ಜನಸಂಖ್ಯೆ: 170936 (2004) ಒಂದು ಸುಂದರವಾದ ಸ್ಪೈ ಎಂಬ ಕೊಳವಿದೆ. ತೋಟಗಾರಿಕೆ ಮುಖ್ಯ ಕಸುಬು. ಪಿಯಾನೊ, ದಿನಬಳಕೆ ಯಂತ್ರದ ಸಾಮಾನುಗಳು ಹಾಗೂ ಚಿತ್ರಪಟ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳಿವೆ. 1807ರಲ್ಲಿ ವೆಸ್ಟ್‌ಕೇಂಬ್ರಿಡ್ಜ್ ಎಂಬ ಹೆಸರಿನಿಂದ ಆರ್ಲಿಂಗ್‌ಟನ್ ಪಟ್ಟಣ ಮಾರ್ಪಾಡಾಯಿತು. ಆದರೆ ಅದೇ ವರ್ಷ ಆರ್ಲಿಂಗ್‍ಟನ್ ಎಂಬ ಹೆಸರನ್ನೇ ಮತ್ತೆ ಸ್ವೀಕರಿಸಲಾಯಿತು.

ಆರ್ಲಿಂಗ್‍ಟನ್ ವರ್ಜೀನಿಯದಲ್ಲಿ ಆರ್ಲಿಂಗ್‍ಟನ್ ಎಂಬ ಒಂದು (ಐತಿಹಾಸಿಕ ಗೃಹ ಪೋಟೋಮಾಕ್ ನದಿಯ ಪಕ್ಕದಲ್ಲಿದೆ ವಾಷಿಂಗ್‍ಟನ್ ಡಿ.ಸಿ.ಗೆ ಎದುರಿನಲ್ಲಿ ಇದೆ. ಒಮ್ಮೆ ಈ ಗೃಹ ಜಾರ್ಜ್ ವಾಷಿಂಗ್‍ಟನ್‌ನ ಸ್ವತ್ತಾಗಿತ್ತು. ಅನಂತರ ಆತನ ಮೊಮ್ಮಗನ ದತ್ತು ಸ್ವತ್ತಾಯಿತು. ಈತನ ಮಗಳನ್ನು ಮದುವೆಯಾದ ರಾಬರ್ಟ್ ಈಲಿಗೆ 1831ರಲ್ಲಿ ದೊರಕಿತು. ಕೆಲವು ಕಾಲಾನಂತರ ಆರ್ಲಿಂಗ್‍ಟನ್ ರಾಷ್ಟ್ರದ ಸಮಾಧಿಸ್ಥಳವಾಗಿ ಅನೇಕ ಅಗ್ರಗಣ್ಯ ವ್ಯಕ್ತಿಗಳ ಹಾಗೂ ಸೈನಿಕರ ಬೀಡಾಯಿತು. ವಸಾಹತು ಕಲೆಗೆ ಈ ಕಟ್ಟಡ ಇಂದಿಗೂ ಒಂದು ಮಾದರಿ. ಆರ್ಲಿಂಗ್‍ಟನ್ ಗೃಹದ ಸುತ್ತಲಿನ ರಾಷ್ಟ್ರೀಯ ಸಮಾಧಿ ಪ್ರದೇಶ 400 ಎಕರೆಗಳಿಗಿಂತಲೂ ಹೆಚ್ಚು. ಇದೊಂದು ರಮಣೀಯ ಪ್ರದೇಶ. (ಎಂ.ಎಸ್.)

**ಆರ್ಲಿಕ್, ಪಾಲ್ :** 1854–1915. ಜೀವ ಮತ್ತು ವೈದ್ಯಕ ವಿಜ್ಞಾನಗಳಲ್ಲಿ ಮೊತ್ತಮೊದಲು ರಸಾಯನವಿಜ್ಞಾನವನ್ನು ಬಹಳವಾಗಿ ಬಳಸಿದ ಪ್ರಯೋಗಶೀಲ ಮೇಧಾವಿ, ಜರ್ಮನಿಯ ವೈದ್ಯಕ ಸಂಶೋಧಕ. ಕೋಶರಕ್ಷಣೆಯ (ಇಮ್ಯೂನಿಟಿ) ಮೇಲಿನ ಸಂಶೋಧನೆಗಾಗಿ ಯಲ್ಯಾ ಮೆಷ್ನಿಕಾವ್‌ನೊಂದಿಗೆ ನೊಬೆಲ್ ಪಾರಿತೋಷಕ (1908) ಪಡೆದವ. 14, ಮಾರ್ಚ್ 1854ರಲ್ಲಿ ಯೆಹೂದಿ ಮನೆತನದಲ್ಲಿ ಜನಿಸಿದ ಇವನಿಗೆ ಚಿಕ್ಕಂದಿನಲ್ಲಿ ಗಣಿತ, ಲ್ಯಾಟಿನ್ನುಗಳನ್ನು ಬಿಟ್ಟರೆ, ಇನ್ನಾವುದರಲ್ಲೂ ಆಸಕ್ತಿ ಇರಲಿಲ್ಲ. ಇವನಿಗೆ ಪರೀಕ್ಷೆಗಳೇ ಹಿಡಿಸುತ್ತಿರಲಿಲ್ಲ. ವೈದ್ಯ ಪದವೀಧರನಾಗಿ (1878). ರಸಾಯನವಿಜ್ಞಾನ ಇವನಿಗೆ ಬಹುವಾಗಿ ರುಚಿಸಿತು. ತನ್ನವೇ ಯತ್ನಗಳಿಂದ ಆಳವಾದ ಅಭ್ಯಾಸಕ್ಕಿಳಿದ. ಕೆಲವು ವರ್ಷಗಳು ವೈದ್ಯ ಸಂಶೋಧನೆಗಾಗಿ ಚಿಕ್ಕ ಪ್ರಯೋಗಾಲಯವನ್ನು ತೆರೆದು, ಅಲ್ಲಿ ನಡೆಸಿದ ರಕ್ತಕಣಗಳ ಮೇಲಿನ ಶೋಧನೆಯಿಂದ ಬೇಗನೆ ಬೆಳಕಿಗೆ ಬಂದ. ಆಮೇಲೆ ರಾಬರ್ಟ್ ಕಾಕನ ಸೋಂಕು ರೋಗಗಳ ಸಂಸ್ಥೆ ಸೇರಿದ್ದು, ಬರ್ಲಿನ್ನಿನ ಲಸಿಕೆ ಸಂಶೋಧನಾ ಸಂಸ್ಥೆಯ ನಿರ್ದೇಶಕನಾಗಿದ್ದು (1806) ಕೊನೆಗೆ ಇವನಿಗಾಗಿ ಹುಟ್ಟಿಕೊಂಡ ರೋಗ ಚಿಕಿತ್ಸಾ ಪ್ರಯೋಗದ ಸಂಸ್ಥೆಯ ಹಿರಿಯನಾದ. ಜೊತೆಗೆ, ಇದರ ಪಕ್ಕದಲ್ಲಿದ್ದ ಜಾರ್ಜ್ ಸ್ಪೇಯರ್ ಸಂಸ್ಥೆಯಲ್ಲೂ ರಸಾಯನ ರೋಗ ಚಿಕಿತ್ಸೆಯ ನಿರ್ದೇಶಕನಾಗಿದ್ದ. ಮೊದಮೊದಲು ಅನೇಕರಿಗೆ ಇವನು ಹಿಡಿಸದಿದ್ದರೂ ಲಂಡನ್ನಿನ ರಾಯಲ್ ಸೊಸೈಟಿಯ ಹೊರನಾಡಿನ ಸದಸ್ಯತ್ವವೂ, ಜರ್ಮನ್ ಬಿರುದಾದ ಎಕ್ಸೆಲೆನ್ಸಿಯೂ ದಕ್ಕಿದುವು. ಬ್ಯಾಡ್ ಹೊಂಬರ್ಗಿನಲ್ಲಿ 20 ಆಗಸ್ಟ್ 1915ರಂದು ಈತ ನಿಧನ ಹೊಂದಿದ.

ಮುಖ್ಯವಾಗಿ ಒಂದಾದ ಮೇಲೆ ಒಂದರಂತೆ, 10–15 ವರ್ಷಗಳ ಕಾಲ, ಊತಕಶಾಸ್ತ್ರದೊಂದಿಗೆ ರಕ್ತ ಜೀವಕಣಶಾಸ್ತ್ರ, ಮರೆವಣೆಯೊಂದಿಗೆ ರಾಸಾಯನ ರೋಗ ಚಿಕಿತ್ಸೆಗಳಲ್ಲಿ ಆರ್ಲಿಕನ ಸಂಶೋಧನೆಗಳು ನಡೆದುವು. ಇದರೊಂದಿಗೇ ರಸಾಯನಿಕ ಶೋಧನೆಗಳನ್ನಂತೂ ಬಿಟ್ಟಿದ್ದೇ ಇಲ್ಲ. ಏಕಾಣುಜೀವಿಶಾಸ್ತ್ರ, ಔಷಧಶಾಸ್ತ್ರ, ಏಡಿಗಂತಿ ಸಂಶೋಧನೆಗಳಲ್ಲೂ ಹೆಚ್ಚಿನ ಮುನ್ನಡೆಗಳಿಗೂ ಕಾರಣನಾದ. ಹೊಸ ತಿಳಿವೇ ಆರ್ಲಿಕ್ಕನ ಮೂಲ ಗುರಿಯಾಗಿದ್ದರೂ, ಅವುಗಳಿಂದ ಬಂದ ಫಲಗಳಂತೂ ಒಂದು ನವಯುಗವನ್ನೇ ಹುಟ್ಟಿಸಿದಂತಿದ್ದುವು. ಇವುಗಳಲ್ಲಿ ಮುಖ್ಯವಾದ ಕೆಲವನ್ನು ಸೂಚಿಸಬಹುದು. ಊತಕಗಳು ಎತ್ತಿಕೊಳ್ಳುವ ಬಣ್ಣಗಳ ಬಿಡಿಪರೀಕ್ಷೆಗಾಗಿ, ಆಗ ಜರ್ಮನಿಯ ವಿಜ್ಞಾನವೂ ರಾಸಾಯನಿಕ ಕೈಗಾರಿಕೆಗಳೂ ದಂಡಿಯಾಗಿ ತಯಾರಿಸುತ್ತಿದ್ದ, ಕೃತಕ ಬಣ್ಣವಸ್ತುಗಳ ಜೀವಜ್ಞಾನದ ಗುಣಗಳನ್ನು ಕಂಡುಕೊಳ್ಳುತ್ತ ಮೊದಲುಮಾಡಿದ. ಊತಕದ ಜೀವಕಣಗಳು, ರಕ್ತದ ಬಿಳಿಯ ಜೀವಕಣಗಳಲ್ಲಿನ ಬೇರೆ ಬೇರೆ ಕಣಗಳ ವಿಶಿಷ್ಟ ಬಣ್ಣತಳೆವ ಗುಣಗಳನ್ನು ತೋರಿಸಿಕೊಟ್ಟು, ಇಂದಿನ ರಕ್ತಶಾಸ್ತ್ರವನ್ನು (ಹೆಮಟಾಲಜಿ) ಸ್ಥಾಪಿಸಿದ. ನರದ ತಂತುಗಳು ಮೆತಿಲೀನ್ ನೀಲಿಯಿಂದ ಬಣ್ಣವೇರುವ ಹಾಗೆ, ಯಾವ ಅಡ್ಡ ವಿಷ ಪರಿಣಾಮಗಳೂ ಆಗದೆಯೇ, ಬದುಕಿರುವ ಪ್ರಾಣಿಗಳಲ್ಲಿ ಊತಕಗಳಿಗೆ ಬಣ್ಣ ಕೊಡುವ ಜೀವಾಳದ ವರ್ಣಕಗಳನ್ನು (ವೈಟಲ್ ಸ್ಟೇನ್ಸ್) ಕಂಡುಹಿಡಿದ. ಹೊಸ ವಿಧಾನಗಳಲ್ಲಿ ಇದೊಂದು ಮಹಾ ಸಾಧನೆ. ಬೇಕಾದಾಗ ಆಕ್ಸಿಜನ್ ಕೂಡಿಸುವ ಇಲ್ಲವೇ ಕಳೆವ ವರ್ಣವಸ್ತುಗಳನ್ನು ಬಳಸಿ, ಜೀವಿಗಳ ಬೇರೆ ಬೇರೆ ಊತಕಗಳಲ್ಲಿನ ಆಕ್ಸಿಜನ್ ಪೂರೈಕೆಯ ಮಟ್ಟಗಳು ಬೇರೆ ಬೇರೆ ಆಗಿರುವುವೆಂದು ತೋರಿಸಿದ. ಆಮ್ಲಕ್ಕೆ ಜಗ್ಗದ ಬಣ್ಣವೇರಿಕೆಯಿಂದ ಕಾಕ್‌ನ (ಕ್ಷಯದ) ದಂಡಾಣು ಜೀವಿಯನ್ನು ಅವನು ತೋರಿಸಿದ್ದರಿಂದ, ಕ್ಷಯರೋಗ ನಿದಾನದಲ್ಲಿ ಅಗತ್ಯವಾದ ವಿಧಾನವೊಂದು ದೊರಕಿತು.

ಕಾರ್ಖಾನೆ ತಯಾರಕರ ಮದ್ದುಗಳ ಬಲ ಹೆಚ್ಚು ಕಡಿಮೆ ಆಗಿರುತ್ತಿದ್ದುದರಿಂದ ಗಂಟಲ ಮಾರಿಯ (ಡಿಫ್ತೀರಿಯ) ಚಿಕಿತ್ಸೆಯಲ್ಲಿ ವಿಷಹಾರಿಯ (ಆ್ಯಂಟಿಟಾಕ್ಸಿನ್) ಬಳಕೆ ಚೆನ್ನಾಗಿರಲಿಲ್ಲ. ಈ ತೆರನ ರಸಿಕೆರೋಧಕಗಳ (ಆ್ಯಂಟಿಸೀರಂ) ಗುಣಮಟ್ಟವನ್ನು ನಿಗದಿಸುವ, ಈಗಲೂ ಎಲ್ಲೆಲ್ಲೂ ಬಳಕೆಯಲ್ಲಿರುವ ವಿಧಾನವನ್ನು ಆರ್ಲಿಕ್ ಜಾರಿಗೆ ತಂದ. ಪ್ರತಿಜನಕ (ಆ್ಯಂಟಿಜನ್) ಮೆರವಣೆ ಆದ ಮೇಲೆ ಜೀವಿಗಳ ರಸಿಕೆಯಲ್ಲಿ ಹುಟ್ಟಿಕೊಳ್ಳುವ, ರೋಧ ವಸ್ತುಗಳ (ಆ್ಯಂಟಿಬಾಡೀಸ್), ಏಕಾಣುಜೀವಿ ವಿಷಗಳು ಮತ್ತು ಅದೇ ತೆರನ ವಿಷಗಳ ವರ್ತನೆಯ ರೀತಿಯ ಮೇಲೆ ಅವನ ಶೋಧನೆಗಳು ಕೋಶರಕ್ಷಾಶಾಸ್ತ್ರದ (ಇಮ್ಯುನಾಲಜಿ) ಮುಖ್ಯ ಅಡಿಗಲ್ಲಾಗಿದೆ. ಈ ಶೋಧನೆಗಳಿಂದ, ಅದರಲ್ಲೂ ಅವನ ಅಡ್ಡ ಸರಪಣಿ ಸಿದ್ಧಾಂತ ಹುಟ್ಟಿಕೊಂಡಿತು.

ಆರ್ಲಿಕ್ಕನಿಂದ ಜನಿಸಿದ, ಔಷಧಶಾಸ್ತ್ರದ ಶಾಖೆಯಾದ ರಸಾಯನರೋಗಚಿಕಿತ್ಸೆಯ ಕೇಮೋತೆರಪಿ ದೆಸೆಯಿಂದ ಈಗ ಮಹಾರಾಸಾಯನಿಕ ಕೈಗಾರಿಕೆಯೇ ನಳನಳಿಸುತ್ತಿದೆ. ರೋಗಕಾರಣಗಳಾದ ಪರಪಿಂಡಿಗಳನ್ನು ಹಾಳುಗೆಡವಿ, ಅವುಗಳ ಹುಟ್ಟಡಗಿಸುವ ಮದ್ದಿನಿಂದ, ಸೋಂಕು ಹತ್ತಿರುವ ಪ್ರಾಣಿಯ ರೋಗವನ್ನು ವಾಸಿಮಾಡುವುದು ಮೊತ್ತಮೊದಲು ಗೊತ್ತಾದುದು 1904ರಲ್ಲಿ. ಬೈರೊಡಲಿ (ಟ್ರಿಪನೊಸೋಮ್) ರೋಗಾಣುವನ್ನು ಚುಚ್ಚಿ

ಹೊಗಿಸಿ ರೋಗ ಹತ್ತಿಸಿದ ಚಿಟ್ಟಿಲಿಗಳಿಗೆ, ಹಾಗೆ ಮದ್ದು ಚುಚ್ಚಿರದವು ರಕ್ತದ ತುಂಬ ರೋಗಾಣುಗಳು ಹೆಚ್ಚಿಕೊಂಡು ಸಾಯುವುದಕ್ಕೆ 24 ತಾಸುಗಳ ಮುಂಚೆ, ಟ್ರಿಪಾನ್ ಕೆಂಪು ಬಣ್ಣವಸ್ತುವನ್ನು ಚರ್ಮದಡಿ ಒಂದೇ ಬಾರಿಗೆ ಚುಚ್ಚಿ ಚಿಕಿತ್ಸೆ ಮಾಡಿದಾಗ ಬದುಕುಳಿದವು. ತನ್ನ ಸಹೋದ್ಯೋಗಿಗಳೊಂದಿಗೆ ಸೇರಿಕೊಂಡು, ಆರ್ಲಿಕ್ ರಾಸಾಯನಿಕಗಳಿಂದ ರೋಗಚಿಕಿತ್ಸೆ ಮಾಡುವ ವಿಧಾನದ ಸೂತ್ರಗಳ ಮೂಲ ವಿಜ್ಞಾನಿಯಾದ. ಸಾಲ್ವರ್ಸಾನ್ ಇಲ್ಲವೇ 606 ಮದ್ದಾಗಿ ಹಿಂದೆ ಮಾರುತ್ತಿದ್ದ ಸೋಮಲದ ಸಂಯುಕ್ತವಾದ ಆರ್ಸ್‌ಫಿ ನಮೀನಿನ ನೆಲೆಗಾಣಕ್ಕೆ, ರಾಸಾಯನಿಕ ರೋಗಚಿಕಿತ್ಸೆಯಲ್ಲಿ ಇವನ ಒಂದು ಮಹಾಸಾಧನೆ. ಉಪದಂಶದ (ಸಿಫಿಲಿಸ್) ರೋಗಾಣುಗಳನ್ನು ಪ್ರಯೋಗದಲ್ಲಿ ಚುಚ್ಚಿ ರೋಗ ಹತ್ತಿಸಿದ ಮೊಲಗಳು ಕೋತಿಗಳಲ್ಲಿ ಇದು ವಾಸಿಮಾಡಿತು. ಆಮೇಲೆ ಇನ್ನೂ ಒಳ್ಳೆಯ ಮದ್ದುಗಳು ಬಂದು ಇದನ್ನು ಕೈ ಬಿಟ್ಟರೂ ಆಗಿನ ಕಾಲದಲ್ಲಿ ಉಪದಂಶದ ರೋಗಿಯ ಚಿಕಿತ್ಸೆಗೆ ಇದರ ಹೊರತಾಗಿ ಬೇರೆ ಯಾವ ಮದ್ದೂ ಗೊತ್ತಿರಲಿಲ್ಲವಾದ್ದರಿಂದ ಇದು ಕ್ರಾಂತಿ ಎಬ್ಬಿಸಿತು. ಈ ತೆರನ ರಸಾಯನ ರೋಗ ಚಿಕಿತ್ಸಕ ಮದ್ದುಗಳು ಸಾಮಾನ್ಯವಾಗಿ ರೋಗಿಯ ರೋಗ ತಡೆವ ಯಾಂತ್ರಿಕತೆಗಳೊಂದಿಗೆ ಸಹಕರಿಸುವುದರಿಂದ ಮಾತ್ರ ವಾಸಿಮಾಡುತ್ತವೆ. ಈ ಮದ್ದುಗಳಿಂದ ಚಿಕಿತ್ಸೆ ಕೈಗೂಡದಿದ್ದರೆ, ರೋಗಿಯ ಇಲ್ಲವೇ ಪರಪಿಂಡಿಗಳ ವಿವಿಧ ರೀತಿಯ ಜೀವಿ ವರ್ತನೆಗಳೇ ಕಾರಣ ಇರಬೇಕು.

ಪ್ರಯೋಗಗಳಲ್ಲಿ ಎದ್ದು ಕಂಡುಬಂದ ಕಣ್ಣರಿಕೆಗಳನ್ನು ಬಿಡಿಸಿ ನೋಡುವುದರಿಂದ ಸೂತ್ರಗಳನ್ನು ರೂಪಿಸಬಹುದು ಎನ್ನುತ್ತಾನೆ ಆರ್ಲಿಕ್. ಊತಕಗಳ ಆಮ್ಲಜನಕದ ಬೇಡಿಕೆಯ ಮೇಲಿನ ಪ್ರಯೋಗಗಳಿಂದ (1885) ಜೀವಕಣಗಳಲ್ಲಿ ಬದುಕಿರುವ ಜೀವಿರಸದಲ್ಲಿ (ಪ್ರೊಟೋಪ್ಲಾಸ್ಮ್), ಅವುಗಳ ವಿಶಿಷ್ಟ ಚಟುವಟಿಕೆಗಳನ್ನು ನಿರ್ಧರಿಸುವ, ನಡುವಣ ಒಂದು ವಿಶೇಷ ರಾಸಿತಂಡವೂ, ಇದಕ್ಕೆ ಅಡ್ಡ ಸರಪಣಿಗಳಾಗಿ (ಪಡೆಕಗಳು) ಪರಮಾಣು – ಸಂಮಿಶ್ರಗಳೂ ಇರುವುವೆಂದೂ ಊಹಿಸಿದ. ಈ ಪಡೆಕಗಳು ವಿಶಿಷ್ಟ ನಿಜಗೆಲಸಗಳಲ್ಲಿ ಅಧೀನವಾಗಿದ್ದರೂ ಒಂದೊಂದೂ ಜೀವಕಣದ ಇಡೀ ಬಾಳುವೆಗೆ ಬಲು ಮುಖ್ಯ. ಈ ಕಲ್ಪನೆಗೆ ಆಧಾರ ಕೊಟ್ಟು, ಜೀವವಿಷಗಳೂ ಮದ್ದುಗಳೂ ವರ್ತಿಸುವುದನ್ನು ತರ್ಕಬದ್ಧವಾಗಿ ವಿವರಿಸಿದುವು. ಅವುಗಳೊಂದಿಗೆ ಅಡ್ಡ ಸರಪಣಿಗಳು ಕೂಡಲು ಅವಕಾಶ ಕೊಡುವ ಜೀವಕಣಗಳ ಮೇಲೆ ಮಾತ್ರ ಜೀವವಿಷಗಳು ವರ್ತಿಸುತ್ತವೆ. ಬಿಡಿಯಾಗಿರುವ ಪಡೆಕಗಳಾಗಿ ರೋಧವಸ್ತುಗಳು ಮೈಯಲ್ಲಿ ಹುಟ್ಟಿಕೊಳ್ಳುವುದನ್ನೂ ಇದು ವಿವರಿಸಿತು. ಈಗಲೂ ಈ ಅಡ್ಡ ಸರಪಣಿ ಸೂತ್ರ ನಿಜವೆನಿಸಿದೆ.

ಜರ್ಮನ್, ಇಂಗ್ಲಿಷ್, ಫ್ರೆಂಚ್ ನುಡಿಗಳಲ್ಲಿ, ಆರ್ಲಿಕ್ಕನ ಇಡೀ ಬರೆಹಗಳೂ ಲೇಖನಪಟ್ಟಿಯೂ ನಾಲ್ಕು ಸಂಪುಟಗಳಲ್ಲಿ (1956) ಪ್ರಕಟವಾಗಿವೆ. (ಡಿ.ಎಸ್.ಎಸ್.)

**ಆರ್ಲಿಯನ್ಸ್ ಡ್ಯೂಕರು :** ಹದಿನಾಲ್ಕನೆಯ ಶತಮಾನದಲ್ಲಿ ಫ್ರಾನ್ಸಿನ ದೊರೆ ತನ್ನ ಹತ್ತಿರ ಸಂಬಂಧಿಗಳಿಗೆ ಆರ್ಲಿಯನ್ಸನ್ನು ಬಳುವಳಿಯಾಗಿ ಕೊಟ್ಟು ಡ್ಯೂಕ್ ಪದವಿಯನ್ನು ಕೊಟ್ಟ ಮೇಲೆ ಈ ಡ್ಯೂಕರಿಗೆ ದೊರೆಯ ಆಸ್ಥಾನದಲ್ಲಿ ಹೆಚ್ಚಿನ ಮರ್ಯಾದೆಯಿತ್ತು.

**1. ಚಾರ್ಲ್ಸ್, ಡ್ಯೂಕ್ ಆರ್ಲಿಯನ್ಸ್ :** (1391–1465). ಇಂಗ್ಲಿಷರಿಗೂ ಫ್ರೆಂಚರಿಗೂ 1415ರಲ್ಲಿ ನಡೆದ ಅಜಿನ್ ಕೋರ್ಟ್ ಕದನದಲ್ಲಿ ಭಾಗವಹಿಸಿ ಬ್ರಿಟಿಷರ ಕೈಸೆರೆ ಸಿಕ್ಕಿ ಮುಂದೆ ಇಪ್ಪತ್ತೈದು ವರ್ಷ ಇಂಗ್ಲೆಂಡಿನಲ್ಲೇ ಇದ್ದ. ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಉತ್ತಮ ಮಟ್ಟದ ಲಾವಣಿಗಳನ್ನೂ ರಾಂಡೆಲ್ಸ್ ಎಂಬ ಭಾವಗೀತೆಗಳನ್ನೂ ಬರೆದ. 1440ರಲ್ಲಿ ಹಣ ಕೊಟ್ಟು ಬಿಡುಗಡೆ ಹೊಂದಿ ತನ್ನ ದೇಶಕ್ಕೆ ಹಿಂತಿರುಗಿದ. ಉಳಿದ ಕಾಲವನ್ನು, ತನ್ನ ಆಸ್ಥಾನದಲ್ಲಿ ಕವಿಗಳಿಗೆ ವಿದ್ವಾಂಸರಿಗೆ ಆಶ್ರಯ ಕೊಟ್ಟು ಅವರ ನಡುವೆ ಕಳೆದ.

**2. ಯೀನ್ ಬ್ಯಾಪಿಸ್ಟ್ ಗ್ಯಾಸ್ಟನ್ :** (1608–60). ಫ್ರಾನ್ಸಿನ ದೊರೆ ನಾಲ್ಕನೆಯ ಹೆನ್ರಿಯ ಮಗ. ಪ್ರಬಲಮಂತ್ರಿ ರಿಚಲುವಿಗೆ ವಿರೋಧವಾಗಿ ಒಳಸಂಚು ನಡೆಸಿ ಸ್ವಲ್ಪಕಾಲ ರಾಜಕೀಯ ಅಲ್ಲೋಲಕಲ್ಲೋಲವನ್ನೆಬ್ಬಿಸಿದ. ಹದಿನಾಲ್ಕನೆಯ ಲೂಯಿ ರಾಜ್ಯಾಧಿಕಾರ ವಹಿಸುವುದಕ್ಕೆ ಮುಂಚೆ ಸೈನ್ಯಾಧಿಕಾರಿಯಾಗಿದ್ದ. ಮಸಾರೀನ್ ಮಂತ್ರಿಯಾದ ಮೇಲೆ ಅವನೊಂದಿಗೆ ಸೌಹಾರ್ದ ಬೆಳೆಸಿಕೊಂಡ.

**3. ಫಿಲಿಪ್ :** (1674–1723). ಹದಿಮೂರನೆಯ ಲೂಯಿಯ ಮೊಮ್ಮಗ. ತುಂಬ ಪ್ರತಿಭಾವಂತ, ಸಮರ್ಥ. ಆದರೆ ಸ್ವೇಚ್ಛಾಚಾರಿ, ವಿಷಯಲಂಪಟ. ಕೆಲವು ಕಾಲ ರಾಜಾಸ್ಥಾನದಲ್ಲೂ ಅವನಿಗೆ ಮಾನ್ಯತೆ ಇರಲಿಲ್ಲ. ಆದರೆ ಲೂಯಿ ಸಾಯುವುದಕ್ಕೆ ಮುಂಚೆ ಇವನನ್ನೇ ರಾಜಪ್ರತಿನಿಧಿಯನ್ನಾಗಿ (ರೀಜಂಟ್) ನೇಮಿಸಿದ (1715). ರೀಜಂಟ್ ಆದಮೇಲೆ ಅಧಿಕಾರವನ್ನೆಲ್ಲ ತನ್ನ ಹತೋಟಿಯಲ್ಲಿಟ್ಟುಕೊಂಡು ದಕ್ಷತೆಯಿಂದ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಫ್ರಾನ್ಸಿನ ಪ್ರಾಮುಖ್ಯವನ್ನು ಕಾಪಾಡಿದ.

**4. ಲೂಯಿ ಫಿಲಿಪ್ ಜೋಸೆಫ್ :** (1747–93). ತಂದೆಯ ಮರಣಾನಂತರ 1785ರಲ್ಲಿ ಡ್ಯೂಕ್ ಪದವಿಗೇರಿದ. ಅವನ ಅನೈತಿಕ ನಡತೆಯಿಂದ ದೊರೆ ಹದಿನಾರನೆಯ ಲೂಯಿಯ ಆಸ್ಥಾನದಲ್ಲಿ ಅವನಿಗೆ ಮಾನ್ಯತೆ ದೊರಕಲಿಲ್ಲ. ಆಗಾಗ್ಗೆ ಇಂಗ್ಲೆಂಡಿಗೆ ಹೋಗಿ ಅಲ್ಲಿನ ಪ್ರಿನ್ಸ್ ಆಫ್ ವೇಲ್ಸ್‌ನ ಸ್ನೇಹಿತನಾಗಿ ಕುದುರೆ ಜೂಜನ್ನು ಫ್ರೆಂಚರಿಗೂ ಪರಿಚಯ ಮಾಡಿಕೊಟ್ಟ. ಹಣಕಾಸಿನ ವಿಷಯದಲ್ಲಿ ಅತ್ಯಂತ ಧಾರಾಳಿ. ರಾಜಕೀಯದಲ್ಲಿ ಅವನ ಅಭಿಪ್ರಾಯಗಳು ತೀವ್ರ ಸುಧಾರಣಾ ನೀತಿಯವು. ಇದರಿಂದ ಆತ ರಾಜಪಕ್ಷಕ್ಕೆ ವಿರುದ್ಧವಾಗಿ ನಿಂತು ಕ್ರಾಂತಿಪಕ್ಷಕ್ಕೆ ಬೆಂಬಲ ನೀಡಿದ. ದೊರೆಗೆ ಮರಣದಂಡನೆಯಾಗಬೇಕೆಂಬ ತೀರ್ಪಿಗೆ ಒಪ್ಪಿಗೆಯಿತ್ತ. ಡ್ಯೂಕ್ ಪದವಿ, ಬಿರುದುಗಳು, ಎಲ್ಲವನ್ನೂ ತ್ಯಜಿಸಿ ಫಿಲಿಪ್ ಏಗಲೀಟೇ ಎಂಬ ಹೆಸರು ಧರಿಸಿದ. ಇಷ್ಟೆಲ್ಲ ಆಡಂಬರದ ಹಿನ್ನೆಲೆಯಲ್ಲಿ, ತಾನು ವ್ಯವಸ್ಥಾಬದ್ಧ ದೊರೆಯಾಗಿ ಅಥವಾ ರಾಜಪ್ರತಿನಿಧಿಯಾಗಿ, ಆಳಬೇಕೆಂಬ ಆಸೆಯಿದ್ದಂತೆ ತೋರುತ್ತದೆ. ಕ್ರಾಂತಿಪಕ್ಷ ಅವನ ನಿಷ್ಠೆಯ ವಿಷಯದಲ್ಲಿ ಸಂದೇಹಪಟ್ಟು ಅವನಿಗೆ 1793ರಲ್ಲಿ ಮರಣದಂಡನೆ ವಿಧಿಸಿತು.

**5. ಲೂಯಿ ಫಿಲಿಪ್, ರಾಬರ್ಟ್ :** (1869–1926). ಹುಟ್ಟಿ ಬೆಳೆದದ್ದು ಇಂಗ್ಲೆಂಡಿನಲ್ಲಿ. ವಿದ್ಯಾವಂತ. 1889ರಲ್ಲಿ ಭಾರತದಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಯಾಗಿ ಕೆಲಸ ಮಾಡಿದ. ತನ್ನ ಭೂಪರಿಶೋಧನಾನುಭವಗಳನ್ನೂ ದೇಶಾಟನದ ವಿವರಗಳನ್ನೂ ಸ್ವಾರಸ್ಯಕರವಾಗಿ ಬರೆದಿಟ್ಟಿದ್ದಾನೆ.

**6. ಸ್ಥಾನ್, ಗ್ರೀಸಿನ ಡ್ಯೂಕ್ :** (1874–1940). ಡ್ಯೂಕ್ ಆಫ್ ಛಾರ್ಟರ್ಸ್‌ನ ಮಗ. ಮೇಲೆ ಹೇಳಿದ ಲೂಯಿ ಫಿಲಿಪ್‌ನ ಮರಣಾನಂತರ ಫ್ರಾನ್ಸಿನ ಸಿಂಹಾಸನಕ್ಕೆ ಜಗಳಹೂಡಿ ದೇಶಭ್ರಷ್ಟನಾಗಿಯೇ ಕಾಲಕಳೆದ. *

**ಆರ್ವೆಲ್, ಜಾರ್ಜ್ :** 1903–50. ಎರಿಕ್ ಬ್ಲೇರ್ ಎಂಬ ಹೆಸರಿನಿಂದ ಬರೆದ ಇಂಗ್ಲಿಷ್ ಕಾದಂಬರಿಕಾರ. ಬಂಗಾಲದ ಮೋತಿಹಾರಿ ಎಂಬಲ್ಲಿ ಹುಟ್ಟಿ ಈಟನ್ನಿನಲ್ಲಿ ವಿದ್ಯಾಭ್ಯಾಸ ಮಾಡಿದ. ಬರ್ಮ ಪೋಲೀಸ್ ಪಡೆಯಲ್ಲಿದ್ದು (1922–27) ತನ್ನ ಅನುಭವಗಳನ್ನು ಬರ್ಮೀಸ್ ಡೇಸ್ ಎಂಬ ಪುಸ್ತಕದಲ್ಲಿ (1934) ವಿವರಿಸಿದ್ದಾನೆ. ಉಪಾಧ್ಯಾಯನಾಗಿ, ಪುಸ್ತಕದ ಅಂಗಡಿಯ ಕೆಲಸಗಾರನಾಗಿ, ಬಡತನದಲ್ಲಿ ಕಳೆದ ಕಾಲವನ್ನು ಡೌನ್ ಅಂಡ್ ಔಟ್ ಇನ್ ಪ್ಯಾರಿಸ್ ಅಂಡ್ ಲಂಡನ್ ಎಂಬ ಪುಸ್ತಕದಲ್ಲಿ (1933) ವರ್ಣಿಸಿದ್ದಾನೆ. 1936ರಲ್ಲಿ ಸ್ಪೇನಿನ ಅಂತರ್ಯುದ್ಧದಲ್ಲಿ ಗಾಯಗೊಂಡು ಹಾಮೇಜ್ ಟು ಕ್ಯಾಟಲೋನಿಯ ಎಂಬ ಪುಸ್ತಕ (1938) ಬರೆದ. ಎರಡನೆಯ ಮಹಾಯುದ್ಧದಲ್ಲಿ ಬ್ರಿಟಿಷ್ ರೇಡಿಯೊ ಪ್ರಸಾರಕ್ಕಾಗಿ ಕೆಲಸ ಮಾಡಿದ. ಅನಿಮಲ್ ಫಾರಂ ಎಂಬ ನಿರಂಕುಶಾಧಿಕಾರದ ವಿಡಂಬನೆಯ ಕಾದಂಬರಿ (1945) ಬರೆದ. ಇದರಲ್ಲಿ ಪ್ರಾಣಿಗಳೆಲ್ಲ ಸಮಾನ; ಆದರೆ ಕೆಲವು ಬೇರೆಯವುಗಳಿಗಿಂತ ಹೆಚ್ಚು ಸಮಾನ. ನೈನ್‌ಟೀನ್ ಎಯ್‌ಟಿಫೋರ್, ಈತನ ಮರಣಕ್ಕೆ ಸ್ವಲ್ಪ ಮುಂಚೆ ಪ್ರಕಟವಾಯಿತು. ಇದರಲ್ಲಿ ಜನರ ಮನೋವೃತ್ತಿ ನಿರಂಕುಶಾಧಿಕಾರಿಗಳಿಂದ ರೂಪಿಸಲ್ಪಟ್ಟು, ಜಗತ್ತನ್ನು ದುರಂತಕ್ಕೀಡುಮಾಡುವುದೆಂಬ ಕಾಲಭವಿಷ್ಯವನ್ನು ಚಿತ್ರಿಸಿದ್ದಾನೆ.

ಮೊದಲ ಕಾದಂಬರಿಗಳು : ಕೀಪ್ ದಿ ಆಸ್‌ಪಿಡಿಸ್ಟ್ರ ಫ್ಲೈಯಿಂಗ್ (1936), ದಿ ರೋಡ್ ಟು ವಿಗನ್ ಪಿಯರ್ (1937), ಕಮಿಂಗ್ ಆಫ್ ಫಾರ್ ಏರ್ (1939). ಪ್ರಬಂಧ ಸಂಕಲನಗಳು: ಇನ್‌ಸೈಡ್ ದಿ ವೇಲ್ (1940), ಷೂಟಿಂಗ್ ಆ್ಯನ್ ಎಲಿಫೆಂಟ್ (1950). (ಎಚ್.ವಿ.ಎಸ್.)

**ಆರ್ಷಜ್ಞಾನ :** ಅಪರೋಕ್ಷಜ್ಞಾನ (ಇನ್‌ಟ್ಯೂಷನ್). ಪ್ರತ್ಯಕ್ಷವಾದರೂ ಇಂದ್ರಿಯ ಪ್ರತ್ಯಕ್ಷವಲ್ಲ; ಹಾಗೂ ತರ್ಕದ ಪರೋಕ್ಷಜ್ಞಾನವೂ ಅಲ್ಲ; ಪ್ರತ್ಯಕ್ಷ ಅನುಮಾನ ಕ್ರಮಗಳನ್ನು ಮೀರಿದ ಅತೀಂದ್ರಿಯ ತತ್ತ್ವದ ಜ್ಞಾನ. ಇದನ್ನು ಶಬ್ದಪ್ರಮಾಣವೆಂದೂ ಆಪ್ತವಾಕ್ಯವೆಂದೂ ಭಾರತದ ಕೆಲವು ದರ್ಶನಗಳು ಕರೆಯುತ್ತವೆ. ಆರ್ಷಜ್ಞಾನ ತರ್ಕಾತೀತವಾದ್ದು. ಪಾಶ್ಚಾತ್ಯ ದರ್ಶನಗಳಲ್ಲಿ ಆರ್ಷಜ್ಞಾನದ ಪ್ರಾಶಸ್ತ್ಯವನ್ನು ಈಚೆಗೆ ಹೆಚ್ಚಾಗಿ ಮನಗಂಡವರಲ್ಲಿ ಹೆನ್ರಿ ಬರ್ಗ್‌ಸನ್ ಎಂಬ ದಾರ್ಶನಿಕ ಅತಿ ಪ್ರಮುಖ. ಇವರ ಅಭಿಪ್ರಾಯದಲ್ಲಿ ತರ್ಕಜ್ಞಾನ ವಿಜ್ಞಾನದ ಜ್ಞಾನ. ಆದರೆ ಆರ್ಷಜ್ಞಾನ ದರ್ಶನದ ಜ್ಞಾನ; ವಿಜ್ಞಾನದ ಜ್ಞಾನ ವಿಶ್ಲೇಷಣದ ಜ್ಞಾನ, ದರ್ಶನದ ಜ್ಞಾನ ಸಮನ್ವಯದ ಜ್ಞಾನ. ದಾರ್ಶನಿಕನ ಜ್ಞಾನ ಕವಿಯ ಜ್ಞಾನದಂತೆ. ವಿಜ್ಞಾನಿಗೆ ನಿಲುಕದ ಪದಾರ್ಥಜ್ಞಾನವನ್ನು ಕವಿ, ದಾರ್ಶನಿಕರು ಪಡೆಯುತ್ತಾರೆ ಎಂಬುದು ಬರ್ಗ್‌ಸನ್‌ನ ಅಭಿಪ್ರಾಯ. ತತ್ತ್ವಶಾಸ್ತ್ರದ ಜ್ಞಾನಮೀಮಾಂಸೆಯಲ್ಲಿ ಮಾತ್ರ ಆರ್ಷಜ್ಞಾನದ ವಿಮರ್ಶೆ ಬರುವುದಿಲ್ಲ. ಆಚಾರಶಾಸ್ತ್ರ, ಧರ್ಮಶಾಸ್ತ್ರಗಳಲ್ಲೂ ಇದರ ಪ್ರಸ್ತಾಪವಿದೆ. ಒಂದು ಕಾರ್ಯ ಪುಣ್ಯಕರ, ಮತ್ತೊಂದು ಕಾರ್ಯ ಪಾಪಕರ ಎಂದು ನಾವು ಹೇಗೆ ನಿರ್ಣಯಿಸುತ್ತೇವೆ ಎನ್ನುವ ಪ್ರಶ್ನೆಗೆ ಆರ್ಷಜ್ಞಾನವಾದಿಗಳು ಮನಸ್ಸಾಕ್ಷಿಯ ಸಹಾಯದಿಂದ ಎಂದು ಉತ್ತರ ಕೊಡುತ್ತಾರೆ. ಈ ರೀತಿಯ ಮನಸ್ಸಾಕ್ಷಿಯ ತತ್ತ್ವ ಆರ್ಷಜ್ಞಾನದ ಒಂದು ಛಾಯೆ ಎಂದು ಹೇಳಬಹುದು. ಋಷಿ ಮಂತ್ರದ್ರಷ್ಟಾರ, ಕವಿ ಕ್ರಾಂತದರ್ಶಿ ಎನ್ನುವ ಮಾತುಗಳೂ ಆರ್ಷಜ್ಞಾನವಾದ ರೂಪಾಂತರಗಳಿವೆ. (ಎಂ.ವೈ.)

**ಆರ್ಷೇಯ ಯುಗ :** ಸುಮಾರು 600 ದಶಲಕ್ಷ ವರ್ಷಗಳಿಗಿಂತ ಹಿಂದಿನ ಕಾಲಕ್ಕೆ ಭೂವಿಜ್ಞಾನದ ಕಾಲಪಟ್ಟಿಯಲ್ಲಿ ಇರುವ ಹೆಸರು (ಆರ್ಕೀಯನ್ ಇರ). ಆರ್ಕೀಯನ್ ಪದ ಶಿಲಾಸಮುದಾಯದ ಅತಿ ಪ್ರಾಚೀನಕಾಲಕ್ಕೆ ಅನ್ವಯಿಸುತ್ತದೆ. ಅಲ್ಲದೆ ಇದು ಬಹುವಚನ

ದಲ್ಲಿ (ಆರ್ಕೀಯನ್ಸ್) ಆ ಕಾಲದ ಶಿಲಾಸಮೂಹಗಳಿಗೂ ರೂಢಿಯಿಂದ ಅನ್ವಯವಾಗುತ್ತದೆ. ಈ ಪದ ಗ್ರೀಕ್ ಭಾಷೆಯ ಆರ್ಕೀಯ್ಸ್ (ಪುರಾತನ) ಮತ್ತು ಆರ್ಕಿ (ಆರಂಭ) ಎಂಬ ಮೂಲಶಬ್ದಗಳಿಂದ ನಿಷ್ಪನ್ನವಾಗಿದೆ. ಉತ್ತರ ಅಮೆರಿಕದ ಸುಪೀರಿಯರ್ ಸರೋವರದ ಸುತ್ತಮುತ್ತಲ ಅಥವಾ ಕೆನೇಡಿಯನ್ ಶೀಲ್ಡ್ ಪ್ರದೇಶದ ಕೇಂಬ್ರಿಯನ್ ಶಿಲಾಸ್ತೋಮಗಳಿಗಿಂತ ಹಿಂದಿನ ಶಿಲಾಸಮೂಹಗಳನ್ನು ಗುರುತಿಸಲು ಈ ಪದವನ್ನು ಮೊತ್ತಮೊದಲು ಬಳಸಿದರು (ಜೆ. ಡಿ. ನಾನಾ, 1872). ಈ ಸಮುದಾಯದಲ್ಲಿ ಶೀಣಿ ಕಲ್ಲುಗಳು (ಗ್ರಾನೈಟಿಕ್ ನೈಸಸ್) ಸ್ಫಟಿಕೀಕರಿಸಿದ ಪದರುಶಿಲೆಗಳು (ಕ್ರಿಸ್ಟಲೈನ್ ಷಿಸ್ಟ್) ಮಾರ್ಪಟ್ಟ ಪ್ರಸ್ತರೀ ಶಿಲೆಗಳು (ಮೆಟ ಸೆಡಿಮೆಂಟ್ಸ್), ರೂಪಾಂತರಗೊಳ್ಳದ ಜೀವಾವಶೇಷವಿಲ್ಲದ ಶಿಲೆಗಳು; ಮತ್ತು ಭೂಗರ್ಭದಿಂದ ಹೊರಬಂದ ಕಣಶಿಲೆ (ಎರಪ್ಟಿವ್ ಗ್ರಾನೈಟ್) ಇವು ಸೇರಿದ್ದುವು. ಮುಂದೆ 1875ರಲ್ಲಿ, ಆರ್ಕೀಯನ್ ಪದವನ್ನು ಅತಿ ಮಡಿಕೆ ಬಿದ್ದು ಹೆಚ್ಚು ರೂಪಾಂತರಗೊಂಡ ಪದರ ಶಿಲೆಗಳು ಮತ್ತು ಶೀಣಿಕಲ್ಲುಗಳ ಸಮೂಹಕ್ಕೆ ಮಾತ್ರ ಡಾನಾ ಅನ್ವಯಿಸಿದ. ಅವುಗಳ ಮೇಲ್ಪದರವಾಗಿ ಅವಸಾದನ ವಿಳಂಬನದಿಂದ (ಸ್ಟ್ರಾಟಿಗ್ರಾಫಿಕ್ ಬ್ರೇಕ್) ಕೂಡಿದ್ದು ಜೀವಾವಶೇಷಗಳಿಲ್ಲದ ಮತ್ತು ಅಷ್ಟು ರೂಪಾಂತರ ಹೊಂದದೆ ಇರುವ ಶಿಲಾಪದರಗಳನ್ನು ಪ್ರತ್ಯೇಕಿಸಿದೆ. ಅಲ್ಲಿಂದೀಚೆಗೆ ಆರ್ಕೀಯನ್ ಪದದ ನಿರೂಪಣೆ ಮತ್ತೆ ಕೆಲವು ಬದಲಾವಣೆಗಳನ್ನು ಹೊಂದುತ್ತ ಬಂದಿದೆ. ಅಮೆರಿಕ ಸಂಯುಕ್ತಸಂಸ್ಥಾನಗಳ ಮತ್ತು ಕೆನಡದ ಭೂಶಾಸ್ತ್ರಜ್ಞರಲ್ಲಿ ಯಾವ ಸ್ತೋಮಗಳಿಗೆ ಆರ್ಕೀಯನ್ ಅಥವಾ ಆರ್ಷೇಯ ಪದ ನಿಖರವಾಗಿ ಅನ್ವಯಿಸುವುದೆಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

**ಘಟಕ ಶಿಲಾಸಮೂಹಗಳು (ಕಾಂಪೊನೆಂಟ್ ರಾಕ್ಸ್) :** ಕನೇಡಿಯನ್ ಶೀಲ್ಡಿನ ಶಿಲಾಸಮೂಹಗಳ ಖಚಿತ ಪರಿಶೋಧನೆಗಳಿಂದ ಅವು ವಿವಿಧ ಪದರುಶಿಲೆಗಳು, ಕಣಶಿಲೆ ಯಂಥ ಶೀಣಿಕಲ್ಲುಗಳು ಮತ್ತು ಕಣಶಿಲೆಗಳನ್ನು ಒಳಗೊಂಡಿವೆ ಎಂದು ಕಂಡುಬಂದಿದೆ. ವಿವಿಧ ಜ್ವಾಲಾಮುಖಿಜ ಶಿಲೆಗಳು ಮತ್ತು ಪ್ರಸ್ತರೀ ಶಿಲೆಗಳು ಅಧಿಕ ರೂಪಾಂತರ ಹೊಂದಿ



ಚಿತ್ರ 1. ಪಾಂಡವಪುರದ ಸಮೀಪದ ಬ್ಯಾಡರಹಳ್ಳಿಯ ಬಳಿಯಲ್ಲಿನ ಧಾರವಾಡದ ಬೆಣಚುಶಿಲೆಯ (ಕ್ವಾರ್ಟ್ಸೈಟ್) ಅತಿ ಒತ್ತಾದ (ಕ್ಲೋಸ್‌ಫೋಲ್ಡ್) ಮಡಿಕೆ ಮತ್ತು ಬಿರುಕುಗಳು (ಫ್ರಾಕ್ಚರ್ಸ್)

ಪದರುಶಿಲೆಗಳಾದುವೆಂದೂ ಮುಂಚೆಯಿಂದಿದ್ದ ವಿವಿಧ ಶಿಲೆಗಳು ರೂಪಾಂತರಹೊಂದಿ ಕಣಶಿಲೆಯಂಥ ಶೀಣಿಕಲ್ಲುಗಳು ಆದುವೆಂದೂ ತೋರಿಬಂದಿದೆ. ಇವುಗಳ ಜೊತೆಯಲ್ಲಿರುವ ನಿರ್ದಿಷ್ಟ ಕಣಶಿಲೆಗಳು, ಭೂಗರ್ಭದಲ್ಲಿ ಜನಿಸಿ ಮೈಲ್ಪ್ರೆಯ ಶಿಲೆಗಳನ್ನೂ ಶೀಣಿಕಲ್ಲುಗಳನ್ನೂ ಒಳಹೊಕ್ಕಿರುವುದು ಖಚಿತವಾಗಿದೆ. ಈ ಪ್ರದೇಶದ ಆರ್ಷೇಯ ಶಿಲಾಸ್ತೋಮಗಳನ್ನು ಕೀವಾಟನ್ ಪದರು ಶಿಲೆಗಳು ಮತ್ತು ಲಾರೆನ್‌ಷಿಯನ್ ಗ್ರಾನೈಟ್ ಎಂದು ಎರಡು ವರ್ಗಗಳಾಗಿ ವಿಭಾಗಿಸಲಾಗಿದೆ.

ಕೆನೇಡಿಯನ್ ಶೀಲ್ಡಿನ ಶಿಲಾವರ್ಗಗಳನ್ನು ಹೋಲುವ ಶಿಲಾಸ್ತೋಮಗಳು ಉತ್ತರ ಅಮೆರಿಕದಲ್ಲಿ ಲ್ಯಾಬ್ರಡಾರ್ ದ್ವೀಪ, ಕೊಲರ್‍ಯಾಡೋ ನದಿಯ ತಳಭಾಗ ಮತ್ತು ಇನ್ನೂ ಕೆಲವು ಪ್ರದೇಶಗಳಲ್ಲಿಯೂ ದಕ್ಷಿಣ ಅಮೆರಿಕ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಮಧ್ಯಯುರೋಪಿನ ಬಾಲ್ಟಿಕ್ ಪ್ರದೇಶ, ಭಾರತ ಮತ್ತು ಪ್ರಪಂಚದ ಇನ್ನೂ ಕೆಲವು ಭಾಗಗಳಲ್ಲಿಯೂ ಕಂಡುಬಂದಿದೆ.

**ಭಾರತದಲ್ಲಿ ಆರ್ಷೇಯ ಶಿಲಾವರ್ಗಗಳು :** ಕನೇಡಿಯನ್ ಶೀಲ್ಡಿನ ಆರ್ಷೇಯ ಶಿಲೆಗಳನ್ನು ಹೋಲುವ ಪದರುಶಿಲೆಗಳು, ಶೀಣಿಕಲ್ಲುಗಳು ಮತ್ತು ಕಣಶಿಲೆಗಳು ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ಪ್ರಮಾಣಗಳ ತುಕಡಿಗಳಾಗಿ ಹರಡಿರುತ್ತವೆ. ಆರ್ಷೇಯ ಶಿಲಾಸ್ತೋಮಗಳು ದಕ್ಷಿಣ ಭಾರತದ ಹೆಚ್ಚುಭಾಗ ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ ಮತ್ತು ಒರಿಸ್ಸ ಪೂರ್ವಘಟ್ಟಗಳು ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳಲ್ಲೆಲ್ಲ ಹರಡಿವೆ. ಈ ಪ್ರದೇಶಗಳ ಆರ್ಷೇಯ ಶಿಲಾಸ್ತೋಮಗಳ ಒಟ್ಟು ವಿಸ್ತೀರ್ಣ ಸು 46632 ಚ.ಕಿಮೀ.




ಚಿತ್ರ 2. ಬೆಂಗಳೂರು ಸಮೀಪದ ಮೌಂಟ್ ಜಾಯ್ ಬಳಿಯಲ್ಲಿನ ಧಾರವಾಡವರ್ಗದ ಕಪ್ಪುಹಾರ್ನ್‌ಬ್ಲೆಂಡ್ ಶಿಲೆಯನ್ನು (ಡಾರ್ಕ್ ಹಾರ್ನ್‌ಬ್ಲೆಂಡ್ ಶಿಷ್ಟ್) ಭೇದಿಸಿ ಒಳನುಗ್ಗಿರುವ ತುಂಡುಗಳು.

ಉತ್ತರ ಅಕ್ಷಾಂಶ $16^0$ಯಿಂದ ಕೆಳಗೆ ದಕ್ಷಿಣ ಭಾರತದ ಹೆಚ್ಚು ಭಾಗ ಆರ್ಷೇಯ ಶಿಲೆಗಳನ್ನು ಒಳಗೊಂಡಿದೆ. ಭಾರತ ಭೂಶೋಧನ ಶಾಖೆ 1857ರಲ್ಲಿ ಸ್ಥಾಪಿತವಾದ ಅನಂತರ ಕೆಲವು ವರ್ಷಗಳವರೆಗೂ ದಕ್ಷಿಣ ಭಾರತದ ಆರ್ಷೇಯ ಶಿಲೆಗಳನ್ನು ವಿಭಾಗಿಸದೆ ಎಲ್ಲವನ್ನೂ ಒಟ್ಟುಗೂಡಿಸಿ ಪ್ರಾಚೀನ ಶಿಲಾಜಾಲವೆಂದು ಮೂಲಭೂತ ನಕಾಸೆಗಳಲ್ಲಿ ತೋರಿಸುತ್ತಿದ್ದರು. 1875ರಲ್ಲಿ ಬ್ರೂಸ್‌ಫುಟ್ ಆಗಿನ ದಕ್ಷಿಣ ಮಹಾರಾಷ್ಟ್ರ ಪ್ರದೇಶದಲ್ಲಿ ಶಿಲಾಸ್ತೋಮ ಪರಿಶೋಧನೆ ನಡೆಸಿ ನಕ್ಷೆಯನ್ನು ತಯಾರಿಸುತ್ತಿದ್ದಾಗ ಅಲ್ಲಿನ ಆರ್ಷೇಯ ಶಿಲಾಸ್ತೋಮಜಾಲದಿಂದ ವಿವಿಧ ಪದರುಶಿಲೆಗಳ ಸಮೂಹವನ್ನು ಬೇರ್ಪಡಿಸಿ ಅವುಗಳನ್ನು ಪ್ರತ್ಯೇಕ ವರ್ಗವಾಗಿ ವಿಂಗಡಿಸಿದ. ಈ ಪದರು ಶಿಲೆಗಳು ಧಾರವಾಡ ಪ್ರದೇಶದಲ್ಲಿ ಹರಡಿರುವುದು ಕಂಡುಬಂದಿರುವುದರಿಂದ, ಆ ಶಿಲಾಸ್ತೋಮಕ್ಕೆ ಧಾರವಾಡ ವರ್ಗ ಎಂದು ಹೆಸರುಕೊಟ್ಟ. ಧಾರವಾಡ ಪದರು ಶಿಲೆಗಳು ಎಂದೂ ಇದನ್ನು ಕರೆಯುತ್ತಾರೆ. 1895ರಲ್ಲಿ ಪದರುಶಿಲೆಗಳ ಜೊತೆಯಲ್ಲಿರುವ ಕಣಶಿಲೆಯಂಥ ಶೀಣಿಕಲ್ಲುಗಳನ್ನೂ ಕಣಶಿಲೆಗಳನ್ನೂ ಒಟ್ಟುಗೂಡಿಸಿ ಆ ವರ್ಗಕ್ಕೆ ಆರ್ಷೇಯ ಪದವನ್ನು ಫುಟ್ ಉಪಯೋಗಿಸಿದ. ಈತ ಪ್ರಯೋಗಿಸಿದ ಆರ್ಷೇಯ ಪದ ಕಣಶಿಲೆಯಂಥ ಶೀಣಿಕಲ್ಲುಗಳಿಗೆ ಮತ್ತು ಕಣಶಿಲೆಗಳಿಗೆ ಮಾತ್ರ ಅನ್ವಯಿಸಿದ್ದಿತು. 1906ರಲ್ಲಿ ಹಾಲೆಂಡನು ಉತ್ತರ ಅಮೆರಿಕದಲ್ಲಿರುವ ಸುಪೀರಿಯರ್ ಸರೋವರ ಪ್ರದೇಶದ ಹ್ಯುರೋನಿಯನ್ ಶಿಲಾವರ್ಗಕ್ಕೆ ಹೋಲಬಹುದಾದ ಧಾರವಾಡದ ವರ್ಗಕ್ಕೂ ಜೀವಾವಶೇಷವಿಲ್ಲದ, ರೂಪಾಂತರ ಹೊಂದದ, ದ್ವೀಪಕಲ್ಪ ಭಾಗದಲ್ಲಿರುವ ಕಡಪ, ಕರ್ನೂಲ್, ವಿಂಧ್ಯ ಮುಂತಾದ ಪ್ರಸ್ತರೀ ಶಿಲಾವರ್ಗಗಳಿಗೂ ಆಗಾಧ ಅವಸಾಧನ ವಿಳಂಬನವಿರುವುದನ್ನು ಗಮನಕ್ಕೆ ತಂದು ಆರ್ಷೇಯ ಪದವನ್ನು ಧಾರವಾಡ ವರ್ಗಕ್ಕೂ ಅನ್ವಯಿಸಬೇಕೆಂದು ವಾದಿಸಿದ. ಈ ಅಭಿಪ್ರಾಯವನ್ನು ಫರ್‌ಮರ್ ಮುಂತಾದ ಭೂ ವಿಜ್ಞಾನಿಗಳೂ ಅಂಗೀಕರಿಸಿದರು. ಆದುದರಿಂದ ಈಗ ಆರ್ಷೇಯ ಗುಂಪಿನಲ್ಲಿ ಕಣಶಿಲೆಗಳು ಮತ್ತು ಕಣಶಿಲೆಯಂಥ ಶೀಣಿಕಲ್ಲುಗಳೂ ಅಲ್ಲದೆ, ಧಾರವಾಡ ಶಿಲಾಸ್ತೋಮಗಳೂ ಸೇರಿವೆ.

ಆರ್ಷೇಯ ಶಿಲಾಸ್ತೋಮಗಳು ಕರ್ನಾಟಕ ರಾಜ್ಯದಲ್ಲಿ ಅಧಿಕವಾಗಿವೆ. ಈ ರಾಜ್ಯದಲ್ಲಿ ಧಾರವಾಡ ಪದರುಶಿಲೆಗಳು ಉತ್ತರ–ದಕ್ಷಿಣವಾಗಿ ಮತ್ತು ಉತ್ತರ–ವಾಯುವ್ಯ, ದಕ್ಷಿಣ–ಆಗ್ನೇಯ ಮುಖವಾಗಿ ಸುಮಾರು 7–8 ಪಟ್ಟಿಗಳಂತೆ ಹಬ್ಬಿವೆ. ಈ ಪಟ್ಟಿಗಳಲ್ಲಿ ಅತಿ ದೊಡ್ಡವು ಉದ್ದದಲ್ಲಿ 400 ಕಿಮೀಗಳ ಮೇಲ್ಪಟ್ಟೂ ಅಗಲದಲ್ಲಿ 15–30 ಕಿಮೀಗಳವರೆಗೂ ಇರುತ್ತವೆ. ಈಗಿನ ಕರ್ನಾಟಕ ರಾಜ್ಯದಲ್ಲಿ 150259 ಚ.ಕಿ.ಮೀ. ಪ್ರದೇಶಗಳಲ್ಲಿ ಧಾರವಾಡ 129533 ಚಕಿಮೀ ಪದರುಶಿಲೆಗಳಿವೆ. ಉಳಿದ 129495 ಚ.ಕಿಮೀ ಪ್ರದೇಶ ಕಣಶಿಲೆ

ಮತ್ತು ಪದರುಕಣಶಿಲೆಗಳಿಂದ ಕೂಡಿದೆ. ಕರ್ನಾಟಕದಲ್ಲಿ ಧಾರವಾಡ ವರ್ಗವನ್ನು ಮೇಲು, ಮಧ್ಯ ಮತ್ತು ತಳಭಾಗಗಳೆಂದು 3 ವಿಭಾಗಗಳಾಗಿ ವಿಂಗಡಿಸಿದೆ. ಸೂಕ್ಷ್ಮವಾಗಿ ಮೇಲೆ ವಿವರಿಸಿರುವ ಕರ್ನಾಟಕ ರಾಜ್ಯದ ಆರ್ಷೇಯ ಶಿಲಾಸ್ತೋಮಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಹೋಲುವ ಆರ್ಷೇಯ ಶಿಲಾಸಮೂಹಗಳು ರಾಜಸ್ಥಾನದ ಕೆಲವೆಡೆಗಳಲ್ಲಿವೆ. ಅಲ್ಲಿನ ಪದರು ಶಿಲಾಸ್ತೋಮದ ಹೆಸರು ಅರಾವಳೀ ವರ್ಗ. ಈ ಪದರುಶಿಲೆಗಳ ತಳದಲ್ಲಿರುವ ಕಣಶಿಲೆ ಮತ್ತು ಶೀಣಿಕಲ್ಲುಗಳನ್ನು ಪಟ್ಟೆ ಆಕೃತಿಯ ನೈಸ್ ಮತ್ತು ಬುಂದೇಲ್ ಖಂಡ ನೈಸ್ ಎಂದು ಕರೆದಿದೆ. ಇವು ಮುಖ್ಯವಾಗಿ ಜೇಡಿಮಣ್ಣಿನ ರೂಪಾಂತರಗಳು. ಇವುಗಳೊಂದಿಗೆ ಬೆಣಚು ಪದರುಶಿಲೆಗಳು ರೂಪಾಂತರಿಸಿದ ಸುಣ್ಣಕಲ್ಲುಗಳು ಮತ್ತು ಇತರ ವಿಧದ ಪ್ರಸ್ತರೀ ಶಿಲೆಗಳೂ ಸೇರಿವೆ.




ಚಿತ್ರ 3. ಕೃಷ್ಣರಾಜಪೇಟೆಯ ಕೆರೆಯ ಕೋಡಿಯಲ್ಲಿ ಕಪ್ಪು ಹಾರ್ನ್‌ಬ್ಲೆಂಡ್ ಪದರುಶಿಲೆ ಮತ್ತು ಕಣಶಿಲೆಗಳು ಸಮಾನಾಂತರವಾಗಿ ಮಡಿಕೆಗೊಂಡು ಪಟ್ಟೆ ಆಕೃತಿಯ (ಬ್ಯಾಂಡೆಡ್) ನೈಸ್ ಆಗಿರುವುದು.

ಮಧ್ಯಪ್ರದೇಶದಲ್ಲಿ ಪದರಶಿಲಾಸ್ತೋಮಗಳು ಪೂರ್ವ–ಈಶಾನ್ಯ, ಪಶ್ಚಿಮ–ನೈಋತ್ಯ ಮುಖವಾಗಿ ಹರಡಿವೆ. ಈ ಶಿಲಾಸ್ತೋಮಗಳನ್ನು ಪಶ್ಚಿಮ ಭಾಗದಲ್ಲಿ ಸಾಸರ್ ಮತ್ತು ಸಕೋಲಿ ಶ್ರೇಣಿಗಳೆಂದೂ ಪೂರ್ವಭಾಗದಲ್ಲಿ ಸೋಣವಾಣಿ ಮತ್ತು ಚಿಲ್ಪಿಘಟ್ಟಶ್ರೇಣಿಗಳು ಎಂದೂ ಕರೆದಿದೆ. ಇದು ಉತ್ತರದ ಮತ್ತು ದಕ್ಷಿಣದ ಎರಡು ಪಟ್ಟೆಗಳಾಗಿ ವಿಭಾಗವಾಗಿದೆ. ಉತ್ತರ ಪಟ್ಟೆ ನಾಗಪುರ, ಚಿಂದವಾರ ಮತ್ತು ಬಾಲಘಾಟ ಜಿಲ್ಲೆಗಳಲ್ಲಿ ಪ್ರಸರಿಸಿರುತ್ತದೆಯಲ್ಲದೆ ಅದು ಇಲ್ಲಿ ಹೆಚ್ಚು ರೂಪಾಂತರಿಸಿದ ಸಾಸರ್ ಶ್ರೇಣಿಯನ್ನು ಒಳಗೊಂಡಿದೆ. ದಕ್ಷಿಣಪಟ್ಟೆ ಸಾಸರ್ ಮತ್ತು ಸಕೋಲೆ ಶ್ರೇಣಿಗಳೆರಡನ್ನೂ ಒಳಗೊಂಡು, ನಾಗಪುರ ಮತ್ತು ಭಂಡಾರ ಜಿಲ್ಲೆಗಳ ದಕ್ಷಿಣಭಾಗದಲ್ಲಿ ಪ್ರಸರಿಸಿದೆ. ಈ ಪ್ರದೇಶದಲ್ಲಿ ಪದರುಶಿಲಾ ಶ್ರೇಣಿಗಳು ಹೆಚ್ಚು ರೂಪಾಂತರಿಸಿಲ್ಲ. ಕಣಶಿಲೆ ಮತ್ತು ಶೀಣಿಕಲ್ಲುಗಳನ್ನು ಹಿರಿಯ ಪಟ್ಟೆರೂಪದ ನೈಸ್‌ಗಳೆಂದೂ ಕಿರಿಯ ಆಮ್ಲ ಕಣಶಿಲೆಗಳೆಂದೂ ಎರಡು ಗುಂಪಾಗಿ ವಿಭಾಗಿಸಿದೆ.

ಮಧ್ಯಪ್ರದೇಶದ ಉತ್ತರ ಮತ್ತು ದಕ್ಷಿಣ ವಿಭಾಗದ ಪದರ ಶಿಲಾಪಟ್ಟೆಗಳು ಪೂರ್ವಾಭಿಮುಖವಾಗಿ ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಮುಂದುವರಿದಿವೆ. ಉತ್ತರ ವಿಭಾಗದ ಪಟ್ಟೆಗೆ ಶೋಣಾನದಿ ಕಣಿವೆಯ ಮತ್ತು ಹಜಾರಿಬಾಗ ಗಯಾಮಾಂಘಿರ್ ಪ್ರದೇಶಗಳ ಬಾಹ್ಯಶಿಲಾಸ್ತರಗಳು ಸೇರಿವೆ. ದಕ್ಷಿಣ ವಿಭಾಗದ ಪಟ್ಟೆಯ ಪೂರ್ವಾಭಿಮುಖ ಮುಂದೆಳೆಯಲ್ಲಿ ಸಿಂಗಭೂಮ್ ಕಿಯೋಂಝಾರ್ ಬೊನಾಯ್ ಮಯೂರ್‌ಬಂಜ್ ಪ್ರದೇಶಗಳ ಆರ್ಷೇಯ ಶಿಲಾಸ್ತೋಮಗಳಿವೆ. ಇವುಗಳನ್ನು ಕೊಲಾನ್‌ಶ್ರೇಣಿ, ಕಬ್ಬಿಣ ಅದಿರು ಶ್ರೇಣಿ ಮತ್ತು ಪ್ರಾಚೀನ ರೂಪಾಂತರ ಶಿಲೆಗಳು ಎಂದು ಮೂರು ವಿಭಾಗಮಾಡಿದೆ. ಇವುಗಳಲ್ಲಿ ಪ್ರಾಚೀನ ರೂಪಾಂತರ ಶಿಲಾಸ್ತೋಮ ಅತ್ಯಂತ ಹಿರಿಯದು. ಈ ಪ್ರದೇಶ ಕಣಶಿಲೆ ಮತ್ತು ಕಣಶಿಲಾರೂಪದ ಶೀಣಿಕಲ್ಲುಗಳು (ಡೋಮ್ ನೈಸ್) ಮತ್ತು ಛೋಟಾನಾಗಪುರ ಕಣಶಿಲಾ ನೈಸ್ ಎಂದು ಎರಡು ವಿಭಾಗಗಳಾಗಿ ಹೆಸರುಗೊಂಡಿವೆ. ಇಲ್ಲಿನ ರಾಂಚಿ ಕಣಶಿಲೆಗಳು ಉತ್ತರ ಮತ್ತು ದಕ್ಷಿಣ ಪದರುಶಿಲಾಪಟ್ಟೆಗಳ ಮಧ್ಯದಲ್ಲಿ ಹೊರಬಂದು ಅವುಗಳನ್ನು ಪ್ರತ್ಯೇಕಿಸಿರುತ್ತವೆ.

ಪೂರ್ವಘಟ್ಟಗಳ ಆರ್ಷೇಯ ಶಿಲಾಸ್ತೋಮಗಳು ಹೆಚ್ಚು ರೂಪಾಂತರಿಸಿದ ಪದರುಶಿಲೆಗಳನ್ನು ಒಳಗೊಂಡಿವೆ. ಈ ಶಿಲಾಸ್ತೋಮದ ಹೆಸರು ಖಾಂಡ್‌ಲೈಟ್ಸ್, ಹೈಪರ್‌ಸ್ತೀನ್ ಗ್ರಾನುಲೈಟ್ ಅಥವಾ ಚಾರ್ನಕೈಟ್ ಎಂಬ ಶಿಲೆಗಳಿಂದಲೂ ಮತ್ತು ಕೆಲವು ಪದರುಶಿಲೆಗಳ (ಕ್ವಾಟ್ಸೈಟ್ಸ್) ಗುಂಪಿಗೆ ಸೇರಿ ಸಿಲಿನುನೈಟ್, ಗ್ರಾಫೈಟ್ ಗಾರ್ನೆಟ್ಸ್ ಮತ್ತು ಕಲ್ಮಷ ಮರಳು ಕಲ್ಲುಗಳು ಇವನ್ನೂ ಉಷ್ಣ ರೂಪಾಂತರವಾಗುವಾಗ ಉತ್ಪನ್ನವಾಗುವ ಇತರ ಖನಿಜಗಳನ್ನೂ ಒಳಗೊಂಡಿವೆ. ಇವು ಅರಾವಳೀ ಪದರುಶಿಲೆಗಳಂತೆ ಘಟ್ಟಪ್ರದೇಶದ ಪೂರ್ವಭಾಗದಲ್ಲಿ ಈಶಾನ್ಯ ನೈಋತ್ಯಾಭಿಮುಖವಾಗಿವೆ; ಅದಕ್ಕೆ ಪಶ್ಚಿಮಭಾಗದಲ್ಲಿ ವಾಯವ್ಯ–ಆಗ್ನೇಯಾಭಿಮುಖವಾಗಿ ಹರಡಿವೆ. ಇತರ ಆರ್ಷೇಯ ಪ್ರದೇಶಗಳಂತೆ ಇಲ್ಲಿಯ ಪದರುಶಿಲೆಗಳೂ ಕಣಶಿಲೆ ಮತ್ತು ಶೀಣಿಕಲ್ಲುಗಳೊಂದಿಗೆ ಕೂಡಿವೆ.

ಮೇಲೆ ಸೂಕ್ಷ್ಮವಾಗಿ ವಿವರಿಸಿರುವ ಖಾಂಡಲೈಟ್ ಪದರುಶಿಲೆಗಳು ನೈಋತ್ಯಾಭಿಮುಖವಾಗಿ ಮುಂದುವರಿದು ಆಂಧ್ರಪ್ರದೇಶದ ಪೂರ್ವಘಟ್ಟಗಳಲ್ಲಿ ಇದುವರೆಗೆ ಬೇರೆ ಹೆಸರಿನಿಂದ ಕರೆಯಲ್ಪಟ್ಟಿದ್ದ ಬೆಜವಾಡ ನೈಸ್ ಆಗಿ ಪರಿಣಮಿಸಿವೆ. ಇವುಗಳೊಂದಿಗೆ ಕಣಶಿಲೆಗಳು, ಶೀಣಿಕಲ್ಲುಗಳು ಮತ್ತು ಪೆಗ್ಮಟೈಟ್‌ಗಳು ಬೆರೆತಿವೆ. ಅವುಗಳನ್ನು ಸಾಧಾರಣವಾಗಿ ನೆಲ್ಲೂರು ಪೆಗ್ಮಟೈಟ್ಸ್ ಎಂದು ಕರೆಯುವುದು ರೂಢಿ.

ಮೇಲೆ ವಿವರಿಸಿರುವ ಬೇರೆ ಬೇರೆ ಆರ್ಷೇಯ ಪ್ರದೇಶಗಳ ಪದರುಶಿಲೆಗಳನ್ನೂ ಅವುಗಳೊಂದಿಗಿರುವ ಕಣಶಿಲೆ ಮತ್ತು ಶೀಣಿಕಲ್ಲುಗಳನ್ನೂ ವಿಭಾಗಿಸಿ ಒಂದು ಪ್ರದೇಶದ ಆರ್ಷೇಯ ಶಿಲೆಗಳನ್ನು ಮತ್ತೊಂದು ಪ್ರದೇಶದ ಆರ್ಷೇಯ ಶಿಲೆಗಳೊಂದಿಗೆ ಪರಸ್ಪರ ಸಂಬಂಧ ಏರ್ಪಡಿಸಿ ಸರಿತೂಗಿಸುವುದು ಈಗಿರುವ ಖಚಿತ ಪ್ರಮಾಣಗಳ ಅಭಾವದಿಂದ ಕಷ್ಟತರವಾಗಿದೆ. 1936ರಲ್ಲಿ ಫರ್ಮನ್ ಭಾರತ ಪ್ರದೇಶಗಳ ಪದರುಶಿಲೆಗಳ ಪರಸ್ಪರ ಸಂಬಂಧವೇರ್ಪಡಿಸಲು 8 ವಿವಿಧ ಪ್ರಮಾಣದ ಆಧಾರಗಳಿಂದ ಪ್ರಯತ್ನಿಸಿದ. ಈ



1. ದಕ್ಷಿಣ ಭಾರತದ (ಧಾರವಾಡ ವರ್ಗ), 2. ರಾಜಾಸ್ಥಾನ (ಅರಾವಳಿ ವರ್ಗ), 3. ಮಧ್ಯ ಪ್ರದೇಶ, 4 ಬಿಹಾರ್ ಮತ್ತು ಒರಿಸ್ಸ (ಕೊಲ್ಹನ್, ಕಬ್ಬಿಣದ ಅದಿರು ಶ್ರೇಣಿಗಳು ಮತ್ತು ಇತರ ರೂಪಪರಿವರ್ತನಗುಣದ ಶಿಲೆಗಳು), 5. ಪೂರ್ವ ಘಟ್ಟಗಳು (ಖಾಂಡಲೈಟುಗಳು).

ಪ್ರಮಾಣಗಳಲ್ಲಿ ಶಿಲೋತ್ಪತ್ತಿಯ ಖಚಿತಕಾಲವನ್ನು ಕಂಡುಹಿಡಿಯಲು ಈಚೆಗೆ ಬಂದಿರುವ ವಿಕಿರಣ ನಿರ್ದಿಷ್ಟಕಾಲಮಾಪಕ ಪದ್ಧತಿಗಳೂ (ರೇಡಿಯೊಮೆಟ್ರಿಕ್ ಡಿಟರ್ಮಿನೇಷನ್ ಆಫ್ ಆ್ಯಬ್ಸಲ್ಯೂಟ್ ಏಜಸ್) ಯುರೇನಿಯಂ ಮತ್ತು ಹೀಲಿಯಂ ಪದ್ಧತಿಗಳೂ ಸೇರಿವೆ. ಇವರ ಪ್ರಯತ್ನಗಳಲ್ಲದೆ ಇನ್ನೂ ಅನೇಕ ಭೂವಿಜ್ಞಾನಿಗಳು ಆರ್ಷೇಯ ಶಿಲೆಗಳ ಪರಸ್ಪರ ಸಂಬಂಧವೇರ್ಪಡಿಸಲು ಪ್ರಯತ್ನಪಟ್ಟಿರುತ್ತಾರೆ. ಆದರೂ ಅವರ ಹೇಳಿಕೆಗಳಲ್ಲಿ ಇನ್ನೂ ಭಿನ್ನಾಭಿಪ್ರಾಯಗಳಿರುವುದರಿಂದ ಈ ಶಿಲಾಸ್ತೋಮಗಳ ಪರಸ್ಪರ ಸಂಬಂಧವನ್ನು ಇದುವರೆಗೆ ಏರ್ಪಡಿಸಿರುವುದು ನಿರ್ದಿಷ್ಟವಾಗಿಲ್ಲವಾಗಿ ಈ ಹೇಳಿಕೆಗಳನ್ನು ನಿಸ್ಸಂದೇಹವಾಗಿ ಅಂಗೀಕರಿಸಲಾಗಿಲ್ಲ.

ವಿಕಿರಣ ನಿರ್ದಿಷ್ಟಕಾಲಮಾಪಕ ಪ್ರಯೋಗಗಳಿಂದ ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿರುವ ಆರ್ಷೇಯ ಶಿಲೆಗಳು ರೂಪುಗೊಂಡ ಖಚಿತ ಕಾಲ ಪ್ರಮಾಣವನ್ನು ಕಂಡುಹಿಡಿಯುವುದು ಈಗ ಸುಮಾರು 80–100 ವರ್ಷಗಳಿಂದೀಚೆಗೆ ಒಳಗೊಂಡು, ಪ್ರೀಕೇಂಬ್ರಿಯನ್ ಶಿಲಾವರ್ಗಗಳ ಜನನ ಕಾಲಗಳು ಸು 600 ದಶಲಕ್ಷ ವರ್ಷಗಳ ಹಿಂದಿನಿಂದ 3,000 ದಶಲಕ್ಷ ವರ್ಷಗಳವರೆಗೂ ವ್ಯಾಪಿಸಿರುವುದಾಗಿ ತಿಳಿದುಬರುತ್ತದೆ. ಭಾರತದ ಆರ್ಷೇಯ ಶಿಲೆಗಳ ಪೈಕಿ ಕೇವಲ ಕೆಲವದರ ಕಾಲಪ್ರಮಾಣಗಳನ್ನು ಮಾತ್ರ ನಿರ್ಧರಿಸಲಾಗಿದೆ. ಈ ನಿರ್ಧಾರಗಳು ನಿರ್ದಿಷ್ಟವಾಗಿ ಜನನಕಾಲ ತಿಳಿಯಲು ಸಾಕಷ್ಟು ಇಲ್ಲದಿದ್ದರೂ ಪದರುಶಿಲಾವರ್ಗಗಳ ಪರಮಾವಧಿ ಆಯಸ್ಸು 1,500 ದಶಲಕ್ಷಗಳಿಂದ 25,000 ದಶಲಕ್ಷ ವರ್ಷಗಳವರೆಗೂ ವ್ಯಾಪಕವಾಗಿದೆಯೆಂದು ಕಂಡುಬಂದಿದೆ. ಮತ್ತು ರೂಢಿಗೆ ಬರುತ್ತಲಿದೆ. ಭಾರತದಲ್ಲಿ ಈ ಬದಲಾವಣೆಯ ಅಗತ್ಯವಿಲ್ಲ. ಆರ್ಷೇಯ ಶಿಲಾಗುಂಪುಗಳಿಗೂ ಮತ್ತು ಪ್ರೀಕೇಂಬ್ರಿಯನ್ ಶಿಲಾವರ್ಗಕ್ಕೂ ನಿಖರವಾಗಿ ಕಂಡುಬರುವ ಅವಸಾದನ ವಿಳಂಬವಿದೆ. ಆರ್ಷೇಯ ಅನಂತರದ ಪ್ರಸ್ತರೀಶಿಲೋತ್ಪತ್ತಿಯ ಅಧಿಕ ವಿರಾಮ ಹೆಚ್ಚು ಮಡಿಕೆಗೊಂಡಿರುವ ಪದರುಶಿಲೆ ಮತ್ತು ನೈಸ್ ಶಿಲೆಗಳ ಗುಂಪಿಗೂ ಮತ್ತು ಅವುಗಳ ಮೇಲೆ ಖಚಿತ ಅವಸಾದನ ವಿಳಂಬನದಿಂದ ಮಡಿಕೆ ಇಲ್ಲದೆ ನೆಲೆಸಿರುವ, ರೂಪಾಂತರವಿಲ್ಲದ, ನಿರ್ದಿಷ್ಟ ಪ್ರಸ್ತರೀ ಶಿಲೆಗಳಿಗೂ ಮಧ್ಯವಿರುವುದು, ಭಾರತದ ಪ್ರೀಕೇಂಬ್ರಿಯನ್ ಕಾಲದ ಕಣಶಿಲೆಗಳೆಲ್ಲವೂ ಪದರುಶಿಲೆಗಳು ರೂಪುಗೊಂಡ ಬಹುಕಾಲಾನಂತರ ಅವುಗಳನ್ನು ಒಳಹೊಕ್ಕು ಉದ್ಭವಿಸಿವೆ. ಮತ್ತು ರೂಪಾಂತರಹೊಂದಿಲ್ಲದ ಪ್ರೀಕೇಂಬ್ರಿಯನ್ ಪ್ರಸ್ತರೀಶಿಲಾವರ್ಗದ ಕಡಪ, ಕರ್ನೂಲ್, ವಿಂಧ್ಯದ ಮತ್ತು ಇತರ

ಆರ್ಷೇಯ ಪ್ರದೇಶಗಳಲ್ಲಿರುವ ಶಿಲಾಸ್ತೋಮಗಳ ಪರಸ್ಪರ ಸಂಬಂಧವನ್ನು ತೋರಿಸುವ ಪಟ್ಟಿ.

| ಕಾಲ ದಶಲಕ್ಷ ವರ್ಷಗಳು | ದಕ್ಷಿಣ ಭಾರತ ಕರ್ನಾಟಕ | ರಾಜಸ್ತಾನ | ಮಧ್ಯ ಪ್ರದೇಶ | ಬಿಹಾರ್ ಮತ್ತು ಒರಿಸ್ಸ | ಪೂರ್ವಘಟ್ಟ ಪ್ರದೇಶ | ಆಂಧ್ರ ಪ್ರದೇಶ |
|---|---|---|---|---|---|---|
| 900–1050 (?) | ಕ್ಲೋಸ್‌ಪೇಟೆ ಗ್ರಾನೈಟ್ | ಬುಂದೇಲ್ ಖಂಡ ನೈಸ್ | ಆಮ್ಲ ಗ್ರಾನೈಟ್ | ಡೋಮ್ ನೈಸ್ | ಗ್ರಾನೈಟ್ | – |
| 1570–1750 | ಪೆನಿನ್‌ಸುಲರ್ ನೈಸ್ | ಆರಾವಳಿ ಅನಂತರದ ನೈಸ್ | ಪಟ್ಟೆರೂಪ ನೈಸ್ | ಛೋಟಾ ನಾಗಪುರ ನೈಸ್ ನೈಸ್ | – | ನೆಲ್ಲೂರ್ ಪೆಗ್ಮಟೈಟ್ |
| 1600–2000 (?) | ಮೇಲಿನ ಧಾರವಾಡ ವರ್ಗ | ರಯಾಲೋ ಶ್ರೇಣಿ | ಸಕೋಲಿ ಶ್ರೇಣಿ | ಕೊಲಾನ್ ಶ್ರೇಣಿ | – | – |
| 2300–2450 | ಛಾಂಪಿಯನ್ ನೈಸ್ | ರಯಾಲೋ ಶ್ರೇಣಿ ಮತ್ತು ಪಾರ್ಲಗ್ರ್ಯಾನೈಟ್‌ಗಳು | – | – | – | – |
| >2500 | ಮಧ್ಯ ಧಾರವಾಡ ವರ್ಗ<br>ತಳ ಧಾರವಾಡ ವರ್ಗ | ಅರಾವಳಿ<br>– | ಸಾಸರ್ ಶ್ರೇಣಿ<br>– | ಐರನ್ ಓರ್ ಶ್ರೇಣಿ<br>ಓಲ್ಡರ್ ಮೆಟ ಮಾರ್ಫಿಕ್ಸ್ | ಖಾಂಡ ಲೈಟ್<br>– | ಬೆಜವಾಡ ನೈಸ್<br>– |

ತಳಹದಿ ಶಿಲಾಸಮೂಹವನ್ನು ನಿರ್ದಿಷ್ಟವಾಗಿ ಗುರ್ತಿಸಿಲ್ಲ

ಕಣಶಿಲಾವರ್ಗಗಳ ಈ ವಯಸ್ಸು ಸು 900 ದಶಲಕ್ಷ ವರ್ಷಗಳಿಂದ 1,750 ದಶಲಕ್ಷಗಳವರೆಗೂ ವಿಸ್ತಾರಗೊಂಡಿದೆಯೆಂದು ತಿಳಿದುಬಂದಿದೆ. ಈಗ ನಿರ್ಧರಿಸುವ ಆರ್ಷೇಯ ಶಿಲಾವರ್ಗಗಳ ಉತ್ಪನ್ನ ಕಾಲಾವಧಿಯನ್ನು ಅನುಸರಿಸಿ ಭಾರತದ ಆರ್ಷೇಯ ಶಿಲಾವರ್ಗಗಳ ಪರಸ್ಪರ ಸಂಬಂಧ ಮತ್ತು ಹೋಲಿಕೆಗಳನ್ನು ಈ ಪಟ್ಟಿಯಲ್ಲಿ ಕಾಣಬಹುದು.

ಆರ್ಷೇಯ ವರ್ಗದ ತಳಹದಿ ಶಿಲೆಗಳು : ಕನೇಡಿಯನ್ ಶೀಲ್ಡ್ ಕೊಲರೇಡೊ ದಕ್ಷಿಣವಲಯ, ದಕ್ಷಿಣ ಆಫ್ರಿಕ ಮತ್ತು ಇತರ ಆರ್ಷೇಯ ಪ್ರದೇಶಗಳಂತೆ, ಭಾರತದಲ್ಲಿಯೂ ಯಾವ ತಳಹದಿಶಿಲೆಗಳ ಮೇಲೆ ಆರ್ಷೇಯ ಸಮೂಹದ ಅತ್ಯಂತ ಪುರಾತನ ಶಿಲೆಗಳು ಅಂದರೆ ಜ್ವಾಲಾಮುಖಿಜ ಶಿಲೆಗಳು ಮತ್ತು ಪ್ರಾಚೀನ ಪ್ರಸ್ತರೀ ಶಿಲೆಗಳು (ಏನ್ಷಂಟ್ ಸೆಡಿಮೆಂಟ್ಸ್) ನೆಲೆಗೊಂಡು ಬೆಳೆದುವೆಂದು ಇದುವರೆಗೂ ಪತ್ತೆಯಾಗಿಲ್ಲ. ಆ ತಳಹದಿಶಿಲೆಗಳು ಎಂಥವು, ಅವುಗಳ ಗತಿಯೇನಾಯಿತು, ಅವುಗಳನ್ನು ಎಲ್ಲಿ ಗುರ್ತಿಸಬಹುದು ಎಂಬುದು ತಿಳಿದುಬಂದಿಲ್ಲ. ಮಧ್ಯ ಯುರೋಪಿನ ಬಾಲ್ಟಿಕ್ ಷೀಲ್ಡ್‌ಗೆ ಸೇರಿದ ಸ್ಕ್ಯಂಡಿನೇವಿಯ, ಫಿನ್‌ಲೆಂಡ್, ಉಕ್ರೇನ್, ಮುಂತಾದ ಪ್ರದೇಶಗಳಲ್ಲಿ ಆರ್ಷೇಯ ಶಿಲಾವರ್ಗಗಳಿಗಿಂತ ಹಿಂದಿನ ಕ್ಯಾಟರ್ಕಿಯನ್ ಎಂಬ ಹೆಸರಿನ ಶಿಲಾಸ್ತೋಮಗಳನ್ನು ಕಂಡುಹಿಡಿಯಲಾಗಿದೆ. ಈ ಶಿಲಾಸ್ತೋಮಗಳನ್ನು ಹೋಲುವ ಆರ್ಷೇಯ ಶಿಲೆಗಳಿಗಿಂತ ಪ್ರಾಚೀನ ಶಿಲಾವರ್ಗಗಳು ಭಾರತದಲ್ಲಿಯೂ ಇರುವುದೇ ಎಂಬುದನ್ನು ನಿರ್ದಿಷ್ಟವಾಗಿ ತಿಳಿಯಲು ಇನ್ನು ಮುಂದೆ ವಿಕಿರಣಕಾಲಮಾಪಕ ಪ್ರಯೋಗಗಳಿಂದ ನಿಷ್ಕರ್ಷಿಸಬೇಕಾಗಿದೆ. ಆರ್ಷೇಯ ಗುಂಪಿನ ಶಿಲಾಸ್ತೋಮಗಳು, ಸ್ತರವಿಭಾಗದಲ್ಲಿ ಎಲ್ಲಿಂದ ಎಲ್ಲಿಯವರೆಗೆ ಇರಬೇಕೆನ್ನುವ ವಿಷಯದಲ್ಲೂ, ಆರ್ಷೇಯ ಅನಂತರದ ಪ್ರಸ್ತರೀ ಶಿಲೋತ್ಪತ್ತಿಯ ಅಧಿಕ ವಿರಾಮವನ್ನು (ಈ ಪಾರ್ಕಿಯನ್ ಇಂಟರ್ವಲ್) ನಿರ್ದಿಷ್ಟವಾಗಿ ಸ್ತರವಿವರ ಶ್ರೇಣಿಯಲ್ಲಿ ಎಲ್ಲಿ ಸೇರಿಸಬಹುದೆಂಬ ವಿಚಾರದಲ್ಲೂ ಕೆನಡ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಭೂಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದುದರಿಂದ ಈಚೆಗೆ ಆರ್ಷೇಯ ಎಂಬುದನ್ನು ಸಂಪೂರ್ಣವಾಗಿ ತ್ಯಜಿಸಿ, ಕೇಂಬ್ರಿಯನ್ ಶಿಲಾವರ್ಗಕ್ಕಿಂತ ಹಿಂದಿನ ಶಿಲಾವರ್ಗಗಳೆಲ್ಲವನ್ನೂ ಪ್ರೀಕೇಂಬ್ರಿಯನ್ ಎಂದು ಕರೆಯುವುದು ಇಂಥವೇ ವರ್ಗಗಳ ತಳಹದಿಯಲ್ಲಿದ್ದು ಅವುಗಳಿಗಿಂತ ಹಿಂದಿನ ಕಾಲಕ್ಕೆ ಸೇರಿರುತ್ತವೆ. ಆದುದರಿಂದ ಈ ಕಣಶಿಲೆಗಳು ಅವುಗಳೊಂದಿಗಿರುವ ಶಿಲಾಸಮೂಹಗಳನ್ನು ಕಣಶಿಲೆಗಳಿಗಿಂತ ಹಿಂದಿನ ವರ್ಗಕ್ಕೆ ಸೇರಿದ ಆರ್ಷೇಯ ವಿಭಾಗಗಳೋ ಅಥವಾ ಅನಂತರ ಜನಿತವಾದ ಪ್ರೀಕೇಂಬ್ರಿಯನ್ ಶಿಲಾವರ್ಗಕ್ಕೆ ಸೇರಿದವುಗಳೋ ಎಂಬುದನ್ನು ನಿರ್ಧರಿಸಲು ಸಹಾಯಕವಾಗಿವೆ.

ಪ್ರೀಕೇಂಬ್ರಿಯನ್ ವರ್ಗಗಳು – ಅಂದರೆ ನಿರ್ದಿಷ್ಟ ಕೇಂಬ್ರಿಯನ್ ಶಿಲಾವರ್ಗಕ್ಕಿಂತ ಹಿಂದಿನ ಎಲ್ಲ ಶಿಲಾವರ್ಗಗಳು–ಅತಿ ಪ್ರಾಚೀನವಾಗಿವೆ. ಅವುಗಳ ಕಾಲಾವಧಿ ಸುಮಾರು 500 ದಶಲಕ್ಷ ವರ್ಷಗಳ ಹಿಂದಿನಿಂದ 3,000 ದಶಲಕ್ಷ ವರ್ಷಗಳ ಮೇಲ್ಪಟ್ಟಿರುತ್ತದೆ. ಈ ಅದ್ಭುತ ಕಾಲಾವಧಿಯ ವಿವಿಧ ಕಾಲದ ಶಿಲಾವರ್ಗಗಳೆಲ್ಲವನ್ನೂ ಪ್ರೀಕೇಂಬ್ರಿಯನ್ ಎಂಬ ಒಂದೇ ಹೆಸರಿನಲ್ಲಿ ಸೇರಿಸುವುದು ಸಮಂಜಸವಾಗಿ ತೋರುವುದಿಲ್ಲ. ಆರ್ಷೇಯ ಪದವನ್ನು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಹಿಂದೆ ಉಪಯೋಗಿಸಿದ್ದಂತೆ ಜೂವಾಟಿನ ಪದರುಶಿಲೆ ಮತ್ತು ಇತರ ಪ್ರದೇಶಗಳಲ್ಲಿ ಅವುಗಳಿಗೆ ಸಮಾನವಾದ ಶಿಲಾವರ್ಗಗಳಿಗೂ ಉಪಯೋಗಿಸಿ ಅವುಗಳಿಗಿಂತ ಸಮಾನವಾದ ಶಿಲಾವರ್ಗಗಳಿಗೂ ಉಪಯೋಗಿಸುವುದು ಸೂಕ್ತವೆಂದು ಕಂಡುಬರುವುದು ಆರ್ಷೇಯ ವರ್ಗಕ್ಕಿಂತ ಅಂದರೆ ಲಾರೆನ್‌ಷಿಯನ್ ಶಿಲಾವರ್ಗದ ಅನಂತರ ಉತ್ಪನ್ನವಾಗಿ ರೂಪಾಂತರಗೊಳ್ಳದ, ಉತ್ತರ ಅಮೆರಿಕದ ಅಲಿಗಾಂಕಿಯನ್ ಪ್ರಸ್ತರೀ ಶಿಲೆಗಳಿಗಿಂತ ಮುನ್ನಿನ ಶಿಲಾವರ್ಗಗಳನ್ನು ಈಪಾರ್ಕಿಯನ್ ಎಂದು ಕರೆಯಬಹುದು. ಪ್ರೀಕೇಂಬ್ರಿಯನ್ ವರ್ಗವೊಂದನ್ನೇ ಕಾಲ ವ್ಯತ್ಯಾಸಗಳ ಆಧಾರದ ಮೇಲೆ 3–4 ವಿಭಾಗ ಮಾಡಬಹುದು.

ವಿಕಿರಣಕಾಲಮಾಪಕ ನಿರ್ಧಾರಗಳಿಂದ ಪ್ರಾಚೀನ ಕಾಲದಲ್ಲಿ ಭೂಮಿಯ ಒತ್ತಡದ ಬದಲಾವಣೆಗಳು ಕ್ರಮವಾಗಿ 350–500 ದಶಲಕ್ಷ ವರ್ಷಗಳಿಗೊಮ್ಮೆ ಮಾರ್ಪಟ್ಟಿರುವುದೆಂದೂ ಈ ಪ್ರತಿಯೊಂದು ಒತ್ತಡ ಬದಲಾವಣೆಗಳ ಕಾಲ ಸು 175 ದಶಲಕ್ಷದಿಂದ 250 ದಶಲಕ್ಷಗಳವರೆಗೂ ಇದ್ದಿತೆಂದೂ ತಿಳಿದುಬಂದಿದೆ. ಈ ಆಧಾರದ ಮೇಲೆ ಪ್ರಪಂಚದಲ್ಲಿ

ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಕೇಂಬ್ರಿಯನ್ ಶಿಲಾವರ್ಗಕ್ಕಿಂತ ಹಿಂದಿನ ಶಿಲಾವರ್ಗಗಳನ್ನು ಸ್ಥೂಲವಾಗಿ ಪರಸ್ಪರ ಸಂಬಂಧಗಳನ್ನು ಏರ್ಪಡಿಸಲು ಅಥವಾ ತಿಳಿಯಲು ಪ್ರೀಕೇಂಬ್ರಿಯನ್ ಶಿಲಾವರ್ಗಗಳನ್ನು ಅವುಗಳ ನಿರ್ದಿಷ್ಟ ಕಾಲವನ್ನನುಸರಿಸಿ 8 ತಂಡಗಳಾಗಿ ವಿಭಾಗಿಸಿ, ಸಮಂಜಸವಾಗಿ ಕಂಡುಬರುವ, ಎಲ್ಲ ಪ್ರದೇಶಗಳಲ್ಲಿಯೂ ಉಪಯೋಗಿಸಲಾಗುವ ಹೆಸರುಗಳನ್ನು ಕೊಡುವುದು ಸೂಕ್ತವೆಂದು ತೋರುವುದು.

| **ಕಾಲಮಾನ (ದಶಲಕ್ಷ ವರ್ಷಗಳಲ್ಲಿ)** | | **ಸೂಚಿಸಿರುವ ಹೆಸರುಗಳು** |
|---|---|---|
| 600-800 | ... | ಅತಿಮೇಲಿನ ಪ್ರೀಕೇಂಬ್ರಿಯನ್ |
| 800-1000 | ... | ಮೇಲಿನ ಪ್ರೀಕೇಂಬ್ರಿಯನ್ |
| 1000-1200 | ... | ಮಧ್ಯದ ಪ್ರೀಕೇಂಬ್ರಿಯನ್ |
| 1200-1500 | ... | ತಳದ ಪ್ರೀಕೇಂಬ್ರಿಯನ್ |
| 1500-1800 | ... | ಇಪಾರ್ಕಿಯನ್ |
| 1800-2500 | ... | ಮೆಸಾರ್ಕಿಯನ್ |
| 2500-3500 | ... | ಕ್ಯಾಟಾರ್ಕಿಯನ್ |
| >3500 | ... | ಪ್ರೋಟೋಲಿಥಿಕ್ |

ಇಂಥ ವಿಭಾಗ ಕೃತಕ ಅಥವಾ ಅಸ್ವಾಭಾವಿಕ ಎಂದು ಕಂಡುಬರಬಹುದು. ಆದರೆ ಇದು ಕೇಂಬ್ರಿಯನ್ ವರ್ಗದ ಹಿಂದಿನ ಎಲ್ಲ ಶಿಲಾವರ್ಗಗಳನ್ನೂ ಪ್ರೀಕೇಂಬ್ರಿಯನ್ ಎಂಬ ಒಂದೇ ಹೆಸರಿನಿಂದ ಕರೆಯುವ ಅಸಮಂಜಸ ಅಗತ್ಯವನ್ನು ತಪ್ಪಿಸುತ್ತದೆ.

ಖನಿಜ ಸಂಪತ್ತು : ಆರ್ಥಿಕದೃಷ್ಟಿಯಿಂದ ಉಪಯುಕ್ತವಾದ ಅನೇಕ ಖನಿಜಗಳು ಆರ್ಷೇಯ ಶಿಲಾಸ್ತೋಮಗಳಲ್ಲಿವೆ. ಭಾರತದಲ್ಲಿ ಪದರು ಶಿಲಾಸ್ತೋಮ ಚಿನ್ನ, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಕ್ರೋಮೈಟ್, ತಾಮ್ರ, ಸೀಸ, ಸತು, ಪಾಷಾಣ ಮತ್ತು ಸುರಮ (ಆ್ಯಂಟಿಮೊನಿ) ಅದಿರುಗಳನ್ನೂ ಲೋಹೇತರ ಖನಿಜಗಳಲ್ಲಿ ಕಲ್ನಾರು, ಕುರಂದ (ಕೊರ್‍ಯಾಂಡಮ್), ಗಾರ್ನೆಟ್ಸ್ ಅಥವಾ ಕೆಂಪು ಹರಳು, ಕಯನೈಟ್ ಮತ್ತು ಸಿಲಿಮನೈಟ್, ಸುಣ್ಣಕಲ್ಲು ಮತ್ತು ಅಮೃತಶಿಲೆ, ಶ್ವೇತ ಸುಧಾಶಿಲೆ (ಮ್ಯಾಗ್ನಸೈಟ್), ಖನಿಜವರ್ಣಗಳು (ಮಿನರಲ್ ಪಿಗ್‌ಮೆಂಟ್ಸ್), ಹೇಮಾಕ್ಷಿ (ಪೈರೈಟ್), ಬಳಪದ ಕಲ್ಲುಗಳು, ವರ್ಮಿಕ್ಯುಲೈಟ್ ಮುಂತಾದ ಅನೇಕ ಖನಿಜ ನಿಕ್ಷೇಪಗಳನ್ನು ಒಳಗೊಂಡಿದೆ. ಕಣಶಿಲೆ ಮತ್ತು ಶೀಣಿಕಲ್ಲುಗಳ ಪೆಗ್ಮಟೈಟ್ ಸಿರಗಳಲ್ಲಿ ಬೆಣಚು ಫೆಲ್‌ಸ್ಪಾರ್ ಅಭ್ರಕ, ಬಿಳೀ ಜೇಡು, ಪಚ್ಚೆಕಲ್ಲು, ಮಾನಜೈಟ್, ಸಾಮರಸ್ಕೈಟ್, ಕೊಲಂಬೈಟ್ ಮತ್ತು ಇತರ ವಿಕಿರಣಶಕ್ತಿ ತೋರುವ ಅಪೂರ್ವ ಮೂಲಧಾತು ಖನಿಜಗಳಿರುತ್ತವೆ (**ನೋಡಿ– ಆದಿಜೀವಯುಗ; ಆಧುನಿಕ ಜೀವಯುಗ; ಯುಗ ಮತ್ತು ಕಲ್ಪ**). (ಬಿ.ಆರ್.ಆರ್.)

**ಆರ್ಸಾನ್ವಾಲ್, ಜಾಕ್ ಆರ್ಸೇನ್‌ದ್ :** 1851–1940 ಫ್ರೆಂಚ್ ಭೌತವಿಜ್ಞಾನಿ. ಜನನ ಲಾಬೋರಿಯಲ್ಲಿ (1851). 1882ರ ವೇಳೆಗೆ ಈತ ಕಾಲೇಜ್ ದ ಫ್ರಾನ್ಸ್ ಎಂಬ ವಿದ್ಯಾಲಯದಲ್ಲಿ ಜೀವಭೌತವಿಜ್ಞಾನದ ಪ್ರಯೋಗಶಾಲೆಯ ಮುಖಂಡನಾಗಿ, 1894ರಲ್ಲಿ ಪ್ರಾಧ್ಯಾಪಕನಾದ. ಭೌತವಿಜ್ಞಾನಕ್ಕೆ ಈತ ಮಾಡಿದ ಮುಖ್ಯ ಉಪಕಾರ ಈತನ ಹೆಸರುಳ್ಳ ವಿದ್ಯುತ್ಪ್ರವಾಹಮಾಪಕದ ನಿರ್ಮಾಣ. ಇದರಲ್ಲಿ ಅಯಸ್ಕಾಂತ ಧ್ರುವಗಳ ಮಧ್ಯೆ ಒಂದು ಸುರುಳಿಯನ್ನು ತೆಳುವಾದ (ಫಾಸ್‌ಫರ್ ಬ್ರಾನ್ಸ್‌ನಿಂದ ಮಾಡಿದ) ಎಳೆಯ ತುದಿಯಲ್ಲಿ ನೇತುಹಾಕಿದ್ದು, ವಿದ್ಯುತ್ಪ್ರವಾಹ ಹರಿದಾಗ ಸುರುಳಿ ತಿರುಗುವುದನ್ನು ತೋರಿಸಲು ಒಂದು ಸಣ್ಣ ಕನ್ನಡಿಯನ್ನು ಸುರುಳಿಯ ಮುಖದಲ್ಲಿ ಸೇರಿಸಿರುತ್ತಾರೆ. ಇದಲ್ಲದೆ ಈತ ಹೆಚ್ಚು ಆವೃತ್ತಿಯ ಪರ್ಯಾಯ ವಿದ್ಯುತ್ಪ್ರವಾಹಗಳನ್ನು ವೈದ್ಯವಿಜ್ಞಾನದಲ್ಲಿ ಪ್ರಯೋಗಿಸಿ ದಾರ್ಸಾನ್ವಾಲೀಕರಣ ಎಂದು ಕರೆಯಲ್ಪಡುವ ವೈದ್ಯಮಾರ್ಗವನ್ನು ಕಂಡುಹಿಡಿದ; ಮತ್ತೆ ಕೆಲವು ಉಪಕರಣಗಳನ್ನೂ ನಿರ್ಮಿಸಿದ. (ಟಿ.ಎಸ್.ಎಸ್.)

**ಆರ್ಸೆನಿಕ್ :** ಒಂದು ಮೂಲವಸ್ತು. ತಾಳಕ ಪರ್ಯಾಯನಾಮ. ರಾಸಾಯನಿಕ ಚಿಹ್ನೆ As. ಪರಮಾಣು ಸಂಖ್ಯೆ 33. ಪರಮಾಣು ತೂಕ 74.9216. ಬಹುಹಿಂದಿನಿಂದಲೂ ವಿಷವಸ್ತುವೆಂದು ತಿಳಿದಿದೆ. ಅನೇಕ ಸಂದರ್ಭಗಳಲ್ಲಿ ಸೇಡು ತೀರಿಸಿಕೊಳ್ಳುವ ಸಲುವಾಗಿ ಪ್ರಾಣಾಪಾಯ ಮಾಡಲು ಘೋರ ವಿಷವಾಗಿ ಪ್ರಯೋಗವಾಗಿರುವ ಕರಾಳ ಸ್ವರೂಪದ ರಾಸಾಯನಿಕ. ಇದು ಪ್ರಕೃತಿಯಲ್ಲಿ ಅಲ್ಪಾಂಶದಲ್ಲಿ ಪ್ರಸರಿಸಿರುವುದಾದರೂ ವಿಶೇಷವಾಗಿ ಗಂಧಕದೊಡನೆ ಸಂಯೋಜಿತವಾಗಿ ಸಲ್ಫೈಡ್ ರೂಪದಲ್ಲಿ ದೊರೆಯುತ್ತದೆ. ಅವುಗಳಲ್ಲಿ ಕೆಂಪು ಬಣ್ಣವುಳ್ಳ ರಿಯಲ್‌ಗರ್ ($As_2S_2$) ಮತ್ತು ಹಳದಿ ಬಣ್ಣದ ಆರ್ಪಿಮೆಂಟ್ ($As_2S_3$) ಮುಖ್ಯವಾದವು. ಇತರ ಅದಿರುಗಳು ಮಿಸ್‌ಪಿಕೆಲ್ (FcAsS) ಮತ್ತು ಕೋಬಾಲ್ಟ್ ಗ್ಲಾನ್ಸ್ (CoAsS).

ಮೇಲ್ಕಂಡ ಯಾವ ಅದಿರನ್ನಾದರೂ, ವಾಯುರಹಿತವಾದ ಆವರಣದಲ್ಲಿ, ಚೆನ್ನಾಗಿ ಕಾಯಿಸಿದ್ದೇ ಆದರೆ, ಆರ್ಸೆನಿಕ್ ಅನಿಲರೂಪದಲ್ಲಿ ಬಿಡುಗಡೆಯಾಗುವುದು. ಈ ಅನಿಲವನ್ನು ದ್ರವೀಕರಿಸುವುದರಿಂದ ಘನರೂಪದ ಆರ್ಸೆನಿಕ್ ಶೇಖರಣೆಯಾಗುತ್ತದೆ. ಗಾಳಿಯ ಸಂಪರ್ಕದೊಡನೆ ಮೇಲ್ಕಂಡ ಅದಿರುಗಳನ್ನು ಕಾಯಿಸಿದಲ್ಲಿ, ಬಿಳುಪಾದ, ಆರ್ಸೆನಿಕ್ ಆಕ್ಸೈಡ್ ($As_2O_3$) ದೊರೆಯುತ್ತದೆ. ಇದನ್ನು ಇದ್ದಿಲುಪುಡಿಯೊಡನೆ ಮಿಶ್ರಮಾಡಿ ಕಾಯಿಸುವುದರಿಂದ ಆರ್ಸೆನಿಕ್ ಅನಿಲರೂಪದಲ್ಲಿ ಬಿಡುಗಡೆಯಾಗುತ್ತದೆ. ಇದನ್ನು ಘನರೂಪಕ್ಕೂ ತಂದುಕೊಳ್ಳಬಹುದು.

ಆರ್ಸೆನಿಕ್ ಗಂಧಕದಂತೆ ಬಹುರೂಪತ್ವವನ್ನು ಹೊಂದಿರುವ ವಸ್ತು. ಸಾಮಾನ್ಯವಾಗಿ ದೊರಕುವ ಲೋಹದ ಆರ್ಸೆನಿಕ್ ಕಂದು ಬಣ್ಣದ ಪೆಡಸಾದ ಹರಳಿನ ರೂಪದ್ದು; ಮತ್ತು ಲೋಹಕ್ಕೆ ಸಹಜವಾದ ಮೆರುಗನ್ನು ಹೊಂದಿದೆ. ಒಳ್ಳೆಯ ವಿದ್ಯುತ್‌ವಾಹಕ. ಕಾಯಿಸಿದಾಗ ಸುಮಾರು $800^0$ ಸೆಂ.ಗ್ರೇ. ಮೇಲ್ಪಟ್ಟು ಶಾಖದಲ್ಲಿ ಇದು ನೇರವಾಗಿ ಆವಿಯಾಗುತ್ತದೆ. ನೀರು ಅಥವಾ ಇಂಗಾಲದ ಡೈಸಲ್ಫೈಡ್‌ನಲ್ಲಿ ($CS_2$) ಅದ್ರಾವ್ಯ. ಸಾಮಾನ್ಯ ಉಷ್ಣತೆಯಲ್ಲಿ ಸ್ಥಿರ. ಇದನ್ನು $\gamma$ (ಗ್ಯಾಮ) ಬಹುರೂಪಿ ಎನ್ನಬಹುದು. ಪುಡಿಯ ರೂಪದಲ್ಲಿರುವ ಮತ್ತೊಂದು ಬಗೆಗೆ $\beta$ (ಬೀಟ) ಆರ್ಸೆನಿಕ್ ಎಂದೂ ಹಳದಿ ಬಣ್ಣದಲ್ಲಿರುವ ಬೇರೊಂದು ಬಗೆಗೆ $\alpha$ (ಆಲ್ಫ) ಎಂದೂ ಕರೆದಿದೆ. ಈ ಎರಡು ಬಗೆಗಳೂ ಅಷ್ಟು ಸ್ಥಿರವಾಗಿರದೆ, $\gamma$ ರೂಪಕ್ಕೆ ಕ್ರಮೇಣ ಪರಿವರ್ತನೆ ಹೊಂದುತ್ತವೆ. ಎಲ್ಲ ಬಗೆಗಳೂ ಪ್ರಬಲ ವಿಷವಸ್ತುಗಳು.

ಪ್ರಬಲ ನೈಟ್ರಿಕ್ ಆಮ್ಲ. ಆರ್ಸೆನಿಕ್‌ನೊಡನೆ ವರ್ತಿಸಿ ಆರ್ಸೆನಿಕ್ ಆಮ್ಲ ($H_3AsO_4$) ಉತ್ಪತ್ತಿಯಾಗುತ್ತದೆ. ಕ್ಲೋರಿನ್ ಅನಿಲ ಸುಲಭವಾಗಿ ಆರ್ಸೆನಿಕ್‌ನೊಂದಿಗೆ ಸಂಯೋಗ ಹೊಂದಿ ಆರ್ಸೆನಿಕ್ ಕ್ಲೋರೈಡ್ ($AsCl_3$) ದೊರೆಯುವುದಲ್ಲದೆ, ಸಂಯೋಗ ಸಂಬಂಧದಲ್ಲಿ ಉಂಟಾದ ಹೆಚ್ಚಿನ ಉಷ್ಣ ಕಿಡಿಗಳ ರೂಪದಲ್ಲಿ ಕಾಣುತ್ತದೆ. (ಎಸ್.ವಿ.ವಿ.)

**ಆರ್ಸೆನಿಕ್ ವಿಷಬಾಧೆ :** ಆರ್ಸೆನಿಕ್ ಅನೇಕ ರೂಪಗಳಲ್ಲಿ ಅಲ್ಲದೆ ಬಳಕೆಯಲ್ಲಿ ಸುಲಭವಾಗಿ ಉಪಯೋಗಿಸಲ್ಪಡುವ ಧಾತುವಾದ್ದರಿಂದ, ಹಲವಾರು ವಿಧಗಳಿಂದ ಇದರ ಬಾಧೆಯುಂಟಾಗುತ್ತದೆ. ಸಾಮಾನ್ಯವಾಗಿ ಬಳಕೆಯಲ್ಲಿರುವ ಆರ್ಸೆನಿಕ್ ಲವಣಗಳು ಬಣ್ಣರಹಿತ ಮತ್ತು ರುಚಿರಹಿತ. ಆದ್ದರಿಂದ ಪೂರ್ವಕಾಲದಿಂದಲೂ ಪಾತಕ ಕಾರ್ಯಕ್ಕೆ ಬಳಸಲ್ಪಡುತ್ತಿವೆ. ಈ ಪಾಷಾಣಬಾಧೆ ತೀವ್ರತರ ಇಲ್ಲವೆ ಜಡತರದ್ದಾಗಿ ಕಂಡುಬರಬಹುದು.

ಆರ್ಸೆನಿಕ್ ಲವಣಗಳಾದ ಬಿಳಿ ಆರ್ಸೆನಿಕ್, ಸೀಸದ ಆರ್ಸೆನೈಟ್, ತಾಮ್ರದ ಆರ್ಸೆನೈಟ್ ಮುಂತಾದವುಗಳು ಕ್ರಿಮಿಕೀಟ, ಹೆಗ್ಗಣ, ಬೆಳೆಯಲ್ಲಿಯ ಕಳೆ, ಪರೋಪಜೀವಿ ಇವುಗಳ ನಾಶಕ್ಕೆ ಉಪಯೋಗಿಸಲ್ಪಡುತ್ತವೆ. ಆದರೆ ಇಂಥ ವಿಷವಸ್ತುಗಳು ಆಕಸ್ಮಿಕವಾಗಿಯಾಗಲಿ ಉದ್ದೇಶಪೂರ್ವಕವಾಗಿಯಾಗಲಿ ಸಾಕಷ್ಟು ಪ್ರಮಾಣದಲ್ಲಿ ಸೇವಿಸಲ್ಪಟ್ಟರೆ ಆರ್ಸೆನಿಕ್ ವಿಷಬಾಧೆಯುಂಟಾಗುತ್ತದೆ. ಆಗ ಪೀಡಿತ ಜೀವಿಗಳಲ್ಲಿ ಯಾತನಾಪೂರ್ವಕ ಹೊಟ್ಟೆನೋವು, ಉತ್‌ಕ್ಷೇಪನ, ವಾಂತಿ, ತೀವ್ರ ಅತಿಸಾರ, ಸ್ನಾಯುಗಳಲ್ಲಿ ಚಳಕು ಮುಂತಾದ ತೀವ್ರ ಲಕ್ಷಣಗಳು ಕಂಡುಬಂದು ಸಕಾಲದಲ್ಲಿ ಚಿಕಿತ್ಸೆಯಾಗದಿದ್ದರೆ ಕೆಲವು ಗಂಟೆಗಳಲ್ಲಿಯೇ ಅವು ಸಾಯುತ್ತವೆ. ಆರ್ಸೆನಿಕ್ ಶರೀರದಿಂದ ಅಷ್ಟು ಸುಲಭವಾಗಿ ವಿಸರ್ಜಿಸಲ್ಪಡದೆ ಶರೀರದ ನಾಡಿಕೂಟದಲ್ಲಿ ಶೇಖರಿಸಲ್ಪಡುವ ವಸ್ತುವಾದ್ದರಿಂದ ಆರ್ಸೆನಿಕ್‌ಯುಕ್ತ ಔಷಧಗಳನ್ನು ಚಿಕಿತ್ಸೆಗಾಗಿ ಆಗಾಗ ಉಪಯೋಗಿಸಿದರೆ ಇಲ್ಲವೆ ಆರ್ಸೆನಿಕ್ ಯಾವುದೇ ಕಾರಣದಿಂದಾಗಿ ಸಣ್ಣ ಪ್ರಮಾಣದಲ್ಲಿ ಬಹುಕಾಲದವರೆಗೆ ದೇಹದೊಳಕ್ಕೆ ಸೇರಿದರೆ ಆರ್ಸೆನಿಕ್‌ನ ತೀವ್ರ (ಕ್ರಾನಿಕ್) ವಿಷಬಾಧೆಯುಂಟಾಗುತ್ತದೆ. ಈ ಬಾಧೆಯನ್ನು ಗುರುತಿಸುವುದು ಕಷ್ಟಕರ. ಆದರೂ ಜಡತರದ ಭೇದಿ, ಕೂದಲು ಉದುರುವುದು, ಉಸಿರು, ಬೆವರಿನಲ್ಲಿ ಬೆಳ್ಳುಳ್ಳಿಯ ವಾಸನೆ ಮೊದಲಾದ ಚಿಹ್ನೆಗಳು ಈ ವಿಷಬಾಧೆಯ ಸೂಚಕಗಳಾಗಿವೆ. ತೀವ್ರ ವಿಷಬಾಧೆಯಿಂದ ನರಳುವ ಜೀವಿಗಳ ಮಲ, ಮೂತ್ರ, ರಕ್ತಾದಿಗಳನ್ನು ರಾಸಾಯನಿಕ ವಿಚ್ಛೇದನೆಗೊಳಪಡಿಸಿದರೆ ತಾಳಕದ (ಆರ್ಸೆನಿಕ್) ವಿಷಬಾಧೆಯ ಸಾಧ್ಯತೆಯನ್ನು ದೃಢೀಕರಿಸುವುದು ಸುಲಭ. ಬಿ.ಎ.ಎಲ್‌ನ್ನು (ಬ್ರಿಟಿಷ್ ಆ್ಯಂಟಿ ಲೆವಿಸೈಟ್) ಸೂಜಿಮದ್ದಾಗಿ ಕೊಡುವುದು ಈ ವಿಷಬಾಧೆಗೆ ಪ್ರಮುಖವಾದ ಚಿಕಿತ್ಸೆ. (ಎಸ್.ಎನ್.ಎಸ್.)

# ಇಂಗ್ಲಿಷ್ ಪದ ಸೂಚಿ

ಇದು ಮುಖ್ಯ ವಿಷಯಗಳ ಸೂಚಿ ಮಾತ್ರ. ಸಂಖ್ಯೆಯು ಪುಟವನ್ನೂ ಎ ಎನ್ನುವುದು ಪುಟದ ಎಡ ಅಂಕಣವನ್ನೂ ಬ ಎನ್ನುವುದು ಪುಟದ ಬಲ ಅಂಕಣವನ್ನೂ ಸೂಚಿಸುತ್ತವೆ.

Aardvark – ಆರ್ಡ್‌ವಾರ್ಕ್ ೮೮೯ಎ
Aard-wolf – ಆರ್ಡ್‌ವುಲ್ಫ್ ೮೯೦ಎ
Abalone – ಅಬಲೋನಿ ೩೬೭ಎ
Abbevillian – ಅಬೆವಿಲಿಯನ್ ೩೭೨ಬ
Abduction – ಅಪಹರಣ ೩೫೩ಎ
Aborigines – ಆದಿವಾಸಿಗಳು ೭೬೨ಎ
Aborigines' religion – ಆದಿವಾಸಿಧರ್ಮ ೭೬೯ಬ
Absorption spectrum – ಅಂತರ್ಗ್ರಹಣ ರೋಹಿತ ೬೪ಬ
Abstract form – ಅಮೂರ್ತರೂಪ ೪೦೦ಬ
Academies – ಅಕಡೆಮಿಗಳು ೧೩೫ಬ
Acalypha – ಅಕ್ಯಾಲಿಫ ೧೩೪ಎ
Acanthocephala – ಅಂಕುಶಕಪಾಲಿ ೧೦ಬ
Acanthodii – ಅಕ್ಯಾಂಥೋಡಿಯೈ ೧೩೩ಬ
Acanthophoenix – ಅಕ್ಯಾಂತೋಫ಼ೀನಿಕ್ಸ್ ೧೩೩ಬ
Acanthopterygii – ಅಕ್ಯಾಂತೊಟೆರಿಜಿಯೈ ೧೩೩ಬ
Accession – ಅನುವೃದ್ಧಿ ೩೨೬ಎ
Accessory buds – ಆನುಷಂಗಿಕ ಮೊಗ್ಗುಗಳು ೮೦೦ಎ
Accident; Accidence – ಆಗಂತುಕವಿಶೇಷಣ ೬೯೫ಎ
Accident insurance – ಆಕಸ್ಮಿಕಗಳ ವಿಮೆ ೬೬೯ಬ
Acenapthene – ಅಸಿನ್ಯಾಫ್ಥೀನ್ ೬೦೧ಎ
Acetanilide – ಅಸಿಟನಿಲೈಡ್ ೫೯೭ಎ
Acetic acid – ಅಸಿಟಿಕ್ ಆಮ್ಲ ೫೯೮ಬ
Acetols – ಅಸಿಟಾಲ್‌ಗಳು ೫೯೮ಎ
Acetone – ಅಸಿಟೋನ್ ೬೦೦ಎ
Acetylene – ಅಸಿಟಲೀನ್ ೫೯೭ಬ
Acheulian Industry – ಅಷುಲಿಯನ್ ಉದ್ಯಮ ೫೮೦ಬ
Achilles, tendon of – ಅಕಿಲೀಸನ ಕಂಡರ ೧೩೫ಬ
Achiminese – ಅಕಿಮಿನೀಸ್ ೧೩೪ಬ
Acid industry – ಆಮ್ಲ ಕೈಗಾರಿಕೆ ೮೫೯ಬ
Acid rocks – ಅಧಿಕ ಸಿಲಿಕಾಂಶ ಶಿಲೆಗಳು ೨೭೧ಬ
Acids and bases – ಆಮ್ಲಗಳು ಮತ್ತು ಪ್ರತ್ಯಾಮ್ಲಗಳು ೮೪೬ಎ
Acid value – ಆಮ್ಲಾಂಕ ೮೫೨ಎ
Acquired characters – ಆರ್ಜಿತ ಗುಣಗಳು ೮೮೩ಎ
Acridine – ಅಕ್ರಿಡಿನ್ ೧೪೪ಬ
Acriflavine – ಅಕ್ರಿಫ್ಲೇವಿನ್ ೧೪೪ಬ
Acropolis – ಅಕ್ರೋಪೊಲಿಸ್ ೧೪೫ಎ
Actinium – ಆಕ್ಟೀನಿಯಂ ೬೯೦ಎ
Actinomycosis (lumpy jaw) – ಅರಟನಾಲಗೆ ೪೪೨ಎ
Action song – ಅಭಿನಯಗೀತೆ ೩೮೫ಬ
Act of settlement – ಆಕ್ಟ್ ಆಫ್ ಸೆಟ್ಲ್‌ಮೆಂಟ್ ೬೮೯ಬ
Adansonia – ಆನೆಹುಣಿಸೆ ೮೦೪ಎ
Addision's disease – ಅಡಿಸನ್ನನ ರೋಗ ೨೮೯ಬ
Adenosine triphosphate – ಅಡೆನೋಸಿನ್ ಟ್ರೈಫಾಸ್ಫೇಟ್ ೨೧೦ಎ
Adhatoda – ಆಡುಸೋಗೆ ೭೩೧ಎ
Adhesives – ಅಂಟುಪದಾರ್ಥಗಳು ೫೮ಬ
Adina – ಅರಿಸಿನತೇಗ ೪೭೬ಎ
Adjutant – ಅಡ್ಜುಟೆಂಟ್ ಹಕ್ಕಿ ೨೦೧ಎ
Administration – ಆಡಳಿತ ೭೨೬ಬ
Administrative Board – ಆಡಳಿತ ನಿರ್ವಾಹಕ ಮಂಡಲಿ ೭೨೮ಬ
Administrative law, Administrative tribunal – ಆಡಳಿತ ಕಾಯಿದೆ, ಆಡಳಿತ ಮಂಡಳಿ ೭೨೭ಎ
Adrenal glands – ಅಡ್ರಿನಲ್ ಗ್ರಂಥಿಗಳು ೨೧೨ಬ
Adrenal glands, diseases of – ಅಡ್ರಿನಲ್ ಗ್ರಂಥಿಗಳ ರೋಗಗಳು ೨೧೨ಎ
Adrenaline, Noradrenaline – ಅಡ್ರಿನಲಿನ್, ನೋರಡ್ರಿನಲಿನ್ ೨೧೩ಎ
Adsorption and adsorbents – ಅಧಿಶೋಷಣೆ ಮತ್ತು ಅಧಿಶೋಷಕಗಳು ೨೭೫ಎ
Adulteration – ಅಪಮಿಶ್ರಣ ೩೪೧ಬ
Adventitious buds – ಆಗಂತುಕ ಮೊಗ್ಗುಗಳು ೬೯೫ಎ
Aeonium – ಅಯೋನಿಯಮ್ ೪೩೭ಎ
Aerial law – ಅಂತರಿಕ್ಷ ಕಾಯಿದೆ ೭೮ಎ
Aerial survey – ಅಂತರಿಕ್ಷ ಮೋಜಣಿ ೭೯ಬ
Aerial tramway – ಅಂತರಿಕ್ಷೀಯ ಟ್ರಾಂವೇ ೯೬ಬ
After image – ಅನುಬಿಂಬ ೩೮೯ಬ
Agapanthus – ಅಗಪಾಂತಸ್ ೧೫೫ಎ
Agar (Agar-agar) – ಅಗಾರ್ (ಅಗಾರ್–ಅಗಾರ್) ೧೫೮ಬ
Agate – ಅಗೇಟ್ ೧೫೯ಬ
Agathis – ಅಗಾಥಿಸ್ ೧೫೮ಎ
Agave – ಅಗೇವಿ ೧೬೦ಎ
Ageratum – ಅಜಿರೇಟಮ್ ೧೯೫ಎ
Agglutinin – ಅಂಟಣಿಕ ೫೩ಬ
Aglaonema – ಅಗ್ಲೋನಿಮ ೧೮೦ಎ
Agnosticism – ಅಜ್ಞೇಯತಾವಾದ ೧೯೭ಬ
Agouti – ಅಗೂಟೀ ೧೫೯ಎ
Agromycidae – ಅಗ್ರೋಮೈಸಿಡೀ ೧೮೦ಎ
Alangium – ಅಂಕೋಲೆ ೧೨ಎ
Albumen – ಅಲ್ಬುಮೆನ್ ೫೪೨ಬ
Aleurodidae – ಅಲ್ಯೂರೋಡಿಡೀ ೫೪೬ಬ
Algol – ಅಲ್ಗಾಲ್ ನಕ್ಷತ್ರ ೫೩೭ಎ
Algor – ಅರುಂಧತಿ ೪೮೭ಎ
Alibi – ಅನ್ಯತ್ರಸ್ಥಿತಿ ೩೩೫ಎ
Allamanda – ಅಲ್ಲಮಂಡ ೫೪೬ಬ
Allegorical plays – ಅನ್ಯೋಕ್ತಿ ರೂಪಕಗಳು ೩೩೭ಎ
Allegory – ಅನ್ಯೋಕ್ತಿ ೩೩೬ಬ

## ಇಂಗ್ಲಿಷ್ ಪದ ಸೂಚಿ


Alligator – ಅಲಿಗೇಟರ್ ಮೊಸಳೆ ೫೨೪ಬ
All India Institute of Medical Sciences – ಅಖಿಲಭಾರತ ವೈದ್ಯವಿಜ್ಞಾನಗಳ ಸಂಸ್ಥೆ ೧೫೫ಎ
All India Institute of Mental Health – ಅಖಿಲಭಾರತ ಮಾನಸಿಕ ಆರೋಗ್ಯ ಸಂಸ್ಥೆ ೧೫೩ಎ
All India Institute of Speech and Hearing – ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ ೧೫೩ಎ
All India Manufacturers' Association – ಅಖಿಲಭಾರತ ಉತ್ಪಾದಕರ ಸಂಘ ೧೫೧ಎ
All India Press Associations – ಅಖಿಲಭಾರತ ಪತ್ರಿಕಾಸಂಘಗಳು ೧೫೨ಎ
All India Sports' Council – ಅಖಿಲಭಾರತ ಕ್ರೀಡಾಮಂಡಲಿ ೧೫೧ಬ
Alocasia – ಅಲೊಕೇಷಿಯ ೫೩೫ಬ
Aloe – ಆ್ಯಲೊ ೫೩೪ಎ
Altazimuth – ಅಲ್ಟಾಜ಼ಿಮತ್ ೫೩೭ಎ
Aluminium – ಅಲ್ಯೂಮಿನಿಯಂ ೫೪೩ಎ
Alumino thermics – ಅಲ್ಯೂಮಿನಿಯಂ ತಾಪನ ೫೪೬ಎ
Alyssum – ಅಲಿಸಮ್ ೫೨೬ಎ
Alytes – ಅಲೈಟಿಸ್ ೫೩೪ಬ
Amalgam – ಅಮಾಲ್ಗಂ ೩೯೭ಬ
Amaranthesi – ಅಮರಾಂತೇಸೀ ೩೯೫ಎ
Amaranthus – ಅಮರಾಂತಸ್ ೩೯೪ಬ
Amaryllis – ಅಮರಿಲಿಸ್ ೩೯೬ಬ
Amblypoda – ಆಂಬ್ಲಿಪೋಡ ೬೬೮ಬ
Americium – ಅಮೆರಿಷಿಯಂ ೪೨೩ಎ
Amides – ಅಮೈಡುಗಳು ೪೨೩ಎ
Amines – ಅಮೀನುಗಳು ೩೯೮ಬ
Amino Acids – ಅಮೈನೊ ಆಮ್ಲಗಳು ೪೨೩ಬ
Ammonia – ಅಮೋನಿಯ ೪೨೭ಎ
Ammonite – ಆ್ಯಮ್ಮೊನೈಟ್ ೪೨೮ಬ
Amniota – ಆಮ್ನಿಯೋಟ ೮೩೯ಬ
Amoeba – ಅಮೀಬ ೩೯೮ಬ
Amorphism – ಅಸ್ಫಟಿಕತೆ ೬೧೧ಎ
Amortization – ಅಸಲುಕಂತು ೫೯೫ಬ
Ampere – ಆ್ಯಂಪೇರ್ ೬೬೬ಬ
Amphetamine – ಆ್ಯಂಫೆಟಮೀನ್ ೬೬೭ಎ
Amphibole – ಆ್ಯಂಫಿಬೋಲ್ ೬೬೭ಬ
Amphictiony – ಆ್ಯಂಫಿಕ್ಟಿಯೋನಿ ೬೬೬ಬ
Amphioxus – ಆ್ಯಂಫಿಯಾಕ್ಸಸ್ ೬೬೭ಬ
Amphora – ಆ್ಯಂಫರ ೬೬೮ಎ
Amyl nitrite – ಅಮೈಲ್ ನೈಟ್ರೈಟ್ ೪೨೬ಎ
Anabas – ಅನಬಾಸ್ ೨೮೩ಬ
Anaesthesia, Anaesthetics – ಅರಿವಳಿಕೆ, ಅರಿವಳಿಕಗಳು ೪೬೭ಎ
Anastomosis – ಅಡ್ಡಗೂಡಣೆ ೨೧೧ಬ
Anatomy, Articles on – ಅಂಗರಚನಾವಿಜ್ಞಾನ (ಲೇಖನಗಳು) ೧೨ಬ
Anatomy, comparative – ಅಂಗರಚನಾಶಾಸ್ತ್ರ, ತುಲನಾತ್ಮಕ ೨೮ಬ
Anatomy, in Ayurveda – ಅಂಗರಚನಾವಿಜ್ಞಾನ (ಆಯುರ್ವೇದದಲ್ಲಿ) ೨೫ಬ
Anatomy, microscopic – ಅಂಗರಚನಾಶಾಸ್ತ್ರ, ಸೂಕ್ಷ್ಮದರ್ಶಕದ ೨೯ಎ
Andalusite – ಆ್ಯಂಡಲೂಸೈಟ್ ೬೪೫ಎ
Andesite – ಆಂಡಿಸೈಟ್ ೬೪೫ಎ
Anemone – ಅನೆಮನಿ ೩೨೯ಬ
Angola yarn – ಅಂಗೋಲ ದಾರ ೪೮ಎ
Aniline – ಅನಿಲೀನ್ ೨೯೮ಬ
Anisotropism – ಅಸಮಪ್ರಸರಣ ೫೯೫ಎ
Annatto – ಅನಾಟೋ ೨೮೫ಎ
Anointing – ಅಭಿಷೇಕ ೩೯೦ಬ
Anonymity – ಅನಾಮಿಕತೆ ೨೮೭ಎ
Anopheles – ಅನಾಫಿಲೀಸ್ ಸೊಳ್ಳೆ ೨೮೬ಬ
Anorthosite – ಅನಾರ್ಥೊಸೈಟ್ ೨೮೭ಬ
Anseres – ಆನ್ಸೆರೆಸ್ ಬಾತು ೮೦೪ಬ
Antenna – ಆ್ಯಂಟೆನ ೬೪೨ಎ
Anthocyanins – ಆಂತೋಸಯನಿನ್‌ಗಳು ೬೪೮ಎ
Anthozoa – ಆಂಥೊಜೋವ ೬೪೯ಬ
Anthracene and phenanthrene – ಆಂಥ್ರಸೀನ್ ಮತ್ತು ಫೀನಾಂಥ್ರಿನ್ ೬೫೦ಎ
Anthracite – ಆಂಥ್ರಸೈಟ್ ೬೫೦ಬ
Anthurium – ಅಂತೂರಿಯಮ್ ೧೧೮ಎ
Antigonon – ಆಂಟಿಗೊನಾನ್ ೬೪೧ಬ
Antimony – ಆಂಟಿಮೊನಿ ೬೪೧ಬ
Anteroom – ಅಂತರಾಳ ೭೮ಎ
Antirrhinum – ಆ್ಯಂಟಿರೈನಮ್ ೬೪೨ಎ
Ant lion – ಆಂಟ್‌ಲಯನ್ ೬೪೧ಎ
Apatite – ಅಪಟೈಟ್ ೩೪೦ಬ
Aplite – ಆಪ್ಲೈಟ್ ೮೦೬ಬ
Apodictic proposition – ಅವಶ್ಯಪ್ರತಿಜ್ಞೆ ೫೫೬ಎ
Apollo – ಅಪೊಲೊ ೩೫೭ಬ, ೩೫೮ಎ
Apomorphine – ಅಪೊಮಾರ್ಫೀನ್ ೫೫೭ಬ
Appeal – ಅಪೀಲು ೩೫೭ಎ
Apperception – ಅನುಬೋಧೆ ೩೧೦ಎ
Apterygota – ಆಪ್ಟೆರಿಗೋಟ ೮೦೬ಎ
Apteryx (kiwi) – ಆಪ್ಟೆರಿಕ್ಸ್ ೮೦೬ಎ
Aralia – ಅರೇಲಿಯ ೪೯೬ಬ
Araucaria – ಅರಕೇರಿಯ ೪೪೧ಎ
Archaeo-magnetism – ಆರ್ಕಿಯೋಮ್ಯಾಗ್ನೆಟಿಸಂ ೮೮೨ಎ
Archaeopteryx – ಆರ್ಕಿಯಾಪ್ಟರಿಕ್ಸ್ ೮೮೧ಬ
Archean era – ಆರ್ಷೇಯ ಯುಗ ೯೨೯ಬ
Archichlamydeae – ಆರ್ಕಿಕ್ಲ್ಯಾಮಿಡಿ ೮೭೮ಬ
Archimedes, principle of – ಆರ್ಕಿಮಿಡೀಸನ ತತ್ತ್ವ ೮೮೧ಎ

Archimedes, screw of – ಆರ್ಕಿಮಿಡೀಸನ ತಿರುಪು ೮೮೧ಬ
Arctic cricle – ಆರ್ಕ್‌ಟಿಕ್ ವೃತ್ತ ೮೭೬ಬ
Arctic ocean – ಆರ್ಕ್‌ಟಿಕ್ ಸಮುದ್ರ ೮೭೭ಎ
Arctotis – ಆರ್ಕ್‌ಟೋಟಿಸ್ ೮೭೭ಬ
Areca – ಅಡಕೆ ೨೦೨ಬ
Arenga – ಅರೆಂಗ ೪೯೨ಬ
Aretide – ಅರೇಟಿಡೀ ೪೯೪ಎ
Argon – ಆರ್ಗಾನ್ ೮೮೨ಎ
Argonaut – ಆರ್ಗೋನಾಟ್ ೮೮೨ಬ
Argyroderma – ಆರ್ಗಿರೊಡರ್ಮ ೮೮೨ಬ
Arisaema – ಅರಿಸಾಯೆಮ ೪೭೪ಬ
Arithmetic – ಅಂಕಗಣಿತ ೧ಬ
Armadillo – ಆರ್ಮಡಿಲೊ ೯೨೪ಎ
Armonica – ಆರ್ಮೋನಿಕ ೯೨೪ಬ
Arms – ಆಯುಧಗಳು ೮೫೪ಎ
Aromatic compounds – ಆ್ಯರೋಮ್ಯಾಟಿಕ್ ಸಂಯುಕ್ತಗಳು ೮೭೪ಬ
Arrowroot – ಆರೋರೂಟ್ ೮೭೫ಬ
Arrow worm – ಅಂಬುಳ ೧೨೩ಬ
Arsenic – ಆರ್ಸೆನಿಕ್ ೯೩೩ಎ
Artesian well – ಆರ್ಟೀಸಿಯನ್ ಬಾವಿ ೮೮೮ಬ
Arthodira – ಆರ್ಥ್ರೊಡೈರ ೯೧೯ಎ
Artichoke – ಆರ್ಟಿಚೋಕ್ ೮೮೫ಬ
Articulata – ಅರೀಢಕ ಸಂಧಿದೇಹಿಗಳು ೪೮೭ಎ
Artiodactyla – ಆರ್ಟಿಯೊಡ್ಯಾಕ್ಟೈಲ ೮೮೬ಎ
Asilidae – ಅಸಿಲಿಡೇ ೬೦೧ಬ
Asparagus – ಅಸ್‌ಪ್ಯಾರಗಸ್ ೬೧೦ಎ
Aspidistra – ಅಸ್ಪಿಡಿಸ್ಟ್ರ ೬೧೦ಬ
Astigmatism – ಅಸಮನಿಟ್ಟು (ಅಬಿಂದುಕತೆ) ೫೯೫ಎ
Astrocaryum – ಅಸ್ಟ್ರೊಕ್ಯಾರಿಯಮ್ ೬೦೩ಎ
Asymptote – ಅನಂತಸ್ಪರ್ಶಕ ೨೮೩ಎ
Atolls – ಅಡಲುಗಳು ೨೦೫ಬ
Atropine – ಅಟ್ರೊಪೀನ್ ೨೦೦ಎ
Attention – ಅವಧಾನ ೫೫೧ಎ
Attorney – ಅಟಾರ್ನಿ ೧೯೯ಎ
Atypical children – ಅಸಾಧಾರಣ ಮಕ್ಕಳು ೫೯೬ಬ
Avantgarde – ಅಗ್ರಗಾಮಿ ೧೭೭ಎ
Avocado – ಅವೊಕ್ಯಾಡೊ ೫೬೬ಬ
Auger effect – ಆಗರ್ ಪರಿಣಾಮ ೬೯೭ಎ
Augite – ಆಗೈಟ್ ೬೯೯ಎ
Aurignacian culture – ಆರಿಗ್ನೇಷಿಯನ್ ಸಂಸ್ಕೃತಿ ೮೬೫ಬ
Australopithecus – ಆಸ್ಟ್ರಲೋಪಿತಕಸ್ ೬೦೨ಬ
Authoritarianism – ಅಧಿಕಾರಪ್ರಾಬಲ್ಯವಾದ ೨೭೩ಎ
Autobiography – ಆತ್ಮಕಥೆ ೭೩೪ಎ
Autoclave – ಆಟೋಕ್ಲೇವ್ ೭೨೩ಎ
Automatism – ಆಟೋಮ್ಯಾಟಿಸಂ ೭೨೩ಬ
Auk – ಆಕ್ ಹಕ್ಕಿ ೬೬೯ಎ
Auriga – ಆರೈಗಾ ೮೬೭ಎ
Aurora – ಅರೋರಾ ಬೆಳಕು ೪೯೭ಎ
Axis – ಅಕ್ಷ ೧೪೬ಎ
Axle – ಅಚ್ಚು ೧೮೩ಎ
Ayurveda – ಆಯುರ್ವೇದ ೮೫೭ಎ
Azalea – ಅಜ಼ೇಲಿಯ ೧೯೬ಎ
Azilian culture – ಅಜ಼ೀಲಿಯನ್ ಸಂಸ್ಕೃತಿ ೧೯೬ಎ
Azimuth – ಅಜ಼ಿಮತ್ ೧೯೫ಬ
Azo Compounds – ಆಜ಼ೊ ಸಂಯುಕ್ತಗಳು ೭೧೧ಎ
Azolla – ಅಜ಼ೋಲ ೧೯೬ಬ
Bank of International Settlements – ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು ೧೦೩ಎ
Barrage – ಅಡ್ಡಗಟ್ಟು ೨೧೧ಎ
Barred debt – ಅವಧಿಮೀರಿದ ಸಾಲ ೫೫೩ಎ
Barricade – ಅಡ್ಡತಡೆ ೨೧೧ಬ
Base line – ಆಧಾರಗೆರೆ ೭೭೧ಎ
Baton – ಅಧಿಕಾರದಂಡ ೨೭೨ಎ
Bearing – ಅಚ್ಚಿನಧಾರಕ ೧೮೨ಎ
Betelgeuse – ಆರ್ದ್ರಾ ೯೨೦ಎ
Blaspheme – ಅಪಚಾರ ೩೪೦ಬ
Boerhavia – ಅಡಕಪಟ್ಟಿನ ಗಿಡ ೨೦೨ಎ
Breakwater – ಅಲೆತಡೆ ೫೩೦ಬ
Braodcasting – ಆಕಾಶವಾಣಿ ೬೭೬ಎ
Bureaucracy – ಅಧಿಕಾರಶಾಹಿ (ಆಡಳಿತ) ೨೭೩ಎ
Butt joint – ಆನು ಏಣಿನ ಜೋಡಣೆ ೭೯೯ಬ
Buttress – ಆಧಾರಕಟ್ಟಡ ೭೭೧ಎ
Cainozoic era – ಆಧುನಿಕ ಜೀವಯುಗ ೭೭೪ಬ
Caisson – ಅಂತರ್ಜಲ ಸಂಪುಟ ೬೬ಎ
Calligraphy, History of – ಅಕ್ಷರಲಿಪಿ ಚರಿತ್ರೆ ೧೪೭ಬ
Canonization – ಅರ್ಚಶಿಷ್ಟ ಘೋಷಣೆ ೪೯೯ಎ
Caption – ಅಗ್ರಶೀರ್ಷಿಕೆ ೧೭೮ಎ
Carpet legume – ಅವರೆ ೫೫೫ಬ
Cassytha – ಆಕಾಶಬಳ್ಳಿ ೬೭೪ಎ
Casual labour – ಅನಿಯತ ಶ್ರಮ ೨೮೮ಎ
Cathode rays – ಅಧೋವಾಟ ಕಿರಣಗಳು ೨೮೮ಎ
Cavalry – ಅಶ್ವದಳ ೫೭೮ಬ
Chaos – ಅವ್ಯವಸ್ಥೆ ೫೬೭ಬ
Charge – ಆರೋಪ ೮೭೩ಬ
Chassis – ಅಡಗಟ್ಟು ೨೦೪ಎ
Cheap money policy – ಅಗ್ಗದ ಹಣದ ಧೋರಣೆ ೧೬೧ಎ
Cirripedia – ಅಲಕಪಾದಿಗಳು ೫೨೦ಎ
Clarias – ಅಣಿಮೀನು ೨೧೮ಎ
Classicism – ಅಭಿಜಾತಸಾಹಿತ್ಯಮಾರ್ಗ ೩೮೧ಎ

Classicism, the age of – ಅಭಿಜಾತಸಾಹಿತ್ಯವಾದದ ಯುಗ ೩೮೧ಬ
Cliche – ಅಚ್ಚಿನಹಲಗೆ ೧೮೩ಎ
Climbers – ಅಡರುಬಳ್ಳಿಗಳು ೭೦೪ಬ
Cockscomb – ಅಣ್ಣೆಸೊಪ್ಪು ೭೩೦ಬ
Cochlospermum – ಅರಿಸಿನ ಬೂರುಗ ೪೨೬ಎ
Cognition – ಅರಿವು[೧] ೪೨೦ಬ
Commandant – ಅಧಿಪತಿ ೭೨೪ಬ
Compassion – ಅಂತಃಕರಣ ೬೪ಎ
Composing machines – ಅಚ್ಚುಮೊಳೆ ಜೋಡಿಸುವ ಯಂತ್ರಗಳು ೧೮೫ಬ
Compositor – ಅಚ್ಚುಮೊಳೆಗಳ ಸಂಯೋಜಕ ೧೮೪ಬ
Conformal mapping – ಅನುರೂಪ ಚಿತ್ರಣ ೩೧೮ಬ
Conformity – ಅನುರೂಪತೆ ೩೧೯ಬ
Conscientious objectors – ಆತ್ಮಸಾಕ್ಷಿಯ ವಿರೋಧಕರು ೨೩೯ಎ
Consumer's sovereignty – ಅನುಭೋಗಿಯ ಪ್ರಭುತ್ವ ೩೧೫ಎ
Consumer's surplus – ಅನುಭೋಗಿಯ ಹೆಚ್ಚಳ ೩೧೬ಎ
Consumption – ಅನುಭೋಗ ೩೧೭ಬ
Continuity – ಅವಿಚ್ಛಿನ್ನತೆ ೫೬೧ಎ
Controller – ಅಧಿಗಣಕ ೭೨೪ಎ
Corollary – ಅನುಮಿತ ೩೧೨ಬ
Cosmetics, Cosmetology – ಅಂಗರಾಗಗಳು, ಅಂಗರಾಗವಿಜ್ಞಾನ ೩೧ಬ
Cow breeds – ಆಕಳ ತಳಿಗಳು ೬೨೦ಎ
Crime – ಅಪರಾಧ ೩೪೩ಎ
Crime, Psychology of – ಅಪರಾಧಮನಶಾಸ್ತ್ರ ೩೪೨ಎ
Crime and criminal law – ಅಪರಾಧ ಮತ್ತು ಅಪರಾಧ ಕಾಯಿದೆ ೩೪೪ಎ
Criminology – ಅಪರಾಧಶಾಸ್ತ್ರ ೩೪೮ಎ
Cross breeding – ಅಡ್ಡತಳಿಯೆಬ್ಬಿಕೆ ೭೧೧ಬ
Cryogenics – ಅತಿಶೀತಶಾಸ್ತ್ರ ೭೪೭ಬ
Culvert – ಅಡಿಗಾಲುವೆ ೭೦೬ಬ
Curcuma; turmeric – ಅರಿಸಿನ ೪೨೫ಎ
Curfew – ಅಗ್ನಿನಿರ್ವಾಪ ಆದೇಶ ೧೬೪ಎ
Dangerous animals, chattels, structures – ಅಪಾಯಕಾರಿ ಪ್ರಾಣಿಗಳು, ವಸ್ತುಗಳು, ಕಟ್ಟಡಗಳು ೩೫೬ಎ
Dark ages – ಅಂಧಕಾರಯುಗ ೧೭೦ಎ
Delegation of powers – ಅಧಿಕಾರ ಪ್ರತಿನಿಯೋಗ ೭೨೭ಬ
Deliquescence – ಆರ್ದ್ರೀಕರಣ ೯೭೦ಬ
Department of Atomic Energy, Indian – ಅಣುಶಕ್ತಿವಿಭಾಗ, ಭಾರತದ ೭೭೬ಎ
Depreciation – ಅವಮೌಲ್ಯನ[೧] ೫೫೩ಬ
Devaluation – ಅವಮೌಲ್ಯನ[೨] ೫೫೩ಬ
Diarrhoea – ಅತಿಸಾರ ೭೪೪ಬ
Digits – ಅಂಕಿಗಳು ೨ಬ
Digits, History of – ಅಂಕಿಗಳು (ಇತಿಹಾಸ) ೮ಬ
Distinctive features – ಅವಚ್ಛೇದಕಾಂಶಗಳು ೫೪೯ಬ
Distribution of powers – ಅಧಿಕಾರಹಂಚಿಕೆ ೭೨೩ಬ
Dominion status – ಅಧಿರಾಜ್ಯಪದ ೭೨೫ಎ
Dry cleaning – ಅಜಲಧಾವನ ೧೯೩ಎ
Dry farming – ಅಲ್ಪವೃಷ್ಟಿ ವ್ಯವಸಾಯ ೫೩೯ಬ
Duration and time – ಅವಧಿ, ಕಾಲ ೫೫೭ಬ
Dysentery – ಆಮಶಂಕೆ ೮೩೪ಎ
Easements and licences – ಅನುಭೋಗ ಹಕ್ಕು ಮತ್ತು ಅನುಜ್ಞೆ ೩೧೪ಬ
Econometrics – ಅರ್ಥಮಿತಿ ಅಥವಾ ಅರ್ಥಮಾಪನಶಾಸ್ತ್ರ ೫೦೮ಎ
Economic efficiency – ಆರ್ಥಿಕ ದಕ್ಷತೆ ೮೯೮ಎ
Economic freedom – ಆರ್ಥಿಕ ಸ್ವಾತಂತ್ರ್ಯ ೯೧೨ಎ
Economic goods – ಆರ್ಥಿಕ ಸರಕುಗಳು ೯೧೨ಎ
Economic growth – ಆರ್ಥಿಕ ಬೆಳೆವಣಿಗೆ ೮೯೯ಬ
Economic incentives – ಆರ್ಥಿಕ ಉತ್ತೇಜಕಗಳು ೮೯೫ಎ
Economic integration – ಆರ್ಥಿಕ ಸಂಘಟನೆ ೯೧೫ಎ
Economic Internationalism – ಆರ್ಥಿಕ ಅಂತಾರಾಷ್ಟ್ರೀಯತೆ ೮೯೭ಎ
Economic laws – ಆರ್ಥಿಕ ನಿಯಮಗಳು ೮೯೮ಎ
Economic nationalism – ಆರ್ಥಿಕ ರಾಷ್ಟ್ರೀಯತೆ ೯೦೯ಬ
Economic planning – ಆರ್ಥಿಕ ಯೋಜನೆಗಳು ೯೦೨ಎ
Economic rent – ಆರ್ಥಿಕ ಗೇಣಿ ೮೯೬ಎ
Economic resources – ಆರ್ಥಿಕ ಸಂಪನ್ಮೂಲಗಳು ೯೧೬ಬ
Economics – ಅರ್ಥಶಾಸ್ತ್ರ ೫೧೧ಎ
Economic security – ಆರ್ಥಿಕ ಭದ್ರತೆ ೯೦೬ಬ
Economic statistics – ಆರ್ಥಿಕ ಸಂಖ್ಯಾಶಾಸ್ತ್ರ ೯೧೧ಎ
Economic study, Methods of – ಆರ್ಥಿಕ ಅಧ್ಯಯನ ಕ್ರಮಗಳು ೮೯೩ಬ
Economic survey – ಆರ್ಥಿಕ ತತ್ತ್ವಸಮೀಕ್ಷೆ ೮೯೬ಬ
Economic systems – ಆರ್ಥಿಕ ಪದ್ಧತಿಗಳು ೮೯೮ಬ
Economic under-development – ಆರ್ಥಿಕ ಅನಭಿವೃದ್ಧಿ ೮೯೪ಬ
Editorial – ಅಗ್ರಲೇಖನ ೧೨೨ಬ
Egg – ಅಂಡ ೬೦ಎ
Egoism – ಅಹಂಭಾವ ೬೭೫ಎ
Elephant – ಆನೆ ೮೦೦ಎ
Elephant grass – ಆನೆಹುಲ್ಲು ೮೦೩ಎ
Elephantiasis – ಆನೆದೊಗಲು ೮೦೭ಬ
Empiricism – ಅನುಭವಪ್ರಧಾನ ವಾದ ೩೦೧ಬ
Endophytes – ಅಂತರ್ಜೀವಿಗಳು ೬೬ಬ
Endosperm – ಅಂತರ್ಬೀಜ ೬೮ಬ
Entropy – ಅಲಭ್ಯತೆ ೫೭೧ಬ
Enzymes – ಅರಗಿಸುವ ದೊಳೆ ೪೪೧ಎ
Eolith – ಆದಿಲೋಪಕರಣ ೨೨೦ಬ
Epicycle – ಅಧಿಚಕ್ರ ೭೨೪ಬ
Epilepsy – ಅಪಸ್ಮಾರ ೩೫೧ಎ
Epiphyte – ಅಪ್ಪುಗಿಡ ೩೬೩ಎ

Equality of opportunity in education – ಅವಕಾಶಸಮಾನತೆ, ಶಿಕ್ಷಣದಲ್ಲಿ ೫೪೯ಎ
Error of measurement – ಅಳತೆಯ ಲೋಪಗಳು ೬೩೧ಬ
Erythroxylon – ಅಡವಿಗೋರಂಟಿ ೨೦೬ಎ
Eschatology – ಅಂತಿಮಗತಿಶಾಸ್ತ್ರ ೧೧೬ಬ
Estimate – ಅಂದಾಜು ೧೧೯ಎ
Excavators – ಅಗೆಯುವ ಯಂತ್ರಗಳು ೧೫೯ಎ
Excess profit tax – ಅಧಿಕಲಾಭ ತೆರಿಗೆ ೨೬೮ಎ
Exercises – ಅಭ್ಯಾಸಪಾಠಗಳು ೩೯೨ಎ
Existentialism – ಅಸ್ತಿತ್ವವಾದ ೬೦೩ಬ
Expeditionary force – ಅವಸರದ ಪಡೆ ೫೫೬ಬ
Experience; Consciousness; Awareness – ಅನುಭವ[೧] ೩೧೦ಬ; ಅನುಭವ[೨] ೩೧೦ಬ
Expressionism – ಅಭಿವ್ಯಕ್ತಿವಾದ ೩೯೦ಎ
Expressionistic drama – ಅಭಿವ್ಯಕ್ತಿರೀತಿಯ ನಾಟಕ ೩೯೦ಎ
Facilitation – ಅನುಕೂಲಣೆ ೩೦೪ಬ
Fairy tale – ಅಜ್ಜಿಕಥೆ ೧೯೭ಎ
Fatalism – ಅದೃಷ್ಟವಾದ ೨೬೨ಬ
Fatigue – ಆಯಾಸ ೮೫೨ಎ
Ficus carica (fig) – ಅಂಜೂರ ೫೨ಎ
Ficus glomerata – ಅತ್ತಿಮರ ೨೪೫ಬ
Figurate numbers – ಆಕೃತೀಯ ಸಂಖ್ಯೆಗಳು ೬೮೯ಎ
Ficus religiosa – ಅರಳಿಮರ ೪೬೨ಎ
File fish – ಅರಮೀನು ೪೫೭ಬ
Fire – ಅಗ್ನಿ[೨] ೧೬೨ಬ
Fire-bellied toad – ಅಗ್ನಿ ಉದರದ ನೆಲಗಪ್ಪೆ ೧೬೪ಎ
Fire brigade – ಅಗ್ನಿಶಾಮಕದಳ ೧೬೮ಎ
Fire Insurance – ಅಗ್ನಿವಿಮೆ ೧೬೮ಎ
Fire-proof building – ಅಗ್ನ್ಯಬಾಧಿತಕಟ್ಟಡ ೧೭೬ಬ
Fire-proof fabric – ಅಗ್ನ್ಯಬಾಧಿತವಸ್ತ್ರ ೧೭೭ಬ
Firth – ಅಳಿವೆ ೬೩೫ಬ
Flax – ಅಗಸೆನಾರು ೧೫೬ಎ
Floor trade – ಅಂಗಳದ ವ್ಯಾಪಾರ ೩೩ಬ
Floor transfer – ಅಂಗಳದಲ್ಲಿನ ವರ್ಗಾವಣೆ ೩೩ಬ
Fog of war – ಅಂತಿಮಜಯದ ಅನಿಶ್ಚಿತತೆ ೧೧೭ಬ
Folk-say – ಅಂತೆ–ಕಂತೆ ೧೧೮ಬ
Footing – ಅಡಿವರಸೆ ೨೦೮ಎ
Forests and forestry – ಅರಣ್ಯಗಳು ಮತ್ತು ಅರಣ್ಯಶಾಸ್ತ್ರ ೪೪೨ಬ
Form work – ಅಣಿಗೆ ೨೧೮ಎ
Foundation – ಅಸ್ತಿಭಾರ ೬೦೪ಬ
Free radical – ಅನಿರ್ಬಂಧ ರ್‍ಯಾಡಿಕಲ್ ೨೯೦ಬ
Fungus infections (mycoses) – ಅಣಬೆ ಸೋಂಕುಗಳು ೨೧೬ಬ
Gangrene – ಅಳಿಕೊಳಮ ೬೩೩ಬ
Garcenia Indica – ಅರಿಸಿನ ಗುರುಗಿ ೪೭೬ಎ
Gas chamber – ಅನಿಲದ ಕೋಣೆ ೨೯೪ಎ
Gas industry – ಅನಿಲ ತಯಾರಿಕೆ ೨೯೨ಬ
Gas mask – ಅನಿಲದ ಮೊಗವಾಡ ೨೯೪ಎ
Gas meter – ಅನಿಲಮಾಪಕ ೨೯೭ಬ
Genealogical classification – ಆನುವಂಶಿಕ ವರ್ಗೀಕರಣ ೮೦೦ಎ
Genesis – ಆದಿಕಾಂಡ ೭೪೫ಎ
Gnosticism – ಅಧ್ಯಾತ್ಮರಹಸ್ಯವಾದ ೨೭೯ಎ
Goat – ಆಡು ೭೨೯ಬ
Goldsmithy – ಅಕ್ಕಸಾಲಿಗರ ಉದ್ಯಮ ೧೪೦ಬ
Ground water – ಅಂತರ್ಜಲ ೬೫ಬ
Gullet, diseases of – ಅನ್ನನಾಳದ ರೋಗಗಳು ೩೩೪ಬ
Gymnastics – ಅಂಗಸಾಧನೆ ೩೨ಬ
Habit – ಅಭ್ಯಾಸ ೩೯೧ಎ
Hand levels (clinometer) – ಅಂತರವನ್ನು ಅಳೆಯುವ ಕೈಯಂತ್ರ ೭೭ಎ
Happiness – ಆನಂದ[೨] ೭೯೬ಎ
Headline – ಅಗ್ರವಾರ್ತೆ ೧೭೮ಎ
Health and safety laws – ಆರೋಗ್ಯ, ಸುರಕ್ಷಣಾ ಕಾಯಿದೆಗಳು ೮೬೮ಎ
Health education – ಆರೋಗ್ಯ ಶಿಕ್ಷಣ ೮೬೭ಬ
Health insurance – ಆರೋಗ್ಯ ವಿಮೆ ೮೬೭ಬ
Health knowledge – ಆರೋಗ್ಯ ತಿಳಿವಳಿಕೆ ೮೬೭ಎ
Heredity – ಅನುವಂಶೀಯತೆ ೩೨೦ಬ
Hierarchy – ಅಧಿಕಾರದರ್ಜೆ ೨೭೨ಎ
High pressure – ಅಧಿಕಸಂಮರ್ದ ೨೭೦ಬ
Histology – ಅಂಗಾಂಶಶಾಸ್ತ್ರ ೩೮ಬ
Histology in plants – ಅಂಗಾಂಶಶಾಸ್ತ್ರ (ಸಸ್ಯಗಳಲ್ಲಿ) ೪೧ಬ
Homologous series – ಅನುರೂಪಶ್ರೇಣಿಗಳು ೩೨೦ಎ
Horse power – ಅಶ್ವಸಾಮರ್ಥ್ಯ ೫೭೯ಬ
Humidity – ಆರ್ದ್ರತೆ ೯೧೯ಬ
Hygiene – ಆರೋಗ್ಯಶಾಸ್ತ್ರ ೮೬೭ಬ
Hyperbola – ಅತಿಪರವಲಯ ೨೩೩ಎ
Hyperbolic functions – ಅತಿಪರವಲಯಿಕ ಉತ್ಪನ್ನಗಳು ೨೩೩ಎ
Hyper spaces – ಅತ್ಯಾಕಾಶಗಳು ೨೪೬ಬ
Hypothesis – ಆಧಾರಭಾವನೆ ೭೭೧ಬ
Hypoxia (Anoxia) – ಆಮ್ಲಜನಕ ಕೊರೆ ೮೪೯ಎ
Igneous rocks – ಅಗ್ನಿಶಿಲೆಗಳು ೧೬೯ಬ
Imitation – ಅನುಕರಣೆ[೧] ೩೦೧ಎ
Impartible estate – ಅವಿಭಾಜ್ಯ ದಾಯ ೫೬೨ಬ
Imports – ಆಮದುಗಳು ೮೩೨ಎ
Indeterminate equations – ಅನಿರ್ದಿಷ್ಟ ಸಮೀಕರಣಗಳು ೨೮೯ಬ
Indeterminate structure – ಅನಿರ್ದಿಷ್ಟ ರಚನೆ ೨೮೯ಎ
Indian medicine – ಆಯುರ್ವೇದ ೮೫೭ಎ
Indigestion – ಅಜೀರ್ಣ ೧೯೬ಎ
Induction – ಅನುಗಮನ ೩೦೫ಬ

Inequality – ಅಸಮೀಕರಣ ೫೯೫ಬ
Inequality, economic – ಅಸಮತೆ, ಆರ್ಥಿಕ ೫೯೪ಬ
Infinite product – ಅನಂತಗುಣಲ್ಧ ೨೮೦ಬ
Infinity and infinitesimal – ಅನಂತ ಮತ್ತು ಅನಂತಸೂಕ್ಷ್ಮ ೨೮೨ಬ
Infrared radiation – ಅತಿರಕ್ತರಶ್ಮಿಪುಂಜ ೨೩೮ಬ
Injector – ಅಂತಃಕೋಪಕ ೬೪ಎ
Inlier – ಅಂತಸ್ಥಶಿಲೆ ೯೭ಬ
Institute of International Affairs – ಅಂತಾರಾಷ್ಟ್ರೀಯ ವಿಚಾರಸಂಸ್ಥೆ ೧೧೦ಬ
Interdependence – ಅನ್ಯೋನ್ಯಾಶ್ರಯ ದೋಷ ೩೩೭ಎ
Interests – ಅಭಿರುಚಿಗಳು ೩೮೮ಎ
Interlocking – ಅಂತರ್ಕೀಲಕ ೬೪ಬ
Internal combustion engines – ಅಂತರ್ದಹನ ಎಂಜಿನ್ನುಗಳು ೬೭ಎ
Internal expansion – ಅಂತರ್ವಿಕಾಸ ೭೧ಬ
International Atomic Energy Agency – ಅಂತಾರಾಷ್ಟ್ರೀಯ ಅಣುಶಕ್ತಿನಿಯೋಗ ೯೭ಬ
International Bank for Reconstruction and Development – ಅಂತಾರಾಷ್ಟ್ರೀಯ ಪುನಾರಚನೆ ಮತ್ತು ಅಭಿವೃದ್ಧಿ ಬ್ಯಾಂಕು ೧೦೬ಬ
International cartels – ಅಂತಾರಾಷ್ಟ್ರೀಯ ಕಾರ್ಟೆಲ್ಲುಗಳು ೧೦೦ಎ
International Cartographic Association – ಅಂತಾರಾಷ್ಟ್ರೀಯ ಭೂಪಟ ಶಾಸ್ತ್ರ ಸಂಘ ೧೦೯ಎ
International Commodity Agreements – ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ೧೧೫ಬ
International Conferences – ಅಂತಾರಾಷ್ಟ್ರೀಯ ಸಮ್ಮೇಳನಗಳು ೧೧೫ಎ
International Court of Justice – ಅಂತಾರಾಷ್ಟ್ರೀಯ ನ್ಯಾಯಾಲಯ ೧೦೬ಎ
International Dateline – ಅಂತಾರಾಷ್ಟ್ರೀಯ ದಿನಾಂಕರೇಖೆ ೧೦೪ಬ
International Development Association – ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ೯೮ಎ
International Economic Associations – ಅಂತಾರಾಷ್ಟ್ರೀಯ ಆರ್ಥಿಕ ಸಂಘಗಳು ೯೯ಬ
International Economics – ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ೯೮ಎ
International Finance Corporation – ಅಂತಾರಾಷ್ಟ್ರೀಯ ಆರ್ಥಿಕ ಮಂಡಳಿ ೯೯ಎ
International Geographical Union – ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟ ೧೦೯ಬ
International Geophysical Year – ಅಂತಾರಾಷ್ಟ್ರೀಯ ಭೂಭೌತ ವರ್ಷ ೧೦೯ಎ
International Language – ಅಂತಾರಾಷ್ಟ್ರೀಯ ಭಾಷೆ ೧೦೮ಎ
International Institute of Agriculture – ಅಂತಾರಾಷ್ಟ್ರೀಯ ಕೃಷಿಸಂಸ್ಥೆ ೧೦೧ಎ
Internationalism – ಅಂತಾರಾಷ್ಟ್ರೀಯತೆ ೧೦೪ಬ
International Labour Organization – ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ೧೦೧ಎ
International Monetary Fund – ಅಂತಾರಾಷ್ಟ್ರೀಯ ದ್ರವ್ಯನಿಧಿ ೧೦೫ಎ
International Newspaper Organization – ಅಂತಾರಾಷ್ಟ್ರೀಯ ಪತ್ರಿಕಾಸಂಸ್ಥೆ ೧೦೬ಬ
International Organisations – ಅಂತಾರಾಷ್ಟ್ರೀಯ ಸಂಸ್ಥೆಗಳು ೧೧೪ಎ
International payment – ಅಂತಾರಾಷ್ಟ್ರೀಯ ಬಾಕಿ ಪಾವತಿ ೧೦೭ಬ
International politics – ಅಂತಾರಾಷ್ಟ್ರೀಯ ಸಂಬಂಧಗಳು ೧೧೩ಬ
International Quiet Sun Year – ಅಂತಾರಾಷ್ಟ್ರೀಯ ಶಾಂತಸೌರವರ್ಷ ೧೧೩ಎ
International relations – ಅಂತಾರಾಷ್ಟ್ರೀಯ ಸಂಬಂಧಗಳು ೧೧೩ಬ
Internationals – ಅಂತಾರಾಷ್ಟ್ರೀಯಗಳು ೧೦೧ಬ
International trade – ಅಂತಾರಾಷ್ಟ್ರೀಯ ವ್ಯಾಪಾರ ೧೧೧ಎ
Interpolation – ಅಂತರ್ನಿವೇಶನ ೭೨ಎ
Interregnum – ಅಭ್ಯಂತರ ಕಾಲ ೩೯೧ಎ
Introspection – ಅಂತರವಲೋಕನ ೭೭ಎ
Intuition – ಅಂತರ್ಬೋಧೆ ೬೯ಬ
Invariants, covariants – ಅಚರಗಳು, ಸಹಚರಗಳು ೧೮೦ಬ
Invertebrate embryology – ಅಕಶೇರುಕ ಭ್ರೂಣಶಾಸ್ತ್ರ ೧೩೧ಎ
Invertebrates – ಅಕಶೇರುಕಗಳು ೧೨೭ಬ
Involute – ಅಂತರ್ವಲಿತ ೭೦ಬ
Iodine – ಅಯೊಡೀನ್ ೪೩೪ಬ
Iodoform – ಅಯಡೊಫಾರಮ್ ೪೨೯ಬ
Ion – ಅಯಾನು ೪೩೩ಬ
Ion exchangers – ಅಯಾನ್ ವಿನಿಮಯಿಗಳು ೪೩೧ಬ
Ionosphere – ಅಯಾನ್ ಗೋಳ ೪೩೦ಬ
Jelly fish – ಅಂಬಲಿ ಮೀನು ೧೨೨ಎ
Juglandaceae – ಅಕ್ರೋಟ್ ೧೪೫ಎ
Keel – ಅಡಿಗಟ್ಟು ೨೦೬ಬ
Kinetic theory of matter – ಅಣುಚಲನವಾದ, ವಸ್ತುವಿನ ೨೧೮ಬ
Kokam – ಅಮಪುರಿ ೩೯೩ಬ
Lac – ಅರಗು ೪೪೧ಬ
Lama Pacos (Alpaca) – ಅಲ್ಪಾಕ ೫೪೨ಎ
Laissez-faire – ಅನಿರ್ಬಂಧಿತ ಆರ್ಥಿಕವ್ಯವಸ್ಥೆ ೨೯೧ಬ
Latitude and longitude – ಅಕ್ಷಾಂಶ ಮತ್ತು ರೇಖಾಂಶ ೧೫೦ಎ
Lauracea – ಅಂತರಗಂಗೆ ೭೫ಎ
Law of contradiction – ಅವಿರೋಧ ನಿಯಮ ೫೬೩ಬ
Leap year – ಅಧಿಕವರ್ಷ ೨೭೦ಎ
Legion – ಅಪರಿಮಿತ ಸೈನ್ಯದಳ ೩೪೯ಬ
Licence, licensee – ಅನುಜ್ಞೆ, ಅನುಜ್ಞಾಧಾರಿ ೩೦೮ಎ
Lie detection – ಅನೃತಶೋಧ ೩೨೯ಎ
Limb – ಅವಯವ ೫೫೫ಎ
Linseed oil – ಅಗಸೆ ಎಣ್ಣೆ ೧೫೫ಬ
Liquefaction of gases – ಅನಿಲದ್ರವೀಕರಣ ೨೯೪ಬ
Liquorice – ಅತಿಮಧುರ ೨೩೫ಎ
Literacy – ಅಕ್ಷರತೆ ೧೪೭ಎ
Low pressure – ಅಲ್ಪಸಂಮರ್ದ ೫೪೧ಬ
Low temperature and super conductivity – ಅಲ್ಪತಾಪ ಮತ್ತು ಅತಿವಾಹಕತ್ವ ೫೩೮ಎ

Management – ಆಡಳಿತ ನಿರ್ವಹಣೆ ೭೨೮ಎ
Marble – ಅಮೃತಶಿಲೆ ೪೦೧ಎ
Mars – ಅಂಗಾರಕ ೪೬ಎ
Matrix – ಅಚ್ಚು, ಎರಕದ ೧೮೩ಬ
Measure, weight, count – ಅಳತೆ, ತೂಕ, ಎಣಿಕೆ ೬೦೯ಬ
Mica – ಅಭ್ರಕ ೩೯೨ಎ
Migraine – ಅರೆತಲೆಬೇನೆ ೪೯೩ಬ
Milky Way – ಆಕಾಶಗಂಗೆ ೬೭೨ಬ
Millingtonia hortensis – ಆಕಾಶಮಲ್ಲಿಗೆ ೬೭೬ಎ
Mimicry – ಅನುಕರಣೆ[೨] ೩೦೧ಬ
Mine – ಅಡಿಮದ್ದು ೨೦೭ಬ
Minority rights – ಅಲ್ಪಸಂಖ್ಯಾತರ ಹಕ್ಕುಗಳು ೫೪೦ಎ
Modern algebra – ಆಧುನಿಕ ಬೀಜಗಣಿತ ೭೮೮ಬ
Modern, Modernism – ಆಧುನಿಕ, ಆಧುನಿಕತೆ ೭೭೪ಎ
Modern music – ಆಧುನಿಕ ಕರ್ಣಾಟಕ ಸಂಗೀತ ೭೯೩ಬ
Modern western philosophy, march of – ಆಧುನಿಕ ಪಾಶ್ಚಾತ್ಯತತ್ತ್ವದ ಮುನ್ನಡೆ ೭೭೫ಬ
Mohair – ಅಂಗೋರ ೪೭ಎ
Molecular distillation – ಅಣು ಬಟ್ಟಿ ಇಳಿಸುವ ವಿಧಾನ ೨೨೨ಎ
Molecular spectrum – ಅಣುರೋಹಿತ ೨೨೫ಬ
Molecular structure – chemical – ಅಣುರಚನಾಸ್ವರೂಪ, ರಾಸಾಯನಿಕ ೨೨೨ಎ
Molecular theory – ಅಣುಸಿದ್ಧಾಂತ ೨೨೭ಎ
Molecule – ಅಣು[೧] ೨೧೮ಎ
Monism – ಅದ್ವೈತ ೨೬೪ಎ
Moral sense, Theory of – ಆತ್ಮಸಾಕ್ಷಿ ಪ್ರಾಮಾಣ್ಯವಾದ ೭೩೮ಎ
Morphology – ಆಕೃತಿವಿಜ್ಞಾನ ೬೮೭ಬ
'Most Favoured Nation' Clause – 'ಅತಿ ಸವಲತ್ತು ಪಡೆದ ರಾಷ್ಟ್ರ' ವ್ಯವಹಾರ ೨೪೪ಬ
Mushrooms – ಅಣಬೆಗಳು ೨೧೪ಎ
Necrosis – ಅಳಿಗೊಳಿತ ೬೩೩ಬ
Non-cooperation – ಅಸಹಕಾರ ೫೯೫ಬ
Nomads, their life – ಅಲೆಮಾರಿ ಜನ, ಜೀವನ ೫೩೨ಬ
Non-metals – ಅಲೋಹಗಳು ೫೩೬ಎ
Non-violence – ಅಹಿಂಸೆ ೬೨೭ಬ
Nymph – ಅಪ್ಸರೆಕೀಟ ೩೬೪ಎ
Oath – ಆಣೆ ೭೩೨ಬ
Obscene – ಅಶ್ಲೀಲ ೫೭೩ಬ
Obsolescence – ಅಪ್ರಚಲಿತತೆ ೩೬೩ಬ
Occlusion of gases – ಅನಿಲಗ್ರಸನ ೨೯೨ಬ
Octahedron – ಅಷ್ಟಫಲಕ ೫೮೧ಬ
Octal number system – ಅಷ್ಟಾಂಶ ಸಂಖ್ಯಾವ್ಯವಸ್ಥೆ ೮೨೭ಎ
Octopus – ಅಷ್ಟಪಾದಿ ೫೮೧ಬ
Offset printing – ಆಫ್‌ಸೆಟ್ ಮುದ್ರಣ ೮೨೭ಎ
Oligarchy – ಅಲ್ಪತಂತ್ರ ೫೩೮ಎ
Oncidium – ಅನ್ಸಿಡಿಯಮ್ ೩೩೭ಬ
Oolites – ಅಂಡಾಶ್ಮಗಳು ೬೩ಬ
Oophorectomy – ಅಂಡಾಶಯ ಕೊಯ್ತೆಗೆತ ೬೩ಬ
Opium – ಅಫೀಮು ೩೬೪ಬ
Opto phone – ಅಂಧವಾಚನಬೋಧಕ ಯಂತ್ರ ೧೨೧ಎ
Orchids – ಆರ್ಕಿಡ್ಡುಗಳು ೮೭೯ಎ
Ordovician system – ಆರ್ಡೊವಿಷಿಯನ್ ಸ್ತೋಮ ೮೯೦ಎ
Ore – ಅದಿರು ೨೫೪ಬ
Ore bin – ಅದಿರು ಕಣಜ ೨೬೦ಎ
Ore dressing – ಅದಿರು ಶುದ್ಧಿ ೨೬೧ಬ
Ore genesis – ಅದಿರು ಜನನ ೨೬೦ಎ
Ornamental foliage plants – ಅಲಂಕಾರದ ಎಲೆಸಸ್ಯಗಳು ಮತ್ತು ಬೇಲಿಗಳು ೫೧೬ಎ
Ornamental stones – ಅಲಂಕಾರಶಿಲೆಗಳು ೫೧೭ಎ
Ornaments – ಆಭರಣಗಳು ೮೨೮ಬ
Orphanages – ಅನಾಥಾಲಯಗಳು ೨೮೫ಎ
Orthoptera – ಆರ್ತ್ಯಾಪ್ಟೆರ ೮೯೧ಬ
Orthorhombic system – ಆರ್ಥೋರಾಂಬಿಕ್ ವರ್ಗ ೯೧೯ಎ
Orthosiphon stamineus – ಆರ್ತೊಸಿಫೊನ್ ಸ್ಟಾಮಿನಿಯಸ್ ೮೯೧ಬ
Oscillation – ಆಂದೋಲನ ೬೫೧ಎ
Oscilloscope – ಆಂದೋಲನ ಲೇಖಕ ೬೫೨ಎ
Osteichthyes – ಅಸ್ಥಿಮತ್ಸ್ಯಗಳು ೬೦೯ಎ
Ostracoderma – ಅಸ್ಥಿಕವಚದ ಮೀನುಗಳು ೬೦೯ಎ
Ovariotomy – ಅಂಡಾಶಯ ಕೊಯ್ತೆಗೆತ ೬೩ಬ
Ovule, in plants – ಅಂಡಕ (ಸಸ್ಯಗಳಲ್ಲಿ) ೬೦ಬ
Oxalic acid – ಆಕ್ಸಾಲಿಕ್ ಆಮ್ಲ ೬೯೧ಎ
Oxalis – ಆಕ್ಸಾಲಿಸ್ ೬೯೧ಬ
Oxide – ಆಕ್ಸೈಡ್ ೬೯೩ಬ
Oxolotl – ಆಕ್ಸೊಲಾಟಲ್ ೬೯೪ಎ
Oxy-acetylene flame – ಆಕ್ಸಿಅಸಿಟಲೀನ್ ಜ್ವಾಲೆ ೬೯೧ಬ
Oxygen – ಆಕ್ಸಿಜನ್ ೬೯೨ಬ
Oxytetracycline – ಆಕ್ಸಿಟೆಟ್ರಸೈಕ್ಲೀನ್ ೬೯೩ಬ
Palate – ಅಂಗುಳು ೪೭ಎ
Panning – ಆಚಯನ ೭೦೬ಬ
Paralysis agitans – ಅದಿರುಜೋಗರಿಕೆ ೨೬೧ಎ
Para- psychology – ಅತಿಮಾನಸಶಾಸ್ತ್ರ ೨೩೫ಬ
Parkinson's disease – ಅದಿರು ಜೋಗರಿಕೆ ೨೬೧ಎ
Parody – ಅಣಕುಬರೆಹ ೨೧೩ಬ
Partition wall – ಅಡ್ಡಗೋಡೆ ೨೧೧ಬ
Pennisetum Purpureum – ಆನೆಹುಲ್ಲು ೮೦೩ಎ
Penny dreadfuls – ಅಗ್ಗದ ಭಯಾನಕಗಳು ೧೬೦ಬ
Permutation and combination – ಅಂಕಪಾಶ ಮತ್ತು ವಿಕಲ್ಪ ೬ಎ

Phase rule – ಅವಸ್ಥಾನಿಯಮ ೫೫೭ಬ
Pineapple – ಅನಾನಸ್ ೨೮೫ಬ
Pleura, diseases of – ಅಳ್ಳೆಪರೆಯ ರೋಗಗಳು ೬೩೬ಎ
Pluralism – ಅನೇಕತ್ವವಾದ ೩೩೦ಎ
Plutonic rocks – ಅಂತರಗ್ನಿಶಿಲೆಗಳು ೭೫ಬ
Point four plan – ಅಂಶ–ಚತುರ್ಥಕ ಕಾರ್ಯಕ್ರಮ ೧೨೬ಎ
Postal stamps – ಅಂಚೆಯ ಚೀಟಿಗಳು ೫೧ಬ
Postal system, history of – ಅಂಚೆ ಇತಿಹಾಸ ೪೮ಎ
Postulates of thought – ಆಧಾರತತ್ತ್ವಗಳು ೭೭೧ಎ
Precession – ಅಯನಾಂಶ ೪೩೦ಎ
Prehistoric art – ಆದಿಮಾನವಕಲೆ ೭೫೪ಬ
Primate – ಆದಿಮಾನವ ೭೫೨ಎ
Primitive art – ಆದಿಮಜನರ ಕಲೆ ೭೪೯ಬ
Principle of contradiction – ಅಂತರ್ವಿರೋಧ ತತ್ತ್ವ ೭೨ಎ
Printing press – ಅಚ್ಚುಕೂಟ ೧೮೪ಎ
Prism – ಅಶ್ರಗ ೫೭೩ಎ
Prismoidal formula – ಅಶ್ರಗೀಯೋಕ್ತಿ ೫೭೩ಬ
Proterozoic era – ಆದಿಜೀವಯುಗ ೭೪೭ಎ
Pyroclastic rocks – ಅಗ್ನಿಶಿಲಾಭಿದ್ರಗಳು ೧೬೮ಬ
Python – ಅಜಗರ[1] ೧೯೩ಎ
Quarry – ಅರೆ ಅಥವಾ ಕಲ್ಲುಗಣಿ ೪೯೨ಬ
Quenching – ಅದ್ದಿ ತಣಿಸುವಿಕೆ ೨೬೩ಎ
Radial velocity – ಅನುತ್ರಿಜ್ಯ ವೇಗ ೩೦೮ಬ
Red tapism – ಅತಿನಿಯಮ ಪದ್ಧತಿ ೨೩೧ಬ
Reservation of posts – ಆಡಳಿತಸ್ಥಾನಗಳ ಆರಕ್ಷಣ ೭೨೮ಬ
Revenue, public – ಆದಾಯ, ಸಾರ್ವಜನಿಕ ೭೪೪ಬ
Rice – ಅಕ್ಕಿ ೧೪೨ಬ
Rice moth – ಅಕ್ಕಿಪತಂಗ ೧೪೨ಬ
Rice weevil – ಅಕ್ಕಿಯ ಸೊಂಡಿಲುಕೀಟ ೧೪೩ಎ
Right of selection – ಆಯ್ಕೆ ಹಕ್ಕು ೮೬೩ಬ
Romance – ಅದ್ಭುತಕಥೆ ೨೬೩ಎ
Sacrilege – ಅಪವಿತ್ರಕಾರ್ಯ ೩೫೦ಬ
Sann-hemp – ಅಪಸೆಣಬು ೩೫೦ಬ
Saraca – ಅಶೋಕವೃಕ್ಷ ೫೭೨ಬ
Scabies – ಅಡಮ ೨೦೪ಬ
Scales of notation – ಅಂಕನಮಾನಗಳು ೫ಎ
Scheduled castes – ಅನುಸೂಚಿತ ಜಾತಿಗಳು ೩೨೭ಬ
Scorpius, â (Akrab), ä , ð – ಅನುರಾಧಾ ೩೧೮ಎ
Scout – ಅಗ್ರಚಾರ ೧೭೭ಬ
Sedimentation – ಅನುವರ್ಷ ಅವಸಾದನ ೩೨೬ಎ
Seer – ಅಂಜಲೆ ೫೨ಎ
Selection – ಆಯ್ಕೆ ೮೬೩ಬ
Self-assertion, Self-submission – ಆತ್ಮಪ್ರತಿಷ್ಠೆ, ಆತ್ಮಶರಣಾಗತಿ ೭೩೬ಎ; ಆತ್ಮಪ್ರತ್ಯಯ ೭೩೭ಬ
Self-conscience – ಆತ್ಮಸಾಕ್ಷಿ ೭೩೮ಎ
Self-determination – ಆತ್ಮನಿರ್ಣಯಾಧಿಕಾರ ೭೩೫ಬ
Self-realization – ಆತ್ಮಸಾಕ್ಷಾತ್ಕಾರ ೭೩೮ಎ; ಆತ್ಮಸಿದ್ಧಿ ೭೪೯ಬ
Self-sacrifice – ಆತ್ಮತ್ಯಾಗ ೭೩೪ಬ
Sequential analysis – ಅನುಕ್ರಮ ವಿಶ್ಲೇಷಣೆ ೩೦೪ಬ
Sesbania – ಅಗಸೆ ೧೫೫ಬ
Significant form – ಅರ್ಥಪೂರ್ಣರೂಪ ೫೦೮ಎ
Sodium bicarbonate (baking powder) – ಅಡಿಗೆಸೋಡ ೨೦೭ಬ
Sodium chloride (common salt) – ಅಡಿಗೆ ಉಪ್ಪು ೨೦೬ಬ
Solstices – ಅಯನ ಸಂಕ್ರಾಂತಿಗಳು ೪೨೯ಬ
South-east Asia – ಆಗ್ನೇಯ ಏಷ್ಯ ೭೪೯ಎ
Space – ಆಕಾಶ[1] ೬೭೨ಬ
Space and time – ಆಕಾಶ ಮತ್ತು ಕಾಲ ೬೭೪ಬ
Space exploration – ಅಂತರಿಕ್ಷ ಸಂಶೋಧನೆ ೧೭೯ಬ
Speaker – ಅಧ್ಯಕ್ಷ ೨೭೮ಎ
*Spondias mangifera* (The Indian log plum) – ಅಮಟೆಗಿಡ ೩೯೩ಎ
Squirrel – ಅಳಿಲು ೬೩೫ಎ
Squirrel fish – ಅಳಿಲು ಮೀನು ೬೩೫ಬ
Statistical data – ಅಂಕಿಅಂಶಗಳು ೭ಎ
Suicide – ಆತ್ಮಹತ್ಯೆ ೭೪೧ಎ
Supercharging – ಅತಿಪೂರೈಕೆ ೨೩೪ಬ
Super heater – ಅಧಿಕೋಷ್ಣಕ ೨೭೪ಎ
Supernatural, in literature – ಅದ್ಭುತ, ಸಾಹಿತ್ಯದಲ್ಲಿ ೨೬೩ಬ
Supersonic – ಅತಿಶಬ್ದ ೨೪೦ಬ
Supertax – ಅಧಿಕರ ೨೬೮ಎ
Surcharge – ಅಧಿಭಾರ ೨೭೪ಬ
Surge tanks – ಅಕ್ಷೋಭಕ ತೊಟ್ಟಿಗಳು ೧೫೧ಎ
Talc – ಅಭ್ರಕಚೂರ್ಣ ೩೯೩ಎ
Telepathy – ಅನ್ಯಮನಃಸ್ಪರ್ಶನ ೩೩೫ಬ
Terminalia chebula – ಅಳಲೆ ಮರ ೬೩೩ಎ
Testing of hypothesis – ಆಧಾರಭಾವನೆಯ ಪರೀಕ್ಷೆ ೭೭೧ಬ
Theodolite – ಅಂತರಕೋನಮಾಪಕ ೭೫ಎ
Three distances – ಅಂತರತ್ರಯ ೭೬ಬ
Three states of matter – ಅವಸ್ಥಾತ್ರಯಗಳು, ವಸ್ತುವಿನ ೫೫೬ಬ
Tidal power – ಅಲೆಗಳ ಉಬ್ಬರವಿಳಿತದ ಶಕ್ತಿ ೫೩೦ಎ
Tinispore – ಅಮೃತಬಳ್ಳಿ ೪೦೧ಎ
Tissue culture – ಅಂಗಾಂಶ ಕೃಷಿ ೩೪ಎ
Tissue test – ಅಂಗಾಂಶ ಪರೀಕ್ಷೆ ೩೮ಎ
Titration – ಅನುಮಾಪನ ೩೧೭ಎ
Tool steel – ಆಯುಧದ ಉಕ್ಕು ೮೫೭ಎ
Tort – ಅಪಕೃತ್ಯ ೩೩೮ಎ
Tortoise – ಆಮೆ ೮೩೮ಎ

Tortoise shell – ಆಮೆಯ ಚಿಪ್ಪು ೮೩೮ಬ
Trespass – ಅತಿಕ್ರಮ ೨೩೦ಬ
Trespasser – ಆಕ್ರಮಣಕಾರ ೬೯೧ಎ
Twins, twinning – ಅವಳಿಗಳು, ಅವಳಿತನ ೫೬೦ಎ
Type – ಅಚ್ಚುಮೊಳೆ ೧೮೪ಎ
Typecasting machines – ಅಚ್ಚುಮೊಳೆ ಎರಕ ಹೊಯ್ಯುವ ಯಂತ್ರಗಳು ೧೮೪ಬ
Type metal – ಅಚ್ಚುಮೊಳೆಯ ಲೋಹ ೧೮೭ಎ
Typography – ಅಚ್ಚುಮೊಳೆ ಮುದ್ರಣ ೧೮೬ಬ
Typology – ಆಕೃತೀಯ ವರ್ಗೀಕರಣ ೬೮೯ಎ
Uncertainty, principle of – ಅನಿಶ್ಚಿತತ್ವ ನಿಯಮ ೨೬೯ಎ
Unearned income – ಅನಾರ್ಜಿತ ವರಮಾನ ೨೮೭ಎ
Ultimate strength – ಅಂತಿಮಬಲ ೧೧೭ಬ
Ultra basic rocks – ಅತ್ಯಲ್ಪ ಸಿಲಿಕಾಂಶಶಿಲೆಗಳು ೨೪೬ಎ
Ultramarine – ಅಲ್ಟ್ರಾಮರೀನ್ ೫೩೭ಎ
Ultra violet radiation – ಅತಿನೇರಳೆ ಕಿರಣಗಳು ೨೩೧ಬ
Ursinia Anethoides – ಅರ್ಸಿನಿಯ ಅನೆತಾಯ್ಡಿಸ್ ೫೧೪ಎ
Utopia – ಆದರ್ಶರಾಜ್ಯ ೭೪೨ಎ
Vega – ಅಭಿಜಿತ್ ೩೮೨ಬ
Vegetative propagation – ಅಬೀಜೋತ್ಪಾದನೆ ೩೬೯ಎ
Vernalization – ಅಂಕುರತ್ವರಣ ೧೦ಎ
Vestigal organs – ಅವಯವಶೇಷಗಳು ೫೫೫ಎ
Vibration – ಅದಿರಾಟ ೨೫೪ಬ
Vigna catjang walp – ಅಲಸಂದೆ ೫೨೨ಬ
Vithonia – ಅಶ್ವಗಂಧ ೫೭೪ಎ
Volcano – ಅಗ್ನಿಪರ್ವತ ೧೬೪ಎ
Warrant – ಆಜ್ಞಾಪತ್ರ ೭೧೩ಎ
Waterproof fabric – ಅಕ್ಲೇದಿತ ವಸ್ತ್ರ ೧೪೫ಬ
Wax wing – ಅರಗುರೆಕ್ಕೆ ಹಕ್ಕಿ ೪೪೨ಎ
Weed – ಅಲುಬು ೫೨೬ಎ
Weir – ಅಣೆಕಟ್ಟು ೨೨೭ಬ
Wrongful restraint – ಅಕ್ರಮ ನಿರ್ಬಂಧ ೧೪೪ಎ
Xenolith – ಅನ್ಯಶಿಲೆ ೩೩೬ಎ


# ಲೇಖಕ ಸೂಚಿ

**ಎ.** ಅನಂತರಾಮಯ್ಯ, ಎಂ.ವಿ. (ದಿ)
ಸೂಪರಿಂಟೆಂಡೆಂಟ್
ಪ್ರಾಣಿ ಸಂಗ್ರಹಾಲಯ, ಮೈಸೂರು

**ಎ.ಎ.** ಅಪ್ಪಾದೊರೆ, ಎ.
ನಿರ್ದೇಶಕ (ವಿ)
ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ್ ಅಫೇರ್ಸ್
ನವದೆಹಲಿ

**ಎ.ಎಐ.** ಅಯ್ಯಪ್ಪನ್, ಐ. (ದಿ)
ನಿವೃತ್ತ ಪ್ರಾಧ್ಯಾಪಕ
ಕಾನ್ವೆಂಟ್ ರಸ್ತೆ, ಷೆನಾಯಿ ನಗರ
ಮದರಾಸು

**ಎ.ಎ.ಕೆ.** ಅನಂತಕೃಷ್ಣ, ಎ.
ಅಧ್ಯಾಪಕ, ನ್ಯಾಯಶಾಸ್ತ್ರ ವಿಭಾಗ
ಶಾರದಾವಿಲಾಸ ಲಾ ಕಾಲೇಜು, ಮೈಸೂರು

**ಎ.ಬಿ.ಎಂ.** ಮುಖರ್ಜಿ, ಎ.ಬಿ.
ರೀಡರ್ (ವಿ), ಭೂಗೋಳವಿಜ್ಞಾನ ವಿಭಾಗ
ಪಂಜಾಬ್ ವಿಶ್ವವಿದ್ಯಾಲಯ, ಚಂಡೀಘರ್

**ಎ.ಸಿ.** ಚಂದ್ರಶೇಖರಯ್ಯ, ಎ.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಎನ್.ಐ.ಇ., ಮೈಸೂರು

**ಎ.ಸಿ.ಎಸ್.** ಶಾಂತಾಮಣಿ, ಎ.ಸಿ.
56, 6ನೆಯ ಮುಖ್ಯರಸ್ತೆ
ಸರಸ್ವತೀಪುರಂ, ಮೈಸೂರು

**ಎ.ಜಿ.ಕೆ.** ಕುಲಕರ್ಣಿ, ಎ.ಜಿ.
ಮುಖ್ಯೋಪಾಧ್ಯಾಯ (ವಿ)
ಕೇರಾಫ್ ಪಿ.ಜಿ. ಕಮಲಾಕರ
ಗಾಜಿಪುರ, ಗುಲ್ಬರ್ಗ

**ಎ.ಕೆ.** ಕುಮಾರಸ್ವಾಮಿ, ಎ.
ಅಧ್ಯಾಪಕ (ವಿ)
ಭೂಗೋಳವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಎ.ಕೆ.ಬಿ.** ಕೃಷ್ಣಭಟ್ಟ, ಎ.
ರೀಡರ್, ಭೌತವಿಜ್ಞಾನ ವಿಭಾಗ
ವಿಜಯ ಕಾಲೇಜು, ಮೂಲ್ಕಿ

**ಎ.ಕೆ.ಜಿ.** ಗೋಪಾಲರಾಜನ್, ಎ.ಕೆ. (ದಿ)
ಗೌರವ ಸರ್ಜನ್
ಕೆ.ಆರ್. ಆಸ್ಪತ್ರೆ, ಮೈಸೂರು

**ಎ.ಕೆ.ಎಸ್.** ಕೃಷ್ಣಸ್ವಾಮಿ, ಎ.
ಜಿಲ್ಲಾ ಅರಣ್ಯಾಧಿಕಾರಿ (ವಿ)
74, 3ನೆಯ ಮುಖ್ಯರಸ್ತೆ
ಬಿಎಚ್‌ಸಿಎಸ್ ಲೇಔಟ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು

**ಎ.ಎಲ್.ಎ.** ಲಕ್ಷ್ಮೀನಾರಾಯಣ ಆಳ್ವ, ಎ. (ದಿ)
ಏರ್ಯ ಹೌಸ್
ಬಂಟ್ವಾಳ (ದ.ಕ.)

**ಎ.ಎಲ್.ಎಚ್.** ಹಿರೇಮಠ, ಎ.ಎಲ್.
ಪ್ರಾಂಶುಪಾಲರು (ವಿ)
ಮುನಿಸಿಪಲ್ ಆರ್ಟ್ಸ್ ಕಾಲೇಜು
ನರಗುಂದ, ಧಾರವಾಡ ಜಿಲ್ಲೆ

**ಎ.ಎಲ್.ಎಸ್.** ಶಿವರುದ್ರಪ್ಪ, ಎ.ಎಲ್.
ಪ್ರಾಧ್ಯಾಪಕ (ವಿ), ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎ.ಎಂ.** ಮೈಲಾರ್‌ರಾವ್, ಎ. (ದಿ)
ಸಂಪಾದಕ, ಮಾನವಿಕ ವಿಭಾಗ
ಕನ್ನಡ ವಿಶ್ವಕೋಶ, ಮೈಸೂರು

**ಎ.ಎಂ.ಎ.** ಅಣ್ಣಿಗೇರಿ, ಎ.ಎಂ.
ಸಹಾಯಕ ಸಂಶೋಧಕ (ವಿ)
ಪ್ರಾಕ್ತನ ಶಾಸ್ತ್ರ ಇಲಾಖೆ, ಧಾರವಾಡ

**ಎ.ಎಂ.ಆರ್.** ರಾಜಶೇಖರಯ್ಯ, ಎ.ಎಂ.
ರೀಡರ್, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| | |
|---|---|
| ಎ.ಎನ್.ಆರ್. | ರಾಧಾಕೃಷ್ಣನ್, ಎ.ಎನ್.<br>ಕ್ರಿಶ್ಚಿಯನ್ ಮೆಡಿಕಲ್ ಕಾಲೇಜು<br>ವೆಲ್ಲೂರು |
| ಎ.ಎನ್.ಎಸ್. | ನಾಗಭೂಷಣರಾವ್ ಸಿಂಧೆ, ಎ. (ದಿ)<br>ಪ್ರಾಧ್ಯಾಪಕ, ಜೀವವಿಜ್ಞಾನ<br>ಸ್ನಾತಕೋತ್ತರ ವಿಭಾಗ, ಮಂಗಳೂರು |
| ಎ.ಎನ್.ಎಸ್.ಐ. | ಶ್ರೀನಿವಾಸ ಐಯ್ಯಂಗಾರ್, ಎ.ಎನ್.<br>ಶ್ರೀ ಶಾನುದಾಸ ಗ್ರಂಥಮಾಲಾ<br>ಮೇಲುಕೋಟೆ |
| ಎ.ಎನ್.ಎಸ್.ಎಂ. | ಮೂರ್ತಿ, ಎ.ಎನ್.ಎಸ್.<br>ಕ್ಯಾಪ್ಟನ್ (ವಿ), ಬೆಂಗಳೂರು |
| ಎ.ಎನ್.ಯು. | ಉಪಾಧ್ಯೆ, ಎ.ಎನ್. (ದಿ)<br>ಪ್ರಾಧ್ಯಾಪಕ, ಅರ್ಧಮಾಗಧಿ<br>ರಾಜಾರಾಂ ಕಾಲೇಜು, ಕೊಲ್ಹಾಪುರ |
| ಎ.ಪಿ. | ಪ್ರೇಮಲತಾ ಶೆಟ್ಟಿ, ಎ.<br>ಅಧ್ಯಾಪಕಿ, ಇತಿಹಾಸ ವಿಭಾಗ<br>ಮಹಾರಾಣಿ ಕಾಲೇಜು, ಮೈಸೂರು |
| ಎ.ಪಿ.ಎಸ್. | ಶ್ರೀನಿವಾಸಮೂರ್ತಿ, ಎ.ಪಿ.<br>ರೀಡರ್ (ವಿ), ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎ.ಆರ್. | ರಮೇಶ್, ಎ.<br>ಭೂಗೋಳವಿಜ್ಞಾನ ವಿಭಾಗ<br>ಮದರಾಸು ವಿಶ್ವವಿದ್ಯಾಲಯ, ಚೆನ್ನೈ |
| ಎ.ಆರ್. | ರಂಗಣ್ಣ, ಎ.<br>ರೀಡರ್, ಭೌತವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಎ.ಆರ್.ಸಿ. | ರಾಮಚಂದ್ರ, ಎ.<br>ಅಧ್ಯಾಪಕ, ಎಂಜಿನಿಯರಿಂಗ್ ಕಾಲೇಜು<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಎ.ಆರ್.ಜಿ. | ಗೋವಿಂದರಾವ್, ಎ.ಆರ್.<br>ಪ್ರಾಧ್ಯಾಪಕ (ವಿ)<br>ಜೆ.ಜೆ.ಎಂ. ಕಾಲೇಜು, ದಾವಣಗೆರೆ |
| ಎ.ಆರ್.ಕೆ. | ಅಶೋಕ, ಆರ್. ಕೇಳ್ಕರ್<br>ಪ್ರಾಧ್ಯಾಪಕ (ವಿ)<br>ಭಾಷಾವಿಜ್ಞಾನ ವಿಭಾಗ<br>ಡೆಕ್ಕನ್ ಕಾಲೇಜು, ಪೂನ |
| ಎ.ಆರ್.ಎಸ್. | ಸತ್ಯಬೋಧರಾವ್, ಎ.ಆರ್.<br>ಚೀಫ್ ಎಂಜಿನಿಯರ್<br>ಕೋಲಾರ್ ಗೋಲ್ಡ್ ಮೈನ್ಸ್, ಮಾರಿಕುಪ್ಪಂ, ಕೆ.ಜಿ.ಎಫ್. |
| ಎ.ಆರ್.ವಿ. | ವಾಸುದೇವಮೂರ್ತಿ, ಎ.ಆರ್.<br>ರಸಾಯನವಿಜ್ಞಾನ ವಿಭಾಗ<br>ತಾತಾ ವಿಜ್ಞಾನಮಂದಿರ, ಬೆಂಗಳೂರು |
| ಎ.ಎಸ್. | ಸಂಪತ್ಕುಮಾರಾಚಾರ್ಯ, ಎ. (ವಿ)<br>ದೊಡ್ಡಬೆಲೆ, ನಾಗಮಂಗಲ ಪೋಸ್ಟ್ |
| ಎ.ಎಸ್.ಎಲ್. | ಲಕ್ಷ್ಮೀನಾರಾಯಣರಾವ್, ಎ.ಎಸ್.<br>ಸಹಾಯಕ ಆರ್ಥಿಕ ಸಲಹೆಗಾರ<br>ಉದ್ಯೋಗ ಮತ್ತು ಸರಬರಾಜು ಸಚಿವ ಶಾಖೆ, ನವದೆಹಲಿ |
| ಎ.ಎಸ್.ಆರ್. | ಸುಬ್ಬರಾವ್, ಎ.<br>ಪ್ರಾಧ್ಯಾಪಕ (ವಿ)<br>ಜೀವ ರಸಾಯನವಿಜ್ಞಾನ ವಿಭಾಗ<br>ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ |
| ಎ.ಎಸ್. | ಸುಂದರ, ಎ.<br>ಪ್ರಾಧ್ಯಾಪಕ (ವಿ)<br>'ಹಿಮಶೃಂಗ', ಶಾರದಾನಗರ, ಶೃಂಗೇರಿ |
| ಎ.ವಿ.ಎನ್. | ನರಸಿಂಹಮೂರ್ತಿ, ಎ.ವಿ.<br>ಪ್ರಾಧ್ಯಾಪಕ (ವಿ), ಭಾರತೀಯ ವಿದ್ಯಾಭವನ<br>ಮೈಸೂರು ಶಾಖೆ, ಮೈಸೂರು |
| ಎ.ವಿ.ವಿ. | ವೆಂಕಟರತ್ನಂ, ಎ.ವಿ. (ದಿ)<br>ಪ್ರಾಧ್ಯಾಪಕ<br>ಜಯಲಕ್ಷ್ಮೀಪುರಂ, ಮೈಸೂರು |
| ಬಿ. | ಭೀಮಾಚಾರ್ಯ<br>ಉಪಾಧ್ಯಾಯ (ವಿ)<br>ಸರ್ಕಾರಿ ವಿವಿಧೋದ್ದೇಶ ಪ್ರೌಢಶಾಲೆ, ಗುಲ್ಬರ್ಗ |
| ಬಿ.ಬಿ. | ಬಾಲಯ್ಯ, ಬಿ. (ದಿ)<br>ಜಿಲ್ಲಾ ಅರಣ್ಯಾಧಿಕಾರಿ, ಮೈಸೂರು |
| ಬಿ.ಬಿ.ಬಿ. | ಬಾಗಿ, ಬಿ.ಬಿ. (ದಿ)<br>ಪ್ರಾಧ್ಯಾಪಕ, ಮಾಳಮಡ್ಡಿ<br>ಧಾರವಾಡ |
| ಬಿ.ಬಿ.ಕೆ. | ಕಣವಿ, ಬಿ.ಬಿ.<br>ಅಧ್ಯಾಪಕ<br>ಕರ್ನಾಟಕ ಕಾಲೇಜು, ಧಾರವಾಡ |
| ಬಿ.ಜಿ. | ಬ್ರಹ್ಮಪ್ಪ, ಜಿ.<br>ಪ್ರಾಂಶುಪಾಲರು (ವಿ)<br>ಗೋಮಟೇಶ್ವರ ಕಾಲೇಜು, ಶ್ರವಣಬೆಳಗೊಳ |
| ಬಿ.ಎಚ್.ಎಂ. | ಮನೋಹರರಾಮ್, ಬಿ.ಎಚ್.<br>ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಪ್ರಥಮದರ್ಜೆ ಕಾಲೇಜು, ಉರಿಗಾಂ (ಕೆ.ಜಿ.ಎಫ್.) |
| ಬಿ.ಎಚ್.ಎಸ್. | ಶ್ರೀಧರ, ಬಿ.ಎಚ್.<br>ಪ್ರಾಂಶುಪಾಲರು (ವಿ)<br>ಗಾಂಧಿ ಸೆಂಟಿನರಿ ಮೆಮೋರಿಯಲ್ ಕಾಲೇಜು<br>ಸಿದ್ಧಾಪುರ (ಉ.ಕ. ಜಿಲ್ಲೆ) |
| ಬಿ.ಕೆ. | ಕುಪ್ಪುಸ್ವಾಮಿ, ಬಿ. (ದಿ)<br>ಪ್ರಾಧ್ಯಾಪಕ, ಮನೋವಿಜ್ಞಾನ ವಿಭಾಗ, ಬೆಂಗಳೂರು |
| ಬಿ.ಕೆ.ಬಿ. | ಬರುವಾ, ಬಿ.ಕೆ.<br>ಗುಹಾವಟಿ ವಿಶ್ವವಿದ್ಯಾಲಯ, ಗುಹಾವಟಿ |
| ಬಿ.ಕೆ.ಸಿ. | ಚಕ್ರಪಾಣಿ ಅಯ್ಯಂಗಾರ್, ಬಿ.ಕೆ. (ದಿ)<br>ಉಪಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಸರ್ಕಾರಿ ಕಾಲೇಜು, ತುಮಕೂರು |
| ಬಿ.ಕೆ.ಜಿ. | ಗುರುರಾಜರಾವ್, ಬಿ.ಕೆ. (ದಿ)<br>ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ<br>ಮಾನಸಗಂಗೋತ್ರಿ ಮೈಸೂರು |
| ಬಿ.ಕೆ.ಎಸ್. | ಶಿವರಾಮಯ್ಯ, ಬಿ.ಕೆ. (ದಿ)<br>ಉಪಪ್ರಾಧ್ಯಾಪಕ, ಸಂಸ್ಕೃತ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಲ್. | ಲಕ್ಷ್ಮೀಕಾಂತ, ಬಿ. (ದಿ)<br>ಪ್ರಾಧ್ಯಾಪಕ<br>ಎಸ್.ಜೆ.ಪಿ. ಇನ್ಸ್ಟಿಟ್ಯೂಟ್, ಬೆಂಗಳೂರು |
| ಬಿ.ಎಲ್.ಆರ್. | ರಾಮಸ್ವಾಮಿ, ಬಿ.ಎಲ್.<br>ಸಹಾಯಕ ನಿರ್ದೇಶಕ (ವಿ)<br>ದೈಹಿಕ ಶಿಕ್ಷಣ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |

# ಲೇಖಕ ಸೂಚಿ

| | |
|---|---|
| ಬಿ.ಎಲ್.ಎಸ್. | ಶ್ರೀನಿವಾಸಮೂರ್ತಿ, ಬಿ.ಎಲ್.<br>ರೀಡರ್ (ವಿ)<br>ಪಿ.ಇ.ಎಸ್. ಎಂಜಿನಿಯರಿಂಗ್ ಕಾಲೇಜು, ಮಂಡ್ಯ |
| ಬಿ.ಎಂ. | ಮುದ್ದಾಚಾರಿ, ಬಿ. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಂಎ. | ಬೆಳವಾಡಿ ಮಂಜುನಾಥ<br>ಅಧ್ಯಾಪಕ, ಪದವಿಪೂರ್ವ ಕಾಲೇಜು<br>ಚಿಕ್ಕಮಗಳೂರು |
| ಬಿ.ಎನ್. | ಬಸವಯ್ಯ, ಎನ್.<br>ವಿಶೇಷಾಧಿಕಾರಿ<br>ಮೀನುಗಾರಿಕೆ ಇಲಾಖೆ, ಬೆಂಗಳೂರು |
| ಬಿ.ಎನ್ಎ. | ನಾಗಪ್ಪ, ಬಿ.<br>ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಮೆಡಿಕಲ್ ಕಾಲೇಜು, ಮೈಸೂರು |
| ಬಿ.ಎನ್.ಬಿ. | ಬೋಳೇಗೌಡ, ಬಿ.ಎನ್. (ದಿ)<br>ಪರೀಕ್ಷಾಧಿಕಾರಿ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಬಿ.ಎನ್.ಸಿ. | ಚಂದ್ರಯ್ಯ, ಬಿ.ಎನ್.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಬಿ.ಎನ್.ಎನ್. | ನಾರಾಯಣ ಅಯ್ಯಂಗಾರ್, ಬಿ.ಎನ್.<br>ಪ್ರಾಧ್ಯಾಪಕ (ವಿ), ಪವರ್ ಎಂಜಿನಿಯರಿಂಗ್ ವಿಭಾಗ<br>ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು |
| ಬಿ.ಎನ್.ಎನ್.ಆರ್. | ನಾರಾಯಣರಾವ್, ಬಿ.ಎನ್. (ದಿ)<br>ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಸೇಂಟ್ ಫಿಲೋಮಿನ ಕಾಲೇಜು, ಮೈಸೂರು |
| ಬಿಬಿ. | ಭೋಗಪ್ಪ<br>ಅಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ<br>ಎಸ್.ಬಿ. ಕಾಲೇಜು, ಗುಲ್ಬರ್ಗ |
| ಬಿ.ಪಿ. | ಪುಟ್ಟಸ್ವಾಮಯ್ಯ, ಬಿ. (ದಿ)<br>ನಂ. 44, 1ನೆಯ ತಿರುವು<br>ಶ್ರೀರಾಮಪುರ, ಬೆಂಗಳೂರು |
| ಬಿ.ಪಿ.ಜಿ. | ಗೋಪಾಲಕೃಷ್ಣ, ಬಿ.ಪಿ.<br>ಪ್ರಾಂಶುಪಾಲರು (ವಿ)<br>ಬೆಂಗಳೂರು ಎಂಜಿನಿಯರಿಂಗ್ ಕಾಲೇಜು ಬೆಂಗಳೂರು |
| ಬಿ.ಪಿ.ಎಸ್. | ಸುಬ್ಬನರಸಿಂಹಶಾಸ್ತ್ರಿ<br>ಪಂಡಿತ, ಭಾಸ್ಕರ ಪಾಠಶಾಲೆ<br>ಜಯನಗರ, ಬೆಂಗಳೂರು |
| ಬಿ.ಆರ್. | ರಾಮಯ್ಯ, ಬಿ.<br>ತೆಲುಗು ಅಧ್ಯಾಪಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಆರ್.ಬಿ. | ಭಟ್ಟ, ಬಿ.ಆರ್.<br>ರೀಡರ್ (ವಿ), ಸಂಖ್ಯಾಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಬಿ.ಆರ್.ಜಿ. | ಗೋಪಾಲ್, ಬಿ.ಆರ್. (ದಿ)<br>ಪ್ರಾಧ್ಯಾಪಕ, ದಕ್ಷಿಣ ಭಾರತೀಯ ಅಧ್ಯಯನ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಆರ್.ಎಂ. | ಮೋದಕ್, ಬಿ.ಆರ್.<br>ಕರ್ನಾಟಕ ಕಾಲೇಜು, ಧಾರವಾಡ |
| ಬಿ.ಆರ್.ಎನ್. | ನಾರಾಯಣ ಅಯ್ಯಂಗಾರ್, ಬಿ.ಆರ್. (ದಿ)<br>ಪ್ರಾಧ್ಯಾಪಕ<br>ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| ಬಿ.ಆರ್.ಆರ್. | ರಾಮರಾವ್, ಬಿ. (ದಿ)<br>ನಿರ್ದೇಶಕ<br>ಗಣಿ ಮತ್ತು ಭೂವಿಜ್ಞಾನ ವಿಭಾಗ, ಬೆಂಗಳೂರು |
| ಬಿ.ಆರ್.ಎಸ್. | ಸುಬ್ಬರಾವ್, ಬಿ.ಆರ್.<br>ಪ್ರಾಂಶುಪಾಲರು (ವಿ), ಕಾಮರ್ಸ್ ಕಾಲೇಜು<br>ಮಲ್ಲೇಶ್ವರಂ, ಬೆಂಗಳೂರು |
| ಬಿ.ಎಸ್. | ಶಿವಮೂರ್ತಿಶಾಸ್ತ್ರೀ, ಬಿ. (ದಿ)<br>ಸಂಪಾದಕ, ಶರಣಸಾಹಿತ್ಯ ಪತ್ರಿಕೆ<br>141, ರಂಗಸ್ವಾಮಿ ದೇವಸ್ಥಾನದ ರಸ್ತೆ, ಬೆಂಗಳೂರು |
| ಬಿ.ಎಸ್.ಎ. | ಷೇಕ್ ಅಲಿ, ಬಿ.<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಸ್.ಕೆ. | ಕೃಷ್ಣಸ್ವಾಮಿ ಅಯ್ಯಂಗಾರ್, ಬಿ.ಎಸ್. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಬಿ.ಎಸ್.ಎಲ್. | ಸುಶೀಲ ಲಿಂಗಯ್ಯ, ಬಿ. (ದಿ)<br>ಪ್ರಾಧ್ಯಾಪಕಿ, ಗೃಹವಿಜ್ಞಾನ ವಿಭಾಗ<br>ರೀಜನಲ್ ಕಾಲೇಜು, ಮೈಸೂರು |
| ಬಿ.ಎಸ್.ಎನ್. | ನರಸಿಂಹ ಅಯ್ಯಂಗಾರ್, ಬಿ.ಎಸ್.<br>ಜಯನಗರ, ಬೆಂಗಳೂರು |
| ಬಿ.ಎಸ್.ಆರ್. | ಸದಾಶಿವರಾಜು, ಬಿ.<br>ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು |
| ಬಿ.ಎಸ್.ಆರ್.ಆರ್. | ರಾಮರಾವ್, ಬಿ.ಎಸ್. (ದಿ)<br>ಪ್ರಜಾವಾಣಿ<br>ಮಹಾತ್ಮಗಾಂಧಿ ರಸ್ತೆ, ಬೆಂಗಳೂರು |
| ಬಿ.ಎಸ್.ಎಸ್. | ಸೀತಾರಾಮಶಾಸ್ತ್ರಿ, ಬಿ. (ದಿ)<br>ರೀಡರ್, ಗಣಿತವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಬಿ.ಎಸ್.ಎಸ್.ಎ. | ಶ್ರೀಕಂಠಾರಾಧ್ಯ, ಬಿ.ಎಸ್.<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ವಿ.ಬಿ. | ಬನುಮಯ್ಯ, ಬಿ.ವಿ. (ದಿ)<br>ಪ್ರಾಂಶುಪಾಲರು<br>ಬನುಮಯ್ಯ ಕಾಮರ್ಸ್ ಕಾಲೇಜು, ಮೈಸೂರು |
| ಬಿ.ವಿ.ಜಿ. | ಗೋವಿಂದರಾಜುಲು, ಬಿ.ವಿ. (ದಿ)<br>ಪ್ರಾಧ್ಯಾಪಕ, ಭೂವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ವಿ.ಎಸ್. | ಬಾ.ವೇ. ಶ್ರೀಧರ<br>ಸಹಾಯಕ ಸಂಪಾದಕ<br>ಕನ್ನಡ ವಿಶ್ವಕೋಶ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಬಿ.ವಿ.ವಿ. | ವೆಂಕಟರಾವ್, ಬಿ.ವಿ.<br>ಸಹ ಪ್ರಾಧ್ಯಾಪಕ, ಕೃಷಿ ಕಾಲೇಜು<br>ಹೆಬ್ಬಾಳ್, ಬೆಂಗಳೂರು |
| ಬಿ.ವೈ.ಎಂ.ಜಿ. | ಗೌಂಡರ್, ಬಿ.ವೈ.ಎಂ.<br>ಪ್ರಾಣಿವಿಜ್ಞಾನ ವಿಭಾಗ<br>ಕರ್ನಾಟಕ ಕಾಲೇಜು, ಧಾರವಾಡ |

| | |
|---|---|
| ಸಿ. | ಚಿದಂಬರ ಕುಲಕರ್ಣಿ<br>ಅಧ್ಯಾಪಕ, ಭವನ್ಸ್ ಕಾಲೇಜು<br>ಅಂಧೇರಿ, ಮುಂಬಯಿ |
| ಸಿ.ಸಿ.ಪಿ. | ಪಟ್ಟಣಶೆಟ್ಟಿ, ಸಿ.ಸಿ.<br>ಪ್ರಾಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಸಿ.ಜಿ. | ಗುಂಡೂರಾವ್, ಸಿ.<br>ಸೀನಿಯರ್ ಸೈಂಟಿಫಿಕ್ ಆಫೀಸರ್ (ವಿ)<br>ರೀಸರ್ಚ್ ಅಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಡೆಹರಾಡೂನ್ |
| ಸಿ.ಜಿ.ಕೆ. | ಕೃಷ್ಣಮೂರ್ತಿ, ಸಿ.ಜಿ. (ದಿ)<br>ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಸಿ.ಜಿ.ಪಿ. | ಪುರುಷೋತ್ತಮ, ಸಿ.ಜಿ. (ದಿ)<br>ಪ್ರಾಧ್ಯಾಪಕ (ವಿ), ಇಂಡಾಲಜಿ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| ಸಿ.ಕೆ. | ಚಿದಂಬರಂ, ಕೆ. (ದಿ)<br>ಪ್ರಕಾಶಕ, ಕಾವ್ಯಾಲಯ, ಮೈಸೂರು |
| ಸಿ.ಕೆ.ಎನ್. | ನಟರಾಜನ್, ಸಿ.ಕೆ.<br>ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಡಿ.ಸಿ. ಬರುವ ಗರ್ಲ್ಸ್ ಕಾಲೇಜು, ಜೋರ್‌ಹಾತ್ |
| ಸಿ.ಕೆ.ಆರ್. | ರೇಣುಕಾರ್ಯ, ಸಿ.ಕೆ.<br>ನಿರ್ದೇಶಕರು, ಮಹಾಜನ ಸ್ನಾತಕೋತ್ತರ ಕೇಂದ್ರ<br>ಕೆ.ಆರ್.ಎಸ್. ರಸ್ತೆ, ಮೈಸೂರು |
| ಸಿ.ಕೆ.ವೈ.ಡಿ. | ದೀಕ್ಷಿತ್, ಸಿ.ಕೆ.ವೈ.<br>ಅಧ್ಯಾಪಕ, ಡಿ.ಆರ್.ಎಂ. ಕಾಲೇಜು<br>ದಾವಣಗೆರೆ |
| ಸಿ.ಎಂ. | ಮ್ಯಾಕ್ ಫ್ಯಾಡನ್, ಸಿ.<br>ಅಧ್ಯಕ್ಷ (ವಿ), ಭೂಗೋಳವಿಜ್ಞಾನ ವಿಭಾಗ<br>ಲಾಸ್ ಏಂಜಲೀಸ್, ಕ್ಯಾಲಿಫೋರ್ನಿಯ ಯು.ಎಸ್.ಎ. |
| ಸಿ.ಎಂ.ಎಸ್. | ಮಹದೇವ ಶಂಕರಪ್ಪ, ಸಿ. (ದಿ)<br>ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಮಹಾರಾಣಿ ಕಾಲೇಜು, ಬೆಂಗಳೂರು |
| ಸಿ.ಎನ್.ಎಂ. | ಮಂಗಳ, ಸಿ.ಎನ್.<br>ಸಂಪಾದಕಿ (ವಿ), ಜ್ಞಾನಗಂಗೋತ್ರಿ<br>ಬೆಂಗಳೂರು |
| ಸಿ.ಎನ್.ಎಸ್. | ಶ್ರೀನಿವಾಸ ಅಯ್ಯಂಗಾರ್, ಸಿ.ಎನ್. (ದಿ)<br>ಪ್ರಾಧ್ಯಾಪಕ, ಗಣಿತವಿಜ್ಞಾನ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| ಸಿ.ಪಿ. | ಪಾರ್ವತಮ್ಮ, ಸಿ. (ದಿ)<br>ಪ್ರಾಧ್ಯಾಪಕಿ, ಸಮಾಜವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಸಿ.ಪಿ.ಕೆ. | ಕೃಷ್ಣಕುಮಾರ್, ಸಿ.ಪಿ.<br>ಪ್ರಾಧ್ಯಾಪಕ ಮತ್ತು ನಿರ್ದೇಶಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಸಿ.ಆರ್. | ರಂಗಾಚಾರ್, ಸಿ.<br>ಪ್ರಾಂಶುಪಾಲರು (ವಿ)<br>ಎಂ.ಇ.ಎಸ್. ಶಿಕ್ಷಣ ಕಾಲೇಜು, ಬೆಂಗಳೂರು |
| ಸಿ.ವಿ.ಕೆ. | ಕಾಮತ್, ಸಿ.ವಿ.<br>ಸಹಾಯಕ ಕಾರ್ಯದರ್ಶಿ<br>ಮೈಸೂರು ರಾಜ್ಯ ಕ್ರೀಡಾಸಂಸ್ಥೆ, ಬೆಂಗಳೂರು |
| ಸಿ.ವಿ.ಆರ್. | ರಂಗಸ್ವಾಮಿ, ಸಿ.ವಿ.<br>ಪ್ರಾಂಶುಪಾಲರು (ವಿ)<br>ಜೆ.ಟಿ. ಕಾಲೇಜು, ಗದಗ |
| ಡಿ. | ಧರಣೇಂದ್ರಯ್ಯ<br>ಪ್ರಾಧ್ಯಾಪಕ (ವಿ), ಮನೋವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಡಿ.ಎ.ಎಚ್. | ಹೆಗಡೆ, ಡಿ.ಎ.<br>ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ<br>ಹಳ್ಳಿಕೇರಿ ಗುದ್ಲೆಪ್ಪ ಕಾಲೇಜು, ಹಾವೇರಿ |
| ಡಿ.ಎ.ಯು. | ಉಪಾಧ್ಯ, ಡಿ.ಎ.<br>ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ<br>ಸಯ್ಯಾಜಿರಾವ್ ರಸ್ತೆ, ಮೈಸೂರು |
| ಡಿ.ಸಿ.ಬಿ. | ದಿನೇಶ್ ಚಂದ್ರ ಭಾರದ್ವಾಜ್<br>ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಉದಯಪುರ ವಿಶ್ವವಿದ್ಯಾಲಯ<br>ಉದಯಪುರ, ರಾಜಸ್ತಾನ |
| ಡಿ.ಇ. | ಏಕಾಂತಪ್ಪ, ಡಿ.<br>ಪ್ರಾಧ್ಯಾಪಕ (ವಿ)<br>ಮೆಡಿಕಲ್ ಕಾಲೇಜು, ಮೈಸೂರು |
| ಡಿ.ಜಿ. | ಗಣೇಶ್, ಡಿ.<br>ಕ್ಯೂರೇಟರ್ (ವಿ), ಸಸ್ಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಡಿ.ಜಿ.ಕೆ. | ಕೃಷ್ಣಪ್ಪ, ಡಿ.ಜಿ.<br>ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| ಡಿ.ಎಚ್.ಕೆ. | ಕೊಪ್ಪಾರ್, ಡಿ.ಎಚ್.<br>ಕ್ಯೂರೇಟರ್<br>ಲೇಡಿ ವಿಲ್ಸನ್ ಮ್ಯೂಸಿಯಂ ಧರ್ಮವರ್, ಸೂರತ್ ಡಿಸ್ಟ್ರಿಕ್ಟ್ |
| ಡಿ.ಕೆ. | ಧೀರೇಂದ್ರ ಕುಲಕರ್ಣಿ<br>ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಡಿ.ಎಲ್.ಎನ್. | ನರಸಿಂಹಾಚಾರ್, ಡಿ.ಎಲ್. (ದಿ)<br>ಕನ್ನಡ ಪ್ರಾಧ್ಯಾಪಕ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಡಿ.ಎಂ. | ಮುನಿಸ್ವಾಮಿ, ಡಿ.<br>ತಾಂತ್ರಿಕ ಸಹಾಯಕ (ವಿ)<br>ತೋಟಗಾರಿಕೆ ವಿಭಾಗ, ಲಾಲ್‌ಬಾಗ್, ಬೆಂಗಳೂರು |
| ಡಿ.ಎಂ.ಜಿ. | ಗೋಪಿನಾಥ, ಡಿ.ಎಂ.<br>ನಿರ್ದೇಶಕ (ವಿ)<br>ಕೇಂದ್ರ ತಂಬಾಕು ಸಂಶೋಧನಾ ಸಂಸ್ಥೆ, ರಾಜಮಹೇಂದ್ರಿ |
| ಡಿ.ಎನ್.ಎಸ್. | ಶಂಕರಭಟ್ಟ, ಡಿ.ಎನ್.<br>ಪ್ರಾಧ್ಯಾಪಕ (ವಿ), ಭಾಷಾಶಾಸ್ತ್ರ ವಿಭಾಗ<br>ಡೆಕ್ಕನ್ ಕಾಲೇಜು, ಪೂನ |
| ಡಿ.ಎನ್.ಆರ್. | ರಾಯಕರ್, ಡಿ.ಎನ್.<br>ಪ್ರಾಧ್ಯಾಪಕ, ಅರ್ಥಶಾಸ್ತ್ರ ವಿಭಾಗ<br>ವಿಜಯಾ ಕಾಲೇಜು, ಮುಲ್ಕಿ (ದ.ಕ.) |
| ಡಿ.ಪಿ. | ಪದ್ಮಕುಮಾರ್, ಡಿ.<br>ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಮಹಾರಾಣಿ ಕಾಲೇಜು, ಮೈಸೂರು |
| ಡಿ.ಪಿ.ಜೆ. | ಜಯರಾಮ್, ಡಿ.ಪಿ.<br>ಪ್ರಾಧ್ಯಾಪಕ (ವಿ)<br>ಕೆ.ಆರ್. ಆಸ್ಪತ್ರೆ, ಮೈಸೂರು |

| | |
|---|---|
| **ಡಿ.ಆರ್.** | ರಂಗಯ್ಯ, ಡಿ.<br>ರೀಡರ್ (ವಿ), ಭೂಗೋಳವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಡಿ.ಆರ್.ಎ.** | ರಾಜು, ಡಿ. (ದಿ)<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಡಿ.ಎಸ್.** | ಶೇಷಗಿರಿರಾವ್, ಡಿ. (ದಿ)<br>ಕೀಟವಿಜ್ಞಾನಿ, ಬೆಂಗಳೂರು |
| **ಡಿ.ಎಸ್.ಇ.** | ಈಶ್ವರಪ್ಪ, ಡಿ.ಎಸ್.<br>ಸಹಾಯಕ ನಿರ್ದೇಶಕ (ವಿ) ಪಶುಸಂಶೋಧನ ಇಲಾಖೆ<br>ಮೈಸೂರು |
| **ಡಿ.ಎಸ್.ಜಿ.** | ಗುರುಬಸವಪ್ಪ, ಡಿ.ಎಸ್. (ದಿ)<br>ನಿರ್ದೇಶಕ<br>ಸರ್ಕಾರಿ ಮುದ್ರಣಾಲಯ, ಬೆಂಗಳೂರು |
| **ಡಿ.ಎಸ್.ಎಸ್.** | ಶಿವಪ್ಪ, ಡಿ.ಎಸ್. (ದಿ)<br>ಪ್ರಾಧ್ಯಾಪಕ<br>ಮೈಸೂರು ಮೆಡಿಕಲ್ ಕಾಲೇಜು, ಮೈಸೂರು |
| **ಡಿ.ಎಸ್ಒ.** | ಫಾದರ್ ಡಿ'ಸೋಜಾ<br>ಪ್ರಾಂಶುಪಾಲರು (ವಿ)<br>ಸೇಂಟ್ ಜೋಸೆಫ್ ಕಾಲೇಜು, ಬೆಂಗಳೂರು |
| **ಡಿ.ಟಿ.ಸಿ.** | ದೇವಂಗಿ, ಟಿ. ಚಂದ್ರಶೇಖರ (ದಿ)<br>ದೇವಂಗಿ, ಶಿವಮೊಗ್ಗ ಜಿಲ್ಲೆ |
| **ಡಿ.ವಿ.ಆರ್.** | ರಾಮಣ್ಣ, ಡಿ.ವಿ.<br>ಅಧ್ಯಾಪಕ, ಗಣಿತವಿಜ್ಞಾನವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| **ಇ.ಎ.ಎ.** | ಅಂಜೊರಿನ್, ಎ.ಎಲ್.<br>ಸಂಶೋಧಕ, ಭೂಗೋಳಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಇ.ಎಸ್.ಜೆ.** | ಜಯದೇವಪ್ಪ, ಇ.ಎಸ್.<br>ರೀಡರ್ (ವಿ)<br>ಭೌತರಸಾಯನವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| **ಎಫ್.ಎಂ.ಕೆ.** | ಮೊಹಮ್ಮದ್ ಖಾನ್, ಎಫ್. (ದಿ)<br>ಅಧ್ಯಾಪಕ, ಉರ್ದು ವಿಭಾಗ<br>ಬೆಂಗಳೂರು |
| **ಜಿ.** | ಗುರುರಾಜ ಭಟ್ಟ, ಪಿ. (ದಿ)<br>ಪ್ರಾಂಶುಪಾಲರು<br>ಸೇಂಟ್ ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ |
| **ಜಿ.ಎ.** | ಅಶ್ವತ್ಥನಾರಾಯಣ, ಜಿ.<br>ಕನ್ನಡ ಪ್ರಾಧ್ಯಾಪಕ (ವಿ)<br>ಸರ್ಕಾರಿ ಕಾಲೇಜು, ಮಂಡ್ಯ |
| **ಜಿ.ಎ.ಡಿ.** | ಗುರುರಾಜ ಎ. ದೇಶಪಾಂಡೆ<br>ಅಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ<br>ಸರ್ಕಾರಿ ಕಾಲೇಜು, ಗುಲ್ಬರ್ಗ |
| **ಜಿ.ಬಿ.** | ಬೋರಯ್ಯ, ಜಿ. (ದಿ)<br>ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಕೃಷಿ ಕಾಲೇಜು, ಹೆಬ್ಬಾಳ್, ಬೆಂಗಳೂರು |
| **ಜಿ.ಬಿ.ಕೆ.** | ಕಡೇಮನಿ, ಜಿ.ಬಿ.<br>ಅಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| **ಜಿ.ಸಿ.ಐ.** | ಚಂದ್ರಶೇಖರ ಐತಾಳ, ಜಿ. (ದಿ)<br>ಅಧ್ಯಾಪಕ, ಕನ್ನಡ ಸ್ನಾತಕೋತ್ತರ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮಂಗಳೂರು |
| **ಜಿ.ಸಿ.ಜಿ.** | ಗೋಸ್ವಾಮಿ, ಜಿ.ಸಿ.<br>ರೀಡರ್ (ವಿ), ಭಾಷಾವಿಜ್ಞಾನ ವಿಭಾಗ<br>ಗೌಹತಿ ವಿಶ್ವವಿದ್ಯಾಲಯ, ಗೌಹತಿ (ಅಸ್ಸಾಂ) |
| **ಜಿ.ಜಿ.ಎಂ.** | ಮಂಜುನಾಥನ್, ಜಿ.ಜಿ.<br>ಸಹಾಯಕ ಸಂಪಾದಕ (ವಿ)<br>ಸಂಪಾದನ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಜಿ.ಎಚ್.** | ಹನುಮಂತರಾವ್, ಜಿ. (ದಿ)<br>ರೀಡರ್, ಅಧ್ಯಕ್ಷ<br>ತತ್ತ್ವಶಾಸ್ತ್ರ ಉಪಸಮಿತಿ<br>ಕನ್ನಡ ವಿಶ್ವಕೋಶ, ಮೈಸೂರು |
| **ಜಿ.ಎಚ್.ಆರ್.** | ರಾಮರಾವ್, ಜಿ.ಎಚ್. (ದಿ)<br>ಮುದ್ರಕ, ಪ್ರಕಾಶಕ<br>ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್<br>ಮೈಸೂರು |
| **ಜಿ.ಕೆ.** | ಗೋಪಾಲ್, ಕೆ.<br>ಸಹಾಯಕ ಕಾರ್ಯದರ್ಶಿ (ವಿ)<br>ಮೈಸೂರು ಸರ್ಕಾರ ಜೀವವಿಮೆ ಇಲಾಖೆ ಬೆಂಗಳೂರು |
| **ಜಿ.ಕೆ.ಜಿ.** | ಘೋರಿ, ಜಿ.ಕೆ. (ದಿ)<br>ಪ್ರಾಧ್ಯಾಪಕ<br>ಭೂಗೋಳವಿಜ್ಞಾನ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಜಿ.ಎಂ.** | ಮರುಳಸಿದ್ದಯ್ಯ, ಜಿ.<br>ನಿರ್ದೇಶಕ (ವಿ)<br>ಪ್ರಾಚ್ಯ ವಿದ್ಯಾ ಸಂಶೋಧನಾಲಯ (ಒಆರ್ಐ), ಮೈಸೂರು |
| **ಜಿ.ಎಂ.ಬಿ.** | ಬಸವರಾಜ್, ಜಿ.ಎಂ. (ದಿ)<br>ಅಧ್ಯಾಪಕ<br>ಸಹ್ಯಾದ್ರಿ ಕಾಲೇಜು, ಶಿವಮೊಗ್ಗ |
| **ಜಿ.ಎಂ.ಎಚ್.** | ಹೆಗಡೆ, ಜಿ.ಎಂ.<br>ಕನ್ನಡ ಅಧ್ಯಾಪಕ<br>6ನೆಯ ತಿರುವು, ಕಲ್ಯಾಣನಗರ, ಧಾರವಾಡ |
| **ಜಿ.ಎಂ.ಯು.** | ಗಂಗಾಧರ ಮೊದಲಿಯಾರ್<br>ಸಹಾಯಕ ಸಂಪಾದಕ, ಪ್ರಜಾವಾಣಿ<br>ಮಹಾತ್ಮಗಾಂಧಿ ರಸ್ತೆ, ಬೆಂಗಳೂರು |
| **ಜಿ.ಎನ್.ಸಿ.** | ಚಕ್ರವರ್ತಿ, ಜಿ.ಎನ್. (ದಿ)<br>ಪ್ರಾಧ್ಯಾಪಕ, ಸಂಸ್ಕೃತ ವಿಭಾಗ<br>ಸೇಂಟ್ ಫಿಲೋಮಿನ ಕಾಲೇಜು, ಮೈಸೂರು |
| **ಜಿ.ಎನ್.ಎಸ್.** | ಶರ್ಮಾ, ಜಿ.ಎನ್.<br>ಮುಖ್ಯಾಧಿಕಾರಿ, ರಾಜ್ಯಶಾಸ್ತ್ರ ವಿಭಾಗ<br>ಮರಾಠವಾಡ ವಿಶ್ವವಿದ್ಯಾಲಯ, ಔರಂಗಾಬಾದ್ |
| **ಜಿ.ಆರ್.ಆರ್.** | ರಂಗಸ್ವಾಮಯ್ಯ, ಜಿ.ಆರ್. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಜಿ.ಆರ್.ಟಿ.** | ತಿಪ್ಪೇಸ್ವಾಮಿ, ಜಿ.ಆರ್.<br>ಪ್ರಾಧ್ಯಾಪಕ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |

**ಜಿ.ಎಸ್.ಎ.** ಅಣ್ಣಯ್ಯ, ಜಿ.ಎಸ್.
ಉಪನಿರ್ದೇಶಕ (ವಿ)
ಭೂಗರ್ಭ ಇಲಾಖೆ, ಬೆಂಗಳೂರು

**ಜಿ.ಎಸ್.ಬಿ.** ಭಟ್ಟ, ಜಿ.ಎಸ್.
ಉಪ ಸಂಪಾದಕ (ವಿ)
ಕನ್ನಡ ವಿಶ್ವಕೋಶ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಜಿ.ಎಸ್.ಎಚ್.** ಹಾಲಪ್ಪ, ಜಿ.ಎಸ್. (ದಿ)
ಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಜಿ.ಎಸ್.ಆರ್.** ಸೀತಾರಾಮಯ್ಯ, ಜಿ. (ದಿ)
ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ಎಸ್.ಎಸ್.** ಶಿವರುದ್ರಪ್ಪ, ಜಿ.ಎಸ್.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಜಿ.ಟಿ.ಎಚ್.** ಹುಚ್ಚಪ್ಪ, ಜಿ.ಟಿ. (ದಿ)
ಪ್ರಾಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ಟಿ.ಜಿ.** ಗುಬ್ಬಣ್ಣ, ಜಿ.ಟಿ.
ವೈಸ್ ಪ್ರಿನ್ಸಿಪಾಲ್ (ವಿ)
ಶಿವರಾತ್ರೀಶ್ವರ ಎಂಜಿನಿಯರಿಂಗ್ ಕಾಲೇಜು ಮೈಸೂರು

**ಜಿ.ಟಿ.ಎನ್.** ನಾರಾಯಣರಾವ್, ಜಿ.ಟಿ. (ದಿ)
ವಿಜ್ಞಾನ ಸಂಪಾದಕ
ಕನ್ನಡ ವಿಶ್ವಕೋಶ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ವಿ.** ವಸಂತರಾವ್, ಜಿ.
ಅಧ್ಯಾಪಕ (ವಿ), ಇತಿಹಾಸ ವಿಭಾಗ
ಆಚಾರ್ಯ ಪಾಠಶಾಲಾ ಕಾಲೇಜು, ಬೆಂಗಳೂರು

**ಜಿ.ವಿ.ಬಿ.** ವಿಷ್ಣುಮೂರ್ತಿಭಟ್ಟ, ಜಿ.
ಸಂಸ್ಕೃತ ಕಾಲೇಜು, ಮೈಸೂರು

**ಜಿ.ವಿ.ಸಿ.** ಚನ್ನವೀರಪ್ಪ, ಜಿ.
ಅಧ್ಯಾಪಕ, ರಸಾಯನವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಬೆಂಗಳೂರು

**ಜಿ.ವಿ.ಆರ್.** ರಂಗಸ್ವಾಮಿ, ಜಿ.ವಿ.
ಪ್ರಾಂಶುಪಾಲರು, ಜಿ.ಟಿ. ಕಾಲೇಜು, ಗದಗ

**ಜಿ.ವಿ.ಎಸ್.** ವೆಂಕಟಸುಬ್ಬಯ್ಯ, ಜಿ.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ವಿಜಯಾ ಕಾಲೇಜು, ಬೆಂಗಳೂರು

**ಎಚ್.ಬಿ.ಡಿ.** ದೇವರಾಜ ಸರ್ಕಾರ್, ಎಚ್.ಬಿ.
ಪ್ರಾಧ್ಯಾಪಕ (ವಿ)
ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಸಿ.ಕೆ.** ಕಪನೀಪತಿಭಟ್ಟ, ಎಚ್.ಸಿ. (ದಿ)
ಪ್ರಾಂಶುಪಾಲರು
ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು

**ಎಚ್.ಡಿ.** ಹೆಮ್ಮಿಗೆ ದೇಶಿಕಾಚಾರ್ಯ
ಉಪಸಂಪಾದಕ (ವಿ)
ಕನ್ನಡ–ಕನ್ನಡ ನಿಘಂಟು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

**ಎಚ್.ಡಿ.ವಿ.** ವಸಂತರಾಜಯ್ಯ, ಎಚ್.ಡಿ.
ರೀಡರ್ (ವಿ), ಮನೋವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಎಚ್.ಜಿ.ಬಿ.** ಬೆಂಗೇರಿ, ಎಚ್.ಜಿ.
ಹುಬ್ಬಳ್ಳಿ

**ಎಚ್.ಜಿ.ಆರ್.** ರಂಗಸ್ವಾಮಿ ಐಯ್ಯಂಗಾರ್, ಎಚ್.ಜಿ.
ಅಧ್ಯಾಪಕ, ಇತಿಹಾಸ ವಿಭಾಗ
ಸರ್ಕಾರಿ ಕಾಲೇಜು, ಮಂಡ್ಯ

**ಎಚ್.ಜಿ.ಎಸ್.** ಸುಬ್ಬರಾವ್, ಎಚ್.ಜಿ.
ಪ್ರಾಧ್ಯಾಪಕ (ವಿ)
ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಚ್.ಜಿ.ಎಸ್.ಆರ್.** ಸೂರ್ಯನಾರಾಯಣರಾವ್, ಎಚ್.ಜಿ.(ದಿ)
ರೀಡರ್, ಇಂಗ್ಲಿಷ್ ವಿಭಾಗ
ಸಹ್ಯಾದ್ರಿ ಕಾಲೇಜು, ಶಿವಮೊಗ್ಗ

**ಎಚ್.ಎಚ್.ಎ.** ಅಣ್ಣಯ್ಯಗೌಡ, ಎಚ್.ಎಚ್. (ದಿ)
ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಚ್.ಎಸ್.** ಷಣ್ಮುಖಮ್ಮ, ಎಚ್.ಎಚ್.
ಅಧ್ಯಾಪಕಿ, ಪ್ರಾಣಿವಿಜ್ಞಾನ ವಿಭಾಗ
ಜೆ.ಎಸ್.ಎಸ್. ಕಾಲೇಜು, ಮೈಸೂರು

**ಎಚ್.ಕೆ.ಎಂ.** ಮಲ್ಲಿಕಾರ್ಜುನಪ್ಪ, ಎಚ್.ಕೆ.
ಅಧ್ಯಾಪಕ (ವಿ)
ಸಸ್ಯವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಗುಲ್ಬರ್ಗ

**ಎಚ್.ಕೆ.** ಕೃಷ್ಣರಾವ್, ಎಚ್. (ದಿ)
ಉಪ ಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಎಚ್.ಕೆ.ಪಿ.** ಪಂಡಿತಾರಾಧ್ಯ, ಎಚ್.ಕೆ.
ಸೂಪರಿಂಟೆಂಡಿಂಗ್ ಎಂಜಿನಿಯರ್
ಧಾರವಾಡ

**ಎಚ್.ಕೆ.ಆರ್.** ರಾಮಚಂದ್ರಮೂರ್ತಿ, ಎಚ್.ಕೆ.
ಪ್ರಾಧ್ಯಾಪಕ (ವಿ)
ಇಂಗ್ಲಿಷ್ ವಿಭಾಗ
ನ್ಯಾಷನಲ್ ಕಾಲೇಜು, ಬೆಂಗಳೂರು

**ಎಚ್.ಎಂ.ಸಿ.** ಚನ್ನಯ್ಯ, ಎಚ್.ಎಂ. (ದಿ)
ಪ್ರಾಧ್ಯಾಪಕ ಮತ್ತು ನಿರ್ದೇಶಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಂ.ಕೆ.ಎನ್.** ಮುಕುಂದಕೃಷ್ಣ ನಾಯ್ಡು, ಎಚ್. (ದಿ)
ಅಧ್ಯಾಪಕ, ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಂ.ಎನ್.** ನಾಯಕ, ಎಚ್.ಎಂ. (ದಿ)
ಪ್ರಾಧ್ಯಾಪಕ ಮತ್ತು ನಿರ್ದೇಶಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಂ.ಎನ್.ಆರ್.** ನಾಗರಾಜರಾವ್, ಎಚ್.ಎಂ.
ಶಾಸನ ಸಹಾಯಕ (ವಿ)
ಎಪಿಗ್ರಾಫಿಯ ಕರ್ನಾಟಿಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

# ಲೇಖಕ ಸೂಚಿ

| | |
|---|---|
| ಎಚ್.ಎಂ.ಎಸ್. | ಸದಾಶಿವಯ್ಯ, ಎಚ್.ಎಂ.<br>ಅಧ್ಯಾಪಕ (ವಿ), ಸಮಾಜವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಚ್.ಎನ್. | ನರಸಣ್ಣ, ಎಚ್.<br>ನಿರ್ದೇಶಕ (ವಿ)<br>ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ<br>ಪ್ರಸಾರಾಂಗ, ಮೈಸೂರು |
| ಎಚ್.ಎನ್.ಸಿ. | ಚಾಮಯ್ಯ, ಎಚ್.ಎನ್. (ದಿ)<br>ರೀಡರ್, ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಎಚ್.ಪಿ.ಡಿ. | ದಾಸ್, ಎಚ್.ಪಿ.<br>ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ<br>ಗೌಹತಿ ವಿಶ್ವವಿದ್ಯಾಲಯ, ಗೌಹತಿ (ಅಸ್ಸಾಂ) |
| ಎಚ್.ಪಿ.ಎನ್. | ನಾಗರಾಜಯ್ಯ, ಎಚ್.ಪಿ.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಎಚ್.ಪಿ.ಎಸ್. | ಶಶಿಧರಮೂರ್ತಿ, ಎಚ್.ಪಿ.<br>ಪತ್ರಪಾಲಕ<br>ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ವಿಧಾನಸೌಧ<br>ಬೆಂಗಳೂರು |
| ಎಚ್.ಆರ್. | ರಾಮಲಿಂಗಪ್ಪ, ಎಚ್.<br>ಅಧ್ಯಾಪಕ (ವಿ)<br>ಇತಿಹಾಸ ವಿಭಾಗ ಸರ್ಕಾರಿ ಕಾಲೇಜು, ತುಮಕೂರು |
| ಎಚ್.ಆರ್.ಸಿ. | ಚಂದ್ರಶೇಖರಯ್ಯ, ಎಚ್.ಆರ್.<br>ಷೀಪ್ ಡೆವಲಪ್‌ಮೆಂಟ್ ಆಫೀಸರ್, ಬೆಂಗಳೂರು |
| ಎಚ್.ಆರ್.ಡಿ. | ದಾಸೇಗೌಡ, ಎಚ್.ಆರ್.<br>ನಿರ್ದೇಶಕ (ವಿ), ಪ್ರಸಾರಾಂಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಎಚ್.ಆರ್.ಕೆ. | ಎಚ್.ಆರ್. ಕೃಷ್ಣಮೂರ್ತಿ<br>ನಂ. 156, 4ನೆಯ ಮುಖ್ಯರಸ್ತೆ<br>ಪದ್ಮನಾಭನಗರ, 2ನೆಯ ಹಂತ, ಬೆಂಗಳೂರು |
| ಎಚ್.ಆರ್.ಎಲ್ | ಲೀಲಾವತಿ, ಎಚ್.ಆರ್.<br>ನಂ. 76, 1ನೆಯ ಕ್ರಾಸ್, ವಿಶ್ವಮಾನವ ಜೋಡಿರಸ್ತೆ<br>ಕಾಮಾಕ್ಷಿ ಆಸ್ಪತ್ರೆ ಹಿಂಭಾಗ, ಸರಸ್ವತೀಪುರಂ, ಮೈಸೂರು |
| ಎಚ್.ಆರ್.ಆರ್. | ರಾಮಚಂದ್ರ, ಎಚ್.ಆರ್.<br>ಗ್ರಂಥಪಾಲಕ, ಕೃಷಿ ಕಾಲೇಜು<br>ಹೆಬ್ಬಾಳ್, ಬೆಂಗಳೂರು |
| ಎಚ್.ಎಸ್. | ಸುಮಿತ್ರ, ಎಚ್.<br>ಪಾದ್ರಿ, ಡಿ.ಡಿ. ಚರ್ಚ್ ಆಫ್ ಸೌತ್ ಇಂಡಿಯ, ಬಳ್ಳಾರಿ |
| ಎಚ್.ಎಸ್.ಎ. | ಅನಂತನಾರಾಯಣ, ಎಚ್.ಎಸ್.<br>ಅಧ್ಯಾಪಕ, ಭಾಷಾವಿಜ್ಞಾನ ವಿಭಾಗ<br>ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್ |
| ಎಚ್.ಎಸ್.ಕೆ. | ಕೃಷ್ಣಸ್ವಾಮಿ ಐಯ್ಯಂಗಾರ್, ಎಚ್.ಎಸ್. (ದಿ)<br>ಮಾನವಿಕ ಸಂಪಾದಕ<br>ಕನ್ನಡ ವಿಶ್ವಕೋಶ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಎಚ್.ಎಸ್.ಎನ್. | ನಾಗರಾಜರಾವ್, ಎಚ್.ಎಸ್.<br>ಅಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಬೆಂಗಳೂರು |
| ಎಚ್.ಎಸ್.ಎಸ್. | ಶೇಷಾದ್ರಿ, ಎಚ್.ಎಸ್.<br>ರೀಡರ್ (ವಿ), ರಸಾಯನವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಚ್.ಟಿ. | ತಿಪ್ಪೇರುದ್ರಸ್ವಾಮಿ, ಎಚ್. (ದಿ)<br>ಪ್ರಾಧ್ಯಾಪಕ ಮತ್ತು ನಿರ್ದೇಶಕ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಎಚ್.ವಿ. | ವೆಂಕಟಸುಬ್ಬಯ್ಯ, ಎಚ್.<br>ವರದಿಗಾರ<br>ಹಿಂದೂ ಪತ್ರಿಕೆ, ನವದೆಹಲಿ |
| ಎಚ್.ವಿ.ಸಿ. | ಚಂದ್ರಶೇಖರ, ಎಚ್.ವಿ.<br>ಅಧ್ಯಾಪಕ, ಎಂಜಿನಿಯರಿಂಗ್ ಕಾಲೇಜು ಬೆಂಗಳೂರು |
| ಎಚ್.ವಿ.ಕೆ. | ಕೃಷ್ಣಮೂರ್ತಿ, ಎಚ್.ವಿ.<br>ಅಧ್ಯಾಪಕ (ವಿ)<br>ಮೆಡಿಕಲ್ ಕಾಲೇಜು, ಬೆಂಗಳೂರು |
| ಎಚ್.ವಿ.ಎಸ್. | ಸಾವಿತ್ರಮ್ಮ, ಎಚ್.ವಿ.<br>ಮಲ್ಲೇಶ್ವರಂ, ಬೆಂಗಳೂರು |
| ಐ.ಆರ್.ವಿ. | ವಸಂತಕುಮಾರ್, ಐ.ಆರ್.<br>ಅಧ್ಯಾಪಕ, ಶಿಲ್ಪಶಾಸ್ತ್ರ ವಿಭಾಗ<br>ಎಂಜಿನಿಯರಿಂಗ್ ಕಾಲೇಜು<br>ಬೆಂಗಳೂರು |
| ಜೆ.ಬಿ. | ಬಾಲಚಂದ್ರ, ಜೆ.<br>ಸಂಶೋಧನಾಧಿಕಾರಿ<br>ಅಣುಶಕ್ತಿ ವಿಭಾಗ, ಮುಂಬಯಿ |
| ಜೆ.ಬಿ.ಎಂ. | ಮಲ್ಲಾರಾಧ್ಯ, ಜೆ.ಬಿ. (ದಿ)<br>ವಿದ್ಯಾಧಿಕಾರಿ<br>ಅಧ್ಯಕ್ಷ, ಮೈಸೂರು ರಾಜ್ಯ ಕ್ರೀಡಾ ಸಂಸ್ಥೆ ಬೆಂಗಳೂರು |
| ಜೆ.ಇ.ಸಿ. | ಜೇಮ್ಸ್ ಇ. ಕಾಲಿಯರ್<br>ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಸದರನ್ ಇಲಿನಾಯ್ ವಿಶ್ವವಿದ್ಯಾಲಯ ಇಲಿನಾಯ್<br>ಯು.ಎಸ್.ಎ. |
| ಜೆ.ಕೆ.ಐ. | ಇರಾನಿ, ಜೆ.ಕೆ. (ದಿ)<br>ಪ್ರಾಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಜೆ.ಆರ್. | ರುದ್ರಪ್ಪ, ಜೆ. (ದಿ)<br>ಜಿಲ್ಲಾ ಸೆಷನ್ಸ್ ಜಡ್ಜ್<br>ಬೆಂಗಳೂರು |
| ಜೆ.ಆರ್.ಎಲ್. | ಲಕ್ಷ್ಮಣರಾವ್, ಜೆ.ಆರ್.<br>ಸಂಪಾದಕ (ವಿ)<br>ಇಂಗ್ಲಿಷ್–ಕನ್ನಡ ನಿಘಂಟು<br>ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು |
| ಜೆ.ಎಸ್. | ಶಶಿಧರ ಪ್ರಸಾದ್, ಜೆ.<br>ಕುಲಪತಿ (ವಿ)<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಜೆ.ಎಸ್.ಕೆ. | ಕುಳ್ಳಿ, ಜೆ.ಎಸ್.<br>ಪ್ರಾಧ್ಯಾಪಕ, ಭಾಷಾವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಜೆ.ಎಸ್.ಪಿ. | ಪರಮಶಿವಯ್ಯ, ಜೆ.ಎಸ್. (ದಿ)<br>ಪ್ರಾಧ್ಯಾಪಕ ಹಾಗೂ ನಿರ್ದೇಶಕ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |

| | |
|---|---|
| **ಕೆ.** | ಕೃಷ್ಣಪ್ಪಗೌಡ<br>ಉಪನಿರ್ದೇಶಕ (ವಿ)<br>ತೋಟಗಾರಿಕೆ ಇಲಾಖೆ, ಮೈಸೂರು |
| **ಕೆ.ಎ.** | ಅನಂತರಾಮಯ್ಯ, ಕೆ. (ದಿ)<br>ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ<br>ಬೆಂಗಳೂರು |
| **ಕೆ.ಎ.ಆರ್.** | ಅಬ್ದುಲ್ ರಷೀದ್, ಕೆ.<br>ಅಧ್ಯಾಪಕ<br>ಸರ್ಕಾರಿ ವಿವಿಧೋದ್ದೇಶ ಪ್ರೌಢಶಾಲೆ, ರಾಮನಗರ |
| **ಕೆ.ಬಿ.** | ಬಸವಯ್ಯ, ಕೆ.<br>ವಿಶೇಷ ಕಾರ್ಯದರ್ಶಿ<br>ವಯಸ್ಕರ ಶಿಕ್ಷಣ ಸಮಿತಿ, ಮೈಸೂರು |
| **ಕೆ.ಬಿ.ಆರ್.** | ರಾಮಕೃಷ್ಣರಾವ್, ಕೆ.ಬಿ. (ದಿ)<br>ಪ್ರಾಧ್ಯಾಪಕ<br>ತತ್ತ್ವಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಕೆ.ಬಿ.ಎಸ್.** | ಸದಾನಂದ, ಕೆ.ಬಿ. (ವಿ)<br>ವಿಜ್ಞಾನ ಸಂಪಾದಕ<br>ಕನ್ನಡ ವಿಶ್ವಕೋಶ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಕೆ.ಸಿ.** | ಚೆನ್ನಬಸಪ್ಪ, ಕೆ.<br>ಅಧ್ಯಕ್ಷ (ವಿ)<br>ರೆವಿನ್ಯೂ ಅಪೆಲೇಟ್ ಟ್ರಿಬ್ಯೂನಲ್, ಬೆಂಗಳೂರು |
| **ಕೆ.ಸಿ.ಆರ್.** | ರೆಡ್ಡಿ, ಕೆ.ಸಿ.<br>ಅಧ್ಯಾಪಕ (ವಿ)<br>ಮಲೆನಾಡು ಎಂಜಿನಿಯರಿಂಗ್ ಕಾಲೇಜು, ಹಾಸನ |
| **ಕೆ.ಡಿ.** | ಕೃಷ್ಣಯ್ಯಂಗಾರ್, ಡಿ. (ದಿ)<br>ರಿಜಿಸ್ಟ್ರೇಷನ್ ತನಿಖಾಧಿಕಾರಿ<br>ಮೈಸೂರು |
| **ಕೆ.ಜಿ.** | ಗೋಪಾಲ್, ಕೆ.<br>ಕುಲಪತಿ (ವಿ)<br>ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು |
| **ಕೆ.ಜಿ.ಎಚ್.** | ಹಿರೇಮಠ, ಕೆ.ಜಿ.<br>ಕೃಷಿ ಕಾಲೇಜು, ಧಾರವಾಡ |
| **ಕೆ.ಜಿ.ವೈ.** | ಯಡಿಯೂರಪ್ಪ, ಕೆ.ವೈ.<br>ಪ್ರಾಧ್ಯಾಪಕ (ವಿ)<br>ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ |
| **ಕೆ.ಕೆ.** | ಕೃಷ್ಣಮೂರ್ತಿ, ಕೆ. (ದಿ)<br>ಪ್ರಾಧ್ಯಾಪಕ, ಸಂಸ್ಕೃತ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| **ಕೆ.ಕೆ.ಆರ್.** | ಕುಲರತ್ನಂ, ಕೆ.<br>ಪ್ರಾಧ್ಯಾಪಕ (ವಿ)<br>ಭೂಗೋಳವಿಜ್ಞಾನ ವಿಭಾಗ<br>ಕೊಲಂಬೊ ವಿಶ್ವವಿದ್ಯಾನಿಲಯ, ಸಿಲೋನ್ |
| **ಕೆ.ಎಲ್.** | ಲಿಂಗಪ್ಪ, ಕೋಣಂದೂರು<br>ವಕೀಲರು, ಬೆಂಗಳೂರು |
| **ಕೆ.ಎಲ್.ಎನ್.** | ನಾರಾಯಣಶೆಟ್ಟಿ, ಕೆ.ಎಲ್<br>ಪ್ರಾಧ್ಯಾಪಕ (ವಿ)<br>ಮೆಡಿಕಲ್ ಕಾಲೇಜು, ದಾವಣಗೆರೆ |
| **ಕೆ.ಎಂ.** | ಮುನಿಯಪ್ಪ, ಕೆ.<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಪ್ರಥಮದರ್ಜೆ ಕಾಲೇಜು, ಉರಿಗಾಂ (ಕೆ.ಜಿ.ಎಫ್.) |
| **ಕೆ.ಎಂ.ಕೆ.** | ಮಹದೇವರಾವ್, ಕದಂ. ಕೆ.<br>ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಕೆ.ಎಂ.ಕೆ.ಆರ್.** | ಕೃಷ್ಣರಾವ್, ಕೆ.ಎಂ.<br>ಪ್ರಾಧ್ಯಾಪಕ (ವಿ)<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಕೆ.ಎಂ.ವಿ.** | ವೀರಪ್ಪ, ಕೆ.ಎಂ.<br>ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಕೆ.ಎನ್.** | ಕೃಷ್ಣಸ್ವಾಮಿ, ಎನ್.<br>ವಿಜ್ಞಾನ ಸಂಶೋಧನಾಧಿಕಾರಿ<br>ಎಲ್.ಆರ್.ಡಿ.ಇ. ಬೆಂಗಳೂರು |
| **ಕೆ.ಎನ್.ಸಿ.** | ಚೈತನ್ಯ ಪಂಡಿತಾರಾಧ್ಯ<br>(ಕೆ.ಎನ್. ಉದಯಕುಮಾರ್)<br>ಪ್ರಾಧ್ಯಾಪಕ (ವಿ)<br>ಭೂಗೋಳವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಕೆ.ಎನ್.ಎಂ.** | ನರಸಿಂಹಮೂರ್ತಿ, ಕೆ.<br>ರೀಡರ್ (ವಿ), ಅರ್ಥಶಾಸ್ತ್ರ ವಿಭಾಗ<br>ಸಹ್ಯಾದ್ರಿ ಕಾಲೇಜು, ಶಿವಮೊಗ್ಗ |
| **ಕೆ.ಎನ್.ಎಸ್.** | ಕಾಯ್ಕಿಣಿ, ಎನ್.ಎಸ್.<br>ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್<br>ಬೆಂಗಳೂರು |
| **ಕೆ.ಎನ್.ವಿ.** | ವೆಂಕಟರಾಯಪ್ಪ, ಕೆ.ಎನ್. (ದಿ)<br>ಪ್ರಾಧ್ಯಾಪಕ, ಸಮಾಜವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಕೆಆರ್.** | ಕೃಷ್ಣಪ್ಪ<br>ಅಸಿಸ್ಟೆಂಟ್ ಎಂಜಿನಿಯರ್ (ವಿ)<br>ಲೋಕೋಪಯೋಗಿ ಇಲಾಖೆ, ಬೆಂಗಳೂರು |
| **ಕೆ.ಆರ್.** | ರಂಗನಾಥ, ಕೆ.<br>ಪ್ರಾಧ್ಯಾಪಕ<br>ಭೂಗೋಳವಿಜ್ಞಾನ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಕೆ.ಆರ್.ಕೆ.** | ಕಾರಂತ, ಕೆ.ಆರ್.<br>ವಕೀಲರು, ಬೆಂಗಳೂರು |
| **ಕೆ.ಆರ್.ಆರ್.** | ರಂಗಾಚಾರ್, ಕೆ.ಆರ್.<br>ಅಧ್ಯಾಪಕ<br>ಉನ್ನತ ಪ್ರೌಢಶಾಲೆ, ಬೆಂಗಳೂರು |
| **ಕೆ.ಆರ್.ಎಸ್.** | ಶ್ರೀಕಂಠಮೂರ್ತಿ, ಕೆ.ಆರ್.<br>ಸಹ ಪ್ರಾಧ್ಯಾಪಕ (ವಿ)<br>ಸರ್ಕಾರಿ ಆಯುರ್ವೇದ ಕಾಲೇಜು, ಮೈಸೂರು |
| **ಕೆ.ಎಸ್.** | ಶಿವೋತ್ತಮರಾವ್, ಕಲ್ಲೆ<br>ಪತ್ರಿಕೋದ್ಯಮಿ ಮತ್ತು ಲೇಖಕ, ಬೆಂಗಳೂರು |
| **ಕೆ.ಎಸ್.ಬಿ.** | ಸುಬ್ಬಾಭಟ್ಟ, ಕೆ. (ದಿ)<br>ಉಪ ಪ್ರಾಧ್ಯಾಪಕ<br>ರಸಾಯನವಿಜ್ಞಾನ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |

ಕೆ.ಎಸ್.ಡಿ. ಧರಣೇಂದ್ರಯ್ಯ, ಕೆ.ಎಸ್. (ದಿ)
ಮುಖ್ಯಾಧಿಕಾರಿ
ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು

ಕೆ.ಎಸ್.ಎಚ್. ಹರಿದಾಸಭಟ್ಟ, ಕೆ.ಎಸ್. (ದಿ)
ಪ್ರಾಂಶುಪಾಲರು
ಎಂ.ಜಿ.ಎಂ. ಕಾಲೇಜು, ಉಡುಪಿ

ಕೆ.ಎಸ್.ಕೆ. ಕೃಷ್ಣಸ್ವಾಮಿ, ಕೆ.ಎಸ್. (ದಿ)
ಪ್ರಾಧ್ಯಾಪಕ
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು

ಕೆ.ಎಸ್.ಎಲ್. ಲಕ್ಷ್ಮಣರಾವ್, ಕೆ.ಎಸ್. (ದಿ)
ರೀಡರ್, ರಸಾಯನವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಕೋಲಾರ

ಕೆ.ಎಸ್.ಎಂ. ಮುನಿಸ್ವಾಮಿ, ಕೆ.ಎಸ್.
ಪ್ರಧಾನ ಕಾರ್ಯನಿರ್ವಹಣಾಧಿಕಾರಿ (ವಿ)
ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಕೆ.ಎಸ್.ಎನ್. ನಂಜುಂಡಪ್ಪ, ಕೆ.ಎಸ್.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಕೆ.ಎಸ್.ಆರ್. ರಾಘವೇಂದ್ರರಾವ್, ಕೆ.ಎಸ್.
ರೀಡರ್ (ವಿ), ಭೌತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

ಕೆ.ಎಸ್.ಆರ್.ಜಿ. ರಾಮೇಗೌಡ, ಕೆ.ಎಸ್.
ನಿರ್ದೇಶಕ, ನಗರಯೋಜನಾ ವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು

ಕೆ.ಎಸ್.ಆರ್.ಎಂ. ರಾಮಕೃಷ್ಣಮೂರ್ತಿ, ಕೆ.ಎಸ್.
ಪ್ರಧಾನ ಸಂಪಾದಕ
ಕನ್ನಡಪ್ರಭ ದಿನಪತ್ರಿಕೆ, ಬೆಂಗಳೂರು

ಕೆ.ಎಸ್.ಎಸ್. ಸದಾನಂದ, ಕೆ.ಎಸ್.
ಅಸಿಸ್ಟೆಂಟ್ ಆರ್ಕಿಟೆಕ್ಟ್, ಬೆಂಗಳೂರು

ಕೆ.ಎಸ್.ವಿ. ವರದಾಚಾರ್, ಕೆ.ಎಸ್.
ಸಹಾಯಕ ಸಂಶೋಧಕ (ವಿ)
ಪ್ರಾಚ್ಯ ವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕೆ.ಟಿ.ಕೆ. ಕೃಷ್ಣಪ್ಪ, ಕೆ.ಟಿ.
ಅಡಕೆ ಅಭಿವೃದ್ಧಿ ಅಧಿಕಾರಿ (ವಿ)
ಲಾಲ್‌ಬಾಗ್, ಬೆಂಗಳೂರು

ಕೆ.ಟಿ.ಪಿ. ಪಾಂಡುರಂಗಿ, ಕೆ.ಟಿ.
ರೀಡರ್ (ವಿ), ಸಂಸ್ಕೃತ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕೆ.ಟಿ.ಎಸ್. ಶ್ಯಾಮಸುಂದರ್, ಕೆ.ಟಿ.
ವಿಶೇಷಾಧಿಕಾರಿ (ವಿ)
ಇಂಡಿಯನ್ ಪ್ಲಾಸ್ಟಿಕ್ಸ್ ಅಂಡ್ ಕೆಮಿಕಲ್ಸ್ ಪ್ರೈವೇಟ್
ಲಿಮಿಟೆಡ್, ಧಾರವಾಡ

ಕೆ.ವಿ. ವೆಂಕಟಲಕ್ಷಮ್ಮ, ಕೆ. (ದಿ)
ಲಲಿತಕಲೆಗಳ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕೆ.ವಿ.ಎ. ಅಯ್ಯರ್, ಕೆ.ವಿ. (ದಿ)
ನಿರ್ದೇಶಕ, ವ್ಯಾಯಾಮ ಶಾಲೆ
ಬೆಂಗಳೂರು

ಕೆ.ವಿ.ಜಿ. ಗುಂಡೂರಾವ್, ಕೆ.ವಿ.
ರೀಡರ್, ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

ಕೆ.ವಿ.ಜಿ. ಘೋರ್ಪಡೆ, ಕೆ.ವಿ.
ಪೆಥಾಲಜಿಸ್ಟ್
ಬೌರಿಂಗ್ ಅಂಡ್ ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು

ಕೆ.ವಿ.ಆರ್. ರಮೇಶ್, ಕೆ.ವಿ.
ಡೆಪ್ಯೂಟಿ ಸೂಪರಿಂಟೆಂಡಿಂಗ್, ಎಪಿಗ್ರಫಿಸ್ಟ್(ವಿ)
ನಂ. 7, 'ಜೆ' ಬ್ಲಾಕ್, ರಮಣಮಹರ್ಷಿ ರಸ್ತೆ
ಕುವೆಂಪುನಗರ, ಮೈಸೂರು

ಕೆ.ವಿ.ಎಸ್. ಸುಬ್ಬರಾಯ, ಕೆ.ವಿ.
ಅಧ್ಯಾಪಕ
ಬೆಂಗಳೂರು ವಿಶ್ವವಿದ್ಯಾಲಯ ಎಂಜಿನಿಯರಿಂಗ್
ಕಾಲೇಜು, ಬೆಂಗಳೂರು

ಕೆ.ವಿ.ಎಸ್‌ಯು. ಸುಬ್ಬಯ್ಯ, ಕೆ.ವಿ.
ಅಧ್ಯಾಪಕ, ಬಸವೇಶ್ವರ ಕಾಲೇಜು ಬಾಗಲಕೋಟೆ

ಕೆ.ವಿ.ವಿ. ವಿಶ್ವನಾಥಯ್ಯ, ಕೆ.ವಿ.
ಉಪ ಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಲ್.ಬಿ. ಬಸವರಾಜು, ಎಲ್.
ಪ್ರಾಧ್ಯಾಪಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಲ್.ಎನ್.ಸಿ. ಚಕ್ರವರ್ತಿ, ಎಲ್.ಎನ್. (ದಿ)
ರೀಡರ್, ಗಣಿತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎಲ್.ಎನ್.ಪಿ. ನಾರಾಯಣರಾವ್ ಪವಾರ್, ಎಲ್.
ರೀಡರ್ (ವಿ), ಮನೋವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಲ್.ಎನ್.ಆರ್. ನಾರಾಯಣರಾವ್, ಎಲ್. (ದಿ)
ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

ಎಲ್.ಆರ್.ಎಚ್. ಹೆಗಡೆ, ಎಲ್.ಆರ್.
ಅಧ್ಯಾಪಕ (ವಿ), ಕನ್ನಡ ವಿಭಾಗ
ಡಾ. ಎ.ಬಿ. ಬಾಳಿಗ ಕಾಲೇಜು, ಕುಮಟ (ಉ.ಕ.)

ಎಲ್.ಆರ್.ಪಿ. ಲೀಲಾದೇವಿ ಆರ್. ಪ್ರಸಾದ್
ಸಮಾಜ ಕಾರ್ಯಕರ್ತೆ
ಬೆಂಗಳೂರು

ಎಲ್.ಎಸ್. ಶ್ರೀಕಂಠಯ್ಯ, ಎಲ್. (ದಿ)
ಶಾಸನಸಭಾ ಸದಸ್ಯ, ಮೈಸೂರು

ಎಲ್.ಎಸ್.ಜಿ. ಸಿದ್ದವೀರೇಗೌಡ, ಎಲ್. (ದಿ)
ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಲ್.ಎಸ್.ಎಸ್. ಶೇಷಗಿರಿರಾವ್, ಎಲ್.ಎಸ್.
ಇಂಗ್ಲಿಷ್ ಪ್ರಾಧ್ಯಾಪಕ (ವಿ)
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಗಂಗೋತ್ರಿ, ಬೆಂಗಳೂರು

ಎಂ. ಮೆಣಸಿನಕಾಯಿ, ಎಸ್.ಡಬ್ಲ್ಯು.
ಪ್ರಾಧ್ಯಾಪಕ (ವಿ)
ಕೃಷಿ ಕಾಲೇಜು, ಧಾರವಾಡ

ಎಂ.ಎ. ಮಿರ್ಜಿ ಅಣ್ಣಾರಾಯ (ದಿ)
ಶೇಡಬಾಳ, ಬೆಳಗಾಂ ಜಿಲ್ಲೆ

ಎಂ.ಎ.ಎ. ಮೋಯಿದ್ ಖಾನ್, ಎಂ.ಎ.
ಪ್ರಾಧ್ಯಾಪಕ, ಅರಬ್ಬೀ ಸಾಹಿತ್ಯ
ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಾಬಾದ್

| | |
|---|---|
| ಎಂ.ಎ.ಎಂ. | ಮಾದಯ್ಯ, ಎಂ.<br>ಕುಲಪತಿ (ವಿ)<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಎಂ.ಎ.ಎಸ್. | ಶ್ರೀರಾಮ, ಎಂ.ಎ.<br>ನಿರ್ದೇಶಕ (ವಿ)<br>ಸರ್ಕಾರಿ ಮುದ್ರಣಾಲಯ, ಬೆಂಗಳೂರು |
| ಎಂ.ಎ.ಎಸ್.ಐ. | ಶ್ರೀನಿವಾಸ ಅಯ್ಯಂಗಾರ್, ಎಂ.ಎ.<br>ಮುಖ್ಯೋಪಾಧ್ಯಾಯ (ವಿ)<br>ಉನ್ನತ ಪ್ರೌಢಶಾಲೆ, ಗೌರಿಬಿದನೂರು |
| ಎಂ.ಬಿ. | ಬಸವರಾಜು, ಎಂ.<br>ಪ್ರಾಧ್ಯಾಪಕ (ವಿ)<br>ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು |
| ಎಂ.ಬಿ.ಆರ್. | ರಾಮಚಂದ್ರರಾವ್, ಎಂ.ಬಿ.<br>ಕನ್‌ಸಲ್‌ಟೆಂಟ್ ಆಯಿಲ್ ಅಂಡ್ ನ್ಯಾಚ್ಯುರಲ್ ಗ್ಯಾಸ್<br>ಕಮಿಷನ್, ಭಾರತ ಸರ್ಕಾರ, ಬೆಂಗಳೂರು |
| ಎಂ.ಬಿ.ಎಸ್. | ಸಿಂಗ್, ಎಂ.ಬಿ.<br>ಸಂಪಾದಕ(ವಿ), 'ಸುಧಾ' ವಾರಪತ್ರಿಕೆ<br>ಬೆಂಗಳೂರು |
| ಎಂ.ಬಿ.ಟಿ. | ತಿಪ್ಪಣ್ಣನವರ್, ಎಂ.ಬಿ.<br>ಕೃಷಿ ವಿದ್ಯಾಧಿಕಾರಿ<br>ಕೃಷಿ ಕಾಲೇಜು, ಧಾರವಾಡ |
| ಎಂ.ಸಿ. | ಚಿದಾನಂದಮೂರ್ತಿ, ಎಂ.<br>ಪ್ರಾಧ್ಯಾಪಕ (ವಿ), ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಎಂ.ಸಿ.ಜಿ. | ಗುಪ್ತ, ಎಂ.ಸಿ.<br>ಪ್ರಾಧ್ಯಾಪಕ<br>ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚೆನ್ನೈ |
| ಎಂ.ಸಿ.ಪಿ. | ಪದ್ಮನಾಭಶರ್ಮ, ಎಂ.ಸಿ.<br>ಸಹಾಯಕ ಸಂಶೋಧಕ (ವಿ)<br>ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು |
| ಎಂ.ಡಿ. | ದಯಾಕರ, ಎಂ.<br>ಪ್ರಾಧ್ಯಾಪಕ (ವಿ)<br>ಮೈಸೂರು ಮೆಡಿಕಲ್ ಕಾಲೇಜು, ಮೈಸೂರು |
| ಎಂ.ಡಿ.ಪಿ. | ಪಾರ್ಥಸಾರಥಿ, ಎಂ.ಡಿ.<br>ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| ಎಂ.ಜಿ.ಪಿ. | ಪ್ರೇಮಲತ, ಎಂ.ಜಿ.<br>ಕೌನ್ಸೆಲಿಂಗ್ ಇನ್‌ಸ್ಟ್ರಕ್ಟರ್<br>ವೃತ್ತಿ ಶಿಕ್ಷಣ ನಿರ್ದೇಶನ ವಿಭಾಗ, ಬೆಂಗಳೂರು |
| ಎಂ.ಜಿ.ಎಸ್. | ಶ್ರೀನಿವಾಸನ್, ಎಮ್.ಜಿ.<br>ವಿಶ್ವರೂಪ, ನಂ. 254<br>5ನೆಯ ಮುಖ್ಯರಸ್ತೆ, 14ನೆಯ ಕ್ರಾಸ್<br>ಜಯನಗರ, ಮೈಸೂರು |
| ಎಂ.ಎಚ್. | ಹನುಮಂತರಾವ್, ಎಂ. (ದಿ)<br>ಸಹಾಯಕ ನಿರ್ದೇಶಕ<br>ಪ್ರಾಕ್ತನ ಸಂಶೋಧನ ವಿಭಾಗ, ಮೈಸೂರು |
| ಎಂ.ಎಚ್.ಡಿ. | ಧನಂಜಯ, ಎಂ.ಎಚ್.<br>ಪ್ರಾಧ್ಯಾಪಕ (ವಿ)<br>ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು<br>ಮೈಸೂರು |
| ಎಂ.ಎಚ್.ಎಂ. | ಮರಿಗೌಡ, ಎಂ.ಎಚ್. (ದಿ)<br>ನಿರ್ದೇಶಕ, ತೋಟಗಾರಿಕೆ ವಿಭಾಗ<br>ಬೆಂಗಳೂರು |
| ಎಂ.ಜೆ. | ಜಯಂತಿಬಾಯಿ, ಎಂ. (ದಿ)<br>ಭಾಷಾಂತರ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಜೆ.ಎ. | ಜಯರಾಂ, ಎಂ.<br>ನಿರ್ದೇಶಕ, ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಕೆ. | ಮತ್ತೂರು ಕೃಷ್ಣಮೂರ್ತಿ (ದಿ)<br>ಭಾರತೀಯ ವಿದ್ಯಾಭವನ, ಬೆಂಗಳೂರು |
| ಎಂ.ಕೆ.ಬಿ. | ಕೇಶವಭಟ್ಟ, ಎಂ.<br>ಪ್ರಧಾನ ಭಾಷಾಂತರಕಾರ<br>ಮೈಸೂರು ಸರ್ಕಾರ, ಬೆಂಗಳೂರು |
| ಎಂ.ಕೆ.ಎನ್. | ನಾಯಕ್, ಎಂ.ಕೆ.<br>ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎಂ.ಕೆ.ಆರ್. | ಕೃಷ್ಣರೆಡ್ಡಿ, ಎಂ.<br>ರಾಜ್ಯಶಾಸ್ತ್ರ ವಿಭಾಗ ಅಧ್ಯಾಪಕ (ವಿ)<br>ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು |
| ಎಂ.ಕೆ.ಎಸ್. | ಮುನೇಗೌಡ, ಕೆ.ಎಸ್.<br>ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಎಲ್.ಎನ್. | ನರಸಿಂಹಮೂರ್ತಿ, ಎಂ.ಎಲ್.<br>ಪ್ರಾಧ್ಯಾಪಕ, ಕನ್ನಡ ವಿಭಾಗ<br>ಶ್ರೀ ಟಿ.ವಿ.ವಿ. ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ |
| ಎಂ.ಎಂ. | ಮಹದೇವಶಾಸ್ತ್ರಿ, ಎಂ.<br>ಪ್ರಾಧ್ಯಾಪಕ (ವಿ)<br>ಸರ್ಕಾರಿ ಆಯುರ್ವೇದ ಕಾಲೇಜು, ಬೆಂಗಳೂರು |
| ಎಂ.ಎಂ.ಎ. | ಮೆಹಂದಲೆ, ಎಂ.ಎ.<br>ಪ್ರಾಧ್ಯಾಪಕ (ವಿ)<br>ಡೆಕ್ಕನ್ ಕಾಲೇಜು, ಪೂನ |
| ಎಂ.ಎಂ.ಬಿ. | ಮರಿಯಪ್ಪ ಭಟ್, ಎಂ. (ದಿ)<br>ಪ್ರಾಧ್ಯಾಪಕ, ಕನ್ನಡ ವಿಭಾಗ<br>ಮದರಾಸು ವಿಶ್ವವಿದ್ಯಾಲಯ, ಚೆನ್ನೈ |
| ಎಂ.ಎಂ.ಎಚ್. | ಮೀರ್ ಮಹಮೂದ್ ಹುಸೇನ್<br>ರೀಡರ್, ಉರ್ದು ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಎಂ.ಪಿ. | ಪ್ರಭು, ಎಂ.ಎಂ.<br>ಬೆಂಗಳೂರು |
| ಎಂ.ಎಂಯು. | ಮುನಿಯಮ್ಮ, ಎಂ.<br>ಕುಲಪತಿ (ವಿ)<br>ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ |
| ಎನ್.ಎಂ. | ನಂಜಮ್ಮಣ್ಣಿ, ಎಂ. (ದಿ)<br>ಪ್ರಾಧ್ಯಾಪಕಿ, ಸಮಾಜವಿಜ್ಞಾನ ವಿಭಾಗ<br>ಮಹಾರಾಣಿ ಕಾಲೇಜು, ಮೈಸೂರು |
| ಎಂ.ಎನ್. | ನಾಗರಾಜ್, ಎಂ.<br>ಕುಲಪತಿ (ವಿ)<br>ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ |

## ಲೇಖಕ ಸೂಚಿ

| | |
|---|---|
| ಎಂ.ಎನ್.ವಿ. | ವಿಶ್ವನಾಥಯ್ಯ, ಎಂ.ಎನ್. (ದಿ)<br>ಕುಲಪತಿ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಎಂ.ಎನ್.ವಿ.ಡಿ. | ವಸಂತಾದೇವಿ, ಎಂ.ಎನ್.<br>ಅಧ್ಯಾಪಕಿ (ವಿ)<br>ಭೂಗೋಳವಿಜ್ಞಾನ ವಿಭಾಗ<br>ಮದರಾಸು ವಿಶ್ವವಿದ್ಯಾಲಯ, ಚೆನ್ನೈ |
| ಎಂ.ಪಿ. | ಪ್ರಸನ್ನಕುಮಾರ್, ಎಂ.<br>ಅಧ್ಯಾಪಕ, ಇತಿಹಾಸ ವಿಭಾಗ<br>ಸರ್ಕಾರಿ ಕಾಲೇಜು, ಗುಲ್ಬರ್ಗ |
| ಎಂ.ಪಿ.ಎಸ್. | ಸಮರ್ಥ, ಎಂ.ಪಿ.<br>ಯು.ಬಿ.ಎಂ. ಚರ್ಚ್<br>ಮಡಕೇರಿ ಗುಡ್ಡ, ಮಂಗಳೂರು |
| ಎಂ.ಪಿ.ವಿ. | ವೆಂಕಟಪ್ಪ, ಎಂ.ಪಿ.<br>ರೀಡರ್, ರಸಾಯನವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎಂ.ಆರ್. | ರಾಮರಾವ್, ಎಂ. (ದಿ)<br>ಪ್ರಧಾನ ಸಂಪಾದಕ<br>ಇಂಗ್ಲಿಷ್–ಕನ್ನಡ ನಿಘಂಟು<br>ಪ್ರಸಾರಾಂಗ, ಮೈಸೂರು |
| ಎಂ.ಆರ್.ಎ. | ಆನಂದರಾಮಯ್ಯ, ಎಂ.ಆರ್.<br>ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯ ಮೈಸೂರು |
| ಎಂ.ಆರ್.ಡಿ. | ದೊರೆಸ್ವಾಮಯ್ಯಂಗಾರ್, ಎಂ.ಆರ್. (ದಿ)<br>ರೀಡರ್, ಸಂಖ್ಯಾಶಾಸ್ತ್ರ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಎಂ.ಆರ್.ಕೆ. | ರಾಮಕೃಷ್ಣ, ಎಂ.<br>ಅಧ್ಯಾಪಕ, ಶಿಲ್ಪಶಾಸ್ತ್ರ ವಿಭಾಗ<br>ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು, ಮಂಡ್ಯ |
| ಎಂ.ಆರ್.ಆರ್. | ರಾಘವೇಂದ್ರರಾವ್, ಎಂ.ಆರ್.<br>ಸಹಾಯಕ ನಿರ್ದೇಶಕ (ವಿ)<br>ಕೇಂದ್ರ ಆಹಾರ ಸಂಶೋಧನಾಲಯ, ಮೈಸೂರು |
| ಎಂ.ಆರ್.ಆರ್.ಎಸ್. | ರಾಜಶೇಖರಶೆಟ್ಟಿ, ಎಂ.ಆರ್. (ದಿ)<br>ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಆರ್.ಎಸ್. | ಶ್ರೀನಿವಾಸರಾವ್, ಎಂ.ಆರ್.<br>ಪ್ರಾಧ್ಯಾಪಕ, ಭೂವಿಜ್ಞಾನ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| ಎಂ.ಎಸ್. | ಶಿವಲಿಂಗಯ್ಯ, ಎಂ.<br>ಪ್ರಾಧ್ಯಾಪಕ<br>ಭೂಗೋಳವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಎಸ್.[1] | ಶ್ರೀರಂಗಮ್ಮ, ಎಂ.<br>ಅಧ್ಯಾಪಕಿ, ಗಣಿತವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಬೆಂಗಳೂರು |
| ಎಂ.ಎಸ್.[2] | ಮೃಣಾಳಿನಿ ಸಾರಾಭಾಯಿ<br>ಅಹಮದಾಬಾದ್ |
| ಎಂ.ಎಸ್.ಎ. | ಶಾಂತಪ್ಪ, ಎಂ.<br>ಪ್ರಾಧ್ಯಾಪಕ (ವಿ)<br>ಭೌತರಸಾಯನವಿಜ್ಞಾನ<br>ಮದರಾಸು ವಿಶ್ವವಿದ್ಯಾಲಯ, ಮದರಾಸು |
| ಎಂ.ಎಸ್.ಬಿ. | ಮುತ್ತೇಗೌಡ, ಎಸ್.ಬಿ. (ದಿ)<br>ಆಡಳಿತಾಧಿಕಾರಿ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಎಸ್.ಕೆ. | ಕೃಷ್ಣಮೂರ್ತಿ, ಎಂ.ಎಸ್.<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ಜೆ.ಎಸ್.ಎಸ್. ಕಾಲೇಜು, ಧಾರವಾಡ |
| ಎಂ.ಎಸ್.ಎಂ. | ಸಾಲಾರ್ ಮಸೂದ್, ಎಂ.<br>ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಂ.ಎಸ್.ಎನ್. | ನಾರಾಯಣರಾವ್, ಎಂ.ಎಸ್.<br>ಗೌರವ ವೈದ್ಯ (ವಿ)<br>ಬೌರಿಂಗ್ ಆಸ್ಪತ್ರೆ, ಬೆಂಗಳೂರು |
| ಎಂ.ಎಸ್.ಆರ್. | ರಾಮರಾವ್, ಎಂ.ಎಸ್.<br>ಅಧ್ಯಾಪಕ (ವಿ), ನ್ಯಾಯಶಾಸ್ತ್ರ ವಿಭಾಗ<br>ಶಾರದಾವಿಲಾಸ ಲಾ ಕಾಲೇಜು, ಮೈಸೂರು |
| ಎಂ.ಎಸ್.ಎಸ್. | ಸದಾಶಿವಯ್ಯ, ಎಂ.ಎಸ್.<br>ಪ್ರಾಧ್ಯಾಪಕ, ಭೂವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎಂ.ಎಸ್.ಎಸ್.ಆರ್. | ರಾವ್, ಎಂ.ಎಸ್.ಎಸ್.<br>ಸಿ6, ಹೌಸಿಂಗ್ ಸೊಸೈಟಿ<br>ಬಾಗಲಕೋಟೆ |
| ಎಂ.ವಿ. | ವಾಸುದೇವರಾವ್, ಎಂ.<br>ಮುಖ್ಯೋಪಾಧ್ಯಾಯ<br>ವಿದ್ಯಾದಾಯಿನಿ ಪ್ರೌಢಶಾಲೆ, ಸುರತ್‌ಕಲ್ (ದ.ಕ.) |
| ಎಂ.ವಿ.ಎ. | ವರದರಾಜನ್, ಎಂ.<br>ಪ್ರಾಧ್ಯಾಪಕ, ತಮಿಳು ವಿಭಾಗ<br>ಮದರಾಸು ವಿಶ್ವವಿದ್ಯಾಲಯ, ಚೆನ್ನೈ |
| ಎಂ.ವಿ.ಜೆ. | ಜಂಬುನಾಥನ್, ಎಂ.ವಿ. (ದಿ)<br>ಪ್ರಾಧ್ಯಾಪಕ, ಅಧ್ಯಕ್ಷ<br>ಸಂಖ್ಯಾಶಾಸ್ತ್ರ ಉಪಸಮಿತಿ<br>ಕನ್ನಡ ವಿಶ್ವಕೋಶ, ಮೈಸೂರು |
| ಎಂ.ವಿ.ಕೆ. | ಕೃಷ್ಣರಾವ್, ಎಂ.ವಿ. (ದಿ)<br>ಪ್ರಾಧ್ಯಾಪಕ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಎಂ.ವಿ.ಆರ್. | ರಾಮಯ್ಯ, ಎಂ.ಆರ್. (ದಿ)<br>ಸಹನಿರ್ದೇಶಕ<br>ವಿದ್ಯಾ ಇಲಾಖೆ, ಬೆಂಗಳೂರು |
| ಎಂ.ವಿ.ಎಸ್. | ಸೀತಾರಾಮಯ್ಯ, ಎಂ.ವಿ. (ದಿ)<br>ರೀಡರ್, ಕನ್ನಡ ವಿಭಾಗ<br>ಸರ್ಕಾರಿ ಕಾಲೇಜು, ಬೆಂಗಳೂರು |
| ಎಂ.ವೈ. | ಯಾಮುನಾಚಾರ್ಯ, ಎಂ. (ದಿ)<br>ತತ್ತ್ವಶಾಸ್ತ್ರ ಪ್ರಾಧ್ಯಾಪಕ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಎನ್.ಎ. | ಅನಂತಪದ್ಮನಾಭನ್, ಎನ್.<br>ಪ್ರಾಧ್ಯಾಪಕ (ವಿ)<br>ಭೂಗೋಳವಿಜ್ಞಾನ ವಿಭಾಗ<br>ಪ್ರೆಸಿಡೆನ್ಸಿ ಕಾಲೇಜು, ಮದರಾಸು |
| ಎನ್.ಎ.ಆರ್. | ಅನಂತರಂಗಾಚಾರ್, ಎನ್. (ದಿ)<br>ಪ್ರಾಧ್ಯಾಪಕ<br>1ನೆಯ ಮುಖ್ಯರಸ್ತೆ<br>ಸರಸ್ವತೀಪುರಂ, ಮೈಸೂರು |

**ಎನ್.ಎಎಸ್.** ನಾಗರಾಜ್, ಎಸ್.
ಸಹಾಯಕ ನಿರ್ದೇಶಕ
ಆರೋಗ್ಯ ಇಲಾಖೆ, ಬೆಂಗಳೂರು

**ಎನ್.ಬಿ.** ಬಸವಾರಾಧ್ಯ, ಎನ್.
ಉಪನಿರ್ದೇಶಕ (ವಿ), ಸಂಪಾದನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎನ್.ಸಿ.ವಿ.** ವಿಜಯರಾಜ್, ಎನ್.ಸಿ.
ಅಧ್ಯಾಪಕ (ವಿ)
ಭೂಗೋಳವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎನ್.ಎಚ್.ಎಂ.** ನಾಗಯ್ಯ, ಎಚ್.ಎಂ.
ಸಂಪಾದಕ (ವಿ), ಕನ್ನಡ ನುಡಿ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

**ಎನ್.ಎಚ್.ಎಸ್.** ನಾಗರಾಜಯ್ಯ, ಎಚ್.ಎಸ್. (ದಿ)
ರೀಡರ್, ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎನ್.ಕೆ.** ನಾಡಿಗ ಕೃಷ್ಣಮೂರ್ತಿ (ದಿ)
ಪ್ರಾಧ್ಯಾಪಕ, ಪತ್ರಿಕೋದ್ಯಮ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎನ್.ಕೆ.ಆರ್.** ರಂಗರಾವ್, ಎನ್.ಕೆ.
ಜನರಲ್ ಮ್ಯಾನೇಜರ್
ಮೈಸೂರು ಲ್ಯಾಕ್ ಅಂಡ್ ಪೇಯಿಂಟ್ ವರ್ಕ್ಸ್, ಮೈಸೂರು

**ಎನ್.ಕೆ.ಎಸ್.** ಕೃಷ್ಣಸ್ವಾಮಿ, ಎನ್.
ವಿದ್ಯುತ್ ರಾಡಾರ್ ಅಭಿವೃದ್ಧಿ ಶಾಖೆ
ಬೆಂಗಳೂರು

**ಎನ್.ಎಲ್.** ಲಲಿತ, ಎನ್.
232/ಇಡಬ್ಲ್ಯುಎಸ್, 4ನೆಯ ಮುಖ್ಯರಸ್ತೆ
ಮೊದಲನೆಯ ಹಂತ, ಶಾರದಾದೇವಿನಗರ
ಮೈಸೂರು – 570 022

**ಎನ್.ಎಲ್.ಎನ್.** ಲಕ್ಷ್ಮೀನಾರಾಯಣ, ಎನ್.
ಪ್ರಾಧ್ಯಾಪಕ
ಸರ್ಕಾರಿ ಆಯುರ್ವೇದ ಕಾಲೇಜು, ಬೆಂಗಳೂರು

**ಎನ್.ಎಂ.ಎ.** ಮಾದಯ್ಯ, ಎನ್. (ದಿ)
ಭೌತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎನ್.ಪಿ.** ಪ್ರಹ್ಲಾದರಾವ್, ಎನ್. (ದಿ)
ಸಂಯೋಜಕ ಸಂಪಾದಕ
ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎನ್.ಆರ್.** ರಂಗಣ್ಣ, ಎನ್. (ದಿ)
ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಸಹ್ಯಾದ್ರಿ ಕಾಲೇಜು, ಶಿವಮೊಗ್ಗ

**ಎನ್.ಆರ್ಎ.** ರಾಮಯ್ಯ, ಎನ್.
ಪ್ರಾಧ್ಯಾಪಕ
ಜೆ.ಸಿ. ಎಂಜಿನಿಯರಿಂಗ್ ಕಾಲೇಜು, ಮೈಸೂರು

**ಎನ್.ಆರ್.ವಿ.** ವಿಶ್ವನಾಥ, ಎನ್.ಆರ್.
ತೋಟಗಾರಿಕೆ ಇಲಾಖೆ
ಬೆಂಗಳೂರು

**ಎನ್.ಎಸ್.** ಶ್ರೀಧರಮೂರ್ತಿ, ಎನ್. (ದಿ)
ರೀಡರ್, ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎನ್.ಎಸ್.ಎ.** ಅನಂತರಂಗಾಚಾರ್, ಎನ್.ಎಸ್. (ದಿ)
ಜಿಲ್ಲಾ ವಿದ್ಯಾಧಿಕಾರಿ
ಬೆಂಗಳೂರು

**ಎನ್.ಎಸ್.ಎಚ್.** ಶಂಕರಲಿಂಗಯ್ಯ, ಎನ್.
ರೀಡರ್, ರಾಜ್ಯಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಎನ್.ಎಸ್.ಕೆ.** ಶ್ರೀಕಂಠ, ಎನ್.
ರೀಡರ್ (ವಿ), ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎನ್.ಎಸ್.ಎಲ್.** ಎನ್.ಎಸ್. ಲೀಲಾ

**ಎನ್.ಎಸ್.ಎಲ್.ಬಿ** ಲಕ್ಷ್ಮೀನಾರಾಯಣಭಟ್ಟ, ಎನ್.ಎಸ್.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎನ್.ಎಸ್. ಎಂ. ಸೇವ ನಮಿರಾಜಮಲ್ಲ
ಸದಸ್ಯ, ಲ್ಯಾಂಡ್ ಟ್ರಿಬ್ಯೂನಲ್
ಹೊನ್ನಾವರ (ಉ.ಕ.)

**ಎನ್.ಎಸ್.ಆರ್.** ಸುಂದರರಾಜ್, ಎನ್.
ಸಹಪ್ರಾಧ್ಯಾಪಕ (ವಿ), ಸಂಖ್ಯಾಶಾಸ್ತ್ರ ವಿಭಾಗ
ಪಶುವೈದ್ಯ ಕಾಲೇಜು, ಹೆಬ್ಬಾಳ್, ಬೆಂಗಳೂರು

**ಎನ್.ಎಸ್.ಎಸ್.** ಶಾಂತಮ್ಮ, ಎನ್.ಎಸ್.
ರೀಡರ್ (ವಿ). ಮನೋವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

**ಎನ್.ಎಸ್.ಎಸ್.ಪಿ.** ಶಾರದಾಪ್ರಸಾದ್, ಎನ್.ಎಸ್.
ಸಹಾಯಕ ಭಾಷಾಂತರಕಾರರು (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎನ್.ಎಸ್.ವಿ.** ವೀರಪ್ಪ, ಎನ್.ಎಸ್. (ದಿ)
ಗೌರವ ಸಂಪಾದಕ
ಕನ್ನಡ ವಿಶ್ವಕೋಶ, ಮೈಸೂರು

**ಎನ್.ಟಿ.ಎನ್.** ಥಕ್ಕರ್‌ನಾಯಕ್
ಪ್ರಾಧ್ಯಾಪಕ
ಬಳ್ಳಾರಿ ಮೆಡಿಕಲ್ ಕಾಲೇಜು, ಬಳ್ಳಾರಿ

**ಎನ್.ವಿ.** ವರದರಾಜನ್, ಎನ್.
ಅಧ್ಯಾಪಕ
ಆರ್.ಸಿ. ಕಾಮರ್ಸ್ ಕಾಲೇಜು, ಬೆಂಗಳೂರು

**ಪಿ.** ಪ್ರಭುಶಂಕರ
ನಿರ್ದೇಶಕ (ವಿ), ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು

**ಪಿ.ಎ.ಆರ್.** ರಾಮಕೃಷ್ಣ ಅಯ್ಯರ್, ಪಿ.ಎ.
ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಪಿ.ಬಿ.ಡಿ.** ದೇಸಾಯ್, ಪಿ.ಬಿ.
ನಿರ್ದೇಶಕ, ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಪಿ.ಸಿ.ಆರ್.** ರಹೇಜಾ, ಪಿ.ಸಿ.
ನಿರ್ದೇಶಕ (ವಿ)
ಸೆಂಟ್ರಲ್ ಆರಿಡ್‌ಜೋನ್ ರೀಸರ್ಚ್ ಇನ್‌ಸ್ಟಿಟ್ಯೂಟ್
ಜೋಧಪುರ

## ಲೇಖಕ ಸೂಚಿ

**ಪಿ.ಡಿ.ಎಂ.** ಮಹಾದೇವ್, ಪಿ.ಡಿ.
ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಪಿ.ಜೆ.** ಜಯರಾಮಯ್ಯ, ಪಿ.
ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಪಿ.ಕೆ.** ಕೃಷ್ಣಕುಮಾರ, ಪಿ.
ಉಪಸಂಪಾದಕ (ವಿ),
ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಪಿ.ಕೆ.ಎಸ್.** ಪಾರ್ವತಿ, ಕೆ. ಸರ್ಕಾರ್
ನುಸೂಕ ವಿಶ್ವವಿದ್ಯಾಲಯ, ನೈಜೀರಿಯ, ಆಫ್ರಿಕ

**ಪಿ.ಎಲ್.ಜಿ.** ಗುರುಮೂರ್ತಿ, ಪಿ.ಎಲ್.
ಪ್ರಜಾವಾಣಿ ಕಾರ್ಯಾಲಯ, ಬೆಂಗಳೂರು

**ಪಿ.ಎಂ.** ಪುಟ್ಟರುದ್ರಯ್ಯ, ಎಂ.
ನಿರ್ದೇಶಕ, ಕೃಷಿ ಕಾಲೇಜು
ಹೆಬ್ಬಾಳ್, ಬೆಂಗಳೂರು

**ಪಿ.ಎಂ.ಯು.ಎಸ್.** ಉಮಾಕಾಂತಶಾಸ್ತ್ರಿ, ಪಿ.ಎಂ.
ಪ್ರಿನ್ಸಿಪಾಲ್ (ವಿ)
ಶ್ರೀ ಗವಿಸಿದ್ದೇಶ್ವರ ವಿ.ವಿ. ಟ್ರಸ್ಟ್ ಕಾಲೇಜು
ಕೊಪ್ಪಳ (ರಾಯಚೂರು)

**ಪಿ.ಎಸ್.** ಪುಲಮತಿ ಶಾಮರಾವ್
ಅಡ್ವೊಕೇಟ್, ಬಳ್ಳಾರಿ

**ಪಿ.ಎಸ್.ಸಿ.** ಚಿಕ್ಕಣ್ಣಯ್ಯ, ಪಿ.ಎಸ್.
ರೀಡರ್ (ವಿ), ಸಸ್ಯವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಪಿ.ಎಸ್.ಎನ್.** ನಾರಾಯಣರಾವ್, ಪಿ.ಎಸ್.
ವಾಣಿಜ್ಯಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಪಿ.ಎಸ್.ಎಸ್.** ಶಂಕರ್, ಪಿ.ಎಸ್.
ಪ್ರಾಧ್ಯಾಪಕ (ವಿ)
ಗುಲ್ಬರ್ಗ ಮೆಡಿಕಲ್ ಕಾಲೇಜು, ಗುಲ್ಬರ್ಗ

**ಪಿ.ಎಸ್.ವಿ.** ವೆಂಕಟರಾವ್, ಪಿ.ಎಸ್.
ಉಪ ಪ್ರಾಧ್ಯಾಪಕ (ವಿ)
ಎಸ್.ಕೆ.ಎಸ್.ಜೆ. ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್
ಬೆಂಗಳೂರು

**ಪಿ.ಎಸ್.ವಿ.ಎಸ್.** ವೆಂಕಟಸ್ವಾಮಿಶೆಟ್ಟಿ, ಪಿ.ಎಸ್.
ಪರೀಕ್ಷಾಧಿಕಾರಿ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಪಿ.ವಿ.** ವೆಂಕಟರಾಮಯ್ಯ, ಪಿ.
ಕುಲಪತಿ (ವಿ)
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ಪಿ.ವಿ.ಸಿ.** ಚಂದ್ರಶೇಖರರಾವ್, ಪಿ.ವಿ. (ದಿ)
ರೀಡರ್, ಕನ್ನಡ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು

**ಆರ್.** ಕ್ಯಾತನಹಳ್ಳಿ ರಾಮಣ್ಣ
ಸಂಶೋಧನ ಸಹಾಯಕ (ವಿ)
ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಆರ್.ಎ.** ರಾಮಲಿಂಗಂ, ಎ.
ಪ್ರಾಧ್ಯಾಪಕ (ವಿ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಆರ್.ಸಿ.** ಚಕ್ರವರ್ತಿ, ಆರ್.
ಬೆಂಗಳೂರು

**ಆರ್.ಸಿ.ಬಿ.** ಭೂಸನೂರಮಠ, ಆರ್.ಸಿ.
ಉಪನಿರ್ದೇಶಕ
ಆಕಾಶವಾಣಿ, ಬೆಂಗಳೂರು

**ಆರ್.ಡಿ.ಆರ್.** ದಿನೇಶರಾವ್, ಆರ್.
ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಆರ್.ಜಿ.** ರಾಮೇಗೌಡ
ಪ್ರಾಧ್ಯಾಪಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು

**ಆರ್.ಜಿ.ಆರ್.** ರಾಯಕರ, ಆರ್.ಜಿ.
ಕಲಾವಿದ, ಚನ್ನಪಟ್ಟಣ ಬಜಾರ
ಶಿರಸಿ, ಉತ್ತರ ಕನ್ನಡ

**ಆರ್.ಜಿ.ಎಸ್.** ಶಿವಣ್ಣ, ಆರ್.ಜಿ.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಆರ್.ಕೆ.** ಕೃಷ್ಣಶೆಟ್ಟಿ, ಆರ್.
ವಕೀಲರು
ಬೆಂಗಳೂರು

**ಆರ್.ಎಲ್.** ಲಲಿತಾ, ಆರ್.
ಅಧ್ಯಾಪಕಿ, ಪ್ರಾಣಿವಿಜ್ಞಾನ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು, ಬೆಂಗಳೂರು

**ಆರ್.ಎಲ್.ಎನ್.** ನರಸಿಂಹಯ್ಯ, ಆರ್.ಎಲ್. (ದಿ)
ಭೌತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಆರ್.ಎಂ.ಆರ್.** ರಾಮಸ್ವಾಮಿ, ಎಂ.ಆರ್.
ಮುಖ್ಯೋಪಾಧ್ಯಾಯ (ವಿ)
ಸರ್ಕಾರಿ ಉನ್ನತ ಪ್ರೌಢಶಾಲೆ, ಮಡಿಕೇರಿ

**ಆರ್.ಎನ್.** ನಾರಾಯಣ, ಆರ್. (ದಿ)
ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಆರ್.ಎನ್.ಡಿ.** ದಾಂಡೇಕರ್, ಆರ್.ಎನ್.
ಪ್ರಾಧ್ಯಾಪಕ (ವಿ)
ಭಂಡಾರ್ಕರ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್
ಪೂನ

**ಆರ್.ಎನ್.ಆರ್.** ನರಸಿಂಗರಾವ್, ಎ.
ಕ್ರೊಮುಪೇಟೆ, ಮದರಾಸು

**ಆರ್.ಪಿ.ಡಿ.** ದೊಡ್‌ವಾಡೆಮಠ್, ಆರ್.ಪಿ.
ರಸಾಯನವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಆರ್.ಪಿ.ಎಸ್.** ಸಿಂಗ್, ಆರ್.ಪಿ.
ಪ್ರಾಧ್ಯಾಪಕ (ವಿ), ಶಿಕ್ಷಣ ಇಲಾಖೆ
ಪಾಟ್ನ ವಿಶ್ವವಿದ್ಯಾಲಯ, ಪಾಟ್ನ

**ಆರ್.ಆರ್.** ರಾಚಪ್ಪ, ಆರ್.
ಮುಖ್ಯಸ್ಥ, ಕನ್ನಡ ವಿಭಾಗ
ಶ್ರೀ ರೇಣುಕಾಚಾರ್ಯ ವಿಜ್ಞಾನ ಕಾಲೇಜು, ಬೆಂಗಳೂರು

**ಆರ್.ಆರ್.ಟಿ.** ರಂಗರಾವ್, ಆರ್.
ತಲಚೇರಕರ್ ಪ್ಲೀಡರ್, ಬೆಳಗಾಂವಿ

**ಆರ್.ಆರ್.ಯು.** ಉಮರ್ಜಿ, ಆರ್.ಆರ್.
ಪ್ರಾಧ್ಯಾಪಕ (ನಿ)
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಆರ್.ಎಸ್.** ರಂಗಾಚಾರ್, ಎಸ್.
ಅಧ್ಯಾಪಕ, ತರ್ಕಶಾಸ್ತ್ರ ವಿಭಾಗ
ಸರ್ಕಾರಿ ಕಾಲೇಜು, ಮಂಡ್ಯ

**ಆರ್.ಎಸ್.ಎನ್.** ಸತ್ಯನಾರಾಯಣ, ಆರ್.
ರೀಡರ್ (ನಿ), ರಸಾಯನವಿಜ್ಞಾನ ವಿಭಾಗ
ಶಾರದಾವಿಲಾಸ ಕಾಲೇಜು, ಮೈಸೂರು

**ಆರ್.ಎಸ್.ಪಿ.** ಪಂಚಮುಖಿ, ಆರ್.ಎಸ್. (ದಿ)
ಸಂಪಾದಕ
ಕರ್ನಾಟಕ ಚಾರಿತ್ರಿಕ ಸಂಪುಟಗಳು, ಧಾರವಾಡ

**ಆರ್.ಎಸ್.ವಿ.** ರಾಮರಾವ್, ಎಸ್.ವಿ.
ಪ್ರಾಧ್ಯಾಪಕ (ನಿ)
ಬಳ್ಳಾರಿ ಮೆಡಿಕಲ್ ಕಾಲೇಜು, ಬಳ್ಳಾರಿ

**ಆರ್.ವಿ.** ವಿಶ್ವನಾಥ, ಆರ್.
ಉಪಪ್ರಾಧ್ಯಾಪಕ
ಮೆಡಿಕಲ್ ಕಾಲೇಜು, ಬೆಂಗಳೂರು

**ಆರ್.ವಿ.ಪಿ.** ಪದ್ಮನಾಭ, ಆರ್.ವಿ.
ಭೌತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎಸ್.** ಸುಕುಮಾರಸೇನ್(ದಿ)
ಪ್ರಾಧ್ಯಾಪಕ, ಭಾಷಾವಿಜ್ಞಾನ ವಿಭಾಗ
ಕಲ್ಕತ್ತ ವಿಶ್ವವಿದ್ಯಾಲಯ, ಕೋಲ್ಕತ

**ಎಸ್.ಎ.** ಷಕೂರ್, ಅಮ್‌ತುಲ್
ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಬಿ.ಎಲ್.** ಶ್ರೀನಿವಾಸ್, ಬಿ.ಎಲ್.
ಭೂವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎಸ್.ಬಿ.ಕೆ.** ಸುರಭಾಂಕರ್, ಬಿ.ಕೆ.
ಜಂಟಿ ನಿರ್ದೇಶಕರು
ವಿದ್ಯಾ ಇಲಾಖೆ, ಬೆಂಗಳೂರು

**ಎಸ್.ಬಿ.ಎಂ.** ಮಠದ್, ಎಸ್.ಬಿ.
ಪ್ರಾಣಿವಿಜ್ಞಾನ ವಿಭಾಗ
ಕರ್ನಾಟಕ ಕಾಲೇಜು, ಧಾರವಾಡ

**ಎಸ್.ಬಿ.ಆರ್.** ಸಕ್ಸೇನಾ, ಬಿ.ಆರ್.
ಉಪಕುಲಪತಿ
ರಾಯಪುರ ವಿಶ್ವವಿದ್ಯಾಲಯ, ಮಧ್ಯಪ್ರದೇಶ

**ಎಸ್.ಬಿ.ಎಸ್.** ಸಣ್ಣಯ್ಯ, ಬಿ.ಎಸ್.
ಸಹನಿರ್ದೇಶಕ (ನಿ), ಸಂಪಾದನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಸಿ.** ಚಿನ್ನಪುಳ್ಳೆ, ಎಸ್.
ಪ್ರಾಧ್ಯಾಪಕ (ನಿ)
ಮೆಡಿಕಲ್ ಕಾಲೇಜು, ಬೆಂಗಳೂರು

**ಎಸ್.ಸಿ.ಜಿ.** ಶೈಲೇಶಚಂದ್ರಗುಪ್ತ
ಸಹಾಯಕ ಸಂಪಾದಕ (ನಿ)
ಜ್ಞಾನಗಂಗೋತ್ರಿ, ಬೆಂಗಳೂರು

**ಎಸ್.ಡಿ.ಎಂ.** ಮಿಶ್ರ, ಎಸ್.ಡಿ.
ಪ್ರಾಧ್ಯಾಪಕ (ನಿ)
ಭೂಗೋಳವಿಜ್ಞಾನ ವಿಭಾಗ
ಉಜ್ಜಯಿನಿ (ಮಧ್ಯಪ್ರದೇಶ)

**ಎಸ್.ಡಿ.ಎನ್.** ನಾರಾಯಣಗೌಡ, ಎಸ್.ಡಿ.
ಜಂಟಿ ನಿರ್ದೇಶಕರು (ನಿ)
ಸಾರ್ವಜನಿಕ ಆರೋಗ್ಯ ಇಲಾಖೆ, ಬೆಂಗಳೂರು

**ಎಸ್.ಜಿ.[1]** ಸೋಮಶೇಖರಗೌಡ
ಪ್ರಾಧ್ಯಾಪಕ (ನಿ), ಭಾಷಾವಿಜ್ಞಾನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಜಿ.[2]** ಗುರುರಾಜಾಚಾರ್, ಎಸ್. (ದಿ)
ರೀಡರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಎಸ್.ಜಿ.ಕೆ.** ಕದರಮಂಡಲಗಿ, ಎಸ್.ಜಿ.
ಭೂಗೋಳವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆನಗರ, ಧಾರವಾಡ

**ಎಸ್.ಜಿ.ವಿ.** ಸೀತಾಪತಿ, ಜಿ.ವಿ.
ಪ್ರಧಾನ ಸಂಪಾದಕ
ತೆಲುಗು ವಿಶ್ವಕೋಶ, ಚೆನ್ನೈ

**ಎಸ್‌ಎಚ್.** ಶಿವಯ್ಯ
ಅಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎಸ್.ಎಚ್.ಎಸ್.** ಸುಬ್ರಹ್ಮಣ್ಯಂ, ಎಚ್.ಎಸ್.
ಅಧ್ಯಾಪಕ (ನಿ), ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಕೆ.** ಸ್ಯಾಮ್ಯುಅಲ್ ಕೊಯ್‌ನಿಗ್
ಪ್ರಾಧ್ಯಾಪಕ (ನಿ), ಮಾನವಶಾಸ್ತ್ರ ವಿಭಾಗ
ಬ್ರೂಕ್‌ಲಿನ್ ಕಾಲೇಜು, ನ್ಯೂಯಾರ್ಕ್, ಯು.ಎಸ್.ಎ.

**ಎಸ್.ಕೆ.ಜಿ.** ಗೋಣಿ, ಎಸ್.ಕೆ.
ಪ್ರಾಧ್ಯಾಪಕ (ನಿ), ಪಶುವೈದ್ಯ ಕಾಲೇಜು
ಹೆಬ್ಬಾಳ್, ಬೆಂಗಳೂರು

**ಎಸ್.ಕೆ.ಎಚ್.** ಕೃಷ್ಣನ್ ಹರವೆ, ಎಸ್.
ಪ್ರಾಧ್ಯಾಪಕ (ನಿ)
ಮೈಸೂರು ಮೆಡಿಕಲ್ ಕಾಲೇಜು, ಮೈಸೂರು

**ಎಸ್.ಕೆ.ಕೆ.** ಕಿಟ್ಟಮ್ಮ, ಎಸ್.ಕೆ.
ಪ್ರಾಧ್ಯಾಪಕಿ (ನಿ)
ಮಹಾರಾಣಿ ಕಾಲೇಜು, ಬೆಂಗಳೂರು

**ಎಸ್.ಕೆ.ಎಲ್.** ಲಕ್ಷ್ಮಣರಾವ್, ಎಸ್.ಕೆ.
ಪ್ರಾಧ್ಯಾಪಕ (ನಿ), ಗಣಿತವಿಜ್ಞಾನ ವಿಭಾಗ
ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜು ಕಾಜಿಪೇಟ್ (ಎ.ಪಿ.)

**ಎಸ್.ಕೆಪಿ.** ಸುಶೀಲಾ ಕೊಪ್ಪರ
ಬರೆಹಗಾರ್ತಿ
ನೆಹರು ನಗರ, ಬೆಂಗಳೂರು

**ಎಸ್.ಕೆ.ಆರ್.** ರಾಮಚಂದ್ರರಾವ್, ಎಸ್.ಕೆ. (ದಿ)
ಬೆಂಗಳೂರು

**ಎಸ್.ಕೆ.ಎಸ್.** ಶಿವಣ್ಣ, ಕೆ.ಎಸ್.
ಅಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

# ಲೇಖಕ ಸೂಚಿ

**ಎಸ್.ಕೆ.ವಿ.** ಸೂರ್ಯನಾರಾಯಣ, ಕೆ.ವಿ.
ರೀಡರ್ (ವಿ), ಭೂವಿಜ್ಞಾನ ವಿಭಾಗ
ವೆಂಕಟೇಶ್ವರ ವಿಶ್ವವಿದ್ಯಾಲಯ, ತಿರುಪತಿ

**ಎಸ್.ಎಲ್.** ಸಿಂಪಿಲಿಂಗಣ್ಣ (ದಿ)
ಚಡಚಣ, ಬಿಜಾಪುರ ಜಿಲ್ಲೆ

**ಎಸ್.ಎಲ್.ಎಂ.** ಮುರಲೀಧರ, ಎಸ್.ಎಲ್.
ಅಧ್ಯಾಪಕ
ಸೆಂಟ್ರಲ್ ಸ್ಕೂಲ್, ಹುಬ್ಬಳ್ಳಿ

**ಎಸ್.ಎಲ್.ಎನ್.** ಶಂಕರಲಿಂಗಯ್ಯ, ಎನ್. (ದಿ)
ಪ್ರಾಂಶುಪಾಲರು
ಮಹಾರಾಜ ಕಾಲೇಜು, ಮೈಸೂರು

**ಎಸ್.ಎಂ.** ಶೇಷಾದ್ರಿ, ಎಂ. (ದಿ)
ಪ್ರಾಧ್ಯಾಪಕ, ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಎಂ.ಎ.** ಅಲಿ, ಎಸ್.ಎಂ.
ಮುಖ್ಯಸ್ಥ (ವಿ)
ಭೂಗೋಳವಿಜ್ಞಾನ ವಿಭಾಗ
ಸೌಗರ್ ವಿಶ್ವವಿದ್ಯಾನಿಲಯ, ಮಧ್ಯಪ್ರದೇಶ

**ಎಸ್.ಎಂ.ಎಚ್.** ಹುಣಶಾಳ್, ಎಸ್.ಎಂ.
ಪ್ರಿನ್ಸಿಪಾಲ್ (ವಿ)
ಹಮ್‌ದರ್ದ್ ಹೈಸ್ಕೂಲ್, ರಾಯಚೂರು

**ಎಸ್.ಎಂಒ.** ಮೊಹಿಯುದ್ದೀನ್, ಎಸ್.
ಪ್ರಾಧ್ಯಾಪಕ, ಪಶುವೈದ್ಯ ಕಾಲೇಜು
ಹೆಬ್ಬಾಳ್, ಬೆಂಗಳೂರು

**ಎಸ್.ಎಂ.ಎಸ್.** ವೀರರಾಘವಾಚಾರ್, ಎಸ್.ಎಂ.
ರೀಡರ್ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಎನ್.** ನಾಗರಾಜು, ಎಸ್.
ಪ್ರಾಧ್ಯಾಪಕ (ವಿ), ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಎನ್.**[1] ನಾರಾಯಣ, ಎಸ್.
ಅಧ್ಯಾಪಕ (ವಿ)
ಭೂಗೋಳವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಎಸ್.ಎನ್ಎ.** ನಾಗರಾಜು, ಎಸ್.
ಪ್ರಾಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಎನ್.ಕೆ.** ಕೃಷ್ಣಜೋಯಿಸ್, ಎಸ್.ಎನ್. (ದಿ)
ಸಹಾಯಕ ಸಂಶೋಧಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಎನ್.ಕೆ.ಜಿ.** ಕೌಲ್‌ಗುಡ್, ಎಸ್.ಎನ್. (ದಿ)
ಪ್ರಾಧ್ಯಾಪಕ
ಮೆಡಿಕಲ್ ಕಾಲೇಜು, ಮೈಸೂರು

**ಎಸ್.ಎನ್ಕೆ.** ನಿರ್ಮಲಕುಮಾರಿ, ಎಸ್.ಎನ್.
ಅಧ್ಯಾಪಕಿ, ಪ್ರಾಣಿವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

**ಎಸ್.ಎನ್.ಆರ್.** ರಾಮಸ್ವಾಮಿ, ಎಸ್.ಎನ್.
ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಎನ್.ಎಸ್.** ಶೆಟ್ಟಿ, ಎಸ್.ಎನ್.
ಔಷಧವಿಜ್ಞಾನ ಪ್ರಾಧ್ಯಾಪಕ (ವಿ)
ಪಶುವೈದ್ಯ ಕಾಲೇಜು, ಹೆಬ್ಬಾಳ್, ಬೆಂಗಳೂರು

**ಎಸ್.ಎನ್.ಎಸ್.ವಿ.** ಶಾಂತವೀರಪ್ಪ, ಎಸ್.ಎನ್. (ದಿ)
ಇಂಗ್ಲಿಷ್ ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಪಿ.** ಶ್ರೀನಿವಾಸರಾವ್, ಪಿ. (ದಿ)
ರೀಡರ್, ಭೌತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎಸ್.ಆರ್.** ಶ್ರೀನಿವಾಸ, ಎಚ್. ರಿತ್ತಿ
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎಸ್.ಆರ್.ಎ.** ಶಾಂತರಸ (ದಿ)
10, ಲಕ್ಷ್ಮೀ, ಗಣೇಶ ನರ್ಸಿಂಗ್ ಹೋಂ ಹಿಂಭಾಗ
ಗಣೇಶನಗರ, ಹಳೆಯ ಜೇವರ್ಗಿ ರಸ್ತೆ, ಗುಲ್ಬರ್ಗ

**ಎಸ್.ಆರ್.ಎಫ್.** ಫರ್ಟಡೊ, ಎಸ್.ಆರ್.
ಕರ್ನಾಟಕ ಥಿಯಾಲಜಿಕಲ್ ಕಾಲೇಜು
ಬಲ್ಮಠ, ಮಂಗಳೂರು

**ಎಸ್.ಆರ್.ಯು.** ಸುಂದರರಾಜ ಅರಸು
ಪ್ರಾಧ್ಯಾಪಕ, ದೈಹಿಕ ಶಿಕ್ಷಣ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು

**ಎಸ್ಆರ್ಐ.** ಶ್ರೀನಿವಾಸರಾವ್
ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಆರ್.ಕೆ.** ಸಂಪದ್ಗಿರಿರಾವ್, ಕೆ. (ದಿ)
ಪ್ರಿನ್ಸಿಪಾಲ್, ನ್ಯಾಷನಲ್ ಕಾಲೇಜು, ಬೆಂಗಳೂರು

**ಎಸ್.ಆರ್.ಪಿ.** ರಾಮಪ್ರಸಾದ್, ಎಸ್.
ವಿಜ್ಞಾನ ಸಂಪಾದಕ (ವಿ), ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಆರ್.ಆರ್.** ರಾಮರಾವ್, ಎಸ್.
ಪ್ರಾಧ್ಯಾಪಕ (ವಿ)
ಮೈಸೂರು ಮೆಡಿಕಲ್ ಕಾಲೇಜು, ಮೈಸೂರು

**ಎಸ್.ಆರ್.ಎಸ್.** ರಾಮಸ್ವಾಮಿ, ಎಸ್.
ಇಂಗ್ಲಿಷ್ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎಸ್.ಎಸ್.** ಸಾಲಿಗ್ರಾಮ ಸುಬ್ಬರಾಮಯ್ಯ (ವಿ)
ವೆಂಕಟೇಶ್ವರ ವಿಶ್ವವಿದ್ಯಾಲಯ, ತಿರುಪತಿ

**ಎಸ್.ಎಸ್.ಎ.** ಆಲೂರ್, ಎಸ್.ಎಸ್.
ಅಧ್ಯಾಪಕ (ವಿ)
ವಿಶ್ವವಿದ್ಯಾಲಯ ಲಾ ಕಾಲೇಜು, ಧಾರವಾಡ

**ಎಸ್.ಎಸ್.ಬಿ.** ಭೂಸನೂರಮಠ, ಎಸ್.ಎಸ್. (ದಿ)
ಪ್ರಾಧ್ಯಾಪಕ, ಕನ್ನಡ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎಸ್.ಎಸ್ಐ.** ಸಿಲ್ವ, ಎಸ್.
ಅಡ್ವೊಕೇಟ್
ಹಿಲ್‌ಸೈಡ್, ಕಾರವಾರ

**ಎಸ್.ಎಸ್.ಜೆ.** ಶ್ಯಾಮಸ್ವರೂಪ ಜಲೋಟಾ
ಪ್ರಾಧ್ಯಾಪಕ, ಮನೋವಿಜ್ಞಾನ ವಿಭಾಗ
ಪಂಜಾಬ್ ವಿಶ್ವವಿದ್ಯಾಲಯ, ಚಂಡಿಘರ್

**ಎಸ್.ಎಸ್.ಎಂ.** ಶ್ರೀಮತಿ ಮಥಾರ್, ಎಸ್.ಎಸ್.
ಪ್ರಾಣಿವಿಜ್ಞಾನ ವಿಭಾಗ
ಕರ್ನಾಟಕ ಕಾಲೇಜು, ಧಾರವಾಡ

**ಎಸ್.ಎಸ್.ಎನ್.** ನಂಜಣ್ಣನವರ್, ಎಸ್.ಎಸ್.
ಹಿರಿಯ ಸಂಶೋಧನ ಸಹಾಯಕ
ಭೂಗೋಳ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ

**ಎಸ್.ಎಸ್.ಆರ್.** ರಾಘವಾಚಾರ್, ಎಸ್.ಎಸ್. (ದಿ)
ಪ್ರಾಧ್ಯಾಪಕ (ವಿ), ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಎಸ್.ಆರ್‌ಯು.** ರೂಡಗಿ, ಎಸ್.ಎಸ್.
ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ತೋಂಟದಾರ್ಯ ಕಾಲೇಜು, ಗದಗ

**ಎಸ್.ಟಿ.ಎನ್.** ನಾಗರಾಜು, ಎಸ್.ಟಿ.
ರೀಡರ್
ಜನತಾಶಿಕ್ಷಣ ಇಂಜಿನಿಯರಿಂಗ್ ಕಾಲೇಜು, ಮಂಡ್ಯ

**ಎಸ್.ಟಿ.ಪಿ.** ಪುಟ್ಟಣ್ಣ, ಎಸ್.ಟಿ. (ದಿ)
ನಿರ್ದೇಶಕ, ಮಿಂಟೋ ಆಸ್ಪತ್ರೆ
ಬೆಂಗಳೂರು

**ಎಸ್.ವಿ.** ವರದರಾಜನ್, ಎಸ್.
ಅಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎಸ್.ವಿ.ಡಿ.** ವೆಂಕಟದೇಶಿಕಾಚಾರ್, ಎಸ್.
5, ಕಾರ್ನ್‌ವಾಲೀಸ್ ರಸ್ತೆ
ನವದೆಹಲಿ

**ಎಸ್.ವಿ.ಪಿ.** ಪರಮೇಶ್ವರ ಭಟ್ಟ, ಎಸ್.ವಿ. (ದಿ)
ಕನ್ನಡ ಪ್ರಾಧ್ಯಾಪಕ, ಸ್ನಾತಕೋತ್ತರ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮಂಗಳೂರು

**ಎಸ್.ವಿ.ಆರ್.** ರಂಗಣ್ಣ, ಎಸ್.ವಿ. (ದಿ)
ಇಂಗ್ಲಿಷ್ ಪ್ರಾಧ್ಯಾಪಕ
ಮಹಾರಾಜ ಕಾಲೇಜು, ಮೈಸೂರು

**ಎಸ್.ವಿ.ಎಸ್.** ಷಣ್ಮುಗಂ, ಎಸ್.ವಿ.
ಪ್ರಾಧ್ಯಾಪಕ (ವಿ), ಭಾಷಾವಿಜ್ಞಾನ ವಿಭಾಗ
ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈ ನಗರ

**ಎಸ್.ವಿ.ವಿ.** ವೆಂಕಟಾಚಲಯ್ಯ, ಎಸ್.ವಿ.
ರೀಡರ್ (ವಿ), ರಸಾಯನವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಬೆಂಗಳೂರು

**ಟಿ.ಜಿ.** ಚಂದ್ರಶೇಖರಯ್ಯ, ಟಿ.ಜಿ.
ಡಿವಿಜನಲ್ ಫಾರೆಸ್ಟ್ ಆಫೀಸರ್
ಉತ್ತರ ಕನ್ನಡ ಜಿಲ್ಲೆ

**ಟಿ.ಎಚ್.** ಹುಸೇನ್ ಅಲೀಖಾನ್
ಅಧ್ಯಾಪಕ, ಮನೋವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಟಿ.ಎಚ್.ಎಚ್.** ಹೊನ್ನಗಂಗಪ್ಪ, ಟಿ.ಎಚ್.
ಸಂಯೋಜಕ ಸಂಪಾದಕ (ವಿ)
ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಟಿ.ಕೆ.** ಕೃಷ್ಣರಾವ್, ಟಿ.
ಪ್ರಿನ್ಸಿಪಾಲ್ (ವಿ)
ಭಂಡಾರ್‌ಕರ್ ಕಾಲೇಜು ಕುಂದಾಪುರ

**ಟಿ.ಎನ್.ಎನ್.** ನಾಗರಾಜಶೆಟ್ಟಿ, ಟಿ.ಎನ್.
ಪ್ರಾಧ್ಯಾಪಕ, ಭೌತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಟಿ.ಪಿ.ಎಸ್.ಆರ್.** ರಾವ್, ಟಿ.ಪಿ.ಎಸ್.
ಅಧ್ಯಾಪಕ, ಇತಿಹಾಸ ವಿಭಾಗ
ಸರ್ಕಾರಿ ಜೂನಿಯರ್ ಕಾಲೇಜು, ಬೆಳ್ತಂಗಡಿ

**ಟಿ.ಆರ್.ಪಿ.** ತಲ್ಲೂರು ರಾಯನಗೌಡ ಪಾಟೀಲ
ತಲ್ಲೂರು, ರಾಜ ಗೋಕಾಕ್, ಬೆಳಗಾಂ

**ಟಿ.ಎಸ್.** ಸತ್ಯಮೂರ್ತಿ, ಟಿ.
26/43, ಜಾನಕಿರಾಮನ್ ರಸ್ತೆ
ಮಾಂಬಲಂ ಪೂರ್ವ, ಚೆನ್ನೈ – 600 033

**ಟಿ.ಎಸ್.ಆರ್.** ರಾಮರಾವ್, ಟಿ.ಎಸ್.
ಕೀಟ ವಿಜ್ಞಾನಿ
ಮಲೇರಿಯ ಸಂಶೋಧನ ಸಂಸ್ಥೆ, ಮಂಡ್ಯ

**ಟಿ.ಎಸ್.ಎಸ್.** ಸುಬ್ಬರಾಯ, ಟಿ.ಎಸ್. (ದಿ)
ಪ್ರಾಧ್ಯಾಪಕ, ಭೌತವಿಜ್ಞಾನ
ಬೆಂಗಳೂರು

**ಟಿ.ಎಸ್.ಟಿ.** ತೋಂಟದಾರ್ಯ, ಟಿ.ಎಸ್.
ಸಹ ಪ್ರಾಧ್ಯಾಪಕ, ಕೀಟ ವಿಜ್ಞಾನ ವಿಭಾಗ
ಕೃಷಿ ಕಾಲೇಜು, ಧಾರವಾಡ

**ಟಿ.ಟಿ.** ತಿಮ್ಮಯ್ಯ, ಟಿ. (ದಿ)
ಪ್ರಿನ್ಸಿಪಾಲ್, ಪ್ರಥಮದರ್ಜೆ ಕಾಲೇಜು
ಉರಿಗಾಂ (ಕೆ.ಜಿ.ಎಫ್.)

**ಟಿ.ಟಿ.ಎಸ್.** ತಿರುಮಲೆ ತಾತಾಚಾರ್ಯ ಶರ್ಮ (ದಿ)
ಪತ್ರಿಕೋದ್ಯಮಿ
ಶಂಕರಪುರಂ, ಬೆಂಗಳೂರು

**ಟಿ.ವಿ.ಜಿ.** ವೀರಬಸಪ್ಪಗೌಡ, ಟಿ.
ಪ್ರಾಧ್ಯಾಪಕ (ವಿ), ಜೀವರಸಾಯನ ವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಟಿ.ವಿ.ವಿ.** ವೆಂಕಟಾಚಲಶಾಸ್ತ್ರೀ, ಟಿ.ವಿ.
ಪ್ರಾಧ್ಯಾಪಕ ಮತ್ತು ನಿರ್ದೇಶಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಯು.ಕೆ.ಎಸ್.** ಸುಬ್ಬರಾಯಾಚಾರ್, ಯು.ಕೆ. (ದಿ)
ವಿದ್ಯಾರ್ಥಿ ಕ್ಷೇಮಪಾಲಕ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಯು.ಆರ್.** ರಾಮಚಂದ್ರಯ್ಯ, ಯು.
ಪ್ರಾಧ್ಯಾಪಕ (ವಿ), ರೋಗವಿಜ್ಞಾನ ವಿಭಾಗ
ಕೃಷ್ಣರಾಜೇಂದ್ರ ಆಸ್ಪತ್ರೆ, ಮೈಸೂರು

**ಯು.ಎಸ್.ಕೆ.** ಕೃಷ್ಣರಾವ್, ಯು.ಎಸ್. (ದಿ)
ರಸಾಯನವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ವಿ.** ವೆಂಕಟಸ್ವಾಮಿ
ರೋಗ ತನಿಖಾಧಿಕಾರಿ
ಮೈಸೂರು ಸೀರಮ್ ಇನ್‌ಸ್ಟಿಟ್ಯೂಟ್ ಹೆಬ್ಬಾಳ್, ಬೆಂಗಳೂರು.

**ಡಿ.ಪಿ.** ದ್ವಾರಕ ಪ್ರಸಾದ್, ವಿ.
ರೀಡರ್ (ವಿ)
ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು

**ವಿ.ಜಿ.** ವರದರಾಜರಾವ್, ಜಿ. (ದಿ)
ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ವಿ.ಜಿ.ಕೆ.** ಕೃಷ್ಣಮೂರ್ತಿ, ವಿ.ಜಿ. (ದಿ)
ಕೃಷ್ಣಾಲಯ, 12ನೆಯ ತಿರುವು
ವಾಣಿವಿಲಾಸ ಮೊಹಲ್ಲಾ, ಮೈಸೂರು

**ವಿ.ಕೆ.ಡಿ.** ದೊರೆಸ್ವಾಮಿ, ವಿ.ಕೆ.
ರೀಡರ್, ಗಣಿತವಿಜ್ಞಾನವಿಭಾಗ
ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು
ಮೈಸೂರು

**ವಿ.ಕೆ.ಕೆ.** ಕೊತ್ತೂರ್‌ಕರ್, ವಿ.ಕೆ.
ಮನೋವಿಜ್ಞಾನ ವಿಭಾಗಾಧಿಕಾರಿ
ಪೂನ ವಿಶ್ವವಿದ್ಯಾಲಯ, ಪೂನ

**ವಿ.ಕೆ.ಎಸ್.** ವಿಶ್ವನಾಥ, ಕೆ.ಎಸ್.
ಅಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಆಚಾರ್ಯ ಪಾಠಶಾಲಾ ಕಾಲೇಜು, ಬೆಂಗಳೂರು

**ವಿ.ಎನ್.** ವೈದ್ಯಲಿಂಗಂ, ಎನ್.
ರೀಡರ್, ಭಾಷಾವಿಜ್ಞಾನ ವಿಭಾಗ
ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈ

**ವಿ.ಆರ್.ಬಿ.** ಭಟ್ಟ, ವಿ.ಆರ್.
ಪ್ರಾಧ್ಯಾಪಕ (ವಿ), ನ್ಯಾಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ವಿ.ಆರ್.ಎಚ್.** ರಘುಚಂದ್ರ ಹೆಬ್ಬಾರ್, ವಿ.
ಅಧ್ಯಾಪಕ, ಇತಿಹಾಸ ವಿಭಾಗ
ಸೇಂಟ್ ಅಲೋಷಿಯಸ್ ಕಾಲೇಜು, ಮಂಗಳೂರು

**ವಿ.ಆರ್.ಟಿ.** ತಿರುವೆಂಕಟಾಚಾರ್, ವಿ.ಆರ್.
ಗಣಿತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ವಿ.ಎಸ್.** ವಿಷ್ಣು, ಎಸ್.
ವಕೀಲರು, ಮೈಸೂರು

**ವಿ.ಎಸ್.ಎನ್.** ನಾರಾಯಣರಾವ್, ವಿ.ಎಸ್.
ಪ್ರಕಾಶಕ
ವಿಚಾರಸಾಹಿತ್ಯ, ಬೆಂಗಳೂರು

**ವಿ.ಎಸ್.ಪಿ.** ಪಾಟೀಲ, ವಿ.ಎಸ್.
ಅಧ್ಯಾಪಕ
ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು
ಇಳಕಲ್, ಬಿಜಾಪುರ

**ವಿ.ಎಸ್.ಎಸ್.** ಸಂಪತ್‌ಕುಮಾರಾಚಾರ್, ವಿ.ಎಸ್.
ಮುನಿಸಿಪಲ್ ಹೈಸ್ಕೂಲು
ಮಳವಳ್ಳಿ

**ವಿ.ಎಸ್.ವಿ.** ವೆಂಕಟರಾಮ್, ವಿ.ಎಸ್.
ಸಹ ಪ್ರಾಧ್ಯಾಪಕ
ಎಸ್.ಜೆ.ಪಿ. ಇನ್‌ಸ್ಟಿಟ್ಯೂಟ್, ಬೆಂಗಳೂರು

**ವಿ.ವಿ.ಜೆ.** ಜತ್ತಿ, ವಿ.ವಿ. (ದಿ)
ಪ್ರಾಂಶುಪಾಲರು
ಆರ್.ಎಲ್. ಸೈನ್ಸ್ ಇನ್‌ಸ್ಟಿಟ್ಯೂಟ್, ಬೆಳಗಾಂವಿ

**ವೈ.ಎಲ್.ಐ.** ಇನಾಂದಾರ್, ವೈ.ಎಲ್.
ಅಧ್ಯಾಪಕ
ಅರ್ಥಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ವೈ.ಎಂ.ಎಲ್.ಎಸ್** ಶರ್ಮ, ವೈ.ಎಂ.ಎಲ್.
ಕನ್ಸರ್ವೇಟರ್ ಆಫ್ ಫಾರೆಸ್ಟ್ (ವಿ)
ಬೆಳಗಾಂ ಸರ್ಕಲ್, ಧಾರವಾಡ

**ವೈ.ಆರ್.ಎಂ.** ಮಾಧವರಾವ್, ವೈ.ಆರ್.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ರೀಜನಲ್ ಕಾಲೇಜು, ಮೈಸೂರು

**ವೈ.ಎಸ್.ಎಲ್.** ಲೂಯಿಸ್, ವೈ.ಎಸ್. (ದಿ)
ಆಹಾರ ವಿಜ್ಞಾನ ಇಲಾಖೆ
ಕೇಂದ್ರ ಆಹಾರ ಸಂಶೋಧನ ಸಂಸ್ಥೆ, ಮೈಸೂರು

**ವೈ.ವಿ.ಆರ್.** ರಾಮದಾಸ್, ವೈ.
ರೀಡರ್ (ವಿ)
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು


# ವಿಷಯ ಸೂಚಿ


ಅ ೧
ಅಂಕಗಣಿತ ೧
ಅಂಕನ ಮಾನಗಳು ೫
ಅಂಕಪಾಶ ಮತ್ತು ವಿಕಲ್ಪ ೬
ಅಂಕಾರ ೭
ಅಂಕಿಅಂಶಗಳು ೭
ಅಂಕಿಗಳು ೭
ಅಂಕಿಗಳು (ಇತಿಹಾಸ) ೮
ಅಂಕುರತ್ವರಣ ೧೦
ಅಂಕುಶ ಕಪಾಲಿ ೧೦
ಅಂಕೋಲ ೧೧
ಅಂಕೋಲೆ ೧೨
ಅಂಗಡಿ ೧೨
ಅಂಗರಚನಾವಿಜ್ಞಾನ ೧೨
ಅಂಗರಚನಾವಿಜ್ಞಾನ, ಒಟ್ಟಾರೆ ೧೩
ಅಂಗರಚನಾವಿಜ್ಞಾನ (ಆಯುರ್ವೇದದಲ್ಲಿ) ೨೫
ಅಂಗರಚನಾಶಾಸ್ತ್ರ, ತುಲನಾತ್ಮಕ ೨೮
ಅಂಗರಚನಾಶಾಸ್ತ್ರ, ಸೂಕ್ಷ್ಮವಿಜ್ಞಾನ ದರ್ಶಕ ೨೯
ಅಂಗರಾಗಗಳು, ಅಂಗರಾಗ ೩೧
ಅಂಗರು ೩೨
ಅಂಗ, ಲಿಂಗ ೩೨
ಅಂಗಸಾಧನೆ ೩೨
ಅಂಗಸ್ಥಲಗಳು ೩೩
ಅಂಗಳದಲ್ಲಿನ ವರ್ಗಾವಣೆ ೩೩
ಅಂಗಳದ ವ್ಯಾಪಾರ ೩೩
ಅಂಗಾಂಶಪರೀಕ್ಷೆ ೩೪
ಅಂಗಾಂಶ ಕೃಷಿ ೩೪
ಅಂಗಾಂಶಶಾಸ್ತ್ರ ೩೮
ಅಂಗಾಂಶಶಾಸ್ತ್ರ (ಸಸ್ಯಗಳಲ್ಲಿ) ೪೧
ಅಂಗಾರ ೪೬
ಅಂಗಾರಕ ೪೬
ಅಂಗಿರಸ ೪೬
ಅಂಗುತ್ತರನಿಕಾಯ ೪೭
ಅಂಗುಲೀಮಾಲ ೪೭
ಅಂಗುಳು ೪೭
ಅಂಗೋರ ೪೭
ಅಂಗೋಲ ೪೭
ಅಂಗೋಲ ದಾರ ೪೮
ಅಂಗ್ರಮೈನ್ಯು ನೋಡಿ: ಅಹ್ರಿಮನ್ ೪೮
ಅಂಚೆ ಇತಿಹಾಸ ೪೮
ಅಂಚೆಯ ಚೀಟಿಗಳು ೫೧
ಅಂಜದೀವ ೫೨
ಅಂಜಲೆ ೫೨
ಅಂಜೂರ ೫೨
ಅಂಟಣಿಕ ೫೩
ಅಂಟಾರ್ಕ್‌ಟಿಕ್ ೫೩
ಅಂಟಿಕೆ – ಪಂಟಿಕೆ ೫೮
ಅಂಟು ದಿಸ್ ಲಾಸ್ಟ್ ೫೮
ಅಂಟುಪದಾರ್ಥಗಳು ೫೮
ಅಂಟುವಾಳ ೫೯
ಅಂಡ ೬೦
ಅಂಡಕ (ಸಸ್ಯಗಳಲ್ಲಿ) ೬೦
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ೬೨
ಅಂಡಮಾನಿ ಭಾಷೆ ೬೩
ಅಂಡಾಶಯ ಕೊಯ್ತೆಗೆತ ೬೩
ಅಂಡಾಶ್ಮಗಳು ೬೩
ಅಂತಃಕರಣ ೬೪
ಅಂತಃಕೋಪಕ ೬೪
ಅಂತಪಾಲರು ೬೪
ಅಂತರ್ಕೀಲಕ ೬೪

ಅಂತರ್ಗ್ರಹಣ ರೋಹಿತ ೬೪
ಅಂತರ್ಜಾಲ ೬೫
ಅಂತರ್ಜಾಲಸಂಪುಟ ೬೬
ಅಂತರ್ಜೀವಿಗಳು ೬೬
ಅಂತರ್ದಹನ ಎಂಜಿನ್ನುಗಳು ೬೭
ಅಂತರ್ಬೀಜ ೬೮
ಅಂತರ್ಬೋಧೆ ೬೯
ಅಂತರ್ಯಾಮಿ ೭೦
ಅಂತರ್ಯುದ್ಧಗಳು ೭೦
ಅಂತರ್ವಲಿತ ೭೦
ಅಂತರ್ವ್ಯಾಪ್ತಿ ೭೧
ಅಂತರ್ವಿಕಾಸ ೭೧
ಅಂತರ್ವಿರೋಧ ತತ್ತ್ವ ೭೨
ಅಂತರ್ವೇಶನ ೭೨
ಅಂತಃಕ್ಷೇಪೋಕ್ತಿ ೭೪
ಅಂತರಕೋನಮಾಪಕ ೭೫
ಅಂತರಗಂಗೆ[೧] ೭೫
ಅಂತರಗಂಗೆ[೨] ೭೫
ಅಂತರಗ್ನಿ ಶಿಲೆಗಳು ೭೫
ಅಂತರತ್ರಯ ೭೬
ಅಂತರವನ್ನು ಅಳೆಯುವ ಕೈಯಂತ್ರ ೭೭
ಅಂತರವಲೋಕನ ೭೭
ಅಂತರಾಳ ೭೮
ಅಂತರಿಕ್ಷ ಕಾಯಿದೆ ೭೮
ಅಂತರಿಕ್ಷ ಮತ್ತು ಅಂತರಿಕ್ಷ ದೇವತೆಗಳು ೭೮
ಅಂತರಿಕ್ಷ ಮೋಜಣಿ ೭೯
ಅಂತರಿಕ್ಷ ಸಂಶೋಧನೆ ೭೯
ಅಂತರಿಕ್ಷೀಯ ಟ್ರಾಂವೇ ೯೬
ಅಂತಲಿಕಿತ ೯೭
ಅಂತಃಶುದ್ಧಿ ೯೭
ಅಂತಸ್ಥಶಿಲೆ ೯೭
ಅಂತಾರಾಷ್ಟ್ರೀಯ ಅಣುಶಕ್ತಿನಿಯೋಗ ೯೭
ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ೯೮
ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ೯೮
ಅಂತಾರಾಷ್ಟ್ರೀಯ ಆರ್ಥಿಕ ಮಂಡಲಿ ೯೯
ಅಂತಾರಾಷ್ಟ್ರೀಯ ಆರ್ಥಿಕ ಸಂಘಗಳು ೯೯
ಅಂತಾರಾಷ್ಟ್ರೀಯ ಕಾರ್ಟೆಲ್ಲುಗಳು ೧೦೦
ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ೧೦೧
ಅಂತಾರಾಷ್ಟ್ರೀಯ ಕೃಷಿ ಸಂಸ್ಥೆ ೧೦೧
ಅಂತಾರಾಷ್ಟ್ರೀಯ ಕ್ಷಿಪಣಿ ನೋಡಿ: ರಾಕೆಟ್ ೧೦೧
ಅಂತಾರಾಷ್ಟ್ರೀಯಗಳು ೧೦೧
ಅಂತಾರಾಷ್ಟ್ರೀಯ ತೀರುವೆ ಬ್ಯಾಂಕು ೧೦೩
ಅಂತಾರಾಷ್ಟ್ರೀಯತೆ ೧೦೪
ಅಂತಾರಾಷ್ಟ್ರೀಯ ದಿನಾಂಕ ರೇಖೆ ೧೦೪
ಅಂತಾರಾಷ್ಟ್ರೀಯ ದ್ರವ್ಯನಿಧಿ ೧೦೫
ಅಂತಾರಾಷ್ಟ್ರೀಯ ನ್ಯಾಯಾಲಯ ೧೦೬
ಅಂತಾರಾಷ್ಟ್ರೀಯ ಪತ್ರಿಕಾ ಸಂಸ್ಥೆ ೧೦೬
ಅಂತಾರಾಷ್ಟ್ರೀಯ ಪುನಾರಚನೆ ಮತ್ತು ಅಭಿವೃದ್ಧಿ ಬ್ಯಾಂಕು ೧೦೬
ಅಂತಾರಾಷ್ಟ್ರೀಯ ಬಾಕಿ ಪಾವತಿ ೧೦೭
ಅಂತಾರಾಷ್ಟ್ರೀಯ ಭಾಷೆ ೧೦೮
ಅಂತಾರಾಷ್ಟ್ರೀಯ ಭೂಪಟಶಾಸ್ತ್ರ ಸಂಘ ೧೦೯
ಅಂತಾರಾಷ್ಟ್ರೀಯ ಭೂಭೌತ ವರ್ಷ ೧೦೯
ಅಂತಾರಾಷ್ಟ್ರೀಯ ಭೌಗೋಳಿಕ ಒಕ್ಕೂಟ ೧೦೯
ಅಂತಾರಾಷ್ಟ್ರೀಯ ರಾಜಕೀಯ ೧೧೦
ಅಂತಾರಾಷ್ಟ್ರೀಯ ವಿಚಾರಸಂಸ್ಥೆ ೧೧೦
ಅಂತಾರಾಷ್ಟ್ರೀಯ ವ್ಯಾಪಾರ ೧೧೧
ಅಂತಾರಾಷ್ಟ್ರೀಯ ಶಾಂತಸೌರವರ್ಷ ೧೧೩
ಅಂತಾರಾಷ್ಟ್ರೀಯ ಸಂಬಂಧಗಳು ೧೧೩
ಅಂತಾರಾಷ್ಟ್ರೀಯ ಸಂಸ್ಥೆಗಳು ೧೧೪
ಅಂತಾರಾಷ್ಟ್ರೀಯ ಸಮ್ಮೇಳನಗಳು ೧೧೫
ಅಂತಾರಾಷ್ಟ್ರೀಯ ಸರಕು ಒಪ್ಪಂದಗಳು ೧೧೫
ಅಂತಿಚಕ್ ೧೧೬
ಅಂತಿಮಗತಿ ಶಾಸ್ತ್ರ ೧೧೬
ಅಂತಿಮಜಯದ ಅನಿಶ್ಚಿತತೆ ೧೧೭
ಅಂತಿಮಬಲ ೧೧೭
ಅಂತೂರಿಯಮ್ ೧೧೮
ಅಂತೆ – ಕಂತೆ ೧೧೮
ಅಂದಾಜು ೧೧೯
ಅಂದಾನಪ್ಪ ದೊಡ್ಡ ಮೇಟಿ ೧೧೯
ಅಂದಾನಿ, ವಿ.ಜಿ. ೧೧೯
ಅಂಧಂತಮಸ್ಸು ೧೧೯
ಅಂಧಕ ೧೨೦
ಅಂಧಕಾರಯುಗ ೧೨೦
ಅಂಧವಾಚನಬೋಧಕಯಂತ್ರ ೧೨೧
ಅಂಬಕೇರಿ ೧೨೧
ಅಂಬರೀಷ್ ೧೨೧
ಅಂಬರೀಷ ೧೨೨
ಅಂಬಲಿ ಚನ್ನಬಸಪ್ಪ ೧೨೨
ಅಂಬಲಿ ಮೀನು (ಅರಿಲಿಯ) ೧೨೨
ಅಂಬಳೆ ೧೨೨
ಅಂಬಾ ೧೨೩
ಅಂಬಾಲ ೧೨೩
ಅಂಬಿಗರ ಚೌಡಯ್ಯ ೧೨೩
ಅಂಬುಳ ೧೨೩
ಅಂಬೆ, ಅಂಬಿಕೆ, ಅಂಬಾಲಿಕೆ ೧೨೪
ಅಂಬೇಡ್ಕರ್, ಭೀಮರಾವ್, ರಾಮ್‌ಜಿ ೧೨೪
ಅಂಭಿ ೧೨೪
ಅಂಶಗಣ ೧೨೪
ಅಂಶ – ಚತುರ್ಥಕ ಕಾರ್ಯಕ್ರಮ ೧೨೬
ಅಂಶುಮಂತ ೧೨೬
ಅಂಶುವರ್ಮನ್ ೧೨೬
ಅಕಲಂಕ ೧೨೭
ಅಕಶೇರುಕಗಳು ೧೨೭
ಅಕಶೇರುಕ ಭ್ರೂಣಶಾಸ್ತ್ರ ೧೩೧
ಅಕಾಲಿ ಚಳವಳಿ ೧೩೩
ಅಕ್ಯಾಂತೋ ಟೆರಿಜಿಯೈ ೧೩೩
ಅಕ್ಯಾಂತೋಫಿನಿಕ್ಸ್ ೧೩೩
ಅಕ್ಯಾಂಥೋಡಿಯೈ ೧೩೩
ಅಕ್ಯಾಬ್ ೧೩೪
ಅಕ್ಯಾಲಿಫಾ ೧೩೪
ಅಕಿಮಿನೀಸ್ ೧೩೪
ಅಕಿಲೀಸ್ ೧೩೫
ಅಕಿಲೀಸನ ಕಂಡರ ೧೩೫
ಅಕೆಡಮಿಗಳು ೧೩೫
ಅಕೇಟೀಸ್ ೧೩೮
ಅಕೇಮೆನಿಡೇ ೧೩೮
ಅಕೇಯನ್ನರು ೧೩೮
ಅಕೇಯನ್ ಒಕ್ಕೂಟ ೧೩೯
ಅಕೋಲ ೧೩೯
ಅಕ್ಕಣ್ಣ – ಮಾದಣ್ಣ ೧೩೯
ಅಕ್ಕನಾಗಮ್ಮ ೧೩೯
ಅಕ್ಕಮಹಾದೇವಿ ೧೩೯
ಅಕ್ಕಲಕೋಟೆ ೧೪೦
ಅಕ್ಕಸಾಲಿಗರ ಉದ್ಯಮ ೧೪೦
ಅಕ್ಕಾಡ್ ೧೪೨
ಅಕ್ಕಿ ೧೪೨
ಅಕ್ಕಿ, ಟಿ.ಪಿ. ೧೪೨
ಅಕ್ಕಿಪತಂಗ ೧೪೨
ಅಕ್ಕಿಯ ಸೊಂಡಿಲುಕೀಟ ೧೪೩
ಅಕ್ಕೇಡಿಯನ್ ಭಾಷೆ ೧೪೩
ಅಕ್ಬರ್ ೧೪೩
ಅಕ್ಬರನಾಮ ೧೪೪
ಅಕ್ರಮನಿರ್ಬಂಧ ೧೪೪
ಅಕ್ರಾನ್ ೧೪೪
ಅಕ್ರಿಡಿನ್ ೧೪೪
ಅಕ್ರಿಫ್ಲೇವಿನ್ ೧೪೪
ಅಕ್ರಿಯಾವಾದ ೧೪೪
ಅಕ್ರೂರ ೧೪೪
ಅಕ್ರೋಟ್ ೧೪೫
ಅಕ್ರೋಪೊಲಿಸ್ ೧೪೫
ಅಕ್ಲೇದಿತ ವಸ್ತ್ರ ೧೪೫
ಅಕ್ವಿನಸ್, ಸೇಂಟ್ ಥಾಮಸ್ ೧೪೫
ಅಕ್ಷ ೧೪೬
ಅಕ್ಷಪಾದ ೧೪೬
ಅಕ್ಷರಗಣ ೧೪೬
ಅಕ್ಷರತೆ ೧೪೭
ಅಕ್ಷರಲಿಪಿ ಚರಿತ್ರೆ ೧೪೭
ಅಕ್ಷಾಂಶ ಮತ್ತು ರೇಖಾಂಶ ೧೫೦
ಅಕ್ಷೋಭಕ ತೊಟ್ಟಿಗಳು ೧೫೧
ಅಖಮನಿಸ್ ೧೫೧
ಅಖಿಲಭಾರತ ಉತ್ಪಾದಕರ ಸಂಘ ೧೫೧
ಅಖಿಲಭಾರತ ಕ್ರೀಡಾಮಂಡಲಿ ೧೫೧
ಅಖಿಲಭಾರತ ಪತ್ರಿಕಾಸಂಘಗಳು ೧೫೨
ಅಖಿಲಭಾರತ ಮಾನಸಿಕ ಆರೋಗ್ಯ ಸಂಸ್ಥೆ ೧೫೩
ಅಖಿಲಭಾರತ ವಾಕ್‌ಶ್ರವಣ ಸಂಸ್ಥೆ ೧೫೩
ಅಖಿಲಭಾರತ ವೈದ್ಯವಿಜ್ಞಾನಗಳ ಸಂಸ್ಥೆ ೧೫೫
ಅಗಪಾಂತಸ್ ೧೫೫
ಅಗರ್‌ತಲ ೧೫೫
ಅಗಸೆ ೧೫೫
ಅಗಸೆಎಣ್ಣೆ ೧೫೫
ಅಗಸೆನಾರು ೧೫೬
ಅಗಸ್ಟ ಕಾಂಟ್ ೧೫೭
ಅಗಸ್ಟಸ್ ಅಕ್ಟೇವಿಯಸ್ ೧೫೭
ಅಗಸ್ತ್ಯ ೧೫೮
ಅಗಾಥಿಸ್ ೧೫೮
ಅಗಾರ್ (ಅಗಾರ್–ಅಗಾರ್) ೧೫೮
ಅಗೂಟೀ ೧೫೯
ಅಗೆಯುವ ಯಂತ್ರಗಳು ೧೫೯
ಅಗೇಟ್ ೧೫೯
ಅಗೇವಿ ೧೬೦
ಅಗ್ಗದ ಭಯಾನಕಗಳು ೧೬೦
ಅಗ್ಗದ ಹಣದ ಧೋರಣೆ ೧೬೧
ಅಗ್ಗಳ ೧೬೧
ಅಗ್ಗಿಷ್ಟಿಕೆ ೧೬೨

ಅಗ್ನಿ[೧] ೧೬೨
ಅಗ್ನಿ[೨] ೧೬೨
ಅಗ್ನಿ ಉದರದ ನೆಲಗಪ್ಪೆ ೧೬೪
ಅಗ್ನಿಕುಲ ೧೬೪
ಅಗ್ನಿನಿರ್ವಾಪ ಆದೇಶ ೧೬೪
ಅಗ್ನಿ ಪರ್ವತ ೧೬೪
ಅಗ್ನಿಪುರಾಣ ೧೬೭
ಅಗ್ನಿಮಿತ್ರ ೧೬೭
ಅಗ್ನಿವಿಮೆ ೧೬೮
ಅಗ್ನಿಶಾಮಕದಳ ೧೬೮
ಅಗ್ನಿಶಿಲಾಭಿದ್ರಗಳು ೧೬೮
ಅಗ್ನಿಶಿಲೆಗಳು ೧೬೯
ಅಗ್ನಿಷ್ಟೋಮ ೧೭೬
ಅಗ್ನಿಹೋತ್ರ ೧೭೬
ಅಗ್ನ್ಯಬಾಧಿತ ಕಟ್ಟಡ ೧೭೬
ಅಗ್ನ್ಯಬಾಧಿತ ವಸ್ತ್ರ ೧೭೭
ಅಗ್ರಗಾಮಿ ೧೭೭
ಅಗ್ರಚಾರ ೧೭೭
ಅಗ್ರಲೇಖನ ೧೭೭
ಅಗ್ರವಾರ್ತೆ ೧೭೮
ಅಗ್ರಶೀರ್ಷಿಕೆ ೧೭೮
ಅಗ್ರಹಾರ ೧೭೮
ಅಗ್ರಹಾರ ಬಾಚಹಳ್ಳಿ ೧೭೯
ಅಗ್ರಹಾರ ಬೆಳಗುಲಿ ೧೭೯
ಅಗ್ರಿಕೋಲ ೧೭೯
ಅಗ್ರಿಪ ೧೮೦
ಅಗ್ರೋಮೈಸಿಡೀ ೧೮೦
ಅಗ್ಲೋನಿಮ ೧೮೦
ಅಘನಾಶಿನಿ ೧೮೦
ಅಘೋರಶಿವ ೧೮೦
ಅಘೋರೀ ಪಂಥ ೧೮೦
ಅಘೋರೇಶ್ವರ ೧೮೦
ಅಚರಗಳು, ಸಹಚರಗಳು ೧೮೦
ಅಚಲಗಡ ೧೮೨
ಅಚಲಪುರ ೧೮೨
ಅಚಲಾನಂದ ದಾಸ ೧೮೨
ಅಚ್ಚಿನಧಾರಕ ೧೮೨
ಅಚ್ಚಿನ ಹಲಗೆ ೧೮೩
ಅಚ್ಚು ೧೮೩
ಅಚ್ಚು, ಎರಕದ ೧೮೩
ಅಚ್ಚುಕೂಟ ನೋಡಿ: ಮುದ್ರಣಾಲಯ ೧೮೪
ಅಚ್ಚುಮೊಳೆ ೧೮೪
ಅಚ್ಚುಮೊಳೆ ಎರಕಹೊಯ್ಯುವ ಯಂತ್ರಗಳು ೧೮೪
ಅಚ್ಚುಮೊಳೆಗಳ ಸಂಯೋಜಕ ೧೮೪
ಅಚ್ಚುಮೊಳೆ ಜೋಡಿಸುವ ಯಂತ್ರಗಳು ೧೮೫
ಅಚ್ಚುಮೊಳೆ ಮುದ್ರಣ ೧೮೬
ಅಚ್ಚುಮೊಳೆಯ ಲೋಹ ೧೮೭
ಅಚ್ಯುತರಾಯ ೧೮೭
ಅಜಂತ ೧೮೮
ಅಜಗಣ್ಣ ೧೯೨
ಅಜಗರ[೧] ೧೯೩
ಅಜಗರ[೨] ೧೯೩
ಅಜಲಧಾವನ ೧೯೩
ಅಜಾತಶತ್ರು ೧೯೩
ಅಜ಼ಾದ್, ಮೌಲಾನಾ ಅಬುಲ್ ಕಲಂ ೧೯೪
ಅಜಾಮಿಳ ೧೯೫
ಅಜಿತ ೧೯೫
ಅಜಿತಸೇನಾಚಾರ್ಯ ೧೯೫
ಅಜಿರೇಟಮ್ ೧೯೫
ಅಜ಼ೀಮತ್ ೧೯೫
ಅಜಿಲರು ೧೯೫
ಅಜೀಗರ್ತ ೧೯೬
ಅಜೀರ್ಣ ೧೯೬
ಅಜೀವಿಕರು ೧೯೬
ಅಜ಼ೀಲಿಯನ್ ಸಂಸ್ಕೃತಿ ೧೯೬
ಅಜ಼ೀಲಿಯ ೧೯೬
ಅಜ಼ೋರ್ಸ್ ದ್ವೀಪಗಳು ೧೯೬
ಅಜ಼ೋಲ ೧೯೬
ಅಜ್ಜಂಪುರ ೧೯೭
ಅಜ್ಜಿಕಥೆ ೧೯೭
ಅಜ್ಞಾತನಾಮ ನೋಡಿ: ಹುಸಿ ಹೆಸರು ೧೯೭
ಅಜ್ಞೇಯತಾವಾದ ೧೯೭
ಅಜ್ಮಲ್‌ಖಾನ್, ಹಕೀಂ ೧೯೮
ಅಜ್ಮೀರ್ ೧೯೮
ಅಟಕಾಮ ೧೯೮
ಅಟಪ್ ಪ್ಯುರುಕ್ ೧೯೮
ಅಟಾಟರ್ಕ್, ಕೆಮಾಲ್ ೧೯೯
ಅಟಾರ್ನಿ ೧೯೯
ಅಟಿಲ ೧೯೯
ಅಟ್ಟರ್‌ಬರ್ಗನ ನಿಬಂಧನೆಗಳು ೨೦೦
ಅಟ್ರೋಪೀನ್ ೨೦೦
ಅಟ್ಲಾಂಟಾ ೨೦೦
ಅಟ್ಲಾಂಟಿಕ್ ಸನ್ನದು ೨೦೧
ಅಟ್ಲಾಂಟಿಕ್ ಸಾಗರ ೨೦೧
ಅಟ್ಲಾಸ್ ಪರ್ವತಗಳು ೨೦೧
ಅಟ್ಲಿ, ಕ್ಲೆಮೆಂಟ್ ಆರ್ ೨೦೧
ಅಡಕಪುಟ್ಟನ ಗಿಡ ೨೦೨
ಅಡಕೆ ೨೦೨
ಅಡಗಟ್ಟು ೨೦೪
ಅಡಪು ೨೦೪
ಅಡರುಬಳ್ಳಿಗಳು ೨೦೪
ಅಡಲುಗಳು ೨೦೫
ಅಡವಿ ಗೋರಂಟಿ ೨೦೬
ಅಡವಿ ಬಾಪಿರಾಜು ೨೦೬
ಅಡಿಗಟ್ಟು ೨೦೬
ಅಡಿಗಾಲುವೆ ೨೦೬
ಅಡಿಗೆ ಉಪ್ಪು ೨೦೬
ಅಡಿಗೆ ಸೋಡ ೨೦೭
ಅಡಿಮದ್ದು ೨೦೭
ಅಡಿಲೇಡ್ ೨೦೮
ಅಡಿವರಸೆ ೨೦೮
ಅಡಿಸನ್, ಜೋಸೆಫ್ ೨೦೮
ಅಡಿಸನ್, ತಾಮಸ್ ೨೦೯
ಅಡಿಸನ್ನನ ರೋಗ ೨೦೯
ಅಡೆನೋಸಿನ್ ಟ್ರೈಫಾಸ್ಫೇಟ್ (ಎ.ಟಿ.ಪಿ) ೨೧೦
ಅಡ್ಜುಟೆಂಟ್ ಹಕ್ಕಿ ೨೧೧
ಅಡ್ಡಗಟ್ಟು ೨೧೧
ಅಡ್ಡಗೂಡಣೆ ೨೧೧
ಅಡ್ಡಗೋಡೆ ೨೧೧
ಅಡ್ಡತಡೆ ೨೧೧
ಅಡ್ಡತಳಿಯೆಬ್ಬಿಕೆ ೨೧೧
ಅಡ್ರಿನಲ್ ಗ್ರಂಥಿಗಳ ರೋಗಗಳು ೨೧೨
ಅಡ್ರಿನಲ್ ಗ್ರಂಥಿಗಳು ೨೧೨
ಅಡ್ರಿನಲಿನ್, ನಾರಡ್ರಿನಲಿನ್ ೨೧೩
ಅಡ್ವೊಕೇಟ್ ೨೧೩
ಅಣಕುಬರೆಹ ೨೧೩
ಅಣಬೆಗಳು ೨೧೪
ಅಣಬೆ ಸೋಂಕುಗಳು ೨೧೬
ಅಣಿಗೆ ೨೧೮
ಅಣಿಮೀನು ೨೧೮
ಅಣು[೧] ನೋಡಿ: ಅಣುಸಿದ್ಧಾಂತ ೨೧೮
ಅಣು[೨] ೨೧೮
ಅಣುಚಲನವಾದ, ವಸ್ತುವಿನ ೨೧೮
ಅಣುಬಟ್ಟಿ ಇಳಿಸುವ ವಿಧಾನ (ಅಣುಬಟ್ಟೀಕರಣ) ೨೨೨
ಅಣುರಚನಾಸ್ವರೂಪ, ರಾಸಾಯನಿಕ ೨೨೨
ಅಣುರೋಹಿತ ೨೨೫
ಅಣುವ್ರತ ೨೨೬
ಅಣುಶಕ್ತಿವಿಭಾಗ, ಭಾರತದ ೨೨೬
ಅಣುಸಿದ್ಧಾಂತ ೨೨೭
ಅಣೆಕಟ್ಟು ೨೨೭
ಅಣ್ಣಮಾಚಾರ್ಯ, ತಾಳ್ಳಪಾಕಂ ೨೨೮
ಅಣ್ಣಾಜಿ ೨೨೮
ಅಣ್ಣಾಮಲೈ ೨೨೯
ಅಣ್ಣಾಮಲೈ ವಿಶ್ವವಿದ್ಯಾಲಯ ೨೨೯
ಅಣ್ಣಿಗೇರಿ ೨೩೦
ಅಣ್ಣೆಸೊಪ್ಪು ೨೩೦
ಅತಿಕ್ರಮ ೨೩೦
ಅತಿಥಿಸತ್ಕಾರ ೨೩೧
ಅತಿನಿಯಮ ಪದ್ಧತಿ ೨೩೧
ಅತಿನೇರಿಳೆ ಕಿರಣಗಳು ೨೩೧
ಅತಿಪರವಲಯ ೨೩೩
ಅತಿಪರವಲಯಿಕ ಉತ್ಪನ್ನಗಳು ೨೩೩
ಅತಿಪೂರೈಕೆ ೨೩೪
ಅತಿಮಧುರ ೨೩೫
ಅತಿಮಾನಸಶಾಸ್ತ್ರ ೨೩೫
ಅತಿರಕ್ತ ರಶ್ಮಿಪುಂಜ ೨೩೮
ಅತಿಶಬ್ದ ೨೪೦
ಅತಿಶೀತಶಾಸ್ತ್ರ ೨೪೨
ಅತಿಸವಲತ್ತು ಪಡೆದ ರಾಷ್ಟ್ರ ವ್ಯವಹಾರ ೨೪೪
ಅತಿಸಾರ ೨೪೪
ಅತೀತರು ೨೪೫
ಅತೀಶ ದೀಪಂಕರ ೨೪೫
ಅತ್ತಿಮಬ್ಬೆ ೨೪೫
ಅತ್ತಿಮರ ೨೪೫
ಅತ್ತಿರಾಂಪಾಕ್ಕಂ ೨೪೫
ಅತ್ತೂರು ೨೪೬
ಅತ್ಯಲ್ಪ ಸಿಲಿಕಾಂಶಶಿಲೆಗಳು ೨೪೬
ಅತ್ಯಾಕಾಶಗಳು ೨೪೬
ಅತ್ರಂಜಿಖೇಡ ೨೪೮
ಅತ್ರಿ ೨೪೮
ಅಥಣಿ ೨೪೮
ಅಥರ್ವನ್ ೨೪೯
ಅಥರ್ವವೇದ ೨೪೯
ಅಥೀನ ೨೫೩
ಅಥೆನ್ಸ್ ೨೫೩

ಅದಿತಿ ೨೫೪
ಅದಿರಾಟ ೨೫೪
ಅದಿರು ೨೫೪
ಅದಿರು ಕಣಜ ೨೬೦
ಅದಿರು ಜನನ ೨೬೦
ಅದಿರುಜೋಗರಿಕೆ ೨೬೧
ಅದಿರುಶುದ್ಧಿ ೨೬೧
ಅದಿಲಾಬಾದ್ ೨೬೨
ಅದೃಶ್ಯಂತೀ ೨೬೨
ಅದೃಶ್ಯಕವಿ ೨೬೨
ಅದೃಷ್ಟವಾದ ೨೬೨
ಅದ್ದಿ ತಣಿಸುವಿಕೆ ೨೬೩
ಅದ್ಭುತಕಥೆ ೨೬೩
ಅದ್ಭುತ, ಸಾಹಿತ್ಯದಲ್ಲಿ ೨೬೩
ಅದ್ವೈತ ೨೬೪
ಅಧಿಕರ ೨೬೮
ಅಧಿಕಲಾಭತೆರಿಗೆ ೨೬೮
ಅಧಿಕವರ್ಷ ೨೭೦
ಅಧಿಕಸಂಮರ್ದ ೨೭೦
ಅಧಿಕಸಿಲಿಕಾಂಶಶಿಲೆಗಳು ೨೭೧
ಅಧಿಕಾರ ೨೭೨
ಅಧಿಕಾರದಂಡ ೨೭೨
ಅಧಿಕಾರದರ್ಜೆ ೨೭೨
ಅಧಿಕಾರ ಪ್ರತಿನಿಯೋಗ ೨೭೨
ಅಧಿಕಾರ ಪ್ರಾಬಲ್ಯವಾದ ೨೭೩
ಅಧಿಕಾರಷಾಹಿ ಆಡಳಿತ ೨೭೩
ಅಧಿಕಾರ ಹಂಚಿಕೆ ೨೭೪
ಅಧಿಕೋಷ್ಣಕ ೨೭೪
ಅಧಿಗಣಕ ೨೭೪
ಅಧಿಚಕ್ರ ೨೭೪
ಅಧಿಪತಿ ೨೭೪
ಅಧಿಭಾರ ೨೭೪
ಅಧಿರಾಜೇಂದ್ರ ೨೭೪
ಅಧಿರಾಜ್ಯಪದ ೨೭೫
ಅಧಿಶೋಷಣೆ ಮತ್ತು ಅಧಿಶೋಷಕಗಳು ೨೭೫
ಅಧಿಷ್ಠಾನ ೨೭೬
ಅಧೀನ ಶಾಸನ ರಚನೆ ೨೭೬
ಅಧೋವಾಟ ಕಿರಣಗಳು ೨೭೭
ಅಧ್ಯವಸಾಯ ೨೭೭
ಅಧ್ಯಕ್ಷ ೨೭೮
ಅಧ್ಯಾತ್ಮರಹಸ್ಯವಾದ ೨೭೯
ಅಧ್ಯಾತ್ಮವಿದ್ಯೆ ೨೭೯
ಅಧ್ಯಾಸ ೨೭೯
ಅನಂಗಪಾಲ ೨೭೯
ಅನಂತ ೨೭೯
ಅನಂತಕವಿ ೨೮೦
ಅನಂತ ಗುಣಲಬ್ಧ ೨೮೦
ಅನಂತನಾಗ್ ೨೮೦
ಅನಂತಮೂರ್ತಿ, ಯು.ಆರ್. ೨೮೧
ಅನಂತಪದ್ಮನಾಭ ೨೮೮
ಅನಂತಪುರ ೨೮೨
ಅನಂತ ಮತ್ತು ಅನಂತಸೂಕ್ಷ್ಮ ೨೮೨
ಅನಂತವಾದ ೨೮೨
ಅನಂತಸ್ಪರ್ಶಕ ೨೮೩
ಅನಂತಾಚಾರಿ, ಅತ್ತಾವರದ ೨೮೩
ಅನಟೋಲಿಯ ೨೮೩
ಅನತ್ತವಾದ ೨೮೩
ಅನಬಾಸ್ ೨೮೩
ಅನರ್ಘರಾಘವ ೨೮೪
ಅನವಸ್ಥೆ ೨೮೪
ಅನವೇಮರೆಡ್ಡಿ ೨೮೪
ಅನಸೂಯೆ ೨೮೪
ಅನಾಕ್ರಿಯಾನ್ ೨೮೪
ಅನಾಟಮಿ ಆಫ್ ಮೆಲಂಕಲಿ, ದಿ ೨೮೪
ಅನಾಟೋ ೨೮೫
ಅನಾಥಾಲಯಗಳು ೨೮೫
ಅನಾದಿ ವೀರಶೈವಾಚಾರಸಂಗ್ರಹ ೨೮೫
ಅನಾನಸ್ (ಪೈನ್‌ಆ್ಯಪಲ್) ೨೮೫
ಅನಾಫಿಲೀಸ್ ಸೊಳ್ಳೆ ೨೮೬
ಅನಾಮಿಕತೆ ೨೮೭
ಅನಾರ್ಜಿತ ವರಮಾನ ೨೮೭
ಅನಾರ್ಥೊಸೈಟ್ ೨೮೭
ಅನಾರ್ಯ ೨೮೮
ಅನಿಮಿಷದೇವರು ೨೮೮
ಅನಿಯತಶ್ರಮ ೨೮೮
ಅನಿರುದ್ಧ ೨೮೯
ಅನಿರ್ದಿಷ್ಟರಚನೆ ೨೮೯
ಅನಿರ್ದಿಷ್ಟ ಸಮೀಕರಣಗಳು ೨೮೯
ಅನಿರ್ಬಂಧ ರ್‍ಯಾಡಿಕಲ್ ೨೯೦
ಅನಿರ್ಬಂಧಿತ ಆರ್ಥಿಕ ವ್ಯವಸ್ಥೆ ೨೯೧
ಅನಿಲ್ ಕುಂಬ್ಳೆ ೨೯೨
ಅನಿಲ ೨೯೨
ಅನಿಲಗ್ರಸನ ೨೯೨
ಅನಿಲತಯಾರಿಕೆ ೨೯೨
ಅನಿಲದ ಕೋಣೆ ೨೯೪
ಅನಿಲದ ಮೊಗವಾಡ ೨೯೪
ಅನಿಲ ದ್ರವೀಕರಣ ೨೯೪
ಅನಿಲಮಾಪಕ ೨೯೭
ಅನಿಲೀನ್ ೨೯೮
ಅನಿಶ್ಚಿತತ್ವ ನಿಯಮ ೨೯೯
ಅನಿಶ್ಚಿತತ್ವವಾದ ೩೦೦
ಅನು ೩೦೧
ಅನುಕರಣೆ[೧] ೩೦೧
ಅನುಕರಣೆ[೨] ೩೦೧
ಅನುಕೂಲಣೆ ೩೦೪
ಅನುಕ್ರಮ ವಿಶ್ಲೇಷಣೆ ೩೦೪
ಅನುಗಮನ ೩೦೫
ಅನುಗ್ರಹ ೩೦೮
ಅನುಜ್ಞೆ, ಅನುಜ್ಞಾಧಾರಿ ೩೦೮
ಅನುತ್ರಿಜ್ಯವೇಗ ೩೦೮
ಅನುಪಮಾ ನಿರಂಜನ ೩೦೯
ಅನುಪಲಬ್ಧಿ ೩೦೯
ಅನುಬಿಂಬ ೩೦೯
ಅನುಬೋಧೆ ೩೧೦
ಅನುಭವ[೧] ೩೧೦
ಅನುಭವ[೨] ೩೧೦
ಅನುಭವ ಪ್ರಧಾನವಾದ ೩೧೧
ಅನುಭವ ಮಂಟಪ ೩೧೨
ಅನುಭವಮುದ್ರೆ ೩೧೨
ಅನುಭವಸೂತ್ರ ೩೧೨
ಅನುಭೂತಿ ೩೧೨
ಅನುಭೋಗ ೩೧೨
ಅನುಭೋಗ ಹಕ್ಕು ಮತ್ತು ಅನುಜ್ಞೆ ೩೧೪
ಅನುಭೋಗಿಯ ಪ್ರಭುತ್ವ ೩೧೫
ಅನುಭೋಗಿಯ ಹೆಚ್ಚಳ ೩೧೬
ಅನುಮಾಪನ ೩೧೭
ಅನುಮಿತ ೩೧೭
ಅನುಯೋಗಿ ೩೧೭
ಅನುರಾಧಪುರ ೩೧೭
ಅನುರಾಧಾ ೩೧೮
ಅನುರಾಧಾ ಧಾರೇಶ್ವರ ೩೧೮
ಅನುರೂಪ ಚಿತ್ರಣ ೩೧೮
ಅನುರೂಪತೆ ೩೧೯
ಅನುರೂಪಶ್ರೇಣಿಗಳು ೩೨೦
ಅನುವಂಶೀಯತೆ ೩೨೦
ಅನುವರ್ಷ ಅವಸಾದನ ೩೨೬
ಅನುವಾದ ಕಲೆ ನೋಡಿ: ಭಾಷಾಂತರ ಕಲೆ ೩೨೬
ಅನುವೃದ್ಧಿ ೩೨೬
ಅನುಷ್ಟುಭ್ ೩೨೭
ಅನುಸೂಚಿತ ಜಾತಿಗಳು ೩೨೭
ಅನೃತಶೋಧ ೩೨೯
ಅನೆಮನಿ ೩೨೯
ಅನೇಕತ್ವವಾದ ೩೩೦
ಅನೇಕದೇವತಾವಾದ ೩೩೨
ಅನೇಕಾಂತವಾದ ೩೩೩
ಅನೌ ೩೩೩
ಅನ್ವಾರ್ ೩೩೪
ಅನ್‌ದ್ರಿಯೋ ಎಫ್ ಲಿಯೊನಿಡ್ ೩೩೪
ಅನ್ನಂಭಟ್ಟ ೩೩೪
ಅನ್ನನಾಳದ ರೋಗಗಳು ೩೩೪
ಅನ್ನಪೂರ್ಣ ೩೩೫
ಅನ್ನಪೂರ್ಣಾ ೩೩೫
ಅನ್ಯತ್ರ ಸ್ಥಿತಿ ೩೩೫
ಅನ್ಯಮನಃಸ್ಪರ್ಶನ ೩೩೫
ಅನ್ಯಶಿಲೆ ೩೩೬
ಅನ್ಯಾಕ್ಸಗೊರಾಸ್ ೩೩೬
ಅನ್ಯಾಕ್ಸಿಮೆಂಡರ್ ೩೩೬
ಅನ್ಯಾತಿಯನ್ ೩೩೬
ಅನ್ಯೋಕ್ತಿ ೩೩೬
ಅನ್ಯೋಕ್ತಿ ರೂಪಕಗಳು ೩೩೭
ಅನ್ಯೋನ್ಯಾಶ್ರಯ ದೋಷ ೩೩೭
ಅನ್ಸಾರಿ, ಮುಖ್ತಾರ್ ಅಹಮದ್ ೩೩೭
ಅನ್ಸಿಡಿಯಮ್ ೩೩೭
ಅಪಕೃತ್ಯ ೩೩೮
ಅಪಚಾರ ೩೪೦
ಅಪಟೈಟ್ ೩೪೧
ಅಪದಾನ ೩೪೧
ಅಪಭ್ರಂಶ ೩೪೧
ಅಪಮಿಶ್ರಣ ೩೪೧
ಅಪರಂಪರಸ್ವಾಮಿ ೩೪೨
ಅಪರಾಂತ ೩೪೨
ಅಪರಾಜಿತ ೩೪೨
ಅಪರಾಜಿತವರ್ಮ ೩೪೩
ಅಪರಾಧ ೩೪೩
ಅಪರಾಧ ಮತ್ತು ಅಪರಾಧಕಾಯಿದೆ ೩೪೪

ಅಪರಾಧಮನಶ್ಶಾಸ್ತ್ರ ೩೪೭
ಅಪರಾಧಶಾಸ್ತ್ರ ೩೪೮
ಅಪರಾಳ ತಮ್ಮಣ್ಣ ೩೪೯
ಅಪರಿಮಿತಸೈನ್ಯದಳ ೩೪೯
ಅಪರ್ಣಾ ೩೫೦
ಅಪಲೇಷಿಯನ್ ಪರ್ವತಗಳು ೩೫೦
ಅಪವರ್ಗ ೩೫೦
ಅಪವಿತ್ರಕಾರ್ಯ ೩೫೦
ಅಪಸಣಬು ೩೫೦
ಅಪಸ್ಮಾರ ೩೫೧
ಅಪಹರಣ ೩೫೩
ಅಪಾಕ್ಷಿಕಶಕ್ತಿ ೩೫೩
ಅಪಾನ ೩೫೩
ಅಪಾಯಕರ ವೃತ್ತಿಗಳು ೩೫೩
ಅಪಾಯಕಾರಿ ಪ್ರಾಣಿಗಳು, ವಸ್ತುಗಳು, ಕಟ್ಟಡಗಳು ೩೫೬
ಅಪೀಲು ೩೫೭
ಅಪೂರ್ವ ೩೫೭
ಅಪೆಗಾಂವ್ ೩೫೭
ಅಪೆನೈನ್‌ಶ್ರೇಣಿ ೩೫೭
ಅಪೊಮಾರ್ಫೀನ್ ೩೫೭
ಅಪೊಲೊ[೧] ೩೫೭
ಅಪೊಲೊ[೨] ೩೫೮
ಅಪೊಲೋನಿಯಸ್ ೩೬೦
ಅಪೊಲ್ಲೋನಿಯಸ್, ಪರ್ಗಾದ ೩೬೦
ಅಪೋಸಲರ ಉಪದೇಶಗಳು ೩೬೦
ಅಪೋಹವಾದ ೩೬೧
ಅಪೌರುಷೇಯ ೩೬೧
ಅಪ್ಪಣ್ಣ, ಹಡಪದ ೩೬೨
ಅಪ್ಪಯ್ಯ ದೀಕ್ಷಿತ ೩೬೨
ಅಪ್ಪರ್ ೩೬೩
ಅಪ್ಪಾನಹಳ್ಳಿ ೩೬೩
ಅಪ್ಪುಗಿಡ ೩೬೩
ಅಪ್ರಚಲಿತತೆ ೩೬೩
ಅಪ್ಸರೆಕೀಟ ೩೬೪
ಅಪ್ಸರೆಯರು ೩೬೪
ಅಫಜಲಪುರ ೩೬೪
ಅಫೀಮು ೩೬೪
ಅಫ್ಜಲ್‌ಖಾನ್ ೩೬೬
ಅಫ್ರೀದಿಗಳು ೩೬೬
ಅಬನಾಸಿ ೩೬೬
ಅಬನೀಂದ್ರನಾಥ ಠಾಕೂರ್ ೩೬೬
ಅಬರ್‌ಡೀನ್ ೩೬೭
ಅಬಲೋನಿ ೩೬೭
ಅಬಿಡಾಸ್ ೩೬೭
ಅಬಿಸೀನಿಯ ೩೬೭
ಅಬೀಜೋತ್ಪಾದನೆ ೩೬೯
ಅಬುಪರ್ವತ ೩೬೯
ಅಬುಬಕರ್ ೩೭೦
ಅಬುಲ್ ಅಲಾ ಅಲ್ – ಮ ಅರ್‍ರಿ ೩೭೦
ಅಬುಲ್ ಫಜ಼ಲ್ ೩೭೦
ಅಬುಲ್ ಫೈಜ಼ಿ ೩೭೦
ಅಬು ಸಿಂಬೆಲ್ ೩೭೧
ಅಬೆ, ಎರ್ನ್‌ಸ್ಟ್ ೩೭೨
ಅಬೆಲ್, ಜಾನ್ ಜೇಕಬ್ ೩೭೨
ಅಬೆಲ್, ನೀಲ್ಸ್ ಹೆನ್ರಿ ೩೭೨
ಅಬೆಲಾರ್ಡ್, ಪೀಟರ್ ೩೭೨
ಅಬೆವಿಲಿಯನ್ ೩೭೨
ಅಬ್ಡರ್‌ಹೆಲ್ಡನ್ ೩೭೨
ಅಬ್ದುರ್ ರಜ಼ಾಕ್ ೩೭೨
ಅಬ್ದುರ್ ರಹಮಾನ್ ಖಾನ್ ೩೭೩
ಅಬ್ದುಲ್ ಅಜ಼ೀಜ್ ೩೭೩
ಅಬ್ದುಲ್ ಖಾದರ್ ೩೭೩
ಅಬ್ದುಲ್ ಗಫಾರ್ ಖಾನ್ ೩೭೩
ಅಬ್ದುಲ್ ಮಜೀದ್ ೩೭೩
ಅಬ್ದುಲ್ ಹಮೀದ್ ೩೭೩
ಅಬ್ದುಲ್ ಹಸನ್ ೩೭೩
ಅಬ್ಬಕ್ಕ ೩೭೩
ಅಬ್ಬಲೂರು ೩೭೪
ಅಬ್ಬಾಸ್, ಖ್ವಾಜಾ ಅಹಮದ್ ೩೭೪
ಅಬ್ಬಾಸಿದ್ ಕಲೀಫರು ೩೭೪
ಅಬ್ಬೊಟ್ಟಾಬಾದ್ ೩೭೫
ಅಬ್ರಕಡಬ್ರ ೩೭೫
ಅಬ್ರಾಕ್ಸಸ್ ೩೭೫
ಅಬ್ರಡೊವಿಚ್, ದ ಸಿತ್ಯ ೩೭೫
ಅಬ್ಸರ್ವರ್ ೩೭೫
ಅಬ್ಬೈಕ್ ೩೭೬
ಅಭಂಗ ೩೭೬
ಅಭಯಗಿರಿ ೩೭೬
ಅಭಯಾರಣ್ಯಗಳು ೩೭೬
ಅಭಾವ ೩೮೧
ಅಭಿಜಾತಸಾಹಿತ್ಯಮಾರ್ಗ ೩೮೧
ಅಭಿಜಾತ ಸಾಹಿತ್ಯವಾದದ ಯುಗ ೩೮೧
ಅಭಿಜಿತ್[೧] ೩೮೨
ಅಭಿಜಿತ್[೨] ೩೮೩
ಅಭಿಧಮ್ಮ ೩೮೩
ಅಭಿನಂದ ೩೮೪
ಅಭಿನಯ ೩೮೪
ಅಭಿನಯಗೀತೆ ೩೮೫
ಅಭಿನವಗುಪ್ತ ೩೮೫
ಅಭಿನವಮಂಗರಾಜ ೩೮೭
ಅಭಿನವವಾದಿ ವಿದ್ಯಾನಂದ ೩೮೭
ಅಭಿನವಶಂಕರ ೩೮೭
ಅಭಿಮನ್ಯು[೧] ೩೮೭
ಅಭಿಮನ್ಯು[೨] ೩೮೮
ಅಭಿರುಚಿಗಳು ೩೮೮
ಅಭಿವ್ಯಕ್ತಿರೀತಿಯ ನಾಟಕ ೩೯೦
ಅಭಿವ್ಯಕ್ತಿವಾದ ೩೯೦
ಅಭಿಷೇಕ ೩೯೦
ಅಭೇದವಾದ ೩೯೧
ಅಭ್ಯಂತರ ಕಾಲ ೩೯೧
ಅಭ್ಯಾಸ ೩೯೧
ಅಭ್ಯಾಸ ಪಾಠಗಳು ೩೯೨
ಅಭ್ಯುದಯ ಮತ್ತು ನಿಶ್ರೇಯಸ ೩೯೨
ಅಭ್ರಕ ೩೯೨
ಅಭ್ರಕಚೂರ್ಣ ೩೯೩
ಅಮಟೆಗಿಡ ೩೯೩
ಅಮರ್ತ್ಯಸೇನ್ ೩೯೩
ಅಮಪುರಿ ೩೯೩
ಅಮರಕಂಟಕ ೩೯೪
ಅಮರಗಣಂಗಳು ೩೯೪
ಅಮರನಾಥ ಗುಹೆ ೩೯೪
ಅಮರಸಿಂಗ್ ೩೯೪
ಅಮರಸಿಂಹ ೩೯೪
ಅಮರಾಂತಸ್ ೩೯೪
ಅಮರಾಂತೇಸಿ ೩೯೫
ಅಮರಾವತಿ[೧] ೩೯೫
ಅಮರಾವತಿ[೨] ೩೯೬
ಅಮರಿಲ್ಲಿಸ್ ೩೯೬
ಅಮರುಕ ೩೯೬
ಅಮರೇಶ್ವರ ೩೯೭
ಅಮಾನುಲ್ಲಾ ಖಾನ್ ೩೯೭
ಅಮಾಲ್ಗಂ ೩೯೭
ಅಮಾವಾಸ್ಯೆ ೩೯೮
ಅಮಿತಾಬ ೩೯೮
ಅಮಿತಾಬ್ ಬಚ್ಚನ್ ೩೯೮
ಅಮೀನ್‌ಗಳು ೩೯೮
ಅಮೀಬ ೩೯೮
ಅಮೀರ್ ಅಲಿ, ಸೈಯದ್ ೩೯೯
ಅಮೀರ್ ಖುಸ್ರು ೪೦೦
ಅಮುಗಿದೇವ ೪೦೦
ಅಮುದ್ರಿತ ಗ್ರಂಥಚಿಂತಾಮಣಿ ೪೦೦
ಅಮೂರ್ತರೂಪ ೪೦೦
ಅಮೃತ ೪೦೦
ಅಮೃತಬಜ಼ಾರ್ ಪತ್ರಿಕ ೪೦೦
ಅಮೃತಬಳ್ಳಿ ೪೦೧
ಅಮೃತ ಮಂಗಳಂ ೪೦೧
ಅಮೃತಶಿಲೆ ೪೦೧
ಅಮೃತ ಶೇರ್‌ಗಿಲ್ ೪೦೧
ಅಮೃತಸರ ೪೦೨
ಅಮೃತಸರದ ಕೌಲು ೪೦೨
ಅಮೃತಾಪುರ ೪೦೨
ಅಮೆಝ಼ಾನ್[೧] ೪೦೨
ಅಮೆಝ಼ಾನ್[೨] ೪೦೩
ಅಮೆರಿಕಗಳು ೪೦೩
ಅಮೆರಿಕದ ಆದಿವಾಸಿಗಳು ೪೦೩
ಅಮೆರಿಕದ ಇಂಡಿಯನರ ಭಾಷೆಗಳು ೪೦೪
ಅಮೆರಿಕದ ಇತಿಹಾಸ ೪೦೫
ಅಮೆರಿಕದ ಕಲೆ ೪೦೮
ಅಮೆರಿಕದ ಕಾಯಿದೆ ೪೦೯
ಅಮೆರಿಕದ ಕಾಯಿದೆಸಂಸ್ಥೆ ೪೧೦
ಅಮೆರಿಕದ ಚರಿತ್ರೆಯಲ್ಲಿ ನೀಗ್ರೊ ೪೧೧
ಅಮೆರಿಕದ ಜಾನಪದ ಪರಿಷತ್ತು ೪೧೪
ಅಮೆರಿಕದ ಡೆಮೊಕ್ರ್ಯಾಟಿಕ್ ಪಕ್ಷ ೪೧೫
ಅಮೆರಿಕದ ಪ್ರಾಗೈತಿಹಾಸಿಕ ಚರಿತ್ರೆ ೪೧೫
ಅಮೆರಿಕದ ರಿಪಬ್ಲಿಕನ್ ಪಕ್ಷ ೪೧೫
ಅಮೆರಿಕದ ಸಾಹಿತ್ಯ ರೂಪರೇಷೆ ೪೧೬
ಅಮೆರಿಕದ ಸ್ವಾತಂತ್ರ್ಯ ೪೧೭
ಅಮೆರಿಕದೊಡನೆ ರಾಜಿ ೪೧೯
ಅಮೆರಿಕ ಸಂಯುಕ್ತಸಂಸ್ಥಾನ ೪೧೯
ಅಮೆರಿಕ ಸಂಯುಕ್ತಸಂಸ್ಥಾನದ ಸಾಹಿತ್ಯವಿಮರ್ಶೆ ೪೨೧
ಅಮೆರಿಷಿಯಂ ೪೨೩
ಅಮೆಷಾ ಸ್ಪೆಂಟಾ ೪೨೩
ಅಮೈಡುಗಳು ೪೨೩
ಅಮೈನೋ ಆಮ್ಲಗಳು ೪೨೪
ಅಮೈಲ್ ನೈಟ್ರೈಟ್ ೪೨೬

ಅಮೋಘವಜ್ರ ೪೨೬
ಅಮೋಘವರ್ಷ ೪೨೬
ಅಮೋನಿಯ ೪೨೭
ಅಮ್ಮಸಂದ್ರ ೪೨೮
ಅಮ್ಮಾನ್ ೪೨೮
ಅಮ್ಮಾನೈಟ್ ೪೨೮
ಅಮ್ರಿ ೪೨೯
ಅಮ್ರೇಲಿ ೪೨೯
ಅಯಟೋಲಿಯ ಒಕ್ಕೂಟ ೪೨೯
ಅಯಡೊಫಾರಮ್ ೪೨೯
ಅಯನ ಸಂಕ್ರಾಂತಿಗಳು ೪೨೯
ಅಯನಾಂಶ ೪೩೦
ಅಯಾನ್‌ಗೋಳ ೪೩೦
ಅಯಾನ್ ವಿನಿಮಯಿಗಳು ೪೩೧
ಅಯಾನು ೪೩೩
ಅಯೂಥಯ ೪೩೪
ಅಯೊಡೀನ್ ೪೩೪
ಅಯೋಧ್ಯೆ ೪೩೬
ಅಯೋಧ್ಯೆಯ ಬೇಗಂ ೪೩೬
ಅಯೋನಿಯನ್ನರು ೪೩೭
ಅಯೋನಿಯಮ್ ೪೩೭
ಅಯೋವ ೪೩೭
ಅಯ್ಯಂಗಾರ್, ಎಚ್.ವಿ.ಆರ್. ೪೩೭
ಅಯ್ಯನಾರ್ ೪೩೮
ಅಯ್ಯವೊಳೆ ಐನೂರ್ವರು ೪೩೮
ಅಯ್ಯರ್, ಕೆ.ವಿ. ೪೩೮
ಅಯ್ಯರ್, ಜಿ.ವಿ. ೪೩೮
ಅಯ್ಯಶಾಸ್ತ್ರೀ, ಸೋಸಲೆ ೪೩೯
ಅರ್ (ಉರ್) ೪೩೯
ಅರಕಲಗೂಡು ೪೪೦
ಅರಕಾನ್ ಕರಾವಳಿ ೪೪೦
ಅರಕಾನ್‌ಯೋಮ ೪೪೦
ಅರಕೇರಿಯ ೪೪೧
ಅರಗಿಸುವದೊಳೆ ೪೪೧
ಅರಗು ೪೪೧
ಅರಗುರೆಕ್ಕೆ ಹಕ್ಕಿ ೪೪೨
ಅರಟನಾಲಗೆ ೪೪೨
ಅರಣ್ಯಗಳು ಮತ್ತು ಅರಣ್ಯಶಾಸ್ತ್ರ ೪೪೨
ಅರಬ್ಬೀ ಒಕ್ಕೂಟ ೪೪೭
ಅರಬ್ಬೀ ಗಣರಾಜ್ಯ ೪೪೭
ಅರಬ್ಬೀ ಛಂದಸ್ಸು ೪೪೭
ಅರಬ್ಬೀ ಭಾಷೆ ೪೪೯
ಅರಬ್ಬೀ ವಿಮರ್ಶೆ ೪೫೦
ಅರಬ್ಬೀ ಸಮುದ್ರ ೪೫೧
ಅರಬ್ಬೀ ಸಾಹಿತ್ಯ ೪೫೧
ಅರಮೀನು ೪೫೨
ಅರವಿಂದ್, ಜಿ. ಸವೂರ್ ೪೫೮
ಅರವಿಂದ ಘೋಷ್ ೪೫೮
ಅರವಿಂದಾಶ್ರಮ ೪೫೯
ಅರಸೀಕೆರೆ ೪೬೦
ಅರಸೊತ್ತಿಗೆ ೪೬೧
ಅರಳಗುಪ್ಪೆ ೪೬೧
ಅರಳಿ ಮರ ೪೬೨
ಅರಾಗೊ ಡೊಮಿನಿಕ್ ಫ್ರಾಂಕೊಜೀನ್ ೪೬೨
ಅರಾಜಕತಾವಾದ ೪೬೨
ಅರಾಟಸ್ ೪೬೨
ಅರಾಮೇಯಿಕ್ ಲಿಪಿ ೪೬೨
ಅರಾವಳಿ ಸಮುದಾಯ ೪೬೨
ಅರಿಕಮೇಡು ೪೬೪
ಅರಿಕೇಸರಿ II ೪೬೪
ಅರಿಜೋನಾ ೪೬೬
ಅರಿಪ್ಪು ೪೬೬
ಅರಿಮರ್ದನಪುರ ಸಾಮ್ರಾಜ್ಯ ೪೬೬
ಅರಿಯಲೂರ್ ೪೬೬
ಅರಿವಳಿಕೆ, ಅರಿವಳಿಕಗಳು ೪೬೭
ಅರಿವು[1] ೪೭೦
ಅರಿವು[2] ೪೭೩
ಅರಿಷಡ್ವರ್ಗ ೪೭೪
ಅರಿಸಾಯೆಮ ೪೭೪
ಅರಿಸಿನ ೪೭೫
ಅರಿಸಿನ ಗುರುಗಿ ೪೭೬
ಅರಿಸಿನ ತೇಗ ೪೭೬
ಅರಿಸಿನ ಬೂರುಗ ೪೭೬
ಅರಿಸ್ಟಾಟಲ್ ೪೭೬
ಅರಿಸ್ಟೈಡೀಸ್ ೪೮೩
ಅರಿಸ್ಟೋಫೆನೀಸ್ ೪೮೩
ಅರೀಢಕ ಸಂಧಿದೇಹಿಗಳು ೪೮೭
ಅರುಂಧತಿ ೪೮೭
ಅರುಂಧತಿನಾಗ್ ೪೮೭
ಅರುಣಗಿರಿ ನೋಡಿ: ಅರುಣಾಚಲ ೪೮೭
ಅರುಣಗಿರಿನಾಥ ೪೮೭
ಅರುಣಾಚಲ ೪೮೮
ಅರುಣಾಚಲ ಪ್ರದೇಶ ೪೮೮
ಅರುವತ್ತನಾಲ್ಕು ಉಪಚಾರಗಳು ೪೯೦
ಅರುವತ್ತನಾಲ್ಕು ಕಲೆಗಳು ೪೯೦
ಅರುವತ್ತನಾಲ್ಕು ವಿದ್ಯೆಗಳು ೪೯೧
ಅರುವತ್ತನಾಲ್ಕು ಶೀಲಗಳು ೪೯೧
ಅರುವತ್ತಮೂರು ಪುರಾತನರು ೪೯೧
ಅರೆಂಗ ೪೯೨
ಅರೆ ಅಥವಾ ಕಲ್ಲುಗಣಿ ೪೯೨
ಅರೆಗೇಣಿ ಆದಾಯ ನೋಡಿ: ಗೇಣಿ, ಗೇಣಿ ಸಿದ್ಧಾಂತ ೪೯೩
ಅರೆತಲೆಬೇನೆ ೪೯೩
ಅರೇಟಿಡೀ ೪೯೪
ಅರೇಟೇನೋ, ಪಿ ಎತ್ರೋ೪೯೪
ಅರೇನಿಯಸ್ ೪೯೪
ಅರೇಬಿಯ ೪೯೪
ಅರೇಬಿಯದ ಚರಿತ್ರೆ ೪೯೪
ಅರೇಬಿಯನ್ ನೈಟ್ಸ್ ನೋಡಿ: ಸಾವಿರದ ಒಂದು ರಾತ್ರಿಗಳು ೪೯೬
ಅರೇಲಿಯ ೪೯೬
ಅರ್ಯೆಆನ್ ೪೯೬
ಅರೋರಾ ಬೆಳಕು ೪೯೭
ಅರ್ಕನ್‌ಸಾಸ್ ೪೯೭
ಅರ್ಕಾವತಿ ನದಿ ೪೯೮
ಅರ್ಕೋಣಂ ೪೯೮
ಅರ್ಚಕ ಬಿ. ರಂಗಸ್ವಾಮಿ ೪೯೮
ಅರ್ಚನೆ ೪೯೮
ಅರ್ಚಾಶಿಷ್ಟ ಘೋಷಣೆ ೪೯೯
ಅರ್ಚಾವತಾರ ೪೯೯
ಅರ್ಜುನ ೪೯೯
ಅರ್ಜುನ ಪ್ರಶಸ್ತಿ ೫೦೦
ಅರ್ಜುನಸಿಂಗ್ ೫೦೫
ಅರ್ಜುನಾಯನರು ೫೦೫
ಅರ್ಟವಹಿಷ್ಟ್ ೫೦೬
ಅರ್ಥ[1] ೫೦೬
ಅರ್ಥ[2] ೫೦೬
ಅರ್ಥಕ್ರಿಯಾಕಾರಿತ್ವ ೫೦೭
ಅರ್ಥ – ದರ್ಶನ ೫೦೭
ಅರ್ಥಪೂರ್ಣ ರೂಪ ೫೦೮
ಅರ್ಥಮಿತಿ ಅಥವಾ ಅರ್ಥಮಾಪನ ಶಾಸ್ತ್ರ ೫೦೮
ಅರ್ಥಮೀಮಾಂಸೆ ೫೧೦
ಅರ್ಥಶಾಸ್ತ್ರ ೫೧೧
ಅರ್ಥಶಾಸ್ತ್ರ, ಕೌಟಿಲ್ಯನ ನೋಡಿ: ಕೌಟಿಲ್ಯ ೫೧೨
ಅರ್ಥಾಪತ್ತಿ ೫೧೨
ಅರ್ಥಾಲಂಕಾರ ೫೧೨
ಅರ್ಧನಾರೀಶ್ವರ ೫೧೩
ಅರ್ಧಮಾಗಧೀ ೫೧೩
ಅರ್ನ್ ಬರಿಯಲ್ ೫೧೩
ಅರ್ಪಣೆ ೫೧೩
ಅರ್ಯಮನ್ ೫೧೩
ಅರ್ವಿಂಗ್, ವಾಷಿಂಗ್‌ಟನ್ ೫೧೩
ಅರ್ಸಿನಿಯ ಅನೆತಾಯ್ಡಿಸ್ ೫೧೪
ಅರ್ಹತ್ ೫೧೪
ಅರ್ಹತೆಗಳು ೫೧೪
ಅಲ್ ಅಹ್ರಾಂ ೫೧೪
ಅಲ್ ಉತ್ಬಿ ೫೧೪
ಅಲ್ ಉಬೈದ್ ೫೧೫
ಅಲ್‌ಖೈದ ೫೧೫
ಅಲ್ ಗಂಹರಿಯಾ ೫೧೫
ಅಲ್ ಮಸೂದ್ ೫೧೫
ಅಲ್ ಹಿಲಾಲ್ ೫೧೫
ಅಲಂಕರಣ ಕಲೆ ೫೧೬
ಅಲಂಕಾರದ ಎಲೆಸಸ್ಯಗಳು ಮತ್ತು ಬೇಲಿಗಳು ೫೧೬
ಅಲಂಕಾರ ಶಾಸ್ತ್ರ ೫೧೬
ಅಲಂಕಾರ ಶಿಲೆಗಳು ೫೧೭
ಅಲಂಕಾರಾತಿರೇಕ ೫೧೯
ಅಲಂಗೀರ್‌ಪುರ ೫೧೯
ಅಲಕನಂದ ೫೨೦
ಅಲಕಪಾದಿಗಳು ೫೨೦
ಅಲಘನಿ ಪರ್ವತಗಳು ೫೨೧
ಅಲಬಾಮ ೫೨೧
ಅಲಭ್ಯತೆ ೫೨೧
ಅಲರಿಪು ೫೨೨
ಅಲಸಂದೆ ೫೨೨
ಅಲಹಾಬಾದ್ ೫೨೩
ಅಲಾಉದ್ದೀನ್ I ೫೨೩
ಅಲಾಉದ್ದೀನ್ ಅಹ್ಮದ್ II ೫೨೩
ಅಲಾರ್ಕನ್ ೫೨೩
ಅಲಾಸ್ಕ ೫೨೪
ಅಲಿಂಗ್ ಹ್ಯಾಂ, ವಿಲಿಯಂ ೫೨೪
ಅಲಿ ಆದಿಲ್‌ಷಾ I ೫೨೪
ಅಲಿ ಆದಿಲ್‌ಷಾ II ೫೨೪
ಅಲಿಗೇಟರ್ ಮೊಸಳೆ ೫೨೪
ಅಲಿಫರ್ ೫೨೫

ಅಲಿಘರ್ ಚಳವಳಿ ೫೨೫
ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ ೫೨೫
ಅಲಿವರ್ದಿಖಾನ್ ೫೨೫
ಅಲಿಸಮ್ ೫೨೬
ಅಲೀಘರ್, ಮಾರ್ಗರಿಟ ಯೊಸಿಫಾವ್ನ ೫೨೬
ಅಲುಬು ೫೨೬
ಅಲೆಕ್ಸಾಂಡರ್ ೫೨೬
ಅಲೆಕ್ಸಾಂಡರ್ ಪೋಪರು ೫೨೮
ಅಲೆಕ್ಸಾಂಡರ್ ದ್ವೀಪಗಳು ೫೨೯
ಅಲೆಕ್ಸಾಂಡರ್, ಸರ್ ವಿಲಿಯಂ ೫೨೯
ಅಲೆಕ್ಸಾಂಡ್ರಿಯ ೫೨೯
ಅಲೆಕ್ಸಾಂಡ್ರೆಸ್ಕೂ, ಗ್ರಿಗರಿ ೫೨೯
ಅಲೆಕ್ಸಾಂದ್ರಿ ವ್ಯಸಿಲಿ ೫೨೯
ಅಲೆಕ್ಸಿಸ್, ವಿಲಿಬಲ್ಡ್ ೫೨೯
ಅಲೆಗಳ ಉಬ್ಬರವಿಳಿತದ ಶಕ್ತಿ ೫೩೦
ಅಲೆತಡೆ ೫೩೦
ಅಲೆನ್ ಫ್ಲೇಗರ್ ಆಡಂ ಗೊಟ್ಲಾಬ್ ೫೩೨
ಅಲೆನ್ಬಿ, ಎಡ್‌ಮಂಡ್ ಹೆನ್ರಿ ಹೈನ್‌ಮನ್ ೫೩೨
ಅಲೆಪ್ಪಿ ೫೩೨
ಅಲೆಮಾರಿಜನ, ಜೀವನ ೫೩೨
ಅಲೈಟಿಸ್ ೫೩೪
ಅಲೊ ೫೩೪
ಅಲೊಕೇಶಿಯ ೫೩೫
ಅಲೋಹಗಳು ೫೩೬
ಅಲೌಕಿಕ ೫೩೬
ಅಲ್ಗಾಲ್ ನಕ್ಷತ್ರ ೫೩೭
ಅಲ್ಟಾಜ಼ಿಮತ್ ೫೩೭
ಅಲ್ಟ್ರಾಮರೀನ್ ೫೩೭
ಅಲ್‌ಡಾನಾ, ಫ್ರಾನ್‌ಸಿಸ್ ಕೋಡೆ ೫೩೭
ಅಲ್ತಮಷ್ ೫೩೭
ಅಲ್ತಾಮೀರ ೫೩೭
ಅಲ್ತೂಸಿಯಸ್ ಜೊಹಾನಸ್ ೫೩೮
ಅಲ್ಪತಂತ್ರ ೫೩೮
ಅಲ್ಪತಾಪ ಮತ್ತು ಅತಿವಾಹಕತ್ವ ೫೩೮
ಅಲ್ಪವೃಷ್ಟಿ ವ್ಯವಸಾಯ ೫೩೯
ಅಲ್ಪಸಂಖ್ಯಾತರ ಹಕ್ಕುಗಳು ೫೪೦
ಅಲ್ಪಸಂಮರ್ದ ೫೪೦
ಅಲ್ಪಸಿಲಿಕಾಂಶ ಶಿಲೆಗಳು ೫೪೧
ಅಲ್ಪಾಕ ೫೪೨
ಅಲ್ಪಿನಿಯ ೫೪೨
ಅಲ್ಬುಮೆನ್ ೫೪೨
ಅಲ್ಯೂಮಿನಿಯಂ ೫೪೩
ಅಲ್ಯೂಮಿನಿಯಮ್ ತಾಪನ ೫೪೬
ಅಲ್ಯೂರೋಡಿಡಿ ೫೪೬
ಅಲ್ಯೂಷಿಯನ್ ದ್ವೀಪಗಳು ೫೪೬
ಅಲ್ಲಮಂಡ ೫೪೬
ಅಲ್ಲಮಪ್ರಭು ೫೪೭
ಅಲ್ಲಸಾನಿ ಪೆದ್ದನ ೫೪೭
ಅಲ್ಲಾ ೫೪೮
ಅಲ್ಲಾವುದ್ದೀನ್ ಖಿಲ್ಜಿ ೫೪೮
ಅವಂತೀ ದೇಶ ೫೪೮
ಅವಂತೀ ನಗರ ೫೪೯
ಅವಂತೀಪುರ ೫೪೯
ಅವಂತೀ ಸುಂದರೀ ಕಥಾ ೫೪೯
ಅವಕಾಶಸಮಾನತೆ, ಶಿಕ್ಷಣದಲ್ಲಿ ೫೪೯
ಅವಚ್ಛೇದಕಾಂಶಗಳು ೫೪೯
ಅವತಂಸ ೫೪೯
ಅವತಾರ ೫೫೦
ಅವದಾನಗಳು ೫೫೦
ಅವಧ ೫೫೦
ಅವಧಾನ ೫೫೧
ಅವಧಿ, ಕಾಲ ೫೫೨
ಅವಧಿಮೀರಿದ ಸಾಲ ೫೫೩
ಅವಧೀ ೫೫೩
ಅವಧೂತ ೫೫೩
ಅವಧೂತಗೀತೆ ೫೫೩
ಅವಮೂಲ್ಯನ[೧] ೫೫೩
ಅವಮೂಲ್ಯನ[೨] ೫೫೫
ಅವಯವ ೫೫೫
ಅವಯವ ಶೇಷಗಳು ೫೫೫
ಅವರೆ ೫೫೬
ಅವಲೋಕಿತೇಶ್ವರ ೫೫೬
ಅವಶ್ಯ ಪ್ರತಿಜ್ಞೆ ೫೫೬
ಅವಸರದ ಪಡೆ ೫೫೬
ಅವಸ್ಥಾತ್ರಯಗಳು, ವಸ್ತುವಿನ ೫೫೭
ಅವಸ್ಥಾನಿಯಮ ೫೫೮
ಅವಸ್ಥೆಗಳು ೫೫೮
ಅವಹಟ್ಟ ಭಾಷೆ ೫೬೦
ಅವಳಿಗಳು, ಅವಳಿತನ ೫೬೦
ಅವಿಚಾರತತ್ವ ೫೬೧
ಅವಿಚ್ಛಿನ್ನತೆ ೫೬೧
ಅವಿದ್ಯೆ ೫೬೨
ಅವಿಭಾಜ್ಯದಾಯ ೫೬೨
ಅವಿರುದ್ಧಸ್ತ್ರೀ ೫೬೩
ಅವಿರೋಧ ನಿಯಮ ೫೬೩
ಅವಿಸೆನ್ನ ೫೬೩
ಅವಿರೊಯಿಝ್ ೫೬೪
ಅವೆಂಜೋಯರ್ ೫೬೪
ಅವೇನೇರಿಯಸ್, ರಿಚರ್ಡ್ ಹೆನ್ರಿಕ್ ಲಡ್ವಿಗ್ ೫೬೪
ಅವೆಸ್ತ ೫೬೪
ಅವೆಸ್ತ ಭಾಷೆ ೫೬೬
ಅವೈದಿಕದೈವವಾದ ೫೬೬
ಅವೊಕ್ಯಾಡೊ ೫೬೬
ಅವೊಗ್ಯಾಡ್ರೊ, ಅಮಡಿಯೊ ೫೬೭
ಅವ್ಯಕ್ತ ೫೬೭
ಅವ್ಯವಸ್ಥೆ ೫೬೭
ಅವ್ವಾಕುಮ್ ಪೆಟ್ರೊವಿಚ್ ೫೬೭
ಅವ್ವೆಯಾರ್ ೫೬೮
ಅಶೋಕ ೫೬೮
ಅಶೋಕ ಚಕ್ರ ೫೬೯
ಅಶೋಕನ ಶಾಸನಗಳು ೫೭೦
ಅಶೋಕ ಪೈ ೫೭೨
ಅಶೋಕ ವೃಕ್ಷ ೫೭೨
ಅಶ್ರಗ ೫೭೩
ಅಶ್ರಗೀಯೋಕ್ತಿ ೫೭೩
ಅಶ್ಲೀಲ ೫೭೩
ಅಶ್ವಗಂಧ ೫೭೪
ಅಶ್ವಘೋಷ ೫೭೪
ಅಶ್ವಥ್, ಸಿ. ೫೭೬
ಅಶ್ವತ್ಥ ನೋಡಿ: ಅರಳಿಮರ ೫೭೬
ಅಶ್ವತ್ಥ ೫೭೬
ಅಶ್ವಥ್, ಕೆ.ಎಸ್. ೫೭೭
ಅಶ್ವತ್ಥನಾರಾಯಣರಾವ್ ೫೭೭
ಅಶ್ವತ್ಥಾಮ ೫೭೮
ಅಶ್ವದಳ ೫೭೮
ಅಶ್ವಮೇಧ ೫೭೯
ಅಶ್ವಸಾಮರ್ಥ್ಯ ೫೭೯
ಅಶ್ವಿನಿ ನಾಚಪ್ಪ ೫೮೦
ಅಶ್ವಿನೀ ದೇವತೆಗಳು ೫೮೦
ಅಷೂಲಿಯನ್ ಉದ್ಯಮ ೫೮೦
ಅಷ್ಟಕಗಳು ೫೮೦
ಅಷ್ಟಛಾಪ ಕವಿಗಳು ೫೮೧
ಅಷ್ಟದಿಕ್ಕುಗಳು ೫೮೧
ಅಷ್ಟಪಾದಿ ೫೮೧
ಅಷ್ಟಪ್ರಧಾನರು ೫೮೧
ಅಷ್ಟಫಲಕ ೫೮೧
ಅಷ್ಟಮಹಿಷಿಯರು ೫೮೨
ಅಷ್ಟಮಿ ೫೮೨
ಅಷ್ಟಮೂರ್ತಿಗಳು ೫೮೨
ಅಷ್ಟವಸುಗಳು ೫೮೨
ಅಷ್ಟವೀರಸ್ಥಾನಗಳು ೫೮೨
ಅಷ್ಟಸಿದ್ಧಿಗಳು ೫೮೨
ಅಷ್ಟಾಂಗ ಮಾರ್ಗ ೫೮೨
ಅಷ್ಟಾಂಗ ಯೋಗ ೫೮೨
ಅಷ್ಟಾಂಶ ಸಂಖ್ಯಾವ್ಯವಸ್ಥೆ ೫೮೩
ಅಷ್ಟಾದಶ ಉಪಪುರಾಣಗಳು ೫೮೩
ಅಷ್ಟಾದಶಪುರಾಣಗಳು ೫೮೫
ಅಷ್ಟಾದಶ ವರ್ಣನೆಗಳು ೫೯೧
ಅಷ್ಟಾವಧಾನ ೫೯೨
ಅಷ್ಟಾವರಣ ೫೯೨
ಅಷ್ಟಾಹ್ನಿಕ ಪರ್ವ ೫೯೨
ಅಷ್ಟೋತ್ತರ ೫೯೨
ಅಸಂಗ ೫೯೨
ಅಸಗ ೫೯೨
ಅಸತ್ ೫೯೩
ಅಸತ್ಕಾರ್ಯವಾದ ೫೯೪
ಅಸನ್‌ಸಾಲ್ ೫೯೪
ಅಸಫ್ ಝಾ I ೫೯೪
ಅಸಫ್ ಝಾ II ೫೯೪
ಅಸಮತೆ, ಆರ್ಥಿಕ ೫೯೪
ಅಸಮನಿಟ್ಟು (ಅಬಿಂಧುಕತೆ) ೫೯೫
ಅಸಮಪಾದ ಪದ್ಯ ೫೯೫
ಅಸಮಪ್ರಸರಣ ೫೯೫
ಅಸಮೀಕರಣ ೫೯೫
ಅಸಲುಕಂತು ೫೯೫
ಅಸಹಕಾರ ೫೯೫
ಅಸ಼ರ್‌ಬೈಜಾನ್ ೫೯೬
ಅಸಾಧಾರಣ ಮಕ್ಕಳು ೫೯೬
ಅಸಾಹಿ ಶಿಂಭೂನ್ ೫೯೭
ಅಸಿಕ್ನಿ ೫೯೭
ಅಸಿಟನಿಲೈಡ್ ೫೯೭
ಅಸಿಟಲೀನ್ ೫೯೭
ಅಸಿಟಾಲ್‌ಗಳು ೫೯೮
ಅಸಿಟಿಕ್ ಆಮ್ಲ ೫೯೮
ಅಸಿಟೋನ್ ೬೦೦

ಅಸಿನ್ಯಾಫ್ತೀನ್ ೬೦೧
ಅಸಿಲಿಡೇ ೬೦೧
ಅಸೀರ್‌ಫರ್ ೬೦೧
ಅಸುತೋಷ ಮುಖರ್ಜಿ ೬೦೧
ಅಸುರ ೬೦೨
ಅಸೆಂಟ್ ಆಫ್ ಎಫ್ ೬, ದಿ ೬೦೨
ಅಸೋಸಿಯೇಟೆಡ್ ಪ್ರೆಸ್ ಆಫ್ ಅಮೆರಿಕ ೬೦೨
ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯ ೬೦೨
ಅಸ್ಟ್ರಿಮ್‌ಸನ್, ಐಸ್ಟೀನ್ ೬೦೨
ಅಸ್ಟ್ರಲೋಪಿತಕಸ್ ೬೦೨
ಅಸ್ಟ್ರೋಕ್ಯಾರಿಯಮ್ ೬೦೩
ಅಸ್ತಿತ್ವವಾದ ೬೦೩
ಅಸ್ತಿಭಾರ (ಅಡಿಪಾಯ) ೬೦೪
ಅಸ್ತ್ರಗಳು ೬೦೮
ಅಸ್ಥಿಕವಚದ ಮೀನುಗಳು ೬೦೯
ಅಸ್ಥಿಪಂಜರ ನೋಡಿ: ಎಲುಗಟ್ಟು ೬೦೯
ಅಸ್ಥಿಮತ್ಸ್ಯಗಳು ೬೦೯
ಅಸ್‌ಪ್ಯಾರಗಸ್ ೬೧೦
ಅಸ್ಪಿಡಿಸ್ಟ್ರ ೬೧೦
ಅಸ್ಫಟಿಕತೆ ೬೧೧
ಅಸ್ಸಾಂ ೬೧೧
ಅಸ್ಸಾಂ ಖನಿಜತೈಲ ಕ್ಷೇತ್ರಗಳು ೬೧೨
ಅಸ್ಸಾಂ ಟ್ರಿಬ್ಯೂನ್ ೬೧೪
ಅಸ್ಸಾಂ ಮಿಹಿರ್ ೬೧೪
ಅಸ್ಸಾಮಿನ ಇತಿಹಾಸ ೬೧೪
ಅಸ್ಸಾಮಿನ ಪ್ರಾಕ್ತನ ಚರಿತ್ರೆ ೬೧೪
ಅಸ್ಸಾಮಿಯಾ ೬೧೬
ಅಸ್ಸಾಮೀ ಭಾಷೆ ೬೧೬
ಅಸ್ಸಾಮೀ ಸಾಹಿತ್ಯ ೬೨೦
ಅಸ್ಸಾಯ್ ಯುದ್ಧ ೬೨೩
ಅಸ್ಸೀರಿಯ ೬೨೩
ಅಸ್ಸೀರಿಯನ್ನರ ಕಲೆ ೬೨೪
ಅಹಂಕಾರ ೬೨೫
ಅಹಂಭಾವ ೬೨೫
ಅಹಮದ್ I ೬೨೬
ಅಹಮದ್ II ೬೨೬
ಅಹಮದ್ III ೬೨೬
ಅಹಮದ್ ನಗರ ೬೨೬
ಅಹಮದ್ ಷಾ ೬೨೬
ಅಹಮದ್ ಷಾ ದುರಾನಿ ೬೨೬
ಅಹಮದಾಬಾದ್ ೬೨೬
ಅಹಲ್ಯಾಬಾಯಿ ಹೋಳ್ಕರ್ ೬೨೭
ಅಹಲ್ಯೆ ೬೨೭
ಅಹಾರ್ ೬೨೭
ಅಹಿಂಸೆ ೬೨೭
ಅಹಿಚ್ಛತ್ರ ೬೨೯
ಅಹುರಮಜ್ದ ೬೨೯
ಅಹೋಂ ೬೨೯
ಅಹೋಬಲ ೬೨೯
ಅಹ್ರಿಮನ್ ೬೨೯
ಅಳಣಾವರ ೬೨೯
ಅಳತೆ, ತೂಕ, ಎಣಿಕೆ ೬೨೯
ಅಳತೆಯ ಲೋಪಗಳು ೬೩೧
ಅಳಲೆ ಮರ ೬೩೩
ಅಳಸಿಂಗ್‌ರಾಚಾರ್ಯ, ದೇವಶಿಖಾಮಣಿ ೬೩೩
ಅಳಿಕೊಳಪು ೬೩೩
ಅಳಿಗೊಳೆತ ೬೩೩
ಅಳಿಯ ಲಿಂಗರಾಜ ೬೩೩
ಅಳಿಯ ಸಂತಾನ ೬೩೪
ಅಳಿಲು ೬೩೫
ಅಳಿಲು ಮೀನು ೬೩೫
ಅಳಿವೆ ೬೩೫
ಅಳ್ತೇಕರ್, ಎ.ಎಸ್. ೬೩೬
ಅಳ್ಳೆಪರೆಯ ರೋಗಗಳು ೬೩೬
ಆಂಕೋರ್ ಥಾಮ್ ೬೩೭
ಆಂಕೋರ್ ವಾಟ್ ೬೩೮
ಆಂಗ್‌ಸನ್ ೬೪೦
ಆಂಗೀರಸ ೬೪೦
ಆಂಗ್ರಿಯ ೬೪೦
ಆಂಗ್‌ಸ್ಟ್ರಾಮ್, ಆಂಡರ್ಸ್‌ಯೊನಸ್ ೬೪೦
ಆಂಜನೇಯ ೬೪೦
ಆ್ಯಂಗ್ಲಿಯೊಲಿರಿ, ಕೆಕೋ ೬೪೦
ಆ್ಯಂಗ್ಲೋ – ಜಪಾನ್ ಒಪ್ಪಂದ ೬೪೦
ಆ್ಯಂಗ್ಲೋ ಸ್ಯಾಕ್ಸನ್ ಕ್ರಾನಿಕಲ್ ೬೪೧
ಆ್ಯಂಗ್ಲೋಸ್ಯಾಕ್ಸನರು ೬೪೧
ಆ್ಯಂಜಲಸ್ ಸೈಲೀಷಸ್ ೬೪೧
ಆ್ಯಂಟ್ ಲಯನ್ ೬೪೧
ಆ್ಯಂಟಿಗೊನಾನ್ ೬೪೧
ಆ್ಯಂಟಿಫಾನ್ ೬೪೧
ಆ್ಯಂಟಿಮನಿ ೬೪೧
ಆ್ಯಂಟಿಯೋಕ್ ೬೪೨
ಆ್ಯಂಟಿಯೋಕಸ್ III ೬೪೨
ಆ್ಯಂಟಿರೈನಮ್ ೬೪೨
ಆ್ಯಂಟೆನಾ ೬೪೨
ಆ್ಯಂಟೆರಿಯೊ ೬೪೨
ಆ್ಯಂಟೆರಿಯೋ ೬೪೨
ಆ್ಯಂಟೊನೈನ್ ಸಾಮ್ರಾಟರು ೬೪೩
ಆ್ಯಂಟೊನೈನಸ್ ಪಯಸ್ ೬೪೩
ಆ್ಯಂಟೋನಿಯಸ್ ಗಯಸ್ ೬೪೩
ಆ್ಯಂಟೋನಿಯಸ್ ಮಾರ್ಕಸ್ ೬೪೪
ಆ್ಯಂಟ್‌ವರ್ಪ್ ೬೪೪
ಆ್ಯಂಟ್‌ಸನ್‌ಗ್ರೂಬರ್, ಲೂಟ್‌ವಿಕ್ ೬೪೪
ಆ್ಯಂಡರ್‌ಸನ್, ಕಾರ್ಲ್ ಡೇವಿಡ್ ೬೪೪
ಆ್ಯಂಡರ್‌ಸನ್, ಡ್ಯಾನ್ ೬೪೪
ಆ್ಯಂಡರ್‌ಸನ್, ಮ್ಯಾಕ್ಸ್‌ವೆಲ್ ೬೪೪
ಆ್ಯಂಡರ್‌ಸನ್, ಷರ್‌ವುಡ್ ೬೪೪
ಆ್ಯಂಡರ್‌ಸನ್, ಹ್ಯಾನ್ಸ್ ಕ್ರಿಶ್ಚಿಯನ್ ೬೪೪
ಆ್ಯಂಡಲೂಸೈಟ್ ೬೪೫
ಆ್ಯಂಡಿಸೈಟ್ ೬೪೫
ಆ್ಯಂಡೀಸ್ ೬೪೫
ಆ್ಯಂಡೊಸಿಡೀಸ್ ೬೪೬
ಆ್ಯಂಡ್ರಾನಿಕಸ್, ಲಿವಿಅಸ್ ೬೪೬
ಆ್ಯಂಡ್ರಿಯ, ಪೆಲೇಡಿಯೊ ೬೪೬
ಆ್ಯಂಡ್ರಿಸ್, ಸ್ಟೀಫನ್ ೬೪೬
ಆ್ಯಂಡ್ರೂ, ಥಾಮಸ್ ೬೪೬
ಆ್ಯಂಡ್ರೂಸ್, ಸಿ.ಎಫ್. ೬೪೬
ಆ್ಯಂಡ್ರೆಡೆ, ಎಡ್ವರ್ಡ್ ನೆವಿಲ್ಲೆ ದ ಕಾಸ್ಟ ೬೪೭
ಆ್ಯಂಡ್ರೊಮಿಡ ೬೪೭
ಆಂಡಯ್ಯ ೬೪೭
ಆಂಡಾಳ್ ೬೪೮
ಆ್ಯಂತೋಸಯನಿನ್‌ಗಳು ೬೪೮
ಆ್ಯಂಥೊಜೋವ ೬೪೯
ಆ್ಯಂಥ್ರಸೀನ್ ಮತ್ತು ಫೀನಾಂಥ್ರಿನ್ ೬೫೦
ಆ್ಯಂಥ್ರಸೈಟ್ ೬೫೦
ಆಂದೋಲನ ೬೫೧
ಆಂದೋಲನಲೇಖಕ ೬೫೨
ಆ್ಯಂದ್ರಿಚ್, ಈವೊ ೬೫೪
ಆ್ಯಂದ್ರೆಯಾನಿ, ಜೋವನಿ ಬ್ಯಾಟಿಸ್ಟ ೬೫೪
ಆಂಧ್ರಪತ್ರಿಕಾ ೬೫೪
ಆಂಧ್ರ ಪ್ರದೇಶ ೬೫೪
ಆಂಧ್ರಪ್ರಭಾ ೬೫೮
ಆಂಧ್ರಭಾಷೆ ೬೫೮
ಆಂಧ್ರ ಸಾಹಿತ್ಯ ೬೬೧
ಆ್ಯಂಪೇರ್ ೬೬೬
ಆ್ಯಂಪೇರ್, ಆಂದ್ರೆಮಾರಿ ೬೬೬
ಆ್ಯಂಫಿಕ್ಟಿಯೋನಿ ೬೬೬
ಆ್ಯಂಫಿಟಮೀನ್ ೬೬೭
ಆ್ಯಂಫಿಪೋಲಿಸ್ ೬೬೭
ಆ್ಯಂಫಿಬೋಲ್ ೬೬೭
ಆ್ಯಂಫಿಯಾಕ್ಸಸ್ ೬೬೭
ಆ್ಯಂಫೋರ ೬೬೮
ಆ್ಯಂಬ್ರೊಚಿನಿ, ಎಂಜೆಲೊ ೬೬೮
ಆ್ಯಂಬ್ಲಿಪೋಡ ೬೬೮
ಆ್ಯಂಸ್ಟರ್‌ಡ್ಯಾಮ್ ೬೬೯
ಆಕ್ ಹಕ್ಕಿಗಳು ೬೬೯
ಆಕಸ್ಮಿಕಗಳ ವಿಮೆ ೬೬೯
ಆಕಳ ತಳಿಗಳು ೬೭೦
ಆಕಾಶ[೧] ೬೭೨
ಆಕಾಶ[೨] ೬೭೨
ಆಕಾಶ[೩] ೬೭೨
ಆಕಾಶಗಂಗೆ ೬೭೨
ಆಕಾಶಬಳ್ಳಿ ೬೭೪
ಆಕಾಶ ಮತ್ತು ಕಾಲ ೬೭೪
ಆಕಾಶ ಮತ್ತು ದಿಕ್ ೬೭೬
ಆಕಾಶ ಮಲ್ಲಿಗೆ ೬೭೬
ಆಕಾಶವಾಣಿ ೬೭೬
ಆಕೃತಿ ವಿಜ್ಞಾನ ೬೮೭
ಆಕೃತೀಯ ವರ್ಗೀಕರಣ ೬೮೯
ಆಕೃತೀಯ ಸಂಖ್ಯೆಗಳು ೬೮೯
ಆ್ಯಕ್ಟ್ ಆಫ್ ಸೆಟಲ್‌ಮೆಂಟ್ ೬೮೯
ಆ್ಯಕ್ಟನ್ ಲಾರ್ಡ್ (ಸರ್ ಜಾನ್ ಎಮೆರಿಚ್ ಎಡ್ವರ್ಡ್ ಡಾಲ್ಬರ್ಗ್) ೬೮೯
ಆ್ಯಕ್ಟೀನಿಯಂ ೬೯೦
ಆಕ್ಟೋಪಸ್ ನೋಡಿ: ಅಷ್ಟಪಾದಿ ೬೯೦
ಆಕ್ಟಾಟನ್ ೬೯೦
ಆಕ್ರಮಣಕಾರ ೬೯೧
ಆಕ್ರಾ ೬೯೧
ಆಕ್‌ಲೆಂಡ್ ೬೯೧
ಆಕ್ಸಾಲಿಕ್ ಆಮ್ಲ ೬೯೧
ಆಕ್ಸಾಲಿಸ್ ೬೯೧
ಆಕ್ಸಿಅಸಿಟಿಲೀನ್ ಜ್ವಾಲೆ ೬೯೧
ಆಕ್ಸಿಜನ್ ೬೯೨
ಆಕ್ಸಿಟೆಟ್ರಸೈಕ್ಲೀನ್ ೬೯೩
ಆಕ್ಸೈಡ್ ೬೯೩
ಆಕ್ಸೊಲಾಟಲ್ ೬೯೪

ಆಕ್ಸಿಯಸ್, ಲ್ಯೂಸಿಯಸ್ ೬೯೪
ಆಖ್ಯಾನ ೬೯೪
ಆಖ್ಯಾನಕ ೬೯೪
ಆಖ್ಯಾಯಿಕಾ ೬೯೫
ಆಗಂತುಕ ಮೊಗ್ಗುಗಳು ೬೯೫
ಆಗಂತುಕ ವಿಶೇಷಣ ೬೯೫
ಆಗಮಗಳು ೬೯೫
ಆಗಮೆಮ್ನಾನ್ ೬೯೭
ಆಗರ್ ಪರಿಣಾಮ ೬೯೭
ಆಗಸ್ಟ್ ೬೯೭
ಆಗಸ್ಟಾ ೬೯೭
ಆಗಸ್ಟೀನ್, ಸೇಂಟ್ ೬೯೭
ಆಗಾಖಾನ್ ೬೯೮
ಆಗುಂಬೆ ೬೯೮
ಆಗೈಟ್ ೬೯೯
ಆಗ್ನೇಯ ಏಷ್ಯ ೬೯೯
ಆಗ್ಬರ್ನ್, ಡಬ್ಲ್ಯು.ಎಫ್. ೭೦೬
ಆಗ್ರ ೭೦೬
ಆಗ್ರಯಣೇಷ್ಟಿ ೭೦೬
ಆಗ್ಸ್‌ಬರ್ಗ್ ಒಕ್ಕೂಟ ೭೦೬
ಆಚಣ್ಣ ೭೦೬
ಆಚಯನ ೭೦೬
ಆಚರಣೆ ೭೦೬
ಆಚರಣೆಯ ವಚನ ೭೦೮
ಆಚಾರ ೭೦೮
ಆಚಾರ್ಯ ೭೦೯
ಆಚಾರ್ಯ, ಪಾ.ವೆಂ. ೭೧೦
ಆಚಾರ್ಯ, ಎಂ.ಟಿ.ವಿ. ೭೧೦
ಆಝಮ್‌ಗಢ ೭೧೧
ಆಝೊ ಸಂಯುಕ್ತಗಳು ೭೧೧
ಆಜ್ಞಾಪತ್ರ ೭೧೩
ಆಜ್ಟೆಕ್ ಸಂಸ್ಕೃತಿ ೭೧೩
ಆಟಗಳು ೭೧೪
ಆಟರ್ ಬೂಮ್, ಪೆರ್‌ಡೇನಿಯಲ್ ಅಮೆಡ್ಯೂಸ್ ೭೨೨
ಆಟಿ ಕಡೆಂಜ ೭೨೨
ಆಟೊ ಚಕ್ರವರ್ತಿಗಳು ೭೨೨
ಆಟೋ ೭೨೨
ಆಟೋಕ್ಲೇವ್ ೭೨೩
ಆಟೋಮನ್ ಚಕ್ರಾಧಿಪತ್ಯ ೭೨೩
ಆಟೋಮ್ಯಾಟಿಸಂ ೭೨೩
ಆಟ್‌ವುಡ್, ಜಾರ್ಜ್ ೭೨೩
ಆಟ್ವೆ, ಥಾಮಸ್ ೭೨೪
ಆಡನ್, ವಿಸ್ಟನ್ ಹ್ಯೂ ೭೨೪
ಆಡಮ್‌ನ ಶಿಖರ ೭೨೪
ಆಡಮ್ ಸೇತುವೆ ೭೨೪
ಆಡಮ್ ಸ್ಮಿತ್ ೭೨೪
ಆಡಮ್ಸ್, ಫ್ರಾನ್ಸಿಸ್ ವಿಲಿಯಂ ಲಾಡರ್‌ಡೇಲ್ ೭೨೫
ಆಡಮ್ಸ್ ಜಾನ್ ೭೨೬
ಆಡಮ್ಸ್, ಜಾನ್ ಕೌಚ್ ೭೨೬
ಆಡಮ್ಸ್, ಜಾನ್ ಕ್ವಿನ್ಸಿ ೭೨೬
ಆಡಮ್ಸ್, ರಾಬರ್ಟ್ ೭೨೬
ಆಡಳಿತ ೭೨೬
ಆಡಳಿತ ಕಾಯಿದೆ, ಆಡಳಿತ ಮಂಡಳಿ ೭೨೭
ಆಡಳಿತ ನಿರ್ವಹಣೆ ೭೨೮
ಆಡಳಿತ ನಿರ್ವಾಹಕ ಮಂಡಲಿ ೭೨೮
ಆಡಳಿತಸ್ಥಾನಗಳ ಆರಕ್ಷಣ ೭೨೮
ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಷನ್ಸ್ (ಎ ಬಿ ಸಿ) ೭೨೯
ಆಡಿಸ್ ಆಬಾಬಾ ೭೨೯
ಆಡು ೭೨೯
ಆಡುಸೋಗೆ ೭೩೧
ಆಡ್ರಿಯನ್, ಎಡ್ಗರ್ ಡಗ್ಲಾಸ್ ೭೩೧
ಆಡ್ಲರ್, ಆಲ್ಫ್ರೆಡ್ ೭೩೧
ಆಣೆ ೭೩೨
ಆತಕೂರು ೭೩೨
ಆತುಕೂರಿ ಮೊಲ್ಲ ೭೩೨
ಆತ್ಮ ೭೩೩
ಆತ್ಮಕಥೆ ೭೩೪
ಆತ್ಮತ್ಯಾಗ ೭೩೪
ಆತ್ಮನಾಶ ೭೩೫
ಆತ್ಮನಿರ್ಣಯಾಧಿಕಾರ ೭೩೫
ಆತ್ಮಪ್ರತಿಷ್ಠೆ, ಆತ್ಮಶರಣಾಗತಿ ೭೩೬
ಆತ್ಮಪ್ರತ್ಯಯ ೭೩೭
ಆತ್ಮಶುದ್ಧಿ ೭೩೭
ಆತ್ಮಸಾಕ್ಷಾತ್ಕಾರ ೭೩೮
ಆತ್ಮಸಾಕ್ಷಿ ೭೩೮
ಆತ್ಮಸಾಕ್ಷಿ ಪ್ರಮಾಣ್ಯವಾದ ೭೩೮
ಆತ್ಮಸಾಕ್ಷಿಯ ವಿರೋಧಕರು ೭೩೯
ಆತ್ಮಸಿದ್ಧಿ ೭೩೯
ಆತ್ಮಹತ್ಯೆ ೭೪೧
ಆತ್ರೇಯ ೭೪೧
ಆದಂ ಈವ್ ೭೪೧
ಆದಯ್ಯ ೭೪೨
ಆದರ್ಶರಾಜ್ಯ ೭೪೨
ಆದವಾನಿ ೭೪೩
ಆದಾಯ ತೆರಿಗೆ ೭೪೩
ಆದಾಯ, ಸಾರ್ವಜನಿಕ ೭೪೪
ಆದಿಕಾಂಡ ೭೪೫
ಆದಿಗ್ರಂಥ ೭೪೫
ಆದಿಚನಲ್ಲೂರು ೭೪೫
ಆದಿಚುಂಚನಗಿರಿ ೭೪೬
ಆದಿಜೀವಯುಗ ೭೪೭
ಆದಿತೀರ್ಥಂಕರ ನೋಡಿ: ತೀರ್ಥಂಕರರು ೭೪೮
ಆದಿತ್ಯ ೭೪೮
ಆದಿತ್ಯಸೇನ ೭೪೯
ಆದಿಬುದ್ಧ ೭೪೯
ಆದಿಬ್ರಹ್ಮಸಮಾಜ ೭೪೯
ಆದಿಭೌತಿಕ ೭೪೯
ಆದಿಮಜನರ ಕಲೆ ೭೪೯
ಆದಿಮಾನವ ೭೫೨
ಆದಿಮಾನವ ಕಲೆ ೭೫೪
ಆದಿಯಪ್ಪ ೭೫೫
ಆದಿಲ್‌ಷಾಹಿ ವಂಶ ೭೫೬
ಆದಿವಾಸಿಗಳು ೭೬೨
ಆದಿವಾಸಿ ಧರ್ಮ ೭೬೯
ಆದಿಶಂಕರಾಚಾರ್ಯ ೭೬೯
ಆದಿ ಶಿಲೋಪಕರಣ ೭೭೦
ಆದಿಶೇಷ ೭೭೦
ಆಧಾರ ಕಟ್ಟಡ ೭೭೧
ಆಧಾರಗೆರೆ ೭೭೧
ಆಧಾರತತ್ವಗಳು ೭೭೧
ಆಧಾರದ ಪೆಟ್ಟಿಗೆ ೭೭೧
ಆಧಾರಭಾವನೆ ೭೭೧
ಆಧಿದೈವಿಕ ೭೭೪
ಆಧುನಿಕ, ಆಧುನಿಕತೆ ೭೭೪
ಆಧುನಿಕ ಜೀವಯುಗ ೭೭೪
ಆಧುನಿಕ ಪಾಶ್ಚಾತ್ಯತತ್ತ್ವದ ಮುನ್ನಡೆ ೭೭೫
ಆಧುನಿಕ ಬೀಜಗಣಿತ ೭೮೮
ಆಧುನಿಕ ಯುದ್ಧಕಲೆ ನೋಡಿ: ಯುದ್ಧಕಲೆ ೭೯೩
ಆಧುನಿಕ ವಾಸ್ತುಶಿಲ್ಪ ನೋಡಿ: ವಾಸ್ತುಶಿಲ್ಪ ೭೯೩
ಆಧುನಿಕ ಕರ್ಣಾಟಕ ಸಂಗೀತ ೭೯೩
ಆ್ಯನ್ ೭೯೫
ಆ್ಯನ್, ಆಸ್ಟ್ರಿಯದ ೭೯೫
ಆ್ಯನ್, ಕ್ಲೀವ್ಸ್‌ನ ೭೯೫
ಆ್ಯನ್, ಡೆನ್ಮಾರ್ಕಿನ ೭೯೫
ಆನಂದ್, ಮುಲ್ಕ್‌ರಾಜ್ ೭೯೫
ಆನಂದ[೧] ನೋಡಿ: ಸೀತಾರಾಮ್, ಎ. ೭೯೬
ಆನಂದ[೨] ನೋಡಿ: ಸಂವತ್ಸರ ೭೯೬
ಆನಂದ[೩] ೭೯೬
ಆನಂದ[೪] ೭೯೬
ಆನಂದಕುಮಾರಸ್ವಾಮಿ ೭೯೬
ಆನಂದಗಿರಿ ೭೯೬
ಆನಂದ ದೇವಾಲಯ ೭೯೬
ಆನಂದ ಬಝಾರ್ ಪತ್ರಿಕಾ ೭೯೬
ಆನಂದರಂಗಂ ಪಿಳ್ಳೆ ೭೯೭
ಆನಂದರಾವ್, ಟಿ. ೭೯೭
ಆನಂದವರ್ಧನ ೭೯೭
ಆನಂದ ವಿಕಟನ್ ೭೯೯
ಆ್ಯನಿ ಬೆಸೆಂಟ್ ೭೯೯
ಆನು ಏಣಿನ ಜೋಡಣೆ ೭೯೯
ಆನುವಂಶಿಕ ವರ್ಗೀಕರಣ ೮೦೦
ಆನುಷಂಗಿಕ ಮೊಗ್ಗುಗಳು ೮೦೦
ಆನೆ ೮೦೦
ಆನೆಗೊಂದಿ ೮೦೨
ಆನೆದೊಗಲು ೮೦೨
ಆನೆಕೊಂಡ ೮೦೩
ಆನೇಕಲ್ಲು ೮೦೩
ಆನೆಹುಣಿಸೆ ೮೦೩
ಆನೆ ಹುಲ್ಲು ೮೦೩
ಆನೋಲೀಡ್ ೮೦೪
ಆನ್ವೀಕ್ಷಿಕೀ ೮೦೪
ಆನ್ಸೆರೆಸ್ ಬಾತು ೮೦೪
ಆನ್ಸೆಲ್ಮ್, ಸೇಂಟ್ ೮೦೪
ಆಪದ್ಧರ್ಮ ೮೦೪
ಆಪಲ್ಟನ್, ಸರ್ ಎಡ್ವರ್ಡ್ ವಿಕ್ಟರ್ ೮೦೫
ಆಪಸ್ತಂಬ ೮೦೫
ಆಪೆನ್ ಹೈಮ್, ಎಡ್ವರ್ಡ್ ಫಿಲಿಪ್ಸ್ ೮೦೫
ಆಪೆರ ನೋಡಿ: ಗೇಯರೂಪಕ ೮೦೫
ಆಪ್ಟೆರಿಕ್ಸ್ ೮೦೬
ಆಪ್ಟೆರಿಗೋಟಾ ೮೦೬
ಆಪ್ಲೈಟ್ ೮೦೬
ಆಫಾ ೮೦೬
ಆಫ್ಘಾನಿಸ್ತಾನ ೮೦೭
ಆಫ್ರಿಕ ಖಂಡ ೮೧೨
ಆಫ್ರಿಕದ ಕಲೆ ೮೧೬
ಆಫ್ರಿಕದ ಗುಲಾಮೀ ವ್ಯಾಪಾರ ೮೧೭

ಆಫ್ರಿಕದ ಜನಾಂಗಗಳು ೮೧೭
ಆಫ್ರಿಕದ ಧರ್ಮ ೮೧೯
ಆಫ್ರಿಕದ ನೀಗ್ರೊ ಸಂಗೀತ ೮೨೦
ಆಫ್ರಿಕದ ಪ್ರಾಕ್ತನ ಚರಿತ್ರೆ ೮೨೧
ಆಫ್ರಿಕದ ಭಾಷೆಗಳು ೮೨೨
ಆಫ್ರಿಕದ ಭೂ ಇತಿಹಾಸ ೮೨೪
ಆಫ್ರಿಕದ ರಾಜಕೀಯ ಚರಿತ್ರೆ ೮೨೫
ಆಫ್ರಿಕ ಮತ್ತು ಹೊರನಾಡಿನ ನೀಗ್ರೊ ಜಾನಪದ ೮೨೬
ಆಫ್‌ಸೆಟ್ ಮುದ್ರಣ ೮೨೭
ಆಫ್ರೆಚ್ ಥಿಯೋಡರ್ ೮೨೭
ಆಬರ್‌ಕ್ರಾಂಬಿ, ಲಾಸೆಲಸ್ ೮೨೭
ಆಬಾದಾನ್ ೮೨೮
ಆಬೆಲ್ ೮೨೮
ಆಬ್ಲೊಮಾನ್ ೮೨೮
ಆಬ್‌ಸಿಡಿಯನ್ ೮೨೮
ಆಬ್ಸಲಾಮ್, ಆಬ್ಸಲಾಮ್ ೮೨೮
ಆಭರಣಗಳು ೮೨೮
ಆಭೀರರು ೮೩೨
ಆಮದುಗಳು ೮೩೨
ಆಮನಿಯರ್ ಸ್ಟೇಸಿ ೮೩೪
ಆಮಶಂಕೆ ೮೩೪
ಆಮರ್ಸ್ಟ್, ಲಾರ್ಡ್ ೮೩೭
ಆಮಿಯನ್ಸ್ ಒಪ್ಪಂದ ೮೩೭
ಆಮಿರ್‌ಖಾನ್ ೮೩೭
ಆಮೂದಾರ್ಯ ೮೩೮
ಆಮೆ ೮೩೮
ಆಮೂರ, ಜೆ.ಎಸ್. ೮೩೮
ಆಮೂರ್ ನದಿ ೮೩೯
ಆಮ್ನಿಯೋಟ ೮೩೯
ಆಮ್ರಪಾಲಿ ೮೩೯
ಆಮ್ಲ ಕೈಗಾರಿಕೆ ೮೩೯
ಆಮ್ಲಗಳು ಮತ್ತು ಪ್ರತ್ಯಾಮ್ಲಗಳು ೮೪೬
ಆಮ್ಲಜನಕ ಕೊರೆ ೮೪೯
ಆಮ್ಲಾಂಕ ೮೫೨
ಆಯಾಸ ೮೫೨
ಆಯುಧಗಳು ೮೫೪
ಆಯುಧದ ಉಕ್ಕು ೮೫೭
ಆಯುರ್ವೇದ ೮೫೭
ಆಯುರ್ವೇದ ಚಿಕಿತ್ಸಾ ತತ್ತ್ವಗಳು ೮೫೯
ಆಯುರ್ವೇದದ ಮೂಲಸಿದ್ಧಾಂತಗಳು ೮೬೨
ಆಯುರ್ವೇದ ವಿಭಾಗಕ್ರಮ ಮತ್ತು ವಿಶೇಷ ಅಭ್ಯಾಸ – ಅದರ ಅಷ್ಟಾಂಗಗಳು ೮೬೨
ಆಯ್ಕೆ ೮೬೩
ಆಯ್ಕೆ ಹಕ್ಕು ೮೬೩
ಆಯ್ದಕ್ಕಿ ಮಾರಯ್ಯ ೮೬೪
ಆಯ್ಲರ್, ಲಿಯೊನಾರ್ಡ್ ೮೬೪
ಆರಂಭವಾದ ೮೬೪
ಆರಕಲ್ ೮೬೪
ಆರಣ್ಯಕ ೮೬೫
ಆರತಿ ೮೬೫
ಆರಾಧನೆ ೮೬೫
ಆರಿಗ್ನೇಷಿಯನ್ ಸಂಸ್ಕೃತಿ ೮೬೫
ಆರಿಯೋಸ್ಟೊ, ಲುಡೋವಿಕೊ ೮೬೫
ಆರಿಸ್ಟಾರ್ಕಸ್ ೮೬೬
ಆರಿಸ್ಟಿಪಸ್ ೮೬೬
ಆರುಣಿ ೮೬೬
ಆರೆಂಜ್ ನದಿ ೮೬೬
ಆರೆಂಜ್ ಫ್ರೀಸ್ಟೇಟ್ ೮೬೬
ಆರೆಂಜ್ ಮನೆತನ ೮೬೬
ಆರೈಗ ೮೬೭
ಆರೋಗ್ಯ ತಿಳಿವಳಿಕೆ ೮೬೭
ಆರೋಗ್ಯವಿಮೆ ೮೬೭
ಆರೋಗ್ಯಶಾಸ್ತ್ರ ೮೬೭
ಆರೋಗ್ಯಶಿಕ್ಷಣ ೮೬೭
ಆರೋಗ್ಯ ಸುರಕ್ಷಣಾ ಕಾಯಿದೆಗಳು ೮೬೮
ಆರೋಪ ೮೭೩
ಆರೋಮ್ಯಾಟಿಕ್ ಸಂಯುಕ್ತಗಳು ೮೭೪
ಆರೋರೂಟ್ ೮೭೫
ಆರೋಹಣ – ಅವರೋಹಣ ೮೭೬
ಆರ್ಕ್‌ಟಿಕ್ ವೃತ್ತ ೮೭೬
ಆರ್ಕ್‌ಟಿಕ್ ಸಮುದ್ರ ೮೭೭
ಆರ್ಕ್‌ಟೋಟಿಸ್ ೮೭೭
ಆರ್ಕ್‌ರೈಟ್, ಸರ್ ರಿಚರ್ಡ್ ೮೭೭
ಆರ್ಕನಿ ದ್ವೀಪಗಳು ೮೭೭
ಆರ್ಕಲೇಅಸ್ ೮೭೮
ಆರ್ಕಾಟ್ ೮೭೮
ಆರ್ಕಾಟ್ ಮುತ್ತಿಗೆ ೮೭೮
ಆರ್ಕಿಕ್ಲ್ಯಾಮಿಡಿ ೮೭೮
ಆರ್ಕಿಡ್ಡುಗಳು ೮೭೯
ಆರ್ಕಿಮಿಡೀಸ್ ೮೮೦
ಆರ್ಕಿಮಿಡೀಸನ ತತ್ತ್ವ ೮೮೧
ಆರ್ಕಿಮಿಡೀಸನ ತಿರುಪು ೮೮೧
ಆರ್ಕಿಯಾಪ್ಟೆರಿಕ್ಸ್ ೮೮೧
ಆರ್ಕಿಯೊಮ್ಯಾಗ್ನೆಟಿಸಂ ೮೮೨
ಆರ್ಕೇಂಜಲ್ ೮೮೨
ಆರ್ಗಾಂಡ್, ಜೇನ್ ರಾಬರ್ಟ್ ೮೮೨
ಆರ್ಗಾನ್ ೮೮೨
ಆರ್ಗಿರೊಡರ್ಮ ೮೮೨
ಆರ್ಗೋನಾಟ್ ೮೮೨
ಆರ್ಚ್ ಡೀಕನ್ ೮೮೩
ಆರ್ಚ್ ಬಿಷಪ್ ೮೮೩
ಆರ್ಜಿತಗುಣಗಳು ೮೮೩
ಆರ್ಜೆಂಟೀನ ೮೮೩
ಆರ್ಜೆಷ್ಕೊವ ಎಲಿಜ಼ ೮೮೫
ಆರ್ಟಾಸರ್ಕ್ಸೀಸ್ ೮೮೫
ಆರ್ಟಿಚೋಕ್ ೮೮೫
ಆರ್ಟಿಯೊಡ್ಯಾಕ್ಟೈಲ ೮೮೬
ಆರ್ಟೀಸಿಯನ್ ಬಾವಿ ೮೮೮
ಆರ್ಟೆಮಿಸ್ ೮೮೯
ಆರ್ಡ್‌ವಾರ್ಕ್ ೮೮೯
ಆರ್ಡ್‌ವಿಂಗೇಟ್ ೮೮೯
ಆರ್ಡ್‌ವುಲ್ಫ್ ೮೯೦
ಆರ್ಡುನೊ ಜೊವಾನಿ ೮೯೦
ಆರ್ಡೆನ್ ೮೯೦
ಆರ್ಡೊವಿಶಿಯನ್ ಸ್ತೋಮ ೮೯೦
ಆರ್ತೊಸಿಫೊನ್ ಸ್ಟಾಮಿನಿಯಸ್ ೮೯೧
ಆರ್ಥಾಪ್ಟೆರ ೮೯೧
ಆರ್ಥಿಕ ಅಂತಾರಾಷ್ಟ್ರೀಯತೆ ೮೯೨
ಆರ್ಥಿಕ ಅಧ್ಯಯನ ಕ್ರಮಗಳು ೮೯೩
ಆರ್ಥಿಕ ಅನಭಿವೃದ್ಧಿ ೮೯೪
ಆರ್ಥಿಕ ಉತ್ತೇಜಕಗಳು ೮೯೫
ಆರ್ಥಿಕ ಗೇಣಿ ೮೯೬
ಆರ್ಥಿಕ ತತ್ತ್ವ ಸಮೀಕ್ಷೆ ೮೯೬
ಆರ್ಥಿಕ ದಕ್ಷತೆ ೮೯೮
ಆರ್ಥಿಕ ನಿಯಮಗಳು ೮೯೮
ಆರ್ಥಿಕ ಪದ್ಧತಿಗಳು ೮೯೮
ಆರ್ಥಿಕ ಬೆಳೆವಣಿಗೆ ೮೯೯
ಆರ್ಥಿಕ ಭದ್ರತೆ ೯೦೬
ಆರ್ಥಿಕ ಯೋಜನೆಗಳು ೯೦೭
ಆರ್ಥಿಕ ರಾಷ್ಟ್ರೀಯತೆ ೯೦೯
ಆರ್ಥಿಕ ಸಂಖ್ಯಾಶಾಸ್ತ್ರ ೯೧೧
ಆರ್ಥಿಕ ಸಂಘಟನೆ ೯೧೫
ಆರ್ಥಿಕ ಸಂಪನ್ಮೂಲಗಳು ೯೧೬
ಆರ್ಥಿಕ ಸರಕುಗಳು ೯೧೭
ಆರ್ಥಿಕ ಸ್ವಾತಂತ್ರ್ಯ ೯೧೭
ಆರ್ಥೊಡಾಕ್ಸ್ ಈಸ್ಟರ್ನ್ ಚರ್ಚ್ ೯೧೮
ಆರ್ಥೊಡೈರ ೯೧೯
ಆರ್ಥೋರಾಂಬಿಕ್ ವರ್ಗ ೯೧೯
ಆರ್ದ್ರತೆ ೯೧೯
ಆರ್ದ್ರಾ ೯೨೦
ಆರ್ದ್ರೀಕರಣ ೯೨೦
ಆರ್ನಲ್ಡ್, ಥಾಮಸ್ ೯೨೦
ಆರ್ನಲ್ಡ್, ಮ್ಯಾಥ್ಯೂ ೯೨೦
ಆರ್ನಲ್ಡ್, ಸರ್ ಎಡ್ವಿನ್ ೯೨೨
ಆರ್ನೀಮ್, ಆಖಿಂ ಫಾನ್ ೯೨೨
ಆರ್ನೆ, ಆಂಟ ೯೨೨
ಆರ್ನೆಟ್, ಇ.ಎಂ. ೯೨೨
ಆರ್ಮ್‌ಸ್ಟ್ರಾಂಗ್ ಮತ್ತು ಅನುಯಾಯಿಗಳು ೯೨೨
ಆರ್ಮಡ (ಸ್ಪೇನಿನ) ೯೨೩
ಆರ್ಮಡಿಲ್ಲೊ ೯೨೪
ಆರ್ಮೇನಿಯ ೯೨೪
ಆರ್ಮೋನಿಕ ೯೨೪
ಆರ್ಯದೇವ ೯೨೫
ಆರ್ಯಪುದ್ಗಲ ೯೨೫
ಆರ್ಯಭಟ ೯೨೫
ಆರ್ಯರು ೯೨೫
ಆರ್ಯಶೂರ ೯೨೭
ಆರ್ಯಸತ್ಯ ೯೨೭
ಆರ್ಯಸಮಾಜ ೯೨೭
ಆರ್ಯಾವರ್ತ[1] ೯೨೮
ಆರ್ಯಾವರ್ತ[2] ೯೨೮
ಆರ್ಲ್ಯಾಂಡೊ ಫ್ಯೂರಿಯೋಸ ೯೨೮
ಆರ್ಲಿಂಗ್‌ಟನ್ ೯೨೮
ಆರ್ಲಿಕ್, ಪಾಲ್ ೯೨೮
ಆರ್ಲಿಯನ್ಸ್ ಡ್ಯೂಕರು ೯೨೯
ಆರ್ವೆಲ್, ಜಾರ್ಜ್ ೯೨೯
ಆರ್ಷಜ್ಞಾನ ೯೨೯
ಆರ್ಷೇಯ ಯುಗ ೯೨೯
ಆರ್ಸೊನ್ವಾಲ್, ಜಾಕ್ ಆರ್ಸೇನ್‌ದ್ ೯೩೩
ಆರ್ಸನಿಕ್ ೯೩೩

ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಶ್ವಕೋಶ

## ಸಂಪುಟ ಎರಡು

**ಆಲಂಪುರ:** ಆಂಧ್ರಪ್ರದೇಶದ ಕರ್ನೂಲು ಪಟ್ಟಣಕ್ಕೆ ಸು.13 ಕಿಮೀ ದೂರದಲ್ಲಿ ತುಂಗಭದ್ರಾನದಿಯ ಪಶ್ಚಿಮ ದಡದಲ್ಲಿದೆ. ಭಾರತದ ದೇವಾಲಯಗಳ ಉಗಮ ಮತ್ತು ವಿಕಾಸವನ್ನು ಅಧ್ಯಯನ ಮಾಡಲು ಇಲ್ಲಿನ ದೇವಾಲಯಗಳು ಬಹು ಸಹಾಯಕವಾಗಿವೆ. ಈ ದೃಷ್ಟಿಯಿಂದ ಇದು ಪಟ್ಟದಕಲ್ಲಿನಷ್ಟೇ ಗಮನಾರ್ಹವಾದುದು. ಇಲ್ಲಿ ಪಟ್ಟದಕಲ್ಲಿನ ಪಾಪನಾಥ ದೇವಾಲಯವನ್ನು ಹೋಲುವ ಅನೇಕ ದೇವಾಲಯಗಳಿವೆ. ಇವುಗಳಲ್ಲಿ ಬಾಗುಳ್ಳ ಶಿಖರ, ಆಮಲಕ, ಗೂಡು ಮುಂತಾದವನ್ನು ಕಾಣಬಹುದು. ಚೌಕನೆಯ ಆಚ್ಛಾದಿತ ಹಜಾರಗಳು, ಅಪ್ಸರಶಿಲ್ಪಗಳಿಂದ ಕೂಡಿದ ಕಂಬಗಳಲ್ಲಿ ದಕ್ಷಿಣಾಪಥದ ಗುಹಾಂತರ ದೇವಾಲಯಗಳ ಪ್ರಭಾವವನ್ನು ಕಾಣಬಹುದು. ಸು.6 ಕಿಮೀ ದೂರದಲ್ಲಿ ದ್ರಾವಿಡ ಶೈಲಿಯ ಶಿಖರಗಳನ್ನುಳ್ಳ ಅನೇಕ ದೇವಾಲಯಗಳಿವೆ. ಈ ಶಿಖರಗಳು ಹಂತಗಳಿಂದ ಕೂಡಿದ್ದು, ಮೇಲೆ ಹೋದಂತೆ ಕಿರಿದಾಗುತ್ತವೆ. ಇಲ್ಲಿನ ಶಿಲ್ಪಗಳೂ ಮನೋಹರವಾಗಿವೆ.

ಒಂದನೆಯ ದೇವಸ್ಥಾನದ ಒಟ್ಟು ನೋಟ

ಜಿಂಕೆಯ ಬೇಟೆ, ಗಾಂಧರ್ವಶಿಲ್ಪ, ಶಿವಪಾರ್ವತಿ, ಗಣೇಶ, ಬ್ರಹ್ಮ ಮುಂತಾದ ಶಿಲ್ಪಗಳು ಗಮನಾರ್ಹವಾದುವು. ಈ ದೇವಾಲಯಗಳು ಮತ್ತು ಶಿಲ್ಪಗಳು ಚಾಳುಕ್ಯ ಶೈಲಿಯಲ್ಲಿವೆ. ಇಲ್ಲಿನ ದೇವಾಲಯಗಳಲ್ಲಿ ಮುಖ್ಯವಾದುದು ಭೀಮಶಂಕರ ದೇವಾಲಯ. ಈಗಲೂ ಪೂಜೆ ನಡೆಯುತ್ತಿರುವ ಈ ದೇವಾಲಯದ ಶಿಖರ ಭದ್ರವಾಗಿದ್ದರೂ ಅದರ ಮೇಲಿನ ಕೆತ್ತನೆಯ ಅನೇಕ ಪದರ ಸುಣ್ಣಬಣ್ಣಗಳಿಂದ ಮರೆಯಾಗಿದೆ. ಇತ್ತೀಚಿನ ಕಟ್ಟಡಗಳು ಈ ಮಂದಿರದ ಸುಂದರವಾದ ವಾಸ್ತುಶೈಲಿಯನ್ನು ಮರೆಗೊಳಿಸಿವೆ. ಮತ್ತೊಂದು

ಆರನೆಯ ದೇವಸ್ಥಾನದ ಒಂದು ಕಲ್ಲುಗಂಬದ ಮೇಲಿನ ಕೆತ್ತನೆ ಕೆಲಸ

ದೇವಾಲಯವಾದ ಕುಮಾರಬ್ರಹ್ಮ ಮಂದಿರವನ್ನು ವಾನರ, ಆನೆ, ಹಂಸ ಮುಂತಾದ ಪ್ರಾಣಿಗಳ ಕೆತ್ತನೆಪಟ್ಟಿಕೆಗಳಿಂದ ಅಲಂಕೃತವಾದ ಜಗಲಿಯ ಮೇಲೆ ಕಟ್ಟಲಾಗಿದೆ. ಮುಖಮಂಟಪ ಮತ್ತು ನವರಂಗಗಳಾದ ಅನಂತರ ಇರುವ ಗರ್ಭಗೃಹ 76,660 ಚದರಗಳಿದ್ದು ಪ್ರದಕ್ಷಿಣ ಮಾರ್ಗದಿಂದ ಆವೃತವಾಗಿದೆ. ಈ ಮಂದಿರದ ಸ್ತಂಭಗಳು ಅಜಂತ ಎಲ್ಲೋರಗಳ ಸ್ತಂಭಗಳನ್ನು ಬಹುವಾಗಿ ಹೋಲುತ್ತವೆ. ಮುಖಮಂಟಪದಲ್ಲಿ ಕೆತ್ತಲಾಗಿರುವ ಪ್ರೇಮಿಗಳ ಶಿಲ್ಪಗಳು ಮಾನವಜೀವನದ ಚಿತ್ರಣಗಳಾಗಿವೆ. ಮಂದಿರದ ಒಳಭಾಗದಲ್ಲಿ ಸಪ್ತಮಾತೃಕೆಯರನ್ನು ರೂಪಿಸಿದೆ; ಗರ್ಭಗೃಹದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಮತ್ತೊಂದು ದೇವಾಲಯವಾದ ಅರ್ಕಬ್ರಹ್ಮ ಮಂದಿರದ ಸ್ತಂಭಗಳು ಗಮನಾರ್ಹವಾಗಿದ್ದು ದಕ್ಷಿಣಾಪಥದ ಗುಹಾಂತರ ದೇವಾಲಯಗಳ ಸ್ತಂಭಗಳನ್ನು ಹೋಲುತ್ತವೆ. ಈ ಗುಂಪಿನಲ್ಲಿ ಕೊನೆಯದಾದ ವೀರಬ್ರಹ್ಮಮಂದಿರದ ಹೊರಭಾಗ ಸುಂದರವಾದ ಕೆತ್ತನೆಗಳಿಂದ ತುಂಬಿದೆ. ಇವುಗಳಲ್ಲಿ ಬೇರೆ ಬೇರೆ ಭಂಗಿಗಳಲ್ಲಿರುವ ನಾಲ್ಕು ಆನೆಗಳೂ ಚಾಮರಧಾರಿಣಿ ಸ್ತ್ರೀವಿಗ್ರಹಗಳೂ ಗೂಡುಗಳೂ ತಳಭಾಗದಲ್ಲಿರುವ ಮಾನವ ಮುಖಗಳೂ ಬಹಳ ಆಕರ್ಷಣೀಯವಾಗಿದ್ದು ದ್ರಾವಿಡ ಲಕ್ಷಣಗಳನ್ನು ಬಿಂಬಿಸುತ್ತವೆ. ದ್ರಾವಿಡ ದೇಶದ ಎಲ್ಲೆಯಲ್ಲಿರುವ ಈ ದೇವಾಲಯಗಳಲ್ಲಿ ದ್ರಾವಿಡ ಶೈಲಿಯ ಲಕ್ಷಣಗಳು ಕಂಡುಬಂದರೂ ಅಲ್ಲಿನ ಶಿಖರಗಳು ಔತ್ತರೇಯ ಪ್ರಭಾವವನ್ನೂ ಒಳಭಾಗ ಪಶ್ಚಿಮ

ಭಾರತದ ಗುಹಾಂತರ ದೇವಾಲಯಗಳ ಪ್ರಭಾವವನ್ನೂ ತೋರುವುದಲ್ಲದೆ ಅಲ್ಲಿನ ಶಿಲ್ಪಗಳೂ ಅಲಂಕರಣ ಶೈಲಿಯೂ ಗುಪ್ತರಕಾಲದ ಕಲಾಶೈಲಿಯನ್ನು ಪ್ರತಿಬಿಂಬಿಸುತ್ತವೆ. ಕ್ರಮೇಣ ದಾಕ್ಷಿಣಾತ್ಯ ಶೈಲಿಯ ಪ್ರಭಾವ ಹೆಚ್ಚಾಗಿ ಮಧ್ಯಯುಗೀನ (ಚಾಳುಕ್ಯ ಶೈಲಿಯ) ವಾಸ್ತುಶಿಲ್ಪಕಲೆಯಲ್ಲಿ ದ್ರಾವಿಡ ಶೈಲಿಯ ಗೋಪುರ ಹೆಚ್ಚಾಗಿ ಬಳಕೆಗೆ ಬಂದಿದ್ದಿರಬೇಕು. (ಎ.ವಿ.ಎನ್.)

**ಆಲಂಬನ ಪ್ರತ್ಯಯ:** ಬೌದ್ಧರ ಪ್ರಕಾರ ಜ್ಞಾನ ಹುಟ್ಟುವುದಕ್ಕೆ ಕಾರಣವಾಗಿರುವ ಪ್ರತ್ಯಯದಲ್ಲಿನ ನಾಲ್ಕು ವಿಧಗಳಲ್ಲೊಂದು. ಸಮಾನಂತರ, ಸಹಕಾರಿ, ಅಧಿಪತಿ–ಇವು ಉಳಿದ ಮೂರು. ಯಾವ ಜ್ಞಾನ ಹುಟ್ಟಬೇಕಾದರೂ ಅದಕ್ಕೆ ವಿಷಯ ಬೇಕು. ವಿಷಯವಿಲ್ಲದೆ ಜ್ಞಾನ ಬರುವಂತೆಯೇ ಇಲ್ಲ. ಈ ವಿಷಯಕ್ಕೆ ಆಲಂಬನ ಪ್ರತ್ಯಯ ಎಂದು ಹೆಸರು (ಹಾಗೆ ಇದಕ್ಕೆ ಆಧಾರವಾಗಿರುವ ಕ್ಷಣಿಕಜ್ಞಾನಪರಂಪರೆ ಸಮಾನಂತರಪ್ರತ್ಯಯವೆನಿಸುವುದು. ಬೆಳಕು ಮುಂತಾದುವು ಸಹಕಾರಿಪ್ರತ್ಯಯಗಳು. ಚಕ್ಷುರಾದಿ ಇಂದ್ರಿಯಗಳು ಅಧಿಪತಿ ಪ್ರತ್ಯಯಗಳು). ಜ್ಞಾನ ಯಾವುದನ್ನು ಅವಲಂಬಿಸಿ ಹುಟ್ಟುತ್ತದೆಯೋ ಅದೇ ಆಲಂಬನ (ಸರ್ವದರ್ಶನಸಂಗ್ರಹ).

ಇದರ ಸತ್ಯಾಸತ್ಯತೆಯನ್ನು ನಿಷ್ಕರ್ಷಿಸುವುದಕ್ಕಾಗಿಯೇ ದಿಙ್ನಾಗ ಆಲಂಬನ ಪರೀಕ್ಷಾ ಎಂಬ ಪ್ರೌಢವಾದ ಚಿಕ್ಕ ಗ್ರಂಥವನ್ನು ಬರೆದಿದ್ದಾನೆ. (ಕೆ.ಎಸ್.ವಿ.)

**ಆಲಂಬರ್ಟ್, ಜೀನ್ ಲೆ ರಾಂಡ್ ದ:** 1717–83. ಫ್ರಾನ್ಸಿನ ಗಣಿತಶಾಸ್ತ್ರಜ್ಞ. ಶ್ರೀಮಂತನೋರ್ವನ ಅನೌರಸಪುತ್ರನಾಗಿ ಜನಿಸಿದ ಈ ಶಿಶುವನ್ನು ಸೈಂಟ್ ಜಿನ್ ಲೆ ರಾನ್ ಇಗರ್ಜಿಯ ಆವರಣದಲ್ಲಿ ತಾಯಿ ತೊರೆದಿದ್ದಳು. ಇಗರ್ಜಿಯ ಹೆಸರು ಉಪನಾಮವಾಗಿ ಇವನಿಗೆ ಬಂದದ್ದು ಈ ಕಾರಣದಿಂದ. ಅನಾಥ ಬಾಲಕನನ್ನು ಸಂರಕ್ಷಿಸಿ ಪೋಷಿಸಿ ಬೆಳೆಸಿದವರು ಬಡ ಗಾಜುಗಾರ ದಂಪತಿಗಳು. ಆ್ಯಲಾನ್ ಬೇರ್‌ನ ಶ್ರೀಮಂತ ತಂದೆ ಗುಪ್ತವಾಗಿ ಈ ದಂಪತಿಗಳಿಗೆ ಧನಸಹಾಯ ಮಾಡುತ್ತಿದ್ದ. ಮುಂದೆ ಸುಪ್ರಸಿದ್ಧ ವಿದ್ವಾಂಸನೆಂದು ಜನತೆ ಹೊಗಳಿದಾಗ ಆ್ಯಲಾನ್ ಬೇರ್‌ನ ತಾಯಿ ತನ್ನ ಹಕ್ಕು ಸ್ಥಾಪಿಸ ಹೊರಟಳು. ಆದರೆ ಇವನು ನಿಷ್ಠುರವಾಗಿ ಆಕೆಯನ್ನು ತಿರಸ್ಕರಿಸಿ "ಗಾಜುಗಾರನ ಹೆಂಡತಿ ನನ್ನ ತಾಯಿ" ಎಂದು ಹೆಮ್ಮೆಯಿಂದ ಹೇಳಿದ. 1741ರಲ್ಲಿ ಇವನನ್ನು ಅಕಾಡೆಮಿ ಆಫ್ ಸೈನ್ಸಸ್‌ಗೆ ಸೇರಿಸಿಕೊಂಡರು. ಇವನು ಕೆಲಸಮಾಡಿದ ಕ್ಷೇತ್ರಗಳು – ಚಲನಶಾಸ್ತ್ರ, ಆಂಶಿಕ ವ್ಯತ್ಯಸ್ತಗಳಿಗೆ ಸಂಬಂಧಿಸಿದ ಕಲನಶಾಸ್ತ್ರ, ಗುರುತ್ವಾಕರ್ಷಣ ಬಲ, ವಿಷುವದ್ಬಿಂದುಗಳಿಗೆ ಸಂಬಂಧಿಸಿದಂತೆ ಅಯನಾಂಶ, ಅಕ್ಷಕಂಪ ಇತ್ಯಾದಿ. ಚಲನಶಾಸ್ತ್ರದಲ್ಲಿ ಇದನ್ನು ಆ್ಯಲಾನ್ ಬೇರ್‌ನ ತತ್ತ್ವ ಎಂಬ ಹೊಸ ಆವಿಷ್ಕಾರ ನೀಡಿ ಸಮಸ್ಯೆಗಳ ಅರ್ಥ ಮತ್ತು ಬಿಡಿಸಿಕೆಗೆ ಹೊಸದೃಷ್ಟಿ ನೀಡಿದ್ದಾನೆ. ಸಾಹಿತ್ಯ, ಚರಿತ್ರೆ, ತತ್ತ್ವಶಾಸ್ತ್ರ ಇವೆಲ್ಲವೂ ಇವನ ಆಸಕ್ತಿ ಕ್ಷೇತ್ರಗಳು. ಡೀಡ್ರೋ ಬರೆದ ವಿಶ್ವಕೋಶಕ್ಕೆ ಇವನ ಸಹಾಯ ವಿಶೇಷವಾಗಿತ್ತು. ಅದಕ್ಕೊಂದು ಮುನ್ನುಡಿಯನ್ನು ಬರೆದ. ಎರಡನೆಯ ಫ್ರೆಡರಿಕ್ ಚಕ್ರವರ್ತಿಯ (ಬರ್ಲಿನ್) ಮತ್ತು ಎರಡನೆಯ ಕ್ಯಾಥರೀನ್ ಮಹಾರಾಣಿಯ (ಸೇಂಟ್ ಪೀಟರ್ಸ್‌ಬರ್ಗ್) ಗೌರವಾಹ್ವಾನಗಳನ್ನು ಈ ಪ್ರತಿಷ್ಠಾವಂತ ತಿರಸ್ಕರಿಸಿದ. *

**ಆಲಂಬರ್ಟ್‌ನ (ಆ್ಯಲಾನ್‌ಬೇರ್‌ನ) ತತ್ತ್ವ :** ಒಂದು ಚಲನವ್ಯವಸ್ಥೆಯಲ್ಲಿ (ಮೂವಿಂಗ್ ಸಿಸ್ಟಂ) ವಿಲೋಮಗೊಳಿಸಿದ ಕಾರಕಬಲಗಳೂ (ರಿವರ್ಸ್ಡ್ ಇಫೆಕ್ಟಿವ್ ಫೋರ್ಸಸ್) ಬಾಹ್ಯಬಲಗಳೂ (ಎಕ್ಸ್‌ಟರ್ನಲ್ ಫೋರ್ಸಸ್) ಸಮಸ್ಥಿತಿಯಲ್ಲಿವೆ ಎಂಬ ನಿರೂಪಣೆ : ಆ್ಯಲಾನ್‌ಬೇರ್ ಇದನ್ನು ಮೊದಲು ಆವಿಷ್ಕರಿಸಿದುದರಿಂದ ಅವನ ಹೆಸರಿನಿಂದ ಇದು ಪ್ರಸಿದ್ಧವಾಗಿದೆ (d'Alembert's principle, ದ ಲಾಂಬರ್ಟನ ತತ್ತ್ವ). ಚಲಿಸುತ್ತಿರುವ ಒಂದು ದೃಢವಸ್ತು Aಯ ಮೇಲೆ ಗಣಿತೀಯ ಸಮೀಕರಣಗಳ ಪ್ರಕಾರ ಪ್ರಯುಕ್ತವಾಗುವ ಬಲಗಳು ಮೂರು ಬಗೆಯವು–ಕಾರಕಬಲಗಳು, ಬಾಹ್ಯಬಲಗಳು ಮತ್ತು ಅಂತರ್ಬಲಗಳು. ದೃಢವಸ್ತು Aಯ ಒಂದು ಕಣ Pಯ ಜಡತ್ವ $m$ ಆಗಿರಲಿ. ಸ್ಥಿರ ನಿರ್ದೇಶಕ ವ್ಯವಸ್ಥೆಯನ್ನು ಕುರಿತು ಇದರ ನಿರ್ದೇಶಗಳು $(x,y,z)$ ಎಂದಿರಲಿ. ಆಗ $m\ddot{x}, m\ddot{y}, m\ddot{z}$ ಆ ಕಣದ ಮೇಲೆ ಪ್ರಯುಕ್ತವಾಗುವ ಮತ್ತು ಕ್ರಮವಾಗಿ x, y, z ಅಕ್ಷಗಳಿಗೆ ಸಮಾನಾಂತರವಾಗಿರುವ ಕಾರಕಬಲಗಳು. ಅದೇ ಕಣದ ಮೇಲಿನ ಬಾಹ್ಯಬಲಗಳ ಘಟಕಗಳು X,Y.Z ಮತ್ತು ಅಂತರ್ಬಲಗಳ ಘಟಕಗಳು $X^I, Y^I, Z^I$ ಆಗಿದ್ದರೆ ಚಲನಶಾಸ್ತ್ರದ ನಿಯಮದ ಪ್ರಕಾರ

$$m\ddot{x} = X + X'$$
$$m\ddot{y} = Y + Y'$$
$$m\ddot{z} = Z + Z'$$

Pಯಂಥ ಅಸಂಖ್ಯಾತ ಕಣಗಳ ಮೊತ್ತವಾದ ದೃಢವಸ್ತು Aಯನ್ನು ಪರಿಶೀಲಿಸಿದಾಗ

$$\Sigma m\ddot{x} = \Sigma(X + X') = \Sigma X + \Sigma X'$$

(ಇತ್ಯಾದಿ) ದೊರೆಯುತ್ತವೆ. ವಸ್ತು ದೃಢವಾಗಿರುವುದರಿಂದ ಆಯಾ ದಿಶೆಯ ಅಂತರ್ಬಲಗಳು ಮೊತ್ತವಾಗಿ ಸಮತೋಲದಲ್ಲಿವೆ. ಆದ್ದರಿಂದ

$$\Sigma X' = \Sigma Y' = \Sigma Z' = 0$$
$$\therefore \Sigma m\ddot{x} = \Sigma X$$

ಅಥವಾ

$$\Sigma X - \Sigma m\ddot{x} = 0, \Sigma Y - \Sigma m\ddot{y} = 0, \quad \Sigma Z - \Sigma m\ddot{z} = 0$$

ಈ ಮೂರು ಸಮೀಕರಣಗಳ ವಾಕ್ಯರೂಪ ಮೇಲೆ ಬರೆದಿರುವ ಆ್ಯಲಾನ್‌ಬೇರ್‌ನ ತತ್ತ್ವ.

ಕೇವಲ ಸ್ವತಸ್ಸಿದ್ಧವೆಂದು ಕಾಣುವುದಾದರೂ ಈ ತತ್ತ್ವ ಬಲು ಮಹತ್ತ್ವದ್ದು. ದೃಢವಸ್ತುಗಳ ಇಡೀ ಚಲನಶಾಸ್ತ್ರ ಇದನ್ನು ಆಧರಿಸಿದೆ. ಇದು ವಸ್ತುವಿನ ಚಲನೆಯ ಸಮೀಕರಣಗಳನ್ನು ಸ್ಥಿತಿಶಾಸ್ತ್ರಕ್ಕೆ (ಸ್ಟ್ಯಾಟಿಕ್ಸ್) ಪರಿವರ್ತಿಸಿ, ಸಮೀಕರಣಗಳನ್ನು ಬರೆಯಲು ಅವಕಾಶ ಉಂಟುಮಾಡಿಕೊಡುತ್ತದೆ. (x, y, z) ಬಿಂದುವಿನಲ್ಲಿ ಅಕ್ಷಗಳಿಗೆ ಸಮಾನಾಂತರವಾದ ಬಾಹ್ಯಬಲಗಳು $t$ ಕಾಲಕ್ಕೆ ಸರಿಯಾಗಿ X, Y, Z ಆಗಿರಲಿ. ಆದ್ದರಿಂದ ಪ್ರತಿಬಿಂದುವಿನಲ್ಲಿಯೂ $X - m\ddot{x}, \quad Y - m\ddot{y}, \quad Z - m\ddot{z}$ ಬಲಗಳ ಮೊತ್ತ ನಿಶ್ಚಲತೆಯನ್ನು ಕೊಡುತ್ತದೆ. ಆದ್ದರಿಂದ ಸ್ಥಿತಿಶಾಸ್ತ್ರದ ಸಮೀಕರಣಗಳಿಗನುಸಾರವಾಗಿ

$$\Sigma(X - m\ddot{x}) = 0, \quad \Sigma(Y - m\ddot{y}) = 0, \quad \Sigma(Z - m\ddot{z}) = 0$$
$$\Sigma y(Z - m\ddot{z}) - z(Y - m\ddot{y}) = 0$$
$$\Sigma z(X - m\ddot{x}) - x(Z - m\ddot{z}) = 0$$
$$\Sigma x(Y - m\ddot{y}) - y(X - m\ddot{x}) = 0$$

ಅಥವಾ

$$\sum m\ddot{x} = \sum X$$
$$\sum m\ddot{y} = \sum Y$$
$$\sum m\ddot{z} = \sum Z$$
$$\sum m(y\ddot{z} - z\ddot{y}) = \sum(yZ - zY)$$
$$\sum m(z\ddot{x} - x\ddot{z}) = \sum(zX - xZ)$$
$$\sum m(x\ddot{y} - y\ddot{x}) = \sum(xY - yX)$$

ದತ್ತಬಲಗಳಿಗನುಸಾರವಾಗಿ ಚಲಿಸುವ ದೃಢವಸ್ತುವಿನ ಚಲನೆ ಈ ಸಮೀಕರಣಗಳಿಗನುಸಾರವಾಗಿರುತ್ತದೆ. ಇದರ ಪರಿಣಾಮವಾಗಿ ಬಲುಮುಖ್ಯವಾದ ಈ ಕೆಳಗಿನ ಪ್ರಮೇಯಗಳನ್ನು ಸಾಧಿಸಬಹುದು. 1. ದೃಢವಸ್ತುವಿನ ಚಲನೆಯನ್ನು ಸರಳಚಲನೆ (ಮೋಷನ್ ಆಫ್ ಟ್ರಾನ್ಸ್‌ಲೇಷನ್) ಮತ್ತು ಆವರ್ತನ ಚಲನೆ (ಮೋಷನ್ ಆಫ್ ರೊಟೇಷನ್) ಎಂದು ಇಬ್ಭಾಗಿಸಬಹುದು. ಸರಳಚಲನೆ ವಸ್ತುವಿನ ಗುರುತ್ವಕೇಂದ್ರದ (ಸೆಂಟರ್ ಆಫ್ ಗ್ರ್ಯಾವಿಟಿ) ಚಲನೆ. ವಸ್ತುವಿನ ಪೂರ್ಣ ಜಡತ್ವವನ್ನು ಕೇಂದ್ರೀಕರಿಸಿ ಗುರುತ್ವಕೇಂದ್ರದಲ್ಲಿಟ್ಟು ಬಾಹ್ಯಬಲಗಳೆಲ್ಲವೂ ಅಲ್ಲಿಯೇ ಪ್ರಯುಕ್ತವಾದರೆ ಆ ಬಿಂದುವಿಗೆ ಉಂಟಾಗುವ ಚಲನೆ ಗುರುತ್ವಕೇಂದ್ರದ ಚಲನೆ. ಇದು ವಸ್ತುವಿನ ಸರಳ ಚಲನೆಯನ್ನು ನೀಡುತ್ತದೆ. ಗುರುತ್ವಕೇಂದ್ರವನ್ನು ಸ್ಥಾಯಿಯಾಗಿಟ್ಟು ಬಾಹ್ಯಬಲಗಳು ವಸ್ತುವಿಗೆ ಅದರ ಸುತ್ತಲೂ ಉಂಟುಮಾಡುವ ಚಲನೆ ಆವರ್ತ ಚಲನೆ. 2. ಒಂದು ರೇಖೆಯ ದಿಕ್ಕಿನಲ್ಲಿ ಬಾಹ್ಯಬಲಗಳ ಮೊತ್ತ ಶೂನ್ಯವಾದಲ್ಲಿ ಆ ದಿಕ್ಕಿನಲ್ಲಿ ವಸ್ತುವಿನ ಒಟ್ಟು ಜಡವೇಗ (ಮೊಮೆಂಟಮ್) ಸ್ಥಿರ. ಈ ಪ್ರಮೇಯವನ್ನು ರೇಖಾಜಡವೇಗದ ಸಂರಕ್ಷಣೆ (ಕನ್‌ಸರ್ವೇಷನ್ ಆಫ್ ಲೀನಿಯರ್ ಮೊಮೆಂಟಂ) ಎನ್ನುತ್ತಾರೆ. 3. ಒಂದು ರೇಖೆಯ ಸುತ್ತ ಬಾಹ್ಯ ಬಲಗಳ ಭ್ರಮಣಾಂಕಗಳ (ಮೊಮೆಂಟ್) ಮೊತ್ತ ಶೂನ್ಯವಾದರೆ, ವಸ್ತುವಿನ ಜಡವೇಗದ ಭ್ರಮಣಾಂಕ (ಮೊಮೆಂಟ್ ಆಫ್ ಮೊಮೆಂಟಂ) ಸ್ಥಿರವಾಗಿರುತ್ತದೆ. ಈ ಪ್ರಮೇಯವನ್ನು ಕೋನೀಯ ಜಡವೇಗದ ಸಂರಕ್ಷಣೆ (ಕನ್‌ಸರ್ವೇಷನ್ ಆಫ್ ಆಂಗ್ಯುಲರ್ ಮೊಮೆಂಟಂ) ಎನ್ನುತ್ತಾರೆ. (ಕೆ.ಎಸ್.ಎ)

**ಆಲ, ಅರಳಿ ಜಾತಿಯ ಮರಗಳು:** ಮೊರೇಸೀ ಕುಟುಂಬಕ್ಕೆ ಸೇರಿದ ಫೈಕಸ್ ಹೆಸರಿನ ಈ ಸಸ್ಯ ಜಾತಿಯ ಕೆಲವು ಮುಖ್ಯ ಸಾಮಾನ್ಯ ಲಕ್ಷಣಗಳು: ಕಾಂಡದೊಳಗೆ ಹಾಲಿನಂಥ ಜಿಗುಟಾದ ರಸ. ಬೊಡ್ಡೆಗೆ ಕಚ್ಚು ಹಾಕಿದರೆ ರಸ ತೊಟ್ಟಿಕ್ಕುತ್ತದೆ. ಹೂಗಳು ಬಲು ಸಣ್ಣ (ರೂಢಿ ಮಾತಿನ ಪ್ರಕಾರ ಆಲದ ಹೂ ಕಂಡವರಿಲ್ಲ), ಗಂಡು ಹೆಣ್ಣು ಹೂಗಳು ಕೋಶಗಳ ಒಳಮೈ ತುಂಬ ಹರಡಿರುತ್ತವೆ. ವರ್ಷದಲ್ಲಿ ಒಂದು ಅಥವಾ ಎರಡು, ಹೆಚ್ಚೆಂದರೆ ಮೂರು ಸಲ ಹೂಬಿಡುತ್ತವೆ. ಪರಾಗಸ್ಪರ್ಶಕ್ರಿಯೆ ಒಂದು ವಿಶಿಷ್ಟವಾದ ಕೀಟದ ನೆರವಿನಿಂದ ಆಗುವುದು. ಕೀಟದ ಜೀವನಾವರ್ತ ಹೂವಿನ ಆವರ್ತಕ್ಕೆ ಹೊಂದಿರುವುದೊಂದು ನಿಸರ್ಗದ ಚೋದ್ಯ. ಬೀಜಪ್ರಸಾರ ಪಕ್ಷಿ ಮತ್ತು ಪ್ರಾಣಿಗಳಿಂದ ನಡೆಯುತ್ತದೆ. ಪಕ್ಷಿಗಳು, ತೊಗಲುಬಾವಲಿ, ಅಳಿಲು ಮುಂತಾದುವು ಹಣ್ಣುಗಳನ್ನು ತಿನ್ನುತ್ತವೆ; ಮುಂದೆ ಅವುಗಳ ಹಿಕ್ಕೆಯಲ್ಲಿ ಬೀಜ ಹೊರಬೀಳುವುದು. ಈ ಕಾರಣದಿಂದ ಆಲ, ಅರಳಿ, ಬಸರಿ ಮುಂತಾದ ಮರಗಳನ್ನು ಹಕ್ಕಿಗಳು ವಾಸಿಸುವ ಅಥವಾ ವಿಶೇಷವಾಗಿ ಸಂಚರಿಸುವ ಸ್ಥಳಗಳಾದ ಬಾವಿಕಟ್ಟೆ, ಜೀರ್ಣವಾದ ಗುಡಿ, ಗೋಪುರ, ಕೋಟೆ ಕೊತ್ತಳಗಳಲ್ಲಿ

ಬೆಳೆಯುವುದನ್ನು ನೋಡುತ್ತೇವೆ. ಭಾರತದಲ್ಲಿ 65 ಬೇರೆ ಬೇರೆ ಪ್ರಕಾರದ ಈ ಜಾತಿಯ ಮರಗಳಿವೆ. ಕೆಲವು ಹೆಮ್ಮರಗಳಾಗುತ್ತವೆ, ಮತ್ತೆ ಕೆಲವು ಮರಗಳ ಮೇಲೆ ಬಳ್ಳಿಗಳಂತೆ ಹಬ್ಬುತ್ತವೆ.

ಆಲ (ಫೈಕಸ್ ಬೆಂಗಾಲೆನ್ಸಿಸ್), ಅರಳಿಮರ ಅಥವಾ ಅಶ್ವತ್ಥ ವೃಕ್ಷ (ಫೈಕಸ್ ರಿಲಿಜಿಯೋಸ), ಅಂಜೂರ ಅಥವಾ ಸೀಮೆ ಅತ್ತಿ (ಫೈಕಸ್ ಕ್ಯಾರಿಕಾ), ಅತ್ತಿಮರ (ಫೈಕಸ್ ಗ್ಲಾಮರೇಟ), ಗೊಡ್ಡುಮಿಟ್ಟಲ ಅಥವಾ ತಜ್ಜಿಗೋಳಿ (ಫೈಕಸ್ ಗಿಬ್ಬೋಸ), ಕಾಡರಳಿ, ಬೆಟ್ಟರಳಿ (ಫೈಕಸ್ ರಂಫೈ), ಬಸರೀಮರ, ಕರಿಬಸರಿ (ಫೈಕಸ್ ಲ್ಯಾಕರ್), ಗರ್ಗತ್ತಿ (ಫೈಕಸ್ ಆಸ್ಪರಿಮ), ಪಿನಿವಾಲ, ಪಿಲ್ಲಾಳ (ಫೈಕಸ್ ರೆಟ್ಯೂಸ), ಕಲ್ಲರಸೆ (ಫೈಕಸ್ ಆರ್ನೋಟಿಯಾನ), ರಬ್ಬರಿನ ಮರ (ಫೈಕಸ್ ಇಲಾಸ್ಟಿಕ) – ಇವು ಈ ಜಾತಿಗೆ ಸೇರಿದ ಹೆಚ್ಚು ಪರಿಚಿತವಾದ ಮರಗಳು.

**ಅಂಜೂರದ ಗಿಡ:** 15'–30' ಎತ್ತರ ಬೆಳೆಯುವ ಗಿಡ. ಮೂಲತಃ ಭಾರತದ ಸಸ್ಯವಲ್ಲದಿದ್ದರೂ ಈಗ ಇಲ್ಲಿ ಎಷ್ಟೋ ಕಡೆ ಇದನ್ನು ಹಣ್ಣಿಗಾಗಿ ಬೆಳೆಸುತ್ತಾರೆ. ಆರ್ದ್ರ ಮತ್ತು ಉಷ್ಣವಾದ ಹವೆ, ಕಪ್ಪುಭೂಮಿ ಮತ್ತು ನೀರಿನ ಸೌಕರ್ಯವಿದ್ದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಅರ್ಧ ಅಂಗುಲ ದಪ್ಪವಾದ ಕಾಂಡದಿಂದ ಅಂಟನ್ನು ತಯಾರಿಸುವರು. ಹೊಸ ಗಿಡಗಳನ್ನು ಗೂಟನೆಟ್ಟು ಬೆಳೆಸುವುದೂ ಇದೆ. ಅಂಜೂರದ ಮರ ಜುಲೈ–ಅಕ್ಟೋಬರ್ ಮತ್ತು ಜನವರಿ–ಮೇ ತಿಂಗಳು ಹೀಗೆ ವರ್ಷದಲ್ಲಿ ಎರಡು ಸಲ ಹಣ್ಣು ಬಿಡುವುದು. ಮೈಸೂರುರಾಜ್ಯದಲ್ಲಿ ಒಂದು ಗಿಡಕ್ಕೆ ಸು. 180–300ರವರೆಗೆ ಹಣ್ಣುಗಳಾಗುತ್ತವೆ. ಗಿಡದ ಮೇಲೆಯೇ ಉಳಿದಿರುವ ಹಣ್ಣುಗಳನ್ನು ಕೊಯ್ಯುತ್ತಾರೆ; ಕೆಳಗೆ ಬಿದ್ದವನ್ನು ಸಂಗ್ರಹಿಸುತ್ತಾರೆ. ಬಿಸಿಲಿನಲ್ಲಿ ಒಣಗಿಸಿದ ಅಂಜೂರಗಳು ಮಾರಾಟಕ್ಕೆ ಸಿದ್ಧವಾಗುತ್ತವೆ. ಈ ಹಣ್ಣಿನಿಂದ ಜಾಮ್, ಮಾದಕಪೇಯ ಮುಂತಾದುವನ್ನು ತಯಾರಿಸುವರು. ಇದೊಂದು ಪೌಷ್ಟಿಕವಾದ ಹಣ್ಣು. ಇದರಲ್ಲಿ ಎ, ಬಿ, ಸಿ ಮತ್ತು ಡಿ ಅನ್ನಾಂಗಗಳು ಇವೆ. ಮಾಂಸವನ್ನು ಬೇಗ ಕುದಿಸಲಿಕ್ಕೆ ಇದರ ಕಾಯಿಯನ್ನು ಸೇರಿಸುವರು. ಇದೊಂದು ಔಷಧೀಯ ವಸ್ತುವೂ ಹೌದು (**ನೋಡಿ– ಅಂಜೂರ**).

**ಅತ್ತಿಮರ:** ಹೊಳೆ ಹಳ್ಳಗಳ ದಂಡೆಯ ಮೇಲೆ ಸಾಧಾರಣ ಎತ್ತರದಲ್ಲಿ ಬೆಳೆಯುತ್ತದೆ. ಹಳ್ಳಿಗಳ ಸುತ್ತಮುತ್ತಲೂ ಕಾಣಬಹುದು. ದಪ್ಪ ಟೊಂಗೆ ಮತ್ತು ಬೊಡ್ಡೆಗಳ ಮೇಲೆ ಮಾರ್ಚ್, ಜುಲೈ ಅವಧಿಯಲ್ಲಿ ನೂರಾರು ಹಣ್ಣುಗಳಾಗುತ್ತವೆ. ಕುರಿ, ಆಡು, ದನಕರುಗಳಿಗೆ ಇದರ ಎಲೆಯನ್ನು ಮೇವಾಗಿ ತಿನ್ನಿಸುತ್ತಾರೆ. ಹರವಾಗಿ ಬೆಳೆಯುವುದರಿಂದ ಇದು ನೆರಳಿನ ಗಿಡ. ಇದರ ಕಟ್ಟಿಗೆಯಿಂದ ಪೆಟ್ಟಿಗೆ, ಹಲಗೆ, ಚಕ್ಕಡಿಗಳ ಹಲ್ಲು ಇತ್ಯಾದಿ ಮರಮುಟ್ಟುಗಳನ್ನು ತಯಾರಿಸುತ್ತಾರೆ. ಅರಗಿನ ಹುಳುವನ್ನು ಕೂಡ ಈ ಮರದ ಎಲೆಗಳ ಮೇಲೆ ಸಾಕುವರು (**ನೋಡಿ – ಅತ್ತಿಮರ**).

**ಅರಳಿಮರ:** ಇದೊಂದು ಹೆಮ್ಮರ. ಹಿಂದೂ ಧರ್ಮೀಯರು ಇದನ್ನು ಪವಿತ್ರವಾದ ಮರವೆಂದು ಪೂಜೆ ಮಾಡುವರು. ನೆರಳಿಗಾಗಿಯೂ ಬೆಳೆಸಬಹುದು. ಇದರ ಕಟ್ಟಿಗೆಯನ್ನು ಹೋಮ ಹವನಾದಿ ಧಾರ್ಮಿಕ ವ್ರತಾಚರಣೆಗಳಲ್ಲಿ ಉಪಯೋಗಿಸುತ್ತಾರೆ. ಇದರ ತೊಗಟೆಯ ಕಷಾಯವನ್ನು ಕಜ್ಜಿ ಹುಣ್ಣುಗಳಿಗೆ ಔಷಧವಾಗಿ ಬಳಸುವುದುಂಟು. ಅರಳಿಮರಗಳನ್ನು ತೋಟಗಳಲ್ಲೂ ದೇವಸ್ಥಾನಗಳ ಪರಿಸರದಲ್ಲೂ ಹೆದ್ದಾರಿಯ ಇಬ್ಬದಿಗಳಲ್ಲೂ ನೆರಳಿಗಾಗಿ ಬೆಳೆಸುತ್ತಾರೆ. ಕೆಲವು ಜಾತಿಯ ಅರಗಿನ ಹುಳುಗಳನ್ನು ಬೆಳೆಸುವುದಕ್ಕೂ ಇವುಗಳ ಉಪಯೋಗವಿದೆ. ಎಲೆಯನ್ನು ದನಕರು, ಆಡು, ಕುರಿಗಳಿಗೆ ಮೇವಾಗಿ ಬಳಸುತ್ತಾರೆ. ಇವುಗಳ ಹಾಲಿನಲ್ಲಿರುವ ಜಿಗುಟಾದ ದ್ರವದಿಂದ ರಬ್ಬರನ್ನು ಮಾಡಬಹುದು. ಅರಳಿಮರವನ್ನು ಸೌದೆಯಾಗಿ ಉಪಯೋಗಿಸುತ್ತಾರೆ. ಕೆಲವು ಜಾತಿಯ ಮರಗಳ ಎಲೆ, ಬೇರು ಮತ್ತು ತೊಗಟೆಯ ಕಷಾಯವನ್ನು ಭೇದಿ, ವಾಂತಿ, ಹಲ್ಲುನೋವು, ದಮ್ಮು ಇತ್ಯಾದಿ ರೋಗಗಳಿಗೆ ಉಪಯೋಗಿಸುತ್ತಾರೆ (**ನೋಡಿ– ಅರಳಿಮರ**).

**ಆಲದ ಮರ:** ಇದು ಸು. 100' ಎತ್ತರ ಬೆಳೆದು ಒಳ್ಳೆ ಹರವಾಗಿ ಹಬ್ಬುತ್ತದೆ. ಮರದ ಟೊಂಗೆಗಳಿಂದ ಜೋತುಬಿದ್ದ ಬಿಳಲುಗಳು ಅಥವಾ ಜಡೆ ಬೇರುಗಳು ಟೊಂಗೆಗಳಿಗೆ ಕಂಬಗಳಂತೆ ಆಧಾರ ಕೊಟ್ಟು ಅದರ ಹಬ್ಬುವಿಕೆಗೆ ಸಹಾಯ ಮಾಡುತ್ತವೆ. ಈ ಮರಗಳನ್ನು ದಾರಿಯುದ್ದಕ್ಕೂ ನೆರಳಿಗಾಗಿ ಬಳಸುತ್ತಾರೆ. ಇದರ ಎಲೆ ಆಡು, ಕುರಿ, ದನಕರುಗಳಿಗೆ ಒಳ್ಳೆಯ ಆಹಾರ. ಕಾಗದ ತಯಾರಿಕೆಗೆ ಬೇಕಾಗುವ ಪಲ್ಪನ್ನು ತಯಾರಿಸಲು ಇದರ ಕಟ್ಟಿಗೆಯನ್ನು ಬಳಸುವರು. ಈ ಮರ ಸೌದೆಗೆ ಉಪಯೋಗವಾಗುತ್ತದೆ. ಆಲದ ಮರದ ಹಾಲನ್ನು ಹಲ್ಲುನೋವಿನ ಶಮನಕ್ಕೂ ಗಂಟುಕಟ್ಟಿದ ಹುಣ್ಣುಗಳಿಗೆ, ಬೆಚ್ಚಾರದಂತೆ ಬಾವುಬಂದ ಭಾಗಕ್ಕೆ ಲೇಪವಾಗಿಯೂ ಉಪಯೋಗಿಸುವುದುಂಟು. ಚಿಗುರಿನ ಕಷಾಯವನ್ನು ಭೇದಿಗೆ ಔಷಧವಾಗಿ ಕೊಡುತ್ತಾರೆ. ಹಾಲನ್ನು ಸಂಧಿವಾತಕ್ಕೆ ಉಪಯೋಗಿಸುತ್ತಾರೆ. (**ನೋಡಿ– ಆಲದಮರ**)

**ಬಸರೀಮರ:** ಹೆಚ್ಚಾಗಿ ರಸ್ತೆಗಳ ಇಬ್ಬದಿಗಳಲ್ಲಿ ನೆರಳಿಗಾಗಿ ಬೆಳೆಸುತ್ತಾರೆ. ಇದರ ಎಲೆಗಳನ್ನು ಕುರಿ, ಆಡು, ದನಕರುಗಳಿಗೆ ಮೇಯಿಸುತ್ತಾರೆ; ತಿಪ್ಪೆಯಲ್ಲಿ ಸಂಗ್ರಹಿಸಿ ಗೊಬ್ಬರವನ್ನೂ ಮಾಡುವುದುಂಟು.

**ರಬ್ಬರಿನ ಮರ:** ಮಳೆ ಹೆಚ್ಚಾಗಿದ್ದು ಆರ್ದ್ರತೆಯಿಂದ ಕೂಡಿದ ಉಷ್ಣವಾದ ಹವೆಯಲ್ಲಿ ಬೆಳೆಯುವ ಹೆಮ್ಮರ. ಅಸ್ಸಾಂ, ಕೇರಳ ಮತ್ತು ಕರ್ನಾಟಕರಾಜ್ಯಗಳಲ್ಲಿ ಇದರ ತೋಟಗಳಿವೆ. 20 ವರ್ಷಕ್ಕೂ ಮಿಕ್ಕಿ ಬೆಳೆದ ಬೊಡ್ಡೆಗಳ ಮೇಲೆ V ಆಕೃತಿಯ ಕಚ್ಚು ಹಾಕಿ ಒಸರುವ ಹಾಲನ್ನು ನೆಲದಮೇಲೆ ಹರವಿದ ಚಾಪೆಗಳ ಮೇಲೆ ಕೂಡಿಸಿ ಹದಮಾಡಿದ ರಬ್ಬರನ್ನು ಉತ್ಪಾದಿಸುತ್ತಾರೆ. ಸೌದೆಯಾಗಿಯೂ ಈ ಮರ ಉಪಯೋಗವಿದೆ (**ನೋಡಿ– ರಬ್ಬರ್–ಮರ**).

**ಆಲತಿಗಿರಿ:** ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಒಂದು ಪ್ರೇಕ್ಷಣೀಯ ಸ್ಥಳ. ನಾಗಮಂಗಲದ ಉತ್ತರಕ್ಕೆ 10 ಕಿಮೀ ದೂರದಲ್ಲಿದೆ. ಮೈಸೂರು–ತುಮಕೂರು ರಸ್ತೆಯ ಪೂರ್ವಕ್ಕೆ ತೋರುವ ಗಿರಿಶ್ರೇಣಿಯಲ್ಲಿ ಆಲತಿಗಿರಿಯ ಉನ್ನತ ಶಿಖರ ಗೋಚರಿಸುತ್ತದೆ. ಇಲ್ಲಿನ ಶ್ರೀಮಲ್ಲೇಶ್ವರಗುಹಾಲಯ ಹೆಚ್ಚು ಗಮನಾರ್ಹ. ಪ್ರಕೃತಿ ಸೌಂದರ್ಯಕ್ಕೂ ಈ ನೆಲೆ ಹೆಸರಾದುದು. ಆಲತಿಗಿರಿಶ್ರೇಣಿ ದಕ್ಷಿಣೋತ್ತರವಾಗಿ ಹಬ್ಬಿದೆ. ಗಿರಿಯ ನೆತ್ತಿಯ ಗುಹಾಲಯವನ್ನು ತಲುಪಲು ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳಿಂದ ಸೋಪಾನಗಳನ್ನು ಕಡೆಯಲಾಗಿದೆ. ಈಗ ಇವು ಸವೆದಿವೆ. ಬೆಟ್ಟದ ಮೇಲಿನ ಕಲ್ಲುಬಂಡೆಗಳಲ್ಲಿ ಬಿರುಕುಗಳು ಕಾಣಿಸುತ್ತವೆ. ಬೆಟ್ಟಕ್ಕೆ ಈ ಹೆಸರು ಬಂದುದು ಸಮೀಪದಲ್ಲೇ ಇರುವ ಆಲತಿ

ಆಲತಿಮಲ್ಲೇಶ್ವರ ಗುಹೆ

ಎಂಬ ಹಳ್ಳಿಯಿಂದ. ಇಲ್ಲಿರುವ ಪಾಂಡವರ ಗುಹೆ, ಮಲ್ಲೇಶ್ವರಗುಹೆ ಎರಡೂ ಪ್ರಸಿದ್ಧವಾದುವು. ಅತ್ಯಂತ ಆಳವಾದ ಡೊಣೆಯೊಂದು ಗುಹಾಲಯದ ಸಮೀಪದಲ್ಲೇ ಇದೆ.

ಮಲ್ಲೇಶ್ವರಗುಹೆಗೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ತಾಯಿಯನ್ನು ಕಡಿದು ಬೇಸರಗೊಂಡ ಪರಶುರಾಮ ಲೋಕಸಂಚಾರವನ್ನು ಕೈಕೊಂಡು ಈ ಗಿರಿಯತ್ತ ಬಂದು ವಿಸ್ತಾರವಾಗಿ ಹಬ್ಬಿದ್ದ ಗಿರಿಯನ್ನೇರಿ ಎತ್ತರವಾದ ದೊಡ್ಡ ಬಂಡೆಯೊಂದರ ಬುಡದಲ್ಲಿ ಕುಳಿತು ಆಯಾಸದಿಂದ ಹಾಯ್ ಮಲ್ಲೇಶ ಎಂದು ಉದ್ಗರಿಸಿದನೆಂದೂ ಬಂಡೆಯೊಳಗಿನಿಂದ ಓ ಎಂಬ ಧ್ವನಿ ಬಂದಿತೆಂದೂ ಆಗ ಆತ ಆಶ್ಚರ್ಯದಿಂದ ಬಂಡೆಯ ಕಡೆ ನೋಡಿ ಪೂರ್ವ ದಿಕ್ಕಿನಿಂದ ಅದನ್ನು ತನ್ನ ಕೊಡಲಿಯಿಂದ ಕಡಿಯತೊಡಗಿ, ಒಬ್ಬ ಮನುಷ್ಯ ಪ್ರವೇಶಿಸುವಷ್ಟು ಭಾಗವನ್ನು ಬಂಡೆಯಲ್ಲಿ ಕಡಿದು ಅದರ ಗರ್ಭವನ್ನು ಪ್ರವೇಶಿಸಿದನೆಂದೂ ಬಂಡೆಯ ಒಡಲಲ್ಲಿ ಜಲ ಕಾಣಿಸಿಕೊಂಡಿತೆಂದೂ ಅದರ ಮಧ್ಯೆ ಮಲ್ಲೇಶ್ವರಲಿಂಗ

ಕಾಣಿಸಿಕೊಂಡಿತೆಂದೂ ನಂಬಿಕೆ ಇದೆ. ಮಲ್ಲೇಶ್ವರಗುಹೆಯ ಲಿಂಗದರ್ಶನಕ್ಕೆಂದು ಬಂದವರು ಬಂಡೆಯ ನಡುವಿನ ಗುಹೆಯಲ್ಲಿ ನುಸುಳಿಕೊಂಡು ಹೋಗಬೇಕು. ಮಂಡಿಯುದ್ದ ನೀರಿದ್ದರೂ ಕತ್ತಲೆ ದಟ್ಟವಾಗಿ ಕವಿದಿರುವ ಆ ಮಾರ್ಗದಲ್ಲಿ ಹತ್ತಾರು ಗಜ ಸಾಗಿದರೆ ಲಿಂಗದರ್ಶನವಾಗುತ್ತದೆ. ಬಂಡೆಯನ್ನು ಕೊಡಲಿಯಿಂದಲೇ ಕಡಿದು ಗುಹೆಯನ್ನು ನಿರ್ಮಿಸಿದಂತೆ ಗುರುತುಗಳು ಇಂದಿಗೂ ಇವೆ. ಯಾವ ಸಾಧನದಿಂದ ಈ ಬಂಡೆಯ ಗರ್ಭವನ್ನು ಹೀಗೆ ಕೊರೆದಿರಬೇಕು ಎಂಬುದು ಇಂದಿಗೂ ದೊಡ್ಡ ಸೋಜಿಗವಾಗಿಯೇ ಉಳಿದಿದೆ.

ಪಾಂಡವಗುಹೆಯಲ್ಲಿ ಹಿಂದೆ ಪಾಂಡವರು ತಂಗಿದ್ದರು ಎಂಬ ಐತಿಹ್ಯವಿದೆ.

ಆಲತಿಗಿರಿಯಲ್ಲಿ ವರ್ಷಕ್ಕೊಮ್ಮೆ ಒಂದು ದೊಡ್ಡ ಜಾತ್ರೆ ನಡೆಯುತ್ತದೆ. ಗಿರಿಯ ತಪ್ಪಲು ಪ್ರಶಾಂತವಾಗಿರುವ ರಮ್ಯ ನಿಸರ್ಗಸೌಂದರ್ಯದಿಂದ ಕಂಗೊಳಿಸುತ್ತದೆ. ಇಲ್ಲಿನ ಗುಹಾಂತರ ದೇವಾಲಯ ಹೆಚ್ಚು ಖ್ಯಾತಿಗಳಿಸದಿದ್ದರೂ ಕರ್ನಾಟಕದ ಆಶ್ಚರ್ಯಗಳಲ್ಲಿ ಒಂದಾಗಿದೆ. (ಜೆ.ಎಸ್.ಪಿ.)

**ಆಲದಮರ:** ಮೊರೇಸೀ ಕುಟುಂಬಕ್ಕೆ ಸೇರಿದ ಫೈಕಸ್ ಬೆಂಗಾಲೆನ್ಸಿಸ್ ಎಂಬ ಹೆಸರಿನ ಮರ. ಅನಾದಿಕಾಲದಿಂದಲೂ ಇದನ್ನು ಬೆಳೆಸುತ್ತಲಿದ್ದಾರೆ. ಸಂಸ್ಕೃತದಲ್ಲಿ ಇದನ್ನು ವಟವೃಕ್ಷ ಎಂದು ಕರೆಯುತ್ತಾರೆ. ವಿಶಾಲವಾಗಿ ಹರಡುವ ದೊಡ್ಡ ಮರ. ಕೋಲ್ಕತದ ರಾಷ್ಟ್ರೀಯ ಸಸ್ಯ ಉದ್ಯಾನದಲ್ಲಿರುವ (ಬೊಟಾನಿಕಲ್ ಗಾರ್ಡನ್) ಆಲದ ಮರ ಒಂದು ಎಕರೆಗೂ ಹೆಚ್ಚು ಜಾಗವನ್ನು ಆಕ್ರಮಿಸಿದೆ. ಕರ್ನಾಟಕ ರಾಜ್ಯದ ತೋಟಗಾರಿಕೆ ಇಲಾಖೆಯ ಅಧೀನದಲ್ಲಿರುವ ರಾಮೋಹಳ್ಳಿಯ ಹತ್ತಿರದ ಆಲದಮರ ವಿಶಾಲವಾಗಿ ಹರಡಿಕೊಂಡು ಹೆಸರುವಾಸಿಯಾಗಿದೆ. ಚೆನ್ನೈನ ಅಡಿಯಾರ್‌ನಲ್ಲೂ ಒಂದು ದೊಡ್ಡ ಆಲದ ಮರವಿದೆ. ಆಲದ ಮರವನ್ನು ನೆರಳಿಗಾಗಿ ಸಾಲುಮರಗಳಾಗಿ ಬೆಳೆಸುತ್ತಾರೆ. ಇದು ನೂರಾರು ವರ್ಷಗಳ ಕಾಲ ಜೀವಿಸಬಲ್ಲದು. ಕನ್ಯಾಕುಮಾರಿಯಿಂದ ಹಿಮಾಲಯದ ತಪ್ಪಲಿನವರೆಗಿನ ಎಲ್ಲ ಸನ್ನಿವೇಶಗಳಲ್ಲೂ ಬೆಳೆಯುತ್ತದೆ.

ಆಲದಮರ ಬಹುವಾರ್ಷಿಕ ನಿತ್ಯಹರಿದ್ವರ್ಣದ ಮರ. ಸ್ವಾಭಾವಿಕವಾಗಿ ಬೆಳೆಯುವ ಈ ಮರ ಮೊದಲು ಅಪ್ಪು ಸಸ್ಯವಾಗಿ ತನ್ನ ಜೀವನವನ್ನು ಪ್ರಾರಂಭಿಸಿ ಕಾಲಕ್ರಮೇಣ ಆತಿಥೇಯ ಸಸ್ಯದ ಮೇಲೆ ಅಗಾಧವಾಗಿ ಬೆಳೆದು, ಅದನ್ನು ನಾಶ ಮಾಡಿ ಸ್ವತಂತ್ರ ಜೀವನದಲ್ಲಿ ತೊಡಗುತ್ತದೆ. ಇದರ ಎಲೆ ತೊಟ್ಟುಳ್ಳ ಆಯತಾಕಾರ ಅಥವಾ ಕರಣಿಯಾಕಾರದಲ್ಲಿ ನಯವಾದ ಅಂಚಿನಿಂದಲೂ ಮೊಂಡು ತುದಿಯಿಂದಲೂ ಕೂಡಿರುತ್ತದೆ. ನವಿರಾದ ರೋಮಗಳು ಅದರ ಮೇಲಿನ ಮತ್ತು ಕೆಳಭಾಗಗಳಲ್ಲಿ ಆವರಿಸಿರುತ್ತವೆ. ಆಲದ ಮರದ ಚಕ್ಕೆ ಮಾಸಲು ಬಿಳುಪು. ಚಳಿಗಾಲದ ಅನಂತರ ಒಡೆಯುತ್ತದೆ. ಎಲೆಗಳು ಚಳಿಗಾಲದ ಮುಕ್ತಾಯದಲ್ಲಿ ಸಂಪೂರ್ಣವಾಗಿ ಉದುರಿ ಬೇಸಗೆ ಪ್ರಾರಂಭದಲ್ಲಿ ಮತ್ತೆ ಚಿಗುರುತ್ತವೆ. ಇದರ ಕಾಂಡ ದಪ್ಪವಾಗಿದ್ದು ನೇರವಾಗಿ ಬೆಳೆಯುವ ಅಥವಾ ಹರಡುವ ಗುಣವುಳ್ಳದ್ದು. ಎಳೆಯ ವಯಸ್ಸಿನಲ್ಲಿ ಶೀಘ್ರವಾಗಿ ಬೆಳೆಯುತ್ತಿರುತ್ತದೆ. ಕಾಂಡದ ತಳದಲ್ಲಿ ಊರು ಬೇರುಗಳು (ಪ್ರಾಪ್ ರೂಟ್ಸ್ ) ಬೆಳೆಯಲು ಪ್ರಾರಂಭಿಸಿ ಹರಡಿರುವ ಕಾಂಡಕ್ಕೆ ದೃಢತೆಯಿತ್ತು ಸಹಾಯ ಮಾಡುತ್ತವೆ. ಕೆಲವು ಸಾರಿ ತಾಯಿಕಾಂಡ ಕಾರಣಾಂತರದಿಂದ ಸತ್ತುಹೋದರೆ ಊರು ಬೇರುಗಳು ಭೂಮಿಯೊಳಗೆ ಆಳವಾಗಿ ಹೋಗುತ್ತವೆ. ಕೆಲವು ಬೇರುಗಳು ಕಾಂಡಗಳಂತೆ ವಿಶಾಲವಾಗಿ ಹರಡಿಕೊಂಡು ಭೂಮಿಯ ಮೇಲುಭಾಗದಲ್ಲಿ ಕೂಡ ಕಾಣಿಸುತ್ತವೆ. ಬೇರುಗಳು ಆಳವಾಗಿ ಇಳಿದು ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುವುದರಿಂದ ಎಂಥ ದೀರ್ಘಕಾಲದ ಬರಗಾಲ ಬಂದರೂ ಎದುರಿಸುವ ಶಕ್ತಿ ಮರಕ್ಕಿರುತ್ತದೆ. ಇದರ ಕಾಯಿಯ ಬಣ್ಣ

ಚಿತ್ರ. 1 ಆಲದ ಮರ

ಹಸಿರು; ವಾಸ್ತವಿಕವಾಗಿ ಕಾಯಿ ಎಂದು ಕರೆಯುವ ಅದು ಹೂವಿನ ಗರ್ಭಕೋಶದ ಉತ್ಪನ್ನವಲ್ಲ, ಅನೇಕ ಹೂಗಳ ಸಮುದಾಯವನ್ನು ಆವರಿಸಿ ಬೀಜಗಳನ್ನು ಅಂಡಾಶಯದ ರೀತಿಯಲ್ಲಿ ಮುಚ್ಚಿರುವ ಪುಷ್ಪಮಂಜರಿಯ ಪಾತ್ರೆ! ಇಂಥ ಪುಷ್ಪಮಂಜರಿಗೆ ಸೈಕೋನಿಯಂ ಎಂಬ ಹೆಸರುಂಟು. ಅದರೊಳಗಿರುವ ಹೂಗಳಲ್ಲಿ ಲಿಂಗ ಪ್ರತ್ಯೇಕವಾಗಿದೆ.

ಸ್ವಾಭಾವಿಕವಾಗಿ ಆಲದ ಮರ ಬೀಜಗಳಿಂದ ವೃದ್ಧಿಯಾಗುತ್ತದೆ; ಆದರೆ ಕಾಂಡದ ತುಂಡುಗಳಿಂದ ಬಲು ಸುಲಭವಾಗಿ ವೃದ್ಧಿ ಮಾಡಬಹುದು. 2–3 ವರ್ಷ ವಯಸ್ಸಿನ ಮರದ 1.8 –3 ಮೀ ಉದ್ದದ ಕಾಂಡದ ತುಂಡುಗಳನ್ನು 20ಸೆಂಮೀ–30ಸೆಂಮೀ ಆಳವಾಗಿ ತೆಗೆದ ಗುಂಡಿಗಳಲ್ಲಿ ನೆಟ್ಟರೆ ಬೇಗ ಬೇರು ಬಿಟ್ಟು ಚಿಗುರುತ್ತದೆ. ದಪ್ಪ ಮತ್ತು ಹಳೆಯ ಕಾಂಡಗಳು ಬೇರು ಬಿಡಲಾರವಾದ್ದರಿಂದ ವೃದ್ಧಿ ಮಾಡಲು ಯೋಗ್ಯವಲ್ಲ. ತುಂಡುಗಳನ್ನು ಸಾಮಾನ್ಯವಾಗಿ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ನೆಡುತ್ತಾರೆ. ನೆಟ್ಟ ಅನಂತರ ಮುಂದಿನ ಮಳೆಗಾಲದವರೆಗೆ ಕಾಲಕ್ಕೆ ಸರಿಯಾಗಿ ನೀರು ಕೊಟ್ಟು ಕಾಪಾಡುವುದು

ಚಿತ್ರ. 2 ಕೋಲ್ಕತದಲ್ಲಿರುವ ವಿಶ್ವವಿಖ್ಯಾತ ಆಲದ ಮರ ಪ್ರದೇಶದ ಒಳ ನೋಟ

ಅಗತ್ಯ. ನೆಟ್ಟ ತುಂಡು ಸುಲಭವಾಗಿ ಬೇರು ಬಿಡಲು ಮೇಲೆ ಕತ್ತರಿಸಿರುವ ಭಾಗಕ್ಕೆ ಸಗಣಿ ಸವರಬೇಕು; ಜಾನುವಾರುಗಳು ಇದನ್ನು ಅಲುಗಾಡಿಸದೇ ಇರುವುದಕ್ಕೆ ಮತ್ತು ಬಿಸಿಲಿನ ತಾಪವನ್ನು ತಡೆಯುವುದಕ್ಕೆ ನೆಟ್ಟ ತುಂಡಿನ ಸುತ್ತಲೂ ಮುಳ್ಳು ಅಥವಾ ತೆಂಗಿನ ಗರಿ ನೆಡುವುದು ಲೇಸು.

**ಉಪಯೋಗ:** ಆಲದ ಮರದ ಎಲೆಗಳನ್ನು ಹಚ್ಚೆ ಊಟ ಮಾಡುವುದಕ್ಕೂ ಪೊಟ್ಟಣ ಕಟ್ಟುವುದಕ್ಕೂ ಉಪಯೋಗಿಸುತ್ತಾರೆ. ಈ ಮರದ ಹಾಲು ಅನೇಕ ಔಷಧಿಗಳಿಗೆ ಬರುತ್ತದೆ. ಒಣ ಆಲದ ಮರದ ದಿಮ್ಮಿಗಳನ್ನು ದೋಣಿಯಂತೆ ಕೊರೆದು ಸಣ್ಣ ಕೆರೆ ಕೊಳಗಳಲ್ಲಿ ಉಪಯೋಗಿಸುತ್ತಾರೆ. ಆಲದ ಮರದ ಎಳೆಯಎಲೆ ಕುರಿ, ಮೇಕೆ ಮುಂತಾದ ಜಾನುವಾರುಗಳಿಗೆ ಮೇವಾಗುತ್ತದೆ. ಆನೆಗಳಿಗೆ ಇದು ಒಳ್ಳೆಯ ಆಹಾರ. ಈ ಮರ ಬೆಂಡಿನಂತಿರುವುದರಿಂದ ಮರ ಮುಟ್ಟುಗಳಿಗೆ ಒದಗುವುದಿಲ್ಲ. ರಸ್ತೆ, ಬಯಲು, ತೋಪು ಮುಂತಾದೆಡೆ ಇದನ್ನು ಬೆಳೆಸುವರು. ವಿಶಾಲವಾಗಿ ಹರಡಿ, ನಿಬಿಡವಾದ ಎಲೆಗಳಿಂದ ಕೂಡಿರುವ ಇದು ಒಳ್ಳೆಯ ನೆರಳು ವೃಕ್ಷವೆಂದು ಖ್ಯಾತಿ ಪಡೆದಿದೆ. (ಎಂ.ಎಚ್.ಎಂ.; ಬಿ.ಬಿ.)

**ಆಲನ್, ಗ್ರಾಂಟ್ (ಚಾರ್ಲ್ಸ್ ಗ್ರಾಂಟ್ ಬ್ಲೇರ್ ಫಿಂಡೀ):** 1848–99. ಇಂಗ್ಲಿಷ್ ಗ್ರಂಥಕರ್ತ. ಕೆನಡದ ಆಂಟೇರಿಯೊ ಜಿಲ್ಲೆಯ ಕಿಂಗ್‌ಸ್ಟನ್‌ನಲ್ಲಿ ಜನಿಸಿದ. ತಂದೆ ಐರಿಷ್ ಪಾದ್ರಿ. ಮೊದಲು ಅಮೆರಿಕ, ಫ್ರಾನ್ಸ್‌ಗಳಲ್ಲಿ ಶಿಕ್ಷಣ ಪಡೆದು ಮುಂದೆ ಆಕ್ಸ್‌ಫರ್ಡಿನ ಮರ್ಟನ್ ಕಾಲೇಜಿನಲ್ಲಿ ಓದಿ ಪದವೀಧರನಾದ. ಕೊಂಚಕಾಲ ಜಮೈಕದಲ್ಲಿ ಉಪಾಧ್ಯಾಯನಾಗಿದ್ದು ಅನಂತರ ಇಂಗ್ಲೆಂಡಿಗೆ ಬಂದು ನೆಲೆಸಿದ. ಅವನ ಗ್ರಂಥರಚನೆ ವಿಪುಲ. ಅನೇಕ ಕಾದಂಬರಿಗಳನ್ನು ಬರೆದ. ಅವುಗಳಲ್ಲಿ ಮುಖ್ಯವಾದುವು ಎರಡು. ದಿ ಡೆವಿಲ್ಸ್ ಡೈ ಎಂಬುದು ಭಾವೋದ್ರೇಕಕಾರಿ ಕಾದಂಬರಿ. ದಿ ವುಮನ್ ಹೂ ಡಿಡ್ ಎಂಬುದರಲ್ಲಿ ಲೈಂಗಿಕ ವಿಷಯಗಳನ್ನು ವಸ್ತುವಾಗಿಟ್ಟುಕೊಂಡಿದ್ದಾನೆ. ಮುಂದೆ ಹಲವು ಕಾದಂಬರಿಕಾರರು ಇವನ ಬರೆಹವನ್ನು ಅನುಕರಿಸಿದರು. ಸರಳತೆ ಇವನ ಬರೆಹದ ವೈಶಿಷ್ಟ್ಯ. ವಿಜ್ಞಾನಕ್ಕೆ ಸಂಬಂಧಿಸಿದ ಫಿಸಿಯಲಾಜಿಕಲ್ ಈಸ್ಥೆಟಿಕ್ಸ್, ದಿ ಎವಲ್ಯೂಷನಿಸ್ಟ್ ಎಟ್ ಲಾರ್ಜ್, ದ ಎವಲ್ಯೂಷನ್ ಆಫ್ ದಿ ಐಡಿಯ ಆಫ್ ಗಾಡ್ ಮುಂತಾದ ಗ್ರಂಥಗಳಲ್ಲಿ ಕ್ಲಿಷ್ಟ ವಿಚಾರಗಳನ್ನು ಸರಳವಾಗಿ ನಿರೂಪಿಸಿದ್ದಾನೆ.

*

**ಆಲನ್, ಡಾ ಜಾನ್:** 1885–1955. ಪ್ರಸಿದ್ಧ ನಾಣ್ಯಶಾಸ್ತ್ರಜ್ಞ. ವಿದ್ಯಾಭ್ಯಾಸ ಎಡಿನ್‌ಬರೊ ಮತ್ತು ಲೀಪ್‌ಜಿಗ್ ವಿಶ್ವವಿದ್ಯಾಲಯಗಳಲ್ಲಿ. 1902–47ರವರೆಗೆ ಬ್ರಿಟಿಷ್ ಮ್ಯೂಸಿಯಮ್‌ನಲ್ಲಿ ಅಧಿಕಾರಿಯಾಗಿದ್ದ. ಇದೇ ಅವಧಿಯಲ್ಲಿ ಲಂಡನ್ ವಿಶ್ವವಿದ್ಯಾಲಯದ ಕಾಲೇಜು ಮತ್ತು ಸ್ಕೂಲ್ ಆಫ್ ಓರಿಯಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್‌ನಲ್ಲಿ ಸಂಸ್ಕೃತದ ಪ್ರಾಚಾರ್ಯನಾಗಿದ್ದ. ಭಾರತದ ಪ್ರಾಚೀನ ಇತಿಹಾಸದಲ್ಲೂ ನಾಣ್ಯ ವಿಷಯದಲ್ಲೂ ವಿಶೇಷ ಪರಿಶ್ರಮವಿತ್ತು. ಕ್ಯಾಟಲಾಗ್ ಆಫ್ ಗುಪ್ತ ಕಾಯಿನ್ಸ್, ಪಂಚ್ ಮಾರ್ಕ್ಡ್ ಕಾಯಿನ್ಸ್ – ಇವು ಆತನ ಪ್ರಮುಖ ಕೃತಿಗಳು. ಬ್ರಿಟಿಷ್ ಮ್ಯೂಸಿಯಮ್‌ನಲ್ಲಿರುವ ಭಾರತದ ನಾಣ್ಯಗಳ ಬಗ್ಗೆ ಒಂದು ಸುದೀರ್ಘ ಪುಸ್ತಕವನ್ನು ರಚಿಸಿದ್ದಾನೆ. ಇದಲ್ಲದೆ, ಇತರ ಗ್ರಂಥಗಳಲ್ಲಿ ಅಸ್ಸಾಮಿನ ಮತ್ತು ಮಾಲ್ಡೀವ್ ದ್ವೀಪದ ನಾಣ್ಯಗಳ ಬಗೆಗೂ ಮೌಲಿಕ ಪ್ರಬಂಧಗಳನ್ನು ಬರೆದಿದ್ದಾನೆ. 1949–54ರ ಅವಧಿಯಲ್ಲಿ ರಾಯಲ್ ಆರ್ಕಿಯಲಾಜಿಕಲ್ ಇನ್‌ಸ್ಟಿಟ್ಯೂಟಿನ ಉಪಾಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದಾನೆ. (ಎ.ಎಂ.ಎ.)

**ಆಲಮಟ್ಟಿ:** ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಒಂದು ಗ್ರಾಮ. ಕೃಷ್ಣಾ ನದಿಯ ಎಡದಂಡೆಯ ಮೇಲೆ ಹುಬ್ಬಳ್ಳಿ ಸೊಲ್ಲಾಪುರ ರೈಲುಮಾರ್ಗದಲ್ಲಿ ಬಾಗಲಕೋಟೆಯ ಈಶಾನ್ಯಕ್ಕೆ 32 ಕಿಮೀ ದೂರದಲ್ಲೂ ಬಿಜಾಪುರದ ದಕ್ಷಿಣಕ್ಕೆ ಸು. 65 ಕಿಮೀ ದೂರದಲ್ಲೂ ಇದೆ. ಗ್ರಾಮದ ಪೂರ್ವದಲ್ಲಿ ಪರ್ವತಕಟ್ಟೆ ಹಳ್ಳವೂ ರಕ್ಷಿತ ಅರಣ್ಯಪ್ರದೇಶವೂ ಇವೆ. ಆಲಮಟ್ಟಿಯಲ್ಲಿ ಹರ್ಡೇಕರ ಮಂಜಪ್ಪನವರ ಆಶ್ರಮವಿತ್ತು. ಅದು ಸಾಮಾಜಿಕ, ನೈತಿಕ ಮತ್ತು ಸಾಂಸ್ಕೃತಿಕ ಶಿಕ್ಷಣ ಕೊಡುವ ಒಂದು ಗುರುಕುಲವಾಗಿತ್ತು. ಇಂದು ಅವರ ಹೆಸರಿನ ಒಂದು ಪ್ರೌಢಶಾಲೆ ಇದೆ.

ಕೃಷ್ಣಾನದಿ ಮೇಲ್ದಂಡೆ ಮೊದಲಹಂತದ ಯೋಜನೆಯಲ್ಲಿ ಕೃಷ್ಣಾನದಿಗೆ ಅಡ್ಡಲಾಗಿ ಆಲಮಟ್ಟಿ ಬಳಿ ದೊಡ್ಡ ಅಣೆಕಟ್ಟು ಕಟ್ಟೆ ಕಟ್ಟಲಾಗಿದೆ. ಇದರಿಂದ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳ ಸು. 3.5ಲಕ್ಷ ಎಕರೆಗಳಿಗೆ ನೀರೊದಗಿಸಲಾಗುತ್ತದೆ. ಕಟ್ಟೆಯ ಹಿಂದಿನ ಜಲಾವೃತ ಪ್ರದೇಶದಲ್ಲಿ ಹಿನ್ನೀರಿನಿಂದ ಬಾಗಲಕೋಟೆ ಪಟ್ಟಣ ಮುಳುಗಡೆಯಾಗಿದ್ದು ಕಟ್ಟೆಯ ಉದ್ದ 15.78ಮೀ. ಗರಿಷ್ಠ ಎತ್ತರ ತಳಪಾಯದಿಂದ 47.80 ಮೀ. ಸಮುದ್ರ ಮಟ್ಟದಿಂದ 519.6ಮೀ ಎತ್ತರವಿದೆ. ಒಟ್ಟು ಜಲಸಂಗ್ರಹ ಸಾಮರ್ಥ್ಯ 5,295 ಮಿಲಿಯನ್ ಘನ ಮೀಟರ್‌ಗಳು. ಎರಡನೆಯ ಹಂತದಲ್ಲಿ ಮತ್ತೆ ಸು. 2.30 ಲಕ್ಷ ಎಕರೆಗೆ ನೀರು ಒದಗುವುದು. (ಎಸ್.ಎಸ್.ಎನ್.)

**ಆಲಯವಿಜ್ಞಾನ:** ಬೌದ್ಧ ವಿಜ್ಞಾನವಾದದ ಪ್ರಕಾರ ಪರಮಸತ್ ನಿಜವಾಗಿ ಜ್ಞಾನರೂಪವೇ. ಅದಕ್ಕೆ ಹೊರತಾದದ್ದು ಇದೆ ಎಂಬುದು ಮಿಥ್ಯಾ ಭಾವನೆ. ಎಲ್ಲಕ್ಕೂ ಆಧಾರವಾದ ಪರಮಜ್ಞಾನಚೈತನ್ಯವನ್ನು ವಿಜ್ಞಾನವಾದಿಗಳು ಈ ಹೆಸರಿನಿಂದ ಕರೆದಿದ್ದಾರೆ. (ಜಿ.ಎಚ್.)

**ಆಲಾಪನೆ:** ಭಾರತೀಯ ಸಂಗೀತದ ವೈಶಿಷ್ಟ್ಯಗಳಲ್ಲಿ ಮುಖ್ಯವಾದುದು. ಗಾಯಕರ, ವಾದಕರ, ಕಲಾಸೃಷ್ಟಿ ವೈಭವದ ಪರಾಕಾಷ್ಠೆಯೂ ಆಗಿರುವ ಇದು ಕಡೆಯಪಕ್ಷ ಎರಡು ಸಾವಿರ ವರ್ಷಗಳಷ್ಟು ಪ್ರಾಚೀನವಾದುದು. ಈಗ ರೂಢಿಯಲ್ಲಿರುವ ಆಲಾಪನಕ್ರಮ ಸು. 300 ವರ್ಷಗಳಷ್ಟು ಹಳೆಯದು. ಉತ್ತರ ಭಾರತದಲ್ಲಿ ಅರಬ್ಬರು, ಪಾರಸಿಕರು ಮೊದಲಾದ ಅನ್ಯ ಸಂಸ್ಕೃತಿಯವರ ಪ್ರಭಾವದಿಂದ ಮೈತಳೆದ ಹಿಂದೂಸ್ಥಾನಿ ಸಂಗೀತ ಮೊಗಲರ ಕಾಲದಲ್ಲಿ ತನ್ನ ಆಧುನಿಕ ಯುಗವನ್ನು ಈ ದಿಸೆಯಲ್ಲಿ ಪ್ರಾರಂಭಿಸಿತು. ದಕ್ಷಿಣ ಭಾರತದಲ್ಲಿ ಕನ್ನಡಿಗನಾದ ಗೋವಿಂದ ದೀಕ್ಷಿತ ತಂಜಾವೂರಿನಲ್ಲಿ ರಚಿಸಿದ ಸಂಗೀತಸುಧೆಯಲ್ಲೂ ಅವನ ಮಗನಾದ ವೆಂಕಟಮಖಿ ರಚಿಸಿದ ಚತುರ್ದಂಡೀ ಪ್ರಕಾಶಿಕೆಯಲ್ಲೂ ಈಗಿನ ಆಲಾಪನಪದ್ಧತಿ ರೂಪುಗೊಂಡಂತೆ ಕಾಣುತ್ತದೆ. ಹೊನ್ನಯ್ಯನ ಮಗನೂ ತನ್ನ ಗುರುವೂ ಆದ ತಾನಪ್ಪ ಮಾಡಿಕೊಟ್ಟ ಲಕ್ಷ್ಯಪ್ರವರ್ತನೆಯಿಂದ ರಾಗಾಲಾಪನೆಯ ವ್ಯವಸ್ಥೆಯನ್ನು ಸಜ್ಜುಗೊಳಿಸಿದುದಾಗಿ ವೆಂಕಟಮಖಿಯೇ ಹೇಳಿಕೊಂಡಿರುವುದರಿಂದ ಕನ್ನಡಿಗರ ಪಾತ್ರ ಇದರಲ್ಲಿ ಸ್ಪಷ್ಟವಾಗುತ್ತದೆ. ಅನಂತರ 18ನೆಯ ಶತಮಾನದಲ್ಲಿ ತಂಜಾವೂರಿನ ಮರಾಠರ ನಾಯಕ ದೊರೆ ತುಳಜೇಂದ್ರ ತನ್ನ ಸಂಗೀತಸಾರಾಮೃತದಲ್ಲಿ ಅಮೂಲ್ಯವಾದ ಸಮಸಾಮಯಿಕ ಉದಾಹರಣೆಗಳ ಮೂಲಕ ಈ ಪರಂಪರೆಯನ್ನು ನೆಲೆಗೊಳಿಸಿದ್ದಾನೆ. ಆದರೂ ರಾಗಾಲಾಪನೆ ಆಧುನಿಕ ರೂಪವನ್ನು ಪಡೆದುದು ಸಂಗೀತ ತ್ರಿಮೂರ್ತಿಗಳ ಯುಗದಲ್ಲಿಯೇ (1750–1850) ಎನ್ನಬಹುದು.

ಹಾಡಿನಲ್ಲಿ ಮಾಡಿದ ರೂಪಕಾಲಪ್ತಿ, ಸ್ವತಂತ್ರವಾಗಿ ಮಾಡಿದ ರಾಗಾಲಪ್ತಿ ಎಂದು ಆಲಾಪನೆಯಲ್ಲಿ ಎರಡು ವಿಧ. ಇವುಗಳಲ್ಲಿ ವಿಷಮ, ಪ್ರಾಂಜಲ, ಅಕ್ಷರಸಹಿತ, ಅಕ್ಷರರಹಿತ, ತಾಳಸಹಿತ, ತಾಳರಹಿತ ಎಂದು ಮುಂತಾಗಿ 16 ಅವಾಂತರ ಭೇದಗಳಿವೆ. ಇವೆಲ್ಲವೂ ಇಂದಿಗೂ ರೂಢಿಯಲ್ಲಿರುವಂಥವೇ. ಪ್ರಾಚೀನ ಕಾಲದಲ್ಲಿ ರಾಗಾಲಾಪವನ್ನು ಮುಖಚಾಲೀ ದ್ವ್ಯರ್ಧ, ನ್ಯಸನ ಮುಂತಾದ ನಾಲ್ಕು ಹಂತಗಳಲ್ಲಿ ಮಾಡಲಾಗುತ್ತಿತ್ತು. ಮಧ್ಯಯುಗದಲ್ಲಿ ಇದನ್ನು ಆರು ಘಟ್ಟಗಳಲ್ಲಿ ಮಾಡುತ್ತಿದ್ದರು : ಆಕ್ಷಿಪ್ತಿಕಾ (ಆಯಿತ್ತ) ಎಂಬ ರಾಗಪ್ರವೇಶ, ಎರಡು, ಮೂರು ಖಂಡಗಳಲ್ಲಿ (ಯಡುಪು) ರಾಗದ ಬೆಳವಣಿಗೆಯಾಗುತ್ತಿದ್ದ ರಾಗವರ್ಧಿನೀ, ಇದನ್ನು ಖಂಡಗಳಾಗಿ ವಿಭಾಗಿಸುತ್ತಿದ್ದ ವಿದಾರೀ (ಯಡುಪು ಮುಕ್ತಾಯಿ, ಒಂದೊಂದಾಗಿ ಸ್ವರಗಳನ್ನು ಕೇಂದ್ರದಲ್ಲಿಟ್ಟು ಅವುಗಳ ಸುತ್ತಲೂ ರಾಗವನ್ನು ಹೆಣೆಯುತ್ತಿದ್ದ ಸ್ಥಾಯೀ ಎಂಬ ಏಕಸ್ವರವೃದ್ಧಿಕ್ರಮ, ವಿವಿಧಸ್ವರಗಳ ಮಿಶ್ರತಾನಗಳಿಂದ ಹುಟ್ಟಿದ) ವರ್ತನೀ, ರಾಗದ ಪರಿಸಮಾಪ್ತಿಯಾದ ನ್ಯಾಸ (ಮುಕ್ತಾಯಿ ಅಥವಾ ಮಕರಿಣೀ)– ಈ ಕ್ರಮ ಈಗ ಶಿಥಿಲವಾಗಿಹೋಗಿದೆ.

ಆಲಾಪನೆ ಎಂದರೆ 5, 6 ಅಥವಾ 7 ಸ್ವರಗಳು ಆರೋಹಣ ಅವರೋಹಣಗಳಲ್ಲಿ ಕ್ರಮಸಂಚಾರದಲ್ಲಿ ಅಥವಾ ವಕ್ರಸಂಚಾರದಲ್ಲಿ ಬರುವ ರೀತಿಯೊಂದನ್ನು ತೆಗೆದುಕೊಂಡು ಮನಸ್ಸು ರಂಜಿಸುವಂತೆ, ಛಂದೋಲಯಗಳ ನಿರ್ಬಂಧವಿಲ್ಲದೆ ಸ್ವಂತ ರೀತಿಯಲ್ಲಿ ವಿವಿಧ ಸ್ವರಸಂಯೋಜನೆಗಳನ್ನು ಸೃಷ್ಟಿ ಮಾಡುವುದು. ಇದರ ಲಕ್ಷಣವನ್ನು ನಮ್ಮ ಸಂಗೀತಶಾಸ್ತ್ರ ಬಹು ಹಿಂದಿನಿಂದಲೂ ವೈಜ್ಞಾನಿಕವಾಗಿ ವರ್ಣಿಸಿದೆ. ಒಂದು ನಿರ್ದಿಷ್ಟವಾದ ವಿಷಯದಲ್ಲಿ ಪ್ರಬಂಧರಚನೆಯನ್ನು ಮಾಡಬೇಕಾದರೆ ವಿಷಯಪ್ರವೇಶ, ಪ್ರಧಾನಾಂಶದ ಅಥವಾ ಸ್ಥಾಯೀಭಾವದ ಉಪಬೃಂಹಣ, ನಿರ್ದಿಷ್ಟವಾಗಿ, ಅಚ್ಚುಕಟ್ಟಾಗಿ ಭಾವಗಳನ್ನು ವಾಕ್ಯಸಮುಚ್ಚಯ ಗಳಲ್ಲಿ ವಿಭಾಗಿಸುವುದು, ಇವುಗಳಲ್ಲಿ ವಿಷಯವನ್ನು ವರ್ಧಿಸಿ ಪರಾಕಾಷ್ಠೆಯ ಏಕಾಗ್ರಮುಖತೆಗೆ ಒಯ್ಯುವುದು, ಅಲ್ಲಿಂದ ಕ್ರಮವಾಗಿ ಇಳಿದು ವಿಷಯೋಪಸಂಹಾರದಿಂದ ನ್ಯಾಸಮಾಡುವುದು– ಇವು ಹೇಗೆ ಮುಖ್ಯವೋ ಹಾಗೆಯೇ ರಾಗಾಲಾಪನೆಯಲ್ಲಿ ಯಾವುದು ಪ್ರಾರಂಭಸ್ವರ, ಜೀವಸ್ವರ, ಬಹುಳಸ್ವರ, ಅಂತ್ಯಸ್ವರ, ಮೇಲು ಕೆಳಗಿನ ಸ್ಥಾಯಿಗಳಲ್ಲಿ ಯಾವ ಸ್ವರದವರೆಗೆ ಸಂಚಾರವಿದೆ, ಯಾವ ಸ್ವರಗಳಲ್ಲಿ ವಿಶೇಷ ಸಂಗತಿಯಿದೆ, ಯಾವುದು ಅಲ್ಪವಾಗಿ ಪ್ರಯೋಗವಾಗಬೇಕು, ರಾಗವನ್ನು ವಿವಿಧಖಂಡಗಳಾಗಿ ಎಲ್ಲಿ ಒಡೆದುತೋರಬೇಕು– ಮುಂತಾದ ಹತ್ತು ಲಕ್ಷಣಗಳ ಮೂಲಕವಾದ ಭೌತವಿಶ್ಲೇಷಣೆಯೂ ಮುಖ್ಯ. ಇದು ನಮ್ಮಲ್ಲಿ ಮುಖ್ಯವಾದ ಒಂದು ಶಾಸ್ತ್ರಪ್ರಕ್ರಿಯೆ. ರಾಗಾಲಾಪನೆಯಿಂದ ಆಯಾ ರಾಗದ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಮೂಡಿಸುವುದು ಹೇಗೆ ಮುಖ್ಯವೋ ಸದೃಶವಾದ ರಾಗಗಳಿಂದ ಅದನ್ನು ಪೃಥಕ್ಕರಿಸುವುದೂ ಹಾಗೆಯೇ ಅಗತ್ಯ. ಇದಕ್ಕಾಗಿ ರಾಗಾಲಾಪನ ಪದ್ಧತಿಯಲ್ಲಿ ಕೆಲವು ತಂತ್ರಗಳನ್ನು ಬಳಸಲಾಗುವುದು. ಎರಡು ಸದೃಶ ರಾಗಗಳಲ್ಲಿ ಆರೋಹಣ– ಅವರೋಹಣಗಳು ಒಂದೇ ಆಗಿದ್ದು ಸ್ಥೂಲಭೌತ ಸಾಮ್ಯವಿದ್ದರೂ ಒಂದೇ ಸ್ವರ ಎರಡರಲ್ಲೂ ಸೂಕ್ಷ್ಮವೂ ವಿಶಿಷ್ಟವೂ ಆದ ಛಾಯಾಂತರಗಳನ್ನೂ ಗಮಕಪ್ರಯೋಗಗಳನ್ನೂ ಪಡೆಯುತ್ತದೆ. ಕೆಲವು ಸ್ವರಗಳು ಇಂಥದೇ ರೀತಿಯಲ್ಲಿ, ಸಂಯೋಜನೆಯಲ್ಲಿ, ಸಂದರ್ಭದಲ್ಲಿ ಪ್ರಯುಕ್ತವಾಗಬೇಕೆಂಬ ನಿಯಮವಿರುತ್ತದೆ. ಆರಂಭಸ್ವರ, ಮುಕ್ತಾಯಸ್ವರ, ಬೇರೆ ಸ್ಥಾಯಿಗಳಲ್ಲಿ ಸಂಚಾರವ್ಯಾಪ್ತಿ–ಇವುಗಳಿಂದಲೂ ಮೇಲುನೋಟಕ್ಕೆ ಒಂದೇ ಆಗಿರುವಂತೆ ಕಾಣುವ ಎರಡು ರಾಗಗಳನ್ನು ಬೇರ್ಪಡಿಸಬಹುದು. ಇವುಗಳೇ ಅಲ್ಲದೆ ಆಯಾ ರಾಗಕ್ಕೇ ವಿಶಿಷ್ಟವಾದ ನಡೆ ಅಥವಾ ವೇಗ, ಪ್ರತಿಪಾದ್ಯರಸದ ಸ್ಥಾಯೀಭಾವ, ಸ್ವರಭಾವ ಮುಂತಾದ ಇತರ ಹಲವು ಕ್ಲಿಷ್ಟವೂ ಪ್ರೌಢವೂ ಆದ ಅನುಕ್ತನಿಯಮಗಳು ಭಾರತೀಯ ರಾಗಾಲಾಪನೆಯ ರೂಢಿಯಲ್ಲಿವೆ. ಇವನ್ನು ಕೇವಲ ಕಂಠ ಪರಂಪರೆಯಿಂದಲೂ ಸಾಂಪ್ರದಾಯಿಕ ಸೂಕ್ಷ್ಮ ಅಭ್ಯಾಸದಿಂದಲೂ ಗುರುಮುಖದಿಂದಲೂ ಕಲಿಯಬೇಕು. *

**ಆಲಾಮಾನಿ ಲೂಯೀಜಿ:** 1495–1556. ಇಟಲಿಯ ಕವಿ. ಸುಸಂಸ್ಕೃತ ಪಂಡಿತ, ರಸಿಕ, ರಾಜನೀತಿಶಾಸ್ತ್ರಜ್ಞನಾದ ಮಾಕಿಯವೆಲಿಯ ಸ್ನೇಹಿತ. ಫ್ಲಾರೆನ್ಸ್ ಗಣರಾಜ್ಯ ಪತನವಾದ ಅನಂತರ ಫ್ರಾನ್ಸಿಗೆ ತೆರಳಿ ಮೊದಲನೆಯ ಫ್ರಾನ್ಸಿಸ್‌ನ ಆಸ್ಥಾನದಲ್ಲಿ ಆಶ್ರಯಪಡೆದ. ತನ್ನ ತಾಯಿನಾಡಾದ ಫ್ಲಾರೆನ್ಸನ್ನು ಕುರಿತು ಹಲವಾರು ದೇಶಪ್ರೇಮಗೀತೆಗಳನ್ನು ಬರೆದ. ವಿವಿಧ ವಿಚಾರಗಳನ್ನು ಉಲ್ಲೇಖಿಸುವ ಭಾವಗೀತೆಗಳನ್ನೂ ರಚಿಸಿದ. ಗ್ರೀಕ್ ಪುರಾಣ ಕಥೆಗಳನ್ನೂ ಆರ್ಥರ್ ದೊರೆಯನ್ನು ಕುರಿತ ಅದ್ಭುತ ಕಥೆಗಳನ್ನೂ ಬೆರೆಸಿ ಕೆಲವು ಮಹಾಕಾವ್ಯಗಳನ್ನು ರಚಿಸಿದ. ಇವನ ಕೃತಿಗಳಲ್ಲೆಲ್ಲ ಉತ್ಕೃಷ್ಟವಾದುದು ಡೆಲ್ಲಾ ಕಾಲ್ಟಿವಝಿಯೋನ್ (1546) ಎಂಬ ನೀತಿಪ್ರಧಾನಕಾವ್ಯ. (ಎಚ್.ಕೆ.ಆರ್)

**ಆಲಿಂಗನ:** ತಬ್ಬುವಿಕೆ. ಪ್ರೀತಿ, ವಿಶ್ವಾಸ, ಸ್ನೇಹಸೂಚಕವಾಗಿ ವ್ಯಕ್ತಿಯನ್ನು ವ್ಯಕ್ತಿ ಎರಡೂ ಕೈಗಳಿಂದ ತಬ್ಬಿ ಎದೆಗೆ ಎದೆ ಕೂಡಿಸುವುದು. ಮುಸ್ಲಿಮರಲ್ಲಿ ಸರ್ವಸಾಧಾರಣವಾದ ಆಚಾರ. ಹಿಂದೂಗಳಲ್ಲೂ ಮದುವೆ ಸಂದರ್ಭದಲ್ಲಿ ಬೀಗರು ಬೀಗರನ್ನು ಆಲಿಂಗಿಸುವ ಪದ್ಧತಿ ಇದೆ. ಸತಿಪತಿಯರಲ್ಲಿ ಚುಂಬನ (ನೋಡಿ– ಚುಂಬನ), ಆಲಿಂಗನಗಳು ರತಿಭಾವಕ್ಕೆ ಆಲಂಬನಗಳಾಗಿವೆ. ಮುಖ್ಯವಾಗಿ ಆಲಿಂಗನ ಎರಡು ಮನಸ್ಸುಗಳ ಮಧುರಮಿಲನದ ಬಾಹ್ಯಪ್ರಕಟನೆಯಾಗಿದೆ. ಆಲಿಂಗನದ ನೆಪದಲ್ಲಿ ಶಿವಾಜಿ ಅಫ್ಜಲ್‌ಖಾನನನ್ನು ವ್ಯಾಘ್ರನಖದಿಂದ ಬಗಿದು ಕೊಂದುದೂ ಧೃತರಾಷ್ಟ್ರಾಲಿಂಗನಕ್ಕೆ ಸಿಕ್ಕ ಭೀಮನ ಲೋಹ ಪ್ರತಿಮೆ ನುಚ್ಚುನುರಿಯಾಗಿ ಹೋದುದೂ ಆಲಿಂಗನದ ಇನ್ನೊಂದು ಮುಖಕ್ಕೆ ಉದಾಹರಣೆಗಳಾಗಿವೆ. ಸಾಯುಜ್ಯಮೋಕ್ಷವನ್ನು ಪಡೆದ ಭಕ್ತರಿಗೆ ಪರಮಾತ್ಮನ ಆಲಿಂಗನಸುಖ ಲಭಿಸುತ್ತದೆಂದು ವಿಶಿಷ್ಟಾದ್ವೈತದಲ್ಲಿ ಹೇಳಿದೆ. *

**ಆಲಿಂಗ್ಯಾಮ್ ಮಾರ್ಜರಿ:** 1904–66. ಇಂಗ್ಲಿಷ್ ಕಾದಂಬರಿಕಾರ್ತಿ. ಜನನ ಲಂಡನ್ನಿನಲ್ಲಿ. ತಂದೆಯೂ ಬರೆಹಗಾರ. ಅನೇಕ ಪತ್ತೆದಾರಿ ಕಾದಂಬರಿಗಳನ್ನು ಬರೆದಳು. 1927ರಲ್ಲಿ ಕಲಾವಿದ ಯಂಗ್‌ಮನ್ ಕಾರ್ಟರ್‌ನನ್ನು ಮದುವೆಯಾದಳು. ಆಕೆ ಚಿತ್ರಿಸಿದ ಪತ್ತೆದಾರ ಆಲ್ಬರ್ಟ್ ಕ್ಯಾಂಪಿಯನ್ ಬಹಳ ಜನಪ್ರಿಯನಾದ.

ದಿ ಕ್ರೈಮ್ ಅಟ್ ಬ್ಲಾಕ್ ಡಡ್ಲಿ (1929), ಫ್ಲವರ್ಸ್ ಫಾರ್ ದಿ ಜಜ್ (1936), ಮೋರ್ ವರ್ಕ್ ಫಾರ್ ದಿ ಅಂಡರ್‌ಟೇಕರ್ (1949), ದಿ ಟೈಗರ್ ಇನ್ ದಿ ಸ್ಮೋಕ್ (1952), ನೋ ಲವ್ ಲಾಸ್ಟ್ (1954)– ಇವು ಈಕೆಯ ಪ್ರಮುಖ ಕಾದಂಬರಿಗಳು. ಮಿಸ್ಟರ್ ಕ್ಯಾಂಪಿಯನ್ ಅಂಡ್ ಅದರ್ಸ್ (1939) ಈಕೆಯ ಕಥಾ ಸಂಕಲನ. (ಎಚ್.ವಿ.ಎಸ್.)

**ಆಲಿಂಗ್ಯಾಮ್, ವಿಲಿಯಂ:** 1824–89. ಐರಿಷ್ ಕವಿ. ಫ್ರೇಸರ್ಸ್ ಮ್ಯಾಗಜಿನಿನ ಸಂಪಾದಕನಾಗಿದ್ದ. (1874–79) ಪೊಯಮ್ಸ್ (1830), ಡೇ ಅಂಡ್ ನೈಟ್ ಸಾಂಗ್ಸ್ (1854), ಲಾರೆನ್ಸ್ ಬ್ಲೂಮ್‌ಫೀಲ್ಡ್ ಇನ್ ಐರ್ಲೆಂಡ್ (1864), ಐರಿಷ್ ಸಾಂಗ್ಸ್ ಅಂಡ್ ಪೊಯೆಮ್ಸ್ (1887)– ಇವು ಈತನ ಮುಖ್ಯ ಕೃತಿಗಳು. ಸ್ವತಃ ಕಲಾವಿದೆಯಾದ ಈತನ ಪತ್ನಿ ಇವನ ಮರಣಾನಂತರ ಇವನ ಪತ್ರಗಳನ್ನು ಪ್ರಕಟಿಸಿದಳು. ಯೇಟ್ಸ್‌ನ ಆರಂಭದ ಕವನಗಳಲ್ಲಿ ಈತನ ಪ್ರಭಾವ ಕಾಣುತ್ತದೆ. (ಎನ್.ಎಸ್.ಎಲ್.1.)

**ಆಲಿಕಲ್ಲು:** ಪದರುಗಟ್ಟಿದ ಮೋಡಗಳಿಂದ (ಕ್ಯೂಮುಲೋ ನಿಂಬಸ್ ಕ್ಲೌಡ್ಸ್) ಕೆಳಗೆ ಬೀಳುವ ಹಿಮಗಡ್ಡೆಯ ಸಣ್ಣ ಉಂಡೆಗಳು (ಹೇಲ್). ಹವಾಶಾಸ್ತ್ರದ ಪ್ರಕಾರ ಆಲಿಕಲ್ಲು ಉತ್ಪನ್ನವಾಗುವ ಸನ್ನಿವೇಶಗಳು ಮೂರು : 1. ಕೆಳಮಟ್ಟದಲ್ಲಿ ತೇವಪೂರಿತ ಬಿಸಿಗಾಳಿ, 2. ಉನ್ನತ ಎತ್ತರಗಳವರೆಗೆ (50,000' ಗಳನ್ನೂ ಮೀರಿ) ವ್ಯಾಪಿಸಿರುವ ಸಿಡಿಲಿನಿಂದ ಕೂಡಿದ ಬಿರುಗಾಳಿ, 3. ನೆಲದಿಂದ 10,000' – 12,000' ಎತ್ತರದಲ್ಲಿ ಹಿಮಬಿಂದು (ಫ್ರೀಸಿಂಗ್ ಪಾಯಿಂಟ್). ಹಿಮ ಮತ್ತು ನೀರು ಇವುಗಳ ಪರ್ಯಾಯ ಮಿಶ್ರಣದಿಂದ ಆಲಿಕಲ್ಲು ಬೆಳೆದು ವೃದ್ಧಿಯಾಗಿ ಹರಳುಗಟ್ಟುವುದು. ಗುಡುಗು, ಬಿರುಗಾಳಿಯಿಂದ ಕೂಡಿದ ಮಳೆಯಲ್ಲಿ ಒಮ್ಮೊಮ್ಮೆ ಆಲಿಕಲ್ಲುಗಳು ಬೀಳುತ್ತವೆ. ರೂಢಿಯಲ್ಲಿ




1 ಬೀಳುತ್ತಿರುವ ಮಳೆಹನಿಗಳು 2 ತುಂತುರು ಮಳೆಹನಿಗಳು 3 ಹಿಮಪದರ 4 ಗಡಸು ಹಿಮ 5 ಘನ ಹಿಮ 6 ಚಿಕ್ಕ ಆಲಿಕಲ್ಲಿನ ಅಡ್ಡ ಕೊಯ್ತ 7 ಆಲಿಕಲ್ಲಿನ ಅಡ್ಡಕೊಯ್ತ 8 ಗಡಸು ಹಿಮ 9 ಹಿಮತುಂಡು 10 ಮಂಜು ತುಂಡುಗಳು 11 ಹಿಮಸ್ಫಟಿಕಗಳು

ಇಂಥ ಮಳೆಯನ್ನು ಕಲ್ಮಳೆ ಎನ್ನುತ್ತಾರೆ. ಆಲಿಕಲ್ಲಿನ ಆಕಾರ ವಿವಿಧ. ಒಂದು ಕೆ.ಜಿ. ತೂಕದವನ್ನೂ ಕಂಡವರಿದ್ದಾರೆ. ತೇವಾಂಶವುಳ್ಳ ಗಾಳಿ ಶೀಘ್ರವಾಗಿ ಮೇಲಕ್ಕೇರುವುದರಿಂದ ಆಲಿಕಲ್ಲುಗಳು ಉತ್ಪತ್ತಿಯಾಗುತ್ತವೆ. ನೀರಿನ ಹನಿಗಳು ಹೆಪ್ಪುಗಟ್ಟಿ ನೀರಿನಲ್ಲಿ ತೇವಾಂಶ ಹೆಚ್ಚಿದಂತೆಲ್ಲ ಇವುಗಳ ಗಾತ್ರ ಮತ್ತು ತೂಕ ಹೆಚ್ಚುತ್ತವೆ. ತೂಕ ಹೆಚ್ಚಿದಾಗ ಮೇಲಕ್ಕೆ ಏರಿ ಹೋಗಲು ಸಾಧ್ಯವಿಲ್ಲದೆ ಕೆಳಕ್ಕೆ ಬೀಳುತ್ತವೆ. ಕೆಳಕ್ಕೆ ಬೀಳುವಾಗ ಗಾಳಿಯಲ್ಲಿನ ತೇವಾಂಶವನ್ನು ಹೀರಿ ಇವುಗಳ ಗಾತ್ರ ಇನ್ನೂ ಹೆಚ್ಚಬಹುದು. ಆಲಿಕಲ್ಲಿನಿಂದ ಕೂಡಿದ ಬಿರುಗಾಳಿಯ ಮಳೆಯು ಬೆಳೆಗಳಿಗೆ ವಿಪರೀತ ನಷ್ಟವನ್ನುಂಟುಮಾಡುತ್ತದೆ; ಮಾವು ಮುಂತಾದ ಹಣ್ಣುಗಳು ಕೊಳೆಯುತ್ತವೆ; ಕಾಯಿಗಳು ಉದುರಿಹೋಗುತ್ತವೆ. ಕುಂಬಳ ಮೂಂತಾದುವು ಕೆಡುತ್ತವೆ. ಕೆಲವು ವೇಳೆ ಈ ಮಳೆಗೆ ಸಿಕ್ಕಿಹಾಕಿಕೊಂಡ ಪ್ರಾಣಿಗಳು ಮತ್ತು ಜನರು ಸಾಯುವುದೂ ಉಂಟು. ಸಾಮಾನ್ಯವಾಗಿ ಆಲಿಕಲ್ಲು ಹೆಸರಿಗೆ ತಕ್ಕಂತೆ ಕಲ್ಲಿನಂತಿರುತ್ತಾದರೂ ಹಿಮದ ಹರಳುಗಳಿಂದ ಕೂಡಿದ ಮೃದು ಆಲಿಕಲ್ಲು ಅನೇಕವೇಳೆ ಹಿಮವನ್ನು ಹೋಲುತ್ತದೆ (**ನೋಡಿ– ಹವಾಶಾಸ್ತ್ರ, ಮೋಡಗಳು ಮಳೆ**). (ಎಂ.ಎಸ್.)

**ಆಲಿಗೊ ಕೀಟ:** ವಲಯವಂತ (ಅನೆಲಿಡ) ವಂಶದ ಒಂದು ವರ್ಗ. ಉದಾ: ಎರೆಹುಳು. ಇವುಗಳ ವಾಸ ಸಾಮಾನ್ಯವಾಗಿ ಮಣ್ಣಿನಲ್ಲಿ. ಕೆಲವು ಸಿಹಿನೀರುವಾಸಿಗಳೂ ಇವೆ. ಇವುಗಳಲ್ಲಿ ಚಲನೆಗೆ ಅನುಕೂಲವಾಗುವಂತೆ ಕೈಟಿನ್ ವಸ್ತುವಿನಿಂದಾದ ಸೀಟ ಎಂಬ ಬಿರುಗೂದಲುಗಳಿವೆ.

ನೆಲವಾಸಿ ಆಲಿಗೋಕೀಟ: ಉದಾ: ಯುಡ್ರಿಲಸ್, ಲುಂಬ್ರಿಕಸ್, ಯುಜಿನಸ್ ಮುಂತಾದವು.

ಜಲವಾಸಿ ಆಲಿಗೋಕೀಟ: ಉದಾ: ಟ್ಯುಬಿಫೆಕ್ಸ್. (ಎಚ್.ಬಿ.ಡಿ.)

**ಆಲಿಗೊಸೀನ್:** ಭೂ ವಿಜ್ಞಾನದಲ್ಲಿ ಟರ್ಷಿಯರಿ (**ನೋಡಿ: ಸ್ತರ ವಿವರಣಾ ಸ್ತಂಭ – ಟರ್ಷಿಯರಿ ತೃತೀಯ ಭೂಕಾಲ**) ಯುಗದ (ಈರಾ) ಮೂರನೆಯ ಕಲ್ಪ (ಈಪಾಕ್); 40 ದಶಲಕ್ಷ ವರ್ಷ ಪ್ರಾಚೀನದಿಂದ 25 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ. ಈ ಗ್ರೀಕ್ ಪದದ ಅರ್ಥ ಅಲ್ಪ (Oligos), ಈಚಿನದು (Kainos); ಕಾರಣ, ಈ ಅವಧಿಯ ಚಿಪ್ಪುಮೀನುಗಳ ಅತ್ಯಲ್ಪ ಪಳೆಯುಳಿಕೆಗಳು ಮಾತ್ರ (ಸು. ಶೇ.10) ಲಭ್ಯವಾಗಿವೆ. ಉತ್ತರ ಜರ್ಮನಿಯ ಶಿಲಾಸಮುದಾಯಗಳನ್ನೂ ಜೀವಾವಶೇಷಗಳನ್ನೂ ಅಧ್ಯಯನ ಮಾಡಿದ ಎಚ್.ಇ. ಬೆರಿಕ್ ಆಲಿಗೊಸೀನ್ ಪದವನ್ನು ಅರ್ಥಪೂರ್ಣವಾಗಿ ಮೊದಲಿಗೆ ಬಳಸಿದ (1854). ಮುಂದೆ ಕೊಟ್ಟಿರುವ ಕೋಷ್ಟಕ ಭೂಮಿಯ ಇತಿಹಾಸದಲ್ಲಿ ಆಲಿಗೊಸೀನ್ ಕಲ್ಪದ ಸ್ಥಾನವನ್ನು ಸ್ಪಷ್ಟೀಕರಿಸುತ್ತದೆ.

ಆಲಿಗೊಸೀನ್ ಸ್ತೋಮಗಳು ಎಂದರೆ ಆ ಕಲ್ಪದಲ್ಲಿ ರೂಪುಗೊಂಡ ಎಲ್ಲ ಶಿಲೆಗಳ ಸಮುದಾಯ ಎಂದು ಸಾಮಾನ್ಯ ಅರ್ಥ; ನಿರ್ದಿಷ್ಟ ಅರ್ಥ ಟರ್ಷಿಯರಿ ಯುಗದ ಆಲಿಗೊಸೀನ್ ಕಲ್ಪದಲ್ಲಿ ಉಂಟಾದ ಅವಸಾದನ ಶಿಲೆಗಳೆಂದಿದೆ.

ಇಯೊಸೀನ್ ಕಲ್ಪದ ಅಂತ್ಯದಲ್ಲಿ ಆ್ಯಂಗ್ಲೊಫ್ರಾಂಕ್‌ಬೆಲ್ಜಿಯನ್ ನಿಕ್ಷೇಪ ಪ್ರದೇಶ ಬಹಳ ಕಿರಿದಾಗಿ ಅಲ್ಲಲ್ಲಿ ಪರಸ್ಪರ ಬೇರ್ಪಟ್ಟ ತಗ್ಗುಪ್ರದೇಶಗಳಲ್ಲಿ ಮಾತ್ರ ಉಳಿಯಿತು. ಆಲಿಗೊಸೀನ್ ಕಾಲದ ಪ್ರಾರಂಭದಲ್ಲಿ ಈ ಪ್ರದೇಶದ ಹೆಚ್ಚು ಭಾಗ ಸಮುದ್ರಾಕ್ರಮಣಕ್ಕೆ ಒಳಗಾಯಿತು; ಇದು ಜರ್ಮನಿಯ ಉತ್ತರ ಭಾಗ ಮತ್ತು ರಷ್ಯದ ಪೂರ್ವ ಭಾಗಕ್ಕೆ ವಿಸ್ತರಿಸಿತು. ಆಗ ಬಂದ ಮೃದ್ವಂಗಿಗಳು ಈ ಕಾಲದ ವಿಶಿಷ್ಟ ಜೀವಿಗಳಾಗಿವೆ. ಜರ್ಮನಿಯಲ್ಲಿ ಇಯೊಸೀನ್ ನಿಕ್ಷೇಪಗಳೇ ಇಲ್ಲ. ಆದರೆ ಆಲಿಗೊಸೀನ್ ನಿಕ್ಷೇಪಗಳು ಉತ್ತಮವಾಗಿ ರೂಪುಗೊಂಡಿವೆ. ಇವುಗಳ ಆಧಾರದ ಮೇಲೆಯೇ ಬೆರಿಕ್ ಆಲಿಗೊಸೀನ್‌ಸ್ತೋಮ ಎಂಬ ಹೆಸರನ್ನು ಬಳಸಿದ್ದು. ಈ ಸ್ತೋಮವನ್ನು ಮೂರು ಭಾಗಗಳನ್ನಾಗಿ ವಿಭಜಿಸಲಾಗಿದೆ: 1. ಕೆಳಭಾಗ ಹಸಿರು ಮರಳು ಮತ್ತು ಜೇಡುಗಳಿಂದ ಕೂಡಿ ವಿಶಾಲ ವ್ಯಾಪ್ತಿಯನ್ನು ಹೊಂದಿದೆ ಮತ್ತು ವಿಶಿಷ್ಟ ಜೀವ್ಯಶೇಷಗಳಿಂದ ಕೂಡಿದೆ. ಇವುಗಳ ಮಧ್ಯೆ ಕಂದು ಬಣ್ಣದ ಕಲ್ಲಿದ್ದಲ ಪದರಗಳಿವೆ. ಅವುಗಳಲ್ಲಿ ಕೆಲವು 100[1] ದಪ್ಪ ಇವೆ. ಈ ಕಲ್ಲಿದ್ದಲು ಕೋನಿಫೆರಸ್ ಗಿಡಗಳಿಂದಾಗಿದೆ. ಅವುಗಳಿಂದ ಜಿನುಗಿದ ಗೋಂದು ಬಾಲ್ಟಿಕ್ ತೀರದ ಸುಪ್ರಸಿದ್ಧ ಅಂಬರ್ ನಿಕ್ಷೇಪವಾಗಿದೆ. ಆಲಿಗೊಸೀನ್ ಸ್ತೋಮದ ಕೆಳಭಾಗ ಲ್ಯಾಟ್‌ಫೋರ್ಡ್ ಎಂಬ ಹಳ್ಳಿಯ ಬಳಿ ಹೇರಳವಾದ ಜೀವ್ಯಶೇಷಗಳನ್ನು ಹೊಂದಿದೆ. ಆದ್ದರಿಂದ ಇದರ ಹೆಸರು ಲ್ಯಾಟ್‌ಫೋರ್ಡಿಯನ್ ಶ್ರೇಣಿ. 2. ಮಧ್ಯಭಾಗ ನೀಲಿ ಜೇಡಿನಿಂದ ಕೂಡಿದೆ. ಇದರ ಹೆಸರು ಸೆಪ್ಟೇರಿಯಂಟಾನ್. ಈ ನಿಕ್ಷೇಪದ ಇನ್ನೊಂದು ಮುಖದ ಹೆಸರು ಸ್ಟೆಟ್ಟಿಯನ್ ಮರಳುಗಳು. ಇದರಲ್ಲಿ ಸಾಗರವಾಸಿಗಳ ಜೀವ್ಯಶೇಷಗಳು ಹೇರಳವಾಗಿವೆ. ಸ್ಯಾಕ್ಸೊನಿ ಹತ್ತಿರ ಇರುವ ಈ ಶಿಲೆಗಳಲ್ಲಿ ರಂಜಕದ ಉಂಡೆಗಳಿವೆ. ಇವುಗಳ ಮಧ್ಯೆ ಮೀನಿನ ಎಲುಬು ಅಥವಾ ಪ್ರಾಣಿಗಳ ಚಿಪ್ಪು ಇರುವುದು ಸಾಮಾನ್ಯ. 3. ಮೇಲ್ಭಾಗ ಕ್ಯಾಸೆಲ್ ಮತ್ತು ಡೂಸಲ್ ಡಾರ್ಫ್ ಬಳಿ ಉತ್ಕೃಷ್ಟ ರೀತಿಯಲ್ಲಿ ಸಂಚಯನಗೊಂಡಿದೆ. ಇದು ಮುಖ್ಯವಾಗಿ ಗ್ಲಾಕೊನೈಟ್ ಮರಳಿನಿಂದ ಕೂಡಿ, ಸು. 200 ಪ್ರಕಾರಗಳ ಜೀವ್ಯಶೇಷಗಳನ್ನು ಒಳಗೊಂಡಿದೆ. ಇದೇ ಅಕ್ವಿಟೇನಿಯನ್ ಶಿಲಾಶ್ರೇಣಿ.

ಪ್ಯಾರಿಸ್ ಪ್ರದೇಶದಲ್ಲಿ ಇಯೊಸೀನ್ ಸ್ತೋಮ ಆಲಿಗೊಸೀನ್ ಸ್ತೋಮದೊಡನೆ ಬೆರೆಯುವುದನ್ನು, ಈ ಎರಡೂ ಸ್ತೋಮಗಳನ್ನು ಇಲ್ಲಿ ಹರಿಯುತ್ತಿರುವ ನದಿ ಕಣಿವೆಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಇಲ್ಲಿ ಆಲಿಗೊಸೀನ್ ಸ್ತೋಮವನ್ನು ಸೆನಾಯ್ಸಿಯನ್, ಸ್ಟ್ಯಾಂಪೇನಿಯನ್ ಮತ್ತು ಚಟ್ಟಿಯನ್ ಎಂಬ ಮೂರು ಭಾಗಗಳಾಗಿ ವಿಭಜಿಸಲಾಗಿದೆ. ಭೂಪ್ರದೇಶ ಸುತ್ತುವರಿದಿರುವ ಸಮುದ್ರದಲ್ಲಿ ಸಂಚಯನಗೊಂಡ ನೀಲಿ ಮತ್ತು ಹಸಿರು ಮಾರಲ್ ಶಿಲೆಗಳು ಕೆಳಭಾಗದಲ್ಲಿವೆ. ಇವುಗಳಲ್ಲಿ ಸಮುದ್ರವಾಸಿಗಳ ಅವಶೇಷಗಳೇ ಅಲ್ಲದೆ ಸರೀಸೃಪಗಳ (ಡೈನೊಸಾರ್‌ಗಳು) ಮತ್ತು ಸ್ತನಿಗಳ ಅವಶೇಷಗಳೂ ಇವೆ. ಮಾರಲ್

ಶಿಲೆಗಳ ಮೇಲೆ ಸುಣ್ಣದ ನಿಕ್ಷೇಪವಿದೆ. ಇದರ ಹೆಸರು ಕ್ಯಾಲ್ಕರೆ ಡಿಬ್ರೀ. ಮಧ್ಯದಲ್ಲಿ ವಿಸ್ತಾರವಾದ ಸಾಗರ ನಿಕ್ಷೇಪಗಳಿವೆ. ಇವು ಆಸ್ಟ್ರಿಯ, ಕಾರ್ಬುಲ ಮೊದಲಾದ ಲೆಮೆಲ್ಲಿಬ್ರ್ಯಾಂಕ್‌ಗಳಿಂದ ಕೂಡಿದ ಮಾರಲ್ ಶಿಲೆಗಳಿಂದ ಪ್ರಾರಂಭವಾಗುತ್ತವೆ. ಇವುಗಳ ಮೇಲೆ ಮರಳು ಪದರಗಳಿವೆ. ಇವುಗಳ ಕೆಳಭಾಗವನ್ನು ಚೌರೆ ಮರಳುಗಳೆಂದೂ

| ಯುಗ | ಕಲ್ಪ | ಜೀವಿಗಳ ವಿವರ | ಕಾಲ (ದಶಲಕ್ಷ ವರ್ಷ ಪ್ರಾಚೀನಕ್ಕೆ) |
|---|---|---|---|
| ಕ್ವಾರ್ಟರ್ನರಿ | ಈಚಿನ | ಆಧುನಿಕ ಮಾನವ | .... |
| | ಪ್ಲಿಸ್ಟೊಸೀನ್ | ಪ್ರಾರಂಭದ ಮಾನವ | |
| ಟರ್ಷಿಯರಿ | ಪ್ಲಿಯೋಸೀನ್ | ಮಹಾ ಮಾಂಸಾಹಾರಿಗಳು | 11 |
| ಮಯೋಸೀನ್ | | ತಿಮಿಂಗಿಲಗಳು, ಕಪಿಗಳು, ಹುಲ್ಲು ಮೇಯುವವು, | 25 |
| | ಆಲಿಗೋಸೀನ್ | ಮಹಾಸಸ್ತನಿಗಳು | 40 |
| | ಇಯೋಸೀನ್ | ಹೂ ಬಿಡುವ ಗಿಡಗಳ ಉದಯ | 60 |
| | ಪೆಲಿಯೊಸೀನ್ | ಹೊಕ್ಕಳುಬಳ್ಳಿಯಿರುವ ಮೊದಲ ಸಸ್ತನಿಗಳು. | 64 |
| ಮೀಸೊ ಜ಼ೋಯಿಕ್ | ಕ್ರಿಟೇಷಿಯಸ್ | ಡಿನೊಸಾರ್‌ಗಳ ನಾಶ | 135 |
| | ಜುರಾಸಿಕ್ | ಡಿನೊಸಾರ್‌ಗಳ ಅತ್ಯುಚ್ಛ್ರಾಯ, ಮೊದಲ ಹಕ್ಕಿಗಳು, ಮೊದಲ ಪುಟ್ಟ ಸ್ತನಿಗಳು | 190 |
| | ಟ್ರಯಾಸಿಕ್ | ಡಿನೊಸಾರ್‌ಗಳ ಉದಯ | 225 |
| ಪೇಲಿಯೊ ಜ಼ೋಯಿಕ್ | ಪರ್ಮಿಯನ್ | ಉರಗಗಳ ಬೆಳವಣಿಗೆ, ಕೋನಿಫರ್‌ಗಳ ವಿಪುಲತೆ | 280 |
| | ಕಾರ್ಬೋನಿಫೆರಸ್ ಮೇಲಿನ | ಮೊದಲ ಉರಗಗಳು ಕಲ್ಲಿದ್ದಲ ಕಾಡುಗಳು | |
| | ಕೆಳಗಿನ | ಷಾರ್ಕುಗಳ ವಿಪುಲತೆ | 350 |
| | ಡಿವೋನಿಯನ್ | ಉಭಯಚರಗಳ ಉದಯ, ಮೀನುಗಳ ವಿಪುಲತೆ. | 400 |
| | ಸೈಲೂರಿಯನ್ | ಮೊದಲ ನೆಲ ಸಸ್ಯಗಳು ಮತ್ತು ಪ್ರಾಣಿಗಳು. | 440 |
| | ಆರ್ಡೋವಿಶಿಯನ್ | ಮೊದಲ ಮೀನುಗಳು | 500 |
| | ಕೇಂಬ್ರಿಯನ್ | ನೀರಿನ ಅಕಶೇರುಕಗಳು | 600 |

ಮೇಲ್ಭಾಗವನ್ನು ಫೌಂಟನ್ ಬ್ಲೊ ಮರಳುಗಳೆಂದೂ ಕರೆದಿದೆ. ಇವೆಲ್ಲವೂ ಜೀವ್ಯಶೇಷರಹಿತವಾದುವು. ಇವು ಗಾಜು ತಯಾರಿಕೆಗೆ ಅತ್ಯುತ್ತಮವಾಗಿವೆ. ಮೇಲ್ಭಾಗ ಕೆಳಗಿನಿಂದ ಕ್ರಮವಾಗಿ ಸುಣ್ಣ ಶಿಲೆ, ಹಸಿರು ಮಾರಲ್, ಮರಳು ಮತ್ತು ಮರಳುಶಿಲೆಗಳಿಂದ ಕೂಡಿದೆ. ಮರಳುಗಳಲ್ಲಿ ಸ್ತನಿಗಳ ಅವಶೇಷಗಳಿವೆ. ಅವುಗಳಲ್ಲಿ ಅಂತ್ರಕೊತೀರಿಯಂ ಮತ್ತು ಮೈಕ್ರೊಬೊನಂ ಮುಖ್ಯವಾದುವು.

ಬೆಲ್ಜಿಯಂನಲ್ಲಿ ಆಲಿಗೊಸೀನ್‌ಸ್ತೋಮ ಆಂಟ್‌ವರ್ಪ್‌ನ ಸುತ್ತಮುತ್ತ ವ್ಯಾಪಿಸಿದೆ. ಇಂಗ್ಲೆಂಡಿನಲ್ಲಿ ಈ ಸ್ತೋಮ ಹ್ಯಾಂಪ್‌ಷೈರ್ ಮತ್ತು ವೈಟ್ ದ್ವೀಪಗಳಿಗೆ ಮಾತ್ರ ಸೀಮಿತವಾಗಿದೆ. ಈ ಎರಡು ಪ್ರದೇಶಗಳಲ್ಲಿಯೂ ಕೆಳ ಮತ್ತು ಮಧ್ಯ ಭಾಗಗಳು ಮಾತ್ರ ರೂಪುಗೊಂಡಿವೆ. ಬೆಲ್ಜಿಯಂನಲ್ಲಿನ ಭೂಕೊರೆತವನ್ನು ಪರಿಶೀಲಿಸಿದಾಗ ಅಲ್ಲಿ ಭೂಮಿಯ ಮೇಲ್ಭಾಗವಿರುವುದು ಕಂಡುಬಂದಿದೆ.

ಉತ್ತರ ಅಮೆರಿಕದಲ್ಲಿ ಆಲಿಗೊಸೀನ್ ಯುಗ ಜ್ವಾಲಾಮುಖಿಗಳ ಕಾರ್ಯಾಚರಣೆಯೊಡನೆ ಪ್ರಾರಂಭವಾಯಿತು. ಪಶ್ಚಿಮ ಪ್ರದೇಶವನ್ನು ಜ್ವಾಲಾಮುಖಿಯ ಬೂದಿ ಮುಚ್ಚಿತು. ಯೆಲ್ಲೋಸ್ಟೋನ್ ಪಾರ್ಕ್ ಮತ್ತು ಕೊಲರೆಡೊ ಪ್ರಾಂತ್ಯದ ಸ್ಯಾನ್ ಜುವಾನ್ ಪರ್ವತ ಪ್ರದೇಶಗಳಲ್ಲಿ ಜ್ವಾಲಾಮುಖಿಗಳ ಹಾವಳಿ ತೀವ್ರವಾಗಿತ್ತು. ಆಲಿಗೊಸೀನ್ ಕಾಲದ ಭೂನಿಕ್ಷೇಪಗಳು ದಕ್ಷಿಣ ಡಕೋಟ, ನೆಬ್ರಾಸ್ಕ, ವೋಮಿಂಗ್ ಮತ್ತು ಕೊಲರೆಡೊ ಪ್ರಾಂತ್ಯಗಳಲ್ಲಿ ಚೆನ್ನಾಗಿ ಸಂಚಯನಗೊಂಡಿವೆ. ಈ ನಿಕ್ಷೇಪಗಳನ್ನು ವೈಟ್ ರಿವರ್ ಶಿಲಾಶ್ರೇಣಿ ಎಂದು ಕರೆದಿದೆ; ಇವು ಶಿಥಿಲೀಕರಣ ಹೊಂದಿ ಬ್ಲಾಕ್‌ಹಿಲ್‌ಗೆ ಆಗ್ನೇಯದಲ್ಲಿ ಅಪ್ರಯೋಜಕ ಬೃಹದ್‌ಭೂಮಿ ಎನಿಸಿಕೊಂಡಿವೆ. ಈ ಪ್ರದೇಶ ಬೆನ್ನೆಲುಬುಳ್ಳ ಪ್ರಾಣಿಗಳ ಅವಶೇಷಗಳ ಗಣಿ ಎನಿಸಿದೆ.

ಭಾರತದಲ್ಲಿ ಆಲಿಗೊಸೀನ್ ಕಾಲ ಹಿಮಾಲಯ ಪರ್ವತದ ಮೇಲೊಗೆತದ ಒಂದನೆಯ ಮತ್ತು ಎರಡನೆಯ ಹಂತಗಳ ಮಧ್ಯಕಾಲ. ಇಯೊಸೀನ್ ಕಲ್ಪದ ಅಂತ್ಯದಲ್ಲಿ ಟೆತಿಸ್ ಸಾಗರದ ನಿಕ್ಷೇಪಗಳು ಮೇಲೊಗೆಯಲ್ಪಟ್ಟು ಹಿಮಾಲಯ ಪರ್ವತಗಳ ಉದಯಕ್ಕೆ ನಾಂದಿಯಾಯಿತು. ಟೆತಿಸ್ ಸಾಗರದ ನಿಕ್ಷೇಪಗಳು ದಿಂಡುದಿಂಡಾಗಿ ಮಾಡಲ್ಪಟ್ಟುದರಿಂದ, ಸಾಗರ ದಕ್ಷಿಣಕ್ಕೆ ಹಿಂಜರಿದು, ಈಗಿನ ಬಲೂಚಿಸ್ತಾನ ಮತ್ತು ಸಿಂಧ್ ಪ್ರದೇಶದಲ್ಲಿ ಮಾತ್ರ ಉಳಿಯಿತು. ಪೂರ್ವದಲ್ಲಿ ಅಸ್ಸಾಂ ಮತ್ತು ಬರ್ಮಕ್ಕೆ ಮಧ್ಯೆ ಒಂದು ದೊಡ್ಡ ದಿಂಡುಂಟಾಗಿ ಸಾಗರ ಇಬ್ಭಾಗವಾಗಿ ಅಸ್ಸಾಂ ಮತ್ತು ಬರ್ಮಗಳಲ್ಲಿ ದಕ್ಷಿಣದ ಸ್ವಲ್ಪ ಪ್ರದೇಶಗಳಲ್ಲಿ ಮಾತ್ರ ಉಳಿಯಿತು. ಆದ್ದರಿಂದ ಆಲಿಗೊಸೀನ್ ನಿಕ್ಷೇಪಗಳು ಈ ಪ್ರದೇಶದಲ್ಲಿ ಮಾತ್ರ ಕಾಣಬರುತ್ತವೆ.

ಬಲೂಚಿಸ್ತಾನದಲ್ಲಿ ಅನೇಕ ಅಡಿಗಳಷ್ಟು ಮರಳುಶಿಲೆ ಮತ್ತು ಹಸಿರು ಬಣ್ಣದ ಮರಳುಮಿಶ್ರಿತ ಜೇಡುಶಿಲೆಗಳು ನಿಕ್ಷೇಪಗೊಂಡಿವೆ. ಸ್ವಲ್ಪ ಸುಣ್ಣಶಿಲೆಯೂ ಇದೆ. ಈ ನಿಕ್ಷೇಪಗಳು ಆಲ್ಪ್ಸ್ ಪ್ರದೇಶದ ಆಲಿಗೊಸೀನ್ ಕಾಲದ ಫ್ಲಿಷ್ ನಿಕ್ಷೇಪವನ್ನು ಹೋಲುವುವು. ಇವುಗಳಿಗೆ ಕೊಜಕ್ ಜೇಡುಶಿಲೆಗಳು ಎಂಬ ಹೆಸರಿದೆ. ಇವುಗಳಲ್ಲಿ ಜೀವ್ಯಶೇಷಗಳಿರುವುದು ಅತ್ಯಲ್ಪ. ಅಪೂರ್ವವಾಗಿ ಸಿಕ್ಕುವ ಶಂಖಗಳ ಆಲಿಗೊಸೀನ್ ಕಾಲವನ್ನು ಸೂಚಿಸುತ್ತವೆ. ಬಲೂಚಿಸ್ತಾನದ ನಿಕ್ಷೇಪಗಳಿಗಿಂತ ಸಿಂಧ್‌ನಲ್ಲಿರುವ ಆಲಿಗೊಸೀನ್ ನಿಕ್ಷೇಪಗಳು ಆಸಕ್ತಿಯನ್ನು ಕೆರಳಿಸುತ್ತವೆ. ಕಿರ್ತಾರ್ ಶಿಲಾಶ್ರೇಣಿಯ ಮೇಲೆ ಅನುರೂಪತೆಯಿಂದ ನಿಕ್ಷೇಪಗೊಂಡಿರುವ ನಾರಿಶ್ರೇಣಿಯ ಕೆಳಭಾಗ ಈ ಕಾಲದ್ದು.

ಅಸ್ಸಾಂನಲ್ಲಿ ನಿಕ್ಷೇಪಗೊಂಡಿರುವ ಆಲಿಗೊಸೀನ್ ಶಿಲೆಗಳಿಗೆ ಬರೈಲ್ ಶಿಲಾಶ್ರೇಣಿ ಎಂಬ ಹೆಸರಿದೆ. ಇವುಗಳಲ್ಲಿ ಜೀವ್ಯಶೇಷಗಳು ಬಲು ವಿರಳ. ಈ ಶ್ರೇಣಿಯ ಮೇಲೆ ಅನನುರೂಪತೆಯಿಂದ ನಿಕ್ಷೇಪಗೊಂಡಿರುವ ಮಯೊಸೀನ್ ಶಿಲೆಗಳ ಆಧಾರದ ಮೇಲೆ ಇದರ ಕಾಲ ನಿಶ್ಚಯಿಸಲಾಗಿದೆ. ಬರ್ಮದ ಪೆಗು ಶಿಲಾಶ್ರೇಣಿ ಈ ಕಾಲಕ್ಕೆ ಸೇರಿದೆ. ಇವುಗಳಲ್ಲಿ ಜೀವ್ಯಶೇಷಗಳು ಹೇರಳ; ಅಲ್ಲದೆ ಇವು ತೈಲಾಶ್ರಯಗಳ ತವರು.

ಆಲಿಗೊಸೀನ್ ಯುಗ ಪ್ರಾರಂಭವಾಗುವ ವೇಳೆಗೆ ಕ್ರಿಯೊಡಾಂಟ ಶಾಖೆಯ ಒಂದು ಜಾತಿಯನ್ನುಳಿದು ಪ್ರಾಚೀನ ಸಸ್ತನಿಗಳೆಲ್ಲ ಗತವಂಶಿಗಳಾಗಿದ್ದುವು. ಮಾರ್ಸೂಪಿಯ ಮತ್ತು ಕೀಟಾಹಾರಿಗಳು ಪ್ರಾಮುಖ್ಯ ಹೊಂದಿರಲಿಲ್ಲ. ಆದರೆ ಪ್ರಗತಿಪರ ಸಸ್ತನಿಗಳು ಪ್ರಬಲವಾಗುತ್ತಿದ್ದುವು. ಮೂರು ಬೆರಳಿನ ಮೀಸೊಹಿಪ್ಪಸ್ ಮತ್ತು ಮಯೊಹಿಪ್ಪಸ್‌ಗಳು ಅತಿ ಸಾಮಾನ್ಯ ಕುದುರೆಗಳಾಗಿದ್ದುವು. ಓಡುವ, ದ್ವಿಚರ ಮತ್ತು ನಿಜ ಎಂಬ ಮೂರು ಜಾತಿಯ ಖಡ್ಗಮೃಗಗಳಿದ್ದವು. ಮೊದಲ ಎರಡು ಜಾತಿಯ ಖಡ್ಗಮೃಗಗಳು ಆಲಿಗೊಸೀನ್ ಕಾಲಕ್ಕೆ ಸೀಮಿತಗೊಂಡಿವೆ. ಆದರೆ ಮೂರು ಜಾತಿಗಳಲ್ಲೂ ದೈತ್ಯಾಕಾರಿಗಳು ಉದಯಿಸಿದವು. ದ್ವಿಚರ ಖಡ್ಗಮೃಗಗಳ ಗಾತ್ರ ಗಣನೀಯವಾದುದು. ಬಲೂಚಿತೀರಿಯಂ ಎಂಬ ಖಡ್ಗಮೃಗ ಆಗಿನ ಇತರ ಎಲ್ಲ ಪ್ರಾಣಿಗಳಿಗಿಂತ ದೊಡ್ಡದಾಗಿತ್ತೆಂದು ಹೇಳಬಹುದು. ಈ ಕಾಲದ ಯಾವ ಖಡ್ಗಮೃಗಕ್ಕೂ ಕೊಂಬುಗಳಿರಲಿಲ್ಲ. ಬಲೂಚಿತೀರಿಯಂ ಖಡ್ಗಮೃಗವನ್ನು ಬಿಟ್ಟರೆ ಟೈಟನೊತೀರ್‌ಗಳೇ ದೊಡ್ಡಗಾತ್ರದ ಪ್ರಾಣಿಗಳಾಗಿದ್ದುವು. ಈ ಪ್ರಾಣಿಗಳು ಆಲಿಗೊಸೀನ್ ಯುಗದ ಅಂತ್ಯಕ್ಕೆ ಮೊದಲೇ ಆಶ್ಚರ್ಯಕರವಾದ ರೀತಿಯಲ್ಲಿ ನಿರ್ನಾಮವಾದುವು. ಕ್ರಿಯಾಡಾಂಟಗಳ ವಿಕಾಸದ ಉನ್ನತ ಶಿಖರವನ್ನು ಮುಟ್ಟಿದುವುಗಳಲ್ಲಿ ಒಂಟೆ, ಟಪೀರ್, ಬೀವರ್, ಅಳಿಲು, ಮೊಲ ಮತ್ತು ಇಲಿಗಳೂ ಇದ್ದುವು. ನಾಯಿ, ಕಚ್ಚುವ ಮತ್ತು ಇರಿಯುವ ಬೆಕ್ಕುಗಳು ಈ ಕಾಲದ ಮುಖ್ಯ ಮಾಂಸಾಹಾರಿಗಳು. ಆಲಿಗೊಸೀನ್ ಕಾಲದಲ್ಲಿ ಯುರೋಪಿನ ಸಸ್ಯವರ್ಗ, ಉಷ್ಣವಲಯದ ಗಿಡಮರಗಳು ಮತ್ತು ಶೀತವಲಯದ ಸಸ್ಯಗಳ ಮಿಶ್ರಣದಿಂದ ಕೂಡಿತ್ತು. ಆದರೆ ಯೂರಲ್ ಪರ್ವತ ಪ್ರದೇಶ ಮತ್ತು ಜಪಾನ್‌ಗಳು, ಉತ್ತರ ಅಮೆರಿಕ ಮತ್ತು ಯುರೋಪುಗಳ ಅಕ್ಷಾಂಶಗಳಲ್ಲಿಯೇ ಇದ್ದರೂ ಆ ಪ್ರದೇಶಗಳಲ್ಲಿ ಸಮಶೀತೋಷ್ಣವಲಯದ ಸಸ್ಯವರ್ಗ ಇದ್ದುದು ವ್ಯಕ್ತವಾಗಿದೆ. ಹೀಗೆ ಉತ್ತರಾರ್ಧಗೋಳದ ಪಶ್ಚಿಮದಲ್ಲಿ ಉಷ್ಣವಲಯದ ಸಸ್ಯಪ್ರಾಂತ್ಯವೂ ಪೂರ್ವದಲ್ಲಿ ಸಮಶೀತೋಷ್ಣವಲಯದ ಸಸ್ಯಪ್ರಾಂತ್ಯವೂ ಕಂಡುಬರುತ್ತಿದ್ದುವೆಂದು ತಿಳಿಯಬಹುದು. ಸಿಂಧ್ ಪ್ರಾಂತ್ಯದಲ್ಲಿ ಆಲಿಗೊಸೀನ್ ಶಿಲೆಗಳಲ್ಲಿ ನಮ್ಮುಲೈಟಿಸ್, ಇಂಟರ್‌ಮೀಡಿಯಸ್ ಮತ್ತು ಲೆಪಿಡೊಸೈಕ್ಲಿನ ಡಯಲೇಟ ಎಂಬ ಪೊರಮಿನಿಫೆರ್‌ಗಳ ಅವಶೇಷಗಳು ಹೇರಳವಾಗಿವೆ. ಮೊದಲನೆಯದು ಆಲಿಗೊಸೀನ್ ಸ್ತೋಮದ ಕೆಳಭಾಗದ ವಿಶಿಷ್ಟ ಅವಶೇಷ. ಇವೇ ಅಲ್ಲದೆ ಮಾಂಟ್ಲಿವಾಲಿಷಿಯ ಎಂಬ ಹವಳ, ಸ್ಕೆಜಾಸ್ಟರ್, ಯೂಪೆಟಗಸ್ ಮತ್ತು ಕ್ಲಿಪಿಯಾಸ್ಟರ್ ಎಂಬ (ಎಕಿನಾಯಿಡ್) ಕಂಟಕಚರ್ಮಿಗಳು ಹೆಚ್ಚು ಸಂಖ್ಯೆಯಲ್ಲಿವೆ. ಅಲ್ಲದೆ ಆಸ್ಟ್ರಿಯ, ಲ್ಯೂಸಿನ, ಪೆಕ್ಟೆನ್, ವೀನಸ್ ಮುಂತಾದ ಮೃದ್ವಂಗಿಗಳೂ ಇದ್ದವು ಎಂದು ತಿಳಿದುಬಂದಿದೆ. (ಡಿ.ಆರ್.)

**ಆಲಿಡೇಡ್:** ಮೋಜಣಿ ಕಾರ್ಯದಲ್ಲಿ ಬಳಸುವ ಒಂದು ಉಪಕರಣ. ದರ್ಶಕಪಟ್ಟಿ ದಿಕ್ಸೂಚಿಕ ಎಂದೂ ಕರೆಯುವುದಿದೆ. ಯಾವುದೇ ದಿಕ್ಕಿನಲ್ಲಿ ನೇರನೋಟದಲ್ಲಿ ಬರುವ ವಸ್ತುವನ್ನು ಸಮತಟ್ಟಿನ ಮೇಜಿನ ಹಾಳೆಯ ಮೇಲೆ ಬಿಂಬಿಸಲು ಇದು ಸಹಾಯಕಾರಿ. ಆದಕಾರಣ ಮೋಜಣಿದಾರರಿಗೆ, ಭೂಮಿತಿ ವಿಜ್ಞಾನಿಗಳಿಗೆ, ಕ್ಷೇತ್ರಸ್ವರೂಪ (ಟೋಪೊಗ್ರಾಫಿ) ತಿಳಿಯಬಯಸುವವರಿಗೆ ಆಲಿಡೇಡ್ ಅತ್ಯುಪಯುಕ್ತ ಉಪಕರಣ. ಇದನ್ನು ಒಂದು ಚಪ್ಪಟೆ ಮತ್ತು ನೇರವಾದ ಕಬ್ಬಿಣ ಅಥವಾ ಮರದ ಪಟ್ಟಿಯಿಂದ ತಯಾರುಮಾಡಿದೆ. ಈ ಪಟ್ಟಿಯ ಎರಡು ತುದಿಗಳಲ್ಲಿ ಚಿಕ್ಕ ನಿಲುವಿನ ಲೋಹದ ಭಾಗಗಳಿವೆ. ಇವು ನೇರ

ಗೆರೆಯ ಮೇಲಿರಲು ಸಾಧ್ಯವಾಗುವಂತೆ ಬಿರುಕುಗಳನ್ನು ಹೊಂದಿವೆ. ಆಲಿಡೇಡನ್ನು ಸಮತಟ್ಟು ಮೋಜಣಿಯ ಅಂಗವಾಗಿ ಮೇಲ್ಮೈಯ ವಿಸ್ತೀರ್ಣವನ್ನು ಅಳೆಯಲು ಮತ್ತು ಭೂಪಟವನ್ನು ತಯಾರಿಸಲು ಉಪಯೋಗಿಸುತ್ತಾರೆ. ಕೆಲವು ವೇಳೆ ಕೋನಗಳನ್ನು ಅಳೆಯಬಲ್ಲ ಸಾಧನಕ್ಕೂ ಆಲಿಡೇಡ್ ಎಂಬ ಹೆಸರಿದೆ. ಆಲಿಡೇಡ್‌ನಲ್ಲಿ ಎರಡು ಬಗೆಯುಂಟು.



ದುರ್ಬೀನ್ ಆಲಿಡೇಡ್

ಒಂದು ಸಾಮಾನ್ಯ ಆಲಿಡೇಡ್, ಮತ್ತೊಂದು ದುರ್ಬೀನು ಆಲಿಡೇಡ್. ಸಾಮಾನ್ಯ ಆಲಿಡೇಡನ್ನು ಕ್ಷೇತ್ರಕಾರ್ಯದಲ್ಲಿ, ಅದರಲ್ಲಿಯೂ ಪ್ರಾಯೋಗಿಕ ಕೆಲಸದಲ್ಲಿ, ವಿದ್ಯಾರ್ಥಿಗಳು ಬಹಳವಾಗಿ ಬಳಸುತ್ತಾರೆ. ದುರ್ಬೀನು ಆಲಿಡೇಡಿನ ಉಪಯೋಗ ವಿಶೇಷವಾಗಿ ಮೋಜಣಿದಾರರಿಗೆ. ಇದರಲ್ಲಿ ಸಾಮಾನ್ಯ ಆಲಿಡೇಡಿನ ಜೊತೆಗೆ ಒಂದು ದುರ್ಬೀನು ಮತ್ತು ಅಳತೆ ಮಾಡುವ ಗೋಳಾಂಶ ಇವೆ. ಇವುಗಳ ಮೂಲಕ ಎತ್ತರ ಮತ್ತು ಉದ್ದವನ್ನು ಸುಲಭವಾಗಿ ಅಳೆಯಬಹುದು. (ಬಿ.ಎಲ್.ಸಿ.ಆರ್.)

**ಆಲಿಫ಼ಾಂಟ್, ಮಾರ್ಗರೇಟ್:** 1828–97. ಸ್ಕಾಟ್ಲೆಂಡಿನ ಲೇಖಕಿ. ಕಾದಂಬರಿ, ಜೀವನಚರಿತ್ರೆ ಬರೆದಿದ್ದಾಳೆ. 1852ರಲ್ಲಿ ಫ್ರಾನ್ಸಿಸ್ ವಿಲ್ಸನ್ ಆಲಿಫ಼ಾಂಟ್ ಎಂಬಾತನನ್ನು ಮದುವೆಯಾದಳು. 1849ರಲ್ಲಿ ಪ್ರಕಟವಾದ ಮಿಸಸ್ ಮಾರ್ಗರೆಟ್ ಮೇಟ್ಲೆಂಡ್ ಎಂಬ ಈಕೆಯ ಕಾದಂಬರಿ ಹಾಸ್ಯ, ಕರುಣ ಪಾತ್ರರಚನೆಗಳ ಕೌಶಲದಿಂದ ಈಕೆಯ ಖ್ಯಾತಿಯನ್ನು ಹೆಚ್ಚಿಸಿತು. ಚರಿತ್ರೆ, ಜೀವನಕಥೆಗಳನ್ನೂ ಈಕೆ ಬರೆದಿದ್ದಾಳೆ. ಅವಸರದಿಂದ ಬರೆಯುತ್ತಿದ್ದುದರಿಂದ ಶೈಲಿ, ವಸ್ತುನಿರೂಪಣೆಗಳಲ್ಲಿ ಅನೇಕ ದೋಷಗಳು ಕಂಡುಬರುತ್ತವೆ. ದಿ ಕ್ರಾನಿಕಲ್ಸ್ ಆಫ್ ಕಾರ್ಲಿಂಗ್ ಫರ್ಡ್ (1863–76), ದಿ ಮಿನಿಸ್ಟರ್ಸ್ ವೈಫ್ (1869), ಎಫಿ ಆಗಿಲ್ವಿ (1886), ಕರ್ಸ್‌ಟೀನ್ (1890), ಎ ಬಿಲೀಗರ್ಡ್ ಸಿಟಿ (1880), ಎ ಲಿಟಲ್ ಪಿಲ್‌ಗ್ರಿಂ ಇನ್ ದಿ ಅನ್‌ಸೀನ್ (1882) ಎಂಬ ಕಾದಂಬರಿಗಳನ್ನೂ ಸ್ಕೆಚಸ್ ಆಫ್ ದಿ ರೇನ್ ಆಫ್ ಜಾರ್ಜ್ II (1869), ದಿ ಮೇಕರ್ಸ್ ಆಫ್ ಫ್ಲಾರೆನ್ಸ್ (1876), ಲಿಟರರಿ ಹಿಸ್ಟರಿ ಆಫ್ ಇಂಗ್ಲೆಂಡ್ 1790–1825 (1882), ರಾಯಲ್ ಎಡಿನ್ಬರೊ (1890), ಸೇಂಟ್ ಫ್ರಾನ್ಸಿಸ್ ಆಫ್ ಅಸಿಸಿ, ಎಡ್ವರ್ಡ್ ಇರ್ವಿಂಗ್ – ಇವೇ ಮುಂತಾದ ಜೀವನಕಥೆಗಳನ್ನೂ ಜೀವನಚರಿತ್ರೆಗಳನ್ನೂ ಈಕೆ ಬರೆದಿದ್ದಾಳೆ. (ಎಚ್.ವಿ.ಎಸ್.)

**ಆಲಿಫ್ಯಾಟಿಕ್ ಸಂಯುಕ್ತಗಳು:** ಕಾರ್ಬನ್ ಮತ್ತು ಹೈಡ್ರೊಜನ್‌ಗಳನ್ನೊಳಗೊಂಡ ಸಂಯುಕ್ತಗಳನ್ನು ವಿಶಾಲವಾಗಿ ಆಲಿಫ್ಯಾಟಿಕ್ ಮತ್ತು ಆ್ಯರೊಮ್ಯಾಟಿಕ್ ಎಂಬ ಎರಡು ಗುಂಪುಗಳನ್ನಾಗಿ ವಿಂಗಡಿಸಿದೆ. ಆದರೆ ಆಲಿಫ್ಯಾಟಿಕ್ (ಕೊಬ್ಬುಳ್ಳ) ಮತ್ತು ಆ್ಯರೊಮ್ಯಾಟಿಕ್ (ಸುವಾಸನೆಯುಳ್ಳ) ಎಂಬ ಪದಗಳಿಗೆ ಮೊದಲಿಗೆ ಕೊಟ್ಟ ಅರ್ಥಕ್ಕೆ ಯಾವ ಮಹತ್ತ್ವವೂ ಇಂದು ಇಲ್ಲ. ಆಲಿಫ್ಯಾಟಿಕ್ ಸಂಯುಕ್ತಗಳು ತೆರೆದ ಸರಣಿ (ಓಪನ್ ಚೈನ್). ಸಂಯುಕ್ತಗಳನ್ನೂ ಇವನ್ನು ಹೋಲುವ, ಆದರೆ ಆವರ್ತರಚನೆಯುಳ್ಳ (ಸೈಕ್ಲಿಕ್ ಸ್ಟ್ರಕ್ಚರ್) ಸಂಯುಕ್ತಗಳನ್ನೂ ಒಳಗೊಂಡಿವೆ. ಈ ಸಂಯುಕ್ತಗಳು ಮುಖ್ಯವಾಗಿ ಸೇರ್ಪಡೆ (ಅಡಿಷನ್) ಮತ್ತು ಆದೇಶಕ್ರಿಯೆಗಳನ್ನು (ಸಬ್‌ಸ್ಟಿಟ್ಯೂಷನ್) ಅನುಸರಿಸುತ್ತವೆ. ಸೇರ್ಪಡೆಕ್ರಿಯೆ ಅಣುವಿನಲ್ಲಿ ದ್ವಿಬಂಧ ಮತ್ತು ತ್ರಿಬಂಧಗಳಿರುವೆಡೆಯಲ್ಲಿಯೂ ಆದೇಶ ಕ್ರಿಯೆಗಳು ಇತರೆಡೆಗಳಲ್ಲಿಯೂ ಜರುಗುತ್ತವೆ.

ಆಲಿಫ್ಯಾಟಿಕ್ ಸಂಯುಕ್ತಗಳಲ್ಲಿ ಮೀಥೇನ್ ($CH_4$) ಮೊದಲನೆಯ ಸಂಯುಕ್ತ. ಉಳಿದೆಲ್ಲ ಸಂಯುಕ್ತಗಳೂ ಇದರಿಂದ ಉದ್ಭವವಾಗಿರುವುದೆಂದು ಪರಿಗಣಿಸಬಹುದು. ಹೈಡ್ರೊಕಾರ್ಬನ್ ಸಂಯುಕ್ತಗಳನ್ನು ರಾಸಾಯನಿಕ ಗುಣಗಳ ಆಧಾರದ ಮೇಲೆ 1. ಆಲ್ಕೇನ್, 2. ಆಲ್ಕೀನ್, 3. ಆಲ್ಕೈನ್, 4. ಸೈಕ್ಲಿಕ್ ಆಲಿಫ್ಯಾಟಿಕ್ ಎಂದು ವಿಂಗಡಣೆ ಮಾಡಲಾಗಿದೆ.

ಆಲ್ಕೇನ್ ಗುಂಪಿಗೆ ಸೇರಿದ ಸಂಯುಕ್ತಗಳಲ್ಲಿ ಕಾರ್ಬನ್ನಿನ ನಾಲ್ಕು ವೇಲೆನ್ಸಿಗಳೂ ಪರ್ಯಾಪ್ತತೆ (ಸ್ಯಾಚುರೇಷನ್) ಹೊಂದಿವೆ. ಈ ಸಂಯುಕ್ತಗಳ ಹೆಸರು ಪರ್ಯಾಪ್ತ ಹೈಡ್ರೊಕಾರ್ಬನ್‌ಗಳು, ಆಲ್ಕೀನ್ ಮತ್ತು ಆಲ್ಕೈನ್‌ಗಳಲ್ಲಿ ಕಾರ್ಬನ್ನಿನ ಪರಮಾಣುಗಳ ವೇಲೆನ್ಸಿ ಹೈಡ್ರೊಕಾರ್ಬನ್‌ಗಳನ್ನು ಪರ್ಯಾಪ್ತಿಪಡಿಸುವಷ್ಟು ಹೈಡ್ರೊಜನ್ ಪರಮಾಣುಗಳಿಲ್ಲ. ಆದ್ದರಿಂದ ಅವುಗಳಿಗೆ ಅಪರ್ಯಾಪ್ತ ಹೈಡ್ರೊಕಾರ್ಬನ್‌ಗಳೆಂದು ಹೆಸರಿದೆ. ಸೈಕ್ಲಿಕ್ ಹೈಡ್ರೊಕಾರ್ಬನ್‌ಗಳಲ್ಲಿಯೂ ಈ ಎರಡು ಬಗೆಯ ಸಂಯುಕ್ತಗಳು ಕಾಣಬರುತ್ತವೆ. ಆಯಾ ಗುಂಪಿಗೆ ಸೇರಿದ ಆಲಿಫ್ಯಾಟಿಕ್ ಸಂಯುಕ್ತಗಳನ್ನು ಕಾರ್ಬನ್ನಿನ ಸಂಖ್ಯೆಗಳು ಹೆಚ್ಚುವ ರೀತಿಯಲ್ಲಿ ಜೋಡಿಸಿ ಪರೀಕ್ಷಿಸಿದರೆ ಅನುಕ್ರಮವಾದ ಅಣುಗಳ ಸೂತ್ರದಲ್ಲಿ ಒಂದು $CH_2$ ಗುಂಪಿನ ವ್ಯತ್ಯಾಸ ಕಂಡುಬರುತ್ತದೆ. ಹಾಗೆಯೇ ಭೌತ ಮತ್ತು ರಾಸಾಯನಿಕ ಗುಣಗಳಲ್ಲಿ ಹೋಲಿಕೆಯೂ ಅನುಕ್ರಮವಾದ ವ್ಯತ್ಯಾಸಗಳೂ ಕಂಡುಬರುತ್ತವೆ. ಒಂದೇ ಶ್ರೇಣಿಗೆ ಸೇರಿದ ಸಂಯುಕ್ತಗಳಲ್ಲಿ ಈ ಗುಣಗಳಿದ್ದರೆ ಆ ಶ್ರೇಣಿಗೆ ಹೋಮಲೋಗಸ್ ಶ್ರೇಣಿಯೆಂದು ಹೆಸರು. ಮೇಲೆ ಹೇಳಿದ ಈ ಶ್ರೇಣಿಗೆ ಸೇರಿದ ಮೂರು ಸಂಯುಕ್ತಗಳನ್ನು ಆಯಾ ಶ್ರೇಣಿಗೆ ಅನ್ವಯಿಸುವಂತೆ ಒಂದು ಸರ್ವಸಾಮಾನ್ಯ ಸೂತ್ರದಿಂದ ಈ ರೀತಿ ನಿರೂಪಿಸಬಹುದು:

1. ಆಲ್ಕೇನ್ ವರ್ಗ $C_nH_{2n+2}$ – ಉದಾ : $CH_4$, $C_2H_6$, $C_3H_8$
2. ಆಲ್ಕೀನ್ ವರ್ಗ $C_nH_{2n}$ – ಉದಾ : $C_2H_4$, $C_3H_6$, $C_4H_8$
3. ಆಲ್ಕೈನ್ ವರ್ಗ $C_nH_{2n-2}$ – ಉದಾ : $C_2H_2$, $C_3H_4$, $C_4H_6$

ಆಲ್ಕೇನ್ ಸಂಯುಕ್ತಗಳ ಭೌತಗುಣಗಳಲ್ಲಿ ಉಂಟಾಗುವ ಅನುಕ್ರಮವಾದ ವ್ಯತ್ಯಾಸವನ್ನು ಕುದಿಯುವ ಉಷ್ಣತೆಯಲ್ಲಿ, ಸಾಂದ್ರತೆ ಮತ್ತು ಕರಗುವ ಉಷ್ಣತೆಯಲ್ಲಿ ಕಾಣಬಹುದು. ಅಣುಕೋಶ ಹಬ್ಬಿದಂತೆಲ್ಲ ಕರಗುವ–ಕುದಿಯುವ ಉಷ್ಣತೆಯೂ ಹೆಚ್ಚುವುದು.

ಔದ್ಯೋಗಿಕವಾಗಿ ಪೆಟ್ರೋಲಿಯಂ ಮತ್ತು ಪ್ರಾಕೃತಿಕ ಅನಿಲದಿಂದ ಆಲ್ಕೇನುಗಳನ್ನು ಪಡೆಯಬಹುದು. ಅಲ್ಪಾಣುಭಾರವುಳ್ಳ ಮೀಥೇನ್, ಈಥೇನ್ ಮುಂತಾದುವು ಅನಿಲಗಳು. ಸಂಯುಕ್ತಗಳಲ್ಲಿ ಕಾರ್ಬನ್‌ಸಂಖ್ಯೆ ಹೆಚ್ಚಿದಂತೆ ಅವು ದ್ರವರೂಪದಲ್ಲಿಯೂ ಘನರೂಪದಲ್ಲಿಯೂ ಇರುತ್ತವೆ.




A ಕುದಿಯುವ ಉಷ್ಣತೆ B ಸಾಂದ್ರತೆ C ಕರಗುವ ಉಷ್ಣತೆ

ಮೂರಕ್ಕಿಂತ ಹೆಚ್ಚಿರುವ ಕಾರ್ಬನ್ ಅಣುಗಳ ಸಂಯುಕ್ತಗಳು ಸಮಘಟಕಗಳನ್ನು ಹೊಂದಿರುತ್ತವೆ. ಈ ಸಮಘಟಕಗಳಿಗೆ ಶಾಖೆಗಳಿವೆ.

ಉದಾ :



ನಾರ್ಮಲ್ ಬ್ಯೂಟೇನ್



ಐಸೊಬ್ಯೂಟೇನ್

ಈ ಎರಡು ಘಟಕಗಳನ್ನು ಬೇರ್ಪಡಿಸಬಹುದು. ಇವುಗಳ ಭೌತ ಮತ್ತು ರಾಸಾಯನಿಕ ಗುಣಗಳಲ್ಲಿ ವ್ಯತ್ಯಾಸವಿದೆ.

ಆಲ್ಕೇನ್ ಗುಂಪಿನ ಸಂಯುಕ್ತಗಳು ಪರ್ಯಾಪ್ತ ಹೈಡ್ರೊಕಾರ್ಬನ್ನು ಗಳಾಗಿರುವುದರಿಂದ ರಾಸಾಯನಿಕ ಕ್ರಿಯಾದೃಷ್ಟಿಯಿಂದ ಅವನ್ನು ಜಡಪದಾರ್ಥ ಗಳೆನ್ನಬಹುದು. C-H ಅಥವಾ C-C ಬಂಧಗಳು ಸಾಮಾನ್ಯ ಉಷ್ಣತೆಯಲ್ಲಿ ಪ್ರಬಲ ಆಮ್ಲ, ಬ್ರೋಮೀನ್ (ಕತ್ತಲಲ್ಲಿ) ಮತ್ತು ಆಕ್ಸಿಜನ್‌ಗಳಿಂದ ಉತ್ಕರ್ಷಣ ಹೊಂದುವುದಿಲ್ಲ. ಹೆಚ್ಚಿನ ಉಷ್ಣತೆಯಲ್ಲಿ ಈ ಸಂಯುಕ್ತಗಳು ಉರಿದು ಗಾಳಿಯ ಆಕ್ಸಿಜನ್ನಿನೊಂದಿಗೆ ಸೇರಿ ಕಾರ್ಬನ್ ಡೈಆಕ್ಸೈಡ್ ಮತ್ತು ನೀರಿನ ಅಣುಗಳಾಗಿ ಪರಿವರ್ತನೆ ಹೊಂದುತ್ತವೆ. ಪೆಟ್ರೋಲಿಯಂನಿಂದ ಒದಗುವ ಹೈಡ್ರೊಕಾರ್ಬನ್ನುಗಳನ್ನು ಅಗಾಧ ಪ್ರಮಾಣದಲ್ಲಿ ಇಂಧನಗಳಾಗಿ ಉಪಯೋಗಿಸುತ್ತಾರೆ.

**ಆಲ್ಕೀನ್‌ಗಳು:** ಅಪರ್ಯಾಪ್ತ ಹೈಡ್ರೊಕಾರ್ಬನ್ನುಗಳು. ಎಥಿಲೀನ್ ಈ ಗುಂಪಿನ ಮಾದರಿ **(ನೋಡಿ– ಎಥಿಲೀನ್)**. ಭೌತಗುಣಗಳಲ್ಲಿ ಆಲ್ಕೇನುಗಳನ್ನು ಹೋಲುತ್ತವೆ. ಈ ಸಂಯುಕ್ತಗಳಲ್ಲಿ ಕಾರ್ಬನ್ನುಗಳ ಸಂಯೋಜನ ಶಕ್ತಿಯನ್ನು ಪರ್ಯಾಪ್ತಗೊಳಿಸುವಷ್ಟು ಹೈಡ್ರೊಜನ್ ಅಣುಗಳಿಲ್ಲವಾದ್ದರಿಂದ ಕಾರ್ಬನ್ನುಗಳ ನಡುವೆ ದ್ವಿಬಂಧವೇರ್ಪಡುತ್ತದೆ. ಈ ದ್ವಿಬಂಧವನ್ನು ಅತಿರಕ್ತರೋಹಿತದಲ್ಲಿ ಸುಲಭವಾಗಿ ಗುರುತಿಸಬಹುದು. ಸಾಮಾನ್ಯವಾಗಿ

ಏಕಬಂಧದಿಂದ (C-C) ಸೇರಿರುವ ಕಾರ್ಬನ್ ಪರಮಾಣುಗಳಿಗೆ ಆ ಬಂಧದ ಸುತ್ತ ಭ್ರಮಿಸುವ ಸ್ವಾತಂತ್ರ್ಯವಿದೆ (ಫ್ರೀರೊಟೇಷನ್). ದ್ವಿಬಂಧಗಳಿದ್ದರೆ ಈ ಸ್ವಾತಂತ್ರ್ಯ ಮೊಟಕಾಗುತ್ತದೆ. ದ್ವಿಬಂಧದಿಂದ ಸೇರ್ಪಟ್ಟಿರುವ ಕಾರ್ಬನ್ನುಗಳಿಗೆ ಅನುಗುಣವಾದ ಗುಂಪುಗಳನ್ನು ಹೈಡ್ರೊಜನ್ನಿನ ಬದಲಿಗೆ ಸೇರಿಸಿದರೆ ಎರಡು ಸಮಘಟಕಗಳು ಉತ್ಪತ್ತಿಯಾಗುವುವು.




ನಿಸ್ ಘಟಕ ಟ್ರಾನ್ಸ್ ಘಟಕ

ಸಾಮಾನ್ಯವಾಗಿ ಟ್ರಾನ್ಸ್‌ಘಟಕ, ಸಿಸ್‌ಘಟಕ ಸಂಯುಕ್ತಗಳಿಗಿಂತ ಹೆಚ್ಚು ಸ್ಥಿರವಾಗಿವೆ. ಆಲ್ಕೀನುಗಳಲ್ಲಿ ದ್ವಿಬಂಧವಿರುವುದರಿಂದ ರಾಸಾಯನಿಕ ಕ್ರಿಯೆಗಳು ಬಲುಮಟ್ಟಿಗೆ ಆ ಎಡೆಯಲ್ಲಿ ನಡೆಯುತ್ತವೆ. ಸಂಯುಕ್ತಗಳಲ್ಲಿ ಕ್ರಿಯೆಗೆ ಕಾರಣವಾದ ಗುಂಪುಗಳ ಹೆಸರು ಸಕ್ರಿಯಾ ಪುಂಜಗಳು (ಫಂಕ್ಷನಲ್ ಗ್ರೂಪ್ಸ್). ಸಿಗ್ಮ ಮತ್ತು ಪೈ ಬಂಧಗಳನ್ನೊಳಗೊಂಡ ದ್ವಿಬಂಧದಲ್ಲಿ, ಪೈ ಬಂಧ ದುರ್ಬಲವಾಗಿರುವ ಕಾರಣ ಸೇರ್ಪಡೆ ಕ್ರಿಯೆಗಳು ಬಂಧದ ಛೇದನೆಯಿಂದ ಜರಗುತ್ತವೆ.





ಆಲ್ಕೀನ್‌ಗಳು ಸೇರ್ಪಡೆ ಹೊಂದುತ್ತವೆ ಮತ್ತು ಆದೇಶಕ್ರಿಯೆಗಳನ್ನು ಜರುಗಿಸುತ್ತವೆ. ಅಲ್ಲದೆ ಇನ್ನೊಂದು ಸರ್ವಸಾಮಾನ್ಯ ಕ್ರಿಯೆಗೆ ಒಳಗಾಗುತ್ತವೆ. ಈ ಕ್ರಿಯೆಯಲ್ಲಿ ದ್ವಿಬಂಧ ಪೂರ್ಣವಾಗಿ ಮುರಿದು ಎರಡು ಅಲ್ಪತರ ಅಣುಗಳು ಉತ್ಪತ್ತಿಯಾಗುವುವು. ದ್ವಿಬಂಧಗಳನ್ನು ಛೇದಿಸಲು ಸಾಮಾನ್ಯವಾಗಿ ಓಜ಼ೋನನ್ನು ಉಪಯೋಗಿಸಲಾಗುತ್ತದೆ. ಓಜ಼ೋನ್‌ಛೇದನ ಎರಡು ಹಂತದಲ್ಲಿ ನಡೆಯುತ್ತದೆ. ಇಲ್ಲಿ ಉತ್ಪತ್ತಿಯಾಗುವ ಆಲ್ಡಿಹೈಡ್ ಮತ್ತು ಕೀಟೋನ್‌ಗಳ ರಚನೆಯನ್ನೂ ಹೈಡ್ರೊಕಾರ್ಬನ್ನಿನ ರಚನೆಯನ್ನೂ ಕಂಡುಹಿಡಿಯಬಹುದು.




**ಆಲ್ಕೈನ್‌ಗಳು ಮತ್ತು ಡಯೀನ್‌ಗಳು** : ಆಲ್ಕೈನ್ ಮತ್ತು ಡಯೀನ್‌ಗಳ ಗುಂಪಿನ ಸಾಮಾನ್ಯ ಸೂತ್ರ $C_nH_{2n-2}$ . ಈ ಗುಂಪಿನ ಸಂಯುಕ್ತಗಳಲ್ಲಿ ಹೈಡ್ರೊಜನ್ ಪ್ರಮಾಣ ಆಲ್ಕೀನ್‌ಗಳಿಗಿಂತ ತಗ್ಗಿದೆ. ಆದ್ದರಿಂದ ಅಪರ್ಯಾಪ್ತತೆ ಇನ್ನಷ್ಟು ಹೆಚ್ಚು. ಇವೆರಡು ಗುಂಪುಗಳ ಸಾಮಾನ್ಯ ಸೂತ್ರ ಒಂದೇ ಆದರೂ ಸಕ್ರಿಯಾ ಗುಂಪುಗಳು ಬೇರೆಯಾಗಿರುವುದರಿಂದ ಅವುಗಳ ಗುಣಗಳು ಭಿನ್ನವಾಗಿವೆ.

**ಆಲ್ಕೈನ್‌ಗಳು : ಅಸಿಟಲಿನ್ ($C_2H_2$) ಈ ಗುಂಪಿನ** ಸರಳ ಪ್ರತಿನಿಧಿ. ಕಾರ್ಬನ್–ಕಾರ್ಬನ್‌ಗಳ ನಡುವೆ ತ್ರಿಬಂಧವಿದೆ. ಇವುಗಳ ಪೈಕಿ ಒಂದು

$$H-C\equiv C-H$$



ಅಸಿಟಲೀನಿನ ಅಣು. ಕಾರ್ಬನ್ – ಕಾರ್ಬನ್ ತ್ರಿಬಂಧ. ಮೇಘಗಳು ಕೊಳವೆಯ (ಸಿಲಿಂಡರ್) ಮಾದರಿಯಲ್ಲಿವೆ

ಸಿಗ್ಮ ಮತ್ತು ಇನ್ನೆರಡು ಪೈ ಬಂಧಗಳು. ಅಸಿಟಲಿನ್ ನೀಳವಾದ ಅಣುವಾದ್ದರಿಂದ ಪೈ ಬಂಧಗಳ ಎಲೆಕ್ಟ್ರಾನ್ ಮೇಘಗಳು ಸಿಲಿಂಡರ್ (ಕೊಳವೆ) ಆಕೃತಿಯಲ್ಲಿರುತ್ತವೆಂದು ಗೊತ್ತಾಗಿದೆ. ಆಲ್ಕೈನ್‌ಗಳ ಭೌತಗುಣಗಳು ಆಲ್ಕೇನ್ ಮತ್ತು ಆಲ್ಕೀನ್ ಸಂಯುಕ್ತದಂತೆಯೇ ಇವೆ. ಅಸಿಟಲಿನ್ ಮತ್ತು ಆಲ್ಕೈನ್‌ಗಳು ಸೇರ್ಪಡೆ ಕ್ರಿಯೆಗಳಿಗೆ ಸುಲಭವಾಗಿ ಒಳಗಾಗುತ್ತವೆ.



**ಡಯೀನ್‌ಗಳು** : ಈ ಸಂಯುಕ್ತಗಳು ಎರಡು ದ್ವಿಬಂಧಗಳಿರುವ ಸರಳ ಆಲ್ಕೀನ್‌ಗಳು. ಆದ್ದರಿಂದ ಆಲ್ಕೀನ್‌ಗಳಿಗಿರುವ ಗುಣಗಳೇ ಇವೆ. ಆದರೆ ಕೆಲವು ಸಂಯುಕ್ತಗಳಲ್ಲಿ ಈ ಗುಣಗಳು ಸ್ವಲ್ಪಮಟ್ಟಿಗೆ ಬದಲಾವಣೆ ಹೊಂದಿವೆ.

ಡಯೀನ್‌ಗಳನ್ನು ಸುಲಭವಾಗಿ ಎರಡು ಗುಂಪುಗಳನ್ನಾಗಿ ವಿಭಾಗಿಸಿದೆ. 1. ಎರಡು ದ್ವಿಬಂಧಗಳ ನಡುವೆ ಒಂದು ಏಕಬಂಧವಿರುವ ಪರ್ಯಾಯ (ಕಾಂಜುಗೇಟೆಡ್) ಸಂಯುಕ್ತಗಳು; 2. ಅನೇಕ ಏಕಬಂಧಗಳಿಂದ ಪ್ರತ್ಯೇಕಿಸಲ್ಪಟ್ಟ ದ್ವಿಬಂಧಗಳುಳ್ಳ ಸಂಯುಕ್ತಗಳು (ಪ್ರತ್ಯೇಕಿತ ದ್ವಿಬಂಧಗಳು).

ಪರ್ಯಾಯ ದ್ವಿಬಂಧಗಳು ಪ್ರತ್ಯೇಕಿತ ದ್ವಿಬಂಧಗಳು

ಅಷ್ಟು ಮುಖ್ಯವಲ್ಲದ ಮೂರನೆಯ ಗುಂಪೂ ಉಂಟು. ಈ ಗುಂಪಿನ ಸಂಯುಕ್ತಗಳಲ್ಲಿ ದ್ವಿಬಂಧಗಳು ಪಕ್ಕದಲ್ಲಿರುತ್ತವೆ. ಇದಕ್ಕೆ ಅಲೀನ್ಸ್ ಎಂದು ಹೆಸರು.



ಡಯೀನ್‌ಗಳ ರಾಸಾಯನಿಕ ಗುಣಗಳು ದ್ವಿಬಂಧಗಳ ಜೋಡಣೆಯನ್ನು ಅವಲಂಬಿಸಿವೆ. ಪ್ರತ್ಯೇಕಿಸಲ್ಪಟ್ಟ ದ್ವಿಬಂಧಗಳು ಸ್ವತಂತ್ರವಾಗಿ ಪರಸ್ಪರವಾಗಿ ಯಾವ ಸಂಬಂಧವಿಲ್ಲದಂತೆ ವರ್ತಿಸುತ್ತವೆ. ಆದ್ದರಿಂದ ಇವುಗಳ ಗುಣಗಳು ಆಲ್ಕೀನ್‌ಗಳನ್ನು ಬಲುಮಟ್ಟಿಗೆ ಹೋಲುತ್ತವೆ. ಆದರೆ ಪರ್ಯಾಯದ್ವಿಬಂಧವುಳ್ಳ ಡಯೀನ್‌ಗಳಿಗೂ ಆಲ್ಕೀನ್‌ಗಳಿಗೂ ಮುಖ್ಯವಾದ ಮೂರು ವ್ಯತ್ಯಾಸಗಳಿವೆ (1) ಡಯೀನ್‌ಗಳ ಸ್ಥಿರತೆ. (2) : ಸೇರ್ಪಡೆ 1.4 ಕಾರ್ಬನ್‌ಗಳಲ್ಲಿ ನಡೆಯುತ್ತದೆ. (1,4 ಅಡಿಷನ್). (3) ಕ್ರಿಯಾಚಟುವಟಿಕೆ ಅಧಿಕ. 1.4 ಸೇರ್ಪಡೆ : 1.4 ಪೆಂಟಾಡಯೀನಿಗೆ ಡೈ ಆಲ್ಡಿಹೈಡ್ ಉತ್ಪತ್ತಿಯಾಗುವ ಪರಿಸ್ಥಿತಿಯಲ್ಲಿ, ಬ್ರೋಮೀನನ್ನು ಸೇರಿಸಿದರೆ 4.5 ಡೈಬ್ರೋಮೊ (ಎರಡು ಬ್ರೋಮೀನ್‌ಗಳು) 1 ಪೆಂಟೀನ್ ಉತ್ಪತ್ತಿಯಾಗುವುದು. ಮತ್ತಷ್ಟು ಬ್ರೋಮೀನನ್ನು ಸೇರಿಸಿದರೆ 1,2,4,5 ಟೆಟ್ರ (ನಾಲ್ಕು)ಬ್ರೋಮೊ ಪೆಂಟೀನ್ ಉತ್ಪತ್ತಿಯಾಗುವುದು.



**1.4 ಪೆಂಟಾಡಯೀನ್** **4,5 ಡೈಬ್ರೋಮೊ 1–ಪೆಂಟೀನ್**



**1,2,4,5 ಟೆಟ್ರಬ್ರೋಮೊ ಪೆಂಟೀನ್**

ಪ್ರತ್ಯೇಕಿತ ದ್ವಿಬಂಧಗಳಿರುವ ಡಯೀನ್‌ಗಳಲ್ಲಿ ಸೇರ್ಪಡೆ ಈ ಮಾದರಿಯಲ್ಲಿಯೇ ನಡೆಯುವುದು. ಎರಡು ದ್ವಿಬಂಧಗಳೂ ಸ್ವತಂತ್ರವಾಗಿ ವರ್ತಿಸುತ್ತವೆ. ಆದರೆ 1,3 ಬ್ಯೂಟಾಡಯೀನ್ ಸಂಯುಕ್ತಕ್ಕೆ ಬ್ರೋಮೀನ್ ಸೇರಿಸಿದರೆ ನಿರೀಕ್ಷಿತವಾದ 3,4 ಡೈಬ್ರೋಮೊ 1–ಬ್ಯೂಟೀನ್ ಮಾತ್ರವಲ್ಲದೆ 1,4 ಡೈಬ್ರೋಮೊ 2 ಬ್ಯೂಟೀನ್ ಸಹ ಉತ್ಪತ್ತಿಯಾಗುವುದು.




ಈ ಎರಡು ಫಲಿತಗಳ ಪ್ರಮಾಣ ಕ್ರಿಯೆ ನಡೆಯುವ ಉಷ್ಣತೆಯನ್ನು ಅವಲಂಬಿಸಿದೆ.

**ಬಹ್ವಂಗೀಕರಣ (ಪಾಲಿಮರೈಸೇಷನ್)** : ಆಲ್ಕೀನ್ ಮತ್ತು ಡಯೀನ್‌ಗಳು ಔದ್ಯೋಗಿಕವಾಗಿ ಬಹುಮುಖ್ಯವಾದ ಬಹ್ವಂಗೀಕರಣ ಕ್ರಿಯೆಗೆ ಒಳಪಡುತ್ತವೆ. ಉದಾ: ಎಥಿಲೀನನ್ನು ಆಕ್ಸಿಜನ್ ವಾತಾವರಣದಲ್ಲಿ ಹೆಚ್ಚು ಸಂಮರ್ದದಲ್ಲಿ ಕಾಯಿಸಿದಾಗ ಅಧಿಕ ಅಣುಭಾರವಿರುವ (ಸು. 20,000) ಪಾಲಿಎಥಿಲೀನ್ ಎಂಬ ಉದ್ದವಾದ ಆಲ್ಕೇನ್ ಉತ್ಪತ್ತಿಯಾಗುತ್ತದೆ.

$$nCH_2=CH_2 \xrightarrow{O_2} \sim(CH_2\text{-}CH_2\text{-}CH_2)_n\sim$$

ಉಷ್ಣ, ಸಂಮರ್ದ

ಅನೇಕ ಅಲ್ಪಪ್ರಮಾಣದ ಅಣುಗಳು ಕೂಡಿ ಮಹದಣುಗಳನ್ನು ಉತ್ಪತ್ತಿಮಾಡುವ ಕ್ರಿಯೆಗೆ ಬಹ್ವಂಗೀಕರಣ ಎನ್ನಬಹುದು. ಈ ಕ್ರಿಯೆಯ ಆಧಾರದಿಂದ ಪ್ಲಾಸ್ಟಿಕ್, ಕೃತಕ ರಬ್ಬರ್ ಇತ್ಯಾದಿ ಬಹ್ವಣುಗಳನ್ನು ತಯಾರಿಸುತ್ತಾರೆ.

**ಇತರ ಆ್ಯಲಿಫ್ಯಾಟಿಕ್ ಸಂಯುಕ್ತಗಳು** : ಕಾರ್ಬನ್ ಮತ್ತು ಹೈಡ್ರೊಜನ್‌ಗಳ ಜೊತೆಗೆ ಆಕ್ಸಿಜನ್, ಫಾಸ್ಫರಸ್, ನೈಟ್ರೊಜನ್ ಮೂಲವಸ್ತುಗಳನ್ನೊಳಗೊಂಡ ಅನೇಕಾನೇಕ ಸಂಯುಕ್ತಗಳು ರಚಿತವಾಗುತ್ತವೆ. ಈ ಸಂಯುಕ್ತಗಳನ್ನು ಅವುಗಳಲ್ಲಿನ ಸಕ್ರಿಯ ಗುಂಪಿನ ಆಧಾರದ ಮೇಲೆ ಈ ಕೆಳಕಂಡಂತೆ ವಿಭಾಗಿಸಬಹುದು. ಈ ನಾನಾ ಸಂಯುಕ್ತಗಳ ರಾಸಾಯನಿಕಗುಣಗಳು ಅವುಗಳಲ್ಲಿನ ಸಕ್ರಿಯ ಗುಂಪಿನ ಗುಣಗಳನ್ನವಲಂಬಿಸಿವೆ.

1. (–OH) ಗುಂಪನ್ನುಳ್ಳ ಆಲ್ಕೊಹಾಲ್‌ಗಳು : ಮೀಥೈಲ್ ಆಲ್ಕೊಹಾಲ್, ಈಥೈಲ್ ಆಲ್ಕೊಹಾಲ್ ಈ ಸಂಯುಕ್ತಗಳು ಉತ್ಕರ್ಷಣ ಹೊಂದಿ ಆಲ್ಡಿಹೈಡ್ ಅಥವಾ ಕೀಟೋನ್‌ಗಳಾಗಿ ಪರಿವರ್ತನೆಯಾಗುತ್ತವೆ. ಆಮ್ಲಗಳೊಂದಿಗೆ ಎಸ್ಟರ್‌ಗಳನ್ನು ಉಂಟುಮಾಡುತ್ತವೆ. ಅನೇಕ (OH) ಗುಂಪುಗಳುಳ್ಳ ಆಲ್ಕೊಹಾಲ್‌ಗಳು ಸಿಹಿಯಾಗಿದ್ದು ಸಕ್ಕರೆಗಳ ರೂಪದಲ್ಲಿ ದೊರೆಯುತ್ತವೆ.

2. (–SH) ಥೈಯಾಲ್ ಗುಂಪುಳ್ಳ ಮರ್‌ಕ್ಯಾಪ್ಟಾನ್‌ಗಳು. ಇವು ಆಲ್ಕೊಹಾಲ್‌ಗಳನ್ನು ಹೋಲುತ್ತವೆ.

3. (–CHO) ಆ್ಯಲ್ಡಿಹೈಡ್‌ಗಳು : ಆ್ಯಲ್ಡಿಹೈಡ್‌ಗಳು ಅಪಕರ್ಷಣಕಾರಿಗಳು. ಈ ಗುಣದಿಂದ ಅವನ್ನು ಕಂಡುಹಿಡಿಯಬಹುದು. ಉದಾ: ಅಸಿಟಾಲ್ಡಿಹೈಡ್ ಉತ್ಕರ್ಷಣಹೊಂದಿ ಆಮ್ಲಗಳಿಗೆ ಪರಿವರ್ತನೆ ಹೊಂದುತ್ತದೆ.

4. (–CO) ಕೀಟೋನ್‌ಗಳು : ರಾಸಾಯನಿಕಗುಣಗಳು ಆಲ್ಡಿಹೈಡನ್ನು ಹೋಲುತ್ತವೆ.

5. (–COOH) ಕಾರ್ಬಾಕ್ಸಿಲ್‌ಗಳು : ಈ ಗುಂಪುಳ್ಳ ಸಂಯುಕ್ತಗಳು ಆಮ್ಲಗಳಂತೆ ವರ್ತಿಸುತ್ತವೆ. ಆದರೆ ನೀರಿನಲ್ಲಿ ಹೆಚ್ಚಿಗೆ ಅಯಾನಿಸುವುದಿಲ್ಲ. ಅಮೈಡ್ ($-CONH_2$) ಮತ್ತು ಎಸ್ಟರ್‌ಗಳನ್ನು ಉತ್ಪಾದಿಸುತ್ತವೆ.

6. ($-NH_2$) ಅಮೀನ್‌ಗಳು : ಅಮೀನ್‌ಗಳನ್ನು 1 ಪ್ರೈಮರಿ, 2. ಸೆಕೆಂಡರಿ. 3. ಟರ್ಷಿಯರಿ ಎಂಬ ಗುಂಪುಗಳನ್ನಾಗಿ ವಿಭಾಗಿಸಲಾಗಿದೆ. ನೈಟ್ರೊಜನ್ ಅಣುವಿಗೆ ಸೇರಿರುವ ಗುಂಪುಗಳ ಆಧಾರದ ಮೇಲೆ ಈ ವಿಭಾಗ ಮಾಡಲಾಗಿದೆ.

| | | |
|---|---|---|
| H | H | R |
| I | I | I |
| R-N-H | R-N-R | R-N-R |
| ಪ್ರೈಮರಿ | ಸೆಕೆಂಡರಿ | ಟರ್ಷಿಯರಿ |

ಈ ಸಂಯುಕ್ತಗಳ ಮುಖ್ಯ ಗುಣ ಪ್ರತ್ಯಾಮ್ಲತೆ. ಮಿಕ್ಕೆಲ್ಲ ಗುಣಗಳೂ ಈ ಗುಣದಿಂದ ಉದ್ಭವವಾಗುತ್ತವೆ ಎನ್ನಬಹುದು.

ಉದಾ: ಮೀಥೈಲ್ ಅಮೀನ್ (ಪ್ರೈಮರಿ), ಡೈಮೀಥಲ್ ಅಮೀನ್ (ಸೆಕೆಂಡರಿ) ಮತ್ತು ಟ್ರೈಮಿಥೈಲ್ ಅಮೀನ್ (ಟರ್ಷಿಯರಿ).

7. R-O-R[I]- ಈಥರ್‌ಗಳು : ಎರಡು ಆಲ್ಕೊಹಾಲ್ ಅಣುಗಳು ನೀರಿನ ಒಂದು ಅಣುವಿನ ಬಿಡುಗಡೆಯ ಮೂಲಕ ಸೇರ್ಪಡೆಯಾದಾಗ ಈಥರ್‌ಗಳು ಉತ್ಪತ್ತಿಯಾಗುತ್ತವೆ.

$$RCH_2OH+R^ICH_2OHIR\text{-}CH_2OCH_2—R^I+H_2O$$

ಈಥರ್

ಈಥರ್‌ಗಳು ಸಾಮಾನ್ಯವಾಗಿ ರಾಸಾಯನಿಕ ದೃಷ್ಟಿಯಿಂದ ಜಡಪದಾರ್ಥಗಳು. ಉದಾ: ಈಥೈಲ್ ಈಥರ್.

8. ಎಸ್ಟರ್‌ಗಳು ( R-COOR[I] ) : ಆಲ್ಕೊಹಾಲ್ ಅಣು ಮತ್ತು ಸಾವಯವ ಆಮ್ಲಗಳು ನೀರಿನ ಒಂದು ಅಣುವಿನ ಬೇರ್ಪಡೆಯಿಂದ ಸಂಯೋಜಿತವಾದಾಗ ಎಸ್ಟರ್‌ಗಳು ತಯಾರಾಗುತ್ತವೆ. ಇವು ಸುವಾಸನೆಯುಳ್ಳ ವಸ್ತುಗಳು. ಉದಾ: ಈಥೈಲ್ ಅಸಿಟೇಟ್.

9. ಹ್ಯಾಲೈಡ್‌ಗಳು (R-X) : ಆಲ್ಕೇನ್, ಆಲ್ಕೀನ್ ಅಥವಾ ಆಲ್ಕೈನ್ ಸಂಯುಕ್ತಗಳೊಂದಿಗೆ ಹ್ಯಾಲೊಜಿನ್ ಮೂಲವಸ್ತುಗಳು ವರ್ತಿಸಿದಾಗ ಅನೇಕ ತರಹೆಯ ಆಲ್ಕೈಲ್ ಹ್ಯಾಲೈಡ್‌ಗಳು ಉತ್ಪತ್ತಿಯಾಗುತ್ತವೆ. ಈ ಸಂಯುಕ್ತಗಳು ಬಹಳ ದುರ್ಬಲವಾದ ಪ್ರತ್ಯಾಮ್ಲಗಳಂತೆ ವರ್ತಿಸುತ್ತವೆ. ಅತಿ ಚಟುವಟಿಕೆಯುಳ್ಳ ವಸ್ತುಗಳಾದ್ದರಿಂದ ಅನೇಕ ತರಹೆಯ ಕ್ರಿಯೆಗಳಿಗೆ ಒಳಗಾಗುತ್ತವೆ. ಉದಾ: ಮೀಥೈಲ್ ಕ್ಲೋರೈಡ್ ಕ್ಲೋರೊಫಾರ್ಮ್ ಇತ್ಯಾದಿ. (ಎಚ್.ಎಸ್.ಎಸ್.)

**ಆಲಿಬಾಬ:** ಸಾವಿರದ ಒಂದು ರಾತ್ರಿಗಳು ಎಂಬ ಗ್ರಂಥದಲ್ಲಿ ಬರುವ ಆಲಿಬಾಬ ಮತ್ತು ನಲವತ್ತು ಜನ ಕಳ್ಳರು ಎಂಬ ಜನಪ್ರಿಯ ಕಥೆಯ ನಾಯಕ. ಬಹಳ ಬಡವ. ಸೌದೆ ಕಡಿದು ತಂದು ಮಾರಿ ಜೀವಿಸುತ್ತಿದ್ದ. ಒಂದು ದಿನ ಕಳ್ಳರ ಗುಂಪೊಂದು ಬೆಟ್ಟದ ಗುಹೆಯೊಂದರಲ್ಲಿ ತಾವು ತಂದ ಲೂಟಿಯನ್ನು ಬಚ್ಚಿಡುತ್ತಿದ್ದುದನ್ನು ಕಂಡು ಕುತೂಹಲದಿಂದ ಗುಹೆಯನ್ನು ಪ್ರವೇಶಿಸಿ ಅಪಾರವಾದ ಹಣ ತಂದು ಚೆನ್ನಾಗಿ ಬದುಕುತ್ತಾನೆ. ಇದನ್ನು ತಿಳಿದ ಕಳ್ಳರು ವಂಚನೆಯಿಂದ ಇವನನ್ನು ಕೊಲ್ಲಲು ಪಿತೂರಿ ಮಾಡುತ್ತಾರೆ. ಆದರೆ ಆಲಿಬಾಬ ತನ್ನ ದಾಸಿ ಮಾರ್ಜಿಯಾನಳೊಂದಿಗೆ ಉಪಾಯ ಹೂಡಿ ಅವರನ್ನು ಸದೆಬಡಿಯುತ್ತಾನೆ. ಕಥೆ ನೀತಿಬೋಧಕವಾಗಿಯೂ ರಮ್ಯವಾಗಿಯೂ ಇದೆ. *

**ಆಲಿವ್‌ಮರ:** ಓಲಿಯೇಸೀ ಕುಟುಂಬಕ್ಕೆ ಸೇರಿದ ಮರ. ಓಲಿಯ ಯುರೋಪಿಯ ಇದರ ಸಸ್ಯ ವೈಜ್ಞಾನಿಕ ಹೆಸರು. ಪ್ರ.ಶ. ಪೂ.17ನೆಯ ಶತಮಾನದಲ್ಲಿ ಇದು ಈಜಿಪ್ಟ್‌ನಲ್ಲಿ ಕೃಷಿಯಲ್ಲಿತ್ತು. ಈ ಮರಗಳು ದಕ್ಷಿಣ ಯುರೋಪಿನ ಭಾಗಗಳಲ್ಲೂ ಏಷ್ಯ ಉಪಖಂಡಗಳಲ್ಲೂ ವಿಪುಲವಾಗಿ ಬೆಳೆಯುತ್ತವೆ. ಮೆಡಿಟರೇನಿಯನ್ ತೀರದಲ್ಲೂ ಆಸ್ಟ್ರೇಲಿಯ ಮತ್ತು ಇತರ ಭಾಗಗಳಲ್ಲೂ ಇವನ್ನು ಬೆಳೆಸುತ್ತಿದ್ದಾರೆ. ಈಚಿನ ವರ್ಷಗಳಲ್ಲಿ ಅಮೆರಿಕ, ದಕ್ಷಿಣ ಆಫ್ರಿಕಗಳಲ್ಲೂ ಹೇರಳವಾಗಿ ಬೆಳೆಸುತ್ತಾರೆ. ಕ್ಯಾಲಿಫೋರ್ನಿಯ, ಫ್ಲಾರಿಡ, ಆರಿಜೋನ ಮತ್ತು ನ್ಯೂ ಮೆಕ್ಸಿಕೊಗಳಲ್ಲೂ ಇವನ್ನು ಬೆಳೆಯುತ್ತಿದ್ದಾರೆ. 1880 ಮತ್ತು 1890 ರಲ್ಲಿ ಜಗತ್ತಿನ ಆಲಿವ್ ಬೆಳೆಯಲ್ಲಿ ಕ್ಯಾಲಿಫೋರ್ನಿಯದ ಆಲಿವ್ ಬೆಳೆಯ ಪಾಲು ಅಧಿಕವಾಗಿತ್ತು ಎಂಬುದು ಅಂಕಿಅಂಶಗಳಿಂದ ಸಿದ್ಧಪಟ್ಟಿದೆ.

ಓಲಿಯ ಯುರೋಪಿಯ ಪ್ರಭೇದ ಹೆಚ್ಚು ಹಸುರಾದ ಚಿಕ್ಕ ಮರ. ಇದರ ಎಲೆ ಸ್ವಲ್ಪ ಒರಟು. 7.5[1]–12 ಮೀ.ಗಳಷ್ಟು ಎತ್ತರ ಬೆಳೆಯುವ ದೀರ್ಘಾವಧಿ ವೃಕ್ಷ. ಇದು ಬಿಳಿಹೂ ಬಿಡುವುದು. ಇದರಲ್ಲಿನ ಹಣ್ಣುಗಳ ಬಣ್ಣ ಕಲ್ಲುಗಳಂಥ ಬೀಜಗಳಿಂದ ತುಂಬಿದೆ. ನಿಯತ ಋತುಮಾನಗಳಲ್ಲಿ ಹೂ, ಹಣ್ಣು ಬಿಡುವುದು. ಕಾಡು ಆಲಿವ್ ಮರಗಳಲ್ಲಿ ಮುಳ್ಳುಗಳು ತುಂಬ. ಅವುಗಳ ಹಣ್ಣುಗಳಿಂದ ಯಾವ ಪ್ರಯೋಜನವೂ ಇಲ್ಲ. ಕೃಷಿ ವಿಧಾನಗಳಿಂದ ಬೆಳೆಸುವ ಆಲಿವ್ ಮರಗಳಲ್ಲಿ ಮುಳ್ಳುಗಳಿರುವುದಿಲ್ಲ.

**ಚಿತ್ರ 1 ಆಲಿವ್ ಹೂ ಮತ್ತು ಹಣ್ಣು**

ಫಲವತ್ತಾದ ಮಣ್ಣಿನಲ್ಲಿ ಮಾತ್ರ ಇವು ಸೊಂಪಾಗಿ ಬೆಳೆಯುವುವು. ಸರಿಯಾಗಿ ಮಳೆ ಬೀಳದ ಶುಷ್ಕ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಲಾರವು. ಆಗ ನೀರಾವರಿ ಸೌಲಭ್ಯಗಳನ್ನು ಒದಗಿಸಬೇಕಾಗುವುದು. ಅದರ ಬೆಳೆಗೆ ಕನಿಷ್ಠಪಕ್ಷ $14^0$ ಸೆ. ಉಷ್ಣತೆ ಬೇಕು. ಆಲಿವ್

ಕೊಂಬೆಗಳನ್ನು ನೆಟ್ಟು ಮರ ಬೆಳೆಸಬಹುದು. ಕಾಡು ಆಲಿವ್ ಹಾಗೂ ಕೃಷಿ ಆಲಿವ್ ಮರಗಳ ಕೊಂಬೆಗಳನ್ನು ಕಸಿಕಟ್ಟಿ ಹೊಸ ಜಾತಿಯ ಆಲಿವ್ ಮರಗಳನ್ನು ಬೆಳೆಸುವುದುಂಟು. ಬೀಜಗಳನ್ನು ಮೊಳೆಯಿಸಿಯೂ ಇವನ್ನು ಬೆಳೆಸುತ್ತಾರೆ. ಆದರೆ ಅದು ಸ್ವಲ್ಪ ಪ್ರಯಾಸಕರ. ಆದರೂ ಇವುಗಳ ಮೊಳೆಯುವಿಕೆಯನ್ನು ತ್ವರಿತಗೊಳಿಸಲು ಅನೇಕ ವಿಧಾನಗಳನ್ನು ಬಳಸುವುದುಂಟು. ಬೀಜದ ತುದಿಯನ್ನು ಸುಲಿಯುವುದು ಅಂಥ ಒಂದು ಕ್ರಮ. ಕ್ಯಾಲಿಫೋರ್ನಿಯದಲ್ಲಿ ಈ ಮರಗಳಿಗೆ ಆಲಿವ್ ನಾಟ್ ಎಂಬ ರೋಗ ತಗಲುತ್ತದೆ. ಸಣ್ಣ ದೊಡ್ಡ ಎಲೆಗಳಲ್ಲಿ ಕೊಂಬೆ ರೆಂಬೆಗಳಲ್ಲಿ ಅನೇಕ ಗಂಟುಗಳು ಅಥವಾ ಟ್ಯೂಮರ್‌ಗಳು ಬೆಳೆಯುವುದೇ ಈ ರೋಗದ ಲಕ್ಷಣ. ಸ್ಯಾವೆಸ್ಟೊನಾಯ್ ಎಂಬ ಅಣುಜೀವಿ ಈ ರೋಗಕ್ಕೆ ಕಾರಣ. ಕೆಲವೊಮ್ಮೆ ಒಂದು ರೀತಿಯ ಅಣಬೆ ರೋಗವೂ ಈ ಎಲೆಗಳಿಗೆ ಬರುವುದುಂಟು. ಆದರೆ ಇದರಿಂದ ಮರಕ್ಕೆ ಅಪಾಯವಿಲ್ಲ.



ಚಿತ್ರ 2 ಆಲಿವ್ ಹಣ್ಣಿನ ವಿವಿಧ ಬಗೆಗಳು

ಆಲಿವ್ ಕಾಯಿಗಳನ್ನು ಹಸಿರಾಗಿರುವಾಗ ಕಿತ್ತು ಉಪ್ಪಿನಕಾಯಿ ತಯಾರಿಸುವರು. ಕಾಯಿಗಳು ಕಹಿಯಾಗಿರುವುವು . ದುರ್ಬಲವಾದ ಬಲು ಬಿಸಿಕ್ಷಾರಗಳನ್ನು ಉಪಯೋಗಿಸಿ ಆ ಮೂಲಕ ಇದರ ಕಹಿ ರುಚಿಯನ್ನು ಹೋಗಲಾಡಿಸುತ್ತಾರೆ. ಆ ಬಳಿಕ ಉಪ್ಪುನೀರಿನಲ್ಲಿ ಹಾಕಿ ಉಪ್ಪಿನಕಾಯಿ ತಯಾರಿಸುತ್ತಾರೆ. ಪಾಶ್ಚಾತ್ಯರಿಗೆ ಇದು ಬಲು ಇಷ್ಟ.

ಆಲಿವ್ ಹಣ್ಣುಗಳು ಚೆನ್ನಾಗಿ ಮಾಗಿದಾಗ ಅವನ್ನು ಕೀಳುತ್ತಾರೆ. ಇವುಗಳ ಗುಳ ಮತ್ತು ಸಿಪ್ಪೆಯಲ್ಲಿ ಜಿಂಗಿನ ಅಂಶ ಹೆಚ್ಚಾಗಿರುವುದು. ಇವುಗಳ ಬೀಜಗಳಲ್ಲಿ ಸ್ವಲ್ಪ ಎಣ್ಣೆಯಿರುವುದು. ಆದರೆ ಕಾಯಿಗಳಲ್ಲಿ ಎಣ್ಣೆ ಅಂಶ ತೀರ ಕಡಿಮೆ. ಕಡಲೆಕಾಯಿ ಎಣ್ಣೆ, ಎಳ್ಳೆಣ್ಣೆಗಳಂತೆ ಆಲಿವ್ ಎಣ್ಣೆಯೂ ಆವಿಯಾಗುವುದಿಲ್ಲ. ಶುದ್ಧ ಆಲಿವ್ ಎಣ್ಣೆ ದೀರ್ಘಕಾಲದವರೆಗೆ ಕೆಡದೆ ಉಳಿಯಬಲ್ಲದು. ಆದರೆ ಆಲಿವ್ ಎಣ್ಣೆಯಿರುವ ಸೀಸೆಗಳನ್ನು ಮುಚ್ಚದೆ ತೆರೆದಿಟ್ಟರೆ, ವಾತಾವರಣದಲ್ಲಿರುವ ನೀರಿನ ಅಂಶ ಅದರಲ್ಲಿ ಸೇರಿಕೊಂಡು ಬಲುಬೇಗ ಅದರಲ್ಲಿ ಬೂಷ್ಟು ಬೆಳೆದು ಕೆಡುವುದು. ದುರ್ವಾಸನೆ ಬರುವುದು. ಒಳ್ಳೆಯ ಆಲಿವ್ ಎಣ್ಣೆಗೆ ಚಿನ್ನದ ಬಣ್ಣವಿರುತ್ತದೆ. ಇದಕ್ಕೆ ಸಪ್ಪೆ ರುಚಿ, ವಾಸನೆ ಇವೆ. ತಿಳಿಯಾಗಿಯೂ ನಿರ್ಮಲವಾಗಿಯೂ ಇರುವ ಇದಕ್ಕೆ ವರ್ಜಿನ್ ಎಣ್ಣೆ ಅಥವಾ ಉತ್ಕೃಷ್ಟ ಎಣ್ಣೆ ಎನ್ನುವರು. ಕೆಳದರ್ಜೆಯ ಆಲಿವ್ ಎಣ್ಣೆ ಮಂದವಾಗಿ ಹಳದಿ ಅಥವಾ ಹಸಿರು ಬಣ್ಣಕ್ಕಿರುವುದು. ಆಲಿವ್ ಮರದ ಕಟ್ಟಿಗೆ ಬಲು ಗಟ್ಟಿಯಾಗಿ ದೀರ್ಘಕಾಲ ಬಾಳಿಕೆ ಬರುವುದು. ನಾಜೂಕಾದ ಕೆತ್ತನೆ ಕೆಲಸ ಮಾಡಬಹುದಾಗಿರುವುದರಿಂದ ಪೀಠೋಪಕರಣಗಳನ್ನು ತಯಾರಿಸುವುದರಲ್ಲಿ ಅದನ್ನು ಉಪಯೋಗಿಸುತ್ತಾರೆ. ಆಲಿವ್ ಎಣ್ಣೆಯನ್ನು ಅಡುಗೆ ಎಣ್ಣೆಯಾಗಿ ಉಪಯೋಗಿಸುವರು. ಆಲಿವ್ ಎಲೆ ಮತ್ತು ತೊಗಟೆಗಳಲ್ಲಿ ಗಾಯದಿಂದ ಸೋರುವ ರಕ್ತವನ್ನು ತಡೆಯುವ ಆಲಿಯಾಕ್ಸಿಡೇಟಾ ಎಂಬ ಔಷಧೀಯ ಸತ್ತ್ವವಿದೆ. ಓಲಿಯಡಯಾಯ್ಕ ಮರದ ತೊಗಟೆಯಲ್ಲಿ ಏರಿದ ಜ್ವರದ ಕಾವು ತಗ್ಗಿಸುವ ಶಕ್ತಿಯಿದೆ. ಈ ಎಣ್ಣೆಯಲ್ಲಿ ಕೊಬ್ಬಿನಂಶ ಅಧಿಕ. ಸಾರ್ಡೀನು ಮುಂತಾದ ಮೀನುಗಳನ್ನು ಹದಮಾಡಲು, ರಕ್ಷಿಸಿ ಇಡಲು ಈ ಎಣ್ಣೆಯನ್ನು ಉಪಯೋಗಿಸುವರು. ಆಲಿವ್ ಎಣ್ಣೆಯಲ್ಲಿ ಮುಖ್ಯವಾಗಿ ಓಲೀಯಿಕ್ ಅಲ್ಲದೆ ಇತರ ಆಮ್ಲಗಳ ಸಾಂದ್ರಮಿಶ್ರಣವಿದೆ. ಸ್ವಲ್ಪ ಪ್ರಮಾಣದ ಲಿನೋಲಿಕ್ ಆಮ್ಲವೂ ಇದೆ. ಆಲಿವ್ ಎಣ್ಣೆ ಪುಷ್ಟಿಕರ. ಭೇದಿ ಔಷಧಿಯಾಗಿಯೂ ಬಳಸುತ್ತಾರೆ. ಹೊಟ್ಟೆ ಸಂಬಂಧದ ಉರಿ ಮೊದಲಾದ ಬೇನೆಗಳಲ್ಲಿ ಶಮನಕಾರಿ. ಗುದದ ಮೂಲಕ ಕೊಡುವ ಮದ್ದುಗಳನ್ನು ಆಲಿವ್ ಎಣ್ಣೆ ಮಿಶ್ರಣದಲ್ಲಿ ಕೊಡಬಹುದು. ಈ ಎಣ್ಣೆಯನ್ನು ಉರಿವ ಚರ್ಮಕ್ಕೆ ಶಾಮಕವಾಗಿ ಲೇಪಿಸುತ್ತಾರೆ. ಇದನ್ನು ಉಜ್ಜುತೈಲ, ಮುಲಾಮು, ಅಂಟುಪಟ್ಟಿ, ಉಣ್ಣೆಬಟ್ಟೆ ಮತ್ತು ಸಾಬೂನುಗಳ ತಯಾರಿಕೆಯಲ್ಲಿ ಬಳಸುತ್ತಾರೆ.(ಎಂ.ಜಿ.)

**ಆಲಿವೀನ್:** ಮೆಗ್ನೀಸಿಯಂ ಮತ್ತು ಫೆರಸ್ ಆರ್ಥೋಸಿಲಿಕೇಟುಗಳಿಂದ ಕೂಡಿದ ಶಿಲಾರೂಪಕ ಖನಿಜ. ಆಲಿವ್ ಬಣ್ಣವಿರುವುದರಿಂದ ಈ ಹೆಸರು ಬಂದಿದೆ; ಇದರ ರಾಸಾಯನಿಕ ಸಂಕೇತ $(Mg\,Fe)_2SiO_4$. ರೂಢಿಯಲ್ಲಿ ಈ ಬಣ್ಣದ ಎಲ್ಲ ಕಲ್ಲುಗಳನ್ನೂ ಆಲಿವೀನ್ ಎಂದು ತಪ್ಪಾಗಿ ಕರೆಯುವುದುಂಟು. ಆಲಿವೀನ್ ಆರ್ಥೋರಾಂಬಿಕ್ ಹರಳಿನ ವರ್ಗಕ್ಕೆ ಸೇರಿದೆ. ಗಾಜಿನಂಥ ಹೊಳಪು. ಕಾಠಿಣ್ಯ (ಹಾರ್ಡ್‌ನೆಸ್) 6.5–7 ಸಾಪೇಕ್ಷ ಸಾಂದ್ರತೆ 3.27–3.37. ಶಿಲಾರೂಪಕ ಖನಿಜಗಳಲ್ಲೆಲ್ಲ ಇದು ಅತಿ ತೂಕವಾದುದು.

ಇದು ಮುಖ್ಯವಾಗಿ ಅಲ್ಪಸಿಲಿಕಾಂಶ (ಬೇಸಿಕ್) ಮತ್ತು ಅತ್ಯಲ್ಪಸಿಲಿಕಾಂಶ ಶಿಲೆಗಳಲ್ಲಿ ಕಂಡುಬರುತ್ತದೆ. ಗ್ಯಾಬ್ರೊ, ಪೆರಿಡೊಟೈಟ್ ಮತ್ತು ಡನೈಟ್‌ಶಿಲೆಗಳಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದೆ. ಇದು ಹಸಿರುಬಣ್ಣದ ನೂಲಿನಂತೆ ಎಳೆ ಎಳೆಯಾದ ಸರ್ಪೆಂಟೈನ್ ಎಂಬ ಖನಿಜವಾಗಿ ಮಾರ್ಪಡುತ್ತದೆ. ಈ ಬದಲಾವಣೆಗೆ ನೀರಿನ ಅಂಶ ಬಹು ಅಪೇಕ್ಷಣೀಯ. ಏಕೆಂದರೆ ಆಲಿವೀನ್‌ಗಿಂತ ಸರ್ಪೆಂಟೈನ್‌ನಲ್ಲಿ ನೀರಿನ ಅಂಶ ಹೆಚ್ಚು. ಆಲಿವೀನ್ ಶಿಲೆಗಳಲ್ಲಿ ಕ್ರೋಮೈಟ್ ಹೆಚ್ಚಾಗಿರುತ್ತದೆ. ಕರ್ನಾಟಕ ರಾಜ್ಯದ ಬೈರಾಪುರ ಮತ್ತು ಕಡಕೊಳ ಪ್ರಾಂತ್ಯಗಳಲ್ಲಿನ ಆಲಿವೀನ್ ಶಿಲೆಗಳಲ್ಲಿ ಹೆಚ್ಚು ಪ್ರಮಾಣದ ಕ್ರೊಮೈಟ್ ಅದುರು ದೊರೆಯುತ್ತದೆ. ಆಲಿವೀನ್ ಹರಳುಗಳನ್ನು ಪೆರಿಡೋಟ್ ಎಂಬ ರತ್ನವಾಗಿ ಉಪಯೋಗಿಸುವುದುಂಟು. ಬರ್ಮ ಮುಂತಾದೆಡೆ ಸಿಗುವ ಆಲಿವೀನ್ ಪಾರದರ್ಶಕ ಹರಳುಗಳನ್ನು ರತ್ನಗಳಾಗಿ ಉಪಯೋಗಿಸುತ್ತಾರೆ. ಶಿಲೆಗಳಿಂದ ಕೂಡಿದ ಉಲ್ಕೆಗಳಲ್ಲಿ ಆಲಿವೀನ್ ಹೆಚ್ಚಾಗಿ ಕಂಡುಬರುತ್ತದೆ. (ಎಸ್.ಕೆ.ವಿ.)

**ಆಲಿವ್ಸ್ ಬೆಟ್ಟಸಾಲು:** ಜೆರೂಸಲೆಂನ ಪೂರ್ವಕ್ಕಿರುವ ಸುಣ್ಣಕಲ್ಲು ರಚಿತ ಬೆಟ್ಟಗಳ ಸಾಲು ಇದಕ್ಕೂ ಜೆರೊಸಲೆಂಗೂ ಮಧ್ಯೆ ಕಿಡ್ರಾನ್ ಕಣಿವೆ ಇದೆ. ಈ ಮಾರ್ಗವಾಗಿಯೇ ಡೇವಿಡ್ ಜೆರೊಸಲೆಂನಿಂದ ಓಡಿಹೋದನೆಂದು ಬೈಬಲ್ಲಿನ ಹಳೆ ಒಡಂಬಡಿಕೆಯಲ್ಲೂ ಯೇಸು ಆಗಾಗ್ಗೆ ಇಲ್ಲಿಗೆ ಬರುತ್ತಿದ್ದನೆಂದು ಹೊಸ ಒಡಂಬಡಿಕೆಯಲ್ಲೂ ಹೇಳಿದೆ. ಕ್ರೈಸ್ತ ಧರ್ಮಾವಲಂಬಿಗಳಿಗಾಗಿ ಇಲ್ಲಿ ಒಂದು ಆರಾಧನ ಮಂದಿರವನ್ನು ಕಟ್ಟಿಸಲಾಗಿತ್ತು. ಕಾಲಕ್ರಮೇಣ ಇದನ್ನು ಮಹಮ್ಮದೀಯರು ಮಸೀದಿಯನ್ನಾಗಿ ಮಾರ್ಪಡಿಸಿದರು. ಬೆಟ್ಟದ ತಳಭಾಗದಲ್ಲಿ ಸ್ವಲ್ಪವೇ ದೂರದಲ್ಲಿರುವ ಶಿಲೆಯಿಂದ ನಿರ್ಮಿತವಾಗಿರುವ ಗುಹೆಯನ್ನು ಧರ್ಮೋಪದೇಶಕರ ಸಮಾಧಿ ಎಂದು ಕರೆಯುತ್ತಾರೆ. ಆಲಿವ್ಸ್ ಸರಣಿಯ ಅತಿಎತ್ತರವಾದ ಶಿಖರ ಆಲಿವ್ಸ್ ಪರ್ವತ (808 ಮೀ).

ಸ್ಕೊಪಿಸ್ ಶಿಖರ ಆಲಿವ್ಸ್ ಬೆಟ್ಟಗಳ ಒಂದು ಭಾಗ. 1925ರಲ್ಲಿ ಇಲ್ಲಿ ಹೀಬ್ರೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು. 1927ರ ಜುಲೈನಲ್ಲಾದ ಭೂಕಂಪದಿಂದ ಈ ಪ್ರದೇಶಕ್ಕೆ ಅಪಾರ ಹಾನಿಯುಂಟಾಯಿತು. ರಾಜಕೀಯವಾಗಿ ಇಸ್ರೇಲಿ ಆಡಳಿತ ವ್ಯವಸ್ಥೆಗೆ ಸಂಬಂಧ ಗ್ರೇಟರ್ ಜೆರೊಸಲೆಂನ ಪುರಸಭೆಗೆ ಸೇರಿದ ಒಂದು ಭಾಗ. ಕ್ರೈಸ್ತ ಮತ್ತು ಯೆಹೂದಿ ಧರ್ಮಗಳ ಪುಣ್ಯಕ್ಷೇತ್ರ. (ಎಂ.ಎಸ್.ಎಂ.)

**ಆಲಿ ಸಹೋದರರು:** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ ಸಹೋದರರು: ಮಹಮ್ಮದ್ ಆಲಿ ಮತ್ತು ಶೌಕತ್ ಆಲಿ. 19ನೆಯ ಶತಮಾನದ 8ನೆಯ ದಶಕದಲ್ಲಿ ಜನಿಸಿದರು. ತಂದೆ ರಾಮಪುರ ರಾಜ್ಯದ ಉನ್ನತಾಧಿಕಾರಿಯಾಗಿದ್ದ. ವಿದ್ಯಾಭ್ಯಾಸ ರಾಮಪುರದಲ್ಲಿ, ಅನಂತರ ಇಂಗ್ಲೆಂಡಿನಲ್ಲಿ ಆಯಿತು. ಇವರಿಬ್ಬರಲ್ಲಿ ಮಹಮ್ಮದಾಲೀಯೇ ಹೆಚ್ಚು ಕ್ರಿಯಾಸಕ್ತ.

ತಾರುಣ್ಯದಲ್ಲೇ ಇವರು ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸತೊಡಗಿದರು. ಮುಸ್ಲಿಂ ಲೀಗನ್ನು ಸ್ಥಾಪಿಸುವ ಕಾರ್ಯದಲ್ಲಿ ದುಡಿದರು. ಮಹಮ್ಮದಾಲಿ ಭಾಷಣ ಮಾಡುವುದರಲ್ಲಿ ಒಳ್ಳೆಯ ಹೆಸರು ಪಡೆದ. ಕಾಮ್ರೇಡ್ ಎಂಬ ಪತ್ರಿಕೆಯನ್ನು ಸ್ಥಾಪಿಸಿ (1919) ಜನತೆಗೆ ತಮ್ಮ ಶೋಚನೀಯ ಪರಿಸ್ಥಿತಿಯ ಅರಿವು ಮಾಡಿಕೊಟ್ಟ. ಆಲೀಗಢ

ಕಾಲೇಜನ್ನು ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸುವ ಕಾರ್ಯದಲ್ಲಿ ಸಹೋದರರಿಬ್ಬರೂ ತುಂಬ ಶ್ರಮಿಸಿದರು. 1912ರಲ್ಲಿ ದೆಹಲಿ ರಾಜಧಾನಿಯಾದ ಮೇಲೆ ಅಲ್ಲಿ ಬಂದು ನೆಲೆಸಿದರು. ಹಮ್‌ದರ್ದ್ ಎಂಬ ಉರ್ದು ಪತ್ರಿಕೆಯನ್ನು ಪ್ರಾರಂಭಿಸಿದರು. ಮೊದಲ ಮಹಾಯುದ್ಧ ಪ್ರಾರಂಭವಾದಾಗ ತುರ್ಕಿ ಜರ್ಮನಿಯ ಕಡೆ ಸೇರಿತು. ಇವರು ತಮ್ಮ ಪತ್ರಿಕೆಗಳಲ್ಲಿ ತುರ್ಕಿಯ ಪರ ಲೇಖನಗಳನ್ನು ಬರೆಯತೊಡಗಿದರು. ಇದರಿಂದ ಜೈಲುವಾಸವನ್ನನುಭವಿಸಬೇಕಾಯಿತು. ಈ ಕಾಲಕ್ಕೆ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದರು. ಖಿಲಾಫತ್ ಚಳವಳಿ (ನೋಡಿ) ಆಗ ಉಗ್ರರೂಪ ತಾಳಿತ್ತು. ಆ ಪ್ರಶ್ನೆಯನ್ನು ಬಗೆಹರಿಸುವುದಕ್ಕಾಗಿ ಮಹಮ್ಮದಾಲೀ ಖಿಲಾಫತ್ ನಿಯೋಗದೊಂದಿಗೆ ಇಂಗ್ಲೆಂಡಿಗೆ ತೆರಳಿದ. ಅಲ್ಲಿ ಅವನ ಪ್ರಯತ್ನ ಫಲಿಸಲಿಲ್ಲ. ಹಿಂತಿರುಗುವಾಗ ಪಶ್ಚಿಮ ಏಷ್ಯದ ಮುಸ್ಲಿಂ ರಾಜ್ಯಗಳಿಗೂ ಭೇಟಿಯಿತ್ತ. ಅಲ್ಲಿಯೂ ಖಿಲಾಫತ್ ವಿಷಯದಲ್ಲಿ ಆಸಕ್ತಿ ಕಡಿಮೆಯೆಂದು ಗೊತ್ತಾಯಿತು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಹೊರತು ಅದಕ್ಕೆ ಹೊರದೇಶಗಳಲ್ಲಿ ಮನ್ನಣೆ ದೊರೆಯದು ಎಂಬುದು ಅನುಭವವೇದ್ಯವಾಯಿತು.

ಭಾರತಕ್ಕೆ ಹಿಂತಿರುಗಿದ ಕೂಡಲೇ ಸಹೋದರರಿಬ್ಬರೂ ಅಸಹಕಾರ ಚಳವಳಿಯಲ್ಲಿ ದುಮುಕಿದರು. ಕಾಂಗ್ರೆಸ್ಸಿನ ಸಂದೇಶವನ್ನು ದೇಶದ ನಾನಾಕಡೆ ಹರಡಿದರು. 1912ರಲ್ಲಿ ಕರಾಚಿಯಲ್ಲಿ ನಡೆದ ಖಿಲಾಫತ್ ಸಮ್ಮೇಳನದಲ್ಲಿ, ಮುಸ್ಲಿಂ ಸೈನಿಕರು ತಮ್ಮ ವೃತ್ತಿಯನ್ನು ತ್ಯಜಿಸಿ ಹೊರಬರಲು ಕರೆಕೊಟ್ಟರು. ಇದರಿಂದ ಪುನಃ ಸೆರೆಮನೆವಾಸವನ್ನನುಭವಿಸಬೇಕಾಯಿತು. ಆಮೇಲೆ 1923ರಲ್ಲಿ ಬಿಡುಗಡೆಯಾಯಿತು. ಆ ವರ್ಷದ ಕಾಂಗ್ರೆಸ್ಸಿಗೆ ಮಹಮ್ಮದಾಲೀಯನ್ನೇ ಅಧ್ಯಕ್ಷನನ್ನಾಗಿ ಆರಿಸಲಾಯಿತು. ಅಧ್ಯಕ್ಷಭಾಷಣದಲ್ಲಿ ಹಿಂದೂ ಮುಸ್ಲಿಂ ಐಕ್ಯವೇ ಪ್ರಧಾನ ಅಂಶವಾಗಿತ್ತು. ಮುಂದೆ ಕೌನ್ಸಿಲ್ ಪ್ರವೇಶದ ಪರವಾಗಿ ನಿಲುವು ಹೊಂದಿದ್ದ ಕಾಂಗ್ರೆಸ್ಸಿಗರನ್ನು ವಿರೋಧಿಸಲಿಲ್ಲವಾದರೂ ಕೌನ್ಸಿಲ್‌ನಿಂದ ದೂರವಾಗಿಯೇ ಉಳಿದುದಲ್ಲದೆ 1927ರಲ್ಲಿ ಗಾಂಧೀಜಿಯೊಡನೆ ಭಿನ್ನಾಭಿಪ್ರಾಯವುಂಟಾಗಿ ಕಾಂಗ್ರೆಸ್‌ನಿಂದ ದೂರಸರಿದ.

ಮುಂದೆ ಹಿಂದೂ ಮುಸ್ಲಿಂ ಗಲಭೆಗಳು ಪ್ರಾರಂಭವಾದವು. ಇದನ್ನು ಕಂಡು ಆಲೀ ಸಹೋದರರು ಬಹಳ ನೊಂದರು. ಈ ಗಲಭೆಗಳ ವಿರುದ್ಧ ಗಾಂಧೀಜಿ ನಡೆಸಿದ ಉಪವಾಸವ್ರತ ಮಹಮ್ಮದಾಲೀಯ ಮನೆಯಲ್ಲೇ ನಡೆಯಿತು. ಈ ಸಹೋದರರ ಶ್ರಮದಿಂದಲೇ ಹಿಂದೂ ಮುಸ್ಲಿಂ ಏಕತಾಸಮ್ಮೇಳನ ಫಲಕಾರಿಯಾಯಿತು. 1930ರಲ್ಲಿ ಮಹಮ್ಮದಾಲೀ ಲಂಡನ್ನಿನಲ್ಲಿ ಜರುಗಿದ ದುಂಡುಮೇಜು ಪರಿಷತ್ತಿಗೆ ಹೋಗಿ, ಸ್ವಾತಂತ್ರ್ಯ ದೊರಕುವವರೆಗೂ ತಾಯ್ನಾಡಿಗೆ ಹಿಂತಿರುಗುವುದಿಲ್ಲವೆಂದು ನೊಂದ ಹೃದಯದಿಂದ ಆ ಸಭೆಯಲ್ಲಿ ಹೇಳಿದ. ವಿಧಿವಿಲಾಸವೆಂಬಂತೆ ಅಲ್ಲೇ ಕಾಲವಾದ. ಕೊನೆಯುಸಿರಿನಲ್ಲೂ ಹಿಂದೂಗಳು ಮುಸ್ಲಿಮರು ಮತಭೇದವನ್ನು ಮರೆತು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವಂತೆ ಉಪದೇಶಿಸಿದ. *

**ಆಲಿಸೈಕ್ಲಿಕ್ (ಆ್ಯಲಿಸೈಕ್ಲಿಕ್) ಸಂಯುಕ್ತಗಳು:** ಚಕ್ರೀಯ ಸಾವಯವ ಸಂಯುಕ್ತಗಳ ಒಂದು ಗುಂಪು. ಚಕ್ರೀಯ ರಚನೆಯಿರುವ (ಸೈಕ್ಲಿಕ್ ಸ್ಟ್ರಕ್ಚರ್) ಸಾವಯವ ಸಂಯುಕ್ತಗಳಲ್ಲಿ ಮುಖ್ಯವಾಗಿ ಎರಡು ವಿಧ. ಅಣುರಚನೆಯಲ್ಲಿ ಇಂಗಾಲ (ಕಾರ್ಬನ್) ಪರಮಾಣುಗಳಿಂದಲೇ ಆದ ಚಕ್ರಗಳಿದ್ದರೆ ಅವನ್ನು ಬರೀ ಇಂಗಾಲ ಚಕ್ರೀಯ (ಕಾರ್ಬೊಸೈಕ್ಲಿಕ್) ಸಂಯುಕ್ತಗಳೆಂದೂ ಚಕ್ರಗಳನ್ನು ರೂಪಿಸಿರುವ ಪರಮಾಣುಗಳಲ್ಲಿ ಇಂಗಾಲೇತರ ಪರಮಾಣುಗಳೂ (ಸಾಮಾನ್ಯವಾಗಿ O, S, N) ಇದ್ದರೆ ಅವನ್ನು ವಿದ್ಯುಶ್ಚಕ್ರೀಯ (ಹೆಟರೊಸೈಕ್ಲಿಕ್) ಸಂಯುಕ್ತಗಳೆಂದೂ ಕರೆಯುತ್ತಾರೆ. ಇಂಗಾಲ ಚಕ್ರೀಯ ಸಂಯುಕ್ತಗಳಲ್ಲಿ ಬೆಂಜೀನ್ ಮತ್ತು ಅದರಿಂದ ಜನ್ಯವಾದ ಸಂಯುಕ್ತಗಳು ತಮ್ಮದೇ ಆದ ವಿಶೇಷ ಗುಣಲಕ್ಷಣಗಳನ್ನು ತೋರುವುದರಿಂದ ಅವನ್ನೇ ಬೇರೊಂದು ಗುಂಪಾಗಿ ಪರಿಗಣಿಸಿ ಆ್ಯರೊಮ್ಯಾಟಿಕ್ ಸಂಯುಕ್ತಗಳೆಂದು (ನೋಡಿ) ಕರೆದು ಉಳಿದ ಎಲ್ಲ ಇಂಗಾಲ ಚಕ್ರೀಯ ಸಂಯುಕ್ತಗಳನ್ನೂ ಒಟ್ಟುಗೂಡಿಸಿ ಆ್ಯಲಿಸೈಕ್ಲಿಕ್ ಸಂಯುಕ್ತಗಳೆಂದು ಕರೆಯುವುದು ಪದ್ಧತಿ. ಇವು ರಾಸಾಯನಿಕವಾಗಿ ಬಲುಮಟ್ಟಿಗೆ ಆ್ಯಲಿಫ್ಯಾಟಿಕ್ ಸಂಯುಕ್ತಗಳನ್ನೇ ಹೋಲುವ ಆದರೆ ಚಕ್ರೀಯ ರಚನೆಯಿರುವ ಸಂಯುಕ್ತಗಳಾದುದರಿಂದ ಇವುಗಳಿಗೆ ಈ ಹೆಸರು. ಈ ಸಂಯುಕ್ತಗಳಿಗೆ ಹೆಸರು ಕೊಡುವಾಗ ಸಹ ಚಕ್ರದಲ್ಲಿರುವ ಇಂಗಾಲ ಪರಮಾಣುಗಳ ಸಂಖ್ಯೆಯಷ್ಟೇ ಇಂಗಾಲ ಪರಮಾಣುಗಳಿರುವ ಆ್ಯಲಿಫ್ಯಾಟಿಕ್ ಸಂಯುಕ್ತಗಳ ಹೆಸರನ್ನು ಆರಿಸಿಕೊಂಡು, ಅದಕ್ಕೆ ಸೈಕ್ಲೊ ಎಂಬ ಪೂರ್ವಪ್ರತ್ಯಯ ಸೇರಿಸುತ್ತಾರೆ.










ಉದಾ: ರಾಸಾಯನಿಕ ಗುಣಲಕ್ಷಣಗಳಲ್ಲಿ ಆ್ಯಲಿಸೈಕ್ಲಿಕ್ ಸಂಯುಕ್ತಗಳು ಬಲುಮಟ್ಟಿಗೆ ಅವಕ್ಕೆ ಅನುರೂಪವಾದ ಆ್ಯಲಿಫ್ಯಾಟಿಕ್ ಸಂಯುಕ್ತಗಳನ್ನೇ ಹೋಲುತ್ತವೆ. ಕೆಲವೊಂದು ಸಂಕಲನ ಕ್ರಿಯೆಗಳು (ಅಡಿಷನ್ ರಿಯಾಕ್ಷನ್ಸ್) ನಡೆದಾಗ ಚಕ್ರ ಒಡೆದು ತೆರೆದ ಸರಣಿ ಸಂಯುಕ್ತಗಳು ಉತ್ಪತ್ತಿಯಾಗುತ್ತವೆ. ಚಕ್ರದಲ್ಲಿ ಮೂರೇ ಇಂಗಾಲ ಪರಮಾಣುಗಳಿರುವ ಸೈಕ್ಲೊಪ್ರೋಪೇನ್ ಚಕ್ರ ಈ ರೀತಿ ಸುಲಭವಾಗಿ ಒಡೆಯುತ್ತದೆ. ನಾಲ್ಕು ಪರಮಾಣುಗಳಿರುವ ಚಕ್ರವನ್ನು ಒಡೆಯುವುದು ಹೆಚ್ಚು ಕಷ್ಟ. ಐದು ಪರಮಾಣುಗಳಿರುವ ಚಕ್ರವನ್ನೊಡೆಯುವುದು ಇನ್ನೂ ಕಷ್ಟ. ಕಡಿಮೆ ಸಂಖ್ಯೆಯ ಪರಮಾಣುಗಳಿರುವ ಚಕ್ರಗಳ ಇಂಥ ಹೆಚ್ಚಿನ ಅಸ್ಥಿರತೆಗೆ ಕಾರಣ ಏನೆಂದರೆ ಈ ಚಕ್ರಗಳು ರೂಪುಗೊಳ್ಳುವಾಗ ಇಂಗಾಲ ಪರಮಾಣುವಿನ ವೇಲೆನ್ಸಿ ಬಂಧಗಳು ಬಲವಂತವಾಗಿ ಒಂದರ ಕಡೆಗೊಂದು ಬಗ್ಗಿಕೊಂಡು ಅವುಗಳ ನಡುವಣ ಕೋನ ಸಹಜವಾಗಿರಬೇಕಾದ ಕೋನಕ್ಕಿಂತ ಕಡಿಮೆಯಿರುತ್ತದೆ.




ಉದಾ : ಸೈಕ್ಲೊಪ್ರೋಪೇನಿನಲ್ಲಿ ಚಕ್ರ ತ್ರಿಕೋನಾಕೃತಿ ಹೊಂದಿದ್ದು ಇಂಗಾಲ ಪರಮಾಣುವಿನ ಎರಡು ವೇಲೆನ್ಸಿ ಬಂಧಗಳ ನಡುವೆ ಇರುವ $60^o$ ಕೋನ ಅವುಗಳ




ಸಹಜ ಕೋನವಾದ 109°28'ಗಿಂತ ಬಲು ಕಡಿಮೆ ಇದೆ.

ಇದಕ್ಕೆ ಹೋಲಿಸಿದರೆ ಸೈಕ್ಲೊಬ್ಯೂಟೇನ್‌ನಲ್ಲಿರುವ $90^o$ ಕೋನ ಅಷ್ಟು ಹೆಚ್ಚಿನ ಅಸ್ಥಿರತೆಯನ್ನುಂಟುಮಾಡುವುದಿಲ್ಲ. ಸೈಕ್ಲೊಪೆಂಟೇನಿನಲ್ಲಿಯಾದರೋ ಇಂಗಾಲದ ವೇಲೆನ್ಸಿ ಬಂಧಗಳ ನಡುವಣ ಕೋನ $108^o$ ಇದ್ದು ಸಹಜ ಕೋನಕ್ಕೆ ಅತ್ಯಂತ ಸಮೀಪವಾಗಿದೆ.




ಸಿವೆಟೋನ್ (ಪುನುಗಿನಲ್ಲಿ)




ಮಸ್ಕೋನ್ (ಕಸ್ತೂರಿಯಲ್ಲಿ)

ಇಂಗಾಲ ಚಕ್ರ ಇನ್ನೂ ದೊಡ್ಡದಾಗುತ್ತ ಹೋದಂತೆ ಇನ್ನೊಂದು ಹೊಸ ಪರಿಸ್ಥಿತಿ ಉದ್ಭವಿಸುತ್ತದೆ; ಚಕ್ರ ಒಂದೇ ಸಮತಲದಲ್ಲಿ ಉಳಿಯದೆ ಮಡಿಸಿಕೊಳ್ಳುವ ಸಾಮರ್ಥ್ಯ ಪಡೆಯುತ್ತದೆ.

ಹಾಗೆ ಮಡಿಸಿಕೊಳ್ಳುವಾಗ ವೇಲೆನ್ಸಿ ಬಂಧಗಳು ತಮಗೆ ಸೂಕ್ತವಾದ ದಿಕ್ಕುಗಳಲ್ಲಿ ನೆಲೆಸುವಂತೆಯೇ ಚಕ್ರದ ಮಡಿಕೆ ಉಂಟಾಗುವುದರಿಂದ ಅಣುವಿನ ಸ್ಥಿರತೆಗೆ ಭಂಗ ಬರುವುದಿಲ್ಲ. ಆದ್ದರಿಂದ ದೊಡ್ಡ ಚಕ್ರಗಳುಳ್ಳ ಆ್ಯಲಿಸೈಕ್ಲಿಕ್ ಸಂಯುಕ್ತಗಳು ಹೆಚ್ಚಿನ ಸ್ಥಿರತೆಯುಳ್ಳವು.

ಈ ಸಂದರ್ಭದಲ್ಲಿ ಪುನುಗು ಮತ್ತು ಕಸ್ತೂರಿಗಳ ಸುವಾಸನೆಗೆ ಕಾರಣವಾದ ಎರಡು ನಿಸರ್ಗದತ್ತವಾದ ವಿಶಾಲ ಚಕ್ರೀಯ (ಲಾರ್ಜ್ ರಿಂಗ್) ಸಂಯುಕ್ತಗಳನ್ನು ಹೆಸರಿಸಬಹುದು. ಐದು ಮತ್ತು ಆರು ಪರಮಾಣುಗಳಿರುವ ಆ್ಯಲಿಸೈಕ್ಲಿಕ್ ಹೈಡ್ರೊಕಾರ್ಬನ್ನುಗಳು ಕೆಲವು ಪ್ರದೇಶಗಳಲ್ಲಿ ದೊರೆಯುವ ಪೆಟ್ರೋಲಿಯಂನಲ್ಲಿ ದೊರೆಯುತ್ತವೆ. ಇವು ಬಲುಮಟ್ಟಿಗೆ ಪರ್ಯಾಪ್ತ (ಸ್ಯಾಚುರೇಟೆಡ್) ಹೈಡ್ರೊಕಾರ್ಬನ್ನುಗಳಾದುದರಿಂದ ಇವುಗಳನ್ನು ಸೈಕ್ಲೊಪ್ಯಾರಫಿನ್ನುಗಳೆಂದು ಕರೆಯುತ್ತಾರೆ.

ನಿಸರ್ಗದಲ್ಲಿ ದೊರೆಯುವ ಅತ್ಯಂತ ಮುಖ್ಯವಾದ ಆ್ಯಲಿಸೈಕ್ಲಿಕ್ ಸಂಯುಕ್ತಗಳೆಂದರೆ ಟರ್ಪೀನುಗಳು. ಸಸ್ಯಗಳ ತೊಗಟೆ, ಎಲೆ, ಹೂಗಳಲ್ಲಿ ಕಂಡುಬರುವ, ಸಾಮಾನ್ಯವಾಗಿ ಸುಲಭವಾಗಿ ಆವಿಯಾಗಬಲ್ಲ ಮತ್ತು ದಟ್ಟ ವಾಸನೆಯುಳ್ಳ ತೈಲಗಳನ್ನು ಚಂಚಲ ತೈಲಗಳು (ವಾಲಟೈಲ್ ಆಯಿಲ್ಸ್, ಎಸೆನ್ಷಿಯಲ್ ಆಯಿಲ್ಸ್) ಎಂದು ಕರೆಯುತ್ತಾರೆ. ಗಂಧದ ಎಣ್ಣೆ, ಟರ್ಪಂಟೈನ್, ನೀಲಗಿರಿ ಎಣ್ಣೆ, ಹೂಗಳಿಂದ ತೆಗೆಯುವ ಸುಗಂಧ ತೈಲಗಳು ಮುಂತಾದ ಈ ಬಗೆಯ ತೈಲಗಳಲ್ಲಿರುವ ಮುಖ್ಯ ರಾಸಾಯನಿಕ ಘಟಕಗಳೇ ಈ ಟರ್ಪೀನುಗಳು.



ಟರ್ಪೀನುಗಳಲ್ಲಿ 3, 4, 5 ಮತ್ತು 6 ಇಂಗಾಲ ಪರಮಾಣುಗಳುಳ್ಳ ಚಕ್ರಗಳು ಕಂಡುಬಂದಿವೆ. ಅಣುವಿನಲ್ಲಿ ಒಂದೇ ಚಕ್ರವಿರುವ ಟರ್ಪೀನುಗಳೂ ಇವೆ. 2 ಮತ್ತು 3 ಚಕ್ರಗಳು




ಒಂದರೊಡನೊಂದು ಸೇರಿಕೊಂಡಿರುವ ದ್ವಿಚಕ್ರೀಯ ಮತ್ತು ತ್ರಿಚಕ್ರೀಯ (ಬೈಸೈಕ್ಲಿಕ್ ಮತ್ತು ಟ್ರೈಸೈಕ್ಲಿಕ್) ಟರ್ಪೀನುಗಳೂ ಇವೆ. ಈ ವಿವಿಧ ವರ್ಗಗಳ ಹೈಡ್ರೊಕಾರ್ಬನ್ನುಗಳೂ ಅವುಗಳಿಂದ ಜನ್ಯವಾದ ಆಲ್ಕೊಹಾಲ್, ಆಲ್ಡಿಹೈಡು ಮತ್ತು ಕೀಟೋನುಗಳೂ ಟರ್ಪೀನುಗಳಲ್ಲಿ ಕಂಡುಬರುತ್ತವೆ.

ನೈಸರ್ಗಿಕವಾಗಿ ದೊರೆಯುವ ಆ್ಯಲಿಸೈಕ್ಲಿಕ್ ಸಂಯುಕ್ತಗಳ ಇನ್ನೊಂದು ಮುಖ್ಯ ಗುಂಪು ಸ್ಟಿರಾಯ್ಡ್‌ಗಳು. ಸಸ್ಯಮೂಲದಿಂದ ಬರುವ ಸ್ಥಿರತೈಲಗಳಲ್ಲಿ (ಫಿಕ್ಸೆಡ್ ಆಯಿಲ್ಸ್) ಕಾಣಬರುವ ಸ್ಟಿಗ್ಮ ಸ್ಟೆರಾಲ್, ಪ್ರಾಣಿಮೂಲ ಕೊಬ್ಬುಗಳಲ್ಲಿರುವ ಕೊಲೆಸ್ಟೆರಾಲ್ ಎರ್ಗೊಸ್ಟೆರಾಲ್‌ಗಳು, ವಿಟಮಿನ್ ಡಿ, ಲೈಂಗಿಕ ಹಾರ್ಮೋನುಗಳಾದ ಎಸ್ಟ್ರಡಯಾಲ್, ಟೆಸ್ಟೊಸ್ಟೆರೋನ್‌ಗಳು, ಸಂಧಿವಾತ ಮೊದಲಾದ ರೋಗಗಳ ಚಿಕಿತ್ಸೆಯಲ್ಲಿ ಬಳಸುವ ಕಾರ್ಟಿಸೋನ್ ಇವೆಲ್ಲವೂ ಸ್ಟಿರಾಯ್ಡ್‌ಗಳು. (ಜಿ.ಆರ್.ಎಲ್.)

**ಆಲೀ, ಸಲೀಂ:** 1896–1987. ಭಾರತದ ವಿಶ್ವವಿಖ್ಯಾತ ಪಕ್ಷಿವಿಜ್ಞಾನಿ. ಜನನ 12 ನವೆಂಬರ್ 1896. ತಂದೆ ಮೋಯಿಜುದ್ದೀನ್. ತಾಯಿ ಜೀನತ್ ಉನ್ನೀಸಾ. ಮೋಯಿಜುದ್ದೀನರದ್ದು ತುಂಬು ಕುಟುಂಬ. 5 ಗಂಡು ಮಕ್ಕಳು (ಹಶಮ್‌ಅಲೀ, ಹಮೀದ್‌ಅಲೀ, ಜಬೀರ್‌ಅಲೀ ಮತ್ತು ಸಲೀಂಅಲೀ) ಮತ್ತು ನಾಲ್ವರು ಹೆಣ್ಣು ಮಕ್ಕಳು (ಅಶ್ರಫ್, ಅಖ್ತರ್, ಫರಾತ್ ಮತ್ತು ಕಾಮೋ). ಆದರೆ ಈ ತುಂಬು ಕುಟುಂಬದಲ್ಲಿ ಬಾಳಿ ಮಕ್ಕಳ ಅಭ್ಯುದಯವನ್ನು ನೋಡುವ ಭಾಗ್ಯ ಈ ದಂಪತಿಗಳಿಗಿರಲಿಲ್ಲ. ಸಲೀಂ ಅಲೀ ಅವರು ಒಂದು ವರ್ಷದವರಾಗಿದ್ದಾಗ ಮೋಯಿಜುದ್ದೀನ್, ಮೂರು ವರ್ಷದವರಾಗಿದ್ದಾಗ ಜೀನತ್ ಉನ್ನೀಸಾ ನಿಧನರಾದರು. ಆದರೆ, ಈ ಕೊರತೆಯ ನೆರಳೂ ಮಕ್ಕಳ ಮೇಲೆ ಬೀಳದಂತೆ ಸಾಕಿ ಸಲಹಿದವರು ಸ್ವಂತ ಮಕ್ಕಳಿಲ್ಲದ ಸೋದರ ಮಾವ ಅಮೀರುದ್ದೀನ್ ತಯಾಬ್ಜಿ ಮತ್ತು ಅತ್ತೆ ಹಮೀದಾ ಬೇಗಂ. ಈ ಕರುಣಾಮಯಿ ದಂಪತಿಗಳು ಸಲೀಂ ಅಲೀ ಸಹೋದರ ಸಹೋದರಿಯರನ್ನಲ್ಲದೆ ಇತರೆ ಅನೇಕ ಬಂಧುಗಳ ಮಕ್ಕಳನ್ನೂ ಅನಾಥರನ್ನೂ ತಮ್ಮ ಮನೆಯಲ್ಲಿರಿಸಿಕೊಂಡು ಸಲಹಿದರು. ಸಲೀಂ ಮುಂದೆ ಇದನ್ನು ಸ್ಮರಿಸಿಕೊಂಡು ಹೇಳುತ್ತಾರೆ: "ಅವರು ನಮಗೆ ಯಾವ ತಂದೆ – ತಾಯಿಗಿಂತಲೂ ಹೆಚ್ಚು ಬೇಕಾದವರಾಗಿದ್ದರು".

ಮಕ್ಕಳಿಂದ ತುಂಬಿಹೋಗಿದ್ದ ಮನೆಯಲ್ಲಿ ಸಲೀಂ ಮತ್ತು ಸಹೋದರರು ಸಂತೋಷವಾಗಿ ತಮ್ಮ ಬಾಲ್ಯವನ್ನು ಕಳೆದರು. ಹಕ್ಕಿಗಳ ಬಗ್ಗೆ ಆಸಕ್ತಿ ಆ ಮನೆಯಲ್ಲಿ ಯಾರಿಗೂ ಇರಲಿಲ್ಲ. ಪ್ರಕೃತಿ ಸಂರಕ್ಷಣೆ ಎಂಬುದು ಹಾಸ್ಯಾಸ್ಪದವಾದ ಮಾತಾಗಿದ್ದ ಆ ಕಾಲ ಶಿಕಾರಿಗಳ ಸುವರ್ಣ ಯುಗ ಎಂದೇ ಗುರುತಿಸಬಹುದು. ಹೀಗಿದ್ದರೂ ಸಲೀಂ ತಮ್ಮ ಸಹೋದರ ಸುಲೇಮಾನ್‌ನೊಡಗೂಡಿ ಅಡುಗೆಯವನ ಸಹಾಯದಿಂದ ಅಡುಗೆಗೆಂದು ತಂದ ಹಕ್ಕಿಗಳನ್ನು ಸಂರಕ್ಷಿಸಿ ಒಂದು ಗುಪ್ತ ಪಕ್ಷಿ ಸಂಗ್ರಹಾಲಯವನ್ನು ನಡೆಸುತಿದ್ದರು. ಆದರೆ, ಆ ಬಂಧನದಲ್ಲಿದ್ದ ಆ ಹಕ್ಕಿಗಳು ಹೆಚ್ಚು ಕಾಲ ಉಳಿಯದೆ ಸಾವನ್ನಪ್ಪುತಿದ್ದವು.

ಸಾಂಪ್ರದಾಯಿಕ ಮುಸ್ಲಿಂ ಕುಟುಂಬವಾದ ಈ ಮನೆಯಲ್ಲಿ ಕೋಳಿಯ ಬದಲಿಗೆ ಆಗ ಮಾರುಕಟ್ಟೆಯಲ್ಲಿ ಧಂಡಿಯಾಗಿ ಸಿಗುತಿದ್ದ ಇತರೆ ಹಕ್ಕಿಗಳನ್ನು ತಂದು ಶಾಸ್ತ್ರೋಕ್ತವಾಗಿ ಅದರ ಗಂಟಲು ಸೀಳಿ (ಹಲಾಲ್ ಮಾಡಿ) ಅಡುಗೆಗೆ ಬಳಸಲಾಗುತಿತ್ತು. ಒಮ್ಮೆ ತಾನು ಶಿಕಾರಿ ಮಾಡಿದ ಹಕ್ಕಿಯನ್ನು ಸಂಪ್ರದಾಯದ ಪ್ರಕಾರ ಹಲಾಲ್ ಮಾಡಲು ನೋಡಿದಾಗ ಆ ಹಕ್ಕಿಯ ಗಂಟಲಿನ ಮೇಲೆ ಹಳದಿ ಮಚ್ಚೆಯಿದ್ದದ್ದು ಸಲೀಂ ಅಲೀಯವರಿಗೆ ಇದು ಒಬ್ಬ ಸಂಪ್ರಾದಯಸ್ಥ ಮುಸ್ಲಿಂ ತಿನ್ನಬಹುದಾದ ಹಕ್ಕಿಯೇ? ಎಂಬ ಸಂಶಯ ಮೂಡಿತು. ಈ ಬಗ್ಗೆ ಫತ್ವಾ ಪಡೆಯಲು ಕುಟುಂಬದ ಶಿಕಾರಿಯಾಗಿದ್ದ ಮಾವನನ್ನು ಸಲೀಂ ಸಂಪರ್ಕಿಸಿದರು. ಅವರಿಗೆ ಈ ಹಕ್ಕಿಯ ಗುರುತು ತಿಳಿಯಲಿಲ್ಲ. ಆಗ ಅವರು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ (ಮುಂಬೈ ನಿಸರ್ಗ ಇತಿಹಾಸ ಸಂಸ್ಥೆ – ಬಿಎನ್‌ಎಚ್‌ಎಸ್) ಗೌರವ ಕಾರ್ಯದರ್ಶಿಗೆ ಈ ಪಕ್ಷಿಯನ್ನು ಗುರುತಿಸುವಂತೆ ಕೋರಿ ಒಂದು ಪತ್ರಬರೆದು ಸಲೀಂ ಕೈಗಿತ್ತು ಬಿಎನ್‌ಎಚ್‌ಎಸ್‌ಗೆ ಕಳುಹಿಸಿದರು.

ಭಾರತದ ಹಕ್ಕಿ ಮನುಷ್ಯನ ಕತೆ ನಿಜದಲ್ಲಿ ಇಲ್ಲಿಂದ ಪ್ರಾರಂಭವಾಗುತ್ತದೆ. ಆಗ ಬಿಎನ್‌ಎಚ್‌ಎಸ್‌ನ ಗೌರವ ಕಾರ್ಯದರ್ಶಿಯಾಗಿದ್ದ ವಾಲ್ಟರ್ ಸಾಮ್ಯುಯಲ್ ಮಿಲರ್ಡ್‌ರನ್ನು ಸಲೀಂ ಭೇಟಿಯಾದರು. ಅವರು ಆ ಹಕ್ಕಿಯನ್ನು ಸುಮ್ಮನೆ ಗುರುತಿಸಿ ಹಿಂದಕ್ಕೆ ಕಳುಹಿಸಿದ್ದರೆ ಏನಾಗುತಿತ್ತೋ. ಆದರೆ, ಮಿಲರ್ಡ್ ಹಾಗೆ ಮಾಡಲಿಲ್ಲ! ಹಕ್ಕಿಯನ್ನು ನೋಡುತಿದ್ದಂತೆಯೇ ಅದನ್ನು ಹಳದಿಗಂಟಲಿನ ಗುಬ್ಬಚ್ಚಿ (ಪೆಟ್ರೊನಿಯಾ ಜಾಂತೋಕೊಲಿಸ್) ಎಂದು ಗುರುತಿಸಿದರು. ಜೊತೆಗೆ ಬಾಲಕ ಸಲೀಂಗೆ ಅಂದಿನ ಬಿಎನ್‌ಎಚ್‌ಎಸ್‌ನ ಸಂಗ್ರಹದಲ್ಲಿದ್ದ ಚರ್ಮಸುಲಿದು ಹೂರಣ ತುಂಬಿಇಟ್ಟಿದ್ದ ಹಕ್ಕಿಗಳನ್ನೆಲ್ಲಾ ಪರಿಚಯ ಮಾಡಿಸುತ್ತಾ ಬಂದರು. ಪ್ರಭೇದಗಳು, ಉಪಪ್ರಭೇದಗಳು ಅವುಗಳಲ್ಲಿನ ಸೂಕ್ಷ್ಮ ವ್ಯತ್ಯಾಸ ಇವೆಲ್ಲವನ್ನೂ ವಿವರಿಸುತ್ತಾ ಸಂಗ್ರಹಾಗಾರವನ್ನೆಲ್ಲಾ ತೋರಿಸಿದರು. ಹಾಗೆ ಪಕ್ಷಿಗಳ ಚರ್ಮ ಸುಲಿದು, ಹೂರಣ ತುಂಬುವ ಕೆಲಸ ಮಾಡುತ್ತಿದ್ದವರನ್ನು ಪರಿಚಯಿಸಿದರು. ಕೊನೆಗೆ ಪಕ್ಷಿಗಳ ಬಗ್ಗೆ ಅಂದು ಲಭ್ಯವಿದ್ದ ಅಮೂಲ್ಯ ಪುಸ್ತಕಗಳನ್ನು ಸಹ ಪರಿಚಯಿಸಿದರು. ಇದರಿಂದ ಬಾಲಕ ಸಲೀಂ ಮೇಲಾದ ಪರಿಣಾಮ ಅಷ್ಟಿಷ್ಟಲ್ಲ. ಈ ಪುಸ್ತಕಗಳಲ್ಲಿ ಎಡ್ವರ್ಡ್ ಹ್ಯಾಮಿಲ್ಟನ್ ಅಟ್ಕಿನ್ಸ್ ಅವರ ಕಾಮನ್ ಬರ್ಡ್ಸ್ ಆಫ್ ಬಾಂಬೆ ಮತ್ತು ಎ ನ್ಯಾಚುರಲಿಸ್ಟ್ ಆನ್ ದ ಪ್ರೌಲ್ ಎಂಬ

ಪುಸ್ತಕಗಳು ಸಲೀಂ ಆಲೀಯವರಿಗೆ ಜೀವನದುದ್ದಕ್ಕೂ ಒಂದು ಗೀಳಿನಂತೆಯೇ ಅಂಟಿಕೊಂಡಿದ್ದವು. ಮಿಲರ್ಡ್ ಅವರ ಈ ಕೃಪೆಯನ್ನು ಸಲೀಂ ಆಲೀ ಅನೇಕ ಸಂದರ್ಶನಗಳಲ್ಲಿ ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಈ ಘಟನೆಯಾದ ಅನಂತರ ತಮ್ಮ ಬದುಕಿನ ಗುರಿ ತಿಳಿದ ಸಾಧಕನಂತೆ ಕಾರ್ಯವೆಸಗತೊಡಗಿದ ಸಲೀಂ ಮುಂದೆಂದೂ ಹಿಂದಿರುಗಿ ನೋಡಲಿಲ್ಲ. ಭಾರತದಲ್ಲಿ ಶೈಶವಾವಸ್ಥೆಯಲ್ಲೂ ಇದ್ದಿರದ ಪಕ್ಷಿಗಳ ಅಧ್ಯಯನ ಇವರ ಏಕಮೇವ ಗುರಿಯಾಯಿತು.

ತಮ್ಮ ಇತರ ಸಹೋದರಿಯರೊಂದಿಗೆ ಜನಾನ ಮೆಡಿಕಲ್ ಮಿಷನ್ ಶಾಲೆಗೆ (ಹೆಣ್ಣು ಮಕ್ಕಳ ಪ್ರೌಢಶಾಲೆಗೆ) ಸೇರಿದರು. ಇಲ್ಲಿ ಬಾಲಕರು ಮಾಧ್ಯಮಿಕ ಶಾಲೆಯವರೆಗೆ ಓದಲು ಅವಕಾಶವಿತ್ತು. ಅನಂತರ ಸಂತ ಜೇವಿಯರ್ ಶಾಲೆಯನ್ನು ಸೇರಿದರು. ಒಬ್ಬ ಸಾಧಾರಣ ಬುದ್ಧಿಮತ್ತೆಯ ವಿದ್ಯಾರ್ಥಿಯಾಗಿದ್ದ ಸಲೀಂ ಆಲೀಗೆ ಶಾಲಾದಿನಗಳಲ್ಲಿ ಬಂದ ಒಂದೇ ಒಂದು ಬಹುಮಾನವೆಂದರೆ ಒಳ್ಳೆಯ ನಡತೆಗಾಗಿ ಇರಿಸಿದ್ದ ಅವರ್ ಅನಿಮಲ್ ಫ್ರೆಂಡ್ಸ್ ಪುಸ್ತಕ ಬಹುಮಾನ! ಮುಂದೆ ತಮ್ಮ ಶಾಲಾದಿನಗಳನ್ನು ನೆನೆಸಿಕೊಂಡು ಸಲೀಂ ಹೇಳುತ್ತಾರೆ "...ಶಾಲೆಯ ಆ ತಿಳಿಗೇಡಿ ಲೆಕ್ಕಗಳನ್ನು ಮಾಡುವ ಬದಲು ಕಾಡಿನಲ್ಲಿ ಹಕ್ಕಿಗಳನ್ನು ಅಟ್ಟಿಕೊಂಡು ತಿರುಗುವುದು ಎಷ್ಟೋಪಾಲು ಸಂತೋಷದಾಯಕ ಕೆಲಸ...ಕಳೆದ ಅರ್ಧ ಶತಮಾನಕ್ಕೂ ಹೆಚ್ಚುಕಾಲ ಪಕ್ಷಿವೀಕ್ಷಣೆಯನ್ನು ಅದು ನೀಡುವ ಆತ್ಮಸಂತೋಷಕ್ಕಾಗಿ ಮಾಡಿದ್ದೇನೆ. ಪಕ್ಷಿಯವೀಕ್ಷಣೆ, ಅಧ್ಯಯನ ನನಗೆ ಈ ಯಾಂತ್ರಿಕ ಜಗತ್ತಿನ ಸಂದಿಗ್ಧ ನಾಗರಿಕತೆಯಿಂದ ಪಾರಾಗಿ ಕಣ್ಮನಗಳಿಗೆ ಆನಂದ ತುಂಬುವ ವಾತಾವರಣದಲ್ಲಿ ಆಶ್ರಯ ಪಡೆಯಲು ಇದು ಸಕಾರಣವಾದ ಸಬೂಬು. ಇದನ್ನು ಪಲಾಯನವಾದ ಎನ್ನಬಹುದು. ಆದರೆ ಈ ಪಲಾಯನವಾದ ಸಮರ್ಥನೆಯನ್ನೇನೂ ಹುಡುಕಬೇಕಾಗಿಲ್ಲ" ಎನ್ನುತ್ತಾರೆ.

ಶಿಕ್ಷಣ ತ್ಯಜಿಸಿದ ಸಲೀಂ ಮಯನ್ಮಾರ್‌ನಲ್ಲಿ ಸಹೋದರ ನಡೆಸುತಿದ್ದ ಗಣಿಯನ್ನು ಸೇರಿಕೊಂಡರು. ಅಲ್ಲಿ ಮಾನವನಿಂದ ಹಾನಿಗೊಳಗಾಗದ ಕಾಡುಗಳಲ್ಲಿ ಸಾಕಷ್ಟು ಪಕ್ಷಿವೀಕ್ಷಣೆಮಾಡಲು ಸಲೀಂಗೆ ಅವಕಾಶಗಳು ಸಿಕ್ಕವು. 1914–17ವರೆಗೆ ಮತ್ತು ಮುಂದೆ 1919–23ರವರೆಗೆ ಮಯನ್ಮಾರ್‌ನಲ್ಲಿದ್ದರು (ಹಿಂದಿನ ಹೆಸರು ಬರ್ಮಾ). ಅವರು ಹಿಂದಿರುಗಲು ಕಾರಣ ಅವರ ಜೀವನ ಪಕ್ಷಿಗಳಾಗಿತ್ತೇ ಹೊರತು ವ್ಯಾಪಾರ ವ್ಯವಹಾರವಲ್ಲ.

ಎರಡನೇ ಬಾರಿ ಮಯನ್ಮಾರ್‌ಗೆ ಹೋಗುವ ಮುನ್ನ ಸಲೀಂ ಆಲೀಯವರಿಗೆ 1918 ಡಿಸೆಂಬರ್‌ನಲ್ಲಿ ಮುತ್ತಿನ ವ್ಯಾಪಾರಿ ಸಿ.ಎ.ಲತೀಫ್‌ರ ಪುತ್ರಿ ತೆಹ್ಮೀನಾರೊಂದಿಗೆ ವಿವಾಹವಾಯಿತು. ಕಾನ್ವೆಂಟ್ ಶಿಕ್ಷಣ ಪಡೆದು ವಿದೇಶದಲ್ಲಿದ್ದವರಾಗಿದ್ದರೂ ಸಲೀಂ ಆಲೀಯವರೊಂದಿಗಿನ ಕಾಡುಗಳಲ್ಲಿನ ಜೀವನಕ್ಕೆ ಹೊಂದಿಕೊಂಡರು. ತೆಹ್ಮೀನಾರಿಗೆ ಇಂಗ್ಲಿಷ್ ಭಾಷೆಯ ಮೇಲೆ ಅದ್ಭುತ ಹಿಡಿತವಿತ್ತು. ಸಲೀಂ ಆಲೀ ಹಸ್ತಪ್ರತಿಗಳನ್ನು ಸಿದ್ಧಪಡಿಸುವಾಗ ಭಾಷೆಯನ್ನು ಸರಳಮಾಡುವುದರಲ್ಲಿ ಇವರು ಸಾಕಷ್ಟು ಸಹಾಯ ಮಾಡಿದರು. ಆದರೆ, ಪುಸ್ತಕ ಪ್ರಕಟವಾದುದನ್ನು ನೋಡಲು ತೆಹ್ಮೀನಾ ಬದುಕಿರಲಿಲ್ಲ. ಪಕ್ಷಿಗಳ ಅಧ್ಯಯನವನ್ನು ಮುಂದುವರಿಸಲು ಒತ್ತಾಸೆಯಾಗಿದ್ದ ಹಾಗೂ ಆರ್ಥಿಕವಾಗಿ ಅತ್ಯಂತ ದುರ್ಭರವಾಗಿದ್ದ ಕಾಲದಲ್ಲೂ ಎದೆಗುಂದದೆ, ಸಲೀಂ ಆಲೀಯವರ ಎಲ್ಲ ಕೆಲಸಕ್ಕೆ ಸ್ಫೂರ್ತಿಯಾಗಿದ್ದ ತೆಹ್ಮೀನಾ 1939ರಲ್ಲಿ ಒಂದು ಶಸ್ತ್ರಚಿಕಿತ್ಸೆಯಾದ ಅನಂತರ ನಂಜೇರಿ ತೀರಿಹೋದರು. ತೆಹ್ಮೀನಾ ಇಲ್ಲದ ಡೆಹರಾಡೂನ್‌ನಲ್ಲಿ ಇರಲು ಸಾಧ್ಯವಾಗದೆ ಅಲೀ ಮುಂಬೈಗೆ ಬಂದು ನೆಲೆಸಿದರು. ಮಕ್ಕಳಿರದಿದ್ದ ಸಲೀಂ ಆಲೀ ಮರು ವಿವಾಹವಾಗಲಿಲ್ಲ. ಮುಂದೆ ಒಂದು ಸಂದರ್ಶನದಲ್ಲಿ "..ನನ್ನ ಜೀವನದ ದೊಡ್ಡ ಅದೃಷ್ಟವೆಂದರೆ, ಮಡದಿ ತೆಹ್ಮೀನಾ. ಈಗ ಹಿಂದಿರುಗಿ ನೋಡಿದರೆ ನನ್ನ ಸಾಧನೆಗಳಿಗೆ ಪ್ರಮುಖ ಕಾರಣ ಅವಳೇ ಎಂದೆನಿಸುತ್ತದೆ. ಏಕೆಂದರೆ ಏಕಾಭಿಪ್ರಾಯದ ಸಂಗಾತಿ ಇಲ್ಲದೇ ಏನನ್ನೂ ಸಾಧಿಸಲಾಗುವುದಿಲ್ಲ" ಎಂದು ನೆನೆಪಿಸಿಕೊಂಡಿದ್ದಾರೆ.

ಸೇಂಟ್ ಜೇವಿಯರ್ ಕಾಲೇಜಿನಲ್ಲಿ ವಾಣಿಜ್ಯ ಮತ್ತು ಲೆಕ್ಕಪತ್ರಗಳ ಅಧ್ಯಯನಕ್ಕೆ ಸೇರಿದ ಸಲೀಂ ತಮ್ಮ ಅಧ್ಯಯನಕ್ಕೆ ಪ್ರಾಣಿಶಾಸ್ತ್ರವನ್ನೂ ಸೇರಿಸಿಕೊಂಡರು. ಪ್ರಾಣಿಶಾಸ್ತ್ರದ ತರಗತಿಗಳಾಗುತ್ತಲೇ ಬಿಎನ್‌ಎಚ್‌ಎಸ್‌ಗೆ ದೌಡಾಯಿಸುತಿದ್ದ ಇವರು, ದಿನಗಟ್ಟಲೆ, ವಾರಗಟ್ಟಲೆ ಅಲ್ಲಿನ ಗ್ರಂಥಾಲಯ ಹಾಗೂ ಸಂಗ್ರಹಾಲಯದಲ್ಲಿ ಅಧ್ಯಯನನಿರತರಾಗಿಬಿಡುತಿದ್ದರು. ಎರಡು ವರ್ಷಗಳ ಕಾಲ ಮುಂಬೈನ ಪ್ರಿನ್ಸ್ ಆಫ್ ವೇಲ್ಸ್ ಪ್ರಕೃತಿ ಇತಿಹಾಸ ಸಂಗ್ರಹಾಲಯದಲ್ಲಿ ಮಾರ್ಗದರ್ಶಕ–ಉಪನ್ಯಾಸಕರಾಗಿದ್ದರು. ಆದರೆ, ಹೇಳಿದ್ದನ್ನೇ ಹೇಳುವ ಈ ಕೆಲಸ ಅವರಿಗೆ ಬೇಸರ ತರಿಸಿತು. ಪಕ್ಷಿಶಾಸ್ತ್ರದ ಅಧ್ಯಯನ ಮಾಡಲು ತವಕಿಸುತಿದ್ದ ಅವರಿಗೆ ಅಂದಿನ ಭಾರತದ ಯಾವುದೇ ಕಾಲೇಜಿನಲ್ಲಿ ಈ ವಿಜ್ಞಾನದ ಶಾಖೆಗಳಿರಲಿಲ್ಲ. ಅನಂತರ ಇಂಗ್ಲೆಂಡ್ ಹಾಗೂ ಜರ್ಮನಿಯಲ್ಲಿ ಅಧ್ಯಯನಕ್ಕೆ ಅವಕಾಶ ಇರುವುದನ್ನು ಮನಗಂಡ ಸಲೀಂ, ಕೊನೆಗೆ ಬರ್ಲಿನ್ ವಿಶ್ವವಿದ್ಯಾಲಯದ ಎರ್ವಿನ್ ಸ್ಟ್ರೆಸ್‌ಮನ್‌ಅವರ ಮಾರ್ಗದರ್ಶನದಲ್ಲಿ ಪಕ್ಷಿಶಾಸ್ತ್ರವನ್ನು ಕ್ರಮಬದ್ಧವಾಗಿ ಅಧ್ಯಯನಮಾಡಿದರು. ಅವರ ಬರ್ಲಿನ್ ವಾಸದಲ್ಲಿ ಪರಿಚಿತರಾದ ಅನೇಕ ಪಕ್ಷಿವಿಜ್ಞಾನ ವಿಜ್ಞಾನಿಗಳಿಂದ ಪಕ್ಷಿಗಳ ಬಗ್ಗೆ ಅಧ್ಯಯನ ನಡೆಸುವುದು, ಸರ್ವೇಕ್ಷಣೆ ಹಾಗೂ ಉಂಗುರ ತೊಡಿಸಿ ಮಾಡುವ ಅಧ್ಯಯನಗಳ ಬಗ್ಗೆ ಪ್ರಾಯೋಗಿಕ ತರಬೇತಿ ಪಡೆದರು. ಪಕ್ಷಿ ವಲಸೆಯನ್ನು ಅಧ್ಯಯನ ಮಾಡಿದರು. ಇವೆಲ್ಲದರ ಸಾರ್ಥಕ ಪ್ರಯೋಜನವನ್ನು ಸಲೀಂ ಆಲೀ ಭಾರತದಲ್ಲಿ ಸರ್ವೇಕ್ಷಣೆಗಳನ್ನು ನಡೆಸುವಾಗ ಪಡೆದುಕೊಂಡರು.

ವಿಶ್ವದರ್ಜೆಯ ತರಬೇತಿ ಮುಗಿಸಿ ಭಾರತಕ್ಕೆ ಮರಳಿದಾಗ ಅವರಿಗೆದುರಾದದ್ದು ನಿರುದ್ಯೋಗ. ಆರ್ಥಿಕ ಕಾರಣಗಳಿಗಾಗಿ ಅವರ ಹುದ್ದೆಯನ್ನು ರದ್ದುಮಾಡಲಾಗಿತ್ತು. ಈ ನಿರುದ್ಯೋಗ ಪರ್ವದಲ್ಲಿ ಸಲೀಂ ಅಲೀ ತಮಗೆ ದೊರೆತಿದ್ದ ತರಬೇತಿಯ ಯುಕ್ತ ಬಳಕೆಗೆ ಒಂದು ಪರಿಯೋಜನೆಯನ್ನು ಸಿದ್ಧಪಡಿಸಿದರು. ಆಗ ಭಾರತದ ಯಾವುದೇ ಸಂಸ್ಥಾನಗಳ ಪಕ್ಷಿಗಳ ಸರ್ವೇಕ್ಷಣೆ ನಡೆದಿರಲಿಲ್ಲ. ಈ ಕಾರ್ಯ ಕೈಗೆತ್ತಿಕೊಳ್ಳುವುದಾಗಿ ಸಲೀಂ ಅಲೀ ತೀರ್ಮಾನಿಸಿದರು. ಸರ್ವೇಕ್ಷಣಾ ಪರಿಯೋಜನೆಗಳು ಬಿಎನ್‌ಎಚ್‌ಎಸ್ ಮೂಲಕ ನಡೆಯುವುದು. ಪ್ರಾಯೋಜಕರು ಕೇವಲ ಸರ್ವೇಕ್ಷಣೆಯ ವೆಚ್ಚ ನೀಡುವುದು; ತಮ್ಮ ಸೇವೆ ಸಂಪೂರ್ಣ ಉಚಿತ ಈ ಸೂತ್ರದ ಮೇಲೆ ಸರ್ವೇಕ್ಷಣಾ ಕಾರ್ಯಯೋಜನೆ ಸಿದ್ಧಪಡಿಸಿದ್ದರು. ಅಂದಿನ ಅನೇಕ ಸಂಸ್ಥಾನಗಳ ರಾಜ ಮಹಾರಾಜರುಗಳು, ಅಧಿಕಾರಿಗಳು ಈ ಯೋಜನೆಯನ್ನು ಸ್ವಾಗತಿಸಿದರು. ಹೀಗಾಗಿ ಭಾರತದ ಅನೇಕ ಸಂಸ್ಥಾನಗಳ ಪಕ್ಷಿ ಸರ್ವೇಕ್ಷಣೆ ಸಾಧ್ಯವಾಯಿತು. ಜೊತೆಗೆ, ಸಲೀಂ ಅಲೀಯವರಿಗೆ ಪಕ್ಷಿಗಳ ಸರ್ವೇಕ್ಷಣೆಯಲ್ಲಿ ತೊಡಗಿಕೊಳ್ಳಲು ಆಂಶಿಕವಾಗಿ ಪ್ರೇರಕವಾಗಿದ್ದ ಸ್ಟುವರ್ಟ್ ಫಾನಾ ಆಫ್ ಬ್ರಿಟಿಷ್ ಇಂಡಿಯ ಪುಸ್ತಕದ ವಿಮರ್ಶೆಯಲ್ಲಿದ್ದ ....ಇಡೀ ಪುಸ್ತಕದಲ್ಲಿ ಭಾರತೀಯ ಪ್ರಕೃತಿ ಶಾಸ್ತ್ರಜ್ಞರಿಗೆ ಎಂದು ಹೆಸರಿಸಬಹುದಾದ ಕೊಡುಗೆ ಏನೂ ಇಲ್ಲ. ಬಹುಶಃ ಯುರೋಪಿಯನ್ನರು ಭಾರತ ಬಿಟ್ಟು ಹೋದರೆ, ಆ ಭೂಭಾಗದ ಜೀವಿವೈವಿಧ್ಯದ ವರದಿಗಳು ನಿಂತೇ ಹೋಗುತ್ತವೆ ಎಂಬ ಭವಿಷ್ಯವಾಣಿಯನ್ನು ಸುಳ್ಳುಮಾಡಿತು. ಬ್ರಿಟಿಷರಲ್ಲದವರಿಗೆ ಸಾಮಾನ್ಯವಾಗಿ ದೊರಕದ ಬ್ರಿಟಿಷ್ ಪಕ್ಷಿಶಾಸ್ತ್ರಜ್ಞರ ಸುವರ್ಣಪದಕ ಸಲೀಂ ಅಲೀ ಅವರಿಗೆ ದೊರಕಿಸಿತು(1967).

ಈ ಪರಿಯೋಜನೆಗಾಗಿ ಪ್ರಾರಂಭವಾದ ಪಕ್ಷಿಯಾತ್ರೆ ಸಲೀಂ ಅಲೀಯವರ ಜೀವನದ ಕೊನೆಯ ಒಂದು ವರ್ಷದವರೆಗೂ ಮುಂದುವರೆಯಿತು. ಉತ್ತರದ ಕಾಶ್ಮೀರದಿಂದ ದಕ್ಷಿಣದ ಕೇರಳ ಮತ್ತು ಪೂರ್ವದ ಕಚ್‌ನಿಂದ ಪಶ್ಚಿಮದ ಮಿಶ್ಮಿ ಪರ್ವತಗಳವರೆಗೆ ಇವರ ಪಕ್ಷಿಗಾಗಿ ಅಲೆದಾಟ ಸಾಗಿತ್ತು. ಇವುಗಳಲ್ಲಿನ ಮುಖ್ಯ ಸರ್ವೇಕ್ಷಣೆಗಳೆಂದರೆ:

- ಹೈದರಾಬಾದ್ ಸಂಸ್ಥಾನದ ಪಕ್ಷಿ ಸರ್ವೇಕ್ಷಣೆ, 1931/32
- ಟ್ರಾವೆಂಕೂರ್ ಮತ್ತು ಕೊಚಿನ್ ಸಂಸ್ಥಾನಗಳ ಪಕ್ಷಿ ಸರ್ವೇಕ್ಷಣೆ, 1933
- ರಾಜಪತಾಣ ಸಂಸ್ಥಾನದ ಬಹವಾಲ್‌ಪುರ ಪ್ರದೇಶದ ಸರ್ವೇಕ್ಷಣೆ 1934/39
- ಕಛ್ ಪ್ರದೇಶದ ಸರ್ವೇಕ್ಷಣೆ, 1945
- ಗುಜರಾತ್ ಪ್ರದೇಶದ ಸರ್ವೇಕ್ಷಣೆ, 1946
- ಪೂರ್ವ ಹಿಮಾಲಯದ ಮಿಶ್ಮಿ ಪರ್ವತಗಳಲ್ಲಿ ನಡೆಸಿದ ಮೊದಲ ಸರ್ವೇಕ್ಷಣೆ, 1948
- ಬಸ್ತಾರ್ ಪ್ರದೇಶದ ಸರ್ವೇಕ್ಷಣೆ, 1949
- ಸಿಕ್ಕಿಂ ಪ್ರದೇಶದ ಸರ್ವೇಕ್ಷಣೆ, 1955
- ಭೂತಾನ್‌ನಲ್ಲಿ ನಡೆಸಿದ ಸರ್ವೇಕ್ಷಣೆಗಳು, 1966, 1973

ಈ ಸರ್ವೇಕ್ಷಣೆಗಳಿಂದ ಮಹತ್ತ್ವದ ವೈಜ್ಞಾನಿಕ ಫಲಿತಾಂಶಗಳು ದೊರೆಯುವುದರೊಂದಿಗೆ, ಭಾರತದಲ್ಲಿನ ಪಕ್ಷಿಗಳ ಬಗೆಗೆ ಅಗಾಧ ಪ್ರಮಾಣದ ಮಾಹಿತಿ ಸಂಗ್ರಹಿತವಾದವು. ಈ ಸರ್ವೇಕ್ಷಣಾ ಸಮಯದಲ್ಲಿ ಅವರು ಅನೇಕ ಹೊಸ ಸಂಗತಿಗಳನ್ನು ವರದಿ ಮಾಡಿದರು. ಮರುಭೂಮಿ ಪ್ರದೇಶಗಳಲ್ಲಿ ಅತಿನೇರಳೆ ಕಿರಣಗಳ ಪ್ರಭಾವದಿಂದ ಅಲ್ಲಿನ ಪಕ್ಷಿ ಪ್ರಾಣಿಗಳ ಬಣ್ಣ ಪೇಲವವಾಗುವುದು ತಿಳಿದ ವಿಷಯವಾಗಿತ್ತು. ಆದರೆ, ಮಳೆ ಬಂದು ಈ ಕಿರಣಗಳ ಪ್ರಭಾವ ಕಡಮೆಯಾದಂತೆಯೇ ಇದೇ ಪ್ರಾಣಿಗಳ ಬಣ್ಣ ಗಾಢವಾಗುತ್ತದೆ ಎಂಬುದನ್ನು ಸಲೀಂ ಅಲೀ ಪತ್ತೆಹಚ್ಚಿದರು. ಇದೇ ಕಛ್ ಪ್ರದೇಶದಲ್ಲಿ ಐದು ಲಕ್ಷಕ್ಕೂ ಹೆಚ್ಚು ರಾಜಹಂಸಗಳು ವಂಶಾಭಿವೃದ್ಧಿ ನಡೆಸುವುದನ್ನು ಅಧ್ಯಯನಮಾಡುತ್ತಾ ಅಲ್ಲಿಯೇ ಅವೋಸೆಟ್ ಹಕ್ಕಿಗಳು ಮತ್ತು ರಾಜಹಂಸ ಬಳಸಿ ಬಿಟ್ಟ ಗೂಡನ್ನು ಬಳಸುತ್ತಿದ್ದ ಹೆಜ್ಜಾರ್ಲೆಗಳ ವರ್ತನೆಯನ್ನು ವರದಿಮಾಡಿದರು.

ಸರ್ವೇಕ್ಷಣೆಯ ಸಮಯದಲ್ಲಿ ಹಕ್ಕಿಗಳ ಸಂಗ್ರಹವನ್ನೂ ಮಾಡಿದ್ದರಿಂದ ಬಿಎನ್‌ಎಚ್‌ಎಸ್‌ನ ಹಾಗೂ ಇತರ ಪ್ರಾಕೃತಿಕ ಇತಿಹಾಸ ಸಂಗ್ರಹಾಲಯಗಳ ಹಕ್ಕಿ ಸಂಗ್ರಹವೂ ಬೆಳೆಯಿತು. ಸಂಗ್ರಹಕ್ಕಾಗಿ ಹಕ್ಕಿಗಳನ್ನು ಕೊಲ್ಲುವ ವಿಷಯವಾಗಿ ಸಲೀಂ ಅಲೀ ಒಮ್ಮೊಮ್ಮೆ ಭಾವುಕರಾಗುತಿದ್ದರು. ಅನಂತರ ಅಧ್ಯಯನ ಹಾಗೂ ಸಂರಕ್ಷಣೆಗಾಗಿ ಕೆಲವು ಹಕ್ಕಿಗಳನ್ನು ಕೊಲ್ಲಬೇಕಾಗುತ್ತದೆ ಎಂದು ಸಮಾಧಾನ ಹೇಳಿಕೊಳ್ಳುತ್ತಿದ್ದರು! ಅವರ ಅವಿರತ ಶ್ರಮದ ಫಲವಾಗಿ ಇಂದು ಬಿಎನ್‌ಎಚ್‌ಎಸ್‌ನಲ್ಲಿ ದೊಡ್ಡ ಸಂಗ್ರಹ ಅಧ್ಯಯನಾಸಕ್ತರಿಗೆ ಲಭ್ಯವಿದೆ.

ಸಲೀಂ ಅಲೀಯವರ ಮಹತ್ತರ ಕೊಡುಗೆಗಳಲ್ಲಿ ಒಂದು ಅವರು ನೇಕಾರ ಹಕ್ಕಿಗಳ ಸಂತಾನಾಭಿವೃದ್ಧಿ ಸಮಯದ ಕುತೂಹಲಕಾರಿ ನಡೆವಳಿಕೆಯನ್ನು ಕಂಡುಹಿಡಿದದ್ದು. ಇವುಗಳಲ್ಲಿ ಗಂಡುಗಳು ನಾರಿನಿಂದ ಗೂಡನ್ನು ಅರ್ಧರಚಿಸಿ, ಹೆಣ್ಣಿನ ಅನುಮೋದನೆಗೆ

ಕಾಯುತ್ತವೆ! ಗೂಡನ್ನು ಹೆಣ್ಣು ಒಪ್ಪಿ ಅದರಲ್ಲಿ ಪ್ರವೇಶಿಸಿದರೆ, ಗಂಡು ಆ ಗೂಡನ್ನು ಪೂರ್ಣಗೊಳಿಸುತ್ತದೆ. ಮುಂದೆ ಗಂಡು ಹೆಣ್ಣುಗಳ ಮಿಲನವಾಗಿ ಹೆಣ್ಣು ಮೊಟ್ಟೆ ಇಡುತ್ತದೆ. ಒಂದು ಪಕ್ಷ ಗೂಡು ಒಪ್ಪಿಗೆಯಾಗದಿದ್ದಲ್ಲಿ  ಆ ಗೂಡನ್ನು ಅಷ್ಟಕ್ಕೇ ಬಿಟ್ಟು ಇನ್ನೊಂದು ಗೂಡನ್ನು ರಚಿಸುತ್ತದೆ. ಒಪ್ಪಿದ  ಹೆಣ್ಣು ಮುಂದೆ ಮೊಟ್ಟೆ ಇಟ್ಟು ಮರಿಮಾಡಿದರೆ, ಗಂಡು ಇನ್ನೊಂದು ಗೂಡು ರಚಿಸಿ ಮತ್ತೊಂದು ಹೆಣ್ಣಿಗಾಗಿ ಕಾಯುತ್ತದೆ. ಬಹುಪತ್ನಿತ್ವ ಈ ಹಕ್ಕಿಗಳಲ್ಲಿನ ಪದ್ಧತಿ. ಆ ಅಧ್ಯಯನ ಕ್ಷೇತ್ರಕಾರ್ಯದ ಪ್ರಾಮುಖ್ಯವನ್ನು ಸ್ಥಾಪಿಸಿತು. ಕ್ಷೇತ್ರಕಾರ್ಯ ಆಧಾರಿತ ಸಂಶೋಧನಾ ಲೇಖನಗಳು ಬರತೊಡಗಿದವು. ಒಂದು ರೀತಿಯಲ್ಲಿ ಈ ಕ್ಷೇತ್ರಕಾರ್ಯಕ್ಕೆ ಮಹತ್ತ್ವ ತಂದುಕೊಟ್ಟಿದ್ದೂ ಸಲೀಂ ಅಲೀಯವರ ಒಂದು ಹೆಗ್ಗಳಿಕೆ.

ತಮ್ಮ ಸರ್ವೇಕ್ಷಣೆಗಾಗಿ ರಾಷ್ಟ್ರದಾದ್ಯಂತ ಪ್ರವಾಸ ಮಾಡುತ್ತಿದ್ದಾಗ ಕಂಡುಹಿಡಿದ ಪಕ್ಷಿಧಾಮ ಕರ್ನಾಟಕದ ರಂಗನ ತಿಟ್ಟು. ಇದನ್ನು ಪತ್ತೆಮಾಡಿದ್ದಲ್ಲದೆ ಅದಕ್ಕೆ ಸೂಕ್ತ ರಕ್ಷಣೆ ಕೊಡಿಸುವಲ್ಲಿಯೂ ಇವರು ಸಫಲರಾದರು. ಕರ್ನಾಟಕದ ದೇವರಾಯನದುರ್ಗಕ್ಕೆ ಇವರು ನಾಲ್ಕು ಬಾರಿ ಭೇಟಿ ನೀಡಿದ್ದರು.

ತಮ್ಮೆಲ್ಲ ಅಲೆದಾಟದಿಂದ ಲಭ್ಯವಾದ ಜ್ಞಾನವನ್ನು ಪುಸ್ತಕಗಳ ಮೂಲಕ ಜಗತ್ತಿನೊಂದಿಗೆ ಹಂಚಿಕೊಂಡರು. ಪ್ರತಿ ಕ್ಷೇತ್ರಕಾರ್ಯದಲ್ಲೂ ಜಾಗರೂಕತೆಯಿಂದ ತಮ್ಮ ಸುಂದರವಾದ ಕೈಬರೆಹದಲ್ಲಿ ಮಾಡಿಕೊಂಡ ಟಿಪ್ಪಣಿ ಪುಸ್ತಕದಿಂದ ಮಾಹಿತಿಯನ್ನು ಪ್ರತಿ ಪ್ರಭೇದಕ್ಕೆ ಅವರು ಇರಿಸಿದ್ದ ಪ್ರತ್ಯೇಕ ಪುಸ್ತಕಕ್ಕೆ ವರ್ಗಾಯಿಸುತಿದ್ದರು.  ಇವುಗಳ ಸಹಾಯದಿಂದ ಬಂದ ಪುಸ್ತಕಗಳಲ್ಲಿ ಮುಖ್ಯವಾದದ್ದು *ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್* 1941ರಲ್ಲಿ ಪ್ರಕಟವಾಯಿತು.  ಬಹಳ ಜನಪ್ರಿಯವಾದ ಈ ಪುಸ್ತಕ ಮುಂದೆ ಹಲವಾರು ಮುದ್ರಣಗಳನ್ನು ಕಂಡು, ಇದೀಗ (2006) 13ನೆಯ ಪರಿಷ್ಕರಣ ಎರಡನೇ ಮುದ್ರಣದಲ್ಲಿದೆ.  ಇದರಿಂದ ಬಂದ ಹಣ ಸಲೀಂ ಅಲೀಯರಿಗೆ ತಮ್ಮ ಸಾಲ ತೀರಿಸಲು ಉಪಯೋಗವಾಯಿತು. ಇದು ಹಿಂದೀ, ಪಂಜಾಬಿ ಹಾಗೂ ಉರ್ದು ಭಾಷೆಗಳಿಗೆ ಅನುವಾದಗೊಂಡಿದೆ. ಲೀಯಿಖ್ ಫುತೇಅಲೀಯೊಂದಿಗೆ ಬರೆದ ಸಾಮಾನ್ಯ ಪಕ್ಷಿಗಳು ಪುಸ್ತಕ ನ್ಯಾಷನಲ್ ಬುಕ್ ಟ್ರಸ್ಟ್ ಮೂಲಕ ದೇಶದ ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ. ಮುಂದೆ ಇವರ ಪ್ರಕಟಣೆಗಳು ಅವಿರತ ಕ್ಷೇತ್ರಕಾರ್ಯ, ಅಧ್ಯಯನ (ಸಲೀಂ ಅಲೀ ಒಬ್ಬ ಗೀಳು ಹಿಡಿದಂತಹ ಓದುಗಾರರಾಗಿದ್ದರು)ಮುಂದುವರೆದಂತೆ ಕಡಿಮೆಯಾಗದೆ ಮುಂದುವರೆದಿದ್ದು ಪಕ್ಷಿಶಾಸ್ತ್ರದ ಪಾಲಿಗೆ ಒಂದು ವರ. 'ದಿ ಬರ್ಡ್ಸ್ ಆಫ಼್ ಕಛ್, 195, 'ಹಿಲ್ ಬರ್ಡ್ಸ್ ಆಫ಼್ ಇಂಡಿಯ' 1949, ದಿ ಬರ್ಡ್ಸ್ ಆಫ಼್ ಕೇರಳ (ಮೂರನೇ ಮುದ್ರಣ 1985), ಬರ್ಡ್ಸ್ ಆಫ಼್ ಸಿಕ್ಕಿಂ, 1962, ದಿ ಫೀಲ್ಡ್ ಗೈಡ್ ಟು ದ ಬರ್ಡ್ಸ್ ಆಫ಼್ ಈಸ್ಟ್ರನ್ ಹಿಮಾಲಯಾಸ್, 1977. ಅವರ ಬರೆಹ ಜೀವನದ ದೈತ್ಯ ಸಾಧನೆ ಎಂದರೆ ಹತ್ತು ಸಂಪುಟಗಳಲ್ಲಿ ಪ್ರಕಟವಾದ ದಿ ಹ್ಯಾಂಡ್ ಬುಕ್ ಆಫ಼್ ಬರ್ಡ್ಸ್ ಆಫ಼್ ಇಂಡಿಯ ಅಂಡ್ ಪಾಕಿಸ್ತಾನ್ ಅವರ ನಿಡುಗಾಲದ ಗೆಳೆಯ ಸಿಡ್ನಿ ಡಿಲಾನ್ ರಿಪ್ಲೈ (ಸ್ಮಿತ್‌ಸೋನಿಯನ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದವರು) ಇದರ ಸಹ ಲೇಖಕರು. ಈ ಪುಸ್ತಕಕ್ಕಾಗಿ ಸಲೀಂ ಅಲೀ ದಿನಕ್ಕೆ 12–15 ಗಂಟೆಗಳ ಕೆಲಸಮಾಡುತ್ತಿದ್ದರು. ಪುಸ್ತಕದ ಮೊದಲ ಕರಡುಪ್ರತಿಯನ್ನು ಸ್ವತಃ ತಯಾರಿಸಿದರು. ಇದರ ಎಲ್ಲ 10 ಸಂಪುಟಗಳು ಆರೇ ವರ್ಷಗಳಲ್ಲಿ ಪ್ರಕಟವಾಯಿತೆಂದರೆ (1968–74) ಸಲೀಂ ಅಲೀಯವರ ಕರ್ತೃತ್ವಶಕ್ತಿಯ ಅರಿವಾಗುತ್ತದೆ.

ಕೇವಲ ಪಕ್ಷಿಗಳ ಅಧ್ಯಯನ ಮಾತ್ರ ಇವರಿಗೆ ತೃಪ್ತಿನೀಡುತ್ತಿರಲಿಲ್ಲ. ಅವುಗಳ ಸಂರಕ್ಷಣೆಗೆ ಪಣ ತೊಟ್ಟು ಕೆಲಸಮಾಡಿದವರು ಸಲೀಂ ಅಲೀ. ಅವರ ಅವಿರತ ಪ್ರಯತ್ನದಿಂದ ಸಾಧಿತವಾದದ್ದು ಭರತಪುರ ವನ್ಯಧಾಮ. ರಾಜರ ಖಾಸಗಿ ಬೇಟೆ ಪ್ರದೇಶವಾಗುವ ಅಪಾಯವಿದ್ದ ಈ ಕಾಡನ್ನು ವನ್ಯಜೀವಿಧಾಮವನ್ನಾಗಿಸಿದ್ದು ಸಲೀಂ ಅಲೀಯವರ ಪರಿಶ್ರಮ. ಕೇರಳದ ಮೌನಕಣಿವೆ ಕಾಡಿನ ಹೋರಾಟ ತಂದ ವಿಜಯ, ಭಾರತದ ಪರಿಸರ ಪರ ಹೋರಾಟದ ಮಹತ್ತ್ವದ ಮೈಲುಗಲ್ಲು. ಇದರಲ್ಲಿ ಸಲೀಂ ಅಲೀಯವರದು ಮಹತ್ತ್ವದ ಪಾಲು.

ನಾಶವಾಗಿ ಹೋಗಿದೆ ಎಂದೇ ನಂಬಲಾಗಿದ್ದ ಹನಿಗೈಡ್ ಪಕ್ಷಿಯನ್ನು ಪತ್ತೆ ಮಾಡಿದ ಶ್ರೇಯಸ್ಸು ಸಲೀಂ ಅಲೀ ಅವರ ತಂಡಕ್ಕೆ ಸಲ್ಲುತ್ತದೆ. 150ವರ್ಷಗಳಿಂದ ಕಂಡಿರದಿದ್ದ ಈ ಅಪರೂಪದ ಹಕ್ಕಿಯನ್ನು ಭೂತಾನ್ ಪಕ್ಷಿ ಸರ್ವೇಕ್ಷಣೆ ಸಮಯದಲ್ಲಿ ಈ ತಂಡ ಕಂಡಿತು.  ಸಲೀಂ ಅಲೀ ಭಾರತದಲ್ಲಿ ಕಂಡುಬರುವ ಹಕ್ಕಿಗಳಲ್ಲಿ ಅನೇಕವನ್ನು ಮೊದಲಬಾರಿಗೆ ಗುರುತಿಸಿದರು. ಉಪಪ್ರಭೇದಗಳನ್ನು ಪತ್ತೆಹಚ್ಚಿ ವರ್ಗೀಕರಣವನ್ನು ಸರಿಪಡಿಸಿದರು. ಇತರ ಪಕ್ಷಿಶಾಸ್ತ್ರಜ್ಞರು ಪತ್ತೆಹಚ್ಚಿದ ಹೊಸ ಪ್ರಭೇದ ಅಥವಾ ಹೊಸ ಉಪಪ್ರಭೇದಕ್ಕೆ ಸಲೀಂ ಅಲೀಅವರ ಮತ್ತು ಅವರ ಪತ್ನಿ ತೆಹ್ಮೀನರ ಹೆಸರಿಟ್ಟು ಅವರಿಗೆ ಗೌರವತೋರಿದ್ದಾರೆ. ಅವೆಂದರೆ: ಬಿಳಿಗಣ್ಣ ಹಕ್ಕಿ (*ಜೊಸ್ಟೆರೋಪ್ಸ್ ಪಲಪೆಬ್ರೊಸ ಸಲೀಂಅಲೀ*), ರಕ್ ಬುಶ್ ಕ್ವೇಯಿಲ್ (*ಪೆರಡಿಕ್ಯಲ ಅರ್‌ಗೂಂಡಾ ಸಲೀಂಅಲೀ*), ಹಾಡ್‌ಸನ್ಸ್ ಸ್ಕಿಮಿಟಾರ್ ಬ್ಯಾಬ್ಲರ್ (*ಪೊಮಟೊರ್ಹಿನಸ್ ಹಾರ್ಸ್‌ಫೀಲ್ಡೈ ಸಲೀಂಅಲೀ*), ಫಿನ್ಸ್ ನೇಕಾರ ಹಕ್ಕಿ (*ಪ್ಲೋಸಿಯಸ್ ಮೆಗರಿಂಚಸ್ ಸಲೀಂಅಲೀ*), ದಿ ಗೋಲ್ಡ್ ಕ್ರೆಸ್ಟ್ (*ರೆಗುಲುಸ್ ರೆಗುಲುಸ್ ಸಲೀಂಅಲೀ*), ಎಮೆರಾಲ್ಡ್ ಡೊವ್ (*ಚಾಲ್ಕೊಫಾಪ್ಸ್ ಇಂಡಿಕಾ ಸಲೀಂಅಲೀ*), ಹೊಂಬಣ್ಣದ ಬೆನ್ನಿನ ಮರಕುಟುಕದ ಒಂದು ಉಪಪ್ರಭೇದ *ಡಿನೊಪಿಯಮ್ ಬೆಂಗಾಲೆನ್ಸ್ ತೆಹ್ಮೀನೇ* ಇತ್ಯಾದಿ. ಸಲೀಂ ಅಲೀ ಆಗಾಗ್ಗೆ ಹೇಳುತ್ತಿದ್ದುದುಂಟು ಪ್ರತಿ ಪಕ್ಷಿವೀಕ್ಷಕನೂ ಪಕ್ಷಿಗಳಲ್ಲಿ ಹೊಸದಾದ ಅಥವಾ ಆಶ್ಚರ್ಯಕರವಾದ ವಿಚಾರಗಳನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಆದರೆ, ಎಚ್ಚರಿಕೆಯಿಂದ ನಿರ್ವಹಿಸಿದ ದೀರ್ಘಾವಧಿ ಪಕ್ಷಿವೀಕ್ಷಣೆ ಹಾಗೂ ಅಧ್ಯಯನ ಆನಂದದ ಮೂಲವಾಗುತ್ತದೆ, ಒಂದು ಅಹ್ಲಾದಕರ ಹವ್ಯಾಸವಾಗುತ್ತದೆ. ಇಷ್ಟೇ ಅಲ್ಲದೆ, ವಿಜ್ಞಾನದ ಬೆಳೆವಣಿಗೆಗೆ ಸಹಕಾರಿಯಾಗುತ್ತದೆ.

ಬ್ರಿಟಿಷ್ ಪಕ್ಷಿವಿಜ್ಞಾನಿಗಳ ಒಕ್ಕೂಟದ ಚಿನ್ನದ ಪದಕ, ವನ್ಯಜೀವಿ ಸಂರಕ್ಷಣೆಗಾಗಿ ಪ್ರತಿಷ್ಠಿತ ಜೆ.ಪಾಲ್‌ಗೆಟಿ ಅಂತಾರಾಷ್ಟ್ರೀಯ ಪ್ರಶಸ್ತಿ, ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ – ಸಿ.ವಿ. ರಾಮನ್ ಪದಕ, ದೆಹಲಿ, ಆಂಧ್ರ ಮತ್ತು ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯಗಳ ಗೌರವ ಡಾಕ್ಟೊರೇಟ್ ಹಾಗೂ ಭಾರತ ಸರ್ಕಾರದಿಂದ ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗಳು ಇವರ ಸಾಧನೆಯನ್ನನುಸರಿಸಿ ಬಂದವು. ಪಾಲ್‌ಗೆಟಿ ಪ್ರಶಸ್ತಿಯಿಂದ ಬಂದ ಹಣದಲ್ಲಿ ಸಿಂಹಪಾಲನ್ನು ಬಿಎನ್‌ಎಚ್‌ಎಸ್ ಸಂಸ್ಥೆಗೆ ನೀಡಿ "ಸಲೀಂ ಆಲೀ ಪ್ರಕೃತಿ ಸಂರಕ್ಷಣಾ ನಿಧಿ" ಸ್ಥಾಪಿಸಿದರು. ಇದರಿಂದ ಆನೇಕ ಉಪಯುಕ್ತ ಅಧ್ಯಯನಗಳು ನಡೆದಿವೆ.

ಸಲೀಂ ಆಲೀಯವರ ಸಂದೇಶಗಳಲ್ಲೊಂದು: "ಪಕ್ಷಿಗಳನ್ನು ವೀಕ್ಷಿಸುವುದರಿಂದಲೇ ಜೀವಿಸುವುದು ಸಾಧ್ಯವಿಲ್ಲ ಎಂದು ಮನುಷ್ಯ ಹೇಳುತ್ತಾನೆ. ಅದು ನಿಜ. ಆದರೆ, ಕೇವಲ ಆಹಾರದಿಂದಲೇ ಮನುಷ್ಯ ಜೀವಿಸಲು ಸಾಧ್ಯವಿಲ್ಲ ಎಂಬುದೂ ನಿಜ. ಕೆಲಸದಿಂದ ನಿವೃತ್ತಿಯಾದ ಅನಂತರ ಕೇವಲ ಗಡಿಯಾರ ನೋಡುವುದರಲ್ಲೇ ಕಾಲಕಳೆಯುತ್ತಾನೆ. ಇದಕ್ಕೆ ಬದಲು ಪಕ್ಷಿವೀಕ್ಷಣೆ ಪ್ರಾರಂಭಿಸಿದರೆ ನಿಸರ್ಗದಲ್ಲಿ ವೇಳೆಯನ್ನು ಕಳೆಯುವುದರಿಂದ ಅವನ ಆರೋಗ್ಯ ಮತ್ತು ಆಯುಸ್ಸು ವೃದ್ಧಿಸುವುದೆಂದು ಅವನು ತಿಳಿಯಬೇಕು".

ಅತ್ಯಂತ ಸರಳ ಮಾನವರಾಗಿದ್ದ ಸಲೀಂ ಆಲೀ, ತಮ್ಮ ಶ್ರೀಮಂತಿಕೆಯ ಸಮಯದಲ್ಲೂ ಯಾವುದೇ ರೀತಿಯ ವೈಭವದ ಜೀವನ ನಡೆಸಿದವರಲ್ಲ. ತಮ್ಮ ಕಾರ್ಯಗಳಿಗಾಗಿ ಪ್ರಾಯೋಜಕರಿಂದ ಪಡೆದುಕೊಳ್ಳುತ್ತಿದ್ದ ಹಣದ ಪ್ರತಿಯೊಂದು ಪೈಸೆಗೂ ಲೆಕ್ಕಕೊಟ್ಟು ಉಳಿದ ಹಣವನ್ನು ಹಿಂದಿರುಗಿಸುತ್ತಿದ್ದರು. ಅವರ ಮಾತು ಹಾಸ್ಯಮಿಳಿತವಾಗಿದ್ದರೂ ಲೋಕಾಭಿರಾಮ ಕಡಿಮೆ. ಕಡಿಮೆ ಸಮಯದಲ್ಲಿ ಹೇಳಬಹುದಾದದಕ್ಕೆ ಹೆಚ್ಚು ಸಮಯ, ಹೆಚ್ಚು ಪದಗಳನ್ನು ಪೋಲುಮಾಡಬಾರದೆಂದು ಹೇಳುತಿದ್ದರು. ಯಾವುದೇ ಸಮಿತಿ, ಉಪಸಮಿತಿಗಳಲ್ಲಿ ಸೇರಲು ಬಯಸುತ್ತಿರಲಿಲ್ಲ. ಸಮ್ಮೇಳನಗಳಲ್ಲಿ ಚರ್ಚೆ ವೈಜ್ಞಾನಿಕವಾಗಿ ಹಗುರಾಗಿ ಕಂಡರೆ, ತಮ್ಮ ಶ್ರವಣಸಾಧನವನ್ನು ನಿಷ್ಕ್ರಿಯಗೊಳಿಸಿ ಸ್ವಸ್ಥವಾಗಿ ಕುಳಿತುಬಿಡುತಿದ್ದರು. ಸದಾ ಕೆಲಸವನ್ನಷ್ಟೇ ಬಯಸಿದ, ಮಾಡಿದ ಕರ್ಮಯೋಗಿ ಸಲೀಂ ಆಲೀ. ಅದಕ್ಕಾಗಿ ತಮ್ಮ ಆರೋಗ್ಯವನ್ನು ಜಾಗ್ರತೆಯಿಂದ ಕಾಪಾಡಿಕೊಳ್ಳುತ್ತಿದ್ದರು. ತಮ್ಮ ಜೀವನದ ಕೊನೆಯ ವರ್ಷದವರೆಗೂ ಕ್ಷೇತ್ರಕಾರ್ಯ ಮಾಡುತ್ತಿದ್ದರು. ತಮ್ಮ ಆರೋಗ್ಯದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಒಮ್ಮೆ ಕೆಲವರು ತಮ್ಮ ಕ್ಷೇತ್ರಕಾರ್ಯಕ್ಕೆ ಸಲೀಂ ಅಲೀ ಅವರನ್ನು ಕರೆಯಬೇಕೆಂದು ಬಯಸಿ, ಈ ವಯಸ್ಸಿನಲ್ಲಿ ಅವರಿಗೆ ಕ್ಷೇತ್ರಕಾರ್ಯ ಕಷ್ಟವಾಗಬಹುದೆಂದು ಭಾವಿಸಿ ಸಲಹೆಯನ್ನಷ್ಟೇ ಕೇಳೋಣ ಎಂದು ತೀರ್ಮಾನಿಸಿ ಅವರಲ್ಲಿಗೆ ಬಂದಾಗ, ಸಲೀಂ ಆಲೀ ಸೈಬೀರಿಯದ ಕೊಕ್ಕರೆಗಳನ್ನು ಹುಡುಕಿಕೊಂಡು ದುರ್ಗಮ ಹಿಮಾಲಯದ ಬೆಟ್ಟಗಳಲ್ಲಿ ಅಲೆಯುತ್ತಿದ್ದರು! ಆಗ ಅವರ ವಯಸ್ಸು 84. ಗುಜರಾತಿನ ವಾನ್ಸ್ಡ ರಾಷ್ಟ್ರೀಯ ಉದ್ಯಾನವನದಲ್ಲಿ ಕೈಗೊಂಡ ಕ್ಷೇತ್ರಕಾರ್ಯ ಅವರ ಜೀವನದಲ್ಲಿ ಕೊನೆಯದು. ಆಗ ಅವರ ವಯಸ್ಸು 90 ದಾಟಿತ್ತು. ಸ್ವಲ್ಪ ಕಾಲ ಪ್ರಾಸ್ಟೇಟ್ ಕ್ಯಾನ್ಸರ್‌ನಿಂದ ಬಳಲಿದ ಸಲೀಂ ಆಲೀ, 20, ಜೂನ್ 1987ರಂದು ತಮ್ಮ 91ನೇ ವಯಸ್ಸಿನಲ್ಲಿ ನಿಧನರಾದರು. *

**ಆಲೂಗೆಡ್ಡೆ:** ಸೊಲನೇಸೀ ಕುಟುಂಬಕ್ಕೆ ಸೇರಿದ ತರಕಾರಿ ಸಸ್ಯ. ವೈಜ್ಞಾನಿಕ ನಾಮ ಸೋಲೇನಂ ಟ್ಯೂಬರೋಸ. ಪರ್ಯಾಯನಾಮಗಳು ಪಟೇಟೋ, ಬಟಾಟೆ. ತರಕಾರಿಯಾಗಿ ಇದರ ಮುಖ್ಯ ಉಪಯೋಗ : ಉದ್ದಿಮೆಗಳಲ್ಲಿ ಕಚ್ಚಾವಸ್ತುವಾಗಿಯೂ ಬಳಕೆಯಲ್ಲಿದೆ. ಹಿತಕರ ರುಚಿ, ಉಪಯೋಗ ವೈವಿಧ್ಯ.. ರಕ್ಷಿಸಿದರೆ ದೀರ್ಘಕಾಲ ಕೆಡದೆ ಉಳಿಯುವಿಕೆ, ದಾಸ್ತಾನು ಸಾಗಾಣಿಕೆಗಳಲ್ಲಿ ಸೌಲಭ್ಯ– ಈ ಕಾರಣಗಳಿಂದ ಆಲೂಗೆಡ್ಡೆ ಜನಪ್ರಿಯತೆ ಗಳಿಸಿದೆ.

ದಕ್ಷಿಣ ಅಮೆರಿಕದ ಚಿಲಿ ಪ್ರದೇಶದಲ್ಲಿಯೂ ಪೆರು, ಈಕ್ವೆಡಾರ್, ಬೊಲೀವಿಯ ವಲಯದಲ್ಲಿಯೂ ಆಲೂಗಡ್ಡೆಯ ಮೂಲವನ್ನು ಗುರುತಿಸಿದ್ದಾರೆ. ಇದರ ಕಾಡು ಪ್ರಭೇದಗಳು ನೂರಾರು ಬಗೆಯಲ್ಲಿ ಅಲ್ಲಿ ಇವೆ. 1577ರ ಸುಮಾರಿಗೆ ಯುರೋಪಿನಾವಿಕರು ಅಮೆರಿಕದ ಇಂಡಿಯನ್ ಜನಾಂಗ ಆಲೂಗೆಡ್ಡೆಯನ್ನು ಆಹಾರವಾಗಿ ಉಪಯೋಗಿಸುತ್ತಿದ್ದುದನ್ನು ಗಮನಿಸಿದರು. ಸ್ಪೇನ್ ದೇಶದ ನಾವಿಕರು ಇವರ ಅನುಕರಣೆ ಮಾಡಿದುದರ ಫಲವಾಗಿ ಆಲೂಗೆಡ್ಡೆ ಹಡಗುಗಳಲ್ಲಿನ ಒಂದು ಮುಖ್ಯ ಆಹಾರವಾಗಿ ಪರಿಣಮಿಸಿತು. ಈ ತೆರನಾಗಿ ಆಲೂಗೆಡ್ಡೆ ಅಟ್ಲಾಂಟಿಕ್ ಸಾಗರ ದಾಟಿ ತನ್ನ ವ್ಯಾಪ್ತಿಯನ್ನು ಯುರೋಪ್ ಖಂಡದಲ್ಲಿಯೂ ಬ್ರಿಟಿಷ್ ದ್ವೀಪಗಳಲ್ಲಿಯೂ ಪಸರಿಸಿತು. ಸು.1588ರಲ್ಲಿ   ಇದರ ಬೆಳೆ ಐರ್ಲೆಂಡಿನಲ್ಲಿ ತೆಗೆದುದಕ್ಕೆ ಆಧಾರ ಉಂಟು. ಆ ದ್ವೀಪದಲ್ಲಿ ಇದರ ಪ್ರಾಬಲ್ಯ ಅಧಿಕವಾದುದರ ಪರಿಣಾಮವಾಗಿ ಐರಿಷ್ ಆಲೂಗಡ್ಡೆ ಎಂಬ ರೂಢಿಯನಾಮ ಜನಪ್ರಿಯವಾಯಿತು (1719). ಭಾರತಕ್ಕೆ

# ಆಲೂಗೆಡ್ಡೆ

ಆಲೂಗಡ್ಡೆಯ ಆಗಮನ ಯಾವಾಗ ಆಯಿತೆಂಬುದು ಸರಿಯಾಗಿ ಹೇಳಲಾಗದಿದ್ದರೂ 17ನೆಯ ಶತಮಾನದ ಆದಿಯಲ್ಲಿ ಅಂದರೆ ಯುರೋಪ್‌ನಲ್ಲಿ ಉಪಯೋಗ ಮಾಡಿದ ಕೇವಲ 40 ವರ್ಷಗಳಲ್ಲಿ ಕೆಲವು ಉನ್ನತ ಅಧಿಕಾರಿಗಳ ಕ್ಷೇತ್ರದಲ್ಲಿ ಇದು ಜನಪ್ರಿಯವಾಗಿತ್ತೆಂದು ಹೇಳಬಹುದು. ಮೊಟ್ಟ ಮೊದಲು ಪೋರ್ಚುಗೀಸರು ಭಾರತಕ್ಕೆ ತಂದಿರಬಹುದೆಂದು ಊಹಿಸಲಾಗಿದೆ. ಮಿಲಿಟರಿ ಅಧಿಕಾರಿಗಳು ಮತ್ತು ಇಂಗ್ಲಿಷರು ಈ ಹೊಸ ತರಕಾರಿಯನ್ನು



ಆಲೂಗೆಡ್ಡೆ ಗಿಡ

ಹೆಚ್ಚು ಆಸ್ಥೆಯಿಂದ ತಮ್ಮ ಉದ್ಯಾನಗಳಲ್ಲಿ ಬೆಳೆಸುತ್ತಿದ್ದರು. ಇದು ಸಾಧಾರಣ ಮನುಷ್ಯನಿಗೂ ದೊರಕುವಂತೆ ಮಾಡಿದ ಕೀರ್ತಿ ಮೇಜರ್ ಯಂಗ್‌ನದು (19ನೆಯ ಶತಮಾನ). ಇವನು ಆಗಿನ ಕಾಲಕ್ಕೆ ಉತ್ತಮ ಜಾತಿಯದು ಎನಿಸಿದ್ದ ಆಲೂಗಡ್ಡೆ ಬೀಜಗಳನ್ನು ಡೆಹರಾಡೂನಿನ ಬೆಟ್ಟಗುಡ್ಡಗಳ ನಾಡಿನಲ್ಲಿ ಬೆಳೆಸಲಾರಂಭಿಸಿದ. ಸು. 1839ರ ವೇಳೆಗೆ ಅದು ಭಾರತದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿತು. ಒಂದನೆಯ ಮತ್ತು ಎರಡನೆಯ ಮಹಾಯುದ್ಧದ ಸಮಯದಲ್ಲಿ ಆಹಾರ ಕೊರತೆ ಹೆಚ್ಚು ಕಂಡುಬಂದು ಬೇಗ ಕೆಡದಂಥ, ಕೊಳೆಯದಂಥ ತರಕಾರಿಯ ಆವಶ್ಯಕತೆ ಹೆಚ್ಚಾಗುತ್ತಾ ಬಂತು. ಹೀಗಾಗಿ ಆಲೂಗೆಡ್ಡೆಯ ಒಳ್ಳೆಯ ಸ್ಥಾನಲಭಿಸಿತು. ಅಂದಿನಿಂದ ಇದು ಬಹುಜನಪ್ರಿಯವಾಗಿ ಇದರ ವಿಸ್ತೃತ ವ್ಯವಸಾಯ ಆರಂಭವಾಯಿತು. ದೇಶದ ಉದ್ದಗಲಕ್ಕೆ ಇದರ ಬೆಳೆ ಹಬ್ಬಿತು. ಅಸ್ಸಾಂ, ನೀಲಗಿರಿ, ಬಿಹಾರ್ ಮುಂತಾದ ಪ್ರದೇಶಗಳಲ್ಲಿ ಹೊಸ ಹೊಸ ಜಾತಿಯ ಬೀಜಗಳನ್ನು ಇಂಗ್ಲೆಂಡ್, ಆಸ್ಟ್ರೇಲಿಯ ದೇಶಗಳಿಂದ ತರಿಸಿಕೊಂಡು ಬೆಳೆಸಲಾರಂಭಿಸಿದರು. ಕೆಲವು ಜಾತಿಗಳು ವಾತಾವರಣದ ವೈಪರೀತ್ಯವನ್ನು ಎದುರಿಸಲಾರದೆ ನಿರೀಕ್ಷಿಸಿದ ಫಸಲು ನೀಡಲಿಲ್ಲ. ಇನ್ನುಳಿದವು ತಮ್ಮತನವನ್ನು ಉಳಿಸಿಕೊಂಡು ಸ್ಥಿರವಾದ ಮತ್ತು ಉತ್ತಮ ದರ್ಜೆಯ ಫಸಲು ಕೊಡತೊಡಗಿದವು.

ಸೊಲೇನಂ ಜಾತಿಯಲ್ಲಿ 1,500ಕ್ಕೂ ಹೆಚ್ಚು ಪ್ರಭೇದಗಳಿವೆ. ಅವುಗಳಲ್ಲಿ ಟ್ಯೂಬೆರೋಸಮ್ ಮುಖ್ಯವಾದದ್ದು. ಆಲೂಗೆಡ್ಡೆ ಏಕಋತುವಿನ ಪರ್ಣಸಸಿ. ಎಲೆ ಸಂಯುಕ್ತ ಪತ್ರ, ಅಭಿಮುಖ ಜೋಡಣೆ: ನಯವಾದ ಅಂಚು, ಮೊನಚು ಅಥವಾ ಮೊಂಡು ತುದಿ, ಕಾಂಡ ನೇರವಾಗಿದೆ, ಭೂಮಿಗಿಳಿದ ಕಾಂಡದ ತುದಿಯಲ್ಲಿ ಗೆಡ್ಡೆಯಿರುತ್ತದೆ, ತುತ್ತತುದಿಯಲ್ಲಿ ಹೂಗೊಂಚಲು, ಹೂಗಳು ದ್ವಿಲಿಂಗ ಪುಷ್ಪಗಳು, ಪುಷ್ಪಪಾತ್ರೆ 5, ದಳ 5, ದಳಗಳ ಬಣ್ಣ ಬಿಳಿ, ನೀಲಿ, ಕಡುಗೆಂಪು, ಕೇಸರಗಳು 5, ಅಂಡಾಶಯ 3 ಭಾಗ, ಬಹು ಅಂಡಗಳುಳ್ಳ ಅಂಡಾಶಯ, ಫಲ ಬೆರಿ ಮಾದರಿಯದು.

ಪುಲ್ ವ, ಅಪ್-ಟು-ಡೇಟ್, ಪ್ರೆಸಿಡೆಂಟ್, ಗ್ರೇಟ್ ಸ್ಕಾಟ್, ಕುಫ್ರಿ ಕುಂದನ್, ಹೈಬ್ರಿಡ್ 12, ಹೈಬ್ರಿಡ್ 13, ಸಾತೊ, ಮೆಜಸ್ಟಿಕ್. ಇಟ್ಯಾಲಿಯನ್ ವೈಟ್ ರೌಂಡ್, ಲೇಟ್ ಜರ್ಮನ್ – ಇವು ಆಲೂಗಡ್ಡೆಯ ಬೇರೆ ಬೇರೆ ತಳಿಗಳು.

ಆಲೂಗಡ್ಡೆ ಸುಮಾರು 30–45 ಸೆಂಮೀ.ವರೆಗೆ ಬೆಳೆಯುವ ಸಣ್ಣ ಸಸ್ಯ. ಅದರ ಬೇರುಗಳು ನಾರಿನಂತಿವೆ. ಇವು ಭೂಮಿಯಲ್ಲಿ ಹೆಚ್ಚು ಆಳ ಹೋಗುವುದಿಲ್ಲ. ತೇವವಿರುವ ಭೂಮಿಯಲ್ಲಿ ಸು. 20 ಸೆಂಮೀ.ವರೆಗೂ ಹೋಗಬಹುದು. ಸಾಧಾರಣವಾಗಿ ಈ ಸಸ್ಯದಲ್ಲಿ ಕಾಯಿ ಬಿಡುವುದಿಲ್ಲ. ಸರಿಯಾದ ವಾತಾವರಣವಿದ್ದಾಗ ಕಾಯಿ ಬಿಡುತ್ತದೆ.

ಗೆಡ್ಡೆ ಕಾಂಡದ ಕವಲಿನ ತುದಿಯಲ್ಲಿ ಕಾಣಬಹುದು. ಒಂದು ಗಿಡದಲ್ಲಿ ಇಂಥ ಕಾಂಡದ ಕವಲುಗಳ ತುದಿಗಳು ಹಲವಾರು ಇರುತ್ತವೆ. ಸ್ಟೋಲಾನ್ ಎಂದು ಇವುಗಳ ಹೆಸರು. ಗೆಡ್ಡೆ ಸಾಮಾನ್ಯವಾಗಿ ಚಿಕ್ಕದಾಗಿದ್ದು ದಪ್ಪವಾಗಿರುತ್ತದೆ. ಸಂಪೂರ್ಣವಾಗಿ ಬಲಿತ ಗೆಡ್ಡೆಯ ಮೇಲೆ ಹಲವಾರು ಸಣ್ಣ ಸಣ್ಣ ಕುಳಿಗಳಂತಿರುವ ಕಣ್ಣುಗಳನ್ನು ಕಾಣಬಹುದು. ಈ ಕಣ್ಣುಗಳ ಭಾಗವನ್ನು ಕತ್ತರಿಸಿ ಭೂಮಿಯಲ್ಲಿ ನೆಡಬಹುದು. ನಿರ್ಲಿಂಗರೀತಿಯಲ್ಲಿ ಸಸ್ಯವನ್ನು ಈ ರೀತಿ ವೃದ್ಧಿಸಬಹುದು. ಹಾಗೆ ವೃದ್ಧಿಗೊಂಡ ಗಿಡಗಳಲ್ಲಿ ಮತ್ತೆ ಗೆಡ್ಡೆಗಳು ಬೆಳೆದು ಪೀಳಿಗೆಯನ್ನು ಮುಂದುವರಿಸುತ್ತವೆ. ಸುಮಾರು ಎರಡು ತಿಂಗಳಲ್ಲಿ ಗಿಡ ಒಳ್ಳೆಯ ಆಕಾರದ ಗೆಡ್ಡೆಗಳನ್ನು ಕೊಡುವುದು.

ಆಲೂಗೆಡ್ಡೆಯ ಬೆಳೆಗೆ ಭೂಮಿಯಲ್ಲಿರುವ ಶೈತ್ಯಾಂಶ ಮತ್ತು ಹವಾಗುಣ ಬಹಳ ಮುಖ್ಯ. ಬೆಳೆಯ ಭವಿಷ್ಯವನ್ನೇ ಹವಾಗುಣ ನಿರ್ಧರಿಸುತ್ತದೆ. ಸಾಮಾನ್ಯವಾಗಿ ಆಲೂಗೆಡ್ಡೆ ತಂಪು ಹವೆಯಿರುವ ಮತ್ತು ತೇವವಿರುವ ಪ್ರದೇಶದಲ್ಲಿ ಬೆಳೆಯುತ್ತದೆ ಹೆಚ್ಚಾಗಿ ಸಿಮ್ಲ, ಡಾರ್ಜಿಲಿಂಗ್, ನೈನಿತಾಲ್, ರಾಂಚಿ, ಮಹಾಬಲೇಶ್ವರ, ನೀಲಗಿರಿ ಪ್ರದೇಶಗಳಲ್ಲಿ 800[1]–2,000[1] ಮೀ. ಎತ್ತರದಲ್ಲೂ ಇದನ್ನು ಬೆಳೆಸುತ್ತಾರೆ. ಬಯಲು ಪ್ರದೇಶದಲ್ಲಿ ಚಳಿಗಾಲದ ಬೆಳೆಯಾಗಿ ಕೂಡ ಇದರ ಕೃಷಿ ನಡೆಯುತ್ತದೆ.

ಕರ್ನಾಟಕ ರಾಜ್ಯದಲ್ಲಿ ಆಲೂಗೆಡ್ಡೆಯ ಬೆಳೆಯನ್ನು ಮೂರು ಕಾಲದ ಬೆಳೆಯಾಗಿ ವಿಭಾಗಿಸಬಹುದು. 1. ಮಳೆಗಾಲದ ಬೆಳೆ : 2. ಚಳಿಗಾಲದ ಬೆಳೆ : 3. ಬೇಸಗೆ ಬೆಳೆ. ಎಲ್ಲ ಋತುಗಳಲ್ಲಿಯೂ ಕರ್ನಾಟಕ ರಾಜ್ಯದಲ್ಲಿ ಆಲೂಗೆಡ್ಡೆ ಬೆಳೆಸಬಹುದಾದರೂ ಚಳಿಗಾಲದ ಬೆಳೆ ಫಸಲು ದೃಷ್ಟಿಯಿಂದ ಅತ್ಯುತ್ತಮ.

ಮಳೆಗಾಲದ ಬೆಳೆ: ಬೇಸಗೆಯಲ್ಲಿ ಆಳವಾಗಿ ಅಗತೆ ಮಾಡಿ ಮುಂಗಾರು ಮಳೆ ಪ್ರಾರಂಭವಾದ ತರ್ತ್‌ಕ್ಷಣ ಆಲೂಗೆಡ್ಡೆ ಬೆಳೆ ಹಾಕುತ್ತಾರೆ. ಇದು ಮಳೆಯನ್ನೇ ಆಶ್ರಯಿಸಿ ಬೆಳೆಯುತ್ತದೆ. ನೀರಾವರಿಯಿಂದಲೂ ಬೆಳೆ ತೆಗೆಯುತ್ತಾರೆ. ರಾಗಿ ಬೆಳೆಯುವ ಹೊಲಗಳಲ್ಲಿ ಆಲೂಗೆಡ್ಡೆಯನ್ನು ಹಾಕಿ, ಬೆಳೆ ತೆಗೆದ ತತ್‌ಕ್ಷಣ ರಾಗಿಪೈರು ನಾಟಿ ಮಾಡುತ್ತಾರೆ. ಬೆಳೆಯ ಅವಧಿ ಜಾತಿಗಳನ್ನು ಅನುಸರಿಸುತ್ತದೆ.

ಚಳಿಗಾಲದ ಬೆಳೆ: ಕರ್ನಾಟಕ ರಾಜ್ಯದಲ್ಲಿ ವರ್ಷದ ಬಹುಭಾಗದ ಉತ್ಪಾದನೆ ಚಳಿಗಾಲದ್ದು. ರಾತ್ರಿಯ ತಂಪಾದ ಹವಾಗುಣ ಬೆಳೆಗೆ ಉತ್ತೇಜನಕಾರಿ. ಈ ಬೆಳೆಯನ್ನು ನೀರಾವರಿ ಆಶ್ರಯದಿಂದ ತೆಗೆಯುತ್ತಾರೆ.

ಬೇಸಗೆ ಬೆಳೆ : ಬೇಸಗೆ ಬೆಳೆಯನ್ನು ಬಿತ್ತನೆಗಾಗಿ ಬೆಳೆಸುತ್ತಾರೆ. ಬೆಳೆ ಬಲು ಕಡಿಮೆ. ಇದಕ್ಕೆ ಯಥೇಚ್ಛವಾಗಿ ನೀರಾವರಿಯ ಆಶ್ರಯ ಬೇಕು.

ಬಿತ್ತನೆ : ಆಲೂಗೆಡ್ಡೆ ಬೇಸಾಯ ಹೆಚ್ಚು ಖರ್ಚಿನದು. ಗೆಡ್ಡೆಯ ಮೇಲಿರುವ 2–3 ಕಣ್ಣುಗಳನ್ನು ಕತ್ತರಿಸಿ ನೆಡುವುದು ರೂಢಿಯ ಬೇಸಾಯಕ್ರಮ. ಗೆಡ್ಡೆ ಗಾತ್ರದಲ್ಲಿ ಸಣ್ಣವಾಗಿದ್ದರೆ ಕತ್ತರಿಸದೆ ನೆಡುವುದು ಒಳ್ಳೆಯದು. ದಪ್ಪವಾಗಿರುವ ಗೆಡ್ಡೆಗಳನ್ನು ಬಿತ್ತನೆ ಮಾಡಿದರೆ ಫಸಲು ಕಡಿಮೆಯಾಗುತ್ತದೆ. ಬಿತ್ತನೆ ಗೆಡ್ಡೆ ತನ್ನ ಹಿಂದಿನ ಪೀಳಿಗೆಯ ಎಲ್ಲ ಶ್ರೇಷ್ಠ ಗುಣಗಳನ್ನೂ ಹೊಂದಿರಬೇಕು. 3.5–4 ಸೆಂಮೀ ಮಧ್ಯಗಾತ್ರದವು ಬಿತ್ತನೆಗೆ ಯೋಗ್ಯ. ರೋಗ ಅಥವಾ ಕೀಟಪೀಡಿತ ಗೆಡ್ಡೆ, ಒಳಭಾಗದಲ್ಲಿ ಮಚ್ಚೆಗಳಿರುವ ಗೆಡ್ಡೆ, ಕಣ್ಣುಗಳಲ್ಲಿ ಸರಿಯಾಗಿ ಮೊಳಕೆ ಬಾರದೆ ಇದ್ದ ಗೆಡ್ಡೆ ಇವುಗಳನ್ನು ಬಿತ್ತಬಾರದು. ಉತ್ತಮಫಸಲು ಮತ್ತು ಪೀಳಿಗೆ ಅಭಿವೃದ್ಧಿ ದೃಷ್ಟಿಯಿಂದ ಈ ಎಚ್ಚರಿಕೆ ಅತ್ಯಗತ್ಯ. ಆಲೂಗೆಡ್ಡೆ ಅಗೆದು ತೆಗೆದು ಮೂರು ತಿಂಗಳು ನಿದ್ರಾವಸ್ಥೆ ಕಳೆದ ಮೇಲೆ ಮಾತ್ರ ಮೊಳೆಯಬಲ್ಲವು. ಬೀಜ ಪ್ರಮಾಣ ಸಾಮಾನ್ಯವಾಗಿ ಎಕರೆಗೆ 400–700ಕೆ.ಜಿ. ಈ ಪ್ರಮಾಣ ಆಲೂಗೆಡ್ಡೆಯ ಪೀಳಿಗೆಯನ್ನು ಅನುಸರಿಸಿ ವ್ಯತ್ಯಾಸವಾಗ ಬಹುದು.

ಬೆಳೆಯ ಆವರ್ತ (ರೊಟೇಷನ್ ಆಫ್ ಕ್ರಾಪ್ಸ್) : ಮಣ್ಣಿನ ಸಾರ ಮತ್ತು ಫಸಲಿನ ದೃಷ್ಟಿಯಿಂದ ವರ್ಷದ ಎಲ್ಲ ಕಾಲದಲ್ಲೂ ಆಲೂಗೆಡ್ಡೆ ಬೆಳೆಯುವುದು ಒಳ್ಳೆಯದಲ್ಲ. ಆದ್ದರಿಂದ ಆಲೂಗೆಡ್ಡೆ–ರಾಗಿ, ಆಲೂಗೆಡ್ಡೆ–ಹುರುಳಿ ಈ ಕ್ರಮದಲ್ಲಿ ಮಳೆಯನ್ನು ಆಶ್ರಯಿಸುವ ಬೆಳೆಗೆ ಪರ್ಯಾಯವಾಗಿಯೂ ನೀರಾವರಿ ಆಲೂಗೆಡ್ಡೆಯನ್ನು ಹುರುಳಿಕಾಯಿ, ಕೋಸು, ಮೂಲಂಗಿ, ಬೆಂಡೆಕಾಯಿ, ಸೌತೆಕಾಯಿ, ನವಿಲುಕೋಸು, ಬೀಟ್‌ರೂಟ್, ಈರುಳ್ಳಿ, ಬೆಳ್ಳುಳ್ಳಿ ಇತ್ಯಾದಿಗಳೊಡನೆ ಪರ್ಯಾಯವಾಗಿಯೂ ಬೆಳೆಸುವುದು ರೂಢಿಯಲ್ಲಿದೆ.

ಮಿಶ್ರ ಬೆಳೆ: ಆಲೂಗೆಡ್ಡೆಯನ್ನು ಸಾಮಾನ್ಯವಾಗಿ ಶುದ್ಧ ಬೆಳೆಯನ್ನಾಗಿಯೇ ಬೆಳೆಸುತ್ತಾರೆ. ಕೆಲವು ಸಲ ಸೊಪ್ಪನ್ನು ಮಿಶ್ರ ಬೆಳೆಯಾಗಿ ಹಾಕಿ ಮಣ್ಣು ಏರು ಹಾಕುವ ಕಾಲಕ್ಕೆ ಸರಿಯಾಗಿ ಉಪಬೆಳೆ ಮುಗಿದು ಹೋಗುತ್ತದೆ. ಬದುಗಳ ಮೇಲೆ ಈರುಳ್ಳಿ, ಬೆಳ್ಳುಳ್ಳಿ, ಕೊತ್ತುಂಬರಿ ಮುಂತಾದವುಗಳನ್ನು ಮಿಶ್ರ ಬೆಳೆಯಾಗಿ ಹಾಕುವುದು ರೂಢಿಯಲ್ಲಿದೆ.

ಆಲೂಗೆಡ್ಡೆ ಬೇಸಾಯಕ್ಕೆ ಅಧಿಕ ಗೊಬ್ಬರ ಅಗತ್ಯ. ಎಕರೆಗೆ 20 ಗಾಡಿಯಷ್ಟು ಕೊಟ್ಟಿಗೆ ಗೊಬ್ಬರ ಬೇಕು. ಎಕರೆಗೆ 200 ಕೆ.ಜಿ. ನೈಟ್ರೋಜನ್, 100 ಕೆ.ಜಿ ಫಾಸ್ಫರಸ್ ಮತ್ತು 200 ಕೆ.ಜಿ. ಪೊಟ್ಯಾಷ್ ಬೇಕಾಗುತ್ತದೆ.

ನೆಡುವ ಪದ್ಧತಿ ನೀರಾವರಿಯನ್ನು ಅನುಸರಿಸಿದೆ. ಮಳೆ ಆಶ್ರಯಿಸಿ ಹಾಕುವ ಬೆಳೆಯನ್ನು ನೇಗಿಲ ಸಹಾಯದಿಂದ ಉತ್ತು ನೆಡುತ್ತಾರೆ. ಎರಡು ಅಂತರದಲ್ಲಿ ಹಾದು ಹೋದ ನೇಗಿಲ ಸಾಲಿನಲ್ಲಿ ಸು. 50 ಸೆಂಮೀ ಆಳದಲ್ಲಿ ಹಾಕಿ ಮಣ್ಣು ಮುಚ್ಚುತ್ತಾರೆ. ನೀರಾವರಿ ಬೆಳೆ ಹಾಕುವಾಗ 50 ಸೆಂಮೀ ಅಂತರದಲ್ಲಿ 4 ಆಳದ ಕಾಲುವೆಗಳನ್ನು ತೆಗೆದು 30 ಸೆಂಮೀ ಅಂತರದಲ್ಲಿ ನೆಡುತ್ತಾರೆ. ಆದರೆ ಆಲೂಗೆಡ್ಡೆ ನೆಡುವುದಕ್ಕೆ ರೈತರು ಅಂತರದ ಬಗ್ಗೆ ಹೆಚ್ಚು ಗಮನ ಕೊಡುವುದಿಲ್ಲ. ಕೆಲವು ಸಾರಿ 6" ಅಂತರದಲ್ಲಿ ಸಹ ನೆಡುತ್ತಾರೆ. ಆಲೂಗೆಡ್ಡೆ ಬೇಸಾಯದಲ್ಲಿ ಕಳೆಕೀಳುವುದು, ಮಣ್ಣು ಏರು ಹಾಕುವುದು ಮುಖ್ಯವಾದ ಮಧ್ಯಕಾಲದ ಬೇಸಾಯಕ್ರಮ. ನೆಟ್ಟ ಮೇಲೆ ಪೂರ್ತಿಯಾಗಿ ಮೊಳೆಯಲು 2–3 ವಾರಬೇಕು. ನೆಟ್ಟ ಒಂದು ತಿಂಗಳ ಅನಂತರ ಕಳೆ ಕೀಳಬೇಕು. ಎರಡನೆಯ ಸಲ ನೆಟ್ಟ 1½ ತಿಂಗಳ ಅನಂತರ ಕಳೆ ಕಿತ್ತು ಕೈಗುದ್ದಲಿಯಿಂದ ಮೊಳಕೆಗಳ ಎರಡು ಕಡೆಗಳಲ್ಲಿ ಮಣ್ಣನ್ನು ಅಗತೆ ಮಾಡಿ ಆಲೂಗೆಡ್ಡೆ ಬುಡಗಳಿಗೆ 10 ಸೆಂಮೀ ಎತ್ತರ ಮಣ್ಣನ್ನು ಏರು ಹಾಕಬೇಕು.

ಆಲೂಗೆಡ್ಡೆ ನೆಟ್ಟ 1½ ತಿಂಗಳಲ್ಲಿ ಮೇಲೆ ಸಸ್ಯದ ಹಸಿರು ಭಾಗ ಬೆಳೆಯುತ್ತದೆ. ಆ ಹೊತ್ತಿಗೆ ಸಣ್ಣ ಸಣ್ಣ ಗೆಡ್ಡೆಗಳು ಕಾಣಿಸಿಕೊಳ್ಳುತ್ತವೆ. ಇವು ಕ್ರಮೇಣ ದಪ್ಪವಾಗುತ್ತ ಬರುತ್ತವೆ. ನೆಟ್ಟ 3ನೆಯ ತಿಂಗಳಲ್ಲಿ ಇವು ಪರಮಾವಧಿ ಗಾತ್ರ ಮುಟ್ಟುತ್ತವೆ. ಮಣ್ಣಿನಲ್ಲಿ ಸರಿಯಾದ ಗೊಬ್ಬರ ಪ್ರಮಾಣ ಇಲ್ಲದೆ ಇದ್ದು ಅಥವಾ ಯಾವುದೇ ಕಾರಣದಿಂದ ಮಣ್ಣು ಜಿಗುಟಾಗಿದ್ದರೆ ಗೆಡ್ಡೆ ದಪ್ಪವಾಗಲು ಅವಕಾಶವಿರುವುದಿಲ್ಲ. ಆಲೂಗೆಡ್ಡೆ ಸಸ್ಯ ಅದರ ಜೀವಿತದ ಪರಮಾವಧಿ ಮುಟ್ಟಿದ ಮೇಲೆ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಒಣಗಲು ಪ್ರಾರಂಭಿಸುತ್ತವೆ. ಅಗತೆಗೆ ಬರುವ ಅವಧಿ ಜಾತಿಗಳನ್ನು ಅನುಸರಿಸಿ ವ್ಯತ್ಯಾಸವಾಗುತ್ತದೆ. ಮಳೆಯನ್ನು ಆಶ್ರಯಿಸಿರುವ ಬೆಳೆ ಸಾಮಾನ್ಯವಾಗಿ ಅಧಿಕ ಅವಧಿಯದು. ಅದಕ್ಕೆ 5 ತಿಂಗಳು ಬೇಕಾಗುತ್ತದೆ. ನೀರಾವರಿ ಬೆಳೆ ನೆಟ್ಟ 3 ತಿಂಗಳಲ್ಲಿ ಅಗತೆಗೆ ಬರುತ್ತದೆ. ಬೆಳೆಯ ಪರಮಾವಧಿ ಸೂಚನೆ ಕಂಡ ಕೂಡಲೆ ನೀರು ಹಾಯಿಸುವುದನ್ನು ನಿಲ್ಲಿಸಬೇಕು. ಅನಂತರ ಗುದ್ದಲಿಯ ಸಹಾಯದಿಂದ ಪ್ರತಿ ಸಸ್ಯವನ್ನು ಕಿತ್ತು ಗೆಡ್ಡೆಗಳನ್ನು ಬೇರ್ಪಡಿಸಬೇಕು. ಬಿತ್ತನೆಗಾಗಿ ಬೆಳೆದ ಬೆಳೆಯನ್ನು ಪರಮಾವಧಿಗಿಂತ 2 ವಾರಗಳ ಮುಂಚೆ ಅಗತೆ ಮಾಡುತ್ತಾರೆ.

ಆಲೂಗೆಡ್ಡೆ ಹೆಚ್ಚು ಫಸಲು ಕೊಡುವ ಬೆಳೆ. ಎಕರೆಗೆ 6–10 ಟನ್ನು ಆಲೂಗೆಡ್ಡೆ ಸಿಕ್ಕುತ್ತದೆ. ಆದರೆ ಸಾಮಾನ್ಯವಾಗಿ ಫಸಲಿನ ಪ್ರಮಾಣ ಜಾತಿ, ಬೇಸಾಯ ಪದ್ಧತಿ, ಸೀಮೆಗೊಬ್ಬರ, ನೀರಾವರಿ ಸೌಲಭ್ಯ ಮುಂತಾದವುಗಳನ್ನು ಅವಲಂಬಿಸಿದೆ.

ಆಲೂಗೆಡ್ಡೆ ಮಾರುಕಟ್ಟೆಗೆ ಒಂದೇ ಸಾರಿ ಬರುವುದರಿಂದ ಬೆಲೆ ತೀರ ಕಡಿಮೆಯಾಗುತ್ತದೆ. ಇದನ್ನು ಸಾಧಾರಣ ಸ್ಥಿತಿಯಲ್ಲಿ ಹೆಚ್ಚು ದಿವಸಗಳು ಇಡಲು ಸಾಧ್ಯವಾಗದೆ ಇರುವುದರಿಂದ ನ್ಯಾಯ ಬೆಲೆ ರೈತರಿಗೆ ಸಿಗುವುದು ಅಪೂರ್ವ. ಈ ತೊಂದರೆಯನ್ನು ತಪ್ಪಿಸಲು ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ವಿಧಾನ ರೂಢಿಯಲ್ಲಿದೆ. ಆಲೂಗೆಡ್ಡೆಯನ್ನು ರಾಶಿ ಹಾಕಿ ಅದರ ಮೇಲೆ 2"–3" ದಪ್ಪವಾಗಿ ಸೊಪ್ಪು ಹೊದಿಸಿ ಅದರ ಮೇಲೆ ಮಣ್ಣು ಹಾಕುತ್ತಾರೆ. ಕೆಲವು ಕಡೆಗಳಲ್ಲಿ ರಂಧ್ರ ಮಾಡಿ ಗೆಡ್ಡೆಗಳಿಗೆ ಉಸಿರಾಡಲು ಅವಕಾಶ ಮಾಡಿಕೊಡುತ್ತಾರೆ. ಕರ್ನಾಟಕರಾಜ್ಯದ ತೋಟಗಾರಿಕೆ ಇಲಾಖೆಯವರು ಇದರ ಮಹತ್ತ್ವವನ್ನು ಅರಿತು ಹಾಸನದಲ್ಲಿ ಮತ್ತು ಬೆಂಗಳೂರಿನ ಲಾಲ್‌ಬಾಗಿನಲ್ಲಿ 2 ಶೀತಶೇಖರಣಾ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಬಿತ್ತನೆ ಆಲೂಗೆಡ್ಡೆಯನ್ನು ಮರಳಿನಲ್ಲಿ ಶೇಖರಿಸುವುದು ಗ್ರಾಮಾಂತರ ಪ್ರದೇಶಗಳಲ್ಲಿ ರೂಢಿಯಲ್ಲಿರುವ ವಿಧಾನ. ಗಾರೆ ಮತ್ತು ಸಿಮೆಂಟ್ ಹಾಕಿರುವ ನೆಲದ ಮೇಲೆ ಬಿತ್ತನೆ ಆಲೂಗೆಡ್ಡೆಯನ್ನು ಹಾಕಬಾರದು.

ಆಹಾರಾಂಶ: ಆಲೂಗೆಡ್ಡೆಯಲ್ಲಿರುವ ಮನುಷ್ಯನ ಬೆಳವಣಿಗೆಗೆ ಅವಶ್ಯವಾಗಿರುವ ಆಹಾರಾಂಶದ ವಿವರ ಈ ಕೆಳಗಿನಂತಿದೆ.

| | 100 ಗ್ರಾಮ್ ಆಲೂಗೆಡ್ಡೆಯಲ್ಲಿ | ಶೇಕಡಾವಾರು |
|---|---|---|
| | ತೇವಾಂಶ (ನೀರು) | 74.70 |
| | ಸಕ್ಕರೆ | 01.60 |
| | ಜೀವಸತ್ತ್ವಗಳು (ವಿಟಮಿನ್‌ಗಳು) | 00.10 |
| | ಕೊಬ್ಬು | 00.60 |
| ಲವಣಗಳು | ಸುಣ್ಣ | 00.10 |
| | ರಂಜಕ | 00.30 |
| | ಕಬ್ಬಿಣ | 00.07 |

ಆಲೂಗೆಡ್ಡೆಯಲ್ಲಿ ಪಿಷ್ಟದ ಅಂಶ ಹೆಚ್ಚಾಗಿದೆ. ಆದ್ದರಿಂದ ಇದನ್ನು ಅಕ್ಕಿ ಮತ್ತು ಇತರ ಧಾನ್ಯಗಳ ಬದಲಾಗಿ ಉಪಯೋಗಿಸಬಹುದು. ಈ ಬೆಳೆ ಧಾನ್ಯಗಳಿಗಿಂತ ಕಡಿಮೆ ಕಾಲದಲ್ಲಿ ಹೆಚ್ಚು ಫಸಲು ಕೊಡಬಲ್ಲದು. ಒಂದು ಎಕರೆಯಲ್ಲಿ ಬೆಳೆದ ಆಲೂಗೆಡ್ಡೆ ಮತ್ತು ಬತ್ತದಲ್ಲಿ ದೊರೆಯುವ ಆಹಾರಾಂಶಗಳನ್ನು ಮುಂದೆ ಕೊಟ್ಟಿದೆ.

| ಆಹಾರದ ಅಂಶ | ಆಲೂಗೆಡ್ಡೆ | ಬತ್ತ |
|---|---|---|
| ಪಿಷ್ಟ | 772 ಕೆ.ಜಿ. | 335 ಕೆ.ಜಿ.ಗಳು |
| ಜೀವಸತ್ತ್ವಗಳು (ವಿಟಮಿನ್‌ಗಳು) | 60 .. | 30 .. |
| ಮೇದಸ್ಸು | 3.2 .. | 5.2 .. |
| ಲವಣಗಳು | 40 .. | 3.6 .. |
| ಆಹಾರ ಶಕ್ತಿ | 3276 ಕೆಲೊರಿ | 1856 ಕೆಲೊರಿ |

ಪ್ರಾಯೋಗಿಕ ದೃಷ್ಟಿಯಿಂದ ಆಲೂಗೆಡ್ಡೆ ಪ್ರಮುಖ ಕಚ್ಚಾವಸ್ತು. ಇದನ್ನು ಆಹಾರ ಮತ್ತು ತರಕಾರಿಯಾಗಿ ಬಳಸುತ್ತಾರೆ. ಇದರಿಂದ ಫರೀನಾ ಎಂಬ ಪಿಷ್ಟವನ್ನು ತಯಾರಿಸಿ ಲಾಂಡ್ರಿಯಲ್ಲೂ ಬಟ್ಟೆ ಗಿರಣಿಗಳಲ್ಲೂ ಬಳಸುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಇದರಿಂದ ಆಲ್ಕೊಹಾಲ್ ತಯಾರಿಸಿ ಕೈಗಾರಿಕೆಗಳಲ್ಲಿ ಬಳಸುತ್ತಾರೆ. ಆಗ ಉಳಿಯುವ ಹಿಂಡಿಯನ್ನು ದನಗಳ ಮೇವಿಗಾಗಿ ಉಪಯೋಗಿಸುತ್ತಾರೆ. ಒಂದು ಟನ್ ಆಲೂಗೆಡ್ಡೆಯಿಂದ ಶೇ.95 ರಷ್ಟು ಶುದ್ಧವಾದ 70 ಗ್ಯಾಲನ್ ಆಲ್ಕೊಹಾಲ್ ತಯಾರಾಗುವುದು. ಇದರಿಂದ ಡೆಕ್ಸ್‌ಟ್ರಿನ್ ಮತ್ತು ಗ್ಲೂಕೋಸನ್ನೂ ತಯಾರಿಸುತ್ತಾರೆ.

ಶತ್ರುಗಳು: ಗೆಡ್ಡೆ ಕೊರೆಯುವ ಕೀಟಗಳ ಹಾವಳಿಯಿಂದ ಶೇಖರಣೆ ಮಾಡಿದ ಆಲೂಗೆಡ್ಡೆ ಹಾಳಾಗುತ್ತದೆ. ಗೆಡ್ಡೆಯ ಆಕಾರ ವಿಕೃತವಾಗುವುದು. ಕೀಟಪೀಡಿತ ಗೆಡ್ಡೆಯನ್ನು ನೆಟ್ಟರೆ ವ್ಯಾಧಿ ಸಾಂಕ್ರಾಮಿಕವಾಗುತ್ತದೆ. ಇಲ್ಲಿ ರಕ್ಷಣೆಯ ಮಾರ್ಗ : ಕಾರ್ಬನ್ ಡೈಸಲ್ಫೈಡ್ ಹೊಗೆಯನ್ನು ಹಾಯಿಸಿ ಆ ಪಿಡುಗನ್ನು ತಡೆಗಟ್ಟಬೇಕು : ಕೀಟಪೀಡಿತ ಗೆಡ್ಡೆಗಳನ್ನು ಬಿತ್ತನೆಗಾಗಿ ಉಪಯೋಗಿಸಬಾರದು. ಬಿತ್ತನೆ ಆಲೂಗೆಡ್ಡೆಯನ್ನು ಮಣ್ಣಿನಿಂದ ಮುಚ್ಚಿ, ಕೀಟದ ಹಾವಳಿಯನ್ನು ತಡೆಯಬೇಕು.

ಕೊಂಬೆ ಕತ್ತರಿಸುವ ಹುಳುಗಳು : ಆಲೂಗೆಡ್ಡೆಯ ಸಸ್ಯ ಕತ್ತರಿಸುವ ಹುಳುಗಳ ಪಿಡುಗೂ ಹತ್ತುವುದುಂಟು. ಆ ಕೀಟದ ಕಂಬಳಿ ಹುಳು ಆಲೂಗಡ್ಡೆ ಎಳೆ ಸಸಿಗಳನ್ನು ಭೂಮಿಯ ಮಟ್ಟದಲ್ಲಿ ಕತ್ತರಿಸಿ ಹಾಕಿ ಬೆಳೆಯನ್ನು ನಾಶಮಾಡುತ್ತದೆ. ಇದನ್ನು ತಡೆಗಟ್ಟಲು ಶೇ.5 ಇರುವ ಬಿ.ಎಚ್.ಸಿ. ಅಥವಾ ಡಿ.ಡಿ.ಟಿ. ಪುಡಿಯನ್ನು ಬೆಳೆಯ ಸಾಲುಗಳಲ್ಲಿ ಹಾಕಿ ಮಣ್ಣಿಗೆ ಮಿಶ್ರಮಾಡಬೇಕು. ಅಥವಾ ಶೇ.5 ಇರುವ ಆಲ್‌ಡ್ರೈನ್ ಅಥವಾ ಕ್ಲೋರೊಡನ್ ಪುಡಿಯನ್ನು ಎರಚಬೇಕು.

ಹಸಿರುಬಣ್ಣದ ಕುಪ್ಪಳಿಸುವ ಅಗಾಧ ಸಂಖ್ಯೆಯ ಜಾಸಿಡ್ಡುಗಳು ಆಲೂಗಡ್ಡೆ ಸಸ್ಯದ ಎಳೆಯ ಭಾಗಗಳಲ್ಲಿ ಇದ್ದು ಸಸ್ಯರಸವನ್ನು ಹೀರುತ್ತವೆ. ಸಸ್ಯರಸವನ್ನು ಹೀರುವುದರಿಂದ ಎಲೆಗಳು ಮುದುರಿಕೊಂಡು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹಾವಳಿ ಅತಿಯಾದಾಗ ಎಲೆ ಮತ್ತು ಇತರ ಎಳೆಯ ಭಾಗಗಳು ಒಣಗಿಹೋಗುತ್ತವೆ. ಈ ಪಿಡುಗನ್ನು ತಪ್ಪಿಸಲು ಶೇ.5 ಇರುವ 1.2 ಕೆ.ಜಿ. ಡಿ.ಡಿ.ಟಿ. ಪುಡಿಯನ್ನು 30 ಲೀಟರ್ ನೀರಿನಲ್ಲಿ ದ್ರಾವಣಮಾಡಿ ಬೆರೆಸಿ ಸಿಂಪಡಿಸಬೇಕು: ಅಥವಾ 5 ಚಮಚ ಎಂಡರಿನ್ ಪುಡಿಯನ್ನು 15 ಲೀಟರ್ ನೀರಿನಲ್ಲಿ ದ್ರಾವಣಮಾಡಿ ಸಿಂಪಡಿಸಬೇಕು.

ಚಿಪ್ಪಿನ ಹುಳು: ಚಿಪ್ಪಿನ ಹುಳು ಮತ್ತು ಇವುಗಳ ಮರಿಗಳು ಸಸ್ಯದ ಎಲೆಯ ನಾಳಗಳನ್ನು ಬಿಟ್ಟು ಉಳಿದ ಭಾಗವನ್ನು ತಿಂದುಹಾಕುತ್ತವೆ. ಜಾಸಿಡ್ಡುಗಳಿಗೆ ಅನುಸರಿಸುವ ಹತೋಟಿಯಕ್ರಮ ಇದಕ್ಕೂ ಪರಿಣಾಮಕಾರಿಯಾಗುತ್ತದೆ.

ಹೇನು : ಹೇನುಗಳು ಸಸ್ಯದ ತುದಿಯ ಎಳೆ ಭಾಗಗಳಲ್ಲಿ ಅಗಾಧ ಸಂಖ್ಯೆಯಲ್ಲಿದ್ದು ಸಸ್ಯರಸವನ್ನು ಹೀರಿ ಜೀವಿಸುತ್ತವೆ. ಕೆಲವು ಸಲ ಹೇನುಗಳು ನಂಜುರೋಗವನ್ನು ಹರಡಿ ಬೆಳೆಯನ್ನು ನಷ್ಟಪಡಿಸುತ್ತವೆ. ಇದರ ನಿವಾರಣೆಗೆ ಜಾಸಿಡ್ಡುಗಳಿಗೆ ಅನುಸರಿಸುವ ಹತೋಟಿಯ ಕ್ರಮವನ್ನು ಅನುಸರಿಸಬಹುದು.

ಆಲೂಗೆಡ್ಡೆಗೆ ಇತರ ರೋಗಗಳೂ ತಗಲುತ್ತವೆ. ಅವುಗಳಲ್ಲಿ ಮುಖ್ಯವಾದವನ್ನು ಕೆಳಗೆ ಸೂಚಿಸಿದೆ:

ಅರ್ಲಿಬ್ಲೈಟ್: ಅರ್ಲಿಬ್ಲೈಟ್ ರೋಗ ಗೆಡ್ಡೆಯಾಗುವುದಕ್ಕೆ ಮುಂಚೆ ಬರುತ್ತದೆ. ಇದು ಶಿಲೀಂಧ್ರಗಳಿಂದ ತಗಲುವುದು. ಅರ್ಲಿಬ್ಲೈಟ್ ರೋಗ ಎಲೆಗಳ ಮೇಲೆ ನಸು ಕಂದು ಬಣ್ಣದ ಮಚ್ಚೆಗಳಿಂದ ಪ್ರಾರಂಭವಾಗುತ್ತದೆ. ಈ ಮಚ್ಚೆಗಳು ಅಗಲವಾಗಿ, ಎಲೆಗಳನ್ನು ಪೂರ್ಣವಾಗಿ ಆವರಿಸಿ ಒಣಗಿ ಪೂರ್ತಿ ಉದುರಿಹೋಗುವಂತೆ ಮಾಡುತ್ತವೆ. ಈ ರೋಗ ಗೆಡ್ಡೆಗಳನ್ನು ಸಹ ಮುಟ್ಟಿ ಮಚ್ಚೆಗಳನ್ನು ಉಂಟುಮಾಡಿ ಗೆಡ್ಡೆಗಳು ಕೊಳೆತು ಹೋಗುವಂತೆ ಮಾಡುತ್ತದೆ. ರೋಗಪೀಡಿತ ಸಸ್ಯಭಾಗ ಭೂಮಿಯಲ್ಲಿ ಉಳಿದರೆ ಇದು ಮತ್ತೆ ಮುಂದಿನ ಬೆಳೆಗೂ ರೋಗವನ್ನು ಹರಡುತ್ತದೆ. ಈ ರೋಗವನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು : ಶುದ್ಧವಾದ ಬಿತ್ತನೆಯನ್ನು ನಾಟಿ ಮಾಡಬೇಕು. ಮುನ್ನೆಚ್ಚರಿಕೆಯ

ಕ್ರಮವಾಗಿ ಎರಡು ವಾರಗಳಿಗೆ ಒಂದು ಸಲ ಶೇ.1 ಇರುವ ಬೋರ್ಡೋ ದ್ರಾವಣವನ್ನು ಸಿಂಪಡಿಸಬೇಕು. ರೋಗದ ಸೂಚನೆ ಕಂಡಕೂಡಲೆ ರೋಗಪೀಡಿತ ಸಸ್ಯವನ್ನು ಸುಟ್ಟುಹಾಕಿ ಅಥವಾ ಆಳವಾಗಿ ಭೂಮಿಯಲ್ಲಿ ಹೂತುಹಾಕಿ ನಾಶಪಡಿಸಬೇಕು.

ಲೇಟ್‌ಬ್ಲೈಟ್ : ಇದು ಶಿಲೀಂಧ್ರಗಳಿಂದ ಬರುತ್ತದೆ. ಶಿಲೀಂಧ್ರಗಳು ಸಸ್ಯದ ಮೇಲೆ ಇರುತ್ತವೆ. ತಂಪಾದ ಮೋಡ ಕವಿದ ಹವಾಗುಣವಿದ್ದಾಗ ಫಕ್ಕನೆ ಬಿಸಿಲು ಪ್ರಾರಂಭವಾದರೆ ರೋಗ ಪ್ರಾರಂಭವಾಗಿ ಇಡೀ ಬೆಳೆಯನ್ನೇ ಆಹುತಿ ತೆಗೆದುಕೊಳ್ಳುತ್ತದೆ. ಸಾಮಾನ್ಯವಾಗಿ ಲೇಟ್‌ಬ್ಲೈಟ್ ರೋಗ ಸಸ್ಯದಲ್ಲಿ ಗೆಡ್ಡೆ ಬಿಡಲು ಪ್ರಾರಂಭವಾದ ಮೇಲೆ ಬರುತ್ತದೆ. ಮೊದಲು ಎಲೆಗಳ ಮೇಲೆ ಸಣ್ಣ ಕಂದುಬಣ್ಣದ ಮಚ್ಚೆಗಳು ಕಾಣಿಸಿಕೊಂಡು ಕ್ರಮೇಣ ಇವು ಅಗಲವಾಗಿ ಕಪ್ಪು ಬಣ್ಣಕ್ಕೆ ತಿರುಗಿ ಎಲೆ, ತೊಟ್ಟು, ಕಾಂಡ ಮತ್ತು ಗೆಡ್ಡೆಗಳಿಗೂ ಹರಡುತ್ತವೆ. ರೋಗ ಕಂಡ ಒಂದೆರಡು ದಿವಸಗಳಲ್ಲಿ ತೋಟದ ಬೆಳೆಯೆಲ್ಲ ಕುಸಿದು ಬೀಳುತ್ತದೆ. ಗೆಡ್ಡೆಗಳಲ್ಲಿ ಕಪ್ಪು ಮಚ್ಚೆಗಳಾಗಿ ಕೊಳೆತು ಹೋಗುತ್ತವೆ. ಈ ರೋಗವನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು : ರೋಗವಿಲ್ಲದ ಬಿತ್ತನೆಯನ್ನು ನೆಡಬೇಕು. ಮುನ್ನೆಚ್ಚರಿಕೆಯ ಕ್ರಮವಾಗಿ ಎರಡು ವಾರಗಳಿಗೆ ಒಂದು ಸಾರಿ ಶೇ.1 ಇರುವ ಬೋರ್ಡೋದ್ರಾವಣವನ್ನು ಸಿಂಪಡಿಸಬೇಕು. ರೋಗದ ಸೂಚನೆ ಕಂಡ ಕೂಡಲೇ ರೋಗಪೀಡಿತ ಸಸ್ಯಗಳನ್ನು ಕಿತ್ತು ಸುಟ್ಟು ಹಾಕಬೇಕು.

ಬಂಗಡಿ ರೋಗ: ಇದು ಬ್ಯಾಕ್ಟೀರಿಯಾದಿಂದ ಬರುತ್ತದೆ. ಇವು ಗೆಡ್ಡೆಯ ಒಳಭಾಗದಲ್ಲಿ ಸೇರಿಕೊಂಡು ಸರಿಯಾದ ಪರಿಸ್ಥಿತಿ ದೊರಕಿದಾಗ ಸಂತಾನೋತ್ಪತ್ತಿ ಮಾಡಿ ಗೆಡ್ಡೆಗಳು ಕೊಳೆಯುವಂತೆ ಮಾಡುತ್ತವೆ. ಇದರಿಂದ ರೋಗಪೀಡಿತ ಸಸ್ಯ ಸತ್ತು ಹೋಗುತ್ತದೆ. ಈ ರೋಗವನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು. ಶುದ್ಧವಾದ ಬಿತ್ತನೆಯನ್ನು ನೆಡಬೇಕು. ಕತ್ತರಿಸುವ ಚಾಕನ್ನು ಆಗಾಗ ಅಗಲಾಲ ದ್ರಾವಣದಲ್ಲಿ ಅದ್ದಿ ಬಿತ್ತನೆ ಆಲೂಗೆಡ್ಡೆ ಕತ್ತರಿಸಬೇಕು. ರೋಗ ಸೂಚನೆ ಕಂಡ ಕೂಡಲೆ ರೋಗಪೀಡಿತ ಸಸ್ಯವನ್ನು ಸುಟ್ಟುಹಾಕಬೇಕು.

ನಂಜು ರೋಗ : ಇದು ಹೇನುಗಳಿಂದ ಹರಡುತ್ತದೆ. ನಂಜುಗಳು ಸಸ್ಯವನ್ನು ಸೇರಿದ ಕೂಡಲೆ ಎಲೆಗಳು ಬಣ್ಣವಿಲ್ಲದಂತಾಗಿ ದಪ್ಪವಾಗಿ ಒರಟಾಗಿ ಬಟ್ಟಲಿನ ಆಕಾರವನ್ನು ತಾಳುತ್ತವೆ. ಸಸ್ಯಗಳ ಬೆಳವಣಿಗೆ ನಿಂತುಹೋಗುತ್ತದೆ. ನಂಜುರೋಗ ಬಂದ ಸಸ್ಯ ಗೆಡ್ಡೆ ಬಿಡುವುದಿಲ್ಲ.

*

**ಆಲೂರು:** ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಪೂರ್ವ ಭಾಗದಲ್ಲಿರುವ ಒಂದು ತಾಲ್ಲೂಕು ಮತ್ತು ಮುಖ್ಯ ಪಟ್ಟಣ. 1876–78ರಲ್ಲಿ ಕ್ಷಾಮ ಪರಿಸ್ಥಿತಿ ಉಂಟಾಗಿದ್ದಾಗ ಇತರ ತಾಲ್ಲೂಕುಗಳಿಗಿಂತಲೂ ಹೆಚ್ಚಿನ ತೊಂದರೆಯನ್ನು ಅನುಭವಿಸಿತು. ಈ ತಾಲ್ಲೂಕಿನ ಜನಸಂಖ್ಯೆ 86,131 (2001). ಪಟ್ಟಣದ ಜನಸಂಖ್ಯೆ 6,113 (2001). ತಾಲ್ಲೂಕಿನಲ್ಲಿ ಸಾಕಷ್ಟು ವ್ಯವಸಾಯ ಯೋಗ್ಯವಾದ ಪ್ರದೇಶಗಳಿದ್ದು ಶೇ.27 ಕರಿಮಣ್ಣಿನ ಭೂಮಿಯಿದೆ. ಜೋಳ, ಮತ್ತು ಹತ್ತಿ ಇಲ್ಲಿಯ ಮುಖ್ಯ ಬೆಳೆಗಳು. ಬೇಸಾಯಕ್ಕೆ ಮಳೆಯ ನೀರೇ ಆಧಾರ. ಕಾಡುಭಾಗ ಬಹಳ ಕಡಿಮೆ. ಮಳೆ ಸರಿಯಾಗಿ ಬೀಳದ ವರ್ಷಗಳಲ್ಲಿ ನೀರಿನ ಅಭಾವ ಪರಿಸ್ಥಿತಿ ತಲೆದೋರುವುದು ಸಾಮಾನ್ಯ. (ಎಂ.ಎಸ್.)

**ಆಲೆಮನೆ:** ಆಲೆ ಎಂದರೆ ಕಬ್ಬಿನ ಗಾಣ. ಆಲೆಮನೆ ಎಂದರೆ ಕಬ್ಬನ್ನು ಹಿಂಡಿ ಬೆಲ್ಲ ಮಾಡುವ ಜಾಗ. ಆಲೆಮನೆಗೆ ಹೋದರೆ ಅಣ್ಣ ಇರಬೇಕು : ಅಡಿಗೆಮನೆಗೆ ಹೋದರೆ ಅಕ್ಕ ಇರಬೇಕು ಎಂಬ ಗಾದೆಯಿಂದ ಅದೊಂದು ಒಂದು ತಾತ್ಕಾಲಿಕ ಮನೆ ಎಂಬುದು ಸಾಬೀತಾಗುತ್ತದೆ. ಒಂದು ಮನೆಯ ಜನಗಳಲ್ಲಿ ತಮ್ಮ ಬದುಕಿನ ಬಗ್ಗೆ ಎಷ್ಟು ಮುತುವರ್ಜಿ, ಪರಸ್ಪರ ಸಹಕಾರ ಮನೋಭಾವನೆ ಇರಬೇಕೋ ಅಷ್ಟು ಇಲ್ಲಿಯೂ ಅಗತ್ಯ ಎಂಬುದನ್ನು ರುಜುವಾತುಪಡಿಸುತ್ತದೆ. ಆಲೆ ಇಲ್ಲದ ಊರಿಗೆ ಇಪ್ಪೆ ಹೂವೇ ಸಕ್ಕರೆ ಎಂಬ ಗಾದೆ ಆಲೆಮನೆಯ ಸಿಹಿ ವಾತಾವರಣವನ್ನು ಬಣ್ಣಿಸುತ್ತದೆ.

ಜನಪದ ಜೀವನದಲ್ಲಿ ಕಬ್ಬು ಬೆಳೆಯುವುದು, ಅದನ್ನು ಮುರಿದು ಆಲೆಯಾಡುವುದು, ಬಂದ ಬೆಲ್ಲದಲ್ಲಿ ಮನೆ ಬಳಕೆಗೆ ಬೇಕಾಗುವಷ್ಟನ್ನು ಇಟ್ಟುಕೊಂಡು ಉಳಿದದ್ದನ್ನು ಮಾರುವುದು–ಒಂದು ಲಾಭದಾಯಕ ಉದ್ಯೋಗ ಎನ್ನಬಹುದು: ಸಣ್ಣ ಪ್ರಮಾಣದ ಕೈಗಾರಿಕೆ ಎನ್ನಬಹುದು. ಇಡೀ ವರ್ಷ ಬೆವರನ್ನು ಸುರಿಸಿ ಎದೆಯ ರಕ್ತವನ್ನು ಭೂಮಿತಾಯಿಗೆ ಬಸಿದು ಬೆಳೆದ ಕಬ್ಬನ್ನು ಆಲೆಯಾಡಿ, ಬೆಲ್ಲದಡಿಗೆಯನ್ನು ಕಂಡಾಗ ರೈತರಿಗಾಗುವ ಸಂತೋಷ ಹೇಳತೀರದು. ಏಕೆಂದರೆ ಕಬ್ಬಿನ ಬೆಳೆಗೆ ಹೆಚ್ಚು ದುಡಿಮೆ ಬೇಕು. ಲವಾಜಮೆ ಬೇಕು. ನಿರಂತರ ನಿಗವಿಲ್ಲದೆ ಕಾಟಾಚಾರಕ್ಕೆ ಕೈ ಸೇರುವ ಫಸಲಲ್ಲ ಅದು, ಬಡಪಟ್ಟಿಗೆ ಬರುವ ಬೆಳೆಯಲ್ಲ.

ಆಲೆಯಾಡುವುದರಲ್ಲಿ ಎಲ್ಲ ಕುಳಗಳೂ ಕಡ್ಡಾಯವಾಗಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಆಲೆ ಇಟ್ಟಿರುವ ಮಾಲೀಕರ ಬಳಿಯಿಂದ ಒಟ್ಟು ಆಲೆಯ ಉಪಕರಣಸಮುದಾಯ (ಆಲೆ, ಕೊಪ್ಪರಿಗೆ, ಅಚ್ಚಿನ ಮಣೆ, ಗ್ವಾರೆ, ಚೂಪುಗತ್ತಿ) ತರುವುದು; ಮರದ ನೆರಳಿರುವ ನಿವೇಶನವನ್ನು ಆರಿಸಿ ಸಿದ್ಧಗೊಳಿಸಿ ಒಲೆ, ದರಗ (ಹೊಗೆಹೋಗುವ ಚಿಮಣಿ) ಇತ್ಯಾದಿಗಳನ್ನು ಕಟ್ಟುವುದು; ಕಬ್ಬು ಮುರಿದುಕೊಂಡು ಬರುವುದು; ಆಲೆಗಿಟ್ಟು ಕಬ್ಬು ಹಿಂಡುವುದು; ಕೊಪ್ಪರಿಗೆಗೆ ಹಾಲನ್ನು ಸುರಿದು ಕಾಸಿ ಬೆಲ್ಲ ಮಾಡುವುದು; ಮೂಡೆ ಕಟ್ಟುವುದು–ಮೊದಲಾದ ಕಾರ್ಯಗಳಲ್ಲಿ ಎಲ್ಲರ ಸಹಕಾರ ಇರುತ್ತದೆ. ಒಬ್ಬನ ಹಸುಗೆಯ ಕಬ್ಬು ಮುರಿದು ಆಲೆಯಾಡುವಾಗ ಎಲ್ಲರೂ ಹೇಗೆ ಭಾಗವಹಿಸುತ್ತಾರೋ ಹಾಗೆಯೇ ಒಬ್ಬನು ಅವರೆಲ್ಲರ ಭಾಗದ ಕಬ್ಬು ಮುರಿದು ಆಲೆಯಾಡುವಾಗ ಭಾಗವಹಿಸುತ್ತಾನೆ. ಇದು ತಮ್ಮ ಪಾಲಿನ ಕರ್ತವ್ಯ ಎಂಬ ಭಾವನೆ ಇರುತ್ತದೆ. ಸಹಕಾರ ಪದ್ಧತಿಯ ಉತ್ತಮ ಮಾದರಿಯನ್ನಿಲ್ಲಿ ಕಾಣಬಹುದು.

ಮೊದಲು ಮರದಾಲೆ ಬಳಕೆಯಲ್ಲಿತ್ತು. ಕಬ್ಬನ್ನು ಹಿಂಡುವ ಮಂತಿಗೆ ಹಲ್ಲು ಇರಲಿಲ್ಲ. ಆದ್ದರಿಂದ ಕಬ್ಬನ್ನು ಅದು ಚೆನ್ನಾಗಿ ಒಳಕ್ಕೆ ಎಳೆದುಕೊಳ್ಳುತ್ತಿರಲಿಲ್ಲ. ಕಾಲಕ್ರಮೇಣ ಮರದ ಯಾವ ಮುಟ್ಟೂ ಇಲ್ಲದ ಬರಿಯ ಲೋಹ ಆಲೆ ಬಳಕೆಗೆ ಬಂತು. ಅದರ ಮಂತಿಗೆ ಹಲ್ಲು ಇರುವುದರಿಂದ ಕಬ್ಬು ಕೊಡುವುದೇ ತಡ ಹಿಡಿದುಕೊಂಡು ಬಿಡುತ್ತದೆ. ಈಗ ವಿದ್ಯುತ್ ಚಾಲಿತ ಆಲೆಗಳು ಬಂದಿರುವುದರಿಂದ ಗಾಣಕ್ಕೆ ಎತ್ತು ಕಟ್ಟಬೇಕಾದ ಪ್ರಮೇಯವಿಲ್ಲ. ಜನಗಳ ಮತ್ತು ದನಗಳ ಶ್ರಮ ಕಡಿಮೆಯಾದಂತಾಗಿದೆ.

ಅಷ್ಟೇ ಅಲ್ಲದೆ ಮೊದಮೊದಲು ಒಂದೇ ಒಲೆ. ಅದರ ಮೇಲೆ ಹಾಲು ಕಾಯಬೇಕು. ಪಾಕವನ್ನು ಅಚ್ಚಿನಮಣೆಗೆ ಹುಯ್ಯುವವರೆಗೂ ಉಳಿದ ಕಾರ್ಯ ಸ್ಥಗಿತ. ಅದೂ ಅಲ್ಲದೆ ಆಗ ಹಾಲು ಕಾಯಿಸುತ್ತಿದ್ದುದು ಸೌದೆಯಿಂದ. ಆಲೆಮನೆ ಬೀಳುವ ಅವಧಿಗೆ ಮುಂಚಿನಿಂದ ಸೌದೆ ಒದಗಿಸಿಕೊಳ್ಳುವುದರಲ್ಲಿ ನಿರತರಾಗಬೇಕಾಗಿತ್ತು. ಅದು ತುಂಬ ಕಷ್ಟದ ಕೆಲಸವಾಗಿತ್ತು. ಇತ್ತೀಚೆಗೆ ಕೇವಲ ಕಬ್ಬಿನ ತರಗು ಮತ್ತು ಸಿಪ್ಪೆಯಿಂದಲೇ ಹಾಲನ್ನು ಕಾಯಿಸುತ್ತಾರೆ. ಅದಕ್ಕೆ ಮಾರ್ಪಟ್ಟ ಒಲೆಯ ಮಾದರಿಯೇ ಕಾರಣ. ಸೌದೆ ಒಲೆಯ ಒಂದೇ ಒಂದು ಕಡೆಯ ಕಂಡಿಯಿಂದ ಸೌದೆ ಹಾಕುತ್ತಿದ್ದರು : ಮತ್ತೊಂದು ಕಡೆಯ ಕಂಡಿಯಿಂದ ಬೂದಿ ಎಳೆಯುತ್ತಿದ್ದರು. ಆದರೆ ಈಗ ದರಗದ (ಚಿಮಣಿ) ಒಲೆಯನ್ನು ಹಾಕುತ್ತಾರೆ. ಸಾಮಾನ್ಯವಾಗಿ ಅಂಥ ಎರಡು ಒಲೆಗಳಿರುತ್ತವೆ. ಹೊಗೆ ಹೋಗಲು ದರಗ ಇರುತ್ತದೆ. ಒಲೆಗೆ ತರಗು, ಸಿಪ್ಪೆ ಇಡುವ ಕಡೆ ಕೆಳಗೆ ಕಂದಕವನ್ನು ಮಾಡಿರುವುದರಿಂದ ಬೂದಿ ತಾನಾಗಿಯೇ ಕೆಳಕ್ಕೆ ಬೀಳುತ್ತದೆ. ಆದ್ದರಿಂದ ಸೌದೆ ಕಡಿದು ಜಮಾಯಿಸಿಕೊಳ್ಳುವ ತಾಪತ್ರಯ ಹೋಗಿ ಕೇವಲ ಕಬ್ಬಿನ ತರಗುಸಿಪ್ಪೆಯಿಂದಲೇ ಬೆಲ್ಲ ಬೇಯಿಸುವ ಸೌಲಭ್ಯ ಒದಗಿದೆ.

ಕಬ್ಬಿನ ತೋಟದಿಂದ ಪ್ರತಿಯೊಂದು ಕುಳವೂ ಕಬ್ಬನ್ನು ಮುರಿದು ತಂದು ಆಲೆಮನೆಯಲ್ಲಿ ರಾಶಿ ಹಾಕುತ್ತಾರೆ. ಸರದಿಯ ಪ್ರಕಾರ ಪ್ರತಿಯೊಂದು ಕುಳವೂ ಗಾಣಕ್ಕೆ ಅವರವರ ಎತ್ತುಗಳನ್ನು ಕಟ್ಟಿ, ನಿಗದಿಯಾದಷ್ಟು ಡಬ್ಬ ಹಾಲು ಬರುವವರೆಗೂ ಕಬ್ಬು ಹಿಂಡಿ ಕೊಪ್ಪರಿಗೆಗೆ ಹುಯ್ಯುತ್ತಾರೆ. ಎರಡು ಕೊಪ್ಪರಿಗೆಗಳಲ್ಲೂ ಹಾಲು ಕಾಯುತ್ತಿರುತ್ತದೆ. ಮೇಲಿನ ಒಲೆಗೆ ಅಷ್ಟು ಹೆಚ್ಚು ಉರಿ ತಾಕದಿರುವುದರಿಂದ ಆ ಕೊಪ್ಪರಿಗೆಯ ಹಾಲು ಅಷ್ಟು ಬೇಗ ಕಾಯುವುದಿಲ್ಲ. ಆದರೆ ಮೊದಲನೆಯ ಒಲೆಯ ಮೇಲೆ ಹಾಲು ಬೇಗ ಕಾಯುತ್ತದೆ. ಹಾಲು ಕಾದಾಗ ಮೇಲುಗಡೆ ಮಡ್ಡಿ ಬರುತ್ತದೆ. ಅದನ್ನು ಜಿಬ್ಬಲಿನಿಂದ ಗೋರಿ ಹಾಕುತ್ತಾರೆ. ಕಾದ ಹಾಲಿಗೆ ಹೆಬ್ಬೆರಳು ಗಾತ್ರದ ಹೆಪ್ಪನ್ನು (ಸುಣ್ಣವನ್ನು) ಹಾಕುತ್ತಾರೆ. ಸೊನೆ ನೆಲದ ತ್ರಾಣವನ್ನು ಅವಲಂಬಿಸಿರುತ್ತವೆ. ಮೊದಲು ದೊಡ್ಡ ಉಕ್ಕಲು ಕೊಪ್ಪರಿಗೆಯ ಕಂಠದವರೆಗೂ ಬರುತ್ತದೆ. ಆಮೇಲೆ ತಳಕ್ಕೆ ಇಳಿದುಹೋಗುತ್ತದೆ. ಹಾಗೇ ಇನ್ನೂ ಉರಿಯನ್ನು ಹಾಕುತ್ತಿದ್ದರೆ ಕಾದು ಕಾದು ಸ್ವಲ್ಪ ಕೆಂಪು ಬಣ್ಣಕ್ಕೆ ತಿರುಗಿದ ಪಾಕ ಮತ್ತೆ ಕಂಠದವರೆಗೂ ಉಕ್ಕುಬರದೆ ತಳದಲ್ಲೇ ಸಣ್ಣುಕ್ಕಲು ಬರುತ್ತದೆ. ಅದಕ್ಕೆ ಗೆಜ್ಜೆಯುಕ್ಕಲು ಎಂದೂ ಕರೆಯುತ್ತಾರೆ. ಬೆಲ್ಲ ಬೇಯಿಸುವುದರಲ್ಲಿ ನಿಷ್ಣಾತವಾದ ರೈತ ಕೈಯನ್ನು ನೀರಲ್ಲಿ ಅದ್ದಿ ಕುದಿಯುವ ಪಾಕವನ್ನು ಸರಕ್ಕನೆ ಬೆರಳಲ್ಲಿ ತೆಗೆದುಕೊಂಡು ನೀರಿನಲ್ಲಿ ಹಾಕಿ ಹಿಸುಕಿ ನೋಡುತ್ತಾನೆ. ಎಳಾದ (ಎಳೆಯ+ಹದ) ಆಗಿದ್ದರೆ ಅದು ಹರಿದುಕೊಂಡು ಹೋಗುತ್ತದೆ. ಸರಿಯಾದ ಹದವಿದ್ದರೆ ನೀರಿಗೆ ಹಾಕಿ ಹಿಸುಕಿದ ಕ್ಷಣ ಗಟ್ಟಿಗಾಗಿ ಬಿಡುತ್ತದೆ. ಕೂಡಲೇ ತರದೂದಿನಿಂದ ತಲಾತಟ್ಟಿಗೆ ಓಡಿಬಂದು ಕೊಪ್ಪರಿಗೆಯ ಬಳೆಗಳಿಗೆ ದೇವಗೆ (ಬೊಂಬು) ತೂರಿಸಿ ಕೆಳಕ್ಕಿಳಿಸಿ ಮತ್ತೊಂದು ಕೊಪ್ಪರಿಗೆಗೆ ಬಗ್ಗಿಸುತ್ತಾರೆ. ಆ ಕೊಪ್ಪರಿಗೆಯನ್ನು ಯಥಾಪ್ರಕಾರ ಒಲೆಯ ಮೇಲಿಟ್ಟು ಮೇಲಿನ ಒಲೆಯ ಮೇಲೆ ಕಾದಿರುವ ಹಾಲನ್ನು ಅದಕ್ಕೆ ಹುಯ್ಯುತ್ತಾರೆ. ಈ ಕಡೆ ಗ್ವಾರೆಯನ್ನು (ಗೋರೆ) ಆಡಿಸುತ್ತಾ ಪಾಕ ಆರಿಸುತ್ತಾರೆ. ಆಮೇಲೆ ಅಚ್ಚಿನ ಮಣೆಗೆ ಅದನ್ನು ಬಗ್ಗಿಸುತ್ತಾರೆ. ಚೂಪುಗತ್ತಿಯಿಂದ ಕೊಪ್ಪರಿಗೆಗೆ ಅಂಟಿರುವ ಪಾಕವನ್ನು ಹೆರೆದು ಹಾಕುತ್ತಾರೆ. ಇನ್ನೊಂದು ಒಲೆ (ಅಡಿಗೆ) ಬರುವಷ್ಟರಲ್ಲಿ ಅಚ್ಚಿನ ಮಣೆಯನ್ನು ದಬ್ಬಾಕುತ್ತಾರೆ. ಮೇಲಿನಿಂದ ಹಾರೆಕೋಲಿನಿಂದ ತೆಗೆದುಕೊಂಡು ಕುಟ್ಟುತ್ತಾರೆ. ಅಚ್ಚುಗಳೆಲ್ಲ ಕೆಳಗೆ ಬೀಳುತ್ತವೆ. ಬಿಡುವಿದ್ದ ವೇಳೆಯಲ್ಲಿ ಕೆಳಗೆ ಎರಡು ಕಟ್ಟು ಹಾಕಿ ಅದರ ಮೇಲೆ ಕಬ್ಬಿನ ಗರಿಯನ್ನು ಹಾಸಿ, ಅಚ್ಚುಗಳನ್ನು ಇಟ್ಟು ಮೂಡೆ ಕಟ್ಟುತ್ತಾರೆ. ಇದಕ್ಕೆ ಪೆಂಡಿ ಎಂದೂ ಕರೆಯುತ್ತಾರೆ. ಒಂದೊಂದು ಮೂಡೆಯಲ್ಲಿ ಐವತ್ತು ಅಥವಾ ಐವತ್ತನಾಲ್ಕು ಅಚ್ಚುಗಳಿರುತ್ತವೆ. ಇಂಥ ಎರಡು ಮೂಡೆಗಳಿಗೆ ಒಂದು ಅಡುಗೆ ಬೆಲ್ಲ ಎನ್ನುತ್ತಾರೆ. ತಮ್ಮ ತಮ್ಮ ಹಸುಗೆಯಲ್ಲಿ ಎಷ್ಟು ಅಡುಗೆ ಬೆಲ್ಲವಾಯಿತು ಎಂಬುದರ ಮೇಲೆ ಅವರ ದುಡಿಮೆಯ ಸಾರ್ಥಕತೆ ಅಥವಾ ಅಸಾರ್ಥಕತೆ ನಿಗದಿಯಾಗುತ್ತದೆ. ಸಣ್ಣ ಮತ್ತು ದೊಡ್ಡ ಪ್ರಮಾಣದಲ್ಲಿ ಬೆಲ್ಲವನ್ನು ಅಚ್ಚು ಹುಯ್ಯುವಂತೆ ಉಂಡೆಗಟ್ಟುವ ಪದ್ಧತಿಯೂ ಉಂಟು. ಇನ್ನು ಕೆಲವು ಬಾರಿ ಜೋನಿ ಬೆಲ್ಲಮಾಡಿ ಡಬ್ಬ ಅಥವಾ ಮಡಿಕೆಯಲ್ಲಿ ತುಂಬುತ್ತಾರೆ.

ಬೆಲ್ಲದ ಇನ್ನು ಕೆಲವು ಮಾದರಿಗಳು ಹೀಗಿವೆ: ತಟ್ಟೆ ಬೆಲ್ಲ, ಆರತಿ ತಟ್ಟೆಗೆ ಪಾಕವನ್ನು ಬಿಟ್ಟು ಅದಕ್ಕೆ ಕೊಬ್ಬರಿತುರಿ, ಕಡಲೆ, ಗಸೆಗಸೆ, ಏಲಕ್ಕಿಪುಡಿ ಮುಂತಾದುವುಗಳನ್ನು ಉದುರಿಸುತ್ತಾರೆ. ಆರಿದ ಮೇಲೆ ತಟ್ಟೆಯಿಂದ ಅದನ್ನು ಎಬ್ಬುತ್ತಾರೆ. ಅದು ತಿನ್ನಲು ತುಂಬ ರುಚಿಯಾಗಿರುತ್ತದೆ. ಚಿಟ್ಟಚ್ಚು : ದೊಡ್ಡಚ್ಚಿನ ಮಣೆಗೆ ಬದಲಾಗಿ ಚಿಟ್ಟಚ್ಚಿನ ಮಣೆ ಇರುತ್ತದೆ. ಮದುವೆ ಮುಂಜಿ ಇವುಗಳಲ್ಲಿ ಹೆಂಗಸರಿಗೆ ಮಡಿಲುದುಂಬುವಾಗ ಬೆಲ್ಲದ ಅಚ್ಚನ್ನು ಇಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಚಿಟ್ಟಚ್ಚಿನ ಮಣೆಗೆ ಪಾಕ ಹೊಯ್ದು ಚಿಟ್ಟಚ್ಚುಗಳನ್ನು ಮಾಡಿಕೊಳ್ಳುತ್ತಾರೆ. ಇನ್ನು ಕೆಲವು ಕಡೆ ಕಾಕಂಬಿ ಬೆಲ್ಲವನ್ನು ತಯಾರಿಸುತ್ತಾರೆ. ಇದನ್ನು ತಯಾರಿಸುವ ವಿಧಾನ ಈ ರೀತಿ ಇದೆ: ಬೆಲ್ಲದ ಹದಕ್ಕೆ ಬರುವ ಮುನ್ನ ಪಾಕವನ್ನು ಹೊಸ ಮಡಕೆಗಳಿಗೆ ಹಾಕಿ ಕೆಲವು ದಿನಗಳು ಬಿಡುತ್ತಾರೆ. ಅನಂತರ ಅದರ ಮೇಲೆ ಗಸಗಸೆಯನ್ನು ಉದುರಿಸುತ್ತಾರೆ. ಗಸಗಸೆಯ ಕಾಳುಗಳು ಮೇಲೆದ್ದು ಕಾಣುವ ಆ ಬೆಲ್ಲ ತಿನ್ನಲು ಬಲು ರುಚಿ. ಹಳ್ಳಿಯ ಕಡೆ ಶಾಲೆಗೆ ಹೋಗುವ ಮಕ್ಕಳ ಜೇಬುಗಳಲ್ಲಿ ಬೆಳಗಿನ ತಿಂಡಿಯಾಗಿ ಇದು ಅಡಗಿರುತ್ತದೆ. ಸಕ್ಕರೆ: ಹೊಸ ಗಡಿಗೆಗೆ ಪಾಕ ಬಗ್ಗಿಸಿ ಅದರ ಬಾಯಿ ಮುಚ್ಚಿ ಮಣ್ಣಿನಿಂದ ಮೆತ್ತೆ ಹಾಕುತ್ತಾರೆ. ಮೂರು ತಿಂಗಳವರೆಗೂ ಅದನ್ನು ತೆಗೆಯುವುದಿಲ್ಲ. ಆಮೇಲೆ ತೆಗೆದಾಗ, ಗಡಿಗೆಗೆ ಬಿಟ್ಟಿದ್ದ ಪಾಕ ಮರಳು ಮರಳಿನಂತೆ ಸಕ್ಕರೆ ಆಗಿರುತ್ತದೆ. ಆದರೆ ಸಕ್ಕರೆಯ ಬಣ್ಣ ಅದಕ್ಕಿರುವುದಿಲ್ಲ. ಕೆಂಪಾಗಿಯೇ ಇರುತ್ತದೆ. ಸಕ್ಕರೆ ಮಾಡುವ ಜನಪದ ವಿಧಾನ ಇದು.

ಆಲೆಮನೆ ನಗೆಹೊಗೆಯ ಕಲಸು ಮೇಲೋಗರ ಎನ್ನಬಹುದು. ಇರುಳು ಹೊತ್ತು ಅಡಿಗೆ ಬಂದಾಗ ಕೆಲವರು ಮಲಗಿರುತ್ತಾರೆ. ಎಬ್ಬಿಸಿದ ಕೂಡಲೇ ಏಳಬೇಕು. ತಡವಾದರೆ ಅಂದು ಯಾರ ಕಬ್ಬಾಡುತ್ತಿರುವುದೋ ಅವರ ಬೈಗುಳಕ್ಕೆ ಗುರಿಯಾಗಬೇಕಾಗುತ್ತದೆ. ಕಾರಣ ಒಲೆಯ ಮೇಲಿನಿಂದ ಕೊಪ್ಪರಿಗೆಯನ್ನು ಇಳಿಸುವುದು ತಡವಾದರೆ ಪಾಕ ಕಂಟು ಹಿಡಿದು ಬೆಲ್ಲ ಕೆಟ್ಟುಹೋಗುತ್ತದೆ. ಆಗ ಆ ಕುಳಕ್ಕೆ ನಷ್ಟವಾಗುತ್ತದೆ. ಆದ್ದರಿಂದ ಆ ಸಮಯದಲ್ಲಿ ಕಂಟಿನ ಮಾತುಗಳೂ ಹೊರಬರುತ್ತವೆ. ಹಾಗೆಯೇ ತಮಾಷೆಯ ಪ್ರಸಂಗಗಳೂ ಇರುತ್ತವೆ. ನಿದ್ರೆಗೆಟ್ಟು ಎಚ್ಚರವಿಲ್ಲದೆ ಮಲಗಿದವನ ಮುಖಕ್ಕೆ ಮಸಿಯಿಂದ ಮೀಸೆ ಇಟ್ಟು ವಿರೂಪ ಗೊಳಿಸುವುದು ; ಎದ್ದ ಮೇಲೆ ಅವನ ಮುಖ ನೋಡಿ ಎಲ್ಲರೂ ನಗುವುದು–ಸರ್ವೇಸಾಮಾನ್ಯ. ಅವನೂ ಸಮಯ ಸಾಧಿಸಿ ಮತ್ತೊಬ್ಬರಿಗೆ ಅದೇ ಕೆಲಸವನ್ನು ಮಾಡುತ್ತಾನೆ, ಅಥವಾ ಹಿಂದೆಯೇ ಮಾಡಿರುತ್ತಾನೆ.

ಆಲೆಮನೆಗಳಲ್ಲಿ ದೆವ್ವದ ಕಾಟ ಜಾಸ್ತಿ ಎಂದು ಜನಗಳ ನಂಬಿಕೆ. ರಾತ್ರಿ ಹೊತ್ತು ಒಂದು ಕಡೆ ಮಲಗಿದ್ದವರನ್ನು ಅವು ಮತ್ತೊಂದು ಕಡೆಗೆ ಹೊತ್ತುಕೊಂಡು ಹೋಗಿ ಮಲಗಿಸುತ್ತವೆ ಎಂದು ಜನ ಹೇಳುವುದುಂಟು. ಆದರೆ ಆಲೆಮನೆಯಲ್ಲಿರುವ ಹಾಸ್ಯಪ್ರಿಯ ಸರೀಕರೇ ಆ ಕೆಲಸವನ್ನು ಮಾಡಲು ಸಾಧ್ಯ ಎಂಬುದನ್ನು ಯಾರೂ ಯೋಚಿಸಿದಂತೆ ಕಾಣುವುದಿಲ್ಲ. ಅದಕ್ಕಾಗಿಯೇ ಕೊಟ್ಟರೆ ಬಿಟ್ಟರೆ ಹೋದಾತ ಆಲೆಮನೆ ದೆವ್ವ ; ಆಲೆಮನೆ ದೆವ್ವ ಹಿಡಿದಂಗೆ ಹಿಡಿದುಬಿಟ್ಟ ಎಂಬ ಗಾದೆಗಳು ದೆವ್ವದ ಕಲ್ಪನೆಗೆ ಪ್ರತಿಮೆಗಳಾಗಿ ಪ್ರಚಲಿತವಾಗಿವೆ ಜನರಲ್ಲಿ.

*

**ಆಲೇಖ್ಯ:** ಯಾವುದಾದರೊಂದು ಹಿನ್ನೆಲೆಯಲ್ಲಿ ಸರಳವಾಗಿ ಅಥವಾ ಸಂಕೀರ್ಣವಾಗಿ ಗುರುತು ಮಾಡಿಕೊಂಡ ಮಾನಸ ಪ್ರತಿಬಿಂಬದ ಪ್ರತಿಕೃತಿ (ಡಿಸೈನ್), ಕಲಾವಿದರು ವರ್ಣಸಂಪನ್ನವಾದ ಜಲ ಅಥವಾ ತೈಲಚಿತ್ರಗಳನ್ನು ಆರಂಭಿಸುವ ಮುನ್ನ ಹೀಗೆ ಸ್ಥೂಲವಾಗಿ ರೇಖಾಮಯವಾದ ಆಲೇಖ್ಯವೊಂದನ್ನು ಸಿದ್ಧಮಾಡುವ ಪರಿಪಾಠವಿದೆ. ಇಂಥ ಆಲೇಖ್ಯಗಳಿಗೆ ಪೂರ್ವಸಿದ್ಧತೆಯ ಪ್ರಯೋಜನವಷ್ಟೇ ಇರುವುದು. ಶಿಲ್ಪ ಅಥವಾ ವಾಸ್ತುವನ್ನು ಸಿದ್ಧಪಡಿಸುವ ಮುನ್ನ ಕೂಡ ಅಂಥ ಆಲೇಖ್ಯಗಳನ್ನು ಬರೆದು ಸಂಪೂರ್ಣವಾದ ಕೃತಿ ಹೇಗೆ ಕಾಣುವುದೆಂದು ನಿರ್ಧರಿಸುತ್ತಾರೆ. ಇದಕ್ಕೆ ಕೆಲವೊಮ್ಮೆ ಸ್ವತಂತ್ರ್ಯವಾದ ಮೌಲ್ಯವುಂಟು. ಕಲಾವಿದರು ತಮ್ಮ ಪರ್ಯಟನೆಯಲ್ಲಿ ತಾವು ಮೆಚ್ಚಿಕೊಂಡ ಪ್ರಸಂಗಗಳನ್ನು, ದೃಶ್ಯಗಳನ್ನು, ವಸ್ತುಗಳನ್ನು ಅನುಭವದ ತರುಣದಲ್ಲೇ ಬರೆದಿಟ್ಟುಕೊಳ್ಳುತ್ತಾರೆ. ಒಡನೆಯೇ ಸಂಪನ್ನವಾದ ಕಲಾಕೃತಿಯನ್ನು ನಿರ್ಮಾಣ ಮಾಡುವ ಸೌಲಭ್ಯವಾಗಲೀ, ಅವಕಾಶವಾಗಲೀ ಇರುವುದಿಲ್ಲ. ಕೇವಲ ಸ್ಮರಣೆಯ ಯದೃಚ್ಛೆಗೆ ಬಿಡುವುದಕ್ಕಿಂತ ಆಗಲೇ ನೆನಪನ್ನು ಉದ್ಬೋಧನಗೊಳಿಸಲು ಮೈಮೇರೆಯ ರೇಖೆಗಳನ್ನು, ನೆರಳು ಬೆಳಕುಗಳ ವಿನ್ಯಾಸವನ್ನು ಬರೆದುಕೊಳ್ಳುತ್ತಾರೆ. ಮುಂದೆ ಬಿಡಿಸುವ ಚಿತ್ರಕ್ಕೆ ಇದು ನಕ್ಷೆಯಂತೆ ಇರುತ್ತದೆ.

ಕಲೆಯ ಇತಿಹಾಸದಲ್ಲಿ ಆಲೇಖ್ಯವೇ ಮೊದಲನೆಯ ಹಂತವೆಂದು ಸ್ಪಷ್ಟವಾಗಿದೆ. ಆದಿಮಾನವರು ಗುಹೆಯ ಒಳಗಡೆ ಬಂಡೆಗಳ ಮೇಲೆ ಚಿತ್ರಗಳನ್ನು ಬಿಡಿಸಿರುವುದು ಆಲೇಖ್ಯದ ಶೈಲಿಯಲ್ಲಿಯೇ ಇವೆ. ಆದರೆ ಇವನ್ನು ಸಂಪೂರ್ಣ ಮಾಡುವ ಉದ್ದೇಶವಾಗಲೀ ಇವುಗಳ ಆಧಾರದ ಮೇಲೆ ಸಂಪನ್ನವಾದ ಚಿತ್ರಗಳನ್ನು ಸಿದ್ಧ ಮಾಡುವ ಆಕಾಂಕ್ಷೆಯಾಗಲೀ ಇರುವ ಸಂಭವವಿಲ್ಲ. ಇಂಥ ಆಲೇಖ್ಯವನ್ನು ಸದ್ಯಸ್ವರೂಪದ ಅಭಿವ್ಯಕ್ತಿ ಎಂದು ನಿರ್ದೇಶಿಸುತ್ತಾರೆ. ಮನೋಭಿತ್ತಿಯಲ್ಲಿ ಮೂಡಿ ಬಂದ ಬಿಂಬವನ್ನು ಬಾಹ್ಯ ವ್ಯವಧಾನದಲ್ಲಿ ನಿಲ್ಲಿಸುವುದೇ ಇಲ್ಲಿನ ಆಶಯ. ಇಟಲಿ ಪುನರುಜ್ಜೀವನಯುಗದ ಕಲಾವಿಮರ್ಶಕರು ಆಲೇಖ್ಯವೇ ಕಲಾಸೃಷ್ಟಿಯ ಪರಾಕಾಷ್ಠೆ ಎಂದು ಪರಿಗಣಿಸಿದರು. ಎಂದರೆ ಆಲೇಖ್ಯದಲ್ಲಿಯೇ ಸೌಂದರ್ಯದ ಅಪರೋಕ್ಷಾಭೂತಿ ಅಡಗಿರುತ್ತದೆ. ಈ ಕಾರಣದಿಂದ ಆಲೇಖ್ಯವನ್ನು ಅಸಂಪೂರ್ಣ ಎಂದಾಗಲೀ ಅಪ್ರಗಲ್ಭ ಎಂದಾಗಲೀ ಕೇವಲ ಆರಂಭಕ್ರಿಯೆ ಎಂದಾಗಲೀ ಹೇಳುವುದು ಸಲ್ಲದು. ಅದು ಕಲಾವಿದನ ಮನಸ್ಸಿನಲ್ಲಿ ಸ್ಫೂರ್ತಿಯಿಂದ ಒದಗಿದ ಅನುಭವದ ಅಭಿವ್ಯಕ್ತಿ.

ಆಲೇಖ್ಯದಲ್ಲಿ ಮೂಡಿಬಂದ ಗೆರೆಗಳು ಚಿತ್ರದ ಮೇಲ್ಮೈ (ಕಾಂಟೂರ್) ಆಗಿ ಪರಿಣಮಿಸುತ್ತದೆ. ದೃಶ್ಯವಸ್ತುವಿನ ವಿವಿಧಮುಖಗಳನ್ನೂ ವಿವಿಧವಿವರಗಳನ್ನೂ ಅನುಭವದ ಬಟ್ಟೆಯಲ್ಲಿ ಇಳಿಸಿ ವಸ್ತುವಿನ ಒಂದು ಸಮಷ್ಟಿಬಿಂಬವನ್ನು ಒದಗಿಸಿ ಕೊಡುವುದೇ ಈ

ಲಿಬಿಯದ ಸಿಬಿಲ್ ದೇವತೆಯ ಚಿತ್ರಣಕ್ಕಾಗಿ ಮೈಕೆಲೇಂಜಲೊ ಕಾಗದದ ಮೇಲೆ ಕೆಂಪುಸೀಮೆ ಸುಣ್ಣದಿಂದ ಸಿದ್ಧಪಡಿಸಿದ ಆಲೇಖ್ಯ. ಮೆಟ್ರೊ ಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್ಸ್‌ನಲ್ಲಿದೆ.

ಮೇಲ್ಮೈಯ ಪ್ರಯೋಜನ. ದೃಗ್ಗೋಚರವಾಗುವ ಭಂಗಿಯನ್ನು ಅವಕಾಶ (ಸ್ಪೇಸ್) ಸಂಬಂಧದಲ್ಲಿ ನಿಲ್ಲಿಸಿ ಅವಿಕಾರ್ಯವಾದ ನೆಲೆಯನ್ನು ವಸ್ತುವಿಗೆ ಇದು ಒದಗಿಸಿಕೊಡುತ್ತದೆ. ಮೂಡಿಸಿದ ರೇಖೆಗಳೆಲ್ಲವೂ ಮೇಲ್ಮೈ ಆಗಿ ಉಳಿಯಲೇಬೇಕೆಂಬ ನಿಯಮವಿಲ್ಲ. ಘನರೂಪ ಬಂದಾಗ ಮೇಲ್ಮೈ ಒದಗಿಬರುತ್ತದೆ. ರೇಖೆಗಳಲ್ಲಿ ಚಲನೆ, ವೇಗ, ನಯ, ಮಾರ್ದವ, ಕಾಠಿನ್ಯ ಮುಂತಾದ ವಿವರಗಳನ್ನು ತೋರಿಸುವುದು ಸಾಧ್ಯ. ಆಕಾರ, ಪ್ರಮಾಣ, ಭಾರಗಳನ್ನು ಮೇಲ್ಮೈ ತೋರಿಸಬೇಕು. ಕಲೆಗಾರನ ಅಗತ್ಯದ ಮೇಲೆ, ಉದ್ದೇಶದ ಮೇಲೆ ಅವನು ಯಾವ ಸಾಮಗ್ರಿಯನ್ನು ಆಲೇಖ್ಯವಾಗಿ ಬಳಸಬೇಕೆಂಬುದು ನಿಶ್ಚಯವಾಗುತ್ತದೆ. ಮೇಲ್ಮೈ ಸ್ಫುಟವಾಗಿರಬೇಕಾದರೆ ರೇಖೆಗಳನ್ನು ಲೆಕ್ಕಣಿಕೆಯಲ್ಲಿ ಕರಿಶಾಯಿಯಿಂದ ಮೂಡಿಸುತ್ತಾರೆ. ವರ್ಣಚಿತ್ರಕ್ಕೆ ಪೂರ್ವಭಾವಿಯಾಗಿ ಮಾತ್ರ ಆಲೇಖ್ಯವಿರಬೇಕಾದರೆ ಬಣ್ಣದ ಪೆನ್ಸಿಲ್‌ನಿಂದಲೋ (ಕ್ರೇಯಾನ್) ಬಣ್ಣದ ಇದ್ದಲಿನಿಂದಲೋ ವರ್ಣಚಿತ್ರದ ಕಾಗದ, ಕ್ಯಾನ್ವಸ್, ಗೋಡೆ, ಮರಗಳ ಮೇಲೆ ರೇಖೆಗಳನ್ನು ಬಿಡಿಸಿಕೊಳ್ಳುತ್ತಾರೆ. ಅನಂತರ ವರ್ಣಗಳನ್ನು ಮೂಡಿಸುವಾಗ ಈ ರೇಖೆಗಳು ಮರೆಯಾಗುತ್ತವೆ. 18ನೆಯ ಶತಮಾನದಲ್ಲಿ ಕಟ್ಲ್ ಮೀನಿನಿಂದ ಬರುವ ಬಣ್ಣದಿಂದ ಸಿಪಿಯಾವನ್ನು ತಯಾರಿಸಿ ಅದರಿಂದ ಆಲೇಖ್ಯವನ್ನು ಮಾಡುತ್ತಿದ್ದರು. ಡ್ಯೂರರ್ ಮುಂತಾದ ಪ್ರಸಿದ್ಧ ಕಲಾವಿದರು ನೀಲಿಬಣ್ಣದ ಕಾಗದದ ಮೇಲೆ ಚೀಣೀ ಬಿಳಿಬಣ್ಣವನ್ನು ಉಪಯೋಗಿಸಿ ಕುಂಚದ ಕೊನೆಯಿಂದ ಬಿಡಿಸುತ್ತಿದ್ದರು. 16ನೆಯ ಶತಮಾನದ ಇಟಲಿ ದೇಶದಲ್ಲಿ ಫ್ಲಾರೆನ್ಸ್ ಮತ್ತು ಅಂಬ್ರಿಯ ಕಲೆಗಾರರು ಬೆಳ್ಳಿಕಡ್ಡಿಯಿಂದ ಆಲೇಖ್ಯವನ್ನು ತಯಾರಿಸುತ್ತಿದ್ದರು. ಇದು ಪೂರ್ವಸಿದ್ಧವಾದ ಕಾಗದದ ಮೇಲೆ ಗೆರೆಗಳನ್ನು ಮೂಡಿಸುತ್ತಿತ್ತು. ಚಿತ್ರ ಸಂಪೂರ್ಣವಾದ ಮೇಲೂ ಈ ಗೆರೆಗಳು ಕಾಣಬರುತ್ತಿದ್ದುವು. ಇದನ್ನು ಶಾಯಿಯಲ್ಲಿಯೋ ಇದ್ದಿಲಿನಲ್ಲಿಯೋ ಮುಚ್ಚಿ ಮೇಲ್ಮೈಯಂತೆ ತೋರಿಸುತ್ತಿದ್ದರು. ರ್‍ಯಾಫೆಲ್‌ನ

ಪ್ರವಾಸ ಪುಸ್ತಕದಲ್ಲಿ ಈ ರೀತಿಯ ಆಲೇಖ್ಯಗಳೇ ಇದ್ದುವು. ಸಣ್ಣ ಪ್ರಮಾಣದ ಆಲೇಖ್ಯವನ್ನು ಅವಲಂಬಿಸಿ ಚಿತ್ರಕ್ಕಾಗಿ ದೊಡ್ಡ ಪ್ರಮಾಣದ ಕಾರ್ಟೂನ್‌ಗಳನ್ನು ತಯಾರಿಸುವ ಪದ್ಧತಿಯೂ ಇದೆ. 19ನೆಯ ಶತಮಾನದಿಂದೀಚೆಗೆ ಗ್ರ್ಯಾಫೈಟ್ ಸೀಸದಕಡ್ಡಿಯನ್ನು ಆಲೇಖ್ಯಕ್ಕಾಗಿ ಉಪಯೋಗಿಸುವ ಪರಿಪಾಠ ವಿಶೇಷವಾಗಿ ಬೆಳೆದುಬಂದಿದೆ. ಕಲೆಗಾರನ ಮನೋಧರ್ಮ ಯಾವ ಸಾಮಗ್ರಿಯನ್ನು ಹಿಡಿಯಬೇಕೆಂದು ನಿರ್ಧರಿಸುತ್ತದೆ.

ಕಲಾ ವಿದ್ಯಾರ್ಥಿ ಅಭ್ಯಾಸದ ದೃಷ್ಟಿಯಿಂದ ಆಲೇಖ್ಯಗಳನ್ನು ವಿಶೇಷವಾಗಿ ತಯಾರಿಸುತ್ತಾನೆ. ಇದು ಉದ್ದೇಶ ಸಾಧನೆಗೆಂದು ಅಳವಡಿಸಿಕೊಂಡ ಸಂವಿಧಾನ ಎಂದು ನಿರ್ದೇಶಿಸುತ್ತಾರೆ. ಕೆಲವೊಮ್ಮೆ ಸಂಪನ್ನವಾದ ಚಿತ್ರವೊಂದು ಯಾವ ಯಾವ ಹಂತಗಳಲ್ಲಿ ಹೇಗೆ ವಿಕಾಸಗೊಂಡಿದೆ ಎಂಬುದನ್ನು ವಿವರಿಸಲು ಆಲೇಖ್ಯಗಳು ನೆರವಾಗುತ್ತವೆ. ಕಲಾ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕಲಾವಿದರ ಆಲೇಖ್ಯಗಳನ್ನು ಈ ದೃಷ್ಟಿಯಿಂದ ಅಧ್ಯಯನ ಮಾಡುತ್ತಾರೆ. ಕಲೆಗಾರನೇ ತನ್ನ ಕಲ್ಪನೆಗಳು ಮೂಡಿಬಂದಂತೆ, ಬಿಂಬ ಹೆಚ್ಚು ಹೆಚ್ಚು ಸ್ಪಷ್ಟವಾದಂತೆ ಹಲವಾರು ಆಲೇಖ್ಯಗಳನ್ನು ಸಿದ್ಧಮಾಡುತ್ತಾನೆ. ಕಡೆಯಲ್ಲಿಯೇ ಚಿತ್ರ ಸಂಪನ್ನವಾದಂತೆ ಹಲವಾರು ಆಲೇಖ್ಯಗಳನ್ನು ಸಿದ್ಧಮಾಡುತ್ತಾನೆ. ಕಡೆಯಲ್ಲಿಯೇ ಚಿತ್ರ ಸಂಪನ್ನವಾಗುವುದು. ಕಲೆಗಾರನ ಪ್ರತಿಭೆಯನ್ನು ಅರಿಯಬೇಕಾದರೆ ಈ ಆಲೇಖ್ಯಗಳ ವಿಶ್ಲೇಷಣೆ ಅಗತ್ಯವಾಗುತ್ತದೆ. ಏಕೆಂದರೆ ಆಲೇಖ್ಯಗಳಲ್ಲಿಯೇ ಕಲೆಗಾರನ ಪ್ರತಿಭೆ ಪ್ರಪ್ರಥಮವಾಗಿ ಅಭಿವ್ಯಕ್ತವಾಗುವುದು.

ಇದಲ್ಲದೆ ಮಧ್ಯಕಾಲದ ಯುರೋಪಿನಲ್ಲಿ ಹೆಸರಾಂತ ಕಲೆಗಾರರು ತಮ್ಮ ಚಿತ್ರಗಳು ಸಂಪೂರ್ಣವಾದ ಅನಂತರ ಅವಕ್ಕಾಗಿ ಸಿದ್ಧಪಡಿಸಿಕೊಂಡಿದ್ದ ಆಲೇಖ್ಯಗಳನ್ನು ತಮಗೆ ಆಶ್ರಯ ನೀಡಿದ್ದ ದೊರೆಗೋ ಶ್ರೀಮಂತನಿಗೋ ರಸಿಕನಿಗೋ ಕಾಣಿಕೆಯಾಗಿ ಕೊಡುವ ಸಂಪ್ರದಾಯವಿತ್ತು. ಸುಸಂಸ್ಕೃತನಾದ ನಾಗರಿಕ ಇಂಥ ಆಲೇಖ್ಯಗಳನ್ನು ಸಂಗ್ರಹಿಸಲು ತವಕಪಡುತ್ತಿದ್ದ. ಸಭ್ಯತೆಯ ಲಕ್ಷಣವೆಂದು ಈ ಹವ್ಯಾಸ ಪರಿಗಣಿತವಾಗಿತ್ತು. ಈ ಅಗತ್ಯದಿಂದಾಗಿ ಯುರೋಪ್ ದೇಶದಲ್ಲೂ ಪ್ರಾಚ್ಯದೇಶಗಳಲ್ಲೂ ಆಲೇಖ್ಯ ನಿರ್ಮಾಣವೇ ವೃತ್ತಿಯಾಗಿ ಉಳ್ಳ ಕಲೆಗಾರರಿದ್ದರು. ಪ್ರಾಚೀನ ಕಲೆಗಾರರೆಂದು ಹಲವಾರು ಮೋಸಗಾರರು ಆಲೇಖ್ಯದ ಪ್ರತಿಕೃತಿಗಳನ್ನು ಮಾಡಿ ಮಾರುವ ವ್ಯವಹಾರವೂ ತಲೆದೋರಿತು.

ಆಲೇಖ್ಯದ ಉಗಮ ಹೇಗೆ ಆಯಿತೆಂಬುದು ಮಾನವಶಾಸ್ತ್ರ ಪರಿಣತರಿಗೆ ಜಿಜ್ಞಾಸೆಯ ವಿಷಯವಾಗಿದೆ. ಆದಿಮಾನವರು ಬಂಡೆಗಳ ಮೇಲೆ, ಆದಿವಾಸಿಗಳು ನೆಲದ ಮೇಲೆ ಪ್ರಾಣಿಗಳ, ಮನುಷ್ಯರ ಆಕಾರದಲ್ಲಿ ಗೆರೆಗಳನ್ನು ಮೂಡಿಸಿ ಆಲೇಖ್ಯವನ್ನು ಸಿದ್ಧಪಡಿಸಿದರೆ ಈ ಪ್ರವೃತ್ತಿಯ ಮೂಲ ಏನು? ಇವರು ಕಲಾವಿಲಾಸಿಗಳಾಗಿದ್ದರೆನ್ನಲು ಅಥವಾ ಕಲೆ ಆ ಕಾಲದಲ್ಲಿ ಸಂಪನ್ನವಾದ ಉದ್ಯಮವಾಗಿದ್ದಿತೆನ್ನಲು ಆಧಾರ ಸಾಲದು. ಐಂದ್ರಜಾಲಿಕ ಉದ್ದೇಶಗಳನ್ನು ಕೆಲವರು ಆರೋಪಿಸುತ್ತಾರೆ. ಮತ್ತೆ ಕೆಲವರು ಬಣ್ಣ, ರೂಪ, ಸಮಭಂಗ ಇವುಗಳನ್ನು ಆದಿಮಾನವ ದೃಶ್ಯಪ್ರಸಂಗಗಳಲ್ಲಿ ನೋಡಿ ಸುಖಪಟ್ಟು ಅವನ್ನು ಉಳಿಸಲು ಆಲೇಖ್ಯಗಳನ್ನು ಸಿದ್ಧ ಮಾಡಿದನೆನ್ನುತ್ತಾರೆ. ಪ್ರಕೃತಿಯ ವಸ್ತುಗಳಂತೆಯೇ ಪ್ರಸಂಗಗಳನ್ನು ಅನುಕರಿಸಿಯೇ ಆದಿಯ ಆಲೇಖ್ಯಗಳಿರುವುದು ಸ್ವಾರಸ್ಯವಾಗಿದೆ. ಆದಿವಾಸಿ ಜನಾಂಗಗಳು ಎಲ್ಲೇ ಇರಲಿ, ಯಾವುದೇ ಸಂಸ್ಕೃತಿಯಿಂದ ಪ್ರಭಾವಿತರಾಗಿರಲಿ ಅವರ ಆಲೇಖ್ಯಗಳು ಹೆಚ್ಚು ಕಡಿಮೆ ಒಂದೇ ಬಗೆಯಲ್ಲಿರುವುದೂ ಗಮನಾರ್ಹ. ಈ ವಿವರದಿಂದ ಆಲೇಖ್ಯ ನಿರೂಪಣೆಗೆ ಮೂಲಪ್ರವೃತ್ತಿಯನ್ನು ಹೇಳುತ್ತಾರೆ.

ಈಜಿಪ್ಟ್ ದೇಶದ ಪ್ರಾಚೀನ ಇತಿಹಾಸದಲ್ಲಿ ಹಳೆಯ ಜೇಡಿಮಣ್ಣಿನ ಮುದ್ರಿಕೆಗಳಲ್ಲೂ 'ಪೇಪರಿ' ಸುರುಳಿಗಳಲ್ಲೂ ಕಟ್ಟಡಗಳ ನಕ್ಷೆಯಿರುವುದು ಕಂಡುಬಂದಿದೆ. ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕೆ ಮುನ್ನ ಪೂರ್ವಭಾವಿಯಾಗಿ ಈ ನಕ್ಷೆಗಳನ್ನು ಸಿದ್ಧಮಾಡಿರಬಹುದು. ಸಮಾಧಿಮಂದಿರಗಳಲ್ಲಿ ಭಿತ್ತಿಚಿತ್ರಗಳು ವಿವಿಧ ವರ್ಣರಂಜಿತವಾಗಿ ಬೃಹದಾಕಾರದಲ್ಲಿ ಬಂದಿವೆಯಷ್ಟೆ. ಇವುಗಳ ಬಳಿಯಲ್ಲಿ ಮಡಕೆ ಚೂರುಗಳ ಮೇಲೆ ಸಣ್ಣ ಪ್ರಮಾಣದಲ್ಲಿ ಅದೇ ಚಿತ್ರಗಳ ಸ್ಥೂಲ ವಿವರಗಳು ಇರುವುದು ಸ್ವಾರಸ್ಯವಾದ ವಿವರ. ಇಲ್ಲಿ ಆಲೇಖ್ಯದ ಪ್ರಯೋಜನ ಪೂರ್ವಸಿದ್ಧತೆ, ಪ್ರಯೋಗ, ನೆರವು ನೀಡುವ ವ್ಯವಧಾನ. ಹೀಗೆಯೇ ರೋಮ್ ನಗರದ ನಕ್ಷೆಯನ್ನು ಚಕ್ರವರ್ತಿ ಸೆಪ್ಟಿಮಿಯಸ್ ಸೀವೆರಸ್‌ನ ಕಾಲದಲ್ಲಿ ಹಾಲುಗಲ್ಲಿನ ಮೇಲೆ ಕೊರೆತದಿಂದ ಮೂಡಿಸಿದ್ದುದು ದೊರೆತಿದೆ. ರೋಮನ್ ಶಿಲ್ಪಿಗಳಲ್ಲೂ ಶಿಲ್ಪಕ್ರಿಯೆಯಲ್ಲಿ ಪೂರ್ವಭಾವಿಯಾಗಿ ಆಲೇಖ್ಯಗಳನ್ನು ಬರೆದಿಟ್ಟುಕೊಳ್ಳುತ್ತಿದ್ದ ಪದ್ಧತಿಯಿದ್ದಂತೆ ತಿಳಿದುಬರುತ್ತದೆ. ಇಂಥ ಆಲೇಖ್ಯಗಳೂ ದೊರೆತಿವೆ. ಪ್ರಾಚೀನ ಯುಗದಲ್ಲಿ ಆಲೇಖ್ಯಕ್ಕೂ ವರ್ಣಚಿತ್ರಕ್ಕೂ ಅಷ್ಟಾಗಿ ವ್ಯತ್ಯಾಸವಿರಲಿಲ್ಲ. ವರ್ಣಚಿತ್ರದಲ್ಲೂ ಒಂದೇ ಬಣ್ಣವನ್ನು ಉಪಯೋಗಿಸುವುದೇ ರೂಢಿಯಲ್ಲಿತ್ತು. ಕ್ರೀಟ್ ಮುಂತಾದೆಡೆ ಅರ್ಧಚಿತ್ರವನ್ನು ವರ್ಣರಂಜಿತವನ್ನಾಗಿಯೂ ಉಳಿದ ಭಾಗವನ್ನು ಕೇವಲ ಆಲೇಖ್ಯದಂತೆಯೂ ಬಿಟ್ಟಿರುವ ನಿದರ್ಶನಗಳಿವೆ. ಸಾಮೋಸ್‌ನಲ್ಲಿ ಮರದ ಹಲಗೆಗಳ ಮೇಲೆ ಮೂಡಿಸಿರುವ ಆಲೇಖ್ಯಗಳು ದೊರೆತಿವೆ. ಇವು ಪ್ರಶಕ್ತಪೂರ್ವ 8ಯ ಶತಮಾನದ್ದೆಂದು ಹೇಳುತ್ತಾರೆ. ಪ್ರಶಕ್ತಪೂರ್ವ 5–6ಯ ಶತಮಾನಗಳಿಗೆ ಸೇರಿದ ಹೆಂಚಿನ ಬಕ್ಕರೆಗಳ ಮೇಲೆ ಆಲೇಖ್ಯಗಳಿರುವುದು ಗ್ರೀಸ್ ದೇಶದ ವಿವಿಧ ಸ್ಥಳಗಳಲ್ಲಿ ಕಂಡುಬಂದಿದೆ. ರೋಮ್ ದೇಶದ ಭಿತ್ತಿಚಿತ್ರಗಳು ಆಲೇಖ್ಯದ ಮಾದರಿಯಲ್ಲೇ ಇದ್ದುವು. ಪಾಂಪೇನ್‌ನಲ್ಲಿರುವ ಕೃತಿಗಳು ಜಗದ್ವಿಖ್ಯಾತವಾಗಿವೆ.

ಮಧ್ಯಕಾಲದ ಯುರೋಪಿನಲ್ಲಿ ಆಲೇಖ್ಯವನ್ನು ನೆನಪಿಗೆ ನೆರವಾಗಲೆಂದು ಬಳಸುತ್ತಿದ್ದರು. ಒಂದು ತಲೆಮಾರಿನ ಸಾಂಪ್ರದಾಯಿಕ ಕಲೆಯನ್ನು ಮುಂದಿನ ತಲೆಮಾರಿಗೆ ಉಳಿಸಿಕೊಡಲು ಆಲೇಖ್ಯ ಸರಳವಾದ ಸಂವಿಧಾನವಾಗಿತ್ತು. ಈ ಕಾಲದ ಕಲೆಗಾರರು ಆಲೇಖ್ಯ ಗ್ರಂಥಗಳನ್ನು ಈ ಪ್ರಯೋಜನಗಳಾಗಿ ಸಿದ್ಧಪಡಿಸಿದ್ದುದೇ ಇಂದಿಗೂ ಉಳಿದು ಬಂದಿದೆ. ಈ ಗ್ರಂಥಗಳಲ್ಲಿ ಅತಿಪ್ರಾಚೀನವಾದುದೆಂದರೆ ಅಡೇಮರ್ ಡಿ ಛಬ್ಬನ್ನೆಯ್ಸ್ – 1030ರಲ್ಲಿ ಹಳೆಯ ಮೂರ್ತಿಗಳ ಚಿತ್ರಗಳನ್ನು ಬರೆದಿಟ್ಟಿರುವ ಗ್ರಂಥ. ಇಂಥ ಗ್ರಂಥಗಳು ಹತ್ತಾರು ದೊರೆತಿವೆ. ಇವುಗಳಲ್ಲಿ

ಆಲೇಖ್ಯದ ಆಧಾರದ ಮೇಲೆ ಮೈಕೆಲೇಂಜಲೊ ರೋಮಿನ ಸಿಸ್ಟೈನ್ ಚಾಪೆಲ್‌ನ ಮೇಲ್ಛಾವಣಿಯಲ್ಲಿ ಕಂಡರಿಸಿದ ಸಿಬಿಲ್ ದೇವತೆಯ ಉಬ್ಬು ಚಿತ್ರ.

ಹಳೆಯ ಶಿಲ್ಪಗಳ ರೇಖಾಕೃತಿಗಳು, ಕಟ್ಟಡಗಳಿಗೆ ನಕ್ಷೆ, ಜೀವಂತ ಪ್ರಾಣಿಗಳನ್ನು ನೇರವಾಗಿ ಚಿತ್ರಿಸಿಕೊಂಡಿರುವುದು ಮುಂತಾದುವು ಅಡಕವಾಗಿದೆ. ರಾಬೆರ್ಟೊ ಸಾಲ್ವಿನಿ ಎಂಬ ಪಂಡಿತ ಇವನ್ನು ಅಧ್ಯಯನ ಮಾಡಿದ್ದಾನೆ.

ಮಧ್ಯಯುಗದಲ್ಲಿಯೇ ಬೆಳೆದುಬಂದ ಆಲೇಖ್ಯದ ಇನ್ನೊಂದು ಪ್ರಕಾರವೆಂದರೆ ಕೈಬರಹದ ಪವಿತ್ರಗ್ರಂಥಗಳಲ್ಲಿ ಆಯಾ ಪ್ರಸಂಗಗಳನ್ನು ನಿರ್ದೇಶಿಸುವ ಚಿತ್ರಗಳನ್ನೂ ಬರೆದು ಸೇರಿಸುವ ಪದ್ಧತಿ 9ನೆಯ ಶತಮಾನದ ಅಂತ್ಯ ಭಾಗದಲ್ಲಿ ಈ ಗ್ರಂಥಸ್ಥ ಆಲೇಖ್ಯಗಳು ತುಂಬ ಪ್ರಚಲಿತವಾದುವು. ಈ ಶೈಲಿ ಇಂಗ್ಲೆಂಡ್ ದೇಶವನ್ನು ಮುಟ್ಟಿ (1000) ಅಲ್ಲಿನ ಗ್ರಂಥ ಪ್ರಕಾಶನದ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿತು. ಸುಂದರವಾದ ಕಲಾತ್ಮಕವಾದ ಅಕ್ಷರವಿನ್ಯಾಸದಲ್ಲಿ (ಕ್ಯಾಲಿಗ್ರಫಿ) ಆಲೇಖ್ಯದ ಪಾತ್ರ ವಿಶಿಷ್ಟವಾಯಿತು. ಗ್ರಂಥದ ಒಂದು ಭಾಗದಲ್ಲಿ ಅಕ್ಷರಗಳನ್ನು ಬರೆಯದೆ ಆ ಜಾಗದಲ್ಲಿ ಚಿತ್ರಗಳನ್ನೇ ಬಿಡಿಸುವ ಪದ್ಧತಿ ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಈ ಸುಮಾರಿಗೆ ಪ್ರಚಲಿತವಾದರೂ ಭಾರತೀಯ ಸಂಸ್ಕೃತಿಯ ಆಶ್ರಯದಲ್ಲಿ ಇದು ಇನ್ನೂ ಮೊದಲೇ ಸಿದ್ಧವಾಗಿದ್ದ ಕಲೆಯಾಗಿತ್ತು. ಜೈನರ ಕಲ್ಪಸೂತ್ರಗಳಲ್ಲಿ, ಬೌದ್ಧರ ಪ್ರಜ್ಞಾಪಾರಮಿತಾ ಸೂತ್ರಗಳಲ್ಲಿ, ನೇಪಾಲ, ಟಿಬೆಟ್ ದೇಶಗಳಲ್ಲಿ ರಚಿತವಾದ ತಾಂತ್ರಿಕ ಗ್ರಂಥಗಳಲ್ಲಿ ಈ ಬಗೆಯ ಗೌಣ ಆಲೇಖ್ಯಗಳು ಪ್ರಾಚೀನವಾದುವು. ಯುರೋಪ್‌ನಲ್ಲಿ 14ನೆಯ ಶತಮಾನದ ಪರಾರ್ಧದಲ್ಲಿ ವರ್ಣಚಿತ್ರಗಳಿಗೆ ಪೂರ್ವಭಾವಿಯಾಗಿಯೇ ಬರೆದುಕೊಂಡ ಆಲೇಖ್ಯಗಳ ಬಿಡಿ ಬಿಡಿ ಹಾಳೆಗಳು ದೊರೆತಿವೆ. ಕ್ರಿಸ್ತನ ಮರಣ, ಪುನರುತ್ಥಾನ ಮುಂತಾದ ಪ್ರಸಂಗಗಳನ್ನು ಚರ್ಮಕಾಗದಗಳ ಮೇಲೆ ಸ್ಥೂಲರೇಖೆಗಳಲ್ಲಿ ಬರೆದುಕೊಂಡಿರುವುದು ಇಲ್ಲಿ ಕಾಣುತ್ತದೆ. ಇವನ್ನು ಕಾಂಪೊಸಿಷನಲ್ ಡ್ರ್ಯಾಫ್ಟ್ಸ್ ಎಂದು ಪಂಡಿತರು ನಿರ್ದೇಶಿಸಿದ್ದಾರೆ. ಇವುಗಳಲ್ಲಿ ಕೆಲವು ಹಳೆಯ ಚಿತ್ರಗಳ ಪ್ರತಿಕೃತಿಗಳಷ್ಟೆ. ಒಯೆರೈಲ್ ಎಂಬ ವಿದ್ವಾಂಸ ಈ ಹಾಳೆಗಳನ್ನು

ಕೂಲಂಕಷವಾಗಿ ವಿಶ್ಲೇಷಣೆ ಮಾಡಿದ್ದಾನೆ. ಚಿತ್ರಕಲೆಯಲ್ಲಿ ಆಲೇಖ್ಯದ ಸ್ಥಾನವನ್ನು ಸ್ಪಷ್ಟಪಡಿಸಿದ ಕೀರ್ತಿ ಕ್ರಿಸ್ತಾಬ್ದ 14ನೆಯ ಶತಮಾನದ ಚೆನ್ನಿನೋ ಚೆನ್ನನಿ ಎಂಬ ಬರೆಹಗಾರನದು. ಅವನ ಪ್ರಕಾರ ಆಲೇಖ್ಯ ಪ್ರತಿಭಾಶಾಲಿಯಾದ ಕಲಾವಿದನಿಗೆ ಸಹಜಪ್ರವೃತ್ತಿ, ವಿದ್ಯಾರ್ಥಿಗೆ ಅನಿವಾರ್ಯವಾದ ಅಭ್ಯಾಸ. 1430ರಲ್ಲಿ ಚಿತ್ರಕಲೆಯ ಮೇಲೆ ಗ್ರಂಥವೊಂದನ್ನು ಬರೆದ ಆಲ್ಬರ್ಟಿ ಆಲೇಖ್ಯವನ್ನು ಚಿತ್ರದ ರಚನಾವ್ಯವಸ್ಥೆಗೆ ಸಮನಾದುದೆಂದು ಬಣ್ಣಿಸಿದ. ಚಿತ್ರಕ್ಕಾಗಲೀ ಶಿಲ್ಪಕ್ಕಾಗಲೀ ಇದೇ ಆಧಾರವೆಂದು ಅವನು ಒಪ್ಪಲಿಲ್ಲ. ಆದರೆ 1455ರಲ್ಲಿ ಲೋರೆನ್ಸೊ ಘಿಬರ್ಟಿ ಎಂಬ ವಿದ್ವಾಂಸ ಚಿತ್ರದ ಅಥವಾ ಶಿಲ್ಪದ ಹಿನ್ನೆಲೆಯಲ್ಲಿ ಅಗತ್ಯವಾಗಿ ಇರಬೇಕಾದ ತರ್ಕ, ಭಾವನಾವ್ಯವಸ್ಥೆ ಸಂಕಲ್ಪಗಳು ಆಲೇಖ್ಯದ ರೂಪವನ್ನು ತಳೆಯುವುದೆಂದು ವಾದಿಸಿದ. ಲಿಯೋನಾರ್ಡೋ ಡ ವಿಂಚಿ ತಾನು ನಿಸರ್ಗದಲ್ಲಿ ಅಧ್ಯಯನ ಮಾಡಿದ ವಸ್ತುಗಳನ್ನು ಪ್ರಸಂಗಗಳನ್ನು ಆಲೇಖ್ಯದಲ್ಲಿ ಮೂಡಿಸಿಡುತ್ತಿದ್ದ. ತನ್ನ ನಿರ್ಣಯಗಳನ್ನು ನಿರೂಪಿಸಲು ಆಲೇಖ್ಯವೊಂದು ಸಾಧನ (ಇನ್‌ಸ್ಟ್ರುಮೆಂಟ್). ಅಷ್ಟಲ್ಲದೆ, ಪ್ರಕೃತಿಯಲ್ಲಿನ ಪದಾರ್ಥಗಳನ್ನು ಚಿತ್ತವು ಅಂತರ್ದೃಷ್ಟಿಯಿಂದ ಗ್ರಹಿಸುವಾಗ ಸ್ಥೂಲ ಆಕಾರದ ಹಿನ್ನೆಲೆಯಲ್ಲಿರುವ ರೇಖಾಮಯ ರಚನೆಯನ್ನು ಕಲ್ಪಿಸಿಕೊಳ್ಳುವುದೆಂದೂ ಇದೇ ಆಲೇಖ್ಯದ ಮೂಲವೆಂದೂ ಅವನ ವಾದವಾಗಿತ್ತು. ವೆನಿಸ್‌ನಲ್ಲಿ ಪವೋಲೋ ಪಿನೋ (1548) ಎಂಬುವವ ಚಿತ್ರಕ್ಕೆ ಆಲೇಖ್ಯ, ಕಲ್ಪನೆ, ಬಣ್ಣ ಎಂಬ ಮೂರು ಅಂಗಗಳನ್ನೂ ಹೇಳಿ ಆಲೇಖ್ಯ ಎಂಬುದನ್ನು ನಿರ್ಣಯ, ಮೇಲ್ಮೈ ನಿರೂಪಣೆ, ಸಂವಿಧಾನ, ನಿರ್ದಿಷ್ಟ ದೃಶ್ಯವ್ಯವಸ್ಥೆ ಎಂಬ ನಾಲ್ಕು ವಿಭಾಗಗಳಲ್ಲಿ ವಿವರಿಸಿದ. ನಿರ್ಣಯವೆಂಬುದು ಕಲೆಗಾರನ ಚಿತ್ತಭಿತ್ತಿಯಲ್ಲಿ ಮೂಡಿಬಂದ ಕಲ್ಪಿತಬಿಂಬ. ಲುಡೋವಿಕೊ ಡೋಲ್ಸೆ ಎಂಬುವವ ಆಲೇಖ್ಯವನ್ನು ದೃಶ್ಯವಸ್ತುಗಳಿಗೆ ಆಕೃತಿಯನ್ನು ಒದಗಿಸುವ ರೇಖೆಗಳ ವಿನ್ಯಾಸ ಎಂದು ನಿರ್ದೇಶಿಸಿದ.

ಭೌತವಾಗಿ ನಾಮರೂಪಗಳ ವಿಶ್ವ ಸ್ಪಷ್ಟವಾಗುವ ಮುನ್ನ ಭಗವಂತನ ಕಲ್ಪನಾ ವ್ಯಾಪಾರಕ್ಕೂ ಆಲೇಖ್ಯಕ್ಕೂ ಸಾಮ್ಯವನ್ನು ನಿರೂಪಿಸಿದ ಸಾಹಸ ಆಂತಾನ್ ಫ್ರಾನ್ಸಿಸ್ಕೊ ದೋನಿಯದು (1549). ಆ ಯುಗದ ಅತ್ಯಂತ ಪ್ರತಿಭಾಶಾಲಿ ವಿಮರ್ಶಕ ಹಾಗೂ ಇತಿಹಾಸಕಾರನಾದ ಜಾರ್ಜಿಯೋ ವಸಾರಿ ಆಲೇಖ್ಯ ಬಾಹ್ಯವಸ್ತುವಿನ ಕಲ್ಪಿತಬಿಂಬವೆಂದೂ ಅದರ ಉಗಮಸ್ಥಾನ ಕಲೆಗಾರನ ಬುದ್ಧಿಶಕ್ತಿಯೆಂದೂ ಆದರೆ ಅದರ ಅಭಿವ್ಯಕ್ತಿ ಬುದ್ಧಿಶಕ್ತಿಗೆ ಅಧೀನವಲ್ಲವೆಂದೂ ಈ ಕಲ್ಪಿತಬಿಂಬ ಆಲೇಖ್ಯದ ನೆರವಿನಿಂದ ಮೂರ್ತಸ್ವರೂಪ ತಳೆಯುವುವೆಂದೂ ಹೇಳಿದ. ಫೆಡರಿಗೋ ಜಕಾರಿ ಎಂಬ ನವ್ಯ ಪ್ಲೇಟೋ ಸಿದ್ಧಾಂತ ಪ್ರತಿಪಾದಕ ಆಲೇಖ್ಯದ ಸ್ಫೂರ್ತಿ ಭಗವಂತನಿಂದಲೇ ಮನುಷ್ಯನ ಮನಸ್ಸಿನಲ್ಲಿ ಅವತರಿಸಿದ ಭಾವನೆ ಎಂಬ ವಾದವನ್ನು ಮಂಡಿಸಿದ. ಆಲೇಖ್ಯ ಚಿತ್ರಕಲೆಯ ತಂದೆ ಎಂಬ ಕಲ್ಪನೆ ಪ್ಯಾಸ್ಸರಿಯಿಂದ (1772) ಊರ್ಜಿತವಾಯಿತು. ಗ್ರಂಥ ಬರೆಯುವ ಮುನ್ನ ಗ್ರಂಥಕರ್ತೃ ವಿಷಯಗಳ ಮೇಲೆ ಟಿಪ್ಪಣಿಗಳನ್ನು ಸಿದ್ಧಮಾಡಿಕೊಂಡಂತೆ ಆಲೇಖ್ಯವೂ ಚಿತ್ರ ಸಿದ್ಧವಾಗಲು ನೆರವಾಗುತ್ತದೆ ಎಂದು ವೆನಿಸ್ ನಗರದ ಮಾರ್ಕೋ ಬೋಷಿನಿಯ ವಾದ.

ಈ ಸಿದ್ಧಾಂತಗಳು ಏನೇ ಇರಲಿ, ಫ್ಲಾರೆಂಟೈನ್ ಕಲೆಗಾರರು ಆಲೇಖ್ಯವನ್ನು ಅತಿ ಮುಖ್ಯವಾಗಿ ಬಗೆದು ಜಗದ್ವಿಖ್ಯಾತವಾದ ಆಲೇಖ್ಯಗಳನ್ನು ಸಿದ್ಧಮಾಡಿದರು. ಲೊರೆನ್ಸೊ, ಗಿಲ್ಬರ್ಟಿ, ಏಂಜಲಿಕೊ, ಜನೋಬಿ, ಸ್ಟ್ರೋಜ್ಜಿ, ಬೆನೊಜೊ, ಗೊಜ್ಜೋಲಿ, ಪವೋಲೊ, ಡೊನಟೆಲ್ಲೊ, ಫಿಲಿಪ್ಪೊ ಲಿಪ್ಪಿ, ಆಂಟೋನಿಯೊ, ಪೋಲ್ಲ್ಯುಓಲೊ, ವೆರೋಕ್ಕಿಯೊ, ಡಾಮಿನಿಕೊ, ಘಿರ್ಲಾಂಡಜೋ, ಫ್ರಾನ್ಸಿಸ್ಕೊ ಡಿ ಜಾರ್ಜಿಯೋ – ಮೊದಲಾದ ಕಲಾವಿದರ ಆಲೇಖ್ಯಗಳು ಪಾಶ್ಚಾತ್ಯಕಲೆಯ ಇತಿಹಾಸದಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆದಿವೆ. ಸಾಂಸ್ಕೃತಿಕ ಪುನರುಜ್ಜೀವನದ ಯುಗದಲ್ಲಿ ಮೈದಳೆದ ಜಾಕೊಪೊ ಬೆಲ್ಲಿನಿಯ ಆಲೇಖ್ಯ ಸಂಗ್ರಹ ಸ್ವಾರಸ್ಯವಾಗಿದೆ. 16ನೆಯ ಶತಮಾನದ ಇಟಲಿಯಲ್ಲಿ ಆಲೇಖ್ಯ ಇನ್ನೂ ಹಿರಿಮೆಯ ಸ್ಥಾನವನ್ನು ಪಡೆಯಿತು. ವಿಶ್ವವಿಖ್ಯಾತ ಕಲೆಗಾರನಾದ ಲಿಯೋನಾರ್ಡೋ ಡ ವಿಂಚಿ ಮತ್ತು ಮೈಕೆಲ್ ಏಂಜಿಲೊಗಳ ಮತ್ತು ಇವರ ಅನುಯಾಯಿಗಳ ಆಲೇಖ್ಯಗಳು ವಿಪುಲವಾಗಿವೆ. ರ್‍ಯಾಫೆಲ್, ಪೆರುಜ್ಜಿ, ಬ್ರಮಾನ್ಟೆ, ಟೆಂಟಿರೊಟ್ಟೆ, ವೆರೊನೀಸ್ ಮೊದಲಾದವರು ಈ ಜಾಡನ್ನೇ ಹಿಡಿದು ಆಲೇಖ್ಯದ ವೈಶಿಷ್ಟ್ಯದಿಂದಾಗಿ ಕಲಾಕ್ರಾಂತಿಯನ್ನೇ ಉಂಟುಮಾಡಿದರು.

ಆಧುನಿಕ ಯುಗದಲ್ಲಿ ಆಲೇಖ್ಯದಂತೆಯೇ ಸರಳವಾದ ಚಿತ್ರಗಳನ್ನು ಬಿಡಿಸುವ ಪದ್ಧತಿ ಪ್ರವೃತ್ತವಾಗಿದೆ. ಹೋಮರ್ (1793), ಇಂಗ್ರೆಸ್, ಪೋಹ್ರ್ ಪಾಮರ್ ಮೊದಲಾದವರು ತಮ್ಮ ಚಿತ್ರಗಳನ್ನು ಹೀಗೆಯೇ ರಚಿಸಿದ್ದಾರೆ. ಆಲೇಖ್ಯ ಬರಿಯ ರೇಖಾಮಯವಾಗಿರಬೇಕೆಂದು ಪ್ರಚಲಿತವಾದ ಮತ; ಅಷ್ಟಲ್ಲದೆ ಅದು ಧ್ವನಿಯಂತೆ ಅದರ ವಸ್ತುವನ್ನು ಸೂಚಿಸಬೇಕು. ಆಲೇಖ್ಯದಲ್ಲೇ ಕಲಾಕ್ರಿಯೆ ಸಂಪನ್ನವಾಗಿರದೆ ಅದು ಚಿತ್ರದಲ್ಲಿ ವ್ಯಕ್ತವಾಗುತ್ತದೆ. ಹೀಗೆ ಇದಕ್ಕೆ ಕಾವ್ಯದ ಲಕ್ಷಣಗಳನ್ನು ಹೇಳುವ ಆಧುನಿಕ ವಿಮರ್ಶಕರಿದ್ದಾರೆ. ಆದರೆ ಕೂರ್ಬೆ, ಮಿಲೆ ಮೊದಲಾದವರ ಆಲೇಖ್ಯಗಳು ಅಷ್ಟು ಉನ್ನತಮಟ್ಟದಲ್ಲವೆಂದು ತಜ್ಞರ ಅಭಿಮತ.

ಭಾರತ ದೇಶದಲ್ಲಿ ಆಲೇಖ್ಯವೆಂಬುದು ತುಂಬ ಪ್ರಾಚೀನವಾದ ಕ್ರಿಯೆ. ಇದರ ಉಲ್ಲೇಖ ವಿಷ್ಣುಧರ್ಮೋತ್ತರದಲ್ಲಿ ಬರುತ್ತದೆ. ಆಲೇಖ್ಯವಿನೋದ ಎಂಬ ಶಬ್ದ ಹಲವು ಪ್ರಾಚೀನ ಸಂಸ್ಕೃತ ಕಾವ್ಯಗಳಲ್ಲಿ ಕಾಣಬರುತ್ತದೆ. ಚಿತ್ರಕಲೆಯ ಅಂಗವಾಗಿ ಆಲೇಖ್ಯವನ್ನು ಸಿದ್ಧಮಾಡಿಕೊಳ್ಳುತ್ತಿದ್ದ ಪದ್ಧತಿ 4–5ನೆಯ ಶತಮಾನಗಳಲ್ಲೇ ಸ್ಪಷ್ಟವಾಗುತ್ತದೆ. ಗುಪ್ತಶೈಲಿಯ ಶಿಲ್ಪದಲ್ಲಿ ಕೂಡ ಆಲೇಖ್ಯ ಅಗತ್ಯವಾದ ಸನ್ನಾಹ. ಆದರೆ ಆಲೇಖ್ಯ ವಿಶಿಷ್ಟವಾದ ಕಲೆಯಾಗಿ ಮೈದಳೆದದ್ದು ಕ್ರಿಸ್ತಾಬ್ದ 16ನೆಯ ಶತಮಾನದ ಆದಿಭಾಗದಲ್ಲಿ; ಪರ್ಷಿಯ ದೇಶದಿಂದ ಮೊಗಲ ಅರಸರ ಆಸ್ಥಾನಕ್ಕೆ ಬಂದ ಕಲಾವಿದರು ಈ ಕಲೆಯನ್ನು ತಮ್ಮೊಂದಿಗೆ ತಂದರು. ಪರ್ಷಿಯ ದೇಶಕ್ಕೆ ಅದು ಬಂದುದು ಚೀನ ದೇಶದಿಂದ ಎಂದು ಹೇಳುತ್ತಾರೆ. ಆ ಕಾಲಕ್ಕೆ ಮುಂಚೆ ಆಲೇಖ್ಯವಿರಲಿಲ್ಲವೆಂದಲ್ಲ. ಭಿತ್ತಿಚಿತ್ರಗಳಲ್ಲಿ, ಗುಹಾಚಿತ್ರಗಳಲ್ಲಿ, ನಿದರ್ಶನಕ್ಕೆ ಅಜಂತ, ಬಾಗ್, ಸಿತ್ತನವಾಸಲ್ ಕಲಾಶೈಲಿಗಳಲ್ಲಿ ರೇಖಾಚಿತ್ರಗಳನ್ನೂ ಆಲೇಖ್ಯಗಳನ್ನೂ ಕಾಣುತ್ತೇವೆ. ಆದರೆ ಸ್ವತಂತ್ರ್ಯವಾದ ಸಂವಿಧಾನದಂತೆ ಬೆಳೆದದ್ದು ಮೊಗಲ್ ಅರಸರ ಆಶ್ರಯದಲ್ಲಿಯೇ. ಆಲೇಖ್ಯಗಳನ್ನು ಸ್ವಸಂಪೂರ್ಣವಾಗಿಯೇ ಉಳಿಸಿಕೊಂಡು ಬರುವ ಪದ್ಧತಿಗೆ ಇರಾನೀ ಕಲಂ ಎಂದು ಹೆಸರು. ಈ ಆಲೇಖ್ಯಕಾರರಿಗೆ ಆದರ್ಶಪ್ರಾಯರಾದವರು ಬಿಹಾಜಾದ್, ಆಖಾ ರಿಜಾ ಮತ್ತು ರಿಜಾ ಇ ಅಬ್ಬಾಸಿ ಎಂಬ ಪರ್ಷಿಯ ಕಲೆಗಾರರು. ಈ ಪದ್ಧತಿಯಲ್ಲಿ ಬಿಳಿ ಹಾಳೆಗಳ ಮೇಲೆ ಕರಿ ಶಾಯಿಯಿಂದ ಲೆಕ್ಕಣಿಕೆಯ ಮುಳ್ಳನ್ನು ಉಪಯೋಗಿಸಿ ಬರೆಯುತ್ತಿದ್ದರು. ಕೆಲವೊಮ್ಮೆ ಕುಂಚಾಗ್ರದಿಂದ ಕೆಂಪು, ಹಸಿರು, ನೀಲಿ, ಸುವರ್ಣ ಈ ಬಣ್ಣಗಳನ್ನು ಮೂಡಿಸುತ್ತಿದ್ದರು. ಮೊಗಲ್ ಚಕ್ರವರ್ತಿಗಳಲ್ಲಿ ಜಹಾಂಗೀರನಿಗೆ (1605–27) ಆಲೇಖ್ಯಗಳ ಮೇಲೆ ತುಂಬ ಪ್ರೀತಿಯಿತ್ತು. ಇವನ ಮತ್ತು ಷಹಜಹಾನನ ಕಾಲದಲ್ಲಿ (1628–58) ಆಲೇಖ್ಯ ತುಂಬ ಪ್ರಚಲಿತವಾದ ಕಲೆಯಾಗಿತ್ತು. ಜಹಾಂಗೀರ್ ತನ್ನ ತಾರುಣ್ಯದಲ್ಲಿ ಕಾಂದಹಾರದಿಂದ ಆಖಾ ರಿಜಾ ಎಂಬ ಪರ್ಷಿಯನ್ ಕಲೆಗಾರನನ್ನು ಭಾರತಕ್ಕೆ ಕರೆಸಿಕೊಂಡು ಅವನನ್ನು ತನ್ನ ಮಿತ್ರನಾಗಿಸಿಕೊಂಡಿದ್ದ. ಮೊಗಲ್ ಆಸ್ಥಾನಕ್ಕೆ ಧರ್ಮಪ್ರಚಾರದ ದೃಷ್ಟಿಯಿಂದ ಬಂದ ಜೆಸ್ಯೂಟ್ ಜನರು ತಮ್ಮೊಂದಿಗೆ ಆಲೇಖ್ಯ ಸಂವಿಧಾನಗಳನ್ನು ತಂದರು. ನಾದಿರ್–ಅಸ್–ಸಮಾನ್, ಮನ್ಸೂರ್ ಮೊದಲಾದವರು ಈ ಪ್ರಭಾವದಿಂದ ಕಾಣಿಸಿಕೊಂಡ ಆಲೇಖ್ಯಕಾರರು. ಮೊಗಲ ರಾಜವಂಶದ ಅವನತಿಯಾದ ಅನಂತರ ಈ ಕಲೆಗೂ ಗ್ಲಾನಿಯೊದಗಿತು. ದಕ್ಷಿಣದಲ್ಲಿ ಎರಡನೆಯ ಇಬ್ರಾಹಿಂ (1580–1626) ಮತ್ತು ಬಿಜಾಪುರದ ದೊರೆ ಮಹಮ್ಮದ್ ಆದಿಲ್ ಷಾ (1626–56) ಇವರೂ ಆಲೇಖ್ಯವನ್ನು ಪ್ರೋತ್ಸಾಹಿಸಿದ ಅರಸರಲ್ಲಿ ಪ್ರಮುಖರು. ತಿರುವಾಂಕೂರು ಸಂಸ್ಥಾನದಲ್ಲಿ ಈ ಕಲೆ ದೇವದೇವತೆಗಳ ಚಿತ್ರಣಕ್ಕೆಂದು ಮೀಸಲಾಗಿದ್ದಂತೆ ತೋರಿಬರುತ್ತದೆ. ಅಲ್ಲಿನ ಹಲವಾರು ದೇವಾಲಯಗಳಲ್ಲಿ ಉತ್ತಮ ಆಲೇಖ್ಯಗಳಿವೆ. ಲೇಪಾಕ್ಷಿಯ ವೀರಭದ್ರಾಲಯದಲ್ಲೂ ಆಲೇಖ್ಯಗಳೆನ್ನಬಹುದಾದ ಚಿತ್ರಗಳಿವೆ. ಶ್ರೀರಂಗಪಟ್ಟಣದ ದರಿಯಾ ದೌಲತ್ ಅರಮನೆಯ ಭಿತ್ತಿಗಳಲ್ಲಿ ಆಲೇಖ್ಯದ ಪ್ರಭಾವವನ್ನು ಕಾಣಬಹುದು. ಪಾಶ್ಚಾತ್ಯ ಕಲಾವಿದರು ಆ ಕಾಲದಲ್ಲಿ ಮಾಡಿದ ಆಲೇಖ್ಯಗಳನ್ನು ಅಲ್ಲಿಯೇ ಇಟ್ಟಿದ್ದಾರೆ. ನಾಗಾರ್ಜುನ ಕೊಂಡ ಮುಂತಾದೆಡೆ ಕಲ್ಲುಗಳ ಮೇಲೆ ಮೂಡಿಸಿದ ಆಲೇಖ್ಯಗಳಿವೆ. ಈ ಪ್ರಾಚೀನ ಪದ್ಧತಿ ಬಹುಕಾಲ ಉಳಿದುಬಂದಿತು.

ಚೀನ ಮತ್ತು ಜಪಾನ್ ದೇಶಗಳಲ್ಲಿ ಆಲೇಖ್ಯಗಳನ್ನು ಕುಂಚಾಗ್ರದಿಂದಲೇ ಬಿಡಿಸುತ್ತಿದ್ದುದರಿಂದ ಆಲೇಖ್ಯಕ್ಕೂ ಚಿತ್ರಕ್ಕೂ ಅಷ್ಟಾಗಿ ವ್ಯತ್ಯಾಸ ಕಾಣಬರಲಿಲ್ಲ. ರೇಖಾಮಯವಾದ ಚಿತ್ರವನ್ನು ಫಿಃ–ಹುವಾ ಎಂದು ಚೀನೀ ಜನರು ಕರೆದು ಬಹುಮಟ್ಟಿಗೆ ಇದನ್ನು ಅಕ್ಷರವಿನ್ಯಾಸಕ್ಕೆ ಬಳಸುತ್ತಿದ್ದರು. ಇದಲ್ಲದೆ ಅರಮನೆ, ದೇಗುಲ, ಗೋಪುರ, ಸೇತುವೆ ಇವುಗಳನ್ನು ನೈಜವಾಗಿ ಅತ್ಯಂತ ಕೂಲಂಕಷವಾಗಿ ಯಾವ ವಿವರವನ್ನೂ ಬಿಡದೆ ರೇಖೆಗಳಲ್ಲಿಯೇ ಚಿತ್ರಿಸುವ ಪ್ರತಿಭೆ ಈ ಜನಕ್ಕಿತ್ತು. ಚೀನೀ ಕಲೆಯ ವಿಶೇಷವೆಂದರೆ ಸಂಪನ್ನವಾದ ಚಿತ್ರ ಬಿಡಿಸುವ ಮುನ್ನ ಇವರು ಆಲೇಖ್ಯಗಳನ್ನು ಸಿದ್ಧಪಡಿಸಿಕೊಳ್ಳುತ್ತಿರಲಿಲ್ಲ. ಕಾಗದವನ್ನೂ ರೇಷ್ಮೆ ವಸ್ತ್ರವನ್ನೂ ಹದ ಮಾಡಿಕೊಂಡು ಒಡನೆಯೇ ವರ್ಣಸಂಯೋಜನೆಗೆ ಆರಂಭಿಸುತ್ತಿದ್ದರು. ಆಲೇಖ್ಯ ಅಲ್ಲಲ್ಲಿ ಬಳಕೆಯಲ್ಲಿದ್ದಾಗಲೂ ಅದಕ್ಕೆಂದೇ ವಿಶಿಷ್ಟವಾದ ಯಾವ ಸಾಮಗ್ರಿಯನ್ನೂ ಚೀನೀ ಜನ ಸೃಷ್ಟಿ ಮಾಡಲಿಲ್ಲ. ಆದರೆ ಜಪಾನಿಯರು ಆಲೇಖ್ಯಕ್ಕೆಂದೇ ಮೊಹಿತು ಎಂಬ ಕುಂಚವಿಶೇಷವನ್ನು ಬಳಸುತ್ತಿದ್ದರು. ಈ ಕುಂಚದಿಂದ ಕರಿಶಾಯಿಯಲ್ಲಿ (ಸುಮಿ) ಮೇಲ್ಮೈರೇಖೆಗಳನ್ನು ಮೊದಲು ಮೂಡಿಸಿ, ಅನಂತರ ಅವುಗಳ ಒಳಗೆ ಬಣ್ಣಗಳನ್ನು ತುಂಬುತ್ತಿದ್ದರು. ವಸ್ತುಗಳನ್ನು ಹಲವಾರು ಭಂಗಿಗಳಲ್ಲಿ ರೇಖೆಗಳಿಂದ ಚಿತ್ರಿಸಿಕೊಳ್ಳುವುದೂ ಈ ದೇಶದಲ್ಲಿ ತುಂಬ ಬಳಕೆಯಲ್ಲಿತ್ತು. ಹಳೆಯ ಪ್ರಸಿದ್ಧ ಚಿತ್ರಗಳನ್ನು ಅಭ್ಯಸಿಸುವಾಗ ಅಥವಾ ತಮ್ಮ ಪ್ರಯೋಜನಕ್ಕೆಂದು ಅವುಗಳ ಪ್ರತಿಕೃತಿಗಳನ್ನು ಮಾಡಿಕೊಳ್ಳುವಾಗ ಇದೇ ಪದ್ಧತಿಯನ್ನು ಅನುಸರಿಸುತ್ತಿದ್ದರು. ಚೀನೀಯರಂತಲ್ಲದೆ ಜಪಾನೀ ಜನ ಚಿತ್ರದ ಪೂರ್ವದಲ್ಲಿ ಆಲೇಖ್ಯವನ್ನು ಸಿದ್ಧಗೊಳಿಸುತ್ತಿದ್ದರು. ಇಂಥ ಆಲೇಖ್ಯಗಳಿಗೆ ಷಿತ–ಎ ಎಂದು ಕರೆಯುತ್ತಾರೆ. ಸಂಪನ್ನವಾದ ಚಿತ್ರ ಮುಗಿದ ಮೇಲೂ ಪ್ರಮುಖವಾದ ವಿವರಗಳನ್ನೂ ಮೇಲ್ಮೈ ರೇಖೆಗಳನ್ನೂ ಮತ್ತೊಮ್ಮೆ ತಿದ್ದುವುದೂ ಬಳಕೆಯಲ್ಲಿತ್ತು. ಈ ಆಲೇಖ್ಯವಿಶೇಷಕ್ಕೆ ಕಾಕಿಯೋಕೋಶಿ ಎಂದು ಹೆಸರಿತ್ತು. ಬಣ್ಣಗಳಿಂದ ಮೊದಲು ಹಾಕಿದ ರೇಖೆಗಳು ಮರೆಯಾಗಬಾರದೆಂಬ ನಿಯಮ ಜಪಾನೀ ಕಲೆಯಲ್ಲಿತ್ತು. ಚೀನದಿಂದ 13ನೆಯ ಶತಮಾನದಲ್ಲಿ ಜಪಾನ್ ದೇಶಕ್ಕೆ ಬಂದ ಆಲೇಖ್ಯಸಂಪ್ರದಾಯವೊಂದು ಸುಮಿ–ಎ ಎನಿಸಿಕೊಳ್ಳುತ್ತದೆ. ಇದು ಕರಿಶಾಯಿಯಿಂದ ಬಿಳಿ ಕಾಗದದ ಮೇಲೆ ಮೇಲ್ಮೈಯಿಲ್ಲದೆ ತುಂಬಿಸುವ ಸ್ಥೂಲ ವಿವರಗಳದ್ದಾಗಿದೆ. 19ನೆಯ ಶತಮಾನದ ಅಂತ್ಯಭಾಗದಲ್ಲಿ ಜಪಾನೀಯರು ಇದ್ದಿಲು ತುಂಡು, ಪೆನ್ಸಿಲ್, ಗ್ರ್ಯಾಫೈಟ್ ಕೋಂಟೆ ಪೆನ್ಸಿಲ್ ಮುಂತಾದುವನ್ನು ಆಲೇಖ್ಯ ಸಾಮಗ್ರಿಗಳನ್ನಾಗಿ ಸ್ವೀಕರಿಸಿದರು. (ಎಸ್.ಕೆ.ಆರ್.)

# ಆಲೋಚನೆ

**ಆಲೋಚನೆ:** ಮೂರ್ತ ಮತ್ತು ಅಮೂರ್ತ ವಸ್ತು ವಿಷಯಗಳಿಂದ ಪರಿಪ್ಲುತವಾದ ಜಗತ್ತಿನ ಪರಿಸರವನ್ನು ಅರ್ಥಮಾಡಿಕೊಳ್ಳುವಲ್ಲಿ, ಹೊಂದಿಕೊಂಡು ಬಳಸಿಕೊಳ್ಳುವಲ್ಲಿ, ಕಾರ್ಯಕಾರಣ ಸಂಬಂಧವನ್ನು ಕಲ್ಪಿಸುವಲ್ಲಿ ಮನಸ್ಸು ತೋರುವ ಕ್ರಿಯೆ ಪ್ರಕ್ರಿಯೆಗಳಿಗೆ ಈ ಹೆಸರಿದೆ (ಥಿಂಕಿಂಗ್). ಇದು ಮನುಷ್ಯನನ್ನು ಮೃಗದಿಂದ ಪ್ರತ್ಯೇಕಿಸುವ ವಿಶಿಷ್ಟಗುಣ ಎಂಬುದು ಅರಿಸ್ಟಾಟಲನ ಕಾಲದಿಂದಲೂ ತಿಳಿದಿರುವ ವಿಷಯವೇ ಆಗಿದೆ. ಯಾವುದು ಆಲೋಚಿಸಬಲ್ಲದೋ ಅದೇ ಮನಸ್ಸೆಂದು ಡೇಕಾರ್ಟ್ ಮುಂತಾದ ದಾರ್ಶನಿಕರು ಹೇಳಿದ್ದಾರೆ. ಆ ದೃಷ್ಟಿಯಿಂದ ಅದು ಜಡದಿಂದ ಭಿನ್ನವಾದುದೆಂದೂ ಭಾವಿಸಲಾಗಿದೆ. ಆದರೆ ಆಧುನಿಕ ಸಂಶೋಧನೆಗಳ ಪ್ರಕಾರ ಆಲೋಚನಾಪರತೆ ಮನುಷ್ಯನೊಬ್ಬನಿಗೇ ಮೀಸಲಾದ ವಿಶಿಷ್ಟಗುಣವೆಂದು ಹೇಳಲಾಗುವುದಿಲ್ಲ. ಜೀವವಿಕಾಸದ ನಿಚ್ಚಣಿಗೆಯಲ್ಲಿ ಮನುಷ್ಯನಿಂದ ಕೊನೆಗೆ ಇಲಿಯ ಪರ್ಯಂತ ಆಲೋಚನಾ ವ್ಯಾಪಾರ ಪ್ರಾಣಿಗಳಲ್ಲಿ ಜರುಗುತ್ತಿದೆಯೆಂಬುದಕ್ಕೆ ನಿದರ್ಶನಗಳಿವೆ. ಆದರೆ ಮನುಷ್ಯ ಆಲೋಚನಾ ವ್ಯಾಪಾರವನ್ನು ತುಂಬ ಅಭಿವೃದ್ಧಿಪಡಿಸಿಕೊಂಡಿದ್ದಾನೆ; ಈ ವ್ಯಾಪಾರದ ಪ್ರಕ್ರಿಯೆಗಳು ಸಂಕೀರ್ಣವೂ ಜಟಿಲವೂ ಆಗುವಂತೆ ಬೆಳೆದಿವೆ. ಅಲ್ಲದೆ ಆವರಣಕ್ಕೆ ಹೊಂದಿಕೊಂಡು ಬಾಳುವ ಪ್ರಯತ್ನದಲ್ಲಿ ಪ್ರಾಣಿಗಿಂತಲೂ ಮನುಷ್ಯ ಹೆಚ್ಚಾಗಿ ಆಲೋಚನಾಪ್ರಕ್ರಿಯೆಯನ್ನು ಬಳಸುತ್ತಲಿದ್ದಾನೆ. ಈ ದೃಷ್ಟಿಯಿಂದ ವಿಕಾಸಾನುಕ್ರಮದಲ್ಲಿ ಮನುಷ್ಯನಿಗೂ ಆತನ ಅತ್ಯಂತ ಸಮೀಪ ಬಂಧುವಿಗೂ ನಡುವೆ ತುಂಬ ಅಂತರವಿದೆ ಎಂಬುದು ಸ್ಪಷ್ಟ.

ಮನುಷ್ಯ ಬೆಳೆದಂತೆಲ್ಲ ಸಂಕೇತಗಳ ಮೂಲಕ ಈ ಪ್ರಪಂಚದೊಂದಿಗೆ ವ್ಯವಹರಿಸಲು ಕಲಿಯುತ್ತಾನೆ. ಲೋಕದೊಡನೆ ಯಾವಾಗಲೂ ನೇರವಾಗಿಯೇ ವ್ಯವಹರಿಸುವುದಕ್ಕೆ ಬದಲು ಪ್ರತೀಕಗಳು, ಮಾತುಗಳು, ಭಾವನೆಗಳು ಮತ್ತು ಭಾಷೆಗಳನ್ನು ಬಳಸುತ್ತಾನೆ. ಈ ಪ್ರಕಾರವಾಗಿ ಆತ ಬಹಿರಂಗವಾಗಿ ಕಾರ್ಯದಲ್ಲಿ ವ್ಯವಹರಿಸುವ ಬದಲು ಆಲೋಚಿಸಲು ಮೊದಲು ಮಾಡುತ್ತಾನೆ. ಹೊಂದಾವಣೆಯ ದೃಷ್ಟಿಯಲ್ಲಿ ಸಂಕೇತಗಳನ್ನು ಉಪಯೋಗಿಸುವುದು ದಕ್ಷತೆಗೆ ಕಾರಣವಾಗುವುದು. ದೂರದಲ್ಲಿದ್ದುಕೊಂಡೇ ವಸ್ತುವಿನ ವಿಷಯದಲ್ಲಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವುದು ಸಾಧ್ಯವಾಗುವುದು. ದೂರದಿಂದ ವಿಷಯವನ್ನು ಗ್ರಹಿಸಲು ಸಾಮರ್ಥ್ಯವುಳ್ಳ ಕಣ್ಣು ಕಿವಿ ಇತ್ಯಾದಿ ಇಂದ್ರಿಯಗಳನ್ನು ಪಡೆದುಕೊಂಡಿರುವ ಜೀವಿಗಳು ಸಮೀಪ ವಸ್ತುವರ್ತಿಗಳಾದ ಸ್ಪರ್ಶ ರಸನೆಗಳಂಥ ಇಂದ್ರಿಯಗಳುಳ್ಳ ಜೀವಿಗಳಿಗಿಂತ ಮೇಲುಗೈಯಾಗಿರುವುದೇನೂ ಆಶ್ಚರ್ಯವಲ್ಲ. ವಿಷಯ ಮೈ ಸೋಕುವುದಕ್ಕೆ ಬಹಳ ಮುಂಚೆಯೇ ದೂರದಿಂದಲೇ ಅದಕ್ಕೆ ತಕ್ಕ ಪ್ರತಿಕ್ರಿಯೆ ತೋರಿಸುವುದಕ್ಕೆ ಸಾಧ್ಯವಾಗುವುದು. ವಿಕಾಸಕ್ರಮದಲ್ಲಿ ಮೇಲಿನ ಹಂತದ ಜೀವಿಗಳಲ್ಲಿ ಈ ಸೌಕರ್ಯ ಕಂಡುಬರುತ್ತದೆ. ಕೆಳಗಿನ ಹಂತದ ಜಂತುಗಳ ನೆನಪಿನ ಅವಧಿಯೂ ತುಂಬ ಚಿಕ್ಕದು. ಮುಂದೇನಾಗಬಹುದೆಂಬ ವಿಚಾರದಲ್ಲೂ ಅವು ತಮ್ಮ ಊಹೆಯನ್ನು ಬಹುದೂರ ಓಡಿಸಲಾರವು. ಆದ್ದರಿಂದ ಅವುಗಳ ಆಸಕ್ತಿಯೆಲ್ಲ ವರ್ತಮಾನದಲ್ಲೇ ಕೇಂದ್ರೀಕೃತವಾಗಿದೆ. ಆದರೆ ಮನುಷ್ಯನಿಗೆ ಮಾತ್ರ ಬಹು ದೀರ್ಘಕಾಲದ ಅನೇಕ ವರ್ಷಗಳ ಹಿಂದಿನ ನೆನಪಿರುವುದಲ್ಲದೆ, ಹಿಂದಿನ ಅನುಭವಗಳನ್ನು ಕೂಡಿಟ್ಟುಕೊಂಡು ಅದರಿಂದ ಲಾಭ ಪಡೆಯುವ ವಿಧಾನಗಳೂ ಅವನ ವಶವಾಗಿವೆ. ಈ ವಿಧಾನದಿಂದ ಆತ ಆಗತಾನೆ ಕಳೆದುಹೋದ ಅನುಭವಗಳಿಂದ ಪಾಠ ಕಲಿಯುತ್ತಾನಲ್ಲದೆ ಅನೇಕ ತಲೆಮಾರುಗಳ ಅನುಭವಗಳೂ ಆತನ ಉಪಯೋಗಕ್ಕೆ ಒದಗುತ್ತವೆ. ಇದೇ ರೀತಿಯಲ್ಲಿ ಆತ ಮುಂದೊದಗುವ ವಸ್ತು ಮತ್ತು ಸಂದರ್ಭಗಳ ವಿಷಯದಲ್ಲೂ ಪರಿಣಾಮಕಾರಿಯಾಗಿ ವರ್ತಿಸಬಲ್ಲ. ಪ್ರಾಣಿಗಳು ಕೂಡ ಮುಂದೊದಗುವುದಕ್ಕೆ ತಕ್ಕ ಹೊಂದಾಣಿಕೆಯನ್ನು ಈಗಿನಿಂದಲೇ ಮಾಡಿಕೊಳ್ಳುತ್ತವೆ. ಆದರೆ ಮನುಷ್ಯ ತನ್ನ ಆಲೋಚನಾಶಕ್ತಿಯ ಪರಿಣಾಮವಾಗಿ ಮುಂದೆ ದೂರದಲ್ಲೊದಗಬಹುದಾದುದನ್ನು ಈಗಲೇ ತಡೆಗಟ್ಟಬಲ್ಲ. ದೂರ ಭವಿಷ್ಯಕ್ಕೆ ಸಂಬಂಧಪಟ್ಟ ಯೋಚನೆಗಳು, ಹಂಚಿಕೆಗಳು–ಮುಂತಾದವು ಮನುಷ್ಯನ ಆಲೋಚನೆಯ ಶ್ರೇಷ್ಠತೆಯನ್ನು ಸೂಚಿಸುತ್ತವೆ. ಸಂಕೀರ್ಣವೂ ಪರಿವರ್ತನಶೀಲವೂ ಆದ ಪರಿಸರಕ್ಕೆ ತಕ್ಕಂತೆ ತಾನು ಹೊಂದಿಕೊಳ್ಳುವ ಸಾಮರ್ಥ್ಯವನ್ನು ಆತ ಪಡೆದಿದ್ದಾನೆ.

ಆಲೋಚನೆ ಎಂಬ ಶಬ್ದದ ಅರ್ಥ ನಿಷ್ಕೃಷ್ಟವಲ್ಲ. ನೆನಪು ಮಾಡಿಕೊಳ್ಳುವುದು, ಹಗಲುಗನಸು ಕಾಣುವುದು ಇತ್ಯಾದಿಗಳಿಂದ ಹಿಡಿದು ಕಲಾವಿದರ ವಿಜ್ಞಾನಿಗಳ ಮತ್ತು ನಿರ್ಮಾಪಕರ ಆಲೋಚನೆಗಳವರೆಗೂ ಇದರ ಅರ್ಥ ಹರಡಿದೆ. ಆಲೋಚನೆ ಎಂದರೆ ಭಾವಪರಂಪರೆ ಅಥವಾ ಭಾವಗತಿ. ಇದಕ್ಕಿಂತಲೂ ಪರಿಮಿತವೂ ನಿರ್ದಿಷ್ಟವೂ ಆದ ಅರ್ಥದಲ್ಲಿ ಹೇಳುವುದಾದರೆ ಒಂದು ಸಮಸ್ಯೆ ಎಬ್ಬಿಸಿದ ಭಾವಗತಿ ಎಂದು ಜೇಮ್ಸ್ ಡ್ರೆವರ್ ಸೂಚಿಸಿದ್ದಾನೆ. ಈ ಅರ್ಥದಲ್ಲಿ ಸಮಸ್ಯೆಯೊಂದು ಉದ್ಭವಿಸಿದಾಗ ಆಲೋಚನೆ ಏಳುತ್ತದೆ: ಅದರ ಪರಿಹಾರದೊಂದಿಗೆ ಇದೂ ಕೊನೆಗೊಳ್ಳುತ್ತದೆ. ಅನಿರ್ದಿಷ್ಟ ಸಾಂಗತ್ಯ ಮತ್ತು ಅನಿಯಂತ್ರಿತ ಪ್ರತಿಭಾವಿಲಸನಗಳಿಗಿಂತ ಇದು ಬೇರೆ. ಸಮಸ್ಯೆಯೂ ಈ ಭಾವಗಳ ಸ್ವರೂಪ, ಸಂಯೋಗಿತೆಗಳನ್ನು ಮತ್ತು ಇತರ ಸಾಂಕೇತಿಕ ಪ್ರಕ್ರಿಯೆಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುತ್ತದೆ. ಈ ಪ್ರಕಾರವಾಗಿ ಸಂಕೇತಗಳ ಮೂಲಕ ಸಮಸ್ಯಾ ಪರಿಹಾರವೇ ಆಲೋಚನೆಯ ಮುಖ್ಯ ಗುಣವೆಂದು ಪರಿಗಣಿತವಾಗಿದೆ. ಆಲೋಚನೆ ಎಂಬುದು ಒಬ್ಬ ವ್ಯಕ್ತಿಯಲ್ಲಿ ಅಡಕವಾಗಿರುವ ಕ್ರಿಯೆ; ರೂಢಿಯಲ್ಲಿರುವ ಕ್ರಿಯೆಗಳಿಂದ ಅಥವಾ ವಿಧಿನಿಷೇಧಗಳಿಂದ ಅಥವಾ ಒಪ್ಪುತಪ್ಪುಗಳ ವಿಧಾನಗಳಿಂದ ಪರಿಹರಿಸಲಾಗದ ಸಮಸ್ಯೆಯಿಂದ ಆಲೋಚನೆ ಮೊದಲಾಗುತ್ತದೆ. ಆ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಕೆಲವು ಅನುಮಿತಿಗಳೂ ಪೂರ್ವಸಿದ್ಧಾಂತಗಳೂ ಆಲೋಚನೆಯಿಂದ ಫಲಿಸುತ್ತವೆ. ಹಿಂದಿನ ಅನುಭವಗಳು ಇದಕ್ಕೆ ಸಹಾಯವಾಗುತ್ತವೆ. ಇವು ಹೇರಳವಾದಷ್ಟೂ ಆತನ ಅನುಮಿತಿಗಳೂ ಪೂರ್ವಸಿದ್ಧಾಂತಗಳೂ ಹೆಚ್ಚು ಕುಶಲವಾಗುತ್ತವೆ. ತಕ್ಕಷ್ಟು ಅನುಭವಗಳು ತನಗೆ ದೊರೆತಿರುವ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿಯ ಆಲೋಚನೆ ಸುಸೂತ್ರವಾಗಿ ಸಾಗುತ್ತದೆ. ಹೀಗಾಗಲು ಆ ಸಂದರ್ಭಕ್ಕೆ ಅನುಗುಣವಾದ ಯಥಾರ್ಥಜ್ಞಾನ ಆತನಲ್ಲಿ ಹೇರಳವಾಗಿರಬೇಕಾದ್ದು ಅಗತ್ಯ.

ಈ ಅನುಮಿತಿಗಳನ್ನು ಪರಿಗ್ರಹಿಸುವುದಕ್ಕೂ ಪರಿತ್ಯಜಿಸುವುದಕ್ಕೂ ಮುಂಚೆ ಅವುಗಳನ್ನು ಪರಾಮರ್ಶಿಸಿ ಬೆಲೆಕಟ್ಟಬೇಕಾಗುತ್ತದೆ. ಅವುಗಳನ್ನು ಪ್ರತ್ಯಕ್ಷವಾಗಿ ಪರೀಕ್ಷಿಸುವುದಕ್ಕೆ ಮುನ್ನವೇ ಕೆಲವನ್ನು ಕೈಬಿಡಲಾಗುತ್ತದೆ. ಎಂದರೆ, ತತ್ಸಂಬಂಧವಾದ ತಿಳಿವಳಿಕೆಯ ಬೆಳಕಿನಲ್ಲಿ ಅವನ್ನು ಪರೀಕ್ಷಿಸಿದಾಗ ಅವು ಸಮಂಜಸವಾಗಿಲ್ಲದಿರುವುದರಿಂದ ಅದನ್ನು ತ್ಯಜಿಸಲಾಗುತ್ತದೆ. ಗಣಿತ ಕ್ಷೇತ್ರದಲ್ಲಿ ಕಲ್ಪನಾ ರಚನೆಯ ಪ್ರಕ್ರಿಯೆಗಳನ್ನು ವಿಶ್ಲೇಷಿಸುತ್ತ ಹಡಾಮಾರ್ಡ್ ಎಂಬಾತ ಒಬ್ಬ ಒಳ್ಳೆ ಗಣಿತಜ್ಞನಿಗೂ ಮತ್ತೊಬ್ಬ ಸಾಧಾರಣ ಗಣಿತಜ್ಞನಿಗೂ ಇರುವ ಅಂತರವನ್ನು ಕುರಿತು ಹೀಗೆ ಹೇಳುತ್ತಾನೆ: ಅದು ಇರುವುದು ಅವರು ಮಾಡುವ ತಪ್ಪುಗಳಲ್ಲಿ ಅಲ್ಲ; ಸಾಧಾರಣ ಗಣಿತಜ್ಞ ತನ್ನ ತಪ್ಪನ್ನು ಪರೀಕ್ಷೆಗೆ ಗುರಿಮಾಡಿ ಅನಂತರ ಅದು ತಪ್ಪೆಂದು ತಿಳಿದುಕೊಳ್ಳುತ್ತಾನೆ; ಆದರೆ ಕುಶಲ ಗಣಿತಜ್ಞ ತಪ್ಪು ಮಾಡುವುದಕ್ಕೆ ಮುಂಚೆಯೇ ಅದನ್ನು ತಿದ್ದಿಕೊಳ್ಳುತ್ತಾನೆ. ಹಾಗಿದ್ದರೂ ಅನೇಕ ಪೂರ್ವಸಿದ್ಧಾಂತಗಳನ್ನು ಪ್ರತ್ಯಕ್ಷ ಪರೀಕ್ಷೆಗೇ ಒಳಪಡಿಸಬೇಕಾಗುತ್ತದೆ. ಕೆಲವು ಮನಶ್ಶಾಸ್ತ್ರಜ್ಞರು ಈ ರೀತಿ ಪೂರ್ವಸಿದ್ಧಾಂತ ರಚನೆ, ಅದರ ಪರಿತ್ಯಾಗ ಮತ್ತೆ ಕೆಲವು ಪೂರ್ವಸಿದ್ಧಾಂತಗಳ ಸೂಚನೆ–ಹೀಗೆ ಸಮಸ್ಯೆ ಪರಿಹಾರವಾಗುವವರೆಗೂ ಜರುಗುವ ವಿಚಾರದ್ಯೋತನವನ್ನು ಪರೋಕ್ಷವಾಗಿ ಜರುಗುವ ಪ್ರಯತ್ನದ ತಪ್ಪುವರ್ತನೆ ಎನ್ನುತ್ತಾರೆ. ಒಂದು ಸಮಸ್ಯೆಯ ಪರಿಹಾರಕ್ಕೆ ಮನುಷ್ಯ ಹಿಂದಿನ ಅನುಭವಗಳನ್ನು ಪುನಸ್ಸಂಘಟಿಸಿ ಹೊಸ ರೂಪದಲ್ಲಿ ಬಳಸಿಕೊಳ್ಳುತ್ತಾನೆ. ಆ ಸಮಸ್ಯೆಯೇ ಮನಸ್ಸಿಗೆ ತಂದುಕೊಳ್ಳಬೇಕಾದ ಸ್ಮೃತಿಯ ಸ್ವರೂಪವನ್ನು ನಿರ್ದೇಶಿಸುತ್ತದೆ. ಒಂದು ಮೋಟರುಗಾಡಿಯನ್ನು ನಡೆಸಲು ತೊಂದರೆಯುಂಟಾದಾಗ, ನಾವು ಸಾಮಾನ್ಯವಾಗಿ ಅದಕ್ಕೆ ಸಂಬಂಧಪಟ್ಟ ಹಿಂದಿನ ಅನುಭವಗಳನ್ನು ಸ್ಮರಣೆಗೆ ತಂದುಕೊಳ್ಳುತ್ತೇವೆ. ಪ್ರಕೃತ ಸಮಸ್ಯೆಯ ಪ್ರಜ್ಞೆ ಸಂಬಂಧಪಟ್ಟ ಮಾರ್ಗದಲ್ಲಿ ಮನೋಗತಿಯ ದಿಕ್ಕನ್ನು ನಿರ್ದೇಶಿಸುತ್ತದೆ. ಮೇಯಿರ್ ಎಂಬಾತ ಮೋಂಬತ್ತಿಯನ್ನು ಊದಿ ಆರಿಸುವುದು, ಟೊಪ್ಪಿ ನೇತುಹಾಕುವ ಗೂಟಗಳ ಚೌಕಟ್ಟನ್ನು ರಚಿಸುವುದು ಅಥವಾ ಪೆಂಡುಲಂ ಸಮಸ್ಯೆ ಮುಂತಾದ ಕುತೂಹಲಜನಕ ಪ್ರಯೋಗಾಭ್ಯಾಸಗಳಿಂದ ಆ ಸಮಸ್ಯೆಗಳ ಪರಿಹಾರಕ್ಕೆ ದಿಗ್ದರ್ಶನ ಎಷ್ಟು ಸಹಾಯಕವಾಗಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ದಾರಿ ತಪ್ಪಾದರೆ, ಅದೊಂದು ದೊಡ್ಡ ಅಡಚಣೆಯಾಗುತ್ತದೆ. ಬೇರೆ ಎಲ್ಲವನ್ನೂ ತ್ಯಜಿಸಿ, ಒಂದೇ ಒಂದು ದಾರಿಯನ್ನು ಹಿಡಿದು ಆಲೋಚನೆ ನಡೆದರೆ ಸಮಸ್ಯೆಯ ಗುರಿಯನ್ನು ಮುಟ್ಟಲು ತೀರ ಅಡೆತಡೆಗಳುಂಟಾಗುತ್ತವೆ. ತೊಂದರೆ ಎಲ್ಲುಂಟಾಗಿದೆ ಎಂಬುದನ್ನು ಮೊದಲು ಪತ್ತೆ ಮಾಡಿ, ಅದು ಸಾಧ್ಯವಾಗದಿದ್ದರೆ ಬೇರೆ ದಾರಿ ಹಿಡಿಯಿರಿ–ಎಂಬ ಸೂಚನೆಯನ್ನು ಪಡೆದವರು, ಅಂಥ ಸೂಚನೆಯನ್ನು ಪಡೆಯದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಮಸ್ಯೆಯನ್ನು ಪರಿಹರಿಸಲು ಶಕ್ತರಾದರೆಂಬ ಗಣನೀಯ ಅಂಶವನ್ನು ಮೇಯಿರ್ ಕಂಡುಹಿಡಿದಿದ್ದಾನೆ.

ಹೊಸ ನಿರ್ಮಿತಿಗಳನ್ನೂ ಹೊಸ ಭಾವನೆಗಳನ್ನೂ ಕಲಾವಸ್ತುಗಳನ್ನೂ ದೊರಕಿಸಿಕೊಟ್ಟಿರುವ ಸೃಷ್ಟ್ಯಾತ್ಮಕ ಆಲೋಚನಾ ಪ್ರಕ್ರಿಯೆಗಳನ್ನು ವಿಶ್ಲೇಷಿಸಲಾಗಿದೆ. ಮನುಷ್ಯನ ಅನೇಕ ಕಲಾಕೃತಿಗಳು ಪರೀಕ್ಷಾಕ್ರಮದಿಂದ ಒಪ್ಪುತಪ್ಪುಗಳನ್ನು ಕಂಡುಕೊಳ್ಳುವ ಕಲಿಕೆಯಂತೆಯೇ ಕ್ರಮೇಣ ಬೆಳೆಯುತ್ತವೆ. ಎಲ್ಲ ಕಲಾವಸ್ತುಗಳ ವಿಷಯದಲ್ಲೂ ಅವುಗಳನ್ನು ರೂಪಗೊಳಿಸಬೇಕೆಂಬ ಆಸೆ ಅವುಗಳ ನಿರ್ಮಾಣದ ಅನೇಕ ಪ್ರಯತ್ನಗಳನ್ನು ಪ್ರಚೋದಿಸುತ್ತದೆ. ಗಮನಾರ್ಹವಾದ ಅಂತಃಸ್ಫೂರ್ತಿಗಳೂ ಪದೇ ಪದೇ ಈ ಕೆಲಸಕ್ಕೆ ನೆರವಾಗುತ್ತವೆ. ಈ ಪ್ರಕ್ರಿಯೆಯನ್ನು ಸಾಮಾನ್ಯವಾಗಿ ನಾಲ್ಕು ಹಂತಗಳಾಗಿ ವಿಭಜಿಸುತ್ತಾರೆ. ಸಿದ್ಧತೆ, ಗರ್ಭೀಕರಣ, ಸ್ಫೂರ್ತಿ ಮತ್ತು ಸತ್ಯಾಂಶ ಪರೀಕ್ಷೆ ಅಥವಾ ಪುನಃಪರಿಶೀಲನೆ–ಇವೇ ಆ ನಾಲ್ಕು ಹಂತಗಳು. ಸೃಷ್ಟ್ಯಾತ್ಮಕ ಆಲೋಚನೆಗಳೆಲ್ಲಕ್ಕೂ ಈ ಮೊದಲೇ ಹೇಳಿರುವಂತೆ ಅನುಭವ ಬೇಕು; ಮತ್ತು ಸಂಬಂಧಪಟ್ಟ ಸಂಗತಿಗಳು ಉದ್ದಿಷ್ಟ ಕ್ಷೇತ್ರದಲ್ಲಿ ಲಭ್ಯವಿರಬೇಕು. ಗಣಿತದ ಜ್ಞಾನವಿಲ್ಲದೆ, ಐನ್‌ಸ್ಟೀನ್ ತನ್ನ ಸಾಪೇಕ್ಷತಾವಾದಕ್ಕೆ ಸುಸ್ವರೂಪವನ್ನು ಕೊಡಲಾಗುತ್ತಿರಲಿಲ್ಲ. ಸಿದ್ಧತೆ ಅನೇಕ ಸಂಗತಿಗಳನ್ನು ಹೊಸದಾಗಿ ಜೋಡಿಸಿ ಅನೇಕ ಬಗೆಗಳಲ್ಲಿ ಹೊಂದಿಸಿಕೊಳ್ಳುವ ಕಾರ್ಯವನ್ನು ಒಳಗೊಂಡಿರುತ್ತದೆ. ಇದಕ್ಕೆ ಒಪ್ಪುತಪ್ಪುಗಳನ್ನು ಕಂಡುಹಿಡಿಯುವ ಅನೇಕ ಪ್ರಯೋಗಗಳೂ ಪ್ರಯತ್ನಗಳೂ ನಿಷ್ಫಲಾರಂಭಗಳೂ ನಡೆಯಬೇಕಾಗುತ್ತವೆ. ವಸ್ತುತಃ ಬೆವರು ಸುರಿಸಿ ದುಡಿಯುವುದೇ ಸ್ಫೂರ್ತಿ ಎಂದು ಎಡಿಸನ್ ಹೇಳಿದ್ದಾನೆ.

ಗರ್ಭೀಕರಣದ ಮುಖ್ಯ ಲಕ್ಷಣವೇನೆಂದರೆ, ಅದು ಯಾವ ಕಾರ್ಯದಿಂದಲೂ ಹೊರತೋರುವುದಿಲ್ಲ; ಯಾವ ಮುನ್ನಡೆಯನ್ನೂ ತೋರದ ಕಾಲವದು. ಸಮಸ್ಯೆ ಒಳಹರಿದಂತೆ ತೋರುತ್ತದೆ. ಬಹುಶಃ ಅದು ಸುಪ್ತಪ್ರಜ್ಞೆಯಲ್ಲಿ ಹೊಗೆಯಾಡುತ್ತಿರಬಹುದು.

ಅನೇಕ ವೇಳೆ ಇದನ್ನು ಸ್ಫೂರ್ತಿ ಹಿಂಬಾಲಿಸುತ್ತದೆ. ಆಗ ಅದುವರೆಗೂ ಕೈಗೆಟುಕದಿದ್ದ ಸಮಸ್ಯೆ ಒಂದು ಕ್ಷಣದಲ್ಲಿ ಪರಿಹಾರವಾಗುತ್ತದೆ. ಅನೇಕವೇಳೆ ಅದು ಇದ್ದಕ್ಕಿದ್ದಂತೆಯೇ ಅನಿರೀಕ್ಷಿತವಾಗಿ ಬರುತ್ತದೆ.

ಇದಕ್ಕೆ ಆರ್ಕಿಮಿಡೀಸ್ 'ಸಿಕ್ಕಿತು' (ಯುರೇಕ) ಎಂದು ಮೈಮೇಲೆ ಬಟ್ಟೆಯಿಲ್ಲದುದರ ಪರಿವೆಯೂ ಇಲ್ಲದೆ ಉಗ್ಗಡಿಸುತ್ತ ಓಡಿದುದೇ ಮಾದರಿಯ ಉದಾಹರಣೆ. ಹೀಗೆ ಥಟ್ಟನೆ ಸಂಗತಿಗಳು ಮನಸ್ಸಂಘಟಿತವಾಗಿ ಸಮಸ್ಯೆಯನ್ನು ಅನಿರೀಕ್ಷಿತವಾಗಿ ಪರಿಹರಿಸುವ ಘಟನೆ ಉನ್ನತ ಸೃಷ್ಟ್ಯಾತ್ಮಕ ಕ್ರಿಯೆಗಳ ವಿಷಯದಲ್ಲೊಂದರಲ್ಲೇ ಅಲ್ಲದೆ ದೈನಂದಿನ ಸಮಸ್ಯೆಗಳ ಪರಿಹಾರದಲ್ಲೂ ಕಾಣಿಸಿಕೊಳ್ಳುತ್ತವೆ. ಅಂತಃಸ್ಫೂರ್ತಿ ಅಥವಾ ಅಂತರ್‌ದೃಷ್ಟಿ ಆಲೋಚನೆಯ ಕೊನೆಯ ಹಂತವಾಗುವುದು ಅಪೂರ್ವ. ಅದಕ್ಕೆ ಬೆಲೆಕಟ್ಟಬೇಕು. ಪ್ರಯೋಗವನ್ನು ಪರೀಕ್ಷೆಗೀಡುಮಾಡಬೇಕು. ಕಾರ್ಯಕ್ಕೆ ಹಚ್ಚಬೇಕು. ಬೇಕಾದರೆ ಪುನಃ ಪರಿಶೀಲಿಸಲೂಬೇಕು. ಪ್ರತಿಯೊಬ್ಬ ವಿಜ್ಞಾನಿಗೂ ಯಂತ್ರಶಿಲ್ಪಿಗೂ ಹೊಳೆದ ಭಾವ ರೇಖಾಫಲಕದ ಮೇಲಲ್ಲದೆ ಕಾರ್ಯಕ್ಷೇತ್ರದಲ್ಲೂ ಬಳಕೆಗೆ ಅರ್ಹವಾಗಬೇಕೆಂಬುದೇನೂ ಇಲ್ಲ. ಅದು ನಿಜವಾದ ನವಸೃಷ್ಟಿ ಎಂದು ಹೇಳಿಸಿಕೊಳ್ಳುವ ಮೊದಲು ಅದನ್ನು ಅನೇಕ ಸಲ ಮಾರ್ಪಡಿಸಬೇಕಾಗುತ್ತದೆ.

ಭಾವನೆಗಳ ಬೆಳೆವಣಿಗೆ ಹೇಗಾಗುತ್ತದೆಯೆಂಬುದರ ವ್ಯಾಸಂಗ ಆಲೋಚನಾ ಸ್ವರೂಪದ ಮೇಲೆ ಹೆಚ್ಚಿನ ಬೆಳಕನ್ನು ಬೀರಿದೆ. ವಸ್ತುಗಳ ಸಾಮಾನ್ಯವಾದ ಮತ್ತು ವಿಶಿಷ್ಟವಾದ ಅಂಶಗಳನ್ನು ಪ್ರತಿನಿಧಿಸುವ ಸಾಧಾರಣ ಅಂಶಗಳೇ ಭಾವನೆಗಳು. ಅವು ಅನುಮಿತಿಯ ಫಲಗಳು. ಒಂದು ಸಲ ರೂಪ ತಾಳಿದರೆ ಅವು ಆಲೋಚನಾ ಪ್ರತಿಕ್ರಿಯೆಯಲ್ಲಿ ಗಮನಾರ್ಹವಾದ ಪಾತ್ರ ವಹಿಸುತ್ತವೆ. ಕಾಲ, ಶಕ್ತಿ, ದ್ರವ್ಯ, ವೇಗ ಇತ್ಯಾದಿ ಅಮೂರ್ತ ಭಾವನೆಗಳನ್ನು ಹೇಗೆ ಉಪಯೋಗಿಸುವುದೆಂಬುದರ ಕಲಿಕೆಯೇ ವಿದ್ಯಾಭ್ಯಾಸವೆನಿಸಿದೆ.

ಸಾರಗ್ರಹಣ ಮತ್ತು ಸಾಮಾನ್ಯೀಕರಣ ಪ್ರಕ್ರಿಯೆಗಳಿಂದ ಭಾವನೆಗಳು ಬೆಳೆಯುತ್ತವೆ. ಬೇರೆ ಎಂದು ತೋರುವ ಬೇವು, ಆಲ, ಅರಳಿ, ಮಾವು ಮುಂತಾದ ಮರಗಳೆಲ್ಲಕ್ಕೂ ಸಾಮಾನ್ಯವಾಗಿರುವ ಅಂಶಗಳನ್ನು ಗುರುತಿಸಿ ಆ ಸಾಮಾನ್ಯ ಗುಣಗಳನ್ನು ನೋಟಕ್ಕೆ ಪ್ರತ್ಯೇಕಿಸುತ್ತ ಅಂಥ ಸಾಮಾನ್ಯಾಂಶಗಳಿಗೆ ಮರ ಎಂಬ ಹೆಸರನ್ನು ಕೊಡುತ್ತಾನೆ. ಒಂದು ಹೊಸ ಮರವನ್ನು ಕಂಡಾಗ, ಈ ಸಾಮಾನ್ಯಾಂಶಗಳನ್ನು ಗುರುತಿಸಿ ಅದು ಒಂದು ಮರ ಎಂದುಕೊಳ್ಳುತ್ತಾನೆ. ಹೀಗೆ, ಒಂದು ಭಾವನೆಯಲ್ಲಿ ಎಲ್ಲ ಹಳೆಯ ಅನುಭವಗಳ ಸಾರ ತುಂಬಿಕೊಂಡಿರುತ್ತದೆ. ಹಾಗೂ ವಾಸ್ತವಿಕ ಮತ್ತು ವೈಯಕ್ತಿಕ ವಿಷಯಗಳನ್ನು ಮೀರುವ ಉಪಾಯವೊಂದು ಅವನೊಳಗೆ ಬೆಳೆಯುತ್ತದೆ. ಮರ ಎಂಬ ಸರಳಭಾವನೆ ಕೂಡ ಈ ಲೋಕವ್ಯವಹಾರದಲ್ಲಿ ಎಷ್ಟು ಉಪಯುಕ್ತವಾಗಿದೆ ಎಂಬುದು ಆ ಒಂದು ಉಪನಾಮದಲ್ಲಿ ಪ್ರಪಂಚದ ಅನೇಕ ಬೇರೆ ಬೇರೆ ಮರಗಳನ್ನು ಹೇಗೆ ಅಡಕ ಮಾಡಬಹುದೆಂಬುದನ್ನು ಪರಿಭಾವಿಸಿದರೆ ತಿಳಿಯುತ್ತದೆ. ಆಸ್ಟ್ರೇಲಿಯದ ಕೆಲವು ವರ್ಗಗಳ ಜನರಿಗೆ ಮರ ಎಂಬ ಭಾವನೆಯೇ ತಿಳಿಯದು. ಅವರು ಯೂಕಲಿಪ್ಟಸ್, ಮುಲ್‌ಗ, ಗೋಂದಿನ ಮರ ಇತ್ಯಾದಿ ಬೇರೆ ಬೇರೆ ವೃಕ್ಷಗಳ ವಿಚಾರದಲ್ಲಿ ಅವುಗಳ ಹೆಸರು ಹಿಡಿದೇ ವ್ಯವಹರಿಸಬೇಕು. ಈ ಭಾವನಾರಾಹಿತ್ಯದಿಂದ ಅವರಿಗೆ ಅನನುಕೂಲವೇ ಹೆಚ್ಚು. ಅವರ ಲೋಕವ್ಯವಹಾರ ರೀತಿಯಲ್ಲಿ ಲಾಭಕ್ಕಿಂತ ನಷ್ಟವೇ ಹೆಚ್ಚು.

ಮಕ್ಕಳಲ್ಲೂ ತರುಣರಲ್ಲೂ ಹೇಗೆ ಭಾವನೆಗಳು ಬೆಳೆಯುತ್ತವೆ ಎಂಬ ವಿಚಾರದಲ್ಲಿ ಕುತೂಹಲಕಾರಕ ಪ್ರಯೋಗಗಳು ನಡೆದಿವೆ. ಸು.7–8 ವರ್ಷಗಳವರೆಗೂ ಮಗುವಿನ ಆಲೋಚನೆ ಅಹಂಭಾವದಲ್ಲಿ ಕೇಂದ್ರೀಕೃತವಾಗಿರುತ್ತದೆ; ಅದರ ಇಷ್ಟಗಳೂ ಆಂತರಿಕ ಆವಶ್ಯಕತೆಗಳೂ ಅದನ್ನು ಬಹುವಾಗಿ ಪ್ರಭಾವಗೊಳಿಸುತ್ತವೆ; ಆದರೆ ಸುತ್ತಣ ಪರಿಸರ ಮತ್ತು ಅದರ ಗುಣಗಳ ಗ್ರಹಿಕೆಯಿಂದ ಅಷ್ಟಾಗಿ ಅಲ್ಲ. ವಸ್ತುಗಳ ಪ್ರೇರಣೆಯಿಂದ ಇಂದ್ರಿಯಗಳು ಮಾತ್ರ ಚಲಿಸುವ ಎಳೆಗಾಲದಿಂದ ಪ್ರಾರಂಭಿಸಿ ವಾಸ್ತವದೊಂದಿಗೆ ಮಾತ್ರ ವ್ಯವಹರಿಸುತ್ತ ಸಂಖ್ಯೆ, ಕಾಲ ದೇಶ ಮತ್ತು ಕಾರ್ಯಕಾರಣ ಸಂಬಂಧ ಇತ್ಯಾದಿ ಅಮೂರ್ತ ಭಾವನೆಗಳನ್ನು ಅದು ಕ್ರಮೇಣ ಪಡೆಯುತ್ತದೆ. ವಯಸ್ಕರಲ್ಲಿ ಭಾವನೆಗಳು ಬೆಳೆಯುವ ಪ್ರತಿಕ್ರಿಯೆಯ ಮೇಲೆ ಪ್ರಯೋಗಗಳು ಬೆಳಕನ್ನು ಚೆಲ್ಲಿರುವುದಲ್ಲದೆ ಕೆಳಮಟ್ಟದ ಪ್ರಾಣಿಗಳಲ್ಲೂ ಅದು ಇರುವ ಬಗೆಯನ್ನು ತೋರಿಸಿಕೊಟ್ಟಿವೆ. ಮಕ್ಕಳು, ಕೋತಿಗಳು ಮತ್ತು ಬೆಕ್ಕುಗಳು ಇವುಗಳಲ್ಲದೆ ಇಲಿ ಮುಂತಾದ ತುಂಬ ಕೆಳಮಟ್ಟದ ಪ್ರಾಣಿಗಳೂ ತ್ರಿಕೋಣತ್ವ ಸಾರಗ್ರಹಣವನ್ನು ಕಲಿತಿವೆ ಎಂದು ಪಿಯಾಜೆಟ್ ಎಂಬ ಪ್ರಸಿದ್ಧ ಮನಶ್ಶಾಸ್ತ್ರಜ್ಞ ಸೂಚಿಸಿದ್ದಾನೆ.

ಅನೇಕರು ತಾವು ಅಲೋಚನೆ ಮಾಡುವಾಗ ಮನಸ್ಸಿನಲ್ಲಿ ಪ್ರತೀಕಗಳಿರುವುದನ್ನು ತಿಳಿಸಿದ್ದಾರೆ. ಈ ಶತಮಾನದ ಆದಿಭಾಗದಲ್ಲಿದ್ದ ಮನಶಾಸ್ತ್ರಜ್ಞರು ಆಲೋಚನೆಯಲ್ಲಿ ಪ್ರತೀಕಗಳ ಸ್ಥಾನದ ವಿಚಾರವಾಗಿ ದೀರ್ಘ ಚಿಂತನೆಯಲ್ಲಿ ತೊಡಗಿದ್ದರು. ಸಮಸ್ಯಾಪರಿಹಾರ ಮತ್ತು ಆಲೋಚನೆಗಳಲ್ಲಿ ತೊಡಗಿರುವವರು ತಮ್ಮೊಳಗನ್ನು ತಾವೇ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮಾನಸಿಕ ಚಿತ್ರಗಳು ಆ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವುದು ಕಂಡುಬರಲಿಲ್ಲ. ವಸ್ತುತಃ ಅತ್ಯುನ್ನತವೂ ಸಂಕೀರ್ಣವೂ ಆದ ಆಲೋಚನೆಯಲ್ಲಿ ಅನೇಕ ವಿಜ್ಞಾನಿಗಳೂ ಆಲೋಚನಾಪರರೂ ಆಸಕ್ತರೂ ಆಗಿದ್ದರೂ ಕಣ್ಣಿಗೆ ಕಾಣುವಂಥ ಪ್ರತೀಕ ನಿರ್ಮಾಣದಲ್ಲಿ ಅಕುಶಲರಾಗಿರುವುದು ಕಂಡುಬರುತ್ತದೆ. ಅನೇಕವೇಳೆ ಅಷ್ಟು ಸಮರ್ಥರಲ್ಲದ ವ್ಯಕ್ತಿಗಳೂ ಬಾಲರೂ ಸ್ಪಷ್ಟ ಮತ್ತು ವಿಶದ ಚಿತ್ರಗಳನ್ನು ಕಾಣಬಲ್ಲರು. ಹಲಸಮಯಗಳಲ್ಲಿ ಕಣ್ಣಿಗೆ ಕಾಣುವ ಚಿತ್ರಕ್ಕೂ ತಾವು ಆಲೋಚಿಸುತ್ತಿರುವ ವಿಷಯಕ್ಕೂ ಏನೂ ಸಂಬಂಧವಿಲ್ಲವೆಂದು ಅನೇಕರು ಹೇಳುತ್ತಾರೆ. ಆಲೋಚನೆಯಲ್ಲಿ ಚಿತ್ರಗಳಿಲ್ಲದಿರುವುದು ಆವಶ್ಯಕವೆಂದು ಇವು ಹೇಳವು. ಆದರೆ ಕೆಲವು ವೇಳೆ ಚಿತ್ರಗಳಿರುವುದು ಆ ಪ್ರಕ್ರಿಯೆಗೆ ನೆರವಾಗಬಹುದು ಅಥವಾ ತಡೆಗಳನ್ನೊಡ್ಡಬಹುದು ಎಂಬುದನ್ನೂ ಮತ್ತು ಬೇರೆ ವಿಧವಾದ ಸಾಂಕೇತಿಕ ಪ್ರಕ್ರಿಯೆಗಳೂ ಈ ಸಂಬಂಧದಲ್ಲಿ ನಿಯುಕ್ತವಾಗುತ್ತವೆ ಎಂಬುದನ್ನೂ ಅವು ತಿಳಿಸಿಕೊಡುತ್ತವೆ.

ಆಲೋಚನೆಯಲ್ಲಿ ಎಲ್ಲ ಸಾಂಕೇತಿಕ ಪ್ರಕ್ರಿಯೆಗಳಿಗಿಂತ ಹೆಚ್ಚಿನ ಸ್ಥಾನವನ್ನು ಪಡೆದಿರುವುದು ಭಾಷೆ. ಅದನ್ನು ಅಂತರ ಭಾಷಾಕ್ರಿಯೆ ಅಥವಾ ಬಿಗಿಹಿಡಿದ ಭಾಷಣ ಎಂದು ಪರಿಭಾವಿಸಲಾಗಿದೆ. ವರ್ಡ್ಸ್‌ವರ್ತ್ ಕವಿಯೂ ಮಾತೆಂಬುದು ಆಲೋಚನೆಯ ತೊಡಿಗೆಯಲ್ಲ, ಅದರ ಸ್ವರೂಪವೇ, ಅವತಾರವೇ ಎಂದಿದ್ದಾನೆ. ಆಲೋಚನೆ ಎಂಬುದು ಒಂದು ರೀತಿಯ ಒಳಮಾತುಗಾರಿಕೆಯೆ? ಅನೇಕ ವೇಳೆ ಮಕ್ಕಳು ಗಟ್ಟಿಯಾಗಿಯೇ ಆಲೋಚಿಸುತ್ತಾರೆ. ವಯಸ್ಕರೂ ತಮ್ಮ ತುಟಿಗಳನ್ನೂ ನಾಲಗೆಯನ್ನೂ ಆಡಿಸುತ್ತಾರೆ. ಇಲ್ಲದಿದ್ದರೆ ಚಿಂತಿಸುತ್ತಿರುವಾಗ ಕೈ ಬೆರಳುಗಳನ್ನು ಆಡಿಸುತ್ತಾರೆ. ಮಾತುಗಾರಿಕೆಯೂ ಆಲೋಚನೆಯೂ ಒಂದೇ ಎಂದು ಹೇಳಿದರೆ ತಪ್ಪಾಗುತ್ತದೆ. ಅನೇಕ ಪ್ರಾಣಿಗಳಿಗೆ ಮಾತು ಬರುತ್ತದೆಯೆಂದು ಹೇಳುವಂತಿಲ್ಲ. ಆದರೂ ಅವು ಆಲೋಚಿಸಬಲ್ಲವೆಂಬುದಕ್ಕೆ ಅನೇಕ ಪ್ರಮಾಣಗಳಿವೆ. ಭಾಷೆ ಇರುವಾಗಲೂ ಆಲೋಚನೆಯಲ್ಲಿ ಸ್ವಲ್ಪ ಅಂಶ ಭಾಷಾರಹಿತವಾದುದು. ಯಾವ ಹೆಸರೂ ಇಲ್ಲದ ವಸ್ತುವಿನ ವಿಚಾರವಾಗಿ ನಾವು ಆಲೋಚಿಸಬಲ್ಲೆವು. ಅನೇಕ ಮನಶ್ಶಾಸ್ತ್ರಜ್ಞರು ಆಲೋಚನೆಯನ್ನು ಮಾತುಗಳ ಮತ್ತು ಪ್ರತೀಕಗಳ ಸಹಾಯವಿಲ್ಲದೆಯೇ ನಡೆಸಬಹುದೆನ್ನುತ್ತಾರೆ. ಷೆಲ್ಲಿಯಂಥ ಕೆಲವು ಕವಿಗಳು ಕೂಡ ಆಲೋಚನೆಗೆ ಮಾತೊಂದು ತಡೆ ಎಂದು ಭಾವಿಸಿದ್ದರು. ಮಾತಿನ ಹೊರೆಯಿಂದ ತಪ್ಪಿಸಿದ ಹೊರತು ಒಂದು ಸಮಸ್ಯೆಯ ಸ್ವರೂಪಜ್ಞಾನ ತನಗಾಗುತ್ತಿರಲಿಲ್ಲವೆಂದು ಪ್ರಸಿದ್ಧ ವಿಜ್ಞಾನಿ ಗಾಲ್ಟನ್ ಹೇಳಿದ್ದಾನೆ. ಇನ್ನೂ ಮುಂದೆ, ಭಾವನೆಗಳ ನಿರ್ಮಾಣಕ್ಕೆ ಭಾಷೆ ಆವಶ್ಯಕವಲ್ಲ ಎಂಬುದು ಪ್ರಯೋಗಗಳಿಂದ ಸಿದ್ಧವಾಗಿದೆ.

ಮಾತುಗಳು ಆಲೋಚನೆಗೆ ಆವಶ್ಯಕವಲ್ಲ; ಅಲ್ಲದೆ, ಕೆಲವು ವೇಳೆ ಅವು ಅದಕ್ಕೆ ತಡೆಗಳನ್ನು ತರಬಹುದು. ಆದರೆ ಕೆಲ ಸಮಯಗಳಲ್ಲಿ ಸಮಸ್ಯಾಪರಿಹಾರಕ್ಕೆ ಮಾತು ಸಹಕಾರಿ ಎಂಬಂತೆ ತೋರಿಬರುತ್ತದೆ. ಲೋಕದ ಅನೇಕಾಂಶಗಳ ಸಂಕೇತ ಭಾಷಾರೂಪದಲ್ಲಿದೆ; ಮತ್ತು ನಮ್ಮ ಆಲೋಚನೆಯ ಬಹ್ವಂಶ ಇಂಥ ಸಂಕೇತಗಳ ಆಂತರಿಕ ನಿಯೋಜನೆಯಿಂದ ಜರುಗುತ್ತದೆ. ಮನುಷ್ಯನ ಸಂಸ್ಕೃತಿ ಹಬ್ಬಿದಂತೆಲ್ಲ, ಸಮಸ್ಯಾಪರಿಹಾರವನ್ನು ಸುಗಮವಾಗಿ ಮಾಡುವುದಕ್ಕಾಗಿ ಅನೇಕ ವಾಕ್ ಸಂಕೇತಗಳು ರೂಪುಗೊಂಡಿವೆ. ಬರಿ ವಸ್ತುಗಳನ್ನೂ ಪ್ರತೀಕಗಳನ್ನೂ ನೇರವಾಗಿ ಉಪಯೋಗಿಸುವಂತಾಗಿದ್ದರೆ ಇವುಗಳ ಪರಿಹಾರ ಅಷ್ಟು ಸುಲಭವಾಗಿ ಸಾಗುತ್ತಿರಲಿಲ್ಲ. ಇವೆರಡಕ್ಕೂ ಇರುವ ನಿಕಟ ಸಂಬಂಧವನ್ನು ಹ್ಯಾಮಿಲ್ಟನ್ ಒಂದು ಉಪಮೆಯ ಮೂಲಕ ಚೆನ್ನಾಗಿ ನಿರೂಪಿಸಿದ್ದಾನೆ. ಭಾಷಾನಿಯುಕ್ತಿಯನ್ನು ಮರಳ ದಡವೊಂದರಲ್ಲಿ ಒಂದು ಸುರಂಗವನ್ನು ತೋಡುವ ಕಾರ್ಯಕ್ಕೆ ಆತ ಹೋಲಿಸಿದ್ದಾನೆ. ತುಂಬ ಸೂಕ್ಷ್ಮವಾಗಿರುವ ವಿದ್ಯುತ್ ವಾಕ್ ತರಂಗಗ್ರಾಹಿಗಳ ಸಹಾಯದಿಂದ ಇತ್ತೀಚೆಗೆ ನಡೆಸಿದ ಪ್ರಯೋಗಗಳು ಆಲೋಚನಾ ಸಮಯದಲ್ಲಿ ಕಣ್ಣು, ಮಾಂಸಖಂಡಗಳು, ನಾಲಗೆ, ಕೊರಳುಗಳು, ಬಹು ಸೂಕ್ಷ್ಮವಾಗಿ ಚಲಿಸುತ್ತವೆ ಎಂಬುದನ್ನು ಸೂಚಿಸುತ್ತವೆ. ಮಾಂಸಖಂಡಗಳ ಈ ಚಲನೆಗಳು ಅನೇಕವೇಳೆ ಆಂತರಿಕ ಭಾಷೆ ಅಥವಾ ಇಂಗಿತಗಳೆಂದು ಪರಭಾವಿತವಾಗಿವೆ. ನಾಲಗೆ ಮತ್ತು ಕೊರಳುಗಳಲ್ಲಿ ಯಾವ ಚಲನೆಯೂ ತಲೆದೋರದ ಕಿವುಡ, ಮೂಗರನ್ನು ಈ ಪ್ರಯೋಗಕ್ಕೆ ನಿಯೋಜಿಸಿಕೊಂಡಾಗ ಅವರು ಗಣಿತದ ಸಮಸ್ಯೆಗಳನ್ನು ಬಿಡಿಸುತ್ತಿರುವಾಗ ಅವರ ಕೈಗಳಲ್ಲಿ ಕಾರ್ಯಸೂಚಿ ವಿದ್ಯುತ್ ಪ್ರವಾಹಗಳು ಕಂಡುಬಂದುವು; ಈ ಕೈಗಳೇ ಅವರು ಎಣಿಕೆಯಲ್ಲಿ ಉಪಯೋಗಿಸುವ ಅಂಗ.

ನರಮಂಡಲ ಕ್ಷೇತ್ರಗಳ ಸೂಕ್ಷ್ಮ ಚಲನೆಗಳೇ ಆಲೋಚನಾಕ್ರಿಯೆಯೆಂದೂ ಅಥವಾ ಅವಕ್ಕೆ ಅವೇ ಕಾರಣವೆಂದೂ ಹೇಳಿದರೆ ತಪ್ಪಾಗುವುದಾದರೂ ವ್ಯಕ್ತಿ ಆಲೋಚಿಸುತ್ತಿರುವಾಗ ಆತನ ನಾಲಗೆ ಮತ್ತು ಗಂಟಲುಗಳಲ್ಲಲ್ಲದೆ ಮೈಯೆಲ್ಲದರಲ್ಲಿಯೂ ಕ್ರಿಯಾಬಾಹುಳ್ಯ ಕಂಡುಬರುತ್ತದೆ.

ಆಲೋಚನಾಪ್ರಕ್ರಿಯೆಯ ವಿಷಯವಾಗಿ ಸಂಶೋಧನೆ ಏಕೆ ಹೇರಳವಾಗಿ ಮುಂದುವರಿದಿಲ್ಲವೆಂದು ಪ್ರಶ್ನಿಸಬಹುದು. ಆ ಪ್ರಕ್ರಿಯೆ ಆಂತರಂಗಿಕವಾದದ್ದು, ಸ್ವನಿರೀಕ್ಷಣೆಯಿಂದ ಮಾತ್ರ ಅದರ ಜ್ಞಾನ ಲಭ್ಯವಾಗಬೇಕು. ಈ ಕ್ರಮ ಯಾವಾಗಲೂ ತಥ್ಯವೆನಿಸದು, ವೈಜ್ಞಾನಿಕವೆನಿಸದು. ಆಲೋಚನಾ ಪ್ರಕ್ರಿಯೆಗಳನ್ನು ವಿಷಯೀಕರಿಸುವ ವಿಧಾನಗಳನ್ನು ಕಂಡುಹಿಡಿದು ಅದು ನೇರವಾಗಿ ನಮ್ಮ ನಿರೀಕ್ಷಣೆಗೆ ಸಿಕ್ಕುವಂತೆ ಮಾಡುವ ಕ್ರಮವನ್ನು ತಿಳಿಯುವುದು ಈಗ ಅತ್ಯವಶ್ಯಕ. ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಬಾರ್ಟ್‌ಲೆಟ್ ಅವರೂ ಹಾರ್ವರ್ಡಿನ ಬ್ರೂನರ್ ಅವರೂ ನಡೆಸಿರುವ ಪ್ರಯೋಗಸಿದ್ಧ ವ್ಯಾಸಂಗಗಳು ಈ ದಿಸೆಯಲ್ಲಿ ಮುಂದಿಟ್ಟ ಮುಖ್ಯ ಹೆಜ್ಜೆಗಳಾಗಿವೆ. ಅವರು ಆಲೋಚನೆಯನ್ನು ಕೋರುವ ಸಮಸ್ಯೆಗಳ ಸ್ವರೂಪವನ್ನೂ ಪ್ರಚೋದಕ ಪರಿಸ್ಥಿತಿಗಳನ್ನೂ ಪ್ರಕಟನಾರೀತಿಗಳನ್ನೂ ಇತರ ಅಂಶಗಳನ್ನೂ ಕ್ರಮಬದ್ಧವಾಗಿ ಬದಲಾಯಿಸಿ ಪ್ರತಿಕ್ರಿಯೆಯ ಬದಲಾವಣೆಗಳನ್ನು ಪರೀಕ್ಷಿಸಿರುವರು **(ನೋಡಿ: ಸಂಕೇತ ಶಾಸ್ತ್ರ)**.

(ಎಸ್.ಡಿ)

**ಪ್ರತಿಮಾರಹಿತ ಆಲೋಚನೆ:** 19ನೆಯ ಶತಮಾನದ ಅಂತ್ಯದಲ್ಲಿ ಅನೇಕ ಮನಶ್ಶಾಸ್ತ್ರಜ್ಞರು ಆಲೋಚನಾಪ್ರಕ್ರಿಯೆಗಳನ್ನು ಅಂತರವಲೋಕನ ವಿಧಾನದಿಂದ ವಿಶ್ಲೇಷಿಸಿ ಆಲೋಚನೆ ಮಾಡುವಾಗ ಪ್ರತಿಮೆಗಳ ಪರಂಪರೆ ಇರಲೇಬೇಕೆಂದು ಹೇಳಿದರು. ಮತ್ತಿತರರು ಪ್ರತಿರೂಪಗಳಿಲ್ಲದ ಅಂದರೆ ಪ್ರತಿಮಾರಹಿತ ಆಲೋಚನೆ ಸಾಧ್ಯ ಎಂದು ವಾದಿಸಿದರು. 1909 ರಲ್ಲಿ ಟಿಚ್‌ನರ್ ತನ್ನ ದಿ ಎಕ್ಸ್‌ಪಿರಿಮೆಂಟಲ್ ಸೈಕಾಲಜಿ ಆಫ್ ಥಾಟ್ ಪ್ರೋಸೆಸಸ್ ಎಂಬ ಪುಸ್ತಕದಲ್ಲಿ ಪ್ರತಿಮಾರಹಿತ ಆಲೋಚನೆ ಎಂಬುದೇ ಇಲ್ಲ ಎಂದು ವಾದಿಸಿದ್ದಾನೆ. ಇದಕ್ಕೆ ಪ್ರತಿಯಾಗಿ ವುಡ್‌ವರ್ತ್ ತನ್ನ ಪೇರ್ ಆಫ್ ವರ್ಡ್ಸ್ ಎಕ್ಸ್‌ಪಿರಿಮೆಂಟ್ ಎಂಬ ಪುಸ್ತಕದಲ್ಲಿ ಇಂದ್ರಿಯಾಂಶಗಳ ಪುನಃಸ್ಮರಣವಿಲ್ಲದೆ ಪ್ರತ್ಯಕ್ಷಾನುಭೂತಿಗಳು ಮರಳಿ ಮನಸ್ಸಿನಲ್ಲೆದ್ದಾಗ ಪ್ರತಿರೂಪವಿಲ್ಲದೆ ಚಿಂತನೆಗಳು ಮೈದೋರಬಹುದು ಎಂದು ಹೇಳಿದ್ದಾನೆ.

ವರ್ತನಾವಾದಿಗಳ ಪ್ರಕಾರ ಮಾನಸಿಕ ವ್ಯಾಪಾರಗಳೆಲ್ಲವೂ ದೈಹಿಕ ವ್ಯಾಪಾರಗಳು. ಆದ್ದರಿಂದ ಇವರಿಗೆ ಪ್ರತಿರೂಪವಿಲ್ಲದೆ ಆಲೋಚನೆ ನಡೆಯುವುದಿಲ್ಲವೆಂಬ ವಾದ ಹಿಡಿಸಲಿಲ್ಲ. ಪ್ರಯೋಗಕ್ಕೊಳಗಾದ ವ್ಯಕ್ತಿಗಳು ತಾವು ಕಂಡ ಪ್ರತಿರೂಪಗಳನ್ನು ನಿರೂಪಿಸಿದ ಸಾಕ್ಷ್ಯಗಳಲ್ಲಿ ನಂಬಲರ್ಹವಾದ ಎಷ್ಟೋ ಅಂಶಗಳಿರುತ್ತಿದ್ದುವು. ಆದಕಾರಣ ಪ್ರತಿರೂಪವನ್ನು ಮನಶ್ಶಾಸ್ತ್ರದ ದತ್ತಾಂಶವಾಗಿ ನಂಬಿಕೆಯಿಂದ ಸ್ವೀಕರಿಸಲು ಸಾಧ್ಯವಾಗಲಿಲ್ಲ. ವ್ಯಾಟ್ಸನ್ ಆವೃತ್ತಚಲನದ ಭಾವನೆಯನ್ನು ಸೂಚಿಸಿದ. ಸ್ನಾಯು ಮತ್ತು ನರಗಳ ಉಪಕರಣಗಳಿಂದ ಕೂಡಿರುವ ಮಾನಸಿಕ ವ್ಯವಸ್ಥೆಯಲ್ಲಿ ಸೂಕ್ಷ್ಮವಾದ ಆಂತರಿಕ ಚಲನಗಳೊಂದಿಗೆ ಪ್ರತಿರೂಪರಹಿತ ಚಿಂತನೆ ಸಂಬಂಧ ಹೊಂದಿರುವುದೆಂಬ ಅಂಶ ಅನೇಕ ವೇಳೆ ಕಂಡುಬಂದಿದೆ. ಕಿವುಡು ಮೂಗರನ್ನಿಟ್ಟುಕೊಂಡು ನಡೆಸಿರುವ ಪ್ರಯೋಗಗಳಿಂದ ಈ ವಿಷಯ ಖಚಿತಗೊಂಡಿದೆ. ಚಿಂತನೆ ಎಂಬುದು ನರ ಮತ್ತು ಸ್ನಾಯುಗಳ ಅವ್ಯಕ್ತಚಲನಗಳಲ್ಲದೆ ಮತ್ತೇನೂ ಅಲ್ಲ ಎಂಬ ಸಿದ್ಧಾಂತಕ್ಕೆ ಈ ಪ್ರಯೋಗಗಳು ದಾರಿಮಾಡಿಕೊಟ್ಟಿವೆ. ಈ ಅತಿಗಾಮಿ ದೃಷ್ಟಿಯಲ್ಲಿ ಇಂಥ ಆಂತರಿಕ ಸೂಕ್ಷ್ಮಸ್ನಾಯು ಚಲನೆಗಳಿಂದಲೇ ಚಿಂತನೆ ಉದ್ಭವಿಸುತ್ತದೆ ಎಂಬುದಕ್ಕೆ ತಕ್ಕ ಸಾಕ್ಷ್ಯಗಳಿರಲಿಲ್ಲ. ಅಷ್ಟಲ್ಲದೆ ಬಾಹ್ಯವೋ ಆಂತರಿಕವೋ ಆದ ಯಾವುದೇ ಒಂದು ಕ್ರಿಯೆಯತ್ತ ಚಿಂತನೆ ಹರಿಯುತ್ತದೆ ಎಂಬುದು ನಮಗೆ ಗೋಚರಿಸುತ್ತದೆ. ಇದಕ್ಕೆ ಅಷ್ಟು ಪ್ರಾಶಸ್ತ್ಯವನ್ನು ಕೊಡದ ಸಮಷ್ಟಿ ಮನಶ್ಶಾಸ್ತ್ರ ಪಂಥದವರ ಅಭಿಪ್ರಾಯದ ಪ್ರಕಾರ, ಹಿಂದಿನ ಅನುಭವಗಳನ್ನು ಪುನರುದ್ದೀಪಿಸುವುದರಲ್ಲಿ ಚಿಂತನೆಯ ಪಾತ್ರ ತುಂಬ ಅಲ್ಪವಾದದ್ದು. ಚಿಂತನೆ ಎಂಬುದು ಯಾವಾಗಲೂ ಉತ್ಪಾದನಾನಿರತವಾಗಿದೆ. ಒಂದು ಸಮಸ್ಯಾತ್ಮಕ ಸಂದರ್ಭದಿಂದ ಉತ್ಪನ್ನವಾದ ಬಿಗಿತ ಅಥವಾ ಒತ್ತಡವೇ ಪ್ರತ್ಯಕ್ಷಕ್ಷೇತ್ರದ ಪುನರ್ವ್ಯವಸ್ಥೆಯನ್ನು ಆವಶ್ಯಕಗೊಳಿಸುತ್ತದೆ. ಹಳೆಯ ಅನುಭವಗಳನ್ನು ನೆನೆದುಕೊಳ್ಳುವದಕ್ಕಿಂತ ಹೆಚ್ಚಾಗಿ, ಪ್ರತ್ಯಕ್ಷಕ್ಷೇತ್ರವನ್ನು ಪುನಾರಚಿಸುವ ಮತ್ತು ವ್ಯವಸ್ಥೆಗೊಳಿಸುವ ಕೆಲಸ ಚಿಂತನೆ ಮಾಡುವಾಗ ಹೆಚ್ಚಾಗಿ ನಡೆಯತ್ತದೆ.

ಮೇಯಿರ್ ಉದಾಹರಣೆಯೊಂದನ್ನು ಕೊಟ್ಟಿದ್ದಾನೆ. ಹುಟ್ಟುತ್ತಲೇ ಕುರುಡನಾಗಿದ್ದು ತನ್ನ ಏಳನೆಯ ವರ್ಷದಲ್ಲಿ ದೃಷ್ಟಿಯನ್ನು ಪಡೆದುಕೊಂಡ ಹುಡುಗನೊಬ್ಬ ತತ್‌ಕ್ಷಣವೇ ಚಿತ್ರಲೇಖನದಲ್ಲೂ ಬಣ್ಣಗಳ ರಚನೆಯಲ್ಲೂ ತುಂಬ ಕೌಶಲವನ್ನು ತೋರಿದ. ಆತನಿಗೆ ಅದರಲ್ಲಿ ಶಿಕ್ಷಣ ದೊರೆತಿರಲಿಲ್ಲ. ಆ ಮನೆಯಲ್ಲಿ ಕಲೆಗೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಬೆಳೆಸುವ ಪರಿಸರವೂ ಇರಲಿಲ್ಲ. ಈ ಪ್ರಕಾರವಾಗಿ, ಸೃಷ್ಟ್ಯಾತ್ಮಕ ಚಿಂತನೆಗೆ ಹಿಂದಿನ ಪ್ರತಿರೂಪಗಳು ಅನವಶ್ಯಕವೆಂಬುದು ಇದರಿಂದ ತಿಳಿದುಬರುತ್ತದೆ. ಹಿಲ್‌ಗಾರ್ಡ್ ಸಹ ಚಿಂತನಾಪ್ರಕ್ರಿಯೆಯಲ್ಲಿ ಪ್ರತಿರೂಪದ ಪ್ರಾಮುಖ್ಯದ ವಿಷಯದಲ್ಲಿ ಮಧ್ಯಮಾರ್ಗಾವಲಂಬಿ ದೃಷ್ಟಿಯುಳ್ಳವನಾಗಿದ್ದಾನೆ. ಆತನ ಪ್ರಕಾರ, ಆಲೋಚಿಸುವಾಗ ಒಬ್ಬ ಮನುಷ್ಯ ಈ ಪ್ರಕ್ರಿಯೆಗಳನ್ನು ತೋರಿಸುತ್ತಾನೆ : 1. ಪ್ರತಿರೂಪಗಳು. 2. ಅಧ್ವನಿತವಾದ ಮಾತು ಮತ್ತು ಇತರ ಚಲನಗಳು. 3. ಶಬ್ದಗಳು, ಚಿಹ್ನೆಗಳು ಮತ್ತು ಸಂಕೇತಗಳು. 4. ಅಮೂರ್ತ ಭಾವನೆಗಳು, ಅಮೂರ್ತ ಚಿಂತನೆಗಿಂತ ಮೂರ್ತಚಿಂತನೆ ಹೆಚ್ಚು ಸರಾಗವಾದದ್ದು. ಆದರೆ ಒಬ್ಬಾತ ಅಮೂರ್ತವಾಗಿ ಚಿಂತಿಸಲು ಸಮರ್ಥನಲ್ಲದಿದ್ದರೆ ಸದ್ಯದ ಕ್ಷಣಕ್ಕಿಂತ ದೂರಗಾಮಿಯಾದ ಸಮಸ್ಯೆಗಳನ್ನು ಕುರಿತು ಆತ ಚಿಂತಿಸಲಾರ. ಅಮೂರ್ತವಾಗಿ ಚಿಂತಿಸುವಾಗ ಸಮಸ್ತವಾಹಕಾಂಶಗಳನ್ನಲ್ಲದೆ ಯಾವ ಚಿಂತನಾವಾಹಕಾಂಶಗಳನ್ನಾದರೂ ಉಪಯೋಗಿಸಿಕೊಳ್ಳಬಹುದಾಗಿದೆ. ಈ ಪ್ರಕಾರ ಆಲೋಚಿಸಿ ಪ್ರತಿಮೆಗಳಿಂದ ಕೆಲವು ಸಮಯಗಳಲ್ಲಿ ಕೂಡಿರುವುದೆಂದೂ ಮತ್ತೆ ಕೆಲವು ಸಮಯಗಳಲ್ಲಿ ಪ್ರತಿಮಾರಹಿತವಾಗಿರಬಹುದೆಂದೂ ಕಂಡುಹಿಡಿಯಲಾಗಿದೆ.(ಬಿ.ಎಚ್.)

**ಆಲ್ಕಮೀಯನ್:** ಗ್ರೀಕ್ ಪೌರಾಣಿಕ ಕಥೆಗಳಲ್ಲಿ ಕಂಡುಬರುವ ಆರ್ಗಾಸ್‌ನ ವೀರ ಮತ್ತು ದಿವ್ಯಜ್ಞಾನಿ. ತಂದೆ ಆಂಫಿಯರೌಸ್, ತಾಯಿ ಎರಿಫೈಲೆ. ಥೀಬ್ಸ್ ವಿರುದ್ಧ 7 ಮಂದಿ ವೀರರು ನಡೆಸಿದ ದಾಳಿಯಲ್ಲಿ ಈತನ ತಂದೆ ಮೃತಪಟ್ಟ. ಮೊದಲಿನ 7ಮಂದಿ ವೀರರ ವಂಶಜರೊಡಗೂಡಿ ಈತನು ಥೀಬ್ಸ್ ವಿರುದ್ಧ ಎಪಿಗೋನಿಯರ ದಾಳಿಯಲ್ಲಿ ಭಾಗವಹಿಸಿದನೆಂದೂ ಪಟ್ಟಣಕ್ಕೆ ಹಿಂತಿರುಗಿ ಬಂದ ಅನಂತರ ತಂದೆಯ ಆಜ್ಞೆಯಂತೆ ತನ್ನ ತಾಯಿಯನ್ನು ಕೊಂದನೆಂದೂ ರೌದ್ರಿಯರು (ದಿ ಫ್ಯೂರೀಸ್) ಒರಿಸ್ಟೀಜ್‌ನನ್ನು (ನೋಡಿ) ಬೆನ್ನಟ್ಟಿದಂತೆ ಇವನನ್ನು ಬೆನ್ನಟ್ಟಿ ಕಾಡಿದರೆಂದೂ ಕಥೆಯಿದೆ. ವೈದ್ಯಶಾಸ್ತ್ರದ ನಾಲ್ಕು ದೈಹಿಕ ಪ್ರವೃತ್ತಿಗಳ (ಹ್ಯೂಮರ್) ಸಿದ್ಧಾಂತವನ್ನು ಈತ ರೂಪಿಸಿದನೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಇವನ ಪ್ರಕಾರ ಉಷ್ಣ, ತೇವ, ಶೀತ ಮತ್ತು ಶುಷ್ಕತೆಗಳ ಸಾಮರಸ್ಯ ದೇಹಸ್ವಾಸ್ಥ್ಯಕ್ಕೆ ಅಗತ್ಯ. (ಕೆ.ಎ.; ಎಲ್.ಎಸ್.ಎಸ್.)

**ಆಲ್ಕಲಾಯ್ಡ್‌ಗಳು:** ಪ್ರತ್ಯಾಮ್ಲೀಯ ಲಕ್ಷಣ, ಸಂಕೀರ್ಣ ರಚನೆ ಇರುವ ಮತ್ತು ಕೆಲವು ಜಾತಿಯ ಸಸ್ಯಗಳಲ್ಲಿ ದೊರೆಯುವ ಸಾವಯವ (ಆರ್ಗ್ಯಾನಿಕ್) ವಸ್ತುಗಳು. ಮೂಲ ಲಕ್ಷಣದಲ್ಲಿ ಇವು ಆಲ್ಕಲಿಗಳನ್ನು (ಕ್ಷಾರ) ಹೋಲುವುದರಿಂದ ಈ ಹೆಸರು ಬಂದಿದೆ. 1804ರಲ್ಲಿ ಸಸ್ಯವೊಂದರಿಂದ ಮಾರ್ಫಿನ್ ಸಂಯುಕ್ತವನ್ನು ಬೇರ್ಪಡಿಸಿದ ದಿನ ಆಲ್ಕಲಾಯ್ಡ್ ವಿಜ್ಞಾನದ ಆರಂಭವಾಯಿತೆನ್ನಬಹುದು. ದೈಹಿಕ ಕ್ರಿಯೆಗಳ ಮೇಲೆ ಪರಿಣಾಮಗಳನ್ನು ಉಂಟುಮಾಡಬಲ್ಲ ಸಸ್ಯಜನ್ಯ ಪ್ರತ್ಯಾಮ್ಲೀಯ (ಬೇಸಿಕ್) ನೈಟ್ರೋಜನ್ ಸಂಯುಕ್ತಗಳನ್ನು ಆಲ್ಕಲಾಯ್ಡ್‌ಗಳೆಂದು ಕರೆಯಲು 1818ರಲ್ಲಿ ತೀರ್ಮಾನಿಸಲಾಯಿತು. ಅಮೈನೋ ಆಮ್ಲಗಳು ಮತ್ತು ಪ್ರೋಟೀನ್‌ಗಳು ಸಸ್ಯಗಳಲ್ಲಿದ್ದರೂ ಅವು ಆಲ್ಕಲಾಯ್ಡ್ ಸಮೂಹಕ್ಕೆ ಸೇರುವುದಿಲ್ಲ. ಮಾರ್ಫೀನಿನ ಮೊದಲ ತಯಾರಿಕೆಯ ದಿನದಿಂದ ಇಂದಿನವರೆಗೆ ನೂರಕ್ಕೆ ಮೇಲ್ಪಟ್ಟ ಸಸ್ಯವರ್ಗಗಳಿಂದ ಸಾವಿರಾರು ಆಲ್ಕಲಾಯ್ಡ್‌ಗಳನ್ನು ಬೇರ್ಪಡಿಸಲಾಗಿದೆ. ಈ ಸಂಯುಕ್ತಗಳು ಜೈವಿಕ ಕ್ರಿಯೆಗಳ (ಬಯಲಾಜಿಕಲ್ ರಿಆ್ಯಕ್ಷನ್ಸ್) ಮೇಲೆ ಪರಿಣಾಮ ಬೀರಬಲ್ಲವು. ಆದ್ದರಿಂದ ಅವುಗಳ ಪ್ರಾಮುಖ್ಯ ಹೆಚ್ಚು. ಬಲು ಪುರಾತನ ಕಾಲದಿಂದಲೂ ಜನರು ಸಸ್ಯಗಳ ಎಲೆ, ಬೇರು, ತೊಗಟೆ, ಬೀಜ ಮುಂತಾದುವುಗಳ ಕಷಾಯ ಮತ್ತು ಪುಡಿಗಳನ್ನು ಔಷಧ ಅಥವಾ ವಿಷವಸ್ತುಗಳಾಗಿ ಉಪಯೋಗಿಸುತ್ತಲೇ ಇದ್ದಾರೆ. ಬಲುಮಟ್ಟಿಗೆ ಈ ಔಷಧೀಯ ಮತ್ತು ವಿಷಗುಣಗಳಿಗೆ ಸಸ್ಯಗಳಲ್ಲಿರುವ ಆಲ್ಕಲಾಯ್ಡ್‌ಗಳೇ ಕಾರಣವೆಂದು ಇಂದು ನಮಗೆ ತಿಳಿದಿದೆ.

ಸಾಮಾನ್ಯವಾಗಿ ದ್ವಿದಳ ಬೀಜಗಳನ್ನು ನೀಡುವ ಉಚ್ಚದರ್ಜೆಯ ಗಿಡಮರಗಳಲ್ಲಿ ಆಲ್ಕಲಾಯ್ಡ್‌ಗಳು ಹೆಚ್ಚಿನ ಪರಿಮಾಣದಲ್ಲಿರುವುದು ಕಂಡುಬಂದಿದೆ. ಹೂ, ಬೀಜ ಬಿಡದ ಕೀಳ್ಮಟ್ಟದ ಸಸ್ಯಗಳಲ್ಲಿ ಆಲ್ಕಲಾಯ್ಡ್‌ಗಳನ್ನು ಗುರುತಿಸಿಲ್ಲ. ಎರ್ಗಾಟ್ ಗುಂಪಿನ ಆಲ್ಕಲಾಯ್ಡ್‌ಗಳು ಈ ಸಾಮಾನ್ಯ ನಿಯಮಗಳಿಗೆ ಒಂದು ಮುಖ್ಯ ಅಪವಾದ. ಅವು ಚಿಟ್ಟಗೋದಿ (ರೈ) ಮೇಲೆ ಬೆಳೆಯುವ ಕೀಳ್ತರಗತಿಯ ಸಸ್ಯವಾದ ಬೂಷ್ಟಿನಲ್ಲಿ ದೊರೆಯುತ್ತವೆ. ಪರಸ್ಪರ ಸಂಬಂಧಿಸಿದ ಸಸ್ಯವರ್ಗಗಳಿಂದ ದೊರೆಯುವ ಆಲ್ಕಲಾಯ್ಡ್‌ಗಳಲ್ಲಿ ರಚನಾಸಾಮ್ಯತೆ (ಸ್ಟ್ರಕ್ಚರಲ್ ಸಿಮಿಲಾರಿಟಿ) ಮತ್ತು ಸಂಬಂಧ ಇವೆ.

ಸಸ್ಯಗಳ ಯಾವುದೇ ಒಂದು ಪ್ರತ್ಯೇಕ ಭಾಗದಲ್ಲಿ ಮಾತ್ರ ಆಲ್ಕಲಾಯ್ಡ್‌ಗಳು ಇರುತ್ತವೆಂದು ಹೇಳಲು ಸಾಧ್ಯವಿಲ್ಲ. ಎಲೆ, ಕಾಂಡ, ತೊಗಟೆ, ಬೇರು, ಹೂ, ಬೀಜಗಳಲ್ಲಿ ಎಲ್ಲಿ ಬೇಕಾದರೂ ಇರಬಹುದು. ಆದರೆ ಎಲ್ಲ ಭಾಗಗಳಲ್ಲೂ ಇರುತ್ತವೆಂದಾಗಲೀ, ಹಾಗೆ ಇದ್ದಲ್ಲಿ ಎಲ್ಲ ಭಾಗಗಳಲ್ಲೂ ಸಮಪ್ರಮಾಣದಲ್ಲಿ ಇರುತ್ತವೆಂದಾಗಲೀ ಹೇಳಲಾಗದು. ಉದಾಹರಣೆಗೆ ಹೊಗೆಸೊಪ್ಪಿನ ಎಲೆಗಳಲ್ಲಿ ಆಲ್ಕಲಾಯ್ಡ್‌ಗಳು ಹೆಚ್ಚಿನ ಪ್ರಮಾಣದಲ್ಲಿದ್ದರೂ ಬೀಜಗಳಲ್ಲಿ ಅವುಗಳ ಅಂಶ ಕಂಡುಬಂದಿಲ್ಲ. ಹಲವಾರು ವರ್ಷ ಇರಬಲ್ಲ ಗಿಡ, ಮರಗಳಲ್ಲಿ ಬೆಳೆವಣಿಗೆಯ ಮೊದಲ ವರ್ಷದಲ್ಲಿ ಆಲ್ಕಲಾಯ್ಡ್‌ಗಳ ಹಂಚಿಕೆ (ಡಿಸ್ಟ್ರಿಬ್ಯೂಷನ್) ಸಸ್ಯದ ಎಲ್ಲ ಭಾಗಗಳಲ್ಲಿಯೂ ಸಮನಾಗಿದ್ದು ಕ್ರಮೇಣ ಸಸ್ಯ ಬೆಳೆದಂತೆ ಹಲವು ನಿರ್ದಿಷ್ಟ ಭಾಗಗಳಲ್ಲಿ ಆಲ್ಕಲಾಯ್ಡ್ ಸಾಂದ್ರತೆ ಹೆಚ್ಚಾಗಿ ಉಳಿದ ಭಾಗಗಳಲ್ಲಿ ಕಡಿಮೆಯಾಗುತ್ತದೆ. ಒಂದು ವರ್ಷಕ್ಕಿಂತ ಕಡಿಮೆ ಆಯುಷ್ಯವುಳ್ಳ ಗಿಡಗಳಲ್ಲಿ ಆಲ್ಕಲಾಯ್ಡ್ ಪ್ರಮಾಣ ದಿನ ಕಳೆದಂತೆ ವ್ಯತ್ಯಸ್ತವಾಗುತ್ತಲೇ ಇದ್ದು ಹೂ ಬರುವುದಕ್ಕೆ ಹಲವು ದಿನಗಳ ಮೊದಲು ಆಲ್ಕಲಾಯ್ಡ್‌ಗಳು ಅಧಿಕ ಪ್ರಮಾಣದಲ್ಲಿ ಉತ್ಪನ್ನವಾಗುತ್ತವೆ.

ಆಲ್ಕಲಾಯ್ಡ್ ಇರುವ ಸಸ್ಯವೊಂದರಲ್ಲಿ ಸಾಮಾನ್ಯವಾಗಿ ಹಲವಾರು ಆಲ್ಕಲಾಯ್ಡ್‌ಗಳಿರುತ್ತವೆ. ಇಂಥವುಗಳ ಪರಸ್ಪರ ಪ್ರಮಾಣ ಸಸ್ಯದ ಬೆಳೆವಣಿಗೆಯ ಎಲ್ಲ ಘಟ್ಟಗಳಲ್ಲೂ ಒಂದೇ ಸಮನಾಗಿರುವುದಿಲ್ಲ. ಸಸ್ಯದ ಆರಂಭದೆಸೆಯಲ್ಲಿ ಕಾಣಲಾಗದ ಹಲವು ಆಲ್ಕಲಾಯ್ಡ್‌ಗಳನ್ನು ಬೆಳೆದ ಗಿಡಗಳಿಂದ ಸಾಕಷ್ಟು ಪ್ರಮಾಣದಲ್ಲಿ ಬೇರ್ಪಡಿಸಬಹದು. ಅಷ್ಟೇ ಅಲ್ಲದೆ ಸಸ್ಯದಲ್ಲಿನ ಆಲ್ಕಲಾಯ್ಡ್‌ಗಳ ಒಟ್ಟು ಪ್ರಮಾಣ ಮತ್ತು ಪರಸ್ಪರ ಪ್ರಮಾಣ ಸಸ್ಯ ಬೆಳೆಯುವ ವಾತಾವರಣ, ವಾಯುಗುಣ ಮತ್ತು ತಳಿಗಳನ್ನು ತಕ್ಕಮಟ್ಟಿಗೆ ಅವಲಂಬಿಸಿರುತ್ತವೆ. ಸಸ್ಯಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಬೆಳೆಸಿ ಅವುಗಳಲ್ಲಿನ ಆಲ್ಕಲಾಯ್ಡ್ ಪ್ರಮಾಣ ವ್ಯತ್ಯಾಸಗೊಳ್ಳುವಂತೆ ಮಾಡಬಹುದು. ಸಿಂಕೋನಾ ಮರಗಳಲ್ಲಿ ಕ್ವಿನೀನ್ ಆಲ್ಕಲಾಯ್ಡ್‌ನ ಪ್ರಮಾಣ ಹೆಚ್ಚಾಗುವಂತೆ ಜಾವಾದ್ವೀಪದಲ್ಲಿ ಮಾಡಲಾಗಿದೆ. ಹಾಗೆಯೇ ನಿಕೋಟೀನ್ ಅಂಶ ಕಡಿಮೆಯಿರುವ ಹೊಗೆಸೊಪ್ಪಿನ ಪ್ರತ್ಯೇಕ ತಳಿಯನ್ನೂ ಬೆಳೆಸಲು ಸಾಧ್ಯವಾಗಿದೆ.

ಆಲ್ಕಲಾಯ್ಡ್‌ಗಳು ಸಸ್ಯಗಳಲ್ಲಿ ಸಾಮಾನ್ಯವಾಗಿ ಬಿಡಿಯಾದ ಸ್ಥಿತಿಯಲ್ಲಿ (ಫ್ರೀ ಸ್ಟೇಟ್) ಇರುವುದಿಲ್ಲ; ಸಸ್ಯಗಳಲ್ಲಿರುವ ಆಮ್ಲಗಳೊಡನೆ ಸಂಯೋಜಿತವಾಗಿ ಲವಣಗಳ ರೂಪದಲ್ಲಿರುತ್ತವೆ (ನಿಕೊಟೀನ್ ಮತ್ತು ನಾರ್ಸೀನ್ ಮಾತ್ರ ಈ ನಿಯಮಕ್ಕೆ ಅಪವಾದಗಳು). ಈ ಬಗೆಯ ಸಂಯೋಗಗಳಲ್ಲಿ ಸಸ್ಯಗಳಲ್ಲಿ ಸಾಮಾನ್ಯವಾಗಿ ಇರುವ ಆಮ್ಲಗಳೆಲ್ಲವೂ ಎಂದರೆ ಆಕ್ಸಾಲಿಕ್, ಟಾರ್ಟಾರಿಕ್, ಅಸಿಟಿಕ್, ಮ್ಯಾಲಿಕ್, ಸಿಟ್ರಿಕ್ ಮೊದಲಾದ ಆಮ್ಲಗಳು ಭಾಗವಹಿಸುತ್ತವೆ. ಹಲವು ಪ್ರತ್ಯೇಕ ಸಂದರ್ಭಗಳಲ್ಲಿ ಕ್ವಿನಿಕ್, ಮೆಕೋನಿಕ್, ವೆರಾಟ್ರಿಕ್‌ಗಳಂಥ

ಕೆಲವು ವಿಶಿಷ್ಟ ಆಮ್ಲಗಳು ಆಲ್ಕಲಾಯ್ಡ್‌ಗಳೊಡನೆ ಸಂಯೋಜಿಸಿ ಲವಣಗಳಾಗಿರುತ್ತವೆ. ಆಲ್ಕೊಹಾಲ್ ಅಥವಾ ಫೀನಾಲ್ ಪುಂಜಗಳನ್ನುಳ್ಳ ಆಲ್ಕಲಾಯ್ಡ್‌ಗಳು ಹಲವು ಬಾರಿ ಎಸ್ಟರುಗಳಾಗಿಯೂ ಇರುತ್ತವೆ.

ಸಸ್ಯಗಳಲ್ಲಿ ಆಲ್ಕಲಾಯ್ಡ್‌ಗಳ ಪಾತ್ರ : ಸಸ್ಯಪ್ರಪಂಚದಲ್ಲಿ ಕಾಣಬರುವ ಅಧಿಕ ಸಂಖ್ಯೆಯ ಆಲ್ಕಲಾಯ್ಡ್‌ಗಳನ್ನು ಗಮನಿಸಿದಾಗ ಅವುಗಳಿಂದ ಸಸ್ಯಗಳಿಗೆ ಯಾವುದಾದರೊಂದು ಬಗೆಯ ಉಪಯೋಗವಿರಬೇಕೆಂದು ಭಾವಿಸುವುದು ಸಹಜ. ಆದರೆ ಸಸ್ಯಗಳಲ್ಲಿ ಆಲ್ಕಲಾಯ್ಡ್‌ಗಳು ನಿರ್ವಹಿಸುವ ಕರ್ತವ್ಯವೇನೆಂಬುದರ ವಿಷಯವಾಗಿ ಹಲವಾರು ವಾದಗಳನ್ನು ಮಂಡಿಸಲಾಗಿದ್ದರೂ ಈ ವಿಷಯ ಇನ್ನೂ ಸ್ಪಷ್ಟವಾಗಿಲ್ಲ. ಆಲ್ಕಲಾಯ್ಡ್‌ಗಳು ಜೀವಾಣುವಿನಲ್ಲಿರುವ ಪ್ರೋಟೋಪ್ಲಾಸಂನ ಸಂಯೋಜನೆಯಲ್ಲಿ ಮಧ್ಯವರ್ತಿಗಳಾಗಿರಬಹುದೆಂದು ಹೆಕೆಲ್ ಸೂಚಿಸಿದ. ಪ್ರೋಟೀನ್ ಮತ್ತು ಅಮೈನೋ ಆಮ್ಲಗಳಿಗೆ ಸಂಬಂಧಿಸಿದ ಹಲವು ಆಲ್ಕಲಾಯ್ಡ್‌ಗಳ ಮಟ್ಟಿಗೆ ಈ ವಾದ ಹೊಂದಬಹುದಾದರೂ ಉಳಿದ ಆಲ್ಕಲಾಯ್ಡ್‌ಗಳ ಬಗ್ಗೆ ಈ ವಾದ ವಿವರಣೆ ನೀಡುವುದಿಲ್ಲ. ಅಲ್ಲದೆ ಸಸ್ಯದ ವಿವಿಧ ಭಾಗಗಳಲ್ಲಿರುವ ಆಲ್ಕಲಾಯ್ಡ್‌ಗಳ ಅಸಮ ಹಂಚಿಕೆ ಈ ವಾದಕ್ಕೆ ಪುಷ್ಟಿ ನೀಡುವುದಿಲ್ಲ; ಮತ್ತು ಸಸ್ಯಗಳಲ್ಲಿ ಆಲ್ಕಲಾಯ್ಡ್ ಪ್ರಮಾಣಕ್ಕೂ ಪ್ರೊಟೋಪ್ಲಾಸಂ ಪ್ರೊಟೀನ್ ಪ್ರಮಾಣಕ್ಕೂ ಯಾವುದೇ ಸಂಬಂಧವಿಲ್ಲದಿರುವುದನ್ನು ಪ್ರಯೋಗಗಳಿಂದ ಸಿದ್ಧಪಡಿಸಲಾಗಿದೆ. ಆಲ್ಕಲಾಯ್ಡ್‌ಗಳೇ ಇಲ್ಲದ ಅನೇಕ ಸಸ್ಯಗಳಿವೆಯೆಂಬ ವಿಷಯವೂ ಗಮನಾರ್ಹವಾಗಿದೆ.

ಆಲ್ಕಲಾಯ್ಡ್‌ಗಳು ಪ್ರಕೃತಿಯು ಸಸ್ಯಗಳಿಗೆ ವರವಾಗಿತ್ತಿರುವ ರಕ್ಷಣಾಸ್ತ್ರಗಳೆಂದು ಹಲವು ವಿಜ್ಞಾನಿಗಳು ಭಾವಿಸಿದ್ದಾರೆ. ಅನೇಕ ಆಲ್ಕಲಾಯ್ಡ್‌ಗಳು ಸಸ್ಯಗಳ ಎಲೆ, ತೊಗಟೆಗಳಂಥ ಹೊರಗಣ (ಪೆರಿಫೆರಲ್) ಭಾಗಗಳಲ್ಲಿದ್ದು ವಿಷಸ್ವಭಾವವನ್ನು ಪಡೆದಿರುವುದೇ ಈ ವಾದಕ್ಕೆ ಮೂಲಕಾರಣ. ಆದರೆ ಎಲ್ಲ ಆಲ್ಕಲಾಯ್ಡ್‌ಗಳೂ ಸಸ್ಯಗಳ ಹೊರಮೈ ಭಾಗಗಳಲ್ಲಿಲ್ಲ : ಆಲ್ಕಲಾಯ್ಡ್‌ಗಳಲ್ಲಿನ ವಿಷ ಸ್ವಭಾವವೂ ತೀಕ್ಷ್ಣವಾಗಿಲ್ಲ. ಹೊರಮೈ ಭಾಗದಲ್ಲಿ ಆಲ್ಕಲಾಯ್ಡ್‌ಗಳನ್ನು ಪಡೆದಿರುವ ಸಸ್ಯಗಳಿಗಾದರೂ ಪರಕೀಯ ಜೀವಿಗಳಿಂದ ಆಗುತ್ತಿರುವ ಹಾನಿ ಕಡಿಮೆಯಾಗಿಲ್ಲ. ಆದ್ದರಿಂದ ರಕ್ಷಣಾಸ್ತ್ರವಾದವನ್ನು ಒಪ್ಪುವುದು ಸಾಧ್ಯವಿಲ್ಲ.

ಪ್ರಾಣಿಗಳ ದೇಹಗಳಿಗೆ ಬೇಡದ ನೈಟ್ರೊಜನ್ ಯೂರಿಯ ಅಥವಾ ಯೂರಿಕ್ ಆಮ್ಲವಾಗಿ ಹೊರಚಲ್ಲಲ್ಪಡುತ್ತದೆ. ಅದೇ ರೀತಿ ಸಸ್ಯದ ಚಯಾಪಚಯದ (ಮೆಟಬಾಲಿಸಂ) ಅಂತಿಮ ಸಂಯುಕ್ತಗಳೇ (ಎಂಡ್ ಕಾಂಪೌಂಡ್) ಆಲ್ಕಲಾಯ್ಡ್‌ಗಳಾಗಿದ್ದು ತಮಗೆ ಬೇಡದ ನೈಟ್ರೊಜನ್ನನ್ನು ಸಸ್ಯಗಳು ಹೀಗೆ ಹೊರಚೆಲ್ಲುತ್ತವೆಂಬುದು ಮತ್ತೊಂದು ವಾದ. ಈ ವಾದಕ್ಕೆ ಪ್ರಯೋಗಗಳ ಆಧಾರವೇನೂ ಇಲ್ಲ. ಕಾರ್ಬನ್, ಹೈಡ್ರೊಜನ್‌ಗಳೇ ಹೆಚ್ಚಿನ ಪ್ರಮಾಣದಲ್ಲಿರುವ ಆಲ್ಕಲಾಯ್ಡ್‌ಗಳಲ್ಲಿ ನೈಟ್ರೊಜನ್ನಿನ ಪ್ರಮಾಣ ಅತ್ಯಲ್ಪ. ಒಂದೆರಡು ನೈಟ್ರೊಜನ್ ಪರಮಾಣುಗಳನ್ನು ಬಂಧಿಸಿಡಲು ಆಲ್ಕಲಾಯ್ಡ್‌ಗಳಂಥ ಜಟಿಲ ರಚನೆಯ ಅಣುಗಳನ್ನು ಪ್ರಕೃತಿ ಸೃಷ್ಟಿಸುತ್ತದೆಂಬುದು ಅಸಮಂಜಸವಾಗಿ ತೋರುತ್ತದೆ.

ಅನಿರೀಕ್ಷಿತ ಪರಿಸ್ಥಿತಿಯನ್ನೆದುರಿಸಲು ಸಸ್ಯಗಳು ನೈಟ್ರೊಜನ್ನನ್ನು ಆಲ್ಕಲಾಯ್ಡ್‌ಗಳಲ್ಲಿ ಸಂಗ್ರಹಿಸಿ ಇಟ್ಟಿರುತ್ತವೆಂಬುದೂ ಒಂದು ವಾದ. ಆದರೆ ಸಸ್ಯಗಳಲ್ಲಿರುವ ಆಲ್ಕಲಾಯ್ಡ್‌ಗಳ ಅಲ್ಪಾಂಶ ಮತ್ತು ಆಲ್ಕಲಾಯ್ಡ್‌ಗಳಲ್ಲಿರುವ ನೈಟ್ರೊಜನ್ನಿನ ಅಲ್ಪಾಂಶಗಳನ್ನು ಗಮನಿಸಿದಾಗ ಈ ವಾದದಲ್ಲಿ ಅಷ್ಟು ಹುರುಳಿಲ್ಲವೆಂಬುದು ತಾನಾಗಿ ವ್ಯಕ್ತವಾಗುತ್ತದೆ. ಈ ವಾದವನ್ನು ಸಮರ್ಥಿಸಲು ಪ್ರಯೋಗಗಳ ಆಧಾರವಂತೂ ಇಲ್ಲವೇ ಇಲ್ಲ.

ಈವರೆಗೂ ಪ್ರಯೋಗಗಳ ಆಧಾರವೇನೂ ದೊರೆಯದೆ ಹೋದರೂ ವಿಜ್ಞಾನಿಗಳು ನಂಬಿರುವ ವಾದವೊಂದಿದೆ. ನಮ್ಮ ದೇಹದಲ್ಲಿನ ಹಾರ್ಮೋನುಗಳಂತೆ ಸಸ್ಯಗಳಲ್ಲಿನ ಚಯಾಪಚಯಗಳನ್ನು (ಮೆಟಬಾಲಿಕ್ ರಿಆ್ಯಕ್ಷನ್) ನಿರ್ದೇಶಿಸುವುದರಲ್ಲಿ ಆಲ್ಕಲಾಯ್ಡ್‌ಗಳು ಪ್ರಮುಖ ಪಾತ್ರ ವಹಿಸುತ್ತವೆಂಬುದೇ ಈ ವಾದ. ಸಸ್ಯಗಳ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ವಿವಿಧ ಆಲ್ಕಲಾಯ್ಡ್‌ಗಳು ಭಿನ್ನ ಪ್ರಮಾಣಗಳಲ್ಲಿ ಸೃಷ್ಟಿಯಾಗುವುದು ಈ ಊಹೆಗೆ ಆಧಾರ. ಈ ವಾದವನ್ನು ಸ್ಪಷ್ಟೀಕರಿಸಿ ಸಮರ್ಥಿಸಲು ಹಲವು ಪ್ರಯೋಗಗಳು ನಡೆಯುತ್ತಿವೆ.

ನಾಮಕರಣ: ನಿಕೊಟೀನ್‌ನಂಥ ಹಲವು ಆಲ್ಕಲಾಯ್ಡ್‌ಗಳ ರಚನೆಗಳು ಸರಳವಾದವುಗಳಾದರೂ ಬಹುಸಂಖ್ಯೆಯ ಆಲ್ಕಲಾಯ್ಡ್‌ಗಳು ಜಟಿಲರಚನೆಯುಳ್ಳವಾದ್ದರಿಂದ ರಾಸಾಯನಿಕ ನಾಮಕರಣ ನಿಯಮಗಳನ್ನು (ನಾಮನ್‌ಕ್ಲೇಚರ್ ರೂಲ್ಸ್) ಅನುಸರಿಸಿ ಇವುಗಳಿಗೆ ಹೆಸರಿಡುವುದು ಬಹಳ ಕಷ್ಟ . ಆದ್ದರಿಂದ ಈ ಬಗೆಯ ಪ್ರಯತ್ನವನ್ನು ಬಿಟ್ಟು ಇತರ ವಿಧಾನಗಳನ್ನು ಉಪಯೋಗಿಸುವುದು ಅನಿವಾರ್ಯ. ಸಾಮಾನ್ಯವಾಗಿ ಆಲ್ಕಲಾಯ್ಡ್‌ಗಳ ಹೆಸರುಗಳು ಅವುಗಳ ಆಕರಸಸ್ಯದ ಹೆಸರನ್ನು ಅವಲಂಬಿಸಿದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಅವುಗಳ ಗುಣ, ಲಕ್ಷಣ ಅಥವಾ ಉಪಯುಕ್ತತೆಗಳನ್ನು ಅವಲಂಬಿಸಿ ಹೆಸರಿಡಲಾಗುತ್ತದೆ. ಒಂದೇ ಒಂದು ಸಂದರ್ಭದಲ್ಲಿ ವಿಜ್ಞಾನಿಯ ಹೆಸರನ್ನು ಅವಲಂಬಿಸಿರುವುದು ಕಂಡುಬಂದಿದೆ [ಪೆಲೆಟೀರೀಸ್ ಎಂಬ ಹೆಸರಿಗೆ ಮೂಲ ಆಲ್ಕಲಾಯ್ಡ್ ವಿಜ್ಞಾನಿ ಪೆಲ್ಟೈ ಎಂಬುವನ ಹೆಸರು]. ಈ ಬಗೆಯ ಸ್ವಲ್ಪ ಹೆಚ್ಚು ಕಡಿಮೆ ನಿಯಮರಹಿತ ನಾಮಕರಣದ ದೆಸೆಯಿಂದಾಗಿ ಆಲ್ಕಲಾಯ್ಡಿನ ಹೆಸರಿನಿಂದ ಅದರ ರಾಸಾಯನಿಕ ರಚನೆ, ಗುಣ, ಲಕ್ಷಣಗಳ ವಿಚಾರವಾಗಿ ಏನೂ ತಿಳಿಯುವಂತಿಲ್ಲ. ಅಲ್ಲದೆ ಅನೇಕ ಬಾರಿ ಒಂದೇ ಆಲ್ಕಲಾಯ್ಡನ್ನು ಇಬ್ಬರು ವಿಜ್ಞಾನಿಗಳು ಒಬ್ಬನಿಗರಿವಿಲ್ಲದಂತೆ ಇನ್ನೊಬ್ಬ ಕಂಡುಹಿಡಿದಾಗ ಬೇರೆ ಬೇರೆ ಹೆಸರುಗಳಿಟ್ಟಿರುವುದು ಕಂಡುಬರುತ್ತದೆ.

ತಯಾರಿಕೆ: ಸಸ್ಯಗಳಲ್ಲಿ ಆಲ್ಕಲಾಯ್ಡ್‌ಗಳು ಮಾತ್ರವಲ್ಲದೆ ಇತರ ಅನೇಕ ಸಂಯುಕ್ತಗಳು ಇವೆ. ಸಾಮಾನ್ಯವಾಗಿ ಆಲ್ಕಲಾಯ್ಡ್‌ಗಳ ಅಂಶ ನೂರಕ್ಕೆ ಎರಡಕ್ಕಿಂತ ಕಡಿಮೆ ಇರುತ್ತದೆ. ಸಸ್ಯಗಳಲ್ಲಿರುವ ಪಿಷ್ಟ (ಕಾರ್ಬೊಹೈಡ್ರೇಟ್), ಸೆಲ್ಯುಲೋಸ್, ವರ್ಣದ್ರವ್ಯ (ಪಿಗ್‌ಮೆಂಟ್), ರಾಳ (ರೆಸಿನ್) ಮೊದಲಾದುವುಗಳಿಂದ ಬೇರ್ಪಡಿಸುವುದು ಆಲ್ಕಲಾಯ್ಡ್‌ಗಳ ತಯಾರಿಕೆಯಲ್ಲಿ ಮೊದಲನೆಯ ಘಟ್ಟ. ಇದಾದ ಅನಂತರವೂ ಆಲ್ಕಲಾಯ್ಡ್‌ಗಳು ಸಂಪೂರ್ಣ ಶುದ್ಧವಾಗಿರುವುದಿಲ್ಲ. ಅಲ್ಲದೆ ಹೀಗೆ ಬೇರ್ಪಡಿಸುವಾಗ ಸಾವಯವ ದ್ರವ್ಯಗಳು, ನೀರು, ಶಾಖ, ಆಮ್ಲ, ಪ್ರತ್ಯಾಮ್ಲಗಳನ್ನು ಉಪಯೋಗಿಸುವುದು ಅನಿವಾರ್ಯ. ಹಲವು ಆಲ್ಕಲಾಯ್ಡ್‌ಗಳು ತೀವ್ರಪರಿಸ್ಥಿತಿಗಳಲ್ಲಿ ಅಸ್ಥಿರವಾದ್ದರಿಂದ ಅವುಗಳ ತಯಾರಿಕೆಯಲ್ಲಿ ಬಲು ಜಾಗರೂಕತೆಯನ್ನು ವಹಿಸುವುದು ಆವಶ್ಯಕ. ಹೀಗೆ ದೊರೆತ ಆಲ್ಕಲಾಯ್ಡ್ ಭಾಗ ಹಲವು ಆಲ್ಕಲಾಯ್ಡ್‌ಗಳ ಮಿಶ್ರಣವಾಗಿರಬಹುದು. ಆದ್ದರಿಂದ ಅವನ್ನು ಅನಂತರ ಪರಸ್ಪರ ಬೇರ್ಪಡಿಸಿ ಪುನಃ ಶುದ್ಧೀಕರಿಸಬೇಕಾಗುತ್ತದೆ. ಸಸ್ಯಗಳಲ್ಲಿ ಆಲ್ಕಲಾಯ್ಡ್ ಕೇವಲ ಅಲ್ಪಾಂಶದಲ್ಲಿರುವುದರಿಂದಲೂ ಅವುಗಳ ಬೇರ್ಪಡೆ ದೀರ್ಘವಾಗಿದ್ದು ಈ ಕಾಲದಲ್ಲಿ ಸಾಕಷ್ಟು ನಷ್ಟವಾಗುವುದರಿಂದಲೂ ಹಲವು ಗ್ರಾಂ ಆಲ್ಕಲಾಯ್ಡ್‌ಗಳಿಗಾಗಿ ಅನೇಕ ಟನ್ ಸಸ್ಯಗಳಿಂದ ಆರಂಭಿಸುವ ಆವಶ್ಯಕತೆಯಿದ್ದು ದೊಡ್ಡ ಗಾತ್ರದ ಉಪಕರಣಗಳನ್ನು ಉಪಯೋಗಿಸಬೇಕಾಗುತ್ತದೆ.

ಮೊದಲು ಸಸ್ಯದ ಯಾವ ಭಾಗದಲ್ಲಿ ಆಲ್ಕಲಾಯ್ಡ್‌ಗಳ ಸಾಂದ್ರತೆ ಹೆಚ್ಚಿರುತ್ತದೋ ಆ ಭಾಗವನ್ನು ಬೇರ್ಪಡಿಸಿ, ಸಣ್ಣ ಸಣ್ಣ ತುಂಡುಗಳನ್ನಾಗಿ ಇಲ್ಲವೇ ಪುಡಿಮಾಡಿ ಅದರಲ್ಲಿನ ಜಲಾಂಶ ಕಡಿಮೆ ಮಾಡಲು ಒಣಗಿಸಲಾಗುತ್ತದೆ. ಅನಂತರ ಈ ಸಸ್ಯರಾಶಿಯಿಂದ ಆಲ್ಕಲಾಯ್ಡ್ ಮೊತ್ತವನ್ನು ಬೇರ್ಪಡಿಸಲು ಲೀನಕಾರಿ ಸಂಸ್ಕರಣಕ್ಕೆ (ಎಕ್ಸ್‌ಟ್ರ್ಯಾಕ್ಷನ್) ಒಳಪಡಿಸಬೇಕು. ಈ ಬಗೆಯ ಸಂಸ್ಕರಣಕ್ಕೆ ಎರಡು ಬಗೆಯ ಲೀನಕಾರಿಗಳನ್ನು ಉಪಯೋಗಿಸಬಹುದು : 1. ಬೆಂಜೀನ್, ಈಥರ್ ಮೊದಲಾದ ನೀರಿನೊಡನೆ ಬೆರೆಯದ ಸಾವಯವ ಲೀನಕಾರಿಗಳು. 2. ನೀರಿನೊಡನೆ ಬೆರೆಯಬಲ್ಲ ಆಲ್ಕೋಹಾಲ್ ಅಥವಾ ಸಾರಗುಂದಿದ ಮತ್ತು ದುರ್ಬಲ (ಡೈಲ್ಯೂಟ್ ಮತ್ತು ವೀಕ್) ಆಮ್ಲಗಳ ಜಲದ್ರಾವಣಗಳು. ದುರ್ಬಲ ಆಮ್ಲಗಳ ಗುಂಪಿನಲ್ಲಿ ದುರ್ಬಲ ಆಮ್ಲೀಯತೆಯನ್ನುಳ್ಳ ಲವಣ ದ್ರಾವಣಗಳೂ ಸೇರುತ್ತವೆ.

ಮೊದಲನೆಯ ಬಗೆಯ ಲೀನಕಾರಿಗಳು ಸಸ್ಯಗಳಲ್ಲಿರುವ ರಾಳ, ಕೊಬ್ಬುಗಳನ್ನೂ ದ್ರಾವಣದಲ್ಲಿ ಸೇರುವಂತೆ ಮಾಡಬಲ್ಲವು. ದ್ರಾವಣದಲ್ಲಿ ಈ ಪರಕೀಯ ವಸ್ತುಗಳೂ ಬೆರೆತಿದ್ದರೆ ಆಲ್ಕಲಾಯ್ಡ್‌ಗಳ ಶುದ್ಧೀಕರಣ ಬಲು ಕಷ್ಟ. ಆದ್ದರಿಂದ ಸಸ್ಯರಾಶಿಯನ್ನು ಮೊದಲೊಮ್ಮೆ ಲೀನಕಾರಿ ಕೊಬ್ಬು ಸಂಸ್ಕರಣಕ್ಕೆ ಒಳಪಡಿಸಿ, ರಾಳಗಳನ್ನು ನಿವಾರಿಸಬೇಕು. ಅನಂತರ ಈ ಸಸ್ಯರಾಶಿಯಲ್ಲಿ ಲವಣರೂಪದಲ್ಲಿರುವ ಆಲ್ಕಲಾಯ್ಡ್‌ಗಳನ್ನು ಮುಕ್ತಸ್ಥಿತಿಗೆ ತರಲು ಪ್ರತ್ಯಾಮ್ಲವೊಂದರೊಡನೆ ವರ್ತಿಸುವಂತೆ ಮಾಡಬೇಕು. ಪ್ರತ್ಯಾಮ್ಲ ತೀವ್ರವಾಗಿದ್ದರೆ ಅಸ್ಥಿರ ಆಲ್ಕಲಾಯ್ಡ್‌ಗಳು ಶಿಥಿಲಗೊಂಡು ನಷ್ಟವಾಗುತ್ತವೆ. ಅಂಥ ಸಂದರ್ಭಗಳಲ್ಲಿ ಅಮೋನಿಯ, ಸೋಡಿಯಂ ಬೈಕಾರ್ಬೊನೇಟ್‌ಗಳಂಥ ದುರ್ಬಲ ಪ್ರತ್ಯಾಮ್ಲಗಳನ್ನು ಜಾಗರೂಕತೆಯಿಂದ ಉಪಯೋಗಿಸಬೇಕಾಗುತ್ತದೆ. ಲವಣರೂಪದಲ್ಲಿದ್ದಾಗ ಸಾವಯವ ಲೀನಕಾರಿಗಳಲ್ಲಿ ಆಲ್ಕಲಾಯ್ಡ್‌ಗಳು ಲೀನವಾಗುವುದಿಲ್ಲ. ಆದರೆ ಬಿಡಿಸ್ಥಿತಿಯಲ್ಲಿದ್ದಾಗ ಲೀನವಾಗುತ್ತವೆ. ಆದ್ದರಿಂದ ಪ್ರತ್ಯಾಮ್ಲದೊಡನೆ ವರ್ತಿಸಿದ ಸಸ್ಯರಾಶಿಯನ್ನು ಪುನಃ ಲೀನಕಾರೀ ಸಂಸ್ಕರಣಕ್ಕೆ ಒಳಪಡಿಸಿದಾಗ ಆಲ್ಕಲಾಯ್ಡ್‌ಗಳು ಸಾವಯವ ಲೀನಕಾರಿಗಳಲ್ಲಿ ಲೀನವಾಗಿ ಆಲ್ಕಲಾಯ್ಡ್ ದ್ರಾವಣ ದೊರೆಯುತ್ತದೆ.

ಎರಡನೆಯ ಬಗೆಯ ಲೀನಕಾರಿಗಳನ್ನು ಉಪಯೋಗಿಸುವಾಗ ಸಸ್ಯರಾಶಿಯನ್ನು ಮೊದಲು ಪ್ರತ್ಯಾಮ್ಲಗಳೊಡನೆ ರಾಸಾಯನಿಕ ಕ್ರಿಯೆಗೆ ಒಳಪಡಿಸಿ ಆಲ್ಕಲಾಯ್ಡ್‌ಗಳನ್ನು ಬಿಡಿಸ್ಥಿತಿಗೆ ತರುವುದು ಆವಶ್ಯಕ. ಈ ಸಂದರ್ಭದಲ್ಲಿಯೂ ಪ್ರತ್ಯಾಮ್ಲವನ್ನು ಆರಿಸಿಕೊಳ್ಳುವ ಆಲ್ಕಲಾಯ್ಡ್‌ಗಳ ಅಸ್ಥಿರತೆಯನ್ನು ಗಮನದಲ್ಲಿಡಬೇಕು. ಬೇರ್ಪಡಿಸಲಾಗುತ್ತಿರುವ ಆಲ್ಕಲಾಯ್ಡ್‌ಗಳು ಸ್ಥಿರಬಗೆಯವಾಗಿದ್ದರೆ ಸುಟ್ಟ ಸುಣ್ಣ ಅಥವಾ ಸೋಡಿಯಂ ಹೈಡ್ರಾಕ್ಸೈಡುಗಳಂಥ ತೀವ್ರ ಕ್ಷಾರವಸ್ತುಗಳನ್ನು ಉಪಯೋಗಿಸಬಹುದು. ಹೀಗೆ ಪ್ರತ್ಯಾಮ್ಲದೊಡನೆ ವರ್ತಿಸಿದ ಸಸ್ಯರಾಶಿಯನ್ನು ಲೀನಕಾರೀ ಸಂಸ್ಕರಣಕ್ಕೆ ಒಳಪಡಿಸಿದಾಗ ಆಲ್ಕಲಾಯ್ಡ್‌ಗಳು ಲೀನಕಾರಿಗಳಲ್ಲಿ ಲೀನವಾಗಿ ಸಸ್ಯಮೂಲದಿಂದ ಹೊರಬರುತ್ತವೆ. ಎರಡು ಬಗೆಯ ಲೀನಕಾರೀ ಸಂಸ್ಕರಣಗಳಿಗೂ ಸಾಕ್ಸ್‌ಲೆಟ್ ಮಾದರಿಯ ಉಪಕರಣವನ್ನು ಉಪಯೋಗಿಸಬಹುದು.

ಹಲವು ಬಗೆಯ ಆಲ್ಕಲಾಯ್ಡ್‌ಗಳಿಗೆ ಮೊದಲನೆಯ ವಿಧಾನವೂ ಮತ್ತೆ ಹಲವಕ್ಕೆ ಎರಡನೆಯ ವಿಧಾನವೂ ಅನುಕೂಲ ಮಾರ್ಗಗಳು. ಆದ್ದರಿಂದ ವಿಧಾನವನ್ನು ಆರಿಸುವಾಗ ಸಸ್ಯಮೂಲ ಮತ್ತು ಅದರಲ್ಲಿನ ಆಲ್ಕಲಾಯ್ಡ್‌ಗಳ ಬಗ್ಗೆ ಪೂರ್ವಜ್ಞಾನವಿದ್ದರೆ ಒಳ್ಳೆಯದು. ಯಾವುದೇ ವಿಧಾನವನ್ನು ಅನುಸರಿಸಿದರೂ ಲೀನಕಾರಿ ಸಂಸ್ಕರಣದ ಅನಂತರ ದೊರೆಯುವುದು ಆಲ್ಕಲಾಯ್ಡ್‌ಗಳ ಕಚ್ಚಾದ್ರಾವಣ.

ಸಾವಯದ ಲೀನಕಾರಿಗಳನ್ನು ಉಪಯೋಗಿಸಿದಾಗ ದೊರೆತ ದ್ರಾವಣದಿಂದ ಲೀನಕಾರಿಗಳನ್ನು ಬಾಷ್ಪೀಕರಣ (ಇವಾಪೊರೇಷನ್) ಅಥವಾ ಆಸವೀಕರಣದ (ಡಿಸ್ಟಿಲೇಷನ್) ಮೂಲಕ ಹೊರದೂಡಿದಾಗ ಆಲ್ಕಲಾಯ್ಡ್‌ಗಳ ಕರಡು ಮಿಶ್ರಣ ದೊರೆಯುತ್ತದೆ. ಸಾರಗುಂದಿಸಿದ ಅಥವಾ ದುರ್ಬಲ ಆಮ್ಲೀಯ ಲೀನಕಾರಿಗಳನ್ನು ಉಪಯೋಗಿಸಿದಾಗ ದೊರೆಯುವ ದ್ರಾವಣದಲ್ಲಿ ಆಲ್ಕಲಾಯ್ಡ್‌ಗಳು ಲವಣ ರೂಪದಲ್ಲಿರುತ್ತವೆ. ಈ ಆಮ್ಲೀಯ ದ್ರಾವಣಕ್ಕೆ ಸಾಕಷ್ಟು ಪ್ರತ್ಯಾಮ್ಲವನ್ನು ಸೇರಿಸಿದಾಗ ಲವಣರೂಪದಲ್ಲಿದ್ದ ಆಲ್ಕಲಾಯ್ಡ್‌ಗಳು ಬಿಡಿಸ್ಥಿತಿಗೆ ಬಂದು ದ್ರಾವಣದಲ್ಲಿ ಬೇರೆ ಆಗುತ್ತವೆ. ಹೀಗೆ ಬೇರ್ಪಟ್ಟ ಆಲ್ಕಲಾಯ್ಡ್‌ಗಳನ್ನು ನೀರಿನೊಡನೆ ಬೆರೆಯದ ಸಾವಯದ ಲೀನಕಾರಿಯೊಂದರಿಂದ ಸಂಸ್ಕರಿಸಿ ದೊರೆತ ದ್ರಾವಣದಿಂದ ಲೀನಕಾರಿಯನ್ನು ಆಸವೀಕರಿಸುವುದರ ಮೂಲಕ ಬೇರ್ಪಡಿಸಿದಾಗ ಆಲ್ಕಲಾಯ್ಡ್ ಕರಡುರಾಶಿ ದೊರೆಯುತ್ತದೆ. ಇದರಲ್ಲಿ ಪರಕೀಯ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ಇಲ್ಲದೆ ಹೋದರೆ ಈ ಮಿಶ್ರಣವನ್ನು ನೇರವಾಗಿ ಆಲ್ಕಲಾಯ್ಡ್‌ಗಳನ್ನು ಪ್ರತ್ಯೇಕಿಸಲು ತೆಗೆದುಕೊಳ್ಳಬಹುದು. ಹಾಗಿಲ್ಲದಿದ್ದಲ್ಲಿ ಆಲ್ಕಲಾಯ್ಡ್‌ಗಳ ಕರಡುರಾಶಿಯನ್ನು ಸಾರಗುಂದಿಸಿದ ಆಮ್ಲವೊಂದರಲ್ಲಿ ಲೀನಮಾಡಿ ಕರಗದ ವಸ್ತುಗಳನ್ನು ಶೋಧಿಸಿ ತೆಗೆದು, ಉಳಿದ ದ್ರಾವಣವನ್ನು ಸಾವಯವ ಲೀನಕಾರಿಗಳಿಂದ ತೊಳೆದರೆ ಆಲ್ಕಲಾಯ್ಡ್‌ಗಳಲ್ಲದ ಪರಕೀಯ ವಸ್ತುಗಳು ಆ ಲೀನಕಾರಿಗಳಲ್ಲಿ ಲೀನವಾಗಿ ಆಲ್ಕಲಾಯ್ಡ್‌ಗಳಿಂದ ಬೇರೆಯಾಗುತ್ತವೆ. ಉಳಿದ ಆಮ್ಲೀಯ ದ್ರಾವಣಕ್ಕೆ ಪ್ರತ್ಯಾಮ್ಲವೊಂದನ್ನು ಸಾಕಷ್ಟು ಪ್ರಮಾಣದಲ್ಲಿ ಸೇರಿಸಿದಾಗ ಆಲ್ಕಲಾಯ್ಡ್‌ಗಳು ದ್ರಾವಣದಿಂದ ಹೊರಚೆಲ್ಲಲ್ಪಡುತ್ತವೆ. ಇವನ್ನು ಪುನಃ ನೀರಿನೊಡನೆ ಬೆರೆಯುವ ಲೀನಕಾರಿಯೊಂದರಿಂದ ಸಂಸ್ಕರಿಸಿದಾಗ ಆಲ್ಕಲಾಯ್ಡ್ ಮಿಶ್ರಣದ ದ್ರಾವಣ ದೊರೆಯುತ್ತದೆ. ಈ ದ್ರಾವಣದಿಂದ ಲೀನಕಾರಿಯನ್ನು ಹೊರದೂಡಿದಾಗ ಆಲ್ಕಲಾಯ್ಡ್ ಕರಡು ಮಿಶ್ರಣ ದೊರೆಯುತ್ತದೆ. ಈ ಕರಡು ಮಿಶ್ರಣದಲ್ಲಿ ಎಷ್ಟು ಪ್ರತ್ಯೇಕ ಆಲ್ಕಲಾಯ್ಡ್‌ಗಳಿವೆಯೆಂಬುದನ್ನು ತೆಳುಪದರ (ಥಿನ್ ಲೇಯರ್) ಕ್ರೊಮಟೋಗ್ರಫಿ ವಿಧಾನದಿಂದ ಕಂಡುಹಿಡಿಯಬಹುದು.

ಹಲವೇ ಹಲವು ಪ್ರತ್ಯೇಕ ಸಂದರ್ಭಗಳಲ್ಲಿ ಆಲ್ಕಲಾಯ್ಡ್‌ಗಳು ಕೆಲವು ನಿರ್ದಿಷ್ಟ ರಾಸಾಯನಿಕ ಸಂಯುಕ್ತಗಳೊಡನೆ ವರ್ತಿಸಿ ಅಲೀನ ಸಂಕೀರ್ಣ ಸಂಯುಕ್ತಗಳಾಗುವಂತೆ ಮಾಡಿ ಬೇರ್ಪಡಿಸಬಹುದು. ಹೀಗೆ ಆಲ್ಕಲಾಯ್ಡ್‌ಗಳು ಸಂಕೀರ್ಣವಾಗಿ ಅವಕ್ಷೇಪಿಸುವಂತೆ (ಪ್ರೆಸಿಪಿಟೇಷನ್) ಮಾಡಲು ಫಾಸ್ಫೋಟಂಗ್‌ಸ್ಟಿಕ್ ಆಮ್ಲ, ಫಾಸ್ಫೋ ಮಾಲಿಬ್ಡಿಕ್ ಆಮ್ಲ, ಪಿಕ್ರಿಕ್ ಆಮ್ಲ, ಸ್ಟಿಫ್ನಿಕ್ ಆಮ್ಲ, ಆಂಥ್ರಕ್ವಿನೋನ್ ಸಲ್ಫೋನಿಕ್ ಆಮ್ಲ ಮತ್ತು ಹಲವಾರು ಪ್ರತ್ಯೇಕ ಲವಣಗಳನ್ನು ಉಪಯೋಗಿಸಬಹುದು. ಮತ್ತೆ ಹಲವು ನಿರ್ದಿಷ್ಟ ಸಂಯುಕ್ತಗಳೊಡನೆ ವರ್ತಿಸಿದಾಗ ಆಲ್ಕಲಾಯ್ಡ್‌ಗಳು ಬಣ್ಣ ತಾಳುತ್ತವೆ. ಇವನ್ನು ಆಲ್ಕಲಾಯ್ಡ್‌ಗಳ ತಯಾರಿಕೆಯಲ್ಲಿ ಉಪಯೋಗಿಸಲು ಸಾಧ್ಯವಾಗದೆ ಹೋದರೂ ಪೂರ್ವಭಾವಿಯಾಗಿ ಆಲ್ಕಲಾಯ್ಡ್‌ಗಳ ಇರುವಿಕೆಯನ್ನು ತಿಳಿಯಲು ಉಪಯೋಗಿಸಬಹುದು.

ಮುಂದಿನ ಘಟ್ಟದಲ್ಲಿ ಈ ಆಲ್ಕಲಾಯ್ಡ್ ಮಿಶ್ರಣದಿಂದ ವಿವಿಧ ಆಲ್ಕಲಾಯ್ಡ್‌ಗಳನ್ನು ಬೇರ್ಪಡಿಸಲಾಗುವುದು. ಈ ಬೇರ್ಪಡೆ ಹಲವು ಬಾರಿ ಸುಲಭವಾಗಿರಬಹುದು ಮತ್ತೆ ಹಲವು ಬಾರಿ ಬಹು ಜಟಿಲವಾಗಿರಬಹುದು. ಇದಕ್ಕೆ ವಿವಿಧ ಆಲ್ಕಲಾಯ್ಡ್‌ಗಳಲ್ಲಿರುವ ಗುಣ, ಲಕ್ಷಣಗಳಲ್ಲಿನ ಅಥವಾ ಒಂದು ಗುಣದ ತೀವ್ರತೆಯಲ್ಲಿ ಇರಬಲ್ಲ ಭಿನ್ನತೆಯೇ ಆಧಾರ. ಒಂದು ನಿರ್ದಿಷ್ಟ ಲೀನಕಾರಿಯಲ್ಲಿ ಲೀನವಾಗುವ ಶಕ್ತಿಯಲ್ಲಿ ಭಿನ್ನತೆಯಿದ್ದರೆ ಅಂಥ ಆಲ್ಕಲಾಯ್ಡ್‌ಗಳನ್ನು ಆಂಶಿಕ ಸ್ಫಟಿಕೀಕರಣದಿಂದ (ಫ್ರ್ಯಾಕ್ಷನಲ್ ಕ್ರಿಸ್ಟಲೈಸೇಷನ್) ಬೇರ್ಪಡಿಸಬಹುದು. ಆಲ್ಕಲಾಯ್ಡ್‌ಗಳ ಪ್ರತ್ಯಾಮ್ಲೀಯತೆಗಳು ಭಿನ್ನವಾಗಿದ್ದಲ್ಲಿ ಆಲ್ಕಲಾಯ್ಡ್ ಮಿಶ್ರಣವನ್ನೊಳಗೊಂಡ ಆಮ್ಲೀಯ ದ್ರಾವಣವೊಂದರ ಆಮ್ಲೀಯತೆಯನ್ನು ಕ್ರಮೇಣ ಕಡಿಮೆ ಮಾಡಿ ಆಲ್ಕಲಾಯ್ಡ್‌ಗಳು ಕ್ರಮೇಣ ಒಂದಾದ ಮೇಲೊಂದರಂತೆ ಹೊರಬೀಳುವಂತೆ ಮಾಡಿ ಬೇರ್ಪಡಿಸಬಹುದು. ನಿರ್ದಿಷ್ಟ ಸಂಯುಕ್ತಗಳೊಡನೆ ಸೇರಿ ಸಂಕೀರ್ಣ ಸಂಯುಕ್ತಗಳಾಗುವ ಶಕ್ತಿ ಪಡೆದಿರುವ ಆಲ್ಕಲಾಯ್ಡ್‌ಗಳನ್ನು ಸಂಕೀರ್ಣಗಳಾಗಿ ಮಾರ್ಪಡಿಸಿ ಇತರ ಆಲ್ಕಲಾಯ್ಡ್‌ಗಳಿಂದ ಬೇರ್ಪಡಿಸಬಹುದು. ಅನಂತರ ಅಂಥ ಸಂಕೀರ್ಣ ಸಂಯುಕ್ತದ ವಿಭಜನೆಯಿಂದ ಆಲ್ಕಲಾಯ್ಡ್‌ನ್ನು ಪಡೆಯಬಹುದು.

ಆಲ್ಕಲಾಯ್ಡ್ ಮಿಶ್ರಣದಿಂದ ವಿವಿಧ ಆಲ್ಕಲಾಯ್ಡ್‌ಗಳನ್ನು ಪ್ರತ್ಯೇಕಿಸಲು ಅತಿಮುಖ್ಯವಾದ ಮತ್ತು ಹೆಚ್ಚು ಬಳಕೆಯಲ್ಲಿರುವ ವಿಧಾನವೆಂದರೆ ಕ್ರೊಮಟೋಗ್ರಫಿ ವಿಧಾನ. ಇದರಲ್ಲಿ ಮೂರು ಬಗೆಗಳಿವೆ–ಮೊದಲನೆಯದು ಸ್ತಂಭರೀತಿಯ (ಕಾಲಂ) ಕ್ರೊಮಟೋಗ್ರಫಿ. ಈ ಬಗೆಯ ಕ್ರೊಮಟೋಗ್ರಫಿಯಲ್ಲಿ ಗಾಜಿನ ಅಥವಾ ಲೋಹದ ಕೊಳವೆಯೊಂದರಲ್ಲಿನ ಅಲ್ಯೂಮಿನಿಯಂ ಆಕ್ಸೈಡ್, ಸೆಲ್ಯುಲೋಸ್ ಅಥವಾ ಸಿಲಿಕಾಜೆಲ್‌ಗಳ ಸ್ತಂಭವನ್ನು ಉಪಯೋಗಿಸಲಾಗುತ್ತದೆ. ಎರಡನೆಯದಾದ ಮಂದಪದರ ಕ್ರೊಮಟೋಗ್ರಫಿಯಲ್ಲಿ (ಥಿಕ್ ಲೇಯರ್ ಕ್ರೊಮಟೋಗ್ರಫಿ) ಗಾಜಿನ ಹಾಳೆಯೊಂದರ ಮೇಲೆ ಹರಡಲಾದ ಅಲ್ಯೂಮಿನಿಯಂ ಆಕ್ಸೈಡ್ ಸೆಲ್ಯುಲೋಸ್ ಅಥವಾ ಸಿಲಿಕಾಜೆಲ್‌ಗಳ ಒಂದೆರಡು ಮಿಲಿಮೀಟರ್ ಮಂದದ ಪದರವನ್ನು ಉಪಯೋಗಿಸಲಾಗುತ್ತದೆ. ಈ ಬಗೆಯ ವಿಧಾನ ಅಲ್ಪಪರಿಮಾಣಗಳಿಗೆ ಮಾತ್ರ ಸೂಕ್ತ. ಮೂರನೆಯದು ಅಯಾನ್‌ವಿನಿಮಯ ಕ್ರೊಮಟೋಗ್ರಫಿಯಲ್ಲಿ. ಇದರಲ್ಲಿ ಅಲ್ಯೂಮಿನಿಯಂ ಆಕ್ಸೈಡ್ ಮೊದಲಾದ ಅಧಿಶೋಷಕಗಳ (ಅಡ್‌ಸಾರ್ಬೆಂಟ್) ಬದಲಾಗಿ ಅಯಾನ್ ವಿನಿಮಯ ರಾಳಗಳನ್ನು ಉಪಯೋಗಿಸಲಾಗುತ್ತದೆ.

ಕ್ರೊಮಟೋಗ್ರಫಿ ವಿಧಾನದಿಂದ ಗುಣಲಕ್ಷಣಗಳಲ್ಲಿ ಅಲ್ಪ ಭಿನ್ನತೆಯಿರುವ ಆಲ್ಕಲಾಯ್ಡ್‌ಗಳನ್ನೂ ಸೂಕ್ತ ಅಧಿಶೋಷಕಗಳನ್ನೂ ಸೂಕ್ತ ಸಾವಯವ ಲೀನಕಾರಿ ದ್ರವಗಳನ್ನೂ ಉಪಯೋಗಿಸಿ ಬೇರ್ಪಡಿಸುವುದು ಸಾಧ್ಯವಾಗಿದೆ. ಹಲವು ಬಾರಿ ಭಿನ್ನತೆ ತೀರ ಅತ್ಯಲ್ಪವಿದ್ದು ಮೊದಲನೆಯ ಕ್ರೊಮಟೋಗ್ರಫಿಯಲ್ಲಿ ಭಾಗಶಃ ಮಾತ್ರ ಪ್ರತ್ಯೇಕಿಸಲು ಸಾಧ್ಯವಾಗುತ್ತದೆ. ಪೂರ್ಣ ಪ್ರತ್ಯೇಕತೆಗೆ ಮತ್ತೊಮ್ಮೆ ಕ್ರೊಮಟೋಗ್ರಫಿಯನ್ನು ಉಪಯೋಗಿಸಬೇಕಾಗುತ್ತದೆ.

ಮೇಲಿನ ವಿಧಾನಗಳಿಂದ ಪ್ರತ್ಯೇಕಿಸಲಾದ ಆಲ್ಕಲಾಯ್ಡ್‌ಗಳನ್ನು ಸೂಕ್ತ ಲೀನಕಾರಿಗಳನ್ನು ಪಯೋಗಿಸಿ ಸ್ಫಟಿಕೀಕರಣದಿಂದ ಶುದ್ಧೀಕರಿಸಿದ ಅನಂತರ ಆಲ್ಕಲಾಯ್ಡ್‌ಗಳು ಶುದ್ಧರೂಪದಲ್ಲಿ ದೊರೆಯುತ್ತವೆ.

ರಚನಾನಿರ್ಣಯ (ಸ್ಟ್ರಕ್ಚರ್ ಡಿಟರ್ಮಿನೇಷನ್) : ಹೀಗೆ ಬೇರ್ಪಡಿಸಿದ ಆಲ್ಕಲಾಯ್ಡ್ ಗಳು ಹಿಂದೆಯೇ ಪರಿಚಿತವಿದ್ದ ಆಲ್ಕಲಾಯ್ಡ್‌ಗಳಾಗಿರಬಹುದು, ಇಲ್ಲವೇ ಹೊಸ ಆಲ್ಕಲಾಯ್ಡ್‌ಗಳಾಗಿರಬಹುದು. ಪರಿಚಿತವಿದ್ದವಾದರೆ ಅವನ್ನು ಮೊದಲು ಗುರುತಿಸಬೇಕು. ಹಾಗೆ ಗುರುತಿಸಲು ಅವುಗಳ ಗುಣ, ಲಕ್ಷಣಗಳ ಪರೀಕ್ಷೆ ನಡೆಸಿ ಪರಿಚಿತ ಆಲ್ಕಲಾಯ್ಡ್‌ನ ಗುಣಲಕ್ಷಣಗಳೊಡನೆ ಹೋಲಿಸಿ ಅವುಗಳಲ್ಲಿ ಅನನ್ಯತೆಯನ್ನು ಸಾಧಿಸಬೇಕು. ಸಾಮಾನ್ಯವಾಗಿ ಪರೀಕ್ಷಿಸಲಾಗುವ ಗುಣಲಕ್ಷಣಗಳೆಂದರೆ–ದ್ರವಿಸುವ ಬಿಂದು (ಮೆಲ್ಟಿಂಗ್ ಪಾಯಿಂಟ್), ಅತಿರಕ್ತ (ಇನ್‌ಫ್ರರೆಡ್), ಅತಿನೇರಳೆ (ಅಲ್ಟ್ರಾವಯೊಲೆಟ್) ಮತ್ತು ಬೀಜಕಾಂತ ಅನುನಾದ (ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೊನೆನ್ಸ್) ರೋಹಿತಗಳು. ಈ ಲಕ್ಷಣಗಳಲ್ಲದೆ ಈಚೀಚೆಗೆ ದ್ರವ್ಯರಾಶಿ ರೋಹಿತಗಳ (ಮ್ಯಾಸ್ ಸ್ಪೆಕ್ಟ್ರ) ಪರೀಕ್ಷೆ ಹೆಚ್ಚಾಗುತ್ತಿದೆ. ಕಡೆಗೆ ನಿಖರವಾಗಿ ಗುರುತಿಸಲು ಸಸ್ಯಗಳಿಂದ ಹೊಸತಾಗಿ ಹೊರತೆಗೆದು ಶುದ್ಧೀಕರಿಸಿದ ಆಲ್ಕಲಾಯ್ಡನ್ನು ಪರಿಚಿತ ಆಲ್ಕಲಾಯ್ಡ್‌ಗಳೊಡನೆ ಸಮಪ್ರಮಾಣದಲ್ಲಿ ಬೆರೆಸಿ ಮಿಶ್ರಣದ ಗುಣ, ಲಕ್ಷಣಗಳ ಪರೀಕ್ಷೆ ಮಾಡಲಾಗುತ್ತಿದೆ. ಪರೀಕ್ಷೆಗೊಳಗಾಗಿರುವ ಆಲ್ಕಲಾಯ್ಡ್, ಪರಿಚಿತ ಆಲ್ಕಲಾಯ್ಡ್, ಮಿಶ್ರಣ ಇವು ಮೂರರ ಗುಣಲಕ್ಷಣಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದಿದ್ದಲ್ಲಿ ಹೊಸ ಆಲ್ಕಲಾಯ್ಡ್ ಮತ್ತು ಪರಿಚಿತ ಆಲ್ಕಲಾಯ್ಡ್‌ಗಳ ಅನನ್ಯತೆಯನ್ನು ಸಾಧಿಸಿದಂತಾಗುತ್ತದೆ. ಹಲವು ಬಾರಿ ಹೊಸ ಆಲ್ಕಲಾಯ್ಡ್‌ನ ಸೂಕ್ತ ನಿಷ್ಪನ್ನ (ಡಿರೈವೆಟಿವ್) ಸಂಯುಕ್ತವೊಂದನ್ನು ಪರಿಚಿತ ಆಲ್ಕಲಾಯ್ಡ್‌ನ ಅನುರೂಪ ನಿಷ್ಪನ್ನದೊಡನೆ ಹೋಲಿಸಿ ಅನನ್ಯತೆಯನ್ನು ಸಾಧಿಸಲಾಗುತ್ತದೆ.

ಸಸ್ಯದಿಂದ ಪ್ರತ್ಯೇಕಿಸಿದ ಆಲ್ಕಲಾಯ್ಡ್ ಇದುವರೆಗೆ ಪರಿಚಿತವಲ್ಲದ ಹೊಸ ರಚನೆಯ ಆಲ್ಕಲಾಯ್ಡ್ ಆಗಿದ್ದಲ್ಲಿ ಅದರ ರಚನಾನಿರ್ಣಯ ಅಗತ್ಯ. ಈ ಬಗೆಯ ರಚನಾನಿರ್ಣಯ ಸಮಸ್ಯೆಗಳು ಸಾವಯವ ರಸಾಯನವಿಜ್ಞಾನ ಸಂಶೋಧನೆಗಳಿಗೆ ಉತ್ತಮ ವಸ್ತುಗಳು.

ರಚನಾನಿರ್ಣಯಕ್ಕೆ ಮೊದಲು ಪರಿಶುದ್ಧ ಆಲ್ಕಲಾಯ್ಡ್ ಆವಶ್ಯಕ. ಪರಿಶುದ್ಧವಾಗಿಲ್ಲದಿದ್ದಲ್ಲಿ ಅದರ ದ್ರವಿಸುವ ಬಿಂದು ಅಚಲವಾಗುವವರೆಗೂ ಅಥವಾ ದ್ಯುತಿಪಟುತ್ವ (ಆಪ್ಟಿಕಲ್ ಆ್ಯಕ್ಟಿವಿಟಿ) ಆಲ್ಕಲಾಯ್ಡ್ ಆಗಿದ್ದಲ್ಲಿ ಅದರ ದ್ಯುತಿಭ್ರಮಣ (ಆಪ್ಟಿಕಲ್ ರೊಟೇಷನ್) ಅಚಲವಾಗುವವರೆಗೂ ಶುದ್ಧೀಕರಿಸಬೇಕು. ಶುದ್ಧೀಕರಣಕ್ಕೆ ಸ್ಫಟಿಕೀಕರಣ ವಿಧಾನವನ್ನಾಗಲೀ ಕ್ರೊಮಟೋಗ್ರಫಿಯನ್ನಾಗಲೀ ಮತ್ತಾವುದಾದರೂ ಸೂಕ್ತ ವಿಧಾನವನ್ನಾಗಲೀ ಉಪಯೋಗಿಸಬಹುದು. ಪರಿಶುದ್ಧತೆಯನ್ನು ಪರೀಕ್ಷಿಸಲು ತೆಳುಪದರ ಕ್ರೊಮಟೋಗ್ರಫಿಯನ್ನೂ ಉಪಯೋಗಿಸಬಹುದು. ಅನಂತರ ರಚನಾನಿರ್ಣಯಕ್ಕೆ ತೊಡಗುವ ಮೊದಲು ಈವರೆಗೆ ತಿಳಿದಿರುವ ಸಾವಿರಾರು ಆಲ್ಕಲಾಯ್ಡ್‌ಗಳೆಲ್ಲವುಗಳಿಂದಲೂ ಪರೀಕ್ಷೆಗೊಳಗಾಗಿರುವ ಆಲ್ಕಲಾಯ್ಡ್ ಖಂಡಿತವಾಗಿಯೂ ಭಿನ್ನವಾದುದೆಂದು ನಿಶ್ಚಯ ಮಾಡಿಕೊಳ್ಳಬೇಕು.

ರಚನಾನಿರ್ಣಯದ ಮೊದಲ ಹಂತ ಆಲ್ಕಲಾಯ್ಡ್‌ನ ಪ್ರಮಾಣಾತ್ಮಕ ವಿಶ್ಲೇಷಣೆ (ಕ್ವಾಂಟಿಟೇಟಿವ್ ಅನ್ಯಾಲಿಸಿಸ್). ನಿಷ್ಕೃಷ್ಟ ವಿಶ್ಲೇಷಣೆಯಿಂದ ಸಂಯುಕ್ತದಲ್ಲಿನ ಮೂಲವಸ್ತುಗಳ ಶತಾಂಶ ಪ್ರಮಾಣ ಮತ್ತು ಅಣುತೂಕಗಳ ಜ್ಞಾನದಿಂದ ಅಣುಸೂತ್ರವನ್ನು ತಿಳಿಯಬಹುದು. ಇದರ ಮುಂದಿನ ಹೆಜ್ಜೆ ರಚನಾಸೂತ್ರದ ನಿರ್ಣಯ. ಸಂಕೀರ್ಣ ರಚನೆಯುಳ್ಳ ಆಲ್ಕಲಾಯ್ಡ್‌ಗಳ ರಚನಾನಿರ್ಣಯ ಅನೇಕ ಬಾರಿ ಬಲುಕಷ್ಟ.

ಪರೀಕ್ಷೆಗೊಳಗಾಗಿರುವ ಆಲ್ಕಲಾಯ್ಡ್‌ನ ಆಕರ ಮತ್ತು ಆ ಆಕರಸಸ್ಯದಲ್ಲಿರುವ ಪರಿಚಿತ ಒಡನಾಡಿ ಆಲ್ಕಲಾಯ್ಡ್‌ಗಳ ರಚನೆಗಳ ಜ್ಞಾನದಿಂದ ಹಲವು ಊಹಾರಚನೆಗಳನ್ನು ಮಂಡಿಸಬಹುದು. ವರ್ಣಪಟಲಗಳ ಪರೀಕ್ಷೆಯಿಂದ ರಚನೆಯ ವಿಷಯವಾಗಿ ಹಲವು ಸ್ಥೂಲವಿಷಯಗಳನ್ನೂ ಅರಿಯಬಹುದು. ಊಹಾರಚನೆಗಳನ್ನು ಬರೆಯುವಾಗ ಇವುಗಳ ಉಪಯೋಗವನ್ನು ಪಡೆಯಲಾಗುತ್ತದೆ. ಹೀಗೆ ಮಾಡಿಕೊಂಡ ಊಹೆಗಳ ಆಧಾರದ ಮೇಲೆ ಆಲ್ಕಲಾಯ್ಡ್‌ಸಂಯುಕ್ತವನ್ನು ಹಲವು ನಿರ್ದಿಷ್ಟ ರಾಸಾಯನಿಕ ವಸ್ತುಗಳಿಂದ ಇಲ್ಲವೇ ಉಷ್ಣ ಅಥವಾ ವಿಕಿರಣಶಕ್ತಿಯನ್ನು (ರೇಡಿಯೇಷನ್ ಎನರ್ಜಿ) ನೀಡಿ ಶಿಥಿಲೀಕರಣ ಕ್ರಿಯೆಗಳಿಗೆ (ಡಿಗ್ರೆಡೇಷನ್ ರಿಆ್ಯಕ್ಷನ್ಸ್) ಒಳಪಡಿಸಿ ಪರಿಣಾಮವಾಗಿ ಬರುವ ಆಲ್ಕಲಾಯ್ಡ್‌ನ ಭಿನ್ನಭಾಗಗಳನ್ನು ಪರೀಕ್ಷಿಸಿ ಗುರುತಿಸಲಾಗುತ್ತದೆ. ಶಿಥಿಲೀಕರಣ ಕ್ರಿಯೆಗಳಿಂದ ದೊರೆತ ಅಣುತುಣುಕುಗಳನ್ನು ಗುರುತಿಸಲಾಗದೆ ಹೋದರೆ ಅವನ್ನು ಪುನಃ ಶಿಥಿಲೀಕರಣ ಕ್ರಿಯೆಗಳಿಗೆ ಒಳಗುಮಾಡಿ ಪರಿಣಾಮವಾಗಿ ದೊರೆಯುವ ಸಂಯುಕ್ತಗಳನ್ನು ಗುರುತಿಸಲಾಗುತ್ತದೆ.

ಹೀಗೆ ದೊರೆತ ಅಣುತುಣುಕುಗಳ ರಚನೆಗಳನ್ನು ಸೂಕ್ತ ರೀತಿಯಲ್ಲಿ ಒಟ್ಟುಗೂಡಿಸುವುದರಿಂದ ಪೂರ್ಣ ಆಲ್ಕಲಾಯ್ಡ್ ಅಣುವಿನ ರಚನೆಯ ಬಗ್ಗೆ ಸ್ವಲ್ಪ ಸುಳಿವು ಸಿಕ್ಕಿದಂತಾಗುತ್ತದೆ. ಆಗ ಕೆಲವು ಊಹಾರಚನೆಗಳಿಗೆ ಸಮರ್ಥನೆ ದೊರೆತು ಉಳಿದ ಊಹಾರಚನೆಗಳನ್ನು ತಿರಸ್ಕರಿಸಬಹುದು.

ಆಲ್ಕಲಾಯ್ಡ್ ಅಣುವಿನಲ್ಲಿ ಆಕ್ಸಿಜನ್ ಪರಮಾಣುಗಳಿದ್ದಲ್ಲಿ ಅವು ಆಲ್ಕೊಹಾಲ್ ಪುಂಜದಲ್ಲಿವೆಯೇ, ಫೀನಾಲ್ ಪುಂಜದಲ್ಲಿವೆಯೇ, ಎಸ್ಟರು, ಆಮ್ಲ ಅಥವಾ ಈಥರ್ ಪುಂಜಗಳಲ್ಲಿವೆಯೇ ಎಂಬುದನ್ನು ಹಲವು ನಿರ್ದಿಷ್ಟ ರಾಸಾಯನಿಕಕ್ರಿಯೆಗಳಿಂದ ಕಂಡುಹಿಡಿಯಬಹುದು. ಅಷ್ಟೇ ಅಲ್ಲದೆ ಆಮ್ಲ, ಎಸ್ಟರು, ಆಲ್ಕೊಹಾಲ್, ಫೀನಾಲ್ ಪುಂಜಗಳು ಎಷ್ಟೆಷ್ಟಿವೆಯೆಂಬುದನ್ನು ಕಂಡುಹಿಡಿಯಬಹುದು. ಈಥರ್‌ಬಂಧ (ಲಿಂಕೇಜ್) ಎಥಾಕ್ಸಿ ಅಥವಾ ಮೆಥಾಕ್ಸಿ ಪುಂಜಗಳಲ್ಲಿ ಇದ್ದಲ್ಲಿ ಅಂಥ ಪುಂಜಗಳು ಎಷ್ಟಿವೆಯೆಂಬುದನ್ನು ಅಳೆಯಬಹುದು.

ಹಾಫ್‌ಮನ್ನನ ಸಮಗ್ರ ಮೆಥಿಲೇಷನ್ ಎಂಬ ಕ್ರಿಯೆಯನ್ನು ಸೂಕ್ತರೀತಿಯಲ್ಲಿ ಉಪಯೋಗಿಸಿದಾಗ, ಕಾರ್ಬನ್ನಿನ ಅಣುಗಳ ಪರಸ್ಪರ ಬಂಧನದ ಸ್ಥೂಲರಚನೆ ತಿಳಿಯುತ್ತದೆ. ಮೇಲ್ಕಂಡ ವಿಧಾನ ಮತ್ತು ಕ್ರಿಯೆಗಳಿಂದ ಸಂಗ್ರಹಿಸಿದ ಎಲ್ಲ ಸಂಗತಿಗಳನ್ನೂ ಉಪಯೋಗಿಸಿ ಆಲ್ಕಲಾಯ್ಡ್ ಅಣುವಿನ ರಚನೆಯನ್ನು ನಿರ್ಣಯಿಸಬಹುದು. ಉದಾಹರಣೆಗೆ ಒಂದು ಸರಳ ಆಲ್ಕಲಾಯ್ಡ್ ಆದ ನಿಕೊಟೀನ್‌ನ ರಚನಾನಿರ್ಣಯವನ್ನು ಪರಿಶೀಲಿಸಬಹುದು.

ಹೊಗೆಸೊಪ್ಪಿನ ಎಲೆಗಳಲ್ಲಿರುವ ಮುಖ್ಯ ಆಲ್ಕಲಾಯ್ಡ್ ನಿಕೊಟೀನ್‌ನ ಪ್ರಮಾಣಾತ್ಮಕ ವಿಶ್ಲೇಷಣೆ ಮತ್ತು ಅಣುತೂಕ ನಿರ್ಣಯಗಳಿಂದ ಈ ಸಂಯುಕ್ತದ ಅಣುಸೂತ್ರ $C_{10}H_{14}N_2$ ಎಂದು ತಿಳಿದುಬರುತ್ತದೆ. ಹೊಗೆಸೊಪ್ಪಿನ ಎಲೆಗಳಲ್ಲಿ ಈ ಆಲ್ಕಲಾಯ್ಡ್ ಮಾತ್ರವಲ್ಲದೆ ಪಿರೋಲಿಡಿನ್ ವೃತ್ತವನ್ನೊಳಗೊಂಡಿರುವ ಹಲವಾರು ಸಂಯುಕ್ತಗಳಿರುವುದರಿಂದ ನಿಕೊಟೀನ್ ಅಣುವೂ ಪಿರೋಲಿಡಿನ್ ವೃತ್ತವನ್ನು ಹೊಂದಿರಬಹುದೆಂದು ಊಹಿಸಬಹುದು.

ನಿಕೊಟೀನನ್ನು ಕ್ರೋಮಿಯಂ ಆಕ್ಸೈಡಿನೊಡನೆ ವರ್ತಿಸಿದಾಗ ಅಣುಗಳು ಶಿಥಿಲಗೊಂಡು ನಿಕೊಟಿನಿಕ್ ಆಮ್ಲ ದೊರೆಯುತ್ತದೆ. ನಿಕೊಟಿನಿಕ್ ಆಮ್ಲದ ರಚನೆ ಬದಿಯಲ್ಲಿ ತೋರಿಸಿದಂತಿದೆಯೆಂದು ಇತರ ವಿಧಾನಗಳಿಂದ ತಿಳಿದುಬಂದಿದೆ.

ಈ ಶಿಥಿಲೀಕರಣ ಕ್ರಿಯೆಯಿಂದ ನಿಕೊಟೀನ್ ಅಣುವಿನಲ್ಲಿ ಪಿರಿಡಿನ್ ವೃತ್ತವಿದೆಯೆಂದೂ, ಪಿರಿಡಿನ್ ವೃತ್ತದಿಂದ ಅಣುವಿನ ಉಳಿದ ಭಾಗಕ್ಕೆ ವೃತ್ತದ ಮೂರನೆಯ ಪರಮಾಣು ಸ್ಥಾನದಿಂದ ಸಂಬಂಧವಿದೆಯೆಂದೂ ತಿಳಿದುಬರುತ್ತದೆ.

ನಿಕೊಟೀನ್ ಮೆಥಯೋಡೈಡ್ ಲವಣವನ್ನು ಪೊಟಾಷಿಯಂ ಫೆರಿಸಯನೈಡ್, ಸೋಡಿಯಂ ಹೈಡ್ರಾಕ್ಸೈಡ್ ಮತ್ತು ಕ್ರೋಮಿಯಂ ಆಕ್ಸೈಡುಗಳೊಡನೆ ಕ್ರಮವಾಗಿ ವರ್ತಿಸಿದಾಗ ಹೈಗ್ರಿನಿಕ್ ಆಮ್ಲ ದೊರೆಯುತ್ತದೆ. ಹೈಗ್ರಿನಿಕ್ ಆಮ್ಲದ ರಚನೆ ಬದಿಯಲ್ಲಿ ತೋರಿಸಿದಂತಿದೆಯೆಂದು ತಿಳಿದಿರುವುದರಿಂದ ನಿಕೊಟೀನ್ ಅಣುವಿನಲ್ಲಿ N–ಮಿಥೈಲ್–ಪಿರೋಲಿಡಿನ್ ವೃತ್ತವಿರುವುದೂ ಈ ವೃತ್ತದಿಂದ ಅಣುವಿನ ಉಳಿದಭಾಗಕ್ಕೆ ಸಂಬಂಧ ಎರಡನೆಯ ಸ್ಥಾನದ ಮೂಲಕ ಆಗಿರುವುದೂ ತಿಳಿಯುತ್ತದೆ.



ನಿಕೊಟೀನಿಕ್ ಮತ್ತು ಹೈಗ್ರಿನಿಕ್ ಆಮ್ಲಗಳ ಅಣುಸೂತ್ರಗಳ ಮೊತ್ತವನ್ನು ಪರಿಶೀಲಿಸಿದಾಗ ಈ ಎರಡು ಅಣುಗಳಲ್ಲಿರುವುದಕ್ಕಿಂತಲೂ ಹೆಚ್ಚು ಪರಮಾಣುಗಳು ನಿಕೊಟೀನ್‌ನಲ್ಲಿ ಇಲ್ಲವೆಂಬುದು ತಿಳಿಯುತ್ತದೆ. ಆದ್ದರಿಂದ ನಿಕೊಟೀನ್ ಅಣುವಿನ ರಚನೆ ಇಲ್ಲಿ ತೋರಿಸಿದಂತೆ ಇರಬೇಕೆಂಬುದು ಸಿದ್ಧವಾದಂತಾಯಿತು. ಅನಂತರ ಸಂಯೋಜನೆಯಿಂದಲೂ ಈ ರಚನೆಯನ್ನು ಸಮರ್ಥಿಸಲಾಗಿದೆ.



ಹಲವು ಸಂದರ್ಭಗಳಲ್ಲಿ ಶಿಥಿಲೀಕರಣಕ್ರಿಯೆಗಳಿಂದ ತಿಳಿಯುವ ಸಂಗತಿಗಳೆಲ್ಲವನ್ನೂ ಸಂತೃಪ್ತಿಗೊಳಿಸಬಲ್ಲ ಹಲವಾರು ಊಹಾರಚನೆಗಳು ಸಾಧ್ಯ. ಅಂಥ ಸಂದರ್ಭದಲ್ಲಿ ಸಂಪೂರ್ಣ ನಿರ್ಣಯಕ್ಕೆ ಬರುವುದು ಸಾಧ್ಯವಿಲ್ಲ.

ಈಗ ಸು. 30 ವರ್ಷಗಳಿಂದ ಭೌತವಿಧಾನಗಳ ಉಪಯೋಗ ಹೆಚ್ಚಾಗಿ ಈಗ ಅತಿರಕ್ತರೋಹಿತ, ಅತಿನೇರಳೆರೋಹಿತ, ಬೀಜಕಾಂತಅನುನಾದರೋಹಿತ, ದ್ರವ್ಯರಾಶಿ ರೋಹಿತ, ದ್ಯುತಿಭ್ರಮಣ ಪ್ರಸರಣ (ಆಪ್ಟಿಕಲ್ ರೊಟೇಟರಿ ಡಿಸ್ಪರ್ಷನ್), ಕಿರಣನಮನ (ಡಿಫ್ರಾಕ್ಷನ್), ಎಲೆಕ್ಟ್ರಾನ್‌ನಮನ ಮೊದಲಾದ ವಿಧಾನಗಳನ್ನು ತಪ್ಪದೆ ರಚನಾನಿರ್ಣಯಕ್ಕಾಗಿ ಉಪಯೋಗಿಸಲಾಗುತ್ತಿದೆ. ಸು.10 ವರ್ಷಗಳಿಂದೀಚೆಗೆ ದ್ರವ್ಯರಾಶಿರೋಹಿತದ ಉಪಯೋಗ ಬಲುಮಟ್ಟಿಗೆ ಹೆಚ್ಚಿದೆ. ಈಗ ಅನೇಕ ಸಂದರ್ಭಗಳಲ್ಲಿ ಆಲ್ಕಲಾಯ್ಡ್‌ನ್ನು ಒಂದು ರಾಸಾಯನಿಕ ಕ್ರಿಯೆಗೂ ಒಳಪಡಿಸದೆ ಕೇವಲ ಭೌತವಿಧಾನಗಳ ನೆರವಿನಿಂದಲೇ ಅದರ ಪೂರ್ಣರಚನೆಯನ್ನು ನಿರ್ಣಯಿಸುವುದು ಸಾಧ್ಯವಾಗಿದೆ. ರಾಸಾಯನಿಕ ವಿಧಾನಗಳಿಂದ ನಿರ್ಣಯಿಸಲು ಸಾಧ್ಯವಾಗದ ರಚನೆಗಳನ್ನೂ ಭೌತವಿಧಾನಗಳಿಂದ ಹೆಚ್ಚು ಕಷ್ಟವಿಲ್ಲದೆ ಮತ್ತು ಹೆಚ್ಚು ಪ್ರಮಾಣದಲ್ಲಿ ಸಂಯುಕ್ತವನ್ನು ಉಪಯೋಗಿಸದೆ ನಿರ್ಣಯಿಸಲು ಸಾಧ್ಯವಾಗುವುದರಿಂದ ಈ ವಿಧಾನಗಳ ಪ್ರಾಮುಖ್ಯ ಹೆಚ್ಚಿದೆ. ವಿವಿಧ ಪರಮಾಣುಗಳ ನಡುವಿನ ಪರಸ್ಪರ ದೂರ, ಕೋನಗಳನ್ನು ಕ್ಷ–ಕಿರಣ ನಮನ ಮತ್ತು ಎಲೆಕ್ಟ್ರಾನ್ ನಮನ ವಿಧಾನಗಳನ್ನುಪಯೋಗಿಸಿ ನಿಖರವಾಗಿ ಅಳೆಯಬಹುದು. ಈ ಅಳತೆಗಳಿಂದ ರಾಸಾಯನಿಕ ಕ್ರಿಯೆಗಳಿಂದ ಸುಲಭವಾಗಿ ಅರಿಯಲಾಗದ ಆಕಾಶ ರಚನೆಯನ್ನು (ಸ್ಪೇಷಿಯಲ್ ಸ್ಟ್ರಕ್ಚರ್) ಅರಿತುಕೊಳ್ಳಬಹುದು.

ಕಡೆಯದಾಗಿ ನಿರ್ಣಯಿಸಿದ ಊಹಾರಚನೆಯನ್ನು ಸಮರ್ಥಿಸಲು ರಚನೆಯಲ್ಲಿ ಅನುಮಾನಕ್ಕೆಡೆಬಾರದ ರೀತಿಯಲ್ಲಿ ಪ್ರಯೋಗಶಾಲೆಯಲ್ಲಿ ಆ ರಚನೆಯ ಸಂಯುಕ್ತವನ್ನು ಸಂಯೋಜಿಸಲಾಗುತ್ತದೆ. ಹೀಗೆ ಸಂಯೋಜಿಸಲಾದ ಸಂಯುಕ್ತ ಮತ್ತು ಅಭ್ಯಸಿಸುತ್ತಿರುವ ಆಲ್ಕಲಾಯ್ಡ್‌ನ ಅನನ್ಯತೆಯನ್ನು ಸಾಧಿಸಿದಾಗ ಆ ಆಲ್ಕಲಾಯ್ಡ್‌ನ ರಚನಾನಿರ್ಣಯ ಪೂರ್ಣವಾಗುತ್ತದೆ.

**ವರ್ಗೀಕರಣ ಮತ್ತು ಹಲವು ಮುಖ್ಯ ಆಲ್ಕಲಾಯ್ಡ್‌ಗಳು:** ಆಲ್ಕಲಾಯ್ಡ್‌ಗಳನ್ನು ಅವುಗಳ ರಚನೆಯಲ್ಲಿನ ಸಾಮ್ಯಗಳನ್ನನುಸರಿಸಿ ವರ್ಗೀಕರಣ ಮಾಡಲಾಗಿದೆ. ಈ ಪ್ರಥಮ ವರ್ಗೀಕರಣದ ಅನಂತರ ಅವುಗಳ ಆಕರಗಳಿಗನುಗುಣವಾಗಿ ಮರುವರ್ಗೀಕರಣ ಮಾಡಲಾಗುತ್ತದೆ. ಹಲವು ಮುಖ್ಯ ಆಲ್ಕಲಾಯ್ಡ್‌ಗಳನ್ನೂ ಮುಂದೆ ಸ್ಥೂಲವಾಗಿ ವಿವರಿಸಿದೆ.

ಹಲವು ಅತಿ ಸರಳ ಆಲ್ಕಲಾಯ್ಡ್‌ಗಳಲ್ಲಿ ನೈಟ್ರೊಜನ್ನಿನ ಪರಮಾಣು ವೃತ್ತವೊಂದರ ಭಾಗವಾಗಿರುವುದಿಲ್ಲ. ಅಂಥ ಆಲ್ಕಲಾಯ್ಡ್‌ಗಳಲ್ಲಿ ಕೆಳಕಾಣಿಸಿರುವ ಎಫೆಡ್ರಿನ್ ಮುಖ್ಯವಾದುದು. ಎಫೆಡ್ರಾ ಗುಂಪಿನ ಸಸ್ಯಗಳಲ್ಲಿ (ಭಾರತೀಯ ಹೆಸರುಗಳು–ಅಸ್ಮೆನಿಯಾ, ಪೋಕ್, ಖಾಂಡ ಬುದಶೂರ್) ದೊರೆಯುವ ಈ ಸಂಯುಕ್ತದ ರಚನಾನಿರ್ಣಯವಾದ ಅನಂತರ ಎರಡು ಬಗೆಗಳಲ್ಲಿ ಸಂಯೋಜಿಸಲಾಗಿದೆ.

ಈ ಆಲ್ಕಲಾಯ್ಡ್‌ಗೆ ರಕ್ತದ ಒತ್ತಡವನ್ನು ಹೆಚ್ಚಿಸುವ ಶಕ್ತಿಯಿದೆ. ಇದನ್ನು ಅಸ್ತಮಾ ದುರ್ಬಲ ರಕ್ತಚಲನೆಗಳಲ್ಲೂ ಉಸಿರುನಾಳಗಳನ್ನು ಹಿಗ್ಗಿಸುವುದಕ್ಕಾಗಿ (ಡೈಲೇಟ್) ಅನೇಕ ಇತರ ಔಷಧಗಳ ಜೊತೆಯಲ್ಲೂ ಉಪಯೋಗಿಸುತ್ತಾರೆ. ಕೇಂದ್ರನರಮಂಡಲವನ್ನು ಇದು ಚೋದಿಸುವುದರಿಂದ, ಸಂಜೆ ಸೇವಿಸಿದರೆ ನಿದ್ದೆಗೆಡಿಸುತ್ತದೆ.

ಪಿರಿಡಿನ್ ವೃತ್ತವನ್ನುಳ್ಳ ಆಲ್ಕಲಾಯ್ಡ್‌ಗಳಲ್ಲಿ ನಿಕೊಟೀನ್, ಹೆಮ್ಲಾಕ್ ಸಸ್ಯದ ಆಲ್ಕಲಾಯ್ಡ್‌ಗಳು, ಅಡಿಕೆ ಮತ್ತು ಮೆಣಸುಗಳಲ್ಲಿರುವ ಆಲ್ಕಲಾಯ್ಡ್‌ಗಳು ಮುಖ್ಯವಾದುವು. ನಿಕೊಟೀನ್ ಸಂಯುಕ್ತ ಕೇಂದ್ರನರಮಂಡಲ ಮತ್ತು ಅಂಗಗಳ ತುದಿಗಳಲ್ಲಿರುವ ನರಗಳ ಮೇಲೆ ಪ್ರಭಾವ ಬೀರಬಲ್ಲುದು ಮತ್ತು ಗ್ರಂಥಿಗಳ ರಸಸ್ರಾವವನ್ನು (ಗ್ಲ್ಯಾಂಡ್ಯುಲರ್ ಸೆಕ್ರೇಷನ್) ಹೆಚ್ಚಿಸಬಲ್ಲುದು. ರಕ್ತನಾಳಗಳು ಕುಗ್ಗುವಂತೆ ಮಾಡಿ ರಕ್ತದ ಒತ್ತಡವನ್ನು ಹೆಚ್ಚಿಸುವ ಶಕ್ತಿ ಇದಕ್ಕಿದೆ.

ಹೆಮ್ಲಾಕ್‌ನಲ್ಲಿರುವ ಕೋನಿನ್, ಕೋನಿರ್ಸಿ ಆಲ್ಕಲಾಯ್ಡ್‌ಗಳಿಂದಲೂ ಮೆಣಸಿನಲ್ಲಿರುವ ಪಿಪೆರೀನ್ ಆಲ್ಕಲಾಯ್ಡ್‌ನಿಂದಲೂ ಅಡಿಕೆಯಲ್ಲಿರುವ ಅರಿಕೇಡಿನ್, ಅರಿಕೋಲಿನ್, ಗ್ವಾರ್ಸಿ ಮತ್ತು ಗ್ವಾಕೋಲಿನ್‌ಗಳಿಂದಲೂ ಅಂಥ ಹೆಚ್ಚಿನ ಉಪಯೋಗ ವೇನಿಲ್ಲ. ಹೆಮ್ಲಾಕ್ ಬೇರು ತೊಗಟೆಗಳ ಕಷಾಯವನ್ನು ಬಲು ಹಿಂದಿನ ಕಾಲದಿಂದಲೂ ಯುರೋಪಿನಲ್ಲಿ ವಿಷವಾಗಿ ಉಪಯೋಗಿಸುತ್ತಿದ್ದರು. ಅಡಿಕೆಯ ಆಲ್ಕಲಾಯ್ಡ್‌ಗಳಲ್ಲಿ ಬಾಯಿಯಲ್ಲಿ ಜೊಲ್ಲು ಸುರಿಸುವಂತೆ ಮಾಡುವ ಮತ್ತು ಹಲವು ಬಗೆಗಳಲ್ಲಿ ವ್ಯಕ್ತಿಯನ್ನು ಉದ್ರೇಕಗೊಳಿಸಬಲ್ಲ ಗುಣವಿರುವುದು ತಿಳಿದುಬಂದಿದೆ. ಅರಿಕೋಲಿನ್ ಸಂಯುಕ್ತವನ್ನು ಹೊಟ್ಟೆಯಲ್ಲಿನ ಪರೋಕ್ಷಜೀವಿಗಳ ವಿರುದ್ಧವಾಗಿ ವಿರೇಚಕವಾಗಿ ಮತ್ತು ಲಾಲಾರಸಸ್ರವಕಾರಕವಾಗಿಯೂ ವೈದ್ಯದಲ್ಲಿ ಉಪಯೋಗಿಸುತ್ತಾರೆ.



ಕೂಡಿಕೊಂಡಿರುವ (ಕಂಡೆನ್ಸ್‌ಡ್) ಪಿರೋಲಿಡಿನ್ ಮತ್ತು ಪಿಪೆರೀಡಿನ್ ವೃತ್ತ ರಚನೆಯನ್ನೊಳಗೊಂಡಿರುವ ಆಲ್ಕಲಾಯ್ಡ್‌ಗಳನ್ನು ಆಕರಗಳಿಗನುಗುಣವಾಗಿ ಮರು ವಿಂಗಡಿಸಬಹುದು. ಸೊಲನೇಸೀ ಗುಂಪಿನ ಸಸ್ಯಗಳಾದ ಅಟ್ರೋಪ ಬೆಲಡೋನ (ಉಮ್ಮತ್ತಿ), ಹೆನ್‌ಬೇನ್ (ಹ್ಯೋಸೈಮಸ್ ನೈಜರ್, ಸಂಸ್ಕೃತ–ಪರಸಿಕಾಯ), ದತ್ತೂರ, ಸ್ಕೊಪೋಲಿಯ ಕಾರ್ನಿಯೋಲಿಯಗಳಲ್ಲಿ ದೊರೆಯುವ ಅಟ್ರೊಪೀನ್ ಮತ್ತು ಸ್ಕೊಪೋಲಮಿನಗಳ ರಚನೆಗಳನ್ನು ಕೆಳಗೆ ಕಾಣಿಸಿದೆ.





ಅಟ್ರೊಪೀನನ್ನು ಸ್ನಾಯುಗಳ ಸೆಡೆತವನ್ನು, ತಡೆಗಟ್ಟಲು ಉತ್ತೇಜಕವಾಗಿ, ವಿಪರೀತ ಲಾಲಾಸ್ರವವನ್ನು ಕಡಿಮೆ ಮಾಡುವುದಕ್ಕೆ ಉಪಯೋಗಿಸುತ್ತಾರೆ.

ಸ್ಕೊಪೋಲಮಿನನ್ನು ಮಾರ್ಫಿನಿನೊಡನೆ ಅಥವಾ ಪ್ರತ್ಯೇಕವಾಗಿ ಅರೆ ನಿದ್ರಾಸ್ಥಿತಿಯನ್ನುಂಟು ಮಾಡಲು ಮತ್ತು ಮೆದುಳಿನ ಉದ್ರೇಕ ಕಡಿಮೆಮಾಡುವ ಶಾಮಕವಾಗಿ ಉಪಯೋಗಿಸುತ್ತಾರೆ (ನೋಡಿ– ಅಟ್ರೊಪೀನ್).



ಕೋಕ ಸಸ್ಯಗಳನ್ನು ಆಕರವಾಗುಳ್ಳ ಇದೇ ಗುಂಪಿನ ಆಲ್ಕಲಾಯ್ಡ್‌ಗಳಲ್ಲಿ ಕೊಕೇನ್ ಮುಖ್ಯವಾದುದು. ದಂತವೈದ್ಯರ ಕುರ್ಚಿಯನ್ನೇರಿದವರಿಗೆಲ್ಲ ಪರಿಚಿತವಿರುವ ಈ ಸಂಯುಕ್ತವನ್ನು ಸ್ಥಳೀಯ ಇಂದ್ರಿಯ ನೋವಳಿಕವಾಗಿ (ಅನೆಸ್ಥೆಟಿಕ್) ಹಿಂದೆ ಹೆಚ್ಚು ಬಳಕೆಯಲ್ಲಿತ್ತು. ಹಲವು ಪ್ರತ್ಯೇಕ ಸಂದರ್ಭಗಳಲ್ಲಿ ಲಾಲಾಸ್ರಾವವನ್ನು ಕಡಿಮೆ ಮಾಡುವುದಕ್ಕಾಗಿಯೂ ಉತ್ತೇಜಕ, ವೇದನನಿವಾರಕ ಅಥವಾ ಶಮನಕಾರಿಯಾಗಿಯೂ ಬಳಕೆಯಲ್ಲಿತ್ತು.

ಕೊಕೇನ್‌ನ ಗುಣಲಕ್ಷಣಗಳಿಗೆ ಕಾರಣಗಳನ್ನು ಶೋಧಿಸುವ ಯತ್ನದಲ್ಲಿ ಅದೇ ಗುಣಗಳನ್ನುಳ್ಳ ನೊವೊಕೇನ್, ಟ್ಯುಟೊಕೇನ್ ಮುಂತಾದ ಹಲವು ಸಂಶ್ಲೇಷಿತ (ಸಿಂತೆಟಿಕ್) ಹಲವು ರಚನಾ ಸಂಬಂಧಿ ಸಂಯುಕ್ತಗಳನ್ನು ತಯಾರಿಸಲಾಗಿದೆ. ಇವನ್ನೂ ಕೊಕೇನಿನ ಬದಲಾಗಿ ಉಪಯೋಗಿಸಲಾಗುತ್ತಿದೆ.

ದಾಳಿಂಬೆಯ ತೊಗಟೆಯ ಕಷಾಯವನ್ನು ಹೊಟ್ಟೆಯಲ್ಲಿನ ಪರೋಪಜೀವಿ ಜಂತುಗಳನ್ನು ಉಚ್ಚಾಟಿಸಲು ಬಲುಹಿಂದಿನಿಂದಲೂ ಉಪಯೋಗಿಸಲಾಗುತ್ತಿದೆ. ಈ ಔಷಧೀಯ ಗುಣಕ್ಕೆ ಅದರಲ್ಲಿರುವ ಪೆಲೆಟಿಯರಿನ್ ಎಂಬ ಆಲ್ಕಲಾಯ್ಡ್ ಕಾರಣವೆಂದು ತಿಳಿದುಬಂದಿದೆ.

ಕ್ವಿನೋಲಿನ್ ವೃತ್ತವುಳ್ಳ ಆಲ್ಕಲಾಯ್ಡ್‌ಗಳಲ್ಲಿ ಸಿಂಕೋನ ಮರದ ತೊಗಟೆ ಬೇರುಗಳಿಂದ ತೆಗೆಯಲಾಗುವ ಆಲ್ಕಲಾಯ್ಡ್‌ಗಳು ಪ್ರಮುಖವಾದುವು. ಸಿಂಕೋನ ಮರದ ತೊಗಟೆಯನ್ನು ಜ್ವರಶಾಮಕವಾಗಿ ದಕ್ಷಿಣ ಅಮೆರಿಕದ ನಿವಾಸಿಗಳು ಬಲು ಹಿಂದಿನಿಂದಲೂ ಉಪಯೋಗಿಸುತ್ತಿದ್ದು ಆ ಮರಕ್ಕೆ ಜ್ವರದ ಮರವೆಂದೇ ಹೆಸರಿಟ್ಟಿದ್ದಾರೆ. ಮಲೇರಿಯದ ವಿರುದ್ಧ ಅನೇಕ ವರ್ಷಗಳ ಕಾಲ ನಿರಂತರವಾಗಿ ಉಪಯೋಗಿಸಲ್ಪಟ್ಟ ಕ್ವಿನೈನ್‌ಗೆ ಸಿಂಕೋನ ಮರವೇ ಆಕರ. ಸಿಂಕೋನ ಮರದಲ್ಲಿ ಕ್ವಿನೈನ್ ಮಾತ್ರವಲ್ಲದೆ ಸಿಂಕೋನಿನ್, ಕ್ವಿನಿಡೀನ್, ಸಿಂಕೋನಿಡೀನ್ ಮುಂತಾದ ಹಲವಾರು ಆಲ್ಕಲಾಯ್ಡ್‌ಗಳಿವೆ. ಮಲೇರಿಯ ಉಂಟುಮಾಡುವ ಪ್ಲಾಸ್ಮೋಡಿಯಂ ಸೂಕ್ಷ್ಮಕ್ರಿಮಿಗಳಿಗೆ ಕ್ವಿನೈನ್ ಯಾವ ಹಾನಿಯನ್ನೂ ಮಾಡದೇ ಹೋದರೂ ಕ್ರಿಮಿಗಳ ವಿರುದ್ಧ ದೇಹದ ಸಹಜಶಕ್ತಿಯನ್ನು ತಾತ್ಕಾಲಿಕವಾಗಿ ಹೆಚ್ಚಿಸಿ ಮಲೇರಿಯ ನಿವಾರಣೆಯಲ್ಲಿ ನೆರವು ನೀಡುತ್ತದೆ. ಕ್ವಿನೈನ್ ಮತ್ತು ಸಿಂಕೋನಿನ್‌ಗಳೆರಡೂ ಉತ್ತಮ ಜ್ವರಶಾಮಕಗಳು ಮತ್ತು ಅಲ್ಪ ಪ್ರಮಾಣದಲ್ಲಿ ಸೇವಿಸಿದಾಗ ಬಲವರ್ಧಕಗಳು. ಹಲವು ಸಂದರ್ಭಗಳಲ್ಲಿ ಸಿಂಕೋನ ಆಲ್ಕಲಾಯ್ಡ್‌ಗಳನ್ನು ಪೂತಿನಾಶಕಗಳಾಗಿಯೂ ಉಪಯೋಗಿಸುತ್ತಾರೆ. ಈಗ ಹಲವು ವರ್ಷಗಳಿಂದ ಕ್ವಿನಿಡೀನನ್ನು ಹಲವು ಹೃದ್ರೋಗಗಳ ಚಿಕಿತ್ಸೆಯಲ್ಲಿ ಉಪಯೋಗಿಸಲಾಗುತ್ತಿದೆ.



ಕ್ವಿನೈನ್ ಮತ್ತು ಕ್ವಿನಿಡೀನ್



ಐಸೋಕ್ವಿನಿಲಿನ್ ವೃತ್ತವನ್ನೊಳಗೊಂಡಿರುವ ಆಲ್ಕಲಾಯ್ಡ್‌ಗಳಲ್ಲಿ ಪಪಾವೆರೀನ್, ಬರ್ಬೆರಿನ್ ಮತ್ತು ಸ್ಯಾಂಗ್ವೆನೆರಿನ್ ಗುಂಪಿನ ಆಲ್ಕಲಾಯ್ಡ್‌ಗಳು ಪ್ರಮುಖವಾದುವು .

ಪಪಾವೆರೀನ್ ಗುಂಪಿನ ಆಲ್ಕಲಾಯ್ಡ್‌ಗಳಿಗೆ ಆಕರ ಗಸಗಸೆ ಜಾತಿಯ ಸಸ್ಯಗಳು. ಇವುಗಳಲ್ಲಿ ಪಪಾವೆರೀನ್ ಮತ್ತು ನಾರ್ಕೋಟೇನ್ ಮುಖ್ಯವಾದುವು. ಗಸಗಸೆಯ ಗಿಡದ ಉತ್ಪನ್ನವಾದ ಅಫೀಮಿನಲ್ಲಿ ಈ ಬಗೆಯ ಆಲ್ಕಲಾಯ್ಡ್‌ಗಳು ಅನೇಕ ಇವೆ. ಅಫೀಮಿನಲ್ಲಿ ಹತ್ತು ಶತಾಂಶದಷ್ಟಿರುವ ನಾರ್ಕೋಟಿನ್ ಮೈಮರೆಸಿ ಸುಪ್ತಾವಸ್ಥೆಯನ್ನು ತರಬಲ್ಲ ಸಂಯುಕ್ತ. ನಾರ್ಕೋಟಿನಿನಿಂದ ತಯಾರಿಸಲಾಗುವ ಕೊಟಾರ್ನಿನ್ ಸಂಯುಕ್ತಕ್ಕೆ ರಕ್ತಸ್ರಾವವನ್ನು ತಡೆಗಟ್ಟುವ ಮತ್ತು ಗರ್ಭಾಶಯವನ್ನು ಸಂಕುಚಿಸುವ ಗುಣವಿರುವುದರಿಂದ ಪ್ರಸವ ಕಾಲದಲ್ಲಿ ಇದನ್ನು ಉಪಯೋಗಿಸುತ್ತಾರೆ. ಈ ಸಂಯುಕ್ತಕ್ಕೆ ಕೇಂದ್ರ ನರಮಂಡಲವನ್ನು ತಾತ್ಕಾಲಿಕವಾಗಿ ನಿಸ್ತತ್ತ್ವಗೊಳಿಸುವ ಶಕ್ತಿಯಿದೆ. ಪಪಾವರಿನ್ ಸಂಯುಕ್ತಕ್ಕೂ ಇಂದ್ರಿಯಸುಪ್ತಿಯನ್ನುಂಟುಮಾಡುವ ಶಕ್ತಿಯಿದ್ದರೂ ಮಾರ್ಫೀನ್‌ನಷ್ಟು ತೀವ್ರವಾಗಿಲ್ಲ. ನರಗಳ ಮೂಲಕ ಸ್ನಾಯುಗಳ ಮೇಲೆ ಪರಿಣಾಮ ಬೀರಬಲ್ಲದು. ಈ ದೃಷ್ಟಿಯಲ್ಲಿ ಇದು ಕೊಡೀನನ್ನು ಹೋಲುತ್ತದೆ. ಹೈಡ್ರಾಸ್ಟಿನ್ ಎಂಬ ಆಲ್ಕಲಾಯ್ಡ್, ರಚನೆಯಲ್ಲಿ ನಾರ್ಕೋಟೀನಿಗೆ ಸಂಬಂಧಿಸಿದ ಸಂಯುಕ್ತವಾದರೂ ಅಫೀಮಿನಲ್ಲಿರುವುದಿಲ್ಲ. ಹೈಡ್ರಾಸ್ಟಿಸ್ ಕೆನಡೆನ್ಸಿಸ್ ಎಂಬ ಸಸ್ಯದ ಬೇರಿನಲ್ಲಿರುವ ಈ ಸಂಯುಕ್ತದ ನಿಷ್ಪನ್ನವಾದ ಹೈಡ್ರಾಸ್ಟಿನಿನ್‌ಗೆ ರಕ್ತನಾಳಗಳನ್ನು ಸಂಕುಚಿಸಿ ರಕ್ತದ ಒತ್ತಡವನ್ನು ಹೆಚ್ಚಿಸುವ ಶಕ್ತಿಯಿರುವುದರಿಂದ ಇದನ್ನು ಅಂಡಾಶಯ ಪರೀಕ್ಷೆ ಮತ್ತು ಪ್ರಸವವಿಜ್ಞಾನದ ಇತರ ಕಾರ್ಯಗಳಲ್ಲಿ ಉಪಯೋಗಿಸುತ್ತಾರೆ. ಹೈಡ್ರಾಸ್ಟಿನ್ ಸಂಯುಕ್ತವನ್ನು ಹೃದಯೋದ್ವೇಗ ಶಮನಕಾರಿಯಾಗಿ, ಪೂತಿನಾಶಕವಾಗಿ ಮತ್ತು ರಕ್ತಸ್ರಾವವನ್ನು ಕಡಿಮೆ ಮಾಡಲು ಉಪಯೋಗಿಸುತ್ತಾರೆ.





ಬರ್ಬೆರಿನ್ ಗುಂಪಿನ ಆಲ್ಕಲಾಯ್ಡ್‌ಗಳಲ್ಲಿ ಬರ್ಬೆರಿನ್ ಸಂಯುಕ್ತವೇ ಮುಖ್ಯವಾದುದು. ಬರ್ಬೆರಿನ್ ಸಸ್ಯಗಳ (ಭಾರತೀಯ ಹೆಸರುಗಳು–ದಾರು ಹಳದಿ, ದಾರು ಹರಿದ್ರಾ) ಮತ್ತು ಹೈಡ್ರಾಸ್ಟಿಸ್ ಕೆನಡೆನ್ಸಿಸ್ ಗಿಡದ ಬೇರುಗಳು ಮತ್ತು ಕ್ಯಾಂಥೋಸೈಲಮ್ ಕ್ಲ್ಯಾವಹರ್‌ಕ್ಯುಲಿಸ್ ಎಂಬ ಗಿಡದ ತೊಗಟೆಗಳಲ್ಲಿ ದೊರೆಯುವ ಈ ಆಲ್ಕಲಾಯ್ಡಿನ ಗುಣಗಳು ಹೈಡ್ರಾಸ್ಟಿಸ್‌ನ ಗುಣಗಳನ್ನು ಹೋಲುತ್ತವೆ ; ಬರ್ಬೆರೀನ್ ಸಲ್ಫೇಟು ಭಾರತದಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ಆಮಶಂಕೆ, ಭೇದಿ ಕಾಯಿಲೆಗಳಿಗೆ ಪರಿಣಾಮಕಾರಿಯಾಗಿದೆ.



ಸ್ಯಾಂಗ್ವೆನೆರಿನ್ ಗುಂಪಿನಲ್ಲಿ ಸ್ಯಾಂಗ್ವನೆರಿನ್, ಕೆಲಿಡೋನಿನ್, ಕೆಲೆರಿಥ್ರಿನ್ ಮತ್ತು ಹೋಮೋಕೆಲಿಡೋನಿನ್ ಎಂಬ ನಾಲ್ಕು ಪರಸ್ಪರ ಸಂಬಂಧಿಸಿದ ಆಲ್ಕಲಾಯ್ಡ್‌ಗಳಿವೆ. ಗಸಗಸೆ ಜಾತಿಯ ಕೆಲಿಡೋನಿಯಂ ಮೇಜಸ್ ಮತ್ತು ಸ್ಯಾಂಗ್ವಿನೇರಿಯ ಕೆನಡೆನ್ಸಿಸ್ ಎಂಬ ಸಸ್ಯಗಳ ಬೇರುಗಳಲ್ಲಿ ದೊರೆಯುವ ಈ ಆಲ್ಕಲಾಯ್ಡ್‌ಗಳು ಚರ್ಮದ ಕ್ಯಾನ್ಸರಿನ ಚಿಕಿತ್ಸೆಯಲ್ಲಿ ಉಪಯೋಗಕ್ಕೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಬೇರುಗಳ ಕಷಾಯವನ್ನು ಚಿಕಿತ್ಸೆಯಲ್ಲಿ ಈಗಾಗಲೇ ಉಪಯೋಗಿಸಲಾಗುತ್ತಿದೆ. ಗಸಗಸೆ ಜಾತಿಯ ಗಿಡಗಳಲ್ಲಿ ದೊರೆಯುವ ಮತ್ತೊಂದು ಮುಖ್ಯವಾದ ಆಲ್ಕಲಾಯ್ಡ್‌ಗಳ ಗುಂಪಿನಲ್ಲಿ ಮಾರ್ಫೀನ್, ಕೋಡೀನ್ ಮತ್ತು ಅದರ ಸಂಬಂಧಿಗಳು ಸೇರುತ್ತವೆ. ಇವುಗಳೂ ಐಸೋಕ್ವಿನೋಲಿನ್ ವೃತ್ತವನ್ನುಳ್ಳ ಆಲ್ಕಲಾಯ್ಡ್‌ಗಳೇ. ಇವುಗಳ ರಚನೆಗಳು ಅಷ್ಟು ಸರಳವಾದುವಲ್ಲವಾದ್ದರಿಂದ ಬಲುಕಾಲ ಇವುಗಳ ರಚನಾ ನಿರ್ಣಯಗಳು ರಸಾಯನಶಾಸ್ತ್ರಜ್ಞರಿಗೆ ಉತ್ತಮ ಸಮಸ್ಯೆಗಳಾಗಿ ಉಳಿದಿದ್ದುವು (**ನೋಡಿ– ಅಫೀಮು**); **ಮಾರ್ಫೀನ್**.





13



ಕೋಡೀನ್‌ನಲ್ಲಿ ಇಂದ್ರಿಯಸುಪ್ತಿಯನ್ನುಂಟುಮಾಡುವ ಶಕ್ತಿ ತೀವ್ರವಾಗಿಲ್ಲ. ಆದರೆ ಉದ್ವೇಗಶಾಮಕ ಶಕ್ತಿ ಉಂಟು. ಆದ್ದರಿಂದ ಕೋಡೀನಿನ ಸೇವನೆ ಮಾರ್ಫೀನಿನ ಸೇವನೆಗಿಂತ ಹೆಚ್ಚು ಕ್ಷೇಮಕರ. ಸ್ನಾಯುಗಳ ಸೆಡೆತವನ್ನು ಕಡಿಮೆಮಾಡುವ ಶಕ್ತಿ ಇರುವುದರಿಂದ ಕೋಡೀನನ್ನು ಕೆಮ್ಮು, ನೆಗಡಿಗಳ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ. ಉತ್ಪನ್ನ ಸಂಯುಕ್ತಗಳಾದ ಮಾರ್ಫೀನ್ ಎಥೈಲ್ ಈಥರ್ ಮತ್ತು ಡೈಹೈಡ್ರೋಕೋಡೀನ್‌ಗಳನ್ನೂ

ಕೆಮ್ಮಿನ ಚಿಕಿತ್ಸೆಯಲ್ಲಿ ಉಪಯೋಗಿಸಲಾಗುತ್ತಿದೆ. ಮಾರ್ಫೀನಿನ ಮತ್ತೊಂದು ನಿಷ್ಪನ್ನವಾದ ಅಪೋಮಾರ್ಫೀನ್ ವಾಂತಿ ಮಾಡಿಸಲು ಉಪಯೋಗಿಸುವ ಔಷಧಿ (**ನೋಡಿ– ಅಪೋಮಾರ್ಫೀನ್**).

ಇಂಡೋಲ್ ವೃತ್ತರಚನೆಯನ್ನೊಳಗೊಂಡಿರುವ ಆಲ್ಕಲಾಯ್ಡ್‌ಗಳಲ್ಲಿ ಎರ್ಗಾಟ್, ಸ್ಟ್ರಿಕ್ನೋಸ್ ಮತ್ತು ಯೋಹಿಂಬೆ ಗುಂಪಿನ ಆಲ್ಕಲಾಯ್ಡ್‌ಗಳು ಮುಖ್ಯವಾದುವು. ಧಾನ್ಯಗಳ ಮೇಲೆ, ಅದರಲ್ಲೂ ರೈ ಧಾನ್ಯದ ಮೇಲೆ ಬೆಳೆಯುವ ಕೀಳ್ತೆರನ ಪರೋಪಜೀವಿಯಾದ ಎರ್ಗಾಟ್ ಎಂಬ ಬೂಷ್ಟಿನಲ್ಲಿ ದೊರೆಯುವ ಆಲ್ಕಲಾಯ್ಡ್‌ಗಳೆಲ್ಲವೂ ಲೈಸರ್ಜಿಕ್ ಆಮ್ಲದ ನಿಷ್ಪನ್ನ ಸಂಯುಕ್ತಗಳು (ನೋಡಿ– ಎರ್ಗಾಟ್). ಲೈಸರ್ಜಿಕ್ ಆಮ್ಲದ ಡೈ ಎಥೈಲ್ ಅಮೈಡ್ ನಿಷ್ಪನ್ನ ಎಲ್.ಎಸ್.ಡಿ. ಎಂಬ ಹೆಸರಿನಿಂದ ಜಗತ್ಪ್ರಸಿದ್ಧವಾಗಿದೆ.



ಮಿದುಳನ್ನು ಸುಪ್ತಿ, ಸಂಮೋಹನ ಕ್ಕೊಳಪಡಿಸಿ ಈ ಸಂಯುಕ್ತ ಸೇವಿಸುವ ವ್ಯಕ್ತಿಯ ಮಾನಸಿಕ ಹಿನ್ನೆಲೆ ಮತ್ತು ಆಕಾಂಕ್ಷೆಗಳಿಗನುಗುಣವಾಗಿ ವಿವಿಧ ಅಸ್ವಾಭಾವಿಕ ಅನುಭವಗಳನ್ನು ನೀಡ ಬಲ್ಲ ಶಕ್ತಿ ಪಡೆದಿರುವುದರಿಂದ ಪಾಶ್ಚಾತ್ಯ ದೇಶಗಳಲ್ಲಿ ಅನೇಕರು ಇದರ ಸೇವನೆಯ ಚಟಕ್ಕೆ ಬಲಿಯಾಗಿದ್ದಾರೆ. ಈ ಸಂಯುಕ್ತದ ವಿಪರೀತ ಉಪಯೋಗದಿಂದ ಸೇವಿಸುವ ವ್ಯಕ್ತಿ ಬೇಜವಾಬ್ದಾರಿಯವನಾಗಿ ಮಾನಸಿಕ ರೋಗಿಯಾಗುವ ಸಂಭವವುಂಟು. ಎಲ್.ಎಸ್.ಡಿ. ಮಿದುಳಿನಲ್ಲಿನ ಚಟುವಟಿಕೆಗಳನ್ನು ನಿಯಂತ್ರಿಸುವ ಸೆರೊಟೋನಿನ್ ಎಂಬ ಸಂಯುಕ್ತದ ಸಮತೋಲನವನ್ನು ಬದಲಾಯಿಸುವುದೇ ಅದರ ಸೇವನೆಯಿಂದಾಗುವ ಪರಿಣಾಮಗಳಿಗೆ ಕಾರಣವೆಂದು ನಂಬಲಾಗಿದೆ.



ಸ್ಟ್ರಿಕ್ನೋಸ್ ಗುಂಪಿನ ಎರಡು ಮುಖ್ಯ ಆಲ್ಕಲಾಯ್ಡ್‌ಗಳು ಸ್ಟ್ರಿಕ್ನಿನ್ ಮತ್ತು ಬ್ರೂಸಿನ್. ಸ್ಟ್ರಿಕ್ನೋಸ್ (ಕಾಜವಾರ) ಗುಂಪಿನ ಸಸ್ಯಗಳಲ್ಲಿ ದೊರೆಯುವ ಈ ಆಲ್ಕಲಾಯ್ಡ್‌ಗಳನ್ನು ಶುದ್ಧರೂಪದಲ್ಲಿ ಪಡೆದ ಅನಂತರ ಸಂಪೂರ್ಣ ರಚನಾನಿರ್ಣಯ ಮಾಡಿ, ಪ್ರಯೋಗಶಾಲೆಯಲ್ಲಿ ಸಂಯೋಜಿಸಿ ಸಮರ್ಥಿಸಲು ಸು. 100 ವರ್ಷಗಳೇ ಬೇಕಾಗುವುದು. ಈ ಆಲ್ಕಲಾಯ್ಡ್‌ಗಳು ವಿಷಪದಾರ್ಥಗಳೆಂದು ಪ್ರಸಿದ್ಧವಾಗಿದ್ದರೂ ಸೂಕ್ತ ಪ್ರಮಾಣಗಳಲ್ಲಿ ಹಸಿವಾಗಿಸಲೂ ನರಗಳನ್ನು ಉತ್ತೇಜಿಸುವುದಕ್ಕಾಗಿಯೂ ಬಲವರ್ಧಕಗಳಾಗಿಯೂ ಇವನ್ನು ಉಪಯೋಗಿಸಲಾಗುತ್ತಿದೆ (**ನೋಡಿ ಕಾಜವಾರ ವಿಷ**).





ಯೋಹಿಂಬೆ ಗುಂಪಿನ ಆಲ್ಕಲಾಯ್ಡ್‌ಗಳಲ್ಲಿ ಮುಖ್ಯವಾದುವು ಯೋಹಿಂಬೈನ್ ಮತ್ತು ರಿಸರ್ಪೀನ್‌ಗಳು. ಸರ್ಪಗಂಧ ಅಥವಾ ಚಂದ್ರಿಕಾ ಗಿಡದ ಬೇರು ತೊಗಟೆಗಳಲ್ಲಿನ ಮುಖ್ಯ ಆಲ್ಕಲಾಯ್ಡ್ ರಿಸರ್ಪೀನ್. ಸರ್ಪಗಂಧವನ್ನು ಸು.4,000 ವರ್ಷಗಳಿಂದಲೂ ಭಾರತೀಯರು ಮೂಲಿಕೆಯಾಗಿ ಉಪಯೋಗಿಸುತ್ತಿದ್ದರು. ಚರಕ ಸಂಹಿತೆಯಲ್ಲೂ ಇದರ ಉಲ್ಲೇಖವಿದೆ. ಈ ಸಂಯುಕ್ತಕ್ಕೆ ಮನಸ್ಸು, ಹೃದಯಗಳ ಉದ್ವೇಗಗಳನ್ನು ಕಡಿಮೆಮಾಡಿ ರಕ್ತದ ಒತ್ತಡವನ್ನು ತಗ್ಗಿಸುವ ಶಕ್ತಿ ಇರುವುದರಿಂದ ಮಾನಸಿಕರೋಗಗಳು ಮತ್ತು ಅತಿರಕ್ತದ ಒತ್ತಡದ ಚಿಕಿತ್ಸೆಗಾಗಿ ಇದನ್ನು ಉಪಯೋಗಿಸಲಾಗುತ್ತಿದೆ. ರಿಸರ್ಪೀನಿನ ಉಪಯೋಗವನ್ನು ಸು.50 ವರ್ಷಗಳಿಂದ ಪಾಶ್ಚಾತ್ಯ ವೈದ್ಯರು ಅರಿತುಕೊಂಡು ಸರ್ಪಗಂಧದಿಂದ ಬೇರ್ಪಡಿಸಿ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಯೋಹಿಂಬೈನ್ ಸಂಯುಕ್ತಕ್ಕೆ ಕಾಮೋತ್ತೇಜಕ ಗುಣವೂ ಇದೆಯೆಂದು ಹೇಳಲಾಗಿದೆ.

ಇಂಡೋಲ್ ರಚನೆಯನ್ನೊಳಗೊಂಡಿರುವ ಹಲವು ಆಲ್ಕಲಾಯ್ಡ್‌ಗಳು ಕೆಲಬಾರ್ ಎಂಬ ಬೀಜದ ಕಾಳುಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಮುಖ್ಯವಾದುದು ಈಸರೀನ್ ಅಥವಾ ಫೈಸೋಸ್ಟಿಗ್ಮಿನ್ (**ನೋಡಿ– ಕೆಲಬಾರ್–ಬೀಜ**).





ಈಸರೀನ್ ಕಣ್ಣುಪಾಪೆ ಸಂಕುಚಿಸುವಂತೆ ಮಾಡಬಲ್ಲದು. ಗ್ರಂಥಿಗಳ ರಸ ಒಸರುವಿಕೆಯನ್ನು ಹೆಚ್ಚಿಸಬಲ್ಲುದು ಮತ್ತು ಕರುಳಿನಲ್ಲಿ ಆಹಾರ ಪರಿಕ್ರಮ ಸ್ನಾಯು ಸಂಕೋಚನೆಯಿಂದ ಸರಾಗವಾಗಿ ಮುಂದುವರಿಯುವಂತೆ ಮಾಡಬಲ್ಲ ಶಕ್ತಿ ಇದಕ್ಕಿದೆ.



ನೇತ್ರಚಿಕಿತ್ಸೆಯಲ್ಲಿ ಮತ್ತು ಕ್ಯೂರರೇ (ಕ್ಯೂರರೇ ಎಂಬುದು ದಕ್ಷಿಣ ಅಮೆರಿಕದ ಮೂಲನಿವಾಸಿಗಳು ಬಾಣದ ತುದಿಗೆ ಹಚ್ಚುತ್ತಿದ್ದ ವಿಷ ; ಹಲವಾರು ಜಾತಿಯ ಮರಗಳ ತೊಗಟೆಗಳಿಂದ ಒಂದು ನಿರ್ದಿಷ್ಟ ರೀತಿಯಲ್ಲಿ ಸಂಸ್ಕರಿಸಿ ಈ ವಿಷವನ್ನು ತಯಾರಿಸಲಾಗುತ್ತಿತ್ತು : ಈ ವಿಷದಲ್ಲಿಯೂ ಹಲವಾರು ಆಲ್ಕಲಾಯ್ಡ್‌ಗಳಿವೆ) ವಿಷಪ್ರಯೋಗದ ವಿರುದ್ಧ ಚಿಕಿತ್ಸೆಗಾಗಿ ಇದನ್ನು ಉಪಯೋಗಿಸಬಹುದು (**ನೋಡಿ– ಅರಿವಳಿಕೆ,–ಅರಿವಳಿಕಗಳು; ಕ್ಯುರೇರ್**).

ಪ್ಯೂರೀನ್ ವೃತ್ತರಚನೆಯನ್ನೊಳಗೊಂಡಿರುವ ಆಲ್ಕಲಾಯ್ಡ್‌ಗಳಲ್ಲಿ ಮುಖ್ಯವಾದುವು ಕೆಫೀನ್ ಮತ್ತು ಥಿಯೋಬ್ರೋಮಿನ್. ಕಾಫಿಬೀಜ ಮತ್ತು ಚಹದ ಎಲೆಗಳಲ್ಲಿರುವ ಕೆಫೀನ್ ಮತ್ತು ಕೋಕೋ ಬೀಜಗಳಲ್ಲಿರುವ ಥಿಯೋಬ್ರೋಮಿನ್ ಹೃದಯದ ಬಡಿತವನ್ನು ಹೆಚ್ಚಿಸಿ ಕೇಂದ್ರ ನರಮಂಡಲಕ್ಕೂ ತಾತ್ಕಾಲಿಕ ಉತ್ತೇಜನ ನೀಡುತ್ತದೆ (**ನೋಡಿ– ಕಾಫಿ**).

ಹೃದಯದ ಬಡಿತದ ವೇಗವನ್ನು ಕಡಿಮೆ ಮಾಡುವ ಅನಪೇಕ್ಷಿತ ಗುಣವನ್ನುಳ್ಳ ಆಸ್ಪಿರಿನ್‌ನಂಥ ಔಷಧಗಳಿಂದುಂಟಾಗಬಹುದಾದ ದುಷ್ಪರಿಣಾಮಗಳನ್ನು ತಡೆಗಟ್ಟಲು ಅಂಥ ಔಷಧಗಳೊಡನೆ ಕೆಫೀನನ್ನು ಉಪಯೋಗಿಸಲಾಗುತ್ತದೆ. ಉತ್ತೇಜಕ ಗುಣವಿರುವುದರಿಂದ ಅನೇಕ ತಂಪು ಪಾನೀಯಗಳಲ್ಲೂ ಕೆಫೀನನ್ನು ಬೆರೆಸಲಾಗುತ್ತಿದೆ (**ನೋಡಿ– ಆಸ್ಪಿರಿನ್**).

ಚಿತ್ರದಲ್ಲಿ ತೋರಿಸಿರುವ ರಚನೆಯುಳ್ಳ ಕೋಲ್ಚಿ ಸಿನ್, ಕೋಲ್ಚಿಕಮ್ ಗುಂಪಿನ ಸಸ್ಯಗಳಲ್ಲಿ (ಭಾರತೀಯ ಹೆಸರುಗಳು–ಹಿರಣ್ಯತುತ್, ಹಿರಂಟುತಿಯ, ಮೂಂಡ್, ಸುರಂಜಮಕರ್ವಿ) ದೊರೆಯುವ ಆಲ್ಕಲಾಯ್ಡ್. 1819ರಲ್ಲಿ ಬೇರ್ಪಡಿಸಲ್ಪಟ್ಟ ಈ ಸಂಯುಕ್ತದ ರಚನಾ ನಿರ್ಣಯಕ್ಕೆ ಸು. 140 ವರ್ಷಗಳಾದುವು. 40ವರ್ಷಗಳ ಹಿಂದೆ ಇದರ ಸಂಯೋಜನೆಯೂ ಆಗಿದ್ದು ಈಗ ಇದರ ರಚನಾನಿರ್ಣಯ ಸಂಪೂರ್ಣವಾಗಿದೆ. ಕಟ್ಟುವಾರೆ (ಗೌಟ್) ರೋಗದ ಚಿಕಿತ್ಸೆಯಲ್ಲಿ ಈ ಸಂಯುಕ್ತವನ್ನು ಉಪಯೋಗಿಸಲಾಗುತ್ತಿದೆ (**ನೋಡಿ– ಕಟ್ಟುವಾರೆ**).

ಇನ್ನುಳಿದ ಆಲ್ಕಲಾಯ್ಡ್‌ಗಳಲ್ಲಿ ಹಲವು ಮುಖ್ಯ ಆಲ್ಕಲಾಯ್ಡ್‌ಗಳನ್ನು ಮುಂದೆ ಸ್ಥೂಲವಾಗಿ ಪರಿಶೀಲಿಸಲಾಗಿದೆ. ಪೈಲೋಕಾರ್ಪಿನ್ (ಆಕರ–ಪೈಲೋಕಾರ್ಪಸ್ ಪೆನ್ನಾಟಿಫೋಲಸ್) – ನೇತ್ರಚಿಕಿತ್ಸೆಯಲ್ಲಿ ಮತ್ತು ಬೆವರಿಳಿಸಲು ಸಹಾಯಕವಾಗಿ ಇದನ್ನು ಉಪಯೋಗಿಸಲಾಗುತ್ತಿದೆ.

ಆಕೋನಿಟನ್ (ಆಕರ–ಆಕೋನಿಟಮ್ ಗುಂಪಿನ ಸಸ್ಯಗಳು. ಭಾರತೀಯ ಹೆಸರುಗಳು–ಬಂಬಲನಾಗ, ಸಫೇದ್ ಬಿಷ್, ಅತಿವಿಷ)–ಬಹು ತೀವ್ರ ವಿಷವಸ್ತು. ಕೇಂದ್ರನರಮಂಡಲದ ಮೇಲೆ ಪರಿಣಾಮವನ್ನುಂಟುಮಾಡಬಲ್ಲ ಶಕ್ತಿಯಿದ್ದು ಹೃದಯಸ್ತಂಭನವನ್ನುಂಟುಮಾಡಬಲ್ಲದು.

ಎಮೆಟಿನ್ (ಆಕರ–ಇಪಿಕ್ಯಾಕುವಾನ) – ಈ ಆಲ್ಕಲಾಯ್ಡ್‌ನ್ನು ಏಕಾಣುಜೀವಿಗಳಿಂದ ಉಂಟಾಗುವ ರಕ್ತಭೇದಿಯ ಚಿಕಿತ್ಸೆಯಲ್ಲಿ ಉಪಯೋಗಿಸಲಾಗುತ್ತದೆ. ಇದು ವಾಂತಿಕಾರಿ ಗುಣವನ್ನೂ ಪಡೆದಿದೆ (**ನೋಡಿ– ಆಮಶಂಕೆ**).

ಈಗ ಸು.40 ವರ್ಷಗಳಿಂದ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಸಸ್ಯೋತ್ಪನ್ನ ಸಂಯುಕ್ತಗಳ ಉಪಯೋಗವನ್ನು ಪರಿಶೀಲಿಸಲಾಗುತ್ತಿದೆ. ಹಲವು ಆಲ್ಕಲಾಯ್ಡ್‌ಗಳು ಥ್ಯಾಲಿಕಾರ್ಪಿನ್, ಟೆಟ್ರಾಂಡ್ರಿನ್, ವಿಂಕ ಲ್ಯೊಕೋಬ್ಲ್ಯಾಸ್ಟಿನ್, ಎಲೆಫ್ಯಾಂಟಿನ್, ವಿಟಾಫೆರಿನ್, ಅಕ್ರೋಮೈಸಿನ್, ಕೋಲ್ಚಿಸಿನ್ ಮತ್ತು ಸ್ಯಾಂಗ್ವೆರಿನ್ ಗುಂಪಿನ ಆಲ್ಕಲಾಯ್ಡ್‌ಗಳು ವಿವಿಧ ಬಗೆಯ ಕ್ಯಾನ್ಸರ್ ವಿರುದ್ಧ ಚಿಕಿತ್ಸೆಗಳಲ್ಲಿ ಉಪಯೋಗಕ್ಕೆ ಒದಗುವ ಭರವಸೆಯನ್ನು ತೋರಿಸುತ್ತಿವೆ. ಖಚಿತ ನಿರ್ಣಯಕ್ಕೆ ಬರಲು ಬೇಕಾಗುವ ಪ್ರಯೋಗಗಳು ನಡೆಯುತ್ತಿವೆ.










ಆಲ್ಕಲಾಯ್ಡ್‌ಗಳ ಜೈವಿಕ ಉತ್ಪಾದನೆ (ಬಯೋಜೆನಿಸಿಸ್), ಸಸ್ಯಗಳಲ್ಲಿ ಆಲ್ಕಲಾಯ್ಡ್‌ಗಳ ನಿರ್ಮಾಣ ಹೇಗೆ ಆಗುತ್ತದೆಂಬುದನ್ನು ತಿಳಿದುಕೊಳ್ಳಲು ಅನೇಕ ವಿಜ್ಞಾನಿಗಳು ಪ್ರಯೋಗಗಳನ್ನು ನಡೆಸಿದ್ದಾರೆ ಮತ್ತು ನಡೆಸುತ್ತಿದ್ದಾರೆ. ಈ ಪರಿಶೀಲನೆಗಳಿಂದ ಸಸ್ಯಗಳಲ್ಲಿ ಅವುಗಳ ಪಾತ್ರವೇನೆಂಬುದನ್ನು ತಿಳಿಯುವ ಸಾಧ್ಯತೆಯಿದೆಯೆಂದು ಭಾವಿಸಲಾಗಿದೆ. ಈ ಬಗೆಯ ಜೈವಿಕಸಂಶ್ಲೇಷಣ (ಬಯೋಸಿಂತೆಸಿಸ್) ಸಮಸ್ಯೆಯೂ ರಸಾಯನವಿಜ್ಞಾನಿಗಳಿಗೆ ರಚನಾನಿರ್ಣಯ ಸಮಸ್ಯೆಯಷ್ಟೇ ಮನೋರಂಜಕವಾಗಿದೆ. ಈವರೆಗೆ ನಡೆದಿರುವ ಪರಿಶೀಲನೆಗಳಲ್ಲಿ ರಾಬರ್ಟ್ ರಾಬಿನ್‌ಸನ್, ಪಿಕ್ಟೆಟ್ ಮತ್ತು ಕಳೆದ 5 ದಶಕಗಳಲ್ಲಿ ಹೆಂಡ್ರಿಕ್‌ಸನ್ ಮತ್ತು ಬ್ಯಾಟರ್ ಸ್ಪೀಯವರ ಪಾತ್ರಗಳು ಹಿರಿದಾಗಿವೆ.

ಸಸ್ಯಗಳಲ್ಲಿ ಸಮೃದ್ಧವಾಗಿರುವ ಅಮೈನೋಆಮ್ಲಗಳು, ಅಸೆಟಿಕ್‌ಆಮ್ಲ ಮತ್ತು ಫಾರ್ಮಾಲ್ಡಿಹೈಡ್‌ಗಳು ಈ ಬಗೆಯ ಸಂಶ್ಲೇಷಣೆಗಳಲ್ಲಿ ಭಾಗವಹಿಸುವುವೆಂದು ತಿಳಿದುಬಂದಿದೆ. ಈ ಬಗೆಯ ಪರಿಶೀಲನೆಗಳಲ್ಲಿ ವಿಕಿರಣಕ್ರಿಯಾಶಕ್ತಿಯನ್ನುಳ್ಳ ಪರಮಾಣುಗಳನ್ನೊಳಗೊಂಡಿರುವ ಸಂಯುಕ್ತಗಳನ್ನು ಸಸ್ಯಗಳಿಗೆ ಒದಗಿಸಿ, ಅಂತಿಮ ಸಂಯುಕ್ತವಾದ ಆಲ್ಕಲಾಯ್ಡ್‌ನಲ್ಲಿ ವಿಕಿರಣಶಕ್ತಿಯ ಇರುವಿಕೆ (ಅಥವಾ ಇಲ್ಲದಿರುವಿಕೆ), ಇದ್ದಲ್ಲಿ ಅದರ ತೀವ್ರತೆ ಇವುಗಳ ಪರೀಕ್ಷೆಯಿಂದ ಊಹಿಸಲಾದ ಸಂಯುಕ್ತಗಳಿಂದ ಆಲ್ಕಲಾಯ್ಡ್ ಅಣುಗಳ ನಿರ್ಮಾಣ ಆಗಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬಹುದು. ಉದಾ : ವಿಕಿರಣ ಕ್ರಿಯಾಶಕ್ತಿಪೂರಿತ ಕಾರ್ಬನ್ ಅಣುವನ್ನುಳ್ಳ ಅಸಿಟಿಕ್ ಆಮ್ಲವನ್ನು ಸಸ್ಯಕ್ಕೆ ಒದಗಿಸಿ, ಹಲವು ಕಾಲದ ಅನಂತರ ಆ ಸಸ್ಯದಿಂದ ಆಲ್ಕಲಾಯ್ಡ್‌ನ್ನು ತಯಾರಿಸಿದಾಗ ಆ ಆಲ್ಕಲಾಯ್ಡ್ ವಿಕಿರಣಕ್ರಿಯಾಶಕ್ತಿಯ ಇರುವಿಕೆಯನ್ನು ವ್ಯಕ್ತಪಡಿಸಿದರೆ ಅದರ ಜೈವಿಕ ಸಂಶ್ಲೇಷಣೆಯಲ್ಲಿ ಅಸಿಟಿಕ್ ಆಮ್ಲ ಭಾಗವಹಿಸಿದೆಯೆಂದು ನಿರ್ಣಯಿಸಬಹುದು.

ಸಾಮಾನ್ಯವಾಗಿ ಈ ಬಗೆಯ ಸಂಶೋಧನೆಗಳಲ್ಲಿ ಊಹಾಸಂಶ್ಲೇಷಣೆಗಳನ್ನು ಬರೆದು ಅನಂತರ ಇವುಗಳನ್ನು ಸಮರ್ಥಿಸಲು, ನಕಾಶೆಗಳಲ್ಲಿ ತೋರಿಸಿರುವ ಮಧ್ಯವರ್ತಿಗಳನ್ನು ಪರಿಶೀಲಿಸಲಾಗುತ್ತದೆ. ಅದಕ್ಕಾಗಿ ವಿಕಿರಣಕ್ರಿಯಾಶಕ್ತಿಯುಳ್ಳ ಪರಮಾಣುಗಳನ್ನೊಳಗೊಂಡಿರುವ ಊಹಾಮಧ್ಯವರ್ತಿಗಳನ್ನು ಪ್ರತ್ಯೇಕವಾಗಿ ಸಂಯೋಜಿಸಿ ಅವುಗಳನ್ನು ಅನಂತರ ಸಸ್ಯಕ್ಕೆ ಒದಗಿಸಿ ಹಲವು ದಿನಗಳ ಅನಂತರ ಆಲ್ಕಲಾಯ್ಡ್‌ನ್ನು ಸಸ್ಯದಿಂದ ಬೇರ್ಪಡಿಸಿ ಪರೀಕ್ಷಿಸಲಾಗುತ್ತದೆ. ಆ ಸಮಯದಲ್ಲಿ ಆಲ್ಕಲಾಯ್ಡ್‌ನಲ್ಲಿ ವಿಕಿರಣಕ್ರಿಯಾಶಕ್ತಿಯಿದ್ದಲ್ಲಿ ಊಹಾಮಧ್ಯವರ್ತಿ ನಿಜವಾಗಿಯೂ ಜೈವಿಕ ಸಂಶೋಧನೆಯಲ್ಲಿಯೂ ಮಧ್ಯವರ್ತಿ ಎಂದು ಭಾವಿಸಲಾಗುತ್ತದೆ. ಹಾಗಿಲ್ಲವಾದರೆ ಆ ಮಾರ್ಗ ಮತ್ತು ಮಧ್ಯವರ್ತಿಗಳನ್ನು ತಿರಸ್ಕರಿಸಿ ಹೊಸ ಮಧ್ಯವರ್ತಿ ಮತ್ತು ಮಾರ್ಗಗಳ ಪರೀಕ್ಷೆಗೆ ತೊಡಗಬೇಕಾಗುತ್ತದೆ. ಈ ಬಗೆಯ ಸೂಕ್ಷ್ಮಸಂಶೋಧನೆಯಿಂದ ಯಾವ ಮೂಲ ಅಣುಗಳು ಆರಂಭ ವಸ್ತುಗಳು, ಅವು ಹೇಗೆ ಕ್ರಮೇಣ ಒಂದರೊಡನೊಂದು ಸೇರಿ ದೊಡ್ಡ ಅಣುಗಳಾಗುತ್ತವೆ ಎಂಬುದನ್ನು ತಿಳಿಯಬಹುದು.

ಇಂಥ ಸಂಶೋಧನೆಗಳು ಸಸ್ಯಗಳ ಬೆಳೆವಣಿಗೆಯನ್ನು ಅನುಸರಿಸಬೇಕಾಗಿರುವುದರಿಂದ ಬಹು ಕಾಲವ್ಯಯ ಅನಿವಾರ್ಯ. ಈವರೆಗೆ ಅನೇಕ ಆಲ್ಕಲಾಯ್ಡ್‌ಗಳ ಜೈವಿಕ ಉತ್ಪಾದನೆಗಳನ್ನು ಯಶಸ್ವಿಯಾಗಿ ಅರಿತುಕೊಳ್ಳಲಾಗಿದೆ. ಎಲ್ಲ ಆಲ್ಕಲಾಯ್ಡ್‌ಗಳ ರಚನಾನಿರ್ಣಯ, ಪ್ರಯೋಗಶಾಲೆಯ ಸಂಶ್ಲೇಷಣೆಗಳನ್ನು ಮಾತ್ರವಲ್ಲದೆ, ಜೈವಿಕ ಸಂಶ್ಲೇಷಣೆಗಳ ಅರಿವನ್ನೂ ಸಾಧಿಸಬೇಕೆಂಬುದು ಆಲ್ಕಲಾಯ್ಡ್ ವಿಜ್ಞಾನಿಗಳ ಆಶಯ. ಈ ಬಗೆಯ ಸಂಶ್ಲೇಷಣೆಯ ರಹಸ್ಯವನ್ನು ಅರಿತ ಅನಂತರ ಆಲ್ಕಲಾಯ್ಡ್‌ನ್ನು ಪ್ರಯೋಗಶಾಲೆಯಲ್ಲಿ ಸಂಶ್ಲೇಷಿಸಲೂ ಹಲವು ಬಾರಿ ಕೆಲವು ಸೂಚನೆಗಳು ದೊರೆಯುತ್ತವೆ. (ಕೆ.ಟಿ.ಎಸ್.)

**ಆಲ್ಕಾಟ್ ಲೂಯಿಸ ಮೇ:** 1832–88. ಮಕ್ಕಳಿಗಾಗಿ ಬಲು ಒಳ್ಳೆಯ ಕಥೆ ಕಾದಂಬರಿಗಳನ್ನು ರಚಿಸಿರುವ ಅಮೆರಿಕದ ಬರೆಹಗಾರ್ತಿ. ತಂದೆ ಬಡ ಅಧ್ಯಾಪಕನಾಗಿದ್ದ ಕಾರಣ ಸಂಸಾರದ ಜವಾಬ್ದಾರಿಯೆಲ್ಲ ಈಕೆಯ ಮೇಲೆ ಬಿತ್ತು. ಚಿಕ್ಕವಳಿರುವಾಗಲೇ ಬೊಂಬೆಗಳಿಗೆ ಬಟ್ಟೆ ಹೊಲಿದು ಹಣ ಸಂಪಾದಿಸುತ್ತಿದ್ದಳು. ಮನಸ್ಸಿಲ್ಲದಿದ್ದರೂ ನೇಯ್ಗೆ ಶಾಲೆಗೆ ಸೇರಿ ದುಡಿದಳು. ಅವಳ ಈ ಎಲ್ಲ ಅನುಭವಗಳೂ ಆಕೆಯ ಪುಸ್ತಕಗಳಲ್ಲಿ ಪ್ರತಿಫಲಿತವಾಗಿವೆ. ಅಮೆರಿಕದ ಪ್ರಸಿದ್ಧ ತತ್ತ್ವವೇತ್ತರೂ ಸಾಹಿತಿಗಳೂ ಆದ ರಾಲ್ಫ್ ವಾಲ್ಡೊ ಎಮರ್‌ಸನ್ ಮತ್ತು ಹೆನ್ರಿ ಡೇವಿಡ್ ಥೋರೊ ಈಕೆಯ ಸ್ನೇಹಿತರು. ಅವರ ಜೀವನದ ನಿಷ್ಠೆ, ಧ್ಯೇಯಗಳೂ ಈಕೆಯ ಬರೆಹ ಮತ್ತು ಬಾಳನ್ನು ತಿದ್ದಿದುವು. ಫ್ಲವರ್ ಫೇಬಲ್ಸ್ (1855) ಮೊದಲ ಕಥಾಸಂಕಲನ, ಎಲ್ಲವನ್ನೂ ಎಮರ್‌ಸನ್ನನ ಮಗಳಿಗೆ ಹೇಳಿದಂತೆ ರಚಿಸಲಾಗಿದೆ. ಈ ಪುಸ್ತಕದಿಂದ ಕರ್ತೃವಿಗೆ ಸಾಕಷ್ಟು ಹೆಸರಾಗಲೀ ಹಣವಾಗಲೀ ಸಿಗಲಿಲ್ಲ. ಅಮೆರಿಕದ ಅಂತರ್ಯುದ್ಧಕಾಲದಲ್ಲಿ ಆಲ್ಕಾಟ್ ದಾದಿಯಾಗಿ ಕೆಲಸಮಾಡಿದಳು. ಆಸ್ಪತ್ರೆಗಳ ಅಶುದ್ಧ ವಾತಾವರಣದಿಂದಾಗಿ ಟೈಫಾಯಿಡ್ ಜ್ವರಕ್ಕೆ ತುತ್ತಾಗಿ ಬಲುಬೇಗ ಕೆಲಸ ಬಿಡಬೇಕಾಗಿ ಬಂತು. ಆ ಸನ್ನಿವೇಶಗಳೆಲ್ಲ ಹಾಸ್ಪಿಟಲ್ ಸ್ಕೆಚಸ್ (1863) ಎಂಬ ಪುಸ್ತಕದಲ್ಲಿ ಚೆನ್ನಾಗಿ ವರ್ಣಿತವಾಗಿವೆ. ಅಟ್ಲಾಂಟಿಕ್ ಪತ್ರಿಕೆಯಲ್ಲಿ ಆಲ್ಕಾಟಳ ಅನೇಕ ಕಥೆಗಳು ಅಚ್ಚಾದುವು. ಮೂಡ್ಸ್ (1865), ಲಿಟ್ಲ್ ವಿಮೆನ್ (1868–69) ಆಕೆಯ ಪ್ರಸಿದ್ಧ ಕೃತಿ. ಈಗಲೂ ಇದು ಜನಪ್ರಿಯವಾಗಿದೆ. ಎನ್ ಓಲ್ಡ್ ಫ್ಯಾಷನ್ಡ್ ಗರ್ಲ್ (1870), ಆರು ಸಂಪುಟಗಳ ಆಂಟ್ ಜೋಸ್ ಸ್ಕ್ರಾಪ್ ಬ್ಯಾಗ್ (1872–82), ಲಿಟ್ಲ್ ಮೆನ್ (1871), ವರ್ಕ್ (1873), ಮಾಡರ್ನ್ ಮೆಫಿಸ್ಟಾಫೆಲಿಸ್ (1877)ಜೋಸ್ ಬಾಯ್ಸ್ (1886)–ಇವು ಆಕೆಯ ಕೆಲವು ಮುಖ್ಯ ಕೃತಿಗಳು. ಜೀವನದ ಕೊನೆಯ ವರ್ಷಗಳಲ್ಲಿ ಈಕೆ ಕೃತಿರಚನೆಯೊಂದಿಗೆ ಸಮಾಜಸುಧಾರಣೆಗಾಗಿ ಶ್ರಮಿಸಿದ್ದಲ್ಲದೆ ಮಹಿಳೆಯರ ಮತಸ್ವಾತಂತ್ರ್ಯಕ್ಕಾಗಿ ಹೋರಾಡಿದಳು. *

**ಆಲ್ಕಿಯೋನ್:** ಕೃತ್ತಿಕಾ ನಕ್ಷತ್ರಪುಂಜದ ಅತ್ಯುಜ್ಜ್ವಲ ನಕ್ಷತ್ರ. ವೃಷಭರಾಶಿಯಲ್ಲಿ (ಟಾರಸ್) ಇದೆ. ಇದರ ಶಾಸ್ತ್ರೀಯನಾಮ η–ಟಾರಿ. ದೃಗ್ಗೋಚರ ಕಾಂತಿ 3. ರೋಹಿತ B5 (**ನೋಡಿ– ವೃಷಭರಾಶಿ; ಕೃತ್ತಿಕಾ**). *

**ಆಲ್ಕೀನ್‌ಗಳು:** ಕನಿಷ್ಠ ಪಕ್ಷ ಒಂದು ದ್ವಿಬಂಧ (ಡಬಲ್ ಬಾಂಡ್) ಇರುವ ಅಣುಗಳನ್ನು ಹೊಂದಿರುವ ತೆರೆದ ಸರಪಳಿಯುಳ್ಳ (ಓಪನ್ ಚೇನ್) ಅಪರ್ಯಾಪ್ತ (ಅನ್‌ಸ್ಯಾಚುರೇಟೆಡ್) ಹೈಡ್ರೊಕಾರ್ಬನ್‌ಗಳ ಸಾರ್ವತ್ರಿಕ ನಾಮಕ್ಕೆ ಆಲ್ಕೀನ್ ಎಂದು ಹೆಸರು. ಇವು ಬಹುವರ್ತನಾಶೀಲ ಗುಣವುಳ್ಳವು. ಇವನ್ನು ಓಲಿಫೀನ್ಸ್ ಅಥವಾ ಎಥಿಲಿನಿಕ್ ಹೈಡ್ರೊಕಾರ್ಬನ್‌ಗಳೆಂದು ಕರೆಯುತ್ತಾರೆ.

ಒಂದೇ ಒಂದು ದ್ವಿಬಂಧವಿರುವ ಆಲ್ಕೀನ್‌ಗಳನ್ನು $C_nH_{2n}$ (n=2 ಅಥವಾ ಹೆಚ್ಚು) ಎಂಬ ಸಾರ್ವತ್ರಿಕ ಸೂತ್ರದಿಂದ ನಿರೂಪಿಸಬಹುದು. ಈ ಶ್ರೇಣಿಯ ಮೊದಲೆರಡರಲ್ಲಿ ಎಥಿಲೀನ್ (ಈಥೀನ್) $CH_2:CH_2$ ಪ್ರೊಪಿಲೋನ್ (ಪ್ರೊಪೀನ್) $CH_2:CH\,CH_3$ ಇವು ಸೇರಿವೆ. ಎರಡು ಅಥವಾ ಅಧಿಕ ದ್ವಿಬಂಧಗಳಿರುವಾಗ ಆಲ್ಕೀನುಗಳನ್ನು, ಆಲ್ಕಡೈನ್‌ಗಳು, ಆಲ್ಕಟ್ರೈನಗಳು ಇತ್ಯಾದಿ ಅಥವಾ ಡೈಓಲಿಫಿನ್ಸ್, ಟ್ರೈಓಲಿಫಿನ್ಸ್ ಇತ್ಯಾದಿ ಎಂದೂ ಕರೆವುದುಂಟು. ಒಂದಕ್ಕಿಂತ ಹೆಚ್ಚಿಗೆ ದ್ವಿಬಂಧಗಳುಳ್ಳ ಹೈಡ್ರೊಕಾರ್ಬನ್ನುಗಳಲ್ಲೆಲ್ಲ ಬ್ಯುಟಡೈನ್ (1,3–ಬ್ಯುಟಡೈನ್) ಅತಿ ಮುಖ್ಯವಾದುದು. $CH_2:CHCH.CH_2$. *

**ಆಲ್ಕೇನ್‌ಗಳು:** ತೆರೆದ ಸರಪಳಿಯ (ಓಪನ್‌ಚೇನ್) ಪರ್ಯಾಪ್ತ (ಸ್ಯಾಚುರೇಟೆಡ್) ಹೈಡ್ರೊಕಾರ್ಬನ್ನುಗಳು $C_nH_{2n+2}$ ಎಂಬ ಸಾಮಾನ್ಯ ಸೂತ್ರದಿಂದ ನಿರೂಪಿಸಬಹುದು. ಇವನ್ನು ಪ್ಯಾರಫಿನ್ ಹೈಡ್ರೊಕಾರ್ಬನ್ನುಗಳೆನ್ನುತ್ತಾರೆ. ಈ ಶ್ರೇಣಿಯ (ಮೀಥೇನ್ ಶ್ರೇಣಿ) ಮೊದಲ ಮೂರರಲ್ಲಿ ಮೀಥೇನ್ $CH_4$,ಈಥೇನ್ $C_2H_6$ ಮತ್ತು ಪ್ರೊಪೇನ್‌ಗಳು $C_3H_8$ ಸೇರಿವೆ. *

**ಆಲ್ಕೊಹಾಲ್:** ರೆಪ್ಪೆಗಳಿಗೆ ಲೇಪಿಸುವ ಪುಡಿ ಎಂಬ ಅರ್ಥವುಳ್ಳ ಅರ್‍ಯಾಬಿಕ್ ಮೂಲಪದದಿಂದ ಜನ್ಯ; ಕ್ರಮೇಣ ಶುದ್ಧ ಮದ್ಯಸಾರಗಳಿಗೆಲ್ಲ ಇದರ ಅನ್ವಯ ಮಾಡಲಾಯಿತು. ಕಾರ್ಬನ್ ಪರಮಾಣುವಿನ ಸಂಯೋಗಶಕ್ತಿ (ವೇಲೆನ್ಸಿ) ನಾಲ್ಕು ಅಂದರೆ, ಅದು ನಾಲ್ಕು ಹೈಡ್ರೋಜನ್ ಅಥವಾ ಇತರ ಪರಮಾಣುಗಳನ್ನು ಹೊರಬಲ್ಲುದು. ಅಂಥ ಸಾವಯವ ವಸ್ತುಗಳು ಪರ್ಯಾಪ್ತವಾಗಿವೆ ಎನ್ನುತ್ತೇವೆ. ಈ ತರಹದ ಕೆಲವು ಹೈಡ್ರೊಕಾರ್ಬನ್ನುಗಳಿವೆ. ಅವುಗಳಲ್ಲಿ ಕಾರ್ಬನ್ ಪರಮಾಣುಗಳು ಸರಪಳಿಯಂತೆ ಒಂದಕ್ಕೊಂದು ಪೋಣಿಸಲ್ಪಟ್ಟಿರುತ್ತವೆ. ಈ ಪರಮಾಣುಗಳು ಚತುಸ್ಸಂಯೋಗಶಕ್ತಿಯನ್ನು ಸರಿದೂಗಿಸಲು ಅಗತ್ಯ ಸಂಖ್ಯೆಯ ಹೈಡ್ರೋಜನ್ ಪರಮಾಣುಗಳಿರುತ್ತವೆ. ಇವೇ ಪ್ಯಾರಫಿನ್ ಹೈಡ್ರೊಕಾರ್ಬನ್‌ಗಳು ಅಥವಾ ಆಲ್ಕೇನ್‌ಗಳು. ಪ್ಯಾರಫಿನ್ ಅಣುವಿನಲ್ಲಿರುವ ಒಂದು ಅಥವಾ ಹೆಚ್ಚು ಹೈಡ್ರೋಜನ್

ಪರಮಾಣುಗಳ ಬದಲು, ಅಷ್ಟೇ ಸಂಖ್ಯೆಯ ಹೈಡ್ರಾಕ್ಸಿಲ್ (–OH) ಗುಂಪುಗಳಿದ್ದರೆ ಆಗ ಅದು ಆಲ್ಕೊಹಾಲ್ ಎನಿಸಿಕೊಳ್ಳುತ್ತದೆ. ಆದ್ದರಿಂದ ಆಲ್ಕೊಹಾಲ್‌ಗಳನ್ನು ಹೈಡ್ರಾಕ್ಸಿಪ್ಯಾರಫಿನ್‌ಗಳು ಎಂದು ಪರಿಗಣಿಸಬಹುದು. ಅವುಗಳ ಅಣುಸೂತ್ರ ($C_nH_{2n+1.}OH$) ಎಂದಾಯಿತು. ಆಲ್ಕೊಹಾಲಿನ ರಚನಾ ಸೂತ್ರವನ್ನು ಕೆಳಕಂಡಂತೆ ಸೂಚಿಸಬಹುದು.



**ವರ್ಗೀಕರಣ:** ಆಲ್ಕೊಹಾಲ್‌ಗಳಲ್ಲಿ ನಾನಾ ಬಗೆಯುಂಟು. ಆಲ್ಕೊಹಾಲ್‌ನ ಒಂದು ಅಣುವಿನಲ್ಲಿರುವ ಹೈಡ್ರಾಕ್ಸಿಲ್ ಗುಂಪುಗಳ ಸಂಖ್ಯೆ ಒಂದಾಗಿದ್ದರೆ ಮಾನೊಹೈಡ್ರಿಕ್, ಎರಡಾಗಿದ್ದರೆ ಡೈಹೈಡ್ರಿಕ್, ಮೂರಾಗಿದ್ದರೆ ಟ್ರೈಹೈಡ್ರಿಕ್, ಅದಕ್ಕಿಂತ ಹೆಚ್ಚಾಗಿದ್ದರೆ ಪಾಲಿಹೈಡ್ರಿಕ್ ಎಂದು ವರ್ಗೀಕರಿಸಲಾಗುವುದು. ಇದಕ್ಕೆ ಕ್ರಮವಾಗಿ ಈಥೈಲ್ ಆಲ್ಕೊಹಾಲ್ ($CH_3CH_2OH$) ಎಥಿಲೀನ್ ಗ್ಲೈಕಾಲ್ ($CH_2.OH.CH_2OH$) ಮತ್ತು ಗ್ಲಿಸರಾಲ್ ($CH_2OH.CHOH.CH_2OH$), ಉದಾಹರಣೆಗಳು. ಆಲ್ಕೊಹಾಲ್‌ಗಳನ್ನು ವಿಂಗಡಿಸುವ ಇನ್ನೊಂದು ಕ್ರಮವಿದೆ. ಹೈಡ್ರಾಕ್ಸಿಲ್ ಗುಂಪನ್ನು ಧರಿಸಿರುವ ಕಾರ್ಬನ್ ಪರಮಾಣು, ನೇರವಾಗಿ ಎಷ್ಟು ಹೈಡ್ರೋಜನ್ ಪರಮಾಣುಗಳನ್ನು ಹೊತ್ತಿದೆಯೆಂಬುದನ್ನು ಇದು ಅವಲಂಬಿಸಿದೆ. ನೇರ ಸಂಬಂಧವಿರುವ ಹೈಡ್ರೋಜನ್ ಪರಮಾಣುಗಳ ಸಂಖ್ಯೆ ಕನಿಷ್ಠಪಕ್ಷ ಎರಡಾಗಿದ್ದರೆ ಪ್ರೈಮರಿ ಆಲ್ಕೊಹಾಲ್ ಎನ್ನುವರು. ಇದಕ್ಕೆ ಈಥೈಲ್ ಆಲ್ಕೊಹಾಲ್ ಉದಾಹರಣೆ. ಅದರ ರಚನಾ ಸೂತ್ರದಿಂದ



ಈ ಅಂಶ ವ್ಯಕ್ತವಾಗುತ್ತದೆ. ಹೀಗೆಯೇ ಐಸೋಪ್ರೊಪೈಲ್ ಆಲ್ಕೊಹಾಲಿನ ರಚನೆಯನ್ನು ಪರಿಶೀಲಿಸಿದರೆ



ಹೈಡ್ರಾಕ್ಸಿಲ್ ಗುಂಪಿರುವ ಕಾರ್ಬನ್ ಪರಮಾಣುವಿನೊಡನೆ ಕೇವಲ ಒಂದು ಹೈಡ್ರೋಜನ್ ಪರಮಾಣುವಿಗೆ ಮಾತ್ರ ಪ್ರತ್ಯಕ್ಷ ಸಂಬಂಧವಿದೆ. ಇಂಥ ಆಲ್ಕೊಹಾಲ್‌ಗಳನ್ನು ಸೆಕೆಂಡರಿ ಎಂದು ಕರೆಯುವರು. ಕೆಲವು ಆಲ್ಕೊಹಾಲ್‌ನಲ್ಲಿ ಹೈಡ್ರಾಕ್ಸಿಲ್ ಗ್ರೂಪಿರುವ ಕಾರ್ಬನ್ ಹೈಡ್ರೋಜನ್ ರಹಿತವಾಗಿರುವುದುಂಟು. ಅವನ್ನು ಟರ್ಷಿಯರಿ ಎಂದು ಕರೆಯುತ್ತಾರೆ. ಇದಕ್ಕೆ ನಿದರ್ಶನವಾಗಿ ಟರ್ಷಿಯರಿ ಐಸೊಬ್ಯೂಟೈಲ್ ಆಲ್ಕೊಹಾಲನ್ನು ಹೆಸರಿಸಬಹುದು. ಅದರ ರಚನಾಸೂತ್ರದಿಂದ



ಇದು ವೇದ್ಯವಾಗುತ್ತದೆ. ಇದಲ್ಲದೆ ಕೆಳಕಂಡ ಜಾತಿಯ ಆಲ್ಕೊಹಾಲ್‌ಗಳೂ ಉಂಟು:

| ವರ್ಗ | ಉದಾಹರಣೆ |
|---|---|
| 1. ಸರಳ ಆಲಿಫ್ಯಾಟಿಕ್ ಆಲ್ಕೊ ಹಾಲ್‌ಗಳು | ಈಥೈಲ್ ಆಲ್ಕೊಹಾಲ್ $CH_3$-$CH_2$-OH |
| 2. ಅಪರ್ಯಾಪ್ತ ಆಲಿಫ್ಯಾಟಿಕ್ ಆಲ್ಕೊಹಾಲ್‌ಗಳು | ಅಲೈಲ್ ಆಲ್ಕೊಹಾಲ್ $CH_2$=CH-$CH_2$OH |
| 3. ಆದೇಶಿತ ಆಲಿಫ್ಯಾಟಿಕ್ ಆಲ್ಕೊಹಾಲ್‌ಗಳು | ಈಥೆನಾಲ್ ಅಮೀನ್ $NH_2$-$CH_2$-$CH_2$OH |
| 4. ಆರೊಮ್ಯಾಟಿಕ್ ಆಲ್ಕೊಹಾಲ್‌ಗಳು | ಬೆಂಜೈಲ್ ಆಲ್ಕೊಹಾಲ್ $C_6H_5$-$CH_2$-OH |
| 5. ಆಲಿಸೈಕ್ಲಿಕ್ ಆಲ್ಕೊಹಾಲ್‌ಗಳು | ಸೈಕ್ಲೊಹೆಕ್ಸನಾಲ್ $C_6H_{11}$-OH |
| 6. ಹೆಟಿರೊಸೈಕ್ಲಿಕ್ ಆಲ್ಕೊಹಾಲ್‌ಗಳು | ಫರ್ಫೂರಿಲ್ ಆಲ್ಕೊಹಾಲ್ $C_4H_3$O-$CH_2$OH |

**ನಾಮಕರಣ ವಿಧಾನ :** ಆಲ್ಕೊಹಾಲ್ ಕುಟುಂಬದ ಕಿರಿಯ ಸದಸ್ಯರನ್ನು (ಉದಾ: ಮೀಥೈಲ್ ಮತ್ತು ಈಥೈಲ್ ಆಲ್ಕೊಹಾಲ್‌ಗಳು) ಅವುಗಳ ಸಂಕ್ಷಿಪ್ತನಾಮದಿಂದ ಸೂಚಿಸಿರುತ್ತಾರೆ. ಅಂತರರಾಷ್ಟ್ರೀಯ ವ್ಯವಸ್ಥೆಯಾದ ಜಿನೀವಸಂಪ್ರದಾಯದ ಪ್ರಕಾರ, ಹೈಡ್ರಾಕ್ಸಿಲ್ ಗುಂಪನ್ನು ಧರಿಸಿರುವ ಕಾರ್ಬನ್ ಸರಣಿಯನ್ನು ಮೊದಲು ಗುರುತಿಸಿಕೊಂಡು, ಆ ರ್‍ಯಾಡಿಕಲ್‌ನ ಹೆಸರಿಗೆ ಆಲ್ ಎಂಬ ಪ್ರತ್ಯಯ ಸೇರಿಸಿ ಕರೆಯುವುದು ಪದ್ಧತಿ. ಹೈಡ್ರಾಕ್ಸಿಲ್ ಮತ್ತು ಇತರ ಗುಂಪುಗಳ ಸ್ಥಾನ ನಿರ್ದೇಶನಕ್ಕೆ ಸಂಖ್ಯೆಗಳನ್ನು ಬಳಸಲಾಗುವುದು. ಹೀಗೆ ಮಾಡುವಾಗ ಹೈಡ್ರಾಕ್ಸಿಲ್ ಗ್ರೂಪಿಗೆ ಕನಿಷ್ಠ ಸಂಖ್ಯೆಯನ್ನು ಕೊಡುವುದು ರೂಢಿ. ಉದಾಹರಣೆಗೆ ಐಸೊಬ್ಯೂಟೈಲ್ ಆಲ್ಕೊಹಾಲನ್ನು



2. ಮೀಥೈಲ್ ಪ್ರೊಪೆನಾಲ್-1 ಎಂದು ಕರೆಯಬೇಕಾಗುತ್ತದೆ.

**ಆಲಿಫ್ಯಾಟಿಕ್ ಮಾನೊಹೈಡ್ರಿಕ್ ಆಲ್ಕೊಹಾಲ್‌ಗಳ ತಯಾರಿಕೆ ಸಾರ್ವತ್ರಿಕ ವಿಧಾನಗಳು:**

1. ಆಲ್ಕೈಲ್ ಹ್ಯಾಲೈಡುಗಳ ಜಲವಿಶ್ಲೇಷಣೆಯಿಂದ:

$$Rx+H_2O \rightarrow R.OH+Hx$$

ನೀರು ಮಾತ್ರ ಇದ್ದರೆ ಕ್ರಿಯೆ ನಿಧಾನವಾಗುವುದು. ದುರ್ಬಲ ಕಾಸ್ಟಿಕ್ ಪೊಟ್ಯಾಷ್ ದ್ರಾವಣ ಅಥವಾ ತೇವವಾದ ಸಿಲ್ವರ್ ಆಕ್ಸೈಡ್ ಉಪಯೋಗಿಸಿದರೆ ಕ್ರಿಯೆಯನ್ನು ತ್ವರಿತಗೊಳಿಸಬಹುದು. ಇವು ಪ್ರತ್ಯಾಮ್ಲೀಯ ಪರಿವರ್ತಕಗಳು. ಆದ್ದರಿಂದ ಉತ್ಪತ್ತಿಯಾದ ಆಮ್ಲವನ್ನು ತಟಸ್ಥಗೊಳಿಸಿ ಆಲ್ಕೊಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುವು. ಅನೇಕ ಆಲ್ಕೊಹಾಲ್‌ಗಳಿಗಿಂತ ಸಂಬಂಧಪಟ್ಟ ಆಲ್ಕೈಲ್ ಹ್ಯಾಲೈಡುಗಳೇ ಹೆಚ್ಚು ದುರ್ಲಭ. ಆದ್ದರಿಂದ ಈ ವಿಧಾನದ ವ್ಯಾಪ್ತಿ ಸೀಮಿತವಾಗಿದೆ.

2. ಅಪರ್ಯಾಪ್ತ ಹೈಡ್ರೊಕಾರ್ಬನ್ನುಗಳಿಂದ : ಪ್ರಬಲ ಸಲ್ಫ್ಯೂರಿಕ್ ಆಮ್ಲದ ಸಂಪರ್ಕದಲ್ಲಿ ಹೈಡ್ರೊಕಾರ್ಬನ್ ಪರ್ಯಾಪ್ತಗೊಂಡು ಅದರ ಹೈಡ್ರೊಜನ್ ಸಲ್ಫೇಟ್ ಆಗುವುದು. ಅನಂತರ ಅದನ್ನು ಜಲವಿಶ್ಲೇಷಣೆಗೆ ಗುರಿಪಡಿಸಿದರೆ ಸಂಬಂಧಪಟ್ಟ ಆಲ್ಕೊಹಾಲ್ ಉಂಟಾಗುವುದು.




3. ಆಲ್ಡಿಹೈಡುಗಳ, ಕೀಟೋನುಗಳ ಮತ್ತು ಎಸ್ಟರುಗಳ ಅಪಕರ್ಷಣದಿಂದ : ಇದಕ್ಕಾಗಿ ಹಲವಾರು ಅಪಕರ್ಷಣಕಾರಿಗಳು ಬಳಕೆಯಲ್ಲಿವೆ. ನವಜಾತ ಹೈಡ್ರೊಜನ್ ನೀಡುವ ಸೂಕ್ತ ಆಮ್ಲ (ಲೋಹದ ಜೋಡಿಯನ್ನು ಉಪಯೋಗಿಸುವುದು ಸರ್ವಸಾಮಾನ್ಯ), ಅವುಗಳ ಪೈಕಿ ಸತು ಮತ್ತು ಸಲ್ಫ್ಯೂರಿಕ್ ಆಮ್ಲ, ಸತು ಅಥವಾ ಕಬ್ಬಿಣ ಮತ್ತು ಅಸಿಟಿಕ್ ಆಮ್ಲ, ತವರ ಮತ್ತು ಹೈಡ್ರೊಕ್ಲೋರಿಕ್ ಆಮ್ಲ, ಸೋಡಿಯಂ ಅಮಾಲ್ಗಂ ಮತ್ತು ಸಲ್ಫ್ಯೂರಿಕ್ ಆಮ್ಲ, ಸೋಡಿಯಂ ಮತ್ತು ಈಥೈಲ್ ಆಲ್ಕೊಹಾಲ್ ಮುಖ್ಯವಾದುವು. ಇವುಗಳಲ್ಲದೆ ಈಚೆಗೆ ಸೋಡಿಯಂ ಹೈಡ್ರೈಡ್, ಅಲ್ಯೂಮಿನಿಯಂ ಐಸೊಪ್ರೊಪಾಕ್ಸೈಡ್, ಲಿಥಿಯಂ ಅಲ್ಯೂಮಿನಿಯಂ ಹೈಡ್ರೈಡ್ ವೇಗವರ್ಧಕದ ಸಂಪರ್ಕದಲ್ಲಿ ಹೈಡ್ರೊಜನ್ ಇತ್ಯಾದಿಗಳನ್ನು ಉಪಯೋಗಿಸುತ್ತಾರೆ.




ಅಪರ್ಯಾಪ್ತ ಆಲ್ಕೊಹಾಲ್‌ಗಳನ್ನು ತಯಾರಿಸಲು ಈ ವಿಧಾನ ಬಲು ಅನುಕೂಲ.



ಎಸ್ಟರುಗಳಿಂದ 6 ಅಥವಾ ಹೆಚ್ಚು ಕಾರ್ಬನ್ ಪರಮಾಣುಗಳಿರುವ ಆಲ್ಕೊಹಾಲ್‌ಗಳನ್ನು ತಯಾರಿಸಲು ಈ ವಿಧಾನ ಸಹಕಾರಿ. $200^0$ ಸೆ0. ಗ್ರೇ, ಉಷ್ಣತೆ 150-200 ವಾಯುಭಾರ ಒತ್ತಡ ಮತ್ತು ತಾಮ್ರದ ಕ್ರೋಮೈಟ್ ($CuCr_2O_4$) ವೇಗವರ್ಧಕ ಇಷ್ಟಿದ್ದರೆ ಎಸ್ಟರು ಹೈಡ್ರೊಜನ್ನನ್ನು ಹೀರಿಕೊಂಡು ಆಲ್ಕೊಹಾಲನ್ನು ಕೊಡುವುದು, ಸಮಸಂಖ್ಯೆ ಕಾರ್ಬನ್‌ಪರಮಾಣುಗಳಿರುವ ಸರಳ ರೇಖಾವಿನ್ಯಾಸದ ಪ್ರೈಮರಿ ಆಲ್ಕೊಹಾಲ್‌ಗಳನ್ನು ಉನ್ನತ ಫ್ಯಾಟಿ ಆಮ್ಲಗಳ ಅಪಕರ್ಷಣದಿಂದ ಪಡೆಯಬಹುದು.




4. ಆಲ್ಡಿಹೈಡುಗಳು, ಕೀಟೋನುಗಳು ಮತ್ತು ಎಸ್ಟರುಗಳೊಡನೆ ಗ್ರಿನ್ಯಾರ್ಡ್ ಪರಿವರ್ತಕದ ಕ್ರಿಯೆಯಿಂದ ಪ್ರೈಮರಿ, ಸೆಕೆಂಡರಿ ಮತ್ತು ಟರ್ಷಿಯರಿ ಆಲ್ಕೊಹಾಲ್‌ಗಳನ್ನು ಹೀಗೆ ತಯಾರಿಸಬಹುದು. ಉದಾ :




5. ಆಮ್ಲಗಳ ಅಪಕರ್ಷಣದಿಂದ : (a) ಲಿಥಿಯಂ ಅಲ್ಯೂಮಿನಿಯಂ ಹೈಡ್ರೈಡು ಆಮ್ಲವನ್ನು ನೇರವಾಗಿ ಆಲ್ಕೊಹಾಲಿಗೆ ಪರಿವರ್ತಿಸಬಲ್ಲುದು.

(b) ಆಮ್ಲವನ್ನು ಅದರ ಕ್ಲೋರೈಡ್ ಅಥವಾ ಅನ್‌ಹೈಡ್ರೈಡಿಗೆ ಪರಿವರ್ತಿಸಿ ಅನಂತರ ವೇಗವರ್ಧಕದ ಸಂಪರ್ಕದಲ್ಲಿ ಅಪಕರ್ಷಿಸುವುದು.




6. ಎಸ್ಟರುಗಳ ಜಲವಿಶ್ಲೇಷಣೆಯಿಂದ : ಎಸ್ಟರುಗಳನ್ನು ಆಮ್ಲ ಅಥವಾ ಕ್ಷಾರಗಳೊಡನೆ ಕುದಿಸಿದರೆ ಆಯಾ ಆಲ್ಕೊಹಾಲ್ ಬರುವುದು. ಪ್ರಕೃತಿದತ್ತ ಎಸ್ಟರುಗಳಾದ ಮೇಣ ಇತ್ಯಾದಿಗಳಿಂದ ಆಲ್ಕೊಹಾಲನ್ನು ತಯಾರಿಸಲು ಈ ಕ್ರಮವನ್ನು ಅನುಸರಿಸಬಹುದು.




7. ಫರ್ಮೆಂಟೇಷನ್ ವಿಧಾನ : ಸರಳ ಆಲ್ಕೋಹಾಲ್ಗಳನ್ನು ಕೈಗಾರಿಕಾ ಪ್ರಮಾಣದಲ್ಲಿ ತಯಾರಿಸುವುದು ಹೀಗೆಯೇ. ಇದರ ಬಗ್ಗೆ ವಿವರಗಳನ್ನು ಮುಂದೆ ಪ್ರಸ್ತಾಪಿಸಲಾಗಿದೆ.

**ಸಾಮಾನ್ಯ ಗುಣಗಳು** : ಆಲ್ಕೊಹಾಲ್‌ಗಳು ನಿರ್ವರ್ಣವಾದ ತಟಸ್ಥ ವಸ್ತುಗಳು. ಅಣುತೂಕ ಕಡಿಮೆಯಿರುವ ಆಲ್ಕೊಹಾಲ್‌ಗಳು ದ್ರವಗಳು. ಅಣುತೂಕ ಹೆಚ್ಚಿದಂತೆ ಎಣ್ಣೆಯಂತೆ ಮಂದವಾಗುವುವು. 12 ಅಥವಾ ಹೆಚ್ಚು ಕಾರ್ಬನ್ ಪರಮಾಣುಗಳಿರುವ ಆಲ್ಕೊಹಾಲ್‌ಗಳು ಮೇಣದಂತಿರುವ ಘನಗಳು. 5 ಕಾರ್ಬನ್ ಪರಮಾಣುಗಳವರೆಗೆ ಹೊಂದಿರುವ ಆಲ್ಕೊಹಾಲ್‌ಗಳು ನೀರಿನಲ್ಲಿ ದ್ರಾವ್ಯ. ಅಣುತೂಕ ಹೆಚ್ಚಿದಂತೆ ದ್ರಾವಣತೆಯೂ ಕಡಿಮೆಯಾಗುವುದು. 16ಕ್ಕೂ ಮೀರಿ ಕಾರ್ಬನ್ ಪರಮಾಣುಗಳಿರುವ ಆಲ್ಕೊಹಾಲ್‌ಗಳು ಅದ್ರಾವ್ಯ ವಸ್ತುಗಳು. ಒಂದೇ ವರ್ಗದ ಆಲ್ಕೊಹಾಲ್‌ಗಳ ಕುದಿಯುವ ಬಿಂದು ಕ್ರಮವಾಗಿ ಅಂದರೆ ಪ್ರತಿಯೊಂದು – ಅಉ$_2$ ಗ್ರೂಪ್ ಸೇರ್ಪಡೆಗೆ ಸುಮಾರು $20^0$ ಸೆ0. ಗ್ರೇಡಿನಷ್ಟು ಹೆಚ್ಚುತ್ತ ಹೋಗುವುದು, ಸಮಾನ ಅಣುತೂಕಗಳುಳ್ಳ ಆಲ್ಕೈಲ್ ಹ್ಯಾಲೈಡುಗಳು ಅಥವಾ ಈಥರ್‌ಗಳಿಗಿಂತ ಆಲ್ಕೊಹಾಲ್‌ಗಳ ಕುದಿಯುವ ಬಿಂದು ಹೆಚ್ಚಾಗಿರುತ್ತದೆ. ಇದಕ್ಕೆ ಕಾರಣವಿದೆ. ನೀರಿನ ಅಣುಗಳು ಹೈಡ್ರೊಜನ್ ಬಂಧದ ಮೂಲಕ ಸಂಘಟಿಸುವಂತೆ ಆಲ್ಕೊಹಾಲಿನ ಅಣುಗಳೂ ಒಟ್ಟುಗೂಡಿ ದೊಡ್ಡ ಅಣುಗಳು ಜನಿಸುತ್ತವೆ. ಇಂಥ ದೊಡ್ಡ ಅಣುಗಳಿಗೆ ಅವ್ಯಾಸಕ್ತಿ ಕಡಿಮೆಯಾಗಿರುವುದು ಸಹಜ. ಅಣುತೂಕ ಹೋಲಿಕೆಯುಳ್ಳ ಮೀಥೇನ್ (16) ಮತ್ತು ಅಮೋನಿಯಾ (17) ಗಳಿಗಿಂತ, ನೀರಿನ (18) ಕುದಿಯುವ ಬಿಂದು ಹೆಚ್ಚಾಗಿರುವುದೇ ಇದಕ್ಕೆ ಸಾಕ್ಷಿ. ಹೈಡ್ರೊಜನ್ನಿನ ಬಂಧದ ಮೂಲಕ ದೊಡ್ಡ ಅಣುಗಳ ಜನನವನ್ನು ಕೆಳಗೆ ಚಿತ್ರಿಸಲಾಗಿದೆ.

ನೀರು




ಆಲ್ಕೊಹಾಲ್‌ಗಳಿಗೆ ವಿಶಿಷ್ಟ ರುಚಿ ವಾಸನೆಗಳುಂಟು. ಅ$_4$–ಅ$_7$ ಆಲ್ಕೊಹಾಲ್‌ಗಳ ವಾಸನೆ ಹಿತಕರವಲ್ಲ. ಅ$_8$–ಅ$_{12}$ ಆಲ್ಕೊಹಾಲ್‌ಗಳು ಮಧುರವಾಸನೆಯುಳ್ಳವು. ಈ ಮಿತಿ ಮೀರಿದರೆ ವಾಸನೆ ಮತ್ತು ರುಚಿರಹಿತವಾಗುವುವು. ಆಲ್ಕೊಹಾಲ್‌ಗಳು ಪೋಲಾರ್ ವಸ್ತುಗಳಂತೆ ವರ್ತಿಸುತ್ತವೆ. ಕೆಲವು ಪರಿವರ್ತಕಗ ಳೊಡನೆ ಅವು ನೀರಿನಂತೆ ನಡೆದುಕೊಳ್ಳುತ್ತವೆ. ನೀರಿನಲ್ಲಿ ಲೀನವಾಗುವ ಅನೇಕ ನಿರವಯವ ವಸ್ತುಗಳು ಆಲ್ಕೊಹಾಲಿನಲ್ಲಿಯೂ

ಲೀನವಾಗುವುವು. ಕೆಲವು ಕ್ರಿಯೆಗಳಲ್ಲಿ ಆಮ್ಲೀಯ ಸ್ವಭಾವವನ್ನೂ ಇತರ ಸಂದರ್ಭಗಳಲ್ಲಿ ಪ್ರತ್ಯಾಮ್ಲೀಯ ಗುಣವನ್ನೂ ಪ್ರದರ್ಶಿಸುವುದು ಇವುಗಳ ವೈಶಿಷ್ಟ್ಯ. ಕಾರ್ಬಿನಾಲ್ ಗುಂಪು



ರೀತಿ ವಿಭಜಿಸಿದರೆ ಆಮ್ಲದಂತೆಯೂ

ರೀತಿ ವಿಭಾಗವಾದರೆ ಪ್ರತ್ಯಾಮ್ಲದಂತೆಯೂ ವರ್ತಿಸುತ್ತದೆ. ಹೀಗಾಗಲು ಆಲ್ಕೈಲ್ ಗುಂಪುಗಳಿಗೆ ಎಲೆಕ್ಟ್ರಾನುಗಳನ್ನು ವಿಸರ್ಜಿಸುವ ಪ್ರವೃತ್ತಿ ಹೆಚ್ಚಾಗಿರುವುದು ಕಾರಣ. ಕಾರ್ಬಿನಾಲ್ ಕಾರ್ಬನ್ನಿನ ಸುತ್ತ ಅವುಗಳ ಸಂಖ್ಯೆ ಹೆಚ್ಚಿದಂತೆಲ್ಲ ಅದರ ಎಲೆಕ್ಟ್ರಾನ್ ಸಾಂದ್ರತೆ ವೃದ್ಧಿಯಾಗುವುದು. ಪರಿಣಾಮವಾಗಿ ಅದರ ಒಂದಂಶ ಆಕ್ಸಿಜನ್ ಪರಮಾಣುವಿಗೆ ವರ್ಗಾವಣೆಯಾಗುವುದು. ಇದರಿಂದ ಆಕ್ಸಿಜನ್ ಹೈಡ್ರೊಜನ್ನಿನ ಪರಮಾಣುವಿಗೆ ಬಲವಾಗಿ ಅಂಟಿಕೊಳ್ಳುವುದು. ಆದ್ದರಿಂದಲೇ ಪ್ರೈಮರಿ ಆಲ್ಕೊಹಾಲ್‌ಗಳಿಗಿಂತ ಟರ್ಷಿಯರಿ ಅಲ್ಕೊಹಾಲ್‌ಗಳಿಗೆ ಪ್ರತ್ಯಾಮ್ಲೀಯ ಸ್ವಭಾವ ಹೆಚ್ಚು ಮತ್ತು ಅವುಗಳಲ್ಲಿರುವ ಹೈಡ್ರಾಕ್ಸಿಲ್ ಗುಂಪುಗಳನ್ನು ಹ್ಯಾಲೋಜನ್ ಪರಮಾಣುಗಳಿಂದ ಪಲ್ಲಟಿಸಬಹುದು. ಪ್ರೈಮರಿ ಆಲ್ಕೊಹಾಲ್‌ಗಳಲ್ಲಿ ಕಾರ್ಬಿನಾಲ್ ಕಾರ್ಬನ್ ಮೇಲೆ ಮೀಥೈಲ್ ಗುಂಪಿನ ಪ್ರೇರಕ ಪ್ರಭಾವ (ಇಂಡಕ್ಟಿವ್ ಇಫೆಕ್ಟ್) ಕಡಿಮೆ. ಆದ್ದರಿಂದ ಹೈಡ್ರಾಕ್ಸಿಲ್ ಗುಂಪಿನ ಆಕ್ಸಿಜನ್ ಪರಮಾಣು ಹೈಡ್ರೊಜನ್ ಮತ್ತು ಮೀಥೈಲ್ ಗುಂಪಿನಿಂದ ಎಲೆಕ್ಟ್ರಾನ್ ಜೋಡಿಗಳನ್ನು ತನ್ನೆಡೆಗೆ ಸೆಳೆದುಕೊಳ್ಳಲು ಹವಣಿಸುತ್ತದೆ. ತತ್ಫಲವಾಗಿ ಹೈಡ್ರೊಜನ್ ಪರಮಾಣು ಆಯಾನ್ ರೂಪದಲ್ಲಿ ಬಿಡುಗಡೆಯಾಗುತ್ತದೆ. ಅಂದರೆ ಆಮ್ಲದಂತೆ ವರ್ತಿಸುತ್ತದೆ.

ಆಲ್ಕೊಹಾಲ್‌ಗಳ ಆಮ್ಲೀಯ ಗುಣ : ಕೆಳಕಂಡ ರಾಸಾಯನಿಕ ಕ್ರಿಯೆಗಳು ಇದನ್ನು ಸಮರ್ಥಿಸುತ್ತದೆ.

1. ಕ್ರಿಯಾಶಾಲಿ ಲೋಹಗಳೊಡನೆ ವರ್ತನೆ : ಸೋಡಿಯಂ ಲೋಹದೊಡನೆ ವರ್ತಿಸಿದಾಗ ಹೈಡ್ರೊಜನ್ ಬಿಡುಗಡೆಯಾಗುವುದು.

$$2ROH + 2Na \rightarrow \underset{\text{ಸೋಡಿಯಂ ಆಲ್ಕಾಕ್ಸೈಡ್}}{2RONa} + H_2 \uparrow$$

ಆಲ್ಕೊಹಾಲ್‌ಗಳು ನೀರಿಗಿಂತ ದುರ್ಬಲ ಆಮ್ಲಗಳು. ಆದ್ದರಿಂದ ಸೋಡಿಯಂ ಹೈಡ್ರಾಕ್ಸೈಡಿನ ವರ್ತನೆಯಿಂದ ಆಲ್ಕಾಕ್ಸೈಡುಗಳನ್ನು ಪಡೆಯುವಂತಿಲ್ಲ. ಅದಕ್ಕೆ ಆಯಾ ಪಟುಲೋಹವೇ ಅಗತ್ಯ. ಐಸೊಪ್ರೊಪೈಲ್ ಮತ್ತು ಟರ್ಷಿಯರಿ ಬ್ಯೂಟೈಲ್ ಆಲ್ಕೊಹಾಲ್‌ಗಳೊಡನೆ ಅಲ್ಯೂಮಿನಿಯಂ ಅಮಾಲ್ಗಂ ವರ್ತನೆಯಿಂದ ಆಯಾ ಅಲ್ಕಾಕ್ಸೈಡುಗಳು ಉಂಟಾಗುವುವು.

2. ಗ್ರಿನ್ಯಾರ್ಡ್ ಪರಿವರ್ತಕದೊಡನೆ ವರ್ತಿಸಿದಾಗ ಒಂದೊಂದು ಹೈಡ್ರಾಕ್ಸಿಲ್ ಗುಂಪಿಗೂ ಪ್ರತಿಯಾಗಿ ಆಲ್ಕೇನಿನ ಒಂದು ಅಣು ಉತ್ಪತ್ತಿಯಾಗುವುದು. ಉಪಯೋಗಿಸಿದ ಗ್ರಿನ್ಯಾರ್ಡ್ ಪರಿವರ್ತಕ ಮೀಥೈಲ್ ಮೆಗ್ನೀಸಿಯಂ ಅಯೊಡೈಡ್ ಆಗಿದ್ದರೆ ಮೀಥೇನ್ ಬಿಡುಗಡೆಯಾಗುವುದು.

$$ROH + CH_3MgI \rightarrow CH_4 \uparrow + ROMgI$$

ಬಿಡುಗಡೆಯಾದ ಮೀಥೇನ್ ಅನಿಲದ ಗಾತ್ರವನ್ನು ಅಳೆದು ಆಲ್ಕೊಹಾಲ್ (ಅಥವಾ ಯಾವುದಾದರೂ ಸಾವಯವ ಸಂಯುಕ್ತ) ಅಣುವಿನಲ್ಲಿರುವ ಕ್ರಿಯಾಶಾಲಿ ಹೈಡ್ರೊಜನ್ನ (ಆಕ್ಟಿವ್ ಹೈಡ್ರೊಜನ್) ಅಂಶವನ್ನು ನಿರ್ಣಯಿಸಬಹುದು. ಇದಕ್ಕೆ ಜೆರೆವಿಟಿನೋಫ್ ವಿಧಾನ ಎಂದು ಹೆಸರು.

**3. ಈಥರ್‌ಗಳ ಉತ್ಪನ್ನ :** (a) ಸೋಡಿಯಂ ಆಲ್ಕಾಕ್ಸೈಡ್ ಮತ್ತು ಆಲ್ಕೈಲ್ ಹ್ಯಾಲೈಡುಗಳ ಪರಸ್ಪರ ವರ್ತನೆಯಿಂದ ಈಥರ್‌ಗಳು ಉಂಟಾಗುವುವು.

(b) ನಿಯಂತ್ರಿತ ಪ್ರಯೋಗಸ್ಥಿತಿಯಲ್ಲಿ, ಆಲ್ಕೊಹಾಲನ್ನು ನಿರ್ಜಲಗೊಳಿಸಿ ಈಥರ್‌ಗಳನ್ನು ಪಡೆಯಲು ಸಾಧ್ಯ. ಉದಾಹರಣೆಗೆ ಈಥೈಲ್ ಆಲ್ಕೊಹಾಲನ್ನು ಪ್ರಬಲ ಸಲ್ಫ್ಯೂರಿಕಾಮ್ಲದೊಂದಿಗೆ $140^\circ - 145^\circ$ ಸೆಂ.ಗ್ರೇ. ಕಾಸಿದಾಗ ಡೈಈಥೈಲ್ ಈಥರ್ ದೊರೆಯುವುದು.




ಉಷ್ಣತೆ $170^\circ$ ಸೆಂ.ಗ್ರೇ. ಮುಟ್ಟಿದರೆ ಎಥಿಲೀನ್ ಉಂಟಾಗುವುದು.

**4. ಅಸಿಟಿಲೇಷನ್ :** ಆಮ್ಲೀಯ ಕ್ಲೋರೈಡುಗಳು ಅಥವಾ ಆನ್‌ಹೈಡ್ರೈಡುಗಳು ಆಲ್ಕೊಹಾಲ್‌ಗಳೊಡನೆ ವರ್ತಿಸುವುವು. ಪಿರಿಡೀನಿನ ಸಂಪರ್ಕದಲ್ಲಿ ಅಸಿಟೈಲ್ ಕ್ಲೋರೈಡ್ ಅಥವಾ ಅಸಿಟಿಕ್ ಆನ್‌ಹೈಡ್ರೈಡುಗಳು ಭಾಗವಹಿಸಿದರೆ ಕ್ರಿಯೆಗೆ ಅಸಿಟಿಲೇಷನ್ ಎನ್ನುವರು. ಇದು ಆಲ್ಕೊಹಾಲನ್ನು ಗುರುತಿಸುವ ಒಂದು ಪರೀಕ್ಷಾ ಪ್ರಯೋಗವಾಗಿದೆ.




**5. ಎಸ್ಟರಿಫಿಕೇಷನ್ :** ಕ್ಷಾರ ಆಮ್ಲದೊಡನೆ ವರ್ತಿಸಿ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುವುದು. ಈ ಕ್ರಿಯೆಗೆ ತಟಸ್ಥೀಕರಣ ಎನ್ನುತ್ತೇವೆ. ಹಾಗೆಯೇ ಆಲ್ಕೊಹಾಲ್ ಸಾವಯವ ಅಥವಾ ನಿರವಯವ ಆಮ್ಲಗಳೊಡನೆ ವರ್ತಿಸಿದಾಗ ಲವಣಸದೃಶವಾದ ಎಸ್ಟರುಗಳು ಮತ್ತು ನೀರು ಉಂಟಾಗುತ್ತವೆ. ಆದ್ದರಿಂದ ಇದಕ್ಕೆ ಎಸ್ಟರಿಫಿಕೇಷನ್ ಎಂದು ಹೆಸರಾಗಿದೆ.




ಇದೊಂದು ಹಿಮ್ಮರಳುವ ಕ್ರಿಯೆ. ಆದ್ದರಿಂದ ಉತ್ಪತ್ತಿಯಾದ ನೀರನ್ನು ಅವಶೋಷಿಸಿದ ಹೊರತು ಕ್ರಿಯೆ ಪೂರ್ಣವಾಗುವುದಿಲ್ಲ. ಇದಕ್ಕೆ ನಿರ್ಜಲಕಾರಿಯಾಗಿ ಪ್ರಬಲ ಸಲ್ಫ್ಯೂರಿಕ್ ಆಮ್ಲವನ್ನಾಗಲಿ ಅಥವಾ ಶುಷ್ಕ ಹೈಡ್ರೊಜನ್ ಕ್ಲೋರೈಡನ್ನಾಗಲಿ ಉಪಯೋಗಿಸುವುದು ವಾಡಿಕೆ. 18 ತೂಕಮಾನದ ಆಕ್ಸಿಜನ್ ಸಮಸ್ಥಾನಿಯನ್ನು ಬಳಸಿ ಆಲ್ಕೊಹಾಲ್ ಹೈಡ್ರೊಜನ್ನನ್ನೂ ಆಮ್ಲ ಹೈಡ್ರಾಕ್ಸಿಲ್ ಗುಂಪನ್ನೂ ಒದಗಿಸುವುದೆಂದು ಖಚಿತವಾಗಿ ತೋರಿಸಲಾಗಿದೆ. ಇಲ್ಲದಿದ್ದರೆ ನೀರಿನ ಅಣು $O^{18}$ ಸಮಸ್ಥಾನಿಯನ್ನು ಹೊಂದಿರಬೇಕಾಗುತ್ತಿತ್ತು.

**ಆಲ್ಕೊಹಾಲ್‌ಗಳ ಪ್ರತ್ಯಾಮ್ಲೀಯ ಸ್ವಭಾವ** : ಮುಂದೆ ವಿವರಿಸಿರುವ ಕ್ರಿಯೆಗಳಿಂದ ಇದು ವೇದ್ಯವಾಗುತ್ತದೆ.

1. ಆಲ್ಕೈಲ್ ಹ್ಯಾಲೈಡುಗಳ ಉತ್ಪನ್ನ : ಹ್ಯಾಲೋಜನ್ ಆಮ್ಲಗಳೊಡನೆ ಆಲ್ಕೊಹಾಲ್‌ಗಳು ವರ್ತಿಸಿದಾಗ ಇವು ಉಂಟಾಗುವುವು.

$$ROH + HCl \xrightarrow[ZnCl_2]{\text{ನಿರ್ಜಲ}} RCl + H_2O$$

ಇಲ್ಲಿನ ನೀರಿನ ಅಣು ಉತ್ಪತ್ತಿಯಾಗಲು ಆಲ್ಕೊಹಾಲ್ ಹೈಡ್ರಾಕ್ಸಿಲ್ ಗುಂಪನ್ನು ಒದಗಿಸಿದೆ ಎಂಬುದನ್ನು ಗಮನಿಸಬೇಕು. ಟರ್ಷಿಯರಿ ಆಲ್ಕೊಹಾಲ್‌ಗಳು ಈ ಕ್ರಿಯೆಯಲ್ಲಿ ಸುಲಭವಾಗಿ ಭಾಗವಹಿಸುತ್ತವೆ.

2. ಫಾಸ್ಫರಸ್ ಹ್ಯಾಲೈಡುಗಳೊಡನೆ ವರ್ತನೆ : ಉದಾಹರಣೆ ಫಾಸ್ಫರಸ್ ಪೆಂಟಕ್ಲೋರೈಡು ಆಲ್ಕೋಹಾಲಿನಲ್ಲಿರುವ ಹೈಡ್ರಾಕ್ಸಿಲ್ ಗುಂಪನ್ನು ಕ್ಲೋರಿನ್ ಪರಮಾಣುವಿನಿಂದ ಪಲ್ಲಟಿಸಿ ಆಯಾ ಆಲ್ಕೈಲ್ ಕ್ಲೋರೈಡನ್ನು ಕೊಡುವುದು.

$$R.OH + PCl_5 \rightarrow R.Cl + POCl_3 + HCl$$

ಫಾಸ್ಫರಸ್ ಟ್ರೈಕ್ಲೋರೈಡನ್ನು ಉಪಯೋಗಿಸಿದಾಗ ಫಾಸ್ಫರಸ್ ಆಮ್ಲ ಬರುವುದು.

$$3R.OH + PCl_3 \rightarrow 3RCl + H_3PO_3$$

ಮೊದಲನೆಯ ಕ್ರಿಯೆಯಲ್ಲಿ ಹೈಡ್ರೊಜನ್ ಕ್ಲೋರೈಡ್ ಹೊರಬೀಳುವುದರಿಂದ ಆಲ್ಕೊಹಾಲ್‌ಗಳನ್ನು ಹೀಗೂ ಗುರುತಿಸಬಹುದು. ಆದರೆ ನೀರಿನೊಡನೆ ಫಾಸ್ಫರಸ್ ಪೆಂಟಕ್ಲೋರೈಡ್ ವರ್ತಿಸಿದಾಗಲೂ ಹೈಡ್ರೊಜನ್‌ಕ್ಲೋರೈಡ್ ಬಿಡುಗಡೆಯಾಗುತ್ತದೆ. ಆದ್ದರಿಂದ ಆಲ್ಕೊಹಾಲ್ ಜಲರಹಿತವಾಗಿದ್ದರೆ ಮಾತ್ರ ಈ ಪರೀಕ್ಷಾ ಪ್ರಯೋಗದ ಫಲಿತಾಂಶವನ್ನು ನೆಚ್ಚಬಹುದು.

ನಿರ್ಜಲೀಕರಣ : ಆಲ್ಕೊಹಾಲ್‌ಗಳಲ್ಲಿರುವ ಅಕ್ಕಪಕ್ಕದ ಕಾರ್ಬನ್ ಪರಮಾಣುಗಳಿಂದ ನೀರಿನ ಅಂಗಮೂಲವಸ್ತುಗಳಾದ ಹೈಡ್ರೊಜನ್ ಮತ್ತು ಆಕ್ಸಿಜನ್ ತೆಗೆಯುವುದರಿಂದ ಅಪರ್ಯಾಪ್ತ ಹೈಡ್ರೊಕಾರ್ಬನ್‌ಗಳು ಲಭಿಸುತ್ತವೆ. ಇದಕ್ಕೆ ಅಗತ್ಯವಾದ ನಿರ್ಜಲಕಾರಿಗಳು ಮತ್ತು ಪ್ರಯೋಗಸ್ಥಿತಿಯನ್ನು ಕೆಳಗೆ ಸೂಚಿಸಲಾಗಿದೆ.



ಇಲ್ಲೂ ಸಹ ಟರ್ಷಿಯರಿ ಆಲ್ಕೊಹಾಲ್‌ಗಳು ಅತಿ ಸುಲಭವಾಗಿ ನಿರ್ಜಲಗೊಳ್ಳುವುವು.

ಉತ್ಕರ್ಷಣ : ಪ್ರೈಮರಿ ಆಲ್ಕೊಹಾಲ್‌ಗಳು ಮೊದಲು ಆಲ್ಡಿಹೈಡುಗಳಾಗಿ ಅನಂತರ ಆಮ್ಲಗಳಿಗೆ ಉತ್ಕರ್ಷಿತವಾಗುವುವು .

ಸೆಕೆಂಡರಿ ಆಲ್ಕೊಹಾಲ್‌ಗಳು ಕೀಟೋನುಗಳಾಗುವುವು.

ಟರ್ಷಿಯರಿ ಆಲ್ಕೊಹಾಲ್‌ಗಳ ಮೇಲ ಏನೂ ಪರಿಣಾಮವಾಗುವುದಿಲ್ಲ. ಪ್ರಯೋಗ ಸ್ಥಿತಿ ತೀವ್ರವಾಗಿದ್ದರೆ ಆಲ್ಕೊಹಾಲಿನ ಅಣು ಛಿದ್ರವಾಗಿ ಕಾರ್ಬನ್ ಡೈಆಕ್ಸೈಡ್ ನೀರು ಇತ್ಯಾದಿಗಳು ಉಂಟಾಗುತ್ತವೆ. ಇದರ ಸಲುವಾಗಿ ಬಳಸುವ ಉತ್ಕರ್ಷಣಕಾರಿಗಳೆಂದರೆ ಪೊಟ್ಯಾಸಿಯಂ ಪರ್ಮ್ಯಾಂಗನೇಟ್, ಆಮ್ಲಮಿಶ್ರಿತ ಮ್ಯಾಂಗನೀಸ್ ಡೈಆಕ್ಸೈಡ್ ಅಥವಾ ಪೊಟ್ಯಾಸಿಯಂ ಡೈಕ್ರೊಮೇಟುಗಳು. ಆದರೆ ಆಲ್ಕೊಹಾಲಿನ ಆವಿಯನ್ನು $250^\circ$ - $300^\circ$ ಸೆಂ.ಗ್ರೇಡಿಗೆ ಕಾಸಿದಾಗ ತಾಮ್ರದ ಪುಡಿಯ ಮೇಲೆ ಹಾಯಿಸಿದರೆ ಇನ್ನೊಂದು ರೀತಿಯ ಉತ್ಕರ್ಷಣ ನಡೆಯುವುದು.




ಪ್ರೈಮರಿ, ಸೆಕೆಂಡರಿ ಮತ್ತು ಟರ್ಷಿಯರಿ ಆಲ್ಕೊ ಹಾಲ್‌ಗಳನ್ನು ಪರಸ್ಪರ ಗುರುತಿಸಲು ಈ ಕ್ರಿಯೆ ನೆರವಾಗುತ್ತದೆ.

**ಅಪಕರ್ಷಣ** : ಹೆಚ್ಚುವರಿ ಹೈಡ್ರಯೊಡಿಕಾಮ್ಲ ಆಲ್ಕೊಹಾಲನ್ನು ನೇರವಾಗಿ ಅಪಕರ್ಷಿಸುತ್ತದೆ.

ಹ್ಯಾಲೊಫಾರಂ ಕ್ರಿಯೆ:




ರಚನೆ ಹೊಂದಿರುವ ಯಾವ ಆಲ್ಕೊಹಾಲ್ ಆದರೂ ಸೋಡಿಯಂ ಹೈಡ್ರಾಕ್ಸೈಡ್ ಮತ್ತು ಅಯೋಡೀನಿನೊಡನೆ ಕಾಯಿಸಿದಾಗ ಅಯೊಡೋಫಾರಂ ($CHI_3$) ಹಳದಿ ಒತ್ತರವಾಗಿ ಬೇರ್ಪಡುವುದು. ಇದಕ್ಕೆ ವಿಶಿಷ್ಟವಾಸನೆಯುಂಟು. ಈ ಕ್ರಿಯೆ ಮೂರು ಹಂತಗಳಲ್ಲಿ ನಡೆಯುತ್ತದೆ.




ಕ್ಲೋರೀನ್ ಅಥವಾ ಬ್ರೋಮೀನ್ ಉಪಯೋಗಿಸಿದರೆ ಕ್ರಮವಾಗಿ ಕ್ಲೋರೋಫಾರಂ ($CHCl_3$) ಮತ್ತು ಬ್ರೋಮೋಫಾರಂ ($CHBr_3$) ಬರುವುದರಿಂದ ಇದಕ್ಕೆ ಹ್ಯಾಲೊಫಾರಂ ಕ್ರಿಯೆ ಎಂದು ಹೆಸರಾಗಿದೆ.

ಆಲ್ಕೊಹಾಲ್ ಎಂದು ಹೆಸರಿರುವ ವಸ್ತುಗಳೆಲ್ಲ ಮೇಲೆ ವಿವರಿಸಿದ ರಾಸಾಯನಿಕ ಲಕ್ಷಣಗಳನ್ನು ಪಡೆದಿವೆ. ಇವುಗಳ ಪೈಕಿ ಮುಖ್ಯವಾದ ಒಂದೆರಡು ಆಲ್ಕೊಹಾಲ್‌ಗಳ ಬಗ್ಗೆ ಈಗ ವಿವರವಾಗಿ ಪ್ರಸ್ತಾಪಿಸಲಾಗುವುದು.

ಮೀಥೈಲ್ ಆಲ್ಕೊಹಾಲ್ (ಮಿಥನಾಲ್ ಅಥವಾ ವುಡ್ ಸ್ಪಿರಿಟ್) : ಮೀಥೈಲ್ ಆಲ್ಕೊಹಾಲ್ ಎಂದರೆ ಮರದಿಂದ ಮದ್ಯ ಎಂದು ಅರ್ಥ. ಮರದ ಚೂರುಗಳನ್ನು ವಿನಾಶಕ ಬಾಷ್ಪಸಾಂದ್ರೀಕರಣಕ್ಕೆ ಒಳಪಡಿಸಿ ಇದನ್ನು ತಯಾರಿಸುತ್ತಿದ್ದರು. ಆದ್ದರಿಂದ ಈ ಹೆಸರು ಬಂದಿದೆ. ($CH_3OH$) ಎಂಬ ಅಣುಸೂತ್ರವನ್ನೂ




ರಚನೆಯನ್ನೂ ಹೊಂದಿರುವ ಈ ಆಲ್ಕೊಹಾಲ್ ವಿಷವಸ್ತು.

ಕೈಗಾರಿಕಾ ತಯಾರಿಕೆ : (a) ಮರದಿಂದ : ಒಣಗಿಸಿದ ಗಟ್ಟಿ ಸೌದೆಯನ್ನು ಕಬ್ಬಿಣದ ರಿಟಾರ್ಟುಗಳಲ್ಲಿಟ್ಟು ಗಾಳಿಯ ಸಂಪರ್ಕವಿಲ್ಲದಂತೆ $450^o$ - $560^o$ ಸೆಂ.ಗ್ರೇ. ಉಷ್ಣತೆಯಲ್ಲಿ ಸುಮಾರು 30 ಗಂಟೆಗಳ ಕಾಲ ಕಾಯಿಸಿದರೆ ಕೆಳಕಂಡ ವಸ್ತುಗಳು ದೊರೆಯುತ್ತವೆ.

1. ವುಡ್‌ಗ್ಯಾಸ್ (ಕಾಷ್ಠಾನಿಲ) – ದಹ್ಯಾನಿಲಗಳ ಮಿಶ್ರಣವಿದು. ಇದರಲ್ಲಿ ಮುಖ್ಯವಾಗಿ ಮೀಥೇನ್ ಮತ್ತು ಕಾರ್ಬನ್ ಮಾನಾಕ್ಸೈಡ್ ಇರುತ್ತವೆ.

2. ಪೈರೊಲಿಗ್ನಿಯಸ್ ಆಮ್ಲ – ಜಲಯುಕ್ತ ದ್ರವಭಾಗ. ಇದರಲ್ಲಿ ಅಸಿಟಿಕ್ ಆಮ್ಲ (9–10%), ಮಿಥೆನಾಲ್ (1–2%) ಮತ್ತು ಅಸಿಟೋನ್ (0.1–0.5%) ಮುಖ್ಯವಾಗಿರುತ್ತವೆ.

3. ಡಾಂಬರು ಮತ್ತು ಇದ್ದಿಲು ಇತರ ಉಪವಸ್ತುಗಳು.

**ಪೈರೊಲಿಗ್ನಿಯಸ್ ಆಮ್ಲದ ಸಂಸ್ಕರಣ :** ಡಾಂಬರಿನ ಮೇಲೆ ನಿಲ್ಲುವ ಕಂದು ಬಣ್ಣದ ದ್ರವವಸ್ತುವೇ ಪೈರೊಲಿಗ್ನಿಯಸ್ ಆಮ್ಲ. ಇದನ್ನು ಬೇರ್ಪಡಿಸಿ ತಾಮ್ರದ ಪಾತ್ರೆಗಳಲ್ಲಿ ಕಾಸಲಾಗುವುದು. ಆವಿಯನ್ನು ಬಿಸಿಯಾದ ಸುಣ್ಣದ ಹಾಲಿನ ಮೂಲಕ ಹಾಯಿಸಿದಾಗ ಅಸಿಟಿಕ್ ಆಮ್ಲ ಮಾತ್ರ ಹೀರಲ್ಪಟ್ಟು ಕ್ಯಾಲ್ಸಿಯಂ ಅಸಿಟೇಟಾಗಿ ಉಳಿದು ಬಿಡುವುದು. ಅಸಿಟೋನ್ (ಕು.ಬಿಂ. $56^o$ ಸೆಂ.ಗ್ರೇ.) ಮತ್ತು ಮಿಥೆನಾಲ್‌ಗಳು (ಕು.ಬಿಂ.$64.5^o$ ಸೆಂ.ಗ್ರೇ.) ಸ್ವಲ್ಪ ನೀರಾವಿಯೊಂದಿಗೆ ಹಾದು ಹೋಗಿ ಸಾಂದ್ರಕಗಳಲ್ಲಿ ದ್ರವರೂಪ ತಳೆಯುವುವು. ಸುಟ್ಟಸುಣ್ಣದ ಸಂಪರ್ಕದಲ್ಲಿ ಈ ದ್ರವಮಿಶ್ರಣವನ್ನು ಕುದಿಸಿದರೆ ಸುಮಾರು 70% ಮಿಥೆನಾಲ್ ದೊರೆಯುವುದು. ಇದು ಮಾರುಕಟ್ಟೆಯ ವಸ್ತು. 98% ಶುದ್ಧ ಮಿಥೆನಾಲ್ ಬೇಕಾದರೆ ಸೂಕ್ತ ಆಂಶಿಕ ಬಾಷ್ಪಸಾಂದ್ರಕಗಳಲ್ಲಿ ಕುದಿಸಬೇಕಾಗುತ್ತದೆ. ಇಂಥ ಆಲ್ಕೊಹಾಲಿನಲ್ಲಿ 1–2% ಅಸಿಟೋನ್ ಇರುವುದು. ಅಯೊಡೊಫಾರಂ ಪರೀಕ್ಷೆಯಿಂದ ಇದು ಗೊತ್ತಾಗುತ್ತದೆ. ಅಸಿಟೋನ್ ನಿವಾರಣೆಗೆ ಅನುಸರಿಸುವ ಕ್ರಮಗಳನ್ನು ಕೆಳಗೆ ಕೊಡಲಾಗಿದೆ.

1. ಬಿಸಿಯಾದ ಆಲ್ಕೊಹಾಲಿಗೆ ಶುಷ್ಕ ಕ್ಲೋರೀನನ್ನು ಹಾಯಿಸಿದರೆ, ಟ್ರೈಕ್ಲೋರ ಸಿಟೋನ್ ($CCl_3.CO.CH_3$) ಉತ್ಪತ್ತಿಯಾಗುವುದು. ಇದರ ಕುದಿಯುವ ಬಿಂದು ಮಿಥೆನಾಲಿಗಿಂತ ಹೆಚ್ಚು. ಆದ್ದರಿಂದ ಅಂಶಿಕ ಬಾಷ್ಪೀಕರಣ ವಿಧಾನದಿಂದ ಸುಲಭವಾಗಿ ಪ್ರತ್ಯೇಕಿಸಬಹುದು.

2. ನಿರ್ಜಲ ಕ್ಯಾಲ್ಸಿಯಂ ಕ್ಲೊರೈಡಿನೊಂದಿಗೆ ಕುಲುಕಿದರೆ ಆಲ್ಕೊಹಾಲ್ ($CaCl_2.4CH_3OH$) ಎಂಬ ಹರಳುರೂಪದ ವಸ್ತುವಾಗುವುದು. ಇದಕ್ಕೆ ಅಂಟಿರುವ ದ್ರವಭಾಗವನ್ನು ಹಿಸುಕಿ ತೆಗೆದು ಕಾಸಿದರೆ ಶುದ್ಧ ಆಲ್ಕೊಹಾಲ್ ಆವಿಯಾಗುವುದು. ಇದನ್ನು ಸಾಂದ್ರೀಕರಿಸುವರು.

3. ಆಕ್ಸಾಲಿಕ್ ಆಮ್ಲದೊಡನೆ ವರ್ತಿಸುವಂತೆ ಮಾಡಿದರೆ ಮೀಥೈಲ್ ಆಕ್ಸಲೇಟ್ ಎಂಬ ಘನರೂಪದ ಎಸ್ಟರು ಬರುತ್ತದೆ. ಅದನ್ನು ನೀರಿನಿಂದ ತೊಳೆದರೆ ಅದಕ್ಕೆ ಅಂಟಿರುವ ಅಸಿಟೋನ್ ಪರಿಹಾರವಾಗುತ್ತದೆ. ಅನಂತರ ಪೊಟ್ಯಾಷ್ ದ್ರಾವಣದೊಡನೆ ಕುದಿಸಬೇಕು,. ಆಗ ಮಿಥೆನಾಲ್ ಸ್ವಲ್ಪ ನೀರಿನೊಂದಿಗೆ ಆವಿಯಾಗುವುದು. ಸುಟ್ಟ ಸುಣ್ಣದೊಡನೆ ಕುಲುಕಿ ಪುನಃ ಕುದಿಸಿದರೆ ಪರಿಶುದ್ಧ ಆಲ್ಕೊಹಾಲ್ ಲಭಿಸುವುದು. ಭದ್ರಾವತಿಯಲ್ಲಿ ಮರದಿಂದ ಮಿಥೆನಾಲ್ ಮಾಡುವ ಕಾರ್ಖಾನೆಯಿದೆ. ಅದರ ವಾರ್ಷಿಕ ಉತ್ಪಾದನೆ ಸುಮಾರು 420 ಟನ್ನುಗಳು.

(b) ಆಧುನಿಕ ಸಂಯೋಜನಾ ವಿಧಾನಗಳು : 1. ಜಲಾನಿಲದಿಂದ : 200 ವಾಯುಭಾರ ಒತ್ತಡದಲ್ಲಿ $350^o$–$400^o$ ಸೆಂ.ಗ್ರೇ. ಉಷ್ಣತಾಮಿತಿಯಲ್ಲಿ 2 : 1 ಗಾತ್ರ ಪ್ರಮಾಣದ ಜಲಾನಿಲ ಮತ್ತು ಹೈಡ್ರೊಜನ್ ಮಿಶ್ರಣವನ್ನು ಸತು ಮತ್ತು ಕ್ರೋಮಿಯಂ ಆಕ್ಸೈಡುಗಳ ವೇಗವರ್ಧಕ ಮಿಶ್ರಣದ ಮೇಲೆ ಹಾಯಿಸುವರು. ಆಗ ಶುದ್ಧ ಮಿಥೆನಾಲ್ ಉಂಟಾಗುವುದು.

$$(CO + H_2) + H_2 \square \quad CH_3OH$$

ಈ ವಿಧಾನದಿಂದ 25% ಪರಿವರ್ತನೆಯನ್ನು ಸಾಧಿಸಬಹುದು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನಿಸರ್ಗಾನಿಲ ಮತ್ತು ಹಬೆಯ ವರ್ತನೆಯಿಂದ ಈ ಕ್ರಿಯೆಗೆ ಅಗತ್ಯವಾದ ಅನಿಲ ಮಿಶ್ರಣವನ್ನು ಮಾಡಿಕೊಳ್ಳುತ್ತಾರೆ.

$$CH_4 + H_2O \rightarrow CO + 3H_2$$

ಆ ದೇಶದಲ್ಲಿ ಸುಮಾರು 200 ಮಿಲಿಯನ್ ಗ್ಯಾಲನ್ ಮಿಥೆನಾಲನ್ನು ವಾರ್ಷಿಕವಾಗಿ ಹೀಗೆ ತಯಾರಿಸುತ್ತಾರೆ.

2. ಮೀಥೇನಿನಿಂದ : – 9 : 1 ಗಾತ್ರ ಪ್ರಮಾಣದ ಮೀಥೇನ್ ಮತ್ತು ಆಕ್ಸಿಜನ್ ಮಿಶ್ರಣವನ್ನು 100 ವಾಯುಭಾರ ಒತ್ತಡದಲ್ಲಿ 200$^{o}$ ಸೆಂ.ಗ್ರೇ. ಉಷ್ಣತೆಯಲ್ಲಿಟ್ಟಿರುವ ತಾಮ್ರದ ಕೊಳವೆಯ ಮೂಲಕ ಹಾಯಿಸುವರು.

$$2CH_4 + O_2 \rightarrow 2CH_3OH$$

ಈ ವಿಧಾನದಲ್ಲಿ 17% ಪರಿವರ್ತನೆ ಮಾತ್ರ ಸಾಧ್ಯ.

ಗುಣಗಳು : ಮಧುರ ವಾಸನೆ ಮತ್ತು ದಾಹಕ ರುಚಿಯುಳ್ಳ ನಿರ್ವರ್ಣ ದ್ರವ. ವಿಷವಸ್ತು. ಸೇವಿಸಿದ ಪ್ರಮಾಣಕ್ಕೆ ಅನುಗುಣವಾಗಿ ಅಂಧತ್ವ, ಹುಚ್ಚು ಅಥವಾ ಸಾವು ಸಂಭವಿಸುತ್ತದೆ. ದೇಹದಲ್ಲಿ ಅದು ಫಾರ್ಮಿಕ್ ಆಮ್ಲವಾಗಿ ಉತ್ಕರ್ಷಣ ಹೊಂದಿ ಕೆಡುಕಾಗುವುದು. ಆದ್ದರಿಂದ ಈಥೈಲ್ ಆಲ್ಕೊಹಾಲನ್ನು ಪಾನತ್ಯಾಜ್ಯವನ್ನಾಗಿ ಮಾಡಲು ಮಿಥೆನಾಲ್ ಉಪಯೋಗಿಸುವರು. ನೀರಿನೊಂದಿಗೆ ಧಾರಾಳವಾಗಿ ಬೆರೆಯುತ್ತದೆ. ಉತ್ಕರ್ಷಿಸಿದಾಗ ಅಂತಿಮವಾಗಿ ಕಾರ್ಬನ್ ಡೈಆಕ್ಸೈಡನ್ನು ಕೊಡುವುದು.

$$CH_3OH \xrightarrow{[O]} HCHO \xrightarrow{[O]} HCOOH \xrightarrow{[O]} CO_2$$

ಫಾರ್ಮಾಲ್ಡಿಹೈಡ್ ಫಾರ್ಮಿಕ್ ಆಮ್ಲ

ಸೋಡಿಯಂ ಲೋಹದೊಡನೆ ತೀವ್ರವಾಗಿ ವರ್ತಿಸಿ ಸೋಡಿಯಂ ಮೀಥಾಕ್ಸೈಡ್ ($CH_3ONa$) ಕೊಡುವುದು. ಮಿಥೆನಾಲ್ ದುರ್ಬಲ ಆಮ್ಲದಂತೆ ವರ್ತಿಸುತ್ತದೆ. ಅದರ ವಿಭಜನಾಂಕ (ಡಿಸೋಸಿಯೇಷನ್ ಕಾನ್‌ಸ್ಟೆಂಟ್) $1 \times 10^{-17}$. ಮೀಥಾಕ್ಸೈಡುಗಳು ಸುಲಭವಾಗಿ ಜಲವಿಶ್ಲೇಷಣೆ ಹೊಂದುತ್ತವೆ. ಆದ್ದರಿಂದಲೇ ಮಿಥೆನಾಲಿನಲ್ಲಿರುವ ಲೇಶಮಾತ್ರ ನೀರನ್ನು ಹೀರಿಕೊಳ್ಳಲು ಮೆಗ್ನೀಸಿಯಂ ಮಿಥಾಕ್ಸೈಡ್ ಉಪಯೋಗಿಸುವುದು.

$$Mg(OCH_3)_2 H_2O \rightarrow MgO + 2CH_3OH$$

ಪ್ರಬಲ ಸಲ್ಫ್ಯೂರಿಕ್ ಆಮ್ಲದೊಡನೆ ವರ್ತಿಸಿದಾಗ ಮೊದಲು ಮೀಥೈಲ್ ಹೈಡ್ರೊಜನ್ ಸಲ್ಫೇಟ್ ($CH_3HSO_4$) ಅನಂತರ ಡೈಮೀಥೈಲ್ ಸಲ್ಫೇಟ್ [$(CH_3)_2SO_4$] ಉತ್ಪತ್ತಿಯಾಗುವುವು. ಸೋಡಾ ಲೈಮ್ ಜೊತೆ ಕಾಸಿದಾಗ ಸೋಡಿಯಂ ಫಾರ್ಮೇಟ್ ಮತ್ತು ಹೈಡ್ರೊಜನನ್ನು ಕೊಡುತ್ತದೆ.

$$2[C_6H_{10}O_5]_n + nH_2O \rightarrow nC_{12}H_{22}O_{11}$$

$$CH_3OH + NaOH \rightarrow HCOONa + 2H_2$$

**ಪರೀಕ್ಷಾ ಪ್ರಯೋಗಗಳು :** ಮಿಥೆನಾಲಿಗೆ ಒಂದು ಚಿಟಕಿ ಸ್ಯಾಲಿಸಿಲಿಕ್ ಆಮ್ಲ, ಎರಡು ತೊಟ್ಟು ಪ್ರಬಲ ಸಲ್ಫ್ಯೂರಿಕ್ ಆಮ್ಲ ಹಾಕಿ ಬೆಚ್ಚಗೆ ಮಾಡಿದರೆ ಮೀಥೈಲ್ ಸ್ಯಾಲಿಸಿಲೇಟ್ ಎಂಬ ಎಸ್ಟರಿನ ವಿಶಿಷ್ಟ ವಾಸನೆ (ಅಮೃತಾಂಜನದಂತೆ) ಬರುತ್ತದೆ. ಅಲ್ಲದೆ ಮಿಥೆನಾಲ್ ಅಯೋಡೊಫಾರಂ ಕೊಡುವುದಿಲ್ಲ. ಈಥೈಲ್ ಆಲ್ಕೊಹಾಲಿನಿಂದ ಇದನ್ನು ಗುರುತಿಸಲು ಈ ಎರಡು ಪರಿಕ್ಷಾ ಪ್ರಯೋಗಗಳು ಉಪಯಕ್ತ .

**ಉಪಯೋಗಗಳು :** ಪ್ಲಾಸ್ಟಿಕ್ ಉತ್ಪಾದನೆಗೆ ಅಗತ್ಯವಾದ ಫಾರ್ಮಾಲ್ಡಿಹೈಡನ್ನು ತಯಾರಿಸಲು ಇದು ವಿಶೇಷವಾಗಿ ಉಪಯೋಗವಾಗುತ್ತದೆ. ಮೀಥೈಲ್ ಅಸಿಟೇಟ್ ಮತ್ತು ಅಸಿಟೋನಿನೊಡನೆ ಮಿಶ್ರಮಾಡಿ ಲ್ಯಾಕರುಗಳನ್ನು ಲೀನಮಾಡಲು ಉಪಯೋಗಿಸುವರು. ಮೋಟಾರ್ ವಾಹನಗಳಲ್ಲಿ ಬಳಸುವ ನೀರಿಗೆ ಇದನ್ನು ಸೇರಿಸಿದರೆ ನೀರು ಹೆಪ್ಪುಗಟ್ಟಿ ತೊಂದರೆಯಾಗುವುದಿಲ್ಲ. ಹರಳೆಣ್ಣೆ ಮತ್ತು ಸೆಲ್ಯುಲೋಸ್ ಉತ್ಪನ್ನಗಳಿಗೂ ಇದು ಲೀನಕಾರಿ. ಬಣ್ಣಗಳು, ಸುಗಂಧಗಳು, ಔಷಧಗಳು, ವಾರ್ನಿಷ್‌ಗಳು ಮತ್ತು ಪಾಲಿಷ್‌ಗಳ ತಯಾರಿಕೆಯಲ್ಲಿ ಮಿಥೆನಾಲಿನ ಉಪಯೋಗ ವ್ಯಾಪಕವಾಗಿದೆ.

ಈಥೈಲ್ ಆಲ್ಕೊಹಾಲ್ (ಎಥೆನಾಲ್) : ಮಾನೊಹೈಡ್ರಿಕ್ ಆಲ್ಕೊಹಾಲ್‌ಗಳಲ್ಲಿ ಅತಿಮುಖ್ಯವಾದ ಈ ವಸ್ತುವನ್ನು ಕೇವಲ ಆಲ್ಕೊಹಾಲ್ ಎಂದು ಸಂಬೋಧಿಸುವುದು ರೂಢಿಯಾಗಿ ಬಿಟ್ಟಿದೆ. ಇದರ ಅಣುಸೂತ್ರ ($C_2H_5OH$). ರಚನಾ ಸೂತ್ರ ಕೆಳಕಂಡಂತಿದೆ.



ಕೈಗಾರಿಕಾ ತಯಾರಿಕೆ : ಅಗ್ಗ ಪಿಷ್ಟ ಪದಾರ್ಥಗಳಾದ ಆಲೂಗೆಡ್ಡೆ, ಮುಸುಕಿನ ಜೋಳ, ಅಕ್ಕಿ ಇತ್ಯಾದಿಗಳಿಂದ ಆಲ್ಕೊಹಾಲನ್ನು ತಯಾರಿಸುವರು. ಆಲೂಗಡ್ಡೆಯನ್ನು ತೆಳುವಾದ ಬಿಲ್ಲೆಗಳಾಗಿ ಹೆಚ್ಚಿ ಒತ್ತಡದಲ್ಲಿ ಹಬೆಯೊಂದಿಗೆ, 140$^{o}$–150$^{o}$ ಸೆಂ.ಗ್ರೇ. ಉಷ್ಣತೆಯಲ್ಲಿ ಕಾಸುವರು. ಇದರಿಂದ ಸೆಲ್ ಪದರಗಳು ಹರಿದು ಪಿಷ್ಟಕಣಗಳು ಹೊರಬೀಳುವುವು. ಆಗ ಹಾಲಿನಂಥ ದ್ರವವಸ್ತುವಾಗುವುದು. ಇದಕ್ಕೆ ಮ್ಯಾಷ್ ಎಂದು ಹೆಸರು. ಅನಂತರ ಇದಕ್ಕೆ ಮಾಲ್ಟ್ ಸೇರಿಸಿದರೆ ಜಲವಿಶ್ಲೇಷಣೆ ಪ್ರಾರಂಭವಾಗುವುದು. ಬಾರ್ಲಿ ಬೀಜಗಳನ್ನು ನೀರಿನಲ್ಲಿ ನೆನೆಸಿ ತೇವ ವಾತಾವರಣದಲ್ಲಿ 12 ಸೆಂ. ಮೀ. ಎತ್ತರ ಹರಡಿ 15$^{o}$ ಸೆಂ.ಗ್ರೇ. ಉಷ್ಣತೆಯಲ್ಲಿ ಕೆಲವು ಗಂಟೆಗಳ ಕಾಲ ಬಿಡಲಾಗುವುದು. ಆಗ ಬಾರ್ಲಿ ಮೊಳಕೆ ಒಡೆಯುವುದು. ಮೊಳೆತಾಗ ಡಯಸ್ಟೇಸ್ ಎಂಬ ಕಿಣ್ವ ಉತ್ಪತ್ತಿಯಾಗುವುದು. ಕಾಳು ಸಾಕಷ್ಟು ಮೊಳೆತ ಅನಂತರ ಅದನ್ನು ಇನ್ನೊಂದು ಕೋಶಕ್ಕೆ ರವಾನಿಸಿ ಹೆಚ್ಚಿನ ಉಷ್ಣತೆಗೆ ಕಾಸಿದರೆ ಮೊಳೆಯುವಿಕೆ ನಿಲ್ಲುವುದು. ಅಂಥ ಕಾಳುಗಳನ್ನು ಒಣಗಿಸಿದರೆ ಲಭಿಸುವುದೇ ಮಾಲ್ಟ್. ಇದನ್ನು ಮ್ಯಾಷ್ ಗಂಜಿಗೆ ಸೇರಿಸಿ ಅದರ ಉಷ್ಣತೆಯನ್ನು 50$^{o}$ ಸೆಂ. ಗ್ರೇಡಿಗೆ ಹೆಚ್ಚಿಸಲಾಗುವುದು. ಕಿಣ್ವನ (ಫರ್ಮೆಂಟೇಷನ್) ಆರಂಭವಾಗಿ ಪಿಷ್ಟದ ಬಹುಭಾಗ ಮಾಲ್ಟೋಸ್ ಸಕ್ಕರೆಯಾಗಿ ಪರಿವರ್ತಿತವಾಗುತ್ತದೆ. ಕೊಂಚ ಡೆಕ್ಸ್ಟ್ರಿನ್ ಸಹ ಬರಬಹುದು. ಮಾಲ್ಟಿನಲ್ಲಿರುವ ಜಲವಿಶ್ಲೇಷಣಕಾರಿಯಾದ ಡಯಸ್ಟೇಸ್ ಕಿಣ್ವ ಈ ಪರಿವರ್ತನೆಗೆ ಕಾರಣ. ಕ್ರಿಯೆ ಸುಮಾರು ಅರ್ಧ ತಾಸಿನಲ್ಲಿ ಪೂರ್ಣಗೊಳ್ಳುವುದು.

ಸಕ್ಕರೆಯ ದ್ರಾವಣವನ್ನು (ವೋರ್ಟ್) 15$^{o}$ ಸೆಂ.ಗ್ರೇಡಿಗೆ ತಣಿಸಿ ಯೀಸ್ಟ್ ಸೇರಿಸುವರು. ಬಹುತೇಕ ಯೀಸ್ಟ್‌ಗಳಲ್ಲಿರುವ ಮಾಲ್ಟೇಸ್‌ಕಿಣ್ವ ಮಾಲ್ಟೋಸನ್ನು ಗ್ಲೂಕೋಸಿಗೆ ಮಾರ್ಪಡಿಸುವುದು. ಯೀಸ್ಟ್‌ನಲ್ಲಿರುವ ಮತ್ತೊಂದು ಕಿಣ್ವವಾದ ಜೈಮೇಸ್ ಗ್ಲೂಕೋಸನ್ನು ಆಲ್ಕೊಹಾಲಿಗೆ ಪರಿವರ್ತಿಸುತ್ತದೆ. ಈ ಕ್ರಿಯೆ ಪೂರ್ತಿಯಾಗಲು ಸುಮಾರು ನಾಲ್ಕು ದಿವಸಗಳು ಬೇಕು. ಆಗ ಉಷ್ಣತೆ 33$^{o}$ ಸೆಂ.ಗ್ರೇ. ಮೀರದಂತೆ ನೋಡಿಕೊಳ್ಳುವುದು ಅಗತ್ಯ. ಕಿಣ್ವನ ಮಾಡುತ್ತಿರುವ ಯೀಸ್ಟನ್ನು ಗಾಳಿಗೆ ಒಡ್ಡಿದರೆ ಕ್ರಿಯೆ ನಿಲ್ಲುವುದು. ಶ್ವಾಸಕ್ರಿಯೆ ಪ್ರಾರಂಭವಾಗಿ, ಕಾರ್ಬನ್ ಡೈಆಕ್ಸೈಡ್ ಮತ್ತು ನೀರು ಉತ್ಪತ್ತಿಯಾಗುವುವೇ ವಿನಾ ಸಕ್ಕರೆ ಆಲ್ಕೊಹಾಲ್ ಆಗುವುದಿಲ್ಲ. ಲಭ್ಯವಾದ ದ್ರವವನ್ನು ಬಟ್ಟಿ ಇಳಿಸಿದರೆ ಜಲಮಿಶ್ರಿತ ಆಲ್ಕೊಹಾಲ್ ದೊರೆಯುವುದು. ಇಲ್ಲಿಯವರೆಗೆ ವಿವರಿಸಿದ ರಾಸಾಯನಿಕ ಕ್ರಿಯೆಗಳು ಕೆಳಕಂಡ ಸಮೀಕರಣಗಳಲ್ಲಿ ಸೂಚಿತವಾಗಿವೆ.

ಮಾಲ್ಟೋಸ್

$$C_{12}H_{22}O_{11} + H_2O \rightarrow 2C_6H_{12}O_6$$

ಗ್ಲೂಕೋಸ್

$$C_6H_{12}O_6 \rightarrow 2C_2H_5OH + 2CO_2 \uparrow$$

ಆಲ್ಕೊಹಾಲ್

ಕಾರ್ಬನ್ ಡೈಆಕ್ಸೈಡ್ ಹೊರಬೀಳುವ ರಭಸಕ್ಕೆ ದ್ರವ ಕುದಿಯುವಂತೆ ಭಾಸವಾಗುತ್ತದೆ. ಆದ್ದರಿಂದ ಕುದಿ ಎಂಬ ಅರ್ಥವುಳ್ಳ (fervere) ಲ್ಯಾಟಿನ್ ಪದದ ಆಧಾರದ ಮೇಲೆ ಈ ಕ್ರಿಯೆಗೆ ಫರ್ಮೆಂಟೇಷನ್ (ಕಿಣ್ವನ) ಎಂದು ಹೆಸರಿಡಲಾಯಿತು. (ಈ ಪದಕ್ಕೆ ಈಗ ವಿಸ್ತಾರವಾದ ಅರ್ಥವಿದೆ). ಆಲ್ಕೊಹಾಲಿನ ಅಂಶ 14% ಮುಟ್ಟಿದ ಕೂಡಲೆ ಯೀಸ್ಟ್ ಹತವಾಗುವುದರಿಂದ ಈ ವಿಧಾನದಿಂದ ಜಲಮಿಶ್ರಿತ ಆಲ್ಕೊಹಾಲನ್ನು ಮಾತ್ರ ತಯಾರಿಸಲು ಸಾಧ್ಯ.

ಕಿಣ್ವಿಸಿದ ಮದ್ಯಸಾರವನ್ನು ವಾಷ್ ಎನ್ನುವರು. ಇದರಲ್ಲಿ ಸಾಮಾನ್ಯವಾಗಿ 8–10% ಆಲ್ಕೊಹಾಲಿರುತ್ತದೆ. ಇದನ್ನು ಕಾಫೆಯ ಸಾಂದ್ರಕದಲ್ಲಿ ಬಟ್ಟಿ ಇಳಿಸಿದರೆ ಒಂದೇ ಸಲಕ್ಕೆ 80–90% ಆಲ್ಕೊಹಾಲ್ ದೊರೆಯುತ್ತದೆ. ಕಾಫೆಯ ಸಾಂದ್ರಕದಲ್ಲಿ ಎರಡು ಸ್ತಂಭಗಳಿವೆ. ಒಂದಕ್ಕೆ ವಿಶ್ಲೇಷಕವೆಂದೂ ಇನ್ನೊಂದಕ್ಕೆ ಶುದ್ಧಿಕಾರಕ (ರೆಕ್ಟಿಫಯರ್) ಎಂದೂ ಹೆಸರು. ಇವುಗಳ ಮೂಲಕ ವಿರುದ್ಧ ದಿಕ್ಕುಗಳಲ್ಲಿ ಹಬೆ ಮತ್ತು ಆಲ್ಕೊಹಾಲ್‌ಗಳು ಹಾಯುತ್ತಿರುತ್ತವೆ. ವಿಶ್ಲೇಷಕದಲ್ಲಿ ಆಲ್ಕೊಹಾಲೆಲ್ಲ ಹಬೆಯೊಡಗೂಡಿ ಶುದ್ಧಿಕಾರಕದ ಮೇಲ್ಭಾಗದಲ್ಲಿ ಸಾಂದ್ರೀಕರಿಸಿ ಅಲ್ಲಿಂದ ಸಂಗ್ರಾಹಕಗಳಿಗೆ ತಲಪುವುದು. ಇದನ್ನೇ ಶುದ್ಧೀಕರಿಸಿದ ಸ್ಪಿರಿಟ್ ಎನ್ನುವುದು. ಇದರಲ್ಲಿ ತೂಕ ರೀತ್ಯಾ 95.6% ಆಲ್ಕೊಹಾಲ್ ಇರುತ್ತದೆ. ಕಿಣ್ವನ ಕ್ರಿಯೆಯಲ್ಲಿ ಆಲ್ಕೊಹಾಲಿನ ಜೊತೆಯಲ್ಲಿ ವಿವಿಧ ಪ್ರಮಾಣದಲ್ಲಿ ಫ್ಯೂಸಲ್ ಆಯಿಲ್, ಗ್ಲಿಸರಾಲ್, ಅಸಿಟಾಲ್ಡಿಹೈಡ್, ಅಸಿಟೋನ್, ಸಕ್ಸಿನಿಕ್ ಆಮ್ಲ ಮುಂತಾದ ಉಪ ವಸ್ತುಗಳು ದೊರೆಯುತ್ತವೆ. ಅಂಶಬಾಷ್ಪೀಕರಣ ಮಾಡಿದಾಗ ಇವೆಲ್ಲ ನಿವಾರಿಸಲ್ಪಡುತ್ತವೆ. ಪಿಷ್ಟದಿಂದ ತಾತ್ವಿಕವಾಗಿ ಪಡೆಯಬಹುದಾದ ಆಲ್ಕೊಹಾಲಿನ 85% ಭಾಗ ಮಾತ್ರ ವಾಸ್ತವಿಕವಾಗಿದೆಯೆಂಬುದು ಅನುಭವಸಿದ್ಧ. ಭಾರತದಲ್ಲಿ ಮದ್ಯಪಾನಕ್ಕೆ ಒದಗಿಸುವ ಆಲ್ಕೊಹಾಲನ್ನು ಗ್ಲೂಕೋಸ್ ಮತ್ತು ಫ್ರಕ್ಟೋಸ್ ಸಕ್ಕರೆಗಳ ಅಂಶ ಅಧಿಕವಾಗಿರುವ ಮಾಹ್ವ (ಬ್ಯಾನಿಯ ಲ್ಯಾಟಿಫೋಲಿಯಾ) ಪುಷ್ಪಗಳನ್ನು ಕಿಣ್ವಿಸಿ ತಯಾರಿಸುತ್ತಾರೆ. ಕಾಗದ ತಯಾರಿಸಲು ಸಲ್ಫೇಟ್ ವಿಧಾನವೆಂಬ ಕ್ರಮವಿದೆ. ಆಗ ಉಳಿಯುವ ನಿರುಪಯೋಗಿ ದ್ರವದಲ್ಲಿ ಕಿಣ್ವಿಸಲು ಯೋಗ್ಯವಾದ ಸಕ್ಕರೆಗಳಿರುತ್ತವೆ. ಅದರಿಂದಲೂ ಆಲ್ಕೊಹಾಲನ್ನು ತಯಾರಿಸುವ ಪದ್ಧತಿ ಸ್ವೀಡನ್ನಿನಲ್ಲಿ ರೂಢಿಯಲ್ಲಿದೆ.

**ಆಬ್ಸಲ್ಯೂಟ್ ಆಲ್ಕೊಹಾಲ್ :** ಕೇವಲ ಕುದಿಸುವುದರಿಂದ 100% ಆಲ್ಕೊಹಾಲನ್ನು ಪಡೆಯಲು ಸಾಧ್ಯವಿಲ್ಲ. 78.13$^{o}$ ಸೆಂ.ಗ್ರೇ.ನಲ್ಲಿ , ತೂಕ ರೀತ್ಯಾ 4.43% ಜಲಾಂಶವಿರುವ ನಿಯತ ಕುದಿಮಿಶ್ರಣವಾಗುವುದೇ (ಕಾನ್‌ಸ್ಟೆಂಟ್ ಬಾಯ್ಲಿಂಗ್ ಮಿಕ್ಸ್ಚರ್) ಇದಕ್ಕೆ ಕಾರಣ. ಆದರೆ ಶುದ್ಧ ಸುಣ್ಣದೊಡನೆ ಕುದಿಸಿದರೆ 0.3% ನೀರುಮಾತ್ರ ಉಳಿಯುವುದು. ವ್ಯವಹಾರದಲ್ಲಿ

ಆಬ್ಸಲ್ಯೂಟ್ ಆಲ್ಕೊಹಾಲ್ ಎನ್ನುವುದು ಇದನ್ನೇ. ಶೇಷಜಲವನ್ನು ತೊಡೆದುಹಾಕಲು, ಕ್ಯಾಲ್ಸಿಯಂ ಅಥವಾ ಮೆಗ್ನೀಸಿಯಂ ಸೇರಿಸಿ ಕುದಿಸಬೇಕು. ಬಳಕೆಯಲ್ಲಿರುವ ಮತ್ತೊಂದು ಜರ್ಮನ್ ವಿಧಾನದಲ್ಲಿ ಅಗತ್ಯವಿದ್ದಷ್ಟು ಮಾತ್ರ ಬೆಂಜೀನನ್ನು ಸೇರಿಸಿ ಕುದಿಸಲಾಗುವುದು. ಆಗ $64.9^{o}$ ಸೆಂಟಿಗ್ರೇಡಿನಲ್ಲಿ ಬೆಂಜೀನ್ ಮತ್ತು ಸ್ವಲ್ಪ ಆಲ್ಕೊಹಾಲ್ ನೀರನ್ನೆಲ್ಲ ಹೊತ್ತು ಹಾಕುತ್ತವೆ. ಉಳಿದ ಬೆಂಜೀನ್ ಇನ್ನಷ್ಟು ಆಲ್ಕೊಹಾಲಿನೊಂದಿಗೆ $68.25^{o}$ ಸೆಂ.ಗ್ರೇ. ನಲ್ಲಿ ನಿಯತ ಕುದಿಮಿಶ್ರಣವಾಗಿ ಆವಿಯಾಗುತ್ತದೆ. ಹಿಂದುಳಿಯುವ 100% ಆಲ್ಕೊಹಾಲ್ $78.3^{o}$ ಸೆಂ.ಗ್ರೇ. ನಲ್ಲಿ ಭಟ್ಟಿ ಇಳಿಯುತ್ತದೆ. ಬೆಂಜೀನನ್ನು ಸಂಗ್ರಹಿಸಿ ಪುನಃ ಉಪಯೋಗಿಸಲಾಗುವುದು. ಆಲ್ಕೊಹಾಲಿನಲ್ಲಿರುವ ಜಲಾಂಶವೆಲ್ಲ ಹೋಗಿದೆಯೇ ಎಂಬುದನ್ನು ಪರೀಕ್ಷಿಸಲು ನಿರ್ಜಲ ತಾಮ್ರದ ಸಲ್ಫೇಟ್ (ನೀಲಿಯಾಗುತ್ತದೆ) ಅಥವಾ ಕ್ಯಾಲ್ಸಿಯಂ ಕಾರ್ಬೈಡ್ (ಅಸಿಟಲೀನ್ ಅನಿಲ ಬರುತ್ತದೆ) ಉಪಯೋಗಿಸಬಹುದು. ಅತಿ ಶುದ್ಧ ಆಲ್ಕೊಹಾಲಿಗೆ ವಿಪರೀತ ಬೇಡಿಕೆಯಿದೆ.

**ಕಾಕಂಬಿಯಿಂದ ಆಲ್ಕೊಹಾಲ್:** ಕಬ್ಬಿನ ಅಥವಾ ಬೀಟ್ ಸಕ್ಕರೆಯ ತಯಾರಿಕೆಯಲ್ಲಿ ಉಳಿಯುವ ಕಾಕಂಬಿಯಲ್ಲಿ 30% ಸುಕ್ರೋಸ್ ಮತ್ತು 32% ಗ್ಲೂಕೋಸ್ ಫ್ರಕ್ಟೋಸ್‍ಗಳು ಇರುತ್ತವೆ. ಮೊದಲು ಕಾಕಂಬಿಯ ಪಾಕಕ್ಕೆ ನೀರು ಸೇರಿಸಿ 10% ಸಕ್ಕರೆಯ ದ್ರಾವಣ ಮಾಡಿಕೊಳ್ಳುವರು. ಅನಂತರ ಯೀಸ್ಟ್ ಒದಗಿಸುವರು. ಅದರಲ್ಲಿರುವ ಇನ್ವರ್ಟೇಸ್ ಕಿಣ್ವ ಸುಕ್ರೋಸನ್ನು ಗ್ಲೂಕೋಸಾಗಿ ಮಾಡುವುದು. ಕ್ರಿಯಾ ಮಾಧ್ಯಮದಲ್ಲಿ ಸಾಕಷ್ಟು ಯೀಸ್ಟ್ ಆಹಾರವಿಲ್ಲದಿದ್ದರೆ ಅಮೋನಿಯಂ ಸಲ್ಫೇಟ್‍ನಂಥ ಪೋಷಕ ದ್ರಾವಣವನ್ನು ಕೂಡಿಸುವರು. ಸ್ವಲ್ಪ ಸಲ್ಫ್ಯೂರಿಕ್ ಆಮ್ಲ ಹಾಕಿದರೆ ಬ್ಯಾಕ್ಟೀರಿಯಾ ಚಟುವಟಿಕೆ ನಿಧಾನವಾಗಿ ಯೀಸ್ಟ್ ತೀವ್ರಗತಿಯಲ್ಲಿ ವೃದ್ಧಿಯಾಗುವುದು. ಮರದ ಅಥವಾ ಗಾಜುಲೇಪನ (ಎನಾಮೆಲ್) ಮಾಡಿದ ಕಬ್ಬಿಣದ ಕಡಾಯಿಗಳಲ್ಲಿ ಈ ಕ್ರಿಯೆ ನಡೆಸಲಾಗುವುದು. ದ್ರವ ಮಿಶ್ರಣದ ಒಟ್ಟು ಗಾತ್ರದ 5% ಮಾತ್ರ ಯೀಸ್ಟ್ ಇದ್ದರೆ ಉತ್ತಮ. ಉಷ್ಣತೆ $21^{o}$·$37.8^{o}$ ಸೆಂ.ಗ್ರೇ. ಮಿತಿಯಲ್ಲಿರಬೇಕು. ಇದು ಉಷ್ಣಜನಕ ಕ್ರಿಯೆ. ಸಾಮಾನ್ಯವಾಗಿ 3–4 ದಿವಸಗಳಲ್ಲಿ ಪೂರ್ತಿಯಾಗುವುದು. ಅನುಕೂಲ ಪರಿಸ್ಥಿತಿಯಿದ್ದರೆ 36 ಗಂಟೆಗಳಲ್ಲಿ 90% ಸಕ್ಕರೆ ಕಿಣ್ವನಗೊಳ್ಳಬಹುದು. ಜಲಮಿಶ್ರಿತ ಆಲ್ಕೊಹಾಲನ್ನು ಹಿಂದೆ ಹೇಳಿದಂತೆ ಸಾಂದ್ರೀಕರಿಸಬಹುದು. ಒಂದು ಗ್ಯಾಲನ್ ಕಾಕಂಬಿಯಿಂದ ಸುಮಾರು 0.4 ಗ್ಯಾಲನ್ ರೆಕ್ಟಿಫೈಡ್ ಸ್ಪಿರಿಟ್ ಪಡೆಯಲು ಸಾಧ್ಯ. 1960ರಲ್ಲಿ ಕಾಕಂಬಿಯಿಂದ 484.21 ಲಕ್ಷ ಗ್ಯಾಲನ್ ಇಂಧನ ಆಲ್ಕೊಹಾಲ್, 337.05 ಲಕ್ಷ ಗ್ಯಾಲನ್ ರೆಕ್ಟಿಫೈಡ್ ಸ್ಪಿರಿಟ್ ಮತ್ತು 252.85 ಲಕ್ಷ ಗ್ಯಾಲನ್ ಪಾನತ್ಯಾಜ್ಯ ಸ್ಪಿರಿಟ್‍ಗಳನ್ನು ಭಾರತದಲ್ಲಿ ಉತ್ಪಾದಿಸಲಾಯಿತು. ಪಾಲಿಥೀನ್ ಪ್ಲ್ಯಾಸ್ಟಿಕ್ ತಯಾರಿಸಲು ಎಥಿಲೀನ್ ಬೇಕು. ಇದನ್ನು ಪಡೆಯಲು ನಾವು ಕಿಣ್ವನ ವಿಧಾನದಿಂದ ಬಂದ ಆಲ್ಕೊಹಾಲನ್ನು ಬಳಸುತ್ತಿದ್ದೇವೆ.

ಆಲ್ಕೊಹಾಲಿಕ್ ಕಿಣ್ವನದಿಂದ ದೊರೆಯುವ ಉಪವಸ್ತುಗಳ ಕಾರ್ಬನ್ ಡಯಾಕ್ಸೈಡನ್ನು ಘನೀಭವಿಸಿ ಒಣಗಿದ ಮಂಜುಗಡ್ಡೆಯನ್ನಾಗಿ ಮಾಡಬಹುದು ಅಥವಾ ಮಿಥೆನಾಲಿಗೆ ಪರಿವರ್ತಿಸಬಹುದು. ಒಂದು ಟನ್ ಕಾಕಂಬಿಯಿಂದ 235 ಪೌಂಡುಗಳಷ್ಟು ಕಾರ್ಬನ್ ಡೈಆಕ್ಸೈಡ್ ಸಿಗುತ್ತದೆ. ಕಂದುಬಣ್ಣದ ಘನವಾಗಿ ಶೇಖರಿಸುವ ಟಾರ್ಟರ್‍ನಿಂದ ಟಾರ್ಟಾರಿಕಾಮ್ಲ ಮತ್ತು ರಾಷೆಲೆ ಲವಣಗಳನ್ನು ಮಾಡಿಕೊಳ್ಳಬಹುದು. ಸಾಂದ್ರೀಕರಣದ ಕಡೆಯ ಹಂತಗಳಲ್ಲಿ ದಟ್ಟ ಹಳದಿಬಣ್ಣದ ತೈಲದಂತಿರುವ ದ್ರವವಸ್ತು ಬರುವುದು. ಇದೇ ಫ್ಯೂಸೆಲ್ ಆಯಿಲ್. ಪಿಷ್ಟದಲ್ಲಿ ಕೆಲವು ಪ್ರೋಟೀನುಗಳಿವೆ. ಅವುಗಳಿಂದ ವ್ಯಾಲೆನ್ ಮತ್ತು ಲ್ಯೂಸೀನ್ ಎಂಬ ಅಮೈನೊ ಆಮ್ಲಗಳು ಉದ್ಭವಿಸುತ್ತವೆ. ಇವುಗಳೊಡನೆ ಯೀಸ್ಟ್ ವರ್ತಿಸಿ ಐಸೊ ಆಮೈಲ್, ಐಸೊ ಬ್ಯೂಟೈಲ್, ನಾರ್ಮಲ್ ಪ್ರೊಪೈಲ್ ಮುಂತಾದ ಆಲ್ಕೊಹಾಲ್‍ಗಳನ್ನು ಕೊಡುತ್ತವೆ. ಇವುಗಳ ಮಿಶ್ರಣವೇ ಫ್ಯೂಸೆಲ್ ಆಯಿಲ್. ಅದರಿಂದ ಕೈಗಾರಿಕಾ ಪ್ರಾಮುಖ್ಯವಿರುವ ಅಮೈಲ್ ಆಲ್ಕೊಹಾಲ್ ತಯಾರಿಸಬಹುದು. ಇದು ಉಪಯುಕ್ತ ದ್ರಾವಕ. ಇದರ ಎಸ್ಟರಾದ ಅಮೈಲ್ ಅಸಿಟೇಟಿಗೆ ಬಾಳೆಯ ಹಣ್ಣಿನ ರುಚಿ ವಾಸನೆಗಳಿವೆ. ಆದ್ದರಿಂದ ಹಣ್ಣಿನ ಸಾರ ತಯಾರಿಕೆಯಲ್ಲಿ ಅದಕ್ಕೆ ಮಹತ್ತ್ವವಿದೆ.

ಆಲ್ಕೊಹಾಲ್ ತಯಾರಿಸುವ ಆಧುನಿಕ ಸಂಯೋಜನಾ ವಿಧಾನಗಳು : ಅಪರ್ಯಾಪ್ತ ಹೈಡ್ರೊಕಾರ್ಬನ್ನುಗಳಿಂದ ಆಲ್ಕೊಹಾಲನ್ನು ತಯಾರಿಸಬಹದೆಂದು ಹಿಂದೆಯೆ ತಿಳಿಸಿದೆಯಷ್ಟೆ. ಈ ತತ್ತ್ವದ ಆಧಾರದ ಮೇಲೆ ಕೆಳಕಂಡ ವಿಧಾನಗಳು ರೂಪಿತವಾಗಿವೆ:

**1. ಅಸಿಟಲೀನ್ ಅನಿಲದಿಂದ:** $60^{o}$ ಸೆಂ.ಗ್ರೇ. ನಲ್ಲಿರುವ ದುರ್ಬಲ ಸಲ್ಫ್ಯೂರಿಕ್ ಆಮ್ಲ ಮತ್ತು ಮರ್ಕ್ಯೂರಿಕ್ ಸಲ್ಫೇಟಿನ (ವೇಗವರ್ಧಕ)ಮಿಶ್ರಣದ ಮೂಲಕ ಒತ್ತಡದಲ್ಲಿ ಅಸಿಟಲೀನ್ ಹಾಯಿಸಲಾಗುವುದು. ಆಗ ಅದು ನೀರನ್ನು ಮಾತ್ರ ಹೀರಿಕೊಂಡು ಅಸಿಟಾಲ್ಡಿಹೈಡ್ ಆಗುತ್ತದೆ. ಇದನ್ನು ನಿಕಲ್ ವೇಗ ವರ್ಧಕದ ಸಂಪರ್ಕದಲ್ಲಿ $100^{o}$–$140^{o}$ ಸೆಂ.ಗ್ರೇ.ನಲ್ಲಿ ಹೈಡ್ರೊಜನ್‍ನಿಂದ ಅಪಕರ್ಷಿಸಿದರೆ ಎಥೆನಾಲ್ ಉಂಟಾಗುವುದು. ಈ ರಾಸಾಯನಿಕ ಕ್ರಿಯೆಗಳನ್ನು ಸಮೀಕರಣಗಳ ರೂಪದಲ್ಲಿ ಕೆಳಗೆ ಕೊಡಲಾಗಿದೆ :

$$CH \equiv CH \xrightarrow{H_2O} CH_3CHO \xrightarrow{H_2} CH_3CH_2OH$$

**2. ಎಥಿಲೀನ್ ಅನಿಲದಿಂದ:** ಪೆಟ್ರೋಲಿಯಂ ಹೈಡ್ರೊಕಾರ್ಬನ್ನುಗಳನ್ನು ವಿಭಜಿಸಿ ಪೆಟ್ರೋಲನ್ನು ತಯಾರಿಸುವಾಗ ಎಥಿಲೀನ್ ಉಪವಸ್ತುವಾಗಿ ಬರುತ್ತದೆ. ಇದನ್ನು $70^{o}$–$80^{o}$ ಸೆಂ.ಗ್ರೇ.ನಲ್ಲಿ ಚದರ ಇಂಚಿಗೆ 200–500 ಪೌಂಡುಗಳಷ್ಟು ಒತ್ತಡ ಹೇರಿ 98% ಸಲ್ಫ್ಯೂರಿಕ್ ಆಮ್ಲದ ಮೂಲಕ ಹಾಯಿಸಿದರೆ ಈಥೈಲ್ ಹೈಡ್ರೊಜನ್ ಸಲ್ಫೇಟಾಗುವುದು. ಇದಕ್ಕೆ ಸಮಾನ ಗಾತ್ರದ ನೀರನ್ನು ಸೇರಿಸಿದರೆ, ಆಲ್ಕೊಹಾಲ್ ಮತ್ತು ಕೊಂಚ ಈಥರ್ ಉತ್ಪತ್ತಿಯಾಗುವುವು. ಕುದಿಸಿದರೆ ಈಥರ್ ನಿವಾರಣೆಯಾಗುವುದು.

ಈ ಎರಡು ವಿಧಾನಗಳಿಂದ ಲಭ್ಯವಾದ, ಜಲಮಿಶ್ರಿತ ಆಲ್ಕೊಹಾಲನ್ನು ಕಾಫೆ ಸಾಂದ್ರಕದಲ್ಲಿ ಕುದಿಸುವುದರಿಂದ ಎಂದಿನಂತೆ ರೆಕ್ಟಿಫೈಡ್ ಸ್ಪಿರಿಟ್ ದೊರೆಯುವುದು.

**ಆಲ್ಕೊಹಾಲನ್ನು ಒಳಗೊಂಡ ಮಾದಕ ಪಾನೀಯಗಳು:** ಕಿಣ್ವನ ವಿಧಾನದಿಂದ ನೇರವಾಗಿ ತಯಾರಿಸಿದ ಮದ್ಯಗಳಲ್ಲಿ ಆಲ್ಕೊಹಾಲಿನ ಅಂಶ ಕಡಿಮೆ. ಬಟ್ಟಿ ಇಳಿಸಿದರೆ ಅದರ ಅಂಶ ಹೆಚ್ಚು. ಹೀಗೆ ಮಾದಕ ಪಾನೀಯಗಳನ್ನು ಬಟ್ಟಿ ಇಳಿಸದ ಮತ್ತು ಬಟ್ಟಿ ಇಳಿಸಿದ ಮದ್ಯಗಳೆಂದು ವಿಂಗಡಿಸುವುದು ವಾಡಿಕೆ. ಈ ಪಾನೀಯಗಳಲ್ಲಿ ಬಹ್ವಂಶ ನೀರು, ಬಣ್ಣ, ರುಚಿ ನೀಡುವ ವಸ್ತುಗಳನ್ನೂ ಸೇರಿಸಿರುವುದುಂಟು. ಪೋರ್ಟ್, ಷೆರ್ರೀ, ಷ್ಯಾಂಪೇನ್ ಎಂಬ ಪಾನೀಯಗಳು ವೈನಿಗೆ ಆಲ್ಕೊಹಾಲ್ ಸೇರಿಸಿದ ಮದ್ಯಗಳು. ಇವನ್ನು ಸಂರಕ್ಷಿತ ಮದ್ಯಗಳು (ಫಾರ್ಟಿಫೈಡ್ ಲಿಕರ್ಸ್) ಎನ್ನುತ್ತಾರೆ. ಮುಖ್ಯವಾದ ಮಾದಕ ಪಾನೀಯಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

| ಹೆಸರು | ಮೂಲ | ಆಲ್ಕೊಹಾಲಿನ ಶೇಕಡಾಂಶ |
|---|---|---|
| **ಬಟ್ಟಿ ಇಳಿಸಿದ ಮದ್ಯಗಳು** | | |
| ವಿಸ್ಕಿ | ಮಾಲ್ಟ್ | 35–40 |
| ರಮ್ | ಕಾಕಂಬಿ | 35–40 |
| ಬ್ರಾಂದಿ | ದ್ರಾಕ್ಷಾರಸ | 40–50 |
| ಜಿನ್ | ಮುಸುಕಿನ ಜೋಳ | ಸುಮಾರು 50 |
| **ಬಟ್ಟಿ ಇಳಿಸದ ಮದ್ಯಗಳು** | | |
| ಬಿಯರ್ | | 3–6 |
| ಏಲ್ } | ಮಾಲ್ಟ್ | |
| ವೈನ್‍ಗಳು | ದ್ರಾಕ್ಷಾರಸ | 8–12 |
| ಪೋರ್ಟ್ | | 14–20 |
| ಷೆರ್ರಿ } | ದ್ರಾಕ್ಷಾರಸ | |
| ಸಿಡರ್ | ಸೇಬಿನ ರಸ | 4–8 |

ಪಾನೀಯವಾಗಿ ಬಳಸುವ ಆಲ್ಕೊಹಾಲಿನ ಮೇಲೆ ಅಧಿಕ ತೆರಿಗೆ ವಿಧಿಸುತ್ತಾರೆ. ವೈಜ್ಞಾನಿಕ ಮತ್ತು ಗೃಹಬಳಕೆಗೆ ಒದಗಿಸುವ ಆಲ್ಕೊಹಾಲ್ ಅಗ್ಗ. ಇಂಥ ಆಲ್ಕೊಹಾಲನ್ನು ಪಾನೀಯವಾಗಿ ದುರುಪಯೋಗ ಮಾಡಿಕೊಳ್ಳುವ ಸಂಭವವಿದೆ. ಆದ್ದರಿಂದ ಅದನ್ನು ಪಾನತ್ಯಾಜ್ಯವನ್ನಾಗಿ ಮಾಡಲು ಕೆಲವು ಅಸಹ್ಯ ವಿಷವಸ್ತುಗಳನ್ನು ಸೇರಿಸುತ್ತಾರೆ. ಇವುಗಳ ಪೈಕಿ 10% ಮಿಥೆನಾಲ್, ಪಿರಡಿನ್, ಪೆಟ್ರೋಲಿಯಂ, ನ್ಯಾಫ್ತ, ವಲ್ಕನೈಸ್ಡ್ ರಬ್ಬರನ್ನು ಕಾಸಿ ಪಡೆದ ಕಾಟ್ ಚೌಸಿನ್ (ಭಾರತದಲ್ಲಿ ಬಳಸುವುದು ಇದನ್ನೇ) ಹೆಸರಿಸಬಹುದು.

ಇಂಧನ ಆಲ್ಕೊಹಾಲ್: ವಿಶ್ವದ ಪೆಟ್ರೋಲಿಯಂ ಸಂಗ್ರಹ ತೀರಿಹೋಗುತ್ತಿದೆ. ಸಂಯೋಜಿತ ಪೆಟ್ರೋಲ್ ಈ ಕೊರತೆಯನ್ನು ಸ್ವಲ್ಪ ನೀಗುತ್ತದೆ. ಬೆಂಜೀನ್ ಮತ್ತು ಆಲ್ಕೊಹಾಲ್ ಮಿಶ್ರಿತ ಪೆಟ್ರೋಲ್ ಉಪಯುಕ್ತ ಇಂಧನ. ಶುದ್ಧ ಆಲ್ಕೊಹಾಲ್ ಪೆಟ್ರೋಲಿನೊಡನೆ ಬೆರೆಯುತ್ತದೆ. ಆದರೆ ರೆಕ್ಟಿಫೈಡ್ ಸ್ಪಿರಿಟ್ ಬೆರೆಯುವುದಿಲ್ಲ. ಅದಕ್ಕಾಗಿ ಈಥರ್, ಬೆಂಜೀನ್ ಅಥವಾ ಟೆಟ್ರಲಿನ್ ಸೇರಿಸುತ್ತಾರೆ. ಜರ್ಮನಿ, ಇಟಲಿ ಮತ್ತು ಫ್ರಾನ್ಸ್ ದೇಶಗಳಲ್ಲಿ ಪೆಟ್ರೋಲಿಗೆ 20–30% ಆಲ್ಕೊಹಾಲನ್ನು ಸೇರಿಸಲೇಬೇಕೆಂಬ ನಿಯಮವಿದೆ. ಭಾರತದ ಪೆಟ್ರೋಲಿಯಂ ನಿಕ್ಷೇಪವೂ ಸೀಮಿತವಾಗಿದೆ. ಕಾಕಂಬಿಯಿಂದ ಆಲ್ಕೊಹಾಲ್ ತಯಾರಿಸಿದರೆ ಪರಿಸ್ಥಿತಿ ಸುಧಾರಿಸೀತು.

ಪ್ರೂಫ್ ಸ್ಪಿರಿಟ್: ಈ ಪದ ಹುಟ್ಟಿದ್ದು ಹೀಗೆ. ಕೋವಿ ಮದ್ದಿನ (ಗನ್ ಪೌಡರ್) ಮೇಲೆ ವಿಸ್ಕಿ ಸುರಿದು ಅನಂತರ ಅದನ್ನು ಹೊತ್ತಿಸಲಾಗುತ್ತಿತ್ತು. ಆಲ್ಕೊಹಾಲೆಲ್ಲ ದಹಿಸಿದ ಒಡನೆ ಕೋವಿಮದ್ದೂ ಹೊತ್ತಿಕೊಂಡರೆ ವಿಸ್ಕಿಯಲ್ಲಿ ಅಷ್ಟೇನೂ ನೀರಿಲ್ಲವೆಂಬುದಕ್ಕೆ ಇದು ಸಾಕ್ಷಿ ಎಂದು ಪರಿಗಣಿಸಲಾಗುತ್ತಿತ್ತು. ಆದ್ದರಿಂದ ಘನ ಅಳತೆಗಳಲ್ಲಿ 57.1% ಇರುವ ಆಲ್ಕೊಹಾಲನ್ನು 'ಪ್ರೂಫ್' ಸ್ಪಿರಿಟ್ ಎಂದು ಕರೆದರು. ಈ ಪದಪ್ರಯೋಗ ಇನ್ನೂ ರೂಢಿಯಲ್ಲಿದೆ.

ಆಲ್ಕೊಹಾಲಿಗೆ ನೀರು ಬೆರೆತಾಗ ಗಾತ್ರ ಕುಗ್ಗುತ್ತದೆ. ವಿವಿಧ ಪ್ರಮಾಣದ ಆಲ್ಕೊಹಾಲ್–ನೀರಿನ ಮಿಶ್ರಣಗಳ ಸಾಪೇಕ್ಷ ಸಾಂದ್ರತೆಯನ್ನು ಸೂಚಿಸುವ ಕೋಷ್ಟಕಗಳಿವೆ. ಪ್ರಯೋಗಕ್ಕೆ ಒಳಪಟ್ಟ ಆಲ್ಕೊಹಾಲಿನ ಸಾಪೇಕ್ಷ ಸಾಂದ್ರತೆಯನ್ನು ಕಂಡುಹಿಡಿದು ಕೋಷ್ಟಕದ ಸಹಾಯದಿಂದ ಅದರಲ್ಲಿರುವ ಜಲಾಂಶವನ್ನು ನಿಖರವಾಗಿ ತಿಳಿಯಬಹುದು. ಸೇಂದಿ ಇಲಾಖೆಯವರು ಒಂದು ಬಗೆಯ ಹೈಡ್ರೊಮೀಟರ್ ಉಪಯೋಗಿಸುತ್ತಾರೆ. ಅದು ಆಲ್ಕೊಹಾಲಿನ ಸೇಕಡಾಂಶವನ್ನು ಪ್ರೂಫ್ ಸ್ಪಿರಿಟ್ ಮಾನದಲ್ಲಿ ನೇರವಾಗಿ ಅಳೆದು

ತೋರಿಸುತ್ತದೆ. ಇದನ್ನು ಅವಲಂಬಿಸಿ ತೆರಿಗೆ ವಿಧಿಸುತ್ತಾರೆ. ಪ್ರೂಫ್ ಸ್ಪಿರಿಟ್ಟಿನಲ್ಲಿ ಗಾತ್ರಾನುಸಾರ 57.1% ಆಲ್ಕೊಹಾಲಿರುತ್ತದೆ. ಅದರ ಸಾಪೇಕ್ಷ ಸಾಂದ್ರತೆ $60^o$ ಫ್ಯಾ.ನಲ್ಲಿ 0.91976. ಆಲ್ಕೊಹಾಲಿನ ಪ್ರಬಲತೆಯನ್ನು ಇಂತಿಷ್ಟು ಡಿಗ್ರಿ ಅಂಡರ್ ಅಥವಾ ಓವರ್ ಪ್ರೂಫ್ ಎಂದು ನಮೂದಿಸುತ್ತಾರೆ. 10% ಓವರ್ ಪ್ರೂಫ್ ಎಂದರೆ 100 ಘ.ಸೆಂ.ಮೀ. ಆಲ್ಕೊಹಾಲ್ 110 ಘ.ಸೆಂ.ಮೀ. ಪ್ರೂಫ್ ಸ್ಪಿರಿಟ್ಟಿಗೆ ಸಮನೆಂದೂ, 10% ಅಂಡರ್ ಪ್ರೂಫ್ ಎಂದರೆ 90 ಘ.ಸೆಂ.ಮೀ. ಪ್ರೂಫ್ ಸ್ಪಿರಿಟ್ಟಿಗೆ ಸಮನೆಂದೂ ತಾತ್ಪರ್ಯ. ಆಲ್ಕೊಹಾಲಿನ ಪ್ರಬಲತೆಯನ್ನು ನಿರ್ಣಯಿಸುವ ಕ್ರಮಕ್ಕೆ ಆಲ್ಕೊಹಾಲೊಮೆಟ್ರಿ (ನೋಡಿ) ಎಂದು ಹೆಸರು.

ಸಾಮಾನ್ಯ ಗುಣಗಳು: ಮಿಥೆನಾಲಿನಂತೆ ನಿರ್ವರ್ಣವಾದ, ದಾಹಕ ರುಚಿಯುಳ್ಳ, ಸುಲಭವಾಗಿ ಆವಿಯಾಗುವ ದ್ರವ. ನೀರಿಗಿಂತ ಹಗುರ (ಸಾಪೇಕ್ಷ ಸಾಂದ್ರತೆ 0.789). ಅದರೊಡನೆ ಎಲ್ಲ ಪ್ರಮಾಣದಲ್ಲೂ ಬೆರೆಯುವುದು. ಆಗ ಉಷ್ಣ ನಿರ್ಗಮಿಸಿ ಗಾತ್ರ ಕುಗ್ಗುವುದು. –114$^o$ ಸೆಂ. ಗ್ರೇಡಿನಲ್ಲಿ ಘನೀಭವಿಸುವುದು. ಆದ್ದರಿಂದ ಅತಿಶೈತ್ಯವನ್ನು ಅಳೆಯುವ ಉಷ್ಣಮಾಪಕಗಳಲ್ಲಿ ಬಳಸುವರು. ಸಾವಯವ ವಸ್ತುಗಳಿಗೆ ಉತ್ತಮ ದ್ರಾವಕವಾದ್ದರಿಂದ ಔಷಧ ಕೈಗಾರಿಕೆಯಲ್ಲಿ ಇದಿಲ್ಲದೆ ಕೆಲಸ ಸಾಗದು. ಹೊತ್ತಿಸಿದರೆ ತಿಳಿನೀಲಿ ಜ್ವಾಲೆಯಿಂದ ಉರಿಯುತ್ತದೆ.

ಉಪಯೋಗಗಳು: ಇದರಿಂದ ಈಥರ್, ಎಥಲೀನ್, ಕ್ಲೋರೊಫಾರಂ, ಅಸಿಟಿಕ್ ಆಮ್ಲ ಇತ್ಯಾದಿಗಳನ್ನು ತಯಾರಿಸಬಹುದು. ಮೇಲ್ಕಂಡ ಪ್ರತಿಯೊಂದು ವಸ್ತುವಿಗೂ ವಿಶಿಷ್ಟ ಉಪಯೋಗವಿದೆ. ಪಾರಕ ಸಾಬೂನುಗಳು, ಕೇಶಮಾರ್ಜಕಗಳು, ಸುಗಂಧಗಳು, ವಾರ್ನಿಷ್ ಮತ್ತು ಲ್ಯಾಕರ್‌ಗಳು, ಹಣ್ಣಿನಸಾರಗಳು, ಟಾನಿಕ್ಕುಗಳು ಮೊದಲಾದ ಅಸಂಖ್ಯಾತ ವಸ್ತುಗಳ ನಿರ್ಮಾಣದಲ್ಲಿ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ಕ್ರಿಮಿನಾಶಕವಾಗಿ 70% ಆಲ್ಕೊಹಾಲ್ ಉಪಯೋಗವಾಗುತ್ತಿದೆ.

ಆಲ್ಕೊಹಾಲ್ ಮತ್ತು ಆರೋಗ್ಯ: ಉತ್ತೇಜಕ ಪಾನೀಯವಾಗಿ ವಿಶ್ವಾದ್ಯಂತ ಇದರ ಆರಾಧಕರಿದ್ದಾರೆ. ವಾಸ್ತವವಾಗಿ ಅದು ಕೇಂದ್ರ ನರಮಂಡಲವನ್ನು ಕುಂಠಿತಗೊಳಿಸುತ್ತದೆ. ಉನ್ನತ ನರಕೇಂದ್ರಗಳ ಸಂಯಮವನ್ನು ತಪ್ಪಿಸುವುದರಿಂದ ತಾತ್ಕಾಲಿಕವಾಗಿ ಉಲ್ಲಸಿತ ಭಾವನೆಯುಂಟಾಗುತ್ತದೆ. ಸಾಕಷ್ಟು ಆಲ್ಕೊಹಾಲ್ ಕುಡಿದರೆ, ಹೃದಯದ ಬಡಿತ ಮತ್ತು ರಕ್ತದ ಒತ್ತಡ ಹೆಚ್ಚುತ್ತದೆ. ಚೇತೋಹಾರಿಯಾಗಿ ಬ್ರಾಂದಿಯನ್ನು ಕುಡಿಸುವುದು ಈ ಕಾರಣದಿಂದಲೇ. ಊಟಕ್ಕೆ ಮುಂಚೆ ಆಲ್ಕೊಹಾಲ್ ಕುಡಿದರೆ ಜಠರರಸದ ಉತ್ಪನ್ನ ಹೆಚ್ಚಿಸಿ ಆಹಾರ ಪಚನಕ್ಕೆ ನೆರವಾಗುತ್ತದೆ. ಬೇಗ ರಕ್ತಗತವಾಗಿ ಅಂಗಾಂಶಗಳಲ್ಲಿ ಉತ್ಕರ್ಷಿತವಾಗುವುದರಿಂದ ಅದಕ್ಕೆ ಶಕ್ತಿ ಒದಗಿಸುವ ಆಹಾರದ ಗುಣವಿದೆ ಎನ್ನಬಹುದು. ದೇಹಶಕ್ತಿ ಒದಗಿಸುವುದರಲ್ಲಿ 78 ಗ್ರಾಂ ಕೊಬ್ಬಿಗೆ 100 ಗ್ರಾಂ ಆಲ್ಕೊಹಾಲ್ ಸಮ. ಆದರೆ ಜಠರ ಮತ್ತು ಕರುಳಿನಲ್ಲಿ ಗ್ಲೂಕೋಸ್, ಅಮೈನೊ ಆಮ್ಲಗಳು ಮತ್ತು ಪಚನವಾದ ಕೊಬ್ಬುಗಳು ರಕ್ತಗತವಾಗುವುದಕ್ಕೆ ಇದು ಅಡ್ಡಿಯಾಗುತ್ತದೆ. ಆಲ್ಕೊಹಾಲಿನ ದೀರ್ಘ ಉಪಯೋಗದಿಂದ ಜಠರದ ಹುಣ್ಣು ಮತ್ತು ಇತರ ರೋಗಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಯಾವ ಒಂದು ರೋಗಕ್ಕೂ ಅದು ಮದ್ದಲ್ಲ.**(ನೋಡಿ– ಕುಡುಕುತನ)**

**ಇತರ ಮಾನೊಹೈಡ್ರಿಕ್ ಆಲ್ಕೊಹಾಲ್‌ಗಳು** : 1. ಪ್ರೋಪೈಲ್ ಆಲ್ಕೊಹಾಲ್‌ಗಳು : ಇದರಲ್ಲಿ ಎರಡು ವಿಧ. ನಾರ್ಮಲ್ ಪ್ರೋಪೈಲ್ ಆಲ್ಕೊಹಾಲನ್ನು ಫ್ಯೂಸಲ್ ಆಯಿಲ್‌ನಿಂದ ಮಾಡಿಕೊಳ್ಳಬಹುದು. ಅಸಿಟೋನನ್ನು ಸೋಡಿಯಂ ಅಮಾಲ್ಗಂನಿಂದ ಅಪಕರ್ಷಿಸಿದರೆ ಐಸೊಪ್ರೊಪೈಲ್ ಆಲ್ಕೊಹಾಲ್ ಬರುತ್ತದೆ. ಎರಡೂ ವಿಷವಸ್ತುಗಳು. ಮೋಟಾರ್ ವಾಹನದ ರೇಡಿಯೇಟರಿನಲ್ಲಿರುವ ನೀರು ಹೆಪ್ಪುಗಟ್ಟದಂತೆ ತಡೆಯಬಲ್ಲವು . ಇವುಗಳ ಅಣುಸೂತ್ರ ಮತ್ತು ರಚನೆ ಕೆಳಕಂಡಂತಿವೆ :




2, ಬ್ಯೂಟೈಲ್ ಆಲ್ಕೊಹಾಲ್‌ಗಳು: ಇದರಲ್ಲಿ ನಾಲ್ಕು ವಿಧಗಳಿವೆ. ನಾರ್ಮಲ್ ಬ್ಯುಟೆನಾಲ್ ಅನೇಕ ಪ್ಲಾಸ್ಟಿಕ್ ಮತ್ತು ಅಂಟುಗಳಿಗೆ ಉತ್ತಮ ದ್ರಾವಕ. ಇದರ ಅಣುಸೂತ್ರ ($CH_3.CH_2.CH_2.CH_2.OH$). ಪಿಷ್ಟ ಪದಾರ್ಥಗಳು ವಿಶಿಷ್ಟಬ್ಯಾಕ್ಟೀರಿಯಾದ ಸಂಪರ್ಕದಲ್ಲಿ ಕಿಣ್ವನವಾದಾಗ ಇದು ಉತ್ಪತ್ತಿಯಾಗುತ್ತದೆ. ಬೇಗ ಒಣಗುವ ನೈಟ್ರೋ ಸೆಲ್ಯುಲೋಸ್ ಪೇಂಟುಗಳು ಮತ್ತು ಲ್ಯಾಕರುಗಳಿಗೆ ಇದು ಲೀನಕಾರಿಯಾಗಿದೆ. ಬ್ಯೂಟೈಲ್ ಅಸಿಟೇಟ್ ಒಂದು ಹಣ್ಣಿನ ಸಾರ. ಐಸೊಬ್ಯೂಟೈಲ್ ಆಲ್ಕೊಹಾಲನ್ನು ಫಿಷರ್–ಟ್ರೋಷ್ ವಿಧಾನದಿಂದ ನಿಕಲ್ ವೇಗವರ್ಧಕ ಬಳಸಿ ಮಾಡಿಕೊಳ್ಳಬಹುದು.




ಐಸೊಬ್ಯೂಟೈಲ್ ಆಲ್ಕೊಹಾಲಿನಿಂದ ಕೃತಕ ಕಸ್ತೂರಿಯನ್ನು ತಯಾರಿಸುತ್ತಾರೆ. ಸೆಕೆಂಡರಿ ಬ್ಯೂಟೇನಾರ್ ಸಹ ಉತ್ತಮ ದ್ರಾವಕ.




ಇದರಿಂದ ಹೈಡ್ರೊಜನ್ನಿನ ಒಂದಂಶವನ್ನು ತೆಗೆದು ಹಾಕಿದರೆ ಉತ್ತಮ ದ್ರಾವಕವಾದ ಮೀಥೈಲ್ ಈಥೈಲ್ ಕೀಟೋನ್ ಲಭಿಸುತ್ತದೆ. ಟರ್ಷಿಯರಿ ಬ್ಯೂಟೆನಾಲನ್ನು ಸಹ ದ್ರಾವಕವಾಗಿ (ಸಾಲ್ವೆಂಟ್) ಬಳಸಲಾಗುತ್ತಿದೆ.

3. ಅಮೈಲ್ ಆಲ್ಕೊಹಾಲ್‌ಗಳು : ಕಾರ್ಬನ್ ಪರಮಾಣುಗಳ ಜೋಡಣೆಗೆ ಅನುಗುಣವಾಗಿ ಎಂಟು ವಿಧವಾದ ಅಮೈಲ್ ಆಲ್ಕೊಹಾಲುಗಳಿವೆ. ಇವುಗಳ ಅಣುಸೂತ್ರ ($C_5H_{11}.OH$). ಅವುಗಳ ಪೈಕಿ ಎರಡು ಫ್ಯೂಸೆಲ್ ಆಯಿಲ್‌ನಲ್ಲಿದೆ. ಅಮೈಲ್ ಅಸಿಟೇಟ್ ಇದರ ಎಸ್ಟರು. ದ್ರಾವಕ ಮತ್ತು ಹಣ್ಣಿನ ಸಾರವಾಗಿ ಅದಕ್ಕೆ ಮಹತ್ತ್ವವಿದೆ. (ಎಚ್.ಜಿ.ಎಸ್.)

**ಆಲ್ಕೊಹಾಲ್ ಪಾನೀಯಗಳು:** ಇವುಗಳಲ್ಲಿ ಕಿಣ್ವಿಸಿದ (ಫರ್ಮೆಂಟೆಡ್) ಮತ್ತು ಬಟ್ಟಿ ಇಳಿಸಿದ ಪಾನೀಯಗಳು ಎಂದು ಎರಡು ವರ್ಗಗಳಿವೆ. ಬಟ್ಟಿ ಇಳಿಸಿದ ಮದ್ಯಗಳ ಬಗ್ಗೆ ಮಾತ್ರ ಇಲ್ಲಿ ವಿವೇಚಿಸಲಾಗಿದೆ. ಬ್ರಾಂದಿ, ಜಿನ್, ರಮ್, ವಿಸ್ಕಿ ಮತ್ತು ವೋಡ್ಕಾಗಳು ಇಂಥ ಪಾನೀಯಗಳ ಪೈಕಿ ಮುಖ್ಯವಾದುವು. ಆಲ್ಕೊಹಾಲನ್ನು ಒಳಗೊಂಡ ಪಾನೀಯಗಳ ಮೇಲೆ ತೆರಿಗೆ ಹೆಚ್ಚು. ಆದ್ದರಿಂದ ವಿಶ್ವಾದ್ಯಂತ ಎಲ್ಲ ರಾಜ್ಯಸರ್ಕಾರಗಳಿಗೂ ಇದೊಂದು ಆಕರ್ಷಕ ವರಮಾನದ ಮೂಲ. ಅನೇಕ ನಿರ್ಬಂಧ ಮತ್ತು ನಿಯಂತ್ರಣಗಳಿಗೆ ಒಳಗಾದ ಉದ್ಯಮವಿದು. ಮದ್ಯ ತಯಾರಿಕೆಯನ್ನು ರಾಷ್ಟ್ರೀಕರಣ ಮಾಡಿರುವ ದೇಶಗಳೂ ಇವೆ. ರಹದಾರಿ ಇಲ್ಲದೆ ಯಾರೂ ಬಟ್ಟಿಯನ್ನು ನಡೆಸುವಂತಿಲ್ಲ. ನಿಯಮಗಳನ್ನು ಕಿಂಚಿತ್ತು ಉಲ್ಲಂಘಿಸಿದರೂ ರಹದಾರಿಯನ್ನು ರದ್ದುಪಡಿಸಲಾಗುವುದು. ಯಾವ ಗಳಿಗೆಯಲ್ಲಾದರೂ ಸರ್ಕಾರದ ಪ್ರತಿನಿಧಿ ಅನಿರೀಕ್ಷಿತವಾಗಿ ಬಟ್ಟಿಯನ್ನು ತನಿಖೆ ಮಾಡಲು ಶಾಸನದಲ್ಲಿ ಅವಕಾಶವಿದೆ. ಈ ಪಾನೀಯಗಳನ್ನು ಕಲಬೆರಕೆ ಮಾಡಿ ಮಾರುವ ಸಂಭವ ಇರುವುದರಿಂದ ಅದರ ವಿರುದ್ಧ ಕಾನೂನಿನ ರಕ್ಷಣೆಯಿದೆ. ಮಾದಕ ಪಾನೀಯಗಳು ಬಳಕೆಗೆ ಬಂದ ಕಾಲ, ದೇಶ ಮತ್ತು ಸನ್ನಿವೇಶಗಳನ್ನು ಕುರಿತ ಐತಿಹಾಸಿಕ ದಾಖಲೆಗಳು ಸ್ಪಷ್ಟವಾಗಿಲ್ಲ. ಸ್ಥೂಲ ವಿವರಗಳು ಕೆಳಕಂಡಂತಿವೆ.

| ಕಾಲ | ದೇಶ | ಕಚ್ಚಾವಸ್ತು | ಹುಳಿ ಬರಿಸಿದ ಪಾನೀಯ | ಬಟ್ಟಿ ಇಳಿಸಿದ ಪಾನೀಯ |
|---|---|---|---|---|
| – | ಚೀನ | ಅಕ್ಕಿ ಮತ್ತು ಮಿಲೆಟ್ | ಚೂ | ಸಾಚೂ |
| ಕ್ರಿ.ಪೂ. 800 | ಭಾರತ ಮತ್ತು ಸಿಂಹಳ | ಅಕ್ಕಿ, ಕಾಕಂಬಿ, ತಾಳೆ ಬೆಲ್ಲ, ಈಚಲ ಮತ್ತು ತೆಂಗಿನ ನೀರ | ಹೆಂಡ | ಸಾರಾಯಿ |
| – | ಜಪಾನ್ | ಅಕ್ಕಿ | ಸ್ಯಾಕೆ | ಸೋಚು |
| ಕ್ರಿ.ಶ. 500 | ಬ್ರಿಟನ್ | ಜೇನುತುಪ್ಪ | ಮೀಡ್ | ಮೀಡ್ |
| ಕ್ರಿ.ಶ. 1000 | ಇಟಲಿ | ದ್ರಾಕ್ಷಿ ಹಣ್ಣು | ವೈನ್ | ಬ್ರಾಂದಿ |
| ಕ್ರಿ.ಶ. 1100 | ಐರ್ಲೆಂಡ್ | ಬಾರ್ಲಿ ಮತ್ತು ಓಟ್ಸ್ | ಬಿಯರ್ | ಅಸ್ಕ್ವಿಬಾ |
| ಕ್ರಿ.ಶ. 1200 | ಸ್ಪೇನ್ | ದ್ರಾಕ್ಷಿ ಹಣ್ಣು | ವೈನ್ | ವಿನಿಜಲ |
| ಕ್ರಿ.ಶ. 1300 | ಫ್ರಾನ್ಸ್ | ದ್ರಾಕ್ಷಿ ಹಣ್ಣು | ವೈನ್ | ಕೊನ್ಯಾಕ್ |
| ಕ್ರಿ.ಶ. 1500 | ಸ್ಕಾಟ್‌ಲೆಂಡ್ | ಮೊಳೆತ ಬಾರ್ಲಿ | ಬಿಯರ್ | ವಿಸ್ಕಿ |

ಮೇಲಿನ ಪಟ್ಟಿಯ ಪರಿಶೀಲನೆಯಿಂದ ಒಂದು ಮುಖ್ಯ ತತ್ತ್ವ ವ್ಯಕ್ತವಾಗುತ್ತದೆ. ಮದ್ಯ ತಯಾರಿಕೆಗೆ, ಸಕ್ಕರೆಯ ಅಂಶವಿರುವ ಜೇನುತುಪ್ಪ, ಮಾಗಿದ ಹಣ್ಣುಗಳು, ಕಬ್ಬು, ಬೀಟ್‌ಗೆಡ್ಡೆ, ಹಾಲು ಅಥವಾ ಸುಲಭವಾಗಿ ಸಕ್ಕರೆಯಾಗಬಲ್ಲ ಯಾವುದಾದರೂ ಪಿಷ್ಟ ಪದಾರ್ಥ ಅಗತ್ಯ. ಸಾಮಾನ್ಯವಾಗಿ ಪಿಷ್ಟ ಪದಾರ್ಥಗಳಲ್ಲಿ ಅವನ್ನು ಸಕ್ಕರೆಯಾಗಿ ಮಾರ್ಪಡಿಸಲು ಶಕ್ತವಾದ ಪ್ರೇರಕ ವಸ್ತುಗಳೂ ಇರುವುದು ಒಂದು ಆಕಸ್ಮಿಕ ಸುಯೋಗ. ಹಾಗಿಲ್ಲದಿರುವ ಸಂದರ್ಭಗಳಲ್ಲಿ (ಉದಾಹರಣೆಗೆ ಆಲೂಗೆಡ್ಡೆಯ ಪಿಷ್ಟ) ಸಾಕಷ್ಟು ಮೊಳೆತ ಧಾನ್ಯವನ್ನು ಕೂಡಿಸಬೇಕಾಗುತ್ತದೆ. ಪಿಷ್ಟವನ್ನು ಸಕ್ಕರೆಗೆ ಮತ್ತೆ ಅದನ್ನು ಆಲ್ಕೊಹಾಲಿಗೆ ಪರಿವರ್ತಿಸಿಸುವ ಇಂಥ ಪ್ರೇರಕ ವಸ್ತುಗಳಿಗೆ ಕಿಣ್ವಗಳೆಂದು (ಎನ್‌ಜೈಮ್ಸ್) ಹೆಸರು. ಅವು ದ್ರಾವ್ಯವಾದ ಪ್ರೋಟೀನ್ ವಸ್ತುಗಳು; ವೇಗವರ್ಧಕಗಳಂತೆ ವರ್ತಿಸುತ್ತವೆ. ಹೈಡ್ರೊಸಯನಿಕ್ ಆಮ್ಲ,

ಪಾದರಸದ ಲವಣಗಳು ಮತ್ತು ಫಾರ್ಮಲಿನ್ ಇತ್ಯಾದಿಗಳ ಸಂಪರ್ಕದಲ್ಲೂ ಮತ್ತು ಉಷ್ಣ ವ್ಯತ್ಯಾಸದಿಂದಲೂ ನಿಷ್ಕ್ರಿಯವಾಗುತ್ತವೆ. ಒಂದೊಂದು ಕಿಣ್ವವೂ ನಿರ್ದಿಷ್ಟ ವಸ್ತುವಿನ ಮೇಲೆ ಮಾತ್ರ ಪ್ರಭಾವ ಬೀರುತ್ತದೆ. ಅವುಗಳ ವ್ಯಾಪ್ತಿ ಪೂರ್ವ ನಿಯೋಜಿತವಾದಂತಿದೆ. ಪಿಷ್ಟವನ್ನು ಡೆಕ್ಸ್ಟ್ರಿನ್ ಮೂಲಕ ಮಾಲ್ಟೋಸ್ ಸಕ್ಕರೆಗೆ ಪರಿವರ್ತಿಸುವ ಅಮೈಲೇಸ್ ಕಿಣ್ವ, ಮಾಲ್ಟೋಸನ್ನು ಡೆಕ್ಸ್ಟ್ರೋಸಾಗಿ ಮಾಡುವ ಮಾಲ್ಟೇಸ್ ಕಿಣ್ವ, ಡೆಕ್ಸ್ಟ್ರೋಸನ್ನು ಆಲ್ಕೊಹಾಲ್ ಮತ್ತು ಕಾರ್ಬನ್ ಡೈಆಕ್ಸೈಡಿಗೆ ಬದಲಾಯಿಸುವ ಜೈಮೇಸ್ ಕಿಣ್ವಗಳನ್ನು ಪ್ರಕೃತ ಸಂದರ್ಭದಲ್ಲಿ ಉದಾಹರಿಸಬಹುದು. ಈ ಕ್ರಿಯೆಗಳು ಜಲಮಾಧ್ಯಮದಲ್ಲಿ ಸರಾಗವಾಗಿ ನಡೆಯುವುದು ವಿಶೇಷ ಸಂಗತಿ. ಅಮೈಲೇಸ್ ಮತ್ತು ಮಾಲ್ಟೇಸ್ ಕಿಣ್ವಗಳು ಮೊಳೆತ ಧಾನ್ಯಗಳಲ್ಲೂ ಮತ್ತು ಜೈಮೇಸ್ ಕಿಣ್ವ ಯೀಸ್ಟ್ ಸಸ್ಯದಲ್ಲೂ ಇರುವುದರಿಂದ, ಮಿತವ್ಯಯದಿಂದ ಮದ್ಯ ತಯಾರಿಕೆ ಸಾಧ್ಯವಾಗಿದೆ. ಧಾನ್ಯಗಳಿಂದ ಹಾಗೂ ಸಕ್ಕರೆಯ ಅಂಶವಿರುವ ಇತರ ವಸ್ತುಗಳನ್ನು ಹುಳಿ ಬರಿಸಿ ಆಲ್ಕೊಹಾಲ್ ತಯಾರಿಸುವ ವಿಧಾನವನ್ನು ಈಥೈಲ್ ಅಲ್ಕೊಹಾಲ್ ಎಂಬ ಶಿರೋನಾಮೆಯಲ್ಲಿ ವಿವರಿಸಲಾಗಿದೆ.

ಬಟ್ಟಿ ಇಳಿಸುವ ಕ್ರಮ: ಹುಳಿಬರಿಸುವ ವಿಧಾನದಿಂದ ದೊರೆತ ಮದ್ಯಸಾರಕ್ಕೆ ವಾಷ್ ಎನ್ನುವರು. ಇದರಲ್ಲಿ ಸಾಮಾನ್ಯವಾಗಿ 8–10% ಭಾಗ ಆಲ್ಕೊಹಾಲ್ ಇರುತ್ತದೆ. ಇದರಲ್ಲಿರುವ ನೀರಿನ ಭಾಗವನ್ನು ಕಡಿಮೆ ಮಾಡುವುದೇ ಸಾಂದ್ರೀಕರಣದ ಉದ್ದೇಶ. ಆಲ್ಕೊಹಾಲ್ ಮತ್ತು ನೀರಿನ ಕುದಿಯುವ ಬಿಂದುಗಳು ಕ್ರಮವಾಗಿ 78.3% ಸೆ. ಮತ್ತು $100^{o}$ ಸೆ. ಆಲ್ಕೊಹಾಲ್ ಮತ್ತು ನೀರಿನ ಮಿಶ್ರಣವನ್ನು $78.3^{o}$–$100^{o}$ ಸೆ. ಉಷ್ಣತೆಯ ಮಿತಿಯಲ್ಲಿ ಕುದಿಸಿದರೆ ಆಲ್ಕೊಹಾಲಿನ ಅಂಶ ಹೆಚ್ಚಾಗಿರುವ ಮಿಶ್ರಣ ಬಟ್ಟಿ ಇಳಿಯುತ್ತದೆ. ಆಲ್ಕೊಹಾಲಿನಲ್ಲಿರುವ ನೀರಿನ ಭಾಗವನ್ನು ಹೆಪ್ಪುಗಟ್ಟಿಸಿಯೂ ತೆಗೆಯಬಹುದು. ಇದಕ್ಕಿಂತ ಮೊದಲನೆಯ ವಿಧಾನ ಉತ್ತಮ. ಬಟ್ಟಿ ಇಳಿಸಿದ ಪಾನೀಯಗಳಲ್ಲಿರುವ ಪ್ರಧಾನ ಅಂಶಗಳು ನೀರು ಮತ್ತು ಆಲ್ಕೊಹಾಲ್ ಆದರೂ ಕೇವಲ ಇವೆರಡರ ಮಿಶ್ರಣ ಮಾತ್ರದಿಂದ ಅವು ಆಕರ್ಷಕ ಪಾನೀಯವಾಗಲಾರವು. ಅವುಗಳಲ್ಲಿರುವ ಇತರ ವಸ್ತುಗಳು ಮದ್ಯಕ್ಕೆ ವಿಶಿಷ್ಟ ಗುಣ ನೀಡುವುವು. ಈ ಅಪ್ರಧಾನ ಅಂಶಗಳಿಗೆ ಸಹಜಾತ ವಸ್ತುಗಳು (ಕಂಜೀನರ್ಸ್) ಎಂದು ಹೆಸರು. ಅವುಗಳಲ್ಲಿ ಉನ್ನತ ಆಲ್ಕೊಹಾಲ್‌ಗಳು ಆಲ್ಡಿಹೈಡುಗಳು, ಈಥರ್‌ಗಳು, ಎಸ್ಟರುಗಳು, ಅವ್ಯಾಸಕ್ತ ಆಮ್ಲಗಳು, ಫರ್‌ಫ್ಯುರಾಲ್ ಮತ್ತು ಇತರ ಆರ್ಗ್ಯಾನಿಕ್ ವಸ್ತುಗಳಿರುತ್ತವೆ. ಮದ್ಯದ ರುಚಿ ಮತ್ತು ಮಾಧುರ್ಯವನ್ನು ಹೆಚ್ಚಿಸುವುದರಲ್ಲಿ, ಇವು ಮಹತ್ತ್ವ ಪಾತ್ರ ವಹಿಸುತ್ತವೆ. ಅವುಗಳ ಪ್ರಮಾಣವನ್ನು ಹೆಚ್ಚು ಕಡಿಮೆ ಮಾಡಿದರೆ ಮದ್ಯಕ್ಕೆ ಅಪೇಕ್ಷಿತ ರುಚಿ ಮತ್ತು ವಾಸನೆಗಳು ಪ್ರಾಪ್ತವಾಗುವುವು. ಸಾಂದ್ರೀಕರಣದ ಮೂಲೋದ್ದೇಶವೂ ಇದೇ ಆಗಿದೆ.



ಚಿತ್ರ. 1 ಟಿಬೆಟ್‌ನಲ್ಲಿ ಉಪಯೋಗಿಸುತ್ತಿದ್ದ ಸಾಂದ್ರಕದ ಪುರಾತನ ರೂಪ



ಚಿತ್ರ. 2 ಪೆರುವಿನಲ್ಲಿ ಉಪಯೋಗಿಸುತ್ತಿದ್ದ ಸಾಂದ್ರಕದ ಪುರಾತನ ರೂಪ

ಪ್ರಾಚೀನ ವಿಧಾನಗಳು: ಕುದಿಯುತ್ತಿರುವ ದ್ರವದಿಂದ ಬಿಸಿಯಾದ ಆವಿ ಹೊರ ಬೀಳುತ್ತದೆ. ಅದಕ್ಕೆ ತಣ್ಣನೆಯ ಪಾತ್ರೆಯನ್ನು ಹಿಡಿದರೆ ಅದರ ಹೊರಮೈ ಮೇಲೆ ದ್ರವದ ಹನಿಗಳು ಕೂಡಿಕೊಳ್ಳುತ್ತವೆ. ಅವನ್ನು ಆಗಿಂದಾಗ್ಗೆ ಸಂಗ್ರಹಿಸುವುದು ಪದ್ಧತಿಯಾಗಿತ್ತು. ತರುವಾಯ ಇದಕ್ಕಾಗಿ ತಣ್ಣೀರು ತುಂಬಿದ ಬೋಗುಣಿಯನ್ನು ಉಪಯೋಗಿಸುವುದು ಪ್ರಾರಂಭವಾಯಿತು. ಟಿಬೆಟ್ ಮತ್ತು ಭೂತಾನಿನಲ್ಲಿ ಉಪಯೋಗಿಸುತ್ತಿದ್ದ ಇಂಥ ಮಾದರಿ ಸಾಂದ್ರಕವನ್ನು ಚಿತ್ರ 1ರಲ್ಲಿ ತೋರಿಸಲಾಗಿದೆ. ಪೆರು ದೇಶೀಯರು ಇದಕ್ಕೋಸ್ಕರ ನೀಳವಾದ ಕೊಳವೆಯನ್ನು ಬಳಸುತ್ತಿದ್ದರು. ಬಿಸಿಯಾದ ಆವಿ, ಅದರ ಮೂಲಕ ಹಾದು ಬೇರೊಂದು ಸಂಗ್ರಾಹಕದಲ್ಲಿ ದ್ರವರೂಪ ತಳೆಯುತ್ತಿತ್ತು. ಸಂಗ್ರಾಹಕವನ್ನು ತಣ್ಣೀರಿನಲ್ಲಿ ಇಟ್ಟಾಗ, ಇನ್ನೂ ಜಾಗ್ರತೆಯಾಗಿ ಹನಿಗೂಡುತ್ತಿದ್ದುವು. ಇದನ್ನು ಜಾರಿಗೆ ತಂದವರು ಸಿಂಹಳೀಯರು. ತಾಹಿತಿಯ ಮೂಲನಿವಾಸಿಗಳು ಮತ್ತೊಂದು ಕ್ರಾಂತಿಕಾರಕ ಬದಲಾವಣೆಯನ್ನು ರೂಪಿಸಿದರು. ಬಿಸಿ ಆವಿ ಹಾಯುತ್ತಿರುವ ನಾಳದ ಸುತ್ತ ತಣ್ಣೀರನ್ನು ಹಾಯಿಸುವುದೇ ಈ ಸುಧಾರಣೆ. ಆಧುನಿಕ ಲೀಬಿಗ್ ಸಾಂದ್ರಕದ ನಿರ್ಮಾಣಕ್ಕೆ ಇದು ನಾಂದಿಯಾಯಿತೆನ್ನ ಬಹುದು. ದಕ್ಷಿಣ ಭಾರತದಲ್ಲಿ ಅದರಲ್ಲೂ ಮೈಸೂರು ಮಾದರಿ ಎಂದು ಪ್ರಸಿದ್ಧವಾಗಿರುವ ಸಾಂದ್ರಕದ ಮೂಲ ರೂಪವನ್ನು ಕಾಣಬಹುದು.



ಚಿತ್ರ. 3 ಮೈಸೂರು ಮಾದರಿಯ ಸಾಂದ್ರಕ

ತಾಹಿತಿ ಮಾದರಿಯ ಮಡಿಕೆ ಸಾಂದ್ರಕಗಳನ್ನು ಫ್ರಾನ್ಸಿನಲ್ಲಿ ಬ್ರಾಂದಿಯನ್ನೂ ಮತ್ತು ಸ್ಕಾಟ್ಲೆಂಡ್, ಐರ್ಲೆಂಡುಗಳಲ್ಲಿ ವಿಸ್ಕಿಯನ್ನೂ ತಯಾರಿಸಲು ಇನ್ನೂ ಉಪಯೋಗಿಸುತ್ತಿದ್ದಾರೆ. ಆದರೆ ಕುದಿಪಾತ್ರೆಯ ಮೇಲೆ ಬಲ್ಬ್ ನಮೂನೆಯ ಶಿರೋಕರಂಡವಿರುತ್ತದೆ. ಇದು ಆವಿಯಲ್ಲಿರುವ ತುಂತುರನ್ನು ಹನಿಗೂಡಿಸಿ ಕುದಿ ಪಾತ್ರೆಗೇ ಬೀಳುವಂತೆ ಮಾಡುತ್ತದೆ. ಆದ್ದರಿಂದ ಸಂಗ್ರಹಿಸಿದ ದ್ರವ ಶುದ್ಧವಾಗಿರುತ್ತದೆ. ಕೆಲವು ಐರಿಷ್ ಸಾಂದ್ರಕಗಳಲ್ಲಿ ಅವ್ಯಾಸಕ್ತ ಅಂಶಗಳು ಮಾತ್ರ ಸಾಂದ್ರಕ ಕೊಳವೆಯನ್ನು ತಲಪುತ್ತವೆ. ಉಳಿದ ಭಾಗವನ್ನು ಕುದಿಪಾತ್ರೆಗೆ ಹಿಂತಿರುಗಿಸುವ ಏರ್ಪಾಡಿರುತ್ತದೆ. ಇದು ಇಂದು ನಾವು ಬಳಸುವ ಅಂಶ ಬಾಷ್ಪೀಕರಣದ ಉಪಕರಣವನ್ನು ಹೋಲುತ್ತದೆ. ಫ್ರೆಂಚ್ ಬ್ರಾಂದಿ ತಯಾರಿಸುವ ಉಪಕರಣದಲ್ಲಿ ಕುದಿಪಾತ್ರೆಗೂ ಸಾಂದ್ರಕಕ್ಕೂ ನಡುವೆ ಎರಡು ಬಲ್ಬುಗಳಿರುವ ಒಂದು ಪಾತ್ರೆ ಇರುತ್ತದೆ. ಒಂದರಲ್ಲಿ ಕುದಿಪಾತ್ರೆಗೆ ಹಾಕಬೇಕಾಗಿರುವ ವೈನ್ ಇರುವುದು. ಇನ್ನೊಂದರಲ್ಲಿ ಅವ್ಯಾಸಕ್ತಿ ಕಡಿಮೆಯಿರುವ ಅಂಶಗಳು ಸಾಂದ್ರೀಕರಿಸುತ್ತವೆ. ಆಗ ಹೊರಬಿದ್ದ ಗುಪ್ತೋಷ್ಣವನ್ನು ವೈನ್ ಹೀರಿಕೊಂಡು ಕುದಿಪಾತ್ರೆಗೆ ಬೀಳುತ್ತದೆ. ಈ ಉಷ್ಣ ವಿನಿಮಯ ತಂತ್ರದಿಂದ ಇಂಧನ ಉಳಿತಾಯವಾಗುವುದು. ಸ್ಕಾಟ್ಲೆಂಡಿನ ವಿಸ್ಕಿ ಕೇಂದ್ರಗಳಲ್ಲಿ ಉಪಯೋಗಿಸುವ ಕುದಿಪಾತ್ರೆಗಳ ರಚನೆ ಇನ್ನೂ ಜಟಿಲವಾಗಿದ್ದು, ಇಂಥ ಹಲವು ಮಧ್ಯವರ್ತಿ ಪಾತ್ರೆಗಳನ್ನು ಒಳಗೊಂಡಿರುತ್ತದೆ. ಇವು ಹಗುರವಾದ ಅಂಶಗಳನ್ನು ಸಾಂದ್ರಕದ ಎಡೆಗೆ ಒಯ್ದು ಶೇಷಾಂಶವನ್ನು ಕುದಿಪಾತ್ರೆಗೆ ಹಿಂತಿರುಗಿಸುತ್ತವೆ.

ಆಧುನಿಕ ಕಾಫೆ ಸಾಂದ್ರಕ: ಹೀಗೆ ರೂಪಾಂತರ ಹೊಂದುತ್ತ ನಡೆದು ಅಂತಿಮವಾಗಿ ಕಾಫೆ ಸಾಂದ್ರಕ ಜನ್ಮತಾಳಿತು ಎನ್ನಬಹುದು. 1831ರಲ್ಲಿ ಪೇಟೆಂಟ್ ಮಾಡಿಕೊಂಡ ಈ ಉಪಕರಣದಲ್ಲಿ ಪ್ರಧಾನವಾಗಿ ಎರಡು ಗೋಪುರಗಳಿವೆ. ವಿಶ್ಲೇಷಕ ಎಂದು ಕರೆಯಲ್ಪಡುವ ಮೊದಲನೆಯ ಗೋಪುರದ (ಸ್ತಂಭ) ಮೇಲ್ಭಾಗದಿಂದ ಆಲ್ಕೊಹಾಲ್ ದ್ರವವನ್ನೂ, ಬುಡದಿಂದ ಹಬೆಯನ್ನೂ ಹಾಯಿಸುತ್ತಾರೆ. ಗೋಪುರದಲ್ಲಿ ಸರಂಧ್ರ ತಟ್ಟೆಗಳಿರುತ್ತವೆ.

ಮೇಲೇರುತ್ತಿರುವ ಹಬೆಯ ದೆಸೆಯಿಂದ ಆಲ್ಕೊಹಾಲ್ ರಂಧ್ರಗಳ ಮೂಲಕ ಕೆಳಗಿನತಟ್ಟೆಗೆ ಸೋರಿಹೋಗುವಂತಿಲ್ಲ. ಸಾಕಷ್ಟು ದ್ರವ ತಟ್ಟೆಯಲ್ಲಿ ಶೇಖರಿಸಿದಾಗ ಹೆಚ್ಚುವರಿ ದ್ರವ ವಿಶೇಷ ನಳಿಗೆಯೊಂದರ ಮೂಲಕ ಅಡಿತಟ್ಟೆಯಲ್ಲಿರುವ ಬಟ್ಟಲಿಗೆ ಹರಿದು ಹೋಗುತ್ತದೆ. ಹಬೆಯ ಉಷ್ಣದಿಂದ ಮದ್ಯದಲ್ಲಿರುವ ಆಲ್ಕೊಹಾಲಿನ ಒಂದಂಶ ಆವಿಯಾಗಿ ಹಬೆಯೊಡನೆ ಬೆರೆತು ರೆಕ್ಟಿಫಯರ್ ಎಂಬ ಎರಡನೆಯ ಗೋಪುರವನ್ನು ಬುಡದಿಂದ ಪ್ರವೇಶಿಸುವುದು. ವಿಶ್ಲೇಷಕದಂತೆ ಇಲ್ಲೂ ಸರಂಧ್ರ ತಟ್ಟೆಗಳಿವೆ. ಪ್ರತಿ ತಟ್ಟೆಗಳ ನಡುವೆ ಸುರುಳಿಯಾಕಾರದ ಕೊಳವೆ ಇದೆ. ಇದು ಎರಡು ಕೆಲಸ ನಿರ್ವಹಿಸುವುದು. ವಿಶ್ಲೇಷಕದ ಮೇಲ್ಭಾಗಕ್ಕೆ ಹೋಗುತ್ತಿರುವ 'ವಾಷ'ನ್ನು ಬಿಸಿ ಮಾಡಿ ಉಷ್ಣವಿನಿಮಯಕ್ಕೆ ಅನುಕೂಲ ಮಾಡಿಕೊಡುವುದು; ಎರಡನೆಯದಾಗಿ ಹಾಯುತ್ತಿರುವ ಹಬೆ ಮತ್ತು ಆಲ್ಕೊಹಾಲ್ ಮಿಶ್ರಣವನ್ನು ತಣಿಸಿ ಭಾಗಶಃ ಸಾಂದ್ರೀಕರಿಸುವುದು. ಅಂತಿಮವಾಗಿ ಮೇಲ್ಭಾಗದಿಂದ ಹೊರಬೀಳುವ ಆವಿಯನ್ನು ತಣಿಸಿದರೆ ಉಂಟಾಗುವ ಮದ್ಯದಲ್ಲಿ ಆಲ್ಕೊಹಾಲಿನ ಅಂಶ ವೃದ್ಧಿಯಾಗಿರುತ್ತದೆ. ಇದನ್ನು ಇತರ ಮದ್ಯಪಾನೀಯಗಳೊಡನೆ ಸೇರಿಸಿ ಸಂಯೋಜಿತ (ಕಾಂಪೌಂಡೆಡ್) ಮತ್ತು ಸಂರಕ್ಷಿತ (ಫಾರ್ಟಿಫೈಡ್) ಮದ್ಯಗಳನ್ನು ತಯಾರಿಸುವರು.




ಚಿತ್ರ. 4 ಆಧುನಿಕ ಕಾಫೆಸಾಂದ್ರಕ. A ವಿಶ್ಲೇಷಕ, B ರೆಕ್ಟಿಫಯರ್

ಹದಗೊಳಿಸುವಿಕೆ (ಮೆಚೂರಿಂಗ್) : ಬಟ್ಟಿ ಇಳಿಸಿದ ಮದ್ಯಗಳು ಪಾನಯೋಗ್ಯವಾಗಬೇಕಾದರೆ ಅವುಗಳನ್ನು ಬಿಳಿ ಓಕ್ ಮರದಿಂದ ಮಾಡಿದ ಪೀಪಾಯಿಗಳು ಅಥವಾ ಜಾಡಿಗಳಲ್ಲಿ ಕೂಡಿಡಬೇಕು. ಕೆಲವು ಮದ್ಯಗಳನ್ನು ಕರಿಯ ಓಕ್ ಮರದ ಪೀಪಾಯಿಗಳಲ್ಲಿಟ್ಟು ಹದಗೊಳಿಸುವರು. ಅಮೆರಿಕನ್ ವಿಸ್ಕಿಯನ್ನುಕೂಡಿಡುವ ಪೀಪಾಯಿಗಳು ಹೊಸದಾಗಿರಬೇಕು. ಅವನ್ನು ಹಿಂದೆ ಬಳಸಿರಬಾರದು. ಅವುಗಳ ಒಳಭಾಗ ಸುಟ್ಟು ಕಪ್ಪಾಗಿರಬೇಕು. ಕೆಲವು ಬಟ್ಟಿಗಳಲ್ಲಿ ಒಮ್ಮೆ ಉಪಯೋಗಿಸಿರುವ ಪೀಪಾಯಿಗಳಿಗೆ ಪ್ರಾಶಸ್ತ್ಯ ಹೆಚ್ಚು. ಪೀಪಾಯಿಗಳಲ್ಲಿ ಶೇಖರಿಸುವ ಮದ್ಯಕ್ಕೆ ನೀರು ಬೆರೆಸಿ ಆಲ್ಕೊಹಾಲಿನ ಅಂಶವನ್ನು ಕಡಿಮೆ ಮಾಡುವುದು ವಾಡಿಕೆ. ಇದೊಂದು ಪ್ರಾದೇಶಿಕ ಸಂಪ್ರದಾಯ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 51.5%, ಸ್ಕಾಟ್ಲೆಂಡಿನಲ್ಲಿ 62%, ಮತ್ತು ಫ್ರಾನ್ಸಿನಲ್ಲಿ 70% ಆಲ್ಕೊಹಾಲನ್ನು ಪೀಪಾಯಿಗಳಲ್ಲಿಟ್ಟು ಭದ್ರಪಡಿಸುತ್ತಾರೆ.

ಸಾಮಾನ್ಯವಾಗಿ ಇಂಥ ಮದ್ಯ ತುಂಬಿದ ಪೀಪಾಯಿಗಳನ್ನು ಗಾಳಿಯ ಹೊಡೆತಕ್ಕೆ ಆಸ್ಪದವಿಲ್ಲದ ಉಗ್ರಾಣಗಳಲ್ಲಿ ಸಾಲಾಗಿ ಹಂತಹಂತವಾಗಿ ಪೇರಿಸಿರುತ್ತಾರೆ. ಆಲ್ಕೊಹಾಲ್ ಸೋರಿ ನಷ್ಟವಾಗುತ್ತಿದ್ದರೆ ತನಿಖೆಮಾಡಲು ಈ ವ್ಯವಸ್ಥೆ ಅನುಕೂಲ. ಹದಗೊಳಿಸುವ ಈ ಅವಧಿಯಲ್ಲಿ ಮದ್ಯದಲ್ಲಿ ಗಣನೀಯ ಬದಲಾವಣೆಗಳಾಗುತ್ತವೆ. ಮರದ ಪೀಪಾಯಿ ಸಾಕಷ್ಟು ಸರಂಧ್ರವಾಗಿರುವುದರಿಂದ ಅದರೊಳಕ್ಕೆ ಗಾಳಿ ತೂರಬಹುದು. ಸ್ವಲ್ಪ ದ್ರವ ಆವಿಯಾಗಿ ಹೊರಕ್ಕೆ ಹೋಗಬಹುದು. ನೀರಿನ ಅಂಶ ನಿರ್ಗಮಿಸಿ ಪೀಪಾಯಿಯಲ್ಲಿರುವ ದ್ರವದಲ್ಲಿ ಆಲ್ಕೊಹಾಲಿನ ಅಂಶ ಹೆಚ್ಚುವುದು ಸರ್ವಸಾಮಾನ್ಯ. ಇದು ಅಮೆರಿಕನ್ ವಿಸ್ಕಿಗೆ ಅನ್ವಯಿಸುತ್ತದೆ. ಆದರೆ ಕೊನ್ಯಾಕ್ ಹೀಗೆ ಶೇಖರಿಸಲ್ಪಟ್ಟಾಗ ಜಲಾಂಶ ವೃದ್ಧಿಯಾಗುವುದು ಕಂಡುಬಂದಿದೆ. ಏತನ್ಮಧ್ಯೆ ಮದ್ಯದಲ್ಲಿರುವ ಅಪ್ರಧಾನ ವಸ್ತುಗಳಲ್ಲಿ ಮುಖ್ಯ ಬದಲಾವಣೆಗಳಾಗುತ್ತವೆ. ಅದರಲ್ಲಿರುವ ಆಮ್ಲಗಳು ಆಲ್ಕೊಹಾಲುಗಳೊಂದಿಗೆ ವರ್ತಿಸಿ ಮಧುರ ಎಸ್ಟರುಗಳಾಗುತ್ತವೆ. ಇದರಿಂದ ಎಸ್ಟರುಗಳ ಅಂಶ ಏರುತ್ತದೆ. ಅಲ್ಲದೆ ಗಾಳಿಯಲ್ಲಿರುವ ಆಕ್ಸಿಜನ್ನಿನ ಸಂಪರ್ಕದಲ್ಲಿ ಆಲ್ಕೊಹಾಲುಗಳು ಆಲ್ಡಿಹೈಡುಗಳಿಗೆ ಉತ್ಕರ್ಷಿತವಾಗುವುವು. ಟ್ಯಾನಿನ್ನುಗಳು ಮತ್ತು ಇನ್ನಷ್ಟು ಫರ್‌ಫ್ಯುರಾಲ್ (ಇದೂ ಒಂದು ಆಲ್ಡಿಹೈಡು) ಮರದ ಪೀಪಾಯಿಯಿಂದ ಮದ್ಯದಲ್ಲಿ ಲೀನವಾಗುವುವು. ಮದ್ಯಕ್ಕೆ ಬಣ್ಣವೂ ಪ್ರಾಪ್ತವಾಗುತ್ತದೆ. ನಿರೀಕ್ಷಿತ ಮಟ್ಟಕ್ಕೆ ಹದಗೊಳ್ಳಲು ಒಂದೊಂದು ಮದ್ಯಕ್ಕೆ ಬೇರೆ ಬೇರೆ ಕಾಲಾವಧಿ ಅಗತ್ಯ. ಕರಿಗಟ್ಟಿಸಿದ ಹೊಸ ಓಕ್ ಮರದ ಪೀಪಾಯಿಗಳಲ್ಲಿ ಮದ್ಯ ಬೇಗ ಹದವಾಗುವಷ್ಟು ಬಳಸಿದ ಜಾಡಿಗಳಲ್ಲಿಟ್ಟರೆ ಆಗುವುದಿಲ್ಲ. ಹೀಗಾಗಲು ಹವಾಗುಣವೂ ಕಾರಣ. ಮದ್ಯ ಹದವಾಗುವ ಕನಿಷ್ಠ ಅವಧಿ ಎರಡು ವರ್ಷಗಳು. ಆದರೆ ನಾಲ್ಕು ವರ್ಷಗಳಿಗೂ ಮೀರಿ ಕೂಡಿಡುವುದು ರೂಢಿ. ಇಂಥ ಮದ್ಯಗಳಲ್ಲಿ ಟ್ಯಾನಿನ್ ಮತ್ತು ಫರ್‌ಫ್ಯುರಾಲ್ ಅಂಶ ಹೆಚ್ಚಾಗಿರುವುದರಿಂದ ತೀಕ್ಷ್ಣವಾದ ಮರದ ರುಚಿ ಹುಟ್ಟುವುದು ಸಹಜ. ಇತರ ಬಟ್ಟಿ ಇಳಿಸಿದ ಮದ್ಯಗಳಿಗಿಂತ ಕೊನ್ಯಾಕ್ ಬ್ರಾಂದಿಯನ್ನು ಸುಮಾರು 50 ವರ್ಷಗಳ ಕಾಲ ಹೀಗೆ ಸುರಕ್ಷಿತವಾಗಿ ಕಾಪಾಡಬಹುದು. ಇಷ್ಟು ದೀರ್ಘಕಾಲ ಕೂಡಿಡುವ ಪ್ರಸಂಗ ಒದಗಿದರೆ ಆಗಿಂದಾಗ್ಗೆ ಹೊಸ ಬ್ರಾಂದಿಯನ್ನು ಅದಕ್ಕೆ ಸೇರಿಸುತ್ತ ಇರಬೇಕು. ಬಟ್ಟಿ ಇಳಿಸಿದ ಮದ್ಯಗಳು ಹಳತಾದಷ್ಟೂ ಹಿತವಾಗಿರುತ್ತವೆ. ಗಾಜಿನ ಪಾತ್ರೆಗಳಲ್ಲಿಟ್ಟ ಮದ್ಯ ಎಂದೂ ಹದವಾಗುವುದಿಲ್ಲ. ಇದು ಗಮನಾರ್ಹ. ಸೀಸೆಗೆ ತುಂಬಿದ ದಿವಸ ಇದ್ದಂತೆಯೇ ಮದ್ಯ ಅದನ್ನು ತೆರೆದ ದಿವಸವೂ ಇರುತ್ತದೆ.

**ಪಾನೀಯಗಳ ವರ್ಗೀಕರಣ. 1. ವಿಸ್ಕಿ:** ಧಾನ್ಯದಿಂದ ಬಂದ ಮ್ಯಾಷ್ ಗಂಜಿಯನ್ನು ಹುಳಿಬರಿಸಿ ಬಂದ ಮದ್ಯವನ್ನು ಬಟ್ಟಿ ಇಳಿಸಿ ಮರದ ಪೀಪಾಯಿಗಳಲ್ಲಿಟ್ಟು ಹಳತು ಮಾಡಿದ ಪಾನೀಯ. ಇದನ್ನು ತಯಾರಿಸುವ ಪ್ರಮುಖ ದೇಶಗಳು ಕ್ರಮವಾಗಿ ಅಮೆರಿಕ ಸಂಯುಕ್ತ ಸಂಸ್ಥಾನ, ಸ್ಕಾಟ್ಲೆಂಡ್, ಕೆನಡ ಮತ್ತು ಐರ್ಲೆಂಡ್. ಅಮೆರಿಕ ಸರ್ಕಾರದ ನಿಯಮಗಳ ಪ್ರಕಾರ ನೇರ, ಬೂರ್ಬನ್, ರೈ ಮತ್ತು ಸಂಮಿಳಿತ ವಿಸ್ಕಿಗಳೆಂಬ ದರ್ಜೆಗಳಿವೆ. ಸ್ಕಾಚ್ ವಿಸ್ಕಿಯನ್ನು ತಯಾರಿಸುವಾಗ ಬಾರ್ಲಿ ಮಾಲ್ಟನ್ನು ಪೀಟ್ ಹೊಗೆಯ ಸಂಪರ್ಕದಲ್ಲಿ ಕಾಯಿಸಿ ಒಣಗಿಸುವರು. ಜೊತೆಗೆ ಅಲ್ಲಿಯ ನೀರಿನ ಗುಣದ ಪರಿಣಾಮವೂ ಸೇರಿ ವಿಸ್ಕಿಗೆ ಧೂಮ ರುಚಿ ಉಂಟಾಗುತ್ತದೆ. ಐರಿಷ್ ವಿಸ್ಕಿಗೆ ಈ ರುಚಿ ಇರುವುದಿಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಮತ್ತು ಕೆನಡಾದಲ್ಲಿ ವಿಸ್ಕಿ ತಯಾರಿಸುವ ಕ್ರಮದಲ್ಲಿ ಏಕರೂಪತೆಯಿದೆ.

**2. ವೋಡ್ಕಾ:** ಇದೊಂದು ಹಳತು ಮಾಡದ, ಬಟ್ಟಿ ಇಳಿಸಿದ ಮದ್ಯ. ಇದ್ದಲಿನ ಮೂಲಕ ಶೋಧಿಸಿ ಅಗತ್ಯವಿದ್ದಷ್ಟು ನೀರು ಸೇರಿಸಿ ಕುಡಿಯಲು ಹದ ಮಾಡಿರುತ್ತಾರೆ. ರಷ್ಯ ಮತ್ತು ಪೋಲೆಂಡುಗಳಲ್ಲಿ ಆಲೂಗೆಡ್ಡೆಯಿಂದ ವೋಡ್ಕಾ ತಯಾರಿಸುವುದೇ ಹೆಚ್ಚು. ಆದರೆ ಅಮೆರಿಕದಲ್ಲಿ ಧಾನ್ಯದಿಂದ ವೋಡ್ಕಾ ತಯಾರಿಸುವುದು ವಾಡಿಕೆ. ಬಟ್ಟಿ ಇಳಿಸಿದ ಅಮೆರಿಕನ್ ವೋಡ್ಕಾ ಪಾನೀಯದಲ್ಲಿ 95% ಆಲ್ಕೊಹಾಲ್ ಇರುತ್ತದೆ. ಇದನ್ನು ಇದ್ದಲಿನ ಮೂಲಕ ಶೋಧಿಸಿದರೆ ವಿಶಿಷ್ಟ ರುಚಿ, ವಾಸನೆ ಒಂದೂ ಇಲ್ಲದ ಪಾನೀಯ ದೊರೆಯುತ್ತದೆ.

**3 ರಮ್:** ಕಬ್ಬಿನ ರಸ ಅಥವಾ ಕಾಕಂಬಿಯನ್ನು ಹುಳಿಸಿ ಬಟ್ಟಿ ಇಳಿಸಿ ಪಡೆದ ಮದ್ಯ. ಆದ್ದರಿಂದ ಸಕ್ಕರೆ ಕೈಗಾರಿಕೆಯ ಉಪವಸ್ತುವಾಗಿ ದೊರೆಯುವ ಈ ಪಾನೀಯ ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಉತ್ಪಾದನೆಯಾಗುತ್ತದೆ. ಅದರಲ್ಲಿ ಮೂರು ಮುಖ್ಯ ದರ್ಜೆಗಳಿವೆ. ರಮ್ ಉತ್ಪಾದಿಸುವ ದೇಶಗಳೆಂದರೆ ಕ್ಯೂಬ, ಮೆಕ್ಸಿಕೊ, ಬ್ರೆಜಿಲ್, ಅರ್ಜೆಂಟೈನಾ ಮತ್ತು ಪೆರುಗ್ವೆ, ಘಾಟು ರಮ್, ಜಮೈಕ, ಬಾರ್ಬಡಾಸ್ ಮತ್ತು ಬ್ರಿಟಿಷ್ ಗಯಾನದಿಂದ ಬರುತ್ತದೆ. ಬ್ರಾಂದಿಯಂತಿರುವ ರಮ್ ಜಾವಾದಲ್ಲಿ ಹೆಚ್ಚು ಬಳಕೆಯಲ್ಲಿದೆ.

**4 ಬ್ರಾಂದಿ:** ಇದನ್ನು ದ್ರಾಕ್ಷಾರಸದಿಂದ ತಯಾರಿಸುವುದು ಪದ್ಧತಿ. ಮರದ ಪೀಪಾಯಿಯಲ್ಲಿಟ್ಟು ಹಳತು ಮಾಡುವರು. ದ್ರಾಕ್ಷಾರಸದಿಂದ ಪಡೆದ ಪಾನೀಯಕ್ಕೆ ಈ ಹೆಸರನ್ನು ಸಾಮಾನ್ಯವಾಗಿ ಅನ್ವಯಿಸಿದರೂ ಫ್ರಾನ್ಸಿನ ಕೊನ್ಯಾಕ್ ಅತ್ಯುತ್ತಮ ಬ್ರಾಂದಿಯೆಂದು ಪರಿಗಣಿಸಲ್ಪಟ್ಟಿದೆ. ಇತರ ಬ್ರಾಂದಿಗಳನ್ನು ಸೇಬು, ಪ್ಲಮ್, ಚೆರಿ ಮತ್ತು ಏಪ್ರಿಕಾಟ್ ಹಣ್ಣುಗಳ ರಸದಿಂದ ತಯಾರಿಸುತ್ತಾರೆ. ಇವುಗಳಿಗೆ ವಿಶಿಷ್ಟ ಹೆಸರುಗಳಿಟ್ಟು ಮಾರುತ್ತಾರೆ. ಹಂಗರಿ, ಯುಗೋಸ್ಲೇವಿಯ ಮತ್ತು ರುಮೇನಿಯ ದೇಶಗಳಲ್ಲಿ ಪ್ಲಮ್ ಬ್ರಾಂದಿಗೆ ಪ್ರಾಶಸ್ತ್ಯ. ಅದು ಅವರ ರಾಷ್ಟ್ರೀಯ ಪಾನೀಯವಿದ್ದಂತೆ. ಅದಕ್ಕೆ ಪ್ಲಮ್ ಹಣ್ಣಿನ ವಿಶಿಷ್ಟ ರುಚಿ ವಾಸನೆಗಳೂ ಮತ್ತು ಹೊಂಬಣ್ಣವೂ ಇರುತ್ತವೆ. ಪ್ಲಮ್ ಹಣ್ಣುಗಳಲ್ಲಿ ನಾನಾ ಜಾತಿಗಳಿರುವಂತೆ ಪ್ಲಮ್ ಬ್ರಾಂದಿಯಲ್ಲೂ ಹಲವು ಬಗೆಯುಂಟು. ಚೆರಿ ಬ್ರಾಂದಿಯನ್ನು ಫ್ರಾನ್ಸಿನಲ್ಲಿ ಕಿರ್ಷ್ ಎಂದೂ ಜರ್ಮನಿ ಮತ್ತು ಸ್ವಿಟ್ಜರ್‌ಲ್ಯಾಂಡುಗಳಲ್ಲಿ ಕಿರ್ಷ್‌ವಾಸೆರ್ ಎಂದೂ ಕರೆಯುವರು. ರೈನ್ ನದೀ ಪಾತ್ರದಲ್ಲಿ ಹೇರಳವಾಗಿ ಬೆಳೆಯುವ ಕಪ್ಪು ಚೆರ್ರಿ ಹಣ್ಣುಗಳಿಂದ ಇದನ್ನು ಮಾಡುವರು. ಅದಕ್ಕೆ ಬಣ್ಣವಿರುವುದಿಲ್ಲ; ಮತ್ತು ಅದನ್ನು ಹಳತು ಮಾಡುವುದಿಲ್ಲ. ಹುಳಿ ಬರಿಸುವಾಗ ಚೆರಿ ಬೀಜಗಳೂ ಅರೆಯಲ್ಪಟ್ಟು ಮ್ಯಾಷ್ ಗಂಜಿಯೊಡನೆ ಬೆರೆಯುವುದರಿಂದ ಕಹಿ ಬಾದಾಮಿಯ ಲಘುವಾಸನೆ ಹೊಂದಿರುತ್ತದೆ. ಆದರೆ ಮದ್ಯದ ಸೊಗಸಾದ ಚೆರಿ ಹಣ್ಣಿನ ಮಾಧುರ್ಯ ಇದನ್ನು ಮರೆಮಾಚುತ್ತದೆ. ಈ ಕಾರಣಕ್ಕಾಗಿಯೇ ಸೇಬಿನ ಬ್ರಾಂದಿಯ ಹೊರತು ಉಳಿದ ಹಣ್ಣಿನ ಬ್ರಾಂದಿಗಳಿಗೆಲ್ಲ ಕಹಿ ಬಾದಾಮಿಯ ತೆಳು ವಾಸನೆಯಿರುವುದು.

ಇತರ ಪಾನೀಯಗಳು. **1. ಟೆಕ್ವಿಲ:** ಮೆಕ್ಸಿಕೊ ದೇಶದ ಜನಾನುರಾಗಿ ಪಾನೀಯ. ಶತಮಾನಸಸ್ಯ ಎಂದು ಹೆಸರಾದ, ಅಲ್ಲಿ ಮೆಸ್ಕಲ್ ಎಂದು ಕರೆಯುವ ಗಿಡದ ಜೀವರಸದಿಂದ ಇದನ್ನು ಮಾಡುತ್ತಾರೆ. ಹೊಸದಾದ ಮತ್ತು ನಾಲ್ಕು ವರ್ಷ ಹದ ಮಾಡಿದ ಟೆಕ್ವಿಲ ಮದ್ಯವನ್ನು ( 43–50% ಆಲ್ಕೊಹಾಲ್ ಇರುವುದು) ಮೆಕ್ಸಿಕೊ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಮಾರುವರು.

**2. ಓಕೊಲೆಹೊ:** ಹವಾಯ್ ದ್ವೀಪ ನಿವಾಸಿಗಳು ತಯಾರಿಸುವ ಮದ್ಯವಿಶೇಷ. ಕಾಕಂಬಿ, ಅಕ್ಕಿ ಮತ್ತು ಟಿರೂಟ್ ಬೇರಿನ ಸೂಕ್ತ ಮಿಶ್ರಣದ ಹುಳಿಬರಿಸುವಿಕೆಯಿಂದ ಲಭ್ಯವಾದ ಪಾನೀಯ. ಇದರಲ್ಲಿ 40–50% ಆಲ್ಕೊಹಾಲಿರುತ್ತದೆ. ಕಪ್ಪು ಬಣ್ಣ ಮತ್ತು ಧೂಮ ರುಚಿ ಇರುವ (ಬೇಯಿಸಿದ ಟಿರೂಟ್ ಬೇರಿನಿಂದ ಹುಟ್ಟಿದ್ದು) ಈ ಮದ್ಯವನ್ನು

ಸುಟ್ಟ ಮರದ ಪೀಪಾಯಿಗಳಲ್ಲಿ ಹಲವು ವರ್ಷಗಳ ಕಾಲ ಕೂಡಿಟ್ಟಿರುತ್ತಾರೆ. ಟಿರೂಟ್ ಬೇರಿನ ಬದಲು ತೆಂಗಿನ ಹಾಲನ್ನು ಬಳಸಿ ಸುಡದಿರುವ ಮರದ ಪೀಪಾಯಿಗಳಲ್ಲಿಟ್ಟು ಹಳತು ಮಾಡಿದರೆ ನಿರ್ವರ್ಣವಾದ ಮದ್ಯ ದೊರೆಯುತ್ತದೆ.

**3. ಎನ್ಷಿಕಾಪಿ ಅಥವಾ ಚೀನಿ ವಿಸ್ಕಿ:** ಮಿಲೆಟ್ ಗಂಜಿಯಿಂದ ತಯಾರಿಸಿ ಸುಗಂಧಯುಕ್ತ ಬೇರುಗಳ ಕಷಾಯದಿಂದ ಆಕರ್ಷಕಗೊಳಿಸಿದ ಮದ್ಯಪಾನೀಯ. ಇದರಲ್ಲಿ 48% ಆಲ್ಕೊಹಾಲ್ ಇರುತ್ತದೆ. ಇದನ್ನು ಸಹ ಮರದ ಸಂಪರ್ಕದಲ್ಲಿ ಹದಗೊಳಿಸಬೇಕು.

**ಮಧುರಗೊಳಿಸಿದ ಮದ್ಯಗಳು:** ಇದರಲ್ಲಿ ಜಿನ್ ಮುಖ್ಯವಾದುದು. ಮದ್ಯವನ್ನು ಮಾಧುರ್ಯಜನಕ ವಸ್ತುವಿನ ಸಂಪರ್ಕದಲ್ಲಿ ಬಟ್ಟಿ ಇಳಿಸಿ ಇವನ್ನು ತಯಾರಿಸಬಹುದು. ಇದಕ್ಕಾಗಿ ಜ್ಯೂನಿಪರ್ ಕಾಯಿ ಇತ್ಯಾದಿಗಳನ್ನು ಬಳಸುವರು. ಸ್ಕಾಂಡಿನೇವಿಯನ್ ರಾಜ್ಯಗಳಲ್ಲಿ ಬಳಕೆಯಲ್ಲಿರುವ ಪಾನೀಯವೆಂದರೆ ಅಕ್ವಾವಿಟ್, ಕ್ಯೂಮಿನ್, ಕ್ಯಾರವೇ ಇತ್ಯಾದಿ ಬೀಜಗಳ ಸಂಪರ್ಕದಲ್ಲಿ ಆಲೂಗೆಡ್ಡೆಯಿಂದ ಬಂದ ಮದ್ಯವನ್ನು ಕಾಯಿಸಿದಾಗ ಇದು ಉಂಟಾಗುವುದು. ಡೆನ್ಮಾರ್ಕಿನ ಮದ್ಯ ನಿರ್ವರ್ಣವಾಗಿಯೂ ನಾರ್ವೀಜಿಯನ್ ಮತ್ತು ಸ್ವೀಡಿಷ್ ಮದ್ಯಗಳು ತಿಳಿ ಹಳದಿ ಬಣ್ಣ ಮತ್ತು ಮಸಾಲೆ ವಾಸನೆಯನ್ನೂ ಫಿನ್ಲೆಂಡಿನ ಮದ್ಯ ದಾಲ್ಚಿನ್ನಿಯ ವಾಸನೆಯನ್ನೂ ಹೊಂದಿರುತ್ತವೆ. ಅಕ್ವಾವಿಟ್ ಮದ್ಯದಲ್ಲಿ 41.5–45% ಆಲ್ಕೊಹಾಲಿರುತ್ತದೆ.

**ಮದ್ಯಪಾನಕಗಳು (ಕಾರ್ಡಿಯಲ್ಸ್) :** ಮಧ್ಯಯುಗದ ವೈದ್ಯರು ಮತ್ತು ರಸವಾದಿಗಳು ರೋಗನಿವಾರಣೆಗಾಗಿ ತಯಾರಿಸಿದ ಈ ಪಾನೀಯಗಳ ಬಳಕೆ ಸುಧಾರಿತ ರೀತಿಯಲ್ಲಿ ವಿಶ್ವವ್ಯಾಪಕವಾಗಿದೆ. ಅಮೆರಿಕ ದೇಶದ ನಿಯಮದ ಪ್ರಕಾರ ಈ ಪಾನಕಗಳಲ್ಲಿ ಕನಿಷ್ಠಪಕ್ಷ 2.5% ಸಕ್ಕರೆಯ ಅಂಶವಿರಬೇಕು. ಆಲ್ಕೊಹಾಲಿನ ಅಂಶ 6–49% ಮಿತಿಯಲ್ಲಿರುವುದು. ಅವುಗಳ ಆಕರ್ಷಕ ಬಣ್ಣ ಮಾಧುರ್ಯ ಮತ್ತು ಅಂಗಾಂಶಗಳ ವೈವಿಧ್ಯಕ್ಕೆ ಕೊನೆಯಿಲ್ಲ.

(ಎಚ್.ಜಿ.ಎಸ್.)

**ಆಲ್ಕೊಹಾಲೊಮೆಟ್ರಿ:** ಆಲ್ಕೊಹಾಲ್ ದ್ರಾವಣಗಳಲ್ಲಿಯೂ ಬಟ್ಟಿ ಇಳಿಸಿ ತಯಾರಿಸಿದ ಮದ್ಯಸಾರದಲ್ಲಿಯೂ ಆಲ್ಕೊಹಾಲ್ ಪ್ರಮಾಣ ಎಷ್ಟಿದೆಯೆಂದು ಅಳತೆ ಮಾಡುವ ವಿಧಾನ; ಉಪಕರಣದ ಹೆಸರು ಆಲ್ಕೊಹಾಲೊಮೀಟರ್. ದ್ರಾವಣಗಳ ಸಾಂದ್ರತೆ ಅಥವಾ ಕಿರಣವಕ್ರೀಭವನಸೂಚ್ಯಂಕ (ರಿಫ್ರಾಕ್ಟೀವ್ ಇಂಡೆಕ್ಸ್) ಇವುಗಳ ಸಹಾಯದಿಂದ ಈ ಪ್ರಮಾಣವನ್ನು ನಿರ್ಧರಿಸಬಹುದು. ಸಾಂದ್ರತೆ–ಪ್ರಮಾಣ ಕೋಷ್ಟಕಗಳಿವೆ. ದ್ರಾವಣದ ಸಾಂದ್ರತೆ ಅಳೆದು ಅದರ ಅನುರೂಪ ಪ್ರಮಾಣವನ್ನು ಇಂಥ ಕೋಷ್ಟಕಗಳನ್ನು ನೋಡಿ ತಿಳಿಯಬಹುದು. **(ನೋಡಿ– ಆಲ್ಕೊಹಾಲ್–ಪಾನೀಯಗಳು)** (ವೈ.ಎಸ್.ಎಲ್.)

**ಆಲ್‌ಖ್ವಾರಿಜ್ಮೀ, ಮಹಮದ್ ಇಬ್ನ್ ಮೂಸಾ ಸು.780–850** : ಅರೇಬಿಯದ ಗಣಿತಜ್ಞ, ಗ್ರೀಕ್ ಗಣಿತಜ್ಞ ಡಯೊಫಂಟಸನ (ನೋಡಿ) ಗಣಿತವನ್ನು ಸಂಗ್ರಹಿಸಿ ಸಂರಕ್ಷಿಸಿ ವಿಸ್ತರಿಸಿದ ಕೀರ್ತಿ ಇವನದು. ಇವನು ರಚಿಸಿದ ಗಣಿತಗ್ರಂಥದ ಹೆಸರು ಇಲ್ಮ್ ಆಲ್‌ಜಬರ್ ವಾಲ್ ಮುಕಾಬಲ್ (ಸ್ಥಾನಪಲ್ಲಟ ಮತ್ತು ನಿರ್ಮೂಲ ಶಾಸ್ತ್ರ). ಅರಬ್ಬೀ ಪದ ಆಲ್‌ಜಬರ್ (ಸ್ಥಾನಪಲ್ಲಟ) ಲ್ಯಾಟಿನ್ ಭಾಷೆಗೆ ಆಲ್‌ಜೀಬ್ರ (ಬೀಜಗಣಿತ) ಆಗಿ ರೂಪಾಂತರಗೊಂಡಿತು; ಮತ್ತು ಡಯೊಫಂಟಿಸ್ ಸ್ಥಾಪಿಸಿದ ಗಣಿತವಿಭಾಗಕ್ಕೆ ಈ ಹೆಸರು ಶಾಶ್ವತವಾಯಿತು. ಆಲ್‌ಖ್ವಾರಿಜ್ಮೀಯ ಹೆಸರು ಲ್ಯಾಟಿನ್ನಿನಲ್ಲಿ ಆಲ್‌ಗಾರಿಸ್ಮ. ಎಂದಾಯಿತು. ಗಣನೆಯ ವಿಧಾನ ಎಂಬರ್ಥ ಇದಕ್ಕೆ ಬಂತು. ಆಲ್‌ಖ್ವಾರಿಜ್ಮೀ ಭರತಖಂಡದ ಮೂಲಗಳಿಂದಲೂ ಗ್ರೀಕ್ ಮೂಲಗಳಿಂದಲೂ ವಿಪುಲವಾಗಿ ನೂತನ ಗಣಿತಭಾವನೆಗಳನ್ನು ಸ್ವೀಕರಿಸಿ ವಿಶ್ಲೇಷಿಸಿ ಸಂಗ್ರಹಿಸಿದ. ಭಾರತೀಯ ದಾಶಮಿಕ ಅಂಕೆಗಳನ್ನು (ಸೊನ್ನೆಯ ಸಹಿತ) ("ಅಂಕಗಣಿತದಲ್ಲಿ ಭಾರತೀಯರ ಶಿಖರಪ್ರಾಯವಾದ ಕಾರ್ಯವೇನೆಂದರೆ ಸ್ಥಾನಾನುಗುಣ್ಯವಾದ ದಾಶಮಿಕ ಪದ್ಧತಿಯನ್ನೊಳಗೊಂಡ ಸಂಖ್ಯಾಕ್ರಮವನ್ನು ಏರ್ಪಡಿಸಿದುದು"–ಸಿ.ಎನ್. ಶ್ರೀನಿವಾಸೈಯಂಗಾರ್ ಅವರ ಗಣಿತ ಶಾಸ್ತ್ರದ ಚರಿತ್ರೆಯಲ್ಲಿ) ಇವನು ಸ್ವೀಕರಿಸಿ ಅವುಗಳ ಮಹತ್ತ್ವವನ್ನು ಅರಿತು ತನ್ನ ಬರೆಹಗಳಲ್ಲಿ ಬಳಸಿಕೊಂಡ. ಮುಂದೆ ಈತನ ಕೃತಿಗಳನ್ನು ಲ್ಯಾಟಿನ್ನಿಗೆ ಅನುವಾದಿಸುವಾಗ ಇವನ್ನು ಅರೇಬಿಕ್ ಅಂಕೆಗಳೆಂದೇ ಭ್ರಮಿಸಿದರು. ಪೂರ್ವಪಶ್ಚಿಮಗಳನ್ನು, ಪ್ರಾಚೀನ–ಆಧುನಿಕಗಳನ್ನು ಜೋಡಿಸುವ ಸೇತುವೆಯಾಗಿದ್ದಾನೆ ಆಲ್‌ಖ್ವಾರಿಜ್ಮೀ. **(ನೋಡಿ– ಅವಿಸೆನ್ನ)** *

**ಆಲ್ಗರಿದಂ:** ಗಣಿತಶಾಸ್ತ್ರದಲ್ಲಿ ಒಂದು ಪರಿಕರ್ಮ. ಅರಬ್ಬೀ ಗಣಿತಜ್ಞ, ಆಲ್‌ಖ್ವಾರಿಜ್ಮೀ ಬರೆದ ಗಣಿತ ಗ್ರಂಥ ಲಿಬರ್ ಆಲ್‌ಗೊರಿಜ್ಮೀ ಎಂದು ಲ್ಯಾಟಿನ್ ಭಾಷೆಗೆ ಅನುವಾದಿತವಾಯಿತು; ಜೊತೆಯಲ್ಲಿಯೇ ಈತನ ಹೆಸರು ಆ್ಯಲ್ಗರಿದಂ ಎಂದು ಪರಿವರ್ತಿತವಾಯಿತು ಮತ್ತು ಈ ಪದಕ್ಕೆ ಗಣನೆಯ ವಿಧಾನವೆಂಬ ಅರ್ಥ ಬಂತು. ಅದುವರೆಗೆ ತಿಳಿಯದಿದ್ದ ಶೂನ್ಯ ಅಥವಾ ಸೊನ್ನೆಗೆ ಪ್ರಾಧಾನ್ಯ ನೀಡಿದ್ದು ಈ ಗಣಿತದ ವೈಶಿಷ್ಟ್ಯ. N ಸಂಖ್ಯೆಯನ್ನು ದಿಂದ ಭಾಗಿಸಿದಾಗ ದೊರೆಯುವ ಭಾಗಲಬ್ದ Q ಮತ್ತು ಶೇಷ ಆಗಿದ್ದರೆ ಎಂದು ಬರೆಯಬಹುದು. ಹೀಗೆ ಬರೆಯುವ ವಿಧಾನವನ್ನು ಆ್ಯಲ್ಗರಿದಂ (ಅಲ್ಗರಿದಂ ಪರ್ಯಾಯಪದ) ಕ್ರಮ ಎನ್ನುತ್ತೇವೆ. ಈ ವಿಧಾನವನ್ನು ಅನುಸರಿಸಿ ಎರಡು ದತ್ತ ಸಂಖ್ಯೆಗಳ ಮಹತ್ತಮ ಸಾಮಾನ್ಯ ಅಪವರ್ತನವನ್ನು (ಜೆ.ಸಿ.ಎಂ.) ಕಂಡು ಹಿಡಿಯಬಹುದು. ಈ ಕ್ರಮಕ್ಕೆ ಯೂಕ್ಲೀಡಿಯನ್ ಆ್ಯಲ್ಗರಿದಂ ಎಂದು ಹೆಸರು. (ಆರ್.ಎಂ.)

ಯೂಕ್ಲೀಡಿಯನ್ ಆ್ಯಲ್ಗರಿದಂ ವಿವರವಿಷ್ಟು. 0,1,2,3........r............ ...n.......ಎಂಬ ಪೂರ್ಣಾಂಕಗಳ ಗಣವನ್ನು ಪರಿಶೀಲಿಸೋಣ. ಇಲ್ಲಿ ಒಂದು ಸಂಖ್ಯೆಯನ್ನು ಇನ್ನೊಂದು ಸಂಖ್ಯೆಯಿಂದ ಭಾಗಿಸುವಾಗ ತಲೆದೋರುವ ಪರಿಸ್ಥಿತಿಗಳು ಆರು : ದೊಡ್ಡ ಸಂಖ್ಯೆಯನ್ನು ಸಣ್ಣ ಸಂಖ್ಯೆಯಿಂದ(*n/r*)ಸಣ್ಣ ಸಂಖ್ಯೆಯನ್ನು ದೊಡ್ಡ ಸಂಖ್ಯೆಯಿಂದ (*r/n*)ಒಂದು ಸಂಖ್ಯೆಯನ್ನು ಅದರಿಂದಲೇ(*n/n*)ಸೊನ್ನೆಯನ್ನು ಸೊನ್ನೆಯಿಂದ (0/0)ಯಾವುದೇ ಸಂಖ್ಯೆಯನ್ನು ಸೊನ್ನೆಯಿಂದ (0/n) ಸೊನ್ನೆಯನ್ನು ಯಾವುದೇ ಸಂಖ್ಯೆಯಿಂದ ಭಾಗಿಸುವುದು. ಒಂದನೆಯ ಪರಿಸ್ಥಿತಿಯನ್ನುಳಿದು ಮಿಕ್ಕವು ವಿಶೇಷ ಸಂದರ್ಭಗಳು. ಸಾಮಾನ್ಯವಾಗಿ ಅಂಕಗಣಿತದ ಭಾಗಾಹಾರದ ಭಾವನೆ ಅನ್ವಯಿಸುವುದು ಇಂಥ (n/r)ಸಂಖ್ಯಾಯುಗ್ಮಗಳಿಗೆ ಮಾತ್ರ. ಇವುಗಳಲ್ಲಿ ತೋರಿಕೆಗೆ ಎರಡು ಪ್ರಭೇದಗಳಿವೆ; $\frac{16}{4}, \frac{54}{18}, \frac{24}{8}$ ಇತ್ಯಾದಿ ಒಂದು; $\frac{17}{5}, \frac{21}{4}, \frac{36}{8}$ ಇತ್ಯಾದಿ ಇನ್ನೊಂದು. ಮೊದಲನೆಯದರಲ್ಲಿ ಶೇಷ ಸೊನ್ನೆ; ಎರಡನೆಯದರಲ್ಲಿ ಶೇಷ ಸೊನ್ನೆಯಲ್ಲ. ಇವೆರಡನ್ನು ಯೂಕ್ಲೀಡಿಯನ್ ಆ್ಯಲ್ಗಾರಿದಂ (N=xQ+) ಕ್ರಮದಲ್ಲಿ ಬರೆಯಬಹುದು:

$$16 = 4 \times 4 + 0$$
$$54 = 18 \times 3 + 0$$
$$24 = 8 \times 3 + 0$$
$$17 = 5 \times 3 + 2$$
$$21 = 4 \times 5 + 1$$
$$36 = 8 \times 4 + 4$$

ಇಂಥ ಅಂಕಸಮಸ್ಯೆಗಳಿಂದ ಪ್ರಭಾವಿತನಾದ ಗಣಿತಜ್ಞ ಇವುಗಳಿಗೆ ಒಂದು ಸಾಮಾನ್ಯ ರೂಪ ಕೊಡಲು ಪ್ರಯತ್ನಿಸಿದ. a ಅಂಶ, b ಛೇದ ಆದರೆ $a \geq b > o$ ನಿಯಮವನ್ನು ಅವು ಪಾಲಿಸಬೇಕು. a ಯನ್ನು b ಯಿಂದ ಭಾಗಿಸುವಾಗ $q_1$ ಭಾಗಲಬ್ಧವೂ $r_1$ ಶೇಷವೂ ಆಗಿರಲಿ. ಆಗ $a=bq_1+r_1$ $o \geq r_1 < b$. $r_1 \neq 0$ ಆದಾಗ b ಯನ್ನು $r_1$ ರಿಂದ ಭಾಗಿಸಿ $q_2$ ಭಾಗಲಬ್ಧವನ್ನೂ $r_2$ ಶೇಷವನ್ನೂ ಪಡೆಯಬಹುದು. ಆದ್ದರಿಂದ $b=r_1q_2+r_2$. $0 \geq r_2 < r_1$ ಹೀಗೆ ಮುಂದುವರಿಸಿ ದೊರೆಯುವ ಫಲಿತಾಂಶಗಳನ್ನು ಈ ಕೆಳಗಿನಂತೆ ವ್ಯವಸ್ಥೆಗೊಳಿಸಬಹುದು :

$$\begin{array}{ll} a = bq_1 + r_1, & 0 \leq r_1 < b \\ b = r_1q_2+r_2, & 0 \leq r_2 < r_1 \\ r_1 = r_2q_3+r_3, & 0 \leq r_3 < r_2 \\ r_2 = r_2q_4+r_4, & 0 \leq r_4 < r_3 \\ \vdots \quad \vdots & \vdots \\ \vdots \quad \vdots & \vdots \\ r_{n-2}=r_{n-1}q_n+r_n, & 0 \rightarrow r_n < r_{n-1} \end{array}$$

ಇಲ್ಲಿ $r_1.r_2.r_3$.............. ಪೂರ್ಣಾಂಕಗಳ ಅವರೋಹೀ ಅನುಕ್ರಮಿ. (ಡಿಕ್ರೀಸಿಂಗ್ ಸೀಕ್ವೆನ್ಸ್ ಆಫ್ ಇಂಟಿಜರ್ಸ್). ಆದ್ದರಿಂದ nನ ಯಾವುದೋ ಒಂದು ಬೆಲೆಗೆ $r_{n+1}=0$ ಆಗಲೇಬೇಕು. a,bಗಳ ಬೆಲೆಗಳನ್ನು ಅವಲಂಬಿಸಿ nನ ಈ ಬೆಲೆ ಇದೆ. ಉದಾಹರಣೆಗೆ a=39, b=4 ಆಗಿದ್ದರೆ,

| | | |
|---|---|---|
| $39 = 4 \times 9 + 3,$ | $0<3<4,$ | $r_1 = 3$ |
| $4 = 3 \times 1 + 1,$ | $0<1<3,$ | $r_2 = 1$ |
| $3 = 1 \times 3 + 0,$ | ಇಲ್ಲಿಗೆ ಮುಗಿಯಿತು | $r_3 = 0$ |

ಮೇಲೆ ಬರೆದಿರುವ $r_1.r_2.r_3$.................. ಇವನ್ನು($r_{n+1}$=0ಆಗುವವರೆಗೂ) ಸಂಬಂಧಿಸುವ ಸಮೀಕರಣದ ವ್ಯವಸ್ಥೆ ಯೂಕ್ಲೀಡಿಯನ್ ಆಲ್ಗಾರಿತಂ. ಈ ಗಣಿತ ಪರಿಕರ್ಮವನ್ನು ಯೂಕ್ಲಿಡ್ಡನ ಎಲಿಮೆಂಟ್ಸ್ ಗ್ರಂಥದ ಮೂರನೆಯ ಪುಸ್ತಕದಲ್ಲಿ (ಪ್ರಮೇಯಗಳು 1-3) ವಿವರಿಸಿದೆ. ಅಲ್ಲಿ ಇದರ ನಿರೂಪಣೆ ಹೀಗಿದೆ : ಎರಡು ಸಂಖ್ಯೆಗಳು ಯಾವುದೇ ಸಂಖ್ಯೆಯನ್ನು ಕುರಿತು ಅವಿಭಾಜ್ಯವಾಗಿದೆ. ಉದಾಹರಣೆಗೆ, 12 ಮತ್ತು 21 ಸಂಖ್ಯೆಗಳು 5ನ್ನು ಕುರಿತು ಅವಿಭಾಜ್ಯಗಳಾಗಿವೆ. (ಅಂದರೆ 12, 5 ಮತ್ತು 21, 5 ಸಂಖ್ಯಾಯುಗ್ಮಗಳ ನಡುವೆ 1ನ್ನು ಬಿಟ್ಟು ಬೇರೆ ಯಾವ ಸಾಮಾನ್ಯ ಅಪವರ್ತನವೂ ಇಲ್ಲ). ಆಗ 12X21=252 ಸಹ 5ನ್ನು ಕುರಿತು ಅವಿಭಾಜ್ಯವಾಗಿದೆ. ತೋರಿಕೆಗೆ ಬಲು ಸ್ಪಷ್ಟ, ಅತಿ ಸುಲಭವೆಂದು ತೋರುವ ಈ ಪರಿಕರ್ಮ ಸಂಖ್ಯಾಸಿದ್ಧಾಂತದಲ್ಲಿ ಬಲು ಪ್ರಾಮುಖ್ಯವಾದದ್ದು.

20ನೆಯ ಶತಮಾನದಲ್ಲಿ ಗಣಿತವಿಜ್ಞಾನ ಬಹುಮುಖವಾಗಿ ಬೆಳೆದುದರ ಪರಿಣಾಮವಾಗಿ ಆ್ಯಲ್ಗರಿದಂ ಪದಕ್ಕೆ ವಿಶಾಲವಾದ ವ್ಯಾಖ್ಯೆ ನೀಡುವುದು ಆವಶ್ಯಕವಾಯಿತು. ಗಣಿತವಿಜ್ಞಾನದಲ್ಲಿ ಮತ್ತು ಇತರ ಶಿಕ್ಷಣ ವಿಭಾಗಗಳಲ್ಲಿ ಅಗತ್ಯವೆನಿಸುವ ರಾಶಿಯೊಂದನ್ನು

(ಕ್ವಾಂಟಿಟಿ) ಲೆಕ್ಕ ಹಾಕುವಾಗ ಅಥವಾ ಮಾಮೂಲು ಸಮಸ್ಯೆಯೊಂದನ್ನು ಬಿಡಿಸುವಾಗ ಅನೇಕ ವೇಳೆ ನಾವು ಪೂರ್ವಭಾವಿಯಾಗಿ ನಿಶ್ಚಯಿಸಲಾಗಿರುವ ಒಂದಷ್ಟು ಕ್ಲ್ಪಪ್ತವಿಧಿಗಳನ್ನು ಮೂಲದತ್ತಾಂಶಗಳ ಮೇಲೆ ಹೆಜ್ಜೆ ಹೆಜ್ಜೆಯಾಗಿ ಪ್ರಯೋಗಿಸುತ್ತ ಹೋಗುತ್ತೇವೆ. ಇಂಥ ವಿಧಿಸರಣಿಗಳಿಗೆ ಅಲ್ಗಾರಿದಂಗಳೆಂದು ಹೆಸರು. ಆಲ್ಗರಿದಂ ಒಂದನ್ನು ಬಳಸುವಾಗ ನಾವು ಯಾವ ಕಲ್ಪನಾಚಾತುರ್ಯವನ್ನೂ ಪ್ರದರ್ಶಿಸದೆ ಅದರಲ್ಲಿರುವ ವಿಧಿಗಳನ್ನು ಕೇವಲ ಯಾಂತ್ರಿಕವಾಗಿ ಪಾಲಿಸಿ ಕೊನೆಯಲ್ಲಿ ಆಪೇಕ್ಷಿತ ಉತ್ತರ ಪಡೆಯುತ್ತೇವೆ. ಆಲ್ಗರಿದಂ ಪದದ ಈ ಅರ್ಥವ್ಯಾಪ್ತಿ ಮುಖ್ಯವಾಗಿ ಗಣಕಯಂತ್ರಯುಗವಾದ (ಕಂಪ್ಯೂಟರ್ ಏಜ್) ಇಪ್ಪತ್ತನೆಯ ಶತಮಾನಕ್ಕೆ ಸಂಬಂಧಿಸಿದ್ದು. ಆಲ್ಗರಿದಂ ಬಗ್ಗೆ ಮೇಲೆ ಕೊಟ್ಟಿರುವ ವರ್ಣನೆ 'ಕ್ಲ್ಪಪ್ತ','ಯಾಂತ್ರಿಕ' ಮುಂತಾದ ಸ್ಥೂಲ ವಿಶೇಷಣಗಳನ್ನೊಳಗೊಂಡಿದೆ. ಆದರೆ ದತ್ತ ವಿಧಿಯೊಂದು ನಿಜಕ್ಕೂ ಕ್ಲ್ಪಪ್ತವೋ ಅಲ್ಲವೋ ಅದರ ಪ್ರಯೋಗ ಯಾಂತ್ರಿಕವೋ ಬುದ್ಧಿಪೂರ್ವಕವೋ ಎಂಬ ಪ್ರಶ್ನೆಗಳ ಬಗ್ಗೆ ಬೇರೆ ಬೇರೆ ಗಣಿತಜ್ಞರು ಬೇರೆ ಬೇರೆ ಮನೋಭಿಪ್ರಾಯಗಳನ್ನು ಇಟ್ಟುಕೊಂಡಿರಬಹುದಾದ ಕಾರಣ ಈ ವರ್ಣನೆ ಒಂದು ನಿಖರ ಗಣಿತೀಯ ವ್ಯಾಖ್ಯೆ ಎನಿಸದು. ಸ್ಥೂಲ ವಿಶೇಷಣಗಳ ಅರ್ಥವ್ಯಾಪ್ತಿಯನ್ನು ನಿಖರಗೊಳಿಸಿ ಆಲ್ಗರಿದಂ ಪ್ರಕರಣವನ್ನು ಒಂದು ಸೈದ್ಧಾಂತಿಕ ಚೌಕಟ್ಟಿನೊಳಗೆ ಅಳವಡಿಸಲು ಸಹಾಯಕವಾಗುವ ಪ್ರಯತ್ನಗಳನ್ನು 1932ರಲ್ಲಿ ಆಲೋನ್‌ಸೊ ಚರ್ಚ್ ಮತ್ತು ಎಸ್. ಸಿ. ಕ್ಲೀನ್; 1934ರಲ್ಲಿ ಕುರ್ಟ್ ಗೋಯ್ಡಲ್; 1936–37 ರಲ್ಲಿ ಅಲ್ಯಾನ್ ಎಂ. ಟ್ಯೂರಿಂಗ್ ಮತ್ತು (ಸ್ವತಂತ್ರವಾಗಿ) ಎಮಿಲ್ ಎಲ್. ಪೋಸ್ಟ್; 1951 ರಲ್ಲಿ (ಕಿರಿಯ) ಎ.ಎ. ಮಾರ್ಕಫ್ ಇವರೆಲ್ಲರೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅಂತಿಮ ವಿಶ್ಲೇಷಣೆಯಲ್ಲಿ ಈ ಎಲ್ಲ ಸಂಶೋಧಕರ ನಿರೂಪಣೆಗಳೂ ವಸ್ತುತಃ ಸಮಾನವೆಂದು ಸಾಧಿಸಲಾಗಿದೆ. ಆದರೆ 1932–37ರಲ್ಲಿ ನಡೆದ ಶೋಧನೆಗಳು ಪ್ರಥಮತಃ ಸಂಖ್ಯಾಸಂಬಂಧಿ ಸಮಸ್ಯೆಗಳನ್ನೇ ಕುರಿತವು. ಮಾರ್ಕಫ್ ಸಿದ್ಧಾಂತವಾದರೋ ಪ್ರಾರಂಭದಿಂದಲೇ ಸಾರ್ವತ್ರಿಕ ವ್ಯಾಪ್ತಿಯನ್ನು ಪ್ರದರ್ಶಿಸುತ್ತದೆ. ಈ ಕಾರಣಕ್ಕಾಗಿ ಪ್ರಸಕ್ತ ಲೇಖನದಲ್ಲಿ ಮಾರ್ಕಫ್ ಆಲ್ಗರಿದಂ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗುವುದು.

ಮಾರ್ಕಫ್ ಆ್ಯಲ್ಗರಿದಂಗಳ ಅಧ್ಯಯನಕ್ಕೆ 'ಅಕ್ಷರಮಾಲೆ', 'ಅಕ್ಷರ' ಮತ್ತು 'ವಾಕ್ಯ' ಎಂಬ ಪರಿಕಲ್ಪನೆಗಳೇ (ಕಾನ್‌ಸೆಪ್ಟ್ಸ್) ಪ್ರಧಾನ ಹಿನ್ನೆಲೆ. ಗಣಿತಶಾಸ್ತ್ರದಂಥ ಯಾವುದಾದರೊಂದು ಶಿಕ್ಷಣವಿಭಾಗದಲ್ಲಿ ಒಂದು ನಿರ್ದಿಷ್ಟ ಸಮಸ್ಯೆಯನ್ನು ವಿಶ್ಲೇಷಿಸುವಾಗ ಬಳಕೆಯಾಗುವ ಎಲ್ಲ ಬಿಡಿ ಸಂಕೇತಗಳನ್ನೂ ಕಲೆ ಹಾಕಿದಾಗ ನಮಗೆ ಆ ವಿಶ್ಲೇಷಣೆಯ ಅಕ್ಷರಮಾಲೆ (ಆಲ್ಫಬೆಟ್) ದೊರಕುವುದು. ಅಕ್ಷರಮಾಲೆಯಲ್ಲಿನ ಬಿಡಿ ಸಂಕೇತಗಳಿಗೆ ಅಕ್ಷರಗಳೆಂದು (ಲೆಟರ್ಸ್ ಅಥವಾ ಕ್ಯಾರೆಕ್ಟರ್ಸ್) ಹೆಸರು. ಈ ದೃಷ್ಟಿಯ ಮೇರೆಗೆ

ಅಕ್ಷರಮಾಲೆಯೊಂದು ರೂಢಿಯ 'ಅ', 'ಆ', 'a','b', , ಮುಂತಾದುವುಗಳನ್ನಷ್ಟೇ ಅಲ್ಲದೆ '+', 'X', '='. '2',

ಇತ್ಯಾದಿ ಚಿಹ್ನೆಗಳನ್ನೂ ಒಳಗೊಳ್ಳಬಹುದು. ಆಗ ಅವೆಲ್ಲವೂ ಅಕ್ಷರಗಳೆನಿಸುತ್ತವೆ. ಕೆಲವಾರು ಅಕ್ಷರಗಳನ್ನು ಸಾಲಾಗಿ ಒಂದರ ಪಕ್ಕದಲ್ಲೊಂದರಂತೆ ಬರೆದಾಗ ಜನಿಸುವ ಸರಪಳಿಗಳನ್ನು ವಾಕ್ಯಗಳೆಂದು (ಸ್ಟ್ರಿಂಗ್ಸ್ ಅಥವಾ ವರ್ಡ್ಸ್) ಕರೆಯುತ್ತೇವೆ. ವಾಕ್ಯವೊಂದರ ಹಲವಾರು ಸ್ಥಾನಗಳಲ್ಲಿ ಒಂದೇ ಅಕ್ಷರ ಮತ್ತೆ ಮತ್ತೆ ಕಾಣಿಸಿಕೊಳ್ಳಬಹುದು. ಆದರೆ ಅನಂತ ಸಂಖ್ಯೆಯಷ್ಟು (ಇನ್‌ಫಿನಿಟ್ ನಂಬರ್) ಅಕ್ಷರಗಳನ್ನು ಒಳಗೊಂಡ 'ಅಕ್ಷರಮಾಲೆ' ಗಳಿಗಾಗಲೀ ಅನಂತ ಸಂಖ್ಯೆಯನ್ನು ಅಕ್ಷರಸ್ಥಾನಗಳನ್ನು ಒಳಗೊಂಡ 'ವಾಕ್ಯ' ಗಳಿಗಾಗಲೀ ಮಾರ್ಕಫ್ ಸಿದ್ಧಾಂತದಲ್ಲಿ ಎಡೆಯಿಲ್ಲ.

ವಾಸ್ತವಿಕ ಜೀವನದಲ್ಲಿ ನಾವು ಅನೇಕ ವೇಳೆ ವಾಕ್ಯಗಳ ಅಕ್ಷರಗಳನ್ನು ಸಾಲಾಗಿ ಒಂದರ ಪಕ್ಕದಲ್ಲೊಂದರಂತೆ ಬರೆಯುವುದಿಲ್ಲ; 'ಬಣ್ಣದ ಚಿಟ್ಟೆ' ಎಂದು ಬರೆಯುತ್ತೇವೆ ವಿನಾ 'ಬಣಣದ ಚಿಟೆಟ' ಎಂದಲ್ಲ, '$4^3 = 8^2$' ಎಂದು ಬರೆಯುತ್ತೇವೇ ವಿನಾ '43 = 82' ಎಂದಲ್ಲ. ಆದರೆ ಈ ಸನ್ನಿವೇಶಗಳಲ್ಲಿ ಕೂಡ ಕೆಲವು ಹೊಸ ಅಕ್ಷರಗಳನ್ನು ನಮ್ಮ ವರ್ಣಮಾಲೆಗೆ ಸೇರಿಸುವುದರ ಮೂಲಕ ಇಂಥ 'ಅಡ್ಡಾದಿಡ್ಡಿ' ವಾಕ್ಯಗಳನ್ನೆಲ್ಲ ನೇರ ಸರಪಳಿಗಳಾಗಿ ಮಾರ್ಪಡಿಸಿಕೊಳ್ಳಬಹುದು. ಉದಾಹರಣೆಗೆ, ಹೊಸದಾಗಿ ಸೇರಿಸಿದ ಅಕ್ಷರಗಳು * ಮತ್ತು ψ ಅಗಿರಲಿ. ಆಗ '$4^3 = 8^2$' ಅನ್ನು 4*3 = 8*2 ಎಂದೂ ಬಣ್ಣದ ಚಿಟ್ಟೆಯನ್ನು ಬಣψಣದ ಚಿಟೆψಟ' ಎಂದೂ ಬರೆಯಲು ಅಡ್ಡಿಯಿಲ್ಲವಷ್ಟೆ. ಆದ್ದರಿಂದ ಮಾರ್ಕಫ್ ನಿರೂಪಣೆಯಲ್ಲಿ ನಮ್ಮ 'ಅಡ್ಡಾದಿಡ್ಡಿ' ವಾಕ್ಯಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವ ಅಗತ್ಯವಿಲ್ಲ.

ವೀಕ್ಷಕರ ಭಾಷೆಯಲ್ಲಿ ವಾಕ್ಯಗಳು ಕೆಲವೊಮ್ಮೆ ನಿರ್ದಿಷ್ಟ ಅರ್ಥವನ್ನುಳ್ಳ ಮಾಹಿತಿಗಳನ್ನು ವ್ಯಕ್ತಪಡಿಸಬಹುದು. ಆದರೆ ಈ ರೀತಿಯ ಅರ್ಥವಿರಲಿ ಬಿಡಲಿ, ಅಕ್ಷರಗಳ ಸಾಂತ ಸರಪಳಿಗಳೆಲ್ಲವೂ (ಫೈನೈಟ್ ಸ್ಟ್ರಿಂಗ್ಸ್) ನಮ್ಮ ದೃಷ್ಟಿಯಲ್ಲಿ ವಾಕ್ಯಗಳೇ ಆಗುತ್ತವೆ ಎಂಬುದನ್ನು ಗಮನಿಸಬೇಕು. ವಾಕ್ಯಗಳ ಅರ್ಥಕ್ಕೂ ಮಾರ್ಕಫ್ ಸಿದ್ಧಾಂತಕ್ಕೂ ನೇರವಾದ ಯಾವ ಸಂಬಂಧವೂ ಇಲ್ಲ. ವಿಶಿಷ್ಟವಾಗಿ ವಾಕ್ಯವೊಂದರ ವಿವಿಧ ಭಾಗಗಳನ್ನು ಸಹ ನಾವು ಮತ್ತೆ ವಾಕ್ಯಗಳೆಂದೇ ಕರೆಯುತ್ತೇವೆ. ಒಂದು ಇಡೀ ವಾಕ್ಯದಲ್ಲಿ ಒಂದೇ ಅಕ್ಷರವಿರಬಹುದು. ಅಷ್ಟೇ ಅಲ್ಲದೆ ಏಕರೂಪ ನಿರೂಪಣೆಯ ಸೌಲಭ್ಯಕ್ಕಾಗಿ ಮಾರ್ಕಫ್ ಸಿದ್ಧಾಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಅಕ್ಷರವನ್ನು ಒಳಗೊಳ್ಳದ ಶೂನ್ಯವಾಕ್ಯದ (ನಲ್‌ವರ್ಡ್) ಪರಿಕಲ್ಪನೆಯನ್ನು ಕೂಡ ಬಳಸಿಕೊಳ್ಳುತ್ತದೆ ; ಶೂನ್ಯವಾಕ್ಯವೆಂದರೆ ಖಾಲಿ ಜಾಗವೆಂಬ ಅಭಿಪ್ರಾಯವನ್ನು ಸದ್ಯದಲ್ಲಿ ನಾವಿಟ್ಟುಕೊಳ್ಳಬಹುದು.

ಈಗ ಒಂದು ಸರಳ ನಿದರ್ಶನದ ಮುಖಾಂತರ ಮಾರ್ಕಫ್ ಆ್ಯಲ್ಗರಿದಂಗಳ ಪರಿಚಯ ಮಾಡಿಕೊಳ್ಳಲು ನಾವು ಸಿದ್ಧವಾಗಿದ್ದೇವೆ. ನಮ್ಮ ಅಕ್ಷರಮಾಲೆಯಲ್ಲಿ P, 0,1,2,3,4,5,6,7,8 ಮತ್ತು 9 ಎಂಬ ಹನ್ನೊಂದು ಅಕ್ಷರಗಳಿರಲಿ. ಇವುಗಳ ಪೈಕಿ Pಯ ವಿನಾ ಉಳಿದೆಲ್ಲವೂ ಮೂಲ ದತ್ತಾಂಶಗಳಲ್ಲಿ ಪ್ರವೇಶಿಸಬಲ್ಲುವೆಂದು ಭಾವಿಸೋಣ. ಈ ಕೆಳಗಿನ ವಿಧಿಗಳನ್ನು ಗಮನಿಸಿ.

(1) 9P→P0 (ಅಂದರೆ 9P ಯನ್ನು Po ಗೆ ಬದಲಾಯಿಸಿ)

(2) ಪರಿಸಮಾಪಕ ವಿಧಿ (ಕನ್‌ಕ್ಲೂಡಿಂಗ್ ಫಾರ್ಮ್ಯುಲಾ) 8P?9, (ಅಂದರೆ '8P' ಯನ್ನು '9' ಕ್ಕೆ ಬದಲಾಯಿಸಿ ಆ್ಯಲ್ಗರಿದಂ ಕ್ರಿಯೆಯನ್ನು ಅಷ್ಟಕ್ಕೇ ಕೊನೆಗಾಣಿಸಿ)

(3) ಪರಿಸಮಾಪಕ ವಿಧಿ 7P→8

(4) ಪರಿಸಮಾಪಕ ವಿಧಿ 6P→7

ಇತ್ಯಾದಿ

(9) ಪರಿಸಮಾಪಕ ವಿಧಿ 1P→2

(10) ಪರಿಸಮಾಪಕ ವಿಧಿ 0P→1

(11) ಪರಿಸಮಾಪಕ ವಿಧಿ P→1

(12) (ಖಾಲಿಜಾಗ) →P, (ಅಂದರೆ ದತ್ತವಾಕ್ಯದ ತುದಿಗೆ P ಯನ್ನು ಲಗತ್ತಿಸಿ). ಈ ವಿಧಿಗಳೊಂದೊಂದೂ ಒಂದು ನಿರ್ದಿಷ್ಟ ವಾಕ್ಯದ (ಅಥವಾ ವಾಕ್ಯವಿಭಾಗದ) ಸ್ಥಾನದಲ್ಲಿ ಇನ್ನೊಂದು ನಿರ್ದಿಷ್ಟ ವಾಕ್ಯವನ್ನು ಆದೇಶಿಸುವಂತೆ ನಮಗೆ ತಿಳಿಯಪಡಿಸುತ್ತದೆ. ಇಂಥ ಆದೇಶಸೂತ್ರಗಳ (ಸಬ್‌ಸ್ಟಿಟ್ಯೂಷನ್ ಫಾರ್ಮ್ಯುಲೇ) ಸಮುದಾಯವನ್ನು ನಾವು ಒಂದು ಮಾರ್ಕಫ್ ಆಲ್ಗರಿದಂ ಎಂದು ಕರೆಯುತ್ತೇವೆ. ಮಾರ್ಕಫ್ ಆ್ಯಲ್ಗರಿದಂಗಳು ಒಳಗೊಳ್ಳುವ ಆದೇಶಸೂತ್ರಗಳ ಒಟ್ಟು ಸಂಖ್ಯೆ ಪ್ರತಿ ಸಂದರ್ಭದಲ್ಲೂ ಸಾಂತವಾಗಿರಬೇಕಲ್ಲದೆ ಒಂದೊಂದು ಆದೇಶ ಸೂತ್ರದ ಉದ್ದವೂ ಸಾಂತವೇ ಆಗಿರಬೇಕು.

ಮೇಲೆ ನಮೂದಿಸಿರುವ ಆಲ್ಗರಿದಂನ ಸಂಪೂರ್ಣ ಕ್ರಿಯಾವಿಧಾನವನ್ನು ಗ್ರಹಿಸುವ ಸಲುವಾಗಿ ಅದನ್ನು '79199' ಎಂಬ ಒಂದು ವಾಕ್ಯದ (ದತ್ತವಾಕ್ಯ) ಮೇಲೆ ಪ್ರಯೋಗಿಸಿ ನೋಡೋಣ. ಮಾರ್ಕಫ್ ಸಿದ್ಧಾಂತದಲ್ಲಿ ವಿಧಿಪ್ರಯೋಗಗಳು ನಾಲ್ಕು ನಿಯಮಗಳಿಗೆ ಬದ್ಧವಾಗಿರಬೇಕಾಗುವುದು : (a) ಆಲ್ಗರಿದಂನಲ್ಲಿ ವಿಧಿಗಳನ್ನು ಯಾವ ಕ್ರಮದಲ್ಲಿ ಬರೆಯಲಾಗಿದೆಯೋ ಅದೇ ಆದ್ಯತೆಗನುಸಾರವಾಗಿ ಅವನ್ನು ವಾಕ್ಯಗಳ ಮೇಲೆ ಪ್ರಯೋಗಿಸಲು ಯತ್ನಿಸತಕ್ಕದ್ದು. (b) ವಿಧಿಯೊಂದನ್ನು ಒಂದೇ ವಾಕ್ಯದ ಹಲವಾರು ವಿಭಾಗಗಳ ಮೇಲೆ ಪ್ರಯೋಗಿಸಲು ಸಾಧ್ಯವಾಗುವ ಸಂದರ್ಭದಲ್ಲಿ ಅದನ್ನು ಆ ವಿಭಾಗಗಳ ಪೈಕಿ ಅತ್ಯಂತ ಬಲ (ಅಥವಾ ಎಡ) ಕಡೆಯಲ್ಲಿರುವುದರ ಮೇಲೆ ಮಾತ್ರ ಪ್ರಯೋಗಿಸತಕ್ಕದ್ದು. (c) ಪರಿಸಮಾಪಕಾಜ್ಞೆಯೊಂದನ್ನು ಪಾಲಿಸಿದ ಕೂಡಲೇ ಆಲ್ಗರಿದಂನ ಕ್ರಿಯಾಸರಣಿಯನ್ನು ನಿಲ್ಲಿಸತಕ್ಕದ್ದು ಮತ್ತು (d) ಆಲ್ಗರಿದಂನಲ್ಲಿ ಪ್ರಯೋಗಿಸಲು ಸಾಧ್ಯವಾಗುವಂಥ ವಿಧಿಗಳೇ ಇಲ್ಲದೆ ಹೋದಾಗ ಸಹ ಕ್ರಿಯಾಸರಣಿಯನ್ನು ಮುಕ್ತಾಯ ಮಾಡತಕ್ಕದ್ದು. '79199' ರಲ್ಲಿ P ಅಕ್ಷರವಿಲ್ಲದ ಕಾರಣ ಅದರಮೇಲೆ ಮೇಲೆ ನಮೂದಿಸಿರುವ ಮೊದಲನೆಯ ಹನ್ನೊಂದು ವಿಧಿಗಳನ್ನು ಪ್ರಯೋಗಿಸಲು ಸಾಧ್ಯವಿಲ್ಲ. (xii) ನೆಯ ವಿಧಿ ಪ್ರಯೋಗದಿಂದ ನಮ್ಮ '79199' ವಾಕ್ಯ '7919P' ಎಂಬುದಾಗಿ ಪರಿವರ್ತನೆ ಹೊಂದುವುದು. ಈಗ '79199' ವಾಕ್ಯದ ಮೇಲೆ (i) ನೆಯ ವಿಧಿಯನ್ನು ಪ್ರಯೋಗಿಸಬಹುದು. ಆ ಬಳಿಕ ಅದು 7919PO' ಎಂದಾಗುವುದು. ಇದರ ಮೇಲೆ ಮತ್ತೆ (i) ನೆಯ ವಿಧಿಯನ್ನು ಪ್ರಯೋಗಿಸಿ '791POO'ಯನ್ನು ಪಡೆಯುತ್ತೇವೆ. '791POO' ಯನ್ನು (ix)ನೆಯ ವಿಧಿಪ್ರಯೋಗಕ್ಕೆ ಗುರಿಮಾಡಿದಾಗ [ಅದರ ಮೇಲೆ (i) ರಿಂದ (viii) ರವರೆಗೆ ಯಾವ ವಿಧಿಗಳನ್ನೂ ಪ್ರಯೋಗಿಸಲು ಸಾಧ್ಯವಾಗುವುದಿಲ್ಲವಷ್ಟೆ] ಅದು '79200' ಎಂಬ ವಾಕ್ಯವಾಗಿ ಮಾರ್ಪಡುತ್ತದೆ. (ix) ನೆಯ ವಿಧಿ ಪರಿಸಮಾಪಕವಾದ್ದರಿಂದ ಆಲ್ಗರಿದಂ ಕ್ರಿಯೆ ಇಲ್ಲಿಗೆ ಮುಕ್ತಾಯವಾಗುವುದು. ಅಂದರೆ ನಮ್ಮ ಅಲ್ಗಾರಿತಂ '79199' ನ್ನು "79200"ಗೆ ಪರಿವರ್ತಿಸುತ್ತದೆಂದಾಯಿತು. ಈಗ '79199"ನ್ನು ಎಂದಿನಂತೆ ಒಂದು ಸಂಖ್ಯೆಯೆಂದು ಅರ್ಥ ಮಾಡಿದಾಗ'79200' ಅದರ ಮುಂದಿನ ಸಂಖ್ಯೆಯೆಂದು ನಮಗೆ ಹೊಳೆಯುತ್ತದೆ. ಈ ಅರ್ಥನಿರೂಪಣೆಯ ಚೌಕಟ್ಟಿನಲ್ಲಿ ಮೇಲಿನ ಆಲ್ಗರಿದಂ ಪ್ರತಿಯೊಂದು ಸಂಖ್ಯೆಯನ್ನೂ ಅದರ ಮುಂದಿನ ಸಂಖ್ಯೆಯನ್ನಾಗಿ ಮಾರ್ಪಡಿಸುವುದು. ಆದರೆ ಆಲ್ಗರಿದಂನ ಶುದ್ಧ ಅಸ್ತಿತ್ವಕ್ಕೆ ಇಂಥ ಅರ್ಥನಿರೂಪಣೆಗಳ ಆಸರೆ ಅನಗತ್ಯ. '79199'ರ ಸಂಬಂಧದಲ್ಲಿ ಮೇಲಿನ ಆಲ್ಗರಿದಂ ಕ್ರಿಯೆ ಕೆಲವಷ್ಟು (ಅಂದರೆ ಸಾಂತ ಸಂಖ್ಯೆಯಷ್ಟು) ಹೆಜ್ಜೆಗಳ ತರುವಾಯ ಅಂತ್ಯಗೊಳ್ಳುವುದರಿಂದ ಈ ಆ್ಯಲ್ಗರಿದಂ '79199'ಕ್ಕೆ ಅನ್ವಯವಾಗುವುದೆಂದು (ಅಪ್ಲಿಕಬಲ್) ನಾವು ಹೇಳುತ್ತೇವೆ. ಆದರೆ '9→9' ಎಂಬ ಏಕೈಕ (ಅಪರಿಸಮಾಪಕ) ವಿಧಿಯನ್ನೊಳಗೊಳ್ಳುವ ಮಾರ್ಕಫ್ ಆ್ಯಲ್ಗರಿದಂ '79199' ಅನ್ವಯವಾಗುವುದಿಲ್ಲ; ಏಕೆಂದರೆ '79199' ರ ಬಗ್ಗೆ ಈ ಆಲ್ಗರಿದಂ ಪ್ರಯೋಗ ಅನಂತವಾಗಿ ಮತ್ತೆ ಮತ್ತೆ '79199' ಎಂಬ ವಾಕ್ಯಕ್ಕೆ ಪುನರ್ಜನ್ಮ

ನೀಡುತ್ತ ಹೋಗುವುದು. (ದತ್ತವಾಕ್ಯವಾಗಿ '79199'ರ ಬದಲು '78188'ನ್ನು ತೆಗೆದುಕೊಂಡಲ್ಲಿ ಈ '9→9' ಅಲ್ಗರಿದಂ ಕೂಡ ಅನ್ವಯವಾಗುವುದೆಂಬ ಅಂಶವನ್ನು ಗಮನಿಸಿ '78188'ರ ಮೇಲೆ '9→9' ವಿಧಿಯನ್ನು ಪ್ರಯೋಗಿಸಲು ಸಾಧ್ಯವಿಲ್ಲದಿರುವುದರಿಂದ ಈ ಅಲ್ಗರಿದಂ '78188' ನ್ನು ಹಾಗೆಯೇ ಉಳಿಸಿಡುತ್ತದೆ).

ಮಾರ್ಕಫ಼ ಅಲ್ಗರಿದಂಗಳ ಹಲವಾರು ರೀತಿಯ ಸಂಯೋಜನೆಗಳನ್ನು ಮತ್ತೆ ಮಾರ್ಕಫ಼್ ಅಲ್ಗರಿದಂಗಳಾಗಿಯೇ ಪುನಾರಚಿಸಬಹುದು. ಉದಾಹರಣೆಗೆ L ಎಂಬ ಮಾರ್ಕಫ್ ಅಲ್ಗರಿದಂ 'ಕ ಖ ಫ಼.ಜ 'ಎಂಬ ದತ್ತವಾಕ್ಯವನ್ನು 'ಚ ಛ . . . ಝ ಞ' ಕ್ಕೆ ಪರಿವರ್ತಿಸಲಿ. ಆ ಬಳಿಕ 'ಚ ಛ . . . ಝ ಞ' ಮೇಲೆ M ಎಂಬ ಇನ್ನೊಂದು ಮಾರ್ಕಫ್ ಅಲ್ಗರಿದಂನ್ನು ಪ್ರಯೋಗಿಸಿದಾಗ ಅದು 'ಟ ಠ ಢ ಣ' ಆಗಿ ಮಾರ್ಪಡಬಹುದು. ಈ ಸನ್ನಿವೇಶದಲ್ಲಿ 'ಕ ಖ. . . ಫ ಜ' ವನ್ನು ನೇರವಾಗಿ 'ಟ ಠ. . . ಢ ಣ' ಕ್ಕೆ ಪರಿವರ್ತಿಸಿ ಕೊಡುವಂತೆ N ಎಂಬ ಒಂದೇ ಒಂದು ಮಾರ್ಕಫ್ ಅಲ್ಗರಿದಂನ್ನು ನಿಯೋಜಿಸಲು ಸಾಧ್ಯವಾಗುತ್ತದೆ. ಮಾರ್ಕಫ್ ಸಿದ್ಧಾಂತದ ಆದಿಯಲ್ಲಿ ಕಾಣಿಸಿಕೊಳ್ಳುವ ಇಂಥ ಮೂಲಭೂತ ಪ್ರಮೇಯಗಳು ಸ್ವಾಭಾವಿಕವಾಗಿಯೇ ಬರಬರುತ್ತ ಹೆಚ್ಚು ಹೆಚ್ಚು ಸಂಕೀರ್ಣವಾಗತೊಡಗುವುವು. ಈ ಶ್ರೇಣಿಯ ಪ್ರಮೇಯಗಳ ಪೈಕಿ ಅತಿ ಮುಖ್ಯವಾದುವೆಂದರೆ ಮಾರ್ಕಫ್ ಸಾರ್ವತ್ರಿಕ ಅಲ್ಗರಿದಂ ಪ್ರಮೇಯ. ಪ್ರತಿ ಮಾರ್ಕಫ್ ಅಲ್ಗರಿದಂನಲ್ಲೂ ಹಲವಾರು ವಿಧಿಗಳಿರುತ್ತವಷ್ಟೆ. ಈಗ ಒಂದು ಕಡೆ ಈ ವಿಧಿಗಳ ಇಡೀ ಸಮುದಾಯವನ್ನೂ ಇನ್ನೊಂದು ಕಡೆ ಅಲ್ಗರಿದಂನ ಪ್ರಯೋಗಕ್ಕಾಗಿ ಆಯ್ಕೆ ಮಾಡಲಾಗಿರುವ ದತ್ತವಾಕ್ಯವನ್ನೂ ಒಟ್ಟುಗೂಡಿಸಿ ವಿಸ್ತೃತ ಅಕ್ಷರಮಾಲೆಯೊಂದರಲ್ಲಿ ಒಂದೇ ಒಂದು ಸಂಯುಕ್ತ ವಾಕ್ಯವನ್ನಾಗಿ ಬರೆದಿಡಬಹುದು. ಉದಾಹರಣೆಗೆ, '79199'ನ್ನು ಅದರ ಮುಂದಿನ ಸಂಖ್ಯೆಯನ್ನಾಗಿ ಪರಿವರ್ತಿಸುವ ಅಲ್ಗರಿದಂನ ವಿಧಿಗಳನ್ನೂ '79199' ಎಂಬ ದತ್ತವಾಕ್ಯವನ್ನೂ ಕೆಳಗಿನ ನಮೂನೆಯಲ್ಲಿ ಒಟ್ಟುಗೂಡಿಸಿ ಬರೆಯಬಹುದು :

A9P→P0BSP→9B7P→8B6P→7B. . .BIP
→2B0P→IBP→1A (ಖಾಲಿಜಾಗ)
→PC 79199

ಈ ನಮೂನೆಯಲ್ಲಿ ಅಪರಿಸಮಾಪಕ ವಿಧಿಗಳ ಪ್ರಾರಂಭವನ್ನು A ಅಕ್ಷರವೂ ಪರಿಸಮಾಪಕ ವಿಧಿಗಳ ಪ್ರಾರಂಭವನ್ನು B ಅಕ್ಷರವೂ ದತ್ತವಾಕ್ಯದ ಪ್ರಾರಂಭವನ್ನು C ಅಕ್ಷರವೂ ಸೂಚಿಸುತ್ತವೆ. ಈಗ ಸಾರ್ವತ್ರಿಕ ಅಲ್ಗರಿದಂ (ಯೂನಿವರ್ಸಲ್ ಅಲ್ಗರಿದಂ) ಎಂಬ ಒಂದು ಆಶ್ಚರ್ಯಕರ ಆ್ಯಲ್ಗರಿದಂ (ಅದರ ಇರವನ್ನು ಸಾರ್ವತ್ರಿಕ ಆಲ್ಗರಿದಂ ಪ್ರಮೇಯ ಸಮರ್ಥಿಸುತ್ತದೆ) ಇಂಥ ಸಂಯುಕ್ತವಾಕ್ಯದ ಮೇಲೆ ವರ್ತಿಸಿ ಇತರ ಅಲ್ಗರಿತಂಗಳು ಬಿಡಿಬಿಡಿಯಾಗಿ ಯಾವ ಕೆಲಸಗಳನ್ನು ನಿರ್ವಹಿಸುತ್ತವೋ ವಸ್ತುತಃ ಅದೇ ಕೆಲಸವನ್ನು ತಾನೊಂದೇ ನಿರ್ವಹಿಸಿಕೊಡುತ್ತದೆ. ಉದಾಹರಣೆಗೆ ಈ ಸಾರ್ವತ್ರಿಕ ಅಲ್ಗಾರತಂ ಮೇಲೆ ಬರೆದಿರುವ A9P→… …→PC79199 ಎಂಬ ಉದ್ದನೆಯ ವಾಕ್ಯದ ಮೇಲೆ ವರ್ತಿಸಿ (ಬರಿಯ 79199 ರ ಮೇಲಲ್ಲ) ಅದನ್ನು 79200 ಮಾರ್ಪಡಿಸುವುದು.

ಗಣಿತಶಾಸ್ತ್ರದ ದೀರ್ಘ ಇತಿಹಾಸದಲ್ಲಿ ಸಹಸ್ರಾರು ನಿರ್ದಿಷ್ಟ ಗಣನ ಪರಿಕರ್ಮಗಳು ನಿಯೋಜಿತವಾಗಿದ್ದು ಅವೆಲ್ಲವನ್ನೂ ಅಲ್ಗರಿದಂಗಳೆಂದೇ ಕರೆಯಲಾಗಿದೆ. ಇಂಥ ಗಣನ ವಿಧಾನಗಳೆಲ್ಲವೂ ಮೇಲೆ ಸೂಚಿಸಿರುವ ಮಾರ್ಕಫ್ ಅಲ್ಗರಿದಂಗಳ ವ್ಯಾಖ್ಯೆಗೆ ನೇರವಾಗಿ ಹೊಂದಿಕೊಳ್ಳುವುದಿಲ್ಲವೆಂಬುದು ನಿಜ. ಆದರೆ ಗಮನಾರ್ಹ ಸಂಗತಿಯೆಂದರೆ ಒಂದು ಅಪವಾದ (ಎಕ್ಸೆಪ್ಷನ್) ಕೂಡ ಇಲ್ಲದಂತೆ ಈ ವೈವಿಧ್ಯಪೂರ್ಣ ಪರಿಕರ್ಮಗಳೆಲ್ಲವನ್ನೂ ಮಾರ್ಕಫ್ ಆ್ಯಲ್ಗರಿದಂಗಳಾಗಿ ಪುನಾರಚಿಸಿಕೊಳ್ಳಲು ಸಾಧ್ಯವುಂಟೆಂಬುದು. ಇದರಿಂದ ಅಲ್ಗರಿದಂ ಸಂಬಂಧವಾಗಿ ಗಣಿತಜ್ಞರಲ್ಲಿದ್ದ ಅವ್ಯಕ್ತ ಮನೋಭಿಪ್ರಾಯವನ್ನು ಮಾರ್ಕಫ್ ಸಿದ್ಧಾಂತ ತಪ್ಪಿಲ್ಲದೆ ನಿಖರವಾಗಿ ಪ್ರತಿಬಿಂಬಿಸಿದೆಯೆಂದು ನಂಬಬಹುದು.

ಸಂಖ್ಯೆಯೊಂದನ್ನು ಕೊಟ್ಟಾಗ ಅದರ ಮುಂದಿನ ಸಂಖ್ಯೆಯನ್ನು ಗೊತ್ತು ಮಾಡುವ ಸಮಸ್ಯೆಯನ್ನು ಒಂದು ಅಲ್ಗರಿದಂ ಮೂಲಕ ಬಿಡಿಸಲು ಸಾಧ್ಯವಾಯಿತಷ್ಟೆ. ಹೀಗೆಯೇ ಇನ್ನೂ ಅನೇಕ ಸಮಸ್ಯೆಗಳನ್ನು ಅಲ್ಗಾರಿತಂಗಳ ಮೂಲಕವೇ ಬಿಡಿಸಬಹುದು. ಉದಾಹರಣೆಗೆ ಗಣಕಯಂತ್ರ ವಿಜ್ಞಾನದಲ್ಲಿ (ಕಂಪ್ಯೂಟರ್ ಸೈನ್ಸ್) ಯಂತ್ರಗಳ ಸಹಾಯದಿಂದ ಒಂದು ಭಾಷೆಯ ವಾಕ್ಯಗಳನ್ನು ಮತ್ತೊಂದು ಭಾಷೆಗೆ ತರ್ಜುಮೆಮಾಡುವ ಪ್ರಯತ್ನಗಳು ಅನುವಾದಕ ಅಲ್ಗರಿದಂಗಳನ್ನು (ಮೆಷೀನ್ ಟ್ರಾನ್ಸ್‌ಲೇಷನ್ ಆ್ಯಲ್ಗರಿದಂಸ್) ಅವಲಂಬಿಸಬಹುದು.

ಯಾವುದಾದರೊಂದು ಪ್ರಶ್ನೆಗೆ ಅಲ್ಗರಿದಂ ಉತ್ತರವಿದ್ದಲ್ಲಿ ಆ ಉತ್ತರದ ತಾರ್ಕಿಕ ಭದ್ರತೆ ಸಂದೇಹಾತೀತವೆನಿಸುವುದು. ಉದಾಹರಣೆಗೆ '79199'ರ ಮುಂದಿನ ಸಂಖ್ಯೆ' ಎಂಬಂಥ ಅಕ್ಷರವೃಂದಗಳು ಯಾವ ಆಭಾಸಗಳಿಗೂ ಜನ್ಮ ನೀಡಿಲ್ಲ. ಆದರೆ '37'ಕ್ಕಿಂತ ಕಡಿಮೆ ಅಕ್ಷರಗಳಲ್ಲಿ ವರ್ಣಿಸಲು ಸಾಧ್ಯವಾಗದ ಕನಿಷ್ಠ ಸಂಖ್ಯೆ' ಎಂಬ ಅಕ್ಷರವೃಂದವನ್ನು ಗಮನಿಸಿ, ನಿಜಕ್ಕೂ ಈ ಸಂಖ್ಯೆ ಇರುವುದಾದರೆ ಅದನ್ನು ಇದೇ ಅಕ್ಷರವೃಂದವೇ ಕೇವಲ 36 ಅಕ್ಷರಗಳಲ್ಲಿ ವರ್ಣಿಸಿರುವುದರಿಂದ (ಒತ್ತಕ್ಷರಾದಿಗಳೂ ಸೇರಿದಂತೆ ಎಣಿಸಿ ನೋಡಿ) ಬೌದ್ಧಿಕ ಗೊಂದಲಕ್ಕೆ ಎಡೆಯುಂಟಾಗುವುದು (ಜಿ.ಜಿ. ಬೆರಿ ಅವರ ಅಭಾಸ). ಅಂದಮೇಲೆ ಸಂಖ್ಯೆಯನ್ನು ರಚಿಸಲು ಅಲ್ಗರಿದಂ ಆಧಾರಿತ ಮಾರ್ಗವೊಂದನ್ನು ನಿಯೋಜಿಸುವ ಮುನ್ನವೇ ಅದರ ಗುಣಲಕ್ಷಣಗಳ ಪ್ರಸ್ತಾಪ ದೋಷಯುಕ್ತವಾಗಬಹುದೆಂದಾಯಿತು.

ಬಹುಶಃ ಆ್ಯಲ್ಗರಿದಂಗಳ ಬಗ್ಗೆ ನಡೆದಿರುವ ಸಂಶೋಧನೆಗಳ ಅತ್ಯಂತ ಗಮನಾರ್ಹ ಫಲಿತಾಂಶವೆಂದರೆ ಎಲ್ಲ ಸಮಸ್ಯೆಗಳನ್ನೂ ಅಲ್ಗರಿದಂಗಳ ಮೂಲಕವೇ ಬಿಡಿಸಲು ಸಾಧ್ಯವಿಲ್ಲವೆಂಬುದು. ಉದಾಹರಣೆಗೆ ಇಂದು ವ್ಯಾಪಕವಾಗಿ ಬಳಕೆಯಲ್ಲಿರುವ ಪ್ರೆಡಿಕೇಟ್ ಕ್ಯಾಲ್‌ಕ್ಯುಲಸ್ (ನೋಡಿ– ಕಲನಶಾಸ್ತ್ರ) ಎಂಬ ಗಣಿತತರ್ಕ ಪದ್ಧತಿಯ ಆಯಕಟ್ಟಿನಲ್ಲಿ ಕೊಟ್ಟಿರುವ ಪ್ರಮೇಯವೊಂದನ್ನು ಸಮರ್ಥಿಸಲು ಸಾಧ್ಯವುಂಟೋ ಇಲ್ಲವೋ ಎಂಬ ಪ್ರಶ್ನೆಯನ್ನು ಇತ್ಯರ್ಥ ಮಾಡಲು ಯಾವ ಅಲ್ಗಾರಿತಮ್ಮೂ ಇಲ್ಲವೆಂದು ಸಾಧಿಸಲಾಗಿದೆ.

ಆಗಲೇ ತಿಳಿಸಿರುವಂತೆ ಅಲ್ಗಾರಿತಂಗಳ ಪ್ರಯೋಗ ಒಂದು ಯಾಂತ್ರಿಕ ಕ್ರಿಯೆ ಮಾತ್ರ. ನಿರ್ದಿಷ್ಟ ಸನ್ನಿವೇಶಗಳಲ್ಲಿ ತಲೆದೋರುವ ಅಲ್ಗಾರಿತಂಗಳ ಅಭಾವ ಅಂಥ ಸನ್ನಿವೇಶಗಳಲ್ಲಿ ಕಲ್ಪನಾಚಾತುರ್ಯವಿಲ್ಲದೆ ಯಾಂತ್ರಿಕವಾಗಿ ಸಮಸ್ಯೆಗಳನ್ನು ಬಿಡಿಸಲು ಸಾಧ್ಯವಿಲ್ಲವೆಂಬ ಸತ್ಯಾಂಶವನ್ನು ಪ್ರತಿಬಿಂಬಿಸುತ್ತದೆ. ಚದುರಂಗ ಆಟವೇ ಮುಂತಾದ ಇನ್ನು ಕೆಲವು ಸನ್ನಿವೇಶಗಳಲ್ಲಿ ತತ್ತ್ವತಃ ಖಾತರಿಯಾಗಿ ಯಶಸ್ಸನ್ನು ದೊರಕಿಸಿ ಕೊಡುವ ಆ್ಯಲ್ಗರಿದಂಗಳಿರಬಹುದಾದರೂ ಅವುಗಳ ನೇರ ಪ್ರಯೋಗಕ್ಕೆ ಮನುಷ್ಯರ ಜೀವಮಾನಕ್ಕಿಂತಲೂ ದೀರ್ಘತರ ಕಾಲಾವಧಿಗಳು ಅವಶ್ಯವಾಗುತ್ತವೆ. ಆದ್ದರಿಂದ ಅಂಥ ಕ್ಷೇತ್ರಗಳಲ್ಲಿ ಕೂಡ ಯಾಂತ್ರಿಕ ನಡೆವಳಿಕೆಗಿಂತ ಬುದ್ಧಿವಂತಿಕೆಗೆ ಹೆಚ್ಚು ಪ್ರಾಶಸ್ತ್ಯವುಂಟು. ಆದರೆ ಎಲ್ಲ ಸಂದರ್ಭಗಳಲ್ಲೂ ಯಶಸ್ವಿಯಾಗುವುದೆಂಬ ಭರವಸೆಯಿಲ್ಲದಿರುವುದೇ ಬುದ್ಧಿವಂತಿಕೆಯ ಮೂಲಭೂತ ಬಲಹೀನತೆ.

ಗಣಕಯಂತ್ರಗಳು 'ಕೇವಲ ಯಂತ್ರ'ಗಳಾದ್ದರಿಂದ ಅವು ಆ್ಯಲ್ಗರಿದಂ ಅಧಾರಿತ ಕಾರ್ಯಕ್ರಮಗಳನ್ನು ನಿರ್ವಹಿಸಬಲ್ಲುವೇ ವಿನಾ ನಿಜವಾದ ಬುದ್ಧಿಶಕ್ತಿಯನ್ನು ಪ್ರದರ್ಶಿಸಲಾರವೆಂದು ಮೊದಮೊದಲು ಕೆಲವು ವಿಜ್ಞಾನಿಗಳು ನಂಬಿದ್ದರು. ಆದರೆ ಇತ್ತೀಚೆಗೆ ಸ್ವಲ್ಪಮಟ್ಟಿನ ಕಲ್ಪನಾಚಾತುರ್ಯವನ್ನು ಕೂಡ ಒಳಗೊಳ್ಳುವ ಕಾರ್ಯಕ್ರಮಗಳನ್ನು ಗಣಕಯಂತ್ರಗಳಲ್ಲಿ ಅಳವಡಿಸಿ ಪರೀಕ್ಷಿಸಲಾಗಿದೆ. ಖಾತರಿ ಯಶಸ್ಸಿನ ಭರವಸೆಯಿಲ್ಲದ ಇಂಥ ಸ್ವಯಂಶಿಕ್ಷಕ ಕಾರ್ಯಕ್ರಮಗಳು (ಹ್ಯೂರಿಸ್ಟಿಕ್ ಪ್ರೋಗ್ರಾಮ್ಸ್) ಆಲೋಚನಾ ಸಾಮರ್ಥ್ಯದಲ್ಲಿ ಮಾನವನಿಗೂ ಯಂತ್ರಗಳಿಗೂ ಇರುವ ಅಂತರವನ್ನು ತುಸು ತಗ್ಗಿಸಿವೆಯೆಂದು ಹೇಳಬಹುದು. (ಎಸ್.ಆರ್.ಎಂ.)

**ಆಲ್ಗೆ:** ಥಾಲ್ಲೊಫೈಟ ಗುಂಪಿಗೆ (ಗ್ರೀಕ್ ಪದ ಥಾಲ್ಲಸ್ ಅಂದರೆ ಎಳೆಕೊನರು, ಫೈಟಾನ್ ಅಂದರೆ ಒಂದು ಗಿಡ) ಸೇರಿದ ಕನಿಷ್ಠ ದರ್ಜೆಯ ಸಸ್ಯ. ಪಾಚಿ, ಶೈವಲ, ಶಿಲಾವಲ್ಕ ಮತ್ತು ಸಾಮಾನ್ಯ ಭಾಷೆಯಲ್ಲಿ ಜಲಕುಸುಮ (ವಾಟರ್ ಬ್ಲೂಮ್), ಕಪ್ಪೆಯ ಉಗುಳು, ಮಾಸಸ್ ಪರ್ಯಾಯನಾಮಗಳು, ತೇವಪೂರಿತ ಪ್ರದೇಶಗಳಿಂದ ತೊಡಗಿ ವಿಶಾಲಸಾಗರಗಳವರೆಗೆ ವಿವಿಧ ಉಷ್ಣತಾವಲಯಗಳಲ್ಲಿ ವಿವಿಧ ಎತ್ತರ ಆಳಗಳಲ್ಲಿ ಆಲ್ಗೆ ಸಸ್ಯಗಳ ವ್ಯಾಪ್ತಿ ಇದೆ. ಹೊಸ ನೀರಿನ ಕೊಳದ ತಳದ ತೆಲುಲೇಪ, ಕಲ್ಲುಬಂಡೆಗಳ ಮರದ ಕಾಂಡಗಳ ಮೇಲಿನ ಹಸಿರು ಕರೆಗಳು, ಸಾಗರಗಳ ಮಹಾ ಕಳೆಗಳು (ಸಮುದ್ರಕಳೆ–ಸೀ ವೀಡ್) ಎಲ್ಲವೂ ಆಲ್ಗೆಯ ವಿವಿಧ ರೂಪಗಳು. ಸಸ್ಯವಿಜ್ಞಾನಿಗಳು ಆಲ್ಗೆಯನ್ನು ಅತ್ಯಂತ ಪುರಾತನ ಮತ್ತು ಮೂಲ ರೂಪದ ಸಸ್ಯವೆಂದು ತಿಳಿದರೆ ಇದರ ಕೆಲವು ವಿಭಾಗಗಳಾದರೂ ಪ್ರಾಣಿವರ್ಗಕ್ಕೆ ಸೇರಿವೆಯೆಂದು ಪ್ರಾಣಿಶಾಸ್ತ್ರಜ್ಞರು ಸಾಧಿಸುತ್ತಾರೆ. ಆಲ್ಗೆಯ ವಿವಿಧ ಪ್ರಭೇದಗಳು ಪ್ರದರ್ಶಿಸುವ ಗುಣಲಕ್ಷಣಗಳು ಇಂಥ ತರ್ಕಕ್ಕೆ ಎಡೆ ಮಾಡಿಕೊಟ್ಟಿವೆ–ಸ್ವಯಂಚಾಲನೆ ಇರುವ ಆಲ್ಗೆಗಳಿವೆ, ಇಲ್ಲದವೂ ಇವೆ. ಉನ್ನತದರ್ಜೆಯ ಸಸ್ಯಗಳನ್ನು ಹಲವಾರು ಆಲ್ಗೆಗಳು ತೋರಿಕೆಗೆ ಹೋಲುತ್ತವಾದರೂ ಈ ಆಲ್ಗೆಗಳಿಗೆ ನಿಜವಾದ ಎಲೆಗಳಿಲ್ಲ, ಕಾಂಡಗಳಿಲ್ಲ, ಬೇರುಗಳಿಲ್ಲ, ನಾಳವ್ಯವಸ್ಥೆಯೂ (ವಾಸ್ಕ್ಯುಲರ್ ಸಿಸ್ಟಂ) ಇಲ್ಲ.

ಪ್ರಾಪ್ತಿ ಮತ್ತು ವಿತರಣೆ: ಸಿಹಿನೀರಿನ ಆಲ್ಗೆ ಮತ್ತು ಉಪ್ಪುನೀರಿನ ಆಲ್ಗೆ ಎಂಬ ಸ್ಥೂಲ ವಿತರಣೆ ಆಲ್ಗೆಯ ಪ್ರಾಪ್ತಿ ಸ್ಥಾನವನ್ನು ಕುರಿತು ಇದೆ. ಸುಮಾರು 18,000 ಬಿನ್ನ ಪ್ರಭೇದಗಳಿರುವ ಆಲ್ಗೆ ಸಸ್ಯದಲ್ಲಿನ ಪ್ರತಿ ಪ್ರಭೇದವನ್ನೂ ಈ ಎರಡು ವಿಂಗಡಣೆಗಳಲ್ಲಿ ಒಂದರಲ್ಲಿ ಗುರುತಿಸಬಹುದು. ಒಟ್ಟಾಗಿ ಪರಿಶೀಲಿಸುವಾಗ ಸಿಹಿ ನೀರಿನ ಮತ್ತು ಉಪ್ಪು ನೀರಿನ ಆಲ್ಗೆಗಳು ಪ್ರದರ್ಶಿಸುವ ವೈವಿಧ್ಯ–ಅತಿ ಸರಳತೆಯಿಂದ ಬಲು ಸಂಕೀರ್ಣತೆ ವರೆಗೆ–ಬೆರಗುಗೊಳಿಸುವಂತಿದೆ.

ವರ್ಗೀಕರಣ: ವರ್ಣ ಪದಾರ್ಥಗಳ ರಾಸಾಯನಿಕ ಸ್ವಭಾವ, ಕಣಗಳಲ್ಲಿ ಶೇಖರವಾಗಿರುವ ಆಹಾರ ಪದಾರ್ಥಗಳ ಸಮ್ಮಿಳನ, ಚಲನಾಂಗಗಳ ವೈವಿಧ್ಯ, ಕಣ ಭಿತ್ತಿಯ ರಾಸಾಯನಿಕ ರಚನೆ, ಸಂತಾನೋತ್ಪತ್ತಿ ವಿಧಾನಗಳು–ಇವನ್ನು ಆಧರಿಸಿ ಆಲ್ಗೆ ಸಸ್ಯಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

1. ಸೈಯನೋಫೈಸಿ (ನೀಲಿ ಹಸಿರು ಆಲ್ಗೆಗಳು ): ಜೀವಕಣದ ಒಳರಚನೆ ಬಲು ಸರಳ. ಈ ಶೈವಲದಲ್ಲಿ ನೈಜಕಣಬೀಜ ಮತ್ತು ಕ್ರೊಮಟೋಫೋರ್‌ಗಳು ಇರುವುದಿಲ್ಲ. ಇದರ ಕಣಗಳಲ್ಲಿರುವ ಕಣದ್ರವ್ಯವನ್ನು ಎರಡು ವಿಭಾಗಗಳಾಗಿ ನೋಡುತ್ತೇವೆ–ವರ್ಣದ್ರವ್ಯಗಳು, ತೈಲವಸ್ತುಗಳು ಮತ್ತು ನೀಲಹರಿತ ಶೈವಾಲೀಯ ಪಿಷ್ಟವನ್ನು ಒಳಗೊಂಡಿರುವ (ಪೆರಿಫೆರಲ್ ಪಿಗ್‌ಮೆಂಟೆಡ್ ರೀಜನ್ ಟುಗೆದರ್ ವಿತ್ ಆಯ್ಲ್ ಡ್ರಾಪ್ಸ್) ಪರಿಧಿಯ ಸಮೀಪದ ಹೊರವಿಭಾಗ; ವರ್ಣ ದ್ರವ್ಯರಹಿತ ನಡುವಣ ವಿಭಾಗ. ಈ ವರ್ಣದ್ರವ್ಯದಲ್ಲಿ ಪತ್ರಹರಿತ್ತು

ಎ. ಕೆರೋಟೀನ್, ಮಿಕ್ಸೊಸೆಂತೀನ್, ಮಿಕ್ಸೊಸೆಂತೊಫಿಲ್, ಫೈಕೊಸಯನಿನ್ ಮತ್ತು ಫೈಕೊ ಇರಿತ್ರಿನ್ ಇವೇ ಮೊದಲಾದ ವಸ್ತುಗಳಿವೆ. ಅವುಗಳಲ್ಲಿ ಲಿಂಗಕಣಗಳಾಗಲಿ ಚಲಿಸುವ ಕಣಗಳಾಗಲಿ ಇರುವುದಿಲ್ಲ. ಈ ಸಸ್ಯಗಳು ಒಮ್ಮೊಮ್ಮೆ ಆಕಸ್ಮಿಕವಾಗಿ ತುಂಡಾಗುವುದರ ಮೂಲಕ ಸಂತಾನೋತ್ಪತ್ತಿ ಕ್ರಿಯೆ ನಡೆಯುವುದು. ಇವುಗಳ ಇನ್ನು ಕೆಲವು ಪ್ರಭೇದಗಳಲ್ಲಿ ವಿಶೇಷ ಕಣಗಳು ರೂಪಗೊಂಡು ಅವು ಈ ಕ್ರಿಯೆಯನ್ನು ನಡೆಸುತ್ತವೆ.

2. ಕ್ಲೋರೊಫೈಸಿ (ಹಸಿರು ಬಣ್ಣದ ಆಲ್ಗೆಗಳು): ಇವುಗಳಲ್ಲಿ ಉಚ್ಚವರ್ಗದ ಸಸ್ಯಗಳಲ್ಲಿರುವಷ್ಟೇ ಪ್ರಮಾಣದ ಮತ್ತು ವ್ಯತ್ಯಾಸಹೊಂದುವ ವರ್ಣಗ್ರಾಹಿಗಳಲ್ಲಿರುವ ವರ್ಣದ್ರವ್ಯಗಳಿವೆ. ಇವು ಸಂಗ್ರಹಿಸಿಡುವ ಪ್ರಮುಖ ಆಹಾರ ವಸ್ತು ಪಿಷ್ಟ ಪದಾರ್ಥಗಳು. ಈ ವರ್ಗದ ಬಹುಪಾಲು ಸಸ್ಯಗಳು ಸಮಯುಗ್ಮ, ಅಸಮಯುಗ್ಮ ಮತ್ತು ವಿಷಮಯುಗ್ಮ ಗ್ಯಾಮೀಟುಗಳಿಂದ ಸಂತಾನೋತ್ಪತ್ತಿ ಕ್ರಿಯೆ ನಡೆಸುತ್ತವೆ. ಇವುಗಳಲ್ಲಿ ವಿವಿಧ ಗಾತ್ರದ ಚಲಿಸುವ ಕಣಗಳಿದ್ದು ಅವುಗಳಲ್ಲಿ ಎರಡು ನಾಲ್ಕು ಅಥವಾ ಅನೇಕ ಕಶಾಂಗಗಳಿವೆ (ಮಲ್ಟಿಫ್ಲಾಗೆಲ್ಲೇಟ್).

3. ಯುಫೈಸಿ: ನಿಶ್ಚಿತಕಣ ಬೀಜವಿದೆ. ವರ್ಣದ್ರವ್ಯಗಳಲ್ಲಿ ಪತ್ರ ಹರಿತ್ತು ಇದೆ ಮತ್ತು ಅದರಲ್ಲಿನ ನಿರ್ದಿಷ್ಟ ವರ್ಣಗ್ರಾಹಿಗಳಲ್ಲಿ ಕೆರೊಟಿನಾಯಿಡ್ ಎಂಬ ವಸ್ತುಗಳಿವೆ. ಪಿಷ್ಟಜಾತಿಗೆ ಸೇರಿದ ಆದರೆ ಕರಗದ ಪ್ಯಾರಾಮೈಲಿಯಂ ಎಂಬ ಕಾರ್ಬೋಹೈಡ್ರೇಟ್ ಮತ್ತು ಮೇದಸ್ಸು ಪದಾರ್ಥಗಳು ಇವು ಸಂಗ್ರಹಿಸುವ ಮುಖ್ಯ ಆಹಾರವಸ್ತುಗಳು. ಇದರ ಎಲ್ಲ ಕಣಗಳಿಗೆ ಹೊರಪೊರೆ ಇರುವುದಿಲ್ಲ. ಈ ಏಕಕಣಯುಕ್ತ ಕಶಾಂಗಿಗಳಲ್ಲಿ (ಯೂನಿಸೆಲ್ಲುಲರ್ ಫ್ಲಾಜೆಲ್ಲೇಟ್ಸ್) ಒಂದು, ಎರಡು ಇನ್ನು ಕೆಲವೊಮ್ಮೆ ಮೂರು ಕಶಾಂಗಗಳು ಇರುವುವು. ಸಾಮಾನ್ಯವಾಗಿ ನೀಳ ಕಣವಿಭಜನೆಯ ಮೂಲಕ ಇವು ಸಂತಾನೋತ್ಪತ್ತಿ ಕ್ರಿಯೆಯನ್ನು ನಡೆಸುತ್ತವೆ. ಆದರೆ ಇದರ ಒಂದು ಪ್ರಭೇದ ಈ ನಿಯಮಕ್ಕೆ ಅಪವಾದವಾಗಿದ್ದು ಲಿಂಗ ರೀತಿಯಲ್ಲಿ ತನ್ನ ಸಂತಾನೋತ್ಪತ್ತಿಯನ್ನು ನಡೆಸುವುದು.

4. ಕ್ಸಾಂತೊಫೈಸಿ (ಹಳದಿ ಹಸಿರು ಬಣ್ಣದ ಆಲ್ಗೆಗಳು): ಮುಖ್ಯವಾಗಿ ಸಿಹಿನೀರಿನಲ್ಲಿ ಬೆಳೆಯುತ್ತವೆ. ಆದರೆ ಕೆಲವು ಕಡಲಿನ ಉಪ್ಪು ನೀರಿನಲ್ಲಿ ಬೆಳೆಯುವುದೂ ಉಂಟು. ಇದರ ಸಸ್ಯಾಂಗ ಏಕಕಣಯುಕ್ತವಾಗಿರಬಹುದು ಅಥವಾ ಬಹುಕಣಯುಕ್ತವಾಗಿರಬಹುದು. ಇದರ ಕಣಭಿತ್ತಿ ಮುಖ್ಯವಾಗಿ ಪೆಕ್ಟಿಕ್ ವಸ್ತುಗಳಿಂದ ಸಂಯೋಜನೆಗೊಂಡಿರುವುದು. ಅವುಗಳಲ್ಲಿ ಪತ್ರಹರಿತ್ತು ವಿರಳ. ಕಣಗಳಲ್ಲಿ ಅನೇಕ ಉರುಟಾದ ಕ್ರೊಮಟೋಫೋರ್‌ಗಳಿವೆ. ಕ್ಸಾಂತೊಫಿಲ್ ಎಂಬ ವರ್ಣದ್ರವ್ಯ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಆಲ್ಗೆಯ ಬಣ್ಣ ಹಳದಿ–ಹಸಿರು. ಸಾಮಾನ್ಯವಾಗಿ ಇವುಗಳಲ್ಲಿ ಪೈರಿನಾಯಿಡುಗಳು ಇರುವುದಿಲ್ಲ. ಮೇದಸ್ಸು ಅಥವಾ ಲ್ಯೂಕೋಸಿನ್ ಪದಾರ್ಥಗಳು ಇವು ಸಂಗ್ರಹಿಸುವ ಪ್ರಮುಖ ಆಹಾರ ವಸ್ತುಗಳು. ಪಿಷ್ಟವನ್ನು ತಯಾರಿಸುವುದಿಲ್ಲ. ಗ್ಯಾಮಿಟುಗಳಲ್ಲಿ ಎರಡು ಕಶಾಂಗಗಳಿದ್ದು ಅವುಗಳ ಉದ್ದ ಭಿನ್ನ. ಇವು ಕಶಾಂಗಗಳಿರುವ ಅಥವಾ ಕಶಾಂಗಗಳಿಲ್ಲದ ಚಲಬೀಜಾಣುಗಳನ್ನು ಉದ್ಭವಿಸಿ ಅವುಗಳ ಮೂಲಕ ತಮ್ಮ ಸಂತಾನೋತ್ಪತ್ತಿ ಕ್ರಿಯೆಯನ್ನು ನಡೆಸುತ್ತವೆ.

5. ಬ್ಯಾಸಿಲೇರಿಯೋಫೈಸಿ (ಡೈಆಟಮ್ಸ್, ಸುವರ್ಣ ಹಸಿರು ಆಲ್ಗೆಗಳು): ಇವುಗಳಿಗೆ ಸಾಮಾನ್ಯ ಹೆಸರು ಡೈಆಟಮ್ಸ್, ಬೆಳವಣಿಗೆ ವಿವಿಧ ಪರಿಸರಗಳಲ್ಲಿ: ಸಿಹಿನೀರು, ಉಪ್ಪು ನೀರು, ತೇವವಿರುವ ಮಣ್ಣು, ಮರಗಳ ತೊಗಟೆಗಳು, ಕಲ್ಲು ಬಂಡೆಗಳ ಇಳಿಜಾರುಗಳು ಇತ್ಯಾದಿ ತಾಣಗಳು. ಸಾಮಾನ್ಯವಾಗಿ ಒಂದೇ ಕಣವುಳ್ಳ ದ್ವಿಗುಣಿತ ಸಸ್ಯಾಂಗ ಪಡೆದಿವೆ. ಏಕಜೀವಿಯಾಗಿರಬಹುದು ಅಥವಾ ಸಂಘಜೀವಿಯಾಗಿರಬಹುದು. ಎರಡು ಅರ್ಧಭಾಗಗಳಿಂದ ಸಂಗತವಾಗಿ ಜೋಡಣೆಗೊಂಡಿರುವ ಡೈಆಟಮ್‌ಗಳ ಆಕಾರಗಳು ಬೇರೆ ಬೇರೆ. ಇವುಗಳಲ್ಲಿ ಪೆಕ್ಟಿಕ್ ವಸ್ತುಗಳಿಂದ ರಚನೆಗೊಂಡ ಕಣಭಿತ್ತಿಗಳಿವೆ. ಅದರಲ್ಲಿ ಸಿಲಿಕಾಕಣಗಳು ಹೇರಳವಾದ್ದರಿಂದ ಚಿಪ್ಪು ಬಲು ಸುಂದರವಾಗಿ ಕಾಣುವುದು. ಇವುಗಳ ಆಕಾರ ಭಿತ್ತಿಗಳಲ್ಲಿನ ರೇಖೆಗಳು ಅವುಗಳ ವರ್ಗೀಕರಣದ ದೃಷ್ಟಿಯಿಂದ ಪ್ರಮುಖ. ಈ ಡೈಆಟಮ್ ಕಣಗಳು ಸತ್ತ ಮಣ್ಣಿನ ಹೆಸರು ಡೈಆಟಮಿನ ಮಣ್ಣು. ಇದಕ್ಕೆ ಹೆಚ್ಚಿನ ಆರ್ಥಿಕಮೌಲ್ಯ ಇದೆ. ಡೈಆಟಮ್ ಕಣಗಳಲ್ಲಿ ಕೇವಲ ಒಂದೇಕಣಬೀಜವಿದೆ. ಇವುಗಳ ಕ್ರೋಮಟೋ ಫೋರ್‌ಗಳಲ್ಲಿ ವರ್ಣ ದ್ರವ್ಯವಿದೆ. ಅವುಗಳ ಆಕಾರ ಮತ್ತು ಸಂಖ್ಯೆಗಳಲ್ಲಿ ಹೆಚ್ಚು ಕಮ್ಮಿಯಿರಬಹುದು. ಇದರಲ್ಲಿರುವ ಕಂದು–ಸುವರ್ಣ ಬಣ್ಣದ ವರ್ಣದ್ರವ್ಯವಾದ ಡೈಆಟಮಿನ್ ಎಂಬ ವಿಶೇಷ ವರ್ಣದ್ರವ್ಯ ಅದರಲ್ಲಿರುವ ಪತ್ರಹರಿತ್ತನ್ನು ಮಸುಕುಗೊಳಿಸುವುದು. ಮೇದಸ್ಸು ಪದಾರ್ಥ ಇದರಲ್ಲಿ ಸಂಗ್ರಹಗೊಳ್ಳುವ ಪ್ರಮುಖ ಆಹಾರವಸ್ತು. ಜೊತೆಗೆ ಕರಗದ ಅನಿಶ್ಚಿತ ರಾಸಾಯನಿಕ ಸಂಯೋಜನೆಯುಳ್ಳ ವೊಲ್ಯುಟಿನ್ ಎಂಬ ವಿಶೇಷ ಆಹಾರವಸ್ತುವೂ ಇದರಲ್ಲಿ ಸಂಗ್ರಹಗೊಳ್ಳುವುದುಂಟು. ಇವುಗಳಲ್ಲಿ ಸಾಮಾನ್ಯವಾಗಿ ಕಣವಿಭಜನೆಯ ಮೂಲಕ ಸಂತಾನೋತ್ಪತ್ತಿಕ್ರಿಯೆ ನಡೆಯುವುದು. ಆದರೆ ಈ ಕಣಗಳು ಅನುಕ್ರಮವಾಗಿ ವಿಭಜನೆಯಾಗುತ್ತ ಹೋದಂತೆ ಅವುಗಳ ಗಾತ್ರ ಚಿಕ್ಕದಾಗುತ್ತ ಹೋಗುವುದು. ಆಗ ಅವು ಆಕ್ಸೊಸ್ಪೋರುಗಳೆಂಬ ವಿಶೇಷ ರೀತಿಯ ಪುನರ್ನಿರ್ಮಾಣಕಣಗಳನ್ನು ಸೃಷ್ಟಿಸಿ ಆ ಮೂಲಕ ತಮ್ಮ ಮೂಲಗಾತ್ರವನ್ನು ಕಾಯ್ದಿಟ್ಟುಕೊಳ್ಳುತ್ತವೆ. ಲಿಂಗರೀತಿಯಲ್ಲಿ ಅಥವಾ ನಿರ್ಲಿಂಗ ರೀತಿಯಲ್ಲಿನ ಸಂತಾನೋತ್ಪತ್ತಿ ಕ್ರಿಯೆಯ ಮೂಲಕ ಈ ಆಕ್ಸೊಸ್ಪೋರುಗಳು ಉದ್ಭವಿಸುವುವು.

6. ಪೇರೋಫೈಸಿ (ಬೆಂಕಿ ಆಲ್ಗೆ): ಹೆಚ್ಚಿನವು ಏಕಕಣಜೀವಿ ಸಸ್ಯಗಳು. ಎರಡು ಕಶಾಂಗಗಳಿವೆ. ಅವೆರಡರ ಉದ್ದ ಒಂದೇ ರೀತಿ ಇಲ್ಲ. ಇವುಗಳಲ್ಲಿ ಕೆಲವು ಏಕಕಣ ಸಸ್ಯಗಳು, ಸಂಘಜೀವಿ ಶೈವಲದಂಥ ಸ್ವರೂಪ ಇದೆ. ಇವುಗಳಲ್ಲಿ ಡಿನೋಸೆಂತೀನ್, ಡೈಯಡಿನೊ ಸೆಂತೀನ್ ಮತ್ತು ಪೆರಿಡಿನಿನ್ ಎಂಬ ವರ್ಣದ್ರವ್ಯಗಳಿರುವುದರಿಂದ ಇದರಲ್ಲಿರುವ ಕ್ರೊಮಾಟೋಫೋರುಗಳು ಹಳದಿ–ಹಸಿರು ಬಣ್ಣದಿಂದ ಕಂದು ಸುವರ್ಣ ಬಣ್ಣಕ್ಕೆ ತಿರುಗುವುವು. ಪಿಷ್ಟ ಅಥವಾ ಪಿಷ್ಟದಂಥ ಸಂಯುಕ್ತ ವಸ್ತುಗಳು ಅಥವಾ ತೈಲಪದಾರ್ಥಗಳು ಇವು ಸಂಗ್ರಹಿಸುವ ಪ್ರಮುಖ ಆಹಾರವಸ್ತುಗಳು. ಸಂತಾನೋತ್ಪತ್ತಿಕ್ರಿಯೆ ಕಣವಿಭಜನೆಯ ಮೂಲಕ ಸಾಮಾನ್ಯವಾಗಿದ್ದರೂ ಕೆಲವು ಪ್ರಭೇದಗಳಲ್ಲಿ ಲಿಂಗ ರೀತಿಯಲ್ಲಿಯೂ ನಡೆಯುತ್ತದೆ. ಇಂಥವಲ್ಲಿ ಚಲಬೀಜಾಣುಗಳು ಉದ್ಭವಿಸುವುದೂ ಕಂಡುಬಂದಿದೆ.

ಚಿತ್ರ 1. ಏಕಕಣಜೀವಿ-ಕ್ಲಾಮಿಡೊ ಮೊನಾಸ್



ಚಿತ್ರ 2. ಏಕಕಣಜೀವಿ-ಕ್ಲಾಸ್ಟೀರಿಯಂ ಮತ್ತು ಜಾಂತಿಡಿಯಂ

7. ಫಿಯೋಫೈಸಿ (ಕಂದು ಬಣ್ಣದ ಆಲ್ಗೆಗಳು): ಕಣಗಳಲ್ಲಿ ನಿರ್ದಿಷ್ಟ ಕಣಬೀಜ, ಕಣದ್ರವ್ಯ ಮತ್ತು ಹರಿತಾಣು ಗಳಿವೆ. ಹರಿತಾಣುಗಳಲ್ಲಿ ಸಾಮಾನ್ಯ ದ್ಯುತಿ ಸಂಶ್ಲೇಷಕ ವರ್ಣದ್ರವ್ಯಗಳಾಗಿರುವ ಪತ್ರಹರಿತ್ತು–ಎ, ಕೆರೊಟೀನ್ ಮತ್ತು ಸೆಂತೊಫಿಲ್‌ಗಳೆಂಬ ವರ್ಣ ದ್ರವ್ಯಗಳಿವೆ. ಅವು ಹಳದಿ ಸುವರ್ಣ ಬಣ್ಣದ ಫ್ಯೂಕೋ ಸೆಂತೀನ್ ಎಂಬ ವರ್ಣದ್ರವ್ಯದಿಂದ ಮಸುಕುಗೊಂಡಿರುತ್ತವೆ. ಸರಳ ರೂಪದ ಸಕ್ಕರೆಗಳು, ಆಲ್ಕೊಹಾಲ್ ಮನ್ನಿಟಾಲ್ ಮತ್ತು ಲ್ಯಾಮಿನಾರಿನ್‌ನಂಥ ಸಂಕೀರ್ಣ ಸಾಕ್ಕರಾಯಿಡ್‌ಗಳನ್ನು ಇವು ಸಂಗ್ರಹಿಸಿಡಬಹುದು; ಅಥವಾ ವಿವಿಧ ರೂಪದ ಮೇದಸ್ಸು ಪದಾರ್ಥಗಳನ್ನು ಶೇಖರಿಸಬಹುದು. ಪಿಯರ್ ಹಣ್ಣಿನಾಕಾರದ ಚಲನಸಾಮರ್ಥ್ಯವುಳ್ಳ ಸಂತಾನೋತ್ಪಾದಕ ಕಣಗಳು ಇವುಗಳಲ್ಲಿವೆ. ಇವುಗಳಲ್ಲಿ ಸಮಯುಗ್ಮ ಗ್ಯಾಮಿಟುಗಳ ಅಥವಾ ವಿಷಮಯುಗ್ಮ ಗ್ಯಾಮಿಟುಗಳ ಸಂಯೋಗದ ಮೂಲಕ ಸಂತಾನೋತ್ಪತ್ತಿಕ್ರಿಯೆ ನಡೆಯುವುದು.

8. ರೋಡೋಫೈಸಿ (ಕೆಂಪುಬಣ್ಣದ ಆಲ್ಗೆಗಳು): ಕೇವಲ ಕೆಲವು ಬಹುಕಣ ಬೀಜಗಳಿರುವ ಕಣಗಳಿದ್ದರೂ ಅವುಗಳಲ್ಲಿ ಹೆಚ್ಚಿನ ಕಣಗಳಲ್ಲಿ ಕೇವಲ ಒಂದೇ ಕಣ ಬೀಜವಿರುವುದು. ರಚನೆ ಉಚ್ಚರೀತಿಯದು. ಅವುಗಳ ಕಣದ್ರವ್ಯದಲ್ಲಿ ಒಂದು ಅಥವಾ ಅನೇಕ ವರ್ಣಗ್ರಾಹಿಗಳು ತೇಲುತ್ತಿವೆ. ಅವುಗಳಲ್ಲಿ ಫೈಕೊ ಇರಿತ್ರೀನ್ ಎಂಬ ಕೆಂಪುವರ್ಣದ್ರವ್ಯದ ಜೊತೆಗೆ ಪತ್ರಹರಿತ್ತೂ ಇರುವುದು ಅಲ್ಲದೆ ಅದರಲ್ಲಿ ಫಾಯಿಕೊಸಯಾನಿನ್ ಎಂಬ ನೀಲಿ ವರ್ಣದ್ರವ್ಯವೂ ಇದೆ. ಇವುಗಳಲ್ಲಿ ಆಲ್ಕೊಹಾಲಿನ ಪದಾರ್ಥದ ರೂಪದಲ್ಲಿ ಆಹಾರವಸ್ತುಗಳು ಸಂಗ್ರಹಗೊಳ್ಳುತ್ತವೆ. ಆದರೆ ಮುಖ್ಯವಾಗಿ ಪಾಲಿಸಾಕ್ಕರಾಯಿಡ್‌ಗಳ ಸ್ವರೂಪದಲ್ಲಿ ಅವು ತಮ್ಮ ಆಹಾರ ವಸ್ತುಗಳನ್ನು ಸಂಗ್ರಹಿಸುತ್ತವೆ. ಈ ಆಹಾರಪದಾರ್ಥ ವರ್ಣಗ್ರಾಹಿಗಳಲ್ಲಿ ಇರದೆ ಚಿಕ್ಕಪುಟ್ಟ ಹರಳುಗಳ ರೂಪದಲ್ಲಿ ಕಣದ್ರವ್ಯದಲ್ಲಿ ಸ್ವತಂತ್ರವಾಗಿ ವ್ಯಾಪಿಸಿದೆ. ಅದಕ್ಕೆ ಫ್ಲಾರಿಡಿಯನ್ ಪಿಷ್ಟವೆಂದು ಹೆಸರು. ಈ ಸಸ್ಯಾಂಗ ತನ್ನ ತುದಿಭಾಗದಿಂದ ಬೆಳೆಯುತ್ತ ಹೋಗುವುದು. ಜೊತೆಯಲ್ಲೇ ಮಧ್ಯಭಾಗದಿಂದಲೂ ಬೆಳೆಯುವುದು. ಇವುಗಳ ಕಣ ಕಣಗಳಲ್ಲಿ ಕಣದ್ರವ್ಯದ ಜೋಡಣೆಯೇ ಕಣ್ಣಿಗೆ ಹೊಡೆಯುವಂತೆ ಎದ್ದು ಕಾಣುವ ಗುಣ. ಎರಡನೆಯದಾಗಿ ಯಾವುದೇ ವಿಧದ ಕಶಾಂಗೀ ಸಂತಾನೋತ್ಪಾದಕ ಕಣಗಳಿಲ್ಲದಿರುವುದು ಇದರಲ್ಲಿನ ಪ್ರಧಾನವಾಗಿ ಕಾಣುವ ಮತ್ತೊಂದು ಗುಣ. ವಿಷಮಯುಗ್ಮ ಗ್ಯಾಮಿಟುಗಳ ಮೂಲಕ ನಡೆಯುವ ಲಿಂಗರೀತಿಯ ಸಂತಾನೋತ್ಪಾದಕ ಕ್ರಿಯೆ ಈ ಕೆಂಪು ಶೈವಲಗಳಲ್ಲಿ ಬಲು ಸಾಮಾನ್ಯ.

ವಾಸ, ಬೆಳವಣಿಗೆ: ಆಲ್ಗೆ ಜಲವಾಸಿ ಸಸ್ಯಗಳು, ಸಿಹಿನೀರು, ಉಪ್ಪುನೀರು ಯಾವುದೂ ಬಹಿಷ್ಕೃತವಲ್ಲ. ಹಲವಾರು ಕಂದು ಮತ್ತು ಕೆಂಪು ಆಲ್ಗೆಗಳ ಬೆಳವಣಿಗೆ ಸಮುದ್ರಗಳಿಗೆ ಮಾತ್ರ ಸೀಮಿತ. ಕೆಲ್ಪ್ಸ್ ಎಂಬ ಸಮುದ್ರ ಸಸ್ಯಗಳು ಕಂದು ಆಲ್ಗೆ ವರ್ಣದವು. ಇವು ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳಲ್ಲೂ ಮೆಡಿಟರೇನಿಯನ್ ಸಮುದ್ರ, ಕೆಂಪು ಸಮುದ್ರ ಮತ್ತು ಅರಬ್ಬೀ ಸಮುದ್ರಗಳಲ್ಲಿಯೂ ವಿಶೇಷವಾಗಿ ಇವೆ.



ಚಿತ್ರ. 3 ಏಕಕಣಜೀವಿ ನಾವಿಕುಲಾ

ಅಚ್ಚ ಹಸಿರು ಆಲ್ಗೆಗಳಲ್ಲಿ ಕೆಲವು ಸಮುದ್ರದಲ್ಲಿ ಬೆಳೆದರೂ ಮಿಕ್ಕವುಗಳ ವಿಕಾಸ ಸಿಹಿನೀರಿನಲ್ಲಿ, ಡೈಆಟಮ್ಸ್ ಎಂಬುವು ಸಿಹಿನೀರಿನಲ್ಲೂ ಸಮುದ್ರದಲ್ಲೂ ಬೆಳೆಯುವುವು. ನೀಲಿ ಹಸಿರು ಆಲ್ಗೆಗಳು ಸಿಹಿನೀರು ಮತ್ತು ಸಮುದ್ರದಲ್ಲಿಯೇ ಅಲ್ಲದೆ ಕೊಚ್ಚೆ, ಕೊಳಕು ಪ್ರದೇಶಗಳಲ್ಲಿಯೂ ಬೆಳೆಯಬಲ್ಲವು. ಕೆಲವು ಆಲ್ಗೆಗಳು ಇತರ ಆಲ್ಗೆಗಳ ಮೇಲೆ ಅಥವಾ ಇತರ ಸಸ್ಯಗಳ ಮೇಲೆ ಬೆಳೆಯುವ ಅಪ್ಪುಗಿಡಗಳು. ಸೆಫಲ್ಯೂರಸ್ ಎಂಬ ಆಲ್ಗೆ ಟೀ ಗಿಡಗಳ ಮೇಲೆ ಅರ್ಧ ಪರಾವಲಂಬಿಯಾಗಿ ಬೆಳೆಯುತ್ತದೆ. ಆಲ್ಗೆಯ ಒಂದು ಪ್ರಭೇದ ನೀರಿನಲ್ಲಿ ವಾಸ ಮಾಡುವ ಪ್ರಾಣಿಗಳ ದೇಹದೊಳಗೆ ಜೀವಿಸುತ್ತದೆ. ಕ್ಲೋರೆಲ್ಲ ಎಂಬುದು ಪ್ರೋಟೋಜೋವ ಹೈಡ್ರ, ಪೊರಿಫೆರ ಪ್ರಾಣಿಗಳಲ್ಲಿರುತ್ತದೆ. ಬ್ಯಾಸಿಕ್ಲಾಡಿಯ ಎಂಬುದು ಆಮೆಗಳಲ್ಲಿರುತ್ತದೆ. ಅನಬೀನಿಯೋಲಂ ಮತ್ತು ಸೈಮೊನಿಯೆಲ್ಲ ಎಂಬುವು ಮಾನವನ ಕರುಳಿನಲ್ಲಿ ವಾಸಿಸುತ್ತವೆ. ಅನಬೀನ, ನಾಸ್ಟಾಕ್ ಮುಂತಾದ ಆಲ್ಗೆಗಳು ಸೈಕ್ಯಾಸ್ ಆಂತೋಸಿ ರಾಸ್ ಮುಂತಾದ ಸಸ್ಯಗಳಲ್ಲಿ ವಾಸ ಮಾಡುತ್ತವೆ. ಇವುಗಳಿಗೆ ಅಂತರ್ಜೀವಿಸಸ್ಯಗಳು (ಎಂಡೋಫೈಟ್ಸ್) ಎಂದು ಹೆಸರು.

ಸ್ಥಳೀಯ ಉಷ್ಣತೆಗೆ ಅನುಸಾರವಾಗಿ ಆಲ್ಗೆಯ ಬೆಳವಣಿಗೆಯಲ್ಲಿ ಮಾರ್ಪಾಡಾಗಿದೆ. ಅತಿಶೀತ ಪ್ರದೇಶದ ನೀರಿನಲ್ಲಿಯೂ (ಉಷ್ಣತೆ $10^0$ ಸೆಂ.ಗ್ರೇ. ಗೂ ಕಡಿಮೆ) ಕೆಲವು ಆಲ್ಗೆಗಳು ಬೆಳೆಯುತ್ತವೆ. ಬಿಸಿನೀರಿನ ಬುಗ್ಗೆಗಳಲ್ಲಿ (ಉಷ್ಣತೆ $85^0$ ಸೆಂ.ಗ್ರೇ.) ಸಹ ಕೆಲವು ಆಲ್ಗೆಗಳು ಇವೆ. ಸಮುದ್ರದ ಮೇಲ್ಭಾಗದಲ್ಲಿ ಕೆಲವು ಆಲ್ಗೆಗಳು ಬೆಳೆದರೆ ಕೆಲವು 100'–300' ಆಳದವರೆಗೂ ಕಂಡುಬರುತ್ತವೆ. ಕೆಲವು ಕಂದು ಆಲ್ಗೆಗಳು ತಂಪು ವಾತಾವರಣವಿರುವ ನೀರಿನಲ್ಲಿ ಬೆಳೆಯುತ್ತವೆ. ಸಾರ್ಗಾಸ್ಸಂ ಎಂಬುದು ಉಷ್ಣಪ್ರದೇಶಗಳ ಸಮುದ್ರಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.



ಚಿತ್ರ. 4
ಸಾಮೂಹಿಕ ಜೀವಿ–ಕ್ರುಕಾಕ್ಕಸ್



ಚಿತ್ರ. 5
ಸಾಮೂಹಿಕ ಜೀವಿ–ನಾಸ್ಟಾಕ್

ದೇಹರಚನೆ: ಆಲ್ಗೆ ಸಸ್ಯಗಳ ದೇಹರಚನೆ ವೈವಿಧ್ಯಪೂರ್ಣ, ಇವುಗಳ ಥಾಲಸ್ಸು (ವೈಶಿಷ್ಟ್ಯರಹಿತ ದೇಹ) ಅನೇಕ ವಿಧ. ಕೆಲವು ಆಲ್ಗೆಗಳಲ್ಲಿ ಥಾಲಸ್ಸು ಕೇವಲ ಒಂದೇ ಕಣದಿಂದ ಕೂಡಿದ್ದರೆ ಇನ್ನು ಕೆಲವಲ್ಲಿ ಅನೇಕ ಏಕಕಣಗಳು ಒಟ್ಟುಗೂಡಿ ಲೋಳೆಯಂಥ ವಸ್ತುವಿನಿಂದ ಆವೃತವಾಗಿರುತ್ತದೆ. ಇಂಥವು ಸಾಮೂಹಿಕ ಜೀವನವನ್ನು (ಕಲೋನಿಯಲ್ ಫಾರಮ್ಸ್) ನಡೆಸುತ್ತವೆ. ಕೆಲವು ಥಾಲಸ್ಸು ಎಳೆರೂಪದಲ್ಲಿರುವ (ಫಿಲಮೆಂಟ್) ಆಲ್ಗೆಗಳಿವೆ. ಈ ಎಳೆ ಸಾಮಾನ್ಯವಾಗಿ ಕವಲೊಡೆದಿರುವುದಿಲ್ಲ. ಆದರೆ ಕೆಲವು ಆಲ್ಗೆಗಳಲ್ಲಿ ಕವಲೊಡೆದಿರುವುದೂ ಇದೆ. ಅಡ್ಡವಾಗಿ ಹರಡುವ ಮತ್ತು ಲಂಬವಾಗಿ ಬೆಳೆಯುವ ಎಳೆಗಳು ಇರುವ ಆಲ್ಗೆಗಳಿವೆ. ಎಳೆಗಳು ನೀರಿನಲ್ಲಿ ಸ್ವತಂತ್ರವಾಗಿ ತೇಲುತ್ತಿರಬಹುದು ; ಅಥವಾ ಹೋಲ್ಡ್ ಫಾಸ್ಟ್ ಎಂಬ ಅಂಗದ ಸಹಾಯದಿಂದ ಆಧಾರಜಾಗವನ್ನು ಹಿಡಿದುಕೊಂಡಿರಬಹುದು. ಹೋಲ್ಡ್‌ಫಾಸ್ಟಿನಲ್ಲಿರುವ ಬೆರಳುಗಳಂಥ ಚಾಚುಭಾಗಗಳು ಆಧಾರ ಜಾಗವನ್ನು ಪಟ್ಟಾಗಿ ಹಿಡಿದುಕೊಳ್ಳಲು ಸಹಾಯಕ. ನೀರಿನಲ್ಲಿ ಬೆಳೆಯುವ ಇತರ ಗಿಡಗಳು, ದೊಡ್ಡ ಆಲ್ಗೆಗಳು, ಕಡ್ಡಿ, ಕಲ್ಲು, ಹವಳ, ಚಿಪ್ಪು, ತಳದ ನೆಲ ಮುಂತಾದವು ಆಲ್ಗೆಗೆ ಆಧಾರ ಸ್ಥಳ.

ಕೆಲವು ಕಂದು ಆಲ್ಗೆಗಳಲ್ಲಿಯೂ ಸೈಫೋನೇಲಿಸ್ ಶ್ರೇಣಿಗೆ ಸೇರಿದ ಕಾಲೆರ್ಪ ಮುಂತಾದ ಆಲ್ಗೆಗಳಲ್ಲೂ ಥಾಲಸ್ಸು ವಿಸ್ತಾರವಾಗಿ ಬೆಳೆಯುತ್ತದೆ. ಇವುಗಳಲ್ಲಿ ಕಾಂಡದಂಥ ಭಾಗಗಳೂ ಎಲೆಗಳಂಥ ಅಲಗು ಭಾಗಗಳು ಇವೆ. ಪೋಸ್ಟೆಲ್ಸಿಯ, ಐಸೇನಿಯ, ಮ್ಯಾಕ್ರೊಸಿಸ್ಟಿಸ್, ಲ್ಯಾಮಿನೇರಿಯ ಮುಂತಾದ ಆಲ್ಗೆಗಳಲ್ಲಿ ಥಾಲಸ್ಸು ಗಾತ್ರದಲ್ಲಿ ಬಹಳ ದೊಡ್ಡದು. ಇವುಗಳ ಉದ್ದ ಸುಮಾರು 100'–200' ವರೆಗೆ. ಆಲ್ಗೆ ಸಸ್ಯಗಳ ಕಣಗಳಿಗೆ ನಿರ್ದಿಷ್ಟ ರಚನೆ ಇದೆ. ಎಲ್ಲ ವಿಧದ ಆಲ್ಗೆಗಳಿಗೂ ಕಣಭಿತ್ತಿ ಇದೆ. ಸಾಮಾನ್ಯವಾಗಿ ಕಣಭಿತ್ತಿಯ ರಚನೆ ಸೆಲ್ಯೂಲೋಸ್‌ನಿಂದ ನೀಲಿ ಹಸಿರು ಆಲ್ಗೆಗಳಲ್ಲಿ ಕಣಭಿತ್ತಿಯ ಸುತ್ತಲೂ ಜೆಲಾಟಿನ್ ಎಂಬ ಲೋಳೆ ಆವರಿಸಿದೆ. ಡೈಆಟಮ್ಸ್ ಮತ್ತು ಡಸ್ಮಿಡ್‌ಗಳಲ್ಲಿ ಕಣ ಭಿತ್ತಿಯ ಶೃಂಗಾರ ಅನೇಕ ವಿಧಗಳಲ್ಲಿ ಇದೆ. ಈ ಕಾರಣದಿಂದ ಈ ಕಣಗಳು ಸೂಕ್ಷ್ಮ ದರ್ಶಕದಲ್ಲಿ ಬಲು ಮನೋಹರವಾಗಿ ಕಾಣುತ್ತವೆ. ಡೈಆಟಮ್‌ಗಳಲ್ಲಿ ಕಣಭಿತ್ತಿಯ ಮೇಲೆ ಸಿಲಿಕ ಪದಾರ್ಥ ಹರಡಿಕೊಂಡಿರುತ್ತದೆ. ಈ ಕಣಗಳು ಸತ್ತರೂ ಇದರ ಸಿಲಿಕದಿಂದ ಕೂಡಿದ ಭಿತ್ತಿ ಹಾಗೆಯೇ ಉಳಿದು ಡೈಆಟಮೇಸಿಯಸ್ ಮಣ್ಣು ಉತ್ಪತ್ತಿಯಾಗುತ್ತದೆ. ಆಲ್ಗೆ ಕಣಗಳಲ್ಲಿ ನಿರ್ದಿಷ್ಟ ಕಣಬೀಜವಿದೆ (ನ್ಯೂಕ್ಲಿಯಸ್), ನೀಲಿ ಹಸಿರು ಆಲ್ಗೆಗಳಲ್ಲಿ ಕಣಬೀಜ ನಿರ್ಣೀತ ರೀತಿಯಲ್ಲಿರುವುದಿಲ್ಲ. ಇವುಗಳ ಕಣದ ಮಧ್ಯಭಾಗದಲ್ಲಿ ಕೆಲವು ವರ್ಣ ಕಾಳುಗಳಿವೆ (ಕ್ರೊಮಾಟಿನ್ ಗ್ರಾನ್ಯೂಲ್ಸ್). ಇವೇ ಕಣಬೀಜಗಳು. ಆದ್ದರಿಂದ ಕಣಬೀಜವನ್ನು ಅನಿರ್ದಿಷ್ಟ ಕಣಬೀಜ (ಇನ್‌ಸಿಪಿಯೆಂಟ್ ನ್ಯೂಕ್ಲಿಯಸ್)ಎಂದು ಕರೆಯುತ್ತಾರೆ. ಉಳಿದ ಎಲ್ಲ ಆಲ್ಗೆಗಳಲ್ಲೂ ಕಣಬೀಜ ಗರಿಷ್ಠವರ್ಗದ ಸಸ್ಯಗಳ ಕಣಬೀಜದಂತೆ ನಿರ್ದಿಷ್ಟವಾಗಿದೆ. ಕೆಲವು ಆಲ್ಗೆಗಳಲ್ಲಿ ಒಂದು ಕಣದಲ್ಲಿ ಒಂದಕ್ಕಿಂತ ಹೆಚ್ಚು ಕಣಬೀಜಗಳಿರಬಹುದು. ಕೆಲವು ಆಲ್ಗೆಗಳಲ್ಲಿ ಎಳೆಗಳ ಕಣಗಳು ಮಧ್ಯದಲ್ಲಿ ಅಡ್ಡ ಗೋಡೆಗಳಿಲ್ಲದೆ ಒಂದೇ ನಾಳದಂತಿರುತ್ತವೆ. ಇವುಗಳಲ್ಲಿ ಅನೇಕ ಕಣಬೀಜಗಳಿವೆ.



ಚಿತ್ರ. 6 ಸಂಕೀರ್ಣ ಥಾಲಸ್ಸುಳ್ಳ ಆಲ್ಗೆ ಯುಲೋತ್ರಿಕ್ಸ್ (ಆಳಿ)

ಕಣಗಳಲ್ಲಿ ನಿರ್ದಿಷ್ಟ ಸಂಖ್ಯೆಯಲ್ಲಿ ಅವಕಾಶಗಳು (ಕುಹರಗಳು) ಇವೆ. ಅವು ಸಣ್ಣವಾಗಿದ್ದು ಹೆಚ್ಚು ಸಂಖ್ಯೆಯಲ್ಲಿರಬಹುದು. ನೀಲಿ ಹಸಿರು ಆಲ್ಗೆಗಳಲ್ಲಿ ಸಾಮಾನ್ಯವಾಗಿ ಅವಕಾಶಗಳಿರುವುದಿಲ್ಲ. ಬಹುಕಣಬೀಜಗಳಿರುವ ಕಣಗಳ ಮಧ್ಯಭಾಗದಲ್ಲಿ ನೀಳವಾದ ಅವಕಾಶವಿದೆ.

ವರ್ಣಗ್ರಾಹಿಗಳು (ಕ್ರೋಮೊಸೋಮ್ಸ್): ಇವು ಬಲು ಮುಖ್ಯ ಭಾಗಗಳು. ವರ್ಣಗ್ರಾಹಿಗಳಲ್ಲಿ ನವವಿಧ ವರ್ಣಗಳು ಆಲ್ಗೆ ಸಸ್ಯಗಳ ವರ್ಗೀಕರಣಕ್ಕೆ ಅನುಕೂಲವಾಗುತ್ತವೆ. ವಿವಿಧವರ್ಣಗಳು ಸಾಮಾನ್ಯವಾಗಿ ವರ್ಣಗ್ರಾಹಿಗಳಲ್ಲಿ ಅಡಕವಾಗಿದ್ದರೂ ನೀಲಿ ಹಸಿರು ಆಲ್ಗೆಗಳಲ್ಲಿ ನಿರ್ದಿಷ್ಟವರ್ಣಗ್ರಾಹಿಗಳಿರುವುದಿಲ್ಲ. ಈ ಸಸ್ಯಗಳಲ್ಲಿ ವರ್ಣಪದಾರ್ಥಗಳು ಜೀವಸರದಲ್ಲಿಯೇ ಅಡಕವಾಗಿವೆ. ಇತರ ಆಲ್ಗೆ ಸಸ್ಯಗಳಲ್ಲಿ ವರ್ಣಪದಾರ್ಥಗಳು ನಿರ್ದಿಷ್ಟ ವರ್ಣಗ್ರಾಹಿಗಳಲ್ಲಿವೆ. ವರ್ಣಗ್ರಾಹಿಗಳ ಸಂಖ್ಯೆ ಗಾತ್ರ ರೂಪ ಮತ್ತು ಆಕಾರ ನಿರ್ದಿಷ್ಟವಾಗಿದೆ. ವರ್ಣಗ್ರಾಹಿಗಳು ಬಟ್ಟಲಿನಾಕಾರವಾಗಿಯೂ ತಟ್ಟೆಯಾಕಾರವಾಗಿಯೂ ನಕ್ಷತ್ರದಾಕಾರವಾಗಿಯೂ ಪಟ್ಟಿಯಾಕಾರವಾಗಿಯೂ ಬಲೆಯಾಕಾರವಾಗಿಯೂ ಇವೆ. ಇವುಗಳ ಸಂಖ್ಯೆ ಒಂದ ಕಣದಲ್ಲಿ ಒಂದು ಅಥವಾ ಅಧಿಕ. ವರ್ಣಗ್ರಾಹಿಗಳಲ್ಲಿನ ಪ್ರಧಾನವರ್ಣಗಳ ವಿವರಗಳನ್ನು ಕೆಳಗೆ ತೋರಿಸಿದೆ.



ಚಿತ್ರ. 7 ಸಂಕೀರ್ಣಥಾಲಸ್ಸುಳ್ಳ ಆಲ್ಗೆ–ಕೋಲಿಯೋಕಾಟೆ ಚಪ್ಪಟೆ ಥಾಲಸ್ಸು

ನೀಲಿ ಹಸಿರು ಆಲ್ಗೆ: ಕ್ಲೋರೊಫಿಲ್ a, â ಕ್ಯಾರೊಟಿನ್. ಫೈಕೊಸೈಯನಿಸ್ ಮತ್ತು ಅಲ್ಪ ಸ್ವಲ್ಪ ಮಿಕ್ಸೊಕ್ಸಾಂತೋಫಿಲ್.

ಅಚ್ಚಹಸಿರು ಆಲ್ಗೆ: ಕ್ಲೋರೊಫಿಲ್ a ಕ್ಲೋರೊಫಿಲ್ b, â ಕ್ಯಾರೊಟಿನ್, ಲ್ಯೂಟಿನ್.

ಕಂದು ಆಲ್ಗೆ: ಕ್ಲೋರೊಫಿಲ್ a, â ಕ್ಯಾರೊಟಿನ್, ಫ್ಯೂಕೋಸಾಂತಿನ್ ಮತ್ತು ಅಲ್ಪಸ್ವಲ್ಪ ಕ್ಲೋರೊಫಿಲ್ c ಫ್ಲೇವೋಸಾಂತಿನ್, ನಿಯೋಸಾಂತಿನ್ ಮುಂತಾದುವು.

ಸುವರ್ಣಹಸಿರು ಆಲ್ಗೆ: ಕ್ಲೋರೊಫಿಲ್ a, â ಕ್ಯಾರೊಟಿನ್, ಫ್ಯೂಕೋಸ್ಸಾಂತಿನ್ ಮತ್ತು ಅಲ್ಪಸ್ವಲ್ಪ ಕ್ಲೋರೊಫಿಲ್ c, ನಿಯೋಫ್ಯೂಕೋಸಾಂತಿನ್, ಡಯಾಟೋಸಾಂತಿನ್, ಡಯಾಟಿನೋಸಾಂತಿನ್ ಮುಂತಾದುವು.

ಹಳದಿ ಹಸಿರು ಆಲ್ಗೆ: ಕ್ಲೋರೊಫಿಲ್ a, â ಕ್ಯಾರೊಟಿನ್ ಅನಿರ್ಣಯವಾದ ಸಾಂತೋಫಿಲ್ ಮತ್ತು ಅಲ್ಪಸ್ವಲ್ಪ ಕ್ಲೋರೊಫಿಲ್ (E).

ಕೆಂಪು ಆಲ್ಗೆ: ಕ್ಲೋರೊಫಿಲ್ a, â ಕ್ಯಾರೊಟಿನ್, ಫೈಕೊಎರಿತ್ರಿನ್ ಮತ್ತು ಅಲ್ಪಸ್ವಲ್ಪ ಫೈಕೊಸೈಯನಿಸ್, ಲೂಟಿನ್, ಕ್ಯಾರೊಟಿನ್ ಮತ್ತು ಕ್ಲೋರೊಫಿಲ್ d.

ಡೈನೋಫ್ಲಾಜಿಲ್ಲಾಟ: ಕ್ಲೋರೋಫಿಲ್ a, â ಕ್ಯಾರೊಟಿನ್, ಅಲ್ಪಸ್ವಲ್ಪ ಕ್ಲೋರೋಫಿಲ್ b, ಪೆರಿಡಿನಿನ್ ಮುಂತಾದುವು.

ಯೂಗ್ಲಿನೋಫೈಟ್: ಕ್ಲೋರೋಫಿಲ್ a, â ಕ್ಯಾರೊಟಿನ್, ಅಲ್ಪಸ್ವಲ್ಪ ಕ್ಲೋರೋಫಿಲ್ b, ಪೆರಿಡಿನಿನ್ ಮುಂತಾದುವು.

ವರ್ಣಗ್ರಾಹಿಗಳಲ್ಲಿ ಪೈರಿನಾಯ್ಡ್ ಎಂಬ ನಿರ್ದಿಷ್ಟಸಂಖ್ಯೆಯ ಆಹಾರ ಶೇಖರಣ ಭಾಗಗಳಿವೆ. ಇವು ವರ್ಣಗ್ರಾಹಿಯ ಮೇಲೆ ನಿರ್ದಿಷ್ಟಸ್ಥಳಗಳಲ್ಲಿವೆ. ಪೈರಿನಾಯಿಡ್‍ಗಳಲ್ಲಿ ಮಾಂಸಗಳಿಂದ ಕೂಡಿದ ಒಂದು ಕೇಂದ್ರವಿದ್ದು ಅದರ ಸುತ್ತಲೂ ಪಿಷ್ಟದ ಕವಚಗಳಿವೆ. ಪೈರಿನಾಯಿಡ್‍ಗಳ ಜೊತೆಗೆ ಅಲ್ಗೆಗಳ ಕಣಗಳಲ್ಲಿ ಕೆಲವು ವಿಧವಾದ ಆಹಾರ ವಸ್ತುಗಳು ಶೇಖರವಾಗುತ್ತವೆ. ಎಣ್ಣೆ ಪದಾರ್ಥಗಳು, ಸಾಮಾನ್ಯ ಪಿಷ್ಟಪದಾರ್ಥಗಳ ಜೊತೆಗೆ ಲ್ಯೂಕೊಸಿನ್ ಎಂಬ ಪ್ರತ್ಯೇಕ ಆಹಾರ ಪದಾರ್ಥ ಹಳದಿ ಹಸಿರು ಆಲ್ಗೆಗಳಲ್ಲೂ ಲ್ಯಾಮಿನೇರಿನ್ ಎಂಬುದು ಕಂದು ಆಲ್ಗೆಗಳಲ್ಲೂ ಸೈಯಾನೋಫೈಸಿಯನ್‍ಪಿಷ್ಟ ಎಂಬುದು ನೀಲ ಹಸಿರು ಆಲ್ಗೆಗಳಲ್ಲೂ ಫ್ಲಾರಿಡಿಯನ್ ಪಿಷ್ಟ ಕೆಂಪು ಆಲ್ಗೆಗಳಲ್ಲೂ ಶೇಖರವಾಗಿರುವುದು. ಇವುಗಳ ಜೊತೆಗೆ ಮಾನ್ನಿಟಾಲ್ ಎಂಬ ಮದ್ಯಸಾರವೂ ಕಂದು ಆಲ್ಗೆಗಳಲ್ಲಿ ಶೇಖರವಾಗಿರುತ್ತದೆ. ಕೆಲವು ಆಲ್ಗೆಗಳಲ್ಲಿ ಪ್ರತ್ಯೇಕ ಚಲನಾಂಗಗಳಿವೆ. ಇವುಗಳಿಗೆ ಶಿಲಕೆಗಳೆಂದು (ಸಿಲಿಯ) ಹೆಸರು. ಒಂದು ಕಣದಲ್ಲಿ ಸಾಮಾನ್ಯವಾಗಿ ಎರಡು ಶಿಲಕಗಳಿವೆ. ಡೈನೋಪ್ಲಾಜಿಲೇಟ, ಯೂಗ್ಲಿನೋಫೈಟದ ಎಲ್ಲ ಸಸ್ಯಗಳಲ್ಲೊ ಅಚ್ಚ ಹಸಿರು ಆಲ್ಗೆಯ ಕ್ಲಾಮಿಡೋಮೊನಾಸ್, ವಾಲ್ವಾಕ್ಸ್ ಮುಂತಾದುವುಗಳಲ್ಲೂ ಶಿಲಕೆಗಳಿವೆ. ಈ ಆಲ್ಗೆಗಳಿಗೆ ನೀರಿನಲ್ಲಿ ಈಜಲು ಇವು ಸಹಾಯಕಗಳು.


ಚಿತ್ರ. 8 ಸಂಕೀರ್ಣಥಾಲಸ್ಸುಳ್ಳ ಆಲ್ಗೆ–ಕಾಲೆರ್ಪ

ಸಂತಾನಾಭಿವೃದ್ಧಿ: ಆಲ್ಗೆ ಸಸ್ಯಗಳಲ್ಲಿ ಮೂರು ವಿಧಗಳಲ್ಲಿ ಸಂತಾನಾಭಿವೃದ್ಧಿಯಾಗುತ್ತದೆ. 1. ಶಾಖಾಭೇದ ಸಂತಾನಾಭಿವೃದ್ಧಿ (ವೆಜಿಟೇಟಿವ್ ರಿಪ್ರೊಡಕ್ಷನ್). 2. ನಿರ್ಲಿಂಗ ಸಂತಾನಾಭಿವೃದ್ಧಿ (ಅಸೆಕ್ಶುಯಲ್ ರಿಪ್ರೊಡಕ್ಷನ್). 3. ಲೈಂಗಿಕ ಸಂತಾನಾಭಿವೃದ್ಧಿ (ಸೆಕ್ಶುಯಲ್ ರಿಪ್ರೊಡಕ್ಷನ್).

ಆಲ್ಗೆಗಳಲ್ಲಿ ಶಾಖಾಭೇದನಕ್ರಮ ಸರ್ವಸಾಮಾನ್ಯವಾದ ಸಂತಾನಾಭಿವೃದ್ಧಿ ಕ್ರಮ. ಆಲ್ಗೆಗಳ ಥಾಲಸ್ಸು ಅನೇಕ ಕಾರಣಗಳಿಂದ ಛೇದವಾಗಿ ಪ್ರತಿ ಭಾಗವೂ ಒಂದೊಂದು ಹೊಸ ಸಸ್ಯವಾಗಿ ಬೆಳೆಯುವ ಶಕ್ತಿ ಪಡೆದಿದೆ. ಮೀನು ಮುಂತಾದ ಕೆಲವು ಜಲಚರಗಳು ಆಲ್ಗೆಗಳನ್ನು ಆಹಾರವಾಗಿ ಉಪಯೋಗಿಸುತ್ತವೆ. ಇವು ಥಾಲಸ್ಸನ್ನು ಕಡಿದು ತುಂಡುಮಾಡಬಹುದು. ಸಮುದ್ರಗಳಲ್ಲಿ ಅಲೆಗಳ ರಭಸದಿಂದಲೂ ಜಲಚರಗಳ ಓಡಾಟಗಳಿಂದಲೂ ಪ್ರವಾಹಗಳಿಂದಲೂ ನದಿಗಳಲ್ಲಿ ನೀರಿನ ವೇಗದಿಂದಲೂ ಥಾಲಸ್ಸು ತುಂಡಾಗುವ ಸಂಭವವಿದೆ. ನೀಲಿ ಹಸಿರು ಆಲ್ಗೆಗಳಲ್ಲಿ ಕಣಗಳು ದ್ವಿಗುಣಛೇದವಾಗುತ್ತವೆ (ಬೈನರಿ ಫಿಶ್ಶನ್). ಅಂದರೆ ಪ್ರತಿಕಣ ಇಬ್ಭಾಗವಾಗಿ ಆ ಭಾಗ ಮತ್ತೆ ಇಬ್ಭಾಗವಾಗುತ್ತದೆ. ಇದು ಒಂದು ಸಾಮಾನ್ಯ ಶಾಖಾಪ್ರಜನನ ವಿಭಾಗ. ಈ ಆಲ್ಗೆಗಳ ಎಳೆಗಳಲ್ಲಿ ಮಧ್ಯೆ ಮಧ್ಯೆ ಸತ್ತ ಕಣಗಳು ಸೇರಿರುತ್ತವೆ. ಇಂಥ ಭಾಗಗಳಲ್ಲಿ ಕಣಗಳು ಬೇರ್ಪಟ್ಟು ತುಂಡಾದ ಭಾಗ ಪೂರ್ಣ ಎಳೆಗಳಾಗಿ ಬೆಳೆಯುತ್ತವೆ. ಕಂದು ಆಲ್ಗೆಗಳಲ್ಲಿ ಕೆಂಪು ಥಾಲಸ್ಸುಗಳು ಪೂರ್ಣವಾಗಿ ಛೇದವಾಗುವುದಿಲ್ಲ.

ಚಿತ್ರ. 9 ಸಂಕೀರ್ಣಥಾಲಸ್ಸುಳ್ಳ ಆಲ್ಗೆ–ಪೋಸ್ಟೆಲ್ಸಿಯ

ಅಪೂರ್ಣಛೇದಭಾಗಗಳು ಬೆಳವಣಿಗೆಯನ್ನು ಮುಂದುವರಿಸುತ್ತವೆ. ಸ್ಫಾಸಿಲೇರಿಯ ಮುಂತಾದ ಆಲ್ಗೆಗಳಲ್ಲಿ ಪ್ರಾಪಗ್ಯೂಲ್ಸ್ ಎಂಬ ಪ್ರತ್ಯೇಕ ಶಾಖಾಪ್ರಜನನ ಭಾಗಗಳು ಉತ್ಪತ್ತಿಯಾಗುತ್ತವೆ. ಇವು ಪ್ರತ್ಯೇಕಗೊಂಡು ಹೊಸ ಸಸ್ಯಗಳಾಗಿ ಬೆಳೆಯುತ್ತವೆ.


ಚಿತ್ರ. 10 ಸಂಕೀರ್ಣಥಾಲಸ್ಸುಳ್ಳ ಆಲ್ಗೆ–ಲ್ಯಾಮಿನೇರಿಯ

ನಿರ್ಲಿಂಗ ಸಂತಾನಾಭಿವೃದ್ಧಿ ಸಹ ಎಲ್ಲ ವಿಧವಾದ ಆಲ್ಗೆಗಳನ್ನೂ ಕಂಡು ಬರುತ್ತದೆ. ನೀಲಿ ಹಸಿರು ಆಲ್ಗೆಗಳಲ್ಲಂತೂ ಇದೇ ಪ್ರಧಾನವಾದ ಕ್ರಮ. ನಿರ್ಲಿಂಗ ಸಂತಾನಾಭಿವೃದ್ಧಿಗಾಗಿ ಪ್ರತ್ಯೇಕ ಕಣಗಳು ಉತ್ಪತ್ತಿಯಾಗುತ್ತವೆ. ಇವುಗಳ ಉತ್ಪತ್ತಿ ಕನಿಷ್ಠ ವರ್ಗದ ಆಲ್ಗೆಗಳ ಥಾಲಸ್ಸಿನ ಎಲ್ಲ ಕಣಗಳಲ್ಲೂ ಇದೆ. ಕೆಲವು ಆಲ್ಗೆಗಳಲ್ಲಿ ಥಾಲಸ್ಸಿನ ಕೆಲವು ಕಣಗಳು ಪ್ರತ್ಯೇಕ ಕೋಶಗಳಲ್ಲೂ ಉತ್ಪತ್ತಿಯಾಗುವುದುಂಟು. ಝೂವೊಸ್ಪೋರ್ಸ್, ಏಪ್ಲನೋಸ್ಪೋರ್ಸ್, ಹಿಪ್ನೋಸ್ಪೋರ್ಸ್, ಅಕಿನೆಟ್ಸ್, ಹೆಟಿರೊಸಿಸ್ಟ್, ಮನೋಸ್ಪೋರ್, ಟೆಟ್ರಸ್ಪೋರ್ ಮುಂತಾದುವು ನಿರ್ಲಿಂಗ ಕಣಗಳು. ಝೂವೊಸ್ಪೋರುಗಳು ಚಲನೆಯುಳ್ಳ ನಿರ್ಲಿಂಗಕಣಗಳು. ಇವು ವಿವಿಧಾಕೃತಿಗಳಿವೆ. ಇವುಗಳ ಚಲನೆಗೆ ಸಹಾಯಮಾಡಲು ಶಿಲಕೆಗಳು ಮುಂಭಾಗದಲ್ಲಿವೆ. ಇವುಗಳ ಸಂಖ್ಯೆ ಒಂದೊಂದು ವಿಧವಾದ ಆಲ್ಗೆಯಲ್ಲಿ ಒಂದೊಂದು ವಿಧ. ಕೆಲವು ಆಲ್ಗೆಗಳ ಝೂವೊಸ್ಪೋರುಗಳಲ್ಲಿ ಎರಡು ಶಿಲಕೆಗಳಿವೆ. ಕೆಲವಲ್ಲಿ ನಾಲ್ಕು ಶಿಲಕೆಗಳಿವೆ. ಯೂಡೊಗೋನಿಯಂ, ವಾಚೇರಿಯ ಮುಂತಾದ ಆಲ್ಗೆಗಳ ಝೂವೊಸ್ಪೋರುಗಳಲ್ಲಿ ಅನೇಕ ಶಿಲಕೆಗಳಿವೆ. ಯೂಡೊಗೋನಿಯಂನಲ್ಲಿ ಶಿಲಕೆಗಳು ಒಂದು ಸುತ್ತಿನಲ್ಲಿ ಜೋಡಿಸಿದೆ. ವಾಚೇರಿಯದಲ್ಲಿ ಮೈಮೇಲೆಲ್ಲ ಜೋಡಿಸಿವೆ. ಶಿಲಕೆಗಳೆರಡೂ ಒಂದೇ ಸಮವಾಗಿರಬಹುದು. ಹಳದಿ ಹಸಿರು ಆಲ್ಗೆಗಳ ಝೂವೊಸ್ಪೋರುಗಳಲ್ಲಿ ಶಿಲಕೆಗಳು ಅಸಮ. ಶಿಲಕೆಗಳು ಸದಾ ಬಡಿದುಕೊಳ್ಳುತ್ತಿರುವುದರಿಂದ ಝೂವೊಸ್ಪೋರು ಮುಂದು ಹಿಂದು ಈಜುವುದಕ್ಕೆ ಸಹಾಯವಾಗುತ್ತದೆ. ಝೂವೊಸ್ಪೋರುಗಳಲ್ಲಿ ಏಕಕಣಬೀಜವಿದೆ. ಅವು ಉತ್ಪತ್ತಿಯಾದ ಕಣವನ್ನು ಛೇದಿಸಿಕೊಂಡು ಹೊರಬರುತ್ತವೆ. ಕೆಲವು ಆಲ್ಗೆಗಳಲ್ಲಿ ಇವುಗಳ ಬಿಡುಗಡೆಗೆ ಪ್ರತ್ಯೇಕ ದ್ವಾರಗಳಿವೆ. ಇವುಗಳಲ್ಲಿ ಕಣಭಿತ್ತಿ ಇರುವುದಿಲ್ಲ. ಹೊರಬಂದ ಝೂವೊಸ್ಪೋರುಗಳು ಈಜಾಡುತ್ತಿದ್ದು ಆಧಾರ ಸ್ಥಳ ಸಿಕ್ಕಿದಾಗ ಅದಕ್ಕೆ ಅಂಟಿಕೊಂಡು ಚಲನಾಂಗವನ್ನು ಕಳೆದುಕೊಳ್ಳುತ್ತವೆ. ಆ ಮೇಲೆ ಇವು ಬೆಳೆದು ಪ್ರತ್ಯೇಕ ಸಸ್ಯಗಳಾಗುತ್ತವೆ. ಕೆಂಪು ಆಲ್ಗೆ, ನೀಲಿ ಹಸಿರು ಆಲ್ಗೆಗಳಲ್ಲಿ ಜೊವೊಸ್ಪೋರುಗಳು ಉತ್ಪತ್ತಿಯಾಗುವುದಿಲ್ಲ. ಕೆಲವು ಆಲ್ಗೆಗಳಲ್ಲಿ ಶಿಲಕೆಗಳಿಲ್ಲದ ಸ್ಪೋರುಗಳು ಉತ್ಪತ್ತಿಯಾಗುತ್ತವೆ. ಈ ಸ್ಪೋರುಗಳ ಸುತ್ತಲೂ ಕಣಭಿತ್ತಿ ಇಲ್ಲದೆ ನಗ್ನವಾಗಿದ್ದರೆ ಇಂಥವುಗಳನ್ನು ಏಪ್ಲಾನೋ ಸ್ಪೋರುಗಳೆಂದು ಕರೆಯುತ್ತಾರೆ. ಶಿಲಕೆಗಳಿಲ್ಲದ ಸ್ಪೋರುಗಳು ಕೆಲವು ಮಂದವಾದ ಭಿತ್ತಿಯಿಂದ ಕೂಡಿವೆ. ಇವುಗಳ ಹೆಸರು ಹಿಪ್ನೋಸ್ಪೋರು. ಕೆಲವು ಅಚ್ಚ ಹಸಿರು ಆಲ್ಗೆ ಮತ್ತು ಹಳದಿ ಹಸಿರು ಆಲ್ಗೆಗಳಲ್ಲಿ ಇಂಥ ಸ್ಪೋರುಗಳು ಉತ್ಪತ್ತಿಯಾಗುತ್ತವೆ. ಇವು ಬೆಳೆದು ಹೊಸಸಸ್ಯಗಳನ್ನು ಉತ್ಪತ್ತಿಮಾಡುತ್ತವೆ. ಕೆಲವು ಆಲ್ಗೆಗಳಲ್ಲಿ ಒಂದು ಶಾಖಾಕಣ (ವೆಜಿಟೇಟಿವ್ ಸೆಲ್) ಪೂರ್ಣವಾಗಿ ಮಾರ್ಪಟ್ಟು ಒಂದು ವಿಧವಾದ ನಿರ್ಲಿಂಗ ಸ್ಪೋರುಗಳಾಗುತ್ತವೆ. ಇವುಗಳ ಹೆಸರು ಅಕಿನೇಟ್, ಕ್ಲಡೊಪೊರ, ಪಿತಾಫೊರ ಮುಂತಾದ ಆಲ್ಗೆಗಳಲ್ಲಿ ಇವು ಕ್ರಮವಾಗಿ ಉತ್ಪತ್ತಿಯಾದರೆ ಕೆಲವು ಆಲ್ಗೆಗಳಲ್ಲಿ ಉತ್ಪತ್ತಿಯಾಗುವುದಿಲ್ಲ. ನೀಲಿ ಹಸಿರು ಆಲ್ಗೆಗಳಲ್ಲಿ ಶಿಲಕೆಗಳಿಲ್ಲದ ಹೆಟಿರೊಸಿಸ್ಟ್ ಎಂಬ ಪ್ರತ್ಯೇಕ



ಚಿತ್ರ. 11 ವಿವಿಧ ಹರಿದ್ವರ್ಣಗ್ರಾಹಿಗಳು: 1 ನಕ್ಷತ್ರಾಕಾರ 2 ಒಲೆಯಾಕಾರ 3 ಸುತ್ತುಗಳಿಂದ ಕೂಡಿದ ಗಟ್ಟಿಯಾಕಾರ 4 ಬಲೆಯಾಕಾರ

ಸ್ಪೋರು ಉತ್ಪತ್ತಿಯಾಗುತ್ತದೆ. ಇದೊ ಮಾರ್ಪಾಟಾದ ಒಂದು ಶಾಖಾಕಣ. ಇವು ಎಲೆಗಳ ಅಂತ್ಯದಲ್ಲಾಗಲಿ ಮಧ್ಯದಲ್ಲಾಗಲಿ ಇರುತ್ತವೆ. ಎಳೆಗಳು ಇವುಗಳ ಬಳಿ ಛಿದ್ರವಾಗಿ ಬೇರ್ಪಟ್ಟು ಶಾಖಾಪ್ರಜನನವಾಗುತ್ತವೆ. ಈ ಆಲ್ಗೆಗಳಲ್ಲಿ ಅಕಿನೇಟ್, ಎಂಡೋಸ್ಪೋರ್ ಮುಂತಾದುವು ಸಹ ಉತ್ಪತ್ತಿಯಾಗುತ್ತವೆ. ಕಂಪು ಆಲ್ಗೆಗಳಲ್ಲಿ ಮಾನೋಸ್ಪೋರ್, ಬೈಸ್ಪೋರ್, ಟ್ರೈಸ್ಪೋರ್, ಪಾಲಿಸ್ಪೋರ್ ಎಂಬ ಸ್ಪೋರುಗಳು ಉತ್ಪತ್ತಿಯಾಗಿ ನಿರ್ಲಿಂಗ ಸಂತಾನಾಭಿವೃದ್ಧಿಗೆ ಸಹಾಯವಾಗುತ್ತವೆ.



**ಚಿತ್ರ. 12 ನಿರ್ಲಿಂಗಸಂತಾನಾಭಿವೃದ್ಧಿ ಜುವೊಸ್ಪೋರ್**
**1 ಕ್ಲಾಮಿಡೋಮೋನಾಸ್ 2 ಯುಲೋತ್ರಿಕ್ಸ್**
**3 ಯೂಡೋಗೋನಿಯಂ 4 ವಾಚೇರಿಯಂ**

ಲೈಂಗಿಕ ಸಂತಾನಾಭಿವೃದ್ಧಿ ನೀಲಿ ಹಸಿರು ಆಲ್ಗೆಗಳನ್ನು ಬಿಟ್ಟು ಮಿಕ್ಕೆಲ್ಲ ಆಲ್ಗೆ ಸಸ್ಯಗಳಲ್ಲಿ ಕಂಡು ಬಂದಿದೆ. ಲೈಂಗಿಕ ಸಂತಾನಾಭಿವೃದ್ಧಿಯಲ್ಲಿ ಲೈಂಗಿಕ ಕಣಗಳು (ಸೆಕ್ಸುಯಲ್ ಸೆಲ್ಸ್) ಉತ್ಪತ್ತಿಯಾಗುತ್ತವೆ. ಇವುಗಳ ಹೆಸರು ಗ್ಯಾಮೀಟುಗಳು. ಗ್ಯಾಮೀಟುಗಳ ಉತ್ಪತ್ತಿ ನಿರ್ದಿಷ್ಟವಾದ ಕೋಶಗಳಲ್ಲಿ; ಈ ಕೋಶಗಳಿಗೆ ಗ್ಯಾಮಿಟಾಂಜಿಯ ಎಂದು ಹೆಸರು. ಕೆಲವು ಏಕಕಣ ಆಲ್ಗೆಗಳಲ್ಲೂ ಸರಳರೂಪದ ಎಳೆಗಳಲ್ಲೂ ಶಾಖಾಕಣಗಳೇ ಗ್ಯಾಮೀಟುಗಳನ್ನು ಉತ್ಪತ್ತಿಸುತ್ತವೆ. ಥಾಲಸ್ಸಿನ ಸಂಕೀರ್ಣತೆ ಹೆಚ್ಚಿದಂತೆಲ್ಲ ಲಿಂಗಕೋಶಗಳು ಉದ್ಭವಿಸಲು ಪ್ರಾರಂಭಿಸುತ್ತವೆ. ಅನೇಕ ಆಲ್ಗೆ ಸಸ್ಯಗಳಲ್ಲಿನ ಗ್ಯಾಮೀಟುಗಳಿಗೆ ಚಲನೆಯಿದೆ. ಕೆಲವು ಆಲ್ಗೆಗಳಲ್ಲಿ ಕೇವಲ ಗಂಡು ಗ್ಯಾಮೀಟುಗಳು ಚಲಿಸುತ್ತವೆ ಹೆಣ್ಣು ಗ್ಯಾಮೀಟುಗಳು ಚಲಿಸುವುದಿಲ್ಲ. ಇಂಥ ಹೆಣ್ಣು ಗ್ಯಾಮೀಟುಗಳಿಗೆ ಸಾಧಾರಣವಾಗಿ ಅಂಡಗಳೆಂದು (ಎಗ್ ಆರ್ ಓವಮ್) ಹೆಸರು. ಇವು ಉತ್ಪತ್ತಿಯಾಗುವ ಕೋಶಕ್ಕೆ ಊಗೋನಿಯ ಎಂದು ಹೆಸರು. ಕೆಲವು ಆಲ್ಗೆಗಳಲ್ಲಿ ಗಂಡು ಮತ್ತು ಹೆಣ್ಣು ಗ್ಯಾಮೀಟುಗಳು ಒಂದನ್ನೊಂದು ಎಲ್ಲ ವಿಧಗಳಲ್ಲಿಯೂ ಹೋಲುತ್ತವೆ. ಇವುಗಳ ರೂಪ ಗಾತ್ರ ಮತ್ತು ಚಲನೆ ಒಂದೇ ವಿಧ. ಇವುಗಳಲ್ಲಿ ಯಾವುದು ಗಂಡುಕಣ, ಯಾವುದು ಹೆಣ್ಣು ಕಣವೆಂದು ಗುರುತಿಸುವುದು ಕಷ್ಟ. ಇಂಥ ಕಣಗಳಿಗೆ ಸಮಲಿಂಗಕಣವೆಂದು (ಐಸೊಗ್ಯಾಮೀಟ್ಸ್) ಹೆಸರು. ಇವುಗಳ ಸಂಯೋಗಕ್ಕೆ ಸಮಲಿಂಗಕಣ ಸಂಯೋಗ (ಐಸೊಗ್ಯಾಮಿ) ಎಂದು ಹೆಸರು. ಕೆಲವು ಆಲ್ಗೆಗಳಲ್ಲಿ ಗ್ಯಾಮೀಟುಗಳೆರಡು ಚಲಿಸುವ ಶಕ್ತಿಯನ್ನು ಹೊಂದಿದ್ದರೂ ರೂಪ ಮತ್ತು ಗಾತ್ರಗಳಲ್ಲಿ ಅಸಮವಾಗಿರುತ್ತವೆ. ಇವುಗಳ ಚಲನೆಯಲ್ಲೂ ಸ್ವಲ್ಪ ವ್ಯತ್ಯಾಸ ಕಂಡು ಬರುತ್ತದೆ. ಇಂಥ ಲಿಂಗಕಣಗಳಿಗೆ ಅಸಮಲಿಂಗಕಣಗಳೆಂದು (ಆನ್ ಐಸೊಗ್ಯಾಮೀಟ್) ಹೆಸರು. ಇವುಗಳ ಸಂಯೋಗಕ್ಕೆ ಅಸಮಲಿಂಗಕಣ ಸಂಯೋಗ(ಆನ್ ಐಸೊಗ್ಯಾಮಿ) ಎಂದು ಹೆಸರು. ಅನೇಕ ಆಲ್ಗೆಗಳಲ್ಲಿ ಗಂಡುಕಣ ಗಾತ್ರದಲ್ಲಿ ಚಿಕ್ಕದಾಗಿದ್ದು ಚಲನಶಕ್ತಿ ಹೊಂದಿದೆ. ಹೆಣ್ಣುಕಣ ಗಾತ್ರದಲ್ಲಿ ದೊಡ್ಡದಾಗಿದ್ದು ಚಲನಾಂಗರಹಿತವಾಗಿರುತ್ತದೆ. ಸಾಮಾನ್ಯವಾಗಿ ಗಂಡುಕಣಗಳು ಒಂದು ಕೋಶದಲ್ಲಿ ಅನಿರ್ದಿಷ್ಟ ಸಂಖ್ಯೆಯಲ್ಲಿ ಉತ್ಪತ್ತಿಯಾಗುತ್ತವೆ ; ಆದರೆ ಹೆಣ್ಣುಕಣಗಳು ನಿರ್ದಿಷ್ಟ ಸಂಖ್ಯೆಯಲ್ಲಿ ಉತ್ಪತ್ತಿಯಾಗುತ್ತವೆ. ಇಂಥ ಹೆಣ್ಣು ಕಣಗಳಿಗೆ ಅಂತರೋಭ್ಜುಆಯ್ಡ್‌ಗಳೆಂದು ಹೆಸರು. ಸ್ತ್ರೀಲಿಂಗ ಕಣಕ್ಕೆ ಅಂಡ ಅಥವಾ ಓವಮ್ ಎಂದು ಹೆಸರು. ಅಂತರೋಭ್ಜುಆಯ್ಡ್‌ಗಳು ನೀರಿಗೆ ಬಿಡುಗಡೆಯಾಗುತ್ತವೆ. ಆದರೆ ಅಂಡಗಳು ಹೊರಗೆ ಬಿಡುಗಡೆಯಾಗದೆ ಅಂಡಕೋಶದಲ್ಲಿಯೇ ಇದ್ದು ಸಂಯೋಗವಾಗುತ್ತವೆ. ಇಂಥ ಗ್ಯಾಮೀಟುಗಳಿಗೆ ಊಗ್ಯಾಮೀಟ್ಸ್ ಎಂದು ಹೆಸರು. ಈ ಸಂಯೋಗಕ್ಕೆ ಊಗ್ಯಾಮಿ ಎಂದು ಹೆಸರು. ಕಾಂಜುಗೆಲಿಸ್ ಶ್ರೇಣಿಗೆ ಸೇರಿದ ಆಲ್ಗೆಗಳಲ್ಲಿ ಲಿಂಗಕಣ ವಿಭೇದವಿರುವುದಿಲ್ಲ. ಎರಡು ಕಣಗಳು ಅಥವಾ ಎರಡು ಎಳೆಗಳು ಒಂದನ್ನೊಂದು ಸಂಧಿಸಿದಾಗ ಎರಡರ ಮಧ್ಯೆ ಒಂದ ನಾಳ ಏರ್ಪಡುತ್ತದೆ. ಇದರ ಮೂಲಕ ಕಣದ್ರವ ಒಂದ ಕಣದಿಂದ ಮತ್ತೊಂದು ಕಣಕ್ಕಾಗಲಿ ಎರಡು ಕಣಗಳಿಂದಲೂ ಮಧ್ಯದ ನಾಳಕ್ಕಾಗಲಿ ಹರಿದು ಸಂಯೋಗವಾಗುತ್ತದೆ. ಇಲ್ಲಿ ಪ್ರತ್ಯೇಕ ಗ್ಯಾಮೀಟುಗಳು ಕಂಡು ಬರುವುದಿಲ್ಲ. ಇಂಥ ಯೋಗಕ್ಕೆ ಏಪ್ಲನೋಗಮಿ ಅಥವಾ ಕಾಂಜುಗೇಷನ್ ಎಂದು ಹೆಸರು. ಡೈಆಟಮ್ ಎಂಬ ಏಕಕಣ ಆಲ್ಗೆಗಳಲ್ಲಿ ಅಕ್ಸೋಸ್ಪೋರ್ ಎಂಬ ಪ್ರತ್ಯೇಕ ಸ್ಪೋರುಗಳ ಸಹಾಯದಿಂದ ಸಂತಾನಾಭಿವೃದ್ಧಿಯಾಗುತ್ತದೆ.

ಕಂದು ಆಲ್ಗೆಗಳ ಫೋಕೇಲಿಸ್ ಶ್ರೇಣಿಯಲ್ಲಿ ಅಂಡಗಳು ಸಹ ಅಂಡಕೋಶದಿಂದ ಹೊರಬಂದು ಬಾಹ್ಯ ಸಂಯೋಗ ಆಗುತ್ತದೆ. ಕೆಂಪು ಆಲ್ಗೆಗಳಲ್ಲಿ ಹೆಣ್ಣುಕಣ ಕಾರ್ಪೋಗೋನಿಯಂ ಎಂಬ ಪ್ರತ್ಯೇಕ ಕೋಶದಲ್ಲಿ ಜನಿಸುತ್ತದೆ. ಗಂಡುಕಣದ ಹೆಸರು ಸ್ಪರ್ಮೇಷಿಯಂ. ಇವುಗಳ ಉತ್ಪತ್ತಿ ಸ್ಪರ್ಮಟಾಂಜಿಯಂ ಎಂಬ ಕೋಶದಲ್ಲಿ. ಇವು ಚಲನರಹಿತ ಕಣಗಳು. ಸಂಯೋಗ ಕಾರ್ಪೋಗೋನಿಯಂನಲ್ಲಿ ಜರುಗುತ್ತದೆ. ಲಿಂಗಕಣಗಳು ಸಂಯೋಗವಾದ ಮೇಲೆ ಸಂಯೋಗಾಂಡ ಕೆಲವು ಸಲ ಸುಪ್ತಾವಸ್ಥೆಯಲ್ಲಿರುತ್ತದೆ. ಆಮೇಲೆ ಇವುಗಳಲ್ಲಿ ವಿಭಜನೆ ಹೊಂದಿ ಜೂವೊಸ್ಪೋರುಗಳು ಉತ್ಪತ್ತಿಯಾಗಬಹುದು ಅಥವಾ ನೇರವಾಗಿ ಸಂಯೋಗಾಂಡ ಬೇರೆ ಗಿಡವಾಗಿ ಬೆಳೆಯಬಹುದು. ಕೆಂಪು ಆಲ್ಗೆಗಳಲ್ಲಿ ಸಂಯೋಗಾಂಡ ಕಾರ್ಪೋಸ್ಪೋರು ಎಂಬ ಸ್ಪೋರುಗಳನ್ನು ಉತ್ಪತ್ತಿ ಮಾಡುತ್ತದೆ. ಇವು ಒಂದೊಂದೂ ಬೇರೆ ಸಸ್ಯವನ್ನು ಕೊಡುತ್ತವೆ. ಕೆಲವು ಕೆಂಪು ಆಲ್ಗೆಗಳಲ್ಲಿ ಕಾರ್ಪೋಸ್ಪೋರುಗಳು ಪ್ರತ್ಯೇಕ ಪೀಳಿಗೆಯನ್ನುಂಟುಮಾಡುತ್ತವೆ. ಇವುಗಳಿಂದ ಟೆಟ್ರಸ್ಪೋರುಗಳು ಉತ್ಪತ್ತಿಯಾಗಿ ಇವುಗಳಿಂದ ಮತ್ತೆ ಬೇರೆ ಸಸ್ಯ ಅಭಿವೃದ್ಧಿಯಾಗುವುದು.

ಜೀವನಚಕ್ರ: ಅನೇಕ ಆಲ್ಗೆಗಳಲ್ಲಿ ಜೀವನಚಕ್ರ ಸಂತಾನಾಭಿವೃದ್ಧಿಯ ಥಾಲಸ್ಸು ಮತ್ತು ಸಂಯೋಗಾಂಡದೊಡನೆ ಕೊಡಿವೆ. ಅಂದರೆ ಜೀವನಚಕ್ರದಲ್ಲಿ ಕೇವಲ ಒಂದೇ ಪೀಳಿಗೆ (ಜನರೇಷನ್) ಇದೆ. ಆದರೆ ಕ್ಲಡಾಫೋರ, ಎಕ್ಟೊಕಾರ್ಪಸ್ ಮುಂತಾದ ಅನೇಕ ಆಲ್ಗೆಗಳಲ್ಲಿ ಒಂದಕ್ಕಿಂತ ಹೆಚ್ಚು ಪೀಳಿಗೆಗಳು ಜೀವನಚಕ್ರದಲ್ಲಿ ಕಂಡುಬರುತ್ತವೆ. ಈ ಪೀಳಿಗೆಗಳು ಒಂದಾದ ಮೇಲೆ ಮತ್ತೊಂದು ಪರ್ಯಾಯಗೊಳ್ಳುತ್ತವೆ. ಲಿಂಗಕಣಗಳನ್ನು ಉತ್ಪತ್ತಿಮಾಡುವ ಪೀಳಿಗೆಗೆ ಗ್ಯಾಮೀಟೊಫೈಟು ಪೀಳಿಗೆ ಎಂದೂ ಸ್ಪೋರುಗಳನ್ನು ಉತ್ಪತ್ತಿ ಮಾಡುವ ಪೀಳಿಗೆಗೆ ಸ್ಪೋರೋಫೈಟಿಕ್ ಪೀಳಿಗೆ ಎಂದೂ ಹೆಸರು. ಈ ಪೀಳಿಗೆಗಳ ಪರ್ಯಾಯಕ್ಕೆ ಪೀಳಿಗೆಗಳ ಪರ್ಯಾಯ ಕ್ರಮ ಎಂದು ಹೆಸರು. ಕ್ಲಡಾಫೋರ, ಎಕ್ಟೊಕಾರ್ಪಸ್ ಮುಂತಾದ ಆಲ್ಗೆಗಳಲ್ಲಿ ಎರಡು ಪೀಳಿಗೆಗಳಲ್ಲಿನ ಥಾಲಸ್ಸು ಒಂದೇ ವಿಧವಾಗಿರುತ್ತದೆ. ಆದ್ದರಿಂದ ಇಂಥ ಪರ್ಯಾಯಕ್ಕೆ ಸಮರೂಪ ಪರ್ಯಾಯ (ಐಸೊಮಾರ್ಫಿಕ್ ಆಲ್ಟರ್ನೇಷನ್) ಎಂದು ಹೆಸರು. ಲ್ಯಾಮಿನೇರಿಯ, ಡಿಕ್ಟಿಯೋಟ ಮುಂತಾದ ಆಲ್ಗೆಗಳಲ್ಲಿ ಗ್ಯಾಮಿಟೊಫೈಟು ಪೀಳಿಗೆಯಲ್ಲಿ ಥಾಲಸ್ಸು ಪ್ರಧಾನ. ಸ್ಪೋರೋಫೈಟಿನ ಥಾಲಸ್ಸು ಚಿಕ್ಕದು. ಆದ್ದರಿಂದ ಇದಕ್ಕೆ ಅಸಮರೂಪ ಪರ್ಯಾಯ (ಹೆಟರೊಮಾರ್ಫಿಕ್ ಆಲ್ಟರ್ನೇಷನ್) ಎಂದು ಹೆಸರು.

ಕೆಲವು ಕೆಂಪು ಆಲ್ಗೆಗಳಲ್ಲಿ ಕಾರ್ಪೋಸ್ಪೋರೋಫೈಟ್ ಎಂಬ ಪೀಳಿಗೆ ಜೀವಿಗಳು ಗ್ಯಾಮಿಟೊಫೈಟ್ ಪೀಳಿಗೆಯ ಮೇಲೆ ಪರಾವಲಂಬಿಯಾಗಿರುತ್ತವೆ. ಪಾಲಿಸೈಫೋನಿಯ ಮುಂತಾದ ಕೆಂಪು ಆಲ್ಗೆಗಳ ಜೀವನಚಕ್ರದಲ್ಲಿ ಮೂರು ಪೀಳಿಗೆಗಳಿವೆ. ಗ್ಯಾಮಿಟೊಫೈಟಿನ ಮೇಲೆ ಕಾರ್ಪೋಸ್ಪೋರೋಫೈಟ್ ಪೀಳಿಗೆ ಇರುತ್ತದೆ. ಇದರಿಂದ ಕಾರ್ಪೋಸ್ಪೋರುಗಳು ಉತ್ಪತ್ತಿಯಾಗುತ್ತವೆ. ಈ ಸ್ಪೋರುಗಳು ಟೆಟ್ರಸ್ಪೋರೋಫೈಟ್ ಎಂಬ ಮತ್ತೊಂದು ಪೀಳಿಗೆಯನ್ನುಂಟುಮಾಡುತ್ತವೆ. ಇವುಗಳಲ್ಲಿ ಟೆಟ್ರಸ್ಪೋರುಗಳುಂಟಾಗಿ ಅವುಗಳಿಂದ ಗ್ಯಾಮಿಟೊಫೈಟುಗಳಾಗುತ್ತವೆ.



**ಚಿತ್ರ. 13 ಲೈಂಗಿಕ ಸಂತಾನಾಭಿವೃದ್ಧಿ:**
**1 ಸಮಲಿಂಗ ಕಣ 2 ಅಸಮಲಿಂಗ ಕಣ 3 ಊಗ್ಯಾಮೀಟ್ಸು**

ಆರ್ಥಿಕ ಉಪಯೋಗ: ಆಲ್ಗೆ ಸಸ್ಯಗಳ ಪ್ರತ್ಯಕ್ಷ ಮತ್ತು ಪರೋಕ್ಷ ಉಪಯೋಗಗಳು ಹಲವಾರು. ಭೂಮಿಯಲ್ಲಿ ಜರಗುವ ದ್ಯುತಿಸಂಶ್ಲೇಷಣಕ್ರಿಯೆಯ ಬಹುಭಾಗ ಆಲ್ಗೆಗಳಿಂದಲೇ ಆಗುತ್ತದೆ. ಮಾನವರಿಗೆ ಉಪಯುಕ್ತವಾದ ಅನೇಕ ಜಲಚರಗಳ ಆಹಾರ ಆಲ್ಗೆ. ಸತ್ತು ಕೊಳೆತ ಆಲ್ಗೆಗಳ ಅವಶೇಷ ಉತ್ತಮ ಸಾವಯುವ ಗೊಬ್ಬರ. ನೀಲಿ ಹಸಿರು ಆಲ್ಗೆಗಳು ಕೆಲವು ಗಾಳಿಯಲ್ಲಿನ ನೈಟ್ರೊಜನ್ನನ್ನು ನೈಟ್ರೇಟ್ ಗೊಬ್ಬರವಾಗಿ ಪರಿವರ್ತಿಸುವ ಶಕ್ತಿ ಹೊಂದಿವೆ. ಆದ್ದರಿಂದ ಬತ್ತ ಮುಂತಾದ ಬೆಳೆಗಳ ಜೊತೆಯಲ್ಲಿ ಈ ಆಲ್ಗೆಗಳು ಸೇರಿದ್ದರೆ ನೈಟ್ರೊಜನ್ ಗೊಬ್ಬರ ಇವುಗಳಿಗೆ ಒದಗುತ್ತದೆ.

ಪ್ರಾಚ್ಯದೇಶಗಳಲ್ಲಿ ಆಲ್ಗೆಗಳನ್ನು ಮನುಷ್ಯರು ತಿನ್ನುವುದಿದೆ. ಪಾರ್ಫೈರಾ, ರೊಡಿಮೀನಿಯ, ಗ್ರಾಸಿಲೇರಿಯ ಮುಂತಾದುವು ಈ ಪ್ರಭೇದಗಳು. ಕ್ಲೋರೆಲ್ಲ ಆಲ್ಗೆಯ ಪುಡಿ ರಾಕೆಟ್‌ಯಾನದಲ್ಲಿ ಬಳಕೆಯಾಗುವ ಆಹಾರ. ಇದು ಉತ್ತಮ ಬಲವರ್ಧಕ ಆಹಾರ. ಕ್ಲೋರೆಲ್ಲವನ್ನು ಪರಿಶೋಧನೆಯಲ್ಲಿಯೂ ಬಹಳವಾಗಿ ಬಳಸುತ್ತಾರೆ. ಕಾಂಡ್ರಸ್ ಮತ್ತು ಜೆಲಿಡಿಯಂ ಎಂಬ ಆಲ್ಗೆಗಳಲ್ಲಿ

ಬರುವ ಲೋಳೆಯಂಥ ವಸ್ತುವನ್ನು ಸಿಹಿತಿಂಡಿಗಳು ಮತ್ತು ಐಸ್‌ಕ್ರೀಮ್ ತಯಾರಿಕೆಗೆ ಉಪಯೋಗಿಸುತ್ತಾರೆ. ಲ್ಯಾಮಿನೇರಿಯ ಮತ್ತು ಅಲೇರಿಯ ಮುಂತಾದ ಆಲ್ಗೆಗಳಿಂದ ಕೊಂಬು ಎಂಬ ಆಹಾರವನ್ನು ಜಪಾನೀಯರು ತಯಾರಿಸುತ್ತಾರೆ. ಸಮುದ್ರದ ಈ ಆಲ್ಗೆಗಳನ್ನು ತಂದು ಒಣಗಿಸುತ್ತಾರೆ. ಆ ಮೇಲೆ ಸಿಹಿ ನೀರಿನಿಂದ ಬೇಯಿಸಿ ಮತ್ತೆ ಒಣಗಿಸುತ್ತಾರೆ. ಇವುಗಳ ಅಲಗುಗಳನ್ನು ಹರಡಿ ಮರದ ಹಲಗೆಗಳಿಂದ ಒತ್ತುತ್ತಾರೆ. ಇವುಗಳನ್ನು ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡಿ ವಿನಿಗರ್ ರಸದಲ್ಲಿ ನೆನೆಹಾಕಿ ಬಳಸುತ್ತಾರೆ. ಇದನ್ನು ಕೊಂಬು ಎಂದು ಕರೆಯುತ್ತಾರೆ. ಅನೇಕ ಸಮುದ್ರ ಕೆಲ್ಪ್ ಆಲ್ಗೆಗಳಿಂದ ಆಲ್ಜಿನ್ ಎಂಬ ಪದಾರ್ಥವನ್ನು ತಯಾರಿಸುತ್ತಾರೆ. ಇದನ್ನು ಐಸ್‌ಕ್ರೀಮ್ ತಯಾರಿಕೆ, ರಬ್ಬರ್ ಕೈಗಾರಿಕೆ, ಬಣ್ಣಗಳ ತಯಾರಿಕೆ, ಕೋಲ್ಡ್ ಕ್ರೀಮ್ ತಯಾರಿಕೆಗಳಲ್ಲಿ ಉಪಯೋಗಿಸುತ್ತಾರೆ. ಔಷಧ ವಾಗೂ ಪರಿಶೋಧನೆಯ ಪ್ರಯೋಗ ಶಾಲೆಗಳಲ್ಲೂ ವಸ್ತು ಶೇಖರಣೆಯಲ್ಲೂ ಬಳಸುತ್ತಾರೆ. ಕೆಲವು ಕೆಲ್ಪ್‌ಗಳಿಂದಲೂ ಫಿಲ್ಲೊಫೋರ ಎಂಬ ಕೆಂಪು ಆಲ್ಗೆಯಿಂದಲೂ ಅಯೋಡೀನ್, ಪೊಟ್ಯಾಷ್ ಮತ್ತು ಬ್ರೋಮಿನನ್ನು ಪಡೆಯುವುದುಂಟು.



ಚಿತ್ರ 14. 1 ಕಾಂಜುಗೇಷನ್
2 ಯುಡೋಗೋನಿಯಂನಲ್ಲಿ ಕಾಣದಿರುವ ಊಗೋನಿಯಂ

ಡೈಆಟಮೇಸಿಯಸ್ ಮಣ್ಣು ನಿಕ್ಷೇಪಗಳಾಗಿ ಅಮೆರಿಕ ಮುಂತಾದ ದೇಶಗಳಲ್ಲಿ ಹೇರಳವಾಗಿ ಸಿಗುತ್ತದೆ. ಈ ಮಣ್ಣನ್ನು ಅನೇಕ ಕೈಗಾರಿಕೆಗಳಲ್ಲಿ ಬಳಸುತ್ತಾರೆ. ಇದರ ಉಪಯೋಗಗಳು ಸಕ್ಕರೆ ಕಾರ್ಖಾನೆಯಲ್ಲಿ ಶೋಧಕವಸ್ತು, ಒಲೆ ಮತ್ತು ಕಾರ್ಖಾನೆಗಳ ಕುಲುಮೆಗಳನ್ನು (ಫರ್ನೇಸ್) ಕಟ್ಟುವ ಇಟ್ಟಿಗೆಗಳ ತಯಾರಿಕೆ, ಲೋಹಗಳನ್ನು ಮೆರುಗು ಮಾಡುವಿಕೆ, ಪೈಪುಗಳ ಮತ್ತು ರೆಫ್ರಿಜಿರೇಟರುಗಳ ಇನ್ಸುಲೇಟರ್, ಡೈನಮೈಟ್ ತಯಾರಿಕೆ, ಹಲ್ಲುಜ್ಜುವ ಸರಿಯ (ಪೇಸ್ಟ್) ತಯಾರಿಕೆ, ರಸ್ತೆಗಳಲ್ಲಿ ಗುರುತಿಸುವ ಬಣ್ಣದಲ್ಲಿ ಬಳಕೆ, ಪೆಟ್ರೋಲ್ ಈ ನಿಕ್ಷೇಪಗಳಿಂದುಂಟಾದುದೆಂದು ಒಂದು ಪ್ರತಿಪಾದನೆ ಇದೆ.

ಆಲ್ಗೆಗಳು ಮಾನವರಿಗೆ ಉಪಯುಕ್ತವಾದರೂ ಅವುಗಳಿಂದ ಕೆಲವು ತೊಂದರೆಗಳೂ ಇವೆ. ಮನೆಗಳಲ್ಲಿ ಬಚ್ಚಲು ಮತ್ತು ಬಟ್ಟೆಗೊಗೆಯುವ ಕಡೆ ಪಾಚಿಕಟ್ಟಿಕೊಂಡು ಜಾರುವಂತೆ ಮಾಡುವುದು ನೀಲಿ ಹಸಿರು ಆಲ್ಗೆಗಳಿಂದಲೇ. ಕುಡಿಯುವ ನೀರಿನಲ್ಲಿ ಇವು ಸೇರಿ ಒಂದು ವಿಧವಾದ ವಾಸನೆಯನ್ನು ಉಂಟುಮಾಡಿ ರುಚಿಯನ್ನು ಕೆಡಿಸಿ ಉಪಯೋಗಕ್ಕೆ ಬಾರದಂತೆ ಮಾಡುತ್ತವೆ. ನೀರಿನಲ್ಲಿ ಕೆಲವು ಆಲ್ಗೆಗಳು ಸತ್ತಾಗ ಕೊಳೆತು ಒಂದು ವಿಧವಾದ ವಿಷ ಬಿಡುಗಡೆ ಮಾಡಿ ಮೀನು ಮುಂತಾದ ಜಲಚರಗಳ ಸಾವಿಗೆ ಕಾರಣವಾಗುತ್ತವೆ. ಇಂಥ ನೀರನ್ನು ಕುಡಿಯುವ ಸಾಕು ಪ್ರಾಣಿಗಳೂ ಆರೋಗ್ಯವನ್ನು ಕೆಡಿಸಿಕೊಂಡು ಸತ್ತುಹೋಗುವ ಸಂಭವವಿದೆ. ಗೊನಿಯೊಲಾಕ್ಸ್ ಎಂಬ ಆಲ್ಗೆಯನ್ನು ಮೀನುಗಳು ನುಂಗುವುದರಿಂದ ಒಂದು ವಿಧವಾದ ವಿಷ ಉತ್ಪತ್ತಿಯಾಗುತ್ತದೆ. ಇಂಥ ಮೀನನ್ನು ಮಾನವರು ತಿನ್ನುವುದರಿಂದ ಅಪಾಯ ಉಂಟು. ಆಲ್ಗೆಗಳಿಂದಾಗುವ ಕೆಡುಕಿಗಿಂತಲೂ ಉಪಯೋಗವೇ ಹೆಚ್ಚು. ನಮಗೆ ಇವು ಆಕ್ಸಿಜನ್ನನ್ನು ದ್ಯುತಿಸಂಶ್ಲೇಷಣದ ಮೂಲಕ ಒದಗಿಸುತ್ತವೆ. ಇತ್ತೀಚೆಗೆ ಅಂತರಿಕ್ಷಯಾನದಲ್ಲಿ ಇವುಗಳ ಪಾತ್ರವನ್ನು ಗುರುತಿಸಲಾಗಿದೆ. ಇದರ ವಿಷಯವಾಗಿಯೂ ಕೈಗಾರಿಕೆಗಳಲ್ಲಿ ಇವುಗಳ ಪಾತ್ರದ ವಿಷಯವಾಗಿಯೂ ಜೀವಕ್ರಿಯೆಗಳನ್ನರಿತುಕೊಳ್ಳಲು ಅನೇಕ ಪರಿಶೋಧನೆಗಳು ಕ್ಲೋರೆಲ್ಲದಂಥ ಆಲ್ಗೆಗಳ ಮೇಲೆ ಪ್ರಪಂಚದ ಅನೇಕ ಕಡೆಗಳಲ್ಲಿ ನಡೆದಿವೆ ಮತ್ತು ನಡೆಯುತ್ತಿವೆ. (ಎಂ.ಸಿ.ಆರ್.)

**ಆಲ್ಜರ್ ಹೊರೇಷಿಯೊ:** 1834–1899. ಅಮೆರಿಕದ ಪ್ರಸಿದ್ಧ ಬಾಲಸಾಹಿತ್ಯಕರ್ತೃ. ಜನನ ಮಸಾಚುಸೆಟ್ಸ್ ಸಂಸ್ಥಾನದ ರೆವರೆ ಎಂಬಲ್ಲಿ, ಹಾರ್ವರ್ಡ್ ವಿಶ್ವವಿದ್ಯಾನಿಲಯದ ದೇವತಾಶಾಸ್ತ್ರ ಶಾಖೆಯಿಂದ ಪದವಿ ಪಡೆದು, ಎರಡು ವರ್ಷ ಖಾಸಗಿಯಾಗಿ ಪಾಠ ಹೇಳಿ ಹಣಸಂಪಾದಿಸುತ್ತಿದ್ದ. 1864ರಲ್ಲಿ ಧರ್ಮೋಪದೇಶಕನ ಕೆಲಸ ದೊರಕಿತು. ಆದರೆ ಆತ ಬಹಳ ಕಾಲ ಆ ವೃತ್ತಿಯಲ್ಲಿರಲಿಲ್ಲ. ಒಂದು ಸಲ ನ್ಯೂಯಾರ್ಕಿಗೆ ಹೋದಾಗ, ಅಲ್ಲಿನ ಬೀದಿಗಳಲ್ಲಿ ಅಲೆಯುತ್ತಿದ್ದ ಬಡ ಹುಡುಗರಸ್ಥಿತಿಯನ್ನು ಕಂಡು ಮನಸ್ಸು ಕರಗಿತು. ಅವರ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕು ಎನಿಸಿತು. ಆಗ ಆತ ನ್ಯೂಯಾರ್ಕಿನಲ್ಲಿ ನೆಲೆಸಿದ್ದ. ಬೀದಿಗಳಲ್ಲಿ ವೃತ್ತಪತ್ರಿಕೆಗಳನ್ನು ಮಾರುತ್ತಿದ್ದ ಹುಡುಗರ ನಿವಾಸವೊಂದಕ್ಕೆ ಆಗಾಗ ಭೇಟಿಕೊಟ್ಟು, ಅಲ್ಲಿನ ಬಾಲಕರ ಕಷ್ಟ ಕಾರ್ಪಣ್ಯಗಳನ್ನು ಕುರಿತು ವಿಚಾರಮಾಡಿದ. ಅವರು ಬಡವರಾದರೂ ಪ್ರಾಮಾಣಿಕರಾಗಿರುವುದಾಗಿ ಕಂಡುಬಂದಿತು. ಅವರ ಜೀವನರೀತಿ ವೀರೋಚಿತವಾಗಿರುವುದನ್ನು ಮೆಚ್ಚಿ, ಆತ ಅವರ ಆಶ್ರಯದಾತನಾದ.

ಆ ಹುಡುಗರ ಸಾಹಸ ಜೀವನವನ್ನೇ ಅವಲಂಬಿಸಿ, ಬಾಲಕರ ಪತ್ರಿಕೆಗಳಿಗೆ ಕಟ್ಟುಕಥೆಗಳನ್ನು ಬರೆಯಲು ಉಪಕ್ರಮಿಸಿದ (1867), ರ್‍ಯಾಗ್ಡ್ ಡಿಕ್ (ಚಿಂದಿ ಬಟ್ಟೆಯ ಡಿಕ್–1867) ಎಂಬ ಕಥೆಯನ್ನು ಬರೆದಾಗ, ಅದು ಜನಪ್ರಿಯವಾದುದನ್ನು ಕಂಡು, ತನ್ನ ಜೀವಮಾನವನ್ನೆಲ್ಲ ಅಂಥ ಕಥೆಗಳಿಗಾಗಿಯೇ ಮೀಸಲಾಗಿರಿಸಿದ. 1899ರಲ್ಲಿ ಕಾಲವಾಗುವ ಹೊತ್ತಿಗೆ ಆತ 135 ಪುಸ್ತಕಗಳನ್ನು ಬರೆದು, ಒಟ್ಟು ಎರಡು ಕೋಟಿ ಪ್ರತಿಗಳನ್ನು ಮಾರಿದ್ದನಂತೆ.

ಈ ಕಟ್ಟುಕಥೆಗಳ ವಿಷಯ ಧೈರ್ಯ ಮತ್ತು ಸಾಮಯಿಕ ಉಪಾಯಗಳಿಂದ ಕೂಡಿದ ಬಡಮಕ್ಕಳ ಸಾಹಸಕಾರ್ಯಗಳ ನಿರೂಪಣೆ. ಅವುಗಳಲ್ಲಿ ಕಳೆದುಹೋದ ಜೋಳಿಗೆ ಚೀಲವನ್ನು ಹುಡುಕಿ ತಂದ ವೀರನೊಬ್ಬ ; ಮುಳುಗಿ ಹೋಗುತ್ತಿದ್ದ ಆಸ್ತಿವಂತ ಯುವತಿಯನ್ನು ರಕ್ಷಿಸಿದವ ಮತ್ತೊಬ್ಬ ; ಓಡಿಹೋದ ಕುದುರೆಯನ್ನು ಹಿಡಿದು ತಂದ ವೀರ ಇನ್ನೊಬ್ಬ. ಇಂಥ ಕಥೆಗಳು ಮಕ್ಕಳಿಗೆ ಮೆಚ್ಚುಗೆಯಾಗುವುದರಲ್ಲಿ ಆಶ್ಚರ್ಯವಿಲ್ಲ. ಮಕ್ಕಳು, ಸದಾ ಹಿರಿಯರ ಹಿಡಿತಕ್ಕೆ ಸಿಕ್ಕಿಬಿದ್ದು, ಸ್ವಾತಂತ್ರದಿಂದ ಕೆಲಸಕ್ಕೆ ನುಗ್ಗಲು ಅವಕಾಶ ಬೇಕೆಂದು ಹಂಬಲಿಸುತ್ತಿರುವವರು. ಆ ಆಸೆಯನ್ನು ಮನಸ್ಸಿನಲ್ಲಾದರೂ ಪೂರೈಸಿಕೊಳ್ಳಲು ಸಹಾಯಕವಾಗುವ ಈ ಕಥೆಪುಸ್ತಕಗಳು ಅಂಗಡಿಗಳಲ್ಲಿ ಅಂದವಾಗಿ ಪ್ರದರ್ಶಿತವಾಗಿರುವುದನ್ನು ಕಂಡಾಗ, ಮಕ್ಕಳಿಗೆ ಒಂದು ಭಂಡಾರವೇ ಕಣ್ಣ ಮುಂದೆ ತೆರೆದು ನಿಂತಂತೆ ಭಾಸವಾಗುವುದು. ಧೈರ್ಯದಿಂದ ಮುಂದೆ ನುಗ್ಗಿ ಕಾರ್ಯಸಾಧನೆಯನ್ನು ಮಾಡಿಕೊಂಡು ಬರುವ ವೀರಬಾಲಕರ ಸಾಹಸಕಾರ್ಯಗಳ ರುಚಿಯನ್ನು ಅನುಭವಿಸಲು ಆಗ ಅವರು ಉತ್ಸುಕರಾಗುವರು. ಹೀಗೆ ಆಲ್ಜರ್‌ನ ಕಟ್ಟುಕಥೆಗಳು ಎರಡು ತಲೆಮಾರಿನ ಕಾಲ ಮಕ್ಕಳ ಮೇಲೆ ತಮ್ಮ ಪ್ರಭಾವವನ್ನು ಬೀರಿದುವು. ರ್‍ಯಾಗ್ಡ್ ಡಿಕ್‌ನೊಂದಿಗೆ ಲಕ್ ಅಂಡ್ ಪ್ಲಕ್ (1869) ಟ್ಯಾಟರ್ಡ್ ಟಾಮ್ (1871)–ಇವು ಅವನ ಪ್ರಸಿದ್ಧ ಧಾರಾವಾಹಿ ಕಥೆಗಳು. (ಎನ್.ಎನ್.)

**ಆಲ್ಜಿಯರ್ಸ್:** ಆಲ್ಜೀರಿಯದ ಮುಖ್ಯ ರೇವು ಪಟ್ಟಣ, ರಾಜಧಾನಿ, ಹಳೆಯ ಹೆಸರು ಅಲ್ ಜೆಜೈರ್. ಆಲ್ಜಿಯರ್ಸ್ ಕೊಲ್ಲಿಯ ಪಶ್ಚಿಮ ಅಂಚಿನ 10 ಮೈಲಿ ವಿಸ್ತಾರದಲ್ಲಿದೆ. ಎತ್ತರವಾದ ಸಹೇಲ್ ಬೆಟ್ಟಗಳ ಇಳಿಜಾರಿನ ಮೇಲೆ ಕಟ್ಟಲಾಗಿದೆ. ಈ ಬೆಟ್ಟಗಳು ತೀರಕ್ಕೆ ಸಮಾನಾಂತರವಾಗಿ ಹರಡಿ ಪಟ್ಟಣದ ಹಿಂಭಾಗದಲ್ಲಿ 1240' ಗಳವರೆಗೂ ಏರಿವೆ. ಈ ಪಟ್ಟಣವನ್ನು ಪೂರ್ವ ಹಾಗೂ ಉತ್ತರಾಭಿಮುಖವಾಗಿರುವಂತೆ ದಕ್ಷಿಣ ಯೂರೋಪಿನ ಮಾದರಿಯಲ್ಲಿ ನಿರ್ಮಿಸಲಾಗಿದೆ. ನಗರದ ಬಡಾವಣೆಯೂ ಸೇರಿ ಜನಸಂಖ್ಯೆ 5,87,570 (1964).

ಹಳೆಯ ತುರ್ಕಿಯ ಈ ರೇವುಪಟ್ಟಣ 10ನೆಯ ಶತಮಾನದಲ್ಲಿ ರೂಪುಗೊಂಡು ತುರ್ಕಿಯ ಕುಪ್ರಸಿದ್ಧ ಕಡಲುಗಳ್ಳ ಖೈರ್–ಎದ್–ದಿನ್ ಅಲ್ಲಿನ ಸ್ಪೇನಿನವರನ್ನು ಹೊರ ಹೊರಡಿಸಿದಂದಿನಿಂದ (1530) ಫ್ರೆಂಚರು ಆಕ್ರಮಿಸುವವರೆಗೆ (1830) ಹಲವು ಬಗೆಯ ಕೊಲೆ ಸುಲಿಗೆಗಳಿಗೆ ಖ್ಯಾತವಾಗಿತ್ತು.

ಈ ರೇವಿನ ಮುಖಾಂತರ 1955ರಲ್ಲಿ ಹಡಗುಗಳು 36,24,000 ಟನ್ನುಗಳಷ್ಟು ಸಾಮಗ್ರಿಯನ್ನು ರವಾನಿಸಿದುವು. ವಾಹನಗಳು, ಪೆಟ್ರೋಲಿಯಂ ಸಾಮಗ್ರಿಗಳು, ಗೋದಿ, ಸಿಮೆಂಟ್, ಲೋಹಗಳು, ಹತ್ತಿ ಬಟ್ಟೆ, ಸಕ್ಕರೆ ಹಾಗೂ ಕಾಫಿ ಇಲ್ಲಿಗೆ ಆಮದಾಗುತ್ತದೆ. ದ್ರಾಕ್ಷಾರಸ, ತರಕಾರಿ, ಹಣ್ಣುಗಳು, ಕಬ್ಬಿಣ ಹಾಗೂ ರಂಜಕಗಳನ್ನು ಇಲ್ಲಿಂದ ರಫ್ತು ಮಾಡಲಾಗುವುದು. ಇಲ್ಲಿಂದ ಮಾರ್ಸೇಲ್ಸ್‌ಗೆ ಹಡಗಿನ ಸಂಚಾರವಿದೆ.

1942 ನವಂಬರ್‌ನಿಂದ ಆಗಸ್ಟ್ 1944 ರವರೆಗೆ ಉತ್ತರ ಆಫ್ರಿಕದ ಸ್ನೇಹಪರ ರಾಷ್ಟ್ರಗಳ ಸೇವೆಗಳಿಗೆ ಕೇಂದ್ರವಾಗಿತ್ತು. (ಎಂ.ಎಸ್.ಎಂ.)

**ಆಲ್ಜೀರಿಯ:** ಆಫ್ರಿಕದ ಉತ್ತರ ಭಾಗದಲ್ಲಿರುವ ಗಣರಾಜ್ಯ. ಪಶ್ಚಿಮದಲ್ಲಿ ಮೊರಾಕೊ ಮತ್ತು ಸ್ಪಾನಿಷ್ ಸಹರ, ದಕ್ಷಿಣದಲ್ಲಿ ಫ್ರೆಂಚರ ಪಶ್ಚಿಮ ಆಫ್ರಿಕ, ಪೂರ್ವದಲ್ಲಿ ಲಿಬಿಯ ಮತ್ತು ಟ್ಯುನೀಷಿಯ, ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರಗಳಿಂದ ಆವೃತವಾಗಿದೆ. ಓರಾನ್, ಆಲ್ಜಿಯರ್ಸ್ ಮತ್ತು ಕಾನ್ಸ್ಟಂಟೈನ್ ಪ್ರಾಂತ್ಯಗಳನ್ನೊಳಗೊಂಡಂತೆ ಇದರ ವಿಸ್ತೀರ್ಣ 9,19,352 ಚ.ಮೈ. ಜನಸಂಖ್ಯೆ 1,21,50,000 (1966). ಬಹುಭಾಗ ಮುಸ್ಲಿಮರು.

ಇಲ್ಲಿ ಹಿತಕರವಾದ ವಾಯುಗುಣವಿದೆ. ಬೇಸಗೆಯಲ್ಲಿ ಹೆಚ್ಚು ಬಿಸಿಲಿನತಾಪವಿದ್ದರೂ ರಾತ್ರಿವೇಳೆ ತಂಪಾಗಿರುತ್ತದೆ. ಮಳೆಯೂ ಸಾಕಷ್ಟು ಆಗುವುದರಿಂದ ಉತ್ತಮವಾದ ವ್ಯವಸಾಯಕ್ಕೆ ಅನುಕೂಲವಾಗಿದೆ. ಆಲ್ಜೀರಿಯ ಭೌತಿಕವಾಗಿ ಟೆಲ್ ಅಟ್ಲಾಸ್ ಮತ್ತು ಸಹರದ ಅಟ್ಲಾಸ್ ಎಂಬ ಎರಡು ಸಮಾನಾಂತರ ಶ್ರೇಣಿಯಿಂದ ಕೂಡಿದೆ. ಇವುಗಳ ನಡುವೆ ಇರುವುದು

ಷಾಟ್ಸ್ ಪ್ರಸ್ಥಭೂಮಿ; ಇದರಲ್ಲಿ ಭೂಕುಸಿತದಿಂದಾದ ಕೆಲವು ಪ್ರದೇಶಗಳು ನೀರು ಬಸಿಯುವ ಕಾಲುವೆಗಳಾಗಿವೆ. ದಕ್ಷಿಣದಲ್ಲಿ 1500' ಗಳಿಗಿಂತ ಕಡಿಮೆ ಎತ್ತರದ ಸಹರ ಪ್ರದೇಶವಿದೆ. ಮೆಡಿಟರೇನಿಯನ್ ವಾಯುಗುಣವಿರುವ ಉತ್ತರದ ಇಕ್ಕಟ್ಟಾದ ತೀರಪ್ರದೇಶದಲ್ಲಿ ವ್ಯವಸಾಯವೇ ಜನರ ಮುಖ್ಯ ಕಸಬು; ಇಲ್ಲಿ ದೇಶೀಯ ರೈತರು ಆಹಾರಧಾನ್ಯಗಳು, ಅಲಿವ್ ಗಿಡಗಳು,




ಎಸ್ಪಾರ್ಟೊ ಹುಲ್ಲು ಮತ್ತು ಕಾರ್ಕ್ ಮರಗಳನ್ನು ಬೆಳೆಸುತ್ತಾರೆ; ದನಕರುಗಳನ್ನು ಸಾಕುತ್ತಾರೆ. ಐರೋಪ್ಯ ನಿವಾಸಿಗಳು ಮದ್ಯ, ತರಕಾರಿ, ಹಣ್ಣು, ಹೊಗೆಸೊಪ್ಪು ಮತ್ತು ಹತ್ತಿಯನ್ನು ಉತ್ಪಾದಿಸುತ್ತಾರೆ. ರಫ್ತಾಗುವ ಪದಾರ್ಥಗಳಲ್ಲಿ ಅರ್ಧಭಾಗ ದ್ರಾಕ್ಷಾರಸ; ಉಳಿದ ವಸ್ತುಗಳು ಕಬ್ಬಿಣದ ಅದುರು, ಹಣ್ಣುಗಳು ಮತ್ತು ತರಕಾರಿಗಳು.

ಧಾನ್ಯವನ್ನು ಹಿಟ್ಟು ಮಾಡುವುದು, ಶೋಧಿಸುವುದು, ಹಣ್ಣುಪಾಕ ಮತ್ತು ಹೊಗೆಸೊಪ್ಪು ತಯಾರಿಕೆ–ಇವೇ ಮುಖ್ಯ ಕೈಗಾರಿಕೆಗಳು. ಇವೆಲ್ಲ ಹೆಚ್ಚಾಗಿ ಸಮುದ್ರತೀರಪ್ರದೇಶದಲ್ಲೇ ಇವೆ. ಬೃಹತ್ ಕೈಗಾರಿಕೆಗಳು ಅಲ್ಪವಾಗಿದ್ದರೂ ರಾಸಾಯನಿಕ ವಸ್ತುಗಳು, ಸಿಮೆಂಟು, ಬಟ್ಟೆಬರೆಗಳು, ಸಕ್ಕರೆ ಮುಂತಾದುವು ತಯಾರಾಗುತ್ತವೆ; ಇವಕ್ಕೆ ವಿದ್ಯುಚ್ಛಕ್ತಿಯ ಅನುಕೂಲತೆ ಇದೆ. (ಪಿ.ಕೆ.ಎಸ್.)

1830 ರಲ್ಲಿ ಫ್ರಾನ್ಸ್ ಇದನ್ನು ಆಕ್ರಮಿಸಿ ಕ್ರಮೇಣ ಇತರ ನೆರೆಹೊರೆಯ ಪ್ರದೇಶಗಳ ಮೇಲೂ ತನ್ನ ಪ್ರಭಾವವನ್ನು ಬೀರಿತು. 1870ರ ಅನಂತರ ಆಲ್ಜೀರಿಯ ಫ್ರಾನ್ಸಿನ ಆಡಳಿತಕ್ಕೆ ಒಳಪಟ್ಟಿತು. ಸಹರ ಪ್ರದೇಶ ಮಾತ್ರ ಸೈನಿಕ ಆಡಳಿತದಲ್ಲಿ ಉಳಿದುಕೊಂಡಿತು. ಎಂಟು ವರ್ಷಗಳಿಗೂ ಹೆಚ್ಚು ಕಾಲ ನಡೆಸಿದ ಹೋರಾಟದ ಅನಂತರ 1962ರಲ್ಲಿ ಆಲ್ಜೀರಿಯ ಸ್ವಾತಂತ್ರ್ಯವನ್ನು ಗಳಿಸಿಕೊಂಡಿತು. ಅಲ್ಲಿನ ಹೋರಾಟ ಭಾರತದ ಸ್ವಾತಂತ್ರ ಸಮರವನ್ನು ನೆನಪಿಗೆ ತರುವಂಥದು.

ಸ್ವಾತಂತ್ರ್ಯ ಪೂರ್ವದಲ್ಲಿ ಆಲ್ಜೀರಿಯದಲ್ಲಿ ಬಂದು ನೆಲೆಸಿದ್ದ ಯೂರೋಪೀಯರ ಸಂಖ್ಯೆ ಸುಮಾರು 10 ಲಕ್ಷದಷ್ಟಿತ್ತು. ಇದರಲ್ಲಿ ಅರ್ಧದಷ್ಟು ಜನ ಫ್ರೆಂಚರು. ಸ್ವಾತಂತ್ರ ಬಂದಾಗಿನಿಂದ ಸಹಸ್ರಾರು ಯೂರೋಪೀಯರು ಈ ದೇಶವನ್ನು ಬಿಟ್ಟು ಹೋದರು. ಉಳಿದವರು ಸ್ಥಳೀಯ ರೈತರುಗಳಿಗಿಂತ ಹೆಚ್ಚಿನ ಪ್ರದೇಶವನ್ನು ಆಕ್ರಮಿಸಿದರು.

ನಿರುದ್ಯೋಗ ನಿವಾರಣೆಯಾಗುವಂತೆ ದೇಶದ ಆರ್ಥಿಕ ಜೀವನವನ್ನು ರೂಪಿಸುವುದೇ ಅಲ್ಜೀರಿಯದ ಮುಖ್ಯ ಉದ್ದೇಶವಾಗಿದೆ. ಸದ್ಯಕ್ಕೆ ಜನ ಉದ್ಯೋಗಾಭಿಲಾಷಿಗಳಾಗಿ ಫ್ರಾನ್ಸಿಗೆ ಹೋಗಿ ನೆಲೆಸುತ್ತಿದ್ದಾರೆ.

ಓರಾನ್ (ಜನಸಂಖ್ಯೆ 3,93,000) ಪಶ್ಚಿಮ ಅಲ್ಜೀರಿಯದ ಮುಖ್ಯ ಬಂದರು. ಇಲ್ಲಿಂದ ರಫ್ತು ಮಾಡಲಾಗುವ ವಸ್ತುಗಳಲ್ಲಿ ಮುಖ್ಯವಾದುವು ದ್ರಾಕ್ಷಾರಸ, ಕಾಳು, ಎಸ್ಪಾರ್ಟೊ ಹುಲ್ಲು ಮತ್ತು ಕುರಿ. *

**ಆಲ್ಟಾಯ್:** ಸೈಬೀರಿಯದ ನೈಋತ್ಯ ಭಾಗದಲ್ಲಿರುವ ಉನ್ನತ ಪರ್ವತ ಪ್ರಾಂತ್ಯ. ಇರ್ಟಿಸ್ ಮತ್ತು ಯೆನಿಸಿ ನದಿಗಳ ಮಧ್ಯ ಪ್ರದೇಶದಲ್ಲಿದ್ದು ಸ್ವಲ್ಪದೂರ ಮಂಗೋಲಿಯದ ಉತ್ತರಗಡಿಯವರೆಗೂ ಚಾಚಿದೆ. ಪಶ್ಚಿಮದ ಕಾಲಿವಾನ್ ಪರ್ವತಶ್ರೇಣಿ, ಆಗ್ನೇಯದ ಸೈಲ್ಯುಜಂ ಶ್ರೇಣಿ ಮತ್ತು ಕಟೂನ್ ಮತ್ತು ಚೂಯ ಆಲ್ಪ್ಸ್ ಶ್ರೇಣಿಗಳ ಮಧ್ಯಭಾಗಗಳೂ ಇದಕ್ಕೆ ಸೇರಿವೆ. 15,115' ಎತ್ತರವಿರುವ ಅತ್ಯುನ್ನತ ಶಿಖರ ಬೆಲೂಖ ಕಟೂನ್ ಆಲ್ಪ್ಸ್‌ನಲ್ಲಿದೆ. ಇರ್ಟಿಷ್, ಓಬ್ ಮುಂತಾದ ನದಿಗಳಿಗೆ ನೀರನ್ನೊದಗಿಸುವ ನೀರ್ಗಲ್ಲುನದಿಗಳು (ಗ್ಲೇಷಿಯರ್)ಇಲ್ಲಿವೆ. ಉತ್ತರದ ಸಲ್ಯೆರ್ ಮತ್ತು ಆಲಾ–ಟಾ ಬೆಟ್ಟಸಾಲುಗಳು, ಈಶಾನ್ಯದ ಸಯಾನ್ ಪರ್ವತಶ್ರೇಣಿ, ಪೂರ್ವದ ಟೆನ್ನು–ಉಲಾ ಬೆಟ್ಟಗಳು ಮತ್ತು ಆಗ್ನೇಯದ ಮಂಗೋಲಿಯನ್ ಆಲ್ಟೈನ್ ಬೆಟ್ಟಗಳು ಇವೆಲ್ಲ ಇದರ ಶಾಖೆಗಳು. ಈ ಪ್ರದೇಶವೆಲ್ಲ ಆದಿಭೂಯುಗದ ಸ್ತರಗಳಿಂದ ಕೂಡಿ, ಸವೆತದಿಂದ ಪ್ರಸ್ಥಭೂಮಿಯಂತಾಗಿ, ಪುನಃ ನೆಲದುಬ್ಬರಕ್ಕೊಳಗಾಗಿದೆ. ಇಲ್ಲಿ ಖಂಡಾಂತರ ವಾಯುಗುಣವಿದೆ. ಆರು ಸಾವಿರ ಅಡಿ ಎತ್ತರದವರೆಗೂ ತಪ್ಪಲಿನಲ್ಲಿ ದಟ್ಟವಾದ ಕಾಡುಗಳಿವೆ. ಅಲ್ಲಿಂದ ಮೇಲೆ ಎಂಟು ಸಾವಿರ ಅಡಿ ಎತ್ತರದವರೆಗೆ ಹುಲ್ಲುಗಾವಲು ; ಅದಕ್ಕೂ ಮೇಲೆ ಹಿಮಾಚ್ಛಾದಿತ ಶಿಖರಗಳು. ಸವೆದ ಪರ್ವತಭಾಗಗಳನ್ನು ಒಳಗೊಂಡ ಈ ಪ್ರದೇಶದಲ್ಲಿ ಬೆಳ್ಳಿ, ತಾಮ್ರ, ಪಾದರಸ, ಚಿನ್ನ, ಸೀಸ ಮುಂತಾದ ಲೋಹಗಳು ವಿಪುಲವಾಗಿ ದೊರಕುತ್ತವೆ. ಲೆನಿನೊಗಾರ್ಸ್ಕ ಪ್ರಧಾನ ಗಣಿಕೇಂದ್ರ. ಟಂಗ್‌ಸ್ಟನ್ನಿನ ಅದುರು ಕೋಲಿವನ್ ಎಂಬಲ್ಲಿ ವಿಶೇಷವಾಗಿದೆ. ಇಲ್ಲಿನ ನಿವಾಸಿಗಳ ಮುಖ್ಯ ಕಸುಬು ಬೇಟೆಯಾಡುವುದು, ಪಶುಪಾಲನೆ ಮತ್ತು ಕೃಷಿ. ರಾಜಧಾನಿ ಬರ್ನೌಲ್. (ಎಂ.ಎಸ್.ಎಂ.)

**ಆಲ್ಟೆನ್ ಬರ್ಗ್ ಪೀಟರ್:** (1859–1919). ಆಸ್ಟ್ರಿಯದ ಗದ್ಯಚಿತ್ರಗಳ ಲೇಖಕ ರಿಚರ್ಡ್ ಎಂಗ್ಲಾಂಡರನ ಕಾವ್ಯನಾಮ. ಈತನ ಜನನ ಮರಣಗಳೆರಡೂ ನಡೆದುದು ವಿಯನ್ನ ನಗರದಲ್ಲಿ. ಜೀವನದ ವಿಲಕ್ಷಣ ವ್ಯಕ್ತಿಯೆನ್ನಿಸಿಕೊಂಡಿದ್ದ ಈತ ಸಮಾಜದ ಕೆಳದರ್ಜೆಯ ನಿಷ್ಕಪಟಿ ಜನರ ಸ್ವತಂತ್ರ ಮನೋವೃತ್ತಿಯ ಮಿತ್ರನೆಂದು ಖ್ಯಾತನಾಗಿದ್ದ. ದೈಹಿಕ ಸೌಂದರ್ಯ, ಆರೋಗ್ಯ, ಸಹಜಗುಣಗಳು ಮತ್ತು ಮಾನವೀಯತೆಯ ಮೌಲ್ಯವನ್ನು ಎತ್ತಿಹಿಡಿದು ತಾತ್ತ್ವಿಕನೆಂದೂ ಹೆಸರೂ ಗಳಿಸಿದ. ಬಗೆಬಗೆಯ ಪ್ರಣಯ ಪ್ರಸಂಗಗಳ ನಾಯಕನಾಗಿದ್ದ ಈತ ಅಲೆಮಾರಿಯಾಗಿ, ನ್ಯಾಯಶಾಸ್ತ್ರ ವೈದ್ಯಶಾಸ್ತ್ರಗಳ ವ್ಯಾಸಂಗದಲ್ಲಿ ಕೈಯಾಡಿಸಿ, ಅನಂತರ ತನ್ನ ಮೂವತ್ತೇಳನೆ ವರ್ಷದಲ್ಲಿ ವಿ ಇಚ್ ಎಸ್ ಸೆಹೆ (ಟಿಜ ಎಛಿ ಜ಼ ಛಿಜ – 1896) ಎಂಬ ತನ್ನ ಮೊದಲ ಲೇಖನಗಳ ಸಂಕಲನವನ್ನು ಪ್ರಕಟಿಸಿದ. ಇದರ ಅರ್ಥ ನಾನು ಕಂಡಂತೆ ಎಂದು. ಈ ಮಾತನ್ನು ಅವನ ಇತರ ಕೃತಿಗಳಿಗೂ ಅನ್ವಯಿಸಬಹುದು. ತಾನು ಕಂಡ ಜೀವನವನ್ನು ಇದ್ದುದಿದ್ದಂತೆಯೇ ಚಿತ್ರಿಸುವುದು, ರಸಹೀನವಾದ ಅದರ ಒಣಚೂರುಗಳ ಮಾದರಿಗಳನ್ನು ಎರಡು ಮೂರು ಪುಟಗಳಲ್ಲಿ ತುಂಬಿಟ್ಟು ಓದುಗನಿಗೆ ಒದಗಿಸುವುದು, ತನ್ನ ಉದ್ದೇಶವೆಂದು ತಾನೇ ನುಡಿದಿದ್ದಾನೆ. ಈ ಚಿತ್ರಗಳೆಲ್ಲ ಕಂಡುಬರುವ ಮೂಲಸೂತ್ರ ಒಂದೇ–ತನ್ನ ಜೀವನದರ್ಶನದ ಅಭಿವ್ಯಕ್ತಿ. ಶಾರೀರಿಕ ಅನ್ಯೂನತೆ ಮಾನಸಿಕ ನೈತಿಕ ಮತ್ತು ಸೌಂದರ್ಯಾಭಿರುಚಿಯ ಅನ್ಯೂನತೆಗೆ ಆಧಾರ, ಗಂಡಸಿನಲ್ಲಿ ಬೌದ್ಧಿಕಶಕ್ತಿಯಿರುವಂತೆ ಹೆಂಗಸಿನಲ್ಲಿ ರಸಾಭಿಜ್ಞತೆಯಿದೆ. ಮನುಷ್ಯ ತನಗೆ ತಾನು ನಿಷ್ಠನಾಗಿದ್ದು ಇತರರ ವಿಷಯದಲ್ಲಿ ನಿಸ್ವಾರ್ಥದಿಂದ ವರ್ತಿಸುವುದು ಮಾನವರ ಒಳಿತನ್ನು ಸಾಧಿಸಲು ತಕ್ಕ ಮಾಧ್ಯಮ–ಎಂಬುದು ಈತನ ಅಭಿಪ್ರಾಯ. ಅದು ಇವನ ಎಲ್ಲ ಬರೆಹಗಳಲ್ಲೂ ಎದ್ದು ಕಾಣುತ್ತದೆ. ಆಧುನಿಕ ನಾಗರಿಕತೆಯಲ್ಲಿ ಕಂಡುಬರುವ ನೀರಸತೆ, ಕೃತ್ರಿಮಗಳನ್ನು ಖಂಡಿಸಿ ದೇಹಬಲ ಮನೋಬಲಗಳೆರಡರ ಅಗತ್ಯವನ್ನು ಈತ ಎತ್ತಿ ಹಿಡಿಯುತ್ತಾನೆ. ಈ ಗುಣಗಳು ಸಮಾಜದ ಎಲ್ಲ ವರ್ಗದ ಸ್ತ್ರೀಪುರುಷರಲ್ಲೂ ಇರುವುದೆಂದು ಪ್ರತಿಪಾದಿಸುತ್ತಾನೆ. ಇವನ ಮೆಚ್ಚುಗೆಗೆ ಪಾತ್ರರಾದವರೆಂದರೆ ಮಕ್ಕಳು, ಹುಡುಗ ಹುಡುಗಿಯರು, ಪ್ರಾಣಿಗಳು–ಮೊದಲಾದ ಪ್ರಕೃತಿಗೆ ಸಮೀಪವರ್ತಿಗಳಾದ ಜೀವಿಗಳು. ಇವನ ಲೇಖನದ ಮುಖ್ಯ ಲಕ್ಷಣ ಅತ್ಯುಕ್ತಿಯನ್ನು ವರ್ಜಿಸಿ ಕೆಲವೇ ಮಾತುಗಳಲ್ಲಿ ಹೆಚ್ಚಿನ ಪರಿಣಾಮವನ್ನುಂಟುಮಾಡುವುದು. (ಎಂ.ಆರ್.;ಜಿ.ಪಿ.ಎಸ್.)

**ಆಲ್ಡರ್ ಕರ್ಟ್:** 1902–58. ಜರ್ಮನಿಯ ರಸಾಯನವಿಜ್ಞಾನಿ. ಬರ್ಲಿನ್ ವಿಶ್ವವಿದ್ಯಾನಿಲಯದ ಪದವೀಧರ. ಆಟ್ಟೊ ಪಾಲ್ ಹೆರ್ಮಾನ್ ಡೀಲ್ಸ್ (**ನೋಡಿ– ಡೀಲ್ಸ್–ಆಟೋ–ಪಾಲ್–ಹರ್ಮನ್**) ಎಂಬ ಜರ್ಮನಿಯ ರಸಾಯನವಿಜ್ಞಾನಿಯ ಶಿಷ್ಯತ್ವದಲ್ಲಿ ಕೀಲ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಸಿಸಿ ಡಾಕ್ಟರೇಟ್ ಪಡೆದ (1926). ಎರಡು ವರ್ಷಗಳ ಅನಂತರ ಈ ಗುರುಶಿಷ್ಯರು ನಡೆಸಿದ ರಾಸಾಯನಿಕ ಸಂಶೋಧನೆಗಳ ಫಲ ಇಂದು ಡೀಲ್ಸ್–ಆಲ್ಡರ್ ಪ್ರತಿಕ್ರಿಯೆ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಡಯೀನ್ ಎಂಬ ರಾಸಾಯನಿಕ ಸಂಯುಕ್ತಗಳ ನೆರವಿನಿಂದ ಸಾವಯವ ಸಂಶ್ಲೇಷಣೆಗಳನ್ನು (ಆರ್ಗೇನಿಕ್ ಸಿಂಥೆಸಸ್) ಇವರು ಕಂಡುಹಿಡಿದರು. ಈ ಸಂಶೋಧನೆಯನ್ನು ಗಮನಿಸಿ 1950ರ ರಸಾಯನಶಾಸ್ತ್ರದ ನೋಬೆಲ್ ಬಹುಮಾನವನ್ನು ಇವರೀರ್ವರಿಗೂ ಒಟ್ಟಾಗಿ ನೀಡಲಾಯಿತು. ಆಲ್ಡರ್ 1934–36ರವರೆಗೆ ಕೀಲ್ ವಿಶ್ವವಿದ್ಯಾನಿಲಯದಲ್ಲಿಯೂ 1936–40ರವರೆಗೆ ಐ.ಜಿ. ಫಾರ್ಬೆನ್ ಪ್ರಯೋಗಾಲಯದಲ್ಲಿಯೂ ಕೆಲಸ ಮಾಡಿದ. 1940ರಲ್ಲಿ ಕುಲಾನ್ ವಿಶ್ವವಿದ್ಯಾನಿಲಯದ

ರಸಾಯನಶಾಸ್ತ್ರ ವಿಭಾಗದ ನಿರ್ದೇಶಕ ಮತ್ತು ಪ್ರಾಧ್ಯಾಪಕನಾಗಿ ಸೇರಿದ. ಪ್ಲಾಸ್ಟಿಕ್ ತಯಾರಿಕೆಯಲ್ಲಿ ಬೃಹದಣುಗಳ ರಚನೆಗೆ ಆಲ್ಡರ್ ತನ್ನ ಸಂಶೋಧನೆಯ ಫಲಿತಾಂಶಗಳನ್ನು ಅನ್ವಯಿಸಿದ್ದಾನೆ. *

**ಆಲ್ಡಿಂಗ್‌ಟನ್, ರಿಚರ್ಡ್:** (1892–1962). ಇಂಗ್ಲಿಷ್ ಕವಿ ಮತ್ತು ಕಾದಂಬರಿಕಾರ. ಹ್ಯಾಂಪ್‌ಷೈರಿನಲ್ಲಿ ಹುಟ್ಟಿ ಡೋವರ್, ಲಂಡನ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿದ. 1913ರಲ್ಲಿ ಈಗೊಯಿಸ್ಟ್ ಪತ್ರಿಕೆಯ ಸಂಪಾದಕನಾದ.

ಹಿಲ್ಡ ಡೂಲಿಟ್ಲ್ ಎಂಬ ಅಮೆರಿಕದ ಕವಯಿತ್ರಿಯನ್ನು ಮದುವೆಯಾದ. 1937ರಲ್ಲಿ ವಿವಾಹ ವಿಚ್ಛೇದನವಾಯಿತು. ಅನೇಕ ವಿಮರ್ಶೆ, ಭಾಷಾಂತರ, ಕವಿತೆ, ಕಾದಂಬರಿಗಳನ್ನು ಬರೆದಿದ್ದಾನೆ. ಈತನ ವೆಲಿಂಗ್‌ಟನ್‌ನ ಜೀವನ ಚರಿತ್ರೆ (1946) ಜೇಮ್ಸ್ ಟೇಟ್ ಬ್ಲ್ಯಾಕ್ ಮೆಮೋರಿಯಲ್ ಬಹುಮಾನಗಳಿಸಿತು. ಮೊದಲ ಮಹಾಯುದ್ಧದಲ್ಲಿ ಸೇನಾಧಿಕಾರಿಯಾಗಿ ಕೆಲಸಮಾಡಿದ. ಇವನ ಕಾದಂಬರಿಗಳಲ್ಲಿ ಸೈನಿಕ ಜೀವನದ ಕಟುತ್ವ ಎದ್ದು ಕಾಣುತ್ತದೆ.

ಡೆತ್ ಆಫ್ ಎ ಹೀರೊ (1929), ದಿ ಕರ್ನಲ್ ಡಾಟರ್ (1931), ಆಲ್ ಮೆನ್ ಆರ್ ಎನಿಮೀಸ್ (1932), ವಿಮೆನ್ ಮಸ್ಟ್ ವರ್ಕ್ (1934) ಈತನ ಕೆಲವು ಕಾದಂಬರಿಗಳು.

ವಾರ್ ಅಂಡ್ ಲವ್ (1919), ಎ ಫೂಲ್ ಇನ್ ದಿ ಫಾರೆಸ್ಟ್ (1925), ಎ ಡ್ರೀಮ್ ಇನ್ ದಿ ಲಕ್ಸೆಂಬರ್ಗ್ (1930)–ಕವನ ಸಂಗ್ರಹಗಳು.

ಈತನ ಕವಿತೆಗಳ ಸಂಗ್ರಹ 1949ರಲ್ಲಿ ಪ್ರಕಟವಾಯಿತು. ಎರಡನೆಯ ಮಹಾಯುದ್ಧ ನಡೆಯುತ್ತಿದ್ದಾಗ ಅಮೆರಿಕಕ್ಕೆ ಹೋಗಿ ಅಲ್ಲಿಯೇ ನೆಲೆಸಿದ. (ಎಚ್.ವಿ.ಎಸ್.)

**ಆಲ್ಡಿಹೈಡುಗಳು:** ಕೀಟೋನ್‌ಗಳಿಗೆ ಸಂಬಂಧಿಸಿದ ಕಾರ್ಬೊನಿಲ್ (C=0) ಪುಂಜವನ್ನುಳ್ಳ ಸಾವಯವ ಸಂಯುಕ್ತಗಳು. ಇವನ್ನು R-CH=O ಎಂಬ ಸಾಮಾನ್ಯ ಅಣುಸೂತ್ರದಿಂದ ನಿರೂಪಿಸಬಹುದು. ಈ ಸಂಯುಕ್ತಗಳಲ್ಲಿ R ಹೈಡ್ರೊಜನ್, ಆಲ್ಕೈಲ್, ಅರೈಲ್, ಹೊಮೋಸೈಕ್ಲಿಕ್ ಅಥವಾ ಹೆಟೆರೋಸೈಕ್ಲಿಕ್ ಪುಂಜವಾಗಿರಬಹುದು. ಹೆಟೆರೋಸೈಕ್ಲಿಕ್ ಪುಂಜದ ಆಲ್ಡಿಹೈಡುಗಳಲ್ಲಿ ಕಾರ್ಬೊನಿಲ್ ಪುಂಜಕ್ಕೆ ಕೂಡಿಕೊಂಡಿರುವ ಅಣು ಕಾರ್ಬನ್ನೇ ಆಗಿರಬೇಕು. ಈ ಗುಂಪಿನ ಅತಿ ಸರಳ ಸಂಯುಕ್ತವಾದ ಫಾರ್ಮಾಲ್ಡಿಹೈಡಿನಲ್ಲಿ R ಹೈಡ್ರೊಜನ್ ಆಗಿದೆ.

ಆಲ್ಡಿಹೈಡುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುವ ಹಲವು ಮುಖ್ಯ ವಿಧಾನಗಳನ್ನು ಮುಂದೆ ವಿವರಿಸಿದೆ.

೧. ಮೊದಲವರ್ಗದ (ಪ್ರೈಮರಿ) ಆಲ್ಕೊಹಾಲ್‌ಗಳ ಉತ್ಕರ್ಷಣದಿಂದ (ಆಕ್ಸಿಡೇಷನ್) ಈ ಸಮೀಕರಣದಲ್ಲಿ ತೋರಿಸಿರುವಂತೆ

ಆಲ್ಡಿಹೈಡುಗಳ ಉತ್ಪತ್ತಿಯಾಗುತ್ತದೆ.

$$R - CH_2OH \xrightarrow{[O]} R - CHO + H_2O$$

ಈ ಉತ್ಕರ್ಷಣವನ್ನು ಸಾಧಿಸಲು ಪ್ಲಾಟಿನಂ, ಪೆಲ್ಲೆಡಿಯಂ, ತಾಮ್ರ ಮೊದಲಾದ ವೇಗವರ್ಧಕ ಲೋಹಗಳ ಸಂಪರ್ಕದಲ್ಲಿ ಆಕ್ಸಿಜನ್ನನ್ನಾಗಲೀ, ಕ್ರೋಮಿಯಂ ಟ್ರೈಆಕ್ಸೈಡ್, ಮ್ಯಾಂಗನೀಸ್ ಡೈಆಕ್ಸೈಡ್ ಅಥವಾ ಸಲ್ಫ್ಯೂರಿಕ್ ಆಮ್ಲದಂಥ ರಾಸಾಯನಿಕ ಉತ್ಕರ್ಷಣಕಾರಿಗಳನ್ನಾಗಲೀ ಉಪಯೋಗಿಸಬಹುದು. ಕೈಗಾರಿಕೋದ್ಯಮಗಳಲ್ಲಿ ಆಕ್ಸಿಜನ್ನನ್ನೂ ಪ್ರಯೋಗಶಾಲೆಗಳಲ್ಲಿ ಸಾಮಾನ್ಯವಾಗಿ ರಾಸಾಯನಿಕ ಉತ್ಕರ್ಷಣಕಾರಿಗಳನ್ನೂ ಬಳಸುತ್ತಾರೆ. ಇಂಥ ಕ್ರಿಯೆಗಳಲ್ಲಿ ಉತ್ಕರ್ಷಣ ಮಿತಿಮೀರಿ ಮುಂದುವರಿದು ಆಲ್ಡಿಹೈಡುಗಳು ಆಮ್ಲಗಳಾಗಿ ಪರಿವರ್ತಿತವಾಗದಂತೆ ಜಾಗರೂಕತೆ ವಹಿಸುವುದು ಅವಶ್ಯಕ.

ಆಕ್ಸಿಜನ್ನನ್ನಾಗಲೀ ಅದನ್ನೊದಗಿಸುವ ರಾಸಾಯನಿಕ ಉತ್ಕರ್ಷಣಕಾರಿಗಳನ್ನಾಗಲೀ ಉಪಯೋಗಿಸದೆ ಹೈಡ್ರೊಜನ್ ಪರಿಹರಣಕ್ರಿಯೆಯನ್ನು (ಡೀಹೈಡ್ರೋಜಿನೇಷನ್) ವೇಗವರ್ಧಕಗಳ ನೆರವಿನಿಂದ ಸಾಧಿಸಿ ಆಲ್ಡಿಹೈಡುಗಳನ್ನು ತಯಾರಿಸಬಹುದು.

$$R - CH_2OH \xrightarrow{\text{Pd ಅಥವಾ Cu}} R - CHO + H_2$$

2. ಆಮ್ಲಕ್ಲೋರೈಡುಗಳನ್ನು ವಿಶಿಷ್ಟ ರೀತಿಯಲ್ಲಿ ತಯಾರಿಸಿದ ಪೆಲ್ಲೆಡಿಯಂ ವೇಗವರ್ಧಕದ ನೆರವಿನಿಂದ ಅಪಕರ್ಷಣಕ್ಕೆ

(ರಿಡಕ್ಷನ್) ಒಳಪಡಿಸಿ ಈ ಕೆಳಗೆ ತೋರಿಸಿರುವ ಸಮೀಕರಣಕ್ಕನುಗುಣವಾಗಿ ಆಲ್ಡಿಹೈಡುಗಳನ್ನು ತಯಾರಿಸಬಹುದು.

$$RCOCI + H_2 \xrightarrow{[Pd]} RCHO + HCI$$

3. ಸಾವಯವ ಆಮ್ಲಗಳ ಕ್ಯಾಲ್ಸಿಯಂ ಲವಣವೊಂದನ್ನು ಕ್ಯಾಲ್ಸಿಯಂ ಫಾರ್ಮೇಟ್‌ನೊಡನೆ ಬೆರೆಸಿ ಸತುವಿನೊಡನೆ ಉಷ್ಣಕ್ರಿಯೆಗೆ (ಪೈರೊಲಿಸಿಸ್) ಒಳಪಡಿಸಿದಾಗ ಆಲ್ಡಿಹೈಡ್ ಸೃಷ್ಟಿಯಾಗುತ್ತದೆ. ಸತು ಈ ಕ್ರಿಯೆಯಲ್ಲಿ ವೇಗವರ್ಧಕ, ನಡೆಯುವ ಕ್ರಿಯೆಯನ್ನು ಮುಂದಿನ ಸಮೀಕರಣದಿಂದ ನಿರೂಪಿಸಬಹುದು.

$$(RCOO)_2Ca + (HCOO)_3Ca \xrightarrow{[Zn]} 2CaCo_3 + 2R - CHO$$

4. ಗ್ರಿನ್ಯಾರ್ ಸಂಯುಕ್ತಗಳನ್ನು ಆರ್ಥೋಫಾರ್ಮಿಕ್ ಎಸ್ಟರಿನೊಡನೆ ಸಂಯೋಗಕ್ಕೆ ಒಳಪಡಿಸಿದಾಗ ಉತ್ಪತ್ತಿಯಾಗುವ ಮಧ್ಯವರ್ತಿಯ (ಇಂಟರ್ಮೀಡಿಯೆಟ್) ಮೇಲೆ ನೀರಿನ ಕ್ರಿಯೆ ನಡೆದರೆ ಆಲ್ಡಿಹೈಡ್‌ಗಳ ಉತ್ಪತ್ತಿಯಾಗುತ್ತದೆ. ಈ ಬಗೆಯ ಸಂಯೋಜನೆಯನ್ನು ಮುಂದಿನ ಸಮೀಕರಣಗಳಿಂದ ನಿರೂಪಿಸಬಹುದು.



5. –CH=CH ಪುಂಜವನ್ನುಳ್ಳ ಆಲ್ಕೀನ್‌ಗಳನ್ನು ಓಜೋನಿನೊಡನೆ ಕ್ರಿಯೆಗೆ ಒಳಪಡಿಸಿದಾಗ ಉತ್ಪತ್ತಿಯಾಗುವ ಓಜೋನೈಡ್‌ಗಳನ್ನು ಹೈಡ್ರೊಜನ್ನಿನಿಂದ ಅಪಕರ್ಷಿಸಿ ಆಲ್ಡಿಹೈಡ್‌ಗಳನ್ನು ತಯಾರಿಸಬಹುದು. ಈ ಬಗೆಯ ಕ್ರಿಯೆಯಲ್ಲಿ $-CH=CR_2$ ಪುಂಜವನ್ನುಳ್ಳ ಆಲ್ಕೀನ್‌ಗಳನ್ನು ಉಪಯೋಗಿಸಿದಾಗ ಆಲ್ಡಿಹೈಡ್ ಮತ್ತು ಕೀಟೋನ್‌ಗಳ ಉತ್ಪತ್ತಿಯಾಗುತ್ತದೆ. ಓಜೋನೈಡ್‌ಗಳ ಮೂಲಕ ಈ ಬಗೆಯ ಆಲ್ಡಿಹೈಡ್ ಸಂಯೋಜನೆಯನ್ನು ಮುಂದೆ ತೋರಿಸಿರುವ ಸಮೀಕರಣದಿಂದ ನಿರೂಪಿಸಬಹುದು.

6. á-â-ಗ್ಲೈಕಾಲ್‌ಗಳನ್ನು ಪರ್‌ಅಯೋಡಿಕ್ ಆಮ್ಲ ಅಥವಾ ಲೆಡ್ ಟೆಟ್ರಅಸಿಟೇಟ್ ಉಪಯೋಗಿಸಿ ಉತ್ಕರ್ಷಿಸಿದಾಗ ಆಲ್ಡಿಹೈಡ್‌ಗಳ ಸೃಷ್ಟಿಯಾಗುತ್ತದೆ.

$$R - CH(OH) - CH(OH) - R' \xrightarrow{[O]} R - CHO + R'CHO + H_2O$$

ಇನ್ನು ಮುಂದೆ ವಿವರಿಸುವ ಎರಡು ವಿಧಾನಗಳನ್ನು ಆರೋಮ್ಯಾಟಿಕ್ ಆಲ್ಡಿಹೈಡ್‌ಗಳನ್ನು ತಯಾರಿಸಲು ಮಾತ್ರ ಉಪಯೋಗಿಸಬಹುದು.

7. ಆರೋಮ್ಯಾಟಿಕ್ ಪರಮಾಣುವಲಯಕ್ಕೆ (ಆರೊಮ್ಯಾಟಿಕ್‌ರಿಂಗ್) ಕೂಡಿಕೊಂಡಿರುವ ಮೀಥೈಲ್ ಪುಂಜವನ್ನು ಕ್ರೋಮಿಯಂ ಟ್ರೈಆಕ್ಸೈಡಿನ ನೆರವಿನಿಂದ ಉತ್ಕರ್ಷಿಸಿ ಬೆಂಜಾಲ್ ಡೈಅಸಿಟೇಟ್‌ಗಳನ್ನು ತಯಾರಿಸಬಹುದು. ಈ ಬೆಂಜಾಲ್ ಡೈಅಸಿಟೇಟ್‌ಗಳ ಮೇಲೆ ನೀರಿನ ಕ್ರಿಯೆ ನಡೆದಾಗ ಬೆಂಜಾಲ್ಡಿಹೈಡ್‌ಗಳ ಸೃಷ್ಟಿ ಆಗುತ್ತದೆ. ಈ ವಿಧಾನವನ್ನು ಅನೇಕ ಪಲ್ಲಟಿತ (ಸಬ್‌ಸ್ಟಿಟ್ಯೂಟೆಡ್) ಬೆಂಜಾಲ್ಡಿಹೈಡ್‌ಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಇಂಥ ಕ್ರಿಯೆಯ ಉದಾಹರಣೆಯೊಂದನ್ನು ಮುಂದಿನ ಸಮೀಕರಣದಲ್ಲಿ ತೋರಿಸಲಾಗಿದೆ.



8. ಆರೋಮ್ಯಾಟಿಕ್ ಆಲ್ಡಿಹೈಡುಗಳ ತಯಾರಿಕೆಗಾಗಿರುವ ಮತ್ತೊಂದು ವಿಧಾನದಲ್ಲೂ ಪರಮಾಣುವಲಯಕ್ಕೆ ಕೂಡಿರುವ

ಮೀಥೈಲ್ ಪುಂಜವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಈ ಕ್ರಿಯೆಯಲ್ಲಿ ಕ್ಲೋರಿನ್ ಅನಿಲವನ್ನು ಉತ್ಕರ್ಷಣಕಾರಿಯಾಗಿ ಉಪಯೋಗಿಸಿ, ಉತ್ಪತ್ತಿಯಾಗುವ ಡೈಕ್ಲೋರೊಮಧ್ಯವರ್ತಿಯನ್ನು ನೀರಿನೊಡನೆ ಕ್ರಿಯೆಗೆ ಒಳಪಡಿಸಿದಾಗ ಆಲ್ಡಿಹೈಡಿನ ಸೃಷ್ಟಿಯಾಗುತ್ತದೆ. ಈ ಉತ್ಕರ್ಷಣ ಅನಿರ್ಬಂಧರ್‍ಯಾಡಿಕಲ್‌ಗಳನ್ನು ಮಧ್ಯವರ್ತಿಯಾಗುಳ್ಳ ಕ್ರಿಯೆಯಾದುದರಿಂದ ರ್‍ಯಾಡಿಕಲ್‌ಗಳ ಉತ್ಪತ್ತಿಗೆ ಬೆಳಕು ಅಥವಾ $135^0$–$175^0$ ಸೆ. ಉಷ್ಣತೆ ಅಗತ್ಯ. ಈ ಸಂಯೋಜನೆಯ ಪೂರ್ಣಕ್ರಿಯೆಯನ್ನು ಕೆಳಗೆ ತೋರಿಸಿರುವ ಸಮೀಕರಣದಿಂದ ಉದಾಹರಿಸಬಹುದು.

$$C_6H_5CH_3 + CI_2 \rightarrow C_6H_5CHCI_2 + 2HCI$$
$$C_6H_5CHCI_2 + H_2O \rightarrow C_6H_5O = HO + 2HCI$$

# ಆಲ್ಡಿಹೈಡುಗಳು

ಮೀಥೈಲ್‌ಪುಂಜದ ಮೂರು ಹೈಡ್ರೋಜನ್ ಪರಮಾಣುಗಳೂ ಕ್ಲೋರಿನ್ ಪರಮಾಣುಗಳಿಂದ ಪಲ್ಲಟಿತವಾದಾಗ ಡೈಕ್ಲೋರೊಸಂಯುಕ್ತಗಳಿಗೆ ಬದಲಾಗಿ ಟ್ರೈಕ್ಲೋರೊ ಸಂಯುಕ್ತಗಳ ಉತ್ಪತ್ತಿಯಾಗುತ್ತದೆ. ಇಂಥ ಟ್ರೈಕ್ಲೋರೊಸಂಯುಕ್ತ ಮತ್ತು ನೀರಿನ ಅಣುಗಳ ಸಂಯೋಗದಿಂದ ಆಲ್ಡಿಹೈಡ್ ಬದಲು ಆಮ್ಲದ ಉತ್ಪತ್ತಿಯಾಗುತ್ತದೆ.

$$C_6H_5CCl_3 + 2H_2O \rightarrow C_6H_5COOH + 3HCl$$

ಟ್ರೈಕ್ಲೋರೊ ಸಂಯುಕ್ತ

ಈ ಉಪಉತ್ಪನ್ನ ಆಮ್ಲಗಳಿಗೂ ಬೆಲೆಯಿರುವುದರಿಂದ ಅವನ್ನು ಕಡೆಗಣಿಸುವಂತಿಲ್ಲ.

ಬಹುಸಂಖ್ಯೆಯ ಆಲ್ಡಿಹೈಡುಗಳು ಬಲು ಸುಲಭವಾಗಿ ಉತ್ಕರ್ಷಣೆಗೆ ಒಳಪಟ್ಟು ಆಮ್ಲಗಳಾಗಿ ಪರಿವರ್ತಿತವಾಗುತ್ತವೆ. ಆದ್ದರಿಂದ ಇವುಗಳ ತಯಾರಿಕೆ, ಸಂಗ್ರಹ ಮತ್ತು ಶೇಖರಣೆಗಳಲ್ಲಿ ಜಾಗರೂಕತೆ ಅವಶ್ಯಕ.

ಆಲ್ಡಿಹೈಡುಗಳ ರಾಸಾಯನಿಕ ಕ್ರಿಯೆಗಳಿಗೆ ಮುಖ್ಯಕಾರಣ ಕಾರ್ಬೊನಿಲ್ ಪುಂಜ. ಅನೇಕ ಆಲ್ಡಿಹೈಡ್‌ಕ್ರಿಯೆಗಳನ್ನು ಕಾರ್ಬೊನಿಲ್ ಪುಂಜಕ್ಕೆ ಆಗುವ ಸೇರ್ಪಡೆಗಳೆಂದು ಪರಿಗಣಿಸಬಹುದು. ಆಲ್ಡಿಹೈಡುಗಳು ಭಾಗವಹಿಸುವ ಹಲವು ಮುಖ್ಯ ರಾಸಾಯನಿಕ ಕ್ರಿಯೆಗಳನ್ನು ಈ ಕೆಳಗೆ ವಿವರಿಸಲಾಗಿದೆ.

1. ಆಲ್ಡಿಹೈಡ್ ಅಣುಗಳ ಕಾರ್ಬೊನಿಲ್ ಪುಂಜಗಳಿಗೆ ಹೈಡ್ರೋಜನ್ ಪರಮಾಣುಗಳು ಸೇರ್ಪಡೆಗೊಂಡರೆ ಪ್ರಥಮ ವರ್ಗದ

ಆಲ್ಕೊಹಾಲುಗಳ ಉತ್ಪತ್ತಿಯಾಗುತ್ತದೆ. ಈ ಬಗೆಯ ಜಲಜನಕೀಕರಣ (ಹೈಡ್ರೋಜಿನೇಷನ್) ಅಥವಾ ಅಪಕರ್ಷಣವನ್ನು ವೇಗವರ್ಧಕಗಳ ಸಂಪರ್ಕದಲ್ಲಿ ಹೈಡ್ರೋಜನ್ನನ್ನು ಉಪಯೋಗಿಸಿಯಾಗಲೀ ಇತರ ರಾಸಾಯನಿಕ ಅಪಕರ್ಷಣಕಾರಿಗಳನ್ನು ಉಪಯೋಗಿಸಿಯಾಗಲೀ ಸಾಧಿಸಬಹುದು. ಒಟ್ಟಿನಲ್ಲಿ ಆಗುವ ಕ್ರಿಯೆಯನ್ನು ಮುಂದಿನ ಸಮೀಕರಣ ನಿರೂಪಿಸುತ್ತದೆ.

$$RCHO + H_2 \rightarrow RCH_2OH$$

ಈ ಬಗೆಯ ಕ್ರಿಯೆಗಾಗಿ ಉಪಯೋಗಿಸುವ ರಾಸಾಯನಿಕ ಅಪಕರ್ಷಣಕಾರಿಗಳಲ್ಲಿ ಅಲ್ಯೂಮಿನಿಯಂ ಆಲ್ಕಾಕ್ಸೈಡುಗಳು ಮುಖ್ಯವಾದುವು. ಇವುಗಳನ್ನು ಉಪಯೋಗಿಸುವ ಓಪೆನಾವರ್ ಅಪಕರ್ಷಣವನ್ನು ಮುಂದಿನ ಸಮೀಕರಣಗಳಿಂದ ನಿರೂಪಿಸಬಹುದು.

$$R-CHO + Al(OCH_2R')_3 \rightarrow RCH_2O-Al(OCH_2R')_2 + R'CHO$$

$$RCH_2O-Al(OCH_2R')_2 + H_2O \rightarrow RCH_2OH + Al(OH)_3 + 2R'CH_2OH$$

2. ಆಲ್ಡಿಹೈಡುಗಳು ಆಲ್ಕೊಹಾಲ್ ಮತ್ತು ಆಮ್ಲಗಳ ನಡುವಣ ಉತ್ಕರ್ಷಣಸ್ಥಿತಿಯನ್ನು (ಆಕ್ಸಿಡೇಷನ್ ಸ್ಟೇಟ್) ಪಡೆದಿರುವ ಸಂಯುಕ್ತಗಳು. ಆದ್ದರಿಂದ ಇವುಗಳ ಅಪಕರ್ಷಣದಿಂದ ಆಲ್ಕೊಹಾಲುಗಳು ಲಭಿಸಿದರೆ ಉತ್ಕರ್ಷಣದಿಂದ ಆಮ್ಲಗಳು ಲಭಿಸುತ್ತವೆ. ಈ ಬಗೆಯ ಉತ್ಕರ್ಷಣ ಯಾವ ನೆರವೂ ಇಲ್ಲದೆ ಬಲು ಸುಲಭವಾಗಿ ಗಾಳಿಯಲ್ಲಿರುವ ಆಕ್ಸಿಜನ್ನಿನಿಂದಲೇ ಆಗುತ್ತದೆ.

$$R-CHO \xrightarrow{O} RCOOH$$

ಆದ್ದರಿಂದಲೇ ಆಲ್ಡಿಹೈಡುಗಳನ್ನು ಶೇಖರಿಸಿಡುವಾಗ ಗಾಳಿಯ ಸಂಪರ್ಕವಿಲ್ಲದಂತೆ ನೋಡಿಕೊಳ್ಳುವುದು ಅಗತ್ಯ. ತನ್ನಷ್ಟಕ್ಕೆ ತಾನೇ ಆಗುವ ಈ ಬಗೆಯ ಉತ್ಕರ್ಷಣದ ಹೆಸರು ಸ್ವಯಂಉತ್ಕರ್ಷಣ (ಆಟೊಆಕ್ಸಿಡೇಷನ್).

ಅಮೋನಿಯದಲ್ಲಿ ವಿಲೀನ ಮಾಡಿದ ಸಿಲ್ವರ್ ನೈಟ್ರೇಟ್ ಮತ್ತು ಫೇಲಿಂಗ್ಸ್ ದ್ರಾವಣಗಳನ್ನು (ವಿಲೀನಗೊಂಡಿರುವ ಕ್ಯೂಪ್ರಸ್ ಆಕ್ಸೈಡ್) ರಾಸಾಯನಿಕ ಉತ್ಕರ್ಷಣಕಾರಿಗಳಾಗಿ ಉಪಯೋಗಿಸಬಹುದು. ಈ ಕ್ರಿಯೆಗಳನ್ನು ಸಂಯೋಜನೆಗಳಲ್ಲಿ ಅಷ್ಟಾಗಿ ಉಪಯೋಗಿಸ ದಿದ್ದರೂ ಆಲ್ಡಿಹೈಡುಗಳ ಇರುವಿಕೆ ಮತ್ತು ಅನನ್ಯತೆಗಳನ್ನು ಸಾಧಿಸಲು ಉಪಯೋಗಿಸ ಲಾಗುತ್ತದೆ.

3. ಹೈಡ್ರೋಜನ್‌ಸಯನೈಡ್ ಮತ್ತು ಬೈಸಲ್ಫೈಟುಗಳು ಆಲ್ಡಿಹೈಡ್ ಕಾರ್ಬೊನಿಲ್ ಪುಂಜಕ್ಕೆ ಸೇರ್ಪಡೆಗೊಂಡು ಸಯನೊಹೈಡ್ರಿನ್ ಮತ್ತು ಬೈಸಲ್ಫೈಟ್‌ಸಂಯುಕ್ತಗಳೆಂಬ ಸೇರ್ಪಡೆ ಸಂಯುಕ್ತಗಳ ಉತ್ಪತ್ತಿಗೆ ಕಾರಣವಾಗುತ್ತವೆ.

ಇವು ಬಲು ಸಡಿಲ ಬಂಧಗಳನ್ನುಳ್ಳ ಸಂಯುಕ್ತಗಳು. ಇವುಗಳಿಂದ ಆಲ್ಡಿಹೈಡುಗಳ ಪುನರುತ್ಪತ್ತಿ ಬಲು ಸುಲಭ. ಆದ್ದರಿಂದ ಬೈಸಲ್ಫೈಟ್ ಸಂಯುಕ್ತಗಳಲ್ಲಿ ಆಲ್ಡಿಹೈಡುಗಳ ಶುದ್ಧೀಕರಣಕ್ಕಾಗಿ ಉಪಯೋಗಿಸಬಹುದು, ಸಯನೊಹೈಡ್ರಿನ್ನುಗಳನ್ನು ಹಲವು ಆಮ್ಲಗಳ ಸಂಯೋಜನೆಗಳಲ್ಲಿ ಮಧ್ಯವರ್ತಿಗಳಾಗಿ ಉಪಯೋಗಿಸಲಾಗುತ್ತದೆ.




4. ಆಲ್ಕೊಹಾಲ್ ಮತ್ತು ಆಲ್ಡಿಹೈಡುಗಳು ಸಂಯೋಜಿಸಿದಾಗ ಅಸಿಟಾಲ್ ಅಥವಾ ಹೆಮಿಅಸಿಟಾಲ್‌ಗಳ ಉತ್ಪತ್ತಿಯಾಗುತ್ತದೆ.




ಅನೇಕ ರಾಸಾಯನಿಕ ಸಂಯೋಜನೆಗಳಲ್ಲಿ ಆಲ್ಡಿಹೈಡ್ ಕಾರ್ಬೊನಿಲ್ ಪುಂಜ ಇತರ ರಾಸಾಯನಿಕ ಸಂಯುಕ್ತಗಳೊಡನೆ ಕ್ರಿಯೆಗೆ ಒಳಪಡದಂತೆ ರಕ್ಷಿಸಲು, ಆಲ್ಡಿಹೈಡುಗಳನ್ನು ಅಸಿಟಾಲುಗಳಾಗಿ ಪರಿವರ್ತಿಸಿ, ಸಂಯೋಜನೆಯ ಕ್ರಿಯೆಗಳು ಮುಗಿದ ಅನಂತರ ಅಸಿಟಾಲುಗಳನ್ನು ಆಲ್ಡಿಹೈಡುಗಳಾಗಿ ಪುನಃ ಪರಿವರ್ತಿಸಲಾಗುತ್ತದೆ. ಆಲ್ಕೊಹಾಲ್ ಪ್ರಮಾಣ ಕಡಿಮೆ ಇದ್ದಾಗ ಅಸಿಟಾಲುಗಳ ಬದಲು ಹೆಮಿಅಸಿಟಾಲುಗಳ ಸೃಷ್ಟಿಯಾಗುತ್ತದೆ. ಹೆಮಿಅಸಿಟಾಲುಗಳನ್ನು ಡೈಕ್ರೋಮೇಟಿನಂಥ ಉತ್ಕರ್ಷಣಕಾರಿಗಳ ನೆರವಿನಿಂದ ಎಸ್ಟರುಗಳಾಗಿ ಪರಿವರ್ತಿಸಬಹುದು.




5. ಅಮೋನಿಯ ಅನಿಲದೊಡನೆ ಆಲ್ಡಿಹೈಡುಗಳು ಕೂಡಿ ಆಲ್ಡಿಹೈಡ್ ಅಮೋನಿಯಗಳೆಂಬ ಸೇರ್ಪಡೆ ಸಂಯುಕ್ತಗಳ ಸೃಷ್ಟಿಯಾಗುತ್ತದೆ. ಬಲುಮಟ್ಟಿಗೆ ಈ ಬಗೆಯ ಸೇರ್ಪಡೆ ಸಂಯುಕ್ತಗಳು ಅಸ್ಥಿರ. ಇವುಗಳಿಂದ ಆಲಿಹೈಡುಗಳನ್ನು ಸುಲಭವಾಗಿ ಪುನರುತ್ಪತ್ತಿ ಮಾಡಬಹುದು. ಆದ್ದರಿಂದ ಆಲ್ಡಿಹೈಡುಗಳ ಶುದ್ಧೀಕರಣಕ್ಕಾಗಿ ಈ ಕ್ರಿಯೆಯನ್ನು




ಉಪಯೋಗಿಸಲಾಗುತ್ತದೆ. ಅಮೈನುಗಳೊಡನೆಯೂ ಆಲ್ಡಿಹೈಡುಗಳು ಸೇರ್ಪಡೆ ಸಂಯುಕ್ತ ಗಳನ್ನು ನೀಡುತ್ತವೆ. ಫಾರ್ಮಾಲ್ಡಿಹೈಡಿನಿಂದ ಉತ್ಪತ್ತಿಯಾಗುವ ಈ ಬಗೆಯ ಎರಡು ತೆರದ ಅಮೈನೋಮೆಥನಾಲುಗಳನ್ನು ಮುಂದೆ ತೋರಿಸಿದೆ.

6. ಅಮೈನೊ ಪುಂಜವನ್ನುಳ್ಳ ಹೈಡ್ರಾಕ್ಸಿಲಮೈನ್, ಸೆಮಿಕಾರ್ಬಜೈಡ್ ಮತ್ತು ಅನೇಕ ಹೈಡ್ರಜೀನ್‌ಗಳೊಡನೆ ಆಲ್ಡಿಹೈಡ್ ಕಾರ್ಬೊನಿಲ್ ಪುಂಜದ ಕ್ರಿಯೆ ನಡೆದಾಗ ಕ್ರಮವಾಗಿ

ಆಕ್ಸಿಮ್, ಸೆಮಿಕಾರ್ಬಜೋನ್ ಮತ್ತು ಹೈಡ್ರಜೈಡುಗಳೆಂಬ ವಿವಿಧ ಸಂಯುಕ್ತಗಳ ಉತ್ಪತ್ತಿ ಯಾಗುತ್ತದೆ. ಈ ಕ್ರಿಯೆಗಳನ್ನು ಮುಂದೆ ತೋರಿಸಿರುವ ಸಮೀಕರಣಗಳಿಂದ ನಿರೂಪಿಸಬಹುದು.

a) $R-CHO + H_2NOH \rightarrow RCH=N-OH + H_2O$

ಹೈಡ್ರಾಕ್ಸಿಲಮೈನ್ ಆಕ್ಸೀಮ್

b) $R-CHO + H_2N.CO.NH.NH_2 \rightarrow RCH=N.NH.CONH_2 + H_2O$

ಸೆಮಿಕಾರ್ಬಜೈಡ್ ಸೆಮಿಕಾರ್ಬಜೋನ್

c) $R-CHO + H_2N.NHR \rightarrow RCH=N-NHR + H_2O$

ಪಲ್ಲಟಿತ ಹೈಡ್ರಜೀನ್ ಪಲ್ಲಟಿತ ಹೈಡ್ರಜೋನ್

ಮೇಲೆ ತೋರಿಸಿರುವ ಈ ಕ್ರಿಯೆಗಳನ್ನು ಆಲ್ಡಿಹೈಡ್ ಮತ್ತು ಕೀಟೋನುಗಳ ಅನನ್ಯತೆಯನ್ನು ಸಾಧಿಸಲು ವಿಶೇಷವಾಗಿ ಉಪಯೋಗಿಸಲಾಗುತ್ತದೆ.

7. ಆಲ್ಡಿಹೈಡುಗಳು ಅನೇಕ ಬಹ್ವಂಗಗಳ (ಪಾಲಿಮರ್ಸ್) ತಯಾರಿಕೆಗಳಲ್ಲಿ ಮುಖ್ಯ ಮೂಲ ವಸ್ತುಗಳು. ಇವುಗಳಿಂದ ಅನೇಕ ಬಗೆಯ ಪ್ಲಾಸ್ಟಿಕ್ ಮತ್ತು ಕೃತಕ ಅಂಟುಗಳನ್ನು ತಯಾರಿಸಬಹುದು. ಹಲವಾರು ಆಲ್ಡಿಹೈಡ್ ಅಣುಗಳು ಪರಸ್ಪರ ತಮ್ಮಲ್ಲೇ ಸಂಯೋಗ ಹೊಂದಿ ಬಹ್ವಂಗಗಳನ್ನು ಉತ್ಪತ್ತಿ ಮಾಡಬಲ್ಲವು. ಫಾರ್ಮಾಲ್ಡಿಹೈಡಿನಿಂದ ಉತ್ಪತ್ತಿಯಾಗುವ ಪ್ಯಾರಫಾರ್ಮಾಲ್ಡಿಹೈಡ್ ಮತ್ತು ಅಸಿಟಾಲ್ಡಿಹೈಡಿನಿಂದ ಉತ್ಪತ್ತಿಯಾಗುವ ಫಾರ್ಮಾಲ್ಡಿಹೈಡ್ ಮತ್ತು ಮೆಟಾಲ್ಡಿ ಹೈಡುಗಳು ಇಂಥ ಬಹ್ವಂಗಗಳು.

ಹೈಡ್ರೋಜನ್ನನ್ನು ಹೊಂದಿರುವ ಆಲ್ಫಕಾರ್ಬನ್ ಇರುವ (ಕಾರ್ಬೊನಿಲ್ ಪುಂಜದ ಪಕ್ಕದಲ್ಲಿರುವ ಕಾರ್ಬನ್ ಅಣು ಆಲ್ಫಕಾರ್ಬನ್) ಆಲ್ಡಿಹೈಡ್ ಅಣುಗಳಲ್ಲಿ ಎರಡು ಪಟುಕೇಂದ್ರಗಳಿವೆ (ಆಕ್ಟಿವ್ ಸೆಂಟರ್ಸ್). ಆದ್ದರಿಂದ ಎರಡು ಆಲ್ಡಿಹೈಡ್ ಅಣುಗಳು



ಕೂಡಿ ದ್ವಯಾಣುಗಳ (ಡೈಮರ್) ಸೃಷ್ಟಿ ಸುಲಭವಾಗಿ ಆಗುತ್ತದೆ. ಈ ಬಗೆಯ ಕ್ರಿಯೆಯಿಂದ ಉತ್ಪತ್ತಿಯಾಗುವ ದ್ವಯಾಣುಗಳನ್ನು ಆಲ್ಡಾಲುಗಳೆಂದೂ ಕ್ರಿಯೆಯನ್ನು ಆಲ್ಡಾಲ್‌ಸಂಘನನ (ಕಂಡೆನ್ಸೇಷನ್) ಎಂದೂ ಕರೆಯಲಾಗುತ್ತದೆ.

$$CH_3CHO + CH_3CHO \longrightarrow CH_3-\underset{\large OH}{\underset{|}{CH}}-CH_2-CHO$$

ಆಲ್ಡಾಲ್

ಆಲ್ಡಾಲ್ ಸಂಘನನ ಕ್ರಿಯೆಗೆ ಎರಡನೆಯ ಅಣು ಆಲ್ಡಿಹೈಡ್ ಅಣುವೇ ಆಗಿರಬೇಕಾಗಿಲ್ಲ; ಹೈಡ್ರೊಜನ್ ಅಣುವೊಂದನ್ನಾದರೂ ಪಡೆದಿರುವ ಆಲ್ಫಕಾರ್ಬನ್ ಇರುವ ಯಾವ ಕಾರ್ಬೊನಿಲ್ ಸಂಯುಕ್ತವಾದರೂ ಸರಿ. ಎಸ್ಟರುಗಳನ್ನು ಆಲ್ಡಿಹೈಡುಗಳೊಡನೆ ಇಂಥ ಸಂಘನನ ಕ್ರಿಯೆಗಳಲ್ಲಿ ಉಪಯೋಗಿಸಿ ಅನೇಕ ಸಂಯೋಜನೆಗಳನ್ನು ಸಾಧಿಸಬಹುದು; ಮತ್ತು ಹೀಗೆ ಉತ್ಪತ್ತಿಯಾದ ಅಣುಗಳಿಂದ ನೀರಿನ ಅಣುವೊಂದು ಬೇರ್ಪಟ್ಟಾಗ ಹೊಸ ಅಪರ್ಯಾಪ್ತ ಸಂಯುಕ್ತಗಳ ಸೃಷ್ಟಿಯಾಗುತ್ತದೆ.



ಇದೇ ರೀತಿ ಆಲ್ಡಾಲ್ ಅಣುಗಳೂ ನೀರಿನ ಅಣುಗಳನ್ನು ಕಳೆದುಕೊಂಡು ಅಪರ್ಯಾಪ್ತ ಆಲ್ಡಿಹೈಡುಗಳಾಗಬಹುದು.

$$R-\underset{\large OH}{\underset{|}{CH}}-\overset{\large R'}{\overset{|}{CH}}-CHO \xrightarrow{-H_2O} R-CH=\overset{\large R}{\overset{|}{C}}-CHO$$

ಆಲ್ಡಾಲ್ ಅಪರ್ಯಾಪ್ತ ಆಲ್ಡಿಹೈಡ್

ಪಟು ಮೆಥಿಲೀನ್ ಪುಂಜಗಳನ್ನುಳ್ಳ ಆಮ್ಲ ಅಥವಾ ಆಮ್ಲದ ಅನ್‌ಹೈಡ್ರೈಡುಗಳೊಡನೆ ಆಗುವ ಆಲ್ಡಿಹೈಡಿನ ಸಂಘನನ ಕ್ರಿಯೆಗೆ ಪರ್ಕಿನ್ ಕ್ರಿಯೆ ಎಂದು ಹೆಸರು. ಈ ಕ್ರಿಯೆ ಸಿನಾಮಿಕ್ ಮತ್ತು ಪಲ್ಲಟಿತ ಸಿನಾಮಿಕ್ ಆಮ್ಲಗಳ ತಯಾರಿಕೆಗಳಲ್ಲಿ ಬಲು ಉಪಯೋಗಕ್ಕೆ ಬರುತ್ತದೆ.

$$C_6H_5CHO + (CH_3CO)_2O \rightarrow C_6H_5CH = OH - COCH + CH_3COOH$$

ಸಿನಾಮಿಕ್ ಆಮ್ಲ

ಆಲ್ಡಿಹೈಡುಗಳು ಫಿನಾಲ್‌ಗಳೊಡನೆ ಸಂಘನನ ಕ್ರಿಯೆಗಳಲ್ಲಿ ಭಾಗವಹಿಸಿದಾಗ ಕ್ರಿಯೆ ನಿರಂತರ ನಡೆದು ಅನೇಕ ಆಲ್ಡಿಹೈಡ್ ಮತ್ತು ಫಿನಾಲ್ ಅಣುಗಳ ಅಂಶಗಳಿಂದ ಕೂಡಿದ ಬೃಹದಣು (ಜಯಂಟ್ ಮಾಲಿಕ್ಯೂಲ್) ಅಥವಾ ಬಹ್ವಂಗಗಳ ಸೃಷ್ಟಿಯಾಗುತ್ತದೆ. ಈ ಬಗೆಯ ಹಲವು ಫಿನಾಲ್–ಆಲ್ಡಿಹೈಡ್ ಬೃಹದಣು ಸಂಯುಕ್ತಗಳನ್ನು ಕೈಗಾರಿಕೋದ್ಯಮಗಳಲ್ಲಿ ಅಂಟುಗಳಾಗಿ ಉಪಯೋಗಿಸಬಹುದು. ಇನ್ನೂ ಅನೇಕ ಬೃಹದಣು ಸಂಯುಕ್ತಗಳು ಪ್ಲಾಸ್ಟಿಕ್‌ಗಳು. ಫಿನಾಲ್ ಮತ್ತು ಫಾರ್ಮಾಲ್ಡಿಹೈಡುಗಳು ಕೂಡಿ ಉತ್ಪತ್ತಿಯಾಗುವ ಬೃಹದಣುವಿನ ರಚನೆಯನ್ನು ಮುಂದೆ ಸ್ಥೂಲವಾಗಿ ತೋರಿಸಲಾಗಿದೆ.

ಫಿನಾಲುಗಳಿಗೆ ಬದಲಾಗಿ ಹಲವು ನೈಟ್ರೊಜನ್ ಸಂಯುಕ್ತಗಳನ್ನೂ ಈ ಬಗೆಯ ಪಾಲಿಮರುಗಳ ತಯಾರಿಕೆಗಳಲ್ಲಿ ಉಪಯೋಗಿಸಬಹುದು. ಯೂರಿಯ–ಫಾರ್ಮಾಲ್ಡಿಹೈಡ್ ಪ್ಲಾಸ್ಟಿಕ್ ಇಂಥ ಬಹ್ವಂಗಗಳ ಒಂದು ಉದಾಹರಣೆ.



8. ಕೆಲವು ಆಲ್ಡಿಹೈಡುಗಳು ಪ್ರತ್ಯಾಮ್ಲಗಳ ಸನ್ನಿಧಿಯಲ್ಲಿ ಅಸಮಾಣುಜನ್ಯಕ್ರಿಯೆಗೆ (ಡಿಸ್‌ಪ್ರಪೋರ್ಷನೇಷನ್) ಒಳಪಟ್ಟು ಏಕಕಾಲ ಉತ್ಕರ್ಷಣ–ಅಪಕರ್ಷಣಗಳಿಂದ ಆಲ್ಕೊಹಾಲ್ ಮತ್ತು ಆಮ್ಲಗಳನ್ನು ಸೃಷ್ಟಿಸುತ್ತವೆ. ಈ ಬಗೆಯ ಕ್ರಿಯೆಯಲ್ಲಿ ಅರ್ಧಭಾಗ ಅಣುಗಳು ಅಪಕರ್ಷಣಕ್ಕೊಳಗಾದರೆ ಉಳಿದರ್ಧ ಅಣುಗಳು ಉತ್ಕರ್ಷಣ ಹೊಂದುತ್ತವೆ. ಆರೋಮ್ಯಾಟಿಕ್ ಆಲ್ಡಿಹೈಡುಗಳೆಲ್ಲವೂ ಇಂಥ

$$R-CHO + RCHO \xrightarrow{[OH^{\ominus}]} RCH_2OH + RCOOH$$

ಅಸಮಾಣುಜನ್ಯಕ್ರಿಯೆಗೆ ಒಳಗಾಗಬಲ್ಲವು. ಕ್ಯಾನಿಜಾರೋಕ್ರಿಯೆಯೆಂದು ಹೆಸರು ಪಡೆದಿರುವ ಈ ಕ್ರಿಯೆಯನ್ನು ಆರೋಮ್ಯಾಟಿಕ್ ಆಮ್ಲಗಳನ್ನು ತಯಾರಿಸಲು ಉಪಯೋಗಿಸಲಾಗುತ್ತದೆ. ಇಂಥ ಏಕಕಾಲ ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳು ಪ್ರಾಣಿ ಶರೀರಗಳ ಹಲವು ಅಂಗಾಂಗಗಳಲ್ಲಿ ನಡೆಯುತ್ತಿರುತ್ತವೆಂದು ನಂಬಲಾಗಿದೆ.

1. ಆರ್ಗಾನೊ ಲಿಥಿಯಂ ಅಥವಾ ಗ್ರಿನಾರ್ಡ್ ಸಂಯುಕ್ತಗಳಂಥ ಆರ್ಗಾನೊ ಲೋಹಸಂಯುಕ್ತಗಳೊಡನೆ ಆಲ್ಡಿಹೈಡುಗಳು ರಾಸಾಯನಿಕ ಕ್ರಿಯೆಗಳಲ್ಲಿ ಭಾಗವಹಿಸಿದಾಗ ಉತ್ಪತ್ತಿಯಾಗುವ ಆರ್ಗಾನೊ ಲೋಹಸಂಯುಕ್ತಗಳಿಂದ ಎರಡನೆಯ ವರ್ಗದ ಆಲ್ಕೊಹಾಲುಗಳನ್ನು ತಯಾರಿಸಬಹುದು.

HCHO ಎಂಬ ಅಣುಸೂತ್ರವನ್ನುಳ್ಳ ಫಾರ್ಮಾಲ್ಡಿಹೈಡ್ ಆಲ್ಡಿಹೈಡುಗಳಲ್ಲಿ ಅತಿ ಸರಳ ಸಂಯುಕ್ತ. ಪ್ರಕೃತಿದತ್ತ ವಸ್ತುಗಳಾದ ಮರ, ಕಲ್ಲಿದ್ದಲು ಮೊದಲಾದುವುಗಳ ಅಪೂರ್ಣ ದಹನದಲ್ಲಿ ಫಾರ್ಮಾಲ್ಡಿಹೈಡ್ ಉತ್ಪತ್ತಿಯಾಗುತ್ತದೆ. ಮೀಥೈಲ್ ಆಲ್ಕೊಹಾಲಿನ ಉತ್ಕರ್ಷಣದಿಂದ ಫಾರ್ಮಾಲ್ಡಿಹೈಡನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಲಾಗುತ್ತಿದೆ. ಗಾಳಿಯಲ್ಲಿರುವ ಆಕ್ಸಿಜನ್ನನ್ನು ವೇಗವರ್ಧಕಗಳ ಸನ್ನಿಧಿಯಲ್ಲಿ ಉಪಯೋಗಿಸಿ ಈ ಉತ್ಕರ್ಷಣವನ್ನು ಸಾಧಿಸಲಾಗುತ್ತದೆ.

$$CH_3OH + O \xrightarrow[\text{ಉಷ್ಣ}]{\text{ವೇಗವರ್ಧಕ}} HCHO + H_2O$$

ಸಾಮಾನ್ಯ ವಾತಾವರಣದ ಉಷ್ಣತೆಯಲ್ಲಿ ಫಾರ್ಮಾಲ್ಡಿಹೈಡ್ ಅನಿಲವಾಗಿರುವುದರಿಂದ ಈ ಸಂಯುಕ್ತವನ್ನು ಸಾಮಾನ್ಯವಾಗಿ ನೀರಿನಲ್ಲಿ ವಿಲೀನಮಾಡಿ ದ್ರಾವಣವನ್ನು ಬೇಕಾದೆಡೆಗಳಲ್ಲಿ ಉಪಯೋಗಿಸಲಾಗುತ್ತದೆ. ಈ ನೀರಿನ ದ್ರಾವಣದ ಹೆಸರು ಫಾರ್ಮಲಿನ್. ಇದನ್ನು ಅಧಿಕ ಪ್ರಮಾಣದಲ್ಲಿ ಜೀವವಿಜ್ಞಾನಿಗಳು ಕ್ರಿಮಿಗಳ ಮತ್ತು ಪ್ರಾಣಿಗಳ ಶವಗಳನ್ನು ಕೆಡದಂತಿಡಲು ಉಪಯೋಗಿಸುತ್ತಾರೆ.

ಹಿಂದೆ ತಿಳಿಸಿರುವ ಫಾರ್ಮಾಲ್ಡಿಹೈಡಿನ ತ್ರಯಾಣುವಾದ (ಟ್ರೈಮರ್) ಪ್ಯಾರಫಾರ್ಮಾಲ್ಡಿಹೈಡ್ ಒಂದು ಘನವಸ್ತು. ಇದನ್ನು ಉಷ್ಣಕ್ಕೆ ಒಳಪಡಿಸಿದಾಗ ಫಾರ್ಮಾಲ್ಡಿಹೈಡ್ ಬಿಡುಗಡೆಯಾಗುತ್ತದೆ. ಶುದ್ಧ ಫಾರ್ಮಾಲ್ಡಿಹೈಡಿನ ಅವಶ್ಯಕತೆಯಿದ್ದು ನೀರಿನ ದ್ರಾವಣವನ್ನು ಉಪಯೋಗಿಸುವ ಸಾಧ್ಯತೆ ಇಲ್ಲದಾಗ ಈ ತ್ರಯಾಣುವನ್ನು ಫಾರ್ಮಾಲ್ಡಿಹೈಡಿನ ಆಕರವಾಗಿ ಬಳಸಬಹುದು.

ಅಮೋನಿಯದೊಡನೆ ಫಾರ್ಮಾಲ್ಡಿಹೈಡ್ ಸಂಯೋಗಿಸಿದಾಗ ಯೂರೋಟ್ರೋಪಿನ್ ಎಂಬ ನವೀನ ಸಂಯುಕ್ತ ಉತ್ಪತ್ತಿಯಾಗುತ್ತದೆ.

ಯೂರೋಟ್ರೋಪಿನನ್ನು ವೈದ್ಯಕೀಯ ರಂಗದಲ್ಲಿ ದೇಹಾಂತರ್ಗತ ಕ್ರಿಮಿನಾಶಕ (ಇಂಟರ್ನಲ್ ಡಿಸ್‌ಇನ್‌ಫೆಕ್ಟೆಂಟ್) ಆಗಿಯೂ ಹಲವು ಸಾಂಕ್ರಾಮಿಕ ರೋಗಗಳಿಗೆ ಔಷಧವಾಗಿಯೂ ಉಪಯೋಗಿಸಲಾಗುತ್ತಿದೆ.




ಆಲ್ಕೈಲ್ ಆಲ್ಡಿಹೈಡುಗಳ ಶ್ರೇಣಿಯಲ್ಲಿ ಎರಡನೆಯದಾದ ಅಸಿಟಾಲ್ಡಿಹೈಡ್ ಒಂದು ದ್ರವವಸ್ತು. ಇದನ್ನು ಬೆಳ್ಳಿಯ ಕನ್ನಡಿಗಳ ತಯಾರಿಕೆಯಲ್ಲೂ ಅಸಿಟಿಕ್ ಆಮ್ಲದ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ.

ಎರಡರಿಂದ ಹನ್ನೆರಡು ಕಾರ್ಬನ್ ಪರಮಾಣುಗಳನ್ನುಳ್ಳ ಸರಳ ಆಲ್ಡಿಹೈಡುಗಳು ದ್ರವವಸ್ತುಗಳು. ಇನ್ನುಳಿದ ಹೆಚ್ಚು ಕಾರ್ಬನ್ ಪರಮಾಣುಗಳನ್ನುಳ್ಳ ಆಲ್ಡಿಹೈಡುಗಳು ಘನವಸ್ತುಗಳು. ಅಲ್ಪ ಸಂಖ್ಯೆಯಲ್ಲಿ ಕಾರ್ಬನ್ ಪರಮಾಣುಗಳನ್ನುಳ್ಳ ಆಲ್ಡಿಹೈಡುಗಳ ವಾಸನೆ ತೀಕ್ಷ್ಣವಾಗಿದ್ದು ಅಷ್ಟೇನೂ ಸಹ್ಯವಾದುದಲ್ಲ. ಆದರೆ ಹೆಚ್ಚು ಅಣುಭಾರವಿರುವ ಆಲ್ಡಿಹೈಡುಗಳ ವಾಸನೆ ಮಧುರ. 8–14 ಕಾರ್ಬನ್ ಪರಮಾಣುಗಳನ್ನುಳ್ಳ ಆಲ್ಡಿಹೈಡುಗಳನ್ನು ಸುಗಂಧದ ಉದ್ದಿಮೆಯಲ್ಲಿ ಉಪಯೋಗಿಸಲಾಗುತ್ತದೆ. ಓಯ್ನಿಂಥಾಲ್ ಎಂಬ ಹೆಸರಿನ 7 ಕಾರ್ಬನ್ ಪರಮಾಣುಗಳಿರುವ ಆಲ್ಡಿಹೈಡನ್ನು ಅನೇಕ ಸುಗಂಧದ್ರವ್ಯಗಳಲ್ಲಿ ಬಳಸಲಾಗುತ್ತಿದೆ. ಸಿಟ್ರೋನೆಲ್ಲ ತೈಲ, ಗುಲಾಬಿ ತೈಲ ಮೊದಲಾದ ಸುಗಂಧತೈಲಗಳ ಸುವಾಸನೆಗೆ ಅವುಗಳಲ್ಲಿರುವ ಕ್ಯಾಪ್ರಿಲಿಕ್ ಮತ್ತು ಪೆಲಾರ್ಗೋನಿಕ್ ಆಲ್ಡಿಹೈಡುಗಳೇ ಕಾರಣ. ಪ್ರಕೃತಿಯಲ್ಲಿ ದೊರೆಯುವ ಆಲ್ಡಿಹೈಡುಗಳನ್ನು ಮಾತ್ರವಲ್ಲದೆ ಕೃತಕವಾಗಿ ತಯಾರಿಸಿದ ಅನೇಕ ಆಲ್ಡಿಹೈಡುಗಳನ್ನು ಸುಗಂಧದ್ರವ್ಯ ಉದ್ದಿಮೆಯಲ್ಲಿ ಉಪಯೋಗಿಸುತ್ತಿದ್ದಾರೆ. ಗ್ಲಿಸರಾಲಿನಿಂದ ತಯಾರಿಸಬಹುದಾದ ಅಕ್ರೊಲಿನ್ ಎಂಬ ಅಪರ್ಯಾಪ್ತ ಆಲ್ಡಿಹೈಡ್ ಬಹು ಪಟುವಾದ ಸಂಯುಕ್ತ. ಅಕ್ರೊಲಿನ್ ಮತ್ತು ಅದೇ ಶ್ರೇಣಿಗೆ ಸೇರಿದ ಇತರ ಆಲ್ಡಿಹೈಡುಗಳನ್ನು ಅನೇಕ ಸಾವಯವ ಸಂಯೋಜನೆಗಳಲ್ಲಿ ಉಪಯೋಗಿಸಲಾಗುತ್ತದೆ. ನಿಂಬೆಯ ಹಣ್ಣಿನ ವಾಸನೆಗೆ ಕಾರಣವಾದ ಸಿಟ್ರೋನೆಲ್ಲಾಲ್ ಮತ್ತು ಸಿಟ್ರಾಲ್ ಎಂಬ ಆಲ್ಡಿಹೈಡುಗಳು ನಿಂಬೆಹಣ್ಣಿನ ಸಿಪ್ಪೆಯಲ್ಲಿ ಮಾತ್ರವಲ್ಲದೆ ಲೆಮನ್‌ಗ್ರಾಸ್ ತೈಲ, ನೀಲಗಿರಿ ತೈಲ, ಸಿಟ್ರೋನೆಲ್ಲ ತೈಲ ಮತ್ತು ವರ್ಬೀನ ತೈಲವೇ ಮೊದಲಾದ ಅನೇಕ ತೈಲಗಳಲ್ಲಿ ಇವೆ. ಸಿಟ್ರಾಲನ್ನು ನೇರವಾಗಿ ಸುಗಂಧ ದ್ರವ್ಯವಾಗಿ ಬಳಸುವುದು ಮಾತ್ರವಲ್ಲದೆ ಅಯನೋನುಗಳೆಂಬ ನೇರಿಳೆ ಬಣ್ಣದ ಪರಿಮಳಗಳ ತಯಾರಿಕೆಯಲ್ಲೂ ಉಪಯೋಗಿಸಲಾಗುತ್ತದೆ. ತ್ರಿಬಂಧ (ಟ್ರಿಪಲ್ ಬಾಂಡ್) ಇರುವ ಆಲ್ಡಿಹೈಡುಗಳನ್ನೂ ತಯಾರಿಸಲಾಗಿದೆ. ಈ ಬಗೆಯ ಆಲ್ಡಿಹೈಡುಗಳಲ್ಲಿ ಮುಖ್ಯವಾದ ಪ್ರೊಪಾರ್ಗಿಲ್ ಆಲ್ಡಿಹೈಡ್ (CH≡C–CHO) ಮತ್ತು ಅದೇ ಶ್ರೇಣಿಯ ಇತರ ಆಲ್ಡಿಹೈಡುಗಳು ಅನೇಕ ಸಾವಯವ ಸಂಯೋಜನೆಗಳಲ್ಲಿ ಉಪಯೋಗಕ್ಕೆ ಬರುತ್ತವೆ. (ಕೆ.ಟಿ.ಎಸ್.)

**ಆಲ್ಡೆಬರಾನ್:** ನೋಡಿ–ರೋಹಿಣಿ.

**ಆಲ್ಪ್ಸ್:** ಯುರೋಪ್ ಖಂಡದಲ್ಲಿಯೇ ಅತಿ ಎತ್ತರವಾಗಿದ್ದು ಸುಮಾರು 700 ಮೈ. ವರೆಗೆ ಬಿಲ್ಲಿನಾಕಾರದಲ್ಲಿ ಅಗಾಧವಾಗಿ ಹರಡಿರುವ ಮುಖ್ಯಪರ್ವತಸ್ತೋಮ. ನೈರುತ್ಯದಿಂದ ಈಶಾನ್ಯದ ಕಡೆ ಹಬ್ಬಿರುವ ಅನೇಕ ಸಮಾನಾಂತರ ಶ್ರೇಣಿಗಳನ್ನೊಳಗೊಂಡಿದೆ. ಜಿನೋವ ಖಾರಿಯಿಂದ ಫ್ರಾನ್ಸ್, ಸ್ವಿಟ್ಜರ್‌ಲೆಂಡ್, ಜರ್ಮನಿ, ಆಸ್ಟ್ರಿಯ, ಇಟಲಿ ಮತ್ತು ಯುಗೋಸ್ಲೇವಿಯ ಭಾಗಗಳಲ್ಲಿ ಪ್ರಸರಿಸಿದೆ. ಈ ಪರ್ವತ ಆಕ್ರಮಿಸಿರುವ ಭಾಗದಲ್ಲಿ ರೈನ್, ರ್‍ಹೋನ್, ಪೋ ಮತ್ತು ಡ್ಯಾನ್ಯೂಬ್ ನದಿಗಳ ಜಲಾನಯನ ಪ್ರದೇಶಗಳಿವೆ. ಈ ಬೃಹದ್ ಪ್ರದೇಶವನ್ನು ಭೌಗೋಳಿಕವಾಗಿ ಮೂರು ಮುಖ್ಯ ಪಂಗಡಗಳಲ್ಲಿ ವಿಂಗಡಿಸಬಹುದು; ಪಶ್ಚಿಮ ಆಲ್ಪ್ಸ್, ಮಧ್ಯ ಆಲ್ಪ್ಸ್ ಮತ್ತು ಪೂರ್ವ ಆಲ್ಪ್ಸ್.

ಪಶ್ಚಿಮ ಆಲ್ಪ್ಸ್ ಪ್ರದೇಶ ಮ್ಯಾರಿಟೈನ್, ಕೊಟ್ಟಿಯನ್, ಡೌಫೈನ್ ಮತ್ತು ಗ್ರೈಯಾನ್ ಆಲ್ಪ್ಸ್‌ಗಳನ್ನೊಳಗೊಂಡಿದೆ. ಎತ್ತರದ ಶಿಖರ ಪಿಕ್‌ಡೆಸ್ ಎಕ್ರಿನ್ಸ್ (13,461') ಮಧ್ಯ ಆಲ್ಪ್ಸ್ ಪರ್ವತಪ್ರದೇಶ ಉತ್ತರದಲ್ಲಿರುವ ಬರ್ನೀಸ್ ಆಲ್ಪ್ಸ್ ಶ್ರೇಣಿ, ಪೆನ್ನೈಲ್ ಮಧ್ಯಶ್ರೇಣಿ, ಲೆಪೊಂಟೈನ್ ಮತ್ತು ಹೆಲ್‌ವೀಸಿಯನ್ ಶ್ರೇಣಿಗಳನ್ನೂ ದಕ್ಷಿಣದಲ್ಲಿರುವ ಆರ್ಟಲರ್ ಮತ್ತು ಡೊಲೊಮೈಟ್ ಆಲ್ಪ್ಸ್ ಶ್ರೇಣಿಗಳನ್ನೂ ಹೊಂದಿದೆ. ಅತಿ ಎತ್ತರ ಶಿಖರ ಮೌಂಟ್ ಬ್ಲ್ಯಾಂಕ್ (15,781'). ಇದು ಆಲ್ಪ್ಸ್ ಪರ್ವತ ಪ್ರದೇಶದಲ್ಲಿಯೇ ಅತಿ ಎತ್ತರವಾದುದು. ಪೂರ್ವ ಆಲ್ಪ್ಸ್ ಪ್ರದೇಶ ನೊರಿಕ್, ಕಾರ್ನಿಯನ್ ಮತ್ತು ಜೂಲಿಯನ್ ಆಲ್ಪ್ಸ್‌ಗಳನ್ನೊಳಗೊಂಡಿದೆ. ಇವುಗಳನ್ನು ಮೌಂಟ್ ಸೆನಿಸ್, ಸಿಂಪ್ಲನ್, ಲಾಶ್ಚಬರ್ಗ್, ಸೆಂಟ್ ಗೊಥಾರ್ಡ್, ಬ್ರೆನ್ನಾರ್, ಲಿಟ್ಲ್ ಮತ್ತು ಗ್ರೇಟ್ ಸೇಂಟ್ ಬರ್ನಾರ್ಡ್, ಜೆಮ್ಮಿ, ಸ್ಪ್ಲೂಜನ್ ಮತ್ತು ಮಲೋಜ ಕಣಿವೆಗಳ ಮೂಲಕ ಹಾದುಹೋಗಬಹುದು. ಕೆಳಕಣಿವೆಯ ಮತ್ತು ಇಳಿಜಾರು ಭಾಗಗಳಲ್ಲಿ ದ್ರಾಕ್ಷಿಬಳ್ಳಿ ಮತ್ತು ಧಾನ್ಯಗಳನ್ನು ಬೆಳೆಯುತ್ತಾರೆ 6000'–7000' ವರೆಗಿನ ಪರ್ವತಪ್ರದೇಶಗಳನ್ನು ಕಾಡುಗಳು ಆಕ್ರಮಿಸಿವೆ. ಇದಕ್ಕಿಂತಲೂ ಹೆಚ್ಚು ಎತ್ತರದ ಭಾಗಗಳಲ್ಲಿ ಆಲ್ಪೈನ್ ಹುಲ್ಲುಗಾವಲುಗಳಿವೆ. ಇವುಗಳನ್ನು ದನಸಾಕಣೆಗೆ ಬಳಸಲಾಗಿದೆ. ಈ ಪ್ರದೇಶದಲ್ಲಿ ಹಿಮರೇಖೆ ಉತ್ತರದಲ್ಲಿ 8500' ಮತ್ತು ದಕ್ಷಿಣದಲ್ಲಿ 10,000' ಎತ್ತರದಲ್ಲಿ ಗೋಚರಿಸುವುದು. ಬೇಸಗೆ ಮತ್ತು ಚಳಿಗಾಲದಲ್ಲಿ ಅಸಂಖ್ಯಾತ ಪ್ರವಾಸಿಗರು ಈ ಪ್ರದೇಶಗಳಿಗೆ ಭೇಟಿ ಕೊಡುತ್ತಾರೆ. ಈ ಪ್ರದೇಶ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಅನುಕೂಲವಾಗಿದೆ.



ಸ್ವಿಸ್ ಆಲ್ಪ್ಸ್‌ನ ಭಾಗ

ಆಲ್ಪ್ಸ್ ಪರ್ವತ ಉತ್ತರ ಯೂರೋಪಿನ ಮೈದಾನ ಪ್ರದೇಶಗಳು ಮತ್ತು ದಕ್ಷಿಣ ಯೂರೋಪಿನ ಮೆಡಿಟರೇನಿಯನ್ ಪ್ರದೇಶಗಳ ಮಧ್ಯೆ ಸಮರ್ಥನೀಯವಾದ ಒಂದು ಸ್ವಾಭಾವಿಕ ಎಲ್ಲೆಯಾಗಿದೆ. ಈ ಭಾಗಗಳಲ್ಲಿ ಜಿನೀವ, ಲೊಸರ್ನೆ, ಕಾನ್‌ಸ್ಟೆನ್ಸ್, ಝೂರಿಚ್, ಲುಗಾನೊ, ಕೊಮೊ, ಗರ್ಡ ಮೊದಲಾದ ಉಪಯುಕ್ತ ಹಾಗೂ ಸುಂದರ ಸರೋವರಗಳಿವೆ. ಸುತ್ತಣ ಪೈನ್ ಕಾಡುಗಳಲ್ಲಿ ಷಮಾಯ್, ಮಾರ್ಮಟ್, ಐಬೆಕ್ಸ್ ಮೊದಲಾದ ವನ್ಯಪ್ರಾಣಿಗಳಿವೆ. ಮತ್ತೆಲ್ಲೂ ಕಂಡು ಬರದಂಥ ಪ್ರಕೃತಿಸೌಂದರ್ಯವುಳ್ಳ ಈ ಪರ್ವತ ಸಂತೋಷಕೂಟ ಮತ್ತು ಆಟಗಳಿಗೆ ಪ್ರಸಿದ್ಧವಿದೆ. ವಿಶ್ವದ ನಾನಾ ಭಾಗಗಳಿಂದ ಜನ ತಂಡೋಪತಂಡವಾಗಿ ಬಂದು ಕೆಲಕಾಲ ಇಲ್ಲಿನ ಪ್ರವಾಸಿ ಶಿಬಿರಗಳಲ್ಲಿ ನೆಲಸಿ ಪರ್ವತಗಳ ರಮ್ಯ ವಾತಾವರಣದಲ್ಲಿ ವಿಶ್ರಾಂತಿಪಡೆದು ಮಂಜುಗೆಡ್ಡೆಯ ಮೇಲೆ ಜಾರುವ ಸ್ಕೀಯಿಂಗ್ ಮತ್ತು ಸ್ಕೇಟಿಂಗ್ ಆಟಗಳಲ್ಲಿ ಭಾಗವಹಿಸುತ್ತಾರೆ. ಅಚ್ಚ ಹಸುರಿನ ಹುಲ್ಲುಗಾವಲುಗಳು ಅಲ್ಲಲ್ಲಿ ಹರಡಿರುವ ಹಳ್ಳಿಗಳಿಗೆ ಮೆರಗು ಕೊಟ್ಟಿವೆ. ವರ್ಷವೆಲ್ಲ ಪ್ರವಾಸಿಗರು ಇಲ್ಲಿಗೆ ಬಂದು ಹೋಗುವುದರಿಂದ ಹೆಚ್ಚಿನ ಆದಾಯವಿದೆ. (ಎಂ.ಎಸ್.)

**ಆಲ್ಫ ಕಣಗಳು:** ವಿಕಿರಣಕ್ರಿಯೆಯುಳ್ಳ ಪರಮಾಣುಗಳ ಬೀಜಗಳಿಂದ ಸಿಡಿಯುವ ಹೀಲಿಯಂ ಬೀಜಗಳು (á- ಪಾರ್ಟಿಕಲ್ಸ್). ವಿವಿಧ ಮೂಲಗಳ ಈ ಕಣಗಳ ವೇಗ ಸೆಕೆಂಡಿಗೆ 1 ರಿಂದ 2 x $10^9$ ಸೆಂ.ಮೀ ನಷ್ಟಿರುತ್ತದೆ. ಇವನ್ನು ತಡೆದು ನಿಲ್ಲಿಸಲು ತೆಳುವಾದ ಒಂದು ಕಾಗದದ ಹಾಳೆ ಸಾಕು. ಗಾಳಿಯಲ್ಲಿ ಇವು ಕೆಲವು ಸೆಂ.ಮೀ.ಗಳಿಗಿಂತ ಹೆಚ್ಚು ದೂರ ಹೋಗಲಾರವು.



ಚಿತ್ರ. 1 ಆಲ್ಫ ಕಣಗಳ ಹಾದಿಯನ್ನು ತೋರಿಸುವ ಮೇಘಮಂದಿರದ ಛಾಯಾಫಲಕ

ಆಲ್ಫ ಕಣಗಳ ಹಾಯಿದೂರ (ರೇಂಜ್): ವಿದ್ಯುದಂಶವಿರುವ ಬೇರೆ ಬೇರೆ ಕಣಗಳು ಗಾಳಿಯಲ್ಲಿ ಇಲ್ಲವೆ ಬೇರೆ ವಸ್ತುಗಳಲ್ಲಿ ಹಾಯುವಾಗ ಅಯಾನೀಕರಣ ಮತ್ತು ಉತ್ತೇಜನ (ಎಕ್ಸೈಟ್‌ಮೆಂಟ್) ಕ್ರಿಯೆಗಳಿಂದ ತಮ್ಮ ಶಕ್ತಿಯನ್ನು ವಿವಿಧ ಹಂತಗಳಲ್ಲಿ ಕಳೆದುಕೊಳ್ಳುತ್ತವೆ; ಅದೇ ತರಹದ ಪ್ರಯೋಗದಲ್ಲಿ ಆಲ್ಫ ಕಣಗಳ ಶಕ್ತಿ ನಷ್ಟವನ್ನು ಪರಿಶೀಲಿಸಿ ಕೆಲವು ಅಭಿಪ್ರಾಯಗಳನ್ನು ವಿಜ್ಞಾನಿಗಳು ಮಂಡಿಸಿದರು: ವಿಕಿರಣ ಕ್ರಿಯೆಯುಳ್ಳ ಯಾವುದೊಂದು ಮೂಲವಸ್ತುವಿನ ಬೀಜಗಳಿಂದ ಸಿಡಿಯುವ ಎಲ್ಲ ಆಲ್ಫ ಕಣಗಳ ವೇಗ ಒಂದೇ; ಒಂದೊಂದು ಆಲ್ಫ ಕಣದ ಚಲನೆಯೂ ಸಾಮಾನ್ಯವಾಗಿ ನೇರ. ಅಯಾನೀಕರಣ ಮತ್ತು ಉತ್ತೇಜನ ಕ್ರಿಯೆಗಳಿಂದ ಆಲ್ಫ ಕಣಗಳು ಕಳೆದುಕೊಳ್ಳುವ ಶಕ್ತಿ ಅವುಗಳ ವೇಗ ಕುಂದಿದಂತೆ ಹೆಚ್ಚಾಗುತ್ತದೆ. ಇತ್ತೀಚಿನ ಸುಧಾರಿತಪ್ರಯೋಗಗಳು ಕೂಡ

ಮೇಲಿನ ಅಭಿಪ್ರಾಯಗಳ ಸ್ಪಷ್ಟತೆಗೆ ಪುರಾವೆ ನೀಡಿವೆ. ಚಿತ್ರವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಆಲ್ಫ ಕಣಗಳು ಗತಿಸಿರುವ ದೂರಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಿರುವುದು ಗೊತ್ತಾಗುವುದು. ಈ ದೂರಗಳ ಸರಾಸರಿಯ ಹೆಸರು ಸರಾಸರಿ ಹಾಯುದೂರ ಅಥವಾ ಹಾಯುದೂರ ಆಲ್ಫ ಕಣಗಳ ಹಾಯುದೂರಕ್ಕೂ ಅವುಗಳ ಮೂಲ ಚಲನಶಕ್ತಿಗೂ (ಇನಿಷಿಯಲ್ ಕೈನೆಟಿಕ್ ಎನರ್ಜಿ) ನಿಕಟಸಂಬಂಧವಿದೆ. ಮೂಲ ಚಲನಶಕ್ತಿ ಹೆಚ್ಚಾಗಿದ್ದರೆ ಹಾಯುದೂರವೂ ಹೆಚ್ಚಾಗುತ್ತದೆ. ಗಾಳಿಯಲ್ಲಿ ಆಲ್ಫ ಕಣಗಳ ಹಾಯುದೂರವನ್ನೂ ಹಾಲೊವೆ ಮತ್ತು ಲಿವಿಂಗ್‌ಸ್ಟನ್ ಅವರು ಉಪಯೋಗಿಸಿದ ತಡಿಕೆ ಗೋಡೆಯ (ಸ್ಕ್ರೀನ್‌ವಾಲ್) ಅಯಾನೀಕರಣಮಂದಿರದ ನೆರವಿನಿಂದ ನಿರ್ಧರಿಸಬಹುದು.




ಚಿತ್ರ. 2 ಆಲ್ಫ ಕಣಗಳ ನಿಖರಹಾಯುದೂರವನ್ನು ಕಂಡುಹಿಡಿಯಲು ಹಾಲೊವೆ ಮತ್ತು ಲಿವಿಂಗ್‌ಸ್ಟನ್ ಉಪಯೋಗಿಸಿದ ತಡಿಕೆ ಗೋಡೆಯ ಅಯಾನೀಕರಣ ಮಂದಿರ

ಕಿರಿದಾದ ಆಲ್ಫ ಕಣಗಳ ದೂರ ಗಾಳಿಯಲ್ಲಿ ಹಾಯ್ದು ಸಂಸೂಚಕವನ್ನು (ಡಿಟೆಕ್ಟರ್) ತಲುಪುತ್ತದೆ. ಒಂದೊಂದು ಆಲ್ಫ ಕಣ ಸುಂಸೂಚಕವನ್ನು ಪ್ರವೇಶಿಸಿದಂತೆ ಅಯಾನುಗಳು ಉತ್ಪತ್ತಿಯಾಗಿ ಪ್ರಚ್ಛನ್ನ ಮಿಡಿತಗಳನ್ನು (ವೋಲ್ಟೇಜ್ ಪಲ್ಸ್) ಸೃಷ್ಟಿಸುತ್ತವೆ.

ಈ ಮಿಡಿತಗಳನ್ನು ವರ್ಧಿಸಿ ಎಣಿಸಬಹುದು. ಆಲ್ಫ ಕಣಗಳ ಅಕಾರಕ್ಕೂ ಸಂಸೂಚಕಕ್ಕೂ ಇರುವ ದೂರವನ್ನು ವ್ಯತ್ಯಾಸ ಮಾಡುತ್ತ ಸಂಸೂಚಕವನ್ನು ತಲಪುವ ಕಣಗಳನ್ನು ಎಣಿಸಿ ಸಂಖ್ಯೆಗೂ ದೂರಕ್ಕೂ ಇರುವ ಸಂಬಂಧವನ್ನು ನಿರೂಪಿಸಲು ಒಂದು ರೇಖೆಯನ್ನು ಆಲೇಖಿಸಬಹುದು.




ಚಿತ್ರ. 3 ಎಪಿ.210 ಆಲ್ಫಕಣಗಳ ಸಂಖ್ಯೆ–ದೂರದ ರೇಖೆ. ಬಿ. ಆಲ್ಫ ಕಣಗಳ ಸಾಪೇಕ್ಷ ಸಾಂದ್ರತೆ ಮತ್ತು ದೂರಕ್ಕೂ ಇರುವ ಸಂಬಂಧವನ್ನು ನಿರೂಪಿಸುವ ರೇಖೆ.

ಇದರ ಹೆಸರು ಸಂಖ್ಯೆ–ದೂರ ರೇಖೆ. ಚಿತ್ರದಲ್ಲಿ A ಇಂಥದೊಂದು ಸಂಖ್ಯೆ–ದೂರ ರೇಖೆ. ಇದರ ನಮ್ಯ ಬಿಂದುವಿನಿಂದ (ಪಾಯಿಂಟ್ ಆಫ್ ಇನ್‌ಫ್ಲೆಕ್ಷನ್) ಒಂದು ಲಂಬವನ್ನು ಎಳೆದಾಗ ಅದು ದೂರದ ಅಕ್ಷದ ಮೇಲೆ ತೋರುವ ಉದ್ದ ಪ್ರಯೋಗಕ್ಕೊಳಪಟ್ಟಿರುವ ಆಲ್ಫ ಕಣಗಳ ಹಾಯುದೂರವನ್ನು (R) ಕೊಡುತ್ತದೆ. ಅರ್ಧ ಭಾಗದಷ್ಟು ಆಲ್ಫ ಕಣಗಳು ಹಾಯುದೂರಕ್ಕಿಂತ ಹೆಚ್ಚು, ಉಳಿದವು ಅದಕ್ಕಿಂತ ಕಮ್ಮಿ ಚಲಿಸಿರುವುದನ್ನು ಸಂಖ್ಯೆ–ದೂರ ರೇಖೆ ಸ್ಪಷ್ಟವಾಗಿ ತೋರಿಸುತ್ತದೆ. ಸಂಖ್ಯೆ–ದೂರ ರೇಖೆಯ ನಮ್ಯ ಬಿಂದುವಿನಲ್ಲಿ ಎಳೆದ ಸ್ಪರ್ಶಕ ದೂರಅಕ್ಷದ ಮೇಲೆ ತೋರುವ ಉದ್ದದ ಹೆಸರು ಬಹಿರ್ವೇಶನ ಹಾಯುದೂರ ($R_n$) (ಎಕ್ಸ್‌ಟ್ರಾಪೊಲೇಟೆಡ್ ರೇಂಜ್). ಆಲ್ಫ ಕಣಗಳು ತಮ್ಮ ಪಥಗಳ ಪ್ರತಿ ಮಿ.ಮೀ.ನಲ್ಲಿ ಉತ್ಪತ್ತಿಮಾಡುವ ಅಯಾನೀಕರಣ ವನ್ನು ಕಣಗಳನ್ನು ಎಣಿಸದೆ ಅಳೆಯಬಹುದು. ಇದು ಸಾಪೇಕ್ಷ ಅಯಾನೀಕರಣ. ಚಿತ್ರದಲ್ಲಿರುವ ರೇಖೆ B ಸಾಪೇಕ್ಷ ಅಯಾನೀಕರಣಕ್ಕೂ ದೂರಕ್ಕೂ ಇರುವ ಸಂಬಂಧವನ್ನು ನಿರೂಪಿಸುತ್ತದೆ.

ಇದರ ನಮ್ಮ ಬಿಂದುವಿನಲ್ಲಿ ಎಳೆದ ಸ್ಪರ್ಶಕ ದೂರ ಅಕ್ಷದ ಮೇಲೆ ಅಯಾನೀಕರಣ ಬಹಿರ್ವೇಶನ ಹಾಯುದೂರವನ್ನು ($R_i$) ಕೊಡುತ್ತದೆ. ಒಂದೇ ಮೂಲಚಲನಶಕ್ತಿಯುಳ್ಳ ಆಲ್ಫ ಕಣಗಳ $R, R_n$ ಮತ್ತು $R_i$ ಗಳಿಗೆ ನಿಕಟ ಸಂಬಂಧಗಳಿವೆ. ಇವುಗಳಲ್ಲಿ ಹಾಯುದೂರವೇ ಮುಖ್ಯ.




ಚಿತ್ರ. 4 ಆಲ್ಫ ಕಣಗಳ ಹಾಯುದೂರ–ಶಕ್ತಿ ರೇಖೆಗಳು (ಚಿತ್ರ)

ಹಾಯುದೂರಕ್ಕೂ ಚಲನಶಕ್ತಿಗೂ ಇರುವ ಸಂಬಂಧವನ್ನು ಸೈದ್ಧಾಂತಿಕವಾಗಿ ಹೆಚ್ಚು ಚಲನಶಕ್ತಿಯ (>5.0 ಮಿ.ಎ.ವೋ) ಆಲ್ಫ ಕಣಗಳಿಗೆ ಹೊಂದಿಕೊಳ್ಳುವಂತೆ ಗೊತ್ತುಪಡಿಸಬಹುದಾದರೂ ಕಮ್ಮಿ ಶಕ್ತಿಯ ಹರವಿನಲ್ಲಿ ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ ಎಲ್ಲ ಶಕ್ತಿಯ ಹಂತದಲ್ಲಿ ಹೊಂದಿಕೊಳ್ಳುವ ಸಂಬಂಧವನ್ನು ಸಿದ್ಧಾಂತ ಮತ್ತು ಪ್ರಯೋಗಗಳ ನೆರವಿನಿಂದ ರೇಖೆಗಳ ರೂಪದಲ್ಲಿ ನಿರೂಪಿಸಬೇಕಾಗುತ್ತದೆ. ಇಂಥವುಗಳ ಹೆಸರು ಹಾಯುದೂರ–ಶಕ್ತಿ ರೇಖೆಗಳು. ಹಾಯುದೂರ ತಿಳಿದಿರುವ ಆಲ್ಫ ಕಣಗಳ ಶಕ್ತಿಯನ್ನು ಇವುಗಳ ಸಹಾಯದಿಂದ ಸುಲಭವಾಗಿ ಪಡೆಯಬಹುದು. ಚಿತ್ರದಲ್ಲಿ ಹಾಯುದೂರಶಕ್ತಿಯ ಎರಡು ರೇಖೆಗಳನ್ನು ನೋಡಬಹುದು.

ಆಲ್ಫ ಶಿಥಿಲಕ್ರಿಯೆ: ಹೆಚ್ಚು ಸಮಸ್ಥಿತಿಗೆ ಬರಲು ಕೆಲವು ಮೂಲವಸ್ತುಗಳು ತಮ್ಮ ಬೀಜಗಳಿಂದ ಆಲ್ಫ ಕಣಗಳನ್ನು ಸಿಡಿಸುವ ಕ್ರಿಯೆಯ ಹೆಸರು (ಆಲ್ಫಡಿಕೆ : ಆಲ್ಫ ಡಿಸಿಂಟಿಗ್ರೇಷನ್). ಈ ಪ್ರವೃತ್ತಿ ಸೀಸಕ್ಕಿಂತ ಹೆಚ್ಚು ಭಾರವಾದ ಮೂಲವಸ್ತುಗಳಲ್ಲಿ ವಿಶೇಷವಾಗಿದೆ. ಯುರೇನಿಯಂ, ಆಕ್ಟೀನಿಯಂ ಮತ್ತು ಥೋರಿಯಂ ವಿಕಿರಣ ಸರಣಿಗಳಲ್ಲಿ ಆಲ್ಫ ಶಿಥಿಲಕ್ರಿಯೆಯನ್ನು ತೋರುವ 30 ಬೀಜಗಳಿವೆ. ಇವುಗಳಲ್ಲದೆ ಕೃತಕವಾಗಿ ಸೃಷ್ಟಿಸಿದ 110 ಬೀಜಗಳೂ ಇಂಥ ಕ್ರಿಯೆಯನ್ನೂ ತೋರುತ್ತವೆ.

ಆಲ್ಫ ಶಿಥಿಲಕ್ರಿಯೆಯನ್ನು ಸಾಂಕೇತಿಕವಾಗಿ

$$_{Z}X^{A} \rightarrow {}_{Z-2}Y^{A-4} + {}_{2}He^{4} + Q$$

ಎಂದು ನಿರೂಪಿಸಬಹುದು. ಇಲ್ಲಿ X ಮೂಲಬೀಜ. A ಮತ್ತು Zಗಳು ಕ್ರಮವಾಗಿ ಅದರ ಜಡಮಾನ ಮತ್ತು ಪರಮಾಣು ಸಂಖ್ಯೆಗಳು. Yಅವಶಿಷ್ಟ (ರೆಸಿಡ್ಯೂ) ಬೀಜ. ಇದರ ಜಡಮಾನ ಮತ್ತು ಪರಮಾಣು ಸಂಖ್ಯೆಗಳು ಕ್ರಮವಾಗಿ 4 ಮತ್ತು 2 ಕಡಿಮೆಯಾಗಿವೆ. ಆಲ್ಫ ಕಣ. ಇದರ ಜಡಮಾನ ಮತ್ತು ಪರಮಾಣು ಸಂಖ್ಯೆಗಳು ಕ್ರಮವಾಗಿ 4 ಮತ್ತು 2.

Q ಶಿಥಿಲಕ್ರಿಯೆಯಲ್ಲಿ ಬಿಡುಗಡೆಯಾದ ಶಕ್ತಿ. $E_r$ ಮತ್ತು $E_á$ ಗಳು ಕ್ರಮವಾಗಿ ಅವಶಿಷ್ಟ ಬೀಜ ಮತ್ತು ಆಲ್ಫ ಕಣಗಳ ಚಲನಶಕ್ತಿಯಾದರೆ

$$E_r+E_á=Q \qquad ...(la)$$

ಇದನ್ನು ಮುಂದೆ E ಎಂಬ ಸಂಕೇತದಿಂದ ಗುರುತಿಸಿದೆ.

$$Q=E=(M - M_r - M_á)c^2 \qquad ...(lb)$$

ಇಲ್ಲಿ c ಬೆಳಕಿನ ವೇಗ, ಚಲನಪರಿಮಾಣದ (ಮೊಮೆಂಟಂ) ನಿತ್ಯತೆಯನ್ನು (ಕನ್ಸರ್ವೇಶನ್) ಗಣನೆಗೆ ತೆಗೆದುಕೊಂಡು

$$E_\alpha = \left[\frac{M_r}{M_r + M_\alpha}\right]E \qquad ...(2)$$

ಎಂದೂ ತೋರಿಸಬಹುದು.

ಆಲ್ಫ ಕಣಗಳ ಶಕ್ತಿರೋಹಿತದ ಸೂಕ್ಷ್ಮರಚನೆ: 1930ರಲ್ಲಿ ರೋಸೆನ್‌ಬ್ಲುಮ್, ಸುಧಾರಿಸಿದ ಉಪಕರಣಗಳಿಂದ ಚಲನಶಕ್ತಿಯನ್ನು ಅಳೆದು, ಒಂದೇ ಮೂಲವಸ್ತುವಿನ ಬೀಜಗಳಿಂದ ಸಿಡಿಯುವ ಆಲ್ಫ ಕಣಗಳು ಬೇರೆ ಬೇರೆ ಶಕ್ತಿ ಗುಂಪುಗಳಲ್ಲಿ ಸೇರಿರಬಹುದಾದ ಸಾಧ್ಯತೆಯನ್ನು ತೋರಿಸಿದ. ಅಲ್ಲಿವರೆಗೆ ಒಂದೇ ಮೂಲದಿಂದ ಸಿಡಿಯುವ ಎಲ್ಲ ಆಲ್ಫ ಕಣಗಳ ಚಲನಶಕ್ತಿ ಒಂದೇ ಆಗಿರುವುದೆಂಬ ನಂಬಿಕೆ ಇತ್ತು.



ಚಿತ್ರ. 5 ThC ಆಲ್ಫ ಶಿಥಿಲಕ್ರಿಯೆಯಿಂದ ThC" ಆಗಿ ಪರಿವರ್ತನೆಗೊಳ್ಳುವ ನಿರೂಪಣೆ



ಚಿತ್ರ. 6 ThC ಶಿಥಿಲಕ್ರಿಯಯಿಂದ ............................

ಮೂಲಬೀಜ ತನ್ನ ನೆಲಮಟ್ಟದಿಂದ (ಗ್ರೌಂಡ್ ಸ್ಟೇಟ್) ಆಲ್ಫ ಕಣವನ್ನು ಸಿಡಿಸಿ, ಅವಶಿಷ್ಟ ಬೀಜದ ಭೂಮಟ್ಟಕ್ಕೆ ಬರುವ ಪ್ರಸಂಗಗಳೇ ಹೆಚ್ಚು. ಕೋಷ್ಟಕ 1ರಿಂದ ಈ ಅಂಶ ಸ್ಪಷ್ಟವಾಗುತ್ತದೆ.

ಕೋಷ್ಟಕ 1

ThC → ThC″ ಶಿಥಿಲದಲ್ಲಿ ಕಾಣುವ ಆಲ್ಫ ಕಣಗಳ ಶಕ್ತಿರೋಹಿತದ ಸೂಕ್ಷ್ಮ ರಚನೆ

| ಗುಂಪು | ಸಾಪೇಕ್ಷ ಪ್ರಮಾಣ (ಅಬಂಡೆನ್ಸ್) | ಆಲ್ಫ ಕಣಗಳ ಶಕ್ತಿ (ಮಿ.ಎ.ವೋ) | ThC″ ನಲ್ಲಿ ಉತ್ತೇಜನ ಶಕ್ತಿ (ಮಿ.ಎ.ವೋ) |
|---|---|---|---|
| $á_1$ | 27.0 | 6.082 | 0.000 |
| $á_0$ | 70.0 | 6.043 | 0.040 |
| $á_2$ | 1.8 | 5.761 | 0.328 |
| $á_4$ | 0.1 | 5.619 | 0.472 |
| $á_3$ | 1.1 | 5.600 | 0.492 |
| $á_5$ | – | 5.584 | – |

ಆಗ ಆಲ್ಫ ಕಣಗಳ ಚಲನಶಕ್ತಿ ಸಮೀಕರಣ (2)ಕ್ಕೆ ಅನುಗುಣವಾಗಿರುತ್ತದೆ. ಒಮ್ಮೊಮ್ಮೆ ಮೂಲ ಬೀಜ ಆಲ್ಫ ಕಣವನ್ನು ಸಿಡಿಸಿ ಅವಶಿಷ್ಟ ಬೀಜ ಯಾವುದಾದರೂ ಒಂದು ಉತ್ತೇಜಿತ ಮಟ್ಟಕ್ಕೆ ಬರುವುದೂ ಉಂಟು. ಇಂಥ ಪ್ರಸಂಗದಲ್ಲಿ ಶಿಥಿಲ ಕ್ರಿಯೆಯ ಶಕ್ತಿಯಲ್ಲಿ ಸ್ವಲ್ಪಭಾಗ ಅವಶಿಷ್ಟ ಬೀಜದ ಉತ್ತೇಜನ ಶಕ್ತಿ; ತತ್ಸಂಬಂಧ ಉತ್ತೇಜಿತ ಸ್ಥಿತಿಯನ್ನನುಸರಿಸಿ ಒಂದು ಅಥವಾ ಹೆಚ್ಚು ಪೋಟಾನುಗಳ ರೂಪದಲ್ಲಿ ಆ ಸ್ವಲ್ಪಭಾಗ ಹೊರಬರುತ್ತದೆ.

ThC ಮೂಲವಸ್ತುವಿನ ಆಲ್ಫ ಕಣಗಳ ಶಕ್ತಿರೋಹಿತದ ಸೂಕ್ಷ್ಮ ರಚನೆಯನ್ನು ಚಿತ್ರದಲ್ಲಿ ತೋರಿಸಿದೆ. ಇಂಥ ಎಷ್ಟೋ ಆಲ್ಫ ಕಣಗಳ ಶಕ್ತಿರೋಹಿತದ ಸೂಕ್ಷ್ಮ ರಚನೆಯನ್ನು ವಿಜ್ಞಾನಿಗಳು ಬೆಳಕಿಗೆ ತಂದಿದ್ದಾರೆ.

ಅಧಿಕ ಹಾಯುದೂರದ ಆಲ್ಫ ಕಣಗಳು: ThC′ ನ ಅರ್ಧಾಯು ($3.0x10^{-7}$ಸೆ.) ಬಲು ಕಡಿಮೆ ಆಗಿರುವುದರಿಂದ ಅದರ ಆಕರದ ಮೇಲೆ ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ರುದರ್‌ಫೋರ್ಡ್ ಮತ್ತು ವುಡ್ ಅವರು ತಮ್ಮ ಪ್ರಯೋಗಗಳಲ್ಲಿ ThC′ ನಿಂದ ಗಾಳಿಯಲ್ಲಿ ಸುಮಾರು 11.6 ಸೆಂ.ಮೀ. ಹಾಯುದೂರವಿರುವ ಆಲ್ಫ ಕಣಗಳು ಸಿಡಿಯುವುದನ್ನು ಪತ್ತೆ ಹಚ್ಚಿದರು. ಸಾಧಾರಣವಾಗಿ ಈ ಮೂಲವಸ್ತುವಿನಿಂದ 8.6 ಸೆಂ.ಮೀ. ಹಾಯುದೂರವಿರುವ ಆಲ್ಫ ಕಣಗಳು ಸಿಡಿಯುತ್ತವೆ. ಇವುಗಳ ಸಂಖ್ಯೆಯೇ ಬಲು ಹೆಚ್ಚು. ಅಧಿಕ ಹಾಯುದೂರದ ಆಲ್ಫ ಕಣಗಳು ಚದುರಿಕೆಯ ಪ್ರಯೋಗಗಳಲ್ಲಿ ಅರ್ಥವಾಗದಂಥ ಗೊಂದಲವನ್ನೇ ಉಂಟುಮಾಡಿದವು. ಇದರ ಕಾರಣ ಬಲುಕಾಲದವರೆಗೆ ಗೊತ್ತಾಗಲೇ ಇಲ್ಲ.



ಚಿತ್ರ. 7 RaC ಅಧಿಕಹಾಯುದೂರವುಳ್ಳ ಆಲ್ಫ ಕಣಗಳನ್ನು ತೋರಿಸುವ ಮೇಘಮಂದಿರದ ಛಾಯಾಫಲಕ

ThC ಬೀಜಗಳಲ್ಲಿ ಮೂರನೆ ಎರಡು ಭಾಗ ಬೀಟ ಶಿಥಿಲಕ್ರಿಯೆಯನ್ನೂ ಉಳಿದವು ಆಲ್ಫ ಶಿಥಿಲಕ್ರಿಯೆಯನ್ನೂ ತೋರುತ್ತವೆ. ಬೀಟ ಶಿಥಿಲಕ್ರಿಯೆಯಿಂದ ThCಬೀಜಗಳಲ್ಲಿ ಕೆಲವು ThC′ ಉತ್ತೇಜಿತ ಮಟ್ಟಗಳಿಗೆ ಬರುತ್ತವೆ. ಇಲ್ಲಿಂದ ThC′ ಬೀಜಗಳು ಗ್ಯಾಮಫೋಟಾನುಗಳನ್ನು ಸಿಡಿಸಿ ನೆಲಮಟ್ಟಕ್ಕೆ ಬಂದು ಅನಂತರ ಆಲ್ಫ ಕಣಗಳನ್ನು ಸಿಡಿಸುವುದು ಸಾಮಾನ್ಯ. ಆದರೆ ಒಂದೊಂದು ವೇಳೆ ಈ ಬೀಜಗಳು ತಮ್ಮ ಉತ್ತೇಜಿತ ಮಟ್ಟದಿಂದಲೇ ನೇರವಾಗಿ

ಆಲ್ಫ ಕಣವಾಗಿ ಸಿಡಿಸಬಹುದು. ಉತ್ತೇಜನಶಕ್ತಿಯ ಪಾಲನ್ನೂ ಪಡೆದುಕೊಂಡು ಬರುವ ಈ ಕಣಗಳ ಶಕ್ತಿ ಸಾಮಾನ್ಯ ಕಣಗಳ ಶಕ್ತಿಗಿಂತ ಬಲು ಹೆಚ್ಚು. ಆದ್ದರಿಂದ ಅವುಗಳ ಹಾಯುದೂರವೂ ಬಲು ಹೆಚ್ಚು.

ಅಧಿಕ ಹಾಯುದೂರದ ಆಲ್ಫ ಕಣಗಳ ಸಂಖ್ಯೆ ಪ್ರಮುಖ ಗುಂಪಿನ ಆಲ್ಫ ಕಣಗಳ ಸಂಖ್ಯೆಗಿಂತ ಬಲು ಕಡಿಮೆ. ಕೋಷ್ಟಕ 2ರಿಂದ ಈ ಅಂಶ ಸ್ಪಷ್ಟವಾಗುತ್ತದೆ.

ಕೋಷ್ಟಕ 2

$ThC' \rightarrow ThD$ ಶಿಥಿಲದಲ್ಲಿ ಕಾಣುವ ಅಧಿಕ ಹಾಯುದೂರದ ಆಲ್ಫ ಕಣಗಳು

| ಗುಂಪು | ಸಾಪೇಕ್ಷ ಪ್ರಮಾಣ | ಆಲ್ಫ ಕಣಗಳ ಶಕ್ತಿ (ಮಿ.ಎ.ವೋ) | ThC′ ನಲ್ಲಿ ಉತ್ತೇಜನ ಶಕ್ತಿ (ಮಿ.ಎ.ವೋ) |
|---|---|---|---|
| á$_0$ | $10^6$ | 8.776 | 0.000 |
| á$_2$ | 35 | 9.489 | 0.725 |
| á$_3$ | 20 | 10.417 | 1.671 |
| á$_1$ | 170 | 10.536 | 1.793 |

ಚಿತ್ರದಲ್ಲಿ ThC′ ನ ಅಧಿಕ ಹಾಯುದೂರವುಳ್ಳ ಆಲ್ಫ ಕಣಗಳ ಉತ್ಪತ್ತಿಯನ್ನು ನಿರೂಪಿಸಿದೆ. ಚಿತ್ರ ದಲ್ಲಿ ಹೆಚ್ಚು ಸಂಖ್ಯೆಯ ಪ್ರಮುಖ ಗುಂಪೊಂದರ ಆಲ್ಫ ಕಣಗಳ ಹಿನ್ನೆಲೆಯಲ್ಲಿ ಎರಡೋ ಮೂರೋ ಅಧಿಕ ಹಾಯುದೂರದ ಕಣಗಳ ಪಥಗಳನ್ನು ನೋಡಬಹುದು.

ಗೈಗರ್–ನಟಲ್ ನಿಯಮ: ಕೆಲವು ಅಪೂರ್ವ ಸಂದರ್ಭಗಳನ್ನು ಬಿಟ್ಟರೆ ಸ್ವಾಭಾವಿಕ ಆಲ್ಫ ಶಿಥಿಲಕ್ರಿಯೆಯಲ್ಲಿ ಬಿಡುಗಡೆಯಾಗುವ ಶಕ್ತಿ 4.06 ಮಿ.ಎ.ವೋ. ನಿಂದ 8.95 ಮಿ.ಎ.ವೋ. ನ ವರೆಗಿರುತ್ತದೆ. ಈ ಹರವಿನಲ್ಲಿ ಬೀಜಗಳ ಅರ್ಧಾಯು $1.39x10^{10}$ ವರ್ಷಗಳಿಂದ $3.0x10^{-7}$ ಸೆಕೆಂಡಿನ ವರೆಗೆ ವ್ಯತ್ಯಾಸವಾಗುತ್ತದೆ. ಹೆಚ್ಚು ಅರ್ಧಾಯುವಿರುವ ಬೀಜಗಳು ಕಡಿಮೆ ಶಕ್ತಿಯ ಆಲ್ಫ ಕಣಗಳನ್ನೂ ಕಡಿಮೆ ಅರ್ಧಾಯುವಿರುವ ಬೀಜಗಳು ಹೆಚ್ಚು ಶಕ್ತಿಯ ಆಲ್ಫ ಕಣಗಳನ್ನೂ ಸಿಡಿಸುತ್ತವೆ. ಆಲ್ಫ ಕಣಗಳ ಹಾಯುದೂರಕ್ಕೂ ಚಲನಶಕ್ತಿಗೂ ಇರುವ ಸಂಬಂಧವನ್ನು ಗೈಗರ್ ತನ್ನ ಪ್ರಯೋಗಫಲಗಳಿಂದ

$$R = (\text{ಸ್ಥಿರಸಂಖ್ಯೆ})\, E_{\alpha}^{\frac{2}{3}}$$

ಎಂದು ತೋರಿಸಿದ. ಶಿಥಿಲಕ್ರಿಯೆಯ ಸ್ಥಿರಸಂಖ್ಯೆ ಮತ್ತು ëತತ್ಸಂಬಂಧ ಅರ್ಧಾಯು T ಎಂದು ಭಾವಿಸಿದರೆ

$$\lambda = \frac{0.693}{T} \qquad ...(4)$$

ಎಂದು ತೋರಿಸಬಹುದು. ಈ ಸಮೀಕರಣಗಳು R ಮತ್ತು ë ಗಳಿಗಿರುವ ಸಂಬಂಧವನ್ನು ಪರೋಕ್ಷವಾಗಿ ತೋರಿಸುತ್ತವೆ. ಗೈಗರ್ ಮತ್ತು ನಟಲ್ಲರು ದತ್ತವಾಗಿದ್ದ ಎಲ್ಲ ಪ್ರಯೋಗಗಳ ಮಾಹಿತಿಯನ್ನು ಕೂಲಂಕುಷವಾಗಿ ಪೃಥಕ್ಕರಿಸಿ ಈ ಸಂಬಂಧವನ್ನು ಒಂದು ನಿಯಮರೂಪದಲ್ಲಿ ಮಂಡಿಸಿದರು: ಸ್ವಾಭಾವಿಕ ಆಲ್ಫ ಶಿಥಿಲಕ್ರಿಯೆಯುಳ್ಳ ಯಾವುದೇ ಒಂದು ಬೀಜದ ಸರಣಿಯ ಶಿಥಿಲಕ್ರಿಯೆಯ ಸ್ಥಿರಸಂಖ್ಯೆಯ ( ಸೆ.$^{-1}$ ನಲ್ಲಿ) ಲಾಗರಿತಮನ್ನು ತತ್ಸಂಬಂಧ ಹಾಯುದೂರದ (15$^0$ ಸೆಂ. ಉಷ್ಣತೆ ಮತ್ತು 760. ಮಿ.ಮೀ. ಸಂಮರ್ದದ ಗಾಳಿಯ ಸೆಂ.ಮೀ.ನಲ್ಲಿ) ಲಾಗರಿತಮ್ ಎದುರು ಆಲೇಖಿಸಿದರೆ ಆ ಬಂಧಗಳೆಲ್ಲ ಒಂದು ಸರಳರೇಖೆಯ ಮೇಲೆ ಬೀಳುತ್ತವೆ. ಗೈಗರ್–ನಟಲ್ ನಿಯಮದ ಸಮೀಕರಣ ರೂಪ ಹೀಗಿದೆ:

$$\log \lambda = A + B \log R \qquad ...(5)$$

ಸ್ಥಿರಸಂಖ್ಯೆ A ಬೇರೆ ಬೇರೆ ಸರಣಿಗಳಿಗೆ ಬೇರೆ ಬೇರೆ ಬೆಲೆಯನ್ನು ಹೊಂದಿರುತ್ತದೆ. ಸ್ಥಿರಸಂಖ್ಯೆ B ಮಾತ್ರ ಸರಿಸುಮಾರಾಗಿ ಎಲ್ಲ ಸರಣಿಗಳಿಗೂ ಒಂದೇ ಬೆಲೆಯನ್ನು ಹೊಂದಿರುತ್ತದೆ. ಚಿತ್ರದಲ್ಲಿ ಸಮೀಕರಣ 5ರ ನಿರೂಪಣೆಯನ್ನು ನೋಡಬಹುದು.

ಶಿಥಿಲಕ್ರಿಯೆಯ ಸಿದ್ಧಾಂತ: ಶಿಥಿಲಶಕ್ತಿಯ ಪ್ರಮಾಣದಲ್ಲಿ (ರೇಷಿಯೊ) 2ರಷ್ಟು ವ್ಯತ್ಯಾಸವಾದರೆ ತತ್ಸಂಬಂಧ ಅರ್ಧಾಯು ಮತ್ತು ಅದನ್ನನುಸರಿಸಿದ ಶಿಥಿಲಕ್ರಿಯೆಯ ಸ್ಥಿರಸಂಖ್ಯೆ ಪ್ರಮಾಣದಲ್ಲಿ $10^{24}$ ರಷ್ಟು ವ್ಯತ್ಯಾಸವಾಗುತ್ತದೆ. ಕೆಲವು ಆಲ್ಫ ಶಿಥಿಲಕ್ರಿಯೆಗಳಿಗೆ ಸಂಬಂಧಪಟ್ಟ ಹಾಯುದೂರ, ಅರ್ಧಾಯು, ಶಿಥಿಲಕ್ರಿಯೆಯ ಶಕ್ತಿ ಮತ್ತು ಸ್ಥಿರಸಂಖ್ಯೆಗಳನ್ನು ಕೋಷ್ಟಕ 3ರಲ್ಲಿ ಕೊಟ್ಟಿದೆ.

ಈ ಅಂಕಗಳು ಗೈಗರ್–ನಟಲ್ ನಿಯಮದಲ್ಲಿ ಅಡಕವಾಗಿದೆ. ಸಿದ್ಧಾಂತ ಯಾವುದೇ ಆಗಲಿ ಅದು ಆಲ್ಫ ಶಿಥಿಲಕ್ರಿಯೆಯ ಬಗ್ಗೆ ಕೊಡುವ ವಿವರಣೆಯಿಂದ ಒಂದಲ್ಲ ಒಂದು ರೀತಿಯಲ್ಲಿ ಗೈಗರ್–ನಟಲ್ ನಿಯಮವನ್ನು ಮರುಸೃಷ್ಟಿಸಲು ಸಾಧ್ಯವಾಗಬೇಕು. ಇಲ್ಲದಿದ್ದರೆ ಆ ಸಿದ್ಧಾಂತ ಭದ್ರವಾಗಿ ನಿಲ್ಲಲಾರದು.



ಚಿತ್ರ. 8 ಗೈಗರ್–ನಟಲ್ ನಿಯಮ

ಆಲ್ಫ ಕಣ ಮತ್ತು ಅವಶಿಷ್ಟ ಬೀಜ ಒಂದಕ್ಕೊಂದು ಬಲು ದೂರದಲ್ಲಿದ್ದಾಗ ಅವುಗಳ ಒಟ್ಟು ಶಕ್ತಿಯ ಬಲುಭಾಗ ಆಲ್ಫ ಕಣದ ಚಲನಶಕ್ತಿಯ ರೂಪದಲ್ಲಿರುತ್ತದೆ. ಅವು

ಕೋಷ್ಟಕ 3

| ಬೀಜ | ಹಾಯುದೂರ 150$^0$ ಸೆಂ.ಗ್ರೇ. ಉಷ್ಣತೆ, 760 ಮಿ.ಮೀ. ಸಂಮರ್ದ, ಇರುವ ಗಾಳಿಯ ಸೆಂಮೀ. | ಶಿಥಿಲಕ್ರಿಯೆ ಶಕ್ತಿ ಮಿ.ಎ.ವೋ | ಅರ್ಧಾಯು | ಶಿಥಿಲಕ್ರಿಯೆ ಸ್ಥಿರಸಂಖ್ಯೆ ಸೆ.$^{-1}$ |
|---|---|---|---|---|
| $Th^{232}$ | 2.49 | 4.06 | $1.39 \times 10^{10}$ ವ. | $1.58 \times 10^{-18}$ |
| $Ra^{226}$ (Ra) | 3.30 | 4.86 | $1.62 \times 10^{3}$ ವ. | $1.36 \times 10^{-11}$ |
| $Th^{228}$ (RdTh) | 3.98 | 5.52 | 1.9 ವ. | $1.16 \times 10^{-8}$ |
| $Em^{222}$ (Rn) | 4.05 | 5.59 | 3.83 ದಿ. | $2.10 \times 10^{-6}$ |
| $P_0^{218}$ (Ra A) | 4.66 | 6.11 | 3.05 ಮಿ. | $3.78 \times 10^{-3}$ |
| $P_0^{216}$ (ThA) | 5.64 | 6.90 | 0.16 ಸೆ. | 4.33 |
| $P_0^{214}$ (Ra C′) | 6.91 | 7.83 | $1.64 \times 10^{-4}$ ಸೆ. | $4.23 \times 10^{-3}$ |
| $P_0^{212}$ (Th C′) | 8.57 | 8.95 | $3.0 \times 10^{-7}$ ಸೆ. | $2.31 \times 10^{-6}$ |

ಹತ್ತಿರ ಹತ್ತಿರ ಬಂದರೆ ಚಲನಶಕ್ತಿಯ ಸ್ವಲ್ಪಭಾಗ ಪ್ರಚ್ಛನ್ನಶಕ್ತಿಯ (ಪೊಟೆನ್ಷಿಯಲ್ ಎನರ್ಜಿ) ರೂಪವನ್ನು ತಾಳುತ್ತದೆ. ಇದು ಅವುಗಳಿಗಿರುವ ಧನವಿದ್ಯುತ್ ಅಂಶಗಳಿಂದ ಹುಟ್ಟುತ್ತದೆ. ಇದನ್ನು ಕೊಲಾಂಬ್ ನಿಯಮದಿಂದ ನಿರ್ಧರಿಸಬಹುದು:

$$V = \frac{2(z-2)e^2}{r}$$

ಇಲ್ಲಿ V ಪ್ರಚ್ಛನ್ನಶಕ್ತಿ, r ಅವಶಿಷ್ಟ ಬೀಜ ಮತ್ತು ಆಲ್ಫ ಕಣ ಇವುಗಳ ನಡುವಿನ ದೂರ ಮತ್ತು e ವಿದ್ಯುತ್ ಘಟಕ.

$U^{238}$ ಬೀಜಗಳು ಸುಮಾರು 4 ಮಿ.ಎ.ವೋ. ಚಲನಶಕ್ತಿಯ ಆಲ್ಫ ಕಣಗಳನ್ನು ಸಿಡಿಸುತ್ತವೆ. ಆದರೆ 9 ಮಿ.ಎ.ವೋ ಚಲನಶಕ್ತಿಯ ThC′ ಆಲ್ಫ ಕಣಗಳು ಈ ಬೀಜವನ್ನು




**ಚಿತ್ರ. 9.** ಪ್ರಚ್ಛನ್ನಶಕ್ತಿ *v* ಮತ್ತು *r* ದೂರ ಇವುಗಳಿಗಿರುವ ಸಂಬಂಧವನ್ನು ನಿರೂಪಿಸುವ ಒಂದು ಕಾಲ್ಪನಿಕ ನಕಾಶೆ

ಭೇದಿಸಲಾರವು. ರುದರ್ಫೋರ್ಡನ ಚದರಿಕೆಯ ಪ್ರಯೋಗಗಳು ಅವಶಿಷ್ಟಬೀಜ ಮತ್ತು ಆಲ್ಫ ಕಣಗಳ ನಡುವೆ ಇರುವ ದೂರ $3x10^{-12}$ ಸೆಂ.ಮೀ. ನಷ್ಟಿರುವಾಗ ಕೂಡ ಕೊಲಾಂಬ್ ನಿಯಮ ಪರಿಪಾಲಿತವಾಗುವುದೆಂದು ತೋರಿಸಿವೆ. ಈ ನಿಯಮ ಇನ್ನೂ ಕಡಿಮೆ ದೂರಕ್ಕೂ ಅನ್ವಯಿಸುತ್ತದೆಂದು ಊಹಿಸಿದರೆ ಚಿತ್ರದಲ್ಲಿ $r=r_0$ ಆದಾಗ ತಡೆಯ ಎತ್ತರ 20–30 ಮಿ.ಎ.ವೋ. ನಷ್ಟಾಗುತ್ತದೆಂದು ತೋರಿಸಬಹುದು. ಇಷ್ಟು ಎತ್ತರದ ತಡೆಯನ್ನು ಹಾರಿ ಬರಬೇಕಾದರೆ ಅಷ್ಟು ಚಲನಶಕ್ತಿಯ ಕಣಗಳಿಗೆ ಮಾತ್ರ ಸಾಧ್ಯ. 4 ಮಿ.ಎ.ವೋ. ನಷ್ಟು ಚಲನಶಕ್ತಿ ಇರುವ ಕಣಗಳು ಹಾರಿಬರುವುದು ಸಾಧ್ಯವಿಲ್ಲ.

ಆಲ್ಫ ಕಣ ಅವಶಿಷ್ಟಬೀಜದ ಒಳಗಿದ್ದು ಹೊರಗೆ ಬರುವುದರಿಂದ ಅವುಗಳ ಮಧ್ಯೆ ವರ್ತಿಸುವ ಪ್ರಚ್ಛನ್ನಶಕ್ತಿ ಒಂದು ಕನಿಷ್ಠದೂರ ಕಳೆದಮೇಲೆ ಆಕರ್ಷಣೆಯನ್ನು ತೋರಬೇಕು. ಇದು ಚಿತ್ರದಲ್ಲಿ 9ರಲ್ಲಿ $r < r_0$ ಹರವಿನಲ್ಲಿ ನಿರೂಪಿತವಾಗಿದೆ. ಅವಶಿಷ್ಟಬೀಜ ಆಲ್ಫ ಕಣಕ್ಕೆ ಒಂದು ವರ್ತುಲಾಕಾರದ ಪ್ರಚ್ಛನ್ನ ಬಾವಿಯಂತೆ (ಪೊಟೆನ್ಷಿಯಲ್ ವೆಲ್) ಕಾಣುತ್ತವೆ. ಈ ಬಾವಿಯಲ್ಲಿದ್ದಾಗ ಆಲ್ಫ ಕಣದ ಚಲನಶಕ್ತಿ $E+V_0$. ಇಲ್ಲಿ $V_0$ ಪ್ರಚ್ಛನ್ನ ಬಾವಿಯ ಆಳ. $r = r'$ ಆದಾಗ ಅದರ ಚಲನಶಕ್ತಿ ಸೊನ್ನೆ. ಬಲು ದೂರಕ್ಕೆ ಹೋದಮೇಲೆ ಕಂಡ ಪ್ರಚ್ಛನ್ನಶಕ್ತಿ $2(Z-2)\ c^2/r'$ ಎಲ್ಲ ಚಲನಶಕ್ತಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. $r< r< r'$ ಹರವಿನಲ್ಲಿ ಆಲ್ಫ ಕಣದ ಚಲನಶಕ್ತಿ ಋಣ ಮೌಲ್ಯವನ್ನು ಹೊಂದುತ್ತದೆ. ಆದ್ದರಿಂದ ಈ ಹರವಿಗೆ ಯಾವುದೇ ಕಡೆಯಿಂದಲೂ ಆಲ್ಫ ಕಣ ಬರುವುದು ಚಿರಸಮ್ಮತ (ಕ್ಲಾಸಿಕಲ್) ಭೌತಶಾಸ್ತ್ರದ ನಿಯಮಗಳ ಪ್ರಕಾರ ಸಾಧ್ಯವಿಲ್ಲ. ಆಲ್ಫ ಶಿಥಿಲಕ್ರಿಯೆಯನ್ನು ವಿವರಿಸಲು ಚಿರಸಮ್ಮತ ಭೌತಶಾಸ್ತ್ರ ವಿಫಲಗೊಳ್ಳುತ್ತದೆ.

ಬೀಜದಿಂದ ಸಿಡಿಯಲು ಆಲ್ಫ ಕಣಗಳು ಕೊಲಾಂಬ್ ತಡೆಯನ್ನು ತೂರಿಬರಬೇಕು. ಇಂಥ ತೂರಿಕೆ ಶಕಲಬಲವಿಜ್ಞಾನದ (ಕ್ವಾಂಟಂ ಮೆಕಾನಿಕ್ಸ್) ನಿಯಮಗಳ ಪ್ರಕಾರ ಸಾಧ್ಯವೆಂಬುದನ್ನು 1928ರಲ್ಲಿ ಗ್ಯಾಮೊ ಮತ್ತು ಸ್ವತಂತ್ರವಾಗಿ ಗರ್ನಿ ಮತ್ತು ಕಾಂಡನ್ ಅವರು ತೋರಿಸಿದರು. ಈ ಕೆಲಸ ಶಕಲಬಲ ವಿಜ್ಞಾನ ಸಾಧಿಸಿದ ಮೊದಲ ಅತಿಮುಖ್ಯ ವಿಕ್ರಮಗಳಲ್ಲೊಂದು.

ಆಲ್ಫ ಕಣ ಹೊರಬರುವುದಕ್ಕೆ ಮುಂಚೆ ಅವಶಿಷ್ಟಬೀಜದಲ್ಲಿ ಅದು ಸ್ವತಂತ್ರವಾದ ಅಸ್ತಿತ್ವವನ್ನು ಸ್ವಲ್ಪಕಾಲವಾದರೂ ಪಡೆದಿತ್ತೆಂದು ಊಹಿಸಿಕೊಳ್ಳೋಣ. ಆಗ ಅದು ಪ್ರಚ್ಛನ್ನ ಬಾವಿಯಲ್ಲಿ ಅತ್ತಿಂದಿತ್ತ ಓಡಾಡುತ್ತ ತಡೆಯಗೋಡೆಗೆ ಸತತವಾಗಿ ಡಿಕ್ಕಿ ಹೊಡೆಯುತ್ತಿರುತ್ತದೆಂದು ಸುಲಭವಾಗಿ ಗ್ರಹಿಸಬಹುದು. ಸೆಕೆಂಡಿಗೆ $\sim10^9$ ಸೆಂ.ಮೀ. ವೇಗದಲ್ಲಿ ಚಲಿಸುವ ಆಲ್ಫ ಕಣ $\sim10^{-13}$ ಸೆಂ.ಮೀ. ತ್ರಿಜ್ಯವುಳ್ಳ ಪ್ರಚ್ಛನ್ನ ಬಾವಿಯ ತಡೆಯಗೋಡೆಗೆ ಪ್ರತಿ ಸೆಕೆಂಡಿನಲ್ಲಿ $\sim10^{21}$ ಸಲ ಡಿಕ್ಕಿ ಹೊಡೆಯುತ್ತದೆ.

ಆಲ್ಫ ಕಣದ ಚಲನೆಯನ್ನು ಶಕಲಬಲವಿಜ್ಞಾನದಲ್ಲಿ ಒಂದು ತರಂಗಉತ್ಪನ್ನದಿಂದ (ವೇವ್ ಫಂಕ್ಷನ್) ವಿವರಿಸಲಾಗುತ್ತದೆ. ಈ ತರಂಗಉತ್ಪನ್ನ ಅವಶಿಷ್ಟಬೀಜದ ಒಳಗೆ ಸ್ಥಿರ ತರಂಗದಂತೆಯೂ $r_0<r<r'$ ಹರವಿನಲ್ಲಿ ಬೇಗ ಕುಂದುವ ಘಾತಿಕ ಉತ್ಪನ್ನದಂತೆಯೂ (ಡಿಕೇಯಿಂಗ್ ಎಕ್ಸ್‌ಪೊನೆನ್ಷಿಯಲ್ ಫಂಕ್ಷನ್) ಮತ್ತು ಅಲ್ಲಿಂದಾಚೆಗೆ ದೂರದಲ್ಲಿ ಹೊರಗೆ ಹೋಗುವ ತರಂಗದಂತೆಯೂ ವರ್ತಿಸಬೇಕೆಂದು ಸ್ಥೂಲವಾಗಿ ಯೋಚಿಸಬಹುದು. ಯಾವ ಹರವಿನಲ್ಲೇ ಆಗಲಿ ಆಲ್ಫ ಕಣದ ಸಾಂದ್ರತೆಯನ್ನು $|\emptyset|^2$ ನಿರ್ಧರಿಸುತ್ತದೆ. $\emptyset$ ಆಲ್ಫ ಕಣದ ಚಲನೆಯನ್ನು ವಿವರಿಸುವ ತರಂಗಉತ್ಪನ್ನ. ತಡೆಯ ಗಾತ್ರ ಹೆಚ್ಚಾದರೆ $|\emptyset|^2$ನ ಬೆಲೆ ಬೀಜದ ಹೊರಗೆ ಕಡಿಮೆಯಾಗುವುದು. ಇಷ್ಟರಲ್ಲೆ ಗೈಗರ್–ನಟಲ್ ನಿಯಮದ ಯಾಥಾರ್ಥ್ಯವನ್ನು ಮನಗಾಣಬಹುದು. ಚಿತ್ರದಲ್ಲಿ ಈ ಅಂಶಗಳನ್ನೆಲ್ಲ ನೋಡಬಹುದು.

ಬೀಜದಲ್ಲಿ ಅತ್ತಿಂದಿತ್ತ ಚಲಿಸುವ ಆಲ್ಫ ಕಣ ಪ್ರತಿ ಸೆಕೆಂಡಿಗೆ nಸಲ ತಡೆಗೆ ಡಿಕ್ಕಿ ಹೊಡೆಯುತ್ತದೆಂದು ತಿಳಿಯೋಣ. ಪ್ರತಿಸಲ ಡಿಕ್ಕಿ ಹೊಡೆದಾಗಲೊ ಅದು ಹೊರಗೆ ಬರುವ ಸಂಭಾವ್ಯತೆ (ಪ್ರಾಬೆಬಿಲಿಟಿ) p ಆಗಿರಲಿ. ಆಗ

$$\lambda=nP \qquad ...(6)$$

ಪ್ರಚ್ಛನ್ನ ಬಾವಿಯಲ್ಲಿ ಆಲ್ಫ ಕಣ ಚಲಿಸುವ ವೇಗ vಆದರೆ

$$n = \frac{v}{2r_0} \qquad ...(7)$$

ಪ್ರಚ್ಛನ್ನ ಬಾವಿಯಲ್ಲಿ ಆಲ್ಫ ಕಣದ ಡಿಬ್ರಾಯಿತರಂಗದೂರ $2r_0$ನಷ್ಟಿದೆ ಎಂದು ತಿಳಿದರೆ

$$n = \frac{h}{4\mu r_0^2} \qquad ...(8)$$

ಎಂದೂ ಬರೆಯಬಹುದು. ಇಲ್ಲಿ h ಪ್ಲಾಂಕನ ಸ್ಥಿರಸಂಖ್ಯೆ.

$\mu = M_r M_\alpha /(M_r + M_\alpha)$ ವನ್ನು ಪಡೆಯಲು ಶ್ರೋಡಿಂಜರನ ಸಮೀಕರಣ

$$\frac{h^2}{8\pi^2\mu}\frac{d^2\Psi}{dr^2} + (E - v)\Psi = 0 \qquad ...(9)$$

ಇದನ್ನು ಬಿಡಿಸಿ ಅದರ ಸೂಕ್ತ ಬಿಡಿಸಿಕೆಗಳನ್ನು (ಸೊಲ್ಯೂಷನ್) ಉಪಯೋಗಿಸಬೇಕು. ಇಷ್ಟು ಮಾಡಲು ಸಮೀಕರಣವನ್ನು $r \ge r_0$ ಹರವಿನಲ್ಲಿ ಪರಿಶೀಲಿಸಿದರೆ ಸಾಕು. v ಯನ್ನು $r \le r_0$ ಹರವಿನಲ್ಲಿ ಗೊತ್ತು ಮಾಡುವುದು ಸುಲಭವಲ್ಲ. ಇದರಿಂದ

$$P = \exp\left[-8\pi^2 e^2 (Z-2)/hv + 16\pi e\left(\sqrt{\mu/h}\right)\sqrt{(Z-2)r_0}\right] \qquad ...(10)$$

ಎಂದು ತಿಳಿದುಬರುವುದು.

ಆಗ

$$\log\lambda = \log\frac{h}{4\mu r_0^2} - \frac{8\pi^2 e^2(Z-2)}{hv} + \frac{16\pi e}{h}\sqrt{\mu(Z-2)r_0} \qquad ...(11)$$

ಎಂದಾಗುತ್ತದೆ. ಈ ಸಮೀಕರಣವನ್ನು ಸಂಕ್ಷಿಪ್ತವಾಗಿ

$$\log\lambda = a - \frac{b(Z-2)}{v} \qquad ...(12)$$

ಎಂದು ಬರೆಯಬಹುದು. ಇಲ್ಲಿ a ಮತ್ತು b ಗಳು ಸ್ಥಿರಸಂಖ್ಯೆಗಳು.

ಸಮೀಕರಣ (12) ಗೈಗರ್–ನಟಲ್ ನಿಯಮದ ಸೈದ್ಧಾಂತಿಕ ರೂಪ. ಒಂದೇ ಪರಮಾಣು ಸಂಖ್ಯೆಯ ಬೀಜಗಳ $\log\lambda$ ವನ್ನು I/v ಎದುರಿಗೆ ಆಲೇಖಿಸಿದರೆ ಸಂಬಂಧಿಸಿದ ಎಲ್ಲ ಬಿಂದುಗಳೂ ಒಂದು ಸರಳರೇಖೆಯ ಮೇಲೆ ಬೀಳುತ್ತವೆ. ಇದನ್ನು ಚಿತ್ರದಲ್ಲಿ ನೋಡಬಹುದು.



**ಚಿತ್ರ. 10.** ಒಂದೇ – ಬೆಲೆಯ ಬೀಜ (ಸೆಂ.ಮೀ/ಸೆ. ಮಾನದಲ್ಲಿ) ಗಳಿಗಿರುವ ಸಂಬಂಧವನ್ನು ಸೂಚಿಸುವ ಚಿತ್ರ

ಸಮ–ಸಮ (ಈವನ್–ಈವನ್) ಬೀಜಗಳ ಆಲ್ಫ ಶಿಥಿಲಕ್ರಿಯೆಯನ್ನು ಮಾತ್ರ ಸಮೀಕರಣ ಸಮರ್ಪಕವಾಗಿ ವಿವರಿಸುತ್ತದೆ. ಎಲ್ಲ ಬಗೆಯ ಬೀಜಗಳ ಆಲ್ಫ ಶಿಥಿಲಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಇದರಿಂದ ಆಗುವುದಿಲ್ಲ. ಸಮ–ಸಮವಲ್ಲದ ಬೀಜಗಳು ಈ ಸಿದ್ಧಾಂತ ಪ್ರತಿಪಾದಿಸುವುದಕ್ಕಿಂತ ಹೆಚ್ಚು ಅರ್ಧಾಯು ಹೊಂದಿದೆ. ಇದಕ್ಕೆ ಕಾರಣ ಸಿದ್ಧಾಂತದ ಬೆಳೆವಣಿಗೆಯಲ್ಲಿರುವ ದೋಷಗಳು: ಇಲ್ಲಿ ಊಹಿಸಿಕೊಂಡಿರುವಂತೆ ಆಲ್ಫ ಕಣ ಸಿಡಿಯುವುದಕ್ಕೆ ಮುಂಚೆ ಅವಶಿಷ್ಟ ಬೀಜದಲ್ಲಿ ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುತ್ತದೆಂದು ಹೇಳಲು ಆಧಾರಗಳಿಲ್ಲ ಮತ್ತು ಬೀಜ ರಚನೆಯ ಪ್ರಭಾವವನ್ನು ಕುರಿತಾದ ಯಾವ ಸಂಗತಿಯನ್ನೂ ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

ಆದ್ದರಿಂದ ಇದು ಸರ್ವವ್ಯಾಪಿಯಾದ ಸಿದ್ಧಾಂತವಾದೀತೇ ಎಂದು ನಿರೀಕ್ಷಿಸುವುದು ಸರಿಯಲ್ಲ. ಇದರ ಮೇಲೆ ಸುಧಾರಣೆಗಳು ಮತ್ತು ಬೇರೆ ತೆರನಾದ ಇನ್ನೂ ಹೆಚ್ಚು ಸಮರ್ಪಕವಾದ ಬೆಳವಣಿಗೆಗಳು ಇತ್ತೀಚೆಗೆ ನಡೆದಿವೆ. (ಎಚ್.ಎ.ಎಚ್.)

**ಆಲ್ಫಾಲ್ಫ:** ಲೆಗ್ಯೂಮಿನೋಸಿ ಕುಟುಂಬದ ಪಾಪಿಲಿಯೊನೇಸಿ ವಿಭಾಗಕ್ಕೆ ಸೇರಿದ ಗಿಡ. ಲೂಸರ್ನ್ ಎಂದೂ ಕರೆಯಲಾಗುವ ಈ ಗಿಡಕ್ಕೆ ಕನ್ನಡದಲ್ಲಿ ಕುದುರೆ ಮಸಾಲೆಸೊಪ್ಪು ಎಂದು ಹೆಸರಿದೆ. ಇದನ್ನು ದನಗಳ ಮತ್ತು ಕುದುರೆಗಳ ಮೇವಿಗಾಗಿ ಹುಲ್ಲುಗಾವಲುಗಳಲ್ಲಿ ಬೆಳೆಸುತ್ತಾರೆ. ಮಣ್ಣಿನ ಸಾರವನ್ನು ಹೆಚ್ಚಿಸುವುದಕ್ಕಾಗಿಯೂ ಬೆಳೆಸುವುದಿದೆ.

ಸಾಮಾನ್ಯವಾಗಿ 1'–4' ಎತ್ತರಕ್ಕೆ ಬೆಳೆಯುವ ಈ ಗಿಡದಲ್ಲಿ ನೆಲದಲ್ಲೇ ಭಾಗಶಃ ಹುದುಗಿರುವ ಮುಖ್ಯಕಾಂಡವಿದೆ. ಈ ಕಾಂಡದಿಂದ ಸುಮಾರು 20–30 ಸಣ್ಣ ರೆಂಬೆಗಳು ಮೇಲ್ಮುಖವಾಗಿ ಬೆಳೆಯುತ್ತದೆ. ಪ್ರತಿಯೊಂದು ರೆಂಬೆಯಲ್ಲಿಯೂ ಪರ್ಯಾಯ ಜೋಡಣೆ ಹೊಂದಿರುವ ಸಂಯುಕ್ತ ಎಲೆಗಳಿವೆ. ಒಂದೊಂದು ಸಂಯುಕ್ತ ಎಲೆಯಲ್ಲಿಯೂ ಮೂರು ಕಿರುಎಲೆಗಳಿವೆ. ರೆಂಬೆಗಳ ಮೇಲ್ಭಾಗದಲ್ಲಿರುವ ಎಲೆಗಳ ಕಂಕುಳಿನಿಂದ ರೇಸಿಮ್ ಹೂಗೊಂಚಲುಗಳು ಬೆಳೆಯುತ್ತವೆ ಹೂಗಳ ಬಣ್ಣ ಊದಾ. ಕಾಯಿಗಳು ಸುರುಳಿಯಾಗಿ ಸುತ್ತಿಕೊಂಡಿದ್ದು ಪ್ರತಿಯೊಂದರಲ್ಲಿಯೂ 2–8 ಅಥವಾ ಹೆಚ್ಚು ಹುರುಳಿ ಬೀಜದ ಆಕಾರದ ಚಿಕ್ಕ ಬೀಜಗಳಿವೆ. ಮುಖ್ಯಕಾಂಡದ ಕೆಳಭಾಗದಿಂದ ಭೂಮಿಯೊಳಕ್ಕೆ ಆಳವಾಗಿ ಇಳಿದಿರುವ ತಾಯಿಬೇರು ಪ್ರಮುಖವಾಗಿರುವ ಬೇರಿನ ಸಮೂಹ ಬೆಳೆಯುತ್ತದೆ. ಈ ತಾಯಿಬೇರು ಪರಿಸ್ಥಿತಿ ಅನುಕೂಲವಾಗಿದ್ದಾಗ 30'–50' ಆಳದವರೆಗೂ ಬೆಳೆಯಬಲ್ಲದು.

ಆಲ್ಫಾಲದಲ್ಲಿ ಹಲವಾರು ಪ್ರಭೇದಗಳಿವೆ. ಮುಖ್ಯವಾಗಿ ಮೆಡಿಕ್ಯಾಗೊ ಸಟೈವ ಮತ್ತು ಮೆಡಿಕ್ಯಾಗೊ ಫಾಲ್ಕೇಟ ಎಂಬ ಎರಡು ಪ್ರಭೇದಗಳನ್ನು ಬೆಳೆಸುತ್ತಾರೆ. ಮೊದಲನೆಯ ಪ್ರಭೇದ ಊದಾಬಣ್ಣದ ಹೂಗಳನ್ನು ಮೇಲಕ್ಕೆ ನೇರವಾಗಿ ಬೆಳೆಯುತ್ತದೆ. ಇದರ ಕಾಯಿಗಳು ಸುರುಳಿಯಾಗಿ ಸುತ್ತಿಕೊಂಡಿವೆ. ಎರಡನೆಯದು ಹಳದಿಬಣ್ಣದ ಹೂಗಳನ್ನು ಹೊಂದಿದ್ದು, ಸ್ವಲ್ಪ ಬಾಗಿಕೊಂಡು ಬೆಳೆಯುತ್ತದೆ. ಇದರ ಕಾಯಿಗಳು ಕುಡುಗೋಲಿನ ಆಕಾರದಲ್ಲಿವೆ.

ಆಲ್ಫಾಲ್ಫ ಗಿಡ ಅತ್ಯಂತ ಒಣ ಹವೆಯನ್ನೂ ಅತ್ಯುಷ್ಣ ಅಥವಾ ಅತಿ ಶೀತ ವಾತಾವರಣವನ್ನೂ ತಡೆದುಕೊಂಡು ಚೆನ್ನಾಗಿ ಬೆಳೆಯಬಲ್ಲ ಶಕ್ತಿ ಹೊಂದಿರಲು ಬಲು ಆಳಕ್ಕೆ ಬೆಳೆಯುವ ಇದರ ತಾಯಿಬೇರೇ ಕಾರಣ. ಇದರ ಬೇರಿನ ಮೂಲಕ ನೆಲದಲ್ಲಿ ಎಷ್ಟೇ ಆಳದಲ್ಲಿರಬಹುದಾದ ನೀರನ್ನೂ ಹೀರಿಕೊಂಡು ಗಿಡ ಚೆನ್ನಾಗಿ ಬೆಳೆಯುತ್ತದೆ. ಆದ್ದರಿಂದಲೇ ಇದನ್ನು ಒಣಹವೆಯಿರುವ ಸರಿಸುಮಾರು ಬಂಜರು ಎನ್ನಬಹುದಾದ ಪ್ರದೇಶಗಳಲ್ಲಿ ಬೆಳೆಸುತ್ತಾರೆ.

ಬೀಜ ಬಿತ್ತಿದ ಹಲವಾರು ತಿಂಗಳುಗಳಲ್ಲಿಯೇ ಗಿಡ ಬೆಳೆದರೂ ಕೊನೆಯ ಪಕ್ಷ 2–3 ವರ್ಷಗಳಾದರೂ ಅದನ್ನು ಹಾಗೆಯೇ ಕತ್ತರಿಸದೆ ಬಿಡುತ್ತಾರೆ. ಆಮೇಲೆ ಪ್ರತಿವರ್ಷವೂ 2–8 ಬಾರಿ ಸೊಪ್ಪನ್ನು ಕತ್ತರಿಸಬಹುದು. ಸಾಮಾನ್ಯವಾಗಿ ಒಂದು ಎಕರೆಗೆ 2–4 ಟನ್ ಸೊಪ್ಪು ದೊರಕುವುದಾದರೂ ಚೆನ್ನಾಗಿ ನೀರು ಹಾಯಿಸಿದಲ್ಲಿ ಉತ್ಪನ್ನ 10 ಟನ್‌ಗಳವರೆಗೂ ಹೆಚ್ಚಬಲ್ಲದು ಇದರ ಸೊಪ್ಪು ಅಧಿಕ ಪೌಷ್ಟಿಕಾಂಶಗಳನ್ನು ಹೊಂದಿದ್ದು ದನಗಳಿಗೆ, ಕುದುರೆಗಳಿಗೆ ರುಚಿಕರವಾಗಿಯೂ ಇರುತ್ತದೆ. ಇದರಲ್ಲಿ 10% ಭಾಗ ಪ್ರೋಟೀನ್, 8% ಭಾಗ ಲವಣಾಂಶಗಳೂ ಅಲ್ಲದೆ ಎ, ಇ, ಡಿ ಮತ್ತು ಕೆ ಜೀವಾತುಗಳು ಇವೆ.

ಮೂಲತಃ ಪೂರ್ವ ಮೆಡಿಟರೇನಿಯನ್ ಪ್ರದೇಶವಾಸಿಯಾದ ಈ ಗಿಡ ರಷ್ಯ ದೇಶದ ದಕ್ಷಿಣದಲ್ಲಿರುವ ಕಾಕಸಸ್ ಪರ್ವತಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಬಹಳ ಹಿಂದಿನ ಕಾಲದಿಂದಲೂ ಇದರ ವ್ಯವಸಾಯ ರೂಢಿಯಲ್ಲಿದೆ. ಕ್ರಿ.ಪೂ. 400ರ ಸುಮಾರಿನಲ್ಲಿಯೇ ಇದನ್ನು ಗ್ರೀಸ್ ದೇಶದಲ್ಲಿ ಬೆಳೆಸುತ್ತಿದ್ದರೆಂದು ದಾಖಲೆಯಿದೆ. ಇದರ ಸೊಪ್ಪಿನ ಉತ್ಕೃಷ್ಟಗುಣದಿಂದಾಗಿ ಈ ಗಿಡವನ್ನು ಪ್ರಪಂಚದ ಎಲ್ಲ ದೇಶಗಳಲ್ಲೂ ಬೆಳೆಸುತ್ತಿದ್ದಾರೆ. ಇತ್ತೀಚಿನ ಅಂದಾಜಿನ ಪ್ರಕಾರ ಸುಮಾರು 6 ಕೋಟಿ ಎಕರೆಗಳಷ್ಟು ಪ್ರದೇಶದಲ್ಲಿ ಆಲ್ಫಾಲ್ಫವನ್ನು ಬೆಳೆಸಲಾಗುತ್ತಿವೆ. ಮುಖ್ಯವಾಗಿ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ದಕ್ಷಿಣ ಅಮೆರಿಕ, ಕೆನಡ, ಯೂರೋಪ್ ದೇಶಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಸುತ್ತಿದ್ದಾರೆ.

ಆಲ್ಫಾಲ್ಫ ಮುಖ್ಯವಾಗಿ ಹಸುರು ಮೇವಾಗಿ ಉಪಯೋಗವಾಗುವುದಾದರೂ ಇದರ ಸೊಪ್ಪನ್ನು ಕೋಳಿ, ಹಂದಿ ಮುಂತಾದ ಪ್ರಾಣಿಗಳ ಮಿಶ್ರ ಆಹಾರ ತಯಾರಿಕೆಯಲ್ಲಿಯೂ ಉಪಯೋಗಿಸುತ್ತಾರೆ. ಅಲ್ಲದೆ ಇದರ ವ್ಯವಸಾಯದಿಂದ ಭೂಮಿಯಲ್ಲಿನ ನೈಟ್ರೋಜನ್ ಪ್ರಮಾಣ ಹೆಚ್ಚುವುದೆಂದು ಕಂಡುಬಂದಿದೆ. ಇದರ ಬೇರುಗಂಟುಗಳಲ್ಲಿ ಕೆಲವು ವಿಶಿಷ್ಟ ಜಾತಿಯ ಬ್ಯಾಕ್ಟೀರಿಯವಿದ್ದು ಅವು ವಾತಾವರಣದಲ್ಲಿನ ನೈಟ್ರೋಜನ್ನನ್ನೇ ಭೂಮಿಯಲ್ಲಿ ಸ್ಥಿರೀಕರಣಗೊಳಿಸುವುದರಲ್ಲಿ ಸಹಾಯ ಮಾಡುತ್ತವೆ. ಹೀಗೆ ಭೂಮಿಯ ಸಾರ ಹೆಚ್ಚುತ್ತದೆ.

ಈ ಗಿಡಕ್ಕೆ ಹಲವಾರು ಬಗೆಯ ಬೂಷ್ಟು, ಬ್ಯಾಕ್ಟೀರಿಯ ವೈರಸ್ ರೋಗಗಳು ಮತ್ತು ಹುಳುಗಳು ತಗಲುತ್ತವೆ. ಕೆಲವು ಬಾರಿ ಗಣನೀಯ ನಷ್ಟವನ್ನುಂಟು ಮಾಡುವುದೂ ಉಂಟು. ಈ ರೋಗಗಳನ್ನು ರಾಸಾಯನಿಕ ಔಷಧಿಗಳ ಉಪಯೋಗದಿಂದ ತಡೆಯಬಹುದು. ಅಲ್ಲದೆ ರೋಗನಿರೋಧಕ ಶಕ್ತಿಯನ್ನುಳ್ಳ ತಳಿಗಳನ್ನು ಅಭಿವೃದ್ಧಿಪಡಿಸುವುದರಿಂದ ರೋಗಗಳಾಗಲಿ, ಹುಳುಗಳಾಗಲಿ ಅಂಟದಂತೆ ಮಾಡಬಹುದಾಗಿದೆ. (ಕೆ.ಬಿ.ಎಸ್.)

**ಆಲ್ಫಿಯೆರಿ, ಕೌಂಟ್ ವಿಟೋರಿಯೊ:** 1749–1803. ಇಟಲಿಯ ಕವಿ ಹಾಗೂ ಯೂರೋಪಿನಲ್ಲೆಲ್ಲ ಪ್ರಖ್ಯಾತಿ ಪಡೆದ ರುದ್ರನಾಟಕಕಾರ. ಶ್ರೀಮಂತ ಮನೆತನದಲ್ಲಿ ಹುಟ್ಟಿ ಟ್ಯೂರಿನ್ ಅಕಾಡಮಿಯಲ್ಲಿ ವಿದ್ಯಾಭ್ಯಾಸ ಪಡೆದ. ಸ್ವಭಾವತಃ ಮುಂಗೋಪಿ, ಭಾವಾವೇಶದ ಪ್ರಕೃತಿಯವ. ತನ್ನ ಪ್ರವೃತ್ತಿಗಳನ್ನು ಸಾಹಿತ್ಯ ಸೃಷ್ಟಿಗೆ ಸದುಪಯೋಗಪಡಿಸಿಕೊಂಡುದು ಸುದೈವವೇ ಸರಿ. ಹಲವಾರು ದೇಶಗಳಲ್ಲಿ ಪ್ರವಾಸ ಮಾಡಿ, ಹಲವಾರು ಪ್ರಣಯ ಪ್ರಸಂಗಗಳ ಸಿಹಿ ಕಹಿ ಅನುಭವಗಳನ್ನುಂಡು ತನ್ನ 25ನೆಯ ವಯಸ್ಸಿನಲ್ಲಿ ನಾಟಕ ರಚನೆಗೆ ಕೈಹಾಕಿದ. ಕೇವಲ ಬೇಸರವನ್ನು ಕಳೆಯಲು, ಸುಮ್ಮನೆ ಗೀಚಿದ ಮೊಟ್ಟಮೊದಲ ಕೃತಿ–ಕ್ಲಿಯೋಪಾತ್ರ. ಆದರೆ ಟ್ಯೂರಿನ್‌ನಲ್ಲಿ ಅಭಿನಯಿಸಲ್ಪಟ್ಟಾಗ ಇದಕ್ಕೆ ಅನಿರೀಕ್ಷಿತವಾದ ಜನಮನ್ನಣೆ ದೊರೆಯಿತು. ಅಂದಿನಿಂದ ರುದ್ರನಾಟಕಗಳನ್ನು ಬರೆದು, ಶ್ರೇಷ್ಠ ನಾಟಕಕಾರನಾಗಬೇಕೆನ್ನುವ ಹಂಬಲ ಬಲವಾಯಿತು. ಇಟಲಿ ಭಾಷೆಯಲ್ಲಿ ಬರೆಯಲು ಕಷ್ಟ ಸಾಧ್ಯವೆಂದು ತೋರಿದ್ದರಿಂದ, ಅಂದಿನ ಸಂಸ್ಕೃತಿ ಕೇಂದ್ರವಾದ ಪೀಸಾ ನಗರಕ್ಕೆ ತೆರಳಿ ಅಲ್ಲಿ ಟಸ್ಕನಿ ಭಾಷೆಯಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದ. ಅನಂತರ ಸುಮಾರು 22 ನಾಟಕಗಳನ್ನು ಬರೆದ. ಇವನ ಉದ್ದಾಮಕೃತಿ ಸಾಲ್ (1782). ಆಂಟಿಗೊನೆ (1783) ಮತ್ತು ಮಾರಿಯ ಸ್ಟೂಯರ್ಟ್ (1804) ಇತರ ಪ್ರಸಿದ್ಧ ಕೃತಿಗಳು.

ಈತನ ಭಾಷೆಯಲ್ಲಿ ಹಾಗೂ ನಾಟಕಗಳ ವಿವಿಧ ಸನ್ನಿವೇಶಗಳಲ್ಲಿ , ಭಾವೋದ್ವೇಗದ ಕಾವಿದೆ. ನಾಟಕಗಳ ವಸ್ತು ಐತಿಹಾಸಿಕವಾಗಿರಲಿ, ಪೌರಾಣಿಕವಾಗಿರಲಿ, ಸಮಕಾಲೀನವಾಗಿರಲಿ, ಬಹಿರಂಗದ ವೇಷ, ಭೂಷಣ, ಬಣ್ಣ ಮುಂತಾದ ಕಾಲಧರ್ಮವನ್ನು ಸೂಚಿಸುವ ಪರಿಕರಗಳಿಗಿಂತಲೂ ವ್ಯಕ್ತಿಯ ಅಂತರಂಗದ ತುಮುಲದ ಅಭಿವ್ಯಕ್ತಿಗೇ ಹೆಚ್ಚು ಪ್ರಧಾನ್ಯ ಕೊಡುತ್ತಾನೆ. ರುದ್ರ ಸನ್ನಿವೇಶಗಳಲ್ಲಿ ಸಿಲುಕಿದ ವ್ಯಕ್ತಿಯ ನೋವು, ನಲಿವು, ಸಂಕಟ ಮುಂತಾದುವನ್ನು ಆವೇಶಯುಕ್ತ ಭಾಷಣಗಳ (ಡಿಕ್ಲಮೇಷನ್) ಮೂಲಕ ಹೊರಪಡಿಸುತ್ತಾನೆ. ಪುರಾತನ ಗ್ರೀಕ್ ವಿಮರ್ಶಕರು ಪರ್ಯಾಯವಾಗಿ ಸೂಚಿಸಿದ ಮೂರು ಏಕತೆಗಳನ್ನು ಕೆಲವು ವೇಳೆ ಅತಿ ಎನಿಸುವಷ್ಟು ಎಚ್ಚರಿಕೆಯಿಂದ ಅನುಸರಿಸುತ್ತಾನೆ. ಇವನ ನಾಟಕಗಳು ಬಹುಕಾಲದವರೆಗೆ ಯೂರೋಪಿನಲ್ಲಿ ಅತ್ಯಂತ ಜನಪ್ರಿಯವಾಗಿದ್ದುವು. ಈ ನಾಟಕಗಳ ಕೊರತೆಯೆಂದರೆ, ರುದ್ರನಾಟಕದಲ್ಲಿರಬೇಕಾದ ಘರ್ಷಣೆಯಾಗಲೀ (ಕಾನ್‌ಫ್ಲಿಕ್ಟ್) ಪಾತ್ರ ವಿನ್ಯಾಸದಲ್ಲಿ ಮನೋ ವಿಶ್ಲೇಷಣೆಯಾಗಲೀ ಅಷ್ಟ ಸ್ಪಷ್ಟವಾಗಿ ತೋರದಿರುವುದು. (ಎಚ್.ಕೆ.ಆರ್.)

**ಆಲ್ಫ್ರೆಡ್ ಮಹಾಶಯ:** 849–899. ವೆಸೆಕ್ಸಿನ ರಾಜ. ಪ್ರಾಚೀನ ಗ್ರೇಟ್ ಬ್ರಿಟನ್ನಿನ ಇತಿಹಾಸದಲ್ಲಿ ಪ್ರಸಿದ್ಧನಾದವ. ಅಥೆಲ್‌ವುಲ್ಫ್ ರಾಜನ ಐದನೆಯ ಮಗ. ತನ್ನ ಹಿರಿಯ ನಾಲ್ಕು ಜನ ಸಹೋದರರು 858–871ರವರೆಗೆ ಒಬ್ಬರಾದ ಮೇಲೊಬ್ಬರಂತೆ ಕ್ರಮವಾಗಿ ರಾಜ್ಯವಾಳಿ ಅಕಾಲಮರಣಕೀಡಾದುದರಿಂದ ಆಲ್ಫ್ರೆಡ್ 871ರಲ್ಲಿ ಸಿಂಹಾಸನಕ್ಕೆ ಬಂದ. ಅಂದಿನ ಅತಿಮುಖ್ಯವಾದ ರಾಜಕೀಯ ಘಟನೆಯೆಂದರೆ ಕೊಳ್ಳೆ ಹೊಡೆಯಲು ದಂಡೆತ್ತಿ ಬಂದ ಡೇನರನ್ನು ಸೋಲಿಸಿದುದು. ಬಾಲ್ಯದಿಂದಲೂ ಆಲ್ಫ್ರೆಡನಿಗೆ ಡೇನರೆ ಹಾವಳಿ ಮನದಟ್ಟಾಗಿತ್ತು. ಪಟ್ಟಕ್ಕೆ ಕೂಡಲೆ ಈತ ಡೇನರ ದಾಳಿಯಿಂದ ದೇಶವನ್ನು ಪಾರುಮಾಡಲು ಸಿದ್ಧನಾದ. ಬಲವಾದ ನೌಕಾದಳವನ್ನು ಕಟ್ಟಿದ. ಸೈನ್ಯವನ್ನು ವಿಸ್ತರಿಸಿ, ಸುಧಾರಣೆಗಳನ್ನು ಜಾರಿಗೆ ತಂದ. ಅನೇಕ ಸಾರಿ ಡೇನರನ್ನು ಸೋಲಿಸಿ ಓಡಿಸಿದ. ಕೊನೆಗೆ 876ರಲ್ಲಿ ಸಂಪೂರ್ಣವಾಗಿ ಶರಣಾಗತನಾದ ಡೇನಿಷ್ ರಾಜ ಗುತ್ರಮ್‌ನಿಗೆ ಕ್ರೈಸ್ತಮತ ದೀಕ್ಷೆಯನ್ನು ಕೊಡಿಸಿ ಮುಂದೆ ಎಂದೂ ದಂಡೆತ್ತಿ ಬರದಂತೆ ಷರತ್ತನ್ನು ವಿಧಿಸಿ ಲಾಡನ್ ಪ್ರದೇಶದ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದ. ಹೀಗೆ ಆಂಗ್ಲೋಸಾಕ್ಸನ್ ಪ್ರದೇಶವನ್ನು ಡೇನರ ಆಕ್ರಮಣದಿಂದ ಪಾರುಮಾಡಿದ.

ಧೀರನೂ ದೇಶವತ್ಸಲನೂ ದೂರದೃಷ್ಟಿಯುಳ್ಳವನೂ ಆದ ಆಲ್ಫ್ರೆಡ್ ದೊರೆ ತನ್ನ ಆರ್ಥಿಕ ಸುಧಾರಣೆಗಳಿಂದ ಪ್ರಜೆಗಳ ಮೇಲ್ಮೆಯನ್ನು ಸಾಧಿಸಿದ. ಕಾನೂನುಗಳನ್ನು ಕ್ರೋಢೀಕರಿಸಿ ವ್ಯವಸ್ಥಿತವಾದ ನ್ಯಾಯನಿಬಂಧನೆಯನ್ನು ಜಾರಿಗೆ ತಂದ. ಪ್ರಜೆಗಳ ವಿದ್ಯಾಭ್ಯಾಸಕ್ಕೆ ವಿಶೇಷ ಗಮನಕೊಟ್ಟ. ಶ್ರೀಮಂತರ ಹಾಗೂ ಸಾಮಾನ್ಯರ ಮಕ್ಕಳು ಕಲಿಯಲನುಕೂಲ ವಾಗುವಂತೆ ಶಾಲೆಗಳನ್ನು ಸ್ಥಾಪಿಸಿದ. ಲ್ಯಾಟಿನ್ ಭಾಷೆಯಲ್ಲಿದ್ದ ಮುಖ್ಯ ಗ್ರಂಥಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಲು ವಿದ್ವಾಂಸರನ್ನು ನಿಯೋಜಿಸಿದ. ಅಸರ್ ಎಂಬ ವಿದ್ವಾಂಸ ಈತನ ಆಸ್ಥಾನದಲ್ಲಿ ಪ್ರಮುಖನಾದವ. ಈತ ಆಲ್ಫ್ರೆಡ್‌ನಿಗೆ ಮಹಾಶಯನ ಜೀವನಚರಿತ್ರೆಯನ್ನು ವಿಶದವಾಗಿ ಬರೆದಿದ್ದಾನೆ. ಆಲ್ಫ್ರೆಡ್‌ನಿಗೆ ಸಂಗೀತದಲ್ಲಿ ವಿಶೇಷವಾದ ಅಭಿರುಚಿಯಿತ್ತು. ಜಾನಪದ ಸಾಹಿತ್ಯವನ್ನು ಕಲೆಹಾಕಿ ಅವುಗಳ ಬೆಳವಣಿಗೆಗೆ ಪ್ರೋತ್ಸಾಹಕೊಟ್ಟ. ದೈವ ಭಕ್ತನಾದ ಆಲ್ಫ್ರೆಡ್ ಮತೀಯ ನಂಬಿಕೆಗಳನ್ನು ಸುಧಾರಿಸಿದ. ಇಂಗ್ಲೆಂಡಿನ ಪ್ರಾಚೀನ ಇತಿಹಾಸವನ್ನು (ಆಂಗ್ಲೋ ಸ್ಯಾಕ್ಸನ್ ಕ್ರಾನಿಕಲ್) ರಚಿಸಲು ವಿದ್ವಾಂಸರನ್ನು ನಿಯೋಜಿಸಿದ. ಶತಮಾನಗಳು ಕಳೆದಂತೆಲ್ಲ ಈ ದೇಶಭಕ್ತನ ಹೆಸರು ಜನಮನದಲ್ಲಿ ಶಾಶ್ವತವಾಗಿ ಉಳಿಯಿತು. ಈತನ ಬಹುಮುಖ ಸೇವೆಯಿಂದ ಉಪಕೃತವಾದ ರಾಷ್ಟ್ರ ಈತನನ್ನು ರಾಷ್ಟ್ರಸಂಸ್ಥಾಪಕನೆಂದು ಪರಿಗಣಿಸಿತು. ಇಂಗ್ಲೆಂಡಿನ ಚರಿತ್ರೆಯಲ್ಲಿ ಈತ ಆಲ್ಫ್ರೆಡ್ ಮಹಾಶಯ ಎಂದು ಪ್ರಸಿದ್ಧಿ ಪಡೆದಿದ್ದಾನೆ. ಇವನ ವಿಚಾರದಲ್ಲಿ ಪ್ರಚಲಿತವಾಗಿರುವ ಅನೇಕ ಆಖ್ಯಾನಕಗಳು ಇವನ ಪ್ರಜಾವಾತ್ಸಲ್ಯವನ್ನೂ ದಕ್ಷತೆಯನ್ನೂ ವಿದ್ಯಾಪಕ್ಷಪಾತವನ್ನೂ ವರ್ಣಿಸುತ್ತವೆ.

ವಿದ್ವಾಂಸರ ನೆರವನ್ನು ಪಡೆದು ಲ್ಯಾಟಿನ್ ಭಾಷೆಯಿಂದ ಮತ, ಚರಿತ್ರೆ, ಭೂಗೋಳ ಮತ್ತು ತತ್ತ್ವಶಾಸ್ತ್ರಗಳಿಗೆ ಸಂಬಂಧಪಟ್ಟ ಕೃತಿಗಳನ್ನು ಆಲ್ಫ್ರೆಡ್ ಪಶ್ಚಿಮ ಸ್ಯಾಕ್ಸನ್ ಭಾಷೆಗೆ ಅನುವಾದಿಸಿದ. ಆರೊಸಿಯಸ್‌ನ ಚರಿತ್ರೆ ಮತ್ತು ಭೂವಿವರಣೆ, ಬೀಡ್‌ನ ಧಾರ್ಮಿಕ ಚರಿತ್ರೆ, ಮಧ್ಯಯುಗದ ಅತಿಜನಪ್ರಿಯ ಕೃತಿ ಬೊತಿಯಿಸ್‌ನ ತತ್ತ್ವಜ್ಞಾನದ ಸಂತೈಕೆಗಳು ಮತ್ತು ಪೋಪ್ ಗ್ರಿಗರಿಯ ಕ್ಯೂರ ಪ್ಯಾಸ್ಟೊರಾಲಿಸ್–ಇವು ಅನುವಾದಿತ ಕೃತಿಗಳಲ್ಲಿ ಮುಖ್ಯವಾದುವು. ತತ್ತ್ವಜ್ಞಾನದ ಸಂತೈಕೆಗಳಲ್ಲಿನ ಅನುವಾದ ಮೂಲದ ಅಭಿನವ ಪ್ಲೇಟೋನಿಕ್ ತತ್ತ್ವಗಳಿಗಿಂತ ಕ್ರೈಸ್ತಧರ್ಮಕ್ಕೆ ಹೆಚ್ಚು ಅನುಗುಣವಾಗಿದೆ. ಇದರಲ್ಲಿ ಅಲ್ಲಲ್ಲಿ ದೋಷಗಳಿದ್ದರೂ ಭಾವನೆಗಳ ಘನತೆಯಲ್ಲಿ ಮೂಲಕ್ಕೆ ತಕ್ಕ ಯೋಗ್ಯತೆಯನ್ನು ಪಡೆದಿದೆ. ತನ್ನ ದೇಶ ಯುರೋಪಿನ ನಾಗರಿಕತೆಗೆ ಸಮೀಪವಾಗಿ ಉಳಿಯುವುದರ ಅಗತ್ಯವನ್ನು ಆಲ್ಫ್ರೆಡ್ ಕಂಡುಕೊಂಡ. ಇವನ ಕೃತಿಗಳು ಆದರ್ಶ ಜನತೆಗೆ ಜ್ಞಾನದಾಹವನ್ನೂ ವಿದ್ವತ್ತು ಮತ್ತು ಸಂಸ್ಕೃತಿಗಳಲ್ಲಿ ಗೌರವವನ್ನೂ ಕಲಿಸಿಕೊಟ್ಟುವು. ಆಲ್ಫ್ರೆಡ್‌ನೇ ಇಂಗ್ಲಿಷ್ ಗದ್ಯದ ಜನಕ. ದೇಶಭಾಷೆಯನ್ನು ಬಳಸಿ, ಇಂಗ್ಲಿಷ್ ಸ್ವತಂತ್ರವಾಗಿ ಬೆಳೆಯಲು ದಾರಿಮಾಡಿಕೊಟ್ಟವೆ. ಇವನಿಂದ ಪ್ರೇರಿತವಾದ ಕೃತಿಗಳಲ್ಲಿ ಆಂಗ್ಲೋ ಸ್ಯಾಕ್ಸನ್ ಕ್ರಾನಿಕಲ್ (**ನೋಡಿ– ಆಂಗ್ಲೋ–ಸ್ಯಾಕ್ಸನ್–ಕ್ರಾನಿಕಲ್**) ಮುಖ್ಯವಾದುದು. "ಇಂಗ್ಲೆಡಿನಲ್ಲಿ ವಿದ್ವತ್ತು ಸತ್ತಿದ್ದುದನ್ನು ಕಂಡ, ಅದನ್ನು ಬದುಕಿಸಿದ. ಶಿಕ್ಷಣವನ್ನು ಅಲಕ್ಷ್ಯ ಮಾಡಿದುದನ್ನು ಕಂಡ, ಅದಕ್ಕೆ ಮತ್ತೆ ಚೇತನವನ್ನಿತ್ತ" ಎಂಬೀ ಮಾತುಗಳು 1877ರಲ್ಲಿ ಇವನಿಗಾಗಿ ಸ್ಥಾಪಿಸಿದ ಸ್ಮಾರಕ ಶಿಲೆಯ ಮೇಲಿನ ವಾಕ್ಯಗಳಾಗಿವೆ. (ಎಲ್.ಎಸ್.ಎಸ್.)

**ಆಲ್ಬ (ಆಲ್ವ) ಫರ್ನ್ಯಾಂಡೊ ಆಲ್ವಾರೆಜ್ ಡ ಟೊಲೇಡೊ, ಡ್ಯೂಕ್ ಡ:** 1507–1582. ಸ್ಪೇನ್ ದೇಶದ ಸೈನ್ಯಾಧಿಕಾರಿ ಮತ್ತು ರಾಜನೀತಿನಿಪುಣ. ಶ್ರೀಮಂತ ಮನೆತನದಲ್ಲಿ ಹುಟ್ಟಿ ತನ್ನ ಆಯುಷ್ಯವನ್ನೆಲ್ಲ ಕೊಲೆ ಸುಲಿಗೆ ಮುಂತಾದುವುಗಳಲ್ಲಿ ಕಳೆದ ಪ್ರಸಿದ್ಧ ವೀರ. ತನ್ನ ಕಾಲದ ಅತ್ಯಂತ ಮೇಧಾವಿ ಸೈನ್ಯಾಧಿಕಾರಿ ಎನಿಸಿದ್ದ. ತನ್ನ ಸೈನಿಕರಿಗೆ ನೀಡುತ್ತಿದ್ದ ಕಠಿಣ ತರಬೇತಿ ಹಾಗೂ ಶಿಸ್ತು ಪಾಲನೆಯಿಂದಾಗಿ ತಾನು ಹೋದ ಕಡೆಯಲ್ಲೆಲ್ಲ ಜಯ ಗಳಿಸಿದ. ಸಮಯವರಿತು ತನ್ನ ಸೇನೆಯನ್ನು ಸ್ಥಳಾಂತರಿಸಿ ಯುದ್ಧಮಾಡುವುದರಲ್ಲಿ ಈತ ನಿಪುಣ. ಇವನ ಆತ್ಮಪ್ರತ್ಯಯದ ಮುಂದೆ ಯಾವ ಅಧಿಕಾರಿಯೂ ನಿಲ್ಲದೆ ಹೋದ.

1546–47ರಲ್ಲಿ ಈತ ಜರ್ಮನಿಯ ಪ್ರಾಟೆಸ್ಟೆಂಟ್ ರಾಜಕುಮಾರರ ಮೇಲೆ ದಾಳಿ ಮಾಡಿ ಜಯಗಳಿಸಿ ಮೇಲ್‌ಬರ್ಗನ್ನು ಹಿಡಿದ. ತಾನು ಪಡೆದ ಜಯದ ದ್ಯೋತಕವಾಗಿ ಐದನೆಯ ಚಾರಲ್ಸ್‌ನನ್ನು ಅಧಿಕಾರಕ್ಕೆ ತಂದ. ಅನಂತರ ಇಟಲಿ ಸೇನೆಯ ಮುಖ್ಯಾಧಿಕಾರಿಯಾಗಿ ನೇಮಕಗೊಂಡ. ಎರಡನೆಯ ಫಿಲಿಪ್ಸ್ ಪಟ್ಟಕ್ಕೆ ಬಂದಮೇಲೆ ಇವನ ಏರಿಕೆ ಕಾಲ ಆರಂಭಿಸಿತು. ತನ್ನ ಎದುರಾಳಿಗಳನ್ನು ಒಂದಿಲ್ಲೊಂದು ರೀತಿಯಲ್ಲಿ ಸದೆಬಡಿದು ತನ್ನ ಅಧಿಕಾರ ಮೆರೆಯಿಸಿದ. ಕೊನೆಗೆ ಲಿಸ್ಬನ್ ಪಟ್ಟಣವನ್ನು ಹಿಡಿದು ಸುಲಿಗೆ ಮಾಡಿ ಜನರನ್ನು ಹಿಂಸೆಗೆ ಗುರಿಪಡಿಸಿದುದರಿಂದ ಅರಸನ ಕೋಪಕ್ಕೆ ಪಾತ್ರನಾದ. ಪ್ರಾಟೆಸ್ಟೆಂಟ್ ದೇಶಗಳಲ್ಲಿ ಆಲ್ಬನ ಹೆಸರು ಕ್ರೂರತ್ವ ಹಾಗೂ ಧರ್ಮಪೀಡನೆಗೆ ಪ್ರಸಿದ್ಧವಾಗಿದೆಯಾದರೂ ಸ್ಪೇನಿನ ಇತಿಹಾಸದಲ್ಲಿ ಅದಕ್ಕೆ ಹೆಚ್ಚಿನ ಮಹತ್ತ್ವವಿದೆ. (ಎಚ್.ಜಿ.ಬಿ.)

**ಆಲ್ಬಟ್ ಸರ್ ಥಾಮಸ್ ಕ್ಲಿಫರ್ಡ್:** 1836–1925. ಇಂಗ್ಲಿಷ್ ವೈದ್ಯ. ಮಹಾಗ್ರಂಥವಾಗಿದ್ದ ವೈದ್ಯಸೂತ್ರ ವಿಧಾನಗಳನ್ನು 8 ಸಂಪುಟಗಳಲ್ಲಿ ಸಂಪಾದಿಸಿ (1896–1899) ಕೀರ್ತಿ ಪಡೆದ. ಈ ಮಹಾಗ್ರಂಥ ಹಲವಾರು ಬಾರಿ ಮರುಮುದ್ರಣ ಕಂಡಿತು. ವೈದ್ಯಶಾಸ್ತ್ರಕ್ಕೆ ಇವನ ಹಲವಾರು ಕೊಡುಗೆಗಳಿವೆ. ಹಿಂದೆ ಎರಡು ಅಡಿಗಳಷ್ಟು ನೀಳವಾಗಿದ್ದ ಮೈ ಉಷ್ಣಮಾಪಕವನ್ನು ಈಗಿರುವ ಸಣ್ಣ ಆಕಾರದಲ್ಲಿ ತಂದವನೀತ (1866). ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ (1880). ಹಾಗೇ ವೈದ್ಯ ರಾಯಲ್ ಕಾಲೇಜಿನಲ್ಲೂ ಫೆಲೋಷಿಪ್ ಪಡೆದ (1883). ಪ್ರಪಂಚದಲ್ಲಿ ಮೊಟ್ಟಮೊದಲಾಗಿ, ಉಪದಂಶ (ಸಿಫಿಲಿಸ್) ರೋಗದಲ್ಲಿ ಮಿದುಳಿನ ಧಮನಿಗಳ ವ್ಯತ್ಯಾಸಗಳು (1868), ಧಮನಿಗಳ ರೋಗಗಳು–ಇವನ್ನು ಕುರಿತ ಎರಡು ಸಂಪುಟಗಳನ್ನು ಪ್ರಕಟಿಸಿದ (1915). ಗುಂಡಿಗೆಯಿಂದೇಳುವ ಎದೆಶೂಲೆಗೆ ಅದರ ಧಮನಿಗಳು ಅಮುಕಿ ಕುಗ್ಗುವುದೇ ಕಾರಣವೆಂದು ಮೊದಲು ಹೇಳಿದ (1915). ಆಳವಾದ ಅಭ್ಯಾಸ, ಅನುಭವಗಳಿಂದ, ಒಳಾಂಗಗಳ ನರಬೇನೆಗಳು (1884), ಸಾಮಾನ್ಯ ಮನೋರೋಗಗಳು (1891) ಎಂಬ ವಿಷಯಗಳ ಮೇಲೆ ಈತ ಮಾಡಿದ ಭಾಷಣಗಳು ಅಚ್ಚಾಗಿವೆ. ಕೊರಳಲ್ಲೇಳುವ ಕ್ಷಯದ ಗೆಡ್ಡೆಗಳನ್ನು ಕೊಯ್ದೆಗೆವ ವಿಧಾನವನ್ನು ಮೊದಲು (1885) ವಿವರಿಸಿದ. ನರಗಳ, ಮೂತ್ರಪಿಂಡಗಳ ರೋಗಗಳಲ್ಲಿ ಕೆಟ್ಟಿರುವುದನ್ನು ಕಣ್ಣಿನಿಂದ ನೋಡುವ ಕಣ್ಣುದರ್ಶಕದ ಬಳಕೆ ಜಾರಿಗೆ ತಂದ (1871). ಕೊನೆಗೆ ಪ್ರೀವಿ ಕೌನ್ಸಿಲರಾಗಿ ಕೆಲಸಮಾಡಿದ (1920). ವೈದ್ಯಚರಿತ್ರೆಯನ್ನು ಆಳವಾಗಿ ಅಭ್ಯಾಸಮಾಡಿದ್ದ ಆಲ್ಬಟ್ ಸರ್ ಥಾಮಸ್ ಕ್ಲಿಫರ್ಡ್ ಅದರಲ್ಲಿ ಪರಿಣತ ಎನ್ನಿಸಿಕೊಂಡಿದ್ದ.

*

**ಆಲ್ಬಟ್ರಾಸ್:** ಸಮುದ್ರವಲಯವಾಸಿಯಾದ ಒಂದು ಹಕ್ಕಿ, ಗಾತ್ರದಲ್ಲಿ ಬಲು ದೊಡ್ಡದು. ಹೆಚ್ಚಿನ ಹಾರುವ ಸಾಮರ್ಥ್ಯವುಳ್ಳದ್ದು. ಡಯೊಮಿಡೈಡ ಕುಟುಂಬದ ಇದರ ಜಾತಿಯಲ್ಲಿ 13 ಪ್ರಭೇಧಗಳಿವೆ. ಇವುಗಳ ವೈಶಿಷ್ಟ್ಯ–ದೊಡ್ಡತಲೆ, ದಪ್ಪದೇಹ, ಬಲು ಉದ್ದ ಮತ್ತು ಕಡಿಮೆ ಅಗಲದ ರೆಕ್ಕೆಗಳು, ಚಿಕ್ಕ ಬಾಲ, ಬಲು ದಪ್ಪವಾಗಿ ಕೊಕ್ಕೆಯಂತೆ ಬಾಗಿರುವಕೊಕ್ಕು, ಕೊಕ್ಕನ್ನು ಆವರಿಸಿರುವ ಕೊಂಬಿನ ಫಲಕ, ಮೇಲು ಕೊಕ್ಕಿನ ಉಭಯ ಪಾರ್ಶ್ವಗಳಲ್ಲಿ ನಳಿಗೆಯಾಕಾರದ ಹೊಳ್ಳೆಗಳು. ಗಿಡ್ಡ ಕಾಲುಗಳು ಜಾಲಪಾದಗಳು; ಬೆಳೆದ ಪಕ್ಷಿಯ ಭಾರ ಸುಮಾರು 25 ಪೌಂಡ್. ರೆಕ್ಕೆಗಳನ್ನು ಬಿಡಿಸಿದಾಗ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಸುಮಾರು $11^{1/2}$ ಅಡಿ ಉದ್ದ. ಆಲ್ಬಟ್ರಾಸ್ ಆಯುಷ್ಯದ ಅಧಿಕಭಾಗವನ್ನು ಸಮುದ್ರಗಳ ಎತ್ತರದಲ್ಲಿ ತೇಲುತ್ತ ಕಳೆಯುತ್ತದೆ. ತೆರೆದ ದೊಡ್ಡ ರೆಕ್ಕೆಗಳಿಂದ ಗಂಟೆಗಟ್ಟಲೆ ನಿಶ್ಚಲವಾಗಿ ನಿಲ್ಲಬಲ್ಲ ಅಥವಾ ಸಮುದ್ರಗಾಮಿ ಹಡಗನ್ನು ಒಂದೇ ಎತ್ತರದಲ್ಲಿ ಆ ಹಡಗಿನ ಒಂದು ಅಂಶವೋ ಎಂಬಂತೆ ಹಿಂಬಾಲಿಸಬಲ್ಲ ಈ ಹಕ್ಕಿ ಕಡಲವಲಯದ ಮಹಾದ್ಭುತಗಳಲ್ಲೊಂದು. ನೀರಿನ ರಾಶಿಯ ಮಧ್ಯೆ ನೆಲಕಂಡೇವೇ ನಾಗರಿಕತೆಯ ಸುಳುವು ದೊರೆತೀತೇ ಎಂಬ ಹಂಬಲಿಕೆಯಿಂದ ಸಾಗುವ ನಾವಿಕರಿಗೆ ಎತ್ತರದ ಈ ಒಡನಾಡಿ ಶುಭಸಂಕೇತವೂ



ಹೌದು, ಮೌನಸಹಗಾಮಿಯೂ ಹೌದು. ಈ ಕಾರಣದಿಂದ ಪ್ರಾಚೀನ ನಾವಿಕರಲ್ಲಿ ಆಲ್ಬಟ್ರಾಸನ್ನು ಕೊಲ್ಲತಕ್ಕದ್ದಲ್ಲ ಎಂಬ ಒಂದು ಸತ್ಸಂಪ್ರದಾಯ ಬೆಳೆದು ಬಂದಿತ್ತು. ಕೋಲ್‌ರಿಜ್ ಕವಿ ಎನ್ಷಂಟ್ ಮ್ಯಾರಿನರ್ ಎಂಬ ಕವನದಲ್ಲಿ ಈ ಆಲ್ಬಟ್ರಾಸ್ ಪ್ರತಿಮೆಯನ್ನು ಸುಂದರವಾಗಿ ಬಳಸಿದ್ದಾನೆ.

ಆಲ್ಬಟ್ರಾಸ್ ಹಕ್ಕಿಗಳು ಸಾಮಾನ್ಯವಾಗಿ $30^0$ ದ. ಅಕ್ಷಾಂಶದಿಂದ ಅಂಟಾರ್ಕ್‌ಟಿಕ ದವರೆಗಿನ ದಕ್ಷಿಣ ಸಮುದ್ರಗಳಲ್ಲೂ ಉತ್ತರ ಪೆಸಿಫಿಕ್ ಸಾಗರದಲ್ಲಿ ಬೇರಿಂಗ್ ಸಮುದ್ರಗಳಲ್ಲಿಯೂ ಹೆಚ್ಚಾಗಿವೆ. ಸಂತಾನವೃದ್ಧಿಯ ಕಾಲವನ್ನು ಬಿಟ್ಟು ಉಳಿದ ವೇಳೆಯೆಲ್ಲ ಸಮುದ್ರದ ಎತ್ತರದ ಗಾಳಿಯ ತರಂಗ ಸಂಸ್ತರಗಳ ನಡುವೆಯೇ ಇವುಗಳ ವಾಸ. ಎಂಥ ಚಂಡಮಾರುತ ಬೀಸುವಾಗಲೂ ಸುಂಟರಗಾಳಿಗಳು ಸುತ್ತುತ್ತಿರುವಾಗಲೂ ಆಲ್ಬಟ್ರಾಸ್‌ಗಳು ಘಾತಿಗೊಳ್ಳದೆ ಬಲು ಚಳಕದಿಂದ ತೇಲುತ್ತಿರುತ್ತವೆ. ಇವು ಸಂಚರಿಸುವ ದೂರ ಊಹೆಗೆ ಮೀರಿದ್ದು. ಇದರ ಪರೀಕ್ಷೆ ಮಾಡಲು ಹಕ್ಕಿಗಳನ್ನು ಸೆರೆಹಿಡಿದು ಅವುಗಳ ಮೈಗೆ ಗುರುತುಮಾಡಿದ ಫಲಕಗಳನ್ನು ಜೋಡಿಸಿ ವಿಮಾನಗಳಲ್ಲಿ ಸಾವಿರಾರು ಕಿ.ಮೀ. ದೂರ ತೆಗೆದುಕೊಂಡುಹೋಗಿ ಬಿಡುಗಡೆ ಮಾಡಿದರು. ಆದರೆ ಹಕ್ಕಿಗಳಿಗೆ ದಿಕ್ಕು ತಪ್ಪಲಿಲ್ಲ. ಮೊದಲ ಆಸರೆಯ ವಾಸನೆ ಮರೆಯಲಿಲ್ಲ. 12 ದಿವಸಗಳಲ್ಲಿ ಸುಮಾರು 5040 ಕಿ.ಮೀ.ಗಳನ್ನು ಒಂದು ಹಕ್ಕಿ ಹಾರಿ ಅದರ ಪೂರ್ವಕ್ಷೇತ್ರವನ್ನು ತಲುಪಿದ್ದರೆ ಇನ್ನೊಂದು ಹಕ್ಕಿ 5120 ಕಿ.ಮೀ.ಗಳನ್ನು ಕೇವಲ 10 ದಿವಸಗಳಲ್ಲಿ ಗಮಿಸಿತ್ತು. 9600 ಕಿ.ಮೀ. ಹಾರಿದ ಆಲ್ಬಟ್ರಾಸನ್ನು ಗುರುತಿಸಲಾಗಿದೆ.

ಗಂಡು ಹೆಣ್ಣು ಆಲ್ಬಟ್ರಾಸ್‌ಗಳೆರಡೂ ಸಂತಾನವೃದ್ಧಿಕಾಲದಲ್ಲಿ ನೆಲದೆಡೆಗೆ ಸಾಗುತ್ತವೆ. ಅವುಗಳ ಪ್ರಣಯವಿನ್ಯಾಸಗಳು, ಭಾವಪ್ರಕಟಣೆ ಎಲ್ಲವೂ ವಿಚಿತ್ರ, ಮಧುಋತು ಸೆಪ್ಟೆಂಬರಿನಿಂದ ಫೆಬ್ರವರಿವರೆಗೆ, ಮೇ ಜೂನ್ ತಿಂಗಳು ಮೊಟ್ಟೆಯಿಡುವ ಕಾಲ. ಅಗಮ್ಯ ಪ್ರದೇಶಗಳಲ್ಲಿ ನೆಲದ ಮೇಲಿನ ಗುಳಿಯಲ್ಲಿಯೋ ಕಿರಿದೆತ್ತರದ ಹುಲ್ಲುಪೊದೆಯಲ್ಲಿಯೋ ಮೊಟ್ಟೆಗಳನ್ನು ಎಚ್ಚರದಿಂದ ಇಡುತ್ತವೆ. ಒಂದು ಗರ್ಭಸ್ಥ ಹೆಣ್ಣು ಹಕ್ಕಿ ಒಂದು ಋತುವಿನಲ್ಲಿ ಒಂದೇ

ಮೊಟ್ಟೆಯನ್ನು ಇಡುವುದು. ಸುಮಾರು 6 ಕೋಳಿಮೊಟ್ಟೆಗಳ ಒಟ್ಟು ಘನಗಾತ್ರದಷ್ಟು ದೊಡ್ಡದು, ಈ ಒಂದು ಮೊಟ್ಟೆ, ಬಣ್ಣ ಸಾಮಾನ್ಯವಾಗಿ ಬಿಳಿ. ಒಮ್ಮೊಮ್ಮೆ ಕಂದು ಮಚ್ಚೆಗಳೂ ಇರುವುದುಂಟು; ಮುಟ್ಟಲು ಚಾಕ್‌ನಂತೆ ದೊರಗು. ತಂದೆ ತಾಯಿ ಹಕ್ಕಿಗಳೆರಡೂ ಸರತಿ ಮೇಲೆ ತಮ್ಮ ಭಾವೀ ಸಂತತಿಯ ಮೇಲೆ ಕಾವು ಕೂರುತ್ತವೆ. ಇದರ ಅವಧಿ 70–80 ದಿವಸಗಳು. ಮುಂದೆ ತತ್ತಿ ಒಡೆದು ಹೊರಬರುವ ಸುಂದರ ಶ್ವೇತ ಮರಿ ಆಲ್ಬಟ್ರಾಸ್ ತಂದೆ ತಾಯಿಯರನ್ನೇ ಆಶ್ರಯಿಸಿ ಜೀವನದ ಹೆಜ್ಜೆಗಳನ್ನು ಕಲಿಯುತ್ತದೆ. ಇದು ಎಂಟು ತಿಂಗಳ ಕಾಲವೇ ನಡೆಯಬಹುದು. ಆ ಹೊತ್ತಿಗೆ ಸಂಗಾತಿಗಳಿಂದ, ಮಹಾ ಸಮುದ್ರಗಳಿಂದ ಸಾಕಷ್ಟು ದೀರ್ಘಕಾಲ ದೂರವಿದ್ದ ತಂದೆತಾಯಿ ಹಕ್ಕಿಗಳು ಮರಿಯ ವ್ಯಾಮೋಹ ತೊರೆದು ಮಹಾವೈಶಾಲ್ಯಕ್ಕೆ ನೆಗೆದು ಮಾಯವಾಗುತ್ತವೆ. ಇನ್ನು ನಿರ್ವಾಹಕವಿಲ್ಲದೆ ಮರಿ ಸ್ವತಂತ್ರವಾಗಿ ಹಿರಿಯರ ಜಾಡನ್ನು ಅರಸಿ ಸಾಗುತ್ತದೆ ಆಲ್ಬಟ್ರಾಸ್‌ಗಳ ಸಂತಾನವೃದ್ಧಿ ಅವಧಿ ಸುಮಾರು 2 ವರ್ಷಗಳು.

ಇವುಗಳ ಆಹಾರ ಕಿರಿಯ ಜಲಚರಗಳು. ವಿಶೇಷವಾಗಿ ಮೀನು. ಸಮುದ್ರದ ಉಪ್ಪುನೀರನ್ನು ಅವು ಯಥೇಚ್ಛವಾಗಿ ಹೀರಿ ಸಂಗ್ರಹವಾದ ಅನಾವಶ್ಯಕ ಉಪ್ಪನ್ನು ಹೊಳ್ಳೆಯ ಗ್ರಂಥಿಗಳಿಂದ ವಿಸರ್ಜಿಸುತ್ತವೆ. ಎಲ್ಲ ಪ್ರಾಣಿಗಳಂತೆಯೆ ಆಲ್ಬಟ್ರಾಸ್‌ಗಳ ಮಹಾ ಮತ್ತು ಪ್ರಥಮ ಶತ್ರು ಮನುಷ್ಯ. ಎಡೆತಡೆಯಿಲ್ಲದ ಹತ್ಯಾಕಾಂಡದಿಂದ ಕೆಲವು ಪ್ರಭೇದಗಳು ನಿರ್ನಾಮವಾಗಿ ಹೋಗಿವೆ. (ಜಿ.ಎಂ.ಬಿ.)

**ಆಲ್ಬರ್ಟ್:** 1819–61. ಪ್ರಿನ್ಸ್ ಆಲ್ಬರ್ಟ್ ಎಂಬ ಹೆಸರಿನಿಂದ ಪ್ರಸಿದ್ಧನಾದ ಈತ ಇಂಗ್ಲೆಂಡಿನ ವಿಕ್ಟೋರಿಯ ರಾಣಿಯ ಗಂಡ. ತಂದೆ ಜರ್ಮನಿಯ ಸ್ಯಾಕ್ಸ್–ಕೊಬರ್ಗ್–ಗೋಥಾದ ಡ್ಯೂಕ್ ಅರ್ನೆಸ್ಟ್. ತಾಯಿ ಲೊಯಿಸಾ ಸ್ಯಾಕ್ಸ್–ಗೋಥಾ ಅಲ್ಟೆನ್‌ಬರ್ಗ್ ಡ್ಯೂಕನ ಮಗಳು. ಬಾಲ್ಯ ಕಾರ್ಪಣ್ಯದ ಜೀವನದಲ್ಲಿ ಕಳೆಯಿತು. ಮುಂದೆ ಬ್ರಸಲ್ಸ್ ಮತ್ತು ಬಾನ್ ನಗರಗಳಲ್ಲಿ ಉಚ್ಚ ಶಿಕ್ಷಣ ಪಡೆದು ತುಂಬ ಮೇಧಾವಿ, ಶ್ರದ್ಧಾವಂತನೆಂದು ಹೆಸರು ಪಡೆದ. ಆದರೂ ತನ್ನ ಪ್ರಾಂತ್ಯದ ನಡೆನುಡಿ, ದೃಷ್ಟಿ, ಭಾವನೆಗಳಿಗೆ ಕೊನೆಯವರೆಗೂ ಅಂಟಿಕೊಂಡೇ ಇದ್ದ. ತಾರುಣ್ಯದಲ್ಲಿ ಅವನ ಸಲಹೆಗಾರನಾಗಿ (ಮೆಂಟಾರ್) ನೇಮಿಸಲ್ಪಟ್ಟಿದ್ದ ಬ್ಯಾರನ್ ಸ್ಟಾಕ್‌ಮಾರ್ ಸಂದರ್ಭ ಸಾಧಕ ಮತ್ತು ಸ್ವಾರ್ಥಿಯಾದುದರಿಂದ ಅವನಿಂದಲೂ ಸರಿಯಾದ ರಾಜಕೀಯ ಶಿಕ್ಷಣ ದೊರಕಲಿಲ್ಲ. ಆಲ್ಬರ್ಟ್ ಸ್ಫುರದ್ರೂಪಿ; ಅವನದು ಆಕರ್ಷಕ ವ್ಯಕ್ತಿತ್ವ. ಇಂಗ್ಲೆಂಡಿನ ಸಾಮ್ರಾಜ್ಞಿ ವಿಕ್ಟೋರಿಯಾಳನ್ನು 1840ರಲ್ಲಿ ಮದುವೆಯಾದ. 1842ರಲ್ಲಿ ಕಾನ್ಸಾರ್ಟ್ (ರಾಣಿಯ ಪತಿ) ಎಂಬ ಪ್ರಶಸ್ತಿಯೂ 1857ರಲ್ಲಿ ಪ್ರಿನ್ಸ್ ಕಾನ್ಸಾರ್ಟ್ (ರಾಣಿಯ ಪತಿಯಾದ ರಾಜಕುಮಾರ) ಎಂಬ ಬಿರುದೂ ಅವನಿಗೆ ವಿಧ್ಯುಕ್ತವಾಗಿ ಬಂದವು. ಇಂಗ್ಲೆಂಡಿನ ಮಂತ್ರಿವರ್ಗದವರಿಗೆ ಅವನಲ್ಲಿ ಸಂಶಯ; ಜನತೆಗೂ ಅವನು ಜರ್ಮನಿಯವನಾದ್ದರಿಂದ ಅಪನಂಬಿಕೆ. ಆದರೂ ರಾಣಿಯ ಮೂಲಕ ಮಂತ್ರಿಗಳಿಗೆ ತಿಳಿದುಬಂದ ಅವನ ಅನೇಕ ರಾಜಕೀಯ ಸಲಹೆಗಳು ಅವನ ಪರಿಜ್ಞಾನವನ್ನೂ ದೂರದರ್ಶಿತ್ವವನ್ನೂ ತೋರಿಸಿದುವು. ರಾಜಕೀಯದಲ್ಲಿ ತನಗೆ ಆಸ್ಪದವಿಲ್ಲದುದನ್ನು ಕಂಡು ಆಲ್ಬರ್ಟ್ ಕಲೆ, ಸಮಾಜ ಕಲ್ಯಾಣ, ಆರ್ಥಿಕ ಪ್ರಗತಿಗಳಂಥ ವಿಷಯಗಳಲ್ಲಿ ಆಸಕ್ತಿ ವಹಿಸಿ ಶ್ರದ್ಧೆಯಿಂದ ದುಡಿದ. 1851ರ ಗ್ರೇಟ್ ಎಗ್ಸಿಬಿಷನ್ (ವಸ್ತುಪ್ರದರ್ಶನ) ಯಶಸ್ವಿಯಾಗಿ ಎಲ್ಲರಿಂದಲೂ ಮೆಚ್ಚುಗೆ ಪಡೆದಿದ್ದು ಅವನ ಶ್ರಮದ ಫಲವಾಗಿ. *

**ಆಲ್ಬರ್ಟ್ I:** 1875–1934. ಬೆಲ್ಜಿಯಂನ ದೊರೆ. 1909ರಲ್ಲಿ ಸಿಂಹಾಸನವನ್ನೇರಿದ. ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗೆ ಬಹಳ ಶ್ರಮಿಸಿದ. ದೇಶದ ಸೈನ್ಯಬಲವನ್ನು ಮೂರೂವರೆ ಲಕ್ಷಕ್ಕೇರಿಸಿದ. ಕಲೆ ಸಾಹಿತ್ಯಗಳಲ್ಲಿ ಅವನಿಗೆ ಅಧಿಕಾಸಕ್ತಿ; ಅವುಗಳ ಬೆಳವಣಿಗೆಗೂ ಅಪಾರ ಪ್ರೋತ್ಸಾಹ ನೀಡಿದ. ಮೊದಲ ಮಹಾಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ, ತನ್ನ ದೇಶದ ತಾಟಸ್ಥ್ಯ ನೀತಿಯನ್ನು ಗೌರವಿಸಬೇಕೆಂದು ಜರ್ಮನಿಯ ದೊರೆಗೆ ತಿಳಿಸಿದ. ಅದನ್ನು ಅಲಕ್ಷಿಸಿ ಜರ್ಮನಿಯ ಸೈನ್ಯ ಬೆಲ್ಜಿಯಂಗೆ ನುಗ್ಗಿದಾಗ ಸೇನಾಧಿಪತ್ಯವನ್ನು ತಾನೇ ವಹಿಸಿ ಹೋರಾಡಿದ. ಯುದ್ಧ ಮುಗಿಯುವವರೆಗೂ ರಣರಂಗದಲ್ಲೇ ನಿಂತು ಇತರ ಸೈನಿಕರಂತೆ ಶತ್ರುವನ್ನೆದುರಿಸಿ ಯುದ್ಧ ಮುಗಿದ ಮೇಲೆ ತನ್ನ ದೇಶ ತಾಟಸ್ಥ್ಯ ನೀತಿಯನ್ನನುಸರಿಸುವುದಿಲ್ಲವೆಂದು ಮಿತ್ರ ರಾಷ್ಟ್ರಗಳಿಗೆ ತಿಳಿಸಿದ. ಬೆಟ್ಟ ಹತ್ತುತ್ತಿದ್ದಾಗ ಅಪಘಾತಕ್ಕೀಡಾಗಿ ಕಾಲವಾದ. *

**ಆಲ್ಬರ್ಟ್ ದೊರೆಗಳು:** ಪವಿತ್ರ ರೋಮನ್ ಚಕ್ರಾಧಿಪತ್ಯವನ್ನಾಳಿದವರಲ್ಲಿ ಈ ಹೆಸರಿನ ಇಬ್ಬರು ಗಣ್ಯರಾಗಿದ್ದಾರೆ.

**ಆಲ್ಬರ್ಟ I:** (ಸು. 1250–1308). ರುಡಾಲ್ಫ್ 1ನ ಮಗ. ಜರ್ಮನಿಯ ದೊರೆ. ತುಂಬ ಸಮರ್ಥನೆಂದು ಹೆಸರು ಪಡೆದಿದ್ದ. ಅವಿಧೇಯರಾಗಿದ್ದ ಸಾಮಂತರ ಪುಂಡಾಟವನ್ನು ಅಡಗಿಸಿ ನಮ್ರತೆಯಿಂದ ವರ್ತಿಸುವಂತೆ ಮಾಡಿದ. ಅವನ ದಾಯಾದಿ ಜಾನ್, ತನ್ನನ್ನು ಸ್ವಾಬಿಯದ ಡ್ಯೂಕನ್ನಾಗಿ ಮಾಡಬೇಕೆಂದು ಕೇಳಿಕೊಂಡಿದ್ದ. ಆಲ್ಬರ್ಟ್ ಅದನ್ನು ನಿರಾಕರಿಸಿದ್ದ. ಈ ಕಾರಣದಿಂದ ಜಾನ್ ಮತ್ಸರವನ್ನು ಬೆಳೆಸಿ ಆಲ್ಬರ್ಟ್ ಹೊಳೆಯನ್ನು ದೋಣಿಯಲ್ಲಿ ದಾಟುತ್ತಿದ್ದಾಗ ಕೊಂದುಹಾಕಿದ.

**ಆಲ್ಬರ್ಟ್ II:** (1397–1439). ಆಸ್ಟ್ರಿಯದ ಡ್ಯೂಕ್ ಆಲ್ಬರ್ಟ್ IVನ ಮಗ. ತಂದೆ 1404ರಲ್ಲಿ ಕಾಲವಾದ. ಅನಂತರ ಏಳುವರ್ಷ ಕಾಲ ರಾಜಪ್ರತಿನಿಧಿ ಅಥವಾ ರೀಜೆಂಟ್ ಆಗಿ ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. ತನ್ನ ಹದಿನಾಲ್ಕನೆಯ ವಯಸ್ಸಿನಲ್ಲೇ ರಾಜಕಾರ್ಯದಲ್ಲಿ ಭಾಗವಹಿಸತೊಡಗಿ ಅನೇಕ ಆರ್ಥಿಕ ಮತ್ತು ಸೈನಿಕ ಸುಧಾರಣೆಗಳನ್ನು ಜಾರಿಗೆ ತಂದ. ಜರ್ಮನಿಯ ದೊರೆ ಸಿಜಿಸ್ಮಂಡ್ ಕಾಲವಾದಮೇಲೆ ಅವನ ಅಳಿಯನಾಗಿದ್ದ ಇವನನ್ನು ಜರ್ಮನಿ, ಹಂಗೆರಿ ಮತ್ತು ಬೊಹಿಮಿಯ ರಾಜ್ಯಗಳ ದೊರೆಯನ್ನಾಗಿ ಆರಿಸಿದರು (1438). ಈ ರಾಜ್ಯಗಳ ಏಳಿಗೆಗೂ ನಿರ್ದಿಷ್ಟವಾದ ರಾಜಕೀಯ ಧೋರಣೆ ಮತ್ತು ಯೋಜನೆಗಳನ್ನು ರೂಪಿಸಿಕೊಂಡಿದ್ದ. ಇವನಿಂದ ಹ್ಯಾಪ್ಸಬರ್ಗ್ ಮನೆತನದ ಆಡಳಿತ ಪ್ರಾರಂಭವಾಯಿತು. *

**ಆಲ್ಬರ್ಟ್ ಸರೋವರ:** ಆಫ್ರಿಕದ ಕಾಂಗೊ ಗಣರಾಜ್ಯದ ಪೂರ್ವ ಸರಹದ್ದಿನಲ್ಲಿದೆ. ವಿಸ್ತೀರ್ಣ 2,064 ಚ.ಮೈ. ಉದ್ದ ಸು. 160 ಕಿ.ಮೀ. ಅಗಲ ಸು 36 ಕಿ.ಮೀ. ಆಳ ಸು. 50'. ಸಮುದ್ರಮಟ್ಟಕ್ಕಿಂತ 2,018' ಎತ್ತರದಲ್ಲಿದೆ. ಬಂಡೆಯ ಕಡಿದಾದ ಮುಖಗಳಿಂದಲೂ ಅರಣ್ಯಮಯವಾದ ಇಳುಕಲುಗಳಿಂದಲೂ ಆವರಿಸಲ್ಪಟ್ಟಿವೆ. ಹತ್ತಿರದ ನೀರಿನ ಬುಗ್ಗೆಗಳಿಂದ ಬೇಸಗೆಯಲ್ಲಿ ಲವಣಗಳನ್ನು ತಯಾರಿಸುತ್ತಾರೆ. ಸೆಂಲಿಕಿ ಮತ್ತು ವಿಕ್ಟೋರಿಯ ನೈಲ್ ನದಿಗಳು ಇದಕ್ಕೆ ಬಂದು ಸೇರುತ್ತವೆ. ಬೆಹ್ರ್ ಎಲ್ ಜೆಬೆಲ್ ಎಂಬ ನದಿ ಈ ಸರೋವರದಿಂದ ಹೊರಟು ಉತ್ತರಕ್ಕೆ ಹರಿದು ಬೆಹ್ರ್ ಎಲ್ ಘಸಲ್ ಎಂಬ ನದಿಯನ್ನು ಸೇರುತ್ತವೆ. ಈ ಸಂಗಮವೇ ವೈಟ್ ನೈಲ್ ನದಿಯ ಮೂಲ. ಬೆಹ್ರ್ ಎಲ್ ಜೆಬೆಲ್ ನದಿಯನ್ನು ಆಲ್ಬರ್ಟ್‌ನೈಲ್ ಎಂದೂ ಕರೆಯುತ್ತಾರೆ. ಸರೋವರದ ದಕ್ಷಿಣಕ್ಕೆ ನಯಾನ್ ಝಾ ಎಂಬ ದೊಡ್ಡ ಬಯಲು ಸೆಂಲಿಕಿ ನದಿಯಿಂದ ಸುತ್ತುವರಿದಿದೆ. ಈ ಸರೋವರದಿಂದ ವಿಕ್ಟೋರಿಯ ನೈಲ್ ನದಿಯ ಮರ್ಚಿಸನ್ ಜಲಪಾತದವರೆಗೂ ಹಡಗು ಸಂಚಾರ ವ್ಯವಸ್ಥೆಯಿದೆ. ಸರ್ ಸ್ಯಾಮ್ಯುಯಲ್ ಬೇಕರ್ ಎಂಬ ಆಂಗ್ಲೇಯ ಇದನ್ನು 1864ರಲ್ಲಿ ಕಂಡುಹಿಡಿದು ವಿಕ್ಟೋರಿಯ ರಾಣಿಯ ಪತಿ ಆಲ್ಬರ್ಟನ ಹೆಸರನ್ನು ಈ ಸರೋವರಕ್ಕೆ ಇಟ್ಟ. ಇದಕ್ಕೆ ಆಲ್ಬರ್ಟ್ ನ್ಯಾನ್ಜ ಎಂದೂ ಹೆಸರಿದೆ. (ಪಿ.ಜಿ.)

**ಆಲ್ಬರ್ಟಸ್ ಮ್ಯಾಗ್ನಸ್:** (1206–80). ಜರ್ಮನಿಯ ವಿದ್ವಾಂಸ, ತಾರ್ಕಿಕ ಮತ್ತು ಧರ್ಮಬೋಧಕ. ಈತನ ಇನ್ನೊಂದು ಹೆಸರು ಆಲ್‌ಬರ್ಟ್ ಕೌಂಟ್ ಆಫ್ ಬೋಲ್‌ಸ್ಟಾಟ್. ಹುಟ್ಟಿದ್ದು ಲ್ಯಾನಿಂಜೆನ್‌ನಲ್ಲಿ; ಸತ್ತದ್ದು ಕೊಲೋನ್‌ನಲ್ಲಿ. ಶ್ರೀಮಂತ ಕುಲದಲ್ಲಿ ಜನ್ಮವೆತ್ತಿ ಇಟಲಿಯ ಪಡುವ ಮತ್ತು ಬೊಲೋನ, ಫ್ರಾನ್ಸಿನ ಪ್ಯಾರಿಸ್ ಮತ್ತು ಜರ್ಮನಿಯ ಕೊಲೋನ್ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸಮಾಡಿದ. ಪಡುವದಲ್ಲಿ ಸಂತ ಡಾಮಿನಿಕ್‌ನ ಪಂಥಕ್ಕೆ ಸೇರಿದ. ಅನಂತರ ಪ್ಯಾರಿಸ್ ನಗರದಲ್ಲಿ ಕೆಲಕಾಲ ಬೋಧಕನಾಗಿದ್ದ. ಅಲ್ಲಿ ಪ್ರಸಿದ್ಧ ತತ್ತ್ವ ಜಿಜ್ಞಾಸು ಥಾಮಸ್ ಅಕ್ವಿನಸ್ ಅವನ ಶಿಷ್ಯನಾದ. 1260–67ರವರೆಗೆ ರೊಸನ್‌ಬರ್ಗ್ ನಗರದಲ್ಲಿ ಬಿಷಪ್ ಆಗಿದ್ದ. ಕ್ರೈಸ್ತಧರ್ಮದ ಬೋಧನೆಗೆ ಗ್ರೀಕ್ ಮತ್ತು ಅರಬ್ಬೀ ತತ್ತ್ವಶಾಸ್ತ್ರಗಳ ಮತ್ತು ವಿಜ್ಞಾನದ ಉಪಯುಕ್ತತೆ ಎಷ್ಟೆಂಬುದನ್ನು ಕಂಡುಕೊಂಡವರಲ್ಲಿ ಈತ ಮೊದಲಿಗ. ಆದ್ದರಿಂದ ಅರಿಸ್ಟಾಟಲನ ಕೃತಿಗಳನ್ನು ಕುರಿತು ವಿಪುಲವಾಗಿ ಟೀಕೆ ಟಿಪ್ಪಣಿಗಳನ್ನು ರಚಿಸಿ ತನ್ನ ಸಮಕಾಲೀನರ ಜ್ಞಾನದಾಹವನ್ನು ನಿವಾರಿಸಲು ಕೈಲಾದಷ್ಟು ಪ್ರಯತ್ನಿಸಿದ. ತಮ್ಮದಲ್ಲದ ತಿಳಿವಿನ ಪ್ರಸರಣಕ್ಕಾಗಿ ಅವನಷ್ಟು ಶ್ರಮಿಸಿದರು ಜಗತ್ತಿನಲ್ಲಿ ಬಹುಮಂದಿ ಇರಲಾರರು. ಹದಿಮೂರನೆ ಶತಮಾನದಲ್ಲಿ ಪಶ್ಚಿಮ ಯೂರೋಪಿನ ಜನರಿಗೆ ಜ್ಞಾನಾರ್ಜನೆಯಲ್ಲಿದ್ದ ಅಪೂರ್ವವಾದ ಆಸಕ್ತಿಯನ್ನು ತೃಪ್ತಿಪಡಿಸಲು ಶ್ರಮಿಸಿದವರಲ್ಲಿ ಈತನ ಹೆಸರು ಮಿಕ್ಕೆಲ್ಲರದಕ್ಕಿಂತಲೂ ಹೆಚ್ಚು ಗಣನೀಯವಾದುದು. ತತ್ತ್ವಜ್ಞಾನ ವಿಜ್ಞಾನ ಎರಡು ಕ್ಷೇತ್ರಗಳಲ್ಲೂ ಅರಿಸ್ಟಾಟಲನ ಆಲೋಚನೆಗಳು ಪಶ್ಚಿಮ ಯೂರೋಪಿನಲ್ಲಿ ಹಬ್ಬಲು ಕಾರಣರಾದವರಲ್ಲಿ ಈತ ಪ್ರಮುಖನೆನ್ನಿಸಿಕೊಂಡಿದ್ದಾನೆ. ಕ್ರೈಸ್ತಮತಕ್ಕೆ ಅರಿಸ್ಟಾಟಲನ ತತ್ತ್ವಗಳನ್ನು ಹೊಂದಿಸಿಕೊಂಡು ಸ್ಕೊಲ್ಯಾಸ್ಟಿಕ್ ಪಂಥವನ್ನು ಸ್ಥಾಪಿಸಿದವನು ಈತನೇ. ಆ ಕಾಲಕ್ಕೆ ತೀರಾ ಪ್ರಗತಿಪರವೆನ್ನಬಹುದಾದಷ್ಟು ಮಟ್ಟಿಗೆ ಈತ ಪ್ರಾಯೋಗಿಕ ವಿಜ್ಞಾನದಲ್ಲಿ ಪರಿಶ್ರಮ ಪಡೆದಿದ್ದ. ಮುಂದೆ ಬಂದ ವಿಚಾರಪರರ ಮೇಲೆ ಇವನ ಬರಹಗಳೂ ಬೋಧನೆಗಳೂ ಬಹಳ ಪ್ರಭಾವಕಾರಿಯಾದವು. 1937ರಲ್ಲಿ ಇವನಿಗೆ ಸಂತಪದವಿ ಲಭಿಸಿತು. ಈತನಿಗೆ ವಿಶ್ವವಿದ್ಯಾಪ್ರವೀಣ ಎಂಬ ಖ್ಯಾತಿ ಇತ್ತು. ಮತಶಾಸ್ತ್ರದ ವಿಶ್ವಕೋಶ ಮತ್ತು ಪೀಟರ್ ಲ್ಯಾಂಬಾರ್ಡ್‌ನ ಬುಕ್ಸ್ ಆಫ್ ಸಂಟೆನ್ಸಸ್ ಎಂಬ ಗ್ರಂಥದ ಟೀಕೆ–ಈತನ ಮುಖ್ಯ ಗ್ರಂಥಗಳು. (ಎಂ.ಆರ್.;ಜಿ.ವಿ.ಎಸ್.)

**ಆಲ್ಬರ್ಟ ಲಿಅನ್ ಬ್ಯಾಟಿಸ್ಟ:** (1404–72). ಹದಿನೈದನೆಯ ಶತಮಾನದ ಇಟಲಿಯ ವಿಜ್ಞಾನಿ. ಕಲೆಗಾರ, ಸಾಹಿತಿ, ಗಣಿತಶಾಸ್ತ್ರಜ್ಞ, ಶಿಲ್ಪಕಲೆ ಸಂಗೀತಶಾಸ್ತ್ರಗಳಲ್ಲಿ ಸರ್ವತೋಮುಖವಾದ ಪ್ರತಿಭೆಯನ್ನುಳ್ಳ ಪಂಡಿತ. ಹೊಸ ಹುಟ್ಟಿನ (ರೆನೈಸಾನ್ಸ್) ಕಾಲದ ಆದರ್ಶ ಸದ್ಗೃಹಸ್ಥರ ಪ್ರತೀಕವಾಗಿದ್ದ. ಶಿಲ್ಪಶಾಸ್ತ್ರ ನ್ಯಾಯಶಾಸ್ತ್ರಗಳನ್ನು ಕುರಿತ ಗ್ರಂಥಗಳನ್ನು ಇಟಾಲಿಯನ್ ಮತ್ತು ಲ್ಯಾಟಿನ್ ಭಾಷೆಗಳೆರಡರಲ್ಲೂ ರಚಿಸಿದ. ಇಟಾಲಿಯನ್ ಭಾಷೆಯನ್ನು ಬಹಳವಾಗಿ ಶ್ಲಾಘಿಸಿ, ಅದರ ಮಹತ್ತ್ವವನ್ನು ಎತ್ತಿ ಹಿಡಿಯಲು ಶ್ರಮಿಸಿದ. ಡೆಲ್ಲಾ

ಫ್ಯಾಮಿಲಿಯಾ ಎಂಬುದು ಇವನ ಅತ್ಯುತ್ತಮ ಗ್ರಂಥ. ಇದು ಸಂವಾದಗಳ ರೂಪದಲ್ಲಿರುವ ವಿಚಾರಪರಿಪ್ಲುತಕೃತಿ. ಮಕ್ಕಳ ವಿದ್ಯಾಭ್ಯಾಸಕ್ರಮ, ವಿವಾಹ, ಗೃಹಸ್ಥ ಜೀವನ, ತಂದೆಯಾದವನ ಕರ್ತವ್ಯ, ಗೆಳೆತನ–ಮುಂತಾದ ಲೌಕಿಕ ವಿಷಯಗಳನ್ನು ಕುರಿತದ್ದಾಗಿದೆ. (ಎಚ್.ಕೆ.ಆರ್.)

**ಆಲ್ಬರ್ಸ್, ಹೆನ್ರಿಚ್ ಡಬ್ಲ್ಯು ಎಂ:** (1758–1840). ಜರ್ಮನಿಯ ವಿಜ್ಞಾನಿ. ಶಿಕ್ಷಣ ವೈದ್ಯಶಾಸ್ತ್ರದಲ್ಲಿ, ವೃತ್ತಿ ಔಷಧವ್ಯಾಪಾರ. ಕುತೂಹಲ ಆಕಾಶವೀಕ್ಷಣೆ. ಹಗಲಿಡೀ ಮನುಷ್ಯ ದೇಹಗಳ ರಿಪೇರಿ ಮಾಡುತ್ತಿದ್ದ ಅಲ್ಬರ್ಸನಿಗೆ ಧೂಮಕೇತು ಶೋಧನೆ ಅತಿಪ್ರಿಯ ಹವ್ಯಾಸ. ಅವುಗಳ ಕಕ್ಷೆಗಳನ್ನು ನಿರ್ಧರಿಸಲು ಅವು ಒಂದು ವಿಧಾನವನ್ನು ರೂಪಿಸಿದ. ಇಂದು ಅದು ಪ್ರಚಲಿತವಿದೆ. ಐದು ಧೂಮಕೇತುಗಳನ್ನು ಶೋಧಿಸಿದ. ಅವುಗಳ ಪೈಕಿ 1815ರಲ್ಲಿ ಈತ ಮೊದಲಾಗಿ ಗುರುತಿಸಿದ ಧೂಮಕೇತು ಆಲ್ಬರ್ಸನ ಧೂಮಕೇತುವೆಂದೇ ಪ್ರಸಿದ್ಧವಾಗಿದೆ. ಮಂಗಳ ಮತ್ತು ಗುರು ಗ್ರಹಗಳ ಕಕ್ಷೆಗಳ ನಡುವಿನ ಪ್ರದೇಶದಲ್ಲಿ ಬೋಡನ ಸೂತ್ರದ (**ನೋಡಿ– ಬೋಡನ–ಸೂತ್ರ**) ಪ್ರಕಾರ ಇರಬಹುದಾದ ಕಾಯಗಳನ್ನು ಶೋಧಿಸುವವರ ತಂಡದಲ್ಲಿ ಇವನದು ಅಗ್ರಸ್ಥಾನ. ಉತ್ಸಾಹ ತಗ್ಗದ, ಎಡೆಬಿಡದ ಇವನ ದುಡಿಮೆ ಅವರಿಗೆ ಹುರುಪಿನ ಚಿಲುಮೆ. ಪಲ್ಲಾಸ್ ಮತ್ತು ವೆಸ್ತ ಎಂಬ ಕ್ಷುದ್ರ ಗ್ರಹಗಳನ್ನು ಕ್ರಮವಾಗಿ 1802 ಮತ್ತು 1807ರಲ್ಲಿ ಶೋಧಿಸಿದ. ಗ್ರಹಗಳು ಒಡೆದಾಗ ಅವುಗಳ ತುಂಡುಗಳೇ ಕ್ಷುದ್ರ ಗ್ರಹಗಳೆಂದು ತಿಳಿಸಿದವರಲ್ಲಿ ಇವನೇ ಮೊದಲಿಗ. ಇಂದಿಗೂ ಈ ಆಧಾರಭಾವನೆಯನ್ನು ಅಲ್ಲಗಳೆದವರಿಲ್ಲ. ಇದು ಸರಿಯಾದುದೆಂದೇ ನಂಬಿದವರು ಬಹಳ ಮಂದಿ ಇದ್ದಾರೆ. ಇವನ ಹೆಸರನ್ನು ಶಾಶ್ವತಗೊಳಿಸಲು ಕ್ಷುದ್ರ ಗ್ರಹಗಳ ಸಮುದಾಯದಲ್ಲಿ ಶೋಧಿಸಲಾದ 102ನೆಯ ಕಾಯವನ್ನು ಆಲ್ಬೇರಿಯಾ ಎಂದು ಕರೆದರು. ಆದರೆ ಆಲ್ಬರ್ಸನ ಹೆಸರು ಇಂದು ಪ್ರಸಿದ್ಧವಾಗಿರುವುದು ಬೇರೆಯೇ ಒಂದು ಕಾರಣದಿಂದ; ಆಲ್ಬರ್ಸನ ವಿರೋಧಾಭಾಸ (ಆಲ್ಬರ್ಸ್ ಪ್ಯಾರಡಾಕ್ಸ್) ಎಂದು ಅದರ ಹೆಸರು. 1826ರಲ್ಲಿ ಈತ ಮಂಡಿಸಿದ ಈ ತರ್ಕ ಬೆಳಕಿನ ಅರ್ಧಾಂಶ ಮಾತ್ರ ಸೂರ್ಯನಿಂದ ಬರುತ್ತದೆ; ಉಳಿದ ಅರ್ಧಾಂಶ ಆಕಾಶದ ಅಸಂಖ್ಯಾತ ನಕ್ಷತ್ರಗಳಿಂದ ಬರುತ್ತದೆ; ಹಾಗಾದರೆ ಮಧ್ಯರಾತ್ರಿಯ ಆಕಾಶ ನಕ್ಷತ್ರಗಳ ಬೆಳಕಿನಿಂದ ಪ್ರಕಾಶಮಯವಾಗಿರಬೇಕಷ್ಟೆ–ಅಂದರೆ ಆಕಾಶ ಕಪ್ಪಾಗಿರಲೇಬಾರದು; ಇದು ವಾಸ್ತವಿಕ ಪರಿಸ್ಥಿತಿಗೆ ವ್ಯತಿರಿಕ್ತ; ಆದ್ದರಿಂದ ವಿರೋಧಾಭಾಸ. ಆಕಾಶ ಅತಿ ದೊಡ್ಡ, ಕೋಟ್ಯಂತರ ಮೈಲಿ ವ್ಯಾಸವಿರುವ ಗೋಳ. ಇದರಲ್ಲಿ ಅಸಂಖ್ಯಾತ ನಕ್ಷತ್ರಗಳು ವಿವಿಧ ದೂರಗಳಲ್ಲಿ ದಟ್ಟೈಸಿವೆ. ಪ್ರತಿಯೊಂದು ನಕ್ಷತ್ರವೂ ಒಂದೊಂದು ಸೂರ್ಯ. ಆಕಾಶದಲ್ಲಿ ಯಾವ ದಿಕ್ಕಿನಲ್ಲಿಯೇ ಆಗಲಿ ದೂರ ದೂರ ಸಾಗಿದಂತೆ ನಕ್ಷತ್ರಸಾಂದ್ರತೆ ಏರುತ್ತ ಹೋಗುವುದು. ಈ ರೀತಿ ನಿಬಿಡವಾಗಿ ಪಸರಿಸಿರುವ ಅಸಂಖ್ಯಾತ ನಕ್ಷತ್ರಗಳಿಂದ ಮೊತ್ತವಾಗಿ ಭೂಮಿಗೆ ಬರುವ ಬೆಳಕು, ಉಷ್ಣ ಅಧಿಕವಾಗಿರಬೇಕು. ನಮ್ಮ ಮಧ್ಯರಾತ್ರಿಯೂ ಬೆಳಕಿನಿಂದ ಮಿರುಗುತ್ತಿರಬೇಕು, ಉಷ್ಣದಿಂದ ಬಿಸುಸುಯ್ಯುತ್ತಿರಬೇಕು. ಆದರೆ ವಾಸ್ತವಿಕ ಪರಿಸ್ಥಿತಿ ತದ್ವಿಪರೀತ–ಇದು ಆಲ್ಬರ್ಸನ ವಿರೋಧಾಭಾಸದ ವಿವರ. ಒಂದು ದೊಡ್ಡ ಬಯಲಿನ ಮಧ್ಯೆ ನಾವು ನಿಂತಿದ್ದೇವೆಂದು ಊಹಿಸೋಣ. ನಮ್ಮ ಸುತ್ತಲೂ ಎಲ್ಲ ಕಡೆಗಳಲ್ಲಿಯೂ ಎಲ್ಲ ದೂರಗಳಲ್ಲಿಯೂ ಅಸಂಖ್ಯಾತ ವಿದ್ಯುದ್ದೀಪಗಳನ್ನು ಉರಿಸಿದ್ದಾರೆಂದು ತಿಳಿಯೋಣ. ನಮ್ಮ ಸಮೀಪದಲ್ಲಿರುವ ಅತಿ ಪ್ರಕಾಶಮಾನವಾದ ದೀಪ ಸೂರ್ಯನೆಂದು ಭಾವಿಸಬಹುದು. ಈಗ ಈ ಒಂದು ದೀಪವನ್ನು ನಂದಿಸಿದರೆ ಬಯಲಿನಲ್ಲಿ ಪಸರಿಸಿರುವ ಪಸರಿಸುತ್ತಿರುವ ಬೆಳಕು, ಉಷ್ಣ, ಸ್ವಲ್ಪ ಕಡಿಮೆಯಾಗಬಹುದು; ಆದರೆ ಬಯಲು ಪೂರ್ಣ ಕಪ್ಪಾಗದಷ್ಟೆ, ನಕ್ಷತ್ರ ಸಂಖ್ಯೆ ಅನಂತವೆಂದು ಅಲ್ಬರ್ಸ್ ಭಾವಿಸಿದ್ದ. ಸಮೀಪದ ಸೂರ್ಯ ಕಾಂತಿದೊಡನೆ ದೂರ ನಕ್ಷತ್ರಗಳ ಬೆಳಕನ್ನು ಅಂತರ ನಕ್ಷತ್ರ ಪ್ರದೇಶಗಳಲ್ಲಿ ದಟ್ಟವಾಗಿ ಹಬ್ಬಿರುವ ಧೂಳು ಹೀರಿಕೊಳ್ಳುವುದರಿಂದ ರಾತ್ರಿಯ ಆಕಾಶ ಕಪ್ಪಾಗಿಯೇ ಇರುವುದೆಂದು ಆಲ್ಬರ್ಸ್ ಪರಿಹಾರಸೂಚಿಸಿದ್ದ. ಆದರೆ ವಿರೋಧಾಭಾಸವನ್ನು ಒಪ್ಪಿಕೊಂಡ ವಿಜ್ಞಾನಿಗಳು ಈ ಪರಿಹಾರದಲ್ಲಿ ಏನೋ ಕೊರತೆ ಇದೆ ಎಂದು ತಿಳಿದರು. ಖಗೋಳಶಾಸ್ತ್ರ ಒಂದು ಶತಮಾನಕಾಲವೇ ಈ ಗಂಟನ್ನು ಅಂಟಿಸಿಕೊಂಡು ಮುಂದುವರಿಯಬೇಕಾಯಿತು. 1842ರಲ್ಲಿ ಶೋಧವಾದ ಡಾಪ್ಲರ್ ಪರಿಣಾಮ (**ನೋಡಿ– ಡಾಪ್ಲರ್–ಪರಿಣಾಮ**) ಆಲ್ಬರ್ಸನ್ ವಿರೋಧಾಭಾಸಕ್ಕೆ ಸಮರ್ಪಕ ಉತ್ತರ ನೀಡಬಹುದಿತ್ತು. ಆದರೆ ತಜ್ಞರ ಗಮನ ಈ ಹೊಂದಾಣಿಕೆ ಮಾಡುವೆಡೆ ಹರಿಯಲಿಲ್ಲ. ವಿಶ್ವ ಅನಂತವಲ್ಲ, ನಕ್ಷತ್ರ ಸಂಖ್ಯೆ ಅನಂತವಲ್ಲ, ವಿಶ್ವ ಉಬ್ಬುತ್ತಿದೆ ಆದ್ದರಿಂದ ನಕ್ಷತ್ರಗಳು ಒಂದರಿಂದ ಇನ್ನೊಂದು ದೂರ ದೂರ ಸಾಗುತ್ತಿವೆ ಎಂದು 1924ರಿಂದೀಚೆಗೆ ನಡೆದ ಪ್ರಯೋಗಗಳಿಂದ, ವೀಕ್ಷಣೆಗಳಿಂದ ಸ್ಥಿರಪಟ್ಟಿತು. ಈ ದಾರಿಯಲ್ಲಿ ಡಾಪ್ಲರ್ ಪರಿಣಾಮದ ಪಾತ್ರ ಮಹತ್ತ್ವದ್ದು. ಅನಂತ ಸಂಖ್ಯೆಯಲ್ಲಿಲ್ಲದ ನಕ್ಷತ್ರಗಳು ವಿಶ್ವದ ಮಹಾವ್ಯಾಪ್ತಿಯ ಬೆಳಕಿನ ಅಭಾವವನ್ನು ಪರಿಣಾಮಕಾರಿಯಾಗಿ ನೀಗಲಾರವು; ಅಲ್ಲದೇ ಅವು ಒಂದರಿಂದ ಇನ್ನೊಂದು ದೂರ ದೂರ ಧಾವಿಸುತ್ತಿರುವುದರಿಂದ ಭೂಮಿಗೆ (ಅಥವಾ ಯಾವುದೇ ಪ್ರದೇಶಕ್ಕೆ) ಅವುಗಳಿಂದ ತಲಪುವ ಬೆಳಕು ಉಷ್ಣಗಳ ಮೊತ್ತ ಅತ್ಯಲ್ಪ; ಆದ್ದರಿಂದ ಭೂಮಿಯ ಹಗಲು, ರಾತ್ರಿ ಉಷ್ಣ ಮುಂತಾದವುಗಳ ನಿಯಂತ್ರಕ ನಕ್ಷತ್ರ ಸೂರ್ಯನೇ ಎಂದು ಸಿದ್ಧವಾಯಿತು. *

**ಆಲ್ಬಿ:** ಫ್ರಾನ್ಸಿನ ಟೂಲೋಜ್ ನಗರದಿಂದ 68 ಕಿ.ಮೀ. ದೂರದಲ್ಲಿ ಟಾರ್ನ್ ನದಿ ತಟದಲ್ಲಿದೆ. ಟಾರ್ನ್ ವಿಭಾಗದ ರಾಜಧಾನಿ. ಜನಸಂಖ್ಯೆ 41,400. ಗೋಥಿಕ್ ಮಾದರಿಯಲ್ಲಿ ನಿರ್ಮಿಸಲಾಗಿರುವ ಸಾಲವಿ, ಸೆಸಿಲಿ ಎಂಬೆರಡು ಪ್ರಾರ್ಥನಾಮಂದಿರಗಳು (ಕೆಥಡ್ರಲ್) ಇದೆ. ಇದರಲ್ಲಿ ಸೆಸಿಲಿ ಎಂಬುದು ದಕ್ಷಿಣ ಫ್ರಾನ್ಸಿನಲ್ಲಿಯೇ ಅತ್ಯಂತ ಸುಂದರವಾದುದು. ಕೋಟೆಯಾಗೂ ಉಪಯೋಗವಾಗುತ್ತಿದ್ದುದು ಇದರ ವೈಶಿಷ್ಟ್ಯ. ಸಿಮೆಂಟು, ಗಾಜು, ಕೃತಕ ರೇಷ್ಮೆಬಟ್ಟೆ ಮತ್ತು ಕೃಷಿಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳಿವೆ. *

**ಆಲ್ಬಿಜನ್ಸೀಸ್:** 11–13ನೆಯ ಶತಮಾನದಲ್ಲಿ ದಕ್ಷಿಣ ಫ್ರಾನ್ಸಿನ ಕೆಲವು ಕಡೆಗಳಲ್ಲಿ ಹರಡಿದ್ದ ಕ್ರೈಸ್ತೇತರ ಧರ್ಮೀಯರ ಗುಂಪು. ಕ್ರೈಸ್ತಧರ್ಮಕ್ಕೆ ವಿರುದ್ಧವಾಗಿದ್ದ ಮತಾಭಿಪ್ರಾಯ ಗಳನ್ನು ಹೊಂದಿದ್ದರಿಂದ ಇವರನ್ನು ಪಾಷಂಡಿಗಳೆಂದು ಕ್ರೈಸ್ತರು ಪರಿಗಣಿಸಿದರು. ಆದರೆ ಇವರು ನಿಷ್ಠರಾದ ವಿರಾಗಿಗಳು, ತಪಸ್ವಿಗಳು ಗಾಢಾನುರಕ್ತ ಧರ್ಮೋಪದೇಶಕರು. ಟುಲೋಸ್‌ನ ಅರ್ಲ್‌ನಾದ ಆರನೆಯ ರೇಮಾಂಡ್‌ನ ಬೆಂಬಲವೂ ಅವರಿಗೆ ಇತ್ತು. ಆದರೂ ಕ್ರೈಸ್ತಮತೀಯರು 1176 ಮತ್ತು 1179ರಲ್ಲಿ, ಇವರನ್ನು ಉಗ್ರವಾಗಿ ಖಂಡಿಸಿದರು. ಪೋಪ್ ಮೂರನೆಯ ಇನ್ನೊಸೆಂಟ್ ಅನ್ಯಧರ್ಮೀಯರ ವಿಷಯದಲ್ಲಿ ಕೊಂಚ ಉದಾರಭಾವನೆ ತಳೆದಿದ್ದುದರಿಂದ ಸ್ವಲ್ಪಕಾಲ ಕ್ರೈಸ್ತರ ವೈರ ಉಗ್ರವಾಗಿರಲಿಲ್ಲ. ಇವರನ್ನು ರೋಮನ್ ಕ್ಯಾಥೊಲಿಕರನ್ನಾಗಿ ಮತಾಂತರಗೊಳಿಸುವ ಪ್ರಯತ್ನಗಳು ಫಲಕಾರಿಯಾಗಲಿಲ್ಲ. ಕೊನೆಗೆ ಮೂರನೆಯ ಇನ್ನೊಸೆಂಟನೇ ಇವರನ್ನಡಗಿಸಲು ಧಾರ್ಮಿಕದಂಡಯಾತ್ರೆ ನಡೆಸಬೇಕೆಂದು ಆಜ್ಞೆ ಹೊರಡಿಸಿದ್ದರಿಂದ, ಸೈಮನ್ ಡಿ. ಮಾಂಟ್‌ಫರ್ಟ್ ಎಂಬ ಫ್ರೆಂಚ್ ಶ್ರೀಮಂತ ಆ ಕೆಲಸವನ್ನು ಕೈಗೊಂಡ. ಇದಕ್ಕೆ ಪಾಷಂಡವಾದವನ್ನು ಅಡಗಿಸಲು ನಿಯಮಿಸಿದ್ದ ಮತೀಯ ನ್ಯಾಯಾಸ್ಥಾನದ (ಇನ್ಕ್ವಿಸಿಷನ್) ಬೆಂಬಲವೂ ದೊರಕಿತು. ಕ್ರಮೇಣ ಅವರೆಲ್ಲ ರೋಮನ್ ಕ್ಯಾಥೊಲಿಕರಾದರು. (ನೋಡಿ– ಇನ್‌ಕ್ವಿಸಿಷನ್) *

**ಆಲ್ಬುಕರ್ಕ್:** ಅಮೆರಿಕ ಸಂಯುಕ್ತ ಸಂಸ್ಥಾನದ ನ್ಯೂ ಮೆಕ್ಸಿಕೊ ಪ್ರಾಂತ್ಯದ ಅತ್ಯಂತ ದೊಡ್ಡನಗರ. ಸಮುದ್ರಮಟ್ಟಕ್ಕಿಂತ 5196' ಎತ್ತರದಲ್ಲಿದೆ. ಜನಸಂಖ್ಯೆ 96,815 (1950) ವಾಯುಗುಣ ಹಾಗೂ ವೈದ್ಯಕೀಯ ಅನುಕೂಲತೆಗಳಿಂದ ಆರೋಗ್ಯಧಾಮವೆನಿಸಿದೆ. ರೈಲು ಹಾಗೂ ವಿಮಾನಗಳ ಸಂಪರ್ಕವುಂಟು.

ಪಶುಪಾಲನೆ, ಗಣಿ ಕೈಗಾರಿಕೆ ಹಾಗೂ ಮರದ ಸಾಮಗ್ರಿಗಳ ಉದ್ಯಮ ಚೆನ್ನಾಗಿ ಬೆಳೆದಿದೆ. ಅಲ್ಲದೆ ಹತ್ತಿರದ ಇತರ ಪಟ್ಟಣಗಳಿಗೂ ಈ ಸಾಮಗ್ರಿಗಳ ಉದ್ಯಮ ಚನ್ನಾಗಿ ಬೆಳೆದಿದೆ. ಅಲ್ಲದೆ ಹತ್ತಿರದ ಇತರ ಪಟ್ಟಣಗಳಿಗೂ ಈ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ಅನೇಕ ಬಗೆಯ ಯಂತ್ರೋಪಕರಣದ ಕೈಗಾರಿಕೆಗಳೂ ಇವೆ. ಇಲ್ಲಿ ನ್ಯೂ ಮೆಕ್ಸಿಕೊ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದೆ (1892). (ಎಂ.ಎಸ್.ಎಂ.)

**ಆಲ್ಬುಕರ್ಕ್, ಆಫೊನ್ಸೊ ಡಿ:** (1453–1515). ಪೋರ್ಚುಗಲ್ ವಸಹಾತಿನ ಆಡಳಿತಗಾರ. ಶ್ರೇಷ್ಠ ನೌಕಾನಾಯಕ. ಜನನ ಲಿಸ್ಬನ್‌ನಲ್ಲಿ. ಐದನೆಯ ಆಫೊಜೊ ಡನ ಆಸ್ಥಾನದಲ್ಲಿ ಶಿಕ್ಷಣ ಪಡೆದ. ಆಫೊಜೊ ಡ ಸ್ಪೇನಿನ ಮೇಲೆ ದಾಳಿ ಮಾಡಿದಾಗ (1476) ಅದರಲ್ಲಿ ಭಾಗವಹಿಸಿದ. ಕೊಚ್ಚಿಯ ರಾಜನೊಂದಿಗೆ ಸ್ನೇಹ ಸಂಪಾದಿಸಲು ಮತ್ತು ಅಲ್ಲಿ ಕೋಟೆ ಕಟ್ಟಲು ರಾಜ ಇವನನ್ನು ಭಾರತಕ್ಕೆ ಕಳಿಸಿಕೊಟ್ಟ (1503). 1504ರಲ್ಲಿ ಲಿಸ್ಬನ್ನಿಗೆ ಮರಳಿದ. ಆದರೆ ಪುನಃ 1506ರಲ್ಲಿ ಇವನನ್ನು ಕೆಂಪುಸಮುದ್ರಕ್ಕೆ ಬರುವ ಇಲ್ಲವೇ ಹೊರಡುವ ಹಡಗುಗಳ ಮೇಲೆ ದಾಳಿಮಾಡಬೇಕೆಂಬ ಆದೇಶ ನೀಡಿ, ಪೂರ್ವದ ದಂಡಯಾತ್ರೆಗೆ ಕಳುಹಲಾಯಿತು. 1506–1508ರಲ್ಲಿ ಮಡಗಾಸ್ಕರ್ ಮತ್ತು ಮೋಜಾಂಬಿಕ್‌ಗಳಲ್ಲಿ ಶೋಧನೆ ನಡೆಸಿದ. ಸೊಕೊಟ್ರಾದಲ್ಲಿ ಕೋಟೆ ಕಟ್ಟಿಸಿದ. ಪರ್ಷಿಯನ್ ಕೊಲ್ಲಿಯ ಪ್ರವೇಶದ್ವಾರದಲ್ಲಿ, ಓರ್ಮಜ್ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡ. ಆದರೆ ದಂಡೆಗೆ ಬರುವ ಹಡಗುಗಳನ್ನು ದೋಚುವುದರಲ್ಲಿಯೇ ಆಸಕ್ತಿಯಿದ್ದ ಇವನ ಸಹಚರರ ಬಲವಂತದಿಂದ ಓರ್ಮಜನ್ನು ಕೆಲಕಾಲ ಬಿಡಬೇಕಾಯಿತು. 1508ರಲ್ಲಿ ಡಿಸೆಂಬರಿನಲ್ಲಿ ಭಾರತಕ್ಕೆ ಬಂದ. 1509ರಲ್ಲಿ ಆಲ್ಮೇಡಾನ ಉತ್ತರಾಧಿಕಾರಿಯಾಗಿ, ಗವರ್ನರ್ ಹುದ್ದೆ ಸ್ವೀಕರಿಸಿದ. ಗೋವೆಯ ಮೇಲೆ ದಾಳಿಮಾಡಿದ (ಮಾರ್ಚ್ 1510). ನವೆಂಬರ್‌ನಲ್ಲಿ ಅದು ಸಂಪೂರ್ಣ ಕೈವಶವಾಯಿತು. ಲಿಸ್ಬನ್ನಿನ ಮಾದರಿಯಲ್ಲಿ ಗೋವಾದಲ್ಲೊಂದು ಸೆನೆಟ್ ಸ್ಥಾಪಿಸಿದ. ಪೌರಸ್ತ್ಯ ರಾಷ್ಟ್ರಗಳಲ್ಲಿಯೇ ಇದೊಂದು ಹೊಸ ಪ್ರಯೋಗ. ಆರ್ಥಿಕ ಮತ್ತು ನ್ಯಾಯಾಡಳಿತಗಳನ್ನು ಸ್ಥಳೀಯ ಅಧಿಕಾರಿಗಳಿಗೆ ವಹಿಸಿಕೊಟ್ಟ. ಮಲಬಾರ್ ದಂಡೆಗುಂಟ ವ್ಯಾಪಾರದ ಹತೋಟಿ ಪೋರ್ಚುಗೀಸರ ಕೈಗೆ ಬಂತು. ಆರು ತಿಂಗಳ ಅನಂತರ ಮಲಾಕ್ಕಾ ಮೇಲೆ ದಾಳಿ ಮಾಡಿ, ಕೈವಶಪಡಿಸಿಕೊಂಡ. ಅಲ್ಲೊಂದು ಕೋಟೆಯನ್ನು ನಿರ್ಮಿಸಿದನಲ್ಲದೆ ಸ್ಥಳೀಯರ ಆಡಳಿತವನ್ನು ಸಂಘಟಿಸಿದ. ಪೇಗು, ಕೊಚ್ಚಿ, ಚೀನ, ಸಯಾಮ್ ಮತ್ತು ಜಾವಾಗಳೊಂದಿಗೆ ಮೈತ್ರಿಯಂತ ಸಂಬಂಧ ಸ್ಥಾಪಿಸಿದ. ಗೋವ, ಕೊಚ್ಚಿ, ಕಣ್ಣಾನೂರುಗಳಲ್ಲಿ ಆಸ್ಪತ್ರೆ ಪ್ರಾರಂಭಿಸಿದ. ಕೆಲಕಾಲದ ಅನಂತರ ಓರ್ಮಜ್‌ಗೆ ಹಿಂತಿರುಗಿದ. ಈ ಪಟ್ಟಣವನ್ನು ಅಂಕಿತದಲ್ಲಿಟ್ಟು ಕೊಂಡಿದ್ದುದರಿಂದ ಪರ್ಷಿಯನ್ ಕೊಲ್ಲಿಯ ಸಮೃದ್ಧ ವ್ಯಾಪಾರದಮೇಲೆ ಪ್ರಭುತ್ವ ಸ್ಥಾಪಿಸುವುದು ಪೋರ್ಚುಗೀಸರಿಗೆ ಸಾಧ್ಯವಾಯಿತು. ಏಡನ್‌ಮೇಲೆ ಈತ ಮಾಡಿದ ದಾಳಿ (1513) ಯಶಸ್ವಿಯಾಗಲಿಲ್ಲ.

ವಸಾಹತು ವಿಸ್ತರಿಸುದದಲ್ಲದೇ ನೈಲ್ ನದಿಯನ್ನು ಕೆಂಪು ಸಮುದ್ರಕ್ಕೆ ತಿರುಗಿಸಿ ಈಜಿಪ್ಟನ್ನು ಒಂಟಿಯಾಗಿ ಮಾಡುವುದು, ಮದೀನಾದಿಂದ ಮಹಮ್ಮದ್ ಪೈಗಂಬರರ ಉಳಿದ ಅವಶೇಷಗಳನ್ನು ಸ್ಥಳಾಂತರಿಸುವುದು ಮೊದಲಾದ ಯೋಜನೆಗಳನ್ನು ಪುರಸ್ಕರಿಸಿದ. ಇವನಿಂದಲೇ ಪೂರ್ವದಲ್ಲಿ ಪೋರ್ಚುಗೀಸರ ವಸಾಹತು ಸ್ಥಾಪನೆ ಸಾಧ್ಯವಾಯಿತು. ಮುಸ್ಲಿಮರಿಗೆ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಈ ಮೊದಲಿದ್ದ ಏಕಸ್ವಾಮ್ಯ ಕೊನೆಗೊಂಡಿತು. ಆಸ್ಥಾನದಲ್ಲಿನ ಒಳಸಂಚು, ವೈಯಕ್ತಿಕ ವಿರೋಧಿಗಳು ಮೇಲಧಿಕಾರದಲ್ಲಿದ್ದುದು ಇವನ ಅವನತಿಗೆ ಕಾರಣಗಳಾದುವು. ಓರ್ಮಜ್‌ನಿಂದ ಭಾರತಕ್ಕೆ ಮರಳುವಾಗ ಅವನ ಆರೋಗ್ಯ ಕ್ಷೀಣಿಸಿತು. ಗೋವದಲ್ಲಿ ನಿಧನಹೊಂದಿದ. 1566ರಲ್ಲಿ ಅವನ ಮೂಳೆಗಳನ್ನು ಪೋರ್ಚುಗಲ್‌ಗೆ ಒಯ್ಯಲಾಯಿತು. ಆಲ್ಬುಕರ್ಕನ ಮೂಳೆಗಳು ಗೋವದಲ್ಲಿರುವವರೆಗೂ ಪೋರ್ಚುಗೀಸ್ ಸಾಮ್ರಾಜ್ಯ ಗೋವದಲ್ಲಿ ಸುಭದ್ರವಾಗಿತ್ತೆಂಬ ಮೂಢನಂಬಿಕೆಯೂ ಇದೆ. (ಎಸ್.ಎಸ್.ಐ.)

**ಆಲ್ಬೆಡೊ:** ಪ್ರತಿಫಲನ ಸಾಮರ್ಥ್ಯದ ಸೂಚ್ಯಂಕ; ಬಳಕೆ ವಿಶೇಷವಾಗಿ ಖಗೋಳಶಾಸ್ತ್ರದಲ್ಲಿ. ಪತನ ಬೆಳಕಿನಿಂದ ಹೊಳೆಯುವ ಒಂದು ವಸ್ತು ಪತನ ಬೆಳಕಿನ ಅರ್ಧಾಂಶವನ್ನು ಪ್ರತಿಫಲಿಸಿದರೆ (ಅಂದರೆ ಹಿಂದಕ್ಕೆ ಚೆದುರಿಸಿದರೆ) ಆ ವಸ್ತುವಿನ ಆಲ್ಬೆಡೊ 1/2 ಎನ್ನುತ್ತೇವೆ. ಸಾಮಾನ್ಯವಾಗಿ ಮೋಡಗಳ ಮೇಲ್ಪದರಗಳ ಅಂದರೆ ಹಿಮಸ್ಫಟಿಕಗಳ ಆಲ್ಬೆಡೊ ಅತ್ಯಧಿಕ (ಸುಮಾರು 0.75). ಇತರ ಕೆಲವು ವಸ್ತುಗಳ ಆಲ್ಬೆಡೊ; ದಟ್ಟನೆಯ ಕಾಡು 0.05, ಒಣಮರಗಳು 0.30, ಒಟ್ಟು ಭೂಮಿ 0.34 (ಇದಕ್ಕೆ ಮೋಡಗಳಿಂದಲೂ ಸಂದಾಯವಿದೆ). ಚಂದ್ರ 0.07, ಶುಕ್ರ 0.61, ಗುರು 0.41, ಶನಿ 0.42. ದೂರದ ಗ್ರಹಗಳ ಆಲ್ಬೆಡೋ ಅಳೆದು ಅವುಗಳ ವ್ಯಾಸವನ್ನು ಲೆಕ್ಕಮಾಡಬಹುದು.

ಪರಮಾಣು ರಿಯಾಕ್ಟರಿಗೆ ಸಂಬಂಧಿಸಿದಂತೆ ಆಲ್ಬೆಡೊ ಅಂದರೆ ಒಂದು ಮಾಧ್ಯಮವನ್ನು ಪ್ರವೇಶಿಸುವ ನ್ಯೂಟ್ರಾನುಗಳು ಮತ್ತು ಆ ಮಾಧ್ಯಮದಿಂದ ಪ್ರತಿಫಲನಗೊಳ್ಳುವ ನ್ಯೂಟ್ರಾನುಗಳು– ಇವುಗಳ ನಡುವಿನ ಪ್ರಮಾಣ (ರೇಷಿಯೊ). ಪರಮಾಣು ಪ್ರಕ್ರಿಯೆ ಸತತ ನಡೆಯಲು ನ್ಯೂಟ್ರಾನುಗಳು ಅವಶ್ಯ ಅಧಿಕ ಪ್ರಮಾಣದಲ್ಲಿ ನ್ಯೂಟ್ರಾನುಗಳು ರಿಯಾಕ್ಟರಿನ ಮೂಲಭಾಗದಿಂದ ತಪ್ಪಿಸಿಕೊಂಡು ಹೋಗುವುದನ್ನು ತಡೆಗಟ್ಟಲು, ರಿಯಾಕ್ಟರಿನ ಸುತ್ತ ಅತ್ಯಧಿಕ ಆಲ್ಬೆಡೊ ಪ್ರತಿಫಲಕವೊಂದನ್ನು ಅಳವಡಿಸಿರುತ್ತಾರೆ. *

**ಆಲ್ಬೆರೂನಿ:** ಹತ್ತನೆಯ ಶತಮಾನದಲ್ಲಿ ಭಾರತಕ್ಕೆ ಬಂದ ಪ್ರಸಿದ್ಧ ಅರಬ್ಬೀ ಪಂಡಿತ. ಸಿಂಧ್ ಪ್ರಾಂತ್ಯದ ಬಿರೊನ್‌ನಲ್ಲಿ ಬೆಳೆದುದರಿಂದ ಬೆರೂನಿ ಎಂಬ ಹೆಸರು ಬಂತು. ಘಜ್ನಿ ಮಹಮದ್ ಕೀವ್ ಪ್ರಾಂತ್ಯವನ್ನು ವಶಪಡಿಸಿಕೊಂಡಾಗ, ಸೆರೆಯಾದವರಲ್ಲಿ ಇವನೂ ಒಬ್ಬ. ಸೆರೆಯಿಂದ ಪಾರಾಗಿ ತನ್ನ ಮೇಧಾಶಕ್ತಿಯಿಂದ ಆಸ್ಥಾನದಲ್ಲಿ ಜ್ಯೋತಿಷಿಯಾಗಿದ್ದಿರಬಹುದೆಂದು ವಿದ್ವಾಂಸರ ಊಹೆ. ಇವನ ಗ್ರಂಥಗಳಲ್ಲಿ ಘಜ್ನಿ ಮಹಮ್ಮದನ ಮಗನೂ ಉತ್ತರಾಧಿಕಾರಿಯೂ ಆದ ಮಸೂದನ ಪ್ರಶಂಸೆಯಿದೆ. ಭಾರತದ ನಾನಾ ಪ್ರಾಂತ್ಯಗಳಲ್ಲಿ ಪ್ರವಾಸ ಕೈಗೊಂಡ. ಅನೇಕ ಜನರ ಸಂಪರ್ಕ ಹೊಂದಿದ್ದ. ಸಂಸ್ಕೃತ ಭಾಷೆ ಅಭ್ಯಸಿಸಿ, ಪ್ರಾಚೀನ ಗ್ರಂಥಗಳನ್ನು ವ್ಯಾಸಂಗಮಾಡಿ ಇಂಡಿಯ ಎಂಬ ಗ್ರಂಥ ರಚಿಸಿದ. ಇದರಲ್ಲಿ ಕಪಿಲಮಹರ್ಷಿಯ ಸಾಂಖ್ಯ, ಪತಂಜಲಿ ಯೋಗಸೂತ್ರ, ವ್ಯಾಸರ ಭಗವದ್ಗೀತೆ, ವಿಷ್ಣು, ವಾಯು, ಮತ್ಸ್ಯ ಮುಂತಾದ ಪುರಾಣಗಳು, ಪುಲಿಷ ಸಿದ್ಧಾಂತ, ಧರ್ಮಸಿದ್ಧಾಂತ ಮೊದಲಾದ ಜ್ಯೋತಿಷ್ಯ ಗ್ರಂಥಗಳು, ಮತ್ತು ರಾಮಾಯಣ–ಮಹಾಭಾರತಗಳಿಂದ ಆಯ್ದ ಹೇಳಿಕೆಗಳನ್ನು ಉದ್ಧರಿಸಲಾಗಿದೆ. ಈ ಗ್ರಂಥದಲ್ಲಿ ಭಾರತದ ಮತ, ತತ್ತ್ವ, ಸಾಹಿತ್ಯ, ಜ್ಯೋತಿಷ್ಯ, ನ್ಯಾಯ, ಧರ್ಮ ಮತ್ತು ಸಾಮಾಜಿಕ ನಡೆನುಡಿಗಳ ಸಜೀವ ಚಿತ್ರಣವಿದೆ. ಹೊರನಾಡಿನಿಂದ ಬಂದು ನಮ್ಮ ದೇಶದ ಮತ, ತತ್ತ್ವ, ವಿಜ್ಞಾನಗಳನ್ನು ಅಭ್ಯಸಿಸಲು ಈತ ಮಾಡಿದ ಪ್ರಯತ್ನ ಸ್ತುತ್ಯವಾದುದು. ಚೀನದ ಯಾತ್ರಿಕರನ್ನು ಬಿಟ್ಟರೆ ಇಂಥ ಪ್ರಯತ್ನ ಮಾಡಿದವರಲ್ಲಿ ಈತನೇ ಮೊದಲಿಗ. ಹೇರಳ ಹಣಸುರಿದು, ದೊರೆಯಬಹುದಾದ ಸಂಸ್ಕೃತ ಗ್ರಂಥಗಳನ್ನೆಲ್ಲ ಸಂಗ್ರಹಿಸಿದ. ತನ್ನ ಗ್ರಂಥವನ್ನು ನಿರ್ದಿಷ್ಟವಾಗಿ ರಚಿಸಲು ಪಂಡಿತರನ್ನು ಕರೆಸಿಕೊಂಡು, ಅವರ ನೆರವಿನಿಂದ ಅವನ್ನು ಅಭ್ಯಾಸ ಮಾಡಿದ. ಹಿಂದೂಗಳ ತತ್ತ್ವಜ್ಞಾನ, ಗಣಿತಶಾಸ್ತ್ರಗಳ ತಜ್ಞತೆಯನ್ನು ಈತ ಪ್ರಶಂಸಿಸಿದನಾದರೂ ಅವರ ಅತಿ ಚಾತುರ್ಯ, ಸಂಕುಚಿತ ಮನೋಭಾವ, ಬಳಸುಮಾತಿನಲ್ಲಿ ಹೇಳುವ ವಿಧಾನಗಳನ್ನು ಖಂಡಿಸಿದ. ಹಿಂದೂಗಳು ಐತಿಹಾಸಿಕ ಘಟನೆಗಳನ್ನು ಕ್ರಮದಲ್ಲಿ ಬರೆಯಲು ಹೆಚ್ಚು ಆಸಕ್ತಿ ವಹಿಸುವುದಿಲ್ಲ. ಒತ್ತಾಯಪಡಿಸಿದರೆ ಮಾತ್ರ ಕಥೆ ಹೇಳಲು ಪ್ರಾರಂಭಿಸುತ್ತಾರೆ–ಎಂಬುದು ಇವನ ಅಭಿಪ್ರಾಯ. ಹಿಂದೂಸ್ತಾನದ ಮೇಲೆ ಬರೆಯುವಾಗ ಮುಖ್ಯ ನದಿಗಳು, ಪಟ್ಟಣಗಳು, ಬೆಳೆ, ಪ್ರಾಣಿ, ಜನರ ಆಚಾರ, ನಡವಳಿಕೆಗಳನ್ನು ಕುರಿತು ಕೂಡ ಈತ ಬರೆದಿದ್ದಾನೆ. ಇವನ ಗ್ರಂಥದಲ್ಲಿ ವರ್ಣಧರ್ಮ, ಆಶ್ರಮಧರ್ಮ, ವಿದ್ಯಾಭ್ಯಾಸ, ವಿವಾಹಪದ್ಧತಿಗಳ ಚಿತ್ರಣವೂ ಇದೆ. ಹಿಂದೂಗಳ ಮತ್ತು ತತ್ತ್ವ ಮತ್ತು ಗ್ರಂಥಗಳ ವಿಷಯವಾಗಿ ಆಳವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದ. ವೇದಗಳೂ ಸ್ಮೃತಿಗಳೂ ಪುರಾಣಗಳೂ ಆದಿಯಾಗಿ ಪ್ರಚಲಿತವಾಗಿದ್ದ ಗ್ರಂಥಗಳ ತಿರುಳನ್ನು ಅರಿಯುವ ಅಭಿರುಚಿಯನ್ನು ವ್ಯಕ್ತಪಡಿಸಿದ. ಇಲ್ಲಿಯ ಜನರ ದೇವ ದೇವತೆಗಳ ಕಲ್ಪನೆ, ಮೂರ್ತಿಪೂಜೆ, ಸ್ವರ್ಗ ನರಕಗಳ ಭಾವನೆಯ ಬಗ್ಗೆಯೂ ಬರೆದ. ವಿದ್ವಾಂಸರ ನಂಬಿಕೆಗಳು ಅವಿದ್ಯಾವಂತರ ನಂಬಿಕೆಗಳಿಂದ ಹೇಗೆ ಭಿನ್ನವಾಗಿದ್ದುವೆಂಬುದನ್ನು ವಿವರಿಸಿ, ತನಗೆ ಸರಿಕಾಣದ ಹಲವು ಕಂದಾಚಾರ ಪದ್ಧತಿಗಳನ್ನು ಖಂಡಿಸಿದ. ಇವನ ಟೀಕೆಗಳಲ್ಲಿ ನಿರ್ದಶನಗಳಿವೆ. ಮಾನವೀಯತೆಯ ಪ್ರದರ್ಶನವಿದೆ. ಈತನ ಬರವಣಿಗೆಯಲ್ಲಿ ದೇಶ, ಕಾಲ ಮತ್ತು ಭಾಷೆಗಳ ಭಿನ್ನತೆಯಿದೆ. ಅಲ್ಪ ಸ್ವಲ್ಪ ದೋಷ ಕಂಡುಬಂದರೂ ಪ್ರಾಚೀನ ಭಾರತದ ಚರಿತ್ರೆಗೆ ಇವನ ಕಾಣಿಕೆ ಮಹತ್ತರವಾದುದು. (ಬಿ.ಎಸ್.ಎ.)

**ಆಲ್ಬೇನಿಯ:** ದಕ್ಷಿಣ ಯುರೋಪಿನ ಏಡ್ರಿಯಾಟಿಕ್ ಸಮುದ್ರ ತೀರದಲ್ಲಿ ಯುಗೋಸ್ಲಾವಿಯ ಮತ್ತು ಗ್ರೀಸ್ ದೇಶಗಳ ಮಧ್ಯೆ ಇರುವ ಒಂದು ಪರ್ವತಮಯ ಬಾಲ್ಕನ್ ದೇಶ. ಉತ್ತರ ಅಜûರ್‌ಬೈಜಾನಿನ ಹಳೆಯ ಹೆಸರು. ವಿಸ್ತೀರ್ಣ ಸುಮಾರು 11,020 ಚ.ಮೈ. ಜನಸಂಖ್ಯೆ 1,56,950 (1964). ಇವರಲ್ಲಿ ಹೆಚ್ಚು ಭಾಗ ಮಹಮ್ಮದೀಯರು. ಉತ್ತರ ದಕ್ಷಿಣವಾಗಿ ಸುಮಾರು 320 ಕಿ.ಮೀ. ಉದ್ದ ಪೂರ್ವ ಪಶ್ಚಿಮವಾಗಿ 80 ಕಿ.ಮೀ. ಅಗಲ ಹಬ್ಬಿದೆ. ಕರಾವಳಿ ಮೈದಾನ ಜೌಗು ಪ್ರದೇಶವಾದರೂ ಫಲವಾತ್ತಾಗಿದೆ. ತಗ್ಗಾದ ಮೈದಾನ ಮತ್ತಿ ಕಣಿವೆಗಳಲ್ಲಿ ಮುಸುಕಿನ ಜೋಳ, ಹತ್ತಿ, ಹೊಗೆಸೊಪ್ಪು, ಸಕ್ಕರೆ ಬೀಟ್‌ಗಳನ್ನು ಬೆಳೆಯುತ್ತಾರೆ. 13% ರಷ್ಟು ಭೂಮಿ ಮಾತ್ರ ವ್ಯವಸಾಯ ಯೋಗ್ಯವಾಗಿದೆ. ಪರ್ವತ ಹಾಗೂ ಗುಡ್ಡಪ್ರದೇಶಗಳ ಜನರಿಗೆ ಕುರಿ ಮತ್ತು ಮೇಕೆಗಳನ್ನು ಸಾಕುವುದೇ ಮುಖ್ಯ ಕಸುಬು. ಕಲ್ಲೆಣ್ಣೆ, ತಾಮ್ರ, ಉತ್ಪಾದಿಸಲಾಗುವುದು.

ರಾಜಧಾನಿ ಟಿರಾನ್, ಜನಸಂಖ್ಯೆ 1,20,000 ಕ್ಕಿಂತಲೂ ಹೆಚ್ಚಾಗಿದೆ. ಮುಖ್ಯ ರೇವುಪಟ್ಟಣ ಡೂರಸ್, ಟಿರಾನ್ ಮತ್ತು ಡೂರಸ್ ಪಟ್ಟಣಗಳಿಗೆ ರೈಲುಮಾರ್ಗದ ಸಂಪರ್ಕವಿದೆ.

ವಿಸ್ತಾರದಲ್ಲಿ ಸಣ್ಣದಾಗಿದ್ದು ಹಿಂದುಳಿದ ದೇಶವಾದ ಆಲ್ಬೇನಿಯವನ್ನು ನಾನಾ ಜನಾಂಗದವರು ಗೆದ್ದು ಆಳಿದರು. ಮುಖ್ಯವಾಗಿ ಮ್ಯಾಸಿಡೋನಿಯನ್ನರು, ರೋಮನರು, ಬೈಜಾಂಟೈನ್ ಅರಸರು ಮತ್ತು ತುರ್ಕಿಯವರು. ಅವರ ಆಳ್ವಿಕೆ ಅಲ್ಲಿನ ಗುಡ್ಡಗಾಡು ಜನರಿಗೆ ಎಂದೂ ಒಪ್ಪಿಗೆಯಾಗಲಿಲ್ಲ. ಹನ್ನೊಂದನೆಯ ಶತಮಾನದಲ್ಲಿ ರಾಬರ್ಟ್ ಗಿಸ್ಕಾರ್ಡ್ ಎಂಬುವನ ನೇತೃತ್ವದಲ್ಲಿ ಇಟಾಲಿಯನ್ನರು ಆ ದೇಶಕ್ಕೆ ಬಂದು ನೆಲೆಸಿದರು; ಅನಂತರ ವೆನಿಸ್, ನೇಪಲ್ಸ್‌ಗಳವರೂ ಬಂದರು. ಈ ಮಧ್ಯೆ ಕಾನ್‌ಸ್ಟಾಂಟಿನೋಪಲ್‌ನ ತುರ್ಕರ ದಾಳಿ ಪ್ರಾರಂಭವಾಗಿತ್ತು. 15ನೆಯ ಶತಮಾನದಲ್ಲಿ, ಮುಖ್ಯವಾಗಿ ಸ್ಕಾಂಡರ್‌ಬೇಗ್ ಎಂಬುವನ ಅಧೀನದಲ್ಲಿ, ಆಲ್ಬೇನಿಯನ್ನರ ಈ ದಾಳಿಯನ್ನೆದುರಿಸಿದರು. ಆದರೆ ಅದು ಫಲಕಾರಿಯಾಗಲಿಲ್ಲ. ಕೊನೆಗೆ 1748ರಲ್ಲಿ ಆಲ್ಬೇನಿಯ ತುರ್ಕಿಯ ಒಂದು ಪ್ರಾಂತ್ಯವಾಯಿತು. ಬಾಲ್ಕನ್ ಯುದ್ಧ ಮುಗಿದ ಮೇಲೆ (ನೋಡಿ– ಬಾಲ್ಕನ್–ಯುದ್ಧಗಳು) 1913ರಲ್ಲಿ ಆಲ್ಬೇನಿಯ ಸ್ವತಂತ್ರ ರಾಜ್ಯವಾಗಬೇಕೆಂಬುದಕ್ಕೆ ಇತರ ರಾಷ್ಟ್ರಗಳು ಒಪ್ಪಿಗೆಯನ್ನಿತ್ತುವು. ಆದರೆ ಈ ಸಣ್ಣ ರಾಜ್ಯ ನಿರ್ಮಿತವಾದದ್ದು ಜರ್ಮನಿಯ ರಾಜಕೀಯ ಕುಟಿಲತೆಯಿಂದ, ಮುಂದೆ ಅದನ್ನು

ಸ್ವಾಧೀನಪಡಿಸಿಕೊಳ್ಳುವುದು. ಸುಲಭವಾಗುತ್ತದೆಂಬ ಆಸೆಯಿಂದ, ಮೊದಲ ಮಹಾಯುದ್ಧದಲ್ಲಿ ಇಟಲಿ, ಆಸ್ಟ್ರಿಯ, ಬಲ್ಗೇರಿಯ ರಾಜ್ಯಗಳಿಂದ ಸೈನ್ಯಗಳು ನುಗ್ಗಿ ಬಂದು ಆಲ್ಬೇನಿಯದ ಕೆಲವು ಭಾಗಗಳನ್ನಾಕ್ರಮಿಸಿದುವು. ಯುದ್ಧ ಮುಗಿದ ಮೇಲೆ 1929ರಲ್ಲಿ ನಡೆದ ಸ್ಯಾನ್ ರೀಮೊ ಸಮ್ಮೇಳನದಲ್ಲಿ ಆಲ್ಬೇನಿಯ ಇಟಲಿಯ ರಕ್ಷಣೆಯಲ್ಲಿರಬೇಕೆಂದು ತೀರ್ಮಾನವಾಯಿತು. ಅಹಮದ್ ಜೋಗು ಎಂಬುವನು ಜೋಗ್ ಎಂಬ ಹೆಸರಿನಿಂದ ರಾಜ್ಯಾಧ್ಯಕ್ಷನಾದ. 1928ರಲ್ಲಿ ರಾಜ್ಯಾಂಗ ರಚನಾ ಸಭೆಯೊಂದು ನಿರ್ಮಿತವಾಗಿ, ಆಲ್ಬೇನಿಯ ಸಾಂಕುಶರಾಜಪ್ರಭುತ್ವವನ್ನು ಹೊಂದಬೇಕೆಂದು ನಿರ್ಣಯವಾಯಿತು. ಜೋಗನೇ ದೊರೆಯಾದ. ಎರಡನೆಯ ಮಹಾಯುದ್ಧದಲ್ಲಿ ಇಟಲಿ ಈ ದೇಶವನ್ನಾಕ್ರಮಿಸಿತು. 1944ರಲ್ಲಿ ಮಿತ್ರರಾಷ್ಟ್ರಗಳು ಅದನ್ನು ಸ್ವಾಧೀನಪಡಿಸಿಕೊಂಡ ಮೇಲೆ, ಅಲ್ಲಿನ ತನಕ ಇಟಲಿಯ ವಿರುದ್ಧ ಹೋರಡುತ್ತಿದ್ದ ಎನ್ವರ್ ಎಂಬುವನ ವಶಕ್ಕೆ ಬಂದಿತು. ಅವನು 1946ರಲ್ಲಿ ಕಮ್ಯೂನಿಸ್ಟ್ ಸರ್ಕಾರವನ್ನು ರಚಿಸಿದ. ಈಗ ಅದು ವಾರ್ಸ ಒಪ್ಪಂದಕ್ಕೆ ಒಳಪಟ್ಟ ರಾಜ್ಯಗಳಲ್ಲೊಂದಾಗಿ 1955ರಲ್ಲಿ ವಿಶ್ವಸಂಸ್ಥೆಯ ಸದಸ್ಯತ್ವವನ್ನು ಪಡೆದಿದೆ. 1960ರಲ್ಲಿ ರಷ್ಯ ಮತ್ತು ಚೀನಗಳ ನಡುವೆ ಕಮ್ಯೂನಿಸ್ಟ್ ತತ್ತ್ವ, ಧೋರಣೆಗಳ ವಿಷಯವಾಗಿ ತೀವ್ರಭಿನ್ನಾಭಿಪ್ರಾಯ ಬೆಳೆದಾಗ ಆಲ್ಬೇನಿಯ ಚೀನಕ್ಕೆ ಬೆಂಬಲ ಕೊಟ್ಟಿತು. 1961 ರಲ್ಲಿ ರಷ್ಯ ಅದರೊಂದಿಗೆ ರಾಯಭಾರ ಸಂಪರ್ಕವನ್ನೂ ಕಡಿದು ಹಾಕಿತು.

ಕಮ್ಯೂನಿಸ್ಟ್ ಗಣರಾಜ್ಯವಾದ ಆಲ್ಬೇನಿಯದಲ್ಲಿ ಶಾಸನಾಧಿಕಾರ ಒಂದೇ ಮನೆಯುಳ್ಳ ಪ್ರತಿನಿಧಿಸಭೆಗೆ ಸೇರಿದೆ. ಒಂದೇ ಹೆಸರುಪಟ್ಟಿಯಿಂದ ಸದಸ್ಯರನ್ನು ನಾಲ್ಕು ವರ್ಷಕ್ಕೊಮ್ಮೆ ಚುನಾಯಿಸುತ್ತಾರೆ. ಸಾಮಾನ್ಯವಾಗಿ ಹತ್ತು ಸಾವಿರ ಜನಕ್ಕೊಬ್ಬ ಪ್ರತಿನಿಧಿಯಿರುತ್ತಾನೆ. ಅಧಿವೇಶನವಿಲ್ಲದ ಕಾಲದಲ್ಲಿ ಕಾರ್ಯಾಂಗವೇ ಅವಶ್ಯ ಶಾಸನಾಧಿಕಾರವನ್ನೂ ಹೊಂದಿರುತ್ತದೆ. ಈ ಕಾರ್ಯಾಂಗದ ಅಧ್ಯಕ್ಷನೇ ರಾಷ್ಟ್ರಾಧ್ಯಕ್ಷನೂ ಆಗಿರುತ್ತಾನೆ. ವಿಧಿನಿರ್ವಾಹಕ ಕಾರ್ಯ ಸಚಿವಸಂಪುಟಕ್ಕೆ ಸೇರಿದ್ದು, ಈ ಸಚಿವಸಂಪುಟದಲ್ಲಿ ಪ್ರಧಾನಿ, ಕೆಲವುರು ಉಪಪ್ರಧಾನಿಗಳು, ಮಂತ್ರಿಗಳು (ಇವರ ಸಂಖ್ಯೆ ಬದಲಾಯಿಸಬಹುದು); ಮತ್ತು ಕೆಲವು ಇಲಾಖೆ ಮುಖ್ಯಾಧಿಕಾರಿಗಳು ಇರುತ್ತಾರೆ. 18 ವಯಸ್ಸು ಕಳೆದ ಸ್ತ್ರೀಪುರಷರೆಲ್ಲರಿಗೂ ಮತದಾನದ ಹಕ್ಕಿದೆ. ಕಮ್ಯೂನಿಸ್ಟ್ ಪಕ್ಷವೊಂದೇ ಆಲ್ಬೇನಿಯದ ರಾಜಕೀಯಪಕ್ಷ. ಆಡಳಿತ ಸೌಕರ್ಯಕ್ಕಾಗಿ ದೇಶವನ್ನು 16 ಜಿಲ್ಲೆಗಳಾಗಿಯೂ 30 ನಗರಗಳಾಗಿಯೂ 2600 ಗ್ರಾಮಗಳಾಗಿಯೂ ವಿಭಾಗಿಸಲಾಗಿದೆ. ಪ್ರತಿಯೊಂದರಲ್ಲೂ ಮೂರು ವರ್ಷಕ್ಕೊಮ್ಮೆ ಚುನಾಯಿತರಾದ ಸದಸ್ಯರನ್ನುಳ್ಳ ಮಂಡಲಿಗಳು ಆಡಳಿತ ನಡೆಸುತ್ತವೆ. ಒಂದು ಉಚ್ಚತಮ ನ್ಯಾಯಾಲಯ, ಸೈನಿಕ ನ್ಯಾಯಾಲಯಗಳು, ಮತ್ತು ಪ್ರಜಾನ್ಯಾಯಾಲಯಗಳನ್ನು ನ್ಯಾಯಾಂಗ ಹೊಂದಿದೆ. ಪ್ರಜಾನ್ಯಾಯಾಲಯಗಳ ಅಧಿಕಾರ ಕ್ಷೇತ್ರವನ್ನು ನಿಗದಿ ಪಡಿಸಲಾಗಿದೆ. ಉಚ್ಚತಮ ನ್ಯಾಯಾಲಯ ಮತ್ತು ಸೈನಿಕ ನ್ಯಾಯಾಲಯಗಳ ನ್ಯಾಯಾಧೀಶರನ್ನು ಪ್ರತಿನಿಧಿಸಭೆ ನಾಲ್ಕು ವರ್ಷಕ್ಕೊಮ್ಮೆ ನಿಯಮಿಸುತ್ತದೆ.

*

**ಆಲ್ಬೇನಿಯಾ ಭಾಷೆ ಮತ್ತು ಸಾಹಿತ್ಯ:** ಆಲ್ಬೇನಿಯ ಭಾಷೆ ಇಂಡೊ–ಯುರೋಪಿಯನ್ ಭಾಷಾವರ್ಗಕ್ಕೆ ಸೇರಿದೆ. ಇದು ಎಪಿರಸಿನ ಉತ್ತರ ಪರ್ವತಗಳಲ್ಲಿ, ಮಾಂಟೆನೀಗ್ರೋನ ದಕ್ಷಿಣದಲ್ಲಿ ಮತ್ತು ಏಡ್ರಿಯಾಟಿಕ್ ಪೂರ್ವಭಾಗದಲ್ಲಿ ಸುಮಾರು ಹತ್ತು ಲಕ್ಷಕ್ಕೆ ಮೇಲ್ಪಟ್ಟು ಜನ ಆಡುವ ಭಾಷೆ. ಇದು ಕಣ್ಮರೆಯಾದ ಇಲಿರಿಯನ್ ಎಂಬ ಭಾಷಾಶಾಖೆಯ ಅವಶೇಷವೆಂದು ಕೆಲವರು ಭಾವಿಸಿದ್ದರು. ಹಾಗಿದ್ದರೆ ಇದು ಇಂಡೋ–ಯುರೋಪಿಯನ್ ವರ್ಗದ ಸೆಂಟಮ್ ಗುಂಪಿಗೆ ಸೇರಬೇಕಾಗುತ್ತದೆ. ಆದರೆ ಇದರ ಸೂಕ್ಷ್ಮಾವಲೋಕನದಿಂದ ಇದರಲ್ಲಿ ಶತಂ ಗುಂಪಿನ ಅಂಶಗಳೇ ಹೆಚ್ಚಾಗಿ ಕಂಡುಬರುವುದರಿಂದ ಮೇಲಿನ ಊಹೆ ನಿರಾಧಾರವೆನಿಸುತ್ತದೆ. ಆದ್ದರಿಂದ ಇದನ್ನು ಒಂದು ಭಾಷಾಗುಂಪು ಎನ್ನುವುದಕ್ಕಿಂತ ಗೆಗ್, ಟೋಸ್ಕ್ ಗ್ರಿಸಿಯೋ–ಆಲ್ಬೇನಿಯನ್ ಮತ್ತು ಕೆಲೆಬ್ರಿಯನ್ ಎಂಬ ನಾಲ್ಕು ಪ್ರಮುಖ ಉಪಭಾಷೆಗಳುಳ್ಳ ಒಂದು ಭಾಷೆಯೆಂದು ಪರಿಗಣಿಸಬಹುದು. ಇಂಡೋ–ಯುರೋಪಿಯನ್ ವರ್ಗದ ಭಾಷೆ ಎಂಬ ಅಂಶಕ್ಕೆ ಪುಷ್ಟಿ ಕೊಡುವ ಆಲ್ಬೇನಿಯ ಭಾಷೆಯ ಆಂತರಿಕ ವೈಶಿಷ್ಟ್ಯಗಳು ವಿಪುಲವಾಗಿವೆ. ಉದಾಹರಣೆಗೆ ಸರ್ವನಾಮಗಳನ್ನು ಅವಲೋಕಿಸಬಹುದು.

ty =ನೀನು, na= ನಾವು, ju=ನೀವು. ಇವು ಅನುಕ್ರಮವಾಗಿ ಇಂಗ್ಲಿಷಿನ thou, we, you – ಇವನ್ನು ಸ್ಮರಣೆಗೆ ತರುತ್ತವೆ. ಹೀಗೆಯೇ ಕ್ರಿಯಾಪದಗಳಲ್ಲೂ ಕೆಲಸಾಮ್ಯಗಳನ್ನು ಗುರುತಿಸಬಹುದು : thou ನಾನು ಹೇಳುತ್ತೇನೆ, thomi ನಾವು ಹೇಳುತ್ತೇವೆ, thote ಅವನು ಹೇಳುತ್ತಾನೆ, thome ಅವರು ಹೇಳುತ್ತಾರೆ ಇಂಥ ರೂಪಗಳು ಇಂಡೋ–ಯುರೋಪಿಯನ್ ವ್ಯಾಕರಣಾಂಶಗಳಿಗೆ ಸನಿಹದಲ್ಲಿವೆ. ಆದರೆ ಶತಮಾನಗಳ ಅವಧಿಯಲ್ಲಿ ಆಲ್ಬೇನಿಯನ್ ಭಾಷೆ ಇತರ ಇಂಡೋ–ಯುರೋಪಿಯನ್ ಭಾಷೆಗಳಿಂದ ಸ್ವಲ್ಪ ದೂರ ಸರಿದು ನಿಂತಂತೆ ತೋರುತ್ತದೆ. ಈ ಭಾಷೆಯಲ್ಲಿ ಉಪಪದ ನಾಮಪದದ ಮುಂದೆ ಬರುತ್ತದೆ. ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಅದು ನಾಮಪದದ ಹಿಂದೆ ಇರುವುದು ಎಲ್ಲರಿಗೂ ವಿದಿತ. ಭವಿಷ್ಯತ್ಕ್ರಿಯೆ ಸಹಾಯಕ ಕ್ರಿಯಾಪದದ ಮೂಲಕ ನಿಷ್ಪನ್ನವಾಗುತ್ತದೆ. ಉದಾಹರಣೆಗೆ ನಾನು ಕೆಲಸ ಮಾಡುವೆನು ಎಂಬುದು dote punoj ನಾನು ಕೆಲಸ ಮಾಡಬೇಕೆಂದು ನನಗೆ ಮನಸ್ಸಿದೆ ಅಥವಾ Kame puntue ನಾನು ಕೆಲಸ ಮಾಡಬೇಕಾಗುತ್ತದೆ–ಎಂದಾಗುತ್ತದೆ.

ಒಂದೆರಡು ಮೌಲಿಕ ಶಾಸನಗಳ ಹೊರತು ಬೇರೆ ಲಿಖಿತ ಆಧಾರಗಳು ದೊರೆಯದಿರುವುದರಿಂದ ಆಲ್ಬೇನಿಯನ್ ಭಾಷೆಯ ಪ್ರಾಚೀನ ಸ್ವರೂಪನಿರ್ಣಯ ಕಷ್ಟದ ಕೆಲಸವಾಗಿದೆ. ಇಲ್ಲಿಯವರೆಗೆ ದೊರೆತಿರುವ ಈ ಭಾಷೆಯ ಅತಿ ಪುರಾತನ ಲಿಖಿತ ಆಧಾರವೆಂದರೆ 1462ರಲ್ಲಿ ರಚಿತವಾಗಿದ್ದು ಚರ್ಚಿಗೆ ಒಳಗಾಗಿರುವ ಒಂದು ದಾಖಲೆ. ಅನಂತರ 1555ರಲ್ಲಿ ಆಲ್ಬೇನಿಯನ್ ಭಾಷೆಯಲ್ಲಿ ಬೈಬಲ್ ಭಾಷಾಂತರವಾಗಿದೆ. ಇದೇ ಎರಡನೆಯ ಕೃತಿ.

ಆಲ್ಬೇನಿಯನ್ ಭಾಷೆಯ ಮೇಲೆ ಅನೇಕ ಭಾಷೆಗಳ ಪ್ರಭಾವವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ ಮುಖ್ಯವಾದುವು ಲ್ಯಾಟಿನ್, ಸ್ಲ್ಯಾವಿಕ್, ಗ್ರೀಕ್. ಉದಾಹರಣೆಗೆ pes ಐದು, het ಹತ್ತು, katre ನಾಲ್ಕು, quind ನೂರು, kanis→gen ನಾಯಿ, lirroj= ಕೆಲಸ ಮಾಡು←laboro – ಇವು ಲ್ಯಾಟಿನ್ ಭಾಷೆಯ ಪ್ರಭಾವವನ್ನು ಎತ್ತಿ ತೋರಿಸುತ್ತವೆ. ಆಲ್ಬೇನಿಯನ್ ಶಬ್ದಕೋಶ ಲ್ಯಾಟಿನ್‌ಮಯವಾಗಿದ್ದರೂ ಧ್ವನಿ ಮತ್ತು ವ್ಯಾಕರಣ ದೃಷ್ಟಿಯಿಂದ ಅದು ತನ್ನ ಸ್ವಂತ ಅಸ್ತಿತ್ವವನ್ನು ಕಾಯ್ದುಕೊಂಡಿದೆ. ಇದರಂತೆ ಗ್ರೀಕ್ ಭಾಷೆಯ ಪ್ರಭಾವಮುದ್ರೆಯನ್ನೂ ಆಲ್ಬೇನಿಯನ್ ಭಾಷೆಯಲ್ಲಿ ಗುರುತಿಸಬಹುದು. ಗ್ರೀಕ್, ಲ್ಯಾಟಿನ್ ಅಲ್ಲದೆ ಸ್ಲ್ಯಾವಿಕ್, ರೊಮನ್ಸ್ ಮುಂತಾದ ಇನ್ನೂ ಕೆಲವು ಅನ್ಯಭಾಷೆಯ ಶಬ್ದಗಳು ಆಲ್ಬೇನಿಯನ್ ಶಬ್ದಕೋಶಗಳಲ್ಲಿ ಸೇರಿರುವುದರಿಂದ ಅದರ ಸ್ವಂತ ಶಬ್ದಭಂಡಾರ ಕಡಿಮೆಯಾಗಿದೆ.

**ಸಾಹಿತ್ಯ:** ಆಲ್ಬೇನಿಯ ಸಾಹಿತ್ಯದಲ್ಲಿ ಬೇರೆ ಬೇರೆ ಕಾಲಕ್ಕೆ ಸಂಬಂಧಪಟ್ಟ ಜನಪದ ಗೀತೆಗಳು ಯಥೇಚ್ಛವಾಗಿವೆ. ಇವು ಇತರ ಬಾಲ್ಕನ್ ದೇಶಗಳಲ್ಲಿರುವ ಸಾಮಾನ್ಯ ವಸ್ತು ವಿಷಯಗಳನ್ನು ಕುರಿತವು ಮತ್ತು ಸಾಧಾರಣವಾಗಿ ಅದೇ ರೀತಿಯವು. ಇವು ಗ್ರಾಮಸ್ಥರಾದ ಮತ್ತು ಸ್ವಾತಂತ್ರ್ಯಪ್ರಿಯರಾದ ಗುಡ್ಡಗಾಡಿನ ಜನಗಳಿಗೆ ಸಂಬಂಧಪಟ್ಟು ಪರ್ವತಗಳ ನಡುವೆ ಮತ್ತು ಕಣಿವೆಗಳಲ್ಲಿ ನಡೆದ ಒಳಪಂಗಡಗಳ ಮನಸ್ತಾಪಗಳನ್ನು ವಿವರಿಸುತ್ತವೆ. ಆಲ್ಬೇನಿಯದ ನ್ಯಾಯಶಾಸ್ತ್ರ ಪಿತಾಮಹನಾದ ಲೆಕ್‌ನನ್ನು ಕುರಿತು ಅನೇಕ ಕಥನಕವನಗಳಿವೆ. ಆದರೆ ಅತ್ಯಂತ ಜನಪ್ರಿಯವಾದ ವಸ್ತುವಿಷಯವೆಂದರೆ ಅರಸ ಸ್ಕ್ಯಾಂಡರ್ ಬೆಗ್‌ನ (1410–67) ಜೀವನ. ಈತ ತನ್ನ ಅಲ್ಪಾಯುಷ್ಯದಲ್ಲಿ ಆಲ್ಬೇನಿಯದ ಅನೇಕ ಒಳಪಂಗಡಗಳನ್ನು ಒಟ್ಟುಗೂಡಿಸಿ, ತುರ್ಕಿಯ ದಂಡಯಾತ್ರೆಗಳನ್ನು ತಡೆಗಟ್ಟಿ, ಆಲ್ಬೇನಿಯದ ಮಾದರಿ ಶೂರನಾಗಿ ಪರಿಗಣಿಸಲ್ಪಟ್ಟು, ಅನೇಕ ಪ್ರಾಚೀನ ಜನಪದಗೀತೆಗಳಿಗೂ ಮತ್ತು ಅರ್ವಾಚೀನ ಕವಿಗಳಿಗೂ ಸ್ಫೂರ್ತಿಯನ್ನು ಕೊಟ್ಟಿದ್ದಾನೆ.

ಫ್ರಾನ್‌ಸಿಸ್ಕೊ ಬ್ಲಾಂಕೊನ ಡಿಜಿಯೊನೇರಿಯೋ ಲ್ಯಾಟನೊ ಎಪರೋಟ (1635) ಎಂಬುದು ಆಲ್ಬೇನಿಯದ ಮೊಟ್ಟಮೊದಲ ಮುದ್ರಿತ ಪುಸ್ತಕ. ಆಲ್ಬೇನಿಯದ ಮೊದಲ ಪ್ರತಿಭಾವಂತ ಬರೆಹಗಾರ ಜೂಲಿಯ ವಾರಿಬೋಬ ಏಸುಕ್ರಿಸ್ತನ ತಾಯಿ ಮೇರಿಯ ಜೀವನವನ್ನು ಪದ್ಯರೂಪದಲ್ಲಿ ನಿರೂಪಿಸಿದ್ದಾನೆ (1762). ಜನಪ್ರಿಯ ಸಂಪ್ರದಾಯವನ್ನು ಒತ್ತಿಹೇಳಿದ ಜಿರೋನಿಮ್‌ದ ರಾಡ (1813–1903) ಎಂಬ ಪುನರುಜ್ಜೀವನ ಕಾಲದ ಕವಿ ಜಾನಪದ ಮತ್ತು ನಾಡಪದಗಳನ್ನು ಸಂಗ್ರಹಿಸಲು ಪ್ರಾರಂಭಿಸಿ, ತಾನೇ ಸ್ವಂತ ಕವನಗಳನ್ನು ರಚಿಸತೊಡಗಿದ. ಈತನ ಮುಖ್ಯವಾದ ಬರೆವಣಿಗೆಗಳಲ್ಲಿ ಶೂರ ಸ್ಕ್ಯಾಂಡರ್ ಬೆಗ್‌ನ ಜೀವನಚರಿತ್ರೆಯೂ ಒಂದು. ಸಾಹಿತ್ಯ ವಿಮರ್ಶೆಯ ಒಂದು ಪತ್ರಿಕೆಯ ಸಂಪಾದಕನಾಗಿದ್ದ ಜರ್ಚ್ ಫಿಷ್ಟ (1866–1941) ತನ್ನ ಲಾಹುಟ ಎ ಮಾಲ್ಸಿಸ್ ಎಂಬ ಬರೆವಣಿಗೆಯಿಂದಲೂ ಈತನ ಸಂಗಡಿಗನಾದ ವಿನ್ಸೆಂಕ್ ಪ್ರೆನುಷಿ ತನ್ನ ಆಲ್ಬೇನಿಯದ ಜನಪದ ಗೀತೆಗಳ ಸಂಗ್ರಹದಿಂದಲೂ (1911) ಪ್ರಸಿದ್ಧರಾದರು. ಸಾಮಿ ಬೇ ಫ್ರಾಷೇರಿ ಬೇಸ ಎಂಬ ತನ್ನ ನಾಟಕದಲ್ಲಿ ಆಲ್ಬೇನಿಯ ದೇಶದ ಸ್ವಾತಂತ್ರ್ಯಪ್ರಿಯರಾದ ಪರ್ವತವಾಸಿಗಳನ್ನು ಲಂಚಕೋರರಾದ ಆಳುವ ಜನಾಂಗದೊಡನೆ ಹೋಲಿಸಿ ಎರಡನೆಯ ಫ್ರಾಷೇರಿ (1846–1901) ಒಂದು ಗ್ರಾಮಾಂತರ ಜನಪದ ಕತೆಯನ್ನೂ ಸ್ಕ್ಯಾಂಡರ್ ಬೆಗ್ ಕುರಿತ ಹಾಡು ಎಂಬುದನ್ನೂ ಬರೆದ. ಜಿಸಿಪೆ ಸ್ಖಿರೊ (1865–1927), ಪಿರ್ರಸ್‌ನ ಸಾವು (1906) ಎಂಬ ದೇಶಪ್ರೇಮದ ದುರಂತ ನಾಟಕವನ್ನು ಬರೆದ ಮಿಹಲ್ ಗ್ರೆಮೀನೊ ಮತ್ತು ಕ್ರಿಸ್ಟೋ ಫ್ಲಾಕಿಯರ ಆಲ್ಬೇನಿಯದ ಕವನ ಸಂಗ್ರಹ (1923) ಸ್ವತಂತ್ರ ಆಲ್ಬೇನಿಯದ ಪಾಠಶಾಲೆಗಳಲ್ಲಿ ಉಪಯೋಗಿಸಲ್ಪಟ್ಟಿತು.

ಆಲ್ಬೇನಿಯದ ಪರವಾಗಿ ಹೊರದೇಶದಲ್ಲಿ ಕೆಲಸ ಮಾಡುತ್ತಿದ್ದ ಫೈಕ್ ಕೊನಿಟ್ಟ (1875–1942) ಒಬ್ಬ ಪ್ರಬಂಧಕಾರ, ಕವಿ ಮತ್ತು ವಿಮರ್ಶಕ. ಈತ ಆಲ್ಬೇನಿಯ ಎಂಬ ವಿಮರ್ಶನ ಪತ್ರಿಕೆಗೆ ಬ್ರಸೆಲ್ಸ್ ಮತ್ತು ಲಂಡನ್ ಪಟ್ಟಣಗಳಲ್ಲಿ 1896–1909ರವರೆಗೆ ಸಂಪಾದಕನಾಗಿದ್ದ. ಫ್ಯಾನ್ ಎಸ್. ನೋಲಿ ಎಂಬಾತ ಷೇಕ್ಸ್‌ಪಿಯರ್, ಇಬ್ಸನ್, ಪೋ, ಉಮರ್ ಖಯ್ಯಾಮ್, ಇಬನೆಜ್ ಮೊದಲಾದ ಕವಿಗಳ ಮುಖ್ಯವಾದ ಕಾವ್ಯಗಳನ್ನು ಆಲ್ಬೇನಿಯ ಭಾಷೆಗೆ ತರ್ಜುಮೆಮಾಡಿದ್ದಾನೆ.

ತರುಣ ಜನಾಂಗದವರ ಪೈಕಿ ಸಂಕೇತವಾದ ಮತ್ತು ತದನಂತರ ಬಂದ ಮಾರ್ಗಗಳಿಂದ ಪ್ರಭಾವಿತರಾದವರಲ್ಲಿ ಸ್ಕೆಂಡರ್‌ಬಾರ್ಧಿ ಮುಖ್ಯನಾದವ. ಈತ ಸಾಮಿ ಬೇ ಫ್ರಾಷೇರಿಯ ಬೇಸ ಕಾವ್ಯವನ್ನು ಇಂಗ್ಲಿಷಿಗೆ ಮೊಟ್ಟ ಮೊದಲಿಗೆ ಅನುವಾದಿಸಿದ್ದಾನೆ. ಗದ್ಯದಲ್ಲಿ ಮಿಲ್ಲೋ ಸೊಟಿರ್ ಗುರ್ರ ಬರೆದ ಫ್ಲಗೆಟ್ ಎ ಕುರ್‌ಬೆಟಟ್ (1938) ಎಂಬ ಕೃತಿಯಲ್ಲಿ ಓ. ಹೆನ್ರಿ ಮತ್ತು ಮೊಪಾಸಾ ಇವರ ಪ್ರಭಾವಗಳನ್ನು ಗುರುತಿಸಬಹುದು.

ಆಲ್ಬೇನಿಯನ್ ಭಾಷೆಯ ವ್ಯಾಕರಣ ಆಧುನಿಕ ಗ್ರೀಕ್ ಮತ್ತು ರೊಮೇನಿಯನ್ ಭಾಷೆಗಳ ವ್ಯಾಕರಣಗಳನ್ನು ಹೋಲುತ್ತದೆ. ಲ್ಯಾಟಿನ್, ರೊಮೇನಿಯನ್ ಮತ್ತು ಬಾಲ್ಕನ್ ಭಾಷೆಗಳಿಂದ ಹಲವು ಪದಗಳನ್ನು ಈ ಭಾಷೆಯಲ್ಲಿ ಬಳಸಲಾಗಿದೆ.

16ನೆಯ ಶತಮಾನದಿಂದ 20ನೆಯ ಶತಮಾನದವರೆಗೆ ತುರ್ಕಿ ಮತ್ತು ಗ್ರೀಸಿನ ಮತಗಳ ಕಥೆಗಳೂ ಪೌರಾಣಿಕ ಕಥೆಗಳೂ ಆಲ್ಬೇನಿಯದ ಜಾನಪದದ ಮೇಲೆ ಪ್ರಭಾವವನ್ನು ಬೀರಿದವು. ವೀರರ ಕಥೆಗಳು ಮತ್ತು ಕಾವ್ಯಗಳಿಂದ ಈ ಕಥೆಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿಬಂದವು. ಈ ಮೌಖಿಕ ಪರಂಪರೆ ಈ ದೇಶವು ತನ್ನತನವನ್ನು ಉಳಿಸಿಕೊಳ್ಳುವಲ್ಲಿ ನೆರವಾಯಿತು. ನೈಮ್ ಫ್ರಷೆಂ ಮತ್ತು ಸಾಮಿ ಫ್ರಷೆಂ ಸಹೋದರರು 19ನೆಯ ಶತಮಾನದ ಉತ್ತರಾರ್ಧದಲ್ಲಿ ಭೂಗತ ಆಲ್ಬೇನಿಯನ್ ಸಾಹಿತ್ಯವನ್ನು ಬೆಳೆಸಿದರು. ಒಂದು ರಾಷ್ಟ್ರೀಯ ಆಂದೋಳನ ಪ್ರಾರಂಭವಾಯಿತು. ಹಲವಾರು ಸಾಹಿತಿಗಳನ್ನು ಆಕರ್ಷಿಸಿತು. 1920ರ ದಶಕದಲ್ಲಿ ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದಿದ್ದ ಬಿಷಪ್ ಫಾನ್ ನೊಲಿ ರಾಷ್ಟ್ರೀಯ ನಿಷ್ಠೆಯನ್ನು ಪ್ರಕಟಿಸಿದ ಮತ್ತೊಬ್ಬ ಬರೆಹಗಾರ. ಈತ ಬೇರೆ ಸಾಹಿತ್ಯದ ಕೃತಿಗಳನ್ನು ಆಲ್ಬೇನಿಯನ್ ಭಾಷೆಗೆ ಅನುವಾದಿಸಿದ. ಕಮ್ಯುನಿಸ್ಟರು ದೇಶವನ್ನು ಆಳುತ್ತಿದ್ದಾಗ ಸಾಹಿತಿಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿರಲಿಲ್ಲ. ಈ ಆಡಳಿತವು ಕುಸಿದನಂತರ ಸಾಹಿತಿಗಳಿಗೆ ಸ್ವಾತಂತ್ರ್ಯದ ವಾತಾವರಣ ಸೃಷ್ಟಿಯಾಯಿತು. 'ದಿ ಜನರಲ್ ಆಫ್ ದಿ ಡೆಡ್ ಆರ್ಮಿ' (1963) ಎನ್ನುವ ಕಾದಂಬರಿಯನ್ನು ಬರೆದ ಇಸ್ಮೇಲ್ ಕದಾಕಿ, 20ನೆಯ ಶತಮಾನದ ಉತ್ತರಾರ್ಧದ ಪ್ರಸಿದ್ಧ ಸಾಹಿತಿ. (ಎಸ್.ಆರ್.ಎಸ್)

**ಆಲ್ಮಜೆಸ್ಟ್:** ಕ್ಲಾಡಿಯಸ್ ಟಾಲೆಮಿ (ಸು. 2ನೆಯ ಶತಮಾನ) ಗ್ರೀಕ್ ಗಣಿತಶಾಸ್ತ್ರಜ್ಞ, ಈತ ಸಂಪಾದಿಸಿದ ಖಗೋಳ ಗ್ರಂಥದ ಹೆಸರು; ಮ್ಯಾತಮ್ಯಾಟಿಕಲ್ ಸಿಂಟೇಕ್ಸಿಸ್ ಎಂದು ಈಚೆಗೆ ಹೆಸರಿಸಲಾಗಿದೆ; ಖಗೋಳಶಾಸ್ತ್ರವನ್ನು ಕುರಿತ ಗ್ರೀಕ್ ಗ್ರಂಥಗಳಲ್ಲಿ ಕೊನೆಯ ಮಹಾಕೃತಿ; ಅಲ್ಲಿಯವರೆಗಿನ ಗ್ರೀಕ್ ಸಂಶೋಧನೆಗಳನ್ನೂ ಭಾವನೆಗಳನ್ನೂ ಒಳಗೊಂಡ ಏಕೈಕ ನಿರೂಪಣೆ. ಆಲ್ಮಜೆಸ್ಟ್ ಎಂಬುದು ಅರಬ್ಬರು ನೀಡಿದ ಹೆಸರು. ಮುಂದಿನ 14 ಶತಮಾನಗಳ ಕಾಲ (ಅಂದರೆ 16ನೆಯ ಶತಮಾನದವರೆಗೂ) ಖಗೋಳಶಾಸ್ತ್ರವನ್ನು ಕುರಿತ ಚಿಂತನೆಗಳಿಗೆ ಇದು ಆಧಾರಗ್ರಂಥವೆಂದು ಪರಿಗಣಿತವಾಗಿತ್ತು. ಟಾಲೆಮಿ ಸ್ವತಃ ಸಂಶೋಧಿಸಿದ್ದು ಕಡಿಮೆ; ಆದರೆ ಕ್ರೋಡೀಕರಿಸಿದ್ದು ಈ ಗ್ರಂಥವನ್ನು. ಭೂಮಿಗೆ ಚಲನೆ ಇರಬಹುದು, ವಿಶ್ವಕೇಂದ್ರ ಭೂಮಿ ಆಗಿರಲಾರದು ಎಂಬ ಸಂದೇಹಗಳನ್ನು ಆ ಮೊದಲು ಹಲವಾರು ಚಿಂತನಕಾರರು ಮುಂದಿಟ್ಟಿದ್ದರು. ಆದರೆ ಟಾಲೆಮಿ ಇವೆಲ್ಲವನ್ನೂ ಅಲ್ಲಗಳೆದು ವಿಶ್ವಕೇಂದ್ರ ಭೂಮಿ, ಇದರ ಸುತ್ತಲೂ ಸೂರ್ಯ, ಚಂದ್ರ, ಗ್ರಹಗಳು, ನಕ್ಷತ್ರಗಳು ಸುತ್ತುತ್ತಿವೆ ಎಂದು ಸಾರಿದ. ಇವುಗಳ ಕಕ್ಷೆಗಳನ್ನು ವಿವರಿಸಲೋಸುಗ ಅಧಿಚಕ್ರ (**ನೋಡಿ**) ಎಂಬ ಹೊಸ ಗಣಿತಭಾವನೆ ಮುಂದಿಟ್ಟ. ಟಾಲೆಮಿ ವ್ಯವಸ್ಥೆ ಎಂದು ಹೆಸರು ಪಡೆದ ಸೌರವ್ಯೂಹದ ಈ ವಿವರಣೆ? ಕಂಡ ವಿವರಗಳಿಗೆ ಸರಿಸುಮಾರು ಹೊಂದುತ್ತಿದ್ದುದರಿಂದ ಟಾಲೆಮಿಯ ವಿಶ್ವದ ಕೇಂದ್ರ ಭೂಮಿ ಎಂಬ ಸಿದ್ಧಾಂತ ಶತಮಾನಗಳ ಕಾಲ ಉಳಿಯಿತು. ಅರಬ್ ಮತ್ತು ಕ್ರಿಶ್ಚಿಯನ್ ಪ್ರಪಂಚಗಳಿಗೂ ವ್ಯಾಪಿಸಿ ಅಲ್ಲಿನ ಚಿಂತನೆಗಳ ಮೇಲೂ ಗಾಢಪ್ರಭಾವ ಬೀರಿತು. 16ನೆಯ ಶತಮಾನದಲ್ಲಿ ಆಲ್ಮಜೆಸ್ಟನ್ನು (ಗ್ರೀಕ್ ಭಾಷೆಯಲ್ಲಿ) ಪ್ರಥಮವಾಗಿ ಮುದ್ರಿಸಲಾಯಿತು. ಟಾಲೆಮಿಯ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿದ ಮೊದಲ ವಿಜ್ಞಾನಿ 16ನೆಯ ಶತಮಾನದ ಕೆಪ್ಲರ್. ಇಂದು ಆಲ್ಮಜೆಸ್ಟ್ ಗ್ರಂಥಕ್ಕೆ ಕೇವಲ ಐತಿಹಾಸಿಕ ಮಹತ್ತ್ವ ಮಾತ್ರ ಉಳಿದಿದೆ. (ಸಿ.ಎನ್.ಎಸ್.)

**ಆಲ್ಮೇಡ, ಫ್ರಾನ್ಸಿಸ್ಕೊ ಡ:** 1450–1510. ಪೋರ್ಚುಗಲ್ಲಿನ ಸೇನಾನಾಯಕ. ಭಾರತದ ಪೋರ್ಚುಗೀಸ್ ಪ್ರದೇಶಗಳ ಪ್ರಥಮ ವೈಸ್‌ರಾಯ್ (1505). ಶ್ರೀಮಂತ ಕುಟುಂಬಕ್ಕೆ ಸೇರಿದವ. ಮೊಂಬಾಸಾವನ್ನು ಗೆದ್ದು, ಕೊಚ್ಚಿನ್ನಿಗೆ ಬಂದು ತಲುಪಿದ. ಅಂಜದೀವ್ ಮತ್ತು ಈಜಿಪ್ಷಿಯನ್ ಹಡಗುಗಳ ಪಡೆಗಳನ್ನು ಡಿಯೋ ಎಂಬಲ್ಲಿ ಸಂಪೂರ್ಣವಾಗಿ ನಾಶಗೊಳಿಸಿದ (1509). 1509ನೆಯ ಡಿಸೆಂಬರ್ ತಿಂಗಳಿನಲ್ಲಿ ಮೂರು ನೌಕೆಗಳೊಡನೆ ಯುರೋಪಿಗೆ ಹೊರಟು ನಡುವೆ ಸಾಲ್ದಾನಾ ಕೊಲ್ಲಿಯಲ್ಲಿ ತಂಗಿದ. ಇಲ್ಲಿ ಹಾಟೆಂಟಾಟರ ಸಂಗಡ ಯುದ್ಧಮಾಡಿ ಕೊಲೆಗೀಡಾದ. ಈತನ ಜೊತೆಯಲ್ಲಿ 65 ಜನ ಪೋರ್ಚುಗೀಸರೂ ಮಡಿದರು. ಮಾರನೆಯ ದಿನ ಈತನ ಶವ ಸಿಕ್ಕಿತು. ಕೊಲೆಯಾದ ಸ್ಥಳದಲ್ಲಿಯೇ ಈತನ ಸಮಾಧಿಯನ್ನೂ ಮಾಡಲಾಯಿತು. (ಎಸ್.ಎಸ್.ಐ.)

**ಆಲ್ಮೋರ:** ಭಾರತ ಗಣರಾಜ್ಯದ ಉತ್ತರಖಂಡ್ ರಾಜ್ಯದ ಕುಮಾಊ ಭಾಗದಲ್ಲಿರುವ ಒಂದು ಪ್ರಮುಖ ಜಿಲ್ಲೆ. 29°–62° ಉ.ಅ. ಮತ್ತು 79°–67° ಪೂ.ರೇ. ಕಾಳಿ ಎಂದು ಹೆಸರಾಗಿರುವ ಗಂಗಾನದಿಯ ಮೇಲ್ದಣಿವೆ ಹಾಗೂ ಗೋಗ್ರಾನದಿಗಳ ಮಧ್ಯಭಾಗದಲ್ಲಿದೆ. ಜಿಲ್ಲಾ ವಿಸ್ತೀರ್ಣ 3139 ಚ.ಕಿಮೀ. ಜನಸಂಖ್ಯೆ 6,30,567 (2001). ಸಮುದ್ರಮಟ್ಟಕ್ಕಿಂತ ಸು. 1625 ಮೀ ಎತ್ತರದಲ್ಲಿದ್ದು, ಹಿಮಾಲಯ ಪರ್ವತಶ್ರೇಣಿಗಳಲ್ಲಿ ಒಂದಾಗಿದೆ. 1790ರಲ್ಲಿ ಗೂರ್ಖಾ ಜನರು ಇದನ್ನು ವಶಪಡಿಸಿಕೊಂಡು ಒಂದು ಕೋಟೆಯನ್ನು ನಿರ್ಮಿಸಿದ್ದಾರೆ. 1891ರಲ್ಲಿ ಈ ಪಟ್ಟಣ ನೈನಿತಾಲ್‌ನೊಡನೆ ಸೇರಿ ಜಿಲ್ಲೆಯಾಯಿತು. ಇಲ್ಲಿ ಒಂದು ಉಚ್ಚ ಶಿಕ್ಷಣ ವಿದ್ಯಾಲಯವಿದೆ. ಭಾರತ ಸರ್ಕಾರದ ಸೈನಿಕ ಕೇಂದ್ರವಿದೆ. ಇಲ್ಲಿನ ನೀರು ಮತ್ತು ಹವೆಯಿಂದಾಗಿ ಆರೋಗ್ಯಧಾಮವೆನಿಸಿದೆ.

ಇಲ್ಲಿ ರಾಮಕೃಷ್ಣಾಶ್ರಮಕ್ಕೆ ಸೇರಿದ ಪುರಾತನ ಮಠವೊಂದಿದೆ. ಒಮ್ಮೆ ಸ್ವಾಮಿ ವಿವೇಕಾನಂದರು ಆಲ್ಮೋರಕ್ಕೆ ಭೇಟಿಯಿತ್ತು ತಮ್ಮ ಧರ್ಮೋಪನ್ಯಾಸದಿಂದ ಜನರನ್ನು ಧರ್ಮಜಾಗೃತರನ್ನಾಗಿ ಮಾಡಿದರೆಂದು ಪ್ರತೀತಿ. ಸ್ವಾಮಿ ವಿವೇಕಾನಂದರ ಕೊಲಂಬೋದಿಂದ ಆಲ್ಮೋರದವರೆಗೆ ಎಂಬ ಉಪನ್ಯಾಸಮಾಲಿಕೆಯ ಕೃತಿ ಪ್ರಸಿದ್ಧವಾದುದು. (ಎಂ.ಎಸ್.)

**ಆಲ್ಮ್‌ಕ್ವಿಸ್ಟ್ ಕಾರ್ಲ್ ಯೋನಾಸ್ ಲೂಡ್ವಿಗ್:** 1793–1866. 19ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಸ್ವೀಡನ್ನಿನ ಸಾಹಿತಿ. ಕಥೆ, ಕಾದಂಬರಿ, ನಾಟಕ ಹಾಗೂ ಕವನ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೆಲಸಮಾಡಿದ್ದಾನೆ. ಬಾಲ್ಯದಿಂದಲೂ ಮೊರೇವಿಯನ್ ಸೋದರರು ಪ್ರತಿಪಾದಿಸಿದ ಧರ್ಮತತ್ತ್ವದ ಪ್ರಭಾವದಲ್ಲಿ ಬೆಳೆದ. ಸ್ವೀಡನ್ನಿನ ಲೂಥೇರಿಯನ್ ಸಂಪ್ರದಾಯದ ಮಠಕ್ಕೆ ಸೇರಿದ ಅನಂತರವೂ ಸ್ವೀಡನ್‌ಬರ್ಗ್‌ನ ಅನುಭಾವ ಸಿದ್ಧಾಂತವನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ವ್ಯಾಖ್ಯಾನಮಾಡಿ ಅದರಂತೆ ತನ್ನ ತಾತ್ತ್ವಿಕ ದೃಷ್ಟಿಯನ್ನು ರೂಪಿಸಿಕೊಂಡ. ಆರ್ಥಿಕ ಮುಗ್ಗಟ್ಟು ಹಾಗೂ ಹಲವಾರು ತೊಂದರೆಗಳಿಗೆ ಸಿಕ್ಕಿದ ಇವನ ಜೀವನ ತಳಮಳದಿಂದ ತುಂಬಿತ್ತು. ಸರ್ಕಾರಿ ಅಧಿಕಾರಿಯಾಗಿ, ರೈತನಾಗಿ, ಅಧ್ಯಾಪಕನಾಗಿ, ಪಾದ್ರಿಯಾಗಿ, ಪ್ರಗತಿಶೀಲ ಪತ್ರಿಕೋದ್ಯಮಿಯಾಗಿ–ಹತ್ತಾರು ರೀತಿಯ ಉದ್ಯಮಗಳಲ್ಲಿ ಕೆಲಸಮಾಡಿದ. ನಿರ್ದಿಷ್ಟ ಗೊತ್ತುಗುರಿಯಿಲ್ಲದೆ ಬರೆದ ತನ್ನ ಕಾದಂಬರಿಗಳಲ್ಲಿ ವ್ಯಕ್ತಿಸಹಜವಾದ, ವಿಚಿತ್ರವಾದ ಸಂಕೀರ್ಣ ವಿಚಾರಗಳನ್ನು ಪ್ರತಿಪಾದಿಸಿದ್ದಾನೆ. ಇವನ ಕಾದಂಬರಿಗಳಲ್ಲಿ ವಾಸ್ತವಿಕತೆ ಹಾಗೂ ವಿಲಕ್ಷಣ ಅಂಶಗಳನ್ನು ಗುರುತಿಸಬಹುದು. ಇವನು 14 ಸಂಪುಟಗಳ ಮೇರುಕೃತಿ ಟಾರ್ನ್‌ರೋಸೆನ್ಸ್ ಬೋಕ್ (1832-35) ಅನ್ನು 1832ರಲ್ಲಿ ಬರೆಯಲುಪಕ್ರಮಿಸಿದ. ಬೇರೆ ಬೇರೆ ಕಾಲದಲ್ಲಿ ಬರೆದ ಐತಿಹಾಸಿಕ ಕಾದಂಬರಿಗಳು, ಸಣ್ಣ ಕಥೆಗಳು, ರಮ್ಯ ಕಥನ ಕವನಗಳು, ನಾಟಕಗಳು, ಭಾವಗೀತೆಗಳು–ಮೊದಲಾದುವು ಈ ಬೃಹತ್ ಸಂಪುಟಗಳಲ್ಲಿ ಅಡಗಿವೆ. ನೀಳ್ಗತೆಗಳ ರಚನೆಯಲ್ಲಿ ಇವನ ಪ್ರತಿಭೆ ಅಸಾಮಾನ್ಯ. 1839ರಲ್ಲಿ ಬರೆದ ಡೆಟ್‌ಗಾರ್ ಅನ್ ಎಂಬ ಇವನ ಅತ್ಯುತ್ತಮ ಕಥೆ ಇವನ ಸಮಕಾಲೀನ ಸಮಾಜದ ಚಿತ್ರಣವನ್ನೊಳಗೊಂಡಿದೆ. ವಿವಾಹ ಸಮಸ್ಯೆಯನ್ನು ಕುರಿತ ಸಾಂಪ್ರದಾಯಿಕ ದೃಷ್ಟಿಯನ್ನು ಅಲ್ಲಗಳೆಯುವ ಈ ನೀಳ್ಗತೆ ಬಹುದೊಡ್ಡ ವಿವಾದವೆಬ್ಬಿಸಿತು. ಲೇವಾದೇವಿ ವ್ಯಾಪಾರಿಯೊಬ್ಬನನ್ನು ವಿಷಹಾಕಿ ಕೊಂದನೆಂಬ ಆಪಾದನೆಗೆ ಗುರಿಯಾದ ಈತ 1851ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ತೆರಳಿದ. ಇವನ ಮೇಲಿನ ಗುಮಾನಿಯಲ್ಲಿ ತಥ್ಯಾಂಶ ಸ್ವಲ್ಪ ಇದೆಯೆಂಬ ವಿಷಯ ಅನಂತರ ಖಚಿತವಾಯಿತು. ಅಲ್ಲಿನ ಟೆಕ್ಸಸ್ ಪ್ರಾಂತ್ಯದಲ್ಲಿ ಪ್ರಯಾಣ ಮಾಡುತ್ತಿದ್ದಾಗ ಇವನ ಬಳಿ ಇದ್ದುವೆಂದು ಹೇಳಲಾದ ಹಲವು ಅತ್ಯಮೂಲ ಹಸ್ತಪ್ರತಿಗಳನ್ನು ದರೋಡೆಕೋರರು ಅಪಹರಿಸಿದರು. ಅಧ್ಯಕ್ಷ ಲಿಂಕನ್ನನಿಗೆ ದೂರಿತ್ತರೂ ಅವು ಪತ್ತೆಯಾಗಲಿಲ್ಲ. ಆ ವೇಳೆಗಾಗಲೇ ಪ್ರಕಟವಾಗಿದ್ದ ರಮ್ಯ ಕಾದಂಬರಿಗಳಿಂದ ಇವನ ಕೀರ್ತಿ ಅಪಾರವಾಗಿ ಬೆಳೆಯಿತಾದರೂ ರಮ್ಯ ಕಥೆಯಂತಿರುವ ಇವನ ರೋಮಾಂಚಕಾರಿ ಜೀವನವೇ ಈತನಿಗೆ ಎಲ್ಲದಕ್ಕಿಂತ ಮಿಗಿಲಾದ ಖ್ಯಾತಿ ದೊರಕಿಸಿತು. ಹಲವಾರು ಬಾರಿ ನಾನಾ ಅಪರಾಧಗಳ ಆಪಾದನೆಗೆ ಸಿಲುಕಿಕೊಂಡರೂ ಅವುಗಳಿಂದ ತಪ್ಪಿಸಿಕೊಂಡು ತಿರುಗಿದ ಇವನ ಸ್ವಾರಸ್ಯಮಯವಾದ ಜೀವನ ಕಥೆಯನ್ನು ಸ್ವೀಡನ್ನಿನ ಜನ ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. (ಎಚ್.ಕೆ.ಆರ್.)

**ಆಲ್ಲಿಯಂ:** ಲಲ್ಲಿಯೇಸಿ ಕುಟುಂಬಕ್ಕೆ ಸೇರಿದ ಸಸ್ಯಜಾತಿ. ಇದರಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಸೀಮೆ ಈರುಳ್ಳಿ ಮುಂತಾದ ಮುಖ್ಯ ವಾಣಿಜ್ಯ ಬೆಳೆಗಳು ಸೇರಿವೆ. ಆಲ್ಲಿಯಂನಲ್ಲಿ 500 ಪ್ರಭೇದಗಳಿವೆ. ಇವುಗಳಲ್ಲಿ ಕೆಲವು ಸುಂದರವಾದ ಹೂಬಿಟ್ಟು ಅಲಂಕಾರವಾಗಿ ಕಾಣುವುದರಿಂದ ಅವನ್ನು ಉದ್ಯಾನವನಗಳಲ್ಲಿ ಬೆಳೆಸುತ್ತಾರೆ. ಆಲ್ಲಿಯಂ ಸಸ್ಯಗಳನ್ನು ಅಂಚು ಪೊದೆಗಳ ಪಕ್ಕದಲ್ಲಿ ತುಂಬುಸಸ್ಯಗಳಾಗಿಯೂ ಕಲ್ಲೇರಿ ಸಸ್ಯಗಳಾಗಿಯೂ ಬೆಳೆಸುತ್ತಾರೆ. ಇವುಗಳ ಹೂಗಳ ಬಣ್ಣ ಬಿಳುಪು, ಗುಲಾಬಿ, ನೀಲಿ, ಕಡುಗೆಂಪು ಮತ್ತು ನಸುಗೆಂಪು. ಕೆಲವು ಪ್ರಭೇದಗಳಲ್ಲಿ ಮಿಶ್ರ ಬಣ್ಣಗಳೂ ವಿವಿಧ ಆಕಾರ ಮತ್ತು ಗಾತ್ರಗಳೂ ಇವೆ. ಹೀಗಾಗಿ ಇ ಪ್ರಭೇದಗಳು ಅತ್ಯಾಕರ್ಷಕವಾಗಿ ತೋರುತ್ತವೆ.

ಬೇಸಾಯದಲ್ಲಿರುವ ಆಲ್ಲಯಂ ಸಸ್ಯಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಕೆಳಗೆ ಕಾಣಿಸಿದೆ. ವಿವರಗಳಿಗೆ

| ಸಸ್ಯದ ಹೆಸರು | ಬೆಳೆಯುವ ಎತ್ತರ (ಅಡಿಗಳಲ್ಲಿ) | ಹೂವಿನ ಬಣ್ಣ |
|---|---|---|
| ಆಲ್ಲಿಯಂ ಅಲ್ಟೊಪಿಲೊಸಿಂ | 2 | ಊದಾ |
| ಆ. ಅಜುರೆಯಂ | 2 | ನೀಲಿ |
| ಆ. ಜೈಗ್ಯಾಂಸಿಯಂ | 5 | ಊದಾ ಅಥವಾ ಊದಾ ಮತ್ತು ಗುಲಾಬಿ ಮಿಶ್ರಿತ. |
| ಆ. ಕರಟವಿನ್ಸ | 2 | ನಸುಗೆಂಪು |
| ಆ. ಮೊಲ್ಲಿ | 1 | ಕಡುಹಳದಿ |
| ಆ. ನೆಪೊಲಿಟನಂ | 2 | ಬಿಳಿ |
| ಆ. ಅಸ್ಟ್ರೊಸ್ಕಿನಂ | 1 | ಗುಲಾಬಿ |

ಆಲ್ಲಿಯಂ ಜಾತಿಯ ಸಸ್ಯಗಳನ್ನು ಬೀಜ ಮತ್ತು ಲಶುನಗಳಿಂದ ಯಶಸ್ವಿಯಾಗಿ ವೃದ್ಧಿ ಮಾಡಬಹುದು. ಬೇಸಾಯದ ಕಾಲ ಜಾತಿಗಳನ್ನು ಅನುಸರಿಸಿದೆ. ಸಾಮಾನ್ಯವಾಗಿ ಅಕ್ಟೋಬರ್–ನವಂಬರ್ ತಿಂಗಳಲ್ಲಿ ನೆಟ್ಟ ಸಸಿಗಳ ಮೇ–ಜೂನ್ ತಿಂಗಳಲ್ಲಿ ಹೂ ಬಿಡುತ್ತವೆ. ಲಶುನಗಳನ್ನು ನೆಡುವುದು ಹೆಚ್ಚು ಬಳಕೆಯಲ್ಲಿದೆ. ಅವನ್ನು 3" ಆಳ 4"–6"ಅಂತರದಲ್ಲಿ ನೆಡಬೇಕು. ಸಾಮಾನ್ಯವಾಗಿ ಹೆಚ್ಚು ಎತ್ತರದ ಪ್ರದೇಶಗಳಲ್ಲಿ ಸಮೃದ್ಧಿಯಾಗಿ ಬೆಳೆಸಬಹುದು. ಮರಳು ಗೋಡು ಮಣ್ಣು ಇವುಗಳ ಬೇಸಾಯಕ್ಕೆ ಶ್ರೇಷ್ಠವಾದದ್ದು.

(ಎಂ.ಎಚ್.ಎಂ.)

**ಆಲ್ವಾಯಿ:** ಕೇರಳ ರಾಜ್ಯದ ಒಂದು ತಾಲ್ಲೂಕು ಹಾಗೂ (ಪೆರಿಯಾರ್) ನದಿಯ ದಡದಲ್ಲಿರುವ ತಾಲ್ಲೂಕಿನ ಕೇಂದ್ರ ಪಟ್ಟಣ. ಕೊಚ್ಚಿ–ಷೋರನೂರುಗಳ ನಡುವಿನ ರೈಲುಮಾರ್ಗದ ಒಂದು ನಿಲ್ದಾಣ. ಆಲ್ವಾಯಿನದಿ ಹಿಂದೆ ಸ್ನಾನಧಾಮವಾಗಿದ್ದು ಈಗ ಬೇಸಗೆಯ ಕಾಲದ ಪ್ರವಾಸಿಗರ ತಂಗುದಾಣವಾಗಿದೆ. ನದಿಯ ದಂಡೆಯಲ್ಲಿರುವ ಈಶ್ವರ ದೇವಾಲಯ ಅನೇಕ ಭಕ್ತರನ್ನು ಆಕರ್ಷಿಸಿದೆ. ಧಾನ್ಯ, ಮೀನು ಮತ್ತು ದನಕರುಗಳ ವ್ಯಾಪಾರಸ್ಥಳ. ನ್ಯಾಯಾಧೀಶರ ಕಚೇರಿ, ಸಬ್ ರಿಜಿಸ್ಟ್ರಾರರವರ ಕಚೇರಿ, ಆಸ್ಪತ್ರೆ, ಅಂಚೆಕಚೇರಿ ಮತ್ತು ಸುಂಕದ ಮನೆಯನ್ನುಳ್ಳ ಆಡಳಿತಕೇಂದ್ರವಾಗಿದೆ. ಅಲ್ಯೂಮಿನಿಯಂ ಕಾರ್ಖಾನೆ ಮತ್ತು ಗೊಬ್ಬರ ಮತ್ತು ಸಲ್ಫೂರಿಕ್ ಆಮ್ಲದ ತಯಾರಿಕೆಗೆ ಬೇಕಾದ ಸಲ್ಫೇಟ್ ತಯಾರಿಸುವ ಕಾರ್ಖಾನೆಯ ಕೈಗಾರಿಕಾ ಕೇಂದ್ರಸ್ಥಳ. (ಎನ್.ಎ.)

**ಆಲ್ಸಿಬೈಯಡೀಸ್:** ಪ್ರ.ಶ.ಪೂ. 451–404. ಅಥೆನ್ಸಿನ ಅತ್ಯಂತ ಸಮರ್ಥ ರಾಜಕಾರಣಿಗಳಲ್ಲೊಬ್ಬ ಹಾಗೂ ದಂಡನಾಯಕ. ಅಥೆನ್ಸ್ ನಗರದ ಶ್ರೀಮಂತ ಮನೆತನದಲ್ಲಿ ಜನಿಸಿದ. ಪೆರಿಕ್ಲೀಸರ ಹತ್ತಿರ ಸಂಬಂಧಿ. ಸಾಕ್ರಟೀಸನ ಮೆಚ್ಚುಗೆಗೆ ಪಾತ್ರನಾದವ. ಬಾಲ್ಯದಿಂದಲೂ ಸ್ವಚ್ಛಂದ ಜೀವನ ನಡೆಸಿದ; ಆಗಿನ ತರುಣರಿಗೆ ಅಚ್ಚುಮೆಚ್ಚಿನ ಗೆಳೆಯನಾದ; ಇವನ ಹುಚ್ಚು ಸಾಹಸ, ಮನಸ್ವೀ ನಡತೆಗಳನ್ನು ಅಥೆನ್ಸಿನ ಜನಸಾಮಾನ್ಯರೂ ಮೆಚ್ಚಿದರು. ಇದರಿಂದ ತೀರ ಸ್ವಾರ್ಥಿಯಾಗಿ ಬೆಳೆದ ಇವನಿಗೆ ರಾಜ್ಯದ ಹಿತಕ್ಕಿಂತ ತನ್ನ ಹಿತವೇ ಹೆಚ್ಚಾಯಿತು. ಅಥೆನ್ಸಿನ ಸಂಪ್ರದಾಯ ಪಕ್ಷದ ಮುಖಂಡನಾದ ನಿಕಿಯಾಸ್ ಪ್ರ.ಶ.ಪೂ. 421ರಲ್ಲಿ ಸ್ಪಾರ್ಟದೊಂದಿಗೆ ಮೂವತ್ತು ವರ್ಷಗಳ ಒಪ್ಪಂದ ಮಾಡಿಕೊಂಡಿದ್ದ. ಆಲ್ಸಿಬೈಯಡೀಸ್ ಅಥೆನ್ಸಿನ ತೀವ್ರಗಾಮಿ ಪಕ್ಷಕ್ಕೆ ಸೇರಿ, ಸ್ಪಾರ್ಟದ ವೈರಿ ಆರ್ಗಾಸ್‌ನೊಂದಿಗೆ ಅಥೆನ್ಸ್ ರಾಜಕೀಯ ಮೈತ್ರಿ ಹೊಂದುವಂತೆ ಮಾಡಿದ. ಆರ್ಗಾಸ್ ಸ್ಪಾರ್ಟದ ಮೇಲೆ ಯುದ್ಧ ಹೂಡಿದಾಗ ಅಥೆನ್ಸ್ ಅದರ ಸಹಾಯಕ್ಕೆ ಹೋಗಲಿಲ್ಲ; ಆರ್ಗಾಸ್ ಸೋತು ಹಿಮ್ಮೆಟ್ಟಬೇಕಾಯಿತು. ಕೊಂಚ ಕಾಲಾನಂತರ ರಾಜಕೀಯವೈರಿಗಳು ಈತನಮೇಲೆ ಅನಾಚಾರದ ಆಪಾದನೆ ಹೊರಿಸಿದ್ದರಿಂದ ಸ್ಪಾರ್ಟಕ್ಕೆ ಓಡಿಹೋದ. ಅಲ್ಲಿ ಅಥೆನ್ಸಿನ ಮೇಲೆ ಯುದ್ಧ ಹೂಡುವಂತೆ ಸ್ಪಾರ್ಟನರನ್ನು ಪ್ರೇರೇಪಿಸಲೆತ್ನಿಸಿದ. ಪರಿಣಾಮವಾಗಿ ಪ್ರ.ಶ.ಪೂ. 410ರಲ್ಲಿ ಸ್ವದೇಶಕ್ಕೆ ಹಿಂತಿರುಗುವಂತಾಯಿತು. ಮೂರುವರ್ಷ ಕಾಲ (410–407) ಸ್ಪಾರ್ಟದ ಮೇಲೆ ನಡೆದ ಯುದ್ಧದಲ್ಲಿ ಭೂ ಮತ್ತು ನೌಕಾ ಪಡೆಗಳ ದಂಡನಾಯಕನಾಗಿ ಕದನಗಳಲ್ಲಿ ವಿಜಯಗಳಿಸಿ ಅಥೆನ್ಸಿಗೆ ಕೀರ್ತಿ ತಂದ. ಒಂದು ಕಾಳಗದಲ್ಲಿ ಕೈಕೆಳಗಿನ ಸೇನಾಧಿಕಾರಿಯೊಬ್ಬ ಮಾಡಿದ ತಪ್ಪಿಗಾಗಿ ದೇಶಭ್ರಷ್ಟನಾಗಬೇಕಾಯಿತು. ಒಬ್ಬ ಪಾರಸಿಕನ ಕೈಯಿಂದ ಹತನಾದ. ಈತ ಸಾಕ್ರಟೀಸನ ಪ್ರಿಯಶಿಷ್ಯನಾದರೂ ಅವನಂತೆ ವಿವೇಕಿಯೂ ತಾತ್ತ್ವಿಕನೂ ಅಲ್ಲ. ತನ್ನ ಸ್ವಾರ್ಥದಿಂದ ಸಾಮಾಜಿಕ ಹಾಗೂ ರಾಜಕೀಯ ಜೀವನವನ್ನೀತ ಕಲಕಿದ. ಯುವಕರ ದುರ್ನಡತೆಗೆ ಕಾರಣನಾದನೆಂದು ಸಾಕ್ರಟೀಸನ ಮೇಲೆ ಹೊರಿಸಿದ ಆಪಾದನೆಗೆ ಈ ಶಿಷ್ಯ ಪುಷ್ಟಿಕೊಡುವಂತಿದ್ದನೆಂದು ಹೇಳಬಹುದು. ಈತನ ಸಾರ್ವಜನಿಕ ಜೀವನವನ್ನು ಥೂಸಿಡೈಡಿಸನೂ ಖಾಸಗಿ ಜೀವನವನ್ನು ಪ್ಲೂಟಾರ್ಕನೂ ಬರೆದಿದ್ದಾರೆ. *

**ಆಲ್ಸೀಯಸ್:** ಪ್ರ.ಶ.ಪೂ. 6ನೆಯ ಶತಮಾನದ ಗ್ರೀಕ್ ಕವಿ. ಹೆಚ್ಚಾಗಿ ಭಾವಗೀತೆಗಳನ್ನು ಬರೆದಿದ್ದಾನೆ. ಉಪಲಬ್ಧವಾಗಿರುವ ಅವನ ಗೀತೆಗಳ ವಸ್ತು ಹೆಚ್ಚಾಗಿ ರಾಜಕೀಯ, ಪ್ರೇಮ, ಯುದ್ಧ, ಕುಡಿತ,–ಇವುಗಳಿಗೆ ಸಂಬಂಧಿಸಿವೆ. ಅಂದಿನ ಆಡುಭಾಷೆಯಾದ ಈಯೋಲಿಕ್ ಅನ್ನೇ ತನ್ನ ಗೀತೆಗಳಲ್ಲಿ ಬಳಸಿದ. ಬರವಣಿಗೆಯಲ್ಲಿ ಆವೇಗಪರತೆ ಪ್ರಧಾನವಾಗಿದ್ದರೂ ರಮ್ಯತೆಯಿದೆ. ಇವನು ಶ್ರೀಮಂತನಾಗಿದ್ದರೂ ಗ್ರೀಸ್‌ನ ನಿರಂಕುಶ ಪ್ರಭುಗಳ ವೈರತ್ವಕ್ಕೆ ಪಕ್ಕಾದ ಇವನು ಸ್ಯಾಫೊವಿನ ಒಡನಾಡಿಯಾಗಿದ್ದನೆಂಬ ಐತಿಹ್ಯವಿದೆ. ಆಲ್ಕೇಯಿಕ್ ವೃತ್ತ ಮಾದರಿಗಳೆಂದು ಹೆಸರು ಪಡೆದು ಮುಂದಿನ ಅನೇಕ ಗ್ರೀಕ್ ಕವಿಗಳಿಗೂ ಹೊರೇಸನಿಗೂ ಮಾದರಿಯಾಗುವಂತಹ ಕಾವ್ಯರಚನಾವಿಧಾನ ಇವನಿಂದ ಪ್ರಾರಂಭವಾಯಿತು. ಪ್ರತಿಯೊಂದು ಪದ್ಯಕ್ಕೂ ನಾಲ್ಕು ಸಾಲುಗಳು; ಅವುಗಳಲ್ಲಿ ಹನ್ನೊಂದು ಉಚ್ಚಾರಾಂಶಗಳುಳ್ಳ (ಸಿಲಬಲ್) ಮೊದಲ ಎರಡು ಸಾಲುಗಳೂ ಒಂಬತ್ತು ಮತ್ತು ಹತ್ತು ಉಚ್ಚಾರಾಂಶಗಳುಳ್ಳ ಇರುವ ಮೂರು, ನಾಲ್ಕನೆಯ ಸಾಲುಗಳು ಇರುವುದು ಅದರ ವಿಶಿಷ್ಟಾಂಶವಾಗಿದೆ. *

**ಆಲ್ಸೇಸ್ ಲೊರೇನ್:** ಮೊದಲಿಗೆ ಇವು ಪ್ರತ್ಯೇಕ ಪ್ರಾಂತ್ಯಗಳಾಗಿದ್ದು ಈಗ ಇವೆರಡೂ ಪ್ರಾಂತ್ಯಗಳು ಸೇರಿ ಆಲ್ಸೇಸ್ ಲೊರೇನ್ ಎನ್ನಿಸಿಕೊಂಡಿದೆ. ಪಶ್ಚಿಮ ಯುರೋಪಿನ ಫ್ರಾನ್ಸ್ ಮತ್ತು ಜರ್ಮನಿ ದೇಶಗಳ ಗಡಿಭಾಗಗಳಾದ ಈ ಪ್ರದೇಶಗಳು ಮೊದಲಿನಿಂದಲೂ ಫ್ರೆಂಚ್ ಮತ್ತು ಜರ್ಮನರ ಕಲಹಕ್ಕೆ ಕಾರಣವಾಗಿ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಇವುಗಳ ಸ್ವಾಮ್ಯವನ್ನು ಪಡೆಯಲು ಎರಡೂ ರಾಷ್ಟ್ರಗಳ ನಡುವೆ ಉಂಟಾದ ಯುದ್ಧ ಭಯಂಕರವೂ ದೀರ್ಘಕಾಲಿಕವೂ ಆದುದು. 1870ರಲ್ಲಿ ಜರ್ಮನರು ಈ ಪ್ರಾಂತ್ಯಗಳನ್ನು ಪಡೆದಾಗ ಆಲ್ಸೇಸ್ ಲೊರೇನ್ ಎಂದು ಕರೆದರು. ಈಗ ಈ ಪ್ರದೇಶ ಫ್ರೆಂಚರ ಅಧೀನದಲ್ಲಿದೆ.

**ಆಲ್ಸೇಸ್:** ಈ ಪ್ರಾಂತ್ಯದ ವಿಸ್ತೀರ್ಣ ಸು. 8288 ಚ.ಕಿಮೀ. ಜನಸಂಖ್ಯೆ ಸು. 18,15,488 (2006). ಇದರ ಮುಖ್ಯನಗರ ಸ್ಟ್ರಾಸ್‌ಬರ್ಗ್. ಹಾತ್–ರಿಹನ್ ಮತ್ತು ಬಾಸ್ ರಿಹನ್‌ಗಳನ್ನೊಳಗೊಂಡು ಫ್ರಾನ್ಸ್ ದೇಶದ ಪ್ರಮುಖ ಭಾಗವಾಗಿದೆ. ಅಲ್ಯೂಮಿನಿಯಂ ಖನಿಜ ನಿಕ್ಷೇಪಗಳನ್ನೊಳಗೊಂಡ ಪರ್ವತ ಶ್ರೇಣಿಗಳಿವೆ. ಮುಲ್‌ಹೌಸನ ಉತ್ತರಕ್ಕೆ ಪೊಟ್ಯಾಷ್‌ನ ನಿಕ್ಷೇಪಗಳುಂಟು. ಬೆಲ್‌ಪೋರ್ಟ್ ಮತ್ತು ಕಾಲ್‌ಮಾರಿನ ಸುತ್ತುಮುತ್ತಲಲ್ಲಿ ಹತ್ತಿಗಿರಣಿಗಳು ಮತ್ತು ಸಾವೆರಿನ್ನಲ್ಲಿ ಉಣ್ಣೆಗಿರಣಿಗಳು ಇವೆ. ಆಹಾರವಸ್ತು ಸಂಸ್ಕರಣ, ರಾಸಾಯನಿಕಗಳು, ಯಂತ್ರೋಪಕರಣಗಳ ಉದ್ದಿಮೆಗಳೂ ಇವೆ. ದ್ರಾಕ್ಷಿ ಬೆಳೆಯನ್ನು ಹೆಚ್ಚಾಗಿ ಉತ್ಪಾದಿಸುತ್ತಾರೆ. ಲ್ಯೂಟರ್, ಮೊಡರ್, ಥೌರ್ ನದಿಗಳು ಈ ಪ್ರದೇಶದಲ್ಲಿ ಹರಿಯುತ್ತವೆ. 870ರಲ್ಲಿ ಇದು ಫ್ರೆಂಚರಿಂದ ಜರ್ಮನಿಯವರ ಆಡಳಿತಕ್ಕೆ ಬಂತು. 1798ರಲ್ಲಿ ಮತ್ತೆ ಫ್ರೆಂಚರ ಆಡಳಿತಕ್ಕೆ ಬಂತು. 1871–1919 ಮತ್ತು 1940–45ರ ಅವಧಿಯಲ್ಲೂ ಜರ್ಮನರ ಆಡಳಿತದಲ್ಲಿದ್ದು, ಇದೀಗ ಫ್ರಾನ್ಸಿನ ಬಹು ಮುಖ್ಯಭಾಗವಾಗಿದೆ.

**ಲೊರೇನ್** : ಇದು ರೋಮನ್ ಚಕ್ರಾಧಿಪತ್ಯಕ್ಕೆ ಸೇರಿದ್ದು 13ನೆಯ ಶತಮಾನದವರೆಗೂ ಫ್ರೆಂಚರ ಪ್ರಭಾವಕ್ಕೆ ಒಳಗಾಗಿ ಅವರ ಸಂಸ್ಕೃತಿಯನ್ನೇ ಬೆಳೆಸಿಕೊಂಡಿತು. ಅನಂತರ ಡ್ಯೂಕರ ಸ್ವಯಂ ಆಡಳಿತಕ್ಕೆ ಒಳಗಾಗಿ 1789ರಲ್ಲಿ ಫ್ರೆಂಚರ ಆಡಳಿತಕ್ಕೆ ಒಳಪಟ್ಟಿತು. ಇದರ ಇತಿಹಾಸ ಪ್ರಸಿದ್ಧವಾದ ರಾಜಧಾನಿ ನ್ಯಾನ್ಸಿ. ಮ್ಯೂಸೆ ಮತ್ತು ಮೊಸಲ್ಲೆ ನದಿಗಳು ಹರಿಯುತ್ತವೆ. ಇದು ಸಾಮಾನ್ಯವಾಗಿ ಪರ್ವತ ಪ್ರದೇಶಗಳಿಂದ ಕೂಡಿದ್ದು ವ್ಯವಸಾಯಕ್ಕೆ ಮುಖ್ಯ ಕಸುಬಾಗಿದೆ. ಇಲ್ಲಿ ಸಿಗುವ ಕಬ್ಬಿಣದ ಅದಿರು ಯುರೋಪು ಖಂಡದಲ್ಲೇ ಹೆಚ್ಚಿನದಾಗಿದೆ. ಕಲ್ಲಿದ್ದಲಿನ ಗಣಿಗಳು ಹೇರಳವಾಗಿವೆ. ಹೀಗಾಗಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಹೆಚ್ಚು. ಹೆಚ್ಚಾಗಿ ಫ್ರೆಂಚ್ ಭಾಷೆಯನ್ನಾಡುವ ಜನರಿದ್ದಾರೆ. ಲೊಥರಿಂಜಿಯ ಸಾಮ್ರಾಜ್ಯದ ಅವಶೇಷವಾಗಿ ಲೊರೇನ್ ಪ್ರದೇಶ ಉಳಿದಿದೆ.

ಈ ಪ್ರದೇಶಗಳ ಪ್ರಾಚೀನ ಇತಿಹಾಸ ಹೀಗಿದೆ : ಜ್ಯೂಲಿಯಸ್ ಸೀಸರನ ಕಾಲದಲ್ಲಿ ಫ್ರಾನ್ಸ್ ಅಥವಾ ಗಾಲ್ ಪ್ರಾಂತ್ಯದ ಭಾಗವಾಗಿದ್ದು ಮುಂದೆ ಚಾರ್ಲಮಾನನ ಚಕ್ರಾಧಿಪತ್ಯಕ್ಕೆ ಒಳಪಟ್ಟು ಅವನ ತರುವಾಯ ಉಂಟಾದ ವಿಭಜನೆಗಳ ಪರಿಣಾಮವಾಗಿ ಜರ್ಮನಿಯ ಅರಸ ಲೂಯಿ ವಶಕ್ಕೆ ಒಳಗಾಯಿತು. 1648ರಲ್ಲಿ ವೆಸ್ಟ್ ಫ್ಯಾಲಿಯ ಒಪ್ಪಂದದ ಪ್ರಕಾರ ಆಲ್ಸೇಸನ್ನು ಫ್ರೆಂಚರಿಗೆ ಬಿಟ್ಟುಕೊಡಲಾಯಿತು. ಅನಂತರ ಅದು ಸು. 200 ವರ್ಷಗಳಕಾಲ ಜರ್ಮನಿಯ ಅಧೀನದಲ್ಲಿತ್ತು. 1789ರಲ್ಲಿ ಆದ ಫ್ರೆಂಚ್ ರಾಜ್ಯಕ್ರಾಂತಿ ಫ್ರಾನ್ಸಿನ ಜನರಲ್ಲಿ ಅತ್ಯಧಿಕ ಸ್ಫೂರ್ತಿಯನ್ನು ತುಂಬಿತು: ಅಲ್ಲದೆ ಜರ್ಮನರ ವಿರುದ್ಧ ದ್ವೇಷಭಾವ ಬೆಳೆಯಿತು. ಆಗ ನಡೆದ ಯುದ್ಧಗಳಲ್ಲಿ ಆಲ್ಸೇಸಿನ ಲೊರೇನ್ ಫ್ರಾನ್ಸಿಗೆ ಪರಾಕ್ರಮಿ ಸೈನಿಕರನ್ನು ಒದಗಿಸಿಕೊಟ್ಟವು. 1870ರಲ್ಲಿ ಜರ್ಮನಿ ಮತ್ತು ರಷ್ಯಗಳ ನಡುವೆ ಯುದ್ಧ ನಡೆಯಿತು. ಆ ಸಂದರ್ಭದಲ್ಲಿ ಜರ್ಮನಿ ಆಲ್ಸೇಸಿನ ಎಲ್ಲ ಭಾಗಗಳನ್ನೂ ಲೊರೇನಿನ ಅರ್ಧ ಭಾಗವನ್ನೂ ವಶಪಡಿಸಿಕೊಂಡಿತು. 1918ರಲ್ಲಿ ಮತ್ತೆ ಫ್ರೆಂಚರ ಆಧಿಪತ್ಯಕ್ಕೆ ಬಂತು. ಮತ್ತೆ 1940ರಲ್ಲಿ ಈ ಪ್ರದೇಶಗಳನ್ನು ಜರ್ಮನಿ ವಶಪಡಿಸಿಕೊಂಡಿತು.

1945ರಲ್ಲಿ ಎರಡನೆಯ ಮಹಾಯುದ್ಧ ಮುಗಿದ ಮೇಲೆ ಈ ಪ್ರದೇಶಗಳು ಫ್ರಾನ್ಸಿನ ಆಡಳಿತಕ್ಕೆ ಒಳಪಟ್ಟುವು. ಫ್ರೆಂಚರು ಮಾರ್ಸೆಲ್ ಎಂಬ ತಮ್ಮ ರಾಷ್ಟ್ರಗೀತೆಯನ್ನು ಸ್ಟ್ರಾಸ್‌ಬರ್ಗ್ ಮೇಯರಿನ ಮನೆಯಲ್ಲಿ ಮೊದಲಬಾರಿಗೆ ಹಾಡಿದರು. ಎರಡು ಮಹಾಯುದ್ಧಗಳ ತುಳಿತಕ್ಕೆ ಸಿಕ್ಕಿ ಈ ಪ್ರದೇಶಗಳು ಬಹುವಾಗಿ ಕಷ್ಟನಷ್ಟಗಳಿಗೆ ಒಳಗಾದವು. (ಜಿ.ಆರ್.ಕೆ.;ಎಂ.ಎಸ್.)

**ಆವಕ್:** ಎಫ್ರೀಷಿಯೇಸೀ ಕುಟುಂಬಕ್ಕೆ ಸೇರಿದ ಎಫ್ರೀಷಿಯಲೇವಿಸ್ ಎಂಬ ವೈಜ್ಞಾನಿಕ ಹೆಸರಿನ ಮರ. ಇದನ್ನು ಹಾಲಿಪ್ಪೆ, ಕರ್ಪೂರ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಭಾರತದ ಎಲ್ಲ ಕಡೆಗಳಲ್ಲೂ ಬೇಸಗೆಯಲ್ಲಿ ಎಲೆಗಳುದುರುವ ಕಾಡುಗಳಲ್ಲಿ ಕಂಡುಬರುತ್ತವೆ. ಸಮುದ್ರ ಮಟ್ಟಕ್ಕೆ 950–1000ಮೀ ಎತ್ತರದಲ್ಲಿ ಬಹು ಚೆನ್ನಾಗಿ ಬೆಳೆಯುತ್ತದೆ. ಸು. 12ಮೀ ಎತ್ತರಕ್ಕೆ ಬೆಳೆಯುತ್ತದೆ. ಸುತ್ತಳತೆ 1–1.5ಮೀಗಳಷ್ಟು ಎಲೆಗಳು ಅಂಡಾಕಾರ. ಹೂಗಳು ಬಿಳಿ. ಹಣ್ಣುಗಳು ಸಣ್ಣ. ಬಣ್ಣ ಕಿತ್ತಳೆ. ಮರ ಘನ ಅಡಿಗೆ 10 ಕೆಜಿ. ಗಳಷ್ಟು ತೂಕವಾಗಿದ್ದು ಹಳದಿ ಇಲ್ಲವೆ ಕಂದು ಮಿಶ್ರ ಬೂದು ಬಣ್ಣವಾಗಿರುತ್ತದೆ.

ಕ್ಷಾಮ ಕಾಲದಲ್ಲಿ ಇದರ ಹಣ್ಣುಗಳನ್ನು ಜನರು ತಿನ್ನುವರು. ಇದರ ಎಲೆಗಳೆಂದರೆ ದನಗಳಿಗೆ ಬಹಳ ಪ್ರೀತಿ. ಮರದಿಂದ ವ್ಯವಸಾಯದ ಉಪಕರಣಗಳನ್ನೂ ಬೆಂಕಿಪೆಟ್ಟಿಗೆಗಳನ್ನೂ ತಯಾರಿಸುತ್ತಾರೆ. ಇದೊಂದು ಉತ್ತಮ ಔಷಧ ಸಸ್ಯ. ಎಲೆಗಳ ಕಷಾಯವನ್ನು ಉದರಸಂಬಂಧ ವ್ಯಾಧಿಗಳಿಗೂ ಕೆಮ್ಮಿಗೂ ಉಪಯೋಗಿಸುತ್ತಾರೆ. ಬೇರಿನ ಕಷಾಯವನ್ನು ಉಪದಂಶ (ಸಿಫಿಲಿಸ್), ಗೊನೊರಿಯ ಮತ್ತಿತರ ಮೇಹ ರೋಗಗಳಿಗೆ ಉಪಯೋಗಿಸುತ್ತಾರೆ. ಬತ್ತದ ಗದ್ದೆಗಳಿಗೆ ಹೊಂಗೆ ಎಲೆಯೊಡನೆ ಇದರ ಎಲೆಗಳನ್ನೂ ಬೆರೆಸಿ ಹೂತು ಹಸಿರು ಗೊಬ್ಬರ ತಯಾರಿಸುತ್ತಾರೆ. (ಎಸ್.ಎನ್.ಆರ್.)

**ಆವನಿ:** ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನಲ್ಲಿ ಮುಳುಬಾಗಿಲನಿಂದ ಸು. 16 ಕಿಮೀ ದಕ್ಷಿಣಕ್ಕಿರುವ ಒಂದು ಪುಣ್ಯಕ್ಷೇತ್ರ. ಈ ಗ್ರಾಮದ ಪರಿಸರದಲ್ಲಿಯೂ ಸಮೀಪದ ಬೆಟ್ಟದ ಮೇಲೂ ಇರುವ ಅನೇಕ ದೇವಾಲಯಗಳು ಮತ್ತು ಶಿಲಾಶಾಸನಗಳು ಇದರ ಪ್ರಾಚೀನ ಪ್ರಾಮುಖ್ಯವನ್ನು ಸಾರುತ್ತವೆ. ಊರಿನ ಪೂರ್ವದ ಹೆಸರು ಅಹವನೀಯ, ಆವಣ್ಯ, ಆವಣೆ ಇತ್ಯಾದಿಯಾಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಸ್ಥಳೀಯ ನಂಬಿಕೆಗಳ ಪ್ರಕಾರ ಈ ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶ ಪುರಾಣಪ್ರಸಿದ್ಧವಾದ ಅವಂತಿಕಾ ಕ್ಷೇತ್ರ. ವಾಲ್ಮೀಕಿ ಋಷಿಯ ಆಶ್ರಮವಿದ್ದುದು ಇಲ್ಲಿಯ ಬೆಟ್ಟದಲ್ಲಿಯೇ ; ರಾಮ ಲಂಕೆಯನ್ನು ಗೆದ್ದು ಅಯೋಧ್ಯೆಗೆ ಹಿಂತಿರುಗುವ ಹಾದಿಯಲ್ಲಿ ಇಲ್ಲಿಗೆ ಬಂದಿದ್ದನಂತೆ ; ಸೀತಾದೇವಿ ಗಂಡನಿಂದ ಕಾಡಿಗೆ ಕಳುಹಿಸಲ್ಪಟ್ಟಾಗ ಇಲ್ಲಿ ಬಂದು ತಂಗಿ ಲವಕುಶರಿಗೆ ಜನ್ಮವಿತ್ತಳೆಂದೂ ಲವಕುಶರು ರಾಮನ ಯಜ್ಞಾಶ್ವವನ್ನು ಕಟ್ಟಿ ರಾಮನೊಡನೆ ಇಲ್ಲಿಯೇ ಯುದ್ಧಮಾಡಿದರೆಂದೂ ಐತಿಹ್ಯ. ಈ ಘಟನೆಗಳಿಗೆ ಸಂಬಂಧಪಟ್ಟಂತೆ, ಈ ಸುತ್ತಿನ ಅನೇಕ ತಾಣಗಳು ವಾಲ್ಮೀಕಿಯ ಕುಟೀರ, ಲವಕುಶರ ತೊಟ್ಟಿಲು, ಸೀತೆಯ ಅಡುಗೆಪಾತ್ರೆ, ಅವಳು ಬಟ್ಟೆಯೊಗೆಯುತ್ತಿದ್ದ ಕೊಳ, ಲವಕುಶರು ಯಜ್ಞಾಶ್ವವನ್ನು ಕಟ್ಟಿದ ಬಂಡೆ, ರಾಮಲಕ್ಷ್ಮಣರು ಕುಳಿತಿದ್ದ ಬಂಡೆ–ಇತ್ಯಾದಿಯಾಗಿ ಪ್ರಸಿದ್ಧವಾಗಿವೆ.

ಆವನಿಯಲ್ಲಿರುವ ರಾಮೇಶ್ವರ ದೇವಾಲಯಗಳ ಒಂದು ಭಾಗದ ನೋಟ

ಅತ್ಯಂತ ಪ್ರಾಚೀನ ದೇವಾಲಯಗಳು ಬೆಟ್ಟದ ನೈರುತ್ಯದಲ್ಲಿ ಒಂದು ದೊಡ್ಡ ಪ್ರಾಂಗಣದ ಮಧ್ಯೆ ಇವೆ. ಇವೆಲ್ಲವೂ ಶೈವ ದೇವಾಲಯಗಳು. ಮಧ್ಯದಲ್ಲಿ ಪಾರ್ವತಿ ದೇವಾಲಯವೂ ಅದರ ಸುತ್ತಲೂ ರಾಮೇಶ್ವರ, ಲಕ್ಷ್ಮಣೇಶ್ವರ, ಭರತೇಶ್ವರ, ಶತ್ರುಘ್ನೇಶ್ವರ, ಸುಗ್ರೀವೇಶ್ವರ ಅಂಜನೇಶ್ವರ ಮುಂತಾದ ಗುಡಿಗಳಿವೆ. ಇವುಗಳಲ್ಲಿ ಲಕ್ಷ್ಮಣೇಶ್ವರ ಗುಡಿ ಅತ್ಯಂತ ಸುಂದರ ಕಟ್ಟಡ. ಗರ್ಭಗೃಹ, ಅಂತರಾಳ ಮತ್ತು ನವರಂಗವಿರುವ ಈ ಗುಡಿಯ ಹೊರಮೈಯ ಸುತ್ತಲೂ ಬುಡದಲ್ಲಿ ಆನೆ, ಸಿಂಹ, ಯಾಳಿ, ಮಕರ, ಕುದುರೆಲಾಳದಾಕೃತಿಯ ಕಮಾನುಗಳು–ಇವುಗಳಿಂದ ಅಲಂಕೃತವಾದ ಆರು ಪಟ್ಟಿಕೆಗಳಿವೆ. ಮೇಲೆ ಅಲ್ಲಲ್ಲಿ ಯಕ್ಷ, ಶಿವ, ದುರ್ಗಿ, ಗಣೇಶ, ಭೈರವ, ಭೈರವಿ, ವಿಷ್ಣು ಮುಂತಾದ ಶಿಲ್ಪಗಳಿರುವ, ಸಮಾನಾಂತರಗಳಲ್ಲಿ ಅರ್ಧಕಂಭಗಳಿಂದ (ಪಿಲ್ಯಾಸ್ಟರ್) ಭೇದಿಸಲ್ಪಟ್ಟ ಎತ್ತರವಾದ ಭಿತ್ತಿಯಿದೆ. ಇದರಲ್ಲಿ ಮಧ್ಯೆ ಮಧ್ಯೆ ಮಹಿಷಾಸುರಮರ್ದಿನಿ, ಸೂರ್ಯ, ನಟರಾಜ ಮುಂತಾದ ವಿಗ್ರಹಗಳನ್ನೊಳಗೊಂಡ ಜಾಲಂಧ್ರಗಳೂ ಇದ್ದು ದೇವಾಲಯದ ಸೊಬಗನ್ನು ಹೆಚ್ಚಿಸಿವೆ. ಒಳಭಾಗದ ನವರಂಗದಲ್ಲಿ, ಮಧ್ಯೆ ಉಮಾಮಹೇಶ್ವರ ಮತ್ತು ಸುತ್ತಲೂ ಅಷ್ಟದಿಕ್ಪಾಲಕರ ಕೆತ್ತನೆಯಿರುವ ಒಂದು ಮೋಹಕ ಭುವನೇಶ್ವರಿಯಿದೆ. ರಚನಾರೀತಿಯಲ್ಲಿ, ಲಕ್ಷ್ಮಣೇಶ್ವರ ದೇವಾಲಯ ಕಂಚಿಯ ದೇವಾಲಯಗಳ ಸಂಪ್ರದಾಯದಿಂದ ಬೆಳೆದು ಬಂದ ನೊಳಂಬ ವಾಸ್ತುಶಿಲ್ಪ ಶೈಲಿಯ ಒಂದು ಉತ್ತಮ ಪ್ರತೀಕವಾಗಿದೆ. ವಾಸ್ತುಶೈಲಿಯಿಂದ, ಮತ್ತು ಸ್ಥಳೀಯ ಶಾಸನಗಳ ಸಾಂದರ್ಭಿಕ ಮಾಹಿತಿಗಳಿಂದ ಈ ದೇವಾಲಯ 10ನೆಯ ಶತಮಾನದಲ್ಲಿ ಕಟ್ಟಲಾಗಿತ್ತೆಂದು ಹೇಳಬಹುದು. ಆದರೆ ದೇವಾಲಯದ ಮೇಲ್ಭಾಗದಲ್ಲಿರುವ ಗೋಪುರ ಮುಂತಾದ ಇಟ್ಟಿಗೆಯ ಸೇರ್ಪಡೆಗಳು ಸುಮಾರು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಆದವುಗಳು. ಶತ್ರುಘ್ನೇಶ್ವರ, ಅಂಜನೇಶ್ವರ ಮತ್ತು ಭರತೇಶ್ವರ ದೇವಾಲಯಗಳೂ ಸುಮಾರು ಲಕ್ಷ್ಮಣೇಶ್ವರದ ಮಾದರಿಯವೇ. ಇವುಗಳ ರಚನೆಯ ಕಾಲದಲ್ಲೂ ಇವುಗಳಲ್ಲಿ ಬಹಳಷ್ಟು ಅಂತರವಿರಲಾರದೆಂಬುದು ಈ ಕೆಲವು ದೇವಾಲಯಗಳಲ್ಲಿ ಕಂಡುಬಂದಿರುವ ನೊಳಂಬ ಮತ್ತು ಗಂಗರ ಶಾಸನಗಳಿಂದ ತಿಳಿದುಬರುತ್ತದೆ. ಇದೇ ಕಾಲದ ರಾಮೇಶ್ವರ ದೇವಾಲಯ ದ್ರಾವಿಡಶೈಲಿಯ ಮೂಲ ಶಿಖರವನ್ನು ಇನ್ನೂ ಉಳಿಸಿಕೊಂಡಿದೆ. ಈ ದೇವಾಲಯದಲ್ಲಿ ಮೂಲಗರ್ಭಗುಡಿ ಮತ್ತು ನವರಂಗದ ಕೆಲವು ಭಾಗಗಳು ರಚನಾರೀತಿಯಲ್ಲಿ ಇತರ ಸಮಕಾಲೀನ ದೇವಾಲಯಗಳಂತೆಯೇ ಇದ್ದರೂ ಮುಂದೆ 12–13ನೆಯ ಶತಮಾನದ ಕೆಲವು ಸೇರ್ಪಡೆಗಳಿಂದಾಗಿ ಕಟ್ಟಡದ ಅಂದಕ್ಕೆ ಸ್ವಲ್ಪ ಕುಂದು ಬಂದಿದೆ. ಮಧ್ಯದಲ್ಲಿರುವ ಪಾರ್ವತಿ ದೇವಾಲಯ ಗರ್ಭಗೃಹ, ನವರಂಗ ಮತ್ತು ಮುಖಮಂಟಪಗಳನ್ನೊಳಗೊಂಡಿರುವ ಸಾಮಾನ್ಯ ಕಟ್ಟಡ. ಇಲ್ಲಿಯ ವಾಸ್ತುರಚನೆಯಲ್ಲಾಗಲೀ ಶಿಲ್ಪಗಳಲ್ಲಾಗಲೀ ಈ ಹಿಂದಿನ ದೇವಾಲಯಗಳಲ್ಲಿರುವ ಪ್ರಬುದ್ಧತೆ ಕಂಡುಬರುವುದಿಲ್ಲ. 13ನೆಯ ಶತಮಾನದಲ್ಲಿ ಕೋಲಾರ ಪ್ರದೇಶದಲ್ಲಿ ಆಳುತ್ತಿದ್ದ ತಮಿಳು ಗಂಗ ಅರಸು ಇಳವಂಜಿ ವಾಸುದೇವರಾಯ ಇದನ್ನು ಕಟ್ಟಿಸಿರಬಹುದೆಂದು ಊಹಿಸಲು ಆಧಾರಗಳಿವೆ. ದೇವಾಲಯದ ಒಳಗೆ ಇಳವಂಜಿ ವಾಸುದೇವರಾಯ ಮತ್ತು ಅವನ ತಮ್ಮನದೆಂದು ಹೇಳಲಾಗುವ ಎರಡು ಭಕ್ತ ವಿಗ್ರಹಗಳಿವೆ. ಈ ದೇವಾಲಯಗಳ ಗುಂಪಿನಲ್ಲೇ ಇರುವ ಕಾಮಾಕ್ಷಿ ಮತ್ತು ಇತರ ಗುಡಿಗಳು ಅನಂತರದ ಕಟ್ಟಡಗಳು.

ಬೆಟ್ಟ ಹತ್ತುವಲ್ಲಿ ಸಿಗುವ ಒಂದು ಗುಹೆಯನ್ನು ವಾಲ್ಮೀಕಿಯ ಗುಹೆಯೆಂದು ಕರೆಯುತ್ತಾರೆ. ಇದರ ಸಮೀಪದಲ್ಲಿ ಚೋಳ ಸಂಪ್ರದಾಯದ ಒಂದು ಸಣ್ಣ ದೇವಾಲಯವಿದೆ. ಇಲ್ಲಿಂದ ಅನತಿ ದೂರದಲ್ಲಿರುವ ಏಕಾಂತರಾಮಯ್ಯನ ದೇವಾಲಯ ಸಹ ಚೋಳ ಸಂಪ್ರದಾಯದ ಕಟ್ಟಡ. ಆದರೆ ಇದರ ನವರಂಗಭಾಗ ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದುದು. ಬೆಟ್ಟದ ಮೇಲುಗಡೆ ಇರುವ ಸೀತಾಪಾರ್ವತಿ ಗುಡಿ ಹೊರನೋಟಕ್ಕೆ ಈಚಿನ ಬಹುಸಾಮಾನ್ಯ ಕಟ್ಟಡದಂತೆ ಕಂಡರೂ ಒಳಭಾಗ ಪುರಾತನವಾದುದು. ಇದು ನೊಳಂಬ ಅರಸರ ಕಾಲದ (9–10ನೆಯ ಶತಮಾನ) ಗುಹಾದೇವಾಲಯವೆಂದು ಕಾಣುತ್ತದೆ. ಆವನಿ ಗ್ರಾಮದಲ್ಲೂ ಬೆಟ್ಟದ ಮೇಲೂ 9–10ನೆಯ ಶತಮಾನದಿಂದ ಹಿಡಿದು ಇತ್ತೀಚಿನವರೆಗಿನ ಗಂಗ, ನೊಳಂಬ, ಚೋಳ, ಹೊಯ್ಸಳ, ತಮಿಳುಗಂಗ, ವಿಜಯನಗರ ಮತ್ತು ಪಾಳೆಯಗಾರರ ಆಳ್ವಿಕೆಗಳಿಗೆ ಸಂಬಂಧಿಸಿದ ಐವತ್ತಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿವೆ. (ಎಸ್.ಎನ್.)

**ಆವರಣಶಾಸ್ತ್ರ:** ಜೀವಿಗಳು ಮತ್ತು ಅವುಗಳ ಆವರಣ (ಆರ್ಗ್ಯಾನಿಸ್ಮ್ಸ್ ಅಂಡ್ ದೇರ್ ಎನ್‌ವೈರನ್‌ಮೆಂಟ್) ಇವುಗಳ ಸಂಬಂಧಗಳನ್ನು ಅಭ್ಯಸಿಸುವ ಶಾಸ್ತ್ರ (ಇಕಾಲಜಿ). ಸಂಕುಚಿತಾರ್ಥದಲ್ಲಿ ಜೀವಿಗಳ ಅಂತರ ಸಂಬಂಧಗಳನ್ನು ಕುರಿತೂ ಈ ಪದದ ಬಳಕೆ ಇದೆ. ಜೀವವಿಜ್ಞಾನದ ಒಂದು ಅಂಗ. ಆವರಣಶಾಸ್ತ್ರದ ಎರಡು ಪ್ರಮುಖಭಾಗಗಳು ಪ್ರಾಣಿ ಆವರಣಶಾಸ್ತ್ರ (ಆ್ಯನಿಮಲ್ ಇಕಾಲಜಿ) ಮತ್ತು ಸಸ್ಯಾವರಣಶಾಸ್ತ್ರ (ಪ್ಲಾಂಟ್ ಇಕಾಲಜಿ). ಮಾನವಾವರಣ ಶಾಸ್ತ್ರವನ್ನು (ಹ್ಯೂಮನ್ ಇಕಾಲಜಿ) ಪ್ರಾಣಿ ಆವರಣಶಾಸ್ತ್ರದಿಂದ ಪ್ರತ್ಯೇಕವಾಗಿ ಅಭ್ಯಸಿಸುವುದೂ ಇದೆ. ಮೇಲೆ ಹೇಳಿದ ಎರಡು ಪ್ರಮುಖ ಭಾಗಗಳಲ್ಲಿ ಒಂದೊಂದನ್ನೂ ಎರಡು ಉಪಭಾಗಗಳಾಗಿ ವಿಭಾಗಿಸಿದೆ; ಸ್ವಂತಾವರಣಶಾಸ್ತ್ರ (ಆಟಿಕಾಲಜಿ)–ಒಂದೊಂದು ಜೀವಿ ಮತ್ತು ಅದರ ಆವರಣ ಇವನ್ನು ಕುರಿತ ಅಭ್ಯಾಸ ಸಮುದಾಯಾವರಣಶಾಸ್ತ್ರ (ಸೈನಿಕಾಲಜಿ)–ನಿರ್ದಿಷ್ಟ ಪ್ರದೇಶದಲ್ಲಿರುವ ಜೀವಿಸಮುದಾಯ ಮತ್ತು ಅವುಗಳ ಆವರಣ ಇವನ್ನು ಕುರಿತ ಅಭ್ಯಾಸ. ಇವುಗಳ ಪೈಕಿ ಸಮುದಾಯಾವರಣಶಾಸ್ತ್ರದ ದೃಷ್ಟಿಯೇ ಉತ್ತಮವಾದದ್ದು.

ಮೂಲ ಚೈತನ್ಯ (ಅಥವಾ ಪ್ರಾಣ) ಎಲ್ಲ ವಿಧದ ಜೀವಿಗಳಿಗೂ (ಪ್ರಾಣಿಗಳು, ಸಸ್ಯಗಳು) ಒಂದೇ. ಆದರೆ ಅದು ಅಭಿವ್ಯಕ್ತವಾಗುವ ಬಗೆ ಬೇರೆ ಬೇರೆ. ಇಲ್ಲಿ ಆವರಣದ ಪ್ರಭಾವ ಸಾಕಷ್ಟು ಇದೆ. ಜೀವ ವಿಕಾಸ ನೆಲ, ನೀರು, ಗಾಳಿ ಈ ಮೂರು ಪ್ರದೇಶಗಳಲ್ಲಿಯೂ ಆಗಿರುವುದು–ಇಲ್ಲೆಲ್ಲ ಆಯಾ ಆವರಣಕ್ಕೆ ಹೊಂದಿ ಜೀವಿಗಳ ವಿವಿಧ ಅವಯವಗಳು ರೂಪುಗೊಂಡಿರುವುದನ್ನು ನೋಡಬಹುದು. ಇಂಥ ಸಂಬಂಧದ ಅಭ್ಯಾಸ ಆವರಣಶಾಸ್ತ್ರ.

ಆವರಣ: ಒಂದು ಜೀವಿಯ ಅಥವಾ ಜೀವಿಸಮುದಾಯದ ಮೇಲೆ ಪ್ರಭಾವಕಾರಿಯಾಗುವ ಸಕಲ ಬಾಹ್ಯ ಬಲಗಳ ಅಥವಾ ನಿಯಮಗಳ ಮೊತ್ತ. ಆದರೂ ಈ ಪದದ ಹಿಂದಿರುವ ಭಾವನೆ ಬಲು ಸಂಕೀರ್ಣವಾದದ್ದು. ಆದ್ದರಿಂದ ಆವರಣ ಎಂದರೆ ಇಂತಿಷ್ಟು ಬಲಗಳು ಅಥವಾ ಇಂತಿಷ್ಟು ಪ್ರಭಾವಗಳ ಸಮುದಾಯ ಎಂದು ವಿಶ್ಲೇಷಿಸುವುದು ಬಲು ಕಷ್ಟವೂ ಹೌದು, ದೋಷಪೂರಿತವೂ ಹೌದು. ಆದರೂ ಶಾಸ್ತ್ರದ ಪರಿಭಾಷೆಯಲ್ಲಿ ಒಂದು ಜೀವಿ ಒಂದು ನಿರ್ದಿಷ್ಟ ಸ್ಥಳದ ನಿವಾಸಿ. ಇಲ್ಲಿ ನಿವಾಸಿ ಪದದ ವ್ಯಾಪ್ತಿ ಆ ಜೀವಿ ಬದುಕಿರುವ ಆವರಣಬಲಗಳಿಗೆ ನಿಯಮಗಳಿಗೆ ಅನ್ವಯಿಸುತ್ತದೆ. ಅನುಕೂಲತೆಗಾಗಿ, ಅಭ್ಯಾಸದ ಸೌಕರ್ಯಕ್ಕಾಗಿ ಈ ಬಲನಿಯಮಗಳನ್ನು ಭೌತ (ಫಿಸಿಕಲ್–ಹವೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ), ರಾಸಾಯನಿಕ (ಕೆಮಿಕಲ್) ಮತ್ತು ಜೈವಿಕ (ಬಯಲಾಜಿಕಲ್) ಎಂದು ಮೂರು ಭಾಗಗಳಾಗಿ ವಿಭಾಗಿಸಬಹುದು.

ಸರಿಯಾದ ಆಹಾರವನ್ನು ಯೋಗ್ಯಕಾಲದಲ್ಲಿ ಪಡೆದು ಬದುಕುವುದು ಜೀವಿಯ ಧರ್ಮ. ಜೀವಿಗೆ ಆವರಣದಿಂದ ಆಹಾರ ಲಭ್ಯವಾಗುತ್ತದೆ. ಆದರೆ ಆವರಣದ ಮೇಲೆ ಪ್ರಭಾವ ಬೀರಲಾಗದ ಜೀವಿ ಆವರಣಕ್ಕೆ ಅನುಗುಣವಾಗಿ ಹೊಂದಿಕೊಂಡರೆ ಮಾತ್ರ ಬದುಕಬಲ್ಲದು. ಈ ನಿರಂತರ ಹೊಂದಾಣಿಕೆ ಅತ್ಯಾಶ್ಚರ್ಯಕರವಾಗಿ ಜೀವಿಗಳ ವಿಕಾಸದ ಮೇಲೆ ಪರಿಣಾಮ ಬೀರಿದೆ. ಕಾಲಾಂತರದಲ್ಲಿ ಜೀವಿಸಮುದಾಯಗಳಿಂದ ಆವರಣದ ಮೇಲೆಯೂ ಪ್ರಭಾವ ಉಂಟಾಗಿದೆ.

# ಆವರಣಶಾಸ್ತ್ರ

ಆವರಣಶಾಸ್ತ್ರದ ಅಭ್ಯಾಸದಲ್ಲಿ ನಾಲ್ಕು ಮೂಲ ಅಂಗಗಳನ್ನು ಗುರುತಿಸಬಹುದು.

1. ನಿರ್ಜೀವ ವಸ್ತುಗಳು: ಇವು ಮೂಲತಃ ಸಾಮಯವ ಮತ್ತು ನಿರವಯವ ಮಿಶ್ರಣಗಳು–ನೀರು, ಕಾರ್ಬನ್ ಡೈಆಕ್ಸೈಡ್, ಆಕ್ಸಿಜನ್, ಕ್ಯಾಲ್ಸಿಯಂ, ನೈಟ್ರೋಜನ್, ಫಾಸ್ಫರಸ್, ಅಮೈನೊ ಆಮ್ಲ ಮುಂತಾದವುಗಳ ಸೇರ್ಪಡೆಯಿಂದ ಆದವು. ಇವೆಲ್ಲ ಪದಾರ್ಥಗಳೂ ನೀರಿನಲ್ಲಿ ಕರಗಿದ್ದರೂ ಸಾವಯವ ಪದಾರ್ಥಗಳಾಗಿ ಸಿಗುತ್ತವೆ. ಆದರೆ ಇವು ಅಧಿಕ ಪ್ರಮಾಣದಲ್ಲಿ ನೀರಿನ ಕೆಳಭಾಗದ ಬದಿಯಲ್ಲಿಯೋ ಅಥವಾ ಜೀವಿಗಳಲ್ಲಿಯೋ ತುಂಬಿರುತ್ತವೆ.




**ಚಿತ್ರ 1. ಆವರಣ ವ್ಯವಸ್ಥೆಯ ಪ್ರಮುಖ ಘಟಕಗಳು**

2. ಉತ್ಪತ್ತಿಕಾರಕ ಜೀವಿಗಳು: ನೀರಿನ ಹೊಂಡದಲ್ಲಿ ಸಾಮಾನ್ಯವಾಗಿ ಎರಡು ರೀತಿಯ ಉತ್ಪತ್ತಿಕಾರಕ ಜೀವಿಗಳನ್ನು ಗುರುತಿಸಬಹುದು. ಕೆಳದರ್ಜೆಯ ಸಸ್ಯಗಳ ಗುಂಪಿಗೆ ಸೇರಿದ ಪಾಚಿ ಇತ್ಯಾದಿ ಸೂಕ್ಷ್ಮ ತೇಲುವ ಜೀವಿಗಳು ಒಂದು ರೀತಿಯವು. ಆಳವಾದ ನೀರಿನಲ್ಲಿ ಸಿಗುವ ದೊಡ್ಡ ಬೇರಿನ ಅಥವಾ ತೇಲುವ ಸಸ್ಯಗಳು ಎರಡನೆಯ ರೀತಿಯವು. ಒಂಟಿಯಾಗಿ ಪಾಚಿ ತುಂಬ ಚಿಕ್ಕದಾಗಿದ್ದರೂ ಒಟ್ಟಿನಲ್ಲಿ ಈ ಸಸ್ಯಸಮುದಾಯ ಜೀವಪರಿಸ್ಥಿತಿ ಪದ್ಧತಿಯಲ್ಲಿ ಪ್ರಮುಖ ಸ್ವಪೌಷ್ಟಿಕಾಂಶವೆನಿಸಿದೆ.

3. ಬಳಕೆದಾರ ಜೀವಿಗಳು: ಮೀನು, ಕ್ರಿಮಿಕೀಟಗಳ ಡಿಂಬಗಳು ಮತ್ತು ವಲ್ಕವಂತ ಪ್ರಾಣಿಗಳು ಬಳಕೆದಾರ ಪ್ರಾಣಿಗಳ ಕೂಟಕ್ಕೆ ಸೇರುತ್ತವೆ. ಮೂಲ ಬಳಕೆದಾರರು ಸಸ್ಯಜೀವಿಗಳು. ಅವು ಸಸ್ಯಶೇಷಗಳಿಂದ ನೇರವಾಗಿ ಆಹಾರ ಪಡೆಯುತ್ತವೆ. ಎರಡನೆಯ ಗುಂಪಿನ ಬಳಕೆದಾರರು ಮಾಂಸಾಹಾರಿಗಳು, ಪ್ರಥಮ ಬಳಕೆದಾರರನ್ನೇ ಆಹಾರವಾಗಿ ಪಡೆದು ಜೀವಿಸುತ್ತವೆ.

4. ಪೃಥಕ್ಕರಣ (ಡೀಕಂಪೊಸಿಷನ್) ಜೀವಿಗಳು: ಏಕಾಣುಜೀವಿಗಳು ಮತ್ತು ಅಣಬೆಗಳೇ ಇವು. ಹೊಂಡದ ತುಂಬ ಇವು ತುಂಬಿದ್ದರೂ ತಳದ ಮಣ್ಣಿನ ಮೇಲ್ಪದರದಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಹೆಚ್ಚಾಗಿ ಕೊಳೆತ ಜೀವರಹಿತ ಸಾವಯವ ಅವಶೇಷಗಳನ್ನು ಮಾತ್ರ ಆಕ್ರಮಿಸುತ್ತವೆ. ಉತ್ಪತ್ತಿಕಾರಕ ಜೀವಿಗಳು ಪುನಃ ಉಪಯೋಗಿಸಬಹುದಾದ ಅತ್ಯಾವಶ್ಯಕ ಪದಾರ್ಥಗಳನ್ನು ಇವುಗಳ ಕ್ರಿಯೆ ಹೊರಗೆಡಹುತ್ತದೆ.

ಗೃಹಸ್ತಂಭನ (ಹೋಮಿಯೋಸ್ಟೆಸಿಸ್) : ಪ್ರತಿಯೊಂದು ಜೀವಿಯಲ್ಲಿ ಸದಾ ಒಂದೇ ಸ್ಥಿತಿಯಲ್ಲಿರುವ ಆವರಣದ ಹೆಸರು ಗೃಹಸ್ತಂಭನ. ಪರಿಚಲನೆ ಮತ್ತು ವಿಸರ್ಜನೆಗಳಿಂದ ಈ ಒಂದು ಸಮತೋಲನಸ್ಥಿತಿ ಏರ್ಪಡುತ್ತದೆ. ಆದರೆ ಇದನ್ನು ವಿರೋಧಿಸುವ ಅಂಶಗಳು ಬಾಹ್ಯಾವರಣದಲ್ಲಿವೆ. ಪೌಷ್ಟಿಕಾಂಶಗಳ ಸಂಗ್ರಹಣೆ, ವಿಸರ್ಜನೆ, ಮತ್ತು ಸಾವಯವ ಪದಾರ್ಥಗಳ ಉತ್ಪತ್ತಿ, ಪೃಥಕ್ಕರಣೆ ಇವನ್ನು ಜೀವಿಯ ದೇಹದಲ್ಲಿರುವ ಸಂಕೀರ್ಣ ಯಾಂತ್ರಿಕ ಕ್ರಿಯೆ ಹತೋಟಿಯಲ್ಲಿಟ್ಟುಕೊಳ್ಳುತ್ತದೆ. ಪೃಥಕ್ಕರಣೆಯ ನಡುವೆ ವಾತಾವರಣಕ್ಕೆ ವಿಸರ್ಜಿಸಲ್ಪಟ್ಟ ಸಾವಯವ ಪದಾರ್ಥಗಳು ಇತರ ಜೀವಿಗಳ ಬೆಳವಣಿಗೆಗಳ ಮೇಲೆ ವಿಶಿಷ್ಟವಾದ ಪರಿಣಾಮಗಳನ್ನು ಬೀರುತ್ತವೆ. ಈ ಪದಾರ್ಥಗಳ ಒಟ್ಟು ಹೆಸರು ವಾತಾವರಣದ ಪ್ರಚೋದಕಸ್ರಾವ. ವಾಸ್ತವವಾಗಿ ಅನೇಕ ಪೃಥಕ್ಕರಣದ ನಿಷ್ಪ್ರಯೋಜಕ ಉತ್ಪನ್ನಗಳು ಆಹಾರ ಪದಾರ್ಥಗಳಿಗಿಂತ ವಿಶೇಷವಾಗಿ ರಾಸಾಯನಿಕ ಕ್ರಮಕಾರಕಗಳು (ರೆಗ್ಯುಲೇಟರ್ಸ್). ಇಂಥ ಕ್ರಮಕಾರಕಗಳು ಬಹುಶಃ ಜೀವಪರಿಸ್ಥಿತಿ ಕ್ರಮದ ವಿವಿಧ ಅಂಗಗಳನ್ನು ಸರಿಹೊಂದಿಸುವ ಯಾಂತ್ರಿಕ ಕ್ರಿಯೆಗಳನ್ನು ಒದಗಿಸುವುದರಲ್ಲಿಯೂ ಒದಗಬಹುದಾದ ಭಿನ್ನ ಜಾತಿಗಳ ಯಶಸ್ಸಿಗೂ ಇರುವ ಸಮತೋಲನದ ನಿರ್ವಹಣೆಗೂ ಹೊಣೆಯಾಗುತ್ತವೆ.

ಜೀವಿ ಆವರಣಕ್ಕೆ ಹೊಂದಿಕೊಳ್ಳುವ ಕ್ರಮದ ಹೆಸರು ಜೀವಪರಿಸ್ಥಿತಿ, ಇದರಲ್ಲಿ ಅನೇಕ ಅನುಸರಣೆಗಳಿವೆ. ಜೀವಿಗಳಲ್ಲಿ ಆಶ್ಚರ್ಯಕರವಾದ ಸ್ಥಿತಿಸ್ಥಾಪಕ ಶಕ್ತಿಯೂ ನಷ್ಟದಿಂದ ಚೇತರಿಸಿಕೊಳ್ಳುವ ಸಾಮರ್ಥ್ಯವೂ ಕಂಡುಬರುತ್ತವೆ. ಆದರೆ ಮನುಷ್ಯ ತನ್ನ ಜೀವವಾತಾವರಣವನ್ನು ಎಷ್ಟರಮಟ್ಟಿಗೆ ಪರಿವರ್ತಿಸಿಕೊಳ್ಳಬಲ್ಲನೆಂದರೆ ಅವನು ಒಮ್ಮೊಮ್ಮೆ ಸರಿಪಡಿಸಲಾರದಷ್ಟು ಅಪಾಯವನ್ನು ಜೀವ ಪರಿಸ್ಥಿತಿಪದ್ಧತಿಗೆ ತಂದೊಡ್ಡಬಲ್ಲ. ಉದಾಹರಣೆಗೆ ಗ್ರಾಮಸಾರದ ಕೊಳಕು ನೀರನ್ನು ಒಂದು ಗೊತ್ತಾದ ಪ್ರಮಾಣದಲ್ಲಿ ಹರಿಯುವ ನೀರಿಗೆ ಬಿಟ್ಟರೆ ಆ ಮಿಶ್ರ ಪ್ರವಾಹ ಕೆಲವೇ ಮೈಲಿಗಳ ತನಕ ಪ್ರವಹಿಸುವುದರಲ್ಲಿ ಚೇತರಿಸಿಕೊಳ್ಳಬಹುದು. ಆದರೆ ಈ ಕೊಳಕು ಬೆರಕೆ ಅತಿಯಾದರೆ ಯಾವುದೇ ನೈಸರ್ಗಿಕ ರೀತಿಯೂ ಅದನ್ನು ಸರಿಪಡಿಸಲಾರದು. ಪ್ರವಾಹವೂ ಮತ್ತು ಅದರ ಜೀವಲೋಕವೂ ಪರಿಹರಿಸಲಾರದಷ್ಟು ಅಪಾಯಕ್ಕೆ ಗುರಿಯಾಗುತ್ತದೆ.

ಪ್ರಕೃತಿಯಲ್ಲಿ ಜೀವಿ–ಭೌತ–ರಾಸಾಯನಿಕ ಆವರ್ತನೆಗಳು: ಪದಾರ್ಥಗಳ ಪುನರಾವರ್ತನೆಯೇ ಜೀವಾವರಣ ಪದ್ಧತಿಯಲ್ಲಿ ಗೃಹಸ್ತಂಭನಕ್ಕೆ ಭಾಗಶಃ ಕಾರಣ. ಎಲ್ಲ ರಾಸಾಯನಿಕ ಮೂಲಾಂಶಗಳೂ ಮೂಲ ಜೀವದ್ರವ್ಯಗಳಿಗೆ ಅಗತ್ಯವಾದ ಅಂಗಗಳೂ ಸೇರಿ ವಾತಾವರಣದಿಂದ ಜೀವಿಗಳಿಗೆ ಅಲ್ಲಿಂದ ಪುನಃ ವಾತಾವರಣಕ್ಕೆ ಸಾಗುತ್ತಿರುವ ಸ್ವಭಾವ ಹೊಂದಿವೆ. ಈ ವಿಶಿಷ್ಟ ಆವರ್ತನೆಯ ಮಾರ್ಗಗಳನ್ನು ಜೀವಿ–ಭೌತ–ರಾಸಾಯನಿಕ ಆವರ್ತನೆಗಳೆಂದು ಕರೆಯುತ್ತಾರೆ. ಪ್ರಕೃತಿಯಲ್ಲಿ ಒದಗಿ ಬರುವ ಇಂಥ ನೂರಾರು ಮೂಲಾಂಶಗಳಲ್ಲಿ 30 ಅಥವಾ 40ರಷ್ಟು ಜೀವಿಗಳಿಗೆ ಆವಶ್ಯಕವಾಗಿವೆ. ಕೆಲವು (ಎಂದರೆ ಕಾರ್ಬನ್, ಹೈಡ್ರೋಜನ್, ಆಕ್ಸಿಜನ್ ಮತ್ತು ನೈಟ್ರೋಜನ್) ಹೆಚ್ಚಿನ ಪ್ರಮಾಣದಲ್ಲಿ ಅಗತ್ಯವಾಗಿವೆ. ಇತರ ಅಂಶಗಳು ಅಲ್ಪ ಪ್ರಮಾಣದಲ್ಲಿದ್ದರೆ ಸಾಕು. ಕಾರ್ಬನನ್ನು ಹೊಂದಿರುವ




**ಚಿತ್ರ 2. ನೈಟ್ರೋಜನ್ ಆವರ್ತನೆ**

ಕೆಲವು ಆವರ್ತನೆಗಳು ಪದಾರ್ಥಗಳನ್ನು ಆವರಣಕ್ಕೆ ಎಷ್ಟು ವೇಗವಾಗಿ ಹೊರಗೆಡಹುತ್ತವೋ ಅಷ್ಟೇ ವೇಗವಾಗಿ ಮರಳಿ ಪಡೆಯುತ್ತವೆ. ಅಷ್ಟು ಪರಿಪೂರ್ಣವಲ್ಲದ ಇತರ ಆವರ್ತನೆಗಳು ನಷ್ಟಹೊಂದಿದ ರಾಸಾಯನಿಕಾಂಶಗಳನ್ನು ಭಾಗಶಃ ಒದಗಿಸಬಹುದು ಇಲ್ಲವೆ ಯಾವುದಾದರೂ ರೂಪದಲ್ಲಿ ಅಥವಾ ಜೀವಾಣುಗಳಿಗೆ ಎಟುಕಿಸದ ಸ್ಥಳಗಳಲ್ಲಿ ಉಳಿದುಕೊಂಡಿರಬಹುದು. ಜೀವಪರಿಸ್ಥಿತಿ ಪದ್ಧತಿಯಲ್ಲಿ ನೈಟ್ರೋಜನ್ ಮತ್ತು ಕಾರ್ಬನ್, ಫಾಸ್ಫರಸ್ ಇವು ಮೂರು ಆವರ್ತನೆಗೊಳ್ಳುವ ಅಂಶಗಳು.

ನೈಟ್ರೋಜನ್ನಿನ ಆವರ್ತನೆಗಳು: ಪೃಥಕ್ಕರಿಸುವ ಜೀವಾಣುಗಳಿಂದ ನೈಟ್ರೋಜನ್ ಇನಾರ್ಗ್ಯಾನಿಕ್ ರೂಪಕ್ಕೆ ಪರಿವರ್ತನೆಗೊಳ್ಳಬಹುದು. ಅದರಲ್ಲಿ ಪ್ರತಿಯೊಂದು ಜೀವಾಣುವೂ ವಿಶಿಷ್ಟ ಕಾರ್ಯವನ್ನು ಮಾಡುತ್ತ ಅನೇಕ ವಿವಿಧ ಜೀವಾಣುಗಳು ಸೇರಿರುತ್ತವೆ. ಕೆಲವು

ನೈಟ್ರೋಜನ್ನುಗಳು ನೈಟ್ರೇಟುಗಳಾಗುತ್ತವೆ. ಇವನ್ನು ಸಾಮಾನ್ಯವಾಗಿ ಹಸಿರು ಗಿಡಗಳು ಉಪಯೋಗಿಸುತ್ತವೆ. ಅಂಥ ನೈಟ್ರೋಜನ್ನುಗಳು ಸಸ್ಯದ ಮೂಲ ಭಾಗಗಳಾಗಿದ್ದರೆ ಆವರ್ತನೆ ಹಾಗೆಯೇ ಪೂರ್ಣವಾಗುತ್ತದೆ. ಆರ್ಗ್ಯಾನಿಕ್ ನೈಟ್ರೋಜನ್ನಿನ ಬಹುಭಾಗ ನೈಟ್ರೋಜನ್ ಒಳಗೊಂಡ ವಸ್ತುವಿನ ವಿಭಜನ ಕ್ರಿಯೆಯ ಫಲವಾಗಿ ಗಾಳಿಯನ್ನು ಮತ್ತೆ ಪ್ರವೇಶಿಸುತ್ತದೆ.




**ಚಿತ್ರ 3. ಕಾರ್ಬನ್ ಆವರ್ತನೆ**

ವಾಯುಮಂಡಲದ ನೈಟ್ರೋಜನ್ ಆವರ್ತನೆಗೆ ಜೀವಾಣುವಿನೊಡನೆ ಬೆರೆಯುವ ನೈಟ್ರೋಜನ್ ಕ್ರಿಯೆಯ ಮೂಲಕವಾಗಿ ಅಥವಾ ನೀಲಿ ಹಸುರಿನ ಪಾಚಿ (ಆಲ್ಗ) ಅಥವಾ ಮಿಂಚಿನ ಕ್ರಿಯೆಯ ಮೂಲಕವಾಗಿ ಹಿಂತಿರುಗುತ್ತದೆ. ಪೌಷ್ಟಿಕ ಪದಾರ್ಥಗಳು ನೈಟ್ರೋಜನ್ ಅಂಶಗಳಾಗಿ ಪರಿವರ್ತನೆ ಆಗುವಾಗ ಒಡೆಯುವ ಆರ್ಗ್ಯಾನಿಕ್ ಪದಾರ್ಥಗಳಿಗೆ ಶಕ್ತಿಯನ್ನು ಒದಗಿಸುತ್ತವೆ. ಹೀಗೆ ಒಡೆದು ಚೂರಾಗಿ ಹಿಂದಿರುಗುವ ಆರ್ಗ್ಯಾನಿಕ್ ಪದಾರ್ಥಗಳು ಸಾವಯವಾಂಶ ಅಥವಾ ಸೂರ್ಯನ ಶಕ್ತಿಯನ್ನು ಗಳಿಕೆಗಾಗಿ ಬಳಸಿಕೊಳ್ಳಬೇಕು. ಹುರುಳಿ ಕುಟುಂಬದ




**ಚಿತ್ರ 4. ನೀರಿನ ಆವರ್ತನೆ**

(ಲೆಗ್ಯೂಮಿನಸ್) ಸಸ್ಯದ ಬೇರಿನ ಗಂಟುಗಳಲ್ಲಿನ ಜೀವಾಣುಗಳು ಆತಿಥೇಯನಿಂದ ಶಕ್ತಿ ಸಂವರ್ಧನಕ್ಕಾಗಿ ಶರ್ಕರ ಪಿಷ್ಟಾದಿಗಳನ್ನು ಸ್ವೀಕರಿಸುತ್ತವೆ. ಆದರೆ ಈ ಜೀವಾಣುಗಳಿಗೆ ಮಣ್ಣಿನಲ್ಲಿರುವ ನೈಟ್ರೋಜನ್ನನ್ನು ಸೆರೆ ಹಿಡಿಯುವ ಶಕ್ತಿಯಿದೆ. ಆಗ ಆತಿಥೇಯ ಜೀವಾಣುಗಳಿಂದ ನೈಟ್ರೋಜನ್ನನ್ನು ಪಡೆಯುತ್ತವೆ. ನೈಟ್ರೋಜನ್ನಿನ ಕೆಲವು ಭಾಗ ಮಣ್ಣಿಗೆ ಇಳಿದು ಬಂದು ಇತರ ಸಸ್ಯಗಳ ಉಪಯೋಗಕ್ಕೆ ಅನುಕೂಲಿಸುತ್ತದೆ. ಇತರ ನೈಟ್ರೋಜನ್ನಿಗೆ ಬೆರೆಯುವ ಜೀವಾಣುಗಳು ಮಣ್ಣಿನಲ್ಲಿ ಸ್ವತಂತ್ರವಾಗಿರುತ್ತವೆ. ಇವುಗಳಿಗೆ ನಾಳ ರಚನೆಯ ಸಸ್ಯಗಳ ಸಹಾಯ ಅನಗತ್ಯ. ನೀರಿನಲ್ಲಿ ಮತ್ತು ನೀಲಿ ಹಸುರಿನ ಪಾಚಿ ಮಾದರಿಯ ಕೆಸರು ಮಣ್ಣಿನಲ್ಲಿ ಪರಿಶೀಲನೆಗೆ ತೆಗೆದುಕೊಂಡಾಗ ಅಲ್ಲಿ ನೈಟ್ರೋಜನ್ ಆವರ್ತನೆ ಪೂರ್ಣವಾಗಿರುವುದು ಕಂಡುಬರುತ್ತದೆ.

ಆಕ್ಸಿಜನ್, ಕಾರ್ಬನ್ ಡೈಆಕ್ಸೈಡ್ ಮತ್ತು ನೀರಿನ ಆವರ್ತನೆಗಳು: ಇವು ನೈಟ್ರೋಜನ್ ಆವರ್ತನೆಯಂತೆಯೇ ಬಹುತೇಕ ಸಮಾನವಾಗಿರುತ್ತವೆ. ಅಂದರೆ ಇನಾರ್ಗ್ಯಾನಿಕ್ಕಿನಿಂದ ಆರ್ಗ್ಯಾನಿಕ್ ಸ್ಥಿತಿಗಳ ಅಂತರದಲ್ಲಿ ಸತತವಾಗಿ ಪ್ರವಹಿಸುವಾಗ ಅನಿಲ ರೂಪದಲ್ಲಿರುವವರೆಗೆ ಮಾತ್ರ ವಾಯುಮಂಡಲದ ಕಾರ್ಬನ್‌ಡೈಆಕ್ಸೈಡ್ ಹಸುರು ಸಸ್ಯಗಳಿಂದ ಶರ್ಕರಪಿಷ್ಟವಾಗಿ ಸೇರುತ್ತವೆ. ಈ ಕ್ರಿಯೆಯಲ್ಲಿ ಆಕ್ಸಿಜನ್ ಒಂದು ಉಪಪದಾರ್ಥವಾಗಿ ಉತ್ಪತ್ತಿಯಾಗುತ್ತದೆ. ವಾಯುಮಂಡಲದಲ್ಲಿನ ಆಕ್ಸಿಜನ್ ಆಹಾರ ಪದಾರ್ಥಗಳ ಉತ್ಕರ್ಷಣೆಯ (ಆಕ್ಸಿಡೈಸ್)




**ಚಿತ್ರ 5. ಫಾಸ್ಫರಸ್ ಆವರ್ತನೆ**

ಸಂದರ್ಭದಲ್ಲಿ ಜೀವಿಗಳಿಗೆ ಬಳಕೆಯಾಗುತ್ತದೆ. ಆಗ ಅನಗತ್ಯವಾದ ಪದಾರ್ಥವಾಗಿ ಕಾರ್ಬನ್ ಪ್ರತಿಯೊಂದು ಡೈ ಆಕ್ಸೈಡ್ ಹೊರಬರುತ್ತದೆ. ಹಾಗೆಯೇ ಗಾಳಿಯಲ್ಲಿರುವ ಹಬೆ ರೂಪದ ಜೀವಾಣುಗಳು ನೀರಿನ ದ್ರವಕಣಗಳು ಭೂಮಿಗೆ ಮಳೆಯಾಗಿಯೋ ಮಂಜಾಗಿಯೋ ಬೀಳುತ್ತವೆ. ಜೀವಿಗಳು ನೀರನ್ನು ತಮ್ಮ ಜೀವದ್ರವ್ಯ ಪರಿಣಾಮದ ಅವಸ್ಥೆಯಲ್ಲಿ ಉಪಯೋಗಿಸಿಕೊಳ್ಳುತ್ತವೆ. ಅಲ್ಲದೆ ಆಹಾರ ಸಂಯೋಜನೆಯಲ್ಲಿ ಅವನ್ನು ನಿರರ್ಥಕ ಪದಾರ್ಥಗಳಾಗಿ ಹೊರಹಾಕುತ್ತವೆ. ನೀರೂ ಕೂಡ ಆಕೃತಿ ಬೆರಕೆಯ ಉಪ ಪದಾರ್ಥವಾಗಿ ಗಾಳಿಗೆ ಬಂದು ಸೇರಿಕೊಳ್ಳುತ್ತದೆ.

ಫಾಸ್ಫರಸ್ ಆವರ್ತನೆ: ಫಾಸ್ಫರಸನ್ನು ಒಳಗೊಂಡಿರುವ ಆವರ್ತನೆ ಸ್ವಲ್ಪ ಅಪರಿಪೂರ್ಣ ಮತ್ತು ಸುಲಭಸ್ವರೂಪದ್ದಾಗಿದೆ. ಫಾಸ್ಫರಸಿನ ಆಕರಗಳೆಂದರೆ ಬಂಡೆಗಳು ಇಲ್ಲವೆ ಪ್ರಾಚೀನ ಭೂಗರ್ಭ ಕಾಲದಲ್ಲಿ ರೂಪುಗೊಂಡ ಇತರ ಆಕರಗಳು. ಇವು ಸಾಮಾನ್ಯವಾಗಿ ನಶಿಸಿ ಆವರಣಪರಿಸ್ಥಿತಿಗೆ ಫಾಸ್ಫರಸ್ ದ್ರವ್ಯಗಳನ್ನು ಹೊರಗೆಡಹುತ್ತವೆ. ಅವುಗಳಲ್ಲಿ ಹೆಚ್ಚಿನ ಭಾಗಗಳು ಸಮುದ್ರಕ್ಕೆ ನುಸುಳಿ ಹೋಗಿ ಸಾಗರದ ಕೆಸರಿನ ಭಾಗವಾಗಿ ಪರಿಣಮಿಸುತ್ತವೆ. ದುರದೃಷ್ಟದಿಂದ ಫಾಸ್ಫರಸನ್ನು ಆವರ್ತನೆಗೆ ಹಿಂತಿರುಗಿಸುವ ವಿಭಾಗಗಳು ಅವುಗಳ ನಷ್ಟಕ್ಕೆ ಸರಿದೂಗಿಸುವಷ್ಟು ಸಮತೂಕವಾಗಿ ಒದಗುತ್ತಿಲ್ಲ. ಕೆಲವು ಪಕ್ಷಿಗಳ ಮೂಲಕ ಸಮುದ್ರದಿಂದ ನೆಲಕ್ಕೆ ಫಾಸ್ಫರಸನ್ನು ವರ್ಗಾಯಿಸುವುದು ಸಾಧ್ಯ. ಉದಾಹರಣೆಗೆ ಪೆರು ಸಮುದ್ರತೀರದಲ್ಲಿ ಕೂಡು ಹಿಕ್ಕೆ ಗೊಬ್ಬರ ಫಾಸ್ಫರಸಿನ ಪ್ರಮುಖ ಮೂಲವನ್ನು ಪ್ರತಿನಿಧಿಸುತ್ತದೆ. ಆದರೂ ನೀರುಹಕ್ಕಿಗಳ ಮತ್ತು ಮೀನಿನ ಕ್ರಿಯೆ ಈ ಕಾರ್ಯದಲ್ಲಿ ಸಾಕಷ್ಟಿಲ್ಲ. ಭೂಮಿಗೆ ನೀರುಹಕ್ಕಿಗಳು ಮತ್ತು ಮೀನುಗಳಿಂದ ಸುಮಾರು 60,000 ಟನ್ ಪ್ರಮಾಣದ ಪ್ರಾಥಮಿಕ ಫಾಸ್ಫರಸ್ ಪ್ರತಿ ವರ್ಷ ಬರುತ್ತದೆ. ಆದರೆ ಒಂದು ಎರಡು ಕೋಟಿ ಟನ್ ಫಾಸ್ಫರಸ್ ಬಂಡೆಗಳನ್ನು ಅಗೆದು ತೆಗೆದು ಅವನ್ನು ಗೊಬ್ಬರಕ್ಕೆ ಉಪಯೋಗಿಸುತ್ತಾರೆ. ಆದರೆ ಇದರಲ್ಲಿ ಹೆಚ್ಚಿನ

ಭಾಗ ಮಳೆಯಿಂದ ಕೊಚ್ಚಿ ಸಮುದ್ರದ ಆಳದಲ್ಲಿ ಸೇರಿಹೋಗುತ್ತದೆ. ಮನುಷ್ಯ ಈ ಕ್ಷಾಮವನ್ನು ನಿವಾರಿಸಬೇಕಾದರೆ ಫಾಸ್ಫರಸನ್ನು ಹೆಚ್ಚಿನ ಅಂಶದಲ್ಲಿ ಆವರ್ತನೆಗೆ ಒಂದಲ್ಲ ಒಂದು ದಿವಸ ಕೂಡಿಸಲೇಬೇಕು.

ಇತರ ಆವರ್ತನೆಗಳು: ಇತರ ಎಲ್ಲ ಮೂಲ ಮತ್ತು ಸಂಯುಕ್ತ ವಸ್ತುಗಳೂ ನಷ್ಟವಾಗುವಿಕೆ, ಗಸಿಯುವಿಕೆ, ಪರ್ವತರಚನೆ, ಜ್ವಾಲಾಮುಖಿಯಾಗುವಿಕೆ ಈ ಕ್ರಿಯೆಗಳಲ್ಲಿ ಫಾಸ್ಫರಸನ್ನು ಹೋಲುತ್ತವೆ.

ಗಸಿಯುವ ಆವರ್ತನೆಗಳು (ಸೆಡಿಮೆಂಟೇಷನ್ ಸೈಕಲ್ಸ್): ಗಸಿಯುವಿಕೆಯ ಆವರ್ತನೆಗಳಲ್ಲಿ ಸದಾ ಕೆಳಮುಖವಾಗಿ ಇಳಿಯುವ ಭಾವನೆಯೇ ಇರುತ್ತದೆ. ಅಂದರೆ ಕೆಲವು ಪೌಷ್ಟಿಕ ಲೋಹಾಂಶ ಪದಾರ್ಥಗಳು ಕರಗಿ ಮೈದಾನದ ಪ್ರದೇಶದಿಂದ ಸಾಗರದೆಡೆಗೆ ಸಾಗುತ್ತವೆ. ಇಂಥ ಪರಿಸ್ಥಿತಿ ಇದ್ದಾಗ ಪೌಷ್ಟಿಕಾಂಶಗಳ ಸಮತೋಲನ ಪಡೆಯಲು ಸ್ಥಳೀಯ ಪುನರಾವರ್ತನೆಯ ಯಾಂತ್ರಿಕ ಸ್ಥಿತಿಗಳನ್ನು ಸುಧಾರಿಸಬೇಕು. ನಷ್ಟವಾದ ಪೌಷ್ಟಿಕಾಂಶಗಳು ಮತ್ತೆ ಭೂಗರ್ಭದೊಳಗೆ ಸೇರುವಂತೆ ಮಾಡಬೇಕು. ಆದರೆ ಪದಾರ್ಥಗಳ ನಷ್ಟಕ್ಕೆ ಮಾನವ ಕಾರಣನಾಗಿರುವುದರಿಂದ ಈ ಕ್ರಿಯೆ ತಡೆಹಿಡಿಯಲ್ಪಟ್ಟಿದೆ. ಉದಾಹರಣೆಗೆ ಹಿಂದೆ ಸಾಮನ್ ಮೀನುಗಳು ಸಮುದ್ರದಿಂದ ಹೊರಕ್ಕೆ ಬಂದು ಸತ್ತಾಗ ಸಾಗರದಿಂದ ತಂದ ಪೌಷ್ಟಿಕ ಪದಾರ್ಥಗಳು ಮತ್ತೆ ಭೂಮಿಗೆ ಬಂದು ಸೇರುತ್ತಿದ್ದುವು. ಆದರ ಕೆಲವು ಪ್ರದೇಶಗಳಲ್ಲಿ ಸಾಮನ್ ಮೀನುಗಳನ್ನು ಮಾನವ ಹಿಡಿಯುವುದರಿಂದ ಸಮುದ್ರದಿಂದ ಬರುತ್ತಿದ್ದ ಅಮೂಲ್ಯ ಪೌಷ್ಟಿಕ ಪದಾರ್ಥಗಳನ್ನು ತಡೆಹಿಡಿದಂತಾಗಿದೆ. ಇನ್ನೊಂದು ಉದಾಹರಣೆ ಕಾಡುಗಳಿಂದ ಮರಗಳನ್ನು ಅವ್ಯಾಹತವಾಗಿ ಮಾನವ ಕಡಿದು ತೆಗೆದುಹಾಕುವುದರಿಂದ ಕೊಳೆತ ಮರದ ತುಂಡುಗಳಿಂದ ಮಣ್ಣಿಗೆ ಸೇರುತ್ತಿದ್ದ ಖನಿಜಾಂಶದ ಗೊಬ್ಬರವನ್ನು ತಡೆಹಿಡಿದಂತಾಗಿದೆ.

ಆಹಾರದ ಸರಪಳಿ ಅದರ ಹಾಸುಹೊಕ್ಕು: ಸಸ್ಯವರ್ಗಗಳಲ್ಲಿ ಇರುವ ಆಹಾರಶಕ್ತಿಯನ್ನು ಅನೇಕ ಜೀವಿಗಳು ಸೇವಿಸುತ್ತವೆ. ಈ ಜೀವಿಗಳೇ ಮತ್ತೆ ಕೆಲವು ಪ್ರಾಣಿಗಳ ಆಹಾರವಾಗುತ್ತವೆ. ಇಂಥ ಆಹಾರ ಶಕ್ತಿಯ ವರ್ಗಾವಣೆಗೆ ಆಹಾರದ ಕುಣಿಕೆ ಎಂದು ಹೆಸರು. ಆಹಾರ ಕುಣಿಕೆಗಳು ಪ್ರತ್ಯೇಕವಾದ ಅನುಕ್ರಮಗತಿ ಏನಲ್ಲ. ಆದರೆ ಪರಸ್ಪರ ಸಂಬಂಧ ಉಳ್ಳವುಗಳಾಗಿ ಒಂದಕ್ಕೊಂದು ಹಾಸುಹೊಕ್ಕಾಗಿವೆ. ಹೀಗಿದ್ದರೂ ವಿವರಣೆಯ ದೃಷ್ಟಿಯಿಂದ ಆಹಾರದ ಕುಣಿಕೆಗಳೆಂದೇ ಕರೆಯುತ್ತಾರೆ. ಈ ಆಹಾರದ ವರ್ಗಾವಣೆ ವಿವಿಧವಾಗಿದ್ದರೂ ಪ್ರತಿಯೊಂದರಲ್ಲೂ ಹೆಚ್ಚೆಂದರೆ ನಾಲ್ಕು ಅಥವಾ ಐದು ಕೊಂಡಿಗಳಿರುತ್ತವೆ. ಪ್ರತಿಯೊಂದು ವರ್ಗಾವಣೆಯಲ್ಲಿಯೂ ಶಕ್ತಿ ಅಥವಾ ಸತ್ತ್ವ ಕಡಿಮೆಯಾಗುತ್ತದೆ. ಆದ್ದರಿಂದ ಕೊಂಡಿಗಳು ಕಡಿಮೆ ಆದಷ್ಟೂ ಸತ್ತ್ವ ಅಧಿಕವಾಗಿರುತ್ತದೆ. ಇದನ್ನೇ ಜೀವಾಯುರ್ದಾಯವಾಗಿ ಬದಲಾಯಿಸಬಹುದು. ಅಥವಾ ಉಸಿರಾಟದಿಂದ ಕರಗಿಸಬಹುದು. ಜೀವಾಯುರ್ದಾಯ ಎಂದರೆ ಒಟ್ಟು ಜೀವಗಳು ಕೂಡಿಟ್ಟ ಜೀವದ್ರವಗಳ ಒಟ್ಟು ತೂಕ ಎಂದು ಹೇಳಬಹುದು.

ಜೀವಿಗಳಲ್ಲಿ ಮೂರು ವಿಧವಾದ ಆಹಾರದ ಕುಣಿಕೆ ಅಥವಾ ಸರಪಳಿಗಳನ್ನು ಕಾಣಬಹುದು: 1 ಮಾಂಸಾಹಾರಿ ಕೊಂಡಿ: ಸಸ್ಯಗಳಿಂದ ಹಿಡಿದು ಸಣ್ಣ ಸಣ್ಣ ಪ್ರಾಣಿಗಳಿಂದ ದೊಡ್ಡ ದೊಡ್ಡ ಪ್ರಾಣಿಗಳಿಗೆ ಹೋಗುತ್ತದೆ; 2 ಪರಾವಲಂಬಿ ಕೊಂಡಿ: ದೊಡ್ಡ ದೊಡ್ಡ ಪ್ರಾಣಿಗಳಿಂದ ಸಣ್ಣ ಜೀವಿಗಳಿಗೆ ಹೋಗುತ್ತದೆ; 3. ಸತ್ತಾವಲಂಬಿ ಕೊಂಡಿ (ಸ್ಯಾಪ್ರೊಫೈಟಿಕ್ ಚೇನ್) : ಸತ್ತ ಅಥವಾ ಕೊಳೆತ ಪದಾರ್ಥಗಳಿಂದ ಸೂಕ್ಷ್ಮ ಜೀವರಾಶಿಗಳಿಗೆ ಹರಿಯುತ್ತವೆ.

ಪ್ರಾಕೃತಿಕ ಸಮೂಹದಲ್ಲಿ ಸಸ್ಯಗಳಿಂದ ಒಂದೇ ರೀತಿಯಲ್ಲಿ ಆಹಾರ ಪಡೆಯತಕ್ಕ ಜೀವರಾಶಿಗಳ ಗುಂಪುಗಳು ಅದೇ ರೀತಿಯ ಪೌಷ್ಟಿಕ ಮಟ್ಟಕ್ಕೆ (ಟ್ರೋಫಿಯಾ ಲೆವೆಲ್) ಸೇರುತ್ತವೆ. ಹೀಗೆ ಹಸಿರು ಸಸ್ಯಗಳು ಪೌಷ್ಟಿಕದ ಪ್ರಥಮ ಘಟ್ಟದವುಗಳಾದರೆ ಶಾಕಾಹಾರಿಗಳು ಎರಡನೆಯ ಘಟ್ಟದವು. ನಾಲ್ಕನೆಯ ಘಟ್ಟದವುಗಳಾದರೋ ಮೂರನೆಯ ಘಟ್ಟದ ಮಾಂಸಾಹಾರಿಗಳನ್ನೇ ತಿನ್ನುತ್ತವೆ. ಮೊದಲೇ ಹೇಳಿದಂತೆ ಆಹಾರದ ಪ್ರತಿ ವರ್ಗಾವಣೆಯಲ್ಲೂ ಸತ್ತ್ವ ನಷ್ಟವಾಗುತ್ತದೆ. ಸೂರ್ಯನಿಂದ ಬರತಕ್ಕ ಶಕ್ತಿಯನ್ನು ಸಸ್ಯಗಳು ಪೂರ್ಣವಾಗಿ ಉಪಯೋಗಿಸುತ್ತವೆ. ಎನ್ನಲಾಗುವುದಿಲ್ಲ. ಮಾಂಸಾಹಾರಿ ಆಹಾರದ ಕೊನೆಯ ಕೊಂಡಿಯಲ್ಲಿದ್ದು ಕಳಚಿ ಬೀಳುವ ಸ್ಥಿತಿಯಲ್ಲಿದೆ ಎಂದು ಊಹಿಸಬಹುದು. ಯಾವ ಪೌಷ್ಟಿಕ ಮಟ್ಟ ತೆಗೆದುಕೊಂಡರೂ ಆ ಮಟ್ಟದಲ್ಲಿ ಹರಿಯುವ ಸತ್ತ್ವ ಅದೇ ಮಟ್ಟದಲ್ಲಿನ ಜೀವರಾಶಿಗಳೆಲ್ಲದರ ಉಸಿರಾಡುವಿಕೆ ಮತ್ತು ಎಲ್ಲ ಜೀವಗಳ ಸಂಗ್ರಹಿತಜೀವದ್ರವ್ಯ ಎಂದಾಯಿತು. ಪ್ರತಿ ಮಟ್ಟದಲ್ಲಿ ಹರಿಯುವ ಸತ್ತ್ವದ ಶಕ್ತಿ ಹಿಂದಿನ ಮಟ್ಟದ ಸತ್ತ್ವದ ಶಕ್ತಿಗಿಂತ ಕಡಿಮೆ. ಕಾರಣ ಪ್ರತಿ ಹಂತದಲ್ಲೂ ಉಸಿರಾಟದಿಂದಲೇ ಸತ್ತ್ವದ ನಷ್ಟವಾಗುತ್ತಿರುತ್ತವೆ. ಇದರ ಜೊತೆಗೆ ಇತರ ರೀತಿಯ ನಷ್ಟಗಳೂ ಉಂಟು. ದೊರೆತ ಆಹಾರಗಳಲ್ಲಿ ಕೆಲವನ್ನು ಕೂಡಲೇ ಸೇವಿಸುವುದು ಕಷ್ಟ; ಇನ್ನು ಕೆಲವು ಸಾಮಾಜಿಕ ಕಾರಣಗಳಿಂದ ಬಹಿಷ್ಕೃತವಾಗಿರಬಹುದು; ಸೇವಿಸಿದ ಆಹಾರದ ಸತ್ತ್ವಗಳು ಜೀರ್ಣವಾಗದೆಯೇ ಉಳಿಯಬಹುದು. ಮೇಲೆ ವಿವರಿಸಿದ ಸಂಗತಿಗಳನ್ನು ಒಂದು ಗೋಪುರದ ಮೂಲಕ ಪ್ರತಿನಿಧಿಸಬಹುದು. ಅಂಥ ಗೋಪುರದಲ್ಲಿ ಅಗಣಿತ ಸಂಖ್ಯೆಯಲ್ಲಿರುವ ಏಕಾಣುಗಳು ಉತ್ಪನ್ನಕಾರಕ ಸಸ್ಯಗಳು, ಬಳಕೆದಾರರಿಗಿಂತ (ಮಾಂಸಾಹಾರಿಗಳಿಗಿಂತ) ಅಧಿಕ ಸಂಖ್ಯೆಯಲ್ಲಿರುತ್ತವೆ.

ಒಂದು ಜನಾಂಗದ ಬೆಳವಣಿಗೆ ಆ ಜನಾಂಗಕ್ಕೆ ದೊರೆಯುವ ಆಹಾರವನ್ನು ಬಹುಮಟ್ಟಿಗೆ ಅವಲಂಬಿಸಿದೆ. ಪ್ರತಿಯೊಂದು ಸಮಾಜದಲ್ಲೂ ಮಿಶ್ರ ಆಹಾರದ ಒಂದು ಜಾಲ (ವೆಬ್) ಇರುತ್ತದೆ. ಈ ಜಾಲ ಎಲ್ಲ ಜೀವರಾಶಿಗಳನ್ನೂ ಆವರಿಸಿದೆ. ಇದರ ತೊಡಕಿನ ನಿವಾರಣೆಯನ್ನು ಮುಂದೆ ವಿವರಿಸುವ ಉದಾಹರಣೆಯಿಂದ ಕಾಣಬಹುದು. ಆಹಾರಜಾಲದತ್ತ ನಮ್ಮ ಗಮನವನ್ನು ಮೊದಲು ಸೆಳೆದವ ಸುಪ್ರಸಿದ್ಧ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್. ಅವನು ಈ ತೊಡಕನ್ನು ಜೀವದ ಜಾಲ, ಬದುಕಿನ ಜಾಲ ಎಂದು ಬಣ್ಣಿಸಿದ.

**ಆಹಾರ ಸರಪಳಿಗಳು**

| | | |
|---|---|---|
| ಉತ್ಪಾದಕರು | ಗಿಡಮೂಲಿಕೆಗಳು | ಆಲ್ಗೆ |
| ↓ | | |
| 1 ಬಳಕೆದಾರರು | ಅಳಿಲುಗಳು | ಶ್ರಿಂಪ್ |
| ↓ | | |
| 2 ಬಳಕೆದಾರರು | ಕೊಯೋಟ್‌ಗಳು | ಮೀನುಗಳು |
| ↓ | | |
| 3 ಬಳಕೆದಾರರು | | ಸೀಲ್‌ಗಳು |
| ↓ | | |
| 4 ಬಳಕೆದಾರರು | | ಕಿಲ್ಲರ್ ತಿಮಿಂಗಿಲಗಳು |

**ಆಹಾರದ ಪಿರಮಿಡ್**

**ಚಿತ್ರ 6.**

ಇದರ ನಿವಾರಣೆಯ ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾನೆ. ವಿಚಿತ್ರ ಸನ್ನಿವೇಶದಲ್ಲಿ ಇಂಗ್ಲೆಂಡಿನ ಆರ್ಥಿಕ ಜೀವನ ಒಬ್ಬೊಂಟಿಗರಾದ ಮುದುಕಿಯರ ಜೀವನದೊಡನೆ ಹೊಂದಿಕೊಂಡಿದೆ ಎಂದು ತೋರಿಸಿಕೊಟ್ಟ. ಅವನ ವಾದ ಈ ರೀತಿ ಇದೆ: ಒಬ್ಬೊಂಟಿಗ ಮುದುಕಿಯರು ಬೆಕ್ಕುಗಳನ್ನು ಸಾಕುತ್ತಾರೆ. ಬೆಕ್ಕುಗಳು ಬೀದಿ ಇಲಿಗಳನ್ನು ತಿನ್ನುತ್ತವೆ. ಬೀದಿ ಇಲಿಗಳು ಜೀರಂಬಿ ಗೂಡುಗಳನ್ನು ತಿನ್ನುತ್ತವೆ. ಈ ಗೂಡುಗಳು ಸಸ್ಯಜಾತಿಯ ಗರ್ಭಧಾರಣೆಗೆ ಸಹಾಯಕಗಳು. ಆದ್ದರಿಂದ ಮುದುಕಿಯರ ಸಂಖ್ಯೆ ಹೆಚ್ಚಾಗಿದ್ದರೆ ಬೆಕ್ಕುಗಳು ಜಾಸ್ತಿ; ಬೀದಿ ಇಲಿಗಳು ಕಡಿಮೆ; ಅದರಿಂದ ಜೀರಂಬಿ ಗೂಡುಗಳು ಅಧಿಕ; ಸಸ್ಯಜಾತಿ ಬೆಳವಣಿಗೆ ಹೇರಳ. ಈ ವಾದ ಮೇಲ್ನೋಟಕ್ಕೆ ವಿಚಿತ್ರವಾಗಿ ಕಂಡರೂ ಒಬ್ಬೊಂಟಿಗ ಮುದುಕಿಯರಿಗೂ ಒಂದು ಜಾತಿಯ ಸಸ್ಯವರ್ಗಕ್ಕೂ ಇರುವ ಆಂತರಿಕ ಸಂಬಂಧ ಇದರಿಂದ ವ್ಯಕ್ತವಾಗುತ್ತದೆ. ಅಂದರೆ ಯಾವುದಾದರೂ ಜೀವಿಜಾತಿಯನ್ನು ಅಳಿಸಿಹಾಕಿದರೆ ಅದರ ಪರಿಣಾಮ ಇತರ ಜೀವರಾಶಿಗಳ ಮೇಲೆ ಉಂಟಾಗುತ್ತದೆ ಎಂಬುದು ನಿಸ್ಸಂದೇಹ. ಇದರ ಸತ್ಯಾಂಶ ವಾತಾವರಣವನ್ನು ಮಾನವ ಪರಿವರ್ತಿಸತೊಡಗಿದಾಗಲೆಲ್ಲ ತಿಳಿವಳಿಕೆಗೆ ಬರುತ್ತಲೇ ಇರುವುದು.

ವಾತಾವರಣದ ಭೌತ ಮತ್ತು ಜೈವಿಕ ಅಂಶಗಳು: ಪ್ರಾಣಿಯ ಬದುಕು ಅದು ವಾಸಮಾಡುವ ವಾತಾವರಣದ ಭೌತ ಮತ್ತು ಜೈವಿಕ ಆವರಣಗಳ ವಿವಿಧ ಪರಿಣಾಮಗಳಿಗೆ ಒಳಗಾಗುತ್ತದೆ. ಉಷ್ಣ, ಗಾಳಿ, ನೀರಿನ ಗುಣ ಮತ್ತು ಪ್ರಮಾಣ, ನೀರಿನ ಪ್ರವಾಹದ ಶಕ್ತಿ, ಬೆಳಕು, ನೀರಿನಲ್ಲಿರುವ ಉಪ್ಪಿನ ಪ್ರಮಾಣ ಇತ್ಯಾದಿಗಳು ಭೌತ ಅಂಶಗಳು. ಜನಸಾಂದ್ರತೆ ಮತ್ತು ಒತ್ತಡ, ಆಹಾರ ಸರಬರಾಜು, ಇತರ ಜೀವರಾಶಿಗಳೊಡನೆ ಇರುವ ಸಂಬಂಧ ಇವೇ ಮುಂತಾದುವು ಜೈವಿಕ ಅಂಶಗಳು.

ಉಷ್ಣ: ಪ್ರತಿ ಜೀವಿಯೂ ತಾನು ವಾಸಮಾಡುವ ಪರಿಸರದ ಉಷ್ಣದಿಂದ ಪ್ರಭಾವಿತವಾಗಿರುತ್ತದೆ. ಶೀತರಕ್ತಪ್ರಾಣಿಗಳು (ಪೋಯ್‌ಕಿಲೋಥರ್ಮನ್ಸ್) ಬಿಸಿ ರಕ್ತ ಪ್ರಾಣಿಗಳಿಗಿಂತ (ಹೋಮಿಯೋಥರ್ಮನ್ಸ್) ಹೆಚ್ಚು ಪ್ರಭಾವಿತವಾಗಿರುತ್ತವೆ. ಶೀತರಕ್ತ ಪ್ರಾಣಿಗಳಲ್ಲಿ ಮರಿಗಳ ಬೆಳವಣಿಗೆ ಮತ್ತು ಅಭಿವೃದ್ಧಿ ಬಾಹ್ಯ ಉಷ್ಣವನ್ನು ಅವಲಂಬಿಸಿದೆ. ಹೀಗಾಗಿ ಚಳಿಗಾಲ ಮತ್ತು ಬೇಸಗೆ ಕಾಲಗಳಲ್ಲಿ ಅವು ಬದುಕುವ ಬೇರೆ ದಾರಿಯನ್ನು

ಕಂಡುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಕೆಲವು ಪ್ರಾಣಿಗಳು ಚಳಿಗಾಲದಲ್ಲಿ ನಿಶ್ಚೇಷ್ಟಿತ ಅವಸ್ಥೆಯನ್ನು ಪಡೆಯುತ್ತವೆ. ಮತ್ತೆ ಕೆಲವು ಪ್ರಾಣಿಗಳು ಬೇಸಗೆಯಲ್ಲಿ ಅಭಾವ ಪರಿಸ್ಥಿತಿಯಿಂದ ನಿಶ್ಚೇಷ್ಟಿತವಾಗುತ್ತವೆ. ಭೂಮಿಯ ಉತ್ತರ ಭಾಗದಲ್ಲಿ ಅಸಮಉಷ್ಣದ ಪ್ರಾಣಿಗಳ ಸಂಖ್ಯೆ ಕಡಿಮೆ. ಇವು ಉತ್ತರದಲ್ಲಿನ ಶೀತವಾತಾವರಣವನ್ನು ತಡೆಯುವ ಶಕ್ತಿ ಹೊಂದಿಲ್ಲದಿರುವುದೇ ಕಾರಣ. ಆದರೂ ಕೆಲವು ಸಮಉಷ್ಣದ ಪ್ರಾಣಿಗಳೂ ಚಳಿಗಾಲದಲ್ಲಿ ನಿಶ್ಚೇಷ್ಟಿತಾವಸ್ಥೆಯನ್ನು ಹೊಂದುವುದನ್ನು ಕಾಣುತ್ತೇವೆ. ಉಷ್ಣದ ಪ್ರಭಾವದಿಂದ ಪ್ರಾಣಿಗಳ ರಚನೆಯಲ್ಲಿಯೂ ವ್ಯತ್ಯಾಸವನ್ನು ಕಾಣುತ್ತೇವೆ. ಉದಾಹರಣೆಗೆ ಶೀತವಲಯದ ಸಮಉಷ್ಣದ ಪ್ರಾಣಿಗಳು ಉಷ್ಣವಲಯದ ಅಂಥವೇ ಪ್ರಾಣಿಗಳಿಗಿಂತ ದೊಡ್ಡವು. ಉಷ್ಣವಲಯದ ಪ್ರಾಣಿಗಳಿಗೆ ಉದ್ದನೆಯ ತುದಿಳಿವೆ. ಅರಿಜೋನ ದೇಶದ ಜಾಕ್ ಮೊಲಗಳ ಕಿವಿಗಳು ಆರ್ಕ್‌ಟಿಕ್ ಪ್ರದೇಶದ ಅದೇ ಜಾತಿಯ ಮೊಲಗಳ ಕಿವಿಗಳಿಗಿಂತ ಉದ್ದ. ಇದೇ ರೀತಿ ತೀವ್ರ ಉಷ್ಣ ವಾತಾವರಣದಲ್ಲಿ ಬೆಳೆಸಿದ ಇಲಿಗಳಿಗೆ ಉದ್ದ ಬಾಲಗಳು ಬೆಳೆಯುತ್ತವೆಂದು ಪ್ರಯೋಗಗಳಿಂದ ಗೊತ್ತಾಗಿದೆ.



ಚಿತ್ರ 7.

ಗಾಳಿ: ತೋರಿಕೆಗೆ ಇದರ ಪ್ರಭಾವ ಪ್ರಾಣಿಗಳಿಗಿಂತ ಸಸ್ಯಗಳ ಮೇಲೆ ಹೆಚ್ಚು ಪರಿಣಾಮಕಾರಿ ಎಂದು ಕಂಡರೂ ಪ್ರಾಣಿಗಳ ಮೇಲೆಯೂ ಗಾಳಿಯ ಪ್ರಭಾವ ಸಾಕಷ್ಟು ಇದ್ದೇ ಇದೆ. ರೆಕ್ಕೆಕೀಟಗಳು ತಮ್ಮ ಹರಡಿಕೆಗೆ ಸಾಮಾನ್ಯವಾಗಿ ಗಾಳಿಯನ್ನೇ ಅವಲಂಬಿಸಿವೆ. ಹಾರುಜೇಡಗಳು ಗಾಳಿಯ ಸಹಾಯದಿಂದ ಬಲು ಎತ್ತರಕ್ಕೆ ದೂರಕ್ಕೆ ಹಾರಬಲ್ಲವು. ಗಾಳಿ ಅತಿಯಾಗಿರುವ ಪ್ರದೇಶದಲ್ಲಿ ಕೆಲವು ಚಿಟ್ಟೆಗಳು ಹಾರುವ ಶಕ್ತಿಯನ್ನೇ ಕಳೆದುಕೊಂಡಿರುತ್ತವೆ. ಪರ್ವತಪ್ರದೇಶದಲ್ಲಿ ಪಕ್ಷಿಗಳು ಗೂಡುಗಳನ್ನು ಕಟ್ಟಿಕೊಳ್ಳಲು ಬಂಡೆಗಳನ್ನೇ ಆಶ್ರಯಿಸುತ್ತವೆ. ಟಿಬೆಟ್ ಮರುಭೂಮಿಯ ಎತ್ತರ ಪ್ರದೇಶಗಳಲ್ಲಿ ವಾಸಮಾಡುವ ಹಕ್ಕಿಗಳು ಗೂಡುಗಳಿಗೆ ರಕ್ಷಣೆಗಾಗಿ ಕಲ್ಲಿನ ಕೋಟೆ ಕಟ್ಟುತ್ತವೆ. 1940ನೆಯ ಜುಲೈ ತಿಂಗಳಲ್ಲಿ ಅಯೋವ ಪ್ರಾಂತ್ಯದಲ್ಲಿ ಬೀಸಿದ ಚಂಡಮಾರುತದಿಂದ ನೂರು ಎಕರೆ ಪ್ರದೇಶದಲ್ಲಿ ಒಂದು ಸಾವಿರ ಹಕ್ಕಿಗಳು ಒಮ್ಮೆಲೇ ನಾಶವಾದುವು. ಅಂಥ ಅನಿರೀಕ್ಷಿತ ಚಂಡಮಾರುತಗಳಿಂದ ಭಾರಿಪ್ರಮಾಣದ ಅನಾಹುತ ಸಂಭವಿಸುತ್ತದೆ.

ನೀರಿನ ಪ್ರವಾಹ: ಜಲಜೀವಿಗಳು ಪ್ರವಾಹಗಳನ್ನು ಎದುರಿಸಲು ತಮ್ಮ ಬೆಳವಣಿಗೆಯ ರೂಪನ್ನೇ ಬದಲಾಯಿಸಿಕೊಂಡಿರುತ್ತವೆ. ತೊಟ್ಟಿಲ್ಲದ ಜೀವರೂಪಗಳು ಇದಕ್ಕೆ ಉದಾಹರಣೆ.

ಬೆಳಕು: ಪ್ರಾಣಿಗಳ ಕ್ರಿಯೆಗಳ ಮೇಲೆ ಬೆಳಕಿನ ಪ್ರಭಾವ ಇದೆ. ಇದರಿಂದ ಉದ್ಭವಿಸುವ ಹೆಚ್ಚಿನ ತೊಡಕಿನ ಪರಿಣಾಮಗಳನ್ನು ಅವು ಎದುರಿಸಬೇಕು. ವಲಸೆ ಹೋಗುವ ಹಕ್ಕಿಗಳು ಉತ್ತರದ ಕಡೆ ಪ್ರವಾಸ ಹೋಗುವಾಗ ಹೆಚ್ಚು ಹಗಲಿರುವ ದಿವಸಗಳನ್ನೇ ಅವಲಂಬಿಸಿರುತ್ತವೆ. ಅಲ್ಪಾವಧಿಯ ಹಗಲಿರುವ ಕಾಲದಲ್ಲಿ ದಕ್ಷಿಣದ ಕಡೆ ವಲಸೆಬರುವ ಉತ್ತರದ ಪಕ್ಷಿಗಳ ತುಪ್ಪಟದ ಬಣ್ಣ ಬದಲಾವಣೆಯಾಗುವುದು ಹಗಲಿನ ಅವಧಿಯ ಪರಿವರ್ತನೆಯ ಪರಿಣಾಮ. ಕೆಲವು ಪ್ರಾಣಿಗಳು ಹಗಲಿನಲ್ಲಿ ಹೊರಗೆ ಬರುವುದೇ ಇಲ್ಲ. ರಾತ್ರಿ ವೇಳೆಯಲ್ಲಿಯೇ ಆಹಾರ ಹುಡುಕಿಕೊಂಡು ಬರುತ್ತವೆ. ಮತ್ತೆ ಕೆಲವು ಸಣ್ಣ ಜೀವಿಗಳು ಬೆಳಕನ್ನು ಬೇಕೆಂದೇ ದೂರೀಕರಿಸುತ್ತವೆ. ಎಲೆಗಳ ಮರೆಯಲ್ಲಿ ವಾಸಮಾಡುವ, ಕೊಳೆತ ಮರಗಳ ತುಂಡಿನ ಸಂದುಗಳಲ್ಲಿ ಬದುಕುವ ಬೆಂಕಿಮೊಸಳೆ, ಅನೇಕ ಕೀಟಗಳು ಮತ್ತು ಇತರ ಸಂಧಿಪದಿಗಳು ಇದಕ್ಕೆ ಉದಾಹರಣೆಗಳು. ಇದರಿಂದ ಬೆಳಕು, ಪ್ರಾಣಿಗಳ ವಾಸಸ್ಥಾನ ಮತ್ತು ರೀತಿಗಳ ಮೇಲೂ ಪರಿಣಾಮ ಬೀರುತ್ತದೆ ಎಂಬುದು ಖಚಿತ. ಬೆಳಕು ಬಲು ದೂರದಿಂದ ಕೀಟಗಳನ್ನು ತನ್ನ ಕಡೆಗೆ ಆಕರ್ಷಿಸುತ್ತದೆ. ಈ ಕಾರಣದಿಂದ ರಾತ್ರಿವೇಳೆ ಹಾರಾಡುವ ಅನೇಕ ರೀತಿಯ ಹುಳುಗಳನ್ನು ಹತೋಟಿಗೆ ತರಬಹುದು ಮತ್ತು ಹಿಡಿಯಲೂಬಹುದು.

ನೀರು: ನೀರಿಲ್ಲದೆ ಯಾವ ಪ್ರಾಣಿಯೂ ಬದುಕಲಾರದು. ನೀರಿನ ಸರಬರಾಜು ಜಲಾವೃತ ಪ್ರದೇಶಗಳಿಂದ ಹಿಡಿದು ಮರುಭೂಮಿಯವರೆಗಿನ ಅನೇಕ ಸ್ಥಳಗಳಲ್ಲಿ ವಿವಿಧ ರೀತಿಯಲ್ಲಿ ಇದೆ. ಒಣಪ್ರದೇಶಗಳಲ್ಲೂ ಜೀವಿಗಳು ವಾಸಿಸಬಲ್ಲವು. ಅದಕ್ಕಾಗಿ ಕೆಲವು ವಿಶೇಷ ಮಾರ್ಪಾಟುಗಳನ್ನು ಹೊಂದಿರುತ್ತವೆ. ದಪ್ಪ ಚರ್ಮ, ದೇಹಕ್ರಿಯೆಯಿಂದ ಉತ್ಪತ್ತಿಯಾದ ನೀರನ್ನೇ ಉಪಯೋಗಿಸುವುದು, ಒಣಮೂತ್ರವಿಸರ್ಜನೆ ಇವೇ ಮೊದಲಾದ ಮಾರ್ಪಾಟುಗಳಲ್ಲದೆ ಕೆಲವು ಪ್ರಾಣಿಗಳು ವಿಶಿಷ್ಟ ಅಭ್ಯಾಸಗಳನ್ನೂ ಹೊಂದಿವೆ. ಉದಾಹರಣೆಗೆ, ಬಿಲತೋಡುವ ಮತ್ತು ರಾತ್ರಿಚಲಿಸುವ ಅಭ್ಯಾಸಗಳು. ಪುಪ್ಪುಸಮೀನು ವಾಸಿಸುವ ಕೆಸರು ಹಿಂಗುವಾಗ ಮೀನು ನಿಶ್ಚೇಷ್ಟಿತವಾಗುವ ಸ್ವಭಾವ ಇತ್ಯಾದಿ.

ವಿವಿಧ ರೀತಿಯ ಕ್ಷಾರಗಳು: ಕ್ಯಾಲ್ಸಿಯಂ, ಮ್ಯಾಗ್ನೀಸಿಯಂ, ಫಾಸ್ಫರಸ್ ಮಿಶ್ರ, ಕ್ಷಾರ ಇವು ನೀರಿನಲ್ಲಿರುವ ಮುಖ್ಯ ಅಂಶಗಳು. ಆದ್ದರಿಂದ ಹೊಸ ನೀರಿನಲ್ಲಿ ಮತ್ತು ಮಣ್ಣಿನಲ್ಲಿ ಇರುವ ಕ್ಷಾರಗಳ ಪ್ರಮಾಣ ಅಲ್ಲಿ ವಾಸಿಸುವ ಪ್ರಾಣಿಗಳನ್ನು ಮಿತಿಗೊಳಿಸುವ ಮುಖ್ಯ ಅಂಶ. ಮೃದ್ವಂಗಿಗಳೂ ವಲ್ಕವಂತಪ್ರಾಣಿಗಳೂ ಕ್ಯಾಲ್ಸಿಯಂ ಅಂಶವಿಲ್ಲದ ನೀರಿನಲ್ಲಿ ವಾಸಿಸಲಾರವು. ಮೃದುಜಲದಲ್ಲಿ ಸಿಹಿನೀರಿನ ಸ್ಪಂಜುಗಳು ಹೆಚ್ಚಾಗಿವೆ. ಕಾರಣ ಅಲ್ಲಿ ಜೈವಿಕ ಪದಾರ್ಥಗಳ ಸರಬರಾಜು ಚೆನ್ನಾಗಿರುತ್ತದೆ. ಕೆಲವು ಭೂಚರ ಪ್ರಾಣಿಗಳು ಮಣ್ಣಿನಲ್ಲಿರುವ ಕೆಲವು ಕ್ಷಾರಗಳ ಅಂಶಗಳ ಅಭಾವದಿಂದ ಶಕ್ತಿಹೀನವಾಗುತ್ತವೆ.

ಜೈವಿಕ ಅಂಶಗಳು (ಬಯೋಟಿಕ್ ಫ್ಯಾಕ್ಟರ್ಸ್): ಎಲ್ಲ ಪ್ರಾಣಿಗಳೂ ಭೌತಬಲಗಳಿಂದ ಪ್ರಭಾವಿತವಾಗುತ್ತವೆ. ಇದರ ಜೊತೆಗೆ ಬಯೋಟಿಕ್ ಅಥವಾ ಜೈವಿಕ ಅಂಶಗಳೂ ತಮ್ಮ ಪ್ರಭಾವವನ್ನು ಬೀರುವುವು. ಇವೆರಡರ ಸ್ಪರ್ಧೆ, ವಾಸಕ್ಕಾಗಿ ಜಾಗಗಳ ಆಯ್ಕೆ, ಜೀವನಕ್ಕಾಗಿ ಜೊತೆಗಾರ್ತಿಯರ ಅನ್ವೇಷಣೆ ಇವೆಲ್ಲ ಜೈವಿಕ ಅಂಶಗಳು. ಭೌತ ವಾತಾವರಣ ಮತ್ತು ಜೈವಿಕ ಒತ್ತಡಗಳಿಂದ ರೂಪಿಸಲ್ಪಟ್ಟ ಕಾರ್ಯಗಳು ಸಹಕ್ರಿಯೆ (ಕೋಆಕ್ಷನ್) ಮತ್ತು ಪ್ರತಿಕ್ರಿಯೆಗಳ (ರಿಯಾಕ್ಷನ್) ಸ್ವರೂಪವನ್ನು ತಾಳುತ್ತವೆ.

ಜೀವಾವರಣ: ಪ್ರಾಣಿಗಳು ಮತ್ತು ಸಸ್ಯಗಳು ಒಟ್ಟೊಟ್ಟಾಗಿ ಮತ್ತು ಗುಂಪು ಗುಂಪಾಗಿ ಬಾಳುತ್ತವೆ. ಇದನ್ನೇ ಸಮುದಾಯ ಜೀವನ ಎನ್ನುತ್ತೇವೆ. ಪ್ರತಿಯೊಂದು ಸಮುದಾಯವೂ ವಾತಾವರಣದ ಸಹಕ್ರಿಯೆ ಮತ್ತು ಪ್ರತಿಕ್ರಿಯೆಗಳ ಸ್ವಭಾವದಿಂದ ಕೆಲವು ವಿಶೇಷ ಗುಣಗಳನ್ನು ಹೊಂದಿದೆ. ಸಮುದ್ರದಲ್ಲಿರುವ ಬಂಡೆಗಳ ಮೇಲೆ ಬೆಳೆಯುವ ಪ್ರಾಣಿಗಳ ಜೋಡಣೆ ಒತ್ತೊತ್ತಾಗಿದ್ದರೆ ಅರಣ್ಯಗಳಲ್ಲಿ ಹುಲ್ಲುಗಾವಲುಗಳಲ್ಲಿರುವ ವಿವಿಧ ಪ್ರಾಣಿಸಮುದಾಯಗಳು ಹೇರಳವಾಗಿ ಹರಡಿರುತ್ತವೆ. ಇಂಥ ಅಧಿಕ ಜೀವಿಗಳ ಸಮುದಾಯವನ್ನು ಬಯೋಮ್‌ಗಳೆಂದು ಕರೆಯುತ್ತೇವೆ. ಸಾಧಾರಣವಾಗಿ ಈ ಬಯೋಮ್‌ಗಳನ್ನು ಎಲ್ಲರೂ ಸುಲಭವಾಗಿ ಗುರುತಿಸಬಲ್ಲರು. ಕೆಲವು ಬಯೋಮ್‌ಗಳಿಗೆ ರೂಢಿನಾಮಗಳೂ ಇವೆ. ವಿಶ್ವದ ಬಯೋಮ್‌ಗಳಲ್ಲಿ ಉತ್ತರದ ಜೌಗುಪ್ರದೇಶ, ಪರ್ವತದ ಜೌಗುಪ್ರದೇಶ, ಹುಲ್ಲುಗಾವಲು, ಮರುಭೂಮಿ, ಶಂಕು ವೃಕ್ಷಗಳ ಅರಣ್ಯ, ಸಮಶೀತೋಷ್ಣ ವಲಯದ ಅರಣ್ಯ, ಉಷ್ಣವಲಯದ ಅರಣ್ಯ ಮತ್ತು ಚಾಪರಾಲ್ ಇವೇ ಮೊದಲಾದುವು ಪರಿಚಿತವಾದುವುಗಳು.


ಚಿತ್ರ 8. ವಿವಿಧ ಪ್ರದೇಶಗಳಲ್ಲಿ ಬಯೋಮ್‌ಗಳ ವಿತರಣೆಯನ್ನು ತೋರಿಸುವ ಚಿತ್ರ

ಉತ್ತರದ ಜೌಗುಪ್ರದೇಶ (ಉತ್ತರದ ತಂಡ್ರ): ಬಯೋಮ್‌ಗಳ ಅತ್ಯಂತ ವಿಸ್ತಾರಾದ ಪ್ರದೇಶ. ಉತ್ತರಮೇರುವಿನ ಮಂಜು ಟೋಪಿಯಿಂದ ಶಂಕುಮರ ಅರಣ್ಯಗಳವರೆಗೆ ಇದು ವಿಸ್ತರಿಸಿದೆ. ಇಳಿಜಾರು ಬಯಲಿನಲ್ಲಿ ನೀರಸ ಪ್ರದೇಶದಲ್ಲಿರುವ ಕಣ್ಣು ತಣಿಸುವ ಸುಪುಷ್ಪ ಸಸ್ಯಗಳು ಎತ್ತರದ ಗುಡ್ಡಗಳಲ್ಲಿ ಕಾಣಿಸುವುದಿಲ್ಲ. ನೀರಿನಿಂದ ತುಂಬಿರುವ ಹಳ್ಳಗಳು ಗೆಡ್ಡೆ ಕಟ್ಟಿರುವ ಗಟ್ಟಿನೆಲಕ್ಕಿಂತ ತಗ್ಗಿನಲ್ಲಿವೆ. ಸ್ಫೇಗ್ನಮ್ ಮತ್ತು ಲೈಕನ್ ಪಾಚಿಗಳೇ

ಅಲ್ಲಿಯ ವಿಶೇಷ ಸಸ್ಯಗಳು. ಉಳಿದ ಒಣ ಪ್ರದೇಶಗಳಲ್ಲಿ ಕುರುಚಲು ಮತ್ತು ಸಣ್ಣ ಸಣ್ಣ ಬಳ್ಳಿಗಳು ವಿಶೇಷವಾಗಿವೆ. ಅಲ್ಪಾವಧಿಯ ಬೇಸಗೆಯಲ್ಲಿ ಈ ಪ್ರದೇಶಗಳೆಲ್ಲ ಹೂಗಳಿಂದ ಮತ್ತು ನೆಲದ ಮೇಲೆ ಕೂರುವ ಪಕ್ಷಿಗಳಿಂದ ತುಂಬಿರುತ್ತವೆ. ಸೊಳ್ಳೆ ಮತ್ತು ಕಚ್ಚುವ ನೊಣಗಳು ಅಸಂಖ್ಯಾತವಾಗಿದ್ದು ಜೌಗುನೆಲದಿಂದ ಪ್ರಾಣಿಗಳ ಮೇಲೆ ದಾಳಿ ನಡೆಸುತ್ತವೆ. ಇಲ್ಲಿ ವಾಸಮಾಡುವ ಪ್ರಾಣಿಗಳಲ್ಲಿ ಮಸ್ಕ್, ಕೆರಿಬೋ ಸಾರಂಗ, ತೋಳ, ನರಿ ಮುಖ್ಯವಾದುವು. ಮೂಷಕಪ್ರಾಣಿಗಳಲ್ಲಿ ಲೆಮ್ಮಿಂಗ್ ಮತ್ತು ಸಣ್ಣ ಸಣ್ಣ ಮೊಲಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿವೆ. ಶೀತಕಾಲದ ಚಳಿ, ಮಳೆ, ಆಹಾರದ ಅಭಾವ ಇಲ್ಲಿನ ಪ್ರಾಣಿಗಳು ಎದುರಿಸಬೇಕಾದ ಸಮಸ್ಯೆಗಳು. ಆದ್ದರಿಂದ ಅನೇಕ ಪ್ರಾಣಿಗಳು ಅನುಕೂಲ ವಾತಾವರಣವಿರುವ ಪ್ರದೇಶಕ್ಕೆ ವಲಸೆ ಹೋಗುತ್ತವೆ. ಸ್ಥಿರವಾದ ಮಂಜಿನಲ್ಲಿ ನಿಷ್ಕ್ರಿಯತ್ವ ಅಸಾಧ್ಯವಾಗಿರುವುದರಿಂದ ಅನೇಕ ಮೂಷಕಗಳು ಹಿಮದಲ್ಲಿ ಬಿಲಕೊರೆದು ಒಣಸಸ್ಯಗಳನ್ನೇ ತಿಂದು ಬದುಕುತ್ತವೆ.

ಉತ್ತರದ ಶಂಕುಮರ ಕಾಡು: ಈ ವೃಕ್ಷಾರಣ್ಯ ಜೌಗುಪ್ರದೇಶದಂತೆಯೇ ವಿಸ್ತಾರವಾಗಿದೆ. ಶಂಕುಮರಗಳು, ಪೊದೆಗಳು, ಬಳ್ಳಿಗಳು, ಎಲೆ ಉದುರುವ ಕೆಲವು ಜಾತಿಯ ಮರಗಳು ಇವೇ ಇಲ್ಲಿನ ಸಸ್ಯವರ್ಗಗಳು. ಇಲ್ಲಿ ಆಹಾರ ಹೇರಳವಾಗಿ ದೊರಕುವುದರಿಂದ ಪ್ರಾಣಿಜೀವನ ಸಂಪದ್ಭರಿತವಾಗಿದೆ. ಮೂಸೆ ಸಾರಂಗ, ಜಿಂಕೆ, ಚಿಕ್ಕ ನರಿ ಮತ್ತು ತೋಳ ಇವು ಇಲ್ಲಿನ ಮುಖ್ಯ ಪ್ರಾಣಿಗಳು. ಇವುಗಳಲ್ಲಿ ಸಸ್ಯಾಹಾರಿಗಳೂ ಮಾಂಸಾಹಾರಿಗಳೂ ಇವೆ. ಮುಳ್ಳುಹಂದಿ ಮತ್ತು ಪೈನ್ ಇಲಿ, ಮೂಷಕ ಜಿಂಕೆ (ಡೀರ್ ಮೌಸ್) ಎತ್ತರ ಮರಗಳಲ್ಲಿ ಗೂಡುಗಟ್ಟಿ ವಾಸಮಾಡುವ ಅನೇಕ ಮಾದರಿಯ ಪಕ್ಷಿಗಳೂ ಇಲ್ಲಿ ವಾಸಿಸುತ್ತವೆ. ಆದರೆ ಶೀತಕಾಲ ಬಂದರೆ ಇವು ದಕ್ಷಿಣದೆಡೆಗೆ ವಲಸೆ ಹೋಗುತ್ತವೆ. ಆಹಾರಾಭಾವ ಇದರ ಮುಖ್ಯ ಕಾರಣ.

ಸಮಶೀತೋಷ್ಣವಲಯದ ಅಸ್ಥಿರ ಅರಣ್ಯಗಳು (ಟೆಂಪರೇಟ್ ಡೆಸಿಡ್ಯುಯಸ್ ಫಾರೆಸ್ಟ್ಸ್): ಈ ಅರಣ್ಯಗಳ ಸ್ವಭಾವ ವೈವಿಧ್ಯಪೂರ್ಣವಾದದ್ದು. ಇಲ್ಲಿಯ ಎಲ್ಲ ಜೀವಿಗಳನ್ನೂ ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸಿ ಸಂಘಗಳು ಎಂದು ಕರೆಯಬಹುದು. ಈ ಅರಣ್ಯಗಳ ರಚನೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯದಾಗಿರುವುದರಿಂದ ಅವುಗಳ ಘಟಕಗಳನ್ನು ಸುಲಭವಾಗಿ ಗುರುತಿಸಬಹುದು. ಉದಾಹರಣೆಗೆ ಸಂಯುಕ್ತ ಸಂಸ್ಥಾನಗಳ ಪೂರ್ವಭಾಗದಲ್ಲಿನ ಬೀಚ್‌ಮೇಪಲ್ ಕಾಡು, ಓಕ್ ಹಿಕರಿ ಕಾಡು, ಓಕ್ ಚೆಸ್ಟ್‌ನಟ್ ಕಾಡು ಮುಂತಾದವುಗಳು. ಶೀತಕಾಲದಲ್ಲಿ ಈ ಎಲ್ಲ ಮರಗಳ ಎಲೆಗಳು ಉದುರುವುದೇ ಇವುಗಳ ಸಾಮಾನ್ಯ ಲಕ್ಷಣ. ಗಿಡ್ಡಾಗಿ ಬೆಳೆಯುವ ಗಿಡಗಳೂ ಇಲ್ಲಿನ ಇನ್ನೊಂದು ಲಕ್ಷಣ. ಈ ಅರಣ್ಯಜಾತಿಯನ್ನು ಯುರೋಪಿನ ಪಶ್ಚಿಮಭಾಗ, ರಷ್ಯ, ಚೀನ ಮತ್ತು ಜಪಾನ್ ದೇಶಗಳಲ್ಲೂ ಕಾಣುತ್ತೇವೆ. ವಿಶಿಷ್ಟ ಗುಣ, ಸ್ವಭಾವ ಹೊಂದಿರುವ ಅನೇಕ ವಲ್ಕವಂತ ಪ್ರಾಣಿಗಳು, ಹಾವುಗಳು ಮತ್ತು ಹುಳುಹುಪ್ಪಟೆಗಳು ಅಲ್ಲಿವೆ. ಚಳಿಗಾಲದಲ್ಲಿ ಕೊರೆತದಿಂದ ಆಹಾರಕ್ಕೆ ಬಹಳ ತೊಂದರೆ ಆಗುವುದರಿಂದ ಎಲೆಗಳ ಸುರುಳಿಯಲ್ಲಿರುವ ಅಕಶೇರುಕಗಳು ಜಡತ್ವವನ್ನು ಹೊಂದುತ್ತವೆ; ಹಕ್ಕಿಗಳಾದರೋ ದಕ್ಷಿಣದ ಕಡೆ ವಲಸೆಹೋಗುತ್ತವೆ.

ಹುಲ್ಲುಗಾವಲು ಪ್ರದೇಶ: ಉತ್ತರ ಅಮೆರಿಕದ ಪಶ್ಚಿಮದ ಬಯಲುಪ್ರದೇಶದಲ್ಲಿ ಕಾಣುವ ತಗ್ಗುದಿಣ್ಣೆಗಳಿಲ್ಲದ ಹುಲ್ಲುಗಾವಲುಗಳು ಅತ್ಯಂತ ಅದ್ಭುತವಾಗಿವೆ ಮತ್ತು ಅಷ್ಟೇ ನೀರಸವೂ ಆಗಿವೆ. ಏಷ್ಯಖಂಡದ ಸ್ಟೆಪೀಸ್ ಮತ್ತು ದಕ್ಷಿಣ ಅಮೆರಿಕದ ಪಂಪಾಸ್‌ಗಳೂ ಕೂಡ ಹುಲ್ಲುಗಾವಲುಗಳೇ. ಸೂರ್ಯಕಾಂತಿ ಮತ್ತು ಆಸ್ಟರ್ ಜಾತಿಯ ಹೂವಿನ ಗಿಡ ಇವು ಇಲ್ಲಿನ ಮಿಶ್ರಸಸ್ಯವರ್ಗ. ಉದ್ದವಾದ ನದಿಗಳ ಅಕ್ಕಪಕ್ಕಗಳಲ್ಲಿ ನೀರಿನ ಆಶ್ರಯವಿರುವಲ್ಲಿ ಬೆಳೆಯುವ ಕೆಲವು ಮರಗಳನ್ನು ಬಿಟ್ಟರೆ ಇತರ ಸಂಪದ್ಭರಿತ ಸಸ್ಯಗಳ ಬೆಳವಣಿಗೆ ಇಲ್ಲ. ಪಶ್ಚಿಮಭಾಗದ ಹುಲ್ಲುಗಾವಲುಗಳ ಪೂರ್ವಭಾಗದಲ್ಲಿ ಹುಲ್ಲು ಆಳೆತ್ತರ ಬೆಳೆಯಬಹುದು. ಪಶ್ಚಿಮದ ಕಡೆ ಸಸ್ಯಸಮೃದ್ಧಿ ಕಡಿಮೆ. ಈ ಬಯಲಿನಲ್ಲಿ ಕಾಣುವ ಪ್ರಾಣಿಗಳು ದೊಡ್ಡವೂ ಸಸ್ಯಾಹಾರಿಗಳೂ ಆಗಿವೆ. ಅವು ಮೆಲಕು ಹಾಕುವ ಪ್ರಾಣಿಗಳು. ಇವುಗಳಲ್ಲಿ ಕಾಡೆಮ್ಮೆಗಳು ಒಮ್ಮೆ ಅಧಿಕ ಸಂಖ್ಯೆಯಲ್ಲಿದ್ದುವು. ಕೊಯೋಟ್ ಜಿಂಕೆ, ತೋಳ, ಮೊಲ, ಅನೇಕ ರೀತಿಯ ಮೂಷಕಗಳು, ನೆಲದಲ್ಲಿ ಗೂಡುಕಟ್ಟುವ ಹಕ್ಕಿಗಳು, ಬಯಲುಹಾವುಗಳು ಮತ್ತು ಕೆಲವು ವಿಶೇಷರೀತಿಯ ಕೀಟಗಳು ಈಗಲೂ ಇವೆ. ಇಲ್ಲಿ ಕಾಳುಗಳನ್ನು ಹೆಚ್ಚಾಗಿ ಬೆಳೆಯಬಹುದು. ಇದು ಪಶುಪಾಲನೆಗೆ ಅನುಕೂಲವಾದ ಸ್ಥಳ. ಆದ್ದರಿಂದ ಈ ಹುಲ್ಲುಗಾವಲುಗಳು ಆರ್ಥಿಕ ದೃಷ್ಟಿಯಿಂದ ಅತಿಮುಖ್ಯ. ಈ ಉಪಯುಕ್ತ ಪ್ರಾಂತ್ಯಗಳು ಮಾನವನ ಆಕ್ರಮಣಕ್ಕೆ ಒಳಗಾಗಿ ನೈಸರ್ಗಿಕ ಪ್ರದೇಶಗಳು ಕೆಲವೇ ಮಾತ್ರ ಉಳಿದಿವೆ. ಇಲ್ಲಿ ಪ್ರಾಣಿಗಳು ಯಶಸ್ವಿ ಜೀವನ ನಡೆಸಬೇಕಾದರೆ ಬಹಳ ಚುರುಕಾಗಿರಬೇಕು. ಒಳ್ಳೆಯ ದೃಷ್ಟಿ ವಾಸನಾ ಬಲಗಳನ್ನು ಹೊಂದಿರಬೇಕು. ಇಂಥ ಪ್ರಾಣಿಗಳಲ್ಲಿ ತೋಳ, ಕೊಯೋಟ್ ಮುಂತಾದವುಗಳು ಮುಖ್ಯ. ಮೂಷಕಗಳು ಉದ್ದವಾದ ಬಿಲಗಳನ್ನು ಮಾಡಿಕೊಂಡಿರುತ್ತವೆ. ಚಳಿಗಾಲದ ಚಳಿಯನ್ನೂ ವೈಶಾಖದ ಬಿಸಿಲನ್ನೂ ತಡೆಯಲು ಇಲ್ಲಿನ ಪ್ರಾಣಿಗಳು ದೃಢವಾಗಿ ಬಲಿಷ್ಠವಾಗಿರಬೇಕು. ಬಿರುಗಾಳಿಯ ಹೊಡೆತ, ಸೂರ್ಯನ ದ್ರವ ಇಂಗಿಸುವ ತಾಪ ಮತ್ತು ಹುಲ್ಲುಗಾವಲಿನ ಕಾಟ ಇವೇ ಮೊದಲಾದವು ಇಲ್ಲಿಯ ಪ್ರಾಣಿಗಳು ಎದುರಿಸಬೇಕಾದ ಅಪಾಯಗಳು.

ಮರುಭೂಮಿ: ಮರುಭೂಮಿಗಳು ವಿಶ್ವದ ಅನೇಕ ಕಡೆಗಳಲ್ಲಿ ಇವೆ. ಉತ್ತರ ಆಫ್ರಿಕ, ಆಸ್ಟ್ರೇಲಿಯ, ಮಧ್ಯ ಏಷ್ಯಾ, ಮೆಕ್ಸಿಕೊ ಮತ್ತು ಸಂಯುಕ್ತ ಸಂಸ್ಥಾನದ ವಾಯವ್ಯ ಸರಹದ್ದಿನ ಕೆಲವು ಭಾಗ ಇವು ನೈಜ ಮರುಭೂಮಿ ಪ್ರದೇಶಗಳು. ಇಲ್ಲಿ ವಾಸಮಾಡುವ ಪ್ರಾಣಿಗಳು ಮತ್ತು ಬೆಳೆಯುವ ಸಸ್ಯಗಳು ಮರುಭೂಮಿಯ ಕಠಿಣ ಜೀವನಕ್ಕೆ ಹೊಂದಿಕೊಳ್ಳಬೇಕು. ಇಲ್ಲಿನ ಗಿಡಗಳಿಗೆ ದಪ್ಪ ಕಾಂಡಗಳೂ ಸೂಜಿಮೊನೆಯ ಎಲೆಗಳೂ ಇವೆ. ಜಾಕ್ ಮೊಲ, ಕಾಂಗರೂ ಇಲಿ, ಮರಳುಕಾಡಿನ ಸರ್ಪಗಳು, ಮೃದ್ವಂಗಿಗಳು, ಚೇಳು, ಜೇಡ ಇತ್ಯಾದಿಗಳೂ ಕೆಲವು ಕೀಟಗಳೂ ಇಲ್ಲಿನ ಮುಖ್ಯ ಪ್ರಾಣಿಗಳು. ನೀರಿನ ಅಭಾವ, ನೀರನ್ನು ಹಿಂಗಿಸುವ ಸೂರ್ಯನ ತಾಪ ಇವು ಈ ಗಡಸು ವಾತಾವರಣದ ಮುಖ್ಯ ತೊಂದರೆಗಳು. ಅನೇಕ ಪ್ರಾಣಿಗಳು ತಮ್ಮ ದೈಹಿಕ ರಚನೆಯ ಮಾರ್ಪಾಟುಗಳಿಂದ ಇವನ್ನು ಎದುರಿಸುತ್ತವೆ. ಕೆಲವು ಸರ್ಪಗಳೂ ಕೀಟಗಳೂ ಒಣಮೂತ್ರವನ್ನು ವಿಸರ್ಜಿಸುವುವಲ್ಲದೆ ಜೀವರಸಪರಿಣಾಮದಿಂದ ಮೂಡಿದ ನೀರನ್ನು (ಮೆಟಬಾಲಿಕ್ ವಾಟರ್) ಬಳಸುತ್ತವೆ. ಬಿಲಗಳಲ್ಲಿ ವಾಸಮಾಡುತ್ತ ರಾತ್ರಿವೇಳೆ ಮಾತ್ರ ಚಟುವಟಿಕೆಯಿಂದಿರುವುದರಿಂದ ಈ ಮರುಭೂಮಿಯ ಕೆಲವು ಪ್ರಾಣಿಗಳು ಸೂರ್ಯನ ಶಾಖದಿಂದ ತಪ್ಪಿಸಿಕೊಳ್ಳುತ್ತವೆ.

ಉಷ್ಣವಲಯದ ಮಳೆಯಕಾಡುಗಳು (ಟ್ರಾಪಿಕಲ್ ರೇನ್ ಫಾರೆಸ್ಟ್): ಪ್ರಪಂಚದ ಉಷ್ಣವಲಯದ ಮಳೆ ಹೆಚ್ಚಾಗಿ ಬೀಳುವ ಪ್ರದೇಶಗಳಲ್ಲೆಲ್ಲ ಸಂಪದ್ಭರಿತ ಕಾಡುಗಳು ಬೆಳೆದಿರುತ್ತವೆ. ಅಲ್ಲಿ ಪ್ರಾಣಿವರ್ಗವೂ ಯಥೇಚ್ಛವಾಗಿವೆ. ಮಧ್ಯ ಅಮೆರಿಕ, ದಕ್ಷಿಣ ಅಮೆರಿಕದ ಉತ್ತರಭಾಗ, ಮಧ್ಯ ಆಫ್ರಿಕ, ಆಗ್ನೇಯ ಏಷ್ಯ, ಪೂರ್ವ ಇಂಡೀಸ್ ಮತ್ತು ನೆರೆಯ ದ್ವೀಪಗಳು ಇವೇ ಆ ಪ್ರದೇಶಗಳು. ಉತ್ತರದ ಇತರ ಅರಣ್ಯಗಳಿಂದ ಈ ಉಷ್ಣವಲಯದ ಮಳೆಯ ಕಾಡುಗಳು ಭಿನ್ನವಾಗಿರುವುದು ಸ್ಪಷ್ಟವಾಗಿ ಕಾಣುತ್ತವೆ. ಉತ್ತರದ ಅರಣ್ಯಗಳು ಕೆಲವೇ ಜಾತಿಯ ಮರಗಳಿಂದ ಕೂಡಿವೆ. ಮರಗಳು ಬೆಳೆಯುವ ಎತ್ತರದಲ್ಲೂ ವ್ಯತ್ಯಾಸ ಇರುವುದರಿಂದ ಅವುಗಳ ವರಿಸೆಯಿಂದಲೇ ಗುರುತಿಸಬಹುದು. ಈ ಕಾಡುಗಳಲ್ಲಿ ಅತ್ಯಂತ ಎತ್ತರದ ಮರಗಳು ಮೇಲ್ಛಾವಣಿಯಂತೆ ಬೆಳೆದಿರುವುದನ್ನೂ ಅವಕ್ಕಿಂತ ಕಡಿಮೆ ಎತ್ತರದ ಮರಗಳು, ಮಧ್ಯಂತರ ಎತ್ತರದ ಮರಗಳು, ಕುರುಚಲು ಗಿಡಗಳು ಇವೆಲ್ಲ ವರಿಸೆಗಳಂತೆ ಕಂಡುಬರುತ್ತವೆ. ಮರದಿಂದ ಮರಕ್ಕೆ ಹಬ್ಬುವ ಬಳ್ಳಿಗಳೂ ಅಸಂಖ್ಯಾತವಾಗಿವೆ. ಅದರಿಂದ ನೆಲದ ಬಳಿ ಬೆಳಕು ಕಡಿಮೆ ಪ್ರಮಾಣದಲ್ಲಿರುತ್ತದೆ. ಗಿಡ ಮರಗಳು ತಮ್ಮ ಆಹಾರವನ್ನು ತಯಾರಿಸಲು ಸೂರ್ಯನ ಬೆಳಕು ಅತಿಮುಖ್ಯವಾದ್ದರಿಂದ ಆ ಬೆಳಕನ್ನು ಪಡೆಯಲು ಮೇಲು ಮೇಲಕ್ಕೆ ಬೆಳೆಯುತ್ತ ಹೋಗುತ್ತವೆ. ಹಾಗಿಲ್ಲದಿದ್ದರೆ ಆಹಾರ ತಯಾರಿಕೆಯ ಶಕ್ತಿಯೇ ನಶಿಸಿಹೋದೀತು. ಸಸ್ಯಗಳಂತೆ ಈ ಅರಣ್ಯಗಳಲ್ಲಿ ಹಲವಾರು ಜಾತಿಯ ಪ್ರಾಣಿಗಳು ವೃಕ್ಷವಾಸದ ಜೀವನಕ್ಕೆ ಹೊಂದಿಕೊಂಡಿವೆ. ಹೀಗೆಯೇ ಹುಳುಗಳಲ್ಲೂ ಅಸಂಖ್ಯಾತ ಜಾತಿಗಳಿವೆ. ಇರುವೆ ಮತ್ತು ಗೆದ್ದಲುಗಳಲ್ಲೇ ಬೇಕಾದಷ್ಟು ವೈವಿಧ್ಯ ಉಂಟು. ವರ್ಣರಂಜಿತ ಪಕ್ಷಿಗಳು ಎಲೆಗಳ ಗುಂಪಿನಲ್ಲಿ ಅಡಗಿವೆ. ವೃಕ್ಷವಾಸದ ಪ್ರಾಣಿಗಳು ಮರದಿಂದ ಮರಕ್ಕೆ ಚಲಿಸಲು ಕೆಲವು ವಿಶೇಷ ಅಂಗಗಳನ್ನು ಪಡೆದಿವೆ. ಈ ಉಷ್ಣವಲಯದ ವರ್ಷಾರಣ್ಯದ ಪ್ರಾಣಿಗಳ ಮತ್ತು ಸಸ್ಯಗಳ ವೈವಿಧ್ಯವನ್ನು ಮತ್ತಾವ ವಾತಾವರಣದಲ್ಲೂ ಕಾಣಲಾರೆವು. ಅಮೆರಿಕದ ಉಷ್ಣವಲಯದ ಈ ಮಳೆಯ ಕಾಡುಗಳ ಪ್ರಾಣಿಗಳಲ್ಲಿ ಕೋತಿಗಳು, ಒಸಿಲಾಟ್ ಮುಂಗುಸಿಗಳು, ಸ್ಲಾತ್ ಕರಡಿ. ಬೋವ ಹೆಬ್ಬಾವು ಮತ್ತು ಸೈನಿಕ ಇರುವೆಗಳು ವಿಶೇಷ ರೀತಿಯ ಪ್ರಾಣಿಗಳು.

ಇಂಥ ಸಮೃದ್ಧ ಅರಣ್ಯದಲ್ಲಿ ಹತೋಟಿಯ ಪ್ರಮುಖ ಅಂಶವೆಂದರೆ ಸ್ಪರ್ಧಾ ಮನೋಭಾವ. ಸಸ್ಯಾದಿಗಳಲ್ಲಿ ಬೆಳಕನ್ನು ಪಡೆಯಲು ಸತತ ಹೋರಾಟವೂ ಪ್ರಾಣಿಗಳಲ್ಲಿ ಶತ್ರುಬಾಧೆಯಿಂದ ತಪ್ಪಿಸಿಕೊಳ್ಳುವ ಯತ್ನವೂ ಎದ್ದು ಕಾಣುತ್ತವೆ.

ಅಲ್ಪ ಪ್ರಮಾಣ ಪ್ರದೇಶದ ವಾತಾವರಣ: ಸಮಶೀತೋಷ್ಣವಲಯದ ಪರ್ವತ ಪ್ರದೇಶಗಳಲ್ಲಿ ಉತ್ತರದ ತುದಿಯ ಪ್ರದೇಶಗಳ ಸ್ವಭಾವವನ್ನೇ ಕಾಣುತ್ತೇವೆ. ಈ ಪ್ರದೇಶಗಳು ವಿಶಾಲವಾಗಿರುವುದಕ್ಕಿಂತ ಎತ್ತರವಾಗಿವೆ. ಈ ಪ್ರದೇಶಗಳನ್ನು ಪರ್ವತಪ್ರದೇಶದ ಜೌಗುಭಾಗ ಮತ್ತು ಪರ್ವತಪ್ರದೇಶದ ಮೊನಚಾದ ಮರಗಳ ಕಾಡು ಎಂಬುದಾಗಿ ವಿಭಾಗಿಸಬಹುದು. ಈ ಭಾಗಗಳು ಸಾಮಾನ್ಯವಾಗಿ ಸ್ವಭಾವದಲ್ಲಿ ಉತ್ತರಪ್ರದೇಶದ ಭಾಗಗಳನ್ನೇ ಹೋಲುತ್ತವೆ. ಅಲ್ಲದೆ ಕಡಿಮೆ ಪ್ರಮಾಣದ ಆಕ್ಸಿಜನ್ನಿನ ಒತ್ತಡ, ತೀವ್ರವಾಯುಶಕ್ತಿ ಈ ಅಂಶಗಳಲ್ಲೂ ಹೋಲಿಕೆ ಇದೆ. ಸಸ್ಯವರ್ಗ ಮತ್ತು ಪ್ರಾಣಿವರ್ಗಗಳು ಉತ್ತರಭಾಗದ ಸಸ್ಯ ಮತ್ತು ಪ್ರಾಣಿವರ್ಗಕ್ಕೆ ಹೋಲುವುದಾದರೂ ಈ ಭಾಗದಲ್ಲಿ ದೊಡ್ಡ ಪ್ರಾಣಿಗಳು ಕಡಿಮೆ. ಬೇಸಗೆಯಲ್ಲಿ ಮರಗಳು ತಮ್ಮ ಎಲೆಗಳನ್ನು ಕಳೆದುಕೊಳ್ಳುವುದರಿಂದ ಇವಕ್ಕೆ ಉಷ್ಣವಲಯದ ಅಸ್ಥಿರ ಕಾಡುಗಳೆಂದು ಹೆಸರು. ಭಾರತದ ಮುಂಗಾರಿನ ಗೊಂಡಾರಣ್ಯಗಳು, ಮೆಕ್ಸಿಕೋ ದೇಶದ ಪಶ್ಚಿಮ ಕರಾವಳಿ ಈ ವರ್ಗಕ್ಕೆ ಸೇರಿದ ಪ್ರದೇಶಗಳು.

ಚಾಪರಾಲಾ ಕಾಡುಗಳು (ಭೂಮಧ್ಯಪ್ರದೇಶದ ವಾಯುಗುಣದ ಭಾಗಗಳು): ಭೂಮಧ್ಯ ಸಾಗರದ ತೀರ ಪ್ರದೇಶದಲ್ಲಿಯೂ ಕ್ಯಾಲಿಫೋರ್ನಿಯಾ ಮತ್ತು ಅರಿಜೋನ ಪ್ರಾಂತ್ಯದ ಭಾಗಗಳಲ್ಲಿಯೂ ಈ ಕಾಡುಗಳನ್ನು ಕಾಣುತ್ತೇವೆ. ಮಳೆಗಾಲದ ಅತಿವೃಷ್ಟಿ, ಕುರುಚಲು

ಸಸ್ಯವರ್ಗ, ಅಲ್ಲಲ್ಲಿ ದೊಡ್ಡ ದೊಡ್ಡ ಮರಗಳು ಇವು ಈ ಕಾಡಿನ ಲಕ್ಷಣಗಳು. ಆದ್ದರಿಂದ ಮಾನವ ಈ ಪ್ರದೇಶದಲ್ಲಿ ಪ್ರಮುಖವಾಗಿ ಕಿತ್ತಳೆ, ನಿಂಬೆ ಮುಂತಾದ ಜಂಬೀರಜಾತಿಯ ಗಿಡಗಳನ್ನು ಕೃಷಿಮಾಡಿದ್ದಾನೆ. ಉತ್ತರಪ್ರದೇಶದಲ್ಲಿ ಫ್ಲೋರಿಡಾದ ಮಧ್ಯಭಾಗದಲ್ಲಿಯೂ ನ್ಯೂಜಿಲೆಂಡಿನ ಕೆಲವು ಭಾಗಗಳಲ್ಲೂ ಸಮ ಉಷ್ಣದ ಈ ಅರಣ್ಯಗಳು ವಿಸ್ತಾರವಾಗಿ ಬೆಳೆದಿವೆ. ಸಮೃದ್ಧವಾದ ಸಸ್ಯವರ್ಗ, ಎಲೆಗಳ ಪದರಗಳು, ಮರಗಳ ಸಂಪತ್ತು ಮತ್ತು ಪ್ರಾಣಿಗಳ ವೈವಿಧ್ಯಮಯ ಜೀವನ–ಇವು ಇಲ್ಲಿನ ವಿಶಿಷ್ಟ ಲಕ್ಷಣಗಳು.

ಸಾಹಚರ್ಯದ ಅನುಕ್ರಮ (ಕಮ್ಯೂನಿಟಿ ಸಕ್ಸೆಷನ್): ಎಲ್ಲ ಜೀವಾವರಣ ಸಾಹಚರ್ಯಗಳೂ ಒಂದು ಆಸ್ಫೋಟನೆಯ ಸ್ಥಿತಿಯಲ್ಲಿವೆ ಎಂದರೆ ಅವುಗಳ ಪರಿಮಿತಿಯಲ್ಲಿ ಅವು ಸತತವಾಗಿ ಪರಿವರ್ತನೆ ಹೊಂದುತ್ತಲೇ ಇವೆ. ಈ ಬದಲಾವಣೆಗಳನ್ನು ಹಗಲಿನಿಂದ ಇರುಳಿಗೆ, ಋತುವಿನಿಂದ ಋತುವಿಗೆ, ವರ್ಷದಿಂದ ವರ್ಷಕ್ಕೆ ಗುರುತಿಸಬಹುದು. ಹಗಲು ಇರುಳಿನ ಬದಲಾವಣೆಗಳು ಪ್ರಾಣಿಗಳ ಸ್ವಭಾವದಲ್ಲಿ ಪ್ರತ್ಯಕ್ಷವಾಗಿ ಗೋಚರಿಸುತ್ತವೆ. ವಿವಿಧ ಪ್ರಾಣಿಗಳ ಚಲನೆ ವಿವಿಧ ಕಾಲಗಳಲ್ಲಿ. ಬಹುಪಾಲು ಸಸ್ತನಿಗಳು ಹಗಲಿನಲ್ಲಿ ವಿಶ್ರಾಂತಿಪಡೆದು ರಾತ್ರಿಯಲ್ಲಿ ಆಹಾರ ಹುಡುಕಲು ಹೊರಡುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ಪಕ್ಷಿಗಳು ಹಗಲಿನಲ್ಲಿ ಸಂಚರಿಸುತ್ತವೆ. ಬೇರೆ ಬೇರೆ ಕಾಲಗಳಲ್ಲಿ ಕ್ರಿಯಾಶೀಲರಾಗಿರುವ ಪ್ರಾಣಿಗಳು ಅಗತ್ಯಕ್ಕೆ ತಕ್ಕಂತೆ ಸ್ವಭಾವದಲ್ಲಿ ವ್ಯತ್ಯಾಸ ಹೊಂದಿವೆ. ಈ ಪ್ರದೇಶದಲ್ಲಿ ಋತುಭೇದಗಳು ಸ್ವಾಭಾವಿಕವಾಗಿ ಸ್ಪಷ್ಟವಾಗಿ ಗೋಚರಿಸುತ್ತವೆ. ಇದನ್ನು ವಾತಾವರಣದ ಉಷ್ಣದ ವ್ಯತ್ಯಾಸದಿಂದ ಗುರುತಿಸಬಹುದು. ಇದರಿಂದ ಪ್ರಾಣಿಗಳು ಒಂದು ಪ್ರದೇಶದಿಂದ ಇನ್ನೊಂದಕ್ಕೆ ಸಾಮೂಹಿಕವಾಗಿ ಚಲಿಸುತ್ತವೆ. ಚಳಿಗಾಲದಲ್ಲಿ ನಿಶ್ಚೇಷ್ಟಿತವಾಗುವ ಪ್ರಾಣಿಗಳ ನಿಷ್ಕ್ರಿಯತೆಯೂ ಬದಲಾವಣೆ ಹೊಂದುವ ಮೊಲಗಳ ವರ್ಣ ಪರಿವರ್ತನೆಯೂ ಇದರ ಫಲಿತಾಂಶ. ತುತ್ತ ತುದಿಯಲ್ಲಿನ ಜೀವಿಗಳಲ್ಲಿ ಅನೇಕ ವರ್ಷಗಳ ಅವಧಿಯಲ್ಲಿ ಕಂಡುಬರುವ ಬದಲಾವಣೆಗಳಿಗಿಂತ ಅವು ವಾತಾವರಣಕ್ಕೆ ಹೊಂದಿಕೊಳ್ಳಲು ಅನುಸರಿಸುವ ನಿತ್ಯಪರಿವರ್ತನೆಗಳು ಕಡಿಮೆಯೇನಲ್ಲ. ಬದಲಾವಣೆಗಳಲ್ಲಿ ಹೆಚ್ಚು ಪ್ರಸಿದ್ಧವಾದದ್ದೆಂದರೆ ಏಕಮಾದರಿಯ ಕಡೆಗೆ ಸ್ನೇಹ ಬೆಳೆಸುವ ಎಲ್ಲ ಜೀವಿಗಳ ಪರಿವರ್ತನೆ. ಇಂಥ ಸಹಜೀವನದಲ್ಲಿ ಎಲ್ಲಿಯವರೆಗೆ ಹವೆ ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಅದೇ ಪ್ರಮಾಣದಲ್ಲಿ ಬದಲಾವಣೆ ನಿಲ್ಲುತ್ತದೆ. ಬೀಚು ದಾರುವಿನ (ಬೀಚ್) ಸಹಜೀವನದ ಅಂತರದಲ್ಲಿ ಆದ ಎಲ್ಲ ಅಭಿವೃದ್ಧಿ ಅಥವಾ ಮುಪ್ಪಿನ ಅವಸ್ಥೆಗಳಿಗೆ ಒಡನಾಡಿಗಳು (ಅಸ್ಸೋಸೀಸ್) ಎಂದು ಹೆಸರು. ಪ್ರತಿಯೊಂದು ಸಾಹಚರ್ಯದಲ್ಲಿ ವಿವಿಧ ಅಭಿವೃದ್ಧಿ ಹಂತಗಳು ಕಾಣಿಸಿಕೊಳ್ಳುತ್ತವೆ. ಅನೇಕ ವೇಳೆ ಈ ಅಂತ್ಯ ಮಂಜುಗಡ್ಡೆಯ ಯುಗದ ಅವಶೇಷದಂತೆ ಇರುವ ಸಣ್ಣ ಕೊಳವಾಗಿಯೋ ಕೆರೆಯಾಗಿಯೋ ಆರಂಭವಾಗುತ್ತದೆ. ವರ್ಷಗಳು ಉರುಳಿದಂತೆ ನೀರಿನ ಮೈ ಕ್ರಮೇಣ ತುದಿಯಿಂದ ಸಸ್ಯರೂಪದಿಂದ ತುಂಬಿಕೊಳ್ಳುತ್ತದೆ. ಮೊದಲ ಹಂತ ಅಥವಾ ಮೊದಲ ಸಂಗಾತಿಗಳು ಸೂರ್ಯಮೀನಿನ (ಸನ್‌ಫಿಷ್), ಅಕಶೇರುಕ ಜಲಚರ ಪ್ರಾಣಿಗಳ ಮತ್ತು ನೀರಿನಲ್ಲಿ ಮುಳುಗಿರುವ ಸಸ್ಯಸಂಖ್ಯೆಯಿಂದ ತುಂಬಿದ ತೆರೆದ ನೀರಿನ ಭಾಗವಾಗಿದೆ. ಮುಂದಿನ ಸಂಗಾತಿಗಳೆಂದರೆ ಮೊನಚಾದ ಬಳ್ಳಿಗಳು ಮತ್ತಿತರ ಸಸ್ಯಗಳು ಕೂಡಿ ಕಾಣಿಸಿಕೊಂಡು ಕೊಳವನ್ನು ಪಾಚಿಮಯವಾಗಿ ಮಾಡುತ್ತವೆ. ಈ ಸಹವಾಸದಲ್ಲಿ ಬಿಲತೋಡುವ ಸಿಗಡಿ, ಕಪ್ಪರ ಸುಂಟೆ, ದ್ವಿಚರ ಪ್ರಾಣಿಗಳು ಮತ್ತು ತೇವವನ್ನು ಬಯಸುವ ಕೆಂಪು ರೆಕ್ಕೆಯ ಹಕ್ಕಿಗಳು ಜನ್ಮತಾಳುತ್ತವೆ. ಇಂಥ ನೆಲದ ಮೇಲೆ ಕೆಲವು ಮಾದರಿ ಗಿಡಗಳು ಆಹಾರ ಪಡೆದು ಹುಟ್ಟುತ್ತವೆ. ಕಡೆಯದಾಗಿ ಅನೇಕ ರೀತಿಯ ಮರ, ಪಕ್ಷಿ ಮತ್ತು ವನ್ಯಮೃಗಗಳಿಂದ ಕೂಡಿದ ಅರಣ್ಯವಾಗಿ ರೂಪುಗೊಳ್ಳುತ್ತದೆ. ಕೊನೆಯ ಹಿಂಬದಿಯ ಮಟ್ಟದಲ್ಲಿ ಈ ಸಾಹಚರ್ಯ ಅಂತಿಮ ಘಟ್ಟದ ಸ್ವಭಾವವುಳ್ಳ ಅರಣ್ಯವಾಗಿ ಪರಿಣಮಿಸುತ್ತವೆ.

ಅಭಿವೃದ್ಧಿಯ ಇಂಥ ಅಂತಿಮ ಸ್ಥಿತಿ ಹವೆಯ ಪರಿಸ್ಥಿತಿಯನ್ನನುಸರಿಸಿ ವ್ಯತ್ಯಾಸವಾಗುವ ಕಾಲಾವಧಿಯನ್ನು ತೆಗೆದುಕೊಳ್ಳುತ್ತವೆ. ಒಂದು ಸರೋವರದಿಂದ ಅರಣ್ಯದವರೆಗೆ ನಡೆದುಹೋದರೆ ಅಭಿವೃದ್ಧಿಯ ಎಲ್ಲ ಹಂತಗಳನ್ನೂ ನೋಡಬಹುದು. ಇಂಥದೇ ಅಂತಿಮ ಸಾಹಚರ್ಯ ಸ್ಥಿತಿಯಲ್ಲಿ ಪರ್ಯವಸಾನ ಹೊಂದುವ ಒಂದು ಸಿಯರ್‌ನ ಸ್ಥಿತಯೂ ಸಾಧಾರಣ ನೆಲದಿಂದ ಆರಂಭವಾಗಬಹುದು. ಮಿಚಿಗನ್ ಸರೋವರದ ಮರಳಿನ ಕಣಗಳಲ್ಲಿ ಪ್ರಾಥಮಿಕ ಸ್ಥಿತಿ ಬರಿಯ ಮರಳು. ಅದು ಕೂಡಲೆ ಹಬ್ಬುವ ಹುಲ್ಲಿನಿಂದ ಆವರಿಸಲ್ಪಡುತ್ತದೆ. ಈ ಹುಲ್ಲು ಮರಳನ್ನು ಹಿಡಿಯುವುದರಿಂದ ಬೀಚ್ ಸಸ್ಯಗಳು ಮತ್ತು ಹತ್ತಿ ಮರಗಳು ಕ್ರಮೇಣ ಪದಾರ್ಪಣ ಮಾಡುತ್ತವೆ. ತತ್ಪರಿಣಾಮವಾಗಿ ಓಕ್, ಪೈನ್ ಮತ್ತು ಇತರ ಜಾತಿಯ ಮರಗಳ ಕಾಡಿಗೆ ಜಾಗ ಸಿದ್ಧವಾಗುತ್ತದೆ. ಕೊನೆಗೆ ಇದನ್ನು ಅಂತಿಮಾವಸ್ಥೆಯ ಅರಣ್ಯ ಆಕ್ರಮಿಸುತ್ತದೆ. ಈ ಎಲ್ಲ ಸ್ಥಿತ್ಯಂತರಗಳೂ ಸಸ್ಯಮಾದರಿಗಳಿಂದ ಸ್ವಭಾವಪೂರ್ಣವಾದರೂ ಪ್ರತಿಯೊಂದು ಸಾಹಚರ್ಯವೂ ಸಂಗಾತಿಯೂ ಪ್ರಾಣಿಗಳ ಸ್ವಭಾವವನ್ನು ಪಡೆದಿವೆ.

ಸಿಹಿನೀರಿನ ಸಾಹಚರ್ಯಗಳು: ಬಹುಪಾಲಿನ ಪ್ರದೇಶಗಳಲ್ಲಿ ವಿವಿಧ ಸಿಹಿ ನೀರಿನ ಸಾಹಚರ್ಯಗಳು ನೆಲೆಸಿವೆ. ಇವುಗಳೆಲ್ಲ ಸುತ್ತಮುತ್ತಲಿನ ಜೀವಸಮುದಾಯಗಳಿಂದ (ಬಯೋಮ್ಸ್) ವಿಶಿಷ್ಟವಾಗಿ ಪ್ರತ್ಯೇಕಿಸಲ್ಪಟ್ಟಿದ್ದರೂ ತಮ್ಮ ಸ್ವಂತ ಸಹಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ಪಡೆದಿದ್ದರೂ ಅವು ತಮ್ಮ ಭೌಗೋಳಿಕ ವಲಯದ ಪ್ರಭಾವಕ್ಕೆ ಒಳಗಾಗುತ್ತವೆ. ತಿಳಿನೀರಿನ ಸಾಯಚರ್ಯದ ಎರಡು ಸಾಧಾರಣ ಮಾದರಿಗಳನ್ನು ಗುರುತಿಸಬಹುದು. ನಿಂತ ನೀರಿನ ಮತ್ತು ಹರಿಯುವ ನೀರಿನ ಸಾಹಚರ್ಯಗಳು ಸರೋವರಗಳು, ಕೊಳಗಳು ಮತ್ತು ಹಂಗಾಮಿ ಕೊಳ್ಳಗಳು. ಹರಿಯುವ ನೀರಿನ ಸಾಹಚರ್ಯಗಳು ಹರಿಯುವ




ಚಿತ್ರ 9. ಮರಳು ಆವರಿತ ಪ್ರದೇಶ ಕ್ರಮೇಣ ಸಸ್ಯಾವೃತವಾಗುವ ಕ್ರಮವನ್ನು ತೋರಿಸುವ ಚಿತ್ರ

ನೀರಿನ ಪ್ರಮಾಣ ಮತ್ತು ರಭಸವನ್ನು ಅನುಸರಿಸಿ ವಿಧವಿಧವಾಗಿರುತ್ತವೆ. ಈ ಯಾವುದೇ ಸಾಹಚರ್ಯವನ್ನು ಅಭ್ಯಸಿಸುವುದರಿಂದ ಅದರ ಪ್ರಾಣಿವರ್ಗದ ಕೆಲವು ವಿಚಿತ್ರ ಸ್ವಭಾವಗಳನ್ನು




ಚಿತ್ರ 10. ಅಭಿವೃದ್ಧಿಯ ಹಂತಗಳು, ಜಲಚರಗಳಿಂದ ಆರಂಭವಾಗಿ ಕ್ರಮೇಣ ಮಹಾರಣ್ಯಗಳ ಮತ್ತು ವಿವಿಧ ಜೀವಿಗಳವರೆಗೆ ವಿಕಾಸವಾಗುವ ಸಾಂಕೇತಿಕ ನಿರೂಪಣೆ

ಕಂಡುಕೊಳ್ಳಬಹುದು. ಬೆಂಥಾಸ್ ಎಂಬ ಸಾಮೂಹಿಕ ಜೀವರಾಶಿಗಳ ಗುಂಪುಗಳಿಗೆ ತಳ ಆಧಾರ ನೀಡುತ್ತದೆ. ತಳದಲ್ಲಿರುವ ಏಕಾಣುಜೀವಿಗಳು, ವಲ್ಕವಂತ ಜೀವಿಗಳು, ಈಸು ಪ್ರಾಣಿಗಳು, ಗೇಸ್ಟ್ರೋಟ್ರಿಕ್ ಜೀವಿಗಳು, ಬಸವನ ಹುಳುಗಳು, ಚಿಪ್ಪು ಮೀನುಗಳು,

ಹುಪ್ಪಟ್ಟೆಗಳು ಮುಂತಾದ ಜೀವರಾಶಿಗಳು ಇದರಲ್ಲಿ ಸೇರಿವೆ. ಬಂಡೆಗಳು ಇದ್ದಾಗ ನಿರ್ವ್ಯಂತವೂ ಬೆನ್ನುಮೂಳೆಯಲ್ಲದವೂ ಆದ ಪ್ರಾಣಿಜೀವಿಗಳೂ ಜೊತೆಗೆ ದೊರಕುತ್ತವೆ. ನೀರಿನ ಮೇಲುಭಾಗದ ಪ್ರದೇಶದಲ್ಲಿಯೂ ಅದರ ಸ್ವಾಭಾವಿಕ ಸಸ್ಯವರ್ಗಗಳು ಇವೆ. ತೇಲುವ ಸಸ್ಯಜೀವರಾಶಿಗಳಲ್ಲಿ (ಪ್ಲಾಂಕ್‌ಟನ್) ಈಜುವ ಸಾಮರ್ಥ್ಯವುಳ್ಳ ಅಥವಾ ಇಲ್ಲದಿರುವ ಅಪರಿಮಿತ ಸಣ್ಣ ಜೀವಿಗಳೂ ಸೇರಿವೆ. ಸಿಹಿನೀರಿನ ಸಸ್ಯಜೀವಿಗಳಲ್ಲಿ ಅಗಣಿತ ವಲ್ಕವಂತ ಪ್ರಾಣಿಗಳೂ ಅಣುಪ್ರಾಣಿ, ಏಕಾಣುಜೀವಿ ಮತ್ತಿತರ ಶೈವಲಗಳು ಸಾಹಚರ್ಯದಲ್ಲಿ ಕಂಡುಬರುತ್ತವೆ. ಗಾಳಿಯ ಅಥವಾ ಅಲೆಗಳ ಪ್ರಭಾವಕ್ಕೆ ಒಳಗಾಗುವ ಜೀವರಾಶಿಗಳ ಗುಂಪೂ ಅದರಲ್ಲಿವೆ. ಮೀನು, ಕಪ್ಪೆ, ಮತ್ತು ಭೂತಾಕಾರದ ಜಲಚರ ಕೀಟಗಳೂ ಸೇರಿವೆ. ಈ ತಿಳಿನೀರಿನ ಸಾಹಚರ್ಯಗಳು ಕುಡಿಯುವ ನೀರಿನ ಆಸರೆಯಾಗಿ ಮೀನು ಇತ್ಯಾದಿಗಳಿಗೆ ಆಹಾರವಾಗಿ ಹೊಸ ಚೇತನದ ಪ್ರದೇಶಗಳಾಗಿ ಅತಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಸಿಹಿನೀರಿನ ಪ್ರಕೃತಿಶಾಸ್ತ್ರಕ್ಕೆ ಲಿಮ್ನಾಲಜಿ ಎಂದು ಹೆಸರು.

ನಿಂತ ನೀರಿನ ಸಾಹಚರ್ಯಗಳು: ನಿಂತ ನೀರಿನ ಸಾಹಚರ್ಯದ ವಿವಿಧ ಮಾದರಿಗಳಲ್ಲಿ ಅತಿದೊಡ್ಡ ಸರೋವರಗಳನ್ನು ಅಂತಿಮ ಸಾಹಚರ್ಯಗಳನ್ನಾಗಿ ಪರಗಣಿಸಬಹುದು. ನೀರಿನ ಸಣ್ಣ ಸಣ್ಣ ಪ್ರದೇಶಗಳು ಭೌಗೋಳಿಕ ಅಂತಿಮ ಸ್ಥಿತಿಗೆ ತೆರಳುವ ಸಿಯರಿನ ಪ್ರಾರಂಭಿಕ ಅವಸ್ಥೆಗಳು. ಬೃಹತ್ ಭೌಗೋಳಿಕ ಸಾಹಚರ್ಯಗಳಲ್ಲದೆ ಪ್ರತಿ ಶುಭ್ರ ಜಲದ ಸಾಹಚರ್ಯವೂ ಒಂದು ವಿಶಿಷ್ಟ ಗುಂಪು. ಅಂದರೆ ಅದು ವಿಸ್ತೃತವಾದ ಆವರಣದ ಜೀವಸಂಗಾತಿಯ ಭಾಗವಲ್ಲ. ಆದ್ದರಿಂದ ಪ್ರತಿ ಸರೋವರವನ್ನೂ ಒಂದು ಅನಂತಸೂಕ್ಷ್ಮ ವಿಶ್ವ (ಮೈಕ್ರೊಕಾಸ್ಮ್) ಎಂದು ಪರಿಗಣಿಸಬಹುದು. ಸರೋವರದ ಅಂತರದಲ್ಲಿ ಕೆಲವು ಭೌತ ಅಂಶಗಳು ಸಸ್ಯ ಮತ್ತು ಪ್ರಾಣಿವರ್ಗದ ಹಂಚಿಕೆಯನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತವೆ. ಈ ಅಂಶಗಳಲ್ಲಿ ಕರಗಿದ ಆವಿಯ ಎಂದರೆ ಆಕ್ಸಿಜನ್, ಕಾರ್ಬನ್ ಡೈ ಆಕ್ಸೈಡ್, ಕರಗಿದ ಉಪ್ಪು, ಪಿಎಚ್ ಆಮ್ಲಾಂಶ, ನೀರಿನ ಕ್ರಿಯೆ, ಉಷ್ಣ, ಚಲನೆ ಮತ್ತು ಬುಡದ ಸ್ವಭಾವ ಇವು ಸೇರಿವೆ. ನಿಂತ ನೀರಿನಲ್ಲಿ ವಾಸಿಸುವ ಪ್ರಾಣಿಗಳು ಎದುರಿಸುವ ಚಳಿಗಾಲದ ಚಳಿ, ಬೇಸಗೆಯ ಬೇಗೆ ಇತ್ಯಾದಿಗಳು ಇತರ ಮುಖ್ಯ ನಿಯಂತ್ರಕ ಅಂಶಗಳು. ದೊಡ್ಡ ಸರೋವರಗಳೂ ಕೂಡ ತೀರ ಪ್ರದೇಶಗಳಲ್ಲಿ ಒಣಗಿಹೋಗುವ ಪ್ರದೇಶಗಳನ್ನು ಹೊಂದಿವೆ. ಈ ಸುತ್ತಮುತ್ತಲಿನ ಆವರಣದ ಅಂತಿಮಾವಸ್ಥೆಯನ್ನು ಬೆನ್ನುಮೂಳೆಯಿಲ್ಲದ ಜೀವಿಗಳು ವಿವಿಧ ರೀತಿಯಲ್ಲಿ ಎದುರಿಸುತ್ತವೆ. ಅನೇಕ ಜೀವಿಗಳು ಪ್ರಾರಂಭದ ಮೃದುವಾದ ಅವಸ್ಥೆಗಳನ್ನು ಕಳಚಿಕೊಳ್ಳುವುದೂ ವಿಶಿಷ್ಟ ರೀತಿಯ ವಲ್ಕ ರೂಪವನ್ನು ಹೊಂದುವುದೂ ಉಂಟು. ಏಕೆಂದರೆ ಇದರಿಂದ ಅವು ಚಳಿಯಿಂದ ಬಿರಿದು ಹೋಗುವ ಮತ್ತು ಗೆಡ್ಡೆಕಟ್ಟುವ ಸ್ಥಿತಿಯನ್ನು ತಡೆಯಬಲ್ಲ ಬಲ ಪಡೆಯುತ್ತವೆ. ಇತರ ಜಾತಿಗಳು ತಡೆಯಬಲ್ಲ ಶಕ್ತಿಯುಳ್ಳ ಕವಚವಿರುವ ಮೊಟ್ಟೆಗಳನ್ನು ಇಡುತ್ತವೆ. ಇವನ್ನು ಗಾಳಿ ಬಲುದೂರದವರೆಗೆ ಕೊಂಡೊಯ್ಯಬಲ್ಲುದು. ಇದರ ಫಲವಾಗಿ ಸರೋವರದ ಚಿಕ್ಕ ಚಿಕ್ಕ ಪ್ರಾಣಿಗಳು ಮತ್ತು ಸಸ್ಯಗಳು ವಿಶ್ವದಾದ್ಯಂತ ಒಂದೇ ರೀತಿಯಲ್ಲಿರುತ್ತವೆ. ಯಾವುದೇ ಒಂದು ಸರೋವರದಲ್ಲಿ ಕೆಲವು ಜಾತಿಯ ಜೀವಿಗಳು ಇರುವಿಕೆ ಅಥವಾ ಇಲ್ಲದಿರುವಿಕೆ ಮತ್ತಾವುದೇ ನೀರಿನ ಭಾಗದ ಸಾಮೀಪ್ಯಕ್ಕಿಂತ ಹೆಚ್ಚಾಗಿ ಅಲ್ಲಿರುವ ಭೌತ ಪರಿಸ್ಥಿತಿಯನ್ನು ಅವಲಂಬಿಸಿದೆ.

ಸಮಉಷ್ಣವಲಯದ ಸರೋವರಗಳು ಒಂದು ವರ್ಷದ ಕಾಲಾವಧಿಯಲ್ಲಿ ಖಚಿತವಾದ ಉಷ್ಣಚಕ್ರದ ಸಂಬಂಧವನ್ನು ಹೊಂದಿವೆ. ಈ ಅಸಾಧಾರಣ ಸಂಬಂಧ ನೀರಿನ ವಿಚಿತ್ರ ಸ್ವಭಾವಕ್ಕೆ ಮೂಲತಃ ಕಾರಣ. ನೀರು $4^0$ ಸೆಂ.ಗ್ರೇ. ಉಷ್ಣತೆಯ ಸಮೀಪದಲ್ಲಿ ಅತಿಭಾರವಾಗಿರುತ್ತದೆ; ಎಂದರೆ ನೀರು ಘನೀಭೂತವಾಗುವ ಸ್ಥಿತಿಗಿಂತ ಸ್ವಲ್ಪ ಮೇಲ್ಮಟ್ಟದಲ್ಲಿರುತ್ತದೆ. ಈ ಅಪಾಯದ ಮಟ್ಟದ ಮೇಲೆ ಅಥವಾ ಕೆಳ ಅಂತರದಲ್ಲಿ ಅದು ಲಘುವಾಗಿರುತ್ತದೆ; ಶಿಶಿರ ಋತುವಿನಲ್ಲಿ ನೀರಿನ ಮೇಲುಭಾಗ ಮಂಜಿನ ಹಾಸಿನಿಂದ ಕೂಡಿರುತ್ತದೆ. ಇದರ ಕೆಳಗೆ ನೀರಿನ ಉಷ್ಣತೆ ಸಾಧಾರಣವಾಗಿ ಒಂದೇ ಪ್ರಮಾಣವುಳ್ಳದ್ದು. ಅಲ್ಲಿ ಉಷ್ಣ ಚಲನೆ (ಥರ್ಮಲ್) ಇರಬಹುದು. ಇಲ್ಲದಿರಬಹುದು. ಈ ಸಮಯದಲ್ಲಿ ಆಕ್ಸಿಜನ್ ಸಾಧಾರಣವಾಗಿ ಇಂಗಿಹೋಗಿರುತ್ತದೆ. ಶೀತರಕ್ತ ಪ್ರಾಣಿಗಳ ಶರೀರದ ಕ್ರಿಯೆಗಳು ಕಡಿಮೆ ಪ್ರಮಾಣದಲ್ಲಿರುವುದರಿಂದ ಆಕ್ಸಿಜನ್ನಿನ ಅಭಾವ ಯಾವ ಹೆಚ್ಚಿನ ಪರಿಣಾಮವನ್ನೂ ಬೀರಲಾರದು. ವಸಂತದಲ್ಲಿ ಮಂಜಿನಗೆಡ್ಡೆ ಕರಗುವುದರಿಂದ ನೀರಿನ ಮೇಲು ಪದರ ಕ್ರಮೇಣ ಭಾರವಾಗುತ್ತ ಬರುತ್ತದೆ. ಅಲ್ಲದೆ ಗಾಳಿ ನೀರಿನ ಮೇಲು ಪದರವನ್ನು ದಡಕ್ಕೆ ಒಗೆಯುವುದರಿಂದ ಅದು ಅಲ್ಲಿ ರಾಶಿಯಾಗಿ ಬುಡದಲ್ಲಿ ಚಲಿಸುವಂತೆ ಮಾಡುತ್ತದೆ. ಇದು ಕಾಲಕ್ರಮದಲ್ಲಿ ನೀರನ್ನು ಒಳಭಾಗದಲ್ಲಿ ಕೆಳ ಮೇಲು ಮಾಡುವುದರಲ್ಲಿ ಪರಿಣಾಮಗೊಂಡು ಆಕ್ಸಿಜನ್ನಿನ ಹೊಸ ಹೊಂದಾಣಿಕೆಗೆ ಕಾರಣವಾಗುತ್ತದೆ. ವಸಂತದ ಹವೆ ಮುಂದುವರಿದಂತೆ ನೀರಿನ ಮೇಲು ಪದರ ಕಾದು ಹಗುರವಾಗಿ ಚಲನೆ ಮುಂದುವರಿಯುತ್ತದೆ. ಆದರೆ ನೀರಿನ ಕೆಳಪದರ ಹೆಚ್ಚು ಘನೀಭೂತವಾಗಿರುವುದರಿಂದ ಈ ಚಲನ ಮುಕ್ತಾಯವಾಗುವುದಿಲ್ಲ. ಇದರ ಪರಿಣಾಮವಾಗಿ ನೀರಿನಲ್ಲಿ ಉಷ್ಣದ ಮಟ್ಟಗಳು ಕಂಡುಬರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಉಷ್ಣ ಹಂಚಿಕೆಯ ಮಧ್ಯಂತರ ಸ್ಥಿತಿ (ಥರ್‌ಮಾಕ್ಲೈನ್) ಇದ್ದಕ್ಕಿದ್ದಂತೆ ಬದಲಾಯಿಸುತ್ತದೆ. ಈ ಸಂಕುಚಿತ ಪಟ್ಟೆಯ ಮೇಲೆ ಗಾಳಿಯ ಚಲನೆ ನೀರಿನ ಮೇಲಿನ ಪದರವನ್ನು ಚಲಿಸುವಂತೆ ಮಾಡುತ್ತದೆ. ಥರ್‌ಮಾಕ್ಲೈನಿನ ಮೇಲಿನ ಪದರವಾದ ಎಪಿಲಿಮ್ನಿಯನ್ ಆಕ್ಸಿಜನ್ನಿನಿಂದ ತುಂಬಿ ಕ್ರಮಕ್ರಮವಾಗಿ ಉಷ್ಣವಾಗಿದೆ. ಥರ್‌ಮಾಕ್ಲೈನ್ ಕೆಳಗಡೆ ಪದರವಾಗಿ ಹೈಪೊಲಿಮ್ನಿಯನ್ ಆಗಿದೆ. ಇದು ಶೀತಲವಾಗಿ ಕಡಿಮೆ ಆಕ್ಸಿಜನ್ನಿನಿಂದ ಕೂಡಿದೆ. ಈ ಭೌತಸ್ಥಿತಿ ಸರೋವರದಲ್ಲಿ ಜೀವಿಗಳ ಹರಡಿಕೆಯ ಮೇಲೆ ಪ್ರಭಾವ ಬೀರುತ್ತದೆ. ವರ್ಷದ ಅವಧಿ ಕಡಿಮೆ ಆದಂತೆ ನೀರಿನ ಮೇಲ್ಪದರ ತಣ್ಣಗಾಗುತ್ತ ವಾಯುಕ್ರಿಯೆ ಸರೋವರದ ನೀರನ್ನು ಕೆಳ ಮೇಲು ಮಾಡುತ್ತದೆ. ಶಿಶಿರ ಋತುವಿನ ಅತಿಶೈತ್ಯದ ಈ ಪ್ರಭಾವ ಪ್ರಚಲಿತವಾಗಿ ನೀರು ಹೆಪ್ಪುಗಟ್ಟುವವರೆಗೆ ನಡೆಯುತ್ತದೆ.

ಹರಿಯುವ ನೀರಿನ ಸಾಹಚರ್ಯ: ಹರಿಯುವ ನೀರಿನ ಸಾಹಚರ್ಯ ನಿಂತಿರುವ ನೀರಿನ ಸಾಯಚರ್ಯದಿಂದ ಅನೇಕ ಮುಖಗಳಿಂದ ವ್ಯತ್ಯಾಸ ಹೊಂದಿದೆ. ಆದರೆ ಅವು ಪ್ರತ್ಯೇಕವಾಗಿಲ್ಲ. ಸಾಧಾರಣವಾಗಿ ಉಷ್ಣರೂಪದಲ್ಲಿ ಸಂಬಂಧಿಸಿವೆ. ಹಾಗೆ ಸಸ್ಯ ಮತ್ತು ಪ್ರಾಣಿವರ್ಗಗಳು ಯಾವುದೇ ಕ್ರಮ ಅಥವಾ ಪದ್ಧತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದು ರೂಪದಲ್ಲಿವೆ. ಕೊಳಕು ಮಿಶ್ರಣದಿಂದ ನಷ್ಟವಾದ ಹೊರತು ಆಕ್ಸಿಜನ್ ಸಾಧಾರಣವಾಗಿ ಯಥೇಚ್ಛವಾಗಿರುತ್ತದೆ. ಅಲ್ಲದೆ ಉಷ್ಣದ ಮಟ್ಟಗಳು (ಥರ್ಮಲ್ ಸ್ಟ್ರಾಟಿಫಿಕೇಷನ್ಸ್) ಇರುವುದಿಲ್ಲ. ತೇಲು ಪ್ರಾಣಿಗಳು ಕಡಿಮೆ ಇವೆ. ವಿಶಿಷ್ಟ ರೀತಿಯ ಎರಡು ಮಾದರಿಗಳನ್ನೂ ಹೊಳೆಯ ಸಾಹಚರ್ಯದಲ್ಲಿ ಗುರುತಿಸಬಹುದು: ಕೊಳ್ಳ (ಪೂಲ್) ಮತ್ತು ಝರಿ (ರಭಸವಾದ ನೀರು– ರ್‍ಯಾಪಿಡ್ಸ್). ಹೊಳೆಯ ನೀರು ನಿಧಾನವಾಗಿ ಹರಿಯುವುದು. ಅದರ ತಳದಲ್ಲಿ ಮರಳಿನ ಅಥವಾ ಮಣ್ಣಿನ ಅಂಶವೇ ಹೆಚ್ಚು. ಇಂಥ ವರ್ಗಗಳಲ್ಲಿ ಸೂರ್ಯಮೀನು, ಮಾರ್ಜಾಲಮೀನು, ಅಗಣಿತ ಸೊಳ್ಳೆ ಮೀನು (ಮಿನ್ನೋ), ನಳ್ಳಿಗಳು, ಅನೇಕ ಹುಳುಗಳು ಮತ್ತು ಪ್ರಾಣಿಗಳ ಮರಿಗಳು ಇವೆ. ರಭಸವಾಗಿ ಹರಿಯುವ ನದಿಗಳಲ್ಲಿ ಬಂಡೆಗಳ ಮೇಲೆ ಹರಿಯುವ ನೀರಿನ ರಭಸದ ಪ್ರಮಾಣ ಬೇರೆ ಬೇರೆಯಾಗಿದೆ. ಸಣ್ಣ ಸಣ್ಣ ನಿಧಾನವಾಗಿ ಹರಿಯುವ ಝರಿಗಳಿಗೂ ಪರ್ವತದಿಂದ ಧುಮುಕುವ ನಿರ್ಝರಗಳಿಗೂ ವ್ಯತ್ಯಾಸವಿದೆ. ಮೇಲೆ ಹೇಳಿದ ನೀರಿನಲ್ಲಿ ಕರಗಿದ ಆಕ್ಸಿಜನ್ ಹೆಚ್ಚು ಪ್ರಮಾಣದಲ್ಲಿದೆ. ಇಲ್ಲಿ ಟ್ರಾಟ್ ಮೀನ್ನುಗಳು, ಡಾರ್ಟರ್ ಮುಂತಾದ ಹೆಚ್ಚಿನ ಆಕ್ಸಿಜನ್ ಉಪಯೋಗಿಸುವ ಮೀನುಗಳೂ ಇವೆ. ಕೀಟಸದೃಶ ಹುಳುಗಳು ಹರಿಯುವ ನೀರಿನ ಪ್ರವಾಹವನ್ನು ಎದುರಿಸಲು ಕಲ್ಲುಗಳಿಗೆ ಅಂಟಿಕೊಳ್ಳುವ ಸಲಕರಣೆಯ ಸ್ವಭಾವವನ್ನೂ ದೈಹಿಕ ಮಲಮೂತ್ರಗಳನ್ನು ವಿಸರ್ಜಿಸುವ ವಿಶಿಷ್ಟ ಗೂಡುಗಳನ್ನೂ ಹೊಂದಿವೆ. ನಿಧಾನವಾಗಿ ಹರಿಯುವ ಝರಿ ಮಣ್ಣುನೀರಿನಿಂದ ತುಂಬಿದೆ. ಅದರಲ್ಲಿ ಸ್ಥಿತಿ ಸಾಮಾನ್ಯವಾಗಿ ಸ್ಥಾಯಿ. ಭೌಗೋಳಿಕ ಅಥವಾ ಮಾನವನ ಪ್ರಯತ್ನದಿಂದ ಬದಲಾದರೆ ಆಗಬಹುದು.

ಸಾಗರಿಕ ಸಾಹಚರ್ಯಗಳು: ಭೂಮಿಯ ಬಲುಭಾಗವನ್ನು ಸಾಗರ ಆಕ್ರಮಿಸಿಕೊಂಡಿದೆ. ಅದು ಎಷ್ಟು ವಿಸ್ತಾರವಾಗಿದೆಯೆಂದರೆ ಭೌತ ಪರಿಸ್ಥಿತಿಗಳು ಅತಿಯಾಗಿ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ವ್ಯತ್ಯಾಸ ಕಾಣಿಸುತ್ತದೆ. ಈ ಬದಲಾವಣೆಯಲ್ಲಿ ಉಷ್ಣ, ಒತ್ತಡ, ಲವಣಾಂಶ, ಗಾಳಿ ಮತ್ತು ಅಲೆಗಳ ಚಲನೆ ಪಾತ್ರವಹಿಸುತ್ತವೆ. ಉಷ್ಣಾಂಶದಲ್ಲಿ ಸಾಮಾನ್ಯವಾಗಿ ಮೇರುಗಳಿಗೂ ಸಮಶೀತೋಷ್ಣವಲಯದ ಸಮುದ್ರಗಳಿಗೂ ವ್ಯತ್ಯಾಸವಿದೆ. ಆಳವಾದ ಪ್ರದೇಶಗಳು ಮೈಲಿಗಳ ಅಂತರದಿಂದ ಪ್ರತ್ಯೇಕಿಸಲ್ಪಟ್ಟಿವೆ. ಇದರ ಪರಿಣಾಮವಾಗಿ ಮೇಲುಪದರದ ಒತ್ತಡ, ಆಳದ ಒತ್ತಡಗಳಿಂದ ಅನೇಕ ಟನ್ನುಗಳಷ್ಟು ಬದಲಾಯಿಸಿದೆ. ಅಷ್ಟೇ ಅಲ್ಲದೆ ದಿವಸದ ಅಲೆಗಳ ಚಲನೆ, ನದಿನೀರಿನ ಆಕಾರದ ಪರಿಮಾಣ, ಅದ್ಭುತವಾದ ಅಲೆಗಳು, ಲವಣಾಂಶಗಳ ವೈವಿಧ್ಯಗಳ ಜೀವಾಧಾರಾಂಶಗಳ (ಸಬ್‌ಸ್ಟ್ರೇಟ) ವೈವಿಧ್ಯ ಇವೆಲ್ಲ ಪ್ರಾಣಿಗಳ ಮತ್ತು ಸಸ್ಯಗಳ ಹಂಚಿಕೆಯನ್ನು ನಿಯಂತ್ರಿಸುತ್ತವೆ. ತಿಳಿನೀರಿನ ನಿವಾಸಗಳಂತಲ್ಲದೆ ಸಾಗರ ಸತತವಾದದ್ದು. ಆದ್ದರಿಂದ ಕೆಲವು ದೊಡ್ಡ ಪ್ರಾಣಿಗಳು ಆ ಆವರಣದಲ್ಲಿ ವಿಶಾಲವ್ಯಾಪ್ತಿ ಪಡೆದಿವೆ. ಅನೇಕ ಮೀನುಗಳು ಒಂದು ವರ್ಗದಿಂದ ಇನ್ನೊಂದು ವರ್ಗದವರೆಗೆ ಇವೆ. ಇಂಥ ಅಂಶಗಳಿಂದ ಉದ್ಭವಿಸುವ ಸಾಗರದ ಆವರಣಶಾಸ್ತ್ರದ ಕಲ್ಪನೆಯನ್ನು ಭೌಗೋಳಿಕ ಅಥವಾ ತಿಳಿನೀರಿನ ಆವರಣಶಾಸ್ತ್ರದೊಡನೆ ಸರಿಹೊಂದಿಸುವುದು ಸ್ವಲ್ಪ ಕಷ್ಟ. ಇದು ಭಾಗಶಃ ಅಭ್ಯಾಸದ ತೊಂದರೆಯಿಂದ. ಆದ್ದರಿಂದ ನಮ್ಮ ಅರಿವು ನಿಯಮಿತವಾಗಿದೆ. ಸಾಗರದ ನೀರಿನಲ್ಲಿರುವ ಕ್ಷಾರದ ಸಾಂದ್ರತೆ ಪ್ರೋಟೋಪ್ಲಾಸ್ಮ್ ಅಥವಾ ಜೀವಸತ್ತ್ವಕ್ಕೆ ಸಮೀಪವಾಗಿರುವುದರಿಂದ ಪರಿಸ್ಥಿತಿಗಳು ತಿಳಿನೀರಿನಲ್ಲಿರುವಂತೆ ದುಸ್ತರವಾಗಿಲ್ಲ. ಇದರಿಂದ ಬೆನ್ನುಮೂಳೆಯಿಲ್ಲದ ಅನೇಕ ಪ್ರಾಣಿಗಳು ತಮ್ಮ ಡಿಂಬಾವಸ್ಥೆಯಲ್ಲಿ ಸ್ವೇಚ್ಛೆಯಾಗಿ ಈಜಾಡಲು ಸಾಧ್ಯವಾಗುತ್ತದೆ. ತಿಳಿನೀರಿಗೂ ಸಾಗರದ ತೇಲುಪ್ರಾಣಿಗಳಿಗೂ ಡಿಂಬರೂಪಗಳಲ್ಲಿ ಮುಖ್ಯ ವ್ಯತ್ಯಾಸವುಂಟು. ಸಾಯಚರ್ಯದ ಅಂತರ್ಯಕ್ರಿಯೆಯಿಂದ ತೊಡಕಿದ್ದರೂ ಸಾಗರದ ತಳದಲ್ಲಿ ಕೆಲವು ಖಚಿತವಾದ ಜೀವ ವಲಯಗಳನ್ನು ಗುರುತಿಸಬಹುದು.

ಚೆನ್ನಾಗಿ ತಿಳಿದಿರುವ ಮತ್ತು ಸ್ಪಷ್ಟವಾಗಿ ಅಭ್ಯಾಸ ಮಾಡಿರುವ ಸಂಕುಚಿತ ಅಂತರ ಅಲೆಗಳ ವಲಯ: ಇದು ತೀರದ ಬಳಿಯ ವಲಯದ ಭಾಗ. ತೀರದ ಹೊರಮುಖದಿಂದ 50ಮೀಟರ್‌ಗಳ ಆಳದವರೆಗೆ ವಿಸ್ತರಿಸಿರುತ್ತದೆ. ಈ ಭಾಗ ಕ್ರಮೇಣ ತೀರದ ಉಪವಲಯಕ್ಕೆ ಪ್ರವೇಶಿಸಿ ಕಾಂಟಿನೆಂಟಲ್ ಭಾಗಕ್ಕೆ ಸೇರುತ್ತದೆ. ಕಾಂಟಿನೆಂಟಲ್ ಭಾಗದ 200 ಮೀಟರ್ ಇಳಿಜಾರು ಪ್ರದೇಶ ಬಲು ಕಡಿದಾಗಿ ಕೂಡಲೇ ಆರ್ಕಿಬೆಂಥಿಕ್ ವಲಯವಾಗಿ ಪರಿಣಮಿಸುತ್ತದೆ. ಇದು 2000 ಮೀಟರುಗಳಷ್ಟು ಆಳದವರೆಗೂ ಹೋಗುತ್ತದೆ. ಇದರ ತಳದಲ್ಲಿ ಅಬಿಸಲ್‌ಬೆಂಥಿಕ್ ವಲಯವಿದೆ. ಅದು ತುಂಬ ಆಳದ ತಳದವರೆಗೂ ವಿಸ್ತರಿಸುತ್ತದೆ.

ತೀರದ ಉಷ್ಣವಲಯದ ಮೇಲ್ಭಾಗದ ನೀರು ನೆರೆಟಿಕ್ ಪ್ರಾಂತವಾಗಿ ಇರುತ್ತದೆ. ಕಾಂಟಿನೆಂಟಲ್ ಭಾಗದ ಆಳವಾದ ಸಮುದ್ರದ ಮೇಲ್ಭಾಗವನ್ನು ಸಾಗರದ ಪ್ರಾಂತ ಎಂದು ಕರೆಯುತ್ತಾರೆ.

ತೀರವಲಯದ (ಯುಲಿಟೋರಲ್ ಜೋನ್): ಅತಿ ಎತ್ತರದ ಅಲೆಯ ಗುರುತಿನಿಂದ 50ಮೀಟರ್ ಆಳವಿರುವ ಪ್ರದೇಶದ ಭಾಗವನ್ನು ತೀರವಲಯ ಎನ್ನಬಹುದು. ಈ ತೀರವಲಯದ ದಡದ ಭಾಗ ಪ್ರತಿದಿವಸವೂ ಹಗಲು, ರಾತ್ರಿ ಎರಡು ಸಲ ನೀರಿನ ಅಲೆಯಿಂದ ಆವರಿಸಿ ಬಿಡುಗಡೆ ಹೊಂದುತ್ತದೆ. ಈ ಅಲೆಯ ಕ್ರಿಯೆ ಉಷ್ಣ, ಬೆಳಕು, ತಿಕ್ಕಾಟ ಮತ್ತು ಲವಣಾಂಶ ಇವುಗಳ ಸ್ಪಷ್ಟ ಬದಲಾವಣೆಗಳಲ್ಲಿ ಪರಿಣಾಮ ಹೊಂದುತ್ತದೆ. ಕಣ್ಣಿಗೆ ಕಾಣುವ ಅನನುಕೂಲದ ಈ ಪರಿಸ್ಥಿತಿಯಿದ್ದರೂ ಅಲೆಯ ಅಂತರ್ವಲಯ ಜೀವ ಚೈತನ್ಯದಿಂದ ತುಂಬಿದೆ. ಅಲ್ಲಿ ವಾಸಮಾಡುವ ಪ್ರಾಣಿಗಳು ಒಣಗಿಹೋಗುವ ಪ್ರಭಾವವನ್ನೂ ತಪ್ಪಿಸಿಕೊಳ್ಳುವ ಯಾವುದೋ ಒಂದು ವಿಧಾನವನ್ನೂ ಪಡೆದಿವೆ. ಕೆಲವು ಕೊರೆಯುವ ಹುಳುಗಳು ಬಿಲಗಳಲ್ಲೂ ಇನ್ನೂ ಕೆಲವು ಶಂಖಗಳೊಳಗೂ ಅಡಗಿ ಬದುಕುತ್ತವೆ. ಮತ್ತೆ ಕೆಲವು ಬಂಡೆಗಳ ಸಂದಿಗಳಿಗೆ ತೆವಳಿಕೊಂಡು ಹೋಗುತ್ತವೆ ಇಲ್ಲವೆ ಕೆಲವು ರಕ್ಷಕ ವಸ್ತುಗಳ ಮೊರೆಹೋಗುತ್ತವೆ.



ಚಿತ್ರ 11. ತೀರದಿಂದ ಆಳಗಳವರೆಗೆ ವ್ಯಾಪಿಸಿದ ಸಾಗರ ವಲಯಗಳು

ಜೀವನಾಧಾರಾಂಶಗಳನ್ನು ಆಧರಿಸಿ ಮೂರು ರೀತಿಯ ನಿವಾಸಗಳನ್ನು (ಹ್ಯಾಬಿಟ್ಯಾಟ್ಸ್) ಗುರುತಿಸಬಹುದು: ಕಲ್ಲುಬಂಡೆಯ ತೀರಗಳು, ಮರಳಿನ ತೀರಗಳು ಮತ್ತು ಮಣ್ಣಿನ ತೀರಗಳು. ನಾಲ್ಕನೆಯ ಮಾದರಿಯೂ ಇರಬಹುದು. ಅದು ಕಡೆಯ ಎರಡು ರೀತಿಯ ಮಿಶ್ರಣದ್ದಾಗಿರುವ ತೀರ. ಇಂಥ ಬೇರೆಬೇರೆ ತೀರ ಪ್ರದೇಶಗಳಲ್ಲಿ ಬಂಡೆಗಳ ತೀರ ಅನೇಕ ವಿಧವಾದ ಪ್ರಾಣಿಗಳ ಮತ್ತು ಸಸ್ಯಗಳ ಬೆಳವಣಿಗೆಯಿಂದ ತುಂಬಿದೆ. ಬಹು ರೀತಿಯ ಶೈವಲಗಳು ಬಂಡೆಗಳಿಗೆ ಅಂಟಿಕೊಂಡಿವೆ. ಅವು ನಾಟಿಕೊಂಡಿರುವ ಪ್ರಾಣಿಗಳಿಗೆ ಎಂದರೆ ಹೈಡ್ರಾಯಿಡ್ಸ್ ಮತ್ತು ಬ್ರಯೊಜೋವ ಪ್ರಾಣಿಗಳಿಗೆ ಪ್ರತಿರೂಪವಾಗಿ ಆಸರೆಯನ್ನು ಒದಗಿಸುತ್ತವೆ. ಅಂತರ ಅಲೆಯ ವಲಯದ ಮೇಲುಭಾಗದಲ್ಲಿ ಕೆಲವೊಮ್ಮೆ ಬಂಡೆಗಳಿಗೆ ಸೇರಿದಂತೆ ಬಾರ್ನಕಲ್ ಗುಂಪುಗಳಿವೆ. ಅದಕ್ಕೂ ದೂರದಲ್ಲಿ ಅನೇಕ ಜಾತಿಯ ಮೃದ್ವಂಗಿಗಳು (ಮೊಲಸ್ಕ್ಸ್), ಟ್ಯುನಿಕೇಟುಗಳು, ಸ್ಪಾಂಜುಗಳು ಇವೆ. ಅತಿ ಎತ್ತರದ ಅಲೆಯ ಗುರುತಿನ ಬಳಿ ಇರುವ ನಿಬಿಡವಾದ ಕಲ್ಲುಗಳಲ್ಲಿ ವಿವಿಧರೀತಿಯ ವಲ್ಕವಂತ ಪ್ರಾಣಿಗಳೂ ಕೆಲವು ಭೌಗೋಳಿಕ ಹುಳುಹುಪ್ಪಟೆಗಳೂ ಇವೆ. ಇತರ ಬಂಡೆಗಳ ಕೆಳಭಾಗದಲ್ಲಿ ಅಗಣಿತವಾದ ಹುಳುಗಳೂ ಅಲೆಗಳು ಮಾಡಿದ ಸಣ್ಣ ಸಣ್ಣ ಹಳ್ಳಗಳಲ್ಲಿ ಸಮುದ್ರದ ಅನಿಮನಿಗಳೂ ಏಕಾಣು ಪ್ರಾಣಿಗಳೂ ಸ್ಪಾಂಜುಗಳೂ ಮತ್ತಿತರ ಪ್ರಾಣಿಗಳೂ ಇರಬಹುದು. ಮರಳು ತೀರದಲ್ಲಿ ಪಾಚಿಯ ಅಂಶ ಕಡಿಮೆ. ಏಕೆಂದರೆ ಮರಳಿಗೆ ಅದನ್ನು ಹಿಡಿದಿಡುವ ಶಕ್ತಿಯಿಲ್ಲ. ಆದರೂ ವಲ್ಕವಂತ ಜೀವಿಗಳು, ಹುಳುಗಳು ಮತ್ತು ಮೃದ್ವಂಗಿಗಳು ಇರುವುದು ಸಾಧ್ಯ. ಮಣ್ಣಿನ ತೀರದಲ್ಲೂ ಕೂಡ ಅಭದ್ರ ತಳಹದಿ ಇದ್ದು ಶೈವಲದ ಉತ್ಪತ್ತಿಗೆ ಹೆಚ್ಚಿನ ಅವಕಾಶ ಕೊಡುವುದಿಲ್ಲ. ಮರಳು ತೀರದಂತೆಯೇ ಇಲ್ಲಿಯೂ ಸಹ ಬಿಲತೋಡುವ ಜೀವಿಗಳೇ ಪ್ರಧಾನ. ಗುಟ್ಟಿನ ಸ್ಥಳಗಳಲ್ಲಿ ವಾಸ ಮಾಡುವ ಹುಳುಗಳು ಮೃದ್ವಂಗಿಗಳು ಮತ್ತು ವಲ್ಕವಂತ ಜೀವಿಗಳು ಇರುತ್ತವೆ. ಈ ಪ್ರದೇಶದಲ್ಲಿ ನಕ್ಷತ್ರ ಮೀನು (ಸ್ಟಾರ್ ಫಿಷ್), ಕಂಟಕಚರ್ಮಿ, ಸಮುದ್ರದ ಹೂಗಳು ಮತ್ತು ಸಮುದ್ರದ ಅನಿಮನಿಗಳನ್ನು ಕಾಣಬಹುದು.

ಉಪತೀರವಲಯ (ಸಬ್‌ಲಿಟ್ಟೋರಲ್ ಜೋನ್): ಭೂತೀರವಲಯದಿಂದ ಸಾಗರದ ಕಡೆಯ ಭಾಗವೇ ಉಪತೀರವಲಯ. ಈ ವಿಸ್ತಾರವಾದ ಪ್ರದೇಶದ ಆಳ 50 ರಿಂದ 200 ಮೀಟರುಗಳವರೆಗೆ ಇರುವುದುಂಟು. ತಳದ ಪ್ರದೇಶ ತೀರವಲಯಕ್ಕಿಂತ ಹೆಚ್ಚು ಸಮತಲವಾಗಿದೆ. ಅದು ಮರಳು, ಮಣ್ಣು ಮತ್ತು ಜೇಡಿ ಮಣ್ಣಿನಿಂದ ಕೂಡಿರುವುದಲ್ಲದೆ ಹೆಚ್ಚಾಗಿ ಮೃದ್ವಂಗಿ ಚಿಪ್ಪುಗಳು ಮತ್ತು ಕಲ್ಲುಗಳಿಂದ ಮಿಶ್ರಿತವಾಗಿವೆ. ತೀರವಲಯದ ಭಾಗ ಉಪತೀರವಲಯವಾಗಿ ಇಳಿಯುತ್ತದೆ. ಅಲ್ಲಿ ಅಧಿಕವಾದ ಶೈವಲರಾಶಿ ಇರುವುದು ಸಾಧ್ಯ. ಅಲ್ಲಿಂದ 100 ಮೀಟರಿನ ಆಳದವರೆಗೆ ವಿವಿಧ ಜಲಲತೆಗಳೂ ನೀರಬಳ್ಳಿಗಳು ಇವೆ (ಕಾಲ್ಕೇರಿಯಸ್ ವಾಟರ್ ವೀಡ್ಸ್). ಇದಾದ ಅನಂತರ ಬ್ಯಾಕ್ಟೀರಿಯಾ ಸಸ್ಯಜೀವಿಗಳೂ ಇವೆ. ಈ ವಲಯದ ತಳದಲ್ಲಿ ಪೋರಾಮಿನಿಫೆರ ಜಾತಿಯ ಏಕಾಣುಜೀವಿಗಳು ಅಸಂಖ್ಯಾತವಾಗಿವೆ. ಇದರ ಜೊತೆಗೆ ಅಲ್ಲಿ ಅನೇಕ ಸ್ಪಾಂಜುಗಳು ಇದ್ದು ಅವು ಇನ್ನು ಕೆಲವು ಸಣ್ಣ ಪ್ರಾಣಿಗಳಿಗೆ ಆಶ್ರಯಸ್ಥಾನವಾಗಿವೆ. ಸಮುದ್ರ ಅರ್ಚಿನ್‌ಗಳು, ಸಮುದ್ರ ಸೌತೆಗಳು (ಸೀ-ಕ್ಯುಕುಂಬರ್ಸ್), ಸಮುದ್ರ ದೋತ್ಪಲಗಳು (ಕ್ರೈನಾಯಿಡ್ಸ್), ಪೆಡಸು ನಕ್ಷತ್ರಗಳು (ಬ್ರಿಟಲ್ ಸ್ಟಾರ್ಸ್), ಕುಟುಕು ಕಣವಂತಗಳು (ಸಿಯಲೆಂಟರೇಟ್ಸ್), ಹುಳುಗಳು (ವರ್ಮ್ಸ್), ಮೃದ್ವಂಗಿಗಳು ಮತ್ತಿತರ ವಲ್ಕವಂತ ಜೀವಿಗಳು ಇವೆ. ಈ ವಲಯದಲ್ಲಿ ಆಹಾರವನ್ನು ಸಿದ್ಧಪಡಿಸುವ ಕೆಲವು ಸಸ್ಯಗಳಿದ್ದರೂ ಬಹುತೇಕ ಪ್ರಾಣಿಗಳು ತಮ್ಮ ಬದುಕಿಗಾಗಿ ಮಾಂಸಾಹಾರಿಗಳಾಗಿವೆ; ಇಲ್ಲವೆ ಪ್ರಯತ್ನದಿಂದ ಆಹಾರ ಸಂಪಾದಿಸುತ್ತವೆ. ಈ ವಿಸ್ತೃತವಾದ ತಳದ ಸಸ್ಯವರ್ಗದ ಮೇಲ್ಭಾಗದಲ್ಲಿ (ನೆರಿಟಿಕ್) ಪ್ರಾಂತ್ಯಭಾಗವಿದೆ. ಇಲ್ಲಿ ಚುರುಕಾದ ಮೀನುಗಳೂ ತೇಲುವ (ಪ್ಲಾಂಕ್‌ಟನ್) ಪ್ರಾಣಿಗಳ ಗುಂಪೂ ಇವೆ. ಈ ಗುಂಪಿನ ಬಲು ಭಾಗ ಶೈವಲ. ಇದೇ ಸಾಗರದ ಆಹಾರಚಕ್ರಕ್ಕೆ ಆಧಾರ. ಈ ವಲಯದಲ್ಲಿ ಕಾಂಟಿನೆಂಟಲ್ ಶೆಲ್ಫ್ ಮೇಲ್ಭಾಗದಲ್ಲಿ ವ್ಯಾಪಾರೋದ್ಯಮಕ್ಕೆ ಒದಗುವ ಮೀನುಗಳು ದೊರಕುತ್ತವೆ.

ಮಧ್ಯವಲಯ (ಆರ್ಕಿಬೆಂಥಿಕ್ ಜೋನ್): ಈ ವಲಯದ ಪ್ರಾದೇಶಿಕ ವಿಸ್ತಾರ 200–2000 ಮೀಟರ್ ಆಳದವರೆಗಿನ ಭಾಗ. ಕಾಂಟಿನೆಂಟಲ್ ಶೆಲ್ಫ್ ಸಾಗರದ ಬಹು ಆಳಕ್ಕೆ ಇಳಿಯುವಲ್ಲಿ ಇರು ಆರಂಭವಾಗುತ್ತದೆ. 300 ಮೀಟರುಗಳ ಕೆಳಗೆ ಕೆಂಪು ಮಿಶ್ರಿತ ಬೆಳಕು ಸಾಧಾರಣ. ಆದರೆ ನೀರಿನ ಭಾರದ ಒತ್ತಡ ಚದರ ಅಂಗುಲಕ್ಕೆ 400 ಪೌಂಡಿನಷ್ಟು, ನೀರಿನ ಉಷ್ಣತೆ ಮಾತ್ರ ಸಮಧಾತುವಾಗಿರುತ್ತದೆ. ಶೈವಲದ ಬೆಳವಣಿಗೆಗೆ ಸಾಕಷ್ಟು ಬೆಳಕಿಲ್ಲದಿರುವುದರಿಂದ ಮೀನು ಮತ್ತು ಇತರ ಜಲಚರ ಪ್ರಾಣಿಗಳು ತಮ್ಮ ಆಹಾರಕ್ಕೆ ಮೇಲಿಂದ ಬೀಳುವ ಆಹಾರವಸ್ತುಗಳನ್ನು ಅವಲಂಬಿಸಿರಬೇಕು. ಇಲ್ಲವೇ ಮಾಂಸಾಹಾರಿಗಳಾಗಿರಬೇಕು. ತಳಭಾಗದಲ್ಲಿ ಅನೇಕ ಅಡಿಗಳ ಉದ್ದವಿರುವ ಬೃಹದಾಕಾರದ ಸ್ಪಾಂಜುಗಳು ಇವೆ. ಇವುಗಳಲ್ಲಿ ಹಲವು ಪ್ರಾಣಿಗಳಿಗೆ ಹಿಡಿತಕ್ಕೆ ಅನುಕೂಲವಾಗುವಂತೆ ಊರುಗೋಲು ಆಸರೆಗಳಿವೆ. ಕಂಟಕಚರ್ಮಿಗಳು (ಎಕಿನೊಡರ್ಮ್ಸ್). ಕೆಂಪು ಮೀನು, ಸಮುದ್ರ ಸೌತೆ, ನಕ್ಷತ್ರ ಮೀನು, ಪೆಡಸುನಕ್ಷತ್ರಗಳು ಯಥೇಚ್ಛವಾಗಿವೆ. ಬ್ರೇಕಿಯಾಪೋಡಾಗಳೂ ಚಿಪ್ಪು ಮೃದ್ವಂಗಿಗಳೂ ಇವೆ. 2000 ಮೀಟರಿನ ಆಳದ ಸಮೀಪದಲ್ಲಿ ಎಂದರೆ ಈ ವಲಯದ ಎಲ್ಲೆಯಲ್ಲಿ ನೀರಿನ ಉಷ್ಣತೆ ಅದೇ ಮಟ್ಟದಲ್ಲಿದ್ದು ಬೆಳಕು ಮಾತ್ರ ಇರುವುದಿಲ್ಲ. ನೀರಿನ ಭಾರದ ಒತ್ತಡ ಪ್ರತಿ ಚದರ ಅಂಗುಲಕ್ಕೆ 1 ಟನ್ನಿನಷ್ಟು ಇದೆ. ಇಲ್ಲಿ ವೈವಿಧ್ಯಮಯ ಸ್ಪಾಂಜುಗಳಿವೆ. ಅವನ್ನು ಆಶ್ರಯಿಸಿ ಮತ್ತಿತರ ಸಣ್ಣ ಸಣ್ಣ ಜೀವರಾಶಿಗಳು ಮತ್ತು ಪಿಕ್ನೊಗೋನಿಡಗಳು ತಮ್ಮ ಓರೆಯಾದ ಹರಡಿದ ಪಾದಗಳಿಂದ ನುಣುಪಾದ ನೆಲದ ಮೇಲೆ ಓಡಾಡುತ್ತವೆ. ಇಲ್ಲಿನ ಜೀವರಾಶಿಗಳೆಲ್ಲ ತಮ್ಮ ಶರೀರಗಳಿಂದಲೇ ಬೆಳಕನ್ನು ಬೀರುವುವು (ಬಯೊಲ್ಯೂಮಿನಿಸೆಂಟ್).

ಅಂತಿಮ ವಲಯ: ಈ ಕೊನೆಯ ವಲಯ 2000 ಮೀಟರಿನಿಂದ ಹೆಚ್ಚಿನ ಆಳಕ್ಕೆ ಎಂದರೆ ತಳವಿಲ್ಲದ ಬುಡಕ್ಕೆ ಇಳಿಯುತ್ತದೆ. ಇಲ್ಲಿನ ನೀರು $0^0$ ಸೆಂ.ಗ್ರೇ. ಗಿಂತ ಸ್ವಲ್ಪ ಹೆಚ್ಚು ಬಿಸಿಯಾಗಿದೆ. ಒತ್ತಡ ಮಾತ್ರ ಅತಿ. ಇಲ್ಲಿ ಅದ್ಭುತವೂ ವಿಚಿತ್ರವೂ ಆದ ಮಾಂಸಾಹಾರಿ ಕ್ರೂರಮೀನುಗಳು ಇವೆ. ಅವುಗಳ ಶರೀರ ಸಣ್ಣದು. ಆದರೆ ತೆರೆದ ಬಾಯಿ ದೊಡ್ಡದು. ಇವುಗಳಿಗೆ ದೀರ್ಘವಾದ ಸ್ವಯಂ ಪ್ರಕಾಶಿತ ಅವಯವಗಳಿವೆ. ತಳ ಮೃದುವಾಗಿ ಜಾರುವುದು. ಈ ಮೃದುತಳದಲ್ಲಿ ನಿಲ್ಲಲು ಪ್ರಾಣಿಗಳಿಗೆ ಒಂದು ವಿಧವಾದ ಜಾಣ್ಮೆ ಇದೆ. ಇಲ್ಲಿ ಅನೇಕ ನಾಟಿಕೊಂಡಿರುವ ಪ್ರಾಣಿಗಳು, ಹವಳಗಳು, ಬ್ರಯೋಜೋವಗಳು. ಸಮುದ್ರೋತ್ಪಲಗಳು (ಕ್ರೀನಾಯ್ಡ್ಸ್), ಸಮುದ್ರ ಪೆನ್ನುಗಳು, ಟ್ಯೂನಿಕೇಟುಗಳು ಇವೆ. ಜೊತೆಗೆ ಸಮುದ್ರದ ಸೌತೆಗಳು, ಮೃದ್ವಂಗಿಗಳು, ಪಿಕ್ನೊಗೋನಿಡಗಳು ದೀರ್ಘವಾದ ಏಡಿಗಳೂ ಉಂಟು. ಕಡೆಯ ಈ ಎರಡು ವಲಯಗಳ ಆಚೆ ಇರುವುದೇ ಸಾಗರ ಪ್ರಾಂತ್ಯ, ನೆಕ್ಟಾನಿಕ್ ಮತ್ತು ಪ್ಲಾಂಕ್ಟಾನಿಕ್ ರೂಪದ ತೆರೆದ ಸಮುದ್ರ.

ಜೀವಿ ಸಂಖ್ಯೆಗಳು(ಪಾಪ್ಯುಲೇಷನ್ಸ್): ವಾಸ್ತವವಾಗಿ ಜೀವಿಸಂಖ್ಯೆಯ ಆವರಣಶಾಸ್ತ್ರ ಬೆಳವಣಿಗೆಗೆ ಬೇಕಾದ ಆಂತರಿಕ ಸಂಬಂಧಗಳು ಮತ್ತು ಮಿತಿಗಳ ಅಭ್ಯಾಸ. ಸ್ಥೂಲವಾಗಿ ಹೇಳುವುದಾದರೆ ಇದು ಜೀವಿಸಂಖ್ಯೆಯ ಗುಣಸ್ವಭಾವವನ್ನು ಅಭ್ಯಸಿಸುವ ಶಾಸ್ತ್ರ ಪ್ರತಿಯೊಂದು ಜೀವಿಸಮುದಾಯಕ್ಕೂ ಆಂತರಿಕ ಸಂಬಂಧಗಳ ಸಮಸ್ಯೆ ಇದೆ. ಯಾವುದೇ ನೈಸರ್ಗಿಕ ಜೀವಿಸಮುದಾಯದಲ್ಲಿ ಪ್ರಾಣಿಗಳೂ ಸಸ್ಯಗಳೂ ಸಮತೂಕವಾಗಿವೆ. ಯಾವುದೇ ಒಂದು ಗುಂಪಿನ ಹೆಚ್ಚಿನ ಬೆಳವಣಿಗೆಯನ್ನು ನಿಸರ್ಗ ಸಾಮಾನ್ಯವಾಗಿ ನಿರೋಧಿಸುತ್ತದೆ. ಈ ನಿರೋಧ ದಾಳಿಕಾರರ ಸಂಖ್ಯೆಯ ಬೆಳವಣಿಗೆಯಿಂದಿರಬಹುದು; ಇಂಥ ಕಾರಣಗಳಿಂದ ಸಂಖ್ಯೆ ಆವರಣದ ಧಾರಣಶಕ್ತಿಯ ಅಂತರದಲ್ಲಿಯೇ ಇರುತ್ತದೆ. ಎಷ್ಟೋ ವೇಳೆ ಈ ಮುಖ್ಯ ಸಮತೂಕ ಮಾನವನ ಕೈವಾಡದಿಂದ ತಲೆಕೆಳಗಾಗಬಹುದು. ಅಂಥ ಸಂದರ್ಭಗಳಲ್ಲಿ ಕೆಲವು ಜಾತಿಯ ಪ್ರಾಣಿಜೀವಿಗಳು ತಮ್ಮ ನೈಸರ್ಗಿಕ ಅಂಶಗಳ ಮಿತಿ ಮಾಯವಾಗುವುದರಿಂದ

ಅತಿಯಾಗಿ ಅಭಿವೃದ್ಧಿಯಾಗಬಹುದು. ಇದರ ಫಲಿತಾಂಶವಾಗಿ ಹೊಸ ಸಮತೂಕ ಏರ್ಪಡುತ್ತದೆ. ಆದರೆ ಅದೇ ಕಾಲದಲ್ಲಿ ಒಟ್ಟು ಜೀವಿ ಸಮುದಾಯ ವ್ಯವಸ್ಥೆಯೇ ಬುಡಮೇಲಾಗುತ್ತದೆ.

ಜೀವಿಗಳ ಸಂಖ್ಯೆಯ ಬೆಳವಣಿಗೆ: ನೈಸರ್ಗಿಕ ಪರಿಸ್ಥಿತಿಯಲ್ಲಿ ಜೀವಿಗಳ ಸಂಖ್ಯೆಯ ಬೆಳವಣಿಗೆಯನ್ನು ಅಳೆಯುವುದು ಕಷ್ಟ. ಆದ್ದರಿಂದ ಬೇಕಾದ ಮಾಹಿತಿಗಳನ್ನು ಪ್ರಯೋಗಾಲಯದಲ್ಲಿ ಹತೋಟಿಗೊಳಗಾದ ಪರಿಸ್ಥಿತಿಯಿಂದ ನೋಡಿ ಪಡೆಯಲಾಗಿದೆ. ಏಕಾಣುಜೀವಿಗಳು ಡ್ರಾಸಾಫಿಲ ನೊಣ, ಬ್ಯಾಕ್ಟೀರಿಯಾ, ಹಿಟ್ಟು ದುಂಬಿ ಇತ್ಯಾದಿಗಳ ಅಭ್ಯಾಸ ಮಾಡಲಾಗಿದೆ. ಇಂಥ ಪರಿಮಿತ ಪರಿಸ್ಥಿತಿಯಲ್ಲಿ ಬಾಲ್ಯಾವಸ್ಥೆಯ ಬೆಳವಣಿಗೆ ಬಲು ನಿಧಾನ. ಮರಿ ಹಾಕುವ ಜೀವಿಗಳ ಸಂಖ್ಯೆ ಹೆಚ್ಚಾದಂತೆಲ್ಲ ಜೀವಗಣತಿಯಲ್ಲಿ ವ್ಯಕ್ತಿ ಜೀವಿಗಳ ಸಂಖ್ಯೆ ಅಧಿಕವಾಗಿ ಮೇಲ್ಮಟ್ಟವನ್ನು ಮುಟ್ಟಿ ಸಮತೂಕವನ್ನು ಪಡೆಯುತ್ತದೆ. ಬೆಳವಣಿಗೆಯನ್ನು ರೇಖಾಚಿತ್ರದ ಮೂಲಕ ಗುರುತಿಸಿದರೆ 8 ಆಕಾರದ ವಕ್ರರೇಖೆ ಕಾಣುತ್ತದೆ. ಈ ರೀತಿಯ ವಕ್ರರೇಖೆಯನ್ನು ಅಥವಾ ವಕ್ರರೇಖೆಯನ್ನು ಸಿಗ್ಮಾಯಿಡ್ ವಕ್ರರೇಖೆ ಎಂದು ಹೇಳುತ್ತಾರೆ. ಇದು ಜೀವಿಗಳ ಸಂಖ್ಯೆಯ ಬೆಳವಣಿಗೆಯ ಮಾದರಿ ಗರಿಷ್ಠಾಂಶ ಅಥವಾ ಮೇಲಿನ ಮಿತಿ. ಮುಖ್ಯವಾಗಿ ಆಹಾರ, ಅವಕಾಶ, ಕೊಂದು ತಿನ್ನುವ ಚಟ, ರೋಗ ಅಥವಾ ಬದಲಾಯಿಸಿದ ಜೀವಾಧಾರವಸ್ತು–ಇವು ಬೆಳವಣಿಗೆಯನ್ನು ಕುಂಠಿತಗೊಳಿಸ ಬಹುದು. ಪ್ರಯೋಗಶಾಲೆಯ ಪ್ರಯೋಗಗಳ ನೆರವಿಲ್ಲದೆಯೇ ಬಲು ಹಿಂದೆಯೇ ಮಾಲ್ತಸ್ ಎಂಬ ವಿಜ್ಞಾನಿ ಮಾನವಸಂಖ್ಯೆ ಜ್ಯಾಮಿತೀಯ ಪ್ರಮಾಣದಲ್ಲಿ (ಜಮಿಟ್ರಿಕ್ ಪ್ರಾಗ್ರೆಷ್ಯನ್) ರೀತಿಯಲ್ಲಿ ಹೆಚ್ಚುತ್ತದೆ ಎಂದು ಗಮನಿಸಿದ್ದ. ಜನಸಂಖ್ಯೆ ಕಡಿಮೆಯಾಗುತ್ತದೆ ಎಂದಿದ್ದ. ಇದು ಜೀವಿಸಂಖ್ಯೆಯ ಬೆಳವಣಿಗೆಯ ಚಿತ್ರಕ್ಕೆ ಸರಿಯಾಗಿ ಹೊಂದುತ್ತದೆ. ಆದರೂ ಮಾಲ್ತಸನ ಕಾಲಾನಂತರ ತಾಂತ್ರಿಕ ಬೆಳವಣಿಗೆಗಳು ಆಹಾರೋತ್ಪತ್ತಿಯ ಮೇಲ್ಮಿತಿಯನ್ನು ಹೆಚ್ಚಿಸುತ್ತ ಬಂದಿವೆ. ಮಾನವಸಂಖ್ಯೆಯೂ ಹಾಗೆಯೇ ಬೆಳೆಯುತ್ತ ಬಂದಿದೆ. ಹೀಗೆ ಮಿತಿಮೀರಿದ ಜನಸಂಖ್ಯೆಯುಳ್ಳ ಭಾರತ ಮಾಲ್ತಸನ ಅಭಿಪ್ರಾಯವನ್ನು ಸತ್ಯವಾಗಿ ಪ್ರತಿಬಿಂಬಿಸುತ್ತದೆ. ಇಂಥ ರಾಷ್ಟ್ರಕ್ಕೆ ಮಾಲ್ತಸನ ರಾಷ್ಟ್ರ ಎಂದು ಹೆಸರು.

ಧಾರಾಳದ ಏರುಪೇರುಗಳು (ಅಬಂಡೆನ್ಸ್ ಆಸಿಲೇಷನ್ಸ್): ಒಂದು ಸಲ ತನ್ನ ಮಿತಿಯ ತುದಿಯನ್ನು ಮುಟ್ಟಿದ ಜೀವಿಸಂಖ್ಯೆ ಅಲ್ಲಿಯೇ ಸ್ಥಿರವಾಗಿರಬೇಕೆಂಬ ನಿಯಮವಿಲ್ಲ. ಅದರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಋತುವಿನಿಂದ ಋತುವಿಗೆ ಹೆಚ್ಚು ಕಡಿಮೆ ಆಗಬಹುದು. ಕೆಲವೊಮ್ಮೆ ತತ್‌ಕ್ಷಣದ ಆಧಿಕ್ಯ ಕಾಣಬಹುದು: ಅಥವಾ ಸಂಪೂರ್ಣ ನಾಶಕ್ಕೆ ಇಳಿಯಬಹುದು. ಹೆಚ್ಚಿನ ಏರುಪೇರುಗಳು ಅಷ್ಟು ಖಚಿತವಾಗಿ ಆಗಲಾರವಾದರೂ ಲೆಕ್ಕಾಚಾರದಲ್ಲಿ (ಅಂಕಿ ಅಂಶಗಳಲ್ಲಿ) ಧಾರಾಳದ ಏರುಪೇರುಗಳಾಗಿರುತ್ತವೆ. ಒಂದು ರೀತಿಯಲ್ಲಿ ಅತ್ಯಾಶ್ಚರ್ಯಕರವಾದ ಅಂಶವೆಂದರೆ ಜೀವಿಸಂಖ್ಯೆ ಒಂದು ಗೊತ್ತಾದ ಚಕ್ರದ ಗತಿಯಲ್ಲಿ ಏರಿಳಿಯುತ್ತದೆ. ಇದನ್ನು ಕೆಲವು ವನ್ಯಪ್ರಾಣಿಗಳ ಮತ್ತು ಪಕ್ಷಿಗಳ ದೃಷ್ಟಾಂತದಿಂದ ಕಂಡುಹಿಡಿಯಲಾಗಿದೆ. ಕೆನಡ ಪ್ರದೇಶದ ಹಡ್ಸನ್ ಕೊಲ್ಲಿಯಲ್ಲಿ ಬದಲಾಯಿಸುತ್ತಿರುವ ಮೊಲಗಳ ಸಂಖ್ಯೆಯನ್ನು ಅನೇಕ ವರ್ಷಗಳವರೆಗೆ ಹಡ್ಸನ್ ಬೇ ಕಂಪನಿಯವರೂ ಇತರರೂ ದಾಖಲೆ ಮಾಡಿ ಕೊಂಡಿದ್ದಾರೆ. ಈ ಚಕ್ರ 9 ಅಥವಾ 10 ವರ್ಷದ ಅಂತರದಲ್ಲಿ ಅಧಿಕವಾಗಿ ಏರಿರುವುದು ಕಂಡುಬಂದಿದೆ. ಹಾಗೆಯೇ ಮೊಲದ ಆಹಾರದ ಮೇಲೆ ವಿಶೇಷವಾಗಿ ಅವಲಂಬಿಸಿರುವ ಕೆನಡಾದ ಕಿರುಬಗಳು 9.7 ವರ್ಷದ ಅವಧಿಯಲ್ಲೇ ತಮ್ಮ ಉತ್ಪತ್ತಿಯ ಪರಮಾವಧಿ ಸೇರಿರುವುದೂ ಗಮನಕ್ಕೆ ಬಂದಿದೆ. ಇದೇ ರೀತಿಯ ಚಕ್ರಗಳು ಇಲಿ, ಲೆಮ್ಮಿಂಗ್, ತೋಳ ಮತ್ತು ಕೆಲವು ಪಕ್ಷಿಗಳ ಬಗ್ಗೆಯೂ ಕಂಡುಬಂದಿದೆ. ಇಲ್ಲೆಲ್ಲ ಅವಧಿಗಳು ಬೇರೆ ಬೇರೆ. ಇದಕ್ಕೆ ಅನೇಕ ಊಹೆಗಳನ್ನು ಜನ ನೀಡಿದ್ದರೂ ಈ ಚಕ್ರಗಳ ಕಾರಣಗಳು ಸ್ಪಷ್ಟವಾಗಿಲ್ಲ. ಹುಟ್ಟಿನಿಂದ ಬಂದ ಸಮತೋಲ, ಸೂರ್ಯಬಿಂಬದ ಪ್ರಭಾವ, ವಿದ್ಯುತ್ ಪ್ರಭಾವ, ರೋಗರುಜಿನ, ಅತಿ ಒತ್ತಡದ ಪಾತ್ರ– ಇವು ಅವುಗಳಲ್ಲಿ ಮುಖ್ಯವಾದವು. ಅತಿ ಬೆಳವಣಿಗೆಯ ಪರಿಣಾಮವಾಗಿ ಅಡ್ರಿನಲ್ ನಿರ್ನಾಳಗ್ರಂಥಿಯ ಕ್ರಿಯೆ ವಿಶೇಷವಾಗುತ್ತದೆ. ಇದರಿಂದ ಪ್ರಾಣಿಗಳು ಮನೋಘಾತಕ್ಕೆ ಒಳಗಾಗಿ ನಶಿಸುತ್ತವೆ ಎಂದು ತಿಳಿದಿದೆ. ಆಗ ಅವು ಬಹು ಸಂಖ್ಯೆಯಲ್ಲಿ ಸಾವಿಗೀಡಾಗುತ್ತವೆ; ಅಲ್ಲದೆ ಫಲವತ್ತಾಗಿಯೂ ಇರುವುದಿಲ್ಲ. ಇಂಥ ಚಕ್ರಗಳು ಸ್ಪಷ್ಟವಾಗಿ ಅರ್ಥವಾಗದ ಅನೇಕ ಕಾರಣಗಳಿಂದ ಸಾಧ್ಯ ಎಂದು ಮಾತ್ರ ಈಗ ನಾವು ಕೊಡಬಹುದಾದ ವಿವರಣೆ.

ಆವರಣಶಾಸ್ತ್ರ ಮತ್ತು ಸಂರಕ್ಷಣೆಯ ಕೆಲವು ಮುಖಗಳು: ಇಂದು ನಮ್ಮನ್ನು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಮುಖ್ಯವಾದವು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಶೇಖರಣೆ. ಮಣ್ಣು, ಖನಿಜ, ವನ್ಯಮೃಗ ಇವುಗಳ ಸಂರಕ್ಷಣೆ ನಮಗೆ ಮಾತ್ರವಲ್ಲ, ನಮ್ಮ ಮುಂದಿನ ಜನಾಂಗಕ್ಕೂ ತುಂಬ ಆವಶ್ಯಕ. ಇಂಥ ಮುಖ್ಯ ಸಂಪನ್ಮೂಲಗಳನ್ನು ಬಳಸಿಕೊಳ್ಳದೆ ಇರುವುದು ಸಂರಕ್ಷಣೆ ಎಂಬ ಅಭಿಪ್ರಾಯ ಒಂದು ಕಾಲದಲ್ಲಿತ್ತು. ಈ ಪದದ ನಿಜವಾದ ಅರ್ಥ ನೈಸರ್ಗಿಕ ಸಂಪನ್ಮೂಲಗಳ ವ್ಯವಸ್ಥಿತ ಬಳಕೆ, ವೃಥಾ ನಾಶದ ತಡೆ, ಬೆಳವಣಿಗೆಗೆ ಅವಕಾಶ ನೀಡಿಕೆ ಎಂದಿದೆ. ಮರಗಳನ್ನು ಕಾಡಿನಿಂದ ಕಡಿದು ತರಬಹುದು. ಅದರೊಂದಿಗೆ ಮುಂದಿನ ಅಗತ್ಯಕ್ಕಾಗಿ ಮತ್ತೆ ಹೊಸ ಮರಗಳನ್ನು ಬೆಳೆಸಲು ಸಸಿಗಳನ್ನು ನೆಡಬೇಕು. ವನ್ಯಮೃಗಗಳನ್ನು ಬೇಟೆಯಾಡಬಹುದು. ಆದರೆ ಅವು ಪ್ರಕೃತಿ ವಲಯದಲ್ಲಿ ಸ್ವತಂತ್ರವಾಗಿ ಬದುಕಲು ವಾತಾವರಣವನ್ನು ಕಲ್ಪಿಸಬೇಕು. ಕೊಲ್ಲುವುದನ್ನು ಮಿತಿಗೊಳಿಸುವುದರಿಂದ, ವಾಸಿಸುವ ಗೂಡುಗಳನ್ನು ನಿರ್ಮಿಸುವುದರಿಂದ, ಅಭಾವಪೀಡಿತ ಕಾಲದಲ್ಲಿ ಆಹಾರವನ್ನು ಒದಗಿಸುವುದರಿಂದ, ಮರಿಹಾಕುವ ಕಾಲದಲ್ಲಿ ಸಂರಕ್ಷಣೆ




**ಚಿತ್ರ 12. ಭೂಮಿಯ ಪ್ರಾಣಿ ಭೂವಲಯಗಳು**

ನೀಡುವುದರಿಂದ ವನ್ಯಪ್ರಾಣಿಗಳು ಇದರ ಹೊಣೆ ಹೊತ್ತಿರುವವರಿಗೆ ಪೂರ್ಣ ಮಾಹಿತಿ ಇಲ್ಲದಿರುವುದರಿಂದ ವಿಫಲವಾಗಿವೆ. ಸಂರಕ್ಷಣೆಗೆ ಅನೇಕ ವಿಧಾನಗಳಿವೆ. ಪ್ರಾಕೃತಿಕ ಭಾಗಗಳನ್ನೂ ಅಲ್ಲಿನ ಸಸ್ಯ ಪ್ರಾಣಿವರ್ಗಗಳನ್ನೂ ಕಾಪಾಡಬೇಕು. ನಮ್ಮ ನೆಲದ, ಕಾಡಿನ, ನೀರಿನ ಉಪಯೋಗವನ್ನು ಬುದ್ಧಿವಂತಿಕೆಯಿಂದ ಬಳಸಬೇಕು. ಈ ಸಂಪನ್ಮೂಲಗಳನ್ನು ಕ್ರಮಬದ್ಧವಾಗಿ ಆವರಣಶಾಸ್ತ್ರದ ಸೂತ್ರಗಳ ಬೆಳಕಿನಲ್ಲಿ ಕೈಗೊಳ್ಳಬೇಕು.

ಆಹಾರದ ಜಾಲದೊಡನೆ ಪ್ರವೇಶ: ಮನುಷ್ಯ ಆಗಾಗ ಮಾಂಸಾಹಾರಿ ಪ್ರಾಣಿಗಳನ್ನು ನಿವಾರಿಸುತ್ತಾನೆ ಕೆಲವು ಜಾತಿಯ ಪ್ರಾಣಿವರ್ಗಗಳ ಇಂಥ ಅಭ್ಯಾಸ ಅಗೋಚರ ಪರಿಣಾಮಗಳಿಗೆ ಕಾರಣವಾಗುತ್ತದೆ. ಅಂಜೋನಾದ ಕೈಬಾಬ್ ಹುಲ್ಲುಗಾವಲಿನಲ್ಲಿ ನಡೆದ ಒಂದು ಐತಿಹಾಸಿಕ ದೃಷ್ಟಾಂತವಿದೆ. ಸಹಜಪರಿಸ್ಥಿತಿಯಲ್ಲಿ ಈ ಶತಮಾನದ ಆರಂಭದಲ್ಲಿ 4000 ಜಿಂಕೆಗಳಿದ್ದುವು. ಆ ಸ್ಥಳದಲ್ಲಿ ಅದರ ಸಂಖ್ಯೆ ಒಂದು ಪರಿಮಿತಿಯಲ್ಲಿತ್ತು. ಅದಕ್ಕೆ ಕಾರಣ ತೋಳಗಳು, ಕೊಯೋಟ್ ದೊಡ್ಡ ಬೆಕ್ಕು ಮತ್ತು ಪ್ಯೂಮ ಸಿಂಹಗಳು. 1905ರ ಸುಮಾರಿನಲ್ಲಿ ಜಿಂಕೆಯ ಸಂಖ್ಯೆಯನ್ನು ಹೆಚ್ಚಿಸಲು ಆ ಮಾಂಸಾಹಾರಿಗಳನ್ನು ಕೊಲ್ಲುವ ಯತ್ನ ತೀವ್ರವಾಗಿ ನಡೆಯಿತು. ಜಿಂಕೆಯ ಗಣತಿ 40,000ಕ್ಕೇರಿತು. 1920ರಲ್ಲಿ ಮೊದಲ ಅಪಾಯ ಕಾಣಿಸಿಕೊಂಡಿತು. ಸಂಖ್ಯೆ 60,000ಕ್ಕೇರಿದಾಗ ಕೆಲವು ಪ್ರಾಣಿಗಳು ಹಸಿವಿನಿಂದ ಸಾಯುವುದು ಗೋಚರಿಸಿತು. ಆಹಾರ ದೊರಕದೆ ಮುಂದಿನ ಎಚ್ಚರಿಕೆಯನ್ನು ಗಣಿಸದೆ ಸಂಖ್ಯೆಯನ್ನು ಹತೋಟಿಯಲ್ಲಿಡುವ ಯಾವ ಪ್ರಯತ್ನವೂ ಮಾಡಲಿಲ್ಲ. ಇದರಿಂದ ಇದರ ಸಂಖ್ಯೆ ಬೆಳೆದಿದ್ದುದರಿಂದ ಮುಂದಿನೆರಡು ವರ್ಷ ಋತುಗಳಲ್ಲಿ 6%ರಷ್ಟು ಪ್ರಾಣಿಗಳು ಹಸಿವಿನಿಂದ ಸತ್ತವು. 1925ರಲ್ಲಿ ಸಂಖ್ಯೆ 40,000ಕ್ಕಿಳಿಯಿತು. 1939ರಲ್ಲಿ 10,000ಕ್ಕೆ ಮಾತ್ರ ನಿಂತಿತು. ಕಾಡೆಲ್ಲ ಹಾಳಾಗಿತ್ತು. ಕೆಲವೇ ಪ್ಯೂಮಗಳು ಇದ್ದುವು.

ಹೊಸ ಪ್ರಾಣಿಗಳ ಪ್ರವೇಶ: ಒಂದು ಪ್ರದೇಶದ ಒಳಕ್ಕೆ ಹೊಸ ಜಾತಿಯ ಪ್ರಾಣಿಗಳನ್ನು ಸೇರಿಸುವುದು ಕೆಲವು ಪ್ರಾಣಿಗಳನ್ನು ಅಲ್ಲಿಂದ ತೆಗೆಯುವಷ್ಟೇ ಕೆಟ್ಟ ಪರಿಣಾಮ ಬೀರುತ್ತದೆ. 1800ರ ಸುಮಾರಿನಲ್ಲಿ ಒಬ್ಬ ಆಂಗ್ಲಪ್ರಜೆ ಆಸ್ಟ್ರೇಲಿಯ ದೇಶಕ್ಕೆ 5 ಮೊಲಗಳನ್ನು ತನ್ನ ಬೇಟೆಯ ಮನೋರಂಜನೆಗಾಗಿ ಪ್ರವೇಶಗೊಳಿಸಿದ. ಈ ಮೊಲಗಳು ತಮಗೆ ಯಾವ ಮೃತ್ಯುಕಾರಕ ಪ್ರಾಣಿಗಳ ಭಯವೂ ಇಲ್ಲದೆ ಅಡೆತಡೆಯಿಲ್ಲದೆ ಅತಿ ವೇಗವಾಗಿ ಅಭಿವೃದ್ಧಿಗೊಂಡು ದೇಶವನ್ನೆಲ್ಲ ಆಕ್ರಮಿಸಿದವು. 1920ರಲ್ಲಿ ದೇಶದ ಮುಕ್ಕಾಲು ಭಾಗದಲ್ಲಿ ಅವು ಗೋಚರಿಸಿಕೊಂಡು ಸಸ್ಯಸಂಪತ್ತನ್ನು ಹಾಳು ಮಾಡಿ ಕುರಿಯ ಬೆಳವಣಿಗೆಗೇ ಘಾತವನ್ನುಂಟು ಮಾಡುವ ಭಯ ಹುಟ್ಟಿಸಿದುವು. ಸಂಯುಕ್ತ ಸಂಸ್ಥಾನಗಳಲ್ಲಿ ಆಂಗ್ಲ ಗುಬ್ಬಚ್ಚಿಗಳ ಆಮದು ಸ್ಥಳೀಯ ಪಕ್ಷಿಗಳ ಮೇಲೆ ಅನಾಹುತ ಉಂಟುಮಾಡಿತು. ಅದು ಮೇಲೆ ಬೀಳುವ ಪ್ರಾಣಿ. ಅದಕ್ಕೆ ಗೂಡುಗಳನ್ನು ಕಟ್ಟುವ ಸಾಮರ್ಥ್ಯ ಇದೆ. ಹೀಗೆ ಸ್ಥಳೀಯ ಪಕ್ಷಿಗಳೊಂದಿಗೆ ಸ್ಪರ್ಧಿಸಿ ಗೆದ್ದು ತನ್ನ ಸ್ಥಾನವನ್ನು ಗಳಿಸಿಕೊಂಡಿತು. ಅಲ್ಲದೆ ಅದಕ್ಕೆ ನೈಸರ್ಗಿಕ ಶತ್ರುಗಳೂ ಇರಲಿಲ್ಲ. ಈಗ ಅದು ತಾನು ಆರಿಸಿಕೊಂಡ ಪ್ರದೇಶದಲ್ಲಿ ಒಂದು ರೀತಿಯ ಸಮತೋಲವನ್ನು ಪಡೆದಿದೆ. ಯೂರೋಪಿನ ಕೊರೆಯುವ ಕೀಟ (ಕಾರ್ನ್ ಬೋರರ್) ಜಿಪ್ಸಿ ಪತಂಗ ಮತ್ತಿತರ ಉಪದ್ರವಕಾರಿ ಕೀಟಗಳು ಯೂರೋಪಿಗೆ ಆಕಸ್ಮಿಕವಾಗಿ ಬಂದವು. ಅವು ಮೊದಮೊದಲು ಭಾರಿ ಪಿಡುಗಾಗಿ ಪರಿಣಮಿಸಿದುವು. ಆದರೆ ಈಚೆಗೆ ಕಡಿಮೆಯಾಗಿವೆ. ಏಕೆಂದರೆ ರಾಷ್ಟ್ರಕ್ಕೆ ತರುವ ಸಸ್ಯಗಳನ್ನು ಪರೀಕ್ಷೆಗೆ ಒಳಪಡಿಸುತ್ತಿದ್ದಾರೆ.

ನದಿಗಳ, ಝರಿಗಳ ನೀರನ್ನು ಕೆಡಿಸುವುದು ಪ್ರಾಣಿವರ್ಗ ಎದುರಿಸುತ್ತಿರುವ ದೊಡ್ಡ ಸಮಸ್ಯೆ. ಕೈಗಾರಿಕೆ. ನಗರಗಳ ಬೆಳವಣಿಗೆ, ಸಾಂಸ್ಕೃತಿಕ ಸ್ವರೂಪಗಳ ಬದಲಾವಣೆ ನೀರಿನ ಉಪಯೋಗವನ್ನು ಹೆಚ್ಚಿಸಿದೆ. ನಮಗೆ ನೀರಿನ ಅಗತ್ಯ ಹೆಚ್ಚಾಗುತ್ತಿರುವಂತೆ ದೊರಕುವ ಒಳ್ಳೆಯ ನೀರಿನ ಮೂಲಗಳೂ ಕಡಿಮೆಯಾಗುತ್ತಿವೆ. ಜೊತೆಗೆ ನದಿಗಳ, ಬಂದರುಗಳ ನೀರು ಕಲುಷಿತವಾಗುತ್ತಿದೆ. ಕುಡಿಯುವುದಕ್ಕೆ ಉಪಯೋಗಿಸುವ ಶುದ್ಧವಾದ ನೀರನ್ನು ಕಾರ್ಖಾನೆ ಕಶ್ಮಲಗಳು ಕೆಡಿಸಿ ಜನಾರೋಗ್ಯಕ್ಕೆ ಮಾರಕವಾಗಿದೆ. ಕೈಗಾರಿಕಾವರ್ಗ ವಿಜ್ಞಾನ. ಆರೋಗ್ಯಶಾಖೆ ಇವೆಲ್ಲ ಸಹಕರಿಸಿದರೆ ಸ್ಥಿತಿಗಳನ್ನು ತಿದ್ದಿಕೊಳ್ಳಬಹುದು. ಸದ್ಯಕ್ಕೆ ಬಹಳ ಪ್ರಯತ್ನವೇನೋ ನಡೆಯುತ್ತಿದೆ. ಆದರೆ ಹೊರ ನೀರಿಗೆ ಸೇರುತ್ತಿರುವ ಕೊಳಚೆಯ ಪ್ರಮಾಣ ಪ್ರಗತಿಯನ್ನು ಕಷ್ಟಕರವಾಗಿ ಮಾಡಿ ನಿಧಾನಿಸುತ್ತಿದೆ.

ವ್ಯಾಲೇಸ್ ಅವರ ಪ್ರಾಣಿ ಭೌಗೋಳಿಕ ಪ್ರದೇಶಗಳು: 1859ರಲ್ಲಿ ಡಾರ್ವಿನ್ನನ ಬೃಹದ್ಗ್ರಂಥ ಹೊರಬಿದ್ದಾಗ ವ್ಯಾಲೇಸ್ ಎಂಬಾತ ಪ್ರಪಂಚವನ್ನು ಮರದ ಮೇಲೆ ಕೂರುವ ಪಕ್ಷಿಗಳ ಅಭ್ಯಾಸದ ಆಧಾರದ ಮೇಲೆ ಪ್ರಾಣಿವರ್ಗದ ಭಾಗಗಳನ್ನಾಗಿ ವಿಂಗಡಿಸಲು ಯತ್ನಿಸಿದ. 1876ರಲ್ಲಿ ಇವನು ಪ್ರಾಣಿಗಳ ಭೌಗೋಳಿಕ ಹಂಚಿಕೆ ಎಂಬ ತನ್ನ ಗ್ರಂಥದಲ್ಲಿ ಪ್ರಪಂಚವನ್ನು ಪ್ರಾಣಿ ಭೌಗೋಳಿಕ ಭಾಗಗಳಾಗಿ ಇಂದು ಕಂಡುಬರುವಂತೆ ವಿಭಾಗ ಮಾಡಿದ. ಇಂದಿನ ಪ್ರಾಣಿವರ್ಗದ ಹಂಚಿಕೆಯ ರೀತ್ಯಾ ಭಾಗಗಳ ಸ್ವರೂಪವನ್ನು ರೂಪಿಸಿದ. ನಿಆರ್ಕ್ಟಿಕ್ (ಉತ್ತರ ಅಮೆರಿಕ) ಪೇಲ್ಆರ್ಕ್ಟಿಕ್ (ಯೂರೋಪ್, ಉತ್ತರ ಆಫ್ರಿಕ ಮತ್ತು ಏಷ್ಯದ ಬಹುಭಾಗ), ಇಥಿಯೋಪಿಯನ್ (ಸಹರಾ ಮರುಭೂಮಿಯ ದಕ್ಷಿಣ ಭಾಗವನ್ನೊಳಗೊಂಡ ಆಫ್ರಿಕ), ಓರಿಯೆಂಟಲ್ (ಭಾರತ, ಈಶಾನ್ಯ ಏಷ್ಯ, ಪೂರ್ವ ಇಂಡೀಸ್ ದ್ವೀಪಗಳ ಪಶ್ಚಿಮ ಭಾಗಗಳು, ಇತರ ಪರ್ಯಾಯ ಭಾಗ). ಆಸ್ಟ್ರೇಲಿಯನ್ (ಆಸ್ಟ್ರೇಲಿಯ, ನ್ಯೂಗಿನಿ ಮತ್ತು ನೆರೆಹೊರೆಯ ದ್ವೀಪಗಳು), ನಿಯೊಟ್ರಾಪಿಕಲ್ (ಮಧ್ಯ ಮತ್ತು ದಕ್ಷಿಣ ಅಮೆರಿಕ ಸೇರಿರುವ ಭಾಗಗಳು) – ಇವು ಈ ಭಾಗಗಳು (ಚಿತ್ರ.12).

ಈಚೆಗೆ ಈ ಪ್ರದೇಶಗಳ ವರ್ಗವಿಭಾಗ ಸ್ವಲ್ಪ ಬದಲಾವಣೆ ಹೊಂದಿದೆ. ಈಗಿನ ಸಂಶೋಧಕರು ಪೇಲಾರ್ಕ್ಟಿಕ್ ಮತ್ತು ನಿಆರ್ಕ್ಟಿಕ್‌ಗಳನ್ನು ಒಟ್ಟುಗೂಡಿಸಿ ಹೋಲಾರ್ಕ್ಟಿಕ್ ಎಂದು ಕರೆದಿದ್ದಾರೆ. ಮಡಗಾಸ್ಕರ್ ಅನ್ನು ಮಲಗಾಸಿ ಎಂದು ವಿಶಿಷ್ಟ ಭಾಗವಾಗಿ ಪರಿಗಣಿಸಿದ್ದಾರೆ. ಆಸ್ಟ್ರೇಲಿಯ ವಿಭಾಗದಿಂದ ಪಾಲಿನೇಸಿಯನ್ ಮತ್ತು ಹವಾಯಿಯನ್ ದ್ವೀಪಗಳನ್ನು ಬೇರ್ಪಡಿಸಿದ್ದಾರೆ. (ಎಂ.ಡಿ.ಪಿ.)

**ಆವರಿಕೆ:** ಸಾಮಾನ್ಯವಾಗಿ ಮಳೆ ಕಡಿಮೆ ಬೀಳುವ ಮರಳು ಮಿಶ್ರಿತ ಫಲವತ್ತಲ್ಲದ ಪ್ರದೇಶಗಳಲ್ಲಿ ಬೆಳೆಯುವ ನಿತ್ಯಹರಿದ್ವರ್ಣದ ಪೊದೆಸಸ್ಯ (ಕ್ಯಾಶಿಯ ಅರಿಕ್ಯುಲೇಟ). ಇದರ ಪರ್ಯಾಯನಾಮ ತಂಗಡಿ. ಆರೇಳು ಅಡಿ ಎತ್ತರ ಬೆಳೆಯುವ ಈ ಗಿಡದ ರೆಂಬೆಗಳು ನೆಲಕ್ಕೆ ಸೇರಿದಂತೆ ವಿಪುಲವಾಗಿ ಬುಡದಿಂದ ಹೊರಡುತ್ತವೆ. ಇದು ಭಾರತದ ಅರಣ್ಯಗಳ ಒಂದು ಮುಖ್ಯ ಫಸಲು. ಚರ್ಮ ಹದಮಾಡಲು ಈ ಗಿಡದ ತೊಗಟೆ ಉತ್ತಮ ವಸ್ತು. ಮೈಸೂರು ಜಿಲ್ಲೆಯ ಹುಣಸೂರು ಕೇಂದ್ರದಲ್ಲಿ ತೊಗಟೆಯಿಂದ ಹದಮಾಡಿದ ಕಂದುಬಣ್ಣದ

ಗಡುಸಾದ ಹೊದಿಕೆಯುಳ್ಳ ಚರ್ಮ ತಯಾರಿಸುತ್ತಾರೆ. ಇದಕ್ಕೆ ಹಲವು ವರ್ಷಗಳ ಹಿಂದೆ ಬೇಡಿಕೆ ಇತ್ತು. ಬೆಂಗಳೂರು, ಚೆನ್ನೈ 3 ಚರ್ಮ ಹದಮಾಡುವ ಕೇಂದ್ರಗಳಲ್ಲಿ ಈಗಲೂ ಈ ಗಿಡದ ಚಕ್ಕೆಯನ್ನು ಉಪಯೋಗಿಸುತ್ತಾರೆ. ಒಂದನೆಯ ಮಹಾಯುದ್ಧದ ಅನಂತರ ಬಳಕೆಗೆ ಬಂದ ಜಾಲಿ ಜಾತಿಯ ಅಕೇಶಿಯಾ ಮೆಲನೊಸೈಲಾನ್ ಎಂಬ ಗಿಡದಿಂದ ಈ ಗಿಡಕ್ಕೆ ಪ್ರಾಶಸ್ತ್ಯ ಕಡಿಮೆಯಾಯಿತು. ಆವರಿಕೆ ಸಸ್ಯದ ತೋಪುಗಳನ್ನು ನೀಲಗಿರಿ ಜಿಲ್ಲೆಯಲ್ಲಿ ತಮಿಳುನಾಡು ಸರ್ಕಾರ ಬೆಳೆಸುತ್ತಿದೆ.

ಆವರಿಕೆಯು ಸೀಮೆತಂಗಡಿ, ಹುಣಸೆ ಇತ್ಯಾದಿ ಸಸ್ಯಗಳಂತೆ ಲೆಗ್ಯುಮಿನೋಸೀ ಎಂಬ ಕುಟುಂಬದ ಸಿಸಾಲ್ಪಿನಾಯ್ಡೀ ಎಂಬ ಉಪಕುಟುಂಬಕ್ಕೆ ಸೇರಿದೆ. ಈ ಆವರಿಕೆ ಮಧ್ಯ ಮತ್ತು ದಕ್ಷಿಣ ಭಾರತದ ಬಯಲುಗಳಲ್ಲೂ ಗುಡ್ಡಗಳಲ್ಲೂ ವ್ಯಾಪಕವಾಗಿ ಬೆಳೆಯುತ್ತವೆ. ಇದರ ಹಳದಿ ಹೂಗಳು ಅಕ್ಟೋಬರ್, ಮೇ ತಿಂಗಳುಗಳವರೆಗೂ ಅರಳುತ್ತವೆ. ಜೊತೆಯಲ್ಲೇ ಕಾಯಿಗಳೂ ಇರುತ್ತವೆ. ಬೀಜಗಳು ಬೇಗ ಮೊಳೆಯುವುದರಿಂದ ಸ್ವಾಭಾವಿಕ ರೀತಿಯಲ್ಲಿ ಪುನರುತ್ಪತ್ತಿಗೆ ಹೆಚ್ಚಿನ ಸೌಲಭ್ಯವುಂಟು.

ಜಾಲಿಮರದ ಜಾತಿಯ ಮರಗಳ ತೊಗಟೆ ಚರ್ಮ ಹದಮಾಡಲು ಬಳಕೆಗೆ ಬರುವ ಮುನ್ನ ಆವರಿಕೆ ಗಿಡಗಳನ್ನು ವ್ಯವಸಾಯ ಮಾಡಿ ಬೆಳೆಸುತ್ತಿದ್ದರು. ದನಗಳು ಮತ್ತು ಆಡುಗಳು ಇದರ ಸೊಪ್ಪನ್ನು ತಿನ್ನುವುದಿಲ್ಲವಾದ್ದರಿಂದ ಗಿಡಗಳಿಗೆ ಇವುಗಳಿಂದ ಹಾನಿ ಉಂಟಾಗುತ್ತದೆ ಎಂಬ ಭಯವಿಲ್ಲ. ಗಿಡಕ್ಕೆ ಎರಡು ಮೂರು ವರ್ಷವಾದಾಗ ರೆಂಬೆಗಳನ್ನು ಬುಡದಲ್ಲಿ ಸ್ವಲ್ಪ ಬಿಟ್ಟು ಕತ್ತರಿಸಿ ತೊಗಟೆಯನ್ನು ಸಂಗ್ರಹಿಸುತ್ತಾರೆ. ರೆಂಬೆಗಳನ್ನು ಕತ್ತರಿಸಿದ ಮೇಲೆ ಅನೇಕ ಕವಲುಗಳು ಗಿಡದ ಉಳಿದ ಭಾಗಗಳಿಂದ ಹೊರಟು ಚೆನ್ನಾಗಿ ಬೆಳೆಯುತ್ತವೆ. ಪ್ರತಿ ವರ್ಷವೂ ಈ ರೀತಿ ರೆಂಬೆಗಳನ್ನು ಕತ್ತರಿಸಿ ತೊಗಟೆಗಳನ್ನು ಸಂಗ್ರಹಿಸುತ್ತಾರೆ. ವ್ಯವಸಾಯ ಮಾಡಿ ಬೆಳೆಯುವುದು ಈಚೆಗೆ ಕಡಿಮೆಯಾಗಿದೆ. ಬಂಜರು ಪ್ರದೇಶದಲ್ಲಿ ತಾನಾಗಿ ಬೆಳೆಯುವ ಗಿಡಗಳಿಂದ ತೊಗಟೆಯನ್ನು ಸಂಗ್ರಹಿಸುತ್ತಾರೆ. ತಮಿಳುನಾಡಿನಲ್ಲಿ ವರ್ಷಕ್ಕೆ ಹನ್ನೊಂದು ಸಾವಿರ ಟನ್ ತೊಗಟೆ ಈಗಲೂ ದೊರೆಯುತ್ತದೆ. ಮೈಸೂರು ಆಂಧ್ರ ಪ್ರಾಂತ್ಯಗಳಲ್ಲಿನ ವಾರ್ಷಿಕ ಉತ್ಪನ್ನ ಎಂಟು–ಹತ್ತು ಸಾವಿರ ಟನ್. ತೊಗಟೆಯಲ್ಲಿರುವ ಟ್ಯಾನಿನ್ ಹಸಿಚರ್ಮದೊಳಗಡೆ ವಿಶಾಲವಾಗಿ ಒಂದೇ ಸಮವಾಗಿ ಹರಡುತ್ತದೆ. ಇದರಿಂದ ಹಿಗ್ಗಿಸಲಾಗುವ ಬಾಳಿಕೆ ಬರುವ ತಿಳಿಬಣ್ಣದ ಹದಮಾಡಿದ ಚರ್ಮ ಸಿದ್ಧವಾಗುತ್ತದೆ. ಈ ಗುಣದಿಂದಾಗಿ ಇದರಿಂದ ಹದಮಾಡಿದ ಚರ್ಮಕ್ಕೆ ಗಿರಾಕಿ ವಿಶೇಷ. ತೊಗಟೆಯಲ್ಲದೆ ಹೂ, ಎಲೆ ಹಣ್ಣುಗಳೂ ಉಪಯೋಗಕ್ಕೆ ಬರುತ್ತವೆ. ತೊಗಟೆಯಲ್ಲಿ ರಕ್ತಸ್ರಾವವನ್ನು ನಿಲ್ಲಿಸುವ ಗುಣವಿದೆ. ಹೂವಿನ ದಳಗಳನ್ನು ಒಣಗಿಸಿ ಅದರಿಂದ ಪಾನೀಯವನ್ನು (ಚಹ ಮಾಡುವಂತೆ) ಮಾಡಿ ಕುಡಿಯುತ್ತಾರೆ. ಇದರಿಂದ ಮಧುಮೇಹ ರೋಗವನ್ನು ನಿಯಂತ್ರಿಸಬಹುದೆನ್ನಲಾಗಿದೆ. ಎಲೆ ಮತ್ತು ಕಾಯಿಗಳಿಗೆ ಕರುಳಿನಲ್ಲಿರುವ ಜಂತುಗಳನ್ನು ನಾಶಮಾಡುವ ಶಕ್ತಿ ಇದೆ. ಬೇರು ಚರ್ಮರೋಗದಲ್ಲಿ, ಔಷಧಿಯಾಗಿ ಉಪಯೋಗಕ್ಕೆ ಬರುತ್ತದೆ. ಹಳ್ಳಿಗಾಡಿನವರು ಅಡಕೆ ಸಿಕ್ಕದಿದ್ದಾಗ ಇದರ ತೊಗಟೆಯ ಚೂರನ್ನು ವೀಳ್ಯದೆಲೆ ಜೊತೆ ಅಗಿಯಲು ಉಪಯೋಗಿಸುವುದುಂಟು. (ಎಚ್.ಎನ್.ಸಿ.;ಎ.ಕೆ.ಎಸ್.)

**ಆವರ್ತ:** ಒಂದು ನೃತ್ತ ಭೇದ. ನೃತ್ತದಲ್ಲಿ ತಾಳ ಮತ್ತು ಲಯಗಳಿಗನುಗುಣವಾಗಿ ಸೊಂಟ ತೋಳು ಪಾದ ತೊಡೆ ಕಣಕಾಲುಗಳನ್ನು ವಿಳಂಬವೂ ವೇಗವೂ ಇಲ್ಲದಂತೆ ವಿಲಾಸದಿಂದ ಕೋಮಲವಾಗಿ ವಿವಿಧ ಪ್ರಕಾರದಲ್ಲಿ ಚಲಿಸುವುದು ಚಾರಿ. ಭರತನಾಟ್ಯದಲ್ಲಿ 32 ವಿಧ ಚಾರಿಗಳ ವಿವರವಿದೆ. ಇವು ಮಾರ್ಗ ಚಾರಿಗಳು. ಈ ಚಾರಿಗಳಲ್ಲಿ ಕೆಲವನ್ನು ಎಡ ಬಲ ಪಾದಗಳ ವಿನ್ಯಾಸಭೇದದಿಂದ ಮಾಡುವ ನೃತ್ತವೇ ಮಂಡಲ. ಚಾರಿಗಳ ಸಮುದಾಯಕ್ಕೆ ಮಂಡಲವೆಂದು ಹೆಸರು. ಇದರಲ್ಲಿ ಭೌಮ ಆಕಾಶ ಎಂದು ಎರಡು ಬಗೆ. ಈ ಎರಡರಲ್ಲೂ ಪ್ರತ್ಯೇಕವಾಗಿ ಹತ್ತು ಪ್ರಭೇದಗಳಿವೆ. ಭೌಮಮಂಡಲದ ಪ್ರಭೇದಗಳಲ್ಲಿ ಆವರ್ತ ಮೂರನೆಯದು. ಇದರಲ್ಲಿ ಜನಿತ ಸ್ಥಿತಾವರ್ತ ಶಕಟಾಸ್ಯ ಏಲಕಾಕ್ರೀಡಿತ ಊರೂದ್ವೃತ್ತ ಅಡ್ಡಿತ ಜನಿತ ಸಮೋಸರಿತಮತ್ತಲ್ಲಿ ಶಕಟಾಸ್ಯ ಊರೂದ್ವೃತ ಚಾರಿಗಳನ್ನು ಬಲ ಮತ್ತು ಎಡಗಾಲಿನಿಂದ ಕ್ರಮವಾಗಿ ಒಂದೊಂದನ್ನೇ ಮಾಡಿ ಬಲಗಾಲಿನಿಂದ ಎರಡಾವರ್ತಿ ಚಾಷಗತಿ ಚಾರಿಯನ್ನೂ ಎಡಗಾಲಿನಿಂದ ಸ್ಯಂದಿತ ಶಕಟಾಸ್ಯ ಚಾರಿಗಳನ್ನೂ ಮತ್ತೆ ಬಲಗಾಲಿನಿಂದ ಭ್ರಮರ ಚಾರಿ ಮತ್ತು ಎಡಗಾಲಿನಿಂದ ಚಾಷಗತಿ ಚಾರಿಯನ್ನೂ ಮಾಡಬೇಕು. (ಎಸ್.ಎನ್.ಕೆ.)

**ಆವರ್ತಕೋಷ್ಟಕ:** ರಾಸಾಯನಿಕ ದೃಷ್ಟಿಯಲ್ಲಿ ಗುಣಸಾಮ್ಯ ಕಂಡುಬರುವ ಧಾತುಗಳು ಬೇರೆ ಬೇರೆಯಾಗಿ ಗುಂಪುಕೂಡಿಕೊಳ್ಳುವಂತೆ ರಾಸಾಯನಿಕ ಧಾತುಗಳೆಲ್ಲವನ್ನೂ ಕ್ರಮಬದ್ಧವಾಗಿ ಜೋಡಿಸಿ ತಯಾರಿಸಿರುವ ಕೋಷ್ಟಕ (ಪೀರಿಯಾಡಿಕ್ ಟೇಬಲ್). ರಷ್ಯ ದೇಶದ ರಸಾಯನವಿಜ್ಞಾನಿ ಡಿ.ಐ. ಮೆಂಡಿಲೀಫ್ (1834–1907) ಪ್ರತಿಪಾದಿಸಿದ ಆವರ್ತ ನಿಯಮ (ಪೀರಿಯಾಡಿಕ್ ಲಾ) ಇದಕ್ಕೆ ಆಧಾರ. ಆದ್ದರಿಂದ ಕೋಷ್ಟಕಕ್ಕೆ ಈ ಹೆಸರು.

ಧಾತುಗಳೆಲ್ಲವೂ ತಮ್ಮ ತಮ್ಮದೇ ಆದ ವಿಶಿಷ್ಟಗುಣಧರ್ಮಗಳನ್ನು ತೋರುವಂತೆಯೂ ಅವುಗಳಲ್ಲಿ ಒಂದಕ್ಕೊಂದು ಸಂಬಂಧವೇ ಇಲ್ಲದಂತೆಯೂ ಕಾಣುತ್ತಿದ್ದುದರಿಂದ ಅವುಗಳ ವರ್ಗೀಕರಣಕ್ಕೆ ಒಂದು ಆಧಾರವಿರಬಹುದೆಂಬುದೇ ಒಂದು ಹೊಸ ಭಾವನೆಯಾಗಿ ಕಾಣಿಸುತ್ತಿದ್ದ ಕಾಲ ಒಂದಿತ್ತು. ಆಗ ರಸಾಯನ ವಿಜ್ಞಾನವೆಂದರೆ ರಾಸಾಯನಿಕ ಧಾತುಗಳ ಮತ್ತು ಅವುಗಳ ಸಂಯುಕ್ತಗಳ ಗುಣಲಕ್ಷಣಗಳನ್ನು ಕುರಿತ ಮಾಹಿತಿಗಳ ಒಂದು ಅವ್ಯವಸ್ಥಿತ ಸಂಗ್ರಹವಾಗಿತ್ತು. ಅಂದು ತಿಳಿದಿದ್ದ ಧಾತುಗಳಲ್ಲಿ ಪರಸ್ಪರ ವಿಶೇಷ ಹೋಲಿಕೆಯಿರುವ ಮೂರು ಮೂರು ಧಾತುಗಳ ಗುಂಪುಗಳನ್ನು ಅಲ್ಲಲ್ಲಿ ಗುರುತಿಸಬಹುದೆಂದು ತೋರಿಸಿ, ಧಾತುಗಳ ವರ್ಗೀಕರಣ ಸಾಧ್ಯವಾದೀತೆಂಬ ಆಸೆಯನ್ನು 1829ರಲ್ಲಿ ಮೊತ್ತಮೊದಲು ಬಿತ್ತಿದವ ಜರ್ಮನಿಯ ಜೆ. ಡಬ್ಲ್ಯು. ಡೊಬೆರೈನರ್, ಕ್ಯಾಲ್ಸಿಯಂ–ಸ್ಟ್ರಾನ್ಷಿಯಂ–ಬೇರಿಯಂ, ಕ್ಲೋರೀನ್–ಬ್ರೋಮೀನ್–ಅಯೊಡೀನ್, ಸಲ್ಫರ್–ಸೆಲೀನಿಯಂ ಟೆಲೂರಿಯಂ. ಇವು ಅಂಥ ಕೆಲವು ತ್ರಿವಳಿಗಳು (ಟ್ರಯಡ್ಸ್). ಈ ಒಂದೊಂದು ತ್ರಿವಳಿಯಲ್ಲಿಯೂ ಪರಸ್ಪರ ರಾಸಾಯನಿಕ ಸಾಮ್ಯವಿರುವುದಲ್ಲದೆ ಮಧ್ಯದ ಧಾತುವಿನ ಪರಮಾಣುತೂಕ ಉಳಿದೆರಡರ ಪರಮಾಣುತೂಕಗಳ ಸರಾಸರಿಗೆ ಹೆಚ್ಚುಕಡಿಮೆ ಸಮನಾಗಿರುವುದೆಂದು ಆತ ತೋರಿಸಿದ. ರಾಸಾಯನಿಕ ಧಾತುಗಳೆಲ್ಲವನ್ನೂ ಇಂಥ ತ್ರಿವಳಿಗಳಾಗಿ ವಿಂಗಡಿಸಬಹುದೆಂಬ ಆತನ ನಿರೀಕ್ಷೆ ಸಫಲವಾಗಲಿಲ್ಲ.

ಅಲ್ಲಿಂದ ಮುಂದಿನ ಹೆಜ್ಜೆಯನ್ನಿಟ್ಟವ ಇಂಗ್ಲೆಂಡಿನ ವಿಜ್ಞಾನಿ ಜಾನ್ ಅಲೆಕ್ಸಾಂಡರ್ ನ್ಯೂಲೆಂಡ್ಸ್. 1864ರಲ್ಲಿ ನ್ಯೂಲೆಂಡ್ಸ್ ತನ್ನ ಅಷ್ಟಕನಿಯಮವನ್ನು (ಲಾ ಆಫ್ ಆಕ್ಟೇವ್ಸ್) ಪ್ರತಿಪಾದಿಸಿದ. ಆತನ ಪ್ರಕಾರ ಧಾತುಗಳೆಲ್ಲವನ್ನೂ ಅವುಗಳ ಪರಮಾಣು ತೂಕಗಳ ಆರೋಹಣಕ್ರಮದಲ್ಲಿ ಬರೆದರೆ, ಆ ಸಾಲಿನಲ್ಲಿ ಯಾವ ಧಾತುವಿನಿಂದ ಎಣಿಸಲು ಪ್ರಾರಂಭಿಸಿದರೂ ಅಲ್ಲಿಂದ ಎಂಟನೆಯ ಸ್ಥಾನದಲ್ಲಿ ಅದನ್ನು ಹೋಲುವ ಇನ್ನೊಂದು ಧಾತು ಇರುತ್ತದೆ–ಸಂಗೀತದ ಸ್ವರಶ್ರೇಣಿಯಲ್ಲಿ ಪ್ರತಿಯೊಂದು ಸ್ವರವೂ ಅಲ್ಲಿಂದ ಎಂಟನೆಯ ಸ್ಥಾನದಲ್ಲಿ ಪುನರಾವರ್ತಿಸುವಂತೆ. ಆಗ ಪರಿಚಿತವಾಗಿದ್ದ ಧಾತುಗಳಲ್ಲಿ ಮೊದಲ ಹದಿನೇಳು ಧಾತುಗಳನ್ನು ಆರೋಹಣ ಕ್ರಮದಲ್ಲಿ ಇಲ್ಲಿ ಬರೆದಿದೆ. ಈ ಸಾಲಿನಲ್ಲಿ ಅಷ್ಟಕನಿಯಮವನ್ನು ಕಾಣಬಹುದು.

| | | | | | | |
|---|---|---|---|---|---|---|
| H | Li | Be | B | C | N | O |
| (1.008) | (6.94) | (9.01) | (10.82) | (12.01) | (14.01) | (16.06) |
| F | Na | Mg | Al | Si | P | S |
| (19.00) | (22.99) | (24.32) | (26.98) | (28.09) | (30.97) | (32.07) |
| Cl | K | Ca | | | | |
| (35.46) | (39.1) | (40.08) | | | | |

ಬೆರಿಲಿಯಂನಿಂದ 8ನೆಯ ಸ್ಥಾನದಲ್ಲಿ ಮೆಗ್ನೀಸಿಯಂ ಇದೆ; ಕಾರ್ಬನ್ನಿನಿಂದ ಎಂಟನೆಯ ಸ್ಥಾನದಲ್ಲಿ ಸಿಲಿಕನ್ ಇದೆ; ಫ್ಲೋರೀನಿನಿಂದ ಎಂಟನೆಯ ಸ್ಥಾನದಲ್ಲಿ ಕ್ಲೋರೀನ್ ಇದೆ. ಹೀಗೆ ಮುಂದುವರಿದರೆ ಮೊದಲ ಹದಿನೈದು ಇಪ್ಪತ್ತು ಧಾತುಗಳಾದ ಮೇಲೆ ಈ ನಿಯಮ ಮುರಿದುಬೀಳುತ್ತದೆ. ಅಷ್ಟೇ ಅಲ್ಲ; ಆಗ ತಿಳಿಯದಿದ್ದ, ಆದರೆ ಈಗ ತಿಳಿದಿರುವ ಜಡಾನಿಲಗಳಾದ ಹೀಲಿಯಂ, ನಿಯಾನ್ ಮೊದಲಾದುವನ್ನು ಅವುಗಳ ಪರಮಾಣುತೂಕಗಳ ಮೇರೆಗೆ ಈ ಸಾಲಿನಲ್ಲಿ ಸೂಕ್ತ ಸ್ಥಾನಗಳಲ್ಲಿ ಸೇರಿಸಿದರೆ ಗುಣಸಾಮ್ಯವಿರುವ ಧಾತು ಎಂಟನೆಯ ಸ್ಥಾನದಲ್ಲಿ ಪುನರಾವರ್ತಿಸುವುದರ ಬದಲು ಒಂಬತ್ತನೆಯ ಸ್ಥಾನದಲ್ಲಿ ಆಗುತ್ತದೆ. ಹೀಗೆ ಅಷ್ಟಕ ನಿಯಮ ಅಸಮರ್ಪಕವೆನಿಸಿತು. ಆದರೂ ಧಾತುಗಳ ಪರಮಾಣು ತೂಕ ಕ್ರಮದ ಸಾಲಿನಲ್ಲಿ ರಾಸಾಯನಿಕ ಗುಣಲಕ್ಷಣಗಳು ಆವರ್ತೀಯವಾಗಿ ಕಾಣಿಸಿಕೊಳ್ಳುವುವೆಂಬ ತತ್ತ್ವವನ್ನು ಸ್ಥೂಲವಾಗಿಯಾದರೂ ಮೊತ್ತಮೊದಲು ಗ್ರಹಿಸಿದನೆಂಬ ಕೀರ್ತಿ ನ್ಯೂಲೆಂಡ್ಸ್‌ಗೆ ಸಲ್ಲಲೇಬೇಕು.

1869ರಲ್ಲಿ ಮೆಂಡಿಲೀಫ್ ತನ್ನ ಆವರ್ತನಿಯಮವನ್ನು ಪ್ರಕಟಿಸಿದ. ಧಾತುಗಳನ್ನು ಅವುಗಳ ಪರಮಾಣುತೂಕಕ್ರಮದಲ್ಲಿ ಸಾಲಾಗಿ ಬರೆದರೆ ಅಂಥ ಸಾಲಿನಲ್ಲಿ ರಾಸಾಯನಿಕ ಗುಣಸಾಮ್ಯವಿರುವ ಧಾತುಗಳು ಆವರ್ತೀಯವಾಗಿ ಪುನಃ ಪುನಃ ಕಾಣಿಸಿ ಕೊಳ್ಳುವುವೆಂದು ಮಾತ್ರ ನಿರೂಪಿಸಿದನೇ ವಿನಾ ಅಂಥ ಆವರ್ತಗಳ ಒಂದು ಅವಧಿಯಲ್ಲಿ ಇಷ್ಟೇ ಧಾತುಗಳಿರುವು ವೆಂದು ಆತ ನಿಗದಿ ಮಾಡಲಿಲ್ಲ. ನ್ಯೂಲೆಂಡ್ಸ್‌ನ ನಿಯಮದ ಮೇಲೆ ಮೆಂಡಿಲೀಫ್ ಸಾಧಿಸಿದ ಸುಧಾರಣೆ ಇದೇ.



ಚಿತ್ರ 1. ಮೆಂಡಿಲೀಫನ ಕೈಬರೆಹದ ಕರಡುಪ್ರತಿ

ಸುಮಾರು ಇದೇ ಸಮಯದಲ್ಲಿ ಜರ್ಮನಿಯ ಲೋದರ್ ಮೇಯರ್ ಎಂಬಾತನು ಸ್ವತಂತ್ರವಾಗಿ ಆವರ್ತ ನಿಯಮವನ್ನು ಗುರುತಿಸಿ ಪ್ರಕಟಿಸಿದನಾದರೂ ಅದನ್ನು ವಿಶದೀಕರಿಸಲಿಲ್ಲ. ಮೆಂಡಿಲೀಫನಂತೆ ಆ ನಿಯಮದ ಆಧಾರದ ಮೇಲೆ ಒಂದು ಅಚ್ಚುಕಟ್ಟಾದ ಕೋಷ್ಟಕವನ್ನು ತಯಾರಿಸಲಿಲ್ಲ. ಆದ್ದರಿಂದ ಸಾಮಾನ್ಯವಾಗಿ ಆವರ್ತನಿಯಮವನ್ನು ಯಾವಾಗಲೂ ಮೆಂಡಿಲೀಫನ ಹೆಸರಿನೊಂದಿಗೆ ಸೇರಿಸುವುದು ವಾಡಿಕೆ. ಇದಕ್ಕೆ ಐದು ವರ್ಷ ಮುಂಚೆಯೇ ನ್ಯೂಲೆಂಡ್ಸ್ ಈ ನಿಯಮವನ್ನು ಅಸ್ಪಷ್ಟವಾಗಿ ಕಂಡುಕೊಂಡಿದ್ದನೆಂಬುದು ಮೆಂಡಿಲೀಫನಿ ಗಾಗಲೀ ಲೋದರ್ ಮೇಯರ್‌ನಿಗಾಗಲಿ ತಿಳಿದಿದ್ದಂತೆ ಕಾಣುವುದಿಲ್ಲ. ಅವರಿಬ್ಬರೂ ಸ್ವತಂತ್ರವಾಗಿಯೇ ಈ ನಿಯಮವನ್ನು ಗುರುತಿಸಿದಂತೆ ಕಾಣುತ್ತದೆ.

ಮೆಂಡಿಲೀಫ್ ತಾನು ಕಂಡುಹಿಡಿದ ಆವರ್ತನಿಯಮವನ್ನು ಮಾರ್ಗದರ್ಶಿ ಯಾಗಿಟ್ಟುಕೊಂಡು ಧಾತುಗಳ ವರ್ಗೀಕೃತ ಕೋಷ್ಟಕವೊಂದನ್ನು ತಯಾರಿಸಿದ. ಆಗ ಪರಿಚಯವಿದ್ದ ಧಾತುಗಳೆಲ್ಲವನ್ನೂ ಪರಮಾಣುತೂಕಗಳ ಆರೋಹಣಕ್ರಮದಲ್ಲಿ ಬರೆದು ಆ ಸಾಲಿನಲ್ಲಿ ಒಂದು ಧಾತುವಿನಿಂದ ಮುಂದೆ ಹೋಗುತ್ತ ಅದನ್ನು ಹೋಲುವ ಇನ್ನೊಂದು ಧಾತು

ಸಿಗುವವರೆಗಿನ ಅವಧಿಯನ್ನು ಒಂದು ಆವರ್ತವೆಂದು ಕರೆದ; ಹೀಗೆ ಆ ಧಾತುಗಳ ಸಾಲನ್ನು ಆವರ್ತಗಳಾಗಿ ಒಡೆದು ಅಂಥ ಆವರ್ತಗಳನ್ನು ಒಂದರ ಕೆಳಗೊಂದರಂತೆ ಇಟ್ಟು ಗುಣಸಾಮ್ಯವಿರುವ ಧಾತುಗಳು ಬೇರೆ ಬೇರೆ ನೀಟಸಾಲುಗಳಲ್ಲಿ (ಕಾಲಮ್ಸ್) ಬೀಳುವಂತೆ ಅಳವಡಿಸಿ ಕೋಷ್ಟಕವನ್ನು ರಚಿಸಿದ. ಅಲ್ಲಿಂದೀಚೆಗೆ ಕಂಡುಹಿಡಿದ ಧಾತುಗಳನ್ನೂ ಆತನ ಆವರ್ತಕೋಷ್ಟಕದಲ್ಲಿ ಸೂಕ್ತಸ್ಥಾನಗಳಿಗೆ ಸೇರಿಸಿದಾಗ ಅದರ ಮಾದರಿ ಹೇಗಿರುವುದೆಂಬುದನ್ನು ಚಿತ್ರ 2ರಲ್ಲಿ ತೋರಿಸಿದೆ.

ಈ ಕೋಷ್ಟಕದ ನೀಟಸಾಲುಗಳನ್ನು ಗುಂಪುಗಳೆಂದೂ (ಗ್ರೂಪ್ಸ್) ಅಡ್ಡಸಾಲುಗಳನ್ನು (ರೋಸ್) ಆವರ್ತಗಳೆಂದೂ (ಪೀರಿಯಡ್ಸ್) ಕರೆಯಲಾಗಿದೆ. ಬಲತುದಿಯಲ್ಲಿರುವ 0 (ಸೊನ್ನೆ) ಗುಂಪಿನಲ್ಲಿರುವ ಜಡಾನಿಲಗಳು ಆಗ ತಿಳಿದಿರಲಿಲ್ಲ. ಅವನ್ನು ಸದ್ಯಕ್ಕೆ ಕೈಬಿಟ್ಟು ಮೆಂಡಲೀಫನ ಆಲೋಚನಾಸರಣಿಯನ್ನು ಪರಿಶೀಲಿಸಬಹುದು. ಮೊತ್ತಮೊದಲನೆಯ ಧಾತುವಾದ ಹೈಡ್ರೋಜನ್ (H) ಆದಕೊಡಲೇ ಅದನ್ನು ತಕ್ಕಮಟ್ಟಿಗೆ ಹೋಲುವ ಲಿಥಿಯಂ (Li) ಬಂದದ್ದರಿಂದ ಒಂದನೇ ಆವರ್ತದಲ್ಲಿ ಹೈಡ್ರೋಜನ್ ಒಂದೇ ಧಾತುವಾಯಿತು. ಎರಡನೆಯ ಮತ್ತು ಮೂರನೆಯ ಆವರ್ತಗಳಲ್ಲಿ ಏಳೇಳು ಧಾತುಗಳು ಮಾತ್ರ ಇದ್ದುದರಿಂದ ಅವನ್ನು ಹ್ರಸ್ವ ಆವರ್ತಗಳೆಂದು (ಷಾರ್ಟ್ ಪೀರಿಯಡ್ಸ್) ಕರೆಯಲಾಯಿತು. ಈ ಎರಡೂ ಆವರ್ತಗಳನ್ನು ಒಂದರ ಕೆಳಗೊಂದು ಜೋಡಿಸಿದಾಗ ಏಳು ನೀಟಸಾಲುಗಳು ಅಥವಾ ಏಳು ಗುಂಪುಗಳು ರೂಪುಗೊಂಡುವು. ಈ ಒಂದೊಂದು ಗುಂಪಿನಲ್ಲಿಯೂ ಎರಡೆರಡು ಧಾತುಗಳು ಬಿದ್ದುವು. ಅಲ್ಲಿಗೆ ಕೋಷ್ಟಕದಲ್ಲಿ ಎರಡನೆಯ ಮತ್ತು ಮೂರನೆಯ ಆವರ್ತಗಳು ಪೂರ್ಣಗೊಂಡುವು. ಅಲ್ಲಿಂದ ಮುಂದೆ ಪೊಟ್ಯಾಸಿಯಂನಿಂದ (ಸಂಕೇತ K) ಪ್ರಾರಂಭವಾದ 4ನೆಯ ಆವರ್ತ ದೀರ್ಘ ಆವರ್ತ (ಲಾಂಗ್ ಪೀರಿಯಡ್) ಆಗಬೇಕಾಯಿತು. ಏಕೆಂದರೆ ಪುನಃ ಪೊಟ್ಯಾಸಿಯಂ ಅನ್ನು ಹೋಲುವ ರುಬಿಡಿಯಂ (ಸಂಕೇತ Rb) ತಲುಪಲು ಹದಿನೇಳು ಧಾತುಗಳನ್ನು ನೀಟಸಾಲುಗಳಾದ 7 ಗುಂಪುಗಳೊಳಕ್ಕೆ ಸೇರಿಸಲು ಮೆಂಡಲೀಫ್ ಒಂದು ಹೊಸ ಉಪಾಯವನ್ನು ಹೂಡಬೇಕಾಯಿತು. ಏಳು ಗುಂಪುಗಳಲ್ಲಿ ಒಂದೊಂದನ್ನು ಅಲ್ಲಿಂದ ಮುಂದೆ a ಮತ್ತು b ಉಪಗುಂಪುಗಳೆಂಬ (ಸಬ್‌ಗ್ರೂಪ್ಸ್) ಎರಡೆರಡು ಶಾಖೆಗಳಾಗಿ ಒಡೆದು ಈ ದೀರ್ಘ ಆವರ್ತದಲ್ಲಿ ಬರುವ ಮೊದಲ ಏಳು ಧಾತುಗಳನ್ನು ಆಯಾ ಗುಂಪಿನ a ಶಾಖೆಗಳಿಗೂ ಕೊನೆಯ ಏಳು ಧಾತುಗಳನ್ನು ಆಯಾ ಗುಂಪಿನ b ಶಾಖೆಗಳಿಗೂ ಸೇರಿಸಿದ. a ಉಪಗುಂಪುಗಳಿಗೆ ಬೀಳುವ ಧಾತುಗಳನ್ನು ಆವರ್ತದ a ಶ್ರೇಣಿಯೆಂದೂ (a ಸೀರೀಸ್) b ಉಪಗುಂಪುಗಳಿಗೆ ಬೀಳುವ ಧಾತುಗಳನ್ನು ಆವರ್ತದ ಅದೇ ಆವರ್ತದ b ಶ್ರೇಣಿಯೆಂದೂ ಕರೆಯಲಾಯಿತು. a ಶ್ರೇಣಿಯ 7 ಧಾತುಗಳಾದ ತರುವಾಯ b ಶ್ರೇಣಿಯ ಏಳು ಧಾತುಗಳು ಪ್ರಾರಂಭವಾಗುವುದಕ್ಕೆ ಮುಂಚೆ ಬರುವ ಮಧ್ಯದ ಮೂರು ಧಾತುಗಳನ್ನು ಸಂಕ್ರಮಣ ಧಾತುಗಳೆಂದು (ಟ್ರಾನ್ಸಿಷನ್ ಎಲಿಮೆಂಟ್ಸ್) ಕರೆದು ಅವನ್ನು ಬೇರೊಂದು ಗುಂಪಿಗೆ ಹಾಕಿ ಆ ಗುಂಪನ್ನು 8ನೆಯ ಗುಂಪೆಂದು ಕರೆಯಲಾಯಿತು. ಅಲ್ಲಿಂದ ಮುಂದಿನದಾದ 5ನೆಯ ಆವರ್ತವೂ ದೀರ್ಘವಾಗಿದ್ದು ಅದರಲ್ಲಿಯೂ ಇದೇ ಪರಿಸ್ಥಿತಿ ಕಂಡುಬಂದುದರಿಂದ ಅದನ್ನೂ ನಾಲ್ಕನೆಯ ಆವರ್ತದಂತೆಯೇ ರಚಿಸಲಾಯಿತು. ಆದರೆ 6ನೆಯ ಆವರ್ತದಲ್ಲಿ ಮೆಂಡಲೀಫ್ ಹೊಸ ಸಮಸ್ಯೆಯೊಂದನ್ನು ಎದುರಿಸಬೇಕಾಯಿತು. ಈ ಆವರ್ತದ ಮೊದಲ ಎರಡು ಧಾತುಗಳಾದ ಸೀಸಿಯಂ (ಸಂಕೇತ Cs) ಮತ್ತು ಬೇರಿಯಂಗಳು (ಸಂಕೇತ Ba) ಎಂದಿನಂತೆ 1(a) ಮತ್ತು 2 (b) ಉಪಗುಂಪುಗಳನ್ನು ಸೇರಿದುವು. ಸೀಸಿಯಂ ಅದೇ ಉಪಗುಂಪಿನಲ್ಲಿ ಮೇಲುಗಡೆ ಇರುವ ಪೊಟ್ಯಾಸಿಯಂ ಮತ್ತು ರುಬಿಡಿಯಮನ್ನೂ ಹಾಗೆಯೇ ಬೇರಿಯಂ ಅದರ ಮೇಲುಗಡೆ ಇರುವ ಕ್ಯಾಲ್ಸಿಯಂ (Ca) ಮತ್ತು ಸ್ಟ್ರಾನ್ಷಿಯಮ್ ಅನ್ನೂ (Sr) ಹೋಲುವುದರಿಂದ ಅವುಗಳಿಗೆ ದೊರೆತ ಸ್ಥಾನಗಳು ಸಮರ್ಪಕವಾಗಿದ್ದುವು. ಅವುಗಳಾದ ಮೇಲೆ ಬರುವ ಲ್ಯಾಂಥನಂ (La) ಸಹ 3(a) ಉಪಗುಂಪಿಗೆ ಹೊಂದಿಕೊಂಡಿತು. ಆದರೆ ಅಲ್ಲಿಂದ ಮುಂದೆ ಪರಮಾಣು ತೂಕಕ್ರಮದಲ್ಲಿ ಬರುವ ಹದಿನಾಲ್ಕು ಧಾತುಗಳೂ ಲ್ಯಾಂಥನಮನ್ನು ಅತ್ಯಂತ ನಿಕಟವಾಗಿ ಹೋಲುವುದರಿಂದ ಅವನ್ನು ಕ್ರಮವಾಗಿ ಮುಂದಿನ ಸ್ಥಾನಗಳಿಗೆ ಇಡುತ್ತ ಮುಂದುವರಿಯುವಂತಿರಲಿಲ್ಲ. ವಿರಳಭಸ್ಮಧಾತುಗಳು (ರೇರ್ ಅರ್ತ್ ಎಲಿಮೆಂಟ್ಸ್) ಎಂದು ಕರೆಸಿಕೊಳ್ಳುವ ಈ ಹದಿನೈದು ಧಾತುಗಳ ತರುವಾಯ ಬರುವ ಹಾಫ್ನಿಯಂ (Hf) ಆದರೆ 4(a) ಉಪಗುಂಪಿನಲ್ಲಿರುವ ಟೈಟೇನಿಯಂ (Ti) ಮತ್ತು ಸಿರ್ಕೋನಿಯಂಗಳೊಂದಿಗೆ (Zr) ಚೆನ್ನಾಗಿ ಹೊಂದಿ

**ಹ್ರಸ್ವ ಆವರ್ತ ಕೋಷ್ಟಕ**

| ಆವರ್ತ | ಶ್ರೇಣಿಗಳು | ಗುಂಪು I. a b | II. a b | III. a b | IV. a b | V. a b | VI. a b | VII. a b | VIII. | (0) |
|---|---|---|---|---|---|---|---|---|---|---|
| 1 | | H 1 | | | | | | | | He 2 |
| 2 | | Li 3 | Be 4 | B 5 | C 6 | N 7 | O 8 | F 9 | | Ne 10 |
| 3 | | Na 11 | Mg 12 | Al 13 | Si 14 | P 15 | S 16 | Cl 17 | | A 18 |
| 4 | a | K 19 | Ca 20 | Sc 21 | Ti 22 | V 23 | Cr 24 | Mn 25 | Fe 26 Co 27 Ni 28 | |
| | b | Cu 29 | Zn 30 | Ga 31 | Ge 32 | As 33 | Se 34 | Br 35 | | Kr 36 |
| 5 | a | Rb 37 | Sr 38 | Y 39 | Zr 40 | Nb 41 | Mo 42 | Tc 43 | Ru 44 Rh 45 Pd 46 | |
| | b | Ag 47 | Cd 48 | In 49 | Sn 50 | Sb 51 | Te 52 | I 53 | | Xe 54 |
| 6 | a | Cs 55 | Ba 56 | ವಿರಳ ಭಸ್ಮಧಾತುಗಳು 57–71 | Hf 72 | Ta 73 | W 74 | Re 75 | Os 76 Ir 77 Pt 78 | |
| | b | Au 79 | Hg 80 | Tl 81 | Pb 82 | Bi 83 | Po 84 | At 85 | | Rn 86 |
| 7 | a | Fr 87 | Ra 88 | Ac 89 | Th 90 | Pa 91 | U 92 | ಯುರೇನಿಯಂ ಆಚೆಯ ಧಾತುಗಳು 93 | | |

ಚಿತ್ರ 2

ಕೊಂಡಿತು. ಮೆಂಡಲೀಫ್ ಧೈರ್ಯವಾಗಿ ಹದಿನೈದು ವಿರಳಭಸ್ಮಧಾತುಗಳನ್ನೂ ಒಟ್ಟುಗೂಡಿಸಿ ಲ್ಯಾಂಥನಂ ಸ್ಥಾನದಲ್ಲಿಟ್ಟು ಆರನೆಯ ಆವರ್ತದ ರಚನೆಯನ್ನು ಮುಂದುವರಿಸಿಕೊಂಡು ಹೋದ. ಆಗ ಆ ಆವರ್ತವೂ ಹಿಂದಿನ ಎರಡು ದೀರ್ಘ ಆವರ್ತಗಳಂತೆಯೇ ರೂಪು ಗೊಂಡಿತು. ಕೊನೆಯದಾದ ಏಳನೆಯ ಆವರ್ತ ಹಿಂದಿನ ಮೂರು ಆವರ್ತಗಳಂತೆಯೇ



ಚಿತ್ರ 3

ಪ್ರಾರಂಭಿಸಿ ಅದರಲ್ಲಿನ ಆರನೆಯ ಧಾತುವಾದ ಯುರೇನಿಯಂ ಅನಂತರ ನಿಂತುಹೋಯಿತು. ಏಕೆಂದರೆ ಆಗ ತಿಳಿದಿದ್ದ ಧಾತುಗಳಲ್ಲಿ ಅತ್ಯಧಿಕ ಪರಮಾಣುತೂಕದ ಧಾತುವೆಂದರೆ ಯುರೇನಿಯಂ.

ಮೆಂಡಲೀಫನ ಜೀವಿತಕಾಲದಲ್ಲೇ ಕಂಡುಹಿಡಿಯಲಾದ ಜಡಾನಿಲಗಳಾದ ಹೀಲಿಯಂ (He), ನಿಯಾನ್ (Ne), ಆರ್ಗಾನ್ (A) ಮೊದಲಾದವುಗಳ ಪರಮಾಣುತೂಕಗಳನ್ನು ಪರಿಶೀಲಿಸಲಾಗಿ ಅವು ಒಂದೊಂದೂ ಆವರ್ತದ ಕೊನೆಯಲ್ಲಿ ಬಂದು ನಿಂತುವು. ಮೊದಲನೆಯ ಆವರ್ತದಲ್ಲಿ ಹೈಡ್ರೋಜನ್ ಆದ ಅನಂತರ ಹೀಲಿಯಂ, ಎರಡು ಮತ್ತು ಮೂರನೆಯ ಹ್ರಸ್ವ ಆವರ್ತಗಳಲ್ಲಿ ಎಂಟನೆಯ ಧಾತುಗಳಾಗಿ ನಿಯಾನ್ ಮತ್ತು ಆರ್ಗಾನ್ ಮುಂದಿನ ದೀರ್ಘ ಆವರ್ತಗಳಲ್ಲಿ ಒಂದೊಂದರಲ್ಲಿಯೂ ಹದಿನೆಂಟನೆಯ ಧಾತುಗಳಾಗಿ ಉಳಿದ ಜಡಾನಿಲಗಳೂ ಬಂದುವು. ಎಂಟನೆಯ ಗುಂಪಿನ ಸಂಕ್ರಮಣ ಧಾತುಗಳು ದೀರ್ಘ ಆವರ್ತಗಳ ಶ್ರೇಣಿಗಳಾದ ಅನಂತರ ಬರುವಂತೆಯೇ ಜಡಾನಿಲಗಳು b ಶ್ರೇಣಿಗಳಾದ ಅನಂತರ ಬರುವುದರಿಂದ ಅದನ್ನು 8(b) ಎಂಬ ಹೊಸ ಉಪಗುಂಪಿಗೆ ಸೇರಿಸಬಹುದು ಎಂಬಂತೆ ಕಾಣುವುದಾದರೂ ಆ ಏರ್ಪಾಡು ಸಮರ್ಪಕವಲ್ಲವೆಂಬುದನ್ನು ಸುಲಭವಾಗಿ ಮನಗಾಣಬಹುದು. ಏಕೆಂದರೆ ಹ್ರಸ್ವ ಆವರ್ತಗಳ ಕೊನೆಯಲ್ಲಿಯೂ ಜಡಾನಿಲಗಳಿವೆ. ಆದ್ದರಿಂದ ಅವನ್ನು ಬೇರೊಂದು ನೀಟಸಾಲಿಗೆ ಸೇರಿಸಿ ಅದನ್ನು ಸೊನ್ನೆ ಗುಂಪು (0 ಗ್ರೂಪ್) ಎಂದು ಕರೆಯಲಾಯಿತು. ಮೊದಲ ಏಳು ಗುಂಪುಗಳಲ್ಲಿ ಗುಂಪಿನ ಸಂಖ್ಯೆ ಬಲುಮಟ್ಟಿಗೆ ಆ ಗುಂಪಿಗೆ ಸೇರಿದ ಧಾತುಗಳ ವೇಲೆನ್ಸಿಗಳನ್ನು ಸೂಚಿಸುವಂತೆ ಜಡಾನಿಲಗಳ ವೇಲೆನ್ಸಿಯನು ಆ ಗುಂಪಿನ ಸಂಖ್ಯೆಯಾದ 0 ಸೂಚಿಸುವುದು. ಏಕೆಂದರೆ ಈ ಧಾತುಗಳಿಗೆ ರಾಸಾಯನಿಕ ಪಟುತ್ವವೇ ಇಲ್ಲ. ಅಷ್ಟೇ ಅಲ್ಲದೆ ಪ್ರತಿಯೊಂದು ಆವರ್ತದ ಕೊನೆಯಲ್ಲಿ ಬರುವ ಜಡಾನಿಲವನ್ನೂ ಬೇಕೆನಿಸಿದರೆ ಮುಂದಿನ ಆವರ್ತದ ಪ್ರಾರಂಭದಲ್ಲಿ ಹಾಕಿ ಸೊನ್ನೆಗುಂಪು ಒಂದನೆಯ ಗುಂಪಿಗೆ ಮುಂಚೆ ಬರುವಂತೆ ಮಾಡುವ ಸಾಧ್ಯತೆ ಇದೆ. ಈ ಕಾರಣಗಳಿಂದ ಈ ಏರ್ಪಾಡು ಸಮರ್ಪಕವೆನಿಸಿದೆ.

ಮೆಂಡಲೀಫ್ ಹೀಗೆ ತಯಾರಿಸಿದ ಆವರ್ತಕೋಷ್ಟಕದಲ್ಲಿ ಗುಣಸಾಮ್ಯವಿರುವ ಧಾತುಗಳು ಬೇರೆ ಬೇರೆಯಾಗಿ ಗುಂಪುಗೂಡಿಕೊಂಡಿರುವುದನ್ನು ನೋಡಬಹುದು. ಮೊದಲ ಎರಡು ಗುಂಪುಗಳಲ್ಲಿ ಹ್ರಸ್ವ ಆವರ್ತಗಳಿಗೆ ಸೇರಿದ ಅಗ್ರಧಾತುಗಳೆರಡೂ (ಟಿಪಿಕಲ್ ಆರ್ ಹೆಡ್ ಎಲಿಮೆಂಟ್ಸ್ : ಲಿಥಿಯಂ, ಸೋಡಿಯಂ ಮತ್ತು ಬೆರಿಲಿಯಂ, ಮೆಗ್ನೀಸಿಯಂ) ಆಯಾ ಗುಂಪಿನಲ್ಲಿರುವ a ಉಪಗುಂಪಿನ ಧಾತುಗಳನ್ನು ಹೋಲುತ್ತವೆ. ಈ ಎರಡು ಗುಂಪುಗಳ ಉಪಗುಂಪುಗಳಲ್ಲಿರುವ ಮೂರು ಮೂರು ಧಾತುಗಳು ತಮ್ಮ ತಮ್ಮಲ್ಲೇ ಪರಸ್ಪರ ಹೋಲಿಕೆ ತೋರುವ ಚಿಕ್ಕ ಕುಟುಂಬಗಳಾಗಿ ರೂಪುಗೊಂಡಿವೆ. ಅಂತೆಯೇ ಮೂರರಿಂದ ಏಳರವರೆಗಿನ ಐದು ಗುಂಪುಗಳಲ್ಲಿ ಅಗ್ರಧಾತುಗಳು b ಉಪಗುಂಪಿನ ಧಾತುಗಳನ್ನು ಹೋಲುತ್ತವೆ. ಈ ಐದು ಗುಂಪುಗಳ a ಉಪಗುಂಪುಗಳಲ್ಲಿರುವ ಧಾತುಗಳು ಅದೇ ರೀತಿ ಪರಸ್ಪರ ಹೋಲಿಕೆಯಿರುವ ಚಿಕ್ಕ ಕುಟುಂಬಗಳಾಗಿವೆ.

ಆವರ್ತಕೋಷ್ಟಕದಲ್ಲಿ ರಾಸಾಯನಿಕ ಧಾತುಗಳೆಲ್ಲವನ್ನೂ ಇಷ್ಟು ಅಚ್ಚುಕಟ್ಟಾಗಿ ವರ್ಗೀಕರಿಸಿದ್ದಲ್ಲದೆ ಆ ಕಾಲಕ್ಕೆ ಇನ್ನೂ ಕಂಡುಹಿಡಿಯದಿದ್ದ ಧಾತುಗಳ ಸ್ಥಾನಗಳನ್ನು ನಿರ್ದೇಶಿಸಿ ಹಾಗೆ ತೆರಪು ಬಿಟ್ಟ ಸ್ಥಾನಗಳನ್ನು ತುಂಬುವಂಥ ಧಾತುಗಳು ಮುಂದೆ ಪತ್ತೆಯಾಗುವುದೆಂದು ಭವಿಷ್ಯ ನುಡಿಯಲೂ ಮೆಂಡಲೀಫನಿಗೆ ಸಾಧ್ಯವಾಯಿತು.




ಚಿತ್ರ 4

ಉದಾಹರಣೆಗೆ ಮೊದಲನೆಯ ದೀರ್ಘ ಆವರ್ತದ b ಶ್ರೇಣಿಯಲ್ಲಿ ತಾಮ್ರ (Cu, ಪರಮಾಣುತೂಕ 63.54) ಮತ್ತು ಸತುಗಳನ್ನು (Zn, ಪರಮಾಣು ತೂಕ 65.38) 1(b) ಮತ್ತು 2(b) ಉಪಗುಂಪುಗಳಲ್ಲಿಟ್ಟ ತರುವಾಯ ಪರಮಾಣುತೂಕ ಕ್ರಮದಲ್ಲಿ ಬಂದುದು ಆರ್ಸೆನಿಕ್ (As, ಪರಮಾಣುತೂಕ 74.91). ಆದರೆ ಆರ್ಸೆನಿಕ್ ಗುಣಲಕ್ಷಣಗಳಲ್ಲಿ ಐದನೆಯ ಗುಂಪಿನ ನೈಟ್ರೊಜನ್ (N), ಫಾಸ್ಫರಸ್‌ಗಳನ್ನು (P) ನಿಕಟವಾಗಿ ಹೋಲುವುದನ್ನು ಗಮನಿಸಿದ ಮೆಂಡಲೀಫ್ ಧೈರ್ಯವಾಗಿ ಆರ್ಸೆನಿಕನ್ನು 5(b) ಉಪಗುಂಪಿನಲ್ಲಿರಿಸಿ 3(b) ಯಲ್ಲಿ (ಅಂದರೆ ಅಲ್ಯೂಮಿನಿಯಂ ಕೆಳಗೆ) ಒಂದು ಸ್ಥಾನವನ್ನೂ 4(b) ಯಲ್ಲಿ (ಅಂದರೆ ಸಿಲಿಕನ್ ಕೆಳಗೆ) ಒಂದು ಸ್ಥಾನವನ್ನು ಖಾಲಿಯಾಗಿ ಬಿಟ್ಟುಬಿಟ್ಟ. ಆ ಖಾಲಿ ಸ್ಥಾನಗಳಿಗೆ ಹೊಂದಿಕೊಳ್ಳುವ ಎರಡು ಧಾತುಗಳನ್ನು ಮುಂದೆ ಕಂಡುಹಿಡಿಯಲಾಗುವುದೆಂದು ಭವಿಷ್ಯ ನುಡಿದನಲ್ಲದೆ ಅವುಗಳ ಗುಣಲಕ್ಷಣಗಳ ಬಗ್ಗೆ ಮುನ್ಸೂಚನೆ ಕೊಟ್ಟ. ಅಲ್ಲಿಂದೀಚೆಗೆ ಕಂಡುಹಿಡಿಯಲಾದ ಗ್ಯಾಲಿಯಂ (Ga, ಪರಮಾಣುತೂಕ 96.72) ಮತ್ತು ಜರ್ಮೇನಿಯಂ (Ge, ಪರಮಾಣುತೂಕ 72.6) ಆ ಸ್ಥಾನಗಳನ್ನು ತುಂಬಿದುವು. ಹೀಗೆ ಆತ ಭವಿಷ್ಯ ನುಡಿದ ಇನ್ನೂ ಹಲವಾರು ಧಾತುಗಳು ತರುವಾಯ ಪತ್ತೆಯಾಗಿವೆ.

ಮೆಂಡಲೀಫ್‌ನ ಕೋಷ್ಟಕ ಇಷ್ಟು ಯಶಸ್ವಿಯಾದರೂ ಅದರ ಬಗ್ಗೆ ಕೆಲವು ಆಕ್ಷೇಪಣೆ ಗಳಿದ್ದುವು. ಹದಿನೈದು ವಿರಳಭಸ್ಮಧಾತುಗಳನ್ನು ಒಂದೇ ಧಾತುವಿನ ಸ್ಥಾನದಲ್ಲಿರಿಸಿದುದು ಅಂಥ ಆಕ್ಷೇಪಣೆಗಳಲ್ಲೊಂದು. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಪರಸ್ಪರ ಹೋಲಿಕೆಯಿರುವ ಧಾತುಗಳನ್ನು ಒಂದೇ ನೀಟಸಾಲಿನಲ್ಲಿ ತರುವ ಉದ್ದೇಶದಿಂದ ಕೋಷ್ಟಕಕ್ಕೆ ಆಧಾರವಾಗಿದ್ದ ಪರಮಾಣುತೂಕಗಳ ಆರೋಹಣ ಕ್ರಮವನ್ನೇ ಆತ ನಿರ್ಲಕ್ಷಿಸಿದ್ದುಂಟು. ಉದಾಹರಣೆಗೆ ಎರಡನೆಯ ದೀರ್ಘ ಆವರ್ತದ b ಶ್ರೇಣಿಯ ಕೊನೆಯಲ್ಲಿರುವ ಅಯೊಡೀನ್ (I) ಪರಮಾಣುತೂಕ (126.9) ಟೆಲೂರಿಯಂನ (Te) ಪರಮಾಣುತೂಕಕ್ಕಿಂತ (127.6) ಕಡಿಮೆ ಇದೆಯಾದರೂ ಟೆಲೂರಿಯಂ ಅನ್ನು 6 (b) ಯಲ್ಲಿ ಸೆಲೀನಿಯಂನೊಡನೆ (Se) ಹೊಂದಿಕೊಳ್ಳು ವಂತೆಯೂ ಅಯೊಡೀನನ್ನು 7(b) ಯಲ್ಲಿ ಬ್ರೊಮೀನ್ನಿನೊಡನೆ (Br) ಹೊಂದಿಕೊಳ್ಳು ವಂತೆಯೂ ಸೇರಿಸುವ ಧೈರ್ಯಮಾಡಿದ.

20ನೆಯ ಶತಮಾನದ ಮೊದಲೆರಡು ದಶಕಗಳಲ್ಲಿ ಪರಮಾಣುರಚನೆಯನ್ನು ಕುರಿತ ಜ್ಞಾನ (**ನೋಡಿ– ಪರಮಾಣು**) ನಮಗೆ ಒದಗಿದಮೇಲೆ ಆವರ್ತಕೋಷ್ಟಕದ ಮೇಲೆ ಹೊಸಬೆಳಕು ಚೆಲ್ಲಿದಂತಾಯಿತು. ಮೊದಲನೆಯದಾಗಿ ಧಾತುಗಳ ವರ್ಗೀಕರಣಕ್ಕೆ ಪರಮಾಣು ತೂಕಕ್ಕಿಂತ ಮೂಲಭೂತವಾದುದು ಧಾತುಗಳ ಪರಮಾಣು ಸಂಖ್ಯೆ (ಅಟಾಮಿಕ್ ನಂಬರ್) ಎನ್ನುವುದು ಖಚಿತವಾಯಿತು. ಯಾವುದೇ ಧಾತುವಿನ ರಾಸಾಯನಿಕ ಸ್ವಭಾವವನ್ನು ನಿರ್ಧರಿಸುವುದು ಅದರ ಪರಮಾಣು ಸಂಖ್ಯೆ–ಪರಮಾಣುವಿನ ಬೀಜದಲ್ಲಿರುವ (ನ್ಯೂಕ್ಲಿಯಸ್ ಮೇಲಿರುವ) ವಿದ್ಯುದಂಶ. ಆದ್ದರಿಂದ ಆವರ್ತಕೋಷ್ಟಕದಲ್ಲಿ ಧಾತುಗಳಿರಬೇಕಾದುದು ಪರಮಾಣು ಸಂಖ್ಯೆಗಳ ಆರೋಹಣ ಕ್ರಮದಲ್ಲೇ ವಿನಾ ಪರಮಾಣುತೂಕಗಳ ಕ್ರಮದಲ್ಲಲ್ಲ. ಆಗ ಆವರ್ತಕೋಷ್ಟಕದಲ್ಲಿ ಧಾತುವಿನ ಕ್ರಮಸಂಖ್ಯೆಯೇ ಪರಮಾಣುಸಂಖ್ಯೆಯಾಗುತ್ತದೆ. ಈ ದೃಷ್ಟಿಯಲ್ಲಿ ನೋಡಿದಾಗ ಕೆಲವು ಸಂದರ್ಭಗಳಲ್ಲಿ ಪರಮಾಣುತೂಕಕ್ರಮವನ್ನು ಉಲ್ಲಂಘಿಸಿರುವುದು ಅಪರಾಧವೇನಲ್ಲ. ಉದಾಹರಣೆಗೆ ಟೆಲೂರಿಯಂ ಅಯೊಡೀನ್‌ಗಳಲ್ಲಿ ಅವುಗಳ ಐಸೊಟೋಪು ಸಂಯೋಜನೆಯ ಕಾರಣ ಟೆಲೂರಿಯಂ ಪರಮಾಣು ತೂಕ ಹೆಚ್ಚಾಗಿರುವುದಾದರೂ ಅದರ ಪರಮಾಣು ಸಂಖ್ಯೆ (52) ಅಯಾಡೀನ್ ಪರಮಾಣು ಸಂಖ್ಯೆಗಿಂತ (53) ಒಂದು ಕಡಿಮೆ. ಆದ್ದರಿಂದ ಟೆಲೂರಿಯಂ ಮೊದಲು ಬಂದುದು ಸಾಧುವೇ ಆಗಿದೆ.

ಅದಕ್ಕೂ ಮಿಗಿಲಾಗಿ ಧಾತುಗಳ ಪರಮಾಣುಸಂಖ್ಯಾಕ್ರಮದಲ್ಲಿ ರಾಸಾಯನಿಕ ಗುಣಲಕ್ಷಣ ಗಳು ಆವರ್ತೀಯವಾಗಿ ಕಾಣಿಸಿಕೊಳ್ಳಲು ಒಂದು ಕಾರಣ ಸಹ ಗೊತ್ತಾದಂತಾಯಿತು. ಪರಮಾಣುಗಳ ಹೊರವಲಯಗಳಲ್ಲಿನ ಎಲೆಕ್ಟ್ರಾನ್ ವಿನ್ಯಾಸಗಳೇ (ಎಲೆಕ್ಟ್ರಾನಿಕ್ ಕನ್‌ಫಿಗು ರೇಷನ್ಸ್) ಆವರ್ತಕೋಷ್ಟಕಕ್ಕೆ ಬೀಗದ ಕೈ. ಪರಮಾಣು ಬೀಜದ ಸುತ್ತ ಇರುವ ಮೊದಲನೆಯ K ಚಿಪ್ಪಿನಲ್ಲಿ (K ಶೆಲ್) ಎರಡು ಎಲೆಕ್ಟ್ರಾನ್‌ಗಳು ಒಂದಾದಮೇಲೊಂದರಂತೆ ತುಂಬಿಕೊಂಡಾಗ ಉಂಟಾದ ಹೈಡ್ರೊಜನ್ ಮತ್ತು ಹೀಲಿಯಂಗಳು ಆವರ್ತಕೋಷ್ಟಕದ ಒಂದನೆಯ ಆವರ್ತವನ್ನು ರೂಪಿಸುತ್ತವೆ. L ಮತ್ತು M ಚಿಪ್ಪುಗಳಲ್ಲಿ ಎಂಟೆಂಟು ಎಲೆಕ್ಟ್ರಾನ್‌ಗಳು ತುಂಬಿಕೊಂಡುದರಿಂದ ಮೊದಲ ಎರಡು ಹ್ರಸ್ವ ಆವರ್ತಗಳು ರೂಪುಗೊಳ್ಳುತ್ತವೆ. N ಚಿಪ್ಪಿನಲ್ಲಿ ಎರಡು ಎಲೆಕ್ಟ್ರಾನ್‌ಗಳು ತುಂಬಿಕೊಂಡುದರಿಂದ ಉಂಟಾದ ಧಾತುಗಳು ಪೊಟ್ಯಾಸಿಯಂ ಮತ್ತು ಕ್ಯಾಲ್ಸಿಯಂಗಳು. ಆದುದರಿಂದಲೇ ಈ ಎರಡು ಧಾತುಗಳು ಅದೇ ಬಗೆಯ ಎಲೆಕ್ಟ್ರಾನ್ ವಿನ್ಯಾಸವಿರುವ ಮೇಲಿನ ಸೋಡಿಯಂ ಮತ್ತು ಮೆಗ್ನೀಸಿ ಯಂಗಳನ್ನು ಹೋಲುತ್ತವೆ. ಅಲ್ಲಿಂದ ಮುಂದೆ ಅಸಂಪೂರ್ಣವಾಗಿರುವ M ಚಿಪ್ಪನ್ನು ಭರ್ತಿಮಾಡುವುದರಿಂದ ಉಂಟಾದ ಧಾತುಗಳು ಹತ್ತು – ಸ್ಕ್ಯಾಂಡಿಯಂನಿಂದ (Sc) ಸತುವಿನ (Zn) ವರೆಗೆ ಅಲ್ಲಿಂದ ಪುನಃ N ಚಿಪ್ಪಿಗೆ ಎಲೆಕ್ಟ್ರಾನ್‌ಗಳು ತುಂಬಿಕೊಳ್ಳಲು ಪ್ರಾರಂಭಿಸಿ ಗ್ಯಾಲಿಯಂನಿಂದ (Ga) ಕ್ರಿಪ್ಟಾನ್ (Kr) ವರೆಗಿನ ಆರು ಧಾತುಗಳು ಉಂಟಾಗುತ್ತವೆ. ಈ ಆರು ಧಾತುಗಳ ಎಲೆಕ್ಟ್ರಾನ್ ವಿನ್ಯಾಸಗಳು ಆಯಾ ಗುಂಪಿನ ಮೇಲುಗಡೆ ಇರುವ ಅಗ್ರಧಾತುಗಳ ಎಲೆಕ್ಟ್ರಾನ್ ವಿನ್ಯಾಸಗಳಂತೆಯೇ ಇರುವುದರಿಂದ ಅವು ಆಯಾ ಅಗ್ರಧಾತು ಗಳನ್ನು ಹೋಲುತ್ತವೆ. ಮುಂದಿನ ದೀರ್ಘ ಆವರ್ತಗಳಿಗೂ ಇದೇ ವಾದಸರಣಿ ಅನ್ವಯವಾಗುತ್ತದೆ.

ಎಲೆಕ್ಟ್ರಾನ್ ವಿನ್ಯಾಸದ ದೃಷ್ಟಿಯಲ್ಲಿ ವಿರಳಭಸ್ಮಧಾತುಗಳ ಸ್ಥಾನಕ್ಕೂ ಸಮರ್ಪಕ ಸಮಾಧಾನ ದೊರೆಯುತ್ತದೆ. ಲ್ಯಾಂಥನಂಗೆ ಬರುವ ವೇಳೆಗೆ ಎಲೆಕ್ಟ್ರಾನುಗಳು P ಚಿಪ್ಪನ್ನು ತುಂಬಲು ಪ್ರಾರಂಭಿಸಿದ್ದರೂ N ಚಿಪ್ಪು ಇನ್ನೂ ಅಸಂಪೂರ್ಣವಾಗಿದ್ದು ಅದರಲ್ಲಿ ಇನ್ನೂ ಹದಿನಾಲ್ಕು ಎಲೆಕ್ಟ್ರಾನುಗಳಿಗೆ ಆಸ್ಪದವಿರುತ್ತದೆ. N ಚಿಪ್ಪಿನಲ್ಲಿ ಈ ಹದಿನಾಲ್ಕು ಎಲೆಕ್ಟ್ರಾನುಗಳು ತುಂಬಿಕೊಳ್ಳುವಾಗ ವಿರಳಭಸ್ಮ ಧಾತುಗಳು ಉಂಟಾಗುತ್ತವೆ. ಆದ್ದರಿಂದ ಲ್ಯಾಂಥನನ್ನು ಅನುಸರಿಸಿ ಬರುವ ಈ ಹದಿನಾಲ್ಕು ಧಾತುಗಳಲ್ಲಿ O ಮತ್ತು P ಚಿಪ್ಪುಗಳೆರಡರಲ್ಲೂ ಎಲೆಕ್ಟ್ರಾನ್ ವಿನ್ಯಾಸ ಏನೂ ಬದಲಾಗದೆ ಹಾಗೇ ಉಳಿದಿರುತ್ತದೆ. ಸಹಜವಾಗಿಯೇ ಅವುಗಳ ರಾಸಾಯನಿಕ ಗುಣಲಕ್ಷಣಗಳಲ್ಲಿ ಕಂಡುಬರುವ ವ್ಯತ್ಯಾಸ ಅತ್ಯಂತ ಕಡಿಮೆ.

ಧಾತುಗಳ ಪರಮಾಣುಗಳಲ್ಲಿಯ ಎಲೆಕ್ಟ್ರಾನ್ ವಿನ್ಯಾಸಗಳು ಆವರ್ತಕೋಷ್ಟಕಕ್ಕೆ ಬುನಾದಿ ಎಂಬುದು ಸ್ಪಷ್ಟವಾದಮೇಲೆ ನೀಲ್ಸ್ ಬೋರ್ ಮತ್ತು ಜೆ. ಜೆ. ಥಾಮ್ಸನ್‌ರವರು ಎಲೆಕ್ಟ್ರಾನ್ ವಿನ್ಯಾಸಗಳ ಆಧಾರದಮೇಲೆ ರಚಿಸಿದ ಬೇರೊಂದು ಮಾದರಿಯ ಆವರ್ತಕೋಷ್ಟಕವನ್ನು (ಚಿತ್ರ–3) ಪ್ರಕಟಿಸಿದರು. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು: ಅಸಂಪೂರ್ಣ ಒಳಚಿಪ್ಪುಗಳನ್ನು ಎಲೆಕ್ಟ್ರಾನ್‌ಗಳು ತುಂಬಿಕೊಳ್ಳುವುದರಿಂದ ಉಂಟಾದ ಧಾತುಗಳನ್ನು ಚೌಕಟ್ಟಿನಲ್ಲಿ ಸೇರಿಸಿದೆ; a, b ಉಪಗುಂಪುಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿಲ್ಲ.

ಬೋರ್–ಥಾಮ್ಸನ್ ಮಾದರಿಯನ್ನು ಈ ರೀತಿ ಪಿರಮಿಡ್ ಆಕಾರದಲ್ಲಿ ಬರೆಯದೆ ಅಗಲವಾಗಿ ಹರಡಿ ಬರೆದಿರುವ ಒಂದು ಮಾದರಿ ಕೋಷ್ಟಕ ಈಗ ಹೆಚ್ಚು ಜನಪ್ರಿಯವಾಗಿದೆ (ಚಿತ್ರ–4). ಇವನ್ನು ವಿಸ್ತೃತ ಕೋಷ್ಟಕವೆಂದೂ (ಲಾಂಗ್ ಟೇಬಲ್) ಹಳೆಯ ಮೆಂಡಲೀಫ್ ಕೋಷ್ಟಕವನ್ನು ಹ್ರಸ್ವ ಕೋಷ್ಟಕವೆಂದೂ (ಷಾರ್ಟ್ ಟೇಬಲ್) ಕರೆಯುವುದುಂಟು. ಈ ಕೋಷ್ಟಕದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಎರಡು. ಮೊದಲನೆಯದಾಗಿ ಮೂರರಿಂದ ಏಳನೆಯ ಗುಂಪಿನವರೆಗೆ ಹ್ರಸ್ವ ಆವರ್ತಗಳಲ್ಲಿ ಬರುವ ಅಗ್ರಧಾತುಗಳು ಎಲೆಕ್ಟ್ರಾನ್ ವಿನ್ಯಾಸದಲ್ಲಿ ಮತ್ತು ರಾಸಾಯನಿಕ ಗುಣಲಕ್ಷಣಗಳಲ್ಲಿ ಬಲಗಡೆಯ ಶಾಖೆಗಳನ್ನು ಹೋಲುವುದರಿಂದ ಅವುಗಳನ್ನು a,b ಉಪಗುಂಪುಗಳೆಂದು ನಿರ್ದೇಶಿಸಿದ್ದಾರೆ. ಆದ್ದರಿಂದ ಈ ಐದು ಗುಂಪುಗಳಲ್ಲಿ a, b ಉಪಗುಂಪುಗಳು ಮೆಂಡಲೀಫ್ ಕೋಷ್ಟಕದಲ್ಲಿದ್ದುದಕ್ಕೆ ಅದುಲುಬದಲಾಗಿವೆ.

ಎರಡನೆಯದಾಗಿ ಲ್ಯಾಂಥನಂ ಅನುಸರಿಸಿ ಬರುವ 14 ಧಾತುಗಳನ್ನು ಲ್ಯಾಂಥನಂ ಶ್ರೇಣಿ ಎಂದು ಕರೆದು ಕೋಷ್ಟಕದ ಹೊರಗಡೆ ಎತ್ತಿಡಲಾಗಿದೆ. ಅಂತೆಯೇ ಕೊನೆಯ ಆವರ್ತದಲ್ಲಿ ಆಕ್ಟಿನಿಯಂ ತರುವಾಯ ಬರುವ ಥೋರಿಯಂ, ಪ್ರೊಟೊ ಆಕ್ಟಿನಿಯಂ, ಯುರೇನಿಯಂ ಮತ್ತು ಯುರೇನಿಯಂ ಆಚೆಯ ಧಾತುಗಳನ್ನೂ ಒಟ್ಟುಗೂಡಿಸಿ ಈ ಆಕ್ಟಿನಿಯಂ ಶ್ರೇಣಿ ಲ್ಯಾಂಥನಂ ಶ್ರೇಣಿಗೆ ಜವಾಬಾಗಿ (ಕರೆಸ್‌ಪಾಂಡಿಂಗ್) ಬರುವ ಇನ್ನೊಂದು ಶ್ರೇಣಿಯೆಂದು ಗುರುತಿಸಿ ಇದನ್ನೂ ಕೋಷ್ಟಕದ ಹೊರಗಡೆ ಎತ್ತಿಡಲಾಗಿದೆ.

(ಜೆ.ಆರ್.ಎಲ್.)

**ಆವರ್ತದರ್ಶಕ:** ಆವರ್ತಿಸುತ್ತಿರುವ ಅಥವಾ ಕಂಪಿಸುತ್ತಿರುವ ಕಾಯಗಳನ್ನು ಅವು ನಿಶ್ಚಲಸ್ಥಿತಿಯಲ್ಲಿರುವಾಗಿನಷ್ಟೇ ವಿವರವಾಗಿ ವೀಕ್ಷಿಸಲು ಅನುಕೂಲಿಸುವಂತೆ ನಿಯತಕಾಲಿಕ ಬಿಟ್ಟು ಬಿಟ್ಟು ಬರುವ (ಪೀರಿಯಾಡಿಕ್, ಇಂಟರ್‌ಮಿಟೆಂಟ್) ಬೆಳಕನ್ನು ಬೀರುವ ಉಪಕರಣ (ಸ್ಟ್ರೋಬೊಸ್ಕೋಪ್). ಸೈಮನ್ ಆರ್, ವಾಸ್ಟಾಂಫರ್ ಇದರ ಸಂಶೋಧಕ (1832). ಸ್ಟ್ರೋಬೊಸ್ಕೋಪ್ ಎಂಬ ಹೆಸರಿತ್ತವನೂ ಅವನೇ. ಆವರ್ತಿಸುತ್ತಿರುವ ಕಾಯ ಅಥವಾ ದೃಶ್ಯ ನೋಡಲು ಅಸ್ಪಷ್ಟ. ಆವರ್ತನ ವೇಗ ಏರಿದಂತೆ ಅಸ್ಪಷ್ಟತೆ ಏರಿ ವಿವರ ಮಸಕಾಗುವುದು. ಅಪಾರಕ ಫಲಕಗಳಿರುವ ವಿದ್ಯುದ್ಬೀಸಣಿಗೆ (ಫ್ಯಾನ್) ವೇಗವಾಗಿ ಆವರ್ತಿಸುವಾಗ ಪಾರಕವೋ ಎಂಬ ಭ್ರಮೆ ಮೂಡುವುದು ಈ ಕಾರಣದಿಂದ. ಇಂಥ ವಸ್ತುಗಳ ವಿವರ ಸೆರೆಹಿಡಿಯಲು ಆವರ್ತದರ್ಶಕ ಸಹಾಯಕಾರಿ. ಒಂದೇ ವಸ್ತು ಬಿಟ್ಟು ಬಿಟ್ಟು ಪುನಃ ಪುನಃ ತೋರಿ ಮಾಯವಾಗುತ್ತಿರಲಿ. ಆ ಘಟನೆಯ ವೇಗ ಏರಿದಂತೆ ವಸ್ತು ನಿಶ್ಚಲವಾಗಿಯೇ ಇದೆ ಎಂಬ ಭಾವ ಮನಸ್ಸಿಗೆ ಮೂಡುವುದು ; ಆದ್ದರಿಂದ ಅದರ ವಿವರಗಳು ಸ್ಪಷ್ಟವಾಗುವುವು. ಕಣ್ಣಿನ ಒಟ್ಟುಗೂಡಿಸುವ ಶಕ್ತಿ ಇದರ ಕಾರಣ. ಇದರ ಭೌತಕಾರಣ ಇಷ್ಟು. ಒಂದು ದೃಶ್ಯ ಬೆಳಗಿದಾಗ ನೇತ್ರಪಟಲದ ಮೇಲೆ ಅದರ ಪ್ರತಿಬಿಂಬ ಬಿದ್ದು ಬೆಳಕು ಆರಿಹೋದ ಮೇಲೆಯೂ ಅದು ಸ್ವಲ್ಪ ಕಾಲ ಉಳಿಯುತ್ತದೆ. ಹೀಗೆ ಪ್ರತಿಬಿಂಬ ಉಳಿದಿರುವಾಗಲೇ ಪುನಃ ಅದೇ ದೃಶ್ಯ ಬೆಳಗಲ್ಪಟ್ಟರೆ ಮಧ್ಯೆ ಬೆಳಕು ತುಂಡಾದುದು ಕಣ್ಣಿನ ಗಮನಕ್ಕೆ ಬರುವುದಿಲ್ಲ ; ಬದಲು ದೃಶ್ಯ ಅವಿಚ್ಛಿನ್ನವಾಗಿ ಬೆಳಗುತ್ತಿದೆ ಎಂದು ಭಾಸವಾಗುವುದು. ಕಣ್ಣಿನ ಈ ಗುಣವನ್ನು ಉಪಯೋಗಿಸಿಕೊಂಡು ಆವರ್ತದರ್ಶಕದ ರಚನೆ ಇದೆ. ಇದರ ಭೌತನಿಯಮ–ಬೆಳಗಿಸಲ್ಪಡುವ ವಸ್ತು ಬದಲಾಗಬಾರದು ಮತ್ತು ಕಾಣುವುದು, ಕಾಣದಿರುವುದು ಇವುಗಳ ನಡುವಿನ ಕಾಲಾಂತರ ಆದಷ್ಟು ಕಡಿಮೆಯಾಗಿರಬೇಕು.

ಆವರ್ತದರ್ಶಕ ಬೀರುವ ಬಿಟ್ಟು ಬಿಟ್ಟು ಬರುವ ಬೆಳಕಿನ ಕಂಬಿ, ವಸ್ತುವಿನ ಆವರ್ತವೇಗ ಇವುಗಳ ನಡುವೆ ಸ್ಪಷ್ಟ ಹೊಂದಾಣಿಕೆ ಆವಶ್ಯ. ಹೀಗಿದ್ದಲ್ಲಿ ನಾವು ನೋಡುವ ವಸ್ತು ನಿಯತಸ್ಥಾನಕ್ಕೆ ಬರುವಾಗ ಬೆಳಕಿನ ಕಂಬಿ ಅದರ ಮೇಲೆ ಬಿದ್ದು ಆ ವಸ್ತು ಬೆಳಗುವುದು. ಆದ್ದರಿಂದ ವಸ್ತುವಿನ ಆವರ್ತನಾವಧಿಯೂ ಬೆಳಕಿನ ಕಂಬಿಯ ಬಿಟ್ಟು ಬಿಟ್ಟು ಬರುವ ಅಂತರಾಯಿಕತೆಯ ಅವಧಿಯೂ ಸಮಾನವಾಗಿವೆ. ಸೆಕೆಂಡಿಗೆ ಇಪ್ಪತ್ತೈದು (ಅಥವಾ ಹೆಚ್ಚು) ಸಲ ಬೆಳಗಲ್ಪಟ್ಟ ಆವರ್ತನ ವಸ್ತುವಿನ ಪ್ರತಿಬಿಂಬ ನೇತ್ರಪಟಲದ ಮೇಲೆ ನಿಶ್ಚಲವಾಗಿರುತ್ತದೆ.

ಇಂದಿನ ಆವರ್ತದರ್ಶಕಗಳಲ್ಲಿ ಉಪಯೋಗಿಸುವ ವಿಧಾನವನ್ನು 1836ರಲ್ಲಿ ಜೋಸೆಫ್ ಆ್ಯಂಟನಿ ಫರ್ಡಿನ್ಯಾಂಡ್ ಪ್ಲೇಟೊ ಮೊಟ್ಟ ಮೊದಲು ಬಳಸಿದನೆಂದು ಹೇಳುತ್ತಾರೆ. ಫ್ಯಾರಡೆ ಸಹ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿಯ ಉಪಕರಣವನ್ನು ವರ್ಣಿಸಿದ್ದಾನೆ. 1866ರಲ್ಲಿ ಆಗಸ್ಟ್ ಟಾಪ್ಲರ್ ಈ ಆವರ್ತದರ್ಶಕದ ಜೋಡಣೆ ಮತ್ತು ಉಪಯೋಗಗಳನ್ನು ವಿಮರ್ಶಿಸಿ ಮೊದಲ ಬಾರಿಗೆ ವಿಜ್ಞಾನಿಗಳ ಗಮನವನ್ನು ಸೆಳೆದ. ಅವನ ಕಾಲದಿಂದ ವೈಜ್ಞಾನಿಕ ಅನ್ವೇಷಣೆಗಳಲ್ಲಿ ಮತ್ತು ಕೈಗಾರಿಕೋದ್ಯಮಗಳಲ್ಲಿ ಆವರ್ತದರ್ಶಕಗಳ ಉಪಯೋಗ ಪ್ರಾರಂಭವಾಯಿತು.



ಚಿತ್ರ 1

ಮೊದಮೊದಲಿನ ಆವರ್ತದರ್ಶಕಗಳಲ್ಲಿ ಅವ್ಯಾಹತ ವೀಕ್ಷಣೆ (ಕಂಟಿನ್ಯುಯಸ್ ಅಬ್ಸರ್ವೇಷನ್) ಮತ್ತು ಅನವ್ಯಾಹತ ಬೆಳಕಿನಲ್ಲಿ ವೀಕ್ಷಣೆ ಎಂಬ ಎರಡು ಪದ್ಧತಿಗಳು ರೂಢಿಯಲ್ಲಿದ್ದುವು. ವಸ್ತುಕಂಪನದಿಂದ ಶಬ್ದೋತ್ಪತ್ತಿಯಾಗುವ ವಿಷಯದ ಮೇಲೆ ಅನ್ವೇಷಣೆ ನಡೆಯುತ್ತಿದ್ದಾಗ ಆವರ್ತದರ್ಶಕದ ಉಪಯೋಗ ಮೊದಲಬಾರಿಗೆ ಆಯಿತು. ಮುಂದೆ ವಸ್ತುಕಂಪನವನ್ನು ಉಪಯೋಗಿಸಿಕೊಂಡ ಆವರ್ತದರ್ಶಕಗಳನ್ನು ಚಲನೆಯಲ್ಲಿರುವ ಯಂತ್ರಭಾಗಗಳ ಪರಿಶೀಲನೆಯಲ್ಲಿಯೂ ಕೈಗಾರಿಕೋದ್ಯಮಗಳಲ್ಲಿ ತಯಾರಾಗುವ ವಸ್ತುಗಳನ್ನು ತಯಾರಿಕೆ ನಡೆಯುತ್ತಿದ್ದಾಗಲೇ ಪರೀಕ್ಷಿಸಲೂ ಬಳಸಿದರು.




ಚಿತ್ರ 3 ಏಕಕಣಜೀವಿ ನಾವಿಕುಲಾ

ಮೊದಲನೆಯ ಚಿತ್ರದಲ್ಲಿ ಅಡ್ಡಕಂಪನ ಸಂಖ್ಯೆ ಚಕ್ರಭ್ರಮಣ ವೇಗಕ್ಕೆ ಅನುಗುಣವಾಗಿ ಅಳವಡಿಕೆಯಾಗಿದೆ. A ಭಾಗ ಕಣ್ಣೆದುರಿಗೆ ಬರುವ ವೇಳೆಗೆ ಸರಿಯಾಗಿ ಅಡ್ಡ ಕಂಪನದಲ್ಲಿರುವ ತಟ್ಟೆಯ ಸೀಳುಗಂಡಿಯೂ ಆ ನೇರಕ್ಕೆ ಬಂದು, ಚಕ್ರದ A ಭಾಗವನ್ನು ಕಣ್ಣಿಗೆ ಪ್ರತಿಸಲವೂ ಪ್ರದರ್ಶನ ಮಾಡುತ್ತದೆ. ಇದರಲ್ಲಿ ಕಂಪನ ಸಂಖ್ಯೆ 25ಕ್ಕೂ ಬಹುಶಃ ಜಾಸ್ತಿಯಾಗಿಯೇ ಇರುವುದರಿಂದ ಮತ್ತು ಸೆಕೆಂಡಿಗೆ 50ಕ್ಕೂ ಹೆಚ್ಚು ಬಾರಿ ಒಂದೇ ಸ್ಥಿತಿಯಲ್ಲಿರುವ ಭಾಗ ಕಣ್ಣಿಗೆ ಕಂಡುಬರುವುದರಿಂದ ಆ ಭಾಗ ನಿಶ್ಚಲವಾಗಿದ್ದಂತೆ ವಿವರಗಳನ್ನು ಸ್ಪಷ್ಟವಾಗಿ ಕಾಣಬಹುದು. ಇಲ್ಲಿ ಅವ್ಯಾಹತ ದೀಪವನ್ನು ಬಳಸಿದೆ.

ಎರಡನೆಯ ಚಿತ್ರದಲ್ಲಿ ಕಣ್ಣು ನೇರವಾಗಿ ಸತತವಾಗಿ ಯಂತ್ರದಿಂದ ಹೊರಬೀಳುವ ತಯಾರಿಕೆಯನ್ನು ಗಮನಿಸುತ್ತಿರುವಾಗ ಸುತ್ತಿಗೆಗಳು ಹಿಂದೆ ಸರಿಯುವ ವೇಳೆಗೆ ಸರಿಯಾಗಿ ಪ್ರತಿಸಲವೂ ದೃಶ್ಯಕ್ಷೇತ್ರ ಬೆಳಗಲ್ಪಡುತ್ತದೆ. ಹೀಗೆಯೇ ಯಾವ ಕಾರ್ಯಾಮುಖದಲ್ಲಿ ಬೇಕಾದರೆ ಅಲ್ಲಿ ಯಂತ್ರವನ್ನಾಗಲೀ ತಯಾರಿಕ ವಸ್ತುವನ್ನಾಗಲೀ ಗಮನಿಸಬಹುದು.

ಚಲಿಸುತ್ತಿರುವ ಬಲು ಚಿಕ್ಕ ಯಂತ್ರಭಾಗಗಳನ್ನು ಆವರ್ತದರ್ಶಕಗಳ ಸಹಾಯದಿಂದ ಸೆರೆಹಿಡಿದು ಪ್ರತಿಬಿಂಬವನ್ನು ಎಷ್ಟು ಬೇಕಾದರಷ್ಟು ವರ್ಧಿಸಿ ಪ್ರತಿಯೊಂದು ಬಿಂದುಗಳ ಸ್ಥಿತಿಯನ್ನು ಪರಿಶೀಲಿಸಬಹುದು.

ಆವರ್ತದರ್ಶಕ ವೀಕ್ಷಣೆಗಳಿಂದ ಕಾರ್ಯನಿರತವಾಗಿರುವ ಯಂತ್ರಭಾಗಗಳ ಸ್ಥಿತಿ ನಿಷ್ಕ್ರಿಯಸ್ಥಿತಿಗಿಂತ ಭಿನ್ನವಾಗಿರುವುದು ತಿಳಿದುಬಂದಿರುವುದಲ್ಲದೆ, ಸನ್ನಿವೇಶಕ್ಕೆ ತಕ್ಕಂತೆ ಅವುಗಳಲ್ಲಿ ಆಗುವ ವ್ಯತ್ಯಾಸಗಳು, ಒತ್ತಡವನ್ನು ತೀವ್ರವಾಗಿ ಅನುಭವಿಸುವ ಭಾಗಗಳು, ಒತ್ತಡವನ್ನು ಸ್ವಲ್ಪವೂ ಅನುಭವಿಸದೆ ಇರುವ ಭಾಗಗಳು ಇತ್ಯಾದಿಗಳ ವಿವರಗಳು ತಿಳಿದುಬರುತ್ತವೆ. ಇದರಿಂದ ವೈಜ್ಞಾನಿಕ ಕುತೂಹಲ ತೃಪ್ತಿಗೆ ಹೆಚ್ಚು ಅನ್ವೇಷಣೆಗಳು ನಡೆಯುವುದಕ್ಕೆ ಅವಕಾಶವಾಗುವುದರ ಜೊತೆಗೆ ಕೈಗಾರಿಕೆಯಲ್ಲಿ ಹೆಚ್ಚು ದಿನ ಬಾಳಿಕೆ ಬರುವ ಮತ್ತು ದಾರ್ಢ್ಯ ಮತ್ತು ದಕ್ಷತೆಗೆ ಬೇಕಾದ ಬಿಡಿಭಾಗಗಳಿರುವ ಯಂತ್ರಗಳನ್ನು ತಯಾರಿಸಲು ಸಾಧ್ಯವಾಗುವುದು.

ಆವರ್ತದರ್ಶಕದ ಸಮರ್ಥಕ್ರಿಯೆಗೆ, ಅದರ ಪ್ರತಿಯೊಂದು ಬಿಡಿಭಾಗದ ಕಾರ್ಯ ಪ್ರತ್ಯೇಕವಾಗಿಯೂ ಸಾಮೂಹಿಕವಾಗಿಯೂ ಅತ್ಯಂತ ಪರಿಷ್ಕೃತವಾಗಿರಬೇಕು. ಇಂಥ ಹೊಂದಾಣಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ದೃಶ್ಯ ನಿಶ್ಚಲವಾಗಿ ಕಾಣುವ ಬದಲು ನಿಧಾನವಾಗಿ ಚಲಿಸುವಂತೆ ಕಾಣುತ್ತದೆ. ಅನವ್ಯಾಹತ ದೀಪಗಳನ್ನು ಉಪಯೋಗಿಸುವ ಆವರ್ತದರ್ಶಕದಿಂದ ಒಂದು ಆವರ್ತಿಸುವ ವಸ್ತುವನ್ನು ನೋಡುತ್ತಿರುವಾಗ ದೀಪ ಹೊತ್ತಿ ಆರುವ ಕಾಲಾವಕಾಶವನ್ನು ವ್ಯತ್ಯಾಸ ಮಾಡುತ್ತಿದ್ದರೆ ಆ ವಸ್ತು ಬೇರೆ ಬೇರೆ ಮಂದ ವೇಗಗಳಿಂದ ಚಲಿಸುತ್ತಿರುವಂತೆ ಕಾಣುತ್ತದೆ. ಈ ವೇಗಗಳೆಲ್ಲವೂ ವಸ್ತುವಿನ ನಿಜವೇಗಕ್ಕಿಂತ ಕಡಿಮೆಯೇ ಇದ್ದರೂ ಪರಿಶೀಲನೆಗೆ ಅಡಚಣೆ ತರುತ್ತವೆ.

ಚಲನಚಿತ್ರಗಳಲ್ಲಿ ಈ ಮೇಲೆ ಹೇಳಿದಂತೆ ಹೊಂದಾವಣೆ ಬೇಕಾದಂತೆ ವ್ಯತ್ಯಾಸಮಾಡಿ ವಿಸ್ಮಯಕರ ಹಾಗೂ ತಮಾಷೆಯ ಸನ್ನಿವೇಶಗಳು ಕಾಣುವಂತೆ ಮಾಡುತ್ತಾರೆ. ಉದಾಹರಣೆಗೆ, ಅಕ್ಷದಮೇಲೆ ತಿರುಗುತ್ತಲಿರುವ ಮೋಟರ್ ಗಾಡಿಯೊಂದರ ಚಕ್ರವನ್ನು ಬೇಕು ಬೇಕಾದ ವೇಗಗಳಲ್ಲಿ ಹಿಂದಕ್ಕೆ ಅಥವಾ ಮುಂದಕ್ಕೆ (ಮೇಲಕ್ಕೆ ಮತ್ತು ಕೆಳಕ್ಕೆ ಸಹ ಯಾವ ದಿಕ್ಕಿನಲ್ಲಿ ಬೇಕಾದರಲ್ಲಿ) ಚಲಿಸುವಂತೆ ತೆರೆಯಮೇಲೆ ಚಿತ್ರಪ್ರದರ್ಶನ ಮಾಡಲು ಸಹಾಯವಾಗುವಂತೆ ಛಾಯಾಗ್ರಹಣ ಮಾಡಬಹುದು. ಚಕ್ರದ ಭ್ರಮಣಸಂಖ್ಯೆ ಛಾಯಾಗ್ರಾಹಕದ ಕವಾಟ ಮುಚ್ಚಿ, ತೆರೆಯುವ ಆವರ್ತ ಸಂಖ್ಯೆಗೆ ಸಮನಾದರೆ ಚಕ್ರ ನಿಶ್ಚಲವಾಗಿದ್ದಂತೆ ತೆರೆಯ ಮೇಲೆ ಚಿತ್ರ ಬೀಳುವುದು. ಭ್ರಮಣಸಂಖ್ಯೆ ಹೆಚ್ಚಾದರೆ ಚಕ್ರ ಮುಂದೋಡುವಂತೆ, ಕಡಿಮೆಯಾದರೆ ಹಿಂದೋಡುವಂತೆ ಚಿತ್ರದಲ್ಲಿ ಕಾಣುವುದು (ಇವೆರಡು ಸಂಖ್ಯೆಗಳೂ ಸೆಕೆಂಡಿಗೆ 25ಕ್ಕೆ ಕಡಿಮೆ ಇರಕೂಡದು ಅಷ್ಟೆ). ಇದಕ್ಕೆ ಸರಿಯಾಗಿ ಅನವ್ಯಾಹತವಾಗುವ ದೀಪವೂ ಇದ್ದರೆ, ಕವಾಟ ಮುಚ್ಚಿ, ತೆರೆಯುವುದರಲ್ಲಿ ಬಂದ ತಪ್ಪುಗಳು ಸರಿಹೋಗುವುವು.

ಇದರಿಂದ ಚಲನಭಾಗ ಪರೀಕ್ಷೆಗಾಗಲಿ ಸಿನಿಮಾ ಛಾಯಾಗ್ರಹಣ ಉಪಯೋಗಕ್ಕಾಗಲಿ, ಚಳಕ ಪ್ರದರ್ಶನಕ್ಕಾಗಲಿ ಹೊಂದಾಣಿಕೆ ನಿಯಂತ್ರಣ ಮಾಡಲು ಸಾಧ್ಯವಾಗುವ ಮತ್ತು ಉಜ್ಜ್ವಲ ಪ್ರಕಾಶ ಬೀರುವ ದೀಪಗಳು ಬೇಕು. ಮೊದಲು ಉಪಯೋಗಿಸುತ್ತಿದ್ದ ಆವರ್ತದರ್ಶಕಗಳಲ್ಲಿನಂತೆ ಈಗಿನ ಸಂದರ್ಭಗಳಲ್ಲಿ ಯಾಂತ್ರಿಕವಾಗಿ ದೀಪದರ್ಶನ ಸಂಖ್ಯೆಯನ್ನು ನಿಯಂತ್ರಿಸಿದರೂ ದೊರೆಯುವ ಪ್ರತಿಫಲ ಅಷ್ಟು ಸಮರ್ಪಕವಾಗಿರುವುದಿಲ್ಲ. ಹೆಚ್ಚು ವಿಭವಾಂತರ ವಿದ್ಯುತ್ಪ್ರವಾಹದ ಅಂತರ ಕಡಿಮೆಯಿದ್ದಾಗ ಎರಡು ವಿದ್ಯುದ್ಧ್ರುವಗಳ ನಡುವೆ ತೇಜೋಮಯವಾದ ವಿದ್ಯುತ್ ಕಿಡಿಗಳು ಉಂಟಾಗುತ್ತವೆಯಾದರೂ ಕಿಡಿಗಿಂಡಿಗೆ ಇರುವ ಕಾಲಾವಧಿಯನ್ನು ನಿಯಂತ್ರಿಸುವುದು ಬಲುಕಷ್ಟ. ಜೊತೆಗೆ ಕಿಡಿಯಿಂದ ವಿವಿಧ ಅನಿಲೋತ್ಪತ್ತಿಯಾಗುವುದರಿಂದ ಅದರ ಬೆಳಕನ್ನು ಪಾರದರ್ಶಕಗಳ ಮೂಲಕ ಉಪಯೋಗಿಸಬೇಕಾಗುತ್ತದೆ. ಇವು ಪ್ರಾರಂಭದಲ್ಲಿ ಸರಿಯಾಗಿದ್ದರೂ ಬಹುಬೇಗ ಅನಿಲದ ಹೊಗೆಯಿಂದ ಮಸಕಾಗುವುದರಿಂದ ಪುನಃ ಪುನಃ ಮಧ್ಯೆ ಮಧ್ಯೆ ಶುಚಿಪಡಿಸುವ ಕೆಲಸ ಬೇರೆ ಆಗಬೇಕಾಗುತ್ತದೆ. ಈ ತೊಂದರೆಗಳಿಂದ ಪಾರಾಗಲು ವಿದ್ಯುದ್ವಿಸರ್ಜಕ ಕೊಳವೆಗಳನ್ನು (ಎಲೆಕ್ಟ್ರಿಕ್ ಡಿಸ್‌ಚಾರ್ಜ್ ಟ್ಯೂಬ್ಸ್) ಉಪಯೋಗಿಸುತ್ತಾರೆ. ಕಾಲಕಾಲಕ್ಕೆ ಸರಿಯಾಗಿ ಇವುಗಳ ಧ್ರುವಗಳಲ್ಲಿ ಅತಿ ಹೆಚ್ಚಿನ ವಿಭವಾಂತರ ಉಂಟಾಗಿ ಉಜ್ಜ್ವಲ ಕಾಂತಿಯಿಂದ ವಿದ್ಯುದ್ವಿಸರ್ಜನೆಯಾಗುವಂತೆ ನಿಯಂತ್ರಿಸುವ ಒಂದು ವಿದ್ಯುನ್ಮಂಡಲವನ್ನು ಜೊತೆಗೆ ಉಪಯೋಗಿಸುತ್ತಾರೆ. ಈ ಮಂಡಲಸಹಿತವಾದ ದೀಪವನ್ನು ಆವರ್ತದರ್ಶಕ ದೀಪಗಳೆಂದು ಕರೆಯಲಾಗಿದೆ. ಈ ರೀತಿಯ ದೀಪವೊಂದನ್ನು ಚಿತ್ರ 3ರಲ್ಲಿ ಕೊಡಲಾಗಿದೆ.

ಇದರ ಮಂಡಲದಲ್ಲಿನ ವಿಸರ್ಜಕ ಕೊಳವೆಯಲ್ಲಿ ನಾಲ್ಕು ವಿದ್ಯುನ್ನಾಳಗಳಿದ್ದು (ಎಲೆಕ್ಟ್ರೋಡ್ಸ್) ಆವರಣದಲ್ಲಿ ನಿಯಾನ್ ಅನಿಲವಿದೆ. ಇದನ್ನು ನಿಯಾನ್ ಥೈರಾಟ್ರಾನ್ ಎಂದು ಕರೆಯುತ್ತಾರೆ. ಇದರ ವಿದ್ಯುದ್ವಿಸರ್ಜಕ ಸಂಖ್ಯೆ ಮಿನಿಟಿಗೆ 600–14,140; ಇದನ್ನು ಬೇಕಾದಂತೆ ನಿಯಂತ್ರಿಸಬಹುದು. ಈ ದೀಪ ಬೆಳಗುವ ಕಾಲ $40 \times 10^{-3}$ ಸೆಕೆಂಡ್.

ಇದರಲ್ಲಿ $C_1$ ಮೊದಲಾಗಿ 6 ಸಾಂದ್ರಕಗಳು (ಕಂಡೆನ್ಸರ್ಸ್) ನಿಯಂತ್ರಣ ಸಾಧನಗಳು. ಆವರ್ತದರ್ಶಕ ದೀಪಗಳು ಚಲನಚಿತ್ರ ಛಾಯಾಗ್ರಹಣದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆದಿವೆ. ಮೊದಲಲ್ಲಿ ಈ ದೀಪ ಮಿನುಗುವಿಕೆ ಮತ್ತು ಛಾಯಾಗ್ರಾಹಕದ ಕವಾಟ ತೆರೆಯುವಿಕೆ ಎರಡೂ ಒಟ್ಟಿಗೆ ನಡೆಯುವಂತೆ ಕಾಲ ಹೊಂದಾಣಿಕೆ ಅಗತ್ಯವಾಗಿದ್ದರಿಂದ ಕಷ್ಟ ಕೊಡುತ್ತಿತ್ತು. ಈ ಚಲನಚಿತ್ರಗ್ರಹಣದಲ್ಲಿ ಅಭಿನಯದ ದೃಶ್ಯ ನಡೆಯುವಾಗ ಅದರ ಚಿತ್ರಗಳನ್ನು ಸೆಕೆಂಡಿಗೆ ಸು. 25 ಚಿತ್ರಗಳನ್ನು ಸಮವೇಗದಲ್ಲಿ ತೆಗೆದುಕೊಂಡು, ಪುನಃ ಅದೇ ವೇಗದಲ್ಲಿ ಚಿತ್ರಗಳನ್ನು ತೆರೆಯಮೇಲೆ ಪ್ರದರ್ಶಿಸಿದರೆ, ಆಗ ಆ ಅಭಿನಯ ತೆರೆಯಮೇಲೆ ಪ್ರದರ್ಶಿತವಾಗುತ್ತದೆ. ಇದಕ್ಕಾಗಿ ಚಿತ್ರಗ್ರಹಣ ಮಾಡುವಾಗ ಛಾಯಾಗ್ರಾಹಿ ತಟ್ಟೆ ಒಂದಾದ ಮೇಲೊಂದು ದೃಶ್ಯಕ್ಕೆ ಎದುರಾಗಿ ಬರಬೇಕಲ್ಲದೆ ಒಂದು ತಟ್ಟೆ ಚಿತ್ರ ಚೌಕಟ್ಟು ಸಂಪೂರ್ಣವಾಗಿ ಅಲ್ಲಿಂದ ಸರಿದು ಮತ್ತೊಂದು ಅದರ ಜಾಗವನ್ನು ಆಕ್ರಮಿಸಿಕೊಂಡ ಮೇಲೆ ಛಾಯಾಗ್ರಾಹಕದ ಕವಾಟ ತೆರೆಯಲ್ಪಟ್ಟು ದೃಶ್ಯದ ಚಿತ್ರ ಗ್ರಹಣವಾಗುತ್ತದೆ. ಆವರ್ತದರ್ಶಕ ದೀಪಗಳ ನಿರ್ಮಾಣ ಮಾಡುವ ಮೊದಲು ಈ ಕಾರ್ಯಗಳು ಸಂಪೂರ್ಣ ಹೊಂದಾಣಿಕೆಯಲ್ಲಿ ನಡೆಯುವುದು ಅಸಾಧ್ಯವಾಗಿ, ಚಲನಚಿತ್ರ ಪ್ರದರ್ಶಿತವಾದಾಗ ಮಧ್ಯೆ ಮಧ್ಯೆ ದೃಶ್ಯಗಳು ಮಸುಕಾಗುವುದು, ಅಸಂಬದ್ಧವಾಗಿ ಕಾಣುವುದು ಮತ್ತು ಅಸಮಂಜಸವಾಗುವುದು–ಇವು ಸಾಧಾರಣವಾಗಿದ್ದುವು. ಆವರ್ತದರ್ಶಕ ದೀಪಗಳು ಬಂದಮೇಲೆ, ಅದೂ 10 ವರ್ಷಗಳಿಂದ ಈಚೆಗೆ ಚಲನಚಿತ್ರ ಛಾಯಾಗ್ರಾಹಕದ ಪ್ರವೇಶದ್ವಾರದ ಕವಾಟವನ್ನೇ ತ್ಯಜಿಸಲಾಗಿದೆ. ಇದಕ್ಕೆ ಬದಲಾಗಿ ಛಾಯಾಗ್ರಾಹಕದ ಒಂದು ಚೌಕಟ್ಟು ಸರಿದು ಇನ್ನೊಂದು ಅದರ ಜಾಗಕ್ಕೆ ಸರಿಯಾಗಿ ಬಂದೊಡನೆ ಮಿಂಚುವಂತೆ ಆವರ್ತದರ್ಶಕ ದೀಪವನ್ನು ನಿಯಂತ್ರಿಸಬಹುದು. ಇತ್ತೀಚೆಗೆ ಈ ಛಾಯಾಗ್ರಾಹಿ ಚೌಕಟ್ಟುಗಳನ್ನು ಸರಿಸುವ ಮತ್ತು ದೀಪವನ್ನು ಮಿಂಚಿಸುವ ಕಾರ್ಯಗಳೆರಡೂ ಒಂದೇ ವಿದ್ಯುನ್ಮಂಡಲದಿಂದ ಕಾಲ ಹೊಂದಾಣಿಕೆಯಲ್ಲಿ ನಡೆಯಿಸಲ್ಪಡುತ್ತಿವೆ. ಇದರಿಂದ ಪ್ರದರ್ಶಿತ ಚಲನಚಿತ್ರಗಳಲ್ಲಿ ಹೊಂದಾಣಿಕೆಯ ನ್ಯೂನತೆಗಳಿಂದ ಆಗುತ್ತಿದ್ದ ಆಭಾಸಗಳು ಕಾಣುವುದಿಲ್ಲ.

ವ್ಯವಹಾರಸೌಲಭ್ಯಕ್ಕಾಗಿ ಅಮೆರಿಕದ ಮೆಸಾಚುಸೆಟ್ಸ್‌ನಲ್ಲಿಯ ವೈಜ್ಞಾನಿಕ ಕಾರ್ಯಾಲಯದ ಹೆರಾಲ್ಡ್ ಎಡ್ಗರ್‌ಟನ್ ಮತ್ತು ಅವರ ಸಂಗಡಿಗರು ಅನೇಕ ಸರಳ ವಿದ್ಯುನ್ಮಂಡಲಗಳಿಂದ ನಿಯಮಿತವಾದ ಆವರ್ತದರ್ಶಕ ದೀಪಗಳನ್ನು ನಿರ್ಮಿಸಿದ್ದಾರೆ. ಇವುಗಳಲ್ಲಿ ಒಂದೇ ಬಾರಿ ಮಿಂಚಿ ಉರಿದು ಹೋಗುವ, ಛಾಯಾಚಿತ್ರಗ್ರಹಣಕ್ಕೆ ಉಪಯುಕ್ತವಾದ ಅತಿ ಪ್ರಕಾಶದ ದೀಪಗಳಿಂದ ಹಿಡಿದು ಮೇಲೆ ಹೇಳಿದ ಚಲನಚಿತ್ರಗ್ರಹಣ ಮತ್ತು ಪ್ರದರ್ಶನಗಳಿಗೆ ಉಪಯುಕ್ತವಾಗುವ ಸೆಕೆಂಡಿಗೆ 1,500 ಬಾರಿ ಮಿಂಚುವ ದೀಪಗಳವರೆಗೆ, ನಾನಾ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುವ ವಿವಿಧ ಆವರ್ತದರ್ಶಕ ದೀಪಗಳಿವೆ. ಇವುಗಳಲ್ಲಿ ಅತಿ ವೇಗ ಚಲನೆಯಲ್ಲಿರುವ ವಸ್ತುಗಳ ಚಲನ ಛಾಯಾಗ್ರಹಣವನ್ನು ಮಾಡಿ, ಮಂದವೇಗದಲ್ಲಿ ಅದರ ಚಿತ್ರವನ್ನು ತೆರೆಯಮೇಲೆ ಪ್ರದರ್ಶಿಸಿ, ಚಲನೆಯ ವಿವಿಧ ಸ್ಥಿತಿಯಲ್ಲಿನ ವಿವರಗಳನ್ನು ಪರೀಕ್ಷಿಸಲು ಸಹಾಯ ಮಾಡುವ ವಿವಿಧ ದೀಪಗಳಿವೆ. ಹೀಗೆಯೇ ಹಾರುತ್ತಿರುವ ಗುಂಡು, ಜೆಟ್ ವಿಮಾನ ಮುಂತಾದುವುಗಳ ಚಲನೆಯ ಪರಿಶೀಲನೆಗೆ $10^{-3}$ ಸೆಕೆಂಡಿಗೊಮ್ಮೆ ಮಿಂಚುವ ದೀಪಗಳು, ಶಬ್ದವೇಗ ಮತ್ತು ಕ್ಷಿಪಣಿ ವೇಗಗಳ ಅಧ್ಯಯನಕ್ಕೆ $10^{-7}$ ಸೆಕೆಂಡಿಗೊಮ್ಮೆ ಮಿಂಚುವ ದೀಪಗಳು ಉಪಯೋಗಕ್ಕೆ ಒದಗಿವೆ. ಕ್ಷಣಿಕವಾದರೂ ಸೂರ್ಯನಷ್ಟು ಬೆಳಕನ್ನು ಚೆಲ್ಲಿ ಆರುವ ಆವರ್ತದರ್ಶಕ ದೀಪಗಳು ಕೂಡ ಈಗ ನಿರ್ಮಿತವಾಗಿವೆ. ಇವುಗಳ ಉಪಯೋಗ ವಿಜ್ಞಾನ ಮತ್ತು ಕೈಗಾರಿಕೆಗಳಲ್ಲಿ ಹೆಚ್ಚುತ್ತಲೂ ಇವೆ.




ಚಿತ್ರ. 3

ಯಂತ್ರಗಳ ವೇಗ ಅಳೆಯುವ ಉಪಕರಣದ ಹೆಸರು ವೇಗಮಾಪಕ (ಟ್ಯಾಕೋಮೀಟರ್). ಇದನ್ನು ಯಂತ್ರಕ್ಕೆ ಜೋಡಿಸಿರುವುದರಿಂದ ಯಂತ್ರ ಇದರ ಭಾರವನ್ನು ಹೊತ್ತಿರುವುದು. ದೊಡ್ಡ ಯಂತ್ರಗಳಿಗೆ ಈ ಭಾರ ಹೆಚ್ಚೇನೂ ಅಲ್ಲ; ಪರಿಣಾಮಕಾರಿಯೂ ಅಲ್ಲ. ಆದರೆ ಒಂದು ಅಶ್ವಸಾಮರ್ಥ್ಯಕ್ಕಿಂತ ಕಡಿಮೆ ಸಾಮರ್ಥ್ಯದ ಯಂತ್ರವನ್ನು ಅಳೆಯಲು ವೇಗಮಾಪಕವನ್ನು ಅದರ ಮೇಲೆ ಹೇರಿದರೆ ಯಂತ್ರದ ಕೆಲಸವೇ ಬದಲಾಗಬಹುದು. ಇಂಥಲ್ಲಿ ಯಂತ್ರವನ್ನು ಅವಲಂಬಿಸದ, ಆದರೂ ಅದರ ವೇಗವನ್ನು ನಿಷ್ಕೃಷ್ಟವಾಗಿ ಅಳೆಯುವ ಒಂದು ಹೊಸ ವೇಗಮಾಪಕ ಬೇಕು. ಅಂಥ ಉಪಕರಣದ ಹೆಸರು ಆವರ್ತಕದರ್ಶಕ ವೇಗಮಾಪಕ (ಸ್ಟ್ರೊಬೋಸ್ಕೋಪಿಕ್ ಟ್ಯಾಕೋಮೀಟರ್). ಇದು ಯಂತ್ರವನ್ನು ಯಾವ ಬಗೆಯಲ್ಲಿಯೂ–ಯಾಂತ್ರಿಕವಾಗಿಯಾಗಲೀ ವಿದ್ಯುಚ್ಛಕ್ತಿಗಾಗಲೀ–ಹೊಂದಿಕೊಂಡಿಲ್ಲ. ಆದ್ದರಿಂದ ಯಂತ್ರದ ವೇಗವನ್ನು ಎಂಥ ಸನ್ನಿವೇಶದಲ್ಲಿಯೂ ಈ ಉಪಕರಣದ ಸಹಾಯದಿಂದ ಅಳೆಯಬಹುದು. *

**ಆವರ್ತನ:** ಯಾವುದೇ ನಿಯತಕಾಲಿಕ ವಿದ್ಯಮಾನವನ್ನು ವಿವರಿಸುವಾಗ ಈ ಪದವನ್ನು ಬಳಸಲಾಗುತ್ತದೆ. ಉದಾಹರಣೆಗೆ ಲೋಲಕದ ಆವರ್ತನ. (ಎಸ್.ಎನ್.ಕೆ.)

**ಆವರ್ತನೆ, ಪರಿಭ್ರಮಣೆ:** ಭೂಮಿ ಅಥವಾ ಯಾವುದೇ ಆಕಾಶಕಾಯ ತನ್ನ ಅಕ್ಷದ ಮೇಲೆ ಬುಗುರಿಯಂತೆ ಸುತ್ತುವ ವಿದ್ಯಮಾನಕ್ಕೂ ಆವರ್ತನೆ ಅಥವಾ ಭ್ರಮಣೆ ಎಂಬ ಹೆಸರಿದೆ. ಉದಾ: ಭೂ ಆವರ್ತನಾವಧಿ 24 ಗಂಟೆಗಳು.

ಹಗಲಿನ ಎರಡನೆಯ ಅರ್ಧದ ಪ್ರಾರಂಭಕಾಲ. ಸೂರ್ಯನಿಗೆ ಅಭಿಮುಖವಾದ ನಮ್ಮ ಶರೀರ ಅಥವಾ ಪದಾರ್ಥದ ನೆರಳು ಪಶ್ಚಿಮದಿಂದ ಪೂರ್ವದಿಕ್ಕಿಗೆ ತಿರುಗುವ ಸಮಯ. ಈ ಕಾಲದ ಪೂರ್ವಭಾಗ ಪೂರ್ವಾಹ್ನ, ಪಶ್ಚಿಮ ಭಾಗ ಅಪರಾಹ್ನ. ಈ ಕಾಲವಿಭಾಗವನ್ನನುಸರಿಸಿ ಧರ್ಮಶಾಸ್ತ್ರದಲ್ಲಿ ಕೆಲವು ವಿಧಿಗಳು ವಿಹಿತವಾಗಿವೆ. (ವೈ.ಎ.ಐ)

**ಆವರ್ತಮಾರುತ:** ವಾಯುಮಂಡಲದಲ್ಲಿ ಉಷ್ಣತೆ ಹೆಚ್ಚಾಗಿರುವ ಪ್ರದೇಶದಲ್ಲಿ ಕಡಿಮೆ ಒತ್ತಡವಿರುವ ಒಂದು ಕೇಂದ್ರದೆಡೆಗೆ ಎಲ್ಲ ಕಡೆಗಳಿಂದಲೂ ನುಗ್ಗುವ ಗಾಳಿ (ಸೈಕ್ಲೋನ್); ಸುಳಿಮಾರುತವೆಂದೂ ಚಕ್ರವಾತವೆಂದೂ ಕರೆಯುತ್ತಾರೆ. ಪಶ್ಚಿಮ ಸಮುದ್ರ ಭಾಗಗಳ ಉತ್ತರಾರ್ಧಗೋಳದಲ್ಲಿ ಬೇಸಗೆಯಲ್ಲೂ ದಕ್ಷಿಣಾರ್ಧಗೋಳದಲ್ಲಿ ಚಳಿಗಾಲ ಮತ್ತು ವಸಂತದಲ್ಲೂ ಕಾಣಿಸಿಕೊಳ್ಳುವ ಇಂಥ ಮಾರುತವನ್ನು ಚಂಡಮಾರುತವೆಂದೂ (ಹರಿಕೇನ್) ತೂಫಾನು (ಟೈಫೂನ್) ಎಂದೂ ಕರೆಯುತ್ತಾರೆ. ಹರಿಕೇನ್‌ಗಿಂತ ಇನ್ನೂ ಬಿರುಸಾದ, ಆದರೆ ಅಷ್ಟು ಹೊತ್ತು ಬೀಸದ ಒಂದು ಸುಂಟರಗಾಳಿ ಇದೆ. ಅದನ್ನು ಟಾರ್ನೇಡೊ ಎನ್ನುತ್ತಾರೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇದನ್ನು ಗುರುತಿಸಿದ್ದಾರೆ.

ಇದರ ವ್ಯಾಸ ಕೆಲವು ಮೀ.ಗಳಿಂದ ಹಲವು ಕಿಮೀಗಳವರೆಗೂ ಇರಬಹುದು. ವೇಗ 200–300 ಕಿಮೀ. ಸುಳಿ ಸುಳಿಯಾಗಿ ಎದ್ದು ಬೀಳುವ ಈ ಗಾಳಿ ಬಹಳ ಅನಾಹುತಗಳಿಗೆ ಕಾರಣವಾಗಿದೆ. ವಾಯುಮಂಡಲದ ಕೆಳಪದರಗಳಲ್ಲಿ ಕಡಿಮೆ ಒತ್ತಡವಿರುವ ಕಡೆ ಇದು ಸಾಮಾನ್ಯವಾಗಿ ಉದ್ಭವಿಸುತ್ತದೆ. ಕಡಿಮೆ ಒತ್ತಡದ ಪ್ರದೇಶ ಕೇಂದ್ರದಲ್ಲಿದ್ದು ಹೆಚ್ಚು ಒತ್ತಡದ ವಾಯು ಅದನ್ನು ಸುತ್ತುವರಿದಿರುತ್ತದೆ. ಈ ಹೆಚ್ಚು ಒತ್ತಡದ ವಾಯು ಕೇಂದ್ರದೆಡೆಗೆ ನುಗ್ಗಿ ಫೆರ್ಲ್‌ನ ನಿಯಮದ ಪ್ರಕಾರ ಅಪಸರಣಗೊಳ್ಳುತ್ತದೆ. ಆದ್ದರಿಂದ ಆವರ್ತಮಾರುತ ಭೂಮಿಯ ಸುತ್ತುವಿಕೆಗನುಗುಣವಾಗಿ ಉತ್ತರಾರ್ಧಗೋಳದಲ್ಲಿ ಅಪ್ರದಕ್ಷಿಣವಾಗಿಯೂ ದಕ್ಷಿಣಾರ್ಧ ಗೋಳದಲ್ಲಿ ಪ್ರದಕ್ಷಿಣ ರೂಪವಾಗಿಯೂ ಸುತ್ತುತ್ತವೆ.



ಚಿತ್ರ 1. ಉತ್ತರಾರ್ಧಗೋಳದಲ್ಲಿ ಆವರ್ತಮಾರುತದ ಚಲನೆಯ ದಿಕ್ಕನ್ನು A ಚಿತ್ರದಲ್ಲೂ ದಕ್ಷಿಣಾರ್ಧಗೋಳದಲ್ಲಿ ಇದರ ಚಲನೆಯ ದಿಕ್ಕನ್ನು B ಚಿತ್ರದಲ್ಲೂ ತೋರಿಸಿದೆ. A ಚಿತ್ರದ ಕೇಂದ್ರಭಾಗದಲ್ಲಿ ಕಡಿಮೆ ಒತ್ತಡವೂ B ಚಿತ್ರದ ಕೇಂದ್ರಭಾಗದಲ್ಲಿ ಹೆಚ್ಚು ಒತ್ತಡವೂ ಇರುತ್ತದೆ.

ಆವರ್ತಮಾರುತ ಉಷ್ಣವಲಯದ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬೇಸಗೆಯಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಇದಕ್ಕೆ ಕಾರಣ ಸಮುದ್ರಗಳ ಮೇಲ್ಮೈಯಲ್ಲಿ ಆಗ ಉಂಟಾಗುವ ಶಾಖವೈಪರೀತ್ಯಗಳು. ಆವರ್ತಮಾರುತದ ವ್ಯಾಸ ಚಿಕ್ಕದಾಗಿದ್ದು ವಾಯುಮಂಡಲದಲ್ಲಿ ಕಂಬದೋಪಾದಿಯಲ್ಲಿ ಬಹಳ ಎತ್ತರದವರೆಗೂ ಪಸರಿಸುತ್ತದೆ. ಉಷ್ಣವಲಯದಲ್ಲಿ ಈ ಮಾರುತ ಬಹಳ ಬಿರುಸು ಮತ್ತು ವಿನಾಶಕಾರಿ. ಇದರ ಚಲನೆ ಸಾಮಾನ್ಯವಾಗಿ ಪಶ್ಚಿಮದ ಕಡೆಗೆ. ಇದರ ಅಡ್ಡಳತೆ 80–300 ಕಿಮೀವರೆಗೆ ಇರುತ್ತದೆ. ಒತ್ತಡವು ಕೇಂದ್ರದಲ್ಲಿ ಅತ್ಯಂತ ಕಡಿಮೆ, ಹೊರಭಾಗಕ್ಕೆ ಹೋದಂತೆಲ್ಲ ಬಲು ಹೆಚ್ಚು. ಇದರ ವೇಗ ಗಂಟೆಗೆ 100 ಕಿಮೀಗೂ ಹೆಚ್ಚು. ಸಮುದ್ರ ಪ್ರದೇಶಗಳ ಮೇಲೆ ಬಹಳ ಬಿರುಸಾಗಿದ್ದು ಭೂಪ್ರದೇಶವನ್ನು ತಲಪಿದಂತೆಲ್ಲ ದುರ್ಬಲವಾಗುತ್ತದೆ. ಇದಕ್ಕೆ ಕಾರಣ, ಈ ಮಾರುತ ಭೂಮಿಯನ್ನು ತಲಪುವ ವೇಳೆಗೆ ತೇವಾಂಶ ಹೋಗಿ ಭೂಮಿಯ ಮೇಲ್ಮೈಯೊಡನೆ ಘರ್ಷಣೆ ಹೊಂದುವುದು.




ಚಿತ್ರ 2. ಉತ್ತರಾರ್ಧಗೋಳದಲ್ಲಿ ಆವರ್ತ ಪ್ರತಿಮಾರುತದ ಚಲನೆಯ ದಿಕ್ಕನ್ನು A ಚಿತ್ರದಲ್ಲೂ ದಕ್ಷಿಣಾರ್ಧಗೋಳದಲ್ಲಿ ಇದರ ಚಲನೆಯನ್ನು B ಚಿತ್ರದಲ್ಲೂ ತೋರಿಸಿದೆ. A ಚಿತ್ರದ ಕೇಂದ್ರ ಭಾಗದಲ್ಲಿ ಹೆಚ್ಚು ಒತ್ತಡವೂ B ಚಿತ್ರದ ಕೇಂದ್ರ ಭಾಗದಲ್ಲಿ ಕಡಿಮೆ ಒತ್ತಡವೂ ಇದೆ.

ಆವರ್ತಮಾರುತದ ಕೇಂದ್ರಪ್ರದೇಶದಲ್ಲಿ ಯಾವಾಗಲೂ ಶಾಂತಸ್ಥಿತಿಯಿರುತ್ತದೆ. ಈ ಶಾಂತಪ್ರದೇಶವನ್ನು ಆವರ್ತಮಾರುತದ ಕಣ್ಣು (ಐ ಆಫ್ ಸೈಕ್ಲೋನ್) ಎಂದು ಕರೆಯುತ್ತಾರೆ. ಇದನ್ನು ಹೆಚ್ಚು ಒತ್ತಡದ ಪ್ರಬಲ ಗಾಳಿ ಕೋಟೆಯಂತೆ ಸುತ್ತುವರಿದಿರುತ್ತದೆ. ಈ ಶಾಂತಪ್ರದೇಶದಲ್ಲಿ ಹವಾಮಾನ ಸ್ವಚ್ಛವಾಗಿದ್ದು ಉಳಿದ ಕಡೆಗಳಲ್ಲಿ ಮೋಡಕವಿದ ಹಾಗೂ ಮಳೆಯಿಂದ ಕೂಡಿದ ವಾತಾವರಣವಿರುತ್ತದೆ. ಆವರ್ತಮಾರುತದ ಆಗಮನಕ್ಕೆ ಮೊದಲು ಹವೆ ಸ್ವಚ್ಛವಾಗಿ ಹಿತಕರವಾಗಿರುತ್ತದೆ. ಅನಂತರ ದಟ್ಟವಾದ ಮೋಡಕವಿದ ವಾತಾವರಣವುಂಟಾಗಿ ಧಾರಾಕಾರವಾಗಿ ಮಳೆಯಾಗುತ್ತದೆ. ಇಂಥ ಆವರ್ತಮಾರುತಗಳು ಪ್ರಪಂಚದ ವಿವಿಧಭಾಗಗಳಲ್ಲಿ ಗೋಚರಿಸಿ, ಅಧಿಕವಾಗಿ ಮಳೆ ಸುರಿಸುತ್ತವೆ. ಸಮುದ್ರದಲ್ಲಿರುವ ದ್ವೀಪಗಳಿಗೂ ಭೂಖಂಡಗಳ ತೀರಪ್ರದೇಶಗಳಿಗೂ ಉಷ್ಣವಲಯದ ಈ ಮಾರುತಗಳು ವಿನಾಶಕಾರಿಗಳಾಗಿವೆ. ಸಾಮಾನ್ಯವಾಗಿ ಇಂಥ ಪರಿಸ್ಥಿತಿ ಬಂಗಾಲಕೊಲ್ಲಿ ಅರಬ್ಬೀ ಸಮುದ್ರ, ಪೂರ್ವ ಹಿಂದೂ ಮಹಾಸಾಗರ, ಮೆಕ್ಸಿಕೋದ ತೀರ ಪ್ರದೇಶ, ಚೀನ ಹಾಗೂ ಆಸ್ಟ್ರೇಲಿಯಗಳ ಪೂರ್ವ ತೀರಗಳಲ್ಲಿ ಉಂಟಾಗುತ್ತದೆ. ಭಾರತದ ದಕ್ಷಿಣ ಭಾಗದ ಪೂರ್ವ ತೀರದ ಮೇಲೆ ಇದರ ಪ್ರಭಾವ ಹೆಚ್ಚು. ಇದು ಬಂಗಾಲಕೊಲ್ಲಿಯಲ್ಲಿ ಹುಟ್ಟಿ ಪಶ್ಚಿಮದೆಡೆಗೆ ನುಗ್ಗುತ್ತದೆ. ದಕ್ಷಿಣ ಭಾರತದ ಹಲವಾರು ನದಿಗಳ ಮುಖಜಭೂಮಿಗಳಲ್ಲೂ ಅವುಗಳ ಕಣಿವೆಗಳಲ್ಲೂ ವಿಪರೀತವಾಗಿ ಮಳೆ ಸುರಿಸಿ, ಬೆಳೆಗಳಿಗೂ ಆಸ್ತಿಪಾಸ್ತಿಗಳಿಗೂ ಅಪಾರ ನಷ್ಟವುಂಟುಮಾಡುತ್ತವೆ. ಕೆಲವುಸಾರಿ ಪ್ರಾಣಹಾನಿಗಳಾಗುವುದೂ ಉಂಟು. ಗಂಗಾನದಿ, ಮಹಾನದಿ, ಕೃಷ್ಣಾ, ಗೋದಾವರಿ, ಕಾವೇರಿ ನದಿಗಳ ಮುಖಜಭೂಮಿ ಹಾಗೂ ಚೆನ್ನೈ, ವಿಶಾಖ ಪಟ್ಟಣ ಮತ್ತು ಕೋಲ್ಕತ ನಗರಗಳು ಹಲವು ಸಾರಿ ಇಂಥ ಪಿಡುಗಿಗೊಳಗಾಗಿವೆ.

ಸಮಶೀತೋಷ್ಣವಲಯಗಳಲ್ಲಿ ಇದನ್ನು ತಗ್ಗು (ಲೋ ಡಿಪ್ರೆಷನ್) ಮಾರುತ ಎಂದು ಕರೆಯುತ್ತಾರೆ. ಪಶ್ಚಿಮ ಮಾರುತ ಮತ್ತು ಧ್ರುವ ಮಾರುತ ಒಂದಕ್ಕೊಂದು ಸೇರುವ ಪ್ರದೇಶದಲ್ಲಿ ಈ ತಗ್ಗುಗಳೇರ್ಪಡುತ್ತವೆ. ಇವುಗಳ ವ್ಯಾಸ ದೊಡ್ಡದಾಗಿದ್ದು ಇವು ಬೃಹತ್ ವೃತ್ತಗಳಲ್ಲಿ ಚಲಿಸುತ್ತವೆ. ಆದ್ದರಿಂದ ಈ ಮಾರುತ ಅಷ್ಟು ತೀವ್ರವಾಗಿಯೂ ಪ್ರಭಾವಶಾಲಿಯೂ ಆಗಿರುವುದಿಲ್ಲ; ವೇಗವೂ ಕಡಿಮೆ; ಸಾಮಾನ್ಯವಾಗಿ ಮಳೆಯನ್ನು ತರುತ್ತದೆ. ಉಷ್ಣವಲಯ ಆವರ್ತಮಾರುತಕ್ಕೆ ವಿರುದ್ಧವಾಗಿ ಇದು ಪೂರ್ವಾಭಿಮುಖವಾಗಿ ಸಂಚರಿಸುತ್ತದೆ. ಉತ್ತರ ಅಮೆರಿಕದ ಪಶ್ಚಿಮ ಭಾಗ, ಯುರೋಪಿನ ಪಶ್ಚಿಮ ಹಾಗೂ ಉತ್ತರ ತೀರಪ್ರದೇಶಗಳ ಮೇಲೆ ಇದರ ಪ್ರಭಾವ ಹೆಚ್ಚು.

**ಆವರ್ತ ಪ್ರತಿಮಾರುತ:** ಹೆಚ್ಚು ಒತ್ತಡದ ಕೇಂದ್ರದ ಸುತ್ತ ಕಡಿಮೆ ಒತ್ತಡವಿರುವ ಮಾರುತಕ್ಕೆ ಈ ಹೆಸರಿದೆ (ಆ್ಯಂಟಿ ಸೈಕ್ಲೋನ್). ಇದು ಎದ್ದಾಗ ಗಾಳಿ ಹೆಚ್ಚು ಒತ್ತಡದ ಕೇಂದ್ರದಿಂದ ಹೊರಭಾಗಕ್ಕೆ ಎಲ್ಲ ದಿಕ್ಕುಗಳಲ್ಲೂ ನುಗ್ಗಿ ಚದರಿ ಹೋಗುತ್ತದೆ.

ವಾಯುವಿನ ಅಪಸರಣದಿಂದಾಗಿ ಇದು ಉತ್ತರಾರ್ಧಗೋಳದಲ್ಲಿ ಪ್ರದಕ್ಷಿಣ ಗತಿಯಲ್ಲೂ ದಕ್ಷಿಣಾರ್ಧಗೋಳದಲ್ಲಿ ಅಪ್ರದಕ್ಷಿಣ ಗತಿಯಲ್ಲೂ ಬೀಸುತ್ತದೆ. ಇದು ಬೀಸಿದಾಗ ಮಳೆ ಬಾರದು. ವಾತಾವರಣ ಮೋಡರಹಿತವಾಗಿರುತ್ತದೆ. ಕಡಿಮೆ ಮೇಘದಿಂದ ಕೂಡಿದ ಮಂದಮಾರುತಗಳು ಬೀಸುವ ಸಾಧ್ಯತೆಯೂ ಉಂಟು. ಈ ಮಾರುತದ ಆಗಮನದೊಡನೆ ವಾಯುಭಾರಮಾಪಕಗಳಲ್ಲಿನ ಪಾದರಸದ ಮಟ್ಟ ಕ್ರಮವಾಗಿ ಹೆಚ್ಚುತ್ತ ಹೋಗುತ್ತದೆ. (ಕೆ.ಎನ್.ಸಿ.)

**ಆವರ್ತಲೇಖಕ:** ನೋಡಿ–ಆಂದೋಲನಲೇಖಕ

**ಆವರ್ತಿತ:** ನಾಟ್ಯ ಪ್ರತ್ಯಂಗವಾದ ಜಂಘೆಯ ಹತ್ತು ವಿಧಗಳಲ್ಲಿ ಒಂದು. ಎಡಗಾಲು ಬಲಗಡೆಯೂ ಬಲಗಾಲು ಎಡಗಡೆಯೂ ಬರುವಂತೆ ಮಾಡಿ ಜಂಘೆಗಳನ್ನು ಸೇರಿಸಿ ನಡೆಯುವುದು. ವಿದೂಷಕ ನಡೆಯುವುದನ್ನು ತೋರಿಸುವಾಗ ಇದನ್ನು ವಿನಿಯೋಗಿಸಬೇಕು.

(ಎಸ್.ಎನ್.ಕೆ.)

**ಆವಾಹನೆ:** ಪೂಜೆಯನ್ನು ಸ್ವೀಕರಿಸಲು ಸನ್ನಿಹಿತವಾಗುವಂತೆ ದೇವತೆಗಳನ್ನು ಪ್ರಾರ್ಥಿಸುವ ಕರೆ. ಪೂಜಾರಂಭದಲ್ಲಿ ಮಾಡುವ ಕ್ರಿಯೆ ಪೂಜಾಂಗವಾದ ಹದಿನಾರು ವಿಧ ಉಪಚಾರಗಳಲ್ಲಿ ಮೊದಲನೆಯದು. ಉದ್ದಿಷ್ಟ ದೇವತಾ ಪ್ರಾರ್ಥನರೂಪ ಮಂತ್ರವನ್ನು ಉಚ್ಚರಿಸುವ ಮೂಲಕ ಆಹ್ವಾನಿಸಿ ಬಳಿಕ ಆಸನ ಸಮರ್ಪಣೆ ಮಾಡಬೇಕು. ವಿಗ್ರಹ ರೂಪದಲ್ಲಿ ಆಹ್ವಾನಿಸಿ ನಿತ್ಯದಲ್ಲೂ ಪೂಜಿಸುವುದು ಅನಿಯತಕಾಲಿಕ ಆವಾಹನೆ. ವ್ರತಾದಿಪೂಜೆಗಳಲ್ಲಿ ಗೊತ್ತಾದ ಕಾಲದವರೆಗೆ ಆವಾಹಿಸುವುದು ನಿಯತಕಾಲಿಕ. ಇದರಲ್ಲಿ ಮಂಡಲಾಕಾರದ ವೇದಿಕೆಯ ಮೇಲೆ ಗೊತ್ತಾದ ಸ್ಥಳಗಳಲ್ಲಿ ಆಯಾ ದೇವತೆಗಳನ್ನು ಆವಾಹಿಸಿ ಪೂಜೆ ನಡೆಸಬೇಕು. ಪುಣ್ಯಾಹಕ್ರಿಯೆಗಾಗಿ ಪೂರ್ಣಕುಂಭದಲ್ಲಿ ವರುಣನನ್ನು ಆವಾಹಿಸುವುದು, ಧಾನ್ಯಗಳಲ್ಲಿ ಗ್ರಹಗಳನ್ನು ಆವಾಹಿಸುವುದು, ದರ್ಭೆಯ ಕೂರ್ಚದಲ್ಲಿ ಪಿತೃಗಳನ್ನು ಆವಾಹಿಸುವುದು–ಇವು ಆವಾಹನೆಯ ಕ್ರಮದಲ್ಲಿ ಕಂಡುಬರುವ ಕೆಲವು ಭೇದಗಳು. ಸಂಧ್ಯಾವಂದನೆಯಲ್ಲಿ ಗಾಯತ್ರೀ ಜಪಾರಂಭಕ್ಕೆ ಮೊದಲು ಮಾಡುವ ಗಾಯತ್ರೀ ಸರಸ್ವತಿಯರ ಆವಾಹನೆ, ಶ್ರಾದ್ಧದಲ್ಲಿ ಬ್ರಾಹ್ಮಣರು ಸ್ವಯಂ ತಮ್ಮ ಮೇಲೆ ಮಾಡಿಕೊಳ್ಳುವ ಪಿತೃಗಳ ಆವಾಹನೆ, ಪ್ರತಿನಿತ್ಯದ ಹೋಮಾನಂತರದಲ್ಲಿ (ಔಪಾಸನಾಂತ್ಯದಲ್ಲಿ) ಮಾಡುವ ಅಗ್ನಿಯ ಆತ್ಮಸಮಾರೋಪಣರೂಪ ಆವಾಹನೆ–ಇವು ವ್ಯಕ್ತಿನಿಷ್ಠ ಆವಾಹನೆಗಳು. ಎಲ್ಲ ವಿಧದ ಆವಾಹನೆಗಳೂ ಪೂಜಾರಂಭದಲ್ಲಿ ಮಾಡುವ ಕ್ರಿಯೆಗಳಾದರೆ ಆತ್ಮಸಮಾರೋಪಣ ರೂಪ ಆವಾಹನೆ ಕೊನೆಯಲ್ಲಿ ಮಾಡುವಂಥದು. ಸಪ್ತವ್ಯಾಹೃತಿಗಳಲ್ಲಿ ಭೂಃ ಭುವಃ ಸುವಃ–ಎಂಬ ಮೊದಲ ಮೂರನ್ನು ಓಂಕಾರಪೂರ್ವಕ ಉಚ್ಚರಿಸಿ ಆವಾಹನೆ ಮಾಡುವುದು ಸಾಮಾನ್ಯ ನಿಯಮ. ಪಿತೃಗಳ ಆವಾಹನೆಯಲ್ಲಿ ತಿಲಾಕ್ಷತೆಯಿಂದಲೂ ದೇವತೆಗಳ ಆವಾಹನೆಯಲ್ಲಿ ಶೋಭನಾಕ್ಷತೆಯಿಂದಲೂ (ಅರಿಸಿನ ಹಚ್ಚಿದ ಅಕ್ಕಿ) ಪೂಜಿಸುತ್ತಾರೆ. ಸಾಲಿಗ್ರಾಮ ಪೂಜೆಯಲ್ಲಿ ಯಾವ ವಿಧವಾದ ಆವಾಹನೆಯೂ ಇಲ್ಲ.

ಜನಪದ ಸಮಾಜದಲ್ಲಿ ದೇವತಾರಾಧನೆಗಳ ಸಂದರ್ಭದಲ್ಲಿ ದೈವಾಹನೆ ಸರ್ವೇಸಾಮಾನ್ಯ. ಆವಾಹನೆಗೆ ಮೊದಲು ಜಾಗಟೆ, ಗಂಟೆ, ತಮ್ಮಟೆಗಳ ನಿನಾದವನ್ನು ಉಂಟುಮಾಡುವುದು ಕ್ರಮ. ಜನತೆಯ ದುಃಖ ದುಮ್ಮಾನ, ಕಷ್ಟ ಸಂಕಷ್ಟಗಳಿಗೆ ಪರಿಹಾರ ಸೂಚಿಸುವ ಕೆಲಸವನ್ನು ಈ ದೈವಾಹನೆಗೊಂಡ ವ್ಯಕ್ತಿ ಮಾಡುತ್ತಾನೆ. ಹೀಗೆ ದೈವಾಹನೆಗೊಂಡು ಜನರಿಗೆ ಸ್ಪಂದಿಸುವ ವ್ಯಕ್ತಿಯನ್ನು 'ಗಣಮಗ' ಎಂದೂ ಕರೆಯುವುದುಂಟು. ದೈವಾವೇಶದಿಂದ ವಿಮುಕ್ತಿ ಹೊಂದುವಾಗ ಗ್ರಾಮದೇವತೆಗೆ ಮಂಗಳಾರತಿ ಮಾಡುವುದು ಪದ್ಧತಿ. (ಎಸ್.ಎನ್.ಕೆ.)

**ಆವಿಗೆ:** ಒಂದು ವಸ್ತುವಿಗೆ ಅಧಿಕೋಷ್ಣವನ್ನು ಪೂರೈಸುವುದರ ಮೂಲಕ ಅದರಲ್ಲಿರುವ ತೇವವನ್ನು ನಿವಾರಿಸುವ ಸಾಧನ (ಕಿಲ್ನ್). ಇಂಗ್ಲಿಷಿನಲ್ಲಿ ಕಿಲ್ನ್, ಫರ್ನೆಸ್, ಸ್ಟವ್ ಮತ್ತು ಓವನ್ ಇವನ್ನು ಪರ್ಯಾಯ ಪದಗಳಾಗಿ ಬಳಸುವುದಿದೆ. ಆದರೆ ತಾಂತ್ರಿಕ ಬಳಕೆಯಲ್ಲಿ ಒಂದು ಸಂಪ್ರದಾಯ ಉಂಟು–ವಸ್ತುವನ್ನು ಅದರ ದ್ರವಬಿಂದುವಿನವರೆಗೆ (ಮೆಲ್ಟಿಂಗ್ ಪಾಯಿಂಟ್) ಕಾಯಿಸುವ ಸಾಧನ ಕಿಲ್ನ್ (ಆವಿಗೆ); ಅದಕ್ಕಿಂತ ಅಧಿಕ ಮಟ್ಟದವರೆಗೆ ಕಾಯಿಸುವ ಸಾಧನ ಫರ್ನೆಸ್ (**ನೋಡಿ– ಕುಲುಮೆ**); ಅನಿಲವನ್ನಾಗಲೀ ನೀರನ್ನಾಗಲೀ ಕಾಯಿಸಲು ಉಪಯೋಗಿಸುವ ನಿತ್ಯಬಳಕೆಯ ಸಾಧನ ಸ್ಟವ್; ಬಟ್ಟೆ ಒಣಗಿಸಲು ಚಳಿ ಕಾಯಿಸಲು ಉಪಯೋಗಿಸುವ ಸಾಧನ ಓವನ್ (ಅಗ್ಗಿಷ್ಟಿಕೆ). ಆದ್ದರಿಂದ ಇಟ್ಟಿಗೆಯನ್ನು ಸುಡುವ ಸಾಧನ ಆವಿಗೆ; ಕಬ್ಬಿಣದ ಅದಿರಿನಿಂದ ಕಬ್ಬಿಣ ಲೋಹದ್ರವ ಪಡೆಯಲು ಉಪಯೋಗಿಸುವ ಸಾಧನ ಕುಲುಮೆ; ಅಕ್ಕಸಾಲಿಗರು ಬಳಸುವ ಮೂಸೆ ತಾತ್ತ್ವಿಕವಾಗಿ ಕುಲುಮೆಯೇ.

ಇಟ್ಟಿಗೆ ಸುಡುವ ಆವಿಗೆಗಳು: ಊರ ಇಟ್ಟಿಗೆ (**ನೋಡಿ– ಇಟ್ಟಿಗೆ**) ತಯಾರಿಸುವಾಗ ಹಸಿ ಇಟ್ಟಿಗೆಗಳ ದೊಡ್ಡ ದೊಡ್ಡ ಗೂಡುಗಳನ್ನು ಬಯಲಿನಲ್ಲಿ ಕಟ್ಟುತ್ತಾರೆ. ಅವುಗಳ ಒಳಗೆ ಒಂದು ಕ್ರಮದಲ್ಲಿ ಮರದ ಕುಂಟೆಗಳನ್ನು ಅಳವಡಿಸಿ ಗೂಡು ಪೂರ್ಣವಾದ ಮೇಲೆ ತಳಭಾಗದ ಕಂಡಿಗಳಲ್ಲಿ ಜೋಡಿಸಿರುವ ಸೌದೆಗೆ ಬೆಂಕಿಯಿಕ್ಕುತ್ತಾರೆ. ಇಂಥ ಗೂಡು ಒಂದು ಸ್ವಯಂಪೂರ್ಣ ವ್ಯವಸ್ಥೆ. ಅದರಲ್ಲಿರುವ ಕುಂಟೆಗಳು ಉರಿದು ಉಷ್ಣವನ್ನು ಸಮವಾಗಿ ಎಲ್ಲ ಇಟ್ಟಿಗೆಗಳಿಗೂ ಒದಗಿಸಿ ಅವನ್ನು ಬೇಯಿಸುತ್ತವೆ. ಬೆಂಕಿ ನಂದಿ ಕಾವು ತಗ್ಗಿದಾಗ ಗೂಡು ಉಪಯೋಗಕ್ಕೆ ಸಿದ್ಧ. ಅದನ್ನು ಒಡೆದು ಬೆಂದ ಇಟ್ಟಿಗೆಗಳನ್ನು ಹೊರತೆಗೆಯುತ್ತಾರೆ. ಇಂಥ ಊರ ಇಟ್ಟಿಗೆ ಹಸಿ ಇಟ್ಟಿಗೆಗಿಂತ ಗಡಸು (ಹಾರ್ಡ್) ; ಆದರೆ ಬಲು ಪೆಡಸು (ಬ್ರಿಟಲ್). ಇಂದಿಗೂ ಹಳ್ಳಿಗಳಲ್ಲಿ ಇಂಥ ಆವಿಗೆಗಳನ್ನು ನೋಡಬಹುದು. ಆದರೆ ಈ ಕ್ರಮದಲ್ಲಿ ಶಕ್ತಿಯ ಅಪವ್ಯಯ ಅಧಿಕ. ಆದ್ದರಿಂದ ಸುಧಾರಿಸಿದ ಆವಿಗೆಗಳನ್ನು ಶಾಶ್ವತಕಟ್ಟಡಗಳಲ್ಲಿ ನಿರ್ಮಿಸಿದ್ದಾರೆ. ಇವು ಸತತ ಕ್ರಿಯಾಶೀಲ ಆವಿಗೆಗಳು. ಹಸಿ ಇಟ್ಟಿಗೆಗಳ ಸಂಗ್ರಹ, ಅವನ್ನು ಸುಡುವ ಆವಿಗೆ ಕೊಠಡಿಗಳು, ಸುಟ್ಟ ಇಟ್ಟಿಗೆಗಳನ್ನು ಹೊರತೆಗೆದು ಒಟ್ಟಲು ಸ್ಥಳ–ಇಷ್ಟು ಒಂದು ಕವಾಯಿತಿಯಲ್ಲಿ ನಡೆದಂತೆ ಅನೂಚಾನವಾಗಿ ಮುಂದುವರಿಯುತ್ತವೆ. ಇದರಿಂದ ಪ್ರತಿಸಲವೂ ಗೂಡು ಕಟ್ಟುವ ಅಥವಾ ಶಕ್ತಿ ಅಪವ್ಯಯವಾಗುವ ಅಥವಾ ಮಳೆ, ಗಾಳಿ, ಮಂಜುಗಳಿಗೆ ಹೆದರಬೇಕಾದ ಪ್ರಸಂಗವಿಲ್ಲ.

ಇತರ ಉಪಯೋಗಗಳು: ಪಿಂಗಾಣಿ ಪಾತ್ರೆ ತಯಾರಿಕೆಯಲ್ಲಿ (**ನೋಡಿ– ಆಧುನಿಕ–ಮೃತ್ಕಲಾತಂತ್ರ**) ಹಸಿ ಮರವನ್ನು ಒಣಗಿಸಿ ಹದಗೊಳಿಸಲು, ಎಲಕ್ಕಿಯನ್ನು ಹದವಾಗಿ ಕಾಯಿಸಿ ಮಾರುಕಟ್ಟೆಗೆ ಸಿದ್ಧಗೊಳಿಸಲು, ಚಿಪ್ಪುಗಳನ್ನು ಸುಟ್ಟು ಸುಣ್ಣ ತಯಾರಿಸಲು ಆವಿಗೆಗಳ ಉಪಯೋಗವಿದೆ. ಅಪಕರ್ಷಕ ವಾತಾವರಣದಲ್ಲಿ ಕಬ್ಬಿಣದ ಅದಿರುಗಳನ್ನು ಕಾಂತಸ್ಥಿತಿಗೆ ಅಪಕರ್ಷಿಸಲು ಉಪಯೋಗಿಸುವ ಒಲೆ.

ಉಷ್ಣದ ಪೂರೈಕೆ: ಮರದ ಕುಂಟೆಗಳು, ಮರದಪುಡಿ, ಇದ್ದಿಲು ಮುಂತಾದುವನ್ನು ಸುಟ್ಟು ಉಷ್ಣವನ್ನು ಪೂರೈಸುವ ಕ್ರಮ ಇಂದಿಗೂ ನಮ್ಮ ದೇಶದಲ್ಲಿ ಬಳಕೆಯಲ್ಲಿದೆ. ಆದರೆ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಮತ್ತು ಮುಂದುವರಿದ ರಾಷ್ಟ್ರಗಳಲ್ಲಿ ಎಣ್ಣೆ, ಇಂಧನಾನಿಲ, ವಿದ್ಯುಚ್ಛಕ್ತಿ ಇವುಗಳ ಸಹಾಯದಿಂದ ಬೇಕಾದ ಉಷ್ಣಶಕ್ತಿ ಪಡೆಯುತ್ತಾರೆ.

(ಜಿ.ಟಿ.ಜಿ.)

**ಆವಿಯಂತ್ರ: ನೋಡಿ–ಉಗಿಯಂತ್ರ**

**ಆವಿಯಾಗುವಿಕೆ: ನೋಡಿ–ಬಾಷ್ಪೀಕರಣ**

**ಆವಿ ವಿಸರ್ಜನೆ: ನೋಡಿ–ಬಾಷ್ಪ ವಿಸರ್ಜನೆ**

**ಆವಿಸ್ಪಂದನ ರೇಚಕ: ನೋಡಿ–ರೇಚಕಗಳು**

**ಆವೃತಬೀಜ ಸಸ್ಯಗಳು:** ಬೀಜಗಳು ಕೋಶಾವೃತವಾಗಿರುವ (ಅಂದರೆ ಕಾಯಿಯೊಳಗೆ ಇರುವಂಥ) ನಾಳಯುಕ್ತ ಸಸ್ಯಗಳು (ಆ್ಯಂಜಿಯೋಸ್ಪರ್ಮ್ಸ್): ಕೋಶರಹಿತ ಬೀಜಗಳಿರುವಂಥವು ನಗ್ನಬೀಜ ಸಸ್ಯಗಳು (**ನೋಡಿ– ನಗ್ನಬೀಜ–ಸಸ್ಯಗಳು**). ಇವೆರಡೂ ವರ್ಗಗಳ ಒಟ್ಟು ಹೆಸರು ಬೀಜೋತ್ಪನ್ನ ಸಸ್ಯಗಳು (ಸ್ಪರ್ಮಟೊಫೈಟ್). ಇವು ಉಚ್ಚವರ್ಗದ ಸಸ್ಯಗಳು. ಸಸ್ಯಸಮೂಹದಲ್ಲಿ ಆವೃತಬೀಜಸಸ್ಯಗಳೇ ಅತ್ಯಧಿಕ ಸಂಖ್ಯೆಯವು. ಇವುಗಳ ಸಂಖ್ಯೆ 350 ಕುಟುಂಬಗಳಲ್ಲಿ ವ್ಯಾಪಿಸಿರುವ 2,50,000 ಪ್ರಭೇದಗಳು ಅಥವಾ ಉಚ್ಚವರ್ಗದ ಸಸ್ಯಗಳ 5/7ರಷ್ಟು ಇರಬಹುದೆಂದು ಅಂದಾಜು ಮಾಡಿದ್ದಾರೆ. ಇನ್ನೂ ಅನೇಕ ಹೊಸ ಪ್ರಭೇದಗಳು ನೈಸರ್ಗಿಕವಾಗಿಯೂ ಕೃತಕವಾಗಿಯೂ ಉತ್ಪನ್ನವಾಗುತ್ತಿವೆ. ಆವೃತಬೀಜ ಸಸ್ಯಗಳ ಬೀಜಗಳು ಹಣ್ಣಿನ ಒಳಗೆ ಮುಚ್ಚಿರುತ್ತವೆ. ಸಸ್ಯಗಳಲ್ಲಿ ಇವು ಮಾತ್ರ ಹೂ ಬಿಡುವುವು. ಬಾಹ್ಯರಚನೆ ಮತ್ತು ಬೀಜೋತ್ಪನ್ನ ವಿಧಾನಗಳಲ್ಲಿ ಆವೃತಬೀಜ ಸಸ್ಯಗಳಿಗೂ ನಗ್ನಬೀಜಸಸ್ಯಗಳಿಗೂ ಬಹಳ ವ್ಯತ್ಯಾಸವುಂಟು. ಆಂಜಿಯೋಸ್ಪರ್ಮ ಎಂಬ ಗ್ರೀಕ್ ಪದದ ಅರ್ಥ ಹೀಗಿದೆ: ಆಂಜಿಯಾನ್ ಅಂದರೆ ಕೋಶ, ಸ್ಪರ್ಮ ಅಂದರೆ ಬೀಜ. ಈ ಪದವನ್ನು ಪ್ರಥಮವಾಗಿ ಪಾಲ್ ಹರ್‌ಮಾನ್ ಸಸ್ಯಗಳ ವರ್ಗೀಕರಣದಲ್ಲಿ ಬಳಸಿದ (1690). ಆತನೇ ನಗ್ನಬೀಜ ಸಸ್ಯಗಳನ್ನು ಮೊದಲ ಬಾರಿಗೆ ಗುರುತಿಸಿ ಅವನ್ನು ಆವೃತಬೀಜಸಸ್ಯಗಳಿಂದ ಬೇರ್ಪಡಿಸಿ ವಿವರಿಸಿದ. ಆ ಹೆಸರುಗಳೇ ಇಂದಿಗೂ ಉಳಿದುಕೊಂಡಿವೆ.

ಭೂಭಾಗದ ಅತ್ಯಧಿಕ ಸ್ಥಳವನ್ನು ಆವೃತಬೀಜ ಸಸ್ಯಸಮೂಹ ಆವರಿಸಿದೆ. ಪ್ರಾಣಿಜೀವನಕ್ಕೆ ಇವು ಮುಖ್ಯ ಆಧಾರ ಸಸ್ಯಗಳು. ಮಾನವಕುಲಕ್ಕೆ ಅಗತ್ಯವಾದ ಸಸ್ಯಾಹಾರ, ಬಟ್ಟೆ ಮತ್ತು ಆಸರೆ ಈ ಪಂಗಡದಿಂದಲೇ ಹೆಚ್ಚಾಗಿ ಒದಗುವುದು. ಪ್ರಪಂಚದ ಜೀವರಾಶಿಗಳ ಉಳಿವಿಗೆ ಅಗತ್ಯವಾದ ಆಕ್ಸಿಜನ್ ಉತ್ಪಾದನೆಗೂ ಜಲಾನಯನ ಭೂಮಿಗಳ ರಕ್ಷಣೆಗೂ ಇದೇ ಮೂಲ. ಇವುಗಳಿಲ್ಲದಿದ್ದಲ್ಲಿ ಬಹುಶಃ ಎಲ್ಲೆಲ್ಲೂ ಮರಳುಭೂಮಿ ಹರಡಿ ಗಾಳಿಯಲ್ಲಿ ಹೆಚ್ಚಾಗಿ ಆಕ್ಸಿಜನ್ ಇಲ್ಲದೆ ಪ್ರಾಣಿಜೀವನ ಸಾಧ್ಯವಿಲ್ಲವಾಗುತ್ತಿತ್ತು. ಬತ್ತ, ಗೋದಿ, ಬಾರ್ಲಿ, ಜೋಳ, ಮುಸುಕಿನ ಜೋಳ, ದ್ವಿದಳ ಧಾನ್ಯಗಳು, ನೆಲಗಡಲೆ ಮುಂತಾದ ಎಲ್ಲ ಆಹಾರ ಧಾನ್ಯಗಳೂ ವಿವಿಧ ತರಕಾರಿ ಮತ್ತು ಅನೇಕ ಹಣ್ಣುಗಳೂ ಈ ಸಸ್ಯಗಳಿಂದ ಒದಗುತ್ತವೆ. ಬಟ್ಟೆಗೆ ಮತ್ತು ಹುರಿ ತಯಾರಿಕೆಗೆ ಅಗತ್ಯವಾದ ನಾರು, ಹತ್ತಿ, ಅಗಸೆ, ಗೋಣಿ, ಕತ್ತಾಳೆ ಇತ್ಯಾದಿಗಳೂ ವಿವಿಧ ಔಷಧಿಗಳೂ ಟೀ, ಕಾಫಿ, ಕೋಕೋ ಮೊದಲಾದ ಪಾನೀಯಗಳೂ, ಹೊಗೆಸೊಪ್ಪು, ರಬ್ಬರ್, ಕಾಗದ, ಸಕ್ಕರೆ, ಬಣ್ಣ ಮುಂತಾದ ವಾಣಿಜ್ಯ ವಸ್ತುಗಳೂ ಇವುಗಳಿಂದಲೇ ನಮಗೆ ಒದಗುವುವು.



ಚಿತ್ರ 1. ಪುಷ್ಪಭಾಗಗಳು:
ಮೇಲೆ–ಹೂವಿನ ಹೊರನೋಟ
ಕೆಳಗೆ–ನೀರಕೊಯ್ತು

ಆವೃತಬೀಜ ಸಸ್ಯಗಳ ಆಕಾರ ಮತ್ತು ಜೀವನರೀತಿಯಲ್ಲಿ ಹೆಚ್ಚು ವೈವಿಧ್ಯವುಂಟು; ವಿವಿಧ ಪರಿಸ್ಥಿತಿಗೆ ಹೊಂದಿಕೊಳ್ಳುವ ಯತ್ನವೂ ಸಸ್ಯಾಭಿವೃದ್ಧಿಗೆ ಅನುಕೂಲವಾಗುವಂತೆ ಹೂ, ಹಣ್ಣು ಮತ್ತು ಬೀಜಗಳ ರಚನೆಯಲ್ಲಿ ಮಾರ್ಪಾಟಾಗಿರುವುದೂ ಇದಕ್ಕೆ ಮುಖ್ಯ ಕಾರಣ. ಗಾಳಿ ನೀರು ಮತ್ತು ಪ್ರಾಣಿಗಳಿಂದ ಬೀಜಪ್ರಸಾರ ಮಾಡುತ್ತ ಇವು ಎಲ್ಲ ಕಡೆಗೂ ಹರಡಿಕೊಂಡಿವೆ. ಸಿಹಿನೀರಿನ ಸರೋವರ ಮತ್ತು ನದಿಗಳಲ್ಲೂ ಹಲವು ಕುಟುಂಬಗಳು ಬೆಳೆಯುತ್ತವೆ. ಉದಾಹರಣೆಗೆ, ನಾಯಡೇಸಿ ಮತ್ತು ಪೊಟಾಮೋಗೆ ಟೋನೇಸಿ ಕುಟುಂಬದ ಜಾತಿಗಳನ್ನು ಗಮನಿಸಬಹುದು. ಉಲ್ಫಿಯಾ ಮತ್ತು ಲಮ್ನ ಗಿಡಗಳು ಸಣ್ಣ ತೇಲುವ ತಟ್ಟೆಯಾಕಾರ ಹೊಂದಿದ್ದು ಅವುಗಳಲ್ಲಿ ಹಲವು 3 ಮಿಮೀ ಅಗಲ ಮಾತ್ರ ಇವೆ. ಇದಕ್ಕೆ ವ್ಯತಿರಿಕ್ತವಾಗಿ ಯೂಕಲಿಪ್ಟಸ್ (ನೀಲಗಿರಿ) ಮತ್ತು ಗೋರಿಯಾ ಮುಂತಾದ ಮರಗಳು 90ಮೀ ಎತ್ತರ ಬೆಳೆಯಬಹುದು. ಕೆಲವು ಜಾತಿಗಳು ಅಲ್ಪಾಯುಗಳಾಗಿವೆಯಾದರೆ ಇನ್ನೂ ಕೆಲವು ಹಲವು ಶತಮಾನಕಾಲ ಬದುಕಬಲ್ಲ ದೀರ್ಘಾಯು ಜಾತಿಗಳು. ಜಾಸ್ಟೇರಾ ಎಂಬುದು ಆಳವಲ್ಲದ ಸಮುದ್ರತೀರದ ಉಪ್ಪು ನೀರಿನಲ್ಲಿ ಬೆಳೆಯುತ್ತದೆ. ದಟ್ಟಡವಿಗಳೂ ಗೊಂಡಾರಣ್ಯಗಳೂ ಇವುಗಳಿಂದಲೇ ಉಂಟಾಗುತ್ತವೆ. ಅಲ್ಲಿ ಹೆಚ್ಚು ಮಳೆಯಿಂದಾಗಿ ಅವು ಸೊಂಪಾಗಿ ಬೆಳೆಯುತ್ತವೆ. ಹಿಮಾವೃತ ಬೆಟ್ಟದ ತುದಿಗಳಲ್ಲೂ ಧ್ರುವಪ್ರದೇಶಗಳಲ್ಲೂ ಬೆಳೆಯುವ ಹಲವು ವರ್ಣರಂಜಿತ ಹೂಗಿಡಗಳು ಈ ಪಂಗಡದವೇ. ಹಾಗೂ ಹಲವು ವರ್ಷಗಳಿಗೊಮ್ಮೆ 2.5 ಸೆಂಮೀ ಕ್ಕಿಂತ ಕಡಿಮೆ ಮಳೆಯಾಗುವ ಮರಳುಕಾಡಿನಲ್ಲೂ ಅನೇಕ ಜಾತಿಯ ಪ್ರಭೇದಗಳು ಬೆಳೆಯುತ್ತವೆ. ಇವುಗಳಿಗೆ ಕಳ್ಳಿಗಳೂ ಮತ್ತು ಐಜೋಏಸಿ ಕುಟುಂಬದ ಸಸ್ಯಗಳೂ ಉತ್ತಮ ಉದಾಹರಣೆಗಳು.

ಇವೆಲ್ಲ ಬಹುತೇಕ ಸ್ವಾವಲಂಬಿ ಸಸ್ಯಗಳು. ಆದರೆ ಹಲವು ಅಪ್ಪುಗಿಡಗಳಾಗಿ ಅಥವಾ ಪರಾವಲಂಬಿಗಳಾಗಿ ಪರಿವರ್ತನೆ ಹೊಂದಿವೆ. ಅಪ್ಪುಗಿಡಗಳು ನೀರು, ಆಹಾರ ಹೀರಲು ಅನುಕೂಲವಾಗುವಂಥ ಬೇರನ್ನೂ ಆಹಾರ ಉತ್ಪನ್ನಮಾಡಲು ಬೇಕಾದ ಹರಿತ್ತನ್ನೂ ಸಾಕಷ್ಟು ಹೊಂದಿರುತ್ತವೆ. ಭೂಮಿ ಅಥವಾ ನೀರಿನಲ್ಲಿ ಸ್ವಾವಲಂಬಿಯಾಗಿ ಬೆಳೆಯದೆ ಬೇರೆ ಮರಗಳ ಆಶ್ರಯ ಪಡೆದು ಅವುಗಳ ಕಾಂಡ ಅಥವಾ ಕೊಂಬೆಗಳ ಮೇಲೆ ಬೆಳೆಯುತ್ತವೆ. ಆಶ್ರಯ ಯಾಚಿಸುತ್ತವೆಯೇ ಹೊರತು ಆ ಮರಗಳಿಗೆ ಹಾನಿಮಾಡುವುದಿಲ್ಲ. ವಿವಿಧ ಆರ್ಕಿಡ್ ಗಿಡಗಳು ಇದಕ್ಕೆ ಉದಾಹರಣೆ. ಆದರೆ ವಿಸ್ಕಂ, ಕಸ್‌ಕ್ಯೂಟ ಮುಂತಾದುವುಗಳಲ್ಲಿ ಹರಿತ್ತು ಇರುವುದಿಲ್ಲ. ಆಶ್ರಯಜೀವಿಗಳ ಅಂಗಾಂಶದೊಳಕ್ಕೆ ತಮ್ಮ ಬೇರನ್ನು ಬಿಟ್ಟು ಅದರ ಆಹಾರ ಹೀರುತ್ತವೆ. ಪೋಷಕಸಸ್ಯಗಳಿಗೆ ಮಾರಕವೆನಿಸಿರುವ ಇವು ಪರಾವಲಂಬಿಗಳು. ಹಲವು ಪೂತಿಜನ್ಯಸಸ್ಯಗಳು ಕೊಳೆತ ಪದಾರ್ಥಗಳಿಂದ ಆಹಾರ ಪಡೆದು ಬೆಳೆಯುತ್ತವೆ. ಆದರೆ ಎಲ್ಲಕ್ಕಿಂತಲೂ ಆಶ್ಚರ್ಯಕರ ವೈವಿಧ್ಯ ಕೀಟಾಹಾರಿಗಳಲ್ಲಿ ಕಂಡುಬಂದಿದೆ. ಕೀಟಗಳನ್ನು

ಹಿಡಿದು ಜೀರ್ಣಿಸಿಕೊಳ್ಳುವಂಥ ಸಾಮರ್ಥ್ಯ ಇವುಗಳ ಎಲೆಗಳು ಹೊಂದಿವೆ. ಇವು ವಿವಿಧ ಗಾತ್ರದವುಗಳಾಗಿ, ನೇರವಾಗಿ ಬೆಳೆಯಬಲ್ಲ ಮರವಾಗಿ, ಸುತ್ತಿ ಬೆಳೆಯುವ ಬಳ್ಳಿಯಾಗಿ ಅಥವಾ ಹರಡುವ ಪೊದರುಗಳಾಗಿ ಎಲ್ಲ ಭೂಭಾಗಕ್ಕೂ ಹೊಂದಿಕೊಂಡು ಆವರಿಸಿರುವುದರಿಂದಲೇ ಈ ಪಂಗಡಕ್ಕೆ ಹೆಚ್ಚಿನ ಪ್ರಾತಿನಿಧ್ಯವಿರುವುದು.

ಪ್ರಾಚೀನತೆ : ಆವೃತಬೀಜ ಸಸ್ಯಗಳಿಗೆ ಪಳೆಯುಳಿಕೆಗಳ ಆಧಾರ ಪರಿಪೂರ್ಣವಾಗಿ ದೊರೆತಿಲ್ಲ. ಇವು ನಗ್ನಬೀಜ ಸಸ್ಯಗಳು ಮತ್ತು ಜರೀಗಿಡಗಳಷ್ಟು ಪುರಾತನ ಅಲ್ಲವೆಂಬುದು ಮಾತ್ರ ಸ್ಪಷ್ಟ. ಜುರಾಸಿಕ್ ಕಲ್ಪದ ಹಲವು ಪಳೆಯುಳಿಕೆಗಳು ದೊರೆತಿವೆ. ನಗ್ನಬೀಜ




ಚಿತ್ರ 2. 1. ಅಂಡಾಶಯ, 2. ಅಂಡಕೋಶದ ಅಡ್ಡಕೊಯ್ತ
3. ಅಂಡಕೋಶದ ಉದ್ದಕೊಯ್ತ

ಸಸ್ಯಗಳ ಮತ್ತು ಜರೀಗಿಡಗಳ ಪಳೆಯುಳಿಕೆಗಳ ಮತ್ತು ಜೀವಂತಸಸ್ಯಗಳ ಅಂಗರಚನೆ ಮತ್ತು ಬಾಹ್ಯರಚನೆಗಳ ಹೋಲಿಕೆಯಿಂದ ಆವೃತಬೀಜ ಸಸ್ಯಗಳು ಈಗಿರುವ ನಗ್ನಬೀಜ ಸಸ್ಯಗಳಿಂದಾಗಲೀ ಜರೀಗಿಡಗಳಿಂದಾಗಲೀ ಉತ್ಪನ್ನವಾಗಿಲ್ಲವೆಂದು ಖಚಿತವಾಗಿದೆ. ಇವು ಪ್ರಾಚೀನಯುಗದಲ್ಲಿ ವೃದ್ಧಿಯಾಗಿದ್ದ ಮತ್ತು ಬೀಜಹೊಂದಿದ್ದ ಜರೀಗಿಡಗಳಿಂದ ಉತ್ಪನ್ನವಾಗಿ ಮುಂದಿನ ದಿವಸಗಳಲ್ಲಿ ಹಠಾತ್ತಾಗಿ ಹರಡಿ ಪ್ರಾಮುಖ್ಯ ಗಳಿಸಿರಬೇಕೆಂದು ತೋರುತ್ತದೆ.

ರಚನೆ : ಆವೃತಬೀಜ ಸಸ್ಯಗಳಲ್ಲಿ ತಾಯಿಬೇರು ಮತ್ತು ತೊಡಕು ಬೇರುಗಳೆರಡೂ ಚೆನ್ನಾಗಿ ವೃದ್ಧಿಯಾಗಿರುತ್ತವೆ. ಆದರೆ ನಗ್ನಬೀಜಸಸ್ಯಗಳಿಗಿಂತ ಇವುಗಳಲ್ಲಿ ತೊಡಕು ಬೇರುಗಳು ಹೆಚ್ಚು. ಕಾಂಡದಲ್ಲಿ ಹೆಚ್ಚು ಕೊಂಬೆಗಳಿವೆ. ಇವುಗಳಿಗೆ ಬಹು ಎಲೆಗಳಿಂದ ಕೂಡಿದ ಕವಲುಗಳಿವೆ. ಕಾಂಡದ ಒಳಗೆ ನಾಳ ಸಮೂಹದಲ್ಲಿ ನೀರು ಕೊಳವೆಗಳೂ ದೃಢತೆಗಾಗಿ ನಾರುಗಳೂ ಇವೆ. ಹಲವು ನಿಮ್ನ ಕುಟುಂಬಗಳಲ್ಲಿ ಇದು ಸ್ಪಷ್ಟವಾಗಿ ಕಾಣದಿದ್ದರೂ (ಉದಾ: ವಿಂಟರೇಸೀ) ಸಾಮಾನ್ಯವಾಗಿ ಎಲ್ಲ ಸಸ್ಯಗಳಲ್ಲೂ ಚೆನ್ನಾಗಿ ಬೆಳೆದಿರುತ್ತದೆ. ಅವುಗಳ ಸುತ್ತಲೂ ಮೃದುಅಂಗಾಂಶ ಇರುವುದು ಈ ಪಂಗಡದ ಒಂದು ಮುಖ್ಯಾಂಶ. ಎಲೆಗಳು ಅಗಲವಾಗಿದ್ದು, ವಿವಿಧ ಆಕಾರಗಳಿಂದ ಕೂಡಿವೆ. ಅವು ಸಾಮಾನ್ಯಪತ್ರ ಅಥವಾ ಭಿನ್ನಪತ್ರಗಳಾಗಿರಬಹುದು. ಸೂರ್ಯರಶ್ಮಿ ಹೆಚ್ಚಾಗಿ ಬೀಳುವಂತೆ ಈ ಎಲೆಗಳು ರೆಂಬೆಯಲ್ಲಿ ಒಂದು ನಿಯತ ರೀತಿಯಲ್ಲಿ ಸಂಯೋಜನೆ ಗೊಂಡಿವೆ. ಅವು ಬಲೆಯಾಕಾರ ಅಥವಾ ಸಮಾನಾಂತರ ನಾಳಜಾಲವನ್ನು ಹೊಂದಿವೆ.

ಜನನಾಂಗಗಳು : ಆವೃತಬೀಜ ಸಸ್ಯಗಳಲ್ಲಿ ವಂಶಾಭಿವೃದ್ಧಿಯ ಮುಖ್ಯಾಂಗಗಳೆಂದರೆ ಪುಷ್ಪಗಳು. ಅವು ಮಾರ್ಪಾಟಾದ ಸಣ್ಣ ರೆಂಬೆ. ರೆಂಬೆ ಗಿಡ್ಡವಾಗಿ ಅದರ ಎಲೆಗಳು ವಿವಿಧ ಆಕಾರ ಮತ್ತು ವರ್ಣಗಳನ್ನು ಹೊಂದಿ ರೆಂಬೆಯ ತುದಿಯಲ್ಲಿ ಜೋಡಿಸಿಕೊಂಡು ಹೂ ಆಗುತ್ತದೆ. ಹೂವಿನ ತೊಟ್ಟಿನ ಮೇಲೆ ಸಾಮಾನ್ಯವಾಗಿ ಹಸುರುಬಣ್ಣವಿರುವ ಪುಷ್ಪಪತ್ರದ ಹೊರಮಂಡಲ ಇದೆ. ಅದರೊಳಗೆ ವಿವಿಧ ಬಣ್ಣಗಳ ದಳಗಳೂ ಜೋಡಿಸಿಕೊಂಡಿವೆ. ಮಧ್ಯಭಾಗದ ಕೇಸರ ಮತ್ತು ಅಂಡಕೋಶಗಳನ್ನು ಚಳಿ, ಮಳೆ, ಗಾಳಿ, ಕ್ರಿಮಿಕೀಟಗಳಿಂದ ದಳಗಳೂ ಪುಷ್ಪಪತ್ರಗಳೂ ರಕ್ಷಿಸುತ್ತವೆ. ದಳಗಳು ಬಿಡಿಬಿಡಿಯಾಗಿರಬಹುದು ಅಥವಾ ಸಂಯುಕ್ತವಾಗಿರಬಹುದು; ಸಮ ಅಥವಾ ಅಸಮ ದಳಗಳಾಗಿರಬಹುದು. ಸಮದಳಪುಷ್ಪಗಳಲ್ಲಿ ಆರೀಯ ಸಮಾಂಗತೆ ಅಥವಾ ಸಮಾಂಗತೆ ಸ್ಥಿತಿ ಇರಬಹುದು. ದಳಗಳ ಜೋಡಣೆಗೆ ಅನುಗುಣವಾಗಿ ಈ ವಿಂಗಡಣೆ ಸಾಧ್ಯ. ದಳಗಳು ವರ್ಣಮಯವಾಗಿಯೂ ಸುವಾಸನಾಯುಕ್ತವಾಗಿಯೂ ಇವೆ. ವಂಶಾಭಿವೃದ್ಧಿಗೆ ಸಹಾಯವಾಗುವ ಕೀಟಗಳ ಆಕರ್ಷಣೆಗೆ ಇವು ಸಹಾಯಕಗಳು.

ಕೇಸರಗಳ ಸಂಖ್ಯೆ ದಳಗಳಷ್ಟೇ ಇರಬಹುದು ಇಲ್ಲವೆ ಇಮ್ಮಡಿ ಅಥವಾ ಅಸಂಖ್ಯಾತವಾಗಿ ಇರಬಹುದು. ಕೆಲವು ಬಗೆಗಳಲ್ಲಿ ಕಡಿಮೆಯಾಗಿರುವುದೂ ಉಂಟು. ಕೇಸರದಲ್ಲಿ ಎರಡು ಮುಖ್ಯ ಭಾಗಗಳಿವೆ. ಕೇಸರದಂಡ ಪುಷ್ಪಪೀಠದಿಂದ ಸಣ್ಣ ಎಳೆಯಂತೆ ಬೆಳೆಯುತ್ತದೆ; ಅದರ ತುದಿಯಲ್ಲಿ ಪ್ರಜನನ ಜೀವಕಣಗಳ ಉತ್ಪತ್ತಿ ಭಾಗವಿದ್ದು ಅವುಗಳ ವಿಭಜನೆಯಿಂದ ಪರಾಗವು ಉತ್ಪನ್ನವಾಗಿ ಈ ಕೋಶದಲ್ಲಿ ತುಂಬಿ ಪ್ರಸಾರಕ್ಕೆ ಸಿದ್ಧವಾಗುತ್ತವೆ. ಕೋಶದ ಹೊರಭಿತ್ತಿ ಉದ್ದಕ್ಕೂ ಸೀಳಿ ಪರಾಗವು ಹೊರಬೀಳುತ್ತದೆ. ಪರಾಗ ಸಸ್ಯದ ಗಂಡುಜನನಕಣ; ಕೇಸರ ಮಂಡಲ ಬಿಡಿಯಾಗಿಯೊ ಸಂಯುಕ್ತವಾಗಿಯೊ ಇರಬಹುದು. ಸಂಯುಕ್ತವಾಗಿದ್ದಲ್ಲಿ ಅಂಡಾಶಯದ ಶಲಾಕೆಯನ್ನು ಸುತ್ತುಗಟ್ಟಿರುತ್ತದೆ. ಅಂಡಕೋಶ ಹೂವಿನ ಮಧ್ಯ ಭಾಗದಲ್ಲಿದೆ. ಇದೇ ಹೂವಿನ ಹೆಣ್ಣು ಜನನಾಂಗ. ಅದರ ತಳಭಾಗ ಅಂಡಗಳನ್ನು ಹೊಂದಿರುವ ಅಂಡಾಶಯ; ಅದರ ಮೇಲೆ ಶಲಾಕೆಯೂ ಅದರ ತುದಿಯಲ್ಲಿ ಶಲಾಕಾಗ್ರವೂ ಇವೆ. ಅಂಡಕೋಶ ಒಂದೇ ಆಗಿರಬಹುದು ಅಥವಾ ವಿಭಾಗವಾಗಿರಬಹುದು. ಇದು ಬೀಜೋತ್ಪನ್ನ ಕಾರ್ಯಕ್ಕಾಗಿ ಪರಿವರ್ತನೆ ಹೊಂದಿದ ಎಲೆ. ಬಹುಶಃ ಪೂರ್ವದ ಸಸ್ಯಗಳಲ್ಲಿ ಹಲವು ತುದಿಯ ಎಲೆಗಳ ಅಂಚುಗಳಲ್ಲಿ ಅಂಡೋತ್ಪತ್ತಿ ಜೀವಕಣಗಳು ಇದ್ದು ಅವು ಮುಂದೆ ಬೀಜವಾಗಿ ಬೆಳೆದು ಹರಡುವಂತಿದ್ದಿರಬಹುದು. ಮುಂದೆ ಅವು ವಿಕಾಸಹೊಂದಿ ಎಲೆಯ ಅಂಚು ಒಳಮಡಚಿ, ಎರಡು ಅಂಚೂ ಕೂಡಿ ಅಂಡಾಶಯವಾಗಿರಬೇಕು, ಎಲೆಗಳ ಮಧ್ಯನಾಳ ಮೇಲಕ್ಕೆ ಮುಂದುವರಿದು ಬೆಳೆದು ಶಲಾಕಾಗ್ರವಾಗಿದೆ. ಅದರ ತುದಿ ಪರಾಗ ಹೊಂದಲು ಅನುಕೂಲವಾಗುವಂತೆ ಅಗಲವಾಗಿ ಅಥವಾ ಸೀಳಿದಂತೆ ವಿವಿಧಾಕಾರ ಹೊಂದಿದೆ. ಯಾವಾಗಲೂ ಅಂಡಗಳು ಈ ಜೋಡಣೆಯಾದ ಅಂಚುಗಳ (ಎಂದರೆ ಅಂಡಾಶಯದ) ಭಾಗದಿಂದಲೇ ಉತ್ಪತ್ತಿಯಾಗುತ್ತವೆ. ಪ್ರತಿಯೊಂದು ಅಂಡಾಶಯದಲ್ಲಿಯೂ ಒಂದು ಅಥವಾ ಹೆಚ್ಚಿನ ಸಂಖ್ಯೆಯ ಅಂಡಗಳಿವೆ. ಪ್ರತಿ ಅಂಡದಲ್ಲಿಯೂ ಒಂದು ತತ್ತಿ ಉತ್ಪನ್ನವಾಗಿ ಗರ್ಭಧಾರಣೆಗೆ ಸಿದ್ಧವಾಗುತ್ತದೆ. ಆವೃತಬೀಜ ಸಸ್ಯಗಳಲ್ಲಿ ಪರಾಗಸ್ಪರ್ಶ ಗಾಳಿ, ನೀರು, ಕೀಟ ಅಥವಾ ಪ್ರಾಣಿಗಳಿಂದಾಗುತ್ತದೆ. ಇತರ ಸಸ್ಯಸಮೂಹದಂತೆ ಇದರಲ್ಲಿ ಸ್ವಯಂಚಲಿತ ಸಂಯೋಗಿ ಜೀವಕಣಗಳು ಉತ್ಪನ್ನವಾಗುವುದಿಲ್ಲ. ಪರಾಗ ಶಲಾಕಾಗ್ರಕ್ಕೆ ಸ್ಪರ್ಶವಾದ ಅನಂತರ ಅದು ಶಲಾಕೆಯ ಮುಖೇನ ಅಂಡಾಶಯವನ್ನು ಹೊಕ್ಕು ಅಂಡಕದೊಡನೆ ಸಂಯೋಗವಾಗುತ್ತದೆ. ಇದಕ್ಕೆ ಗರ್ಭಕಟ್ಟುವಿಕೆ ಎಂದು ಹೆಸರು. ಗರ್ಭಧಾರಣೆಯಾದ ಅಂಡಕ ಭ್ರೂಣವಾಗುತ್ತದೆ. ಮುಂದೆ ಬೆಳೆದು ಬೀಜವಾಗುತ್ತದೆ. ಅಂಡಾಶಯ ಅದನ್ನು ಆವರಿಸಿ ಬೆಳೆದು ಹಣ್ಣಾಗುತ್ತದೆ. ಈ ಕಾರಣದಿಂದ ಈ ಗುಂಪಿಗೆ ಆವೃತಬೀಜ ಸಸ್ಯಗಳೆಂಬ ಹೆಸರು ಬಂದಿದೆ.

ಸಾಮಾನ್ಯವಾಗಿ ಬೀಜಗಳಲ್ಲಿ ಮೂರು ಮುಖ್ಯ ಭಾಗಗಳಿವೆ: 1. ಸಿಪ್ಪೆ–ಒಳ ಭಾಗಗಳನ್ನು ರಕ್ಷಿಸುವುದು ಇದರ ಮುಖ್ಯ ಕಾರ್ಯ. ಹೊರಗಿನ ಸಿಪ್ಪೆ ಮಂದವಾಗಿದ್ದು ಒಳಗಿನ ಸಿಪ್ಪೆ ತೆಳುವಾಗಿರುತ್ತದೆ. 2. ಭ್ರೂಣ–ಇದರಲ್ಲಿ ಎರಡು ಭಾಗಗಳಿವೆ. ಸಲಾಕೆಯ ಆಕಾರದಲ್ಲಿದ್ದು ಕೆಳಕ್ಕೆ ಬಾಗಿರುವ ಪ್ರಥಮ ಮೂಲ ಒಂದು; ಇದರಿಂದ ಬೇರು ಉತ್ಪನ್ನವಾಗುತ್ತದೆ; ಮುಂದೆ ಸಸ್ಯಕಾಂಡವಾಗುವ ಬಿಳುಪಿನ ಎರಡು ಎಲೆಗಳುಳ್ಳ ಪ್ರಥಮ ಕಾಂಡ. 3. ಭ್ರೂಣಾಹಾರ–ಇದು ಎಲ್ಲ ಬೀಜಗಳಲ್ಲೂ ಇರುವುದಿಲ್ಲ. ಏಕದಳ ಸಸ್ಯಗಳಲ್ಲಿ ಮತ್ತು ಹರಳು ಮುಂತಾದ ದ್ವಿದಳ ಸಸ್ಯಗಳಲ್ಲಿ ಹೆಚ್ಚು. ಹೆಚ್ಚು ಇರುವಲ್ಲಿ ಭ್ರೂಣ ಸಣ್ಣದು. ಇಲ್ಲದಿರುವಲ್ಲಿ ಅಂಕುರ ದಳಗಳೂ ಭ್ರೂಣವೂ ದೃಢವಾಗಿ ಬೆಳೆದಿರುತ್ತವೆ. ಉದಾಹರಣೆಗೆ, ತಿಂಗಳ ಹುರುಳಿ, ಅವರೆ ಇತ್ಯಾದಿ. ಬೀಜಗಳನ್ನು ಆವರಿಸಿರುವ ಅಂಡಾಶಯ ಹಣ್ಣು. ಇವುಗಳಲ್ಲಿ ವೈವಿಧ್ಯವಿದ್ದರೂ ಒಂದೇ ಪ್ರಭೇದವು ಅಥವಾ ಜಾತಿಯವು ನಿರ್ದಿಷ್ಟ ನಿಯಮವನ್ನನುಸರಿಸುತ್ತವೆ. ಪ್ರಾಣಿಗಳ ಆಹಾರವನ್ನು ಈ ಹಣ್ಣುಗಳೂ ಬೀಜಗಳೂ ಹೊಂದಿರುವುದು ಈ ಸಸ್ಯಸಮೂಹದ ಅಭಿವೃದ್ಧಿಗೆ ಮೂಲಕಾರಣ.

17ನೆಯ ಶತಮಾನದ ಉತ್ತರಾರ್ಧದಲ್ಲಿ ಜಾನ್ ರೇ ಈ ಸಸ್ಯಗಳನ್ನು ಅಂಗಾಂಶಗಳ ವ್ಯತ್ಯಾಸಗಳ ಆಧಾರದ ಮೇಲೆ ದ್ವಿದಳ ಮತ್ತು ಏಕದಳ ಸಸ್ಯಗಳೆಂಬ ಎರಡು ಪಂಗಡಗಳಾಗಿ ಬೇರ್ಪಡಿಸಿದ. ದ್ವಿದಳ ಸಸ್ಯಗಳಲ್ಲಿ ಭ್ರೂಣಕ್ಕೆ ಎರಡು ಅಂಕುರದಳ ಇವೆ. ಕಾಂಡಗಳ ಪುನರ್ ಬೆಳೆವಣಿಗೆಗೆ ನಿರ್ದಿಷ್ಟವಾದ ನಾಳಸಮೂಹದ ಜೀವಕಣ ಉತ್ಪತ್ತಿಭಾಗದಿಂದಾಗುತ್ತದೆ. ಎಲೆಗಳ ನಾಳಗಳು ಜಾಲದಾಕಾರದಲ್ಲಿ ಹರಡಿವೆ. ಎಲೆಗಳು ಕಾಂಡ ಹೊಂದಿ ಅಂಚು ನಯವಾಗಿ ಅಥವಾ ಕಚ್ಚು ಹೊಂದಿರುತ್ತವೆ. ಹೂವಿಗೆ ದಳವಲಯವಿದ್ದು ಅವು 4–5 ಅಥವಾ 4, 5ರ ಅಪವರ್ತ್ಯ ಸಂಖ್ಯೆಯಲ್ಲಿರುತ್ತವೆ. ಪರಾಗಗಳ ಹೊರಭಿತ್ತಿಯಲ್ಲಿ ಸಾಮಾನ್ಯವಾಗಿ ಮಡಿಕೆ ಅಥವಾ ನೀಳ ವಿಭಾಗಗಳಿರುತ್ತವೆ. ಏಕದಳ ಬೀಜಗಳಲ್ಲಿ ಭ್ರೂಣ ಒಂದೇ ಅಂಕುರದಳ ಹೊಂದಿದೆ. ಕಾಂಡಕ್ಕೆ ದಪ್ಪವಾಗಲು ನೆರವಾಗುವ ದ್ವಿತೀಯಕ ಬೆಳೆವಣಿಗೆ (ಸೆಕೆಂಡರಿ ಗ್ರೋತ್) ಸಾಧ್ಯವಿಲ್ಲ. ಎಲೆಗಳಿಗೆ ಅಂಚು ನೇರವಾಗಿದ್ದು ಕಾಂಡವಿಲ್ಲದೆ ನಾಳಗಳು ಸಮಾನಾಂತರವಾಗಿವೆ. ಪುಷ್ಪವಲಯಗಳ ಸಂಖ್ಯೆ ಮೂರರ ಅಪವರ್ತ್ಯ. ಪರಾಗಗಳ ಹೊರಭಿತ್ತಿಯಲ್ಲಿ ಒಂದೇ ಮಡಿಕೆ ಇದೆ. ದ್ವಿದಳ ಸಸ್ಯಗಳಲ್ಲಿ ಸು. 260–270 ಕುಟುಂಬಗಳೂ 9,500 ಜಾತಿಗಳೂ 2,00,000ಕ್ಕೂ ಮೀರಿದ ಪ್ರಭೇದಗಳೂ ಇವೆ. ಏಕದಳ ಬೀಜ ಪಂಗಡದಲ್ಲಿ 65–70 ಕುಟುಂಬಗಳು ಮಾತ್ರವಿದ್ದು 3,000 ಜಾತಿಗಳನ್ನೂ 50,000 ಪ್ರಭೇದಗಳನ್ನೂ ಒಳಗೊಂಡಿವೆ.

ಆವೃತಬೀಜ  ಸಸ್ಯಗಳ ವರ್ಗೀಕರಣ: ಸಸ್ಯಗಳ ಬಾಹ್ಯರಚನಾಶಾಸ್ತ್ರದ ಅಧ್ಯಯನದಿಂದ ವಿವಿಧ ಗಿಡಗಳಲ್ಲಿ ಅನೇಕ ಹೋಲಿಕೆ ಮತ್ತು ವ್ಯತ್ಯಾಸಗಳು ಗೋಚರವಾಗುತ್ತವೆ. ಈ ವೈವಿಧ್ಯವನ್ನು ಸರಿಯಾಗಿ ಅರಿತು ವಿವರಿಸಿ ಸಸ್ಯಗಳಲ್ಲಿರುವ ಪರಸ್ಪರ ಹೋಲಿಕೆ ಮತ್ತು ವ್ಯತ್ಯಾಸಗಳಿಗೆ ಅನುಗುಣವಾಗಿ ಸಸ್ಯಜಾತಿ ಕುಟುಂಬಗಳನ್ನು ಜೋಡಿಸುವುದೇ ಇದರ ಉದ್ದೇಶ. ಕೆಳಮಟ್ಟದ ಸಸ್ಯರಚನೆಯಿಂದ ಕ್ರಮೇಣ ಹೇಗೆ ಅವು ಅಂಗ ಅಂಗವಾಗಿ

ವಿಕಾಸಹೊಂದಿ ಉನ್ನತಮಟ್ಟವನ್ನು ಮುಟ್ಟಿದುವೆಂದು ಈ ಅಧ್ಯಯನದಿಂದ ತಿಳಿಯಬಹುದು. ಇಂಥ ವರ್ಗೀಕರಣಕ್ಕೆ ಬಾಹ್ಯರಚನೆ, ಅಂಗರಚನೆ, ಜೀವನಚರಿತ್ರೆ, ಗಾತ್ರ, ಆಕಾರ, ಹೂಗಳ ಬಣ್ಣ ಅವುಗಳ ಉಪಯೋಗ ಅಥವಾ ಅವುಗಳ ನೈಸರ್ಗಿಕ ವಿವರಣೆ–ಇವೆಲ್ಲ ಆಧಾರಗಳು. ಆದರೆ ಅವು ಸ್ಥಿರವಾದವುಗಳಲ್ಲ. ಗಾಳಿ, ಬೆಳಕು, ನೀರು, ಮಣ್ಣು ಮುಂತಾದುವುಗಳು ಸಸ್ಯಸಮೂಹದಲ್ಲಿ ಹೊಂದಾಣಿಕೆಯ ರೂಪವನ್ನು ಉಂಟುಮಾಡಬಲ್ಲವು. ಅವು ಬೇರೆ ಬೇರೆ ಜಾತಿಯವಾದರೂ ಎಲ್ಲಕ್ಕೂ ಒಂದೇ ವಿಧವಾದ ಬಾಹ್ಯರೂಪ ರಚನೆ ಉಂಟಾಗಬಹುದು. ಆದರೆ ಸಸ್ಯಗಳ ಸಂತಾನಾಭಿವೃದ್ಧಿ ಭಾಗಗಳಲ್ಲಿ ಮಾತ್ರ ಬಾಹ್ಯಾವರಣದಿಂದ ಅತಿ ಹೆಚ್ಚಿನ ವ್ಯತ್ಯಾಸವಾಗುವುದಿಲ್ಲ. ಅವುಗಳ ವಿವಿಧ ವಲಯಗಳ ಸಂಖ್ಯೆ ಜೋಡಣೆಯ ಕ್ರಮ ಮುಂತಾದವು ಸಾಮಾನ್ಯವಾಗಿ ಪ್ರತಿ ಜಾತಿಯಲ್ಲೂ ಸಮನಾಗಿರುತ್ತವೆ. ಅವುಗಳ ಸಣ್ಣ ವ್ಯತ್ಯಾಸಗಳ ಆಧಾರದ ಮೇಲೆ ವಿವಿಧ ಪ್ರಭೇದಗಳನ್ನು ಕಲ್ಪಿಸಿರುವರು. ಬಾಹ್ಯರಚನೆಯಲ್ಲೂ ಸಂತಾನಾಭಿವೃದ್ಧಿ ಭಾಗಗಳಲ್ಲೂ ಹೋಲುವ ಸಸ್ಯಗಳನ್ನು ಜೋಡಿಸಿ ಅವನ್ನು ಒಂದು ಪ್ರಭೇದವೆಂದೂ ಹೆಚ್ಚು ಅಂಶಗಳಲ್ಲಿ ಸಾದೃಶ್ಯ ಹೊಂದಿ ಸ್ವಲ್ಪ ಮಾತ್ರ ಭೇದವುಳ್ಳ ಅನೇಕ ಪ್ರಭೇದಗಳ ವಿವರಣೆಯಾಗಿ ಅವನ್ನು ಬೇರ್ಪಡಿಸಲೂ ಸುಲಭವಾಗಿ ಅರಿಯಲೂ ಸಹಾಯವಾಗುತ್ತದೆ. ಇದನ್ನು ಸಸ್ಯಶಾಸ್ತ್ರ ಪಿತಾಮಹನೆನಿಸಿರುವ ಸ್ವೀಡನ್ನಿನ ಲಿನೀಯಸ್ (1707–78) ಮೊದಲಬಾರಿಗೆ ದ್ವಿಪದ ನಾಮಕರಣ ಪದ್ಧತಿ ಎಂದು ವಿವರಿಸಿದ. ಅದು ಅತ್ಯಂತ ಸಮಂಜಸವಾದ್ದರಿಂದ ಅದೇ ನೀತಿಯನ್ನು ಈಗಲೂ ಅನುಸರಿಸಲಾಗುತ್ತಿದೆ. ಹೀಗೆ ವರ್ಗೀಕರಣ ಮಾಡಿ ವಿವರಿಸುವುದರಿಂದ ಸಸ್ಯವನ್ನು ಗುರುತಿಸುವುದೂ ತಿಳಿಯುವುದೂ ಸುಲಭವಾಗುತ್ತದೆ. ಉದಾಹರಣೆಗೆ ಅರಳಿ, ಆಲ, ಅಂಜೂರ ಎಲ್ಲವೂ ಒಂದೇ ಜಾತಿ (ಫೈಕಸ್) ; ಅವುಗಳಲ್ಲಿನ ವ್ಯತ್ಯಾಸ ತೋರಿಸಲು ಫೈಕಸ್ ಬೆಂಗಾಲೆನ್ಸಿಸ್, ಫೈಕಸ್ ರಿಲಿಜಿಯೋಸ, ಫೈಕಸ್ ಕ್ಯಾರಿಕ ಎಂಬ ಅನುಕ್ರಮ ಪ್ರಭೇದನಾಮಗಳನ್ನು ಹೇಳಲಾಗುತ್ತದೆ. ಪ್ರಾಚೀನ ಗ್ರೀಸಿನ ಥಿಯೊಫ್ರಾಸ್ಟಸ್ ಮುಂತಾದವರು ಹಲವು ಮೂಲಿಕೆಗಳನ್ನು ವಿವರಿಸಲು ಮೊದಲು ಬಾಹ್ಯಶರೀರ ರಚನೆಯ ಆಧಾರದ ಹಲವು ಜಾತಿಗಳನ್ನು ವಿವರಿಸಿದರು. 18ನೆಯ ಶತಮಾನದವರೆಗಿನ ಅವಧಿಯಲ್ಲಿ ಅನೇಕ ನುರಿತ ಸಸ್ಯವಿಜ್ಞಾನಿಗಳು ಅದನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸಿದರು. ಲಿನೀಯಸ್ 1735ರಲ್ಲಿ ಬಾಹ್ಯರಚನೆಯ ಆಧಾರದಿಂದಲೇ ಪ್ರಭೇದಗಳನ್ನು ಸೂಚಿಸಿ ದ್ವಿಪದ ನಾಮಕರಣವನ್ನು ಅನುಸರಿಸಿ ಶಾಸ್ತ್ರೀಯ ವರ್ಗೀಕರಣಶಾಸ್ತ್ರದ ಅಧ್ಯಾಯ ಆರಂಭಿಸಿದ. ಆತ ಅದನ್ನು ಇನ್ನೂ ಉತ್ತಮಪಡಿಸಬೇಕೆಂದು ನೈಸರ್ಗಿಕ ರೀತಿಯ ವರ್ಗೀಕರಣಮಾಡಲು ಪ್ರಯತ್ನಿಸುತ್ತಿದ್ದಾಗಲೇ ಮರಣಹೊಂದಿದ. ಈ ನಿಯಮಗಳನ್ನು ಸರಿಪಡಿಸಿ ವಿವರಿಸಿದ ಕೀರ್ತಿ ಫ್ರಾನ್ಸಿನ ವಿಜ್ಞಾನಿ ಜಸ್ಯೂಗೆ (1789) ಸಲ್ಲುತ್ತದೆ. ಸಸ್ಯಜೀವನ ವಿಕಾಸದ ಅಧ್ಯಯನದಿಂದ ಕಾಲಾಂತರದಲ್ಲಿ ಹೂವಿನ ವಿವಿಧ ವಲಯಗಳು ಅಧಿಕ ಸಂಖ್ಯೆಯಿಂದ ಸರಳ ಸಂಖ್ಯೆಗೆ ಇಳಿಯಿತೆಂದು ಅನೇಕ ಆಧಾರಗಳಿಂದ ತಿಳಿದುಬರುತ್ತದೆ. ಇದರಿಂದ ಈಗಿನ ಸರಳ ಪುಷ್ಪಗಳು ಹೆಚ್ಚು ಭಾಗಗಳಿರುವ ಪುಷ್ಪಗಳಿಗಿಂತ ಮುಂದುವರಿದವೆಂದು ತಿಳಿಯುತ್ತದೆ. ಈ ತತ್ತ್ವದ ಅನುಸರಣೆ ಅಥವಾ ನಿರಾಕರಣೆಯ ಆಧಾರ ಮುಂದಿನ ಸಸ್ಯವಿಜ್ಞಾನಿಗಳ ಎರಡು ಪಂಗಡಗಳಾಗಿಸಿತು. ಇವುಗಳಲ್ಲಿ ಜರ್ಮನಿಯ ಎಂಗ್ಲರ್ ಮತ್ತು ಪ್ರಾಂಟೆಲ್ ಎಂಬುವರು ಈ ತತ್ತ್ವವನ್ನು ನಿರಾಕರಿಸಿ, ಗಾಳಿಯಿಂದ ಪರಾಗಸ್ಪರ್ಶವಾಗುವ ಸಸ್ಯಗಳು, ಕೀಟಗಳಿಂದಾಗುವ ಸಸ್ಯಗಳಿಗಿಂತ ಪುರಾತನವಾದುವೆಂದೂ ಮೃದು ಕಾಂಡದವು ಗಟ್ಟಿಯಾದ ಮರದವುಗಳಿಗಿಂತ ಹಿಂದಿನವೆಂದೂ ಜಲಸಸ್ಯಗಳಿಂದ ಭೂಸಸ್ಯಗಳ ಉತ್ಪನ್ನವಾಗಿದೆಯೆಂದೂ ಏಕದಳ ಸಸ್ಯಗಳು ದ್ವಿದಳ ಸಸ್ಯಗಳಿಗಿಂತ ಪೂರ್ವದವೆಂದೂ ನಿರ್ಧರಿಸಿ ಪ್ರಪಂಚದ ಎಲ್ಲ ಸಸ್ಯಗಳನ್ನೂ ಪೂರ್ಣವಾಗಿ ವಿವರಿಸಿ 20 ಸಂಪುಟಗಳಲ್ಲಿ ಪ್ರಕಟಿಸಿದರು. ಇಷ್ಟು ಬೃಹತ್‍ಯೋಜನೆಯ ವಿವರಣೆಯನ್ನು ಮೀರಿಸಲು ಇದುವರೆಗೆ ಯಾರಿಗೂ ಸಾಧ್ಯವಾಗಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಎಲ್ಲ ಸರಳ ಹೂಗಳೂ ಹಿಂದಿದ್ದ ಹೆಚ್ಚು ಭಾಗ ಹೊಂದಿದವುಗಳಿಂದ ವಿಕಾಸ ಹೊಂದಿ ಉತ್ಪನ್ನವಾದುವು ಎಂದು ಜಸೂ ಸೂಚಿಸಿದ್ದ ಊಹೆಯನ್ನು ಕ್ರಮೇಣ ಡಿ ಕಂಡೋಲ್ (1813), ಲಿಂಡ್ಲೇ (1830), ಬೆಂತಾಮ್ ಮತ್ತು ಹುಕ್ಕರ್ (1862–83), ಜೆಸ್ಸಿ (1915) ಮತ್ತು ಹಚ್ಚಿನ್‍ಸನ್ (1948) ಅನುಮೋದಿಸಿ ಅದನ್ನೇ ಅವರ ವಿವರಣೆಯಲ್ಲಿ ಅನುಸರಿಸಿದ್ದಾರೆ. ಅವರು ಯಾವುದೇ ಪ್ರಭೇದ ಅಥವಾ ಜಾತಿಯಲ್ಲಿ ಗಟ್ಟಿಯಾದ ಮರದಂಥ ಅಂಗಾಂಶವೇ ಮೆದುಕಾಂಡ ಅಂಗಾಂಶಗಳಿಗೆ ಮೂಲವೆಂದೂ ಜಲಸಸ್ಯಗಳು ಭೂಸಸ್ಯ ಜಾತಿಗಳಿಂದ ಉತ್ಪನ್ನವಾದದೆಂದೂ ದ್ವಿದಳ ಸಸ್ಯಗಳಿಂದ ಏಕದಳಸಸ್ಯ ಪಂಗಡವಾಯಿತೆಂದೂ ಪುಷ್ಪಪತ್ರರಹಿತ ಮತ್ತು ದಳವಲಯರಹಿತ ಹೂಗಳು ಅವುಗಳಿದ್ದ ಪೂರ್ವಿಕರಿಂದಲೇ ಬಂದವೆಂದೂ ಪ್ರತಿಪಾದಿಸಿದ್ದಾರೆ. ಯಾವುದೊಂದು ವರ್ಗೀಕರಣ ವಿವರಣೆಯನ್ನೂ ಪೂರ್ಣ ಸಮರ್ಪಕವೆಂದು ಹೇಳಲಾಗುವುದಿಲ್ಲ. ಆದರೆ ಏಕದಳ ಸಸ್ಯಗಳು ದ್ವಿದಳ ಸಸ್ಯಗಳಿಂದ ಉತ್ಪನ್ನವಾದವೆಂದೂ ಅಥವಾ ಯಾವುದೋ ಅಳಿದ ಪೂರ್ವಿಕರಿಂದ ಈ ಎರಡೂ ಬೇರೆ ಬೇರೆಯಾಗಿ ವಿಕಾಸಹೊಂದಿ ಬೆಳೆದಿರಬಹುದೆಂದೂ ಅನೇಕ ಪುರಾವೆಗಳಿಂದ ಊಹಿಸಲಾಗಿದೆ. ಎಂಗ್ಲರ್ ಮತ್ತು ಪ್ರಾಂಟೆಲ್‍ರು ಏಕದಳ ಬೀಜ ಸಸ್ಯಗಳನ್ನು 11 ಶ್ರೇಣಿ, 46 ಕುಟುಂಬಗಳಾಗಿಯೂ ಮತ್ತು ದ್ವಿದಳ ಬೀಜ ಸಸ್ಯಗಳನ್ನು 44 ಶ್ರೇಣಿ, 261 ಕುಟುಂಬಗಳಾಗಿಯೂ ವಿಂಗಡಿಸಿ ವಿವರಿಸಿದ್ದಾರೆ. ಬೆಂತಾಮ್ ಮತ್ತು ಹುಕ್ಕರ್ ರೀತ್ಯಾ ಏಕದಳ ಸಸ್ಯಗಳನ್ನು 34 ಕುಟುಂಬಗಳಾಗಿಯೂ ದ್ವಿದಳ ಸಸ್ಯಗಳನ್ನು 174 ಕುಟುಂಬಗಳಾಗಿಯೂ ವಿಂಗಡಿಸಿದೆ. ಹಿಂದಿನ ಬ್ರಿಟಿಷ್ ಚಕ್ರಾಧಿಪತ್ಯದ ಭಾಗಗಳಲ್ಲೂ ಹಲವು ಯುರೋಪಿನ ರಾಷ್ಟ್ರಗಳಲ್ಲೂ ಬೆಂತಾಮ್ ಮತ್ತು ಹುಕ್ಕರ್‍ರವರ ವರ್ಗೀಕರಣವನ್ನೇ ಬಳಸಲಾಗುತ್ತಿದೆ.

(ಜಿ.ವಿ.ಬಿ.ಎನ್.)

**ಆವೃತ್ತಿಕೋಷ್ಟಕ:** ಸಂಗೃಹೀತ ಪ್ರಾಯೋಗಿಕ ಅವೇಕ್ಷಣೆಗಳನ್ನು ಅನುಮಿತಿ ತೆಗೆಯಲು ಅನುಕೂಲಿಸುವಂತೆ ಸಿದ್ಧಗೊಳಿಸಿದ ಕೋಷ್ಟಕ (ಫ್ರೀಕ್ವೆನ್ಸಿ ಟೇಬಲ್); ಪರ್ಯಾಯನಾಮ: ಆವೃತ್ತಿ ಸಾರಣಿ. ಸಂಖ್ಯಾಶಾಸ್ತ್ರದಲ್ಲಿ ಒಂದು ಪರಿಕರ್ಮ. ಈ ಪರಿಕರ್ಮದಲ್ಲಿ ವಿವರಣಾತ್ಮಕ ಸಂಖ್ಯಾ ಮಾಹಿತಿಗಳನ್ನು ಮೊದಲು ಒದಗಿಸಿಕೊಡಬೇಕು. ಒಂದು ಉದಾಹರಣೆಯಿಂದ ಇದನ್ನು ವಿವರಿಸಬಹುದು. ಒಂದು ಸಣ್ಣ ಹಳ್ಳಿಯ ಜನಗಣತಿಯಿಂದ ಪ್ರತಿಮನೆಯಲ್ಲಿಯೂ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಎಷ್ಟು ಎಂಬ ವಿವರವನ್ನು ಸಂಗ್ರಹಿಸಿದ್ದೇವೆ ಎನ್ನೋಣ. ಕುಳವಾರು ಮಕ್ಕಳ ಸಂಖ್ಯೆಗಳು ಹೀಗಿವೆ:

| | | | | | | | | | |
|---|---|---|---|---|---|---|---|---|---|
| 2 | 1 | 3 | 3 | 5 | 4 | 2 | 2 | 2 | 5 |
| 4 | 2 | 4 | 7 | 2 | 3 | 3 | 1 | 1 | 3 |
| 3 | 6 | 1 | 2 | 4 | 4 | 3 | 2 | 6 | 3 |
| 3 | 3 | 3 | 3 | 4 | 4 | 4 | 4 | 2 | 3 |
| 4 | 5 | 2 | 5 | 5 | 1 | 3 | 3 | 5 | 2 |

ಈ ಸಂಖ್ಯಾವಳಿಯ ಅವಗಾಹನೆಯಿಂದ ನಮಗೆ ನಿಜ ಸ್ಥಿತಿಗತಿ ಏನೆಂಬುದಾಗಿ ತಿಳಿಯುವುದಿಲ್ಲ. ನಮ್ಮ ಗ್ರಹಿಕೆಗೆ ಬರಬೇಕಾದರೆ ಅಂಕೆಗಳ ಈ ವರಸೆಯನ್ನು ಪುಟಪಾಕ ಮಾಡಬೇಕು ಮತ್ತು ಅವೇಕ್ಷಣೆಗಳ ಈ ಸಮೂಹದ ಲಕ್ಷಣವನ್ನು ಅಡಕವಾದ ರೀತಿಯಲ್ಲಿ ತಿಳಿಯಪಡಿಸಬೇಕು. ಇದಕ್ಕೆ ಮೊದಲನೆಯ ಹಂತವಾಗಿ ಒಂದು ಮಗು ಇರುವ ಮನೆಗಳು ಎಷ್ಟು, ಎರಡು ಮಕ್ಕಳು ಇರುವ ಮನೆಗಳು ಎಷ್ಟು, ಮೂರು ಮಕ್ಕಳಿರುವ ಕುಳಗಳೆಷ್ಟು ಎಂದು ಮುಂತಾಗಿ ಲೆಕ್ಕಮಾಡಿ ಒಂದು ಕೋಷ್ಟಕವನ್ನು ತಯಾರಿಸಬೇಕು.

ಹಾಲುಮೊಸರು ಕೊಳ್ಳುವ ಲೆಕ್ಕವನ್ನಿಡಲು ನೀಟಗೆರೆ ಹಾಕುವ ರೂಢಿ ನಮ್ಮಲ್ಲಿರುವುದಷ್ಟೆ. ಸೇರಿನ ಗೆರೆಗಳನ್ನು ಒಂದೆಡೆಯಲ್ಲಿ ಪಾವಿನ ಗೆರೆಗಳನ್ನು ಮತ್ತೊಂದೆಡೆ ಹಾಕುತ್ತೇವೆ. ಕೊನೆಗೆ ಸೇರಿನ ಗೆರೆಗಳೆಷ್ಟು, ಪಾವಿನ ಗೆರೆಗಳೆಷ್ಟು ಎಂದು ಬೇರೆ ಬೇರೆ ಎಣಿಸಿ ಒಟ್ಟು ಲೆಕ್ಕವನ್ನು ಮಾಡುತ್ತೇವೆ. ಇದೇ ಕ್ರಮವನ್ನು ಅನುಸರಿಸಿ ಒಂದು ಮಗು ಇರುವ ಕುಳಗಳೆಷ್ಟು, ಎರಡು ಮಕ್ಕಳಿರುವ ಕುಳಗಳೆಷ್ಟು ಎಂದು ಮುಂತಾಗಿ ಗೆರೆಗಳನ್ನು ಹಾಕಿ ಎಣಿಕೆಮಾಡುವುದನ್ನು ಸುಲಭಗೊಳಿಸಲು ಒಂದು ಉಪಾಯವನ್ನು ಬಳಸುತ್ತೇವೆ. ನಾಲ್ಕು ಗೆರೆಗಳನ್ನು ಹಾಕಿದಮೇಲೆ ಐದನೆಯ ಗೆರೆಯನ್ನು ಅಡ್ಡಲಾಗಿ ಹಾಕಿ ಪಂಚಕಗಳನ್ನಾಗಿ ಬಿಗಿದು ಕಂತೆಕಟ್ಟುತ್ತೇವೆ.

ಹೀಗೆ |||| ಅಥವಾ 卌 ಮೇಲೆ ಕೊಟ್ಟಿರುವ ಸಂಖ್ಯಾವಳಿಯಿಂದ ಇಂಥ ಪಟ್ಟಿಯನ್ನು ರಚಿಸುವ ವಿಧಾನವನ್ನು ಕೆಳಗೆ ತೋರಿಸಿದೆ. ಇದರಿಂದ ಸಿದ್ಧಿಸುವ ಪಟ್ಟಿಯನ್ನು ಆವೃತ್ತಿಕೋಷ್ಟಕ ಎನ್ನುತ್ತೇವೆ. ಇದನ್ನು ಆವೃತ್ತಿ ವಿತರಣೆ (ಫ್ರೀಕ್ವೆನ್ಸಿ ಡಿಸ್ಟ್ರಿಬ್ಯೂಷನ್) ಎಂದೂ ಹೇಳುವುದುಂಟು.

ಕೋಷ್ಟಕ – 1 ಗೆರೆಗಳ ತಾಳೆ

| ಮಕ್ಕಳ ಸಂಖ್ಯೆ | ಬೊಟ್ಟುಗಳ ದಾಖಲ |
|---|---|
| 1 | 卌 |
| 2 | 卌 卌 \| |
| 3 | 卌 卌 卌 |
| 4 | 卌 卌 |
| 5 | 卌 \| |
| 6 | \|\| |
| 7 | \| |

ಕೋಷ್ಟಕ–2

| ಮಕ್ಕಳ ಸಂಖ್ಯೆ | ಆವೃತ್ತಿ ಸಂಖ್ಯೆ |
|---|---|
| 1 | 5 |
| 2 | 11 |
| 3 | 15 |
| 4 | 10 |
| 5 | 6 |
| 6 | 2 |
| 7 | 1 |
| ಒಟ್ಟು | 50 |

ಮೇಲಿನ ಉದಾಹರಣೆಯಲ್ಲಿ ವಿವರ್ತದ (ವೇರಿಯೇಟ್) ಪ್ರತಿಯೊಂದು ಬೆಲೆಗೂ ಒಂದು ವರ್ಗದಂತೆ ವಿಂಗಡಿಸಿದ್ದೇವೆ. ಕೆಲವು ವೇಳೆ ಎರಡು ಮೂರು ಬೆಲೆಗಳನ್ನು ಸೇರಿಸಿ ಒಂದು ವರ್ಗವನ್ನು (ಕ್ಲಾಸ್) ರಚಿಸುತ್ತೇವೆ. ಉದಾಹರಣೆಗೆ, 1–2, 3–4, 5–6, 7–8 ಎಂಬುದಾಗಿ ವರ್ಗದ ಅಂತರಗಳನ್ನು ನಿಗದಿಮಾಡಿಕೊಂಡರೆ ಮೇಲಿನ ಅವೇಕ್ಷಣೆಗಳಿಂದ ಕೆಳಕಂಡ ಆವೃತ್ತಿಕೋಷ್ಟಕ ದೊರೆಯುವುದು. ವರ್ಗದ ಅಂತರ ಹೆಚ್ಚಿದರೆ ಒಟ್ಟು ದೊರೆವ ವರ್ಗಗಳ ಸಂಖ್ಯೆ ಕಡಿಮೆಯಾಗುವುದು. ಆವೃತ್ತಿಕೋಷ್ಟಕದ ಗುಣಧರ್ಮಗಳು: ಆವೃತ್ತಿಕೋಷ್ಟಕದ ವಿಶಿಷ್ಟ ಗುಣಧರ್ಮಗಳನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸುತ್ತೇವೆ. ಒಂದು ತರಗತಿಯ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆವೃತ್ತಿ ಕೋಷ್ಟಕದ ರೂಪದಲ್ಲಿ ಕೆಳಗೆ ಬರೆದಿರುವಂತೆ ಪ್ರದರ್ಶಿಸಲಾಗಿದೆ ಎನ್ನೋಣ.

ಇಲ್ಲಿ ಗಮನಿಸಬೇಕಾದ ಅಂಶಗಳು: (1) ಈ ಕೋಷ್ಟಕದಲ್ಲಿ ವರ್ಗದ ಅಂತರ 5. (2) ಈ ಕೋಷ್ಟಕದಿಂದ ಸರಳತೆ ದೊರೆತಿದೆ; ಆದರೆ ಅವೇಕ್ಷಣೆಗಳು ಬಿಡಿ ಬಿಡಿಯಾಗಿದ್ದಾಗ ಎಷ್ಟು ಮಾಹಿತಿಗಳು ಸಿಗುವುವೋ ಅಷ್ಟು ಸಿಗುವುದಿಲ್ಲ; ಕೆಲವು ವಿದ್ಯಮಾನಗಳು ಲುಪ್ತವಾಗಿವೆ. ಹೇಗೆಂದರೆ 40–44 ರ ವರೆಗಿನ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ 18 ಎಂದು ಕೋಷ್ಟಕ ತಿಳಿಸುತ್ತದೆ. ಆದರೆ ಎಷ್ಟು ಮಂದಿ 40 ಅಂಕಗಳನ್ನು ಪಡೆದರು, ಎಷ್ಟು ಮಂದಿ 41 ಅಂಕಗಳನ್ನು ಪಡೆದರು ಎಂಬ ವಿವರಗಳನ್ನು ಸ್ಫುಟವಾಗಿ ತಿಳಿಸುವುದಿಲ್ಲ.

ಅಂದರೆ ಸರಳತೆಯನ್ನು ಪಡೆಯಲು ಕೆಲವೊಂದು ವಿವರಗಳನ್ನು ತ್ಯಾಗಮಾಡಬೇಕಾಗುವುದು. ಇಂಥ ಸಂದರ್ಭದಲ್ಲಿ ಉಕ್ತವರ್ಗದ ಆವೃತ್ತಿ ಸಂಖ್ಯೆಯ ಪ್ರತಿಯೊಂದು ಅವೇಕ್ಷಣೆಯೂ ವರ್ಗದ ಮಧ್ಯವರ್ತಿ ಬೆಲೆಯನ್ನು (ಸೆಂಟ್ರಲ್ ವ್ಯಾಲ್ಯೂ, ಮಿಡ್–ವ್ಯಾಲ್ಯೂ) ಹೊಂದಿದೆ ಎಂದು ಭಾವಿಸುವುದು ರೂಢಿ. ಅಂದರೆ 18 ವಿದ್ಯಾರ್ಥಿಗಳು ತಲಾ 42 ಅಂಕ ಪಡೆದಿರುವರೆಂದು ಭಾವಿಸುತ್ತೇವೆ. ಇದರಿಂದ ಮುಂದಿನ ಲೆಕ್ಕಾಚಾರದಲ್ಲಿ ಸ್ವಲ್ಪ ತಪ್ಪು ಅಥವಾ ವಿಭ್ರಮ (ಎರರ್, ಡೀವಿಯೇಷನ್) ಉಂಟಾಗುವುದು. ವರ್ಗದ ಅಂತರ ಕಡಿಮೆಯಿದ್ದರೆ ಈ ವಿಭ್ರಮದ ಪ್ರಮಾಣವೂ ಕಡಿಮೆಯಿರುವುದು. (3) ಪ್ರಕೃತ ವಿವರ್ತ ಅವಿಚ್ಛಿನ್ನವಾಗಿದ್ದರೆ (ಕಂಟಿನ್ಯುಯಸ್) ವರ್ಗದ ಮೇರೆಗಳನ್ನು ಲಕ್ಷ್ಯವಿಟ್ಟು ನಿಶ್ಚಯಿಸಬೇಕು. ಉದಾಹರಣೆಗೆ ಒಂದು ತರಗತಿಯ ವಿದ್ಯಾರ್ಥಿಗಳ ಎತ್ತರಗಳನ್ನು ಸೆಂಟಿಮೀಟರುಗಳಲ್ಲಿ ಅಳತೆ ಮಾಡಿ ಬರೆದಿದೆ ಎನ್ನೋಣ. 3 ಸೆಂಮೀಗೆ ಒಂದು ವರ್ಗದಂತೆ ವಿಂಗಡಿಸಿಕೊಳ್ಳಬಹುದು. 144–146, 147–149, 150–152, 153–155 ಇತ್ಯಾದಿ. ಹೀಗೆ ಮಾಡುವುದರಲ್ಲಿ ಒಂದು ದೋಷವಿದೆ. ಒಬ್ಬ ವಿದ್ಯಾರ್ಥಿಯ ಎತ್ತರ 152.5 ಸೆಂಮೀ ಇದ್ದರೆ ಆ ಅವೇಕ್ಷಣೆಯನ್ನು ಯಾವ ವರ್ಗಕ್ಕೆ ಸೇರಿಸಬೇಕು? 150–152 ವರ್ಗದಲ್ಲಿ ಸೇರುವುದಿಲ್ಲ; 153–155 ವರ್ಗದಲ್ಲೂ ಸೇರುವುದಿಲ್ಲ. ಅದು ಉಭಯಬಾಹಿರವಾಗುತ್ತದೆ. ಆದ್ದರಿಂದ ಒಂದು ವರ್ಗದ ಉಚ್ಚ ಮೇರೆಗೂ ಮುಂದಿನವರ್ಗದ ಕೆಳಗಣ ಮೇರೆಗೂ ನಡುವೆ ತೆರಪು ಇರಬಾರದು. ಈ ಆಕ್ಷೇಪಣೆಯನ್ನು ತಪ್ಪಿಸಲು 144–147, 147–150, 150–153, 153–156............ ಎಂಬುದಾಗಿ ವರ್ಗಗಳನ್ನು ಮೇಲೆಕಟ್ಟಬಹುದು. ಆದರೆ ಇದಕ್ಕೂ ಒಂದು ಅಭ್ಯಂತರವಿದೆ. 153 ಸೆಂಮೀ ಉಳ್ಳ ಅವೇಕ್ಷಣೆಯನ್ನು ಯಾವ ವರ್ಗಕ್ಕೆ ಸೇರಿಸಬೇಕು 150–153 ವರ್ಗಕ್ಕೋ ಅಥವಾ 153–156 ವರ್ಗಕ್ಕೋ? ಇದು ಇಬ್ಬಂದಿಯಾಗುತ್ತದೆ. ಇದನ್ನು ತಪ್ಪಿಸಲು ಒಂದು ಸಂಪ್ರದಾಯವನ್ನು ಪಾಲಿಸಬಹುದು. ಪ್ರತಿವರ್ಗದಲ್ಲೂ ಕೆಳಗಿನ ಮೇರೆಯನ್ನು ಸೇರಿಸಿಕೊಂಡು ಉಚ್ಚ ಮೇರೆಯನ್ನು ಹೊರತುಮಾಡತಕ್ಕದ್ದು ಎಂದು ರೂಢಿಮಾಡಿಕೊಳ್ಳುತ್ತೇವೆ. ಇದರ ಪ್ರಕಾರ 153ನ್ನು 150–153 ಎಂಬ ವರ್ಗಕ್ಕೆ ಸೇರಿಸದೆ 153–156 ವರ್ಗಕ್ಕೆ ಸೇರಿಸಿಕೊಳ್ಳಬೇಕು. ಈ ಸಂಪ್ರದಾಯವನ್ನು ಅನುಸರಿಸಿ ವರ್ಗಗಳ ಮೇರೆಗಳನ್ನು ಈ ರೀತಿ ತೋರಿಸಬಹುದು:

144– ; 147– ;

150– ; 153– ; ಇತ್ಯಾದಿ.

ಅಂದರೆ 144 ಮತ್ತು ಇದಕ್ಕಿಂತ ಹೆಚ್ಚು ಆದರೆ 147 ಕ್ಕಿಂತ ಕಡಿಮೆ ಬೆಲೆಗಳನ್ನು ಮೊದಲನೆಯ ವರ್ಗಕ್ಕೆ ಸೇರಿಸಬೇಕು; ಇದರಂತೆಯೇ ಎರಡನೆಯ ಮೂರನೆಯ ವರ್ಗಗಳಿಗೂ ಅನ್ವಯಿಸತಕ್ಕದ್ದು.

**ಕೋಷ್ಟಕ–3**

| ಮಕ್ಕಳ ಸಂಖ್ಯೆ | ಆವೃತ್ತಿ ಸಂಖ್ಯೆ |
|---|---|
| 1–2 | 16 |
| 3–4 | 25 |
| 5–6 | 8 |
| 7–8 | 1 |

**ಕೋಷ್ಟಕ–4**

| ಪಡೆದ ಅಂಕ | ವಿದ್ಯಾರ್ಥಿಗಳ ಸಂಖ್ಯೆ |
|---|---|
| 30–34 | 5 |
| 35–39 | 16 |
| 40–44 | 18 |
| 45–49 | 21 |
| 50–54 | 13 |
| 55–59 | 5 |
| 60–64 | 2 |
| ಒಟ್ಟು | 80 |

ಮೇಲೆ ಹೇಳಿದ ತೊಡಕನ್ನು ಪರಿಹರಿಸಲು ಮತ್ತೊಂದು ದಾರಿಯಿದೆ. ವರ್ಗಗಳ ಮೇರೆಗಳನ್ನು ಭಿನ್ನರಾಶಿಗಳನ್ನಾಗಿ ತೆಗೆದುಕೊಂಡರೆ ಇಂಥ ದೋಷಗಳು ಒದಗುವುದಿಲ್ಲ. ಅಂದರೆ, 143.5–146.5; 146.5–149.5; 149.5–152.5; 152.5–155.5 ಎಂಬುದಾಗಿ ವರ್ಗಗಳ ಮೇರೆಗಳನ್ನು ಗೊತ್ತುಮಾಡಬಹುದು. 146.5, 152.5, 156.5 ಮುಂತಾದ ಅವೇಕ್ಷಣೆಗಳು ಅಂದರೆ ಅರ್ಧಸೆಂಟಿಮೀಟರುಗಳು ಅಳತೆಗೆ ಸೇರದೆ ಇದ್ದಲ್ಲಿ ಯಾವ ವಿಧವಾದ ಇಬ್ಬಂದಿ ಪ್ರಸಂಗವೂ ಒದಗುವುದಿಲ್ಲ. ಅವೇಕ್ಷಣೆಗಳಲ್ಲಿ ಅರ್ಧಸೆಂಟಿಮೀಟರುಗಳು ಇದ್ದಪಕ್ಷದಲ್ಲಿ ವರ್ಗಮೇರೆಗಳನ್ನು ದಶಾಂಶದ ಎರಡು ಸ್ಥಾನಗಳಿಗೆ ಗೊತ್ತು ಮಾಡಿಕೊಳ್ಳಬಹುದು. ಉದಾಹರಣೆಗೆ ಎತ್ತರಗಳು 147.5, 152.5, 156.5 ಎಂದೆಲ್ಲ ಅಳತೆ ಮಾಡಲಾಗಿದೆ ಎಂದರೆ 143.75–146.75, 146.75–149.75 149.75–152.75 ಎಂದು ವರ್ಗಮೇರೆಗಳನ್ನು ನಿಗದಿಮಾಡಬಹುದು. ಆಗ 147.5 ಅಥವಾ 152.5 ಮುಂತಾದ ಅವೇಕ್ಷಣೆಗಳನ್ನು ಸಂದಿಗ್ಧತೆ ಇಲ್ಲದೆ ಕ್ಲುಪ್ತವಾದ ಒಂದು ವರ್ಗಕ್ಕೆ ಸೇರಿಸಲು ಸಾಧ್ಯವಾಗುವುದು. ವರ್ಗಗಳ ಅಂತರ ಏನಿರಬೇಕು ಎಂದು ನಿಶ್ಚಯಿಸಲು ಯಾವ ವಿಧವಾದ ಸಾರ್ವತ್ರಿಕ ನಿಯಮವೂ ಇಲ್ಲ. ಸಾಮಾನ್ಯವಾಗಿ 10 ಅಥವಾ 12 ವರ್ಗಗಳು ಇರುವಂತೆ ವರ್ಗೀಕರಣ ಮಾಡಬೇಕು. ಒಟ್ಟು ಅವೇಕ್ಷಣೆಗಳು ಕಡಿಮೆ ಇದ್ದರೆ 8ಕ್ಕಿಂತ ಕಡಿಮೆ ವರ್ಗಗಳನ್ನು ಬಳಸಬಹುದು (ಎರಡನೆಯ ಮತ್ತು 4 ನೆಯ ಕೋಷ್ಟಕಗಳನ್ನು ನೋಡಿ). ಅವೇಕ್ಷಣೆಗಳು ನೂರುಗಟ್ಟಲೆ ಅಥವಾ ಸಾವಿರಗಟ್ಟಲೆ ಇದ್ದರೆ 15 ವರ್ಗಗಳವರೆಗೆ ಬಳಸಬಹುದು.

ಆವೃತ್ತಿಕೋಷ್ಟಕದ ಪ್ರಯೋಜನ: ಹಲವು ವಿಧವಾದ ಸಂಖ್ಯಾ ಲೆಕ್ಕಾಚಾರಗಳಿಗೆ ಆವೃತ್ತಿಕೋಷ್ಟಕ ಆಧಾರಪ್ರಾಯ. ಇದರ ಸಹಾಯದಿಂದ ಸ್ತಂಭಚಿತ್ರವನ್ನು (ಹಿಸ್ಟೊಗ್ರಾಮ್) ರಚಿಸಬಹುದು. 2ನೆಯ ಕೋಷ್ಟಕದಲ್ಲಿ ಕೊಟ್ಟಿರುವ ಆವೃತ್ತಿಸಾರಿಣಿಯಿಂದ ರಚಿಸಿದ ಸ್ತಂಭಚಿತ್ರವನ್ನು ಕೆಳಗೆ ತೋರಿಸಿದೆ. ಒಂದು ಅವೇಕ್ಷಣೆ ಸಮೂಹದ ಬಹುಲಕವನ್ನು ಕಂಡುಹಿಡಿಯಬೇಕಾದರೆ ಕೋಷ್ಟಕವನ್ನು ರಚಿಸಿ ವಿವರ್ತದ ಯಾವ ಬೆಲೆ ಎಲ್ಲಕ್ಕಿಂತ ಹೆಚ್ಚು ಸಲ ಆವೃತ್ತಿಗೊಂಡಿದೆ ಎಂದು ಕಂಡುಹಿಡಿಯಬೇಕು. ಆ ಬೆಲೆಗೆ ಬಹುಲಕ (ಮೋಡ್) ಎಂದು ಹೆಸರು.



ಸ್ತಂಭ ಚಿತ್ರ

ಎರಡನೆಯ ಆವೃತ್ತಿಕೋಷ್ಟಕದಲ್ಲಿ ಎಲ್ಲಕ್ಕಿಂತ ಹೆಚ್ಚು ಆವೃತ್ತಿ ಎಂದರೆ 16; ಇದಕ್ಕೆ ಸಂವಾದಿಯಾದ (ಕರೆಸ್ಪಾಂಡಿಂಗ್) ಬೆಲೆ 3. ದತ್ತ ಅವೇಕ್ಷಣ ಸಮೂಹದಲ್ಲಿ 3 ಮಕ್ಕಳ ಕುಳಗಳೇ ಸರ್ವಸಾಧಾರಣವಾದುದು ಅಥವಾ ಹೆಚ್ಚು ಜನಪ್ರಿಯವಾದುದು ಎಂದರ್ಥ. ಇದಲ್ಲದೆ ಅವೇಕ್ಷಣ ಸಮೂಹದ ಸರಾಸರಿ ಅಥವಾ ಮಧ್ಯಕ (ಮೀನ್,) ವಿತರಣೆ (ಡಿಸ್ಪರ್ಷನ್), ಮಾನಕ ವಿಭ್ರಮ (ಸ್ಟಾಂಡರ್ಡ್ ಡೀವಿಯೇಷನ್) ಮತ್ತು ಪ್ರಪಾತಗಳನ್ನು (ಮೊಮೆಂಟ್ಸ್) ಆವೃತ್ತಿ ಕೋಷ್ಟಕದಿಂದ ಕಂಡುಹಿಡಿಯಬಹುದು. ಪಿಯರ್ಸನ್ ವಿಧಾನಕ್ಕನುಸಾ ರವಾಗಿ ದತ್ತ ಅವೇಕ್ಷಣಗಳಿಗೆ ಒಪ್ಪುವಂತೆ ಗಣಿತವಕ್ರಗಳನ್ನು (ಮ್ಯಾಥಮ್ಯಾಟಿಕಲ್ ಕರ್ವ್ಸ್) ಹೊಂದಿಸಲು (ಟು ಫಿಟ್) ಪ್ರಪಾತಗಳನ್ನು ಗುಣಕ ಹಾಕಬೇಕಾಗುವುದು (ಕಂಪ್ಯೂಟ್, ಕ್ಯಾಲ್ಕ್ಯುಲೇಟ್), ಹಾಗೂ ಅವೇಕ್ಷಣ ಸಮೂಹದ ಅರ್ಧಕವನ್ನೂ (ಮೀಡಿಯನ್) ಮತ್ತು ಚತುರ್ಥಕಗಳನ್ನೂ (ಕ್ವಾರ್ಟೈಲ್) ಕಂಡುಹಿಡಿಯಲು ಆವೃತ್ತಿಕೋಷ್ಟಕದಿಂದ ಪರಿಸಂಕಲಿತ (ಕ್ಯುಮುಲೇಟೆಡ್, ಕ್ಯುಮುಲೇಟಿವ್) ಆವೃತ್ತಿಕೋಷ್ಟಕವನ್ನು ರಚಿಸಿ ಅನಂತರ ತಕ್ಕ ಪರಿಕರ್ಮಗಳನ್ನು ಪ್ರಯೋಗಿಸ ಬೇಕಾಗಬಹುದು. ಹೀಗೆ ಆವೃತ್ತಿಕೋಷ್ಟಕ ಇಂಥ ಉದ್ದಿಷ್ಟಗಳಿಗೆ ಆಧಾರಪ್ರಾಯವಾಗಿದೆ.

(ಎಂ.ವಿ.ಜೆ.)

**ಆವೇಗ: ನೋಡಿ–ಜಡವೇಗ**

**ಆವೋಮಾಪಕ:** ವಿದ್ಯುತ್ ಪ್ರವಾಹ, ಪ್ರಚ್ಛನ್ನಾಂತರ ಮತ್ತು ರೋಧತ್ವಗಳ ಪ್ರಮಾಣವನ್ನು ನಿಖರವಾಗಿ ಅಳೆಯಲು ಉಪಯೋಗಿಸುವ ಒಂದು ವಿದ್ಯುದುಪಕರಣ. ಅತ್ಯಂತ ಕನಿಷ್ಠ ಪ್ರಮಾಣದಿಂದ ಹಿಡಿದು ಗರಿಷ್ಠ ಪ್ರಮಾಣದವರೆಗೂ ಅಳೆಯಲು ಇದನ್ನು ಉಪಯೋಗಿಸಬಹುದು.

(ಜೆ.ಎಸ್)

**ಆವ್ಬರಿ:** ಇಂಗ್ಲೆಂಡಿನ ವಿಲ್ಟ್‌ಷೈರ್ ಪ್ರಾಂತ್ಯದಲ್ಲಿರುವ ಹಳ್ಳಿ. ಇಲ್ಲಿ ಸು. 3,500 ವರ್ಷಗಳಷ್ಟು ಹಳೆಯದಾದ ದೊಡ್ಡ ಕಲ್ಲುಗಳನ್ನು ವೃತ್ತಾಕಾರದಲ್ಲಿ ನೆಟ್ಟಿರುವ ವಿಚಿತ್ರ ನಿರ್ಮಾಣವೊಂದು ಕಂಡುಬಂದಿದೆ. ವೃತ್ತಾಕಾರದಲ್ಲಿ ನೆಡಲು ಸುಮಾರು ನೂರು ಕಲ್ಲುಗಳನ್ನು ಉಪಯೋಗಿಸಿದ್ದಾರೆ. ಈ ಕಲ್ಲುಗಳು ನೆಲಮಟ್ಟದ ಮೇಲೆ 1.5–4ಮೀ ಎತ್ತರವಿದ್ದು, 1–3.5ಮೀ ಅಗಲವಿದೆ. ಈ ಕಲ್ಲಿನ ವೃತ್ತ ಸು. 28 ಎಕರೆ ಪ್ರದೇಶವನ್ನು ಆಕ್ರಮಿಸಿದ್ದು ಈಗಿನ ಹಳ್ಳಿಯನ್ನು ಸುತ್ತುವರಿದಿದೆ. ಈಗ ವೃತ್ತದೊಳಗೆ ಮೂರು ಪ್ರವೇಶದ್ವಾರಗಳಿದ್ದರೂ ಹಿಂದೆ ಪೂರ್ವ, ಪಶ್ಚಿಮ, ದಕ್ಷಿಣೋತ್ತರಗಳಲ್ಲಿ ಒಂದೊಂದು ದ್ವಾರಗಳಿದ್ದುವು. ಸುತ್ತಲೂ 12ಮೀ ಅಗಲ, 9ಮೀ ಆಳದ ಕಂದಕವಿದೆ. ಇದರ ಒಳಗೇ ದೊಡ್ಡದರ ತರಹದ ಕಲ್ಲುಗಳನ್ನೇ ನೆಟ್ಟು ನಿರ್ಮಿಸಿದ ಎರಡು ಸಣ್ಣವೃತ್ತಗಳಿವೆ. ಇವುಗಳ ಮಧ್ಯದಲ್ಲಿ, ಒಂದರಲ್ಲಿ ಮೂರು ಮತ್ತು ಇನ್ನೊಂದರಲ್ಲಿ ಒಂದು ಬಲು ಎತ್ತರವಾದ ಕಲ್ಲುಗಳನ್ನು ನೆಡಲಾಗಿದೆ. ಹಿಂದೆ ಈ ದೊಡ್ಡ ಕಲ್ಲಿನ ವೃತ್ತಕ್ಕೆ ಸೇರಿದ ಹಾಗೆ ಸು. 15ಮೀ ಅಗಲದ, ಇಕ್ಕೆಲಗಳಲ್ಲೂ ದೊಡ್ಡಕಲ್ಲುಗಳನ್ನು ಸಾಲಾಗಿ ನೆಟ್ಟ ದೊಡ್ಡ ರಸ್ತೆಯೊಂದಿತ್ತು. ಇದು ಸು. 1.6 ಕಿಮೀ ಉದ್ದವಿದ್ದು, ಅದರ ಅತ್ತಣ ಕೊನೆಯಲ್ಲಿದ್ದ ಎರಡು ಏಕಕೇಂದ್ರ ಶಿಲಾವೃತ್ತಗಳಿಗೆ ಸಂಪರ್ಕವನ್ನು ಕಲ್ಪಿಸಿತ್ತು. ದೊಡ್ಡ ವೃತ್ತದ ನೈರುತ್ಯಕ್ಕೆ ಎರಡು ಪಕ್ಕಗಳಲ್ಲೂ ಸಾಲುಕಲ್ಲುಗಳನ್ನು ನೆಟ್ಟು ಮಾಡಿದ ಇನ್ನೊಂದು ರಸ್ತೆ ಇತ್ತು. ಇವೆಲ್ಲ ಈಚೆಗೆ ಸ್ವಲ್ಪ ಹಾಳಾಗಿವೆ. ಈ ಕಟ್ಟಡದ ಉದ್ದೇಶ ಇನ್ನೂ ಅಸ್ಪಷ್ಟವಾದರೂ ಇದೊಂದು ಬಯಲು ದೇವಾಲಯವಾಗಿರಬಹುದೆಂದು ಹಲವರ ಊಹೆ. ಇದರ ಕಾಲವೂ ಅನಿರ್ದಿಷ್ಟ; ಬ್ರಿಟನ್ನಿನ ನವಶಿಲಾಯುಗದ ಕೊನೆಯ ಭಾಗದಲ್ಲೂ ಕಂಚಿನಯುಗದ ಮೊದಲಲ್ಲೂ ಇದನ್ನು ನಿರ್ಮಿಸಿರಬಹುದು. ಆವ್ಬರಿಯ ಶಿಲಾವೃತ್ತ ಆ ರೀತಿಯ ಕಟ್ಟಡಗಳಲ್ಲಿ ಪ್ರಪಂಚದಲ್ಲೇ ಅತಿ ದೊಡ್ಡದಾಗಿದ್ದು ತನ್ನ ಬೃಹತ್ಪ್ರಮಾಣ ಮತ್ತು ರಚನಾವೈಶಿಷ್ಟ್ಯಗಳಿಂದ ಗಮನಾರ್ಹವಾಗಿದೆ.

(ಎಸ್.ಎನ್.)

**ಆಶ:** ಮಾಲ್ವೇಸಿ ಕುಟುಂಬಕ್ಕೆ ಥೆಸ್ಪಿಸಿಯ ಪಾಪ್ಪುಲಿನ ಎಂಬ ವೈಜ್ಞಾನಿಕ ಹೆಸರಿನ ಈ ಮರವನ್ನು ಹೂವರಸಿ ಎಂದು ಕರೆಯುವುದುಂಟು. ಇದು ಪಶ್ಚಿಮ ಕರಾವಳಿ, ಬಂಗಾಳ, ಅಂಡಮಾನ್, ಮೈಸೂರು, ಮದ್ರಾಸು ಮುಂತಾದ ಪ್ರದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಮರಳುಮಿಶ್ರಿತ ನೆಲದಲ್ಲಿ ಬಲು ಸೊಂಪಾಗಿ ಬೆಳೆಯುತ್ತದೆ. ರಸ್ತೆಗಳ ಇಕ್ಕೆಲಗಳಲ್ಲೂ ಸಾಲುಮರಗಳಾಗಿ ಬೆಳೆಸುವುದುಂಟು. 9–10 ಮೀಟರ್ ಎತ್ತರಕ್ಕೆ ಬೆಳೆಯಬಲ್ಲ ಈ ಮರದ ಹೊಳಪುಳ್ಳ ಹೃದಯಾಕಾರದ ಎಲೆಗಳು ಅತ್ಯಂತ ಆಕರ್ಷಕವಾಗಿರುತ್ತವೆ.

ಹೂಗಳು ಹಳದಿ, ಕಾಯಿ ಬುಗುರಿಯಾಕಾರದ್ದಾಗಿದ್ದು ಬಹಳ ಕಾಲ ಮರಕ್ಕೆ ಅಂಟಿಕೊಂಡೇ ಇರುತ್ತದೆ. ಬೀಜಗಳಿಂದ ಸುಲಭವಾಗಿ ಸಸಿಗಳನ್ನು ಪಡೆಯಬಹುದು.

ಮರ ತುಂಬ ಗಟ್ಟಿ. ಗರ್ಭದಲ್ಲಿ ಸೊಗಸಾದ ಎಲೆಗಳಿಂದ ಕೂಡಿದ ಜಾಲವಿದೆ. ದೋಣಿ, ಬಂದೂಕದ ಹಿಡಿ, ಗಾಡಿಚಕ್ರ, ಪಟ್ಟೆಗಳು, ವ್ಯವಸಾಯ ಕಾರ್ಯಗಳಲ್ಲಿ ಬಳಸುವ ಮೇಣಿ, ಕುಂಟೆ, ಮೇಣಿಹಿಡಿ ಮುಂತಾದವನ್ನೆಲ್ಲ ತಯಾರಿಸಲು ಇದರ ಮರವನ್ನು ಉಪಯೋಗಿಸುತ್ತಾರೆ. ಮರದ ತೊಗಟೆಯಿಂದ ಬರುವ ನಾರನ್ನು ಒರಟಾದ ಹಗ್ಗಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಬೀಜಗಳಿಂದ ತೆಗೆದ ಎಣ್ಣೆಯನ್ನು ದೀಪ ಉರಿಸಲು ಹಿಪ್ಪೆ ಎಣ್ಣೆಯ ಜೊತೆ ಸೇರಿಸಿ ಉಪಯೋಗಿಸುತ್ತಾರೆ. ಹೂವಿನಿಂದ ಹಳದಿ ಬಣ್ಣವನ್ನು ತಯಾರಿಸುತ್ತಾರೆ. ಕಾಯಿ, ಎಲೆ ಮತ್ತು ಬೇರುಗಳಿಂದ ಮಾಡಿದ ಚೂರ್ಣವನ್ನು ಬಿಳಿ ಹುಲಿಸೊಪ್ಪಿನ ಚೂರ್ಣದೊಂದಿಗೆ ಸೇರಿಸಿ, ಕಜ್ಜಿ ಮುಂತಾದ ಚರ್ಮರೋಗಗಳಿಗೆ ಉಪಯೋಗಿಸುತ್ತಾರೆ. (ಎಸ್.ಎನ್.ಆರ್.)

**ಆಶಾಭಂಗ ಮತ್ತು ದುರಾಕ್ರಮಣ:** ಆಶಾಭಂಗಕ್ಕೂ (ಫ್ರಸ್ಟ್ರೇಷನ್), ದುರಾಕ್ರಮಣಕ್ಕೂ (ಅಗ್ರೆಷನ್) ನಡುವೆ ಇರುವ ಸಂಬಂಧವನ್ನು ಅರಿಯಬೇಕಾದರೆ, ಇವೆರಡು ಭಾವನೆಗಳನ್ನೂ ಪ್ರತ್ಯೇಕವಾಗಿ ಪರೀಕ್ಷಿಸುವುದೊಳ್ಳೆಯದು. ಈ ಭಾವನೆಗಳೇನೂ ಹೊಸವಲ್ಲ; ಅನೇಕ ವೇಳೆ ನಿಷ್ಕೃಷ್ಟಾರ್ಥದಲ್ಲಲ್ಲದಿದ್ದರೂ ಸಾಮಾನ್ಯಾರ್ಥದಲ್ಲಿ ಇವು ಪದೇ ಪದೇ ತಲೆ ಹಾಕುತ್ತಲೇ ಇರುತ್ತವೆ.

ಆಶಾಭಂಗವೆಂಬುದು ವ್ಯಕ್ತಿಯೊಬ್ಬನ ಮಾನಸಿಕಸ್ಥಿತಿ. ಒಂದು ಜೀವ ಅತ್ಯಾವಶ್ಯಕವಾದ ತನ್ನ ಕೊರತೆಯನ್ನು ತುಂಬಿಕೊಳ್ಳಲು ಹೊರಟಾಗ ನಡುವೆ ಏಗಲಾರದ ಅಡೆತಡೆಗಳು ಬಂದರೆ ಅದರ ಆಶೆಗೆ ಭಂಗವುಂಟಾಗುತ್ತದೆ. ಕೆಲವು ಸಂಶೋಧಕರು ಆಶಾಭಂಗಕ್ಕೆ ಈ ರೀತಿಯಾಗಿ ಲಕ್ಷಣ ಹೇಳಿದ್ದಾರೆ: ಗುರಿಯನ್ನು ಸಾಧಿಸುವ ಪ್ರಯತ್ನಕ್ಕೆ ಭಂಗವುಂಟಾದಾಗ ಮೂಡುವ ಮನಸ್ಥಿತಿ. ಆವಶ್ಯಕವೆನಿಸಿದ ಆಶೆಯೊಂದನ್ನು ಪೂರೈಸಿಕೊಳ್ಳಲಾಗದಂತೆ ಮಾಡುವ ಅಡೆತಡೆಗಳಿಂದ ಹುಟ್ಟುವ ಅಸಂತುಷ್ಟಿ. ಆಶಾಭಂಗದಲ್ಲಿ ಎರಡು ಭಾವನೆಗಳು ಅಡಕವಾಗಿವೆ: ಫಲವಂಚನೆ ಮತ್ತು ವ್ಯಕ್ತಿತ್ವಭಂಗ. ಸತತವಾದ ಸೋಲಿನಿಂದ ಕಲಿವಿನ ಪ್ರಕ್ರಿಯೆಗಳು ನಿಂತುಹೋಗಿ ಹೊಂದುವಣೆಯ ತಂತ್ರಗಳು ಕಾರ್ಯೋನ್ಮುಖವಾದಾಗ ಉಂಟಾಗುವ ಮನಸ್ಥಿತಿಯನ್ನು ಆಶಾಭಂಗ ನಿರ್ದೇಶಿಸುತ್ತದೆ.

ಆಶಾಭಂಗವನ್ನುಂಟುಮಾಡುವ ಪರಿಸ್ಥಿತಿಯಲ್ಲಿ ಮೂರು ಅಂಗಗಳಿವೆ: ಗುರಿ, ಅದನ್ನು ಸಾಧಿಸುವ ಯತ್ನ ಮತ್ತು ಆಗಬರುವ ಅಡಚಣೆಗಳು ಅಥವಾ ಅಡೆತಡೆಗಳು. ಆಶಾಭಂಗವನ್ನು ತರಲು ಇವುಗಳಲ್ಲಿ ಪ್ರತಿಯೊಂದೂ ಪ್ರಮುಖಪಾತ್ರ ವಹಿಸುತ್ತದೆ. ಒಂದು ಕೊರತೆ, ಆವಶ್ಯಕತೆ ಅಥವಾ ವ್ಯಕ್ತಿಯನ್ನು ಕುರಿತ ಶ್ಲಾಘನೆಗಳು ಆಶಾಭಂಗಕ್ಕೆ ಗುರಿಯಾಗಿರಬಹುದು. ಯತ್ನವೆಂದರೆ ಗುರಿಯನ್ನು ಮುಟ್ಟಲು ವ್ಯಕ್ತಿ ತನ್ನೊಳಗಾಗಲೀ ಹೊರಗಾಗಲೀ ಮಾಡುವ ಸಾಧನೆ. ಪ್ರಯತ್ನವನ್ನು ವಿಫಲಗೊಳಿಸುವ ಅಡಚಣೆ ಒಂದು ವಸ್ತುವಾಗಿರಬಹುದು, ಒಬ್ಬ ವ್ಯಕ್ತಿಯಾಗಿರಬಹುದು. ಅದು ಹೊರಗಣದಾಗಿರಬಹುದು, ಒಳಗಿನದಾಗಿರಬಹುದು. ಇದರ ಫಲವಾಗಿ, ಆ ಪ್ರಯತ್ನವನ್ನು ಮಾಡುವ ಮನುಷ್ಯ ತನ್ನ ಗುರಿ ಮುಟ್ಟಿ ಆ ಫಲವನ್ನು ಹೊಂದಲಾರದವನಾಗುತ್ತಾನೆ. ಗುರಿ ಮುಟ್ಟುವುದರಲ್ಲಿ ಜಯಶಾಲಿಯಾದ ಮನುಷ್ಯ ಸುಖಿಯೂ ಸಂತುಷ್ಟನೂ ಆಗುತ್ತಾನೆ; ಗುರಿ ಮುಟ್ಟದಿದ್ದರೆ ಅಥವಾ ಗುರಿ ಮುಟ್ಟಲಾಗದಂಥ ಅಡ್ಡಿಗೊಳಗಾದರೆ ಆಗ ಆತ ಅಸುಖಿಯಾಗಿ ಕುಗ್ಗಿಹೋಗುತ್ತಾನೆ. ಗುರಿಮುಟ್ಟಲು ಅಡ್ಡಿ ಬಂದಾಗ ಉಂಟಾದ ಪರಿಸ್ಥಿತಿಯನ್ನು ಆಶಾಭಂಗ ಪರಿಸ್ಥಿತಿ ಎಂದು ಕರೆಯುವುದು ವಾಡಿಕೆ.

ಆಶಾಭಂಗದ ಪರಿಸ್ಥಿತಿಗಳನ್ನು ವಿಘ್ನಗಳ ಆಧಾರದ ಮೇಲೆ ಬೇರೆ ಬೇರೆ ವರ್ಗಗಳಾಗಿ ವಿಂಗಡಿಸಬಹುದು. ವಿಘ್ನ ನಿಷ್ಕ್ರಿಯವಾಗಿರಬಹುದು; ಇಲ್ಲ ಸಕ್ರಿಯವಾಗಿರಬಹುದು. ನಿಷ್ಕ್ರಿಯವಿಘ್ನ–ತಾನೇ ಉಗ್ರರೂಪವನ್ನು ತೋರದಿದ್ದರೂ ತನ್ನನ್ನು ನಿವಾರಿಸಲು ಅಸಾಧ್ಯವೆನಿಸುವ ರೂಪವನ್ನು ಪ್ರಕಟಿಸಬಹುದು. ಉದಾಹರಣೆಗೆ, ಹಸಿದವ ಆಹಾರ ತುಂಬಿ ಬೀಗ ಹಾಕಿದ ಕೋಣೆಯ ಬಳಿ ನಿಂತಿರುವುದು. ನಿಷ್ಕ್ರಿಯವಿಘ್ನಗಳ ಹಾಗೆ ಸಕ್ರಿಯವಿಘ್ನಗಳಿಗೆ ತಮ್ಮನ್ನು ಅತಿವರ್ತಿಸದಂತೆ ತಡೆದಿಡುವ ಸಾಮರ್ಥ್ಯವಿರುವುದರ ಜೊತೆಗೆ ಅವು ಸ್ವರೂಪತಃ ಅಪಾಯಕಾರಿಗಳೂ ಆಗಿವೆ. ಉದಾಹರಣೆಗೆ, ಹಸಿದಿರುವವನೂ ನಿರ್ಗತಿಕನೂ ಆದವನೊಬ್ಬ ಅನ್ನವಿರುವ ಜಾಗಕ್ಕೆ ಹೋಗದಂತೆ ತಡೆದಿಡುವ ಪೊಲೀಸ್ ನೌಕರ. ನಿಷ್ಕ್ರಿಯ ವಿಘ್ನಗಳು ಯಾವ ವಿಷಯಕ್ಕೋಸ್ಕರ ಆಶಾಭಂಗವುಂಟಾಯಿತೋ ಆ ವಿಷಯಕ್ಕೆ ಮಾತ್ರ ಸಂಬಂಧಿಸಿವೆ; ಸಕ್ರಿಯವಿಘ್ನಗಳಾದರೆ ತತ್‌ಕ್ಷಣದಲ್ಲಿ ಆತ್ಮರಕ್ಷಣೆಗೆ ಸಂಬಂಧಪಟ್ಟ ಇತರ ಆವಶ್ಯಕತೆಗಳನ್ನೂ ಒಳಗೊಳ್ಳುತ್ತವೆ. ವಿಘ್ನಗಳು ಹೊರಗಿರಬಹುದು, ಇಲ್ಲ ಒಳಗಿರಬಹುದು. ಆದ್ದರಿಂದ ಅವುಗಳಲ್ಲಿ ಬಾಹ್ಯ ಮತ್ತು ಆಂತರಿಕಗಳೆಂಬ ವ್ಯತ್ಯಾಸಗಳುಂಟು. ನಿಷ್ಕ್ರಿಯವಾಗಿರುವ ಬಾಹ್ಯ ವಿಘ್ನಗಳು ಯಾವುವೆಂದರೆ, ಮನುಷ್ಯನಿಗೂ ಆತನ ಗುರಿಗೂ ನಡುವೆ ತೋರುವ ಜಡವಸ್ತುಗಳು. ಸಕ್ರಿಯವಾದ ಹೊರಗಿನ ಅಡಚಣೆಗಳಾವುವೆಂದರೆ, ಒಬ್ಬಾತನಿಗೆ, ತನ್ನ ಗುರಿಯಿಂದ ದೂರವಿರುವಂತೆ ಬೆದರಿಕೆ ಹಾಕುವುದು. ಮೇಲೆ ಹೇಳಿದ ಎರಡು ಉದಾಹರಣೆಗಳೂ ಇವೆರಡೂ ವಿಘ್ನಗಳನ್ನು ಚಿತ್ರಿಸುತ್ತವೆ. ಮನುಷ್ಯನ ಅಸಾಮರ್ಥ್ಯ, ಹೀನಭಾವ, ಸಾಕಷ್ಟು ಯೋಗ್ಯತೆ ಇಲ್ಲದಿರುವಿಕೆ–ಇವು ಸಾಮಾನ್ಯವಾಗಿ ಆಂತರಿಕ ನಿಷ್ಕ್ರಿಯವಿಘ್ನಗಳು. ಒಂದನ್ನು ಕೊರಗಿಸದೆ ಮತ್ತೊಂದನ್ನು ಸಂತುಷ್ಟಿಗೊಳಿಸಲಾಗದಂಥ ಎರಡು ಕಾಮನೆಗಳು ಒಟ್ಟಿಗೆ ಮನಸ್ಸಿನಲ್ಲಿ ಹುಟ್ಟಿಕೊಳ್ಳುವ ಪ್ರಸಂಗದಲ್ಲಿ ಆಂತರಿಕ ಸಕ್ರಿಯ ವಿಘ್ನಗಳೇಳುತ್ತವೆ. ಉದಾಹರಣೆಗೆ, ಒಬ್ಬ ಮನುಷ್ಯ ಒಂದು ವಸ್ತುವನ್ನು ಕದಿಯಲು ಆಶಿಸುತ್ತಾನೆ, ಆದರೆ ಆತನ ಮನಸ್ಸು ನೀತಿಯ ಹಿಡಿತಕ್ಕೆ ಸಿಕ್ಕಿದ್ದು ಆ ಕೆಲಸಕ್ಕೆ ಅವನನ್ನು ಪ್ರೋತ್ಸಾಹಿಸುತ್ತಿಲ್ಲ.

ಆಶೆಗೆ ಭಂಗ ಬಂದಾಗ ವ್ಯಕ್ತಿ ಅದರ ಸಾಫಲ್ಯಕ್ಕಾಗಿ ಕೈಗೊಳ್ಳುವ ಅಕ್ರಮ ಕೆಲಸ ಕಾರ್ಯಗಳನ್ನು ದುರಾಕ್ರಮಣವೆನ್ನಬಹುದು. ಜಗಳಗಂಟಿತನ ಅಥವಾ ಮೇಲೆ ಬೀಳುವ ಹವ್ಯಾಸಗಳ ಭಾವನೆಗಳನ್ನು ಮೆಕ್‌ಡುಗಲ್ ಮನಶ್ಶಾಸ್ತ್ರದೊಳಕ್ಕೆ ತಂದ. ಪ್ರಣಯ, ಹಸಿವು ಮುಂತಾದ ಸಹಜಪ್ರೇರಣೆಗಳು ಭಂಗಕ್ಕೊಳಗಾದಾಗ ಸಂಘರ್ಷಣಾ ಪ್ರವೃತ್ತಿ ಉದ್ಭವಿಸುವುದು. ಈ ಸಹಜ ಪ್ರವೃತ್ತಿ ಎಲ್ಲ ಪ್ರಾಣಿಗಳಲ್ಲೂ ಇರುತ್ತದೆ. ಅನಂತರ ಫ್ರಾಯ್ಡ್ ಥನಾಟೋಸ್ (ಡೆತ್–ಸಾವು) ಘರ್ಷಣೆಯ ಸಹಜವರ್ತನೆ ಎಂಬ ಪರಿಭಾವನೆಯನ್ನು ಸಂಸ್ಥಾಪಿಸಿದ. ಇದೊಂದು ಸ್ವತಂತ್ರವಾದ ವಿನಾಶಕಾರಕ ಪ್ರೇರಣೆ. ಈರೋಸ್ ಎಂದರೆ ಕಾಮ ಮತ್ತು ಜೀವಪ್ರೇರಣೆಯನ್ನು ನೇರವಾಗಿ ಇದಿರಿಸುತ್ತ ನಿಂತಿರುವಂಥದು. ಈ ಎರಡು ಪ್ರೇರಣೆಗಳ ಸಮತೂಕ ತಪ್ಪಿದರೆ ಆಗ ಮೃತ್ಯು ಸಂಭವಿಸಬಹುದು. ಇದು ಒಳಸರಿದ ಘರ್ಷಣೆಯಲ್ಲಿ (ಇದರ ಅಂತಿಮ ಸ್ವರೂಪ ಆತ್ಮಹತ್ಯೆ) ಬಹಿರಂಗವಾಗಿ ವ್ಯಕ್ತವಾಗುವ ಘರ್ಷಣೆಯ ಸ್ವರೂಪ ಕೊಲೆ. ಘರ್ಷಣೆಯ ಪ್ರಕಟಣೆ ಯಾವ ರೂಪದಲ್ಲಾಗುತ್ತದೆ ಎಂಬುದು ಮೂರು ಅಂಶಗಳನ್ನು ಅವಲಂಬಿಸಿದೆ: 1. ಅಂತಃಕರಣದ ಅಥವಾ ಆತ್ಮಸಂಯಮದ ವಿಶಿಷ್ಟ ಸಾಮರ್ಥ್ಯ ಮತ್ತು ಸ್ವರೂಪ 2. ವ್ಯಕ್ತಿ ತಾನೇ ಕಟ್ಟಿರುವ ಅಹಮಾದರ್ಶ, 3. ಬಾಹ್ಯಲೋಕದ ಪರಿಸ್ಥಿತಿ.

ಒಂದು ಪ್ರಾಣಿಸಂಸ್ಥೆಯನ್ನಾಗಲೀ ಅಥವಾ ಅದರ ಪ್ರತಿನಿಯುಕ್ತವನ್ನಾಗಲೀ ಕಷ್ಟಕ್ಕೀಡು ಮಾಡುವ ಗುರಿಯುಳ್ಳ ಪ್ರಯತ್ನವೇ ದುರಾಕ್ರಮಣವೆಂದು ಡಲಾರ್ಡ್ ಹೇಳಿದ್ದಾನೆ. ಘರ್ಷಣೆ ಮೇಲೆದ್ದು ತೋರುವ ನಡೆವಳಿಕೆಗಳಲ್ಲಿ ಮಾತ್ರವಲ್ಲದೆ ಅದು ಕಲ್ಪನೆ, ಕನಸು ಅಥವಾ ಸೇಡು ತೀರಿಸಿಕೊಳ್ಳುವ ಯುಕ್ತ ಹಂಚಿಕೆಗಳಲ್ಲೂ ಇರಬಹುದು. ಯಾವುದು ಆಶಾಭಂಗಕ್ಕೆ ಕಾರಣವೋ ಆ ವಸ್ತುವಿನತ್ತ ಅದು ಮುಖ ಮಾಡಿರಬಹುದು ಅಥವಾ ಯಾವ ತಪ್ಪನ್ನೂ ಮಾಡದ ಸಾಧುವಿನತ್ತಲೇ ಸಾರಬಹುದು ಅಥವಾ ಸ್ವಪೀಡನರತಿ, ಹುತಾತ್ಮತೆ ಅಥವಾ ಆತ್ಮಹತ್ಯೆಗಳ ಕಡೆಯೂ ಹೊರಳಬಹುದು.

ಆಶಾಭಂಗಕ್ಕೂ ಘರ್ಷಣೆಗೂ ಕಾರ್ಯಕಾರಣ ಸಂಬಂಧ ಸಾರ್ವತ್ರಿಕವಾಗಿದ್ದರೂ ಎರಡು ಭಾವನೆಗಳನ್ನೂ ವಿಂಗಡಿಸಿ ಅವಕ್ಕೆ ಸ್ವತಂತ್ರವಾದ ಲಕ್ಷಣವನ್ನು ಹೇಳಿದ್ದಾರೆಂಬುದನ್ನು ಮುಖ್ಯವಾಗಿ ಗಮನಿಸಬೇಕು.

ಈಗ ಆಶಾಭಂಗ ಮತ್ತು ಘರ್ಷಣೆಗಳೆರಡಕ್ಕೂ ಇರುವ ಪರಸ್ಪರಾವಲಂಬಿಯಾದ ಸಂಬಂಧವನ್ನು ಗುರುತಿಸೋಣ. ಘರ್ಷಣೆ ಆಶಾಭಂಗದ ಫಲ ಎಂಬುದನ್ನು ಮೊದಲು ಪರಿಭಾವಿಸಿದವ ಫ್ರಾಯ್ಡ್ ಎಂಬಾತ. ಈ ಪರಿಭಾವನೆ ಡಲಾರ್ಡ್ 1939ರಲ್ಲಿ ಪ್ರಕಟಿಸಿದ ಆಶಾಭಂಗ ಮತ್ತು ದುರಾಕ್ರಮಣ ಎಂಬ ಪುಸ್ತಕದ ತಳಹದಿಯಾಯಿತು. ಆಶಾಭಂಗದ ಪರಿಣಾಮವೇ ಇಂಥ ಘರ್ಷಣೆ ಎಂಬ ಭಾವನೆಯಿಂದ ಅದು ಮೊದಲಾಗುತ್ತದೆ. ಹೆಚ್ಚು

ನಿಷ್ಕೃಷ್ಟವಾಗಿ ಈ ಪ್ರಮೇಯವನ್ನು ರೂಪಿಸಿದಾಗ, ಘರ್ಷಣಾತ್ಮಕವಾದ ನಡೆವಳಿಕೆ ತನ್ನ ಬೆನ್ನಹಿಂದೆ ಆಶಾಭಂಗವಿರುವುದನ್ನು ತೋರುತ್ತದೆ; ಇದನ್ನೇ ತಿರುಗಿಸಿ ಹೇಳಬೇಕಾದರೆ, ಆಶಾಭಂಗವಿದ್ದರೆ ಯಾವುದಾದರೊಂದು ರೂಪದಲ್ಲಿ ಘರ್ಷಣೆ ತಲೆದೋರುತ್ತದೆ. ಗ್ರಂಥಕರ್ತರು ಈ ಕಲ್ಪನೆಗೆ ಪ್ರಾಯೋಗಿಕ ಚಿಕಿತ್ಸಾ ಮತ್ತು ಸಾಮಾಜಿಕ ಮನಶ್ಶಾಸ್ತ್ರದಿಂದ ಸಾಕ್ಷ್ಯವನ್ನು ಎತ್ತಿಕೊಡಲು ಪ್ರಯತ್ನಿಸಿದ್ದಾರೆ. ಆಶಾಭಂಗಕ್ಕೂ ಘರ್ಷಣೆಗೂ ಇರುವ ಸಂಬಂಧದ ಬಗ್ಗೆ ಎರಡು ಮೂಲ ಕಲ್ಪನೆಗಳು ಉಕ್ತವಾಗಿವೆ. ಮೊದಲನೆಯದಾಗಿ ಆಶಾಭಂಗದ ಅನುಭವದ ಪರಿಮಾಣಕ್ಕೆ ತಕ್ಕಂತೆ ಘರ್ಷಣೆಯನ್ನು ಪ್ರಚೋದಿಸುವ ಪ್ರೇರಣಾಬಲ ವ್ಯತ್ಯಾಸ ಹೊಂದುತ್ತದೆ. ಎಂದರೆ, ಆಶಾಭಂಗಾನುಭವದ ತೀವ್ರತೆಗೆ ತಕ್ಕಂತೆ ಘರ್ಷಣಾ ಪ್ರತಿಕ್ರಿಯೆ ಹೊಂದಿಕೊಂಡಿದೆ. ಎರಡನೆಯದಾಗಿ, ಘರ್ಷಣೆಯನ್ನು ಪ್ರಕಟಿಸುವ ಕ್ರಿಯೆಯ ನಿರೋಧಶಕ್ತಿ ಆ ಕಾರ್ಯದ ಫಲವಾಗಿ ನಿರೀಕ್ಷಿಸುವ ಶಿಕ್ಷೆಯ ಪ್ರಮಾಣಕ್ಕೆ ಅನುಗುಣವಾಗಿ ನೇರವಾಗಿ ವ್ಯತ್ಯಾಸ ಹೊಂದುತ್ತದೆ. ಘರ್ಷಣೆಯ ಪ್ರಕಟಣೆಯಿಂದ ಆಶಾಭಂಗ ಹೆಚ್ಚುತ್ತದೆಯೇ ವಿನಾ ಕುಗ್ಗುವುದಿಲ್ಲವೆಂಬುದು ಅನುಭವದಿಂದ ತಿಳಿದುಬಂದರೆ ಆಗ ಆ ಆಶಾಭಂಗಕಾರಕ ವ್ಯಕ್ತಿಯ ಮೇಲೆ ಪ್ರಯುಕ್ತವಾಗಬೇಕಾದ ಘರ್ಷಣಾಕ್ರಿಯೆಯೇ ನಿರುದ್ಧವಾಗುತ್ತದೆ. ಇಲ್ಲದಿದ್ದರೆ, ಇಬ್ಬರಿಗೂ ಸಂಬಂಧಪಡದೆ ತನ್ನ ಪಾಡಿಗೆ ತಾನಿರುವ ಮೂರನೆಯವನತ್ತ ತಿರುಗುತ್ತದೆ.

1939ರಿಂದೀಚೆಗೆ, ಆಶಾಭಂಗ ಮತ್ತು ದುರಾಕ್ರಮಣದ ಕಲ್ಪನೆಯ ವಿಷಯದಲ್ಲಿ ತುಂಬ ಕುತೂಹಲಕಾರಕ ಅಂಶಗಳು ಪ್ರಕಟವಾಗಿವೆ. ಆಶಾಭಂಗ ಅನೇಕ ಭಿನ್ನ ಭಿನ್ನ ರೀತಿಯ ಪ್ರತಿಕ್ರಿಯೆಗಳನ್ನು ಪ್ರಚೋದಿಸುತ್ತದೆ; ಘರ್ಷಣೆಯ ಯಾವುದೋ ಒಂದು ಪ್ರಕಾರದ ಪ್ರಚೋದನೆ ಅವುಗಳಲ್ಲೊಂದು ಎಂದು ಮಿಲ್ಲರ್ ಹೇಳಿದ್ದಾನೆ.

ಯಾವ ಪರಿಸ್ಥಿತಿಯಲ್ಲಿ ಆಶಾಭಂಗ ಘರ್ಷಣೆಗೆ ದಾರಿ ಮಾಡಿಕೊಡುತ್ತದೆ ಎಂಬುದನ್ನು ಕಂಡುಹಿಡಿಯಲು ಕೆಲವು ಪ್ರಯೋಗಗಳು ನಡೆದಿವೆ. ನಿರಾಶನಾದವ ಗುರಿಗೆ ತೀರ ಹತ್ತಿರವಿದ್ದಾಗ, ಆಶಾಭಂಗಕ್ಕೆ ಕಾರಣವಾದ ಅಂಶ ಅಷ್ಟು ಕಟ್ಟುನಿಟ್ಟಾಗಿಲ್ಲದಾಗ ಒದಗಬಹುದಾದ ಶಿಕ್ಷೆಯ ತಿಳಿವಳಿಕೆಯನ್ನವಲಂಬಿಸಿ, ಆರ್ಥಿಕ ಪರಿಸ್ಥಿತಿಗಳಿಗನುಗುಣವಾಗಿ ವ್ಯಕ್ತಿಯ ಸಾಮಾಜಿಕ ಅಂತಸ್ತು ಮತ್ತು ತನ್ನ ಗುರಿಯ ವಿಚಾರದಲ್ಲಿ ಇರುವ ನೀತಿ, ನಂಬಿಕೆಗಳಿಗನುಗುಣವಾಗಿ ದುರಾಕ್ರಮಣ ಮನೋಧರ್ಮ ಕೆಲಸಮಾಡುತ್ತದೆ.

ಅನೇಕವೇಳೆ ಆಶಾಭಂಗ ಘರ್ಷಣೆಗೆ ಎಡೆಮಾಡಿಕೊಡಬಹುದಾದರೂ ಎಲ್ಲ ಘರ್ಷಣೆಗೂ ಆಶಾಭಂಗವೇ ಕಾರಣವಾಗಬೇಕಾದ್ದಿಲ್ಲ. ದಿನಬಳಕೆಯ ಮಾತಿನಲ್ಲಿ ದುರಾಕ್ರಮಣಕ್ಕೆ ವಿರುದ್ಧವಾದ ಭಾವನೆ ಆತ್ಮರಕ್ಷಣೆ ಎನ್ನಿಸಿಕೊಳ್ಳುತ್ತದೆ. ಎಂದಮೇಲೆ ಘರ್ಷಣೆಯ ಪ್ರಮಾಣ ಆಶಾಭಂಗದ ಅನುಭವದ ಬಲ, ಪರಿಸ್ಥಿತಿಗಳ ಪ್ರಭಾವ–ಈ ಎರಡು ಅಂಶಗಳನ್ನೂ ಅವಲಂಬಿಸಿದೆ. ಸ್ನೇಹಿತರ ಬೆಂಬಲವಿದ್ದರೆ ಘರ್ಷಣಾ ಮನೋವೃತ್ತಿ ಅಧಿಕ ಸ್ವಾತಂತ್ರ್ಯದಿಂದ ಪ್ರವರ್ತಿಸುತ್ತದೆ. ವೃತ್ತಿಚ್ಯುತಿ ಮತ್ತು ಶಿಕ್ಷೆಯ ಭಯಗಳಿಂದ ಘರ್ಷಣೆ ನಿರುದ್ಧವಾಗಬಹುದು. ಈ ಪರಿಸ್ಥಿತಿಗಳಲ್ಲಿ ಅದು ತನಗೆದುರುಬೀಳದ ತನ್ನ ಅಂತಸ್ತಿನ ವ್ಯಕ್ತಿಯ ಮೇಲೋ ಅಥವಾ ಗುಂಪಿನ ಮೇಲೋ ತಿರುಗಬಹುದು. ಹೀಗೆ ಘರ್ಷಣೆ ಬೇರೆ ಕಡೆಗೆ ತಿರುಗಬೇಕಾದರೆ ಆಶಾಭಂಗದ ಪರಿಸ್ಥಿತಿಗೆ ಯಾವ ವಿಧದಲ್ಲೂ ಕಾರಣನಲ್ಲದವನ ಮೇಲೆ ಪ್ರಾಯಶಃ ಅದು ತಿರುಗುತ್ತದೆ. ಯಾವನು ಇದರಿಂದ ತನ್ನ ನೆಮ್ಮದಿಗೆ ಚ್ಯುತಿಬಾರದೆಂದುಕೊಂಡು ಆ ಪರಿಸ್ಥಿತಿಯನ್ನು ಕುರಿತು ತನ್ನ ಮನೋಭಾವನೆಗಳನ್ನು ವ್ಯಕ್ತಪಡಿಸುತ್ತಾನೋ ಆತನೇ ಆ ಪರಿಸ್ಥಿತಿಯನ್ನು ಹದಕ್ಕೆ ತರಲೂ ಪ್ರಯತ್ನಿಸುತ್ತಾನೆ. ಒಬ್ಬ ವ್ಯಕ್ತಿಗೆ ಆಶಾಭಂಗದ ಅನುಭವವನ್ನು ತಂದೊಡ್ಡುವುದರಿಂದ ಅಷ್ಟೇನೂ ಕೆಡಕಾಗುವುದಿಲ್ಲ, ಆದರೆ ಏರುತ್ತಿರುವ ತನ್ನ ಮನಸ್ಸಿನ ಉದ್ವೇಗಗಳಿಗೆ ಥಟ್ಟನೆ ಪರಿಹಾರವನ್ನು ಕಂಡುಕೊಳ್ಳಲು ಆ ವ್ಯಕ್ತಿ ತಾನು ತೀರ ನಿಸ್ಸಹಾಯನೆಂಬ ಪರಿಸ್ಥಿತಿಯಲ್ಲಿ ಅದನ್ನು ತಂದೊಡ್ಡುವುದರಿಂದ ತುಂಬ ಕೆಡಕಾಗುತ್ತದೆ. ಒಬ್ಬಾತ ತನ್ನ ಆಶಾಭಂಗಕ್ಕೆ ಯಾವ ರೀತಿಯ ಪ್ರತಿಕ್ರಿಯೆಯನ್ನು ತೋರಿಸುತ್ತಾನೆ ಎಂಬುದನ್ನು ನಿರ್ಧರಿಸುವುದರಲ್ಲಿ ಸಂದರ್ಭಾಂಶಗಳಿಗಿರುವಷ್ಟೇ ಪ್ರಾಮುಖ್ಯ ವ್ಯಕ್ತಿಯ ಸ್ವಭಾವಕ್ಕೂ ಉಂಟು. ಆಶಾಭಂಗವನ್ನು ಸಹಿಸಿಕೊಳ್ಳುವುದರಲ್ಲೂ ಆಶಾಭಂಗದಿಂದುಂಟಾದ ಮನಸ್ಸಿನ ಉದ್ವೇಗಗಳನ್ನು ಉಪಶಮನಗೊಳಿಸಲು ಪ್ರಯುಕ್ತವಾದ ಉಪಾಯಗಳಲ್ಲೂ ವ್ಯಕ್ತಿ ವ್ಯಕ್ತಿಗೂ ವ್ಯತ್ಯಾಸವಿರುವುದು ತಿಳಿದುಬಂದಿದೆ.

ಆಶಾಭಂಗ ವ್ಯಕ್ತಿಯ ಮುಂದಿನ ನಡೆವಳಿಕೆಗಳಲ್ಲಿ ತರುವ ವ್ಯತ್ಯಾಸಗಳ ಬಗ್ಗೆ, ಮುಖ್ಯವಾಗಿ ಆಶಾಭಂಗಕ್ಕೂ ಘರ್ಷಣೆಗೂ ಇರುವ ಸಂಬಂಧದ ವಿಷಯದಲ್ಲಿ ಎದ್ದಿರುವ ಸಾಮಾನ್ಯ ಸಮಸ್ಯೆ ಇನ್ನೂ ಅಸ್ಪಷ್ಟವಾಗಿಯೇ ಉಳಿದಿವೆ.

ಕೆಲವು ಆಶಾಭಂಗಗಳು ತರುವ ದುಷ್ಪರಿಣಾಮಗಳನ್ನು ಮಿತಗೊಳಿಸಲೂ ನಾವು ಆಶಾಭಂಗದ ಅನುಭವದ ತೀವ್ರತೆಯನ್ನೇ ತಗ್ಗಿಸಬೇಕು. ಅಲ್ಲದೆ ಆ ಉದ್ವೇಗಗಳು ಕೆಡುಕಿಲ್ಲದ ಬೇರೆ ದಾರಿಯಲ್ಲಿ ಹೊರಹರಿಯುವಂತೆ ಅವಕಾಶಗಳನ್ನು ಕಲ್ಪಿಸಬೇಕು. ಆಶಾಭಂಗದ ತೀವ್ರತೆ ಅದು ಆ ಮನುಷ್ಯನ ಮನಸ್ಸಿನಲ್ಲಿ ಎಂಥ ಪರಿಣಾಮವನ್ನುಂಟು ಮಾಡುತ್ತದೆ ಎಂಬುದನ್ನೂ ಅದು ಉದ್ಭವಿಸುವ ಸಂದರ್ಭಾಂಶಗಳನ್ನೂ ಅವಲಂಬಿಸಿದೆಯಷ್ಟೆ ಆದ್ದರಿಂದ ಮೈತ್ರಿಯ ವಾತಾವರಣದಲ್ಲಿ ಮನಸ್ಸು ನೆಮ್ಮದಿಯಿಂದಿರುವಾಗ ನಿರ್ಬಂಧವನ್ನು ಹಾಕಿದಲ್ಲಿ ಪರಿಣಾಮರೂಪದ ಮನೋವಿಕಾರಗಳನ್ನೂ ದುರಾಕ್ರಮಣಬುದ್ಧಿಯನ್ನೂ ತಡೆಗಟ್ಟಬಹುದು.

(ಬಿ.ಸಿ.ಎಂ.)

**ಆಶಾವಾದ:** ಮಾನವನ ಬಾಳನ್ನು ಸಮಗ್ರವಾಗಿ ವೀಕ್ಷಿಸಲು ನಮಗಿರುವ ಎರಡು ಅತಿರೇಕದ ಹಾಗೂ ಪರಸ್ಪರ ವಿರುದ್ಧವಾದ ಮಾರ್ಗಗಳೆಂದರೆ ಆಶಾವಾದ (ಆಪ್ಟಿಮಿಸಂ) ಮತ್ತು ನಿರಾಶಾವಾದ (ಪೆಸಿಮಿಸಂ). ಒಂದರ ಪೂರ್ಣ ಪರಿಚಯವಾಗಬೇಕಾದರೆ ಮತ್ತೊಂದರ ಅರಿವು ಅನಿವಾರ್ಯ. ಈ ಮಾರ್ಗಗಳು ಬಹುವ್ಯಕ್ತಿಗತ ಸ್ವಭಾವ ಸಂಸ್ಕೃತಿ ಮತ್ತು ಮೌಲ್ಯಮಾಪನ ಕ್ರಮದಿಂದ ಬಹುಮಟ್ಟಿಗೆ ಪ್ರಭಾವಗೊಳ್ಳುತ್ತವೆ. ಈ ಜಗತ್ತು ಸುವ್ಯವಸ್ಥಿತವೂ ನಿಯಮಬದ್ಧವೂ ಪ್ರಗತಿಪರವೂ ಆಗಿದ್ದು ಮಾನವನ ಪ್ರಗತಿಗೆ ಸಹಕಾರಿಯಾಗಿದೆ. ಅಲ್ಲದೆ ಇದರಲ್ಲಿ ದುಃಖದ ಪಾಲಿಗಿಂತಲೂ ಸುಖದ ಪಾಲೇ ಹೆಚ್ಚು ಎಂಬುದೇ ಆಶಾವಾದ. ಬಾಳು ಸುಖಶಾಂತಿಯ ಸಾಧನ. ದುಃಖದ ಹಿಂದೆ ಸುಖ ಸುಪ್ತವಾಗಿದೆ. ಶುಭದ ಅಪೂರ್ಣ ಗ್ರಹಿಕೆಯೇ ಅಶುಭ. ಅಖಂಡತೆಯನ್ನು ಖಂಡಗೊಳಿಸುವುದರಿಂದುದಿಸುವುದೇ ದುಃಖ, ಇಲ್ಲವೆ ನಿರಾಶೆ. ಆದರೆ ಈ ನಿರಾಶೆ ಬಾಳಿನ ನೈಜಸ್ವರೂಪವಲ್ಲ. ಸುಖಸಂತೋಷ ಮತ್ತು ಶ್ರದ್ಧೆಯೇ ಬಾಳಿನ ಸಹಜಧರ್ಮ. ಅತ್ಯಂತ ಶ್ರೇಷ್ಠವಾದ ಈ ಜಗತ್ತಿನಲ್ಲಿ ಕಾಣುವುದೆಲ್ಲವೂ ಶ್ರೇಷ್ಠವೇ. ಆದರೆ ಅದನ್ನು ಗ್ರಹಿಸಲು ಬೇಕಾದ ವ್ಯಾಪಕದೃಷ್ಟಿ ನಮ್ಮಲ್ಲಿ ನಿಚ್ಚಳಗೊಳ್ಳಬೇಕು. ಇದೇ ಆಶಾವಾದದ ಪೂರ್ಣಸ್ವರೂಪ.

ಮಾನವರು ತಮ್ಮ ಬಾಳಿನಲ್ಲಿ ಕಾಣುವ ಶುಭಾಶುಭಗಳನ್ನು ಗ್ರಹಿಸಲು ಸಹಕಾರಿಯಾಗಿ ತಮ್ಮವೇ ಆದ ಕೆಲವು ಶ್ರದ್ಧೆ ಅಥವಾ ನಂಬಿಕೆಗಳನ್ನು ಆಶ್ರಯಿಸುವುದರಿಂದ ಆಶಾವಾದದ ಕಲ್ಪನೆ ತತ್ತ್ವಶಾಸ್ತ್ರಕ್ಕಿಂತಲೂ ಹೆಚ್ಚಾಗಿ ಧರ್ಮದ ವ್ಯಾಪ್ತಿಗೆ ಸೇರಿದೆ. ಈ ಕಲ್ಪನೆ ತಾತ್ತ್ವಿಕ ಚಿಂತನೆಗೊಳಪಡಲು ಅರ್ಹವೆನಿಸುವಷ್ಟು ನಿಖರತೆಯನ್ನು ಪಡೆದಿದೆಯೇ ಎಂದು ಅನುಮಾನಿಸುವವರೂ ಇದ್ದಾರೆ. ಇದನ್ನು ಕುರಿತು ಆಳವಾಗಿ ಪರಿಶೀಲಿಸುವ ಮುನ್ನ ಆಶೆಗೆ ಪ್ರೇರಕವಾದ ಸುಖದ ಸ್ವರೂಪವೇನೆಂಬುದನ್ನು ತಿಳಿಯುವುದು ಅವಶ್ಯ. ವಾಸ್ತವಿಕ ಅನುಭವವನ್ನೇ ಆಧಾರವಾಗಿ ಉಳ್ಳ ವಾಸ್ತವವಾದಿಗಳು, ಐಹಿಕ ಭೋಗವನ್ನು ಸುಖವೆಂದು ಗಣಿಸಿ, ಈ ಭೋಗವನ್ನು ಪಡೆಯಲು ಜಗತ್ತಿನಲ್ಲಿ ಅನೇಕ ಅಡಚಣೆಗಳಿರುವುದರಿಂದ ಜಗತ್ತಿನ ವಿಚಾರದಲ್ಲಿ ನಿರಾಶೆಯನ್ನು ತಳೆಯುತ್ತಾರೆ. ವಿವೇಚನೆ ಮತ್ತು ಚಿಂತನಾಶೀಲರಾದ ಆದರ್ಶವಾದಿಗಳು ಮತ್ತು ಧ್ಯೇಯವಾದಿಗಳು ಈ ಜಗತ್ತನ್ನು ವಿಕಾಸದ ಸೋಪಾನವೆಂದು ಪರಿಗಣಿಸಿ ಆಶಾವಾದಿಗಳಾಗಿ ನಿಲ್ಲುತ್ತಾರೆ. ಇನ್ನು ಮಾನವನನ್ನು ಸುಖದಿಂದ ಪಾರುಗೊಳಿಸಿ ನಿತ್ಯ ಸುಖದತ್ತ ಕೊಂಡೊಯ್ಯುವ ಸಾಧನವೆನಿಸಿದ ಧರ್ಮ ಜಗತ್ತನ್ನು ದುಃಖಮಯವೆಂದು ಕರೆದರೂ ಸರಿ ಅದಕ್ಕೆ ಪರಿಹಾರರೂಪವಾಗಿ ಮುಕ್ತಿಮಾರ್ಗವನ್ನು ಸೂಚಿಸುವುದರಿಂದ ಆಶಾವಾದ ಮತ್ತು ನಿರಾಶಾವಾದಗಳೆರಡೂ ಇದರಲ್ಲಿ ಕಾಣಬರುತ್ತವೆ. ಜಗತ್ತು ಮಾಯೆ, ಇಲ್ಲವೇ ನಶ್ವರವೆಂದು ಹೇಳಿದ ಹಿಂದೂಧರ್ಮ ಈ ಜಗತ್ತಿನಲ್ಲೇ ಇದ್ದು ಇದನ್ನು ಜಯಿಸಬೇಕೆಂದು ಸಾರಿತು. ಮೂಲರೂಪವಾದ ಪಾಪವನ್ನು ಒಪ್ಪಿದ ಕ್ರೈಸ್ತಧರ್ಮ ಸಹ ಮುಕ್ತಿಯ ಆಕರ್ಷಣೆಯನ್ನು ಮಾನವನ ಮುಂದೆ ಇಟ್ಟಿದೆ. ಹೀಗೆ ದುಃಖದಿಂದ ಸುಖದ ಕಡೆ ಇಲ್ಲವೇ ನಿರಾಶೆಯಿಂದ ಆಶೆಯ ಕಡೆ ಸಾಗಲು ಧರ್ಮ ತೋರಿದ ದಾರಿಯಲ್ಲಿ ನೀತಿಯ ಪಾತ್ರ ಬಹು ಹೆಚ್ಚೇನೋ ಎನಿಸುವಷ್ಟಿದೆ.

ಆಶಾವಾದದ ಇತಿಹಾಸವನ್ನು ನೋಡಬೇಕಾದರೆ ಇದು ಬೆಳೆದು ಬಂದ ದಾರಿ ಹಾಗೂ ಇದರಿಂದ ಪ್ರಭಾವಿತರಾದ ದಾರ್ಶನಿಕರು ಕೆಲವರ ವಿಚಾರಧಾರೆಯ ಪರಿಚಯ ಅಗತ್ಯ. ಸಾಕ್ರಟೀಸ್ ಮತ್ತು ಪ್ಲೇಟೋಗಳ ಕಾಲದಿಂದಲೇ ಮೊದಲಾದ ಈ ವಿಚಾರದೃಷ್ಟಿ 17, 18 ಶತಮಾನದ ಕಾಲಕ್ಕೆ ಐರೋಪ್ಯ ದಾರ್ಶನಿಕನಾದ ಲೈಬ್ನಿಟ್ಸ್‌ನಿಂದ ಒಂದು ಸ್ಪಷ್ಟರೂಪವನ್ನು ಪಡೆಯಿತು. ನಮ್ಮ ಈ ಜಗತ್ತು ಸರ್ವೋತ್ಕೃಷ್ಟವಾದದ್ದು ಎಂಬುದೇ ಇವನ ಸಿದ್ಧಾಂತ. ಈ ಜಗತ್ತು ಒಂದು ಶ್ರೇಷ್ಠ ಧ್ಯೇಯದ ಕಡೆಗೆ ತನ್ನನ್ನು ತಾನು ರೂಪಿಸಿಕೊಳ್ಳುತ್ತಿದೆ. ಆದರೆ ಈ ಉದ್ದೇಶ ಮಾನವನ ಕಲ್ಪನೆಯನ್ನವಲಂಬಿಸಿ ನಿಂತಿಲ್ಲ. ವಿಶ್ವದ ವಿವಿಧ ಮೂಲ ಘಟಕಗಳನ್ನೆಲ್ಲ (ಚಿದಣು; ಮೊನ್ಯಾಡ್) ನಿಯಂತ್ರಿಸಬಲ್ಲ ಪೂರ್ವನಿಶ್ಚಿತ ವ್ಯವಸ್ಥೆಯೊಂದು ಜಗತ್ತಿನ ರಚನೆಯಲ್ಲಿ ಹಾಸುಹೊಕ್ಕಾಗಿದೆ. ತನ್ನ ಈ ಚಿಂತನೆಗೆ ಇಂಬುಗೊಡಲೋಸುಗ ಲೈಬ್ನಿಟ್ಸ್ ದೇವರು ಮತ್ತು ಅವನ ಸರ್ವಜ್ಞತೆ ಹಾಗೂ ಸರ್ವಶಕ್ತತೆಯನ್ನು ಆಧರಿಸಿ ಪೂರ್ವನಿಶ್ಚಿತ ವ್ಯವಸ್ಥೆಯ ತತ್ತ್ವವನ್ನು ಸ್ಥಾಪಿಸುತ್ತಾನೆ. ಇವನ ಪ್ರಕಾರ ಕೆಟ್ಟದ್ದು ಇಲ್ಲವೆ ದುಃಖ ಎಂಬುದು ಕತ್ತಲು ಅಥವಾ ಶೈತ್ಯದಂತೆ ಸ್ವತಂತ್ರ ಅಸ್ತಿತ್ವವಿಲ್ಲದ ಅವಲಂಬನ ತತ್ತ್ವಮಾತ್ರ. ಒಳ್ಳೆಯದರ ಕ್ಷೀಣ ಸ್ವರೂಪವನ್ನೇ ಕೆಟ್ಟದೆಂದು ಹೆಸರಿಸಲಾಗುವುದು. ಪ್ರಕೃತಿಯಲ್ಲಿ ಕಾಣಬರುವ ವಿಪತ್ತು ಮಾನವನೆಸಗಿದ ಧರ್ಮೋಲ್ಲಂಘನೆಯ ಫಲ. ಅದು ಪ್ರಕೃತಿಯ ವಿಕೋಪವಷ್ಟೆ. ಇದು ನ್ಯಾಯಸಮ್ಮತವೆಂದೇ ಲೈಬ್ನಿಟ್ಸ್‌ನ ಅಭಿಮತ. ಸರಿಯಾದ ಕಾರಣದಿಂದಾದ ವಿಪತ್ತುಗಳು ಮೂಲತಃ ಶುಭದಾಯಕವಾದ ದೈವಶಾಸನದ ರಕ್ಷೆಗೆ ಒಳಪಟ್ಟೇ ಇರುತ್ತದೆ. ಈ ಶಾಸನದ ಆಶ್ರಯದಲ್ಲಿಯೇ ಸರ್ವವ್ಯಾಪಾರಗಳೂ ನಡೆಯುತ್ತವೆಂದ ಮೇಲೆ ಇನ್ನು ನಿರಾಶೆಗೆ ಕಾರಣವೇ ಇಲ್ಲ.

ಇವನಾದಮೇಲೆ ಆಶಾವಾದದ ಬಗ್ಗೆ ಆಲೋಚನೆ ಮಾಡಿದ ದಾರ್ಶನಿಕರಲ್ಲಿ ಪ್ರಮುಖವಾಗಿ ಡೇವಿಡ್ ಹ್ಯೂಮ್, ಇಮ್ಯಾನ್ಯುಯಲ್ ಕಾಂಟ್, ಷೋಪೆನ್‌ಹೌರ್ ಮತ್ತು ಹಾರ್ಟ್‌ಮನ್‌ಗಳ ಹೆಸರನ್ನು ಹೇಳಬೇಕು. ಜಗತ್ತಿನಲ್ಲಿ ನಡೆಯುವ ವಿಪತ್ತು ಮತ್ತು ನೈತಿಕ ಪಾಪಗಳನ್ನು ಕೂಲಂಕಷವಾಗಿ ವಿಚಾರ ಮಾಡಿದ ಹ್ಯೂಮ್ ವಿಶ್ವದಲ್ಲಿ ಕಾಣಬರುವ ದುಃಖದ ಧಾರಣೆ ಮಾನವನ ವಿವೇಕಕ್ಕೆ ಮೀರಿದೆ ಎಂದೂ ಇದನ್ನು ತಾತ್ತ್ವಿಕವಾಗಿ

ನಿರ್ಧರಿಸುವುದು ಕಷ್ಟವೆಂದೂ ಮನಗಂಡ. ಕಾಂಟ್ ಜಗತ್ತಿನ ನೈತಿಕ ವ್ಯವಸ್ಥೆಯನ್ನು ಒಪ್ಪಿದರೂ ಮಾನವನಲ್ಲಿ ಮೂಲಭೂತವಾಗಿ ನೆಲೆಸಿರುವ ದುಷ್ಟತನದ ಫಲವಾಗಿ ಈ ಆಶಾಜಗತ್ತಿನಲ್ಲಿ ನಿರಾಶೆಯ ಒಡಕು ಧ್ವನಿ ಮೂಡುವುದು ಅನಿವಾರ್ಯ ಎಂದು ನಿರ್ಣಯಿಸಿದ. ಈ ವಾದವನ್ನೇ ಇನ್ನೂ ಹೆಚ್ಚು ಮುಂದುವರಿಸಿದ ಷೋಪೆನ್ ಹೌರ್ ಮಾನವ ಶಾಶ್ವತವಾಗಿ ದುಃಖದಲ್ಲಿ ತೊಳಲತಕ್ಕವನೆಂದೂ ಅವನಿಗೆ ಸುಖವೆಂಬುದು ಕನಸಿನ ಗಂಟೆಂದೂ ಹೇಳಿ, ಈ ದುಃಖದಿಂದ ಪಾರಾಗಲು ಆತ ಆಶೆಯನ್ನು ಗೆದ್ದು ಪ್ರೇಮವನ್ನು ವೃದ್ಧಿಸಿಕೊಳ್ಳ ಬೇಕೆಂದು ಹೇಳಿದ. 19ನೆಯ ಶತಮಾನದಲ್ಲೇ ಬಹು ವ್ಯವಸ್ಥಿತ ರೀತಿಯಲ್ಲಿ ನಿರಾಶಾವಾದ ಮತ್ತು ಆಶಾವಾದದ ವಿಚಾರದಲ್ಲಿ ಚಿಂತನೆ ಮಾಡಿದ ಹಾರ್ಟ್‌ಮನ್ ಈ ಜಗತ್ತು ಸರ್ವೋತ್ಕೃಷ್ಟವಾಗಿರುವುದು ನಿಜವಾದರೂ ಇದರಲ್ಲಿ ದುಃಖದ ಪಾಲು ಸುಖಕ್ಕಿಂತಲೂ ಮಿಗಿಲಾದ್ದರಿಂದ ಈ ವಿಶ್ವವೇ ನಾಶವಾದರೆ ಒಳ್ಳೆಯದೆಂದು ಅಭಿಪ್ರಾಯಪಡುತ್ತಾನೆ.

20ನೆಯ ಶತಮಾನದಲ್ಲಾದ ವೈಜ್ಞಾನಿಕ ಪ್ರಗತಿ, ವಿಚಾರಕ್ರಾಂತಿ ಹಾಗೂ ಯುದ್ಧಗಳಿಂದಾದ ಮಹತ್ತರ ವಿನಾಶದಿಂದಾಗಿ ಆಶಾವಾದ ಅಥವಾ ನಿರಾಶಾವಾದವನ್ನು ಕುರಿತು ತಾತ್ತ್ವಿಕ ಚಿಂತನೆಗೆ ಬದಲಾಗಿ ಜೀವನದಲ್ಲಿ ಸುಖವನ್ನು ವರ್ಧಿಸುವ ಹಾಗೂ ದುಃಖವನ್ನು ಕಡಿಮೆಮಾಡುವಂಥ ಪ್ರಗತಿಪರ ಮಾರ್ಗದಲ್ಲಿ ವಾಸ್ತವಿಕ ರೀತಿಯಲ್ಲಿ ಕಾರ್ಯಪ್ರವೃತ್ತನಾಗಬೇಕೆಂದು ಮಾನವ ಎಂದಿಗಿಂತಲೂ ಹೆಚ್ಚಾಗಿ ಮನಗಂಡಿದ್ದಾನೆ.

**(ನೋಡಿ– ನಿರಾಶಾವಾದ)** (ಎ.ಎಲ್.ಎಸ್.)

**ಆಶೀರ್ವಾದ:** ಶುಭದ ಹಾರೈಕೆ. ಕಿರಿಯರ ವಿಚಾರದಲ್ಲಿ ಇಷ್ಟವಾದುದನ್ನು ನಡೆಯಲೆಂದು ಹಿರಿಯರು ಹೇಳುವುದು (ವಾತ್ಸಲ್ಯಾದ್ಯತ್ರ ಮಾನ್ಯೇನ ಕನಿಷ್ಠಸ್ಯಾಭಿಧೀಯತೇ। ಇಷ್ಟಾವಧಾರಕಂ ವಾಕ್ಯಮಾಶೀಃ ಸಾ ಪರಿಕೀರ್ತಿತಾ ॥); ಅದು ಸಫಲವಾಗಬಹುದು, ಆಗದಿರಬಹುದು. ಆದ್ದರಿಂದ ವರಕ್ಕಿಂತ ಭಿನ್ನ. ವರ ನಿಶ್ಚಿತವಾಗಿ ಈಡೇರುವ ಹಾರೈಕೆ. ಪ್ರಾಜ್ಞರಾದ ಹಿರಿಯರ ಆಶೀರ್ವಾದವೇ ವರವಾಗುವುದೆಂದು ಹೇಳುವುದುಂಟು.

ಸ್ತ್ರೀಯರಿಗೆ ನಾಮಕರಣ ಮಾಡಬೇಕಾದರೆ ಯಶೋದಾದೇವಿ ಮುಂತಾದ ಆಶೀರ್ವಾಚಕ ಶಬ್ದಗಳಿಂದ ಕೂಡಿದ ಹೆಸರು ಉತ್ತಮವೆಂದು ಮನುಸ್ಮೃತಿಯಲ್ಲಿ ಪ್ರತಿಪಾದಿತವಾಗಿದೆ. ನಮಸ್ಕ್ರಿಯಾ ವಸ್ತುನಿರ್ದೇಶಗಳಂತೆ ಕಾವ್ಯದಲ್ಲಿ ಬರುವ ಮಂಗಳಶ್ಲೋಕ ಆಶೀರ್ವಾದ ರೂಪದಲ್ಲಿರಬಹುದು. (ಬಿ.ಕೆ.ಎಸ್.)

**ಆಶುಕವಿತೆ:** ಬರವಣಿಗೆಯ ಸಾಧನವಿಲ್ಲದೆ, ಯಾವ ಪೂರ್ವಸಿದ್ಧತೆಯೂ ಇಲ್ಲದೆ ಸದ್ಯಃಸ್ಫೂರ್ತಿಯಿಂದ ಹೊರಹೊಮ್ಮುವ ವಾಚಿಕ (ಓರಲ್) ಕವಿತೆ. ಬರವಣಿಗೆಯಿಲ್ಲದಿದ್ದ ಪ್ರಾಚೀನ ಕಾಲದಲ್ಲಿ ಆಶುಕವಿತ್ವವೇ ಪ್ರಧಾನವಾಗಿದ್ದುದು ಸಹಜ. ವಿಕಾಸಶೀಲ ಮಹಾಕಾವ್ಯ (ಎಪಿಕ್ ಆಫ್ ಗ್ರೋತ್) ಎಂದು ಕರೆಯಲ್ಪಡುವ ಮಹಾಕಾವ್ಯಪ್ರಕಾರ ರೂಪುಗೊಂಡದ್ದು ಆಶುಕವಿತ್ವಪ್ರಧಾನವಾದ ವಾಚಿಕ ಪರಂಪರೆಯಿಂದ ಎನ್ನುವುದು ಪ್ರಸಿದ್ಧವಾದ ಸಂಗತಿ. ಓದುಬರೆಹಗಳನ್ನು ಆಶ್ರಯಿಸದ ಜನಪದ ಕಾವ್ಯವೆಲ್ಲ–ಗಾದೆಗಳು ಮತ್ತು ಒಗಟುಗಳನ್ನೂ ಸೇರಿಸಿಕೊಂಡು–ಆಶುಕವಿತೆಯೇ. ಬರವಣಿಗೆಯನ್ನು ಕಂಡುಹಿಡಿದ ಮೇಲೂ ಆಶುಕವಿತೆಯ ಪದ್ಧತಿ ಉಳಿದುಕೊಂಡು ಬಂತು. ರಾಜಾಸ್ಥಾನಗಳಲ್ಲಿ ಪಂಡಿತಕವಿಗಳ ಮಟ್ಟದಲ್ಲಿ ನಡೆಯುತ್ತಿದ್ದ ವಿದ್ವತ್ ಸ್ಪರ್ಧೆಗಳಲ್ಲಿ ಆಶುಕವಿತ್ವಕ್ಕೆ ಅವಕಾಶಗಳು ಹೇರಳವಾಗಿದ್ದುವು. ಕನ್ನಡದಲ್ಲಿ ಉಪಲಬ್ಧವಿರುವ ಕಂತಿ–ಹಂಪನ ಸಮಸ್ಯೆಗಳು ಎಂಬ ಕೃತಿ ಇಂಥ ಆಸ್ಥಾನಕವಿತೆಗೆ ಮಾದರಿಯಾಗಬಹುದು **(ನೋಡಿ– ಕಂತಿ)**. ಸಂಸ್ಕೃತದ ಭೋಜಪ್ರಬಂಧ ಮುಂತಾದ ಕೃತಿಗಳಲ್ಲಿ ಕಂಡುಬರುವ ಪ್ರಹೇಳಿಕೆಗಳು ಮತ್ತು ಅವುಗಳ ಪರಿಹಾರದಲ್ಲಿ ಆಶುಕವಿತ್ವದ ಮಾದರಿಗಳಿವೆ. ಓದುಬರೆಹಗಳ ಜೊತೆಗೆ ಮುದ್ರಣಸೌಲಭ್ಯ ವಿಪುಲವಾಗಿರುವ ಮತ್ತು ವಿರಾಮಶೀಲವಲ್ಲದ ಆಧುನಿಕ ಕಾಲದಲ್ಲಿ ಆಶುಕವಿತೆಗೆ ಅವಕಾಶ ಹೆಚ್ಚಾಗಿಲ್ಲದಿರುವುದು ಸಹಜವೇ. ಕುತೂಹಲಕ್ಕಾಗಿ ಅಲ್ಲೊಂದು ಇಲ್ಲೊಂದು ಆಶುಕವಿತಾ ಸ್ಪರ್ಧೆಯನ್ನು ಏರ್ಪಡಿಸಿದರೂ ಅದು ಯಶಸ್ವಿಯಾಗುವುದು ವಿರಳ. ಜಾನ್ ಆಫ್ ಲಂಡನ್ಸ್ ವೀಕ್ಲಿ, ಟೈಮ್ಸ್ ಲಿಟರರಿ ಸಪ್ಲಿಮೆಂಟ್‌ನಂಥ ಕೆಲವು ಪತ್ರಿಕೆಗಳು ಇಂಥ ಅನೇಕ ಸ್ಪರ್ಧೆಗಳನ್ನು ನಡೆಸುತ್ತಿವೆ. ಹಾಗೆಯೇ ತೆಲುಗಿನಲ್ಲಿ ಬಹಳ ಪ್ರಚುರವಾಗಿರುವ ಅಷ್ಟಾವಧಾನ, ಶತಾವಧಾನ ಮೊದಲಾದ ಅವಧಾನ ಸಂಪ್ರದಾಯದಲ್ಲಿ ಆಶುಕವಿತ್ವದ ರೀತಿಯನ್ನು ಇಂದಿಗೂ ಕಾಣಬಹುದಾಗಿದೆ. ಅಂತೂ ಆಶುಕವಿತೆಯ ಭವಿಷ್ಯ ಉಜ್ಜ್ವಲವಾಗಿಲ್ಲವೆಂದೇ ಹೇಳಬೇಕು; ಮುಂದೆ ಅದು ನಾಮಾವಶೇಷವಾದರೆ ಆಶ್ಚರ್ಯಪಡಬೇಕಾಗಿಲ್ಲ. (ಸಿ.ಪಿ.ಕೆ.)

**ಆಶೌಚ:** ಅಶುಚಿ ಎಂದು ಸೂಚಿಸುವ ಒಂದು ಬಗೆಯ ಪಾಪ (ಮೈಲಿಗೆ). ಅದೇ ಅರ್ಥದಲ್ಲಿ ಈಗ ಸೂತಕ ಪದ ಬಳಕೆಯಲ್ಲಿದೆ. ಕಾರಣಾನುಗುಣವಾಗಿ ಗೊತ್ತಾದ ಕಾಲದವರೆಗೆ ಮಾತ್ರ ಇರುತ್ತದೆ. ಆಶೌಚ (ಶಾವ) ಇರುವ ಕಾಲದಲ್ಲಿ ಪಿಂಡದಾನ, ಉದಕದಾನ ಮಾಡುತ್ತಾರೆ. ಆದರೆ ವೇದಾಧ್ಯಯನ ಮತ್ತು ಶ್ರೌತಸ್ಮಾರ್ತಕರ್ಮಗಳನ್ನು ಮಾಡಲು ಅರ್ಹತೆ ಇರುವುದಿಲ್ಲ. ಆಶೌಚ ಇರುವವರಿಗೆ ಸಂಬಂಧಪಟ್ಟ ಪದಾರ್ಥಗಳಿಗೂ ಶುದ್ಧಿ ಇರುವುದಿಲ್ಲ. ಆಶೌಚ ಕಣ್ಣಿಗೆ ಕಾಣುವುದಿಲ್ಲ. ಆದರೂ ಕರ್ಮಾನರ್ಹತೆಯನ್ನುಂಟುಮಾಡುವ, ಜನಸಾಮಾನ್ಯರಲ್ಲೂ ಗೊತ್ತಾದ ಕಾಲದವರೆಗಿರುವ, ಶರೀರಗತವಾದ ಒಂದು ವಿಧದ ಮಾಲಿನ್ಯ. ಗೊತ್ತಾದ ಕಾಲ ಕಳೆದ ಮೇಲೆ ಸ್ನಾನಾದಿಗಳಿಂದ ಮಾಲಿನ್ಯ ಕಳೆದು ಕರ್ಮಾರ್ಹತೆ ಉಂಟಾಗುತ್ತದೆ. ಆಶೌಚದ ಕೊನೆಯಲ್ಲಿ ಶುದ್ಧಿಯಾಗಲು ಕೆಲವರಿಗೆ ಕ್ಷೌರವೂ ವಿಹಿತವಾಗಿದೆ. ಆಶೌಚದಲ್ಲಿ ಜನನ, ಮರಣ, ಆರ್ತವ, ಸಾಂಸರ್ಗಿಕ, ಸನ್ನಿಪಾತ–ಎಂದಿವೇ ಮೊದಲಾಗಿ ಅನೇಕ ಭೇದಗಳಿವೆ.

ಮಕ್ಕಳು ಹುಟ್ಟಿದರೆ ಬರುವುದು ಜನನಾಶೌಚ (ಸೂತಿಕಾಶೌಚ). ಇದಕ್ಕೆ ಪುರುಡು, ವೃದ್ಧಿ ಎಂಬ ಪದಗಳೂ ಬಳಕೆಯಲ್ಲಿವೆ. ಸಾವಿನಿಂದ ಬರುವುದು ಮರಣಾಶೌಚ (ಶಾವಾಶೌಚ). ಇದನ್ನೀಗ ಬಳಕೆಯಲ್ಲಿ ಕ್ಷಯ ಎನ್ನುತ್ತಾರೆ. ಈ ಎರಡು ವಿಧಗಳಲ್ಲೂ ಏಳು ತಲೆಮಾರಿನವರೆಗಿನ ದಾಯಾದಿಗಳಲ್ಲಿ ಬ್ರಾಹ್ಮಣರಿಗೆ ಹತ್ತು ದಿನಗಳು, ಕ್ಷತ್ರಿಯರಿಗೆ ಹನ್ನೆರಡು ದಿನಗಳು, ವೈಶ್ಯರಿಗೆ ಹದಿನೈದು ದಿನಗಳು, ಚತುರ್ಥವರ್ಣದವರಿಗೆ ಒಂದು ತಿಂಗಳು ಆಶೌಚಕಾಲವೆಂದು ಶಾಸ್ತ್ರದಲ್ಲಿ ಹೇಳಿದೆ. ಇದು ಆಶೌಚದ ಪರಮಾವಧಿ. ಜನನಾಶೌಚದಲ್ಲಿ ಗರ್ಭಸ್ರಾವನಿಮಿತ್ತ ಗರ್ಭಮಾಸಾನುಗುಣವಾಗಿ 4, 5, 6 ದಿನಗಳು ಆಶೌಚವೂ ಉಂಟು.

ಇದಕ್ಕಿಂತ ಕಡಿಮೆಯಾದುದು ಮೂರು ದಿನಗಳ ಆಶೌಚ. ಇದರಂತೆಯೇ ಪಕ್ಷಿಣೀ (ಒಂದೂವರೆ ದಿನಗಳು) ಮತ್ತು ಒಂದು ದಿನದ ಆಶೌಚವೂ ಇವೆ. ಅವೆರಡೂ ಶಾವಾಶೌಚ ದಲ್ಲಿ ಮಾತ್ರ. ಈ ನಿಯತಕಾಲಿಕವಲ್ಲದೆ ಕೇವಲ ಸ್ನಾನ ನಿಮಿತ್ತಕವಾದ ಆಶೌಚವೂ ಉಂಟು. ಇದರಲ್ಲಿ ಸ್ನಾನಮಾತ್ರದಿಂದ ಶುದ್ಧಿ. ಬಾಂಧವ್ಯ ದೂರವಾದಂತೆಲ್ಲ ಆಶೌಚಕಾಲ ಕಡಿಮೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸ್ತ್ರೀ ಪುರುಷ ಭೇದದಿಂದಲೂ ಆಶೌಚಕಾಲ ಭಿನ್ನವಾಗುತ್ತದೆ. ಹಲ್ಲು ಹುಟ್ಟುವುದಕ್ಕಿಂತ ಮೊದಲು ಮಗು ಸತ್ತರೆ ತಂದೆತಾಯಿಗಳಿಗೆ ಪೂರ್ಣಕಾಲದ ಆಶೌಚ. ದಾಯಾದಿಗಳಿಗೆ ಸ್ನಾನದಿಂದ ಕೂಡಲೇ ಶುದ್ಧಿ. ಚೌಲಕಾಲದೊಳಗೆ ಮೃತನಾದರೆ ಒಂದು ದಿನದ ಆಶೌಚ. ಉಪನಯನದವರೆಗೆ ಮೂರು ದಿನಗಳ ಆಶೌಚ. ಅಲ್ಲಿಂದ ಮುಂದೆ ಹತ್ತುದಿನಗಳ ಆಶೌಚ. ಮರಣಾಶೌಚದಲ್ಲಿ ಇದರಂತೆಯೇ ಇನ್ನೂ ಹಲವು ಪ್ರಭೇದಗಳಿವೆ. ಗಂಡನಿಗೆ ಬಂದ ಆಶೌಚ ಹೆಂಡತಿಗೂ ಉಂಟು. ಆದರೆ ಹೆಂಡತಿಗೆ ಬಂದ ಆಶೌಚ ನಿಯತವಾಗಿ ಗಂಡನಿಗೆ ಬರುವುದಿಲ್ಲ. ಸ್ತ್ರೀಯರಿಗೆ ವಿವಾಹಾನಂತರ ತಂದೆ ಕಡೆಯ ಬಂಧುಗಳ ಆಶೌಚ ಕಡಿಮೆಯಾಗುತ್ತದೆ. ಗಂಡನ ಬಂಧುಗಳ ಆಶೌಚ ಪೂರ್ಣವಾಗಿರುತ್ತದೆ.

ಜನನ ಅಥವಾ ಮರಣದ ಅರಿವು ಉಂಟಾಗುವವರೆಗೂ ಆಶೌಚ ಬರುವುದಿಲ್ಲ. ಜನನಾಶೌಚ ವಿಷಯ ಕಾಲ ಕಳೆದ ಮೇಲೆ ತಿಳಿದರೂ ಆಶೌಚ ಇರುವುದಿಲ್ಲ. ಮರಣಾಶೌಚದಲ್ಲಿ ಕಾಲ ಕಳೆದ ಮೇಲೂ ಆಶೌಚ ಉಂಟು, ಆದರೆ ಅವಧಿ ಕಡಿಮೆಯಾಗುತ್ತದೆ. ಹತ್ತು ದಿನಗಳ ಆಶೌಚದ ವಿಷಯವನ್ನು ಆ ಕಾಲ ಕಳೆದ ಮೇಲೆ ಮೂರು ತಿಂಗಳೊಳಗೆ ಕೇಳಿದರೆ ಮೂರು ದಿನಗಳೂ ಆರು ತಿಂಗಳೊಳಗೆ ಪಕ್ಷಿಣಿಯೂ, ವರ್ಷದೊಳಗೆ ಒಂದು ದಿನವೂ ಆಶೌಚ ಇರಬೇಕು. ವರ್ಷಾನಂತರ ಮರಣ ವಿಷಯ ತಿಳಿದರೆ ಸ್ನಾನಮಾತ್ರದಿಂದ ಶುದ್ಧಿ. ಮಗನನ್ನು ಬಿಟ್ಟು ಉಳಿದ ಸಪಿಂಡ ಬಂಧುಗಳಿಗೆ ಈ ಕ್ರಮ.

ಮೂರು ದಿನಗಳ ಆಶೌಚದಲ್ಲಿ ಆ ಕಾಲ ಕಳೆದ ಮೇಲೆ ಹತ್ತು ದಿವಸಗಳೊಳಗೆ ವಿಷಯ ತಿಳಿದರೆ ಒಂದು ದಿನವೂ ಪಕ್ಷಿಣಿಯಲ್ಲಿ ಒಂದು ಕಾಲವೂ ಆಶೌಚ. ಹತ್ತು ದಿವಸಗಳು ಕಳೆದ ಬಳಿಕ ಕೇವಲ ಸ್ನಾನ ಮಾತ್ರ. ದಿನಾಶೌಚದಲ್ಲಿಯೂ ನಿಯತ ಕಾಲಾನಂತರ ತಿಳಿದ ಆಶೌಚಕ್ಕೆ ಸ್ನಾನದಿಂದ ಶುದ್ಧಿ.

ಒಂದು ಜನನಾಶೌಚ ಮಧ್ಯದಲ್ಲಿ ಇನ್ನೊಂದು ಜನನಾಶೌಚ ಬಂದರೆ ಎರಡನೆಯ ಜನನನಿಮಿತ್ತ ಪ್ರತ್ಯೇಕವಾಗಿ ಆಶೌಚ ಇರಬೇಕಾಗಿಲ್ಲ. ಮೊದಲನೆಯ ಆಶೌಚದಿಂದ ಅದೂ ಹೋಗುತ್ತದೆ. ಜನನಾಶೌಚ ಮಧ್ಯದಲ್ಲಿ ಶಾವಾಶೌಚ ಬಂದರೂ ಶಾವಾಶೌಚ ಮಧ್ಯದಲ್ಲಿ ಜನನಾಶೌಚ ಬಂದರೂ ಶಾವಾಶೌಚ ಕಾಲದಿಂದಲೇ ಶುದ್ಧಿ. ಶಾವಾಶೌಚ ಮಧ್ಯದಲ್ಲಿ ಸಮಾನ ಕಾಲದ ಮತ್ತೊಂದು ಶಾವಾಶೌಚ ಬಂದರೆ ಆಗ ಮೊದಲಿನ ಶಾವಾಶೌಚ ಕಾಲದಿಂದಲೇ ಶುದ್ಧಿ. ಅಧಿಕಕಾಲದ ಆಶೌಚದ ಮಧ್ಯದಲ್ಲಿ ಅಲ್ಪಕಾಲದ ಆಶೌಚ ಬಂದರೆ ಅಧಿಕ ಕಾಲದ ಆಶೌಚದೊಡನೆಯೇ ಮತ್ತೊಂದು ಆಶೌಚ ಕಳೆದು ಹೋಗುತ್ತದೆ. ತಂದೆ–ತಾಯಿ ನಿಮಿತ್ತಕವಾದ ಆಶೌಚದಲ್ಲಿ ಈ ನಿಯಮ ಕೂಡುವುದಿಲ್ಲ.

ಆಶೌಚಾಂತ್ಯಸ್ನಾನವನ್ನು ಸಂಗಮಕಾಲದಲ್ಲಿ ಎಂದರೆ, ಸೂರ್ಯೋದಯ ಕಾಲಕ್ಕೆ 2 ಗಂ 24 ನಿ. ಮೇಲೆ 4 ಗಂ 48 ನಿ. ಒಳಗೆ ಮಾಡಬೇಕು.

ಆಶೌಚಿ ದೇವಾಲಯಕ್ಕೆ ಹೋಗಕೂಡದು; ಆತ ನಮಸ್ಕಾರಕ್ಕೆ ಅನರ್ಹ. ಪೂಜೋಪಯುಕ್ತ ಪುಷ್ಪ ಮೊದಲಾದುವನ್ನೂ ಮನೆಯಲ್ಲಿ ಉಪಯೋಗಿಸುತ್ತಿರುವ ಮಣ್ಣಿನ ಪಾತ್ರೆಗಳನ್ನೂ ಮುಟ್ಟಕೂಡದು. ಅಭ್ಯಂಗಸ್ನಾನ ಕೂಡದು. ತಾಂಬೂಲ, ಗಂಧ ಮೊದಲಾದುವನ್ನು ಉಪಯೋಗಿಸಬಾರದು.

ವೈಯಕ್ತಿಕ ಆಶೌಚಕಾಲದ ಬಗ್ಗೆ ಧರ್ಮಶಾಸ್ತ್ರದಲ್ಲಿ ವಿವರವಾಗಿ ಉಕ್ತವಾಗಿದೆ.

ರಾತ್ರಿಕಾಲದಲ್ಲಿ ಜನನ ಮರಣಗಳು ಸಂಭವಿಸಿದರೆ ಸಾಮಾನ್ಯವಾಗಿ 12 ಗಂ. ಒಳಪಟ್ಟು ಅದೇ ದಿವಸದಿಂದ, 2 ಗಂ. 30 ನಿ. ಮೇಲ್ಪಟ್ಟು ಮಾರನೆಯ ದಿನದಿಂದ ಆಶೌಚ ದಿನಸಂಖ್ಯೆಯನ್ನು ಗಣಿಸಲು ಪ್ರಾರಂಭಿಸಬೇಕು. ಈ ಎರಡು ಕಾಲಗಳ ಮಧ್ಯದಲ್ಲಿ

ಸಂಭವಿಸುವುದರ ದಿನಗಣನೆಯನ್ನು ಲೆಕ್ಕದಿಂದ ಗೊತ್ತುಪಡಿಸಬೇಕು. ಆ ಗೊತ್ತಾದ ದಿನದ ಹಗಲಿನ ಕಾಲ ಪ್ರಮಾಣವನ್ನು 24 ಗಂಟೆಗಳಲ್ಲಿ ಕಳೆದುಳಿದುದು ರಾತ್ರಿ ಪ್ರಮಾಣ. ಈ ಕಾಲದಲ್ಲಿ ಮೂರು ಗಂಟೆ ಕಾಲವನ್ನು ಕಳೆದು ಉಳಿದುದರ ಮೂರನೆಯ ಎರಡು ಭಾಗಕ್ಕೆ $1^1/_2$ ಗಂಟೆ ಕಾಲವನ್ನೂ ಹಗಲಿನ ಕಾಲಪ್ರಮಾಣವನ್ನೂ ಕೂಡಿಸಿ ಬರುವ ಕಾಲದಿಂದ ಮುಂದಿನದು ಮಾರನೆಯ ದಿನದ ಗಣನೆಗೆ ಸೇರುತ್ತದೆ. ಈ ಕಾಲಗಣನೆಯಂತೆ ಅರ್ಧ ರಾತ್ರಿಯಲ್ಲಿ ಸಂಭವಿಸುವ ಜನನ ಮರಣಗಳ ದಿನವನ್ನು ನಿಷ್ಕರ್ಷಿಸಬೇಕು.

ರಜಸ್ವಲಾಶೌಚ : ಹೆಂಗಸರು ಮುಟ್ಟಾದ ದಿನದಿಂದ ಮೂರು ದಿನಗಳ ಕಾಲ ಇರುವ ಮೈಲಿಗೆ. ಮುಟ್ಟಾದ ದಿನದಿಂದ 18ನೆಯ ದಿನ ಮತ್ತೆ ಮುಟ್ಟಾದರೆ 1 ದಿನವೂ 19ನೆಯ ದಿನ ಆದರೆ 2 ದಿನಗಳೂ ಅಲ್ಲಿಂದ ಮುಂದೆ 3 ದಿನಗಳೂ ಆಶೌಚ ಇರುತ್ತದೆ. ಆ ಕಾಲ ಕಳೆದ ಮೇಲೆ ಸ್ನಾನದಿಂದ ಶುದ್ಧಿ.

ಅನ್ಯ ಸಂಪರ್ಕದಿಂದ ಬರುವ ಆಶೌಚ ಸಾಂಸರ್ಗಿಕ. ಆಶೌಚ ಮಧ್ಯದಲ್ಲಿ ಮತ್ತೊಂದು ಆಶೌಚ ಬರುವುದು ಸನ್ನಿಪಾತ.

ಪುರುಷನಿಗೆ ಸಂಸರ್ಗಾಶೌಚ ಬಂದರೆ ಅದು ಅವನಿಗೆ ಮಾತ್ರ ಅವನ ಹೆಂಡತಿಗಾಗಲೀ ಸಂಬಂಧಪಟ್ಟ ಪದಾರ್ಥಗಳಿಗಾಗಲೀ ಆಶೌಚ ಇಲ್ಲ. ಹೆಂಡತಿಗೆ ವಿಷಯ ತಿಳಿದು ಆಶೌಚ ಕಳೆದ ಮೇಲೆ ಕಾಲಾನಂತರದಲ್ಲಿ ಗಂಡನಿಗೆ ಅದೇ ವಿಷಯ ತಿಳಿದು ಆಶೌಚವಿರುವ ಸನ್ನಿವೇಶದಲ್ಲಿ ಮತ್ತೆ ಆಕೆಯೂ ಆಶೌಚ ಇರಬೇಕಾಗಿಲ್ಲ. (ಎಸ್.ಎನ್.ಕೆ.)

**ಆಶ್ರಮ:** ಈ ಮಾತಿಗೆ ವಿಶ್ರಾಂತಿಯನ್ನು ಪಡೆಯುವ ಸ್ಥಳವೆಂದು ಅರ್ಥ (ಆಶ್ರಮ್ಯಂತೇ ವಿಶ್ರಾಂತಿಂ ಪ್ರಾಪ್ಯಂತೇ ಅನೇನ). ವರ್ಣಾಶ್ರಮ ವ್ಯವಸ್ಥೆಗೆ ಅನುಗುಣವಾಗಿ ಕರ್ತವ್ಯಗಳನ್ನೆಲ್ಲ ನಿರ್ವಹಿಸಿ ಮುಪ್ಪು ಅಡರಿದಾಗ, ಗೃಹಸ್ಥ ಸಪತ್ನೀಕನಾಗಿ ಜಾನಪದದಿಂದ ಹೊರ ಹೊರಟು ನಗರದ ಉಪವನದಲ್ಲಿ ಪರ್ಣಶಾಲೆಯನ್ನು ಕಟ್ಟಿಕೊಂಡು ಋಷಿಯಂತೆ ವಾಸ ಮಾಡುವುದು ಆಶ್ರಮವಾಸ ಎನಿಸಿಕೊಳ್ಳುತ್ತದೆ. ಆಶ್ರಮಪದ, ಆಶ್ರಮಸ್ಥಾನ, ಆಶ್ರಮಮಂಡಲ ಎನ್ನುವುದೂ ಇದನ್ನೇ ಸೂಚಿಸುತ್ತದೆ. ಶಾಂತವಾದ ಆಶ್ರಮ ಪದದಲ್ಲಿ ಧರ್ಮಕಥೆಯನ್ನು ನಡೆಸುವ ವಿಧಾನ ಮಹಾಭಾರತದ ಆಶ್ರಮವಾಸಿಕಪರ್ವದಿಂದ ಸ್ಪಷ್ಟವಾಗುತ್ತದೆ. ಆಶ್ರಮದಲ್ಲಿ ಇರುತ್ತಿದ್ದ ವೃದ್ಧರು ಮೋಕ್ಷೋಪಾಯವೇ ಆಶ್ರಮಧರ್ಮವಾಗಿ ಉಳ್ಳವರಾದರೂ ಗೃಹಸ್ಥರಾಗಿಯೇ ಇರುತ್ತಿದ್ದುದು ವಿಶೇಷ. ಆಶ್ರಮಗಳು ವಿದ್ಯಾಸಂಸ್ಥೆಗಳಾಗಿ ಕೆಲಸ ಮಾಡುತ್ತಿದ್ದುವು. ಆಶ್ರಮವಾಸಿಯಾದ ಆಚಾರ್ಯ ಕುಲಪತಿಯಾಗಿ ಸಹಸ್ರಾರು ಶಿಷ್ಯರಿಗೆ ಪಾಠ ಹೇಳುತ್ತಿದ್ದನಾಗಿ ಆಶ್ರಮ ಗುರುಕುಲವೆನಿಸಿತ್ತು. ಊರಿನ ದ್ವಿಜರೆಲ್ಲರೂ ಎಳೆಯ ವಯಸ್ಸಿನಲ್ಲಿ ಗುರುಗಳ ಬಳಿಯೇ ಇದ್ದುಕೊಂಡು ವಿವಿಧ ಶಾಸ್ತ್ರಗಳಲ್ಲಿ ಜ್ಞಾನಾರ್ಜನೆ ಮಾಡುತ್ತಿದ್ದರು. ಆಶ್ರಮವಾಸಿಯಾದ ಕುಲಪತಿ ಆಮಾಯಂತು ಬ್ರಹ್ಮಚಾರಿಣಃ, ಪ್ರಮಾಯಂತು ಬ್ರಹ್ಮಚಾರಿಣಃ ಎಂದು ತವಕಪಡುತ್ತಿದ್ದುದು ಉಪನಿಷದ್ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಪ್ರತಿಯೊಂದು ಆಶ್ರಮವೂ ಸಾವಿರಾರು ವಿದ್ಯಾರ್ಥಿಗಳ ವಿದ್ಯಾಕೇಂದ್ರವಾಗಿದ್ದುದು ಹಲವಾರು ಪ್ರಸ್ತಾಪಗಳಲ್ಲಿ ಬರುತ್ತದೆ. ಕಣ್ವಋಷಿ ಕುಲಪತಿಯಾಗಿದ್ದುದೂ ದ್ರೋಣಾಚಾರ್ಯ ಕೌರವ ಪಾಂಡವರಿಗೆ ವಿದ್ಯಾಭ್ಯಾಸ ಮಾಡಿಸಿದುದೂ ಕೃಷ್ಣ ಬಲರಾಮರು ಅವಂತಿಯ ಸಾಂದೀಪಿನೀ ಆಚಾರ್ಯರಲ್ಲಿ ಶಿಕ್ಷಣ ಪಡೆದುದೂ ರಾಮಲಕ್ಷ್ಮಣರು ವಿಶ್ವಾಮಿತ್ರರಲ್ಲಿ ಅಧ್ಯಯನ ಮಾಡಿದುದೂ ಪ್ರಖ್ಯಾತ ನಿದರ್ಶನಗಳು. ಆಚಾರ್ಯರ ಬಳಿ ವಿದ್ಯಾಭ್ಯಾಸವನ್ನು ಪಡೆದು ಹಿಂದಿರುಗಿದ ಉದ್ದಾಲಕ ಮೊದಲಾದ ಋಷಿಗಳ ಉಲ್ಲೇಖವೂ ಗಮನಾರ್ಹವಾದುದು. ಇಂಥ ಆಶ್ರಮಗಳಲ್ಲಿ ವೈದಿಕವಿದ್ಯೆ, ವೇದಾಂತಶಿಕ್ಷಣಗಳಷ್ಟೇ ದೊರೆಯುತ್ತಿದ್ದುದು ಎಂದು ಬಗೆಯಲಾಗದು. ವ್ಯಾಕರಣ, ನಿರುಕ್ತ ಮೊದಲಾದ ಸಾಹಿತ್ಯಸಂಬಂಧವಾದ ವಿದ್ಯೆಗಳೂ ಧನುರ್ವಿದ್ಯೆ, ಸಮರಕೌಶಲ ಮೊದಲಾದ ಲೌಕಿಕ ವಿದ್ಯೆಗಳೂ ಇಲ್ಲಿ ಕಲಿಸಲ್ಪಡುತ್ತಿದ್ದುವು. ದ್ರೋಣಾಚಾರ್ಯರು ಕೌರವರಿಗೂ ಪಾಂಡವರಿಗೂ ಕಲಿಸಿದ್ದು ಧನುರ್ವಿದ್ಯೆಯನ್ನೇ. ಆಶ್ರಮಗಳು ಒಂದು ತೆರನಾದ ವಿಶ್ವವಿದ್ಯಾನಿಲಯಗಳೇ ಆಗಿದ್ದುವು. ಆಶ್ರಮದಲ್ಲಿ ಎಲ್ಲ ಜೀವಿಗಳಿಗೂ ಅಭಯವಿದ್ದುದು ವಿಶೇಷವಾದ ಸಂಗತಿ. ಆಶ್ರಮ ಪರಿಸರದಲ್ಲಿ ಹಿಂಸ್ರಜಂತುಗಳೂ ಮೈತ್ರಿಯಿಂದ ಇರುತ್ತಿದ್ದುವು. ದ್ವೇಷವಿಲ್ಲದ ಶಾಂತವಾತಾವರಣ ಆಶ್ರಮದ ವೈಶಿಷ್ಟ್ಯವಾಗಿತ್ತು. ರಾಜರು ಆಶ್ರಮದಲ್ಲಿ ಬೇಟೆಯಾಡುವ ಹಾಗಿರಲಿಲ್ಲ. ಶಾಕುಂತಲ ನಾಟಕದಲ್ಲಿ ಕಣ್ವಮುನಿಯ ಶಿಷ್ಯರು ಹೇಳುವ 'ಆಶ್ರಮ ಮೃಗೋಯಂ ನ ಹಂತವ್ಯಃ' ಎನ್ನುವ ಮಾತು ಗಮನಾರ್ಹವಾದುದು. ಹೀಗೆ ಆಶ್ರಮಕ್ಕೂ ಅಹಿಂಸೆಗೂ ತಾತ್ತ್ವಿಕವಾದ ನಂಟಿತ್ತು. ರಾಜರು ಮಂತ್ರಾಲೋಚನೆಗಾಗಿ ಆಶ್ರಮಕ್ಕೆ ಬಂದುಹೋಗುವ ಪರಿಪಾಠವಿತ್ತು. ವಯೋವೃದ್ಧರೂ ಜ್ಞಾನವೃದ್ಧರೂ ಆದ ಕುಲಪತಿಗಳು ವ್ಯವಹಾರಕುಶಲರೂ ಆಗಿದ್ದರು ; ಅವರ ಮಾರ್ಗದರ್ಶನ ರಾಜರಿಗೆ ಅಗತ್ಯವಾಗಿತ್ತು. ಯಾವ ಸ್ವಾರ್ಥವೂ ಇಲ್ಲದೆ ಯುಕ್ತವಾದ ಸಲಹೆಗಳನ್ನು ಕೊಡುವುದು ಕುಲಪತಿಗಳಿಗೆ ಸಾಧ್ಯವಿತ್ತು. ಹೀಗೆ ಆಶ್ರಮವ್ಯವಸ್ಥೆಯಿಂದ ಎರಡು ಬಗೆಯಾದ ಲಾಭವಿತ್ತು; ಸಾಂಸಾರಿಕ ವ್ಯವಹಾರದಲ್ಲಿ ಬಳಲಿದವರಿಗೆ ಮನಶ್ಶಾಂತಿ, ವಿದ್ಯಾರ್ಥಿಗಳಿಗೆ ವಿದ್ಯೆ, ರಾಜಾಧಿರಾಜರಿಗೆ ಮಾರ್ಗದರ್ಶನ.

ಚತುರ್ವಿಧ ವರ್ಣಾಶ್ರಮಧರ್ಮಗಳಾದ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸಗಳನ್ನು ಆಶ್ರಮಧರ್ಮಗಳೆನ್ನುತ್ತಾರೆ. ವಿವರಗಳಿಗೆ ಆಯಾ ಶೀರ್ಷಿಕೆಯನ್ನೂ ವರ್ಣಾಶ್ರಮ ಧರ್ಮಗಳು ಎಂಬ ಲೇಖನವನ್ನೂ ನೋಡಿ. (ಎಸ್.ಕೆ.ಆರ್.)

**ಆಶ್ರಯದಾತ ಸಸ್ಯ:** ಪರಾವಲಂಬಿ ಅಥವಾ ಪರತಂತ್ರ ಜೀವಿಗಳಿಗೆ ಆಶ್ರಯವೀಯುವ ಸಸ್ಯ (ಹೋಸ್ಟ್). ಆತಿಥೇಯ ಸಸ್ಯ ಎಂದು ಕೂಡ ಕರೆಯಬಹುದು. ಸಸ್ಯದಂತೆ ಪ್ರಾಣಿಯೂ ಪ್ರಾಣಿಗೆ ಆಶ್ರಯದಾತವಾಗಿರಬಹುದು. ಆಶ್ರಯವೀಯುವ ಯಾವ ಜೀವಿಯೂ ಇತರ ಜೀವಿಗಳನ್ನು ಅವಲಂಬಿಸದೆ ಜೀವಿಸದು. ಸಸ್ಯವರ್ಗದ ಎಲ್ಲ ವಿಭಾಗಗಳಲ್ಲಿಯೂ ಈ ತರದ ಪರಾವಲಂಬಿಗಳಿವೆ. ಕೆಲವಂತೂ ಸಂಪೂರ್ಣವಾಗಿ ಆಶ್ರಯದಾತರನ್ನೇ ಅವಲಂಬಿಸಿ ಕೊನೆಗೆ ಅದನ್ನು ಕ್ರಮೇಣ ನಾಶಪಡಿಸುತ್ತವೆ. ಇನ್ನೂ ಕೆಲವು ಸ್ವಲ್ಪಮಟ್ಟಿಗೆ ಸ್ವತಂತ್ರವಾಗಿ ತಮ್ಮ ಕಾಲಮೇಲೆ ನಿಂತು, ಇನ್ನು ಕೆಲವು ಕೊಂಚಮಟ್ಟಿಗೆ ಆಶ್ರಯದಾತದ ನೆರವು ಪಡೆದು ಜೀವನವನ್ನು ಸಾಗಿಸುತ್ತವೆ.

ಸಸ್ಯವರ್ಗದ ಕಸ್‍ಕ್ಯೂಟಾ ಮತ್ತು ಕ್ಯಾಸಿತ ಎಂಬ ಪರಿಪೂರ್ಣ ಪರಾವಲಂಬಿಗಳು ತಮ್ಮ ಆಶ್ರಯದಾತದ ಸರ್ವಸ್ವವನ್ನೂ ಅಪಹರಿಸಿ ಕ್ರಮೇಣ ಅವನ್ನು ಸಂಪೂರ್ಣವಾಗಿ ನಾಶಮಾಡುತ್ತವೆ. ಬದನಿಕೆ (ಲೊರಾಂಥಸ್) ಜಾತಿಯ ಗಿಡಗಳೂ ಗಂಧದ ಗಿಡದ ಜಾತಿಯ ಗಿಡಗಳೂ ಸಂಪೂರ್ಣ ಪರಾವಲಂಬಿಗಳಲ್ಲ. ಆಶ್ರಯದಾತರನ್ನು ಸಂಪೂರ್ಣವಾಗಿ ಅವಲಂಬಿಸದೆ, ಅವುಗಳಿಂದ ನೀರು ಮತ್ತು ಲವಣಗಳನ್ನು ಮಾತ್ರ ಪಡೆದು ತಮ್ಮ ಆಹಾರವನ್ನು ತಾವೇ ತಯಾರಿಸಿಕೊಂಡು ಜೀವನ ನಡೆಸುವುವು. ಈ ಸಂದರ್ಭದಲ್ಲಿ ಆಶ್ರಯದಾತ ಸಸ್ಯಗಳ ಪಾತ್ರ ಬಹಳ ಮಹತ್ತರವಾದದ್ದೂ ಅವುಗಳ ತ್ಯಾಗ ಬಹಳ ಬೆಲೆಯುಳ್ಳದ್ದೂ ಆಗಿ ತೋರುವುದು. ತಾವು ಕಷ್ಟಪಟ್ಟು ತಯಾರಿಸಿದ ಮತ್ತು ಮುಂದಿನ ಉಪಯೋಗಕ್ಕೆಂದು ಶೇಖರಿಸಿದ ಬೆಲೆಯುಳ್ಳ ಆಹಾರ ಪದಾರ್ಥಗಳನ್ನು ಪರಾವಲಂಬಿಗಳಿಗೆ ಕೊಟ್ಟು ತಾವು ಕ್ರಮೇಣ ಬಡವಾಗುವುವು. ಶ್ರೀಗಂಧದ ಗಿಡದ ಉದಾಹರಣೆ ಪರಿಶೀಲಿಸಬಹುದು. ಈ ಮರ ಹುಲ್ಲಿನ ಬೇರುಗಳನ್ನು ಆಶ್ರಯಿಸಿ ಬೆಳೆಯುತ್ತದೆ. ತನ್ನ ಬೇರುಗಳಿಗೆ ಸ್ವತಃ ಭೂಮಿಯಿಂದ ಲವಣ, ಜಲ ಹೀರುವ ಶಕ್ತಿಯಿಲ್ಲ. ಆಶ್ರಯದಾತ ಇಲ್ಲದಿದ್ದರೆ ಗಂಧದ ಗಿಡ ಮರವಾಗಿ ಬೆಳೆಯಲಾರದು. ಆರ್ಥಿಕದೃಷ್ಟಿಯಿಂದ ನೋಡಿದರೆ ಆಶ್ರಯದಾತ ಸಸ್ಯಗಳ ಪಾತ್ರ ಈ ಸಂಬಂಧದಲ್ಲಿ ಬಹಳ ಮಹತ್ತರವಾದುದು. *

**ಆಶ್ರಿತ ರಾಜ್ಯಗಳು:** ಸಂಪೂರ್ಣವಾಗಿ ಸ್ವಂತ ಆಡಳಿತಾಧಿಕಾರವಿಲ್ಲದ ಪ್ರದೇಶಗಳು (ಡಿಪೆಂಡೆನ್ಸೀಸ್). ಸಾಮಾನ್ಯವಾಗಿ ಆಳುವ ರಾಷ್ಟ್ರದ ಪ್ರದೇಶವೂ ಆಶ್ರಿತರಾಜ್ಯದ ಪ್ರದೇಶವೂ ಪರಸ್ಪರ ಭಿನ್ನವಾಗಿಯೂ ದೂರದೂರದಲ್ಲೂ ಇದ್ದು, ಈ ಎರಡು ಪ್ರದೇಶಗಳಲ್ಲಿ ವಾಸಿಸುವ ಜನರು ಭಿನ್ನ ಬುಡಕಟ್ಟುಗಳಿಗೆ ಸೇರಿದವರಾಗಿರುತ್ತಾರೆ.

ಆಶ್ರಿತ ಪ್ರದೇಶಗಳ ಮೇಲೆ ಆಳುವ ರಾಷ್ಟ್ರಗಳು ಹೊಂದಿರುವ ಹತೋಟಿ ಒಂದೇ ಸಮನಾಗಿರುವುದಿಲ್ಲ. ಕೆಲವು ಆಶ್ರಿತರಾಜ್ಯಗಳ ಆಡಳಿತದ ಸಂಪೂರ್ಣ ಹೊಣೆಯನ್ನೆಲ್ಲ ಆಳುವ ರಾಷ್ಟ್ರವೇ ವಹಿಸಬಹುದು; ಆಳುವ ರಾಷ್ಟ್ರದ ಸರ್ಕಾರದಿಂದ ನಿಯೋಜಿತರಾಗಿ ಬಂದ ಅಧಿಕಾರಿಗಳೇ ಆ ಪ್ರದೇಶಗಳ ಆಡಳಿತ ನಿರ್ವಹಿಸಬಹುದು. ಇನ್ನೂ ಕೆಲವು ಪ್ರದೇಶಗಳಲ್ಲಿ ಅಲ್ಲಿನ ಜನರು ಸ್ಥಳೀಯ ನಾಯಕರ ಮೂಲಕವಾಗಿ ಪ್ರಭುತ್ವ ನಡೆಸಬಹುದು. ಇಂಥ ಆಳಿಕೆ ಪರೋಕ್ಷ. ಇನ್ನೂ ಕೆಲವು ಪ್ರದೇಶಗಳಲ್ಲಿ ಜನರ ಪ್ರಾತಿನಿಧ್ಯ ಹೊಂದಿದ ಆಡಳಿತ ವ್ಯವಸ್ಥೆ ಏರ್ಪಟ್ಟಿರಬಹುದು. ಇಂಥ ಪ್ರದೇಶಗಳಲ್ಲಿ ಆಡಳಿತ ನಡೆಸುವ ಸರ್ಕಾರಗಳಿಗೆ ಅಲ್ಲಿನ ಆಂತರಿಕ ವ್ಯವಹಾರಗಳಲ್ಲಿ ಬಹಳಮಟ್ಟಿಗೆ ಸ್ವಯಮಾಡಳಿತಾಧಿಕಾರವಿರುತ್ತದೆ.

ಆಶ್ರಿತರಾಜ್ಯವನ್ನು ವಸಾಹತು ಎಂಬ ಅರ್ಥದಲ್ಲೂ ಬಳಸುವುದುಂಟು. ಆದರೆ ಎರಡಕ್ಕೂ ಸೂಕ್ಷ್ಮವ್ಯತ್ಯಾಸಗಳುಂಟು. ಆಶ್ರಿತ ರಾಜ್ಯಗಳ ಹಿತರಕ್ಷಣೆ ಮಾಡಿ, ಅವುಗಳ ಮೇಲ್ವಿಚಾರಣೆ ನಡೆಸುವ ಕೆಲಸ ಈಗ ಹೆಚ್ಚು ಹೆಚ್ಚಾಗಿ ವಿಶ್ವಸಂಸ್ಥೆಯ ಹೊಣೆಯಾಗುತ್ತಿದೆ. (ವಿ.ಎಸ್.ಪಿ.)

**ಆಶ್ಲೇಷಾ:** ದಕ್ಷನ ಮಗಳೆಂದೂ ಚಂದ್ರನ ಹೆಂಡತಿಯೆಂದೂ ಪುರಾಣ ಪ್ರಸಿದ್ಧವಾಗಿರುವ ಈ ನಕ್ಷತ್ರ ಸರ್ಪಸಂಬಂಧಿಯಾದುದು. ಇದು ರಾಕ್ಷಸಗಣಕ್ಕೆ, ಮಾರ್ಜಾಲಯೋನಿಗೆ ಸೇರಿದುದು ಎಂದೂ ಕ್ರೂರ ಸ್ವಭಾವದ್ದು ಎಂದೂ ಜ್ಯೋತಿಷದ ವಿವರಣೆ. ಪ್ರಯಾಣಕ್ಕೆ ಇದು ನಿಷಿದ್ಧ. ಈ ನಕ್ಷತ್ರದಲ್ಲಿ ರೋಗ ಬಂದರೆ ಒಂದು ತಿಂಗಳ ಕಾಲ ಪೀಡಿಸುತ್ತದೆ ಎನ್ನುವ ನಂಬಿಕೆಯಿದೆ. ಮದುವೆಯನ್ನು ನಿಶ್ಚಯಿಸುವಾಗ ಆಶ್ಲೇಷಾ ನಕ್ಷತ್ರದ ಹುಡುಗಿಗೆ ಅತ್ತೆಯಿಲ್ಲದ ಮನೆಯನ್ನು ನೋಡುವ ಪದ್ಧತಿಯುಂಟು; ಇಲ್ಲವಾದರೆ ಅತ್ತೆ ತೀರಿಕೊಳ್ಳುತ್ತಾಳೆಂದು ಹೇಳುತ್ತಾರೆ. ಆಶ್ಲೇಷಾ ನಕ್ಷತ್ರದಲ್ಲಿ ಜನಿಸಿದವರಿಗೆ ಬುಧ ಮಹಾದಶೆಯೆಂದೂ ಈ ದಶೆ ಹದಿನೇಳು ವರ್ಷಗಳು ನಡೆಯುವುದೆಂದೂ ನಂಬಿಕೆ. ಈ ನಕ್ಷತ್ರಕ್ಕೆ ಸರ್ಪದೇವತೆ ಅಧಿದೇವತೆಯೆಂದು ವ್ಯವಹರಿಸಿ ಅದನ್ನು ಸರ್ಪವೆಂದೇ ಕರೆಯುವ ವಾಡಿಕೆಯುಂಟು. (ನಿದರ್ಶನ–ಮೂಲಜಾಶ್ವಶುರಂ ಹಂತಿ ಸರ್ಪಜಾತು ತದಂಗನಾಂ). ಈ ಕಾರಣದಿಂದಲೇ ಗ್ರಹಗತಿ ದಾರುಣವಾದುದೆಂದು ಕಲ್ಪನೆ. (ಆಶ್ಲೇಷಾ ನಕ್ಷತ್ರಂ ಸರ್ಪಾದೇವತಾ–ತೈತ್ತಿರೀಯ ಸಂಹಿತೆ). (ಎಸ್.ಕೆ.ಆರ್.)

ಖಗೋಳಶಾಸ್ತ್ರದಲ್ಲಿ ಚಂದ್ರನ 27 ಮನೆಗಳಲ್ಲಿ (ನಿತ್ಯನಕ್ಷತ್ರಗಳಲ್ಲಿ) ಒಂದು. ಹೈಡ್ರಾ (ವಾಟರ್ ಸ್ನೇಕ್ ಅಂದರೆ ನೀರಹಾವು ಎಂದರ್ಥ) ನಕ್ಷತ್ರ ಪುಂಜದ ಪ್ರಥಮ ನಕ್ಷತ್ರ. ಆದ್ದರಿಂದ ಇದರ ಶಾಸ್ತ್ರನಾಮ $\alpha$–ಹೈಡ್ರಾ. ಆಲ್ಫಾರ್ಡ್ ಪರ್ಯಾಯನಾಮ. ಇದರ ದೃಗ್ಗೋಚರ (ಅಪೇರೆಂಟ್) ಕಾಂತಿ 2.2, ರೋಹಿತ K2, ದೂರ 190 ಜ್ಯೋತಿರ್ವರ್ಷಗಳು.

ಆಶ್ಲೇಷಾ ಕರ್ಕಾಟಕ ರಾಶಿಯಲ್ಲಿರುವ ಒಂದು ನಕ್ಷತ್ರ. ಸಿಂಹರಾಶಿಯ ಮಖಾ ನಕ್ಷತ್ರ ಶೃಂಗವಾಗಿರುವಂತೆ ಪೂರ್ವ–ದಕ್ಷಿಣದೆಡೆಗೆ ಒಂದು ಸಮದ್ವಿಭುಜ, ತ್ರಿಭುಜ ರಚಿಸಿದರೆ ಅದರ ಪಾದಶೃಂಗಗಳಲ್ಲಿ ದಕ್ಷಿಣ ದಿಕ್ಕಿನದು ಆಶ್ಲೇಷಾ (ನೋಡಿ – ಹೈಡ್ರ). *

**ಆಶ್ವಯುಜಮಾಸ:** ಚಾಂದ್ರವರ್ಷ ಪ್ರಾರಂಭದಿಂದ ಏಳನೆಯ ತಿಂಗಳು. ವರ್ಷದ ಎರಡನೆಯ ಅರ್ಧ ಈ ತಿಂಗಳಿನಿಂದ ಪ್ರಾರಂಭವಾಗುತ್ತದೆ, ಕನ್ಯಾರಾಶಿಯಲ್ಲಿ ಸೂರ್ಯನಿರುವಾಗ ಶುಕ್ಲಪ್ರಥಮೆಯಿಂದ ಮಾಸ ಪ್ರಾರಂಭವಾಗಿ ಸೂರ್ಯ ತುಲಾರಾಶಿಯಲ್ಲಿರುವಾಗ ಅಮಾವಾಸ್ಯೆಯಿಂದ ಕೊನೆಗೊಳ್ಳುತ್ತದೆ. ಈ ತಿಂಗಳನ್ನು ಅಶ್ವಿನ ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಈ ತಿಂಗಳಿನ ಹುಣ್ಣಿಮೆ ಅಶ್ವಿನಿ ನಕ್ಷತ್ರದೊಡನೆ ಕೂಡಿರುವುದರಿಂದ ಇದಕ್ಕೆ ಆಶ್ವಯುಜ ಎಂಬ ಹೆಸರು ಬಂದಿದೆ. ರೇವತಿ ಭರಣಿ ನಕ್ಷತ್ರಗಳೂ ಕೆಲವು ವೇಳೆ ಸೇರುವುದುಂಟು. ಕನ್ಯಾರಾಶಿಯಲ್ಲಿ ಸೂರ್ಯನಿರುವಾಗ ಸೂರ್ಯಸಂಕ್ರಮಣವಿಲ್ಲದ ವರ್ಷಾದಿ ಏಳನೆಯ ಚಾಂದ್ರಮಾಸ ಕೆಲವು ವರ್ಷಗಳಿಗೊಮ್ಮೆ ಬರುವುದುಂಟು. ಇದನ್ನು ಅಧಿಕ ಆಶ್ವಯುಜವೆಂದು ಕರೆಯುತ್ತಾರೆ. ಇದರ ಮುಂದಿನ ಚಾಂದ್ರಮಾಸ ನಿಜಾಶ್ವಯುಜ. ಅಧಿಕ ಆಶ್ವಯುಜದಲ್ಲಿ ನಿತ್ಯಕರ್ಮಗಳು ಮಾತ್ರ, ವಿಶೇಷಕರ್ಮಾಚರಣೆ ಇಲ್ಲ. ಆಶ್ವಯುಜ ಶುಕ್ಲಪ್ರಥಮೆಯಿಂದ ಶರದೃತುವೂ ಶರನ್ನವರಾತ್ರಿಯೂ ಪ್ರಾರಂಭವಾಗುತ್ತವೆ. ಈ ತಿಂಗಳಿನಲ್ಲಿ ದೇವಿಯ ಪೂಜೆ ವಿಶೇಷ. ಸರಸ್ವತಿ, ದುರ್ಗಿ, ಲಕ್ಷ್ಮೀದೇವಿಯರ ಪೂಜೆಗೆ ಈ ತಿಂಗಳು ಮೀಸಲಾಗಿದೆ. ಶುಕ್ಲದಶಮಿಯ ದಿವಸ ಕ್ಷತ್ರಿಯರು ವಿಜಯಯಾತ್ರೆಗೆ ಹೊರಡಲು ಶುಭಕಾಲ. ಇಂದೂ ಇದು ಆಚರಣೆಯಲ್ಲಿದೆ. ಉತ್ತರಾಭಾದ್ರ ನಕ್ಷತ್ರದ ದಿವಸ ಮೈಸೂರು ನಗರದ ಅಧಿದೇವತೆಯಾದ ಶ್ರೀಚಾಮುಂಡೇಶ್ವರಿ ರಥೋತ್ಸವ ನಡೆಯುತ್ತದೆ. (ಎಸ್.ಎನ್.ಕೆ.)

**ಆಶ್ವಲಾಯನ:** ಆಪಸ್ತಂಬನಂತೆಯೇ ಶಾಖಾಪ್ರವರ್ತಕನಾದ ಆಚಾರ್ಯ. ಆಪಸ್ತಂಬ ಯಜುರ್ವೇದದ ಶಾಖಾಪ್ರವರ್ತಕನಾದರೆ ಆಶ್ವಲಾಯನ ಋಗ್ವೇದದ ಶಾಖಾಪ್ರವರ್ತಕ. ಈತ ಶೌನಕನ ಶಿಷ್ಯನೆಂಬ ಪ್ರತೀತಿಯಿರುವಂತೆ ಈತನ ಸೂತ್ರಗಳ ಆದ್ಯಂತಗಳಲ್ಲಿ ನಮಃ ಶೌನಕಾಯ – ಎಂಬ ಉಲ್ಲೇಖವಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಆಶ್ವಲಾಯನ ಆಪಸ್ತಂಬನಿಗಿಂತ ಪ್ರಾಚೀನನೆಂಬುದು ನಿರ್ವಿವಾದ. ಇವನು ಕೇವಲ ಪ್ರಾಚೀನ ಆಚಾರ್ಯರನ್ನು ಮಾತ್ರ ಸ್ಮರಿಸಿದ್ದಾನೆ. ಶುಕ್ಲ ಯಜುರ್ವೇದದ ಆರಣ್ಯಕದಲ್ಲಿ ಅಶ್ವಲನೆಂಬ ಒಬ್ಬ ಋಷಿ ಜನಕರಾಜನ ಸಭೆಯಲ್ಲಿದ್ದನೆಂದು ಹೇಳಲಾಗಿದೆ. ಕಲ್ಪಸೂತ್ರಕಾರನಾದ ಆಶ್ವಲಾಯನ ಅಶ್ವಲನ ಮಗನೇ ಇದ್ದರೂ ಇರಬಹುದು. ಕಾತ್ಯಾಯನನ ಸರ್ವಾನುಕ್ರಮಣೀ ಗ್ರಂಥಕ್ಕೆ ಷಡ್ಗುರುಶಿಷ್ಯ ಬರೆದಿರುವ ಭಾಷ್ಯದಲ್ಲಿ, ಶಿಷ್ಯನಾದ ಆಶ್ವಲಾಯನನ ಸೂತ್ರಗಳನ್ನು ನೋಡಿದೊಡನೆ ಶೌನಕ ತಾನೇ ಬರೆದಿದ್ದ ಕಲ್ಪಸೂತ್ರಗಳನ್ನು ಹರಿದು ಹಾಕಿದನೆಂಬ ಐತಿಹ್ಯವನ್ನು ಉಲ್ಲೇಖಿಸಿದ್ದಾನೆ. ಶೌನಕನ ಬೃಹದ್ದೇವತಾ ಗ್ರಂಥದಲ್ಲಿಯೇ ಆಶ್ವಲಾಯನನ ಉಲ್ಲೇಖವಿರುವ ಕಾರಣ ಆಶ್ವಲಾಯನನ ಕಾಲ ಪಾಣಿನಿಯದಕ್ಕಿಂತ ಪ್ರಾಚೀನ, ಸು. ಪ್ರ.ಶ.ಪೂ. 700 ಇರಬೇಕೆಂದು ಪ್ರಾಚೀನ ಸಂಶೋಧಕರ ಮತ.

ಆಶ್ವಲಾಯನ ಶ್ರೌತಸೂತ್ರ, ಗೃಹ್ಯಸೂತ್ರ, ಗೃಹ್ಯಪರಿಶಿಷ್ಟಗಳನ್ನು ಮಾತ್ರ ರಚಿಸಿದ್ದಾನೆ. ಆಪಸ್ತಂಬನಂತೆ ಧರ್ಮಸೂತ್ರ, ಶುಲ್ಬಸೂತ್ರಗಳನ್ನು ರಚಿಸಿಲ್ಲ. ಈತನ ಶ್ರೌತಸೂತ್ರಕ್ಕೆ ದೇವಸ್ವಾಮಿ ರಚಿತ ಭಾಷ್ಯವೂ ನಾರಾಯಣೋಪಾಧ್ಯಾಯನ ವೃತ್ತಿಯೂ ಇವೆ. ಋತ್ವಿಜರ ಹೌತ್ರಕರ್ಮದ ವಿವೇಚನೆ, ಋಗ್ವೇದಮಂತ್ರಗಳ ವಿನಿಯೋಗ, ಪ್ರದರ್ಶನ–ಇವು ಇಲ್ಲಿಯ ಮುಖ್ಯ ವಿಷಯಗಳು. ದರ್ಶಪೂರ್ಣಮಾಸ, ಅಗ್ನ್ಯಾಧಾನ, ಪುನರಾಧಾನ, ಆಗ್ರಯಣ, ಕಾಮ್ಯೇಷ್ಟಿ, ಚಾತುರ್ಮಾಸ್ಯ, ಪಶು, ಸೌತ್ರಾಮಣಿ, ಅಗ್ನಿಷ್ಟೋಮಾದಿ ಸೋಮಸಂಸ್ಥೆಗಳು–ಇವು ಮೊದಲನೆಯ ಭಾಗದಲ್ಲಿ ಬರುತ್ತವೆ. ಎರಡನೆಯ ಭಾಗದಲ್ಲಿ ಸತ್ರಗಳು, ಹೋತ್ರಗಳು, ಹೋತ್ರ ಪ್ರವರಸಂಗ್ರಹ, ಕರ್ಮವೈಕಲ್ಯಕ್ಕೆ ಪ್ರಾಯಶ್ಚಿತ್ತಗಳು ನಿರೂಪಿತವಾಗಿವೆ. ಒಮ್ಮೊಮ್ಮೆ ಅಧ್ವರ್ಯುಗಳಿಗೆ ಉಪಯುಕ್ತವಾದ ವಿಷಯಗಳೂ ಬರುವುದುಂಟು.

ಆಶ್ವಲಾಯನ ಗೃಹ್ಯಸೂತ್ರಗಳಲ್ಲೂ ದ್ವಿಜರ ಷೋಡಶ ಸಂಸ್ಕಾರಗಳು ಹಾಗೂ ಪಂಚಮಹಾಯಜ್ಞಗಳು ವಿಹಿತವಾಗಿವೆ. ಇಲ್ಲಿ ಪ್ರಾಯಿಕವಾಗಿ ವಿನಿಯುಕ್ತ ಮಂತ್ರಗಳೆಲ್ಲ ಋಗ್ವೇದಮಂತ್ರಗಳೆಂಬುದಷ್ಟೇ ವಿಶೇಷ.

ಗೃಹ್ಯಪರಿಶಿಷ್ಟದಲ್ಲಿ ಸಂಧ್ಯೋಪಾಸನಾಂಗಗಳಾದ ಆಚಮನ, ಮಾರ್ಜನ, ಪಾಪಶೋಧನ, ಗಾಯತ್ರೀಧ್ಯಾನ, ಸ್ನಾನವಿಧಿ, ವೈಶ್ವದೇವ, ಸ್ಥಾಲಿಪಾಕ, ವಿವಾಹ ವಿಧಿ, ಗ್ರಹಯಜ್ಞ, ದೇವತಾರ್ಚನ, ಪಿತೃಮೇಧ, ಅಗ್ನಿಕಾರ್ಯ ಮುಂತಾದ ವಿಷಯಗಳು ಬರುತ್ತವೆ.

ಉತ್ತರ ಭಾರತದಂತೆ ದಕ್ಷಿಣ ಭಾರತದಲ್ಲೂ ಆಶ್ವಲಾಯನಶಾಖೆಯ ಪ್ರಸಾರವಿರುವುದು ಅದರ ಪ್ರಾಚೀನತೆ ಹಾಗೂ ಪ್ರಾಶಸ್ತ್ಯಗಳ ಕುರುಹಾಗಿದೆ. ಆಶ್ವಲಾಯನ ಗೃಹ್ಯಪರಿಶಿಷ್ಟ, ಆಶ್ವಲಾಯನ ಗೃಹ್ಯಕಾರಿಕಾ, ಆಶ್ವಲಾಯನ ಗೃಹ್ಯ ಪರಿಭಾಷಾ, ಆಶ್ವಲಾಯನ ಗೃಹ್ಯಪ್ರಯೋಗ ಇತ್ಯಾದಿ ಗ್ರಂಥಗಳು ಆಶ್ವಲಾಯನ ಸೂತ್ರಗಳನ್ನವಲಂಬಿಸಿ ಬರೆದ ಗ್ರಂಥಗಳಾಗಿವೆ. (ಕೆ.ಕೆ.;ಕೆ.ಟಿ.ಪಿ.)

**ಆಷಂತಿ:** ಪಶ್ಚಿಮ ಆಫ್ರಿಕದಲ್ಲಿ ಬ್ರಿಟಿಷರಿಗೆ ಸೇರಿದ ಗೋಲ್ಡ್ ಕೋಸ್ಟ್ ವಸಾಹತು ಪ್ರದೇಶದ ಮಧ್ಯಭಾಗದಲ್ಲಿರುವ ಒಂದು ಅರಣ್ಯಮಯ ಪ್ರಾಂತ್ಯ. ವಿಸ್ತೀರ್ಣ 63,141 ಚ. ಕಿಮೀ. ಜನಸಂಖ್ಯೆ 3,812,950 (2010). ಮುಖ್ಯ ಪಟ್ಟಣ ಕುಮಾಸಿ. 150–450ಮೀ ಎತ್ತರವಿರುವ ಏರುತಗ್ಗುಗಳ ಪ್ರಸ್ಥಭೂಮಿ. ಉಷ್ಣವಲಯದ ವಾಯುಗುಣವಿರುವುದರಿಂದ 5000 ಗಿಂತ ಹೆಚ್ಚು ಮಳೆಯಾಗುವುದು. ಮಹಾಗನಿ, ತಾಳೆಜಾತಿಯ ಕೋಲಾಮರಗಳು, ರಬ್ಬರ್ ಮರಗಳು ಇಲ್ಲಿನ ಮುಖ್ಯ ಅರಣ್ಯೋತ್ಪನ್ನಗಳು. ವ್ಯವಸಾಯಕ್ಕಾಗಿ ಕಾಡುಗಳನ್ನು ಬಯಲುಮಾಡಿ ಬತ್ತ, ಮೆಕ್ಕೆಜೋಳ, ಕಕಾವೊ (ಕೋಕೊ), ಕೆಸ್ಸಾವ, ಬಾಳೆಹಣ್ಣು, ಹತ್ತಿ, ಎಣ್ಣೆ ತಾಳೆ ಮುಂತಾದುವನ್ನು ಬೆಳೆಯುತ್ತಾರೆ. ಭೂಮಿ ಫಲವತ್ತಾಗಿದೆ. ವ್ಯವಸಾಯ ತ್ವರಿತವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಕಾಫಿತೋಟಗಳು ಹೆಚ್ಚುತ್ತಿವೆ. ಕುಮಾಸಿಯ ಬಳಿ ಚಿನ್ನದ ನಿಕ್ಷೇಪವಿದೆ. ಚಿನ್ನದ ಆಭರಣ ತಯಾರಿಸುವುದರಲ್ಲಿ ಇಲ್ಲಿಯ ಜನ ಕುಶಲರು. ಸ್ವಾತಂತ್ರ್ಯಪ್ರಿಯರಾದ ಇಲ್ಲಿನ ಆಕಾನ್ ಪಂಗಡದ ದಿಟ್ಟ ನೀಗ್ರೊ ಜನರ ರಾಜಕೀಯ ಚಟುವಟಿಕೆಗಳು 18 ಮತ್ತು 19ನೆಯ ಶತಮಾನಗಳಲ್ಲಿ ಬಲಗೊಂಡವು. ಆಗ ಬ್ರಿಟಿಷರು ದಾಳಿಮಾಡಿ ಆ ಪ್ರದೇಶವನ್ನು ವಶಪಡಿಸಿಕೊಂಡು (1935) ತಮ್ಮ ಗೋಲ್ಡ್‌ಕೋಸ್ಟ್ ವಸಾಹತು ಪ್ರದೇಶಕ್ಕೆ ಸೇರಿಸಿಕೊಂಡರು. (ಎ.ಕೆ.)

**ಆಷಸ್:** ಎಂದರೆ ಬೂದಿ. ಶವದಹನ ಮಾಡಿದಾಗ ಉಳಿಯುವ ಅವಶೇಷ. ಕ್ರಿಕೆಟ್ ಆಟಕ್ಕೂ ಆ್ಯಷಸ್‌ಗೂ ಇರುವ ಸಂಬಂಧವನ್ನೂ ಮೇರಿಲಿಬೋನ್ ಕ್ರಿಕೆಟ್ ಕ್ಲಬ್ಬಿನವರು ಪ್ರಕಟಿಸಿರುವ ಎಂ.ಸಿ.ಸಿ. 1787–1937 ಎಂಬ ಗ್ರಂಥದಲ್ಲಿ ವಿವರಿಸಲಾಗಿದೆ. ಅದರ ಚರಿತ್ರೆ ಹೀಗಿದೆ:

ಇಂಗ್ಲಿಷ್ ಕ್ರಿಕೆಟ್‌ನ ಪ್ರಥಮ ತಂಡ 1862ರಲ್ಲಿ ಸರೆಯ ಎಚ್.ಎಚ್. ಸ್ಟೀಫನ್‌ಸನ್ನನ ನಾಯಕತ್ವದಲ್ಲಿ ಆಸ್ಟ್ರೇಲಿಯಕ್ಕೆ ಭೇಟಿ ನೀಡಿತು. ಇಂಗ್ಲಿಷ್‌ನವನಾದ ಲಾರೆನ್ಸ್ ಎಂಬಾತನಿಂದ ತರಬೇತಿ ಪಡೆದ ಮೂಲನಿವಾಸಿಗಳಿಂದ ಕೂಡಿದ ಆಸ್ಟ್ರೇಲಿಯ ತಂಡ 1868ರಲ್ಲಿ ಇಂಗ್ಲೆಂಡಿನಲ್ಲಿ ಪ್ರವಾಸಮಾಡಿ ಅದನ್ನು ಸೋಲಿಸಿತು. ಅನಂತರ ಇಂಗ್ಲಿಷ್ ಕ್ರಿಕೆಟ್ ಆಟಗಾರರಿಂದ ತರಬೇತಿ ಪಡೆದ ಆಸ್ಟ್ರೇಲಿಯದ ಕ್ರಿಕೆಟ್ ವಿಶೇಷವಾಗಿ ಅಭಿವೃದ್ಧಿ ಹೊಂದಿತು. ಜೇಮ್ಸ್ ಲಿಲ್ಲಿ ವೈಟ್‌ನ ನಾಯಕತ್ವದಲ್ಲಿ ಇಂಗ್ಲೆಂಡಿನ ಬಾರಿ ತಂಡ 1876–77 ರಲ್ಲಿ ಆಸ್ಟ್ರೇಲಿಯಕ್ಕೆ ಭೇಟಿ ನೀಡಿತು. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಗಳ ನಡುವಣ ಪ್ರಥಮ ಕ್ರಿಕೆಟ್ ಪಂದ್ಯ ಆಗ ನಡೆಯಿತು. ಶ್ರೇಷ್ಠ ಕ್ರಿಕೆಟ್ ಕ್ರೀಡಾಪಟುಗಳಾದ ಚಾರ್ಲ್ಸ್ ಬಾನರ್‌ಮನ್, ಎಫ್.ಆರ್ ಸ್ಫೋರ್ತ್ ಮತ್ತು ಡಬ್ಲ್ಯು. ಎಲ್. ಮುರ್ಡೋಚ್‌ರಂಥ ಆಟಗಾರರನ್ನು ಆ ಕಾಲಕ್ಕಾಗಲೇ ಮುಂದೆ ತಂದಿದ್ದ ಆಸ್ಟ್ರೇಲಿಯ ಆಶ್ಚರ್ಯಕರ ರೀತಿಯಲ್ಲಿ ಇಂಗ್ಲೆಂಡ್ ತಂಡವನ್ನು 45 ರನ್ನುಗಳಿಂದ ಸೋಲಿಸಿತು. ಪ್ರಥಮವಾಗಿ ಆಡಲು ಹೋದ ಬಾನರ್‌ಮನ್ 165 ರನ್ನು ಬಾರಿಸಿದ.

ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯ ನಡುವಣ ಪ್ರಥಮ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು 1880ರಲ್ಲಿ ಇಂಗ್ಲೆಂಡಿನಲ್ಲಿ ಆಡಲಾಯಿತು. ಆಸ್ಟ್ರೇಲಿಯ 1882, 1884 ಮತ್ತು 1890 ರಲ್ಲಿ ಇಂಗ್ಲೆಂಡಿಗೆ ಭೇಟಿ ನೀಡಿತು. ಆ ಕಾಲಕ್ಕೆ ಆಸ್ಟ್ರೇಲಿಯದ ಡಬ್ಲ್ಯು. ಎಲ್. ಮುರ್ಡೋಚ್ ಶ್ರೇಷ್ಠ ಮಟ್ಟದ ಆಟಗಾರನಾಗಿ ಖ್ಯಾತನಾದ.

ಎರಡು ವರ್ಷಗಳ ಅನಂತರ ಇಂಗ್ಲೆಂಡ್‌ನಲ್ಲಿ ಆಡಿದ ಟೆಸ್ಟ್ ಪಂದ್ಯದಿಂದ ಆ್ಯಷಸ್‌ನ ಕಲ್ಪನೆ ಉದ್ಭವವಾಯಿತು. ಇಂಗ್ಲೆಂಡ್ ಈ ಪಂದ್ಯದಲ್ಲಿ ಹೀನಾಯವಾಗಿ ಸೋತಿತು. ಕ್ರೀಡೆಗಾಗಿಯೇ ಮೀಸಲಾಗಿದ್ದ ಪತ್ರಿಕೆಯೊಂದು ಇಂಗ್ಲಿಷ್ ಕ್ರಿಕೆಟ್‌ನ ಚರಮವಾಕ್ಯವನ್ನು ಬರೆಯುತ್ತ ಹೇಗೆ ಅದರ ದೇಹವನ್ನು ದಹನಗೊಳಿಸಿ ಬೂದಿಯನ್ನು ಆಸ್ಟ್ರೇಲಿಯಕ್ಕೆ ಒಯ್ಯಲಾಯಿತೆಂದು ವರ್ಣಿಸಿತು. ಮುಂದಿನ ಚಳಿಗಾಲದಲ್ಲಿ ಆ॥ ಐವೊಬ್ಲೈ (ಈತ ಮುಂದೆ ಲಾರ್ಡ್ ಡಾರ್ನ್‌ಲೆ ಆದ) ನೇತೃತ್ವದಲ್ಲಿ ಇಂಗ್ಲೆಂಡ್ ತಂಡ ಆಸ್ಟ್ರೇಲಿಯಕ್ಕೆ ಭೇಟಿ ನೀಡಿ ಮೂರು ಟೆಸ್ಟ್ ಪಂದ್ಯಗಳ ಪೈಕಿ ಎರಡರಲ್ಲಿ ಆಸ್ಟ್ರೇಲಿಯವನ್ನು ಸೋಲಿಸಿತು. ಮೆಲ್‌ಬರ್ನನ ಕೆಲವು ಮಹಿಳೆಯರು ಸಣ್ಣ ಕರಂಡದಲ್ಲಿ ವಿಕೆಟ್‌ಗಳ ಮೇಲಿಡುವ ಚೆಣ್ಣಿಯನ್ನು ಸುಟ್ಟ ಬೂದಿಯನ್ನಿಟ್ಟು ಗೆದ್ದ ತಂಡದ ನಾಯಕನಿಗೆ ಕೊಡುವ ಉಪಾಯ ಮಾಡಿದರು. ಈ ಪ್ರಕರಣದಿಂದ ಆ್ಯಷಸ್ ಚಿರಸ್ಥಾಯಿಯಾಗಿ ಕ್ರಿಕೆಟ್ ರಂಗದಲ್ಲಿ ಉಳಿದಿದೆ. ಈ ಕರಂಡವನ್ನು ಲಾರ್ಡ್ ಡಾರ್ನ್‌ಲೆ ಇಂಗ್ಲೆಂಡಿಗೆ ತಂದು ಎಂ.ಸಿ.ಸಿ.ಗೆ ನೀಡಿದ. ಇದನ್ನು ಈಗಲೂ ಲಾರ್ಡ್ಸ್ ಮೈದಾನದಲ್ಲಿ ಜೋಪಾನವಾಗಿ ಇಡಲಾಗಿದೆ.

ಆ್ಯಷಸ್ ಎಂಬುದು ಆಸ್ಟ್ರೇಲಿಯ ಮತ್ತು ಇಂಗ್ಲೆಂಡ್ ತಂಡಗಳ ನಡುವೆ ನಡೆಯುವ ಟೆಸ್ಟ್ ಸರಣಿ – 5 ಟೆಸ್ಟ್ ಮ್ಯಾಚ್‌ಗಳ ಸರಣಿ. ಈ ಎರಡು ದೇಶಗಳು ಸರದಿಯ ಪ್ರಕಾರ ಪಂದ್ಯಗಳ ಆತಿಥ್ಯ ವಹಿಸುತ್ತವೆ. ಮೊದಲನೆಯ ಟೆಸ್ಟ್ ಪಂದ್ಯ ಎರಡೂ ದೇಶಗಳ ನಡುವೆ ನಡೆದದ್ದು 1877ನೆಯ ಇಸವಿ ಆ್ಯಷಸ್ ಶುರುವಾಯಿತು. 9ನೆಯ ಟೆಸ್ಟ್ ಮ್ಯಾಚ್‌ನಿಂದ 1882ನೆಯ ಇಸವಿ ಇಂಗ್ಲೆಂಡ್‌ನ ಓವಲ್ ಮೈದಾನದಲ್ಲಿ ನಡೆದ ಮ್ಯಾಚ್‌ನಿಂದ ಆಸ್ಟ್ರೇಲಿಯನ್ನರು ಇಂಗ್ಲೆಂಡ್ ಅನ್ನು ಪರಾಭವಗೊಳಿಸಿದಂದು (29.8.1882). ಸಾಂಪ್ರದಾಯಕವಾಗಿ 1903–04ನೆಯ ಸರಣಿಯ ಅನಂತರ ಅದನ್ನು ಆ್ಯಷಸ್ ಸರಣಿಯೆಂದೇ ಕರೆಯುತ್ತಾರೆ.

ಅತಿ ಹೆಚ್ಚು ರನ್‌ಗಳು – ಸರ್, ಡೊನಾಲ್ಡ್ ಬ್ರಾಡ್‌ಮನ್ 5028 ರನ್‌ಗಳು
ಅತಿ ಹೆಚ್ಚು ವಿಕೆಟ್‌ಗಳು – ಶೇನ್ ವಾರ್ನ್ 195 ವಿಕೆಟ್‌ಗಳು
ಒಟ್ಟು ಆ್ಯಷಸ್ ಸರಣಿ – 64
ಆಸ್ಟ್ರೇಲಿಯ ಗೆದ್ದದ್ದು – 31 ಬಾರಿ

ಇಂಗ್ಲೆಂಡ್ ಗೆದ್ದದ್ದು – 28 ಬಾರಿ
ಡ್ರಾ ಆದದ್ದು – 5 ಸರಣಿ
ಆಸ್ಟ್ರೇಲಿಯ ತನ್ನಲ್ಲಿ 'ಆ್ಯಷಸ್' ಉಳಿಸಿಕೊಂಡದ್ದು – 04 ಬಾರಿ
ಇಂಗ್ಲೆಡ್ ತನ್ನಲ್ಲಿ 'ಆ್ಯಷಸ್' ಉಳಿಸಿಕೊಂಡದ್ದು – 01 ಬಾರಿ

ಒಟ್ಟು ನಡೆದ 315 ಪಂದ್ಯಗಳು ಆಸ್ಟ್ರೇಲಿಯ ಗೆದ್ದದ್ದು – 121 ಬಾರಿ, ಇಂಗ್ಲೆಂಡ್ ಗೆದ್ದದ್ದು – 94 ಬಾರಿ, ಪಂದ್ಯಗಳು ಡ್ರಾ ಆದದ್ದು – 88 ಬಾರಿ. (ಸಿ.ಜಿ.ಆರ್.)

**ಆಷಾಢಮಾಸ:** ಚೈತ್ರದಿಂದ ಆರಂಭವಾಗುವ ಹನ್ನೆರಡು ಚಾಂದ್ರಮಾನ ತಿಂಗಳುಗಳ ಪೈಕಿ ಐದನೆಯದು. ಇದರಲ್ಲಿ ಸಂಭವಿಸುವ ಹುಣ್ಣಿಮೆಯೊಡನೆ ಪೂರ್ವಾಷಾಢಾ ಅಥವಾ ಉತ್ತರಾಷಾಢಾ ನಕ್ಷತ್ರ ಕೂಡುವುದರಿಂದ ಈ ಹೆಸರು ಬಂದಿದೆ. ಸೂರ್ಯ ಮಿಥುನ ರಾಶಿಯಲ್ಲಿರುವಾಗ ಆಷಾಢ ಪ್ರಾರಂಭವಾಗಿ ಕರ್ಕಾಟಕರಾಶಿಯಲ್ಲಿರುವಾಗ ಮುಗಿಯುತ್ತದೆ.

ಹಲವು ವರ್ಷಗಳಿಗೊಮ್ಮೆ ಸೂರ್ಯ ಮಿಥುನರಾಶಿಯಲ್ಲಿರುವಾಗಲೇ ಮಾಸಮಧ್ಯದಲ್ಲಿ ಸೂರ್ಯಸಂಕ್ರಮಣವಿಲ್ಲದ ಚಾಂದ್ರಮಾಸ ಬರುತ್ತದೆ. ಆ ತಿಂಗಳಿಗೆ ಅಧಿಕಾಷಾಢವೆಂದು ಹೆಸರು. ಇದು ಚೈತ್ರಾದಿ ಮಾಸಗಣನೆಯಲ್ಲಿ ಐದನೆಯದಾಗುತ್ತದೆ. ಮುಂದಿನ ತಿಂಗಳೇ ನಿಜವಾದ ಆಷಾಢ.

ಅಧಿಕಾಷಾಢದಲ್ಲಿ ನಿತ್ಯವಿಧಿಗಳನ್ನು ಬಿಟ್ಟು ಯಾವ ವಿಶೇಷ ಕಾರ್ಯಗಳನ್ನೂ ಮಾಡಕೂಡದು. ವಿಶೇಷವಾಗಿ ಈ ಮಾಸಕ್ಕೆಂದೇ ವಿಹಿತವಾದ ವ್ರತಾದಿಗಳನ್ನು ನಿಜಾಷಾಢ ಮಾಸದಲ್ಲೇ ಮಾಡಬೇಕು. ಆಷಾಢದಲ್ಲಿ ಕರ್ಕಾಟಕರಾಶಿಯಲ್ಲಿ ಸೂರ್ಯನಿರುವ ಕಾಲವನ್ನು ಶೂನ್ಯಮಾಸವೆಂದು ಪರಿಗಣಿಸುತ್ತಾರೆ. ಈ ತಿಂಗಳಿನ ಶುಕ್ಲಪಕ್ಷದ ಏಕಾದಶಿಯಂದು ದಕ್ಷಿಣಾಯನ ಪ್ರಾರಂಭದ ಕುರುಹಾಗಿ ದೇವಾಲಯಗಳಲ್ಲಿ ಭಗವಂತನಿಗೆ ಡೋಲೋತ್ಸವ ನಡೆಯುತ್ತದೆ. ಅಂದಿನಿಂದ ಚಾತುರ್ಮಾಸ್ಯವ್ರತ ಪ್ರಾರಂಭ. ನವ ವಿವಾಹಿತೆ ಆಷಾಢದಲ್ಲಿ ಪತಿಯ ಗೃಹದಲ್ಲಿರದೆ ತವರು ಮನೆಯಲ್ಲಿರುತ್ತಾರೆ. ಈ ತಿಂಗಳಿನಲ್ಲಿ ಅತ್ತೆ ಸೊಸೆಯರು ಒಂದೆಡೆ ಇರಕೂಡದೆಂಬುದೇ ಇದಕ್ಕೆ ಕಾರಣ. ಇದು ಕೆಲವರಲ್ಲಿ ಮಾತ್ರ ಆಚರಣೆಯಲ್ಲಿದೆ. ಆಷಾಢ ಮಾಸದ ಎಲ್ಲ ಶುಕ್ರವಾರಗಳಲ್ಲೂ ವಿಶೇಷ ಪೂಜೆಯುಂಟು. (ಎಸ್.ಎನ್.ಕೆ.)

**ಆಷ್ಟನ್ ವಿನಿಫ್ರೆಡ್:** 1888–1965. ಇಂಗ್ಲಿಷ್ ಕಾದಂಬರಿಕಾರ್ತಿ. ಕಾವ್ಯನಾಮ ಕ್ಲೆಮನ್ಸ್ ಡೇನ್. ಹುಟ್ಟು ಲಂಡನ್ನಿನಲ್ಲಿ. 16ನೆಯ ವರ್ಷದಲ್ಲಿ ಜಿನೀವದಲ್ಲಿ ಒಂದು ವರ್ಷ ಫ್ರೆಂಚ್ ಪಾಠ ಹೇಳುತ್ತಿದ್ದು ಆಮೇಲೆ ಮೂರು ವರ್ಷ ಕಲಾಭ್ಯಾಸ ಮಾಡಿದಳು. ಮತ್ತೆ ಸ್ವಲ್ಪಕಾಲ ಐರ್ಲೆಂಡಿನಲ್ಲಿ ಉಪಾಧ್ಯಾಯಿನಿಯಾಗಿದ್ದು 1913ರಲ್ಲಿ ಡಯಾನ ಕರ್ಟಿಸ್ ಎಂಬ ಹೆಸರಿನಿಂದ ರಂಗಭೂಮಿಯಲ್ಲಿ ಕೆಲಸ ಮಾಡಿದಳು. ಇವಳು ಬರೆದ ಮೊದಲ ಕಾದಂಬರಿ ರೆಜಿಮೆಂಟ್ ಆಫ್ ವಿಮೆನ್ (1917). ಉಪಾಧ್ಯಾಯಿನಿಯ ಜೀವನಚಿತ್ರಣ ಇದರ ವಸ್ತು. ಲೆಜೆಂಡ್ (1919) ಎಂಬುದು ಇನ್ನೊಂದು ಕಾದಂಬರಿ. ಇದು ಆಮೇಲೆ ನಾಟಕವಾಗಿ ರೂಪಾಂತರ ಹೊಂದಿತು.

ವಾಂಡರಿಂಗ್ ಸ್ಟಾರ್ಸ್ (1928), ಬ್ರೂಂ ಸ್ಟೇಜಸ್ (1931), ದಿ ಮೂನ್ ಈಸ್ ಫೆಮಿನೈನ್ (1938), ಹಿ ಬ್ರಿಂಗ್ಸ್ ಗ್ರೇಟ್ ನ್ಯೂಸ್ (1944), ದಿ ಫ್ಲವರ್ ಗರ್ಲ್ (1954) ಎಂಬುವು ಈಕೆಯ ಇತರ ಕಾದಂಬರಿಗಳು. ವಿಲ್ ಷೇಕ್ಸ್‌ಪಿಯರ್ (1921) ಎಂಬುದು ಈಕೆ ಬರೆದ ನಾಟಕಗಳಲ್ಲೊಂದು. ಬ್ರಾಂಟಿಗಳ ವಿಚಾರ ಕುರಿತ ವೈಲ್ಡ್ ಡಿಸೆಂಬರ್ಸ್ (1933) ಎಂಬುದೂ ಚಾಟರ್‌ಟನ್ನನನ್ನು ಕುರಿತ ಕಮ್ ಆಫ್ ಏಜ್ (1934) ಎಂಬುದೂ ಇನ್ನೆರಡು ನಾಟಕಗಳು. 1953ರಲ್ಲಿ ಈಕೆಗೆ ಸಿ.ಬಿ.ಇ. ಪ್ರಶಸ್ತಿ ಲಭಿಸಿತು. (ಎಚ್.ವಿ.ಎಸ್.)

**ಆಷ್‌ಲಂಡ್:** ಉತ್ತರ ಅಮೆರಿಕದ ಈಶಾನ್ಯ ಕೆಂಟುಕಿ ಪ್ರದೇಶದಲ್ಲಿರುವ ಆರಿಗನ್ ಸಂಸ್ಥಾನದ ಜ್ಯಾಕ್‌ಸನ್ ಕೌಂಟಿಯ ಒಂದು ಪಟ್ಟಣ. ಒಹಾಯೊ ನದಿಯ ದಡದ ಮೇಲಿದೆ. ಜನಸಂಖ್ಯೆ 21,981 (2000). ಬಟ್ಟೆ ಗಿರಣಿಗಳಿವೆ. ಚರ್ಮ, ಪಾದರಕ್ಷೆ, ರಾಸಾಯನಿಕ ವಸ್ತುಗಳು, ಉಕ್ಕು, ಆಹಾರ ಪದಾರ್ಥಗಳು–ಇವೇ ಮುಖ್ಯ ಉತ್ಪನ್ನಗಳು. ಉತ್ತರ ಅಮೆರಿಕದ ಉತ್ತರ ಒಹಾಯೊ, ನೈಋತ್ಯ ಒರೆಗಾನ್, ಪೆನ್ಸಿಲ್ವೇನಿಯ, ಸುಪೀರಿಯರ್ ಸರೋವರದ ಬಳಿಯಲ್ಲಿರುವ ಉತ್ತರ ವಿಸ್‌ಕಾನ್‌ಸಿನ್‌ಗಳಲ್ಲೂ ಇದೇ ಹೆಸರಿನ ಪಟ್ಟಣಗಳಿವೆ. *

**ಆಸ್ ಇಫ್ ತತ್ತ್ವ:** ಇದನ್ನು ತನ್ನ ತತ್ತ್ವದ ಹೆಸರಾಗಿ ಏರ್ಪಡಿಸಿಕೊಂಡವ ಹಾನ್ಸ್ ವೈಹಿಂಗರ್ ಎಂಬ ಪಾಶ್ಚಾತ್ಯ ತಾತ್ತ್ವಿಕ. ಆ್ಯಸ್ ಇಫ್ ಎಂದರೆ ಎಂಬಂತೆ ಎಂದು ಅರ್ಥ. ಎಂಬಂತೆ ಎಂಬುದು ಇರುವಂತೆ ಎಂಬುದಕ್ಕಿಂತ ಭಿನ್ನವಾದುದು. ಇರುವಂತೆ ಎಂದರೆ ವಾಸ್ತವವಾಗಿ ಇರುವಂತೆ ಎಂದು ಅರ್ಥ. ವಾಸ್ತವವಾದಿಗಳು ಇರುವುದು ಇರುವಂತೆಯೇ ತಿಳಿಯುತ್ತದೆ ಎಂದು ವಾದಿಸುತ್ತಾರೆ. ಇವರಿಗೆ ಪ್ರತಿಯಾಗಿ ಆ್ಯಸ್ ಇಫ್ ತತ್ತ್ವವಾದಿಗಳು ಹೀಗೆ ಹೇಳುತ್ತಾರೆ; ನಮಗೆ ವಸ್ತುಗಳು ಅವು ಇದ್ದಹಾಗೆ ತಿಳಿಯುವುದಿಲ್ಲ. ಏಕೆಂದರೆ ಮಾನವನ ಸ್ವಭಾವಕ್ಕನುಗುಣವಾಗಿ ಅವು ತೋರುತ್ತವೆಯೇ ಹೊರತು ಇದ್ದಹಾಗೆಯೇ ಅಲ್ಲ. ಅವು ಹಾಗೆ ಇರುವಂತೆ ಭಾವಿಸಿಕೊಂಡರೆ ನಮ್ಮ ತಿಳಿವು ಹೆಚ್ಚು ಸಮರ್ಪಕವಾಗುತ್ತದೆ. ನಾವು ಈ ವಿಶ್ವದಲ್ಲಿ ಬದುಕಿ ಬಾಳಲು ಆ ತಿಳಿವು ಸಹಾಯಮಾಡುತ್ತದೆ. ಭೌತವಿಜ್ಞಾನದಲ್ಲಿ ವಿದ್ಯುದಣು ಎಂಬ ಭಾವನೆಯನ್ನು ಕಲ್ಪಿಸಿಕೊಳ್ಳುತ್ತೇವೆ. ಏಕೆಂದರೆ ಆ ಕಲ್ಪನೆಯ ಮೂಲಕ ನಮ್ಮ ಭೌತಜ್ಞಾನ ಹೆಚ್ಚು ಸಮಂಜಸವಾಗುತ್ತದೆ, ಉಪಯೋಗ ಕಾರಿಯಾಗುತ್ತದೆ. ಹಾಗೆಯೇ ವ್ಯಾಪಾರ, ವ್ಯವಹಾರಗಳ ಕಾನೂನಿನಲ್ಲಿ ಒಂದು ಕಂಪನಿಯನ್ನು ಕೆಲವು ಹಕ್ಕುಗಳುಳ್ಳ ವ್ಯಕ್ತಿಯಾಗಿ ಭಾವಿಸುತ್ತೇವೆ. ನೀತಿ ಧರ್ಮಗಳ ಸಲುವಾಗಿ, ಪಾಪ, ಪುಣ್ಯ, ಪರಲೋಕ, ದೇವರು ಇತ್ಯಾದಿಗಳು ಇರುತ್ತವೆ ಎಂಬಂತೆ ಭಾವಿಸಿಕೊಳ್ಳುತ್ತೇವೆ. ಕ್ಯಾಂಟ್ ಎಂಬ ತಾತ್ತ್ವಿಕ 'ನಾವು ತಿಳಿದಿರುವುದು ತೋರಿಕೆಗಳನ್ನು ಮಾತ್ರ, ವಸ್ತು ಅದು ಇದ್ದಂತೆ ನಮಗೆ ತಿಳಿಯುವುದಿಲ್ಲ' ಎಂದು ಹೇಳಿದ್ದಾನೆ. ಇದು 'ಎಂಬಂತೆ' ತತ್ತ್ವಕ್ಕೆ ಪ್ರೇರಕ; ಕ್ಯಾಂಟ್‌ನ ಅಜ್ಞೇಯತಾವಾದದ ಮತ್ತು ಫಲವಾದದ ಒಂದು ಪರಿಣಾಮ. ಒಂದು ಭಾವನೆ—ಅದು ತೋರಿಕೆಯಾದರೂ—ಅದು ನಮ್ಮ ಜೀವನಕ್ಕೆ ಅಗತ್ಯವಾದುದರಿಂದ ಅದನ್ನು ನಾವು ನಂಬುತ್ತೇವೆ. ಹಾಗೆ 'ಎಂಬಂತೆ' ತತ್ತ್ವಕ್ಕೂ ಫಲವಾದಕ್ಕೂ (ಪ್ರಾಗ್ಮ್ಯಾಟಿಸಂ) ನಿಕಟ ಸಂಬಂಧವಿದೆ. (ಜಿ.ಎಚ್.)

**ಆಸಂದಿ:** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಒಂದು ಗ್ರಾಮ. ಅಜ್ಜಂಪುರದ ಆಗ್ನೇಯಕ್ಕೆ 11ಕಿಮೀ ದೂರದಲ್ಲಿದೆ. ಗಂಗರ ಮತ್ತು ಹೊಯ್ಸಳರ ಕಾಲದಲ್ಲಿ ಇದು ಆಸಂದಿನಾಡು ಎಂಬ ಆಡಳಿತ ಪ್ರಾಂತ್ಯದ ಮುಖ್ಯ ಸ್ಥಳವಾಗಿದ್ದಿತು. ಎಂಟನೆಯ ಶತಮಾನದಲ್ಲಿ ಇದು ಶ್ರೀಪುರುಷನ ಮಗ ವಿಜಯಾದಿತ್ಯನ ಆಳ್ವಿಕೆಗೂ ಹನ್ನೆರಡು, ಹದಿಮೂರನೆಯ ಶತಮಾನಗಳಲ್ಲಿ ಗಂಗವಂಶದ ಒಂದು ಶಾಖೆಯ ಆಡಳಿತಕ್ಕೂ ಒಳಪಟ್ಟಿತ್ತು. ಇಲ್ಲಿನ ಪಾಳು ಬಿದ್ದಿರುವ ದೇವಾಲಯಗಳೂ ದೊರೆತಿರುವ ಶಾಸನಗಳೂ ಇದು ಹಿಂದೆ ಪ್ರಸಿದ್ಧಿಪಡೆದ ಸ್ಥಳವೆಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ. (ಎಸ್.ಎ.ಎಸ್)

1206ರ ಒಂದು ಶಾಸನದಿಂದ ಇಲ್ಲಿ 13 ಶೈವದೇವಾಲಯಗಳಿದ್ದುವೆಂದು ತಿಳಿಯುತ್ತದೆ. ಈಗ ಮೂರು ಮಾತ್ರ ಉಳಿದಿವೆ. ಮುಖ್ಯವಾದ್ದು ಗಂಗೇಶ್ವರ, ಬ್ರಹ್ಮೇಶ್ವರ ದೇವಾಲಯಗಳು. ವಸ್ತುತಃ ಇವೆರಡೂ ಎರಡು ಗುಡಿಗಳಿರುವ ಒಂದೇ ದೇವಾಲಯ. ಇದು ಇಲ್ಲಿ ಆಳುತ್ತಿದ್ದ ಸಾಮಂತ ಗಂಗ ಅರಸನಿಂದ 1191ರಲ್ಲಿ ರಚಿತವಾಯಿತು. ಎರಡು ಗುಡಿಗಳೂ, ಹಿನ್‌ಸರಿತ ಮುನ್‌ಸರಿತಗಳಿಂದ ಕೂಡಿದ ಪರಿಘವಿರುವ ಆಯಾಕಾರದ ತಳವಿನ್ಯಾಸದಲ್ಲಿವೆ. ಗರ್ಭಗುಡಿ, ಅಂತರಾಳ ಮತ್ತು ತೆರೆದ ಮಂಟಪಗಳಿವೆ. ಹೊರಮೈಯಲ್ಲಿ ಅಡ್ಡಪಟ್ಟಿಕೆಗಳ ಅಧಿಷ್ಠಾನ, ಶಿಖರಾಕೃತಿಗಳು, ಸಿಂಹ ಲಲಾಟಗಳನ್ನು ಕೆತ್ತಿರುವ ಅರೆಗಂಬಗಳಿಂದ ಕೂಡಿದ ಭಿತ್ತಿ ಇವೆ. ಶಿಖರಗಳು ಉಳಿದಿಲ್ಲ. ಒಳಕಂಬಗಳು ಹೊಯ್ಸಳ ರೀತಿಯವು. ದ್ವಾರಬಂಧಗಳು ಮತ್ತು ಭುವನೇಶ್ವರಿಗಳಲ್ಲಿ ಸುಂದರವಾದ ಕೆತ್ತನೆಗಳಿವೆ.

ಇಲ್ಲಿನ ವೀರಭದ್ರ ದೇವಾಲಯ 1205ರಲ್ಲಿ ಹರಹ ಸಾಹಣಿ ಎಂಬುವನಿಂದ ರಚಿತವಾದ್ದು. ಶಾಸನಗಳಲ್ಲಿ ದೇವರನ್ನು ಬಲ್ಲೇಶ್ವರ ಎಂದು ಹೆಸರಿಸಲಾಗಿದೆ. ಇದೊಂದು ತ್ರಿಕೂಟಾಚಲ. ಮೂರು ಗರ್ಭಗೃಹಗಳು, ಅಂತರಾಳ, ನವರಂಗ ಮತ್ತು ಮುಖಮಂಟಪ ವಿರುವ ಕಟ್ಟಡ. ಹೊರಮೈಯಲ್ಲಿ ಶಿಲ್ಪಾಲಂಕರಣಗಳು, ಒಳಗೆ ಹೊಯ್ಸಳ ಮಾದರಿಯ ಕಂಬಗಳು, ಕುಸುರಿ ಕೆತ್ತನೆಯ ಬಾಗಿಲುವಾಡ, ಭುವನೇಶ್ವರಿಗಳು ಇದ್ದು ಇದೊಂದು ಉತ್ತಮ ಹೊಯ್ಸಳ ವಾಸ್ತುಕೃತಿಯ ಉದಾಹರಣೆಯಾಗಿದೆ. ಹೊರಭಿತ್ತಿಯ ಶಿಲ್ಪಗಳಲ್ಲಿ ತಾಂಡವೇಶ್ವರ, ತ್ರಿವಿಕ್ರಮ ಮೊದಲಾದವು ಅನುಪಮ ಸುಂದರ ಕೃತಿಗಳು. ಒಳಗಿರುವ ವೀರಭದ್ರಮೂರ್ತಿ ಇತ್ತೀಚಿನದು. ದೇವಾಲಯದಲ್ಲಿ ಕೆಲವು ಕಂಚಿನ ಮೂರ್ತಿಗಳಿವೆ. ಇಲ್ಲಿನ ಇನ್ನೊಂದು ದೇವಾಲಯ ಚಂಡಿಕೇಶ್ವರನದು. ಇದೂ ಬಹುಶಃ ಹೊಯ್ಸಳ ಕಾಲದ್ದಾದರೂ ಹೆಚ್ಚಿನ ಅಲಂಕರಣಗಳಿಲ್ಲದ ಸಾಮಾನ್ಯ ಕಟ್ಟಡ. *

**ಆಸಕ್ತಿಗಳು:** ಅಭಿರುಚಿ (ಆ್ಯಪ್ಟಿಟ್ಯೂಡ್) ಇರುವ ವಿಷಯಗಳಲ್ಲಿ ಆಸಕ್ತಿ (ಇಂಟರೆಸ್ಟ್) ಹೆಚ್ಚುವುದೂ ಆಸಕ್ತಿ ಇರುವ ವಿಷಯಗಳಲ್ಲಿ ಕ್ರಮೇಣ ಅಭಿರುಚಿಯೇರ್ಪಡುವುದೂ ಎಲ್ಲರಿಗೂ ತಿಳಿದಿರುವ ವಿಚಾರ. ಇದು ಮನಶ್ಶಾಸ್ತ್ರದ ಪರಿಮಿತಿಗೆ ಒಳಪಟ್ಟಿರುವ ವಿಷಯವೇ ಆದರೂ ಸಾಧಾರಣವಾಗಿ ಇದರ ವಿಶ್ಲೇಷಣೆ ಆ ಕ್ಷೇತ್ರದಲ್ಲಿ ಸಾಕಷ್ಟು ಆಗಿಲ್ಲವೆಂದೇ ಹೇಳಬೇಕು. ಆದರೆ ಉದ್ಯೋಗ ಕ್ಷೇತ್ರಗಳಲ್ಲಿ ಇದರ ಅಗತ್ಯ ಕಂಡಿದ್ದರಿಂದ ಔದ್ಯೋಗಿಕ ಮನಶ್ಶಾಸ್ತ್ರದಲ್ಲಿ ಇದರ ಬಗ್ಗೆ ಸಾಕಷ್ಟು ವಿವೇಚನೆ ನಡೆದಿದೆ. ಡಗ್ಲಾಸ್ ಫ್ರಯರ್ 1931ರಲ್ಲಿ ಆಸಕ್ತಿಯ ಬಗ್ಗೆ ಕ್ರಮವಾದ ಅಧ್ಯಯನ ನಡೆಸಲು ಪ್ರಾರಂಭಿಸಿದ. ಸಾಮಾಜಿಕ ಜೀವನದಲ್ಲಿ, ವೈಯಕ್ತಿಕ ಹೊಂದಾಣಿಕೆಯಲ್ಲಿ, ವಿದ್ಯಾಭ್ಯಾಸದಲ್ಲಿ, ಔದ್ಯೋಗಿಕ ಕ್ಷೇತ್ರದಲ್ಲಿ ಅನೇಕ ತೊಡಕುಗಳನ್ನು ಬಗೆಹರಿಸಲು ಆಸಕ್ತಿ ಒಂದು ಮುಖ್ಯ ಸಾಧನವಾಗಿದೆ. ನಾವೆಲ್ಲರೂ ಆಸಕ್ತರಾಗಲು, ಇತರರಲ್ಲಿ ಆಸಕ್ತಿಯನ್ನು ಬೆಳೆಸಲು ಆಶಿಸುತ್ತೇವೆ. ಲೋಕದೊಡನೆ ಹೊಂದಿ ಬಾಳಲು ಆಸಕ್ತಿಯ ಅಗತ್ಯವಿದೆ. ಅಭ್ಯಾಸದಿಂದ ಅದನ್ನು ಬೆಳೆಸಬಹುದು. ಅದು ನಮ್ಮ ಗುಣಗಳನ್ನು, ಒಟ್ಟಾರೆ ಯೋಗ್ಯತೆಯನ್ನು ಅವಲಂಬಿಸಿದೆ ಎಂದು ಆತ ಹೇಳಿದ್ದಾನೆ.

ಫ್ರಯರ್‌ನ ದಾರಿಯನ್ನು ಹಿಡಿದು ಆಸಕ್ತಿಗಳ ಮೇಲೆ ಎರಡು ಮುಖ್ಯ ಗ್ರಂಥಗಳನ್ನು ಬರೆದ ಸ್ಟ್ರಾಂಗ್ ಆಸಕ್ತಿಯನ್ನು ಪ್ರಚೋದಿಸುವ ಮೂರು ಭಾವನೆಗಳನ್ನು ಈ ರೀತಿ ವ್ಯಕ್ತಪಡಿಸುತ್ತಾನೆ: 1. ನಾಯಿಯನ್ನು ಕಂಡರೆ ನನಗಿಷ್ಟ–ಎಂಬಂಥ ಏಕ ವಿಷಯಕ ಆಸಕ್ತಿ. 2. ನನಗೆ ವೈಜ್ಞಾನಿಕ ವಿಷಯಗಳ ಮೇಲೆ ಕುತೂಹಲವುಂಟು–ಎಂಬಂಥ ಬಹುಮುಖ್ಯ ಆಸಕ್ತಿ. 3. ಆಸಕ್ತಿಗಳನ್ನು ಅವುಗಳ ತೀವ್ರತೆಗನುಗುಣವಾಗಿ ಪಟ್ಟಿಮಾಡಿ ತಿಳಿಸುವುದು. ಆತ ಮುಂದುವರಿದು ಆಸಕ್ತಿಯ ಸ್ವಭಾವವನ್ನು ಮೋಟರ್ ದೋಣಿಯ ಹೋಲಿಕೆಯಿಂದ

ವಿವರಿಸುತ್ತಾನೆ. ಒಬ್ಬಾತನ ಸಾಮರ್ಥ್ಯ ಆ ದೋಣಿಯ ಮೋಟರನ್ನೂ ಆತನ ಆಸಕ್ತಿ ಅದರ ಚುಕ್ಕಾಣಿಯನ್ನೂ ಹೋಲುತ್ತದೆ ಎನ್ನುತ್ತಾನೆ. ಮೋಟರು (ಸಾಮರ್ಥ್ಯ) ದೋಣಿಯ ವೇಗವನ್ನು ನಿರ್ಧರಿಸಿದರೆ ಚುಕ್ಕಾಣಿ ಅದು ಚಲಿಸುವ ದಿಕ್ಕನ್ನು ನಿರ್ಧರಿಸುತ್ತದೆ. ಇವೆರಡರ ಕಾರ್ಯದಿಂದ ದೋಣಿ ಸಾಗಿದ ದೂರಕ್ಕೂ ಇವನ ಪರಿಶ್ರಮಕ್ಕೂ ಹೋಲಿಕೆಯನ್ನು ಕಲ್ಪಿಸುತ್ತಾನೆ. ಆಸಕ್ತಿಯನ್ನು ಒಂದು ವಿಷಯದ ಮೇಲಾಗಲೀ ಕಾರ್ಯದ ಮೇಲಾಗಲೀ ಒಬ್ಬನಿಗಿರುವ ಇಷ್ಟಾನಿಷ್ಟಗಳ ಅಭಿವ್ಯಂಜನವೇ ಆಸಕ್ತಿ ಎಂದು ಸೂಪರ್‌ನ ಮತ. ತನಗಿಷ್ಟವಾದ ವಿಷಯದ ಅಥವಾ ವ್ಯಕ್ತಿಯ ಮತ್ತು ಕಾರ್ಯದ ಸಂಸರ್ಗದಿಂದ ಸಂತೋಷವೂ ತೃಪ್ತಿಯೂ ಉಂಟಾಗುತ್ತವೆ; ಇವುಗಳ ಅಭಿವ್ಯಂಜನೆಯೇ ಆಸಕ್ತಿ. ಈ ಸಂಸರ್ಗವನ್ನು ಮರಳಿ ಮರಳಿ ಪಡೆಯಲು, ಹಾಗೆಯೇ ಆ ಕಾರ್ಯದಲ್ಲಿ ತೊಡಗಿರಲು ಈ ತುಷ್ಟಿ ಆ ವ್ಯಕ್ತಿಯನ್ನು ಪ್ರಚೋದಿಸುತ್ತದೆ. ಒಬ್ಬ ವ್ಯಕ್ತಿಗೆ ಒಂದು ಕೆಲಸವನ್ನು ನಡೆಸಲು ಸಾಮರ್ಥ್ಯವಿದ್ದರೂ ಆಸಕ್ತಿಯಿಲ್ಲದಿದ್ದರೂ ಅವನು ಆ ಕೆಲಸವನ್ನು ನಿರ್ವಹಿಸಿಯಾನು. ಆದರೆ ಆ ಕೆಲಸದಲ್ಲೇ ಬಹುಕಾಲ ನಿಲ್ಲಲಾರ. ಒಬ್ಬ ವ್ಯಕ್ತಿ ಒಂದು ಕೆಲಸದಲ್ಲಿ ನಿರತನಾಗಿರುವಾಗ ಮೂಡುವ ಸಂತುಷ್ಟಿ ಆತ ಎಳೆತನದಿಂದಲೂ ಬೆಳೆಸಿಕೊಂಡು ಬಂದ ಮತ್ತು ಆತನ ಬೆಳವಣಿಗೆಯ ಹಂತಗಳಲ್ಲಿ ಆಯಾ ಪರಿಣತಿಗಳ ಪ್ರಭಾವದಿಂದ ಪ್ರಣೀತವಾದ ಸುಖಗಳೊಡನೆ ಮಾನಸಿಕವಾಗಿ ಹೊಂದಿಕೊಂಡಿದೆ. ಆದ ಪ್ರಯುಕ್ತ ಆಸಕ್ತಿಗಳು ವ್ಯಕ್ತಿಯ ಸ್ವಭಾವರಚನೆ ಹಾಗೂ ಆತನ ಸಾಮಾಜಿಕ, ಸಾಂಸ್ಕೃತಿಕ ವಾತಾವರಣದ ಪರಿಸರಗಳಲ್ಲಿನ ಸಂಘಚಾಲಕ ಪ್ರಭಾವಗಳೊಡನೆ ನಿಕಟಸಂಪರ್ಕವನ್ನು ಪಡೆದಿವೆ.

**ಆಸಕ್ತಿಗಳ ಪ್ರಮಾಣ:** ಆಸಕ್ತಿಯ ಪ್ರಮಾಣವನ್ನು ನಾಲ್ಕು ತೆರದಲ್ಲಿ ಅಳೆಯುತ್ತಾರೆ. 1. ಸಂದರ್ಶನ: ವ್ಯಕ್ತಿಗೆ ಯಾವ ಯಾವ ವಿಷಯಗಳಲ್ಲಿ ಆಸಕ್ತಿಯಿದೆಯೆಂಬುದನ್ನು ಪ್ರಶ್ನಿಸಿ ತಿಳಿಯುವುದು; 2. ನಿರೀಕ್ಷಣೆ: ಕೆಲಸಗಳಲ್ಲಿ ಪಾಲುಗೊಳ್ಳುವಂತೆ ಮಾಡಿ ಆತನ ಆಸಕ್ತಿಗಳನ್ನು ಪರೀಕ್ಷಿಸುವುದು; 3. ಪರೀಕ್ಷೆಗಳು; 4.ಪಟ್ಟಿಗಳು.

ಈ ನಾಲ್ಕು ಬಗೆಯ ಬೆಲೆಕಟ್ಟುವ ಕ್ರಮಕ್ಕೆ ಸಮಾನವಾದ ಆಸಕ್ತಿಗಳನ್ನು ಫ್ರಯರ್ ನಾಲ್ಕು ವರ್ಗಗಳಾಗಿ ವಿಂಗಡಿಸಿದ್ದಾನೆ. 1. ಹೇಳಿಕೊಂಡ ಆಸಕ್ತಿಗಳು; 2. ಪ್ರಕಾಶಕ್ಕೆ ಬಂದ ಆಸಕ್ತಿಗಳು; 3. ಪರೀಕ್ಷಿಸಿದ ಆಸಕ್ತಿಗಳು ಮತ್ತು 4. ಪಟ್ಟಿ ಮಾಡಿದ ಆಸಕ್ತಿಗಳು. ಇದು ನನಗಿಷ್ಟ, ಇದು ಇಷ್ಟವಿಲ್ಲ ಎಂಬುವ ಒಂದು ವಿಷಯದ ಬಗೆಗೂ ಒಂದು ಕೆಲಸದ ಬಗೆಗೂ ಹೇಳುವ ಆಡುಮಾತುಗಳಿಂದ ಅಭಿವ್ಯಕ್ತವಾದ ಆಸಕ್ತಿಗಳು ಚಿಕ್ಕ ಮಕ್ಕಳಲ್ಲೂ ಎಳೆ ಹರೆಯದವರಲ್ಲೂ ನೆಲೆನಿಂತವಲ್ಲ ಎಂಬುದು ಸಂಶೋಧನೆಗಳಿಂದ ತಿಳಿದುಬಂದಿರುವ ವಿಷಯ. ಆದರೆ ಹರೆಯಕ್ಕೇರಿದವರಲ್ಲಿ ಇವು ಅಷ್ಟಾಗಿ ತೂಗಾಡಲು ಈ ಅಸ್ಥಿರತೆ ಕಾರಣ. ಹರೆಯಕ್ಕೇರದವರ ಇಷ್ಟಾನಿಷ್ಟಗಳು ಆ ಕಾರ್ಯದ ಸಹಗಾಮಿಗಳಿಂದ ತಕ್ಕಷ್ಟು ಪ್ರಭಾವಿತವಾಗುತ್ತವೆಯೇ ಹೊರತು ಆ ಕಾರ್ಯದ ಅಂತರ್ಗತ ಮೂಲಾಂಶಗಳಿಂದ ಅಷ್ಟಾಗಿ ಅಲ್ಲ. ಉದಾ: ಒಬ್ಬ ಹುಡುಗ ತನಗೆ ಚರಿತ್ರೆ ಇಷ್ಟವೆಂದು ಹೇಳಬಹುದು. ಆದರೆ ವಸ್ತುತಃ ಚರಿತ್ರೆಯನ್ನು ಹೇಳಿಕೊಡುವ ಉಪಾಧ್ಯಾಯನನ್ನು ಕಂಡರೆ ಆತನಿಗೆ ಇಷ್ಟವೇ ಹೊರತು ಆ ವ್ಯಾಸಂಗದ ವಿಷಯದಲ್ಲಿ ಅವನಿಗೆ ಅಂಥ ಆಸಕ್ತಿಯೇನೂ ಇರದು. ಕೆಲಸಕ್ಕೆ ತೊಡಗಿದಾಗ ಆಸಕ್ತಿಗಳು ಪ್ರಕಟವಾಗುತ್ತವೆ. ಆಗ ಪ್ರತ್ಯೇಕವಾಗಿ ನಿರೀಕ್ಷಿಸಬಹುದು. ಆದರೆ ಹೀಗೆ ಕೆಲಸದಲ್ಲಿ ತೊಡಗಿರುವುದು ನಿಜವಾದ ಆಸಕ್ತಿಗಳಿಂದಲ್ಲದೆ ಬೇರೆ ಕಾರಣಗಳಿಂದಾಗಿರಬಹುದು. ಉದಾ: ಸ್ಕೂಲಿನ ಪ್ರದರ್ಶನಕ್ಕಾಗಿ ಹುಡುಗಿಯೊಬ್ಬಳು ಗೋಡೆ ಚೀಟಿಗಳಿಗೆ ಬಣ್ಣ ಹಾಕುವುದರಲ್ಲಿ ತೊಡಗಿರಬಹುದು; ತಾನು ಯಾವ ಗುಂಪಿಗೆ ಸೇರಿಕೊಳ್ಳಲು ತುಂಬ ಆಸೆ ಪಡುತ್ತಾಳೋ ಆ ಗುಂಪಿನ ಜೊತೆಗಾರ್ತಿಯರು ತನ್ನನ್ನು ತಮ್ಮವರಲ್ಲೊಬ್ಬಳಾಗಿ ಸೇರಿಸಿಕೊಳ್ಳುವಂತೆ ಮಾಡಲು ಅವಳಿಗೆ ಇದೊಂದೇ ದಾರಿಯಾಗಿರುವುದರಿಂದ ಕೆಲಸದಲ್ಲಿ ಪ್ರವೃತ್ತಳಾಗಿರುವುದಕ್ಕೆ ಇಂಥ ಬಾಹ್ಯ ಅಂಶಗಳೇ ಕಾರಣವಾಗಬಲ್ಲವು. ಪಾಠಕ್ರಮದಲ್ಲಿ ವಿಧವಿಧವಾದ ಕಾರ್ಯಕಲಾಪಗಳನ್ನೊದಗಿಸುವ ಒಬ್ಬ ವಿದ್ಯಾರ್ಥಿ ಶಾಲೆಗಳಲ್ಲಿ ಜರುಗುವ ಕಾರ್ಯಕಲಾಪಗಳಲ್ಲೂ ಅವಿರತವಾಗಿ ಪಾಲುಗೊಳ್ಳುತ್ತಿದ್ದರೆ ಆ ವಿದ್ಯಾರ್ಥಿಗೆ ಇಂಥವುಗಳಲ್ಲಿ ನಿಜವಾದ ಆಸಕ್ತಿಯಿದೆಯೆಂದು ಹೇಳಬಹುದು. ಪರೀಕ್ಷಿತ ಆಸಕ್ತಿಗಳೆಂದರೆ ಒಬ್ಬ ವ್ಯಕ್ತಿ ತಾನೇ ಸ್ವಂತವಾಗಿ ಅಳೆದುಕೊಂಡು ನಿರ್ಧರಿಸಿದ ಆಸಕ್ತಿಗಳು: ಪಟ್ಟಿ ಮಾಡಿರುವ ಕಾರ್ಯ ಕಲಾಪಗಳ ಮತ್ತು ವಿಷಯಗಳ ಸಂಬಂಧವಾದ ವ್ಯಕ್ತಿ ತನ್ನ ಇಷ್ಟಾನಿಷ್ಟಗಳನ್ನು ದ್ಯೋತಿಸುವುದರ ಮೂಲಕ ಅಳತೆ ಮಾಡಿದ ಆಸಕ್ತಿಗಳನ್ನು ಕುರಿತವಾಗಿವೆ. ಹೇಳಿಕೊಂಡ ಆಸಕ್ತಿಗಳಿಗೂ ಪಟ್ಟಿ ಮಾಡಿರುವ ಆಸಕ್ತಿಗಳಿಗೂ ಇರುವ ವ್ಯತ್ಯಾಸವೇನೆಂದರೆ ಪಟ್ಟಿಯಲ್ಲಿ ಪ್ರತಿಯೊಂದು ಅಂಶದ ವಿಷಯದಲ್ಲೂ ವ್ಯಕ್ತಿಯ ಪ್ರತಿಕ್ರಿಯೆ ಏನೆಂಬುದನ್ನು ಪ್ರಾಯೋಗಿಕವಾಗಿ ನಿರ್ಧರಿಸಿ ಅದಕ್ಕೆ ತಕ್ಕ ತೂಕವನ್ನು ಕೊಡುತ್ತಾರೆ ಮತ್ತು ಹೀಗೆ ತೂಕ ಮಾಡಿಕೊಟ್ಟ ಅಂಕಗಳನ್ನು ವಿವಿಧ ಕಾರ್ಯಕಲಾಪಗಳ ವಿಷಯದಲ್ಲಿ ಉದ್ಯೋಗ ಕ್ಷೇತ್ರದ ವಿಷಯದಲ್ಲಿ ಒಟ್ಟುಗೂಡಿಸಿ ನೋಡುತ್ತಾರೆ. ಅಮೆರಿಕದಲ್ಲಿ ನಡೆಸಿದ ಸಂಶೋಧನೆಗಳಿಂದ ಈ ರೀತಿ ಅಳೆದ ಆಸಕ್ತಿಗಳು ಹರೆಯಕ್ಕೇರಿದವರಲ್ಲಲ್ಲದೆ ಎಳೆ ಹರೆಯದವರಲ್ಲೂ ನೆಲೆ ನಿಲುವನ್ನು ಪಡೆಯಬಲ್ಲಂಥವು ಎಂದು ಗೊತ್ತಾಗಿದೆ.

ಭಾರತದಲ್ಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ವಿಷಯದಲ್ಲಿ ಈ ಪಟ್ಟಿ ಮಾಡಿದಾಗ ಆಸಕ್ತಿಗಳ ಉಪಯುಕ್ತತೆಯನ್ನು ಕುರಿತು ಮೊಹಸಿನ್ ಸಂದೇಹಪಟ್ಟಿದ್ದಾನೆ. ಬಿಹಾರಿನ ರೆಸಿಡೆನ್ಷಿಯಲ್ ಶಾಲೆಯೊಂದರಲ್ಲಿ ಅಲ್ಲಿನ 60 ವಿದ್ಯಾರ್ಥಿಗಳನ್ನು ಪಟ್ಟಿಮಾಡಿದ ಆಸಕ್ತಿಗಳ ಪರೀಕ್ಷೆಗೆ ಈಡುಮಾಡಿದ ಬಳಿಕ ಆತ ಪಟ್ಟಿ ಮಾಡಿದ ಆಸಕ್ತಿಗಳಿಗೂ ವ್ಯಕ್ತಾಸಕ್ತಿಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಕಂಡುಕೊಂಡ. ಇದರಿಂದ ಆತ ಹೈಸ್ಕೂಲು ಹುಡುಗರ ವಿಷಯದಲ್ಲಿ ಪಟ್ಟಿಮಾಡಿದ ಆಸಕ್ತಿಗಳು ಸಮಾಜ ಏನನ್ನು ಕೋರುತ್ತದೆ, ತಾನೆಂಥ ಸಮಾಜಕ್ಕೆ ಸೇರಿದವ–ಎಂಬುದನ್ನು ತೋರಿಸಿಕೊಡುವುದಕ್ಕೆ ಉಪಯುಕ್ತವಾಗಿವೆಯೇ ಹೊರತು ಆಸಕ್ತಿ ದ್ಯೋತಕಗಳಲ್ಲವೆಂದು ತೀರ್ಮಾನಿಸ ಬೇಕಾಯಿತು. ಸಾಕ್ಷಾತ್ತಾಗಿ ನಿರೀಕ್ಷಿಸುವ ಕ್ರಮ ಪಟ್ಟಿ ಮಾಡುವ ಕ್ರಮಕ್ಕಿಂತ ಉತ್ತಮವೆಂದು ಆತನೆಣಿಕೆ.

**ಆಸಕ್ತಿಗಳ ನಮೂನೆಗಳು:** ಹಿಂದಿನ ಅನೇಕ ವ್ಯಾಸಂಗಗಳನ್ನು ಅವಲಂಬಿಸಿ ಆಸಕ್ತಿಗಳ ಬೇರೆ ಬೇರೆ ನಮೂನೆಗಳ ಪಟ್ಟಿಯೊಂದನ್ನು ಫ್ರಯರ್ ತಯಾರಿಸಿದ್ದಾನೆ. ಅವುಗಳನ್ನು ಈ ಕೆಳಗೆ ಸಂಕ್ಷೇಪವಾಗಿ ವಿವರಿಸಿದೆ :

1. ವೈಜ್ಞಾನಿಕ: ವಸ್ತುಗಳ ವಿಷಯದಲ್ಲಿ ಏಕೆ ಹೀಗೆ ಎಂಬುದನ್ನು ಮುಖ್ಯವಾಗಿ ತಿಳಿದುಕೊಳ್ಳಲು ಆಸಕ್ತಿ.

2. ಸಮಾಜಕಲ್ಯಾಣಕಾರಕ : ಯಾವುದಾದರೊಂದು ಬಗೆಯಲ್ಲಿ ನೆರವು ನೀಡಬೇಕೆಂದು ಜನರೊಂದಿಗೆ ಬೆರೆಯುವುದರಲ್ಲಿ ಆಸಕ್ತಿ.

3. ಸಾಹಿತ್ಯಕ: ಶಬ್ದಗಳ ಪ್ರಯೋಗದಲ್ಲೂ ಶಾಬ್ದಿಕ ಭಾವನೆಗಳ ಕುಶಲ ಪ್ರಯೋಗದಲ್ಲೂ ಆಸಕ್ತಿ.

4. ಪಾರಿಭಾಷಿಕ ಅಥವಾ ತಾಂತ್ರಿಕ: ಭೌತಜೀವನಕ್ಕೆ ಸಂಬಂಧಪಟ್ಟ ಮೂರ್ತ ವಸ್ತುಗಳಲ್ಲೂ ಅವುಗಳ ಉತ್ಪಾದನೆ, ರಕ್ಷಣೆ ಮತ್ತು ಬಳಕೆಗಳ ವಿಷಯದಲ್ಲೂ ಆಸಕ್ತಿ.

5. ಸಕ್ರಮ ವ್ಯವಸ್ಥೆಯ ಅಥವಾ ವ್ಯಾವಹಾರಿಕ ವಿವರಗಳು: ದಸ್ತಾವೇಜುಗಳನ್ನು ಸರಿಯಾಗಿಡುವುದು, ಕ್ರಮವರಿತು ದಾಖಲು ಮಾಡುವುದು–ಇತ್ಯಾದಿ ವಿಷಯಗಳಲ್ಲಿ ಆಸಕ್ತಿ.

6. ವ್ಯಾವಹಾರಿಕ ಸಂಪರ್ಕ: ಜನಕ್ಕೆ ಹಿತವಾಗಲೆಂಬ ಬುದ್ಧಿಯಿಂದಲ್ಲದೆ ಸ್ವಪ್ರಯೋಜನಕ್ಕಾಗಿ ಅಥವಾ ತಾನು ಸೇವೆಗೈಯ್ಯುತ್ತಿರುವ ಸಂಸ್ಥೆಯ ಹಿತಕ್ಕಾಗಿ ಜನರನ್ನು ಕಾಣುವುದು ಮತ್ತು ಅವರೊಡನೆ ವ್ಯವಹರಿಸುವುದರಲ್ಲಿ ಆಸಕ್ತಿ.

7. ಕಲಾತ್ಮಕ: ಚಿತ್ರ ಬರೆಯುವುದು, ವಿಗ್ರಹಗಳನ್ನು ಕೆತ್ತುವುದು, ಕುಣಿಯುವುದು ಇತ್ಯಾದಿ ಕಲಾತ್ಮಕ ಚಟುವಟಿಕೆಗಳಲ್ಲಿ ಆಸಕ್ತಿ.

8. ಸಂಗೀತದ ವಿಷಯದಲ್ಲಿ: ಹಾಡುವುದು, ವಾದ್ಯಗಳನ್ನು ಬಾರಿಸುವುದು–ಇತ್ಯಾದಿಗಳಲ್ಲಿ ಆಸಕ್ತಿ.

ಒಬ್ಬ ವ್ಯಕ್ತಿ ಒಂದೇ ಒಂದು ನಮೂನೆಯ ಆಸಕ್ತಿಯಲ್ಲಿ ತೊಡಗಿರುವುದಿಲ್ಲವೆಂಬ ಅಂಶವನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ. ಔದ್ಯೋಗಿಕ ಮನಶ್ಶಾಸ್ತ್ರಜ್ಞರ ಗಮನ ಆಸಕ್ತಿಗಳನ್ನು ಕುರಿತ ಕೆಲವು ಸಮಸ್ಯೆಗಳತ್ತ ಹರಿದಿದೆ. ಆಸಕ್ತಿಗಳು ಅನುವಂಶೀಯತೆಯ ಪರಿಣಾಮವೇ ಅಥವಾ ಪರಿಸರಗಳ ಪರಿಣಾಮವೇ? ಎಲ್ಲ ಆಸಕ್ತಿಗಳೂ ಪುರುಷಧರ್ಮಕಗಳೇ ಅಥವಾ ಸ್ತ್ರೀಧರ್ಮಕಗಳೇ? ವಯಸ್ಸು ಬೆಳೆದಂತೆಲ್ಲ ಆಸಕ್ತಿಗಳು ಯಾವ ರೀತಿ ಪರಿವರ್ತನೆಗೊಳ್ಳುತ್ತವೆ? ಅನುಭವದಿಂದ ಆಸಕ್ತಿಗಳು ಪ್ರಭಾವಿತವಾಗುತ್ತವೆಯೇ? ಆಸಕ್ತಿಗಳಿಗೂ ಸಹಜ ಸಾಮರ್ಥ್ಯಗಳಿಗೂ ಇರುವ ಸಂಬಂಧವೇನು? ಆಸಕ್ತಿಗಳಿಗೂ ವ್ಯಕ್ತಿಗಳ ಗುಣಗಳಿಗೂ ಇರುವ ಸಂಬಂಧವೇನು? ಈ ಪ್ರಶ್ನೆಗಳನ್ನು ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ.

ಹೀಗೆ ಆಸಕ್ತಿಗಳು ವ್ಯಕ್ತಿತ್ವವ್ಯವಸ್ಥೆಯ ಮುಖ್ಯ ಭಾಗವಾಗಿವೆ. ಆದ ಪ್ರಯುಕ್ತ ಮನುಷ್ಯನ ನಡೆವಳಿಕೆಯನ್ನು ಅವು ಬಹುಮಟ್ಟಿಗೆ ಪ್ರಭಾವಿಸುತ್ತವೆ. ಅಮೆರಿಕದಲ್ಲಿನ ಈ ವಿಷಯದ ಮೇಲಣ ವ್ಯಾಸಂಗಗಳಿಂದ ಆಸಕ್ತಿಗಳಿಗೂ ಸಹಜ ಸಾಮರ್ಥ್ಯಗಳಿಗೂ ಹೆಚ್ಚಿನ ಸಂಬಂಧವಿಲ್ಲವೆಂಬುದೂ ಆದ್ದರಿಂದ ಅವೆರಡನ್ನೂ ಬೇರೆಬೇರೆಯಾಗಿಯೇ ಅಳೆಯಬೇಕೆಂಬುದೂ ಖಚಿತವಾಗಿದೆ. ಅವು 18 ವರ್ಷಗಳ ಮೇಲೆ ಬಹುಮಟ್ಟಿಗೆ ಸ್ಥಿರವಾಗಿರುವುದರಿಂದ ಪ್ರೌಢಶಾಲಾ ಮಟ್ಟದಲ್ಲಿ ಅವನ್ನು ನಿರ್ದೇಶಿಸಬಹುದು. ಪರಿಸರಗಳ ಪ್ರಭಾವಗಳಿಂದ ಅವು ಚಿಕ್ಕ ವಯಸ್ಸಿನಲ್ಲಿ ವ್ಯತ್ಯಾಸವಾಗಬಲ್ಲವಾದರೂ ಬಹುಮಟ್ಟಿಗೆ ಅನುಭವಗಳಿಗೂ ಹೊಸ ಆಸಕ್ತಿಗಳನ್ನು ಹುಟ್ಟಿಸಲೂ ಆಗದು, ಹಳೆಯವನ್ನು ನಾಶಗೊಳಿಸಲೂ ಆಗದು.

ಕೆಲವು ಆಸಕ್ತಿಗಳು ಪುರುಷರಿಗೆ ನಿರ್ದಿಷ್ಟವಾಗಿವೆ ಮತ್ತೆ ಕೆಲವು ಸ್ತ್ರೀಯರಿಗೆ–ಎಂದು ಹೇಳಬಹುದಾದರೂ ಈ ವಿಂಗಡಣೆ ಖಡಾಖಂಡಿತವೆಂದು ಹೇಳಲು ಬರುವುದಿಲ್ಲ.

(ಎಚ್.ಪಿ.ಎಂ.)

**ಆಸನಗಳು: ನೋಡಿ–ಯೋಗಾಸನಗಳು**

**ಆಸಫ್‌ಜಾಹೀ ಆಳ್ವಿಕೆ:** 1724–1948. ಹೈದರಾಬಾದನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಆಸಫ್‌ಜಾಹೀ ರಾಜವಂಶದವರು ಉತ್ತರ ಕರ್ನಾಟಕದ ಪೂರ್ವಾರ್ಧದ ಭಾಗದ ಮೇಲೆ ಎರಡು ಶತಮಾನಗಳಿಗೂ ಹೆಚ್ಚುಕಾಲ ಒಡೆತನ ಹೊಂದಿದ್ದರು. ಈ ವಂಶದ ಸ್ಥಾಪಕನಿಗೆ ಆಸಫ್‌ಜಾ ಎಂದು ಬಿರುದಿದ್ದುದರಿಂದ ಇವನ ಮನೆತನ ಆಸಫ್‌ಜಾಹೀ ಎಂದೇ ಪ್ರಸಿದ್ಧವಾಯಿತು. ಈ ವಂಶದವರು ನಿಜಾಮ್–

ಉಲ್-ಮುಲ್ಕ್ ಎಂಬ ಬಿರುದನ್ನೂ ಉಪಯೋಗಿಸುತ್ತಿದ್ದುದ ರಿಂದ ಇವರಿಗೆ ಹೈದರಾಬಾದಿನ ನಿಜಾಮರು ಎಂಬ ಹೆಸರೂ ಪ್ರಚಲಿತವಾಗಿದೆ. ಕನ್ನಡನಾಡಿನ ಆಸಫ್‌ಜಾಹೀಗಳ ನೇರ ಕಾಣಿಕೆ ಹೆಚ್ಚಿಲ್ಲದಿದ್ದರೂ 18ನೆಯ ಶತಮಾನದ ಕರ್ನಾಟಕದ ರಾಜಕೀಯದಲ್ಲಿ ಇವರು ಗಣನೀಯ ಪಾತ್ರವಹಿಸಿದ್ದರು. ಬಹುಕಾಲ ಇವರ ಆಳ್ವಿಕೆಗೆ ಒಳಪಟ್ಟಿದ್ದ ರಾಯಚೂರು, ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳಲ್ಲಿ (ಹೈದರಾಬಾದು ಕರ್ನಾಟಕ) ವಿಶಿಷ್ಟರೀತಿಯ ಆಡಳಿತ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸ್ಥಿತಿ ಮೂಡಲು ಕಾರಣರಾದರು.

**ರಾಜಕೀಯ ಇತಿಹಾಸ:** 1686ರಲ್ಲಿ ಬಿಜಾಪುರದ ಆದಿಲ್‌ಶಾಹೀಗಳ ಆಳ್ವಿಕೆ ಕೊನೆಗೊಂಡು ಅವರ ವಶದಲ್ಲಿದ್ದ ಕರ್ನಾಟಕದ ಭಾಗವೆಲ್ಲ ಮುಗಲರ ಕೈಸೇರಿತು. ಮುಗಲರು ರೂಢಿಗೆ ತಂದ ರಾಜ್ಯವ್ಯವಸ್ಥೆಯಲ್ಲಿ ರಾಜ್ಯ ಹಲವು ಸುಬಾಗಳಾಗಿ (ಪ್ರಾಂತ್ಯ) ವಿಭಾಗಿತವಾಗಿರುತ್ತಿತ್ತು. ಪ್ರತಿಯೊಂದು ಸುಬಾಕ್ಕೂ ಒಬ್ಬ ಸುಬೇದಾರ (ಪ್ರಾಂತ್ಯಾಧಿಕಾರಿ) ಮುಖ್ಯಸ್ಥನಾಗಿರುತ್ತಿದ್ದ. ಮುಗಲರ ವಶವಾದ ಕರ್ನಾಟಕದ ಭಾಗ ದಖನ್ ಸುಬಾಕ್ಕೆ ಸೇರಿತ್ತು. ಔರಂಗಜೇಬನ ಮರಣಾನಂತರ ಮುಗಲ ಸಾಮ್ರಾಜ್ಯದಲ್ಲಿ ಉದಯಿಸಿದ್ದ ಅಸ್ತವ್ಯಸ್ತ ಪರಿಸ್ಥಿತಿಯ ಲಾಭ ಪಡೆದು ದಖನ್‌ನ ಸುಬೇದಾರನಾಗಿ ಹೈದರಾಬಾದಿನಲ್ಲಿದ್ದ ಮೀರ್ ಕಮ್ರುದ್ದೀನ್ ಚಿನ್ ಕುಲಿಕ್ ಖಾನ್ ಆಸಫ್ ಜಾ ಎಂಬುವನು 1724ರಲ್ಲಿ ಸ್ವಾತಂತ್ರ್ಯ ಸಾರಿಕೊಂಡು ಈ ಭಾಗದಲ್ಲಿ ತನ್ನ ಮನೆತನದ ಆಳ್ವಿಕೆಯನ್ನು ಪ್ರಾರಂಭಿಸಿದ.

ಮೊದಲನೆಯ ಆಸಫ್ ಜಾ (1724-48) ಚತುರ ರಾಜಕಾರಣಿ, ಸಮರ್ಥ ಸೇನಾನಾಯಕ. ಇವನ ರಾಜ್ಯ ಒಂದು ಕಾಲದಲ್ಲಿ ಒರಿಸ್ಸಾದಿಂದ ಹಿಡಿದು ತಂಜಾವೂರಿನವರೆಗಿನ ಇಡೀ ಕಡಲತೀರ ಹಾಗೂ ಗುಲ್ಬರ್ಗ, ಬಿದರೆ, ಬಿಜಾಪುರ, ಧಾರವಾಡ, ರಾಯಚೂರು ಜಿಲ್ಲೆಗಳ ಪ್ರದೇಶಗಳನ್ನೂ ಒಳಗೊಂಡಿತ್ತು. ಇವನ ಕಾಲದಲ್ಲಿ ಉತ್ತರ ಕರ್ನಾಟಕದ ಪಶ್ಚಿಮ ಭಾಗದಲ್ಲಿ ಮರಾಠರು ಪ್ರಬಲಿಸಿದ್ದರು. ಆದರೆ ಪೂರ್ವದಲ್ಲಿ ತುಂಗಭದ್ರಾನದಿಯ ಉತ್ತರ ಭಾಗವೆಲ್ಲ ಇವನ ವಶದಲ್ಲಿದ್ದುದಲ್ಲದೆ ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾನದಿಯ ಉತ್ತರಕ್ಕಿದ್ದ ಪ್ರದೇಶವೂ ಇವನಿಗೆ ಸೇರಿತ್ತು. ಆ ಭಾಗಕ್ಕೆ ನಾಸಿರ್‌ಜಂಗ್‌ನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ್ದ. ಅನಂತರ ಈತ ದಂಗೆಯೆದ್ದುದರಿಂದ ಆ ಭಾಗಕ್ಕೆ ಮುಜಫರ್‌ಜಂಗ್ ಅಧಿಕಾರಿಯಾದ. ಕೃಷ್ಣಾನದಿಯ ದಕ್ಷಿಣಕ್ಕಿದ್ದ ಬಿಜಾಪುರ ಜಿಲ್ಲೆಯ ಭಾಗಗಳು ಮತ್ತು ಧಾರವಾಡ ಜಿಲ್ಲೆಯ ಬಹುತೇಕ ಪ್ರದೇಶವನ್ನು ಸವಣೂರು ನವಾಬರು ಆಸಫ್‌ಜಾನ ಅಧೀನರಾಗಿ ಆಳುತ್ತಿದ್ದರು. 1746ರ ಸುಮಾರಿನಲ್ಲಿ ಆದ ಒಪ್ಪಂದದ ಪ್ರಕಾರ ಬಾದಾಮಿ ಮತ್ತು ಬಾಗಲಕೋಟೆಯ ಭಾಗಗಳನ್ನು ನಿಜಾಮ ಮರಾಠರಿಗೆ ಒಪ್ಪಿಸಿದ. ಆದರೆ ಉತ್ತರ ಕರ್ನಾಟಕದ ಬಹುಭಾಗದಲ್ಲಿ ಸ್ಥಳೀಯ ಆಡಳಿತಗಾರರು, ಮರಾಠರು ಹಾಗೂ ನಿಜಾಮ ಎಲ್ಲರೂ ಸಮಯ ಬಂದಂತೆ ತೆರಿಗೆಗಳನ್ನು ವಸೂಲಿಮಾಡುವ ವಿಚಿತ್ರ ಪರಿಸ್ಥಿತಿಯಿತ್ತು.

*

1748ರಲ್ಲಿ ಮೊದಲನೆಯ ಆಸಫ್ ಜಾ ನಿಧನನಾದಾಗ ಇವನ ಎರಡನೆಯ ಮಗ ನಾಸಿರ್‌ಜಂಗ್‌ನಿಗೂ ಮಗಳ ಮಗ ಮುಜಫರ್ ಜಂಗ್‌ನಿಗೂ ಅಧಿಕಾರಕ್ಕಾಗಿ ಕಚ್ಚಾಟ ನಡೆಯಿತು. ಫ್ರೆಂಚರೂ ಬ್ರಿಟಿಷರೂ ಇವರ ಪಕ್ಷಗಳನ್ನು ವಹಿಸಿದರು. ಫ್ರೆಂಚರು ಬೆಂಬಲಿಸಿದ ಮುಜಫರ್‌ಜಂಗ್ ನಿಜಾಮನಾದ. ಆದರೆ 1751ರಲ್ಲಿ ಕೊಲೆಯಾದ. ಅನಂತರ ನಾಸಿರ್‌ಜಂಗ್‌ನ ತಮ್ಮ ಸಲಾಬತ್‌ಖಾನ್ ನಿಜಾಮನಾದ. ಇವನ ಕಾಲದಲ್ಲಿ ರಾಜ್ಯದಲ್ಲಿ ಫ್ರೆಂಚರ ಪ್ರಾಬಲ್ಯ ಹೆಚ್ಚಿತು. ಇದೇ ಕಾರಣದಿಂದ ಇಂಗ್ಲಿಷರೊಡನೆಯೂ ಯುದ್ಧಗಳನ್ನು ಮಾಡಬೇಕಾಯಿತು. ಜನವರಿ 1755ರಲ್ಲಿ ಬುಸ್ಸಿಯ ನೆರವಿನಿಂದ ಈತ ಮೈಸೂರಿಗೆ ದಂಡೆತ್ತಿಬಂದು ನಂಜರಾಜನಿಂದ 52 ಲಕ್ಷ ರೂಪಾಯಿಗಳಷ್ಟು ಅಪಾರ ಹಣವನ್ನು ಪರಿಹಾರವಾಗಿ ಪಡೆದುಕೊಂಡ. ಒಂದೇ ಸಮನೆ ದೂರದ ಯುದ್ಧಗಳಲ್ಲಿ ನಿರತನಾಗಿದ್ದ ಸಂದರ್ಭವನ್ನು ಉಪಯೋಗಿಸಿ ಸವಣೂರು ನವಾಬರು ಸ್ವತಂತ್ರರಾದರು. 1759ರ ಸುಮಾರಿನಲ್ಲಿ ಸಲಾಬತ್‌ನ ಸೈನಿಕರಲ್ಲೇ ಅತೃಪ್ತಿಮೂಡಿತು. ಆಗ ಬಿಜಾಪುರದ ಜಮೀನ್ದಾರರಿಂದ ಹಣ ಸೆಳೆದು ಸೈನಿಕರನ್ನು ನಿಭಾಯಿಸುವ ಪ್ರಯತ್ನ ನಡೆಯಿತು. ಪೇಶ್ವೆ ಬಾಲಾಜಿ ಈ ಸಂದರ್ಭದಲ್ಲಿ ಸಲಾಬತ್ ಜಂಗನನ್ನು ಸೋಲಿಸಿ ಹುನಗುಂದ ಭಾಗವನ್ನು ಬಿಟ್ಟು ಬಿಜಾಪುರ ಜಿಲ್ಲೆಯ ಮಿಕ್ಕೆಲ್ಲಾ ಪ್ರದೇಶವನ್ನೂ ವಶಪಡಿಸಿಕೊಂಡ. ಆ ಹೊತ್ತಿಗೆ ಇಂಗ್ಲಿಷರ ನೆರವು ಪಡೆದಿದ್ದ ಸಲಾಬತನ ತಮ್ಮ ನಿಜಾಮ್ ಅಲಿ ಖಾನ್ ಪ್ರಬಲನಾಗಿದ್ದ. ಆದ್ದರಿಂದ ಸಲಾಬತ್ ಅವನೊಡನೆ ಒಪ್ಪಂದ ಮಾಡಿಕೊಂಡು ಅವನನ್ನು ಪ್ರಧಾನಿಯಾಗಿ ನೇಮಿಸಿದ. ಇವನು 1761ರಲ್ಲಿ ತನ್ನ ಸಹೋದರನನ್ನು ಕೊಲೆಮಾಡಿ ತಾನೇ ನಿಜಾಮನಾದ (1761-1803). ಹೈದರನ ರಾಜಕೀಯ ಪ್ರಾಬಲ್ಯ ಬೆಳೆಯುತ್ತಿದ್ದುದನ್ನು ಸಹಿಸದ ನಿಜಾಮ್ ಅಲಿ ಕರ್ನಾಟಕದತ್ತ ಹೆಚ್ಚು ಗಮನ ಹರಿಸಿದ. ಹೈದರನಿಗೆ ಮೈಸೂರು ರಾಜಕೀಯದಲ್ಲಿ ಸ್ವತಂತ್ರನಾಗಿ ವರ್ತಿಸಲು ಅಧಿಕಾರವಿಲ್ಲವೆಂಬುದು ನಿಜಾಮನ ವಾದ. ತಾನು ದಖನ್ನಿನ ಮುಗಲ ರಾಜಪ್ರತಿನಿಧಿಯಾದ ಕಾರಣ ಹೈದರ್ ತನ್ನ ಸಾಮಂತನಾಗಿರಬೇಕೆಂಬುದು ಅವನ ನಿರೀಕ್ಷೆಯಾಗಿತ್ತು. ಆದರೆ ಹೈದರನನ್ನು ಅಂಥ ಸ್ಥಾನಕ್ಕೆ ಇಳಿಸುವಷ್ಟು ಶಕ್ತನಾಗಿರಲಿಲ್ಲ. ಆದ್ದರಿಂದ ತಾನು ನಿಜಾಮಪದವಿಗೆ ಬಂದ ಕಾಲದಿಂದ (1761) ಟಿಪ್ಪುಸುಲ್ತಾನನ ಮರಣದವರೆಗೆ (1799) ಮೈಸೂರಿನ ಬಗ್ಗೆ ನಿರಂತರ ಹಗೆತನ ಸಾಧಿಸುವುದು ಅವನ ನೀತಿಯಾಯಿತು. ತನ್ನ ಸೇಡಿನ ಸಾಧನೆಗೆ ಇಂಗ್ಲಿಷರು ಇಲ್ಲವೆ ಮರಾಠರು ಮೈಸೂರಿನ ಮೇಲೆ ಮಾಡಿದ ಯುದ್ಧಗಳಲ್ಲಿ ತಾನೂ ಅವಕಾಶ ಪಡೆದುಕೊಂಡ. ಆದರೆ ಹೈದರ್‌ಅಲಿ ಮತ್ತು ಟಿಪ್ಪು ಅವನ ಬಗ್ಗೆ ಜಾಗರೂಕತೆಯಿಂದ ವರ್ತಿಸಿ, ಅವನೊಂದಿಗೆ ಹೊಂದಿಕೊಳ್ಳುವ ನೀತಿಯನ್ನು ಅನುಸರಿಸಿದರು. ಅವನ ಮೇಲೆ ಯುದ್ಧ ಮಾಡುವ ಬಗ್ಗೆ ಅವರು ಇತರ ಬಲಯುತ ಪಕ್ಷಗಳಿಗೆ ಬೆಂಬಲ ನೀಡಲಿಲ್ಲ. 1761ರಲ್ಲಿ ನಿಜಾಮನ ಸಹೋದರ ಸಲಾಬತ್ ಜಂಗ್ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬಂದು ಶಿರಾ ಪ್ರಾಂತ್ಯವನ್ನು ಆಕ್ರಮಿಸಿಕೊಳುವಲ್ಲಿ ವಿಫಲನಾದಾಗ ಹೈದರ್ ಅವನಿಗೆ ಅಪಮಾನ ಮಾಡದೆ, ಅವನಿಗೆ 3 ಲಕ್ಷ ರೂಪಾಯಿ ಒಪ್ಪಿಸಿ ಅವನಿಂದ ಶಿರಾ ನವಾಬಗಿರಿ ತನ್ನ ಹೆಸರಿಗೆ ಬರುವಂತೆ ಪ್ರಯತ್ನಿಸಿದರೂ ಮೈಸೂರು ರಾಜ್ಯ ಸ್ವತಂತ್ರವಾಗಿರುವುದನ್ನು ನಿಜಾಮ ಸಹಿಸಲಿಲ್ಲ.

1765ರಲ್ಲಿ ಮುಗಲ ಸಾಮ್ರಾಟನ ಫರ್ಮಾನ್ (ಸನ್ನದು) ಮೂಲಕ ಇಂಗ್ಲಿಷರು ಉತ್ತರ ಸರ್ಕಾರ್ ಪ್ರದೇಶಗಳನ್ನು ಗಳಿಸಿದಾಗ ನಿಜಾಮ ಉದ್ರಿಕ್ತನಾಗಿ, ಇಂಗ್ಲಿಷರನ್ನು ಮಟ್ಟಹಾಕಲು ಹೈದರನೊಂದಿಗೆ ಸೇರಿಕೊಳ್ಳಲು ಬಯಸಿದ. ಈ ಉದ್ದೇಶಕ್ಕಾಗಿ ಅವನು ಕರ್ನಾಟಿಕ್‌ನ (ಆರ್ಕಾಟಿನ) ನವಾಬ ಮಹಮ್ಮದಾಲಿಯ ಸಹೋದರ ಮಹಾಫಿಜ್ ಖಾನನನ್ನು ಹೈದರನ ಬಳಿ ಕಳುಹಿಸಿ, ಮದರಾಸು ಸರ್ಕಾರದ ವಿರುದ್ಧ ಹೈದರನ ನೆರವನ್ನು ಬಯಸಿದ ಹಾಗೂ ಹೈದರನಿಗೆ ಕರ್ನಾಟಿಕ್ ಪ್ರದೇಶದ ಬಗ್ಗೆ ಸನ್ನದುಗಳನ್ನು ನೀಡುವುದಾಗಿ ಸಹ ತಿಳಿಸಿದ. ನಿಜಾಮ ಮತ್ತು ಹೈದರ್ ನಡುವಣ ಮೈತ್ರಿಯಿಂದ ಸಂಭವಿಸಬಹುದಾದ ಅಪಾಯವನ್ನು ಗ್ರಹಿಸಿದ ಇಂಗ್ಲಿಷರು ನಿಜಾಮನಿಗೆ ಆಗಿದ್ದ ನಷ್ಟಕ್ಕೆ ಪರಿಹಾರವಾಗಿ ಕರ್ನಾಟಕ ಪ್ರದೇಶದ ಭಾಗಗಳನ್ನು ಗೆದ್ದುಕೊಡುವುದಾಗಿ ಭರವಸೆ ನೀಡಿದರು. ನಿಜಾಮ ಕೂಡಲೆ ಇಂಗ್ಲಿಷರ ಸಲಹೆಗೆ ಒಪ್ಪಿದ. ಅದಕ್ಕೆ ಮತ್ತೊಂದು ಕಾರಣವೂ ಇತ್ತು. ಮರಾಠರ ಪೇಶ್ವೆ ಮಾಧವರಾವ್ ಮೈಸೂರು ರಾಜ್ಯದ ಮೇಲೆ ದಾಳಿ ನಡೆಸಲು ನಿರ್ಧರಿಸಿದ್ದ; ತನ್ನ ರಾಜ್ಯವನ್ನು ವಿಸ್ತರಿಸಿಕೊಳ್ಳಲು ಈ ಅವಕಾಶವನ್ನು ಕಳೆದುಕೊಳ್ಳಲು ನಿಜಾಮನಿಗೆ ಇಷ್ಟವಿರಲಿಲ್ಲ. ಹೈದರ್ ಈ ಮಧ್ಯೆ ಹೈದರಾಬಾದಿನ ಅಂಚಿನ ಕಡಪ ಪ್ರದೇಶದ ಒಂದಿಷ್ಟು ಭಾಗವನ್ನು ಆಕ್ರಮಿಸಿಕೊಂಡಿದ್ದ. ಈ ಕಾರಣಗಳಿಂದ ಹೈದರನ ವಿರುದ್ಧ 1766ರಲ್ಲಿ ನಿಜಾಮ, ಮರಾಠರು ಹಾಗೂ ಇಂಗ್ಲಿಷರ ನಡುವೆ ಬಲಯುತವಾದ ಒಕ್ಕೂಟವೇರ್ಪಟ್ಟಿತು. ಯುದ್ಧ ಪ್ರಾರಂಭವಾದಾಗ ಮೈಸೂರಿನತ್ತ ನಿಜಾಮ ತನ್ನ ಸೈನ್ಯಗಳನ್ನು ತರಲು ತಡವಾಯಿತು. ಅಷ್ಟರಲ್ಲಿ ಹೈದರ್ ನಿಜಾಮನನ್ನು ಒಲಿಸಿಕೊಂಡ. ಕ್ಷಣಮಾತ್ರದಲ್ಲಿ ಆಕ್ರಮಣಕಾರನಾಗಿ ಬಂದ ನಿಜಾಮ ಮಿತ್ರನಾದ. ಆದರೆ ಮುಂದೆ ಒಂದೆರಡು ಯುದ್ಧಗಳಲ್ಲಿ ಅವನು ಇಂಗ್ಲಿಷರಿಗೆ ಸೋತು ಅವರೊಡನೆ ಒಪ್ಪಂದಮಾಡಿಕೊಂಡು ಹೈದರಾಬಾದಿಗೆ ಹಿಂತಿರುಗಿದ. ಇಂಗ್ಲಿಷರ ಮೇಲೆ ಸಾಮೂಹಿಕ ದಾಳಿ ನಡೆಸಬೇಕೆಂದು ಹೈದರ್, ಮರಾಠರು ಮತ್ತು ನಿಜಾಮ ಪ್ರಮಾಣ ವಚನದೊಂದಿಗೆ ಮಾಡಿಕೊಂಡ ಒಪ್ಪಂದವನ್ನೂ ನಿಜಾಮ ಉಲ್ಲಂಘಿಸಿದ.

ಹೈದರನ ಮರಣಾನಂತರ ಟಿಪ್ಪು ಅಧಿಕಾರಕ್ಕೆ ಬಂದಾಗ ಸಹ ಮೈಸೂರಿನೊಂದಿಗೆ ನಿಜಾಮನ ಸಂಬಂಧ ಉತ್ತಮಗೊಳ್ಳಲಿಲ್ಲ. ಹೈದರನ ವಿರುದ್ಧ ನಿಜಾಮ ಒಂದೇ ಯುದ್ಧಮಾಡಿದ್ದ; ಆ ಯುದ್ಧ ಸಹ ಅರ್ಧಮನಸ್ಸಿನಿಂದ ಮಾಡಿದ್ದಾಗಿತ್ತು. ಟಿಪ್ಪುವಿನ ಕಾಲದಲ್ಲಿ ನಿಜಾಮನ ನಿಲವು ಪೂರ್ಣವಾಗಿ ಮಾರ್ಪಟ್ಟಿತ್ತು. 1785ರಿಂದ 1799ರ ವರೆಗೆ ನಿಜಾಮ ಟಿಪ್ಪುವಿನ ವಿರುದ್ಧ ಮೂರು ಬಾರಿ ಯುದ್ಧಮಾಡಿದ. ಟಿಪ್ಪುವಿನ ಪತನವಾದದ್ದು (1799) ವಾಸ್ತವಿಕವಾಗಿ ನಿಜಾಮ ಇಂಗ್ಲಿಷರ ಪಕ್ಷ ಸೇರಿದ ಕಾರಣದಿಂದ. ಮರಾಠರಾಗಲಿ, ಇಂಗ್ಲಿಷರಾಗಲಿ ಕರ್ನಾಟಕದ ಮೇಲೆ ಆಸೆಯ ನೋಟವನ್ನು ಬೀರಿದಾಗ, ತನ್ನ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಲು ನಿಜಾಮ ಅವರಿಗೆ ಸ್ನೇಹ ಹಸ್ತವನ್ನು ನೀಡುತ್ತಿದ್ದ. 1786ರಲ್ಲಿ ನಿಜಾಮ ಮತ್ತು ನಾನಾಸಾಹೇಬ ಒಟ್ಟುಗೂಡಿ ಮೈಸೂರಿನ ಮೇಲೆ ಯುದ್ಧಸಾರಿದರು. ಯುದ್ಧ ಒಂದು ವರ್ಷಕಾಲ (1786-87) ನಡೆದು ಗಜೇಂದ್ರಗಡದ ಕೌಲಿನಿಂದ ಕೊನೆಗೊಂಡಿತು. ಈ ಯುದ್ಧದಲ್ಲಿ ಟಿಪ್ಪು ಜಯ ಹೊಂದಿದರೂ ಇಂಗ್ಲಿಷರ ವಿರುದ್ಧ ಭಾರತದ ಇತರ ರಾಷ್ಟ್ರಗಳ ನೆರವನ್ನು ಪಡೆದುಕೊಳ್ಳುವ ತನ್ನ ನೀತಿಯನ್ನನುಸರಿಸಿ, ಅವನು ತನ್ನ ಗಡಿಯ ಸಮೀಪದ ಕೆಲವು ಸಣ್ಣಪುಟ್ಟ ಕೋಟೆಗಳನ್ನು ಕೊಟ್ಟು ಮರಾಠರನ್ನು ಮತ್ತು ನಿಜಾಮನನ್ನು ಸಮಾಧಾನಗೊಳಿಸಿದ. ಆದರೆ ಹಿಂದೆ ಹೈದರಾಬಾದಿಗೆ ಸೇರಿದ್ದ ಪ್ರದೇಶಗಳನ್ನು ಗೆದ್ದುಕೊಡುವ ಹೊಣೆಹೊತ್ತು ತಮ್ಮೊಂದಿಗೆ ಕೂಡುವಂತೆ ನಿಜಾಮನಿಗೆ 1787ರಿಂದಲೂ ಇಂಗ್ಲಿಷರು ಆಸೆ ತೋರಿಸುತ್ತಿದ್ದರು. ಟಿಪ್ಪು ಸಹ ನಿಜಾಮನನ್ನು ತನ್ನ ಕಡೆ ಸೆಳೆಯಲು ಪ್ರಯತ್ನಿಸಿದ. ಗುಂಟೂರು ಭಾಗವನ್ನು ಕೊಡಬೇಕೆಂದು ಕಾರ್ನ್‌ವಾಲಿಸ್ ನಿಜಾಮನನ್ನು ಒತ್ತಾಯ ಮಾಡಿದಾಗ ಇಂಗ್ಲಿಷರಿಗೂ ನಿಜಾಮನಿಗೂ ಇದ್ದ ಸಾಮರಸ್ಯ ತಪ್ಪಿತು. ಸ್ವಲ್ಪಕಾಲ ಟಿಪ್ಪುವಿಗೂ ನಿಜಾಮನಿಗೂ ನಡುವೆ ಎಂದೂ ಇಲ್ಲದ ಸಹೃದಯತೆ ಮೂಡಿತು. 1786ರ ಯುದ್ಧದಲ್ಲಿ ಧಾರಾಳ ಷರತ್ತುಗಳ ಮೇಲೆ ಟಿಪ್ಪು ಮಾಡಿಕೊಂಡ ಒಪ್ಪಂದ ನಿಜಾಮ ಟಿಪ್ಪುವಿನೊಡನೆ ಸೇರಿಕೊಳ್ಳಲು ಉತ್ತೇಜಕವಾಯಿತು. ಆಗಸ್ಟ್ 1787ರಲ್ಲಿ ನಿಜಾಮನ ಆಸ್ಥಾನಿಕರಾದ ಇಂತಿಯಾಜ್-ಉದ್-ದೌಲ ಹಾಗೂ ಷಮ್ಸ್-ಉಲ್-ಉಮ್ರ ಟಿಪ್ಪುವಿನೊಡನೆ ಸಂಬಂಧ ಬೆಳೆಸಲು ನಿಜಾಮನಿಗಿದ್ದ ಇಷ್ಟವನ್ನು ಟಿಪ್ಪುವಿಗೆ ತಿಳಿಸಿದರು. ಟಿಪ್ಪು ಒಪ್ಪಿದ ಕಾರಣ ಹಾಫಿಜ್-ಫರೀದ್-ಉದ್-ದೀನ್ ಮತ್ತು ಬಹಾದ್ದೂರ್ ಖಾನ್ ಎಂಬಿಬ್ಬರು ರಾಯಭಾರಿಗಳು ಹೈದರಾಬಾದಿನಿಂದ ಶ್ರೀರಂಗಪಟ್ಟಣಕ್ಕೆ ಬಂದರು (ನವೆಂಬರ್

1787). ನಿಜಾಮನನ್ನು ತಾನೇ ಕಂಡು ಪರಸ್ಪರ ಮೈತ್ರಿಯ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ನಿರ್ಧರಿಸಬೇಕೆಂದು ಟಿಪ್ಪು ಕಾತರನಾಗಿದ್ದ. ತನ್ನ ಮೈತ್ರಿ ಬಲವಾದ ತಳಹದಿಯ ಮೇಲಿರಬೇಕೆಂದು ನಿಜಾಮನ ಮಗಳನ್ನು ತನ್ನ ಮಗನಿಗೆ ತಂದುಕೊಳ್ಳಲು ಸಹ ಅಪೇಕ್ಷಿಸಿದ. ಆದರೆ ನಿಜಾಮ ಈ ವಿವಾಹದ ಬಗ್ಗೆ ಅಷ್ಟು ಆಸಕ್ತನಾಗಿರಲಿಲ್ಲ. ಅಲ್ಲದೆ, ಅವನ ಆಸ್ಥಾನದಲ್ಲಿ ಇಂಗ್ಲಿಷರ ಬೆಂಬಲ ಪಡೆದುಕೊಳ್ಳಬೇಕೆಂಬ ಪಕ್ಷವೇ ಬಲವಾಗಿತ್ತು. ಈ ಸಂದರ್ಭದಲ್ಲಿ ಟಿಪ್ಪುವಿನ ವಿರುದ್ಧ ಭಾರತದ ರಾಜ್ಯಗಳನ್ನು ಸಂಘಟಿಸಲು ಕಾರ್ನ್‌ವಾಲಿಸ್ ತೀವ್ರ ಕಾರ್ಯಾಚರಣೆಗಳನ್ನು ಕೈಗೊಂಡಿದ್ದ. ಆದ್ದರಿಂದ ಟಿಪ್ಪುವಿಗೆ ನಿಜಾಮನ ಉತ್ತರ ಅಸ್ಪಷ್ಟವಾಗಿತ್ತು ಹಾಗೂ ಸಂಬಂಧಕಲ್ಪನೆಯ ಬಗ್ಗೆ ನಡೆಸಿದ ವ್ಯವಹಾರ ಹಠಾತ್ತನೆ ನಿಂತುಹೋಯಿತು.

ಕಾರ್ನ್‌ವಾಲಿಸ್ ಹೈದರಾಬಾದಿನ ಭಾಗವಾದ ಗುಂಟೂರನ್ನು ಆಕ್ರಮಿಸಿಕೊಂಡಾಗ ನಿಜಾಮ ಟಿಪ್ಪುವಿನೊಡನೆ ಮತ್ತೆ ಬಾಂಧವ್ಯ ಬೆಳೆಸುವ ಬಗ್ಗೆ ಮಾತುಕತೆ ಮುಂದುವರಿಸಲು ನವೆಂಬರ್ 1788ರಲ್ಲಿ ಹಾಫಿಜ್ ಫರೀದ್–ಉದ್–ದೀನ್ ಹಾಗೂ ರಾಮಚಂದ್ರ ಇವರಿಬ್ಬರನ್ನು ಟಿಪ್ಪುವಿನ ಬಳಿ ಅಟ್ಟಿದ. ಆಗ ಟಿಪ್ಪು ಕೊಯಮತ್ತೂರಿನ ಬಳಿ ಬಿಡಾರ ಹಾಕಿದ್ದ. ಟಿಪ್ಪುವಿನ ಉತ್ತರ ಮತ್ತೆ ಆಹ್ವಾನಾರ್ಹವಾಗಿತ್ತು. ಅವನು ಮತ್ತೆ ವಿವಾಹ ಸಂಬಂಧವನ್ನು ಬಯಸಿ ಹೈದರಾಬಾದಿನ ವಕೀಲರೊಂದಿಗೆ ಸಮಾಲೋಚನೆ ನಡೆಸಿದ. ಈ ಸಮಾಲೋಚನೆಯಲ್ಲಿ ಮರಾಠರ ಪ್ರತಿನಿಧಿ ಶಿವಾಜಿರಾವ್ ಸಹ ಹಾಜರಿದ್ದ. ರಾಜಕೀಯ ಮೈತ್ರಿ ಹಾಗೂ ವಿವಾಹ ಸಂಬಂಧವನ್ನು ನಿರ್ಧರಿಸಿಕೊಂಡು ಬರಲು ಟಿಪ್ಪು ತನ್ನ ವಕೀಲನಾದ ಕುತ್ಬುದ್ದೀನ್ ಖಾನ್ ಮತ್ತು ಅಲಿ ರಾಜ ಇವರನ್ನು ಹೈದರಾಬಾದಿಗೆ ಕಳುಹಿಸಿದ. ಈ ಪ್ರಯತ್ನ ಸಹ ವಿಫಲವಾಯಿತು. ಈ ಹೊತ್ತಿಗೆ ಇಂಗ್ಲಿಷರ ಕುತಂತ್ರ ಬಲವಾಗಿ ಬೇರೂರಿತ್ತು. ಮೈಸೂರಿನ ಬಹುಭಾಗವನ್ನು ಗೆದ್ದುಕೊಳ್ಳಲು ಇದ್ದ ಅವಕಾಶಗಳನ್ನು ತಿಳಿಸಿ ಕಾರ್ನ್‌ವಾಲಿಸ್ ನಿಜಾಮನ ಮನಸ್ಸನ್ನು ಸೆಳೆದುಕೊಂಡ. ಟಿಪ್ಪುವಿನ ರಾಯಭಾರಿಗಳು ನಿಜಾಮನ ಸಂಶಯಕ್ಕೊಳಗಾಗಿ ಹೈದರಾಬಾದಿನಲ್ಲಿ ಸೆರೆಯಾದರು. ಟಿಪ್ಪು ಕೇವಲ ಫೌಜಿನ ನಾಯಕ್ ಹುದ್ದೆಯಲ್ಲಿದ್ದವರ ಪೀಳಿಗೆಯವನು ಅವನೊಂದಿಗೆ ವಿವಾಹಸಂಬಂಧ ಬೆಳೆಸುವುದು ನಿಜಾಮನ ಮನೆತನಕ್ಕೆ ಅಪಮಾನ, ಘನತೆಗೆ ಕುಂದು, ಎಂದು ನಿಜಾಮ ವಿವಾಹದ ವಿಷಯವನ್ನು ತಳ್ಳಿಹಾಕಿದ. ನಿಜಾಮ ಮೂರನೆಯ ಮೈಸೂರು ಯುದ್ಧದಲ್ಲಿ ಇಂಗ್ಲಿಷರೊಡನೆ ಸೇರಿಕೊಳ್ಳಲು ನಿರ್ಧರಿಸಿದ. ಟಿಪ್ಪುವಿನ ಮೇಲೆ ದಾಳಿ ನಡೆಸುವ ಬಗ್ಗೆ ನಡೆದ ಒಪ್ಪಂದದಲ್ಲಿ ಇಂಗ್ಲಿಷರು ಹಾಗೂ ಮರಾಠರೊಡನೆ ಸೇರಿಕೊಂಡ. ಈ ಯುದ್ಧದಲ್ಲಿ ಟಿಪ್ಪು ಸೋತು ಅವನ ರಾಜ್ಯದಲ್ಲಿ ಅರ್ಧಭಾಗ ದಾಳಿಕಾರರ ಪಾಲಾಯಿತು. ಅದರಲ್ಲಿ ಕೃಷ್ಣಾನದಿಯಿಂದ ಪೆನ್ನಾರ್ ನದಿಯವರೆಗಿನ ವಿಶಾಲ ಪ್ರದೇಶ ನಿಜಾಮನಿಗೆ ಸೇರಿತು. ಅದರಿಂದ ನಿಜಾಮನ ಆಸೆ ಮುಗಿಲಿಗೇರಿ 1799ರಲ್ಲಿ ನಡೆದ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಸಹ ಅವನು ಮತ್ತೆ ಇಂಗ್ಲಿಷರ ಪಕ್ಷವನ್ನು ಸೇರಿದ. ಈ ಯುದ್ಧದಲ್ಲಿ ಟಿಪ್ಪು ಮೃತನಾದ (4 ಮೇ 1799). ನಿಜಾಮನಿಗೆ ಯುದ್ಧದ ಫಲವಾಗಿ ಗುತ್ತಿ, ಗುರಮಕೊಂಡ ಹಾಗೂ ಚಿತ್ರದುರ್ಗ ಕೋಟೆಯ ವಿನಾ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳು ಸೇರಿದವು. ಯುದ್ಧ ದೃಷ್ಟಿಯಿಂದ ಉಪಯುಕ್ತವಾಗಿದ್ದ ಇಂಥ ಸ್ಥಳಗಳನ್ನು ಕಳೆದುಕೊಳ್ಳಲು ಇಂಗ್ಲಿಷರು ಸಿದ್ಧರಾಗಿರಲಿಲ್ಲ. 1792ರಲ್ಲಿ ಹಾಗೂ 1799ರ ಯುದ್ಧಗಳಲ್ಲಿ ಕೊಟ್ಟಿದ್ದ ಈ ಪ್ರದೇಶಗಳನ್ನು ಒಪ್ಪಿಸುವಂತೆ ನಿಜಾಮನನ್ನು ಅವರು ಒತ್ತಾಯ ಪಡಿಸಿದರು (1800). ಈ ಮಧ್ಯದಲ್ಲಿ ಬಿಜಾಪುರದ ಹುನಗುಂದ ಭಾಗವನ್ನು ನಿಜಾಮ ಮರಾಠರಿಗೆ ಒಪ್ಪಿಸಿದ್ದ. ಅಂದರೆ ಕರ್ನಾಟಕದಲ್ಲಿ ಮುಂದೆ ಹೈದರಾಬಾದು ಕರ್ನಾಟಕದ ಜಿಲ್ಲೆಗಳೆಂದು ಪ್ರಸಿದ್ಧವಾದ ಪ್ರದೇಶವಷ್ಟೇ ನಿಜಾಮನ ವಶದಲ್ಲಿ ಉಳಿಯಿತು.

1803ರಲ್ಲಿ ನಿಜಾಮ್ ಅಲಿ ಖಾನ್ ಮೃತನಾಗಿ ಅವನ ಮಗ ಸಿಕಂದರ್ ಜಾ (1803–29) ಹೈದರಾಬಾದಿನ ಗದ್ದುಗೆಯನ್ನೇರಿದ. ಈ ಕಾಲದಲ್ಲಿ ಬ್ರಿಟಿಷರ ಕೈಮೇಲಾಗಿ ಹಲವು ಪ್ರದೇಶಗಳನ್ನು ಅವರಿಗೊಪ್ಪಿಸಬೇಕಾಯಿತು. ವಿಷಯಾಕಾಂಕ್ಷಿಯಾದ ಈತ ಆಡಳಿತಕ್ಕೆ ಹೆಚ್ಚು ಗಮನವೀಯಲಿಲ್ಲ. ರಾಜ ಚಂದುಲಾಲ್ ಈ ಕಾಲದಲ್ಲಿ ದಿವಾನನಾಗಿದ್ದ. ಆಡಳಿತ ಸಾಕಷ್ಟು ಕೆಟ್ಟಿತ್ತು. (ಬಿ.ಎಸ್.ಎ.)

ಅವನ ತರುವಾಯ ನಿಜಾಮ್ ಪದವಿಗೆ ಬಂದ ನಾಸಿರುದ್ದೌಲ (1829–57) ಇಂಗ್ಲಿಷರಿಗೆ ನಿಷಾವಿವಂತನಾಗಿದ್ದ. ಅವರು ಒದಗಿಸಿದ್ದ ಸೈನ್ಯಸಹಾಯದ ಖರ್ಚಿಗಾಗಿ ರಾಯಚೂರು ಪ್ರದೇಶವನ್ನು ಅವರಿಗೆ ಒಪ್ಪಿಸಿದ. ಇಂಗ್ಲಿಷರ ಆದೇಶದಂತೆ ಚಂದುಲಾಲನನ್ನು ದಿವಾನಗಿರಿಯಿಂದ ತೆಗೆದ. 1843ರಲ್ಲಿ ಸರ್ ಸಾಲಾರ್ ಜಂಗ್ ದಿವಾನನಾದ. ಬ್ರಿಟಿಷರು ಹಿಂದಿನಿಂದ ನಿಜಾಮರ ಸ್ನೇಹಿತರಾಗಿದ್ದಾರೆ, ಎಂದೆಂದಿಗೂ ಅವರಿಗೆ ಕೃತಜ್ಞತೆಯಿಂದ ನಡೆದುಕೊಳ್ಳಬೇಕು ಎಂದು ನಾಸಿರುದ್ದೌಲ ಸಾಯುವಾಗ ತನ್ನ ಮಗ ಅಫ್ಜಲುದ್ದೌಲನಿಗೆ ಹೇಳಿದ್ದನಂತೆ. ತಂದೆಯ ಮರಣಾನಂತರ ಪಟ್ಟಕ್ಕೆ ಬಂದ ಅಫ್ಜಲುದ್ದೌಲ (1857–69) ಪಿತೃವಾಕ್ಯವನ್ನು ಪೂರ್ಣವಾಗಿ ಪಾಲಿಸಿದ. 1857–58ರಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದೆದುರು ಬ್ರಿಟಿಷರು ತಲ್ಲಣಿಸುತ್ತಿದ್ದಾಗಲೂ ನಿಜಾಮ ಮತ್ತು ಅವನ ಪ್ರಧಾನಿ ಸಾಲಾರ್ ಜಂಗ್ ಅವರಿಗೆ ಬೆಂಬಲವಾಗಿ ನಿಂತಿದ್ದರು. ಈ ಉಪಕಾರಕ್ಕಾಗಿ ಬ್ರಿಟಿಷ್ ಸರ್ಕಾರ ಇವನೊಡನೆ ಹೊಸ ಒಪ್ಪಂದವೊಂದನ್ನು ಮಾಡಿಕೊಂಡು ನಿಜಾಮರಿಂದ ತೆಗೆದುಕೊಂಡಿದ್ದ ಉಸ್ಮಾನಾಬಾದ್ ಮತ್ತು ರಾಯಚೂರು ಪ್ರದೇಶವನ್ನು ಹಿಂತಿರುಗಿಸಿತು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಿದರೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳು ಅಂದಿನಿಂದ ನಿಜಾಮನ ಆಳ್ವಿಕೆಯಲ್ಲೇ ಉಳಿದವು. ಸುರಪುರದ ದಂಗೆ ಈ ಕಾಲದಲ್ಲಿ ನಡೆದ ಮುಖ್ಯ ಘಟನೆ (ನೋಡಿ: ಸ್ವಾತಂತ್ರ್ಯ ಸಂಗ್ರಾಮ, ವೆಂಕಟಪ್ಪನಾಯಕ). ಅಫ್ಜಲುದ್ದೌಲ 1869ರಲ್ಲಿ ಮೃತನಾದ.

ಅನಂತರದ ನಿಜಾಮ ಮೀರ್ ಮಹಬೂಬ್ ಅಲಿ ಖಾನ್ (1869–1911) ಪಟ್ಟಕ್ಕೆ ಬಂದಾಗ ಈತ ಇನ್ನೂ ಮೂರುವರ್ಷದ ಬಾಲಕನಾಗಿದ್ದರಿಂದ ಸರ್ ಸಾಲಾರ್‌ಜಂಗ್ 1 ಮತ್ತು ನವಾಬ್ ಶಮ್ಸುಲಾ ಉಮ್ರಾ ಇವರು ಆಡಳಿತಗಾರರಾಗಿ ನಿಯಮಿತರಾಗಿದ್ದರು. ಆಡಳಿತದಲ್ಲಿ ಬ್ರಿಟಿಷ್ ರೆಸಿಡೆಂಟನ ಸಲಹೆಯನ್ನು ತೆಗೆದುಕೊಳ್ಳಲಾಗುತ್ತಿತ್ತು. ಈ ವ್ಯವಸ್ಥೆ 1884ರ ವರೆಗೂ ಮುಂದುವರಿದು, ಆ ವರ್ಷ ನಿಜಾಮರೇ ಆಡಳಿತ ವಹಿಸಿಕೊಂಡರು. ಇವರ ಕಾಲದಲ್ಲಿ ಆಡಳಿತದಲ್ಲಿ ಹಲವು ಬದಲಾವಣೆಗಳಾದವು. 1893ರಲ್ಲಿ ಒಂದು ಮಂತ್ರಿಮಂಡಲ ಮತ್ತು ನ್ಯಾಯಾಂಗ ಸಭೆ ವ್ಯವಸ್ಥಿತವಾಯಿತು. ಅಧಿಕಾರಿಗಳಲ್ಲದವರೂ ರಾಜ್ಯದ ಆಗು ಹೋಗುಗಳಲ್ಲಿ ಧ್ವನಿಗೂಡಿಸುವ ಅವಕಾಶ ಉಂಟಾಯಿತು.

ಮಹಬೂಬ್ ಅಲಿ ಖಾನ್‌ರ ಮರಣಾನಂತರ (1911) ಅವರ ಮಗ ಮೀರ್ ಉಸ್ಮಾನ್ ಅಲಿ ಖಾನ್ ನಿಜಾಮರಾದರು (1911–48). ಪ್ರಧಾನಿ ಸಾಲಾರ್‌ಜಂಗ್ ಖಖಖ 1914ರಲ್ಲಿ ರಾಜೀನಾಮೆಯಿತ್ತಾಗ ಆಡಳಿತವನ್ನು ನಿಜಾಮರೇ ನೇರವಾಗಿ ನಿರ್ವಹಿಸತೊಡಗಿದರು. ಪ್ರಥಮ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷರಿಗೆ ಧನ–ಸೈನ್ಯ ಸಹಾಯವನ್ನು ನೀಡಿದರು. ಹೈದರಾಬಾದು ಸಂಸ್ಥಾನದ ಸಿಬ್ಬಂದಿಯನ್ನು ಪೂರ್ಣವಾಗಿ ಭಾರತೀಕರಣ ಮಾಡಿದ್ದು ಇವರ ಸಾಧನೆ. ಎಲ್ಲಾ ಹುದ್ದೆಗಳಲ್ಲೂ ಭಾರತೀಯರೇ ಅದರಲ್ಲೂ ಹೆಚ್ಚು ಮಟ್ಟಿಗೆ ಹೈದರಾಬಾದಿನವರೇ ನಿರ್ವಹಿಸುವ ವ್ಯವಸ್ಥೆಮಾಡಿದರು. ಮುಂದಿನ ದಿನಗಳಲ್ಲಿ ಭಾರತ ಸ್ವಾತಂತ್ರ್ಯ ಚಳವಳಿ ಹೈದರಾಬಾದು ಸಂಸ್ಥಾನದಲ್ಲಿ ಹರಡಿತು. ಆದರೆ ಅದನ್ನು ವ್ಯಗ್ರದೃಷ್ಟಿಯಿಂದ ನೋಡುವುದು ಅಂದಿನ ರಾಜನೀತಿಯಾಗಿತ್ತು.

1947ರಲ್ಲಿ ಭಾರತ ಸ್ವತಂತ್ರವಾದಾಗ ಇತರ ರಾಜ್ಯಗಳನ್ನು ಅನುಸರಿಸಿ ಭಾರತ ಒಕ್ಕೂಟಕ್ಕೆ ಸೇರದೆ ನಿಜಾಮರು 27–8–1947ರಂದು ಹೈದರಾಬಾದನ್ನು ಸ್ವತಂತ್ರ ರಾಷ್ಟ್ರವೆಂದು ಸಾರಿದರು. ಸ್ವಾತಂತ್ರ್ಯ ಸಂಗ್ರಾಮದ ಬಿರುಸು ಮತ್ತಷ್ಟು ಏರಿತು. ಈ ಮಧ್ಯದಲ್ಲಿ ರಜಾಕರರ ಸಂಸ್ಥೆಯೂ ತಲೆಯೆತ್ತಿ ಜನರನ್ನು ಕ್ರೂರವಾಗಿ ನಡೆಸಿಕೊಳ್ಳಲಾರಂಭಿಸಿತು. ಕೊಲೆ, ಸುಲಿಗೆಗಳು ಅವರ ಕಾರ್ಯಾಚರಣೆಯ ಭಾಗವಾಗಿದ್ದುವು. ಅದಕ್ಕೆ ವಿರುದ್ಧವಾಗಿ ಜನಗಳೂ ಸಂಘಟಿತರಾಗತೊಡಗಿ ರಾಜ್ಯದಲ್ಲಿ ಕರಾಳ ವಾತಾವರಣ ಒದಗಿಬಂತು. ರಜಾಕರರ ಸಂಸ್ಥೆಯನ್ನು ಬಹಿಷ್ಕರಿಸಬೇಕೆಂದು ಅನೇಕರು ಪ್ರಾರ್ಥಿಸಿದರೂ ನಿಜಾಮರು ಕ್ರಮ ಕೈಗೊಳ್ಳಲಿಲ್ಲ. ಭಾರತ ಸರ್ಕಾರದವರು ನಿಜಾಮರೊಡನೆ ಸಂಧಾನ ನಡೆಸಿದರೂ ಸಫಲವಾಗಲಿಲ್ಲ. ನಿಜಾಮರು ಭಾರತ ಸರ್ಕಾರದ ವಿರುದ್ಧ ಕತ್ತಿ ಮಸೆಯುತ್ತಿದ್ದುದು 1948ರ ಆದಿಭಾಗದ ಹೊತ್ತಿಗೇ ಸ್ಪಷ್ಟವಾಯಿತು. ಕೊನೆಗೆ 13–9–48ರಲ್ಲಿ ಭಾರತ ಸರ್ಕಾರ ನಿಜಾಮರ ದುರಾಡಳಿತದ ವಿರುದ್ಧ ಪೊಲೀಸ್ ಕಾರ್ಯಾಚರಣೆ ಆರಂಭಮಾಡಿತು. ನಿಜಾಮರು ಮೊದಲು ವಿರೋಧಿಸಿದರು. ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿದರು. ಆದರೆ ಬೆಂಬಲ ಸಿಕ್ಕಲಿಲ್ಲ. ಕೊನೆಗೆ ಭಾರತ ಸರ್ಕಾರದೊಡನೆ ಒಪ್ಪಂದಕ್ಕೆ ಒಡಂಬಟ್ಟರು. ಆಸಫ್‌ಜಾಹೀ ರಾಜತ್ವ ಕೊನೆಗೊಂಡಿತು. 18–9–48ರಂದು ಭಾರತ ಒಕ್ಕೂಟಕ್ಕೆ ಸೇರಿದ ಹೈದರಾಬಾದು ರಾಜ್ಯ ಉದಯವಾಯಿತು. *

**ಆಡಳಿತವ್ಯವಸ್ಥೆ:** ಆಸಫ್‌ಜಾಹೀ ಆಡಳಿತ ಮುಗಲ್ ಪದ್ಧತಿಯಲ್ಲಿ ರೂಢಿತವಾದ್ದು, ಹೈದರಾಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಖನ್ನಿನಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸಿದಾಗ ಈ ಸಂತತಿಯವರಿಗೆ ಸರ್ಕಾರ ವ್ಯವಸ್ಥೆ ಹಾಗೂ ಆಡಳಿತ ನಿರ್ವಹಣೆಯಲ್ಲಿ ಒಳ್ಳೆಯ ಶಿಕ್ಷಣವಿತ್ತು. 1ನೆಯ ಆಸಫ್‌ಜಾ ತನ್ನ ಮನೆತನಕ್ಕೆ ಬಿಟ್ಟುಹೋದ ಶಾಸನ ಅವರ ಸರ್ಕಾರ ರಚನೆ ಮತ್ತು ನೀತಿಯನ್ನು ಸೂಚಿಸುತ್ತದೆ. ಅವರ ಆಡಳಿತ ವ್ಯವಸ್ಥೆ ಕಂದಾಯ, ಪೊಲೀಸು, ನ್ಯಾಯ ಮತ್ತು ಇತರ ಸಂಕೀರ್ಣ ಇಲಾಖೆಗಳು ಎಂದು ನಾಲ್ಕು ಸಾದರ್–ಉಲ್ ಮಹಾಮ್‌ಗಳಾಗಿ ವಿಭಾಗಿತವಾಗಿದ್ದುವು. ಒಬ್ಬ ವಜೀರನ (ಮಂತ್ರಿಯ) ನಿರ್ದೇಶನದಲ್ಲಿ ಅವುಗಳು ಕಾರ್ಯನಿರ್ವಹಿಸುತ್ತಿದ್ದುವು. ಇಡೀ ರಾಜ್ಯ ನಾಲ್ಕು ಸುಬಾ (ಪ್ರಾಂತ್ಯ) ಗಳಾಗಿ ವಿಭಜಿತವಾಗಿದ್ದಿತು. ನಿಜಾಮರ ಆಳ್ವಿಕೆಗೆ ಒಳಪಟ್ಟ ಕರ್ನಾಟಕದ ಭಾಗವು ಮರಾಠವಾಡ ಸುಬಾ ಎಂಬ ಎರಡನೆಯ ಸುಬೆಗೆ ಸೇರಿತ್ತು, ನಿಜಾಮರು ಕೆಲವು ಆಡಳಿತ ಸಂಸ್ಥೆಗಳನ್ನು ಸ್ಥಾಪಿಸಿದರಲ್ಲದೆ ಹಳೆಯ ಆಡಳಿತ ರೀತಿಗಳನ್ನೂ ಉಳಿಸಿಕೊಂಡರು. 1892ರಲ್ಲಿ ಕಾನೂನ್ ಚ–ಇ–ಮುಬಾರಕ್ (ಪವಿತ್ರ ಕಾಯಿದೆ) ಜಾರಿಗೆ ಬಂತು. ಅದು ಆಡಳಿತವರ್ಗಕ್ಕೆ ಕೈಪಿಡಿ; ಅದರಿಂದ ವಿವಿಧ ಇಲಾಖೆಗಳ ಕಾರ್ಯಾಚರಣೆಗಳಲ್ಲಿ ಕೆಲವು ಬದಲಾವಣೆಗಳಾದವು. ಮರಾಠವಾಡ ಸುಬೆಯಲ್ಲಿದ ಗುಲ್ಬರ್ಗ ವಿಭಾಗದಲ್ಲಿ ಗುಲ್ಬರ್ಗ, ರಾಯಚೂರು, ಲಿಂಗಸುಗೂರು ಮತ್ತು ಉಸ್ಮಾನಾಬಾದ್– ಈ ನಾಲ್ಕು ಜಿಲ್ಲೆಗಳಿದ್ದುವು. ತರುವಾಯ ಲಿಂಗಸುಗೂರು ಜಿಲ್ಲೆಯನ್ನು ವಿಭಜಿಸಿ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಸೇರಿಸಲಾಯಿತು. ಬಿದರೆ ಜಿಲ್ಲೆಯನ್ನು ಗುಲ್ಬರ್ಗ ವಿಭಾಗಕ್ಕೆ ಸೇರಿಸಲಾಯಿತು. ಪ್ರತಿ ವಿಭಾಗ ಒಬ್ಬ ಸುಬೇದಾರನ (ಕಮಿಷನರ್) ಅಧೀನದಲ್ಲಿತ್ತು.

ಪ್ರತಿ ಜಿಲ್ಲೆ ಒಬ್ಬ ಜೇಷವಿ ತಾಲ್ಲೂಕುದಾರನ (ಕಲೆಕ್ಟರನ) ಆಡಳಿತದಲ್ಲಿತ್ತು. ದ್ವಿತೀಯ ಅಥವಾ ತೃತೀಯ ತಾಲ್ಲೂಕುದಾರರೆಂಬ ಹೆಸರಿನ ಇಬ್ಬರು ಅಥವಾ ಹೆಚ್ಚು ಅಧಿಕಾರಿಗಳು ಜೇಷವಿ ತಾಲ್ಲೂಕುದಾರನ ಸಹಾಯಕರಾಗಿರುತ್ತಿದ್ದರು. ಪ್ರತಿ ತಾಲ್ಲೂಕಿಗೆ (ತಹಸೀಲ್) ಒಬ್ಬ ತಹಸೀಲ್‍ದಾರ ಮುಖ್ಯಸ್ಥನಾಗಿರುತ್ತಿದ್ದ. ತಾಲ್ಲೂಕಿನ ಕಂದಾಯ ಹಾಗೂ ನ್ಯಾಯಾಡಳಿತ ಅವನಿಗೆ ಸೇರಿತ್ತು. ಒಬ್ಬ ಪೇಷ್ಕಾರ್ (ಸಹಾಯಕ) ಮತ್ತು ಗಿರ್ದಾವಾರ್ (ರೆವೆನ್ಯೂ ಇನ್ಸ್‍ಪೆಕ್ಟರ್) ಈ ಕೆಲಸಗಳಲ್ಲಿ ಅವನಿಗೆ ನೆರವು ನೀಡುತ್ತಿದ್ದರು. ಪಾಟೀಲ ಗ್ರಾಮದ ಪ್ರಮುಖ. ಗ್ರಾಮಲೆಕ್ಕಿಗನ ಹೆಸರು ಪಟವಾರಿ, ಕರ್ಣಂ ಅಥವಾ ಕುಲಕರ್ಣಿ, ಪಾಟೀಲರಲ್ಲಿ ರೆವಿನ್ಯೂ ಪಾಟೀಲ (ಮಾಲಿ ಪಾಟೀಲ), ಪೊಲೀಸು ಪಾಟೀಲ ಎಂಬ ಎರಡು ವರ್ಗ. 1870ರ ವರೆಗೆ ಪಾಟೀಲರಿಗೂ ಪಟವಾರಿಗಳಿಗೂ ಅವರ ಸೇವೆಗಾಗಿ ಇನಾಂ ಗ್ರಾಮಗಳನ್ನು ಕೊಡಲಾಗಿತ್ತು. ಆ ತರುವಾಯ ಸರ್ಕಾರ ಅವರ ಇನಾಂಗಳನ್ನು ಹಿಂದಕ್ಕೆ ಪಡೆದುಕೊಂಡು ಅದಕ್ಕೆ ಪ್ರತಿಯಾಗಿ ಅವರಿಗೆ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತಂದಿತು, ತಹಸೀಲ್ದಾರ್, ಮುನ್ಸಿಫ್, ನಾಜಿಮಾ-ಇ-ಸುಬಾ- ಇವರು ವಿವಿಧ ಹಂತಗಳಲ್ಲಿ ನ್ಯಾಯಾಡಳಿತವನ್ನು ನಿರ್ವಹಿಸುತ್ತಿದ್ದರು. ಎಲ್ಲಕ್ಕೂ ಮೇಲೆ ಉಚ್ಚ ನ್ಯಾಯಾಲಯವಿತ್ತು. ತಾಲ್ಲೂಕು ಹಂತದಿಂದ ರಾಜ್ಯದ ಪ್ರಮುಖ ಹಂತದವರೆಗೆ ಪ್ರತಿಯೊಂದು ನ್ಯಾಯಾಲಯವೂ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಿತ್ತು.

**ಆರ್ಥಿಕ ಸಾಮಾಜಿಕ ಸ್ಥಿತಿ:** ನಿಜಾಮರ ಆಳ್ವಿಕೆಗೆ ಗುಲ್ಬರ್ಗ ವಿಭಾಗದ ಆರ್ಥಿಕ ಪರಿಸ್ಥಿತಿ ಅವರ ರಾಜ್ಯದ ಇತರ ಪ್ರದೇಶಗಳಿಗಿಂತ ಭಿನ್ನವಾಗಿರಲಿಲ್ಲ. ನಿಜಾಮರಿಗೆ ಬಿಜಾಪುರ ಭಾಗದ ಬಗ್ಗೆ ಶಂಕಾಮನೋಭಾವವಿತ್ತು. ಫಲವತ್ತಾದ ಅದನ್ನು ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳನ್ನೂ ಬ್ರಿಟಿಷರಿಗೆ ಖಾಯಂ ಆಗಿ ಬಿಟ್ಟು ಕೊಟ್ಟು ಹೆಚ್ಚು ಫಲವತ್ತಾಗಿಲ್ಲದಿದ್ದ ಗುಲ್ಬರ್ಗ ಹಾಗೂ ಬಿದರೆ ಭಾಗಗಳು ನಿಜಾಮರಿಗೆ ಉಳಿದುವು. ಈ ಪ್ರದೇಶಗಳು ಸಾಮಾನ್ಯವಾಗಿ ಮಳೆಯ ಅಭಾವ ಹಾಗೂ ಕೆಲವು ವೇಳೆ ಕ್ಷಾಮಪರಿಸ್ಥಿತಿಗೆ ಒಳಗಾಗುವಂಥವು. 18 ಮತ್ತು 19ನೆಯ ಶತಮಾನಗಳಲ್ಲಿ ಸುಮಾರು 18 ಸಲ ಈ ಭಾಗಗಳಲ್ಲಿ ದುರ್ಭಿಕ್ಷ ಪರಿಸ್ಥಿತಿ ತಲೆದೋರಿತ್ತು. ಫಲವತ್ತಾದ ರಾಯಚೂರು ಪ್ರದೇಶದಲ್ಲಿ ಸಹ ಕ್ಷಾಮದ ಬೇಗೆ ಉಂಟಾಗುತ್ತಿತ್ತು. ನಿಜಾಮರ ಸರ್ಕಾರ ಅಂಥ ಕ್ಷಾಮ ಮತ್ತು ಅಭಾವ ಕಾಲದಲ್ಲಿ ತೆರಿಗೆ ವಸೂಲಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯುತ್ತಿತ್ತು. ಅನಾವೃಷ್ಟಿ ತೀವ್ರವಾಗಿದ್ದರೆ ಕಂದಾಯವನ್ನು ಮಾಫಿ ಮಾಡುತ್ತಿತ್ತು. ಮಳೆಯಾಗದ ಪ್ರದೇಶಗಳಲ್ಲಿ ಪರಿಹಾರ ಕ್ರಮಗಳನ್ನೂ ಕೈಗೊಳ್ಳುತ್ತಿತ್ತು.

ಭೂಮಿಗೆ ಸಂಬಂಧಿಸಿದಂತೆ ರಯತ್ವಾರಿ ಪದ್ಧತಿ ಸಾಮಾನ್ಯವಾಗಿತ್ತು. ಗುಲ್ಬರ್ಗ, ಬಿದರೆ, ರಾಯಚೂರು ಜಿಲ್ಲೆಗಳಲ್ಲಿ ಸರ್ವೇಕ್ಷಣೆ ನಡೆಸಿ ಹಿಡುವಳಿಗಳನ್ನು ನಿಗದಿಮಾಡಲಾಗಿತ್ತು. ಸರ್ಕಾರಕ್ಕೆ ಸಲ್ಲಬೇಕಾಗಿದ್ದ ಕಂದಾಯವನ್ನು ಪಾವತಿ ಮಾಡುವವರೆಗೂ ವ್ಯವಸಾಯ ಮಾಡುತ್ತಿದ್ದ ಭೂಮಿಯ ಮೇಲೆ ಸ್ವಾಮ್ಯ ಹೊಂದಿರಬಹುದಾಗಿತ್ತು. ಭೂಮಿಯಲ್ಲಿ ಬಿತ್ತ ಕಾಳಿನ ಪ್ರಮಾಣ ಇಲ್ಲವೆ ಉತ್ಪನ್ನವಾದ ಫಸಲಿನ ಆಧಾರದ ಮೇಲೆ ಕಂದಾಯ ನಿಗದಿಯಾಗುತ್ತಿತ್ತು. ಖುಷ್ಕಿ ಭೂಮಿಯಾದರೆ ರಾಜ್ಯದ ಪಾಲು ಭೂಮಿಯ ಉತ್ಪನ್ನದಲ್ಲಿ 1/4 ಭಾಗ, ತರಿ ಭೂಮಿಯಾದರೆ ಅದು ಉತ್ಪನ್ನದಲ್ಲಿ 2/5 ದಿಂದ 1/2 ಭಾಗದವರೆಗೆ ಇರುತ್ತಿತ್ತು.

18ನೆಯ ಶತಮಾನದಲ್ಲಿ ಈ ಪ್ರದೇಶ ಮರಾಠರ ದಾಳಿಗಳಿಗೆ ತುತ್ತಾಗಿ ಮತ್ತೆ ಶಾಂತಿ ನೆಲೆಸಿದ ಮೇಲೆ ಕಂದಾಯ ವಸೂಲಿಯನ್ನು ಬ್ಯಾಂಕರುಗಳಿಗೆ ಹಾಗೂ ಪಠಾಣ ಸೈನಿಕರಿಗೆ ಗೇಣಿಗೆ ವಹಿಸಿಕೊಡುವ ಪದ್ಧತಿ ರೂಢಿಗೆ ಬಂತು. 19ನೆಯ ಶತಮಾನದಲ್ಲಿ ಈ ಪದ್ಧತಿಯನ್ನು ಸರ್ ಸಾಲಾರ್ ಜಂಗ್ ರದ್ದು ಮಾಡಿದ. ಅದು ಜನರ ಏಳಿಗೆಗೆ ಕಾರಣವಾಗಬಲ್ಲ ಜನಪ್ರಿಯ ಕ್ರಮವಾಗಿತ್ತು.

ಆಸಫ್‍ಜಾಹೀ ಆಳ್ವಿಕೆಯಲ್ಲಿ ಕಲೆ, ಕುಶಲಕಲೆ, ಕಲಾತ್ಮಕ ವಸ್ತುಗಳ ತಯಾರಿಕೆ, ಹತ್ತಿ ಮತ್ತು ರೇಷ್ಮೆ ಉದ್ಯಮ, ಲೋಹ ಮತ್ತು ಬಿದ್ರಿ ವಸ್ತುಗಳ ತಯಾರಿಕೆ ಮೊದಲಾದವು ಸುಸ್ಥಿತಿಯಲ್ಲಿದ್ದುವು. ರಾಯಚೂರು ಹಾಗೂ ಲಿಂಗಸುಗೂರು ರೇಷ್ಮೆಸೀರೆಗಳ ನೇಯ್ಗೆಗೆ, ಗುಲ್ಬರ್ಗ ಟಸಾರ್ ಮತ್ತು ಮಷ್ರೂ ರೇಷ್ಮೆ ಬಟ್ಟೆಗೆ ಮತ್ತು ಶತ್ರಂಗಿ ತಯಾರಿಕೆಗೆ, ಬಿದರೆ ಬಿದ್ರಿ ಕೆಲಸಕ್ಕೆ ಪ್ರಸಿದ್ಧವಾಗಿದ್ದುವು. ಬಿದ್ರಿ ಬಲು ನಾಜೂಕಾದ ಸೂಕ್ಷ್ಮ ಹಾಗೂ ಕಲಾತ್ಮಕವಾದ ಕೆಲಸವಾಗಿತ್ತು.

ನಿಜಾಮರ ಇಡೀ ರಾಜ್ಯದ ಒಟ್ಟು ಪ್ರಜಾಸಂಖ್ಯೆಯಲ್ಲಿ ಕನ್ನಡಿಗರು ಶೇ.14ರಷ್ಟಿದ್ದರು. ಅವರಲ್ಲಿ ಹೆಚ್ಚುಮಂದಿ ಗುಲ್ಬರ್ಗ, ಬಿದರೆ ಹಾಗೂ ರಾಯಚೂರು ಜಿಲ್ಲೆಗಳಲ್ಲಿದ್ದರು. ದೇಶದ ಇತರ ಕಡೆಗಳಲ್ಲಿರುವಂತೆ ಈ ಭಾಗದಲ್ಲೂ ಹಿಂದು ಸಮಾಜ ಸಾಂಪ್ರದಾಯಿಕವಾಗಿ ವಿಭಜಿತವಾಗಿತ್ತು. ಚತುರ್ವರ್ಣಗಳ ಜೊತೆಗೆ, ಈ ವ್ಯವಸ್ಥೆಯ ಹೊರಗಿದ್ದು ಅನೇಕ ಉಪಯುಕ್ತ ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿದ್ದವರೂ ಇದ್ದರು. ಮಾಲ, ಢೇರ, ಬಂಜಾರ ಅಥವ ಲಂಬಾಣಿ, ವಡ್ಡ, ಗಂಡಾಲ (ಈಡಿಗ), ಕೊರವ (ನೇಕಾರ) ಮೊದಲಾದ ಜನ ಇಲ್ಲಿದ್ದು ಗ್ರಾಮದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖಪಾತ್ರ ವಹಿಸಿದ್ದರು. ಕಾಪು ಅಥವಾ ಕುಣ್ಬಿ (ರೈತವರ್ಗ) ಹಾಗೂ ಗೊಲ್ಲಜನ ಸಹ ಅಧಿಕವಾಗಿದ್ದರು. ದೋತಿ, ಚಿಕ್ಕ ಅಂಗಿ, ತಲಿಪಾಗು ಇಲ್ಲಿನ ಜನಸಾಮಾನ್ಯರ ಉಡುಪು. ಜಮಖಾನೆ ಇಲ್ಲವೆ ಕಂಬಳಿಯನ್ನು ಸದಾ ಜೊತೆಯಲ್ಲಿಟ್ಟುಕೊಂಡಿರುತ್ತಿದ್ದರು. ಹಿಂದು ಹಾಗೂ ಮುಸಲ್ಮಾನ ಸ್ತ್ರೀಯರಲ್ಲಿ ಸೀರೆ ಮತ್ತು ಚೋಳಿ ಸಾಮಾನ್ಯ. ಮುಸಲ್ಮಾನ ಹೆಂಗಸರು ಲಂಗ ಹಾಗೂ ಚೋಳಿ ಧರಿಸಿ ಭುಜದ ಮೇಲೆ ದುಪ್ಪಟ ಹೊದೆಯುವುದೂ ರೂಢಿ. ಲಂಬಾಣಿ ಸ್ತ್ರೀಯರ ಉಡುಪು ಸೊಂಟದಿಂದ ಇಳಿಬಿಟ್ಟ ಘಾಗ್ರ (ಲಂಗ) ಮತ್ತು ಮೇಲೆ ಕುಪ್ಪಸ.

ಈ ಭಾಗದ ಕರ್ನಾಟಕದ ಜನ ಇತರ ಭಾಗಗಳಲ್ಲಿರುವಂತೆ ಭಕ್ತಿ ಹಾಗೂ ಮನರಂಜನೆಗಾಗಿ ದೀಪಾವಳಿ, ಕಾಮನ ಹಬ್ಬ, ದಸರ, ನಾಗಪಂಚಮಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಿದ್ದರು. ಈದ್ ಉಜ್ಜುಹ, ಈದ್-ಉಲ್-ಫಿತರ್, ಮೊಹರಂ ಹಾಗೂ ಪೈಗಂಬರರ ಜನ್ಮದಿನ ಮಹಮ್ಮದೀಯರ ಮುಖ್ಯ ಹಬ್ಬಗಳು. ರಾಜಧಾನಿ ಹೈದರಾಬಾದಿನಲ್ಲಿ ಆಚರಿಸುತ್ತಿದ್ದ ನವರೋಜ್ ಪಾರಸಿ ಹಬ್ಬದ ವೈಭವವನ್ನು ನೋಡಲು ಜನ ಹೋಗುತ್ತಿದ್ದರು.

ಜನರ ಮುಖ್ಯ ಆಹಾರ ಜೋಳ ಹಾಗೂ ಶಾಮೆ ರೊಟ್ಟಿ. ಅವುಗಳಿಗೆ ನಂಜಿಕೊಳ್ಳುವುದಕ್ಕೆ ಬೇಳೆ ತರಕಾರಿ ಉಳ್ಳಾಗಡ್ಡೆ ಹಾಗೂ ಸಾಂಬಾರ ದಿನಸಿಗಳನ್ನು ಹಾಕಿ ಮಾಡಿದ ಸಾರು ಅಥವಾ ಪಲ್ಯ. ಕೆಲವು ವರ್ಗದ ಹಿಂದುಗಳು ಹಾಗೂ ಮುಸಲ್ಮಾನರು ಮಾಂಸಾಹಾರಿಗಳು. ಹಳ್ಳಿಗಳ ಕಡೆ ಮುಸಲ್ಮಾನರು ತಮ್ಮ ಹಿಂದು ನೆರೆಹೊರೆಯವರಿಗೆ ಅಸಮಾಧಾನವಾಗ ಬಾರದೆಂದು ಗೋಮಾಂಸವನ್ನು ತಿನ್ನುವುದಿಲ್ಲ. ನಗರವಾಸಿಗಳದು ವಿಶಾಲದೃಷ್ಟಿ, ಸಂಪ್ರದಾಯಗಳಿಗೆ ಕಟ್ಟು ಬಿದ್ದವರಲ್ಲ.

ಹಿಂದು ಹಾಗು ಮುಸಲ್ಮಾನರಲ್ಲಿ ಬಹುಪತ್ನಿತ್ವಕ್ಕೆ ಅವಕಾಶವಿತ್ತು. ಆದಾಗ್ಯೂ ವಿವಾಹಿತ ಸ್ತ್ರೀ-ಪುರುಷರ ಸಂಖ್ಯೆ ಸಮವಾಗಿದ್ದ ಕಾರಣ ಈ ಪದ್ಧತಿ ಹೆಚ್ಚಾಗಿ ಆಚರಣೆಯಲ್ಲಿರಲ್ಲವೆಂದು ತೋರುತ್ತದೆ. ವಿಧವೆಯರು ಸಾಕಷ್ಟು ಸಂಖ್ಯೆಯಲ್ಲಿದ್ದುದನ್ನು ನೋಡಿದರೆ ವಿಧವಾ ವಿವಾಹ ಸಮಾಜಗ್ರಾಹ್ಯವಾಗಿರಲಿಲ್ಲವೆಂದೆನಿಸುತ್ತದೆ. ಆದರೆ ರೈತವರ್ಗದಲ್ಲಿ ವಿಧವೆಯರ ಪುನರ್ವಿವಾಹಕ್ಕೆ ಅಡ್ಡಿಯಿರಲಿಲ್ಲ. ಅಂಥ ವಿವಾಹವನ್ನು ಮೊಹುತುರತ್ ಅಥವಾ ಮರ್ಮನು ಎಂದು ಕರೆಯುತ್ತಾರೆ.

**ವಾಸ್ತುಶಿಲ್ಪ:** ಆಸಫ್‍ಜಾಹೀ ಅರಸರು ಹಾಗೂ ಅವರ ವಜೀರರು (ಮಂತ್ರಿಗಳು) ಕಲೆ ಮತ್ತು ಶಿಲ್ಪಕ್ಕೆ ಉತ್ತೇಜನವಿತ್ತು ಸುಂದರವಾದ ಅರಮನೆ, ಮಸೀದಿ, ಉದ್ಯಾನ ಮೊದಲಾದುವನ್ನು ನಿರ್ಮಿಸಿದ್ದಾರೆ. ಆದರೆ ರಾಜಧಾನಿ ಹೈದರಾಬಾದಿನಿಂದ ಹೊರಗಡೆ ಇವರು ನಿರ್ಮಿಸಿದ ಕಟ್ಟಡಗಳು ಕಡಿಮೆ. ಗುಲಬರ್ಗದ ಐವಾನ್-ಎ-ಶಾಹೀ ಕಟ್ಟಡದಲ್ಲಿ ಗುಲ್ಬರ್ಗ ವಿಭಾಗದ ಮುಖ್ಯ ಕಚೇರಿಗಳಿದ್ದವು. ಆದರೆ ಹೈದರಾಬಾದಿನ ಬೃಹತ್ ಕಟ್ಟಡಗಳಿಗೆ ಹೋಲಿಸಿದರೆ ಅದೊಂದು ಸಾಮಾನ್ಯ ಕೃತಿ. ಆದರೆ ಕರ್ನಾಟಕ ಭಾಗದ ಐತಿಹಾಸಿಕ ಹಾಗೂ ಪುರಾವಸ್ತು ಸಂಬಂಧವಾದ ಕಟ್ಟಡಗಳನ್ನು ರಕ್ಷಿಸುವುದರಲ್ಲಿ ನಿಜಾಮರ ಸರ್ಕಾರ ಶ್ರಮವಹಿಸುತ್ತಿತ್ತು. ಗುಲ್ಬರ್ಗ, ರಾಯಚೂರು, ಮುದ್ಗಲ್ ಮೊದಲಾದೆಡೆಯ ಕೋಟೆಗಳು, ಹಲವಾರು ಮಸೀದಿಗಳು, ನಾಗಾಯಿ ಮೊದಲಾದೆಡೆಯ ಕೋಟೆಗಳು, ಹಲವಾರು ದೇವಾಲಯಗಳು ನಿಜಾಮ ಸರ್ಕಾರದಿಂದ ರಕ್ಷಿತವಾಗಿದ್ದುವು.

**ನಾಣ್ಯಗಳು:** ನಿಜಾಮರ ರಾಜ್ಯದಲ್ಲಿ ವಿವಿಧ ಮಾದರಿಯ ನಾಣ್ಯಗಳು ಚಲಾವಣೆಯಲ್ಲಿದ್ದವು. 1854ರಲ್ಲಿ ರೂಢಿಗೆ ತಂದ ಹಾಲಿ ಸಿಕ್ಕ ಮತ್ತು 1904ರಲ್ಲಿ ಚಲಾವಣೆಗೆ ಬಂದ ಮಹಬೂಬಿಯ ರೂಪಾಯಿ ನಿಜಾಮರು ಟಂಕಿಸುತ್ತಿದ್ದ ನಾಣ್ಯಗಳು. ಮಹಬೂಬಿಯ ರೂಪಾಯಿಯ ಒಂದು ಮುಖದಲ್ಲಿ ಚಾರ್‍ಮಿನಾರ್ ಕಟ್ಟಡದ ಚಿತ್ರವಿರುತ್ತದೆ. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಬೆಳ್ಳಿಯ ಅಭಾವದಿಂದ ಹಾಲಿ ಸಿಕ್ಕ ನಾಣ್ಯಗಳ ಟಂಕಣೆಯನ್ನು ನಿಲ್ಲಿಸಲಾಯಿತು. ಮಹಬೂಬ್ ಅಲಿಖಾನ್ ನಿಜಾಮರಾದಾಗ ನಾಣ್ಯಪದ್ಧತಿಯಲ್ಲಿ ಮತ್ತೆ ಸ್ಥಿರತೆ ಬಂತು. ನಿಜಾಮರು ಬೆಳ್ಳಿಯ ನಾಣ್ಯಗಳೊಡನೆ ವಿವಿಧ ಮೌಲ್ಯಗಳ ತಾಮ್ರದ ನಾಣ್ಯಗಳನ್ನು ಸಹ ಚಲಾವಣೆಗೆ ತಂದಿದ್ದರು. (ಬಿ.ಎಸ್.ಎ.)

**ಆಸರೆಕಟ್ಟು (ಸರಕಟ್ಟು):** ಕಟ್ಟಡದ ಅಂಗಗಳನ್ನು ಒಂದೇ ಸಮತಳದಲ್ಲಿ ಜೋಡಿಸಿ ಚೌಕಟ್ಟು ಭದ್ರವಾಗುವ ಹಾಗೆ ಮಾಡಿ ಕೊನೆಗಳಲ್ಲಿ ಸೇರಿಸಿ ಆಸರೆಕಟ್ಟನ್ನು (ಟ್ರಸ್) ತಯಾರಿಸುತ್ತಾರೆ. ಇದನ್ನು ಮನೆಗಳ ಮಾಡುಗಳಲ್ಲೂ ಸೇತುವೆಗಳಲ್ಲೂ ಉಪಯೋಗಿಸುವುದೇ ಹೆಚ್ಚು. ಗಟ್ಟಿಯಾದ ತಗಡುಳ್ಳ (ವೆಬ್) ಉಕ್ಕಿನ ಗರ್ಡರಿಗಿಂತ ಭಾರ ಬಹಳ ಹೆಚ್ಚಾಗದೆ ಇನ್ನೂ ಆಳವಾಗಿ ಹೆಚ್ಚಿನ ಭಾರವನ್ನು ಹೊರುವ ಹಾಗೆ ಆಸರೆಕಟ್ಟನ್ನು ತಯಾರಿಸಬಹುದು.

ಹಿಂದಿನ ಕಾಲದಲ್ಲಿ ಆಸರೆಕಟ್ಟುಗಳನ್ನು ಮರದಿಂದ ಮಾಡುತ್ತಿದ್ದರು. ಮೂರು ಮರದ ತೊಲೆಗಳನ್ನು ತ್ರಿಕೋನಾಕಾರವಾಗಿ ಜೋಡಿಸಿ ತೊಲೆಗಳು ಸೇರುವ ಕಡೆ ಮೊಳೆಗಳನ್ನೋ ಬೋಲ್ಟುಗಳನ್ನೋ ಹೊಡೆದರೆ ಸರಳವಾದ ಆಸರೆಕಟ್ಟು ಬರುತ್ತದೆ.

ಈ ಚೌಕಟ್ಟಿನ ಮೇಲೆ ಭಾರ ಬಿದ್ದಾಗ ಎರಡು ತೀರುಗಳ ಸಂಧಿಗಳ (ಜಾಯಿಂಟ್ಸ್) ಸಾಪೇಕ್ಷ (ರಿಲೆಟಿವ್) ಸ್ಥಾನಗಳಲ್ಲಿ ಬದಲಾವಣೆಯಾಗುವುದಿಲ್ಲ. ಮಾಡುಗಳ ಅಥವಾ ಸೇತುವೆಯ ಕಣ್ಣುಗಳ (ಸ್ಪ್ಯಾನ್ಸ್) ಅಗಲ ಹೆಚ್ಚಿದಾಗ ಇಂಥ ಹಲವು ತ್ರಿಕೋನಾಕಾರಗಳನ್ನು ಒಂದು ನಿಯಮಕ್ಕೆ ಅನುಸಾರವಾಗಿ ಒಟ್ಟುಗೂಡಿಸಿ ಆಸರೆಕಟ್ಟನ್ನು ತಯಾರಿಸುತ್ತಾರೆ.

ಮನೆಗಳ ಮಾಡುಗಳಲ್ಲಿ 2.5–6 ಮೀ ಅಗಲದ ಅಂಕಣಗಳಿಗೆ ಕಪ್ಲ್ ಕ್ಲೋಸ್ ಮತ್ತು ಕಾಲರ್ ಬೀಮ್ ಸರಕಟ್ಟುಗಳನ್ನು ಮರದಿಂದ ಮಾಡಿ ಉಪಯೋಗಿಸುತ್ತಿದ್ದರು. 7.8 ಮೀ ಅಂಕಣಗಳಿಗೆ ಕಿಂಗ್ ಪೋಸ್ಟ್ 10.62 ಮೀ ಗೆ ಕ್ವೀನ್ ಪೋಸ್ಟ್ ಮತ್ತು

15.5ಮೀಗೆ ಹ್ಯಾಮರ್ ಬೀಮ್ ಆಸರೆಕಟ್ಟುಗಳು ಬಂದುವು. ಆ ಮೇಲೆ ಮರದಿಂದಲೇ ಮಾಡಿದ ಹಗುರವಾದ ತಡಿಕೆಯ (ಲ್ಯಾಟಿಸ್) ನಮೂನೆ ಬಂತು. ಮುಂದಿನ ಹೆಜ್ಜೆಯಲ್ಲಿ ಒಂದೇ ಸರಕಟ್ಟಿನಲ್ಲಿ ಒತ್ತಡಕ್ಕೆ (ಕಂಪ್ರೆಷನ್) ಸಿಕ್ಕಿದ ಭಾಗಗಳನ್ನು ಮರದಿಂದಲೂ ಎಳೆತಕ್ಕೆ (ಟೆನ್ಷನ್) ಸಿಕ್ಕಿದವನ್ನು ಕಬ್ಬಿಣದಿಂದಲೂ ಮಾಡಿ ಅಗಲವಾದ ಕಣ್ಣುಗಳಿಗೆ ಉಪಯೋಗಿಸಿದರು.



ಚಿತ್ರ 1. ಬೆಲ್–ಫಾಸ್ಟ್ ರೂಫ್ ಆಸರೆಕಟ್ಟು

ಅಗಲವಾದ ಕಣ್ಣಿನ ರೈಲು ಸೇತುವೆಗಳು ಬಂದಾಗಿನಿಂದ ಸರಕಟ್ಟುಗಳಿಗೆ ಮೊದಲು ತಾಂಡವಾಳವನ್ನೂ (ಕ್ಯಾಸ್ಟ್ ಐರನ್), ಆಮೇಲೆ ಮೆದು ಕಬ್ಬಿಣವನ್ನೂ (ರಾಟ್ ಐರನ್), ಈಚೆಗೆ ಉಕ್ಕನ್ನೂ ಉಪಯೋಗಿಸುತ್ತಿದ್ದಾರೆ. ಮಿತಿಮೀರಿದ ಭಾರದಿಂದಲೂ ಉಷ್ಣತೆಯ (ಟೆಂಪರೇಚರ್) ಬದಲಾವಣೆಯಿಂದಲೂ ಆಗಬಹುದಾದ ಚಲನೆಗೆ ಅವಕಾಶ ಮಾಡಿಕೊಡಲು ಒಂದು ಕೊನೆಯನ್ನು ರೋಲರುಗಳ ಮೇಲೆ ಇಟ್ಟಿರುತ್ತಾರೆ.



ಚಿತ್ರ 2. ಕಿಂಗ್‌ಪೋಸ್ಟ್ ಆಸರೆಕಟ್ಟು

ಒಂದು ಆಸರೆಕಟ್ಟಿನ ಸಂವಿಧಾನದಲ್ಲಿ ನಾಲ್ಕು ಹಂತಗಳಿವೆ: 1. ಚೌಕಟ್ಟು ಹೊರಬೇಕಾದ ಭಾರಗಳ ಲೆಕ್ಕಾಚಾರ. 2. ತೊಲೆಗಳು, ಕಂಬಗಳು ಮತ್ತು ದೂಲಗಳ ಸಂವಿಧಾನ ಮತ್ತು ಜೋಡಣೆ. 3. ಮೇಲೆ ಭಾರ ಬಿದ್ದಾಗ ಅದರ ಭಾಗಗಳಲ್ಲಿ ಉತ್ಪನ್ನವಾಗುವ ತ್ರಾಸಗಳು. (ಸ್ಟ್ರೆಸ್) 4. ಈ ತ್ರಾಸಗಳನ್ನು ಸುರಕ್ಷಿತವಾಗಿ ತಡೆಯುವ ಹಾಗೆ ಭಾಗಗಳ ಜೋಡಣೆ.

ಆಸರೆಕಟ್ಟಿನ ಮೇಲೆ ಬರುವ ಭಾರಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು: 1. ಅದರ ಸ್ಥಿರಭಾಗ (ಡೆಡ್–ಲೋಡ್). ಇದು ಲಂಬವಾಗಿ ಕೆಳಕ್ಕೆ ಎಳೆಯುತ್ತದೆ. 2. ಸೇತುವೆಯ ಮೇಲೆ ಓಡಾಡುವ ಕಾರುಗಳು, ರೈಲುಗಾಡಿಗಳು, ಮಂಜು ಮತ್ತು ಗಾಳಿಯ ಒತ್ತಡ (ಲೈವ್ ಲೋಡ್). ಈ ಭಾರದ ಆಘಾತ ಸೇತುವೆಯ ಮೇಲೆ ವಿಶೇಷವಾಗಿದೆ.

ದೊಡ್ಡ ಆಸರೆಕಟ್ಟುಗಳು ಒಂದೇ ಸಮತಲದಲ್ಲಿ (ಪ್ಲೇನ್) ಇರಬಹುದು. ಇಲ್ಲವೆ ಎರಡು ಸಮತಲದಲ್ಲಿರಬಹುದು. ⌋⌊ ಆಕಾರದಲ್ಲಿ ಎರಡು ಉಕ್ಕಿನ ಕೋನಗಳಿಂದ ಮಾಡಿದ ಒಂದು ಸಮತಲದ ಆಸರೆಕಟ್ಟುಗಳನ್ನು ಕಾರ್ಖಾನೆಗಳು ಮತ್ತು ಯಂತ್ರಾಗಾರಗಳ ಮಾಡುಗಳಲ್ಲಿ ಉಪಯೋಗಿಸುತ್ತಾರೆ. ⌈⌉ ಅಥವಾ ⌋⌊ ⌉⌈ ಆಕಾರದಲ್ಲಿ ಎರಡು ಇಲ್ಲವೆ ನಾಲ್ಕು ಅಸಮವಾದ ಕೋನಗಳಿಂದ ಮಾಡಿದ ಎರಡು ಸಮತಳಗಳ ಆಸರೆಕಟ್ಟುಗಳನ್ನು ಅಗಲವಾದ ಸೇತುವೆಗಳಲ್ಲಿ ಉಪಯೋಗಿಸುತ್ತಾರೆ.

ದೊಡ್ಡ ಸೇತುವೆಯ ಸಂವಿಧಾನದಲ್ಲಿ ಹೊಳೆಯ ತಳದ ಮತ್ತು ತಳಪಾಯದ ನಿಷ್ಕೃಷ್ಟವಾದ ತಿಳಿವಳಿಕೆ ಆವಶ್ಯಕ. ಆಗ ಸೇತುವೆಯ ಕಣ್ಣಿನ ಅಗಲ ಮತ್ತು ನಮೂನೆಯನ್ನು ನಿರ್ಧರಿಸಬಹುದು. ರಸ್ತೆಗಳ ಸೇತುವೆಗಳ ಮೇಲೆ ಹೋಗುವ ಟ್ರಕ್ಕುಗಳ ಮತ್ತು ಟ್ರ್ಯಾಕ್ಟರುಗಳ ಭಾರ ಈಚೆಗೆ ಬಹಳ ಹೆಚ್ಚಾಗುತ್ತಿದೆ. ಸೇತುವೆಯ ಭಾರದಲ್ಲಿ ಆಸರೆಕಟ್ಟು, ರಸ್ತೆ, ನೀರಿನ ಕೊಳಾಯಿಗಳು ಮತ್ತು ವಿದ್ಯುತ್ತಿನ ಸಾಲುಗಳು ಮುಖ್ಯವಾದುವು. ಸೇತುವೆಯ ಉಕ್ಕಿನ ತೂಕವನ್ನು ಸೂತ್ರಗಳನ್ನು (ಫಾರ್ಮುಲ) ನಂಬದೆ ನೇರವಾಗಿ ಲೆಕ್ಕ ಹಾಕಬೇಕು. ಹಾಗೆಯೇ ಕಟ್ಟಡಗಳಲ್ಲೂ ಮೇಲೆ ಬರುವ ಮಾಡುಗಳು, ಗೋಡೆಗಳು ಮತ್ತು ವಿಶಿಷ್ಟಭಾರಗಳನ್ನು (ಸ್ಪೆಷಲ್ ಲೋಡ್ಸ್) ಪ್ರತ್ಯೇಕವಾಗಿ ಲೆಕ್ಕ ಹಾಕಬೇಕು. ಮಂಜು ಮತ್ತು ಗಾಳಿಯ ಒತ್ತಡ ಒಂದೊಂದು ಪ್ರದೇಶಕ್ಕೂ ಬೇರೆ ಬೇರೆಯಾಗಿರುತ್ತದೆ. ಸಾಮಾನ್ಯವಾಗಿ ಉಪಯೋಗದಲ್ಲಿರುವ ಆಸರೆಕಟ್ಟುಗಳ ನಮೂನೆಗಳನ್ನು ಚಿತ್ರಗಳಲ್ಲಿ ತೋರಿಸಿದೆ. ಇವುಗಳಲ್ಲಿ ಒಂದು ಸನ್ನಿವೇಶಕ್ಕೆ ಯಾವ ಸಂವಿಧಾನ ಹೊಂದುವುದೆಂದು ನಿರ್ಣಯಿಸಿ ಆಸರೆಕಟ್ಟಿನ ಭಾಗಗಳಲ್ಲಿ ತ್ರಾಸಗಳನ್ನು ರೇಖಾಕೃತಿಗಳ ಮೂಲಕವೂ (ಗ್ರ್ಯಾಫಿಕ್ ಸ್ಟ್ಯಾಟಿಕ್ಸ್), ಗಣಿತದ ಮೂಲಕವೂ (ಅನಲಿಟಿಕಲಿ) ಗೊತ್ತು ಮಾಡಿ, ಒಂದರೊಡನೆ ಇನ್ನೊಂದನ್ನು ಹೋಲಿಸಿ ಹೆಚ್ಚಿನ ತ್ರಾಸವನ್ನು ಸಂವಿಧಾನದಲ್ಲಿ ಉಪಯೋಗಿಸಿಕೊಳ್ಳಬೇಕು.

ಉಕ್ಕಿನ ಇಲ್ಲವೆ ಪ್ರಬಲಿತ ಕಾಂಕ್ರೀಟಿನ (ರೀಇನ್‌ಫೋರ್ಸ್ಡ್ ಕಾಂಕ್ರೀಟ್) ಆಸರೆಕಟ್ಟಿನ ಮೇಲುಗಡೆಯ ತುಂಡುಗಳನ್ನು ಮೇಲಿನ ಹುರಿಯೆಂದೂ (ಅಪ್ಪರ್ ಕಾರ್ಡ್) ಕೆಳಗಿನ ತುಂಡುಗಳನ್ನು ಕೆಳಗಿನ ಹುರಿಯೆಂದೂ (ಲೋಯರ್ ಕಾರ್ಡ್) ಕರೆಯುತ್ತಾರೆ. ಇವೆರಡನ್ನೂ ಒಟ್ಟುಗೂಡಿಸುವ ಲಂಬವಾದ ಇಲ್ಲವೆ ಓರೆಯಾದ ಭಾಗಗಳನ್ನು ದಿಂಡಿನ (ವೆಬ್) ಭಾಗಗಳು ಎನ್ನುತ್ತಾರೆ. ಚೌಕಟ್ಟು ಹೊರಬೇಕಾದ ಭಾರಗಳನ್ನು ಕಾರ್ಡ್ ಮತ್ತು ವೆಬ್‌ನ ತುಂಡುಗಳ ಸಂಧಿಗಳ ಮೇಲೆ ಬೀಳುವ ಹಾಗೆ ಸಂವಿಧಾನ ಮಾಡಿರುತ್ತಾರೆ. ಈ ಕಾರಣದಿಂದ ಆಸರೆಕಟ್ಟಿನ ಭಾಗಗಳು ಒತ್ತಡದ (ಕಂಪ್ರೆಷನ್) ಅಥವಾ ಎಳೆತದ ತ್ರಾಸದಲ್ಲಿರುತ್ತವೆ, ಬಾಗುವ (ಬೆಂಡಿಂಗ್) ತ್ರಾಸದಲ್ಲಿರುವುದಿಲ್ಲ. ಸೇತುವೆಯ ಒಂದು ಕಣ್ಣಿನಮೇಲೆ ಬೀಳುವ ಭಾರವನ್ನು ಹಿಮ ಮತ್ತು ಗಾಳಿಯ ಒತ್ತಡವನ್ನೂ ಸೇರಿಸಿ ಲೆಕ್ಕ ಹಾಕಿ ಆಸರೆಕಟ್ಟಿನ ನಕ್ಷೆಯಮೇಲೆ ಮೇಲಿನ ಹುರಿಯ ಸಂಧಿಗಳಿಗೆ ಸಂಪೂರ್ಣವಾಗಿ ಹಂಚಿ ರೇಖಾಕೃತಿಗಳಿಂದ (ಗ್ರ್ಯಾಫಿಕ್ ಸ್ಟ್ಯಾಟಿಕ್ಸ್) ಆಸರೆಕಟ್ಟಿನ ಒಂದೊಂದು ರೌಂಡಿನ



ಚಿತ್ರ 3. ಮೇಲಿನದು – ಬೌಸ್ಟ್ರಿಂಗ್ ಆಸರೆಕಟ್ಟು
ಕೆಳಗಿನದು – ಬೌಸ್ಟ್ರಿಂಗ್ ಮಾದರಿಯ ಉಕ್ಕುಸೂರು ಆಸರೆಕಟ್ಟು

ಮೇಲೂ ಬೀಳುವ ಒತ್ತಡದ ಅಥವಾ ಎಳೆತದ ಅಥವಾ ತ್ರಾಸದ ಪ್ರಮಾಣವನ್ನು ಶಾಸ್ತ್ರೀಯವಾಗಿ ನಕ್ಷೆಗಳಿಂದಲೇ ಒಂದು ವಿಶಿಷ್ಟವಾದ ವಿಧಾನದಲ್ಲಿ ಕಂಡುಹಿಡಿಯುತ್ತಾರೆ. ಆಮೇಲೆ ಆಸರೆಕಟ್ಟಿನ ಚಿತ್ರದಲ್ಲಿ ಒತ್ತಡಕ್ಕೆ (–) ಸಿಕ್ಕಿದ ಭಾಗಗಳನ್ನು ದಪ್ಪವಾದ ರೇಖೆಗಳಿಂದಲೂ ಎಳೆತಕ್ಕೆ (+) ಸಿಕ್ಕಿದವುಗಳನ್ನು ತೆಳುವಾದ ರೇಖೆಗಳಿಂದಲೂ ಗುರುತುಮಾಡಿ ಒಂದೊಂದು ಭಾಗದಲ್ಲೂ ಬರುವ ತ್ರಾಸಗಳನ್ನು ಕೋಷ್ಟಕಗಳಲ್ಲಿ ಬರೆದಿಡುತ್ತಾರೆ. ಈ ಆಧಾರದ ಮೇಲೆ ಒಂದೊಂದು ರೌಂಡನ್ನು ಪ್ರತ್ಯೇಕವಾಗಿ ಸಂವಿಧಾನ ಮಾಡುತ್ತಾರೆ.

ಮನೆಯ ಮಾಡುಗಳಲ್ಲಿ ಉಪಯೋಗಿಸುವ ಸರಕಟ್ಟುಗಳು ಮೇಲುಗಡೆಯಿಂದ ಬರುವ ತೂಕ, ಹಿಮ ಮತ್ತು ಗಾಳಿಯ ಭಾರವನ್ನು ಮೇಲಿನ ಹುರಿಯ ಮೂಲಕ ಹೊರುತ್ತವೆ. ಒಳಮಾಳಿಗೆಯಿದ್ದರೆ ಅದರ ತೂಕ ಕೆಳಗಿನ ಹುರಿಯಮೇಲೆ ಬೀಳುತ್ತದೆ.

ಸೇತುವೆಯ ಎರಡು ಆಸರೆಕಟ್ಟುಗಳ ನಡುವೆ ತಳದಲ್ಲಿ ರೈಲುದಾರಿಯಾಗಲಿ, ರಸ್ತೆಯಾಗಲಿ ಹೋದರೆ ಅದನ್ನು ತ್ರೂ ಸೇತುವೆಯೆನ್ನುತ್ತಾರೆ. ಮೇಲುಗಡೆ ಹೋದರೆ ಡೆಕ್ ಸೇತುವೆಯೆನ್ನುತ್ತಾರೆ. ಸೇತುವೆಗಳಲ್ಲಿ ಭಾರ ಮೇಲಿನ ಹುರಿಯ ಮೇಲಾದರೂ ಬೀಳಬಹುದು, ಕೆಳಹುರಿಯ ಮೇಲಾದರೂ ಬೀಳಬಹುದು. ಡೆಕ್ ಸೇತುವೆಗಳಲ್ಲಿ ಮೇಲಿನ ಹುರಿಯೂ ತ್ರೂ ಸೇತುವೆಗಳಲ್ಲಿ ಕೆಳಗಿನ ಹುರಿಯೂ ಭಾರವನ್ನು ಹೊರುತ್ತವೆ. ಸೇತುವೆಗಳಲ್ಲಿ ಆಸರೆಕಟ್ಟಿನ ಭದ್ರತೆಯನ್ನು ಕಾಪಾಡಲು ಅದರ ಸಮತಳಕ್ಕೆ ಸಮಕೋಣವಾಗಿ ಬಿಗಿ ಪಟ್ಟಿಯನ್ನು ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಎರಡು ಆಸರೆಕಟ್ಟುಗಳ ನಡುವೆ ಒಂದು ಚೌಕಟ್ಟನ್ನು ಸೇರಿಸುತ್ತಾರೆ.

ಆಸರೆಕಟ್ಟಿನ ಆಳ ಸೇತುವೆಯ ಕಣ್ಣಿನ 1/8 ಭಾಗದಿಂದ 1/5ರ ವರೆಗೂ ವ್ಯತ್ಯಾಸವಾಗುತ್ತದೆ. ಕಣ್ಣಿನ ಅಗಲ ಹೆಚ್ಚಾದ ಹಾಗೆ ಈ ಪ್ರಮಾಣವೂ ಹೆಚ್ಚಾಗುತ್ತದೆ. ಒಂದೇ ಅಗಲದ ರಸ್ತೆಯ ಸೇತುವೆಯ ಆಳ ರೈಲು ಸೇತುವೆಯ ಆಳಕ್ಕಿಂತ ಕಡಿಮೆಯಾಗಿರುತ್ತದೆ. ಸೇತುವೆಯ

ಕಣ್ಣು 91ಮೀ ಗಿಂತ ಕಡಿಮೆ ಇದ್ದರೆ ಮೇಲಿನ ಮತ್ತು ಕೆಳಗಿನ ಹುರಿಗಳು ನೇರವಾಗಿ ಸಮಾನಾಂತರವಾಗಿರುತ್ತವೆ. ಹೆಚ್ಚಾದರೆ ಮೇಲಿನ ಹುರಿ ಮಾತ್ರ ಪರವಲಯದ (ಪ್ಯಾರಬೊಲ) ಆಕಾರದಲ್ಲಿ ಬಾಗಿರುತ್ತದೆ.

**ಆಸರೆಕಟ್ಟಿನ ಸಂವಿಧಾನ:** ಆಸರೆಕಟ್ಟಿನ ಭಾಗಗಳಲ್ಲಿ ತ್ರಾಸವನ್ನು ಲೆಕ್ಕ ಹಾಕುವಾಗ ಎರಡು ತುಂಡುಗಳ ಸಂಧಾನಗಳಲ್ಲಿ ಘರ್ಷಣೆಯಿಲ್ಲದ ಮೊಳೆಗಳಿವೆಯೆಂದೂ ಮೇಲೆ ಭಾರ ಬಿದ್ದಾಗ ಒಂದೊಂದು ತುಂಡೂ ಕೇವಲ ತುಯ್ತ ಇಲ್ಲವೆ ಒತ್ತಡದ ತ್ರಾಸದಲ್ಲಿರುವುದೆಂದೂ ಅಂಗೀಕರಿಸುತ್ತಾರೆ. ಒಂದೊಂದು ಸಂಧಿಯಲ್ಲೂ ತ್ರಾಸಗಳೂ ಭಾರಗಳೂ ಸಮತೂಕದಲ್ಲಿದ್ದು ಒಂದೇ ಸಮತಲದಲ್ಲಿರುತ್ತವೆ. ಇವುಗಳನ್ನು ಮಟ್ಟವಾಗಿಯಾಗಲಿ (ಹಾರಿಸ್ಯಾಂಟಲಿ), ಲಂಬವಾಗಿಯೇ (ವರ್ಟಿಕಲಿ) ಆಗಲಿ ವಿಭಜಿಸಿದಾಗ ಒಂದೊಂದು ದಿಕ್ಕಿನಲ್ಲೂ ಅವುಗಳ ಮೊತ್ತ ಶೂನ್ಯವಾಗಿರಬೇಕು. ಇಷ್ಟೇ ಅಲ್ಲದೆ ಸಮಸ್ಥಿತಿ ಶಾಸ್ತ್ರದ (ಸ್ಟ್ಯಾಟಿಕ್ಸ್) ತತ್ತ್ವಗಳ ಪ್ರಕಾರ ಆಸರೆಕಟ್ಟಿಗೆ ಸಮಕೋಣವಾದ ಒಂದು ಅಕ್ಷದ ಸುತ್ತ ಮೇಲಿನ ತ್ರಾಸಗಳ ಮತ್ತು ಭಾರಗಳ ಭ್ರಾಮಕ ಶಕ್ತಿಗಳ (ಮೊಮೆಂಟ್ಸ್) ಒಟ್ಟು ಮೊತ್ತ ಶೂನ್ಯವಾಗಿರಬೇಕು. ಒಂದು ಆಸರೆಕಟ್ಟಿನಲ್ಲಿ ಸಂಧಿಗಳಿದ್ದು ಅದರಲ್ಲಿರುವ ತುಂಡುಗಳ (ಮೆಂಬರ್ಸ್) ಸಂಖ್ಯೆ (2ಟ–3) ಆಗಿದ್ದರೆ, ಒಂದಲ್ಲ ಒಂದು ವಿಧದಲ್ಲಿ ತ್ರಾಸಗಳನ್ನು ಕರಾರುವಾಕ್ಕಾಗಿ ಲೆಕ್ಕ ಹಾಕಬಹುದು. ತುಂಡುಗಳ ಸಂಖ್ಯೆ ಕಡಿಮೆಯಾಗಿದ್ದರೆ ಚೌಕಟ್ಟು ಅಭದ್ರವಾಗುತ್ತದೆ. ಹೆಚ್ಚಾಗಿದ್ದರೆ ತ್ರಾಸಗಳು ಅನಿಶ್ಚಿತವಾಗಿಬಿಡುತ್ತವೆ. ಅದನ್ನು ಸರಿಯಾಗಿ ಲೆಕ್ಕ ಹಾಕಲಾಗುವುದಿಲ್ಲ. ದೊಡ್ಡ ಸೇತುವೆಗಳ ಸಂವಿಧಾನವೂ ಕಟ್ಟಡವೂ ತೊಡಕಾದ ಮತ್ತು ಕಷ್ಟವಾದ ಕೆಲಸಗಳು. ಅವುಗಳ ಮೇಲಿನ ತ್ರಾಸವನ್ನು ಕಂಡುಹಿಡಿಯಲು ಪ್ರಭಾವದ ರೇಖೆಗಳು (ಇನ್‌ಫ್ಲುಯೆನ್ಸ್ ಲೈನ್ಸ್) ಎಂಬ ಕ್ರಮವನ್ನು ಬಳಸುತ್ತಾರೆ. (ಎಚ್.ಸಿ.ಕೆ.)

**ಆಸರೆಗೋಡೆ:** ಹಿಂಭಾಗದಲ್ಲಿರುವ ಮಣ್ಣಿನ ಒತ್ತಡವನ್ನು ತಡೆಯುವ ಗೋಡೆ (ತಡೆಗೋಡೆ; ರೀಟೇನಿಂಗ್ ವಾಲ್). ಆಳವಾದ ಸರೋವರದ ನೀರಿನ ಒತ್ತಡವನ್ನು ತಡೆಯುವ ಕಲ್ಲುಗಾರೆಯ ಕಟ್ಟೆಯಲ್ಲಿ ಹೇಗೋ ಹಾಗೆ ಆಸರೆ ಗೋಡೆಯ ಓರೆ ಚಿತ್ರದಲ್ಲಿರುವಂತೆ ಅದರ ಮುಖದ ಕಡೆ ಇರುತ್ತದೆ. ಗೋಡೆಯ ಮಣ್ಣಿನ ಕಡೆಯ ಮುಖ (ಬೆನ್ನು) ಲಂಬವಾಗಿರುತ್ತದೆ. ಹೊರಗಡೆಯ ಮುಖ ಕೆಲವುವೇಳೆ ಓರೆಯಾಗಿರುವುದರ ಬದಲು ಮೆಟ್ಟಿಲು ಮೆಟ್ಟಿಲಾಗಿರುತ್ತದೆ.



ಆದರೂ ನೀರಾವರಿಯ ಕೆಲಸಗಳಲ್ಲಿ ಇಂಥ ಗೋಡೆ ಕಟ್ಟುವಾಗ ಓರೆಯನ್ನೆಲ್ಲ ಬೆನ್ನಿನ ಕಡೆಗೆ ಕೊಟ್ಟು ಮುಖವನ್ನು ಲಂಬವಾಗಿಡಬೇಕಾಗಿ ಬರುತ್ತದೆ. ಗೋಡೆಗಳನ್ನು ಇಟ್ಟಿಗೆ ಗಾರೆಯಿಂದ ಅಥವಾ ವರಸೆಯಾದ ಕಲ್ಲುಗಳಿಂದ ಕಟ್ಟಿದಾಗ ಹೀಗೆ ಮಾಡುವುದು ಅನುಕೂಲ. ಆದರೆ ಗೋಡೆಯ ಮುಖದ ಕಡೆ ಮೆಟ್ಟಲುಗಳನ್ನು ಬಿಡುವುದು ಅಪೇಕ್ಷಣೀ ಯವಲ್ಲ. ಏಕೆಂದರೆ ಮೆಟ್ಟಿಲುಗಳ ಮೇಲೆ ಬೀಳುವ ಮಣ್ಣಿನಲ್ಲಿ ಬಳ್ಳಿಗಳ ಬೀಜಗಳು ಬೇರುಬಿಟ್ಟು ಕುರುಚಲು ಗಿಡಗಳು ಬೆಳೆದುಕೊಳ್ಳುತ್ತವೆ. ಆದರೆ ದಕ್ಷಿಣಭಾರತದಲ್ಲಿನ ಹಾಗೆ ತಡೆಗೋಡೆಗಳನ್ನು ಕಲ್ಲಿನಿಂದ ಅಥವಾ ಗಿಲಾವು ಮಾಡಿದ ಇಟ್ಟಿಗೆಯಿಂದ ಕಟ್ಟಿದರೆ ಈ ಆಕ್ಷೇಪಣೆಯಿರುವುದಿಲ್ಲ. ಅಂಥ ಕಡೆಗಳಲ್ಲಿ ತಡೆಗೋಡೆಗಳನ್ನು ಮುಖದ ಕಡೆ ಓರೆಯಾಗಿರುವಂತೆ ಧಾರಾಳವಾಗಿ ಕಟ್ಟಬಹುದು.

ನೀರಾವರಿಯ ಕೆಲಸದಲ್ಲಿ ಮಣ್ಣಿನ ಏರಿಯ ಇಳಿಜಾರಾದ ಪಕ್ಕಗಳನ್ನು ತಡೆಯುವುದಕ್ಕಾಗಿ ತಲೆಮಟ್ಟ ಇಳಿಜಾರಾಗಿರುವ ಆಸರೆಗೋಡೆಗಳನ್ನು ಕಟ್ಟುತ್ತಾರೆ. ಆಗ ಇವುಗಳ ತಲೆಮಟ್ಟವನ್ನು ಮಣ್ಣಿನ ಏರಿಯ ಪಕ್ಕಗಳ ಇಳಿಜಾರಿಗೆ ಸಮವಾಗಿ ಇಡುತ್ತಾರೆ. (ಎಚ್.ಸಿ.ಕೆ.)

**ಆಸವೀಕರಣ: ನೋಡಿ–ಬಟ್ಟಿ ಇಳಿಸುವಿಕೆ**

**ಆಸಾದಿ:** ಧಾರ್ಮಿಕ ವೃತ್ತಿಗಾಯಕ ಪರಂಪರೆಗೆ ಸೇರಿದ ಮಾರಮ್ಮನ ಆರಾಧಕರು. ಮಾರಮ್ಮನಿಗೆ ಸಂಬಂಧಿಸಿದ ಹಾಡುಗಳನ್ನೇ ಹೆಚ್ಚಾಗಿ ಹಾಡುವರು. ಆಕೆ ಮೆರೆದ ಪವಾಡ ಹಾಗೂ ಮಹಿಮೆಗಳನ್ನು ಭಕ್ತ ಸಮೂಹಕ್ಕೆ ತಿಳಿಸುತ್ತ ಅವರಲ್ಲಿ ಭಯ ಭಕ್ತಿ, ಧರ್ಮ ಶ್ರದ್ಧೆಗಳನ್ನು ಮೂಡಿಸುವುದೇ ಇವರ ಕಾಯಕ. ಕರ್ನಾಟಕದಲ್ಲಿ ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಭಾಗಗಳಲ್ಲಿ ವಿಶೇಷತಃ ಕಂಡುಬರುತ್ತಾರೆ. ಇವರು ಪರಿಶಿಷ್ಟ ಮಾದಿಗ ಜಾತಿಗೆ ಸೇರಿದವರು. ಮಾರಮ್ಮನ ಎದುರಿನಲ್ಲಿಯೇ ಇವರ ದೀಕ್ಷೆ ನಡೆಯುವುದು. ದೇವಿಯ ಮುದ್ರೆ ಬಿದ್ದಂದಿನಿಂದ ತಮ್ಮ ಕುಲಕಸಬಾದ ಚಮ್ಮಾರಿಕೆಯನ್ನು ಮಾಡುವಂತಿಲ್ಲ. ಅಲ್ಲದೆ ಊರಿನ ಯಾವುದೇ ಕೀಳು ಕೆಲಸಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ. ದೇವಿ ಪ್ರಾರ್ಥನೆಗೆ ಮಂಗಳವಾರ ಮತ್ತು ಶುಕ್ರವಾರ ಇವರಿಗೆ ಪ್ರಶಸ್ತ ದಿನಗಳು. ಇವರ ಉಡುಗೆ ತೊಡುಗೆಗಳಲ್ಲಿ ವಿಶೇಷತೆ ಕಾಣಬಹುದು. ಕೆಂಪುಸೀರೆಯ ರುಮಾಲು, ಬಿಳಿಯ ಕಾಸೆಪಂಚೆ, ನಿಲುವಂಗಿ, ಅದರ ಮೇಲೆ ಕೋಟು, ಕೊರಳಲ್ಲಿ ಕರಿಮಣಿಸರ, ಹಣೆಗೆ ಕುಂಕುಮ ಧರಿಸುವರು. ದೇವತೆಯನ್ನು ಕೊಂಡಾಡಲು ಕೈಯಲ್ಲಿರುವುದು ರಣಹಲಗೆ ಎಂಬ ವಾದ್ಯ. ಹಬ್ಬ ಹರಿದಿನಗಳಲ್ಲದೆ ಜಾತ್ರೆಯಂತಹ ಸಾಂಸ್ಕೃತಿಕ ಸಂದರ್ಭಗಳಲ್ಲೂ ಆಸಾದಿ ಪಾತ್ರ ಬಹುಮುಖ್ಯ. ಇವನಿಲ್ಲದೆ ಜಾತ್ರೆಯ ಕಾರ್ಯಗಳು ಪೂರ್ಣಗೊಳ್ಳುವುದಿಲ್ಲ. ಮಾರಮ್ಮನ ಮೆರವಣಿಗೆಯ ನಿಗದಿ, ಕೋಣ ಕುರಿಗಳ ಬಲಿ ಇತ್ಯಾದಿ ವಿಚಾರಗಳನ್ನು ತಿಳಿಸುವವನೇ ಈತ. ಇವರು ಮೆರವಣಿಗೆ

ಆಸಾದಿ ಗಾಯಕ

ಹೊರಡುವ ಸಂದರ್ಭದಲ್ಲಿ ಹಲಗೆ ಹಿಡಿದು ದೇವತೆಯ ಬಗ್ಗೆ ಹೊಗಳಿ ಕೊಂಡಾಡುವುದುಂಟು. ಈ ಕೊಂಡಾಟದಲ್ಲಿ ಬಯ್ಗಳಗಳೂ ಇರುತ್ತವೆ. ಹೀಗೆ ಬೈಯ್ಯುವುದೂ ಇವರಿಗೆ ಈ ಸಂದರ್ಭದಲ್ಲಿರುವ ವಿಶೇಷ ಹಕ್ಕು; ಇದು ಈ ವೃತ್ತಿ ಗಾಯಕ ಪರಂಪರೆಯವರಿಗೆ ಮಾತ್ರ ಸೀಮಿತವಾದದ್ದು.

ಇವರು ತಮ್ಮ ಜೀವನದ ಬಹುಪಾಲು ಕಾಲವನ್ನು ಮಾರಿಗುಡಿಗಳಿರುವ ಊರುಗಳನ್ನು ಸುತ್ತುತ್ತ, ಹಾಡುಗಳನ್ನು ಹೇಳುತ್ತ ಕಳೆಯುವರು. ಇವರ ಹಾಡುಗಳಲ್ಲಿ ಮುಖ್ಯವಾಗಿ ಮಾರಿದೇವತೆ ಕುರಿತ ಹಾಡುಗಳು ಕೋಣಬಿಗೌಡನ ಹಾಡುಗಳು, ವಿನೋದ ಸಂಬಂಧದ ಹಾಡುಗಳನ್ನು ಕಾಣಬಹುದು. ಮಾರಮ್ಮನ ಜಾತ್ರೆಯ ಸಂದರ್ಭದಲ್ಲಿ ಭಕ್ತ ಸಮೂಹದ ಒತ್ತಾಸೆ, ಒತ್ತಾಯಗಳಿಗೆ ಮಣಿದು ಅಶ್ಲೀಲ ಪದಗಳನ್ನೂ ಹಾಡುವರು. ಒಂದು ರೀತಿಯ ವಿಶಿಷ್ಟ ನಿಂದಾಸ್ತುತಿಯ ಮೂಲಕ ತಮ್ಮ ದೈವಾರಾಧನೆಯನ್ನು ಕೈಗೊಳ್ಳುವರು. ಇಂಥ ರಚನೆಗಳಲ್ಲಿ ಕೆಲವು ಕಡೆ ಮೇಲುವರ್ಗದವರನ್ನು ಕುರಿತು ಅವಾಚ್ಯವಾಗಿ, ತುಚ್ಛವಾಗಿ ಬಯ್ಯುವ ರಚನೆಗಳೂ ಕಂಡುಬರುತ್ತವೆ. ಒಂದು ಆಸಾದಿ ಪದ ಹೀಗಿದೆ.

ಗೌಡ ಗಂಭೀರನಲ್ಲ ತೌಡು ಬುಕ್ಕಿಟ್ಟಲ್ಲ
ಔಡಲ ಕಾಯಿ ಬೆಳಿಸಲ್ಲ ಈ ಊರ
ಗೌಡನ ಹೆಣ್ತಿ ಗರ್ತ್ಯಲ್ಲ (ಎಂ.ಆರ್‌ಇ.)

**ಆಸಾಮಿ ಹಾಜರಿ ಹುಕುಂ:** ಒಬ್ಬನನ್ನು ಬಂಧನದಲ್ಲಿಟ್ಟಿರುವುದು ನ್ಯಾಯ ವಿಹಿತವೋ ಅಲ್ಲವೋ ಎಂಬುದನ್ನು ವಿಚಾರಣೆ ಮಾಡುವುದಕ್ಕಾಗಿ ನ್ಯಾಯಾಧಿಪತಿಯ ಮುಂದೆ ವ್ಯಕ್ತಿಯನ್ನು ಸಾಕ್ಷಾತ್ತಾಗಿ ಹಾಜರು ಮಾಡಬೇಕೆಂದು ಕೊಟ್ಟ ಆಜ್ಞೆ (ಹೇಬಿಯಸ್ ಕಾರ್ಪಸ್). ನೀವು ಈ ದೇಹ ಪಡೆಯಬಹುದು–ಎಂಬುದು ಹೇಬಿಯಸ್ ಕಾರ್ಪಸ್‌ನ ಅರ್ಥ. ವ್ಯಕ್ತಿಯನ್ನು ಬಂಧನದಲ್ಲಿಟ್ಟಿರುವವನಿಗೆ ನ್ಯಾಯಾಧೀಶ ಈ ಆಜ್ಞೆ ನೀಡುತ್ತಾನೆ. ಅಕ್ರಮವಾಗಿ ಬಂಧಿಸಿ, ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸದೆ ನ್ಯಾಯಬಾಹಿರವಾಗಿ ಸೆರೆಯಲ್ಲಿಟ್ಟಿರುವುದಕ್ಕೆ ಇದು ಪರಿಹಾರಕ್ರಮ. ಇದು ಒಂದು ಹಕ್ಕು. ನ್ಯಾಯಬಾಹಿರ ಬಂಧನವೆನಿಸಬಹುದಾದ ಸಂದರ್ಭದ ವಿವರಗಳನ್ನೊಳಗೊಂಡು ಪ್ರಮಾಣಪೂರ್ವಕವಾದ ಹೇಳಿಕೆಯೊಂದಿಗೆ ಉಚ್ಚನ್ಯಾಯಾಲಯಕ್ಕೋ ಅದರ ನ್ಯಾಯಮೂರ್ತಿಗೋ ಅರ್ಜಿ ಸಲ್ಲಿಸಿದಾಗ ಮಾತ್ರವೇ ಈ ಆಜ್ಞೆ ನೀಡಲಾಗುತ್ತದೆ. ಬಂಧನದಲ್ಲಿರುವವನನ್ನು ಒಂದು ನಿರ್ದಿಷ್ಟ ಕಾಲಕ್ಕೆ ಸರಿಯಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆಂದೂ ಆತನ ಬಂಧನದ ದಿನ ಹಾಗೂ ಕಾರಣ ತಿಳಿಸಬೇಕೆಂದೂ ಈ ಆಜ್ಞೆ ತಿಳಿಸುತ್ತದೆ. ವ್ಯಕ್ತಿಯ ಬಂಧನಕ್ಕೆ ಸಂಬಂಧಿಸಿದಂತೆ ಆತನ ವಿಚಾರವಾಗಿ ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧವಾಗಿರಬೇಕೆಂದೂ ಸಂಬಂಧಪಟ್ಟವರು ಅದನ್ನು ಸ್ವೀಕರಿಸಬೇಕೆಂದೂ ಈ ಆಜ್ಞೆಯಲ್ಲಿ ಸೂಚಿಸಿರುತ್ತದೆ.

**ಇಂಗ್ಲೆಂಡಿನಲ್ಲಿ:** ಮ್ಯಾಗ್ನಕಾರ್ಟ ಎಂಬ ವೈಯಕ್ತಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಮಹಾಸನ್ನದನ್ನು ಇಂಗ್ಲೆಂಡಿನ ಪ್ರಜೆಗಳು ಜಾನ್ ದೊರೆಯಿಂದ ಪಡೆಯುವುದಕ್ಕೆ (1215) ಮುಂಚಿನಿಂದಲೂ ಆ ದೇಶದಲ್ಲಿ ಆಸಾಮಿ ಹಾಜರಿ ಹುಕುಂಗಳನ್ನು ನೀಡುತ್ತಿದ್ದುದುಂಟು. ಅಪರಾಧ ಹೊರಿಸಿ ಕ್ಲೇಶಪಡಿಸುವ ಉದ್ದೇಶದಿಂದ ಬಂದ ಅರ್ಜಿಗಳ ನೆವದಲ್ಲಿ ವ್ಯಕ್ತಿಗಳನ್ನು ಬಂಧನಕ್ಕೊಳಪಡಿಸುವುದನ್ನು ತಪ್ಪಿಸಲು 12ನೆಯ ಶತಮಾನದಲ್ಲಿಯೇ ಇಂಥ ಆಜ್ಞೆ

ಜಾರಿಯಲ್ಲಿತ್ತು. ಮ್ಯಾಗ್ನಕಾರ್ಟದಲ್ಲಿ ಇದನ್ನು ನಿರ್ದಿಷ್ಟವಾಗಿ ವಿಧಿಬದ್ಧಗೊಳಿಸಲಾಯಿತು. ಈ ರಕ್ಷಣೆಯನ್ನು ಉಚಿತವಾಗಿ ನೀಡತಕ್ಕದ್ದು; ಇದನ್ನು ತಿರಸ್ಕರಿಸತಕ್ಕದ್ದಲ್ಲ–ಎಂಬುದಾಗಿ ಅದರಲ್ಲಿ ನಮೂದಿಸಲಾಯಿತು. ಇಂಗ್ಲೆಂಡಿನಲ್ಲಿ ಕಾಯಿದೆ ಇತಿಹಾಸದಲ್ಲಿ ಇದೊಂದು ಮುಖ್ಯವಾದ ಘಟ್ಟ. ಕಾಳಗದಿಂದಲೇ ಒಬ್ಬ ವ್ಯಕ್ತಿ ತನ್ನ ವ್ಯಾಜ್ಯವನ್ನು ತೀರ್ಮಾನಿಸುವ ಬದಲು ನ್ಯಾಯದರ್ಶಿಗಳಿಂದ ಆ ಬಗ್ಗೆ ತೀರ್ಪು ಪಡೆಯುವ ನಾಗರಿಕವಿಧಾನ ಇದರಿಂದ ಸಾಧ್ಯವಾಯಿತು. ತಕ್ಸೀರಿನ ಆಪಾದನೆಗೊಳಪಟ್ಟು ಬಂಧಿಸಲ್ಪಟ್ಟವನ ವಿಚಾರದಲ್ಲಿ ನ್ಯಾಯಾಲಯದಿಂದ ಈ ಆಜ್ಞೆ ಬರುತ್ತಿತ್ತು. ಸಂಬಂಧಪಟ್ಟ ವ್ಯಕ್ತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಆತನ ಬಂಧನ ಎಷ್ಟರಮಟ್ಟಿಗೆ ನ್ಯಾಯಸಮ್ಮತ ಎಂಬುದನ್ನು ನ್ಯಾಯಾಲಯ ವಿಚಾರಿಸುತ್ತಿತ್ತು. ವಿಚಾರಣೆಯ ಪರಿಣಾಮವಾಗಿ ಅದು ಬಂಧಿತನನ್ನು ಬಿಡುಗಡೆ ಮಾಡುತ್ತಿತ್ತು; ಇಲ್ಲವೇ ಅವನಿಗೆ ಜಾಮೀನಿನ ಅವಕಾಶ ನೀಡುತ್ತಿತ್ತು; ಅಥವಾ ಕೈದಿಯನ್ನು ಸೆರೆಗೆ ವಾಪಸು ಕಳಿಸುತ್ತಿತ್ತು. ಮೊದಲನೆಯ ಚಾರ್ಲ್ಸ್ ದೊರೆಯ ಕಾಲಕ್ಕೆ ಈ ಆಜ್ಞೆ ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿತ್ತು. ಕೆಳ ನ್ಯಾಯಾಲಯಗಳಾಗಲೀ ಸರ್ಕಾರಿ ಅಧಿಕಾರಿಗಳಾಗಲೀ ಯಾರನ್ನೂ ಕಾಯಿದೆಬಾಹಿರವಾಗಿ ಬಂಧಿಸದಂತೆ ತಡೆಗಟ್ಟಲು ಇದು ಯೋಗ್ಯವಿಧಾನವೆಂದು ಪರಿಗಣಿತವಾಯಿತು.

17ನೆಯ ಶತಮಾನದಲ್ಲಿ ಈ ಆಜ್ಞೆಗಳ ವಿಚಾರವಾಗಿ ಇಂಗ್ಲೆಂಡಿನ ದೊರೆಗೂ ಅಲ್ಲಿನ ಕಾಮನ್ಸ್ ಸಭೆಗೂ ವಿವಾದವೇರ್ಪಟ್ಟಿತ್ತು. ನ್ಯಾಯಾಲಯ ನೀಡುವ ಇಂಥ ಆಜ್ಞೆಗಳನ್ನು ದೊರೆ ತಳ್ಳಿಹಾಕಬಹುದೆಂದು ನ್ಯಾಯಮೂರ್ತಿಗಳು ಒಂದು ಮೊಕದ್ದಮೆಯಲ್ಲಿ ತೀರ್ಪು ನೀಡಿದರು. ಕಾಮನ್ಸ್ ಸಭೆ ಇದಕ್ಕೆ ವ್ಯತಿರಿಕ್ತವಾಗಿ ನಿರ್ಣಯಿಸಿತು. ಕಾಮನ್ಸ್ ಮತ್ತು ಲಾರ್ಡ್ಸ್ ಸಭೆಗಳ ಜಂಟಿ ಅಧಿವೇಶನದಲ್ಲಿ ಪೆಟಿಷನ್ ಆಫ್ ರೈಟ್ಸ್ ಎಂಬ ಪ್ರಜಾಹಕ್ಕು ಘೋಷಣೆ ಅಂಗೀಕೃತವಾಯಿತು. ಅದಕ್ಕೆ ಚಾರ್ಲ್ಸ್ ದೊರೆ ಒಪ್ಪಿಗೆ ನೀಡಬೇಕಾಯಿತು. ದೊರೆಯ ನಿರೂಪವೇ ಇದ್ದಾಗ್ಯೂ ಯಾವ ಸ್ವತಂತ್ರ ವ್ಯಕ್ತಿಯನ್ನೂ ನಿಷ್ಕಾರಣವಾಗಿ ಕೈದುಮಾಡಿ ಸೆರೆಯಲ್ಲಿಟ್ಟಿರಲಾಗದೆಂದು ಅದರಲ್ಲಿ ವಿಧಿಸಲಾಯಿತು.

ಎರಡನೆಯ ಚಾರ್ಲ್ಸ್ ದೊರೆಯ ಕಾಲದಲ್ಲಿ ಈ ಕ್ಷೇತ್ರದಲ್ಲಿ ವ್ಯಕ್ತಿಯ ಈ ಹಕ್ಕಿಗೆ ಇನ್ನೂ ಹೆಚ್ಚು ರಕ್ಷಣೆ ದೊರಕುವಂತಾಯಿತು. ಲಾರ್ಡ್ ಕ್ಲಾರೆಂಡನ್ ಎಂಬುವನು ಕಾಯಿದೆಗೆ ವಿರುದ್ಧವಾಗಿ ಅನೇಕರನ್ನು ಬಂಧನಕ್ಕೆ ಒಳಪಡಿಸಿದ್ದ. ಪ್ರಭಾವಶಾಲಿಗಳ ಪ್ರೇರಣೆಯಿಂದಾದ ಬಂಧನಗಳ ವಿಚಾರದಲ್ಲಿ ನಿಷ್ಪಕ್ಷಪಾತ ವಿಚಾರಣೆ ನಡೆಸಿ ಆಜ್ಞೆ ನೀಡಲು ನ್ಯಾಯಾಧಿಕಾರಿಗಳು ಅನೇಕವೇಳೆ ಹಿಂದೆಗೆಯುತ್ತಿದ್ದರು. ಇಂಥ ಆಜ್ಞೆಯ ಅವಧಿಯ ವಿಚಾರವಾಗಿಯೂ ಇದನ್ನು ನೀಡಬಲ್ಲವರ ಅಧಿಕಾರದ ವಿಚಾರವಾಗಿಯೂ ಸಂದೇಹಕ್ಕೆ ಆಸ್ಪದವಿತ್ತು. ಆದ್ದರಿಂದ 1679ರಲ್ಲಿ ಹೇಬಿಯಸ್ ಕಾರ್ಪಸ್ ಅಧಿನಿಯಮ ಜಾರಿಗೆ ಬಂದಿತು. ಇದರಿಂದ ಮೇಲೆ ಸೂಚಿಸಿದ ಸಂದರ್ಭಗಳಲ್ಲಿ ವ್ಯಕ್ತಿಯ ಹಕ್ಕಿಗೆ ಸಂಪೂರ್ಣ ರಕ್ಷಣೆ ದೊರಕುವಂತಾಯಿತು.

ಸಾಮಾನ್ಯವಾಗಿ ಈ ಹಕ್ಕು ಎಲ್ಲರಿಗೂ ದೊರಕುವುದಾದರೂ ಸಾರ್ವಜನಿಕ ಅಪಾಯದ ಪರಿಸ್ಥಿತಿಗಳಲ್ಲಿ ಈ ಅಧಿನಿಯಮವನ್ನು ವಿಶೇಷ ಕಾನೂನಿನ ಮೂಲಕ ಹಂಗಾಮಿಯಾಗಿ ತಳ್ಳಿಟ್ಟದ್ದೂ ಉಂಟು.

**ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ** : ಅಮೆರಿಕದ ಸಂಸ್ಥಾನಗಳ ಸಾಮಾನ್ಯ ವಿಧಿಗಳ ಅಂಗವಾಗಿ ಆಸಾಮಿ ಹಾಜರಿ ವಿಧಿ ಅಲ್ಲಿ ರೂಢಿಗೆ ಬಂದಿತು. ಇಂಗ್ಲೆಂಡಿನಲ್ಲಿ 1679ರಲ್ಲಿ ಜಾರಿಗೆ ಬಂದ ಅಧಿನಿಯಮದಲ್ಲಿ ಸೂಚಿಸಿರುವ ತತ್ತ್ವಗಳನ್ನು ಆಧರಿಸಿಯೇ ಅಮೆರಿಕ ಸಂಯುಕ್ತ ಸರ್ಕಾರವೂ ಸಂಸ್ಥಾನ ಸರ್ಕಾರಗಳೂ ಈ ಸಂಬಂಧವಾದ ಕಾರ್ಯವಿಧಾನವನ್ನು ಸ್ಥಾಪಿಸಿಕೊಂಡವು. ಸಂಯುಕ್ತ ನ್ಯಾಯಾಲಯವಾಗಲೀ ಸಂಸ್ಥಾನ ನ್ಯಾಯಾಲಯವಾಗಲಿ ನೀಡಿದ ಆಜ್ಞೆ ಅದರ ಕ್ಷೇತ್ರಾಧಿಕಾರಕ್ಕೆ ಒಳಪಟ್ಟ ಪ್ರದೇಶದಿಂದಾಚೆಗೆ ಅನ್ವಯಿಸುವುದಿಲ್ಲ. ಸಂಯುಕ್ತ ಸರ್ಕಾರಕ್ಕೆ ಪರಮಾಧಿಕಾರವಿರುವ ಕ್ಷೇತ್ರದಲ್ಲಿ ಈ ಅಧಿಕಾರಕ್ಕೆ ಅನುಗುಣವಾಗಿ ಯಾವ ವ್ಯಕ್ತಿಯಾದರೂ ಬಂಧಿಸಲ್ಪಟ್ಟಿದ್ದರೆ ಸಂಸ್ಥಾನ ಸರ್ಕಾರಗಳು ಅದಕ್ಕೆ ಸಂಬಂಧಿಸಿದಂತೆ ಆಸಾಮಿ ಹಾಜರಿ ಆಜ್ಞೆ ನೀಡತಕ್ಕದ್ದಲ್ಲ. ಸಂಯುಕ್ತ ನ್ಯಾಯಾಲಯವಾದರೂ ಜರೂರಾದ ವಿಶಿಷ್ಟ ಸಂದರ್ಭಗಳಲ್ಲಿ ವಿನಾ ಸಂಸ್ಥಾನ ನ್ಯಾಯಾಲಯಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲ.

ಆಸಾಮಿ ಹಾಜರಿ ಆಜ್ಞೆಯನ್ನು ಬೇಡಿ ಬಂದ ಅರ್ಜಿಯನ್ನು ಸಂಸ್ಥಾನ ನ್ಯಾಯಾಲಯ ತಿರಸ್ಕರಿಸಿದಾಗ ಒಬ್ಬ ವ್ಯಕ್ತಿ ಸಂಯುಕ್ತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದೆ ಎಂಬ ವಿಚಾರವಾಗಿ ವಿವಿಧ ಸಂಸ್ಥಾನಗಳ ಅಭಿಪ್ರಾಯಗಳು ಭಿನ್ನವಾಗಿವೆ. ಸಂಯುಕ್ತ ನ್ಯಾಯಾಲಯಕ್ಕೆ ಅಪೀಲು ವಿಚಾರಣೆಯ ಅಧಿಕಾರವ್ಯಾಪ್ತಿಯಿರುವುದರಿಂದ, ಕೆಳ ನ್ಯಾಯಾಲಯದ ಆಜ್ಞೆಗೆ ಅನುಸಾರವಾಗಿ ನಡೆದಿರುವ ಬಂಧನ ಆ ನ್ಯಾಯಾಲಯದ ಅಧಿಕಾರವ್ಯಾಪ್ತಿಯೊಳಕ್ಕೆ ಸೇರಿದ್ದೇ ಅಥವಾ ಅದು ತನ್ನ ಎಲ್ಲೆ ಮೀರಿದೆಯೇ ಎಂಬುದನ್ನು ವಿಚಾರಣೆ ನಡೆಸಲು ಸಂಯುಕ್ತ ನ್ಯಾಯಾಲಯ ಆಜ್ಞೆ ನೀಡಬಹುದು.

**ಭಾರತದಲ್ಲಿ** : ಬ್ರಿಟಿಷ್ ಆಳ್ವಿಕೆ ಪ್ರಾರಂಭವಾದ ಬಳಿಕ ಬ್ರಿಟನ್ನಿನ ವರಿಷ್ಠ ನ್ಯಾಯಾಲಯಗಳಿಗೆ ಸಾಮಾನ್ಯ (ಕ್ರೋಡೀಕೃತವಲ್ಲದ) ವಿಧಿಗಳ ಪ್ರಕಾರ ಇದ್ದ ಅಧಿಕಾರ ಚಲಾಯಿಸುವ ಹಕ್ಕು ಭಾರತದ ಮದ್ರಾಸು, ಮುಂಬಯಿ, ಕಲ್ಕತ್ತಗಳ ಉಚ್ಚ ನ್ಯಾಯಾಲಯಗಳಿಗೆ ಪ್ರಾಪ್ತವಾಯಿತು. ಈ ನ್ಯಾಯಾಲಯಗಳು ಬಾದಷಹರಿಂದ ಪಡೆದ ಸನ್ನದಿನಿಂದ ಸ್ಥಾಪಿತವಾದುವು. 1898ರಲ್ಲಿ ಜಾರಿಗೆ ಬಂದ ದಂಡಪ್ರಕ್ರಿಯಾ ಸಂಹಿತೆಯ (ಕ್ರಿಮಿನಲ್ ಪ್ರೊಸೀಜರ್ ಕೋಡ್) 491ನೆಯ ಕಲಮಿನ ಪ್ರಕಾರ ಈ ಅಧಿಕಾರವನ್ನು ಎಲ್ಲ ಉಚ್ಚ ನ್ಯಾಯಾಲಯಗಳಿಗೂ ಕೊಡಲಾಯಿತು. ಅದರ ವ್ಯಾಪ್ತಿಯನ್ನು ಇಡೀ ಮೂಲ ಹಾಗೂ ಅಪೀಲ್ ನ್ಯಾಯಾಧಿಕಾರ ಕ್ಷೇತ್ರಕ್ಕೆ ವಿಸ್ತರಿಸಲಾಯಿತು.

491ನೆಯ ಕಲಮಿನನ್ವಯ ಕೊಡಲಾಗಿದ್ದ ಅಧಿಕಾರ ಸಾಮಾನ್ಯ ವಿಧಿಗಳ ರೀತ್ಯಾ ದತ್ತವಾದ ಅಧಿಕಾರದಷ್ಟೇ ವ್ಯಾಪಕವಾಗಿರಲಿಲ್ಲ. ಆದರೆ ಸ್ವತಂತ್ರ ಭಾರತದ ಸಂವಿಧಾನದ 32ನೆಯ ಅನುಚ್ಛೇದದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚು ಅಧಿಕಾರವಿದೆ. ಬಂಧನಕ್ಕೊಳಗಾದ ಯಾವ ವ್ಯಕ್ತಿಯನ್ನಾದರೂ ತನ್ನ ಮುಂದೆ ಹಾಜರುಪಡಿಸಬೇಕೆಂದು ಈ ನ್ಯಾಯಾಲಯ ಆಜ್ಞೆ ನೀಡಬಹುದು. ಬಂಧನದಲ್ಲಿಟ್ಟ ವ್ಯಕ್ತಿಗಾಗಲಿ ಸಂಸ್ಥೆಗಾಗಲಿ ಅಲ್ಲದೆ ಸರ್ಕಾರಕ್ಕೂ ಆಜ್ಞಾಪಿಸಲು ಇದಕ್ಕೆ ಅಧಿಕಾರವುಂಟು. ಆ ವ್ಯಕ್ತಿಯ ಬಂಧನವು ಕಾಯಿದೆಗೆ ಅನುಗುಣವಾಗಿದೆಯೇ ಇಲ್ಲವೆ ಎಂಬುದನ್ನು ಅದು ಪರಿಶೀಲಿಸಬಹುದು; ಈ ವಿಚಾರದಲ್ಲಿ ಅದು ತನಗೆ ಯುಕ್ತ ಕಂಡಂತೆ ಹುಕುಮು ನೀಡಬಹುದು. ಸಂವಿಧಾನದ 222ನೆಯ ಅನುಚ್ಛೇದದ ಪ್ರಕಾರ ಈ ಅಧಿಕಾರವನ್ನು ಎಲ್ಲ ಉಚ್ಚ ನ್ಯಾಯಾಲಯಗಳಿಗೂ ಕೊಡಲಾಗಿದೆ.

ಈ ಅಧಿಕಾರ ಚಲಾಯಿಸಬೇಕೆಂದು ವಿನಂತಿಸುವ ಅರ್ಜಿಯನ್ನು ಬಂಧಿತನಲ್ಲಿ ಹಿತಸಂಬಂಧವಿರುವ ಯಾರು ಬೇಕಾದರೂ ಕೊಡಬಹುದು. ಹಿತಸಂಬಂಧವಿಲ್ಲದಿದ್ದರೂ ನ್ಯಾಯಪಾಲನೆಯಲ್ಲಿ ಆಸಕ್ತಿಯಿರುವಂಥವರು ತಮಗೆ ಅಕ್ರಮವೆನಿಸಿದ ಬಂಧನದ ಕಡೆಗೆ ನ್ಯಾಯಾಲಯದ ಲಕ್ಷ್ಯ ಸೆಳೆಯಬಹುದು.

ಸ್ಥಾನಬದ್ಧತೆಯಲ್ಲಿಡಲ್ಪಟ್ಟವರ ವಿಷಯದಲ್ಲಿ ವಿಶೇಷವಾಗಿ ಈ ಅಧಿಕಾರದ ಆಶ್ರಯ ಪಡೆಯಲಾಗುತ್ತದೆ. ಆದರೆ ವಿಶೇಷ ಸಂದರ್ಭಗಳಲ್ಲಿ, ರಾಷ್ಟ್ರದ ಭದ್ರತೆಗೆ ಧಕ್ಕೆ ಬರುವ ಅಪಾಯವಿದ್ದಾಗ, ನಿವಾರಕ ನಿರೋಧ ಕಾಯಿದೆಯನ್ನು (ನೋಡಿ) ಸರ್ಕಾರ ಜಾರಿಗೆ ತರಬಹುದು. ವಿಚಾರಣೆಯಿಲ್ಲದೆಯೇ ಯಾರನ್ನಾದರೂ ಸ್ಥಾನಬದ್ಧತೆಯಲ್ಲಿಡುವ ಅಧಿಕಾರ ಆಗ ಸರ್ಕಾರಕ್ಕೆ ಇರುತ್ತದೆ. ನಿರೋಧ ಮಾಡುವುದರಲ್ಲಿ ಕಾನೂನಿನ ನಿಯಮಗಳನ್ನು ಪಾಲಿಸಲು ತಪ್ಪಿದರೆ ಮಾತ್ರ ಬಂಧಿತನನ್ನು ಬಿಡುಗಡೆ ಮಾಡಬಹುದು. ಏಕೆಂದರೆ ಯಾವ ಮನುಷ್ಯನ ಸ್ವಾತಂತ್ರ್ಯವನ್ನೇ ಆಗಲಿ ಕಾನೂನಿನಿಂದ ಸ್ಥಾಪಿತವಾದ ಕ್ರಮದಿಂದ ಹೊರತಾಗಿ ಹರಣ ಮಾಡಬಾರದೆಂದು ಸಂವಿಧಾನದ 21ನೆಯ ಪರಿಚ್ಛೇದ ವಿಧಿಸುತ್ತದೆ. **(ಆರ್.ಆರ್.ಟಿ.)**

**ಆಸಿಂಟೊ:** ಸ್ಪ್ಯಾನಿಷ್ ಭಾಷೆಯಲ್ಲಿ ಇದಕ್ಕೆ ಒಪ್ಪಂದ ಎಂಬರ್ಥವಿದೆ. ಗ್ರೇಟ್ ಬ್ರಿಟನ್ ಮತ್ತು ಸ್ಪೇನ್‌ಗಳ ನಡುವೆ ನಡೆದ ಆಸಿಂಟೊ ಒಪ್ಪಂದವನ್ನು (1713) ಈ ಪದ ಸೂಚಿಸುತ್ತದೆ. 16ನೆಯ ಶತಮಾನದ ಮಧ್ಯಭಾಗದಲ್ಲಿ ನೀಗ್ರೊ ಗುಲಾಮರನ್ನು ಸ್ಪ್ಯಾನಿಷ್ ಅಮೆರಿಕಕ್ಕೆ ಮಾರಾಟ ಮಾಡುವ ಸಂಬಂಧವಾಗಿಯೇ ಈ ಒಪ್ಪಂದವಾದದ್ದು. 1713ಕ್ಕೂ ಮೊದಲು ಇಂಥ ಒಪ್ಪಂದಗಳನ್ನು ಸ್ಪೇನ್, ಪೋರ್ಚುಗಲ್ ಮತ್ತು ಫ್ರಾನ್ಸ್‌ನ ಖಾಸಗೀ ವ್ಯಕ್ತಿಗಳು ಮಾಡಿಕೊಳ್ಳುತ್ತಿದ್ದರು. ಅಧಿಕ ತೆರಿಗೆ, ಸರ್ಕಾರದ ಹಸ್ತಕ್ಷೇಪ ಮತ್ತು ವ್ಯಾಪಾರದಲ್ಲಿನ ಏರುಪೇರುಗಳು–ಇವು ಇಂಥ ಗುಲಾಮೀ ವ್ಯಾಪಾರವನ್ನು ಹೆಚ್ಚು ಲಾಭದಾಯಕವನ್ನಾಗಿ ಮಾಡಲು ಸಹಕಾರಿಯಾಗದಿದ್ದರೂ ಸ್ಪ್ಯಾನಿಷ್ ಅಮೆರಿಕದೊಡನೆ ವ್ಯಾಪಾರವಹಿವಾಟುಗಳಲ್ಲಿ ಭಾಗವಹಿಸಲು ಮತ್ತು ಸಾಧ್ಯವಾದಷ್ಟು ಚಿನ್ನವನ್ನು ಗಳಿಸಲು ವಿದೇಶೀಯರಿಗೆ ಒಂದು ಅವಕಾಶವನ್ನು ಕಲ್ಪಿಸುತ್ತಿದ್ದುವು. ಈ ವ್ಯಾಪಾರವನ್ನು ವಿರೋಧಿಸಿ ಬ್ರಿಟಿಷರು ಯುಟ್ರೆಕ್ಟ್ ಒಪ್ಪಂದ ಮಾಡಿಕೊಂಡರು. ಒಪ್ಪಂದದಿಂದ ತಾವು ಪಡೆದುಕೊಂಡ ಅಧಿಕಾರವನ್ನು ಬ್ರಿಟಿಷರು ದುರುಪಯೋಗಪಡಿಸಿಕೊಂಡದ್ದರ ಸಲುವಾಗಿ ಸೌತ್ ಸೀಬಬಲ್ ಎಂಬ ಸಟ್ಟಾ ವ್ಯಾಪಾರ ಹುಟ್ಟಿಕೊಂಡು, ಕಳ್ಳಪೇಟೆಗಳು ಬಲಿತು ಕ್ರಮೇಣ ಯುದ್ಧಕ್ಕೆ ಅವಕಾಶವಾಯಿತು. ಏ–ಲಾ–ಶಾಪೇಲ್ ಎಂಬ ಒಪ್ಪಂದದಿಂದಾಗಿ ಇಂಥ ವ್ಯಾಪಾರ ಕೆಲವು ಕಾಲ ನಡೆದುಬಂದರೂ ಸ್ಪ್ಯಾನಿಷರೂ ಬ್ರಿಟಿಷರಿಗೆ 1 ಲಕ್ಷ ಪೌಂಡ್ ಹಣ ಕೊಟ್ಟಿದ್ದರಿಂದ ಗುಲಾಮೀ ವ್ಯಾಪಾರ ಸಂಬಂಧಿಯಾದ ಈ ಒಪ್ಪಂದ ರದ್ದಾಯಿತು (1750). **(ಎಚ್.ಜಿ.ಬಿ.)**

**ಆಸುರಿ:** ಸಾಂಖ್ಯತತ್ತ್ವದ ಜನಕ ಕಪಿಲ ಆ ತತ್ತ್ವಗಳನ್ನು ಈ ಹೆಸರಿನ ಶಿಷ್ಯೋತ್ತಮನಿಗೆ ಮೊಟ್ಟಮೊದಲಿಗೆ ಬೋಧಿಸಿದನೆಂದು ಪ್ರತೀತಿ. ಆಸುರಿ ಎಂಬುವವನೊಬ್ಬ ಇದ್ದನೆಂಬ ವಿಚಾರದಲ್ಲಿ ಪಾಶ್ಚಾತ್ಯ ಸಂಶೋಧಕರಾದ ಗಾರ್ಬೆ ಮತ್ತು ಕೀತ್ ಸಂಶಯಪಡುತ್ತಾರೆ. ಕವಿರಾಜ ಗೋಪೀನಾಥರಾದರೋ ಇಂಥ ವ್ಯಕ್ತಿ ಇದ್ದನೆಂದು ಖಚಿತವಾಗಿ ಹೇಳುತ್ತಾರೆ. ನಿಜವಾಗಿ ಇದ್ದನೆಂಬುದಕ್ಕೆ ಪ್ರಬಲವಾದ ಆಧಾರಗಳಿವೆ. ಕಪಿಲ ಆಸುರಿಗೆ ಸಾಂಖ್ಯತತ್ತ್ವವನ್ನು ಬೋಧಿಸಿದನೆಂದು ಜಯಮಂಗಲಾ ಮತ್ತು ಮಾಥರವೃತ್ತಿಗಳು ಸಾರಿವೆ. ಮಹಾಭಾರತದ ಶಾಂತಿಪರ್ವ ಕಪಿಲನ ಮೊದಲನೆಯ ಶಿಷ್ಯನಾದ ಆಸುರಿ ಪಂಚಶಿಖನಿಗೆ ಸಾಂಖ್ಯತತ್ತ್ವವನ್ನು ಬೋಧಿಸಿದನೆಂದು ತಿಳಿಸುತ್ತದೆ. ಷಡ್ದರ್ಶನಸಮುಚ್ಚಯದ ಮೇಲೆ ಬರೆದಿರುವ ವ್ಯಾಖ್ಯಾನದಲ್ಲಿ ಹರಿಭದ್ರನು ಆಸುರಿಯ ಎರಡು ವಾಕ್ಯಗಳನ್ನು ಉದ್ಧರಿಸಿದ್ದಾನೆ. ನಿರ್ಲಿಪ್ತನಾದ ಪುರುಷ ಭೋಗದಲ್ಲಿ ಹೇಗೆ ಸಿಕ್ಕಿಕೊಂಡಿರುತ್ತಾನೆಂಬ ಪ್ರಶ್ನೆಗೆ ಚಂದ್ರಬಿಂಬ ನೀರಿನಲ್ಲಿ ಆಡಿದಂತೆ ಎಂದು ಉತ್ತರ ಕೊಟ್ಟಿರುತ್ತಾನೆ. ಈ ಉಪಮಾನ ಸಾಂಖ್ಯತತ್ತ್ವ ಬೋಧೆಗೆ ಬಹುಮುಖ್ಯವಾದದ್ದು. ಬಹುಶಃ ಸಾಂಖ್ಯತತ್ತ್ವವನ್ನು ಉಪಮಾನಗಳ ಮೂಲಕ, ರೂಪಕಥೆಗಳ ಮೂಲಕ ಮೊಟ್ಟಮೊದಲಿಗೆ ಪ್ರತಿಪಾದಿಸಿದವ ಆಸುರಿ ಇದ್ದಿರಬಹುದು. (ನೋಡಿ – ಸಂಖ್ಯಾದರ್ಶನ) **(ಜಿ.ಎಚ್.)**

**ಆಸುರೀ ಸಂಪತ್ತು:** ಅಸುರ ಅಂದರೆ ರಾಕ್ಷಸ ಸಂಬಂಧವಾದುದು. ಆಸುರೀಮಾಯಾ, ಆಸುರೀರಾತ್ರಿ, ಆಸುರೀಸಂಪತ್ತು ಎಂಬುದು ಈ ಅರ್ಥದಲ್ಲಿಯೇ ಪ್ರಯುಕ್ತವಾಗಿವೆ. ದೈವಕ್ಕೆ ಪ್ರತಿಕಕ್ಷಿಯಾದುದು ಎನ್ನುವ ನೆಲೆಯಲ್ಲಿ ಆಸುರೀಸಂಪತ್ತಿನ ವಿವರಣೆ ಭಗವದ್ಗೀತೆಯ (ನೋಡಿ) 16ನೆಯ ಅಧ್ಯಾಯದಲ್ಲಿ ಬರುತ್ತದೆ. ಈ ಅಧ್ಯಾಯಕ್ಕೆ ದೈವಾಸುರ–ಸಂಪದ್ವಿಭಾಗಯೋಗವೆಂದು ಹೆಸರು. 'ದಂಭೋ ದರ್ಪೋಽತಿ ಮಾನಶ್ಚ ಕ್ರೋಧಃ ಪಾರುಷ್ಯಮೇವ ಚ, ಅಜ್ಞಾನಂ ಚ ಅಭಿಜಾತಸ್ಯ ಪಾರ್ಥ ಸಂಪದಮಾಸುರೀಂ'. ದಂಭ, ದರ್ಪ, ಅಹಂಭಾವ, ಕೋಪ, ಪರುಷವಚನ, ಅಜ್ಞಾನ–ಇವು ಆಸುರೀ ಸಂಪತ್ತುಗಳೆಂದು ಇಲ್ಲಿನ ನಿರೂಪಣೆ. ದೈವೀಸಂಪತ್ತಿನಿಂದ ಮೋಕ್ಷ ಉಂಟಾಗುವುದಾದರೆ, ಆಸುರೀ ಸಂಪತ್ತಿನಿಂದ ಸಂಸಾರಬಂಧ ಒದಗುತ್ತದೆ. ಆಸುರೀ ಸಂಪತ್ತು ಇರುವ ಜನಕ್ಕೆ ಪ್ರವೃತ್ತಿ ನಿವೃತ್ತಿಗಳ ನಡುವೆ ಇರುವ ವ್ಯತ್ಯಾಸ ತಿಳಿಯುವುದಿಲ್ಲ. ಅವರು ಶುಚಿಯಾಗಿರುವುದಿಲ್ಲ. ಸತ್ಯವಂತರಲ್ಲ, ಜಗತ್ತು ಅಸತ್ಯವೆಂದೂ ಅದು ಭಗವಂತನಿಂದ ನಿಯಮಿತವಾದುದೆಂದೂ ಅವರು ನಂಬುವುದಿಲ್ಲ. ಅವರು ನಷ್ಟಾತ್ಮರು, ಅಲ್ಪ ಬುದ್ಧಿಗಳು, ಉಗ್ರಕರ್ಮರು. ಅಂಥವರು ಜಗತ್ತಿನ ಅಹಿತಕ್ಕೆ, ಕ್ಷಯಕ್ಕೆ ಕಾರಣವಾಗುವವರಲ್ಲದೆ ಅಧಮಗತಿಯನ್ನು ಎಂದರೆ ಮೂರು ವಿಧವಾದ ನರಕವನ್ನು ಹೊಂದುವರು. (ಎಸ್.ಕೆ.ಆರ್.)

**ಆಸ್ಕಮ್, ರೋಜರ್:** 1515–68. ಇಂಗ್ಲೆಂಡ್ ದೇಶದ ವಿದ್ವಾಂಸ, ಶಿಕ್ಷಣಶಾಸ್ತ್ರಜ್ಞ ರಾಜಕುಮಾರಿ ಎಲಿಜಬೆತ್‌ಳ ಗುರು. ರಾಣಿ ಮೇರಿಗೆ ಲ್ಯಾಟಿನ್ ಕಾರ್ಯದರ್ಶಿಯಾಗೂ ಕೆಲಸಮಾಡಿದ. ಅಡಕವಾದ ಬಿಗಿಯಾದ ಶೈಲಿಗೆ ಹೆಸರಾಗಿದ್ದಾನೆ. ಟ್ಯಾಕ್ಸೊಫಿಲಸ್ ಮತ್ತು ದಿ ಸ್ಕೂಲ್‌ಮಾಸ್ಟರ್ ಇವನ ಮುಖ್ಯ ಕೃತಿಗಳು. ಮೊದಲ ಪುಸ್ತಕ ಬಿಲ್ವಿದ್ಯೆಯನ್ನೂ ಎರಡನೆಯದು ಲ್ಯಾಟಿನ್ ಭಾಷಾಬೋಧನೆಯನ್ನೂ ಕುರಿತಾಗಿವೆ. ಕೇಂಬ್ರಿಜ್ ವಿಮರ್ಶಾಪಂಥಕ್ಕೆ ಸೇರಿದ ಈತ ಬರಿಯ ಪಾಂಡಿತ್ಯಪೂರ್ಣ ಶಬ್ದಗಳ ಬಳಕೆಯನ್ನು ವಿರೋಧಿಸಿದ. ಇವನ ಶೈಲಿ ಲ್ಯಾಟಿನ್ ಪದಸಂಯೋಜನೆಯ ಪ್ರಭಾವಕ್ಕೆ ಒಳಗಾದುದರಿಂದ ಸ್ವಲ್ಪ ಜಟಿಲವಾಗಿದೆ. ಆದರೂ ಪ್ರಾಚೀನ ಬರೆಹಗಾರರ–ಮುಖ್ಯವಾಗಿ ಸಿಸಿರೊ ಮತ್ತು ಸೆನೆಕರ ಶೈಲಿಯ – ಶಿಸ್ತು ಕಾಣುತ್ತದೆ. ಆದರೆ ಶೈಲಿಯಲ್ಲಿ ಇವನದು ವಾಸ್ತವಿಕತೆಯ ಪರಮಾವಧಿ. ಅದು ಅತ್ಯಂತ ಸರಳ, ನಿರಾಡಂಬರ. ಸ್ಕೂಲ್‌ಮಾಸ್ಟರ್‌ನಲ್ಲಿ ತೀಕ್ಷ್ಣವಾದ ವಿಮರ್ಶೆಯೂ ಉಂಟು. ಹಳೆಯ ಸಂಪ್ರದಾಯದ ಇಂಗ್ಲಿಷ್ ಗದ್ಯರೀತಿಯನ್ನು ಪ್ರಾರಂಭಿಸಿದವರಲ್ಲಿ, ಶುದ್ಧವಾಗಿರಬೇಕೆಂದು ಶ್ರಮಿಸಿದವರಲ್ಲಿ ಈತನೂ ಒಬ್ಬ. ಇವನಿಗೆ ಇಂಗ್ಲಿಷ್ ಭಾಷೆಯಲ್ಲಿ ನೈಜವಾದ ಅಭಿಮಾನವಿತ್ತು. ಪ್ರಾರಂಭದಲ್ಲಿ ಮುಖ್ಯವಾದ ಪತ್ರಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬರೆಯುತ್ತಿದ್ದವ ತನ್ನ ಜರ್ಮನಿಯ ಪ್ರವಾಸದ ಅನುಭವಗಳನ್ನು ಮಿತ್ರರಿಗೆ ಇಂಗ್ಲಿಷ್ ಭಾಷೆಯಲ್ಲಿ ನಿರೂಪಿಸಿದ. ಇಂಗ್ಲಿಷರಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಇಂಗ್ಲಿಷ್ ವಸ್ತುವನ್ನು ರೂಪಿಸುವ ಬಯಕೆಯನ್ನು ಟ್ಯಾಕ್ಸೊಫಿಲಸ್‌ನಲ್ಲಿ ವ್ಯಕ್ತಪಡಿಸಿದ್ದಾನೆ. (ಎಲ್.ಎಸ್.ಎಸ್.)

**ಆಸ್ಕ್ವಿತ್, ಹರ್ಬರ್ಟ್ ಹೆನ್ರಿ:** 1852–1928. ಪ್ರಸಿದ್ಧ ಬ್ರಿಟಿಷ್ ರಾಜಕಾರಣಿ. ಯಾರ್ಕ್‌ಷೈರಿನ ಮಾರ್ಲೆಯಲ್ಲಿ ಜನಿಸಿದ. ಲೀಡ್ಸ್ ನಗರದ ಸಮೀಪವಿರುವ ಹಡರ್ಸ್‌ಫೀಲ್ಡ್‌ನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, 1863ರಲ್ಲಿ ಲಂಡನ್ ಶಾಲೆಯಲ್ಲಿ ಓದಿ, 1870ರಲ್ಲಿ ಆಕ್ಸ್‌ಫರ್ಡ್ ಸೇರಿ ಉಚ್ಚಶಿಕ್ಷಣ ಪಡೆದ. ಆಕ್ಸ್‌ಫರ್ಡ್ ಯೂನಿಯನ್ನಿನ ಅಧ್ಯಕ್ಷನಾಗಿದ್ದ ಸಮಯವಂತೂ ಸ್ಮರಣೀಯವಾದುದು. ಅಲ್ಲಿ ಪ್ರತಿಭೆ ವಿಕಾಸಗೊಂಡಿತು. 1876ರಲ್ಲಿ ವಕೀಲಿವೃತ್ತಿ ಆರಂಭಿಸಿದ. 1877ರಲ್ಲಿ ಹೆಲನ್ ಕೆಲ್‌ಸಾಲ್ ಮೆಲಾಂಡಳನ್ನು ಮದುವೆಯಾದ.

ಮೊದಲಿಗೆ ಎಕಾನಮಿಸ್ಟ್ ಮತ್ತು ಸ್ಪೆಕ್ಟೇಟರ್ ಪತ್ರಿಕೆಗಳ ಮೂಲಕ ತನ್ನ ವಿಚಾರಗಳನ್ನು ಪ್ರಕಟಿಸಿದ. ಬಿಡುವಿನ ವೇಳೆಯನ್ನೆಲ್ಲ ರಾಜಕೀಯ ಚಟುವಟಿಕೆಗಳಿಗೆ ಮೀಸಲಿರಿಸಿದ. ಗ್ಲಾಡ್‌ಸ್ಟನ್‌ನ ಉದಾರವಾದಿಪಂಥಕ್ಕೆ ಸೇರಿ 1886ರಲ್ಲಿ ಪಾರ್ಲಿಮೆಂಟ್ ಸದಸ್ಯನಾದ. ಬಹು ಬೇಗ ಪಕ್ಷದ ಅತ್ಯಂತ ಸಮರ್ಥ ಸದಸ್ಯನಾಗಿ ಪ್ರಭಾವ ಬೀರಿ ಕಾಮನ್ಸ್ ಸಭೆಯ ಗಣ್ಯವ್ಯಕ್ತಿಯಾದ. 1890ರಲ್ಲಿ ರಾಣಿಯ ಆಪ್ತಸಲಹೆಗಾರನಾಗಿ, ಗ್ಲಾಡ್‌ಸ್ಟನ್ ಮಂತ್ರಿಮಂಡಲದಲ್ಲಿ ಗೃಹಸಚಿವನಾದ. ಮೊದಲಪತ್ನಿ ಕಾಲವಾದ್ದರಿಂದ 1894ರಲ್ಲಿ ಎಮ್ಮಾ ಆಲೇಸಿ ಮಾರ್ಗರೆಟ್‌ಳನ್ನು ಮದುವೆಯಾದ.

ಲಿಬರಲ್ ಪಕ್ಷದಲ್ಲಿ ಒಡಕುಂಟಾದ ಕಾರಣದಿಂದಾಗಿ 1895–1905ರವರೆಗೆ ಅಧಿಕಾರದಿಂದ ದೂರವಾಗಿ, ಪಕ್ಷದಲ್ಲಿದ್ದ ಬಿರುಕನ್ನು ಮುಚ್ಚಲು ಶ್ರಮಿಸಿದ. ಅನಂತರ ಕ್ಯಾಂಪ್‌ಬೆಲ್ ಮಂತ್ರಿಮಂಡಲದಲ್ಲಿ ಅರ್ಥಸಚಿವನಾದ. ಅದೇ ಸಮಯದಲ್ಲಿ ವೃದ್ಧಾಪ್ಯ ನಿವೃತ್ತಿವೇತನ (ಓಲ್ಡ್ ಏಜ್ ಪೆನ್ಷನ್) ಮಸೂದೆಯನ್ನು ಜಾರಿಗೆ ತಂದ. ಅನಾರೋಗ್ಯದ ನಿಮಿತ್ತ ಕ್ಯಾಂಪ್‌ಬೆಲ್ ನಿವೃತ್ತನಾದ ತರುವಾಯ ತಾನೇ ಪ್ರಧಾನಿಯಾಗಿ ಅನೇಕ ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತಂದ. ಆಸ್ಕ್ವಿತ್ ಮಾಡಿದ ಸುಧಾರಣೆಗಳನ್ನು ಶ್ರೀಮಂತಸಭೆ ಒಂದೇಸಮನೆ ವಿರೋಧಿಸಿದ್ದರಿಂದ ಆ ಸಭೆಯ ಅಧಿಕಾರವನ್ನು ಮೊಟಕು ಮಾಡಲು 1911ರಲ್ಲಿ ಪಾರ್ಲಿಮೆಂಟ್ ಆ್ಯಕ್ಟನ್ನೂ ಐರ್ಲೆಂಡಿಗಾಗಿ ಹೋಮ್ ರೂಲ್ ಮಸೂದೆಯನ್ನೂ ಜಾರಿಗೆ ತಂದ. ಅಷ್ಟರಲ್ಲೇ ಒಂದನೆಯ ಮಹಾಯುದ್ಧ ಪ್ರಾರಂಭವಾದ್ದರಿಂದ 1915ರಲ್ಲಿ ಸಮ್ಮಿಶ್ರ ಸರ್ಕಾರವನ್ನು ರಚಿಸಿ ಅನೇಕ ಕಾರಣಗಳಿಂದಾಗಿ 1916ರಲ್ಲಿ ಪ್ರಧಾನಿ ಪದವಿಗೆ ರಾಜೀನಾಮೆ ಸಲ್ಲಿಸಿದ. ಮುಂದೆ ನಡೆದ ಮಧ್ಯಕಾಲೀನ ಚುನಾವಣೆಯಲ್ಲಿ ಮತ್ತೆ ಜಯಗಳಿಸಿ ಪಾರ್ಲಿಮೆಂಟ್ ಸದಸ್ಯನಾದ.

ಸ್ತ್ರೀಯರು ರಾಜಕೀಯಕ್ಕೆ ಪ್ರವೇಶಿಸುವುದನ್ನು ಆಸ್ಕ್ವಿತ್ ಪ್ರಾರಂಭದಿಂದ ಪ್ರಬಲವಾಗಿ ವಿರೋಧಿಸುತ್ತ ಬಂದಿದ್ದರೂ ಯುದ್ಧಕಾಲದಲ್ಲಿ ಅವರು ಸಲ್ಲಿಸಿದ ಅನುಪಮ ಸೇವಾ ಮನೋಭಾವವನ್ನು ಮೆಚ್ಚಿ, ಅವರಿಗೂ ರಾಜಕೀಯ ಪ್ರವೇಶಕ್ಕೆ ಅವಕಾಶ ಕಲ್ಪಿಸಲು ತಾನೇ ಮುಂದಾದ. 1924ರಲ್ಲಿ ರಾಜಕೀಯ ಜೀವನದಿಂದ ನಿವೃತ್ತನಾದ. 1925ರಲ್ಲಿ ಆಸ್ಕ್ವಿತ್‌ನ ಸೇವೆಯನ್ನು ಪ್ರಶಂಸಿಸಿ ಅರ್ಲ್ ಆಫ್ ಆಕ್ಸ್‌ಫರ್ಡ್ ಎಂಬ ಬಿರುದು ನೀಡಿ ಗೌರವಿಸಲಾಯಿತು. 1926ರಲ್ಲಿ ಮೆಮಾಯರ್ಸ್ ಮತ್ತು ರಿಫ್ಲೆಕ್ಷನ್ ಎಂಬ ಇವನ ಕೃತಿಗಳು ಇವನ ಜೀವನದ ಮತ್ತು ಅಂದಿನ ಜನಜೀವನದ ಉತ್ತಮ ಚಿತ್ರಗಳನ್ನು ಒದಗಿಸುತ್ತವೆ. (ಕೆ.ಎಸ್.ಎನ್.)

**ಆಸ್ಕರ್ ಪುರಸ್ಕಾರ:** ಈ ಪುರಸ್ಕಾರವನ್ನು ಸಿನಿಮಾರಂಗದ ಅತ್ಯುತ್ತಮ ನಿರ್ದೇಶಕರು, ನಟನಟಿಯರು, ಲೇಖಕರಿಗೆ 'ಅಮೆರಿಕನ್ ಅಕ್ಯಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆ್ಯಂಡ್ ಸೈನ್ಸಸ್' (AMPAS) ಸಂಸ್ಥೆಯು ನೀಡುತ್ತದೆ. 'ಆಸ್ಕರ್ ಕಿರುಪ್ರತಿಮೆ'ಯನ್ನು 'ಅಕ್ಯಾಡೆಮಿ ಅವಾರ್ಡ್ ಆಫ್ ಮೆರಿಟ್' ಎಂದು ಕರೆಯಲಾಗಿದೆ. ಇದು ಒಂಬತ್ತು ಅಕಾಡೆಮಿ ಪುರಸ್ಕಾರಗಳಲ್ಲಿ ಒಂದಾಗಿದೆ.

ಪ್ರಪಂಚದಲ್ಲೇ ಅತ್ಯಂತ ಪ್ರತಿಷ್ಠಿತ ಪುರಸ್ಕಾರಗಳಲ್ಲೊಂದಾದ ಆಸ್ಕರ್ ಪುರಸ್ಕಾರ ಪ್ರದಾನ ಸಮಾರಂಭವನ್ನು ಪ್ರತಿವರ್ಷ ಒಂದು ನೂರು ದೇಶಗಳಲ್ಲಿ ದೂರದರ್ಶನದಲ್ಲಿ ನೇರಪ್ರಸಾರ ಮಾಡಲಾಗುವುದು. ಇದು ತುಂಬಾ ಪ್ರಾಚೀನವಾದುದು. ಇದರ ಸಂವಾದಿ ಪುರಸ್ಕಾರಗಳೆಂದರೆ (ಸಂಗೀತಕ್ಕೆ) ಗ್ರ್ಯಾಮಿ ಪುರಸ್ಕಾರ, 'ಟೆಲಿವಿಷನ್'ಗೆ ಎಮ್ಮಿ ಪುರಸ್ಕಾರ ಮತ್ತು (ರಂಗಕ್ಷೇತ್ರಕ್ಕೆ) ಟೋನಿ ಪುರಸ್ಕಾರ.

AMPAS ಸಂಸ್ಥೆಯು ಮೆಟ್ರೋ–ಗೋಲ್ಡ್‌ವಿನ್–ಮೇಯರ್ ಸ್ಟುಡಿಯೋದ ಮಾಲೀಕ ಲೂಯಿ, ಬಿ. ಮೇಯರನ ಚಿಂತನೆಯ ಫಲ. ಈ ಸಂಸ್ಥೆ ಸಿನಿಮಾ ಉದ್ಯಮದ ಬಗ್ಗೆ ಜನಾಭಿಪ್ರಾಯ ಸುಧಾರಿಸುವಂತೆ ಮಾಡಿ, ಕಾರ್ಮಿಕ ಕಲಹಗಳನ್ನು ನಿವಾರಿಸಲು ನೆರವು ನೀಡುತ್ತದೆ.

ಮೊದಲನೆಯ 'ಅಕ್ಯಾಡೆಮಿ ಪುರಸ್ಕಾರ' ಸಮಾರಂಭವು 1929ರ ಮೇ 16ರಂದು ಹಾಲಿವುಡ್‌ನ 'ಹೊಟೆಲ್ ರೂಸ್‌ವೆಲ್ಟ್'ನಲ್ಲಿ 270 ಜನ ಪ್ರೇಕ್ಷಕರ ಎದುರು ನಡೆಯಿತು. 84ನೇ ಆಸ್ಕರ್ ಪುರಸ್ಕಾರ ಸಮಾರಂಭವು (2011ರ ಚಲನಚಿತ್ರಗಳಿಗೆ ಸಂಬಂಧಿಸಿದ್ದು) 2012ರ ಫೆಬ್ರವರಿ 26ರಂದು ಹಾಲಿವುಡ್ ಆ್ಯಂಡ್ ಹೈಲ್ಯಾಂಡ್ ಸೆಂಟರ್‌ನಲ್ಲಿ ನಡೆಯಿತು. ಚಲನಚಿತ್ರ ಕ್ಷೇತ್ರದಲ್ಲಿ ಮಹತ್ತ್ವಪೂರ್ಣ ಕೊಡುಗೆ ನೀಡಿದ ಗಣ್ಯರು ಇದರ ಸದಸ್ಯರಾಗಿರುವರು. ಇವರು AMPASನ ಆಡಳಿತ ಮಂಡಳಿಯ ಸದಸ್ಯರು. ಅನೇಕ ವರ್ಷಗಳ ಕಾಲ ಸೋಮವಾರ ರಾತ್ರಿ 9 ಗಂಟೆಗೆ (ಪೂರ್ವ ಪೆಸಿಫಿಕ್ ಕಾಲಮಾನ) ನಡೆಯುತ್ತಿದ್ದ ಸಮಾರಂಭವು ಹೆಚ್ಚು ಹೆಚ್ಚು ಪ್ರೇಕ್ಷಕರನ್ನು ಆಕರ್ಷಿಸಲು, 1999ರಿಂದ ಈಚೆಗೆ ಭಾನುವಾರಗಳಂದು ರಾತ್ರಿ 8.30 ಗಂಟೆಗೆ ನಡೆಯುತ್ತದೆ.

2012ರಲ್ಲಿ AMPAS ಸಂಸ್ಥೆಯಲ್ಲಿ 5783 ಜನ ಮತ ಚಲಾಯಿಸುವ ಹಕ್ಕುಗಳ ಸದಸ್ಯರಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಬಿಟ್ಟು ಬೇರೆ ಭಾಷೆಯ ಚಿತ್ರಗಳನ್ನು ಈ ಪುರಸ್ಕಾರಕ್ಕೆ ಪರಿಶೀಲಿಸಿರುವುದು ಕಡಿಮೆ. ಇದುವರೆಗೆ ಕೇವಲ ಇತರ ಎಂಟು ಭಾಷೆಯ ಚಿತ್ರಗಳಿಗೆ (ಫ್ರೆಂಚ್, ಸ್ವೀಡಿಷ್, ಇಟ್ಯಾಲಿಯನ್, ಸ್ಪ್ಯಾನಿಷ್, ಚೀನೀ, ಜಪಾನಿ ಮೊದಲಾದವು)

ನೀಡಲಾಗಿದೆ. ರಿಚರ್ಡ್ ಅಟೆನ್‌ಬರೊ ನಿರ್ಮಾಪಕತ್ವದ 'ಗಾಂಧಿ' (1982) ಕ್ರಿಶ್ಚಿಯನ್ ಕಾಲ್ಸನ್ ನಿರ್ಮಾಪಕತ್ವದ 'ಸ್ಲಮ್‌ಡಾಗ್ ಮಿಲಿಯನೇರ್' ಚಿತ್ರಗಳೂ ಆಸ್ಕರ್ ಪುರಸ್ಕೃತ ಚಿತ್ರಗಳಾಗಿವೆ. (ಬಿ.ವಿ.ಎಸ್)

**ಆಸ್ಟಟೀನ್:** ಅತ್ಯಧಿಕ ಭಾರದ ಹ್ಯಾಲೊಜನ್, ವಿಕಿರಣಪಟು ಧಾತು, ಸಂಕೇತ At, ಪರಮಾಣು ಸಂಖ್ಯೆ 85. 1940 ರಲ್ಲಿ ಸೆಗ್ರೆ, ಮೆಕೆನ್ಸೀ ಮತ್ತು ಕಾರ್ಸನ್ ಇವರು ಬಿಸ್ಮತ್ 209ನ್ನು ಆಲ್ಫ ಕಣದಿಂದ ತಾಡಿಸಿ 211 ತೂಕದ ಈ ಧಾತುವಿನ ಸಮಸ್ಥಾನಿಯೊಂದನ್ನು (ಐಸೊಟೋಪ್) ತಯಾರಿಸಿದರು.

$$_{83}Bi^{209}+_{2}He^{4}\rightarrow _{85}At^{211}+2n$$

ಇದರ ಅರ್ಧಾಯು 7.5 ಗಂಟೆ. 201–219ವರೆಗೆ ತೂಕವಿರುವ ಅನೇಕ ಸಮಸ್ಥಾನಿಗಳಿವೆ. ಅವುಗಳಲ್ಲಿ ಕೆಲವು ವಿವಿಧ ವಿಕಿರಣ ಶ್ರೇಣಿಗಳಲ್ಲಿ ಕಂಡುಬರುವುದಾದರೂ ಯಾವುದಕ್ಕೂ ಅರ್ಧಾಯು 8.5 ಗಂಟೆಗಳಿಂತ ಹೆಚ್ಚಿಗೆ ಇಲ್ಲ. ರಾಸಾಯನಿಕವಾಗಿ ಇದು ಹ್ಯಾಲೊಜನ್. ಅಂತೆಯೇ $At^{-}$-$AtO^{-}$-$AtO_3^{-}$ ಅಯಾನುಗಳನ್ನು ಗುರುತಿಸಲಾಗಿದೆ. ಆವರ್ತಕೋಷ್ಟಕದಲ್ಲಿ ಇದರ ಸಮೀಪವಿರುವ ಧಾತುಗಳನ್ನು ಶಕ್ತಿಯುತವಾದ ಕಣಗಳಿಂದ ಘಾತಿಸುವುದರಿಂದಲೂ ಆಸ್ಟಟೀನನ್ನು ತಯಾರಿಸಬಹುದು. ಉದಾ:ಗೆ $Au^{197}(C^{12}, 4n)At^{205}$. ಇದು ಹ್ಯಾಲೋಜನ್ ಮತ್ತು ಅಯೊಡೀನ್‌ಗಿಂತ ಹೆಚ್ಚು ಲೋಹಗುಣವುಳ್ಳದ್ದೆಂದು ಕಂಡುಬಂದಿದೆ. ಅಲ್ಪ ಪ್ರಮಾಣದಲ್ಲಿ ನಿಸರ್ಗದಲ್ಲಿದೆಯೆಂದು ಈಚೆಗೆ ತಿಳಿದುಬಂದಿದೆ. ಅಭದ್ರ, ಅಸ್ಥಿರ ಎಂದು ಅರ್ಥವಿರುವ ಒಂದು ಗ್ರೀಕ್ ಪದದಿಂದ ಆಸ್ಟಟೀನ್ ಪದ ನಿಷ್ಪನ್ನವಾಗಿದೆ. (ಜಿ.ಆರ್.ಎಲ್.;ಎನ್.ಎಸ್.ಕೆ.)

**ಆಸ್ಟನ್, ಫ್ರಾನ್ಸಿಸ್ ವಿಲಿಯಂ:** 1877–1945. ಬ್ರಿಟನ್ನಿನ ರಸಾಯನ ಮತ್ತು ಭೌತವಿಜ್ಞಾನಿ. ಪ್ರೌಢಶಾಲೆಯ ಕೊನೆಯ ಪರೀಕ್ಷೆಯಲ್ಲಿ ಇವನದೇ ಪ್ರಥಮಸ್ಥಾನ (1893). ಅಲ್ಲಿ ಕಲಿತದ್ದು ವಿಜ್ಞಾನ ಮತ್ತು ಗಣಿತ. ಮುಂದೆ ಮ್ಯಾಲ್ವರ್ನ್ ಕಾಲೇಜ್, ಬರ್ಮಿಂಗ್‌ಹ್ಯಾಮ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಲ್ಲಿ ಸಹಾಯಕ ಉಪಾಧ್ಯಾಯನಾಗಿ ಸೇರಿದ (1909). ಇವನಿಗೆ 1920ರಲ್ಲಿ ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನ ಫೆಲೋ ಪದವಿ ದೊರಕಿತು. ಒಂದೇ ರಾಸಾಯನಿಕ ಗುಣಗಳಿದ್ದರೂ ಬೇರೆ ಬೇರೆ ಪರಮಾಣುಗಳಿರುವ ಸಮಸ್ಥಾನಿಗಳನ್ನು (ಐಸೊಟೋಪ್ಸ್) ನಿಷ್ಕೃಷ್ಟವಾದ ರೀತಿಯಲ್ಲಿ ಕಂಡುಹಿಡಿಯಲು ಜಡತ್ವರೋಹಿತಲೇಖಕ (ಮಾಸ್ ಸ್ಪೆಕ್ಟ್ರೊಗ್ರಾಫ್) ಎಂಬ ಉಪಕರಣವನ್ನು ನಿರ್ಮಿಸಿದ. ಇದರ ಸಹಾಯದಿಂದ ಎಲ್ಲ ಮೂಲವಸ್ತುಗಳಿಗೂ ಸಮಸ್ಥಾನಿಗಳನ್ನು ಕಂಡುಹಿಡಿಯುವುದರಲ್ಲಿ ನಿರತನಾಗಿ ಪರಮಾಣು ಭಾರಗಳನ್ನು ಹತ್ತು ಸಾವಿರದಲ್ಲೊಂದಕ್ಕಿಂತ ಕಡಿಮೆ ಅನಿಶ್ಚಿತತ್ವವಿರುವಂತೆ ಬಲು ನಿಷ್ಕೃಷ್ಟವಾಗಿ ನಿರ್ಧರಿಸಿದ್ದಾನೆ. ಈ ಸಾಧನೆಗಾಗಿ ರಸಾಯನವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಕ ಇವನಿಗೆ ದೊರಕಿತು (1922). ಮೆಕೆನ್ಸಿ ಡೇವಿಡ್‌ಸನ್ ಪದಕ 1920ರಲ್ಲೂ ಹ್ಯೂಸ್ ಪದಕ 1922ರಲ್ಲೂ ರಾಯಲ್ ಪದಕ 1938ರಲ್ಲೂ ದೊರೆತುವಲ್ಲದೆ ಇನ್ನೂ ಅನೇಕ ಪದಕಗಳೂ ಎಫ್.ಆರ್.ಎಸ್. ಎಂಬ ಗೌರವವೂ ಇವನಿಗೆ ಲಭಿಸಿದುವು. ಐಸೊಟೋಪ್ಸ್ ಎಂಬ ಪುಸ್ತಕವನ್ನು 1922ರಲ್ಲೂ ಮಾಸ್ ಸ್ಪೆಕ್ಟ್ರ ಅಂಡ್ ಐಸೊಟೋಪ್ಸ್ ಎಂಬ ಪುಸ್ತಕವನ್ನು 1933ರಲ್ಲೂ ಇವನು ಬರೆದು ಪ್ರಸಿದ್ಧಪಡಿಸಿದ. ಇವು ಜಡತ್ವರೋಹಿತದ ವಿಷಯದಲ್ಲಿ ಆದರ್ಶ ಪುಸ್ತಕಗಳಾಗಿವೆ. (ಟಿ.ಎಸ್.ಎಸ್.)

ಆಸ್ಟನ್ ಸುಪ್ರಸಿದ್ಧ ಬ್ರಿಟಿಷ್ ಭೌತವಿಜ್ಞಾನಿ ಜೆ.ಜೆ. ಥಾಮ್‌ಸನ್‌ನ ಸಹಾಯಕನಾಗಿ ಕೆಲಸಮಾಡಿ ಬೆಳಕಿಗೆ ಬಂದವ. ಕಾಂತಕ್ಷೇತ್ರಗಳಲ್ಲಿ ಧನವಿದ್ಯುದಂಶದಿಂದ ಕೂಡಿದ ಅಯಾನುಗಳ ವಿಚಲನವನ್ನು (ಡಿಫ್ಲೆಕ್ಷನ್ ಆಫ್ ಪಾಸಿಟಿವ್ಲಿ ಚಾರ್ಜ್ಡ್ ಅಯಾನ್ಸ್ ಇನ್ ಮ್ಯಾಗ್ನೆಟಿಕ್ ಫೀಲ್ಡ್ಸ್) ಕಂಡುಹಿಡಿಯಲು ಥಾಮ್‌ಸನ್ ನಿರ್ಮಿಸಿದ್ದ ಉಪಕರಣವನ್ನು ಇವನು ಸುಧಾರಿಸಿದ. ಇದರ ಪರಿಣಾಮವಾಗಿ ಒಂದು ನಿರ್ದಿಷ್ಟ ರಾಶಿಯ ಎಲ್ಲ ಅಯಾನುಗಳೂ ಫೋಟೋಗ್ರಾಫ್ ಫಿಲ್ಮಿನ ಒಂದು ಸೂಕ್ಷ್ಮರೇಖೆಯಲ್ಲಿ ಕೇಂದ್ರೀಕೃತವಾಗುವುದು ಸಾಧ್ಯವಾಯಿತು. ಪರಮಾಣುಗಳ ಭಾರವನ್ನು ನಿಷ್ಕೃಷ್ಟವಾಗಿ ನಿರ್ಣಯಿಸುವಲ್ಲಿ ಇದು ಮಹತ್ತ್ವದ ಸುಧಾರಣೆ. ಭವಿಷ್ಯದಲ್ಲಿ ಮನುಷ್ಯ ಪರಮಾಣು ಶಕ್ತಿಯನ್ನು ಪಡೆಯುವ ಸಾಹಸ ಸಾಧಿಸುತ್ತಾನೆ ಎಂದು ಆಸ್ಟನ್ දೃಢವಾಗಿ ನಂಬಿದ್ದ. ಇಂಥ ಸನ್ನಿವೇಶದಲ್ಲಿ ಒದಗಬಹುದಾದ ಅಪಾಯಗಳನ್ನು ಕುರಿತು ಅವನು ತನ್ನ ನೊಬೆಲ್ ಬಹುಮಾನಸಂಬಂಧ ಭಾಷಣದಲ್ಲಿ ಪ್ರಸ್ತಾಪಿಸಿದ್ದಾನೆ. ಅಂದು ಇವನ ಮಾತನ್ನು ನಂಬಿದ ವಿಜ್ಞಾನಿಗಳಿಗಿಂತ ವೈಜ್ಞಾನಿಕ ಕಥೆಗಾರರ ಸಂಖ್ಯೆಯೇ ಹೆಚ್ಚು. ಇವನ ಜೀವನದ ಕೊನೆಯ ತಿಂಗಳುಗಳಲ್ಲಿ ಬಂದ ಹಿರೋಷೀಮಾದ ಪರಮಾಣು ಬಾಂಬ್ ಹತ್ಯಾಕಾಂಡದ ವರದಿ ಆಸ್ಟನ್ ಕನಸುಗಾರನಲ್ಲ ಎಂದು ಸಿದ್ಧಪಡಿಸಿತು. *

**ಆಸ್ಟರ್:** ಬಹುಜನಪ್ರಿಯವೂ ರಮ್ಯವೂ ಆದ ವಾರ್ಷಿಕ ಸಸ್ಯ ಆಸ್ಟರೇಸೀ ಅಥವಾ ಕಂಪಾಸಿಟೀ ಕುಟುಂಬಕ್ಕೆ ಸೇರಿದೆ. ಸೀಮೆ ಸೇವಂತಿಗೆಯೆಂದೂ ಕರೆಯುತ್ತಾರೆ. ಇದನ್ನು ಮಡಿಗಳಲ್ಲೂ ಕುಂಡಗಳಲ್ಲೂ ಬೆಳೆಸುತ್ತಾರೆ. ಸೇವಂತಿಗೆಯಂತಿರುವ ಈ ಹೂಗಳನ್ನು ಮಂಜರಿಗಳಿಗೂ (ಬುಕೆ) ಕಳಶಗಳಲ್ಲಿ ಜೋಡಿಸುವುದಕ್ಕೂ ಮುಡಿಯಲೂ ಉಪಯೋಗಿಸಬಹುದು. ಇಂದಿನ ಹೂವಾಡಿಗರು ಬಳಸುವ ಆಸ್ಟರ್ ಹೂ 1731ರಲ್ಲಿ ಜೆಸ್ಯೂಟ್ ಪಾದ್ರಿಗಳು ಚೀನದಿಂದ ತಂದ ಒಂದು ವಿಧದ ಏಕದಳ ಪುಷ್ಪ. ಅದು ಕ್ರಮಕ್ರಮವಾಗಿ ವಿಕಾಸಗೊಂಡು ಇಂದಿನ ಸ್ವರೂಪವನ್ನು ತಾಳಿದೆ. ಬೆಳವಣಿಗೆ, ಬಣ್ಣ ಮತ್ತು ಹೂಗಳ ಆಕಾರಗಳಲ್ಲಿ ವೈವಿಧ್ಯವಿರುವ ಆಸ್ಟರ್ ಹೂಗಳು ಈಗ ಎಲ್ಲೆಲ್ಲೂ ದೊರೆಯುತ್ತವೆ. ಗಿಡ

ಸಣ್ಣ ಸಣ್ಣ ರೆಂಬೆಗಳೊಡನೆ 1–3ಮೀ ಎತ್ತರದವರೆಗೆ ಹರಡಿಕೊಂಡು ಪೊದೆಯಂತೆ ಅಚ್ಚುಕಟ್ಟಾಗಿ ಬೆಳೆಯುತ್ತದೆ. ಆಸ್ಟರ್‌ನಲ್ಲಿ ಹಳದಿ ಬಣ್ಣವನ್ನು ಬಿಟ್ಟು ಮಿಕ್ಕ ಎಲ್ಲ ಬಣ್ಣದ ಹೂಗಳನ್ನೂ ಬಿಡುವ ಜಾತಿಗಳಿವೆ. ಇವುಗಳಲ್ಲಿ ಕ್ಯಾಲಿಫೋರ್ನಿಯನ್ ಜಯಂಟ್, ಕಾಮೆಟ್, ವಿಕ್ಟೋರಿಯ, ಮ್ಯಾಮತ್, ಪ್ಯೂನಿಫ್ಲವರ್ಡ್ ಮತ್ತು ಬ್ರ್ಯಾಂಚಿಂಗ್ ಆಸ್ಟರುಗಳು ಮುಖ್ಯವಾದುವು.

ಆಸ್ಟರುಗಳನ್ನು ಬೆಳೆಸುವುದು ಬಲು ಸುಲಭ. ಇವುಗಳಿಗೆ ಬಲು ಹಗುರವಾದ, ನೀರು ಸುಲಭವಾಗಿ ಇಂಗಿಹೋಗುವ ಮಣ್ಣು ಅಗತ್ಯ. ಇವನ್ನು ವರ್ಷದ ಎಲ್ಲ ಕಾಲಗಳಲ್ಲೂ ಹೆಚ್ಚು ಮಳೆ ಬೀಳುವ ಮಧ್ಯಮ ಪ್ರದೇಶಗಳಲ್ಲಿ ಬೆಳೆಸಬಹುದು. ಬಿತ್ತಿದ ಮೇಲೆ 3½–4 ತಿಂಗಳಲ್ಲಿ ಹೂ ಬರುತ್ತವೆ. ಕ್ಯಾಲಿಫೋರ್ನಿಯನ್ ಜಯಂಟ್ ಮತ್ತು ಇತರ ಕೆಲವು ಆಸ್ಟರುಗಳು 4–5 ತಿಂಗಳಲ್ಲಿ ಹೂ ಬಿಡುತ್ತವೆ. ಸಸಿಗಳು ಆರು ಎಲೆಯಾದಾಗ 3–4ಮೀ ಅಂತರ ಕೊಟ್ಟು ನೆಡಬೇಕು. ಗಿಡ 10 ಸೆಂಮೀ–90ಸೆಂಮೀ ಎತ್ತರದವರೆಗೂ ಬೆಳೆಯುತ್ತದೆ. ಕೆಂಪು ಇರುವೆಗಳು, ಕಿತ್ತಳೆ ಬಣ್ಣದ ಬೀಟಲ್ ಮತ್ತು ಲಾರ್ವಗಳು ಆಗಾಗ್ಗೆ ಬಂದು ಗಿಡಗಳನ್ನು ತಿಂದು ಹಾಳುಮಾಡುವುದುಂಟು. ಶೇ 50 ಡಿ.ಡಿ.ಟಿ. ಅಥವಾ ಯಾವುದಾದರೂ ಕ್ರಿಮಿನಾಶಕವನ್ನು ಸಿಂಪಡಿಸುವುದರಿಂದ ಅಂಥ ಪಿಡುಗುಗಳನ್ನು ನಿವಾರಿಸಬಹುದು. (ಕೆ.)

**ಆಸ್ಟರಾಯ್ಡ್‌ಗಳು: ನೋಡಿ–ಕ್ಷುದ್ರಗ್ರಹಗಳು**

**ಆಸ್ಟರ್ ಲಿಟ್ಸ್ ಕದನ:** ಈ ಕದನದಲ್ಲಿ ನೆಪೋಲಿಯನ್ 1805 ಡಿಸೆಂಬರ್ 2ನೆಯ ತಾರೀಖು ಆಸ್ಟ್ರಿಯ ಮತ್ತು ರಷ್ಯ ರಾಜ್ಯಗಳ ಸಂಯುಕ್ತ ಸೈನ್ಯವನ್ನೆದುರಿಸಿ, ಪ್ರಚಂಡ ವಿಜಯ ಗಳಿಸಿದ. ಆಸ್ಟ್ರಿಯದ ಮತ್ತು ರಷ್ಯದ ಚಕ್ರವರ್ತಿಗಳೇ ಈ ಕದನದಲ್ಲಿ ಭಾಗವಹಿಸಿದ್ದರಿಂದ ಇದನ್ನು ಮೂರು ಸಾಮ್ರಾಟರ ಕದನ ಎಂದೂ ಕರೆಯುತ್ತಾರೆ. ಇದರಲ್ಲಿ ನೆಪೋಲಿಯನ್ ತೋರಿಸಿದ ವ್ಯೂಹನಿರ್ಮಾಣವಿವೇಕ, ಸೈನ್ಯಸಂಚಾಲನೋಪಾಯಗಳು ಇಡೀ ಯುರೋಪನ್ನೇ ದಿಗ್ಭ್ರಮೆಗೊಳಿಸಿದವು. ಮುಂದೆ ಕೆಲವು ವರ್ಷಕಾಲ ಅವನ ಸೈನ್ಯವನ್ನೆದುರಿಸಲು ಯುರೋಪಿನ ಇತರ ರಾಷ್ಟ್ರಗಳು ಹೆದರಿದವು. ಈ ವಿಜಯ ಪ್ರಾಪ್ತವಾದದ್ದು ಆತ ಚಕ್ರವರ್ತಿ ಪದವಿ ಧರಿಸಿದ ಮೊದಲ ವಾರ್ಷಿಕೋತ್ಸವದ ದಿನ. ಲಿಯೊ ಟಾಲ್‌ಸ್ಟಾಯ್ ತನ್ನ ವಾರ್ ಅಂಡ್ ಪೀಸ್ ಎಂಬ ಭವ್ಯ ಕಾದಂಬರಿಯಲ್ಲಿ ಈ ಕದನವನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ. (ಎಚ್.ಆರ್.ಡಿ.)

**ಆಸ್ಟಿನ್, ಜಾನ್:** 1790–1859. ಇಂಗ್ಲೆಂಡಿನ ನ್ಯಾಯಶಾಸ್ತ್ರಜ್ಞ. ಹುಟ್ಟಿದ್ದು ಸಫೋಕ್‌ನ ಕ್ರೀಟಿಂಗ್‌ಮಿಲ್‌ನಲ್ಲಿ. ಚಿಕ್ಕ ವಯಸ್ಸಿನಲ್ಲಿ ಸೈನ್ಯಕ್ಕೆ ಸೇರಿ, ಐದು ವರ್ಷಗಳ ಕಾಲ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿ, ಅನಂತರ ವಿದ್ಯಾಭ್ಯಾಸದತ್ತ ಮನಸ್ಸು ತಿರುಗಿಸಿ, 1818ರಲ್ಲಿ ಬ್ಯಾರಿಸ್ಟರ್ ಆದ. 1820ರಿಂದ ಕೆಲವು ಕಾಲ ವಕೀಲಿ ವೃತ್ತಿಯಲ್ಲಿದ್ದು, ಅನಾರೋಗ್ಯದ ನಿಮಿತ್ತ ಅದನ್ನು ತ್ಯಜಿಸಿ, 1826ರಲ್ಲಿ ಹೊಸದಾಗಿ ಸ್ಥಾಪಿತವಾದ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರದ ಪ್ರಾಧ್ಯಾಪಕನಾದ. 1820ರಲ್ಲಿ ನಾರ್‌ವಿಚ್‌ನ ಸರಾಹ್ ಟೇಲರ್‌ಳನ್ನು ಮದುವೆಯಾದ. ಎರಡು ವರ್ಷಗಳ ಕಾಲ ಜರ್ಮನಿಯಲ್ಲಿ ಪ್ರವಾಸ ಮಾಡಿ, ನ್ಯಾಯಶಾಸ್ತ್ರದ ಬಗ್ಗೆ ಉನ್ನತಮಟ್ಟದ ಪಾಂಡಿತ್ಯ ಪಡೆದು 1828ರಲ್ಲಿ ಲಂಡನ್ ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿದ. ನಾಲ್ಕು ವರ್ಷಗಳ ಕಾಲ ನ್ಯಾಯಶಾಸ್ತ್ರದ ಬಗ್ಗೆ ಉಪನ್ಯಾಸ ಮಾಡಿ 1832ರಲ್ಲಿ ದಿ ಪ್ರಾವಿನ್ಸ್ ಆಫ್ ಜೂರಿಸ್‌ಪ್ರೂಡೆನ್ಸ್ ಡಿಟರ್ಮಿನ್ಡ್ ಎಂಬ ತನ್ನ ಆರು ಉಪನ್ಯಾಸಗಳನ್ನೊಳಗೊಂಡ ಪುಸ್ತಕವನ್ನು ಪ್ರಕಾಶಪಡಿಸಿದ. ಅದೇ ವರ್ಷ ಪ್ರಾಧ್ಯಾಪಕ ಪದವಿಗೆ ರಾಜೀನಾಮೆಯಿತ್ತ. ಕೆಲವು ಕಾಲ ಪಾರ್ಲಿಮೆಂಟರಿ ಕಮಿಷನ್‌ಗಳಲ್ಲಿ ಕೆಲಸ ಮಾಡಿ ಲಂಡನ್ನಿನ ಇನ್ನರ್ ಟೆಂಪಲ್‌ನಲ್ಲಿ ಉಪನ್ಯಾಸಕನಾಗಿ ಕೆಲಸ ಮಾಡಿದ. ಅನಂತರ ಮಾಲ್ಟದ ಬ್ರಿಟಿಷ್ ಕಲೋನಿಯಲ್ ಕಚೇರಿಯಲ್ಲಿ ಸೇವೆ ಸಲ್ಲಿಸಿದ. ಆ ವೇಳೆಗೆ ಆತನ ಪುಸ್ತಕ ಸಾಮಾನ್ಯರ ಪ್ರಶಂಸೆಗೆ ಒಳಗಾಗದೆ ಹೋದರೂ ತಜ್ಞರಿಂದ ಶ್ರೇಷ್ಠ ಗ್ರಂಥವೆಂದು

ಪರಿಗಣಿಸಲಾಗಿತ್ತು. ಆತನ ಮರಣಾನಂತರ ಅವನ ಪತ್ನಿ ಗ್ರಂಥದ ಎರಡನೆಯ ಮುದ್ರಣವನ್ನು ಹೊರತಂದಳು (1861). ನ್ಯಾಯಶಾಸ್ತ್ರದ ವಿವಿಧ ವಿಷಯಗಳ ಬಗ್ಗೆ ಆಸ್ಟಿನ್ ಬರೆದಿದ್ದ ಲೆಕ್ಚರ್ ಆನ್ ಜೂರಿಸ್‌ಪ್ರೂಡೆನ್ಸ್ ಎಂಬ ವ್ಯಾಖ್ಯಾನ ಗ್ರಂಥ 1863ರಲ್ಲಿ ಪ್ರಕಟವಾಯಿತು. ಸರ್ ಹೆನ್ರಿ ಮೇನ್ ಎಂಬ ಕೇಂಬ್ರಿಜ್‌ನ ನ್ಯಾಯಶಾಸ್ತ್ರಜ್ಞ ಆಸ್ಟಿನ್‌ನ ಪ್ರತಿಭೆ ಆಂಗ್ಲ ನ್ಯಾಯಶಾಸ್ತ್ರದಲ್ಲಿ ಚಿರಸ್ಥಾಯಿಯಾಗಿ ಬೆಳಗುವಂತೆಯೂ ಉಳಿಯುವಂತೆಯೂ ಮಾಡಿದ.

ಆಸ್ಟಿನ್ ಬೆಂಥಂನ ಶಿಷ್ಯ. 19ನೆಯ ಶತಮಾನದಲ್ಲಿ ಇದ್ದ ಐತಿಹಾಸಿಕ ಹಾಗೂ ಆಧ್ಯಾತ್ಮಿಕ ನ್ಯಾಯಶಾಸ್ತ್ರ ಶಾಖೆಗಳ ಹಲವಾರು ನ್ಯೂನತೆಗಳನ್ನು ನಿವಾರಿಸಲು ಆಸ್ಟಿನ್ ವಿಭಜನ ವಿಧಾನದ ನ್ಯಾಯಶಾಸ್ತ್ರದ ಶಾಖೆಯನ್ನು ಸ್ಥಾಪಿಸಿದ. ಅದರ ರೂಪರೇಖೆಗಳನ್ನು ವಿವರಿಸಿ, ವಿಶ್ಲೇಷಿಸಿ, ವ್ಯಾಖ್ಯಾನ ಮಾಡಿದ. ಈ ಶಾಖೆಯ ಗಮನಾರ್ಹ ವೈಶಿಷ್ಟ್ಯಗಳೆಂದರೆ–ವಿಕಸಿತ ಕಾನೂನುಗಳನ್ನು ಗಣನೆಗೆ ತೆಗೆದುಕೊಂಡಿರುವುದು, ಕಾನೂನನ್ನು ಶಾಸನ ಸಭೆ ಅಥವಾ ನ್ಯಾಯಾಂಗ ಆಲೋಚಿಸಿ ರಚಿಸಬೇಕೆಂಬುದು, ಕಾನೂನುಗಳನ್ನು ಪಾಲಿಸುವುದಕ್ಕೆ ಮೂಲಕಾರಣ ಶಿಕ್ಷಾಶಕ್ತಿ (ದಂಡನಾಶಕ್ತಿ) ಎಂಬುದು, ಕಾಯಿದೆ ಮಾದರಿಯಾದ ಕಾನೂನೆಂಬುದು, ತಾತ್ತ್ವಿಕ ದೃಷ್ಟಿಕೋನ ಸರ್ವಜನಹಿತದ್ದಾಗಿರಬೇಕೆಂಬುದು.

ಅಂತಾರಾಷ್ಟ್ರೀಯ ಕಾನೂನು ಕಾನೂನಲ್ಲವೆಂದು ವಾದಿಸಿ ಆಸ್ಟಿನ್ ಶಿಕ್ಷಾಶಕ್ತಿರಹಿತವಾದ ಆ ಕಾನೂನು ಮಾನವ ನಿಯಮಿಸಿದ ಕೇವಲ ಅಂತಾರಾಷ್ಟ್ರೀಯ ತತ್ತ್ವವಷ್ಟೇ ಎಂಬುದನ್ನು ಸಮರ್ಥಿಸಿದ್ದಾನೆ. (ಎಂ.ಎಸ್.ಆರ್.)

**ಆಸ್ಟಿನ್, ಜೇನ್:** 1775–1817. ಇಂಗ್ಲಿಷ್ ಕಾದಂಬರಿಕಾರ್ತಿ. ಹ್ಯಾಂಪ್‌ಷೈರಿನ ಸ್ಟೀವನ್‌ಟನ್ ಎಂಬ ಹಳ್ಳಿಯ ಪಾದ್ರಿಯ ಎಂಟು ಮಕ್ಕಳ ಪೈಕಿ ಏಳನೆಯವಳು. ಹೊಂದಿಕೆಯ ಹಿತಕರ ಸಂಸಾರದಲ್ಲಿ ಬೆಳೆದ ಆಕೆ ಆಟ, ಒಗಟೆ, ಓದುಗಳಲ್ಲಿ ನಿರತಳಾಗಿ ಆ ಹಳ್ಳಿಯಲ್ಲೇ 25 ವರ್ಷ ಕಳೆದಳು. ಯಾವ ಉದ್ರೇಕವೂ ಇಲ್ಲದ ಪ್ರಶಾಂತ ಜೀವನ ಸಾಗಿಸಿದ ಆಕೆ ಸಾಹಿತ್ಯಸಂಘಗಳಲ್ಲಾಗಲಿ, ಸಾಹಿತ್ಯ ವಿಷಯಕವಾದ ಪತ್ರವ್ಯವಹಾರಗಳಲ್ಲಾಗಲೀ ಎಂದೂ ಆಸಕ್ತಿ ತೋರಲಿಲ್ಲ.

ಆಸ್ಟಿನ್ನಳ ಬಾಳೂ ಅವಳ ಕಾದಂಬರಿಗಳೂ ಮೇಲುನೋಟಕ್ಕೆ ಒಂದೇ ತರಹ. ಅವು ಘಟನಾಪ್ರಧಾನವಾದುವಲ್ಲ. ಒಳನಾಡಿನ ಊರುಗಳಲ್ಲಿ ಸಾಮಾನ್ಯವಾಗಿ ಕಾಣಬಹುದಾದ, ಮಧ್ಯಮವರ್ಗದ ಜನರ ಚಿತ್ರಗಳನ್ನೇ ಆಕೆಯ ಕಾದಂಬರಿಗಳಲ್ಲಿ ಹೆಚ್ಚಾಗಿ ಕಾಣಬಹುದು. ಮೃದು ಹೃದಯ, ನಗೆ ಮಾತು, ಸುಸಂಸ್ಕೃತಿಯ ಸಲ್ಲಕ್ಷಣ. ಕಾಲ್ತೊಡಕಾಗಿ ಬಂದ ಸಂಕಟಗಳೆಲ್ಲ ಅಂತಿಮವಾಗಿ ಪರಿಹಾರವಾಗುವುವೆಂದು ನಂಬಿ ನಡೆಯುವ ಜನ. ಪ್ರೇಮಭಂಗ ಮಾನಹರಣಗಳೇ ಮುಂತಾದ ಘಟನೆಗಳು ವಿರಳ. ಬದುಕಿನ ನಿತ್ಯಜಂಜಡ, ನೆರೆಹೊರೆಯ ಮಾತಿನ ಕಲಾಪ–ಇವಕ್ಕೆಲ್ಲ ಹಾಸ್ಯದ ಲೇಪ. ಇದೇ ಆಕೆಯ ಕಾದಂಬರಿಯ ಮುಖ್ಯ ಲಕ್ಷಣವೆಂದು ಹೇಳಬಹುದು.

ಈಕೆಯ ಕೃತಿಗಳಲ್ಲಿ ಬಾಳಿನ ನಾನಾ ಅನುಭವಗಳ ವಿವೇಚನೆ ಧಾರಾಳವಾಗಿ ಕಾಣಸಿಗುತ್ತದೆ. ಭಾವೋದ್ರೇಕವಿಲ್ಲದ ಸರಳ ಶೈಲಿಯ ಹಿಂದೆ ಬಾಳಿನ ಕಟುಮಧುರತೆಯ ಆವಿರ್ಭಾವವಾಗಿದೆ. ಸಾಧಾರಣ ಜೀವನವನ್ನು ಸಹಾನುಭೂತಿಯ ಕಣ್ಣಿನಿಂದ ನೋಡಿ ಕಲಾತ್ಮಕವಾಗಿ ಚಿತ್ರಿಸಿ ಶ್ರೇಷ್ಠ ಸಾಹಿತ್ಯವನ್ನು ಹೇಗೆ ಸೃಷ್ಟಿಸಬಹುದೆಂಬುದಕ್ಕೆ ಜೇನ್ ಆಸ್ಟಿನ್ನಳ ಕೃತಿಗಳೇ ದೃಷ್ಟಾಂತ. ಮಧ್ಯಮವರ್ಗದ ಸಂಸಾರವನ್ನು ಚಿತ್ರಿಸುವುದರಲ್ಲಿ ಆಕೆಯನ್ನು ಯಾರೂ ಮೀರಿಸಿಲ್ಲ. ಅವಳೇ ಹೇಳಿಕೊಂಡಿರುವ ಹಾಗೆ ಅದು ಎರಡಂಗುಲ ದಂತದ ಕಿರಿಯಗಲದಲ್ಲಿ ಕೆತ್ತಿದ ಕುಸುರಿ ಕೆಲಸ.

ಇಂಗ್ಲಿಷ್ ರಮ್ಯ (ರೊಮ್ಯಾಂಟಿಕ್) ಸಾಹಿತ್ಯದ ಪರ್ವಕಾಲದಲ್ಲಿ ಬಾಳಿದರೂ ರಮ್ಯ ವ್ಯಕ್ತಿತ್ವಾರಾಧನೆಯ ಪಂಥಕ್ಕೂ ಜೇನ್‌ಳಿಗೂ ಬಹಳ ದೂರ. ರಮ್ಯಸಾಹಿತ್ಯದಲ್ಲಿ ಆಕೆಗೆ ಅಷ್ಟಾಗಿ ಒಳ್ಳೆಯ ಅಭಿಪ್ರಾಯವಿರಲಿಲ್ಲ. 18ನೆಯ ಶತಮಾನದ ಸಂಪ್ರದಾಯಗಳನ್ನು ಅವಳು ಸ್ವೀಕರಿಸಿದಳಾದರೂ ಆಕೆ ಅದರಲ್ಲೇ ಭಾವಪರವಶಳಾಗಿಲ್ಲ. 1790ರ ದಶಕದ ಮೊದಲ ವರ್ಷಗಳಲ್ಲಿ ರಚಿತವಾದರೂ 20ನೆಯ ಶತಮಾನದ ಎರಡು–ಮೂರನೆಯ ದಶಕಗಳಲ್ಲಿ ಪ್ರಕಟವಾದ ಲವ್ ಅಂಡ್ ಫ್ರೆಂಡ್‌ಷಿಪ್ ಎಂಬ ಕೃತಿಯ ಎರಡು ಸಂಪುಟಗಳ ತುಂಬ ಅಂದಿನ ಕಾಲದ ಜನಪ್ರಿಯ ಕಾದಂಬರಿಗಳ ಭಾವಾತಿರೇಕದ ಅಣಕವೇ ತುಂಬಿದೆ. ಲೇಡಿ ಸೂಸಾನ್ ಎಂಬುದು ಭಾಗಶಃ 1790ರ ದಶಕದ ನಡುಗಾಲದಲ್ಲಿ ರಚಿತವಾಗಿ 1871ರಲ್ಲಿ ಪ್ರಕಟವಾಯಿತು. ಜೇನ್ ಆಸ್ಟಿನ್ನಳ ಪ್ರಸಿದ್ಧ ಕಾದಂಬರಿಗಳಲ್ಲೊಂದಾದ ಸೆನ್ಸ್ ಅಂಡ್ ಸೆನ್ಸಿಬಿಲಿಟಿ ಎಂಬುದು ಆಕೆಯ ಲೇಖನಜೀವನದ ಆರಂಭಕಾಲದ ಆಶಾಭಂಗದ ಸಂಕೇತವಾಗಿದೆ. 1796ಕ್ಕೆ ಹಿಂದೆಯೇ ಬರೆದು ಮುಗಿಸಿದ್ದ ಈ ಕಾದಂಬರಿ 1797–98ರಲ್ಲಿ ಹೊಸ ರೂಪ ತಳೆಯಿತು. ಆದರೆ ಅದೂ ಪ್ರಕಾಶಕರಿಂದ ತಿರಸ್ಕೃತವಾಯಿತು. 1809–10ರಲ್ಲಿ ಆಕೆ ಈ ಕೃತಿಯನ್ನು ಪರಿಷ್ಕರಿಸಿದಳು. ಮರುವರ್ಷ ಅದು ಪ್ರಕಟವಾಯಿತು. ಈ ಕಾದಂಬರಿಯಲ್ಲೂ ಆಸ್ಟಿನ್ ಮರಣದ ಮರುವರ್ಷ ಪ್ರಕಟವಾದ ನಾರ್ಥಾಂಜರ್ ಅಬೆಯಲ್ಲೂ ಆಗಿನ ಕಾಲದ ರೀತಿನೀತಿಗಳ ಹಾಸ್ಯವೇ ಪ್ರಧಾನವಾಗಿದೆ.

1813ರಲ್ಲಿ ಪ್ರಕಟವಾದ ಪ್ರೈಡ್ ಅಂಡ್ ಪ್ರಿಜುಡಿಸ್ ಎಂಬುದು ಆಸ್ಟಿನ್ನಳ ಅನುಭವದ ಪಕ್ವಫಲವಾಗಿದ್ದು, ಹಾಸ್ಯ ಕಟಕಿಗಳು ಬೆರೆತ ಜೀವನಾನುಕಂಪ ಆ ಕೃತಿಯ ಉದ್ದಕ್ಕೂ ಕಾಣಸಿಗುತ್ತವೆ. ಹಮ್ಮು ಬಿಮ್ಮು ಎಂಬ ಹೆಸರಿನಲ್ಲಿ ಇದರ ಕನ್ನಡ ಅನುವಾದ ಪ್ರಕಟವಾಗಿದೆ.

ತನ್ನ ಕೃತಿಗಳಿಗೆ ಪ್ರಕಟಣೆಯ ಯೋಗ ಪ್ರಾಪ್ತಿಯಾದುದರಿಂದ ಹುರುಪುಗೊಂಡ ಆಸ್ಟಿನ್ ಮುಂದೆಯೂ ಕಾದಂಬರಿಗಳ ರಚನೆಯಲ್ಲಿ ತೊಡಗಿದಳು. ಎಮ್ಮಾ ಎಂಬುದು ಅವಳು ಬದುಕಿದ್ದಾಗಲೇ (1815ರಲ್ಲಿ) ಪ್ರಕಟವಾಯಿತು. ಪರ್ಸುಯೇಷನ್ ಆಕೆ ಸತ್ತ ಮರುವರುಷವೂ ಮ್ಯಾನ್ಸ್‌ಫೀಲ್ಡ್ ಪಾರ್ಕ್ ಅದರ ಮರುವರುಷವೂ ಪ್ರಕಟವಾದುವು.

ಕೋಲ್‌ರಿಜ್, ಸದೆ, ಮಕಾಲೆಗಳು ಆಸ್ಟಿನ್ನಳ ಪ್ರತಿಭೆಯನ್ನು ಮೆಚ್ಚಿಕೊಂಡಿದ್ದಾರೆ. ಸ್ಕಾಟ್ ಪ್ರಶಂಸಿಸಿದ್ದಾನೆ. ಮಿತವ್ಯಾಪ್ತಿಯ ಅನುಭವದಲ್ಲೇ ಜೀವನದ ಆಳವನ್ನೂ ಗಂಭೀರತೆಯನ್ನೂ ಕಲಾತ್ಮಕವಾಗಿ ಸೃಷ್ಟಿಸಿದ್ದು ಆಸ್ಟಿನ್ನಳ ವೈಶಿಷ್ಟ್ಯ. (ಎಚ್.ಪಿ.ಎಸ್.)

**ಆಸ್ಟೆರಾಯ್ಡಿಯ:** ಅಕಶೇರುಕಪ್ರಾಣಿಗಳ ಗುಂಪಿನ ಕಂಟಕಚರ್ಮಿ (ಎಕಿನೊಡರ್ಮ) ವಂಶದ ಐದು ವರ್ಗಗಳಲ್ಲೊಂದು. ಎಲ್ಲ ಕಂಟಕ ಚರ್ಮಿಗಳೂ ಸಮುದ್ರವಾಸಿಗಳು. ಆಸ್ಟೆರಾಯ್ಡಿಯ ಪ್ರಾಣಿಗಳ ಶರೀರ ನಕ್ಷತ್ರಗಳನ್ನೇ ಹೋಲುವುದರಿಂದ ಇವುಗಳಿಗೆ ನಕ್ಷತ್ರಮೀನುಗಳು (ಸ್ಟಾರ್ ಫಿಷ್), ಕಡಲ ನಕ್ಷತ್ರಗಳು ಎಂಬ ರೂಢಿನಾಮಗಳು ಇವೆ. ಚರ್ಮ ಸುಣ್ಣಮಿಶ್ರಿತ ತಟ್ಟೆಗಳಂಥ ರಚನೆಗಳಿಂದ ಆವೃತವಾಗಿ ಗಟ್ಟಿಯಾಗಿದೆ. ಇದರ ಮಧ್ಯಭಾಗದಲ್ಲಿ ಪಂಚಭುಜಾಕೃತಿಯ ತಟ್ಟೆ ಇದೆ. ಇದಕ್ಕೆ ಹೊಂದಿಕೊಂಡು ಐದು ತೋಳುಗಳಿವೆ. ಆಸ್ಟೆರಿಯಸ್‌ನಲ್ಲಿ ತೋಳುಗಳು ಶರೀರದ ಮಧ್ಯದ ತಟ್ಟೆಯಿಂದ ಬೆಳೆದುಬಂದಿರುವ ಗುರುತು ಸ್ಫುಟವಾಗಿ ಕಾಣುವುದಿಲ್ಲ. ಶರೀರದ ತಳಭಾಗದಲ್ಲಿ ಬಾಯಿ. ಅದರ ಸುತ್ತಲೂ ಅತ್ಯಂತ ಚಿಕ್ಕ ಚಿಕ್ಕ ಮುಳ್ಳಿನೋಪಾದಿಯ ರಚನೆಗಳು. ಜಠರ ಚೀಲದಂತೆ, ಅದು ತಟ್ಟೆಯಂತಿರುವ ಶರೀರದ ಬಹುಭಾಗವನ್ನು ಆಕ್ರಮಿಸಿದೆ. ಬಾಯಿಯಿಂದ ಪ್ರತಿತೋಳಿನ ತುದಿಯವರೆಗೂ ಒಂದು ಕಾಲುವೆಯಂಥ ರಚನೆ ಇದೆ. ಇದು ಸರಿಯಾಗಿ ಬಾಹುಗಳ ಮಧ್ಯದಲ್ಲಿ ಹಾದುಹೋಗಿದೆ. ಇವನ್ನು ಆಂಬುಲ್ಯಾಕರಲ್ ಕಾಲುವೆಗಳೆನ್ನುತ್ತೇವೆ. ಇವುಗಳ ಇಕ್ಕೆಲಗಳಲ್ಲೂ ನಳಿಕೆಯಂಥ ಅತ್ಯಂತ ಚಿಕ್ಕ ಚಿಕ್ಕ ರಚನೆಗಳು ಇವೆ. ಇವನ್ನು ನಳಿಕೆ ಪಾದಗಳು ಎನ್ನುತ್ತಾರೆ. ಇವು ಜೊತೆ ಜೊತೆಯಲ್ಲಿವೆ. ಪ್ರತಿಯೊಂದು ನಳಿಕೆ ಪಾದದ ತುದಿಯಲ್ಲೂ ಒಂದೊಂದು ಅಂಟುಸಿಂಬಿಯಿದೆ. ಇವು ಗಟ್ಟಿ ಪದಾರ್ಥಕ್ಕೆ ಅಂಟಿಕೊಳ್ಳಬಲ್ಲುವು. ಈ ಪ್ರಾಣಿ ತನ್ನ ಪಾದಗಳನ್ನು ಹೊರಚಾಚಬಲ್ಲುದು ಮತ್ತು ಒಳಗೆಳೆದುಕೊಳ್ಳಬಲ್ಲುದು. ನಕ್ಷತ್ರಮೀನಿನ ಚಲನೆ ನಳಿಕೆಪಾದಗಳ ಸಹಾಯದಿಂದ. ಇವುಗಳ ಈ ಕ್ರಿಯೆ ಬಲು ಸಂಕೀರ್ಣ. ಆಂಬುಲ್ಯಾಕರಲ್ ಕಾಲುವೆಯಲ್ಲಿ ನೀರು ತುಂಬಿಕೊಂಡಿರುವ ನಾಳ ಪ್ರಾಣಿಯ ತಳಭಾಗದಲ್ಲಿ ಬಾಯಿಯ ಸುತ್ತಲೂ ಉಂಗುರದಂತಿರುವ ನಾಳವನ್ನು ಸೇರುತ್ತದೆ: ಉಂಗುರನಾಳಕ್ಕೆ ನೀರು ತುಂಬಿಕೊಂಡಿರುವ ಚೀಲದಂಥ ರಚನೆಗಳು ಅಂಟಿಕೊಂಡಿವೆ. ಉಂಗುರನಾಳಕ್ಕೂ ಪ್ರಾಣಿಯ ಹೊರ ಭಾಗಕ್ಕೂ ಸಂಪರ್ಕ ಕಲ್ಲುಗಾಲುವೆಯೆಂಬ ಮತ್ತೊಂದು ನಾಳದಿಂದ. ಪ್ರಾಣಿಯ ಮೇಲುಭಾಗದಲ್ಲಿ ಅಂದರೆ ಬಾಯಿಯಿರುವ ಭಾಗಕ್ಕೆ ವಿರುದ್ಧಭಾಗದಲ್ಲಿ ಕಲ್ಲುಗಾಲುವೆಯ ಬಾಯಿ ಇದೆ. ಇದರ ಹೆಸರು ಮ್ಯಾಡ್ರಿಪೋರೈಟ್. ಇದರಲ್ಲಿ ಜಲ್ಲಡಿಯಂಥ ರಚನೆಯಿದೆ. ಸಮುದ್ರದ ನೀರು ಮ್ಯಾಡ್ರಿಪೋರೈಟನ್ನು ಪ್ರವೇಶಿಸಿ ಕಲ್ಲುಗಾಲುವೆಯ ಮೂಲಕ ಉಂಗುರಗಾಲುವೆಯನ್ನು ತಲುಪುತ್ತದೆ. ಇದು ಉಂಗುರಗಾಲುವೆ ಮತ್ತು ಅದಕ್ಕಂಟಿಕೊಂಡಿರುವ ಚೀಲಗಳಿಗೆ ತುಂಬಿಕೊಂಡು ಉಂಗುರಗಾಲುವೆಯಿಂದ ಪ್ರತಿ ತೋಳಿನಲ್ಲಿರುವ ಕಾಲುವೆಗಳಿಗೆ ಪ್ರವಹಿಸುವುದು. ಇಲ್ಲಿರುವ ಕಾಲುವೆಯ ಇಕ್ಕೆಲದ ನಳಿಕೆಪಾದಗಳೊಳಗೆ ನೀರು ಹರಿಯುತ್ತದೆ. ನಳಿಕೆಪಾದದ ಬುರುಡೆಯಾಕಾರದ ಅಂಪುಲ್ಲ ನೀರಿನಿಂದ ತುಂಬಿಕೊಂಡಿರುವುದು. ಇವು ಸಂಕುಚಿಸುತ್ತವೆ. ಇದರಿಂದ ನೀರು ಅಂಪುಲ್ಲದ ಮುಂಭಾಗದ ನಳಿಕೆಗೆ ನುಗ್ಗಿ ಹಿಗ್ಗಿ ಉದ್ದವಾಗಿ ಅವು ಪ್ರಾಣಿಯ ಶರೀರದಿಂದ ಹೊರಚಾಚಿಕೊಳ್ಳುತ್ತವೆ. ನಳಿಕೆಪಾದದೊಳಗಿರುವ ನೀರು ಅಂಟುಸಿಂಬಿಯೊಳಗಿರುವ ರಂಧ್ರದ ಮೂಲಕ ಹೊರಹೋಗುತ್ತದೆ. ತೋಳಿನ ತುದಿಯಲ್ಲಿ ಒಂದು ಸಂಕುಚಿಸಲಾರದ ನಳಿಕೆಪಾದವಿದೆ. ಇದೊಂದು ಸ್ಪರ್ಶಾಂಗದಂತೆ ಕಾರ್ಯ ನಿರ್ವಹಿಸುತ್ತದೆ. ಇದರ ಮೇಲುಭಾಗದಲ್ಲಿ ಕೆಂಪನೆಯ ಕಾಳಿನಂಥ ರಚನೆಯಿದೆ. ಇದು ದ್ಯುತಿಗ್ರಾಹಕ. ಇದನ್ನು ಕಣ್ಣಿಗೆ ಹೋಲಿಸಬಹುದು.



ನಕ್ಷತ್ರಮೀನು

ನಕ್ಷತ್ರಮೀನಿನ ಮೇಲುಭಾಗದಲ್ಲಿ ಒತ್ತೊತ್ತಾಗಿ ಹೆಣೆದುಕೊಂಡಿರುವ ಚಿಕ್ಕ ಚಿಕ್ಕ ತಟ್ಟೆಗಳ ಜಾಲವೇ ಇದೆ. ತಟ್ಟೆಗಳ ಜೋಡಣೆ ಒಂದರಪಕ್ಕದಲ್ಲೊಂದರಂತೆ ನಿರ್ದಿಷ್ಟ ರೀತಿಯಲ್ಲಿದೆ. ಎರಡು ತಟ್ಟೆಗಳ ಮಧ್ಯೆ ಚರ್ಮದಿಂದ ಚಿಕ್ಕ ಚಿಕ್ಕ ಗುಳ್ಳೆಗಳಂಥ ಚೀಲಗಳು ಹೊರಬಂದಿವೆ. ಇವಕ್ಕೆ ಪಾಪಿಲೇ ಎಂದು ಹೆಸರು. ಇವು ಪ್ರಾಣಿಗಳ ಉಸಿರಾಟದಲ್ಲಿ ಸಹಕರಿಸುತ್ತವೆ. ಶರೀರದ ಮೇಲಿರುವ ತಟ್ಟೆಗಳ ಮೇಲೆ ಚೂಪಾದ ಮುಳ್ಳಿನಂಥ ರಚನೆಗಳು ಇವೆ. ಸೂಕ್ಷ್ಮದರ್ಶಕದ ಸಹಾಯದಿಂದ ಇವನ್ನು ಪರೀಕ್ಷಿಸಿದರೆ ಇವುಗಳಲ್ಲಿ ಕೆಲವು

ಸೂಕ್ಷ್ಮ ಚಿಮುಟಗಳಂತೆ ಕಾಣುವುವು. ಇವಕ್ಕೆ ಪೆಡಿಸಲೇರಿಯೇ ಎಂದು ಹೆಸರು. ಇವು ಪ್ರಾಣಿಯ ರಕ್ಷಣಾಂಗಗಳು. ಪೆಡಿಸಲೇರಿಯದ ಬಾಹುಗಳ ಒಳಭಾಗದಲ್ಲಿ ಚೂಪಾದ ಹಲ್ಲುಗಳಂಥ ರಚನೆಗಳಿವೆ. ಇವುಗಳ ಬುಡದಲ್ಲಿ ಹಿಡಿಗಳೂ ಇವೆ. ಒಂದು ಸಾರಿ ಈ ಪೆಡಿಸಲೇರಿಯದ ಹಿಡಿತಕ್ಕೆ ಸಿಕ್ಕಿದ ಜೀವಿ ಬಿಡಿಸಿಕೊಳ್ಳುವುದು ಕಷ್ಟ. ಅವುಗಳ ಬಾಹುಗಳ ಚಲನೆಗಾಗಿಯೇ ವಿಶಿಷ್ಟ ಸ್ನಾಯುಗಳಿವೆ. ಕೆಲವು ನಕ್ಷತ್ರಮೀನುಗಳಲ್ಲಿ ಶರೀರದ ಮೇಲುಭಾಗದಲ್ಲಿ ಮಧ್ಯಕ್ಕೆ ಸ್ವಲ್ಪ ಮಗ್ಗುಲಾಗಿ ಗುದದ್ವಾರ ಇದೆ. ಮತ್ತೆ ಕೆಲವಕ್ಕೆ ಗುದದ್ವಾರವಿಲ್ಲ.

ನಕ್ಷತ್ರಮೀನುಗಳಲ್ಲಿ ಲಿಂಗಭೇದ ಉಂಟು. ಹೆಣ್ಣುಗಳಲ್ಲಿ ಅಂಡಾಶಯವೂ ಗಂಡಿನಲ್ಲಿ ವೃಷಣವೂ ಇದೆ. ಅಂಡಾಶಯ ಮತ್ತು ವೃಷಣಗಳಿಗೆ ಗರಿಗಳಂಥ ರಚನೆ ಇದೆ. ಇವುಗಳಲ್ಲಿ ಉತ್ಪತ್ತಿಯಾದ ಲಿಂಗಾಣುಗಳು ಪ್ರಾಣಿಯ ಮೇಲುಭಾಗದಲ್ಲಿ ಎರಡು ಬಾಹುಗಳಿಗೂ ಮಧ್ಯೆ ಇರುವ ರಂಧ್ರಗಳ ಮೂಲಕ ಹೊರ ಹಾಕಲ್ಪಡುತ್ತವೆ. ಗರ್ಭಧಾರಣೆ ಸಮುದ್ರದ ನೀರಿನಲ್ಲಿ ನಡೆಯುತ್ತದೆ. ಮೊಟ್ಟೆಗಳು ಬೆಳೆದು ಡಿಂಬಗಳು ಹೊರಬರುತ್ತವೆ. ಆಸ್ಟೆರಾಯ್ಡಿಯಗಳ ಡಿಂಬಕ್ಕೆ (ಲಾರ್ವ) ಬೈಪಿನ್ನೇರಿಯ ಡಿಂಬವೆಂದು ಹೆಸರು. ಡಿಂಬಗಳು ಸ್ವತಂತ್ರವಾಗಿ ಈಸಿಕೊಂಡಿದ್ದು ಆರು ವಾರಗಳಲ್ಲಿ ರೂಪಾಂತರ ಹೊಂದಿ ಚಿಕ್ಕ ಚಿಕ್ಕ ನಕ್ಷತ್ರಮೀನುಗಳಾಗುತ್ತವೆ. ನಕ್ಷತ್ರಮೀನು ಸಾವಿರ ಮೊಟ್ಟೆಗಳನ್ನು ಇಡುತ್ತದೆ. ಈ ಮೊಟ್ಟೆಗಳಿಂದ ಸಾವಿರ ಡಿಂಬಗಳು ಹೊರಬರುತ್ತವೆ. ಆದರೆ ಬದುಕಿ ಉಳಿದು ನಕ್ಷತ್ರಮೀನುಗಳಾಗುವುದು ಕೆಲವು ಮಾತ್ರ. ಮಿಕ್ಕವು ಮೀನುಗಳಿಗೆ ಆಹಾರವಾಗಿಬಿಡುತ್ತವೆ.

ನಕ್ಷತ್ರಮೀನುಗಳಲ್ಲಿ ವರ್ಣವೈವಿಧ್ಯವುಂಟು. ಕೆಲವು ಕೆಂಪು, ಕೆಲವು ಹಳದಿ : ಮತ್ತೆ ಕೆಲವು ಇತರ ವರ್ಣಗಳನ್ನು ಅಥವಾ ಅವುಗಳ ಮಿಶ್ರಣವನ್ನು ಹೊಂದಿರುವುದುಂಟು. ನಕ್ಷತ್ರಮೀನುಗಳಿಗೆ ಆಯಿಸ್ಟರ್‌ಗಳೆಂದರೆ ಅತ್ಯಂತ ಪ್ರಿಯ. ತನ್ನ ಪಂಚಬಾಹುಗಳನ್ನು ಬಗ್ಗಿಸಿ ನಳಿಕೆಪಾದಗಳ ಸಹಾಯದಿಂದ ಕಪ್ಪೆಚಿಪ್ಪನ್ನು ಅಗಲವಾಗಿ ಬಿಡಿಸಿ ಅದರೊಳಗಿರುವ ಪ್ರಾಣಿಯನ್ನು ನುಂಗುವುದೇ ನಕ್ಷತ್ರಮೀನಿಗೆ ಆನಂದ. ಆಹಾರ ಸೇವನೆಯ ಕಾಲದಲ್ಲಿ ಜಠರದ ಒಳಭಾಗ ಸಂಪೂರ್ಣವಾಗಿ ಹೊರಬಂದು ಆಹಾರವನ್ನು ಸುತ್ತಿಕೊಳ್ಳುತ್ತದೆ. ಆಹಾರ ಜೀರ್ಣವಾದ ಮೇಲೆ ಜಠರ ಒಳಸೇರುತ್ತದೆ. ಬೆಲೆಬಾಳುವ ಮುತ್ತುಗಳನ್ನು ಕೊಡುವ ಆಯಿಸ್ಟರ್‌ಗಳನ್ನು ನಕ್ಷತ್ರಮೀನು ತಿಂದು ನಾಶಪಡಿಸುತ್ತದೆ. ನಕ್ಷತ್ರಮೀನು ಮುತ್ತಿನ ಕೈಗಾರಿಕೆಯ ಕಂಟಕ. ಬಲೆಗೆ ಬಿದ್ದಮೇಲೂ ಮೀನುಗಳನ್ನು ಇವು ತಿಂದು ನಾಶ ಮಾಡುವುದುಂಟು. ಪ್ರಪಂಚದ ಕೆಲವು ಭಾಗಗಳಲ್ಲಿ ಇವನ್ನು ಭೂತದ ಬೆರಳುಗಳು ಎಂದು ಭಾವಿಸುವರು.

ಮೇಲೆ ಹೇಳಿದ ನಕ್ಷತ್ರಮೀನುಗಳಲ್ಲದೆ ಇನ್ನೂ ವಿವಿಧ ರೀತಿಯವಿವೆ. ಆಸ್ಟೆರೈನ್ *ಗಿಬೋಸ* ಅತ್ಯಂತ ಚಿಕ್ಕ ನಕ್ಷತ್ರಮೀನು. 1.5 ಸೆಂಮೀ ಮಾತ್ರ ಅಗಲವಿದೆ. *ಪಾಲ್‌ಮಿಪೆಸ್ ಪ್ಲಾಸೆಂಟ* ಪಂಚಭುಜಾಕೃತಿಯನ್ನು ಹೊಂದಿದ್ದು ಬಿಸ್ಕತ್ತಿನಂತಿದೆ. ಮಿಥ್ರೊಡಿಯಕ್ಕೆ ಅತಿ ದೊಡ್ಡ ದೊಡ್ಡ ಮುಳ್ಳುಗಳಿವೆ. *ಸೋಲಾಸ್ಟರ್* ಎನ್ನುವ ಇದಕ್ಕೆ ಬಹಳ ಬಾಹುಗಳಿವೆ. ಸೂರ್ಯನಂತೆ ಕಾಣುತ್ತದೆ. ಛತ್ರಿಯಾಕಾರದ *ಟಿರಾಸ್ಟರ್* ಎಂಬ ನಕ್ಷತ್ರಮೀನು ಸಮುದ್ರದಲ್ಲಿ ಆಳವಾದ ನೀರಿನಲ್ಲಿ ವಾಸಿಸುತ್ತದೆ. ಲೂಡಿಯ ಮತ್ತು *ಲಿಂಕಿಯಾ*ಗಳಿಗೆ ನೀಳವಾದ ತೋಳುಗಳಿವೆ. ಇನ್ನೂ ನಾನಾ ವಿಧವಾದ ಜೀವಿಗಳು ಈ ವರ್ಗದಲ್ಲುಂಟು. (ಎಲ್.ಎಸ್.ಜಿ.)

**ಆಸ್ತ್ರಕೋಡ:** ಆರ್ಥ್ರೊಪೊಡ (ಸಂಧಿಪದಿ) ವಂಶದ ಕ್ರಸ್ಟೇಷಿಯ ವರ್ಗದ ಒಂದು ಉಪವರ್ಗ. ಕಪ್ಪೆಚಿಪ್ಪಿನ ಹುಳುಗಳಂತಿರುವ ಈ ಉಪವರ್ಗದ ಪ್ರಾಣಿಗಳು ಸಿಹಿನೀರಿನಲ್ಲೂ ಕಡಲಿನಲ್ಲೂ ವಾಸಿಸುವ ತೇಲುಜೀವಿಗಳು. ಈಸುಪ್ರಾಣಿಗಳಾಗಿ ಕಡಲ ತಡಿಯಲ್ಲಿ ವಾಸಿಸುತ್ತವೆ. ಕೆಲವು ಪರತಂತ್ರ ಜೀವಿಗಳು. ಇನ್ನು ಕೆಲವು ಅಪ್ಪುಸಸ್ಯಗಳ ಎಲೆಗಳಲ್ಲಿ ನಿಂತ ನೀರಿನಲ್ಲಿಯೇ ಇರುತ್ತವೆ. ಚಿಕ್ಕ ಕಠಿಣಚರ್ಮಿಗಳಾದ ಇವು ಸಾಮಾನ್ಯವಾಗಿ ಚಪ್ಪಟೆಯಾಗಿರುತ್ತವೆ. ದೇಹದ ವಲಯಗಳು ನಿರ್ದಿಷ್ಟವಾಗಿ ಕಾಣುವುದಿಲ್ಲ. ಉದರಭಾಗ ಚಿಕ್ಕದು. ಇವುಗಳ ಆಹಾರದ ರೀತಿಯ ಬಗೆಗೆ ಹೆಚ್ಚು ತಿಳಿಯದು. ಇವು ಹೆಚ್ಚಾಗಿ ಸರ್ವಭಕ್ಷಕಗಳು. ಕೆಲವು ಮಾಂಸಾಹಾರಿಗಳು. ಇನ್ನು ಕೆಲವು ನೀರಿನ ಸಸ್ಯಗಳನ್ನು ತಿಂದು ಜೀವಿಸುತ್ತವೆ. ಈ ಉಪವರ್ಗದ ಪ್ರಾಣಿಗಳು ಆರ್ಥಿಕ ದೃಷ್ಟಿಯಿಂದ ಬಹಳ ಮುಖ್ಯ. ಇವುಗಳ ದೇಹ ಮತ್ತು ಉಪಾಂಗಗಳು ಕೀಲು ಇರುವ ಎರಡು ಚಿಪ್ಪುಗಳ ಒಳಗೆ ಅಡಕವಾಗಿವೆ. ಇವುಗಳಲ್ಲಿ ಕ್ರಸ್ಟೇಷಿಯದಲ್ಲಿಯೇ ಅತ್ಯಂತ ಕಡಿಮೆ ಸಂಖ್ಯೆಯ ಉಪಾಂಗಗಳಿವೆ. ಅಂದರೆ ನಾಲ್ಕು ಜೊತೆಗಿಂತ ಹೆಚ್ಚು ಇರಲಾರವು. ಕೆಲವಕ್ಕೆ ಮುಖ್ಯಾಂಗಗಳ ಹಿಂದೆ ಎರಡೇ ಜೊತೆ ಕಾಲುಗಳಿರಬಹುದು. ಎರಡು ಜೊತೆ ಕುಡಿಮೀಸೆಗಳನ್ನು (ಆಂಟಿನ್ಯೂಲ್ ಮತ್ತು ಆ್ಯಂಟೆನ) ಈಸಲು, ತೆವಳಲು ಉಪಯೋಗಿಸಬಹುದು. ದವಡೆಗಳು (ಮ್ಯಾಂಡಿಬಲ್) ಅನೇಕಸಾರಿ ಕವಲೊಡೆದಿರುತ್ತವೆ ಅಥವಾ ಕಾಲುಗಳಂತಿರಬಹುದು. ಇವುಗಳ ಸಂತಾನೋತ್ಪತ್ತಿಯಲ್ಲಿ ಅನೇಕ ಗಮನಾರ್ಹ ಅಂಶಗಳಿವೆ. ಇವುಗಳಲ್ಲಿ ಪಿತೃರಹಿತ ಸಂತಾನೋತ್ಪತ್ತಿ (ಪಾರ್ಥನೊಜೆನಿಸಿಸ್) ಬಹಳ ಸಾಮಾನ್ಯ (ಸಾಮಾನ್ಯವಾಗಿ ಸಿಹಿನೀರು ಪ್ರಭೇದಗಳಲ್ಲಿ); ಈ ಪ್ರಭೇಧಗಳಲ್ಲಿ ಗಂಡುಗಳು



ವಿರಳ. ಇದುವರೆಗೆ ಕೆಲವು ಜಾತಿಗಳಲ್ಲಿ ಗಂಡುಗಳನ್ನು ಗುರುತಿಸಿಯೇ ಇಲ್ಲ. ಸಿಪ್ರಿಸ್ ಎಂಬ ಒಂದು ಪ್ರಭೇಧವನ್ನು 30 ವರ್ಷಗಳ ಪರ್ಯಂತ ಸಂಶೋಧನಾಲಯದಲ್ಲಿ ಇಟ್ಟು ಬೆಳೆಸಿದರೂ ಗಂಡುಗಳು ಕಾಣಿಸಿಕೊಳ್ಳಲೇ ಇಲ್ಲ! ಗಂಡುಗಳಿದ್ದರೂ ಅವು ಉತ್ಪತ್ತಿಮಾಡುವ ರೇತ್ರಾಣುಗಳು ಪ್ರೌಢಾವಸ್ಥೆಯ ರೂಪದಲ್ಲಿರುವುದಿಲ್ಲ. ಇದರಲ್ಲಿ ಬದುಕಿರುವ ಜೀವಿಗಳನ್ನು ನಾಲ್ಕು ಗಣಗಳಾಗಿ ವಿಂಗಡಿಸಬಹುದು: ಮೈಯೊಡೊಕೋಪ, ಕ್ಲಾಡೊಕೋಪ, ಪ್ಲಾಟಿಕೋಪ ಮತ್ತು ಪೋಡಕೋಪ. ಮೊದಲನೆಯ ಮೂರು ಗಣದ ಪ್ರಾಣಿಗಳು ಪೂರ್ಣ ಕಡಲ ಪ್ರಾಣಿಗಳು. ಕೊನೆಯ ಗಣಕ್ಕೆ ಸಿಹಿನೀರಿನ ಪ್ರಾಣಿಗಳು ಸೇರುತ್ತವೆ. (ಎಚ್.ಬಿ.ಡಿ.)

**ಆಸ್ತ್ರಕೋಡರ್ಮಿ:** ಸೈಲೂರಿಯನ್ ಮತ್ತು ಡಿವೋನಿಯನ್ ಕಾಲದ ಅವಶೇಷಗಳೊಂದಿಗೆ ಕಂಡುಬಂದಿರುವ ಪ್ರಾಚೀನ ಕಾಲದ ಮೀನಿನಂಥ ಪ್ರಾಣಿವರ್ಗ. ನಮಗೆ ಗೊತ್ತಿರುವ ಕಶೇರುಕ ಪ್ರಾಣಿಗಳ ಪೈಕಿ ಅತಿ ಹಳೆಯ ಜೀವಾವಶೇಷಗಳು ಈ ಗುಂಪಿನವೇ ಆಗಿವೆ. ಈ ಗುಂಪಿನ ಪ್ರಾಣಿಗಳಿಗೆ ದವಡೆಗಳು ಇರಲಿಲ್ಲ. ಒಮ್ಮೊಮ್ಮೆ ಇವುಗಳಲ್ಲಿ ಜೋಡಿ ಉಪಾಂಗಗಳು (ಅಪೆಂಡೇಜ್) ಇಲ್ಲದಿರುವುದು ಕಂಡುಬಂದಿದೆ. ಈ ಮೂಲ ಗುಣಲಕ್ಷಣಗಳು ಪ್ರಾಚೀನ ಲಕ್ಷಣಗಳಾಗಿದ್ದು ಈಗ ಜೀವದಿಂದಿರುವ



ದುಂಡುಬಾಯಿ ಪ್ರಾಣಿಗಳನ್ನು ಹೋಲುತ್ತವೆ. ಈ ಪ್ರಾಣಿಗಳಿಗೆ ಎಲುಬಿನ ಹೊರಕವಚವಿತ್ತು. ಕೆಲವು ವೇಳೆ ದೇಹದ ಒಳಗೂ ಅಸ್ಥಿಭಾಗಗಳು ಕಂಡುಬರುತ್ತಿದ್ದುವು.

*ಆಸ್ಟಿಯೋಸ್ಟ್ರೇಸಿ:* *ಹೆಮಿಕೆಫಲಾಸ್ಪಿಸ್* ಎಂಬುದು ಈ ಉಪವರ್ಗಕ್ಕೆ ಸೇರಿದ್ದು. ಇದರ ತಲೆ ಮತ್ತು ಕಿವಿರಿನ ಭಾಗಗಳು ಅರ್ಧ ಚಂದ್ರಾಕಾರದ ದೊಡ್ಡ ಅಸ್ಥಿಕವಚದಿಂದ ಮುಚ್ಚಿದ್ದುವು. ಇದಕ್ಕೆ ಸಹಜವಾದ ಎರಡು ಕಣ್ಣುಗಳ ಜೊತೆಗೆ ಮಧ್ಯದ ನೆತ್ತಿಯ ಕಣ್ಣೊಂದಿತ್ತು. ಬಾಯಿ ಬಹಳ ಸಣ್ಣದು; ಒಳಗಡೆ ಒಂದು ಕಿವಿರು ಕೋಣೆ; ತಲೆಯ ಕೆಳಭಾಗದಲ್ಲಿ ದುಂಡನೆಯ ಹತ್ತು ಜೊತೆ ಕಿವಿರಿನ ರಂಧ್ರಗಳಿದ್ದುವು. ಈ ಪ್ರಾಣಿಯಲ್ಲಿ ವಿದ್ಯುತ್ ಅಂಗಗಳೂ ಒತ್ತಡವನ್ನು ಗೊತ್ತುಮಾಡಿಕೊಳ್ಳತಕ್ಕ ಜ್ಞಾನಾಂಗವೂ ಇದ್ದುದು ಕಂಡುಬಂದಿದೆ.

*ಅನಾಸ್ಪಿಡ:* ಇದರಲ್ಲಿ ಚಿಕ್ಕ ಕದಿರಿನಾಕಾರದ ಮೀನಿನಂಥ ಪ್ರಾಣಿಗಳಿವೆ. ಅನಾಸ್ಪಿಸ್ ಈ ಉಪವರ್ಗಕ್ಕೆ ಸೇರಿದ ಪ್ರಾಣಿ. ಇವಕ್ಕೆ ಅಗಲವಾದ ತಲೆಯ ಕವಚವಿರಲಿಲ್ಲ. ಆದರೆ ಆ ಭಾಗದಲ್ಲಿ ಸಣ್ಣ ಸಣ್ಣ ಹುರುಪೆಗಳಿದ್ದುವು. ಇವುಗಳ ಒಳರಚನೆಯ ಬಗ್ಗೆ ಮಾಹಿತಿ ದೊರೆತಿಲ್ಲ.

*ಹೆಟರೋಸ್ಟ್ರೇಸಿ:* *ಟೀರಾಸ್ಪಿಸ್* ಈ ಉಪವರ್ಗಕ್ಕೆ ಸೇರಿದ ಪ್ರಾಣಿ. ಈ ಗುಂಪಿನ ಪ್ರಾಣಿಗಳಲ್ಲೂ ಶರೀರದ ಒಳರಚನೆಯ ಬಗ್ಗೆ ಹೆಚ್ಚು ವಿಷಯಗಳು ತಿಳಿದಿಲ್ಲ. ಆದರೆ ಇದಕ್ಕೆ ಶರೀರದ ಎರಡು ಕಡೆಗಳಲ್ಲೂ ಒಂದೊಂದು ದೊಡ್ಡ ಕಿವಿರಿನ ರಂಧ್ರವಿತ್ತು. ಇದರ ಮುಂಭಾಗ ದೊಡ್ಡ ದೊಡ್ಡ ತಟ್ಟೆಯಾಕಾರದ ಹುರುಪೆಗಳಿಂದ ಆವೃತವಾಗಿತ್ತು. ಕಣ್ಣುಗಳು ಬಲು ಚಿಕ್ಕವು. ಬಾಯಿ ಶರೀರದ ಕೆಳಭಾಗದಲ್ಲಿ ಒಂದು ಅಡ್ಡ ರಂಧ್ರದಂತಿತ್ತು. (ಎನ್.ವಿ.ಎ.)

**ಆಸ್ತ್ರಲೇಷ್ಯ:** ಸಾಮಾನ್ಯವಾಗಿ ಏಷ್ಯದ ದಕ್ಷಿಣ ಭಾಗದಲ್ಲಿರುವ ಭೂಭಾಗವನ್ನು ಸೂಚಿಸಲು ಈ ಶಬ್ದವನ್ನು ಮೊದಮೊದಲಿಗೆ ಬಳಸಲಾಗಿತ್ತು. ವ್ಯಾಪಕ ದೃಷ್ಟಿಯಲ್ಲಿ ಇದು ಟಾಸ್ಮೇನಿಯವನ್ನೊಳಗೊಂಡಂತಿರುವ ಆಸ್ಟ್ರೇಲಿಯ ಮತ್ತು ನ್ಯೂಜ಼ೀಲೆಂಡ್, ದ್ವೀಪವನ್ನು ಒಟ್ಟಾರೆ ಈ ಹೆಸರಿನಿಂದ ಕರೆಯುತ್ತಾರೆ. ಫ್ರಾನ್ಸಿನ ಪಂಡಿತನಾಗಿದ್ದ ಚಾರ್ಲ್ಸ್ ಡ ಬ್ರೋಸ್ (1709–77) ಹಿಸ್ಟರಿ ಡೆಸ್ ನ್ಯಾವಿಗೇಷನ್ಸ್ ಆಕ್ಸ್ ಟೆರಿಸ್ ಆಸ್ಟ್ರಲಿಸ್ (1756) ಎಂಬ ತನ್ನ ಪುಸ್ತಕದಲ್ಲಿ ಆಸ್ಟ್ರಲೇಷ್ಯ ಎಂಬ ಪದವನ್ನು ಉಲ್ಲೇಖಿಸಿರುವುದಾಗಿ ತಿಳಿದುಬಂದಿದೆ. ಕೆಲವುವೇಳೆ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡುಗಳನ್ನು ಒಟ್ಟಿಗೆ ಹೇಳುವಾಗ ಆಸ್ಟ್ರಲೇಷು ಎಂಬ ಹೆಸರಿನಿಂದ ಕರೆಯುವುದು ಬಳಕೆಯಲ್ಲಿದೆ.
*

**ಆಸ್ಟ್ರಾಯ್ಡ್:** ಗಣಿತಶಾಸ್ತ್ರದಲ್ಲಿ ಒಂದು ಸಮತಲರೇಖೆ : ಹೈಪೊಸೈಕ್ಲಾಯ್ಡ್‌ನ (ನೋಡಿ) ಒಂದು ವಿಶೇಷ ರೂಪ.

$r$ ತ್ರಿಜ್ಯವಿರುವ ಒಂದು ಸ್ಥಿರವೃತ್ತದ ಒಳಗೆ r/4 ತ್ರಿಜ್ಯವಿರುವ (ಅಂದರೆ ಮೊದಲಿನವರ ¼ರಷ್ಟು) ಒಂದು ಚರವೃತ್ತ ಉರುಳುವಾಗ ಚರವೃತ್ತದ ಪರಿಧಿಯ ಮೇಲೆ ಗುರುತಿಸಿರುವ ಒಂದು ಸ್ಥಿರ ಬಿಂದು ರೇಖಿಸುವ ವಕ್ರರೇಖೆ ಆಸ್ಟ್ರಾಯ್ಡ್. ಇದರ ಕಾರ್ಟೀಸಿಯನ್ ಸಮೀಕರಣ

$$x^{\frac{2}{3}} + y^{\frac{2}{3}} = r^{\frac{2}{3}}$$

ಮತ್ತು ಪ್ರಾಚಲ (ಪ್ಯಾರಾಮೆಟ್ರಿಕ್) ಸಮೀಕರಣಗಳು

$$x = r \cos^3 \phi, \quad y = r \sin^3 \phi$$

ಎರಡು ವೃತ್ತಗಳ ಕೇಂದ್ರಗಳನ್ನು ಜೋಡಿಸುವ ರೇಖೆ $x$ ಅಕ್ಷದೊಡನೆ ರಚಿಸುವ ಕೋನ . ಈ ವಕ್ರರೇಖೆ ಎರಡೂ ಅಕ್ಷಗಳನ್ನು ಕುರಿತು ಸಮಾಂಗವಾಗಿದೆ. ಅಕ್ಷಗಳನ್ನು ಸಂಧಿಸುವಲ್ಲಿ ಅಂದರೆ ( r, 0), (0, $\pm$ r) ಬಿಂದುಗಳಲ್ಲಿ ವಕ್ರರೇಖೆಗೆ ಒಂದನೆಯ



ದರ್ಜೆಯ ಉಭಯಾಗ್ರಗಳಿವೆ (ಕಸ್ಪ್ಸ್ ಆಫ್ ದಿ ಫಸ್ಟ್ ಕೈಂಡ್). ದೀರ್ಘವೃತ್ತ ರ ಲಂಬಸ್ಪರ್ಶಿತದ (ಎವೊಲ್ಯೂಟ್) ಸಮೀಕರಣ $(ax)^{\frac{2}{3}} + (by)^{\frac{2}{3}} = a^2 - b^2$. ಆ್ಯಸ್ಟ್ರಾಯ್ಡ್‌ನ ಸಮೀಕರಣಕ್ಕೂ ಈ ಸಮೀಕರಣಕ್ಕೂ ಸಾದೃಶ್ಯವಿರುವುದನ್ನು ಸುಲಭವಾಗಿ ಗುರುತಿಸಬಹುದು. ಇದರ ರೂಪವೂ ಗುಣವೂ ಆ್ಯಸ್ಟ್ರಾಯ್ಡ್‌ನಂತೆಯೇ ಇರುವುದರಿಂದ ದೀರ್ಘವೃತ್ತದ ಲಂಬಸ್ಪರ್ಶಿತವನ್ನು ಸಹ ಆ್ಯಸ್ಟ್ರಾಯ್ಡ್ ಎಂದು ಕರೆಯುತ್ತಾರೆ. *

**ಆಸ್ಟ್ರಿಕ್ ಭಾಷಾ ಪರಿವಾರ:** ಭಾರತ, ಆಗ್ನೇಯ ಏಷ್ಯ ಮತ್ತು ಶಾಂತ ಸಾಗರದ ಕೆಲವು ದ್ವೀಪಗಳಲ್ಲಿ ಅಲ್ಲಲ್ಲಿ ಚದುರಿ ಹೋದ ಕೆಲವು ಭಾಷೆಗಳು ಆಸ್ಟ್ರಿಕ್ ಎನ್ನುವ ಭಾಷಾ ಪರಿವಾರಕ್ಕೆ ಸೇರುತ್ತವೆ. ಈ ಪರಿವಾರದ ವ್ಯಾಪ್ತಿ ಪಂಜಾಬಿನಿಂದ ನ್ಯೂಜಿ಼ಲೆಂಡ್‌ವರೆಗೆ ಇದೆ. ಜನಸಂಖ್ಯೆಯ ದೃಷ್ಟಿಯಿಂದ ದೊಡ್ಡದಾಗಿರದಿದ್ದರೂ ಈ ಜನಾಂಗದವರು ವಿಶಾಲವಾದ ಪ್ರದೇಶದಲ್ಲಿ ಹರಡಿಕೊಂಡಿದ್ದಾರೆ. ಭಾರತದ ಆದಿವಾಸಿಗಳ ಆಡುಮಾತಾಗಿರುವ ಮುಂಡ ವರ್ಗದ ಹದಿನೈದಕ್ಕೂ ಹೆಚ್ಚಿನ ಭಾಷೆಗಳು ಭಾರತದ ಆದಿವಾಸಿ ಭಾಷೆಗಳಲ್ಲಿ ಅತಿ ಪ್ರಾಚೀನ ಭಾಷೆಗಳಾಗಿವೆ. ಹಿಂದೆ ಕೋಲ್ ಅಥವಾ ಕೊಲರಿಯನ್ ಎಂದು ಕರೆಯಲ್ಪಡುತ್ತಿದ್ದ ಈ ಭಾಷೆಗಳನ್ನು ಆಗ್ನೇಯ ಏಷ್ಯದ ಭಾಷೆಗಳೊಡನೆ ಹೋಲಿಸಿ ಅವು ಆಸ್ಟ್ರಿಕ್ ಎನ್ನುವ ಒಂದೇ ಕುಟುಂಬಕ್ಕೆ ಸೇರಿದವುಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಕುಟುಂಬದಲ್ಲಿ ಆಸ್ಟ್ರೋನೇಷ್ಯನ್ ಮತ್ತು ಆಸ್ಟ್ರೋ ಏಷ್ಯಾಟಿಕ್ ಎಂಬ ಎರಡು ಪ್ರಧಾನ ಶಾಖೆಗಳಿವೆ.

ಆಸ್ಟ್ರೋನೇಷ್ಯನ್ ಶಾಖೆ: ಬರ್ಮ, ಸಯಾಂ, ಇಂಡೋಚೀನ, ಮಡಗಾಸ್ಕರ್, ಫಾರ್ಮೋಸಾ, ಫಿಲಿಪೈನ್, ಮಲಯ, ಜಾವಾ ಮುಂತಾದೆಡೆಗಳಲ್ಲಿ ಪ್ರಚಾರದಲ್ಲಿರುವ ಮೋನ್–ಖ್ಮೇರ್, ವಿಯಟ್ನಾಮಿಸ್, ಮಡಗಾಸಿ, ತಗಲ, ಮಲಯನ್, ಜಾವಾನೀಸ್, ಪೋಲಿನೇಷ್ಯನ್ ಇತ್ಯಾದಿ ಭಾಷೆಗಳು ಈ ಶಾಖೆಗೆ ಸೇರಿವೆ. ಭೌಗೋಲಿಕವಾಗಿ ಇವುಗಳನ್ನು ಇಂಡೋನೇಷ್ಯನ್, ಮಲನೇಷ್ಯನ್ ಮತ್ತು ಪೋಲಿನೇಷ್ಯನ್ ಎಂದು ವಿಂಗಡಿಸಬಹುದು. ಒಂದು ಕಾಲದಲ್ಲಿ ಮೋನ್–ಖ್ಮೇರ್ ಭಾಷೆಗಳನ್ನಾಡುವವರು ಇಂಡೋ–ಚೀನವನ್ನು ಆಳುತ್ತಿದ್ದರು. ಹನ್ನೊಂದನೆಯ ಶತಮಾನದ ಮೋನ್ ಶಿಲಾ ಶಾಸನಗಳೂ ಏಳನೆಯ ಶತಮಾನದ ಖ್ಮೇರ್ ಶಾಸನಗಳೂ ದೊರೆತಿವೆ. ಈಗ ಈ ಭಾಷೆಗಳನ್ನಾಡುವವರೆಂದರೆ ಬರ್ಮ, ಸಯಾಂ ಮತ್ತು ಪೂರ್ವಭಾರತದ ಕೆಲವು ಆದಿವಾಸಿಗಳು ಮಾತ್ರ. ಮಲಯನ್ ಭಾಷೆಯೂ ಬಹಳ ಪ್ರಾಚೀನವಾಗಿದ್ದು ಅದರಲ್ಲಿ ಹದಿಮೂರನೆಯ ಶತಮಾನದಿಂದೀಚಿನ ಸಾಹಿತ್ಯ ದೊರೆಯುತ್ತದೆ. ಜಾವಾನೀಸ್ ಕೂಡ ಈ ಶಾಖೆಯ ಒಂದು ಪ್ರಸಿದ್ಧ ಭಾಷೆ. ಇಸ್ಲಾಂ ಮತ್ತು ಹಿಂದೂ ಧರ್ಮದ ಸಂಪರ್ಕದಿಂದಾಗಿ ಅರಬ್ಬೀ ಮತ್ತು ಸಂಸ್ಕೃತ ಭಾಷೆಯ ಪ್ರಭಾವ ಈ ಭಾಷೆಗಳಲ್ಲಿ ಕಂಡುಬರುತ್ತದೆ.

ಆಸ್ಟ್ರೋ ಏಷ್ಯಾಟಿಕ್ ಶಾಖೆ : ಭಾರತದಲ್ಲಿ ಆರ್ಯ, ದ್ರಾವಿಡ ಹಾಗೂ ಟಿಬೆಟೋ ಬರ್ಮನ್ ಭಾಷೆಗಳನ್ನಾಡುವವರಲ್ಲದೆ ಆಸ್ಟ್ರೋ–ಏಷ್ಯಾಟಿಕ್ ಭಾಷೆಗಳನ್ನಾಡುವ ಜನರೂ ಸುಮಾರು ಅರುವತ್ತು ಲಕ್ಷಕ್ಕೆ ಮೇಲೆಯೇ ಇದ್ದಾರೆ. ಈ ಶಾಖೆಯನ್ನು ಮುಂಡ, ಖಾಸಿ ಮತ್ತು ನಿಕೋಬರೀಸ್ ಎಂಬ ಉಪ ಶಾಖೆಗಳಾಗಿ ವಿಂಗಡಿಸಬಹುದು. ಬಂಗಾಳ, ಬಿಹಾರದ ಪರ್ವತಶ್ರೇಣಿಗಳು, ಒರಿಸ್ಸದ ಕಾಡುಗಳು, ಮಧ್ಯಪ್ರದೇಶದ ಗಡಿ ಪ್ರದೇಶಗಳು, ಉತ್ತರ ಪ್ರದೇಶಗಳಲ್ಲಿ ಪರ್ವತ ತಪ್ಪಲುಗಳು ಮತ್ತು ಮದ್ರಾಸಿನ ಗಂಜಾಂ ಇತ್ಯಾದಿ ಪ್ರದೇಶಗಳಲ್ಲಿ ಮುಂಡ ವರ್ಗಕ್ಕೆ ಸೇರಿದ ಮುಂಡಾರಿ, ಸಂತಾಲಿ, ಹೋ, ಖಡಿಯ, ಭೂಮಿಜ್, ಕೊಕು, ಸವೋರ, ಗದಬ, ಕೊತ, ಜುವಂಗ್, ಕೊರವ, ಬಿರ್ಜಿಯಾ, ಅಸುರಿ ಮುಂತಾದ ಭಾಷೆಗಳು ಪ್ರಚಾರದಲ್ಲಿವೆ. ಅಸ್ಸಾಂ ಪ್ರದೇಶದ ಬೆಟ್ಟಗಳಲ್ಲಿ ಖಾಸಿ ಹಾಗೂ ನಿಕೋಬಾರ್ ದ್ವೀಪಗಳಲ್ಲಿ ನಿಕೋಬರೀಸ್ ಪ್ರಚಾರದಲ್ಲಿವೆ. ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಈ ಭಾಷೆಗಳ ವೈಜ್ಞಾನಿಕ ಅಧ್ಯಯನ ನಡೆಸಿ ಇವುಗಳ ಪರಸ್ಪರ ಸಂಬಂಧವನ್ನು ತೋರಿಸಿಕೊಟ್ಟು ಇವು ಒಂದೇ ಬುಡಕಟ್ಟಿಗೆ ಸೇರಿದವೆಂದು ಸಾಧಿಸಿದವರಲ್ಲಿ ಫಾದರ್ ಷ್ಮಿಟ್ ಮತ್ತು ಸ್ಟೆನ್ ಕೊನೋ ಅವರ ಹೆಸರನ್ನು ಇಲ್ಲಿ ಸ್ಮರಿಸಬಹುದು. ಆದರೆ ಈ ವಿದ್ವಾಂಸರು ಮಾಡಿದ ವರ್ಗೀಕರಣವೇ ಸಾಧುವಾದುವೆಂಬುದರಲ್ಲಿ ವಿದ್ವಾಂಸರ ಮತಭೇದವಿದೆ. ಅನ್ನಮೀಸ್, ವಿಯಟ್ನಾಮೀಸ್ ಮುಂತಾದ ಕೆಲವು ಭಾಷೆಗಳು ಸಿನೋ–ಟಿಬೆಟನ್ ಪರಿವಾರಕ್ಕೆ ಸೇರಿದವುಗಳೆಂದು ಪರಿಗಣಿಸುವ ಪ್ರಯತ್ನವೂ ನಡೆದಿದೆ.

ಮಧ್ಯ ಮತ್ತು ಪೂರ್ವ ಭಾರತದಲ್ಲಿ ಆಸ್ಟ್ರೋ–ಏಷ್ಯಾಟಿಕ್ ಭಾಷೆಗಳನ್ನಾಡುವ ಆದಿವಾಸಿಗಳ ಸಂಖ್ಯೆ ಮತ್ತು ಭಾಷೆಗಳ ಹೆಸರುಗಳು ಈ ಕೆಳಗಿನಂತಿವೆ : ಸಂತಾಲಿ 32,47,058; ಮುಂಡಾರಿ 7,37,037; ಹೋ 6,48,359; ಖಡಿಯ 1,77,159; ಭೂಮಿಜ್ 1,42,003; ಕೊರ್ಕು 2,20,242; ಸವೋರ 2,65,721; ಗದಬ 40,163; ಕೊತ 31,724, ಜುವಂಗ್ 15,795; ಕೊರವ 17,720; ಬಿರ್ಜಿಯಾ 2,395 ; ಅಸುರಿ 4,540; ತುರಿ 1,562; ಖಾಸೀ 3,64,063; ನಿಕೋಬರೀಸ್ 13,936. ಇತರ ಕೆಲವು ಉಪ ಭಾಷೆಗಳನ್ನು ಸೇರಿಸಿ ಆಸ್ಟ್ರೋ–ಏಷ್ಯಾಟಿಕ್ ಭಾಷೆಗಳನ್ನಾಡುವವರ ಒಟ್ಟು ಸಂಖ್ಯೆ (ಭಾರತದಲ್ಲಿ) 61,92,495.

ಆಶ್ಲಿಷ್ಟಯೋಗಾತ್ಮಕಗಳಾದ ಈ ಭಾಷೆಗಳಲ್ಲಿ ಸೂಕ್ಷ್ಮವಾದ ಅರ್ಥಘಟಕಗಳನ್ನು ದ್ಯೋತಿಸಬಲ್ಲ ಮತ್ತು ಒಂದರ ಮೇಲೊಂದರಂತೆ ಅಂಟಿಕೊಳ್ಳುವ ಪ್ರತ್ಯಯ ಸಂಪತ್ತನ್ನು ಕಾಣಬಹುದು. ಉಪಸರ್ಗ ಪ್ರತ್ಯಯಗಳು ಮಾತ್ರವಲ್ಲದೆ ಧಾತುವಿನ ಮಧ್ಯದಲ್ಲಿ ಸೇರಿಕೊಳ್ಳುವ ಅಂತಃಪ್ರತ್ಯಯಗಳೂ ಇವೆ. ಉದಾ: ತಗಲ ಭಾಷೆಯಲ್ಲಿ ಸುಲತ್=ಬರೆಯುವುದು, ಸಿನುಲತ್ರ=ಬರೆಯಲಿಕ್ಕೆ, ಸುಂಗ್‌ಮುಲತ್=ಬರೆದನು. ಸಿನುಲತನ್ = ಬರೆಯಲ್ಪಟ್ಟಿತು. ಧಾತುಗಳು ಸಾಮಾನ್ಯವಾಗಿ ದ್ವ್ಯಕ್ಷರಿಗಳಾಗಿದೆ. ಸಂದರ್ಭಾನುಸಾರವಾಗಿ ಈ ಧಾತುಗಳು ನಾಮಧಾತುಗಳಾಗಿಯೂ ಕ್ರಿಯಾಧಾತುಗಳಾಗಿಯೂ ಉಪಯೋಗಿಸಲ್ಪಡುತ್ತವೆ. ಕ್ರಿಯಾಪದಗಳ ರಚನೆ ಬಹಳ ಕ್ಲಿಷ್ಟವಾಗಿದ್ದು ಬಿಹಾರಿ ಭಾಷೆಯ ಕ್ಲಿಷ್ಟವಾದ ಕ್ರಿಯಾರಚನೆಗೆ ಈ ನೆರೆಹೊರೆಯ ಭಾಷೆಗಳ ಪ್ರಭಾವವೇ ಕಾರಣ ಎನ್ನಲಾಗಿದೆ. ಸಂಬಂಧಸೂಚಕ ಸರ್ವನಾಮಯುಕ್ತ ವಾಕ್ಯಾಂಶಗಳ ಬದಲಾಗಿ ಕೃದಂತ ವಿಶೇಷಣಗಳ ಬಳಕೆಯನ್ನು ಈ ಭಾಷೆಗಳಲ್ಲಿ ಕಾಣಬಹುದು. ಸಂಸ್ಕೃತದಲ್ಲಿರುವಂತೆ ಏಕವಚನ ದ್ವಿವಚನ ಬಹುವಚನಗಳೆಂಬ ಮೂರು ವಚನಗಳಿವೆ. ಉದಾ: ಸಂತಾಲಿ ಭಾಷೆಯಲ್ಲಿ ಹಾಡ್=ಮನುಷ್ಯ, ಹಾಡ್‌ಕೇನ್ = ಇಬ್ಬರು ಮನುಷ್ಯರು, ಹಾಡ್ ಕೋ = ಎರಡಕ್ಕಿಂತ ಹೆಚ್ಚು ಮನುಷ್ಯರು. ಎರಡು ಲಿಂಗಗಳಿವೆ. ನಾಮಪದಗಳು ಸಜೀವ ವಾಚಕ ಮತ್ತು ನಿರ್ಜೀವ ವಾಚಕಗಳೆಂದು ಎರಡು ಭಾಗವಾಗಿ ವಿಂಗಡಿಸಲ್ಪಡುತ್ತವೆ. ನಿರ್ಜೀವ ವಾಚಕಗಳು ಸಾಮಾನ್ಯವಾಗಿ ಸ್ತ್ರೀಲಿಂಗಗಳಾಗಿರುತ್ತವೆ. ಲಿಂಗ ವಿವಕ್ಷೆಗೆ ಸ್ತ್ರೀ ಮತ್ತು ಪುರುಷವಾಚಕ ಪ್ರತ್ಯಯಗಳನ್ನು ಸೇರಿಸುತ್ತಾರೆ. ಕ್ರಿಯಾಪದದಲ್ಲಿ ಮಾತ್ರ ಲಿಂಗಭೇದವಿರುವುದಿಲ್ಲ. ಉತ್ತಮ ಪುರುಷ ಸರ್ವನಾಮದ ದ್ವಿವಚನ ಮತ್ತು ಬಹುವಚನದಲ್ಲಿ ಮಧ್ಯಮ ಪುರುಷ ಸಮಾವಿಷ್ಟ ಮತ್ತು ಅಸಮಾವಿಷ್ಟ (ಇನ್‌ಕ್ಲೂಸಿವ್ ಮತ್ತು ಎಕ್ಸ್‌ಕ್ಲೂಸಿವ್) ಎಂಬ ಎರಡೆರಡು ರೂಪಗಳನ್ನು ಕಾಣಬಹುದು. ಉದಾಃ ಆಲೆ=ನಾವು (ಕೇಳುವವನನ್ನು ಸೇರಿಸಿ), ಆಬೋನ್ = ನಾವು (ಕೇಳುತ್ತಿರುವವನನ್ನು ಬಿಟ್ಟು) ಸಂಖ್ಯಾವಾಚಕಗಳು ಒಂದರಿಂದ ಹತ್ತು ಮತ್ತು ಇಪ್ಪತ್ತು–ಇಷ್ಟೆ. ಇವುಗಳ ಜೋಡಣೆಯಿಂದ ಬೇರೆ ಸಂಖ್ಯೆಗಳನ್ನು ಮಾಡಿಕೊಳ್ಳಬೇಕು. ಉದಾ: ಪೋನೆ ಆ=ನಾಲ್ಕು, ಗೈಲ್=ಹತ್ತು, ಇಸಿ=ಇವತ್ತು. ಗೈಲ್ ಖನ್ ಪೋನೆ ಆ=10+4=14. ಪೋನೆ ಆ ಇಸಿ=4ಥ20=80. ಶಬ್ದಗಳ ಪುನರುಕ್ತಿಯಿಂದ ಅರ್ಥ ಪುಷ್ಟಿ ಅಥವಾ ಬಹುವಚನ ರೂಪಗಳು ದೊರೆಯುತ್ತವೆ. ಉದಾ: ದಲ್=ಹೊಡೆಯುವುದು. ದಲ್ ದಲ್ ಚೆನ್ನಾಗಿ ಹೊಡೆ. ರಜ=ರಾಜ. ರಜ ರಜ=ರಾಜರು. ಧ್ವನಿಗಳಲ್ಲಿ ಘೋಷ ಅಘೋಷ ಅಲ್ಪಪ್ರಾಣ ಮಹಾಪ್ರಾಣ ವ್ಯಂಜನಗಳಿವೆ. ಮಹಾಪ್ರಾಣಗಳಲ್ಲಿ ಮಹಾಪ್ರಾಣತ್ವ ಅಧಿಕವಾಗಿರುತ್ತದೆ. ಉಚ್ಚಾರಕ್ಕಿಂತ ಮೊದಲೇ ಕ್ಲಿಕ್ ಧ್ವನಿಯಂತೆ ಅಂತಃಸ್ಫೋಟವನ್ನು ಹೊಂದಿರುವ ಅರ್ಧ ವ್ಯಂಜನದಂಥ ಕೆಲವು ವಿಶಿಷ್ಟವಾದ ವರ್ಣಗಳೂ ಇವೆ. ಸ್ವರಾಘಾತ ಸಾಮಾನ್ಯವಾಗಿ ಮೊದಲಕ್ಷರದ ಮೇಲೂ ಎರಡನೆಯ ಅಕ್ಷರ ದೀರ್ಘವಾಗಿದ್ದರೆ ಎರಡನೆಯ ಅಕ್ಷರದ ಮೇಲೂ ಇರುತ್ತದೆ. ಭೌಗೋಲಿಕವಾಗಿ ಈ ಭಾಷೆಗಳು ದೂರ ದೂರ ಹೋಗಿ ಬೆಳೆದುದರಿಂದ ಇವುಗಳ ಎಷ್ಟೋ ಮೂಲ ಸಾಮ್ಯಗಳು ವ್ಯತ್ಯಾಸಗೊಂಡು ತುಂಬ ಮಾರ್ಪಾಟುಗಳಾಗಿವೆ.

ಭಾರತ ಮತ್ತು ಆಗ್ನೇಯ ಏಷ್ಯದ ಪ್ರಾಗೈತಿಹಾಸಿಕ ಸಾಂಸ್ಕೃತಿಕ ಮತ್ತು ಮಾನವವಂಶ ವಿಜ್ಞಾನದ ಅಧ್ಯಯನಕ್ಕೆ ಮತ್ತು ಭಾಷೆಗಳ ಪೂರ್ವಚರಿತ್ರೆಯ ಸಂಶೋಧನೆಗೆ ಈ ಭಾಷೆಗಳ ಅಧ್ಯಯನ ತುಂಬ ಫಲಕಾರಿಯಾಗಿದೆ. ಆರ್ಯರು ಮತ್ತು ದ್ರಾವಿಡರು ಭಾರತಕ್ಕೆ ವಲಸೆ ಬರುವುದಕ್ಕಿಂತ ಮುಂಚೆಯೇ ಮುಂಡ ಮೊದಲಾದ ಆಸ್ಟ್ರೋ–ಏಷ್ಯಾಟಿಕ್ ಭಾಷೆಗಳನ್ನಾಡುವ ಜನರು ಭಾರತದಲ್ಲಿದ್ದರಂತೂ ಆರ್ಯರು ಮತ್ತು ದ್ರಾವಿಡರು ಅವರನ್ನು ಕಾಡುಪ್ರದೇಶಗಳಿಗೆ ಹೊಡೆದೋಡಿಸಿದರೆಂದೂ ಅವರೊಡನುಂಟಾದ ಸಂಪರ್ಕದ ಪರಿಣಾಮವಾಗಿ

ಭಾಷೆಗಳಲ್ಲಿಯೂ ಲೇವಾದೇವಿಯಿಂಟಾಗಿ ಆರ್ಯ ಹಾಗೂ ದ್ರಾವಿಡಭಾಷೆಗಳ ಪ್ರಭಾವ ಈ ಆದಿವಾಸಿ ಭಾಷೆಗಳ ಮೇಲೆ ಬಿದ್ದಹಾಗೆಯೇ ಈ ಆದಿವಾಸಿ ಭಾಷೆಗಳೂ ವಲಸೆ ಬಂದವರ ಭಾಷೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿವೆಯೆಂದೂ ಇತ್ತೀಚಿನ ಸಂಶೋಧನೆಗಳಿಂದ ಕಂಡುಬಂದಿದೆ. ಶಬ್ದ ಸಂಪತ್ತಿನ ಮೇಲೆ ಮಾತ್ರವಲ್ಲದೆ ಆರ್ಯ ಮತ್ತು ದ್ರಾವಿಡ ಭಾಷೆಗಳ ವ್ಯಾಕರಣಾಂಶಗಳ ಮೇಲೂ ಮುಂಡ ಭಾಷೆಗಳು ಪ್ರಭಾವ ಬೀರಿವೆ. ಇಪ್ಪತ್ತರ ಘಟಕಗಳ ಮೂಲಕ ಗಣನೆ, ದ್ವಿವಚನದ ಪ್ರಯೋಗ, ಉತ್ತಮ ಪುರುಷ ಬಹುವಚನದ ಎರಡು ರೂಪಗಳು, ಸಜೀವ ಮತ್ತು ನಿರ್ಜೀವ ಶಬ್ದಗಳೆಂಬ ವರ್ಗೀಕರಣ, ಕ್ರಿಯಾರೂಪಗಳಲ್ಲಿ ಲಿಂಗವಿವಕ್ಷೆಯ ಲೋಪ, ಕ್ರಿಯಾ ರೂಪಗಳ ಕ್ಲಿಷ್ಟತೆ, ಕೃದಂತ ವಿಶೇಷಣಗಳ ಬಳಕೆ–ಇವು ಮುಂಡ ಭಾಷೆಗಳಿಂದ ಪ್ರಭಾವಿತವಾದ ಕೆಲವು ಭಾರತೀಯ ಭಾಷೆಗಳು ಎರವಲು ಪಡೆದ ಅಂಶಗಳಾಗಿವೆ. ವಿಶ್ವಾಸನೀಯವಾದ ವ್ಯುತ್ಪತ್ತಿ ಸಿಕ್ಕದಂಥ ಮತ್ತು ಇತರ ಭಾರತೀಯ ಭಾಷೆಗಳ ಧಾತುಗಳಲ್ಲಿ ಸಾಮ್ಯ ಕಾಣದಂಥ ಕೆಲವು ಇಂಡೋ ಆರ್ಯನ್ ಪದಗಳಿಗೆ ಈ ಆಸ್ಟ್ರೋ–ಏಷ್ಯಾಟಿಕ್ ಧಾತುಗಳೇ ಮೂಲ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸಂಶೋಧನೆ ಮುಂದುವರಿದಂತೆ ಈ ಸಾಮಾಜಿಕ ಸಂಪರ್ಕದ ಕುರುಹುಗಳು ಬೆಳಕಿಗೆ ಬರುತ್ತಿವೆ. (ಯು.ಪಿ.ಯು.)

**ಆಸ್ಟ್ರಿಕಥಿಸ್ ಮೀನು: ನೋಡಿ–ಎಲಬುಮೀನು**

**ಆಸ್ಟ್ರಿಯ:** ಇಟಲಿಗೆ ಈಶಾನ್ಯ ದಿಕ್ಕಿನಲ್ಲಿರುವ ಮಧ್ಯ ಯುರೋಪಿನ ಒಂದು ರಾಷ್ಟ್ರ. ವಿಸ್ತೀರ್ಣ 83,872 ಚ.ಕಿಮೀ. ಜನಸಂಖ್ಯೆ 8,356,707 (2009). ಉತ್ತರಕ್ಕೆ 46°22 0–49°1 0 (293 ಕಿಮೀ) ಹಾಗೂ ಪೂರ್ವಕ್ಕೆ 9°22 0–17° 10 0 (576 ಕಿಮೀ.) ವಿಸ್ತಾರವಿದೆ. ದೇಶದ ಗಡಿ 2,635ಕಿಮೀ ಉದ್ದವಿದೆ. ಉತ್ತರಕ್ಕೆ ಜರ್ಮನಿ ಮತ್ತು ಜೆಕ್ ಗಣರಾಜ್ಯ, ವಾಯುವ್ಯಕ್ಕೆ ಸ್ಲಾವೇಕಿಯ, ಆಗ್ನೇಯಕ್ಕೆ ಹಂಗರಿ, ದಕ್ಷಿಣಕ್ಕೆ ಇಟಲಿ ಹಾಗೂ ಸ್ಲೋವೇನಿಯ, ಪೂರ್ವ ಮತ್ತು ಪಶ್ಚಿಮಕ್ಕೆ ಸ್ವಿಟ್ಜರ್‌ಲೆಂಡ್‌ಗಳಿವೆ.

ಪರ್ವತಮಯ ದೇಶ ಪೂರ್ವ ಆಲ್ಪ್ಸ್‌ನ ಬಹು ಭಾಗ ಆಸ್ಟ್ರಿಯದಲ್ಲಿದೆ. 13° ಪೂರ್ವ ರೇಖಾಂಶದ ಪೂರ್ವಭಾಗದಲ್ಲಿ ಎತ್ತರ ಕಡಿಮೆಯಾಗುತ್ತ ಬಂದು ಡ್ಯಾನ್ಯೂಬ್ ಕಣಿವೆಯನ್ನು ಸೇರಿಕೊಳ್ಳುತ್ತದೆ. ಆಸ್ಟ್ರಿಯದ ಆಲ್ಪ್ಸ್ ಪರ್ವತಗಳನ್ನು ಉತ್ತರ ಆಲ್ಪ್ಸ್ ಮತ್ತು ಮಧ್ಯ ಆಲ್ಪ್ಸ್ ಎಂದು 3 ಭಾಗಗಳಾಗಿ ವಿಂಗಡಿಸಬಹುದು. ಆಲ್ಪ್ಸ್‌ನಲ್ಲಿಯ ಗ್ರೊಸ್ಸಿಲಾಕ್ನರ ಶಿಖರ 3,797ಮೀ ಎತ್ತರವಿದೆ. ಮುಖ್ಯ ನದಿಯಾದ ಡ್ಯಾನ್ಯೂಬ್‌ನಲ್ಲಿ 350ಕಿಮೀ ಹಡಗಿನಲ್ಲಿ ಸಂಚರಿಸಬಹುದು. ಇನ್ನ್, ಡ್ರಾವ ಮತ್ತು ಮೂರ್ ಇತರ ಮುಖ್ಯ ನದಿಗಳು. ಅಲ್ಲದೆ ಅನೇಕ ದೊಡ್ಡ ಸರೋವರಗಳೂ ಇವೆ. ಉತ್ತರ ಹಾಗೂ ಈಶಾನ್ಯದ ಕಡೆ ವಿಯನ್ನ ಮೈದಾನವನ್ನು ಸೇರುವುದು. ಪರ್ವತಗಳ ತಪ್ಪಲುಗಳು ಸಸ್ಯವರ್ಗದಿಂದ ಕೂಡಿವೆ. ಇವುಗಳಿಂದಾಗಿ ಪಶ್ಚಿಮ ಹಂಗರಿ ಭಾಗಗಳಲ್ಲಿ ಹಳ್ಳ ತಿಟ್ಟುಗಳು ವಿಪುಲ. ಅನೇಕ ಕಣಿವೆಗಳಿಂದ ಛಿದ್ರವಾಗಿರುವ ಎತ್ತರದ ಪ್ರದೇಶಗಳಲ್ಲಿ ಸುಣ್ಣಕಲ್ಲು ಹೇರಳವಾಗಿದೆ.

ಮೇಲ್ಮೈಲಕ್ಷಣದ ವೈವಿಧ್ಯ, ಸನ್ನಿವೇಶ ಇವು ಆಸ್ಟ್ರಿಯದಲ್ಲಿ ವಿವಿಧ ರೀತಿಯ ವಾಯುಗುಣಕ್ಕೆ ಕಾರಣವಾಗಿವೆ. ದಕ್ಷಿಣ ಭಾಗದಲ್ಲಿ ಮೆಡಿಟರೇನಿಯನ್ ವಾಯುಗುಣ, ಪೂರ್ವ ಭಾಗದಲ್ಲಿ ಖಂಡಾಂತರ ವಾಯುಗುಣ ಇವೆ. ಸರಾಸರಿ ಉಷ್ಣತೆ ಅತಿ ಕಡಿಮೆಯೆಂದರೆ ಜನವರಿಯಲ್ಲಿ 9° ಫ್ಯಾ. ಮತ್ತು ಅತಿ ಹೆಚ್ಚೆಂದರೆ ಜುಲೈನಲ್ಲಿ 68° ಫ್ಯಾ. ಇರುತ್ತದೆ. ಮಳೆಯ ಪ್ರಮಾಣ 75–175 ಸೆಂಮೀ. ಪಶ್ಚಿಮ ಆಸ್ಟ್ರಿಯ ವಾಯುಗುಣ ಸೌಮ್ಯ ಮತ್ತು ಹಿತಕರ. ದಕ್ಷಿಣದಿಂದ ಬೀಸುವ ಸ್ಥಳೀಯ ಫೋಹ್ನ್‌ಗಾಳಿಗಳು ಹಿಮಕರಗಿಸುತ್ತವೆ.

ಪೂರ್ವದ ಇಳಿಜಾರುಗಳಲ್ಲಿ ಅಗಲವಾದ ಎಲೆಯುಳ್ಳ ಮರಗಳು ಅತಿ ಎತ್ತರಕ್ಕೆ ಬೆಳೆಯುತ್ತವೆ. ಎತ್ತರ ಪ್ರದೇಶಗಳಲ್ಲಿ ಮೊನಚಾದ ಹಾಗೂ ಆಲ್ಪೈನ್ ಹುಲ್ಲುಗಾವಲಿನ ಸಸ್ಯವರ್ಗವಿದೆ. ಬೀಚ್, ಬರ್ಚ್ ಮತ್ತು ಓಕ್ ಮುಂತಾದ ಎಲೆ ಉದುರುವ ಮರಗಳು ಮತ್ತು ಇತರೆ ಶಂಕು ಮರಗಳು ಬೆಳೆಯುತ್ತವೆ. ಅನೇಕ ಬಗೆಯ ವನ್ಯಮೃಗಗಳಿವೆ. ಕಾಡುಜಿಂಕೆಗಳು ವಿರಳ. ಚಿಗರಿ, ಮೊಲ, ಗ್ರೌಸ್, ಕವಜುಗ ಮತ್ತು ಫೆಸೆಂಟ್ ಹಕ್ಕಿಗಳು ಹೇರಳವಾಗಿವೆ.

ದೇಶದ ಅರ್ಧ ಭಾಗದಷ್ಟು ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ಸು. 1/3 ಅರಣ್ಯ ಪ್ರದೇಶಗಳಿಂದ ತುಂಬಿದೆ. ಪಶುಪಾಲನೆ ಜನರ ಮುಖ್ಯ ಕಸುಬು. ಆಲ್ಪ್ಸ್ ಹಾಗೂ ಡ್ಯಾನ್ಯೂಬ್‌ಗಳ ನಡುವಿನ ಫಲವತ್ತಾದ ಭೂಮಿಯಲ್ಲಿ ಮೆಕ್ಕೆಜೋಳ ಮತ್ತು ಇತರ ಗಡ್ಡೆ ಬೆಳೆಗಳನ್ನು ಬೆಳೆಯುತ್ತಾರೆ. ಶೇ. 30 ರಷ್ಟು ಜನ ಆಧುನಿಕ ಕೃಷಿಯಲ್ಲಿ ತೊಡಗಿದ್ದಾರೆ. ಮುಖ್ಯ ಬೆಳೆಗಳಾದ ಗೋಧಿ, ರೈ, ಓಟ್ಸ್, ಬಾರ್ಲಿ, ಆಲೂಗೆಡ್ಡೆ, ಮೆಕ್ಕೆಜೋಳ, ಸಕ್ಕರೆ ಗೆಡ್ಡೆಗಳು ಮತ್ತು ಹೈನು ಉತ್ಪನ್ನಗಳಾದ ಹಾಲು, ಬೆಣ್ಣೆ, ತುಪ್ಪಗಳನ್ನು ಹೆಚ್ಚಾಗಿ ಉತ್ಪಾದಿಸಿ ರಫ್ತು ಮಾಡುತ್ತಾರೆ.

ಆಸ್ಟ್ರಿಯದಲ್ಲಿ ಮುಖ್ಯವಾಗಿ ಡಿನಾರಿಕರು, ನಾರ್ಡಿಕರು, ಆಲ್ಪೈನರು ಮತ್ತು ಪೂರ್ವಬಾಲ್ಟಿಕರು ಎಂಬ ನಾಲ್ಕು ಜನಾಂಗಗಳಿವೆ. ಡಿನಾರಿಕರು ಎತ್ತರವಾಗಿಯೂ ಕಪ್ಪಾಗಿಯೂ ನಾರ್ಡಿಕರು ತೆಳ್ಳಗೆ ಎತ್ತರವಾಗಿ ಸುಂದರವಾಗಿಯೂ ಆಲ್ಪೈನರು ಗಟ್ಟಿಮುಟ್ಟಾಗಿ ಕುಳ್ಳಾಗಿಯೂ ಪೂರ್ವಬಾಲ್ಟಿಕರು ಮಧ್ಯಮ ಎತ್ತರದವರಾಗಿಯೂ ಇದ್ದಾರೆ. ಹಂಗರಿ ಗಡಿಯ ಬರ್ಗನ್‌ಲೆಂಡಿನಲ್ಲಿ ಕ್ರೋಚ್ ಮತ್ತು ಮ್ಯಾಗ್ಯಾರರು, ಯುಗೊಸ್ಲಾವ್ ಗಡಿಯ ಸ್ಟೀರಿಯ ಮತ್ತು ಕಾರಿಂಥಿಯ ಪ್ರದೇಶಗಳಲ್ಲಿ ಸ್ಲೋವನ್ನರೂ ಇದ್ದಾರೆ. ಜೆಕೊಸ್ಲೊವಾಕ್‌ನಲ್ಲಿ ರುಥೇನಿಯನ್ನರು, ರೂಮೇನಿಯನ್ನರು, ಸರ್ಬಿಯನ್ನರು ಮತ್ತು ಇಟ್ಯಾಲಿಯನ್ನರು ಸ್ವಲ್ಪ ಪ್ರಮಾಣದಲ್ಲಿದ್ದಾರೆ.



ಚಿನ್ನ, ಬೆಳ್ಳಿ, ಕಬ್ಬಿಣ, ಸೀಸ, ಸತು ಹಾಗೂ ತಾಮ್ರ ಇಲ್ಲಿ ದೊರಕುವ ಮುಖ್ಯ ಖನಿಜಗಳು. ಕಲ್ಲಿದ್ದಲು ಅಲ್ಪ ಪ್ರಮಾಣದಲ್ಲಿ ದೊರಕುತ್ತದೆ. ಜಲವಿದ್ಯುಚ್ಛಕ್ತಿ ಹೇರಳವಾಗಿರುವುದರಿಂದ ಕಲ್ಲಿದ್ದಲಿನ ಕೊರತೆ ಕಾಣದು. ದೇಶದ ವಿದ್ಯುಚ್ಛಕ್ತಿಯಲ್ಲಿ ಶೇ.66 ಭಾಗ ಜಲವಿದ್ಯುತ್‌ನಿಂದ ಪೂರೈಕೆಯಾಗುತ್ತದೆ.

ಮುಖ್ಯವಾದ ಕೈಗಾರಿಕೆಗಳೆಂದರೆ ಮರದ ಸಾಮಾನುಗಳನ್ನು ತಯಾರಿಸುವುದು. ಕಾಗದ, ಕಬ್ಬಿಣ ಹಾಗೂ ಉಕ್ಕಿನ ತಯಾರಿಕೆ, ಪೆಟ್ರೋಲಿಯಂ ಶುದ್ಧೀಕರಣ, ರಾಸಾಯನಿಕ ಉತ್ಪತ್ತಿ, ಗಿರಣಿಗಳು, ಚರ್ಮ ಹದಮಾಡುವುದು, ಸೆರಾಮಿಕ್ಸ್, ಗಾಜು, ವಿದ್ಯುದುಪಕರಣಗಳ ತಯಾರಿಕೆ, ರೈಲ್ವೆ ಎಂಜಿನ್ ತಯಾರಿಕೆ ಇತ್ಯಾದಿ.

ಆಸ್ಟ್ರಿಯ ಕಚ್ಚಾ ಪದಾರ್ಥಗಳನ್ನು ಹೆಚ್ಚಾಗಿ ರವಾನಿಸುವುದು. ಆಮದು ವಸ್ತುಗಳಲ್ಲಿ ಆಹಾರ, ಪಾನೀಯ ಹಾಗೂ ಯಂತ್ರೋಪಕರಣಗಳು ಮುಖ್ಯ.

ರಾಜಧಾನಿ ವಿಯನ್ನ. ರೈಲು ಹಾಗೂ ಇತರ ಸಂಚಾರ ಮಾರ್ಗಗಳ ಕೇಂದ್ರ, ಜರ್ಮನ್ ಮುಖ್ಯ ಭಾಷೆ (99%), ಸ್ಲೋವೇನಿಯನ್, ಹಂಗೇರಿಯನ್ ಕ್ರೋಚಿಯನ್ ಮತ್ತು ಬವೇರಿಯನ್‌ಗಳನ್ನಾಡುವವರೂ ಇದ್ದಾರೆ. ಅವರ ಸಂಖ್ಯೆ ಅಲ್ಪ.

ರೋಮನ್ ಕೆಥೊಲಿಕರೇ ಹೆಚ್ಚು (90%); ಉಳಿದವರು ಪ್ರಾಟೆಸ್ಟೆಂಟರು, ಯೆಹೂದ್ಯರು, ಗ್ರೀಕರು ಮುಂತಾದವರು.

ರೈಲ್ವೆ ಕೇಂದ್ರ ಹಾಗೂ ಪ್ರಾಂತೀಯ ಹೆದ್ದಾರಿಗಳು ಸರ್ಕಾರದ ಆಡಳಿತಕ್ಕೆ ಒಳಪಟ್ಟಿವೆ. ವಿಯೆನ್ನ–ಸಾಲ್ಜ್ ಬರ್ಗ್ ಹೆದ್ದಾರಿ (347ಕಿಮೀ) ಪಶ್ಚಿಮ ಜರ್ಮನಿಗೆ ಸಂಪರ್ಕ ಒದಗಿಸುತ್ತದೆ. ಡ್ಯಾನ್ಯೂಬ್ ನದಿ ಜಲಸಾರಿಗೆಗೆ ಮುಖ್ಯವಾಗಿದೆ. ರಷ್ಯದೊಡನೆ ಮಾಡಿಕೊಂಡ 1956ರ ಒಪ್ಪಂದದ ಪ್ರಕಾರ ಆಸ್ಟ್ರಿಯದ ಹಡಗುಗಳು ಕಪ್ಪು ಸಮುದ್ರದವರೆಗೂ ಪ್ರವಾಸ ಮಾಡುತ್ತವೆ. ಗ್ರಾಜ್, ಇನ್ಸ್‌ಬ್ರುಕ್, ಕ್ಲಾಗೆನ್‌ಫರ್ಟ್, ಲಿಂಜ್, ಸಾಲ್ಜ್‌ಬರ್ಗ್ ಮತ್ತು ಸ್ಕ್ವೆಚಾದ್‌ಗಳಲ್ಲಿ (ವಿಯನ್ನದ ಹತ್ತಿರ) ವಿಮಾನ ನಿಲ್ದಾಣಗಳಿವೆ. ಆಸ್ಟ್ರಿಯ ದೇಶದ ಸಾರಿಗೆ ಹೆಚ್ಚಾಗಿ ಇಟಲಿಯ ಟ್ರೇಸ್ಟ್ ಬಂದರಿನ ಮುಖಾಂತರವೂ ಪಶ್ಚಿಮ ಜರ್ಮನಿಯ ಹ್ಯಾಂಬರ್ಗ್ ಮತ್ತು ಬ್ರೆಮನ್ ಬಂದರುಗಳ ಮುಖಾಂತರವೂ ನಡೆಯುವುದು.

**ಚರಿತ್ರೆ:** ಈಗ ಇದು ಮಧ್ಯ ಯುರೋಪಿನ ಒಂದು ಸಣ್ಣ ರಾಜ್ಯವಾದರೂ ಹಿಂದೆ ಕೆಲಕಾಲ ದೊಡ್ಡ ಸಾಮ್ರಾಜ್ಯದ ಕೇಂದ್ರವಾಗಿತ್ತು. ಇದರ ಆಗುಹೋಗುಗಳು ಮಧ್ಯಯುರೋಪಿನ ಇತರ ರಾಜ್ಯಗಳ ಇತಿಹಾಸದೊಂದಿಗೆ ಹೆಣೆದುಕೊಂಡಿವೆ. ಪುರಾತನ ಶಿಲಾಯುಗದಿಂದಲೂ ಇಲ್ಲಿ ಜನರು ವಾಸಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಪ್ರ.ಶ.ಪೂ.14ರಲ್ಲಿ ರೋಮನ್ನರು ಡ್ಯಾನ್ಯೂಬ್ ನದಿಗೆ ದಕ್ಷಿಣಕ್ಕಿರುವ ಭಾಗವನ್ನೆಲ್ಲ ಸ್ವಾಧೀನಪಡಿಸಿಕೊಂಡು ನಾರಿಕಂ ಮತ್ತು ಪೆನೋನಿಯ ಎಂಬ ಎರಡು ಪ್ರಾಂತ್ಯಗಳನ್ನು ನಿರ್ಮಿಸಿದರು. ಪೆನೋನಿಯದಲ್ಲಿದ್ದ ವಿಂಡೊಬೋನ ಎಂಬ ನಗರವೇ ಇಂದಿನ ವಿಯನ್ನ. ಡ್ಯಾನ್ಯೂಬ್ ನದಿಗೆ ಉತ್ತರದಲ್ಲಿರುವ ಪ್ರಾಂತ್ಯವನ್ನು ಮಾರ್ಕೊಮ್ಯಾನಿ ಎಂಬ ಜನರು ಆಕ್ರಮಿಸಿದರು. ಮುಂದೆ ಐದಾರು ಶತಮಾನಗಳ ಅವಧಿಯಲ್ಲಿ ವ್ಯಾಂಡರು, ಗಾಥರು, ಹೂಣರು, ಲಂಬಾರ್ಡರು, ಆವಾರರು ಈ ದೇಶಕ್ಕೆ ನುಗ್ಗಿ ಬಂದು ಕೆಲಕಾಲ ಆಕ್ರಮಿಸಿ ನಿಂತರು. 8ನೆಯ ಶತಮಾನದ ಅಂತ್ಯಭಾಗದಲ್ಲಿ ಸಾಮ್ರಾಟ ಚಾರ್ಲ್ಸ್ ಮಹಾಶಯ ಆವಾರರನ್ನು ಸೋಲಿಸಿ ಈಸ್ಟ್‌ಮಾರ್ಕ್ ಎಂಬ ಪ್ರಾಂತ್ಯವನ್ನು ನಿರ್ಮಿಸಿದ. ಆಸ್ಟ್ರಿಯ ಸಾಮ್ರಾಜ್ಯದ ಇತಿಹಾಸ ಇಲ್ಲಿಂದ ಪ್ರಾರಂಭವಾಗುತ್ತದೆಂದು ಅನೇಕರ ಅಭಿಪ್ರಾಯ. ಮುಂದೆ

ಹಂಗರಿಯವರು ಇಲ್ಲಿಗೆ ನುಗ್ಗಿ ಭೀಕರ ಹಾವಳಿ ನಡೆಸಿದರು; ಆಸ್ಟ್ರಿಯ ಹೇಳ ಹೆಸರಿಲ್ಲದಾಗುತ್ತದೆಂಬ ಭಯ ತಲೆದೋರಿತು. ಆದರೆ 955ರಲ್ಲಿ ಆಟೊ ಮಹಾಶಯ ಅವರನ್ನು ಆಗ್ಸ್‌ಬರ್ಗ್ ಕದನದಲ್ಲಿ ಸೋಲಿಸಿ ಈಸ್ಟ್‌ಮಾರ್ಕ್ ಪ್ರಾಂತ್ಯವನ್ನು ಪುನರುಜ್ಜೀವನಗೊಳಿಸಿದ. 973ರಲ್ಲಿ, ಬೇಬನ್‌ಬರ್ಗ್ ವಂಶದ ಲಿಯೋಪಾಲ್ಡ್ ಎಂಬುವನಿಗೆ ಮಾರ್‌ಗ್ರೇವ್ ಅಥವಾ ಗಡಿನಾಡಿನ ಸೈನಿಕ ಮಂಡಲಾಧಿಪತಿ ಎಂಬ ಹೆಚ್ಚಿನ ಬಿರುದನ್ನು ಕೊಟ್ಟ. ಈ ಪ್ರಾಂತಾಧಿಪತಿಗಳ ಆಳ್ವಿಕೆಯಲ್ಲಿ ಈಸ್ಟ್‌ಮಾರ್ಕ್ ವಿಸ್ತರಿಸಲ್ಪಟ್ಟಿತಲ್ಲದೆ ಆಂತರಿಕ ಭದ್ರತೆಯನ್ನೂ ಪಡೆಯಿತು. 12ನೆಯ ಶತಮಾನದಲ್ಲಿ ದಕ್ಷಿಣದ ಕೆಲವು ಪ್ರದೇಶಗಳನ್ನೂ ಸೇರಿಸಿ ಅದನ್ನು ಡ್ಯೂಕ್‌ಡಂ ಅಥವಾ ವಂಶಾನುಗತ ಶ್ರೀಮಂತಪದವಿ ಹೊಂದಿರುವವರ ರಾಜ್ಯವನ್ನಾಗಿ ಪರಿವರ್ತಿಸಲಾಯಿತು. ಹೆನ್ರಿ ಜ್ಯಾಸೊಮಿರ್ಗಾಟ್ ಎಂಬಾತ ಸಾಮಂತನಾದ. ಈ ಮನೆತನದ ಅಧಿಪತಿಗಳು ಸಮರ್ಥರಾಗಿದ್ದು, ರಾಜ್ಯವನ್ನು ವಿಸ್ತರಿಸಿದರು. ಇವರಲ್ಲಿ 6ನೆಯ ಲಿಯೊಪಾಲ್ಡ್ ಎಂಬುವನು ಮಾಗ್ಯಾರರ ಮತ್ತು ಮುಸ್ಲಿಮರ ಹಾವಳಿಯನ್ನು ತಡೆಗಟ್ಟಿದ. ಅವನ ತರುವಾಯ ಬಂದ ಫ್ರೆಡರಿಕ್ ಮಾಗ್ಯಾರರ ವಿರುದ್ಧ ನಡೆದ ಕದನದಲ್ಲಿ (1246) ಮಡಿದ. ಇಲ್ಲಿಗೆ ಬೇಬನ್‌ಬರ್ಗ್ ವಂಶದವರ ಆಳ್ವಿಕೆ ಕೊನೆಗಂಡಿತು.

ಕೊಂಚಕಾಲ ಆಸ್ಟ್ರಿಯದಲ್ಲಿ ಪ್ರಭುಗಳೇ ಇರಲಿಲ್ಲ. ಈ ಗೊಂದಲದಲ್ಲಿ, ಬೊಹಿಮಿಯದ ದೊರೆ ಒಟೇಕರ್ ರಾಜ್ಯವನ್ನು ಸ್ವಾಧೀನಪಡಿಸಿಕೊಂಡ. ಹ್ಯಾಬ್ಸ್‌ಬರ್ಗ್ ಚಕ್ರವರ್ತಿ 1ನೆಯ ರಡೋಲ್ಫನ ಸಾರ್ವಭೌಮತ್ವವನ್ನು ಆತ ಒಪ್ಪಲಿಲ್ಲವಾದ್ದರಿಂದ ಯುದ್ಧ ಪ್ರಾರಂಭವಾಯಿತು. ಮಾರ್ಚ್‌ಫೀಲ್ಡ್ ಕದನದಲ್ಲಿ ಒಟೇಕರ್ ಮಡಿದ. ಆಸ್ಟ್ರಿಯ ಹ್ಯಾಬ್ಸ್‌ಬರ್ಗ್ ರಾಜಮನೆತನದ ಆಳ್ವಿಕೆಗೆ ಬಂತು. ರಡೋಲ್ಫನ ಮಗ ಆಲ್ಬರ್ಟ್ ಆಸ್ಟ್ರಿಯದ ಡ್ಯೂಕನಾದ. ಈ ಮನೆತನದವರ ಆಳ್ವಿಕೆಯಲ್ಲಿ ಆಸ್ಟ್ರಿಯದ ಇತಿಹಾಸ ಭವ್ಯವಾಗಿ 1282–1318ರವರೆಗೂ ಅವಿಚ್ಛಿನ್ನವಾಗಿ ಸಾಗಿತು. 1330ರಲ್ಲಿ ದೊರೆಯಾದ 2ನೆಯ ಆಲ್ಬರ್ಟನ ಕಾಲದಲ್ಲೇ ರಾಜ್ಯ ವಿಸ್ತರಣೆ ಪ್ರಾರಂಭವಾಯಿತು. ಕಾರಿಂಥಿಯ, ಟೈರಾಲ್ ಮುಂತಾದ ನೆರೆಯ ರಾಜ್ಯಗಳು ಆಸ್ಟ್ರಿಯಕ್ಕೆ ಸೇರಿದುವು. ಐದನೆಯ ಆಲ್ಬರ್ಟ್ ಸಿಜಸ್ಮಂಡ್ ಚಕ್ರವರ್ತಿಯ ಮಗಳನ್ನು ಮದುವೆಯಾಗಿ ಹಂಗರಿ ಬೊಹಿಮಿಯ ರಾಜ್ಯಗಳಿಗೂ ದೊರೆಯಾದ; ಎರಡನೆಯ ಆಲ್ಬರ್ಟ್ ಎಂಬ ಹೆಸರಿನಿಂದ ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿಯೂ ಆದ. ಮುಂದೆ, ಆಸ್ಟ್ರಿಯದ ಹ್ಯಾಬ್ಸ್‌ಬರ್ಗ್ ರಾಜರು (1740–45ರ ಅವಧಿಯಲ್ಲಿ ಹೊರತು) 1806ರವರೆಗೂ ಪವಿತ್ರ ರೋಮನ್ ಸಾಮ್ರಾಟರೂ ಆಗಿದ್ದರು. ಹೀಗೆ ಆಸ್ಟ್ರಿಯದ ಚರಿತ್ರೆ ಆ ಸಾಮ್ರಾಜ್ಯದ ಇತಿಹಾಸದೊಂದಿಗೆ ಹೆಣೆದುಕೊಂಡಿದೆ (ನೋಡಿ– ಪವಿತ್ರ–ರೋಮನ್–ಸಾಮ್ರಾಜ್ಯ).

ಈ ಕಾಲದಲ್ಲಿ ಆಸ್ಟ್ರಿಯದ ಐತಿಹಾಸಿಕ ಪ್ರಾಮುಖ್ಯ ಕಂಡುಬರುವುದು ಒಂದೇ ಸಮನಾಗಿ ನಡೆಯುತ್ತಿದ್ದ ಮುಸ್ಲಿಮರ ದಾಳಿಯನ್ನು ತಡೆಗಟ್ಟಿದ್ದರಲ್ಲಿ. ಇಡೀ ಯುರೋಪನ್ನೇ ಸ್ವಾಧೀನಪಡಿಸಿಕೊಳ್ಳುವ ಉದ್ದೇಶದಿಂದ ಮುಸ್ಲಿಮರು ಮೇಲಿಂದಮೇಲೆ ಆಸ್ಟ್ರಿಯದ ಮೇಲೆ ನುಗ್ಗುತ್ತಿದ್ದರು. ಅವರ ಹಾವಳಿ ನಿಂತಿದ್ದು 1689ರಲ್ಲಿ, ಅವರು ವಿಯನ್ನ ನಗರಕ್ಕೆ ಮುತ್ತಿಗೆ ಹಾಕಿ ಪರಾಭವ ಹೊಂದಿದಮೇಲೆ. ಹೀಗೆ ಆಸ್ಟ್ರಿಯ ಆ ದಾಳಿಗೆ ತಡೆರಾಜ್ಯವಾಗಿ ನಿಂತಿದ್ದರಿಂದ ಮಧ್ಯ ಮತ್ತು ಪಶ್ಚಿಮ ಯುರೋಪಿನ ರಾಜ್ಯಗಳು ನಿರುಪಾಧಿಕವಾಗಿ ಬೆಳೆಯಲನುಕೂಲವಾಯಿತು. ಆದರೆ 17ನೆಯ ಶತಮಾನದಲ್ಲಿ ಆಸ್ಟ್ರಿಯ ಮತೀಯ ಮತ್ತು ರಾಜಕೀಯ ಗೊಂದಲಕ್ಕೆ ಸಿಕ್ಕಿ ತನ್ನ ಪ್ರಾಮುಖ್ಯ ಕಳೆದುಕೊಳ್ಳುತ್ತ ಬಂತು. 1618–48ರ ವರೆಗೆ ನಡೆದ 30 ವರ್ಷಗಳ ಯುದ್ಧದಲ್ಲಿ ಯುರೋಪಿನ ಪ್ರಮುಖ ರಾಷ್ಟ್ರಗಳೆಲ್ಲ ಭಾಗವಹಿಸಿದುವು. ಜರ್ಮನಿ ಜನಶೂನ್ಯವಾಗಿ ದಟ್ಟದಾರಿದ್ರ್ಯದ ದೇಶವಾಯಿತು; ಪವಿತ್ರ ರೋಮನ್ ಸಾಮ್ರಾಜ್ಯ ಹೆಸರಿಗೆ ಮಾತ್ರ ಸಾಮ್ರಾಜ್ಯವಾಗುಳಿಯಿತು; ಆಸ್ಟ್ರಿಯದ ಪ್ರಾಮುಖ್ಯ ಕುಂದತೊಡಗಿತು. ಈ ವಿಪ್ಲವದ ಲಾಭ ಪಡೆದು ಪ್ರಗತಿ ಹೊಂದಿದ ರಾಷ್ಟ್ರ ಫ್ರಾನ್ಸ್ ಒಂದೇ. ಇಂಗ್ಲೆಂಡ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ಬಲಗೊಂಡದ್ದರಿಂದ ಕಾಲಧರ್ಮಕ್ಕೆ ವಿರುದ್ಧವಾದ ಪವಿತ್ರ ರೋಮನ್ ಸಾಮ್ರಾಜ್ಯ ಉಳಿಯುವುದು ಸಾಧ್ಯವೇ ಇರಲಿಲ್ಲ.

ಆದರೂ 1701–14 ರವರೆಗೆ ಸ್ಪೇನ್ ವಾರಸಯುದ್ಧದ ಪರಿಣಾಮವಾಗಿ ಆಸ್ಟ್ರಿಯ, ನೆದರ್ಲೆಂಡ್ಸ್, ಮಿಲಾನ್, ನೇಪಲ್ಸ್, ಮಾಂಟುಅ ಮತ್ತು ಸಿಸಿಲಿಗಳನ್ನು ಪಡೆಯಿತು. ರಾಷ್ಟ್ರೀಯತಾಭಾವನೆ ಬೆಳೆಯುತ್ತಿದ್ದ ಆ ಕಾಲದಲ್ಲಿ ಇದು ಉಳಿಯುವುದೂ ಸಾಧ್ಯವಿರಲಿಲ್ಲ. 18ನೆಯ ಶತಮಾನದ ಪ್ರಥಮಾರ್ಧದಲ್ಲಿ, 30 ವರ್ಷದ ಯುದ್ಧದ ಪರಿಣಾಮವಾಗಿ ಕುಂದಿದ್ದ ಜರ್ಮನಿಯಲ್ಲಿ ಪ್ರಷ್ಯರಾಜ್ಯ ತಲೆಯೆತ್ತಿ ಬಹುಬೇಗ ಬೆಳೆಯಿತು. ಈ ಮಧ್ಯೆ ಆಸ್ಟ್ರಿಯದಲ್ಲಿ ಪುತ್ರಸಂತಾನವಿಲ್ಲದೆ ದೊರೆ ಆರನೆಯ ಚಾರ್ಲ್ಸ್ ಕಾಲವಾದ (1740). ಇದಕ್ಕೆ ಮುಂಚೆ ಆತ ರಾಜ್ಯದ ಮೂಲಾಧಾರ ಶಾಸನದಲ್ಲಿ (ಪ್ರ್ಯಾಗ್ಮಾಟಿಕ್ ಸ್ಯಾಂಕ್ಷನ್) ತನ್ನ ಮಗಳು ಮೇರಿಯ ಥೆರೀಸಾ ಮುಂದಿನ ರಾಣಿಯಾಗುವುದಕ್ಕೆ ಪ್ರಮುಖ ರಾಷ್ಟ್ರಗಳ ಒಪ್ಪಿಗೆ ಪಡೆದಿದ್ದ. ಆದರೆ 6ನೆಯ ಚಾರ್ಲ್ಸ್ ಕಾಲವಾದ ಕೂಡಲೇ ಆ ಮೂಲಾಧಾರ ಶಾಸನವನ್ನು ಕಡೆಗಣಿಸಿ ಪ್ರಷ್ಯದ ದೊರೆ ಫ್ರೆಡರಿಕ್ ಆಸ್ಟ್ರಿಯಕ್ಕೆ ಸೇರಿದ ಸೈಲೀಷಿಯವನ್ನು ಆಕ್ರಮಿಸಿದ. ಯುರೋಪಿನ ಕೆಲವು ರಾಷ್ಟ್ರಗಳು ಫ್ರೆಡರಿಕ್‌ನ ಕಡೆ ಸೇರಿದುವು. ಆದರೂ ಎದೆಗುಂದದೆ ಮೇರಿ ಶತ್ರುಗಳನ್ನೆದುರಿಸಿದಳು. 1748ರಲ್ಲಿ ಯುದ್ಧ ನಿಂತಿತು; ಏ–ಲಾ–ಷ್ಯಾಪೆಲ್ ಒಪ್ಪಂದದ ಪ್ರಕಾರ ಸೈಲೀಷಿಯವನ್ನು ಫ್ರೆಡರಿಕ್‌ಗೆ ಬಿಟ್ಟುಕೊಡಬೇಕಾದರೂ ಮಿಕ್ಕ ಪ್ರಾಂತ್ಯಗಳು ಆಸ್ಟ್ರಿಯಕ್ಕೇ ಉಳಿದುವು.

18ನೆಯ ಶತಮಾನದ ಉತ್ತರಾರ್ಧದಲ್ಲಿ ಯುರೋಪಿನಲ್ಲಿ ಕ್ರಾಂತಿಕಾರಕ ಘಟನೆಗಳು ಜರುಗಿದುವು. ಫ್ರೆಡರಿಕ್ ಮಹಾಶಯನ ಆಳ್ವಿಕೆಯಲ್ಲಿ ಪ್ರಷ್ಯ ಅಭಿವೃದ್ಧಿ ಹೊಂದಿ ಆಸ್ಟ್ರಿಯದ ಪ್ರಬಲ ಪ್ರತಿಸ್ಪರ್ಧಿಯಾಗಿ ನಿಂತಿತು. ರಾಷ್ಟೀಯತಾಭಾವನೆ ಎಲ್ಲ ದೇಶಗಳಿಗೂ ವ್ಯಾಪಿಸಿ ಸಾಮ್ರಾಜ್ಯ ಭಾವನೆ ಕ್ಷೀಣಿಸಿತು. ಫ್ರಾನ್ಸಿನ ಮಹಾಕ್ರಾಂತಿ ಉಗ್ರಸ್ವರೂಪ ತಾಳಿ, ಈ ಭಾವನೆಗೆ ಪೂರಕವಾದ ಪೆಟ್ಟುಕೊಟ್ಟಿತು. ಕೊನೆಗೆ ನೆಪೋಲಿಯನ್ ಇಡೀ ಯುರೋಪನ್ನೇ ಗೆದ್ದು ರಾಜ್ಯಗಳನ್ನೆಲ್ಲ ಅಸ್ತವ್ಯಸ್ತಗೊಳಿಸಿ 1815ರಲ್ಲಿ ವಾಟರ್ ಲೂ ಕದನದಲ್ಲಿ ಪರಾಭವ ಹೊಂದಿದಾಗ ಸಾಮ್ರಾಜ್ಯತ್ವ ಅಳಿದು ರಾಷ್ಟ್ರೀಯತೆ ಸ್ಥಿರವಾಗಿ ನೆಲೆಸುವುದಕ್ಕೆ ಅನುಕೂಲವಾಯಿತು. 1806ರಲ್ಲೇ ಪವಿತ್ರ ರೋಮನ್ ಸಾಮ್ರಾಜ್ಯ ಕೊನೆಗೊಂಡಿತ್ತು. ಆಸ್ಟರ್‌ಲಿಟ್ಜ ಕದನದಲ್ಲಿ ನೆಪೋಲಿಯನ್ನನಿಂದ ಆಸ್ಟ್ರಿಯ ತೀವ್ರ ಸೋಲು ಅನುಭವಿಸಿತ್ತು. ನೆಪೋಲಿಯನ್ನನ ಒತ್ತಡದ ಮೇರೆಗೆ ಆಸ್ಟ್ರಿಯ ದೊರೆ 1ನೆಯ ಫ್ರಾನ್ಸಿಸ್ ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿಯ ಸ್ಥಾನವನ್ನು ತ್ಯಜಿಸಿದ್ದನು. 19ನೆಯ ಶತಮಾನದ ಮೊದಲ ದಶಕಗಳಲ್ಲಿ ಆಸ್ಟ್ರಿಯದ ಪ್ರಧಾನಿ ಮೆಟರ್ನಿಕ್ ತನ್ನ ದೇಶದ ಪ್ರಾಧಾನ್ಯವನ್ನು ಕಾಪಾಡಲು ಬಹುವಾಗಿ ಶ್ರಮಿಸಿದ. ಆದರೆ 1848ರಲ್ಲಿ ಯುರೋಪಿನಾದ್ಯಂತ ನಡೆದ ಕ್ರಾಂತಿಯ ಪರಿಣಾಮವಾಗಿ ಆಸ್ಟ್ರಿಯ ಕ್ಷೀಣಿಸಿತು. ಅದೇ ವರ್ಷ ಮೆಟರ್ನಿಕ್ ದೇಶಾಂತರ ಹೋಗಬೇಕಾಯಿತು. ಆದರೂ ದೊರೆ ಫ್ರಾನ್ಸಿಸ್ ಜೋಸೆಫ್ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು ನಿರಂಕುಶಪ್ರಭುವಾಗಿ ಆಳಿದ. 1859ರಲ್ಲಿ ಇಟಲಿಯೊಂದಿಗೆ ನಡೆದ ಯುದ್ಧದಲ್ಲಿ ಆಸ್ಟ್ರಿಯ ಲಾಂಬಾರ್ಡಿಯನ್ನು ಕಳೆದುಕೊಂಡಿತು. 1866ರಲ್ಲಿ ಪ್ರಷ್ಯದೊಂದಿಗೆ ಸಪ್ತವಾರಗಳ ಯುದ್ಧವಾಗಿ ವೆನೀಷಿಯವನ್ನು ಕಳೆದುಕೊಳ್ಳಬೇಕಾಯಿತು. 1867ರಲ್ಲಿ ಆಸ್ಟ್ರಿಯಕ್ಕೆ ಸೇರಿದ ರಾಜ್ಯಗಳ ಪುನರ್ವ್ಯವಸ್ಥೆ ನಡೆದು ಆಸ್ಟ್ರಿಯ–ಹಂಗರಿ ರಾಜ್ಯ ಸ್ಥಾಪನೆಯಾಯಿತು. ಇದು ಒಂದನೆಯ ಮಹಾಯುದ್ಧ ಮುಗಿಯುವವರೆಗೂ ನಡೆದುಬಂದು ಹಂಗರಿ ಪತ್ಯೇಕವಾಯಿತು.

1918ರಲ್ಲಿ ಒಂದನೆಯ ಮಹಾಯುದ್ಧ ಮುಗಿದಮೇಲೆ ಮಾಡಿದ ರಾಜ್ಯವ್ಯವಸ್ಥೆಯಲ್ಲಿ ಆಸ್ಟ್ರಿಯ ಪ್ರಜಾರಾಜ್ಯವಾಗಿ ಪರಿವರ್ತನೆಗೊಂಡಿತು. 1920ರಲ್ಲಿ ಅದು ಸಂವಿಧಾನವನ್ನು ಅಳವಡಿಸಿಕೊಂಡಿತು. ಅದರ ಎಲ್ಲೆಗಳೂ ನಿಗದಿಮಾಡಲ್ಪಟ್ಟವು. 60 ಲಕ್ಷ ಜನಸಂಖ್ಯೆ ಹೊಂದಿದ (ಅದರ ಪೈಕಿ 20 ಲಕ್ಷ ಜನ ವಿಯನ್ನದಲ್ಲೇ ಇದ್ದರು) ಸಣ್ಣ ರಾಜ್ಯವಾಗುಳಿಯಿತು. ಆರ್ಥಿಕಾಭಿವೃದ್ಧಿಗೆ ಬೇಕಾದ ಸಂಪನ್ಮೂಲಗಳಿಲ್ಲ; ಆಹಾರ ಪದಾರ್ಥಗಳಿಗೆ ಕೊರತೆ, ವಾಣಿಜ್ಯ ಬೆಳೆಯಲು ಆವಶ್ಯಕವಾದ ಅನುಕೂಲತೆಗಳಿಲ್ಲ; ಹೀಗೆ ಈ ಹೊಸ ಆಸ್ಟ್ರಿಯದಲ್ಲಿ ರಾಜಕೀಯ ಕ್ಷೋಭೆ, ನಿರುದ್ಯೋಗ, ದಾರಿದ್ರ್ಯ, ದಿವಾಳಿತನ, ಹೆಚ್ಚಿದುವು. ಅಲ್ಲಿನ ರಾಜಕೀಯದಲ್ಲಿ ಮೂರು ಪರಸ್ಪರ ತೀರ ವಿರುದ್ಧ ಪಕ್ಷಗಳಾದುವು. ಈ ಪಕ್ಷಗಳು ಪ್ರತ್ಯೇಕ ಸೈನ್ಯಗಳನ್ನೂ ಹೊಂದಿದ್ದುವು. ಕೊನೆಗೆ ವಿಯನ್ನದಲ್ಲಿ 1927ರಲ್ಲಿ ದೊಂಬಿಗಳಾದುವು. 1934ರಲ್ಲಿ ಡಾಲ್ಫಸ್ ಎಂಬಾತ ಅಧಿಕಾರಯುಕ್ತ ಸರ್ಕಾರ ರಚಿಸಿದ. ಜರ್ಮನಿಯಲ್ಲಿ ಪ್ರಬಲನಾಗಿದ್ದ ಹಿಟ್ಲರ್ ಸ್ಥಳೀಯ ನಾಜಿಪಕ್ಷದ ಬೆಂಬಲದಿಂದ 1938ರಲ್ಲಿ ಆಸ್ಟ್ರಿಯವನ್ನಾಕ್ರಮಿಸಿದನು. 1940ರಲ್ಲಿ ಅದು ಜರ್ಮನಿಯಲ್ಲಿ ವಿಲೀನಗೊಂಡಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಆಸ್ಟ್ರಿಯ ಜರ್ಮನಿಯ ಒಂದು ಹೊರಪ್ರಾಂತ್ಯವಾಗುಳಿಯಿತು. 1945ರಲ್ಲಿ ಯುದ್ಧ ಮುಗಿದು ಮಿತ್ರರಾಷ್ಟ್ರಗಳು ಅದನ್ನು ಆಕ್ರಮಿಸಿಕೊಂಡಮೇಲೆ ಅಲ್ಲಿ ಒಂದು ಪ್ರಜಾಸರ್ಕಾರವನ್ನು ಸ್ಥಾಪಿಸಲಾಯಿತು. ಸಮರ್ಥನಾದ ಕಾರ್ಲ್ ರೆನ್ನರ್ ಪ್ರಧಾನಿಯಾದ. ಮೇ 1955ರಲ್ಲಿ ಸ್ವತಂತ್ರ ಪ್ರಜಾಸತ್ತಾತ್ಮಕ ಆಸ್ಟ್ರಿಯ ತಲೆ ಎತ್ತಿತು. ಅಕ್ಟೋಬರ್ 1955ರಲ್ಲಿ ಎಲ್ಲ ಮಿತ್ರರಾಷ್ಟ್ರಗಳೂ ಅಲ್ಲಿಂದ ಕಾಲ್ತೆಗೆದುವು. 1938ರಲ್ಲಿ ಕಳೆದುಕೊಂಡ ಸ್ವಾತಂತ್ರ್ಯವನ್ನು ಈಗ ಅದು ಪಡೆಯಿತು. ಒಪ್ಪಂದದ ಪ್ರಕಾರ ಕೊನೆಯವರೆಗೂ ಆಸ್ಟ್ರಿಯ ತಟಸ್ಥ ರಾಷ್ಟ್ರವಾಗಿ ಉಳಿಯಲು ಒಪ್ಪಿತು. 1955ರಲ್ಲಿಯೇ ವಿಶ್ವಸಂಸ್ಥೆಯನ್ನು ಸೇರಿತು. ಆಸ್ಟ್ರಿಯದ ತಟಸ್ಥ ನಿಲುವಿನ ಫಲವಾಗಿ 1972ರಲ್ಲಿ ಆಸ್ಟ್ರಿಯದ ಕುರ್ಟ್‌ವಾಲ್ಡ್‌ಹೀಮ್ ವಿಶ್ವಸಂಸ್ಥೆಯ ಪ್ರಧಾನಕಾರ್ಯದರ್ಶಿಯಾಗಿ ಆಯ್ಕೆಯಾದನು. 1995ರಲ್ಲಿ ಆಸ್ಟ್ರಿಯ ಐರೋಪ್ಯ ಒಕ್ಕೂಟದ ಸದಸ್ಯದೇಶವಾಯಿತು. ಆದರೆ ಇದು ನ್ಯಾಟೊ ಸದಸ್ಯತ್ವ ಪಡೆದಿಲ್ಲ.

ಆಸ್ಟ್ರಿಯದಲ್ಲಿ 9 ಪ್ರಾಂತ್ಯಗಳಿವೆ. ಬರ್ಗನ್‌ಲೆಂಡ್, ಕಾರಿಂಥಿಯ, ಕೆಳ ಆಸ್ಟ್ರಿಯ, ಸಾಲ್ಸ್ ಬರ್ಗ್, ಸ್ಟೀರಿಯ, ಟೈರೋಲ್, ಮೇಲಿನ ಆಸ್ಟ್ರಿಯ, ವಿಯನ್ನ ಮತ್ತು ವೊರಾರ್ಲ್ ಬರ್ಗ್. ರಾಷ್ಟ್ರಾಧ್ಯಕ್ಷ ಜನರಿಂದ ಚುನಾಯಿಸಲ್ಪಡುತ್ತಾನೆ. ಆತನ ಅಧಿಕಾರಾವಧಿ 6 ವರ್ಷ. ಅಧ್ಯಕ್ಷ ಛಾನ್ಸಲರ್‌ನನ್ನು ನೇಮಿಸುತ್ತಾನೆ. ಛಾನ್ಸಲರನ ಅವಧಿ ಹೆಚ್ಚೆಂದರೆ 4 ವರ್ಷ. ಅಧ್ಯಕ್ಷನೇ ಮಂತ್ರಿಗಳನ್ನು ಆರಿಸುತ್ತಾನೆ. ಮಂತ್ರಿಮಂಡಲ ಸಂಸತ್ತಿಗೆ ವಿಧೇಯವಾಗಿರುತ್ತದೆ. ಕೇಂದ್ರಸಂಸತ್ತಿನ ಮಂಡಳ ಜನಸಂಖ್ಯೆಯ ಪ್ರಮಾಣದ ಮೇಲೆ ಪ್ರಾಂತೀಯ ಶಾಸನಸಭೆಗಳು ಚುನಾಯಿಸಿ ಕಳಿಸಿದ 63 ಸದಸ್ಯರನ್ನು ಹೊಂದಿದೆ. ಕೆಳಮನೆಯಾದ ರಾಷ್ಟ್ರೀಯ ಮಂಡಳಿ, ಜನರಿಂದ ಚುನಾಯಿಸಲ್ಪಟ್ಟ 183 ಸದಸ್ಯರನ್ನು ಹೊಂದಿದೆ.

ಪ್ರತಿ ಪ್ರಾಂತ್ಯ ಜನರಿಂದ ಚುನಾಯಿಸಲ್ಪಟ್ಟ ಒಮ್ಮನೆಯ ಶಾಸನ ಸಭೆಯನ್ನು ಪಡೆದಿದೆ. ಪ್ರಾಂತೀಯ ಸಭೆ ಚುನಾಯಿಸಿದ ಗವರ್ನರೇ ಪ್ರಾಂತ್ಯದ ಮುಖ್ಯಸ್ಥ.

ನ್ಯಾಯಾಂಗ–232 ಕೋರ್ಟುಗಳನ್ನೂ 19 ಪ್ರಾಂತೀಯ ಮತ್ತು ಜಿಲ್ಲಾಕೋರ್ಟುಗಳನ್ನೂ 4 ಉಚ್ಚ ಪ್ರಾಂತೀಯ ಕೋರ್ಟುಗಳನ್ನೂ ವಿಯನ್ನದಲ್ಲಿ ಪ್ರಧಾನ ಕೋರ್ಟನ್ನೂ ಪಡೆದಿದೆ.

(ಎ.ಎಂ.;ವಿ.ಎಸ್.ಪಿ.)

**ಆಸ್ಟ್ರಿಯನ್ ಪಂಥ:** ಗೊಸ್ಸೆನ್ ಎಂಬ ಜರ್ಮನ್ ಅರ್ಥಶಾಸ್ತ್ರಜ್ಞನಲ್ಲಿ ಮೂಡಿದ ಕೆಲ ವಿಚಾರಗಳ ತಳಹದಿಯನ್ನು ವಿಸ್ತರಿಸಿ, ಪರಿಷ್ಕರಿಸಿ, ಆಸ್ಟ್ರಿಯದ ಕಾರ್ಲ್ ಮೆಂಗರ್, ವೀಸರ್ ಮತ್ತು ಬೊಂ–ಬಾವರ್ಕ್, ಇಂಗ್ಲೆಂಡಿನ ಜೆವನ್ಸ್ ಮತ್ತು ಫ್ರಾನ್ಸಿನ ಲಿಯೋ ವಾಲ್ರಾಸ್ ಅವರು 1860ರ ಅನಂತರದ 2–3 ದಶಕಗಳಲ್ಲಿ ಸ್ಥಾಪಿಸಿದ ಒಂದು ನೂತನ ಆರ್ಥಿಕ ವಿಚಾರಧಾರೆಯನ್ನು ಈ ಹೆಸರಿನಿಂದ ಕರೆಯುತ್ತಾರೆ. ಉಪಯುಕ್ತತೆ ಎಂಬ ಪಾರಿಭಾಷಿಕ ಪದಕ್ಕೆ ವ್ಯಕ್ತಿನಿಷ್ಠ ಮೌಲ್ಯಗಳ ವಿವರಣೆಯನ್ನು ಕೊಟ್ಟಿರುವುದು ಈ ಸಿದ್ಧಾಂತದ ವೈಶಿಷ್ಟ್ಯ. ಈ ಪೈಕಿ ಮೆಂಗರ್, ಜೆವನ್ಸ್ ಮತ್ತು ವಾಲ್ರಾಸ್ ಈ ಪಂಥದ ಆಚಾರ್ಯಪುರುಷರು. ಪರಸ್ಪರ ಸಂಪರ್ಕವಿಲ್ಲದಿದ್ದರೂ ಒಂದೇ ತೆರನ ತತ್ತ್ವವನ್ನು ಹೆಚ್ಚು ಕಡಿಮೆ ಏಕಕಾಲದಲ್ಲಿ ಅವರು ಪ್ರಕಟಿಸಿದ್ದು (ಮೆಂಗರ್ ಮತ್ತು ಜೆವನ್ಸ್ ಅವರ ಎರಡು ಮುಖ್ಯ ಗ್ರಂಥಗಳು 1871ರಲ್ಲಿಯೇ ಹೊರಬಿದ್ದುವು) ಆಶ್ಚರ್ಯಕರವಾಗಿದೆ. ದೃಢವಾಗಿ ನೆಲೆಯಾಗಿದ್ದ ಅಭಿಜಾತ (ಕ್ಲಾಸಿಕಲ್) ಪಂಥವನ್ನು ವಿರೋಧಿಸಿದ ಧಾರ್ಷ್ಟ್ಯಕ್ಕಾಗಿ ವಾಲ್ರಾಸ್ ಮತ್ತು ಮೆಂಗರ್ ಅವರ ಬೆಂಬಲಿಗರಿಗೆ ಮೊದಮೊದಲು ವಿಶ್ವವಿದ್ಯಾನಿಲಯಗಳಿಂದ ಪುರಸ್ಕಾರ ದೊರೆಯದಾಯಿತು. ಜರ್ಮನಿಯಲ್ಲಿ ಆಸ್ಟ್ರಿಯನ್ ಪಂಥಕ್ಕೆ ವಿರುದ್ಧವಾಗಿ ಮಾರ್ಕ್ಸ್‌ವಾದಿ ಅರ್ಥಸೂತ್ರಗಳನ್ನೇ ಎತ್ತಿ ಕಟ್ಟಿದರು. ನಿಧಾನವಾಗಿಯಾದರೂ ಬಹಳ ಯುಕ್ತಿಪೂರ್ವಕವಾಗಿ ಇಂಗ್ಲಿಷ್, ಅರ್ಥಶಾಸ್ತ್ರದ ಬಲವನ್ನು ಆಸ್ಟ್ರಿಯನ್ ವಿಚಾರಗಳಿಗೆ ಹೊಂದಿಸಿದ ಶ್ರೇಯಸ್ಸು ಆಲ್ಫ್ರೆಡ್ ಮಾರ್ಷಲ್‌ಗೆ ಸಲ್ಲುತ್ತದೆ. ಕಾಲಾನುಕ್ರಮದಲ್ಲಿ ಜರ್ಮನಿಯಲ್ಲೂ ಈ ಪಂಥದವರ ಮೂಲವಿಚಾರಗಳು ಪೂರ್ತಿಯಾಗಿ ಮೌಲ್ಯ ಸಿದ್ಧಾಂತದಲ್ಲೂ ಅಂಶತಃ ಧಾರಣೆಸಿದ್ಧಾಂತದಲ್ಲೂ ವಿಲೀನಗೊಂಡವು.

ಉಪಯುಕ್ತತೆಯೆಂಬ ಪಾರಿಭಾಷಿಕ ಪದವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ವಿಶ್ಲೇಷಿಸಿ ವ್ಯಕ್ತಿನಿಷ್ಠ ಅಂಶಗಳಿಂದಲೇ ಮೌಲ್ಯಗಳ ಉತ್ಪನ್ನವಾಗುವುವೆಂದು ಆಸ್ಟ್ರಿಯನ್ ಪಂಥದವರು ಸಾಧಿಸಿದರು. ಅಷ್ಟಲ್ಲದೆ ಉತ್ಪಾದನೆಯ ಅವಯವ ಅಥವಾ ಕಾರಕಗಳಿಗೂ ಇದೇ ಮೌಲ್ಯ ವಿಶ್ಲೇಷಣೆಯನ್ನು ಅನ್ವಯಿಸಿ ಬಂಡವಾಳ ಮತ್ತು ಬಡ್ಡಿಯನ್ನು ಕುರಿತ ಪ್ರತ್ಯೇಕ ತತ್ತ್ವವನ್ನು ನಿರ್ಮಿಸಿದರು. ಉಪಯುಕ್ತತೆಯೇ ಮೌಲ್ಯದ ಮೂಲಾಧಾರ. ತಂತಮ್ಮ ಅಭಿಲಾಷೆಗಳ ತೃಪ್ತಿಯನ್ನು ಬೇರೆ ಬೇರೆ ವ್ಯಕ್ತಿಗಳು ವಿಭಿನ್ನವಾಗಿ ಅಳೆಯುವುದರಿಂದ, ಅಥವಾ ಆರ್ಥಿಕ ಉದ್ದೇಶಗಳಿಂದ ಪ್ರೇರಿತವಾದ ವಿನಿಮಯ ಸಂದರ್ಭಗಳಲ್ಲಿ ವಿನಿಮಯಕ್ಕೆ ಹೊರಟ ಕುಳಗಳು ಸರಕುಗಳ ಪ್ರಮಾಣಕ್ಕೆ ಬೇರೆ ಬೇರೆ ಮೌಲ್ಯವನ್ನು ಹಚ್ಚುವುದರಿಂದ, ಮೌಲ್ಯಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ ಎಂದು ಮೆಂಗರ್ ಸೂಚಿಸಿದ. 'ಹೀಗೆ ತಯಾರಾದ ಸರಕುಗಳಿಗೆ–ಉತ್ಪಾದನೆಯ ವೆಚ್ಚಕ್ಕೆ ಮಿಗಿಲೂ ಅಲ್ಲ, ಕಡಿಮೆಯೂ ಅಲ್ಲ ಎಂಬಂತೆ–ಮೌಲ್ಯ ಏತರಿಂದ ಬಂತು, ಅಥವಾ ಇಂತಿಷ್ಟೇ ಮೌಲ್ಯವೆಂದು ಹೇಗೆ ನಿರ್ಣಯಿತವಾಯಿತು, ಎಂಬುದನ್ನು ವಿಚಾರಿಸುವುದಾದರೆ ಹೊರಟಲ್ಲಿಗೇ ಮುಟ್ಟಿದಂತಾಗುತ್ತದೆ. ಅಂದರೆ ಸರಕುಗಳ ಮೌಲ್ಯ ಅವುಗಳಲ್ಲಿ ಹುದುಗಿರುವ ಉಪಯುಕ್ತತೆಯಿಂದಲೇ ಸೃಷ್ಟಿಯಾಗುವುದು. ಅವುಗಳ ತಯಾರಿಕೆಗೆ ತಗುಲಿದ ವೆಚ್ಚಕ್ಕೂ ಅವುಗಳ ಮೌಲ್ಯಕ್ಕೂ ಯಾವ ಸಂಬಂಧವೂ ಇಲ್ಲ. ವೆಚ್ಚಮೌಲ್ಯ ಉಪಯೋಗ ಮೌಲ್ಯವನ್ನು ನಿರ್ಣಯಿಸಲು ಶಕ್ತವಾದದ್ದಲ್ಲ; ಉಪಯೋಗ ಮೌಲ್ಯ ಸ್ವಯಂಕೃತವಾಗಿ, ಸ್ವಯಂ ನಿರ್ಧರಿತವಾಗಿ ವೆಚ್ಚಮೌಲ್ಯವನ್ನು ನಿರ್ಣಯಿಸುತ್ತದೆ'–ಎಂದು ವೀಸರ್ ವ್ಯಕ್ತಿನಿಷ್ಠವಾದ ಉಪಯೋಗಮೌಲ್ಯದ ಮಹತ್ತ್ವವನ್ನು ಸಾರಿದ್ದಾನೆ. ಸರಕುಗಳಿಂದ ಒದಗುವ ಸುಖಲಾಭ ಅಥವಾ ಅವುಗಳ ಅಭಾವದಿಂದುಂಟಾಗುವ ದುಃಖಪ್ರಾಪ್ತಿ–ಇವುಗಳ ಪ್ರಮಾಣದಿಂದ ಸರಕುಗಳ ಮೌಲ್ಯ ನಿರ್ಣಯವಾಗುತ್ತದೆ. ಒಂದು ಪ್ರತ್ಯಕ್ಷ ಅಭಿಲಾಷೆ ಅಥವಾ ಇಚ್ಛೆಯ ಹೆಚ್ಚುವರಿ ಎಷ್ಟು ಪ್ರಾಮುಖ್ಯವಾದದ್ದೆನ್ನುವುದರ ಮೇಲೆ ಸರಕಿನ ಮೌಲ್ಯ ನಿರ್ಧಾರಗೊಳ್ಳುತ್ತದೆ. ಸರಕುಗಳು ಒದಗಿಸಬಲ್ಲ ಇಚ್ಛಾಪೂರ್ತಿಯಲ್ಲಿ (ಬಯಕೆಯ ಪೂರೈಕೆ) ಅತಿ ಕಡಿಮೆ ಮಹತ್ತ್ವದ ಇಚ್ಛಾಪೂರ್ತಿ ಯಾವುದೋ ಅದರ ಅಳತೆಗೆ ಮೌಲ್ಯ ಸರಿಹೊಂದುತ್ತದೆ ಎಂದು ಬೊಂ–ಬಾವರ್ಕ್ ಪ್ರತಿಪಾದಿಸಿದ್ದಾನೆ. ವೀಸರ್ ಮತ್ತು ಬೊಂ–ಬಾವರ್ಕ್ ಇಬ್ಬರೂ ಜೆವನ್ಸ್ ಸೃಷ್ಟಿಸಿದ 'ಅಂತಿಮ ಉಪಯುಕ್ತತೆಯ ಸ್ಥಾನದಲ್ಲಿ ಅದಕ್ಕಿಂತ ಶ್ರೇಷ್ಠವೂ ಕಾಲಕ್ರಮೇಣ ಸರ್ವ ಪ್ರಚಲಿತವೂ ಆದ ಪರಿಸರದ ಅಥವಾ ಅಂಚಿನ ಉಪಯುಕ್ತತೆ' (ಮಾರ್ಜಿನಲ್ ಯುಟಿಲಿಟಿ) ತತ್ತ್ವವನ್ನು ಆಸ್ಟ್ರಿಯನ್ ಪಂಥದಲ್ಲಿ ಸೇರಿಸಿಕೊಂಡದ್ದನ್ನು ಮರೆಯಬಾರದು. ಮಾರ್ಷಲ್‌ನ ಬೇಡಿಕೆಪೂರೈಕೆ ಪ್ರತಿಪಾದನೆಯಲ್ಲಿ ಸರ್ವವ್ಯಾಪಿಯಾಗಿ ತದನಂತರ, ಅಣು ಅರ್ಥಶಾಸ್ತ್ರದ (ಮೈಕ್ರೊ ಎಕನಾಮಿಕ್ಸ್) ಊರುಗಂಬವಾಗಿ ನೆಲೆನಿಂತ ಪರಿಸರದ ಉಪಯುಕ್ತತೆ, ಅರ್ಥಶಾಸ್ತ್ರ ಚಿಂತನೆಯಲ್ಲಿ ಕೇವಲ ಒಂದು ನೂತನ ಪರಿಭಾಷೆಯನ್ನು ಮಾತ್ರವಲ್ಲದೆ, ನೂತನ ವಿಚಾರಸೂತ್ರವನ್ನೂ ಪ್ರೇರಿಸಿತೆಂದು ಹೇಳಬಹುದು.

ಉಪಯುಕ್ತತೆಗೆ ಯಾವ ನೈತಿಕ ಲೇಪವೂ ಇಲ್ಲ. ಅಂಬಲಿ, ಹರಳೋಲೆ, ಹೆಂಡ–ಇವು ಮೂರೂ ಉಪಯುಕ್ತ ವಸ್ತುಗಳೇ. ವಿನಿಮಯ ಸಂದರ್ಭಗಳಲ್ಲಿ ಮುಖ್ಯವಾದದ್ದು ಅಂತಿಮ ಉಪಯುಕ್ತತೆಯೇ ಹೊರತು ಒಟ್ಟು ಉಪಯುಕ್ತತೆ ಅಲ್ಲ. ನೂರಾರು ಪದಾರ್ಥಗಳು, ಸಾವಿರಾರು ಜನರು ಇರುವಲ್ಲಿ ಒಂದು ಕಾಲಕ್ಕೆ ಒಂದು ಮಾರುಕಟ್ಟೆಯಲ್ಲಿ ಒಂದೇ ಧಾರಣೆ ಹೇಗೆ ನಿಲ್ಲುತ್ತದೆಂಬ ಪ್ರಶ್ನೆಯನ್ನು ಉಪಯುಕ್ತತೆಯ ಸಿದ್ಧಾಂತಿಗಳು ಬಗೆಹರಿಸಿದ್ದಾರೆ. ನೂರು ಲೋಟ ಕಾಫಿಯಲ್ಲಿ ವ್ಯಕ್ತಿಗೆ ತಾನು ಸ್ವೀಕರಿಸುವ ಒಂದನೆಯದು ನೂರನೆಯದರಂತೆಯೇ ಇರುವುದರಿಂದ, ಎಲ್ಲ ನೂರು ಲೋಟಗಳ ದರವೂ ಸಮಾನವಾಗಿರುತ್ತದೆ. ಸರಕಿನ ಮೌಲ್ಯವು ನೀಡುವ ಅತಿ ಕಡಿಮೆ ಸುಖಲಾಭದ ಸಂದರ್ಭದಲ್ಲಿ ನಿರ್ಣಯಿತವಾಗುವುದೆಂಬ ಈ ಸಾಮಾನ್ಯ ತತ್ತ್ವವನ್ನು ಉತ್ಪಾದನೆ, ಅನುಭೋಗ ಮತ್ತು ವಿತರಣೆಯ ರಂಗಗಳಿಗೂ ಅನ್ವಯಿಸಬಹುದು. ಸ್ವತಂತ್ರ ಪೈಪೋಟಿಯ ಸನ್ನಿವೇಶದಲ್ಲಿ ಒಂದು ಸರಕು ಇನ್ನೊಂದು ಸರಕಿಗೆ ವಿನಿಮಯಿಸಲ್ಪಡುವ ಸಾಧ್ಯತೆ ಇರುವುದರಿಂದ ಸರಕಿನ ಮೌಲ್ಯ ಉತ್ಪಾದನೆಯ ವೆಚ್ಚಕ್ಕೆ ಸಮನಾಗಿರುತ್ತದೆ. ಸರಕುಗಳ ಅನುಭೋಗದಲ್ಲಂತೂ ಗ್ರಾಹಕ ತಾನು ಕೊಳ್ಳುವ ಸರಕುಗಳಲ್ಲಿ ಸದಾ ವ್ಯತ್ಯಾಸ, ಹೆಚ್ಚು ಕಡಿಮೆ ಮಾಡುತ್ತಲೇ ಇರುತ್ತಾನೆ. ವರಮಾನದ ವಿತರಣೆಯಲ್ಲಿ ಸಾಧ್ಯವಾದಷ್ಟು ಹೆಚ್ಚಿನ ತೃಪ್ತಿಯನ್ನು ಪಡೆಯುವ ದೃಷ್ಟಿಯಿಂದ ಬೇರೆ ಬೇರೆ ಸರಕುಗಳಿಗೆ ಆತ ಬೇರೆ ಬೇರೆ ಮಹತ್ತ್ವ ನೀಡಿರುತ್ತಾನೆ. ಸಮತೋಲಸ್ಥಿತಿಯನ್ನು ಮುಟ್ಟಿದಾಗ ಈಡೇರಿಸಿದ ಎಲ್ಲ ಬಯಕೆಗಳಿಗೂ ಆತ ಸಮಾನ ಮೌಲ್ಯವನ್ನಿಟ್ಟಿದ್ದಾನೆಂದು, ಕೊನೆಯಲ್ಲಿ ಈಡೇರಿಸಿದ ಇಚ್ಛೆಗಳು ಒಂದಕ್ಕೊಂದು ಸಮನಾಗಿರಬೇಕು ಎನ್ನುವಾಗ ಅಂತಿಮ ಉಪಯುಕ್ತತೆಯ ತತ್ತ್ವವನ್ನೇ ನಾವು ಕಾಣುತ್ತೇವೆ. ಅಮೆರಿಕದ ಅರ್ಥಶಾಸ್ತ್ರಜ್ಞ ಜೆ.ಬಿ. ಕ್ಲಾರ್ಕ್ ವಿತರಣೆಯ ರಂಗಕ್ಕೆ ಸೇರಿದ ಬಡ್ಡಿ, ಕೂಲಿ, ಗೇಣಿಗಳಿಗೂ ಈ ತತ್ತ್ವವನ್ನು ಅಳವಡಿಸಿದ್ದಾನೆ. ಕೊನೆಯ ಅಥವಾ ಪರಿಸರದ ಕೂಲಿಗಾರ ಎಷ್ಟು ಮೌಲ್ಯವನ್ನು ಉತ್ಪಾದಿಸುವನೋ ಅಷ್ಟು ಕೂಲಿ ಎಲ್ಲರಿಗೂ ಲಭ್ಯವಾಗುವುದು. ಮಾಲೀಕ ಕೂಲಿಯ ದರವನ್ನು ನಿರ್ಣಯಿಸುವುದು ಇಂಥ ಕನಿಷ್ಠ ಉಪಯೋಗಿ ಕೂಲಿಯವನ ಕರ್ತೃತ್ವಶಕ್ತಿಯಿಂದ, ಇಂಥವನಿಗಿಂತ ಹೆಚ್ಚು ಉತ್ಪಾದಿಸಬಲ್ಲ ಕೂಲಿಗಳಿಗೂ ಇವನಿಗೆ ದೊರೆಯುವಷ್ಟೇ ಕೂಲಿ ಸಿಗುತ್ತದೆ.

ಅಭಿಜಾತ ಪಂಥದ ಕೆಲವು ಕೊರತೆಗಳನ್ನು ತುಂಬಿಸಿಕೊಟ್ಟು ಮೌಲ್ಯನಿರ್ಣಯಕ್ಕೆ ಒಂದು ಏಕೀಕೃತ ಮತ್ತು ಅಂತಿಮ ಕಾರಣವನ್ನು ವ್ಯಕ್ತಿನಿಷ್ಠ ತಳಹದಿಯಲ್ಲಿ ಶೋಧಿಸುವ ಸಾಹಸದಲ್ಲಿ ಆಸ್ಟ್ರಿಯನ್ ಪಂಥದವರು ಸಫಲರಾದರು. ಅಭಿಜಾತ ಮಾರ್ಗದವರಿಗೆ ಮೌಲ್ಯ ಶ್ರಮದ ಪ್ರಮಾಣವನ್ನು ಅವಲಂಬಿಸಿದ್ದರೆ ಆಸ್ಟ್ರಿಯನ್ ಪಂಥದವರಿಗೆ ಅದು ಉಪಯಕ್ತತೆಗೆ ಹೊಂದಿಕೊಂಡಿದೆ. ಅಭಿಜಾತ ಪಂಥದವರು ಒಮ್ಮೆ ಉಪಯುಕ್ತತೆಗೂ ಮತ್ತೊಮ್ಮೆ ಶ್ರಮ ಪ್ರಮಾಣಕ್ಕೂ ಶರಣು ಹೋಗುವುದನ್ನು ನೋಡಿದರೆ ಅವರಲ್ಲಿ ಏನೋ ದ್ವೈತವಿರುವಂತೆ ಸಂಶಯ ಬರುತ್ತದೆ. ಉದಾಹರಣೆಗೆ, ಅಭಿಜಾತ ಪಂಥದವರ ಗುರುವಾದ ರಿಕಾರ್ಡೊ ಮಗುದೊಮ್ಮೆ ತಯಾರಿಸಲಾಗದ (ಕಲಾವಿದರ ಚಿತ್ರ, ಮೂರ್ತಿ ಇತ್ಯಾದಿ) ಸರಕುಗಳಿಗೆ ವಿರಳತ್ವದಿಂದ ಮೌಲ್ಯವೆಂದು ಒಂದು ನಿಯಮವನ್ನೂ ಮತ್ತೆ ಮತ್ತೆ ತಯಾರಿಸಲಾಗುವ ಆರ್ಥಿಕ ಸರಕುಗಳಿಗೆ ಉತ್ಪಾದನೆಯ ವೆಚ್ಚವೇ ಮೌಲ್ಯಕಾರಣವೆಂದು ಬೇರೊಂದು ನಿಯಮವನ್ನೂ ಸ್ಥಾಪಿಸಿದ್ದಾನೆ. ಆದರೆ ಆಸ್ಟ್ರಿಯನ್ ಪಂಥದವರು ವೆಚ್ಚವನ್ನು ಉಪಯುಕ್ತತೆಯಲ್ಲಿಯೇ ಸಮಾವಿಷ್ಟಗೊಳಿಸಿ ವೈಜ್ಞಾನಿಕವಾದ ಅದ್ವೈತ ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ. ಅಲ್ಲದೆ ರಿಕಾರ್ಡೊನ ಮೌಲ್ಯಸಿದ್ಧಾಂತ ಉತ್ಪಾದಿತ ಸರಕುಗಳಿಗೆ ಮಾತ್ರ ಸೀಮಿತವಾದದ್ದು; ಆಸ್ಟ್ರಿಯನ್ನರ ಪರಿಸರದ ಉಪಯುಕ್ತತೆಯ ಸೂತ್ರ ಉತ್ಪಾದನೆಯ ಅವಯವಗಳಾದ ಭೂಮಿ, ಬಂಡವಾಳ, ಶ್ರಮಗಳಿಗೂ ತರ್ಕಬದ್ಧವಾಗಿ ಅನ್ವಯವಾಗುತ್ತದೆ.

ಮನುಷ್ಯನ ಆರ್ಥಿಕ ಚಟುವಟಿಕೆಗಳನ್ನು ವ್ಯಕ್ತಿನಿಷ್ಠ ದೃಷ್ಟಿಕೋನದಿಂದ ಅಳೆಯುವ ಆಸ್ಟ್ರಿಯನ್ ಪಂಥದವರು ಸ್ವಹಿತವನ್ನು ತಮ್ಮ ವಾದದ ಕೇಂದ್ರಸ್ಥಾನದಲ್ಲಿರಿಸಿ ಚಾರ್ವಾಕತನದ ನಿಂದೆಗೆ ತಮ್ಮನ್ನು ಗುರಿಪಡಿಸಿಕೊಂಡಿದ್ದಾರೆ. ಸುಖೈಕಸಾಧಕರೆಂಬ ಅಪವಾದವನ್ನು ಅವರು ಹೊರಬೇಕಾಗಿ ಬಂದಿದೆ. ಮನುಷ್ಯನ ಆರ್ಥಿಕ ಇಚ್ಛೆಗಳಿಗೆ ಸುಖಲಾಭವೇ ಪರಮೋದ್ದೇಶವೆಂದು ಸಾರುವ ತತ್ತ್ವದಿಂದಾಗಿ ಅವರು ಇಂಥ ಟೀಕೆಗಳಿಗೆ ಪಾತ್ರರಾಗಬೇಕಾಗಿದೆ. ಅವರ ಅತಿ ಪರಿಷ್ಕೃತ ಪರಿಸರದ ಉಪಯುಕ್ತತೆಯ ಸೂತ್ರವಾದರೂ ವಿಮರ್ಶೆಗೆ ಹೊರತಾಗಿಲ್ಲ. ಬಯಕೆಯಿಂದ ಸುಖಲಾಭವೆ? ಅಥವಾ ಸುಖದಾಸೆಯಿಂದ ಬಯಕೆಯೇ? ವೈಯಕ್ತಿಕ ಮೌಲ್ಯಾಂಕ ಕ್ರಿಯೆಯಲ್ಲಿ ವ್ಯಕ್ತಿನಿಷ್ಠವಾದದ್ದಕ್ಕೆ ಮಾತ್ರ ಪ್ರಾಧಾನ್ಯ ಕೊಡುವುದು ಹೇಗೆ? ವ್ಯಕ್ತಿಯ ಸಂಸ್ಕಾರ, ಅವನ ಸಮಾಜದ ರೂಢಿ, ಸಂಪ್ರದಾಯಗಳಿಗೆ ಯಾವ ಸ್ಥಾನವೂ ಇಲ್ಲವೇ? ವ್ಯಕ್ತಿಯ ಅಂತರಂಗನಿಷ್ಠ ಸ್ಪಂದನಗಳಿಗೂ ಹೊರಗಿನ ಮಾರುಕಟ್ಟೆಯ ಧಾರಣೆವಾಸಿ ಮತ್ತು ಬೆಲೆಗಳ ಸ್ಥಾಪನೆಗೂ ನಡುವೆ ಇರುವ ಅಂತರವನ್ನು ಕೂಡಿಸುವುದು ಹೇಗೆ? ಪರಿಸರವನ್ನು ಬಿಟ್ಟು ಸನ್ನಿವೇಶದಿಂದ ಪ್ರತ್ಯೇಕಿಸಲು ಸಾಧ್ಯವೇ? ಅದು ಒಟ್ಟು ಸನ್ನಿವೇಶದ ಅಂಕಸೂಚಿಯಲ್ಲವೇ? ಅಪರಿಪೂರ್ಣ ಪೈಪೋಟಿ, ಹಣ ಮುಂತಾದ ಆರ್ಥಿಕ ಸನ್ನಿವೇಶಗಳ ಗೋಜಿಗೆ ಇವರು ಹೋಗಿಲ್ಲ ಎಂಬಂಥ ಅನೇಕ ಟೀಕೆಗಳಿಗೆ ಆಸ್ಟ್ರಿಯನ್ನರು ಒಳಗಾಗಿದ್ದಾರೆ.

ಅಭಿಜಾತ ಪಂಥದವರು ಅಸಡ್ಡೆಯಿಂದ ಕಡೆಗಣಿಸಿದ ಅನೇಕ ಮಹತ್ತ್ವದ ವಿಷಯಗಳತ್ತ ಅರ್ಥಶಾಸ್ತ್ರದ ಒಲವನ್ನು ಹರಿಯಿಸಿದ ಶ್ರೇಯಸ್ಸು ಆಸ್ಟ್ರಿಯನ್ ಪಂಥದವರಿಗೆ ಸಲ್ಲುತ್ತದೆ. ಪರಿಸರದ ಉಪಯುಕ್ತತೆಯ ತತ್ತ್ವದ ದೆಸೆಯಿಂದ ಶುದ್ಧ ಅರ್ಥಶಾಸ್ತ್ರ ಉದಯವಾಯಿತು. ಸರಾಸರಿ ಅಂದಾಜು ಇತ್ಯಾದಿಗಳಿಂದ ಬಾಧಿತವಾಗಿ ಅರ್ಥವಿಜ್ಞಾನ ಒಂದು ನಿಶ್ಚಿತಜ್ಞಾನವೆಂಬ ಭ್ರಮೆಯನ್ನು ಹುಟ್ಟಿಸುತ್ತಿದ್ದ ಕ್ಲಾಸಿಕಲ್ ಪಂಥದ ಪ್ರಭಾವ ಕುಗ್ಗಿತು. ಅಲ್ಲದೆ ಶ್ರಮವೊಂದೇ ಮೌಲ್ಯ ಕಾರಣವೆಂಬ ಅಭಿಜಾತ ಪಂಥದ ಭ್ರಮೆಯನ್ನು ದೂರಮಾಡಿದ ಶ್ರೇಯಸ್ಸೂ ಆಸ್ಟ್ರಿಯನ್ನರಿಗೆ ಸಲ್ಲಬೇಕು. ಶ್ರಮೈಕಸಾಧ್ಯ ಮೌಲ್ಯವೆಂಬ ವಸ್ತುನಿಷ್ಠ ದೃಷ್ಟಿಕೋನದ ಸ್ಥಾನದಲ್ಲಿ ಆಸ್ಟ್ರಿಯನ್ ಪಂಥದವರು ನಿಲ್ಲಿಸಿದ ವ್ಯಕ್ತಿನಿಷ್ಠ ಮೌಲ್ಯ ಸರ್ವಗ್ರಾಹಿಯಾದ ಒಂದು

ತತ್ತ್ವವಾಯಿತು. ಅಲ್ಪಾವಧಿ, ದೀರ್ಘಾವಧಿ ಎಂಬ ಕಾಲಮಾನಭೇದವಿಲ್ಲದೆ, ಒಮ್ಮೆ ಮಾತ್ರ ತಯಾರಿಸಲಾಗುವ ವಿರಳ ವಸ್ತು, ಪದೇ ಪದೇ ತಯಾರಿಸಲಾಗುವ ವಸ್ತು ಎಂಬ ಭೇದವೂ ಇಲ್ಲದೆ ಸರ್ವ ಸನ್ನಿವೇಶಗಳಿಗೂ ಏಕರೀತಿಯಲ್ಲಿ ಅನ್ವಯಿಸಬಹುದಾದ ಈ ಮುಖ್ಯತತ್ತ್ವ ಮನುಷ್ಯನ ಇಚ್ಛೆಗಳ ತೃಪ್ತಿಯನ್ನೂ ಆ ಇಚ್ಛೆಗಳಲ್ಲಿ ನಡೆಯುವ ಬದಲಾವಣೆಗಳನ್ನೂ ನಿರೂಪಿಸಿದ್ದಲ್ಲದೆ, ಅರ್ಥಶಾಸ್ತ್ರಕ್ಕೆ ವಿಜ್ಞಾನದ ಮೆರುಗನ್ನು ದಯಪಾಲಿಸಿತು ಎನ್ನಲೂಬಹುದು.

ಆಸ್ಟ್ರಿಯನ್ ಪಂಥದ ತ್ರಿಮೂರ್ತಿಗಳೂ ಅವರ ಸಮಕಾಲೀನರೂ ಅಲ್ಲದೆ ಈಚಿನ ದಶಕಗಳಲ್ಲೂ ಹಲವರು ಅವರ ಮಾರ್ಗದಲ್ಲಿಯೇ ನಡೆದು ಆ ಪಂಥದ ಪೋಷಣೆ ಮಾಡಿದ್ದಾರೆ. ಲಡ್ವಿಗ್ ವಾನ್ ಮೀಸಸ್ ಹಣದ ಮೌಲ್ಯಮಾಪನಕ್ಕೂ ವ್ಯಾಪಾರಚಕ್ರದ ವಿಶ್ಲೇಷಣೆಗೂ ಪರಿಸರದ ಉಪಯುಕ್ತತೆಯನ್ನೂ ಬಳಸಿಕೊಂಡಿದ್ದಾನೆ. ಫ್ರೆಡರಿಕ್ ವಾನ್ ಹಯೆಕ್ ತನ್ನ ವಿಶಿಷ್ಟ ವ್ಯಾಪಾರಚಕ್ರ, ಬಂಡವಾಳ ಮತ್ತು ಬಡ್ಡಿಯ ಸಿದ್ಧಾಂತಗಳನ್ನು ಈ ಹಾದಿಯಲ್ಲೇ ಕಟ್ಟಿದ್ದಾನೆ. ಇಂಗ್ಲೆಂಡಿನಲ್ಲಿ ವಿಕ್‍ಸ್ಟೀಡ್ ಮತ್ತು ಎಡ್ಜ್‍ವರ್ತ್ ಹೇಗೋ ಅಮೆರಿಕದ ಜೆ.ಬಿ.ಕ್ಲಾರ್ಕ್ ಗಣಿತಶಾಸ್ತ್ರದ ರೀತ್ಯಾ ಪರಿಸರದ ಉಪಯುಕ್ತತೆಯನ್ನು ಸಾಧಾರಣವಾಗಿ ಸಮರ್ಥಿಸಿರುವುದಲ್ಲದೆ ಅದನ್ನು ಮುಂದಿನ ಮಜಲಿಗೆ ಒಯ್ದು ಮುಟ್ಟಿಸಿದ್ದಾನೆ.

(ಕೆ.ಎಸ್.ಎಚ್.)

**ಆಸ್ಟ್ರೇಲಿಯ:** ಸಂಪೂರ್ಣವಾಗಿ ದಕ್ಷಿಣಾರ್ಧಗೋಳದಲ್ಲಿರುವ ಖಂಡ. ಸುತ್ತಲೂ ಸಾಗರಜಲದಿಂದ ಆವೃತವಾಗಿದ್ದು ಇಡೀ ಖಂಡವೇ ಒಂದು ಬೃಹತ್‍ದ್ವೀಪದಂತಿದೆ. ಇದರ ಸ್ಥಳ ನಿರ್ದೇಶ ಹೀಗಿದೆ : 113°9 0–153°39 0 , ಪೂ.ರೇ; 10°41 0–43°39 0, ದ.ಅ. ವಿಸ್ತೀರ್ಣ 76,86,850 ಚ.ಕಿಮೀ. ಜನಸಂಖ್ಯೆ 19,855,288 (2006). ರಾಜಧಾನಿ ಕ್ಯಾನ್ಬೆರ 353,149 (2001). ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರಗಳ ನಡುವೆ ಇದೆ. ಅಂದರೆ ಇದರ ವಿಸ್ತಾರ ಅಮೆರಿಕ ಸಂಯುಕ್ತ ಸಂಸ್ಥಾನದಷ್ಟಾಗುತ್ತದೆ. ಸಮುದ್ರತೀರ 19,536 ಕಿಮೀ ಉದ್ದವಾಗಿದೆ. ನಿಸ್ಸಂದೇಹವಾಗಿ ಇದೊಂದು ಅಡಕವಾದ ಭೂಭಾಗ. ಇದರ ಈ ವೈಶಿಷ್ಟ್ಯ, ಮೇಲ್ಮೈಲಕ್ಷಣ ಮತ್ತು ಅಕ್ಷಾಂಶರೀತ್ಯಾ ಇದರ ಸ್ಥಾನ, ಇವೆಲ್ಲ ಇದರ ವಾಯುಗುಣವನ್ನು ನಿಯಂತ್ರಿಸುತ್ತವೆ. ಈ ಖಂಡದ ಭೌಗೋಳಿಕ ಲಕ್ಷಣ



ನಿರ್ಣಯವಾಗಿರುವುದು ಈ ಅಂಶಗಳಿಂದ. ಆಸ್ಟ್ರೇಲಿಯ ಎಂಬ ಹೆಸರು 'ಆಸ್ಟ್ರಲ' ಎಂಬ ಲ್ಯಾಟಿನ್ ಶಬ್ದದಿಂದ ಬಂದದ್ದು.

ಆಸ್ಟ್ರೇಲಿಯದ ಮುಖ್ಯ ರಾಜಕೀಯ ವಿಭಾಗಗಳು : 1 ಪಶ್ಚಿಮ ಆಸ್ಟ್ರೇಲಿಯ, 2. ಉತ್ತರ ಆಸ್ಟ್ರೇಲಿಯ, 3. ದಕ್ಷಿಣ ಆಸ್ಟ್ರೇಲಿಯ, 4. ಕ್ವೀನ್ಸ್‌ಲೆಂಡ್, 5. ನ್ಯೂ ಸೌತ್ ವೇಲ್ಸ್, 6. ವಿಕ್ಟೋರಿಯ, 7. ಟಾಸ್ಮೇನಿಯ ದ್ವೀಪ. ಈ ಖಂಡದ ಹೊರಗಡೆ ಇರುವ ಆಸ್ಟ್ರೇಲಿಯದ ವಿಭಾಗಗಳು ಪಾಪುಅ, ಪೆಸಿಫಿಕ್ ಮಹಾಸಾಗರದಲ್ಲಿರುವ ನಾರ್‌ಫೋಕ್ ದ್ವೀಪ, ಹಿಂದೂಮಹಾಸಾಗರದ 27 ಕೋಕೋಸ್ (ಕೀಲಿಂಗ್) ದ್ವೀಪಗಳು ಮತ್ತು ಕ್ರಿಸ್ಮಸ್ ದ್ವೀಪ ಮತ್ತು ಆಸ್ಟ್ರೇಲಿಯದ ಅಂಟಾರ್ಕ್‌ಟಿಕ್ ಭಾಗ.

ಖಂಡದಲ್ಲಿ ಮೂರು ಪ್ರಾಕೃತಿಕ ಲಕ್ಷಣಗಳು ಕಾಣುತ್ತವೆ : 1. ಪೂರ್ವದ ಎತ್ತರ ಪ್ರದೇಶಗಳು, 2. ಮಧ್ಯದ ತಗ್ಗು ಬಯಲುಗಳು, 3. ಪಶ್ಚಿಮದ ಪೀಠಭೂಮಿ. ಪೂರ್ವದ ಎತ್ತರ ಪ್ರದೇಶಗಳು ಖಂಡದ ಪೂರ್ವದಲ್ಲಿ ಉತ್ತರದ ಯಾರ್ಕ್ ಭೂಶಿರದಿಂದ ದಕ್ಷಿಣದಲ್ಲಿನ ಮರೆ ನದಿಯ ಉಗಮಸ್ಥಾನದವರೆಗೂ ಹರಡಿವೆ. ಪರ್ವತ ಭಾಗವೇ ಗ್ರೇಟ್ ಡಿವೈಡಿಂಗ್ ರೇಂಜ್ ಎಂಬುದು. ಇದರಲ್ಲಿ ಕೊಸಿಯುಸ್ಕೊ (2,234ಮೀ) ಅತ್ಯಂತ ಎತ್ತರದ ಶಿಖರ. ಭೂವಿಜ್ಞಾನದ ದೃಷ್ಟಿಯಿಂದ ಈ ಪರ್ವತಗಳು ಪ್ರಿ–ಕೇಂಬ್ರಿಯನ್‌ನಿಂದ ಕಾರ್ಬೋನಿಫೆರಸ್ ವರೆಗಿನ ಕಾಲದ ವಿವಿಧ ಶಿಲೆಗಳಿಂದ ಉಂಟಾಗಿವೆ; ಅವುಗಳ ಪಕ್ಕದಲ್ಲಿ ಈಚಿನ ಭೂನಿಕ್ಷೇಪಗಳಿವೆ. ಕಾರ್ಬೋನಿಫೆರಸ್ ಕಾಲದಲ್ಲಿ ಟಾಸ್ಮನ್ ಭೂಸ್ತರಾವನತಗಳು ಅಲ್ಪ ಪ್ರಮಾಣದಲ್ಲಿ ಪಕ್ಷೀಕೃತ ರೂಪವನ್ನು ಹೊಂದಿದುವು. ಅನಂತರ ನದಿಗಳಿಂದಾದ ಸವೆತದಿಂದ ಇಕ್ಕಟ್ಟಾದ ತೀರಪ್ರದೇಶ ಪರ್ವತಗಳ ತುಂಡುಭಾಗಗಳು ಸಮಮಟ್ಟವಾದುವು. ಮರೆ–ಡಾರ್ಲಿಂಗ್ ನದಿಗಳ ಉಪನದಿಗಳ ಉಗಮ ಗ್ರೇಟ್ ಡಿವೈಡಿಂಗ್ ರೇಂಜ್‌ನಲ್ಲಿ ಅವು ಪ್ರಧಾನ ನದಿಯನ್ನು ಸಮಕೋನದಲ್ಲಿ ಸೇರಿಕೊಳ್ಳುತ್ತವೆ. ಮರೆ ನದಿ ಮೆಲ್ಬರ್ನ್ ತಗ್ಗು ಬಯಲಿನ ಮುಖಾಂತರ ಹರಿದು, ಟಾಸ್ಮೇನಿಯ ಜಲಸಂಧಿಯನ್ನು ತಲಪುತ್ತದೆ. ಪೂರ್ವದ ತೀರಪ್ರದೇಶದ ಆಚೆ ದಕ್ಷಿಣೋತ್ತರವಾಗಿ ಹಬ್ಬಿದ ಹವಳದ್ವೀಪ ಸಮುದಾಯಗಳಿವೆ. ಇವನ್ನು ದಿ ಗ್ರೇಟ್ ಬ್ಯಾರಿಯರ್ ರೀಫ್ ಎಂದು ಕರೆಯುತ್ತಾರೆ. ಇವು ಸಮುದ್ರತೀರಕ್ಕೆ 16 ಕಿಮೀಗಳಿಂದ 241 ಕಿಮೀಗಳ ಸಮಾನಾಂತರದಲ್ಲಿ 2.011 ಕಿಮೀ ಉದ್ದ ಹರಡಿವೆ.

ಮಧ್ಯದ ತಗ್ಗು ಬಯಲುಗಳು ಉತ್ತರದ ಕಾರ್ಪೆಂಟೇರಿಯ ಕೊಲ್ಲಿಯಿಂದ ದಕ್ಷಿಣದ ತೀರದವರೆಗೂ ಹರಡಿವೆ. ಇವು ಸಾಮಾನ್ಯವಾಗಿ ತಗ್ಗಾಗಿವೆ. ಉತ್ತರದ ಬರ್ಕ್‌ಲಿ ಡೌನ್ಸ್ (610ಮೀ), ಗ್ರೇ ಮತ್ತು ಫ್ಲ್ಯಾಂಡರ್ ಬೆಟ್ಟ ಸಾಲುಗಳ ವಿನಾ ಉಳಿದ ತಗ್ಗು ಬಯಲು ಪರ್ಮಿಯನ್ ಶಿಲಾಸ್ತರಗಳಿಂದ ಕೂಡಿದೆ. ಈ ರೀತಿಯ ವೈವಿಧ್ಯಪೂರ್ಣ ಸಂಚಯನಗಳು ಗ್ರೇಟ್ ಡಿವೈಡಿಂಗ್ ರೇಂಜ್‌ನ ಪೂರ್ವ ಪಾರ್ಶ್ವದಲ್ಲಿರುವ ಮರಳುಶಿಲೆ, ಜೇಡಿಪದರಶಿಲೆ ಮತ್ತು ಕಲ್ಲಿದ್ದಲಿನ ಸ್ತರಗಳನ್ನು ನಿರ್ಮಿಸಿವೆ. ಭೂರಚನಾಶಾಸ್ತ್ರ ದೃಷ್ಟಿಯಿಂದ ಇಲ್ಲಿನ ಭೂರಚನೆ ಏಕ ರೀತಿಯ ತರಂಗಿತ ಭೂಲಕ್ಷಣಗಳನ್ನು ಹೊಂದಿದೆ.

ಇಲ್ಲಿನ ಜಲವಹನ ರೀತಿ ಕೇಂದ್ರಾಭಿಗಾಮಿ. ಐರ್ ಸರೋವರದ ಕಡೆಗೆ ಈ ಬಯಲುಗಳ ಎಲ್ಲ ನದಿಗಳೂ ಹರಿಯುತ್ತವೆ. ಗೇರ್ಡ್‌ನರ್ ಸರೋವರ ದಕ್ಷಿಣದಲ್ಲಿದ್ದು ಮರುಭೂಮಿ ಪ್ರಧಾನ ಪ್ರದೇಶದಲ್ಲಿ ಜೌಗು ಭಾಗಗಳನ್ನು ನಿರ್ಮಿಸಿದೆ.

ಈ ಭಾಗಗಳನ್ನು 1. ಮರೆ–ಡಾರ್ಲಿಂಗ್ ತಗ್ಗುಬಯಲುಗಳು; 2. ಐರ್ ಸರೋವರದ ಬಯಲು; 3. ಕಾರ್ಪೆಂಟೇರಿಯ ತಗ್ಗುಬಯಲುಗಳು ಎಂದು ಮೂರು ಭಾಗ ಮಾಡಬಹುದು.

ಮಧ್ಯ ಆಸ್ಟ್ರೇಲಿಯದಲ್ಲಿನ ಕಾರ್ಪೆಂಟೇರಿಯ ಕೊಲ್ಲಿಯಿಂದ ಆನ್‌ಸ್ಲೊ, ಪರ್ತ್ ಮತ್ತು ಆಲ್ಬೆನಿಗಳವರೆಗೆ ಹರಡಿರುವ ತಗ್ಗಿನ, ಇಕ್ಕಟ್ಟಾದ ತೀರಪ್ರದೇಶ ಪೂರ್ವಕ್ಕೆ ಪಶ್ಚಿಮ ಪೀಠಭೂಮಿ ಗ್ರೇಟ್ ಗಿಬ್ಸನ್ ಮತ್ತು ವಿಕ್ಟೋರಿಯ ಮರುಭೂಮಿಗಳನ್ನು ಹೊಂದಿದೆ. ಈ ಭೂಮಿ ಭಾರತ ಮತ್ತು ಆಫ್ರಿಕಗಳ ಪೀಠಭೂಮಿಗಳಷ್ಟೇ ಹಳೆಯದು. ಇದು ಮತ್ತು ಆಫ್ರಿಕದಲ್ಲಿನ ಸಹರಾ ಮರುಭೂಮಿ ಅವಳಿಜವಳಿಗಳಂತಿವೆ. ಕಾರ್ಬೋನಿಫೆರಸ್ ಯುಗಕ್ಕೆ ಹಿಂದೆ, ಆಸ್ಟ್ರೇಲಿಯದ ಭೂಭಾಗ ದಕ್ಷಿಣದ ಅಂಟಾರ್ಕ್‌ಟಿಕದ ಭೂಭಾಗದೊಂದಿಗೂ ವಾಯವ್ಯದಲ್ಲಿ ಭಾರತದ ದಖನ್ ಪೀಠಭೂಮಿಯೊಂದಿಗೂ ಭೂಸಂಪರ್ಕ ಹೊಂದಿತ್ತು. ಇಂಗಾಲಯುಗದ ಅಂತ್ಯಕಾಲದಲ್ಲಿ ಈ ಅಖಂಡಭೂಭಾಗ ಒಡೆದು ಬೇರ್ಪಟ್ಟಿತು. ಕೆಲವು ಭಾಗಗಳು ಸಮುದ್ರದಲ್ಲಿ ಮುಳುಗಿ ಈಗಿರುವಂತೆ ದ್ವೀಪಗಳು ನಿರ್ಮಿತವಾದುವು. ಮೊತ್ತಮೊದಲು ಆಸ್ಟ್ರೇಲಿಯ ಪ್ರತ್ಯೇಕ ದ್ವೀಪವಾಯಿತು. ಈ ಪ್ರತ್ಯೇಕತೆಯ ಪರಿಣಾಮವಾಗಿ ಆಸ್ಟ್ರೇಲಿಯದ ಪ್ರಾಣಿ ಮತ್ತು ಸಸ್ಯವರ್ಗಗಳು ತಮ್ಮವೇ ಆದ ವೈಶಿಷ್ಟ್ಯವನ್ನು ಹೊಂದಿವೆ. ತೃತೀಯ ಭೂಕಾಲಯುಗದಲ್ಲಿ ಆದ ಬದಲಾವಣೆಗಳನ್ನು ಯೂಕ್ಲ ಜಲಾನಯನ ಪ್ರದೇಶದಲ್ಲಿ ಕಾಣಬಹುದು. ಅಲ್ಲಿನ ನೆಲ ಸುಣ್ಣಶಿಲಾಮಯವಾಗಿರುವುದರಿಂದ ರಂಧ್ರವಾಗಿದೆ; ಮಳೆ ಬಿದ್ದ ಕೂಡಲೆ ನೀರನ್ನು ಹೀರಿಬಿಡುತ್ತದೆ. ತಗ್ಗುಪ್ರದೇಶಗಳಲ್ಲಿ ನೆಲದೊಳಗೆ ನೀರು ನಿಂತಿರುತ್ತದೆ. ಇಂಥ ಭೂಮ್ಯಂತರ್ಗತ ಜಲಪ್ರದೇಶಗಳನ್ನು ವಾಯವ್ಯದ ಮರುಭೂಮಿಯಲ್ಲೂ ದಕ್ಷಿಣದ ಯೂಕ್ಲ ತಗ್ಗುಭೂಭಾಗದಲ್ಲೂ ಕಾಣಬಹುದು.

ನದಿಗಳು ಮತ್ತು ಸರೋವರಗಳು : ಇಲ್ಲಿನ ಅನೇಕ ನದಿಗಳು ವೇಗವಾಗಿ ಹರಿಯುವ ಚಿಕ್ಕ ನದಿಗಳು. ಹಾಕ್ಸ್‌ಬರಿ, ಫಿಟ್ಜ್ ರಾಯ್, ಬರ್ಡೆಕಿನ್ ನದಿಗಳು ಪೂರ್ವದ ಪರ್ವತಪ್ರಾಂತ್ಯದಿಂದ ಪೂರ್ವದ ಕಡೆಗೆ ಹರಿದು, ಪೆಸಿಫಿಕ್ ಸಾಗರವನ್ನು ಸೇರುತ್ತವೆ. ಫ್ಲಿಂಡರ್ಸ್ ಮತ್ತು ರೋಪರ್ ನದಿಗಳು ಉತ್ತರಕ್ಕೆ ಹರಿದು ಕಾರ್ಪೆಂಟೇರಿಯ ಕೊಲ್ಲಿಯನ್ನು ಸೇರುತ್ತವೆ. ಪಶ್ಚಿಮದ ಕಡೆ ಹರಿದು, ಹಿಂದೂ ಮಹಾಸಾಗರವನ್ನು ಸೇರುವ ನದಿಗಳಲ್ಲಿ ಮರ್ಚಿಸನ್, ಫಿಟ್ಜ್‌ರಾಯ್ ಮತ್ತು ವಿಕ್ಟೋರಿಯಗಳು ಮುಖ್ಯವಾದುವು.

ಖಂಡದ ಮುಖ್ಯನದಿ ಮರೆ. ಇದು ಅಲೆಗ್ಸಾಂಡ್ರಿನ ಸರೋವರ ಎನ್ನುವ ಆಳವಿಲ್ಲದ ಜೌಗುತಗ್ಗಿನ ಮುಖಾಂತರ ಹರಿದು, ಎನ್‌ಕೌಂಟರ್ ಕೊಲ್ಲಿಯನ್ನು ಸೇರುತ್ತದೆ. ಡಾರ್ಲಿಂಗ್ ಮತ್ತು ಮರ್ರಂಬಿಡ್ಜೀ– ಈ ನದಿಯ ಮುಖ್ಯ ಉಪನದಿಗಳು. ವರ್ಷದಲ್ಲಿ ಕೆಲವು ಋತುಗಳಲ್ಲಿ ಮಾತ್ರ ಈ ನದಿಗಳಲ್ಲಿ ನಾವೆಯ ಸಂಚಾರ ಸಾಧ್ಯ.

ಇಲ್ಲಿನ ಸರೋವರಗಳು ಬಹಳ ಚಿಕ್ಕವು. ಎಲ್ಲ ಉಪ್ಪುನೀರಿನವು. ಐರ್, ಟಾರೆನ್ಸ್, ಗೇರ್ಡ್‌ನರ್ ಸರೋವರಗಳು ಮುಖ್ಯವಾದುವು.

**ವಾಯುಗುಣ :** ಖಂಡದ ಮಧ್ಯಭಾಗದಲ್ಲಿ ಪೂರ್ವ ಪಶ್ಚಿಮವಾಗಿ ಮಕರ ಸಂಕ್ರಾಂತಿ ವೃತ್ತ ಹಾದುಹೋಗುತ್ತದೆ. ಇದರ ಉತ್ತರಕ್ಕಿರುವ ಪ್ರದೇಶ ಉಷ್ಣವಲಯದ ವಾಯುಗುಣವನ್ನೂ ಇದರ ಎರಡರಷ್ಟು ವಿಸ್ತಾರವಾಗಿರುವ ದಕ್ಷಿಣ ಪ್ರದೇಶ ಸಮಶೀತೋಷ್ಣ ವಾಯುಗುಣವನ್ನೂ ಹೊಂದಿವೆ.



ಮೆಡಿಟರೇನಿಯನ್ ವಾಯುಗುಣ ಹೊಂದಿದ ವಿಕ್ಟೋರಿಯ, ಮೆಲ್ಬರ್ನ್‌ಗಳಿಂದ ಅತ್ಯುಷ್ಣ ಪ್ರದೇಶವಾದ ಕ್ವೀನ್ಸ್‌ಲೆಂಡ್‌ನವರೆಗೂ ಇಲ್ಲಿನ ವಾಯುಗುಣ ಬದಲಾಗುತ್ತ ಹೋಗುತ್ತದೆ. ಶೀತೋಷ್ಣಗಳ ವೈಪರೀತ್ಯ ಕಂಡುಬರುವುದು ಆಲಿಸ್‌ಸ್ಪ್ರಿಂಗ್ಸ್ ಪ್ರದೇಶದಲ್ಲಿ: ಅಲ್ಲಿ ಬೇಸಗೆಯಲ್ಲಿ 47.2ಸೆ. ಮತ್ತು ಚಳಿಗಾಲ (5º ಸೆ.) ಉಷ್ಣತೆ ಇರುತ್ತದೆ. ಇಡೀ ಆಸ್ಟ್ರೇಲಿಯದ ವಾರ್ಷಿಕ ಮಳೆ 25 ಸೆಂ.ಮೀ. ಅದರ 1/3 ಭಾಗ ಉತ್ತರದ ಕೆಲವು ಕಡೆಗಳಲ್ಲಿ ಬೇಸಗೆಯಲ್ಲೂ ದಕ್ಷಿಣತೀರದ ಕೆಲವು ಪ್ರದೇಶಗಳಲ್ಲಿ ಚಳಿಗಾಲದಲ್ಲೂ ಬೀಳುತ್ತದೆ. ದಕ್ಷಿಣ ತೀರಪ್ರದೇಶದ ವಾಯುಗುಣ ಆಲ್ಜೀರಿಯ, ಸ್ಪೇನ್, ಕ್ಯಾಲಿಫೋರ್ನಿಯಗಳ ವಾಯುಗುಣದಂತೆ; ಅಂದರೆ ಹೆಚ್ಚು ಶಾಖವಿರುವ ಮಳೆಯಿಲ್ಲದ ಬೇಸಗೆ, ಚಳಿ ಕಡಿಮೆಯಾದ ಮಳೆ ಬೀಳುವ ಚಳಿಗಾಲ.

ಟಾಸ್ಮೇನಿಯದ ವಾಯುಗುಣ ಪ್ರಧಾನವಾಗಿ ವರ್ಷಪೂರ್ತಿ ಪಶ್ಚಿಮದಿಂದ ಬೀಸುವ ವಾಣಿಜ್ಯ ಪ್ರತಿಮಾರುತಗಳನ್ನವಲಂಬಿಸಿದೆ. ಮೆಲ್ಬರ್ನ್ ಸುತ್ತಮುತ್ತಣ ಪ್ರದೇಶ ಪೂರ್ತಿ ಈ ಮಾರುತದ ಪ್ರಭಾವಕ್ಕೊಳಪಟ್ಟಿದೆ. ಸಿಡ್ನಿ ಬಳಿಯ ತೀರದಲ್ಲಿ ಬೇಕಾದಷ್ಟು ಮಳೆ ಬೀಳುತ್ತದೆ. ಪಶ್ಚಿಮ ಆಸ್ಟ್ರೇಲಿಯದ ಮಧ್ಯಭಾಗದ ಮರುಭೂಮಿಯನ್ನು ತಲಪುವ ಮಾರುತಗಳು ಅರೆ ಉಷ್ಣವಲಯದ ಹೆಚ್ಚು ಒತ್ತಡವಿರುವ ಕಡೆಗೆ ಬರುವುದರಿಂದ ಆಗಾಗ್ಗೆ ಬಿರುಸಾಗುತ್ತವೆ. ಆದರೆ ಅವುಗಳಲ್ಲಿ ಜಲಾಂಶವಿರುವುದಿಲ್ಲ.

ಸ್ವಾಭಾವಿಕ ಸಸ್ಯವರ್ಗ: ಆಸ್ಟ್ರೇಲಿಯದ ಶೇ. 1 ಭಾಗಕ್ಕಿಂತಲೂ ಕಡಿಮೆ ಪ್ರದೇಶದಲ್ಲಿ ಅದರಲ್ಲೂ ಮರುಭೂಮಿಯ ಅಂಚುಗಳಲ್ಲಿ ಎತ್ತರಕ್ಕೆ ಬೆಳೆಯುವ ಹುಲ್ಲುಗಾವಲುಗಳಿವೆ. ಈ ಹುಲ್ಲನ್ನು ಕಾಂಗರೂ ಹುಲ್ಲು ಎಂದು ಕರೆಯುತ್ತಾರೆ. ತೀರಪ್ರದೇಶಗಳಲ್ಲಿ ದಟ್ಟವಾದ ಕಾಡುಗಳಿವೆ. ಕ್ವೀನ್ಸ್‌ಲೆಂಡ್‌ನ ಸದಾ ಹಸಿರಾಗಿರುವ ಮರಗಳು ಲಿಯಾನಾಸ್ ಮತ್ತು ಜರಿ ಮರಗಳನ್ನು ಒಳಗೊಂಡಿವೆ. ದಕ್ಷಿಣದ ಕಡೆಗೆ ಹೋದ ಹಾಗೆಲ್ಲ ಇವು ಸಮಶೀತೋಷ್ಣ ವಲಯದ ಕಾಡುಗಳಾಗಿ ಪರಿವರ್ತಿತವಾಗುತ್ತವೆ. ಈ ಕಾಡುಗಳಲ್ಲಿ ಮರಗಳ ಮಧ್ಯೆ ಬೆಳೆಯುವ ಕುರುಚಲು ಮುಂತಾದ ಸಸ್ಯಗಳಿಲ್ಲ.

ಇಲ್ಲೆಲ್ಲ ನೀಲಗಿರಿ ಮರಗಳು ಭವ್ಯವಾದುವು. ಇವುಗಳಲ್ಲಿ 600 ವಿಧಗಳಿವೆ. ಕೆಲವು ಸ್ಥಳದಲ್ಲಿ ಇವು 90 ಮೀ ಎತ್ತರವಾಗಿ ಬೆಳೆದಿವೆ. ಇದಕ್ಕಿಂತಲೂ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಅಕೇಸಿಯ, ಮುಲ್ಗ್, ಮಲ್ಲೀ ಎನ್ನುವ ಹೆಚ್ಚು ಬೆಳವಣಿಗೆಯಿಲ್ಲದ ನೀಲಗಿರಿ (ಯೂಕಲಿಪ್ಟಸ್) ಮರಗಳು ಕಾಣುತ್ತವೆ. ಮರುಭೂಮಿಯ ಅಂಚುಗಳಲ್ಲಿನ ಶುಷ್ಕಭೂಮಿಯಲ್ಲಿ ಬೆಳೆಯುವ ಸಸ್ಯಗಳು ಅಂತರ್ಜಲವನ್ನು ಹೀರಿ ಜೀವಿಸುತ್ತವೆ.

ಪ್ರಾಣಿವರ್ಗ : ಈ ಖಂಡದಲ್ಲಿ ಬೇರೆಲ್ಲೂ ಇಲ್ಲದ ವಿಚಿತ್ರ ಪ್ರಾಣಿಗಳನ್ನು ಕಾಣಬಹುದು. ಕೆಲವು ಮನುಷ್ಯ ಹುಟ್ಟುವುದಕ್ಕೆ ಮುಂಚೆ ಇಲ್ಲಿ ಇದ್ದುವು.

ಸರೀಸೃಪಗಳು ಮತ್ತು ವಿಷಪೂರಿತ ಹಾವುಗಳು ಸಾಮಾನ್ಯವಾಗಿವೆ. ಪ್ಲಾಟಿಪಸ್ ಎನ್ನುವ ಸಸ್ತನಿ ಮೊಟ್ಟೆಗಳನ್ನಿಡುತ್ತದೆ ಮತ್ತು ಮರಿಗಳಿಗೆ ಮೊಲೆಯೂಣಿಸುತ್ತದೆ. ಇದರ ಮೂತಿ ಬಾತಿನ ಕೊಕ್ಕಿನಂತಿದೆ. ಮೈತುಂಬ ತುಪ್ಪಳ ಚರ್ಮದ ಹೊದಿಕೆ ಇದೆ. ಮಾರ್ಸ್ಯೂಪಿಯಲ್ ಎಂಬ ಇನ್ನೊಂದು ಸಸ್ತನಿ ಅರೆಬೆಳೆದ ಮರಿಗಳನ್ನು ಹಡೆದು ಅನಂತರ ಅವನ್ನು ತನ್ನ ಹೊಟ್ಟೆಯ ಹೊರ ಚೀಲದಲ್ಲಿಟ್ಟುಕೊಂಡು ಬೆಳೆಸುತ್ತದೆ. ಕಾಂಗರೂ, ಒಪೋಸಂ ಇದೇ ರೀತಿಯ ಪ್ರಾಣಿಗಳು. ಕಾಂಗರೂ ಗಂಟೆಗೆ 32 ಕಿಮೀ ವೇಗದಲ್ಲಿ ಓಡುತ್ತದೆ. ಈಮೂ ಎಂಬುದು ಇಲ್ಲಿನ ಪಕ್ಷಿಗಳಲ್ಲೆಲ್ಲ ದೊಡ್ಡದಾದುದು. ಲೈರ್ ಎಂಬ ನವಿಲಿನಂತಿರುವ ಸೊಗಸಾದ ಪಕ್ಷಿ ಇತರ ಧ್ವನಿಗಳನ್ನು ಬಹಳ ಚೆನ್ನಾಗಿ ಅನುಕರಿಸುತ್ತದೆ. ಡಿಂಗೊ ಎಂಬ ಕಾಡು ನಾಯಿ ನೋಡಲು ತೋಳದಂತಿದೆ. ವಲ್ಲಬಿ, ನೊಣಗಳನ್ನು ತಿನ್ನುವ ಎಕಿಡ್ನ, ಮರ ಹತ್ತುವ ಸಣ್ಣ ಆಕಾರದ ಕರಡಿ ಕೋಆಲ-ಇತ್ಯಾದಿ ಪ್ರಾಣಿಗಳು ಆಸ್ಟ್ರೇಲಿಯದ ರಕ್ಷಿತ ಕಾಡುಗಳಲ್ಲಿ ವಾಸಿಸುತ್ತವೆ. ಗಿಣಿಗಳು, ಉಷ್ಟ್ರಪಕ್ಷಿ, ಕ್ಯಾಸ್ಸೋವರಿ ಮತ್ತು ಇತರ ಬಗೆಯ ಪಕ್ಷಿಗಳೂ ಇಲ್ಲಿವೆ.

**ವ್ಯವಸಾಯ:** ಆಸ್ಟ್ರೇಲಿಯದಲ್ಲಿ ವ್ಯವಸಾಯಯೋಗ್ಯವಾದ ಭೂಮಿ ಬಹಳ ಕಡಿಮೆ. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ.15 ಭಾಗ ಮಾತ್ರ ಕೃಷಿಗೆ ಯೋಗ್ಯ. ಸಮುದ್ರತೀರ ಮತ್ತು ನದಿ ಮೈದಾನಗಳಲ್ಲಿ ಮಾತ್ರ ವ್ಯವಸಾಯವಿದೆ. ಖಂಡದಲ್ಲಿ ಬಿಳಿಯ ಜನ ಹೆಚ್ಚಾಗಿ ಇರುವುದರಿಂದ ಸಮಶೀತೋಷ್ಣವಲಯದ ಬೆಳೆಗಳು ಹೆಚ್ಚಾಗಿ ಅಭಿವೃದ್ಧಿ ಹೊಂದಿವೆ. ಮುಖ್ಯಬೆಳೆ ಗೋದಿ, ಓಟ್ಸ್, ಕಬ್ಬು, ಬಾರ್ಲಿ, ಜೋಳ, ಆಲೂಗೆಡ್ಡೆ ಹಾಗೂ ಪ್ರಮುಖ ಹಣ್ಣುಗಳಾದ ದ್ರಾಕ್ಷಿ, ಸೇಬು, ಏಪ್ರಿಕಾಟ್, ಬಾಳೆ, ಕಿತ್ತಲೆ, ಪೀಚ್, ಪೇರು ಮತ್ತು ಪ್ಲಮ್.

ಬೆಟ್ಟಗುಡ್ಡಗಳ ಮೇಲೆ ಬಿದ್ದ ಮಳೆಯ ನೀರು ನೆಲದಲ್ಲಿ ಇಳಿದು ಭೂಮಿಯ ಪದರಗಳಲ್ಲಿ ಹರಿಯುತ್ತಿರುತ್ತದೆ. ಅಂಥ ಪ್ರದೇಶದಲ್ಲಿ ಬಾವಿಯನ್ನು ತೆಗೆದರೆ ನೀರು ಬುಗ್ಗೆಯಂತೆ ಚಿಮ್ಮುತ್ತದೆ. ಇದೇ ಆರ್ಟೀಸಿಯನ್ ಬಾವಿ. ಇವನ್ನು ಬೇರೆ ಬೇರೆ ಗುಂಪುಗಳಾಗಿ ವಿಭಾಗಿಸಿದ್ದಾರೆ. ಮಧ್ಯದ ತಗ್ಗುಬಯಲುಗಳಲ್ಲಿರುವ ಗ್ರೇಟ್ ಆರ್ಟೀಸಿಯನ್ ಬಯಲು; ಮರೆ ಬಯಲು, ದಕ್ಷಿಣದಲ್ಲಿ ಯೂಕ್ಲ ಬಯಲು; ಪಶ್ಚಿಮದ ಪೀಠಭೂಮಿಯಲ್ಲಿ ಪರ್ತ್ ಬಯಲು, ವಾಯವ್ಯ ಬಯಲು, ಮರುಭೂಮಿ ಬಯಲುಗಳು-ಇವು ಮುಖ್ಯವಾದ ಆರ್ಟೀಸಿಯನ್ ಬಾವಿ ಗುಂಪುಗಳು. ಈ ಬಾವಿಗಳು ನೀರಿಲ್ಲದ ಪ್ರದೇಶಗಳನ್ನು ಫಲವತ್ತಾದ ಭೂಮಿಯನ್ನಾಗಿ ಮಾಡಿ, ದನಕರುಗಳಿಗೆ ಮತ್ತು ವ್ಯವಸಾಯಕ್ಕೆ ನೀರನ್ನು ಒದಗಿಸುತ್ತವೆ.

ಪಶುಪಾಲನೆ : ಆಸ್ಟ್ರೇಲಿಯದಲ್ಲಿ ಪಶುಪಾಲನೆಯೇ ಜನರ ಮುಖ್ಯ ಕಸುಬು. ಸಾಮಾನ್ಯ ಮಳೆ, ಅತಿಯಲ್ಲದ ಉಷ್ಣಾಂಶ, ವಿಶಾಲವಾದ ಹುಲ್ಲುಗಾವಲು-ಇಲ್ಲಿನ ಪಶುಪಾಲನೆಗೆ ಸಹಾಯಕವಾದ ಮುಖ್ಯ ಅನುಕೂಲಗಳು. ಮುಖ್ಯವಾಗಿ ಕುರಿ, ದನಕರುಗಳನ್ನು ಸಾಕುತ್ತಾರೆ.



ಆಸ್ಟ್ರೇಲಿಯದ ಸ್ವಾಭಾವಿಕ ಸಸ್ಯವರ್ಗ

1. ಮಲಯ ವಿಧದ ಕಾಡುಗಳು; 2. ಯೂಕಲಿಪ್ಟಸ್ ಕಾಡುಗಳು; 3. ತೆರೆದ ಯೂಕಲಿಪ್ಟಸ್ ಕಾಡುಗಳು 4. ಮಲ್ಲೀ ಸಸ್ಯಪ್ರದೇಶ; 5. ಉಪ್ಪು ಪೊದೆಗಳ ಸವನ್ನ; 6. ಮುಲ್ಗ ಮತ್ತು ಉಪ್ಪಿನ ಪೊದೆ; 7. ಬ್ರಿಗಲೊ ಮತ್ತು ಮಿಚೆಲ್ ಹುಲ್ಲಿನಿಂದ ಕೂಡಿದ ಸವನ್ನ ಪ್ರದೇಶ; 8. ಟ್ರಯೋಡಿಯದಿಂದ ಕೂಡಿದ ಮರಳು ದಿಣ್ಣೆಗಳು

ಕುರಿ ಸಾಕುವಿಕೆಗೆ ಈ ಖಂಡದಲ್ಲಿರುವಷ್ಟು ವಾಯುಗುಣದ ಅನುಕೂಲ ಮತ್ತೆಲ್ಲಿಯೂ ಇಲ್ಲ. ಗ್ರೇಟ್ ಡಿವೈಡಿಂಗ್ ಶ್ರೇಣಿಗಳ ಪಶ್ಚಿಮದುದ್ದಕ್ಕೂ ವಿಶಾಲ ಬಯಲುಗಳಲ್ಲಿ ಅಸಂಖ್ಯಾತ ಕುರಿಗಳನ್ನು ಉಣ್ಣೆ ಮತ್ತು ಮಾಂಸಕ್ಕಾಗಿ ಸಾಕುತ್ತಾರೆ. ಈ ಖಂಡದ ವಿಶಿಷ್ಟವಾದ ಉಣ್ಣೆ ಕೊಡುವ ಕುರಿ ಮೆರಿನೊ.

ಉತ್ತರದ ಮಳೆ ಪ್ರದೇಶಗಳು, ಪೂರ್ವದ ತೀರಪ್ರದೇಶಗಳಲ್ಲಿ ದನಕರುಗಳನ್ನು ಹೆಚ್ಚಾಗಿ ಸಾಕುತ್ತಾರೆ. ಇವನ್ನು ಹೆಚ್ಚಾಗಿ ಮಾಂಸಕ್ಕಾಗಿ ಸಾಕಿದರೂ ಹೈನದ ಉತ್ಪನ್ನಗಳಾದ ಹಾಲು, ಬೆಣ್ಣೆ, ಗಿಣ್ಣನ್ನೂ ಪಡೆಯುತ್ತಾರೆ.

ಪ್ರಮುಖ ಸಾಕುಪ್ರಾಣಿಗಳೆಂದರೆ: ಕುದುರೆಗಳು (ಮಾಂಸವನ್ನು ರಫ್ತು ಮಾಡುವುದಕ್ಕಾಗಿ ಸಾಕುವರು); ದನಕರುಗಳು–ಕುರಿಗಳು ಮತ್ತು ಹಂದಿಗಳು. ಈ ಸಾಕುಪ್ರಾಣಿಗಳಿಂದ ದೊರಕುವ ಹಾಲಿನ ಮತ್ತಿತರ ವಸ್ತುಗಳು–ಬೆಣ್ಣೆ ಗಿಣ್ಣು: ಘನೀಕರಿಸಿದ ಹಾಲು, ಗಟ್ಟಿ ಹಾಲು, ಕಚ್ಚ ಎಣ್ಣೆ ಮತ್ತು ಮೊಟ್ಟೆಗಳು.

ಖನಿಜಸಂಪತ್ತು: ಆಸ್ಟ್ರೇಲಿಯದ ಭೂರಚನೆಗೂ ಅದರ ಖನಿಜ ಸಂಪತ್ತಿಗೂ ಬಹು ಹತ್ತಿರದ ಸಂಬಂಧವಿದೆ. ಲೋಹ ಖನಿಜಗಳು ಅಂತರಗ್ನಿ ಶಿಲೆಗಳೊಂದಿಗೆ ಸಂಯೋಜಿತವಾಗಿ ಘನಾಕೃತಿಯಲ್ಲಿವೆ–ತವರ, ಟಂಗ್‌ಸ್ಟನ್, ಚಿನ್ನ, ತಾಮ್ರ, ಸೀಸ, ಸತು, ಬೆಳ್ಳಿ, ಆಂಟಿಮೊನಿ ಮತ್ತು ಪಾದರಸ ಇವುಗಳಲ್ಲಿ ಮುಖ್ಯವಾದುವು. ಶಿಲಾಪದರಗಳು ಶಿಥಿಲೀಕರಣ ಪ್ರಕ್ರಿಯೆಯ ಸಮಯದಲ್ಲಿ ಸ್ಫಟಿಕಾಕೃತಿ ಶಿಲೆಗಳಾಗಿ ನಿರ್ಮಾಣವಾದಾಗ ಶಿಲಾಹಂಚಿಕೆಯ ವ್ಯವಸ್ಥೆ ಏರುಪೇರಾಯಿತು. ಇದರಿಂದ ಅದಿರುನಿಕ್ಷೇಪಗಳ ವ್ಯಾಪ್ತಿಯನ್ನು ನಿಷ್ಕರ್ಷಿಸುವುದು ಕಷ್ಟವಾಯಿತು. ಆದಾಗ್ಯೂ ಗ್ರೇಟ್ ಆಸ್ಟ್ರೇಲಿಯನ್ ಷೀಲ್ಡ್ (ಪೀಠಭೂಮಿ ಪ್ರದೇಶ)ಲೋಹದ ಖನಿಜಗಳಿಂದ ಕೂಡಿದ್ದು ಸಂಪದ್ಭರಿತವಾಗಿದೆ. ಗ್ರೇಟ್ ಡಿವೈಡಿಂಗ್ ಶ್ರೇಣಿಯ ಪ್ರದೇಶಕ್ಕೂ ಇದು ಅನ್ವಯಿಸುತ್ತದೆ.

ಪಶ್ಚಿಮ ಆಸ್ಟ್ರೇಲಿಯದಲ್ಲಿ ಅನೇಕ ಖನಿಜಗಳು ದೊರೆಯುತ್ತವೆ. ಇಲ್ಲಿ 6 ಸಮಾನಾಂತರ ವಲಯಗಳನ್ನು ಸುಲಭವಾಗಿ ಕಾಣಬಹುದು:

ಸಮುದ್ರತೀರದ ಬಳಿ ಇರುವ ಬೆಣಚುಕಲ್ಲಿನ ಪದರ ಶಿಲೆ, ನುಣುಪು ಶಿಲೆ, ಭಿನ್ನಸ್ತರ ಶಿಲೆಯ ವಲಯ. 2. ಗ್ರ್ಯಾಫೈಟ್, ಕಲ್ನಾರು ಮತ್ತು ತವರಗಳನ್ನು ಹೊಂದಿರುವ ನುಣುಪುಶಿಲೆ ಮತ್ತು ನೀಸ್ ಶಿಲೆಗಳ ವಲಯ. 3. ಶುಷ್ಕ ಸ್ಫಟಿಕಾಕೃತಿಗಳು. 4. ಹೇರಳವಾಗಿ ಚಿನ್ನ ದೊರೆಯುವ ಸ್ಫಟಿಕಾಕೃತಿ ಶಿಲೆಗಳು. 5. ಅದಿರಿನಿಂದ ಕೂಡಿರದ ಸ್ಫಟಿಕಾಕೃತಿ ಶಿಲೆಗಳ ನೀಸ್. 6. ಚಿನ್ನದ ಅದಿರುಗಳಿರುವ ಸ್ಫಟಿಕಾಕೃತಿ ಶಿಲೆಗಳು.

ಆರನೆಯ ವಲಯ ಎಸ್ಪೆರಾನ್ಸಿನ ದಕ್ಷಿಣ ತೀರದಲ್ಲಿ ಪ್ರಾರಂಭವಾಗಿ ನಾರ್ಸ್‌ಮನ್ ಮತ್ತು ಕಾಲ್ಗೂರ್ಲಿ ಮುಖಾಂತರ ಲಿಯೋನಾರವನ್ನು ಹಾಯ್ದು ಉತ್ತರ ತೀರದ ಪಿಲ್‌ಬರವನ್ನು ತಲಪುತ್ತದೆ. ರೈಲುಮಾರ್ಗ ಇದರ ಪ್ರಾಮುಖ್ಯವನ್ನು ಒತ್ತಿ ಹೇಳುತ್ತದೆ. ನಾಲ್ಕನೆಯ ಚಿನ್ನದ ವಲಯ ಫಿಲಿಪ್ಸ್ ನದಿಯ ಹತ್ತಿರ ಪ್ರಾರಂಭವಾಗಿ ಸದರ್ನ್ ಕ್ರಾಸ್ ಮತ್ತು ಆಸ್ಟಿನ್ ಸರೋವರ ಪ್ರದೇಶವನ್ನೊಳಗೊಂಡು 240 ಕಿಮೀ ದೂರದಲ್ಲಿರುವ ಗ್ಯಾಸ್ಕಾಯಿನ್ ಮತ್ತು ಆಷ್ಬರ್ಟನ್ ನದಿಗಳವರೆಗೂ ವ್ಯಾಪಿಸಿದೆ.

ನ್ಯೂ ಸೌತ್‌ವೇಲ್ಸ್, ಕ್ವೀನ್ಸ್‌ಲೆಂಡ್ ತಾಮ್ರಕ್ಕೆ ಪ್ರಸಿದ್ಧಿ ಪಡೆದಿವೆ. ಈ ಪ್ರದೇಶದಲ್ಲಿ ಮರಳುದಿಣ್ಣೆಗಳಿಲ್ಲ; ಆದುದರಿಂದ ಗಣಿಗಳನ್ನು ಸುಲಭವಾಗಿ ತಲಪಬಹುದು.

ಪೂರ್ವದ ಎತ್ತರ ಪ್ರದೇಶಗಳಲ್ಲಿ ತಾಮ್ರ ಮತ್ತು ತವರದ ನಿಕ್ಷೇಪಗಳು ಹೇರಳವಾಗಿವೆ. ಚಿಲ್ಲಾಂಗೊ, ಗೊಟಾಟ್, ಚಾರ್ಟರ್ಸ್ ಟವರ್ಸ್, ಮೌಂಟ್ ಮಾರ್ಗನ್ ಮತ್ತು ಜಿಂಪಿಕ್ ಇವೆಲ್ಲ ಕ್ವೀನ್ಸ್‌ಲೆಂಡಿನಲ್ಲಿವೆ. ನ್ಯೂ ಸೌತ್‌ವೇಲ್ಸ್‌ನಲ್ಲಿ ಗ್ರೇಟ್ ಡಿವೈಡಿಂಗ್ ಶ್ರೇಣಿಯ ಪಶ್ಚಿಮಕ್ಕೆ ಅನೇಕ ಕಡೆಗಳಲ್ಲಿ ಚಿನ್ನ ದೊರೆಯುತ್ತದೆ. ವಿಕ್ಟೋರಿಯದಲ್ಲಿ ಬೆಲ್ಲಾರಟ್ ಮತ್ತು ಬೆಂಡಿಗೊಗಳಲ್ಲಿ ಚಿನ್ನದ ಗಣಿಗಳಿವೆ. ಟಾಸ್ಮೇನಿಯದಲ್ಲಿ ತವರ, ತಾಮ್ರ ಮತ್ತು ಸತುವಿನ ಗಣಿಗಳಿವೆ.

ಆಸ್ಟ್ರೇಲಿಯದಲ್ಲಿ ದೊರೆಯುವ ಖನಿಜಗಳು–ಕಲ್ಲಿದ್ದಲು (ಕಪ್ಪು ಮತ್ತು ಬೂದು) ಕಬ್ಬಿಣದ ಅದಿರು, ಸೀಸ, ಸತು, ತಾಮ್ರ, ಟೈಟೇನಿಯಂ, ತವರ, ಟಂಗ್‌ಸ್ಟನ್, ಚಿನ್ನ ಮತ್ತು ಬೆಳ್ಳಿ.

ಸಂಚಾರ ಮಾರ್ಗಗಳು: ಸಂಚಾರ ಮಾರ್ಗಗಳ ಹಂಚಿಕೆ ಖಂಡದ ಆಗ್ನೇಯ, ನೈಋತ್ಯ ಮತ್ತು ಈಶಾನ್ಯ ದಿಕ್ಕಿನಲ್ಲಿ ಒತ್ತಾಗಿರುವುದನ್ನು ಕಾಣಬಹುದು. ವಿಶಾಲ ಮರುಭೂಮಿ ಪ್ರದೇಶಗಳಲ್ಲಿ ಸಾಗಾಣಿಕೆ ಬಹಳ ಕಡಿಮೆ. ವಾಯುಸಂಚಾರ ಮಾತ್ರ ಹೆಚ್ಚಾಗಿದೆ. ಜನವಸತಿಗಳಿರುವ ವಿಭಾಗಗಳಲ್ಲಿ ಉತ್ತಮವಾದ ರಸ್ತೆ ಮತ್ತು ರೈಲು ಮಾರ್ಗಗಳ ವ್ಯವಸ್ಥೆಯಿದೆ. ದೇಶದ ಬಹಳಷ್ಟು ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುತ್ತವೆ. ಅಷ್ಟೇ ಮುಖ್ಯವಾಗಿ ಬಂದರುಗಳ ಸೌಲಭ್ಯವೂ ಉಂಟು. ವ್ಯಾಪಾರ ಮತ್ತು ವಾಣಿಜ್ಯ ಈ ಕೆಳಗೆ ಕಂಡ ವಸ್ತುಗಳನ್ನು ಒಳಗೊಂಡಿದೆ.

ರಫ್ತು ಸರಕುಗಳು: ಹಾಲಿನ ವಸ್ತುಗಳು ಮುಖ್ಯವಾಗಿ ಬೆಣ್ಣೆ, ದನಕರುಗಳ ಮಾಂಸ, ಗೋದಿ, ಲೋಹ ಮತ್ತು ಅಲೋಹ ಕೈಗಾರಿಕಾ ವಸ್ತುಗಳು ಮತ್ತು ಕಚ್ಚಾ ಉಣ್ಣೆ.

ಆಮದು ವಸ್ತುಗಳು: ವಿಮಾನಗಳು, ಹಡಗು ಮತ್ತು ರೈಲ್ವೇ ಉಪಕರಣಗಳು, ಮೋಟರು ವಾಹನಗಳು, ಗ್ರಾಮೀಣ ಕೈಗಾರಿಕಾ ಉಪಕರಣಗಳು ಮತ್ತು ಕಟ್ಟಡ ನಿರ್ಮಾಣ ಉಪಕರಣಗಳು.

ಬ್ರಿಟನ್ ಆಸ್ಟ್ರೇಲಿಯದ ಮುಖ್ಯ ಗಿರಾಕಿ. ಅದು ಆಸ್ಟ್ರೇಲಿಯದ ಶೇ. 17 ಭಾಗ ರಫ್ತನ್ನು ಪಡೆದು, ಶೇ. 26 ಭಾಗ ಆಮದನ್ನು ಒದಗಿಸುತ್ತದೆ. ಸಾಮ್ರಾಜ್ಯಾಧಿಮಾನ ಆಯಾತನಿರ್ಯಾತ ಶುಲ್ಕ ಕ್ರಮದ ಆಶ್ರಯದಲ್ಲಿ ಆಸ್ಟ್ರೇಲಿಯ ಬ್ರಿಟನ್ನಿನ ರಫ್ತುಮಾಡುವ ವಸ್ತುಗಳು ಆಹಾರ ಪದಾರ್ಥ, ಉಣ್ಣೆ, ಖನಿಜಗಳನ್ನು ಒಳಗೊಂಡಿವೆ. ಲೋಹಗಳಿಗೆ ಬದಲಾಗಿ ಯಂತ್ರಗಳು ಮತ್ತು ಮರಮುಟ್ಟುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಜಪಾನ್ ಮತ್ತು ಪಶ್ಚಿಮ ಜರ್ಮನಿಗಳೊಡನೆ ಆಸ್ಟ್ರೇಲಿಯದ ವ್ಯಾಪಾರ ಇತ್ತೀಚೆಗೆ ಹೆಚ್ಚಾಗುತ್ತಿದೆ. ಯುರೋಪ್ ವಾಣಿಜ್ಯ ಮಾರುಕಟ್ಟೆ ಆಸ್ಟ್ರೇಲಿಯವನ್ನು ದೂರವಿರಿಸಿದರೂ ಕಾಮನ್‌ವೆಲ್ತ್ ಸಂಬಂಧದಿಂದ ಅದರಲ್ಲೂ ಮುಖ್ಯವಾಗಿ ಸಾಮ್ರಾಜ್ಯಾಧಿಮಾನ ಆಯಾತನಿರ್ಯಾತ ಶುಲ್ಕಕ್ರಮದ ಆಶ್ರಯದಲ್ಲಿ ಹೆಚ್ಚಿನ ಅನುಕೂಲಗಳನ್ನು ಪಡೆದಿದೆ.

**ಜನಸಂಖ್ಯೆ ಮತ್ತು ಜನವಸತಿ:** ಆಸ್ಟ್ರೇಲಿಯವನ್ನು ಮೊದಲು ಆಕ್ರಮಿಸಿದ ಜನರು 12,000 ವರ್ಷಗಳ ಹಿಂದೆ ವಲಸೆ ಬಂದ ನೀಗ್ರೊ ಮೂಲನಿವಾಸಿಗಳು. ಜನ ಸಂಖ್ಯೆ 40,081 (1966). ಇದು ಆಸ್ಟ್ರೇಲಿಯದ ಜನಸಂಖ್ಯೆಯಲ್ಲಿ ಶೇ. 1 ಭಾಗಕ್ಕಿಂತಲೂ ಕಡಿಮೆ. ಯುರೋಪಿನ ನೆಲೆಸಿಗರು ಇವರ ಸಂಖ್ಯೆಯನ್ನು ಕಡಿಮೆ ಮಾಡಿದರು. ಕ್ಯಾಪ್ಟನ್ ಕುಕ್ 1688ರಲ್ಲಿ ಆಸ್ಟ್ರೇಲಿಯಕ್ಕೆ ಸಮುದ್ರಯಾನ ಮಾಡಿದಾಗಿನಿಂದ ಇಲ್ಲಿ ಯುರೋಪಿಯನ್ನರ ವಸತಿ ಪ್ರಾರಂಭವಾಯಿತು. 2001ರ ಜನಗಣತಿ ಪ್ರಕಾರ ಶೇ. 58 ರಷ್ಟು ಜನರು ದೊಡ್ಡನಗರಗಳಲ್ಲಿ ಶೇ. 85 ರಷ್ಟು ಜನರು ಸಣ್ಣ ನಗರಗಳಲ್ಲೂ ಶೇ. 15 ಹಳ್ಳಿಗಳಲ್ಲೂ ಇದ್ದಾರೆ. ಶೇ. 0.24 ವಲಸೆ ಹೋಗುವ ಜನಸಂಖ್ಯೆಯೂ ಇದೆ. ಜನಸಾಂದ್ರತೆ ಚ.ಕಿಮೀಗೆ 3 ಜನರಿಗಿಂತಲೂ ಕಡಿಮೆ.

2009ರ ಜನಗಣತಿಯಂತೆ ಆಸ್ಟ್ರೇಲಿಯದ ದೊಡ್ಡ ನಗರಗಳಲ್ಲಿ ಮುಖ್ಯವಾದುವು: ಕ್ಯಾನ್ಬೆರ (403,118). ಸಿಡ್ನಿ (4,504,469), ಮೆಲ್ಬರ್ನ್ (3,995,537), ಬ್ರಿಸ್ಬನ್ (2,004,262), ಅಡಿಲೇಡ್ (1,187,466), ಪರ್ತ್ (1,658,992), ನ್ಯೂಕ್ಯಾಸಲ್ (540,796), ವೊಲೋನ್‌ಗಾಂಗ್ (2,88,984), ಹೋಬರ್ಟ್ (2,12,019), ಗೀಲಾಂಗ್ (1,75,803).

**ಜನವಸತಿ:** ಮೊಟ್ಟಮೊದಲ ಯುರೋಪಿನ ಸಂಪರ್ಕ 1606ರಲ್ಲಿ ಆಯಿತು. ಡ್ರೈಫಕೆನ್ ಎಂಬ ಡಚ್ ಹಡಗಿನಲ್ಲಿನ ಜೇನ್ ಎಂಬಾತ 1616ರಲ್ಲಿ ಪಶ್ಚಿಮತೀರದಲ್ಲಿ ಕಾಲಿರಿಸಿದ. ಏಬಲ್ ಟಾಸ್ಮನ್ ಟಾಸ್ಮೇನಿಯ ಮತ್ತು ನ್ಯೂಜಿಲೆಂಡ್‌ಗಳನ್ನು 1642ರಲ್ಲಿ ತಲಪಿದ. 1688ರಲ್ಲಿ ಪಶ್ಚಿಮ ತೀರದಲ್ಲಿ ಡ್ಯಾಂಪಿಯರ್ ಎಂಬ ಬ್ರಿಟಿಷ್ ಪ್ರಜೆ ಇಳಿದ. 1770ರಲ್ಲಿ ಜೇಮ್ಸ್ ಕುಕ್ ಪೂರ್ವತೀರವನ್ನು ಮೋಜಣಿಮಾಡಿ, ಬ್ರಿಟನ್ನಿನ ಹೆಸರಿನಲ್ಲಿ ಆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡ. 19ನೆಯ ಶತಮಾನದ ಪ್ರಾರಂಭದಲ್ಲಿ ಮ್ಯಾಥ್ಯೂ ಫ್ಲಿಂಡರ್ಸ್ ಎಂಬ ಆಂಗ್ಲ ನಾವಿಕ ಆಸ್ಟ್ರೇಲಿಯ ಎಂಬ ಹೆಸರನ್ನು ಮೊದಲು ಉಪಯೋಗಿಸಿದ. ಅದುವರೆವಿಗೂ ಈ ಖಂಡವನ್ನು ನ್ಯೂ ಹಾಲೆಂಡ್ ಎಂದೂ ನ್ಯೂ ಸೌತ್‌ವೇಲ್ಸ್ ಅಥವಾ ಬಾಟನಿ ಬೇ ಎಂದೂ ಕರೆಯಲಾಗುತ್ತಿತ್ತು.

1788ರಲ್ಲಿ ಮೊಟ್ಟಮೊದಲು ಯುರೋಪಿಯನ್ನರು ನೆಲೆಸಲಾರಂಭಿಸಿದರು. ಕ್ಯಾಪ್ಟನ್ ಆರ್ಥರ್ ಫಿಲಿಪ್ ಎಂಬಾತ 206 ಸೈನಿಕರು ಮತ್ತು 759 ಕೈದಿಗಳೊಂದಿಗೆ ಸಿಡ್ನಿ ಬಳಿಯಲ್ಲಿ ಅದೇ ವರ್ಷದ ಜನವರಿ 26ರಂದು ಇಳಿದ. ಇದರ ನೆನಪಿಗಾಗಿ ಆ ದಿನವನ್ನು ಆಸ್ಟ್ರೇಲಿಯ ದಿನಾಚರಣೆ ಎಂಬುದಾಗಿ ಆಚರಿಸುತ್ತಾರೆ. 1813ರಲ್ಲಿ ಬ್ಲ್ಯಾಕ್‌ಲೆಂಡ್, ವೆಂಟ್‌ವರ್ತ್ ಮತ್ತು ಲಾಸನ್‌ರವರು ಬ್ಲೂಮೌಂಟನ್ಸ್ ದಾಟಿ, ಅದರಾಚೆ ಇರುವ ಮೈದಾನ ಪ್ರದೇಶಗಳನ್ನು ತಲಪಿದರು. ಎಡ್ವರ್ಡ್ ಹಾರ್‌ಗ್ರೇವ್ಸ್‌ನಿಗೆ 1851ರಲ್ಲಿ ಬ್ಯಾಥರ್ಸ್ಟ್‌ನಲ್ಲಿ ಚಿನ್ನ ಕಂಡುಬಂತು; ಅನಂತರ ಬೆಲ್ಲಾರಟ್, ಬೆಂಡಿಗೊ ಮುಂತಾದ ಇತರ ಕಡೆಗಳಲ್ಲೂ ದೊರಕಿತು. ಇದು ತಿಳಿದ ಕೂಡಲೆ ಒಂದೇ ದಶಕದಲ್ಲಿ ಜನಸಂಖ್ಯೆಯನ್ನು ಮುಮ್ಮಡಿಗೊಳಿಸುವಷ್ಟು ಹೊಸ ವಲಸೆಗಾರರು ಬಂದರು. ಇವರಲ್ಲಿ ಯೆಹೂದ್ಯರು ಮತ್ತು ಯುರೋಪಿಯನ್ನರು ಖಂಡದ ತುಂಬ ಹರಡಿದರು. ನಿಗದಿಯಾದಷ್ಟು ಮಾತ್ರ ನೆಲೆಸಬೇಕೆಂಬ ನಿಯಮದಂತೆ ಆಫ್ರಿಕನ್ನರು ಮತ್ತು ಏಷ್ಯನ್ನರು ಖಂಡದೊಳಗಡೆ ನೆಲೆಸುವುದನ್ನು ನಿಯಂತ್ರಿಸಲು ವಲಸೆ ಕಾನೂನುಗಳನ್ನು ಮಾಡಿದ್ದರೂ ಜಪಾನೀಯರ ನೆಲೆಸುವಿಕೆ ಹೆಚ್ಚಾಗುತ್ತಿದೆ. ಇದು (1970ರ ಅಂದಾಜಿನಂತೆ) 120 ಲಕ್ಷ ಜನಸಂಖ್ಯೆಗೆ ಕಾರಣವಾಗಿದೆ. ಖಂಡದ ವಿಶಾಲತೆಗೆ ಇದು ಕಡಿಮೆ ಎನಿಸಿದರೂ ಸರ್ಕಾರಕ್ಕೆ ಇದೊಂದು ಸಮಸ್ಯೆಯಾಗಿದೆ.

ಆರ್ಥಿಕವಾಗಿ 1939ರವರೆಗೂ ಆಸ್ಟ್ರೇಲಿಯ ಅದರ ಕುರಿಗಳಿಗೆ ಸಂಬಂಧಿಸಿದ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿತ್ತು. ಆದರೆ 1951–61ರ ಮಧ್ಯೆ 20ಲಕ್ಷ ವಲಸೆಗಾರರು ತಮ್ಮ ಕುಶಲ ಕೈಗಾರಿಕಾ ಕಾರ್ಯದಕ್ಷತೆಯಿಂದ ನಗರ ಕೈಗಾರಿಕೆಗಳನ್ನು ಅತಿ ಶೀಘ್ರವಾಗಿ ಅಭಿವೃದ್ಧಿಪಡಿಸಿದರು. 1966ರ ಜೂನ್ ಹೊತ್ತಿಗೆ ಜನಸಂಖ್ಯೆಯ ಶೇ. 0.5 ಗಣಿಗಾರಿಕೆ ಮತ್ತು ಕಲ್ಲುಗಣಿಗಳಲ್ಲೂ ಶೇ. 13 ವಸ್ತುಗಳ ತಯಾರಿಕೆಯಲ್ಲೂ ಶೇ. 19 ಸರ್ಕಾರಿ ಕೆಲಸಗಳಲ್ಲೂ ಶೇ. 4 ಕಟ್ಟಡಗಳು ಮತ್ತದರ ನಿರ್ಮಾಣದಲ್ಲೂ ಶೇ. 5 ಸಾಗಾಣಿಕೆ. ವಸ್ತುಗಳ ಸಂಗ್ರಹಣೆ ಮತ್ತು ಸಾರಿಗೆ ಸಂಪರ್ಕಗಳಲ್ಲೂ ಶೇ. 10 ವಾಣಿಜ್ಯದಲ್ಲೂ ಉಳಿದವರು ಆರ್ಥಿಕವ್ಯವಸ್ಥೆ, ಸಾರ್ವಜನಿಕ ಚಟುವಟಿಕೆಗಳು, ಸಾಮೂಹಿಕ ಹಾಗೂ ವ್ಯಾಪಾರ ಸೇವೆಗಳು, ಮನರಂಜನೆ, ಹೋಟೇಲ್ ಮತ್ತು ವ್ಯಕ್ತಿಗತ ಸೇವೆಗಳಲ್ಲೂ ನಿರತರಾಗಿದ್ದರು. ಆಸ್ಟ್ರೇಲಿಯದಲ್ಲಿ ಸು. 50 ವಿಶ್ವವಿದ್ಯಾಲಯಗಳಿವೆ. ಇವುಗಳಲ್ಲಿ ಅತ್ಯಂತ ದೊಡ್ಡದು ಸಿಡ್ನಿ ವಿಶ್ವವಿದ್ಯಾಲಯ.

(ಇ.ಎ.ಎ.)

**ಭೂ ಇತಿಹಾಸ:** ಈ ಖಂಡದ ಬಹುಭಾಗ ಆರ್ಷೇಯ ಮತ್ತು ಕೇಂಬ್ರಿಯನ್ ಯುಗಗಳ ಶಿಲೆಗಳಿಂದ ಆವೃತವಾಗಿದೆ. ಈ ಶಿಲಾಸಮುದಾಯ ಸಿಡ್ನಿ ಪಶ್ಚಿಮ ಮತ್ತು ದಕ್ಷಿಣ ಆಸ್ಟ್ರೇಲಿಯಗಳಲ್ಲೂ ಉತ್ತರ ಪ್ರಾಂತ್ಯಗಳು, ಸೌತ್‌ವೇಲ್ಸ್‌ನ ಬ್ರೋಕನ್‌ಹಿಲ್ ಮತ್ತು ಪಶ್ಚಿಮ ಟಾಸ್ಮೇನಿಯಗಳಲ್ಲೂ ನೋಡಬಹುದು. ಖಂಡದಲ್ಲೇ ಅತಿ ವಿಸ್ತಾರವಾದ ಪ್ರಸ್ಥಭೂಮಿಯಲ್ಲೂ ಈ ಶಿಲೆಗಳನ್ನು ಕಾಣಬಹುದು. ಈ ಭಾಗವನ್ನು ಷೀಲ್ಡ್ ಅಥವಾ

ಪೀಠಭೂಮಿ ಎಂದು ಕರೆಯಲಾಗಿದೆ. ಇದರ ಸುತ್ತಮುತ್ತ ಇದಕ್ಕಿಂತಲೂ ವಯಸ್ಸಿನಲ್ಲಿ ಕಿರಿಯ ಶಿಲಾಪ್ರಸ್ತರಗಳೂ ಹಬ್ಬಿವೆ. ಇಡೀ ಖಂಡದ ಭೂಚರಿತ್ರೆಯಲ್ಲಿ ನ್ಯೂನತೆ ಎಂದರೆ ಟರ್ಷಿಯರಿ ಕಲ್ಪದ ಶಿಲಾಶ್ರೇಣಿಗಳಿಂದಾದ ಪರ್ವತಗಳಿಲ್ಲದಿರುವುದು, ಗತಕಾಲದಲ್ಲಿ ಪರ್ವತಗಳು ಖಂಡದೊಂದಿಗಿದ್ದು ಕ್ರಮೇಣ ಬೇರ್ಪಟ್ಟು ಈಗಿನ ನ್ಯೂಗಿನಿ ಪ್ರಾಂತ್ಯದಲ್ಲಿ ಕಂಡುಬರುತ್ತವೆ. ಬಹುಶಃ ಪೂರ್ವದಿಕ್ಕಿಗೆ ನ್ಯೂಜಿಲೆಂಡ್‌ಗೂ ಹಬ್ಬಿದ್ದು ಕೈನೋಜೋಯಿಕ್ ಯುಗದಲ್ಲಿ ಇವೆರಡರ ಮಧ್ಯೆ ಭೂಭಾಗದಿಂದ ಈಗಿನ ಟಾಸ್ಮೇನಿಯ ಸಮುದ್ರ ಉಂಟಾಯಿತೆಂದು ಭೂವಿಜ್ಞಾನಿಗಳ ಅಭಿಪ್ರಾಯ. ಖಂಡದ ವಿವಿಧ ಭೂಕಾಲಯುಗಗಳ ಶಿಲಾಸಮೂಹಗಳನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ.

ಪ್ರಿ–ಕೇಂಬ್ರಿಯನ್ ಶಿಲಾಸಮೂಹ : ಈ ಸಮೂಹದಲ್ಲಿ ಭೂಚರಿತ್ರೆಯಲ್ಲಿ ಅತಿ ಪುರಾತನವೆನಿಸಿದ ಆರ್ಷೇಯ ಕಲ್ಪದ ಕಾಲ್‌ಗೂರ್ಲಿ ಮತ್ತು ವಾರವೂಸ ಶಿಲಾಯುಗಗಳನ್ನು ಪರಿಗಣಿಸಬಹುದು. ಸಮುದಾಯದಲ್ಲಿ ವಿವಿಧ ಘಟ್ಟದ ರೂಪಾಂತರ ಹೊಂದಿರುವ (ಪಿಲ್ಲೊ) ದಿಂಬು ಲಾವಾ, ಟಫ್ ಮತ್ತು ಗ್ರೀನ್‌ಸ್ಟೋನ್‌ಗಳಿವೆ. ಖಂಡದ ಉತ್ತಮ ದರ್ಜೆಯ ಚಿನ್ನದ ಗಣಿಗಳಿಗೆ ಇವೇ ಆಗರ. ಕೆಲವು ಕಡೆ ಈ ಸಮುದಾಯದ ಇಕ್ಕೆಲಗಳಲ್ಲಿ ಇವುಗಳಿಗಿಂತ ಕಿರಿಯವೆನಿಸಿದ ಇಲ್‌ಗಾರ್ನ್ ಶ್ರೇಣಿಗೆ ರೂಪಾಂತರ ಜಲಜಶಿಲಾಸ್ತರಗಳಿವೆ. ಇವನ್ನೆಲ್ಲ ಹಿರಿಯ ಮತ್ತು ಕಿರಿಯ ಶಿಲಾಕೃತಿಗಳು ಭೇದಿಸಿಕೊಂಡು ಹೊರಚಾಚಿವೆ. ಶಿಲೆಗಳಲ್ಲಿ ಅಡಕವಾಗಿರುವ ಖನಿಜ ನಿಕ್ಷೇಪಗಳ ಉತ್ಪತ್ತಿಗೆ ಈ ಗ್ರ್ಯಾನೈಟ್‌ಗಳೇ ಕಾರಣವೆಂದು ಊಹಿಸಲಾಗಿದೆ. ಚಿನ್ನವೇ ಅಲ್ಲದೆ ಪಶ್ಚಿಮ ಮತ್ತು ದಕ್ಷಿಣ ಆಸ್ಟ್ರೇಲಿಯಗಳಲ್ಲಿ ಉತ್ತಮವಾದ ಅದಿರಿನ ನಿಕ್ಷೇಪಗಳೂ ಇವೆ.

ಪಶ್ಚಿಮ ಕ್ವೀನ್ಸ್‌ಲೆಂಡ್‌ನಲ್ಲಿ ಸ್ತರ ರಚನೆಯುಳ್ಳ ಸೀಸ ಮತ್ತು ತಾಮ್ರದ ಅದಿರಿನ ನಿಕ್ಷೇಪಗಳಿವೆ. ನ್ಯೂಸೌತ್‌ವೇಲ್ಸ್‌ನ ಬ್ರೋಕನ್ ಹಿಲ್‌ನ ಸೀಸ ಮತ್ತು ಸತುವಿನ ಗಣಿಗಳು ಇಡೀ ವಿಶ್ವದಲ್ಲೇ ಬಹು ಹೆಸರುವಾಸಿಯಾಗಿವೆ.

ಡಾರ್ವಿನ್ ಪ್ರಾಂತ್ಯದ ಪೈನ್‌ಕ್ರೀಕ್ ಜಿಲ್ಲೆಯ ಅಸಂಖ್ಯಾತ ಖನಿಜ ನಿಕ್ಷೇಪಗಳನ್ನು ಗಮನದಲ್ಲಿಡಬೇಕು. ಇವು ಸಹ ಇದೇ ಯುಗದ ಪದರುಶಿಲೆ, ಸ್ಲೇಟುಗಳು ಮತ್ತು ಆ್ಯಂಫಿಬೊಲೈಟ್‌ಗಳಲ್ಲಿ ಅಡಕವಾಗಿವೆ. ಮಧ್ಯ ಆಸ್ಟ್ರೇಲಿಯದಲ್ಲಿ ಕಾಗೆಬಂಗಾರ, ಅಭ್ರಕ, ಬೆರಿಲ್ ನಿಕ್ಷೇಪಗಳು ಪೆಗ್ಮಟೈಟ್ ಶಿಲಾ ಸಮುದಾಯದಲ್ಲಿ ದೊರೆಯುತ್ತವೆ. ಕಿರಿಯ ಆದಿಜೀವಿ ಕಲ್ಪ (ಪ್ರೊಟಿರೋಜೋಯಿರೆ) ಭೂಕಾಲದ ಕಂಗ್ಲಾಮರೇಟ್, ಜೇಡುಶಿಲೆ ಮತ್ತು ಡಾಲೊಮೈಟ್ ಸ್ತರಗಳು ಕೇಂಬ್ರಿಯನ್ ಶಿಲಾಸ್ತರಗಳಿಗೆ ಎಡೆಮಾಡಿಕೊಟ್ಟಿವೆ.

ಕೇಂಬ್ರಿಯನ್ ಯುಗ: ಈ ಯುಗದ ಶಿಲಾಸ್ತರಗಳು ವಿಶಾಲವಾಗಿ ಹರಡಿವೆ. ಇವುಗಳಲ್ಲಿ ಮುಖ್ಯವಾದುವು ಸುಣ್ಣಶಿಲೆ ಮತ್ತು ಜೇಡುಶಿಲೆ. ಇವುಗಳಲ್ಲಿ ಉತ್ತಮವಾದ ಟ್ರೈಲೊಬೈಟ್‌ನ ಜೀವಾವಶೇಷಗಳಿವೆ. ಮಧ್ಯ ಆಸ್ಟ್ರೇಲಿಯದ ಬಾರ್ಕ್ಲಿಭೂಮಿ, ಕಿಂಬರ್ಲಿ ಜಿಲ್ಲೆ, ಮ್ಯಾಕ್ಡೊನಾಲ್ಡ್ ಪರ್ವತಶ್ರೇಣಿ–ಈ ಪ್ರದೇಶದಲ್ಲಿ ಕೇಂಬ್ರಿಯನ್ ಶಿಲಾಸ್ತರಗಳನ್ನು ನೋಡಬಹುದು. ಪಶ್ಚಿಮ ಆಸ್ಟ್ರೇಲಿಯದ ಆಂಟ್ರಿಂ ಪ್ರಸ್ಥಭೂಮಿ, ವಿಕ್ಟೋರಿಯ ಮತ್ತು ಟಾಸ್ಮೇನಿಯ ಪ್ರಾಂತ್ಯದ ಕೆಳ ಕೇಂಬ್ರಿಯನ್ ಯುಗದ ಬೆಸಾಲ್ಟ್ ಲಾವಾ ಸ್ತರಗಳಿವೆ. ಅದರಲ್ಲೂ ವಿಕ್ಟೋರಿಯ ಪ್ರಾಂತ್ಯದ ಈ ಶಿಲಾ ಸಮುದಾಯ ಸಹಸ್ರಾರು ಮೀಗಳಷ್ಟು ಮಂದವಾಗಿದ್ದು ಸಮುದ್ರಾಂತರ್ಗತ ಲಾವಾಗಳು, ಟಫ್ ಮತ್ತು ಅಗ್ನಿಶಿಲಾಛಿದ್ರಗಳಿಂದ ಹೀತ್‌ಕೋಟ್ ಡಯಬೇಸ್ ಶಿಲಾಸಮೂಹವೆನಿಸಿದೆ. ಇವುಗಳ ಮೇಲೆ ಮಧ್ಯ ಕೇಂಬ್ರಿಯನ್ ಯುಗದ ಜೀವಾವಶೇಷಗಳನ್ನು ಹೊಂದಿದ ಬೇಸಿಕ್ ಟಫ್‌ಗಳು, ಜೇಡುಶಿಲಾಸ್ತರಗಳು ಮತ್ತು ಚೆರ್ಟ್ ಶಿಲೆಗಳೂ ಮೇಲಿನ ಕೇಂಬ್ರಿಯನ್ ಯುಗದ ಗೋಲ್ಡೀ ಚೆರ್ಟ್‌ಶಿಲೆಗಳೂ ಇವೆ. ಕ್ರಮೇಣ ಇವು ಕೆಳ ಆರ್ಡೋವಿಷಿಯನ್ ಸ್ತರಗಳಿಗೆ ಅನುವು ಮಾಡಿಕೊಟ್ಟಿವೆ. ಅಡಿಲೇಡ್ ಮಹಾ ಅಭಿನತಿಗೆ (ಜಿಯೊಸಿಂಕ್ಲೈನ್) ಸಂಬಂಧಿಸಿದ ಸುಣ್ಣಶಿಲೆ ಮತ್ತು ಜೇಡುಶಿಲಾಸ್ತರಗಳಲ್ಲಿ ರೆಡ್‌ಲಿಕಿಯ ಪ್ರೊಟೊಲೆನಸ್ ಮತ್ತು ಇತರ ಬ್ರಾಕಿಯೋಪಾಡ್‌ಗಳ ಚಿಪ್ಪುಗಳಿವೆ.

ಆರ್ಡೋವೀಸಿಯನ್ ಯುಗ: ಇದರ ಶಿಲಾಸ್ತರಗಳು ಮುಖ್ಯವಾಗಿ ವಿಕ್ಟೋರಿಯ ಪ್ರಾಂತ್ಯ, ಟಾಸ್ಮೇನಿಯ ಮತ್ತು ಮಧ್ಯ ಆಸ್ಟ್ರೇಲಿಯಗಳಲ್ಲಿ ಪರಸ್ಪರ ವಿರುದ್ಧ ವರ್ಗದ ಶಿಲಾಸಮುದಾಯಗಳಲ್ಲಿ ಕಂಡುಬಂದಿವೆ. ವಿಕ್ಟೋರಿಯ ಪ್ರಾಂತ್ಯದಲ್ಲಿ ಗ್ರಾಪ್ಟೊಲೈಟ್ ಜೀವಾವಶೇಷಗಳಿಂದ ಕೂಡಿದ ಸ್ತರಗಳೂ ಟಾಸ್ಮೇನಿಯ ಮತ್ತು ಮಧ್ಯ ಆಸ್ಟ್ರೇಲಿಯಗಳಲ್ಲಿ ಬ್ರಾಕಿಯೋಪೊಡ ಮುಂತಾದ ಸಮುದ್ರಜೀವಿಗಳ ಚಿಪ್ಪುಗಳಿಂದ ಕೂಡಿದ ಶಿಲಾಸ್ತರಗಳೂ ಇವೆ. ಸುಣ್ಣಶಿಲೆಯಿಂದ ಕೂಡಿದ ಮಧ್ಯವರ್ತಿ ಶಿಲಾಸಮುದಾಯದ ಸ್ತರಗಳು ನ್ಯೂ ಸೌತ್‌ವೇಲ್ಸ್‌ನ ಆರೆಂಜ್‌ಜಿಲ್ಲೆ ಮತ್ತು ಪಶ್ಚಿಮ ಆಸ್ಟ್ರೇಲಿಯದ ಕಿಂಬರ್ಲಿಯಲ್ಲಿ ಕಂಡುಬಂದಿವೆ. ವಿಕ್ಟೋರಿಯ ಪ್ರಾಂತ್ಯದಲ್ಲಿ ಗ್ರಾಪ್ಟೋಲೈಟ್ ಜೀವಾವಶೇಷಗಳನ್ನು ಹೊಂದಿರುವ ಸ್ಲೇಟುಗಳೂ ಮತ್ತು ಇವುಗಳೊಡನೆ ಮಿಳಿತವಾಗಿರುವ ಮರಳು ಶಿಲಾಸ್ತರಗಳೂ ಬಹು ಉತ್ತಮ ರೀತಿಯಲ್ಲಿದ್ದು ಕ್ರಮೇಣ ತಮಗಿಂತ ಕಿರಿಯವಾದ ಸೈಲೂರಿಯನ್ ಸ್ತರಗಳಿಗೆ ಎಡೆಮಾಡಿ ಕೊಟ್ಟಿವೆ. ಜೀವಾವಶೇಷ ಚಿಪ್ಪುಗಳಿಂದ ಕೂಡಿದ ಈ ಯುಗದ ಜಲಜಶಿಲಾಸ್ತರಗಳು ಮಧ್ಯ ಆಸ್ಟ್ರೇಲಿಯದಲ್ಲಿ ಲ್ಯಾರಪಿಂಟೈನ್ ಸಮೂಹವೆಂದು ಪ್ರಸಿದ್ಧಿ ಪಡೆದಿವೆ. ಇವುಗಳಲ್ಲಿ ಅರ್ಥಿಡ್, ಟ್ರೈಲೊಬೈಟ್ ಮತ್ತು ಶಿರಪಾದಿಗಳ (ಕೆಫಲೊಪೊಡ)ಗಳ ಅವಶೇಷಗಳು ತುಂಬಿವೆ.

ಸೈಲೂರಿಯನ್ ಯುಗ: ಉತ್ತಮ ದರ್ಜೆಯ ಶಿಲಾಸ್ತರಗಳು ಪೂರ್ವ ಆಸ್ಟ್ರೇಲಿಯದ ಟಾಸ್ಮನ್ ಮಹಾಅಭಿನತಿಯ ಶಿಲಾಸಮುದಾಯಕ್ಕೆ ಸೀಮಿತವಾಗಿವೆ. ಸುಣ್ಣಶಿಲಾ ದಿಬ್ಬಗಳು ನ್ಯೂಸೌತ್‌ವೇಲ್ಸ್‌ನ ಚಿಲಾಗೊ, ಕ್ವೀನ್ಸ್‌ಲೆಂಡ್ ಮತ್ತು ಜೆನೊಲಾನ್ ಗುಹಾಪ್ರದೇಶಗಳಲ್ಲಿವೆ. ವಿಕ್ಟೋರಿಯ ಪ್ರಾಂತ್ಯದಲ್ಲೂ ಇದೇ ಯುಗದ ಗ್ರಾಪ್ಟೊಲೈಟ್ ಮತ್ತು ಚಿಪ್ಪುಗಳುಳ್ಳ ಜೇಡು ಮತ್ತು ಮರಳು ಶಿಲಾಸ್ತರಗಳನ್ನು ನೋಡಬಹುದು. ಮೆಲ್ಬೋರ್ನಿಯನ್ ಸ್ತರಗಳಲ್ಲಿ ಅತಿಪುರಾತನ ಭೂಸಸ್ಯ (ವ್ಯಾಸ್ಕ್ಯುಲರ್ ಲ್ಯಾಂಡ್ ಪ್ಲಾಂಟ್ಸ್) ಬಾರ್ಗ್ವೊನಾತಿಯ ಮತ್ತು ಗ್ರಾಪ್ಟೊಲೈಟ್ ಅವಶೇಷಗಳಿವೆ.

ಡಿವೋನಿಯನ್ ಯುಗ: ವಿಕ್ಟೋರಿಯ ಪ್ರಾಂತ್ಯದಲ್ಲಿ ಕೆಳ ಡಿವೋನಿಯನ್ ಸ್ತರಗಳು ಎರಿಂಜಿಯನ್ ಶ್ರೇಣಿಯಲ್ಲಿ ಬಹು ಚೆನ್ನಾಗಿ ಕಂಡುಬರುತ್ತವೆ. ಅಡಿಯಲ್ಲಿ ಪೆಂಟೆ ಶಿಲೆ (ಕಂಗ್ಲಾಮರೇಟ್), ಕ್ರಮೇಣ ಅದರ ಮೇಲೆ ಸುಣ್ಣ ಶಿಲಾಸ್ತರ, ಸಹಸ್ರಾರು ಅಡಿ ಮಂದವಿರುವ ವಾಲ್‌ಹಲಾ ಶ್ರೇಣಿ ಎನಿಸಿದ ಜೇಡು ಶಿಲಾಸ್ತರಗಳು ಮತ್ತು ಮರಳು ಶಿಲಾಸ್ತರಗಳಿವೆ. ಮಧ್ಯ ಡಿವೋನಿಯನ್ ಸುಣ್ಣಶಿಲಾ ದಿಬ್ಬಗಳಲ್ಲಿ ಮತ್ತು ಸುಣ್ಣಯುಕ್ತ ಜೇಡುಶಿಲಾ ಸ್ತರಗಳಲ್ಲಿ ಅಸಂಖ್ಯಾತ ಅಕಶೇರುಕಗಳ ಮತ್ತು ಮೀನುಗಳ ಅವಶೇಷಗಳಿವೆ. ಬಹುಶಃ ಈ ಯುಗದಲ್ಲೇ ಪರ್ವತ ಜನ್ಯ ಶಕ್ತಿಗಳು ಉದ್ಭವಿಸಿ ಅವುಗಳ ಪ್ರಭಾವಕ್ಕೆ ಪೂರ್ವ ಆಸ್ಟ್ರೇಲಿಯದ ಶಿಲೆಗಳೂ ಒಳಗಾದುವು. ವಿಕ್ಟೋರಿಯ ಪ್ರಾಂತ್ಯದ ಭೂಖಂಡದ ಮರಳು ಶಿಲಾಸ್ತಂಭಗಳು ಜೇಡು ಶಿಲಾಸ್ತರಗಳು ಮತ್ತು ಟಫ್‌ಗಳಲ್ಲಿ ಸಸ್ಯಗಳ ಮತ್ತು ಮೀನುಗಳ ಅವಶೇಷಗಳಿವೆ. ಇದೇ ಭೂಕಾಲದ ನ್ಯೂ ಸೌತ್‌ವೇಲ್ಸ್‌ನ ಲ್ಯಾಂಬಿಯನ್ ಶಿಲಾಸಮೂಹ ಸಮುದ್ರ ಆಕ್ರಮಣಕ್ಕೆ ಸಂಬಂಧಿಸಿದುದೆಂದು ಊಹಿಸಲಾಗಿದೆ.

ಇದೇ ಕಾಲದಲ್ಲಿ ಅಗ್ನಿಶಿಲಾ ಚಟುವಟಿಕೆಯೂ ತೀವ್ರಗತಿಯಲ್ಲಿತ್ತು. ವಿಕ್ಟೋರಿಯ ಪ್ರಾಂತ್ಯದಲ್ಲಿ ಅಧಿಕ ಸಿಲಿಕಾಂಶ ಲಾವಾ ಸ್ತರಗಳೂ ಲ್ಯಾಂಪ್ರೊಫೈರ್ ಮತ್ತು ಡಯೊರೈಟ್ ಡೈಕ್ ಶಿಲೆಗಳೂ ಕಂಡುಬಂದಿವೆ. ಅಲ್ಲದೆ ಯುಗದ ಅಂತ್ಯದಲ್ಲಿ ಉಂಟಾದ ಈ ಬಗೆಯ ಚಟುವಟಿಕೆಗಳಿಗೆ ಸಂಬಂಧಿಸಿದ ಡೇಸೈಟ್, ರಯೊಲೈಟ್ ಮುಂತಾದ ಅಗ್ನಿಶಿಲಾ (ಲಾವಾ) ಸ್ತರಗಳನ್ನು ನೋಡಬಹುದು. ಅಲ್ಲದೆ ಗ್ರಾನೊಡಯೊರೈಟ್ ಮತ್ತು ಅಡಮಲೈಟ್ ಡೈಕುಗಳನ್ನೂ ಸ್ಟಾಕ್‌ಗಳನ್ನೂ ಅನೇಕ ಕಡೆ ನೋಡಬಹುದು.

ಕಾರ್ಬಾನಿಫೆರಸ್ ಯುಗ: ಈ ಯುಗದ ಸ್ತರಗಳನ್ನು ನ್ಯೂ ಸೌತ್‌ವೇಲ್ಸ್‌ನ ಹಂಟರ್ ಕಣಿವೆ, ವಿಕ್ಟೋರಿಯ ಮತ್ತು ದಕ್ಷಿಣ ಕ್ವೀನ್ಸ್‌ಲೆಂಡ್ ಪ್ರಾಂತ್ಯಗಳಲ್ಲಿ ಅಧ್ಯಯನ ಮಾಡಬಹುದು. ಹಂಟರ್ ಕಣಿವೆಯ ಶಿಲಾಸಮುದಾಯ ಅಷ್ಟು ಆಳವಿಲ್ಲದ ಸಮುದ್ರ ಭಾಗಗಳಲ್ಲಿ ಮತ್ತು ಸಿಹಿನೀರಿನ ಜಲಾಶಯಗಳಲ್ಲಿ ಸಂಚಿತವಾಗುವ ಜಲಜ ಶಿಲಾಸ್ತರಗಳಿಂದ ಕೂಡಿದೆ. ಈ ಸಮುದಾಯದ ಮೇಲಿನ ಕುಟಿಂಗ್ ಸ್ತರಗಳಲ್ಲಿ ಹಿಮನದಿಯ ಪೆಂಟೆಶಿಲಾಸ್ತರಗಳು ಮತ್ತು (ವಾರ್ವ್) ವಾರ್ಷಿಕಪದರು ರಚನೆಗಳೂ ಕಂಡುಬಂದಿವೆ. ಖಂಡದಲ್ಲಿ ಈ ಕಾಲದಲ್ಲಿ ತಲೆದೋರಿದ ಹಿಮಯುಗದ ಮೊತ್ತಮೊದಲಿನ ಸಾಕ್ಷ್ಯವೇ ಇದು. ಹೀಗಾಗಿ ಭೂ ಅಧ್ಯಯನದಲ್ಲಿ ಇದಕ್ಕೆ ಪ್ರಾಶಸ್ತ್ಯ ಹೆಚ್ಚಿನದು.

ವಿಕ್ಟೋರಿಯ ಪ್ರಾಂತ್ಯದಲ್ಲಿನ ಕೆಳ ಕಾರ್ಬಾನಿಫೆರಸ್ ಶಿಲಾಸ್ತರಗಳಲ್ಲಿ ಮೀನುಗಳ ಅವಶೇಷಗಳು ಮತ್ತು ಅಂಗ್ಯುಲಾ ಚಿಪ್ಪುಗಳು ಅಡಗಿವೆ. ಅಲ್ಲದೆ ಶಿಲೆಗಳು ಪ್ರವಾಹಸ್ತರ (ಕರೆಂಟ್ ಬೆಡಿಂಗ್) ರಚನೆಯನ್ನು ತೋರುತ್ತವೆ.

ಸಮುದ್ರಭಾಗಗಳಲ್ಲಿ ಸಂಚಿತವಾದ ಈ ಯುಗದ ಶಿಲಾಸ್ತರಗಳನ್ನು ದಕ್ಷಿಣ ಕ್ವೀನ್ಸ್‌ಲೆಂಡಿನಲ್ಲಿ ಕಾಣಬಹುದು. ರಾಕ್‌ಹ್ಯಾಂಪ್ಟನ್ ಶಿಲಾಶ್ರೇಣಿ 1828 ಮೀ ಮಂದವಾಗಿದ್ದು, ಜೇಡುಶಿಲೆ, ಸಮುದ್ರಗತ ಟಫ್, ಊಲಿಟಿಕ್ ಸುಣ್ಣ ಶಿಲಾಸ್ತರಗಳಿಂದ ಕೂಡಿದೆ. ಈಚೆಗೆ ಈ ಯುಗದ ಶಿಲಾಸ್ತರಗಳನ್ನು ಪಶ್ಚಿಮ ಆಸ್ಟ್ರೇಲಿಯದ ಬರ್ಟ್ ಶ್ರೇಣಿಯಲ್ಲೂ ವಾಯವ್ಯ ಇಳುಕಲಿನಲ್ಲೂ ಗುರುತಿಸಲಾಗಿದೆ. ಎಲ್ಲೆಡೆಯೂ ಬ್ರಾಕಿಯೊಪಾಡ್ ಮತ್ತು ಟ್ರೈಲೊಬೈಟ್‌ಗಳ ಅಸಂಖ್ಯಾತ ಅವಶೇಷಗಳೂ ಲೆಪಿಡೊಡೆಂಡ್ರಾನ್ ಮತ್ತು ರೇಕಾಪ್ಟೆರಿಸ್ ಮುಂತಾದ ಪ್ರಾಚೀನ ಸಸ್ಯಗಳ ಅವಶೇಷಗಳೂ ಕಂಡುಬಂದಿವೆ.

ಪರ್ಮಿಯನ್ ಯುಗ: ಈ ಯುಗದ ಶಿಲಾಶ್ರೇಣಿಗಳು ಆರ್ಥಿಕವಾಗಿ ಬಹುಮುಖ್ಯ. ಕಾರಣ ಕಲ್ಲಿದ್ದಿಲಿನ ನಿಕ್ಷೇಪಗಳಿಗೆ ಇವೇ ತೌರು. ಇವು ನ್ಯೂ ಸೌತ್‌ವೇಲ್ಸ್ ಮತ್ತು ಕ್ವೀನ್ಸ್‌ಲೆಂಡ್ ಪ್ರಾಂತ್ಯದಲ್ಲಿ ಬಹು ಉತ್ತಮ ರೀತಿಯಲ್ಲಿ ಕಂಡುಬಂದು ಹಿಮನದಿಗಳ ಕಾರ್ಯಾಚರಣೆಗೆ ಸಂಬಂಧಿಸಿದ ಅನೇಕ ಕುರುಹುಗಳನ್ನೂ ಹೊಂದಿವೆ. ಇವುಗಳ ಆಧಾರದ ಮೇಲೆ ಖಂಡದ ಬಹುಭಾಗ ಪದೇ ಪದೇ ದೀರ್ಘಕಾಲದವರೆಗೆ ಹಿಮದ ಹಾಳೆಗಳಿಂದ ಆವೃತವಾಗಿತ್ತೆಂದು ಊಹಿಸಲಾಗಿದೆ. ನ್ಯೂ ಸೌತ್‌ವೇಲ್ಸ್‌ನಲ್ಲಿ ಶಿಲಾಸ್ತರಗಳು 4575 ಮೀ ಮಂದವಾಗಿದ್ದು ಭೂಯುಗದ ವಿವಿಧ ಹಂತಗಳನ್ನು ಗುರುತಿಸಬಹುದು. ಇವೇ ಕ್ವೀನ್ಸ್‌ಲೆಂಡಿನಲ್ಲಿ ಬವನ್‌ಶ್ರೇಣಿ ಎಂಬ ಹೆಸರಿನಿಂದ 5486 ಮೀ ಮಂದವಾಗಿವೆ.

ಟಾಸ್ಮೇನಿಯದಲ್ಲಿ ಈ ಯುಗದ ಸಮುದ್ರಸಂಚಿತ ಶಿಲಾಸ್ತರಗಳೂ ವಿಕ್ಟೋರಿಯ ಮತ್ತು ದಕ್ಷಿಣ ಆಸ್ಟ್ರೇಲಿಯಗಳಲ್ಲಿ ಹಿಮನದಿಯ ಶಿಲಾಸ್ತರಗಳೂ ಪಶ್ಚಿಮ ಆಸ್ಟ್ರೇಲಿಯದಲ್ಲಿ ಅಸಂಖ್ಯಾತ ಜೀವಾವಶೇಷಗಳನ್ನು ಹೊಂದಿದ ಶಿಲಾಶ್ರೇಣಿಗಳೂ ಕಂಡುಬಂದಿವೆ. ಶಿಲೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಗ್ಲಾಸಾಪ್ಟೆರಿಸ್ ಮತ್ತು ಗಂಗಮಾಪ್ಟೆರಿಸ್ ಸಸ್ಯಾವಶೇಷಗಳು ತುಂಬಿವೆ.

ಯುಗದ ಅಂತ್ಯದಲ್ಲಿ ನ್ಯೂ ಇಂಗ್ಲೆಂಡ್ ಮತ್ತು ಪೂರ್ವ ಕ್ವೀನ್ಸ್‌ಲೆಂಡ್‌ನಲ್ಲಿ ಪರ್ವತಜನ್ಯಶಕ್ತಿಗಳು ಆವಿರ್ಭವಿಸಿ ಹೊರಚಿಪ್ಪಿನ ರಚನೆಯಲ್ಲಿ ಅಧಿಕ ಸ್ತರಭಂಗಗಳೂ ಅಲ್ಲದೆ ಸರ್ಪೆಂಟೈನೈಟ್ ಮತ್ತು ಗ್ರ್ಯಾನೈಟ್ ಶಿಲಾಕೃತಿಗಳೂ ತೂರಿಬಂದುವು.

ಟ್ರೈಯಾಸಿಕ್ ಯುಗ: ಈ ಯುಗದ ಸಮುದ್ರಸಂಚಿತ ಸ್ತರಗಳು ಖಂಡದಲ್ಲಿ ಅಪರೂಪವೆನ್ನಬಹುದು. ಪೂರ್ವಭಾಗದಲ್ಲಿ ಸರೋವರ ನಿಕ್ಷೇಪಗಳಾದ ಜೇಡು ಮತ್ತು ಮರಳು ಶಿಲಾಸ್ತರಗಳಿವೆ. ಸಿಡ್ನಿ ಜಿಲ್ಲೆ ಮತ್ತು ಬ್ಲೂಮೌಂಟನ್ ಶ್ರೇಣಿಯಲ್ಲಿ ಅಗಾಧವಾಗಿ ಹರಡಿರುವ ಹಾಕ್ಸ್‌ಬರಿ ಮರಳು ಶಿಲಾಸ್ತರಗಳು ವಿಶಿಷ್ಟರೀತಿಯ ಪ್ರಸ್ಥಭೂಮಿ ಮತ್ತು ಕಡಿದಾದ ಕಣಿವೆಗಳಿಗೆ ಎಡೆಮಾಡಿಕೊಟ್ಟಿವೆ. ಬ್ರಿಸ್‌ಬೇನ್ ಬಳಿ ಕಂಡುಬರುವ (ವೆಲ್ಡೆಡ್ ಟಫ್) ಬೆಸೆದ ಅಗ್ನಿಶಿಲಾಛಿದ್ರ ಸ್ತರ ಎಂಬ ಅಗ್ನಿಶಿಲಾಸ್ತರಗಳಲ್ಲಿ ಆಗಿನ ಕಾಲದ ವೃಕ್ಷಗಳ ದೊಡ್ಡ ದೊಡ್ಡ ಕಾಂಡಗಳನ್ನೂ ಗುರುತಿಸಬಹುದು. ದಕ್ಷಿಣ ಆಸ್ಟ್ರೇಲಿಯ, ವಿಕ್ಟೋರಿಯ ಮತ್ತು ಟಾಸ್ಮೇನಿಯಗಳಲ್ಲಿ ಈ ಯುಗದ ಸಣ್ಣ ಸಣ್ಣ ನಿಕ್ಷೇಪಗಳಿವೆ.

ಜುರಾಸಿಕ್ ಯುಗ: ಖಂಡದ ಅನೇಕ ಕಡೆ ಸಿಹಿನೀರಿನ ಸರೋವರಗಳಿದ್ದುವು. ಸಮುದ್ರ ನಿಕ್ಷೇಪಗಳು ಕೇವಲ ಪಶ್ಚಿಮ ಪ್ರಾಂತ್ಯಕ್ಕೆ ಸೀಮಿತವಾಗಿದ್ದುವು. ಈ ಯುಗದ ನಿಕ್ಷೇಪಗಳಿಗೆ ಕ್ವೀನ್ಸ್‌ಲೆಂಡ್‌ನ ವಲ್ಲೂನ್ ಶ್ರೇಣಿಗಳೂ ನ್ಯೂ ಸೌತ್‌ವೇಲ್ಸ್‌ನ ಕ್ಲಾರೆನ್ಸ್ ಸಮುದಾಯವೂ ಉತ್ತಮ ಉದಾಹರಣೆಗಳು. ಇವು ಬಹುಮಟ್ಟಿಗೆ ಮರಳುಶಿಲೆ ಮತ್ತು ಜೇಡುಶಿಲಾಸ್ತರಗಳಿಂದ ಕೂಡಿದ್ದು ಅಲ್ಲಲ್ಲೇ ಕಲ್ಲಿದ್ದಿಲಿನ ಸಣ್ಣಪುಟ್ಟ ನಿಕ್ಷೇಪಗಳೂ ಇವೆ. ರಚನೆಯೂ ವಿಶಿಷ್ಟ ರೀತಿಯದಾಗಿದ್ದು ಅಲ್ಲಲ್ಲೇ ತೋಡಲಾಗಿರುವ ಆರ್ಟೀಸಿಯನ್ ಬಾವಿಗಳಲ್ಲಿ ಅಧಿಕ ಅಂತರ್ಜಲ ದೊರೆಯುತ್ತದೆ. ಪಶ್ಚಿಮ ಆಸ್ಟ್ರೇಲಿಯದ ಸಮುದ್ರ ನಿಕ್ಷೇಪಗಳಲ್ಲಿ ಅಸಂಖ್ಯಾತ ಅಮೊನೈಟ್‌ಗಳು ಹುದುಗಿವೆ.

ಕ್ರಿಟೇಷಿಯಸ್‌ಯುಗ: ಜುರಾಸಿಕ್ ಯುಗದ ಸರೋವರಗಳಿಗೆ ಕಾರಣಭೂತವಾದ ಭೂ ಚಟುವಟಿಕೆಗಳು ಈ ಯುಗದಲ್ಲೂ ಮುಂದುವರಿದು ಖಂಡದ ಬಹುಭಾಗ ಸಮುದ್ರದಿಂದ ಆವೃತವಾಗಿತ್ತು. ಯುಗದ ಮುಖ್ಯ ಶಿಲಾಶ್ರೇಣಿಗಳು ಬಹುಮಟ್ಟಿಗೆ ಜೇಡುಶಿಲೆಯಿಂದ ಕೂಡಿದ ರೋಮ (ಆಪ್ಟಿಯನ್) ಶ್ರೇಣಿ ಮತ್ತು ಟಾಂಬೋ (ಆಲ್ಬಿಯನ್) ಶ್ರೇಣಿ. ಇವುಗಳಲ್ಲಿ ಅಸಂಖ್ಯಾತ ಅಮೊನೈಟ್‌ಗಳು. ಹಲವು ಲೆಮೆಲಿಬ್ರಾಂಕ್ ಚಿಪ್ಪುಗಳು, ಪೊರಾಮಿನೆಫರ, ಇಕ್ತಿಯೊಸಾರ್, ಪ್ಲೀಸಿಯೊಸಾರ್ ಮತ್ತು ಕ್ರೋನೊಸಾರ್ ಮುಂತಾದ ಸರೀಸೃಪಗಳ ಅವಶೇಷಗಳಿವೆ. ಇವುಗಳಲ್ಲಿ ಕ್ರೋನೊಸಾರ್ ಗಾತ್ರದಲ್ಲಿ ಬಹುದೊಡ್ಡದು. ಸಿಹಿನೀರಿನಲ್ಲಿ ಜಲಜ ಶಿಲಾಸ್ತರಗಳ ಶ್ರೇಣಿಯೇ ವಿನ್‌ಟನ್ (ಸೆನೊಮೇನಿಯನ್) ಶಿಲಾಶ್ರೇಣಿ. ಇದು ಉತ್ತಮ ಜಲವಾಹಕವೂ ಹೌದು. ಕ್ವೀನ್ಸ್‌ಲೆಂಡ್‌ನ ತೀರಪ್ರದೇಶದಲ್ಲಿನ ಗ್ರಹಾಂಸ್ ಕ್ರೀಕ್ ಜ್ವಾಲಾಮುಖಿ ಶಿಲೆಗಳಾದ ಟ್ರ್ಯಾಕೈಟ್ ಮತ್ತು ಅಂಡಿಸಿಟಿಕ್ ಟಫ್‌ಗಳು ಈ ಭೂಯುಗದವು. ಬುರ್ರಂ ಮತ್ತು ಸ್ಟೈಕ್ ನದೀ ಪ್ರಾಂತ್ಯದ ಕಲ್ಲಿದ್ದಿಲಿನ ನಿಕ್ಷೇಪಗಳನ್ನು ಹೆಸರಿಸಬಹುದು. ಈ ಜಾಡಿನಲ್ಲಿರುವ ಶಿಲಾಪ್ರಸ್ತರಗಳು ಮಡಿಕೆ ಬಿದ್ದಿರುವುದೇ ಅಲ್ಲದೆ ಅಲ್ಲಲ್ಲೇ ಅವುಗಳನ್ನು ಗ್ರಾನೊಡಯೊರೈಟ್, ಸಯನೈಟ್ ಮತ್ತು ಡಯೊರೈಟ್ ಮುಂತಾದ ಅಗ್ನಿಶಿಲಾರೂಪಗಳು ಭೇದಿಸಿಕೊಂಡು ಬಂದಿವೆ. ಇವು ಯುಗದ ಅಂತ್ಯಕಾಲದವೆಂದು ಭಾವಿಸಲಾಗಿದೆ. ಪಾದರಸ, ಚಿನ್ನ ಮತ್ತು ಬಿಸ್ಮತ್ ಅದಿರು ನಿಕ್ಷೇಪಗಳಿಗೂ ಇವೇ ಮೂಲ.

ಆದರೆ ಪಶ್ಚಿಮ ಆಸ್ಟ್ರೇಲಿಯದ ಕ್ರಿಟೇಷಸ್ ಶಿಲೆಗಳು ಬಹುಮಟ್ಟಿಗೆ ಸಾಗರಜನಿತ. ಇವು ಹಸಿರು ಮರಳುಶಿಲೆ ಮತ್ತು ಸೀಮೆಸುಣ್ಣದ ಪ್ರಸ್ತರಗಳಿಂದ ಕೂಡಿವೆ. ವಿಲ್ಕಿನ್‌ಸನ್, ವರ್ಜೀನಿಯ ಮತ್ತು ವಾರ್‌ಬರ್ಟನ್ ಶ್ರೇಣಿಗಳಲ್ಲಿ ಈ ಶಿಲಾಸಮೂಹ 610ಮೀ ಮೀರಿ ಮಂದವಾಗಿದೆ.

ಟರ್ಷಿಯರಿ ಯುಗ: ಈ ಭೂಯುಗದ ಸಾಗರಜನಿತ ಶಿಲಾಶ್ರೇಣಿಗಳು–ವಿಕ್ಟೋರಿಯ, ದಕ್ಷಿಣ ಮತ್ತು ಪಶ್ಚಿಮ ಆಸ್ಟ್ರೇಲಿಯಗಳಲ್ಲಿ ಬಹು ಉತ್ತಮ ರೀತಿಯಲ್ಲಿ ನಿಕ್ಷೇಪವಾಗಿವೆ. ಮರೆ ಕೊಲ್ಲಿಯ ಪ್ರದೇಶದಲ್ಲಿ ಈ ಶ್ರೇಣಿಯಲ್ಲಿ ಗ್ರಿಟ್, ಜೇಡುಶಿಲೆ ಮತ್ತು ಸುಣ್ಣಶಿಲಾಸ್ತರಗಳಿವೆ. ಅಲ್ಲದೆ ಈ ಯುಗದ ವಿವಿಧ ಹಂತಗಳಾದ ಇಯೊಸೀನ್, ಆಲಿಗೋಸೀನ್, ಮಯೊಸೀನ್ ಮತ್ತು ಪ್ಲಯೊಸೀನ್ ಸ್ತರಗಳನ್ನೂ ನೋಡಲು ಸಾಧ್ಯ. ಹಲವು ಕಡೆ ಲಿಗ್ನೈಟ್ ಸಹ ದೊರೆಯುತ್ತದೆ. ದಕ್ಷಿಣ ಆಸ್ಟ್ರೇಲಿಯದ ಮೂರ್‌ಲ್ಯಾಂಡ್ಸ್ ಇದಕ್ಕೆ ಹೆಸರುವಾಸಿ. ಯುಗದುದ್ದಕ್ಕೂ ವಿವಿಧ ಘಟ್ಟಗಳಲ್ಲಿ ಜ್ವಾಲಾಮುಖಿಗಳ ಕಾರ್ಯಾಚರಣೆ ನಡೆಯುತ್ತಿತ್ತು. ಅಗಾಧ ಪ್ರಮಾಣದಲ್ಲಿ ಬೆಸಾಲ್ಟ್, ರಯೊಲೈಟ್, ಟ್ರಾಕೈಟ್ ಮುಂತಾದ ಲಾವಾಸ್ತರಗಳು ನಿಕ್ಷೇಪಗೊಂಡುವು.

ಅಲ್ಲಲ್ಲೆ ವಿವಿಧ ಪ್ರಮಾಣದ ಸರೋವರ ಮತ್ತು ಸಿಹಿನೀರಿನ ಶಿಲಾನಿಕ್ಷೇಪಗಳನ್ನೂ ಗುರುತಿಸಬಹುದು.

ಪ್ಲೀಸ್ಟೊಸೀನ್ ಯುಗ: ಸಮುದ್ರ ನೀರಿನ ಮಟ್ಟದಲ್ಲಿ ಆಗಾಗ ಏರುಪೇರು ಗಳಾಗುತ್ತಿತ್ತು. ಇದಕ್ಕೆ ಸಂಬಂಧಿಸಿದ ಶಿಲಾನಿಕ್ಷೇಪಗಳನ್ನು ಗುರುತಿಸಬಹುದು. ಹಿಮನದಿಗಳು ಮಧ್ಯ ಆಸ್ಟ್ರೇಲಿಯದ ಕೋಷಿಸ್ಕೊ ಪ್ರಸ್ಥಭೂಮಿಗೆ ಸೀಮಿತವಾಗಿದ್ದುವು. ಟಾಸ್ಮೇನಿಯದಲ್ಲೂ ಇವುಗಳ ಕಾರ್ಯಾಚರಣೆಯ ಗುರುತುಗಳಿವೆ. ಒಣಹವೆಯಿದ್ದ ಪ್ರದೇಶಗಳಲ್ಲಿ ದೊಡ್ಡ ಸರೋವರಗಳಿದ್ದುವು. ಇಲ್ಲಿ ನಿಕ್ಷೇಪಗೊಂಡ ಶಿಲಾಪ್ರಸ್ತರಗಳಲ್ಲಿ (ಡಿಪ್ರೊಟೊಡಾನ್) ನೀರುಕುದುರೆ, ಥೈಲಾಕೋಲಿಯೊ (ಮೂಲಸಿಂಹ), ಪಲೆರೊಚಸ್ಟಸ್ (ದೊಡ್ಡ ಕಾಂಗರೂ) ಮತ್ತು ಮೆಗಲೇನಿಯ (ದೊಡ್ಡ ಹಲ್ಲಿ)–ಇವುಗಳ ಅವಶೇಷಗಳಿವೆ. (ಬಿ.ವಿ.ಜಿ.)

**ಇತಿಹಾಸ ಪೂರ್ವದ ಚರಿತ್ರೆ:** ಆಸ್ಟ್ರೇಲಿಯದ ಇತಿಹಾಸಯುಗ ಪ್ರಾರಂಭವಾಗುವುದು 17–18ನೆಯ ಶತಮಾನದಲ್ಲಿ. ಯುರೋಪಿಯನ್ನರ ಆಗಮನದ ಅನಂತರ. ತತ್ಪೂರ್ವ ಅಲ್ಲಿದ್ದ ಮೂಲನಿವಾಸಿಗಳೆಲ್ಲರೂ ಶಿಲಾಯುಗದ ಸ್ಥಿತಿಯಲ್ಲೇ ಇದ್ದರು. ಈ ಜನ ಆಸ್ಟ್ರಲಾಯಿಡ್ ಬುಡಕಟ್ಟಿನವರಾಗಿದ್ದು, ಮಲಯ, ಇಂಡೊನೇಷ್ಯ, ಸಿಂಹಳ ಮತ್ತು ದಕ್ಷಿಣ ಭಾರತದಲ್ಲಿ ಹರಡಿರುವ ಹಲವು ಜನಾಂಗಗಳ ಗುಂಪಿಗೆ ಸೇರುತ್ತಾರೆ. ಆಸ್ಟ್ರೇಲಿಯ ಖಂಡಕ್ಕೆ ಎಂದು ಈ ಮೂಲನಿವಾಸಿಗಳು ವಲಸೆ ಬಂದರೆಂದು ನಿಷ್ಕರ್ಷಿಸಲು ಸಾಧ್ಯವಾಗಿಲ್ಲ. ಪ್ಲಿಸ್ಟೊಸೀನ್ (ಹಿಮಯುಗ) ಕಾಲಕ್ಕೆ ಸಂಬಂಧಿಸಿದ ಆದಿಮಾನವನ ಜೀವಾವಶೇಷಗಳಾವುವೂ ಇದುವರೆಗೆ ಈ ಖಂಡದಲ್ಲಿ ದೊರೆತಿಲ್ಲ. ಈ ದ್ವೀಪಖಂಡವನ್ನು ದೋಣಿಗಳಲ್ಲಿ ಮಾತ್ರವೇ ತಲಪಲು ಸಾಧ್ಯವಾದ್ದರಿಂದ, ಇತರೆಡೆಯ ಶಿಲಾಯುಗದ ಸಂಸ್ಕೃತಿಗಳಲ್ಲಿ ದೋಣಿಯ ಉಪಯೋಗ ಪ್ರಚಲಿತವಾದ ಮೇಲೆಯೇ ಅಂದರೆ ಹಿಮಯುಗಗಳು ಕಳೆದು ಹೊಸ ಉಷ್ಣಯುಗ ಬಂದ ಅನಂತರವೇ ಜನ ಇಲ್ಲಿಗೆ ಬಂದರೆಂದು ಊಹಿಸಬಹುದು.

ಆಗ್ನೇಯ ಆಸ್ಟ್ರೇಲಿಯದ ಕೀಲೋಲ್ ಎಂಬ ಸ್ಥಳದಲ್ಲಿ ದೊರಕಿದ ಆಸ್ಟ್ರಲಾಯ್ಡ್ ಗುಂಪಿಗೆ ಸೇರಿದ ಒಂದು ತಲೆಬುರುಡೆ ಆಸ್ಟ್ರೇಲಿಯದ ಆದಿವಾಸಿಗಳ ಬಗ್ಗೆ ದೊರಕುವ ಅತ್ಯಂತ ಪ್ರಾಚೀನ ಕುರುಹು. ಇದರ ಕಾಲ ಸುಮಾರು ಪ್ರ.ಶ.ಪೂ. 6500. ಅದೇ ಪ್ರದೇಶದಲ್ಲೇ ಮರೆನದಿಯ ದಂಡೆಯಲ್ಲಿ ಡೆವಾನ್ ಡೇನ್ಸ್ ಎಂಬ ಸ್ಥಳದಲ್ಲಿ ನಡೆಸಿದ ಉತ್ಖನನದಲ್ಲಿ ಕೆಲವು ಪ್ರಾಚೀನ ಸಂಸ್ಕೃತಿಗಳು ಗುರುತಿಸಲ್ಪಟ್ಟಿವೆ. ಇವುಗಳಲ್ಲಿ ಅತ್ಯಂತ ಹಳೆಯದು ಪ್ರ.ಶ.ಪೂ. 2500ಕ್ಕಿಂತಲೂ ಹಿಂದಿನ ಕಾಲದ್ದು. ಅಂದಿನಿಂದ 17–18ನೆಯ ಶತಮಾನದವರೆಗೂ ಪ್ರಚಲಿತವಾಗಿದ್ದ ಆಸ್ಟ್ರೇಲಿಯದ ಸಂಸ್ಕೃತಿಗಳ ಪರಂಪರೆಯನ್ನು ಡೆವಾನ್ ಡೌನ್ಸ್‌ನಲ್ಲಿ ಕಾಣಬಹುದು.

ದಕ್ಷಿಣ ಆಸ್ಟ್ರೇಲಿಯದಲ್ಲಿ ಮರೆ ನದಿಯ ದಕ್ಷಿಣದಲ್ಲೂ ನ್ಯೂ ಸೌತ್‌ವೇಲ್ಸ್ ಪ್ರಾಂತ್ಯದಲ್ಲೂ ಹಲವು ತ್ರಿಕೋನ ಮತ್ತು ಚತುಷ್ಕೋನಾಕೃತಿಯ ಸಣ್ಣ ಶಿಲಾಯುಧಗಳನ್ನೊಳಗೊಂಡ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗಳು ಹರಡಿದ್ದುವು. ಇವುಗಳಲ್ಲಿ ಕೆಲವು ಏಷ್ಯದ ಸೂಕ್ಷ್ಮ ಶಿಲಾಯುಗದವುಗಳನ್ನು ಹೋಲುತ್ತವೆ. ಯುರೋಪಿಯನ್ನರ ನಾಗರಿಕತೆಯ ಪ್ರಭಾವದಿಂದ, ಅಲ್ಲಿಯ ಮೂಲನಿವಾಸಿಗಳ ಸಂಸ್ಕೃತಿಗಳು ಶೀಘ್ರವಾಗಿ ನಶಿಸುತ್ತಿವೆ. (ಎಸ್.ಎನ್.)

**ಇತಿಹಾಸ:** ಖಂಡ ಪ್ರಾಚೀನವಾದರೂ ಇತಿಹಾಸ ತೀರ ಇತ್ತೀಚಿನದು. 18ನೆಯ ಶತಮಾನದ ಅಂತ್ಯಭಾಗದಲ್ಲಿ ಐರೋಪ್ಯ (ಪಾಶ್ಚಾತ್ಯ) ರಾಷ್ಟ್ರಗಳ ಗಮನ ಇತ್ತ ಹರಿದಾಗಿನಿಂದ ಈ ಖಂಡದ ಇತಿಹಾಸ ಪ್ರಾರಂಭವಾಯಿತೆಂದು ಹೇಳಬಹುದು. ಯುರೋಪಿನವರು ಇಲ್ಲಿಗೆ ವಲಸೆ ಬರುವ ಮೊದಲು ಸಮಗ್ರ ಖಂಡ ಆದಿವಾಸಿಗಳ ನೆಲೆಬೀಡಾಗಿತ್ತು. ಅವರ ಸಂಖ್ಯೆ 1788ರಲ್ಲಿ 71/2 ಲಕ್ಷವಿತ್ತು. ಸಾಮಾಜಿಕ ಸ್ಥಿತಿ ಆಚಾರಗಳೂ ಪ್ರಚಲಿತವಿದ್ದುವು. ಈ ಜನ ಯುರೋಪಿನವರ ಅಕ್ರಮಣದ ಹೊಡೆತಕ್ಕೆ ಸಿಕ್ಕಿ ಬಹಳ ಹಿಂಸೆಗೊಳಗಾದರು. ಅವರ ಸಂಖ್ಯೆ ಕಡಿಮೆಯಾಗುತ್ತ ಬಂದು, ಈಗ ಅವರು ಮಧ್ಯ ಮತ್ತು ಉತ್ತರ ಆಸ್ಟ್ರೇಲಿಯದ ಬೆಂಗಾಡು ಪ್ರದೇಶದಲ್ಲಿ ಬಹು ಕಷ್ಟದಾಯಕ ಜೀವನವನ್ನು ನಡೆಸುತ್ತಿದ್ದಾರೆ.

12ನೆಯ ಶತಮಾನದವರೆಗೆ ಯುರೋಪಿಯನ್ನರಿಗೆ ಆಸ್ಟ್ರೇಲಿಯ ಖಂಡ ಇರುವುದೆಂಬುದೇ ತಿಳಿದಿರಲಿಲ್ಲ. ಮಾರ್ಕೊಪೋಲೊ ತನ್ನ ಏಷ್ಯ ಸಂಚಾರವನ್ನು ಮುಗಿಸಿ ಯುರೋಪಿಗೆ ಹಿಂದಿರುಗಿದಾಗ ವಿಷುವದ್ರೇಖೆಯ ದಕ್ಷಿಣಕ್ಕೆ ಸಂಬಾರ ಪದಾರ್ಥಗಳು ವಿಪುಲವಾಗಿ ಬೆಳೆಯುವ ದೇಶವೊಂದಿರುವುದಾಗಿ ವರದಿ ಮಾಡಿದ್ದ. 16ನೆಯ ಶತಮಾನದಲ್ಲಿ ಈ ದೇಶವನ್ನು ಕಂಡುಹಿಡಿಯುವ ಪ್ರಯತ್ನಗಳು ನಡೆದುವು. ಇಂಗ್ಲೆಂಡ್ ಸರ್ಕಾರ ಸರ್ ಫ್ರಾನ್ಸಿಸ್ ಡ್ರೇಕ್‌ನನ್ನು ಈ ಉದ್ದೇಶದಿಂದ ಸಕಲ ಸನ್ನಾಹದೊಡನೆ ಕಳಿಸಿತು. ಆದರೆ, ಈ ಯಾನ ಸಫಲವಾಗಲಿಲ್ಲ. ಡಚ್ಚರು ಪೆಸಿಫಿಕ್ ಸಾಗರಕ್ಕೆ ನುರಿತ ನಾವಿಕರನ್ನು ಕಳಿಸಿದರು. 1605–06 ರಲ್ಲಿ ಡಚ್ ನಾವಿಕನೊಬ್ಬ ಕ್ವೀನ್ಸ್‌ಲೆಂಡಿನ ಸಮೀಪದಲ್ಲಿ ಹಾದುಹೋದ. 1642ರಲ್ಲಿ ಟಾಸ್ಮನ್ ಟಾಸ್ಮೇನಿಯದಲ್ಲಿ ಬಂದಿಳಿದ. 1688ರಲ್ಲಿ ವಿಲಿಯಂ ಡ್ಯಾಂಪೀರ್‌ನೆಂಬ ಕಡಲುಗಳ್ಳ ಪಶ್ಚಿಮ ಆಸ್ಟ್ರೇಲಿಯದಲ್ಲಿ ಇಳಿದಿದ್ದನೆಂಬ ಸುದ್ದಿ ಇಂಗ್ಲೆಂಡಿನಲ್ಲಿ ಒಂದು ಹೊಸ ಉತ್ಸಾಹವನ್ನು ಹುಟ್ಟಿಸಿತು.

ಕಡೆಗೆ ಇಂಗ್ಲೆಂಡ್ ಸರ್ಕಾರದ ಆದೇಶದ ಮೇರೆ ಕ್ಯಾಪ್ಟನ್ ಜೇಮ್ಸ್ ಕುಕ್ 1769ರಲ್ಲಿ ಕೆಲ ಹಡಗುಗಳೊಡನೆ ಹೊರಟು ಪೆಸಿಫಿಕ್ ಸಾಗರದ ಅನೇಕ ನಡುಗಡ್ಡೆಗಳನ್ನು ಶೋಧಮಾಡಿ ಪೂರ್ವ ಆಸ್ಟ್ರೇಲಿಯದ ತೀರವನ್ನು ತಲಪಿದನಲ್ಲದೆ (20 ಏಪ್ರಿಲ್ 1770), ಆ ತೀರಪ್ರದೇಶವನ್ನೆಲ್ಲ ಪರಿಶೀಲಿಸಿ ಅದನ್ನು ನ್ಯೂಸೌತ್‌ವೇಲ್ಸ್ ಎಂದು ಕರೆದ ಮತ್ತು ಅದನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸಿಕೊಂಡಿರುವುದಾಗಿ ಸಾರಿದ. ಆಸ್ಟ್ರೇಲಿಯದ ಪೂರ್ವಕರಾವಳಿಯನ್ನು ಪ್ರವೇಶಿಸಿದ ಪ್ರಥಮ ಐರೋಪ್ಯನೆಂಬ ಹೆಗ್ಗಳಿಕೆ ಅವನದು. ಅವನ 1772 ಮತ್ತು 1776ರ ಪ್ರವಾಸಗಳ ಫಲವಾಗಿ ಆಸ್ಟ್ರೇಲಿಯದ ಬಗೆಗೆ ವಿಶೇಷ ಜ್ಞಾನ ಇಂಗ್ಲೆಂಡಿನಲ್ಲಿ ಬೆಳೆಯಿತು.

ಆಸ್ಟ್ರೇಲಿಯ ಶೋಧವಾದಂದಿನಿಂದ ಆ ದೇಶದಲ್ಲಿ ವಸಾಹತುಗಳೂ ಪ್ರಾರಂಭವಾದುವು. ಅಮೆರಿಕದ ವಸಾಹತುಗಳನ್ನು ಕಳೆದುಕೊಂಡ ಇಂಗ್ಲೆಂಡಿಗೆ ಕೈದಿಗಳನ್ನಿಡುವ ಸಲುವಾಗಿ ಹೊಸದೊಂದು ವಸಾಹತಿನ ಆವಶ್ಯಕತೆಯಿತ್ತು. 1787ರಲ್ಲಿ 759 ಕೈದಿಗಳು ಹಾಗೂ 206 ಸೈನಿಕರು, 1487 ಜನರನ್ನು ಒಳಗೊಂಡ 11 ಬ್ರಿಟಿಷ್ ನೌಕೆಗಳು ಇಂಗ್ಲೆಂಡಿನಿಂದ

ಆಸ್ಟ್ರೇಲಿಯಕ್ಕೆ ಪ್ರಯಾಣಿಸಿದವು. ಆರ್ಥರ್ ಫಿಲಿಪ್ ಈ ನೌಕಾಪಡೆಯ ನಾಯಕನಾಗಿದ್ದನು. ಅವನು ನ್ಯೂ ಸೌತ್ ವೇಲ್ಸ್‌ನ ಪ್ರಥಮ ಗವರ್ನರ್. ಈ ಹಡಗುಗಳು 1788 ಜನವರಿಯಲ್ಲಿ ಆಸ್ಟ್ರೇಲಿಯದ ಬಾಟನಿ ಕೊಲ್ಲಿಯನ್ನು ತಲುಪಿದವು. ಆದರೆ ಅವನಿಗೆ ಕೊಲ್ಲಿ ಸೂಕ್ತವಾದ ಸ್ಥಳವಾಗಿ ಕಂಡುಬರಲಿಲ್ಲ. ಆದ್ದರಿಂದ ಅವನು ತನ್ನ 11 ಹಡಗುಗಳೊಂದಿಗೆ ಪೋರ್ಟ್ ಜಾಕ್‌ಸನ್‌ಗೆ ತೆರಳಿದನು. ಇದನ್ನು ಅವನು ವಿಶ್ವದ ಅತ್ಯುತ್ತಮ ಬಂದರು ಎಂದು ವರ್ಣಿಸಿದ್ದಾನೆ. ಅಡಚಣೆಗಳು ಜರುಗಿದುವು. ಆದರೆ ಸರ್ಕಾರದ ಉದಾರ ಧೋರಣೆ ಮತ್ತು ಬಂಗಾರದ ಶೋಧದಿಂದ ಜನರ ಆರ್ಥಿಕ ಜೀವನ ಉತ್ತಮಗೊಂಡಿತು. ನಾಡಿನ ಸಂಪತ್ತು ಬೆಳೆಯಿತು. ರಾಜಕೀಯದಲ್ಲಿ ವಿಕ್ಟೋರಿಯ ಪ್ರಾಂತ್ಯವು ನ್ಯೂ ಸೌತ್‌ವೇಲ್ಸ್ ಬೇರ್ಪಟ್ಟು ಎರಡೂ ರಾಜ್ಯಗಳಿಗೆ ಸ್ವಾಧಿಕಾರ ಸಿಕ್ಕಿತು. ಹೊಸ ಘಟನೆ ರಚಿಸಲ್ಪಟ್ಟು ಇಮ್ಮನೆ ಶಾಸಕಾಂಗ ಪದ್ಧತಿ ಜಾರಿಗೆ ಬಂತು.




ರಾಜಕೀಯ ಭೂಪಟ

ಈ ಸ್ಥಳವೇ ಮುಂದೆ ಸುಪ್ರಸಿದ್ಧ ಸಿಡ್ನಿ ಬಂದರು ನಗರವಾಗಿ ಬೆಳೆಯಿತು. ಫಿಲಿಪ್ ನ್ಯೂ ಸೌತ್ ವೇಲ್ಸ್‌ನ ಪ್ರಥಮ ಗವರ್ನರ್ ಆಗಿ ನೇಮಕಗೊಂಡನು (1788–92). ಇಲ್ಲಿಂದ ಮುಂದೆ, ನ್ಯೂ ಸೌತ್‌ವೇಲ್ಸ್ ಸರ್ಕಾರದ ಆದೇಶದ ಮೇಲೆ ಸಿಡ್ನಿಯ ಉತ್ತರ ಮತ್ತು ದಕ್ಷಿಣ ತೀರಪ್ರದೇಶಗಳ ಮತ್ತು ಒಳನಾಡಿನ ಶೋಧ ನಡೆಯಿತು. ಹೊಸ ಹೊಸ ನೆಲೆಗಳು ಸ್ಥಾಪಿತವಾದವು. ಜನಸಂಖ್ಯೆ ಬೆಳೆಯುತ್ತ ಹೋಯಿತು. 1875ರ ವೇಳೆಗೆ ಇಡೀ ಆಸ್ಟ್ರೇಲಿಯದ ಮುಖ್ಯ ಭೌಗೋಳಿಕ ಲಕ್ಷಣಗಳ ಪೂರ್ಣ ಪರಿಚಯವಾಯಿತು. ಹೊಸ ವಸಾಹತುಗಳ ಸ್ಥಾಪನೆಯಾಯಿತು; ಮತ್ತು ಸಂಪನ್ಮೂಲಗಳನ್ನು ಬೆಳೆಸಿಕೊಂಡು ತನ್ಮೂಲಕ ಆರ್ಥಿಕ ಪ್ರಗತಿಯನ್ನು ಸಾಧಿಸುವ ಪ್ರಯತ್ನಗಳು ನಡೆದುವು.

ಗವರ್ನರ್ ಫಿಲಿಪ್ 1792ರಲ್ಲಿ ಇಂಗ್ಲೆಂಡಿಗೆ ಮರಳಿದ. ಮುಂದಿನ 30 ವರ್ಷಗಳಲ್ಲಿ ನ್ಯೂ ಸೌತ್‌ವೇಲ್ಸ್ ಸರ್ಕಾರದ ಸೈನ್ಯಾಧಿಕಾರಿಗಳ ಕೈಗೆ ಬಂತು. ಈ ಸರ್ಕಾರದ ಅವಧಿಯಲ್ಲಿ ದನಕುರಿಗಳನ್ನು ಸಾಕುವಿಕೆ, ವ್ಯವಸಾಯ ಇವುಗಳ ಬೆಳವಣಿಗೆಗೆ ಗಮನ ಕೊಟ್ಟಿತು. ರಸ್ತೆಗಳು ನಿರ್ಮಾಣವಾದುವು. ಗವರ್ನರ್ ಬ್ರಿಸ್‌ಬೇನ್‌ನ ಕಾಲದಲ್ಲಿ (1821–25) ರಾಜಕೀಯ ಸುಧಾರಣೆಗಳಾದುವು. ಆತನ ಸಹಾಯಕ್ಕೆ ಒಂದು ಪ್ರಜಾಪ್ರತಿನಿಧಿ ಮಂಡಳಿಯ ನೇಮಕ ವಾಯಿತು (1823). ಮುಂದಿನ ಗವರ್ನರ್ ರಾಲ್ಫ್ ಡಾರ್ಲಿಂಗ್‌ನ ಕಾಲದಲ್ಲಿ ದೊಡ್ಡ ಸಾಗುವಳಿ ಕ್ಷೇತ್ರಗಳು ಜಮೀನುದಾರರಿಗೆ ಸಿಕ್ಕವು. ಇದರಿಂದ ಉಣ್ಣೆಯ ಉದ್ಯೋಗ ಬೆಳೆಯಿತು. ಇಂಗ್ಲೆಂಡಿನಿಂದ ಜನ ಅಧಿಕ ಸಂಖ್ಯೆಯಲ್ಲಿ ವಲಸೆ ಬಂದರು. ಸ್ವಾಧಿಕಾರದ ಸಲುವಾಗಿ ಚಳವಳಿಗಳು ನಡೆದುವು. 1828–42ರವರೆಗೆ ಆರ್ಥಿಕ ವ್ಯವಸ್ಥೆಯಲ್ಲಿ ಅನೇಕ

ಇಲ್ಲಿಯವರೆಗಿನದು ಆಸ್ಟ್ರೇಲಿಯದ ಅಂದರೆ ನ್ಯೂ ಸೌತ್‌ವೇಲ್ಸ್‌ನ ಇತಿಹಾಸ. 1850ರ ವೇಳೆಗೆ ಆಸ್ಟ್ರೇಲಿಯದ ಬೇರೆ ಬೇರೆ ಭಾಗಗಳಲ್ಲಿ ಪ್ರತ್ಯೇಕ ವಸಾಹತುಗಳೂ ಸರ್ಕಾರಗಳೂ ಜಾರಿಯಲ್ಲಿ ಬಂದು ಸಮಗ್ರ ನಾಡಿನ ಅಭಿವೃದ್ಧಿಯಾಗತೊಡಗಿತ್ತು. ಆಸ್ಟ್ರೇಲಿಯದ ಮುಂದಿನ ಇತಿಹಾಸವನ್ನು ಅಭ್ಯಸಿಸುವ ಮೊದಲು ವಿಕ್ಟೋರಿಯ, ದಕ್ಷಿಣ ಆಸ್ಟ್ರೇಲಿಯ, ಕ್ವೀನ್ಸ್‌ಲೆಂಡ್ ಮತ್ತು ಪಶ್ಚಿಮ ಆಸ್ಟ್ರೇಲಿಯಗಳಲ್ಲಿ ವಸಾಹತುಗಳು ಹೇಗೆ ಸ್ಥಾಪಿತವಾದುವು ಮತ್ತು ಬೆಳೆದುವು ಎಂಬ ವಿಷಯವನ್ನು ನೋಡಬೇಕು.

ವಿಕ್ಟೋರಿಯ ರಾಜ್ಯದಲ್ಲಿ ಪ್ರಥಮ ವಸಾಹತು ಟಾಸ್ಮೇನಿಯದಿಂದ ವಲಸೆ ಬಂದ ಜನರಿಂದ ಪೋರ್ಟ್‌ಲೆಂಡ್ ಎಂಬಲ್ಲಿ ಸ್ಥಾಪಿತವಾಯಿತು (1834). 1835ರಲ್ಲಿ ಪೋರ್ಟ್ ಫಿಲಿಪ್ ಎಂಬಲ್ಲಿ ಜಾನ್ ಬ್ಯಾಟ್‌ಮನ್ ಸ್ಥಾಪಿಸಿದ ನೆಲೆ ಬೆಳೆಯುತ್ತ ಬಂದು ಕಡೆಗೆ ಮೆಲ್ಬರ್ನ್ ನಗರವಾಗಿ ಪರಿಣಮಿಸಿತು. ಈ ನೆಲೆಗಳು ಮೊದಲು ನ್ಯೂ ಸೌತ್‌ವೇಲ್ಸ್ ಸರ್ಕಾರದ ಅಧೀನದಲ್ಲಿದ್ದು, ಕ್ರಮೇಣ ವಿಸ್ತಾರಗೊಳ್ಳುತ್ತ ಬಂದುವು. ಜನಸಂಖ್ಯೆ ಏರುತ್ತ ಬಂದು ಕುರಿಸಾಕಣೆ ಅವರ ಮುಖ್ಯ ಉದ್ಯೋಗವಾಯಿತು. 1850ರಲ್ಲಿ ವಿಕ್ಟೋರಿಯದಲ್ಲಿ 26,000 ಜನರೂ 60 ಲಕ್ಷ ಕುರಿಗಳೂ ಇದ್ದುವೆಂದು ಹೇಳಲಾಗಿದೆ. ಮೆಲ್ಬರ್ನ್, ಗೀಲಾಂಗ್ ಮತ್ತು ಪೋರ್ಟ್‌ಲೆಂಡ್‌ಗಳು ಈ ಪ್ರದೇಶದ ಮುಖ್ಯ ಶಹರುಗಳು. 1851ರಲ್ಲಿ ವಿಕ್ಟೋರಿಯ ನ್ಯೂ ಸೌತ್‌ವೇಲ್ಸ್‌ನಿಂದ ಪ್ರತ್ಯೇಕವಾಗಿ, ತನ್ನದೇ ಆದ ಸರ್ಕಾರವನ್ನು ಪಡೆಯಿತು. ಮುಂದೆ ವ್ಯವಸಾಯ ಅಭಿವೃದ್ಧಿಗೊಂಡು 1900ರಲ್ಲಿ ಈ ಪ್ರದೇಶ ಗೋದಿ ಬೆಳೆಯುವ ಪ್ರಮುಖ ಪ್ರಾಂತ್ಯವಾಯಿತು.

ದಕ್ಷಿಣ ಆಸ್ಟ್ರೇಲಿಯದ ಕರಾವಳಿ ಪ್ರದೇಶದ ಶೋಧನೆ 1802ರಲ್ಲೇ ಪ್ರಾರಂಭವಾದರೂ ಅಲ್ಲಿ 1830ರ ಅನಂತರ ವಲಸೆಗಾರರ ನೆಲೆಗಳು ಸ್ಥಾಪಿತವಾದುವು. 1836ರಲ್ಲಿ ಪ್ರತ್ಯೇಕವಾದ ವಸಾಹತು ಸ್ಥಾನವನ್ನು ಪಡೆಯಿತು. 1830ರಲ್ಲಿ ಸ್ಥಾಪನೆಯಾದ ದಕ್ಷಿಣ ಆಸ್ಟ್ರೇಲಿಯ ಕಂಪನಿ ಎಂಬ ಸಂಸ್ಥೆ ವ್ಯವಸಾಯದಲ್ಲಿ ಜನರ ಸಹಾಯಕ್ಕೆ ಬಂದುದಲ್ಲದೆ ಸರ್ಕಾರದ ಧೋರಣೆಯಲ್ಲೂ ತನ್ನ ಪ್ರಭಾವ ಬೀರಿತು. 1842ರಲ್ಲಿ ಅಡಿಲೇಡ್ ನಗರದ ಸ್ಥಾಪನೆಯಾಯಿತು. ಒಳನಾಡಿನ ಪ್ರದೇಶಗಳು ಶೋಧಿಸಲ್ಪಟ್ಟು ವ್ಯವಸಾಯದ ಪ್ರಸಾರವಾಯಿತು. ಜಾತ್ಯತೀತ ಶಿಕ್ಷಣ ಕ್ರಮದಿಂದಾಗಿ ಜನರ ಪ್ರಗತಿ ತೀವ್ರಗತಿಯಲ್ಲಿ ಸಾಗಿತು. ಕ್ರೈಸ್ತಧರ್ಮದ ಅನೇಕ ಸಂಸ್ಥೆಗಳು ಅಡಿಲೇಡ್‍ನಲ್ಲಿದ್ದು ಆ ನಗರ ಚರ್ಚುಗಳ ನಗರವೆನಿಸಿದೆ. 1860–1900ರ ಅವಧಿಯಲ್ಲಿ ಇಡಿಯ ರಾಜ್ಯದ ಶೋಧವಾದುದಲ್ಲದೆ ಉಣ್ಣೆ ಮತ್ತು ಕೃಷಿ ಉದ್ದಿಮೆಗಳು ಭರದಿಂದ ಬೆಳೆದುವು. 3200 ಕಿಮೀ ರೈಲ್ವೆ ಮಾರ್ಗಗಳು ನಿರ್ಮಾಣವಾದುವು. ಹೊಸ ವೈಜ್ಞಾನಿಕ ಶೋಧನೆಗಳನ್ನು ಅಳವಡಿಸಿಕೊಂಡು ರಾಜ್ಯ ಪ್ರಗತಿಪಥದಲ್ಲಿ ಸಾಗಿತು.

ಕ್ವೀನ್ಸ್‍ಲೆಂಡನ್ನು 1823ರಲ್ಲಿ ಜಾನ್ ಆಕ್ಸ್‍ಲಿ ಗುರುತಿಸಿದ ಅನಂತರ ಈಗಿನ ಬ್ರಿಸ್‍ಬೇನ್ ನಗರದ ಬಳಿ ಪ್ರಥಮ ಕೈದಿಗಳ ಠಾಣ್ಯ ಏರ್ಪಟ್ಟಿತು. ದೇಶದ ಒಳಭಾಗ ಅಲೆನ್ ಕನಿಂಗ್ ಹ್ಯಾಮನಿಂದ 1827ರಲ್ಲಿ ಶೋಧಿಸಲ್ಪಟ್ಟು ಮತ್ತಷ್ಟು ನೆಲೆಗಳ ಸ್ಥಾಪನೆಗೆ ಸಹಾಯವಾಯಿತು. ಕ್ರಮೇಣ ಈ ವಸಾಹತು ಬೆಳೆಯಿತು. ಜನಸಂಖ್ಯೆ 23,520 ಇದ್ದಾಗ 1859ರಲ್ಲಿ ಇದು ಸ್ವತಂತ್ರ ಸರ್ಕಾರವನ್ನು ಪಡೆಯಿತು. ಉಣ್ಣೆ ಉದ್ಯೋಗಕ್ಕೆ ಸರ್ಕಾರದ ಉತ್ತೇಜನ ದೊರಕಿತು. ಆರ್ಟೀಸಿಯನ್ ಬಾವಿಗಳನ್ನು ತೋಡುವ ಕಾರ್ಯ ಭರದಿಂದ ಸಾಗಿತು. ರೈಲ್ವೆ ಮಾರ್ಗಗಳು ನಿರ್ಮಿಸಲ್ಪಟ್ಟುವು. ಕೃಷಿ ಕಾರ್ಯ ತ್ವರಿತವಾಗಿ ಹರಡಿತು. ಇದರ ಪರಿಣಾಮವಾಗಿ ಕಬ್ಬು ಇಲ್ಲಿಯ ಮುಖ್ಯ ಬೆಳೆಯಾಯಿತು. ಶತಮಾನದ ಅಂತ್ಯದ ವೇಳೆಗೆ ಸಮಾಜವಾದ ಪ್ರಸಾರವಾಗಿ 1899ರಲ್ಲಿ ಪ್ರಥಮ ಕೂಲಿಕಾರ ಸರ್ಕಾರ ಅಧಿಕಾರಕ್ಕೆ ಬಂತು.

ಸಿಡ್ನಿಯಿಂದ ಬಂದ ವಲಸೆಗಾರರಿಂದ ಪಶ್ಚಿಮ ಆಸ್ಟ್ರೇಲಿಯದಲ್ಲಿ ಪ್ರಥಮ ನೆಲೆ 1826ರಲ್ಲಿ ಸ್ಥಾಪಿತವಾಯಿತು. ಕ್ರಮೇಣ ಇತರ ನೆಲೆಗಳೂ ಸ್ಥಾಪಿಸಲ್ಪಟ್ಟು 1829ರಲ್ಲಿ ಪ್ರತ್ಯೇಕ ಸರ್ಕಾರ ಏರ್ಪಟ್ಟಿತು. ಸ್ವಾನ್ ನದಿಯ ಮೇಲಿರುವ ಪರ್ತ್ ಮತ್ತು ಫ್ರೀಮ್ಯಾಂಟಲ್ ಪಟ್ಟಣಗಳು ಬೆಳೆದುವು. ಒಳಭಾಗದ ಪ್ರದೇಶಗಳು ಶೋಧಿಸಲ್ಪಟ್ಟುವು. ಆದರೆ, ಈ ಪ್ರದೇಶ ಅಷ್ಟು ಫಲವತ್ತಾಗಿಲ್ಲದ್ದರಿಂದ ಜನಬಾಹುಳ್ಯಕ್ಕೆ ಅವಕಾಶವಾಗಲಿಲ್ಲ. ಕಾಲ್‍ಗೂರ್ಲಿ ಮತ್ತು ಕೂಲ್‍ಗಾರ್ಡಿ ಪ್ರದೇಶಗಳಲ್ಲಿ ಬಂಗಾರ ಹೇರಳವಾಗಿ ಸಿಗತೊಡಗಿದ್ದರಿಂದ ಈ ವಸಾಹತಿನ ಬೆಳೆವಣಿಗೆಯಾಯಿತು. 1890ರಲ್ಲಿ ಸ್ವತಂತ್ರ ಸರ್ಕಾರ ಪ್ರಾರಂಭವಾಯಿತು. 1900ರವರೆಗೆ ಈ ಪ್ರದೇಶ ಆರ್ಥಿಕ ದೃಷ್ಟಿಯಿಂದ ಸಾಧಾರಣ ರೀತಿಯಲ್ಲಿತ್ತು. ಅನಂತರ ಆಸ್ಟ್ರೇಲಿಯ ಒಕ್ಕೂಟಕ್ಕೆ ಸೇರಿದರೂ ಆರ್ಥಿಕ ಪರಿಸ್ಥಿತಿಯಿಂದಾಗಿ 1922ರಲ್ಲಿ ಒಕ್ಕೂಟದಿಂದ ಬೇರೆಯಾಗಲು ನಿರ್ಧರಿಸಿತು. ಆದರೆ ಪರಿಸ್ಥಿತಿ ಉತ್ತಮವಾಗತೊಡಗಿದ್ದರಿಂದ ಮತ್ತು 2ನೆಯ ಮಹಾಯುದ್ಧ ಆರಂಭವಾದದ್ದರಿಂದ ಒಕ್ಕೂಟದಲ್ಲೇ ಉಳಿಯಿತು.

ಒಕ್ಕೂಟದ ಸ್ಥಾಪನೆ: ಹೀಗೆ ಪ್ರತ್ಯೇಕ ಸರ್ಕಾರಗಳನ್ನು ಹೊಂದಿ ವಸಾಹತುಗಳು ಅಭಿವೃದ್ಧಿ ಹೊಂದುತ್ತಿದ್ದಾಗ ಅವುಗಳ ಕಾರ್ಯಗಳ ಮೇಲ್ವಿಚಾರಣೆ ನಡೆಸಲು ಸಮಗ್ರ ಆಸ್ಟ್ರೇಲಿಯದಲ್ಲಿ ಅಧಿಕಾರ ನಡೆಸಬಲ್ಲ ಕೇಂದ್ರ ಸರ್ಕಾರದ ಆವಶ್ಯಕತೆಯ ಅರಿವು ರಾಜಕಾರಣಿಗಳಲ್ಲಿ ಉದಯಿಸಿತು. ಈ ಬಗ್ಗೆ ನ್ಯೂ ಸೌತ್‍ವೇಲ್ಸ್ ಮತ್ತು ವಿಕ್ಟೋರಿಯಗಳಲ್ಲಿ ಚಳವಳಿಗಳು ಪ್ರಾರಂಭವಾದುವು. ಎಲ್ಲ ಸರ್ಕಾರಗಳೂ ಯಾವ ಯಾವ ವಿಷಯಗಳ ಮೇಲೆ ಒಂದೇ ತರಹದ ಕಾಯಿದೆಗಳನ್ನು ಮಾಡಬಹುದೆಂಬುದನ್ನು ಚರ್ಚಿಸಲು 1863ರಲ್ಲಿ ಮೆಲ್ಬರ್ನ್‍ನಲ್ಲಿ ಒಂದು ಪ್ರಾಂತೀಯ ಪ್ರತಿನಿಧಿಗಳ ಸಭೆ ನೆರೆಯಿತು. 1884ರಲ್ಲಿ ಐದು ವಸಾಹತುಗಳನ್ನೊಳ ಗೊಂಡ ಆಸ್ಟ್ರೇಲಿಯವನ್ನು ಒಕ್ಕೂಟ ರಾಷ್ಟ್ರವನ್ನಾಗಿ ಮಾಡಲು ನಿರ್ಣಯಿಸಿದರು. 1899ರಲ್ಲಿ ಅನುಕೂಲ ಜನಾಭಿಪ್ರಾಯ ದೊರೆತದ್ದರಿಂದ, 1901 ರಲ್ಲಿ ಆಸ್ಟ್ರೇಲಿಯ ಒಕ್ಕೂಟ ಜಾರಿಗೆ ಬಂತು. ನ್ಯೂ ಸೌತ್ ವೇಲ್ಸ್‍ನ ಪ್ರಧಾನಿಯಾಗಿ 5 ಬಾರಿ ಸೇವೆಸಲ್ಲಿಸಿದ್ದ ಸರ್ ಹೆನ್ರಿ ಪಾರ್ಕ್ಸನನ್ನು ಒಕ್ಕೂಟದ ಪಿತಾಮಹ ಎಂದು ಕರೆಯಲಾಗಿದೆ. ಕೆಲವು ನಿರ್ದಿಷ್ಟ ವಿಷಯಗಳು ಕೇಂದ್ರ ಸರ್ಕಾರಕ್ಕೆ ಮೀಸಲಾದುವು. ಶೇಷಾಧಿಕಾರ ರಾಜ್ಯಗಳಿಗೆ ಸೇರಿತ್ತು. 1927ರಲ್ಲಿ ಕ್ಯಾನ್‍ಬೆರ ಪಟ್ಟಣ ಒಕ್ಕೂಟದ ರಾಜಧಾನಿಯಾಗುವವರೆಗೆ ಸರ್ಕಾರದ ಮುಖ್ಯ ಕಚೇರಿಗಳು ಮೆಲ್ಬರ್ನ್‍ನಲ್ಲೇ ಇದ್ದುವು.

ಒಕ್ಕೂಟದ ಮೊದಲ ವರ್ಷಗಳು ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗೆ ಮೀಸಲಾದುವು. ಚರ್ಚು ಮತ್ತಿತರ ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿದ್ದ ಶಿಕ್ಷಣ ಪ್ರಸಾರ ಕಾರ್ಯ ಈಗ ಸರ್ಕಾರದ ಕಾರ್ಯಕ್ಷೇತ್ರಕ್ಕೆ ಬಂತು. ಅನೇಕ ಸಾಮಾಜಿಕ ಮತ್ತು ಆರ್ಥಿಕ ಕಾಯಿದೆಗಳು ಜಾರಿಗೆ ಬಂದು ಆ ಕ್ಷೇತ್ರಗಳಲ್ಲಿ ಉದ್ಭವಿಸಿದ ಲೋಪದೋಷಗಳನ್ನು ನಿವಾರಿಸಿದುವು. ರಾಜಕೀಯ ರಂಗದಲ್ಲಿ ಕೂಲಿಗಾರ ಪಕ್ಷ ಅನೇಕ ರಾಜ್ಯಗಳಲ್ಲಿ ತನ್ನ ಶಕ್ತಿಯನ್ನು ಬೆಳೆಸಿಕೊಂಡಿತು. 1910ರಲ್ಲಿ ನ್ಯೂ ಸೌತ್‍ವೇಲ್ಸ್ ಸರ್ಕಾರ ಆ ಪಕ್ಷಕ್ಕೆ ಸೇರಿತು. 1910–12ರಲ್ಲಿ ಕೂಲಿಗಾರ ಪಕ್ಷ ಒಕ್ಕೂಟದ ಶಾಸನಸಭೆಗಳಲ್ಲಿ ಬಹುಮತ ಗಳಿಸಿತು. ಆ್ಯಂಡ್ರೂ ಫಿಷರ್ ಅದರ ನಾಯಕನಾದ. ಒಂದನೆಯ ಜಾಗತಿಕ ಯುದ್ಧ ಪ್ರಾರಂಭವಾದಾಗ ಆಸ್ಟ್ರೇಲಿಯದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುತ್ತಿದ್ದುವು. ಆದರೂ ಎಲ್ಲ ಪಕ್ಷಗಳೂ ಒಂದಾಗಿ ಫಿಷರನ್ನನ್ನು ಮುಂದಿಟ್ಟುಕೊಂಡು ಇಂಗ್ಲೆಂಡಿಗೆ ಸಂಪೂರ್ಣ ನೆರವು ನೀಡಲು ನಿರ್ಧರಿಸಿದವು. ಯುದ್ಧದಲ್ಲಿ ಆಸ್ಟ್ರೇಲಿಯ 20,000 ಸೈನಿಕರನ್ನೂ 4 ಲಕ್ಷಕ್ಕೂ ಹೆಚ್ಚಾಗಿ ಸ್ವಯಂಸೇವಕರನ್ನೂ ಕಳಿಸಿತು. ಅಲ್ಲದೆ ಆಸ್ಟ್ರೇಲಿಯದ ಯುದ್ಧನೌಕೆಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಒಪ್ಪಿಸಲಾಯಿತು. ನೌಕಾಪಡೆಯನ್ನು ಬ್ರಿಟಿಷರಿಗೆ ಒಪ್ಪಿಸಲಾಯಿತು. ಯುದ್ಧದಿಂದಾಗಿ 59,993 ಆಸ್ಟ್ರೇಲಿಯನ್ನರು ಕೊಲ್ಲಲ್ಪಟ್ಟರು. ಯುದ್ಧಾನಂತರ ಆಸ್ಟ್ರೇಲಿಯ ರಾಷ್ಟ್ರಗಳು ಸಂಘವನ್ನು ಸೇರಿತು. ಯುದ್ಧಕಾಲದ ಉದ್ದಿಮೆಗಳು ಬೆಳೆದುವು.

ಯುದ್ಧಾನಂತರ ಆಸ್ಟ್ರೇಲಿಯದ ರಾಜಕಾರಣದಲ್ಲಿ ಮಹತ್ತ್ವದ ಬದಲಾವಣೆಗಳಾದುವು. ಕೂಲಿಗಾರ ಪಕ್ಷದ ಪ್ರಭಾವ ಕುಂದಿತು. ಹೊಸ ಒಳನಾಡು ಪಕ್ಷ (ಕಂಟ್ರಿ ಪಾರ್ಟಿ)ಮತ್ತು ರಾಷ್ಟ್ರೀಯ ಪಕ್ಷಗಳು ಮುಂದೆ ಬಂದು ಪರರಾಷ್ಟ್ರಗಳಿಂದ ವಲಸೆಗಾರರನ್ನೂ ಬಂಡವಾಳವನ್ನೂ ಆಹ್ವಾನಿಸಿದುವು. ಹೊಸ ಉದ್ದಿಮೆಗಳಿಗೆ ಪ್ರೋತ್ಸಾಹ ದೊರೆಯಿತು. 1929ರಿಂದ ಮುಂದೆ ಕೂಲಿಗಾರಪಕ್ಷದ ನೇತೃತ್ವದಲ್ಲಿ ಒಕ್ಕೂಟ ಮತ್ತು ರಾಜ್ಯ ಸರ್ಕಾರಗಳು ಒಂದುಗೂಡಿ ಅನೇಕ ಆರ್ಥಿಕ ಯೋಜನೆಗಳನ್ನು ಕೈಗೆತ್ತಿಕೊಂಡುವು.

ಎರಡನೆಯ ಮಹಾಯುದ್ಧ ಪ್ರಾರಂಭವಾದ ತಕ್ಷಣ ಆಸ್ಟ್ರೇಲಿಯ 1939ರಲ್ಲಿ ಜರ್ಮನಿಯ ಮೇಲೆ ಯುದ್ಧ ಸಾರಿ ತನ್ನ ಉದ್ದಿಮೆಗಳನ್ನು ಯುದ್ಧಸಾಮಗ್ರಿಗಳ ತಯಾರಿಕೆಗೆ ಅಳವಡಿಸಿಕೊಂಡಿತು. 1941ರಲ್ಲಿ ರಾಬರ್ಟ್ ಮೆನ್‍ಸೀಸ್‍ನ ಸರ್ಕಾರ ಸೋತು ಜಾನ್ ಕರ್ಟನ್‍ನ ಮುಖಂಡತ್ವದಲ್ಲಿ ಕೂಲಿಗಾರ ಸರ್ಕಾರವೇರ್ಪಟ್ಟಿತು. ಜಪಾನ್ ಮತ್ತು ಅಮೆರಿಕಗಳು ಯುದ್ಧಪ್ರವೇಶ ಮಾಡಿದ ಅನಂತರ ಆಸ್ಟ್ರೇಲಿಯ ಮತ್ತು ಅಮೆರಿಕಗಳಲ್ಲಿ ಮಧುರ ಸಂಪರ್ಕವೇರ್ಪಟ್ಟಿತು. ಜನರಲ್ ಮ್ಯಾಕ್ ಆರ್ಥರ್ ತನ್ನ ಮುಖ್ಯ ಕಚೇರಿಯನ್ನು ಆಸ್ಟ್ರೇಲಿಯದಲ್ಲಿ ಸ್ಥಾಪಿಸಿದ.

ಯುದ್ಧ ಆಸ್ಟ್ರೇಲಿಯವನ್ನು ಸಂಪೂರ್ಣ ಔದ್ಯೋಗಿಕ ರಾಷ್ಟ್ರವನ್ನಾಗಿ ಮಾಡಿತು. ಜಾಗತಿಕ ವ್ಯವಹಾರಗಳಲ್ಲಿ ಅದರ ಸ್ವಾತಂತ್ರ್ಯ ಮತ್ತು ಮಹತ್ತ್ವ ಬೆಳೆಯಿತು. ಯುದ್ಧಾನಂತರ ಯಾವ ತೊಂದರೆಯಿಲ್ಲದೆ ಆರ್ಥಿಕ ಪರಿಸ್ಥಿತಿ ಶಾಂತಿಕಾಲಕ್ಕೆ ಹೊಂದಿಕೊಂಡು ಪ್ರಗತಿ ಪಥದಲ್ಲಿ ಸಾಗಿತು. 1949ರ ಚುನಾವಣೆಯಲ್ಲಿ ಕೂಲಿಗಾರಪಕ್ಷ ಸೋತು ಲಿಬರಲ್‍ಕಂಟ್ರಿ ಪಕ್ಷ ಅಧಿಕಾರ ವಹಿಸಿತು. ಸಕಲ ನಿಯಂತ್ರಣಗಳನ್ನು ತೆಗೆಯುವುದು, ಸ್ವಾವಲಂಬನೆ ಮತ್ತು ಕಮ್ಯೂನಿಸ್ಟರನ್ನು ವಿರೋಧಿಸುವುದು–ಇವು ಈ ಪಕ್ಷದ ಧೋರಣೆಯ ಮುಖ್ಯ ಅಂಶಗಳು. ಯುದ್ಧಕಾಲದಲ್ಲಿ ಆಸ್ಟ್ರೇಲಿಯ ವಿಶ್ವಸಂಸ್ಥೆಯನ್ನು ಸ್ಥಾಪಿಸಲು ಉತ್ಸಾಹ ತೋರಿದರೂ ಯುದ್ಧಾನಂತರ ಅದರ ಕಾರ್ಯಕಲಾಪಗಳಲ್ಲಿ ಹೆಚ್ಚು ಆಸ್ಥೆ ವಹಿಸಲಿಲ್ಲ. ಆದರೆ ಅಮೆರಿಕ ಸಂಯುಕ್ತ ಸಂಸ್ಥಾನದೊಂದಿಗೆ ಆಸ್ಟ್ರೇಲಿಯದ ಸಂಬಂಧಗಳು ಬಲಗೊಂಡವು. ಅದು ಕೊರಿಯ ಯುದ್ಧದಲ್ಲಿ ಪಾಲ್ಗೊಂಡಿತು. ಏಷ್ಯದ ಕಮ್ಯೂನಿಸ್ಟ್ ವಿರೋಧಿ ಸರ್ಕಾರಗಳೊಂದಿಗೆ ನಿಕಟ ಸಂಪರ್ಕ ಸ್ಥಾಪಿಸಿಕೊಂಡಿತು ಮತ್ತು 1954ರಲ್ಲಿ ಸ್ಥಾಪನೆಯಾದ ಆಗ್ನೇಯ ಏಷ್ಯ ಒಪ್ಪಂದ ಸಂಸ್ಥೆಯ (ಸಿಯಾಟೊ) ಸದಸ್ಯ ದೇಶವಾಯಿತು. 1959ರ ವೇಳೆಗೆ ಆಸ್ಟ್ರೇಲಿಯದ ಜನಸಂಖ್ಯೆ ಒಂದು ಕೋಟಿಯ ಗಡಿಯನ್ನು ದಾಟಿತು. 2ನೆಯ ಮಹಾಯುದ್ಧಾನಂತರ ಅಪಾರ ಸಂಖ್ಯೆಯ ಜನರು ಇಲ್ಲಿಗೆ ವಲಸೆ ಬಂದುದು ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಯಿತು. ವಿಯಟ್ನಾಂ ಯುದ್ಧದಲ್ಲಿ ಆಸ್ಟ್ರೇಲಿಯ ಅಮೆರಿಕಕ್ಕೆ ಸೈನಿಕ ಬೆಂಬಲ ನೀಡಿತು. 1960 ರ ಅನಂತರ ಸರ್ಕಾರ ಮೂಲನಿವಾಸಿಗಳನ್ನು ಉತ್ತಮವಾಗಿ ನಡೆಸಿಕೊಳ್ಳುತ್ತಿದೆ. ಆಸ್ಟ್ರೇಲಿಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಬ್ರಿಟನ್ನಿನ ಅಧಿಕಾರವನ್ನು 1968ರಲ್ಲಿ ರದ್ದು ಪಡಿಸಲಾಯಿತು. ಬ್ರಿಟನ್ನಿನ ಸಂಬಂಧ ಕಡಿದುಕೊಂಡು ಆಸ್ಟ್ರೇಲಿಯವನ್ನು ಗಣರಾಜ್ಯವಾಗಿ ಪರಿವರ್ತಿಸುವ ಬಗ್ಗೆ 1990ರಲ್ಲಿ ತೀವ್ರ ಚರ್ಚೆ ನಡೆಯಿತು. (ಕೆ.ವಿ.ಎಸ್.ಯು.)

**ಪರಿಶೋಧನೆ:** ಆಸ್ಟ್ರೇಲಿಯದ ಭೂ ಪರಿಶೋಧನೆ ಪ್ರಾರಂಭವಾದದ್ದು 1788 ರಲ್ಲಿ, ನ್ಯೂ ಸೌತ್‍ವೇಲ್ಸ್ ವಸಾಹತು ಸ್ಥಾಪನೆಯಾದ ಅನಂತರ, ಬೇರೆ ದೇಶಗಳಲ್ಲಿ ನಡೆದಂತೆ ಪರಿಶೋಧನೆ ಕೆಲಸ ಉತ್ತರ ಮತ್ತು ಪಶ್ಚಿಮ ತೀರಪ್ರಾಂತ್ಯಗಳಿಂದ ಪ್ರಾರಂಭವಾಗಿ ಪೂರ್ವದ ಮತ್ತು ದಕ್ಷಿಣದ ಪ್ರದೇಶಗಳಿಗೆ ಹರಡುವುದರ ಬದಲು ಆಗ್ನೇಯ ಭಾಗದಿಂದ ಪಶ್ಚಿಮ ಮತ್ತು ಉತ್ತರದ ಪ್ರಾಂತ್ಯಗಳಿಗೆ ಹರಡಿದ್ದು ಆಸ್ಟ್ರೇಲಿಯದ ವೈಶಿಷ್ಟ್ಯ. ಇದಕ್ಕೆ ಕಾರಣ, ಈ ಆಗ್ನೇಯ ಭಾಗ ಹಿತಕರ ವಾಯುಗುಣವನ್ನು ಹೊಂದಿರುವುದು ಮತ್ತು ಪಶ್ಚಿಮ ಭಾಗಗಳು ಹೆಚ್ಚಾಗಿ ಮರಳುಗಾಡು ಪ್ರದೇಶವಾಗಿರುವುದು. 1788ಕ್ಕೆ ಮುಂಚೆಯೇ ಚಿನ್ನ ದೊರಕಬಹುದೆಂಬ ಆಸೆಯಿಂದ ಅನೇಕ ಸಾಹಸಿಗರು ಬಂದು ಹೋಗಿದ್ದರು. ವ್ಯವಸ್ಥಿತವಾದ ವಸಾಹತು ಸ್ಥಾಪನೆ ಆದದ್ದು 1788ರಲ್ಲಿ ಆರ್ಥರ್ ಫಿಲಿಪ್ ಎಂಬ ಬ್ರಿಟಿಷ್ ಅಧಿಕಾರಿ 759 ಕೈದಿಗಳೊಡನೆ ಪೋರ್ಟ್ ಜಾಕ್ಸನ್ ಎಂಬಲ್ಲಿ ಬಂದಿಳಿದಾಗ, ಇವರು ವ್ಯವಸಾಯಯೋಗ್ಯವಾದ ಭೂಮಿಯನ್ನು ಹುಡುಕುತ್ತ ತಿರುಗಿದರು. ಪಶ್ಚಿಮಕ್ಕೆ ಬ್ಲೂಮೌಂಟನ್ ತಲಪಿ ತಪ್ಪಲಿನಲ್ಲಿ ನೆಲಸುನಾಡನ್ನು ನಿರ್ಮಿಸಿಕೊಂಡರು. ಅಲ್ಲಿಯ ತನಕ ರಸ್ತೆಯೂ ನಿರ್ಮಿತವಾಯಿತು. ಈ ಪರ್ವತವನ್ನು ದಾಟಿ ಪಶ್ಚಿಮಕ್ಕೆ ಹರಡಿದ್ದ ನದೀಬಯಲು ಪ್ರದೇಶವನ್ನು ಕಂಡುಹಿಡಿಯಲು ಸ್ವಲ್ಪ ಕಾಲ ಬೇಕಾಯಿತು. ಮುಂದೆ ಪಶ್ಚಿಮದ ತಪ್ಪಲಿನಲ್ಲೂ ವಸತಿಗಳು ಸ್ಥಾಪಿತವಾದುವು. ಇನ್ನೂ ಪಶ್ಚಿಮಕ್ಕೆ ಜೌಗುಪ್ರದೇಶವಿರುವುದೆಂದು ಆಕ್ಸ್ಲಿ ಎಂಬಾತ ತಿಳಿಸಿದ ಮೇಲೆ, ತಮಗೆ ನೈರುತ್ಯಕ್ಕಿದ್ದ ಪ್ರಾಂತ್ಯದಲ್ಲಿ ಪರಿಶೋಧನೆ ನಡೆಸಿದರು. ಸ್ನೋಯಿ ಮೌಂಟನ್‍ಗಳವರೆಗೂ ಅವರ ಪರಿಶೋಧನೆ ಸಾಗಿತು. 1824ರಲ್ಲಿ ಮರೆನದಿಯನ್ನು ಗುರುತಿಸಿದರು. ದಕ್ಷಿಣ ತೀರದ ಪೋರ್ಟ್ ಫಿಲಿಪ್‍ಗೆ ಮಾರ್ಗವನ್ನು ಕಂಡುಹಿಡಿದರು.

ಉತ್ತರದ ಬಯಲುಪ್ರದೇಶದ ಸಂಶೋಧನೆಯೂ ಸಾಗಿತ್ತು. 1827ರಲ್ಲಿ ಕನ್ನಿಂಗ್‌ಹ್ಯಾಂ ಎಂಬಾತ ಡಾರ್ಲಿಂಗ್ ನದಿಯ ವಿಶಾಲವಾದ ಬಯಲು ಮೇಡು ಪ್ರದೇಶವನ್ನು ಕಂಡುಹಿಡಿದ. ಹೀಗೆ ಆಸ್ಟ್ರೇಲಿಯದ ಆಗ್ನೇಯ ಭಾಗವೆಲ್ಲ ಪರಿಶೋಧಿಸಲ್ಪಟ್ಟಿತು, ಮೆಲ್ಬರ್ನ್‌ನಿಂದ ಬ್ರಿಸ್ಬೇನ್‌ವರೆಗು ಸಂಶೋಧಕರಿಗೆ ಈ ಕಾಲದಲ್ಲಿ ಪರಿಶೋಧನೆಯ ಹುಚ್ಚೇ ಹಿಡಿದಿತ್ತೆನ್ನಬಹುದು. ಮುಂದೆ ಖಂಡದ ಮಧ್ಯ ಮತ್ತು ಉತ್ತರದ ಪ್ರದೇಶಗಳು ಅವರ ಗಮನವನ್ನು ಸೆಳೆದುವು. ದಕ್ಷಿಣ ಮತ್ತು ಪಶ್ಚಿಮ ಆಸ್ಟ್ರೇಲಿಯಗಳಿಗೆ ಸಂಪರ್ಕವನ್ನುಂಟುಮಾಡುವ ಭೂಮಾರ್ಗವನ್ನು ಕಂಡುಹಿಡಿಯಲು ಹೊರಟ ಟಾರೆನ್ಸ್ ಎಂಬಾತ 2080 ಕಿಮೀ ದೂರ ನೀರೇ ಸಿಗದ ಮರಳುಗಾಡಿನಲ್ಲಿ ಅಲೆಯಬೇಕಾಯಿತು. ಲೀಚ್‌ಹಾರ್ಟ್ ಎಂಬಾತ ಉತ್ತರದಲ್ಲಿ ಕ್ವೀನ್ಸ್‌ಲೆಂಡ್‌ನಿಂದ ಅರ್ನ್‌ಹೆಂಲ್ಯಾಂಡ್‌ವರೆಗೂ ಹೋಗಿ ಭೂಮಾರ್ಗವನ್ನು ಕಂಡುಹಿಡಿದಿದ್ದಲ್ಲದೆ ಕಾರ್ಪೆಂಟೇರಿಯ ಕೊಲ್ಲಿಗೆ ಹರಿಯುವ ನದಿಗಳನ್ನೂ ಗುರುತಿಸಿದ.

1859–70ರವರೆಗಿನ ಅವಧಿಯಲ್ಲಿ ಚಿನ್ನದ ನಿಕ್ಷೇಪಗಳು ಆಸ್ಟ್ರೇಲಿಯದಲ್ಲಿವೆಯೆಂದು ತಿಳಿದಮೇಲೆ, ಅನೇಕ ಪರಿಶೋಧಕರ ಗಮನ ಇವುಗಳ ಕಡೆ ತಿರುಗಿತು. 1853–56ರವರೆಗೆ ಯುರೋಪಿನಲ್ಲಿ ನಡೆದ ಕ್ರಿಮಿಯ ಯುದ್ಧವೂ ಅನೇಕರನ್ನು ಯುರೋಪಿಗೆ ಸೆಳೆಯಿತು. ಗಂಗಾನದಿಯಂಥ ದೊಡ್ಡ ನದಿಯೊಂದು ಆಸ್ಟ್ರೇಲಿಯದ ವಾಯವ್ಯ ಪ್ರಾಂತ್ಯದಲ್ಲಿದೆಯೆಂದು ಆಗ ಅನೇಕರ ಭಾವನೆಯಾಗಿತ್ತು. ಅದರ ಪರಿಶೋಧನೆಗಾಗಿ ಸರ್ಕಾರ ಅಪಾರ ಹಣ ವೆಚ್ಚಮಾಡಿತು. ಕೊನೆಗೆ ಆ ಪ್ರಾಂತ್ಯದಲ್ಲಿ ಅಂಥ ದೊಡ್ಡ ನದಿಯಿಲ್ಲವೆಂಬುದು ಖಚಿತವಾದರೂ ಅಲ್ಲಿ ಅತ್ಯಂತ ಉಪಯುಕ್ತವಾದ ಕಿಂಬರ್ಲಿ ಹುಲ್ಲುಗಾವಲುಗಳನ್ನು ಕಂಡುಹಿಡಿದಂತಾಯಿತು. 1861ರಲ್ಲಿ ಸ್ಟೂವರ್ಟ್ ಎಂಬಾತ ಅತ್ಯಂತ ಪ್ರಯಾಸದಿಂದ ಅಡಿಲೇಡ್‌ನಿಂದ ಅರ್ನ್‌ಹೆಂಲ್ಯಾಂಡ್‌ಗೆ ಮಧ್ಯಭಾಗದ ಮೂಲಕ ಹೋಗುವ ಮಾರ್ಗವನ್ನು ಕಂಡುಹಿಡಿದ. 1871–1939ರ ಅವಧಿಯಲ್ಲಿ ಖಂಡದ ಪಶ್ಚಿಮ ಭಾಗದ ಮಧ್ಯದಲ್ಲಿರುವ ವಿಶಾಲ ಮರುಭೂಮಿಯ ಪರಿಶೋಧನೆ ನಡೆದು, ಅದರ ಮೂಲಕ ಟೆಲಿಗ್ರಾಫ್ ತಂತಿ ಮಾರ್ಗವನ್ನು ನಿರ್ಮಿಸಲನುಕೂಲವಾಯಿತು. *

**ವಸಾಹತುಗಳು:** 1788ರಲ್ಲಿ ಕೆಲವು ಬ್ರಿಟಿಷ್ ಕೈದಿಗಳನ್ನು ಪೋರ್ಟ್ ಜಾಕ್ಸನ್‌ಗೆ (ಇಂದಿನ ಸಿಡ್ನಿ) ಕರೆತಂದು ಶಿಕ್ಷೆಯನ್ನನುಭವಿಸಲು ಬಿಟ್ಟಾಗಿನಿಂದ ವಸಾಹತುಗಳ ಸ್ಥಾಪನೆಯ ಕೆಲಸ ಪ್ರಾರಂಭವಾಯಿತೆನ್ನಬಹುದು. ಈ ಕೈದಿಗಳೊಂದಿಗೆ, ಅವರನ್ನು ನೋಡಿಕೊಳ್ಳಲು ಅನೇಕ ಬ್ರಿಟಿಷ್ ಅಧಿಕಾರಿಗಳೂ ಸಿಬ್ಬಂದಿಯವರೂ ಬಂದು ನಿಲ್ಲಬೇಕಾಯಿತು. ಕೈದಿಗಳನ್ನು ಮತ್ತೆ ಮತ್ತೆ ಇಲ್ಲಿಗೆ ತರತೊಡಗಿದ ಮೇಲೆ ಇಲ್ಲಿನ ಜನಸಂಖ್ಯೆ ಬೆಳೆಯುತ್ತ ಬಂತು. ಈ ಪದ್ಧತಿಯನ್ನು ನಿಲ್ಲಿಸಿದ್ದು 50 ವರ್ಷಗಳ ಮೇಲೆ. ಅಷ್ಟುಹೊತ್ತಿಗೆ 1,61,000 ಕೈದಿಗಳನ್ನು ತಂದಿದ್ದರು. ಅವರೊಂದಿಗೆ ಸ್ವತಂತ್ರ ನೆಲೆಸಿಗರೂ ಅಧಿಕಸಂಖ್ಯೆಯಲ್ಲಿ ಬಂದರು; ಇವರು ಜೀವನಾನುಕೂಲಗಳನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ಮಾಡಿದ ಪ್ರಯತ್ನಗಳಿಂದ ದೇಶದ ಆರ್ಥಿಕ ಬೆಳೆವಣಿಗೆಗೆ ಅವಕಾಶವಾಯಿತು. ಖಂಡದ ನಾನಾ ಕಡೆ ಪುನಃ ಪರಿಶೋಧನೆ ನಡೆಯಿತು; ಜನ ಅನುಕೂಲಸ್ಥಳಗಳಲ್ಲಿ ನೆಲೆನಿಂತರು. 6 ವಸಾಹತುಗಳು ನಿರ್ಮಿತವಾದುವು; ನ್ಯೂ ಸೌತ್‌ವೇಲ್ಸ್ (1766), ವಾನ್ ಡೀಮನ್ಸ್ ಲ್ಯಾಂಡ್ (1825) (1835ರಿಂದ ಟಾಸ್ಮೇನಿಯ), ವೆಸ್ಟರ್ನ್ ಆಸ್ಟ್ರೇಲಿಯ (1829), ಸೌತ್ ಆಸ್ಟ್ರೇಲಿಯ (1834), ವಿಕ್ಟೋರಿಯ (1851), ಕ್ವೀನ್ಸ್‌ಲೆಂಡ್ (1859) ಉತ್ತರ ಪ್ರಾಂತ್ಯ (1961). ಜನಸಂಖ್ಯೆ 1820ರಲ್ಲಿ 34,000 ಇದ್ದದ್ದು 1850ರಲ್ಲಿ 4,05,000ಕ್ಕೆ ಏರಿತು. ಈ ಪ್ರಾಂತ್ಯಗಳು ತಮ್ಮದೇ ಆದ ಪ್ರತಿನಿಧಿ ಸರಕಾರವನ್ನು ಹೊಂದಿ ಸ್ವತಂತ್ರವಾಗಿದ್ದುವು. 1991ರಲ್ಲಿ ಅವೆಲ್ಲ ಒಟ್ಟುಗೂಡಿ ಕಾಮನ್‌ವೆಲ್ತ್ ವ್ಯವಸ್ಥೆಯನ್ನು ನಿರ್ಮಿಸಿಕೊಂಡುವು.

**ರಾಜಕೀಯ:** ಆಸ್ಟ್ರೇಲಿಯ ಸ್ವಯಮಾಡಳಿತವುಳ್ಳ ಸ್ವತಂತ್ರ ಪ್ರಜಾರಾಜ್ಯ. ಪ್ರಜಾಪ್ರತಿನಿಧಿಸಭೆಯನ್ನು ಹೊಂದಿದ ಸಂಯುಕ್ತ ಸಂಸ್ಥಾನ. 1901 ರಲ್ಲಿ ಇಲ್ಲಿ ನೆಲೆಸಿದ್ದ 6 ವಸಾಹತುಗಳ ಒಮ್ಮತದಿಂದ ಈ ರಾಜ್ಯಾಂಗ ವ್ಯವಸ್ಥೆಯಾಯಿತು. ಪ್ರತಿಯೊಂದು ವಸಾಹತೂ ಒಂದು ರಾಜ್ಯವಾಯಿತು. ಸಂಯುಕ್ತ ರಾಜ್ಯ ವ್ಯವಸ್ಥೆಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಮತ್ತು ಇಂಗ್ಲೆಂಡಿನ ರಾಜ್ಯಭಾರದ ಮೂಲತತ್ತ್ವಗಳನ್ನು ಕಾಣಬಹುದು. ಸಂಯುಕ್ತ ರಾಜ್ಯದ ಅಧಿಕಾರವನ್ನು ವಿಶದವಾಗಿ ತಿಳಿಸಿ ನಿಗದಿಮಾಡಲಾಗಿದೆ. ಬ್ರಿಟಿಷ್ ದೊರೆಯ ಪ್ರತಿನಿಧಿಯಾಗಿ ಒಬ್ಬ ಗವರ್ನರ್ ಜನರಲ್ ಇದ್ದಾನೆ; ರಾಷ್ಟ್ರದ ಪಾರ್ಲಿಮೆಂಟ್ ಅಥವಾ ಸಂಸತ್ತು ಎರಡು ಸದನಗಳನ್ನು ಹೊಂದಿದೆ. ಆಡಳಿತ ಹೆಸರಿಗೆ ಮಾತ್ರ ಕಾರ್ಯಕಾರಿ ಸಮಿತಿಯ ಸಹಾಯದಿಂದ ಕೆಲಸಮಾಡುವ ಗವರ್ನರ್ ಜನರಲ್‌ನ ಕೈಯಲ್ಲಿದೆ; ವಾಸ್ತವವಾಗಿ ಆಡಳಿತದ ಜವಾಬ್ದಾರಿಯೆಲ್ಲ ಕೆಳಮನೆಯಲ್ಲಿ ಅಭಿಮತಪರಮಾಧಿಕ್ಯ ಪಡೆದ ಪಕ್ಷ ಅಥವಾ ಸಂಯುಕ್ತ ಪಕ್ಷದ ಮುಖ್ಯಸ್ಥನಾಗಿ ಪ್ರಧಾನಮಂತ್ರಿಯಾಗಿರುವವ ಮತ್ತು ಅವನಿಂದ ನಿಯಮಿತರಾಗಿರುವವರಿಂದ ಕೂಡಿದ ಮಂತ್ರಿಮಂಡಲಕ್ಕೆ ಸೇರಿದೆ. ಕೆಳಮನೆ ಸದಸ್ಯರು ಮೂರು ವರ್ಷ ಕಾಲವಾದರೂ ಆಸ್ಟ್ರೇಲಿಯದ ನಿವಾಸಿಗಳಾಗಿರಬೇಕು ಮತ್ತು ಬ್ರಿಟಿಷರಾಗಿರಬೇಕು ಎಂಬ ನಿಬಂಧನೆಯಿದೆ.

ಶಾಸನರಚನೆ ಪಾರ್ಲಿಮೆಂಟಿಗೆ ಸೇರಿದ್ದು; ಈ ಪಾರ್ಲಿಮೆಂಟ್, 76 ಸದಸ್ಯರನ್ನುಳ್ಳ ಸೆನೆಟ್ ಅಥವಾ ಮೇಲ್ಮನೆ ಮತ್ತು 148 ಸದಸ್ಯರನ್ನುಳ್ಳ ಹೌಸ್ ಆಫ್ ರೆಪ್ರಸೆಂಟೆಟಿವ್ಸ್ ಅಥವಾ ಕೆಳಮನೆಗಳನ್ನೊಳಗೊಂಡಿದೆ. ಅನುಪಾತಿಪ್ರಾತಿನಿಧ್ಯ ಕ್ರಮದಲ್ಲಿ ಚುನಾಯಿತರಾದ ಹತ್ತು ಮಂದಿ ಸದಸ್ಯರನ್ನು ಪ್ರತಿರಾಜ್ಯವೂ ಮೇಲ್ಮನೆಗೆ ಕಳುಹಿಸುತ್ತದೆ. ಅವರ ಕಾಲಾವಧಿ ಆರು ವರ್ಷ. ಆದರೆ ಮೂರು ವರ್ಷ ಕಳೆದ ಕೂಡಲೇ ಅರ್ಧ ಸದಸ್ಯರು ಬಿಟ್ಟುಹೋಗುತ್ತಾರೆ. ಕೆಳಮನೆಯಲ್ಲಿ ಪ್ರತಿಯೊಂದು ರಾಜ್ಯದಲ್ಲೂ ಚುನಾಯಿತರಾದ ಐದು ಮಂದಿ ಸದಸ್ಯರಾದರೂ ಇರಲೇಬೇಕೆಂಬ ನಿಯಮವಿದೆ. ಕೆಳಮನೆ ವರ್ಷಕ್ಕೊಂದು ಸಲವಾದರೂ ಸೇರಲೇಬೇಕು. ತೆರಿಗೆ ವಿಧಿಸುವುದು, ವಿನಿಯೋಗ, ಕೆಳಮನೆಗೆ ಸೇರಿದ್ದು.

**ಆದಿವಾಸಿಗಳು:** ಇವರು ಆಸ್ಟ್ರೇಲಿಯದ ಮೂಲನಿವಾಸಿಗಳಲ್ಲ. ಅವರೆಲ್ಲರೂ ಆಗ್ನೇಯ ಏಷ್ಯದಿಂದ, ಮುಖ್ಯವಾಗಿ ಇಂಡೊನೇಷ್ಯದಿಂದ 50,000 ವರ್ಷಗಳ ಹಿಂದೆ ವಲಸೆ ಬಂದವರು. ಪುರಾತತ್ತ್ವಶಾಸ್ತ್ರಜ್ಞರು ಆದಿವಾಸಿಗಳ ನೂರೂರು ನೆಲೆಗಳನ್ನು ಉತ್ಖನನ ಮಾಡಿದ್ದಾರೆ. ಅವುಗಳಲ್ಲಿ ಸಿಡ್ನಿ ಸಮೀಪ ಪೆನ್ರಿತ್ ಎಂಬ ನೆಲೆ ಸು. 45,000 ವರ್ಷಗಳಷ್ಟು ಪ್ರಾಚೀನವಾದುದು. ಆಗ್ನೇಯ ಏಷ್ಯದವರಾಗಿದ್ದ ಅವರು ನೀರ್ಗಲ್ಲ ಯುಗ ಬಂದು ಭೂಮಿಯ ಉತ್ತರಭಾಗದ ನೀರೆಲ್ಲ ಘನೀಭವಿಸಿದ ಮೇಲೆ ದಕ್ಷಿಣ ಪ್ರದೇಶಗಳಿಗೆ ವಲಸೆ ಬಂದರು. ಆಗ ಏಷ್ಯದ ಆಗ್ನೇಯ ಭಾಗ ಆಸ್ಟ್ರೇಲಿಯದೊಂದಿಗೆ ಭೂಸಂಪರ್ಕ ಹೊಂದಿತ್ತು. ಈ ಯುಗ ಮುಗಿದ ಮೇಲೆ, ಭೂಮಿಯ ಮೇಲೆ ಹರಡಿದ್ದ ನೀರ್ಗಲ್ಲು ಕರಗಿ ಸಮುದ್ರಕ್ಕೆ ಹರಿಯಿತು; ತಗ್ಗು ಪ್ರದೇಶಗಳೆಲ್ಲ ನೀರಿನಿಂದಾವರಿಸಲ್ಪಟ್ಟು ಎತ್ತರ ಪ್ರದೇಶಗಳೆಲ್ಲ ದ್ವೀಪಗಳಾಗಿ ನಿಂತವು.

ಈ ಕಾಲದಲ್ಲೇ ಆಸ್ಟ್ರೇಲಿಯವು ಆಗ್ನೇಯ ಏಷ್ಯದ ಭೂ ಭಾಗದಿಂದ ಪ್ರತ್ಯೇಕಿಸಲ್ಪಟ್ಟು ಅಲ್ಲಿಗೆ ಬಂದು ನೆಲೆಸಿದ್ದ ಜನರು ಏಷ್ಯದ ಇತರ ಜನರೊಂದಿಗೆ ಸಂಪರ್ಕವನ್ನು ಕಳೆದುಕೊಂಡರು. ಇವರಲ್ಲಿ ಮುಖ್ಯ ಪಂಗಡಗಳೆಂದರೆ ಈಶಾನ್ಯದ ಒರೀನಿಯನ್ ನಗ್ರಿಟೊಗಳು, ಉತ್ತರದ ಕಾರ್ಪೆಂಟೇರಿಯನ್ ಜನ, ಪಶ್ಚಿಮದ ಮರಳು ಗಾಡಿನ ಬುಡಕಟ್ಟುಗಳು, ಆಗ್ನೇಯದ ಮರೆ ಬಯಲಿನ ಆದಿವಾಸಿಗಳು.

ಈ ಆದಿವಾಸಿಗಳಲ್ಲಿ ಮುಖ್ಯವಾಗಿ ಕಂಡುಬರುವ ಒಂದು ಅಂಶವೆಂದರೆ, ಅವರ ಜೀವನಕ್ರಮ, ಸಂಪ್ರದಾಯಗಳು, ಕೊಂಚಮಟ್ಟಿಗೆ ಭಾಷೆಯಲ್ಲೂ ಕಂಡುಬರುವ ಸಾಮ್ಯ. ಈ ಹೋಲಿಕೆ ಬೇರೆ ಯಾವ ದೇಶದಲ್ಲೂ ಕಂಡುಬಂದಿಲ್ಲ. ಆಸ್ಟ್ರೇಲಿಯ ಒಂದು ದೊಡ್ಡ ದ್ವೀಪವಾದ ಅನಂತರ ಅವರು ಆಗ್ನೇಯ ಏಷ್ಯದ ಇತರ ಜನರ ಸಂಪರ್ಕವನ್ನು ಕಳೆದುಕೊಂಡರು; ಅಲ್ಲದೆ ಅವರಲ್ಲನೇಕರು ಆಹಾರ ಸೌಕರ್ಯಕ್ಕಾಗಿ ಅಲೆಮಾರಿಜೀವನ ನಡೆಸಬೇಕಾಗಿದ್ದುದರಿಂದ ಅವರಲ್ಲೇ ಪರಸ್ಪರ ಸಂಪರ್ಕವೇರ್ಪಡುವಂತಾಗಿ ಅನೇಕರು ತಮ್ಮ ಪ್ರತ್ಯೇಕತೆಯನ್ನು ಕಾಲಕ್ರಮೇಣ ಕಳೆದುಕೊಂಡರು. ಎತ್ತರದಲ್ಲಿ ಅವರು ಮಧ್ಯಮ ಮಟ್ಟದವರೆನ್ನಬಹುದು; ಅವರ ಅಂಗಾಂಗಗಳಲ್ಲಿ ತಕ್ಕ ಮಟ್ಟಿನ ಹೊಂದಿಕೆಯಿದೆ. ಆದರೆ ಸರಿಯಾದ ಪೋಷಣೆಯಿಲ್ಲದ ಕೃಶಾಂಗರಾಗಿದ್ದಾರೆ. ಅವರದು ಕಂದು ಬಣ್ಣ, ಕೂದಲು ತೀರ ಕಪ್ಪು. 1788ರಲ್ಲಿ, ಅಂದರೆ ಬಿಳಿಯರು ಆಸ್ಟ್ರೇಲಿಯದಲ್ಲಿ ನೆಲಸಲು ಪ್ರಾರಂಭಿಸಿದಾಗ, ಅಲ್ಲಿನ ಆದಿವಾಸಿಗಳ ಸಂಖ್ಯೆ ಸು. 71/2 ಲಕ್ಷದಷ್ಟಿತ್ತೆಂದು ಕೆಲವರು ಲೆಕ್ಕಹಾಕಿದ್ದಾರೆ. ಆಸ್ಟ್ರೇಲಿಯದ ಉತ್ತರ ಪ್ರಾಂತ್ಯದಲ್ಲಿ ಮಾತ್ರ ಒಟ್ಟು ಜನಸಂಖ್ಯೆಯ ಶೇ.25 ಭಾಗದಷ್ಟು ಆದಿವಾಸಿಗಳಿದ್ದಾರೆ. ಬಿಳಿಯರಿಂದ ಗೊತ್ತುಗುರಿಯಿಲ್ಲದ ಸಾಮೂಹಿಕ ಕೊಲೆಯಲ್ಲದೆ ಕೆಲವು ಕಡೆ ವಿಷಪ್ರಯೋಗ, ಸಿಡುಬು, ಕ್ಷಯ ಮುಂತಾದ ಸಾಂಕ್ರಾಮಿಕ ರೋಗಗಳು ಇವುಗಳ ಪರಿಣಾಮವಾಗಿ ಆ ಸಂಖ್ಯೆ ಬಹುಬೇಗ ಕುಗ್ಗಿ, 1966ರಲ್ಲಿ ನಡೆಸಿದ ಗಣತಿಯ ಪ್ರಕಾರ 79,620ಕ್ಕೆ ಇಳಿದಿದೆ. ಟಾಸ್ಮೇನಿಯದ ಆದಿವಾಸಿಗಳು ಮಲಯ, ಪಾಲಿನೇಷ್ಯಗಳಿಂದ ವಲಸೆ ಬಂದ ಪುಟ್ಟ ನೀಗ್ರೊಕಲ್ಪ ಜಾತಿಯವರು. ಇವರು 1888ರ ಕಾಲಕ್ಕೆ ನಿರ್ನಾಮವಾದರು. ಈ ಆದಿವಾಸಿಗಳು ಹೀಗೆ ಅಳಿಯುವುದನ್ನು ತಡೆಗಟ್ಟುವುದಕ್ಕಾಗಿ ಆಸ್ಟ್ರೇಲಿಯ ಸರ್ಕಾರ ವ್ಯಾಪಕವಾದ ಕಾರ್ಯಕ್ರಮವನ್ನು ಕೈಗೊಂಡಿದೆ. ಇದು ಒಬ್ಬ ಸಚಿವನ ನೇತೃತ್ವದಲ್ಲಿ ನಡೆಯುತ್ತಿದೆ. 1967ರಲ್ಲಿ ಆಸ್ಟ್ರೇಲಿಯದ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಆದಿವಾಸಿಗಳನ್ನು ಅಧಿಕೃತ ಜನಗಣತಿಯಲ್ಲಿ ಸೇರಿಸಲು ಅವಕಾಶ ಕಲ್ಪಿಸಲಾಯಿತು. ಅಲ್ಲದೆ ಅವರಿಗೆ ಮತದಾನದ ಹಕ್ಕು ನೀಡಲಾಯಿತು. ಉತ್ತರ ಪ್ರಾಂತ್ಯದಲ್ಲಿ ಮೊದಲಿಗೆ 1976ರಲ್ಲಿ ಆದಿವಾಸಿಗಳಿಗೆ ಭೂ ಒಡೆತನದ ಹಕ್ಕು ನೀಡಲಾಯಿತು. ಇತರ ಕೆಲವು ಪ್ರಾಂತ್ಯಗಳಲ್ಲೂ ಈ ಕ್ರಮ ಕೈಗೊಳ್ಳಲಾಗಿದೆ. ಅವರಿಗೆ ಆಧುನಿಕ ಸೌಲಭ್ಯಗಳಿರುವ ಮನೆಗಳನ್ನು ನಿರ್ಮಿಸಿಕೊಡುವ ಹಾಗೂ ಇತರ ಸಾಮಾಜಿಕ ಸೌಲಭ್ಯಗಳನ್ನು ಕಲ್ಪಿಸುವ ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಆದಿವಾಸಿಗಳ ಜನಸಂಖ್ಯೆ ಈಚೆಗೆ ಇಳಿಮುಖವಾಗಿಲ್ಲ.

ಈ ಆದಿವಾಸಿಗಳು ಕೃಷಿಜೀವನ ನಡೆಸುವ ಮಟ್ಟಕ್ಕೆ ಏರಲೇ ಇಲ್ಲ; ಉತ್ತರ ಪ್ರಾಂತ್ಯದ ಕೆಲವೇ ಜನರ ಹೊರತು ಬೇಟೆಯಾಡುವುದು, ದೊರಕಿದ ಆಹಾರ ವಸ್ತುಗಳನ್ನು ಸಂಗ್ರಹಿಸುವುದು, ಇವೇ ಅವರ ಮುಖ್ಯ ಕಸಬುಗಳು. ತಾವು ನೆಲೆಸಿದ ಪ್ರದೇಶದ ಜೀವನೋಪಾಯ ಸಾಧನೆಗಳನ್ನು ಇವರು ಚೆನ್ನಾಗಿ ಅರಿತಿರುತ್ತಾರೆ. ಈ ಸಾಧನಗಳು ಕಡಿಮೆಯಾದಾಗಲೆಲ್ಲ ಬೇರೆ ಪ್ರಾಂತ್ಯಗಳಿಗೆ ವಲಸೆಹೋಗುತ್ತಾರೆ. ಅವರಿಗೆ ಜೀವನಾವಶ್ಯಕ ವಸ್ತುಗಳೇ ಅತ್ಯಲ್ಪ. ಬಹುಪಾಲು ಜನರು ನಗ್ನರಾಗಿಯೇ ಇರುತ್ತಾರೆ. ಅವರು ಧರಿಸುವುದು ಕೆಲವು ಆಭರಣಗಳನ್ನು ಮಾತ್ರ. ಮರಳುಗಾಡಿನಲ್ಲಿ ಚಳಿಗಾಲದ ಕೊರೆತದಿಂದ ತಪ್ಪಿಸಿಕೊಳ್ಳಲಾರರು. ಗಾಳಿಬರುವ ದಿಕ್ಕಿಗೆದುರಾಗಿ ಸಣ್ಣದಿಬ್ಬವನ್ನೇರ್ಪಡಿಸಿ ಕೊಳ್ಳುತ್ತಾರೆ. ಪಕ್ಕದಲ್ಲೇ ಬೆಂಕಿಯನ್ನುರಿಸುತ್ತಾರೆ. ಮನೆಗಳನ್ನು ಕಾಣರು. ಅವರಿಗಿರುವುದು, ಕಡ್ಡಿಗಳು,

ಎಲೆಗಳಿಂದ ಮಾಡಿದ ಗೂಡಿನಂಥ ಗುಡಿಸಲು. ರಾತ್ರಿಯ ಚಳಿಯನ್ನು ತಡೆಯುವುದಕ್ಕಾಗಿ ಅನೇಕ ಪಂಗಡಗಳ ಜನರು ತಾವು ಆಹಾರಕ್ಕಾಗಿ ಕೊಂದ ಪ್ರಾಣಿಗಳ ಕೊಬ್ಬನ್ನು ಸಾಯಂಕಾಲವೇ ಮೈಗೆಲ್ಲ ಬಳಿದುಕೊಳ್ಳುತ್ತಾರೆ. ಹೆಚ್ಚು ಶಾಖಕ್ಕಾಗಿ ಅದರಮೇಲೆ ಬೂದಿಯನ್ನು ಸವರುತ್ತಾರೆ. ರಾತ್ರಿಯೆಲ್ಲ ಆಗಾಗ್ಗೆ ಎದ್ದು ಹಾಸಿನ ಬದಿಯ ಉರಿಯನ್ನು ಸರಿಮಾಡುತ್ತಾರೆ. ಅವರು ವಾಸಿಸುವ ಪ್ರದೇಶ ಬಹುಪಾಲು ಮರಳುಗಾಡಾದ್ದರಿಂದ ನೀರು ದೊರಕುವುದು ಬಹುಕಷ್ಟ. ಅದನ್ನು ದೊರಕಿಸಿಕೊಳ್ಳುವುದಕ್ಕಾಗಿ ಚಮತ್ಕಾರವಾದ ವಿಧಾನಗಳನ್ನು ತಿಳಿದುಕೊಂಡಿದ್ದಾರೆ. ಡಿಂಗೋ, ಕಾಂಗರೂ ಮುಂತಾದ ಪ್ರಾಣಿಗಳು ಒಂದೆರಡು ಅಡಿ ಆಳದಲ್ಲೇ ನೀರು ಇರುವ ಸ್ಥಳಗಳನ್ನು ವಾಸನೆಯಿಂದ ತಿಳಿದು ಅಲ್ಲಿ ಬಗೆದು ನೀರು ಕುಡಿಯುತ್ತವೆ. ಈ ಪ್ರಾಣಿಗಳನ್ನು ಹಿಂಬಾಲಿಸಿ ಹೋಗಿ ಈ ಜನರೂ ನೀರನ್ನು ದೊರಕಿಸಿಕೊಳ್ಳುತ್ತಾರೆ. ಕೆಲವು ಮರಗಳು ಕೊಳವಿಯಂತಿರುವ ತಮ್ಮ ಬೇರುಗಳಲ್ಲಿ ನೀರನ್ನು ಶೇಖರಿಸುತ್ತವೆ; ಇವುಗಳನ್ನು ಅಗೆದು ಆ ನೀರನ್ನು ಉಪಯೋಗಿಸುತ್ತಾರೆ. ಕೆಲವುವೇಳೆ ಕಪ್ಪೆಗಳು ತಮ್ಮ ಹೊಟ್ಟೆಯಲ್ಲಿ ಶೇಖರಿಸುವ ನೀರನ್ನೂ ತೆಗೆದು ಕುಡಿಯುತ್ತಾರೆ. ಕೆಲವು ಕಡೆ ಬೆಳಿಗ್ಗೆ ಮುಂಚೆಯೇ ಎದ್ದು ಗಿಡಗಳ ಎಲೆಗಳ ಮೇಲಿರುವ ಇಬ್ಬನಿಯನ್ನು ಶೇಖರಿಸುತ್ತಾರೆ.

ಪ್ರಾಣಿಗಳನ್ನು ಬೇಟೆಯಾಡಿಯೇ ಆಹಾರವನ್ನೊದಗಿಸಿಕೊಳ್ಳಬೇಕಾದ ಇವರು ಬೇಟೆಯಲ್ಲಿ ಬಲು ಚತುರರು; ಸುಳಿವು ಕೊಡದೆ ಬೇಟೆಯನ್ನು ಬೆನ್ನಟ್ಟಿ ಹೋಗುವ ನೈಪುಣ್ಯದಲ್ಲಿ ಇವರನ್ನು ಯಾರೂ ಮೀರಿಸಿಲ್ಲ. ಕಲ್ಲಿನ ಮತ್ತು ಮರದ ಆಯುಧಗಳು ಹೆಚ್ಚು ಕಡಿಮೆ ಇತರ ದೇಶಗಳ ಆದಿವಾಸಿಗಳ ಆಯುಧಗಳಂತೆಯೇ ಇದ್ದರೂ ಬೂಮರ್‍ಯಾಂಗ್ ಇವರ ವಿಶಿಷ್ಟ ಆಯುಧ. ಇದು ಗುರಿಗೆ ತಗಲಿದಮೇಲೆ ಎಸೆದವನ ಬಳಿಗೇ ಬಂದು ಬೀಳುತ್ತದೆ. ಇದನ್ನು ಪ್ರಾಚೀನ ಈಜಿಪ್ಟ್, ಭಾರತ ಮುಂತಾದ ಕೆಲವು ದೇಶಗಳಲ್ಲೂ ಉಪಯೋಗಿಸುತ್ತಿದ್ದರೆಂದು ತಿಳಿದುಬಂದಿದೆ. ಆದರೆ ಆಸ್ಟ್ರೇಲಿಯದ ಆದಿವಾಸಿಗಳು ಇದನ್ನು ಪ್ರಯೋಗಿಸಿದಷ್ಟು ಬೇರೆ ಯಾವ ದೇಶದವರೂ ಪ್ರಯೋಗಿಸಲಿಲ್ಲ. ಸದ್ದಿಲ್ಲದೆ ಬೇಟೆಯನ್ನು ಬೆನ್ನಟ್ಟುವುದನ್ನು ಇವರು ಮಕ್ಕಳಿಗೆ ಬಾಲ್ಯದಿಂದಲೂ ಕಲಿಸುತ್ತಾರೆ.

ಹಗಲೆಲ್ಲ ಬೇಟೆ, ಆಹಾರ ಶೇಖರಣೆಯಲ್ಲಿ ಕಾಲಕಳೆಯುತ್ತ ರಾತ್ರಿ ಬರಿಮೈಯಲ್ಲಿ ನೆಲದ ಮೇಲೆ ಮಲಗುವ ಈ ಆದಿವಾಸಿಗಳಿಗೆ, ಕಲಾಪ್ರಜ್ಞೆ ಅಥವಾ ಆಸಕ್ತಿ ಇದ್ದರೂ ಅದನ್ನು ಬೆಳೆಸಲು ಅವಕಾಶವೇ ಇಲ್ಲ. ಆದರೆ ನೀರು, ಆಹಾರ ಹೆಚ್ಚು ಕಷ್ಟವಿಲ್ಲದೆ ದೊರಕುವ ಕಡೆಗಳಲ್ಲಿ ಆದಿವಾಸಿಗಳ ಕಲಾಪ್ರಜ್ಞೆ ಕೊಂಚವಾದರೂ ವಿಕಸಿಸಿರುವುದನ್ನು ಕಾಣಬಹುದು. ಅಲಂಕರಣಕ್ಕಾಗಿ ಆಯುಧಗಳ ಮೇಲೆ ಚಿತ್ರಗಳನ್ನು ಕೊರೆಯುವುದು, ಬಂಡೆಗಳ ಮೇಲೆ ಕೆತ್ತಿ ಚಿತ್ರಗಳನ್ನು ಮಾಡುವುದು, ಗುಹೆಗಳಲ್ಲಿ ಬೇಟೆಯ ದೃಶ್ಯ ಮುಂತಾದುವುಗಳನ್ನು ಬಣ್ಣಗಳಲ್ಲಿ ತೋರಿಸುವುದು, ಇವೆಲ್ಲ ಆದಿಕಾಲದಿಂದಲೂ ಕಲಾಭಿರುಚಿ ಮಾನವನಲ್ಲಿ ಬೆಳೆದುಬಂದಿದೆ ಎಂಬುದಕ್ಕೆ ನಿದರ್ಶನಗಳು. ಇಲ್ಲಿನ ಜನ ತೀರ ಅನಾಗರಿಕರಾದ್ದರಿಂದ ಅವರ ಚಿತ್ರಗಳು ತುಂಬ ಒರಟಾಗಿವೆ, ಚಿಕ್ಕಮಕ್ಕಳು ಬರೆಯಲೆತ್ನಿಸುವ ಚಿತ್ರಗಳಂತೆ. ಆದರೆ ಮಾನವ ನಾಗರಿಕತೆಯ ವಿಕಾಸವನ್ನು ತಿಳಿಯಬೇಕೆನ್ನುವವರಿಗೆ ಈ ಚಿತ್ರಗಳು ಸ್ವಾರಸ್ಯಪೂರ್ಣವೂ ಬೋಧಪ್ರದವೂ ಆಗಿವೆ. (ಬಿ.ಪಿ)

**ಜಾನಪದ:** ಮಾನವಶಾಸ್ತ್ರ ಹಾಗೂ ಜಾನಪದ ಅಧ್ಯಯನಗಳಿಗೆ ಅಪಾರ ಸಾಮಗ್ರಿಯನ್ನು ಒದಗಿಸಿರುವ ರಾಷ್ಟ್ರಗಳಲ್ಲಿ ಆಸ್ಟ್ರೇಲಿಯವೂ ಒಂದು. ಅಮೆರಿಕ, ಆಫ್ರಿಕಗಳಂತೆ ಜಾನಪದ ಅಧ್ಯಯನಕ್ಕೆ ಅಲ್ಲಿನ ಮೂಲನಿವಾಸಿಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದುದು ಅಗತ್ಯ. ಆಸ್ಟ್ರೇಲಿಯದ ಜಾನಪದವೆಂದರೆ ಆಸ್ಟ್ರೇಲಿಯದ ಮೂಲನಿವಾಸಿಗಳ ಜಾನಪದವೇ. ಏಕೆಂದರೆ 1788ರಲ್ಲಿ ಐರೋಪ್ಯರು ಆ ಖಂಡದಲ್ಲಿ ಪದಾರ್ಪಣ ಮಾಡಿ ಅವರೇ ಇಂದು ಬಹುಸಂಖ್ಯಾತರೆನಿಸಿದ್ದರೂ ಶೇ.90ರಷ್ಟು ಜನಸಂಖ್ಯೆ ಅವರದೇ ಆಗಿದ್ದರೂ ಅವರ ಜಾನಪದ ಹಿನ್ನೆಲೆಯನ್ನು ಅಭ್ಯಸಿಸಲು ಅವರ ಸ್ವರಾಷ್ಟ್ರಗಳತ್ತಲೇ ನಾವು ದೃಷ್ಟಿಯನ್ನು ಹರಿಸಬೇಕು. ಸಹಸ್ರಾರು ವರ್ಷಗಳ ಪರಂಪರೆಯ ಮುದ್ರೆಯನ್ನು ಪಡೆದ ಮೂಲನಿವಾಸಿಗಳ ಜಾನಪದವೇ ಬಹಳ ಮುಖ್ಯವಾದುದು. ಆಸ್ಟ್ರೇಲಿಯದ ನೆಲದ ಕಂಪು, ಕಸುವುಗಳನ್ನು ಪಡೆದ ದೇಶೀಯರ ಜಾನಪದದ ಸಂಗ್ರಹಣೆ ಅಭ್ಯಾಸಗಳು ಕಳೆದ ಶತಮಾನದಿಂದಲೇ ನಡೆದು ಅತ್ಯುತ್ತಮ ಸಂಕಲನಗಳು ಹೊರಬಂದಿವೆ.

ಆದಿವಾಸಿಗಳ ಬಗ್ಗೆ ಅನೇಕ ಸಂಶೋಧನ ಗ್ರಂಥಗಳು ಪ್ರಕಟವಾಗಿವೆ. ರೆವರೆಂಡ್ ರಿಡ್ಲೆ ಆದಿವಾಸಿಗಳ ಭಾಷೆಯನ್ನು ಅಭ್ಯಸಿಸಿ 1866ರಲ್ಲೇ ಒಂದು ಗ್ರಂಥವನ್ನು ಪ್ರಕಟಿಸಿದ. ಮ್ಯಾಥ್ಯು ಜಾನ್‌ನ ಆಸ್ಟ್ರೇಲಿಯದ ಮೂಲನಿವಾಸಿಗಳ ಒಂದು ಅಧ್ಯಯನ (1899), ಆಂಗ್ಲೋ ಸಾರ್ಕರ್‌ನ ಆಸ್ಟ್ರೇಲಿಯದ ಲೆಜೆಂಡರಿ ಟೇಲ್ಸ್ (1896), ಮೋರ್ ಆಸ್ಟ್ರೇಲಿಯನ್ ಲೆಜೆಂಡರಿ ಟೇಲ್ಸ್ (1898), ಆಸ್ಟ್ರೇಲಿಯ ಮೂಲನಿವಾಸಿ ಜೀವನದ ಒಂದು ಅಧ್ಯಯನ (1905), ಆಸ್ಟ್ರೇಲಿಯನ್ ಅಬಾರಿಜಿನಲ್ ಲೆಜೆಂಡ್ಸ್ (1930), ಇಲ್ಕಿನ್‌ನ ಆಸ್ಟ್ರೇಲಿಯದ ಮೂಲನಿವಾಸಿಗಳು–ಅವರನ್ನು ಅರ್ಥ ಮಾಡಿಕೊಳ್ಳುವ ಬಗೆ (1938) ಮುಂತಾದ ಕೃತಿಗಳು ಬಹಳ ಹಿಂದೆಯೇ ಪ್ರಕಟವಾಗಿ ಆಸ್ಟ್ರೇಲಿಯದ ಮೂಲನಿವಾಸಿಗಳ ಬಗ್ಗೆ ಜಾನಪದ ಸಂಬಂಧವಾಗಿ ಅನೇಕ ಅಮೂಲ್ಯ ವಿಷಯಗಳನ್ನು ದೊರಕಿಸುತ್ತವೆ. ರಾಬರ್ಟ್ ಎಚ್ ಲೂಯಿ ಮುಂತಾದ ಮಾನವಶಾಸ್ತ್ರಜ್ಞರಂತೂ ಆಸ್ಟ್ರೇಲಿಯನ್ನರ ಜಾನಪದವನ್ನು ತಮ್ಮ ಸಾಂಸ್ಕೃತಿಕ ಮಾನವಶಾಸ್ತ್ರ ಕೃತಿಗಳಲ್ಲಿ ಹೇರಳವಾಗಿ ಬಳಸಿಕೊಂಡಿದ್ದಾರೆ.

ಮೂಲನಿವಾಸಿಗಳಲ್ಲಿ ಟಾಸ್ಮೇನಿಯನ್ ಬುಡಕಟ್ಟಿಗೆ ಸೇರಿದ ಜನ ಸಹಸ್ರಾರು ವರ್ಷಗಳ ಹಿಂದೆಯೇ ಆ ನೆಲದ ಮಕ್ಕಳಾಗಿ ಬಾಳಿದವರು. 1876ರವರೆಗೂ ಅವರ ಬುಡಕಟ್ಟಿಗೆ ಸೇರಿದವರು ಇದ್ದರು ಎಂದು ಗುರುತಿಸಲಾಗಿದೆ. ಈ ಜನಾಂಗ ಆಸ್ಟ್ರೇಲಿಯಕ್ಕೆ ಕಾಲಿಟ್ಟ ಎಷ್ಟೋ ವರ್ಷಗಳ ತರುವಾಯ ಕಪ್ಪುಜನ ಆಗಮಿಸಿದರು. ಕಪ್ಪು ಮಿಶ್ರಿತ ಚಾಕೊಲೇಟ್ ಬಣ್ಣದ, ವಂಕಿವಂಕಿಯಾದ ಗುಂಗುರು ಗೂದಲಿನ ಈ ಜನರ ಸಂಖ್ಯೆ 1788ರಲ್ಲಿ 35,000 ಎಂದು ಅಂದಾಜು ಮಾಡಲಾಗಿತ್ತು. ಐರೋಪ್ಯರ ಪ್ರಾಬಲ್ಯದಿಂದ ಕ್ರಮೇಣ ಈ ಜನಸಂಖ್ಯೆ ಕುಗ್ಗುತ್ತಾ ಬಂತು. ಪಶ್ಚಿಮ ಆಸ್ಟ್ರೇಲಿಯ, ಉತ್ತರ ಪ್ರಾಂತ್ಯ, ಉತ್ತರ ಕ್ವೀನ್ಸ್‌ಲೆಂಡ್, ದಕ್ಷಿಣ ಆಸ್ಟ್ರೇಲಿಯಗಳಲ್ಲಿ ವಿಶೇಷವಾಗಿ ನೆಲೆಸಿರುವ ಇವರಲ್ಲಿ ನೂರಾರು ಒಳಪಂಗಡಗಳು ಇವೆ. ಗೊತ್ತಾದ ಪ್ರದೇಶವೊಂದನ್ನು ತನ್ನದು ಎಂಬಂತೆ ಭಾವಿಸಿ ಬೇಟೆಯನ್ನೇ ಅವಲಂಬಿಸಿ ಜೀವಿಸುವ ಜನ ಇವರು. ಉಳುವುದನ್ನರಿಯರು. ಇವರಿಗೆ ಸಾಕುಪ್ರಾಣಿಗಳ ಅಗತ್ಯವಿಲ್ಲ. ಎಲ್ಲದಕ್ಕೂ ಪ್ರಕೃತಿಯನ್ನೇ ಅವಲಂಬಿಸಿ ನಿಂತವರು. ಜೀವಜಂತುಗಳನ್ನೂ ಗೆಡ್ಡೆಗೆಣಸುಗಳನ್ನೂ ಹಣ್ಣುಸೊಪ್ಪುಗಳನ್ನೂ ತಿಂದೇ ಕಾಲ ಹಾಕುವವರು. ಇವರು ಗಿಡದಿಂದ ಬಿಡಿಸಿಕೊಳ್ಳುವುದನ್ನು ಬಲ್ಲರೇ ಹೊರತು ನೆಲದಿಂದ ಏನನ್ನೂ ಬೆಳೆಯುವ ಗೋಜಿಗೆ ಹೋದವರಲ್ಲ.

ಆಸ್ಟ್ರೇಲಿಯದ ಮೂಲನಿವಾಸಿಗಳ ಪೂರ್ವಿಕರು ನೀರಿನ ಅನುಕೂಲವಿರುವ ಸ್ಥಳಗಳಲ್ಲಿ ನೆಲೆಸಿದ್ದರು. ಆ ಎಡೆಗಳಲ್ಲೇ ಇವರಿಗೆ ಅತ್ಯಂತ ಪವಿತ್ರವಾದುವು. ಅವರ ಆತ್ಮಗಳು ಇಂದಿಗೂ ಆ ಎಡೆಗಳಲ್ಲೇ ಇವೆ–ಎಂಬ ನಂಬಿಕೆಯಿರುವುದರಿಂದ ತಮ್ಮ ಪ್ರದೇಶಗಳನ್ನು ಬಿಟ್ಟು ಇವರು ದೂರ ಹೋಗುವುದಿಲ್ಲ. ಒಳ್ಳೆಯ ನಡತೆಗೆ, ವಿನಯಕ್ಕೆ, ಪ್ರಾಮಾಣಿಕತೆಗೆ ಹೆಸರಾದ ಈ ಜನ ವಿನೋದಪ್ರಿಯರೂ ಹೌದು. ತುಂಬ ಉಲ್ಲಾಸದಿಂದ ತಮ್ಮ ಬದುಕನ್ನು ಹೊರೆಯುತ್ತಾರೆ. ಈ ಜನ ತಾಳ್ಮೆಗೆ ಹೆಸರಾದವರು. ನೈತಿಕತೆ ಇವರ ಬದುಕಿನ ಉಸಿರು.

ಪ್ರಕೃತಿಯ ಮಡಿಲಲ್ಲಿ ಬೆಳೆಯುವ ಇವರು ಹೆಚ್ಚು ಸಾಹಸಿಗಳು. 5–6 ಅಡಿಗಳಷ್ಟು ಎತ್ತರವಾಗಿರುವ, ದೃಢಕಾಯರಾದ ಈ ಮೂಲನಿವಾಸಿಗಳು ನಡುವಿಗೆ ಸುತ್ತಿರುವ ಮಾನವ ಕೂದಲಿನ ಪಟ್ಟಿಗೆ ಅನೇಕ ಬಗೆಯ ಆಯುಧಗಳನ್ನು ಸಿಕ್ಕಿಸಿಕೊಂಡಿರುತ್ತಾರೆ. ಮುಖದ ಅಂಚಿನಲ್ಲಿ ಒಂದು ಬಗೆಯ ಬಣ್ಣವನ್ನು ಬಳಿದುಕೊಂಡಿರುತ್ತಾರೆ. ಆಹಾರವನ್ನು ಸೇವಿಸಿದ ಮೇಲೆ ಚೆನ್ನಾಗಿ ಬಾಯಿ ಮುಕ್ಕಳಿಸದೇ ಇರುವುದಿಲ್ಲ. ಇದ್ದಿಲಿನಿಂದ ಶುದ್ಧಿಗೊಳಿಸುವುದೂ ಉಂಟು. ಬಿಸಿಯಾದದ್ದೇನನ್ನೂ ಕುಡಿಯರು. ಹೀಗಾಗಿ ಇವರ ಹಲ್ಲುಗಳು ಹೆಚ್ಚು ಭದ್ರ, ಆಕರ್ಷಕ. ಇತ್ತೀಚೆಗೆ ಇಂಥ ಉತ್ತಮ ಅಭ್ಯಾಸಗಳು ಇವರಲ್ಲಿಯೂ ತಪ್ಪಿಹೋಗುತ್ತಿವೆ.

ಚುಂಬನವೇ ಬಿಳಿಯರ ಅವಿವೇಕ ಎಂದು ಈ ಜನ ಭಾವಿಸುತ್ತಾರೆ. ಹಸ್ತಲಾಘವವೂ ಅಷ್ಟೆ, ಇವರ ದೃಷ್ಟಿಯಲ್ಲಿ ಹಾಸ್ಯಾಸ್ಪದ. ಒಂದು ಕಾಲಕ್ಕೆ ಇವರು ಆಗಂತುಕರ ಮೈವಾಸನೆ ಸೋಕಿದರೂ ಅಪಾಯ ಎಂದು ಭಾವಿಸುತ್ತಿದ್ದರು.

ನ್ಯಾಯಕ್ಕೆ ತಲೆಬಾಗಿ ನಡೆಯುವ ಇವರು ಸತ್ಯಸಂಧರು. ನ್ಯಾಯ ಉಲ್ಲಂಘನೆ ಎಂದರೆ ಅದೊಂದು ಘೋರ ಅಪರಾಧ. ಒಂದೊಂದು ಬುಡಕಟ್ಟಿನಲ್ಲೂ ಅಸಂಖ್ಯಾತ ಕಟ್ಟುಕಟ್ಟಳೆಗಳು ಇವೆ. ತಪ್ಪು ಮಾಡಿದವನಿಗೆ ಶಿಕ್ಷೆ ಎಂದರೆ ಒಂದಲ್ಲ ಒಂದು ರೀತಿಯಲ್ಲಿ ಅವನಿಗೆ ಗಾಯಗಳನ್ನುಂಟುಮಾಡುವುದು ಇಲ್ಲವೇ ಮರಣ ದಂಡನೆಯನ್ನೇ ವಿಧಿಸುವುದು. ಪ್ರತಿಯೊಬ್ಬರೂ ತಮ್ಮ ವರ್ಗದ ಕಟ್ಟುಗಳಿಗೆ ವಿಧೇಯರಾಗಿ ನಡೆದುಕೊಳ್ಳುವರು. ಸರ್ಕಾರದ ಭಯಕ್ಕಿಂತ ತಮ್ಮ ಜನಗಳ ಕಟ್ಟಳೆಗಳೇ ಇವರಿಗೆ ಮುಖ್ಯ. ಮೂರು ಅಕ್ಷಮ್ಯ ಅಪರಾಧಗಳನ್ನು ಈ ಜನ ಸಹಿಸರು. ಯಾವ ವ್ಯಕ್ತಿಯೂ ಜನಾಂಗದ ಹಿರಿಯ ವ್ಯಕ್ತಿಗೆ ಸುಳ್ಳು ಹೇಳಕೂಡದು; ಅಪ್ರಚೋದಿತವಾಗಿ ಕೊಲೆ ಮಾಡಬಾರದು; ನಿಷೇಧಿಸಲ್ಪಟ್ಟ ವರ್ಗದಲ್ಲಿನ ಸ್ತ್ರೀಯರನ್ನು ಅಪಹರಿಸಕೂಡದು. ಇಂಥವರಿಗೆ ಜನಾಂಗದವರು ವಿಧಿಸುವ ಶಿಕ್ಷೆಯ ಜೊತೆಗೆ ಕೆಳಲೋಕದ ಕತ್ತಲು ಕವಿದ ಘೋರ ನರಕವೂ ಕಾದಿರುತ್ತದೆ.

ವಯಸ್ಸು ಮತ್ತು ಅನುಭವದ ಆಧಾರದ ಮೇಲೆ ಕುಟುಂಬದ ಯಜಮಾನನ ಆಯ್ಕೆಯಾಗುತ್ತದೆ. ಸಾಮಾನ್ಯವಾಗಿ ಒಂದು ವರ್ಗದ ಮುಖಂಡ ತನ್ನ ಧೈರ್ಯ, ಸಾಹಸ ಹಾಗೂ ಆದರ್ಶಗುಣಗಳಿಗೆ ಹೆಸರಾಗಿರುತ್ತಾನೆ. ಇವನು ಹಿರಿಯರ ಸಲಹೆಗಳ ಮೇರೆಗೆ ನ್ಯಾಯಪಾಲನೆ ಮಾಡುತ್ತಾನೆ. ತನ್ನ ವರ್ಗದವರ ಹಿತರಕ್ಷಣೆ ಮಾಡುತ್ತಾನೆ. ಸಾಂಪ್ರದಾಯಿಕ ಕಟ್ಟುಕಟ್ಟಳೆಗಳನ್ನು ಜನ ಮುರಿಯದಂತೆ ಎಚ್ಚರ ವಹಿಸುತ್ತಾನೆ. ಸಣ್ಣಪುಟ್ಟ ವಿವಾದಗಳನ್ನು ಒಳಜಗಳಗಳನ್ನು ಪರಿಹರಿಸುತ್ತಾನೆ.

ಸಂಖ್ಯೆಗಳಿಗೆ ಆಸ್ಟ್ರೇಲಿಯದ ಮೂಲನಿವಾಸಿಗಳು ಹೆಚ್ಚು ಗಮನ ಕೊಟ್ಟಿಲ್ಲ; ಅದರ ಅಗತ್ಯವೂ ಅವರಿಗೆ ಹೆಚ್ಚಾಗಿ ಇದ್ದಂತಿಲ್ಲ. ಕೆಲವು ಪಕ್ಷಿಗಳ ಹೆಸರಿನಲ್ಲಿ ಸಂಖ್ಯೆಗಳನ್ನು ನೆನಪಿಟ್ಟುಕೊಳ್ಳುತ್ತಾರೆ. ಗುಂಡೋಯಿ ಎಂದರೆ ಒಂದು ಹಕ್ಕಿ, ಬೊಲೊವ್ವ ಎಂದರೆ ಎರಡು ಹಕ್ಕಿ, ಊಗ್ಲೆ ಎಂದರೆ ನಾಲ್ಕು ಹಕ್ಕಿ, ಹೀಗೆಯೇ ಒಂದೊಂದು ಪಕ್ಷಿಯ ಹೆಸರಿನಲ್ಲಿ ಕೆಲವು ಆವಶ್ಯಕ ಸಂಖ್ಯೆಗಳನ್ನು ನೆನಪಿಟ್ಟುಕೊಳ್ಳುತ್ತಾರೆ.

ಕುಲದೇವತೆಯ ಹಿನ್ನೆಲೆಯಲ್ಲಿ ವಿವಾಹಗಳು ನಡೆಯುತ್ತವೆ. ಸಾಮಾನ್ಯವಾಗಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಸರಳವಾಗಿ ಮದುವೆಗಳಾಗಿಬಿಡುವ ಉತ್ತಮ ಉಪಾಯಗಳನ್ನೂ ಇವರು ಕಂಡುಕೊಂಡಿದ್ದಾರೆ. ಒಂದು ಕುಟುಂಬದಲ್ಲಿ ಒಂದು ಹೆಣ್ಣು, ಒಂದು ಗಂಡಿದ್ದರೆ ಅಂಥದೇ ಮತ್ತೊಂದು ಕುಟುಂಬವನ್ನು ಆರಿಸಿ ಸುಲಭವಾಗಿ ಹೆಣ್ಣುಗಂಡುಗಳನ್ನು ಅದಲು ಬದಲು ಮಾಡಿಕೊಳ್ಳುತ್ತಾರೆ.

ಆಸ್ಟ್ರೇಲಿಯದ ಮೂಲನಿವಾಸಿಗಳಲ್ಲಿ ಎರಡು ಬಗೆಯ ಪಂಡಿತರನ್ನು ಕಾಣಬಹುದು. ಮಾಟ, ಮಂತ್ರಗಳ ಮೂಲಕ ಇತರರಿಗೆ ತೊಂದರೆ ಮಾಡುವ ಮಂತ್ರಶಕ್ತಿಯನ್ನು ಪಡೆದ ಮೊದಲ ವರ್ಗದವರ ಬಗ್ಗೆ ಅವರಿಗೆ ತುಂಬ ಭಯ. ಅವರನ್ನು ತುಂಬ ಕೀಳಾಗಿ ಭಾವಿಸುತ್ತಾರೆ. ಕೆಲವು ವ್ಯಕ್ತಿಗಳು ತಮಗೆ ಮಂತ್ರ, ಮಾಟಗಳು ಗೊತ್ತೆಂದು ಹೆಮ್ಮೆಯಿಂದ ಹೇಳಿಕೊಳ್ಳುವುದೂ ಉಂಟು.

ಕೆಲವು ಸಾಮಾನ್ಯ ರೋಗಗಳಿಗೆ ಈ ಮೂಲನಿವಾಸಿಗಳು ತಾವೇ ಔಷಧಿಗಳನ್ನು, ಪರಿಹಾರಗಳನ್ನು ಕಂಡುಕೊಂಡಿದ್ದಾರೆ. ಆದರೆ ಮಂತ್ರ, ಮಾಟ ಸಂಬಂಧವಾದ ರೋಗಗಳಿಗೆ ಅನುಭವಿಯಾದ ಪಂಡಿತ ಬರಲೇಬೇಕು. ಈತನೇ ಎರಡನೆಯ ಬಗೆಯವ. ಈತ ಉತ್ತಮ ಔಷಧದಿಂದಲೇ ರೋಗಗಳನ್ನು ಗುಣಪಡಿಸಿದರೂ ಜನರ ನಂಬಿಕೆಗಾಗಿಯಾದರೂ ರೋಗಿಗಳ ಶರೀರವನ್ನು ಉಜ್ಜಿ, ಬಾಯಲ್ಲಿ ಕಚ್ಚಿ ಹೀರುವಂತೆ ನಟಿಸಿ ದುಷ್ಟಶಕ್ತಿಗಳ ರೂಪದಲ್ಲಿ ಸೇರಿಕೊಂಡಿದ್ದ ಮೂಳೆಗಳನ್ನೂ ಕಲ್ಲುಗಳನ್ನೂ ಹೊರತೆಗೆದಂತೆ ಮಾಡುತ್ತಾನೆ. ಆ ವಸ್ತುಗಳು ಹೊರಗೆ ಹೋದರೆ ಆ ರೋಗಿ ಗುಣಮುಖನಾಗುತ್ತಾನೆ. ಜನರಿಗೆ ಇವನ ಬಗ್ಗೆ ತುಂಬ ಗೌರವ. ಅನೇಕ ಶಕ್ತಿಗಳನ್ನು ಕೈವಶ ಮಾಡಿಕೊಂಡವನೀತ ಎಂಬ ನಂಬಿಕೆ ಅವರಿಗೆ. ಆದರೆ ಇವನೇ ಕಾಯಿಲೆ ಬಿದ್ದಾಗ ಇತರರ ನೆರವನ್ನು ಕೋರುತ್ತಾನೆ.

ಮೂಲನಿವಾಸಿಗಳು ಮಾನವನಿಗೆ ಸಂಬಂಧಿಸಿದಂತೆ ಮೂರು ಬಗೆಯ ಆತ್ಮಗಳಿವೆ ಎಂದು ಭಾವಿಸುತ್ತಾರೆ. ಯೋವಿ ಎನ್ನುವುದು ಹುಟ್ಟಿದೊಡನೆಯೇ ಮಾನವ ಶರೀರವನ್ನು ಪ್ರವೇಶಿಸಿ, ಶರೀರದ ಜೊತೆಯಲ್ಲಿಯೇ ಬೆಳೆದು, ಅದರ ಜೊತೆಯಲ್ಲಿಯೇ ನಾಶವಾಗುತ್ತದೆ; ಅಥವಾ ಇತರ ವಸ್ತುವಿನ ಸಂಪರ್ಕವನ್ನು ಪಡೆದು, ಶರೀರದಿಂದ ಪ್ರತ್ಯೇಕಗೊಂಡು ಗಾಳಿಯಾಗಿ ರೂಪಗೊಳ್ಳುತ್ತದೆ. ಎರಡನೆಯ ಆತ್ಮ ಡೋವಿ ಸ್ವಪ್ನಕ್ಕೆ ಸಂಬಂಧಪಟ್ಟುದು. ಶರೀರ ವಿಶ್ರಾಂತಿಯಲ್ಲಿರುವಾಗ ಸ್ವಚ್ಛಂದವಾಗಿ ಎಲ್ಲಿಬೇಕಾದರೂ ಅಡ್ಡಾಡಿಕೊಂಡು ಬರುವ ಸೌಲಭ್ಯ ಇದರದು. ಸಾಮಾನ್ಯ ಜನರಿಗೆ ಡೋವಿಯ ಮೇಲೆ ನಂಬಿಕೆ ಸಾಲದು. ನಿದ್ರಿಸುವಾಗ ಅದು ಶರೀರದಿಂದ ನುಣುಚಿಕೊಳ್ಳದಿರಲಿ ಎಂದು ಭದ್ರವಾಗಿ ಬಾಯಿಮುಚ್ಚಿಕೊಂಡು ಮಲಗುತ್ತಾರೆ. ಮೂರನೆಯ ಮುಲ್ಲೋವಿ ಮನುಷ್ಯನ ನೆರಳಿಗೆ ಸಂಬಂಧಿಸಿದ ಆತ್ಮ. ಕೆಲವರು ಇದರ ಉಪಯೋಗವನ್ನು ಬಹಳ ಚೆನ್ನಾಗಿ ಪಡೆದುಕೊಳ್ಳುತ್ತಾರೆ. ಎಲ್ಲಿಗೆ ಬೇಕಾದರೂ ಯಾರಿಗೆ ಏನು ಮಾಡಬೇಕಾದರೂ ಇದನ್ನು ಕಳಿಸುವ ಶಕ್ತಿ ಪಡೆದಿರುತ್ತಾರೆ. ಮೋಬೀ ಎಂಬ ಪ್ರಾಣಿಸಂಬಂಧವಾದ ಮತ್ತೊಂದು ಆತ್ಮವಿದೆಯೆಂದೂ ಕೆಲವರು ನಂಬುತ್ತಾರೆ. ಮರ, ಅಣಬೆ, ದೆವ್ವದ ಆಹಾರ ಎಂಬ ನಂಬಿಕೆ ಜನರಲ್ಲಿದೆ. ತಮ್ಮ ಮಕ್ಕಳು ಅವನ್ನು ಮುಟ್ಟದಂತೆ ಅವರು ಅತ್ಯಂತ ಎಚ್ಚರದಿಂದ ನೋಡಿಕೊಳ್ಳುತ್ತಾರೆ. ತಲೆಗೂದಲ ಬಗ್ಗೆ ಹೆಂಗಸರಿಗೆ ತುಂಬ ಶ್ರದ್ಧೆ. ಅವರ ಕೂದಲನ್ನು ಗಂಡ ಅಪಹರಿಸಿ ಯಾವ ರೀತಿಯ ತೊಂದರೆಯನ್ನಾದರೂ ಅವರಿಗೆ ಕೊಡಬಹುದು. ತಮ್ಮ ತಲೆಗೂದಲು ಹೋದರೆ ಯಾವ ಗಳಿಗೆಯಲ್ಲಾದರೂ ಮರಣ ಬರಬಹುದೆಂದು ಅವರು ಹೆದರುತ್ತಾರೆ.

ಮೂಲನಿವಾಸಿಗಳ ಆಚಾರ ವಿಚಾರಗಳು ನಂಬಿಕೆಗಳು, ನಡೆವಳಿಗಳು, ವೈದ್ಯ, ಮಾಟ, ಮಂತ್ರಗಳಂತೆ ನೃತ್ಯ ಸಾಹಿತ್ಯಗಳೂ ಜಾನಪದ ಅಧ್ಯಯನದಲ್ಲಿ ಗಮನಾರ್ಹವಾದುವು. ನೃತ್ಯಗಳು ಜಾನಪದ ಕಲೆಗಳ ಒಂದು ಪ್ರಮುಖ ಅಂಗ. ಮೂಲನಿವಾಸಿಗಳ ನೃತ್ಯಗಳಲ್ಲಿ ಸಾಮೂಹಿಕ ನೃತ್ಯಗಳು ಮುಖ್ಯ. ಅವರ ಮನರಂಜನೆಯ ಮುಖ್ಯ ಸಾಧನಗಳೇ ಅವು. ಈ ನೃತ್ಯಗಳಿಗೆ, ಹಾಡುಗಳಿಗೆ, ಕುಣಿತ ಮಣಿತಗಳಿಗೆ ಅನೇಕ ಸಂದರ್ಭಗಳಲ್ಲಿ ಭೂತಗಳು ಪ್ರಚೋದನೆ ನೀಡುತ್ತವೆಯೆಂದು ಅವರು ಭಾವಿಸುತ್ತಾರೆ. ಆವೇಶದಿಂದ ಕುಣಿಯುವಾಗ, ಹಾಡುವಾಗ ಭೂತಗಳು ಶಕ್ತಿಯನ್ನು ತುಂಬಿದರೂ ಆಶ್ಚರ್ಯವಿಲ್ಲ. ಇವರ ನೃತ್ಯಗಳಲ್ಲಿ ಸ್ತ್ರೀಯರು ಬೂಮರ್‍ಯಾಂಗ್ ಎಂಬ ಬಿಲ್ಲಿನಂಥ ಸಾಧನಗಳೆರಡನ್ನು ಕುಟ್ಟುತ್ತ ಅಥವಾ ಕಂಬಳಿ ಸುತ್ತಿದ ವಾದ್ಯವೊಂದನ್ನು ಬಡಿಯುತ್ತ ಹಾಡುತ್ತಾರೆ. ಪುರುಷರು ಕುಣಿಯುತ್ತಾರೆ. ಈ ನೃತ್ಯದವರು ತಮ್ಮ ಮುಡಿಯನ್ನು ಹಕ್ಕಿಯ ಗರಿಗಳಿಂದ ಅಲಂಕರಿಸಿಕೊಳ್ಳುತ್ತಾರೆ. ಮೈಯನ್ನು ನಾನಾರೀತಿಯ ಬಣ್ಣಗಳಿಂದ ಚಿತ್ರಿಸಿಕೊಳ್ಳುತ್ತಾರೆ. ಹೀಗೆ ಸಿದ್ಧಮಾಡಿಕೊಂಡು ರಂಗವನ್ನು ಪ್ರವೇಶಿಸುವುದರಲ್ಲಿ ದೊಡ್ಡದಾಗಿ ಹಾಕಿದ ಬೆಂಕಿ ವಿಸ್ತಾರವಾದ ಬಯಲಿನಲ್ಲಿ ಬೆಳಕು ಚೆಲ್ಲುತ್ತದೆ. ಅನೇಕ ಕಷ್ಟಸಾಧ್ಯವಾದ ಕೌಶಲಮಯವಾದ ನೃತ್ಯವೈಖರಿಯನ್ನು ಮೆರೆಯುತ್ತ ಕುಣಿಯುವ ಪುರುಷರು ಹಕ್ಕಿಗಳ ಕೂಗನ್ನೂ ಚಲನೆಯನ್ನೂ ಅನುಕರಿಸುತ್ತಾರೆ.

ಜಾನಪದ ಸಾಹಿತ್ಯದ ಬಗೆಗಳಲ್ಲಿ ಐತಿಹ್ಯಗಳ ಪಾತ್ರವೂ ಬಹಳ ಪ್ರಮುಖವಾದುದು. ಆಸ್ಟ್ರೇಲಿಯದಲ್ಲಿ ಅಪಾರ ಸಂಖ್ಯೆಯ ಐತಿಹ್ಯಗಳು ಲಭ್ಯವಾಗುತ್ತವೆ. ನಿಸರ್ಗದ ಅನೇಕ ಅದ್ಭುತಗಳಿಗೆ ಸಂಬಂಧಿಸಿದಂತೆ ಉತ್ತಮ ಐತಿಹ್ಯಗಳು ಹುಟ್ಟಿಕೊಂಡಿವೆ. ಬ್ರಿವೇರಿನದ ಬಳಿ ಇರುವ ಪ್ರಸಿದ್ಧ ಗುರುತುಗಳು ಬ್ಯಾಮೀ ದೈವದ ಮತ್ತು ಆತನ ದೈತ್ಯಪುತ್ರರ ಕಾರ್ಯವೆನ್ನಲಾಗಿದೆ. ಬೂಗೀರಿಯದ ಸರೋವರದ ಬಳಿ ಕಲ್ಲಿನ ಮೇಲೆ ಇರುವ ಗುರುತುಗಳನ್ನು ಬ್ಯಾಮೀಯ ಹಸ್ತ ಮತ್ತು ಪಾದದ ಗುರುತುಗಳು ಎಂದು ಜನ ಭಾವಿಸುತ್ತಾರೆ. ತನ್ನ ಮಡದಿಯರನ್ನು ನುಂಗಿದ ಮೊಸಳೆಗಳನ್ನು ಬ್ಯಾಮೀ ದಡಕ್ಕೆ ಎಳೆತಂದು ಕೊಂದು ಪತ್ನಿಯರನ್ನು ಬದುಕಿಸಿದನೆಂದು ನಂಬುತ್ತಾರೆ. ಮಿಲ್ಗೋಲದ ಬಳಿ ವಿಶಿಷ್ಟ ಆಕಾರದ ಬಂಡೆಯೊಂದಿದೆ. ಬ್ಯಾಮೀ ನೀರನ್ನು ತುಂಬಿ ಹಿಡಿದುಕೊಳ್ಳುತ್ತಿದ್ದ ಪಾತ್ರೆ ಇದು ಎಂಬ ನಂಬಿಕೆ ಇದೆ. ಅದರ ಪಕ್ಕದ ಹೊಂಡ ಬ್ಯಾಮೀಯ ನಾಯಿ ನೀರು ಕುಡಿಯುತ್ತಿದ್ದ ನೆಲೆ. ನಾಯಿಗಳು ಆಸ್ಟ್ರೇಲಿಯದಲ್ಲಿ ಮಾನವನಷ್ಟೇ ಹಳೆಯ ಜೀವಿಗಳು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಹೀಗೆ ಅನೇಕ ಬಗೆಯ ಐತಿಹ್ಯಗಳು ದೆವ್ವಗಳಿಗೆ, ಇತರ ಅಂಶಗಳಿಗೆ ಸಂಬಂಧಿಸಿದಂತೆ ಲಭ್ಯವಾಗುತ್ತವೆ.

ಇಲ್ಲಿನ ಐತಿಹ್ಯಗಳಲ್ಲಿ ವೈವಿಧ್ಯ ಹೆಚ್ಚು; ನಾಟಕೀಯತೆ, ಕಾವ್ಯಾಂಶಗಳೂ ಅಪಾರ. ಕಪ್ಪು ಜನರ ಕಲ್ಪನಾರಮ್ಯತೆ, ಸರಳ ಹಾಗೂ ಸಹಜ ಮಾನವಸ್ವಭಾವ ಚಿತ್ರಣಗಳಿಗೆ ಇವು ಉತ್ತಮ ನಿದರ್ಶನ. ಬದುಕು ಅಷ್ಟೇನೂ ಸುಖಪ್ರದವಲ್ಲವಾದರೂ ಅವರ ಜನಪದ ಸಾಹಿತ್ಯ ಸಂಪತ್ತು ಹೇರಳವಾದುದು. ಶ್ರೀಮತಿ ಪಾರ್ಕರ್ ಇಲ್ಲಿನ ಜಾನಪದ ಸಂಬಂಧಿ ಕೃತಿಗಳನ್ನು ಪ್ರಕಟಿಸಿದ ಮೇಲೆ ವಿಶ್ವವಿದ್ಯಾನಿಲಯಗಳಲ್ಲಿ ಜಾನಪದ ಅಧ್ಯಯನದ ಬಗ್ಗೆ ಮಾನವಶಾಸ್ತ್ರದ ಪ್ರತ್ಯೇಕ ಪೀಠಗಳು ಏರ್ಪಟ್ಟುವು. ಜಗತ್ತಿನ ಮಾನವಶಾಸ್ತ್ರಜ್ಞರ ದೃಷ್ಟಿ ಅತ್ತ ಹೊರಳಿತು. ಆ್ಯಂಡ್ರೂ ಲ್ಯಾಂಗ್ ಮೊದಲಾದ ಪ್ರಸಿದ್ಧ ಮಾನವಶಾಸ್ತ್ರಜ್ಞರು ಆ ಸಾಹಿತ್ಯಸಂಪತ್ತನ್ನು ಮುಕ್ತಕಂಠದಿಂದ ಕೊಂಡಾಡಿದರು. ಇಲ್ಲಿನ ಐತಿಹ್ಯಗಳ, ಪುರಾಣಗಳ, ಕಥೆಗಳ ಅಭ್ಯಾಸದಿಂದ ಆಸ್ಟ್ರೇಲಿಯದ ಮೂಲನಿವಾಸಿಗಳ ಜೀವನ ಕಣ್ಣಿಗೆ ಕಟ್ಟುತ್ತದೆ. ಆಂಡ್ರೂ ಲ್ಯಾಂಗ್ ಒಂದು ಕಡೆ ಬರೆಯುತ್ತಾನೆ; ಈ ಕಥೆಗಳು ಯಾವುದೋ ಗತಸಂಪ್ರದಾಯದ, ಕಣ್ಮರೆಯಾದ ವಸ್ತುಗಳಲ್ಲಿ ಬದುಕಿನ ಜೀವಂತಚಿತ್ರವನ್ನು, ಜನರ ಮನಸ್ಸಿನ ಸಹಜ ಪರಿಚಯವನ್ನು ಒದಗಿಸುವ ಸಾಧನಗಳು. ಆಹಾರ ಮತ್ತು ನೀರಿಗಾಗಿ ಅವರ ಹೋರಾಟ, ಉಳದೆ, ಬಿತ್ತದೆ ಯಾವ ಸಾಕುಪ್ರಾಣಿಯನ್ನೂ ಹೊಂದದೆ, ಒಣ ನೆಲದಲ್ಲಿ ಹೋರಾಟದ ಬದುಕನ್ನು ನಡೆಸುವ ರೀತಿ, ಅವರ ಬೇಟೆಯ ಕ್ರಮ, ಜೇನು, ನೊಣಗಳನ್ನು ಅಟ್ಟಿ ಹಟ್ಟಿಯನ್ನು ವಶಪಡಿಸಿಕೊಳ್ಳುವ ರೀತಿ–ಹೀಗೆ ಈ ಮೂಲನಿವಾಸಿಗಳಿಂದ ಆದಿಮಾನವರ ಜೀವನದ ಸಂಗತಿಗಳು ನಮಗೆ ಲಭ್ಯ. ಕೆಲವು ವರ್ಷಗಳ ಹಿಂದೆ ಕಪ್ಪು ಜನರಿಗೆ ಸಂಬಂಧಪಟ್ಟಂತೆ ಕಥೆಗಳಾಗಲಿ, ಗೀತೆಗಳಾಗಲಿ, ಇವೆಯೆಂಬುದೇ ಗೊತ್ತಿರಲಿಲ್ಲ. ಅವುಗಳ ಸಂಗ್ರಹ ನಡೆದ ಮೇಲೆ ಪ್ರಾಣಿಗಳ, ಪಕ್ಷಿಗಳ ಮರಗಿಡಗಳ, ಮಾನವರ ನಿಸರ್ಗದ ವೈಚಿತ್ರ್ಯಗಳ ಸುತ್ತ ಹೆಣೆದುಕೊಂಡ ಅದ್ಭುತ ಪ್ರಪಂಚವನ್ನು ನೋಡಿದ ಮೇಲೆ ಆಸ್ಟ್ರೇಲಿಯದ ಜಾನಪದ ರಚನೆಗಳ ಬಗ್ಗೆ ವಿದ್ವಾಂಸರು ಹೆಮ್ಮೆಪಟ್ಟರು. ಇವೆಲ್ಲ ಆಸ್ಟ್ರೇಲಿಯದ ಕಥೆಗಳು. ಆಸ್ಟ್ರೇಲಿಯಕ್ಕೆ ಸೇರಿದ, ಬಿಳಿಯರು, ಕರಿಯರು ಅಥವಾ ಹೊಸದಾಗಿ ಬಂದವರು ಎಂಬ ಭೇದವಿಲ್ಲದಂತೆ ಸಮಗ್ರ ಆಸ್ಟ್ರೇಲಿಯಕ್ಕೆ ಸೇರಿದುವು ಎಂದು ಅಭಿಮಾನಪಟ್ಟರು.

ಆಸ್ಟ್ರೇಲಿಯದ ಜಾನಪದದಲ್ಲಿ ವಿವರಣಾತ್ಮಕ ಕಥೆಗಳು ಹೆಚ್ಚು. ಪ್ರಾಣಿಗಳ ಮೈಮೇಲೆ ಈ ಗುರುತು ಏಕೆ ಉಳಿಯಿತು; ಬಾಲ ಏಕೆ ಮೊಟಕಾಯಿತು, ಈ ಹವ್ಯಾಸ ಏತಕ್ಕೆ ಬಂತು–ಇಂಥ ವಿವರಗಳು ಅಲ್ಲಿವೆ. ಕಥೆ ಹೇಳುವುದರಲ್ಲೂ ಸಾಕಷ್ಟು ತಾರತಮ್ಯ ಕಾಣುತ್ತದೆ. ಕೆಲವರು ಸ್ಥೂಲವಾಗಿ ಕಥಾರೇಖೆಯನ್ನು ಮಾತ್ರ ಹೇಳಿ ಬೇಗ ಮುಗಿಸಿಬಿಡುತ್ತಾರೆ. ಸ್ವಲ್ಪ ಒಗ್ಗಿಸಿಕೊಂಡರೆ ಅವರವರೇ ಹೇಳಿಕೊಳ್ಳುವಂತೆ ರಮ್ಯವಾಗಿ ನಿರೂಪಿಸುತ್ತಾರೆ. ಪುರಾಣಕಥೆಗಳು ಲಯಬದ್ಧವಾದ ಸಂಗೀತ ದೃಷ್ಟಿಯಿಂದ ಗಮನಾರ್ಹವಾದ ಕಾವ್ಯರೂಪದಲ್ಲಿ ಉಳಿದಿವೆ. ಪ್ರಾಣಿಗಳ ಪಾತ್ರ ವಿಶೇಷವಾಗಿ ಈ ಮೂಲನಿವಾಸಿಗಳ ಬದುಕನ್ನು ಆವರಿಸಿರುವುದರಿಂದ ಅಂಥ ಕಥೆಗಳು ಹೆಚ್ಚು. ಪವಿತ್ರ ಸಂಕೇತಗಳ ಮೇಲೆ, ಆಯುಧಗಳ ಮೇಲೆ, ಕಲ್ಲುಗಳ ಮೇಲೆ ಕೆಲವು ಕಡೆ ಮರದ ತೊಗಟೆಗಳ ಮೇಲೆ ಪುರಾಣಕಥೆಗಳನ್ನೂ ಐತಿಹ್ಯಗಳನ್ನೂ ಚಿತ್ರಿಸುವ ದೃಶ್ಯಗಳನ್ನೂ ಬಿಡಿಸಿ ಈ ಜನ ಅವನ್ನು ಪವಿತ್ರ ವಸ್ತುಗಳೆಂಬಂತೆ ಸಂರಕ್ಷಣೆ ಮಾಡಿಕೊಂಡು ಬರುತ್ತಾರೆ.

ಆಸ್ಟ್ರೇಲಿಯದ ಜಾನಪದ ಅಧ್ಯಯನದಲ್ಲಿ ಐತಿಹ್ಯಗಳ ಬಗ್ಗೆ, ಕಥೆಗಳ ಬಗ್ಗೆ ಸಾಕಷ್ಟು ಕೆಲಸ ನಡೆದಿದ್ದರೂ ಗಾದೆ, ಒಗಟು ಮುಂತಾದುವುಗಳ ಬಗ್ಗೆ ಲಕ್ಷ್ಯ ಸಾಲದಾಯಿತೇನೋ ಎನಿಸುತ್ತದೆ. ಸಂಗ್ರಹಕಾರ್ಯ ಬೆಳೆದಷ್ಟೂ ಅಲ್ಲಿನ ಜನಪದದ ವೈವಿಧ್ಯ, ವಿಸ್ತಾರಗಳ ಸಮರ್ಪಕ ಪರಿಚಯ ಲಭ್ಯವಾದಂತಾಗುವುದಿಲ್ಲ. ಅಲ್ಲಿನ ಜಾನಪದ ಅಧ್ಯಯನದಲ್ಲಿ ಮಾನವನ ಶಾಸ್ತ್ರೀಯ ದೃಷ್ಟಿಯೇ ವಿಶೇಷವೆನಿಸಿ ಜಾನಪದ ಶಾಖೆಗಳು ಕೆಲವು ನಿರ್ಲಕ್ಷಿತವಾದುವು ಎನಿಸಿದರೆ ಆಶ್ಚರ್ಯಪಡಬೇಕಿಲ್ಲ. (ಜೆ.ಎಸ್.ಪಿ.)

**ಧರ್ಮ:** 2006ರ ಜನಗಣತಿಯಂತೆ ಶೇ.64 ಜನರು ಕ್ರೈಸ್ತರು ಶೇ.2 ಹೀಬ್ರೂಗಳೂ ಇದ್ದಾರೆಂದು ತಿಳಿಯುತ್ತದೆ. ಶೇ.19 ಜನರು ತಾವು ಯಾವುದೇ ಧರ್ಮಾವಲಂಬಿಗಳಲ್ಲವೆಂದು ಉತ್ತರ ನೀಡಿದರು. ಅಂದರೆ ಇವರು ಆದಿವಾಸಿಗಳು. ಇವರಿಗೆ ನಾಗರಿಕ ಜನಾಂಗಗಳ ಯಾವುದೇ ಮತಧರ್ಮವಿರದಿದ್ದರೂ ಇವರದೇ ಆದ ಧಾರ್ಮಿಕ ವ್ಯವಹಾರವಿದೆಯೆಂಬುದನ್ನು ಮರೆಯಲಾಗದು. ಕ್ರೈಸ್ತರಲ್ಲಿ ಶೇ.38 ಪ್ರಾಟೆಸ್ಟೆಂಟರು, ಶೇ.26 ರೋಮನ್ ಕ್ಯಾಥೊಲಿಕರು, ಶೇ.19 ಆ್ಯಂಗ್ಲಿಕನ್ನರು. ಇದಲ್ಲದೇ ಹಲವಾರು ಇತರ ಧರ್ಮಾವಲಂಬಿಗಳೂ ಅಲ್ಪಸಂಖ್ಯಾತರಾಗಿದ್ದಾರೆ. ಬೌದ್ಧರು, ಶೇ.2.1 ಹಿಂದೂಗಳು, ಶೇ.0.8 ಜೂಡ, ಶೇ.0.5 ಆಸ್ಟ್ರೇಲಿಯದ ಧರ್ಮದ ಇತಿಹಾಸವನ್ನವಲೋಕಿಸಿದಾಗ, ಅವರ ಪರಮತ ಸಹಿಷ್ಣುತೆಯ ಅರಿವಾಗುತ್ತದೆ. ಸರ್ಕಾರ ಚರ್ಚಿನ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಬಹುದೆಂಬ ಭಯವೂ ಜಾತ್ಯತೀತತೆಯ ಭಾವನೆಯೂ ಹೆಚ್ಚಿದುದರಿಂದ, ಒಕ್ಕೂಟ ರಚಿತವಾಗುವ ವೇಳೆಗೆ ಚರ್ಚ್ ಮತ್ತು ರಾಜ್ಯದ ವ್ಯವಹಾರಗಳು ಸಂಪೂರ್ಣವಾಗಿ ಬೇರ್ಪಟ್ಟುವು. ಧರ್ಮದ ಆಧಾರದ ಮೇಲೆ ಸಾರ್ವಜನಿಕ ಹುದ್ದೆಗಳಿಗೆ ನೇಮಕ ಮಾಡುವುದನ್ನು ಸಂವಿಧಾನದ 116ನೆಯ ವಿಧಿ ನಿಷೇಧಿಸುತ್ತದೆ. ವಲಸೆಯ ಪರಿಣಾಮವಾಗಿ 1945ರಿಂದೀಚೆಗೆ

ರೋಮನ್ ಕ್ಯಾಥೊಲಿಕ್‌ರ ಸಂಖ್ಯೆ ಹೆಚ್ಚಿದೆ. ಇವರಲ್ಲಿ ಹೆಚ್ಚಿನವರು ಬ್ರಿಟಿಷ್ ಮೂಲದವರು. ಕೆಲವೇ ಜನ ಆಸ್ಟ್ರೇಲಿಯನ್ನರ ಸ್ವಭಾವವನ್ನು ರೂಢಿಸಿಕೊಂಡಿದ್ದಾರೆ. 20ನೆಯ ಶತಮಾನದ ಅನಂತರ, ಜನರ ನಿತ್ಯದ ಜೀವನ ಮತ್ತು ಘಟನೆಗಳ ಮೇಲೆ ಚರ್ಚಿನ ಪ್ರಭಾವ ಇಳಿಮುಖವಾಗಿದೆ. ಆಸ್ಟ್ರೇಲಿಯದ ಚರ್ಚ್‌ಗಳೂ ಇದಕ್ಕೆ ಹೊರತಾಗಲಿಲ್ಲ. ಈಗ ಶಿಕ್ಷಣ, ಸಮಾಜಕಲ್ಯಾಣ ಮುಂತಾದ ಆಂತರಿಕ ಚಟುವಟಿಕೆಗಳಿಗೆ ಅವುಗಳ ಕಾರ್ಯ ಸೀಮಿತವಾಗಿದೆ. *

**ವಾಸ್ತುಶಿಲ್ಪ:** ಮೂಲನಿವಾಸಿಗಳಲ್ಲಿ ಯಾವುದೇ ನಿಖರವಾದ ರಚನೆಯಾಗಲೀ ಕಟ್ಟಡ ನಿರ್ಮಾಣವಾಗಲೀ ಇಲ್ಲದಿದ್ದುದರಿಂದ ಆಸ್ಟ್ರೇಲಿಯದ್ದೇ ಎನ್ನಿಸಿಕೊಳ್ಳಬಲ್ಲ ವಾಸ್ತುಶಿಲ್ಪ ಇಲ್ಲವೆಂದೇ ಹೇಳಬಹುದು. ಮೊದಲಿಗೆ ಇವರಲ್ಲಿ ತರಬೇತಿ ಪಡೆದ ಕಟ್ಟಡ ನಿರ್ಮಾಪಕರೇ

ಅಪೇರ ಹೌಸ್, ಸಿಡ್ನಿ

ಆಗಲೀ ಅಥವಾ ಅದಕ್ಕೆ ಬೇಕಾದ ಕುಶಲ ಸಲಕರಣೆಗಳೇ ಆಗಲೀ ಇರಲಿಲ್ಲ. ಮೊದಲಿನ ಐರೋಪ್ಯ ಕಟ್ಟಡಗಳ ರಚನೆಗಳು ಬಹಳ ಒರಟಾಗಿದ್ದುವು. ಮರದ ಅಥವಾ ಬೊಂಬುಗಳನ್ನು ಕಟ್ಟಿ ಮೇಲೆ ಮಣ್ಣಿನಿಂದ ಗಿಲಾವು ಮಾಡಿದ ಗೋಡೆಗಳನ್ನು ನಿರ್ಮಿಸಿ ಮೇಲ್ಛಾವಣಿಗೆ ಗರಿಗಳನ್ನು ಹೊದಿಸುತ್ತಿದ್ದರು. ಅನಂತರ ಇಟ್ಟಿಗೆಗಳಿಂದ ಮನೆಕಟ್ಟಲು ಆರಂಭಿಸಿದರು. 1794ರವರೆಗೂ ಯಾವ ಕುಶಲತೆಯೂ ಕಾಣದ ಒರಟೊರಟಾದ ಒಂದಂತಸ್ತಿನ ಮನೆಗಳೇ ಇದ್ದುವು. ಮನೆಯ ಮುಂದೆ ಬಿಡಲಾಗುತ್ತಿದ್ದ ಹೊರಾಂಗಣವು ಬೇಸಗೆಯ ಬಿಸಿಲಿನ ಝಳಕ್ಕೊಂದು ತಡೆಯಾಗುತ್ತಿತ್ತು. 1829ರ ಅನಂತರ ಇಡೀ ಆಸ್ಟ್ರೇಲಿಯ ಬ್ರಿಟಿಷ್ ಸಾಮ್ರಾಜ್ಯದ ಆಧಿಪತ್ಯಕ್ಕೆ ಬಂದ ಮೇಲೆ ಇಂಗ್ಲೆಂಡಿನ ವಾಸ್ತುಶಿಲ್ಪ ಮಾದರಿಯ ರಚನೆಯನ್ನು ಕಟ್ಟಡಗಳಲ್ಲಿ ಅಳವಡಿಸಲು ಅಂದಿನ ಗವರ್ನರ್ ಕೆಲವು ಶಿಲ್ಪಿಗಳನ್ನು ನೇಮಿಸಿದ. ಅಲ್ಲಿನ ವಾಯುಗುಣಕ್ಕೆ ತಕ್ಕಂತೆ ಹಳೆಯ ಮಾದರಿಯ ಕಟ್ಟಡಗಳಲ್ಲೇ ಕೆಲವೊಂದು ಹೊಸ ಬದಲಾವಣೆಗಳನ್ನು ಮಾಡಿ ಮನೆಗಳನ್ನು ಕಟ್ಟಲು ಆರಂಭಿಸಿದರು. ಕ್ರಮೇಣ ಒಂದಂತಸ್ತಿನಿಂದ ಎರಡಂತಸ್ತಿನವರೆಗಿನ ಮನೆಗಳನ್ನು ಕಟ್ಟಲಾಯಿತು. 19ನೆಯ ಶತಮಾನದಲ್ಲಿ ಆಸ್ಟ್ರೇಲಿಯದ ವಾಸ್ತುಶಿಲ್ಪ ಇಂಗ್ಲೆಂಡಿನ ವಾಸ್ತುಶಿಲ್ಪದೊಂದಿಗೆ ಬೆರೆತು ತನ್ನದೇ ಆದ ಹೊಸ ಮಾದರಿಯನ್ನು ಸ್ಥಾಪಿಸಿತು. ಇಟ್ಟಿಗೆ ಗೋಡೆಗಳನ್ನು ಸಿಮೆಂಟ್‌ನಿಂದ ಕಟ್ಟಲು ಆರಂಭಿಸಿದರು. ಹಳೆಯ ವಿಧಾನದ ಮೇಲ್ಛಾವಣಿಯನ್ನು ನಿಲ್ಲಿಸಿ ಹೊಸ ವಿಧಾನದ ಸಿಮೆಂಟ್ ಮತ್ತು ಕಬ್ಬಿಣ ಸೇರಿಸಿದ ಮೇಲ್ಛಾವಣಿಯನ್ನು ಹಾಕಲಾಯಿತು.

1920ರಲ್ಲಿ ಅಮೆರಿಕ ಮಾದರಿಯ ಎರಡು ಕಟ್ಟಡಗಳು ನಿರ್ಮಿತವಾದುವು. ಬರೀ ಸಿಮೆಂಟ್ ಮತ್ತು ಕಬ್ಬಿಣಗಳಿಂದ ಕೂಡಿದ ಕಂಬಗಳಿಂದಲೇ ನಿರ್ಮಿತವಾದ ಮನೆಗಳವು. ಕಾಲಂ ರಚನೆ ಅವುಗಳಿಂದ ಪ್ರಾರಂಭವಾಯಿತೆನ್ನಬಹುದು.

1930ರ ಅನಂತರ ಆಸ್ಟ್ರೇಲಿಯದಲ್ಲಿ ಇಂಗ್ಲೆಂಡ್, ಅಮೆರಿಕ ಮುಂತಾದ ದೇಶಗಳ ಎಲ್ಲ ಬಗೆಯ ವಾಸ್ತುಶಿಲ್ಪಗಳೂ ಬೆರೆತ ಕಟ್ಟಡಗಳು ಕಾಣಿಸಲಾರಂಭಿಸಿದವು.

1934ರ ಅನಂತರ ಇಗರ್ಜಿ, ಶಾಲೆ, ಆಸ್ಪತ್ರೆ ಮುಂತಾದುವು ಹೊಸ ಹೊಸ ಮಾದರಿಯಲ್ಲಿ ನಿರ್ಮಿತವಾದುವು. ಅನಂತರ ಹೊಸ ಹೊಸ ರಸ್ತೆಗಳು ಏರ್ಪಟ್ಟವು. ಆದರೂ ಆಸ್ಟ್ರೇಲಿಯದಲ್ಲಿ ಹಳೆಯ ಮಾದರಿಯ, ನಾಲ್ಕು ಚದರಗಳ, ಹವಾಮಾನಕ್ಕೆ ಅನುಗುಣವಾಗಿ ಕಟ್ಟುತ್ತಿದ್ದ, ಮಧ್ಯೆ ಮೊಗಸಾಲೆಯುಳ್ಳ ಮನೆಗಳೇ ಇಂದಿಗೂ ಹೆಚ್ಚಾಗಿವೆ.

ಎರಡನೆಯ ಮಹಾಯುದ್ಧದ ಅನಂತರ ಕಟ್ಟಡಗಳ ರಚನೆಯಲ್ಲಿ ಅನೇಕ ಬದಲಾವಣೆಗಳಾದುವು. ಹವಾಮಾನಕ್ಕೆ ಅನುಕೂಲವಾಗುವಂತೆ ಅನೇಕ ಅಂತಸ್ತುಗಳುಳ್ಳ ಸೌಧಗಳು ಎದ್ದುವು. ಬಿಸಿಲಿನ ತಾಪವನ್ನು ತಡೆಯಲು ಗಾಜುಗಳನ್ನು ಹೆಚ್ಚು ಹೆಚ್ಚಾಗಿ ಬಳಸಲಾಯಿತು.

1956ರಲ್ಲಿ ಬೆನ್ನೆಲಾಂಗ್ ಬಂದರಿನ ತಟದಲ್ಲಿ ಕಟ್ಟಲಾಗಿರುವ ಸಿಡ್ನಿ ಆಪೇರ ಹೌಸ್ ಇಡೀ ಪ್ರಪಂಚದ ಗಮನವನ್ನು ಸೆಳೆದಿದೆ. ಆ ಕಟ್ಟಡದ ರಚನಾಕಲೆ ಅದ್ಭುತವಾಗಿದೆ. ಡೇನಿಷ್ ಶಿಲ್ಪಜ್ಞ ಉಟ್ಜಾನ್ ಈ ಕಟ್ಟಡದ ರಚನೆಗೆ ಕಾರಣನಾಗಿದ್ದಾನೆ. ಹಣವನ್ನು ಲಾಟರಿಗಳನ್ನು ಎತ್ತಿ ಈ ಕಟ್ಟಡದ ಕೆಲಸಕ್ಕೆ ಬಂಡವಾಳ ಒದಗಿಸಲಾಗಿದೆ.

ಇದಲ್ಲದೆ ಕ್ಯಾನ್‌ಬೆರದಲ್ಲಿ ಕಟ್ಟಲಾಗಿರುವ ದಿ ಅಕೆಡೆಮಿ ಆಫ್ ಸೈನ್ಸ್ ಎಂಬ ಗೋಳಾಕಾರದ ಕಟ್ಟಡ ಅತ್ಯಾಧುನಿಕವಾಗಿದೆ. ಅದರ ತಳಭಾಗದ ಸುತ್ತಳತೆ 47.54ಮೀ. ಆ ಗುಮ್ಮಟದ ಮೇಲು ಹೊದಿಕೆ ಪೂರ್ತಿ ತಾಮ್ರದ ತಗಡಿನಿಂದ ಆವೃತವಾಗಿದೆ. ಸಿಡ್ನಿ ಬಂದರಿನ ಸೇತುವೆ ಅತಿ ದೊಡ್ಡದಾದ ಸೇತುವೆಯಾಗಿದ್ದು ಆಧುನಿಕ ವಾಸ್ತುತಂತ್ರಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಅದರ ಕಮಾನಿನ ಅಳತೆ 503 ಮೀ., ಎತ್ತರ 139 ಮೀ. ಉದ್ದ 1,149 ಮೀ.

**ಸಾಹಿತ್ಯ:** ಆಸ್ಟ್ರೇಲಿಯದ ಸಾಹಿತ್ಯ ಸೃಷ್ಟಿಯಾದುದು ಬ್ರಿಟಿಷರು ಆ ಸಾಮ್ರಾಜ್ಯಕ್ಕೆ ಕಾಲಿಟ್ಟ ಮೇಲೆಯೇ. ಆದರೆ ಅಲ್ಲಿಯ ಆದಿವಾಸಿಗಳಲ್ಲಿ ಯಾವುದೇ ವಿಧವಾದ ಬರವಣಿಗೆ ಇಲ್ಲದೆ ಹೋದರೂ ಬಾಯಿಂದ ಬಾಯಿಗೆ ಚಲಿಸುತ್ತಿದ್ದ ಅವರದೇ ಆದ ಒಂದು ಸಾಹಿತ್ಯವಿತ್ತು. ಅವರಲ್ಲಿ ಸಾಹಸ, ಅದ್ಭುತ, ಪ್ರೇಮ, ಈರ್ಷ್ಯೆ, ಹಬ್ಬ ಹುಣ್ಣಿಮೆ, ಬೇಟೆ ಮುಂತಾದ ವಿವರಗಳನ್ನು ಒಳಗೊಂಡ ಕಥೆ, ವಿನೋದ ಕಥೆ, ಗೀತೆಗಳು, ಹಾಡುಹಬ್ಬಗಳು ಬಳಕೆಯಲ್ಲಿದ್ದುವು. ಬಾಯಿಂದ ಬಾಯಿಗೆ ಬಂದು ಬಾಯಲ್ಲೇ ನಿಂತ ಹಲವು ಕಥೆ ಮತ್ತು ಗೀತೆಗಳನ್ನು ಆಸ್ಟ್ರೇಲಿಯದಲ್ಲಿ ಸಂಗ್ರಹಿಸಲಾಗುತ್ತಿದೆ. ಅಲ್ಲಿನ ಜನಪದ ಸಾಹಿತ್ಯದಲ್ಲಿ ಮಂತ್ರವಾದಿ ಹಾಗೂ ಸಾಹಸ ಮತ್ತು ರೋಮಾಂಚಕ ಕಥೆಗಳು ಹೇರಳವಾಗಿವೆ.

ಸೃಷ್ಟ್ಯಾತ್ಮಕ ಸಾಹಿತ್ಯ ಪ್ರಾರಂಭವಾದುದು 1788ರಿಂದ ಎನ್ನಬಹುದು. 1788ರಿಂದ ಇತ್ತೀಚಿನವರೆಗಿನ ಸಾಹಿತ್ಯಚರಿತ್ರೆಯನ್ನು 4 ಭಾಗಗಳಾಗಿ ವಿಂಗಡಿಸಬಹುದು. 1788–1850, 1850–1910, 1910–40, 1940 ರಿಂದ ಇತ್ತೀಚಿನದು. ಪ್ರಪಂಚದ ಇತರ ದೇಶದಲ್ಲಿ ಸಾಹಿತ್ಯವನ್ನು ನೋಡುವಂತೆ ಆಸ್ಟ್ರೇಲಿಯದ ಸಾಹಿತ್ಯವನ್ನೂ ಎರಡು ಹಂತಗಳಲ್ಲಿ ನೋಡಬಹುದು. ಮೊದಲನೆಯದು ರಾಷ್ಟ್ರೀಯ ಮಟ್ಟವನ್ನು ಮುಟ್ಟುವಂಥದು. ಎರಡನೆಯದು ಪ್ರಪಂಚದ ಇತರ ಸಾಹಿತ್ಯಪಂಕ್ತಿಯಲ್ಲಿ ನಿಲ್ಲುವಂಥದು. ಈ ಎರಡರಲ್ಲೂ ಆಸ್ಟ್ರೇಲಿಯದ ಕೊಡುಗೆ ಸಾಕಷ್ಟಿದೆ. ಹೆನ್ರಿ ಹ್ಯಾಂಡಲ್ ರಿಚರ್ಡ್‌ಸನ್, ಕ್ಯಾಥರೀನ್ ಸುಸನ್ನ ಪ್ರಿಚರ್ಡ್, ಪ್ಯಾಟ್ರಿಕ್ ವೈಟ್ ಮೊದಲಾದವರು ಪ್ರಖ್ಯಾತ ಗದ್ಯ ಲೇಖಕರು. ಪದ್ಯಲೇಖಕರಲ್ಲಿ ಮುಖ್ಯವಾದವರು ಕ್ರಿಸ್ಟೋಫರ್ ಬ್ರೆನಾವ್, ಜೇಮ್ಸ್ ಮೆಕಾಲೆ, ನೀತ್ ಸ್ಲೆಸ್ಸಾರ್ ಮತ್ತು ಆರ್. ಫಿಟ್‌ಜೆರಲ್ಡ್ ಮೊದಲಾದವರು.

ಆರಂಭದ ಸಾಹಿತ್ಯವೆಲ್ಲ ಬೋಧನೆ, ಸಾಹಸ, ಅದ್ಭುತಗಳ ವೈವಿಧ್ಯಮಯ ವರ್ಣನೆಗಳಿಂದ ಕೂಡಿದ ಸಾಹಸದ ಕಥೆಗಳೇ ಆಗಿದೆ. ಅಲ್ಲಿಯ ಜನರನ್ನು ಹುರಿದುಂಬಿಸಲು ಈ ತೆರನಾದ ಸಾಹಿತ್ಯದ ಅಗತ್ಯವಿತ್ತು. ಅನಂತರ ಗೀತೆಗಳು ಹುಟ್ಟಿದುವು. 1819ರಲ್ಲಿ ಆಸ್ಟ್ರೇಲಿಯ ಗೀತೆಗಳ ಮೊದಲ ಸಂಕಲನ ಪ್ರಕಟವಾಯಿತು. ಮೊದಲ ಕಾದಂಬರಿ ಆಸ್ಟ್ರೇಲಿಯದ ಜನಜೀವನದ ಚಿತ್ರಣವೇ ಆಗಿದೆ.

19ನೆಯ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷರು ಅಲ್ಲಿಯ ಚಿನ್ನದ ಗಣಿಗಳನ್ನು ಪತ್ತೆ ಹಚ್ಚಲು ತೊಡಗಿದಾಗ ಅನೇಕ ಸಾಹಸಮಯ ಕಥೆಗಳು ಸೃಷ್ಟಿಯಾದುವು. ಅನಂತರ ಸಾಹಿತ್ಯ ಒಂದು ನಿರ್ದಿಷ್ಟ ದಾರಿಯನ್ನು ಹಿಡಿದು ನಡೆಯಿತು. ಹೆಚ್ಚು ಹೆಚ್ಚು ಕಥೆ ಕಾದಂಬರಿಗಳು ಬರತೊಡಗಿದುವು. ಜೊತೆಜೊತೆಗೆ ವಿಜ್ಞಾನ, ತತ್ತ್ವಚರಿತ್ರೆ, ಅರ್ಥಶಾಸ್ತ್ರ ಮುಂತಾದವುಗಳ ಮೇಲೂ ಸಾಹಿತ್ಯ ನಿರ್ಮಾಣವಾಯಿತು. 1920ರಲ್ಲಿ ಸಿಡ್ನಿ ಲೇಖಕರ ಒಂದು ತಂಡವೇ ಸೃಷ್ಟಿಯಾಯಿತು. ಅವರ ದೃಷ್ಟಿ ಹಾಗೂ ಸಾಹಿತ್ಯಸೃಷ್ಟಿ ಸುಖಜೀವನದ ನಾನಾ ಮುಖಗಳನ್ನು ಚಿತ್ರಿಸುವುದೇ ಆಯಿತು. ಅನಂತರ ಸಾಕಷ್ಟು ನವ್ಯಸಾಹಿತ್ಯ ಸೃಷ್ಟಿಯಾಯಿತು. 1967ರಲ್ಲಿ ಆಸ್ಟ್ರೇಲಿಯದ ಪ್ರಾತಿನಿಧಿಕ ಸಣ್ಣ ಕಥೆಗಳ ಒಂದು ಬೃಹತ್ ಸಂಪುಟ ಪ್ರಕಟವಾಯಿತು.

1900ರಿಂದ ರಾಜಕೀಯದಲ್ಲಿನಂತೆಯೇ ಸಾಹಿತ್ಯಕ್ಷೇತ್ರದಲ್ಲೂ ಬುಲೆಟಿನ್ (ಸ್ಥಾಪನೆ 1880) ಎಂಬ ವಾರಪತ್ರಿಕೆ ಪ್ರಮುಖ ಪಾತ್ರ ವಹಿಸಿತು. ಅಂದಿನ ಕಥೆ ಮತ್ತು ಕವನಗಳ ಕ್ಷೇತ್ರ ವಿಸ್ತಾರವಾಗಲು ಸಹಕರಿಸಿತು. ಅಂದಿನ ಹಳ್ಳಿಗಾಡು ಜೀವನದ ನೈಜಸ್ವರೂಪವನ್ನು ತೋರುವ ಮತ್ತು ಜಾನಪದದಲ್ಲಿ ಬಳಕೆಯಲ್ಲಿದ್ದ ಅನೇಕ ಕಥೆಗಳು ಈ ಪತ್ರಿಕೆಯಲ್ಲಿ ಪ್ರಕಟವಾದುವು. ಆಸ್ಟ್ರೇಲಿಯದ ಅನೇಕ ಪ್ರಮುಖ ಕಾದಂಬರಿಗಳು ಧಾರಾವಾಹಿಯಾಗಿ ಈ ಪತ್ರಿಕೆಯ ಮೂಲಕ ಜನರ ಕೈ ಸೇರಿದವು. ಇಂದಿಗೂ ಈ ಪತ್ರಿಕೆ ಜನಜೀವನದಲ್ಲಿ ತನ್ನದೇ ಆದ ಪ್ರಭಾವವನ್ನು ಹೊಂದಿದೆ. *

**ಆಸ್ಟ್ರೇಲಿಯನ್ ನ್ಯೂಗಿನಿ:** ಆಸ್ಟ್ರೇಲಿಯದ ಆಡಳಿತಕ್ಕೊಳಪಟ್ಟಿರುವ ಪಾಪುಅ ಪ್ರದೇಶವನ್ನು ಬ್ರಿಟಿಷರ ನ್ಯೂಗಿನಿ ಎಂದು ಹಿಂದೆ ತಿಳಿಯಲಾಗಿದ್ದುದು ಮತ್ತು ವಿಶ್ವಸಂಸ್ಥೆಯ ಪರವಾಗಿ ಆಸ್ಟ್ರೇಲಿಯದ ಆಡಳಿತಕ್ಕೊಳಪಟ್ಟಿರುವ ನ್ಯೂಗಿನಿಯ ಟ್ರಸ್ಟ್ ಪ್ರದೇಶವನ್ನೂ ಒಳಗೊಂಡಿದೆ. ಪಶ್ಚಿಮದಲ್ಲಿರುವ ನ್ಯೂಗಿನಿ ಇಂಡೊನೇಷ್ಯಕ್ಕೆ ಸೇರಿದ್ದು, ಸಮಭಾಜಕ ವೃತ್ತದಿಂದ $12^0$ ಅಕ್ಷಾಂಶದ ಮತ್ತು $141^0$ ಮತ್ತು $16^0$ ಪೂರ್ವ ರೇಖಾಂಶಗಳ ಮಧ್ಯದಲ್ಲಿದೆ. ಒಟ್ಟು ವಿಸ್ತೀರ್ಣ 1,83,000 ಚ. ಮೈ. ಜನಸಂಖ್ಯೆ 2,020,000 (1962), 26,000 ಜನ ಸ್ಥಳೀಯ ನಿವಾಸಿಗಳಲ್ಲ. ಪ್ರದೇಶದ ಒಳಭಾಗ ಹೆಚ್ಚಾಗಿ ಪರ್ವತಮಯವಾಗಿದೆ ಅಥವಾ ತೀರದ ಜೌಗು ಪ್ರದೇಶವಾಗಿದೆ. ತೋಟಗಾರಿಕೆ ವ್ಯವಸಾಯದಿಂದ ಕೊಬ್ಬರಿ ಮತ್ತು ರಬ್ಬರನ್ನು ಉತ್ಪಾದಿಸುತ್ತಾರೆ. ಕಾಫಿ ಬೆಳೆ ಮಧ್ಯದ ಎತ್ತರದ ಪ್ರದೇಶಗಳಲ್ಲಿ ಹೆಚ್ಚು. ಚಿನ್ನವನ್ನು ಹೆಚ್ಚಾಗಿ ತೆಗೆಯುತ್ತಾರೆ. ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಇತ್ತೀಚೆಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತಿನಿಧಿಸಭೆಗೆ ಪ್ರಥಮ ಬಾರಿಗೆ 1964ರಲ್ಲಿ ಚುನಾವಣೆ ನಡೆಯಿತು. ಪೋರ್ಟ್ ಮೋರ್ಸ್ಬಿ ಆಡಳಿತಕೇಂದ್ರ ಮತ್ತು ಮುಖ್ಯ ಪಟ್ಟಣ. *

**ಆಸ್ಟ್ರೊಫೈಟಮ್:** ಈ ಜಾತಿಯ ಸಸ್ಯಗಳು ಸುಂದರವಾದ ಕಳ್ಳಿಗಳೆಂದು (ಕ್ಯಾಕ್ಟಸ್) ಪ್ರಖ್ಯಾತಿ ಗಳಿಸಿವೆ. ಸಾಮಾನ್ಯವಾಗಿ ಆಕಾರದಲ್ಲಿ ಗುಂಡಾಗಿದ್ದು ಮೇಲು ಭಾಗದಲ್ಲಿ ಭುಜದಂತಿರುವ ಕೋಣಗಳಿವೆ. ಹೂ ಕೊಡೆಯಂತೆ ಸಸ್ಯದ ಮೇಲೆ ನಿಂತಿರುವ ದೃಶ್ಯ ಬಹಳ ಆಕರ್ಷಕ. ಹಲವು ಸಸ್ಯಗಳಲ್ಲಿ ಮುಳ್ಳುಗಳಿವೆ. *

**ಆಸ್ಟ್‌ವಾಲ್ಟ್, ಫ್ರೀಡ್‌ರಿಶ್ ವಿಲ್‌ಹೆಲ್ಮ್:** 1853–1932. ರಷ್ಯದಲ್ಲಿ ಜನಿಸಿ ಜರ್ಮನಿಯಲ್ಲಿ ಪ್ರಸಿದ್ಧಿಗೆ ಬಂದ ಭೌತರಸಾಯನವಿಜ್ಞಾನಿ. ಆಧುನಿಕ ಭೌತರಸಾಯನ ವಿಜ್ಞಾನದ ಮುಖ್ಯ ಪ್ರವರ್ತಕರಲ್ಲಿ ಒಬ್ಬನೆಂದು ಪರಿಗಣಿಸಲ್ಪಟ್ಟಿದ್ದಾನೆ. ಕ್ರಿಯಾವರ್ಧಕಕ್ಕೆ (ಕೆಟಲಿಸಿಸ್) ಸಂಬಂಧಿಸಿದಂತೆ ನಡೆಸಿದ ಸಂಶೋಧನೆಗಾಗಿ 1909ರಲ್ಲಿ ಈತನಿಗೆ ರಸಾಯನ ವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಕ ಲಭಿಸಿತು. ಡೋರ್‌ಪಾತ್ ವಿಶ್ವವಿದ್ಯಾನಿಲಯದಲ್ಲಿ ಈತ ರಸಾಯನವಿಜ್ಞಾನದ ಅಧ್ಯಯನ ನಡೆಸಿ 3 ವರ್ಷಗಳ ಬಳಿಕ ಪ್ರಾಧ್ಯಾಪಕ ಆರ್ಥರ್ ಓಟಿಂಗನ್‌ನ ಕೈಕೆಳಗೆ ಭೌತವಿಜ್ಞಾನ ಸಂಸ್ಥೆಯಲ್ಲಿ ಸಹಾಯಕನಾಗಿ ಕೆಲಸಕ್ಕೆ ಸೇರಿಕೊಂಡ. ಇದೇ ಬಗೆಯ ಕೆಲಸವನ್ನು ರಸಾಯನವಿಜ್ಞಾನ ಪ್ರಯೋಗಾಲಯದಲ್ಲೂ ಕಾರ್ಲ್‌ಷ್ಮಿಟ್‌ನ ಕೈಕೆಳಗೆ ಮಾಡಿದ. ತನ್ನ ವೈಜ್ಞಾನಿಕ ತರಬೇತಿಗೆ ಇವರೀರ್ವರೂ ಬಹಳ ಕಾರಣರಾದರೆಂದು ಆಸ್ಟ್‌ವಾಲ್ಟ್ ಸ್ಮರಿಸಿದ್ದಾನೆ. 1877ರಲ್ಲಿ ಇವನಿಗೆ ಡೋರ್‌ಪಾತ್ ವಿಶ್ವವಿದ್ಯಾನಿಲಯದಲ್ಲಿ ಗೌರವ ಅಧ್ಯಾಪಕನ ಹುದ್ದೆ ದೊರಕಿತು. ಅನಂತರ ರೀಗಾ ಎಂಬಲ್ಲಿ ಪಾಲಿಟೆಕ್ನಿಕ್ ಶಾಲೆಯಲ್ಲಿ ಪೂರ್ಣಕಾಲಿಕ ರಸಾಯನವಿಜ್ಞಾನ ಪ್ರಾಧ್ಯಾಪಕನ ಕೆಲಸಕ್ಕೆ ಆಹ್ವಾನಿಸಿದರು. 6 ವರ್ಷಗಳ ಬಳಿಕ ಲೀಪ್‌ಸಿಗ್ ವಿಶ್ವವಿದ್ಯಾನಿಲಯದಲ್ಲಿ ಭೌತರಸಾಯನವಿಜ್ಞಾನದ ಹುದ್ದೆಯನ್ನು ಸ್ವೀಕರಿಸಿದ. ನೊಬೆಲ್ ಬಹುಮಾನ ವಿಜೇತರಾದ ಅರೇನಿಯಸ್ (1903) **(ನೋಡಿ)**, ವಾಂಟ್‌ಹಾಫ್ (1901). ನರ್ನ್‌ಸ್ಟ್ (1920) ಮತ್ತು ಇತರ ಹಲವು ವಿಜ್ಞಾನಿಗಳು ಇವನ ಶಿಷ್ಯರಾಗಿದ್ದರು. 1906ರಲ್ಲಿ ನಿವೃತ್ತನಾಗುವವರೆಗೂ ಆಸ್ಟ್‌ವಾಲ್ಟ್ ಲೀಪ್‌ಸಿಗ್‌ನಲ್ಲೇ ತನ್ನ ಕಾಲವನ್ನು ಕಳೆದ. ರಾಸಾಯನಿಕ ಬಾಂಧವ್ಯ (ಕೆಮಿಕಲ್ ಅಫಿನಿಟಿ) ಸಮಸ್ಯೆಗಳಿಗೆ ಸಂಬಂಧಿಸಿದಂತೆ ನೀರನ್ನು ಕುರಿತ ಲಾ ಆಫ್ ಮ್ಯಾಸ್ ಆಕ್ಷನ್ ಬಗ್ಗೆ ಇವನು ಹೆಚ್ಚಿನ ಶೋಧನೆಗಳನ್ನು ನಡೆಸಿದ್ದಾನೆ. ವಿದ್ಯುದ್ರಸಾಯನಶಾಸ್ತ್ರ (ಎಲೆಕ್ಟ್ರೋಕೆಮಿಸ್ಟ್ರಿ) ಮತ್ತು ರಾಸಾಯನಿಕ ಚಲನಶಾಸ್ತ್ರ (ಕೆಮಿಕಲ್ ಡೈನಮಿಕ್ಸ್) ಇವುಗಳಲ್ಲಿ ಇವನು ಕೈಯಾಡಿಸಿದ್ದಾನೆ. ಇದರಿಂದಾಗಿ ದುರ್ಬಲತಾನಿಯಮಕ್ಕೆ (ಲಾ ಆಫ್ ಡೈಲ್ಯೂಷನ್) ಆಸ್ಟ್‌ವಾಲ್ಟ್‌ನ ನಿಯಮವೆಂದೇ ಹೆಸರಿದೆ. ಇಲ್ಲಿ ಅಣುವಿನ ವಹನತೆ (ಮಲಿಕ್ಯುಲರ್ ಕಂಡಕ್ಟಿವಿಟಿ) ಮತ್ತು ದುರ್ಬಲತೆ (ಡೈಲ್ಯೂಷನ್) ಇವುಗಳಿಗಿರುವ ಸಂಬಂಧವನ್ನು ನೋಡಬಹುದು. ನೈಟ್ರಿಕ್ ಆಮ್ಲದ ತಯಾರಿಕೆಗೆ ಸಂಬಂಧಿಸಿದಂತೆ ಅಮೋನಿಯದ ಉತ್ತೇರಿತ ಉತ್ಕರ್ಷಣದ (ಕ್ಯಾಟಲಿಟಿಕ್ ಆಕ್ಸಿಡೇಷನ್) ಬಗ್ಗೆ ಈತ ನಡೆಸಿದ ಕಾರ್ಯ ಕೈಗಾರಿಕಾ ಮಹತ್ತ್ವವನ್ನು ಗಳಿಸಿ ನೈಟ್ರೇಟುಗಳ ತಯಾರಿಕೆಗೆ ಸಹಾಯಕವಾಗಿದೆ. ಲೀಪ್‌ಸಿಗ್‌ನಲ್ಲಿನ ಪ್ರಯೋಗಾಲಯದಲ್ಲಿ ಇವನ ಸಂಶೋಧನೆಯ ಸಲುವಾಗಿ ವೈಜ್ಞಾನಿಕ ಶಿಕ್ಷಣಕ್ಕೆ ಒಂದು ಸ್ಥಾನ ಲಭಿಸಿತು. ಆಸ್ಟ್‌ವಾಲ್ಟ್ ಅನೇಕ ಪಠ್ಯಪುಸ್ತಕಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಟೆಕ್ಸ್ಟ್‌ಬುಕ್ ಆಫ್ ಜನರಲ್ ಕೆಮಿಸ್ಟ್ರಿ (1884), ಔಟ್‌ಲೈನ್ಸ್ ಆಫ್ ಜನರಲ್ ಕೆಮಿಸ್ಟ್ರಿ (1889), ಹ್ಯಾಂಡ್‌ಬುಕ್ ಅಂಡ್ ಮ್ಯಾನ್ಯುಯಲ್ ಫಾರ್ ಫಿಸಿಯೋಕೆಮಿಕಲ್ ಮೆಷರ್‌ಮೆಂಟ್ಸ್ (1893)–ಇವೇ ಮುಂತಾದುವು ಸೇರಿವೆ. ವಿಶ್ಲೇಷಣ ರಸಾಯನಶಾಸ್ತ್ರ, ವಿದ್ಯುದ್ರಸಾಯನವಿಜ್ಞಾನ ನಿರವಯವ ರಸಾಯನವಿಜ್ಞಾನ–ಮುಂತಾದವುಗಳ ಮೇಲೆ ಈತ ಅನೇಕ ವೈಜ್ಞಾನಿಕ ಲೇಖನಗಳನ್ನು ಬರೆದಿದ್ದಾನೆ. ಇವನಿಗೆ ಜರ್ಮನಿ, ಗ್ರೇಟ್ ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ ಮುಂತಾದ ದೇಶಗಳ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟೊರೇಟ್ ಪದವಿಗಳು ಲಭಿಸಿದುವು. ಜರ್ಮನಿ, ಸ್ವೀಡನ್, ನಾರ್ವೆ, ನೆದರ್‌ಲೆಂಡ್ಸ್, ರಷ್ಯ, ಗ್ರೇಟ್‌ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ ಈ ದೇಶಗಳ ಅನೇಕ ವಿದ್ವತ್ ಸಂಘಗಳ ಗೌರವ ಸದಸ್ಯನಾಗಿದ್ದ. 1899ರಲ್ಲಿ ಸ್ಯಾಕ್ಸೊನಿಯ ದೊರೆ ಇವನಿಗೆ ಗೌರವಪದವಿಯೊಂದನ್ನಿತ್ತ. 1906ರಲ್ಲಿ ವೈಜ್ಞಾನಿಕ ವೃತ್ತಿಯಿಂದ ನಿವೃತ್ತಿಹೊಂದಿದ ಮೇಲೆ ತತ್ತ್ವಶಾಸ್ತ್ರದ ಮೇಲೂ ಗಮನವನ್ನು ಹರಿಸಿದ. ದಿ ಎನರ್ಜೆಟಿಕ್ ಇಂಪೆರೆಟಿವ್, ದಿ ಪಿರಮಿಡ್ ಆಫ್ ದಿ ಸೈನ್ಸಸ್ ಎಂಬುವು ಇವನ ಪ್ರಮುಖ ಪ್ರಕಟಣೆಗಳು. ಸಾರ್ವಜನಿಕ ಕಾರ್ಯಗಳಲ್ಲೂ ಈತ ಸೇವೆ ಸಲ್ಲಿಸಿದ. ಮಧ್ಯಮ ವರ್ಗದ ಶಾಂತಿವಾದಿಗಳ ಚಳವಳಿಗೆ ಬೆಂಬಲವಿತ್ತ. ಶೈಕ್ಷಣಿಕ ಸುಧಾರಣೆಯಲ್ಲಿ, ಏಕತತ್ತ್ವ ವಾದದಲ್ಲಿ (ಮಾನಿಸಂ) ಹೆಚ್ಚಿನ ಆಸಕ್ತಿ ಇವನದು. ವಿಜ್ಞಾನ ವಿಚಾರದಲ್ಲಿ ಚರ್ಚಿನ (ಧರ್ಮಸಂಸ್ಥೆ) ಹಸ್ತಕ್ಷೇಪ ಪ್ರಭಾವಗಳನ್ನು ತಗ್ಗಿಸಿ ಆಧುನಿಕ ವೈಜ್ಞಾನಿಕ ದೃಷ್ಟಿಕೋನವನ್ನು ಜನತೆಯಲ್ಲಿ ತಾನು ಪ್ರವರ್ತಿಸುವುದು ಸಾಧ್ಯವೆಂದು ಇವನು ನಂಬಿದ್ದ; ಮತ್ತು ಆ ಉದ್ದೇಶಸಾಧನೆಗಾಗಿ ತನ್ನ ಅಭಿಪ್ರಾಯವನ್ನು ಲೇಖನಗಳಲ್ಲಿ ಪ್ರತಿಪಾದಿಸಿದ. ಇದನ್ನೇ ಮಾನೊಯಿಸ್ಟಿಕ್ ಸಂಡೇ ಸರ್ಮನ್ಸ್ ಮತ್ತು ವರ್ಕ್ಸ್ ಆನ್ ಮಾನಿಸಂ ಎಂಬ ತನ್ನ ಬರೆಹಗಳಲ್ಲಿ ವ್ಯಕ್ತಪಡಿಸಿದ್ದಾನೆ. ಹಲವಾರು ವೈಜ್ಞಾನಿಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದ್ದಲ್ಲದೆ ಇವುಗಳಿಂದ ಪ್ರಕಟವಾದ (1921ರ ವರೆಗೆ) 14 ಸಂಪುಟಗಳನ್ನು ಸಂಪಾದಿಸಿದ್ದಾನೆ.

ತನ್ನ ಜೀವಿತದ ಕೊನೆಯವರೆಗೂ (1932) ಬಣ್ಣಗಳು ಮತ್ತು ಆಕೃತಿಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದ. ದಿ ಕಲರ್, ಪ್ರಿಮಿಯರ್ ಕಲರ್ ಥಿಯರಿ, ಹಾರ್ಮೊನಿ ಆಫ್ ದಿ ಕಲರ್ಸ್–ಎಂಬುವು ಇವನ ಮುಖ್ಯ ಪ್ರಕಟಣೆಗಳು. ಕಲರ್ ಎಂಬ ನಿಯತಕಾಲಿಕ ಪತ್ರಿಕೆಯೊಂದನ್ನು ಈತ ಪ್ರಕಟಿಸಿದ್ದ. *

**ಆಸ್ತಿ:** ಒಡೆತನದ ಹಕ್ಕುಗಳಿಗೆ ಒಳಪಡಿಸಬಹುದಾದ ಹಾಗೂ ಆರ್ಥಿಕ ಮೌಲ್ಯವುಳ್ಳ ಪದಾರ್ಥ. ಒಂದು ಪದಾರ್ಥಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳ ನಡುವೆ ಏರ್ಪಟ್ಟಿರುವ ಸಂಬಂಧಗಳ ವಿನ್ಯಾಸವೇ ಸ್ವತ್ತು. ಇಂಥ ಸಂಬಂಧಗಳ ವಿನ್ಯಾಸ ಸರ್ಕಾರದಿಂದ ಅಂಗೀಕೃತವಾಗಿರಬೇಕು, ಸ್ಥಾಪಿಸಲ್ಪಟ್ಟಿರಬೇಕು.

ಆಸ್ತಿ ಮತ್ತು ಸ್ವತ್ತು ಎಂಬ ಪದಗಳನ್ನು ಸಾಮಾನ್ಯವಾಗಿ ಸಮಾನಾರ್ಥಕ ಪದಗಳಾಗಿ ಬಳಸಲಾಗುತ್ತಿದ್ದರೂ ಶಾಸ್ತ್ರೀಯ ವಿವೇಚನೆಗಾಗಿ ಇಲ್ಲಿ ಇವೆರಡಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನು ಗಮನಿಸಬೇಕು. ಆಸ್ತಿ ಎಂಬ ಪದವನ್ನು ಮೊದಲಿನ ಸಂಕುಚಿತ ಅರ್ಥದಲ್ಲೂ ಸ್ವತ್ತು ಎಂಬ ಪದವನ್ನು ಎರಡನೆಯ ವಿಶಾಲ ಅರ್ಥದಲ್ಲೂ ಇಲ್ಲಿ ಬಳಸಲು ಪ್ರಯತ್ನಿಸಿದೆ. ಅನೇಕ ಸಂದರ್ಭಗಳಲ್ಲಿ ಇವೆರಡನ್ನೂ ಪ್ರತ್ಯೇಕಿಸುವುದೂ ಕಷ್ಟವಾಗುತ್ತದೆ. ಸ್ಥಿತಿವಂತ ಎಂಬ ಪದವನ್ನು ಜನ ಬಳಸುವಾಗ ಒಬ್ಬಾತನ ಸ್ವಾಮ್ಯಕ್ಕೊಳಪಟ್ಟಿರುವ ಎಲ್ಲ ಬಗೆಯ ಮೂರ್ತ ಆಸ್ತಿಗಳನ್ನೇ ಅಲ್ಲದೆ ಅಮೂರ್ತವಾದ ಎಲ್ಲ ಬಗೆಯ ಹಕ್ಕುಗಳನ್ನೂ ಗಮನದಲ್ಲಿಟ್ಟು ಕೊಂಡು ಈ ಮಾತು ಹೇಳುವುದು ವಾಡಿಕೆಯಾಗಿದೆ.

ಕಾಯಿದೆಯ ದೃಷ್ಟಿಯಲ್ಲಿ ಆಸ್ತಿ ಹಾಗೂ ಸ್ವತ್ತಿನ ವಿವರಣೆಯನ್ನು ಇಲ್ಲಿ ಮೊದಲ ಭಾಗದಲ್ಲಿ ಕೊಡಲಾಗಿದೆ. ಕೊನೆಯ ಭಾಗದಲ್ಲಿ ಸಮಾಜದ ದೃಷ್ಟಿಯಿಂದ ಸ್ವತ್ತಿನ ಕಲ್ಪನೆಯನ್ನು ವಿವೇಚಿಸಿದೆ. ಒಂದು ಉದ್ಯಮದಲ್ಲಿ ತೊಡಗಿಸಿದ ಆಸ್ತಿಗಳನ್ನು ಕುರಿತ ವಿವೇಚನೆಯನ್ನು ಲೇಖನದಲ್ಲಿ (ಮುಂದೆ) ಕೊಟ್ಟಿದೆ.

ಅಸ್ತಿ ಎಂದರೆ ಇದೆ ಎಂದರ್ಥ. ಅಸ್ತಿತ್ವದಲ್ಲಿರುವುದು ಯಾವುದೋ ಅದು ಆಸ್ತಿ. ಸ್ವಂತದ್ದು ಯಾವುದೋ ಅದು ಸ್ವತ್ತು. ಪ್ರಾಪರ್ಟಿ ಎಂಬ ಇಂಗ್ಲಿಷ್ ಪದ ಪ್ರೊಪ್ರೈಟಸ್, ಪ್ರೊಪ್ರಿಯಸ್ ಎಂಬ ಲ್ಯಾಟಿನ್ ಪದಗಳಿಂದ ಬಂದಿದೆ. ಪ್ರೊಪ್ರಿಯಸ್ ಎಂಬ ಪದದ ಅರ್ಥ ಸ್ವಂತದ್ದು ಎಂದು, ಸ್ವತ್ತು ಎಂಬುದು ಪ್ರಾಪರ್ಟಿ ಎಂಬ ಮಾತಿಗೆ ಬಹು ಸಮೀಪವಾಗಿದೆ.

ಅಸ್ತಿತ್ವದಲ್ಲಿರುವುದೆಲ್ಲ ಆಸ್ತಿ ಎಂಬುದಾದರೆ, ಅಸ್ತಿತ್ವದಲ್ಲಿರುವುದು ಯಾವುದು–ಎಂಬ ಪ್ರಶ್ನೆ ಏಳುತ್ತದೆ. ಕಣ್ಣಿಗೆ ಕಾಣುವ, ಕೈಯಿಂದ ಮುಟ್ಟಿ ಅನುಭವಿಸುವ ವಸ್ತುಗಳು ಮಾತ್ರ ಅಸ್ತಿತ್ವದಲ್ಲಿವೆಯೆ ? ಜಡವಸ್ತುಗಳೆಲ್ಲ, ವಾಸ್ತವವಾಗಿ ಯಾವುದನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅವುಗಳ ಮೇಲೆ ಒಡೆತನವನ್ನು ಸ್ಥಾಪಿಸಲು ಸಾಧ್ಯವಾಗುವುವೋ ಆ ವಸ್ತು ಅಥವಾ ಸ್ವತ್ತುಗಳೆಲ್ಲ, ಅಸ್ತಿತ್ವದಲ್ಲಿವೆ ಎಂಬ ವಿಚಾರವನ್ನು ಗ್ರಹಿಸುವುದು ಕಷ್ಟವಲ್ಲ. ಭೂಮಿ, ಮನೆ, ಧನ, ಧಾನ್ಯ, ಪಶು, ಪಕ್ಷಿ ಮುಂತಾದುವು ಆಸ್ತಿಗಳೆಂದು ತಿಳಿಯುವುದಕ್ಕೆ ಕಷ್ಟವಾಗುವುದಿಲ್ಲ. ಆದರೆ, ಕಣ್ಣಿಗೆ ಕಾಣದ ಆಸ್ತಿಗಳೂ ಆಸ್ತಿಗಳೆ ? ಎಲ್ಲ ಹಕ್ಕುಗಳೂ ಗ್ರಂಥಕರ್ತನಿಗೆ ಸೇರಿವೆ ಎಂದು ಒಬ್ಬ ಗ್ರಂಥಕರ್ತ ತನ್ನ ಪುಸ್ತಕದಲ್ಲಿ ಸೂಚಿಸಿದಾಗ, ಯಾವುದರ ಮೇಲಿರುವ ಹಕ್ಕುಗಳು ?–ಎಂಬುದು ಪ್ರಶ್ನೆ. ಅಚ್ಚಾದ ಗ್ರಂಥದ ಆ ಒಂದು ಪ್ರತಿಯ ಮೇಲಿನ ಹಕ್ಕು ಅದಾಗಿದ್ದರೆ, ಅದನ್ನು ಕ್ರಯ ಕೊಟ್ಟು ಪಡೆದವನು ಆ ಹಕ್ಕನ್ನೂ ಕೊಂಡಂತಾಗುತ್ತದೆ. ಆದರೆ, ಒಂದು ಪ್ರತಿಯನ್ನು ಕ್ರಯಕ್ಕೆ ಕೊಳ್ಳುವುದರಿಂದ ಗ್ರಂಥಕರ್ತನ ಹಕ್ಕುಗಳಿಗೆ ಲೋಪ ಬರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಮಾತು. ಎಂದಮೇಲೆ, ಗ್ರಂಥಕರ್ತನ ಆ 'ಆಸ್ತಿ' ಕಣ್ಣಿಗೆ ಕಾಣುವ ಕೈಯಿಂದ ಗ್ರಹಿಸುವ ಗ್ರಂಥಕ್ಕಿಂತಲೂ ಬೇರೆಯೇ ಆಗಿದೆ **(ನೋಡಿ– ಗ್ರಂಥಸ್ವಾಮ್ಯ)**. ಅದೂ ಆಸ್ತಿಯೇ ಎಂದಂತಾಯಿತು. ಏಕೆಂದರೆ, ಆ ಆಸ್ತಿಯ ಮೇಲೆ ಗ್ರಂಥಕರ್ತನಿಗೆ ಸ್ವಾಮ್ಯವಿದೆ. ಎಂದರೆ ಆಸ್ತಿ ಕೇವಲ ಜಡವಸ್ತುಗಳಿಗೇ ಪರಿಮಿತವಾಗಿಲ್ಲ.

ಬಹುಕಾಲದವರೆಗೆ ಒಂದು ಸ್ಥಳದಲ್ಲಿ ವ್ಯಾಪಾರ ನಡೆಸುತ್ತಿರುವ ಒಂದು ಅಂಗಡಿ ಮಾಲೀಕ ತನ್ನ ಸರಕು ಹಾಗೂ ತನ್ನ ಅಂಗಡಿಯ ಬಗ್ಗೆ ಒಂದು ಬಗೆಯ ಸದ್ಭಾವನೆ ಮತ್ತು ಖ್ಯಾತಿ ಪಡೆಯುತ್ತಾನೆ. ಆ ಖ್ಯಾತಿ ಅವನ ಅಂಗಡಿಯ ಅವಿಭಾಜ್ಯ ಭಾಗವಾಗುತ್ತದೆ. ಇದನ್ನು ಸುನಾಮ (ಗುಡ್‌ವಿಲ್) ಎನ್ನುತ್ತಾರೆ. ಒಂದು ವೇಳೆ ಆ ಅಂಗಡಿಯ ಮಾಲೀಕ ತನ್ನ ಅಂಗಡಿಯನ್ನು ಮಾರಿದರೆ, ಅದರೊಡನೆ ಅದರ ಸುನಾಮವನ್ನೂ ಮಾರುತ್ತಾನೆ. ಆಗ ಅದು ಆಸ್ತಿ ಎಂಬ ಹೆಸರಿಗೆ ಅರ್ಹವಾಗುತ್ತದೆ. ಅದಕ್ಕೂ ಬೆಲೆಯಿದೆ.

ಒಬ್ಬಾತನಿಗೆ ಭೂಮಿ ಮನೆ ಮುಂತಾದ ಸ್ಥಾವರ ಆಸ್ತಿಗಳಿಲ್ಲದಿದ್ದರೂ ಕಂಪನಿಗಳಲ್ಲಿ ಷೇರುಗಳ ರೂಪದಲ್ಲಿ ಅಥವಾ ಜನರಿಂದ ಬರಬೇಕಾದ ಸಾಲದ ರೂಪದಲ್ಲಿ ಆಸ್ತಿಯಿರಬಹುದು. ಷೇರು ಮತ್ತು ಸಾಲದ ಈ ಆಸ್ತಿಯ ಮೇಲೆ ಪ್ರಸ್ತಾಪಿಸಿದ ಭೂಮಿ ಅಥವಾ ಮನೆ ಮುಂತಾದ ಸ್ಥಾವರ ಆಸ್ತಿಗಿಂತ ಬೇರೆಯಾಗಿದೆ. ಹಾಗೆಯೇ ಗ್ರಂಥಸ್ವಾಮ್ಯ ಸುನಾಮಕ್ಕಿಂತ ಭಿನ್ನವಾಗಿದೆ. ಒಬ್ಬಾತ ಒಂದು ಕಂಪನಿಯ ಇಂತಿಷ್ಟು ಸಾವಿರ ರೂಪಾಯಿ ಸಾಲ ಬರುವುದಿದೆ–ಎಂದಾಗ ಆ ಷೇರು ಅಥವಾ ಸಾಲಪತ್ರಗಳೇ ಆಸ್ತಿ ಎಂಬ ಅಭಿಪ್ರಾಯವಲ್ಲ. ಅವು ಬರಿಯ ಕಾಗದ ಪತ್ರ. ಯಾರ ಹೆಸರಿನಲ್ಲಿ ಷೇರು ಅಥವಾ ಸಾಲಪತ್ರಗಳಿವೆಯೋ ಅವರಿಗೆ ಅಷ್ಟು ಹಣವನ್ನು ವಸೂಲು ಮಾಡಿಕೊಂಡು ಪಡೆಯುವ ಹಕ್ಕು ಇದೆ ಎಂದು ಅರ್ಥವಾಗುತ್ತದೆ. ಇಂಥ ಹಕ್ಕುಗಳೂ ಆಸ್ತಿಗಳೇ.

ಈ ಮೇಲೆ ಗಮನಿಸಿದ ಆಸ್ತಿಗಳಲ್ಲದೆ, ಇನ್ನೊಂದು ಬಗೆಯ ಆಸ್ತಿಯೂ ಅದರಲ್ಲಿರಬಹುದು. ಇದಕ್ಕೆ ವಿದ್ಯುಚ್ಛಕ್ತಿ ಒಂದು ಉದಾಹರಣೆ. ಕೆಲವು ಕಂಪನಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ ನಗರ ಸಭೆಗಳಿಗೂ, ಗಿರಣಿಗಳಿಗೂ, ಕಾರ್ಖಾನೆಗಳಿಗೂ ಮಾರುತ್ತವೆ. ಆ ಕಂಪನಿಗಳು ಉತ್ಪಾದಿಸುವ ವಿದ್ಯುಚ್ಛಕ್ತಿಯೂ ಒಂದು ಆಸ್ತಿ. ಅದು

ಭೂಮಿಯಂತೆ ಭೌತಿಕವಾದ ಸ್ಥಾವರವಲ್ಲ. ಗ್ರಂಥಕರ್ತನ ಗ್ರಂಥಸ್ವಾಮ್ಯ, ಅಂಗಡಿಯ ಸುನಾಮ, ಷೇರುಪತ್ರ ಮತ್ತು ಬಾಂಡುಗಳಂತೆ ಕೇವಲ ಹಕ್ಕುಗಳ ಸಂದಾಯವಲ್ಲ. ಅದು ಕಣ್ಣಿಗೆ ಕಾಣುವುದಿಲ್ಲ. ಆದರೂ ಅದು ಕೇವಲ ಕಾಲ್ಪನಿಕ ಹಕ್ಕುದಾರಿಕೆಯಲ್ಲ. ಭೂಮಿಯಂತೆ ಜಡವಲ್ಲ. ಅದರದು ಶಕ್ತಿರೂಪ. ಅಸ್ತಿತ್ವದಲ್ಲಿ ಇರುವುದೆಲ್ಲ ಆಸ್ತಿಯೆಂಬುದಾದರೆ, ವಿದ್ಯುಚ್ಛಕ್ತಿಯೂ ಆಸ್ತಿಯೇ. ಕೆಲವರನ್ನು ಮಾನಧನರು ತಪೋಧನರು ಎಂದು ಕರೆಯುವ ವಾಡಿಕೆಯುಂಟು. ಒಬ್ಬ ವ್ಯಕ್ತಿಯ ಮಾನವೂ ಧನವಾಗಿರಬಲ್ಲದು. ಆ ಧನವನ್ನು ಅಪಹರಿಸುವ ಹಕ್ಕು ಯಾರಿಗೂ ಇಲ್ಲ. ಒಂದು ವೇಳೆ ಯಾರಾದರೂ ಇನ್ನೊಬ್ಬರ ಮಾನವನ್ನು ಅಪಹರಿಸಿದರೆ, ಅದನ್ನು 'ಅಪಮಾನ' ಎಂದು ಶಾಸನದ ಭಾಷೆಯಲ್ಲಿ ಕರೆಯುತ್ತಾರೆ. ಇದು ಆಲಂಕಾರಿಕವಾಗಿ ಈಗ ತೋರಿದರೂ ಇದು ನಿಜವಾಗಿ ಆಸ್ತಿಯೇ. ಆಸ್ತಿ ಎಂದು ನಾವು ಕರೆಯುವುದನ್ನು ಸಂಸ್ಕೃತದಲ್ಲಿ ಧನ, ದ್ರವ್ಯ, ವಿತ್ತ, ಅರ್ಥ–ಎಂದು ಕರೆಯುತ್ತಾರೆ. ಆಸ್ತಿ ಎಂಬ ಮಾತು ಇತ್ತೀಚೆಗೆ ರೂಢಿಯಿಂದ ಪ್ರಚಾರದಲ್ಲಿದೆ.

**ಆಸ್ತಿಯ ಪ್ರಭೇದಗಳು:** ಮೇಲಿನ ಪ್ರಸ್ತಾಪದಿಂದ ಆಸ್ತಿ ಎಂಬ ಮಾತಿಗೆ ಈ ಕೆಳಗಿನ ಅರ್ಥಗಳಿವೆ. 1. ಜಡರೂಪದಲ್ಲಿ ಸ್ಥಿರವಾಗಿರುವ ಆಸ್ತಿ. ಅದನ್ನು ಸ್ಥಿರ ಅಥವಾ ಸ್ಥಾವರ ಎನ್ನುತ್ತೇವೆ. 2. ಜಡರೂಪದಲ್ಲಿದ್ದರೂ ಅಸ್ಥಿರವಾದ ಆಸ್ತಿ. ಸಜೀವ ನಿರ್ಜೀವ ಚರವಸ್ತುಗಳು ಈ ಗುಂಪಿಗೆ ಸೇರುತ್ತವೆ. ಅದನ್ನು ಜಂಗಮ ಅಥವಾ ಚರಾಸ್ತಿ ಎನ್ನುತ್ತೇವೆ. 3. ಜಡರೂಪದಲ್ಲಿ ಇಲ್ಲದಿದ್ದರೂ ಭೌತ ಪ್ರಪಂಚದಲ್ಲಿ ಶಕ್ತಿರೂಪದಲ್ಲಿ ಇರುವ ವಿದ್ಯುಚ್ಛಕ್ತಿಯಂಥ ಆಸ್ತಿ. 4. ಗ್ರಂಥಕರ್ತನ ಗ್ರಂಥಸ್ವಾಮ್ಯ, ಅಂಗಡಿಕಾರನ ವ್ಯಾಪಾರೋದ್ಯಮ ಸಂಪಾದಿಸಿರುವ ಸುನಾಮ– ಇನ್ನೊಂದು ಬಗೆಯ ಆಸ್ತಿ. 5. ಷೇರುಗಳು, ಬಾಂಡುಗಳು, ಪತ್ರಗಳು–ಮುಂತಾದ ಹಕ್ಕುಪತ್ರಗಳಲ್ಲಿರುವ ಹಕ್ಕುಗಳ ಸಮುದಾಯ ಇನ್ನೊಂದು ಬಗೆಯ ಆಸ್ತಿ. 6. ಕೊನೆಯದಾಗಿ, ವ್ಯಕ್ತಿಗತ ಮಾನವೂ ಒಂದು ಆಸ್ತಿ. ಹೀಗೆ ಆಸ್ತಿ ಎಂಬ ಮಾತಿಗೆ ಅತ್ಯಂತ ವಿಶಾಲವಾದ ಅರ್ಥದಲ್ಲಿ ಒಬ್ಬಾತನಿಗೆ ಸ್ಥಿರ, ಚರ, ಮೂರ್ತ, ಅಮೂರ್ತವಾದ ಎಲ್ಲ ವಸ್ತುಗಳ ಮೇಲಿರುವ ಸಮಸ್ತ ಹಕ್ಕುಗಳ ಸಮುದಾಯ ಎಂದು ಅರ್ಥವಾಗುತ್ತದೆ. ಹಾಗೂ ತನ್ನ ವೈಯಕ್ತಿಕ ಬುದ್ಧಿಶಕ್ತಿ, ಮತ್ತೊಬ್ಬನಿಂದ ತನಗೆ ಸಲ್ಲಬೇಕಾದ ಋಣ. ಅದು ಹಣದ ರೂಪದಲ್ಲಿರಬಹುದು, ಇಲ್ಲವೇ ಸಲ್ಲಬೇಕಾದ ಗೌರವರೂಪದಲ್ಲಿರಬಹುದು ಎಂದೂ ಅರ್ಥವಾಗುತ್ತದೆ. ಮೇಲೆ ಹೇಳಿದ ಆರು ಬಗೆಯ ಆಸ್ತಿಗಳಲ್ಲಿ ಮೊದಲನೆಯ ನಾಲ್ಕು ಬಗೆಯ ಆಸ್ತಿಗಳು ಒಂದು ಗುಂಪಿಗೆ ಸೇರುತ್ತವೆ. ಕೊನೆಯ ಎರಡು ಇನ್ನೊಂದು ಗುಂಪಿಗೆ ಸೇರುತ್ತವೆ. ಮೊದಲನೆಯ ಗುಂಪಿನ ಆಸ್ತಿಗಳು ಅಸ್ತಿತ್ವದಲ್ಲಿರುವ ಸ್ಥಾವರ, ಜಂಗಮ, ಮೂರ್ತ ಅಮೂರ್ತ ಆಸ್ತಿಗಳು. ಎರಡನೆಯ ಗುಂಪಿನ ಆಸ್ತಿಗಳು ವೈಯಕ್ತಿಕ ಆಸ್ತಿಗಳು. ಮೊದಲನೆಯ ಗುಂಪಿಗೆ ಸೇರಿದ ಆಸ್ತಿಯನ್ನು ಇಂಗ್ಲಿಷ್ ಶಾಸನದಲ್ಲಿ ಪ್ರಾಪರ್ಟಿ ಇನ್ ರೆಮ್ ಎಂದೂ ಮತ್ತು ಎರಡನೆಯ ಗುಂಪಿಗೆ ಸೇರಿದ ಆಸ್ತಿಯನ್ನು ಪ್ರಾಪರ್ಟಿ ಇನ್ ಪರ್ಸೋನಮ್ ಎಂದೂ ಕರೆಯುತ್ತಾರೆ. ಪ್ರಾಪರ್ಟಿ ಇನ್ ಪರ್ಸೋನಮ್ ಎಂದರೆ, ಪ್ರತಿವಾದಿ ವಾದಿಗೆ ವೈಯಕ್ತಿಕವಾಗಿ ತೀರಿಸಬೇಕಾದ ಋಣ; ಅಥವಾ ಯಾವುದಾದರೊಂದು ಒಪ್ಪಂದದಿಂದ ಉದ್ಭವಿಸುವ ಕರ್ತವ್ಯದ ಋಣ. ನ್ಯಾಯಾಲಯ ಈ ಬಗೆಯ ಹಕ್ಕನ್ನು ಅಂಗೀಕರಿಸಿ ಪರಿಹಾರ ಕೊಡುವಾಗ ಇಂಥ ವ್ಯಕ್ತಿ ಇಂಥ ಇನ್ನೊಬ್ಬ ವ್ಯಕ್ತಿಗೆ ಈ ರೂಪದಲ್ಲಿ ಋಣ ತೀರಿಸತಕ್ಕದ್ದೆಂದು ಡಿಕ್ರಿ ಕೊಡುತ್ತದೆ. ಇದಕ್ಕೆ ವಿರುದ್ಧವಾದದ್ದು 'ಪ್ರಾಪರ್ಟಿ ಇನ್ ರೆಮ್'. ಇದಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ನ್ಯಾಯಾಲಯ ಕೊಡುವ ಪರಿಹಾರ ಮತ್ತೊಬ್ಬ ವ್ಯಕ್ತಿ ಮಾಡಬೇಕಾದ, ಇಲ್ಲವೆ ಮಾಡಬಾರದ ಕರ್ತವ್ಯರೂಪದಲ್ಲಿರುವುದಿಲ್ಲ. ಅಸ್ತಿತ್ವದಲ್ಲಿರುವ ಒಂದು ವಸ್ತುವಿನಲ್ಲಿ ಒಬ್ಬಾತನಿಗಿರುವ ಹಕ್ಕನ್ನು ಮನ್ನಿಸಿ, ಆ ಆಸ್ತಿಯ ಬಗ್ಗೆ ಇಡೀ ಲೋಕವೇ ನಡೆದುಕೊಳ್ಳಬೇಕಾದ ರೀತಿಯನ್ನು ನಿರ್ದೇಶಿಸುತ್ತದೆ. ಈ ಎರಡು ಬಗೆಯ ಹಕ್ಕುಗಳನ್ನು ಉದಾಹರಣೆಯಿಂದ ಸ್ಪಷ್ಟಪಡಿಸಬಹುದು. 'ಅ' ಎಂಬಾತ 'ಇ' ಎಂಬಾತನಿಗೆ ಸಾವಿರ ರೂಪಾಯಿ ಸಾಲ ಕೊಡುವುದಿದ್ದರೆ, ಅಥವಾ ಹತ್ತು ಕ್ವಿಂಟಲ್ ಬತ್ತ ಮಾರಲು ಒಪ್ಪಿಕೊಂಡಿದ್ದರೆ 'ಇ'ಗೆ ಇರುವ ಆಸ್ತಿ ಎಂದರೆ 'ಅ' ನಿಂದ ಆ ಹಣ ಮತ್ತು ಒಪ್ಪಿಕೊಂಡ ವಸ್ತುವನ್ನು ಇಲ್ಲವೆ ಅದಕ್ಕೆ ಸಮನಾದ ಹಣದ ರೂಪದ ಬೆಲೆಯನ್ನು ವೈಯಕ್ತಿಕವಾಗಿ ವಸೂಲು ಮಾಡಿಕೊಳ್ಳುವುದು. ಈ ವ್ಯವಹಾರ 'ಅ' ಮತ್ತು 'ಇ' ಇಬ್ಬರಿಗೆ ಮಾತ್ರ ಸಂಬಂಧಿಸಿದ್ದು. ತದ್ವಿರುದ್ಧವಾಗಿ 'ಇ' ಎಂಬಾತನಿಗೆ 'ಈ' ಎಂಬ ಆಸ್ತಿಯಲ್ಲಿ ಹಕ್ಕು ಇದ್ದರೆ, ನ್ಯಾಯಾಲಯ ಅದನ್ನು ಎತ್ತಿ ಹಿಡಿದರೆ, ಇಡೀ ಲೋಕದ ಜನರೆಲ್ಲ ಆ ಹಕ್ಕನ್ನು ಮಾನ್ಯ ಮಾಡಲೇಬೇಕು.

ನಾವು ಈಗ ಚರ್ಚಿಸಬೇಕಾದ್ದು ಮೇಲೆ ಹೇಳಿದ ಮೊದಲನೆಯ ಗುಂಪಿಗೆ ಸೇರಿದ ನಾಲ್ಕು ಆಸ್ತಿಗಳ ವಿಚಾರವಾಗಿ. ಎರಡನೆಯ ಗುಂಪಿಗೆ ಸೇರಿದ ಎರಡು ತರದ ಆಸ್ತಿಗಳನ್ನು ಇಲ್ಲಿ ಚರ್ಚಿಸುವುದಿಲ್ಲ.

ಆಸ್ತಿಗಳನ್ನು ಮೂರ್ತ ಮತ್ತು ಅಮೂರ್ತ, ಸ್ಥಿರ ಮತ್ತು ಚರ, ವಾಸ್ತವ ಮತ್ತು ವೈಯಕ್ತಿಕ–ಎಂದು ವಿಭಜಿಸುವುದುಂಟು.

ಮೂರ್ತ, ಅಮೂರ್ತ (ಕಾರ್ಪೋರಿಯಲ್, ಇನ್‌ಕಾರ್ಪೋರಿಯಲ್) ಆಸ್ತಿಗಳು: ಹಕ್ಕುಳ್ಳ ಆಸ್ತಿ ಮೂರ್ತವಾಗಿ (ಭೌತ) ಇರಬಹುದು; ಅಮೂರ್ತವಾಗಿರಬಹುದು. ಆಸ್ತಿಯ ಹಕ್ಕು ಬಹುಮಟ್ಟಿಗೆ ಮೂರ್ತವಾದ ಭೌತಿಕ ವಸ್ತುಗಳಿಗೆ ಸಂಬಂಧಿಸಿದೆ. ಭೌತ ವಸ್ತುಗಳ ಆಸ್ತಿ ಅವುಗಳನ್ನು ಉಪಯೋಗಿಸುವ ಹಕ್ಕಿಗೆ ನೇರವಾಗಿ ಸಂಬಂಧಪಟ್ಟುದು. ನ್ಯಾಯಶಾಸ್ತ್ರದ ಈ ಶಾಖೆಯ ಮುಖ್ಯ ಉದ್ದೇಶ, ಮಾನವನ ಸುಖಜೀವನಕ್ಕೆ ಬೇಕಾದ ಪ್ರಾಪಂಚಿಕ ವಸ್ತುಗಳನ್ನು, ಅವರವರಿಗೆ ಸಲ್ಲಬೇಕಾದಷ್ಟನ್ನು ನಿಗದಿ ಮಾಡಿ ಹಂಚುವುದೇ ಆಗಿದೆ. ಅಮೂರ್ತ ಆಸ್ತಿ ಎಂಬುದು ಮಾನವನ ಜಾಣತನ ಮತ್ತು ಕುಶಲಕರ್ಮದಿಂದ ನಿರ್ಮಿತವಾದುದಕ್ಕೆ ಪರಿಮಿತವಾಗಿದೆ. ಶಾಸನ ಇಂಥ ಅಮೂರ್ತ ಆಸ್ತಿಯನ್ನು ಮಾನ್ಯಮಾಡುತ್ತದೆ. ಸರ್ವಸಾಧಾರಣವಾಗಿ ಯಾರು ಏನನ್ನು ಸ್ವಬುದ್ಧಿಯಿಂದ ಸ್ವಶಕ್ತಿಯಿಂದ ಕಾಯಕಷ್ಟದಿಂದ ಉತ್ಪಾದಿಸುತ್ತಾರೋ ರಚನೆಮಾಡುತ್ತಾರೋ ಅದು ಆ ಕರ್ತೃವಿಗೇ ಸೇರುತ್ತದೆ. ಮನುಷ್ಯನ ಮೇಧಾಶಕ್ತಿಯಿಂದ ನಿರ್ಮಿತವಾದ ಅಮೂರ್ತವಸ್ತು ಅವನ ಭೂಮಿಕಾಣಿಯಷ್ಟೇ ಬೆಲೆಯುಳ್ಳದ್ದಾಗಿರಲು ಸಾಧ್ಯ. ಆದ್ದರಿಂದ ಶಾಸನ ಅಂಥ ಆಸ್ತಿಗಳ ಬಗ್ಗೆ ಅವುಗಳನ್ನು ನಿರ್ಮಿಸಿದಾತನಿಗೆ ಸಂಪೂರ್ಣ ಒಡೆತನ, ಹಕ್ಕು, ಅಧಿಕಾರ ನೀಡುತ್ತದೆ. ಒಂದು ವಸ್ತುವನ್ನು ಕದಿಯುವುದನ್ನು, ಇನ್ನೊಬ್ಬರ ಭೂಮಿಯಲ್ಲಿ ಅಕ್ರಮಪ್ರವೇಶ ಮಾಡುವುದನ್ನು ಶಾಸನ ನಿಷೇಧಿಸಿ, ಆಯಾ ವಸ್ತುಗಳ ಒಡೆಯನ ಹಕ್ಕನ್ನು ಹೇಗೆ ರಕ್ಷಿಸುವುದೋ ಹಾಗೆಯೇ ಒಬ್ಬ ವ್ಯಕ್ತಿ ನಿರ್ಮಿಸಿದ ಕುಶಲಕರ್ಮದ ಹಕ್ಕನ್ನೂ ರಕ್ಷಿಸುತ್ತದೆ. ಈ ಗುಂಪಿಗೆ ಗ್ರಂಥಕರ್ತನ ಗ್ರಂಥಸ್ವಾಮ್ಯ, ಕಲಾಕೃತಿಗಳ ಸ್ವಾಮ್ಯ, ಸಂಗೀತ ಮತ್ತು ನಾಟಕದ ಒಡೆತನ, ವಾಣಿಜ್ಯ ಸುನಾಮ, ವ್ಯಾಪಾರ ಚಿಹ್ನೆ (ಟ್ರೇಡ್ ಮಾರ್ಕ್) ಮತ್ತು ಏಕಸ್ವ (ಪೇಟೆಂಟ್)– ಇವು ಸೇರುತ್ತವೆ.

**ಸ್ಥಿರ ಚರ ಆಸ್ತಿಗಳು:** ಸ್ಥಿರಾಸ್ತಿ ಭೂಮಿ, ಮನೆ ಇತ್ಯಾದಿ. ಇದಕ್ಕೆ ವಿರುದ್ಧವಾದದ್ದು ಚರ ಅಥವಾ ಜಂಗಮ ಆಸ್ತಿ. ಚರ ಎಂದರೆ ಚಲಿಸುವುದು; ಅಶಾಶ್ವತವಾದದ್ದು ಎಂದಾಗುತ್ತದೆ. ಒಂದು ಮೂರ್ತವಸ್ತು (ಭೌತ ವಸ್ತು) ತಾನಾಗಿಯೇ ಚಲಿಸಬಹುದು–ಪಶು ಪಕ್ಷಿ ಪ್ರಾಣಿಗಳು ಅಥವಾ ಮಾನವ ಸಹಾಯದಿಂದ ಚಲಿಸುವಂಥದ್ದಾಗಿರಬಹುದು. ನಾವು ಉಪಯೋಗಿಸುವ ನಿರ್ಜೀವ ವಸ್ತುಗಳೆಲ್ಲ ಈ ಗುಂಪಿನವು. ಸ್ಥಾವರ ಅಥವಾ ಸ್ಥಿರಾಸ್ತಿಗೆ ಅದರ ಹೆಸರೇ ಸೂಚಿಸುವಂತೆ ಒಂದು ಬಗೆಯ ಶಾಶ್ವತತೆ ಇರುತ್ತದೆ. ಭೂಮಿ ಈ ದೃಷ್ಟಿಯಿಂದ ಸ್ಥಿರ. ಭೂಕಂಪ ಮುಂತಾದ ನಿಸರ್ಗ ಅನರ್ಥಗಳು ಸಂಭವಿಸಿದಾಗ ಭೂಮಿಯೂ ಅಶಾಶ್ವತವೇ. ಆದರೆ ಇತರ ಯಾವ ಭೌತ ವಸ್ತುವಿಗಿಂತಲೂ ಭೂಮಿ ಹೆಚ್ಚು ಶಾಶ್ವತ. ನ್ಯಾಯಶಾಸ್ತ್ರದ ದೃಷ್ಟಿಯಲ್ಲಿ ಸ್ಥಿರಾಸ್ತಿ ಈ ಗುಣಗಳಿಂದ ಕೂಡಿರುತ್ತದೆ: 1. ನಿರ್ದಿಷ್ಟವಾದ ಭೂಭಾಗ. 2. ಆ ಭೂಭಾಗದ ಕೆಳಗಡೆ ಭೂಗರ್ಭದಲ್ಲಿ ಅಡಗಿರುವ ಭೂಮಿ. 3. ಭೂಮಿಯ ಮೇಲ್ಭಾಗದ ಆಕಾಶ. 4. ಭೂಗರ್ಭದಲ್ಲಿ ನೈಸರ್ಗಿಕವಾಗಿರುವ ಜಲ, ತರು, ನಿಧಿ, ನಿಕ್ಷೇಪ, ಪಾಷಾಣಾದಿ ಸಂಪತ್ತು ಮತ್ತು ಭೂಮಿಯ ಮೇಲೆ ಬಿದ್ದಿರುವ ಕಲ್ಲು ಇತ್ಯಾದಿ. 5. ಕೊನೆಯದಾಗಿ, ಭೂಮಿಯನ್ನು ಭದ್ರವಾಗಿ ಹೂತುಕೊಂಡಿರುವ ಅಥವಾ ಉದ್ದೇಶಪಟ್ಟು ಭೂಮಿಗೆ ಶಾಶ್ವತವಾಗಿ ಕೂಡಿಸಿರುವ ಇತರ ಎಲ್ಲ ವಸ್ತುಗಳೂ ಸ್ಥಿರಾಸ್ತಿ ಎನಿಸಿಕೊಳ್ಳುತ್ತವೆ.

ಈ ಗುಂಪಿಗೆ, ಭೂಮಿಯ ಮೇಲೆ ಕಟ್ಟಿದ ಮನೆ, ನೆಟ್ಟ ಮರ, ತೋಡಿದ ಬಾವಿ, ಹೊಸ ಯಂತ್ರೋಪಕರಣಗಳು ಸೇರುತ್ತವೆ. ಮರ ಕಡಿದಾಗ ಚರಾಸ್ತಿಯಾಗುತ್ತದೆ. ಯಂತ್ರೋಪಕರಣ ಭೂಮಿಯಿಂದ ಕಿತ್ತು ಮೇಲೆತ್ತಿದಾಗ ಚರಾಸ್ತಿಯಾಗುತ್ತದೆ. ಆದರೆ, ಮನೆಯ ಗೋಡೆಗೆ ತೂಗುಹಾಕಿದ ಅಲಂಕಾರದ ವಸ್ತುಗಳು, ನೆಲಕ್ಕೆ ಹಾಸಿದ ಜಮಖಾನ ಸ್ಥಿರಾಸ್ತಿಯಲ್ಲ.

**ವಾಸ್ತವ ಮತ್ತು ವೈಯಕ್ತಿಕ ಆಸ್ತಿಗಳು:** ವಾಸ್ತವ ಆಸ್ತಿ ಭೂಮಿಯ ಮೇಲೆ ನಮಗಿರುವ ಎಲ್ಲ ಹಕ್ಕುಗಳಿಗೂ ಸಂಬಂಧಿಸಿದುದು. ಅದು ಮೇಲೆ ಹೇಳಿದ ಭೂ ಆಸ್ತಿಗಳನ್ನೆಲ್ಲ ಒಳಗೊಂಡಿದೆ. ಆದರೆ ವೈಯಕ್ತಿಕ ಆಸ್ತಿ ಇಷ್ಟಕ್ಕೆ ಪರಿಮಿತವಾಗಿಲ್ಲ. ಮೇಲೆ ವಿವರಿಸಿದ ಮೂರ್ತ, ಚರ ಮತ್ತು ಅಮೂರ್ತ ಸ್ವತಂತ್ರ ಕೃತಿ ರಚನೆ ಹಾಗೂ ಕುಶಲಕರ್ಮಗಳನ್ನೆಲ್ಲ ಒಳಗೊಳ್ಳುತ್ತದೆ.

**ಸ್ವತ್ತಿನ ವಿಕಾಸ:** (ಅ) ಸ್ವತ್ತಿನ ಉಗಮ ಹೇಗಾಯಿತು? ಸ್ವಂತದ್ದು ಯಾವುದೋ ಅದು ಸ್ವತ್ತು ಎನಿಸಿಕೊಂಡಿತು ಎಂದು ಈ ಹಿಂದೆ ಹೇಳಿದೆ. ಹಾಗಾದರೆ ಒಂದು ವಸ್ತು ಸ್ವಂತದ್ದು ಹೇಗಾಯಿತು? ಜನಾಂಗ ಅತೀ ಬಾಲ್ಯಾವಸ್ಥೆಯಲ್ಲಿದ್ದಾಗ ಆಸ್ತಿ ಅಪರಿಮಿತವಾಗಿ ದೊರೆಯುತ್ತಿತ್ತು. ಆಗ ಯಾವುದು ಏನು ಬೇಕಾದರೂ ಹೇರಳವಾಗಿ ಸಿಗುತ್ತಿತ್ತು. ಎಷ್ಟು ಆಸ್ತಿಯನ್ನು ಹಿಡಿದುಕೊಂಡರೆ ಅಷ್ಟೂ ಅವನದೇ ಆಗುತ್ತಿತ್ತು. ಸ್ವಾಧೀನವೇ ಸ್ವತ್ತಿಗೆ ಮೂಲ– ಎಂಬ ಒಂದು ಸಿದ್ಧಾಂತ ನ್ಯಾಯಶಾಸ್ತ್ರದಲ್ಲಿ ಪ್ರಚಲಿತವಿದೆ. ಈ ಸಿದ್ಧಾಂತದ ಪ್ರಕಾರ ಸ್ವಾಧೀನವೇ ಸ್ವತ್ತಿನ ಮೇಲೆ ಸ್ವಾಮ್ಯವನ್ನು ಕೊಡುತ್ತದೆ. ಆಕ್ರಮಣವೇ ಆಸ್ತಿಯ ಮೂಲ, ಸ್ವಾಧೀನವೇ ಸ್ವಾಮ್ಯಕ್ಕೆ ಕಾರಣ, ಎಂಬ ಈ ಸಿದ್ಧಾಂತ ಆಧುನಿಕ ಕಾಲದಲ್ಲಿ ಅಷ್ಟೇ ಮಾನ್ಯತೆ ಪಡೆದಿಲ್ಲ. ಏಕೆಂದರೆ, ಅದೃಷ್ಟಶಾಲಿಯಾದ ಯಾವನೋ ಒಬ್ಬ ಒಂದು ಸಾವಿರ ಎಕರೆ ಭೂಮಿಯನ್ನು ಹಿಡಿದುಕೊಳ್ಳಲು ಸಮರ್ಥನಾದರೆ ಆವನಿಗೆ ಆ ಭೂಮಿಯ ಸ್ವಾಮ್ಯ, ಒಡೆತನ–ಏಕೆ ದೊರೆಯಬೇಕು? ಅಮೆರಿಕದ ಪ್ರಪ್ರಥಮ ಸಮಾಜವಾದಿ ಹೆನ್ರಿ ಜಾರ್ಜ್ ಎಂಬಾತ ತನ್ನ ಪ್ರೋಗ್ರೆಸ್ ಅಂಡ್ ಪಾವರ್ಟಿ ಎಂಬ ಗ್ರಂಥದಲ್ಲಿ ಸ್ವಾಧೀನವೇ ಸ್ವಾಮ್ಯಕ್ಕೆ ಮೂಲ, ಆಕ್ರಮಣವೇ ಆಸ್ತಿಗೆ ಕಾರಣ, ಎಂಬ ಸಿದ್ಧಾಂತವನ್ನು ಬಹು ಕಟುವಾಗಿ ಟೀಕಿಸುತ್ತಾನೆ. ಒಬ್ಬ ಮನುಷ್ಯ ಎಲ್ಲರಿಗಿಂತ ಮೊದಲೇ ಒಂದು ಚಿತ್ರಮಂದಿರ ಅಥವಾ ರಂಗಮಂಟಪಕ್ಕೆ ಬಂದು ಎಲ್ಲ ಪ್ರವೇಶಪತ್ರಗಳನ್ನೂ ಕೊಂಡು, ಇತರರು ಬರಬಾರದು ಎಂದು ಬಾಗಿಲು ಮುಚ್ಚುವುದು ನ್ಯಾಯವೇ?–ಎಂದು ಕೇಳುತ್ತಾನೆ. ಒಬ್ಬ ಶ್ರೀಮಂತ

ರೈಲುಗಾಡಿಯ ಎಲ್ಲ ಟಿಕೇಟುಗಳನ್ನೂ ಕೊಂಡು, ತನ್ನೊಬ್ಬನಿಗೇ ಎಲ್ಲ ಸ್ಥಳಗಳೂ ಮೀಸಲಾಗಿರಬೇಕು ಎಂದು ವಾದಿಸುವುದು ನೈತಿಕ ದೃಷ್ಟಿಯಿಂದ ನ್ಯಾಯ ಎನಿಸುವುದಿಲ್ಲ ಎಂದು ಆ ಸಮಾಜವಾದಿ ಗ್ರಂಥಕರ್ತ ಪ್ರತಿಪಾದಿಸುತ್ತಾನೆ. ಅವನ ಈ ವಾದದಲ್ಲಿ ಸತ್ಯವಿದೆಯೆಂದು ಈಗ ಲೋಕ ಬಹುಮಟ್ಟಿಗೆ ಒಪ್ಪಿಕೊಂಡಿದೆ.

(ಆ) ಸ್ವತ್ತು ವ್ಯಕ್ತಿಯ ದುಡಿಮೆಯ ಫಲ, ಎಂಬುದು ಇನ್ನೊಂದು ಸಿದ್ಧಾಂತ. ಒಬ್ಬ ಶ್ರಮಜೀವಿ, ಬುದ್ಧಿಜೀವಿ ಕಷ್ಟಪಟ್ಟು ಸೃಷ್ಟಿಸಿದ ವಸ್ತು ಅಥವಾ ರಚಿಸಿದ ಕೃತಿ ಅವನದೇ ಆಗುತ್ತದೆ. ಅದು ಅವನ ಸ್ವಂತ ಆಸ್ತಿ; ಅವನಿಗೆ ಅದು ಸೇರುತ್ತದೆ, ಸೇರಬೇಕು ಎಂಬುದು ಈ ಸಿದ್ಧಾಂತದ ತಿರುಳು. ಇದು ಸ್ವಲ್ಪಮಟ್ಟಿಗೆ ಸತ್ಯ. ಆದರೆ ಇದು ಬಹುಮಟ್ಟಿಗೆ ಅಸಮರ್ಪಕ ತತ್ತ್ವ. ಗ್ರಂಥಕರ್ತ ರಚಿಸುವ ಸ್ವತಂತ್ರ ಗ್ರಂಥ ಅಥವಾ ಚಿತ್ರಕಾರ ಬರೆಯುವ ಸುಂದರ ಸ್ವತಂತ್ರ ಕೃತಿ, ಅದನ್ನು ರಚಿಸಿದವನಿಗೆ ಸೇರಬೇಕೆಂಬುದು ಸರಿಯಾದ ಮಾತು. ಆದರೆ, ಇತರ ಸ್ವತ್ತಿನ ವಿಚಾರದಲ್ಲಿ ಈ ಸಿದ್ಧಾಂತ ಪೂರ್ಣ ಸತ್ಯವಾಗಲಾರದು. ಇಂದಿನ ಬಹು ಜಟಿಲ ಸಮಾಜದಲ್ಲಿ ಜೀವನಕ್ಕೆ ಬೇಕಾದುದನ್ನೆಲ್ಲ ಅವರವರೇ ಉತ್ಪಾದಿಸುವರೆಂಬುದು, ದುಡಿದು ತಯಾರಿಸುವ ರೆಂಬುದು ನಿಜವಲ್ಲ. ಯಾವುದಾದರೂ ಸ್ವತ್ತು ನಿರ್ಮಾಣವಾಗಬೇಕಾದರೆ, ಅದಕ್ಕೆ ಬೇಕಾಗುವ ಕಚ್ಚಾ ಸಾಮಗ್ರಿ ಎಲ್ಲಿಂದ ಬರುತ್ತದೆ? ಕಾಡಿನಲ್ಲಿ ಹೇರಳವಾಗಿ, ತನಗೆ ತಾನೇ ಬೆಳೆದು ಯಾರಿಗೂ ಸೇರದ ಕಚ್ಚಾ ಸಾಮಗ್ರಿಯಿಂದ ತಯಾರಿಸಿದ ವಸ್ತು ತಯಾರಿಸಿದವನಿಗೇ ಸೇರುತ್ತದೆ ಎಂದರೆ ಒಪ್ಪಬಹುದು. ಆದರೆ, ಬಟ್ಟೆಯನ್ನು ತಯಾರಿಸುವ ನೇಕಾರನಿಗೇ ಬಟ್ಟೆ ಸೇರುತ್ತದೆ ಎಂದರೆ ಒಪ್ಪುವ ಮಾತಲ್ಲ. ಹತ್ತಿ ಬೆಳೆದವನಿಗೆ ಬಟ್ಟೆಯಲ್ಲಿ ಪಾಲಿಲ್ಲವೇ? ಸಿಂಪಿಗ ಅಂಗಿ ಹೊಲೆಯುತ್ತಾನೆ. ಅಂದಮಾತ್ರಕ್ಕೆ ಆ ಅಂಗಿ ಸಿಂಪಿಗನಿಗೆ ಸೇರಬೇಕು ಎಂದರೆ ಯಾರೂ ಒಪ್ಪುವುದಿಲ್ಲ. ದುಡಿದವನಿಗೆ ಸ್ವತ್ತು ಸೇರಬೇಕು ಎಂಬ ಮಾತಿನಲ್ಲಿ ಕೆಲಮಟ್ಟಿಗೆ ಸತ್ಯಾಂಶವಿದೆ. ಉತ್ಪತ್ತಿಮಾಡಿದ ಆಸ್ತಿಯಲ್ಲಿ ಒಡೆತನವಿಲ್ಲದಿದ್ದರೆ ದುಡಿಯುವ ಶ್ರದ್ಧೆ ಹೇಗೆ ಉಳಿದೀತು? ಸಂಪದಭಿವೃದ್ಧಿ ಹೇಗೆ ಆಗಬೇಕು? ಈ ಕಾರಣದಿಂದ ವೈಯಕ್ತಿಕ ಆಸ್ತಿಗೆ ಮಾನ್ಯತೆ ಕೊಡಬೇಕೆಂಬ ವಾದವುಂಟು. ಹಾಗೆಯೇ ಸಮಾಜವಾದಿಗಳೂ ಶ್ರಮಜೀವಿಗೆ ಸ್ವತ್ತು ಸೇರಬೇಕು ಎಂದು ವಾದಿಸುತ್ತಾರೆ. ಏಕೆಂದರೆ ಭೂಮಿ, ಗಿರಣಿ ಮುಂತಾದ ಉತ್ಪಾದಕ ಸಾಧನ ಮತ್ತು ಉಪಕರಣಗಳ ಸ್ವಾಮ್ಯವಿರುವ ಭೂಸ್ವಾಮಿಯೂ ಗಿರಣಿಯ ಮಾಲೀಕನೂ ಕೃಷಿಕರನ್ನು ಕಾರ್ಮಿಕರನ್ನು ಶೋಷಣೆ ಮಾಡುವುದನ್ನು ಇವರು ವಿರೋಧಿಸುತ್ತಾರೆ. ದುಡಿದು ಪಡೆಯದ ಯಾವ ಆಸ್ತಿಯ ಮೇಲೂ ಯಾರಿಗೂ ನೈತಿಕವಾಗಿ ಹಕ್ಕಿಲ್ಲ ಎಂದು ಎಚ್.ಜೆ.ಲಾಸ್ಕಿ ಬರೆಯುತ್ತಾನೆ. ಇದು ನೀತಿಶಾಸ್ತ್ರಕ್ಕೂ ಸಮ್ಮತ; ಅರ್ಥಶಾಸ್ತ್ರಕ್ಕೂ ಸಮ್ಮತ.

(ಇ) ಹೆಗೆಲ್ ಎಂಬ ತತ್ತ್ವಜ್ಞಾನಿ ಒಂದು ಸಿದ್ಧಾಂತ ಮಂಡಿಸಿದ್ದಾನೆ. ವ್ಯಕ್ತಿಯ ಸರ್ವತೋಮುಖ ವಿಕಾಸಕ್ಕೆ, ಸ್ವತಂತ್ರ ಜೀವನಕ್ಕೆ, ಆಸ್ತಿ ಅತ್ಯಂತ ಅಗತ್ಯ. ಸ್ವಾತಂತ್ರ್ಯಪ್ರಿಯನಾದ ಮಾನವ ತನ್ನ ವ್ಯಕ್ತಿತ್ವದ ವಿಕಾಸಕ್ಕೆ ಆಸ್ತಿಯನ್ನು ಪಡೆದ ಮತ್ತು ಅದನ್ನು ಊರ್ಜಿತ ಮಾಡಿದ ಎಂದು ಅವನು ವಾದಿಸುತ್ತಾನೆ. ಯಾರು ಆರ್ಥಿಕವಾಗಿ ಅಸ್ವತಂತ್ರರೋ ಅವರು ನಿಜವಾದ ಸ್ವಾತಂತ್ರ್ಯ ಅನುಭವಿಸಲಾರರು. ಅವರು ಪರಿಪೂರ್ಣ ಸಾರ್ಥಕ ಜೀವನ ನಡೆಸಲಾರರು. ಆದಕಾರಣ ಆಸ್ತಿ ವ್ಯಕ್ತಿಯ ಸ್ವಾತಂತ್ರ್ಯಾಪೇಕ್ಷೆಯ ಪರಿಣಾಮ ಎಂಬುದು ವಾದ. ವೈಯಕ್ತಿಕ ಆಸ್ತಿಗೆ ಪ್ರತಿಯೊಬ್ಬ ವ್ಯಕ್ತಿಗೂ ಹಕ್ಕು ಇರಬೇಕೆಂಬುದು ಈ ಸಿದ್ಧಾಂತದ ತಿರುಳು. ಆದರೆ ವೈಯಕ್ತಿಕ ಆಸ್ತಿಗೆ ಅನಿರ್ಬಂಧ ಹಕ್ಕಿರಬೇಕೆಂಬ ವಾದದಿಂದ ಕೆಲವೇ ಜನರ ಕೈಯಲ್ಲಿ ಸಮಾಜದ ಆಸ್ತಿಯೆಲ್ಲ ಕೇಂದ್ರೀಕೃತವಾಗಿ ಬಹುಜನರು ದಟ್ಟ ದಾರಿದ್ರ್ಯದಲ್ಲಿ ನರಳುವ ದುಃಸ್ಥಿತಿಯುಂಟಾಗಿದೆ. ಆದಕಾರಣ ಆಸ್ತಿಯ ಉಗಮದ ಈ ಸಿದ್ಧಾಂತ ಅಷ್ಟೇನೂ ನ್ಯಾಯಸಮ್ಮತವಾಗಿಲ್ಲ.

(ಈ) ಆಕ್ರಮಣವೇ ಆಸ್ತಿಯ ಉಗಮ, ಸ್ವಾಧೀನವೇ ಸ್ವತ್ತಿನ ಮೂಲ, ಉತ್ಪಾದನೆಯೇ ಆಸ್ತಿಗೆ ಒಡೆತನವನ್ನು ಕೊಡುತ್ತದೆ–ಎಂಬ ಈ ಎಲ್ಲ ಸಿದ್ಧಾಂತಗಳಲ್ಲೂ ಅಲ್ಪಸ್ವಲ್ಪ ಸತ್ಯವಿದೆ. ಯಾವುದೂ ಪೂರ್ಣ ಸತ್ಯವನ್ನು ಮೂಡಿಸುವುದಿಲ್ಲ. ಆಕ್ರಮಣ ಅಥವಾ ಸ್ವಾಧೀನವೇ ಆಸ್ತಿಗೆ ಮೂಲಕಾರಣವೆಂಬುದು ನಿಜವಾಗಿದ್ದರೆ, ಯಾರು ಒಂದು ಆಸ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಮರ್ಥರೋ ಅದು ಅವರದೇ ಆಗುತ್ತಿತ್ತು. ಆದರೆ ಕೇವಲ ಸ್ವಾಧೀನವೇ ಆಸ್ತಿಗೆ ಹಕ್ಕುದಾರಿಕೆಯನ್ನು ಕೊಡಲಾರದು. ಒಬ್ಬನ ಆಸ್ತಿಯನ್ನು ಮತ್ತೊಬ್ಬ ಅಪಹರಿಸಿದರೆ, ಆಕ್ರಮಣ ಮಾಡಿದರೆ, ಶಾಸನ ಅದನ್ನು ತಡೆಗಟ್ಟುತ್ತದೆ. ಆಸ್ತಿಯ ಒಡೆತನವನ್ನು ಶಾಸನ ರಕ್ಷಿಸುತ್ತದೆ. ಒಬ್ಬ ನೂರು ವರ್ಷ ಒಂದು ಆಸ್ತಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೂ ಅವನಿಗಿಂತ ಬಲಿಷ್ಠನಾದವ ಅದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು, ಸ್ವಾಮ್ಯವನ್ನು ಸ್ಥಾಪಿಸಲು ಸಮರ್ಥನಾದರೆ, ಸ್ವಾಧೀನಕ್ಕೆ ಪ್ರಾಧಾನ್ಯ ಎನಿದೆ? ಪಾವಿತ್ರ್ಯವೇನಿದೆ? ಆ ಸ್ವಾಧೀನತೆಯನ್ನು ಮಾನ್ಯಮಾಡಿ, ಶಾಸನದ ಬೆಂಬಲದಿಂದ ಅದನ್ನು ಸ್ಥಿರಪಡಿಸಿದರೆ ಮಾತ್ರ ಆಸ್ತಿಯಲ್ಲಿ ಹಕ್ಕು ಸ್ಥಿರವಾಗುತ್ತದೆ. ಈ ದೃಷ್ಟಿಯಿಂದ ಆಸ್ತಿಯ ಮೂಲ, ರಾಜ್ಯಶಾಸನ ಎಂಬ ಒಂದು ಸಿದ್ಧಾಂತದಿಂದ ಏರ್ಪಟ್ಟಿದೆ. ರಾಜ್ಯಶಾಸನ ಆಸ್ತಿಯನ್ನು ರಕ್ಷಿಸುವುದರಿಂದಲೇ ಖಾಸಗಿ ಆಸ್ತಿ ಪದ್ಧತಿ ಇಂದು ಅಸ್ತಿತ್ವದಲ್ಲಿದೆ. ಆದರೆ ಈ ಸಿದ್ಧಾಂತವೂ ಆಸ್ತಿಯ ಉಗಮವನ್ನು ಖಚಿತವಾಗಿ ಸಕಾರಣವಾಗಿ ವಿವರಿಸುವುದಿಲ್ಲ.

**ಆಸ್ತಿಯ ಸ್ವಾಮ್ಯ:** ಅಸ್ತಿತ್ವದಲ್ಲಿರುವುದೆಲ್ಲ ಆಸ್ತಿ ಎನ್ನುವುದಾದರೆ, ಈ ವಿಶ್ವದಲ್ಲಿರುವುದೆಲ್ಲ ಆಸ್ತಿಯೇ ಎನ್ನಬೇಕಾಗುತ್ತದೆ. ಆದರೆ, ಆಸ್ತಿ ಎಂದೊಡನೆ ಯಾರ ಆಸ್ತಿ ಎಂಬ ಪ್ರಶ್ನೆ ಏಳುತ್ತದೆ. ಅಸ್ತಿತ್ವದಲ್ಲಿರುವ ವಸ್ತು ಆಸ್ತಿಯ ಸ್ಥಾನ ಪಡೆಯಬೇಕಾದರೆ, ಅದಕ್ಕೊಬ್ಬ ಒಡೆಯನಿರಬೇಕು. ಏಕೆಂದರೆ, ಯಾರಿಗೂ ಸೇರದ ವಸ್ತು ಆಸ್ತಿಯಾಗಲಾರದು. ಸರ್ಕಾರಿ ಅಡವಿಯಲ್ಲಿ ಬೆಳೆದ ಮರಗಳು, ಹಣ್ಣು ಹಂಪಲುಗಳು, ಭೂಗರ್ಭದಲ್ಲಿರುವ ಖನಿಜ ಸಂಪತ್ತು, ನಿಧಿ ನಿಕ್ಷೇಪಗಳು ಕೂಡ ಸರ್ಕಾರದ ಆಸ್ತಿ. ಖಾಸಗಿ ಜನರ ಸ್ವಾಧೀನಾನುಭವ ದಲ್ಲಿರುವ ವಸ್ತುಗಳಂತೂ ನಿಸ್ಸಂಶಯವಾಗಿ ಆಸ್ತಿ. ಬೀದಿಯಲ್ಲಿ ಬಿದ್ದಿರುವ ಬೆಲೆಯುಳ್ಳ ಒಡವೆಗೂ ಒಬ್ಬ ಒಡೆಯನಿರಬೇಕು. ಒಡವೆಯ ಸ್ವಾಧೀನ ತಪ್ಪಿದ ಕೂಡಲೇ ಸ್ವಾಮ್ಯ ತಪ್ಪುವುದಿಲ್ಲ. ಹಾಗಿದ್ದಿದ್ದರೆ, ಕಳೆದ ಒಡವೆಯ ಒಡೆತನವೂ ಕಳೆದುಹೋಗುತ್ತಿತ್ತು; ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡವನದೇ ಅದರ ಸ್ವಾಮ್ಯವಾಗುತ್ತಿತ್ತು. ಆದಕಾರಣ ಸ್ವತ್ತಿನ ಅವಿಭಾಜ್ಯ ಗುಣ ಸ್ವಾಮ್ಯ. ಒಡವೆ ಒಡೆತನ, ಸ್ವತ್ತು ಸ್ವಾಮ್ಯ. ಹಾಲು ಅದರ ಬಿಳುಪು ಇದ್ದಂತೆ. ಒಂದಕ್ಕೊಂದಕ್ಕೆ ಅವಿನಾಭಾವ ಸಂಬಂಧ. 'ನೀವಿರುವ ಮನೆ ಸ್ವಂತದ್ದೋ, ಬಾಡಿಗೆಯದೋ?' ಎಂದು ಕೇಳುವ ಪ್ರಶ್ನೆಯಲ್ಲಿ ಮನೆ ಅಸ್ತಿತ್ವದಲ್ಲಿದೆ ಎಂಬ ದೃಷ್ಟಿಯಿಂದ ಆಸ್ತಿಯಾದರೂ ಅದು ಬಾಡಿಗೆದಾರನ 'ಸ್ವತ್ತು' ಆಗಲಾರದು. ಏಕೆಂದರೆ, ಯಾವುದು ಸ್ವಂತ ಆಸ್ತಿಯೋ ಅದೇ ಸ್ವತ್ತು; ನಿಜವಾದ ಆಸ್ತಿ. ಸ್ವಂತದ್ದಲ್ಲದ ವಸ್ತು ಆಸ್ತಿಯಾದರೂ ಸ್ವತ್ತಲ್ಲ. ಇದರಿಂದ ತಿಳಿಯುವುದೇನೆಂದರೆ, ಸ್ವತ್ತಿನ ಅನಿವಾರ್ಯಲಕ್ಷಣ ಸ್ವಾಮ್ಯ, ಒಡೆತನ, ಒಡೆತನವಿಲ್ಲದ ಸ್ವತ್ತು ಇರಲಾರದು.

ಒಡೆತನದ, ಸ್ವಾಮ್ಯದ ಇಂಗಿತವೇನು? ಒಂದು ಸ್ವತ್ತು ತನ್ನದು, ಸ್ವಂತದ್ದು, ಸ್ವಾಮ್ಯವಿದೆ ಎಂದು ಯಾರಾದರೂ ಹೇಳಿಕೊಳ್ಳಬೇಕಾದರೆ ಈ ಕೆಲವು ಷರತ್ತುಗಳ ಪೂರೈಕೆಯಾಗಬೇಕು:

(ಅ) ಅವನು ಅದರ ಸ್ವಾಧೀನ ಪಡೆದಿರಬೇಕು; (ಆ) ಅದನ್ನು ತನಗಿಷ್ಟ ಬಂದಂತೆ ಅನುಭವಿಸುವ, ಹೇಗೆ ಬೇಕಾದರೆ ಹಾಗೆ ಉಪಯೋಗಿಸುವ, ಬೇಕಾದರೆ ಅದನ್ನು ನಾಶಪಡಿಸುವ, ಅಧಿಕಾರ ಅವನಿಗೆ ಇರಬೇಕು; (ಇ) ಬದುಕಿದ್ದಾಗ ತನ್ನಿಚ್ಛೆ ಬಂದಂತೆ ಅದನ್ನು ಪರಭಾರೆ ಮಾಡುವ ಅಧಿಕಾರ ಇರಬೇಕು; (ಈ) ಕೊನೆಯದಾಗಿ, ತಾನು ಸತ್ತಮೇಲೂ ತನ್ನ ಆಸ್ತಿ ಹೇಗೆ ವಿಲೇವಾರಿ ಆಗ ಬೇಕೆಂಬುದನ್ನು ನಿರ್ಧರಿಸುವ ಹಕ್ಕು ಅವನಿಗೆ ಇರಬೇಕು.

(ಅ) ಆಸ್ತಿಯ ಸ್ವಾಮ್ಯಕ್ಕೆ ಸ್ವಾಧೀನ ಅನಿವಾರ್ಯವಾದ ಅಂಶ. ಒಂದು ಸ್ವತ್ತು ಸ್ವಂತದ್ದು, ತನ್ನದು ಎಂದು ಹೇಳಬೇಕಾದರೆ, ಆ ಸ್ವತ್ತು ಒಡೆಯನ ವಶದಲ್ಲಿರಬೇಕು. ಆದರೆ, ಈ ಹಿಂದೆ ಪ್ರಸ್ತಾಪಿಸಿದಂತೆ ಸ್ವಾಧೀನ ತಪ್ಪಿದರೆ, ಸ್ವಾಮ್ಯವೂ ತಪ್ಪುವುದಿಲ್ಲ. ಕಳೆದ ಒಡವೆ ಪರರ ಸ್ವಾಧೀನವಾದರೂ ಸ್ವಾಮ್ಯ ಒಡೆಯನದೇ. ಆದರೂ, ಸ್ವಾಧೀನವಿಲ್ಲದ ಆಸ್ತಿ ತನ್ನದೆಂದು ಭಾವಿಸಿಕೊಂಡರೆ ಮಾನಸಿಕ ತೃಪ್ತಿಯಾಗಬಹುದೇ ಹೊರತು, ಒಡೆತನದ ಪೂರ್ಣ ಪ್ರಯೋಜನ ದಕ್ಕುವುದಿಲ್ಲ. ಸ್ವಾಧೀನ ತಪ್ಪಿದ ಆಸ್ತಿಯನ್ನು ಅನುಭವಿಸಲು ಸಾಧ್ಯವಿಲ್ಲ. ಆದಕಾರಣ, ಒಡೆತನ ನ್ಯಾಯವಾಗಿ ತನ್ನದಾಗಿದ್ದು ತನ್ನ ಅನುಮತಿಯಿಲ್ಲದೆ ಪರರ ಸ್ವಾಧೀನದಲ್ಲಿರುವ ವಸ್ತುವನ್ನು ಸ್ವಾಧೀನಕ್ಕೆ ಕೊಡಿಸಬೇಕೆಂದು ಶಾಸನದ ಸಹಾಯ ಬೇಡಿದಾಗ, ಕೊರತೆಯಾದ ಸ್ವಾಮ್ಯವನ್ನು ಮತ್ತೆ ತುಂಬಿಕೊಳ್ಳುವುದೇ ಉದ್ದೇಶ. ಬಹುಕಾಲ ಸ್ವಾಧೀನ ತಪ್ಪಿದರೆ ಸ್ವಾಮ್ಯ ಸತ್ತುಹೋಗುವ ಸಂಭವವಿದೆ.

ಸ್ವಾಧೀನ ಎಂದರೆ ಅದು ವಾಸ್ತವಿಕ ಸ್ವಾಧೀನವೇ ಆಗಿರಬೇಕಾಗಿಲ್ಲ. ಅದು ರಚನಾತ್ಮಕ ಸ್ವಾಧೀನವಾಗಿಯೂ ಇರಬಹುದು. ಒಂದು ಮನೆಯಲ್ಲಿದ್ದು ವಾಸ ಮಾಡುವಂತೆ, ಒಂದು ಲೇಖನಿಯನ್ನು ಕೈಯಲ್ಲಿಟ್ಟುಕೊಂಡು ಉಪಯೋಗಿಸುವಂತೆ, ಒಂದು ಕಾರನ್ನು ನಡೆಸಿಕೊಂಡು ಹೋಗುವಂತೆ ಒಂದು ವಸ್ತುವನ್ನು ವಾಸ್ತವವಾಗಿ ತನ್ನ ವಶದಲ್ಲೇ ಇಟ್ಟುಕೊಂಡು ಅದರ ಸ್ವಾಮ್ಯ ಸ್ಥಾಪಿಸಬಹುದು. ಹೊಲಗದ್ದೆಯನ್ನು ವಾಸ್ತವವಾಗಿ ಉಳುವಾಗ ಇನ್ನೊಬ್ಬನ ವಶದಲ್ಲಿದ್ದರೂ ಅದು ಒಡೆಯನ ಸ್ವಾಧೀನದಲ್ಲೇ ಇದ್ದಂತೆ. ಒಡೆಯನ ನೌಕರ, ಕಾರು ತೆಗೆದುಕೊಂಡು ತನ್ನ ವಶದಲ್ಲಿಟ್ಟುಕೊಂಡರೂ ಅದು ಮಾಲೀಕನ ಸ್ವಾಧೀನದಲ್ಲೇ ಇದ್ದಂತೆ. ಹಾಗೆಯೇ ಮನೆ ವಾಸ್ತವವಾಗಿ ಬಾಡಿಗೆದಾರನ ಸ್ವಾಧೀನದಲ್ಲಿದ್ದರೂ ಮಾಲೀಕನೇ ಅದರ ಸ್ವಾಧೀನ ಹೊಂದಿದ್ದಂತೆ. ಬಾಡಿಗೆದಾರನ ವಾಸ್ತವಿಕ ಸ್ವಾಧೀನ ಅನುಭವಕ್ಕಾಗಿ ಮಾತ್ರ. ಒಡೆಯನ ರಚನಾತ್ಮಕ ಸ್ವಾಧೀನ ಅವನ ಸ್ವಾಮ್ಯಕ್ಕಾಗಿ.

(ಆ) ಸ್ವಾಮ್ಯಕ್ಕೆ ಸ್ವಾಧೀನಕ್ಕಿಂತಲೂ ಅನುಭವವೇ ಮುಖ್ಯವೆಂಬಂತೆ ತೋರುತ್ತದೆ. ಬಾಡಿಗೆದಾರ ಮನೆಯಲ್ಲಿ ವಾಸ್ತವವಾಗಿ ವಾಸವಾಗಿದ್ದು ಅದರ ಸ್ವಾಧೀನಾನು ಭವದಲ್ಲಿದ್ದರೂ ಅದರ ಮೇಲೆ ಅವನಿಗೆ ಸ್ವಾಮ್ಯವಿಲ್ಲ. ಇಲ್ಲಿ ಮನೆಯ ಮಾಲೀಕನಿಗೆ ಸ್ವಾಧೀನವೂ ಇಲ್ಲ, ಅನುಭವವೂ ಇಲ್ಲ. ಹಾಗಾದರೆ ಅವನ ಸ್ವಾಮ್ಯವೆಲ್ಲಿದೆ ? ಬಾಡಿಗೆದಾರ ಅನುಭವಿಸುವುದು ವಾಸ್ತವ್ಯವನ್ನು, ಸ್ವಾಮ್ಯವನ್ನಲ್ಲ. ಮಾಲೀಕ ಅನುಭವಿಸುವುದು, ಸ್ವಾಮ್ಯದ ಫಲವಾಗಿ ಬಂದ ಬಾಡಿಗೆಯನ್ನು. ಮಾಲೀಕನ ಅನುಭವ ಈ ಸಂದರ್ಭದಲ್ಲಿ ಬಾಡಿಗೆಯನ್ನು ಪಡೆಯುವು ದರಲ್ಲಿದೆ. ಬಾಡಿಗೆದಾರ ಮನೆಯನ್ನು ಅನುಭವದಲ್ಲಿಟ್ಟುಕೊಂಡಿದ್ದರೂ ಆ ಅನುಭವ ಸುಖಕ್ಕೆ ಅವನು ಬಾಡಿಗೆ ತೆರಬೇಕು. ಮೂಲತಃ ಬಾಡಿಗೆದಾರ ವಾಸ್ತವ್ಯದ ಅನುಭವವನ್ನು ಹಣಕೊಟ್ಟು ಅಥವಾ ಮತ್ತಾವ ರೂಪದಿಂದಲಾದರೂ ಕೊಂಡುಕೊಳ್ಳಲೇಬೇಕು. ತನ್ನದೇ ಆಗಿರುವ ವಸ್ತುವನ್ನು ಬೆಲೆ ಕೊಟ್ಟು ಯಾರೂ ಕೊಳ್ಳುವುದಿಲ್ಲ. ಆದಕಾರಣ ಬಾಡಿಗೆದಾರ ಮನೆಯಲ್ಲಿ ವಾಸ್ತವ್ಯಾನುಭವ ಹೊಂದಿದ್ದರೂ ಅವನಿಗೆ ಸ್ವಾಮ್ಯವಿಲ್ಲ.

ಒಡೆತನದ ಲಕ್ಷಣ, ಪ್ರಮುಖ ಲಕ್ಷಣ, ಅನುಭವಸ್ವಾತಂತ್ರ್ಯ ಎಂದು ಮೇಲೆ ಹೇಳಿದೆ. ಆದರೆ, ಈ ಅನುಭವಸ್ವಾತಂತ್ರ್ಯ ಅನಿರ್ಬಂಧವಾಗಿಲ್ಲ. ತನಗಿಷ್ಟ ಬಂದಂತೆ, ಹಿಂದಿನ ಕಾಲದಲ್ಲಿ ಸ್ವೇಚ್ಛೆಯಿಂದ ಅನುಭವಿಸುತ್ತಿದ್ದಂತೆ, ಈಗಿನ ಕಾಲದಲ್ಲಿ ಒಡೆಯ ತನ್ನ ವಸ್ತು ಒಡವೆ ಆಸ್ತಿಯನ್ನು ಅನುಭವಿಸುವಂತಿಲ್ಲ. ಭೂಸುಧಾರಣಾ ಕಾಯಿದೆ, ಬಾಡಿಗೆ ನಿಯಂತ್ರಣ ಕಾಯಿದೆ, ಮುಂತಾದ ನಿಯಂತ್ರಣ ಶಾಸನಗಳು ಮಾಲೀಕನ ಅನುಭವ ಸ್ವಾತಂತ್ರ್ಯವನ್ನು ಬಹು ಕುಂಠಿತಗೊಳಿಸಿವೆ. ಆಹಾರ ಧಾನ್ಯ ಸಂಗ್ರಹ ನಿಯಂತ್ರಣಾಜ್ಞೆಗಳ ಮೂಲಕವಾಗಿ ರೈತ ಬೆಳೆದ ಧಾನ್ಯದಲ್ಲಿ ಎಷ್ಟನ್ನು ತನ್ನಲ್ಲಿಟ್ಟುಕೊಳ್ಳಬೇಕು, ಎಷ್ಟನ್ನು ಯಾರಿಗೆ ಯಾವ ದರದಲ್ಲಿ ಮಾರಬೇಕು ಎಂಬುದನ್ನೂ ನಿಯಂತ್ರಿಸಲಾಗಿದೆ. ಅಂದಮೇಲೆ, ಅನುಭವ ಸ್ವಾತಂತ್ರ್ಯ ಎಂಬುದು ತತ್ತ್ವದಲ್ಲಿ ಉಳಿದಿದೆಯೇ ಹೊರತು ವಸ್ತುತಃ ಎಷ್ಟೋ ಮೊಟಕಾಗಿ ಹೋಗಿದೆ.

ಅನುಭವ ಸ್ವಾತಂತ್ರ್ಯ ಕುಂಠಿತವಾಗಿರುವುದಕ್ಕೆ ಶಾಸನಗಳು ಮಾತ್ರವೇ ಕಾರಣವಲ್ಲ. ಒಬ್ಬರ ಹೊಲದಲ್ಲಿ ಇನ್ನೊಬ್ಬರು ಗೊಬ್ಬರದ ಗಾಡಿ ಹೊಡೆದುಕೊಂಡು ಹೋಗುವುದು ಹಳ್ಳಿಗಳಲ್ಲಿ ಬಹು ಸಾಮಾನ್ಯ ಸಂಗತಿ. ಕಲ್ಲಪ್ಪನ ಹೊಲದಲ್ಲಿ ಮಲ್ಲಪ್ಪನ ಗಾಡಿ ಅಡ್ಡಾಡುವುದರಿಂದ ಕಲ್ಲಪ್ಪ ಅಷ್ಟು ಹೊಲವನ್ನು ತನಿಗಿಷ್ಟ ಬಂದಂತೆ ಅನುಭವಿಸಲಾರ. ಅಷ್ಟರಮಟ್ಟಿಗೆ ಅವನ ಅನುಭವಸ್ವಾತಂತ್ರ್ಯ ಮೊಟಕಾಗುತ್ತದೆ. ಕಲ್ಲಪ್ಪನಿಗೆ ಭೂಮಿಯ ಸ್ವಾಧೀನಾನುಭವವಿದೆ. ಆದರೆ ಮಲ್ಲಪ್ಪನಿಗೆ ಕಲ್ಲಪ್ಪನ ಹೊಲದಲ್ಲಿ ಗಾಡಿ ಹೊಡೆಯುವ ಹಕ್ಕಿದೆ. ಇಂಥ ಹಕ್ಕನ್ನು ಅನುಭೋಗದ ಹಕ್ಕು ಅಥವಾ ಮಾಮೂಲು ಹಕ್ಕು ಎಂದು ಕರೆಯುತ್ತಾರೆ. ಈ ಹಕ್ಕು, ಕಲ್ಲಪ್ಪ ಮಲ್ಲಪ್ಪ ಇಬ್ಬರ ನಡುವೆ ಆದ ಒಪ್ಪಂದದ ಫಲವಲ್ಲ. ಒಬ್ಬರ ಆಸ್ತಿಯಲ್ಲಿ ಮತ್ತೊಬ್ಬರಿಗೆ ಶಾಸನಬದ್ಧವಾಗಿ ದೊರಕಿರುವ ಹಕ್ಕು.

ಇನ್ನೊಂದು ರೀತಿಯಿಂದಲೂ ಅನುಭವಸ್ವಾತಂತ್ರ್ಯ ಕುಂಠಿತವಾಗಬಹುದು. ಅದು ಒಪ್ಪಂದದಿಂದ ಆದ ಪರಿಣಾಮ. ಒಬ್ಬಾತ ತನ್ನ ಭೂಮಿಯನ್ನು ಇನ್ನೊಬ್ಬಾತನಿಗೆ ಸ್ವಾಧೀನ ಆಯಕ ಅಥವಾ ಭೋಗ್ಯ (ಪೊಸೆಸರಿ ಮಾರ್ಗಿಜ್) ಮಾಡಬಹುದು. ಇಂಥ ಸಂದರ್ಭಗಳಲ್ಲಿ ಒಡೆಯನ ಅನುಭವ ಅಷ್ಟರ ಮಟ್ಟಿಗೆ ಕುಂಠಿತವಾಗುತ್ತದೆ. ಆದರೂ ಒಡೆಯ ತನ್ನ ಆಸ್ತಿಯನ್ನು ಹೇಗೆ ಅನುಭವಿಸಬೇಕೆಂಬ ಬಗ್ಗೆ ಆತನಿಗೆ ಸ್ವಾತಂತ್ರ್ಯವಿದ್ದೇ ಇರುತ್ತದೆ. ಸ್ವಾಧೀನ ಆಯಕ ಮಾಡುವುದೂ ಬಿಡುವುದೂ ಒಡೆಯನ ಇಷ್ಟ.

ಮೇಲಿನ ಚರ್ಚೆಯಿಂದ ಈ ಕೆಲವು ಅಂಶಗಳು ವ್ಯಕ್ತವಾಗುತ್ತವೆ: 1. ಆಸ್ತಿಯ ಸ್ವಾಧೀನಾನುಭವವನ್ನು ತಾತ್ಕಾಲಿಕವಾಗಿ ಮತ್ತೊಬ್ಬರಿಗೆ ಬಿಟ್ಟುಕೊಟ್ಟು ಒಡೆಯ ತನ್ನ ಸ್ವಾಮ್ಯವನ್ನು ಕಾಪಾಡಿಕೊಳ್ಳಬಹುದು; 2. ತನ್ನ ಒಡೆತನದಲ್ಲಿ ಕೆಲವು ಭಾಗ ಅಥವಾ ಬಹುಭಾಗವನ್ನು ಪರಸ್ಪರ ಒಪ್ಪಂದದ ಮೂಲಕ ಇತರರಿಗೆ ಬಿಟ್ಟುಕೊಟ್ಟು ಒಡೆತನದ ತಿರುಳನ್ನು ಮಾತ್ರ ತಾನಿಟ್ಟುಕೊಂಡಿರಬಹುದು; 3. ಒಡೆಯನೇ ಆಸ್ತಿಯ ಸ್ವಾಧೀನಾನುಭವದಲ್ಲಿದ್ದುಕೊಂಡು ಶಾಸನಬದ್ಧವಾಗಿ ತನಗಿರುವ ಎಲ್ಲ ಹಕ್ಕನ್ನೂ ತಾನೇ ಅನುಭವಿಸಬಹುದು.

(ಇ) ಒಂದು ವಸ್ತುವಿನ ಮೇಲಿರುವ ಒಡೆತನದ ಮತ್ತೊಂದು ಲಕ್ಷಣವೆಂದರೆ ತಾನು ಬದುಕಿದ್ದಾಗ ಆ ವಸ್ತುವನ್ನು ತನಗಿಷ್ಟ ಬಂದಂತೆ ವಿನಿಯೋಗಿಸುವ ಅಥವಾ ಪರಭಾರೆ ಮಾಡುವ ಹಕ್ಕು. ಸ್ವಯಾರ್ಜಿತ ಸ್ವತ್ತನ್ನು ವಿಕ್ರಯಿಸಲೂ, ದಾನ ಮಾಡಲೂ ಒತ್ತೆಯಿಡಲೂ ಅಡವಿಡಲೂ ತನಗಿಷ್ಟ ಬಂದರೆ ನಾಶಪಡಿಸಲೂ ಆ ಸ್ವತ್ತಿನ ಮಾಲೀಕನಿಗೆ ಅಧಿಕಾರವಿರುತ್ತದೆ. ಒಂದು ವಸ್ತು ಸ್ವಂತದ್ದು ಎಂಬುದಾದರೆ ಅದನ್ನು ಏನು ಬೇಕಾದರೂ ಮಾಡುವ ಅಧಿಕಾರ ಒಡೆಯನಿಗಿರಬೇಕು. ಆ ಅಧಿಕಾರವಿಲ್ಲದಿದ್ದರೆ ಒಡೆತನ ಪೂರ್ಣವಲ್ಲ. ಒಂದು ಸ್ವತ್ತು 'ನನ್ನದು' ಎಂದು ಹೇಳಿ, ಅದನ್ನು ಹೀಗೆಯೇ ವಿನಿಯೋಗಿಸಬೇಕು ಎಂಬ ನಿರ್ಬಂಧಕ್ಕೆ ಒಳಪಟ್ಟಿರುವುದು ಒಡೆತನದ ಲಕ್ಷಣವಲ್ಲ.

ಮೇಲಿನ ಈ ಮಾತು ಹಿಂದಿನ ಕಾಲದಲ್ಲಿ ನಿಜವಾಗಿತ್ತು. ಆದರೆ ಸಮಾಜ ಜಟಿಲವಾದಂತೆ, ಆರ್ಥಿಕ ವ್ಯವಸ್ಥೆ ನವಸಮಾಜದ ಆವಶ್ಯಕತೆಗಳಿಗೆ ಹೊಂದಿಕೆಯಾದಂತೆ ಆಸ್ತಿಯ ವಿನಿಯೋಗ ಮತ್ತು ವಿಲೇವಾರಿಯ ಹಕ್ಕು ಬಹುಮಟ್ಟಿಗೆ ಕುಂಠಿತವಾಗಿದೆ. ಭೂಸುಧಾರಣಾ ಕಾಯಿದೆಯ ಪ್ರಕಾರ ಭೂಸ್ವಾಮಿ ಗೇಣಿದಾರರ ಮತ್ತು ಸಾಗುವಳಿಗಾರರ ಸ್ವಾಧೀನದಲ್ಲಿರುವ ಭೂಮಿಯನ್ನು ತನ್ನ ಇಷ್ಟಾನುಸಾರ ಯಾರಿಗಾದರೂ ಮಾರುವಂತಿಲ್ಲ. ಹಿಡುವಳಿದಾರನಿಗೆ ಇಂತಿಷ್ಟೇ ಕ್ರಯಕ್ಕೆ ಮಾರಬೇಕೆಂದು ಶಾಸನವಾಗಿದೆ. ಫ್ರಾನ್ಸ್ ದೇಶದಲ್ಲಿ ತಂದೆ ಬದುಕಿರುವಾಗ ತನ್ನ ಆಸ್ತಿಯಲ್ಲಿ ಒಂದು ಪ್ರಮಾಣಕ್ಕಿಂತ ಹೆಚ್ಚಿಗೆ ವಿಲೇವಾರಿ ಮಾಡುವಂತಿಲ್ಲ. ಅವನು ಸತ್ತಮೇಲೆ ಆ ಆಸ್ತಿ ಹೀಗೆಯೇ ವಿಲೇವಾರಿ ಆಗಬೇಕೆಂದು ಮೃತ್ಯುಪತ್ರದ ಅಥವಾ ಉಯಿಲಿನ ಮೂಲಕವಾಗಿ ನಿರ್ದೇಶಿಸುವಂತೆಯೂ ಇಲ್ಲ. 1933ರಲ್ಲಿ ನಾಜ಼ಿ ಜರ್ಮನಿಯಲ್ಲಿ ಮಧ್ಯಮ ಪ್ರಮಾಣದ ಭೂಮಿಯನ್ನು ಮಾರಕೂಡದೆಂದೂ ತುಂಡು ಮಾಡಬಾರದೆಂದೂ ಶಾಸನ ಮಾಡಲಾಗಿತ್ತು. ಆದಕಾರಣ ನಿರುಪಾಧಿಕ ವಿನಿಯೋಗದ ಹಕ್ಕು ಇದ್ದವನೇ ಒಡೆಯ ಎಂದು ಹೇಳುವುದಾದರೆ ಆಧುನಿಕ ಸಮಾಜದಲ್ಲಿ ಒಬ್ಬನಾದರೂ ನಿಜವಾದ ಒಡೆಯ ಇದ್ದಾನೆಂದು ಹೇಳುವುದು ಕಷ್ಟ.

(ಈ) ಕೊನೆಯದಾಗಿ ಮೃತ್ಯುಪತ್ರದ ಮೂಲಕ ಆಸ್ತಿಯನ್ನು ವಿಲೇಮಾಡುವ ಅಧಿಕಾರವೂ ಒಡೆಯನಿಗಿರಬೇಕೆಂಬುದು ಪಾಶ್ಚಾತ್ಯ ಶಾಸನ ಪದ್ಧತಿಯಲ್ಲಿ ಪ್ರಚಲಿತವಾಗಿದ್ದ ಒಂದು ನಿಶ್ಚಿತ ಅಭಿಪ್ರಾಯ. ಅಲ್ಲಿ ಆಸ್ತಿಯ ಖಾಸಗಿ ಒಡೆತನದಲ್ಲಿ ನಂಬಿಕೆ ಹೆಚ್ಚು. ಆದರೆ ಭಾರತದಲ್ಲಿ, ಅದರಲ್ಲೂ ಹಿಂದೂ ನ್ಯಾಯಶಾಸ್ತ್ರದ ಪ್ರಕಾರ, ಕುಟುಂಬದ ಯಜಮಾನನಿಗಿದ್ದ ದಾನ ಮಾಡುವ ಹಕ್ಕು, ಮೃತ್ಯುಪತ್ರದ ಮೂಲಕ ಆಸ್ತಿಯನ್ನು ವಿಲೇಮಾಡುವ ಅಧಿಕಾರ ನಿರುಪಾಧಿಕವಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ, ಸ್ವಲ್ಪ ಪ್ರಮಾಣದಲ್ಲಿ ಮಾತ್ರ, ಮೃತ್ಯುಪತ್ರದ ಮೂಲಕ ಆಸ್ತಿಯನ್ನು ವಿಲೇಮಾಡುವ ಅಧಿಕಾರ ಅವನಿಗೆ ಇದೆ. ಪಾಶ್ಚಾತ್ಯ ದೇಶಗಳಲ್ಲಿ ಒಡೆಯನ ಮರಣಾನಂತರ ಭೂಮಿ ಹಿರಿಯ ಮಗನಿಗೇ ಕ್ರಮಿಸಬೇಕೆಂಬ ಶಾಸನ ಬಹುಕಾಲದಿಂದಲೂ ಜಾರಿಯಲ್ಲಿದೆ. ಮೃತ್ಯುಪತ್ರದ ಮೂಲಕ ತನ್ನ ಭೂಮಿಯನ್ನು ಬೇಕಾದಂತೆ ಹಂಚುವ ಅಧಿಕಾರ ಬಹುಮಟ್ಟಿಗೆ ಕುಂಠಿತವಾಗಿದೆ.

**ಆಸ್ತಿಯ ಸ್ವಾಧೀನ (ಪೊಸೆಷನ್) :** ಒಂದು ವಸ್ತು ಯಾರ ವಶದಲ್ಲಿದೆಯೆಂಬುದನ್ನು ನೋಡಿ ಅದು ಯಾರದೆಂಬುದನ್ನು ಹಿಂದಿನ ಕಾಲದಲ್ಲಿ ನಿರ್ಧರಿಸುತ್ತಿದ್ದರು. ಅದರಲ್ಲೂ ಇಂಗ್ಲೆಂಡಿನಲ್ಲಿ ಸ್ವಾಧೀನವೇ ಸ್ವಾಮ್ಯದ ಒಂದು ಸ್ಪಷ್ಟವಾದ ಲಕ್ಷಣವೆಂದು ಬಗೆದಿದ್ದರು. ಸ್ವಾಮ್ಯಕ್ಕೆ ಎಷ್ಟು ಪ್ರಾಧಾನ್ಯ ಕೊಟ್ಟಿದ್ದರೆಂದರೆ, ಸ್ವಾಧೀನವಿದ್ದರೆ ಸ್ವಾಮ್ಯವೂ ಆತನದೇ ಎಂದು ಭಾವಿಸಲಾಗಿತ್ತು. ಸ್ವಾಧೀನವಿಲ್ಲದ ಸ್ವತ್ತಿನ ಒಡೆಯ ತನ್ನ ಹಕ್ಕನ್ನು ಸ್ಥಿರಪಡಿಸಿ ಆ ಸ್ವತ್ತನ್ನು ಸ್ವಾಧೀನಕ್ಕೆ ಪಡೆಯಬೇಕಾಗುತ್ತಿತ್ತು. ಸ್ವಾಧೀನವೇ ಶಾಸನದಲ್ಲಿ ನೂರಕ್ಕೆ ತೊಂಬತ್ತು ಅಂಶದ ಬಲ ಎನ್ನುತ್ತಾರೆ–ಇಂಗ್ಲಿಷ್ ಶಾಸನದಲ್ಲಿ. ರೋಮನ್ ನ್ಯಾಯದಲ್ಲಿ ಸ್ವಾಧೀನಕ್ಕೆ ಇಂಗ್ಲಿಷ್ ನ್ಯಾಯದಲ್ಲಿರುವಷ್ಟು ಪ್ರಾಮುಖ್ಯವಿಲ್ಲ. ಆದರೆ ಅಲ್ಲೂ ಸ್ವಾಧೀನಕ್ಕೆ ತಕ್ಕಮಟ್ಟಿನ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಇಂಗ್ಲಿಷ್ ಮತ್ತು ರೋಮನ್ ನ್ಯಾಯಗಳ ಬಹು ಅಂಶವೇ ಈಗ ಭಾರತದಲ್ಲಿ ಪ್ರಚಲಿತವಾಗಿದೆ. ಪ್ರಾಚೀನ ಭಾರತದ ನ್ಯಾಯ ಆಸ್ತಿಯ ವೈಯಕ್ತಿಕ ಒಡೆತನಕ್ಕೆ ಪ್ರಾಮುಖ್ಯ ಕೊಡದೆ ಹಿಂದೂ ಅವಿಭಕ್ತ ಕುಟುಂಬದಲ್ಲಿರುವಂತೆ ಸಾಮೂಹಿಕ ಒಡೆತನಕ್ಕೆ ಪ್ರಾಮುಖ್ಯ ಕೊಡುತ್ತಿದ್ದ ಕಾರಣ ಭಾರತೀಯ ನ್ಯಾಯದಲ್ಲಿ ಸ್ವಾಧೀನಕ್ಕೆ ಇಂಗ್ಲಿಷ್ ನ್ಯಾಯದಲ್ಲಿದ್ದಷ್ಟು ಪ್ರಾಮುಖ್ಯ ಇದ್ದಿರಲಾರದು. ಅರ್ವಾಚೀನ ಭಾರತೀಯ ನ್ಯಾಯ ರೋಮನ್ ಮತ್ತು ಇಂಗ್ಲಿಷ್ ನ್ಯಾಯಗಳ ಆಧಾರದ ಮೇಲೆ ನಿಂತಿರುವುದರಿಂದ ಅವುಗಳಿಂದಲೇ ಇದು ಪ್ರಭಾವಿತವಾಗಿರುವುದರಿಂದ, ಸ್ವಾಧೀನದ ಬಗ್ಗೆ ಪಾಶ್ಚಾತ್ಯ ನ್ಯಾಯಪದ್ಧತಿಯ ಅಭಿಪ್ರಾಯವನ್ನು ಗ್ರಹಿಸುವುದು ಇಲ್ಲೂ ಅತ್ಯಗತ್ಯ.

ಇಂಗ್ಲಿಷ್ ನ್ಯಾಯಪದ್ಧತಿಯ ಪ್ರಕಾರ ಸ್ವಾಧೀನಕ್ಕೆ ಬಹಳ ಪ್ರಾಮುಖ್ಯವಿದೆಯೆಂಬುದಕ್ಕೆ ಕೆಲವು ದೃಷ್ಟಾಂತಗಳನ್ನು ಕೊಡಬಹುದು. ಒಬ್ಬ ಜಾಡಮಾಲಿಗೆ ಕಸ ಗುಡಿಸುವಾಗ ಒಂದು ಉಂಗುರ ಸಿಕ್ಕರೆ ಅದು ಅವನದೇನಲ್ಲ. ಅದರ ಒಡೆಯ ಯಾರೆಂಬುದು ಅವನಿಗೆ ಗೊತ್ತಿಲ್ಲದಿರಬಹುದು. ಆದರೆ ಯಾರೋ ಒಬ್ಬ ಒಡೆಯ ಇರಲೇಬೇಕು ಎಂಬುದಂತೂ ನಿಶ್ಚಯ. ಒಂದು ವೇಳೆ ಜಾಡಮಾಲಿ ಆ ಉಂಗುರದ ಹರಳನ್ನು ರತ್ನಪರೀಕ್ಷಕನಿಗೆ ಕೊಟ್ಟರೆ ಆ ಪರೀಕ್ಷಕ ಅದನ್ನು ಎತ್ತಿಹಾಕಿದರೆ ಜಾಡಮಾಲಿಗೆ ಅದರ ಬೆಲೆಯನ್ನು ಅಥವಾ ಹರಳನ್ನು ನ್ಯಾಯಬದ್ಧವಾಗಿ ವಸೂಲು ಮಾಡಿಕೊಳ್ಳುವ ಅಧಿಕಾರವಿದೆ. ಜಾಡಮಾಲಿಯೇನೂ ಅದರ ಒಡೆಯನಲ್ಲ, ರತ್ನ ಪರೀಕ್ಷಕನೂ ಅಷ್ಟೆ. ಇಬ್ಬರ ಸ್ವಾಧೀನವೂ ಒಡೆತನದ ಸ್ವಾಧೀನವಲ್ಲ. ಆದರೂ ಜಾಡಮಾಲಿಯ ಸ್ವಾಧೀನವನ್ನು ಇಂಗ್ಲಿಷ್ ಶಾಸನ ಮನ್ನಿಸುತ್ತದೆ, ಅದನ್ನು ರತ್ನಪರೀಕ್ಷಕನಿಂದ ವಾಪಸು ಕೊಡಿಸಲು ನೆರವಾಗುತ್ತದೆ. ಜಾಡಮಾಲಿಯ ಹಕ್ಕು, ಸ್ವಾಮ್ಯದ ಹಕ್ಕಲ್ಲ; ಸ್ವಾಧೀನದ ಹಕ್ಕು. ಕೃಷ್ಣನ ಕಾರನ್ನು ರಾಮ ತೆಗೆದುಕೊಂಡು ಹೋಗಿ ಅದನ್ನು ವಾಪಸು ಕೊಡದಿದ್ದರೆ ಕೃಷ್ಣ ಅದನ್ನು ನ್ಯಾಯಬದ್ಧವಾಗಿ ರಾಮನಿಂದ ವಾಪಸು ಪಡೆಯುವ ಹಕ್ಕಿದೆ. ಕೃಷ್ಣ ಅದನ್ನು ಕದ್ದು ತಂದಿದ್ದಾನೆಂಬ ಮಾತನ್ನು ನ್ಯಾಯಾಲಯವು ಕೇಳುವುದೇ ಇಲ್ಲ. ಕೃಷ್ಣ ಕಳ್ಳನಾದರೂ ಅವನ ಸ್ವಾಧೀನ ರಾಮನ ಸ್ವಾಧೀನಕ್ಕಿಂತ ಹೆಚ್ಚು ನ್ಯಾಯಸಮ್ಮತವಾಗಿದೆ. ರೋಮನ್ ನ್ಯಾಯಶಾಸ್ತ್ರದಲ್ಲಿ ಹೀಗಿಲ್ಲ. ಕೃಷ್ಣ ತನ್ನ ಸ್ವಾಧೀನ ನೀತಿಗೂ ನ್ಯಾಯಕ್ಕೂ ಸಮ್ಮತವಾದದ್ದೆಂದು ಸಿದ್ಧಾಂತ ಮಾಡಿದರೆ ಮಾತ್ರ ರಾಮನಿಂದ ಆ ಕಾರಿನ ಸ್ವಾಧೀನ ಪಡೆಯಲು ಸಮರ್ಥನಾಗುತ್ತಾನೆ. ಕಳ್ಳನ ಕಳ್ಳಮಾಲು ಕದ್ದ ಮತ್ತೊಬ್ಬ ಕಳ್ಳನಿಗೂ ಸ್ವಾಧೀನದ ಹಕ್ಕು ಬರುತ್ತದೆ–ಎಂಬುದಾಗಿ ರೋಮನ್ ನ್ಯಾಯಪದ್ಧತಿ ನಂಬಿತ್ತು.

ಈ ರೀತಿಯಾಗಿ ಸ್ವಾಧೀನಕ್ಕೆ ಪ್ರಾಶಸ್ತ್ಯ ಕೊಡುವುದರ ಕಾರಣವೇನು? ಮೊದಲನೆಯದಾಗಿ, ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಉಳಿಸಿಕೊಳ್ಳಲು ಇದ್ದ ಪರಿಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗಲೇಬೇಕು. ಸ್ವಾಧೀನವನ್ನು ತಪ್ಪಿಸಲು ಮಾಡುವ ಎಲ್ಲ ಪ್ರಯತ್ನಗಳೂ ಅನಿವಾರ್ಯವಾಗಿ ಹಿಂಸಾಕೃತ್ಯ ಮತ್ತು ಅಶಾಂತಿಗೆ ಎಡೆಕೊಡುತ್ತವೆ. ಎರಡನೆಯದಾಗಿ, ಸ್ವಾಧೀನವು ಸ್ವಾಮ್ಯದ ಒಂದು ಮುಖ್ಯ ಲಕ್ಷಣ. ಆದಕಾರಣ ಸ್ವಾಧೀನ ಹೊಂದಿರುವಾತನಿಗೆ ಸ್ವಾಮ್ಯವಿಲ್ಲವೆಂದು ಸಿದ್ಧಾಂತ ಮಾಡಿದರೆ, ಅದರ ಜೊತೆಗೆ ಸ್ವಾಧೀನ ಬೇಕೆಂದು ಬೇಡುವಾತನ ಸಾಮ್ಯದ ಹಕ್ಕು ಸದ್ಯ ಸ್ವಾಧೀನದಲ್ಲಿರುವಾತನ ಸ್ವಾಧೀನಕ್ಕಿಂತ ಉತ್ತಮವಾದದ್ದೆಂದು ತೋರಿಸಬೇಕು.

**ಸ್ವತ್ತಿನ ಪ್ರಾಪ್ತಿ:** ಕೊನೆಯದಾಗಿ ಆಸ್ತಿಯನ್ನು ಗಳಿಸುವ ಬಗೆ ಹೇಗೆಂದು ಪರಿಶೀಲಿಸೋಣ. ಜನಾಂಗದ ಬಾಲ್ಯಾವಸ್ಥೆಯಲ್ಲಿ, ಜನರು ಬಹು ಅಲ್ಪ ಸಂಖ್ಯೆಯಲ್ಲಿದ್ದಾಗ, ಸ್ವತ್ತುಗಳು ಹೇರಳವಾಗಿ ದೊರೆಯುತ್ತಿದ್ದ ಆ ಒಳ್ಳೆಯ ಕಾಲದಲ್ಲಿ ಸಿಕ್ಕಿದ್ದನ್ನು ಸಿಕ್ಕಷ್ಟು ಆಕ್ರಮಿಸಿ ಕೈವಶಮಾಡಿಕೊಳ್ಳುವುದು ಸ್ವತ್ತನ್ನು ಗಳಿಸುವ ಪ್ರಥಮ ಮತ್ತು ಸುಲಭೋಪಾಯ. ಯಾರದೂ ಅಲ್ಲದ, ಪ್ರಕೃತಿದತ್ತ ಸ್ವತ್ತನ್ನು ಸ್ವಾಧೀನಪಡಿಸಿಕೊಂಡರೆ ಅದು ಆತನ ಆಸ್ತಿಯಾಗುತ್ತದೆ.

ಹರಿಯುವ ನೀರಿನಲ್ಲಿ ಸಿಗುವ ಮೀನೂ ಆಕಾಶದಲ್ಲಿ ಹಾರುವ ಹಕ್ಕಿಗಳೂ ಯಾರು ಹಿಡಿದರೋ ಅವರದೇ ಆಗುತ್ತವೆ. ಒಂದು ವೇಳೆ, ಒಂದು ಸ್ವತ್ತು ಮತ್ತೊಬ್ಬರಿಗೆ ಸೇರಿದ್ದರೆ, ಅದನ್ನು ತನ್ನದನ್ನಾಗಿ ಮಾಡಿಕೊಳ್ಳಲು ಬರುತ್ತದೆ. ಯಾರಿಗೆ ಆ ಸ್ವತ್ತು ಸೇರಿದೆಯೋ ಅವರೊಡನೆ ಒಪ್ಪಂದ ಮಾಡಿಕೊಂಡು ಸ್ವತ್ತನ್ನು ಕ್ರಯಕ್ಕೆ ಕೊಂಡು, ಇಲ್ಲವೇ ಪುಕ್ಕಟೆಯಾಗಿ ಪಡೆದುಕೊಂಡು, ಅಥವಾ ಮತ್ತಾವುದೋ ರೀತಿಯಿಂದ, ಒಡೆತನ ಹೊಂದಬಹುದು. ಒಪ್ಪಂದವಿಲ್ಲದೆ ವಸ್ತುವನ್ನು ಬಲಾತ್ಕಾರವಾಗಿ ಆಕ್ರಮಿಸಿಕೊಂಡು, ನಿಯಮಿತ ಕಾಲಕ್ಕಿಂತ ದೀರ್ಘಕಾಲ ಬಹಿರಂಗವಾಗಿ ಆಕ್ಷೇಪಣೆಯಿಲ್ಲದೆ ಅನುಭೋಗಿಸಿದರೂ ಮೂಲ ಒಡೆಯನ ಸ್ವಾಮ್ಯ ತಾನಾಗಿಯೇ ಲುಪ್ತವಾಗಿ ಬಲಾಢ್ಯನ ಸ್ವಾಧೀನ ಸ್ವಾಮ್ಯವಾಗಿ ಮಾರ್ಪಡುತ್ತದೆ. ಆಸ್ತಿಯ ಮಾಲೀಕ ಮೃತ್ಯುಪತ್ರದ ಮೂಲಕ ತನ್ನಿಷ್ಟ ಬಂದವರಿಗೆ ಆಸ್ತಿಯನ್ನು ಕೊಡುವುದರಿಂದಲೂ ಆಸ್ತಿ ಪ್ರಾಪ್ತಿಯಾಗುತ್ತದೆ. ಹಿಂದೂ ನ್ಯಾಯಶಾಸ್ತ್ರ ಹಾಗೂ ಇತರ ಪ್ರಮುಖ ನ್ಯಾಯಶಾಸ್ತ್ರ ಪದ್ಧತಿಯಂತೆ ವಂಶಾನುಗತವಾಗಿ ಆಸ್ತಿ ಸಂಕ್ರಮಿಸುವುದರಿಂದಲೂ ಅದು ಪ್ರಾಪ್ತವಾಗುತ್ತದೆ. (ಕೆ.ಸಿ.)

**ಸಾಮಾಜಿಕವಾಗಿ ಸ್ವತ್ತಿನ ಕಲ್ಪನೆ:** ಸ್ವತ್ತನ್ನು ಕುರಿತ ಜಿಜ್ಞಾಸೆಯನ್ನು ವ್ಯಕ್ತಿಯ ಮತ್ತು ಸಮಾಜದ ದೃಷ್ಟಿಯಿಂದ ಮಾಡುವುದು ರೂಢಿಯಾಗಿದೆ. ಒಬ್ಬ ವ್ಯಕ್ತಿ ಒಂದು ಸ್ವತ್ತನ್ನು ಪಡೆದುಕೊಂಡು ಅದರ ಒಡೆತನ ಹೊಂದುವುದರ ಉದ್ದೇಶವೇನೆಂಬುದನ್ನು ವಿವೇಚಿಸುವ ಪ್ರಯತ್ನಗಳು ನಡೆದಿವೆ. ಒಬ್ಬ ವ್ಯಕ್ತಿ ಸ್ವತ್ತಿನ ಸ್ವಾಧೀನ ಹಾಗೂ ಸ್ವಾಮ್ಯ ಪಡೆಯುವುದರಿಂದ ಸಮಾಜದ ಮೇಲೆ ಉಂಟಾಗುವ ಪರಿಣಾಮಗಳೇನೆಂಬುದನ್ನು ಪರಿಶೀಲಿಸುವ ಪ್ರಯತ್ನಗಳೂ ಅಷ್ಟೇ ಪ್ರಮುಖವಾಗಿ ನಡೆದಿವೆ. ವ್ಯಕ್ತಿಗೂ ಸಮಾಜಕ್ಕೂ ಇರುವ ಸಂಬಂಧವನ್ನು ಮರೆತು ಕೇವಲ ವ್ಯಕ್ತಿಯ ದೃಷ್ಟಿಯಿಂದಲೋ ಸಮಾಜದ ದೃಷ್ಟಿಯಿಂದಲೋ ಇದರ ಜಿಜ್ಞಾಸೆಯಲ್ಲಿ ತೊಡಗುವುದರಿಂದ ಏನೂ ಪ್ರಯೋಜನವಿಲ್ಲ. ಸ್ವತ್ತೂ ಒಂದು ಹಕ್ಕು. ಒಂದು ಪದಾರ್ಥದ ಸುತ್ತ ಬೆಳೆದ ಸಂಬಂಧಗಳ ವ್ಯೂಹ (ಲೇಖನದ ಮೊದಲ ಭಾಗ ನೋಡಿ). ಸಮಾಜದ ಒಪ್ಪಿಗೆಯಿಲ್ಲದೆ ಯಾವ ಹಕ್ಕೂ ಸಿಂಧುವಾಗದೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ಸ್ವತ್ತಿನ ವಿಚಾರದಲ್ಲೂ ಈ ಮಾತು ನಿಜ. ಆದ್ದರಿಂದ ಈ ವಿಚಾರವಾಗಿ ವಿವೇಚಿಸಬೇಕಾದ ಅಂಶಗಳು ಹಲವುಂಟು. ಸ್ವತ್ತಿನ ಸ್ವಾಧೀನ, ಒಡೆತನ, ಪ್ರೇರಣೆ, ಸ್ವತ್ತಿನ ನಿಮಿತ್ತವಾಗಿ ಇತರರೊಂದಿಗೆ ಉದ್ಭವಿಸುವ ಸಂಬಂಧಗಳು (ಉದಾ: ಪ್ರತಿಷ್ಠೆಯ ಚಿಹ್ನೆ), ಪ್ರಾಬಲ್ಯ, ಅಧಿಕಾರ, ಅವಲಂಬನೆ, ಅಂತಸ್ತು ಮುಂತಾದವನ್ನೆಲ್ಲ ವಿವೇಚಿಸಬೇಕಾಗುವುದು. ಇತರ ವ್ಯವಸ್ಥೆಗಳಂತೆ ಸ್ವತ್ತೂ ಒಂದು ವ್ಯವಸ್ಥೆಯಾದ್ದರಿಂದ ಇದರ ಜಿಜ್ಞಾಸೆಯಲ್ಲಿ ನೈತಿಕ ಸಾಮಾಜಿಕ ಸಮಸ್ಯೆಗಳು ಅತ್ಯಂತ ಮುಖ್ಯವಾದುವು. ಏಕೆಂದರೆ ಮಿಕ್ಕೆಲ್ಲದರಂತೆಯೇ ಸ್ವತ್ತೂ ಸಾಮಾಜಿಕ ವ್ಯವಸ್ಥೆ. ಮಿಕ್ಕೆಲ್ಲ ಹಕ್ಕುಗಳಂತೆಯೇ ಸ್ವತ್ತೂ ಒಂದು ಹಕ್ಕಾದರೂ ಭೌತ ವಸ್ತುಗಳಿಗೆ ಮಾತ್ರವೇ ಸ್ವತ್ತಿನ ಹಕ್ಕು ಮಿತಿಗೊಳ್ಳುವುದಿಲ್ಲ. ಅದು ಅದ್ರವ್ಯ ವಿಷಯಗಳಿಗೂ ಎಂದರೆ ಹಾಡುಗಳು, ಮಾಟದ ಮಂತ್ರಗಳು, ಹೆಸರುಗಳು ಮುಂತಾದವಕ್ಕೂ, ಅನ್ವಯವಾಗುತ್ತದೆ. ಆಕ್ರಮಣ ಮತ್ತು ಅನುಭೋಗಗಳಿಂದ ಸ್ವತ್ತು ಹುಟ್ಟಿದೆ, ನಿಜ; ಆದರೆ ಅದು ಬೇಗನೆ ಸ್ವಾಮಿತ್ವಕ್ಕೆ ಬೆಳೆಯುತ್ತದೆ ಮತ್ತು ಸಾಮಾಜಿಕ ಸಂಬಂಧವಾಗಿ ಬಹು ವ್ಯಾಪಕವಾದ ಪರಿಣಾಮವನ್ನು ಉಂಟುಮಾಡುತ್ತದೆ. ಸರಳ ಸಮಾಜಗಳಲ್ಲಿ ಒಂದು ಸ್ವತ್ತನ್ನು ಬಹುಮಟ್ಟಿಗೆ ಅದರ ಒಡೆಯ ತನ್ನ ಕುಲದವರೊಂದಿಗೆ ಭೋಗಿಸುವುದು ವಾಡಿಕೆ. ಆದರೆ ಆಧುನಿಕ ಸಮಾಜಗಳಲ್ಲಿ ವ್ಯಕ್ತಿಗಳೇ ಸಾಮಾನ್ಯವಾಗಿ ಸ್ವತ್ತಿನ ಒಡೆಯರು ಹಾಗೂ ಉಪಭೋಕ್ತೃಗಳು. ಭವಿಷ್ಯದ ಅಭದ್ರತೆಯನ್ನು ನಿವಾರಿಸುವ ಉದ್ದೇಶದಿಂದಲೇ ಸಾಮಾನ್ಯವಾಗಿ ಜನ ಸ್ವತ್ತನ್ನರಸಿ ಹೋಗುತ್ತಾರೆ. ಸಾಕಷ್ಟು ಆಹಾರ ದೊರಕುವಂತಾದರೆ ಸಾಕೆಂಬುದು ಒಂದು ಉದ್ದೇಶ. ಇದು ಪ್ರಥಮ. ಸ್ವತ್ತಿನೊಡೆತನಕ್ಕೆ ಮೋಡಿಯ ಪವಾಡವುಂಟು. ಜಡವಾದ ಸ್ವತ್ತಿಗೂ ಚೇತನವನ್ನಾರೋಪಿಸಿ ಅದನ್ನು ವಶಪಡಿಸಿ ಕೊಳ್ಳಬೇಕೆಂಬ ಹಂಬಲವೂ ಉಂಟು. ಈ ಕಾರಣಗಳಿಂದಲೂ ಸ್ವತ್ತನ್ನರಸುವುದುಂಟು. ಸ್ವತ್ತಿನ ಒಡೆತನದಿಂದ ವ್ಯಕ್ತಿಯ ಅರ್ಹತೆಯ ವಿಸ್ತರಣವಾಗುತ್ತದೆ. ಆ ಕಾರಣದಿಂದ ಅವನು ಸ್ವತ್ತನ್ನು ರೂಢಿಸುತ್ತ ಹೋಗಬಹುದು. ಸಂಗ್ರಹಿಸಬೇಕೆಂಬ ಸಹಜಪ್ರವೃತ್ತಿ ಸ್ವತ್ತಿನ ಸಂಪಾದನೆಗೂ ಒಡೆತನಕ್ಕೂ ಒಂದು ಕಾರಣ.

ಸಾಕಷ್ಟು ಸುಖೋಪಭೋಗಗಳ ಲಾಲಸೆಯಿಂದಲೂ ಸ್ವತ್ತಿನ ಅವತಾರವಾಗಬಹುದು. ಇದು ಅಂತಸ್ತಿನ ಚಿಹ್ನೆಯೂ ಆಗುವುದು. ಇತರರ ಕಣ್ಣು ಕೋರೈಸುವಂತೆ ವಸ್ತುಗಳನ್ನು ಅನುಭೋಗಿಸುವುದು, ಪೋಲುಮಾಡುವುದು ಹಿಂದೂ ಇತ್ತು; ಇಂದೂ ಇದನ್ನು ಕಾಣಬಹುದು. ಇತರರನ್ನು ಮೀರಿಸಬೇಕೆಂಬುದೂ ಮಾನವರಲ್ಲಿ ಬಹಳ ಸಾಮಾನ್ಯವಾಗಿರುವ ಆಸೆ. ಇತರರ ಮೇಲೆ ಹತೋಟಿ ಹೊಂದಿ ಅಧಿಕಾರ ಚಲಾಯಿಸಲು ಸ್ವತ್ತು ಒಂದು ಸಾಧನವಾಗಿ ಪರಿಣಮಿಸಿರುವುದು ಇಂದಿನ ನಾಗರಿಕತೆಗಳ ಒಂದು ಲಕ್ಷಣ. ಹಣದ ಆಗಮನ ಹಾಗೂ ಬಂಡವಾಳ ಶೇಖರಣೆಯ ಫಲವಾಗಿ ಇದು ಈಗ ಬಹಳ ಪ್ರಧಾನ ಲಕ್ಷಣವಾಗಿದೆ.

ಸರಳ ಸಮಾಜಗಳಲ್ಲಿ ಸ್ವತ್ತು ಇದ್ದದ್ದು ಮುಖ್ಯವಾಗಿ ಬಳಕೆಗಾಗಿ, ಪ್ರದರ್ಶನಕ್ಕಾಗಿ. ಇತರರ ಮೇಲೆ ಹಿಡಿತ ಹಾಗೂ ಅಧಿಕಾರ ಪಡೆಯವ ಸಾಧನವಾಗಿ ಆಗ ಅದನ್ನು ಇಂದಿನಷ್ಟು ಹೆಚ್ಚಾಗಿ ಉಪಯೋಗಿಸುವ ಸಾಧ್ಯತೆ ಇರಲಿಲ್ಲ. ಸರಳ ಸಮಾಜಗಳಲ್ಲಿ ವ್ಯಕ್ತಿಗಳ ಜೀವನಮಟ್ಟ ಹೆಚ್ಚು ಕಡಿಮೆ ಸಮಾನವಾಗಿತ್ತು. ಬಂಡವಾಳ ಶೇಖರಣೆ ಹಾಗೂ ವಿನಿಯೋಗದ ಸಾಧ್ಯತೆಗಳು ಹೆಚ್ಚಿದಂತೆಲ್ಲ ಇದು ವ್ಯಕ್ತಿಗಳ ಮೇಲಣ ಹತೋಟಿ ಹಾಗೂ ಅಧಿಕಾರಿಗಳ ಸಾಧನವಾಯಿತು. ತತ್ಫಲವಾಗಿ ಸ್ವತ್ತಿನ ಒಡೆಯರಿಗೂ ಸ್ವತ್ತೇ ಇಲ್ಲದವರಿಗೂ ಅಂತರ ಹೆಚ್ಚಿತು. ಇಡೀ ಸಮಾಜದ ತಾರತಮ್ಯಗಳು ಸ್ವತ್ತಿನ ಒಡೆತನದ ಆಧಾರದ ಮೇಲೆ ರಚಿತವಾದುವು. ಸ್ವತ್ತಿನಿಂದ ರಾಜಕೀಯ ಪರಿಣಾಮಗಳೂ ಉಂಟಾದುವು. ಇದಕ್ಕೆ ಅನುಗುಣವಾಗಿ ಅಧಿಕಾರದ ಹಂಚಿಕೆಯಾಯಿತು. ಇಡೀ ಸಮಾಜದ ಸ್ವರೂಪವೇ ಇಂದು ಸ್ವತ್ತಿಗೆ ಅನುಗುಣವಾಗಿದೆ. ಉಳ್ಳವರು, ಇಲ್ಲದವರು–ಎಂಬ ವಿಶಿಷ್ಟ ವಿಂಗಡಣೆಯಾಗಿದೆ. ಸ್ವತ್ತಿನ ಒಡೆತನದ ಹಿಂದೆ ನೈತಿಕ ಪ್ರಶ್ನೆಗಳೂ ಅಡಗಿವೆ.

**ಆದಿಕಾಲದಲ್ಲಿ ಸ್ವತ್ತಿನ ಸ್ವರೂಪ:** ಹಿಂದಿನ ಸಮಾಜಗಳಲ್ಲಿ ಸ್ವತ್ತಿಗೆ ಅದರ ಆಕ್ರಮಣ, ಉಪಯೋಗ ಹಾಗೂ ಒಡೆತನಗಳು ಆಧಾರವಾಗಿದ್ದವೆಂದು ಹಿಂದೆ ಹೇಳಿದೆ. ಅದನ್ನು ಉಪಯುಕ್ತವಾಗಿ ಮಾರ್ಪಡಿಸಿದವರು ಯಾರೋ, ಅದರ ಮೇಲೆ ಯಾರು ಕೆಲಸ ಮಾಡುತ್ತಿದ್ದರೋ ಅವರೇ ಅದಕ್ಕೆ ಒಡೆಯರಾಗುತ್ತಿದ್ದರು; ಇದು ನ್ಯಾಯವೆಂದೇ ಎನಿಸಿತ್ತು. ಒಂದು ಕುಟುಂಬವೋ ಕುಲವೋ ಸಾಮಾನ್ಯವಾಗಿ ಅದರ ಸ್ವಾಮ್ಯ ಹೊಂದಿತ್ತು. ಅದನ್ನು ಬಳಸುತ್ತಿತ್ತು. ಮಾಟ, ಮಂತ್ರ, ತಂತ್ರಗಳು ಮುಂತಾದ ಕೆಲವು ಸ್ವತ್ತುಗಳು ವ್ಯಕ್ತಿಗಳ ವಶದಲ್ಲಿದ್ದುವಾದರೂ ಉಳಿದದ್ದಕ್ಕೆ ಸಮಷ್ಟಿಯ ಒಡೆತನವೇ ಸಾಮಾನ್ಯವಾಗಿತ್ತು. ವೈಯಕ್ತಿಕ ಒಡೆತನವಿಲ್ಲದ ಸ್ವತ್ತಿನ ಸ್ವಾಮ್ಯಕ್ಕೆ ಬಳಕೆಯೇ ಆಧಾರವಾಗಿತ್ತು. ಹಿಂದೆಯೇ ಹೇಳಿದಂತೆ ಅದು ಅಂತಸ್ತಿನ ಚಿಹ್ನೆಯೂ ಆಗಿತ್ತು. ಪುರಾತನ ಸಮಾಜದಲ್ಲಿ ಬಳುವಳಿ ಕೊಡುವುದೂ ಅದನ್ನು ಹಿಂತಿರುಗಿಸುವುದೂ ಒಂದು ದೊಡ್ಡ ಕಲಾಪವೆನಿಸಿತ್ತು. ಸ್ವತ್ತಿನ ಶೇಖರಣೆಗಿಂತ ಅದರ ಬಳಕೆ ಹಾಗೂ ವಿತರಣೆಯೇ ಉದ್ದೇಶವಾದ್ದರಿಂದಲೇ ಈ ಬಗೆಯ ಪದ್ಧತಿಗಳಿದ್ದುವು. ಸ್ವತ್ತಿನ ಸ್ವರೂಪವೂ ಇದಕ್ಕೆ ಕಾರಣವಾಗಿತ್ತು. ಸ್ವತ್ತೆಲ್ಲ ಸಾಮಾನ್ಯವಾಗಿ ಅನುಭೋಗ ವಸ್ತುಗಳೇ ಆಗಿದ್ದುದರಿಂದ ಇದನ್ನು ಹಣರೂಪದ ಬಂಡವಾಳದಂತೆ ಅನಿರ್ದಿಷ್ಟಕಾಲ ಶೇಖರಿಸಿಡಲು ಸಾಧ್ಯವಾಗುತ್ತಿರಲಿಲ್ಲ. ಸ್ವತ್ತನ್ನು ಇತರರೊಂದಿಗೆ ಭೋಗಿಸಬೇಕೆಂಬ ಕಟ್ಟಳೆಗಳೂ ಇದ್ದುವು. ಈ ಕಾರಣದಿಂದ ಸ್ವತ್ತುಳ್ಳವರಿಗೂ ಇಲ್ಲದವರಿಗೂ ಅಂತರ ಕಡಿಮೆಯಾಗಿತ್ತು. ಸ್ವತ್ತಿನ ಸಮಷ್ಟಿ ಸ್ವಾಮ್ಯ ಹಾಗೂ ಅನುಭೋಗಗಳಿವೆಯೆಂದೇ ಭಾಸವಾಗುತ್ತಿತ್ತು. ಆದ್ದರಿಂದ ಸ್ವತ್ತಿನ ಒಡೆಯರ ವಿಚಾರದಲ್ಲಿ ಅಸೂಯೆ ದ್ವೇಷಗಳಿಗೆ ಅವಕಾಶ ಕಡಿಮೆಯಿತ್ತು.

**ಸಾಮುದಾಯಿಕ ಸ್ವತ್ತು:** ಆದಿ ಸಮಾಜಗಳಲ್ಲಿ ಬೆಳೆ ತೆಗೆಯಲು ಎಲ್ಲರೂ ನೆರವಾಗುತ್ತಿದ್ದರು. ಬೆಳೆದದ್ದು ಇಡಿಯ ಕುಟುಂಬಕ್ಕೋ ಕುಲಕ್ಕೋ ಸೇರಿದ್ದಾಗಿತ್ತು. ಅನಾಗರಿಕ ಜನಾಂಗಗಳಲ್ಲಿ ಹೇಗೋ ಹಾಗೆ ಆಧುನಿಕ ಸಮಾಜಗಳಲ್ಲೂ ನೆಲದ ಜಂಟಿ ಒಡೆತನವನ್ನು ಕಾಣಬಹುದು. ಇಪ್ಪತ್ತನೆಯ ಶತಮಾನದ ನಾಲ್ಕನೆಯ ದಶಕದ ಆದಿಕಾಲದಲ್ಲೂ ದಕ್ಷಿಣ ಸರ್ಬಿಯದಲ್ಲಿ ನೆಲದ ಸಾಮೂಹಿಕ ಒಡೆತನಕ್ಕೆ ಉದಾಹರಣೆಗಳನ್ನು ಕೊಡಬಹುದಿತ್ತು. ಸಾಧನಗಳನ್ನು ಒಟ್ಟು ಹಾಕುವುದೂ ಉತ್ಪನ್ನವನ್ನು ಹಂಚಿಕೊಳ್ಳುವುದೂ ಸಾಮಾನ್ಯವಾಗಿತ್ತು. ದನಗಾಹಿಗಳ ಸಮಾಜದಲ್ಲಿ ಗೋಮಾಳದ ದೃಷ್ಟಿಯಿಂದ ನೆಲಕ್ಕೆ ಪ್ರಾಮುಖ್ಯ. ಇಲ್ಲೂ ಇದರ ಸ್ವಾಮ್ಯವೂ ಬಳಕೆಯೂ ಸಾಮುದಾಯಿಕ. ಬೇಟೆಗಾರರು, ಬೆಸ್ತರು ಮುಂತಾದವರು ಸಂಘಟಿಸಿಕೊಂಡು ಒಂದು ಗೊತ್ತಾದ ಪ್ರದೇಶದ ಮೇಲೆ ತಮ್ಮ ಒಡೆತನ ಸ್ಥಾಪಿಸಿಕೊಳ್ಳುತ್ತಿದ್ದರು. ಇತರರು ಪ್ರವೇಶಿಸಿ ಅಲ್ಲಿನ ನಿಸರ್ಗದತ್ತ ವಸ್ತುಗಳ ಮೇಲೆ ತಮ್ಮ ಹಕ್ಕು ಸ್ಥಾಪಿಸದಂತೆ ತಡೆಯುತ್ತಿದ್ದರು. ಈ ಆದ್ಯ ಸಮಾಜಗಳಲ್ಲಿ ನೆಲದ ಫಲಾನುಭವದ ಮೇಲೆ ಸಾಮೂಹಿಕ ಒಡೆತನವಿತ್ತು. ಮತಶ್ರದ್ಧೆಯಿದ್ದ ಸಮಾಜಗಳು ತಮ್ಮ ಧಾರ್ಮಿಕ ಕರ್ಮಕಾಂಡಗಳ ಪುರಾಣಗಳ, ಹಾಗೂ ನರ್ತನ ಪದ್ಧತಿಗಳ ಮೇಲೆ ಒಡೆತನದ ಹಕ್ಕು ಪಡೆದಿದ್ದುವು. ಸ್ಥಿರಸ್ವತ್ತಿನ ಒಡೆತನ ಸಮಷ್ಟಿಯದಾಗಿತ್ತು. ಆಧುನಿಕ ಕಾಲದಲ್ಲೂ ಸರ್ವಜನೋಪಯೋಗಿ ಸ್ವತ್ತುಗಳು ಸರ್ವರ ಸ್ವತ್ತು. ಪ್ರಭುತ್ವಗಳು ಅವುಗಳ ಆಡಳಿತ ನಡೆಸುತ್ತವೆ. ಆದ್ಯ ಸಮಾಜಗಳಲ್ಲಿ ಸಾಮಾನ್ಯವಾಗಿ ಸ್ವತ್ತಿನ ಸಾಮುದಾಯಿಕ ಒಡೆತನವಿದ್ದರೂ ವೈಯಕ್ತಿಕ ಸ್ವಾಮ್ಯಕ್ಕೂ ಮೌನಸಮ್ಮತಿಯಿತ್ತು.

**ವೈಯಕ್ತಿಕ ಸ್ವತ್ತು:** ಸ್ವತ್ತು ಯಾರದೆಂದರೆ ಯಾರು ಅದನ್ನು ಚೆನ್ನಾಗಿ ಬಳಸುತ್ತಾರೊ ಅವರದು. ಸಾಧನ ಸಲಕರಣೆಗಳೂ ತಾಯಿತಿಗಳೂ ಹಾಡುಗಳೂ ಉಡಿಗೆಗಳೇ ಮುಂತಾದವೂ ಸ್ವತ್ತಿಗೆ ಸೇರಿದ್ದವು. ತನ್ನ ಒಡಹುಟ್ಟಿದವನ ಸಮ್ಮತಿಯಿಲ್ಲದೆ ಆತನ ಭೂಮಿಯಲ್ಲಿ ಬೇಟೆಯನ್ನೂ ಆಡಕೂಡದೆಂಬ ನಿರ್ಬಂಧ ಕೆಲವು ಸಂದರ್ಭಗಳಲ್ಲಿ ಇತ್ತೆಂಬುದು ಗೊತ್ತಾಗಿದೆ. ಹೆಚ್ಚು ಕಡಿಮೆ ಯಾವೊಬ್ಬ ಮನುಷ್ಯ ತಾನೇನನ್ನು ಮಾಡುತ್ತಾನೋ ಉಟ್ಟುತೊಡುತ್ತಾನೋ ಏನನ್ನು ಸಲಕರಣೆಯಾಗಿಯೋ ಆಯುಧವಾಗಿಯೋ ಉಪಯೋಗಿಸುತ್ತಾನೋ ಅವೆಲ್ಲ ಅವನ ಸ್ವತ್ತಾಗಿದ್ದುವು. ಇದು ಗಂಡಸರಿಗೂ ಹೆಂಗಸರಿಗೂ ಅನ್ವಯಿಸುತ್ತದೆ. ಈ ದೃಷ್ಟಿಯಲ್ಲಿ ವೈಯಕ್ತಿಕ ಸ್ವತ್ತು ಆದಿ ಸಮಾಜಗಳಲ್ಲಿ ಅನ್ಯಾದೃಶವಾಗಿದೆ. ಹೀಗೆ ವೈಯಕ್ತಿಕವಾಗಿ ಪಡೆದಿರುವ ಸ್ವತ್ತನ್ನು ತನಗಿಷ್ಟ ಬಂದ ರೀತಿಯಲ್ಲಿ ವಿತರಣೆ ಮಾಡುವ ಹಕ್ಕು ಅದರ ಮಾಲೀಕನಿಗುಂಟು. ಉದಾಹರಣೆಗೆ, ಅಂಥ ಸ್ವತ್ತನ್ನು ಆತ ತನ್ನ ಜ್ಯೇಷ್ಠ ಪುತ್ರನಿಗಾಗಲಿ, ಕನಿಷ್ಠ ಪುತ್ರನಿಗಾಗಲಿ ಅಥವಾ ಜ್ಯೇಷ್ಠ ಪುತ್ರಿಗಾಗಲಿ, ಕನಿಷ್ಠ ಪುತ್ರಿಗಾಗಲಿ, ಕೊಟ್ಟುಬಿಡಬಹುದು. ಚರಸ್ವತ್ತು ಸಾಮಾನ್ಯವಾಗಿ ವ್ಯಕ್ತಿಯ ವಶದಲ್ಲಿರುತ್ತಿತ್ತೇ ಹೊರತು ಸಮುದಾಯದ ವಶದಲ್ಲಿರುತ್ತಿರಲಿಲ್ಲ; ಆದ್ದರಿಂದ ಆತ ಅದನ್ನು ತನ್ನ ಇಷ್ಟಾನುಸಾರವಾಗಿ ವಿತರಿಸುತ್ತಿದ್ದ. ಆದ್ಯ ಸಮಾಜಗಳಲ್ಲಿ ಹೆಂಗಸರೂ ಗಂಡಸರೂ ವೈಯಕ್ತಿಕವಾಗಿ ಸ್ವತ್ತಿನ ಮಾಲೀಕರಾಗಿರುತ್ತಿದ್ದರು. ಹೀಗೆ

ಮಾಲೀಕರಾಗುವ ಮೂಲೋದ್ದೇಶ ಅದನ್ನು ಬಳಸಿಕೊಳ್ಳುವುದೇ ಆಗಿತ್ತು; ಮತ್ತು ಅಂಥ ಸ್ವತ್ತು ಸಾಮಾಜಿಕ ಸ್ಥಾನಮಾನದ ಗುರುತಾಗಿತ್ತೇ ಹೊರತು ಬಲಪ್ರದರ್ಶಕವಾಗಿರಲಿಲ್ಲ. ವ್ಯಕ್ತಿಗಳು ಸ್ವತ್ತಿನ ಮಾಲೀಕರಾಗಿರುವುದೇ ಆಧುನಿಕ ಸಮಾಜಗಳ ವಿಶಿಷ್ಟಲಕ್ಷಣ. ಇಂಥ ಸ್ವಾಮಿತ್ವದಿಂದ ಆಧುನಿಕ ಸಮಾಜಗಳಲ್ಲಿ ಸಾಮಾಜಿಕ ಸಂಬಂಧಗಳು, ಕ್ರಮಬದ್ಧ ಶ್ರೇಣಿ, ನಿಯಂತ್ರಣ, ಅಧಿಕಾರ ಇತ್ಯಾದಿಗಳ ವಿಷಯದಲ್ಲಿ ದೂರಗಾಮಿಯಾದ ಪರಿಣಾಮ ಉಂಟಾಗುತ್ತದೆ. ಜೊತೆಗೆ ಪರಸ್ಪರ ವೈವಾಹಿಕ ಸಂಬಂಧಗಳಿಂದ ಆಸ್ತಿ ಮತ್ತು ಐಶ್ವರ್ಯಗಳು ಕೇವಲ ಕೆಲವು ಕುಟುಂಬಗಳಲ್ಲೇ ಶೇಖರಗೊಳ್ಳುವ ಪ್ರವೃತ್ತಿ ಹುಟ್ಟಿಕೊಳ್ಳುತ್ತದೆ. ಆದಿ ಸಮಾಜದಲ್ಲಿ ಇಂಥ ಪ್ರಸಂಗಕ್ಕೆ ಅವಕಾಶವಿರಲಿಲ್ಲ. ಆದಿ ಸಮಾಜಗಳ ಸ್ವತ್ತು ಸಾಮಾನ್ಯವಾಗಿ ಅಳಿದುಹೋಗುವಂಥದು. ಅದು ಬಿಟ್ಟು ಹೋಗುವಂಥದಾಗಿರಲಿಲ್ಲ. ಆದ್ದರಿಂದ ವಂಶಪಾರಂಪರ್ಯವಾಗಿ ಅನುಭವಿಸುವುದು ಸಾಧ್ಯವಾಗುತ್ತಿರಲಿಲ್ಲ. ಉದಾಹರಣೆಗೆ ಧಾನ್ಯ, ಸಾಕಿದ ಪ್ರಾಣಿ, ಸ್ವತ್ತಿನ ಶೇಖರಣೆಯಾದಾಗಲೇ ಅದನ್ನು ದೀರ್ಘಕಾಲ ಬಳಸಬಹುದಾಗಿತ್ತು ಮತ್ತು ಇತರರಿಗೆ ಕೊಡುವುದಕ್ಕಾಗಲಿ ವಿತರಿಸುವುದಕ್ಕಾಗಲಿ ಸಾಕಷ್ಟು ಸ್ವತ್ತು ಮಾಲೀಕನ ಹತ್ತಿರ ಉಳಿಯುತ್ತಲೂ ಇರಲಿಲ್ಲ. ಸ್ವತ್ತು ಅಧಿಕವಾಗಿ ಸೇರುತ್ತಾ ಬಂದ ಹಾಗೆಲ್ಲ ವಾರಸುದಾರರ ಪ್ರಶ್ನೆಗೆ ಹೆಚ್ಚು ಮಹತ್ತ್ವ ಬರುತ್ತದೆ. ಹೀಗಿದ್ದರೂ ಆದಿ ಸಮಾಜಗಳಲ್ಲಿಯೂ ಸ್ವತ್ತಿನ ಉತ್ತರಾಧಿಕಾರದ ವಿಷಯದಲ್ಲಿ ನಿರ್ದಿಷ್ಟ ಮನೋಭಾವಗಳಿದ್ದವೆಂಬುದನ್ನು ನೆನಪಿನಲ್ಲಿಡಬೇಕು.

**ಉತ್ತರಾಧಿಕಾರದ ಶಾಸನ:** ಸತ್ತ ಮನುಷ್ಯನೊಂದಿಗೆ ಆತನ ಸ್ವಂತ ಸ್ವತ್ತುಗಳನ್ನೆಲ್ಲ ಹೂಳುವುದರಿಂದ ಮೊದಲುಗೊಂಡು ಸುವ್ಯವಸ್ಥಿತವಾದ ಉತ್ತರಾಧಿಕಾರದ ನಿಯಮಗಳನ್ನು ಹಾಕಿಕೊಡುವ ವಿಧಾನಗಳವರೆಗೆ ಉತ್ತರಾಧಿಕಾರದ ನಿಯಮದ ವಿಕಾಸ ನಾನಾ ಅವಸ್ಥೆಗಳನ್ನು ಹೊಂದಿ ಬೆಳೆದುಬಂದಿದೆ. ಆದರೂ ಆದಿಮ ಸಮಾಜಗಳಲ್ಲಿ ಉತ್ತರಾಧಿಕಾರಿಗಳಿಗೆ ಬಿಟ್ಟುಹೋಗಲು ಗಣನೀಯ ಪ್ರಮಾಣದ ಸ್ವತ್ತೇ ಒಬ್ಬನ ಹತ್ತಿರ ಉಳಿಯುತ್ತಿರಲಿಲ್ಲ. ವಸ್ತುತಃ ಅಲ್ಲಿನ ಗುಂಪೇ ಆತನ ಉತ್ತರಾಧಿಕಾರಿ; ಅದು ಕುಟುಂಬವಾಗಿರಬಹುದು, ಕುಲವಾಗಿರಬಹುದು; ಪಂಗಡದ್ದೊಂದು ಭಾಗವಾಗಿರಬಹುದು ಅಥವಾ ಕುಲವೇ ಆಗಿರಬಹುದು. ಹೀಗಿದ್ದರೂ ವೈಯಕ್ತಿಕ ಸ್ವತ್ತನ್ನು ಅಂಗೀಕರಿಸಿದಾಗ ಅದರ ಮಾಲೀಕನಿಗೆ ಸಾಂಸ್ಕೃತಿಕ ಸಂಪ್ರದಾಯಗಳನ್ನು ಅಂಗೀಕರಿಸಿ ಅದನ್ನು ತನ್ನ ಇಷ್ಟ ಬಂದಂತೆ ವಿನಿಯೋಗಿಸಲು ಸ್ವಾತಂತ್ರ್ಯವಿತ್ತು. ಸ್ವತ್ತಿನ ವಿನಿಯೋಗದ ವಿಚಾರದಲ್ಲಿ ಈಗಿರುವ ಕಾನೂನನ್ನು ಹಿಂದಿನ ಕಾಲದ ಜನ ಎಂದಾದರೂ ಉಲಂಘಿಸುತ್ತಿದ್ದರೇ ಎಂಬ ವಿಷಯದಲ್ಲಿ ಕೆಲವು ಉದಾಹರಣೆಗಳು ಗೋಚರಕ್ಕೆ ಬಂದಿವೆ. ಸಾಧಾರಣವಾಗಿ ಯಾರೇ ಆಗಲಿ ಮಂತ್ರವಾದಿಗೆ ಯಾವುದನ್ನೂ ಕೊಡಬಾರದೆಂಬ ನಿಯಮವಿತ್ತು. ಏಕೆಂದರೆ, ಪ್ರತಿಯೊಬ್ಬನೂ ತನ್ನ ಸ್ವತ್ತನ್ನು ತನ್ನ ಕುಲದವರಿಗೆ ಮಾತ್ರ ಬಿಟ್ಟುಕೊಡಬೇಕಿತ್ತು. ಆದರೆ ಈ ನಿಯಮವನ್ನು ಬದಿಗೊತ್ತಲು ಉಪಾಯವೂ ಇತ್ತು. ಮಂತ್ರವಾದಿಯನ್ನು ಗಾಯಗೊಳಿಸಿದರೆ ಅವನು ಪರಿಹಾರ ಬಯಸಿ ದೂರು ಸಲ್ಲಿಸುತ್ತಿದ್ದ. ಪರಿಹಾರಕ್ಕಾಗಿ ಪಂಚಾಯತಿ ಹೂಡುವಂತೆ ಮಾಡಿದಾಗ ಅವನಿಗೆ ಪರಿಹಾರ ಕೊಟ್ಟ ಮೇಲೆ ಬಂಧುಬಳಗಗಳಿಗೆ ಹೆಚ್ಚು ಸ್ವತ್ತು ಉಳಿಯುತ್ತಿರಲಿಲ್ಲ.

ಸ್ವತ್ತಿನ ಮಾಲೀಕನಾಗುವುದು ಒಂದು ರೀತಿಯಾದರೆ ಅದರ ವಾರಸುದಾರನಾಗಿಯೇ ಹುಟ್ಟುವುದು ಮತ್ತೊಂದು ರೀತಿ. ಸ್ವತ್ತಿನ ಶೇಖರಣೆಯೂ ಅದು ವಂಶಾನುಗತವಾಗಿ ಮುಂದುವರಿಯುವುದೂ ಸಾಧ್ಯವಾದಾಗ ಅದು ಹೆಚ್ಚು ಹೆಚ್ಚಾಗಿ ಕೇಂದ್ರೀಕೃತವಾಗುತ್ತದೆ. ಅದರಿಂದ ಸಹಜವಾಗಿಯೇ ಸಾಮಾಜಿಕ ಸಂಬಂಧಗಳ ಮೇಲೆ ಪರಿಣಾಮಗಳಾಗುತ್ತವೆ. ಉತ್ತರಾಧಿಕಾರದ ನಿಯಮಗಳು ಒಂದು ಸಮಾಜದ ನೀತಿಸೂತ್ರಗಳನ್ನು ಪ್ರತಿಬಿಂಬಿಸುತ್ತವೆ. ಸತ್ತವರಿಗೆ ಸಂಬಂಧಪಟ್ಟ ಸ್ವಂತ ಚರಸ್ವತ್ತುಗಳನ್ನೆಲ್ಲ ಅವನೊಂದಿಗೆ ಹೂಳುವ ಸಂಪ್ರದಾಯಕ್ಕೆ ಕಾರಣವುಂಟು. ಹಾಗೆ ಮಾಡದಿದ್ದರೆ ಆತನ ಆತ್ಮ ಆ ಸ್ಥಳಕ್ಕೆ ಮರಳಿ ಬಂದೀತೆಂಬ ಭಯವಿತ್ತು. ಆದರೂ ಇಂಥ ವೈಯಕ್ತಿಕ ಸ್ವತ್ತುಗಳನ್ನು ಸಂಪೂರ್ಣವಾಗಿ ನಾಶಪಡಿಸದಿದ್ದ ಸಂದರ್ಭಗಳೂ ಗೋಚರಕ್ಕೆ ಬಂದಿವೆ. ಆರ್ಥಿಕ ಹಿತದೃಷ್ಟಿಯಿಂದ ಉಪಯುಕ್ತ ಸಾಧನಗಳು, ಉಪಕರಣಗಳು ಮುಂತಾದವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದೂ ಉಂಟು. ಒಂದು ಗುಂಪಿನ ವಶದಲ್ಲಿರುವ ಸ್ವತ್ತಿನ ವಿಚಾರದಲ್ಲಿ ನಿಜವಾದ ವಂಶಪಾರಂಪರ್ಯವಾದ ಅಧಿಕಾರವೇ ಇಲ್ಲ. ಒಂದು ಸ್ವತ್ತಿಗೆ ಒಬ್ಬ ಒಡೆಯನಾಗಿದ್ದರೂ ಅದನ್ನು ಮತ್ತೊಬ್ಬನಿಗೆ ಬಿಟ್ಟುಕೊಡುವ ಸ್ವಾತಂತ್ರ್ಯಕ್ಕೆ ಕೆಲವು ಸಾಂಸ್ಕೃತಿಕ ಕಟ್ಟಳೆಗಳ ಮತ್ತು ಸಂಪ್ರದಾಯಗಳ ನಿರ್ಬಂಧವಿತ್ತು. ಒಬ್ಬಾತ ತನ್ನ ಸ್ವಂತ ಆಸ್ತಿಯನ್ನು ತನ್ನ ಇಚ್ಛೆಯಂತೆ ಕೊಡುವ ಹಾಗಿರಲಿಲ್ಲ. ಆತ ಸಂದರ್ಭಕ್ಕೆ ತಕ್ಕಂತೆ ತನ್ನ ಬಂಧುಗಳನ್ನಾಗಲಿ ತನ್ನ ಕುಲದವರನ್ನಾಗಲಿ ಆರಿಸಿಕೊಳ್ಳಬೇಕಾಗಿತ್ತು. ಜೊತೆಗೆ ಉತ್ತರಾಧಿಕಾರದ ವಿಚಾರದಲ್ಲಿ ಪವಿತ್ರ ಸ್ವತ್ತುಗಳನ್ನೂ ಲೌಕಿಕ ಸ್ವತ್ತುಗಳನ್ನೂ ಬೇರೆ ಬೇರೆ ವಿಂಗಡಿಸಲಾಗುತ್ತಿತ್ತು. ಮಾತೃವಂಶ ಮತ್ತು ಪಿತೃವಂಶಗಳ ನಿಯಮಗಳನ್ನೂ ಸಹ ಸ್ವಲ್ಪವೂ ಗೆರೆ ಮೀರದೆ ನಡೆಸಲಾಗುತ್ತಿತ್ತು. ಈ ತೆರದಲ್ಲಿ ಕೆಲವು ವೈಯಕ್ತಿಕ ಸ್ವತ್ತುಗಳು ಪಿತೃವಂಶದವರಿಗೇ ಸಲ್ಲುತ್ತ ಹೋಗುತ್ತಿದ್ದುವು. ಮಾತೃವಂಶದವರಿಗೆ ಸಲ್ಲುತ್ತ ಹೋಗುತ್ತಿದ್ದ ಸ್ವತ್ತುಗಳೂ ಇದ್ದುವು. ಜ್ಯೇಷ್ಠಾಧಿಕಾರವೋ ಅಥವಾ ಕನಿಷ್ಠಾಧಿಕಾರವೋ ಎಂಬುದನ್ನು ಪ್ರಚಲಿತ ನಿಯಮಗಳಿಗನುಸಾರವಾಗಿ ನಿರ್ಣಯಿಸಲಾಗುತ್ತಿತ್ತು.

**ಜ್ಯೇಷ್ಠ ಸಂತಾನಾಧಿಕಾರ:** ಹಿಂದಿನ ಕಾಲದಲ್ಲಿ ಹಿರಿಯ ಮಗನಿಗೆ ಸ್ವತ್ತನ್ನು ಬಿಟ್ಟುಕೊಡುವುದು ಉತ್ತರಾಧಿಕಾರದ ಸ್ವತ್ತಿನ ವಾರಸುದಾರಿಕೆಯ ಮುಖ್ಯ ನಿಯಮವೆಂದು ಪರಿಗಣಿತವಾಗಿತ್ತು. ಒಂದು ಆಸ್ತಿ ಒಬ್ಬನಿಗೆ ಬರಬೇಕಾದರೆ ಜ್ಯೇಷ್ಠಾಧಿಕಾರ ಅನೇಕ ವೇಳೆ ಗಣನೆಗೆ ಬರುತ್ತದೆ. ಜ್ಯೇಷ್ಠಾಧಿಕಾರವೆಂದರೆ ಸಾಮಾನ್ಯವಾಗಿ ಆ ಕುಟುಂಬದ ಹಿರಿಯ ಗಂಡುಮಗನಿಗೆ ಪಿತ್ರಾರ್ಜಿತ ಸ್ವತ್ತಿನ ಸಂದಾಯ. ಆದರೆ ಇದರಲ್ಲಿ ಬದಲಾವಣೆಗಳೂ ಇರಬಹುದು. ಕೆಲವು ವಸ್ತುಗಳಿಗೆ ಹಿರಿಯ ಗಂಡುಮಗುವಿಗೆ ಅಧಿಕಾರವಿರುತ್ತದೆ. ಮತ್ತೆ ಕೆಲವು ಆಸ್ತಿಗಳು ಹಿರಿಯ ಮಗಳ ಸ್ವತ್ತು. ಪಿತೃವಂಶಾನುಕ್ರಮವನ್ನು ಅನುಸರಿಸುವ ಜುಲುಗಳಲ್ಲಿ ಹಿರಿಯ ಮಗನೇ ಮಿಕ್ಕೆಲ್ಲರಿಗಿಂತಲೂ ತಂದೆಯ ಸ್ವತ್ತಿಗೆ ಉತ್ತರಾಧಿಕಾರಿ. ವ್ಯವಸಾಯವನ್ನು ಅವಲಂಬಿಸಿ ಜೀವಿಸುವವರ ಪೈಕಿ ಜ್ಯೇಷ್ಠಾಧಿಕಾರಕ್ಕೆ ಮಾನ್ಯತೆಯಿರುವುದಕ್ಕೆ ಕಾರಣವಿದೆ. ಬೇಸಾಯದ ನೆಲವನ್ನು ಛಿದ್ರಗೊಳಿಸದೆ ಅದನ್ನು ಇಡಿಯಾಗಿ ಉಳಿಸುವುದು ಸಾಧ್ಯ. ಇದರಿಂದ ಬೇಸಾಯ ಲಾಭಪ್ರದವಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ಜ್ಯೇಷ್ಠ ಪುತ್ರನಿಗೆ ತಂದೆಯ ಅಥವಾ ತಾಯಿಯ ಜವಾಬ್ದಾರಿಯೆಲ್ಲ ಪ್ರಾಪ್ತವಾಗುತ್ತದೆ. ಆಳರಸರ ಕುಟುಂಬಗಳಲ್ಲಿಯೂ ಸಹ ಜ್ಯೇಷ್ಠಾಧಿಕಾರವಿತ್ತು.

**ಕನಿಷ್ಠ ಸಂತಾನಾಧಿಕಾರ:** ಜ್ಯೇಷ್ಠಾಧಿಕಾರಕ್ಕೆ ಸಂಪೂರ್ಣ ವಿರುದ್ಧವಾದ ಈ ಪದ್ಧತಿಯಲ್ಲಿ ಕನಿಷ್ಠ ಪುತ್ರ ಅಥವಾ ಪುತ್ರಿಗೆ ಉತ್ತರಾಧಿಕಾರವಿರುತ್ತದೆ. ಕನಿಷ್ಠ ಪ್ರಾಶಸ್ತ್ಯ ಇಂಗ್ಲೆಂಡಿನ ಅನೇಕ ಭಾಗಗಳಲ್ಲೂ ಜರ್ಮನಿ, ರಷ್ಯ ಮತ್ತು ಹಂಗರಿಯ ಕೆಲವು ಭಾಗಗಳಲ್ಲೂ ಆಚರಣೆಯಲ್ಲಿತ್ತು. ಏಷ್ಯದಲ್ಲಿ ಇದು ತುರ್ಕಿ ಮತ್ತು ಮಂಗೋಲಿಯನ್ ಕುಲಗಳ ಮುಖ್ಯ ಲಕ್ಷಣವಾಗಿತ್ತು. ಭಾರತ, ಇಂಡೋಚೀನ ಮುಂತಾದ ಕಡೆಗಳಲ್ಲೂ ಇದು ಆಚರಣೆಯಲ್ಲಿತ್ತು. ಆದರೆ ಜ್ಯೇಷ್ಠಸಂತಾನಕ್ಕೆ ಕೊಡುವಷ್ಟು ಹೆಚ್ಚಿನ ಪ್ರಾಶಸ್ತ್ಯವನ್ನು ಕನಿಷ್ಠಸಂತಾನಕ್ಕೆ ಕೊಟ್ಟಿರುವ ಸಂದರ್ಭಗಳು ಕಡಿಮೆ. ಹಿರಿಯ ಮಕ್ಕಳೆಲ್ಲರೂ ಚದರಿಹೋಗಿ ಕಡೆಯ ಸಂತಾನ ತಂದೆ ತಾಯಿಗಳ ಜೊತೆಯಲ್ಲಿಯೇ ಹೆಚ್ಚು ಕಾಲ ಉಳಿದುಕೊಂಡ ಸಂದರ್ಭಗಳಲ್ಲಿ ಮಾತ್ರ ಕನಿಷ್ಠ ಸಂತಾನಕ್ಕೆ ಉತ್ತರಾಧಿಕಾರ ದೊರಕುತ್ತಿತ್ತು.

ಮಿತಾಕ್ಷರ ನ್ಯಾಯರೀತಿಯಾಗಿ ಉತ್ತರಾಧಿಕಾರ ನಿರ್ಣಯ : ಮೇಲೆ ಹೇಳಿದ ಆಸ್ತಿಯ ಉತ್ತರಾಧಿಕಾರದ ಚರ್ಚೆಯೆಲ್ಲ ಮುಖ್ಯವಾಗಿ ಸಾಧಾರಣ ರೀತಿಯಲ್ಲಿ ನಡೆದಿದೆ. ಭಾರತದಲ್ಲಿ ಪ್ರಚಲಿತವಾಗಿರುವ ಮತ್ತು ಸಂಪ್ರದಾಯಗಳ ಬಲದಿಂದ ಸುಪುಷ್ಟವಾಗಿರುವ ಉತ್ತರಾಧಿಕಾರದ ಶ್ರೇಷ್ಠವ್ಯವಸ್ಥೆಗಳನ್ನು ಕುರಿತು ಸ್ವಲ್ಪ ಚರ್ಚಿಸುವುದು ಈಗ ಯುಕ್ತವಾಗಿದೆ. ಭಾರತದ ನ್ಯಾಯಾಲಯಗಳಲ್ಲಿ ದತ್ತು ಸ್ವೀಕಾರ, ಉತ್ತರಾಧಿಕಾರ, ಆಸ್ತಿವಿಭಾಗ ಅಧಿಕಾರ ಮುಂತಾದ ವಿಷಯಗಳಲ್ಲಿ ಬಂಗಾಳವನ್ನು ಬಿಟ್ಟು ಎಲ್ಲ ಭಾಗಗಳಲ್ಲೂ ಮಿತಾಕ್ಷರ ಪದ್ಧತಿಯೇ ಪ್ರಮಾಣವಾಗಿದೆ. ಬಂಗಾಳದಲ್ಲಿ ಮಾತ್ರ ದಾಯಭಾಗ ಪದ್ಧತಿಯೇ ಪ್ರಮಾಣ (**ನೋಡಿ– ಮಿತಾಕ್ಷರ ದಾಯಭಾಗ**). ಉತ್ತರಾಧಿಕಾರವನ್ನು ನಿರ್ಣಯಿಸುವ ವಿಚಾರದಲ್ಲಿ ಮಿತಾಕ್ಷರ ಪದ್ಧತಿ ಪಿಂಡ ಹಾಗೂ ಹತ್ತಿರದ ರಕ್ತಸಂಬಂಧಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುತ್ತದೆ. ಒಬ್ಬ ವ್ಯಕ್ತಿಯ ದೇಹ ಕಣಗಳಲ್ಲಿ ಸಮಭಾಗಿಗಳಾಗಿರುವ ರಕ್ತಸಂಬಂಧಿಗಳೇ ಇಲ್ಲಿ ಮುಖ್ಯ ಉತ್ತರಾಧಿಕಾರದ ಅನುಕ್ರಮವನ್ನು ನಿರ್ಧರಿಸಲು ರಕ್ತಸಂಬಂಧವೇ ಆಧಾರ. ಪುತ್ರ ಪೌತ್ರ ಪ್ರಪೌತ್ರರೆಲ್ಲರೂ ಪಿತ್ರಾರ್ಜಿತ ಸ್ವತ್ತಿಗೆ ಸಂಯುಕ್ತವಾಗಿ ಅಧಿಕಾರಿಗಳು. ಇದು ಅವರ ಆಜನ್ಮಸಿದ್ಧ ಹಕ್ಕು. ಮಿಕ್ಕವರಿಗೆ ಈ ಹಕ್ಕು ಇರುವುದಿಲ್ಲ. ಹುಟ್ಟಿದಂದಿನಿಂದಲೇ ಮಗನಿಗೆ ತಂದೆಯೊಂದಿಗೆ ಈ ಅಧಿಕಾರವಿರುತ್ತದೆ. ಆದರೆ ತಂದೆಯ ಸ್ವಯಾರ್ಜಿತ ಸ್ವತ್ತನ್ನು ಕೇಳಲು ಮಗನಿಗೆ ಹಕ್ಕಿಲ್ಲ.

ದಾಯಭಾಗ ರೀತಿಯಾಗಿ ಉತ್ತರಾಧಿಕಾರದ ನಿರ್ಣಯ: ಹಿಂದೂ ನ್ಯಾಯಶಾಸ್ತ್ರದ ವಿಷಯಗಳಾದ ಉತ್ತರಾಧಿಕಾರ, ವಿಭಾಗ, ಸ್ತ್ರೀಧನ ಮುಂತಾದುವುಗಳಲ್ಲಿ ದಾಯಭಾಗ ಪದ್ಧತಿ ಇನ್ನೊಂದು. ಬಂಗಾಳದ ನ್ಯಾಯಾಲಯಗಳಲ್ಲಿ ಇದೇ ಉಚ್ಚತಮ ಪ್ರಮಾಣಗ್ರಂಥ. ದಾಯಭಾಗದಲ್ಲಿ ಗಂಡುಮಕ್ಕಳಿಗೆ ತಮ್ಮ ಹುಟ್ಟಿನಿಂದಲೇ ಪೂರ್ವಾರ್ಜಿತ ಆಸ್ತಿಯಲ್ಲಿ ಹಕ್ಕು ಬರುವುದಿಲ್ಲ, ತಮ್ಮ ತಂದೆಯ ಹಕ್ಕು ಆತ ಮೃತನಾಗುವುದರಿಂದಲೋ ಪತಿತನಾಗುವುದರಿಂದಲೋ ಅಥವಾ ಸನ್ಯಾಸಿಯಾಗುವುದರಿಂದಲೋ ಅವರಿಗೆ ದೊರಕುತ್ತದೆ. ಆಮೇಲೆ ಮಕ್ಕಳು ಆಸ್ತಿಯನ್ನು ಹಂಚಿಕೊಳ್ಳಬಹುದು. ತಂದೆ ಇಷ್ಟಪಟ್ಟರೆ ತಂದೆಗೂ ಮಕ್ಕಳಿಗೂ ಆಸ್ತಿ ವಿಭಾಗವಾಗಬಹುದು. ಅಣ್ಣತಮ್ಮಂದಿರು ಒಟ್ಟಿಗೆ ಇರುವಾಗಲೂ ಅವರಲ್ಲೊಬ್ಬ ಗತಿಸಿದರೆ ಅವನ ಹೆಂಡತಿಗೆ ಆತನ ಪಾಲು ಬರುತ್ತದೆ. ಸತ್ತವನ ಆತ್ಮಕ್ಕೆ ಪಿಂಡಪ್ರದಾನಮಾಡಿ ತೃಪ್ತಿಪಡಿಸುವವನಿಗೆ ಮೃತನ ಸ್ವತ್ತು ದೊರೆಯಬೇಕೆಂದು ನಿಯತವಾಗಿದೆ; ಮಿತಾಕ್ಷರದಲ್ಲಿರುವ ಹಾಗೆ ರಕ್ತಸಂಬಂಧದಿಂದಲೇ ಈ ಹಕ್ಕು ಇಲ್ಲ. ಈ ಹೊಸ ಸೂತ್ರದ ಕ್ಷಿಪ್ರ ಪರಿಣಾಮ ಏನಾಯಿತೆಂದರೆ, ಮಿತಾಕ್ಷರ ಮತದ ರೀತಿಯಾಗಿ ಜ್ಞಾತಿಗಳೆಂದು ಪರಿಣಿತರಾಗಿದ್ದು ಸ್ವತ್ತಿಗೆ ಅಧಿಕಾರದಿಂದ ಹೊರಗಿದ್ದವರೂ ಪಾಲುದಾರರ ಪಟ್ಟಿಯಲ್ಲಿ ಸೇರಿಕೊಳ್ಳುವಂತಾಯಿತು. ಕೊನೆಯ ಮಾಲೀಕನ ಇಷ್ಟದ ಪ್ರಕಾರ ಆಸ್ತಿಯ ಹಕ್ಕುದಾರಿಕೆ ಪ್ರಾಪ್ತವಾಗುತ್ತದೆ. ಮಿತಾಕ್ಷರದಲ್ಲಿರುವ ಹಾಗೆ ಸಪ್ರತಿಬಂಧದಾಯಕ್ಕೂ ಅಪ್ರತಿಬಂಧದಾಯಕ್ಕೂ ಇಲ್ಲಿ ಯಾವ ವ್ಯತ್ಯಾಸವೂ ಇಲ್ಲ. ತನ್ನ ಆಸ್ತಿಯನ್ನು ಇತರರಿಗೆ ಹಂಚಲು ತಂದೆಗೆ ಹಕ್ಕುಂಟು. ಪಾಲಾಗಬೇಕೆಂದು ಕೋರಲು ಮಗನಿಗೆ ಹಕ್ಕಿಲ್ಲ; ಜೀವನಾಂಶ ಕೇಳುವ ಹಕ್ಕೂ ಇಲ್ಲ.

ಅಂತೂ ಸ್ವತ್ತೆಂಬುದು ಒಂದು ಸಾಮಾಜಿಕ ವ್ಯವಸ್ಥೆಯೆಂಬ ದೃಷ್ಟಿಯಿಂದ ಇಲ್ಲಿ ಚರ್ಚಿಸಲಾಗಿದೆ. ಸಾಮಾಜಿಕ ಸಂಬಂಧಗಳೇ ಬಹಳ ಮುಖ್ಯವೆಂಬುದು ಸಹಜವೇ ಆಗಿದೆ. ಸಾಮಾಜಿಕ ಸಂಬಂಧಗಳ ದೃಷ್ಟಿಯಲ್ಲಿ ಸ್ವತ್ತಿನ ಪಾತ್ರವನ್ನೇ ಅಲ್ಲದೆ ಸ್ವತ್ತನ್ನು ಕುರಿತ ಭಾವನೆಗಳಲ್ಲಾಗಿರುವ ವ್ಯತ್ಯಾಸಗಳಿಗೂ ಸಾಮಾಜಿಕ ವ್ಯವಸ್ಥೆಗಳಿಗೂ ಇರುವ ಕಾರ್ಯಕಾರಣ ಸಂಬಂಧಗಳನ್ನು ಇಲ್ಲಿ ವಿವೇಚಿಸಿದ್ದಾಗಿದೆ. ಅಂತೂ ಒಟ್ಟಿನಲ್ಲಿ ಹೇಳಬಹುದಾದ ವಿಚಾರವಿಷ್ಟು:

1. ಸ್ವತ್ತು ಒಂದು ಸಾಮಾಜಿಕ ವ್ಯವಸ್ಥೆ. ಸಾಮಾಜಿಕ ಸಂಬಂಧಗಳಿಗೆ ಅನುಸಾರವಾಗಿ ಸ್ವತ್ತಿನ ಕಲ್ಪನೆ ಮಾರ್ಪಟ್ಟಿದೆ. ಇವೆರಡಕ್ಕೂ ಕಾರ್ಯಕಾರಣಸಂಬಂಧವಿದೆ.

2. ಆದ್ಯ ಸಮಾಜಗಳಲ್ಲಿ ಸ್ವತ್ತಿನ ಸಾಮೂಹಿಕ ಒಡೆತನವೇ ಸಾಮಾನ್ಯವಾಗಿತ್ತು.

3. ಸ್ವತ್ತಿನ ವೈಯಕ್ತಿಕ ಒಡೆತನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿರುವ ಈಗಿನ ಕಾಲದಲ್ಲಿ ಇದರ ಪರಿಣಾಮವಾಗಿ ಅಸಮತೆ, ಅನ್ಯಾಯ, ಅಧಿಕಾರದ ಕೇಂದ್ರೀಕರಣ ಮುಂತಾದ ಸಮಸ್ಯೆಗಳು ಉದ್ಭವವಾಗಿವೆ. ಆಧುನಿಕ ಸಮಾಜಗಳಲ್ಲಿ ಇತರರ ಮೇಲೆ ಅಧಿಕಾರ ಹಾಗೂ ಹತೋಟಿ ಹೊಂದಲು ಸ್ವತ್ತು ಒಂದು ಸಾಧನವಾಗಿದೆ.

4. ಸ್ವತ್ತನ್ನು ಶೇಖರಿಸುವುದೂ ಉತ್ತರಾಧಿಕಾರಿಗಳಿಗೆ ಬಿಟ್ಟುಕೊಡುವುದೂ ಸಾಧ್ಯವಾಗಿರುವುದರಿಂದ ಈ ಸಮಸ್ಯೆಗಳು ಪ್ರಧಾನವಾಗಿವೆ.

5. ತತ್ಫಲವಾಗಿ ಸ್ವತ್ತು ಉಳ್ಳವರು, ಸ್ವತ್ತು ಇಲ್ಲದವರು ಎಂಬ ವರ್ಗಗಳು ಏರ್ಪಟ್ಟಿವೆ. ರಾಜಕೀಯವಾಗಿಯೂ ಇದರ ಪರಿಣಾಮಗಳುಂಟಾಗಿವೆ. ಕಾರ್ಲ್‌ಮಾರ್ಕ್ಸ್ (**ನೋಡಿ– ಮಾರ್ಕ್ಸ್,-ಕಾರ್ಲ್**) ತನ್ನ ವರ್ಗಸಿದ್ಧಾಂತದಲ್ಲಿ ಇದನ್ನೆಲ್ಲಾ ಬಹು ಯುಕ್ತಿಯುಕ್ತವಾಗಿ ವಿವೇಚಿಸಿದ್ದಾನೆ.

6. ಖಾಸಗಿ ಒಡೆತನ ಹಾಗೂ ವರ್ಗಾವಣೆಯ ಹಕ್ಕಿನ ಫಲವಾಗಿ ಸ್ವತ್ತಿನ ಅತಿಯಾದ ಕೇಂದ್ರೀಕರಣವಾಗುವುದನ್ನು ತಪ್ಪಿಸಲು ಆಧುನಿಕ ಸರ್ಕಾರಗಳು ಮಧ್ಯಪ್ರವೇಶ ಮಾಡುತ್ತಿವೆ. ಸೂಕ್ತವಾದ ತೆರಿಗೆಯ ಪದ್ಧತಿಯೂ (**ನೋಡಿ–ತೆರಿಗೆ**) ಉತ್ತರಾಧಿಕಾರ ಸಂಬಂಧವಾದ ಶಾಸನಗಳೂ (**ನೋಡಿ– ಉತ್ತರಾಧಿಕಾರ**) ಈ ದೃಷ್ಟಿಯಿಂದ ರಚಿತವಾಗಿವೆ. ಸ್ವತ್ತಿನ ಕೇಂದ್ರೀಕರಣದಿಂದಾಗಿ ಅದರ ಒಡೆಯನಿಗೆ ಹೆಚ್ಚು ಧಾರಣಶಕ್ತಿಯಿರುವುದರಿಂದ, ಆ ಶಕ್ತಿಯಿಲ್ಲದವರೊಂದಿಗೆ ನಡೆಸುವ ವ್ಯವಹಾರಗಳಲ್ಲಿ ಅವನದೇ ಮೇಲುಗೈ ಆಗಿರುವ ಸಂಭವವುಂಟು. ಕರಾರಿನ ಷರತ್ತುಗಳು ಇತರರಿಗೆ ಎಷ್ಟೇ ಕಠಿಣವಾಗಿದ್ದರೂ ಅವರಿಗೆ ಧಾರಣಶಕ್ತಿಯಿಲ್ಲದ್ದರಿಂದ ಆ ಷರತ್ತುಗಳಿಗೆ ಅವರು ಒಪ್ಪಬೇಕಾಗುತ್ತದೆ. ಆದ್ದರಿಂದಲೇ ಆಧುನಿಕ ಸಮಾಜಗಳಲ್ಲಿ ಸ್ವತ್ತು ಅಗಾಧವಾಗಿಯೂ ಅಪಾಯಕಾರಿಯಾಗಿಯೂ ಬೆಳೆದಿದೆ. ಆಸ್ತಿಯಿಲ್ಲದವರ ಹಿತರಕ್ಷಿಸುವ ಉದ್ದೇಶದಿಂದ ಆಸ್ತಿಯನ್ನು ಹದ್ದಿನಲ್ಲಿಡಲು ಆಧುನಿಕ ಸರ್ಕಾರಗಳು ನಾನಾಕ್ರಮಗಳನ್ನು ಜಾರಿಗೆ ತಂದಿವೆ. (ವೈ.ಬಿ.ಡಿ.)

**ಆಸ್ತಿಕ್ಯ ಮತ್ತು ನಾಸ್ತಿಕ್ಯ:** ಭಾರತೀಯ ದರ್ಶನಗಳ ವಿಂಗಡನೆಗೆ ಆಧಾರಗಳಾದ ಭಾವನೆಗಳು. ಸಾಮಾನ್ಯವಾಗಿ ದೇವರನ್ನು ನಂಬುವವರು ಆಸ್ತಿಕರೆಂದೂ, ನಂಬದವರು ನಾಸ್ತಿಕರೆಂದೂ ಪಾಶ್ಚಾತ್ಯರು ಭಾವಿಸುವುದುಂಟು. ಭಾರತೀಯ ಸಂಪ್ರದಾಯದ ಪ್ರಕಾರ ಇದು ಶಾಸ್ತ್ರೀಯ ವಿಂಗಡನೆಯಲ್ಲ. ಸಂಪ್ರದಾಯಾನುಸಾರವಾಗಿ ಒಂದು ಮತ ಆಸ್ತಿಕಮತವೆಂದು ಗಣಿಸಲ್ಪಡಬೇಕಾದರೆ ಅದು ಮೂರು ಮುಖ್ಯ ಲಕ್ಷಣಗಳನ್ನು ಪಡೆದಿರಬೇಕು. ಅದು ವೇದಪ್ರಮಾಣವೆಂದೂ ಪುನರ್ಜನ್ಮ ಮತ್ತು ಕರ್ಮಭಾವನೆಗಳು ನಿಜವೆಂದೂ ನಂಬಿರಬೇಕು. ಈ ಲಕ್ಷಣಗಳಿಗನುಸಾರವಾಗಿ ಭಾರತೀಯ ದರ್ಶನಗಳಲ್ಲಿ ಆರನ್ನು ಆಸ್ತಿಕದರ್ಶನಗಳೆಂದು ಪರಿಗಣಿಸಲಾಗಿದೆ: ಪೂರ್ವಮೀಮಾಂಸಾ, ಉತ್ತರಮೀಮಾಂಸಾ, ಸಾಂಖ್ಯ, ಯೋಗ, ನ್ಯಾಯ ಮತ್ತು ವೈಶೇಷಿಕ ದರ್ಶನಗಳು. ಬೌದ್ಧ, ಜೈನ ಮತ್ತು ಚಾರ್ವಾಕ ದರ್ಶನಗಳನ್ನು ನಾಸ್ತಿಕ ದರ್ಶನಗಳೆಂದು ಕರೆಯಲಾಗಿದೆ. ಏಕೆಂದರೆ ಇವು ಮೇಲೆ ಹೇಳಿದ ಮೂರು ಲಕ್ಷಣಗಳನ್ನು ಪಡೆದಿಲ್ಲ. ಬೌದ್ಧರು ಮತ್ತು ಜೈನರು ಕರ್ಮ ಮತ್ತು ಪುನರ್ಜನ್ಮ ಭಾವನೆಗಳನ್ನು ಒಪ್ಪಿದರೂ ವೇದವನ್ನು ಪ್ರಮಾಣವಾಗಿ ಗಣಿಸಿರುವುದಿಲ್ಲ. ಚಾರ್ವಾಕ ದರ್ಶನವಾದರೋ ಈ ಮೂರನ್ನೂ ನಿರಾಕರಿಸುತ್ತದೆ. ಈಶ್ವರಭಾವನೆಯನ್ನು ಒಪ್ಪುವುದಿಲ್ಲವಾದ್ದರಿಂದ ಇವು ನಾಸ್ತಿಕ ದರ್ಶನಗಳೆಂಬ ತಪ್ಪು ಭಾವನೆ ಇದೆ. ಹಾಗೆ ಭಾವಿಸಿರುವುದಕ್ಕೆ ಇವು ಈಶ್ವರಭಾವನೆಯನ್ನು ನಿರಾಕರಿಸಿರುವುದು ಕಾರಣವಲ್ಲ. ಏಕೆಂದರೆ ಈಶ್ವರಭಾವನೆ ಅಸಿದ್ಧವೆಂದು ಹೇಳುವ ಸಾಂಖ್ಯದರ್ಶನವನ್ನು ಸಾಂಪ್ರದಾಯಿಕವಾಗಿ ಆಸ್ತಿಕದರ್ಶನವೆಂದು ಭಾವಿಸಲಾಗಿದೆ. ವೇದಪ್ರಾಮಾಣ್ಯ, ಕರ್ಮ ಮತ್ತು ಪುನರ್ಜನ್ಮಗಳಲ್ಲಿ ನಂಬಿಕೆ–ಇವೇ ಆಸ್ತಿಕತೆಯ ಮೂರು ಅಗತ್ಯ ಲಕ್ಷಣಗಳು. ಇವುಗಳಲ್ಲಿ ಯಾವುದೊಂದನ್ನಾದರೂ ಒಪ್ಪದಿದ್ದಲ್ಲಿ, ಆ ದರ್ಶನ ನಾಸ್ತಿಕ ದರ್ಶನವೆಂದು ಗಣಿಸುವುದು ಸಂಪ್ರದಾಯ. (ಜಿ.ಎಚ್.)

**ಆಸ್ತಿಗಳು–ಜವಾಬ್ದಾರಿಗಳು:** ಒಂದು ವ್ಯವಹಾರಸಂಸ್ಥೆಗೆ ಅದರ ಗ್ರಾಹಕರಿಂದಲೂ ಇತರರಿಂದಲೂ ಬರಬೇಕಾದ ಸಾಲಗಳೇ ಅಲ್ಲದೆ ಅದು ತನ್ನ ವ್ಯವಹಾರ ಮೂಲವಾಗಿಯೂ ಮೂಲಕವಾಗಿಯೂ ಪಡೆದುಕೊಂಡ ಎಲ್ಲ ಮೂರ್ತಾಮೂರ್ತ ವಸ್ತುಗಳೂ ಹಕ್ಕುಗಳೂ ಅದರ ಆಸ್ತಿಗಳು (ಅಸೆಟ್ಸ್); ಅದು ಇತರರಿಗೆ ತೆರಬೇಕಾಗಿ ಬಂದ ಎಲ್ಲ ಸಾಲಗಳೂ ಅದರ ಜವಾಬ್ದಾರಿಗಳು (ಲೈಎಬಿಲಿಟೀಸ್).

ವ್ಯವಹಾರಸಂಸ್ಥೆಯ ದೃಷ್ಟಿಯಿಂದ ಅದರ ಆಸ್ತಿಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು: 1. ಸ್ಥಿರ (ಫಿಕ್ಸೆಡ್) ಆಸ್ತಿಗಳು; 2. ಚರ (ಫ್ಲೋಟಿಂಗ್) ಅಥವಾ ಚಾಲ್ತಿ (ಕರೆಂಟ್) ಆಸ್ತಿಗಳು; 3. ದ್ರವ (ಲಿಕ್ವಿಡ್) ಆಸ್ತಿಗಳು: 4. ತಳ್ಳಿಟ್ಟ (ಡೆಫರ್ಡ್) ಆಸ್ತಿಗಳು; 5. ಅಗೋಚರ (ಇನ್‌ಟ್ಯಾಂಜಿಬಲ್) ಆಸ್ತಿಗಳು.

**ಸ್ಥಿರ ಆಸ್ತಿಗಳು:** ಮಾರಾಟ ಮಾಡುವ ಉದ್ದೇಶವಿಲ್ಲದೆ ವ್ಯವಹಾರದಲ್ಲಿ ಖಾಯಮ್ಮಾಗಿ ಬಳಸುವ ಉದ್ದೇಶದಿಂದ ಪಡೆದ ಆಸ್ತಿಗಳು. ಉದಾಹರಣೆ : ಜಮೀನು ಮತ್ತು ಕಟ್ಟಡ, ಯಂತ್ರ ಹಾಗೂ ಯಂತ್ರಸ್ಥಾವರ, ಅಣೆಕಟ್ಟು ಅಥವಾ ಪೀಠೋಪಕರಣ (ಫರ್ನಿಚರ್). ಪದಾರ್ಥಗಳ ಉತ್ಪಾದನೆಯಲ್ಲಿ ನಿರತವಾದ ಉದ್ಯಮಗಳಲ್ಲಿ ಬಂಡವಾಳದ ಹೆಚ್ಚಿನ ಪ್ರಮಾಣವನ್ನು ಸ್ಥಿರ ಆಸ್ತಿಗಳಿಗಾಗಿ ವಿನಿಯೋಗ ಮಾಡಬೇಕಾಗುತ್ತದೆ. ಪದಾರ್ಥಗಳನ್ನು ಕೊಂಡು ಮಾರುವ ಸಂಸ್ಥೆಗಳಲ್ಲಿ ಸ್ಥಿರ ಆಸ್ತಿಗಳು ಸಾಮಾನ್ಯವಾಗಿ ಅವುಗಳ ಒಟ್ಟು ಬಂಡವಾಳದ ಅಲ್ಪ ಪ್ರಮಾಣದಲ್ಲಿರುತ್ತವೆ.

ಸ್ಥಿರ ಆಸ್ತಿಗಳ ಬಗ್ಗೆ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಇವು:

(ಅ) ಈ ವಿಧವಾದ ಆಸ್ತಿಗಳನ್ನು ಮೇಲಿಂದ ಮೇಲೆ ಉಪಯೋಗಿಸುತ್ತಿರುವುದರಿಂದ ಸಾಮಾನ್ಯವಾಗಿ ಇವುಗಳ ಮೌಲ್ಯ ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಈ ಕಾರಣದಿಂದ ಇಂಥ ಆಸ್ತಿಗಳಿಗೆ ನಶಿಸುವ (ವೇಸ್ಟಿಂಗ್) ಆಸ್ತಿಗಳೆಂದೂ ಹೆಸರು. ನಶಿಸುವ ಆಸ್ತಿಗೆ ಉತ್ತಮ ಉದಾಹರಣೆಗಳೆಂದರೆ ಗಣಿಗಳು. ಯಂತ್ರವೇ ಮುಂತಾದ ಆಸ್ತಿಗಳು ಸವೆಯುವುದು ಮಾತ್ರವೇ ಅಲ್ಲದೆ ಅಪ್ರಚಲಿತವಾಗಬಹುದು; ಹೊಸ ಯಂತ್ರಗಳು ಬಂದಾಗ ಹಳೆಯ ಯಂತ್ರಗಳನ್ನೇ ಬಳಸುವುದು ಲಾಭದಾಯಕವಾಗದೆ ಹೋಗಬಹುದು. ಆದ್ದರಿಂದ ಇಂಥ ಆಸ್ತಿ ಸವೆದಾಗ ಅಥವಾ ಅಪ್ರಚಲಿತವಾಗಿ ಲುಪ್ತಪ್ರಾಯವಾದಾಗ ಅವುಗಳ ಬದಲು ಹೊಸ ಯಂತ್ರಗಳನ್ನು ಕೊಳ್ಳುವ ಉದ್ದೇಶದಿಂದ ವರ್ಷೇ ವರ್ಷೇ ಒಂದು ನಿಶ್ಚಿತವಾದ ಮೊಬಲಗನ್ನು ಲಾಭ–ನಷ್ಟ ಖಾತೆಗೆ ಸವಕಳಿ ಋಣಿಸಿ (ಖರ್ಚು ಹಾಕಿ) ಒಂದು ನಿಧಿ ಏರ್ಪಡಿಸಬಹುದು. ಈ ಆಸ್ತಿ ಅನುಪಯುಕ್ತವಾದಾಗ ಈ ನಿಧಿಯಿಂದ ಹೊಸ ಆಸ್ತಿ ಕೊಳ್ಳಬಹುದು.

(ಆ) ಇಂಥ ಆಸ್ತಿಯನ್ನು ಕೊಂಡಿರುವುದು ಪುನರ್ ಮಾರಾಟಕ್ಕಾಗಿ ಅಲ್ಲ. ಆದ್ದರಿಂದ ಮಾರುಕಟ್ಟೆಯಲ್ಲಿ ಇದರ ಬೆಲೆ ಹೆಚ್ಚಿದಾಗ ಸಾಮಾನ್ಯವಾಗಿ ಇದನ್ನು ಗಣನೆಗೆ ತೆಗೆದುಕೊಳ್ಳಬಾರದು. ಆದರೆ ಇದರ ಬೆಲೆ ಕಡಿಮೆಯಾದ ಸಂದರ್ಭದಲ್ಲಿ ಇದರ ಪುನರ್ಮೌಲ್ಯವನ್ನು ನಿರ್ಧರಿಸಿ, ಇದರ ಪುಸ್ತಕಮೌಲ್ಯಕ್ಕೂ ಪುನರ್ನಿರ್ಧರಿಸಿದ ಮೌಲ್ಯಕ್ಕೂ ಇರುವ ವ್ಯತ್ಯಾಸವನ್ನು ಸವೆತವೆಂದು ಭಾವಿಸಿ ಅದನ್ನು ಲಾಭ–ನಷ್ಟ ಖಾತೆಗೆ ಋಣಿಸಬೇಕು. ಮೌಲ್ಯವನ್ನು ಪುನರ್ನಿರ್ಧರಿಸಿದಾಗ ಅಂದುಕೊಂಡ ಬೆಲೆಗಿಂತ ಹೆಚ್ಚಾಗಿದ್ದ ಪಕ್ಷದಲ್ಲಿ ಈ ಹೆಚ್ಚುವರಿಯನ್ನು ಆಸ್ತಿಯ ಲೆಕ್ಕದಲ್ಲಿ ಲೇಖಿಸುವುದು ಉಚಿತವಲ್ಲ. ಆ ಆಸ್ತಿಯನ್ನು ಮಾರುವ ಉದ್ದೇಶದಿಂದ ಕೊಂಡಿರುವುದಲ್ಲವಾದ್ದರಿಂದ ಈ ಹೆಚ್ಚುವರಿಯನ್ನು ಲಾಭವೆಂದು ಪರಿಗಣಿಸುವುದು ನಿಯಮದ ಉಲ್ಲಂಘನೆಯಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಎಲ್ಲ ಸ್ಥಿರ ಆಸ್ತಿಗಳ ಪುನರ್ಮೌಲ್ಯ ನಿರ್ಣಯ ಮಾಡಿ ಅವುಗಳ ಪುಸ್ತಕ ಮೌಲ್ಯಗಳಿಗೂ ಪುನರ್ನಿರ್ಧರಿಸಿದ ಮೌಲ್ಯಗಳಿಗೂ ಇರುವ ವ್ಯತ್ಯಾಸಗಳನ್ನು ದಾಖಲೆ ಮಾಡಬೇಕಾಗಿ ಬರಬಹುದು. ಉದಾ: ವ್ಯಾಪಾರಸಂಸ್ಥೆಯನ್ನು ಮಾರುವಾಗ, ಹೊಸಬರು ಪಾಲುದಾರರಾಗಿ ಸಂಸ್ಥೆಗೆ ಬರುವಾಗ ಅಥವಾ ಪಾಲುದಾರರೊಬ್ಬರು ಸಂಸ್ಥೆಯಿಂದ ನಿರ್ಗಮಿಸುವಾಗ, ಎಲ್ಲ ಸ್ಥಿರ ಆಸ್ತಿಗಳ ಮೌಲ್ಯಗಳನ್ನೂ ಪುನರ್ನಿರ್ಧರಿಸಿದಾಗ ಒಟ್ಟಿನಲ್ಲಿ ಬರುವ ಹೆಚ್ಚುವರಿಯ ಮೊಬಲಗನ್ನು ಆಸ್ತಿ ಜವಾಬ್ದಾರಿ ತಖ್ತೆಯ (ಶಿಲ್ಕು ತಖ್ತೆಯ) ಎಡಪಾರ್ಶ್ವದಲ್ಲಿ ಮೀಸಲು ಖಾತೆಯಲ್ಲಿ ಸೇರಿಸಬಹುದು; ಅಥವಾ ಅದನ್ನು ಸೂಕ್ತ ಕಂಡ ರೀತಿಯಲ್ಲಿ ವಿನಿಯೋಗಿಸಬಹುದು.

ಒಂದು ಸಂಸ್ಥೆಯ ಸ್ಥಿರ ಆಸ್ತಿಗಳ ಮೇಲಿನ ಬಂಡವಾಳ ಆದಷ್ಟು ಕಡಮೆಯಿರಬೇಕು. ಅದು ಆ ಸಂಸ್ಥೆಯ ಲಾಭದ ಪ್ರಮಾಣಕ್ಕೆ ಅನುಗುಣವಾಗಿರಬೇಕು. ತಾಂತ್ರಿಕಯುಗದಲ್ಲಿ ಸಂಭವಿಸುತ್ತಿರುವ ಶೀಘ್ರ ಬದಲಾವಣೆಗಳ ದುಷ್ಪರಿಣಾಮಗಳನ್ನು ಸರಿತೂಗಿಸುವ ರೀತಿಯಲ್ಲಿರಬೇಕು. ಯಂತ್ರೋಪಕರಣವೇ ಮುಂತಾದ ರೂಪಗಳಲ್ಲಿರುವ ಸ್ಥಿರ ಆಸ್ತಿಗಳ ಮೌಲ್ಯದ ಇಳಿತವನ್ನು ಲೆಕ್ಕ ಪುಸ್ತಕಗಳಲ್ಲಿ ದಾಖಲು ಮಾಡುವಾಗ, ಮೊದಲ ವರ್ಷಗಳಲ್ಲಿ ಈ ಮೊಬಲಗು ಹೆಚ್ಚಾಗಿದ್ದು ಕ್ರಮೇಣ ಇದು ಕಡಿಮೆಯಾಗುತ್ತ ಹೋಗಬೇಕು. ಏಕೆಂದರೆ ಇಂಥ ಆಸ್ತಿಗಳು ಹಳೆಯದಾದಂತೆಲ್ಲ ಇವುಗಳ ದುರಸ್ತು ವೆಚ್ಚ ಹೆಚ್ಚುತ್ತ ಹೋಗುವುದರಿಂದ ಆ ವರ್ಷಗಳಲ್ಲಿ ಸವಕಳಿಯ ಮೊಬಲಗು ಹೆಚ್ಚಾಗಿದ್ದರೆ ಅದರಿಂದ ಸಂಸ್ಥೆಯ ಲಾಭ ಅನಾವಶ್ಯಕವಾಗಿ ಕಡಿಮೆಯಾಗಬಹುದು. ಮೊದಲ ವರ್ಷಗಳಲ್ಲಿ ಹೆಚ್ಚು ಸವಕಳಿಯೂ ಕಡಿಮೆ ದುರಸ್ತು ವೆಚ್ಚವೂ ಅನಂತರದ ವರ್ಷಗಳಲ್ಲಿ ಹೆಚ್ಚು ದುರಸ್ತು ವೆಚ್ಚವೂ, ಕಡಿಮೆ ಸವಕಳಿಯೂ ಇದ್ದರೆ ಅದರಿಂದ ಒಟ್ಟಿನಲ್ಲಿ ಆಸ್ತಿಯ ಪ್ರಾಯದ ಅವಧಿಯಲ್ಲಿ ಎಲ್ಲ ವರ್ಷಗಳಲ್ಲೂ ಇವೆರಡೂ ಖಾತೆಗಳ (ಸವಕಳಿ ಹಾಗೂ ದುರಸ್ತು) ಒಟ್ಟು ಖರ್ಚು ಸ್ಥೂಲವಾಗಿ ಒಂದೇ ಸಮನಾಗಿರುತ್ತದೆ. ಲಾಭನಷ್ಟ ಖಾತೆಯಲ್ಲಿ ಅವಾಸ್ತವಿಕವಾದ ಏರು–ತಗ್ಗುಗಳಿಲ್ಲದಂತಾಗುತ್ತದೆ.

ಚರ ಆಸ್ತಿಗಳು: ಮಾರುವ ಉದ್ದೇಶದಿಂದ ಕೊಂಡ ಸರಕು, ಅಸಿದ್ಧವಸ್ತು, ಅರ್ಧಸಿದ್ಧವಸ್ತು, ಸಿದ್ಧವಸ್ತು, ಬರಬೇಕಾದ ಸಾಲ ಮುಂತಾದುವು. ಜಮೀನು, ಕಟ್ಟಡ, ಯಂತ್ರ ಮುಂತಾದುವುಗಳಂತೆ ಇವು ಸ್ಥಿರವಲ್ಲ. ಮಾರಲು ಕೊಂಡ ಸರಕುಗಳು, ಅಸಿದ್ಧವಸ್ತುಗಳು ಮುಂತಾದವನ್ನು ಆಸ್ತಿ ಜವಾಬ್ದಾರಿ ತಖ್ತೆಯಲ್ಲಿ ತೋರಿಸುವಾಗ ಅವುಗಳ ಅಸಲುಬೆಲೆಯನ್ನೂ ಮಾರುಕಟ್ಟೆಯ ಬೆಲೆಯನ್ನೂ ಪರಿಶೀಲಿಸಿ, ಇವೆರಡರಲ್ಲಿ ಯಾವುದು ಕಡಿಮೆಯಾಗಿದೆಯೋ ಅದನ್ನೇ ನಮೂದಿಸುವುದು ಯುಕ್ತ ಮಾರ್ಗ.

ದ್ರವ ಆಸ್ತಿಗಳು: ನಗದು ಹಾಗೂ ಸುಲಭವಾಗಿ ನಗದಾಗಿ ಪರಿವರ್ತಿಸಬಹುದಾದ ಆಸ್ತಿಗಳು. ಉದಾ: ಬ್ಯಾಂಕಿನಲ್ಲಿಟ್ಟ ನಗದು, ಲೇಣೆ ಹುಂಡಿ, ಷೇರು, ಋಣಪತ್ರ (ಡಿಬೆಂಚರ್) ಇತ್ಯಾದಿ.

ತಳ್ಳಿಟ್ಟ ಆಸ್ತಿಗಳು: ಮುಂಗಡವಾಗಿ ಕೊಟ್ಟ ಚಂದಾ, ವಿಮೆಯ ಕಂತು, ಬಾಡಿಗೆ ಇತ್ಯಾದಿ ಖರ್ಚುಗಳಲ್ಲಿ ಮುಂದಿನ ಹಣಕಾಸಿನ ಅವಧಿಗೆ ಸಂಬಂಧಿಸಿದ ಭಾಗ. ಪ್ರಚಲಿತ ಅವಧಿಯಲ್ಲೇ ಇವನ್ನು ಕೊಟ್ಟಿರುವುದಾದರೂ ಇವು ಈ ಅವಧಿಗೆ ಸಂಬಂಧಿಸಿದ ಖರ್ಚುಗಳಲ್ಲವಾದ್ದರಿಂದ ಇವನ್ನು ತಾತ್ಕಾಲಿಕವಾಗಿ ಆಸ್ತಿಗಳೆಂದು ಪರಿಗಣಿಸುವುದು ಅವಶ್ಯ. ಪ್ರಚಲಿತ ಹಣಕಾಸಿನ ಅವಧಿಗೆ ಸಂಬಂಧಿಸಿದ ವರಮಾನಗಳು ಯಾವುವಾದರೂ ಈ ಅವಧಿಯ ಅಂತ್ಯದ ವೇಳೆಗೆ ಇನ್ನೂ ಬಾರದಿದ್ದರೆ ಇವೂ ಆಸ್ತಿಗಳೇ. ಉದಾ: ಬರಬೇಕಾದ ಲಾಭಾಂಶ, ಬಡ್ಡಿ, ಬಾಡಿಗೆ, ಈ ಎಲ್ಲ ಮುಂಗಡ ವೆಚ್ಚಗಳನ್ನು ಗಳಿಸಿಯೂ ಪಡೆಯದಿರುವ ವರಮಾನಗಳನ್ನೂ ತಳ್ಳಿಟ್ಟ ಆಸ್ತಿಗಳೆಂದು ಪರಿಗಣಿಸಿ ಆಸ್ತಿ–ಜವಾಬ್ದಾರಿ ತಖ್ತೆಯಲ್ಲಿ ತೋರಿಸಬೇಕು.

ಅಗೋಚರ ಆಸ್ತಿಗಳು: ಕಣ್ಣಿಗೆ ಕಾಣಿಸದಿದ್ದರೂ ಬೆಲೆಬಾಳುವ ಆಸ್ತಿಗಳು. ಉದಾ: ಸಂಸ್ಥೆಯ ಸುನಾಮ.

ಜವಾಬ್ದಾರಿಗಳು: ಒಂದು ಸಂಸ್ಥೆಗೆ ಬರಬೇಕಾದ ಎಲ್ಲ ಬಗೆಯ ಸಾಲಗಳು, ಸಂಸ್ಥೆಯ ಸ್ವಂತ ಬಂಡವಾಳ ಸಾಲದೆ ಬಂದಾಗ ಇತರರಿಂದ ನಾನಾ ರೀತಿಯಲ್ಲಿ ಸಾಲ ಪಡೆಯಬೇಕಾಗುತ್ತದೆ. ಋಣಪತ್ರಗಳನ್ನು ನೀಡಿಯೋ ಸಂಸ್ಥೆಯ ಆಸ್ತಿಗಳನ್ನು ಈಡು ಮಾಡಿಯೋ ಪಡೆದ ಸಾಲಗಳು ಸಾಮಾನ್ಯವಾಗಿ ದೀರ್ಘಾವಧಿಯವು. ಬ್ಯಾಂಕಿನಿಂದ ಪಡೆದ ಅಲ್ಪಾವಧಿ ಋಣವೂ ಸಾಲದಾತರಿಂದ (ಕ್ರೆಡಿಟರ್) ಸಾಲ ಪಡೆದ ಸರಕುಗಳ ಹಣವೂ ಚಾಲ್ತಿ ಜವಾಬ್ದಾರಿಗಳಿಗೆ ಉದಾಹರಣೆ. ಒಂದು ಹಣಕಾಸಿನ ಅವಧಿಗೆ ಸಂಬಂಧಿಸಿದ್ದರೂ ಆ ಅವಧಿಯ ಅಂತ್ಯದಲ್ಲಿ ಇನ್ನೂ ಕೊಡದಿರುವ ಖರ್ಚುಗಳೂ ಮುಂಗಡವಾಗಿ ಪಡೆದ ಲಾಭಗಳೂ ಜವಾಬ್ದಾರಿಗಳೇ. ಇವನ್ನೆಲ್ಲ ಆಸ್ತಿ ಜವಾಬ್ದಾರಿ ತಃಖ್ತೆಯ ಎಡಪಾರ್ಶ್ವದಲ್ಲಿ ತೋರಿಸಬೇಕು.

ಸಾಮಾನ್ಯವಾಗಿ ಒಂದು ಸಂಸ್ಥೆಯ ಒಟ್ಟು ಆಸ್ತಿಗಳ ಮೊಬಲಗು ಅದರ ಜವಾಬ್ದಾರಿಗಳ ಮೊಬಲಿಗಿಗಿಂತ ಹೆಚ್ಚಾಗಿರುತ್ತದೆ. ಅದರ ಜವಾಬ್ದಾರಿ (ಹೊಣೆ) ಗಳಿಗಿಂತ ಅದರ ಆಸ್ತಿ ಎಷ್ಟು ಅಧಿಕವಾಗಿರುತ್ತದೋ ಅಷ್ಟು ಅದರ ಬಂಡವಾಳವೆಂದು ಸ್ಥೂಲವಾಗಿ ಹೇಳಬಹುದು. **(ನೋಡಿ– ಬಂಡವಾಳ) ; ಶಿಲ್ಕು ತಖ್ತೆ :** (ಟಿ.ಎಚ್.ಎನ್.)

**ಆಸ್ತಿ ವೃದ್ಧಿ: ನೋಡಿ–ಅನುವೃದ್ಧಿ**

**ಆಸ್ತೀಕ:** 1. ಸರ್ಪರಾಜನಾದ ವಾಸುಕಿಯ ತಂಗಿ ಜರತ್ಕಾರು ಎಂಬುವಳ ಮಗ. ಸರ್ಪಯಾಗವನ್ನು ಕೈಗೊಂಡ ಜನಮೇಜಯನಿಂದ ಸರ್ಪಗಳಿಗೆ ಅಭಯಪ್ರದಾನ ಮಾಡಿಸಿದನೆಂದು ಮಹಾಭಾರತ ಹಾಗೂ ದೇವೀಭಾಗವತದಲ್ಲಿ ಉಲ್ಲೇಖವಿದೆ.

2. ಒಬ್ಬ ಗಂಧರ್ವ. ನಂದನವನದಲ್ಲಿ ತನ್ನ ಪತ್ನಿಯರೊಂದಿಗೆ ವಿಹಾರಗೈಯುತ್ತಿರುವಾಗ ಹತ್ತಿರದಲ್ಲೇ ತಪಸ್ಸು ಮಾಡುತ್ತಿದ್ದ ರೋಮಶ ಮುನಿಯ ಮೇಲೆ ಮುತ್ತಿನ ಸರಗಳನ್ನೂ ಮಲ್ಲಿಗೆ ಹೂಗಳನ್ನೂ ಎರಚುತ್ತಾನೆ. ಇದರಿಂದ ತಪಸ್ಸಿನಿಂದ ಎಚ್ಚೆತ್ತ ಮುನಿ ಉದ್ವಿಗ್ನನಾಗಿ ಗಂಧರ್ವನನ್ನು ಉದ್ದೇಶಿಸಿ ಬ್ರಹ್ಮರಾಕ್ಷಸನಾಗಿ ಆಲದ ಮರದ ಕೆಳಗೆ ಜನಿಸೆಂದು ಶಾಪವೀಯುತ್ತಾನೆ. ಶಾಪದಿಂದ ಖಿನ್ನನಾದ ಆಸ್ತೀಕ ಅಭಯವನ್ನು ಬೇಡಿದಾಗ ಮುನಿ ಶಾಪವಿಮೋಚನಾ ಮಾರ್ಗವನ್ನೂ ಸೂಚಿಸುತ್ತಾನೆ. ಅದರಂತೆ ಮುಂದೆ ವಿಷ್ಣುಭಕ್ತನಾದ ಸುಮೇಧನೆಂಬ ಬ್ರಾಹ್ಮಣನಿಂದ ತುಲಸೀ ಮಹಿಮೆಯನ್ನು ಕೇಳಿ ಗಂಧರ್ವ ಶಾಪವಿಮೋಚನೆ ಪಡೆಯುತ್ತಾನೆಂದು ಸ್ಕಾಂದ ಪುರಾಣದಲ್ಲಿ ಹೇಳಿದೆ. *

**ಆಸ್ನಿಕ್, ಆದಂ:** (1838–97). ಪೋಲೆಂಡಿನ ಕವಿ, ನಾಟಕಕಾರ, ಕಥೆಗಾರ. 1863ರ ದಂಗೆ ವಿಫಲವಾದ ಮೇಲೆ ಇಟಲಿ ಮತ್ತು ಜರ್ಮನಿಗಳಲ್ಲಿ ತತ್ತ್ವಶಾಸ್ತ್ರಧ್ಯಯನ ನಡೆಸಿದ. ಸ್ವಲ್ಪಕಾಲ ವಿಧ್ಯರ್ಥಕ (ಪಾಸಿಟಿವಿಸ್ಟ್) ಪಂಥಕ್ಕೆ ಸೇರಿದ್ದು ಅನಂತರ ಮಾನವಹೃದಯಕ್ಕೆ ಹೆಚ್ಚು ಪ್ರಾಧಾನ್ಯ ನೀಡಿದ. ಪ್ರಾರಂಭದ ದಿನಗಳಲ್ಲಿ ರಾಷ್ಟ್ರೀಯ ಬಲಿದಾನವನ್ನು ಮೆಚ್ಚಿದ್ದನಾದರೂ ಅನಂತರ ಕ್ರಿಯಾತ್ಮಕ ಸಮಾಜಸೇವೆಯನ್ನು ಪ್ರತಿಪಾದಿಸಿದ. ಇವನೂ ಕನೋಪ್‍ನಿಕ್‍ನೊ ಪೋಲೆಂಡಿನಲ್ಲಿ ಈ ಶತಮಾನದ ಉತ್ತರಾರ್ಧದ ಅತ್ಯುತ್ತಮ ಭಾವಗೀತೆಗಳ ಕವಿಗಳು. ಇವನ ಭಾವಗೀತೆಗಳಲ್ಲಿ ಯಾವ ನಿರ್ದಿಷ್ಟತತ್ತ್ವದ ಪ್ರತಿಪಾದನೆಯ ಗುರಿಯೂ ಇಲ್ಲ. ಮಾನವಹೃದಯದ ಹಲವು ಭಾವಗಳನ್ನು ಚಿತ್ರಿಸುವ ಕವನಗಳು ಶ್ರೇಷ್ಠವಾದುವು. ಇವನ ಚಾರಿತ್ರಿಕ ಮತ್ತು ಸಾಮಾಜಿಕ ನಾಟಕಗಳಲ್ಲಿ ಅಂಥ ಸತ್ತ್ವವಿಲ್ಲದಿದ್ದರೂ ಅಷ್ಟೇನೂ ಅವು ನೀರಸವಲ್ಲ. ಇವನ ಕಾವ್ಯನಾಮ ಈಲಿ. *

**ಆಸ್ಪತ್ರೆ:** ನುರಿತ ವೈದ್ಯರೂ ಸಿಬ್ಬಂದಿಯೂ ಇದ್ದು ಆರೋಗ್ಯ ಕೆಟ್ಟವರ, ಗಾಯವಾದವರ ರೋಗವನ್ನು ಕಂಡುಕೊಂಡು ಬೇಕಿರುವಷ್ಟು ದಿನ ಚಿಕಿತ್ಸೆ ಆರೈಕೆಗಳನ್ನು ಒದಗಿಸುವ ಸ್ಥಳ (ಹಾಸ್ಪಿಟಲ್). ಚಿಕಿತ್ಸಾಲಯ (ಕ್ಲಿನಿಕ್), ಔಷಧಶಾಲೆಗಳು (ಡಿಸ್ಪೆನ್ಸರಿಗಳು) ದಿನವೂ ನಡೆದು ಮನೆಗೆ ಹಿಂದಿರುಗಲು ಸಾಧ್ಯವಿರುವ ರೋಗಿಗಳಿಗೆ ಮಾತ್ರ. ಅಶಕ್ತಪೋಷಕಶಾಲೆಯಲ್ಲಿ ಅಷ್ಟಾಗಿ ಚಿಕಿತ್ಸೆಯ ಏರ್ಪಾಡಿಲ್ಲದಿದ್ದರೂ ಅದು ರೋಗದಿಂದ ಚೇತರಿಸಿಕೊಳ್ಳುವವರಿಗೆ, ಮುದುಕರಿಗೆ, ಭಿಕ್ಷುಕರಿಗೆ, ಇತರ ದುರ್ಬಲರಿಗೆ ರಕ್ಷಣಾಗೃಹವಾಗಿದೆ.

ಲ್ಯಾಟಿನ್ ಮೂಲ ಪದ ಹಾಸ್ಪಿಷಿಯಮ್‍ನಿಂದ (ಸತ್ಕಾರದ ಮನೆ, ಅತಿಥಿ ಮಂದಿರ), ಹಾಸ್ಪಿಟಲ್ (ಸತ್ಕಾರ) ಬಂದಿದೆ. ಇದೇ ಅರ್ಥ ಕೊಡುವ ಹಾಸ್ಪೀಸ್, ಹೋಪಿಟಲ್, ಹೋಟೆಲ್, ಸ್ಪಿಟಲ್, ಹಾಸ್ಟಲ್ ಪದಗಳೆಲ್ಲಕ್ಕೂ ಮೂಲತಃ ಅತಿಥಿಗಳು ಎಂಬ ಒಂದೇ ಅರ್ಥವಿದ್ದರೂ ಈಗ ಅವಕ್ಕೆ ಬೇರೆ ಬೇರೆ ಅರ್ಥವಿದೆ. ಸತ್ಕಾರವೆಂಬ (ಹಾಸ್ಪಿಟ್ಯಾಲಿಟಿ) ಪದದಿಂದ ಕೊನೆಗೆ ಸತ್ಕಾರ, ಆರೈಕೆ ಮಂದಿರ (ಹಾಸ್ಪಿಟಲ್) ಆಯಿತು. ಯಾತ್ರಿಕರೂ, ದಾರಿಹೋಕರೂ ತಂಗಲು ಕ್ರೈಸ್ತ ಧರ್ಮಕರ್ತರು ರೋಮನ್ ಚಕ್ರಾಧಿಪತ್ಯದಲ್ಲಿ ಛತ್ರಗಳನ್ನು (ಹಾಸ್ಪೀಸ್) ಮೊತ್ತಮೊದಲು ಏರ್ಪಡಿಸಿದ್ದರು.

**ಚರಿತ್ರೆ:** ಆರೋಗ್ಯ ಕೆಟ್ಟವರನ್ನು ಬೇರೊಂದು ಮಂದಿರದಲ್ಲಿಟ್ಟು ಆರೈಕೆ ಮಾಡುವ ಹಂಚಿಕೆ ಮೊದಲು ಎಲ್ಲಿ ಹೇಗೆ ಹುಟ್ಟಿತೆಂದು ಹೇಳುವುದು ಕಷ್ಟ. ಆದಿಯಿಂದಲೂ ಮತ, ಪೂಜೆ ಪುನಸ್ಕಾರಗಳೊಡನೆ ರೋಗಗಳ ಚಿಕಿತ್ಸೆ ಸೇರಿಕೊಂಡಿದೆ. ಪೂರ್ವದಲ್ಲಿ ಅರ್ಚಕರೇ ವೈದ್ಯರಾಗಿ ಆತ್ಮ, ಮನಸ್ಸು, ಕಾಯಗಳ ಚಿಕಿತ್ಸೆಗಳನ್ನು ಪೂಜೆ, ಬಲಿ, ಮಂತ್ರ, ಮದ್ದುಗಳಿಂದ ನಡೆಸುತ್ತಿದ್ದರು. ಭಾರತದಲ್ಲಿ ಇವರಿಗೆ ಅಥರ್ವಣರು ಎಂಬ ಹೆಸರಿತ್ತು. ಪ್ರ.ಶ.ಪೂ. 4000ದ ಹೊತ್ತಿಗೆ ಕೆಲವು ಮತಗಳಲ್ಲಿ ಒಂದೊಂದು ರೋಗಕ್ಕೂ ಒಬ್ಬೊಬ್ಬ ದೇವರನ್ನು ಪೂಜಿಸುತ್ತಿದ್ದರು. ಶನಿ, ಮತ್ತು ಹೈಜಿಯ **(ನೋಡಿ– ಈಸ್ಕುಲೇಪಿಯಸ್)** ದೇವತೆಗಳಿಗಾಗಿ ಕಟ್ಟಿದ ದೇಗುಲಗಳು ವಿಶ್ರಾಂತಿಗೃಹ ಅಥವಾ ಚಿಕಿತ್ಸಾಮಂದಿರಗಳಾಗಿದ್ದುವು. ಮುಂದುವರಿದ ದೇಶಗಳಲ್ಲಿನ ಆಸ್ಪತ್ರೆಗಳು ಬಹುವಾಗಿ ಕ್ರೈಸ್ತಮತದವು. ಗ್ರೀಸ್, ಈಜಿಪ್ಟ್, ಬ್ಯಾಬಿಲೋನಿಯ, ಭಾರತಗಳಲ್ಲಿ ಹಿಂದಿನ ಕಾಲದಲ್ಲಿ ಈ ರೀತಿಯ ಮಂದಿರಗಳಿದ್ದುದಕ್ಕೆ ಆಧಾರಗಳಿವೆ. ರಾಜ್ಯದಲ್ಲಿ ಎಲ್ಲೆಡೆಗಳಲ್ಲೂ ಆಸ್ಪತ್ರೆಗಳಾದುದು ಮೊತ್ತಮೊದಲು ಭಾರತದಲ್ಲಿ ಎಂದು ತಿಳಿದುಬಂದಿದೆ. ಪ್ರಶ.ಪೂ. 500ರ ಹೊತ್ತಿಗೆ, ಸುಶ್ರುತ ಮತ್ತು ಚರಕ ಸಂಹಿತೆಗಳ ಪ್ರಕಾರ ಚಿಕಿತ್ಸಾಲಯಗಳೂ ಮಠಗಳೂ ಇದ್ದುವು. ಪ್ರ.ಶ.ಪೂ. 300ರ ಹೊತ್ತಿಗೆ ಚಿಕಿತ್ಸಾಲಯಗಳು ಇದ್ದುದರ ಸಂಗತಿ ಅಶೋಕನ ಶಾಸನಗಳಿಂದ ತಿಳಿಯುತ್ತದೆ. ಸು. 402ರಲ್ಲಿ ಸುಮಾರಿಗೆ ಭಾರತಕ್ಕೆ ಬಂದ ಚೀನೀ ಯಾತ್ರಿಕ ಫಾಹಿಯಾನ್ ಹಲವು ಕಡೆಗಳಲ್ಲಿ ಆಸ್ಪತ್ರೆಗಳನ್ನು ಕಂಡಿದ್ದನ್ನು ವಿವರಿಸಿದ್ದಾನೆ. ಪ್ರಶ.ಪೂ.5ನೆಯ ಶತಮಾನದಲ್ಲಿ ಸಿಲೋನಿನಲ್ಲಿ ಆಸ್ಪತ್ರೆಗಳಿದ್ದುವು.

ರೋಗಿಮಂದಿರಗಳೆಂಬ (ವೇಲಿಟ್ಯೂಡಿನೇರಿಯ) ಆಗಿನ ಕಾಲದ ಸೇನೆಯ ಆಸ್ಪತ್ರೆಗಳು ರೋಮನ್ನರಲ್ಲಿದ್ದುವು. ಡುಸೆಲ್‍ಡಾರ್ಫಿನ ಬಳಿ ಪ್ರಶ. 100ರಲ್ಲಿದ್ದ ಒಂದರಲ್ಲಿ ಇಂದಿನವಂತೆ ಕೋಣೆಗಳ ಬಾಗಿಲುಗಳು ಪಡಸಾಲೆಗೆ ತೆರೆಯುತ್ತಿದ್ದವು. 335ರಲ್ಲಿ ಕಾನ್‍ಸ್ಟಾಂಟೈನಿನ ಅಪ್ಪಣೆಯ ಮೇರೆಗೆ ಇವನ್ನು ಮುಚ್ಚಿದರೂ ಮುಂದೆ ಅವೇ ಕ್ರಿಸ್ತರ ಆಸ್ಪತ್ರೆಗಳಾಗಿ ತೆರೆಯಲ್ಪಟ್ಟವು. ಅರಬ್ಬೀ ವೈದ್ಯಶಾಲೆಗಳೊಂದಿಗೆ ಸೇರಿದಂತೆ ಹಲವಾರು ದೊಡ್ಡ ಆಸ್ಪತ್ರೆಗಳಿದ್ದುವು. ಕ್ರಿಸ್ತನ ಅನಂತರ 400 ವರ್ಷಗಳವರೆಗೆ ದಾರಿಗರು, ಯಾತ್ರಿಕರು, ದಿಕ್ಕಿಲ್ಲದವರು, ವಯಸ್ಸಾದವರು, ಆಕಸ್ಮಿಕಗಳಲ್ಲಿ ನೊಂದವರು–ಇಂಥವರಿಗೆ ಮಾತ್ರ ಕ್ರೈಸ್ತರು ಆಸ್ಪತ್ರೆಗಳನ್ನು ಕಟ್ಟಿ ಅನ್ನಾಹಾರ, ನೆರಳುಗಳನ್ನು ಒದಗಿಸುತ್ತಿದ್ದರು. 400ರ ಹೊತ್ತಿಗೆ ರೋಮನ್ ಚಕ್ರಾಧಿಪತ್ಯದ ಕ್ರೈಸ್ತಮಠಗಳಲ್ಲಿ ಕುಷ್ಠರಿಗೆ, ಹೆಳವರಿಗೆ, ದರಿದ್ರ ರೋಗಿಗಳಿಗೆ ಆಸ್ಪತ್ರೆಗಳ ಸ್ಥಾಪನೆಯಾಯಿತು. 542ರಲ್ಲಿ ಫ್ರಾನ್ಸಿನ ಲಯನ್ಸ್ ಪಟ್ಟಣಗಳಲ್ಲಿ ರೋಗಿಗಳ ಆರೈಕೆಯಾಗಿ ಹೊಟೆಲ್ ಡಯು (ದೇವರ ಹೋಟಲು) ಸ್ಥಾಪನೆಯಾಯಿತು. ಇದೇ ತೆರನ ಆಸ್ಪತ್ರೆಗಳು ಎಲ್ಲೆಲ್ಲೂ ಹರಡಿದುವು. ಫ್ರಾನ್ಸಿನಲ್ಲಿ ಹಲವಾರು ಪಟ್ಟಣಗಳ ದೊಡ್ಡ ಆಸ್ಪತ್ರೆಗಳಿಗೆ ಈಗಲೂ ಇದೇ ಹೆಸರಿದೆ. ಇಟಲಿಯಲ್ಲಿ ಬಲು ಹಳೆಯ ಆಸ್ಪತ್ರೆಯಾದ ಸಿಯನದ ಸಾಂತ ಮೇರಿಯ ಡೆಲ್ಲ ಸ್ಕೇಲ 898ರಲ್ಲಿ ಸ್ಥಾಪನೆಯಾಯಿತು. ಅರೇಬಿಯ ರಾಜ್ಯಕ್ಕೆ ಸೇರಿದ್ದ ಸ್ಪೇನ್, ಉತ್ತರ ಆಫ್ರಿಕ, ಪಶ್ಚಿಮ ಏಷ್ಯಗಳಲ್ಲಿ ಅರಬ್ಬೀ ಆಸ್ಪತ್ರೆಗಳು ಹರಡಿದುವು. ಇವು ಬಹುವಾಗಿ ಭಾರತದ ಸಂಪರ್ಕದಿಂದ ಬಂದವು.

ಆಗಾಗ ನಡೆಯುತ್ತಿದ್ದ ಯುದ್ಧಗಳು ವೈದ್ಯಶಾಲೆಗಳ ಮತ್ತು ವೈದ್ಯವಿಜ್ಞಾನದ ಪ್ರಗತಿಗೆ ಕಾರಣಗಳಾದುವು. ಗಾಯಗಳ ಚಿಕಿತ್ಸೆಯಿಂದ ಶಸ್ತ್ರವೈದ್ಯ ಬೆಳೆಯಲು ಹೆಚ್ಚು ಅವಕಾಶ ಒದಗಿತು. ಭಾರತದಲ್ಲಿ ಧನ್ವಂತರಿ ಎಂಬ ಹೆಸರು ಯುದ್ಧಗಳಲ್ಲಿ ನಾಟಿಕೊಂಡ ಬಾಣಗಳ ಅಲಗುಗಳನ್ನು ತೆಗೆಯುವ ಪ್ರವೀಣನಿಗೆ ಮೊದಲು ಬಂದ ಹೆಸರೆಂಬ ಪ್ರತೀತಿಯಿದೆ. ಸೈನ್ಯಗಳಲ್ಲಿ ವೈದ್ಯರು ರೋಗಿಗಳನ್ನು ವ್ಯಾಧಿಗಳಿಗೆ ತಕ್ಕಂತೆ ವಿಂಗಡಿಸಿ ಹಲತೆರನಾದ ಯುಕ್ತ ಚಿಕಿತ್ಸೆಗಳನ್ನು ಕೊಡಲು ಕ್ರಮೇಣ ಕಲಿತರು. ಸೈನಿಕ ಆಸ್ಪತ್ರೆಗಳು ವೈದ್ಯಕ್ಕೆ ಸಂಬಂಧಿಸಿದ ತಿಳಿವು, ತಂತ್ರ, ಆರೈಕೆ, ಮೇಲ್ವಿಚಾರಣೆಗಳಿಗೆ ತೌರುಮನೆ ಗಳಾದುವು. 1000–1400ರ ಹೊತ್ತಿಗೆ ಗಾಯಗೊಂಡವರಿಗೆ ವಿಶ್ರಾಂತಿ ಶಾಲೆಗಳೇರ್ಪಟ್ಟುವು. 14ನೆಯ ಶತಮಾನದಲ್ಲಿ ಪ್ಲೇಗು ಹರಡಿದ್ದರಿಂದ ಇನ್ನಷ್ಟು ಆಸ್ಪತ್ರೆಗಳಾದುವು. ಸಾರ್ವಜನಿಕವಾಗಿದ್ದ ಹಾಸ್ಪಿಷಿಯಂಗಳು ಮೊದಲು ಮತನಿಬಂಧನೆಯನ್ನು ಹೊಂದಿರಲಿಲ್ಲ. ಬರಬರುತ್ತ ಇವುಗಳಲ್ಲಿ ಮತೀಯ ಸಂಘಗಳು ಪಾಲುಗೊಂಡುವು.

ಮೊದಲು ಆಸ್ಪತ್ರೆಗಳಿಗೆ ನಿರ್ಗತಿಕರು ಹೆಚ್ಚಾಗಿ ಹೋಗುತ್ತಿದ್ದರು. ಕ್ರೈಸ್ತಮತದಲ್ಲಿ ರೋಗಿಗಳ ಆರೈಕೆಗೆ ಹೆಚ್ಚು ಗಮನ ದೊರೆಯುತ್ತ ಬಂದು ಪ್ರಪಂಚದಲ್ಲೆಲ್ಲ ಮಿಷನರಿ ಆಸ್ಪತ್ರೆಗಳಾಗುತ್ತ ಬಂದುವು. 1123ರಲ್ಲಿ ಲಂಡನ್ನಿನಲ್ಲಿ ಸಂತ ಬಾರ್ತೊಲೊಮ್ಯೊ ಆಸ್ಪತ್ರೆಯ ಸ್ಥಾಪನೆಯಾಯಿತು. ಆಗಲೇ ಇಂಗ್ಲೆಂಡಿನಲ್ಲಿ 18 ಆಸ್ಪತ್ರೆಗಳಿದ್ದುವಂತೆ. ಹಣವಿದ್ದವರೇನೋ ವೈದ್ಯರು, ಔಷಧ ವ್ಯಾಪಾರಿಗಳು, ರಕ್ತತೆಗೆದುಹಾಕುವ ಶಸ್ತ್ರವೈದ್ಯರಿಂದ ಚಿಕಿತ್ಸೆಗಳನ್ನು ತಮ್ಮ ಮನೆಗಳಲ್ಲೇ ಹೊಂದುತ್ತಿದ್ದರು. ಸಂತ ಥಾಮಸನ ಆಸ್ಪತ್ರೆ ಲಂಡನ್ನಿನಲ್ಲಿ ತೆರೆದ ಹೊತ್ತಿಗೆ ಇಂಗ್ಲೆಂಡಿನಲ್ಲಿ 170 ಆಸ್ಪತ್ರೆಗಳಿದ್ದುವಂತೆ. 1155ರಲ್ಲಿ ಸಂತ ಅಗಸ್ಟೈನ್ ನನ್ಸ್ ಎಂಬ ಮೊದಲ ಶುಶ್ರೂಷಾ (ದಾದಿಯರ) ವ್ಯವಸ್ಥೆ ಮೊದಲಾಯಿತು. 1400ರ ತರುವಾಯ ಅಂಧಕಾರ (ಮೂಢ ನಂಬಿಕೆ) ಯುಗ ತೊಲಗಿ ತಿಳಿವಳಿಕೆ ಮರುಹುಟ್ಟಿದಾಗ, ವೈದ್ಯದಲ್ಲಿ ವಿಜ್ಞಾನದ ಮಹತ್ತ್ವಕ್ಕೆ ಮನ್ನಣೆ ದೊರೆಯಲು ಮೊದಲಾಯಿತು. ಇಂಗ್ಲೆಂಡಿನಲ್ಲಿ ಮತವಿರುದ್ಧ ನಡೆಸಿದ ಪುನರ್ಯೋಜನೆಯಲ್ಲಿ ಸಂತ ಬಾರ್ತೊಲೊಮ್ಯೊ ಆಸ್ಪತ್ರೆಗೆ ಪಮವಟ್ಟನ್ನು ಒದಗಿಸಿ ಮೊದಲ ಬಾರಿ ಮತ ಸಂಬಂಧವಿಲ್ಲದೆ ಸರ್ಕಾರದಿಂದ ನೆರವನ್ನು ಆಸ್ಪತ್ರೆಗೆ ಒದಗಿಸಿದ ಹಿರಿಮೆ 8ನೆಯ ಹೆನ್ರಿಯದು.

18ನೆಯ ಶತಮಾನದಲ್ಲಿ ವೈಜ್ಞಾನಿಕ ಪ್ರಗತಿಯ ಫಲ ಆಸ್ಪತ್ರೆಗಳಲ್ಲಿ ಬಳಕೆಗೆ ಬರಲಾರಂಭಿಸಿತು. ಸಿಡುಬು ತಡೆಯಲು ದೇವಿ ಹಾಕುವುದನ್ನು ಜೆನ್ನರ್ ಇಂಗ್ಲೆಂಡಿನಲ್ಲಿ ಜಾರಿಗೆ ತಂದ (1796) ಹಾಗೆಯೇ ಮನೋರೋಗಿಗಳನ್ನು ಕಟ್ಟಿಹಾಕುವ ಪದ್ಧತಿ ಫ್ರಾನ್ಸಿನಲ್ಲಿ ರದ್ದಾಯಿತು (1798).

ನಂಜುರೋಧಕ (ಆ್ಯಂಟಿಸೆಪ್ಟಿಕ್), ನಂಜಿರದ (ಎಸೆಪ್ಟಿಕ್) ಶಸ್ತ್ರವೈದ್ಯ 19ನೆಯ ಶತಮಾನದಲ್ಲಿ ಜಾರಿಗೆ ಬಂದಂದಿನಿಂದ ಇಂದಿನ ಆಸ್ಪತ್ರೆಗಳ ಚರಿತ್ರೆ ಕಾಲಿಟ್ಟಿತು. ಅಂದಿನಿಂದ ಅವು ಕೇವಲ ಬೇನೆಬಿದ್ದಿರುವ ಬಡವರ, ಗತಿಗೆಟ್ಟವರ ಸತ್ರಗಳಾಗದೆ ಎಲ್ಲ ತೆರನ ಜನರಿಗೆ ಎಲ್ಲ ಬಗೆಯ ರೋಗಗಳ ಚಿಕಿತ್ಸೆಗಳ ವೈದ್ಯಕೇಂದ್ರಗಳಾದುವು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಹೆಚ್ಚಿನ ಮುನ್ನಡೆ ಕಂಡಿತು. ಯುರೋಪಿನಲ್ಲೂ ಹೀಗೇ ಆಯಿತು. ವೃದ್ಧರು, ಹಳವರು, ಅಂಗವಿಕಲರು, ಬಡರೋಗಿಗಳು ಮತ್ತು ಸಾಂಕ್ರಾಮಿಕ ರೋಗಿಗಳಿಗೆ ಸರ್ಕಾರಿ ಕಟ್ಟಡಗಳಾದುವು. ಚರ್ಚಿಗೆ ಸೇರಿದ ಆಸ್ಪತ್ರೆಗಳು ಮುಖ್ಯವಾಗಿ ಬಡ ರೋಗಿಗಳಿಗೆ ಮಾತ್ರ ಆಗಿದ್ದವು. ಅನುಕೂಲಸ್ಥರಿಗೆ ಮನೆಗಳಲ್ಲೇ ಚಿಕಿತ್ಸಾಲಯಗಳುಳ್ಳ ಖಾಸಗಿ ವೈದ್ಯರಿಂದ ಚಿಕಿತ್ಸೆ ನಡೆಯುತ್ತಿತ್ತು.

**ಸೇನೆಯ ಆಸ್ಪತ್ರೆಗಳು:** ಇವು ಆಸ್ಪತ್ರೆಗಳ ಹಾಗೂ ವೈದ್ಯದ ಚರಿತ್ರೆಯನ್ನೇ ಬದಲಾಯಿಸಿದುವು. ಕ್ರಿಸ್ತಪೂರ್ವದಲ್ಲೇ ಸೈನಿಕ ಶಸ್ತ್ರವೈದ್ಯರಿದ್ದರು. ಮಧ್ಯ ಯುಗದಲ್ಲಿ ಸೈನ್ಯ ಹಾದುಹೋಗುವ ದಾರಿಗಳಲ್ಲಿ ಗಾಯಗೊಂಡವರಿಗೆ ವಿಶ್ರಾಂತಿಮನೆಗಳಾಗಿ ಮತದ ಪ್ರಭಾವವುಳ್ಳ ಆಸ್ಪತ್ರೆಗಳಾದುವು. ಗಾಯಗಳ ಚಿಕಿತ್ಸೆಯಿಂದ ಹೊಸ ಶಸ್ತ್ರವೈದ್ಯ ಪದ್ಧತಿಗಳೂ ವಿಧಾನಗಳೂ ಹುಟ್ಟಿದುವು. ಕದನಗಳಲ್ಲಿ ಶಸ್ತ್ರವೈದ್ಯವಾಗಬೇಕಿದುದ್ದರಿಂದ, ಮದ್ದುಕೊಡುವ ಸೈನ್ಯದ ವೈದ್ಯರು ಮಾತ್ರ ಗಮನಿಸಬೇಕಿರುವವರನ್ನು ಬೇರ್ಪಡಿಸಲಾಯಿತು.

ಕ್ರೀಮಿಯ ಯುದ್ಧದಲ್ಲಿನ ಬ್ರಿಟಿಷ್ ಸೈನ್ಯದಲ್ಲಿ ಸ್ವಯಂಸೇವಕ ದಾದಿ ಫ್ಲಾರೆನ್ಸ್ ನೈಟಿಂಗೇಲ್ (**ನೋಡಿ– ನೈಟಿಂಗೇಲ್ ಫ್ಲಾರೆನ್ಸ್**) ವೈಜ್ಞಾನಿಕ ವೈದ್ಯ, ಮಾನವೀಯತೆ ಸೇರಿದ ಶುಶ್ರೂಷೆಯನ್ನು 1854ರಲ್ಲಿ ಮೊದಲು ಮಾಡಿ ತೋರಿದಳು. ಆಕೆಯ ಸಿದ್ಧಾಂತಗಳು ಮೂಲಸೂತ್ರಗಳು ಬೇಗನೆ ಪ್ರಪಂಚದಲ್ಲೆಲ್ಲ ಹರಡಿದುವು. 1924ರಿಂದ ಆಕೆಯ ಹುಟ್ಟುದಿನವಾದ ಮೇ 12ನೆಯ ತಾರೀಖನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, ರಾಷ್ಟ್ರೀಯ ಆಸ್ಪತ್ರೆ ದಿನ ಎಂದು ನಾಡಹಬ್ಬವಾಗಿ ಆಚರಿಸುತ್ತ ಬಂದಿದ್ದಾರೆ. ಆಕೆಯ ಪ್ರಭಾವದಿಂದ 1863ರಲ್ಲಿ ಹುಟ್ಟಿಕೊಂಡ ರೆಡ್ ಕ್ರಾಸ್ ಸಂಸ್ಥೆ (ನೋಡಿ) ಬೆಂಕಿ, ಪ್ರವಾಹ, ಕ್ಷಾಮ ಮತ್ತು ಸೈನ್ಯ ಬಿಡಾರಗಳಿಂದ ಊರಿನ ಜನಕ್ಕೆ ಉಪದ್ರವ ಉಂಟಾದಾಗ ಆಸ್ಪತ್ರೆ ಸೇವೆಗಳನ್ನು ಸಲ್ಲಿಸಿದೆ.

ಎರಡು ಮಹಾಯುದ್ಧಗಳು ಮುಗಿವ ವೇಳೆಗೆ ಆಸ್ಪತ್ರೆಗಳಲ್ಲಿನ ಸೇವೆ ಮತ್ತಷ್ಟು ಉತ್ತಮವಾಯಿತು. ಹೀಗಾದ ಹೆಚ್ಚಿನ ಮುನ್ನಡೆಗಳಲ್ಲಿ ಮುಖ್ಯವಾದವಿವು : 1. ಮನೆ, ಸೇನಾಡೇರೆ, ಹಡಗು, ರೈಲು, ಪ್ರಥಮ ಚಿಕಿತ್ಸೆಯ ಗಾಡಿ (ಫಸ್ಟ್ ಏಡ್ ವ್ಯಾನ್), ವಿಮಾನ, ಜಲಾಂತರ್ಗಾಮಿ (ನೀರಾಳನಾವೆ, ಸಬ್‌ಮೆರೀನ್)–ಹೀಗೆ ಎಲ್ಲದರಲ್ಲೂ ಒಳ್ಳೆಯ ವೈದ್ಯಕೀಯ ನೆರವನ್ನು ಕೊಡಬಹುದೆನಿಸಿತು. 2. ವೈದ್ಯರೂ ದಾದಿಯರೂ ಮದ್ದುಗಳೊಂದಿಗೆ ಮೋಟಾರು ಗಾಡಿಗಳಲ್ಲಿ ಸುತ್ತಾಡುವ ಆಸ್ಪತ್ರೆಗಳು ಬಂದುವು. 3. ಗುಣಮುಖವಾಗುತ್ತಿರುವ ರೋಗಿಗಳನ್ನು ಒಟ್ಟೊಟ್ಟಾಗಿ ಬಹುದೂರ ಸಾಗಿಸುವುದು ಹಿಂದೆ ಸಾಧ್ಯವಿಲ್ಲ ಎಂದಿದ್ದುದು ಸಾಧ್ಯವೆನಿಸಿತು. 4. ಅಂಟುರೋಗಗಳ ನಿಯಂತ್ರಣ ಬಲುಮಟ್ಟಿಗೆ ಸಾಧ್ಯವಾಗಿ ಸೈನಿಕರಲ್ಲದ ಸಾಮಾನ್ಯರಿಗೂ ದೊರೆಯಿತು.

ರೋಗಗಳ ಪ್ರಕಾರ ಆಸ್ಪತ್ರೆಗಳಲ್ಲಿ ಬಲುಮಟ್ಟಿಗೆ ಎಲ್ಲ ತೆರನ ರೋಗಗಳಿಗೂ ಮದ್ದು, ಆರೈಕೆ, ಶಸ್ತ್ರಕ್ರಿಯೆಗಳನ್ನು ಮಾಡುವ ಸಾಮಾನ್ಯ (ಜನರಲ್) ಆಸ್ಪತ್ರೆಗಳು, ವಿಶೇಷ ಆಸ್ಪತ್ರೆಗಳು ಇವೆ. ಹೆರಿಗೆ ಮತ್ತು ಹೆಂಗಸರು, ಮಕ್ಕಳು, ಕಣ್ಣು, ಕ್ಷಯ, ಮನೋರೋಗ, ಸಾಂಕ್ರಾಮಿಕಗಳು ಇವುಗಳಿಗೆ ಸಂಬಂಧಿಸಿದವು ಇಂಥ ವಿಶೇಷ ಆಸ್ಪತ್ರೆಗಳು. 1940ರಿಂದ ಈಚೆಗೆ ಇವುಗಳಲ್ಲಿ ಕೆಲವಂತೂ ಸಾಮಾನ್ಯ ಆಸ್ಪತ್ರೆಗಳಲ್ಲೇ ಬೇರೆ ಭಾಗಗಳಾಗಿವೆ. ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಬಿಟ್ಟರೆ ಮಿಕ್ಕ ದೇಶಗಳಲ್ಲಿ ಸರ್ಕಾರಿ ಆಸ್ಪತ್ರೆಗಳೇ ಹೆಚ್ಚು.. ಪ್ರಪಂಚದ ಆಸ್ಪತ್ರೆಗಳಲ್ಲಿ ನೂರಕ್ಕೆ 5ರಷ್ಟು ಖಾಸಗಿ ಸಂಸ್ಥೆಗಳವು.

ಕಿಂಗ್ ಎಡ್ವರ್ಡನ ಆಸ್ಪತ್ರೆ ಇಂಗ್ಲೆಂಡಿನಲ್ಲಿ ಮೊತ್ತಮೊದಲು ಸ್ಥಾಪನೆಗೊಂಡ ಲಾಭರಹಿತ ಆಸ್ಪತ್ರೆ (1897) ಮೊದಲು ರಾಜಮನೆತನದವರಿಂದಲೂ ಹಣವಂತರಿಂದಲೂ ನಿಧಿ ಸಂಗ್ರಹವಾಯಿತು. ಅದೇ ಪರಂಪರೆ ಇಂದಿಗೂ ಬೆಳೆದು ಬಂದಿದೆ. ಸಂಯುಕ್ತ ಸಂಸ್ಥಾನಗಳಲ್ಲಿ ಧರ್ಮಾರ್ಥ ಆಸ್ಪತ್ರೆಗಳನ್ನು ಚರ್ಚು, ಇತರ ಮತೀಯ ಗೌರವ ಸಂಸ್ಥೆಗಳು ಮುಂತಾದುವು ನಡೆಸುತ್ತಿವೆ. ಇಲ್ಲಿ ಸಾಮಾನ್ಯವಾಗಿ ವೈದ್ಯರ ಸೇವೆ ಗೌರವಾರ್ಥವಾಗಿದೆ.

**ಇಂಗ್ಲೆಂಡಿನಲ್ಲಿ:** ಬ್ರಿಟಿಷ್ ಆಸ್ಪತ್ರೆಗಳು 1948ರಲ್ಲಿ ಸರ್ಕಾರದ ರಾಷ್ಟ್ರೀಯ ಸಾಮಾಜಿಕ ಆರೋಗ್ಯಸೇವೆಗೆ ಒಳಗಾದುವು. ಇದರಲ್ಲಿ ಮದ್ದುಗಳಿಂದಾಗುವ ಚಿಕಿತ್ಸೆ, ಹಲ್ಲುಚಿಕಿತ್ಸೆ, ಮದ್ದುಗಳು, ರೋಗಿಗಳು ಚೇತರಿಸಿಕೊಳ್ಳುವ ವಿಭಾಗಗಳು ಸೇರಿದುವು. ತಾವಾಗಿ ನಡೆಸುವ ಆಸ್ಪತ್ರೆಗಳನ್ನು ನಡೆಸಲು ಜನಸೇವೆಯ ಕೈಗಾರಿಕೆಯ ವೈದ್ಯಸದಸ್ಯರಿರುವ ಸಮಿತಿಗಳಿವೆ. ಇವು ರಾಷ್ಟ್ರದ ಆರೋಗ್ಯ ಸಚಿವ ಖಾತೆಗೆ ಸೇರಿದವು. ರಾಷ್ಟ್ರೀಯ ಆರೋಗ್ಯ ಮಸೋದೆಯಿಂದ (ಜುಲೈ 7, 1948) ಖಾಸಗಿ ಆಸ್ಪತ್ರೆಗಳ ಆಡಳಿತ ಸಹಕಾರಯುತವಾಯಿತು. ಖರ್ಚುಗಳನ್ನು ನೋಡಿಕೊಳ್ಳಲು ಬೇರೆ ಅಧಿಕಾರಿ ಇರುತ್ತಾನೆ. ಸಮಿತಿಗಳು ಈ ಅಧಿಕಾರಿಗಳಿಗೆ ಆಡಳಿತದ ಸಲಹೆಗಳನ್ನು ಕೊಡುತ್ತವೆ. ಒಟ್ಟು 14 ಪ್ರದೇಶ ಸಮಿತಿಗಳಿವೆ. ವೈದ್ಯಶಾಲೆಗಳಿಗೆ ಸೇರಿದ ಆಸ್ಪತ್ರೆಗಳು ಈ ಏರ್ಪಾಡಿನಲ್ಲಿ ಸೇರಿಲ್ಲ. ಆರೋಗ್ಯ ಸಚಿವರಿಗೆ ಸಲಹೆಗಳನ್ನು ಕೊಡಲು ಒಂದು ಕೇಂದ್ರ ಆರೋಗ್ಯ ಸೇವಾಸಮಿತಿ ಇದೆ. ಈ ಸಮಿತಿಯ ಸದಸ್ಯರಿಗೂ ಸಂಬಳವಿಲ್ಲ. ವೈದ್ಯ, ಸ್ನಾತಕೋತ್ತರ ವಿದ್ಯಾರ್ಥಿಗಳ ವಿದ್ಯಾವ್ಯವಸ್ಥೆ ನೇರವಾಗಿ ಆರೋಗ್ಯ ಮಂತ್ರಿಗಳ ಕೈಕೆಳಗಿನ ಸಮಿತಿಗಳಿಗೆ ಸೇರಿದೆ.

ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆ ಉಚಿತ. ವೈದ್ಯ ಪರಿಣತರು ಪೂರ್ಣಸರ್ಕಾರಿ ನೌಕರರು ದಿನವೂ ಸ್ವಲ್ಪ ಕಾಲ ಸೇವೆ ಸಲ್ಲಿಸುವ ತಮ್ಮವೇ ಚಿಕಿತ್ಸಾಲಯಗಳುಳ್ಳ ವೈದ್ಯರೂ ಇದ್ದಾರೆ. ರಾಷ್ಟ್ರೀಯ ಆರೋಗ್ಯದ ಮಸೋದೆಗೆ ಒಳಪಟ್ಟ ಈ ಜನಸೇವೆಗೆ ಒಬ್ಬೊಬ್ಬ ವಯಸ್ಕನಿಂದಲೂ ಹಣ ವಸೂಲಾಗಿ ಬರುತ್ತದೆ. ಸರ್ಕಾರದ ಬೊಕ್ಕಸದಿಂದಲೂ ಒದಗುತ್ತದೆ. ಈ ಮಸೋದೆಗೆ ಒಳಪಡುವ ಖಾಸಗಿ ವೈದ್ಯಶಾಲೆಗಳಲ್ಲಿ ಬಲ್ಲಿದರು ಎಂದಿನಂತೆ ದುಡ್ಡು ತೆತ್ತು ಚಿಕಿತ್ಸೆ ಪಡೆಯಬಹುದು.

**ಕೆನಡದಲ್ಲಿ:** ರಾಷ್ಟ್ರೀಯ ಆಸ್ಪತ್ರೆ ವಿಮಾ ಯೋಜನೆಯಂತೆ, ಕೆನಡದ ಆಸ್ಪತ್ರೆಗಳಿಗೆಲ್ಲ ಹಣವನ್ನು ಒದಗಿಸಲು ಕೇಂದ್ರ ಮತ್ತು ಪ್ರದೇಶ ವ್ಯವಸ್ಥೆ 1958ರಲ್ಲಿ ಆರಂಭವಾಯಿತು. ಇದರಿಂದ ಕೇಂದ್ರ ಸರ್ಕಾರ ಪ್ರಾದೇಶಿಕ ಆಡಳಿತದ ಆಸ್ಪತ್ರೆಗಳ ಖರ್ಚುಗಳಲ್ಲಿ ಸಮಭಾಗಿಯಾಯಿತು. ಇದರಿಂದ ಆಸ್ಪತ್ರೆಗಳ ಒಡೆತನ, ಆಡಳಿತಗಳಿಗೆ ಅಡ್ಡಿಯಾಗಲಿಲ್ಲ. ವೈದ್ಯರ ಸಂಭಾವನೆ ಇದರಲ್ಲಿ ಸೇರಿಲ್ಲ. ಕೇಂದ್ರ ಸರ್ಕಾರದ ಈ ಯೋಜನೆಗೆ ನಾಡಿನ ತೆರಿಗೆ ಆದಾಯವೇ ಮೂಲ. ಪ್ರದೇಶ ಸರ್ಕಾರಗಳಿಗೆ ತೆರಿಗೆ ಆದಾಯ, ಆರೋಗ್ಯವಿಮೆ ಮಾಡಿದವರ, ಮತ್ತವರ ಕುಟುಂಬಗಳ ವಿಮೆ ಕಂತುಗಳ ಹಣವೇ ಆಧಾರ.

**ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ:** ಆಸ್ಪತ್ರೆಗಳ ಸಂಖ್ಯೆ 7,000, ಇವುಗಳಲ್ಲಿ ರೋಗಿಗಳಿಗಾಗಿ 16.7 ಲಕ್ಷ ಹಾಸಿಗೆಗಳಿವೆ. ವರ್ಷದಲ್ಲಿ 2.55 ಕೋಟಿ ರೋಗಿಗಳು ಸೇರಿಕೊಳ್ಳುತ್ತಾರೆ. (ಅಂದರೆ, ಸಾವಿರ ಜನರಿಗೆ 92 ಹಾಸಿಗೆಗಳಿದ್ದು ವರ್ಷವರ್ಷ 130 ರೋಗಿಗಳು ಚಿಕಿತ್ಸೆ ಪಡೆವರು. ಸಂಸ್ಥಾನಗಳಲ್ಲೆಲ್ಲ ದಿವಸಕ್ಕೆ ಸರಾಸರಿ 13.9 ಲಕ್ಷ ರೋಗಿಗಳಿರುತ್ತಾರೆ). ಶೇ.85 ಹಾಸಿಗೆಗಳು ತುಂಬಿರುತ್ತವೆ. ಒಬ್ಬ ರೋಗಿ ಆಸ್ಪತ್ರೆಯಲ್ಲಿ ಸರಾಸರಿ 7.5 ದಿವಸಗಳಿರುತ್ತಾನೆ. ವರ್ಷದಲ್ಲಿ ಸು. 40 ಲಕ್ಷ ಹೆರಿಗೆಗಳಾಗುತ್ತವೆ. ದಾಖಲಾದ ಜನನಗಳಲ್ಲಿ ಶೇ. 94 ಆಸ್ಪತ್ರೆಗಳಲ್ಲಾಗುತ್ತವೆ. ಶೇ. 32 ಆಸ್ಪತ್ರೆಗಳು ಸರ್ಕಾರದವು. ಇವುಗಳಲ್ಲಿ ಒಟ್ಟು ಹಾಸಿಗೆಗಳ ಶೇ. 70 ರಷ್ಟು ಇಲ್ಲಿವೆ. ಆದರೆ ವರ್ಷದ ಸೇರ್ಪಡೆಗಳಲ್ಲಿ ಶೇ. 24 ರಷ್ಟು ಮಾತ್ರ ಇಲ್ಲಿ ಸೇರುವರು. ಏಕೆಂದರೆ ಮಾನಸಿಕ ರೋಗಿಗಳು ಸರಾಸರಿ 3 ವರ್ಷಗಳು, ಕ್ಷಯ ರೋಗಿಗಳು ಸು.10 ತಿಂಗಳು ಆಸ್ಪತ್ರೆಗಳಲ್ಲಿರುತ್ತಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಶೇ. 28 ಹಾಸಿಗೆಗಳಿದ್ದರೂ ಅವರಲ್ಲಿ ಶೇ. 74 ರೋಗಿಗಳು ಕೆಲವೇ ದಿವಸಗಳು ಉಳಿಯುವರು. ಬಲುಮಟ್ಟಿಗೆ ಸರ್ಕಾರಿ ಆಸ್ಪತ್ರೆಗಳು ದೊಡ್ಡವು. ಕೆಲವು ಆಸ್ಪತ್ರೆಗಳಲ್ಲಂತೂ 2,000ಕ್ಕೂ ಮೀರಿ ಹಾಸಿಗೆಗಳಿವೆ.

**ಆಸ್ಪತ್ರೆಗಳ ಹಣದ ವ್ಯವಸ್ಥೆ:** ಸಂಯುಕ್ತ ಸಂಸ್ಥಾನಗಳಲ್ಲಿರುವ ಆಸ್ಪತ್ರೆಗಳ ಹೂಡಿಕೆ ಹಣ ಸುಮಾರು 21 ಕೋಟಿ ಡಾಲರುಗಳು. ಇದನ್ನು ನಡೆಸಲು ವರ್ಷದ ಖರ್ಚು ಸುಮಾರು ಒಂದು ಕೋಟಿ ಡಾಲರುಗಳು. ಅಂದರೆ ಜನರಲ್ಲಿ ಒಬ್ಬೊಬ್ಬರಿಗೆ 57 ಡಾಲರ್ ಖರ್ಚು ಬೀಳುತ್ತದೆ. 18.4 ಲಕ್ಷ ನೌಕರರ ಸಂಬಳ ವರ್ಷಕ್ಕೆ 7.3 ಕೋಟಿ ಡಾಲರ್. ಇದು ಆಸ್ಪತ್ರೆಗಳ ಒಟ್ಟು ಖರ್ಚಿನಲ್ಲಿ 2/3 ಭಾಗ. ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳಿಂದ 93% ರಷ್ಟು ಆದಾಯವಿದೆ. ಜನರು ಮುಂಗಡ ವಿಮೆಯ ಮೂಲಕ ಹಣಕೊಡುವ ಏರ್ಪಾಡಿನಿಂದ ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ಖರ್ಚಿನ ವ್ಯವಸ್ಥೆ ಚೆನ್ನಾಗಿದೆ. ಸು. 14 ಕೋಟಿ ಜನ ಈ ರೀತಿ ಅನುಕೂಲ ಪಡೆದಿದ್ದಾರೆ. ಇದರಿಂದ 10.2 ಕೋಟಿ ರೋಗಿಗಳ ಶಸ್ತ್ರಕ್ರಿಯೆ, ಮದ್ದುಗಳ ಖರ್ಚಿಗೆ ನೆರವಾಗುತ್ತದೆ. ಈ ಮುಂಗಡ ಹಣ ಕೊಡುವ ಏರ್ಪಾಡು 1929ರಲ್ಲಿ ಬ್ಲೂ ಕ್ರಾಸ್ ವಿಮೆ ಯೋಜನೆಗಳಿಂದ ಮೊದಲಾಯಿತು. ಹೊರ ರೋಗಿಗಳ ಸೇವೆ ಕೆಲವು ನಗರ ಆಸ್ಪತ್ರೆಗಳಲ್ಲಿ ಒಳ ರೋಗಿಗಳಿಗಿಂತ ಹೆಚ್ಚು.. ಸಂಯುಕ್ತ ಸಂಸ್ಥಾನಗಳ ಸು. 4,000 ಆಸ್ಪತ್ರೆಗಳಲ್ಲಿ ವರ್ಷಕ್ಕೆ ಸುಮಾರು 11 ಕೋಟಿ ಹೊರರೋಗಿಗಳು ಚಿಕಿತ್ಸೆ

ಪಡೆಯುತ್ತಾರೆ. ಆಸ್ಪತ್ರೆಗಳ ಬಳಿಯಲ್ಲೇ ತಮ್ಮವೇ ಚಿಕಿತ್ಸಾಲಯಗಳುಳ್ಳ ವೈದ್ಯರು ಹೆಚ್ಚುತ್ತಿರುವರು. ಅವರ ರೋಗಿಗಳಲ್ಲಿ ಕೆಲವರನ್ನು ಆಸ್ಪತ್ರೆಗೆ ಹೆಚ್ಚಿನ ಸೇವೆಗೆ ಕಳುಹಿಸಲು ಇದರಿಂದ ಅನುಕೂಲ.

**ಆಸ್ಪತ್ರೆಗಳ ಸಹಕಾರ ವ್ಯವಸ್ಥೆ:** ಸಣ್ಣ ಆಸ್ಪತ್ರೆಗಳು ಬಲುಮಟ್ಟಿಗೆ ದೊಡ್ಡ ಆಸ್ಪತ್ರೆಗಳಿಂದ ವೈದ್ಯ ಪರಿಣತರ, ಸಲಕರಣೆಗಳ, ಹೆಚ್ಚಿನ ನೆರವನ್ನು ಪಡೆಯುತ್ತವೆ. ಇದರಿಂದ ಅವುಗಳಿಗೆ ಖರ್ಚು ಕಡಿಮೆ. 1946ರಲ್ಲಿ ಕಾನೂನಾದ ಆಸ್ಪತ್ರೆಗಳ ಪರಿಶೀಲನೆ. ನಿರ್ಮಾಣಗಳ ಮಸೂದೆ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ಸು ಆಸ್ಪತ್ರೆಗಳಿಗೆ ಹೆಚ್ಚು ನೆರವು ನೀಡುವಂತೆ ವಿಧಿಸಿತು. ಇದರಿಂದ ವರ್ಷದ ಸರಾಸರಿ ಖರ್ಚು 12.5 ಕೋಟಿ ಡಾಲರುಗಳಿಗೇರಿತು. ಇದರಲ್ಲಿ 2/3 ರಷ್ಟನ್ನು ಪ್ರದೇಶ ಸರ್ಕಾರವೂ ಸ್ಥಳೀಯ ಸಂಸ್ಥೆಗಳೂ ಕೊಡುತ್ತವೆ.

1899ರಲ್ಲಿ ರೂಪುಗೊಂಡ ಅಮೆರಿಕ ಆಸ್ಪತ್ರೆಗಳ ಸಂಘ ಒಂದು ರಾಷ್ಟ್ರೀಯ ಸಂಸ್ಥೆ. ಆಸ್ಪತ್ರೆಗಳ ಆಡಳಿತದಲ್ಲಿ ಸಲಹೆ ನೀಡುವುದು, ಸಾರ್ವಜನಿಕ ಸಂಪರ್ಕ ಮುಂತಾದ ರಚನಾತ್ಮಕ ಕ್ರಿಯೆಗಳಲ್ಲಿ ಇದು ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಅಮೆರಿಕದ ಆಸ್ಪತ್ರೆ ಆಡಳಿತಗಾರರ ಸಂಘ 1933ರಲ್ಲಿ ಪ್ರಾರಂಭವಾಯಿತು. ಇದರ ಸದಸ್ಯರ ಸಂಖ್ಯೆ 3,700. ಇದು ವೈದ್ಯಕಲಿಕೆ, ಸೇವೆಗಳು ಉತ್ತಮ ಮಟ್ಟದಲ್ಲಿರುವಂತೆ ಶ್ರಮಿಸುತ್ತದೆ.

ಪ್ರಪಂಚದಲ್ಲೆಲ್ಲ ವೈದ್ಯರ, ದಾದಿಗಳ ತರಬೇತಿಗೆ ಆಸ್ಪತ್ರೆಗಳೇ ಕೇಂದ್ರಗಳು. ಸಂಯುಕ್ತ ಸಂಸ್ಥಾನಗಳಲ್ಲಿ ವೈದ್ಯಶಿಕ್ಷಣದ ಮಂಡಲಿ, ವೈದ್ಯಶಿಕ್ಷಣ ಮತ್ತು ಅಮೆರಿಕದ ವೈದ್ಯಸಂಘ ಆಸ್ಪತ್ರೆಗಳ ಆಡಳಿತಗಳ ಮೇಲ್ವಿಚಾರಣೆ ನೋಡುತ್ತವೆ. 1960ರಿಂದೀಚೆಗೆ ಮನ್ನಣೆ ಪಡೆದ ಒಂದೊಂದು ವೈದ್ಯಶಾಲೆಯೊಂದಿಗೆ ಒಂದೋ ಹೆಚ್ಚೋ ಆಸ್ಪತ್ರೆಗಳು ಸೇರಿವೆ. ಈ ತೆರನ 870 ಕಾಲೇಜುಗಳು ಆಸ್ಪತ್ರೆಗಳ ವಿದ್ಯಾರ್ಥಿನಿಲಯಗಳಲ್ಲಿರುವ ಹೊಸ ಪದವೀಧರ ವೈದ್ಯರಿಗೂ ಸ್ನಾತಕೋತ್ತರ ಪದವೀಧರರಿಗೂ ವಿಶೇಷ ವೈದ್ಯಗಳಲ್ಲಿ ತರಬೇತು ನೀಡಿದುವು. ಸಂಯುಕ್ತ ಸಂಸ್ಥಾನಗಳ ಆಸ್ಪತ್ರೆಗಳಲ್ಲಿ ಸು. 1,000 ಶಾಲೆಗಳು 1.2 ಲಕ್ಷ ದಾದಿಯರಿಗೆ ತರಬೇತು ಕೊಟ್ಟವು.

1946ರಲ್ಲಿ ಸ್ಥಾಪಿತವಾದ ಫಿಲಡೆಲ್ಫಿಯದ ಆಸ್ಪತ್ರೆಮಂಡಲಿಯಿಂದ ದೊಡ್ಡ ನಗರಗಳಲ್ಲಿ ಆಸ್ಪತ್ರೆಯ ಸೇವೆ, ಆಡಳಿತದಲ್ಲಿ ಹೊಸ ವಿಧಾನಗಳ ಶೋಧನೆ, ಖಾಸಗಿ ಸಂಸ್ಥೆಗಳೊಡನೆ ವ್ಯವಹಾರ, ದಾದಿಗಳ ತರಬೇತು, ಒಂದೇ ರೀತಿಯ ಲೆಕ್ಕಪತ್ರ, ವೈದ್ಯವೃತ್ತಿಯೊಡನೆ ಸಂಬಂಧ–ಇವುಗಳ ವಿಚಾರವಾಗಿ ಮುನ್ನಡೆಯಾಗಿದೆ.

**ಆಸ್ಪತ್ರೆಗಳ ಆಡಳಿತ ಮತ್ತು ಕಾರ್ಯಕ್ರಮ:** ಇಂದಿನ ಆಸ್ಪತ್ರೆಗಳನ್ನು ನಡೆಸುವಲ್ಲಿ ಅನಸರಿಸುವ ಕೆಲವು ಕ್ರಮಗಳು: 1. ಕೋಣೆಗಳಲ್ಲಿ ನಾಲ್ಕಾರು ಮಂಚಗಳಿಗೆ ಹೆಚ್ಚಿಲ್ಲದೆ ಇರುವುದರಿಂದ ಅವನ್ನು ಸಮಯಕ್ಕೆ ಬೇಕಾದ ಹಾಗೆ ವಯಸ್ಸು, ಲಿಂಗ, ರೋಗಗಳಿಗೂ ತಕ್ಕಂತೆ ಬಳಸಬಹುದು. ರೋಗಿಗಳಿಗೂ ಇಕ್ಕಟ್ಟಾಗಿರದೆ ಆರಾಮವಾಗಿರಬಹುದು. 2. (ಹವಾನಿಯಂತ್ರಣ ವ್ಯವಸ್ಥೆಯಿಂದ) ಸದಾ ಒಂದೇ ಸಮವಾದ ತಾಪದ ಗಾಳಿಯನ್ನು ರೋಗಿಗಳಿಗೆ ಒದಗಿಸುವುದರಿಂದ, ಕ್ರಿಮಿ ಕೀಟಗಳ ಹಾವಳಿ ತಗ್ಗಿ, ರೋಗಗಳು ಬೇಗ ವಾಸಿಯಾಗುವುವು. ರೋಗಿಗಳಿಗೂ ಹಿತಕರ. 3. ಹೆಚ್ಚು ಅಂತಸ್ತುಗಳಿಂದ ಕಟ್ಟಡದ ಖರ್ಚು ಸಲೆಯೂ ಕಡಿಮೆಯಾಗಿ ಆರೈಕೆಗಾರರು ಓಡಾಡುವ ದೂರ, ಸಮಯ ತಗ್ಗಿ ರೋಗಿಗಳ ಸೇವೆ ಇನ್ನೂ ಅಚ್ಚುಕಟ್ಟಾಗುವುದು. 15 ಅಂತಸ್ತುಗಳ ಕಟ್ಟಡ ಚಿಕಾಗೊ ನಗರದಲ್ಲಿ ಮೊದಲು (1925) ಎದ್ದಿತು. 4. ವಿಜ್ಞಾನದ ಸಲಕರಣೆಗಳು ಬಲು ಹೆಚ್ಚಿರುವುದರಿಂದ ಹೊರರೋಗಿಗಳು ಪಡೆವ ಸೌಕರ್ಯಗಳು ಹೆಚ್ಚಿ ಅವರು ಬೇಗ ಗುಣ ಹೊಂದುವರು. ಆಸ್ಪತ್ರೆಯಲ್ಲಿ ಸೇರಿರುವವರ ಕಷ್ಟವೂ ತಗ್ಗುತ್ತದೆ. 5. ಪೂರ್ಣ ಮತ್ತು ಸ್ವಲ್ಪ ಕಾಲದ ವೈದ್ಯರು ತಂಡಗಳಲ್ಲಿ, ಆಸ್ಪತ್ರೆಯ ಸೌಕರ್ಯಗಳನ್ನು ಎಲ್ಲರ ಬುದ್ಧಿ ಅನುಭವಗಳನ್ನೂ ಒಟ್ಟಿಗೆ ಬಳಸಿಕೊಂಡು ಇನ್ನೂ ಒಳ್ಳೆಯ ಚಿಕಿತ್ಸೆಯನ್ನು ಕೊಡಬಹುದು. 6. ದಾದಿಯರ ಶಾಲೆ, ರೋಗಿಕೋಣೆಗಳು ಆಸ್ಪತ್ರೆಯಲ್ಲೇ ಇರುವುದರಿಂದ ರೋಗಿಗಳ ಚಿಕಿತ್ಸೆ ಮತ್ತು ಚೆನ್ನಾಗಿ ನಡೆಯುತ್ತದೆ. 7. ಸಮಾಜ ಕಾರ್ಯಕರ್ತರು ನೆರವಾಗಿ ರೋಗಿಗಳ ತೊಂದರೆಗಳನ್ನು ಕಡಿಮೆಮಾಡಿ, ಅವರ ಅಲ್ಲದೆ ಸುತ್ತಮುತ್ತಲಿನ ವಿಷಯಗಳಿಗೆ ಗಮನ ಕೊಡುತ್ತಾರೆ. 8. ಪಟ್ಟಣಗಳಲ್ಲಿ ಆಸ್ಪತ್ರೆಗಳು ಹೆಚ್ಚುವುದರಿಂದ ರೋಗ ವಾಸಿಯಾದವರಿಗೆ ಹೆಚ್ಚು ಆರೈಕೆ ಮಾಡಲು ಅನುಕೂಲ. 9. ಸ್ವಯಂಸೇವಕರ ಸೇವೆಯಿಂದ ಈಗ ಆಸ್ಪತ್ರೆಗಳಲ್ಲಿ ಹೆಚ್ಚು ಸೌಕರ್ಯವುಂಟು. ಸಂಯುಕ್ತ ಸಂಸ್ಥಾನಗಳಲ್ಲಿ ಈಗ 15 ಲಕ್ಷಕ್ಕೂ ಮೀರಿ ಇಂಥ ಸೇವಕರು ವಾರದಲ್ಲಿ ಕೆಲವು ದಿನಗಳು, ಕೆಲವು ತಾಸುಗಳ ಹೊತ್ತು, ಈ ಸೇವೆಯನ್ನು ಇಷ್ಟಪಟ್ಟು ಮಾಡುತ್ತಾರೆ.

ಆಸ್ಪತ್ರೆಗಳಲ್ಲಿ ಸಿಬ್ಬಂದಿ, ಸವಲತ್ತುಗಳು, ಮದ್ದುಗಳು ಸಾಕಷ್ಟಿಲ್ಲದಿದ್ದರೆ ತೊಂದರೆ. ಎಲ್ಲ ಅನುಕೂಲಗಳಿದ್ದರೂ ವೈದ್ಯರ ಅನುಭವ, ಆಡಳಿತ ಕ್ರಮ ಸರಿಯಾಗಿಲ್ಲದಿದ್ದರೆ ಆಸ್ಪತ್ರೆಯ ಸೇವೆ ಬೀಳಾಗುತ್ತದೆ. ಆದರೂ ಹಿಂದಿನ ಕಾಲದಲ್ಲಿ ಜನರಿಗೆ ಆಸ್ಪತ್ರೆಗಳಲ್ಲಿದ್ದ ನಂಬಿಕೆಗಿಂತಲೂ ಈಗ ಹೆಚ್ಚು ಭರವಸೆಯಿದೆ. ನವೀನ ಆಸ್ಪತ್ರೆ ರೋಗಚಿಕಿತ್ಸೆಗಷ್ಟೇ ಅಲ್ಲದೆ ರೋಗನಿವಾರಣೆಗೂ ಕೇಂದ್ರ ಆಗಿರಬೇಕು.

**ಭಾರತದಲ್ಲಿ:** ಆಸ್ಪತ್ರೆಗಳು ಜನಸಂಖ್ಯೆಗೆ ಸಾಕಾಗುವಷ್ಟಿಲ್ಲ. ಜನಸಂಖ್ಯೆಗೆ ತಕ್ಕಂತೆ ಹೆಚ್ಚು ಹೆಚ್ಚಾಗಿ ವೈದ್ಯರ ಸಂಖ್ಯೆಯನ್ನು ಹೆಚ್ಚಿಸಲು ಪಂಚವಾರ್ಷಿಕ ಯೋಜನೆಗಳಲ್ಲಿ ಹೊಸ ವೈದ್ಯ ಕಾಲೇಜುಗಳನ್ನು ತೆರೆಯಲಾಗಿದೆ. 1947ರಲ್ಲಿ 22 ಕಾಲೇಜುಗಳಿದ್ದುದು, 1966ರ ಹೊತ್ತಿಗೆ 90 ಕಾಲೇಜುಗಳಾದವು. ಇವುಗಳಲ್ಲಿ ಸರ್ಕಾರಿ ಕಾಲೇಜುಗಳೇ ಹೆಚ್ಚು. ಮುಂಬಯಿಯಲ್ಲಿ ಪುರಸಭೆಯ ಕಾಲೇಜುಗಳಿವೆ. ಸ್ನಾತಕೋತ್ತರ ಶಿಕ್ಷಣ ಹಲವೆಡೆಗಳಲ್ಲಿ ಆರಂಭವಾಗಿದೆ. ಕಾಲೇಜುಗಳಿಗೆ ಸೇರಿದ ಆಸ್ಪತ್ರೆಗಳು ಚೆನ್ನಾಗಿ ಬೆಳೆಯುತ್ತಿವೆ, ಉತ್ತಮ ಚಿಕಿತ್ಸೆಯನ್ನು ಕೊಡುತ್ತಿವೆ. ಕೋಲ್ಕತ್ತದಲ್ಲಿ ಮೊದಲ ವೈದ್ಯಕಾಲೇಜು 1835ರಲ್ಲೂ ಮುಂಬಯಿಯಲ್ಲಿ 1845ರಲ್ಲೂ ಚೆನ್ನೈನಲ್ಲಿ 1850ರಲ್ಲೂ ತೆರೆದುವು.

ವಿಶ್ವ ಆರೋಗ್ಯ ಸಂಸ್ಥೆ, ಯೂನಿಸೆಫ್ ಮುಂತಾದವು ಮದ್ದುಗಳು, ಯಂತ್ರಗಳು, ಸಲಕರಣೆಗಳು, ಸಲಹೆಗಳ ರೂಪದಲ್ಲಿ ಭಾರತಕ್ಕೆ ವಿಶೇಷ ನೆರವು ಕೊಡುತ್ತಿವೆ. ಹಿಂದೆ ಇದ್ದ ಸಿಡುಬು, ಪ್ಲೇಗ್, ಕಾಲರ, ಮಲೇರಿಯ ಉಪದ್ರವಗಳು ಈಗಿಲ್ಲ. ಬೇರೆ ಬೇರೆಯಾಗಿ ಇದ್ದ ಆರೋಗ್ಯ, ವೈದ್ಯ ಇಲಾಖೆಗಳು ಈಗ ಒಂದಾಗಿವೆ. ಭಾರತದ ಆಸ್ಪತ್ರೆಗಳ ಸ್ಥೂಲ ಆಡಳಿತ ವಿಚಾರಗಳು ಡೈರೆಕ್ಟರ್ ಜನರಲ್ ಆಫ್ ಹೆಲ್ತ್ ಸರ್ವಿಸಸ್ ಅಂಡ್ ಫ್ಯಾಮಿಲಿ ಪ್ಲಾನಿಂಗ್, ನವದೆಹಲಿ ಅವರ ಕೈಯಲ್ಲಿದೆ. ಇತ್ತೀಚೆಗೆ ಕುಟುಂಬಯೋಜನೆಯೂ ಆಸ್ಪತ್ರೆಗಳಿಗೆ ಸೇರಿದ್ದು, ಯಶಸ್ವಿಯಾಗಿ ನಡೆಯುತ್ತಿದೆ.

ಭಾರತದಲ್ಲಿ ಸರ್ಕಾರಿ ಆಸ್ಪತ್ರೆಗಳೇ ಹೆಚ್ಚು. ಹಲವೆಡೆ ಚಿಕ್ಕ ಪುರಸಭೆ ಆಸ್ಪತ್ರೆಗಳೂ ಇವೆ. ಹಿಂದೆ ಕ್ರೈಸ್ತಧರ್ಮ ಪ್ರಚಾರಕರೂ ಹಲವೆಡೆಗಳಲ್ಲಿ ಆಸ್ಪತ್ರೆಗಳನ್ನು ತೆರೆದರು. ಆ ತೆರನ ಆಸ್ಪತ್ರೆಗಳಲ್ಲಿ ವೆಲ್ಲೂರಿನಲ್ಲಿರುವ ಕ್ರೈಸ್ತ ಮಿಷನರಿ ಆಸ್ಪತ್ರೆ ದೊಡ್ಡದು. ದೊಡ್ಡ ಪಟ್ಟಣಗಳ ಆಸ್ಪತ್ರೆಗಳಲ್ಲಿ ಹೆಚ್ಚು ಸಲಕರಣೆ, ಸವಲತ್ತುಗಳಿದ್ದು ಮುಂಬೈಯಲ್ಲಿ ಗುಂಡಿಗೆ ನಾಟಿಮಾಡುವ ಪ್ರಯೋಗವೂ ನಡೆದಿದೆ.

ಕರ್ನಾಟಕ ರಾಜ್ಯದಲ್ಲಿ 1966ರ ಮೊದಲಲ್ಲಿ 978 ಆಸ್ಪತ್ರೆಗಳಿದ್ದವು. ಇವುಗಳಲ್ಲಿ ಸರ್ಕಾರಿಯವು 328, ಸ್ಥಳೀಯ ಸಂಸ್ಥೆಯವು 594, ಸರ್ಕಾರದಿಂದ ನೆರವು ಪಡೆಯುವವು 19, ಇತರವು 37. ಇವುಗಳಲ್ಲಿ ದಿನವೂ 17,222 ಒಳ ರೋಗಿಗಳೂ 83,823 ಹೊರರೋಗಿಗಳೂ ಚಿಕಿತ್ಸೆ ಪಡೆಯುತ್ತಾರೆ. ಸರಾಸರಿ 24,076 ಜನರಿಗೆ ಒಂದು ಆಸ್ಪತ್ರೆಯಿದೆ. ಬೆಂಗಳೂರಲ್ಲಿ ವಿಕ್ಟೋರಿಯ ಆಸ್ಪತ್ರೆಯನ್ನು 1900ರಲ್ಲಿ, ಮೈಸೂರಿನಲ್ಲಿ ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆಯನ್ನು 1916ರಲ್ಲಿ ಕಟ್ಟಲಾಯಿತು. ಈಗ 190 ವಿಶೇಷ ಆಸ್ಪತ್ರೆಗಳಿವೆ: ಕಣ್ಣಿಗೆ 1, ಕ್ಷಯಕ್ಕೆ 12, ಹೆರಿಗೆಗೆ 54, ಮನೋರೋಗಕ್ಕೆ 2, ಕುಷ್ಠರೋಗಕ್ಕೆ 5, ಸಾಂಕ್ರಾಮಿಕಗಳಿಗೆ 3. ಬೆಂಗಳೂರಿನಲ್ಲಿರುವ ಮನೋರೋಗದ ಆಸ್ಪತ್ರೆ ಕೇಂದ್ರಸರ್ಕಾರದ ಆಡಳಿತದಲ್ಲಿದೆ. ಇತರ ಪ್ರದೇಶಗಳಿಗಿಂತ ಕರ್ಣಾಟಕದಲ್ಲಿ ಹೆಚ್ಚು ವೈದ್ಯಕೀಯ ಕಾಲೇಜುಗಳಿವೆ. ಇವುಗಳಲ್ಲಿ 4 ಸರ್ಕಾರಿಯವು, ಅದರಲ್ಲಿ 2 ಸ್ವಾಯತ್ತತೆ ಪಡೆದಿವೆ. 5 ಖಾಸಗಿ, ಬ್ರಿಟಿಷರ ಕಾಲದಲ್ಲಿದ್ದ ಮಹಾರಾಜರ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನವೇ ಮೊದಲು ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿದುದು (1924). ಸ್ನಾತಕೋತ್ತರ ಶಿಕ್ಷಣ 1962ರಲ್ಲಿ ಮೊದಲಾಯಿತು. (ಎಂ.ಡಿ)

**ಆಸ್ಪ್‌ಡಿನ್, ಜೋಸೆಫ್:** ಪುಡಿ ಮಾಡಿದ ಸುಣ್ಣಕಲ್ಲನ್ನೂ ಜೇಡಿಮಣ್ಣನ್ನೂ ಬೆರೆಸಿ ಅವೆರಡೂ ಒಂದುಗೂಡಿ ಗಟ್ಟಿಯಾಗುವವರೆಗೆ ಕುಲುಮೆಯಲ್ಲಿ ಸುಟ್ಟು ಪೋರ್ಟ್‌ಲ್ಯಾಂಡ್ ಸಿಮೆಂಟನ್ನು ತಯಾರಿಸಿದವ (1824). ಇದು ಪೋರ್ಟ್‌ಲ್ಯಾಂಡ್ ಪ್ರದೇಶದ ಬಂಡೆಗಳಲ್ಲಿನ ಕಲ್ಲಿನಂತೆ ಕಾಣುತ್ತಿದ್ದುದರಿಂದ ಈ ಹೆಸರಿಟ್ಟ. ಕಿಟ್ಟದ ಹಾಗೆ ಗಟ್ಟಿಯಾದ ಹರಳುಗಳನ್ನು ಪುಡಿಮಾಡಿ ಬಂದ ಸಿಮೆಂಟನ್ನು ನೀರಿನಲ್ಲಿ ಬೆರೆಸಿದರೆ ಅದು ಬಹಳ ಗಟ್ಟಿಯಾಗುತ್ತದೆ. ಈಚೆಗೆ ಸಿಮೆಂಟಿನ ತಯಾರಿಕೆಯಲ್ಲೂ ಪರೀಕ್ಷೆಯಲ್ಲೂ ಅನೇಕ ಮಾರ್ಪಾಡುಗಳು ನಡೆದಿವೆ. ಈ ಸಾಮಗ್ರಿ ಬಳಕೆಗೆ ಬಂದ ಮೇಲೆ ಕಟ್ಟಡದ ನಿರ್ಮಾಣ ಕಲೆಯಲ್ಲಿಯೇ ಒಂದು ಕ್ರಾಂತಿಯಾಯಿತು. ಸಿಮೆಂಟ್, ಮರಳು, ಸಣ್ಣದಾಗಿ ಒಡೆದ ಕಲ್ಲಿನ ಚೂರು–ಇವನ್ನು ಕ್ಲುಪ್ತವಾದ ಪರಿಮಾಣದ ನೀರಿನಲ್ಲಿ ಕಲಸಿ ಕಾಂಕ್ರೀಟನ್ನು ಮಾಡುತ್ತಾರೆ. ಅದರ ಒಳಗಡೆ ಉಕ್ಕನ್ನು ಹುದುಗಿಸಿ ಪ್ರಬಲಿತ ಕಾಂಕ್ರೀಟನ್ನು ಮಾಡಿ ಅದರಿಂದ ದೊಡ್ಡ ಕಟ್ಟಡಗಳನ್ನೂ ಸೇತುವೆಗಳನ್ನೂ ಕಟ್ಟುತ್ತಾರೆ.

ರೋಮನರು ಅಗ್ನಿಪರ್ವತಗಳ ಬೂದಿಯನ್ನೂ ಸುಣ್ಣವನ್ನೂ ಒಂದು ಪ್ರಮಾಣದಲ್ಲಿ ಬೆರೆಸಿ ಪಾಟ್ಸಲಾನ ಎಂಬ ಸಿಮೆಂಟನ್ನು ತಯಾರಿಸಿ ತಮ್ಮ ಬಂದರು ಮತ್ತು ನೀರಿನ ಸರಬರಾಜಿನ ಕಾಮಗಾರಿಗಳಲ್ಲಿ ಉಪಯೋಗಿಸುತ್ತಿದ್ದರು. ದೀಪಸ್ತಂಭಗಳನ್ನು (ಲೈಟ್ ಹೌಸಸ್) ಕಟ್ಟುವಾಗ ಸ್ಮೀಟನ್ ಒಂದು ಬಗೆಯ ಸಿಮೆಂಟನ್ನು ತಯಾರಿಸಿದ್ದ(1756). 1796ರಲ್ಲಿ ರೋಮನ್ ಸಿಮೆಂಟ್ ಎಂಬ ಸಿಮೆಂಟನ್ನು ಪಾರ್ಕರ್ ತಯಾರಿಸಿದ. 1813ರಲ್ಲಿ ವೈಕಾ ಎಂಬಾತ ಸಿಮೆಂಟನ್ನು ಪರೀಕ್ಷೆ ಮಾಡುವ ಕ್ರಮವನ್ನು ಕಂಡುಹಿಡಿದ. ಆದರೂ ಎಲ್ಲೆಲ್ಲೂ ಸಿಕ್ಕುವ ಸುಣ್ಣಕಲ್ಲು ಮತ್ತು ಜೇಡಿಮಣ್ಣಿನಿಂದ ಆಸ್ಪ್‌ಡಿನ್ ಸಿಮೆಂಟನ್ನು ಮಾಡುವವರೆಗೂ ಇದು ಸರ್ವತ್ರ ಬಳಕೆಗೆ ಬರುವುದು ಸಾಧ್ಯವಾಗಲಿಲ್ಲ. *

**ಆಸ್ಪಿರಿನ್:** ತಲೆನೋವಿನ ಮದ್ದಾಗಿ ಹರ್ಮನ್ ಡ್ರೀಸರ್ (1893) ಜಾರಿಗೆ ತಂದ ಅಸಿಟೈಲ್ ಸ್ಯಾಲಿಸಿಕಾಮ್ಲದ ವ್ಯಾಪಾರ ನಾಮ. ಸ್ಯಾಲಿಸಿಕಾಮ್ಲದ ಮೇಲಿನ ಅಸಿಟಿಕ್ ಆನ್‌ಹೈಡ್ರೈಡಿನ ರಸಾಯನ ವರ್ತನೆಯಿಂದ ತಯಾರಾಗುವ, ಹರಳಂತಿರುವ, ನೀರಲ್ಲಿ ಸುಲಭವಾಗಿ ವಿಲೀನವಾಗದ, ಬಿಳಿಯ ಪುಡಿ. ತಲೆನೋವಿಗಾಗಿ ಬಲು ಸಾಮಾನ್ಯ ಬಳಕೆಯಲ್ಲಿರುವ ಮನೆಮದ್ದು. ನುಂಗಿದ ಕೂಡಲೇ ರಕ್ತಗತವಾಗಿ ಪರಿಣಾಮಕಾರಿಯಾಗುವುದು. ಕೇವಲ ಮನಸ್ಸಿನ ಮೇಲೆ ಪರಿಣಾಮಕಾರಿಯಾಗುವ ತಣಿಕವಾಗಿ (ಪ್ಲಸಿಬೊ)

ಇರಬಹುದಾದರೂ ಜ್ವರ, ತಲೆನೋವಿಂದ ನರಳುತ್ತಿರುವ ರೋಗಿಯಲ್ಲಿ, ಜ್ವರದ ಮುಂಚಿನ ಮೈ ಕೈ ಕಾಲುಗಳ ನೋವುಗಳನ್ನು ಹೋಗಲಾಡಿಸಿ ಮೈ ಬೆವರಿಳಿಸಿ ಜ್ವರವಿಳಿಸುವುದರಲ್ಲಿ ಅನುಮಾನವಿಲ್ಲ. ಇದರಿಂದಲೇ ಇದರ ಸೇವನೆಯ ಆನಂತರ ರೋಗಿ ಚಳಿಗೆ ಮೈಯೊಡ್ಡದೆ ಕೆಲಕಾಲ ಬೆಚ್ಚಗಿರಬೇಕು. ಉಳಿದ ಸ್ಯಾಲಿಸಿಲೇಟುಗಳಂತೆ ತೀವ್ರ ಕೀಲುವಾತದ ಜ್ವರದಲ್ಲಿ (ಅಕ್ಯೂಟ್ ರೂಮ್ಯಾಟಿಕ್ ಫೀವರ್) ಕೀಲುಗಳ ನೋವು, ಜ್ವರಗಳನ್ನು ಕಳೆದರೂ ಬೇನೆಯ ತೊಡಕುಗಳನ್ನು ಮಾತ್ರ ತಗ್ಗಿಸದು. ಗುಂಡಿಗೆಯಲ್ಲೂ ರೋಗ ಹರಡಿಕೊಂಡು ಕವಾಟಗಳನ್ನು ಹಾಳುಗೆಡಹುವುದು ಅಂಥ ಒಂದು ತೊಡಕು. ಪ್ರಪಂಚದಲ್ಲಿ ಟನ್ನುಗಳಗಟ್ಟಲೆ ಆ್ಯಸ್ಪಿರಿನ್ ಖರ್ಚಾಗುತ್ತಿದೆ. ಬಲುಮಂದಿಗೆ ಇದರಿಂದ ತೊಂದರೆ ಕಂಡಿಲ್ಲ. ಆದರೆ ಮತ್ತೆ ಮತ್ತೆ ಅಭ್ಯಾಸವಾಗಿ ನುಂಗುವ, ಹೆಚ್ಚಾಗಿ ಸೇವಿಸುವ ಕೆಲವರಿಗೆ ಒಗ್ಗದೆ ಚರ್ಮದಲ್ಲಿ ತುರುಚೆ,ದದ್ದು, ಮರೆಹಾರಿಕೆಯ (ಅನಫೈಲಾಕ್ಟಿಕ್) ಬೇನೆ ಕಾಣಿಸಿಕೊಳ್ಳಬಹುದು. ತುರುಚೆ,ದದ್ದು (ಅರ್ಟಿಕೇರಿಯ) ಏಳುವವರು ಇದನ್ನು ಸೇವಿಸಬಾರದು. ಆ್ಯಸ್ಪಿರಿನ್ ನುಂಗಿದಾಗ ಜಠರವನ್ನು ಕೆರಳಿಸಬಹುದು. ನೂರಕ್ಕೆ 50–70 ಮಂದಿಯಲ್ಲಿ ಇದರಿಂದ ಹೊರಗಾಣದೆಯೇ ಒಳಗೊಳಗೇ ಜಠರದಿಂದ ರಕ್ತ ಸುರಿದು ಮಲದಲ್ಲಿ ರಕ್ತ ಬೀಳುವುದಕ್ಕೂ ರಕ್ತವಾಂತಿಗೂ ಎಡೆಯಾಗಬಹುದು. ಬೇಗನೆ ನುಣ್ಣಗೆ ಪುಡಿಯಾಗಿ ಚೆನ್ನಾಗಿ ಕರಗುವಂತೆ ಹೆಚ್ಚು ನೀರಿನೊಂದಿಗೆ ನುಂಗಿದರೆ ಈ ತೊಂದರೆ ತಗ್ಗುವುದು. ಮುಟ್ಟಾಗುವವರಲ್ಲಿ ಇದರಿಂದ ಇನ್ನಷ್ಟು ರಕ್ತ ಕೊರೆಯಾಗ ಬಹುದು. ಹೊಟ್ಟೆ ಹುಣ್ಣಾಗಿರುವವರು ಇದನ್ನು ಬಳಸದಿರುವುದು ಒಳ್ಳೆಯದು. ಇಂಥವರಿಗಾಗಿ, ಕರಗುವ ಆ್ಯಸ್ಪಿರಿನ್ ಇದೆ. ಇದರಲ್ಲಿ ಆ್ಯಸ್ಪಿರಿನ್ನಿನೊಂದಿಗೆ ಸೀಮೆಸುಣ್ಣವೂ ಸಿಟ್ರಿಕಾಮ್ಲವೂ (ಸಿಟ್ರಿಕ್ ಆ್ಯಸಿಡ್) ಸೇರಿವೆ. ಇದನ್ನು ನುಂಗಿದ ಮೇಲೆ, ಕೆರಳಿಸದ ಮೆಲುಪಿನ ಸುಣ್ಣದ ಆ್ಯಸ್ಪಿರಿನ್ ಆಗುತ್ತದೆ. ಮಿತಿಮೀರಿ ಸೇವಿಸಿದರೆ, ಕಿವಿಯಲ್ಲಿ ಗುಂಯ್ಗುಡಿಕೆ, ತಲೆನೋವು, ತಲೆದಿಪ್ಪಟೆ, ಕಣ್ಣುಮಂಜು, ತಬ್ಬಿಬ್ಬು, ಓಕರಿಕೆ, ವಾಂತಿ, ಭೇದಿಗಳಾಗುತ್ತವೆ. ಇದೇ ಸ್ಯಾಲಿಸಿಲೇಟುವಿಷತೆ (ಸ್ಯಾಲಿಸಿಲಿಸಂ). (ಡಿ.ಎಸ್.ಎಸ್)

ಇಷ್ಟೆಲ್ಲಾ ದುಷ್ಪರಿಣಾಮಗಳಿದ್ದರೂ ಆ್ಯಸ್ಪಿರಿನ್ನನ್ನು ವೈದ್ಯಕೀಯ ಕ್ಷೇತ್ರದಲ್ಲಿ ಹಲವು ಮುಖ್ಯ ರೋಗಗಳಿಗೆ ಉಪಯೋಗಿಸಲೇಬೇಕಾಗುತ್ತದೆ. ವ್ಯಕ್ತಿಗೆ ಹೃದಯಾಘಾತವಾಗಲು ಹಲವು ಕಾರಣಗಳಲ್ಲಿ ಒಂದಾದ, ಮಕುಟಧಮನಿ ತಡೆ (ಮೈಯೋಕಾರ್ಡಿಯಲ್ ಇನ್‌ಫಾರ್ಕ್ಷನ್)ಯು ಮತ್ತೆ ಮತ್ತೆ ಮರುಕಳಿಸದಂತೆ ತಡೆಯಲು ಆ್ಯಸ್ಪಿರಿನ್ ಉಪಯೋಗಿಸಲಾಗುತ್ತದೆ.

ಲಕ್ವ ಹೊಡೆಯಲು ಪ್ರಮುಖ ಕಾರಣ ಮಿದುಳಿನ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವುದು. ಆ್ಯಸ್ಪಿರಿನ್ ರಕ್ತ ಹೆಪ್ಪುಗಟ್ಟುವುದನ್ನು ತಡೆಯುವುದರಿಂದ, ಲಕ್ವ ಹೊಡೆದ ರೋಗಿಗಳಲ್ಲಿ ಲಕ್ವದ ಪ್ರಮಾಣವು ಹೆಚ್ಚಾಗದಂತೆ ಹಾಗೂ ದೇಹದ ಇತರ ಅಂಗಗಳಿಗೆ ಲಕ್ವವು ಹರಡದಂತೆ ತಡೆಯಲು ಆ್ಯಸ್ಪಿರಿನ್ ಉಪಯೋಗಿಸುತ್ತಾರೆ. ಲಕ್ವದಿಂದ ಗುಣ ಹೊಂದಿದವರಿಗೆ ಮತ್ತೆ ಲಕ್ವ ಹೊಡೆಯುವುದನ್ನು ತಡೆಯಲೂ ಇದನ್ನು ಉಪಯೋಗಿಸುತ್ತಾರೆ.

ಪ್ರಸವವನ್ನು ಮುಂದೂಡಲೂ ಗರ್ಭಿಣಿಯರಲ್ಲಿ ಅಧಿಕ ರಕ್ತದೊತ್ತಡವಿದ್ದಾಗಲೂ ಕೂಡ ಆ್ಯಸ್ಪಿರಿನ್ ಬಳಕೆಗೆ ಬರುತ್ತದೆ.

*

**ಆಸ್ಪೇಷಿಯ:** ಪ್ರ.ಶ.ಪೂ.ಸು. 470–410. ಅಥೆನ್ಸಿನ ರಾಜಕಾರಣಿ ಪೆರಿಕ್ಲೀಸ್‌ನ ಉಪಪತ್ನಿ, ಏಷ್ಯಮೈನರಿನ ಪಶ್ಚಿಮತೀರದಲ್ಲಿರುವ ಹನ್ನೆರಡು ಅಯೋನಿಯನ್ ಪಟ್ಟಣಗಳಲ್ಲಿ ಅತ್ಯಂತ ಮುಖ್ಯವಾದ ಮೈಲಿಟಸ್ ಈಕೆಯ ಹುಟ್ಟೂರು. ಅಲಂಕಾರಶಾಸ್ತ್ರದ ಶಾಲೆಯೊಂದನ್ನು ಸ್ಥಾಪಿಸುವ ಸಲುವಾಗಿ ಅಥೆನ್ಸಿಗೆ ಬಂದಳೆಂದು ತಿಳಿದುಬರುತ್ತದೆ. ಬುದ್ಧಿವಂತಳೂ ಸುಶಿಕ್ಷಿತಳೂ ಆಗಿದ್ದ ಈಕೆಯ ಬುದ್ಧಿಕೌಶಲ ಸಾಕ್ರಟೀಸನನ್ನು ಪ್ರಭಾವಿಸಿತಲ್ಲದೆ ದೇಹಸೌಂದರ್ಯ ಪೆರಿಕ್ಲೀಸನನ್ನು ಆಕರ್ಷಿಸಿತು. ಎರಡು ಮಕ್ಕಳ ತಂದೆಯಾದರೂ ಪೆರಿಕ್ಲೀಸ್ ತನ್ನ ಧರ್ಮಪತ್ನಿಯನ್ನು ತೊರೆದು ಆಸ್ಪೇಷಿಯಳೊಡನೆ ಸಂಬಂಧ ಬೆಳೆಸಿದ. ಪೆರಿಕ್ಲೀಸ್‌ನ ರಾಜಕೀಯ ವಿರೋಧಿಗಳಿಂದ ಈಕೆ ಅನೇಕವೇಳೆ ತೊಂದರೆಗೀಡಾಗಿದ್ದೂ ಉಂಟು. ಗುಲಾಮೀ ಕನ್ಯೆಯರನ್ನು ವೇಶ್ಯಾವೃತ್ತಿಗೆ ಎಳೆದಳೆಂಬುದು ಈಕೆಯ ಮೇಲಿದ್ದ ದೊಡ್ಡ ಆರೋಪ. ಪ್ರ.ಶ.ಪೂ. 451ರಲ್ಲಿ ಪೆರಿಕ್ಲೀಸ್ ತಾನೇ ಜಾರಿಗೆ ತಂದ ಕಾನೂನಿನ ಪ್ರಕಾರ ತಂದೆತಾಯಿಗಳಿಬ್ಬರೂ ಅಥೆನ್ಸಿನವರಾಗಿದ್ದರೆ ಮಾತ್ರ ಅವರ ಮಕ್ಕಳಿಗೆ ಅಥೆನ್ಸಿನ ಪೌರತ್ವ ಸಿಗುತ್ತಿತ್ತು. ಆಸ್ಪೇಷಿಯಳಲ್ಲಿ ತಾನು ಪಡೆದ ಮಗಳಿಗೆ ಪೌರತ್ವ ದೊರಕಿಸಲು ಪೆರಿಕ್ಲೀಸ್ ಆ ಶಾಸನವನ್ನೇ ಬದಲಿಸಬೇಕಾಯಿತು. ಧರ್ಮಶ್ರದ್ಧೆ ಇಲ್ಲದವಳೆಂಬ ಕಾರಣದಿಂದ ಈಕೆಯನ್ನು ವಿಚಾರಣೆಗೆ ಗುರಿಪಡಿಸಿದಾಗ ಪೆರಿಕ್ಲೀಸ್ ಸ್ವತಃ ಈಕೆಯ ಪರ ವಾದಿಸಿ ಈಕೆಯ ಖುಲಾಸೆಗೆ ಸಹಾಯ ಮಾಡಿದನೆಂದು ಹೇಳಲಾಗಿದೆ.

*

**ಆಸ್ಪ್ರೆ:** ಗಿಡುಗನ ಜಾತಿಗೆ ಸೇರಿದ, ಮೀನು ಹಿಡಿಯುವ ಹಕ್ಕಿ. ಪ್ರಪಂಚದ ಬಹು ಭಾಗಗಳಲ್ಲಿ ವಾಸಿಸುತ್ತದೆ. ತನ್ನ ಜಾತಿ ಮತ್ತು ಕುಲಗಳನ್ನು ಪ್ರತಿನಿಧಿಸುತ್ತ ಈಗ ಉಳಿದುಕೊಂಡಿರುವ ಹಕ್ಕಿ ಇದೊಂದೇ. ಕೆನಡ, ಸಂಯುಕ್ತ ಸಂಸ್ಥಾನಗಳು ಮತ್ತು ಮೆಕ್ಸಿಕೊಗಳಲ್ಲಿ ವಿಶೇಷವಾಗಿದೆ. ಭಾರತದಲ್ಲಿ ಆಸ್ಪ್ರೆ ಹಕ್ಕಿಯ ಒಂದು ಪ್ರಭೇದ ಕಂಡುಬರುತ್ತದೆ. ಇದರ ವೈಜ್ಞಾನಿಕ ನಾಮದ್ವಯ ಪಾಂಡಿಯನ್ ಹೇಲಿಯಾಟಿಸ್. ದಕ್ಷಿಣ ಅಮೆರಿಕದ ದಕ್ಷಿಣದ ತುದಿಗೆ ಹೋದಂತೆಲ್ಲ ಇದರ ಸುಳಿವು ಕಾಣದಾಗುತ್ತದೆ. ಮೀಂಚುಳ್ಳಿ (**ನೋಡಿ**) ಹೇಗೆ ಮೇಲಿಂದ ದುಮುಕಿ ಅಲೆಯೊಳಕ್ಕೆ ತೂರಿ ಮೀನುಗಳನ್ನು ಹಿಡಿಯುತ್ತದೋ



ಹಾಗೆ ಈ ಹಕ್ಕಿಯೂ ವೇಗದಿಂದ ನೀರೊಳಕ್ಕೆ ಹಾರಿ ಮೀನುಗಳನ್ನು ಹಿಡಿಯುತ್ತದೆ. ಕೊಕ್ಕಿನ ಬಣ್ಣ ಕಪ್ಪು, ತಲೆ ನೀಲಿ, ಕಣ್ಣು ಹಳದಿ, ಮೇಲುಮೈ ಮತ್ತು ರೆಕ್ಕೆ ಕಪ್ಪು ಕಂದು, ಗದ್ದ ಮತ್ತು ಗಂಟಲು ಬಿಳುಪು. ಇದಕ್ಕೆ ಮನುಷ್ಯರನ್ನು ಕಂಡರೆ ಸ್ವಲ್ಪವೂ ಭಯವಿಲ್ಲ. ದೊಡ್ಡ ಮರಗಳ ತುದಿಯಲ್ಲಿ ಇವು ಗೂಡುಗಳನ್ನು ಕಡ್ಡಿಗಳಿಂದ ಕಟ್ಟುತ್ತದೆ. ಕಟ್ಟಿದ ಗೂಡನ್ನು ವರ್ಷೇ ವರ್ಷೇ ಬಲಮಾಡುತ್ತವೆ. ಅದೇ ಗೂಡುಗಳಲ್ಲಿ ವಾಸಿಸುತ್ತವೆ. ವರ್ಷಕ್ಕೆ ಒಂದೇ ಸೂಲು. ಮೊಟ್ಟೆ ಬೆಳೆಯಲು 21 ದಿನ ಬೇಕು. ಮಾಸಲು ಕಂದುಬಣ್ಣದ ಮೊಟ್ಟೆಗಳು ಚೆಲುವಾಗಿ ಕಾಣುತ್ತವೆ. ಮರಿಗಳು ಚಿಕ್ಕವಾಗಿರುವಾಗ ಅವುಗಳ ತಂದೆ ತಾಯಿಗಳು ಮೀನುಗಳನ್ನು ಎಳೆ ಎಳೆಯಾಗಿ ಬಿಡಿಸಿ ಅದಕ್ಕೆ ತಿನ್ನಿಸುತ್ತವೆ. ಅಳಿಯುತ್ತಿರುವ ಈ ಹಕ್ಕಿಗಳನ್ನು ಕಾಪಾಡಲು ಅಟ್ಲಾಂಟಿಕ್ ಸಮುದ್ರದ ಕರೆಯಲ್ಲಿ ತಕ್ಕ ಏರ್ಪಾಡು ಮಾಡಲಾಗಿದೆ.

*

**ಆಸ್ಫಾಲ್ಟ್:** ಇದನ್ನು ಆಸ್‌ಫಾಲ್ಟಂ, ಮಿನರಲ್ ಪಿಚ್, ಕಪ್ಪುರಾಳಿ, ಕಲ್ಲರಗು, ಟಾರೆಣ್ಣೆ ಮುಂತಾಗಿ ಕರೆಯುತ್ತಾರೆ. ಯಾವ ತೆರನಾದ ಸ್ಪಷ್ಟ ಒಳರಚನೆಯಿರದ ಕಾರಣ ಮುದ್ದೆಯಾಗಿರುತ್ತದೆ. ಹೀಗೆಯೇ ಇದಕ್ಕೆ ನಿರ್ದಿಷ್ಟ ರಾಸಾಯನಿಕ ಸಂಯೋಜನೆಯಿಲ್ಲ. ಬಣ್ಣದಲ್ಲಿ ಕಂದು, ಕಪ್ಪು ಅಥವಾ ಅಚ್ಚಕಪ್ಪು; ಟಾರೆಣ್ಣೆಯ ಹೊಳಪು, ವಾಸನೆಯೂ ಟಾರೆಣ್ಣೆಯದೇ. ಸಾಪೇಕ್ಷಸಾಂದ್ರತೆ 1–1.8. ಕೆಲವು ಬಗೆಯ ಟಾರೆಣ್ಣೆ ಕಾಕಂಬಿಯಂತೆ ಜಿಗುಟಾದ ದ್ರವರೂಪವನ್ನು ಹೊಂದಿರುತ್ತದೆ. ಈ ಬಗೆಯ ಕಪ್ಪುರಾಳವನ್ನು ಗಾಳಿಗೊಡ್ಡಿದಾಗ ಕ್ರಮೇಣ ಗಟ್ಟಿಯಾಗುತ್ತದೆ. ಟರ್ಪೆಂಟೈನ್, ಈಥರ್ ಮತ್ತು ಆಲ್ಕೊಹಾಲ್‌ಗಳಲ್ಲಿ ಆಸ್ಫಾಲ್ಟ್ ಸುಲಭವಾಗಿ ಕರಗುತ್ತದೆ. ಇದು ಭೂಚರಿತ್ರೆಯ ನಾನಾ ಯುಗದ ಶಿಲೆಗಳಲ್ಲಿ ಕಂಡುಬಂದಿದೆ. ಸಾಮಾನ್ಯವಾಗಿ ಕಪ್ಪುರಾಳದ ವಿಸ್ತಾರವಾದ ನಿಕ್ಷೇಪಗಳು ಭೂಮಿಯ ಮೇಲ್ಭಾಗದಲ್ಲಿ ಅಥವಾ ಹೆಚ್ಚು ಆಳವಿಲ್ಲದ ಪ್ರದೇಶಗಳಲ್ಲಿ ಕಂಡುಬಂದಿದೆ. ಬಲುಮಟ್ಟಿಗೆ ಇದು ಬಿಟ್ಯುಮಿನಸ್ ಪದಾರ್ಥ ಅಥವಾ ಸಸ್ಯಾವಶೇಷಗಳು ಶೇಖರವಾಗಿರುವ ಪ್ರದೇಶಗಳಲ್ಲಿ ಸಿಗುತ್ತದೆ.

ಇಸ್ರೇಲಿನ ಡೆಡ್ ಸೀ (ಮೃತ ಸಮುದ್ರ) ಸುತ್ತಮುತ್ತ ಕಪ್ಪುರಾಳದ ಉತ್ತಮ ನಿಕ್ಷೇಪಗಳಿವೆ. ಇತಿಹಾಸಕಾರರು ಇದನ್ನು ಆಸ್‌ಫಾಲ್ಟೈಟಿಸ್ ಸರೋವರವೆಂದೇ ಹೆಸರಿಸಿದ್ದಾರೆ. ಟ್ರಿನಿಡ್ಯಾಡ್‌ನಲ್ಲಿ ಕಪ್ಪುರಾಳದ ಸರೋವರವೊಂದಿದೆ. ಇದರ ಸುತ್ತಳತೆ ಸುಮಾರು ಒಂದೂವರೆ ಕಿ.ಮೀ. ಸರೋವರ ಮಧ್ಯ ಭಾಗ ಉಷ್ಣತೆಯಿಂದ ಕೂಡಿ ದ್ರವರೂಪವಾಗಿ ಇದೆ. ಅಂಚುಗಳು ತಣ್ಣಗೆ ಮತ್ತು ಘನರೂಪದಲ್ಲಿ ಇವೆ. ಈ ಪ್ರದೇಶದಲ್ಲಿ ಸಮೃದ್ಧವಾದ ಸಸ್ಯಸಂಪತ್ತನ್ನೂ ಹೆಮ್ಮರಗಳನ್ನೂ ಕಾಣಬಹುದು. ಅಂದರೆ ಇದು ಇರುವ ಭೂಮಿ ಫಲವತ್ತಾದುದು. ಸಾಮಾನ್ಯವಾಗಿ ತೈಲನಿಕ್ಷೇಪಗಳಿರುವ ಕಡೆ ಆಸ್ಫಾಲ್ಟನ್ನು ವಿವಿಧ ಪ್ರಮಾಣಗಳಲ್ಲಿ ದೊರಕಿಸಿಕೊಳ್ಳಬಹುದು. ಕಪ್ಪುರಾಳದಲ್ಲಿ ಹಲವಾರು ಬಗೆಗಳನ್ನು ಭೂವಿಜ್ಞಾನಿಗಳು ಗುರುತಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದವು–ಎಲಾಟರೈಟ್, ಆಲ್ಬರ್ಟೈಟ್, ಗ್ರಹಾಮೈಟ್, ಗಿಲ್ಸನೈಟ್, ನಿಗ್ರೈಟ್, ಥೊಕೊಲೈಟ್. (ಬಿ.ವಿ.ಜಿ.)

**ಆಸ್ಮಾಸಿಸ್:** ನೈಸರ್ಗಿಕ ಅಥವಾ ಕೃತಕ ಪೊರೆಯ (ಮೆಂಬ್ರೇನ್) ಮೂಲಕ ದ್ರವದ ಸ್ವಯಂವಹನ. ಪೊರೆ ಬೇರ್ಪಡಿಸಿರುವ ದ್ರವಗಳ ರಚನೆಗಳನ್ನು ಅವಲಂಬಿಸಿ ವಹನದ ದಿಕ್ಕೂ ಬದಲಾಗುತ್ತದೆ. ನೀರಿನಲ್ಲಿ ಲೀನವಾದ ಒಂದು ವಸ್ತು ದ್ರಾವಣದ ಎಲ್ಲೆಡೆಯಲ್ಲೂ ಏಕಪ್ರಕಾರ ವ್ಯಾಪಿಸಿರುವುದು (ಉದಾಹರಣೆಗೆ ನೀರಿನಲ್ಲಿ ಸಕ್ಕರೆಯ ದ್ರಾವಣ). ಇಂಥ ಒಂದು ದ್ರಾವಣದ ಎರಡು ಭಾಗಗಳನ್ನು ತೆಗೆದುಕೊಳ್ಳಬೇಕು. ಒಂದನೆಯದು ಪ್ರಬಲ, ಎರಡನೆಯದು ದುರ್ಬಲವೆಂದು ಭಾವಿಸಬಹುದು. ಇವೆರಡನ್ನೂ ದ್ರವದ ಅಣುಗಳನ್ನು ಮಾತ್ರ ಒಳಬಿಡುವ, ವಿಲೀನ ವಸ್ತುವಿನ (ಸಲ್ಯೂಟ್) ಅಣುಗಳನ್ನು ಒಳಬಿಡದಂಥ ಒಂದು ಪೊರೆಯಿಂದ ಪ್ರತ್ಯೇಕಿಸಿದಾಗ ದುರ್ಬಲ ದ್ರಾವಣದ ದ್ರವದ ಅಣುಗಳು ಮಾತ್ರ ಪೊರೆಯ ಮುಖಾಂತರ ಹಾದು ಪ್ರಬಲ ದ್ರಾವಣದೆಡೆಗೆ ಹೋಗುವುವು. ಇಂಥ ಪೊರೆಯ ಹೆಸರು ಅರ್ಧಪಾರಗಮ್ಯ ಪೊರೆ (ಸೆಮಿ ಪರ್ಮಿಯಬಲ್ ಮೆಂಬ್ರೇನ್). ಪಾರ್ಚ್‌ಮೆಂಟ್ ಕಾಗದ, ಸೆಲೊಫೇನ್ ಅಥವಾ ಸೂಕ್ಷ್ಮಚರ್ಮದ ಪೊರೆಗಳನ್ನು ಈ ಕಾರ್ಯದಲ್ಲಿ ಉಪಯೋಗಿಸ ಬಹುದಾದರೂ ನಿಖರ ಪ್ರಯೋಗಗಳಲ್ಲಿ ಅವನ್ನು ಬಳಸಲಾಗದು. ಕಾರಣ ಅಲ್ಲಿ ಉದ್ಭವಿಸುವ ಸಂಮರ್ದವನ್ನು ತಡೆದು ನಿಲ್ಲುವ ಚೈತನ್ಯ ಅವುಗಳಿಗಿರುವುದಿಲ್ಲ.

ಅಲ್ಲದೆ ಅವುಗಳ ಮುಖಾಂತರ ವಿಲೀನವಾದ ವಸ್ತುವಿನ ಅಣುಗಳು ಸ್ವಲ್ಪಮಟ್ಟಿಗೆ ಹಾದುಹೋಗುತ್ತವೆ. ಅಂದರೆ ಅವು ಪೂರ್ಣ ಅರ್ಧಪಾರಗಮ್ಯ ಪೊರೆಗಳಲ್ಲ. ಲೋಳೆಯಂತಿರುವ ತಾಮ್ರದ ಫೆರೋಸೈಯನೈಡನ್ನು ಸರಂಧ್ರ ಬಟ್ಟಲಿನ ಮೇಲೆ ಒತ್ತರಿಸಿ ಪಡೆಯುವ ಪೊರೆಯೇ ಅತ್ಯುತ್ತಮ. ಇದು ಸೂಕ್ಷ್ಮ ಪ್ರಯೋಗಗಳಲ್ಲಿ ಉಪಯೋಗಿಸಲು ಯೋಗ್ಯ. ಈ ರೀತಿಯ ಪೊರೆಯನ್ನು ಅಳವಡಿಸಿಕೊಂಡು ಡಬ್ಲ್ಯು ಫೆಫರ್ ಮೊಟ್ಟಮೊದಲಿಗೆ 1877ರಲ್ಲಿ ಆಸ್ಮಾಸಿಸ್ಸನ್ನು ಅಭ್ಯಸಿಸಿದ. ಇದೇ ರೀತಿ ಅಮೆರಿಕದ ಮೋರ್ಸ್ ಮತ್ತು ಫ್ರೇಜರ್ 1914 ರಲ್ಲೂ ಇಂಗ್ಲೆಂಡಿನ ಬರ್ಕಲೇ ಮತ್ತು ಹಾರ್ಟಲೇ 1919ರಲ್ಲೂ ಆಸ್ಮಾಟಿಕ್ ಪ್ರಯೋಗಗಳನ್ನು ಮಾಡಿದರು. ಇವುಗಳ ಪರಿಣಾಮವಾಗಿ ಆಸ್ಮಾಸಿಸ್ ಸೂತ್ರ ನಿರೂಪಿತವಾಯಿತು: ಭಿನ್ನಸಾಂದ್ರತೆಗಳ ಎರಡು ದ್ರವಗಳನ್ನು ಒಂದು ಅರ್ಧಪಾರಗಮ್ಯ ಪೊರೆ ಪ್ರತ್ಯೇಕಿಸಿದ್ದರೆ ಸಾಂದ್ರತೆಗಳು ಸಮಾನವಾಗುವವರೆಗೂ ದುರ್ಬಲ ದ್ರವ ಪ್ರಬಲ ದ್ರವದೆಡೆಗೆ ಪ್ರವಹಿಸುತ್ತದೆ.

ಒಂದು ಆಸ್ಮಾಟಿಕ್ ವಹನದ ಕಾರಣ ಆ ಎರಡು ದ್ರವಗಳ ಸಂಮರ್ದಗಳ ವ್ಯತ್ಯಾಸ, ಪೊರೆಯ ಎರಡೂ ಪಕ್ಕಗಳಲ್ಲಿ ದ್ರವಗಳ ಪ್ರಬಲತೆ ಒಂದೇ ಆಗುವವರೆಗೂ – ಅಂದರೆ ಅಲ್ಲಿದ್ದ ಸಂಮರ್ದ ಸಮಸ್ಥಿತಿಗೆ ಬರುವವರೆಗೂ – ಈ ವಹನ ನಡೆಯುತ್ತದೆ. ದ್ರವದ ಅಣುಗಳು ಪೊರೆಯಿಂದಾಚೆ ಹಾದು ಹೋಗುವುದನ್ನು ತಡೆಗಟ್ಟಲು ಅಂದರೆ ಸ್ವಾಭಾವಿಕ ಆಸ್ಮಾಟಿಕ್ ವಹನವನ್ನು ನಿಲ್ಲಿಸಲು ಪ್ರಯೋಗಿಸಬೇಕಾದ ಕನಿಷ್ಠ ಬಾಹ್ಯ ಸಂಮರ್ದದ ಹೆಸರು ಆಸ್ಮಾಟಿಕ್ ಸಂಮರ್ದ. ಇದರ ಬೆಲೆ 273 ವಾಯುಮಾನಗಳ ವರೆಗೂ (ಅಟ್‌ಮಾಸ್ಫಿಯರ್ಸ್) ಇರುವುದನ್ನು ಸರಂಧ್ರಬಟ್ಟಲ ಪ್ರಯೋಗಗಳಿಂದ ತಿಳಿಯಲಾಗಿದೆ.

ಒಂದು ದ್ರಾವಣದ ಆಸ್ಮಾಟಿಕ್ ಸಂಮರ್ದ ವಿಲೀನಕ ವಸ್ತುವಿನ ಅಣುಗಳ ಸ್ವಭಾವವನ್ನು ಅವಲಂಬಿಸಿರುವುದಿಲ್ಲ. ಅದು ವಿಲೀನವಾದ ವಸ್ತುವಿನ ಪ್ರಬಲತೆಗೆ ಅನುಗುಣವಾಗಿರುತ್ತದೆ. ಸಮನಾದ ಅಣುಪ್ರಬಲತೆಯುಳ್ಳ ಭಿನ್ನ ದ್ರಾವಣಗಳು ಸಮನಾದ ಆಸ್ಮಾಟಿಕ್ ಸಂಮರ್ದ




**ಒಂದೇ ಗಾತ್ರದ 1% ಮತ್ತು 5% ಸಕ್ಕರೆಯ ದ್ರಾವಣಗಳನ್ನು (A ಮತ್ತು B ಎಡಗಡೆಯ ಚಿತ್ರ) ಒಂದು ಅರ್ಧ ಪಾರಗಮ್ಯ ಪೊರೆಯಿಂದ ಬೇರ್ಪಡಿಸಿದೆ. ಪೊರೆಯ ರಂಧ್ರಗಳು ನೀರಿನ ಅಣುಗಳನ್ನು ಮಾತ್ರ ಹಾದುಹೋಗಲು ಬಿಡುತ್ತವೆ. ಸಕ್ಕರೆಯ ಅಣುಗಳನ್ನು ಬಿಡುವುದಿಲ್ಲ. ನೀರಿನ ಅಣುಗಳು ದುರ್ಬಲ ದ್ರಾವಣದಿಂದ ಪೊರೆಯನ್ನು ದಾಟಿ ಪ್ರಬಲ ದ್ರಾವಣಕ್ಕೆ ಬಂದಿರುವುದನ್ನು ಬಲಗಡೆಯ ಚಿತ್ರದಲ್ಲಿ ತೋರಿಸಿದೆ. ಅಲ್ಲಿನ ದ್ರಾವಣಮಟ್ಟ ಏರಿದೆ. ದುರ್ಬಲ ದ್ರಾವಣದ ಮಟ್ಟ ಕಡಿಮೆಯಾಗಿದೆ.**

ಪಡೆದಿರುತ್ತವೆ. ಒಂದು ದ್ರಾವಣದ ಆಸ್ಮಾಟಿಕ್ ಸಂಮರ್ದ ನಿರಪೇಕ್ಷ ಶೂನ್ಯ (ಆಬ್ಸಲ್ಯೂಟ್ ಸ್ಹೀರೋ) ಉಷ್ಣತೆಯ ಅನುಲೋಮ ಪ್ರಮಾಣದಲ್ಲಿರುತ್ತವೆ. ಈ ಎಲ್ಲ ಅಂಶಗಳು ವ್ಯಾಂಟ್ ಹಾಫ್‌ನ ದುರ್ಬಲ ದ್ರಾವಣಗಳ ವಾದಕ್ಕೆ ನಾಂದಿಯಾಗಿವೆ. ಅವನ ಪ್ರಕಾರ ದುರ್ಬಲ ದ್ರಾವಣದಲ್ಲಿ ವಿಲೀನವಾದ ವಸ್ತು ಒಂದು ಅನಿಲದಂತೆ ವರ್ತಿಸುತ್ತದೆ. ವಿಲೀನವಸ್ತು ಆ ದ್ರಾವಣದ ಗಾತ್ರದೆಲ್ಲೆಡೆಯಲ್ಲೂ ಏಕಸಮವಾಗಿ ವ್ಯಾಪಿಸಿರುತ್ತದೆ; ಮತ್ತು ಬಾಯಲ್ಲನ ಮತ್ತು ಚಾರ್ಲ್ಸ್‌ನ ನಿಯಮಗಳನ್ನು ಅನುಸರಿಸುತ್ತದೆ. ಒಂದು ಶುದ್ಧದ್ರವ ಮತ್ತು ದ್ರಾವಣಗಳ ಮಧ್ಯದಲ್ಲಿ ಮುಚ್ಚಿರುವ ಸ್ಥಳದಲ್ಲಿನ ಗಾಳಿ ಅವೆರಡರ ಮಧ್ಯೆ ಅರ್ಧಪಾರಗಮ್ಯ ಪೊರೆಯಾಗಿ ವರ್ತಿಸಬಹುದು. ಶುದ್ಧ ನೀರನ್ನು ಒಂದು ಬೀಕರಿನ ಅರ್ಧ ಭಾಗದಲ್ಲಿ ತುಂಬಿ ಮತ್ತೊಂದು ಬೀಕರಿನಲ್ಲಿ ಅರ್ಧಭಾಗ ಒಂದು ದ್ರಾವಣ ತುಂಬಿ ಎರಡನ್ನೂ ಒಂದು ಘಂಟಾಪಾತ್ರೆಯಿಂದ ಮುಚ್ಚಿ ಸ್ವಲ್ಪ ಕಾಲ ಬಿಟ್ಟು ನೋಡಿದರೆ ಅನಿಲರೂಪದಲ್ಲಿ ನೀರು ಗಾಳಿಯ ಮುಖಾಂತರ ದ್ರಾವಣಕ್ಕೆ ಪಸರಿಸಿರುವುದು ಗೋಚರವಾಗುತ್ತದೆ. ಆಸ್ಮಾಟಿಕ್ ಸಂಮರ್ದಕ್ಕೆ ನೇರ ಸಂಬಂಧ ಹೊಂದಿರುವ ಅನಿಲ ಸಂಮರ್ದಗಳಲ್ಲಿನ ವ್ಯತ್ಯಾಸವೇ ಈ ಕ್ರಿಯೆಗೆ ಕಾರಣ.

ಆಸ್ಮಾಟಿಕ್ ಕ್ರಿಯೆಯನ್ನು ವಿವರಿಸುವ ಅನೇಕ ಸಿದ್ಧಾಂತಗಳನ್ನು ಮುಂದಿಡಲಾಗಿದೆ. ಆದರೆ ಅವುಗಳ ಪೈಕಿ ಯಾವುದೊಂದೂ ಎಲ್ಲ ಸಂದರ್ಭಗಳಿಗೂ ಅನ್ವಯಿಸುವುದಿಲ್ಲ. ಹೀಗಾಗಿ ಯಾವ ಒಂದು ಸಿದ್ಧಾಂತವನ್ನೂ ಸಾರ್ವತ್ರಿಕವಾಗಿ ತಜ್ಞರು ಒಪ್ಪಿಕೊಂಡಿಲ್ಲ. ಕ್ಯಾಲ್ಸಿಯಂ ಸಲ್ಫೇಟ್‌ನಂಥ ($CaSO_4 . 2H_2O$) ಹರಳುಗಳ ಮುಖಾಂತರವೂ ನೀರು ಹಾದು ಹೋಗುತ್ತದೆ. ಏಕೆಂದರೆ ಆ ಹರಳು ನೀರನ್ನು ಪ್ರಬಲ ದ್ರಾವಣಕ್ಕೆ ಬಿಟ್ಟುಕೊಡುತ್ತದೆ. ಹಾಗೆ ಕಳೆದುಕೊಂಡ ನೀರಿನ ಅಂಶವನ್ನು ಶುದ್ಧ ದ್ರವದಿಂದ ಪಡೆದ ನೀರಿನ ಅಣುಗಳು ತುಂಬಿಕೊಡುವುದು ಬಹುಶಃ ಕಾರಣವಿರಬಹುದು. ಯಾವ ಪೊರೆಯಲ್ಲಿ ದ್ರವ ಹೆಚ್ಚಾಗಿ ಕರಗುತ್ತದೆಯೋ ಆ ಪೊರೆಯ ಮುಖಾಂತರವೂ ಆಸ್ಮಾಟಿಕ್ ಕ್ರಿಯೆ ಅತ್ಯಂತ ವೇಗದಲ್ಲಿ ನಡೆಯುತ್ತದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಪೊರೆಯ ಮೇಲೆ ದ್ರವದ ಅಧಿಶೋಷಣೆ (ಅಡ್‌ಸಾರ್ಪ್‌ಷನ್) ಸಹ ಆಸ್ಮಾಟಿಕ್ ಕ್ರಿಯೆಗೆ ಕಾರಣವಾಗಬಹುದು. ಅರ್ಧಪಾರಗಮ್ಯ ಪೊದೆಯಿಂದ ಬೇರ್ಪಡಿಸಿರುವ ಎರಡು ದ್ರಾವಣಗಳ ಮಧ್ಯೆ ಯಾವಾಗ ಎರಡೂ ದಿಕ್ಕುಗಳಲ್ಲೂ ಆಸ್ಮಾಟಿಕ್ ಚಲನೆ ಇರುವುದಿಲ್ಲವೋ ಆಗ ಅವನ್ನು ಐಸೊಟಾನಿಕ್ ದ್ರಾವಣಗಳು ಎನ್ನುತ್ತಾರೆ. ಕೆಂಪು ರಕ್ತಕಣಗಳು 0.85% ಉಪ್ಪು ನೀರಿನಲ್ಲಿರಿಸಿದಾಗ ಅವು ಸುಕ್ಕಾಗುವುದಿಲ್ಲ ಅಥವಾ ಉಬ್ಬುವುದೂ ಇಲ್ಲ. ಅಂದರೆ ಆ ನಾರ್ಮಲ್ ಉಪ್ಪು ನೀರಿನ ದ್ರಾವಣ ಕೆಂಪು ರಕ್ತಕಣದೊಡನೆ ಐಸೊಟಾನಿಕ್ ಆಗಿದೆ ಎಂದರ್ಥ. ರಕ್ತಕ್ಕೆ ಸೇರಿಸುವ ದ್ರಾವಣಗಳಾಗಲೀ, ಸೂಕ್ಷ್ಮಶರೀರ ಜೀವಕಣಗಳೊಡನೆ ಇಡುವ ದ್ರಾವಣಗಳಾಗಲೀ ಜೀವಕಣಗಳೊಡನೆ ಐಸೊಟಾನಿಕ್ ಆಗಿರಬೇಕಾದದ್ದು ಬಲು ಮುಖ್ಯ. ಒಂದು ಜೀವಕಣದ ಆಸ್ಮಾಟಿಕ್ ಸಂಮರ್ದಕ್ಕಿಂತ ಹೆಚ್ಚು ಸಂಮರ್ದ ಪಡೆದಿರುವ ದ್ರಾವಣವನ್ನು ಜೀವಕಣಕ್ಕೆ ಹೋಲಿಸಿದಾಗ ಆ ದ್ರಾವಣ ಹೈಪರ್‌ಟಾನಿಕ್ ಎನಿಸುತ್ತದೆ. ಈ ಸಂದರ್ಭದಲ್ಲಿ ಜೀವಕಣದಿಂದ ಹೈಪರ್‌ಟಾನಿಕ್ ದ್ರಾವಣದ ಕಡೆಗೆ ಆಸ್ಮಾಟಿಕ್ ಕ್ರಿಯೆ ಆಗುತ್ತಿರುತ್ತದೆ. ಹೀಗಾಗುವುದರಿಂದ ಜೀವಕಣ ಸುಕ್ಕಾಗಿ ಜೋತು ಬೀಳುತ್ತದೆ (ಪ್ಲಾಸ್ಮೋಲಿಸಿಸ್). ಹಾಗೆಯೇ ಅತಿ ಹೆಚ್ಚು ಗೊಬ್ಬರ ಅಥವಾ ಉಪ್ಪು ದ್ರಾವಣದಿಂದ ಸಸಿಗಳ ಬೇರುಗಳು ಆವೃತವಾದಾಗ ಆ ಸಸಿಗಳು ಬಾಡುತ್ತವೆ. ಒಂದು ಜೀವಕಣದ ಆಸ್ಮಾಟಿಕ್ ಸಂಮರ್ದಕ್ಕಿಂತ ಕಡಿಮೆ ಸಂಮರ್ದ ಪಡೆದಿರುವ ದ್ರಾವಣವನ್ನು ಜೀವಕಣಕ್ಕೆ ಹೋಲಿಸಿದಾಗ ಆ ದ್ರಾವಣ ಹೈಪೊಟಾನಿಕ್ ಎನಿಸುತ್ತದೆ. ಇಲ್ಲಿ ದ್ರಾವಣದಿಂದ ಜೀವಕಣದ ಕಡೆಗೆ ಆಸ್ಮಾಟಿಕ್‌ಕ್ರಿಯೆ ಆಗುತ್ತಿರುತ್ತದೆ. ತತ್ಪರಿಣಾಮವಾಗಿ ಜೀವಕಣ ಉಬ್ಬುತ್ತದೆ ಮತ್ತು ಸಾಧ್ಯವಾದಲ್ಲಿ ಜೀವಕಣದ ಪೊರೆಯನ್ನು ಹರಿದು ಹಾಕುತ್ತದೆ (ಪ್ಲಾಸ್ಮೋಪ್ಟಿಸಿಸ್).

ಪ್ರಾಣಿಗಳ ಮತ್ತು ಸಸ್ಯಗಳ ಜೀವನದಲ್ಲಿ ಆಸ್ಮಾಸಿಸ್‌ನ ಪಾತ್ರ ಪ್ರಮುಖವಾದದ್ದು. ಸಸ್ಯಗಳ ಬೇರಿನಿಂದ ನೀರು ಎಲೆಗಳಿಗೆ ತಲಪುವುದಕ್ಕೆ ಆಸ್ಮಾಸಿಸ್ ಕ್ರಿಯೆಯೂ ಒಂದು ಕಾರಣ. ಸಸ್ಯದ ಬೇರು ಅಥವಾ ಕಾಂಡದಲ್ಲಿ ಅದರ ಅಸಂಖ್ಯಾತ ಕಣಗಳೆಂಬುವು ಅತಿಸೂಕ್ಷ್ಮ ಪೊರೆಯುಳ್ಳ ಕೋಶಗಳಿಂದ ಆವರಿಸಲ್ಪಟ್ಟಿದ್ದು ಹೊರಗಣ ಅನಿಲ ದ್ರವಗಳು ಒಳಗೂ ಒಳಗಿನವು ಹೊರಗೂ ಹೋಗಬಲ್ಲಂಥ ಪೊರೆಯುಳ್ಳವು, ಆ ಪೊರೆಗಳನ್ನು ಕಣದ ಗಾತ್ರಕ್ಕೆ ಹೋಲಿಸಿದಲ್ಲಿ ಅವು ಸಾಕಷ್ಟು ವಿಶಾಲವಾಗಿರುವುದರಿಂದ ಆಸ್ಮಾಸಿಸ್‌ಗೆ ಬಲು ಅನುಕೂಲವಾಗಿದೆ. ಬೇರಿನ ಕುಡಿಯಲ್ಲಿರುವ ರೋಮಗಳು ನೆಲದೊಳಕ್ಕೆ ಚಾಚುತ್ತ ತಮಗೆ ನೀರು ದೊರೆಯುವ ತನಕವೂ ಮುಂದೊತ್ತಿ ಹೋಗುವಾಗ ನೀರೂ ಅದರಲ್ಲಿ ವಿಲೀನವಾಗಿರುವ ಯಾವುದೇ ಲವಣಗಳೂ ಸಾರಗಳೂ ಆಸ್ಮಾಸಿಸ್ ಆಗುವುದಕ್ಕೆ ಸಾಧ್ಯವಾಗುತ್ತದೆ. ಬೇರಿನ ಹೊರಮೈಯಿಂದ ಒಳಗಿನ ತಿರುಳಿನ ಕಡೆಗೆ ಈ ದ್ರವಗಳು ಬರಬೇಕಾದರೆ ಪ್ರತಿಯೊಂದು ಕಣದ ಕೋಶವನ್ನೂ ನುಗ್ಗಿ ಆಚೆಂದೀಚೆ ಹರಿಯುತ್ತಿರ ಬೇಕಾಗುತ್ತದೆ. ಹೀಗೆ ಬೇರುಗಳ ನಾಳಗಳಲ್ಲಿ ಕಲೆತ ನೀರು ವಾಯುವಿನ ಸಂಮರ್ದ ಮತ್ತು ಆಸ್ಮಾಸಿಸ್‌ನಿಂದ ಮೇಲಕ್ಕೇರಿ ಎಲೆಗಳನ್ನು ತಲಪುತ್ತದೆ. ನಮ್ಮ ಶರೀರದಲ್ಲಿ ಕಣಗಳಿಂದ ಕಣಗಳಿಗೆ ಇದೇ ರೀತಿಯ ಆಸ್ಮಾಸಿಸ್ ನಡೆಯುತ್ತದೆ. ನಮ್ಮ ರಕ್ತ ಒಯ್ಯುವ ಆಹಾರ ವಿವಿಧ ಅವಯವಗಳ ಕಣಗಳ ಬಳಿಗೆ ಹೋದಾಗ ಇದೇ ಬಗೆಯಲ್ಲಿ ಆ ಕಣಗಳಿಗೆ ಆಹಾರ ಸಿಗುತ್ತದೆ. ಕಣಗಳಲ್ಲಿ ದಹನವಾಗಿ ಉಂಟಾದ ಕಾರ್ಬನ್ ಡೈಆಕ್ಸೈಡ್ ಹೀಗೆಯೇ ರಕ್ತವನ್ನು ಸೇರುತ್ತದೆ. ಅಲ್ಲಿಂದ ಮುಂದೆ ಶ್ವಾಸಕೋಶದ ವಾಯುವಿಗೆ ಪಸರಿಸುತ್ತದೆ. ಮೂತ್ರವಿಸರ್ಜನೆ, ಕಣಕೂಟ ಮತ್ತು ಅದರ ಆ ವೃತ್ತದೊಡನೆ ನಡೆಯುವ ಪೋಷಕ ವಸ್ತುಗಳ (ನ್ಯೂಟ್ರಿಯೆಂಟ್ಸ್) ಮತ್ತು ಕಲ್ಮಷಗಳ ವಿನಿಮಯ ಕ್ರಿಯೆ, ಜೀವರಸ ಪರಿಚಲನೆ ಇನ್ನೂ ಮುಂತಾದ ಜೀವ ವ್ಯಾಪಾರಗಳಲ್ಲೆಲ್ಲ ಆಸ್ಮಾಸಿಸ್ ಮುಖ್ಯ ಪಾತ್ರವಹಿಸುತ್ತದೆ. ಜೀವಕಣಗಳ ಒಳಹೊಕ್ಕು ಹರಡಿಕೊಳ್ಳುವ ಕರಗುವ ವಸ್ತುಗಳು, ಗಾತ್ರ ಬದಲಾವಣೆಗೆ ಕಾರಣವಾಗುತ್ತವೆ. ಈ ಬದಲಾವಣೆಯನ್ನು ಜೀವಕಣ ಪಾರಗಮ್ಯತೆಯ (ಸೆಲ್‌ಪರ್ಮಿಯೆಬಿಲಿಟಿ) ಪರಿಮಾಣ ವಿಶ್ಲೇಷಣಗಳ ಅಳತೆಯಲ್ಲಿ ಅಳವಡಿಸಿಕೊಳ್ಳುತ್ತಾರೆ. ಕೆಲವೊಂದು ಔಷಧಗಳು ಜೀವಕಣ ಪಾರಗಮ್ಯತೆಯನ್ನು ಬದಲಾಯಿಸುವ ಸಾಮರ್ಥ್ಯವುಳ್ಳವು. ರಕ್ತ ಸೋರುವ ಲೋಮ ರಕ್ತನಾಳಗಳ ಮುಖಾಂತರ ಸಂಮರ್ದಕ್ಕೆ ಒಳಪಟ್ಟು ಹರಿದು ಹೋಗುತ್ತಿರುವಾಗ ಪ್ಲಾಸ್ಮವನ್ನು ಕಳೆದುಕೊಳ್ಳುವುದಿಲ್ಲ. ಇದು ಸಸ್ತನಿ ಪ್ರಾಣಿಗಳ ಶರೀರವಿಜ್ಞಾನದಲ್ಲಿ ಒಂದು ವಿಶಿಷ್ಟ ಅಂಶ. ಪ್ರೋಟೀನ್ ರಹಿತ ದ್ರಾವಣದ ಹೊರಸೋಸಿಕೆ (ಫಿಲ್‌ಟ್ರೇಷನ್) ಮತ್ತು ಒಳಹೋಗುವ ಆಸ್ಮಾಸಿಸ್‌ಗಳೆರಡರ ನಡುವೆ ಒಂದು ಸಮಸ್ಥಿತಿ ಏರ್ಪಟ್ಟಿದೇ ಅದಕ್ಕೆ ಕಾರಣವೆಂದು ಇ.ಎಚ್.ಸ್ಟಾರ್ಲಿಂಗ್‌ನ ಅಭಿಪ್ರಾಯ. ಕೆಲವು ಪ್ರಾಣಿಗಳ ಜೀವಕಣಗಳು

ನೀರನ್ನು ತಮ್ಮ ದೇಹದೊಳಕ್ಕೆ ಹೀರಿಕೊಳ್ಳುವಲ್ಲಿ ಕೂಡ ಆಸ್ಮಾಸಿಸ್ ಕ್ರಿಯೆಯಿಂದ ಸಾಧ್ಯವಾಗಿದೆ. ಆಸ್ಮಾಟಿಕ್ ಸಂಮರ್ದದ ನೆರವಿನಿಂದ ವಸ್ತುಗಳ ಅಣುತೂಕ ನಿರ್ಣಯ ಸಾಧ್ಯವಾಗಿದೆ. *

**ಆಸ್ಮಿಯಂ:** ರಾಸಾಯನಿಕ ಲೋಹಧಾತು; ಸಂಕೇತ ಆ; ಆವರ್ತ ಕೋಷ್ಟಕದಲ್ಲಿ ಇದರ ಸಂಖ್ಯೆ 76; ಪರಮಾಣುತೂಕ 190.2; ಸಹಜಲಭ್ಯ ಸ್ಥಿರ ಸಮಸ್ಥಾನಿಗಳು (ಐಸೊಟೋಪ್ಸ್) 184, 186, 187, 188, 189, 190, 192. ಇವುಗಳಲ್ಲಿ 192 ಸಮಸ್ಥಾನಿ ಪ್ರಕೃತಿಯಲ್ಲಿ ದೊರೆಯುವ ಲೋಹದಲ್ಲಿ 41% ಇರುತ್ತದೆ; ಉಳಿದವು ವಿವಿಧ ಪ್ರಮಾಣಗಳಲ್ಲಿ ಲಭಿಸುತ್ತವೆ. ಇತರ ಸಮಸ್ಥಾನಿಗಳು 182, 183, 185, 191, 193, 194. ಇವು ರಶ್ಮಿ ವಿಕಿರಣತೆ (ರೇಡಿಯೋ ಆಕ್ಟಿವಿಟಿ) ಉಳ್ಳವಾದ್ದರಿಂದ ಅಸ್ಥಿರವಾಗಿವೆ. ಆಸ್ಮಿಯಮ್ಮಿನ ದ್ರವೀಕರಿಸುವ ಉಷ್ಣತೆ $2000^0$ ಸೆ.ಗಿಂತ ಹೆಚ್ಚು; ಕುದಿಯುವ ಉಷ್ಣತೆ $500^0$ ಸೆ. ಎಲೆಕ್ಟ್ರಾನಿಕ್ ವಿನ್ಯಾಸ.

$1s^2\ 2s^2\ 2p^6\ 3s^2\ 3p^6\ 3d^{10}\ 4s^2\ 4p^6\ 4d^{10}\ 4f^{14}\ 5s^2\ 5p^6\ 5d^6\ 6s^2$

ಆಸ್ಮಿಯಂ ಒಂದು ಗಡುಸಾದ (ರಿಫ್ರಾಕ್ಟರಿ) ಲೋಹವಾದರೂ ಸಾಮಾನ್ಯ ಉಷ್ಣತೆಯಲ್ಲಿಯೂ ಆಕ್ಸಿಜನ್ನಿನೊಂದಿಗೆ ಬೆರೆತು ನೀಲಿಬಣ್ಣದ ಆಕ್ಸೈಡನ್ನು ಉತ್ಪಾದಿಸುತ್ತದೆ. ಈ ಸಂಯುಕ್ತ ಲೋಹದಮೇಲೆ ತೆಳು ಪದರದಂತಿರುತ್ತದೆ. ಗಾಳಿಯಲ್ಲಿ ಕಾಸಿದಾಗ ಆಸ್ಮಿಯಂ ಆಕ್ಸೈಡ್ ಸುಲಭವಾಗಿ ಆಸ್ಮಿಯಂ ಟೆಟ್ರಾಕ್ಸೈಡ್ ($O_sO_4$) ಎಂಬ ವಸ್ತುವಿಗೆ ಪರಿವರ್ತನೆಯಾಗುತ್ತದೆ. $130^0$ ಸೆ. $O_sO_4$ ನಲ್ಲಿ ಕುದಿಯುತ್ತದೆ ಮತ್ತು ನಿರ್ವರ್ಣವಾದ ಮತ್ತು ಕ್ಲೋರೀನ್‌ನಂತೆ ವಾಸನೆಯುಳ್ಳ ಅತ್ಯಂತ ವಿಷಯುಕ್ತ ಅನಿಲವಾಗಿ ಪರಿವರ್ತಿತವಾಗುತ್ತದೆ. ಮೂಗಿನ ಲೋಳೆಪೊರೆ (ಮ್ಯೂಕಸ್ ಮೆಂಬ್ರೇನ್) ಮತ್ತು ಕಣ್ಣುಗಳಿಗೆ ಇದು ಅಪಾಯಕಾರಿ. ಆಸ್ಮಿಯಂ ನೈಟ್ರಿಕ್ ಆಮ್ಲದಲ್ಲಿ ಸುಲಭವಾಗಿ ವಿಲೀನವಾಗುತ್ತದೆ. ಈ ಲೋಹದ ವೇಲೆನ್ಸಿ 2+, 3+, 4+, 6+,ಮತ್ತು 8+ ಆಗಿರುವುದರಿಂದ ಅನೇಕ ಬಗೆಯ ಕ್ಲಿಷ್ಟ ರಚನೆಯುಳ್ಳ ಸಂಯುಕ್ತಗಳನ್ನು ರಚಿಸುತ್ತದೆ.

ಆಸ್ಮಿಯಂ ಪ್ಲಾಟಿನಂ ಲೋಹದ ಅದುರಿನೊಂದಿಗೂ ಇರಿಡಿಯಂ ಲೋಹದೊಂದಿಗೆ ಆಸ್ಮಿರಿಡಿಯಂ ಎಂಬ ಮಿಶ್ರಲೋಹದ ರೂಪದಲ್ಲಿಯೂ ದೊರೆಯುತ್ತದೆ. ಲೋಹವನ್ನು ತಯಾರಿಸುವ ವಿಧಾನದಲ್ಲಿ ಮೊದಲನೆಯ ಹೆಜ್ಜೆಯಾಗಿ ನೈಟ್ರಿಕ್ ಆಮ್ಲದಲ್ಲಿ ಲೋಹವನ್ನು ವಿಲೀನಗೊಳಿಸಿ ತರುವಾಯ ಆಸ್ಮಿಯಂ ಟೆಟ್ರಾಕ್ಸೈಡನ್ನು ಅನಿಲರೂಪದಲ್ಲಿ ಹೊರತೆಗೆಯುವರು. ಇನ್ನೊಂದು ವಿಧಾನದಲ್ಲಿ ಅದುರನ್ನು ಗಾಳಿಯಲ್ಲಿ ಹುರಿದು (ರೋಸ್ಟ್) ಆಸ್ಮಿಯಂ ಟೆಟ್ರಾಕ್ಸೈಡನ್ನು ಪಡೆಯುತ್ತಾರೆ. ಮುಂದೆ ಈ ಅನಿಲವನ್ನು ಮದ್ಯಸಾರದಲ್ಲಿ ಕರಗಿದ ಪ್ರತ್ಯಾಮ್ಲದಲ್ಲಿ ಅವಶೋಷಿಸಲಾಗುವುದು (ಅಡ್‌ಸಾರ್ಬ್). ಇದರಿಂದ ಉತ್ಪತ್ತಿಯಾಗುವ ಆಸ್ಮೇಟ್ ದ್ರಾವಣದಿಂದ ಆಸ್ಮಿಯಂ ಸಲ್ಫೈಡ್ ಅಥವಾ ಆಸ್ಮಿಯಂ ಹೈಡ್ರಾಕ್ಸೈಡ್ ರೂಪದಲ್ಲಿ ಲೋಹವನ್ನು ಒತ್ತರಿಸುತ್ತಾರೆ. ಈ ಒತ್ತರಗಳನ್ನು ಹೈಡ್ರೊಜನ್ನಿನಿಂದ ಅಪಕರ್ಷಿಸಿ ಲೋಹವನ್ನು ಪಡೆಯುವರು.

ಮುಖ್ಯವಾದ ಸಂಯುಕ್ತಗಳು : 1. ಆಸ್ಮಿಯಂ ಟೆಟ್ರಕ್ಲೋರೈಡ್($O_sCl_4$): ಕಪ್ಪುಬಣ್ಣದ ಘನಪದಾರ್ಥ. ಉತ್ಕರ್ಷಣ ಶಕ್ತಿಯಿಲ್ಲದ (ಉದಾ: ಹೈಡ್ರೋಕ್ಲೋರಿಕ್ ಆಮ್ಲ) ಆಮ್ಲಗಳಲ್ಲಿ ಕರಗುವುದಿಲ್ಲ. ಆಸ್ಮಿಯಂ ಲೋಹವನ್ನು $700^0$ಸೆ. ಉಷ್ಣತೆಯಲ್ಲಿ ಕ್ಲೋರೀನಿನೊಂದಿಗೆ ಕಾಸಿ ಪಡೆಯುತ್ತಾರೆ.

2. ಆಸ್ಮಿಯಂ ಟೆಟ್ರಾಕ್ಸೈಡ್ ($O_sO_4$)ಅತಿ ತೆಳು ಹಳದಿಬಣ್ಣದ ಹರಳಿನಂಥ ವಸ್ತು. $40^0$ ಸೆ. ಉಷ್ಣತೆಯಲ್ಲಿ ದ್ರವಿಸುತ್ತದೆ. $130^0$ಸೆ. ಉಷ್ಣತೆಯಲ್ಲಿ ಆವಿಯಾಗುತ್ತದೆ. ವಿಷಪದಾರ್ಥ. ನೀರಿನಲ್ಲಿ ಮತ್ತು ಕಾರ್ಬನ್ ಟೆಟ್ರಕ್ಲೋರೈಡ್‌ನಲ್ಲಿ ವಿಲೀನವಾಗುತ್ತದೆ. ಪ್ರಬಲ ಉತ್ಕರ್ಷಣ ವಸ್ತು. ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ಮರಳಿಸಿ (ರೀಫ್ಲಕ್ಸ್) ಮುಂದೆ ಅಮೋನಿಯಂ ಕ್ಲೋರೈಡಿನೊಂದಿಗೆ ಸೇರಿಸಿದಾಗ ಅಮೋನಿಯಂ ಹೆಕ್ಸಕ್ಲೋರೋಆಸ್ಮೇಟ್ ಒತ್ತರಿಸುತ್ತದೆ. ಈ ಕಪ್ಪು ವಸ್ತುವನ್ನು $[(NH_4)_2\ O_s\ Cl_6]$ಹೈಡ್ರೊಜನ್ನಿನಲ್ಲಿ ಕಾಸಿದರೆ ಆಸ್ಮಿಯಂ ಲೋಹ ಬಿಡುಗಡೆಯಾಗುತ್ತದೆ.

ಉಪಯೋಗಗಳು: ಕೆಲವು ಆರ್ಗ್ಯಾನಿಕ್ ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ, ದ್ವಿಬಂಧಗಳಿಗೆ (ಡಬಲ್ ಬಾಂಡ್ಸ್) ಜಲಾಂಶಗಳನ್ನು ಸೇರಿಸುವ ಕ್ರಿಯೆಯಲ್ಲಿ ಆಸ್ಮಿಯಂ ಟೆಟ್ರಾಕ್ಸೈಡಿನ ಉಪಯೋಗವಿದೆ. ಜೋತಕ ದ್ರವ್ಯಗಳಲ್ಲೊಂದಾದ ಕಾರ್ಟಿಸೋನ್ ವಸ್ತುವಿನ ತಯಾರಿಕೆಯನ್ನು ಇಲ್ಲಿ ಉದಾಹರಿಸಬಹುದು. ಸಸ್ಯಗಳ ಮತ್ತು ಜೀವಿಗಳ ಅಂಗಾಂಶಗಳನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಲು ಸುಲಭವಾಗುವಂತೆ ಅಂಗಾಂಶಗಳನ್ನು ಗಟ್ಟಿಮಾಡಲು ಮತ್ತು ಅವುಗಳಿಗೆ ಬಣ್ಣಕೊಡಲು ಆಸ್ಮಿಯಂ ಟೆಟ್ರಾಕ್ಸೈಡನ್ನು ಉಪಯೋಗಿಸುತ್ತಾರೆ. ಹೈಡ್ರೊಜನ್ನನ್ನು ಸೇರಿಸುವ ಕ್ರಿಯೆಗೆ ಲೋಹ ಸೊಗಸಾದ ವೇಗವರ್ಧಕ. ಆಸ್ಮಿಯಂ ಮಿಶ್ರಲೋಹಗಳನ್ನು ಸೂಕ್ಷ್ಮವಾದ ಮತ್ತು ಕರಾರುವಾಕ್ಕಾದ ಯಂತ್ರಗಳಲ್ಲಿ ಬೇರಿಂಗುಗಳನ್ನಾಗಿ ಉಪಯೋಗಿಸುತ್ತಾರೆ. ಶಾಯಿಯಲ್ಲಿರುವ ಆಮ್ಲ ಈ ಲೋಹವನ್ನೊಳಗೊಂಡ ಆಸ್ಮಿರಿಡಿಯಂ ಮಿಶ್ರಲೋಹವನ್ನು ಕರಗಿಸಲಾರದಾದ್ದರಿಂದ ಲೇಖನಿಗಳ ತುದಿಗಳನ್ನು ಈ ಲೋಹಮಿಶ್ರಣದಿಂದ ಮಾಡುತ್ತಾರೆ. ಮಿಶ್ರಲೋಹ ಅತಿಗಡುಸಾದ್ದರಿಂದ ಲೇಖನಿಗಳ ತುದಿ ಬೇಗ ಸವೆಯುವುದೂ ಇಲ್ಲ. (ಎಚ್.ಎಸ್.ಎಸ್.)

**ಆಸ್ರವತತ್ತ್ವ:** ಜೈನಸಂಪ್ರದಾಯದಲ್ಲಿ ಜೀವ, ಅಜೀವ, ಆಸ್ರವ, ಬಂಧ, ಸಂವದ, ನಿರ್ಜರಾ, ಮೋಕ್ಷ ಎಂಬ ಏಳು ತತ್ತ್ವಪ್ರಕಾರಗಳಲ್ಲಿ ಮೂರನೆಯದು. ಆಸ್ರವ ಪದಕ್ಕೆ ಬರುವಿಕೆ ಎಂಬ ಅರ್ಥವಿದೆ.

ಕಾದಕಬ್ಬಿಣದ ಗುಂಡಿಗೆ ನೀರನ್ನು ಹಾಕುವುದರಿಂದ ಅದು ತನ್ನ ನಾಲ್ಕು ಕಡೆಯಿಂದಲೂ ನೀರನ್ನು ಹೀರಿಕೊಳ್ಳುವ ಹಾಗೆ ಆತ್ಮನ ಶುಭ ಮತ್ತು ಅಶುಭ ಪರಿಣಾಮಗಳನ್ನುಂಟುಮಾಡುವ ವಿವಿಧ ವ್ಯಾಪಾರದಿಂದ ಪ್ರತಿ ಸಮಯದಲ್ಲಿ ಕರ್ಮ ಪರಮಾಣುಗಳು ಹೊಸ ಹೊಸದಾಗಿ ತೀವ್ರಗತಿಯಿಂದಲೂ ಮಂದಗತಿಯಿಂದಲೂ ಬಂದು ಸೇರುತ್ತವೆ. ಈ ಕರ್ಮಪರಮಾಣುಗಳ ಸಮೂಹವೇ ಮುಂದಿನ ಜನ್ಮದ ಸುಖದುಃಖರೂಪವಾದ ಸ್ಥಾನಕ್ಕೆ ಅವನನ್ನು ಒಯ್ಯುತ್ತದೆ.

ಆಸ್ರವದಲ್ಲಿ ಭಾವಾಸ್ರವವೆಂತಲೂ ದ್ರವ್ಯಾಸ್ರವವೆಂತಲೂ ಎರಡು ಬಗೆಗಳಿವೆ. ಜ್ಞಾನಾವರಣ ಮೊದಲಾದ ಪುದ್ಗಲಕರ್ಮಗಳು ಆತ್ಮಪ್ರದೇಶಕ್ಕೆ ಬರುವುದಕ್ಕೆ ನಿಮಿತ್ತಗಳಾದ ರಾಗದ್ವೇಷ ಮೊದಲಾದ ವಿಕಲಪರಿಣಾಮಗಳನ್ನುಳ್ಳ ಪರಮಾಣುಗಳಿಗೆ ಭಾವಾಸ್ರವವೆಂದೂ ಆ ಪರಿಣಾಮಗಳನ್ನು ನಿಮಿತ್ತ ಮಾಡಿಕೊಂಡು ಆತ್ಮ ಪ್ರದೇಶದಲ್ಲಿ ಬಂದು ಸೇರುವ ಜ್ಞಾನಾವರಣಾದಿ ಪುದ್ಗಲಕರ್ಮಗಳ ಬರುವಿಕೆಗೆ ದ್ರವ್ಯಾಸ್ರವವೆಂದೂ ಹೆಸರು. ಎಣ್ಣೆಯಿಂದ ಜಿಡ್ಡಾದ ವಸ್ತುವಿಗೆ ಧೂಳು ಅಂಟಿಕೊಳ್ಳುವಂತೆ ರಾಗದ್ವೇಷಾದಿ ಭಾವಗಳಿಂದ ಜೀವಕ್ಕೆ ಪುದ್ಗಲಕರ್ಮಗಳು ಬಂದು ಲಿಪ್ತವಾಗುವುವು.

**ಭಾವಾಸ್ರವ:** ದರ್ಶನಮೋಹನೀಯ ಕರ್ಮೋದಯದಿಂದುಂಟಾದ ವಿಪರೀತ ಶ್ರದ್ಧಾನ ರೂಪವಾದ ಮಿಥ್ಯಾತ್ವ, ಏಕಾಂತ, ವಿಪರೀತ, ವಿನಯ, ಸಂಶಯ, ಅಜ್ಞಾನವೆಂದು ಐದು ಪ್ರಕಾರವಾಗಿದೆ: ಸಮಸ್ತ ವಸ್ತುಗಳೂ ನಿತ್ಯವೆಂದು ನಂಬುವುದು ಏಕಾಂತ ಮಿಥ್ಯಾತ್ವ, ಯಜ್ಞಯಾಗಾದಿಗಳಲ್ಲಿ ಪಶುಹಿಂಸೆ ನಿರ್ದೋಷವೆಂದೂ ಪುತ್ರಾರ್ಥಿಯಾಗಿ ಪರಸ್ತ್ರೀಸಂಸರ್ಗವನ್ನು ಮಾಡಿದರೆ ದೋಷವಿಲ್ಲವೆಂದೂ ನಂಬುವುದು ವಿಪರೀತ ಮಿಥ್ಯಾತ್ವ.

ಸಚ್ಚಾರಿತ್ರ್ಯ, ಸದ್ಗುಣಗಳನ್ನು ಧರಿಸಲಾರದೆ ಮನಬಂದಂತೆ ಆಚರಿಸಿ ದೇವ, ಗುರು, ಶಾಸ್ತ್ರ ಇವುಗಳಲ್ಲಿ ವಿನಯವನ್ನು ಮಾಡಿದರೆ ಮುಕ್ತಿಮಾರ್ಗವೆಂದು ನಂಬುವುದು ವಿನಯಮಿಥ್ಯಾತ್ವ, ಆಪ್ತ ಆಗಮ ಪದಾರ್ಥಗಳಲ್ಲಿ ನಿಶ್ಚಲವಾದ ನಂಬಿಕೆಯಿಲ್ಲದೆ ಸಂಶಯ ಪಡುವುದು ಸಂಶಯಮಿಥ್ಯಾತ್ವ, ಅಹಂಕಾರದಿಂದ ಸಮೀಚೀನ ದೇವಗುರುಜ್ಞಾನಾದಿಗಳನ್ನು ದೂಷಿಸುವುದು, ಕುದೈವಗುರುಜ್ಞಾನಾದಿಗಳೇ ಮುಕ್ತಿಮಾರ್ಗವೆಂದು ನಂಬುವುದು ಅಜ್ಞಾನಮಿಥ್ಯಾತ್ವ.

ಹಿಂಸಾ, ಅಸತ್ಯ, ಚೌರ್ಯ, ಅಬ್ರಹ್ಮಚರ್ಯ, ಪರಿಗ್ರಹವೆಂದು ಅವ್ರತ ಐದು ವಿಧವಾಗಿದೆ. ಸ್ತ್ರೀಕಥಾ, ಭೋಜನಕಥಾ, ರಾಷ್ಟ್ರಕಥಾ, ಅವನಿಪಾಲಕಥಾ, ಕ್ರೋಧ, ಮಾನ, ಮಾಯ, ಲೋಭ, ಸ್ಪರ್ಶೇಂದ್ರಿಯ, ಜಿಹ್ವೇಂದ್ರಿಯ, ಘ್ರಾಣೇಂದ್ರಿಯ, ಚಕ್ಷುರಿಂದ್ರಿಯ, ಶ್ರೋತ್ರೇಂದ್ರಿಯ, ನಿದ್ರೆ, ಬಾಹ್ಯವಿಷಯಪ್ರೀತಿ ಈ 15 ವಿಧವಾದ ಮನೋಭಾವನೆಗಳಿಗೆ ಪ್ರಮಾದಗಳೆಂದು ಹೆಸರು. ಮನೋವ್ಯಾಪಾರ, ವಚನವ್ಯಾಪಾರ, ಕಾಯವ್ಯಾಪಾರವೆಂದು ಯೋಗ ಮೂರು ಪ್ರಕಾರವಾಗಿದೆ. ಕ್ರೋಧ, ಮಾನ, ಮಾಯಾ, ಲೋಭಗಳೆಂದು ಕಷಾಯಗಳು ನಾಲ್ಕು ಪ್ರಕಾರವಾಗಿವೆ. ಈ ಮೇಲೆ ಹೇಳಿದ 32 ವಿಧವಾದ ಮನೋಭಾವನೆಗಳು ಭಾವಾಸ್ರವದ ಭೇದಗಳಾಗಿವೆ. ದಾಸವಾಳದ ಹೂವಿನ ಸಂಬಂಧದಿಂದ ಸ್ಫಟಿಕಮಣಿಯಲ್ಲಿ ನಾನಾವರ್ಣಗಳು ತೋರುವಂತೆ ಕರ್ಮಸಂಬಂಧದಿಂದ ಜೀವನದಲ್ಲಿ ಮಿಥ್ಯಾತ್ವಾದಿ ಭಾವಗಳುಂಟಾಗುತ್ತವೆ.

**ದ್ರವ್ಯಾಸ್ರವ:** ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಹನೀಯ, ಆಯುಷ್ಯ, ನಾಮ, ಗೋತ್ರ, ಅಂತರಾಯಗಳೆಂಬ ಈ ರೀತಿಯಾದ ಕರ್ಮಗಳಾಗಿ ಪರಿಣಮಿಸುವುದಕ್ಕೆ ಯೋಗ್ಯವಾದ ಕಾರ್ಮಣವರ್ಗಣಾ (ಕರ್ಮಪರಮಾಣು ಸಮೂಹ) ರೂಪವಾದ ಪುದ್ಗಲ ಜೀವಪ್ರದೇಶಕ್ಕೆ ಬಂದು ಸೇರುವುದೇ ದ್ರವ್ಯಾಸ್ರವ. ಜ್ಞಾನಾವರಣ ಐದು ಬಗೆ: ಮತಿಜ್ಞಾನಾವರಣ, ಶ್ರುತಜ್ಞಾನಾವರಣ, ಅವಧಿಜ್ಞಾನಾವರಣ, ಮನಃಪರ್ಯಯಜ್ಞಾನಾವರಣ, ಕೇವಲ ಜ್ಞಾನಾವರಣ. ದರ್ಶನಾವರಣ ಒಂಬತ್ತು ತೆರ: ಚಕ್ಷುದರ್ಶನಾವರಣ, ಅಚಕ್ಷುದರ್ಶನಾವರಣ, ಅವಧಿದರ್ಶನಾವರಣ, ಕೇವಲದರ್ಶನಾವರಣ, ನಿದ್ರಾದರ್ಶನಾವರಣ, ನಿದ್ರಾನಿದ್ರಾದರ್ಶನಾವರಣ, ಪ್ರಚಲಾದರ್ಶನಾವರಣ, ಪ್ರಚಲಾಪ್ರಚಲಾದರ್ಶನಾವರಣ, ಸ್ತ್ಯಾನಗೃದ್ಧಿದರ್ಶನಾವರಣ. ವೇದನೀಯ ಎರಡು ಬಗೆ: ಸಾತಾವೇದನೀಯ, ಅಸಾತಾವೇದನೀಯ. ಮೋಹನೀಯಕರ್ಮ ದರ್ಶನ ಮೋಹನೀಯವೆಂದೂ ಚಾರಿತ್ರ ಮೋಹನೀಯವೆಂದೂ ಎರಡು ಪ್ರಕಾರ. ದರ್ಶನ ಮೋಹನೀಯಮಿಥ್ಯಾತ್ವ, ಸಮ್ಯಕ್ಮಿಥ್ಯಾತ್ವ, ಸಮ್ಯಕ್ತ್ವ ಪ್ರಕೃತಿಗಳೆಂದು ಮೂರು ಬಗೆ. ಚಾರಿತ್ರ ಮೋಹನೀಯದಲ್ಲಿ ಅನಂತಾನುಬಂಧಿ, ಕ್ರೋಧ, ಮಾನ ಮೊದಲಾದ 25 ಬಗೆಗಳಿವೆ. ಒಟ್ಟಿನಲ್ಲಿ ಮೋಹನೀಯ ಕರ್ಮ ಒಟ್ಟು 28 ವಿಧವಾಗಿದೆ.

ಆಯುಷ್ಯಕರ್ಮದಲ್ಲಿ ನಾಲ್ಕು ಬಗೆ: ನರಕಾಯುಷ್ಯ, ತಿರ್ಯಗಾಯುಷ್ಯ, ಮನುಷ್ಯಾಯುಷ್ಯ, ದೇವಾಯುಷ್ಯ. ತೀವ್ರಪಾಪಕರ್ಮಗಳಿಂದ ನರಕಾಯುಷ್ಯವನ್ನೂ ವಕ್ರಪರಿಣಾಮದಿಂದ ತಿರ್ಯಗಾಯುಷ್ಯವನ್ನೂ ಸರಳಸ್ವಭಾವದಿಂದ ಮನುಷ್ಯಾಯುಷ್ಯವನ್ನೂ ವ್ರತ ನಿಯಮ ತಪಸ್ಸುಗಳಿಂದ ದೇವಾಯುಷ್ಯವನ್ನೂ ಪಡೆಯಬಹುದು. ಜೀವ ತಾನು ಗಳಿಸಿದ ಕರ್ಮದಂತೆ ಶರೀರಾದಿ ರಚನೆಯಾಗುವುದಕ್ಕೆ ನಾಮಕರ್ಮವೆಂದು ಹೆಸರು. ನರಕಗತಿ, ತಿರ್ಯಗ್ಗತಿ ಮೊದಲಾಗಿ ಇದರಲ್ಲಿ 93 ಭೇದಗಳಿವೆ. ಗೋತ್ರಕರ್ಮ ಎರಡು ಬಗೆ: ಉಚ್ಚಗೋತ್ರ, ನೀಚಗೋತ್ರ. ಪರರ ನಿಂದೆ, ಆತ್ಮಪ್ರಶಂಸೆಗಳಲ್ಲಿ ತೊಡಗುವವರು

ಎಷ್ಟೇ ಪುಣ್ಯಗಳಿಸಿದ್ದರೂ ನೀಚಕುಲದಲ್ಲಿ ಹುಟ್ಟುತ್ತಾರೆ. ಉತ್ತಮದೇವರು, ಗುರು, ಗುಣವಂತರು, ತಪೋಧನರು ಮೊದಲಾದವರನ್ನು ನಿರ್ವ್ಯಾಜದಿಂದ ಸೇವಿಸಿದರೆ ಉಚ್ಚಕುಲ ದೊರೆಯುತ್ತದೆ.

ದಾನಿಯು ದಾನ ಮಾಡುವಾಗ ಕೋಶಾಧ್ಯಕ್ಷ ದಾನ ಮಾಡುವುದನ್ನು ತಡೆದು ಕೊಡಬೇಡವೆಂದು ಹೇಳುವಂತೆ ಅಂತರಾಯಕರ್ಮ ಆತ್ಮನಿಗೆ ಭೋಗೋಪಭೋಗಗಳನ್ನು ಅನುಭವಿಸಲು ನಿರಂತರವಾಗಿ ತಡೆಯನ್ನುಂಟುಮಾಡುತ್ತದೆ. ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ, ವೀರ್ಯಾಂತರಾಯಗ ಳೆಂದು ಇದು 5 ಬಗೆಯಾಗಿದೆ.

ಮೇಲಿನ ಎಲ್ಲ ಭಾಗೋಪಭಾಗಗಳೂ ಸೇರಿದರೆ 148 ಆಗುತ್ತವೆ. ಜೀವನಿಗೆ ಸ್ಥೂಲವಾಗಿ ಎಂಟು ಕರ್ಮವೆಂತಲೂ ಭೇದರೂಪವಾಗಿ 148 ಎಂತಲೂ ನಿಷ್ಕರ್ಷೆಯಾಗಿದ್ದು ಅವು ಉತ್ತರೋತ್ತರ ಅಸಂಖ್ಯಾತಗಳಾಗುತ್ತವೆ.

ಆಸ್ರವಕರ್ಮದಲ್ಲಿ ಸಿಲುಕಿದ ಆತ್ಮಗಳು ನಿರಂತರವೂ ಕರ್ಮ ಸಂಪಾದನೆ ಮಾಡುತ್ತವೆ. ಸಂಸಾರಿಜೀವಾತ್ಮರಿಗಂತೂ ಆಸ್ರವ ತಪ್ಪಿದ್ದಲ್ಲ. ಆಸ್ರವರಹಿತರು ಸಿದ್ಧಾತ್ಮರು. ಅಂದರೆ ಸಂಪೂರ್ಣ ಕರ್ಮಗಳಿಂದ ಬಿಡಲ್ಪಟ್ಟವರು; ಆತ್ಮೀಯ ಸುಖವಾದ ಅನಂತಜ್ಞಾನ ದರ್ಶನ ಸುಖ ವೀರ್ಯಗಳಿಂದ ಕೂಡಿರುವವರು. (ಎಂ.ಸಿ.ಪಿ.)

**ಆಸ್ಲರ್, ಸರ್ ವಿಲಿಯಂ:** 1849–1919. ಕೆನಡದ ವೈದ್ಯ, ಮಾನವಿಕ ಪ್ರವೀಣ, ಆಂಟೇರಿಯೊದ ಬಾಂಡ್ ಹೆಡ್ಡಿನಲ್ಲಿ ಹುಟ್ಟಿದವ. ಮೆಗಿಲ್ ವಿಶ್ವವಿದ್ಯಾಲಯದ ಮಾಂಟ್ರೀಲ್‌ನಲ್ಲಿ ವೈದ್ಯ ಪದವೀಧರನಾಗಿ (1872), ಅಲ್ಲಿನ ವೈದ್ಯಶಾಲೆಗಳ ಪ್ರಾಧ್ಯಾಪಕನಾಗಿದ್ದು (1874), ಆಮೇಲೆ ಅಮೆರಿಕದ ಪೆನ್ಸಿಲ್ವೇನಿಯದಲ್ಲಿ (1884) ರೋಗಿಶಯ್ಯೆಬದಿಯ (ಕ್ಲಿನಿಕಲ್) ಪ್ರಾಧ್ಯಾಪಕನಾಗಿ 40ನೆಯ ವಯಸ್ಸಿನಲ್ಲಿ (1889) ಬಾಲ್ಟಿಮೋರಿನ ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಮುಖ್ಯ ವೈದ್ಯಪೀಠವನ್ನು ಅಲಂಕರಿಸಿಯೂ ಕೆಲಸ ಮಾಡಿದ. ಆಗ ಅಲ್ಲಿದ್ದ ನಾಲ್ವರು ಸಂತರು ಎನಿಸಿಕೊಂಡಿದ್ದ ವೈದ್ಯ ಪ್ರವೀಣರಲ್ಲಿ ಬಲು ಚುರುಕಾಗಿದ್ದವ ಆಸ್ಲರ್. ಹೊಸ ವೈದ್ಯಶಾಲೆಯನ್ನು ಅಲ್ಲಿ ಸ್ಥಾಪಿಸುವ ಅವಕಾಶವನ್ನು ಬಳಸಿಕೊಂಡು, ರೋಗಿ ಹಾಸಿಗೆಬದಿಯ ಶಿಕ್ಷಣದೊಂದಿಗೆ, ರೋಗಿಕೋಣೆಯ ಕಲಿಕೆಗೂ ಪ್ರಯೋಗಾಲಯದ ಕಣ್ಣರಿಕೆಗೂ ಹೊಂದಾಣಿಕೆ ತಂದು, ಉತ್ತರ ಅಮೆರಿಕದಲ್ಲೇ ವೈದ್ಯಶಿಕ್ಷಣದಲ್ಲಿ ಕ್ರಾಂತಿ ಎಬ್ಬಿಸಿದ. ಈತ ವೈದ್ಯವಿದ್ಯೆಯನ್ನು ರೋಗಿಗಳ ಕೋಣೆಗಳಲ್ಲಿ ಕಲಿಸಿದ ಎಂಬ ಚರಮಶ್ಲೋಕವನ್ನು ಆಸ್ಲರ್ ಬಯಸಿದ. ವೈದ್ಯಗಾರಿಕೆ ರೋಗಿಯಲ್ಲಿ ಮೊದಲಾಗಿ, ರೋಗಿಯಲ್ಲಿ ಮುಂದುವರಿದು, ರೋಗಿಯಲ್ಲಿ ಕೊನೆಗೊಳ್ಳಬೇಕು ಎಂಬುದಾಗಿ ಈತ ಪ್ರತಿಪಾದಿಸಿದ. 56ನೆಯ ವಯಸ್ಸಿನಲ್ಲಿ ಇಂಗ್ಲೆಂಡಿನ ಆಕ್ಸ್‌ಫರ್ಡಿನಲ್ಲಿ ವೈದ್ಯಮಹಾಪ್ರಾಧ್ಯಾಪಕ ನಾದ (1905). ರೋಗಶಾಸ್ತ್ರ, ರೋಗಿಹಾಸಿಗೆಬದಿಯ ಅಲ್ಲದೆ ವೈಜ್ಞಾನಿಕ ವೈದ್ಯ, ಸಾಂಕ್ರಾಮಿಕ ಶಾಸ್ತ್ರಗಳಲ್ಲಿ ಈ ಮಹಾಕುಶಲಿಯ ಹೆಸರು ಈಗಲೂ ಉಳಿದಿದೆ. ಎಷ್ಟೋ ವರ್ಷಗಳು ಪಠ್ಯಪುಸ್ತಕವಾಗಿದ್ದು ಹೆಸರಾಗಿದ್ದ ಅವನ ವೈದ್ಯಸೂತ್ರಗಳು ಮತ್ತು ಆಚರಣೆ 1892 (1947ರಲ್ಲಿ 16ನೆಯ ಮುದ್ರಣ) ಹಲವಾರು ತಲೆಮಾರುಗಳ ವೈದ್ಯ ಕಲಿಕೆಯವರಲ್ಲೂ ವೈದ್ಯರಲ್ಲೂ ಇಂಗ್ಲಿಷ್‌ನಲ್ಲೇ ಬಹು ಜನಪ್ರಿಯ ಕೃತಿಯಾಗಿತ್ತು. ವೈದ್ಯವಿಜ್ಞಾನಕ್ಕೆ ಇವನ ಬರೆಹಗಳ ಕೊಡುಗೆಯೂ ಇದೆ.

ಈತ ಆಸಕ್ತನಾಗಿದ್ದ ವಿಷಯಗಳಲ್ಲಿ ಕ್ಷಯವೂ ಒಂದು. ವೈದ್ಯಚಿಕಿತ್ಸೆಯಲ್ಲಿ ಮದ್ಯಸಾರದ ಬಳಕೆ ಸಲ್ಲದೆಂದೂ ದಿನವೂ ಇದನ್ನು ಕುಡಿಯುತ್ತಿದ್ದರೆ ಕ್ಷಯಕ್ಕೆ ಈಡಾಗಬಹುದೆಂದೂ ತೋರಿಸಿಕೊಟ್ಟವರಲ್ಲಿ ಆಸ್ಲರ್ ಮೊದಲಿಗ. ಆತ ಕೇವಲ ಮಹಾವೈದ್ಯ, ವಿಜ್ಞಾನಿ ಅಷ್ಟೇ ಆಗಿರಲಿಲ್ಲ; ಮಾನವಿಕ ವಿಚಾರಿ, ಸಾಹಿತಿಯೂ ಆಗಿದ್ದು, ಮಹಾ ಸಾಹಿತ್ಯಸಂಘದ ಅಧ್ಯಕ್ಷನಾಗಿ ಮೊತ್ತಮೊದಲು ಚುನಾಯಿತನಾಗಿ ಬಂದ ವೈದ್ಯನೂ ಗ್ರಂಥಸೂಚಿಯ (ಬಿಬ್ಲಿಯೊಗ್ರಾಫಿಕಲ್) ಸಂಘದ ಅಧ್ಯಕ್ಷನೂ ಆಗಿದ್ದ (1913). ಅದರಲ್ಲೂ ಪುರಾತನ ವೈದ್ಯಮಹಾಗ್ರಂಥಗಳ, ಸರ್ ಥಾಮಸ್ ಬ್ರೌನನ ಬರೆಹಗಳ, ಉತ್ಸಾಹೀ ಸಂಗ್ರಹಕಾರನಾಗಿದ್ದ. 7,500ಕ್ಕೂ ಹೆಚ್ಚು ಗ್ರಂಥಗಳಿದ್ದ ತನ್ನ ಸೊಗಸಾದ ಗ್ರಂಥಭಂಡಾರವನ್ನು ಮೆಗಿಲ್ ವಿಶ್ವವಿದ್ಯಾಲಯಕ್ಕೆ ಬಳುವಳಿಯಾಗಿ ಬಿಟ್ಟ. ಆಸ್ಲರನ ಗ್ರಂಥಪಟ್ಟಿಯೊಂದಿಗೆ ಇದು ವೈದ್ಯರಲ್ಲೆಲ್ಲ ಉನ್ನತಮಟ್ಟದ ಉತ್ತಮೋತ್ತಮನೊಬ್ಬನ ಸ್ಮಾರಕವಾಗಿ ಈಗಲೂ ಉಳಿದಿದೆ. ವೈದ್ಯಕಲೆಗೆ ಗಡಿಗೆರೆಗಳು ಇಲ್ಲವೆಂಬ ನಾಣ್ಣುಡಿಯ ದಿಟ್ಟತನವನ್ನು ತಾನೇ ಪಾಲಿಸಿ ತೋರಿಸಿ, ಅಂತಾರಾಷ್ಟ್ರೀಯ ವೈದ್ಯದ ಮೂಲಪುರುಷನಾಗಿದ್ದ ಆಸ್ಲರ್ ರಾಯಲ್ ಕಾಲೇಜಿನ ಫೆಲೋ ಆಗಿ ಚುನಾಯಿತನಾಗಿ (1898), ಬ್ಯಾರೊನೆಟ್ ಪದವಿಗೇರಿದ (1911). ಆಸ್ಲರನ ಚಟುವಟಿಕೆಗಳಿಗೆ ಮಿತಿ ಮೇರೆಗಳು ಇರಲಿಲ್ಲ. ಯಾವ ಅಂಚೆ ಕಾಗದ, ಊಟದ ಕರೆಯೋಲೆಗಳನ್ನೂ ಬಿಡದೆ ನೋಡಿ, ಅವನ ಜೀವನಚರಿತ್ರೆಯನ್ನು ಮೂರು ಸಂಪುಟಗಳಲ್ಲಿ ಬರೆದ ಹಾರ್ವಿ ಕಷಿಂಗ್ ಕೂಡ ಆಸ್ಲರನ ಬಹುಮುಖಗಳೆಲ್ಲವನ್ನೂ ಬರೆಯಲಾರದಾದ. ವೈದ್ಯದಲ್ಲಿ ಎಲ್ಲ ಸಂದರ್ಭಗಳಲ್ಲೂ ಉದಾಹರಿಸಬಹುದಾದ ಸೂಕ್ತಿಗಳು, ಮುಕ್ತಕಗಳು, ಸೂತ್ರಗಳನ್ನು ಈಗಲೂ ಆಸ್ಲರ್‌ನಷ್ಟು ಹೇಳಿ ಬರೆದವರಿಲ್ಲ. ಆಸ್ಲರನ ಕೃತಿಗಳಲ್ಲಿ ಕೆಲವನ್ನು ಹೆಸರಿಸಬಹುದು. ಮಕ್ಕಳ ನಿಮ್ಮದುಳಿನ ಜೋಗರಿಕೆ, (1889), ಕಂಪವಾತ (ಕೊರಿಯ), ಕಂಪವಾತ ರೂಪದ ಬೇನೆಗಳು (1894); ಹೊಟ್ಟೆಯ ಗಂತಿಗಳ ಮೇಲಿನ ಭಾಷಣಗಳು (1895); ಎದೆ ಸೆರೆಬಿಗಿತ (ಆ್ಯಂಜೈನ ಪೆಕ್ಟೋರಿಸ್) ಮತ್ತು ಸಂಬಂಧಿತ ರೋಗಸ್ಥಿತಿಗಳು (1897); ಜಠರದ ಏಡಿಗಂತಿ ಮೇಲಿನ ಬಿಡಿಬರೆಹ (1900); ವಿಜ್ಞಾನ, ಚಿರಾಯುತನ (1904); ಸಮಚಿತ್ತ, ಮತ್ತಿತರ ಭಾಷಣಗಳು (1904); ಬುದ್ಧಿವಾದಗಳು, ಆದರ್ಶಗಳು (1905); ಒಬ್ಬ ಅಲಬಾಮ ಕಲಿಕೆಯವ ಮತ್ತಿತರ ಜೀವನ ಚರಿತ್ರೆಯ ಪ್ರಬಂಧಗಳು (1908); ವೈದ್ಯಶಾಸ್ತ್ರದ ಸೂತ್ರಗಳು, ಪ್ರಯೋಗ (1912) (8ನೆಯ ಆವೃತ್ತಿ), ಇಂದಿನ ವೈದ್ಯದ ವಿಕಾಸ (1913). ಇವಲ್ಲದೆ, ಒಂದು ವೈದ್ಯಶಾಸ್ತ್ರಪದ್ಧತಿಯ (1905–10) ಏಳು ಸಂಪುಟಗಳನ್ನೂ ಸರ್ ವಿಲಿಯಂ ಆಸ್ಲರ್ ಸಂಪಾದಿಸಿದ್ದ. (ಡಿ.ಎಸ್.ಎಸ್.)

**ಆಸ್ವಾನ್:** ಈಜಿಪ್ಟ್ ದೇಶದ ನೈಋತ್ಯಕ್ಕಿರುವ ಆಸ್ವಾನ್ ಪ್ರಾಂತ್ಯದ ಮುಖ್ಯಪಟ್ಟಣ. ಉತ್ತರದ ಕೈರೋವಿನಿಂದ ಇಲ್ಲಿಗೆ ರೈಲುಮಾರ್ಗದ ಮೇಲೆ 893 ಕಿ.ಮೀ., ನೈಲ್ ನದಿಯ ಪೂರ್ವದಂಡೆಯ ಮೇಲಿರುವ ಈ ಪಟ್ಟಣದ ಜನಸಂಖ್ಯೆ 275,000 (2008), ಸರಹದ್ದಿನ ಆಯಕಟ್ಟಿನ ಸ್ಥಳವಾದ್ದರಿಂದ ಇತಿಹಾಸಪ್ರಸಿದ್ಧ. ಗಡಿಸೇನೆಯ ಠಾಣೆ, ನೆರೆಯ ಸೂಡಾನ್, ಇಥಿಯೋಪಿಯಗಳೊಂದಿಗೆ ವ್ಯಾಪಾರಕ್ಕೆ ಮುಖ್ಯದ್ವಾರ. ಆಸ್ವಾನಿನ ದಕ್ಷಿಣಕ್ಕೆ ಕೆಲವು ಕಿಲೋಮೀಟರ್ ದೂರದಲ್ಲಿರುವ ಜಲಪಾತದ ತಲೆಯ ಬಳಿ ಇರುವ ಷೆಲ್ಲಾಲ್‌ವರೆಗೂ ರೈಲುಮಾರ್ಗ ಮುಂದುವರಿಯುತ್ತದೆ. ಅಲ್ಲಿಂದಾಚೆಗೆ ಸೂಡಾನಿನೊಂದಿಗೆ ಜಲಮಾರ್ಗ ಸಂಪರ್ಕ, ಪೂರ್ವಕ್ಕೆ (48 ಕಿಮೀ) ದೂರದಲ್ಲಿ ದೊರಕುವ ಕಬ್ಬಿಣದ ಅದುರು ಕೈರೋ ವಿಭಾಗದ ಕಬ್ಬಿಣ ಉಕ್ಕಿನ ಕಾರ್ಖಾನೆಗೆ ಸಾಗುತ್ತದೆ. ಆಸ್ವಾನ್ ಒಂದು ಆರೋಗ್ಯಧಾಮ, ಪ್ರವಾಸಿಕೇಂದ್ರ; ಆಫ್ರಿಕದಲ್ಲೇ ಸುಂದರವಾದ ನಗರ. ಹವೆ ತಂಪು.

ನಗರದ ಎದುರಿಗಿರುವ ಎಲಿಫಂಟೈನ್ ನಡುಗಡ್ಡೆಯ ಮೇಲೆ ಬಲು ಹಿಂದೆಯೇ ಜನ ವಾಸಿಸಲಾರಂಭಿಸಿದರು. ನೈಲ್ ನದಿಯ ಪ್ರವಾಹವನ್ನಳೆಯಲು ಆಗ ನಿಲ್ಲಿಸಿದ ಸ್ತಂಭವೊಂದು ಈಗಲೂ ಉಂಟು. ಮುಂದೆ ನಗರ ಬೆಳೆಯಿತು. ಪುರಾತನ ಈಜಿಪ್ಟಿನ ದೇವಮಂದಿರಗಳನ್ನು ಕಟ್ಟಲು ಬೇಕಾದ ಕಲ್ಲುಗಳನ್ನು ಸಮೀಪದ ಬಂಡೆಗಳಿಂದ ಎಬ್ಬಿ ತೆಗೆಯಲಾರಂಭಿಸಿದ ಮೇಲೆ ನಗರದ ಪ್ರಾಮುಖ್ಯ ಹೆಚ್ಚಿತು.

ನೈಲ್ ನದಿಯ ಪಶ್ಚಿಮಕ್ಕಿರುವ ಕಡಿದಾದ ದಂಡೆಯ ಮೇಲೆ ಬಂಡೆಗಳಲ್ಲೇ ಕೊರೆದ ಅನೇಕ ಗೋರಿಗಳಿವೆ. ನಗರದ ಬಳಿಯಲ್ಲೇ ಆಸ್ವಾನ್ ಕಟ್ಟೆಯಿದೆ (**ನೋಡಿ– ಆಸ್ವಾನ್– ಕಟ್ಟೆ**). (ಎಂ.ಎಸ್.;ಡಿ.ಕೆ.)

**ಆಸ್ವಾನ್ ಕಟ್ಟೆ:** ಈಜಿಪ್ಟಿನ ಆಸ್ವಾನ್ ಪಟ್ಟಣದ ಬಳಿಯಲ್ಲಿ ಅದರ ದಕ್ಷಿಣಕ್ಕೆ ನೈಲ್ ನದಿಗೆ ಅಡ್ಡಲಾಗಿ ಕಟ್ಟಿರುವ ಕಟ್ಟೆ. ಗ್ರ್ಯಾನೈಟ್ ಕಲ್ಲಿನ ತಳಪಾಯದ ಮೇಲೆ ಇದನ್ನು ಕಟ್ಟಿದ್ದಾರೆ. ಈಜಿಪ್ಟಿನಲ್ಲಿ ಮಳೆ ಕನಿಷ್ಠ, ಬಿಸಿಲು ಬಹಳ ಹೆಚ್ಚು. ಪ್ರಾಚೀನ ಕಾಲದಿಂದಲೂ ಆ ದೇಶದ ಜೀವನಕ್ಕೆ ನೈಲ್ ನದಿಯ ನೀರೇ ಆಧಾರ. 5,760 ಕಿಮೀ. ಉದ್ದವಾದ ನೈಲ್ ನದಿಯ ಕೊನೆಯ ಮಜಲಿನಲ್ಲಿ ಈಜಿಪ್ಟ್ ಇರುವುದರಿಂದ ಇಲ್ಲಿ ಪ್ರವಾಹಗಳು ಪ್ರತಿ ವರ್ಷವೂ ಒಂದೇ ಕಾಲದಲ್ಲಿ ಬರುತ್ತವೆ. ಆಗ ವರ್ಷದಲ್ಲಿ ಸು. 50 ದಿನ ಈ ನದಿ ಈಜಿಪ್ಟಿನ ಬೆಂಗಾಡಿನಲ್ಲಿ ದಡಮೀರಿ ಹರಿದು ಬಯಲುಗಳ ಮೇಲೆ ವಿಶಾಲವಾಗಿ ಪ್ರವಾಹವು ಹರಡಿ ಫಲವತ್ತಾದ ಮೆಕ್ಕಲುಮಣ್ಣನ್ನು ಗದ್ದೆಗಳ ಮೇಲೆ ಕೆಡವುತ್ತದೆ. ಪ್ರ.ಶ.ಪೂ. 4500ರಿಂದಲೂ ಗದ್ದೆಗಳ ಸುತ್ತ ಅಡ್ಡಕಟ್ಟೆಗಳನ್ನು ಹಾಕಿ ಹೊಳೆ ಇಳಿದ ಮೇಲೂ ಮಣ್ಣು, ನೀರನ್ನು ಶೇಖರಿಸಿ ಏಗುಪ್ತರು ಹುಲುಸಾದ ಬೆಳೆಯನ್ನು ತೆಗೆಯುತ್ತಿದ್ದರು. ಇದು ನೈಸರ್ಗಿಕವಾದ ನೀರಾವರಿಯ ಕ್ರಮ. ಈಗ ಆಸ್ವಾನ್ ಕಟ್ಟೆಯ ನಿರ್ಮಾಣವಾದ ಮೇಲೆ ಜುಲೈ ತಿಂಗಳಿನ ಆದಿಯಲ್ಲಿ ಬರಿದಾಗಿರುವ ಜಲಾಶಯಕ್ಕೆ ಪ್ರವಾಹ ಬಂದು ಸೆಪ್ಟೆಂಬರಿನಲ್ಲಿ ಪರಮಾವಧಿ ಮುಟ್ಟುತ್ತದೆ. ನವೆಂಬರಿನಲ್ಲಿ ಇಳಿಯುತ್ತಿರುವ ಪ್ರವಾಹದ ನೀರನ್ನು ಶೇಖರಿಸಿ ಫೆಬ್ರವರಿಯಿಂದ ಜುಲೈ ತಿಂಗಳವರೆಗೆ ನಾಲೆಗಳ ಮೂಲಕ ಗದ್ದೆಗಳಿಗೆ ಬಿಡುತ್ತಾರೆ.

ಪ್ರಾಕ್ತನ ವಿಮರ್ಶಕರು ಈಜಿಪ್ಟಿನ ಅಬು ಸಿಂಬೆಲ್ ಎಂಬಲ್ಲಿರುವ ಪ್ರಾಚೀನ ದೇವಾಲಯ ಗಳ ಅವಶೇಷಗಳನ್ನು ಮುಳುಗಿಸಲು ಒಪ್ಪದೆ ಇದ್ದುದರಿಂದ ದೀರ್ಘಚರ್ಚೆಯ ಅನಂತರ ಕಟ್ಟೆಯ ಎತ್ತರವನ್ನು ಕಡಿಮೆ ಮಾಡಲಾಯಿತು. ಆದರೆ ನೀರು ಸಾಲದೆ ಬಂದದ್ದರಿಂದ ಎರಡನೆಯ ಮತ್ತು ಮೂರನೆಯ ಘಟ್ಟಗಳಲ್ಲಿ ಕಟ್ಟೆಯನ್ನು ಎತ್ತರಿಸಬೇಕಾಯಿತು. ಬ್ರಿಟಿಷ್ ಎಂಜಿನಿಯರ್ ಸರ್ ಬೆಂಜಮಿನ್ ಬೇಕರನ ನೇತೃತ್ವದಲ್ಲಿ 1899ರಲ್ಲಿ ಕಟ್ಟೆಯ ಕೆಲಸ ಪ್ರಾರಂಭವಾಗಿ 1902ರಲ್ಲಿ ಮುಗಿಯಿತು. ಕಟ್ಟೆಯನ್ನು ಗ್ರ್ಯಾನೈಟ್ ಕಲ್ಲಿನ ತಳಪಾಯದ ಮೇಲೆ ಕಲ್ಲು ಮತ್ತು ಸಿಮೆಂಟ್ ಗಾರೆಯಿಂದ ಕಟ್ಟಿದ್ದಾರೆ. ಕಟ್ಟೆಯ ಕಲ್ಲು ಗಾರೆಯ ಭಾರದ ಮೇಲೆ ನಿಂತಿದೆ. ಈ ಘಟ್ಟದಲ್ಲಿ ಕಟ್ಟೆಯ ಎತ್ತರ 26 ಮೀ. ಉದ್ದ 2,000 ಮೀ. ಕಟ್ಟೆಯಿಂದ ನೀರನ್ನು ಹೊರಕ್ಕೆ ಬಿಡಲು ಕೃಷ್ಣರಾಜ ಸಾಗರದಲ್ಲಿರುವ ಹಾಗೆ ಕಟ್ಟೆಯೊಳಗಡೆ ಒಟ್ಟು 180 ತೂಬುಗಳಿವೆ. ಇದಕ್ಕೆ ರೋಲರುಗಳ ಮೇಲೆ ಏರಿ ಇಳಿಯುವ ಉಕ್ಕಿನ ಬಾಗಿಲುಗಳನ್ನು ಜೋಡಿಸಿದ್ದಾರೆ. ಇವುಗಳಲ್ಲಿ ಕೆಳಮಟ್ಟದ 2 ಮೀ. ಅಗಲ ಮತ್ತು 7 ಮೀ ಎತ್ತರದ 63 ತೂಬುಗಳು (ಇಳಿಸಿದ ಮಟ್ಟ) 87.5 ಮೀ. ಮಟ್ಟದಲ್ಲಿವೆ. ನಡುವೆ 5 ಮೀ. ಅಗಲದ ನಯವಾದ ಕಲ್ಲಿನ ದಿಮ್ಮಿಗಳಿವೆ. ನಡುವಣ ಮಟ್ಟದ (ಇಳಿಸಿದ ಮಟ್ಟ 92 ಮೀಟರ್) 75 ತೂಬುಗಳಲ್ಲಿ 25ಕ್ಕೆ ಸ್ಟೋನಿಯ ಮಾದರಿಯ ರೋಲರುಗಳಿವೆ. ಉಳಿದ 50ಕ್ಕೆ ರೋಲರುಗಳಿಲ್ಲ. ಪೂರ್ವ ದಿಕ್ಕಿನ ದಡದಲ್ಲಿ ನಾಲೆಯೊಳಕ್ಕೆ ನೀರನ್ನು ಬಿಡಲು 100

ಮೀ ಮಟ್ಟದಲ್ಲಿ 2 ಮೀ. ಅಗಲ 3½ ಮೀ ಎತ್ತರದ 22 ತೂಬುಗಳೂ ಪಶ್ಚಿಮದ ದಡದಲ್ಲಿ 96 ಮೀ ಮಟ್ಟದಲ್ಲಿ ಅದೇ ಅಳತೆಯ 18 ತೂಬುಗಳೂ ಇವೆ. ಈ ಘಟ್ಟದಲ್ಲಿ ತುಂಬು ಕಟ್ಟೆಯ ಮಟ್ಟ 106 ಮೀ ಶೇಖರಿಸಿದ ನೀರಿನ ಅಳತೆ 98 ಕೋಟಿ ಸಲೆ ಮೀ ತಗಲಿದ ಖರ್ಚು 29 ಲಕ್ಷ ಪೌಂಡು. ಈ ನೀರಿನಿಂದ ಪ್ರತಿ ವರ್ಷವೂ 4,20,000 ಎಕರೆ ಜಮೀನಿಗೆ ನೀರು ಒದಗಿಸುತ್ತಿದ್ದರು.



ಕಟ್ಟೆಯ ಕೆಳಗಡೆ ಸಾಗುವಳಿಯಾಗುವ ಜಮೀನಿನ ವಿಸ್ತೀರ್ಣ ಬೇಗ ಹೆಚ್ಚಿತು. 1907–1912ರ ಅವಧಿಯಲ್ಲಿ ಕಟ್ಟೆಯ ಅಗಲವನ್ನು 5 ಮೀ. ಹೆಚ್ಚಿಸಿ ತಕಬು ಸರೋವರದ ಮಟ್ಟವನ್ನು 106–113 ಮೀ. ಎತ್ತರಿಸಲಾಯಿತು. ಕಟ್ಟೆಯ ಮೇಲಿನ ರಸ್ತೆಯ ಮಟ್ಟ 109ರಿಂದ 114 ಮೀ. ವರೆಗೂ ಮೇಲುಗಡೆ ರಸ್ತೆಯ ಒಳ ಅಗಲ 5½ ಮೀ 7½ ಮೀ ಏರಿತು. ಈ ಕೆಲಸಕ್ಕೆ 15 ಲಕ್ಷ ಪೌಂಡು ವೆಚ್ಚ ತಗಲಿತು.

ಬೇಸಗೆಯಲ್ಲಿ ಕಲ್ಲುಗಾರೆ ಹಿಗ್ಗಿದಾಗಲೂ ಚಳಿಗಾಲದಲ್ಲಿ ಕುಗ್ಗಿದಾಗಲೂ ಬಿರುಕು ಬಿಡದಂತೆ ಹಳೆಯ ಕಟ್ಟೆಗೂ ಹೊಸ ಕಲ್ಲುಗಾರೆಯ ಕೆಲಸಕ್ಕೂ ನಡುವೆ 15 ಸೆಂಮೀ ಜಾಗವನ್ನು ಬಿಟ್ಟು ಎರಡು ದಿಕ್ಕುಗಳಲ್ಲೂ 1¼0 ವ್ಯಾಸ ಮತ್ತು 8¼0ಉದ್ದದ ಉಕ್ಕಿನ ಕಂಬಿಗಳನ್ನು ಒಂದು ಮೀ ಅಂತರದಲ್ಲಿ ಹಳೆಯ ಕಟ್ಟೆಯನ್ನು ಕೊರೆದು ಕೂರಿಸಿದ್ದಾರೆ. ಈ ಕಂಬಿಗಳು ಹೊಸ ಕಲ್ಲುಗಾರೆಯ ತೂಕವನ್ನು ಹಳೆಯ ಕಟ್ಟೆಗೆ ಸಾಗಿಸುತ್ತವೆ. ಹಳೆಯ ಮತ್ತು ಹೊಸ ಕಲ್ಲುಗಾರೆಯ ತೂಕವನ್ನು ಹಿಗ್ಗುವಿಕೆಯಲ್ಲಿ ಅಥವಾ ಕುಗ್ಗುವಿಕೆಯಲ್ಲಿ ಏನಾದರೂ ವ್ಯತ್ಯಾಸವಾದರೆ ಅದರಿಂದ ಒದಗಿದ ತ್ರಾಸವನ್ನು ತಡೆದುಕೊಳ್ಳುತ್ತವೆ. ಕೆಲವು ಕಾಲದ ಅನಂತರ ಕಟ್ಟೆಯ ಎರಡು ಭಾಗಗಳೂ ಒಂದೇ ಉಷ್ಣತೆಗೆ ಬಂದಮೇಲೆ 15 ಸೆಂಮೀ ಸಂದಿಯಲ್ಲಿ ಸಿಮೆಂಟ್ ಗಾರೆಯನ್ನು ನೀರಾಗಿ ಕದರಿ ಸುರಿದು ಭರ್ತಿ ಮಾಡಿದ್ದಾರೆ.

1932ರಲ್ಲಿ ಬೆಂಗಳೂರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಕೈಗೊಂಡ ಯೋಜನೆಯಂತೆ ತಿಪ್ಪಗೊಂಡನ ಹಳ್ಳಿಯ ಕಲ್ಲುಗಾರೆಯ ಕಟ್ಟೆಯ ಮೊದಲನೆಯ ಘಟ್ಟದ ಅಗಲವನ್ನು ಬಲ ದಡದಲ್ಲಿ ಹೆಚ್ಚಿಸಬೇಕಾಗಿ ಬಂದಾಗ ಇದೇ ಕ್ರಮವನ್ನೇ ಬಳಸಿಕೊಂಡಿದೆ.

ಅಸ್ವಾನ್ ಕಟ್ಟೆಯ ಎತ್ತರ ಹೆಚ್ಚಾದ ಮೇಲೆ ಕೆಳಮಟ್ಟದ ತೂಬುಗಳಿಂದ ಹೆಚ್ಚಿನ ವೇಗದಲ್ಲಿ ಹೊರಕ್ಕೆ ಬರುವ ನೀರಿನ ವೇಗವನ್ನು ತಡೆಯಲು 87.5 ಮೀ ಮಟ್ಟದಲ್ಲಿ ಈ ಕೊನೆಯಿಂದ ಆ ಕೊನೆಯವರೆಗೂ ಕಲ್ಲುಗಾರೆಯ ದಪ್ಪವಾದ ನೆಲಹಾಸನ್ನು ಕಟ್ಟಿದ್ದಾರೆ.

ಈಜಿಪ್ಟಿನ ಜನಸಂಖ್ಯೆ ಹೆಚ್ಚಾದ ಹಾಗೂ ಸಾಗುವಳಿಯಾಗುವ ಜಮೀನು ಹೆಚ್ಚಾಗಿ ಬೇಸಾಯಕ್ಕೆ ನೀರು ಸಾಲದಾಯಿತು. ಆಗ 1899–1933ರ ಅವಧಿಯಲ್ಲಿ ಅಸ್ವಾನ್ ಕಟ್ಟೆಯನ್ನು 35½ ಮೀ ನೀರು ಹಿಡಿಯುವ ಹಾಗೆ ಎತ್ತರಿಸಲಾಯಿತು. ಕಟ್ಟೆಯ ಉದ್ದ 2,134 ಮೀ ಕಟ್ಟೆಯಲ್ಲಿ 16,000 ಕೋಟಿ ಸಲೆ ಅಡಿ ನೀರು ಹಿಡಿಯುತ್ತದೆ. ಅಸ್ವಾನ್ ಕಟ್ಟೆಯ ಕೆಳಗಡೆ 560 ಕಿಮೀ ದೂರದಲ್ಲಿ ಅಸ್ಸಿಟ್ ಕಟ್ಟೆಯನ್ನು ಕಟ್ಟಿ ಇಬ್ರಾಮಿಯಾ ನಾಲೆಯೊಳಕ್ಕೆ ನೀರನ್ನು ಬಿಟ್ಟಿದ್ದಾರೆ.

ಈಗ ಅಸ್ವಾನ್ ಕಟ್ಟೆಯ ಬಳಿ ವಿದ್ಯುಜ್ಜನಕ ಯಂತ್ರಗಳು ಸ್ಥಾಪಿತವಾಗಿವೆ. ನೀರಾವರಿ ಕ್ರಮದಲ್ಲಿ ಮೇಲ್ಪಾಡುಗಳಾಗಿವೆ. ಇದುವರೆಗೆ ಈ ಕಟ್ಟೆಯ ಕೆಲಸಗಳಿಗಾಗಿ ಒಟ್ಟು 1 ಕೋಟಿ ಪೌಂಡು ತಗಲಿದೆ. ಜನರಿಗೆ ಸೌಕರ್ಯಗಳು ಅನೇಕ ಬಗೆಗಳಲ್ಲಿ ಹೆಚ್ಚಿವೆ.

**ಅಸ್ವಾನ್ ಎತ್ತರ ಕಟ್ಟೆ :** ಹಳೆಯ ಅಸ್ವಾನ್ ಕಟ್ಟೆಯ ಮೇಲುಗಡೆಗೆ ನಾಲ್ಕು ಮೈಲಿಗಳ ಅಂತರದಲ್ಲಿ ನಿರ್ಮಿತವಾಗುತ್ತಿರುವುದೇ ಎತ್ತರದ ಕಟ್ಟೆ. 1960ರಲ್ಲಿ ಇದರ ಕಾರ್ಯಾರಂಭ ವಾಯಿತು. ಈಜಿಪ್ಟಿನಲ್ಲಿ ಇನ್ನೂ ನೀರಾವರಿಗೆ ಒಳಪಡದ ವಿಸ್ತಾರ ಭೂಪ್ರದೇಶದಲ್ಲಿ ಹಸಿರು ಕೊನರಿಸಿ, ಗೋದಿ, ಹತ್ತಿ ಮುಂತಾದ ಬೆಳೆ ತೆಗೆಯುವ ಕನಸೇ ಈ ಯೋಜನೆಯ ಹಿಂದೆ ಇರುವ ಪ್ರೇರಕಶಕ್ತಿ. ಒಮ್ಮೆ ಅತಿಯಾಗಿ ಉಬ್ಬಿ, ಮತ್ತೊಮ್ಮೆ ವಿಪರೀತ ತಗ್ಗಿ, ಸುತ್ತಣ ಜನರನ್ನು ಸರ್ವದಾ ಅನಿಶ್ಚಯದಲ್ಲಿ ತಳ್ಳಿ ತಬ್ಬಿಬ್ಬು ಮಾಡುವ ನೈಲ್ ನದಿಯನ್ನು ಅಂಕೆಗೆ ಒಳಪಡಿಸಿ, ಪ್ರವಾಹಕಾಲದಲ್ಲಿ ಅದರ ಹೆಚ್ಚು ನೀರನ್ನು ಹಿಡಿದು ನಿಲ್ಲಿಸಿ ಶೇಖರಿಸುವುದು ಇದರಿಂದ ಸಾಧ್ಯ. ಕಟ್ಟೆ ಪೂರೈಸಿದಾಗ ಈ ಜಲಾಶಯದಲ್ಲಿ 12,56,00,000 ಘ.ಅ. (1,54, 93,00,00,000 ಘನ ಮೀಟರ್) ನೀರನ್ನು ಶೇಖರಿಸಬಹುದೆಂದು ನಿರೀಕ್ಷಿಸಲಾಗಿದೆ. ತಲಾ 1,75,000 ಕಿ.ವಾ. ಗಳಂತೆ ಒಟ್ಟು 2,100 ಸಾವಿರ ಕಿ.ವಾ. ವಿದ್ಯುದುತ್ಪಾದನ ಸಾಮರ್ಥ್ಯವುಳ್ಳ ಜಲವಿದ್ಯುದಾಗಾರದ ನಿರ್ಮಾಣವೂ ಈ ಯೋಜನೆಯ ಅಂಗವಾಗಿದೆ.

ಈ ಕಟ್ಟೆಯ ನಿರ್ಮಾಣಕಾರ್ಯ ಎರಡು ಹಂತಗಳಲ್ಲಿ ನಡೆದಿದೆ. ಮೊದಲನೆಯ ಹಂತ 1960ರ ಜನವರಿಯಲ್ಲಿ ಪ್ರಾರಂಭವಾಗಿ 1964ರಲ್ಲಿ ಮುಗಿಯಿತು. ಆ ವರ್ಷದ ನವಂಬರಿನಲ್ಲಿ ಎರಡನೆಯ ಹಂತದ ಕಾರ್ಯಾರಂಭವಾಯಿತು. ಸೋವಿಯತ್ ರಾಜ್ಯದ ತಾಂತ್ರಿಕ ಸಹಕಾರದೊಂದಿಗೆ, 30,000 ಈಜಿಪ್ಷಿಯನ್ ಕೆಲಸಗಾರರಿಂದಲೂ 2,000 ಮಂದಿ ಸೋವಿಯತ್ ತಜ್ಞರಿಂದಲೂ ಈ ಕಾರ್ಯ ಮುಂದುವರಿಯಿತು. ಇದು ಈಗ ಮುಕ್ತಾಯದ ಘಟ್ಟದಲ್ಲಿದೆ. ವಿದ್ಯುದಾಗಾರದ ನಿರ್ಮಾಣದೊಂದಿಗೆ ವಿದ್ಯುತ್ತಿನ ಸಂವಹನ (ಟ್ರಾನ್ಸ್ಮಿಷನ್) ವ್ಯವಸ್ಥೆಯ ನಿರ್ಮಾಣದ ಕೆಲಸವೂ ಸಾಗಿತು. ಅಖಿಲ ಈಜಿಪ್ಟ್ ವಿದ್ಯುಜ್ಜಾಲ (ಗ್ರಿಡ್ ಸಿಸ್ಟಂ) ನಿಯಂತ್ರಣ ಕೇಂದ್ರವನ್ನು ಕೈರೊ ನಗರದ ಬಳಿಯಲ್ಲಿ ನಿರ್ಮಿಸಲಾಗಿದೆ. ನೀರಾವರಿಯ ಜೊತೆಗೆ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಸರಬರಾಜೂ ಸಾಧ್ಯವಾಗಿ, ಇದರಿಂದ ಈಜಿಪ್ಟಿನ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯವಾಗಿದೆ.

ಈ ಕಟ್ಟೆ ಪೂರ್ಣಗೊಂಡು, ಪೂರ್ತಿಯಾಗಿ ನೀರು ಶೇಖರವಾದಾಗ ಈ ನದೀ ಕಣಿವೆಯಲ್ಲಿ 644 ಕಿಮೀ ಗಳವರೆಗೆ ನೀರು ಒದ್ದು ನಿಲ್ಲುತ್ತದೆ. ಇದು ಸೂಡಾನ್ ಪ್ರದೇಶ ದೊಳಕ್ಕೂ ಚಾಚುತ್ತದೆ. ಇದರಿಂದ ಈಜಿಪ್ಟ್ ಹಾಗೂ ಸೂಡಾನಿನ ಸು. 90,000 ರೈತರು ನೆಲೆಯಿಲ್ಲದವರಾಗುತ್ತಾರೆಂದು ಅಂದಾಜು ಮಾಡಲಾಗಿತ್ತು. ಇವರಿಗೆ ಈಜಿಪ್ಟ್ ಸೂಡಾನ್‌ಗಳಲ್ಲಿ ಬೇರೆ ಕಡೆಗಳಲ್ಲಿ ವಸತಿಯನ್ನೂ ಬೇಸಾಯದ ನೆಲವನ್ನೂ ಒದಗಿಸಿಕೊಡುವುದು ಅಗತ್ಯವಾಯಿತು.

ಈ ಎತ್ತರ ಕಟ್ಟೆಯನ್ನೊತ್ತಿ ನೀರು ಶೇಖರವಾದಾಗ ಅಮೂಲ್ಯವಾದ ಪ್ರಾಚೀನ ದೇವಾಲಯಗಳೂ ವಸ್ತುಗಳೂ ಮುಳುಗಿ ನಾಶವಾಗುವುದನ್ನು ತಪ್ಪಿಸಲು ಅವನ್ನೆಲ್ಲ ಬೇರೆಡೆಗೆ ಸಾಗಿಸಲು ವ್ಯವಸ್ಥೆ ಮಾಡಬೇಕಾಯಿತು. ವಿಶ್ವಸಂಸ್ಥೆಯ ನೆರವಿನಿಂದ ಇದನ್ನು ಜೋಪಾನಗೊಳಿಸಿಕೊಳ್ಳುವುದು ಸಾಧ್ಯವಾಯಿತು (**ನೋಡಿ–ಅಬು ಸಿಂಬೆಲ್**). *

**ಆಹವನೀಯ:** ಶ್ರೌತಕರ್ಮಗಳಲ್ಲಿ ಉಪಯೋಗಿಸುವ ಮೂರು ಅಗ್ನಿಗಳಲ್ಲಿ ಒಂದು. ಅಗ್ನ್ಯಾಧಾನ ಕ್ರಿಯೆಯ ಅನಂತರ ದ್ವಿಜರಿಗೆ ಗಾರ್ಹಪತ್ಯ, ದಕ್ಷಿಣಾಗ್ನಿ ಮತ್ತು ಆಹವನೀಯ ಎಂಬ ಅಗ್ನಿಗಳು ಸಿದ್ಧವಾಗುತ್ತವೆ. ಅರಣಿಯಿಂದ ಕಡೆದು ಪಡೆದ ಅಗ್ನಿಯನ್ನು ಅದಕ್ಕಾಗಿ ನಿರ್ಮಿಸಿದ ಕುಂಡಗಳಲ್ಲಿ ಇಡಬೇಕು. ಇವುಗಳಲ್ಲಿ ಯಾಗಶಾಲೆಯೊಳಗೆ ಪೂರ್ವದಿಕ್ಕಿನಲ್ಲಿರುವ ಕುಂಡದಲ್ಲಿ ಸೂರ್ಯಬಿಂಬ ಅರ್ಧ ಉದಯಿಸಿದಾಗ ಇಟ್ಟು ಸಿದ್ಧವಾದ ಅಗ್ನಿಯೇ ಆಹವನೀಯ. ಯಾಗದಲ್ಲಿ ಯಜಮಾನನ ಪಾತ್ರ ಪ್ರಧಾನವಾದರೂ ಈ ಅಗ್ನಿಯಲ್ಲಿ ಹೋಮ ಮಾಡುವವ ಅಧ್ವರ್ಯು ಎಂಬ ಋತ್ವಿಕ್ಕು. ಈ ಅಗ್ನಿಯನ್ನು ಆರದಂತೆ ಕಾಪಾಡಿಕೊಂಡು ಬರುವುದು ಒಂದು ವಿಧ. ಗಾರ್ಹಪತ್ಯಾಗ್ನಿಯಿಂದ ಆಹವನೀಯ ಕುಂಡಕ್ಕೆ ಅಗ್ನಿಯನ್ನು ಪ್ರತಿನಿತ್ಯ ತಂದಿಟ್ಟುಕೊಂಡು ಹೋಮಕರ್ಮಾನಂತರ ಆ ಅಗ್ನಿಯನ್ನು ಬಿಡುವುದು ಇನ್ನೊಂದು ವಿಧ. (ಎಸ್.ಎನ್.ಕೆ.)

**ಆಹವಮಲ್ಲ ತೈಲಪ:** ಇಮ್ಮಡಿ ತೈಲನೆಂದು ಖ್ಯಾತನಾಗಿರುವ ಈತ ಕಲ್ಯಾಣದ ಚಾಲುಕ್ಯ ಮನೆತನದ ಸ್ಥಾಪಕನೆಂದೂ ಕವಿಕಾವ್ಯಪೋಷಕನೆಂದೂ ಗಣ್ಯನಾಗಿದ್ದಾನೆ. ಈ ಮನೆತನದಲ್ಲಿ ಈತನಿಗೆ ಮೊದಲು ಇನ್ನೂ ಕೆಲವರು ಆಗಿಹೋದಂತೆ ತಿಳಿದುಬಂದಿದ್ದರೂ ಅದರ ಚರಿತ್ರೆ ಸರಿಯಾಗಿ ಮೊದಲಾಗುವುದು ಈತನಿಂದಲೇ ಎನ್ನಬಹುದು. ಈತ ನಾಲ್ವಡಿ ವಿಕ್ರಮಾದಿತ್ಯನಿಗೆ ಚೇದಿಯ ರಾಜಪುತ್ರಿ ಬೊಂತಾದೇವಿಯಲ್ಲಿ ಜನಿಸಿದ. ಪತ್ನಿ ಭಮ್ಮಹ (ಭಾಮಹ) ರಟ್ಟನ ಪುತ್ರಿಯಾದ ಜಾಕವ್ವೆ. ಈ ಭಮ್ಮಹ ರಾಷ್ಟ್ರಕೂಟರ ಅರಸನೆಂದೇ ತಿಳಿಯುವುದರಿಂದ ಈಕೆ ರಾಷ್ಟ್ರಕೂಟರಾಜಪುತ್ರಿಯೇ ಆದಳು. ಆಹವಮಲ್ಲ ತೈಲಪನಿಗೆ ಜಾಕವ್ವೆಯಲ್ಲಿ ಸತ್ಯಾಶ್ರಯ ಮತ್ತು ದಶವರ್ಮ (ಯಶೋವರ್ಮ) ಎಂಬ ಇಬ್ಬರು ಪುತ್ರರಿದ್ದರು. ತೈಲಪನ ತರುವಾಯದಲ್ಲಿ ಸತ್ಯಾಶ್ರಯ ಚಾಲುಕ್ಯರಾಜ್ಯವನ್ನಾಳಿದ.

ಆಹವಮಲ್ಲ ತೈಲಪನಿಗೆ ತೈಲ (ತೈಲಪ) ಎಂಬುದು ನಿಜವಾದ ಹೆಸರು. ಆಹವಮಲ್ಲ ಎಂಬುದು ನಚ್ಚಿನ ಬಿರುದು. ತೈಲಪಯ್ಯ, ತೈಲಪ್ಪ, ನೂರ್ಮಡಿತೈಲ–ಎಂಬುವು ಪ್ರತಿನಾಮಗಳು. ಈತನಿಗೆ ಮಹಾರಾಜಾಧಿರಾಜ, ರಾಜಪರಮೇಶ್ವರ, ಪರಮಭಟ್ಟಾರಕ–ಎಂದು ಮುಂತಾದ ಸಾಮ್ರಾಜ್ಯದ ಪ್ರಶಸ್ತಿಸೂಚಕವಾದ ಅನೇಕ ಬಿರುದುಗಳಿದ್ದುವು. ಈತ 977ರವರೆಗೆ 24 ವರ್ಷಗಳ ಕಾಲ ರಾಜ್ಯವನ್ನಾಳಿದ.

ಆಹವಮಲ್ಲ ತೈಲಪನ ಹೆಸರನ್ನು ಹೇಳುವ ಅತಿ ಹಳೆಯ ದಾಖಲೆ ಎಂದರೆ 957ರ ಒಂದು ಶಾಸನ. 957 ಮತ್ತು 965ರಲ್ಲಿ ಈತ ರಾಷ್ಟ್ರಕೂಟರಾಜ ಮುಮ್ಮಡಿ ಕೃಷ್ಣನಿಗೆ ಸಾಮಂತನಾಗಿ ಬಿಜಾಪುರ ಜಿಲ್ಲೆಯಲ್ಲಿ ಆಳುತ್ತಿದ್ದ. ರಾಷ್ಟ್ರಕೂಟರ ಅಧೀನದಲ್ಲಿ ಮೊದಲು ಚಿಕ್ಕದೊಂದು ನಾಡಿನ ನಾಯಕನಾಗಿದ್ದು ಬರಬರುತ್ತ ಮಹಾಸಾಮಂತಪದವಿಗೆ ಏರಿದ. ಮುಮ್ಮಡಿ ಕೃಷ್ಣನ ಉತ್ತರಾಧಿಕಾರಿಗಳು ದುರ್ಬಲರಾಗುತ್ತ ಹೋದಂತೆ ಈತ ತನ್ನ ಸ್ಥಾನಬಲವನ್ನು ಸಾಮರ್ಥ್ಯವನ್ನು ಬೆಳೆಸಿಕೊಂಡ. ರಾಷ್ಟ್ರಕೂಟ ಇಮ್ಮಡಿ ಕಕ್ಕನಿಗೂ ತೈಲಪನಿಗೂ ನಡೆದ ಯುದ್ಧದಲ್ಲಿ (ಸು. 973) ಕಕ್ಕ ಮೃತನಾದ ಮೇಲೆ, 973–4 ರಿಂದ ತೈಲಪ ರಾಷ್ಟ್ರಕೂಟ ಅಧಿರಾಜತ್ವವನ್ನು ಪೂರ್ತಿಯಾಗಿ ಕಿತ್ತೊಗೆದು ಸ್ವತಂತ್ರನಾದ.

ಆಹವಮಲ್ಲ ತೈಲಪನ ಏಳಿಗೆಯಿಂದ ಹೊಸದಾಗಿ ಉದಿಸಿದ ಚಾಲುಕ್ಯ ಸಾಮ್ರಾಜ್ಯಕ್ಕೆ ಈವರೆಗೆ ರಾಷ್ಟ್ರಕೂಟರಿಗೆ ಸಾಮಂತರಾಗಿದ್ದವರು ತಮ್ಮ ವಿಧೇಯತೆಯನ್ನು ತೋರಿಸಲು ಮೊದಲು ಮಾಡಿದರು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಆಳುತ್ತಿದ್ದ ಬ್ರಹ್ಮಕ್ಷತ್ರಿಯ

ಕುಲದ ಶಾಂತಿವರ್ಮ ಮೊದಲು ಕಕ್ಕಲದೇವನಿಗೆ ಅಧೀನನಾಗಿದ್ದು, ಅನಂತರ ಆಹಮಮಲ್ಲನಿಗೆ ಅಧೀನನಾದ. ಗಂಗ ಮಾರಸಿಂಹನ ಅನಂತರದ ಗಂಗದೇಶವನ್ನು ಸು. 974–75ರಲ್ಲಿ ಆಳುತ್ತಿದ್ದು, ಚಾಲುಕ್ಯರಿಗೆ ಸಿಂಹಪ್ರಾಯನೆಂದು ತನ್ನನ್ನು ಕರೆದುಕೊಂಡು ಮೆರೆಯುತ್ತಿದ್ದ ಪಾಂಚಾಲದೇವನೆಂಬ ಒಬ್ಬ ನಾಯಕನನ್ನು ತೈಲಪ ಶಿವಮೊಗ್ಗ ಜಿಲ್ಲೆಯ ಸಿರಿವೂರಿನಲ್ಲಿ ಬೀಡುಬಿಟ್ಟಿದ್ದಾಗ (ಸು. 975) ಯುದ್ಧರಂಗದಲ್ಲಿ ಶಿರಚ್ಛೇದನ ಮಾಡಿ ಕೊಂದ. 976ರಿಂದ ತೈಲಪ ತನ್ನ ಸಾಮ್ರಾಜ್ಯ ಪ್ರಶಸ್ತಿಗಳ ಸಹಿತವಾಗಿ ವರ್ಣಿತವಾಗಿರುವುದು ಬಳ್ಳಾರಿ ಜಿಲ್ಲೆಯ ಶಾಸನಗಳಿಂದ ತಿಳಿದುಬರುತ್ತದೆ. ಮುಮ್ಮಡಿ ಕೃಷ್ಣನ ಕೃಪೆಯಿಂದ ಅಭ್ಯುದಯಕ್ಕೆ ಬಂದ ಸೌಂದತ್ತಿಯ ರಟ್ಟರು ಪ್ರವರ್ಧಮಾನಕ್ಕೆ ಬರುತ್ತಿದ್ದ ತೈಲಪನ ಅಧೀನತೆಯನ್ನು ಒಪ್ಪಿಕೊಂಡ ಹಾಗೆ ಸುಮಾರು 980ರಲ್ಲಿ ಲಿಖಿತವಾದಂತೆ ಭಾವಿಸುವ ಎರಡು ಶಾಸನಗಳಿಂದ ತಿಳಿದು ಬರುತ್ತದೆ. ಚೋಳದೊರೆಯೊಬ್ಬನನ್ನು ಸೋಲಿಸಿ ಆತನಿಂದ 150 ಆನೆಗಳನ್ನು ಸೆಳೆದುಕೊಂಡು ತೈಲ ಅನಂತಪುರ ಜಿಲ್ಲೆಯ ರೊದ್ದ ಶಿಬಿರದಿಂದ ರಾಜ್ಯವಾಳುತ್ತಿದ್ದ ವಿಷಯವನ್ನು ತೈಲಪನ ಕಾಲದ್ದೇ ಆದ ಬಳ್ಳಾರಿಯ ಕೋಗಳಿ ಶಾಸನದಲ್ಲಿ (992) ಹೇಳಿದೆ. ತೈಲಪನ ಮಹತ್ಸಾಧನೆಗಳಲ್ಲಿ ಗಣ್ಯವಾದದ್ದು ಎಂದರೆ ಆತ ಮಾಳವ ದೇಶದ ಪರಮಾರ ಮುಂಜನನ್ನು ಸಾಧಿಸಿದ್ದು. ಈ ಮುಂಜ ಸೀಯಕ ಹರ್ಷನ ತರುವಾಯದಲ್ಲಿ ಮಾಳವ ದೇಶವನ್ನಾಳುತ್ತಿದ್ದ ವಾಕ್ಪತಿ ಮುಂಜನೆಂಬುದಾಗಿ ಗುರುತಿಸಲಾಗಿದೆ. ತೈಲಪ ರಾಷ್ಟ್ರಕೂಟರಿಗೆ ಅಧೀನನಾಗಿದ್ದಾಗಲೇ ಅವನ ಪರವಾಗಿ ಅವರ ಶತ್ರುಗಳಾದ ಪರಮಾರರೊಡನೆ ಕಾದಿದ್ದ. ಈಚೆಗೆ ಈತ ಪರಮಾರ ಮಂಜನನ್ನು ಸೆರೆಹಿಡಿದ ವಿಷಯವನ್ನು ಕೌಠೆಂ ಶಾಸನಗಳಲ್ಲೂ (1003), ಕೊಂದ ವಿಷಯವನ್ನು ವಿಕ್ರಮಾದಿತ್ಯನ ಗದಗು ಶಾಸನದಲ್ಲೂ ಉಲ್ಲೇಖಿಸಿದೆ. ಮುಂಜನ ಮೃತಿಯ ಕಾಲವನ್ನು ಸು. 995 ಎಂದು ಊಹಿಸಲಾಗಿದೆ. ಈತ ಚಾಲುಕ್ಯರ ಕೈಯಲ್ಲಿ ಸಿಕ್ಕಿ ಪಾಡುಪಟ್ಟದ್ದನ್ನು ಮೇರುತುಂಗನ ಪ್ರಬಂಧಚಿಂತಾಮಣಿಯಲ್ಲಿ ವರ್ಣಿಸಿದೆ.

ಆಹವಮಲ್ಲ ತೈಲಪನ ಸಾಮಂತವರ್ಗದಲ್ಲಿ ಬಿಜಾಪುರ ಜಿಲ್ಲೆಯ ಸಿಂಧರು, ಉತ್ತರ ಕೊಂಕಣದ ಶಿಲಾಹಾರರು, ಸೇವುಣದೇಶದ ಯಾದವರು, ನೊಳಂಬಪಲ್ಲವರು–ಇವರೆಲ್ಲ ಸೇರಿದವರಾಗಿದ್ದರು. ಬನವಾಸಿ ಪ್ರಾಂತ್ಯವನ್ನಾಳುತ್ತಿದ್ದವರಲ್ಲಿ ಶೋಭನರಸನೆಂಬಾತ ತೈಲಪನಿಗೆ ಆಪ್ತನಾದ ದಂಡಾಧಿಪನಾದ. ಇನ್ನೊಬ್ಬ ಸೇನಾನಿಯಾದ ಬಾರಪನೆಂಬ ಚಾಲುಕ್ಯರಾಜಪುತ್ರ ತೈಲಪನಿಗಾಗಿ ಲಾಟದೇಶವನ್ನು ಸಾಧಿಸಿಕೊಟ್ಟ. ಬನವಾಸಿ, ಸಾಂತಲಿಗೆ ಕಿಸುಕಾಡುನಾಡುಗಳಲ್ಲಿ ರಾಜಪ್ರತಿನಿಧಿಯಾಗಿ ಆಳುತ್ತಿದ್ದ ಭೀಮರಸ ತೈಲಪನ ಅಂಕಕಾರನೆನಿಸಿದ್ದ. ಅಂತೂ ಆಹವಮಲ್ಲ ತೈಲಪ ಗುಜರಾತ ಪ್ರಾಂತ್ಯ ಭಾಗವನ್ನು ಬಿಟ್ಟು ಸಮಗ್ರ ರಾಷ್ಟ್ರಕೂಟರ ಸಾಮ್ರಾಜ್ಯಕ್ಕೆ ಒಡೆಯನಾಗಿ, ರಟ್ಟಪಾಡಿ ಏಳೂವರೆ ಲಕ್ಷ ಪ್ರಾಂತ್ಯವನ್ನು ಆಳಿದನೆಂದು ತಿಳಿಯುವುದು.

ತೈಲಪನು ಕವಿ ರನ್ನನಿಗೆ ಆಶ್ರಯದಾತನಾಗಿದ್ದ. ರನ್ನ ಸು. 990ರಲ್ಲಿ ತೈಲಪನ ಆಸ್ಥಾನವನ್ನು ಪ್ರವೇಶಿಸಿರಬೇಕೆಂದೂ ಅಲ್ಲಿಯೇ ಅಜಿತತೀರ್ಥಂಕರಪುರಾಣತಿಲಕ ಎಂಬ ತನ್ನ ಗ್ರಂಥವನ್ನು ರಚಿಸಿರಬೇಕೆಂದೂ ಸು. 991–2ರಲ್ಲಿ ಆತನಿಂದಲೇ ಕವಿಚಕ್ರವರ್ತಿ ಬಿರುದನ್ನು ಪಡೆದಿರಬೇಕೆಂದೂ ವಿದ್ವಾಂಸರು ಊಹಿಸಿದ್ದಾರೆ. ಚಕ್ರವರ್ತಿಯಾದ ತೈಲಪನಿಂದ ಮಹಿಮೋನ್ನತಿಯನ್ನೂ ಕವಿಚಕ್ರವರ್ತಿ ಬಿರುದನ್ನೂ ತಾನು ಪಡೆದುಕೊಂಡುದಾಗಿ ರನ್ನನೇ ತನ್ನ ಇನ್ನೊಂದು ಗ್ರಂಥವಾದ ಸಾಹಸಭೀಮವಿಜಯದಲ್ಲಿ ಹೇಳಿಕೊಂಡಿದ್ದಾನೆ. ರನ್ನನ ಆ ಎರಡು ಗ್ರಂಥಗಳಲ್ಲೂ ಅಲ್ಲಲ್ಲಿ ತೈಲಪನ ವಿಚಾರ ಬಂದಿದೆ. ಚಕ್ರಿಗಳೊಳಗಾಹವಮಲ್ಲಂ ಮಿಗಿಲೆನಿಕುಂ, ಅವನಿಪರೊಳ್ ನಿಜಭುಜ ಚಕ್ರವರ್ತಿ ರಣಜಯಕೆ ತೈಲನೆಂತಸಹಾಯಂ, ಜಗತೀ ಚಕ್ರಮನಾಳ್ಗೆ ತೈಲನೃಪನೇ ಕಚ್ಛತ್ರದಿಂ–ಇಂಥ ಮಾತುಗಳು ಅಜಿತಪುರಾಣದಲ್ಲಿ ಬಂದಿವೆ. ಗದಾಯುದ್ಧದಲ್ಲಿ ತೈಲಪನನ್ನು ರನ್ನ ಸಮಸ್ತಭುವನಾಶ್ರಯಂ ಶ್ರೀ ಪ್ರಥ್ವೀವಲ್ಲಭಂ, ಮಹಾರಾಜಾಧಿರಾಜಂ, ರಾಜಪರಮೇಶ್ವರಂ, ಪರಮಭಟ್ಟಾರಕಂ, ಕರಹಟಭಯಂಕರಂ, ಜಾವಿಳಾಂಧ್ರ ಕುಲೀನ ಭುವನಸದ್ಗುಣಮಣಿವಿಭೂಷಣಂ, ಸಿಂಧುರಕಂಧರಾಧಿರೂಢಪಲ್ಲಿ ಕೋಟೋಲ್ಲಂಘನಂ, ಭದ್ರಕವಿದ್ರಾವಣಂ, ಕೊಂಕಣಭಯಂಕರಂ, ಉಭಯ ಬಲದಲ್ಲಣಂ, ಮಾರ್ಮಲೆವರಿಗಜಗೇಸರಿ, ಕರೀಂದ್ರಕಂಠೀರವಮಲ್ಲಂ, ವೈರಿಫಣೀಂದ್ರಸೌಪರ್ಣಂ, ಕ್ರಾಕಲಿಕರಾಜಗಜಕೇಸರಿ, ರಣಕುಂಭಿಕುಂಭಕಂಠೀರವಂ, ಯಾದವ ಕುಲಾಂಬರದ್ಯುಮಣಿ, ರಣರಂಗಭೀಷಣಂ, ರಿಪುಬಲಪುಂಜಗಜಘಟಾ ಭಂಜನಂ, ಸಾಮಂತ ಮೃಗಶಾರ್ದೂಲ, ರಣರಂಗರಾಕ್ಷಸಂ ಅಕಲಂಕರಾಮಂ, ತಳವರ್ಗತಳಪ್ರಕಾರಂ, ಅರಿಷ್ಟ ಘರಟ್ಟರಾಷ್ಟ್ರಕೂಟಕಾಳ ಕೂಟಂ, ನಿಜಭುಜಚಕ್ರವರ್ತಿ, ಪಾಂಚಾಲ ಮದೇಭಪಂಚಾನನಂ, ಸಂಹಾರಸಿಂಹಿತ್ವಘೋರ್ಜ ರವಜ್ರದಾಡಾ, ಘೂರ್ಜರ ಭಯಜ್ವರ, ಸಮಸ್ತ ಮಾಳವ ಸಪ್ತಾರ್ಚಿ, ಶತ್ರುಗ್ರಹೋಚಾಟನನುಂ ಮತ್ತಂ ಅನೇಕದೇಶಾಧೀಶ್ವರಂ ಪರನೃಪಮದಗಜಘಟಾಭಂಜನನುಮುತ್ಸಕ್ಯಮಲ್ಲಂ ಶ್ರೀಮನ್ನೂರಿರ್ಮಡಿತೈಲಪನೆನಿಸಿ ದಾಹವಮಲ್ಲದೇವನಿಂ–ಎಂಬುದಾಗಿ ನಾನಾವಿಧವಾಗಿ ಕೀರ್ತಿಸಿದ್ದಾನೆ. ಇದರಲ್ಲಿರುವ ಚಾರಿತ್ರಿಕಾಂಶಗಳು ಹಿಂದೆ ಹೇಳಿರುವ ಘಟನೆಗಳಲ್ಲಿ ಕೆಲವನ್ನು ಘೋಷಿಸುತ್ತವೆ. (ಟಿ.ವಿ.ವಿ.)

**ಆಹಾರ:** ಜೀವಿಯನ್ನು ಜೀವಂತವಾಗಿ ಉಳಿಸಿಕೊಂಡು, ದಿನದ ಚಟುವಟಿಕೆಗಳಿಗೆ ಶಕ್ತಿಯನ್ನು ಕೊಟ್ಟು, ಸವೆದ, ಹಾಳಾದ ಅಂಗಭಾಗಗಳನ್ನು ಸರಿಪಡಿಸಲು ನೆರವಾಗುವ, ಮೈಗೆ ಪುಷ್ಟಿ ಕೊಡುವ ವಸ್ತುಗಳ ಸಮುದಾಯ.

ಆಹಾರ ವಸ್ತುಗಳು: ಇವನ್ನು ಮುಖ್ಯವಾಗಿ 9 ಭಾಗಗಳಾಗಿ ವಿಂಗಡಿಸಬಹುದು. 1. ಅಕ್ಕಿ, ರಾಗಿ, ಜೋಳ, ಗೋದಿ, ಮುಸುಕಿನ ಜೋಳ, ನವಣೆ, ಹಾರಕ, ಸಜ್ಜೆ, ಜವೆಗೋದಿ, ಬಾರ್ಲಿ ಮುಂತಾದ ಧಾನ್ಯಗಳು; ಸಕ್ಕರೆ, ಬೆಲ್ಲ, ಜೇನುತುಪ್ಪ ಇತ್ಯಾದಿ. 2. ತೊಗರಿ, ಉದ್ದು, ಕಡಲೆ, ಅವರೆ, ಹೆಸರು, ತಡಗುಣಿ ಮುಂತಾದ ಬೇಳೆಕಾಳುಗಳು. 3. ತೆಂಗಿನಕಾಯಿ, ಎಳ್ಳು, ಕುಸುಬಿ, ಕಡಲೆಕಾಯಿಬೀಜ, ಬಾದಾಮಿ, ಗೋಡಂಬಿ ಮುಂತಾದ ಎಣ್ಣೆ ಕೊಡುವ ಬೀಜಗಳು; ಕಡಲೆಕಾಯಿ ಎಣ್ಣೆ, ಎಳ್ಳೆಣ್ಣೆ, ಸಾಸಿವೆ ಎಣ್ಣೆ, ವನಸ್ಪತಿ, ಬೆಣ್ಣೆ, ತುಪ್ಪ ಮುಂತಾದ ಜಿಡ್ಡು ವಸ್ತುಗಳು; ಹಾಲು, ಮೊಸರು, ಮಜ್ಜಿಗೆ. 4. ಬಗೆಬಗೆಯ ಸೊಪ್ಪುಗಳು, ಹಸುರೆಲೆ ತರಕಾರಿಗಳು; ಆಲೂಗೆಡ್ಡೆ, ಮರಗೆಣಸು, ಸಿಹಿಗೆಣಸು, ಬದನೆ, ಬೆಂಡೆ, ಹುರುಳಿ, ಗೋರೀ ಕಾಯಿ, ಸೌತೇಕಾಯಿ ಮುಂತಾದ ತರಕಾರಿಗಳು. 5. ಮಾವು, ಪರಂಗಿ, ಸೀಬೆ, ಕಿತ್ತಳೆ, ನಿಂಬೆ, ದ್ರಾಕ್ಷಿ ಮುಂತಾದ ಹಸಿಯ ಹಣ್ಣುಗಳು. 6. ಮೀನು, ಕೋಳಿ, ಕುರಿ, ಬಾತು, ಹಂದಿಗಳ ಮಾಂಸಗಳು; ಮೊಟ್ಟೆ, ಮೀನು ಮುಂತಾದ ಪ್ರೋಟೀನ್‌ಗಳಿರುವ ವಸ್ತುಗಳು.

ಸಮತೋಲ ಆಹಾರ: ಪುಷ್ಟಿಕರ ಅಂಶಗಳನ್ನು ಕೂಡಿಸಿ ಆಹಾರವನ್ನು ಸರಿದೂಗಿಸಬೇಕು. ಅದು ಅವರವರ ಮೈಗುಣ, ವಯಸ್ಸು, ಪರಿಸರ, ಕೆಲಸಗಳಿಗೆ ತಕ್ಕಂತೆ ಬೇರೆ ಬೇರೆಯಾಗಿರಬೇಕು. ಸಮತೋಲ ಆಹಾರದಲ್ಲಿ ಸಾಕಷ್ಟು ಜೀವಾತುಗಳೂ ಕಬ್ಬಿಣ, ಸುಣ್ಣ, ರಂಜಕಗಳ ರೀತಿಯ ಲೋಹ ಪದಾರ್ಥಗಳೂ ಇರುತ್ತವೆ. (ಬಿ.ವಿ.ಎಸ್.)

**ಆಹಾರ ಕುಹರ (ದಾನಿ):** ಏಕಕೋಶಗಳಲ್ಲಿ ನೀರು, ಆಹಾರ ಮತ್ತು ಅಂತಃಸ್ರಾವಗಳಿಂದ ರೂಪುಗೊಂಡ ಕುಹರಗಳು. ಸೂಕ್ಷ್ಮಜೀವಿಯಾದ ಅಮೀಬ ನೀರಿನಲ್ಲಿ ಚಲಿಸುವಾಗ, ಆಹಾರ ಕಣಗಳನ್ನು ಮಿಥ್ಯಾಪಾದಗಳಿಂದ ಆವರಿಸಿ, ಆಹಾರ ಕುಹರ ರೂಪುಗೊಳ್ಳುತ್ತದೆ. ಅಂತರ್ದ್ರವ್ಯದಲ್ಲಿ ಆಹಾರ ಕುಹರ ಚಲಿಸುತ್ತಾ, ಕುಹರದಲ್ಲಿ ಆಹಾರ ಪಚನವಾಗುತ್ತದೆ. ಪಚನವಾದ ಆಹಾರ ಎಲ್ಲಾ ಭಾಗಗಳಿಗೆ ವಿತರಣೆಯಾಗುತ್ತದೆ. ಪಚನವಾಗದ ಆಹಾರ ಕೋಶದ ಒಂದು ಭಾಗಕ್ಕೆ ಸಾಗಿ ಅಲ್ಲಿಂದ ಆಹಾರ ಹೊರಬೀಳುತ್ತದೆ. ಆಹಾರ ಕುಹರದಲ್ಲಿ ಆಹಾರ ಪಚನವಾಗುವಾಗ ಆಹಾರದಲ್ಲಾಗುವ ಬದಲಾವಣೆಗಳನ್ನು ನಿದರ್ಶಿಸಬಹುದಾಗಿದೆ. ಜೀವಿಗಳಿಗೆ ಕೆಲವು ವರ್ಣವಸ್ತುಗಳನ್ನು ಇಲ್ಲವೆ ವರ್ಣಯುಕ್ತ ಆಹಾರವನ್ನು ಒದಗಿಸಿ, ಅವುಗಳಲ್ಲಾಗುವ ವರ್ಣ ಬದಲಾವಣೆಯಿಂದ ಆಮ್ಲಯುಕ್ತ ಇಲ್ಲವೆ ಕ್ಷಾರಯುಕ್ತ ಸ್ಥಿತಿಗಳನ್ನು ತಿಳಿಯಬಹುದು. ಬಹುತರವಾಗಿ ಪಚನಕ್ರಿಯೆ ಕ್ಷಾರಯುಕ್ತ ಸ್ಥಿತಿಯಲ್ಲೇ ನಡೆಯುವುದು.*

**ಆಹಾರ ಕ್ಷೇತ್ರ:** ಬುಂದೇಲಖಂಡದಲ್ಲಿರುವ ಜೈನಕ್ಷೇತ್ರ. ಇಲ್ಲಿ 6.4 ಮೀ ಎತ್ತರವಿರುವ ಶಾಂತಿನಾಥ ಮೂರ್ತಿಯಿದೆ. ಬಿಡಿಯಾಗಿ ಬುಂದೇಲಖಂಡವೂ ಒಟ್ಟಾಗಿ ರಾಜಸ್ಥಾನವೂ ಭಾರತೀಯ ಶಿಲ್ಪಕ್ಕೆ ಹೆಸರುವಾಸಿಯಾಗಿವೆ. (ಬಿ.ಜಿ.)

**ಆಹಾರಗಳ ನೀರ್ಗಳೆತ:** ಆಹಾರ ವಸ್ತುಗಳಿಂದ ನೀರಿನ ಅಂಶವನ್ನು ಹೊರತೆಗೆಯುವುದು (ಡೀಹೈಡ್ರೇಷನ್ ಆಫ್ ಫುಡ್ಸ್)ಬಿಸಿಲಿನಲ್ಲಿ ಅಥವಾ ಬಿಸಿಗಾಳಿಯಲ್ಲಿ ಒಣಗಿಸಿದರೆ, ಆಹಾರ ವಸ್ತುಗಳು ಕೆಡುವುದಿಲ್ಲವೆಂದು ಅನಾದಿಕಾಲದಿಂದ ಗೊತ್ತಿದೆ.ಮರಗಿಡಗಳ ಬೀಜಗಳು ಒಣಗಿ ಬಹು ಕಾಲ ಬದುಕಿರುವುವು. ಹುಣಿಸೇ ಹಣ್ಣು, ಬೇಲದ ಹಣ್ಣು, ಖರ್ಜೂರ ಮುಂತಾದವು ಮರದ ಮೇಲೆಯೇ ಬಹುಪಾಲು ನೀರು ಕಳೆದುಕೊಳ್ಳುವುದರಿಂದ ಕಿತ್ತಿಟ್ಟರೆ ಕೆಡುವುದಿಲ್ಲ. ನೀರು ಇಂಗುವುದರಿಂದ ಕೊಬ್ಬರಿ ಗಿಟುಕು ಕೆಡುವುದಿಲ್ಲ. ಬೇಳೆಗಳು, ಧಾನ್ಯಗಳು, ಸಂಬಾರ ದಿನಸಿಗಳು, ಕೆಲವು ಗೆಡ್ಡೆಗಳನ್ನೂ ಹೆಚ್ಚಾಗಿ ಸಿಕ್ಕುವ ದೇಶಗಳಲ್ಲಿ ಮೀನುಗಳನ್ನೂ ನೀರ್ಗಳೆದು (ನೀರು ತೆಗೆದು) (ಡೀಹೈಡ್ರೇಟ್) ಒಣಗಿಸಿ ಕೆಡದಂತೆ ಇರಿಸುವುದು ಮೊದಲಿನಿಂದ ಬಂದ ಪದ್ಧತಿ. ಆಫ್ರಿಕನ್ನರೂ ಅಮೆರಿಕದ ಆದಿವಾಸಿಗಳೂ ಮಾಂಸದ ತುಂಡುಗಳನ್ನು ಬಿಸಿಲಲ್ಲಿ ಒಣಗಿಸಿ ಇಟ್ಟುಕೊಳ್ಳುತ್ತಿದ್ದರು. ಅಮೆರಿಕಕ್ಕೆ ಮೊದಲು ವಲಸೆ ಹೋದ ಬಿಳಿಯರೂ ಜಪಾನೀಯರೂ ಎಷ್ಟೋ ಕಾಲದಿಂದಲೂ ಒಣಗಿಸಿದ ಅನ್ನ, ಮೀನುಗಳನ್ನು ಬಳಸುತ್ತಿದ್ದಾರೆ. ಚೀನಾದಲ್ಲಿ ಮೊಟ್ಟೆಗಳ ಒಣ ಪುಡಿ ಬಳಕೆಯಲ್ಲಿದೆ. ನಮ್ಮ ಮನೆಗಳಲ್ಲಿ ಹಪ್ಪಳ, ಸಂಡಿಗೆ, ಬಾಳಕ ಮುಂತಾದವನ್ನು ಒಣಗಿಸಿ ವರ್ಷವೆಲ್ಲ ಇಡುವುದು ಎಲ್ಲರಿಗೂ ಗೊತ್ತಿದೆ.

ಆಹಾರಗಳನ್ನು ಕೆಡಿಸುವುದು ಮುಖ್ಯವಾಗಿ ಜೀವಾಣುಗಳು. ಅಲ್ಲದೆ ಕಿಣ್ವಗಳು (ಎಂಜೈಮ್ಸ್), ಹುಳಿಯಿಲ್ಲದ ಮಾಂಸ, ಮೀನು, ಹಾಲು, ತರಕಾರಿ, ಹುಳಿಯಾಗಿರುವ ಹಣ್ಣು, ಚೀಸ್ ಮುಂತಾದವಲ್ಲಿ ಹುದುಗೂ (ಯೀಸ್ಟ್) ಬೂಷ್ಟೂ ಬೆಳೆದು ಅವುಗಳಿಂದೇಳುವ ಕಿಣ್ವಗಳಿಂದ ಆಹಾರ ಪದಾರ್ಥವನ್ನು ಕೊಳೆಯಿಸಿಯೋ ಹುದುಗೇಳಿಸಿಯೋ ಕೆಡಿಸುತ್ತವೆ. ಇದಲ್ಲದೆ, ಕೆಲವು ಆಹಾರಗಳಲ್ಲಿ ಮೊದಲೇ ಇರುವ ಕಿಣ್ವಗಳು ನೀರು ಕಾವೂ ಸಾಕಷ್ಟು ಇದ್ದಾಗ ಆಹಾರಗಳನ್ನು ಕೊಳೆಸಿ, ಕೆಡಿಸಿಬಿಡುತ್ತವೆ. ಮೀನು, ಮಾಂಸ, ಕೆಲವು ತರಕಾರಿಗಳು ಕೆಡುವುದು ಹೀಗೇಯೆ.

ಇನ್ನೂ ಹಸಿಯಾಗಿರುವಾಗಲೇ ಆಹಾರ ಪದಾರ್ಥಗಳ ನೀರನ್ನು ಇಂಗಿಸಿಬಿಡುವುದರಿಂದ ಜೀವಾಣುಗಳ ಬೆಳೆವಣಿಗೆಯನ್ನು ತಡೆಗಟ್ಟಬಹುದು. ಆದರೆ, ಅವುಗಳಲ್ಲಿ ಮೊದಲೇ ಇರುವ ಕಿಣ್ವಗಳನ್ನು ಅಶಕ್ತ ಮಾಡದಿದ್ದರೆ, ಒಣಗಿಸುವಾಗ ಅವುಗಳ ಚಟುವಟಿಕೆಯಿಂದ ಕೆಟ್ಟ ವಾಸನೆ ಮತ್ತು ಕೆಟ್ಟ ರುಚಿಗಳು ಹುಟ್ಟಬಹುದು. ಆಲೂಗೆಡ್ಡೆಯ ಹೆರೆದ ಚೂರುಗಳನ್ನು ಒಣಗಿಸಿ ಎಣ್ಣೆಯಲ್ಲಿ ಕರಿದರೆ ರುಚಿಯಲ್ಲದ ಬಿಸ್ಕತ್ತಿನಂತಿರುತ್ತದೆ. ಬೆಂಡೆಕಾಯಿ, ನುಗ್ಗೆಕಾಯಿ

ಹೋಳುಗಳನ್ನು ಒಣಗಿಸಿದರೆ ಕೆಟ್ಟವಾಸನೆ ಬಂದು, ಬೇಯಿಸಿದಾಗ ಬೆಂಡಿನ ತುಂಡುಗಳಂತೆ ಇರುತ್ತವೆ. ಅಲ್ಲದೆ, ಕೆಲವು ಕಿಣ್ವಗಳು ಆಹಾರ ಪದಾರ್ಥಗಳ ಹಸಿರು, ಕೆಂಪು ಮುಂತಾದ ಬಣ್ಣಗಳನ್ನು ಕೆಡಿಸಬಹುದು.

ಈ ಬೇಡದ ಪರಿಣಾಮಗಳನ್ನು ತಡೆಗಟ್ಟಲು, ಆಹಾರ ಪದಾರ್ಥಗಳನ್ನು ಒಣಗಿಸುವ ಮೊದಲು ಕುದಿಯುವ ನೀರಿನಲ್ಲಿ ಕೆಲವು ಕ್ಷಣಗಳ ಕಾಲ ಇಟ್ಟಿರಬೇಕು (ಬ್ಲಾಂಚಿಂಗ್-ಬಿಳಿಚಿಕೆ). ಆಗ ಕಿಣ್ವಗಳು ಅಶಕ್ತವಾಗುವುವು. ಕೆಲವು ಹಣ್ಣುಗಳನ್ನೂ ತರಕಾರಿಗಳನ್ನೂ ಹೀಗೆ ಮಾಡಲು, ಗಂಧಕಾನಿಲಕ್ಕೆ (ಸಲ್ಫರ್ ಡೈ ಆಕ್ಸೈಡ್) ಒಡ್ಡುವುದುಂಟು. ಆದರೆ ಬೆಳ್ಳುಳ್ಳಿ, ಈರುಳ್ಳಿ ಮುಂತಾದವುಗಳಲ್ಲಿ ವಾಸನೆ, ರುಚಿಗಳನ್ನು ಹುಟ್ಟಿಸುವ ಕಿಣ್ವಗಳು ಬೇಕಾದವಾದ್ದರಿಂದ ಅವನ್ನು ಈ ರೀತಿ ಮೊದಲೇ ಒಡ್ಡಕೂಡದು.

ಅನೇಕ ಆಹಾರ ಪದಾರ್ಥಗಳನ್ನು ಒಂದಲ್ಲ ಒಂದು ರಿತಿಯಲ್ಲಿ ಒಣಗಿಸಿ ಸಂಗ್ರಹಿಸಿಡಬಹುದು. ಬಳಸುವ ವಿಧಾನಗಳೂ ಸರಳ. ಕಡಿಮೆ ಖರ್ಚಿನದಾಗಿದ್ದರೂ ಹಣ್ಣುಗಳನ್ನೂ, ಕೆಲವು ದೇಶಗಳಲ್ಲಿ ಮೀನುಗಳನ್ನು ಮಾತ್ರ ಕೈಗಾರಿಕಾಮಟ್ಟದಲ್ಲಿ ಒಣಗಿಸಿಡುವುದು ರೂಢಿಯಲ್ಲಿತ್ತು. ದ್ರಾಕ್ಷಿ, ಖರ್ಜೂರ, ಅಂಜೂರ ಮುಂತಾದ ಒಣಗಿದ ಹಣ್ಣುಗಳು ಇಂಥವು. ಬೊಂಬಾಯಿ, ಕೇರಳದಲ್ಲಿ ಮೀನುಗಳನ್ನು ಒಣಗಿಸಿಟ್ಟು ವ್ಯಾಪಾರಕ್ಕೆ ಒದಗಿಸುತ್ತಾರೆ. ಬೇಗ ಕೆಡದೆ ಹಗುರವಾಗಿರುವ ನೀರ್ಗಳೆದ ಆಹಾರಗಳು ಯುದ್ಧಕಾಲದಲ್ಲಿ, ಸೈನಿಕರಿಗೆ ಅನುಕೂಲವಾಗಿದ್ದುವು. ಮೊದಲ ಮಹಾಯುದ್ಧ ಕಾಲದಲ್ಲೇ ಅನೇಕ ನೀರ್ಗಳೆದ ಆಹಾರ ಪದಾರ್ಥಗಳ ತಯಾರಿಕೆಯ ಕಾರ್ಖಾನೆಗಳು ಕೆಲಸ ಮಾಡಿದವು. ಸುಮಾರು 100 ಕೆ.ಜಿ ತೂಕದ ಹಾಲನ್ನು ಪುಡಿಯಾಗಿ ಬದಲಿಸಿದರೆ, 12-15 ಕೆ.ಜಿ.ಗೆ ಇಳಿಯುತ್ತದೆ. ಸಾಧಾರಣವಾಗಿ 15 ಕೆ.ಜಿ. ತೂಕದ ನೀರಿರುವ ಆಹಾರ ಒಣಗಿದಾಗ ಕೇವಲ ಒಂದು ಕಿಲೋಗೆ ಇಳಿಯುತ್ತದೆ. ಗಾತ್ರವೂ ಕಿರಿದಾಗುತ್ತದೆ. ಆದ್ದರಿಂದ, ಹಡಗು, ರೈಲು, ಲಾರಿ ಮುಂತಾದ ಸಾಗಣೆ ವಾಹನಗಳಲ್ಲಿ ಸರಕಿಗೆ ಬೇಕಾದ ಜಾಗ ಬಹಳ ಉಳಿಯುತ್ತದೆ.



ವ್ಯಾಕ್ಯೂಂ-ಡ್ರೈಯರ್

ಮೊದಲ ಮಹಾಯುದ್ಧ ಕಾಲದ ತುರ್ತಿನಲ್ಲಿ ಬೇಕಾದಷ್ಟು ನೀರ್ಗಳೆದ ಆಹಾರಗಳು ತಯಾರಾದವು. ಆದರೆ, ಯುದ್ಧಾನಂತರ ಇವು ಜನರಿಗೆ ರುಚಿಸಲಿಲ್ಲ. ಆದ್ದರಿಂದ ಈ ಕಾರ್ಖಾನೆಗಳು ಮುಚ್ಚಿಹೋದವು. ಎರಡನೆಯ ಮಹಾಯುದ್ಧ ಕಾಲದಲ್ಲಿ ಹೊಸ ವಿಧಾನಗಳಿಂದ ನೀರ್ಗಳೆದ ಆಹಾರಗಳನ್ನು ತಯಾರಿಸುವ ಅನೇಕ ಕಾರ್ಖಾನೆಗಳು ಬೇರೆ ಬೇರೆ ದೇಶಗಳಲ್ಲಿ ಸ್ಥಾಪಿತವಾದುವು. ಆಗ ಬಣ್ಣ, ರುಚಿ, ವಾಸನೆ ಮತ್ತು ರಚನೆಯಲ್ಲಿ ಈ ಆಹಾರಗಳು ಬಲು ಚೆನ್ನಾಗಿದ್ದವು. ಯುದ್ಧ ಮುಗಿದ ಮೇಲೆ ಮುಂದುವರಿದ ದೇಶಗಳಲ್ಲಿ ಕೆಲವು ನೀರ್ಗಳೆದ ಆಹಾರಗಳ ವಿಚಾರದಲ್ಲಿ ಸಾಮಾನ್ಯರಿಗೂ ಆಸಕ್ತಿ ಹುಟ್ಟಿತು. ನೀರ್ಗಳೆದ ತಿಳಿಸಾರು (ಸೂಪ್) ಮಿಶ್ರಣಗಳು, ಆಲೂಗೆಡ್ಡೆ, ಗಜ್ಜರಿ (ಕ್ಯಾರಟ್), ಈರುಳ್ಳಿ, ಚೀಸ್, ಹಣ್ಣು ರಸ, ಐಸ್ ಕ್ರೀಮ್, ಚಹ, ಕಾಫಿ ಮುಂತಾದವು ಜನಪ್ರಿಯವಾದವು. ಇವುಗಳಿಂದ ಜನರು ತಮಗೆ ಬೇಕಾದ ಆಹಾರಗಳನ್ನು ದಿಢೀರನೆ-ಅಂದರೆ ಬೇಕೆಂದಕೂಡಲೇ ಸುಲಭವಾಗಿ ತಯಾರಿಸಿಕೊಳ್ಳಲು ಅನುಕೂಲವಾಯಿತು.

ಆಹಾರ ವಸ್ತುಗಳಿಂದ ನೀರನ್ನು ಹಲವು ವಿಧಗಳಲ್ಲಿ ತೆಗೆಯಬಹುದು. ಬಿಸಿಲಲ್ಲಿ ಒಣಗಿಸುವುದರಿಂದ, ಬಿಸಿ ಗಾಳಿ ಹಾಯಿಸುವುದರಿಂದ. ಹಬೆಯಿಂದ ನಿರ್ಗಾಳಿಯಲ್ಲೋ (ವ್ಯಾಕ್ಯೂಂ) ಗಾಳಿಗೆ ಸೋಕಿಸದೆ ತಂಪುಗಟ್ಟಿಸುವುದರಿಂದಲೂ ನೀರ್ಗಳೆಯಬಹುದು. ನೀರ್ಗಳೆದ ಆಹಾರದ ರುಚಿ, ವಾಸನೆ, ಬಣ್ಣಗಳು ಚೆನ್ನಾಗಿರಬೇಕಾದರೆ, ಒಣಗಿಸುವ ಕ್ರಮದಲ್ಲಿ ಆಹಾರದಿಂದ ಆದಷ್ಟು ಬೇಗನೆ ನೀರನ್ನು ಕಳೆಯುವಂತಿರಬೇಕು. ಆದರೆ ಮೇಲೆಮೇಲೆ ಬೇಗ ಒಣಗಿ ಒಳಗಡೆ ನೀರು ಹಾಗೆಯೇ ಇದ್ದುಬಿಟ್ಟರೆ ಫಲವಿಲ್ಲ. ಬೇಯಿಸಿದರೆ, ಸುಟ್ಟರೆ, ಆಹಾರಗಳ ಬಣ್ಣ ಕೆಡುತ್ತದೆ, ಮುರುಟಿಕೊಳ್ಳುತ್ತದೆ. ನೋಡಲು ಚೆನ್ನಾಗಿರುವುದಿಲ್ಲ. ಅಲ್ಲದೆ ಮತ್ತೆ ನೀರಿನಲ್ಲಿ ಹಾಕಿದಾಗ ಆಹಾರದೊಳಗಿನ ಪೌಷ್ಟಿಕಾಂಶಗಳು ಹೊರಬಿದ್ದು ನೀರಿನಲ್ಲಿ ಸೇರಿ ನಷ್ಟವಾಗುತ್ತವೆ. ಆಹಾರಗಳ ಬೇಕಾದ ವಾಸನೆಯ ಅಂಶಗಳು ಹೋಗಿಬಿಡುತ್ತವೆ.

ಬಿಸಿಲು ಚೆನ್ನಾಗಿರುವ ನಾಡುಗಳಲ್ಲಿ ಅನೇಕ ಆಹಾರ ಪದಾರ್ಥಗಳನ್ನು ನೆಲದ ಮೇಲೆ ಹರಡಿ ಕಡಿಮೆ ಖರ್ಚಿನಲ್ಲಿ ಒಣಗಿಸುತ್ತಾರೆ. ಸಂಬಾರ ದಿನಸಿಗಳು ಕೊಬ್ಬರಿ, ಗೆಡ್ಡೆ ಗಣಸುಗಳನ್ನು ಕೇರಳದ ಕಡೆ ಕೈಗಾರಿಕಾ ಮಟ್ಟದಲ್ಲಿ ಒಣಗಿಸುತ್ತಾರೆ. ಮಳೆಯಿಲ್ಲದ ಕಾಲದಲ್ಲಿ ಇವುಗಳ ಫಸಲು ಬರುವುದು ಇದಕ್ಕೆ ಅನುಕೂಲ. ಆದರೆ ಸಾಕಷ್ಟು ಬಿಸಿಲಿಲ್ಲದ ಅನೇಕ ಕಡೆ ಪದಾರ್ಥಗಳನ್ನು ಆವಿಗೆಗಳಲ್ಲಿ (ಕಿಲ್ನ್) ಕಾವಿಗೊಡ್ಡಿ ಒಣಗಿಸುತ್ತಾರೆ. ಏಲಕ್ಕಿ, ಅಡಕೆ ಮಂತಾದವನ್ನು ಒಣಗಿಸುವುದು ಹೀಗೆ.

ಬಿಸಿಗಾಳಿ ಹಾಯಿಸುವುದರ ಮೂಲಕ ಆಹಾರ ವಸ್ತುಗಳಿಂದ ನೀರಿನ ಅಂಶವನ್ನು ತೆಗೆಯಲು ಬಳಸಲಾಗುವ ಕೆಲವು ಯಂತ್ರಗಳು-ಸುರಂಗ ಆರಿಕೆ (ಟನಲ್ ಡ್ರೈಯಿಂಗ್), ಪೆಟ್ಟಿಗೆಯೊಳಗೆ ಆರಿಕೆ (ಕ್ಯಾಬಿನೆಟ್ ಡ್ರೈಯಿಂಗ್), ತುಂಪುರಿ ಅಥವಾ ತುಂತುರು ಸಿಡಿಸಿ ಆರಿಕೆ (ತುಂಪುರಿಗಾರಿಕ-ಸ್ಪ್ರೇ ಡ್ರೈಯಿಂಗ್), ನಿರ್ಗಾಳಿಯಲ್ಲಿ ಆರಿಕೆ (ವ್ಯಾಕ್ಯೂಂ ಡ್ರೈಯಿಂಗ್), ತಿರುತಿರುಗಿಸಿ ಆರಿಕೆ (ರೋಟರಿ ಡ್ರೈಯಿಂಗ್), ಇತ್ಯಾದಿ. ಇವುಗಳಲ್ಲಿ ವ್ಯಾಕ್ಯೂಂ ಡ್ರೈಯರ್ ಒಂದರವಿನಾ ಉಳಿದಲ್ಲಿ ಸುಡುಗಾಳಿಯನ್ನು ಆಹಾರವಸ್ತುವಿನ ಮೂಲಕ ಹಾಯಿಸಿ ನೀರನ್ನು ಆರಿಸಲಾಗುತ್ತದೆ. ಸ್ಪ್ರೇ ಡ್ರೈಯರಿನಲ್ಲಿ ಗಟ್ಟಿಮಾಡಿದ ಹಾಲು, ಮೊಟ್ಟೆ, ಹಣ್ಣಿನ ರಸ ಮುಂತಾದವನ್ನು ಸ್ಪ್ರೇ ಡ್ರೈಯರಿನಲ್ಲಿ ತುಂತುರಿನಂತೆ ಚಿಮ್ಮಲು ಬಿಟ್ಟು ಕೆಳಗಿನಿಂದ ಬಿಸಿಗಾಳಿ ಹಾಯಿಸಿದರೆ ಬಲುಬೇಗನೆ ತುಂತುರ್ವನಿಗಳು ಅಲ್ಲೇ ಒಣಗಿ ಪುಡಿಯಾಗಿ ಕೆಳಗೆ ಬೀಳುತ್ತವೆ.



ತುಂಪುರಿಗಾರಿಕ

ಹಣ್ಣುಗಳು: ಈಗಲೂ ಆಫ್ಘಾನಿಸ್ತಾನ, ಪರ್ಷಿಯ, ಅರೇಬಿಯ ಮುಂತಾದ ಕಡೆ ದ್ರಾಕ್ಷಿ, ಅಂಜೂರ, ಖರ್ಜೂರ, ಒಣದ್ರಾಕ್ಷಿ ಮುಂತಾದ ಹಣ್ಣುಗಳನ್ನು ಬಿಸಿಲಿನಲ್ಲಿ ಒಣಗಿಸಿ ಎತ್ತಿಡುವರು. ಏಕಾಣುಜೀವಿಗಳ ಬೆಳವಣಿಗೆಯನ್ನು ತಡೆಗಟ್ಟಲು ಇವುಗಳಲ್ಲಿ ಸಕ್ಕರೆ ಹೆಚ್ಚಾಗಿ ಇರುವುದರಿಂದ ಕೆಡದಂತೆ ಇವನ್ನು ಒಣಗಿಸುವುದು ಸುಲಭ. ಆದರೆ ಮುಂದುವರಿದ ದೇಶಗಳಲ್ಲಿ ಈಗ ಒಲೆಗಳ ಕಾವಿಗೊಡ್ಡಿಸಿ, ಇನ್ನೂ ಚೆನ್ನಾಗಿ ವ್ಯಾಕ್ಯೂಂ ಡ್ರೈಯರುಗಳಿಂದ ನೀರ್ಗಳೆದ ಹಣ್ಣುಗಳು ತಯಾರಾಗುತ್ತಿವೆ. ನೀರ್ಗಳೆದ ಸೇಬು, ಪೇರ್, ಅನಾನಾಸ್ ಮುಂತಾದ ಹಣ್ಣುಗಳೂ ಹೀಗೇ ತಯಾರಾಗುತ್ತಿವೆ. ಒಳ್ಳೆಯ ಗಾತ್ರದ, ಚೆನ್ನಾಗಿ ಕಳಿತಿರುವ ಹಣ್ಣುಗಳಿಂದ ಬಣ್ಣ, ರುಚಿ, ಜೀವಸತ್ವಗಳಲ್ಲಿ ಚೆನ್ನಾಗಿರುವ ಪದಾರ್ಥಗಳು ತಯಾರಾಗುತ್ತಿವೆ.

ಒಳ್ಳೆಯ ಕಿತ್ತಳೆ, ದ್ರಾಕ್ಷಿ, ಸೇಬು ಮುಂತಾದ ಹಣ್ಣುಗಳ ರಸ ತೆಗೆದುಕೊಂಡು ಶೀತಲ ಗಾಳಿಯಲ್ಲಿ ಗಟ್ಟಿಗೊಳಿಸಿ, ನಿರ್ಗಾಳಿ ಪೀಪಾಯಲ್ಲಾಗಲಿ, ನೊರೆಯೆಬ್ಬಿಸಿ ನಿರ್ಗಾಳಿಯಲ್ಲಿ ಕಾವಿನಿಂದಾಗಲಿ ಹಣ್ಣಿನ ಸಹಜ ಪರಿಮಳಗಳು (ಫ್ಲೇವರ್ಸ್) ಕಳೆಯದಂತೆ ಅವನ್ನೇ ಬೇರೆಯಾಗಿ ಬಟ್ಟಿಯಿಳಿಸಿಕೊಂಡು ಬೆರಸಿ ಒಣಗಿದ ಪುಡಿ ತಯಾರಿಸುವರು. ಆದರೆ ಹಣ್ಣಿನ ರಸದ ಒಣಗಿಸಿದ ಪುಡಿಗಳು ಬಲು ಬೇಗನೆ ಗಾಳಿಯಲ್ಲಿನ ತೇವವನ್ನು ಹೀರಿ ಗಂಟುಗಟ್ಟುವುದರಿಂದ ಅವನ್ನು ಗಾಳಿ ತೆಗೆದುಹಾಕಿ ಸಾರಜನಕ ತುಂಬಿದ ಡಬ್ಬಿಗಳಲ್ಲಿ ಇಡಬೇಕು.

**ಹಾಲಿನ ಉತ್ಪನ್ನಗಳು:** ಪೂರಾ ಹಾಲು, ಬೆಣ್ಣೆ ತೆಗೆದ ಹಾಲು, ಮಜ್ಜಿಗೆ, ಮೊಳಕೆಗಾಳು ಹುಡಿ (ಮಾಲ್ಟ್), ಬೆರಸಿದ ಹಾಲು ಮುಂತಾದವನ್ನು ಬೇರೆ ಬೇರೆ ವಿಧಾನಗಳಿಂದ ಒಣಗಿಸಿದ್ದರಿಂದ ಪುಡಿ ಪದಾರ್ಥಗಳು ದಂಡಿಯಾಗಿ ತಯಾರಾಗುತ್ತಿವೆ. ಇದರ ಮೊದಲು ಬಳಸುತ್ತಿದ್ದ ಪೀಪಾಯಿ ಯಂತ್ರದ ಬದಲಾಗಿ ಈಗ ತುಂತುರು ಯಂತ್ರವಿದೆ. ಇದರಲ್ಲಿ ಹಾಲಿನ ತುಂತುರು ಹನಿಗಳು ಬಲು ಬೇಗನೆ ಒಣಗಿ ಪುಡಿಯಾಗುವುದರಿಂದ ಒಳ್ಳೆಯ ಪುಡಿ ದೊರೆಯುತ್ತದೆ (ಚಿತ್ರ ನೋಡಿ). ಈ ಪುಡಿ ಸುಲಭವಾಗಿ ನೀರಿನಲ್ಲಿ ಕರಗುವುದು. ತೇವಹೀರಕ (ಹೈಗ್ರೊಸ್ಕೋಪಿಕ್) ಮೊಳಕೆಗಾಳುಹುಡಿ ಸೇರಿಸಿದ ಹಾಲನ್ನು ನಿರ್ಗಾಳಿ ಪೀಪಾಯಿ ಯಂತ್ರದಲ್ಲಿ ಒಣಗಿಸಬೇಕು.

**ಮೊಟ್ಟೆ:** ಮೊಟ್ಟೆಗಳ ಬಿಳಿಲೋಳೆಯ, ಬಂಡಾರದ (ಯೋಕ್) ಭಾಗಗಳನ್ನು ಬೇರೆ ಬೇರೆಯಾಗೋ ಅಥವಾ ಒಟ್ಟಾಗಿ ಹಾಲಿನ ಹಾಗೋ ಒಣಗಿಸಬಹುದು. ಮೊಟ್ಟೆಯ ದ್ರವವನ್ನು ಚೆನ್ನಾಗಿ ನೊರೆಯೆಬ್ಬಿಸಿ ಸಕ್ಕರೆ ಭಾಗವನ್ನು ಹುದುಗೇಳಿಸಿ ಕಳೆದು ಆಮೇಲೆ

ತುಂತುರು ಯಂತ್ರದಲ್ಲಿ ಒಣಗಿಸಬಹುದು. ಸಕ್ಕರೆಯಿಂದ ಬಣ್ಣ, ರುಚಿಗಳು ಬೇಗ ಕೆಡುತ್ತವೆ. ಪುಡಿಯಲ್ಲಿ ನೀರು 2% ಕ್ಕಿಂತ ಹೆಚ್ಚಿರದಂತೆ ತೆಗೆದಿರಿಸಬೇಕು.




ಪೀಪಾಯಿ ಆರಿಕ

**ಮಾಂಸ:** ನೀರ್ಗಲ್ಲಾಗಿಸಿ ಒಣಗಿಸುವ ಇಂದಿನ ವಿಧಾನದಿಂದ ಒಳ್ಳೆಯ ರುಚಿಕರ ಮಾಂಸ, ಮೀನು ಮುಂತಾದವನ್ನು ತಯಾರಿಸಬಹುದಾದರೂ ಇದು ಖರ್ಚಿನ ವಿಧಾನ.

**ತರಕಾರಿಗಳು:** ಆಲೂಗೆಡ್ಡೆ, ಗಜ್ಜರಿ, (ಕ್ಯಾರಟ್), ಬೀಟ್, ಗೆಣಸು ಮುಂತಾದ ತರಕಾರಿಗಳನ್ನು ಒಣಗಿಸುವ ಮೊದಲು ಸಿಪ್ಪೆ ತೆಗೆಯಬೇಕು. ಇಲ್ಲವಾದರೆ ಬೇಗ ಒಣಗುವುದಿಲ್ಲ. ಆಮೇಲೆ ಕಿಣ್ವಗಳನ್ನು ನಾಶ ಮಾಡಲು ಕುದಿಯುವ ನೀರಲ್ಲಿ ಕೆಲವು ನಿಮಿಷಗಳ ಹೊತ್ತು ಇಟ್ಟು ತೆಗೆಯಬೇಕು. ಇದರಿಂದ ಕೆಟ್ಟ ರುಚಿ, ವಾಸನೆಗಳು ಹತ್ತುವುದನ್ನು ತಡೆಗಟ್ಟಬಹುದು. ಅಲ್ಲದೆ ಪದಾರ್ಥ ಅರೆಬೆಂದಂತೆ ಆಗುವುದರಿಂದ ಒಣಗಿಸಿದಾಗ ನೀರು ಬೇಗ ಹೋಗುತ್ತದೆ. ಹಸಿರು ಬಟಾಣಿಯನ್ನು ಒಣಗಿಸುವ ಮೊದಲು ಯಂತ್ರದಿಂದ ಅದರ ಮೇಲೆ ಚುಚ್ಚಿ ಸಣ್ಣ ತೂತುಗಳನ್ನು ಮಾಡಬೇಕು; ಆಗಲೇ ಬೇಗನೆ ನೀರ್ಗಳೆದು ಸರಿಯಾಗಿ ಒಣಗುವುದು.

ಇಂದಿನ ಯಂತ್ರೋಪಕರಣಗಳಿಂದ ಕಡಿಮೆ ಖರ್ಚಿನಲ್ಲಿ ಒಳ್ಳೆಯ ನೀರ್ಗಳೆದ ಆಹಾರಗಳನ್ನು ತಯಾರಿಸಲು ಬರುವುದರಿಂದ ಇವು ಬರಬರುತ್ತ ಹೆಚ್ಚು ಜನಪ್ರಿಯವಾಗುತ್ತಿವೆ **(ನೋಡಿ- ಆಹಾರದ-ಜೋಪಾಸನೆ) (ಆಹಾರ-ವಿಷವೇರಿಕೆ,-ಏಕಾಣುಜೀವಿಕ) (ಆಹಾರದ-ಜೋಪಾನಿಕೆ,-ದಾಸ್ತಾನು-(ಮನೆಯಲ್ಲಿ))** (ವೈ.ಎಸ್.ಎಲ್.)

## ಆಹಾರಗಳು, ವಿವಿಧ ರಾಷ್ಟ್ರಗಳಲ್ಲಿ

**ಆಹಾರಗಳು, ವಿವಿಧ ರಾಷ್ಟ್ರಗಳಲ್ಲಿ:** ಬೇರೆ ಬೇರೆ ದೇಶಗಳ ಅಹಾರಗಳು ಬೇರೆ ಬೇರೆ ತೆರನಾಗಿದ್ದರೂ ಅವುಗಳಲ್ಲಿ ಅನೇಕ ಹೋಲಿಕೆಗಳಿರುತ್ತವೆ. ಎಲ್ಲ ನಾಡುಗಳವರೂ ಆಹಾರಗಳನ್ನು ಸಿದ್ಧಪಡಿಸುವಾಗ ಹುರಿಯುವುದು, ಒಲೆಯ ಮೇಲಿಟ್ಟು ಬೇಯಿಸುವುದು, ಕೆಂಡದ ಮೇಲೆ ಬಾಡಿಸುವುದು, ಆವಿಯಲ್ಲಿ ಬೇಯಿಸುವುದೇ ಮಂತಾದ ವಿಧಾನಗಳನ್ನು ಬಳಸುತ್ತಾರೆ. ಮಾಂಸದೊಂದಿಗೆ ಕಾಯಿಪಲ್ಯೆಗಳನ್ನು ಜೋಡಿಸುವುದು ಅನೇಕ ದೇಶಗಳಲ್ಲಿ ಜನಪ್ರಿಯವಾಗಿದೆ. ಹಣ್ಣು, ಹಿಟ್ಟು, ಬೆಣ್ಣೆ, ಸಕ್ಕರೆಗಳಿಂದ ಸಿಹಿ ತಿಂಡಿಗಳನ್ನು ಎಲ್ಲರೂ ತಯಾರಿಸಿದರೂ ರುಚಿಗಾಗಿ ಸೇರಿಸುವ ಪರಿಕರಗಳೇ ಬೇರೆ; ಉಪಯೋಗಿಸುವ ತರಕಾರಿಗಳೂ ಹಣ್ಣುಗಳೂ ಬೇರೆ. ಅಡಿಗೆ ಮಾಡುವಾಗ ಪದಾರ್ಥಗಳನ್ನು ಬಳಸುವ ರೀತಿಗಳಲ್ಲೂ ವ್ಯತ್ಯಾಸಗಳಿವೆ.

ಬೇರೆ ಬೇರೆ ನಾಡುಗಳ ಆಹಾರ ಪದ್ಧತಿಗಳು ಆಯಾ ದೇಶದ ಹಣಕಾಸಿನ ಸ್ಥಿತಿ, ನೆಲ ಗುಣ, ಮತಧರ್ಮ-ಇವನ್ನು ಅವಲಂಬಿಸಿರುತ್ತವೆ. ಬೇಗ ಕೆಡುವ ಆಹಾರಗಳನ್ನು ಕೆಡದಿರಿಸಲು ಶೀತಕಗಳು ಇಲ್ಲದ ದೇಶಗಳಲ್ಲಿ, ಒಣಗಿಸಿಟ್ಟ, ಉಪ್ಪು ಹಾಕಿ ಊರಿಟ್ಟ ಆಹಾರಗಳ ಬಳಕೆ ಇರುತ್ತದೆ. ಸಂಖ್ಯೆ ಹೆಚ್ಚಿದ್ದು ಹಣಕಾಸಿರದ ಹಿಂದುಳಿದ ದೇಶಗಳಲ್ಲಿ ಕಾಳುಗಳೇ ಮುಖ್ಯ ಆಹಾರ. ಹೊಸ ತಿಳಿವಳಿಕೆ, ಹಣಕಾಸು ತುಂಬಿಕೆ, ಬೇರೆ ನಾಡುಗಳ ಸಂಪರ್ಕ ಇವುಗಳಿಂದ ಆಹಾರ ಪದ್ಧತಿಗಳು ನಿಧಾನವಾಗಿ ಬದಲಾಯಿಸುತ್ತವೆ. ಆದರೆ ಕೆಲವು ಆಹಾರಗಳಂತೂ ಬಲು ರುಚಿಕರ ಆಗಿರುವುದರಿಂದ ಬಹುಕಾಲವಾದರೂ ಜನಪ್ರಿಯವಾಗೇ ಉಳಿಯುತ್ತವೆ.

**ಅಮೆರಿಕ:** ಇಂದಿನ ಕಾರ್ಖಾನೆಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ತಯಾರಾದ ಅನೇಕ ಬಗೆಯ ಆಹಾರಗಳು ಅಮೆರಿಕದ ನಗರಗಳಲ್ಲಿ ದಂಡಿಯಾಗಿ ದೊರೆಯುತ್ತವೆ. ಆದ್ದರಿಂದ, ಡಬ್ಬಿಗಳಲ್ಲೂ ಶೀತಕಗಳಲ್ಲೂ ಬಗೆಬಗೆಯ ಆಹಾರಗಳು ವರ್ಷವೆಲ್ಲ ಸಿಗುತ್ತವೆ. ಕೇಕುಗಳು, ರೊಟ್ಟಿಗಳು, ಸಿಹಿ ತಿಂಡಿಗಳನ್ನು ಮಾಡಲು ಸಿದ್ಧಮಾಡಿದ (ರೆಡಿ ಮೇಡ್) ಹಿಟ್ಟಿನ ಮಿಶ್ರಣಗಳು ಯಾವಾಗಲೂ ದೊರೆಯುವುವು. ಮಾಂಸಾಹಾರಗಳಲ್ಲಿ ದನದ ಮಾಂಸವೇ ಹೆಚ್ಚು ಬಳಕೆ. ಇದಲ್ಲದೆ ಹೆಚ್ಚಾಗಿ ಹಂದಿಯ ಮಾಂಸವೂ, ತುಸುಮಟ್ಟಿಗೆ ಆಡಿನ ಮಾಂಸವೂ ಬಳಕೆಯಲ್ಲಿವೆ. ಮಾಂಸಾಹಾರಗಳನ್ನು ಹುರಿಯುವುದು, ಕೆಂಡದ ಮೇಲೆ ಬಾಡಿಸುವುದು, ಒಲೆಯಲ್ಲಿ ಸುಡುವುದು, ಬೇಯಿಸುವುದೇ ಮುಂತಾದ ಸರಳ ರೀತಿಗಳಲ್ಲಿ ಸಿದ್ಧಪಡಿಸುವುದು ಸಾಮಾನ್ಯ. ಮಾಂಸದ ದಪ್ಪ ತುಂಡುಗಳು ಇಷ್ಟವೆನಿಸಿದರೂ ಬೆಲೆ ಹೆಚ್ಚು . ಸಣ್ಣದಾಗಿ ಕತ್ತರಿಸಿದ ಕೀಮಾದಿಂದ ಮಾಡಿದ ಹ್ಯಾಂಬರ್ಗರ್, ಫ್ರಾಂಕ್‌ಫರ್ಟರ್, ಮಸಾಲೆ ಬಾಡು ಸಮೋಸ (ಹಾಟ್ ಡಾಗ್) ಮುಂತಾದವನ್ನು ರೊಟ್ಟಿಯ ಜೊತೆಗೆ ಹಗಲಿನ ಊಟದಲ್ಲಿ ತಿನ್ನುವುದು ವಾಡಿಕೆ. ಸುಟ್ಟು ಬಾಡಿಸಿದ ಟರ್ಕಿಯನ್ನು ಕ್ರ್ಯಾನ್-ಬೆರಿ ಚಟ್ನಿಯೊಂದಿಗೆ ಧನ್ಯವಾದಾರ್ಪಣೆ (ಥ್ಯಾಂಕ್ಸ್‌ಗಿವಿಂಗ್) ಹಬ್ಬದಲ್ಲಿ ಮೆಲ್ಲುವರು. ಕುಂಬಳಕಾಯಿ, ಸೀಕಡುಬು ಆ ದಿನದ ಸಿಹಿ ತಿಂಡಿ. ಕೋಳಿ, ಟರ್ಕಿಕೋಳಿಮಾಂಸಗಳನ್ನು ವರ್ಷವೆಲ್ಲ ತಿನ್ನುತ್ತಾರೆ. ದಕ್ಷಿಣ ಭಾಗದ ಉಣಿಸು ಎನಿಸಿಕೊಂಡ ಹುರಿದ ಕೋಳಿ ಎಲ್ಲ ಭಾಗಗಳಲ್ಲೂ ಪ್ರಿಯ. ಮೀನುಗಳ ಬಳಕೆ ಅಷ್ಟಾಗಿಲ್ಲ. ಕ್ಲಾಮ್ ಚೌಡರ್, ಕಡಲನಳ್ಳಿ (ಲಾಬ್‌ಸ್ಟರ್), ಮೊದಲಾದ ಕಡಲಾಹಾರಗಳನ್ನು ನ್ಯೂ ಇಂಗ್ಲೆಂಡ್‌ನಲ್ಲೂ ಸೀಗಡಿಯನ್ನು (ಷಿಂಪ್) ಅಟ್ಲಾಂಟಿಕ್ ತೀರದಲ್ಲೂ ಹೆಚ್ಚಾಗಿ ಬಳಸುತ್ತಾರೆ. ಇವರು ತಿನ್ನುವ ಮೈದಾಹಿಟ್ಟಿನ ರೊಟ್ಟಿ ಮೆತ್ತಗೂ ಬೆಳ್ಳಗೂ ಇರುವುದು. ಮಸುಕಿನ ಜೋಳದ ರವೆಯಿಂದ ಮಾಡಿದ ಬಿಸಿ ರೊಟ್ಟಿ ಎಲ್ಲೆಲ್ಲೂ ಜನಪ್ರಿಯ. ಹಾಲು, ಮೊಟ್ಟೆಗಳು ದಂಡಿಯಾಗಿ ಬಳಕೆಯಲ್ಲಿವೆ. ಜೋಳದವುಲು (ಕಾರ್ನ್ ಫ್ಲೇಕ್ಸ್ ), ತೋಕೆಗೋದಿ ಹಿಟ್ಟು (ಓಟ್ ಮೀಲ್) ಮುಂತಾದ ಧಾನ್ಯಗಳಿಂದ ಮಾಡಿದ ಪದಾರ್ಥಗಳು, ತವೆ ದೋಸೆ (ಗ್ರಿಡಲ್ ಕೇಕ್), ತೆಳುದೋಸೆ (ವ್ಯಾಫಲ್) ತೆರನ ತಿಂಡಿಗಳು ಬಳಕೆಯಲ್ಲಿವೆ. ಮೊಸರು, (ಚೀಸ್), ಹಣ್ಣುಗಳು, ಅದರಲ್ಲೂ ಈಳೆಯ (ಸಿಟ್ರಸ್) ಹಣ್ಣುಗಳು ಬೆಳಗಿನ ಉಪಾಹಾರದಲ್ಲಿ (ಬ್ರೇಕ್‌ಫಾಸ್ಟ್) ಸೇರುತ್ತವೆ.

ನೀರಲ್ಲಿ ಬೇಯಿಸಿ, ಬೆಣ್ಣೆ ಹಾಕಿದ ತರಕಾರಿ, ಬೇಯಿಸಿದ ಕಾಳು, ಹಸಿ ಹಣ್ಣು, ತರಕಾರಿಗಳಿಂದ ತಯಾರಿಸಿದ ಕೋಸಂಬರಿಗಳೂ ಹಗಲಿನ ಊಟಕ್ಕೆ ಬರುತ್ತವೆ. ಐಸ್‌ಕ್ರೀಮ್, ಸೇಬಿನ ಸೀಕಡುಬು (ಆ್ಯಪಲ್ ಪೈ)-ಇವು ಊಟದ ಕೊನೆಯಲ್ಲಿ ತಿನ್ನುವ ಸಿಹಿ ತಿಂಡಿಗಳು (ಡೆಸರ್ಟ್‌ಸ್). ಬಿಸಿಕಾಫಿ ಮುಖ್ಯ ಪಾನೀಯ. ಇಟ್ಯಾಲಿಯನ್, ಚೀಣೀ ಫಲಾಹಾರಮಂದಿರಗಳು (ರೆಸ್ಟೋರಂಟ್ಸ್) ಮುಖ್ಯವಾದ ಎಲ್ಲ ಊರುಗಳಲ್ಲೂ ಇವೆ. ಅಮೆರಿಕದಲ್ಲಿ ನೆಲೆಸಿರುವ ಬಗೆಬಗೆ ಜನಾಂಗಗಳವರ ನಾನಾ ತೆರನ ಆಹಾರಗಳನ್ನು ಅಮೆರಿಕನ್ನರು ತಮ್ಮದಾಗಿಸಿ ಕೊಂಡಿದ್ದಾರೆ. ಆದ್ದರಿಂದಲೇ ಗ್ರೀಕ್, ಜರ್ಮನ್, ಇಟ್ಯಾಲಿಯನ್, ಚೀನೀ, ಹಂಗೇರಿಯನ್ ಮುಂತಾದ ತಿಂಡಿತಿನಿಸುಗಳನ್ನೂ ಅಲ್ಲಿ ತಿನ್ನಬಹುದು.

**ಗ್ರೇಟ್ ಬ್ರಿಟನ್:** ಇಲ್ಲಿನ ಅಡಿಗೆಗಳು ಬಹು ಸರಳ. ನೀರಲ್ಲಿ ಬೇಯಿಸುವುದು, ಒಲೆಯ ಮೇಲೆ ಬೇಯಿಸುವುದು ಹುರಿಯುವುದು ಸಾಮಾನ್ಯ ವಿಧಾನಗಳು. ಆಹಾರಗಳ ಎಂದಿನ ನಿಜವಾದ ರುಚಿ, ವಾಸನೆಗಳೇ ಇವರಿಗೆ ಇಷ್ಟವಾದ್ದರಿಂದ ಹೆಚ್ಚಾಗಿ ಯಾವ ಮಸಾಲೆ ಪದಾರ್ಥಗಳನ್ನೂ ಸೇರಿಸುವುದಿಲ್ಲ. ಬೆಳಗಿನ ಉಪಾಹಾರಕ್ಕೆ ಹುರಿದ ಹಂದಿ ಮಾಂಸ, ಮೊಟ್ಟೆ, ಹೊಗೆಯಿಟ್ಟ (ಹ್ಯಾಡಾಕ್, ಕಿಪ್ಪರ್) ಮೀನುಗಳು ಪ್ರಿಯವಾದುವು. ಹಗಲೂಟಕ್ಕೆ ಹುರಿದ ಮಾಂಸ, ಬೇಯಿಸಿದ ತರಕಾರಿಗಳು; ಸಿಹಿ ರುಚಿಗೆ, ಹಣ್ಣಿನ ಸೀಕಡುಬು, ಮೊಟ್ಟೆ, ಹಾಲು ಪಾಯಸ (ಕಸ್ಟರ್ಡ್); ದನ, ಆಡು, ಹಂದಿಗಳ ಹುರಿದ ಮಾಂಸಗಳ ಜೊತೆಗೆ ಸೇಬು ಪಳಿದ್ಯ (ಆಪಲ್ ಸಾಸ್) ಇರುತ್ತದೆ. ಮಾಂಸ, ತರಕಾರಿಗಳನ್ನು ಒಟ್ಟಿಗೆ ಬೇಯಿಸಿದ ಲ್ಯಾಂಕಷೈರ್ ಹಾಟ್‌ಪಾಟ್ ಹೆಸರಾದ್ದು. ಇಂಗ್ಲೆಂಡಿನಲ್ಲಿ ಹುರಿದ ಮೀನೂ ಆಲೂಗೆಡ್ಡೆ ದುಂಡುಚೂರುಗಳೂ ಎಲ್ಲರಿಗೂ ಬೇಕಾದವು. ಮೈದಾ, ಗೋಧಿ ರೊಟ್ಟಿಗಳು, ಬನ್ನು, ಹಣ್ಣಿನ ಸೀಕಡುಬುಗಳು, ಆವಿಯಲ್ಲಿ ಬೇಯಿಸಿದ ಸಿಹಿ ಕಡುಬುಗಳು ಹೆಚ್ಚಾಗಿ ಬಳಕೆಯಲ್ಲಿವೆ. ಕ್ರಿಸ್‌ಮಸ್ ಹಬ್ಬಕ್ಕೆ ದ್ರಾಕ್ಷಿ, ಬೆರಿ ಮುಂತಾದ ಒಣಗಿದ ಹಣ್ಣುಗಳೂ ಜಿಡ್ಡು, ಸಕ್ಕರೆಗಳಿಂದ ಮಾಡಿದ ದ್ರಾಕ್ಷಿ ಕಡುಬೂ (ಪ್ಲಂ ಪುಡಿಂಗ್) ಇರುತ್ತವೆ. ಹಣ್ಣು, ಹಿಟ್ಟುಗಳಿಂದ ಕ್ರಿಸ್‌ಮಸ್ ಕೇಕ್ ತಯಾರಿಸಿ, ಮೇಲೆ ಬಾದಾಮಿ ಸರಿ (ಆಮಂಡ್ ಪೇಸ್ಟ್), ಸೀಪಾಕ (ಐಸಿಂಗ್) ಬಳಿದಿರುತ್ತಾರೆ. ಬೆಣ್ಣೆ ಹಾಕಿದ ಕಾಲುದೋಸೆಯನ್ನು (ಸ್ಕೋನ್) ಸಂಜೆಯ ಚಹದ ಜೊತೆಗೆ ತಿನ್ನುತ್ತಾರೆ. ಸ್ಕಾಟ್‌ಲೆಂಡಿನಲ್ಲಿ ತೋಕೆಗೋದಿಯಿಂದ (ಓಟ್ಸ್) ಹುಗ್ಗಿ (ಪಾರಿಡ್ಜ್), ಕೇಕ್‌ಗಳನ್ನು ತಯಾರಿಸುತ್ತಾರೆ. ಐರ್ಲೆಂಡ್‌ನಲ್ಲಿ ಆಲೂಗೆಡ್ಡೆ, ಕೋಸುಗಳ ಬಳಕೆ ಹೆಚ್ಚು. ಕುರಿಮಾಂಸ, ಆಲೂಗೆಡ್ಡೆ, ಈರುಳ್ಳಿಗಳನ್ನು ಹಾಕಿ ನಿಧಾನವಾಗಿ ಬೇಯಿಸಿದ ಐರಿಷ್ ನೆನಗುದಿಲ (ಸ್ಟ್ಯೂ) ಹೆಸರಾದ್ದು. ಕೋರಾಜಿನ್ ಪಾಚಿಯಿಂದ ಗಿಜಿ (ಜೆಲಿ) ಸಿಹಿತಿಂಡಿ ಮಾಡುತ್ತಾರೆ. ಹಾಲು ಬೆರೆಸಿದ ಬಿಸಿ ಚಹಾ ದೇಶದ ಎಲ್ಲ ಕಡೆಯಲ್ಲೂ ಜನಪ್ರಿಯ ಪಾನೀಯ.

**ಆಸ್ಟ್ರೇಲಿಯ, ನ್ಯೂಜೀಲೆಂಡ್:** ಮುಖ್ಯವಾಗಿ ಇಂಗ್ಲೆಂಡಿನ ಆಹಾರಗಳೊಂದಿಗೆ ಕೆಲವು ತಮ್ಮವೇ ಆದ ಹೊಸ ಆಹಾರಗಳನ್ನು ಬಳಸುತ್ತಾರೆ. ಇದರ ಜೊತೆಗೆ, ಅಮೆರಿಕ, ಚೀನಗಳ ಪ್ರಭಾವವೂ ಇದೆ. ಅಡುಗೆಯ ವಿಧಾನ ಸರಳ. ಮಾಂಸ, ತರಕಾರಿಗಳೇ ಹೆಚ್ಚು, ಕಡಲ ಆಹಾರಗಳು ಜನಪ್ರಿಯ. ಬಾಡುತುಂಡಿನ (ಸ್ಟೀಕ್) ಜೊತೆಗೆ ಅಣಬೆ, ಮಳಿ (ಆಯಿಸ್ಟರ್), ಕೆಂಡದ ಮೇಲೆ ಸುಟ್ಟ ಬಾಡುತುಂಡು (ಗ್ರಿಲ್ಡ್ ಸ್ಟೀಕ್), ಜೊತೆಗೆ ಹುರಿದ ಮೊಟ್ಟೆ, ಹಂದಿಮಾಂಸಗಳನ್ನು ಹೆಚ್ಚು ಬಳಸುವರು. ಕೋಸಂಬರಿಗಳು, ತರಕಾರಿಗಳು ವರ್ಷವೆಲ್ಲ ಬಳಕೆಯಲ್ಲಿರುತ್ತವೆ. ಪವಲೋವಾ ಸೀಕಡುಬು, ಸೇಬು ಹೂ ಸೀಕಡುಬು

(ಆ್ಯಪಲ್ ಬ್ಲಾಸಂ ಪೈ) ಹೆಸರಾದವು. ಇವುಗಳಲ್ಲಿ ಹಿಟ್ಟಿನ ಹೂರಣದೊಳಗೆ, ಪ್ಯಾಷನ್ ಹಣ್ಣು, ಕೆನೆ, ಸೇಬು, ಮೊಟ್ಟೆ, ನಿಂಬೆರಸಗಳೂ ಇರುತ್ತವೆ. ನ್ಯೂಜಿಲೆಂಡ್‌ನಲ್ಲಿ ಹಲ ತೆರನ ಕೇಕ್, ಅಟ್ಟಕಣಕ (ಪೇಸ್ಟ್ರಿ), ಬಿಸ್ಕತ್ತುಗಳನ್ನೂ ತಿನ್ನುತ್ತಾರೆ.

**ಕೆನಡ** : ಇಲ್ಲಿ ನೆಲೆಸಿರುವ ಫ್ರೆಂಚ್, ಅಮೆರಿಕನ್, ಇಂಗ್ಲಿಷ್ ಜನರ ಆಹಾರಗಳಲ್ಲಿ ಅನೇಕವು ಬಳಕೆಯಲ್ಲಿವೆ. ತರಕಾರಿ, ಹಣ್ಣು ಬೆರಸಿದ ಕೋಸಂಬರಿಗಳು, ಮೀನುಗಳು, ಗರಿಗರಿ ಬಿಸ್ಕತ್ತುಗಳು ಎಲ್ಲ ಕಡೆಗಳಲ್ಲೂ ರೂಢಿಯಲ್ಲಿವೆ. ಇವುಗಳ ಜೊತೆಗೆ ಮೇಪಲ್ ಗಿಡದ ಸಕ್ಕರೆ ಪಾನಕ ಹೆಚ್ಚು. ಮಾಂಸಾಹಾರದಲ್ಲಿ ಉಪ್ಪು ಹಾಕಿದ ಹಂದಿ ತೊಡೆ ಮಾಂಸ (ಗ್ಯಾಮನ್)–ಸಾಸಿವೆ, ಸಿಹಿಚಟ್ನಿ, ಅನಾನಾಸ್ ಹಣ್ಣುರಸ ಮುಂತಾದವು ಸೇರಿದ್ದು ಹುರಿದ ಟರ್ಕಿಕೋಳಿ, ಚೆಸ್‌ನಟ್ ಹಾಕಿದ್ದೂ ಹೆಸರಾಗಿವೆ. ಕಿತ್ತಳೆಹಣ್ಣು, ತಕ್ಕಾಳಿ (ಟೊಮ್ಯಾಟೋ), ಪೇರುಹಣ್ಣುಗಳನ್ನು ಹಾಲ್ಮೂಲಂಗಿ (ಲೆಟಿಸ್) ಎಲೆಗಳಲ್ಲಿಟ್ಟು ತಿನ್ನುತ್ತಾರೆ. ನೀಲಿಕಾಯಿ (ಬ್ಲೂ ಬೆರಿ) ಕುಂಬಳಕಾಯಿ, ಲೆಮನ್ ಷಿಫಾನ್ ಸೀಕಡುಬು ಪ್ರಿಯವಾದ ಸಿಹಿತಿಂಡಿಗಳು.

**ದಕ್ಷಿಣ ಆಫ್ರಿಕ:** ಕುರಿಮಾಂಸದ ಸಣ್ಣ ತುಂಡುಗಳು, ಈರುಳ್ಳಿ, ಮಸಾಲೆ ಪುಡಿ, ಕಾಡಿ (ವಿನೆಗರ್), ಚಟ್ನಿ, ನಿಂಬೆ ಎಲೆಗಳನ್ನು ಹಾಕಿದ ಸೊಸಾಟೀಸ್ ತಿಂಡಿ ಹೆಸರಾಗಿದೆ. ಇದರ ಜೊತೆಗೆ ಅನ್ನ, ಚಟ್ನಿ ತಿನ್ನುತ್ತಾರೆ. ಬೊಬೋಟಿ ಎನ್ನುವುದು ಮಾಂಸದ ಕೀಮಾ, ಈರುಳ್ಳಿ, ಬಾದಾಮಿ, ದ್ರಾಕ್ಷಿ, ಮಸಾಲೆ ಪುಡಿಗಳೊಂದಿಗೆ ಬೆಂದ ಮೊಟ್ಟೆ ಬೆರೆತ ಹಾಲು. ಹಿಟ್ಟನ್ನು ಬಿಸ್ಕತ್ತಿನಂತೆ ಕರಿದು, ಆಮೇಲೆ ಸಕ್ಕರೆ ಪಾಕದಲ್ಲಿ ಅದ್ದಿರುವುದು ಕುರಿಸ್ಟರ್ಸ್.

**ಫ್ರಾನ್ಸ್:** ಇಲ್ಲಿ ಅಡಿಗೆ ಒಂದು ವಿಶೇಷ ಕಲೆ. ಸೊಪ್ಪುಗಳು, ಸಂಬಾರ ದಿನಸಿಗಳು, ದ್ರಾಕ್ಷಾಸುರೆಗಳು ತಿಂಡಿ ತಿನಿಸುಗಳ ಜೊತೆ ಸಾಕಷ್ಟು ಸೇರುತ್ತವೆ. ಫ್ರೆಂಚ್ ತಿಳಿಸಾರು ಹೆಸರು ಪಡೆದಿದೆ. ಈರುಳ್ಳಿ ತಿಳಿಸಾರಿನಲ್ಲಿ, ಬೆಣ್ಣೆಯಲ್ಲಿ ಬೇಯಿಸಿದ ಈರುಳ್ಳಿ, ಮಸಾಲೆ ಪದಾರ್ಥ, ಮಾಂಸ ಬೇಯಿಸಿದ ಕಟ್ಟು (ಸ್ಟಾಕ್) ಇರುತ್ತವೆ. ಬಗೆಬಗೆಯ ಮೀನುಗಳಿಂದಾದ ಮಾರ್ಸೇಲ್ಸ್ ಮೀನಿನ ತಿಳಿಸಾರು ಜನಪ್ರಿಯ. ಮೈದಾ, ಗೋಧಿ, ಚಿಟ್ಟಗೋಧಿ (ರೈ) ಮುಂತಾದುವುಗಳಿಂದ ಬಗೆಬಗೆಯಾಗಿ ತಯಾರಿಸಿದ ನೀಳ ರೊಟ್ಟಿಗಳು ಫ್ರಾನ್ಸ್‌ನಲ್ಲಿ ಎಲ್ಲೆಲ್ಲೂ ಬಳಕೆಯಲ್ಲಿವೆ. ಮಾಂಸವನ್ನು ದ್ರಾಕ್ಷಿರಸಗಳಲ್ಲೂ ಬೇಯಿಸುವ ಪದ್ಧತಿಯಿದೆ. ಹಸಿ ತರಕಾರಿ, ಎಣ್ಣೆ, ಕಾಡಿ ಬೆರೆಸಿದ ಕೋಸಂಬರಿಗಳು ಜನಪ್ರಿಯ. ಬೇಯಿಸಿದ, ಸುಟ್ಟಹಿಟ್ಟಿನಂತೆ ಆಲೂಗೆಡ್ಡೆಯಿಂದ ಮಾಡಿದ ಅನೇಕ ತೆರನ ಆಹಾರಗಳು ರೂಢಿಯಲ್ಲಿವೆ. ಸಿಹಿತಿಂಡಿಗಳಲ್ಲಿ ಬಹು ಅಲಂಕಾರವಾಗಿ ತಯಾರಿಸಿದ ಅಟ್ಟಕಣಕ, ಕೇಕ್‌ಗಳ ಬಳಕೆ ಹೆಚ್ಚು. ಮೊಟ್ಟೆಗಳನ್ನು ಬಗೆಬಗೆಯಾಗಿ ಬಳಸುವುದು ಫ್ರೆಂಚರಿಗೆ ಚೆನ್ನಾಗಿ ಗೊತ್ತು. ಇವರು ಹಾಲನ್ನು ಅಷ್ಟಾಗಿ ಬಳಸರು. ಕಿಲಾಟದಲ್ಲಿ ನೂರಾರು ಬಗೆಗಳಿವೆ. ಇವುಗಳಲ್ಲಿ ಬೂಷ್ಟಿನಿಂದಾದ ಕ್ಯಾಮೆಂಬರ್ಟ್, ರೋಕ್‌ಫರ್ಟ್ ಚೀಸ್‌ಗಳನ್ನು ಹೆಚ್ಚಾಗಿ ಬಳಸುತ್ತಾರೆ. ಕಾಫಿ, ಚಾಕೊಲೇಟ್ ಮುಖ್ಯವಾದ ಬಿಸಿಪಾನೀಯಗಳು. ಕಾಫಿಗೆ ಚಿಕೋರಿ ಬೆರಸುವುದೂ (ಫ್ರೆಂಚ್ ಕಾಫಿ) ಫ್ರೆಂಚರ ಹೆಚ್ಚಳಿಕೆ.

**ನೆದರ್‌ಲೆಂಡ್ಸ್:** ಇವರ ಮುಖ್ಯ ಅಡಿಗೆಗಳು ಒಳ್ಳೆಯ ಪುಷ್ಟಿಕರ ವಸ್ತುಗಳಿಂದ ತಯಾರಿಸಿದವು. ಸಂಜೆಯ ಊಟವೇ ಮುಖ್ಯವಾದದ್ದು, ದೊಡ್ಡದು. ಚೀಸ್ ಮತ್ತು ಬೇಯಿಸಿದ ಮೊಟ್ಟೆಗಳನ್ನು ಬೆಳಗಿನ ಉಪಾಹಾರದಲ್ಲಿ ತೆಗೆದುಕೊಳ್ಳುವರು. ಜೊತೆಯಲ್ಲಿ ಬಗೆಬಗೆಯ ರೊಟ್ಟಿಗಳು, ಬೆಣ್ಣೆ, ಹಣ್ಣಿನ ಮುರಬ್ಬಗಳನ್ನು ತಿನ್ನುವರು. ಹಗಲೂಟಕ್ಕೆ ರೊಟ್ಟಿಯನ್ನು ಪದರಗಳಾಗಿ ಕತ್ತರಿಸಿ, ಅದರ ನಡುವೆ ಮಸಾಲೆ ಬಾಡು, ದನ ಇಲ್ಲವೇ ಹಂದಿಮಾಂಸ (ಸಾಸೇಜ್), ಹುರಿದ ಮೊಟ್ಟೆ ಇಟ್ಟು ಸಾಧಾರಣವಾಗಿ ಎಲ್ಲರೂ ತಿನ್ನುವರು. ರಾತ್ರಿ ಊಟಕ್ಕೆ ಮೊದಲು ಹುರುಳಿಕಾಯಿ ಇಲ್ಲವೇ ಬಟಾಣಿಕಾಳಿನ ತಿಳಿಸಾರು, ಆಮೇಲೆ ಮಾಂಸ ಇಲ್ಲವೇ ಮೀನು ಕಾಯಿಪಲ್ಯೆಗಳ ಭಕ್ಷ್ಯ, ಕೊನೆಯದಾಗಿ ಸಿಹಿ ಕೇಕ್ ಇಲ್ಲವೇ ಹಣ್ಣು. ಇವರ ಅಡುಗೆಯ ವಿಧಾನ ಸರಳ. ಆದರೆ ಹೊರದೇಶಗಳಲ್ಲಿ ಇವರ ಚಕ್ರಾಧಿಪತ್ಯ ಹಿಂದೆ ಇದ್ದ ಕಾರಣ, ಅನ್ನ, ಮಸಾಲೆ ಸಾಮಾನುಗಳ ಬಳಕೆಯೂ ಈಗ ಸೇರಿದೆ. ಆವಿಯಲ್ಲಿ ಬೇಯಿಸಿದ ತರಕಾರಿಗಳಿಗೆ, ಲವಂಗಪಟ್ಟೆ, ಜಾಯಿಕಾಯಿ ಸೇರಿಸುತ್ತಾರೆ. ಒಣ ಬಟಾಣಿ ಕಾಳು, ಹುರುಳಿಕಾಯಿ ಬೀಜಗಳ ಬಳಕೆ ಹೆಚ್ಚು. ಅವನ್ನು ರಾತ್ರಿ ನೆನೆಸಿಟ್ಟು, ಬೆಳಗ್ಗೆ ಬೇಯಿಸುತ್ತಾರೆ. ಬೀಟ್‌ಗಡ್ಡೆ, ಸೇಬು, ಕೋಸು, ಇವನ್ನು ಬೆಣ್ಣೆ, ಜಾಯಿಕಾಯಿ ಸೇರಿಸಿ ಬೇಯಿಸುತ್ತಾರೆ. ಮೀನುಗಳ ಸೇವನೆ ಧಾರಾಳ. ಹೆರಿಂಗ್, ಪ್ಲೇಸ್ ಜಾತಿಯ ಮೀನುಗಳು, ದನದ ಮಾಂಸ, ಹಂದಿಮಾಂಸ, ಕರುವಿನ ಬಾಡು (ವೀಲ್) ಎಲ್ಲರಿಗೂ ಪ್ರಿಯ. ಮೊಟ್ಟೆ, ಸಕ್ಕರೆ, ದ್ರಾಕ್ಷಿ, ಚೀಸ್, ಲವಂಗ ಮುಂತಾದವನ್ನು ಸೇರಿಸಿ, ಹುದುಗೇಳಿಸಿದ ಹಿಟ್ಟಿನಿಂದ ಬಗೆಬಗೆ ರುಚಿಯ ಸಿಹಿ ತಿಂಡಿಗಳನ್ನು ತಯಾರಿಸುತ್ತಾರೆ. ಹಾಲು ಸೇರಿಸದ ಚಹ, ಹಾಲು ಬೆರೆಸದ ಕಾಫಿ ಇಲ್ಲಿಯ ಜನರ ಬಿಸಿ ಪಾನೀಯಗಳು.

**ಬೆಲ್ಜಿಯಂ:** ಇಲ್ಲಿ ಮುಖ್ಯವಾದ ನೆರೆದೇಶಗಳಾದ ಫ್ರಾನ್ಸ್ ಮತ್ತು ಹಾಲೆಂಡ್‌ಗಳ ತಿಂಡಿತಿನಿಸುಗಳೇ ಹೆಚ್ಚು. ಆದರೂ ಕೆಲವು ತಮ್ಮವೇ ಆದ ಅಡುಗೆಗಳೂ ಇವೆ. ವಾಟರ್‌ಸಾಯ್ಲ್ ಎನ್ನುವುದು, ಕೋಳಿ ಬೇಯಿಸಿದ ನೀರೂ ಬಿಳಿ ದ್ರಾಕ್ಷಾರಸವೂ ಸೇರಿದ್ದು, ಇದೇ ತೆರನ ಮೀನಿನ ತಿಳಿಸಾರೂ ಉಂಟು. ಹಂದಿಮಾಂಸ, ಆಲೂಗೆಡ್ಡೆ, ಬಿಯರ್ ಸೇರಿಸಿ ಬೇಯಿಸಿದ್ದು, ಹಂದಿಮಾಂಸದ ಕೀಮ ಆಲೊಗೆಡ್ಡೆ, ಬಿಳಿ ದ್ರಾಕ್ಷಾರಸ ಇಲ್ಲವೇ ಬಿಯರ್‌ನಲ್ಲಿ ಬೇಯಿಸಿದ್ದು, ಮೊಲದ ಮಾಂಸ, ಪ್ರೂನ್ ಹಣ್ಣು, ದ್ರಾಕ್ಷಾರಸ ಹಾಕಿ ಬೇಯಿಸಿದ್ದು–ಇವೆಲ್ಲ ಜನಪ್ರಿಯ ಭಕ್ಷ್ಯಗಳು. ಚಿಕೋರಿ, ಸಲ್ಲಗೆಡ್ಡೆ (ಆ್ಯಸ್ಪಾರಗಸ್). ಹಾಪ್ ಗಿಡದ ಸೊಪ್ಪು ಜನಪ್ರಿಯ ತರಕಾರಿಗಳು. ಚಿಕೋರಿ ಗೆಡ್ಡೆಯನ್ನು ಕೋಸಂಬರಿಯಾಗೂ ಮಾಂಸದ ಜೊತೆಯಲ್ಲೂ ತಿನ್ನುತ್ತಾರೆ. ಸಿಹಿಗಾಗಿ ಚೀಸ್ ಬೆಣ್ಣೆ, ಸಕ್ಕರೆಗಳೊಂದಿಗೆ, ಹುದುಗೇಳಿಸಿದ ಹಿಟ್ಟಿನಿಂದ ಮಾಡಿದ ದೋಸೆಗಳೂ ಕಿಲಾಟ, ಸಕ್ಕರೆ, ಬೆಣ್ಣೆ, ಮೊಟ್ಟೆ ಹಾಕಿ ಮಾಡಿದ ಅಟ್ಟಕಣಕಗಳನ್ನು ಬಳಸುತ್ತಾರೆ. ಬಿಳಿ ಮತ್ತು ಕೆಂಪು ಸೀಪಾಕ ಬಳಿದ ಬಿಸ್ಕತ್ತುಗಳನ್ನು ಸಂತ ನಿಕೋಲಾಸನ ಹಬ್ಬದಲ್ಲಿ ಎಲ್ಲರೂ ತಿನ್ನುತ್ತಾರೆ.

**ಜರ್ಮನಿ :** ಮಾಂಸಾಹಾರಗಳಿಗೆ ಸಿಹಿ ಚಟ್ನಿಗಳು, ಬಿಯರ್ ಬೆರೆಸಿದ ತಿಳಿಸಾರು, ಮಸಾಲೆ ಬಾಡು, ಕೋಸು ಮದ್ಯ (ಸಾವರ್ ಕ್ರಾಟ್), ತೋಕೆ ಗೋದಿ ಬ್ರೆಡ್ ಜರ್ಮನಿಯ ಆಹಾರದಲ್ಲಿ ಮುಖ್ಯವಾದುವು. ಬಿಯರ್ ಜೊತೆಗೆ ಪಟ್ಟೆ, ಆಲೂಗೆಡ್ಡೆ ಹಿಟ್ಟು, ನಿಂಬೆಹುಳಿ ಬೆರೆಸಿದ ತಿಳಿಸಾರು ಹೆಸರಾಗಿದೆ. ಕಾರ್ಪ್, ಹೆರಿಂಗ್ ಮೀನುಗಳಿಗೆ, ಸಾಸಿವೆ, ಮೆಣಸು, ಕಾಡಿ ಬೆರಸಿ, ಉಪ್ಪಿನಕಾಯಿ ತೆರನ ಆಹಾರ ತಯಾರಿಸುತ್ತಾರೆ. ಹಂದಿ, ದನ, ಬಾತುಗಳ ಕರಿದ ಮಾಂಸಗಳೊಳಗೆ ಸೇಬು, ಚೆಸ್‌ನಟ್ ಬೀಜ, ಒಣ ದ್ರಾಕ್ಷಿ ಮುಂತಾದವನ್ನು ತುಂಬಿದ್ದು ಜನಪ್ರಿಯ ಭಕ್ಷ್ಯ. ಕಿತ್ತಳೆ ಕೇಕ್, (ರಮ್ ಸೀಪಾಕ ಮಾಡಿದ್ದು), ಜಾಕಾಯಿ ಬೆರೆಸಿದ ಅಟ್ಟ ಕಣಕ, ಚೀಸ್ ಬೆರೆಸಿದ ಬಿಸ್ಕತ್, ಮುಂತಾದವು ಇಷ್ಟವಾದ ಸಿಹಿತಿಂಡಿಗಳು. ಚೀಸ್‌ಗಳಲ್ಲಿ ಲಿಂಬರ್ಗರ್ ಮತ್ತು ಟೆಲ್ಸಿಟರ್‌ಗಳನ್ನು ಎಲ್ಲರೂ ಬಳಸುವರು. ಊಟದ ಜೊತೆಗೆ ಹೆಚ್ಚಾಗಿ ಬಿಯರ್ ಸೇವಿಸುವರು. ಕಾಫಿ ಜನಪ್ರಿಯ ಬಿಸಿ ಪಾನೀಯ.

**ಆಸ್ಟ್ರಿಯ:** ಇಲ್ಲಿನ ತಿಳಿ ಸಾರುಗಳು ಹೆಸರಾದವು. ಅವುಗಳಲ್ಲಿ ಬಗೆಬಗೆ ಪದಾರ್ಥಗಳು ಬೀಳುವುದರಿಂದ ಕೇವಲ ಅವನ್ನೇ ಊಟದಲ್ಲಿ ತಿನ್ನಬಹುದು. ಕೀಮಾ ಉಂಡೆ, ಹಿಟ್ಟಿನ ಉಂಡೆ, ಅನ್ನ, ಶಾವಿಗೆ (ನೂಡ್ಲ್ಸ್) ಮುಂತಾದವು ತಿಳಿಸಾರಿನಲ್ಲಿ ಸೇರುತ್ತವೆ. ನದೀಮೀನು, ಕಡಲಮೀನು, ಜನಪ್ರಿಯವಾದುವು. ಆಹಾರ ಪದಾರ್ಥಗಳಿಗೆ ಮೆಣಸಿನಕಾಯಿಯನ್ನೂ (ಪೆಪ್ರಿಕ) ಹೆಚ್ಚಾಗಿ ಬಳಸುತ್ತಾರೆ. ಹಂದಿಮಾಂಸ, ಕರುವಿನ ಮಾಂಸ, ಜಿಂಕೆ ಮಾಂಸ ಎಲ್ಲರೂ ತಿನ್ನುವರು. ಮೊಟ್ಟೆ, ರೊಟ್ಟಿಚೂರುಗಳನ್ನು ಹಿಟ್ಟು ಸವರಿದ ತೆಳ್ಳನೆಯ ಮಾಂಸದ ತುಂಡುಗಳಿಗೆ ಬಳಿದು, ಬೆಣ್ಣೆಯಲ್ಲಿ ಕರಿದು ಬೇಗನೇ ಬಿಸಿಬಿಸಿಯಾಗಿ ತಿನ್ನುವುದು ಪ್ರಸಿದ್ಧ ವೀನರ್ ಷ್ನಿಟ್ಸೆಲ್. ಕೋಳಿಯ ಮಾಂಸಕ್ಕಿಂತ ಬಾತುಮಾಂಸದ ಬಳಕೆ ಹೆಚ್ಚು. ಇವುಗಳ ಜೊತೆಗೆ ಸೌತೆಕಾಯಿ ಕೋಸಂಬರಿ ಇರುತ್ತದೆ. ಇಲ್ಲಿನ ಅಟ್ಟಕಣಕದ ಸಿಹಿತಿಂಡಿಗಳು ಜಗತ್ಪ್ರಸಿದ್ಧ. ಬಹು ತೆಳ್ಳನೆಯ ಹಿಟ್ಟಿನ ಕಣಕಕ್ಕೆ ರೊಟ್ಟಿಯ ಚೂರು, ಸೇಬಿನ ಹಣ್ಣಿನ ಹೋಳುಗಳು, ಒಣದ್ರಾಕ್ಷಿ, ಸಕ್ಕರೆ, ಲವಂಗ ಪಟ್ಟೆ ಮುಂತಾದವನ್ನು ಹೂರಣವಾಗಿಟ್ಟು, ಸುರುಳಿ ಸುತ್ತಿ ಒಲೆಯಲ್ಲಿ ಬೇಯಿಸಿ, ತುಂಡುಗಳಾಗಿ ಕತ್ತರಿಸುವುದು, ಹೆಸರಾದ ಆ್ಯಪಲ್ ಸ್ಟ್ರೂಡೆಲ್, ಮೊಸರು, ಮೊಟ್ಟೆ, ಸಕ್ಕರೆ, ಒಣದ್ರಾಕ್ಷಿ, ಹುದುಗು ಬೆರೆಸಿದ ಹಿಟ್ಟು, ಇವುಗಳಿಂದ ಬಗೆಬಗೆಯ ಕೇಕ್ ಮುಂತಾದವನ್ನು ತಯಾರಿಸುತ್ತಾರೆ. ಕಾಫಿ, ಚಾಕಲೇಟುಗಳ ಮೇಲೆ ಸಿಹಿನೊರೆ ಕೆನೆ ಹಾಕಿದವು ಪ್ರಿಯವಾದ ಬಿಸಿ ಪಾನೀಯಗಳು.

**ಹಂಗರಿ:** ಇಲ್ಲಿ ತಿಳಿಸಾರು, ಮೀನು, ಮಾಂಸದ ಅಡಿಗೆಗಳಿಗೆ ಕೆಂಪು ಬಣ್ಣ ಕೊಡಲು, ಹೆಚ್ಚಾಗಿ ಅಷ್ಟೇನೂ ಖಾರವಲ್ಲದ ಸಿಹಿಕಾಯಿ ಮೆಣಸಿನ ಪುಡಿ ಉದುರಿಸುತ್ತಾರೆ. ಗುಲಾಷ್ ಎಂಬುದು ಹೆಸರುವಾಸಿ ಅಡಿಗೆ. ಮಾಂಸ, ಈರುಳ್ಳಿ, ಸಿಹಿ ಮೆಣಸು, ತಕ್ಕಾಳಿ, ಸೀಮೆಸೋಂಪು (ಕ್ಯಾರವೇ) ಬೀಜ, ಇವನ್ನು ಒಟ್ಟಿಗೆ ಬೇಯಿಸಿ, ಜೊತೆಗೆ ಆಲೂಗೆಡ್ಡೆ, ಅನ್ನ ಬಡಿಸುತ್ತಾರೆ. ಚೆರಿ, ಕೇಕ್, ಗಸೆಗಸೆ ಹಾಕಿದ ಸಿಹಿತಿಂಡಿಗಳು ಜನಪ್ರಿಯ.

**ಪೋಲೆಂಡ್:** ಇಲ್ಲಿನ ಆಹಾರ ಇತರ ಯುರೋಪು ದೇಶಗಳಂತಿಲ್ಲ. ಇಲ್ಲಿನ ಅಡುಗೆಯ ವಿತರಣೆ ಶತಮಾನಗಳ ಕಾಲದಿಂದ ಬಂದದ್ದು. ಸೌತೆಕಾಯಿ, ಮೊಸರು ಹಾಕಿದ ತಿಳಿಸಾರು, ಮೀನು, ಅನ್ನ, ಸಬ್ಬಸಿಗೆ (ಡಿಲ್) ಬೀಜ ಸೇರಿಸಿ ಬೇಯಿಸಿದ ಅಡಿಗೆ–ಇವನ್ನು ಎಲ್ಲರೂ ತಿನ್ನುವರು. ಇದಲ್ಲದೆ ದನ, ಹಂದಿ, ಜಿಂಕೆಗಳ ಮಾಂಸ ಜನಪ್ರಿಯ. ಕೋಸು ಮದ್ಯ, ಮಾಂಸ, ಅಣಬೆ, ಸೇಬಿನ ಹಣ್ಣು, ತಕ್ಕಾಳಿ ಸೇರಿದ, ಪ್ರಸಿದ್ಧ ಅಡಿಗೆ ಬೈಗಾಸ್, ಹಿಟ್ಟಿನ ಉಂಡೆ, ಮೀನು, ಚೀಸ್ ಸಿಹಿ ಮೆಣಸು ಬೆರೆಸಿದ್ದು ಇನ್ನೊಂದು ವಿಶೇಷ ಅಡುಗೆ. ಬಗೆಬಗೆಯ ಕಾಯಿಪಲ್ಯಗಳು, ಸಿಹಿತಿಂಡಿಗಳು, ಕೇಕುಗಳನ್ನು ಬಳಸುವರು. ಹಾಲಿಲ್ಲದ ಕಾಫಿ, ಚಹ ಜನಪ್ರಿಯ ಬಿಸಿ ಪಾನೀಯಗಳು.

**ಇಟಲಿ:** ಬೇರೆ ಬೇರೆ ಭಾಗಗಳಲ್ಲಿ ವಿವಿಧ ಬಗೆಯ ಅಡುಗೆಗಳು ಬಳಕೆಯಲ್ಲಿವೆ. ಬೋಲೋನಲ್ಲಿ ಶೇವಿಗೆಯಂಥ ಪದಾರ್ಥ (ಸ್ಪ್ಯಾಗೆಟಿ) ಕೇಮು ಮಾಂಸ, ತಕ್ಕಾಳಿ ಅಣಬೆ ಬೆರೆಸಿದ್ದು –ತಿನ್ನುತ್ತಾರೆ. ಕಾಯಿಪಲ್ಯೆ, ಚೀಸ್ ಬೆರೆಸಿದ ತಿಳಿ ಸಾರು, ಮೊಟ್ಟೆ, ಹಿಟ್ಟು, ರವೆ, ಆಲೂಗೆಡ್ಡೆ ಹಿಟ್ಟು ಹಾಕಿದ, ಶೇವಿಗೆಯಂತಿರುವ ಪಾಸ್ಟಾಸ್ (ಬೇರೆ ಬೇರೆ ಆಕಾರಗಳದ್ದು) ಎಲ್ಲರೂ ಸೇವಿಸುತ್ತಾರೆ. ಹಿಟ್ಟಿನ ಉದ್ದನೆಯ ಕಣಕದಲ್ಲಿ ಕೀಮೂ ಹೂರಣ ಇಟ್ಟು ಮಾಡುವುದೇ ರಾವಿಯೋಲಿ. ಅನ್ನವನ್ನು ಬೆಣ್ಣೆ, ಕೇಸರಿ, ಕಿಲಾಟಗಳೊಂದಿಗೆ ಬೇಯಿಸುತ್ತಾರೆ. ಗೆಡ್ಡೆಗಳು, ಹುರುಳಿಕಾಯಿ, ಬಟಾಣಿ, ಸೋರೆಕಾಯಿ ತೆರನ ಕಾಯಿಗಳು, ದಪ್ಪ ಮೆಣಸಿನ ಕಾಯಿ ಮುಂತಾದ ತರಕಾರಿಗಳನ್ನು ದಂಡಿಯಾಗಿ ಬಳಸುತ್ತಾರೆ. ಎಣ್ಣೆ, ಕಾಡಿ ಹಾಕಿ ಇವುಗಳಿಂದ ಪಚಡಿಗಳನ್ನು (ಸಾಲಡ್ಸ್) ತಯಾರಿಸುತ್ತಾರೆ. ನೇಪಲ್ಸ್‌ನಲ್ಲಿ, ದಪ್ಪ ಚಪಾತಿಯಂಥ ರೊಟ್ಟಿಯ ಮೇಲೆ ತಕ್ಕಾಳಿ, ಮಾಂಸ, ಸೊಪ್ಪು, ಮೆಣಸಿನ ಪುಡಿ, ಚೀಸ್ ಹಾಕಿ ಬೇಯಿಸಿದ

ಪೀಟ್ಸ ಅಡುಗೆ ಹೆಸರು ಪಡೆದಿದೆ. ಬಗೆಬಗೆಯ ಮೀನುಗಳು ಸೀಗಡಿ, ಕಪ್ಪೆ ಚಿಪ್ಪಿನ ಪ್ರಾಣಿಗಳ ತೆರನ ಕಡಲ ಆಹಾರಗಳು ಹೆಚ್ಚು ಬಳಕೆಯಲ್ಲಿವೆ. ದನ, ಕುರಿ, ಕೋಳಿ, ಹಂದಿ ಮಾಂಸಾಹಾರಗಳನ್ನು ಹುರಿಯುವುದು, ಕೆಂಡದ ಮೇಲೆ ಬೇಯಿಸುವುದು; ಒಲೆಯ ಮೇಲೆ ಬೇಯಿಸುವುದು ಸಾಧಾರಣ ಪದ್ಧತಿಗಳು. ಊಟದ ಜೊತೆಗೆ ಸಿಹಿ ತಿಂಡಿಗಳನ್ನು ಬಳಸುವುದು ಅಪರೂಪ. ಅದಕ್ಕೆ ಬದಲು ಹಣ್ಣುಗಳ ಸೇವನೆ ಹೆಚ್ಚು.. ಬಿಸಿ ಕಾಫಿ ಜನಪ್ರಿಯ.

**ಸ್ಪೇನ್:** ಇಲ್ಲಿನ ಆಹಾರಗಳಲ್ಲಿ ಮಸಾಲೆ ಸಾಮಾನುಗಳು, ಬೆಣ್ಣೆ ಹೆಚ್ಚು. ಅಡುಗೆಗೆ ಬೆಳ್ಳುಳ್ಳಿ, ಎಣ್ಣೆ, ಮೆಣಸಿನ ಕಾಯಿ, ಪೆಪ್ರಿಕ ಜೀರಿಗೆ–ಇವನ್ನು ಹೆಚ್ಚಾಗಿ ಹಾಕುವರು. ಕೋಳಿ, ಸೀಗಡಿ, ಏಡಿ, ಮೀನುಗಳು, ತರಕಾರಿಗಳು, ಅಕ್ಕಿ ಇವನ್ನೆಲ್ಲ ಬೆರೆಸಿ, ಬೆಳ್ಳುಳ್ಳಿ, ಕೇಸರಿ ಹಾಕಿ ಬೇಯಿಸಿದ್ದು ಪಯೆಲ್ಲ. ತಕ್ಕಾಳಿ, ಮೆಣಸಿನ ಕಾಯಿ ಹಾಕಿ ಅಡುಗೆಗಳಿಗೆ ಬಣ್ಣ ಕಟ್ಟುತ್ತಾರೆ. ತಿಳಿಸಾರುಗಳಿಗೆ ಅನೇಕ ಕಾಯಿಪಲ್ಯೆಗಳು, ಅನ್ನ, ಶೇವಿಗೆ, ಕೀಮಾ ಮಾಂಸಗಳೂ ಸೇರುತ್ತವೆ. ಕೋಳಿ, ಹಂದಿ, ಕುರಿಗಳ ಮಾಂಸ ಎಲ್ಲರೂ ಬಳಸುತ್ತಾರೆ. ಹಸಿ ಇಲ್ಲವೇ ಬೇಯಿಸಿದ ತರಕಾರಿಗಳಿಗೆ ಆಲಿವ್ ಎಣ್ಣೆ, ಕಾಡಿ ಇವನ್ನು ಹಾಕಿ ಮಾಡಿದ ಕೋಸಂಬರಿಗಳು, ಆಲಿವ್‌ಕಾಯಿ ಉಪ್ಪಿನಕಾಯಿ ಜನಪ್ರಿಯವಾದವು. ಊಟದಲ್ಲಿ ಸಿಹಿತಿಂಡಿ ಇರುವುದಿಲ್ಲ. ಆದರೆ ಸಕ್ಕರೆ ಹಾಕಿದ ಹಣ್ಣು ತಿನ್ನುತ್ತಾರೆ.

**ಪೋರ್ಚುಗಲ್:** ಇಲ್ಲಿನ ಆಹಾರ ಸ್ಪೇನ್ ದೇಶದ್ದನ್ನೇ ಹೋಲಿದರೂ ಇನ್ನೂ ಸರಳ. ಬಗೆಬಗೆಯಾಗಿ ಹುರಿದ ಮೊಟ್ಟೆ ಹೆಚ್ಚು ಬಳಕೆಯ ಆಹಾರ. ಕಿತ್ತಳೆ, ಸೌತೆಕಾಯಿ, ದ್ರಾಕ್ಷಿ ಹಣ್ಣುಗಳನ್ನು ಊಟ ಮಾಡುವಾಗ ತಿನ್ನುತ್ತಾರೆ.

**ಮೆಕ್ಸಿಕೊ:** ಇಲ್ಲಿನ ಅಡುಗೆಗಳು ಸ್ಪೇನ್ ದೇಶದ ಅಡುಗೆಗಳಂತಿದ್ದರೂ ಮೆಣಸಿನ ಕಾಯಿ ಖಾರ ಹೆಚ್ಚು. ಚಪಾತಿ ಹಾಗೆ ಗೋಧಿ ಹಿಟ್ಟಿನಿಂದ ಟೊರ್ಟಿಲ್ಲ ರೊಟ್ಟಿ ಸಾಮಾನ್ಯ ಬಳಕೆಯಲ್ಲಿದೆ. ಇದರೊಳಗೆ ಕೀಮಾ ಮಾಂಸ, ಈರುಳ್ಳಿ, ಚೀಸ್‌ಗಳನ್ನು ಬೆರೆಸಿ, ಮೇಲೆ ಟೊಮ್ಯಾಟೊ ಚಟ್ನಿ ಇಟ್ಟು ಬೇಯಿಸಿದ್ದೇ ಎಂಕೊಲೆಡೋಸ್. ಇದನ್ನು ಜಿಡ್ಡಿನಲ್ಲಿ ಹುರಿದರೆ ಟೊಸ್ಟಾಡೊ ಆಗುತ್ತದೆ. ಮುಸುಕಿನ ಜೋಳದ ಹಿಟ್ಟು, ಕೀಮಾ ಮಾಂಸ, ಮೆಣಸಿನಕಾಯಿ ಗಳಿಂದ ಮಾಡಿದ ಕಡುಬಿನಂತೆ ಆವಿಯಲ್ಲಿ ಬೇಯಿಸಿದ ಪದಾರ್ಥ ಹೆಸರಾದ ಟಮಾಲೆಗಳು. ದಪ್ಪ ಹುರುಳಿಕಾಯಿ, ಅನ್ನ ಮೆಕ್ಸಿಕನ್ನರ ಮುಖ್ಯ ಆಹಾರ. ಮಾವು, ಪರಂಗಿ ಬಳಕೆಯಲ್ಲಿರುವ ಹಣ್ಣುಗಳು. ಚಾಕೊಲೇಟ್ ಜನಪ್ರಿಯ ಪಾನೀಯ.

**ಸ್ಕ್ಯಾಂಡಿನೇವಿಯ:** ಶೀತ ವಾತಾವರಣ, ಕಡಲ ಸಾಮೀಪ್ಯ, ವರ್ಷದ ಕೆಲವೇ ತಿಂಗಳಲ್ಲಿ ಬೆಳೆ ಬರುವುದು–ಇವು ಇಲ್ಲಿನ ಆಹಾರ ಪದ್ಧತಿಗಳ ಮೇಲೆ ಪರಿಣಾಮ ಬೀರಿವೆ. ನಾರ್ವೆಯಲ್ಲಿ ಮೀನುಗಳು, ಉಪ್ಪು ಹಾಕಿದ ಮಾಂಸಗಳು, ಹೊಗೆ ಹಿಡಿಸಿದ ಮೀನಿನ ಮಾಂಸಗಳು, ಬಳಕೆಯಲ್ಲಿವೆ. ಚಟ್ಟಗೋಧಿ ಹಿಟ್ಟಿನಿಂದ ಮಾಡಿದ ರೊಟ್ಟಿಗಳನ್ನು ಹೆಚ್ಚು ತಿನ್ನುತ್ತಾರೆ. ಸ್ವೀಡನ್‌ನಲ್ಲಿ ದಂಡಿಯಾಗಿ ಸಿಗುವ ಹೆರಿಂಗ್ ಮೀನೇ ಮುಖ್ಯ ಆಹಾರ. ಇದಲ್ಲದೆ ಸೀಗಡಿ, ಕುರಿಯ ಮಾಂಸಗಳು ಬಳಕೆಯಲ್ಲಿವೆ. ಕೇಕಿನಂತೆ ಮೆತುವಾದ ಲಿಂಪಾ ರೊಟ್ಟಿ ಜನಪ್ರಿಯ.

**ಡೆನ್‌ಮಾರ್ಕ್:** ತಿಳಿಸಾರು ಕೆಲವು ವೇಳೆ ಮುಖ್ಯ ಆಹಾರವಾಗುತ್ತದೆ. ಇದರಲ್ಲೇ ಹಂದಿ ಮಾಂಸ, ಬಟಾಣಿ ಬೇಳೆ, ಹಿಟ್ಟಿನ ಉಂಡೆ, ಕೀಮಾ ಮಾಂಸದ ಉಂಡೆ ಸೇರುತ್ತವೆ. ಮಜ್ಜಿಗೆಗೆ ಅನ್ನ, ನಿಂಬೆ ರಸ, ಲವಂಗಪಟ್ಟೆ, ಬಾದಾಮಿ ಬೀಜ ಹಾಕಿ ಒಂದು ಬಗೆಯ ಸಿಹಿ ತಿಳಿಸಾರು ಮಾಡುತ್ತಾರೆ. ಮೀನುಗಳನ್ನು ದಂಡಿಯಾಗಿ ತಿನ್ನುತ್ತಾರೆ. ಕಾಡ್, ಮ್ಯಾಕೆರೆಲ್, ಪ್ಲೈಸ್, ಸಾಮನ್ ಮೀನುಗಳೇ ಹೆಚ್ಚು. ದನಕರುಗಳ, ಕುರಿಗಳ ಮಾಂಸಗಳನ್ನು ಒಲೆಯಮೇಲೆ ಬೇಯಿಸುತ್ತಾರೆ. ಕೋಳಿ, ಬಾತುಗಳ ಮಾಂಸ ಬಳಕೆಯಲ್ಲಿದೆ. ಕರಿದ ಬಾತಿನ ಮಾಂಸದ ಜೊತೆಗೆ ಕೆಂಪು ಕೋಸು, ಕೆಂಪು ದ್ರಾಕ್ಷಿ ಹಾಕುತ್ತಾರೆ. ಬೇಯಿಸಿದ ಆಲೂಗೆಡ್ಡೆಗೆ ಸಕ್ಕರೆ ಬಳಿದು ಬೆಣ್ಣೆಯಲ್ಲಿ ಹುರಿಯುತ್ತಾರೆ. ಸೌತೆಕಾಯಿ, ಬೀಟ್‌ಗೆಡ್ಡೆಗಳ ಕೋಸಂಬರಿ, ಸೇಬು ಹಣ್ಣಿನ ಕೇಕ್, ದೋಸೆ ಜನಪ್ರಿಯವಾದುವು. ಹುದುಗೇಳಿಸಿದ ಹಿಟ್ಟಿಗೆ ಬೆಣ್ಣೆ, ಬಾದಾಮಿ ಬೀಜದ ಹಿಟ್ಟು, ಸುವಾಸನೆಗಾಗಿ ವೆನಿಲ ಸುಗಂಧಸಾರ, (ಎಸೆನ್ಸ್), ಕೆನೆ, ಪ್ರೂನ್ ಹಣ್ಣುಗಳನ್ನು ಸೇರಿಸಿ ತಯಾರಿಸಿದ ಡೇನಿಷ್ ಅಟ್ಟಕಣಕದ ಸಿಹಿ ತಿಂಡಿಗಳು ಪ್ರಪಂಚಕ್ಕೆ ಹೆಸರಾದುವು. ಇವನ್ನು ಬೆಳಗಿನ ಉಪಾಹಾರಕ್ಕೆ ಬಳಸುತ್ತಾರೆ. ಜೊತೆಗೆ ತೆಳ್ಳಗೆ ಕತ್ತರಿಸಿದ ನೀಲಿ ಚೀಸನ್ನೂ ತಿನ್ನುತ್ತಾರೆ.

**ಗ್ರೀಸ್:** ಕುರಿಮಾಂಸ ಇಲ್ಲಿನ ಎಲ್ಲರಿಗೂ ಬೇಕಾದ ಆಹಾರ. ಇದನ್ನು ಕೆಂಡದ ಮೇಲೆ ಬೇಯಿಸುವುದೇ ರೂಢಿ. ಈಸ್ಟರ್ ಹಬ್ಬದಲ್ಲಿ ಪೂರ್ತಿ ಕುರಿಯ ದೇಹವನ್ನೇ ಸುಡುತ್ತಾರೆ. ಮಾಂಸದ ತುಂಡುಗಳನ್ನು ಎಣ್ಣೆಯಲ್ಲಿ ಹುರಿದು, ಜೊತೆಗೆ ಈರುಳ್ಳಿ, ಸೊಪ್ಪುಗಳನ್ನು ಬೇಯಿಸಿ ಅನ್ನದ ಜೊತೆಗೆ ಕೊಡುವುದು ಸೌಲೇಕಿಯಾ. ಕೀಮಾ ಮಾಂಸ, ಆಲೂಗೆಡ್ಡೆ ಚೀಸ್‌ಗಳನ್ನು ಪದರಪದರವಾಗಿಟ್ಟು ಒಲೆಯಲ್ಲಿ ಬೇಯಿಸಿ ತಯಾರಿಸುವುದೇ ಮಸಾಕಾ. ಕೋಳಿಮಾಂಸ ಬೇಯಿಸಿದ ನೀರು, ಅನ್ನ, ಮೊಟ್ಟೆ, ನಿಂಬೆರಸಗಳಿಂದ ಮಾಡುವ ತಿಳಿಸಾರು ಜನಪ್ರಿಯ. ಆಲಿವ್ (ಇಪ್ಪೆ) ಎಣ್ಣೆ ಎಲ್ಲರೂ ಬಳಸುವರು. ಬೇಯಿಸಿದ ಮೀನು, ಈರುಳ್ಳಿ, ತಕ್ಕಾಳಿ, ಬೆಳ್ಳುಳ್ಳಿ ಹಾಕಿದ ತಿಂಡಿ ಹೆಸರುವಾಸಿ. ಕಡಲ ಆಹಾರ ಪದಾರ್ಥಗಳು ಹೆಚ್ಚು ಬಳಕೆಯಲ್ಲಿವೆ.

ಟರ್ಕಿ ದೇಶದ ಸಂಪರ್ಕದಿಂದ ಪಲಾವ್‌ನಂಥ ಅನೇಕ ಆಹಾರಗಳು ಇವರಲ್ಲೂ ಬಳಕೆಯಲ್ಲಿವೆ. ತರಕಾರಿಗಳಲ್ಲಿ ಅನ್ನ, ಕೀಮಾ ಮಾಂಸ, ಕೋಸು ಮುಂತಾದವನ್ನು ತುಂಬಿ ಬೇಯಿಸುತ್ತಾರೆ. ಕತ್ತರಿಸಿದ ಕೋಸು ಎಲೆ, ಆಲಿವ್, ಬೀಟ್‌ಗೆಡ್ಡೆ, ಹುರುಳಿಕಾಯಿ ಬೀಜಗಳಿಗೆ ಕಾಡಿ, ಇಪ್ಪೆಎಣ್ಣೆ ಬೆರೆಸಿ ಮಾಡಿದ ಕೋಸಂಬರಿಯನ್ನು ಸೌಲೇಕಿಯಾ ಜೊತೆಗೆ ಬಡಿಸುತ್ತಾರೆ. ಬೆಣ್ಣೆ, ಹಿಟ್ಟು, ಸಕ್ಕರೆ ಹಾಕಿರುವ ಚಿಕ್ಕ ರೊಟ್ಟಿಗಳಿಗೆ ಸಕ್ಕರೆಪಾಕ ಬಳಿದು ಹಬ್ಬಗಳಲ್ಲಿ ತಿನ್ನುತ್ತಾರೆ. ರೊಟ್ಟಿ ಜೊತೆಗೆ ಹಸಿ ಚೀಸ್ ಬಳಸುವರು. ಸಕ್ಕರೆ ಹಾಕಿದ ಕರೀ ಚಹ, ಕೆನೆ ಹಾಕಿದ ಟರ್ಕಿ ಕಾಫಿ ಜನಪ್ರಿಯ ಬಿಸಿ ಪಾನೀಯಗಳು.

**ಟರ್ಕಿ, ಅರಬ್ಬೀ ರಾಜ್ಯಗಳು:** ಟರ್ಕಿ ದೇಶದಲ್ಲಿ ಕುರಿಮಾಂಸ, ಅನ್ನ, ತರಕಾರಿಗಳು, ಎಣ್ಣೆಸೇರಿದ ಅಡಿಗೆಗಳೇ ಹೆಚ್ಚು. ಮಾಂಸದ ತುಂಡುಗಳನ್ನು ಕಾಡಿ, ಎಣ್ಣೆಯಲ್ಲಿ ಹುರಿದು, ಹುರಿದ ಈರುಳ್ಳಿ, ಲವಂಗಗಳನ್ನು ಸೇರಿಸಿ ಅನ್ನದ ಜೊತೆಗೆ ಬಡಿಸುವುದೇ ಕಬಾಬ್. ಸೊಪ್ಪು, ಕೀಮಾ, ಮಸಾಲೆ ಸಾಮಾನುಗಳು ಎಲ್ಲ ಅಡಿಗೆಗಳಲ್ಲೂ ಸೇರುತ್ತವೆ. ಎಳ್ಳಿನ ಪುಡಿಗೆ ಸಕ್ಕರೆ, ಚಾಕೊಲೇಟ್, ಬಾದಾಮಿ ಸೇರಿಸಿ ಮಾಡುವ ಸಿಹಿ ಪದಾರ್ಥಕ್ಕೆ ಹಲ್ವ ಎನ್ನುವರು. ಒಳಗೆ ಮಾಂಸ ಮುಂತಾದುವನ್ನು ತುಂಬಿಸಲು ಪದರವಿರುವ, ಚಪಾತಿಯಂತೆ ತೆಳ್ಳಗಿರುವ ರೊಟ್ಟಿ ಎಲ್ಲರೂ ತಿನ್ನುವುದಾಗಿದೆ. ಟೊಳ್ಳಾಗೂ ಗರಿಗರಿಯಾಗೂ ದುಂಡಗೂ ಇರುವ ಇನ್ನೊಂದು ರೊಟ್ಟಿ ಕೂಡ ಬಳಕೆಯಲ್ಲಿದೆ. ಬಾಕ್ಲಾವಾ ಎನ್ನುವುದು ಬಾದಾಮಿ, ಜೇನು ಸೇರಿಸಿದ ಕೇಕಿನಂಥ ಸಿಹಿ ತಿಂಡಿ. ಊಟವಾದ ಮೇಲೆ ಏಲಕ್ಕಿ ಬೆರೆಸಿದ ಕಾಫಿಯನ್ನು ಕುಡಿಯುವರು.

**ಭಾರತ:** ಹಣಕಾಸಿನ ಸ್ಥಿತಿ, ಜನ ಅವಲಂಬಿಸುವ ಧರ್ಮಗಳ ಕಾರಣದಿಂದ ಭಾರತದಲ್ಲಿ ಮಾಂಸಾಹಾರಗಳ ಬಳಕೆ ಕಡಿಮೆ. ಧಾನ್ಯಗಳೇ ಜನರ ಮುಖ್ಯ ಆಹಾರ. ಅಕ್ಕಿ, ಗೋದಿ, ಬೇಳೆಗಳು ಇನ್ನೂ ಮುಖ್ಯ. ಉತ್ತರದಲ್ಲಿ ಗೋಧಿಯಿಂದ ಮಾಡಿದ ಚಪಾತಿಗಳೂ, ದಕ್ಷಿಣದಲ್ಲಿ ಅಕ್ಕಿಯಿಂದ ಮಡಿದ ಅನ್ನವೂ ಜೋಳದ ರೊಟ್ಟಿಯೂ ರಾಗಿ ಮುದ್ದೆಯೂ ದಿನವೂ ಸೇವಿಸುವ ಆಹಾರ. ಇವುಗಳ ಜೊತೆಗೆ ಬೇಳೆಗಳಿಂದ, ತರಕಾರಿಗಳಿಂದ ಮಾಡಿದ ಅಡಿಗೆಗಳೂ ಇವೆ. ಬೆಣ್ಣೆಯಿಂದ ತುಪ್ಪ ತಯಾರಾಗುವುದು ಭಾರತವೊಂದರಲ್ಲೇ. ಕೊತ್ತುಂಬರಿ ಬೀಜ (ಧನಿಯಾ), ಅರಿಶಿನ, ಶುಂಠಿ, ಮೆಣಸು, ಲವಂಗ ಮುಂತಾದ ಅನೇಕ ಸಂಬಾರ ಪದಾರ್ಥಗಳು ಸೇರುವ ಮಸಾಲೆಗಳನ್ನು ಆಹಾರಗಳ ಜೊತೆ ಸೇರಿಸುತ್ತಾರೆ. ಕುರಿ ಮಾಂಸ, ಕೋಳಿ ಮಾಂಸ, ಬಳಕೆಯಲ್ಲಿವೆ. ಕಡಲ ತೀರ ಪ್ರದೇಶಗಳಲ್ಲಿ ಜನರು ಹೆಚ್ಚಾಗಿ ಮೀನುಗಳನ್ನೂ ಸೇವಿಸುತ್ತಾರೆ. ಗೆಡ್ಡೆಗಳು, ಬೆಂಡೆ, ಹುರುಳಿ, ಬಟಾಣಿ, ಹೀರೆ, ಸೋರೆ, ಪಡುವಲ, ಬೂದುಗುಂಬಳ, ಮುಂತಾದ ತರಕಾರಿಗಳು, ಬಗೆಬಗೆಯ ಸೊಪ್ಪುಗಳು ಜನಪ್ರಿಯವಾಗಿವೆ. ಉತ್ತರ ಭಾರತದಲ್ಲಿ, ಹಾಲು ಹೆಚ್ಚಾಗಿ ಸಿಗುವುದರಿಂದ ಅದರಿಂದ ಅನೇಕ ತೆರನ ಸಿಹಿ ತಿಂಡಿಗಳನ್ನು ತಯಾರಿಸುತ್ತಾರೆ. ಹಾಲು, ಮೊಸರು, ಕೆನೆ, ಕೋವ, ಬೆಣ್ಣೆ, ತುಪ್ಪ ಮುಂತಾದ ಹಾಲಿನ ಉತ್ಪನ್ನಗಳು ಎಲ್ಲರೂ ಇಷ್ಟಪಡುವ ಆಹಾರಗಳು. ಪಂಜಾಬು, ಉತ್ತರಪ್ರದೇಶ ಮುಂತಾದ ಕಡೆ ಗೋದಿಯೊಂದನ್ನೇ ಬಳಸುತ್ತಾರೆ. ಮಹಾರಾಷ್ಟ್ರ, ಮಧ್ಯಪ್ರದೇಶ ಮುಂತಾದ ಕಡೆಗಳಲ್ಲಿ, ಗೋದಿ, ಅಕ್ಕಿ ಎರಡರನ್ನೂ ಸಮಸಮವಾಗಿ ಸೇವಿಸುತ್ತಾರೆ. ಜೈನರೂ ಹಿಂದುಗಳಲ್ಲಿ ಕೆಲವು ಪಂಗಡದವರೂ ಅಚ್ಚ ಶಾಖಾಹಾರಿಗಳು. (ಮಾಂಸಾಹಾರಿಗಳಾದರೂ ಇತರರು ಹಣಕಾಸಿನ ಕಾರಣ ಕೆಲವೊಮ್ಮೆ ಮಾತ್ರ ಸೇವಿಸುವರು.) ಕುರಿ, ಮೇಕೆ, ಕೋಳಿ, ಹಂದಿ ಮುಂತಾದವು ಮಾಂಸಾಹಾರಗಳಾಗಿವೆ. ಉತ್ತರದಲ್ಲಿ ತಿಳಿ ಚಹ, ದಕ್ಷಿಣದಲ್ಲಿ ಕಾಫಿ ಜನಪ್ರಿಯ ಬಿಸಿ ಪಾನೀಯಗಳು.

**ರಷ್ಯ:** ಇಲ್ಲಿ ಪೂರ್ವ, ಪಶ್ಚಿಮ ದೇಶಗಳ ಅಡಿಗೆ ಪದ್ಧತಿಗಳು ಬೆರೆತಿವೆ. ಬಕ್ ಗೋದಿಯಿಂದ ಮಾಡಿದ ದೋಸೆಗಳನ್ನು ಮೊಸರಿನ ಜೊತೆಗೆ ತಿನ್ನುತ್ತಾರೆ. ಕಾಯಿಪಲ್ಲೆಗಳು, ಮಾಂಸ, ಕೋಳಿಮಾಂಸ, ಮೀನುಗಳ ಜೊತೆಗೆ, ಮೇಯೊನ್ನೀಸ್ ಚಟ್ನಿ ಬೆರೆಸಿ, ಕೋಸುಂಬರಿ ಮಾಡುತ್ತಾರೆ. ಕೋಸಿನ ತಿಳಿಸಾರೂ ಬೀಟ್‌ಗೆಡ್ಡೆ ತಿಳಿಸಾರೂ ಜನಪ್ರಿಯವಾದುವು. ಮಾಂಸಗಳ ಜೊತೆಗೆ ಮೊಸರು, ಕಾಯಿಪಲ್ಯೆ, ಸೌತೇಕಾಯಿ ಉಪ್ಪಿನಕಾಯಿ, ಕೋಸುಮದ್ಯ ಬಡಿಸುತ್ತಾರೆ. ಹಾಲು, ಸಕ್ಕರೆ ಹಾಕದ ಚಹ ಜನಪ್ರಿಯ ಪಾನೀಯಗಳು. ಇದಕ್ಕೆ ಕೆಲವರು ಹಣ್ಣಿನ ಮುರಬ್ಬ ಸೇರಿಸುತ್ತಾರೆ. ಆಲೂಗೆಡ್ಡೆಯಿಂದ ತಯಾರಿಸಿದ ವೋಡ್ಕ ಎಂಬ ತಿಳಿಮದ್ಯ ಎಲ್ಲೆಲ್ಲೂ ಜನಪ್ರಿಯ ಪಾನೀಯ.

**ಚೀನ:** ಫ್ರೆಂಚ್ ಜನರಂತೆ ಇವರೂ ಅಡಿಗೆಗಳಲ್ಲಿ ಬಲು ನಿಸ್ಸೀಮರು. ಅನ್ನ, ಸೋಯಾ ಅವರೆ (ಸೋಯಾ ಬೀನ್) ಮೊಳಕೆಗಳು, ಅದರ ಮೊಸರು, ಹಸಿ ಶುಂಠಿ ಅಡಿಗೆಗಳಿಗೆ ಹೆಚ್ಚಾಗಿ ಹಾಕುವ ಪದಾರ್ಥಗಳು. ಬೆಣ್ಣೆ, ಹಾಲು, ಚೀಸ್ ಮುಂತಾದವನ್ನು ಎಂದೂ ಅಡಿಗೆಗಳಲ್ಲಿ ಬಳಸರು. ಸಂಬಾರ ದಿನಸಿಗಳೂ ಹೆಚ್ಚಾಗಿ ಬಳಕೆಯಲ್ಲಿಲ್ಲ. ಬೆಳ್ಳುಳ್ಳಿ, ಈರುಳ್ಳಿಗಳನ್ನು ಮಾತ್ರ ಕೆಲವು ಅಡಿಗೆಗಳಲ್ಲಿ ಹೆಚ್ಚಾಗಿ ಸೇರಿಸುತ್ತಾರೆ. ಚಾಪ್ ಕಡ್ಡಿಗಳಿಂದ ಇಲ್ಲವೆ ಚಮಚದಿಂದ ಊಟ ಮಾಡುತ್ತಾರೆ. ಅಡಿಗೆಯ ಪದಾರ್ಥಗಳನ್ನೆಲ್ಲ ಸಣ್ಣದಾಗಿ ಕತ್ತರಿಸಿ ಬೇಯಿಸುವುದರಿಂದ ಊಟ ಮಾಡುವಾಗ ಇವರಿಗೆ ಚಾಕು ಬೇಕಿರದು. ಮೀನು ಎಲ್ಲರಿಗೂ ಇಷ್ಟವಾದ ಆಹಾರ. ಸೀಗಡಿಗಳು, ಹಂದಿ, ಕೋಳಿ, ಬಾತಿನ ಮಾಂಸಗಳು ಒಳ್ಳೆಯ ಆಹಾರಗಳೆಂದು ತಿಳಿದಿರುವರು. ಇವನ್ನು ಕಾಡಿ, ಹಿಟ್ಟು, ಸಕ್ಕರೆಗಳ ಮಿಶ್ರಣದಲ್ಲಿ ಅದ್ದಿ ಎಣ್ಣೆಯಲ್ಲಿ ಹುರಿಯುತ್ತಾರೆ. ಸೋಯ ಅವರೆ ಚಟ್ನಿ ಇವುಗಳ ಜೊತೆಗೆ ಸೇರುತ್ತದೆ.

ಅನ್ನ, ಸೇವಿಗೆ ತೆರನ ಪದಾರ್ಥಗಳೇ ಮುಖ್ಯ ಆಹಾರ. ಕಾಯಿಪಲ್ಯೆಗಳನ್ನು ದಂಡಿಯಾಗಿ ತಿನ್ನುತ್ತಾರೆ. ಅಣಬೆಗಳು, ಬೊಂಬಿನ ಚಿಗುರು, ಕಾಳಿನ ಮೊಳಕೆಗಳು ಅಡಿಗೆಗಳಲ್ಲಿ ಸೇರುತ್ತವೆ. ಅನ್ನವನ್ನು ಮಾಡುವುದರಲ್ಲೂ ಅನೇಕ ಬಗೆಗಳಿವೆ. ಪೀಚ್, ಪೇರ್, ಮಾವು, ಲೀಚಿ ಹಣ್ಣುಗಳನ್ನು ತಿನ್ನುವರು. ಬಾದಾಮಿ ಬಿಸ್ಕತ್, ಬಾದಾಮಿ ಹಿಟ್ಟಿನಿಂದ ಮಾಡಿದ ಹಲ್ವದಂತಿರುವ ಪದಾರ್ಥ, ಎಲ್ಲರೂ ಇಷ್ಟಪಡುವ ಸಿಹಿತಿಂಡಿಗಳು. ಅಕ್ಕಿಯಿಂದ ತಯಾರಿಸಿದ ವೈನ್ ಮದ್ಯವನ್ನು ಅಡಿಗೆಗಳಲ್ಲೂ ಊಟದ ಜೊತೆಗೆ ಪಾನೀಯವಾಗೂ ಬಳಸುತ್ತಾರೆ. ಚಹ ಪಾನೀಯವನ್ನು ದಿನಕ್ಕೆ ಹಲವು ಬಾರಿ ಸೇವಿಸುತ್ತಾರೆ.

**ಜಪಾನ್:** ಈ ನಾಡಿನವರ ಅಡಿಗೆಗಳು ಬಹಳ ಸರಳ. ಕೆಂಡದ ಮೇಲೋ ಒಲೆಯ ಮೇಲೋ ಬೇಯಿಸುವುದು ಸಾಧಾರಣ ವಿಧಾನ. ಅಡಿಗೆಗಳನ್ನು ತಟ್ಟೆಗಳಲ್ಲಿ ಅಲಂಕಾರವಾಗಿ ಜೋಡಿಸುವುದು ಇವರ ವಿಶೇಷ ಪದ್ಧತಿ. ಇವರಲ್ಲಿ ಅದೊಂದು ಕಲೆ. ಊಟ, ಬಗೆಬಗೆಯ ಅಡಿಗೆಗಳ ಸ್ವಲ್ಪ ಸ್ವಲ್ಪ ಭಾಗಗಳಿಂದ ಕೂಡಿರುತ್ತದೆ. ಅನ್ನ, ಮೊಟ್ಟೆ, ಹಿಟ್ಟಿನಿಂದ ಮಾಡಿದ ಶೇವಿಗೆ ಮುಖ್ಯ ಆಹಾರ. ಸೋಯಾ ಅವರೆ ಹಿಟ್ಟು, ಮೀನು, ಮೊಟ್ಟೆಗಳಿಂದ ತಿಳಿಸಾರು ತಯಾರಿಸುವರು. ಜಪಾನೀಯರು ಮೀನುಗಳು ಮತ್ತಿತರ ಕಡಲ ಆಹಾರಗಳನ್ನು ದಂಡಿಯಾಗಿ ತಿನ್ನುತ್ತಾರೆ. ಸೌತೆಕಾಯಿ, ಹಾಲ್ಮೂಲಂಗಿ (ಲೆಟಿಸ್) ಸೊಪ್ಪಿನೊಂದಿಗೆ, ಹಸಿ ಮೀನಿನ ಕೋಸಂಬರಿಯನ್ನು ತಿನ್ನುವುದೂ ಉಂಟು. ಊಟದ ಮೇಜಿನ ಮೇಲೇ ತಯಾರಿಸಿ ತಿನ್ನುವ ಅಡಿಗೆ ಸುಕಿಯಾರೆ. ತೆಳ್ಳಗೆ ಕೊಯ್ದ ಮಾಂಸ, ಈರುಳ್ಳಿ, ಬೊಂಬಿನ ಚಿಗುರು, ಲೀಕ್ ಮುಂತಾದವನ್ನು ಎಣ್ಣೆಯಲ್ಲಿ ಸ್ವಲ್ಪ ಹುರಿದು ಸಣ್ಣ ಪಾತ್ರೆಯಲ್ಲಿಟ್ಟು, ಮೇಜಿನ ಮೇಲೆ ಮದ್ಯಸಾರದ ದೀಪದ ನೆರವಿಂದ ಬೇಯಿಸಿದ ಕೂಡಲೇ ಸೋಯ ಅವರೆ ಚಟ್ನಿ, ಸೋಯ ಅವರೆ ಮೊಸರಿನ ಜೊತೆಗೆ ಇದನ್ನು ಬಡಿಸುವರು. ಅಕ್ಕಿಯಿಂದ ಮಾಡಿದ ವೈನ್ ಮದ್ಯ ಜನಪ್ರಿಯ. ದಿನದ ಊಟಗಳ ಜೊತೆಗೆ ಚಹ ಸೇವಿಸುತ್ತಾರೆ.

**ಶ್ರೀಲಂಕಾ:** ಇಲ್ಲಿನ ಅಡಿಗೆಗಳಲ್ಲಿ ತೆಂಗಿನಕಾಯಿಗೆ ಹೆಚ್ಚು ಪ್ರಾಧಾನ್ಯ. ತೆಂಗಿನ ಹಾಲು, ತುರಿ ಅಥವಾ ಒಣಕೊಬ್ಬರಿ ಹೆಚ್ಚು ಕಡಿಮೆ ಎಲ್ಲ ಸಿಹಿ ಮತ್ತು ಖಾರದ ಭಕ್ಷ್ಯಗಳಲ್ಲಿ ಸೇರುತ್ತವೆ. ಸಂಬಾರಜಿನಸಿಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಆದ್ದರಿಂದ ಆಹಾರಗಳು ತೀಕ್ಷ್ಣ ವಾಸನೆ, ರುಚಿ ಹೊಂದಿರುತ್ತವೆ.

ತರಕಾರಿಗಳಿಂದಲೂ ದನ, ಕುರಿ, ಕೋಳಿ, ಹಂದಿ ಮುಂತಾದ ಪ್ರಾಣಿಗಳ ಮಾಂಸಗಳಿಂದಲೂ ವಿಧವಿಧವಾದ ಮೀನುಗಳಿಂದಲೂ ರುಚಿಯಾದ ಸಂಬೋಲ್‌ಗಳನ್ನು (ಸಾರು) ತಯಾರಿಸುತ್ತಾರೆ. ಇವಕ್ಕೆ ತೆಂಗಿನ ಹಾಲು, ಸಂಬಾರಜಿನಸಿ ಹಾಕಿ ಬೇಯಿಸಿದ ಹಲವು ಬಗೆಯ ಅನ್ನಗಳನ್ನು ಮಾಡುತ್ತಾರೆ. ಅಂಬೂಲ್ ಕಿಯಾಲ್ (ಮೀನು), ಸೀಮ್ ಸಂಬೋಲ್, ಮಿರಿಸ್ ಮಾಲು, ಕಿರಿತ್ತೋಡಿ ಮುಂತಾದುವು ಪ್ರಸಿದ್ಧ ಖಾರದ ಅಡುಗೆಗಳು. ಪೋಲೋಸ್ ಪಾಹಿ ಎನ್ನುವುದು ಹಲಸಿನ ಕಾಯಿಂದ ಮಾಡಿದ್ದು. ಹೋಳುಗಳನ್ನು ಮೆತ್ತಗೆ ಬೇಯಿಸಿ, ಸಾಸಿವೆ, ಬೆಳ್ಳುಳ್ಳಿ, ಮೆಣಸಿನಕಾಯಿ, ಶುಂಠಿ ಮತ್ತು ಉಪ್ಪು ಹಾಕಿ ಅರೆದ ಮಸಾಲೆಯನ್ನು ಬೆರೆಸಿ ಸ್ವಲ್ಪ ವಿನೆಗರ್ ಜೊತೆಗೆ ಕುದಿಸುವರು. ಇದನ್ನು ಗಾಜಿನ ಪಾತ್ರೆಯಲ್ಲಿಟ್ಟುಕೊಂಡು ಬೇಕಾದಾಗ ಗೊಜ್ಜಿನಂತೆ ಬಳಸಬಹುದು.

ಬೆಳಗಿನ ಉಪಾಹಾರಕ್ಕೆ ದೋಸೆಯಂತೆ ಮಡಕೆಗಳಲ್ಲಿ ಬೇಯಿಸುವ ಅಕ್ಕಿಹಿಟ್ಟಿನ ಹಾಪರ್; ಅಕ್ಕಿ, ತೆಂಗಿನ ಹಾಲು, ದ್ರಾಕ್ಷಿ, ಏಲಕ್ಕಿ ಹಾಕಿ ಬೇಯಿಸಿದ ಕಿರಿಬಾತ್; ಅಕ್ಕಿ ಹಿಟ್ಟಿನ ಪುಟ್ಟು (ಬೊಂಬಿನಲ್ಲಿ ಬೇಯಿಸಿದ್ದು) ಜನಪ್ರಿಯವಾದ ಅಡಿಗೆಗಳು.

ಕೊಬ್ಬರಿ, ಹಾಲು, ಸಕ್ಕರೆ, ಗೋಡಂಬಿ ಹಾಕಿ ಗಟ್ಟಿ ಮಾಡಿದ ಕೋಕನಟ್ ಟಾಕ್; ಕೊಬ್ಬರಿ ಹಾಲು, ಅಕ್ಕಿಹಿಟ್ಟು, ಬೆಲ್ಲ, ಗೋಡಂಬಿ ಹಾಕಿದ ಕಾಲು ದೋದೊಲ; ಅಕ್ಕಿಹಿಟ್ಟು, ಮೊಟ್ಟೆ, ತೆಂಗಿನಹಾಲು, ಉಪ್ಪು ಹಾಕಿ ಎಣ್ಣೆಯಲ್ಲಿ ಕರಿಯುವ ಕೋಕಿ; ಎಳ್ಳು, ಕೊಬ್ಬರಿತುರಿ, ಬೆಲ್ಲ ಹಾಕಿದ ತಲಗುಲಿ–ಮುಂತಾದುವು ಪ್ರಸಿದ್ಧ ಸಿಹಿ ತಿಂಡಿಗಳು. ಬಿಬಿಕ್ಕಾನ್ ಎನ್ನುವುದು ತೆಂಗಿನಹಾಲು, ಬೆಲ್ಲ, ಗೋಡಂಬಿ, ಮೈದಾಹಿಟ್ಟು, ಲವಂಗ, ಏಲಕ್ಕಿ, ಶುಂಠಿ, ನಿಂಬೆಸಿಪ್ಪೆಯ ಚೂರುಗಳು ಮತ್ತು ಸಕ್ಕರೆ ಬೆರೆಸಿ ಕೇಕಿನಂತೆ ಒಲೆಯಲ್ಲಿ ಬೇಯಿಸುವುದು. ಹಲಾಪೆ ಎನ್ನುವುದು ಅಕ್ಕಿಹಿಟ್ಟು, ಕೊಬ್ಬರಿತುರಿ, ಏಲಕ್ಕಿ ಮತ್ತು ಕಾಕಂಬಿ ಬೆರೆಸಿ ರೊಟ್ಟಿಗಳಂತೆ ತಟ್ಟಿ ಬಾಳೆಎಲೆಯ ಮಧ್ಯೆಯಿಟ್ಟು, ಹಬೆಯಲ್ಲಿ ಬೇಯಿಸಿ ತಯಾರಿಸುವುದು.

ಪಾನೀಯಗಳಲ್ಲಿ ಕಾಫಿ, ಟೀ, ಬಾರ್ಲಿ ನೀರು, ಶುಂಠಿ ಅಥವಾ ಪಟ್ಟೆಹಾಕಿದ ಟೀ, ಸಬ್ಬಕ್ಕಿ (ಸೇಗೋ) ಗಂಜಿ ಜನಪ್ರಿಯವಾದುವು. (ವೈ.ಎಸ್.ಎಲ್.)

**ಆಹಾರದ ಕೀಳ್ಬೆರಕೆ:** ಒಳ್ಳೆಯ ಅಚ್ಚ ಆಹಾರ ಪದಾರ್ಥಕ್ಕೆ ಕೇವಲ ವ್ಯಾಪಾರದ ಲಾಭಕ್ಕಾಗಿ ಕೀಳಾದ ಅಗ್ಗದ ವಸ್ತುಗಳನ್ನು ಬೆರೆಸುವುದು (ಅಡಲ್ಟರೇಷನ್), ಮುಂದುವರಿದ ನಾಡುಗಳಲ್ಲಿ ಮೊದಲಿಗೆ ದೊಡ್ಡ ಸಮಸ್ಯೆ ಆಗಿದ್ದು ಈಗ ಬಹುಮಟ್ಟಿಗೆ ಇಳಿಮುಖವಾಗಿದೆ. ಆಹಾರ ತಯಾರಕರ ನ್ಯಾಯ, ನೀತಿ ವರ್ತನೆ, ಸರ್ಕಾರಗಳ ಆಹಾರ, ಮದ್ದುಗಳ ಕಾಯಿದೆಗಳು ಈ ಇಳಿಮುಖಕ್ಕೆ ಮುಖ್ಯ ಕಾರಣಗಳು. ಬಳಕೆಗಾರನ ಆರೋಗ್ಯ ಕಾಪಾಡುವುದೇ ಈ ಕಾಯಿದೆಗಳ ಮುಖ್ಯ ಗುರಿ. ತಯಾರಾದ ಆಹಾರದಲ್ಲಿ ಅಪಾಯಕರ ವಸ್ತುಗಳು ಏನೂ ಸೇರದಂತೆ, ವಿವರ, ವರ್ಣನೆ, ಮೇಲಂಟಿಸಿದ ಚೀಟಿಗಳು, ಜಾಹೀರಾತುಗಳ ಮೂಲಕ ಮೋಸಗೊಳಿಸದಂತೆ ನೋಡಿಕೊಳ್ಳುವುದು ಇನ್ನೊಂದು ಗುರಿ.

ತಯಾರಾದ ಆಹಾರದ ಡಬ್ಬಿ, ಸೀಸೆಗಳ ಮೇಲಿನ ಚೀಟಿಯಲ್ಲಿ, ಅದರೊಳಗಿರುವ ವಸ್ತುಗಳ ನಿಜವಾದ ಹೆಸರು, ಪ್ರಮಾಣಗಳನ್ನು ಸರಿಯಾದ ಕ್ರಮದಲ್ಲಿ ಸೂಚಿಸಿರಬೇಕೆನ್ನುವುದು ಕಾಯಿದೆಯಲ್ಲಿ ಮುಖ್ಯವಾದ ಒಂದು ಕಡ್ಡಾಯ ಸೂಚನೆ. ತಯಾರಕರು ಇದನ್ನು ಚಾಚೂ ತಪ್ಪದೆ ಪಾಲಿಸಿದಲ್ಲಿ ಕೀಳ್ಬೆರಕೆಯ ಮೋಸಕ್ಕೆ ದಾರಿಯೇ ಇರದು. ಮೇಲುಗಡೆ ಬಾದಾಮಿ ಎಣ್ಣೆ (ಅಮಂಡ್ ಆಯಿಲ್) ಎಂದು ಚೀಟಿ ಅಂಟಿಸಿ, ಒಳಗಡೆ ಬಾದಾಮಿ ವಾಸನೆ, ರೂಪಗಳಿರುವ ರಾಸಾಯನಿಕ ದ್ರವವನ್ನು ಸೀಸೆಯಲ್ಲಿ ತುಂಬುವುದು ಕಾಯಿದೆ ಮುರಿದಂತೆ. ಅಲ್ಲದೆ ಚೀಟಿಯಲ್ಲಿ ಬಲವರ್ಧಕ, ರಕ್ತಶೋಧಕ, ಸಕಲನೋವುಹರ, ಮುಟ್ಟುಕಾರಕ–ಹೀಗೆಲ್ಲ ವರ್ಣನೆಗಳು, ವೈದ್ಯಶಾಸ್ತ್ರಕ್ಕೆ ಎದುರಾಗಿ ಬರೆವಂತಿಲ್ಲ. ಹಾಗೆ ಬರೆದ ವಿಷಯಗಳೆಲ್ಲ ಶಾಸ್ತ್ರೀಯವಾಗಿ ಒಪ್ಪುವಂತಿರಬೇಕು.

ಜನ ಬಳಸುವ ಉಳಿದ ಎಷ್ಟೋ ವಸ್ತುಗಳಿಗೆ ಇರುವ ಹಾಗೇ ಆಹಾರದ ವಿಚಾರಗಳಲ್ಲೂ ಗೊತ್ತಾದ ಆಯಮಾನಗಳಿವೆ. ತಕ್ಕಾಳಿ ಪಳಿದ್ಯ (ಟೊಮ್ಯಾಟೊ ಕೆಚಪ್) ಎಂದರೆ ಅದರಲ್ಲಿ ಇರಬೇಕಾದ ತಕ್ಕಾಳಿಯ ಪ್ರಮಾಣ, ಬಣ್ಣ, ವಾಸನೆ ಕೊಡುವ ಇತರ ವಸ್ತುಗಳ ಪ್ರಮಾಣ, ಗುಣಗಳು ನಿರ್ಧಾರವಾಗಿದೆ. ಮದ್ಯ ಪಾನೀಯಗಳಲ್ಲೂ ಅಷ್ಟೆ. ವೈನ್ ಅಂದರೆ ವೈನೇ ಆಗಿರಬೇಕು. ಅದರಲ್ಲಿ ಇಂತಿಷ್ಟಾದರೂ ಮದ್ಯಸಾರ ಇರಬೇಕೆಂದಿದೆ. ಯಾವ ಹಣ್ಣಿಂದ ಮಾಡಿದೆ, ನೀರೆಷ್ಟಿದೆ ಎಂದೂ ಸೂಚಿಸಬೇಕು. ಮೇಜಿನ ಮೇಲೆ ಸೀಸೆಯಲ್ಲಿ ಇಟ್ಟುಕೊಂಡು ಊಟದ ತಟ್ಟೆಗೆ ಉದುರಿಸಿಕೊಳ್ಳುವ 'ಮೇಜು ಉಪ್ಪಿನ' ಪುಡಿ ಗೆಡ್ಡೆಗಟ್ಟದೆ ಸರಾಗವಾಗಿ ಬರುವಂತೆ ಎಷ್ಟು ಪಾಲು ಮೆಗ್ನೀಷಿಯಂ ಕಾರ್ಬೊನೇಟನ್ನು ಹಾಕಿದೆ ಎನ್ನುವುದನ್ನೂ ಸೀಸೆಯ ಮೇಲೆ ಸೂಚಿಸಬೇಕು.

ಭಾರತದಲ್ಲಿ ಆಹಾರದ ಕೀಳ್ಬೆರಕೆ ಆಗುತ್ತಿರುವುದನ್ನು ನೋಡಿದರೆ, ಒಬ್ಬನಿಗೆ ಅಮೃತ, ವರ ಆದದ್ದು ಸಾವಿರಾರು ಮಂದಿಗೆ ವಿಷವೋ ಶಾಪವೋ ಆಗುವಂತಿದೆ. ಭಾರತ ಸರ್ಕಾರದ ಆರೋಗ್ಯ ಇಲಾಖೆಯವರು ಇತ್ತೀಚೆಗೆ ನಡೆಸಿದ ಪರೀಕ್ಷೆಯಂತೆ, ಮೂರು ಪದಾರ್ಥಗಳಲ್ಲಿ ಒಂದು ಆಹಾರ ಪದಾರ್ಥ ಕೀಳ್ಬೆರಕೆಯಾಗಿತ್ತು. ಅಷ್ಟೇ ಅಲ್ಲ, ಚೆನ್ನಾಗಿರದ, ಕೆಟ್ಟಿರುವ ಆಹಾರಗಳಿಗೆ ಬಣ್ಣ ಕಟ್ಟಲು ಬಳಸಿದ ರಾಸಾಯನಿಕ ಬಣ್ಣಗಳು ಏಡಿಗಂತಿ (ಕ್ಯಾನ್ಸರ್) ಆಗಿಸುವಂತಿದ್ದುವು. ಬಾಯಲ್ಲಿ ನೀರೂರಿಸುವಂತೆ ಹೊನ್ನಿನ ಹಳದಿ ಬಣ್ಣ ಕೊಡಲು ಜಿಲೇಬಿಗಳಿಗೆ ಮೆಟಾನಿಲ್ ಯೆಲ್ಲೊ, ಬಟಾಣಿ ಕಾಳುಗಳು ಅಚ್ಚ ಹಸುರಾಗಿ ಕಾಣುವಂತೆ ಬ್ಲೊ ವಿಆರ್‌ಎಸ್ (ಇದೂ ಒಂದು ಏಡಿಗಂತಿ ಜನಕ) ಹಾಕುವುದು ರೂಢಿಯಲ್ಲಿವೆ. ಇವೆರಡೂ ಬಣ್ಣಗಳೂ ಕಲ್ಲಿದ್ದಲ ಟಾರೆಣ್ಣೆಯ ಕೃತಕ ಉತ್ಪನ್ನಗಳು. ಆದ್ದರಿಂದ ಹೊಟ್ಟೆಗೆ ಸೇರಿದರೆ ಇವು ಏಡಿಗಂತಿಕಾರಕಗಳು. ಕಣ್ಸೆಳೆವಂತೆ ಹಪ್ಪಳಗಳಿಗೆ ಕೆಂಪು ರಂಗು ಕೊಡಲು ಬಳಸುವ ರೊಡಮೀನ್–ಬಿ ಬಲವಾದ ಏಡಿಗಂತಿಜನಿಕ ರಾಸಾಯನಿಕ. ಬೇಳೆ ಕಾಳುಗಳಿಗೂ ಈ ಬಗೆಯ ಬಣ್ಣಗಳನ್ನು ಸೇರಿಸುವುದುಂಟು. ಬಹಳ ಮಂದಿ ಬಳಸುವ ಅರಿಶಿನಕ್ಕೂ ಉಳಿಗಾಲವಿಲ್ಲ. ಅದರ ಹಳದಿ ಬಣ್ಣ ಇನ್ನಷ್ಟು ನಿಗಿನಿಗಿಯಾಗಿ ಹೊಳೆವಂತೆ ಮಾಡಲು ಸೀಸದ ಕ್ರೋಮೇಟನ್ನು ಸೇರಿಸುವರು. ಇದರಿಂದ ಸೀಸದ ವಿಷವೇರಿಕೆಯಾಗಿ ರಕ್ತಕೊರೆ, ಅರೆನಾರಿಬೇನೆ (ಲಕ್ವ), ಮೈಯಿಳಿತಗಳು ಆಗುವುದುಂಟು.

ನಗರಗಳಲ್ಲಂತೂ ದುಡ್ಡು ತೆತ್ತರೂ ನೂರಕ್ಕೆ 50–60 ಬಾರಿ ಅಪ್ಪಟವಾದ ಹಾಲು ದೊರೆಯದಿರುವಾಗ, ಕೀಳ್ಬೆರಕೆಯ ಅಪಾಯವನ್ನು ಅರಿಯಬಹುದು. ದಿನದ ಮಾರಾಟದಲ್ಲಿ ಉಳಿದುಬಿಟ್ಟ ಹಾಲನ್ನು ಕೆಡದಂತಿರಿಸಲು ಹಿಂದೆ ಒಂದು ಚಿಟಿಕೆಯಷ್ಟು ಬೋರಿಕಾಮ್ಲವನ್ನು ಸೇರಿಸುತ್ತಿದ್ದರು. ಇದರಿಂದ ಬೋರಾನು ವಿಷವೇರಿಕೆಯಾಗಿದ್ದರಿಂದ ಇದಕ್ಕೆ ಕಾನೂನು ಎದುರಾಗಿದೆ. ಹೀಗೇ ಬೆಣ್ಣೆ, ತುಪ್ಪಗಳಲ್ಲೂ ವನಸ್ಪತಿ ಬೆರೆಸುವುದುಂಟು. ಇದನ್ನು ತಪ್ಪಿಸುವಂತೆ, ವನಸ್ಪತಿಗೇ ಸೇರಿಸಿದರೆ ಸುಲಭವಾಗಿ ಕಂಡುಕೊಳ್ಳಬಹುದಾದ ಒಂದು ಬಣ್ಣವನ್ನು ಕಂಡುಹಿಡಿವುದು ಇನ್ನೂ ಕೈಗೂಡಿಲ್ಲ. ಬದಲಾಗಿ ಈ ವನಸ್ಪತಿಗೆ ತುಪ್ಪದ ಬಣ್ಣ ಕೊಡುತ್ತಿರುವರು. ಚಹ, ಚಾಕೊಲೇಟು, ಚಿಕೋರಿಗಳು ಕೂಡ ಕೀಳ್ಬೆರಕೆಗೆ ಹೊರತಾಗಿಲ್ಲ. ಹಿಂದಿನ ಕಾಲದಲ್ಲಿ, ಕಾಫಿಗೆ ಕೀಳ್ಬೆರಕೆಯಾಗಿ ಚಿಕೋರಿ ಸೇರುತ್ತಿದ್ದುದೇ ಜನರಿಗೆ ಅಭ್ಯಾಸವಾಗಿಬಿಟ್ಟು, ಈಗ ಚಿಕೋರಿ ಇದ್ದರೇ ಕಾಫಿ ರುಚಿಕರ ಎನ್ನುವ ಪರಿಸ್ಥಿತಿ ಬಂದಿದೆ. ಕಾಫಿಪುಡಿಯಲ್ಲಿ ಹುರಿದ ಹುಣಿಸೆಬೀಜದ ಪುಡಿಯನ್ನೂ ಬಾದಾಮಿ ಹಾಲಿಗೆ ಕಡಲೆಕಾಯಿ ಬೀಜವನ್ನೂ ಕೀಳ್ಬೆರಸಿ ರುಚಿ ಕಟ್ಟಿಸುವುದುಂಟು. ಈ ತೆರನ ಕೀಳ್ಬೆರಕೆಯೇ ಈಗ ಕೈಗಾರಿಕೆಯಾಗಿ ಬೆಳೆದಿದೆ.

ತೂಕದಲ್ಲಿ ಅಳೆವ ದವಸಗಳಿಗೆ ಕಲ್ಲು ಮಣ್ಣನ್ನೂ ನೀರನ್ನೂ ಬೆರೆಸುವುದು ಇನ್ನೊಂದು ತೆರನ ಕೀಳ್ಬೆರಕೆ. ಜನರು ದಿನವೂ ಬಳಸುವ ಆಹಾರಗಳಲ್ಲಿ, ಕುಡಿವ ಪಾನೀಯಗಳಲ್ಲಿ ಯಾವುವೂ ಕೀಳ್ಬೆರಕೆಗಾರನ ಕಣ್ಣು ತಪ್ಪಿಸಿಲ್ಲ. ಕೀಳ್ಬೆರಸುವ ವಸ್ತುಗಳ ಹರವು ಹಿಂದಿನ ಕಾಲದವರನ್ನು ಹಿಂಬೀಳಿಸಿವೆ. ಅಡಿಗೆಗಾಗಿ ಬಳಸುವ ಎಳ್ಳು, ಸೇಂಗಾ, ಕೊಬ್ಬರಿ, ಕುಸುಬಿ ಎಣ್ಣೆಗಳ ಕೀಳ್ಬೆರಕೆಗಾಗಿ ಖನಿಜದ ಎಣ್ಣೆ (ಮಿನರಲ್ ಆಯಿಲ್), ಡೀಸೆಲ್ ಎಣ್ಣೆಗಳನ್ನು ಕೂಡ ಬಿಟ್ಟಿಲ್ಲ. ಹೊಟ್ಟೆಗೆ ಸೇರಿದರೆ ಇವೂ ಏಡಿಗಂತಿಕಾರಕಗಳೇ. ಹಾಗೇ ಬಂಗಾಳ, ಉತ್ತರ ಭಾರತದಲ್ಲಿ ಎಲ್ಲೆಲ್ಲೂ ಬಳಸುವ ಸಾಸಿವೆ ಎಣ್ಣೆಯೊಂದಿಗೆ ದತ್ತೂರಿ (ಅರ್ಜಿಮೋನ್) ಎಣ್ಣೆ ಕೀಳ್ಬೆರೆಸುವುದುಂಟು. ಈ ಎಣ್ಣೆಯಿಂದ ಸಾಂಕ್ರಾಮಿಕವಾಗಿ ಶೋಬೆ, ಹತ್ತಗಣ್ಣು (ಗ್ಲಾಕೋಮ) ಆಗುವುದಲ್ಲದೆ, ಏಡಿಗಂತಿಗಳಾಗುವುವೆಂದೂ ಇತ್ತೀಚೆಗೆ ಗೊತ್ತಾಗಿದೆ.

ಕೀಳ್ಬೆರಕೆಯ ಕೆಟ್ಟ ಚಾಳಿ ನಗರಗಳಲ್ಲಿ ವಿಪರೀತಕ್ಕೇರಿದ್ದರೂ ಹಳ್ಳಿಗಳೂ ಈ ವಿಚಾರದಲ್ಲಿ ಹಿಂದೆ ಬಿದ್ದಿಲ್ಲ ಎನಿಸುತ್ತಿದೆ. ಹಳ್ಳಿಯಿಂದ ತಂದು ಹಾಲು ಮಾರುವವರು ಕೂಡ ಯಾವ ವಿಶಿಷ್ಟ ಗುರುತ್ವದ (ಸ್ಪೆಸಿಫಿಕ್ ಗ್ರ್ಯಾವಿಟಿ) ಹಾಲು ಬೇಕೆಂದು ತಿಳಿದು ಅದಕ್ಕೆ ಸರಿಯಾಗಿ ಹಾಲನ್ನು ಕೀಳ್ಬೆರಸುವರು.

ಭಾರತದಲ್ಲಿ 1954ರಲ್ಲಿ ಕಾಯಿದೆಯಾಗಿ ಬಂದ ಆಹಾರದ ಕೀಳ್ಬೆರಕೆ ತಡೆಗಟ್ಟುವ ಶಾಸನ, 1964ರಲ್ಲಿ ತಿದ್ದುಪಡಿಯಾಗಿ ಇನ್ನೂ ಕಟ್ಟುನಿಟ್ಟಿನ ಹತೋಟಿಗಳು ಕಾಯಿದೆಯಲ್ಲಿ ಸೇರಿದುವು. ಇಷ್ಟಾದರೂ ಇದು ಶಾಸನ ಕಡತಗಳಿಂದ ಇಳಿದು ಜಾರಿಗೆ ಬರುವುದರಲ್ಲಿ ತೊಡರುಗಳಿವೆ. ಆರೋಗ್ಯ ಸಂರಕ್ಷಣೆಯ ಕಾಯಿದೆಯನ್ನು ಜಾರಿಗೆ ತರುವ ಹೊಣೆ ಆಯಾ ರಾಜ್ಯ ಸರ್ಕಾರಗಳ ಮೇಲೆ ಬಿದ್ದಿರುವುದೇ ಈಗ ಕೆಲವೆಡೆಗಳಲ್ಲಿ ನಡೆಯುತ್ತಿರುವ ತಡೆಬಡೆಯಿಲ್ಲದ ಕೀಳ್ಬೆರಕೆಗೆ ಕಾರಣ. ಇದನ್ನು ಜಾರಿಗೆ ತರಲು ರಾಜ್ಯ ಸರ್ಕಾರಗಳ ಕೈಯಲ್ಲಿ ಹಣಕಾಸು ಸಾಕಷ್ಟಿರದು. ಅಲ್ಲದೆ, ಈ ಕಾಯಿದೆಯನ್ನು ಜಾರಿಗೆ ತರಲು ನುರಿತ ಅಧಿಕಾರಿಗಳ ನಿರೋಧ ಸಿಬ್ಬಂದಿಯೂ ವಶಪಡಿಸಿಕೊಂಡ ಎಲ್ಲ ಬಗೆಗಳ ಆಹಾರವಸ್ತುಗಳನ್ನೂ ಸರಿಯಾಗಿ ಪರೀಕ್ಷಿಸಲು ವಿಶೇಷ ಪರಿಕರ, ಪರಿಣತರೂ ಅನುಕೂಲಗಳೂ ಇರುವ ಪರೀಕ್ಷಾ ಪ್ರಯೋಗಾಲಯಗಳೂ (ಟೆಸ್ಟಿಂಗ್ ಲ್ಯಾಬೊರೇಟರೀಸ್) ಒಂದೊಂದು ಜಿಲ್ಲೆಯಲ್ಲೂ ಇರಬೇಕು. ಇದು ಇನ್ನೂ ಸಾಧ್ಯವಾಗಿಲ್ಲ.

ಆಹಾರದ ಕೀಳ್ಬೆರಕೆ ತಡೆಗಟ್ಟುವ ಕಾಯಿದೆಯನ್ನು ಚೆನ್ನಾಗಿ ಜಾರಿಗೆ ತರಲು ಇರುವ ಅಡ್ಡಿ, ತೊಡರುಗಳನ್ನು ಕಂಡುಕೊಳ್ಳಲು, ಎರಡು ವರ್ಷಗಳ ಹಿಂದೆ ಭಾರತ ಸರ್ಕಾರ ನೇಮಿಸಿದ್ದ ಸಮಿತಿ ಕೆಲವು ಸಲಹೆಗಳನ್ನು ಮುಂದಿಟ್ಟಿದೆ. ಸಮಿತಿಯ ವರದಿಯಂತೆ, ಮುಖ್ಯವಾಗಿ ನಗರಗಳಲ್ಲಾದರೂ ಮೊಟ್ಟಮೊದಲಾಗಿ 50,000 ಜನರಿಗೆ ಒಬ್ಬರಂತೆ (ಮುಂದೆ ಇಬ್ಬರಂತೆ) ಆಹಾರ ತನಿಖಾಧಿಕಾರಿಗಳನ್ನು ನೇಮಿಸಬೇಕು. ಈಗ ಒಂದೂ ಕಾಲು ಕೋಟಿ ಜನರಿಗೆ ಒಬ್ಬನಿದ್ದಾನೆ. ಹಾಗೇ ಒಂದೊಂದು ಜಿಲ್ಲೆಗೂ ನಗರಕ್ಕೂ ಒಂದೊಂದರಂತೆ, 500 ಪರೀಕ್ಷಾ ಪ್ರಯೋಗಾಲಯಗಳು ಇರಬೇಕು. ಈಗ ಕೇವಲ 63 ಇವೆ.

ಸರ್ಕಾರದ ಕ್ರಮಗಳೊಂದಿಗೆ ಭಾರತದ ಮಾನಕ ಸಂಸ್ಥೆ (ಇಂಡಿಯನ್ ಸ್ಟ್ಯಾಂಡರ್ಡ್ಸ್ ಇನ್‌ಸ್ಟಿಟ್ಯೂಟ್) ಸೂಚಿಸಿ ಒಪ್ಪುವ ಗುರುತು ಮುದ್ರೆಗಳಿರುವ ತಯಾರಿಕೆಗಳನ್ನು ಮಾತ್ರ ಕೊಳ್ಳುವುದರ ಮೂಲಕ, ಬಿಕರಿಗಿರುವ ನಕಲಿ ಮಾಲು ಎಷ್ಟೇ ಅಗ್ಗವಾದರೂ ಕೊಳ್ಳದಿದ್ದು ಜನರೂ ನೆರವಿತ್ತರೆ, ಕಾಯಿದೆಗಳನ್ನೂ ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಆಹಾರದ ಕೀಳ್ಬೆರಕೆಯನ್ನು ಬಹುಮಟ್ಟಿಗೆ ತಡೆಗಟ್ಟಬಹುದು (**ನೋಡಿ– ಅಪಮಿಶ್ರಣ, ಆರೋಗ್ಯ,–ಸುರಕ್ಷಣಾ–ಕಾಯಿದೆಗಳು**). (ಡಿ.ಎಸ್.ಎಸ್.)

**ಆಹಾರದ ಜೋಪಾನಿಕೆ, ದಾಸ್ತಾನು (ಮನೆಯಲ್ಲಿ):** ಆರೋಗ್ಯಕ್ಕೆ, ಪೋಷಣೆಗೆ ತಕ್ಕ ಆಹಾರಗಳನ್ನು ಆರಿಸಿಕೊಂಡು ಕೆಡದಂತೆ, ಅವುಗಳ ಸತ್ತ್ವಗಳು ಹಾಳಾಗದಂತೆ ಎಚ್ಚರದಿಂದ ದಾಸ್ತಾನು ಮಾಡುವುದೇ ಮನೆಯಲ್ಲಿನ ಆಹಾರದ ಜೋಪಾನಿಕೆ. ದೇಹಪೋಷಣೆಗೆ ಮುಖ್ಯವಾದ ಧಾನ್ಯ, ಬೇಳೆ, ಮಾಂಸಾಹಾರ ವಸ್ತು, ಜಿಡ್ಡಿನ ಪದಾರ್ಥ, ತರಕಾರಿ ಮತ್ತು ಹಣ್ಣುಗಳನ್ನು ಆರಿಸುವಾಗ ಅವು ಚೆನ್ನಾಗಿರುವುವೆಂದು ಮೊದಲು ಖಚಿತಪಡಿಸಿಕೊಳ್ಳಬೇಕು. ಕ್ರಿಮಿಕೀಟಗಳು, ಜೀವಾಣುಗಳು ಬಿದ್ದು ಆಗಲೇ ಕೆಡಲು ಮೊದಲಾಗಿದ್ದರೆ ಕೂಡಿಟ್ಟಾಗ ಅವು ಬೇಗನೆ ಕೆಟ್ಟು, ತಿನ್ನಬಾರದ್ದಾಗುತ್ತವೆ. ಅವುಗಳ ರುಚಿಗೆಟ್ಟು, ಕೆಟ್ಟ ವಾಸನೆ ಹಿಡಿಯುತ್ತವೆ. ಒಳ್ಳೆಯ ಆಹಾರ ಪದಾರ್ಥ ಆರಿಸಿದ ಮೇಲೆ ಅದರಲ್ಲಿ ಇರಬೇಕಾದ ಒಳ್ಳೆಯ ಗುಣಗಳು ಆದಷ್ಟು ಹೆಚ್ಚು ಕಾಲ ನಿಲ್ಲುವಂತೆ, ದಾಸ್ತಾನಿಡುವ ಜಾಗ, ಅಲ್ಲಿನ ಕಾವು, ತೇವಾಂಶ ಮುಂತಾದವನ್ನು ಹತೋಟಿಯಲ್ಲಿಡಬೇಕು.

ಆಹಾರ ಪದಾರ್ಥಗಳು ಕೆಡಲು ಮುಖ್ಯವಾಗಿ ಎರಡು ಕಾರಣಗಳಿವೆ. ಹುದುಗು (ಯೀಸ್ಟ್), ಏಕಾಣುಜೀವಿಗಳು (ಬ್ಯಾಕ್ಟೀರಿಯ), ಬೂಜು (ಮೋಲ್ಡ್)–ಈ ತೆರನ ಜೀವಾಣುಗಳು; ಆಹಾರಗಳಲ್ಲೇ ಇರುವ ಕಿಣ್ವಗಳು (ಎಂಜೈಮುಗಳು) ಇಲ್ಲವೇ ರಾಸಾಯನಿಕಗಳು.

ಜೀವಾಣುಗಳಿಂದ ಆಹಾರ ಕೆಡಲು ಕೆಲವು ನಿದರ್ಶನಗಳಿವೆ:

**ಏಕಾಣುಜೀವಿಗಳಿಂದ:** ಹಾಲು ಹುಳಿ ಬಂದು ಒಡೆದು ಹೋಗುವುದು, ಹಾಲನ್ನು ಚೆನ್ನಾಗಿ ಕಾಯಿಸದೆ ಬಿಸಿ ವಾತಾವರಣದಲ್ಲಿ ಇಟ್ಟಿದ್ದರೆ, ಹಾಲಿನಾಮ್ಲವನ್ನು (ಲ್ಯಾಕ್ಟಿಕ್ ಆಸಿಡ್) ತಯಾರಿಸುವ ಹಾಲಿನ ಏಕಾಣುಜೀವಿಗಳು ಬೆಳೆದು ಹುಳಿಹಿಡಿಸಿ ಕೆಡಿಸುವುವು. ಒಡೆದಿಟ್ಟ ತೆಂಗಿನಕಾಯಿ ಹೋಳಿನ ತಿರುಳಿನ ಮೇಲೆ ಬಿಳಿಯ ಇಲ್ಲವೇ ಬಣ್ಣದ ಏಕಾಣುಜೀವಿಗಳು ಬೆಳೆದು ಅಂಟಂಟಾಗುವುದು.

**ಹುದುಗಿನಿಂದ:** ಹಣ್ಣಿಗೆ ಬರುತ್ತಿರುವ ಮಾವಿನ ದೋರಗಾಯನ್ನು ಉಪ್ಪಿನ ಕಾಯಿಗೆ ಬಳಸಿದರೆ, ಬೇಗನೆ ಒಂದು ಬೆಳ್ಳನೆಯ ಪದರ ಮೇಲುಗಡೆ ಕಾಣಿಸಿಕೊಂಡು ಉಪ್ಪಿನಕಾಯಿ ಕೆಡುತ್ತದೆ. ಹುದುಗು (ಯೀಸ್ಟ್) ಜೀವಾಣುವಿನಿಂದ ಹೀಗಾಗುವುದು. ತೆಂಗಿನ ಮರದಿಂದ ಇಳಿಸಿದ ಸಿಹಿ ರಸ ನೀರಾ ಬೇಗನೆ ಹೆಂಡ ಆಗಿಬಿಡುವುದೂ, ಹಣ್ಣಿನ ರಸಗಳು ಹುಳು ಹತ್ತಿ ಕೆಡುವುದೂ ಹುದುಗಿನ ಜೀವಾಣುಗಳಿಂದಲೇ.

**ಬೂಜಿನಿಂದ:** ಉಪ್ಪಿನಕಾಯಿ, ಹಣ್ಣುಗಳು, ತರಕಾರಿ, ಕೆನೆ, ಬ್ರೆಡ್‌ಗಳ ಮೇಲೆ ಬೇಗ ಬೆಳೆದುಕೊಂಡು, ಅವನ್ನು ಕೆಡಿಸುವ ಬಣ್ಣ ಬಣ್ಣದ ಬೂಷ್ಟುಗಳು ಬೂಜಿನ ಜಾತಿಗೆ ಸೇರಿದುವು. ಮಾಂಸಾಹಾರಗಳಲ್ಲೂ ಹಲವು ವೇಳೆ ಇವು ಬೆಳೆದು ಕೊಳೆತ ವಾಸನೆ ಹಿಡಿಸಿ ಅಂಟಂಟು, ಹುಳಿ ಆಗಿಸುತ್ತವೆ.

**ಕಿಣ್ವಗಳಿಂದ:** ಆಹಾರಗಳಲ್ಲಿ ಮೊದಲೇ ಇರುವ ಕಿಣ್ವಗಳು ಹಲವು ವೇಳೆ ಆಹಾರದ ರುಚಿ, ವಾಸನೆಗಳನ್ನು ಕೆಡಿಸುವುವು. ವಸೆಕಿಣ್ವದಿಂದ (ಲೈಪೇಸ್) ಜಿಡ್ಡಿನ ಪದಾರ್ಥಗಳು ಒಡೆದು, ಕೆಟ್ಟು ಕಮಟು (ರ್‍ಯಾನ್ಸಿಡಿಟಿ) ಹಿಡಿಸುತ್ತವೆ, ಮುಗ್ಗಿಸುತ್ತವೆ. ತೆಂಗಿನಕಾಯಿ, ಕಡಲೆಕಾಯಿ ಬೀಜ, ಬೆಣ್ಣೆ ಮುಂತಾದವು ಕೆಟ್ಟು ವಾಸನೆ ಬರುವುದು ಇದರಿಂದಲೇ. ಮಾಂಸಾಹಾರಗಳು, ವಿಶೇಷವಾಗಿ ಮೀನುಗಳು, ಪ್ರೋಟೀನುಗಳನ್ನು ಒಡೆಕೆಡಹುವ ಪ್ರೋಟೀನುಲಯಕ (ಪ್ರೋಟಿಯೊಲಿಟಕ್) ಕಿಣ್ವಗಳ ಚಟುವಟಿಕೆಯಿಂದ ಬೇಗ ಕೊಳೆಯುತ್ತವೆ.

**ಬೇರೆ ಕಾರಣಗಳು:** ಗಾಳಿ ಹೆಚ್ಚಾಗಿದ್ದಾಗ ಕೆಲವು ಆಹಾರಗಳಲ್ಲಿನ ಕೊಬ್ಬು ಆಕ್ಸಿಜನ್‌ಗೂಡಿ (ಆಕ್ಸಿಡೈಸ್) ಮುಗ್ಗಿದ ವಾಸನೆ ಬರುತ್ತವೆ. ಬೆಳಕು ಹೆಚ್ಚಿದ್ದರೆ ಕೆಲವು ಆಹಾರಗಳು ಅವುಗಳ ಸೊಗಸಾದ ಬಣ್ಣವನ್ನು ಕಳೆದುಕೊಳ್ಳುತ್ತವೆ. ಆಕ್ಸಿಜನ್ ತಾಕಿ ಜೀವಾತುಗಳು ಹಾಳಾಗುತ್ತವೆ.

ಆಹಾರ ಪದಾರ್ಥಗಳು ಕೆಡುವುದು ಅವನ್ನು ಕೂಡಿಡುವ, ದಾಸ್ತಾನು ಮಾಡುವ ಜಾಗದ ವಾತಾವರಣ, ಎಂದರೆ ಅಲ್ಲಿನ ಕಾವು, ತೇವ, ಚೊಕ್ಕತೆ, ರಾಸಾಯನಿಕಗಳು, ಜೀವಿನಿರೋಧಕಗಳು (ಆಂಟಿಬಯೋಟಿಕ್ಸ್), ಅನಿಲಗಳು–ಇವನ್ನು ಅನುಸರಿಸುತ್ತವೆ.

**1. ಕಾವು:** ರಾಸಾಯನಿಕ ಬದಲಾವಣೆಗಳೂ ಜೀವಾಣುಗಳ ಬೆಳೆವಣಿಗೆಯೂ ಕಾವಿನ ಮಟ್ಟ ಏರಿದಂತೆಲ್ಲ(ಒಂದು ಮಿತಿಯವರೆಗೆ) ಹೆಚ್ಚುತ್ತವೆ. ಆದ್ದರಿಂದ ಶೀತಕದಲ್ಲಿ (ರೆಫ್ರಿಜರೇಟರ್) ಇರಿಸಿದ ಪದಾರ್ಥಗಳು ಬೇಗ ಹಾಳಾಗವು. ಬೇಸಗೆ ಕಾಲದಲ್ಲಿ ಆಹಾರಗಳು ಬೇಗ ಕೆಡುತ್ತವೆ. ಬೇಯಿಸಿದ ಪದಾರ್ಥಗಳಾದ ಸಾರು, ಅನ್ನ ಹಳಸುತ್ತವೆ. ಹಾಲು ಹುಳಿ ಬಂದು ಒಡೆಯುತ್ತದೆ. ಆದರೆ, ಆಹಾರವನ್ನು ಚೆನ್ನಾಗಿ ಕುದಿಸಿಟ್ಟರೆ ಬಹುಪಾಲು ಜೀವಾಣುಗಳು ನಾಶವಾಗಿ ಹೀಗೆ ಕೆಡುವುದನ್ನು ತಡೆಯುತ್ತವೆ.

**2. ತೇವ:** ಆಹಾರಗಳನ್ನು ಕೆಡಿಸುವ–ಜೀವಾಣುಗಳ ಬೆಳೆವಣಿಗೆಗೆ ನೀರಲ್ಲಿ ಕರಗಿರುವ ಪೋಷಕ ವಸ್ತುಗಳು ಬೇಕೇ ಬೇಕು. ಅಂದ ಮೇಲೆ ನೀರೂ ಸಾಕಷ್ಟು ಇರಬೇಕು. ಈ ಕಾರಣದಿಂದಲೇ ನೀರಿಲ್ಲದಂತೆ ಒಣಗಿಸಿದ ಪದಾರ್ಥಗಳು ಬೇಗ ಕೆಡುವುದಿಲ್ಲ. ಆದರೆ, ಜೀವಾಣುಗಳ ಬೆಳೆವಣಿಗೆಗೆ ಇಂತಿಷ್ಟೇ ನೀರಿನ ಅಂಶ ಇರಬೇಕೆಂದು ಹೇಳಲುಬಾರದು. ಅದು ಪದಾರ್ಥ, ಅದರ ಆಮ್ಲತೆ, ಅದರಲ್ಲಿ ಉಪ್ಪು, ಸಕ್ಕರೆ ಮುಂತಾದವಂತಿರುತ್ತದೆ. ಧಾನ್ಯಗಳಲ್ಲಿ ಶೇ.15 ಪಾಲಿಗಿಂತ ಕಡಿಮೆ ನೀರಿದ್ದರೆ ಏಕಾಣುಜೀವಿಗಳೇ ಮುಂತಾದುವು ಬೆಳೆಯವು. ಮಸಾಲೆಬಾಡು (ಸಾಸೇಜ್) ಮುಂತಾದ ಮಾಂಸಾಹಾರಗಳಲ್ಲಿ ಉಪ್ಪು ಜೊತೆಗಿದ್ದರೆ ಶೇ.35 ನೀರಿದ್ದರೂ ಕೆಡುವುದಿಲ್ಲ. ಆದರೆ ಇದನ್ನು ಉಪ್ಪು ಹಾಕದೆ ಜೋಪಾನಿಸಬೇಕಾದರೆ ನೀರಿನ ಅಂಶ ಶೇ.20 ಮೀರಿರಬಾರದು. ಗಾಳಿಯಲ್ಲಿನ ತೇವದ ಅಂಶ 60% ಕ್ಕೂ ಹೆಚ್ಚಿದ್ದರೆ, ಕಡಿಮೆ ನೀರಿನ ಅಂಶ ಇರುವ ಆಹಾರ ಪದಾರ್ಥಗಳ ಮೇಲೂ ಬೂಜುಗಳು ಬೆಳೆಯಲು ಮೊದಲಿಡುತ್ತವೆ. ಮಳೆಗಾಲದಲ್ಲಿ ಹಪ್ಪಳ, ಕುಸುಬಲಕ್ಕಿ, ರೊಟ್ಟಿಗಳ ಮೇಲೆ ಬೇಗ ಬೂಜು ಬೆಳೆಯುವುದು ಇದರಿಂದಲೇ. ತುಸು ತೇವವಿರುವ ತಿಂಡಿ ತಿನಿಸುಗಳನ್ನು, ಅದರಲ್ಲೂ ಬಿಸಿಯಲ್ಲೇ ಡಬ್ಬ, ಸೀಸೆಗಳಲ್ಲಿ ಭದ್ರವಾಗಿ ಮುಚ್ಚಿಟ್ಟುಬಿಟ್ಟರೆ (ಉದಾ : ಕೊಬ್ಬರಿಮಿಠಾಯಿ, ರವೆಉಂಡೆ, ಗಜ್ಜರಿಹಲ್ವ), ಒಳಗಿನ ಗಾಳಿಯ ತೇವದ ಅಂಶ ಬಹಳ ಹೆಚ್ಚಾಗಿ, ಬೇಗನೆ ಬೂಜುಗಳು ಬೆಳೆದು ಬಿಡುತ್ತವೆ. ಒಣಗಿಸಿಟ್ಟ ಆಹಾರ ಪದಾರ್ಥಗಳಲ್ಲಿ ನೀರಿನ ಅಂಶ ಶೇ.10–15 ಪಾಲಿನಷ್ಟಿದ್ದರೆ ಜೀವಾಣುಗಳೇನೋ ಬೆಳೆಯವು. ಆದರೆ, ಇಷ್ಟು ತೇವವಿರುವಾಗ ಕಿಣ್ವಗಳೂ ಆಕ್ಸಿಜನ್ ಕೂಡಿಕೆಯೂ ಆಹಾರವನ್ನೂ ಕೆಡಿಸುವುವು. ಆದ್ದರಿಂದ, ಈ ಆಹಾರಗಳಲ್ಲಿನ ತೇವಾಂಶ ಇನ್ನೂ ಕಡಿಮೆಯಿರಬೇಕು.

**1. ಮೊದಲಿನ ಶುಚಿತ್ವ:** ಕೂಡಿಡಬೇಕಿರುವ ಆಹಾರ ಪದಾರ್ಥ ಮೊದಲೇ ಶುಚಿಯಾಗಿರದಿದ್ದರೆ ದಾಸ್ತಾನು ಮಾಡಿದಾಗ ಬೇಗನೇ ಕೆಡುತ್ತದೆ. ಹಣ್ಣು, ತರಕಾರಿಗಳು, ಮೊಟ್ಟೆ, ಮಾಂಸಾಹಾರಗಳನ್ನು ಕೊಳ್ಳುವಾಗ, ಅವು ಹಸಿಯಾಗಿ ಹೊಚ್ಚ ಹೊಸತಾಗಿ ತಾಜಾ ಆಗಿರಬೇಕು. ಕೊಳೆ, ಧೂಳು, ಮಣ್ಣು ಇದ್ದರೆ ಚೆನ್ನಾಗಿ ತೊಳೆದಿಡಬೇಕು.

**2. ರಾಸಾಯನಿಕಗಳು:** ಕೆಲವು ಆಹಾರಗಳನ್ನು ಉಪ್ಪು, ಸಕ್ಕರೆ, ಹುಳಿಗಳ ನೆರವಿಂದ ಜೋಪಾನಿಸುವ ರೂಢಿಯಿದೆ. ಈ ರಾಸಾಯನಿಕಗಳು ಜೀವಾಣುಗಳ ಬೆಳೆವಣಿಗೆಯನ್ನು ತಡೆಗಟ್ಟಿ, ಆಹಾರವನ್ನು ಕಾಪಾಡುತ್ತವೆ. ಉದಾ: ಉಪ್ಪಿನಿಂದ ಉಪ್ಪಿನಕಾಯಿ, ಸಕ್ಕರೆಯಿಂದ ಹಣ್ಣಿನ ಮುರಬ್ಬ (ಹಲ್ವ), ಹುಳಿ ಮತ್ತು ಉಪ್ಪಿನಿಂದ ಮೀನುಗಳು ಜೋಪಾನವಾಗಿರುತ್ತವೆ. ಹುಳಿ (ಆಮ್ಲ) ಇದ್ದ ಕಡೆ ಅನೇಕ ಏಕಾಣುಜೀವಿಗಳು ಬೆಳೆಯಲಾರವು. ಜೀವಾಣುಗಳು ಬದುಕಿರಲು ಮುಖ್ಯವಾಗಿ ಬೇಕಾದ ನೀರನ್ನು ಉಪ್ಪು, ಸಕ್ಕರೆಗಳು ಅವುಗಳ ಮೈಯಿಂದ ತೆಗೆದುಬಿಡುವುದರಿಂದ ಅವು ಬೆಳೆಯಲಾರದಾಗುತ್ತವೆ.

**3. ಜೀವಿರೋಧಕಗಳು:** ಕೆಲವು ಆಹಾರ ಪದಾರ್ಥಗಳಲ್ಲಿ ಮೊದಲೇ ಇರುವ ಚಂಚಲ (ಎಸೆನ್ಷಿಯಲ್) ತೈಲಗಳು, ರಾಸಾಯನಿಕಗಳು ಜೀವಾಣುಗಳ ಬೆಳೆವಣಿಗೆಯನ್ನು ತಡೆವಂತಿರುತ್ತವೆ. ಅಂದರೆ ಇವು ಜೀವಿರೋಧಕಗಳು. ಸಂಬಾರ ದಿನಸಿಗಳ ಚಂಚಲ ತೈಲಗಳು, ಎಲೆಕೋಸು, ಈರುಳ್ಳಿ, ಕೆಂಪು ಮೂಲಂಗಿ ಮುಂತಾದವಲ್ಲಿರುವ ರಾಸಾಯನಿಕಗಳು ಆಹಾರವನ್ನು ಕೊಳೆಸುವ ಕೆಲವು ಜೀವಾಣುಗಳನ್ನು ನಾಶಮಾಡುವಂತಿರುವುವು.

**4. ಅನಿಲಗಳು:** ಅನೇಕ ಜೀವಾಣುಗಳ ಬೆಳೆವಣಿಗೆಗೆ ಗಾಳಿಯಲ್ಲಿರುವ ಆಕ್ಸಿಜನ್ ಬಹು ಮುಖ್ಯವಾಗಿ ಬೇಕು. ಆದ್ದರಿಂದ ಆಹಾರವಿಡುವ ಜಾಗದಲ್ಲಿ ಗಾಳಿ ಇಲ್ಲವಾದರೆ, ನೈಟ್ರೊಜನ್ ಇದ್ದರೆ ಜೀವಾಣುಗಳ ಬೆಳೆವಣಿಗೆಯನ್ನು ತಡೆಯಬಹುದು. ಆಹಾರಗಳನ್ನು

ಮುದ್ರೆಹಾಕಿದ ಡಬ್ಬಗಳಲ್ಲಿ (ಸೀಲ್ಡ್ ಟಿನ್ಸ್) ಹೀಗೆ ಕೂಡಿಡುವುದು ಒಂದು ನಿದರ್ಶನ. ಪಾನೀಯಗಳಲ್ಲಿ ಹಾಲು, ಕ್ರಷ್, ನೀರಾ ಮುಂತಾದವನ್ನು ಕಾರ್ಬನ್ ಡೈ ಆಕ್ಸೈಡ್ ತುಂಬಿ ಕೆಡದಂತಿರಿಸಬಹುದು. ಆಕ್ಸಿಜನ್ ಇಲ್ಲದಂತೆ ಆದಾಗ ನೀರ್ಗಳೆದು ಒಣಗಿಸಿದ ಆಹಾರಗಳೂ ಕರಿದ ಪದಾರ್ಥಗಳೂ ರಾಸಾಯನಿಕ ಬದಲಾವಣೆಗಳಿಂದ ವಾಸನೆ, ರುಚಿಗಳಲ್ಲಿ ಕೆಡುವುದು ನಿಲ್ಲುತ್ತದೆ. ಇವನ್ನು ಸಾರಜನಕ ತುಂಬಿದ ಡಬ್ಬಗಳಲ್ಲಿ ತುಂಬಿಡುವುದು ಇದಕ್ಕಾಗಿಯೇ. ಇಂದಿನ ರೀತಿಯಲ್ಲಿ ತಯಾರಿಸಿದ, ನೀರ್ಗಳೆದು ಒಣಗಿಸಿದ ಹಣ್ಣು, ಮೀನು, ಮಾಂಸ, ತರಕಾರಿ–ಮುಂತಾದವನ್ನೂ ಹುರಿದ ಗೋಡಂಬಿ, ಬಾದಾಮಿ, ವಾಲ್‌ನಟ್ ಮುಂತಾದವನ್ನೂ ನೈಟ್ರೊಜನ್ ತುಂಬಿ ಮುದ್ರೆ ಹಾಕಿದ ಡಬ್ಬಗಳಲ್ಲಿ ಕೂಡಿಡುತ್ತಾರೆ.

**ಆಹಾರ ಸಂಗ್ರಹಣೆ:** ಎಲ್ಲ ಬಗೆಯ ಆಹಾರ ಪದಾರ್ಥಗಳನ್ನೂ ಕೆಡದಂತೆ ಕೂಡಿಡಲು ಒಂದೇ ಬಗೆಯ ಕ್ರಮವನ್ನು ಅನುಸರಿಸಲಾಗದು. ಆಯಾ ಪದಾರ್ಥದ ಗುಣಕ್ಕೆ ತಕ್ಕಂತೆ ವಿಧಾನ ಹುಡುಕಬೇಕು. ಜೀವಾಣುಗಳ ಬೆಳವಣಿಗೆ, ರಾಸಾಯನಿಕ ಬದಲಾವಣೆಗಳನ್ನು ತಡೆಗಟ್ಟುವುದಲ್ಲದೆ, ಕೈಗೆತ್ತಿಕೊಂಡ ವಿಧಾನ ಆಹಾರದ ಸತ್ತ್ವಗಳಿಗೆ ಹಾನಿ ತರದಂತಿರಬೇಕು. ಕಿತ್ತುತರುವ, ಕೊಂಡುತರುವ ಆಹಾರ ಚೊಕ್ಕವೂ ಹಸಿಯದಾಗಿ ಹೊಚ್ಚ ಹೊಸದೂ ಆಗಿರಬೇಕು. ಬಹಳ ಕಳಿತಿದ್ದು ಜೀವಾಣುಗಳಿಂದ ಕೆಡಲು ಆರಂಭಿಸಿರುವುದೂ ಕಿತ್ತು ಬಹಳ ದಿನಗಳಾಗಿ ಒಣಗುತ್ತಿರುವುದೂ ಸಲ್ಲದು. ತರಕಾರಿಗಳು ಬಲಿತಿರುವುದು, ಬಾಡಿರುವುದು, ಕೊಳೆಯಲಿಡುತ್ತಿರುವುದು ಕೂಡದು. ಧೂಳು, ಮಣ್ಣು, ಇದ್ದರೆ ಒಳ್ಳೆಯ ನೀರಿನಲ್ಲಿ ತೊಳೆದು, ಆಮೇಲೆ ಒರೆಸಿಡಬೇಕು. ಇಲ್ಲವಾದರೆ ಬೂಜುಗಳು ಬೆಳೆಯಲು ಅನುಕೂಲ. ಧಾನ್ಯಗಳಲ್ಲಿ ಕೀಟಗಳು ಸೇರಿರಕೂಡದು. ಮುಗ್ಗಲು ವಾಸನೆ ಬಂದಿರಬಾರದು. ಕೂಡಿಸಿಟ್ಟಾಗ ಕೀಟಗಳು ಹೆಚ್ಚಿಕೊಂಡು ಧಾನ್ಯವನ್ನು ತಿಂದು ಜಳ್ಳು ಮಾಡುತ್ತವೆ. ಆಹಾರ ಹಾಳಾಗುತ್ತದೆ. ಮೊದಲೇ ಮುಗ್ಗಲು ವಾಸನೆಯಿದ್ದರೆ, ಬರುಬರುತ್ತ ಅದು ಇನ್ನೂ ಹೆಚ್ಚಿ ದವಸ ಧಾನ್ಯ ತಿನ್ನದಂತಾಗುತ್ತದೆ. ಬೆಣ್ಣೆಯಲ್ಲಿ ನೀರಿನ ಅಂಶ ಸಾಕಷ್ಟು ಕಡಿಮೆಯಿರಬೇಕು. ಹೆಚ್ಚಿದ್ದರೆ (ಶೇ.25) ಬೇಗನೆ ಕೆಡುತ್ತದೆ. ಅಡಿಗೆಯ ಎಣ್ಣೆಗಳು ಒಳ್ಳೆಯ ಎಣ್ಣೆಬೀಜಗಳಿಂದ ಮಾಡಿರಬೇಕು. ಇಲ್ಲವಾದರೆ ಬಿಡಿಯಾದ ಕೊಬ್ಬಿನ ಆಮ್ಲಗಳು (ಫ್ರೀಫ್ಯಾಟಿ ಆ್ಯಸಿಡ್ಸ್) ಹೆಚ್ಚಾಗಿದ್ದು ಕಮಟು ವಾಸನೆ ಬರುವುದು; ಕಾಯಲು ಇಟ್ಟಾಗ ಉಕ್ಕಿ ಬರುವುದು. ಮಾಂಸಾಹಾರಗಳು ತಾಜಾ ಆಗಿರಬೇಕು. ಮೀನುಗಳು ಬಹು ಜಾಗ್ರತೆ ಕೆಡುವುದರಿಂದ ಅವನ್ನು ಹಿಡಿದಮೇಲೆ ಆದಷ್ಟು ಬೇಗ ಚೊಕ್ಕಗೊಳಿಸಿ ಕೂಡಿಡಬೇಕು. ಮೊಟ್ಟೆಗಳು ಹೊಸವಾಗಿರಬೇಕು; ಹೊರಗಡೆ ಕೊಳೆ ಅಂಟಿದ್ದರೆ ತೊಳೆದು ಒರಸಿಡಬೇಕು.

**ಶೀತಕದಲ್ಲಿ ದಾಸ್ತಾನು:** ಆಹಾರಗಳ ಕಾವನ್ನು ತೀರ ತಗ್ಗಿಸುವುದರಿಂದ ಅವನ್ನು ಕೆಡಿಸುವ ಜೀವಾಣುಗಳ ಬೆಳವಣಿಗೆಯನ್ನೂ ರಾಸಾಯನಿಕ ಚಟುವಟಿಕೆಯನ್ನೂ ಕುಂದಿಸಬಹುದು. ಆದರೆ ಶೀತಕದಲ್ಲಿಡುವ ಮೊದಲು ಅವನ್ನು ಅಣಿಮಾಡುವ ಕ್ರಮ, ಒಳಗಿಡುವ ರೀತಿ, ಬೇರೆ ಬೇರೆ ಆಹಾರಗಳಿಗೆ ಬೇರೆಬೇರೆಯಾಗಿರುತ್ತದೆ.

ಹಣ್ಣು, ತರಕಾರಿಗಳನ್ನು ಚೆನ್ನಾಗಿ ತೊಳೆದು, ಒರಸಿ ಬಾಡಿ ಹೋಗದಂತೆ ಪಾಲಿಥೀನ್ ಚೀಲಗಳಲ್ಲಿ ತುಂಬಿ ಶೀತಕದ ಅರೆಯ ಮೇಲಿಡಬೇಕು. ಆದರೆ, ಸ್ಟ್ರಾಬೆರಿ, ರಾಸ್ಪ್‌ಬೆರಿ ಮುಂತಾದವನ್ನು ನೀರು ಸೇರಿಸದೆ ಹಾಗೇ ಹರಡಿಬಿಡಬೇಕು. ನೀರಿದ್ದರೆ ಬೂಜು ಬೆಳೆಯುತ್ತದೆ. ಕೋಳಿ, ಕುರಿ, ಆಡುಗಳ ಮಾಂಸದ ದೊಡ್ಡ ತುಂಡುಗಳನ್ನು ಹೊರಗಡೆ ಚೆನ್ನಾಗಿ ತೇವದ ಬಟ್ಟೆಯಿಂದ ಒರಸಿ, ನೀರು ಸೇರದಂತೆ ಪಾಲಿಥೀನ್ ಹಾಳೆಗಳಲ್ಲಿ ಬಿಗಿಯಾಗಿ ಸುತ್ತಿಡಬೇಕು. ಹೀಗೆ ಮಾಡಿಟ್ಟರೆ, ಇವನ್ನು 5–6 ದಿನಗಳವರೆಗೆ ಜೋಪಾನಿಸಬಹುದು. ಅಡಿಗೆಗಾಗಿ ಮೀನುಗಳನ್ನು ಹಿಡಿದಮೇಲೆ ಆದಷ್ಟು ಬೇಗ (ಕರುಳು ಮುಂತಾದವನ್ನು ತೆಗೆದು) ಚೊಕ್ಕಗೊಳಿಸಿ ಪಾಲಿಥೀನ್ ಹಾಳೆಯಲ್ಲಿ ಸುತ್ತಿಡಬೇಕು. ಒಂದೆರಡು ದಿನಕ್ಕಿಂತ ಹೆಚ್ಚಾಗಿ ಇಡಬಾರದು. ಬೆಣ್ಣೆಯಲ್ಲಿ ಬೇರೆ ತೆರನ ವಾಸನೆಗಳು ಸೇರದಂತೆ ಭದ್ರವಾಗಿ ಮುಚ್ಚಿಡಬಹುದಾದ ಡಬ್ಬಿಯಲ್ಲಿಡಬೇಕು. ಒಂದೆರಡು ವಾರ ಈ ರೀತಿ ಇಡಬಹುದು. ಹಾಲನ್ನು ಸೀಸೆಗಳಲ್ಲಿ ತುಂಬಿ ಮುಚ್ಚಿ ಹಾಗೇ ಇಡಬೇಕು. ಮೊಟ್ಟೆಗಳನ್ನು ಒರೆಸಿ ದಪ್ಪವಾದ ತುದಿಗಳು ಮೇಲೆ ಬರುವಂತೆ ನಿಲ್ಲಿಸಿಡಬೇಕು.

ನೀರ್ಗಲ್ಲಾಗುವಷ್ಟು ತಂಪುಗೊಳಿಸಿದ ಆಹಾರಗಳನ್ನು ಅಷ್ಟೇ ನೀರ್ಗಲ್ಲಾಗಿರುವಂತೆ ಇರಿಸುವ ಶೀತಕಗಳಲ್ಲಿ ತಿಂಗಳುಗಟ್ಟಳೆ ಕಾಪಾಡಬಹುದು.

ಡಬ್ಬ, ಸೀಸೆಗಳಲ್ಲಿ ತುಂಬಿದ ಆಹಾರಗಳು : ಕಾಯಿಸಿ ಕೆಡದಂತಿರಿಸುವ ಈ ಆಹಾರಗಳನ್ನು ಶೀತಕದಲ್ಲಿ ಇಡಬೇಕಾಗಿಲ್ಲ. ಇವನ್ನು ಬೆಳಕು ಹೆಚ್ಚಿಲ್ಲದ, ತಂಪಾದ ಜಾಗದಲ್ಲಿ ಕೂಡಿಡಬೇಕು. ಒಂದು ಸಾರಿ ಮುದ್ರೆಯನ್ನು ಒಡೆದು ತುಸು ಬಳಸಿದ ಡಬ್ಬಿ, ಸೀಸೆಯನ್ನು ಆಮೇಲೆ ಶೀತಕದಲ್ಲೇ ಇಟ್ಟಿರಬೇಕು. ಇಲ್ಲವಾದರೆ, ಗಾಳಿಯಲ್ಲಿ ತೇಲಿ ಬಂದು ಸೇರುವ ಜೀವಾಣುಗಳಿಂದ ಅವು ಕೆಡಲಿಡುತ್ತವೆ. ಬ್ರೆಡ್ಡು, ಬಿಸ್ಕತ್ತು, ಚಪಾತಿ ಮುಂತಾದವನ್ನು ಒಣಗದಂತೆ ಪಾಲಿಥೀನ್, ಇಲ್ಲವೇ ಅಲ್ಯೂಮಿನಿಯಮ್ ರೇಕುಗಳಲ್ಲಿ (ಫಾಯಿಲ್ಸ್) ಸುತ್ತಿ ಶೀತಕದಲ್ಲಿಡಬೇಕು.

ಬೇಯಿಸಿದ ತರಕಾರಿ, ಮೊಟ್ಟೆ, ಹಾಲು, ಮಾಂಸ, ಮೀನು ಹಾಕಿರುವ ಅಡಿಗೆಗಳನ್ನು ಜೋಪಾನಿಸುವಾಗ ತುಂಬ ಎಚ್ಚರದಿಂದಿರಬೇಕು. ಇವು ಬಲು ಬೇಗ ಕೆಡುತ್ತವೆ. ಆಹಾರ ವಿಷವೇರಿಸುವ ಜೀವಾಣುಗಳು ಬೆಳೆದು ಅಪಾಯಕರವಾಗಬಹುದು. ಆದ್ದರಿಂದ ಇಂಥ ಪದಾರ್ಥಗಳನ್ನು ಭದ್ರವಾಗಿ ಮುಚ್ಚಿದ ಪಾತ್ರೆಗಳಲ್ಲಿ ಶೀತಕದಲ್ಲಿ ಇಟ್ಟಿರಬೇಕು. ಒಂದೆರಡು ದಿನಕ್ಕಿಂತ ಹೆಚ್ಚಾಗಿ ಇಟ್ಟ ಪದಾರ್ಥಗಳನ್ನು ಬಳಸಬಾರದು (**ನೋಡಿ–ಆಹಾರದ–ಜೋಪಾಸನೆ; ಆಹಾರಗಳ–ನೀರ್ಗಳೆತ; ಆಹಾರ–ವಿಷವೇರಿಕೆ,–ಏಕಾಣುಜೀವಿಕ**). (ವೈ.ಎಸ್.ಎಲ್.)

**ಆಹಾರದ ಜೋಪಾಸನೆ:** ಬಹು ಕಾಲ ಆಹಾರ ಕೆಡದಂತಿರಿಸುವುದೇ ಜೋಪಾಸನೆ (ಪ್ರಿಸರ್ವೇಷನ್). ಆಹಾರ ಕೆಡಲು ಮೂರು ಮುಖ್ಯ ಕಾರಣಗಳಿವೆ :

1. ಬರಿಯ ಕಣ್ಣಿಗೆ ಕಾಣದ ಜೀವಾಣುಗಳು, ಕಿಣ್ವಗಳು (ಎಂಜೈಮ್ಸ್) ಆಹಾರದಲ್ಲಿ ಬೆಳೆದು ಹೆಚ್ಚುವುದು:

ಏಕಾಣುಜೀವಿಗಳು (ಬ್ಯಾಕ್ಟೀರಿಯ), ಹುದುಗು (ಯೀಸ್ಟ್), ಬೂಜುಗಳು (ಮೋಲ್ಡ್‌ಸ್) ಈ ಬಗೆಯವು; 2. ಗಿಡಮರಗಳ, ಪ್ರಾಣಿಗಳ ಸಂಬಂಧದ ಆಹಾರಗಳಲ್ಲಿದ್ದ ನಿರ್ಜೀವ ಕಿಣ್ವಗಳು ತಮ್ಮ ಚಟುವಟಿಕೆಯನ್ನು ನಡೆಸುತ್ತಲೇ ಇರುವುವು. ಗಿಡಮರ, ಪ್ರಾಣಿ ಬದುಕಿರುವಾಗ ಈ ಕಿಣ್ವಗಳು ಕೆಲಸ ಮಾಡುತ್ತಿರುವ ಹಾಗೇ ಫಸಲನ್ನು ಕೊಯ್ದ ಮೇಲೂ ಮಾಂಸವಾಗಿ ಕೊಯ್ದು ತೆಗೆದ ಮೇಲೂ ಅವುಗಳಲ್ಲಿ ಈ ನಿರ್ಜೀವ ಕಿಣ್ವಗಳು ಇನ್ನೂ ಹಾಗೇ ಉಳಿದಿರುತ್ತವೆ; 3. ಆಹಾರಾಂಶಗಳಲ್ಲಿ ನಿಧಾನವಾಗಿ ಗಾಳಿಯಲ್ಲಿರುವ ಆಕ್ಸಿಜನ್ ಕೂಡುವುದರಿಂದ ಆಹಾರದ ಎಂದಿನ ಬಣ್ಣ, ವಾಸನೆ, ಗುಣಗಳು ಬದಲಾಗುವುವು. ಕೊಬ್ಬು ಎಣ್ಣೆಗಳು ಮುಗ್ಗಿ ಕಮಟು ಹತ್ತುವುವು.

ಆಹಾರ ಜೋಪಾಸನೆಯ ಗುರಿ, ಈ ಮೂರು ಬಗೆಯ ಬದಲಾವಣೆಗಳಲ್ಲಿ ಯಾವುದೂ ಆಗದಂತೆ ತಡೆಗಟ್ಟುವುದು. ಏಕಾಣುಜೀವಿಗಳೂ ಕೆಲವು ಕಿಣ್ವಗಳೂ ಆರೋಗ್ಯಕ್ಕೆ ಹಾನಿಕರ. ಅವುಗಳಿಂದ ವಿಷಗಳು ಹುಟ್ಟುವುವು. ತಿಂದವರಿಗೆ ವಿಷವೇರಿಸುತ್ತವಲ್ಲದೆ, ಇವುಗಳಿಂದ ಆಹಾರ ಕೊಳೆತು, ಗಡುಸಾದ ವಸ್ತುಗಳು ಮೆದುವಾಗಿ ನೀರಂತಾಗುವುವು. ಹುಳಿ, ಕಹಿ ಮುಂತಾದ ಬೇಡದ ರುಚಿಗಳು ಹುಟ್ಟಿ ಕೆಟ್ಟ ವಾಸನೆಗಳು ಬರಬಹುದು.

ಊರುಬಾಡುಬೇನೆಗೆ (ಬಾಟುಲಿಸಂ) ಊರುಬಾಡು ಕದಿರು ಜೀವಿಯ (ಕ್ಲಾಸ್ಟ್ರಿಡಿಯಂ ಬಾಟುಲೈನಂ) ವಿಷವೇ ಕಾರಣ. ಮುಖ್ಯವಾಗಿ ಮನೆಗಳಲ್ಲಿ ಸರಿಯಾಗಿ ಜೋಪಾನಿಸದೆ ಮುದ್ರೆಹಾಕಿದ ಡಬ್ಬಿಗಳಲ್ಲಿ (ಸೀಲ್ಡ್ ಟಿನ್ಸ್) ತುಂಬಿರಿಸಿದ ಆಹಾರಗಳಿಂದ ಹೀಗಾಗುವುದು ಸಾಮಾನ್ಯ. ಆಹಾರವನ್ನು ಚೆನ್ನಾಗಿ ಕುದಿಸಿ, ಬೇಯಿಸಿ ತಿಂದರೆ ವಿಷಕರವಲ್ಲ. ಹೊರಗೆ ಎಲ್ಲೆಲ್ಲೂ ಇರುವ ಗುತ್ತಿಕಾಯ್ಜೀವಿ (ಸ್ಟೆಫೈಲೊ ಕಾಕಸ್) ರೋಗಾಣುಗಳು ಆಹಾರ ವಸ್ತುಗಳಲ್ಲಿ ಸೇರಿಕೊಂಡು ಬೆಳೆದು ವಿಷವನ್ನು ಬಿಡಬಹುದು (**ನೋಡಿ– ಆಹಾರ–ವಿಷವೇರಿಕೆ, ಏಕಾಣುಜೀವಿಕ**).

ಕೆಲವು ಜೀವಾಣುಗಳು ಆಹಾರವನ್ನು ಕೊಳೆಸಿ, ಹುಳಿಯೆಬ್ಬಿಸಿ, ಹಿಟ್ಟು ಸಕ್ಕರೆಗಳಿರುವ ವಸ್ತುಗಳಲ್ಲಿ ಅನಿಲ ಹುಟ್ಟಿಸುತ್ತ ಮದ್ಯಸಾರವನ್ನು (ಆಲ್ಕೊಹಾಲ್) ತಯಾರಿಸುತ್ತವೆ. ಆದರೆ ಈ ಜೀವಾಣುಗಳಿಂದಲೇ ಮೊಸರು, ಚೀಸ್ ಮೊದಲಾದ ಆಹಾರಗಳನ್ನು ತಯಾರಿಸುವ ಹೆಚ್ಚಿನ ಅನುಕೂಲವಿದೆ.

ಪ್ರೋಟೀನು ಇರುವ ಆಹಾರಗಳಲ್ಲಿ, ಈ ಜೀವಾಣುಗಳು ಕಮಟು ಹಿಡಿಸುತ್ತವೆ. ಆಹಾರದಲ್ಲಿ ಇವನ್ನು ಸಾಯಿಸುವುದು ಸುಲಭವಲ್ಲ. ಇವುಗಳ ಬೆಳವಣಿಗೆಯನ್ನು ಮಾತ್ರ ತಗ್ಗಿಸಬಹುದು. ಕೆಲವು ಜಾತಿಯ ಜೀವಾಣುಗಳು ಹೆಚ್ಚು ಕಾವಿನಲ್ಲೇ ಬೆಳೆವುವಾದರೂ ಕೆಲವು ತಂಪಿನಲ್ಲೂ ಬೆಳೆಯುವುವು. ನೀರ್ಗಲ್ಲಿನ ತಂಪಿನಲ್ಲಂತೂ ಯಾವ ಜೀವಾಣುಗಳೂ ಬೆಳೆಯವು. ಇದರಿಂದಲೇ ನೀರ್ಗಲ್ಲಿನ ತಂಪಿನಲ್ಲಿ ಇರಿಸಿದ ಆಹಾರ ಪದಾರ್ಥಗಳು ಕೆಡುವುದು ಅಪರೂಪ. $60^{\circ}$–$100^{\circ}$ ಸೆಂ.ಗ್ರೇ. ಉಷ್ಣತೆಯಲ್ಲಿ ಎಲ್ಲ ಜೀವಾಣುಗಳೂ ಕಿಣ್ವಗಳೂ ನಾಶಹೊಂದುವುವು. ಆದ್ದರಿಂದ ಆಹಾರವನ್ನು ಕಾಯಿಸಿ, ಕುದಿಸಿ ಬೇಯಿಸುವುದು ಒಳ್ಳೆಯದು. ನೀರಿಲ್ಲದೆ ಯಾವ ಕ್ರಿಮಿಗಳೂ ಬದುಕಲಾರವು. ಇದಕ್ಕಾಗೇ ಆಹಾರದಲ್ಲಿನ ನೀರನ್ನು ತೆಗೆದರೆ ಹೆಚ್ಚು ಕಾಲ ಜೋಪಾನಿಸಬಹುದು. ಕಾವೇರಿಸಿ ಒಣಗಿಸುವುದರಿಂದ ನೀರು ಆವಿಯಾಗಿ ಹೋಗಿ ತೀರ ಕಮ್ಮಿಯಾಗಿ, ಆಹಾರದಲ್ಲಿನ ಜೀವಾಣು ಸೊರಗಿ ಬೆಳೆಯಲಾರದೆ ಆಹಾರ ಚೆನ್ನಾಗಿರುವುದು (**ನೋಡಿ– ಆಹಾರಗಳ ನೀರ್ಗಳೆತ**).

ನಿರ್ಜೀವ ಕಿಣ್ವಗಳು ಎಲ್ಲ ಗಿಡಮರಗಳಲ್ಲೂ ಪ್ರಾಣಿಗಳಲ್ಲೂ ಇದ್ದೇ ಇವೆ. ಜೀವಿಗಳು ಬೆಳೆಯಲು ಇವು ಬೇಕೇಬೇಕು. ಇವುಗಳ ಚಟುವಟಿಕೆಗಳು ಬಗೆಬಗೆಯವು. ಕೊಯ್ಲಾಗಿ ಫಸಲು ಬಂದ ಮೇಲೂ ಕಡ್ಡಿ ಕಾಳುಗಳಲ್ಲಿನ ಈ ಕಿಣ್ವಗಳು ಮೊದಲಿನ ಹಾಗೆ ಕೆಲಸ ನಡೆಸುತ್ತಲೇ ಇರುತ್ತವೆ. ಹಣ್ಣು ತರಕಾರಿಗಳಲ್ಲಿರುವ ಸಕ್ಕರೆಯನ್ನು ಇವು ಹಿಟ್ಟಾಗಿ ಬದಲಿಸುವುವು. ಕಿಣ್ವಗಳ ಪ್ರಭಾವದಿಂದ ಆಗ ತಾನೇ ಕಿತ್ತ ಎಳೆಯ ಹುರುಳಿಕಾಯಿ ಇನ್ನೂ ಬಲಿತು ಬೇಗನೆ ನಾರಾಗುತ್ತದೆ; ಒಂದೆರಡು ದಿನಗಳಿಟ್ಟ ತರಕಾರಿಗಳು ಕಮಟು ಹತ್ತುತ್ತವೆ; ಹೀಗೇ ಮಾಂಸಗಳು, ಮೆದುವಾಗಿ ನೀರಾಗಿ ರುಚಿಗೆಡುತ್ತವೆ. ಆಹಾರದಲ್ಲಿನ ರಾಸಾಯನಿಕ ಕಿಣ್ವಗಳ ಚಟುವಟಿಕೆ, ಆಹಾರವನ್ನು ಬಲು ತಂಪಿನಲ್ಲಿ ಇರಿಸಿದರೂ ನೀರಿನ ಅಂಶ ತೀರ ಕಡಿಮೆಮಾಡಿದರೂ ನಿಲ್ಲದು. ಈ ಕಿಣ್ವಗಳು ಹೆಚ್ಚಿನ ಕಾವಿನಲ್ಲಿ ಹಾಳಾಗುವುದರಿಂದ ಗಿಡ, ಸೊಪ್ಪು, ಸದೆ, ತರಕಾರಿಗಳನ್ನು ತೀರ ಸುಡುಗಾವಿನ ನೀರಲ್ಲಿ ಅದ್ದಿ ಆಮೇಲೆ ಒಣಗಿಸಿಟ್ಟುಕೊಳ್ಳಬಹುದು, ಶೀತಕದಲ್ಲಿ ತೆಗೆದಿರಿಸಲೂಬಹುದು.

ಗಾಳಿಯಲ್ಲಿಟ್ಟ ಆಹಾರಕ್ಕೆ ಆಕ್ಸಿಜನ್ ತಾಕುತ್ತಲೇ ಇರುವುದು ; ಇದರಿಂದ ಆಹಾರ ಮಾರ್ಪಾಟಾಗಿ ವಾಸನೆ, ಬಣ್ಣ ಬದಲಿಸುತ್ತವೆ. ಎಣ್ಣೆಗಳನ್ನು ಹೀಗೆ ಎತ್ತಿರಿಸಿದ್ದರೆ ನಾತ ಬಡಿಯುತ್ತದೆ. ಸೂರ್ಯನ ಬೆಳಕು, ಶಾಖ ಇವೆರಡೂ ಜೊತೆಯಲ್ಲಿದ್ದರೆ ಆಕ್ಸಿಜನ್

ಕೂಡಿಕೆ ಇನ್ನೂ ಜೋರು. ಇದರಿಂದ ಆಹಾರ ಇನ್ನೂ ಬೇಗ ಕೆಡುವುದು. ಇದಕ್ಕಾಗೇ ಆಹಾರ ಕೆಡದಂತೆ ಜೋಪಾನಿಸಲು, ಗಾಳಿಯಿಲ್ಲದಂತೆ ಮಾಡಲು, ಆಹಾರವನ್ನು ಡಬ್ಬಿ ಸೀಸೆಗಳಲ್ಲಿಟ್ಟು ಮುಚ್ಚಿ, ಗಾಳಿಯನ್ನು ಹೊರ ಸೆಳೆದು ಹಾಕುತಾರೆ; ಇಲ್ಲವೇ ಕಾರ್ಬನ್ ಡೈ ಆಕ್ಸೈಡ್ ಮುಂತಾದ, ಆಹಾರದೊಡನೆ ಒಂದುಗೂಡದ ಅನಿಲಗಳನ್ನು ಒಳತುಂಬಿ ಮುದ್ರೆ ಹಾಕುತ್ತಾರೆ. ಹೊಸ ಶೋಧನೆಗಳು ಈ ರೀತಿಯ ಆಹಾರ ಜೋಪಾಸನೆಗೆ ಉತ್ತಮವಾದ ಪಾತ್ರೆ, ಡಬ್ಬಿ, ವಸ್ತುಗಳನ್ನು ಒದಗಿಸುತ್ತವೆ.

**ವಿಧಾನಗಳು:** ಡಬ್ಬಿ ಬಳಕೆ: ಹೊರಗಿನ ಗಾಳಿ, ಜೀವಾಣುಗಳು ಮುಂತಾದುವು ಸೇರಿದರೆ ಆಹಾರ ಕೆಡುವುದು. ಇದನ್ನು ತಡೆಗಟ್ಟಲು ಆಹಾರವನ್ನು ಡಬ್ಬಿಗಳಲ್ಲಿ, ಸೀಸೆಗಳಲ್ಲಿ ರಾಸಾಯನಿಕವಾಗಿ ಸಂಸ್ಕರಿಸಿ ತುಂಬಿಸಿ ಮೊಹರು ಹಾಕುತ್ತಾರೆ. ಇದೇ ಡಬ್ಬಿ ತುಂಬಿಕೆ (ಕ್ಯಾನಿಂಗ್). ಫ್ರಾನ್ಸಿನ ರೊಟ್ಟಿಗಾರ ನಿಕೋಲಾಸ್ ಆಪರ್ಟ್ ಈ ವಿಧಾನವನ್ನು ಕಂಡು ಹಿಡಿದ (1809) ಪ್ಯಾಶ್ಚರ್‌ನಿಗೂ ಮೊದಲ ದಿನಗಳಿವು. ಡಬ್ಬಿತುಂಬಿಕೆ ಈಗ ಬಲು ದೊಡ್ಡ ಕೈಗಾರಿಕೆ. ಜೀವಾಣುಗಳನ್ನು, ಮುಖ್ಯವಾಗಿ ಊರುಬಾಡು ಕದಿರುಜೀವಿಗಳನ್ನು ಕೊಲ್ಲಲು ಸಾಕಷ್ಟು ಹೊತ್ತು ಆಹಾರವನ್ನು ಕುದಿಸುವುದು ಬೇಯಿಸುವುದು ಈ ವಿಧಾನದ ಮುಖ್ಯ ಗುರಿ. ಹುಳಿ ಹೆಚ್ಚಾಗಿರುವ ಪದಾರ್ಥಗಳನ್ನು ತುಸು ಹೊತ್ತು ಕಾಯಿಸಿದರೂ ಇವು ಬೇಗನೆ ಸಾಯುವುವು. ಹುಳಿಯಾಗಿರುವ ತರಕಾರಿ, ಹಣ್ಣುಗಳನ್ನು ಕುದಿವ ನೀರಲ್ಲಿ ಸ್ವಲ್ಪ ಹೊತ್ತು ಇಟ್ಟಿದ್ದರೇ ಸಾಕು. ಹುಳಿಯಿಲ್ಲದಿರುವ, ಸಿಹಿಯಾದ ಸೊಪ್ಪು ಗಿಡಗಳು, ಮಾಂಸಗಳಲ್ಲಿರುವ ಜೀವಾಣುಗಳನ್ನು ಕೊಲ್ಲಲು ಹೆಚ್ಚು ಹೊತ್ತು ಬೇಯಿಸಬೇಕು. ಒತ್ತಡ ಅಡುಪಾತ್ರೆಯಲ್ಲಿ (ಪ್ರೆಷರ್ ಕುಕರ್) ಹೆಚ್ಚಿನ ಒತ್ತಡದಲ್ಲಿ ಕಾಯಿಸಿದರೆ, ಕಾವೂ ಬಹಳ ಹೆಚ್ಚಿನ ಮಟ್ಟಕ್ಕೇರುವುದು. ಆಹಾರದೊಳಗೆಲ್ಲ ಕಾವು ಒಳಹೋಗುವಷ್ಟು ಹೊತ್ತು ಕಾಯಿಸಬೇಕು. ಸಿಪ್ಪೆಯೊಂದಿಗಿರುವ ಗಟ್ಟಿಯಾದ, ದಪ್ಪನಾದ ಆಹಾರ ಪದಾರ್ಥವನ್ನು ಬೇಯಿಸಲು ಹೆಚ್ಚು ಹೊತ್ತು ಹಿಡಿಯುತ್ತದೆ. ಬಿಸಿ ಗಾಳಿಯಿಂದ ಕಾಯಿಸುವುದು ನಿಧಾನ. ನೀರಿನ ಆವಿಯಲ್ಲಿ ಬೇಗನೆ ಕಾಯಿಸಬಹುದು. ಮುಚ್ಚಳವಿಲ್ಲದ ಪಾತ್ರೆಗಳಲ್ಲಿ ಬೇಯಿಸುವುದು ಇನ್ನೂ ನಿಧಾನ. ಒಳ್ಳೆಯ ಉಸ್ತುವಾರಿಯುಳ್ಳ ಕಾರ್ಖಾನೆಗಳಲ್ಲಿ ಡಬ್ಬಿ ತುಂಬಿದ ಆಹಾರವನ್ನು ಸಾಕಾದಷ್ಟು ಹೊತ್ತು ಬೇಕಾಗಿರುವ ಕಾವಿನಲ್ಲಿ ಕುದಿಸಿ ಮುದ್ರೆ ಹಾಕಿ ತಯಾರಿಸುವರು. ಮನೆಗಳಲ್ಲಿ ಆಗುವ ಆಹಾರ ತಯಾರಿಕೆಯಲ್ಲಿ ಆಹಾರವನ್ನು ಸಾಕಾದಷ್ಟು ಕುದಿಸದಿರಬಹುದು. ಜನರ ತಿಳಿವಳಿಕೆಗಾಗಿ ಈ ತರಹದ ವಿಚಾರ ವಿವರಗಳನ್ನು ಮುಂದುವರಿದ ದೇಶಗಳ ಸಂಶೋಧನ ಕೇಂದ್ರಗಳು ಅನೇಕ ಹಸ್ತಪತ್ರಿಕೆಗಳ ಮೂಲಕ ಹಂಚುತ್ತಾರೆ. ಡಬ್ಬಿಗಳಲ್ಲಿಟ್ಟು ಕಾಯಿಸಿದ ಆಹಾರದ ರುಚಿ, ವಾಸನೆಗಳು ಬದಲಾಗದಂತೆ ಡಬ್ಬಿತುಂಬಿಕೆಯ ವಿಧಾನದಲ್ಲಿ ಆಹಾರ ತುಂಬಿದ ಬಿಸಿ ಡಬ್ಬಿಗಳನ್ನು ನೀರ್ಗಲ್ಲಿನಲ್ಲಿಟ್ಟು ತಣ್ಣಗೆ ಮಾಡುತ್ತಾರೆ. ಇಷ್ಟಾದರೂ ಕೆಲವು ವೇಳೆ ಡಬ್ಬಿತುಂಬಿದ ಆಹಾರದ ರುಚಿ ಸಪ್ಪೆಯಾಗಬಹುದು. ಆಹಾರದಲ್ಲಿರುವ ಕೆಲವು ಜೀವಾತುಗಳು, ಲವಣಗಳು ನೀರಿನಲ್ಲಿ ಕರಗುವುವು. ಇವು ಆಹಾರದೊಡನೆ ಹೊರಗಿರುವ ರಸದಲ್ಲಿ ಬೆರೆತು ಹೋಗುತ್ತವೆ. ಇದಕ್ಕೋಸ್ಕರವೇ ಡಬ್ಬಿಯಲ್ಲಿರುವ ಗಟ್ಟಿ ಆಹಾರದ ಜೊತೆಗೆ ಅದರ ರಸವನ್ನೂ ಕೂಡಿಸಲೇಬೇಕು. ಡಬ್ಬಿ ತುಂಬುವ ವಿಧಾನದಲ್ಲಿ ಬಿ, ಸಿ ಜೀವಸತ್ವ ಸುಮಾರು ಅರೆಪಾಲಾದರೂ ಹಾಳಾಗುವುವು. ಆಹಾರದಲ್ಲಿನ ಬೇರೆ ಪುಷ್ಟಿಕರ ಪದಾರ್ಥಗಳು ಯಾವುವೂ ಹಾಳಾಗವು.

**ನೀರ್ಗಲ್ಲಾಗಿಸಿಕೆ:** ನೀರ್ಗಲ್ಲಾಗಿಸುವ (ಫ್ರೀಸಿಂಗ್) ತಂಪಿನಲ್ಲಿ ಇರಿಸಿದ ಆಹಾರ ಬಲುಮಟ್ಟಿಗೆ ಅದೇ ರುಚಿ, ವಾಸನೆ, ಪುಷ್ಟಿ, ರೂಪಗಳಿಂದಿರುವುದು. ಮಂಜಿನಗಡ್ಡೆ ಹೇರಳವಾಗಿ ದೊರೆವ ಉತ್ತರ ನಾಡುಗಳ ಚಳಿ ಪ್ರದೇಶಗಳಲ್ಲಿ ಪುರಾತನ ಕಾಲದಿಂದಲೂ ಜನರಿಗೆ ಈ ವಿಧಾನ ಗೊತ್ತು. 50 ವರ್ಷಗಳಿಂದ ಈಚೆಗೆ, ಆಹಾರವನ್ನು ನೀರ್ಗಲ್ಲಾಗುವಷ್ಟು ತಂಪು ಮಾಡಿ ಜೋಪಾನಿಸುವ ವಿಧಾನ ವಿಶೇಷವಾಗಿ ಬಳಕೆಗೆ ಬಂದಿದೆ. ಬಲು ಕೊರೆಯುವಷ್ಟು ತಂಪಾದ (–10° ಸೆಂ.ಗ್ರೇ.) ಆವರಣದಲ್ಲಿ ಜೀವಾಣುಗಳೂ ಕಿಣ್ವಗಳೂ ಬೆಳೆಯಲಾರವು. ಇದರಿಂದ ಆಹಾರ ಕೆಡದೆ ಜೋಪಾನವಾಗಿರುವುದು. ಆದರೂ ಆಹಾರದಲ್ಲಿ ಆಮ್ಲಜನಕದ ಕೂಡಿಕೆಯೂ ರಾಸಾಯನಿಕ ಕಿಣ್ವಗಳ ಚಟುವಟಿಕೆಯೂ ಅಷ್ಟಿಷ್ಟು ನಡೆಯುತ್ತಲೇ ಇರುತ್ತವೆ. ಇದರಿಂದ ಆಹಾರದ ಊತಕಗಳ (ಟಿಷ್ಯೂಸ್) ಬಿರಿದು ಪ್ರೋಟೀನು ವಸ್ತುಗಳು ಮಾರ್ಪಡುವುವು.

**ಕ್ಷಿಪ್ರ ನೀರ್ಗಲ್ಲಾಗಿಸಿಕೆ:** ಆಹಾರವನ್ನು ನೀರ್ಗಲ್ಲು ತಂಪಿನ ಉಪ್ಪಿನ ನೀರಿನಲ್ಲಿ ಅದ್ದಿಡುವುದು. ನೀರ್ಗಲ್ಲು ತಂಪಿನಲ್ಲಿರುವ ಲೋಹದ ತಟ್ಟೆಗಳ ನಡುವೆ ಇಡುವುದು. ನೀರ್ಗಲ್ಲಷ್ಟು ತಂಪಾದ ಗಾಳಿಯಿಂದ ತಂಪು ಮಾಡುವುದೇ ಮುಂತಾದ ವಿಧಾನಗಳಿಂದ, ಆಹಾರದಲ್ಲಿರುವ ನೀರು ಬಲುಕಿರಿದಾದ ಮಂಜಿನ ಹರಳುಗಳಾಗಿ ಮಾರ್ಪಡುವುದು; ನೋಡಲು ಹೇಗಿದ್ದುದು ಹಾಗೇ ಕಾಣುತ್ತದೆ. ಸೇವಿಸುವಾಗ ಮತ್ತೆ ಅದನ್ನು ಬಿಸಿ ಮಾಡಿ, ಬೇಕಾದಷ್ಟು ನೀರನ್ನು ಸೇರಿಸಿದರೆ ತೀರಿತು. ಆದರೂ ಹೀಗೆ ತಂಪುಗೊಳಿಸಿದ್ದ ಮೀನು ಮುಂತಾದ ಕೆಲವು ಆಹಾರ ವಸ್ತುಗಳು ಮೊದಲಿನಂತೆ ಆಗವು. ಸೊಪ್ಪು, ಬಟಾಣಿ ಮುಂತಾದ ಕೆಲವು ಆಹಾರ ತರಕಾರಿಗಳನ್ನು ಕುದಿವ ನೀರಲ್ಲಿ ಅದ್ದಿ ಆಮೇಲೆ ನೀರ್ಗಲ್ಲ ತಂಪಿಗೆ ಇಳಿಸುವರು. ಸೇಬು, ಪೀಚ್ ಹಣ್ಣುಗಳು ಗಾಳಿ ಸೋಕಿ ಮೇಲ್ಗಡೆ ಕಪ್ಪಾಗುವುವು. ಇವನ್ನು ಸಕ್ಕರೆ ಪಾಕದಲ್ಲಿ ಸಿ ಜೀವಸತ್ವದನ್ನು ಸೇರಿಸಿ ಜೋಪಾನಿಸಬಹುದು.

**ಒಣಗಿಸಿ ಜೋಪಾನಿಸುವುದು:** ಆಹಾರದಲ್ಲಿ ಇದ್ದೇ ಇರುವ ನೀರಿನ ಬಲುಪಾಲನ್ನು ತೆಗೆದು, ಅಂದರೆ ಆಹಾರವನ್ನು ಒಣಗಿಸಿ ಇಟ್ಟುಕೊಳ್ಳುವುದು ಹಿಂದಿನಿಂದ ಬಂದ ಪದ್ಧತಿ. ಹಣ್ಣುಗಳು, ಉಪ್ಪು ಹಾಕಿ ಊರಿಟ್ಟ ಮಾಂಸ, ಮೀನು ಈ ತರಹದ ಆಹಾರಗಳಲ್ಲಿ ಸಾಕಷ್ಟು ನೀರು ಇಲ್ಲದಿದ್ದರೆ ಜೀವಾಣುಗಳು ಬೆಳೆಯಲಾರವು. ಆದರೆ ಎಲ್ಲೋ ತುಸು ನೀರಿದ್ದರೂ ಸಾಕು, ರಾಸಾಯನಿಕ ಕಿಣ್ವಗಳು ತಮ್ಮ ಕೆಲಸ ಮುಂದುವರಿಸಬಲ್ಲವು. ಆದ್ದರಿಂದ, ಮೊದಲು ಆಹಾರವನ್ನು ಕಾದ ನೀರಿನಲ್ಲಿ ಅದ್ದಿ ಈ ಕಿಣ್ವಗಳನ್ನು ನಾಶಮಾಡಬೇಕು. ಆಹಾರವನ್ನು ಒಣಗಿಸುವುದರಿಂದ ಆಕ್ಸಿಜನ್ ಕೂಡಿಕೆಯನ್ನು ಮಾತ್ರ ತಡೆಯಲಾಗುವುದಿಲ್ಲ. ಒಣಗಿಸಿದ ಆಹಾರ ಪದಾರ್ಥಗಳನ್ನು ಕೂಡಲೆ ತಿಂದರೆ ರುಚಿ. ಕೆಲವು ಕಾಲ ಇಟ್ಟಮೇಲೆ ಗಾಳಿಯಲ್ಲಿನ ನೀರಿನ ಆವಿಯನ್ನು ಇವು ಮತ್ತೆ ಹೀರಿ ತೇವಗೊಂಡು ಕೆಡುತ್ತವೆ. ಬಣ್ಣ, ರುಚಿ, ವಾಸನೆಗಳೂ ಬದಲಾಗುತ್ತವೆ. ಒಣಗಿಸಿಟ್ಟ ಆಹಾರವನ್ನು ಮತ್ತೆ ನೀರು ಸೇರಿಸಿಯೇ ಬಳಸಬೇಕು. ಮೊದಲಿನಷ್ಟು ನೀರನ್ನು ಅದು ಹೀರದಿದ್ದರೆ, ಅದರ ಗುಣವೂ ಬದಲಾಗುತ್ತದೆ. ಸಾಮಾನ್ಯವಾಗಿ ಒಣಗಿಸಿದ ದ್ರಾಕ್ಷಿ, ಖರ್ಜೂರ, ಸೇಬು, ಪೀಚ್ ಮುಂತಾದ ಹಣ್ಣುಗಳ ಜೋಪಾಸನೆಗಾಗಿ ಈ ವಿಧಾನ ವಿಶೇಷ ಬಳಕೆಯಲ್ಲಿದೆ. ಸಾಧಾರಣವಾಗಿ, ಈ ಹಣ್ಣುಗಳನ್ನು ಬಿಸಿಲಿನಲ್ಲಿಟ್ಟು ಒಣಗಿಸುವ ಮುಂಚೆ, ಅವುಗಳಿಗೆ ಗಂಧಕದ ಅನಿಲದ ಹೊಗೆಯನ್ನು ಹಾಕುವುದರಿಂದ, ಹಣ್ಣುಗಳು ಒಣಗಿದಾಗ ಕಪ್ಪುಬಣ್ಣಕ್ಕೆ ತಿರುಗುವುದಿಲ್ಲ. ಅಲ್ಲದೆ ಈ ಹೊಗೆಯಿಂದ ಎ, ಸಿ ಜೀವಸತ್ವಗಳೂ ಕೆಡದೆ ಉಳಿಯುತ್ತವೆ. ಬಿ ಜೀವಸತ್ವ ಮಾತ್ರ ನಾಶವಾಗುತ್ತದೆ. ಆಹಾರ ಪದಾರ್ಥದಲ್ಲಿ ಉಳಿಯಬಹುದಾದ ತುಸು ಗಂಧಕಕೂಡ ಅಡಿಗೆಯಾದಾಗ, ಬಿಸಿಮಾಡಿದಾಗ ಕಳೆಯುತ್ತದೆ (**ನೋಡಿ ಆಹಾರದ ನೀರ್ಗಳೆತ**).

ಬೆಣ್ಣೆ ತೆಗೆದ ಹಸಿ ಹಾಲನ್ನು ನೀರ್ಗಳೆದು (ಡೀಹೈಡ್ರೇಟ್) ಒಣಗಿಸಿ ಹಾಲಿನಪುಡಿ ತಯಾರಿಸಲಾಗುತ್ತಿದೆ. ಈಚೆಗೆ ಇದು ವಿಶೇಷ ಬಳಕೆಯಲ್ಲಿದೆ. ಇಂದಿನ ಹೊಸ ರೀತಿಯಲ್ಲಿ ತಯಾರಿಸಿದ ಹಾಲಿನ ಪುಡಿ ನೀರಿನಲ್ಲಿ ಸುಲಭವಾಗಿ ಕರಗಿ, ಎಂದಿನ ಕರೆದ ಹಾಲಿನಂತಿರುವ ಆಹಾರವನ್ನೇ ಒದಗಿಸುವುದು. ಜಾಮೂನು ಮುಂತಾದ ಅನೇಕ ಆಹಾರ ಪದಾರ್ಥಗಳನ್ನು ಮಾಡಲೂ ಹಾಲಿನ ಪುಡಿಯನ್ನು ಉಪಯೋಗಿಸಬಹುದು. ಮೊಟ್ಟೆಯ ಬೇರೆ ಬೇರೆ ಅಂಶಗಳನ್ನು ಬೇರ್ಪಡಿಸಿ ಹೀಗೆ ನೀರ್ಗಳೆದು ಒಣಗಿಸಬಹುದು. ಹೊಸದಾಗಿರುವಾಗ ಮೊಟ್ಟೆಗಳು ಬಲು ರುಚಿಕರವಾದರೂ ಹೆಚ್ಚು ದಿನಗಳು ಇಟ್ಟರೆ ಮೊಟ್ಟೆಗಳು ನೀರಿನಲ್ಲಿ ಸುಲಭವಾಗಿ ಕರಗುವುದಿಲ್ಲ; ಬಣ್ಣವೂ ಬದಲಾಗುವುದು. ಕಾರ್ಬನ್ ಡೈ ಆಕ್ಸೈಡ್, ನೈಟ್ರೋಜನ್ ಅನಿಲ ತುಂಬಿದ ಪಾತ್ರೆಗಳಲ್ಲಿ ಇವನ್ನು ಜೋಪಾನಿಸಬಹುದು. ಅಲ್ಲದೆ ನೀರ್ಗಲ್ಲಿನ ತಂಪಿನಲ್ಲಿಟ್ಟಿದ್ದರೆ ಹೆಚ್ಚು ಕಾಲ ಕೆಡದಂತೆ ಇಡಬಹುದು.

**ಉಪ್ಪು ನೀರಿನಲ್ಲಿ ಜೋಪಾಸನೆ:** ಉಪ್ಪು, ಹುಳಿಗಳಿಂದ ಆಹಾರವನ್ನು ಚೆನ್ನಾಗಿ ಜೋಪಾನಿಸಬಹುದು. ಪೂರ್ವಕಾಲದಿಂದಲೂ ಉಪ್ಪಿನ ಕಾಯಿ, ಊರುಗಾಯಿಗಳನ್ನು ಹಾಕಿಡುತ್ತಿರುವ ವಿಧಾನವಿದು. ಸೌತೇಕಾಯಿ, ಕೋಸುಗಳ ತರಹದ ತರಕಾರಿಗಳನ್ನು ಉಪ್ಪು ನೀರಿನಲ್ಲಿ ಇಡಬಹುದು; ಇಲ್ಲವೇ ಉಪ್ಪನ್ನೇ ಇವುಗಳೊಡನೆ ಬೆರೆಸಬಹುದು. ಗಿಡಗಳಲ್ಲಿರುವ ಕೆಲವು ಏಕಾಣುಜೀವಿಗಳು ಅವುಗಳಲ್ಲಿರುವ ಸಕ್ಕರೆಯನ್ನು ಹುಳಿ ಹಿಡಿಸಿ ಹಾಲಿನಾಮ್ಲವಾಗಿ (ಲ್ಯಾಕ್ಟಿಕ್ ಆ್ಯಸಿಡ್) ಬದಲಿಸುತ್ತವೆ. ಉಪ್ಪು ಇರುವುದರಿಂದ ಇತರ ಜೀವಾಣುಗಳು ಬೆಳೆಯದೆ, ಇನ್ನಷ್ಟು ಹುಳಿಯಾಗಿ, ಮೊದಲಿನ ಜೀವಾಣುಗಳ ಕೆಲಸ ನಿಲ್ಲುವುದು. ಈ ರೀತಿ ಜರ್ಮನಿಯಲ್ಲಿ ಹುಳಿತ ಕೋಸುಮದ್ಯವನ್ನು (ಸಾವರ್ ಕ್ರಾಟ್) ತಯಾರಿಸಿ ಜೋಪಾನಿಸಿಡುತ್ತಾರೆ. ಬಿಸಿ ನೀರಿನಲ್ಲಿ ಅದ್ದಿಟ್ಟು ಅದು ಹೆಚ್ಚು ದಿನವಿರುವಂತೆ ಮಾಡುತ್ತಾರೆ. ಪ್ರೋಟೀನಿನ ಆಹಾರ ಪದಾರ್ಥಗಳನ್ನು ಹೀಗೆ ಜೋಪಾನಿಸುವುದು ಕಷ್ಟ. ಆಹಾರವನ್ನು ಕೊಳೆವಂತೆ ಮಾಡುವ ಏಕಾಣುಜೀವಿಗಳು ಅವುಗಳಲ್ಲೇ ಇರುತ್ತವೆ. ಬರೀ ಉಪ್ಪು ಹಾಕಿಟ್ಟೂ ಅವನ್ನು ಕೆಡದಂತಿರಿಸಬಹುದು.

**ರಾಸಾಯನಿಕ ಜೋಪಾಸನೆ:** ಕೆಲವು ರಾಸಾಯನಿಕ ವಸ್ತುಗಳು ಏಕಾಣುಜೀವಿಗಳನ್ನು ನಾಶಪಡಿಸುತ್ತವೆ; ಇಲ್ಲವೆ ಅವು ಬೆಳೆಯದಂತೆ ತಡೆಯುತ್ತವೆ. ಉಪ್ಪು, ಮೆಣಸು, ಸಾಸಿವೆ, ಜೀರಿಗೆ ಮುಂತಾದ ಸಾಂಬಾರ ಪದಾರ್ಥಗಳು ಉದಾಹರಣೆಗಳು. ಬೇಯಿಸುವ ಮಾಂಸಕ್ಕೆ ಪೆಟ್ಲುಪ್ಪನ್ನು ಬೆರೆಸುವರು. ಕೇವಲ ಸಾಮಾನ್ಯ ಅನುಭವದಿಂದ ಜನರು ಈ ಸಾಮಗ್ರಿಗಳನ್ನು ಬಳಸುತ್ತಿದ್ದಾರೆ. ಕೆಲವು ರಾಸಾಯನಿಕಗಳು ಆಹಾರವನ್ನು ಜೋಪಾನಿಸುವುದಲ್ಲದೆ, ಪುಷ್ಟಿಕರವಾಗೂ ಇರುವುವು. ಉದಾಹರಣೆಗೆ, ಸಿ ಜೀವಸತ್ವ ಹಣ್ಣುಗಳನ್ನೂ ಇ ಜೀವಸತ್ವ ಎಣ್ಣೆಗಳನ್ನೂ ಕೆಡದಂತೆ ಇಡುತ್ತವೆ. ಕೆಲವು ಪದಾರ್ಥಗಳು ಬೇಕಾದ ರುಚಿಯನ್ನೂ ಬಣ್ಣವನ್ನೂ ಆಹಾರಕ್ಕೆ ಒದಗಿಸುವುವು. ಆಹಾರಕ್ಕೆ ಸೇರಿಸುವ ಈ ರಾಸಾಯನಿಕಗಳು ಜನರಿಗೆ ಕೆಡುಕು ಮಾಡದಂತಿರಬೇಕು. ಇಲಿ, ನಾಯಿ, ಬೆಕ್ಕು ಮುಂತಾದ ಪ್ರಾಣಿಗಳ ಆಹಾರಕ್ಕೆ ಅವನ್ನು ಸೇರಿಸಿ, ಪ್ರಯೋಗಗಳನ್ನು ನಡೆಸಿ, ಪರೀಕ್ಷಿಸಿ ಅನಂತರ ಮನುಷ್ಯನ ಆಹಾರಕ್ಕೆ ತಕ್ಕದ್ದೆಂದು ತೀರ್ಮಾನಿಸಲಾಗುವುದು. ಈ ತರಹದ ಪರೀಕ್ಷೆಗಳನ್ನು ಬಹು ಕಾಲ ನಡೆಸಬೇಕು. ಈ ಬಗೆಯ ರಾಸಾಯನಿಕಗಳಲ್ಲಿ ಸೋಡಿಯಂ ಬೆಂಜೋಯೇಟ್, ಪ್ರೊಪಿಯೋನಿಕ್ ಆಮ್ಲ, ಪೊಟ್ಯಾಸಿಯಂ ಮೆಟಬೈಸಲ್ಫೈಟ್ ಇತ್ಯಾದಿ ಬಳಕೆಯಲ್ಲಿವೆ.

ಎಥಿಲೀನ್ ಆಕ್ಸೈಡ್ ಅನಿಲವನ್ನು ನೀರ್ಗಲ್ಲಿನಂತೆ ಮಾಡಿಟ್ಟು ಆಹಾರ ಪದಾರ್ಥದೊಡನೆ ಪಾತ್ರೆ, ಪಾಲಿಥೀನ್ ಚೀಲದಲ್ಲಿ ಸೇರಿಸಿಟ್ಟಿದ್ದು ಆಮೇಲೆ ಬಳಸಬಹುದು. ಈ ಅನಿಲ ಜೀವಾಣುಗಳನ್ನು ಕೊಲ್ಲುವುದು. 2–3 ದಿನಗಳಲ್ಲಿ ಅನಿಲ ಆರಿಹೋಗಿ ಆಹಾರ

ಚೊಕ್ಕವಾಗುವುದು. ಆಹಾರವನ್ನಿಟ್ಟಿರುವ ಸೆಲೊಫೇನ್, ಪಾಲಿಥೀನ್ ಚೀಲಗಳ ಮೂಲಕ ಈ ಗಾಳಿ ತೂರಿಹೋಗಬಲ್ಲದು. ಹೊರಗಿರುವ ಜೀವಾಣುಗಳು ಈ ಚೀಲಗಳನ್ನು ತೂರಿಕೊಂಡು ಒಳಸೇರಲಾರವು.

ಡಬ್ಬಿಗಳಲ್ಲಿಟ್ಟ ಆಹಾರ ಪದಾರ್ಥಗಳನ್ನು ಜೋಪಾನಿಸಲು ಈಚೆಗೆ ಜೀವಿರೋಧಕ (ಆಂಟಿಬಯೋಟಿಕ್) ವಸ್ತುಗಳನ್ನು ಬಳಸಿದ್ದಾರೆ. ಇವುಗಳಿಂದ ಮಾಂಸ ಇಲ್ಲವೇ ಕೆನೆ ತುಂಬಿದ ತಿಂಡಿಗಳಂಥವನ್ನು ಚೆನ್ನಾಗಿ ಕೆಡದಂತೆ ಇರಿಸಬಹುದು.

**ವಿದ್ಯುತ್ಕಾಂತ ವಿಕಿರಣಗಳು:** ಈ ವಿಕಿರಣಗಳು ಜೀವಾಣುನಾಶಕಗಳೆಂದು ಪ್ರಯೋಗಗಳಿಂದ ತಿಳಿದಿದೆ. ಅತಿ ನೇರಳೆಕಿರಣಗಳು (ಅಲ್ಟ್ರಾವಯೊಲೆಟ್ ರೇಸ್), ಕ್ಷ ಕಿರಣಗಳು, ಗ್ಯಾಮ ಕಿರಣಗಳು, ವಿಶ್ವಕಿರಣಗಳು (ಕಾಸ್ಮಿಕ್ ರೇಸ್) ಆಹಾರ ಪದಾರ್ಥಗಳಲ್ಲಿ ಫಲಕಾರಿಯಾಗಿ ಒಳಗೇ ಕಾವೇರಿಸುತ್ತವೆ. ಆಹಾರದ ಪರಮಾಣುಗಳು ಈ ಕಿರಣಗಳ ದೆಸೆಯಿಂದ ಬೇಗಬೇಗನೆ ಕಂಪಿಸಿ ಒಂದಕ್ಕೊಂದು ತಾಕುವುದರಿಂದ ಅವುಗಳೊಳಗೇ ಕಾವು ಹುಟ್ಟುತ್ತದೆ. ಒಂದೆರಡು ಕ್ಷಣಗಳೊಳಗೇ ಬಲು ಜೋರಾದ ಕಾವಿನಿಂದ ಜೀವಾಣುಗಳು ಹಾಳಾಗುವುವು. ಆಹಾರದ ರುಚಿ, ವಾಸನೆ, ಪುಷ್ಟಿಕರ ಗುಣಗಳು ಕುಂದುವುವು. ಅನೇಕ ಆಹಾರ ಪದಾರ್ಥಗಳನ್ನು ಬಹು ಬೇಗ ಚೊಕ್ಕಗೊಳಿಸಿ ಜೋಪಾನಿಸಲು ಈ ವಿಧಾನ ಈಗಾಗಲೇ ಕಾರ್ಖಾನೆಗಳಲ್ಲಿ ರೂಢಿಗೆ ಬಂದಿದೆ. ಈ ಕಿರಣಗಳನ್ನು ಪಡೆಯಲು ಖರ್ಚು ಹೆಚ್ಚು. ಈಚೆಗೆ ಪರಮಾಣು ಶಕ್ತಿಯಿಂದ ಬರುವ ಕಿರಣಗಳು ಅಗ್ಗವಾಗಿದ್ದು, ಮುಂದೆ ಎಲ್ಲೆಲ್ಲೂ ಇನ್ನಷ್ಟು ಬಳಕೆಗೆ ಬರಬಹುದು **(ನೋಡಿ– ಆಹಾರದ–ಜೋಪಾನಿಕೆ,–ದಾಸ್ತಾನು–(ಮನೆಯಲ್ಲಿ).** (ವೈ.ಕೆ.ಆರ್.)

ಶೀತಕದಲ್ಲಿ ಹಣ್ಣು, ತರಕಾರಿಗಳ ಜೋಪಾಸನೆಯ ಕಾಲಗಳು
(ಸಾಪೇಕ್ಷ ತೇವ 85%–90%)

| ಅಂಕ | ಹಣ್ಣು, ತರಕಾರಿಗಳು | ಉಷ್ಣತೆ ಡಿಗ್ರಿ (ಫ್ಯಾ) | ಜೋಪಾನ (ವಾರಗಳು) | ಹೊರಗಡೆ ಉಳಿಯುವ ಕಾಲ (ದಿವಸಗಳು) |
|---|---|---|---|---|
| 1 | ಸೇಬು | 35–38 | 18 | 9 |
| 2 | ಮಾವಿನಹಣ್ಣು | 47–50 | 4 | ... |
| 3 | ಬಾಳೆಯಹಣ್ಣು | 52–55 | 3 | 1 |
| 4 | ದ್ರಾಕ್ಷಿ | 32–35 | 8 | ... |
| 5 | ಸೀಬೆ | 47–50 | 4 | 3 |
| 6 | ನಿಂಬೆ | 47–50 | 8 | ... |
| 7 | ಕಿತ್ತಳೆ, ಸಾತಕುಡಿ | 42–44 | 18 | ... |
| | ಕಿತ್ತಳೆ ಕೊಡಗು ಮುಖ್ಯ ಬೆಳೆ | 42–45 | 9 | ... |
| | ಕಿತ್ತಳೆ ಕೊಡಗು ಮಳೆಗಾಲದ ಬೆಳೆ | 42–45 | 6 | 4 |
| 8 | ಪರಂಗಿಹಣ್ಣು (ಪಪಾಯ) | 39–42 | 5 | 3 |
| 9 | ಸಪೋಟ | 32–35 | 10 | ... |
| 10 | ಅವರೇಕಾಯಿ | 32–35 | 2 | 1 |
| 11 | ಬದನೇಕಾಯಿ | 47–50 | 4 | 2 |
| 12 | ಎಲೆಕೋಸು | 32–35 | 12 | ... |
| 13 | ಹೂಕೋಸು | 32–35 | 7 | ... |
| 14 | ಬೆಂಡೆಕಾಯಿ | 42–50 | 2 | 2 |
| 15 | ಆಲೂಗೆಡ್ಡೆ | 35–38 | 35 | 22 |

(ಬಿ.ವಿ.ಎಸ್.)

**ಆಹಾರ ಪೂರೈಕೆ, ಜಗತ್ತಿನ:** ಮಾನವ ತನ್ನ ಜೀವಧಾರಣೆಗಾಗಿ ತೆಗೆದುಕೊಳ್ಳುವ ಮೊದಲ ವಸ್ತುವೇ ಆಹಾರ. ಅವನ ಚಟುವಟಿಕೆಗಳು ಆಹಾರಾನ್ವೇಷಣೆಗಳಷ್ಟಕ್ಕೇ ಸೀಮಿತವಾಗಿರದಿದ್ದರೆ ಸಾಕಷ್ಟು ಆಹಾರ ದೊರೆಯದಿದ್ದರೆ ಅವನ ಉಳಿದ ಚಟುವಟಿಕೆಗಳಿಗೆ ಪೆಟ್ಟು ಬೀಳುವುದು ಖಂಡಿತ. ಮಾನವನ ಆಹಾರದ ಅಗತ್ಯವನ್ನು ಇಲ್ಲಿ ಎರಡು ದೃಷ್ಟಿಗಳಿಂದ ನೋಡಬಹುದು–ಆರ್ಥಿಕ ಹಾಗೂ ಶಾರೀರಿಕ. ಆರ್ಥಿಕ ಪ್ರಗತಿಯಾದಂತೆ ಉತ್ಪನ್ನಗಳೂ ಹೆಚ್ಚುತ್ತವೆ. ಅಭಿವೃದ್ಧಿ ಹೊಂದದ ರಾಷ್ಟ್ರಗಳು ಅಭಿವೃದ್ಧಿಯ ಪಥದಲ್ಲಿ ಸಾಗಿದಂತೆ ಆಹಾರಕ್ಕಾಗಿ ಬೇಡಿಕೆ ಹೆಚ್ಚುತ್ತದೆ. ಈ ಬೇಡಿಕೆಯನ್ನು ತೃಪ್ತಿಪಡಿಸುವಷ್ಟು ಆಹಾರ ಪೂರೈಕೆಯಾಗದಿದ್ದರೆ ಅತಿಪ್ರಸರಣ ಉದ್ಭವಿಸುವುದು; ಉಳಿತಾಯಗಳು ಕರಗುವುವು; ಆರ್ಥಿಕ ಪ್ರಗತಿಗೆ ಬೇಕಾದ ಬಂಡವಾಳ ಕಡಿಮೆಯಾಗುವುದು.

ಆಹಾರದ ಆರ್ಥಿಕ ಬೇಡಿಕೆಯನ್ನು ಪೂರೈಸದಿದ್ದರೆ ಆರ್ಥಿಕ ದುಷ್ಪರಿಣಾಮಗಳಾಗುವಂತೆ ಶಾರೀರಿಕ ಬೇಡಿಕೆಯನ್ನು ಪೂರೈಸದಿದ್ದರೆ ಶಾರೀರಿಕ ದುಷ್ಪರಿಣಾಮಗಳಾಗುವುವು. ಈ ದೃಷ್ಟಿಯಿಂದ ಆಹಾರದ ಕೊರತೆಯನ್ನು ಎರಡು ವಿಧವಾಗಿ ವಿಂಗಡಿಸಬಹುದು–ಅರೆಪೋಷಣೆ (ಅಂಡರ್ ನರಿಷ್‌ಮೆಂಟ್) ಮತ್ತು ನ್ಯೂನಪೋಷಣೆ (ಮಾಲ್‌ನ್ಯೂಟ್ರಿಷನ್). ಅರೆಪೋಷಣೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಸಿಗದೆ ಉಂಟಾದರೆ, ನ್ಯೂನಪೋಷಣೆಯನ್ನು ಕ್ಯಾಲೊರಿಗಳಲ್ಲಿ ಅಳೆಯುವರು. ದೇಶದ ಹವಾಮಾನ ಹಾಗೂ ಮನುಷ್ಯನ ವೃತ್ತಿಗಳಿಗನುಸಾರವಾಗಿ ದೇಹಾರೋಗ್ಯವನ್ನು ಕಾಯ್ದುಕೊಳ್ಳಲು ಪ್ರತಿಮನುಷ್ಯನಿಗೆ ಇಂತಿಷ್ಟೇ ಕ್ಯಾಲೊರಿಗಳು ಪ್ರತಿದಿನ ಬೇಕಾಗುವುದೆಂದು ವಿಜ್ಞಾನಿಗಳು ನಿರ್ಧರಿಸಿದ್ದಾರೆ. ಈ ಪ್ರಮಾಣಕ್ಕಿಂತ ಕಡಿಮೆ ಸೇವನೆಯಾದರೆ ಅದು ಅರೆಪೋಷಣೆಯೆನ್ನಬಹುದು. ಇದರ ಪರಿಣಾಮವಾಗಿ ದೇಹ ಕ್ಷೀಣವಾಗುತ್ತದೆ ; ಬೆಳವಣಿಗೆ ಕುಂಠಿತವಾಗುತ್ತದೆ; ಅಶಕ್ತಿ ಬೆಳೆಯುತ್ತದೆ. ಆದರೆ ಆಹಾರದ ಮೊತ್ತವಷ್ಟೇ ಅಲ್ಲ, ಅದು ಯಾವ ಘಟಕಗಳನ್ನು ಹೊಂದಿದೆಯೆಂಬುದೂ ಅಷ್ಟೇ ಮಹತ್ತ್ವದ್ದು. ಆಹಾರದಲ್ಲಿ ಸಕ್ಕರೆ ಅಥವಾ ಪಿಷ್ಟಪದಾರ್ಥದೊಂದಿಗೆ ಸಾಕಷ್ಟು ಪ್ರೋಟೀನು, ಜೀವಾತುಗಳು, ಖನಿಜ ದ್ರವ್ಯಗಳು ಹಾಗೂ ಕೊಬ್ಬು ಇರಬೇಕಾಗುತ್ತದೆ. ಸಕ್ಕರೆ, ಪಿಷ್ಟಪದಾರ್ಥ ಹಾಗೂ ಕೊಬ್ಬುಗಳಿಂದ ಚೈತನ್ಯ ಸಿಕ್ಕರೆ, ಪ್ರೋಟೀನು, ಮಾಂಸಖಂಡಗಳ ಬೆಳವಣಿಗೆಗೆ ಬೇಕಾಗುತ್ತದೆ. ಪ್ರೋಟೀನು ಹಾಗೂ ಕ್ಯಾಲೊರಿಗಳ ಕೊರತೆಯಿಂದ ಮೈಸವೆತ (ಮರಾಸ್‌ಮಸ್) ರೋಗ ಉಂಟಾಗುತ್ತದೆ. ಕ್ಯಾಲೊರಿಗಳ ಪ್ರಮಾಣಕ್ಕೆ ತಕ್ಕಂತೆ ಪ್ರೋಟೀನು ಸೇವಿಸದಿದ್ದರೆ ಕ್ವಾಷಿಯೋರ್ಕರ್ ಎಂಬ ರೋಗ ಬರುತ್ತದೆ. ಈ ಎರಡು ರೋಗಗಳಿಗೂ ಮಾಂಸಖಂಡಗಳ ಕ್ಷೀಣತೆ ಸಾಮಾನ್ಯವಾದರೂ ದೇಹದಲ್ಲಿ–ವಿಶೇಷವಾಗಿ ಹೊಟ್ಟೆ ಹಾಗೂ ಕಾಲುಗಳಲ್ಲಿ–ನೀರು ತುಂಬುವುದು ಕ್ವಾಷಿಯೋರ್ಕರ್ ಲಕ್ಷಣವಾಗಿದೆ. ಪ್ರೋಟೀನುಗಳ ಕೊರತೆಯಿಂದ ಶಾರೀರಿಕ ಬೆಳವಣಿಗೆಯಷ್ಟೆ ಅಲ್ಲ, ಮಾನಸಿಕ ವಿಕಾಸವೂ ಕುಂದುವುದೆಂದು ಗೊತ್ತಾಗಿದೆ. ಅದರಂತೆ ವಿಟಮಿನ್ನುಗಳ ಕೊರತೆಯಿಂದ ನ್ಯೂನತಾರೋಗಗಳು (ಡಿಫಿಷಿಯೆನ್ಸಿ ಡಿಸೀಸಸ್) ಉಂಟಾಗುವುವು. ಚರ್ಮರೋಗಗಳು, ಬೆರಿಬೆರಿ, ಸ್ಕರ್ವಿ, ರಿಕೆಟ್ಸ್ ಇವು ನ್ಯೂನತಾರೋಗಗಳ ಕೆಲ ಉದಾಹರಣೆಗಳು. ನ್ಯೂನಪೋಷಣೆಯನ್ನು ನಿಖರವಾಗಿ ಅಳೆಯುವುದು ತುಂಬ ಕಷ್ಟ.. ಸ್ಥೂಲವಾಗಿ ಇದರ ಪ್ರಮಾಣ ಗೊತ್ತಾಗಲು ಆಹಾರ ಮತ್ತು ಕೃಷಿಸಂಸ್ಥೆ (ಫುಡ್ ಅಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್) ಎರಡು ಸೂಚಿಗಳ ಉಪಯೋಗವನ್ನು ತನ್ನ ಜಾಗತಿಕ ಆಹಾರ ಸಮೀಕ್ಷೆಯಲ್ಲಿ ಮಾಡಿಕೊಂಡಿತು. ಪ್ರೋಟೀನುಗಳ ದೈನಿಕ ಸೇವನೆ ಹಾಗೂ ಧಾನ್ಯ, ಸಕ್ಕರೆ ಮತ್ತು ಪಿಷ್ಟಗಡ್ಡೆಗಳಿಂದ (ಬಟಾಟೆ, ಗೆಣಸು, ಇತ್ಯಾದಿ) ದೊರಕಿದ ಕ್ಯಾಲೊರಿಗಳ ಶೇಕಡ ಪ್ರಮಾಣ, ಪ್ರೋಟೀನುಗಳ, ವಿಶೇಷತಃ ಪ್ರಾಣಿಜನ್ಯ ಪ್ರೋಟೀನುಗಳ ಸೇವನೆ ಹೆಚ್ಚಾದಂತೆ ಆಹಾರ ಮತ್ತೂ ಹೆಚ್ಚು ಸತ್ತ್ವಯುತವಾದುದೆಂದು ತಿಳಿಯಬಹುದು. ಆದರೆ ಹೆಚ್ಚು ಹೆಚ್ಚು ಕ್ಯಾಲೊರಿಗಳನ್ನು ಧಾನ್ಯಾದಿಗಳಿಂದ ದೊರಕಿಸಿದಂತೆ ಆಹಾರ ಕಡಿಮೆ ಸತ್ತ್ವದ್ದೆಂದು ತಿಳಿಯಬಹುದು. ಅರೆಪೋಷಣೆ, ನ್ಯೂನಪೋಷಣೆಗಳನ್ನು ವಿಶ್ಲೇಷಣೆಯ ದೃಷ್ಟಿಯಿಂದ ವಿಂಗಡಿಸಿದರೂ ಜಗತ್ತಿನಲ್ಲಿ ಇವು ಕೂಡಿಯೇ ಕಂಡುಬರುತ್ತವೆ. ಹೊಟ್ಟೆ ತುಂಬುವಷ್ಟು ಸಹ ಆಹಾರ ಸಿಗದಿದ್ದಾಗ, ವಿವಿಧ ಆಹಾರ ಘಟಕಗಳ ಸೇವನೆಯೂ ಕಡಿಮೆಯಾಗುವುದು ಸಹಜ.

ಆರ್ಥಿಕ ಬೇಡಿಕೆ ಹಾಗೂ ಶಾರೀರಿಕ ಅಗತ್ಯ ಇವೆರಡೂ ಒಂದೇ ಮಟ್ಟದಲ್ಲಿರುತ್ತವೆಯೆಂದು ಹೇಳಲಾಗದು. ಶ್ರೀಮಂತರಲ್ಲಿ ಆಹಾರದ ಆರ್ಥಿಕ ಬೇಡಿಕೆಯ ಮಟ್ಟ ಅದರ ಶಾರೀರಿಕ ಅಗತ್ಯಗಳಿಗಿಂತ ಮೇಲೆಯೇ ಇರಬಹುದು. ಬಡವರಲ್ಲಿ ಅದು ಬಹಳ ಕೆಳಗೆ ಇರುತ್ತದೆ. ಬಡವರ ಆಹಾರ ಸೇವನೆಯ ಮಟ್ಟ ಹೆಚ್ಚಾಗಲು ಹೆಚ್ಚು ಪೂರೈಕೆಯೊಂದೇ ಸಾಲದು ; ಅದರ ಉತ್ಪನ್ನದ ಮಟ್ಟವೂ ಹೆಚ್ಚಾಗಬೇಕಾಗುತ್ತದೆ.

ಬೆಳೆಯುತ್ತಿರುವ ಜನಸಂಖ್ಯೆ ಆಹಾರದ ಅಗತ್ಯವನ್ನು ಎರಡು ದೃಷ್ಟಿಗಳಿಂದ ಹೆಚ್ಚಿಸುತ್ತದೆ. ಕೊಟ್ಟ ಜನಸಂಖ್ಯೆಯನ್ನು ಆರೋಗ್ಯದಲ್ಲಿಡಲು ಬೇಕಾಗುವ ಆಹಾರದ ಮೊತ್ತ ಆ ಜನಸಂಖ್ಯೆ ಬೆಳೆಯುತ್ತಿದ್ದರೆ ಹೆಚ್ಚಾಗುವುದು ಸ್ಪಷ್ಟವೇ. ಇದು ಶಾರೀರಿಕ ದೃಷ್ಟಿ. ಆರ್ಥಿಕ ಬೇಡಿಕೆ ಸಹ ಇದರಿಂದ ಉಲ್ಬಣವಾಗುತ್ತದೆ. ಉಳಿತಾಯವಾಗ ಬಹುದಾದ ಅಥವಾ ಇತರ ವಸ್ತುಗಳ ಮೇಲೆ ವ್ಯಯವಾಗಬಹುದಾದ ಹಣ ಬೆಳೆದ ಜನಸಂಖ್ಯೆಗೆ ಆಹಾರ ದೊರಕಿಸುವಲ್ಲಿಯೇ ವ್ಯಯವಾಗುತ್ತದೆ. ಹೀಗಾಗಿ ಬೆಳೆಯುತ್ತಿರುವ ಜನಸಂಖ್ಯೆಗನುಸಾರವಾಗಿ ಆಹಾರೋತ್ಪಾದನೆ ಹೆಚ್ಚಾಗದಿದ್ದರೆ ಅರೆಪೋಷಣೆ, ನ್ಯೂನಪೋಷಣೆಗಳೊಡನೆ ಅತಿಪ್ರಸರಣದ ಸಮಸ್ಯೆಯೂ ಗಂಭೀರವಾಗುತ್ತದೆ. ಜಗತ್ತಿನ ಜನಸಂಖ್ಯೆ ಹಿಂದೆಂದೂ ಏರದಷ್ಟು ಗತಿಯಿಂದ ಈಗ ಬೆಳೆಯುತ್ತಿದೆ. ನೂತನ ವೈಜ್ಞಾನಿಕ ವಿಧಾನಗಳ ಮೂಲಕ ಮರಣಗತಿ ಬಹಳ ಇಳಿದುದು ಮತ್ತು ಅದಕ್ಕೆ ತಕ್ಕಂತೆ ಜನನಗತಿ ಮಾತ್ರ ಕಡಿಮೆಯಾಗದಿರುವುದು ಇದಕ್ಕೆ ಕಾರಣವಾಗಿದೆ. ನಗರೀಕರಣ ಹಾಗೂ ಔದ್ಯೋಗೀಕರಣಗಳೂ ಸಹ ಆರ್ಥಿಕ ಬೇಡಿಕೆಯನ್ನು ಹೆಚ್ಚಿಸುವುವು. ಏಷ್ಯದ ಕೆಲವು ರಾಷ್ಟ್ರಗಳಲ್ಲಿ ಆರ್ಥಿಕ ಬೇಡಿಕೆಯನ್ನು ಪೂರೈಸುವಷ್ಟು ಪ್ರಮಾಣದಲ್ಲಿ ಆಹಾರೋತ್ಪಾದನೆ ಹೆಚ್ಚಿದೆಯೇ ಎಂಬುದನ್ನು ಮುಂದಿನ ಪಟ್ಟಿಯಿಂದ ತಿಳಿಯಬಹುದು. ಜನಸಂಖ್ಯೆ ಮತ್ತು ಆಹಾರಗಳ ವರ್ಷಂಪ್ರತಿ ಶೇಕಡಾ ಏರಿಕೆಗಳನ್ನು ಈ ರೀತಿ ಗಮನಿಸಬಹುದು.

| ದೇಶ | ಜನಸಂಖ್ಯೆ | ಆದಾಯ | ಬೇಡಿಕೆಯ ಏರಿಕೆ | | ಉತ್ಪಾದನ ಸೂಚಿಕೆ | |
|---|---|---|---|---|---|---|
| | | | ಧಾನ್ಯಗಳು | ಆಹಾರ (ಒಟ್ಟು) | ಧಾನ್ಯಗಳು | ಆಹಾರ (ಒಟ್ಟು) |
| ಇಂಡೋನೇಷ್ಯ* | 2.2 | 0.6 | 2.5 | 2.7 | 2.2 | 1.5 |
| ಜಪಾನ್ | 1.0 | 9.0 | 0.5 | 6.3 | 2.4 | 3.6 |
| ಥೈಲೆಂಡ್ | 3.0 | 1.9 | 3.4 | 4.4 | 4.1 | 4.8 |
| ಪಾಕಿಸ್ತಾನ | 2.1 | 2.1 | 3.2 | 4.7 | 2.5 | 1.5 |
| ಫಿಲಿಫೀನ್ಸ್ | 3.3 | 2.1 | 3.7 | 4.9 | 3.1 | 3.1 |
| ಭಾರತ ** | 2.1 | 1.3 | 2.8 | 3.3 | 2.9 | 2.4 |
| ಶ್ರೀಲಂಕ ** | 2.6 | 1.1 | 3.0 | 3.5 | 5.9 | 3.2 |

* 1952–54 ರಿಂದ 1960     1952–54 ರಿಂದ 1961–62

ಮೇಲಿನ ಪಟ್ಟಿಯನ್ನು ನೋಡಿದರೆ, ಥೈಲೆಂಡನ್ನು ಬಿಟ್ಟು ಉಳಿದ ಎಲ್ಲ ದೇಶಗಳಲ್ಲಿ ಆಹಾರೋತ್ಪಾದನೆ ಬೇಡಿಕೆಗಿಂತ ಹಿಂದೆ ಬಿದ್ದಿದೆಯೆಂದು ಕಂಡುಬರುವುದು. ಆಹಾರ ಧಾನ್ಯಗಳನ್ನಷ್ಟೇ ತೆಗೆದುಕೊಂಡರೆ ಜಪಾನ್, ಥೈಲೆಂಡ್ ಹಾಗೂ ಶ್ರೀಲಂಕಗಳಲ್ಲಷ್ಟೇ ಉತ್ಪಾದನೆ ಬೇಡಿಕೆಯನ್ನು ಹಿಂದೆ ಹಾಕಿತು. ಭಾರತದಲ್ಲಿ ಧಾನ್ಯಗಳ ಮಟ್ಟಿಗೆ ಇವೆರಡೂ ಸಮನಾಗಿದ್ದುವು. ಇತ್ತೀಚೆಗೆ ಭಾರತದಲ್ಲಿ ಉತ್ಪಾದನೆ ಕುಂಠಿತವಾದ ಕಾರಣ, ಹೆಚ್ಚುತ್ತಿರುವ ಬೇಡಿಕೆಗಿಂತ ಅದು ಹಿಂದುಳಿಯಿತು. ಉತ್ಪಾದನೆ ಹೀಗೆ ಹಿಂದೆ ಬಿದ್ದೊಡನೆ ಬೆಲೆಗಳ ಮೇಲೆ ಪರಿಣಾಮವಾಗುವುದು. ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಈ ಕಾರಣದಿಂದಲೇ ಆಹಾರದ ಬೆಲೆಗಳು ರಭಸದಿಂದ ಏರುತ್ತಿವೆ. ಬ್ರೆಜಿಲಿನಲ್ಲಿ ಶೇ. 67 ರಷ್ಟೂ ಚಿಲಿಯಲ್ಲಿ ಶೇ. 49 ರಷ್ಟೂ ಅರ್ಜೆಂಟೈನದಲ್ಲಿ ಶೇ. 23 ರಷ್ಟೂ ಆಹಾರದ ಬೆಲೆಗಳು ಇಂಡೋನೇಷ್ಯದಲ್ಲಿಯ ಈ ಗತಿ ಶೇ. 100ಕ್ಕೂ ಹೆಚ್ಚಿತು.

ಈಗ ಶಾರೀರಿಕ ಅಗತ್ಯದ ದೃಷ್ಟಿಯಿಂದ ಆಹಾರ ಪೂರೈಕೆಯನ್ನು ಪರಿಶೀಲಿಸಬಹುದು. ಒಂದು ರಾಷ್ಟ್ರದ ಆಹಾರ ಪೂರೈಕೆಯನ್ನರಿಯಲು ಅಲ್ಲಿಯ ಉತ್ಪಾದನೆಗೆ ಆಹಾರದ ಆಯಾತಗಳನ್ನು ಕೂಡಿಸಬೇಕು ಮತ್ತು ನಿರ್ಯಾತಗಳನ್ನು ಕಳೆಯಬೇಕು. ಅಲ್ಲದೆ, ಆಹಾರ ಸೇವನೆಯನ್ನು ಗ್ರಾಹಕಮಟ್ಟದಲ್ಲಿ ಎಣಿಸಬೇಕು. ಉತ್ಪಾದಕ ಮಟ್ಟದಲ್ಲಲ್ಲ. ಆಹಾರ ಪೂರೈಕೆಯ ಪರಿಶೀಲನೆಗೆ ಆಹಾರ ಮತ್ತು ಕೃಷಿ ಸಂಸ್ಥೆಯವರು ನಡೆಸಿದ ಹಿಂದಿನ ಮೂರು ಜಾಗತಿಕ ಆಹಾರ ಸಮೀಕ್ಷೆಗಳು ತುಂಬ ಸಹಾಯಕಾರಿಯಾಗಿವೆ. ಜನರ ದೈನಿಕ ಕ್ಯಾಲೊರಿ ಸೇವನೆ ತಲಾ 2550–2650 ರಷ್ಟಾದರೂ ಇರಬೇಕೆಂಬುದನ್ನು ಒಪ್ಪಿಕೊಳ್ಳುವುದಾದರೆ ಜಗತ್ತಿನಲ್ಲಿ ಮೂರನೆಯ ಎರಡರಷ್ಟು ಜನ ಅರೆಪೋಷಣೆಗೆ ಒಳಗಾಗಿದ್ದಾರೆಂಬುದಾಗಿ ಸಮೀಕ್ಷೆ ತಿಳಿಸುತ್ತದೆ. ಅರ್ಧಕ್ಕಿಂತ ಹೆಚ್ಚು ಜನಕ್ಕೆ ಪ್ರತಿದಿನ ತಲಾ 2250 ಕ್ಯಾಲೊರಿಗಿಂತ ಕಡಿಮೆ ಆಹಾರ ಸಿಕ್ಕರೆ, ಮೂರನೆಯ ಒಂದಕ್ಕಿಂತ ಕಡಿಮೆ ಜನಕ್ಕೆ 2750 ಕ್ಯಾಲೊರಿಗಿಂತ ಹೆಚ್ಚು ಸಿಗುವುದೆಂದೂ ಅದು ಕಂಡುಕೊಂಡಿದೆ. ಜನಸಂಖ್ಯೆಯ ವಯಸ್ಸು, ವೃತ್ತಿ, ಹವಾಮಾನ ಇತ್ಯಾದಿಗಳಿಗೆ ಅನುಗುಣವಾಗಿ ಕ್ಯಾಲೊರಿಗಳ ಪ್ರಮಾಣ ಇರಬೇಕೆಂಬುದನ್ನು ಎರಡನೆಯ ಸಮೀಕ್ಷೆ ಮಾನ್ಯ ಮಾಡಿ ಅದರಂತೆ ಆಯಾ ದೇಶಗಳ ಜನತೆಯ ಕ್ಯಾಲೊರಿ ಆವಶ್ಯಕತೆಯನ್ನು ಬೇರೆ ಬೇರೆಯಾಗಿಯೇ ತೆಗೆದುಕೊಂಡು ಅಲ್ಲಿನ ಆಹಾರ ಪೂರೈಕೆಯೊಡನೆ ಹೋಲಿಸಿತು. ಹೀಗಾಗಿ ಆವಶ್ಯಕತೆ ಹಾಗೂ ಪೂರೈಕೆಗಳ ನಡುವಿನ ಅಂತರ ಸಮೀಕ್ಷೆ ತೋರಿಸಿದುದಕ್ಕಿಂತ ಕಡಿಮೆಯಾಯಿತು. ಆದರೂ ಜಗತ್ತಿನ ಶೇ. 59ರಷ್ಟು ಜನಕ್ಕೆ ಪ್ರತಿದಿನ ತಲಾ 2200 ಕ್ಯಾಲೊರಿಗಳಿಗಿಂತ ಕಡಿಮೆ ಆಹಾರ ದೊರೆಯುತ್ತಿದೆಯೆಂದೂ ಶೇ. 28ರಷ್ಟು ಜನಕ್ಕೆ 2700ಕ್ಕಿಂತ ಹೆಚ್ಚು ಕ್ಯಾಲೊರಿ ದೊರೆಯುವುದೆಂದೂ ಈ ಸಮೀಕ್ಷೆಯಿಂದ ಗೊತ್ತಾಯಿತು. ಯುದ್ಧಪೂರ್ವದಲ್ಲಿ ಈ ಅಂಕಿಗಳು ಅನುಕ್ರಮವಾಗಿ ಶೇ. 39 ಹಾಗೂ ಶೇ. 31 ಆಗಿದ್ದುವು. ಅಂದರೆ ಯುದ್ಧಾನಂತರ ಬಹುಸಂಖ್ಯಾತ ಜನರ ಕ್ಯಾಲೊರಿ ಸೇವನೆಯ ಪ್ರಮಾಣ ಯುದ್ಧಪೂರ್ವಕ್ಕಿಂತ ಕಡಿಮೆಯಾಯಿತು. ಆದರೆ ಹೀಗೆ ಆದದ್ದೂ ವಿಶೇಷತಃ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿಯೇ.

ತೃತೀಯ ಜಾಗತಿಕ ಆಹಾರ ಸಮೀಕ್ಷೆ ವೈಜ್ಞಾನಿಕವಾಗಿ ಹೆಚ್ಚು ಪರಿಪೂರ್ಣವಾಗಿದ್ದು, ನ್ಯೂನಪೋಷಣೆಯ ಮೇಲೂ ಅದು ಸಾಕಷ್ಟು ಬೆಳಕು ಚೆಲ್ಲಿತು. ಯುದ್ಧಪೂರ್ವದ (1934–38), ಯುದ್ಧಾನಂತರದ (1948–52) ಹಾಗೂ ಇತ್ತೀಚಿನ ಮೂರು ಅವಧಿಗಳು ಈ ಸಮೀಕ್ಷೆಗೆ ಒಳಪಟ್ಟಿವೆ. ಮುಂದಿನ ಆವಶ್ಯಕತೆಗಳನ್ನೂ ಇದು ಚರ್ಚಿಸುತ್ತದೆ.

ಈ ಸಮೀಕ್ಷೆಯಿಂದ ಗೊತ್ತಾದ ಒಂದು ಮಹತ್ತ್ವದ ವಿರೋಧಾಭಾಸವೆಂದರೆ ಎಲ್ಲಿ ಜನಸಂಖ್ಯೆಯ ಒತ್ತಡ ಹೆಚ್ಚಾಗಿ ಅಹಾರದ ಅಗತ್ಯ ಹೆಚ್ಚೋ ಅಲ್ಲಿಯೇ ಆಹಾರ ಪೂರೈಕೆ ಕಡಿಮೆಯ ಪ್ರಮಾಣದಲ್ಲಿದೆ. ಆಹಾರ ಸೇವನೆಯ ಈ ಅಂತರಕ್ಕೂ ತಲಾ ಉತ್ಪನ್ನದ ಅಂತರಕ್ಕೂ ಹೊಂದಾಣಿಕೆಯಿದೆ. ಈ ಅಂತರ ಪ್ರಾಣಿಜನ್ಯ ಆಹಾರದ ವಿಷಯದಲ್ಲಿ ಮತ್ತೂ ತೀವ್ರವಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ವನಸ್ಪತಿಜನ್ಯ ತಲಾ ಆಹಾರಸೇವನೆ ಒಂದೂವರೆ ಪಾಲು ಹೆಚ್ಚಿದರೆ ಪ್ರಾಣಿಜನ್ಯ ಆಹಾರ ಸೇವನೆ ಆರು ಪಾಲು ಹೆಚ್ಚಿದೆ. ಮುಂದಿನ ಪಟ್ಟಿಯಿಂದ ಈ ಅಂಶಗಳು ವ್ಯಕ್ತಪಡುತ್ತವೆ :

ಜನಸಂಖ್ಯೆ, ರಾಷ್ಟ್ರೀಯ ಉತ್ಪನ್ನ ಹಾಗೂ ಆಹಾರ ಪೂರೈಕೆಗಳ
ಜಾಗತಿಕ ವಿತರಣೆ

| ಪ್ರದೇಶ | ಒಟ್ಟು ಪೂರೈಕೆ ಜನಸಂಖ್ಯೆಯ ಶೇಕಡ | ಶೇಕಡ ಆಹಾರ ಶೇಕಡ | | ಉತ್ಪನ್ನ |
|---|---|---|---|---|
| | | ಒಟ್ಟು | ಪ್ರಾಣಿ ಜನ್ಯ | |
| ಅಭಿವೃದ್ಧಿ ಹೊಂದದ ಪ್ರದೇಶ * | 71.3 | 42.7 | 30.8 | 21.4 |
| ಅಭಿವೃದ್ಧಿ ಹೊಂದಿದ ಪ್ರದೇಶ ** | 28.7 | 57.8 | 69.2 | 78.6 |
| | 100.0 | 100.0 | 100.0 | 100.0 |

* ದೂರಪ್ರಾಚ್ಯ ಚೀನ, ಸಮೀಪ ಪ್ರಾಚ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕ.

** ಯುರೋಪ್, ಸೋವಿಯತ್ ದೇಶ, ಉತ್ತರ ಅಮೆರಿಕ ಮತ್ತು ಓಷಿಯಾನಿಯ.

ಅರೆಪೋಷಣೆಯ ಪ್ರಮಾಣವನ್ನೀಗ ನೋಡಬಹುದು. ಮುಂದಿನ ಪಟ್ಟಿಯಲ್ಲಿ ಕ್ಯಾಲೊರಿ ಆವಶ್ಯಕತೆ ಹಾಗೂ ಪೂರೈಕೆಗಳ ನಡುವಿನ ಅಂತರವನ್ನಷ್ಟೇ ಅಲ್ಲದೆ, ಹೆಚ್ಚು ಕ್ಯಾಲೊರಿ ಸೇವಿಸುವ ಹಾಗೂ ಕಡಿಮೆ ಕ್ಯಾಲೊರಿ ಸೇವಿಸುವ ರಾಷ್ಟ್ರಗಳಲ್ಲಿಯ ಕ್ಯಾಲೊರಿ ಪೂರೈಕೆಯ ಅಂತರವನ್ನೂ ಕಾಣಬಹುದು:

**ದೈನಿಕ ತಲಾ ಸೇವನೆ, ಗ್ರಾಹಕ ಮಟ್ಟದಲ್ಲಿ**

| ಪ್ರದೇಶ | ಕ್ಯಾಲೊರಿ ಪೂರೈಕೆ | ಕ್ಯಾಲೊರಿ ಅಗತ್ಯ | $\frac{(2)}{(3)}$ x 100 |
|---|---|---|---|
| 1 | 2 | 3 | 4 |
| ದೂರ ಪ್ರಾಚ್ಯ (ಕೆಂಪು ಚೀನ ಸಮೇತ) | 2,050 | 2,300 | 90 |
| ಸಮೀಪ ಪ್ರಾಚ್ಯ | 2,450 | 2,400 | 103 |
| ಆಫ್ರಿಕ | 2,350 | 2,400 | 98 |
| ಲ್ಯಾಟಿನ್ ಅಮೆರಿಕ | 2,500 | 2,400 | 104 |
| ಯುರೋಪ್ (ಸೋವಿಯತ್ ದೇಶ ಸಮೇತ) | 3,050 | 2,600 | 117 |
| ಉತ್ತರ ಅಮೆರಿಕ | 3,100 | 2,600 | 120 |
| ಓಷಿಯಾನಿಯ | 3,250 | 2,600 | 125 |
| ಕಡಿಮೆ ಕ್ಯಾಲೊರಿ ರಾಷ್ಟ್ರಗಳು | 2,150 | 2,300 | 93 |
| ಹೆಚ್ಚು ಕ್ಯಾಲೊರಿ ರಾಷ್ಟ್ರಗಳು | 3,050 | 2,600 | 117 |
| ಜಗತ್ತು | 2,400 | 2,400 | 100 |

ಜಗತ್ತನ್ನು ಸಮಗ್ರವಾಗಿ ನೋಡಿ ಪರಿಸ್ಥಿತಿ ಸಮಾಧಾನಕರವೆಂದು ತಿಳಿದರೆ ಅದು ತಪ್ಪಾದೀತು. ಅನೇಕರು ಶಾರೀರಿಕ ಅಗತ್ಯಕ್ಕಿಂತ ಹೆಚ್ಚಿಗೆ ಕ್ಯಾಲೊರಿಗಳನ್ನು ಸೇವಿಸುತ್ತಿದ್ದರೆ ಇತರರಿಗೆ ಈ ಅಗತ್ಯದಷ್ಟು ಕ್ಯಾಲೊರಿಗಳು ಸಿಗುವುದಿಲ್ಲ. ಅರೆಪೋಷಣೆಯಿಂದ ಜಗತ್ತಿನಲ್ಲಿ ಬಳಲುವವರ ಪ್ರಮಾಣ, ಅತಿ ಕಡಿಮೆ ಅಂದಾಜು ಮಾಡಿದರೂ ಶೇ. 10 ಮತ್ತು ಶೇ. 15 ರ ನಡುವೆ ಇದೆ. ಅಂದರೆ ಸಮೀಕ್ಷೆಯ ಅವಧಿಯಲ್ಲಿ (1957–59) ಕನಿಷ್ಠ 30 ಮತ್ತು 50 ಕೋಟಿಯ ನಡುವಣ ಸಂಖ್ಯೆಯ ಜನ ಅರೆಪೋಷಣೆಗೆ ಒಳಗಾಗಿದ್ದರು. ರಾಷ್ಟ್ರಗಳನ್ನು ಬೇರೆ ಬೇರೆಯಾಗಿ ಪರಿಶೀಲಿಸಿದರೆ ಈ ಪ್ರಮಾಣ ಇನ್ನೂ ಹೆಚ್ಚು ಇದ್ದುದು ಕಂಡುಬರುವುದು. ದೂರಪ್ರಾಚ್ಯದಲ್ಲಿ ಕನಿಷ್ಠ ಪಕ್ಷ ಐದನೆಯ ಒಂದರಷ್ಟು ಜನ ಅರೆಪೋಷಣೆಗೆ ಒಳಗಾಗಿದ್ದರು. ಬರ್ಮದಲ್ಲಿ ನಾಲ್ಕನೆಯ ಒಂದರಷ್ಟು ಜನರೂ ಭಾರತದಲ್ಲೂ ಪಾಕಿಸ್ತಾನದಲ್ಲೂ ತಲಾ ನಾಲ್ಕನೆಯ ಒಂದರಷ್ಟು ಮತ್ತು ಮೂರನೆಯ ಒಂದರಷ್ಟು ಜನರೂ ಅರೆಪೋಷಣೆಗೆ ಒಳಗಾಗಿದ್ದರು.

ಮುಂದೆ ಕೊಟ್ಟಿರುವ ಪಟ್ಟಿಯಲ್ಲಿ ಇತ್ತೀಚಿನ ಕ್ಯಾಲೊರಿ ಸೇವನೆಯನ್ನು ಯುದ್ಧಾನಂತರದ ಹಾಗೂ ಯುದ್ಧಪೂರ್ವದ ಪರಿಸ್ಥಿತಿಗೆ ಹೋಲಿಸಬಹುದು. ಯುದ್ಧಾನಂತರ ಕಡಿಮೆ ಕ್ಯಾಲೊರಿ ದೇಶಗಳಲ್ಲಿದ್ದ ಮೊದಲಿನ ಕೆಳಮಟ್ಟ ಇನ್ನೂ ಕೆಳಕ್ಕೆ ಇಳಿಯಿತು. ಅವುಗಳ ಸೇವನೆ 150 ಕ್ಯಾಲೊರಿಗಳಷ್ಟು ಕಡಿಮೆಯಾಯಿತು. ಹೆಚ್ಚು ಕ್ಯಾಲೊರಿ ದೇಶಗಳಲ್ಲಿ ಬರೀ 90 ಕ್ಯಾಲೊರಿ ಕಡಿಮೆಯಾಯಿತು. ಎರಡೂ ಪ್ರಕಾರದ ದೇಶಗಳನ್ನು ಒಟ್ಟಾಗಿ ಪರಿಶೀಲಿಸಿದಾಗ ಅವುಗಳಲ್ಲಿ ತಲಾ ಸೇವನೆ 190 ಕ್ಯಾಲೊರಿ ಹೆಚ್ಚಾಯಿತು. ಈ ದೇಶಗಳಲ್ಲಿಯ ಕ್ಯಾಲೊರಿ ಸೇವನೆಯ ಅಂತರ ಯುದ್ಧಪೂರ್ವದಲ್ಲಿ 1 : 1.40 ಪ್ರಮಾಣದಲ್ಲಿದ್ದುದು ಯುದ್ಧಾನಂತರ 1 : 1.46ಕ್ಕೆ ಏರಿತು; ಇತ್ತೀಚಿನ ಅವಧಿಯಲ್ಲಿ ಅದು 1 : 1.42ಕ್ಕೆ ಇಳಿಯಿತು.

ಸರಾಸರಿ ತಲಾ ದೈನಿಕ ಕ್ಯಾಲೊರಿ ಮತ್ತು ಪ್ರೋಟೀನ್ ಪೂರೈಕೆ ಗ್ರಾಹಕ ಮಟ್ಟದಲ್ಲಿ

| ಪ್ರದೇಶ | ಅವಧಿ | ಕ್ಯಾಲೊರಿಗಳು | | ಪ್ರೋಟೀನು | |
|---|---|---|---|---|---|
| | | ಒಟ್ಟು | ಧಾನ್ಯಾದಿಗಳಿಂದ ದೊರಕಿಸಿದ ಶೇಕಡ ಕ್ಯಾಲೊರಿ ಪ್ರಮಾಣ | ಒಟ್ಟು (ಗ್ರಾಂ) | ಒಟ್ಟು ಪ್ರೋಟೀನಿನಲ್ಲಿ ಪ್ರಾಣಿಜನ್ಯ ಪ್ರೋಟೀನಿನ ಶೇಕಡ ಪ್ರಮಾಣ |
| **1** | **2** | **3** | **4** | **5** | **6** |
| ಕಡಿಮೆ ಕ್ಯಾಲೊರಿ ಪ್ರದೇಶಗಳು | ಯುದ್ಧಪೂರ್ವ | 2,110 | 77 | 62 | 16 |
| | ಯುದ್ಧಾನಂತರ | 1,960 | 78 | 56 | 14 |
| | ಇತ್ತೀಚೆಗೆ | 2,150 | 78 | 58 | 16 |
| ಹೆಚ್ಚು ಕ್ಯಾಲೊರಿ ಪ್ರದೇಶಗಳು | ಯುದ್ಧಪೂರ್ವ | 2,950 | 78 | 85 | 40 |
| | ಯುದ್ಧಾನಂತರ | 2,860 | 62 | 85 | 44 |
| | ಇತ್ತೀಚೆಗೆ | 3,050 | 57 | 90 | 49 |
| ಜಗತ್ತು | ಯುದ್ಧಪೂರ್ವ | 2,380 | 71 | 69 | 26 |
| | ಯುದ್ಧಾನಂತರ | 2.240 | 71 | 64 | 28 |
| | ಇತ್ತೀಚೆಗೆ | 2,430 | 70 | 68 | 29 |

ಮೇಲಿನ ವಿವರಗಳಿಂದ ಅತಿಪೋಷಣೆಯ ಪ್ರಮಾಣವನ್ನು ಸ್ಥೂಲವಾಗಿ (4) ಹಾಗೂ (5) ನೆಯ ಕಲಮುಗಳಿಂದ ತಿಳಿದುಕೊಳ್ಳಬಹುದು; ಇಲ್ಲಿಯೂ ಅಭಿವೃದ್ಧಿ ಹೊಂದಿದ (ಅಥವಾ ಹೆಚ್ಚು ಕ್ಯಾಲೊರಿ ಸೇವಿಸುವ) ಹಾಗೂ ಅಭಿವೃದ್ಧಿ ಹೊಂದದ (ಅಥವಾ ಕಡಿಮೆ ಕ್ಯಾಲೊರಿ ಸೇವಿಸುವ) ರಾಷ್ಟ್ರಗಳಲ್ಲಿಯ ಅಂತರ ವ್ಯಕ್ತವಾಗುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಕ್ಯಾಲೊರಿ ಸೇವನೆಯ ಬಹುಭಾಗವನ್ನು ಧಾನ್ಯಾದಿಗಳಿಂದಲೇ ದೊರಕಿಸುವರು. ಪ್ರೋಟೀನುಗಳ, ಅದರಲ್ಲೂ ವಿಶೇಷವಾಗಿ ಪ್ರಾಣಿಜನ್ಯ ಪ್ರೋಟೀನುಗಳ, ಸೇವನೆ ಇಲ್ಲಿ ಕಡಿಮೆಯಿದೆ. ಮೀನು, ಮಾಂಸ, ಬೇಳೆಕಾಳುಗಳು, ಹಾಲು ಇವು ಹೆಚ್ಚು ಪ್ರೋಟೀನುಯುಕ್ತ ಆಹಾರಗಳಾಗಿವೆ. ಧಾನ್ಯಗಳಲ್ಲಿಯೂ ಸ್ವಲ್ಪ ಅಂಶ ಪ್ರೋಟೀನು ಇದ್ದರೂ ಸತ್ತ್ವದ ದೃಷ್ಟಿಯಿಂದ ಅದು ಮೇಲ್ಮಟ್ಟದ್ದಲ್ಲ. ಇಂದು ಜಗತ್ತಿನ ಪ್ರೋಟೀನು ಪೂರೈಕೆಯ ಶೇ. 70ಕ್ಕೂ ಹೆಚ್ಚು ಭಾಗ ವನಸ್ಪತಿಜನ್ಯವಾಗಿದೆ. ಜಗತ್ತಿನಲ್ಲಿ ಪ್ರೋಟೀನಿನ ಅಭಾವವಿದೆಯಷ್ಟೇ ಅಲ್ಲ; ಇದ್ದ ಪ್ರೋಟೀನು ಪೂರೈಕೆಯೂ ಸತ್ತ್ವಯುತವಾಗಿಲ್ಲ. ಪ್ರೋಟೀನಿನ ಕೊರತೆಯಿಂದುಂಟಾಗುವ ಮೆರೆಸ್ಮಸ್, ಕ್ವಾಷಿಯೋರ್ಕರ್ ರೋಗಗಳು ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಕಂಡುಬರುವ ಪ್ರಮಾಣವೇ ಇದಕ್ಕೆ ಸಾಕ್ಷಿ. ಗರ್ಭಿಣಿಯರಿಗೆ, ಮೊಲೆಯುಣಿಸುವ ತಾಯಿಯರಿಗೆ ಹಾಗೂ ಚಿಕ್ಕ ಮಕ್ಕಳಿಗೆ ಪ್ರೋಟೀನ್ ಆವಶ್ಯಕತೆ ಇತರರಿಗಿಂತ ಹೆಚ್ಚು, ಆದರೆ ಅಭಿವೃದ್ಧಿ ಹೊಂದದ ದೇಶಗಳಲ್ಲಿ ಪ್ರೋಟೀನ್ ಕೊರತೆ ಇಂಥವರಲ್ಲಿಯೇ ಅತಿ ಹೆಚ್ಚಾಗಿ ಕಂಡುಬರುತ್ತದೆ. ರಾಷ್ಟ್ರದ ಸರಾಸರಿ ಪ್ರೋಟೀನ್ ಅಗತ್ಯ ಹಾಗೂ ಪೂರೈಕೆಗಳನ್ನು ಹೋಲಿಸಿದರೆ ಒಂದೆರಡು ರಾಷ್ಟ್ರಗಳನ್ನು ಬಿಟ್ಟರೆ ಜಗತ್ತಿನಲ್ಲಿ ಅದರ ಅಭಾವವೇ ಇಲ್ಲವೆಂದು ಅನಿಸುತ್ತದೆ. ಆದರೂ ಆ ರಾಷ್ಟ್ರಗಳಲ್ಲಿ ಅರೆಪೋಷಣೆಯಿಂದ ಬಳಲುವ ಜನಸಂಖ್ಯೆಯನ್ನು ಸಾಕಷ್ಟು ಕಾಣಬಹುದು. ವಿಷಮ ವಿತರಣೆಯೇ ಇದಕ್ಕೆ ಕಾರಣ. ಅಭಾವ ಕೆಲವರಿಗಿದ್ದರೆ ಇತರರಿಗೆ ಅಗತ್ಯಕ್ಕಿಂತ ಹೆಚ್ಚು ಪೂರೈಕೆ. ಹಾಗೆ ನೋಡಿದರೆ ವಿಷಮ ವಿತರಣೆಯೊಂದು ಇಲ್ಲದಿದ್ದರೆ ಜಗತ್ತಿನಲ್ಲಿ ಈಗಿದ್ದ ಪ್ರೋಟೀನು ಕನಿಷ್ಠ ಶಾರೀರಿಕ ಅಗತ್ಯವನ್ನು ಪೂರೈಸಲು ಸಾಕು. ಪ್ರೋಟೀನು ಹೆಚ್ಚು ಪುಷ್ಟಿಯಾದ ಆಹಾರವಾಗಿದ್ದು ಅದು ಬಡವರ ಅಳವಿಗೆ ಇನ್ನೂ ಬಂದಿಲ್ಲ. ಆಹಾರದಲ್ಲಿರುವ ವೈವಿಧ್ಯವೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ವಿಶೇಷ ಗುಣಗಳಲ್ಲೊಂದು. ಪ್ರೋಟೀನಿಗಷ್ಟೇ ಅವುಗಳ ಮತ್ತು ಅಭಿವೃದ್ಧಿ ಹೊಂದದ ರಾಷ್ಟ್ರಗಳ ನಡುವಿನ ಅಂತರ ಸೀಮಿತವಾಗಿಲ್ಲ. ಕೊಬ್ಬಿನ ದೈನಿಕ ತಲಾಸೇವನೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ 100 ಗ್ರಾಂ ಇದ್ದರೆ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಅದು ಬರೀ 30 ಗ್ರಾಂ ಇದೆ. ಕಾಯಿಪಲ್ಲೆ, ಹಣ್ಣುಹಂಪಲು ಇತ್ಯಾದಿಗಳ ಸೇವನೆಯಲ್ಲಿಯೇ ಈ ಅಂತರವನ್ನು ಕಾಣಬಹುದು.

ಧಾನ್ಯಾದಿಗಳಿಂದ ದೊರಕಿಸಿದ ಕ್ಯಾಲೊರಿ ಪ್ರಮಾಣ ಎರಡು ಮೂರಂಶಕ್ಕಿಂತ ಹೆಚ್ಚಾದರೆ ಅದು ಅರೆಪೋಷಣೆಯ ನಿದರ್ಶನವೆಂದು ದ್ವಿತೀಯ ಜಾಗತಿಕ ಆಹಾರ ಸಮೀಕ್ಷೆಯಲ್ಲಿ ಪರಿಗಣಿಸಲಾಯಿತು. ಆದರೆ ಅರೆಪೋಷಣೆಯಿಂದ ಬಳಲುವ ಜನಸಂಖ್ಯೆಯ ಪ್ರಮಾಣವನ್ನು ಹುಡುಕುವ ವಿಶೇಷ ಪ್ರಯತ್ನವನ್ನು ಆ ಸಮೀಕ್ಷೆ ಮಾಡಲಿಲ್ಲ. ಮೂರನೆಯ ಸಮೀಕ್ಷೆ ಇದರ ಮೇಲೆ ಹೆಚ್ಚು ಬೆಳಕು ಚೆಲ್ಲಿತು. ಮಹಾರಾಷ್ಟ್ರದಲ್ಲಿ (ಭಾರತ) ಹಿಂದೆ ಮಾಡಿದ ಒಂದು ಅಭ್ಯಾಸದಲ್ಲಿ ಶೇ.60ರಷ್ಟು ಕುಟುಂಬಗಳು ಶೇ.80ಕ್ಕಿಂತ ಹೆಚ್ಚು ಕ್ಯಾಲೊರಿಗಳನ್ನು ಧಾನ್ಯಾದಿಗಳಿಂದಲೇ ದೊರಕಿಸುತ್ತಿರುವುದು ಕಂಡುಬಂದಿತು. ಇದೇ ಪ್ರಮಾಣ ಭಾರತದಲ್ಲಷ್ಟೇ ಅಲ್ಲ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿಯೂ ಕೆಲ ಜನರಿಗಾದರೂ ಸಾಕಷ್ಟು ಸತ್ತ್ವಯುತವಾದ ಆಹಾರ ಸಿಗುವುದಿಲ್ಲವೆಂದು ಗಣಿಸಿದರೆ ಜಗತ್ತಿನಲ್ಲಿ ಅರ್ಧದಷ್ಟಾದರೂ ಜನ ಹಸಿವು ಇಲ್ಲವೆ ನ್ಯೂನಪೋಷಣೆ ಇಲ್ಲವೆ ಇವೆರಡರಿಂದಲೂ ಬಳಲುವರೆಂದು ಧಾರಾಳವಾಗಿ ಹೇಳಬಹುದು.

ಜಗತ್ತಿನ ಆಹಾರಪೂರೈಕೆ ಎಷ್ಟರಮಟ್ಟಿಗೆ ಹೆಚ್ಚಾಗಬೇಕೆಂಬುದನ್ನು ತಿಳಿಯಲು, ತೃತೀಯ ಆಹಾರ ಸಮೀಕ್ಷೆಯಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಎಂದು ಎರಡು ಗುರಿಗಳನ್ನು ಇಟ್ಟುಕೊಳ್ಳಲಾಗಿದೆ. ಬಡತನ ಮತ್ತು ಅಭಾವ ಪರಿಸ್ಥಿತಿ ಮಾಯವಾದರೆ ಆಹಾರದ ಮಟ್ಟವನ್ನು ಎಷ್ಟರಮಟ್ಟಿಗೆ ಸುಧಾರಿಸಬಹುದೆಂಬ ಕಲ್ಪನೆಯನ್ನು ದೀರ್ಘಾವಧಿಯ ಗುರಿಗಳು ಕೊಡುತ್ತವೆ. ಆದರೆ ಅಲ್ಪ ಅವಧಿಯ ಗುರಿಗಳನ್ನು ರೂಪಿಸುವಲ್ಲಿ ಉತ್ಪಾದನಾ ಸಾಧ್ಯತೆ ಮತ್ತು ಕೊಂಡುಕೊಳ್ಳುವ ಶಕ್ತಿ ಇವೆರಡನ್ನೂ ಗಮನಿಸಲಾಯಿತು. ಅಭಿವೃದ್ಧಿ ಹೊಂದದ ರಾಷ್ಟ್ರಗಳಿಗೆ ತಮ್ಮ ಆರ್ಥಿಕ ಯೋಜನೆಗಳನ್ನು ರಚಿಸುವಲ್ಲಿ ಸಹಾಯವಾಗಲೆಂಬುದು ಈ ಅಲ್ಪಾವಧಿಯ ಗುರಿಗಳ ಉದ್ದೇಶ. ಈ ಎರಡೂ ಗುರಿಗಳಲ್ಲಿ ಆಹಾರದ ಮೊತ್ತವನ್ನಷ್ಟೇ ಅಲ್ಲ, ಸತ್ತ್ವವನ್ನೂ ಅಳವಡಿಸಲಾಗಿದೆ.

ಪ್ರೋಟೀನುಗಳ, ವಿಶೇಷವಾಗಿ ಪ್ರಾಣಿಜನ್ಯ ಪ್ರೋಟೀನುಗಳ, ಹೆಚ್ಚಿನ ಅಗತ್ಯವನ್ನೂ ಧಾನ್ಯಾದಿಗಳಿಂದ ದೊರಕಿಸುವ ಕ್ಯಾಲೊರಿಗಳ ಪ್ರಮಾಣವನ್ನೂ ತಗ್ಗಿಸುವ ಅಗತ್ಯವನ್ನು ಈ ಅಂಕಿಗಳು ವ್ಯಕ್ತಪಡಿಸುತ್ತವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಶಾರೀರಿಕ ಅಗತ್ಯಕ್ಕೂ ಹೆಚ್ಚಾಗಿ ಕೆಲವು ಆಹಾರಗಳ, ವಿಶೇಷವಾಗಿ ಪ್ರಾಣಿಜನ್ಯ ಆಹಾರಗಳ, ಸೇವನೆಯಿದ್ದರೂ ಗ್ರಾಹಕರ ಅಭಿರುಚಿ ಮತ್ತು ಬೇಡಿಕೆಯನ್ನು ಅನುಲಕ್ಷಿಸಿ ಪೂರೈಕೆಯ ಗುರಿಗಳನ್ನು ಇಳಿಸಲಾಗಿಲ್ಲ. ಆದರೆ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಧಾನ್ಯ ಹಾಗೂ ಪಿಷ್ಟಗೆಡ್ಡೆಗಳ ಸೇವನೆಯ ಗುರಿಯನ್ನು ಈಗಿನ ಸೇವನೆಯ ಮಟ್ಟಕ್ಕಿಂತ ಕಡಿಮೆಮಾಡಲಾಗಿದೆ. ಉತ್ಪನ್ನಗಳು ಹೆಚ್ಚಿದಂತೆ ಈ ಆಹಾರವನ್ನು ಕಡಿಮೆ ಮಾಡಿ ಇತರ ಉತ್ತಮ ಅಹಾರಗಳ ಸೇವನೆಯನ್ನೂ ಹೆಚ್ಚಿಸುವುದು ಸಾಮಾನ್ಯವಾಗಿದ್ದರಿಂದ ಹೀಗೆ ಮಾಡಿದುದು ಯುಕ್ತವೇ ಆಗಿದೆ. ಅಲ್ಲದೆ ಧಾನ್ಯಾದಿಗಳಿಂದ ದೊರಕಿಸಿದ ಕ್ಯಾಲೊರಿ ಪ್ರಮಾಣವನ್ನು ತಗ್ಗಿಸುವ ಗುರಿಯೊಂದಿಗೆ ಇದು ಸಮಂಜಸವಾಗಿದೆ. ಮೇಲಿನ ಪಟ್ಟಿಯಲ್ಲಿ ಈ ಎರಡೂ ಗುರಿಗಳನ್ನು ಕಾಣಬಹುದು. ಇದರ 3ನೆಯ ಮತ್ತು 5ನೆಯ ಅಂಕಣಗಳಲ್ಲಿ ತಲಾ ಆಹಾರದ ಪೂರೈಕೆ ಎರಡೂ ಗುರಿಗಳ ಪ್ರಕಾರ ಈಗಿರುವುದಕ್ಕೆ ಶೇಕಡ ಎಷ್ಟು ಹೆಚ್ಚಾಗಬೇಕೆಂಬುದನ್ನು ಕಾಣಬಹುದು. ಸದ್ಯದ ಜಾಗತಿಕ ಕೊರತೆ ಪ್ರಾಣಿಜನ್ಯ ಆಹಾರ ಪದಾರ್ಥಗಳಲ್ಲಿ, 6 ಕೋಟಿ ಟನ್ನು, ಕಾಯಿ ಪಲ್ಲೆ ಮತ್ತು ಹಣ್ಣುಹಂಪಲುಗಳಲ್ಲಿ 5 ಕೋಟಿ ಟನ್ನು ಕೊಬ್ಬಿನಲ್ಲಿ 55 ಲಕ್ಷ ಟನ್ನು ಎಂದು ಈ ಸಮೀಕ್ಷೆಯಿಂದ ಗೊತ್ತಾಗುತ್ತದೆ. ಸದ್ಯದ ಕೊರತೆಗಳ ಇಮ್ಮಡಿಯಷ್ಟು ಉತ್ಪಾದನೆ ಹೆಚ್ಚಾದರೆ ಮಾತ್ರ ದೀರ್ಘಾವಧಿಯ ಅಗತ್ಯಗಳಿಗೆ ಸಾಕಷ್ಟಾಗುವುದು.

ಆದರೆ ಈ ಮೇಲಿನ ಅಂದಾಜುಗಳಲ್ಲಿ ಜನಸಂಖ್ಯೆಯ ಹೆಚ್ಚಳವನ್ನು ಗಮನಿಸಿಲ್ಲ. ವಿಶ್ವಸಂಸ್ಥೆ ಮಾಡಿದ ಜನಸಂಖ್ಯೆಯ ಹೆಚ್ಚಳದ ಮೂರು ಅಂದಾಜುಗಳಲ್ಲಿ ಮಧ್ಯಮ ಅಂದಾಜನ್ನು ಇಲ್ಲಿ ತೆಗೆದುಕೊಳ್ಳಬಹುದು. ಇದರ ಪ್ರಕಾರ 1975ರ ಹೊತ್ತಿಗೆ ಜನಸಂಖ್ಯೆ ಕಡಿಮೆ ಕ್ಯಾಲೊರಿ ದೇಶಗಳಲ್ಲಿ 288 ಕೋಟಿ, ಹೆಚ್ಚು ಕ್ಯಾಲೊರಿ ದೇಶಗಳಲ್ಲಿ

ಈಗಿನ ತಲಾ ಆಹಾರ ಪೂರೈಕೆ ಹಾಗೂ ಅಲ್ಪಾವಧಿ ದೀರ್ಘಾವಧಿಗಳಲ್ಲಿ ಬೇಕಾಗುವ ಆಹಾರ

| ಆಹಾರ ಪದಾರ್ಥಗಳು | ಈಗಿನ ಪೂರೈಕೆ (ಪ್ರತಿದಿನ ಗ್ರಾಂಗಳು) | ಅಲ್ಪಾವಧಿ ಅಗತ್ಯಗಳು (ಪ್ರತಿದಿನ ಗ್ರಾಂಗಳು) | ಪೂರೈಕೆಯನ್ನು ಕುರಿತು ಶೇಕಡಾ ಅಗತ್ಯ (3)/(2) x 100 | ದೀರ್ಘಾವಧಿ ಅಗತ್ಯಗಳು (ಪ್ರತಿದಿನ ಗ್ರಾಂಗಳು) | ಅಗತ್ಯ ಪೂರೈಕೆ (5)/(2) x 100 |
|---|---|---|---|---|---|
| 1 | 2 | 3 | 4 | 5 | 6 |
| **ಅ : ಕಡಿಮೆ ಕ್ಯಾಲೊರಿ ದೇಶಗಳು** | | | | | |
| ಧಾನ್ಯಗಳು[1] | 386 | 386 | 100 | 356 | 92 |
| ಪಿಷ್ಟಗೆಡ್ಡೆಗಳು[2] | 194 | 162 | 84 | 148 | 76 |
| ಸಕ್ಕರೆ[3] 31 | 31 | 39 | 126 | 39 | 126 |
| ಬೇಳೆ ಮತ್ತು ಕಾಳುಗಳು | 48 | 68 | 142 | 72 | 150 |
| ಕಾಯಿ ಪಲ್ಲೆ, ಹಣ್ಣು ಹಂಪಲು[4] | 184 | 248 | 135 | 324 | 176 |
| ಮಾಂಸ | 30 | 44 | 147 | 69 | 230 |
| ಮೊಟ್ಟೆ[4]4 | 4 | 8 | 200 | 10 | 250 |
| ಮೀನು[5] | 12 | 20 | 167 | 28 | 233 |
| ಹಾಲು[6] | 80 | 129 | 161 | 166 | 208 |
| ಎಣ್ಣೆ ಮತ್ತು ಕೊಬ್ಬು[7] | 12 | 18 | 150 | 24 | 200 |
| ಒಟ್ಟು ಕ್ಯಾಲೊರಿಗಳು | 2,150 | 2,350 | .... | 2,430 | .... |
| ಧಾನ್ಯಾದಿಗಳಿಂದ ದೊರಕಿಸಿದ ಶೇಕಡಾ ಕ್ಯಾಲೊರಿಗಳು | 78 | 71 | .... | 64 | .... |
| ಒಟ್ಟು ಪ್ರೋಟೀನುಗಳು (ಪ್ರತಿದಿನ : ಗ್ರಾಂಗಳು) | 58 | 69 | (119) | 74 | (128) |
| ಪ್ರಾಣಿಜನ್ಯ ಪ್ರೋಟೀನುಗಳು (ಪ್ರತಿದಿನ : ಗ್ರಾಂಗಳು) | 905 | 15 | (158) | 21 | (221) |
| ತಲಾ ಒಟ್ಟು ಆಹಾರ ಸೂಚ್ಯಂಕ | 100 | 127 | .... | 157 | .... |
| ತಲಾ ಪ್ರಾಣಿಜನ್ಯ ಆಹಾರ ಸೂಚ್ಯಂಕ | 100 | 157 | .... | 233 | .... |
| **ಆ : ಜಗತ್ತು** | | | | | |
| ಧಾನ್ಯಗಳು[1] | 367 | 367 | 100 | 347 | 95 |
| ಪಿಷ್ಟಗೆಡ್ಡೆಗಳು[2] | 230 | 207 | 90 | 197 | 86 |
| ಸಕ್ಕರೆ[3] 49 | 49 | 53 | 108 | 53 | 108 |
| ಬೇಳೆ ಮತ್ತು ಕಾಳುಗಳು | 38 | 52 | 137 | 55 | 145 |
| ಕಾಯಿಪಲ್ಲೆ, ಹಣ್ಣು ಹಂಪಲು[4] | 238 | 282 | 118 | 336 | 141 |
| ಮಾಂಸ | 66 | 76 | 115 | 94 | 142 |
| ಮೊಟ್ಟೆ[4]11 | 11 | 15 | 136 | 16 | 145 |
| ಮೀನು[5] | 14 | 19 | 136 | 25 | 179 |
| ಹಾಲು[6] | | | | | |
| ಎಣ್ಣೆ ಮತ್ತು ಕೊಬ್ಬು[7] | 22 | 27 | 123 | 31 | 141 |
| ಒಟ್ಟು ಕ್ಯಾಲೊರಿಗಳು | 2,420 | 2,560 | .... | 2,620 | ..... |
| ಧಾನ್ಯಾದಿಗಳಿಂದ ದೊರಕಿಸಿದ ಶೇಕಡ ಕ್ಯಾಲೊರಿಗಳು | 70 | 66 | .... | 62 | .... |
| ಒಟ್ಟು ಪ್ರೋಟೀನುಗಳು (ಪ್ರತಿದಿನ : ಗ್ರಾಂಗಳು) | 68 | 75 | (110) | 79 | (116) |
| ಪ್ರಾಣಿಜನ್ಯ ಪ್ರೋಟೀನುಗಳು (ಪ್ರತಿದಿನ ಗ್ರಾಂಗಳು) | 20 | 23 | (115) | 28 | (140) |
| ತಲಾ ಒಟ್ಟು ಆಹಾರ ಸೂಚ್ಯಂಕ100 | 100 | 111 | .... | 123 | .... |
| ತಲಾ ಪ್ರಾಣಿಜನ್ಯ ಆಹಾರ ಸೂಚ್ಯಂಕ | 100 | 116 | .... | 138 | .... |

ವಿವರಣೆ: 1. ಇತರ ಧಾನ್ಯಗಳ ಹಿಟ್ಟು ಮತ್ತು ಮಿಲ್ ಮಾಡಿದ ಅಕ್ಕಿ. 2. ಬಟಾಟೆ ಮುಂತಾದ ತಿನ್ನಲು ಯೋಗ್ಯವಾದ ಗೆಡ್ಡೆಗಳು; 3. ಬೆಲ್ಲ ಮತ್ತಿತರ ಕಚ್ಚಾ ಸಕ್ಕರೆಯೂ ಸೇರಿ; ಆದರೆ ಜೇನು ಹಾಗೂ ಷರಬತ್ತುಗಳನ್ನು (ಸಿರಪ್) ಬಿಟ್ಟು ; 4. ತಾಜಾ ರೂಪದಲ್ಲಿ ; 5. ತಿನ್ನಬಹುದಾದ ಭಾಗದ ಅಂದಾಜು ಮಾಡಿದ ತೂಕ ; 6. ಬೆಣ್ಣೆ ಸೇರಿಲ್ಲ ; ಆದರೆ ಹಾಲಿನ ಇತರ ಪದಾರ್ಥಗಳು ಸೇರಿವೆ ; 7. ಶುದ್ಧ ಕೊಬ್ಬಿನ ಪ್ರಮಾಣವನ್ನಷ್ಟೇ ಗಣನೆಗೆ ತೆಗೆದುಕೊಂಡಿದೆ.

ವಿವರಣೆ : 1. ಇತರ ಧಾನ್ಯಗಳ ಹಿಟ್ಟು ಮತ್ತು ಮಿಲ್ ಮಾಡಿದ ಅಕ್ಕಿ. 2. ಬಟಾಟೆ ಮುಂತಾದ ತಿನ್ನಲು ಯೋಗ್ಯವಾದ ಗೆಡ್ಡೆಗಳು; 3. ಬೆಲ್ಲ ಮತ್ತಿತರ ಕಚ್ಚಾ ಸಕ್ಕರೆಯೂ ಸೇರಿ; ಆದರೆ ಜೇನು ಹಾಗೂ ಷರಬತ್ತುಗಳನ್ನು (ಸಿರಪ್) ಬಿಟ್ಟು ; 4. ತಾಜಾ ರೂಪದಲ್ಲಿ ; 5. ತಿನ್ನಬಹುದಾದ ಭಾಗದ ಅಂದಾಜು ಮಾಡಿದ ತೂಕ ; 6. ಬೆಣ್ಣೆ ಸೇರಿಲ್ಲ ; ಆದರೆ ಹಾಲಿನ ಇತರ ಪದಾರ್ಥಗಳು ಸೇರಿವೆ ; 7. ಶುದ್ಧ ಕೊಬ್ಬಿನ ಪ್ರಮಾಣವನ್ನಷ್ಟೇ ಗಣನೆಗೆ ತೆಗೆದುಕೊಂಡಿದೆ.

106 ಕೋಟಿ ಮತ್ತು ಇಡಿಯ ಜಗತ್ತಿನಲ್ಲಿ 234 ಕೋಟಿಯಷ್ಟಾಗುವುದು. ತಲಾ ಆಹಾರ ಸೇವನೆ ಈಗಿನ ಮಟ್ಟದಲ್ಲೇ ಉಳಿದರೂ ಆಹಾರ ಪೂರೈಕೆ ಕಡಿಮೆ ಕ್ಯಾಲೊರಿ ದೇಶಗಳಲ್ಲಿ 41% ರಷ್ಟು ಮತ್ತು ಇಡಿಯ ಜಗತ್ತಿನಲ್ಲಿ 36% ರಷ್ಟು 1965ರ ಹೊತ್ತಿಗೆ ಏರಬೇಕಾಗುತ್ತದೆ. 2000ದಲ್ಲಿ ಅವು ಅನುಕ್ರಮವಾಗಿ 150% ಮತ್ತು 123% ರಷ್ಟು ಬೇಕಾಗುತ್ತದೆ. ಆದರೆ ನಾವು ತಲಾ ಆಹಾರ ಸೇವನೆಯ ಗುರಿಗಳನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ಆಗ ಮುಂದೆ ಕೊಟ್ಟಿರುವ ಪಟ್ಟಿಯಲ್ಲಿ ಸೂಚಿಸಿರುವಂತೆ ಆಹಾರ ಪೂರೈಕೆ ಹೆಚ್ಚಾಗ ಬೇಕಾಗುತ್ತದೆ ; ಅಲ್ಪ ಹಾಗೂ ದೀರ್ಘಾವಧಿಯ ಗುರಿಗಳ ಪ್ರಕಾರ ಬೇಕಾಗುವ ಆಹಾರ ಪೂರೈಕೆಯ ಸೂಚ್ಯಂಕಗಳು (ಜನಸಂಖ್ಯೆಯ ಹೆಚ್ಚಳವನ್ನು ಲಕ್ಷಿಸಿ)

| ಆಹಾರ ಪದಾರ್ಥಗಳು | ಅಲ್ಪಾವಧಿಯ ಗುರಿ | | ದೀರ್ಘಾವಧಿಯ ಗುರಿ | |
|---|---|---|---|---|
| | ಕಡಿಮೆ ಕ್ಯಾಲೊರಿ ದೇಶಗಳು | ಜಗತ್ತು | ಕಡಿಮೆ ಕ್ಯಾಲೊರಿ ದೇಶಗಳು | ಜಗತ್ತು |
| ಧಾನ್ಯಗಳು | 140 | 135 | 230 | 210 |
| ಬೇಳೆಗಳು | 200 | 188 | 375 | 325 |
| ಪ್ರಾಣಿಜನ್ಯ ಆಹಾರ | 220 | 160 | 583 | 308 |
| ಒಟ್ಟು ಆಹಾರ | 179 | 151 | 393 | 274 |

ದೇಶಗಳ ಒಳಗಣ ಆಹಾರ ಪೂರೈಕೆಯ ವಿಷಮ ವಿತರಣವನ್ನು ಗಮನಿಸಿದರೆ ಮೇಲೆ ಕಾಣಿಸಿರುವುದಕ್ಕಿಂತಲೂ ಹೆಚ್ಚು ಆಹಾರ ಪೂರೈಕೆ ಬೇಕಾದೀತು. ಅಂತೂ ಸತ್ತ್ವಯುತ ಆಹಾರಸೇವನೆ ಸಾಧ್ಯವಾಗಬೇಕಾದರೆ ಜಗತ್ತಿನ ಒಟ್ಟು ಆಹಾರ ಪೂರೈಕೆ ಒಂದೂವರೆ ಪಟ್ಟು ಹೆಚ್ಚಾಗಬೇಕು.

**ಉತ್ಪಾದನೆಯ ಪ್ರವೃತ್ತಿಗಳು :** ಈಗ ವಿವಿಧ ಆಹಾರ ಪದಾರ್ಥಗಳು ಎಲ್ಲೆಲ್ಲಿ ಎಷ್ಟೆಷ್ಟು ಮತ್ತು ಯಾವ ಗತಿಯಿಂದ ಬೆಳೆಯುತ್ತಿವೆಯೆಂದು ನೋಡಬಹುದು. ಜಗತ್ತಿನ ಆಹಾರ ಎಲ್ಲೆಡೆಗೂ ಒಂದೇ ಬಗೆಯಾಗಿಲ್ಲ ; ಅನೇಕ ಜನಾಂಗಗಳಲ್ಲಿ ಬೇಟೆ ಆಹಾರದ ಒಂದು ಪ್ರಮುಖ ಮೂಲವಾಗಿದೆ. ಹಾವು, ಕಪ್ಪೆ, ಇಲಿ ಇತ್ಯಾದಿಗಳು ಸಹ ಕೆಲವರಿಗೆ ಆಹಾರವೆನಿಸಿವೆ. ಆದರೆ ಈ ಮೂಲಕ ದೊರಕಿಸಿದ ಆಹಾರದ ಬಗ್ಗೆ ಸರಿಯಾದ ಅಂಕಿಅಂಶಗಳನ್ನೊದಗಿಸು ವುದು ಕಷ್ಟ ; ಇದರ ಮೊತ್ತವೂ ಅಲಕ್ಷಿಸಬಹುದಾದಷ್ಟು ಸಣ್ಣದು. ಬಹುಸಂಖ್ಯಾತ ಜನ ಯಾವ ಆಹಾರ ಬೆಳೆಸುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡಿರುವರೋ ಅಂಥವುಗಳ ಬಗ್ಗೆ ವಿವರಗಳು ಲಭ್ಯವಿದೆ. ಇವು ವನಸ್ಪತಿಜನ್ಯ ಆಹಾರ (ಧಾನ್ಯಗಳು, ಬೇಳೆಕಾಳುಗಳು, ಎಣ್ಣೆ, ಹಣ್ಣುಹಂಪಲು ಹಾಗೂ ಕಾಯಿಪಲ್ಲೆ), ಭೂಚರ ಪ್ರಾಣಿಜನ್ಯ ಆಹಾರ (ಮಾಂಸ, ತತ್ತಿ, ಹಾಲು) ಹಾಗೂ ಜಲಜನ್ಯ ಆಹಾರ (ಮೀನು, ಏಡಿ) ಇತ್ಯಾದಿಗಳಾಗಿವೆ. ಕೃಷಿಜನ್ಯ ಆಹಾರಗಳಲ್ಲಿ ವನಸ್ಪತಿಜನ್ಯವಷ್ಟೇ ಅಲ್ಲ, ಮಾಂಸ, ತತ್ತಿ, ಹಾಲುಗಳನ್ನೂ ಸೇರಿಸುತ್ತಾರೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇಂಥ ಮಿಶ್ರಕೃಷಿ ಸಾಮಾನ್ಯವಾಗಿದೆ. ಈ ಆಹಾರಗಳ ಬಗ್ಗೆ ಸಹ ನೂರಕ್ಕೆ ನೂರರಷ್ಟು ನಂಬಲರ್ಹವಾದ ಅಂಕಿಗಳು ಲಭ್ಯವಿಲ್ಲ. ವಿಶೇಷತಃ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅಂಕಿಗಳ ಸಂಕಲನ ಇನ್ನೂ ಸುಧಾರಿಸಬೇಕಾಗಿದೆ.

ಪೂರೈಕೆಯ ಸಮಸ್ಯೆ ಕಡಿಮೆ ಉತ್ಪಾದನೆಯಷ್ಟೇ ಅಲ್ಲ. ಉತ್ಪಾದನೆಯ ಕೆಲಭಾಗ ಮಾತ್ರವೇ ಕೃಷಿಕರು ತಿಂದು ಮಿಕ್ಕಿದ್ದು–ಪೇಟೆಗೆ ಬರುತ್ತದೆ. ಕೃಷಿಪ್ರಧಾನ ದೇಶಗಳಲ್ಲಿ ಔದ್ಯೋಗೀಕರಣ ಹೆಚ್ಚಿದಂತೆ ಕೃಷಿವರ್ಗದ ಜನ ನಗರಗಳಿಗೆ ವಲಸೆ ಹೋಗುವುದು ಹೆಚ್ಚುವುದು. ಇದರೊಡನೆ ಪೇಟೆಗೆ ಬರುವ ಆಹಾರದ ಪ್ರಮಾಣ ಹೆಚ್ಚಾಗಬೇಕಾಗುತ್ತದೆ. ಆದರೆ ಕೃಷಿಯಲ್ಲಿ ಉಳಿದ ಜನ ತಮ್ಮ ಆಹಾರಸೇವೆಯನ್ನು ಹೆಚ್ಚಿಸಿದರೆ ನಗರಗಳ ಮಟ್ಟಿಗೆ ಆಹಾರ ಪೂರೈಕೆಯ ಪ್ರಶ್ನೆ ಕಠಿಣವಾಗುತ್ತದೆ. ಆದ್ದರಿಂದ ಉತ್ಪಾದನೆ ಹೆಚ್ಚಿಸುವುದರೊಂದಿಗೆ ನಗರಗಳಿಗೆ ಆಗುವ ಪೂರೈಕೆಯನ್ನು ಹೆಚ್ಚಿಸಲೂ ವಿಶೇಷ ಪ್ರಯತ್ನ ಮಾಡಬೇಕಾಗುವುದು. ನಾವಿಲ್ಲಿ ಕೆಳಗೆ ಕೊಟ್ಟ ವಿವರಗಳಿಗೆ ಉತ್ಪಾದನೆಯನ್ನಷ್ಟೇ ಗಮನಿಸಿದರೂ, ಪೇಟೆಗಾಗಿ ಬರುವ ಪೂರೈಕೆಯ ಮಹತ್ತ್ವವನ್ನು ಮರೆಯಲಾಗದು.

ಮೇಲಿನ ವಿಭಾಗದಲ್ಲಿ ಕಾಣಿಸಿದಂತೆ ಧಾನ್ಯಗಳು ಜಗತ್ತಿನ ಆಹಾರ ವ್ಯವಸ್ಥೆಯಲ್ಲಿ ಅತಿ ಪ್ರಮುಖ ಪಾತ್ರ ವಹಿಸಿವೆ. ಬಡವರಲ್ಲಿಯಂತೂ ಆಹಾರದ ಹೆಚ್ಚಿನ ಅಂಶಗಳನ್ನು ಇವೇ ಪೂರೈಸುತ್ತವೆ. ಧಾನ್ಯಗಳಲ್ಲಿ ಪ್ರಮುಖವಾದುವು ಅಕ್ಕಿ, ಗೋದಿ, ಮಿಲೊ (ಜೋಳ, ಸಜ್ಜೆ, ರಾಗಿ, ನವಣೆ ಇತ್ಯಾದಿ), ಗೊಂಜೋಳ ಅಥವಾ ಮುಸುಕಿನ ಜೋಳ (ಮೇಸ್ ಅಥವಾ ಕಾರ್ನ್), ಬಾರ್ಲಿ, ಓಟ್ಸ್ ಹಾಗೂ ರೈ. ಇವುಗಳಲ್ಲಿ ಅಕ್ಕಿಯೇ ಅತ್ಯಂತ ಮಹತ್ತ್ವದ್ದು. ಜಗತ್ತಿನ ಅರ್ಧಕ್ಕೂ ಹೆಚ್ಚು ಜನಕ್ಕೆ ಅಕ್ಕಿಯೇ ಮುಖ್ಯ ಆಹಾರ. ಏಷ್ಯದಲ್ಲಿ ಇದೇ ಪ್ರಧಾನ. ವಿವಿಧ ಖಂಡಗಳಲ್ಲಿ ಅಕ್ಕಿ ಮತ್ತು ಗೋದಿ ಬೆಳೆವ ಭೂಮಿ ಹಾಗೂ ಉತ್ಪಾದನೆಯನ್ನೂ ಅವುಗಳಲ್ಲಿರುವ ಬದಲಾವಣೆಗಳನ್ನೂ ಗಮನಿಸಬಹುದು. ಜಗತ್ತಿನ ಅಕ್ಕಿ ಬೆಳೆವ ಭೂಮಿಯಲ್ಲಿ ಮೂರನೆಯ ಎರಡರಷ್ಟಕ್ಕೂ ಹೆಚ್ಚುಪಾಲು ಏಷ್ಯಕ್ಕೆ ಸೇರಿದ್ದು. ಥಾಯ್‌ಲೆಂಡಿನಲ್ಲಿ ಶೇ.

ಅಕ್ಕಿ (ಭತ್ತ) ಹಾಗೂ ಗೋಧಿ ಬೆಳೆವ ಭೂಮಿ ಮತ್ತು ಅವುಗಳ ಉತ್ಪಾದನೆ ಹಿಂದಿನ ಅಂಕಿಅಂಶದಂತೆ

| ಪ್ರದೇಶ | ಭತ್ತ | | ಗೋಧಿ | |
|---|---|---|---|---|
| | 1948–49 ರಿಂದ 1952–53ರ ವರೆಗೆ ವಾರ್ಷಿಕ ಸರಾಸರಿ | 1962–63ರಿಂದ 1964–65ರ ವರೆಗೆ ವಾರ್ಷಿಕ ಸರಾಸರಿ | 1948–49ರಿಂದ 1952–53ರ ವರೆಗೆ ವಾರ್ಷಿಕ ಸರಾಸರಿ | 1962–63ರಿಂದ 1964–65ರ ವರೆಗೆ ವಾರ್ಷಿಕ ಸರಾಸರಿ |
| ಅ: ಭೂಮಿ (ಸಾವಿರ ಹೆಕ್ಟೇರುಗಳಲ್ಲಿ) ಏಷ್ಯ (ಕೆಂಪು ಚೀನ ಬಿಟ್ಟು) | 69,610 | 82,223 | 25,770 | 36,570 |
| ಯೂರೋಪ್ | 310 | 320 | 28,010 | 28,683 |
| ಸೋವಿಯತ್ ದೇಶ | 136 | 106 | 42,633 | 66,640 |
| ಉತ್ತರ ಮತ್ತು ಮಧ್ಯ ಅಮೆರಿಕ | 1,140 | 1,323 | 28,900 | 30,783 |
| ದಕ್ಷಿಣ ಅಮೆರಿಕ | 2,390 | 4,390 | 6,930 | 7,297 |
| ಆಫ್ರಿಕ | 2,780 | 3,230 | 6,040 | 7,203 |
| ಓಷಿಯಾನಿಯ | 30 | 38 | 4,670 | 7,543 |
| ಜಗತ್ತು | 1,03,000 | 1,24,900 | 1,69,800 | 2,10,933 |
| ಬ: ಉತ್ಪಾದನೆ (ಸಾವಿರ ಮೆಟ್ರಿಕ್ ಟನ್ನುಗಳಲ್ಲಿ) | | | | |
| ಏಷ್ಯ | 97,600 | 1,46,300 | 21,150 | 32,947 |
| ಯೂರೋಪ್ | 1,320 | 1,547 | 41,150 | 58,840 |
| ಸೋವಿಯತ್ ದೇಶ | 202 | 270 | 32,750 | 64,893 |
| ಉತ್ತರ ಮತ್ತು ಮಧ್ಯ ಅಮೆರಿಕ | 2,520 | 4,120 | 45,060 | 50,933 |
| ದಕ್ಷಿಣ ಅಮೆರಿಕ | 4120 | 7,850 | 7,420 | 10,390 |
| ಆಫ್ರಿಕ | 3,460 | 5,575 | 4,300 | 6,140 |
| ಓಷಿಯಾನಿಯ | 90 | 168 | 5,300 | 9,507 |
| ಜಗತ್ತು | 1,65,300 | 2,56,270 | 1,71,100 | 2,61,971 |

90 ರಷ್ಟು, ಮೊದಲಿನ ಇಂಡೋಚೀನ ಪ್ರದೇಶದಲ್ಲಿ ಶೇ. 85 ರಷ್ಟು, ಭಾರತದಲ್ಲಿ ಶೇ. 65 ರಷ್ಟು, ಬರ್ಮ ಹಾಗೂ ಇಂಡೋನೇಷ್ಯಗಳಲ್ಲಿ ಶೇ. 57 ರಷ್ಟು ಸಾಗುವಳಿ ಭೂಮಿ ಭತ್ತವನ್ನು ಬೆಳೆಯುತ್ತವೆ. ಅಕ್ಕಿಗೆ ಹವೆ ಉಷ್ಣವಾಗಿದ್ದು ನೀರು ಹಿಡಿಯುವಂಥ ನೆಲವಿರಬೇಕು. ನದೀ ಮುಖಜಭೂಮಿಯಂತೂ ಅಕ್ಕಿಗೆ ಅತ್ಯುತ್ತಮ. ಏಷ್ಯದಲ್ಲಿ ಮುಖ್ಯವಾಗಿ ಮೇಲ್ಕಂಡ ದೇಶಗಳಲ್ಲೂ ಪಾಕಿಸ್ತಾನ, ಮತ್ತು ಚೀನಗಳಲ್ಲೂ ಈ ಬೆಳೆ ಬೆಳೆಯುತ್ತದೆ. ಏಷ್ಯದ ಹೊರಗೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲೂ ಬ್ರೆಜಿಲ್ ಮತ್ತು ಈಜಿಪ್ಟ್‌ಗಳಲ್ಲೂ ಇದನ್ನು ಬೆಳೆಯುತ್ತಾರೆ. ಮೇಲಿನ ಪಟ್ಟಿಯಲ್ಲಿ ಸೂಚಿಸಿರುವ ಅವಧಿಗಳ ನಡುವೆ ಅಕ್ಕಿ ಬೆಳೆಯುವ ಭೂಮಿ 21% ರಷ್ಟು ಹೆಚ್ಚಾದರೆ, ಉತ್ಪಾದನೆ 55% ರಷ್ಟು ಏರಿತು. ವರ್ಷವಿಡೀ ಮಳೆಯಿರುವ ಪ್ರದೇಶಗಳಲ್ಲೂ ನೀರಾವರಿಯ ಸೌಲಭ್ಯವಿದ್ದಲ್ಲೂ ವರ್ಷದಲ್ಲಿ ಅಕ್ಕಿಯ ಎರಡು ಬೆಳೆಗಳನ್ನು ತೆಗೆಯಬಹುದು. ಅಕ್ಕಿಯ ಅನಂತರದ ಸ್ಥಾನ ಗೋದಿಗೆ. ಅಕ್ಕಿಗೆ ಬೇಕಾದುದಕ್ಕಿಂತಲೂ ಗೋದಿಗೆ ಹೆಚ್ಚು ಭೂಮಿ ಬೇಕಾಗುತ್ತದೆ. ಅನೇಕ ತರದ ಪ್ರದೇಶಗಳಲ್ಲಿ ಇದನ್ನೂ ಬೆಳೆಸಲು ಬರುತ್ತದೆ.

ಆದರೂ ಮೊದಲು ತಂಪು ಹಾಗೂ ಆರ್ದ್ರ ಹವೆಯಿದ್ದು ಅನಂತರ ಬೆಚ್ಚಗಿನ ಹಾಗೂ ಒಣ ಹವಾಮಾನ ಇದಕ್ಕೆ ಅತ್ಯುತ್ತಮ. ಜಗತ್ತಿನ ಬಹು ಅಂಶದ ಗೋದಿಯನ್ನು ಚಳಿಗಾಲದಲ್ಲೇ ಬಿತ್ತುತ್ತಾರೆ. ಗೋದಿಯನ್ನು ಬೆಳೆಯುವ ಮುಖ್ಯ ಪ್ರದೇಶಗಳೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಾಗಳ ಬಯಲು ಪ್ರದೇಶಗಳು, ಪೂರ್ವ ಹಾಗೂ ಮಧ್ಯ ಅರ್ಜೆಂಟೈನ, ಭೂಮಧ್ಯ ಸಮುದ್ರದ ಸುತ್ತಮುತ್ತ, ಆಗ್ನೇಯ ಯೂರೋಪ್, ಸೋವಿಯತ್ ದೇಶ, ವಾಯವ್ಯ ಹಾಗೂ ಮಧ್ಯ ಭಾರತ. ಈಶಾನ್ಯ ಚೀನ ಮತ್ತು ಆಗ್ನೇಯ ಆಸ್ಟ್ರೇಲಿಯ. ಜಗತ್ತಿನ ಶೇ. 80 ಕ್ಕೂ ಹೆಚ್ಚು ಗೋದಿಯ ಪೂರೈಕೆ ಈ ಭಾಗಗಳಿಂದಲೇ ಆಗುತ್ತದೆ. ಮೇಲಿನ ಪಟ್ಟಿಯಲ್ಲಿ ಕಾಣಿಸಿದ ಅವಧಿಯಲ್ಲಿ ಗೋದಿ ಬೆಳೆವ ಭೂಮಿ ಶೇ. 24ರಷ್ಟು ಹೆಚ್ಚಾದರೆ, ಉತ್ಪಾದನೆ ಶೇ. 53ರಷ್ಟು ಹೆಚ್ಚಾಯಿತು. ಮಿಲೆಟ್‌ಗಳು (ಸಾರ್ಗಮ್ ಒಳಗೊಂಡು) ಮತ್ತು ಗೋದಿ ಜೋಳಗಳನ್ನು ಬೆಳೆವ ಭೂಮಿ ಮತ್ತು ಅವುಗಳ ಉತ್ಪಾದನೆ ಯುದ್ಧಾನಂತರ ಮತ್ತು ಇತ್ತೀಚೆಗೆ ಎಲ್ಲೆಲ್ಲಿ ಎಷ್ಟೆಷ್ಟಿದ್ದುವು ಎಂಬುದನ್ನು ಮುಂದಿನ ಪಟ್ಟಿಯಲ್ಲಿ ನೋಡಬಹುದು.

ಮಿಲೆಟ್‌ಗಳು ಮತ್ತು ಸಾರ್ಗಮ್ ಹಾಗೂ (ಮುಸುಕಿನ ಜೋಳಗಳನ್ನು ಬೆಳೆದ ಭೂಮಿ, ಅವುಗಳ ಉತ್ಪಾದನೆ ವಾರ್ಷಿಕ ಸರಾಸರಿ) ಮಿಲೆಟ್ ಮತ್ತು ಸಾರ್ಗಮ್‌ಗಳನ್ನು ಯುರೋಪ್ ಮತ್ತು ಉತ್ತರ ಅಮೆರಿಕಗಳಲ್ಲಿ ಪಶುಗಳಿಗೆ ಹೆಚ್ಚಾಗಿ ಉಪಯೋಗಿಸಿದರೆ ಏಷ್ಯ, ಆಫ್ರಿಕಗಳಲ್ಲಿ ಅವು ಮುಖ್ಯವಾಗಿ ಮನುಷ್ಯರ ಆಹಾರವೆನಿಸಿವೆ. ಈ ಧಾನ್ಯಗಳಿಗೆ ಹೆಚ್ಚು ಫಲವತ್ತಾದ ಭೂಮಿಯೇ ಇರಬೇಕೆಂಬ ನಿಯಮವಿಲ್ಲ. ಬೇರೆ ಬೆಳೆಗಳು ಬಾರದ ಪ್ರದೇಶಗಳಲ್ಲೂ ಇವು ಬೆಳೆಯುತ್ತವೆ ; ಅಲ್ಲದೆ ಬೇಗನೆ ಫಲವನ್ನು ಕೊಡುತ್ತವೆ. ಭಾರತ ಚೀನಗಳು ಮಿಲೆಟ್‌ಗಳ ಪ್ರಮುಖ ಉತ್ಪಾದನ ರಾಷ್ಟ್ರಗಳು. ಇಲ್ಲಿ ಇವು ಮುಖ್ಯವಾಗಿ ಅಕ್ಕಿ ಅಥವಾ ಗೋಧಿಯನ್ನು ಕೊಂಡು ತಿನ್ನಲು ಸಾಧ್ಯವಿಲ್ಲದ ಬಡವರ ಆಹಾರಗಳಾಗಿವೆ. ಸಾರ್ಗಮ್ ಮುಖ್ಯವಾಗಿ ಏಷ್ಯ, ಆಫ್ರಿಕ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬೆಳೆಯುತ್ತದೆ. ಜಗತ್ತಿನಲ್ಲಿ ಇವೆರಡನ್ನೂ ಬೆಳೆವ ಭೂಮಿ ಮೇಲಿನ ಪಟ್ಟಿಯಲ್ಲಿ ಕಾಣಿಸಿದ ಅವಧಿಯಲ್ಲಿ ಶೇ. 12ರಷ್ಟು ಮಾತ್ರವೇ ಹೆಚ್ಚಾದರೂ ಉತ್ಪಾದನೆ ಶೇ. 63ರಷ್ಟು ಹೆಚ್ಚಾಯಿತು. ಮುಸುಕಿನಜೋಳ ಜಗತ್ತಿನಲ್ಲಿ ಸುಮಾರು 6 ಕೋಟಿ ಜನರಿಗೆ ಆಹಾರವಾದರೂ ಮುಖ್ಯವಾಗಿ ಅದು ಪಶುಗಳ ಆಹಾರ. ಜಗತ್ತಿನ ಎಲ್ಲೆಡೆ ಇದನ್ನು ಕಾಣಬಹುದಾದರೂ ಅಮೆರಿಕದಲ್ಲಿ ಇದು ವಿಶೇಷ. ಬಾರ್ಲಿ ಅನೇಕ ತರದ ಹವಾಮಾನಗಳಲ್ಲಿ ಬೆಳೆಯಬಲ್ಲದು– ಉತ್ತರಮೇರುವೃತ್ತದಾಚೆಯಿಂದ ಹಿಡಿದು ಸಹರಾ ಮರುಭೂಮಿಯವರೆಗೂ ಭಾರತದ ಬಯಲುಪ್ರದೇಶಗಳಿಂದ ಟಿಬೆಟ್ಟಿನ ಪ್ರಸ್ಥಭೂಮಿಯವರೆಗೂ ಅನೇಕ ತರದ ಹವಾಮಾನಗಳಲ್ಲಿ ಬಾರ್ಲಿ ಬೆಳೆಯಬಲ್ಲುದು. ಪಶುಗಳಿಗೆ ಆಹಾರವಾದ ಬಾರ್ಲಿ, ಮಾಲ್ಟ್ ಮಾಡುವ ಬಾರ್ಲಿ ಎಂಬ ಎರಡು ಪ್ರಭೇದಗಳು ಈ ಧಾನ್ಯದಲ್ಲುಂಟು. ಎರಡನೆಯದಕ್ಕೆ ಮೊದಲನೆಯದಕ್ಕಿಂತ ಉತ್ತಮ ಭೂಮಿ ಬೇಕು. ಸೋವಿಯತ್ ದೇಶ, ಚೀನ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳು ಬಾರ್ಲಿಯ ಪ್ರಮುಖ ಉತ್ಪಾದಕ ರಾಷ್ಟ್ರಗಳು. ಯುದ್ಧಾನಂತರದ ವಾರ್ಷಿಕ ಸರಾಸರಿ ತೆಗೆದುಕೊಂಡರೆ ಬಾರ್ಲಿ ಬೆಳೆವ ಭೂಮಿ ಜಗತ್ತಿನಲ್ಲಿ 52 ದಶಲಕ್ಷ ಹೆಕ್ಟೇರು ; 59 ದಶಲಕ್ಷ ಮೆಟ್ರಿಕ್ ಟನ್ ಉತ್ಪಾದನೆ, ಸರಾಸರಿ ತೆಗೆದುಕೊಂಡರೆ ಈ ಅಂಶಗಳು ಅನುಕ್ರಮವಾಗಿ 67 ದಶಲಕ್ಷ ಹೆಕ್ಟೇರ್ ಮತ್ತು 99 ದಶಲಕ್ಷ ಮೆಟ್ರಿಕ್ ಟನ್ನುಗಳ ಮಟ್ಟಕ್ಕೆ ತಲುಪಿದುವು. ಅಂದರೆ ಇವುಗಳ ಶೇಕಡ ಹೆಚ್ಚಳ ಅನುಕ್ರಮವಾಗಿ 29 ಮತ್ತು 68ರಷ್ಟಾಯಿತು. ಓಟ್ಸನ್ನು ಇತರ ಬೆಳೆಗಳೊಡನೆ ಪರ್ಯಾಯವಾಗಿ (ರೊಟೇಷನ್) ಬೆಳೆಯಬಹುದು. ತಂಪಾದ, ಆರ್ದ್ರ ಹವೆಯಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಉತ್ತರ ಅಮೆರಿಕ, ಯುರೋಪ್ ಮತ್ತು ಸೋವಿಯತ್ ದೇಶಗಳಲ್ಲಿ ಬಹುಪಾಲು ಓಟ್ಸ್ ಬೆಳೆಯುತ್ತಾರೆ. ಜಗತ್ತಿನಲ್ಲಿ ಇದನ್ನು ಬೆಳೆವ ಭೂಮಿ ಯುದ್ಧಾನಂತರದಲ್ಲಿ (ವಾರ್ಷಿಕ ಸರಾಸರಿ) 54 ದಶಲಕ್ಷ ಹೆಕ್ಟೇರ್ ಇದ್ದದ್ದು ಅನಂತರ 34 ದಶಲಕ್ಷ ಹೆಕ್ಟೇರ್‌ಗಳಿಗೆ ಇಳಿಯಿತು. ಉತ್ಪಾದನೆ ಇದೇ ಅವಧಿಯಲ್ಲಿ 62 ದಶಲಕ್ಷ ಮೆಟ್ರಿಕ್‌ಟನ್ನುಗಳಿಂದ 50 ದಶಲಕ್ಷಕ್ಕಿಳಿಯಿತು. ಇದೇ ಇಳಿಕೆ ರಯ ಧಾನ್ಯದಲ್ಲಿಯೂ ಕಂಡುಬರುತ್ತದೆ. ಇದನ್ನು

ಮಿಲೆಟ್‌ಗಳು ಮತ್ತು ಸಾರ್ಗಮ್ ಹಾಗೂ (ಮುಸುಕಿನ ಜೋಳಗಳನ್ನು ಬೆಳೆದ ಭೂಮಿ, ಅವುಗಳ ಉತ್ಪಾದನೆ ವಾರ್ಷಿಕ ಸರಾಸರಿ)

| ಪ್ರದೇಶ | ಮಿಲೆಟ್‌ಗಳು ಮತ್ತು ಸಾರ್ಗಮ್ | | ಮುಸುಕಿನಜೋಳ (ಮೇಜ್) | |
|---|---|---|---|---|
| | 1948–49 ರಿಂದ 1952–53 | 1952–53 ರಿಂದ 1963–64 | 1948–49 ರಿಂದ 1952–53 | 1962–63 ರಿಂದ 1964–65 |
| ಅ: ಭೂಮಿ (ಸಾವಿರ ಹೆಕ್ಟೇರುಗಳಲ್ಲಿ) | | | | |
| ಏಷ್ಯ (ಕೆಂಪು ಚೀನ ಬಿಟ್ಟು) | 35,530 | 38,535 | 8,660 | 12,113 |
| ಯೂರೋಪ್ | 180 | 115 | 10,350 | 11,290 |
| ಸೋವಿಯತ್ ದೇಶ | 3,597 | 4,150 | 4,385 | 14,180 |
| ಉತ್ತರ ಮತ್ತು ಮಧ್ಯ ಅಮೆರಿಕ | 3,560 | 5,775 | 35,930 | 32,580 |
| ದಕ್ಷಿಣ ಅಮೆರಿಕ | 186* | 1062 | 8310 | 12,630 |
| ಆಫ್ರಿಕ | 20,650 | 25,705 | 10,200 | 13,890** |
| ಓಷಿಯಾನಿಯ | 57 | 153 | 80 | 90 |
| ಜಗತ್ತು | 91,600 | 1,03,100 | 87,600 | 1,06,567 |
| ಆ: ಉತ್ಪಾದನೆ (ಸಾವಿರ ಮೆಟ್ರಿಕ್ ಟನ್ನುಗಳಲ್ಲಿ) | | | | |
| ಏಷ್ಯ (ಕೆಂಪು ಚೀನ ಬಿಟ್ಟು) | 16,660 | 18,820 | 6,900 | 13,687 |
| ಯೂರೋಪ್ | 155 | 190 | 12,850 | 25,677 |
| ಸೋವಿಯತ್ ದೇಶ | 1,705 | 2,312 | 5,751 | 23,461** |
| ಉತ್ತರ ಮತ್ತು ಮಧ್ಯ ಅಮೆರಿಕ | 4,300 | 14,715 | 79,420 | 1,04,717 |
| ದಕ್ಷಿಣ ಅಮೆರಿಕ | 234 | 1,500 | 10,320 | 17,127 |
| ಆಫ್ರಿಕ | 11,970 | 17,375 | 8,630 | 15,600 |
| ಓಷಿಯಾನಿಯ | 75 | 247 | 140 | 197 |
| ಜಗತ್ತು | 46,200 | 75,250 | 1,38,100 | 2,20,467 |

* ಸಾರ್ಗಮ್ ಬೆಳೆದ ಭೂಮಿಯ ಬಗ್ಗೆ ವಿವರಗಳು ಲಭ್ಯವಿಲ್ಲ.

** 1962–63ರ ಅಂಕಿಗಳು ಮಾತ್ರ

ಬೆಳೆವ ಭೂಮಿಯ ಯುದ್ಧಾನಂತರ ವಾರ್ಷಿಕ ಸರಾಸರಿ 38 ದಶಲಕ್ಷ ಹೆಕ್ಟೇರುಗಳಿದ್ದದ್ದು ಮುಂದೆ 28 ದಶಲಕ್ಷಕ್ಕಿಳಿಯಿತು. ಉತ್ಪಾದನೆ ಇದೇ ಅವಧಿಯಲ್ಲಿ 38 ದಶಲಕ್ಷ ಮೆಟ್ರಿಕ್ ಟನ್ನುಗಳಿಂದ 34 ದಶಲಕ್ಷಕ್ಕಿಳಿಯಿತು. ರೈ ಯುರೋಪಿನಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಇದು ಮುಖ್ಯವಾಗಿ ಬಡವರ ಧಾನ್ಯ. ಈ ಧಾನ್ಯಗಳೇ ಅಲ್ಲದೆ ಬಟಾಟೆ, ಶೇಂಗಾ, ಸೋಯಾಬೀನ್, ತಂಬಾಕು, ಹತ್ತಿ ಮತ್ತು ಸೆಣಬುಗಳನ್ನು ತೆಗೆದುಕೊಂಡರೆ ಜಾಗತಿಕ ಉತ್ಪಾದನೆಯ ವೆಚ್ಚಳದಲ್ಲಿ ಶೇ. 64ರಷ್ಟು ಇತ್ತು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಉತ್ಪಾದನೆಯ ವೆಚ್ಚಳದ ಶೇ. 70ರಷ್ಟು ಆದದ್ದು ಉತ್ಪಾದನಾ ಸಾಮರ್ಥ್ಯದ ಸುಧಾರಣೆಯಿಂದಲೇ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಉತ್ಪಾದನೆಯ ಬಹುಮಟ್ಟಿನ ಹೆಚ್ಚಳವಾಗಿರುವುದು ಉತ್ಪಾದನೆಯ ಸಾಮರ್ಥ್ಯದ ಸುಧಾರಣೆಯಿಂದಲೇ. ಆದರೆ, ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಈ ಹೆಚ್ಚಳದ ಬಹಳ ಭಾಗ ಹೆಚ್ಚು ಭೂಮಿಯ ಸಾಗುವಳಿಯಿಂದ ಆಯಿತು. ಮುಂದೆ ಕೊಟ್ಟಿರುವ ಪಟ್ಟಿಯಲ್ಲಿ ಇತರ ಕೆಲ ಆಹಾರಗಳ ವಿವರಗಳನ್ನು ನೋಡಬಹುದು.

ಅತಿ ಪುರಾತನಕಾಲದಿಂದ ಹಾಲು ಮಾನವನ ಆಹಾರವಾಗಿದ್ದು, ಜಗತ್ತಿನ ಎಲ್ಲ ಭಾಗಗಳಲ್ಲೂ ಇದನ್ನು ಕಾಣಬಹುದು. ವಿವಿಧ ಪ್ರಾಣಿಗಳಿಂದ ಹಾಲನ್ನು ಪಡೆಯುತ್ತಿದ್ದರೂ ಆಕಳ ಹಾಲೇ ಹೆಚ್ಚು ಮುಖ್ಯ. ಅಭಿವೃದ್ಧಿ ಹೊಂದದ ರಾಷ್ಟ್ರಗಳು ಹಾಲಿನ ಉತ್ಪಾದನೆಯಲ್ಲಿ ಹಿಂದುಳಿದಿವೆ. ಜಗತ್ತಿನಲ್ಲಿ ಹೈನಿನ ಅತಿ ಹೆಚ್ಚಿನ ಉತ್ಪಾದಕ ರಾಷ್ಟ್ರಗಳೆಂದರೆ ಡೆನ್ಮಾರ್ಕ್, ನೆದರ್ಲೆಂಡ್ ಮತ್ತು ನ್ಯೂಜಿಲೆಂಡ್‌ಗಳು. ಇಂಗ್ಲೆಂಡ್, ಜರ್ಮನಿ, ಸ್ವಿಟ್ಜರ್ಲೆಂಡ್ ಉತ್ತರ ಅಮೆರಿಕ ಹಾಗೂ ಸೋವಿಯತ್ ದೇಶಗಳೂ ಸಹ ಹಾಲಿನ ಉತ್ಪಾದನೆಯಲ್ಲಿ ಮುಂದಿವೆ. ಈ ರಾಷ್ಟ್ರಗಳಲ್ಲಿ ಪ್ರತಿಯೊಂದು ಆಕಳಿನ ಉತ್ಪಾದನೆಯೂ ಅಭಿವೃದ್ಧಿ ಹೊಂದದ ರಾಷ್ಟ್ರಗಳಿಗಿಂತ ಹೆಚ್ಚು. ಹಾಲೆಂಡಿನ ಒಂದು ಆಕಳು ಒಂದು ವರ್ಷಕ್ಕೆ 8,385 ಪೌಂಡು ಹಾಲು ಕೊಡುತ್ತಿದ್ದರೆ, ಭಾರತ, ವೆನಿಜೂಲ ಮತ್ತು ಗ್ರೀಸ್‌ಗಳಲ್ಲಿ ಅದು 1,400 ಪೌಂಡು ಮತ್ತು ಇಥಿಯೋಪಿಯದಲ್ಲಿ ಬರೀ 600 ಪೌಂಡು ಹಾಲನ್ನು ಕೊಡುತ್ತದೆ. ಈಗ ಉತ್ಪಾದನೆಯಲ್ಲಿ ಅಭಿವೃದ್ಧಿ ಕಂಡುಬರುತ್ತಿದೆ.

ಯುದ್ಧಾನಂತರ ಕಾಲದಲ್ಲಿ ಜಗತ್ತಿನ ಹಾಲಿನ ಉತ್ಪಾದನೆ ಶೇ.36ರಷ್ಟು ಏರಿದರೂ ಏಷ್ಯದಲ್ಲಿ ಅದು ಶೇ. 22ರಷ್ಟು ಮಾತ್ರ ಏರಿತು. ಶೀತಸಂರಕ್ಷಣೆ ಸಾಧ್ಯವಾಗಿರುವ ಈಗಿನ ದಿನಗಳಲ್ಲಿ ಹಾಲನ್ನು ನೂರಾರು ಮೈಲಿ ದೂರಕ್ಕೆ ತಲಪಿಸಬಹುದು. ಹೀಗಾಗಿ ಆಧುನಿಕ ವಿಜ್ಞಾನವನ್ನವಲಂಬಿಸಿ ದೊಡ್ಡ ದೊಡ್ಡ ಹೈನು ಉತ್ಪಾದಕ ಕೇಂದ್ರಗಳನ್ನು ಸ್ಥಾಪಿಸಲು ಈಗ ಅನುಕೂಲವಿದೆ. ಆದರೆ ಇವುಗಳಿಗೆ ಬಹಳ ಬಂಡವಾಳ ಬೇಕಾಗುವುದರಿಂದ ಈ ಕೆಲಸ ಕಠಿಣ. ಹೀಗಾಗಿ ಹಿಂದುಳಿದ ದೇಶಗಳು ಹಾಲಿನ ವಿಚಾರದಲ್ಲಿ ಶೀಘ್ರವಾಗಿ ಸ್ವಯಂಪೂರ್ಣವಾಗಲು ಸಾಧ್ಯವಾಗಲಿಕ್ಕಿಲ್ಲ. ಇಲ್ಲಿಯ ಕೊರತೆಯನ್ನು ನೀಗಿಸಲು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ತಯಾರಿಸಿದ ಹಾಲಿನ ಪುಡಿ ಬಳಕೆಯಾಗುತ್ತಿದೆ.

ಮೀನು ಅನೇಕ ಕಡೆ ಮಹತ್ತ್ವದ ಆಹಾರ. ಮೀನಿನ ಆಹಾರವಾದ ಪ್ಲಾಂಕ್ಟನ್ ಬೆಚ್ಚಗಿನ ನೀರಿಗಿಂತ ತಂಪು ನೀರಿನಲ್ಲೂ ಸೂರ್ಯಕಿರಣ ಬರಲು ಸಾಧ್ಯವಾದ ಕಡಿಮೆ ಆಳದ ನೀರಿನಲ್ಲೂ ದೂರದ ಸಮುದ್ರಕ್ಕಿಂತ ಕರಾವಳಿಯ ಹತ್ತಿರವೂ ಹೆಚ್ಚಿಗೆ ಸಿಗುವುದರಿಂದ ಮೀನುಗಳು ಸಹ ಇಂಥ ಕಡೆಯಲ್ಲಿ ಹೆಚ್ಚು ಸಿಗುತ್ತವೆ. ಉತ್ತರ ಗೋಳಾರ್ಧದಲ್ಲಿಯೇ ಮೀನುಗಾರಿಕೆಯ ಪ್ರಮಾಣ ಹೆಚ್ಚು. ಶೇ.98ರಷ್ಟು ಇಲ್ಲಿಯೇ ದೊರೆಯುತ್ತದೆ. ಉತ್ತರ ಅಟ್ಲಾಂಟಿಕ್‌ನಲ್ಲಿ ಸೋವಿಯತ್ ದೇಶದ ಶ್ವೇತಸಮುದ್ರದಿಂದ ಬಿಸ್ಕೆ ಕೊಲ್ಲಿಯವರೆಗಿನ ಯುರೋಪಿನ ಕರಾವಳಿ, ಲ್ಯಾಬ್ರಡಾರಿನಿಂದ ನ್ಯೂ ಇಂಗ್ಲೆಂಡಿನ ದಕ್ಷಿಣ ತುದಿಯವರೆಗಿನ ಭಾಗ–ಇವು ಮೀನುಗಾರಿಕೆಗೆ ಪ್ರಸಿದ್ಧವಾಗಿವೆ. ಉತ್ತರ ಅಮೆರಿಕ ಪಶ್ಚಿಮ ಕರಾವಳಿಯಲ್ಲಿ ಅಲಾಸ್ಕದಿಂದ ದಕ್ಷಿಣ ಕ್ಯಾಲಿಫೋರ್ನಿಯದವರೆಗಿನ ಭಾಗ ಅನುಕೂಲವಾಗಿದೆ. ಪೆಸಿಫಿಕ್ ಮಹಾಸಾಗರಕ್ಕೆ ಹೊಂದಿರುವ ಏಷ್ಯದ ಕರಾವಳಿಯಲ್ಲಿ ಸೈಬೀರಿಯದ ದಂಡೆಯಿಂದ ಜಪಾನ್ ಕರಾವಳಿಯನ್ನೊಳಗೊಂಡು ದಕ್ಷಿಣ ಚೀನದವರೆಗಿನ ಭಾಗವೆಲ್ಲ ಇದಕ್ಕೆ ಹೆಸರಾಗಿದೆ. ಭಾರತದ ಪೂರ್ವ ಕರಾವಳಿಗಿಂತಲೂ ಪಶ್ಚಿಮ ಕರಾವಳಿಯಲ್ಲಿಯೇ ಮೀನುಗಾರಿಕೆ ಹೆಚ್ಚು. ಭೂಭಾಗದ ಒಳಗಣ ಮೀನುಗಾರಿಕೆಯಲ್ಲಿ ಅಮೆರಿಕದ ಮಹಾಸರೋವರಗಳು, ಮಿಸಿಸಿಪಿ ನದಿ ಹಾಗೂ ಅದರ ಉಪನದಿಗಳು, ಆಗ್ನೇಯ ಯುರೋಪಿನ ಕಪ್ಪು ಸಮುದ್ರ, ಏಡ್ರಿಯಾಟಿಕ್ ಸಮುದ್ರಗಳು, ಕ್ಯಾಸ್ಪಿಯನ್ ಹಾಗೂ ಏಷ್ಯದ ಅನೇಕ ದೊಡ್ಡ ನದಿಗಳು ಪ್ರಸಿದ್ಧವಾಗಿವೆ. ದಕ್ಷಿಣಾರ್ಧಗೋಳದ ಮತ್ಸ್ಯ ಸಂಪತ್ತನ್ನು ಇನ್ನೂ ಸಾಕಷ್ಟು ಉಪಯೋಗಿಸಲಾಗಿಲ್ಲ. ದಕ್ಷಿಣ ಅಮೆರಿಕದ ಎರಡೂ ಕರಾವಳಿಗಳು ಹೆಚ್ಚು ಮತ್ಸ್ಯಸಂಪನ್ನವಾಗಿವೆ. ಕೆಲವೆಡೆಯಂತೂ ವರ್ಷವಿಡೀ ಮೀನು ಸಿಗಬಹುದು. ದಕ್ಷಿಣ ಆಫ್ರಿಕದ ಪಶ್ಚಿಮ ಕರಾವಳಿ, ಮಡಗಾಸ್ಕರ್ ಕರಾವಳಿ, ಆಸ್ಟ್ರೇಲಿಯದ ಉತ್ತರ ಕರಾವಳಿ, ನ್ಯೂಜಿಲೆಂಡಿನ ಕರಾವಳಿ, ಇವೂ ಮೀನುಗಾರಿಕೆಗೆ ಅನುಕೂಲವಾಗಿವೆ. ಹಿಡಿದ ಮೀನುಗಳ ಮೊತ್ತದ ದೃಷ್ಟಿಯಿಂದಲೂ ಈ ವೃತ್ತಿಯಲ್ಲಿ ತೊಡಗಿದ ಜನಸಂಖ್ಯೆಯ ದೃಷ್ಟಿಯಿಂದಲೂ ಜಪಾನು ಎಲ್ಲ ರಾಷ್ಟ್ರಗಳಿಗಿಂತ

ಇತರ ಕೆಲವು ಆಹಾರಗಳ ಉತ್ಪಾದನೆ
(ವಾರ್ಷಿಕ ಸರಾಸರಿ–ಲಕ್ಷ ಮೆಟ್ರಿಕ್ ಟನ್ನುಗಳಲ್ಲಿ)

| ಕ್ರ ಸಂ. | ಆಹಾರ ವಸ್ತು | 1948–52 | 1962–63, 1964–65 |
|---|---|---|---|
| 1. | 2 | 3 | 4 |
| | ಹಾಲು | | |
| | ಏಷ್ಯ | 334.0 | 407.0 |
| | ಯುರೋಪ್ | 963.0 | 1,351.0 |
| | ಸೋವಿಯತ್ ದೇಶ | 351.0 | 627.0 |
| | ಉತ್ತರ ಮತ್ತು ಮಧ್ಯ ಅಮೆರಿಕ | 628.0 | 717.0 |
| | ದಕ್ಷಿಣ ಅಮೆರಿಕ | 113.0 | 165.0 |
| | ಆಫ್ರಿಕ | 123.0 | 156.0 |
| | ಓಷಿಯಾನಿಯ | 102.0 | 124.0 |
| | ಇಡೀ ಜಗತ್ತು : | | |
| | ಒಟ್ಟು ಹಾಲು | 2,614.0 | 3547.0 |
| | ಆಕಳ ಹಾಲು | 2321.0 | 3227.0 |
| | ಎಮ್ಮೆಯ ಹಾಲು | 141.0 | 169.0 |
| | ಆಡಿನ ಹಾಲು | 87.0 | 83.0 |
| | ಕುರಿಯ ಹಾಲು | 65.0 | 68.0 |
| 2. | ಜಲಜನ್ಯ ಆಹಾರ (ಮೀನು, ಏಡಿ ಇತ್ಯಾದಿ) (1,962 ಮತ್ತು 64) (ತಾಜಾ ಪ್ರಾಣಿಯ ತೂಕ) | | |
| | ದೂರ ಪ್ರಾಚ್ಯ | 78.0 | 122.3 |
| | ಸಮೀಪ ಪ್ರಾಚ್ಯ | 3.5 | 4.8 |
| | ಪಶ್ಚಿಮ ಯುರೋಪ್ | 62.4 | 84.2 |
| | ಸೋವಿಯತ್ ದೇಶ ಮತ್ತು ಪೂರ್ವ ಯುರೋಪ್ | 19.4 | 45.4 |
| | ಉತ್ತರ ಅಮೆರಿಕ | 35.0 | 40.2 |
| | ಲ್ಯಾಟಿನ್ ಅಮೆರಿಕ | 6.0 | 96.9 |
| | ಆಫ್ರಿಕ | 10.6 | 26.9 |
| | ಓಷಿಯಾನಿಯ | 0.9 | 1.2 |
| | ಇಡೀ ಜಗತ್ತು | 215.8 | 21.9 |
| 3. | ಮಾಂಸ (ಆಡು, ಕುರಿ, ಆಕಳು, ಹಂದಿ ಮತ್ತು ಕೋಳಿ) | | 1962–63, 1964–65 (ಸರಾಸರಿ) |
| | ಇಡೀ ಜಗತ್ತು | 402.2 | 645.7 |
| 4. | ಮೊಟ್ಟೆ | | |
| | ಇಡೀ ಜಗತ್ತು | 87.7 | 134.2 |
| 5 | ಬಟಾಟೆ | | (1962–63, 1964–65) (ಸರಾಸರಿ) |
| | ಇಡೀ ಜಗತ್ತು | 2,438.0 | 2,788.0 |
| | ಯುರೋಪ್ | 1,300.0 | 1413.0 |
| | ಸೋವಿಯತ್ ದೇಶ | 886.0 | 781.6 |
| 6. | ಸಕ್ಕರೆ - ಇಡೀ ಜಗತ್ತು | | |
| | ಬೀಟ್‌ನಿಂದ ಪಡೆದದ್ದು | 122.8 | 243.4 |
| | ಕಬ್ಬಿನಿಂದ ಪಡೆದದ್ದು | 199.6 | 322.3 |
| | ಕಬ್ಬಿನಿಂದ ಪಡೆಯದ್ದು | 56.7 | 81.1 |
| 7. | ಜಂಬೀರ ಜಾತಿಯ ಹಣ್ಣು | 154.0 | 230.3 |
| 8. | ದ್ರಾಕ್ಷಿಹಣ್ಣು | | |
| | ಇಡೀ ಜಗತ್ತು | 344.0 | 500.0 (1962–63, 1963–64) (ಸರಾಸರಿ) |

ಮುಂದಿದೆ. ಅಕ್ಕಿಯ ಜೊತೆಗೆ ಮೀನು ಅಲ್ಲಿನ ಜನರ ಮುಖ್ಯ ಪ್ರಮುಖ ಆಹಾರವಾಗಿದೆ. ಅವರಿಗೆ ಅಗತ್ಯವಾದ ಪ್ರೋಟೀನನ್ನು ಇದು ಪೂರೈಸುತ್ತದೆ. ಜಪಾನಿನ ಅನಂತರ ಬರುವ ರಾಷ್ಟ್ರವೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನ. ಈ ಉದ್ಯಮದಲ್ಲಿ ನಿರತವಾಗಿರುವ ಜನರ ಸಂಖ್ಯೆಯ ದೃಷ್ಟಿಯಿಂದಲೂ ಲಭ್ಯವಿರುವ ಕರಾವಳಿಯ ದೃಷ್ಟಿಯಿಂದಲೂ ಭಾರತ ಈ ಉದ್ಯಮದಲ್ಲಿ ಬಹಳ ಹಿಂದಿದೆ. ಯುದ್ಧಾನಂತರ ಕಾಲದಲ್ಲಿ ಮೀನುಗಾರಿಕೆಯಲ್ಲಿ ಅತಿ ಹೆಚ್ಚು ಶೇಕಡಾವಾರು ಪ್ರಗತಿ ಲ್ಯಾಟಿನ್ ಅಮೆರಿಕದಲ್ಲಾಯಿತು (ಶೇ. 1515) ; ಅದರ ಅನಂತರದಲ್ಲಿ ಆಫ್ರಿಕ (ಶೇ. 154), ಸೋವಿಯತ್ ದೇಶ ಮತ್ತು ಪೂರ್ವ ಯುರೋಪ್ (ಶೇ. 136) ಮತ್ತು ದೂರ ಪ್ರಾಚ್ಯ (ಶೇ. 56) ಇವು ಅನುಕ್ರಮವಾಗಿ ಬರುತ್ತವೆ. ಇಡಿಯ ಜಗತ್ತಿನಲ್ಲಿ ಈ ಹೆಚ್ಚಳ ಶೇ. 95ರಷ್ಟು ಆಯಿತು.

ಜಗತ್ತಿನ ಮಾಂಸ ಪೂರೈಕೆಯಲ್ಲಿ ಅರ್ಧದಷ್ಟು ಆಕಳಿನಿಂದಲೇ ಆಗುತ್ತಿದೆ. ಒಟ್ಟು ಪೂರೈಕೆಯ ಐದನೆಯ ಎರಡರಷ್ಟು ಹಂದಿಯದು. ಮೇಲೆ ಕೊಟ್ಟಿರುವ ಪಟ್ಟಿಯಲ್ಲಿ ತೋರಿಸಿರುವ ಯುದ್ಧಾನಂತರ ಕಾಲದ ಅವಧಿಯಲ್ಲಿ ಮಾಂಸದ ಉತ್ಪಾದನೆ 34% ರಷ್ಟು ಹೆಚ್ಚಾಯಿತು. ಯುರೋಪಿನಲ್ಲಿ ಹಂದಿಯ ಮಾಂಸ ಮುಖ್ಯವಾದದ್ದು. ಆಫ್ರಿಕ, ಓಷಿಯಾನಿಯ ಗಳಲ್ಲಿ ಆಕಳ ಮಾಂಸ ಹಾಗೂ ಕುರಿಯ ಮಾಂಸ ಪ್ರಾಮುಖ್ಯ ಪಡೆದಿವೆ. ಉತ್ತರ ಅಮೆರಿಕದಲ್ಲಿ ಆಕಳ ಮಾಂಸ, ಹಂದಿಯ ಮಾಂಸಗಳೆರಡೂ ಮುಖ್ಯವಾಗಿದ್ದು ಎರಡೂ ಸಮಸಮ ಪ್ರಮಾಣದಲ್ಲಿವೆ. ಏಷ್ಯದಲ್ಲಿ ಆಡಿನ, ಕುರಿಯ ಮಾಂಸಗಳೇ ಮುಖ್ಯವಾದುವು. ಜಗತ್ತಿನಲ್ಲಿ ಅತಿ ದೊಡ್ಡ ಮಾಂಸದ ಉತ್ಪಾದಕ ರಾಷ್ಟ್ರಗಳೆಂದರೆ ಯುರೋಪ್ ಹಾಗೂ ಉತ್ತರ ಅಮೆರಿಕ. ತಲಾ ಉತ್ಪಾದನೆಯ ದೃಷ್ಟಿಯಿಂದ ನ್ಯೂಜಿಲೆಂಡ್ ಬಹಳ ಮುಂದಿದ್ದು ಜಾಗತಿಕ ಪೇಟೆಯ ಅಗತ್ಯವನ್ನು ಬಹಳ ಮಟ್ಟಿಗೆ ಪೂರೈಸುತ್ತದೆ. ಕೋಳಿಯ ಮಾಂಸ ಇತರ ಕಡೆಗಳಿಗಿಂತ ಉತ್ತರ ಅಮೆರಿಕ, ಪಶ್ಚಿಮ ಯುರೋಪ್ ಹಾಗೂ ಆಸ್ಟ್ರೇಲಿಯಗಳಲ್ಲಿ ವಿಶೇಷ ಹೆಚ್ಚು. ಮೊಟ್ಟೆ ಜಗತ್ತಿನೆಲ್ಲೆಡೆಗೆ ಕಂಡುಬರುವ ಆಹಾರವಾಗಿದೆ. ಇದರ ಉತ್ಪಾದನೆ ಜಗತ್ತಿನಲ್ಲಿ ಯುದ್ಧಾನಂತರ ಶೇ. 53ರಷ್ಟು ಏರಿತು.

ಪಿಷ್ಟಗಳಲ್ಲಿ ಬಟಾಟೆ ಮಹತ್ತ್ವದ್ದು. ಯುರೋಪ್ ಹಾಗೂ ಸೋವಿಯತ್ ದೇಶಗಳು ಕೂಡಿ ಜಗತ್ತಿನ ಬೇಡಿಕೆಯ ಶೇ. 80ರಷ್ಟು ಪೂರೈಸುತ್ತವೆ.

ಸಕ್ಕರೆಯಲ್ಲಿ ಸು. 2/3 ರಷ್ಟು ಭಾಗ ಕಬ್ಬಿನಿಂದಲೇ ಬರುತ್ತದೆ. ಕಬ್ಬಿನ ಸಕ್ಕರೆಯ ಪ್ರಮುಖ ಉತ್ಪಾದಕ ರಾಷ್ಟ್ರಗಳೆಂದರೆ ಕ್ಯೂಬ ಹಾಗೂ ಭಾರತ. ಕಬ್ಬಿನ ಸಕ್ಕರೆಯ ಅರ್ಧದಷ್ಟನ್ನು ಅಮೆರಿಕ ಖಂಡವೇ–ವಿಶೇಷವಾಗಿ ಮಧ್ಯ ಅಮೆರಿಕ–ಉತ್ಪಾದಿಸುತ್ತದೆ. ದಕ್ಷಿಣ ಅಮೆರಿಕದಲ್ಲಿನ ಬ್ರೆಜಿಲ್ ಸಹ ಮಹತ್ತ್ವದ ಉತ್ಪಾದಕವಾಗಿದೆ. ಯುರೋಪ್ ಹಾಗೂ ಸೋವಿಯತ್ ದೇಶಗಳು ಜಗತ್ತಿನ ಬೀಟ್ ಸಕ್ಕರೆಯ ಶೇ. 85ರಷ್ಟನ್ನು ಉತ್ಪಾದಿಸುತ್ತವೆ.

ದ್ರಾಕ್ಷಿಯನ್ನು ಜಗತ್ತಿನೆಲ್ಲೆಡೆ ಬೆಳೆಸುತ್ತಿದ್ದರೂ ಇದು ವಿಶೇಷವಾಗಿ ಯುರೋಪಿನ ಬೆಳೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಚಿಲಿ, ಅರ್ಜೆಂಟೈನಗಳಲ್ಲೂ ಇದನ್ನು ಬೆಳೆಸುತ್ತಾರೆ. ಯುರೋಪ್, ಚಿಲಿ, ಅರ್ಜೆಂಟೈನದಲ್ಲೂ ಇದರಿಂದ ಮದ್ಯವನ್ನು ತಯಾರಿಸುತ್ತಾರೆ.

ಕಿತ್ತಳೆ, ಮೋಸಂಬಿ, ನಿಂಬೆಹಣ್ಣು ಮುಂತಾದ ಜಂಬೀರ ಫಲಗಳ ಪ್ರಮುಖ ಉತ್ಪಾದಕ ಗಳೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರೆಜಿಲ್, ಸ್ಪೇನ್, ಮೆಕ್ಸಿಕೊ ಮತ್ತು ಜಪಾನ್.

ಎಲ್ಲ ತರಹದ ಆಹಾರಗಳ ಒಟ್ಟು ಉತ್ಪಾದನೆ ಹಾಗೂ ತಲಾ ಉತ್ಪಾದನೆ ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಹೇಗೆ ವ್ಯತ್ಯಾಸವಾಗಿದೆಯೆಂಬುದನ್ನು ಮುಂದಿನ ಪುಟದಲ್ಲಿರುವ ಪಟ್ಟಿಯಲ್ಲಿ ಕಾಣಬಹುದು. ಈ ಪಟ್ಟಿಯ ಕೊನೆಯ ಎರಡು ನೀಟ ಸಾಲುಗಳಲ್ಲಿ ಇತ್ತೀಚಿನ ಉತ್ಪಾದನೆಯ ಮಟ್ಟವನ್ನು ಯುದ್ಧಪೂರ್ವದ ಹಾಗೂ ಯುದ್ಧಾನಂತರದ ಮಟ್ಟಗಳೊಂದಿಗೆ ಹೋಲಿಸಲಾಗಿದೆ.

ಆಹಾರ ಮತ್ತು ಕೃಷಿ ಸಂಸ್ಥೆಯವರು ಮಾಡಿದ ತೃತೀಯ ಆಹಾರ ಸಮೀಕ್ಷೆಯ ಅವಧಿ 1957–59 ಇದ್ದುದರಿಂದ ಸುಮಾರು ಆ ಅವಧಿಯ ಉತ್ಪಾದನೆಯ ಮಟ್ಟವನ್ನು ಇಲ್ಲಿ ತೋರಿಸಲಾಗಿದೆ. ಇತ್ತೀಚಿನ ಉತ್ಪಾದನೆಯನ್ನು ಈ ಮಟ್ಟದೊಂದಿಗೂ ಹೋಲಿಸ ಬಹುದು. ಒಟ್ಟು ಉತ್ಪಾದನೆ ಎಲ್ಲ ಕಡೆ ಹೆಚ್ಚಾದರೂ ತಲಾ ಉತ್ಪಾದನೆಯ ದೃಷ್ಟಿಯಿಂದ ಪರಿಸ್ಥಿತಿ ಸಮಾಧಾನಕರವಾಗಿಲ್ಲ. ಯುದ್ಧಪೂರ್ವದ ಪರಿಸ್ಥಿತಿಯೊಂದಿಗೆ ಹೋಲಿಸಿದರೆ ಉತ್ಪಾದನೆಗಿಂತ ವೇಗವಾಗಿ ಜನಸಂಖ್ಯೆ ಬೆಳೆದ ಮೂಲಕ ದೂರ ಪ್ರಾಚ್ಯ, ಲ್ಯಾಟಿನ್

ಆಹಾರ ಪೂರೈಕೆ, ಜಗತ್ತಿನ ಆಹಾರೋತ್ಪಾದನೆಯ ಸೂಚ್ಯಂಕಗಳು

| ಪ್ರದೇಶಗಳು | ಯುದ್ಧ ಪೂರ್ವ | ವಾರ್ಷಿಕ ಸರಾಸರಿ | | | ಯುದ್ಧಪೂರ್ವ ಸ್ಥಿತಿಗಿಂತ ಹೆಚ್ಚಳ ಶೇಕಡ | ಯುದ್ಧಾನಂತರ ಸ್ಥಿತಿಗಿಂತ ಹೆಚ್ಚಳ ಶೇಕಡ |
|---|---|---|---|---|---|---|
| | | 1 | 2 | 3 | | |
| **ಅ: ಒಟ್ಟು ಉತ್ಪಾದನೆ** | | | | | | |
| ದೂರ ಪ್ರಾಚ್ಯ | 82 | 87 | 112 | 128 | 57.2 | 48.2 |
| ಭಾರತ – | .... | 89* | 110 | 120 | .... | 34.8 |
| ಸಮೀಪ ಪ್ರಾಚ್ಯ | 73 | 85 | 117 | 131 | 79.5 | 54.1 |
| ಪಶ್ಚಿಮ ಯುರೋಪ್ | 82 | 86 | 110 | 126 | 54.8 | 46.0 |
| ಪೂರ್ವ ಯುರೋಪ್ ಮತ್ತು ಸೋವಿಯತ್ ದೇಶ | 82 | 87 | 128 | 141 | 72.0 | 62.0 |
| ಉತ್ತರ ಅಮೆರಿಕ | 66 | 92 | 109 | 117 | 78.8 | 28.3 |
| ಲ್ಯಾಟಿನ್ ಅಮೆರಿಕ | 69 | 88 | 115 | 127 | 84.0 | 44.3 |
| ಆಫ್ರಿಕ | 69 | 89 | 107 | 121 | 75.4 | 36.0 |
| ಓಷಿಯಾನಿಯ | 81 | 92 | 111 | 139 | 74.1 | 53.2 |
| ಎಲ್ಲ ಪ್ರದೇಶಗಳು | 76 | 88 | 113 | 127 | 67.1 | 44.5 |
| **ಆ : ತಲಾ ಉತ್ಪಾದನೆ** | | | | | | |
| ದೂರ ಪ್ರಾಚ್ಯ | 106 | 93 | 103 | 105 | –1.9 | 11.8 |
| ಭಾರತ – | 92 | 101 | 100 | – | 8.6 | |
| ಸಮೀಪ ಪ್ರಾಚ್ಯ | 96 | 93 | 106 | 105 | 9.3 | 12.9 |
| ಪಶ್ಚಿಮ ಯುರೋಪ್ | 93. | 89 | 106 | 116 | 24.7 | 30.3 |
| ಪೂರ್ವ ಯುರೋಪ್ ಮತ್ತು ಸೋವಿಯತ್ ದೇಶ | 84 | 92 | 120 | 124 | 47.6 | 34.8 |
| ಉತ್ತರ ಅಮೆರಿಕ | 85 | 99 | 99 | 101 | 18.8 | 2.2 |
| ಲ್ಯಾಟಿನ್ ಅಮೆರಿಕ | 104 | 97 | 103 | 101 | –1.9 | 4.1 |
| ಆಫ್ರಿಕ | 98 | 99 | 97 | 96 | –2.0 | –3.0 |
| ಓಷಿಯಾನಿಯ | 108 | 102 | 100 | 113 | 4.6 | 10.8 |
| ಎಲ್ಲ ಪ್ರದೇಶಗಳು | 96 | 95 | 104 | 106 | 10.4 | 11.6 |

ಅಮೆರಿಕ ಮತ್ತು ಆಫ್ರಿಕಗಳಲ್ಲಿ ತಲಾ ಉತ್ಪಾದನೆ ಇಳಿದುದು ಕಂಡುಬರುತ್ತದೆ. ಜನಸಂಖ್ಯೆ ಬೆಳೆಯುವ ವಾರ್ಷಿಕಗತಿ 1958–62ರ ನಡುವೆ ಇಡೀ ಜಗತ್ತಿನಲ್ಲಿ ಶೇ. 2ರಷ್ಟು ಇದ್ದರೆ, ಅದು ಮಧ್ಯ ಅಮೆರಿಕದಲ್ಲಿ 2.9, ದಕ್ಷಿಣ ಅಮೆರಿಕದಲ್ಲಿ 2.7 ಮತ್ತು ಆಫ್ರಿಕ ಏಷ್ಯಗಳಲ್ಲಿ 2.3 ಇದೆ. ಆದರೆ ಇದೇ ಗತಿ ಬೆಳೆದ ರಾಷ್ಟ್ರಗಳಾದ ಉತ್ತರ ಅಮೆರಿಕ ಮತ್ತು ಸೋವಿಯತ್ ದೇಶಗಳಲ್ಲಿ 1.7 ಯುರೋಪಿನಲ್ಲಿ 0.9 ಆಗಿದೆ. ಸಮಗ್ರ ಜಗತ್ತಿನ ದೃಷ್ಟಿಯಿಂದ ಒಟ್ಟು ಆಹಾರೋತ್ಪಾದನೆಯಲ್ಲಿ ತಲಾ ಉತ್ಪಾದನೆಯಲ್ಲೂ ಕೊಂಚ ಸುಧಾರಣೆಯಾದರೂ ಯುದ್ಧಪೂರ್ವದ ಪರಿಸ್ಥಿತಿಗೆ ಹೋಲಿಸಿದರೆ ರಾಷ್ಟ್ರ ರಾಷ್ಟ್ರಗಳ ನಡುವಣ ವಿಷಮತೆ ಸ್ವಲ್ಪ ಹೆಚ್ಚಾಗಿದೆಯೆಂದೇ ಹೇಳಬೇಕು. ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ತಲಾ ಉತ್ಪಾದನೆ ಇಳಿದಿದ್ದರೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅದು ಏರಿದೆ. ಈ ಪರಿಸ್ಥಿತಿ ತೃತೀಯ ಆಹಾರ ಸಮೀಕ್ಷೆಯ ಅವಧಿಯಲ್ಲೂ ಏನೂ ಸುಧಾರಿಸಿಲ್ಲ. ಜಗತ್ತಿನ ಜನಸಂಖ್ಯೆಯ $\frac{2}{3}$ರಷ್ಟು ಪಾಲು ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿಯೇ ಇದೆಯೆಂದ ಮೇಲೆ ಈ ಸಮಸ್ಯೆಯ ಮಹತ್ತ್ವ ಸ್ಪಷ್ಟವಾಗಬಹುದು.

**ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಸಹಕಾರ :** ಮೇಲೆ ಹೇಳಿದ ವಿಷಮತೆ ಹೆಚ್ಚಿದುದರ ಪರಿಣಾಮ ಅಂತಾರಾಷ್ಟ್ರೀಯ ವ್ಯಾಪಾರದ ಮೇಲೆ ಆಗದೆ ಉಳಿಯಲಿಲ್ಲ. ಜಗತ್ತಿನ ಆಹಾರದ ನಿರ್ಯಾತಗಳಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ನಿವ್ವಳ ಕೊಡುಗೆ ಮುಂದಿನ ದಶಕದಲ್ಲಿ ತುಂಬ ಬೆಳೆದದ್ದು ಕಂಡುಬರುತ್ತದೆ; ಮತ್ತು ಇವುಗಳ ಮೇಲೆ ಅಭಿವೃದ್ಧಿ ಹೊಂದದ ರಾಷ್ಟ್ರಗಳ ಅವಲಂಬನೆ ಹೆಚ್ಚುತ್ತಿದೆ.

ಇದರಲ್ಲಿ ಆಯಾತ ನಿರ್ಯಾತಗಳ ಮೊತ್ತ ಹಾಗೂ ಮೌಲ್ಯಗಳೆರಡರಲ್ಲೂ ಯುದ್ಧ ಪೂರ್ವದ ಪರಿಸ್ಥಿತಿಗಿಂತ ಆಗಿರುವ ಬದಲಾವಣೆಗಳನ್ನು ಕಾಣಬಹುದು. ಓಷಿಯಾನಿಯವನ್ನು ಬಿಟ್ಟರೆ ಅಭಿವೃದ್ಧಿ ಹೊಂದಿದ ಎಲ್ಲ ಪ್ರದೇಶಗಳಲ್ಲೂ ಆಹಾರಸಾಮಗ್ರಿಗಳ ಆಯಾತಕ್ಕಿಂತ ನಿರ್ಯಾತಗಳು ಭರದಿಂದ ಬೆಳೆದಿವೆ. ಉತ್ತರ ಅಮೆರಿಕದ ಉದಾಹರಣೆಯಂತೂ ಗಮನಾರ್ಹ. ಆಹಾರದ ಆಯಾತದ ಮೊತ್ತ ಯುದ್ಧಪೂರ್ವದಿಂದೀಚೆಗೆ ಒಂದೂವರೆ ಪಟ್ಟು ಮಾತ್ರ ಹೆಚ್ಚಾದರೆ ನಿರ್ಯಾತ ಐದೂವರೆ ಪಟ್ಟಿನಷ್ಟು ಬೆಳೆಯಿತು. ಅಭಿವೃದ್ಧಿ ಹೊಂದದ ರಾಷ್ಟ್ರಗಳ ಪರಿಸ್ಥಿತಿ ತದ್ವಿರುದ್ಧವಾಗಿದೆ. ದೂರ ಪ್ರಾಚ್ಯದಲ್ಲಂತೂ ಆಹಾರದ ನಿರ್ಯಾತಗಳ ಮೊತ್ತ ಯುದ್ಧಪೂರ್ವದ ಮಟ್ಟದ ಅರ್ಧಕ್ಕಿಳಿದರೂ ಆಯಾತಗಳು ಮಾತ್ರ ಒಂದೂವರೆಯಷ್ಟು ಏರಿದುವು. ಬೆಲೆಗಳನ್ನು ತೆಗೆದುಕೊಂಡರೆ ಅಭಿವೃದ್ಧಿಹೊಂದದ ರಾಷ್ಟ್ರಗಳ ಕಷ್ಟ ಚೆನ್ನಾಗಿ ಅರಿವಾಗುತ್ತದೆ. ಬೆಲೆಯೇರಿಕೆಯಿಂದ ಆಯಾತಗಳಿಗೆ ಹೆಚ್ಚು ಹೆಚ್ಚು ವಿದೇಶೀ ವಿನಿಮಯವನ್ನು ಕೊಡಬೇಕಾಗುತ್ತದೆ. ಹೀಗಾಗಿ ಈ ರಾಷ್ಟ್ರಗಳ ಅಂತಾರಾಷ್ಟ್ರೀಯ ವ್ಯಾಪಾರ ಶಿಲ್ಕು ಯಾವಾಗಲೂ ಪ್ರತಿಕೂಲವಾಗಿಯೇ ಇದೆ.

ಇಂಥ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಹೊಂದದ ರಾಷ್ಟ್ರಗಳ ಈ ತೊಂದರೆಗಳನ್ನು ನಿವಾರಿಸಲು ಎರಡು ತೆರನಾದ ಅಂತಾರಾಷ್ಟ್ರೀಯ ಸಹಕಾರ ಬೇಕಾಗುತ್ತದೆ. ಒಂದನೆಯದಾಗಿ, ತುರ್ತು ಕೊರತೆಗಳನ್ನು ನಿವಾರಿಸಲು ವಿದೇಶಿ ವಿನಿಮಯವನ್ನು ಕೇಳದೆ, ಆಯಾ ಪ್ರದೇಶಗಳ ಹಣ ಪಡೆದಾಗಲಿ, ದೀರ್ಘಾವಧಿಯ ಸಾಲಗಳ ರೂಪದಲ್ಲಾಗಲಿ, ಕೊಡುಗೆಯಿಂದಾಗಲೀ ಆಹಾರಸಾಮಗ್ರಿಗಳನ್ನು ಈ ರಾಷ್ಟ್ರಗಳಿಗೆ ಪೂರೈಸುವುದು. ಎರಡನೆಯದಾಗಿ ಈ ರಾಷ್ಟ್ರಗಳು ಆಹಾರದಲ್ಲಿ ಸ್ವಯಂಪೂರ್ಣವಾಗುವಂತೆ ಇವುಗಳ ವ್ಯವಸಾಯವನ್ನೂ ಮೀನುಗಾರಿಕೆಯನ್ನೂ ಸುಧಾರಿಸಿ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸುವುದು. ಮೊದಲನೆಯ ತೆರನಾದ ಸಹಾಯ ನೀಡುವಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮುಂದೆ ಬಂದಿದೆ. ಈ ರಾಷ್ಟ್ರ ಪಬ್ಲಿಕ್ ಲಾ 480 ಹಾಗೂ ಪರಸ್ಪರ ಭದ್ರತಾ ಕಾರ್ಯಕ್ರಮಗಳ ಅಂಗವಾಗಿ 1955ರಲ್ಲಿ 1196 ದಶಲಕ್ಷ ಡಾಲರು ಬೆಲೆಯ ಆಹಾರ ಸಾಮಗ್ರಿ, ಹತ್ತಿ, ತಂಬಾಕುಗಳನ್ನು ನಿರ್ಯಾತಿಸಿತು. 1964ರಲ್ಲಿ ಈ ಅಂಕಿ 1320 ದಶಲಕ್ಷ ಡಾಲರುಗಳಿಗೆ ಏರಿತು. 1964ರಲ್ಲಿ ಕೃಷಿವಸ್ತುಗಳ ಒಟ್ಟು ನಿರ್ಯಾತದಲ್ಲಿ ಇಂಥ ನಿರ್ಯಾತ 27ರಷ್ಟಿತ್ತು. ಈ ಸಾಮಗ್ರಿಗಳಲ್ಲಿ ಗೋದಿಯ ಪ್ರಮಾಣವೇ ಅರ್ಧಕ್ಕಿಂತ ಹೆಚ್ಚಿದ್ದರೂ ಅಕ್ಕಿ, ಹೈನ, ಕೊಬ್ಬು, ಎಣ್ಣೆಕಾಳುಗಳೂ ಸೇರಿವೆ. ಈ ನಿರ್ಯಾತಗಳಲ್ಲಿ ಆಹಾರಸಾಮಗ್ರಿಗಳ ಪಾಲು ಶೇ.80ರಷ್ಟು. ಕೆನಡ, ಆಸ್ಟ್ರೇಲಿಯಗಳು ಈ ಸಹಾಯ ಸಲ್ಲಿಸುತ್ತಿವೆ. ಇದಲ್ಲದೆ ಈಗ ವಿಶ್ವಸಂಸ್ಥೆ ಹಾಗೂ ಆಹಾರ ಮತ್ತು ಕೃಷಿ ಸಂಸ್ಥೆಗಳು ಕೂಡಿ ಜಾಗತಿಕ ಆಹಾರ ಕಾರ್ಯಕ್ರಮದ (ವರ್ಲ್ಡ್ ಫುಡ್ ಪ್ರೋಗ್ರಾಮ್) ಅಂಗವಾಗಿ ಈ ನೆರವನ್ನು ನೀಡುತ್ತವೆ.

ಅಭಿವೃದ್ಧಿಹೊಂದಿದ ರಾಷ್ಟ್ರಗಳು ಎರಡನೆಯ ಬಗೆಯ ನೆರವು ನೀಡುವುದರಲ್ಲೂ ಮುಂದೆ ಬರುತ್ತಿವೆ. ಸುಲಭ ಕರಾರುಗಳ ಮೇಲೆ ವಿದೇಶೀ ವಿನಿಮಯ ಸಾಲಗಳನ್ನು ನೀಡಿ ಅಭಿವೃದ್ಧಿ ಯೋಜನೆಗಳಿಗೆ ಬೇಕಾದ ಬಂಡವಾಳವನ್ನು ಒದಗಿಸುವುದೂ ಪ್ರತ್ಯಕ್ಷವಾಗಿ ತಾಂತ್ರಿಕ ನೆರವು ನೀಡುವುದೂ ಕೃತಕ ಗೊಬ್ಬರಗಳನ್ನು ಪೂರೈಸುವುದೂ ಈ ಬಗೆಯ ನೆರವಿನ ಕೆಲವು ಸಾಮಾನ್ಯ ವಿಧಾನಗಳು. ಇಲ್ಲಿ ಆರೋಗ್ಯ ಮತ್ತು ಕೃಷಿ ಸಂಸ್ಥೆಯು ಬಹಳ ಮಹತ್ತ್ವದ ಪಾತ್ರವನ್ನು ವಹಿಸುತ್ತಲಿದೆ. ಆಹಾರ ಪೂರೈಕೆಗೆ ಸಂಬಂಧಪಟ್ಟ ಅಂಕಿಗಳನ್ನು ಕಲೆಹಾಕುವುದು, ಸಭೆ ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಆಹಾರ ಸಮಸ್ಯೆಗಳನ್ನು ಚರ್ಚಿಸುವುದು–ಇವೇ ಇದರ ಮುಖ್ಯ ಕಾರ್ಯಕ್ರಮಗಳಾಗಿದ್ದುವು. ಆದರೆ ಈಗ ಅಭಿವೃದ್ಧಿ ಹೊಂದದ ರಾಷ್ಟ್ರಗಳಿಗೆ ಪರಿಣತರ ಮುಖಾಂತರ ವ್ಯಾವಹಾರಿಕ ನೆರವು

ಆಹಾರಸಾಮಗ್ರಿಗಳ ಆಯಾತ, ನಿರ್ಯಾತಗಳ ಸೂಚ್ಯಂಕಗಳು.
ನಾಲ್ಕು ಹಂತಗಳಲ್ಲಿ ಸರಾಸರಿ=100

| ಪ್ರದೇಶ | ಆಯಾತ ನಿರ್ಯಾತ | ಮೊತ್ತ | | ಮೌಲ್ಯ | |
|---|---|---|---|---|---|
| | | 1 | 2 | 3 | 4 |
| ಪಶ್ಚಿಮ ಯುರೋಪ್ | ಆ | 86 | 135 | 222 | 314 |
| | ನಿ | 88 | 192 | 216 | 421 |
| ಉತ್ತರ ಅಮೆರಿಕ | ಆ | 103 | 153 | 263 | 400 |
| | ನಿ | 285 | 530 | 700 | 960 |
| ಓಷಿಯಾನಿಯ | ಆ | 153 | 229 | 450 | 580 |
| | ನಿ | 110 | 170 | 239 | 376 |
| ದೂರ ಪ್ರಾಚ್ಯ | | | | | |
| | ಆ | 82 | 145 | 343 | 469 |
| | ನಿ | 38 | 55 | 158 | 190 |
| ಸಮೀಪ ಪ್ರಾಚ್ಯ | ಆ | 202 | 582 | 636 | 1,264 |
| | ನಿ | 94 | 171 | 242 | 421 |
| ಆಫ್ರಿಕ | ಆ | 118 | 228 | 361 | 678 |
| | ನಿ | 107 | 185 | 304 | 500 |
| ಲ್ಯಾಟಿನ್ ಅಮೆರಿಕ | ಆ | 152 | 250 | 483 | 578 |
| | ನಿ | 84 | 119 | 303 | 400 |
| | ಆ | 92 | 152 | 263 | 389 |
| ಜಗತ್ತು | ನಿ | 96 | 166 | 294 | 444 |

ನೀಡುವುದೂ ಇದರ ಮುಖ್ಯ ಕಾರ್ಯಕ್ರಮಗಳಾಗಿದ್ದುವು. ಹಸಿವೆಯಿಂದ ಬಿಡುಗಡೆ ಎಂಬ ಆಂದೋಲನದ ಅಂಗವಾಗಿ ಈ ಸಂಸ್ಥೆ 164 ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿತು. ಇದಕ್ಕೆ ಬೇಕಾದ 22 ದಶಲಕ್ಷ ಡಾಲರುಗಳಲ್ಲಿ 13 ದಶಲಕ್ಷದಷ್ಟನ್ನು ಸಹಾಯ ಪಡೆಯುವ ದೇಶಗಳೇ ಪೂರೈಸಿದುವು. ಆದರೆ ಇದಕ್ಕೂ ಎಷ್ಟೋ ಹೆಚ್ಚು ಮೊತ್ತದ ಅಭಿವೃದ್ಧಿ ಯೋಜನೆಗಳನ್ನು ಮುಂದುವರಿದ ಹಾಗೂ ಹಿಂದುಳಿದ ದೇಶಗಳು ಪರಸ್ಪರ ಒಪ್ಪಿಗೆಯಿಂದ ಕೈಗೊಂಡಿವೆ. ಹೀಗಾಗಿ ಆಹಾರ ಮತ್ತು ಕೃಷಿ ಸಂಸ್ಥೆ ಮುಖ್ಯವಾಗಿ ಎರಡು ತರದ ಕಾರ್ಯಕ್ರಮಗಳಿಗೆ ಹೆಚ್ಚು ಲಕ್ಷ್ಯ ನೀಡಿದೆ. ತಾಂತ್ರಿಕ ಸಹಾಯದ ವಿಸ್ತೃತ ಕಾರ್ಯಕ್ರಮ ಮತ್ತು ವಿಶ್ವಸಂಸ್ಥೆಯ ವಿಶೇಷನಿಧಿಯ ಮೂಲಕವಾಗಿ ಕಾರ್ಯಕ್ರಮ. ರೈತರಿಗೆ ಆಧುನಿಕ ಉಪಕರಣಗಳ ಉಪಯೋಗ ಹಾಗೂ ಸುಧಾರಿತ ಕೃಷಿ ಪದ್ಧತಿಯ ತಿಳಿವಳಿಕೆ, ವಿವಿಧ ರೋಗಗಳನ್ನು ತಡೆಯುವ ವಿಧಾನಗಳ ಬೋಧನೆ. ಮೀನುಗಾರರಿಗೆ ಸುಧಾರಿತ ಮೋಟರ್ ಬೋಟುಗಳ ಸರಬರಾಜು ಮುಂತಾದುವು ಮೊದಲನೆಯ ಕಾರ್ಯಕ್ರಮದ ಅಂಗಗಳು. ಭೂಸುಧಾರಣೆ ಹಾಗೂ ದೊಡ್ಡ ನೀರಾವರಿ ಯೋಜನೆಗಳು, ಕೃಷಿವಿಜ್ಞಾನದ ಬೆಳವಣಿಗೆಗಾಗಿ ಶಿಕ್ಷಣ ಹಾಗೂ ಸಂಶೋಧನ ಕೇಂದ್ರಗಳ ಸ್ಥಾಪನೆ ಮುಂತಾದವು ವಿಶೇಷ ನಿಧಿಯ ಕಾರ್ಯಕ್ರಮಗಳು. ಈ ಎರಡು ಕಾರ್ಯಕ್ರಮಗಳ ಅಂಗವಾಗಿ ಆದ ಒಟ್ಟು ಖರ್ಚು 1965ರಲ್ಲಿ 59 ದಶಲಕ್ಷ ಡಾಲರುಗಳವರೆಗೆ ಏರಿತು. ಅಷ್ಟೇ ಅಲ್ಲ. ವಿಶ್ವ ಬ್ಯಾಂಕು ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಘ ಹಾಗೂ ಅಭಿವೃದ್ಧಿ ಹೊಂದದ ರಾಷ್ಟ್ರಗಳ ಯೋಜನೆಗಳಿಗೆ ಈ ಸಂಸ್ಥೆಗಳಿಂದ ಬಂಡವಾಳವನ್ನು ಒದಗಿಸುವುದರಲ್ಲಿ ಸಹಾಯ ಮಾಡುತ್ತವೆ. ಈ ಸಂಸ್ಥೆಗಳು ಪ್ರಾರಂಭವಾದಂದಿನಿಂದ 30 ಜೂನ್ 1964ರವರೆವಿಗೆ ಈ ರೀತಿ ಕೃಷಿ ಅಭಿವೃದ್ಧಿಗೆ ದೊರೆತ ಬಂಡವಾಳ 470 ದಶಲಕ್ಷ ಡಾಲರುಗಳು. ಇದರಲ್ಲಿಯ ಬಹ್ವಂಶವನ್ನು ನೀರಾವರಿ ಯೋಜನೆಗಳಿಗೆ ಕೊಟ್ಟಿದೆ. ಇವೇ ಅಲ್ಲದೆ ಬಂಡವಾಳದ ಇತರ ಮೂಲಗಳೂ ಇವೆ. ಲ್ಯಾಟಿನ್ ಅಮೆರಿಕಕ್ಕೆ ಅಂತರ ಅಮೆರಿಕ ಅಭಿವೃದ್ಧಿ ಬ್ಯಾಂಕು (ಇಂಟರ್ ಅಮೆರಿಕನ್ ಡೆವಲಪ್‌ಮೆಂಟ್ ಬ್ಯಾಂಕ್), ಯುರೋಪಿನ ಸಾಮಾನ್ಯ ಮಾರುಕಟ್ಟೆಯ

ರಾಷ್ಟ್ರಗಳಿಗೆ ಐರೋಪ್ಯ ಅಭಿವೃದ್ಧಿ ನಿಧಿಯೂ (ಯುರೋಪಿಯನ್ ಡೆವಲಪ್‌ಮೆಂಟ್ ಫಂಡ್), ಏಷ್ಯಕ್ಕೆ ಏಷ್ಯಾಭಿವೃದ್ಧಿ ಬ್ಯಾಂಕು (ಏಷ್ಯನ್ ಡೆವಲೆಪ್‌ಮೆಂಟ್ ಬ್ಯಾಂಕ್), ಅರಬ್ ರಾಷ್ಟ್ರಗಳಿಗೆ ಅರಬ್ ಆರ್ಥಿಕಾಭಿವೃದ್ಧಿಯ ಕುವೈಕ್ ನಿಧಿಯೂ (ಕುವೈಕು ಫಂಡ್ ಫಾರ್ ಅರಬ್ ಎಕನಾಮಿಕ್ ಡೆವಲಪ್‌ಮೆಂಟ್), ಆಫ್ರಿಕಕ್ಕೆ ಆಫ್ರಿಕಾಭಿವೃದ್ಧಿ ಬ್ಯಾಂಕು (ಆಫ್ರಿಕನ್ ಡೆವಲಪ್‌ಮೆಂಟ್ ಬ್ಯಾಂಕ್) ಇವೆ. ಇವುಗಳಿಂದ ದೊರಕುವ ಬಂಡವಾಳದ ಶೇ. 16ರಿಂದ 28ರಷ್ಟು ಪಾಲು ಕೃಷಿಗೆ ಹೋಗುತ್ತದೆನ್ನಬಹುದು. ಜಗತ್ತಿನ ಕೃಷಿ ಸುಯೋಜಿತವಾಗಿ ಸುಸಂಬದ್ಧವಾಗಿ ಸಾಗಲು ಆಹಾರ ಮತ್ತು ಕೃಷಿ ಸಂಸ್ಥೆ ಒಂದು ನಿರ್ದೇಶಾರ್ಥ ಜಾಗತಿಕ ಯೋಜನೆಯನ್ನು (ಇಂಡಿಕೇಟಿವ್ ವರ್ಲ್ಡ್ ಪ್ಲಾನ್) ಸಿದ್ಧಪಡಿಸಿತು. ವಿವಿಧ ದೇಶಗಳಲ್ಲಿ ಉತ್ಪಾದನೆಯ ಗುರಿಗಳು ಯಾವುವು ಹೇಗೆ ಅವನ್ನು ತಲಪಬಹುದು, ಸರಕಾರಗಳಿಗೆ ಯಾವ ನೆರವನ್ನು ದೊರಕಿಸಬಹುದು, ವಿವಿಧ ದೇಶಗಳ ನಡುವೆ ಯಾವ ಸಹಕಾರ ಮತ್ತು ಹೊಂದಾಣಿಕೆಗಳನ್ನು ಸಾಧಿಸಬಹುದು–ಮುಂತಾದುವು ಈ ಯೋಜನೆಯ ಅಂಗಗಳು.

**ಮುಂದಿನ ಸಾಧ್ಯತೆಗಳು:** ಈಗಿನ ಆಹಾರದ ಕೊರತೆಯನ್ನು ನೋಡಿ ನಾವು ನಿರಾಶರಾಗಬೇಕಾದ್ದಿಲ್ಲ. ಜಗತ್ತಿನ ಮೂರನೆಯ ಎರಡರಷ್ಟು ಭಾಗದಲ್ಲಿ ಆಧುನಿಕ ವಿಜ್ಞಾನವನ್ನು ಕೃಷಿ ಕ್ಷೇತ್ರದಲ್ಲಾಗಲಿ ಮತ್ಸ್ಯೋದ್ಯಮ ಕ್ಷೇತ್ರದಲ್ಲಾಗಲಿ ಇನ್ನೂ ಜಾರಿಗೆ ತಂದಿಲ್ಲವೆಂಬುದನ್ನು ಗಮನಿಸಿದರೆ ಇಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವ ಅವಕಾಶ ಎಷ್ಟೊಂದಿದೆಯೆಂಬುದು ಅರಿವಾಗಬಹುದು. ಹೆಚ್ಚು ಗೊಬ್ಬರ ಹಾಗೂ ಉತ್ತಮ ವಿಧಾನಗಳ ಮೂಲಕ ತಲಾ ಎಕರೆ ಉತ್ಪಾದನೆಯನ್ನು ಹೆಚ್ಚಿಸುವುದು, ಭೂಸುಧಾರಣೆ ಮಾಡಿ ಹೆಚ್ಚಿನ ಭೂಮಿಯನ್ನು ನೇಗಿಲ ಅಡಿಗೆ ತರುವುದು. ನೀರಾವರಿಯ ಸೌಲಭ್ಯಗಳನ್ನು ವಿಸ್ತರಿಸುವುದು ಮುಂತಾದ ಕ್ರಮಗಳಿಂದ ಜಗತ್ತಿನ ಉತ್ಪಾದನೆಯನ್ನು ಹೆಚ್ಚಿಸುವುದು ಸಾಧ್ಯ. ಉದಾಹರಣೆಗಾಗಿ, ಭಾರತದಲ್ಲಿ ಉತ್ತಮ ತಳಿಯ ಬೀಜಗಳ ಬಳಕೆ ಹಾಗೂ ಉತ್ತಮ ಉಳುಮೆ–ಇವಿಷ್ಟರಿಂದಲೇ ಅಕ್ಕಿಯ ಉತ್ಪಾದನೆಯನ್ನು ದ್ವಿಗುಣಗೊಳಿಸಬಹುದು. ಚೀನದಲ್ಲಿ ಉತ್ತಮ ಬೀಜಗಳಿಂದ ಅಕ್ಕಿಯ ಉತ್ಪಾದನೆಯಲ್ಲಿ ಶೇ.20–30 ರಷ್ಟು ಹೆಚ್ಚಳವನ್ನು ಸಾಧಿಸಬಹುದು. ಅನೇಕ ಧಾನ್ಯಗಳಲ್ಲಿ ಹೆಚ್ಚು ಉತ್ಪಾದನೆಯನ್ನೀಯುವ ತಳಿಗಳ ಸಂಶೋಧನೆ ಆಗಿದೆ. ಭೂಮಿ ಫಲವತ್ತಾಗಿಲ್ಲದ್ದು ಒಂದು ಅನಿವಾರ್ಯ ಅಡಚಣೆಯಲ್ಲ. ಕೃತಕ ಗೊಬ್ಬರಗಳಿಂದ ಸಾಧಾರಣ ಮಣ್ಣಿನಲ್ಲಿಯೂ ಉತ್ಪಾದನೆ ಹೆಚ್ಚಿಸಬಹುದು. ಉದಾಹರಣೆಗಾಗಿ, ಆಸ್ಟ್ರೇಲಿಯದಲ್ಲಿ ನಿರುಪಯೋಗಿಯೆನಿಸಿದ್ದ ಬಹು ಅಂಶ ಭೂಮಿಯನ್ನು ಸೂಪರ್ ಫಾಸ್ಫೇಟಿನ ಉಪಯೋಗದಿಂದ ಸಾಗುವಳಿಗೆ ತರಲಾಯಿತು. ಏಷ್ಯದಲ್ಲಂತೂ ನೈಸರ್ಗಿಕ ಗೊಬ್ಬರದ ಉಪಯೋಗವನ್ನು ಸಹ ಸಾಕಷ್ಟು ಮಾಡಿಕೊಂಡಿಲ್ಲ. ವಿಶೇಷ ಜನದಟ್ಟಣೆ ಹಾಗೂ ಪ್ರಾಣಿಸಂಪತ್ತುಳ್ಳ ಈ ಭಾಗದಲ್ಲಿ ಪ್ರಾಣಿಗಳ ಮಲಮೂತ್ರಗಳಿಂದಲೇ ಅಗ್ಗವಾದ ಗೊಬ್ಬರ ತಯಾರಿಸ ಬಹುದು. ಬೆಳೆಗಳಿಗೆ ಆಗುವ ರೋಗಗಳನ್ನೂ ಮಿಡಿತೆಗಳನ್ನೂ ತಡೆಯುವ ವಿಧಾನಗಳು ಹಿಂದುಳಿದ ರಾಷ್ಟ್ರಗಳಲ್ಲಿಯ ರೈತರಿಗೆ ಇನ್ನೂ ಸಾಧ್ಯವಾಗಿಲ್ಲ. ಇವುಗಳ ಮುಖಾಂತರವೇ ಬೆಳೆಗಳಿಗೆ ಆಗುವ ಹಾನಿಯನ್ನು ಸಾಕಷ್ಟು ತಡೆಯಬಹುದು. ಭೂಸಾರ ರಕ್ಷಿಸಲು ಆಧುನಿಕ ವಿಜ್ಞಾನದಲ್ಲಿ ಮಾರ್ಗಗಳಿವೆ. ನೆಲಕ್ಕೆ ಮೆಟ್ಟಲು ಮೆಟ್ಟಲಾಗಿ ದಿಂಡು ಕಟ್ಟುವ (ಟೆರೇಸಿಂಗ್) ವಿಧಾನದಿಂದಲೇ ತಲಾ ಹೆಕ್ಟೇರಿನ ಮಣ್ಣಿನ ವಾರ್ಷಿಕ ನಾಶವನ್ನು 2.2 ಟನ್ನುಗಳಿಂದ 0.3ಕ್ಕೆ ಇಳಿಸಬಹುದೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ಹಾಗೆಯೇ ಹೊಸದಾಗಿ ನಾಟಿದ ಗಿಡಗಳ ಬೇರಿಗೆ ಅರ್ಧಕೊಳೆತ ಹುಲ್ಲು, ಮಣ್ಣು, ಎಲೆ ಮೊದಲಾದವುಗಳ ಮಿಶ್ರಣದ ರಕ್ಷಣೆಯನ್ನೀಯುವುದರಿಂದಲೂ ಮಣ್ಣಿನ ಹಾನಿ ಶೇ.65ರಷ್ಟು ಇಳಿಯುವುದೆಂದು ಗೊತ್ತಾಗಿದೆ.

ಹೆಚ್ಚಿನ ಭೂಮಿಯನ್ನು ನೇಗಿಲ ಕೆಳಗೆ ತರುವುದಕ್ಕೂ ನೀರಾವರಿಯ ಸೌಲಭ್ಯಗಳನ್ನು ಹೆಚ್ಚಿಸುವುದಕ್ಕೂ ಅವಕಾಶವಿದೆ. ಜಗತ್ತಿನ ಸುಮಾರು ಶೇ.10ರಷ್ಟು (ಸು. 1400 ದಶಲಕ್ಷ ಹೆಕ್ಟೇರು) ಭೂಭಾಗ ಸಾಗುವಳಿಗೆ ಬಂದಿದೆ. ಆದರೆ ಪರಿಣತರ ಅಭಿಪ್ರಾಯದ ಪ್ರಕಾರ ಸುಮಾರು ಶೇ.30ರಷ್ಟು ಭೂಮಿಯನ್ನು ಸಾಗುವಳಿ ಮಾಡಬಹುದು. ವಿಶೇಷತಃ ಈ ಕೆಳಗಿನವು ಅಭಿವೃದ್ಧಿಗೆ ತುಂಬ ಅವಕಾಶವಿರುವ ಪ್ರದೇಶಗಳೆಂದು ಹೇಳುವುದುಂಟು : 1. ಆಫ್ರಿಕದಲ್ಲಿ ಕಾಂಗೊ ನದಿಯ ಮುಖದಿಂದ ನೈಜರ್‌ನದಿಯ ಮುಖದವರೆಗಿನ ಹಾಗೂ ಇಲ್ಲಿಂದ ಒಳನಾಡಿನಲ್ಲಿ ಪೂರ್ವ ಆಫ್ರಿಕದ ತಪ್ಪಲು ಪ್ರದೇಶದವರೆಗಿನ ಕಾಂಗೊ ನದಿಯ ಕೊಳ್ಳದ ಮಧ್ಯಭಾಗವನ್ನೊಳಗೊಂಡ ವಿಶಾಲವಾದ ಭಾಗ; 2 ಇಂಡೊನೇಷ್ಯ, ಮಲೇಷ್ಯಗಳ, ಬಹು ಭಾಗ ; 3. ದಕ್ಷಿಣ ಅಮೆರಿಕದಲ್ಲಿ ಅಮೆಜಾನ್ ನದಿಯ ವಿಶಾಲವಾದ ಕೊಳ್ಳ ಹಾಗೂ ಕೊಲಂಬಿಯದ ತಗ್ಗು ಪ್ರದೇಶಗಳು. ಆಹಾರೋತ್ಪದನೆಗೆ ಎಲ್ಲ ಖಂಡಗಳಿಗಿಂತ ಅತಿ ಹೆಚ್ಚು ಅವಕಾಶವಿರುವುದು ದಕ್ಷಿಣ ಅಮೆರಿಕದಲ್ಲಿಯೇ ಎಂದು ಹೇಳುವುದುಂಟು. ವಿಶ್ವದ ಜಲಸಂಪತ್ತಿಯನ್ನು ಇಲ್ಲಿಯವರೆಗೆ ಅಲ್ಪವಾಗಿ ಮಾತ್ರ ಉಪಯೋಗಿಸಿಕೊಂಡದ್ದಾಗಿದೆ. ನದಿಗಳ ಹತ್ತಿರವಿರುವ ಮರುಭೂಮಿಗಳನ್ನು ನೀರಾವರಿ ಯೋಜನೆಗಳಿಂದ ಹೆಚ್ಚು ಅಭಿವೃದ್ಧಿ ಮಾಡಬಹುದು. ಭಾರತದ ರಾಜಾಸ್ತಾನ್ ಮರುಭೂಮಿಯೂ ಆಸ್ವಾನ್ ಅಣೆಕಟ್ಟಿನಿಂದ ಲಾಭಪಡೆಯುವ ಈಜಿಪ್ಟಿನ ಒಳಭಾಗಗಳೂ ಇದಕ್ಕೆ ಉದಾಹರಣೆಯಾಗಿವೆ. ಚೀನದಲ್ಲಿ ಹಳದಿ ನದಿಯ ನೀರಿನಿಂದ ಅನೇಕ ದಶಲಕ್ಷ ಎಕರೆಗಳನ್ನು ಅಭಿವೃದ್ಧಿಗೊಳಿಸಬಹುದು.

ಉತ್ಪಾದನೆಯಿಂದಷ್ಟೇ ಅಲ್ಲ, ಈಗ ಆಗುವ ಆಹಾರದ ನಾಶವನ್ನು ತಪ್ಪಿಸುವುದರಿಂದಲೂ ಆಹಾರದ ಪೂರೈಕೆಯನ್ನು ಹೆಚ್ಚಿಸಬಹುದು. ಧಾನ್ಯಗಳನ್ನು ಹಾಳಾಗದಂತೆ ಕಾಪಾಡುವುದು, ಇಲಿಗಳ ಹಾವಳಿಯನ್ನು ತಡೆಯುವುದು, ಇವುಗಳಿಂದಲೇ ಭಾರತದಲ್ಲಿ ಧಾನ್ಯಗಳ ಪೂರೈಕೆಯನ್ನು ಶೇ. 10–12ರಷ್ಟು ಹೆಚ್ಚಿಸಬಹುದು ಎಂದು ಅಂದಾಜು ಇದೆ. ಇದೇ ಮಾತು ಮೀನುಗಾರಿಕೆಗೂ ಅನ್ವಯಿಸುತ್ತದೆ. ಶೀತರಕ್ಷಣೆ ನಿರ್ದ್ರವೀಕರಣ, ಡಬ್ಬಿಗಳಲ್ಲಿ ಮೊಹರು ಮಾಡುವುದು ಇತ್ಯಾದಿಗಳಿಂದ ಮೀನನ್ನಷ್ಟೇ ಅಲ್ಲ, ಕಾಯಿಪಲ್ಲೆ, ಹಣ್ಣು ಹಂಪಲುಗಳನ್ನೂ ಸಂರಕ್ಷಿಸಬಹುದು. ಆದರೆ ಇಲ್ಲಿಯ ಮುಖ್ಯ ಅಡಚಣೆಯೆಂದರೆ ಇದಕ್ಕೆ ತಗಲುವ ವೆಚ್ಚ ಈ ರೀತಿ ಸಂರಕ್ಷಿತ ಆಹಾರಗಳು ಸಾಮಾನ್ಯ ಗ್ರಾಹಕರಿಗೆ ಎಟಕುವಂತಿರಬೇಕು.

ಆಹಾರದ ವಿಷಯದಲ್ಲಿ ದೊಡ್ಡ ಸಮಸ್ಯೆಯೆಂದರೆ ಜಗತ್ತಿನ ಪ್ರೋಟೀನ್ ಪೂರೈಕೆಯನ್ನು ಹೆಚ್ಚು ಮಾಡುವುದು. ಇಲ್ಲಿ ಸಹ ಬಹಳ ಅವಕಾಶವಿದೆ. ಉದಾಹರಣೆಗೆ ಉಷ್ಣವಲಯದ ದೇಶಗಳ ಒಂದು ಸಾಮಾನ್ಯ ಕೋಳಿ ವರ್ಷಕ್ಕೆ 30–40 ತತ್ತಿ ಹಾಕಿದರೆ ಉತ್ತಮ ತಳಿಯ ಕೋಳಿ 200 ಅಥವಾ ಅದಕ್ಕೂ ಹೆಚ್ಚು ತತ್ತಿಗಳನ್ನು ಹಾಕಬಲ್ಲುದು. ಕೋಳಿ ಉದ್ಯಮವನ್ನು ಯಾವುದೇ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಸಾಗಿಸಲು ಸಾಧ್ಯವಿದೆ. ಕೋಳಿಗಳ ರೋಗಗಳನ್ನು ತಡೆಗಟ್ಟುವಲ್ಲಿಯೂ ವಿಜ್ಞಾನ ದಾರಿದೋರಿದೆ. ಪ್ರಾಣಿಗಳಿಗಾಗುವ ರೋಗಗಳನ್ನು ತಡೆಗಟ್ಟಲು ಸಾಧ್ಯವಾದರೆ ಅಭಿವೃದ್ಧಿ ಹೊಂದದ ದೇಶಗಳಲ್ಲಿ ಮಾಂಸದ ಉತ್ಪಾದನೆಯನ್ನು ಎಷ್ಟೋ ಹೆಚ್ಚಿಸಬಹುದು. ಇರುವ ಅವಕಾಶವನ್ನು ಉಪಯೋಗಿಸುವಲ್ಲಿ ಧಾರ್ಮಿಕ ಭಾವನೆಗಳೂ ಅಡ್ಡ ಬರುತ್ತವೆ. ಹೈನದ ಉತ್ಪಾದನೆಯನ್ನು ಹೆಚ್ಚಿಸುವಲ್ಲೂ ಸಾಕಷ್ಟು ಅವಕಾಶವಿದೆ. ಉತ್ತಮ ತಳಿಯ ಆಕಳುಗಳನ್ನು ಸಾಕುವುದು, ರೋಗಗಳನ್ನು ನಿಯಂತ್ರಿಸುವುದು, ಅವುಗಳಿಗೆ ಸಾಕಷ್ಟು ಮೇವನ್ನು ಪೂರೈಸುವುದು ಇವೇ ಅದಕ್ಕೆ ಉಪಾಯಗಳು. ಭಾರತದಲ್ಲಿ ದನಗಳ ಸಂಖ್ಯೆ ಬಹಳವಿದ್ದರೂ ಆರ್ಥಿಕವಾಗಿ ಬಹ್ವಂಶ ನಿರುಪಯುಕ್ತವಾಗಿವೆ. ಆದರೆ ಇದ್ದ ಮೇವಿನ ಸಂಗ್ರಹದಲ್ಲಿ ಇವುಗಳಿಗೆ ಹೋಗುವ ಪಾಲು ಗಣನೀಯ. ನಿರುಪಯುಕ್ತ ದನಗಳ ಸಂಖ್ಯೆ ಬೆಳೆಯದಂತೆ ನೋಡಿಕೊಳ್ಳುವುದು ಇಲ್ಲಿ ಅಗತ್ಯ.

ಪ್ರೋಟೀನ್ ಕೊರತೆಯನ್ನು ನೀಗಿಸುವಲ್ಲಿ ನಮ್ಮ ಸುತ್ತಲಿನ ಮಹಾಸಾಗರಗಳಲ್ಲಿರುವಷ್ಟು ಅವಕಾಶ ಬಹುಶಃ ಬೇರೆಲ್ಲಿಯೂ ಇರಲಾರದು. ಪೃಥ್ವಿ ಮುಕ್ಕಾಲು ಪಾಲು ಸಮುದ್ರದಿಂದ ಆವೃತವಾಗಿದ್ದರೂ ಅದು ಈಗ ಮಾನವನ ಒಟ್ಟು ಆಹಾರದ ಶೇ.1ರಷ್ಟು, ಒಟ್ಟು ಪ್ರೋಟೀನ್ ಸೇವನೆಯ ಶೇ.3ರಷ್ಟು ಹಾಗೂ ಪ್ರಾಣಿಜನ್ಯ ಪ್ರೋಟೀನಿನ ಶೇ.10ರಷ್ಟು ಪಾಲನ್ನು ಒದಗಿಸುತ್ತದೆ. ಪರಿಣತರ ಅಭಿಪ್ರಾಯದಂತೆ ಸಮುದ್ರದ ಮತ್ಸ್ಯ ಸಂತತಿಗೆ ಏನೂ ಬಾಧೆಯಾಗದಂತೆ ಇಂದು ಹಿಡಿಯುತ್ತಿರುವುದರ ಇಮ್ಮಡಿ ಮೀನನ್ನು ಸುಲಭವಾಗಿ ಹಿಡಿಯಬಹುದು. ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಇನ್ನೂ ಮೀನು ಹಿಡಿಯುವ ಆಧುನಿಕ ಸಲಕರಣೆ ಹಾಗೂ ವಿಧಾನಗಳನ್ನು ಅನುಸರಿಸುತ್ತಿಲ್ಲ. ಎಲ್ಲ ಕಡೆಗೂ ಈ ವಿಧಾನಗಳನ್ನು ಉಪಯೋಗಿಸಿದರೆ ಮತ್ಸ್ಯಸಂಪತ್ತು ಬೇಗ ನಷ್ಟವಾದೀತೆಂದು ಭಯಪಡಬೇಕಾಗಿಲ್ಲ. ಸಮುದ್ರಸಾಗುವಳಿಯ ವಿಧಾನಗಳ ಮೂಲಕ ಆಧುನಿಕ ವಿಜ್ಞಾನ ಇದಕ್ಕೂ ಪರಿಹಾರ ತೋರಿಸಿದೆ. ಮೀನಿನ ಆಹಾರವಾದ ಪ್ಲಾಂಕ್ಟನ್ ಬಿತ್ತುವುದು, ಮೀನುಗಳ ತಳಿಗಳನ್ನು ಸುಧಾರಿಸುವುದು, ಸಣ್ಣ ಸಣ್ಣ ಮೀನಿನ ಮರಿಗಳು ಪಾರಾಗುವಂತೆ ಮಾಡಿ ಬೆಳೆದ ದೊಡ್ಡ ಮೀನುಗಳನ್ನಷ್ಟೇ ಹಿಡಿಯುವ ಉಪಾಯಗಳನ್ನನುಸರಿಸುವುದು ಈ ಮುಂತಾದವುಗಳಿಂದ ಸಾಗರದ ಮತ್ಸ್ಯಸಂಪತ್ತನ್ನು ಕಾಪಾಡಿಕೊಂಡು ಬರಲು ಪ್ರಯೋಗಗಳು ನಡೆದಿವೆ.

ಪ್ರೋಟೀನ್ ಪೂರೈಕೆಯ ಇತರ ಮೂಲಗಳನ್ನು ಹುಡುಕುವ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ಕಾಳುಗಳ ಎಣ್ಣೆ ತೆಗೆದು ಉಳಿಯುವ ಪದಾರ್ಥ ತುಂಬ ಪ್ರೋಟೀನುಯುಕ್ತವಾಗಿದೆ. ಅದನ್ನು ಈಗ ಪಶುಗಳಿಗೇ ಉಪಯೋಗಿಸುತ್ತಿದ್ದಾರೆ. ಪಶುಗಳ ಆಹಾರ ಕಡಿಮೆಯಾಗದಂತೆ ಸ್ವಲ್ಪ ಸ್ವಲ್ಪವಾಗಿ ಮನುಷ್ಯರ ಅಹಾರವಾಗಿ ಅದನ್ನು ತಯಾರಿಸಲು ಪ್ರಯೋಗಗಳು ನಡೆದಿವೆ. ವಾಸನೆಯಿಲ್ಲದೆ, ಇತರ ಆಹಾರದೊಂದಿಗೆ ಮಿಶ್ರ ಮಾಡಿ ತಿನ್ನಲು ಸಾಧ್ಯವಾಗಬಹುದಾದ ಹಾಗೂ ಅಗ್ಗವಾದ ತಯಾರಿಕೆ ಅದಾಗಿರಬೇಕು. ಸೋಯಾಬೀನ್, ಸಾಸಿವೆ, ಎಳ್ಳು ಹಾಗೂ ಶೇಂಗ ಈ ದೃಷ್ಟಿಯಲ್ಲಿ ತುಂಬ ಉಪಯುಕ್ತವಾಗಿವೆ. ಮನುಷ್ಯನ ರುಚಿಗೆ ಹೊಂದಬಹುದಾದ ಮೀನಿನ ಪುಡಿಯನ್ನು ತಯಾರಿಸುವಲ್ಲೂ ಪ್ರಯೋಗಗಳು ಯಶಸ್ವಿಯಾಗುತ್ತಲಿವೆ. ವಿಜ್ಞಾನ ಇದಕ್ಕೂ ಮುಂದೆ ಹೋಗಿ ಈಗಿನವರೆಗೂ ಆಹಾರವೆಂದು ಗಣಿಸಲ್ಪಡದ ಪದಾರ್ಥಗಳಿಂದಲೂ ಪ್ರೋಟೀನುಯುಕ್ತ ಆಹಾರವನ್ನು ತಯಾರಿಸಲು ಪ್ರಯತ್ನಿಸುತ್ತಿದೆ. ಹಸಿರೆಲೆಗಳು, ಕ್ಲೋರೆಲ್ಲ ಮುಂತಾದ ಸಮುದ್ರದ ಪಾಚಿ ಇವುಗಳ ಮೇಲೆ ಪ್ರಯೋಗಗಳು ನಡೆಯುತ್ತಿವೆ. ಯೀಸ್ಟ್ ಪುಡಿಯನ್ನು ದೊಡ್ಡ ಪ್ರಮಾಣದಲ್ಲಿ ಹಾಗೂ ಅಗ್ಗದಲ್ಲಿ ತಯಾರಿಸುವ ಸೌಲಭ್ಯಗಳು ಅನೇಕ ರಾಷ್ಟ್ರಗಳಿಗಿವೆ. ಈಗಂತೂ ಕಚ್ಚಾ ಪೆಟ್ರೋಲಿಯಂ ಅನ್ನು ಶುದ್ಧೀಕರಿಸುವಾಗ ಸಿಗುವ ಪೆರಾಫಿನಿಕ್ ಹೈಡ್ರೊಕಾರ್ಬನ್ ತುಣುಕುಗಳ ಮೇಲೆ ಯೀಸ್ಟನ್ನು ಬೆಳೆಸಲು ಕೆಲ ಎಣ್ಣೆ ಕಂಪನಿಗಳು ಪ್ರಯತ್ನ ನಡೆಸಿವೆ. ಆದರೆ ಈ ತರದ ಎಲ್ಲ ಆಹಾರಗಳಲ್ಲಿಯ ಮುಖ್ಯ ಸಮಸ್ಯೆಯೆಂದರೆ ಅದನ್ನು ಮಾನವನ ನಾಲಗೆ ಒಪ್ಪುವುದೋ ಎಂಬುದೇ ಆಗಿದೆ. ಬಹುಶಃ ವಿಜ್ಞಾನ ಇದಕ್ಕೂ ಉತ್ತರವನ್ನು ಕೊಡಬಹುದು. ಇಲ್ಲದಿದ್ದರೆ ಅವು ಪಶುಗಳಿಗಾದರೂ ಸತ್ತ್ವಯುತ ಆಹಾರಗಳಾಗಬಹುದು.

ಹೀಗೆ ಆಧುನಿಕ ವಿಜ್ಞಾನ ಕಲ್ಪಿಸಿದ ಅವಕಾಶಗಳನ್ನಷ್ಟೇ ಗಣಿಸಿದರೆ ಮಾನವನ ಇಂದಿನ-ಅಷ್ಟೇ ಏಕೆ, ಮುಂದಿನ-ಆಹಾರದ ಅಗತ್ಯಗಳನ್ನು ಪೂರೈಸಲು ಸಾಧ್ಯವಿದೆ. ಆದರೆ ಇದಕ್ಕೆ ಹೇರಳವಾದ ಬಂಡವಾಳ, ಜಾಗತಿಕ ಸಹಕಾರ, ತಾಂತ್ರಿಕ ಕೌಶಲಗಳು ಬೇಕು. ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಜನತೆ ಹಾಗೂ ಸರಕಾರಗಳೆರಡಕ್ಕೂ ಆಹಾರ ಸಮಸ್ಯೆಯ ಗಂಭೀರತೆಯ ಅರಿವು ಮೂಡಿ ಈ ಅರಿವಿಗೆ ತಕ್ಕಂತೆ ಅವು ಶ್ರಮಿಸಬೇಕಾದದ್ದು ಅಗತ್ಯ. ಜೊತೆಗೆ ಜನಸಂಖ್ಯೆಯ ಬೆಳವಣಿಗೆಗೆ ತಡೆ ಹಾಕುವುದೂ ಅಷ್ಟೇ ಅಗತ್ಯ. ಬೆಳೆದ ಜನಸಂಖ್ಯೆಗೆ ಆಹಾರವನ್ನು ಹೇಗೆ ಒದಗಿಸುವರೆಂಬುದನ್ನು ವಿಜ್ಞಾನವೇನೋ ಹೇಳಿಕೊಡುತ್ತದೆ. ಆದರೆ ಅದನ್ನು ಅನುಷ್ಠಾನದಲ್ಲಿ ತರುವುದು ಸುಲಭವಲ್ಲ. ವಿಜ್ಞಾನ ಹಾಗೂ ಅದರ ವ್ಯಾವಹಾರಿಕ ಅನುಷ್ಠಾನಗಳಲ್ಲಿನ ಈಗಿನ ಅಂತರವೇ ಇದಕ್ಕೆ ಸಾಕ್ಷಿ.

**ಆಹಾರ ಸಮಸ್ಯೆ:** ಆಹಾರದ್ದು ಪ್ರಪಂಚದಲ್ಲಿ ಬಹು ಹಳೆಯ ಸಮಸ್ಯೆ. ಆದಿಕಾಲದಲ್ಲಿ ಜನರು ಒಂದೆಡೆಯಿಂದ ಇನ್ನೊಂದೆಡೆಗೆ ವಲಸೆಹೋದದ್ದು ಆಹಾರಕ್ಕಾಗಿಯೇ. ಜೀವಿಗಳ ವಿಕಾಸದ ಹಾದಿಯಲ್ಲಿ ಆಗಿರುವ ನಾನಾ ಪರಿವರ್ತನೆಗಳು ಮೂಲತಃ ಅವುಗಳ ಆಹಾರ ಗಳಿಕೆಯ ಯತ್ನದ ಫಲ. ಎತ್ತರದಲ್ಲಿದ್ದ ಮರದೆಲೆಗಳನ್ನು ನಿಲುಕಿಸುವ ಪ್ರಯತ್ನದಲ್ಲೇ ಕತ್ತನ್ನು ದಿನದಿನಕ್ಕೂ ಮೇಲಿಂದ ಮೇಲಕ್ಕೆ ನಿಮಿರಿಸುತ್ತಿದ್ದುದರಿಂದಲೇ ಜಿರಾಫೆಯ ಕೊರಳು ಉದ್ದವಾಯಿತೆಂಬುದು ಜೀವವಿಜ್ಞಾನಿಗಳ ಒಂದು ಮತ. ಆಹಾರ ಸಂಗ್ರಹಣೆ, ಉಣಿಸುಗಳ ತಯಾರಿಕೆ, ಊಟದ ಪದ್ಧತಿ ಇವುಗಳ ಆಧಾರದ ಮೇಲೆ ಒಂದು ನಾಗರಿಕತೆಯನ್ನಳೆಯುವುದು ಸಾಧ್ಯ.

ವೇದಗಳ ಕಾಲದಿಂದಲೂ ಭಾರತೀಯರಿಗೆ ಆಹಾರದ ಮಹತ್ತ್ವ ಗೊತ್ತಿತ್ತು. ಆಹಾರವನ್ನು-ಎಂದರೆ ಅನ್ನವನ್ನು-ನಿಂದಿಸಬಾರದು. ಅನ್ನವೇ ಬ್ರಹ್ಮ. ಎಲ್ಲ ಜೀವಿಗಳೂ ಅನ್ನದಿಂದಲೇ ಹುಟ್ಟುತ್ತವೆ; ಅನ್ನದಿಂದಲೇ ಬದುಕುತ್ತವೆ; ಅನ್ನದಲ್ಲೇ ಅವು ಲಯವಾಗುತ್ತವೆ. ಇದು ವೇದದ ಒಂದು ಮಂತ್ರದ ಅರ್ಥ. ಪುರಾತನ ಈಜಿಪ್ಟಿನಲ್ಲೂ ರೋಮಿನಲ್ಲೂ ಜನಕ್ಕೆ ಆಹಾರದ ಮಹತ್ತ್ವ ಗೊತ್ತಿತ್ತು. ಆಹಾರದ ಕೊರತೆಯ ಬಿಸಿಯೂ ಅವರಿಗೆ ತಟ್ಟಿತ್ತು. ನೀರಿನ ಅಭಾವದ ಫಲವಾಗಿ ಕ್ಷಾಮಕ್ಕೀಡಾಗಬಾರದೆಂದು ಅವರು ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿದ್ದರು. ಎಲ್ಲ ನಾಗರಿಕತೆಗಳ ಉಚ್ಛ್ರಾಯ ಕಾಲದಲ್ಲಿ ಆಹಾರದ ಕೊರತೆಯ ನಿವಾರಣೆಗಾಗಿ ನೀರಾವರಿಗೆ ಆದ್ಯ ಗಮನ ಕೊಟ್ಟಿದ್ದನ್ನು ಚರಿತ್ರೆಯಲ್ಲಿ ಕಾಣಬಹುದು. ಜಗತ್ತಿನ ಜನಸಂಖ್ಯೆ ಏರುತ್ತಲೇ ಇರುವುದರಿಂದ ಆಹಾರ ಪೂರೈಕೆಯಲ್ಲಿ ಆಗಿಂದಾಗ್ಗೆ ಒದಗುವ ಬಿಕ್ಕಟ್ಟನ್ನು ಪರಿಹರಿಸುವುದಕ್ಕಾಗಿ ಜನರಿಂದಲೂ ಸರ್ಕಾರಗಳಿಂದಲೂ ನಾನಾಕ್ರಮಗಳು ಜಾರಿಗೆ ಬಂದಿವೆ.

ಜನಸಂಖ್ಯೆಗೂ ಆಹಾರಕ್ಕೂ ಇರುವ ಸಂಬಂಧದ ವಿಚಾರವಾಗಿ ಮೊಟ್ಟಮೊದಲಿಗೆ ಜಗತ್ತಿನ ಗಮನ ಸೆಳೆದವ ಮಾಲ್ಥಸ್ ಎಂಬ ಪಂಡಿತ (1798). ಆಹಾರದ ಪೂರೈಕೆಯನ್ನೇ ಒಂದು ದೇಶದ ಜನಸಂಖ್ಯೆ ಅವಲಂಬಿಸಿರುತ್ತದೆಂದು ಅವನು ಹೇಳಿದ. ಆಹಾರೋತ್ಪತ್ತಿಗಿಂತ ಜನಸಂಖ್ಯೆ ವೇಗವಾಗಿ ಅಧಿಕವಾಗುವುದೆಂದು ಅವನ ಹೇಳಿಕೆ. ಯಾವುದೇ ಒಂದು ಘಟ್ಟದಲ್ಲಿ ಆಹಾರೋತ್ಪತ್ತಿಯ ಪ್ರಮಾಣವನ್ನು ಜನಸಂಖ್ಯೆಯ ಪ್ರಮಾಣ ಮೀರಿಸಿ ನಡೆದಾಗ ಆಹಾರಾಭಾವ ಸಂಭವಿಸುತ್ತದೆ. ಎಲ್ಲರಿಗೂ ಸಾಕಷ್ಟು ಆಹಾರ ದೊರಕದ್ದರ ಫಲವಾಗಿ ರೋಗರುಜಿನಗಳೂ ಕ್ಷಾಮಡಾಮರಗಳೂ ತಲೆದೋರುತ್ತವೆ. ಜನರು ಅಧಿಕ ಸಂಖ್ಯೆಯಲ್ಲಿ ಸಾಯುತ್ತಾರೆ. ಜನಸಂಖ್ಯೆ ಇಳಿಯುತ್ತದೆ. ಮತ್ತೆ ಆಹಾರೋತ್ಪತ್ತಿಯೂ ಜನಸಂಖ್ಯೆಯೂ ಓಟದ ಸ್ಪರ್ಧೆಯಲ್ಲಿ ತೊಡಗುತ್ತವೆ. ಹಿಂದಿನ ಪರಿಸ್ಥಿತಿ ಮರುಕಳಿಸಿ ಮತ್ತೆ ಸಮತೋಲ ಏರ್ಪಡಬೇಕಾಗುತ್ತದೆ. ಹೀಗೆ ಚಕ್ರಾಕಾರವಾಗಿ ನಡೆಯುತ್ತಿರುವುದು ಪ್ರಕೃತಿನಿಯಮ.

ಮಾಲ್ಥಸನ ಮೀಮಾಂಸೆಯನ್ನು ಸರ್ವಸಮರ್ಪಕವೆಂದು ಹೇಳಲಾಗದಿದ್ದರೂ ಪ್ರತಿಯೊಂದು ಆರ್ಥಿಕ ವ್ಯವಸ್ಥೆಯಲ್ಲೂ ಒಂದು ನಿಶ್ಚಿತಕಾಲದಲ್ಲಿ ಸಾಧ್ಯವಾಗುವ ಉತ್ಪಾದನೆಯಿಂದ ಸರಿತೂಗಿಸಬಹುದಾದ ಒಂದು ಪರಮಾವಧಿ ಜನಸಂಖ್ಯೆ ಇದೆಯೆಂಬುದು ನಿಜ. ಜನಸಂಖ್ಯೆ ಈ ಮಿತಿಯನ್ನು ಮೀರಿ ನಡೆದಾಗ ಅಭಾವ ಸಂಭವಿಸುವುದು ಸಹಜ. ಆಗ ಹೆಚ್ಚಿನ ಬೇಡಿಕೆಯನ್ನು ಪೂರೈಸಲು ಉತ್ಪಾದನೆಯನ್ನು ಹೆಚ್ಚಿಸುವುದು ಅಗತ್ಯ. ತೀವ್ರಗತಿಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಇದು ಅಧಿಕವಾಗಬೇಕಾಗುತ್ತದೆ.

ಎರಡನೆಯ ಮಹಾಯುದ್ಧದ ಕಾಲದಲ್ಲಿ ವ್ಯವಸಾಯದ ಕಡೆಗೆ ಹೆಚ್ಚು ಗಮನ ಕೊಡುವುದು ಸಾಧ್ಯವಾಗದುದರಿಂದಲೂ ಅನೇಕ ದೇಶಗಳಲ್ಲಿ ಆರ್ಥಿಕ ವ್ಯವಸ್ಥೆಗೆ ಒದಗಿದ ಆಘಾತದ ದೆಸೆಯಿಂದಲೂ ಯುದ್ಧಾನಂತರ ಅನೇಕ ದೇಶಗಳಲ್ಲಿ ತೀವ್ರವಾದ ಅಭಾವ ಕಾಣಿಸಿಕೊಂಡಿತು. ಹೆಚ್ಚು ಆಹಾರ ಬೆಳೆಯುವ ಯೋಜನೆಗಳು ಅನಿವಾರ್ಯವಾದುವು. ಪಾಳುಬಿದ್ದಿದ್ದ ಜಮೀನಿನ ಸಾಗುವಳಿ ಆಯಿತು. ರಾಸಾಯನಿಕ ಗೊಬ್ಬರದ ಬಳಕೆ ಹೆಚ್ಚಾಗಿ ರೂಢಿಗೆ ಬಂತು. ಬೇಸಾಯದಲ್ಲಿ ಯಂತ್ರದ ಬಳಕೆ ಅನೇಕ ಕಡೆಗಳಲ್ಲಿ ಸಾಮಾನ್ಯವಾಯಿತು. ವಿಶಿಷ್ಟವಾದ ವ್ಯವಸಾಯದ ಕೆಲಸಗಳಿಗೆ ಹೊಸ ಯಂತ್ರಗಳು ನಿರ್ಮಾಣವಾದುವು. ಒಳ್ಳೆಯ ತಳಿಯ ಬೀಜಗಳನ್ನು ಶಾಸ್ತ್ರೀಯ ಪ್ರಯೋಗಗಳಿಂದ ಬೆಳೆದು ಉಪಯೋಗಿಸುವ ಕ್ರಮ ಜಾರಿಗೆ ಬಂತು. ಪಶುಪಾಲನೆಯಲ್ಲೂ ಸುಧಾರಣೆಗಳಾದುವು. ಅಮೆರಿಕ ಸಂಯುಕ್ತ ಸಂಸ್ಥಾನ, ರಷ್ಯ ಮೊದಲಾದ ಮುಂದುವರಿದ ದೇಶಗಳಲ್ಲಿ ಪ್ರಗತಿ ಚುರುಕಾಯಿತು. ಉಳಿದ ದೇಶಗಳೂ ತಕ್ಕಮಟ್ಟಿಗೆ ಮುಂದುವರಿದುವು.

ಲಾಭದಾಯಕವಲ್ಲದ ಸಣ್ಣ ಹಿಡುವಳಿಗಳನ್ನು ಒಟ್ಟುಗೂಡಿಸಿ ದೊಡ್ಡದಾಗಿ ಮಾಡುವ ಚಳವಳಿ ನಡೆಯಿತು. ದೊಡ್ಡ ಜಮೀನುಗಳನ್ನು ರೈತರಿಗೆ ಹಂಚಿ ಹೆಚ್ಚು ಬೆಳೆ ತೆಗೆಯುವ ಯತ್ನವೂ ನಡೆಯಿತು. ಸ್ವಂತ ಜಮೀನಿನಲ್ಲಿ ಸ್ವತಃ ಬೇಸಾಯ ಮಾಡದ, ದೂರದಲ್ಲಿ ವಾಸಿಸುವವರ ಜಮೀನನ್ನು ಅವರ ಕೈಯಿಂದ ತಪ್ಪಿಸಿ, ಅದನ್ನು ಬೇಸಾಯ ಮಾಡುವ ರೈತನಿಗೇ ಕೊಡಿಸುವ ಕಾಯಿದೆಗಳು ಜಾರಿಗೆ ಬಂದುವು. ಹೀಗೆ ನಾನಾ ಬಗೆಯಾಗಿ ಆಹಾರೋತ್ಪನ್ನವನ್ನು ಹೆಚ್ಚಿಸಿ, ಆಹಾರಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನಗಳು ಜಗತ್ತಿನಾದ್ಯಂತ ನಡೆದಿವೆ.

ಇಷ್ಟೆಲ್ಲ ಆದರೂ ಎಲ್ಲರಿಗೂ ಅತ್ಯಾವಶ್ಯಕವಾದ ಆಹಾರವನ್ನೊದಗಿಸುವುದರಲ್ಲಿ ಇನ್ನೂ ವಿಫಲತೆಯೇ ಕಾಣುತ್ತಿರುವುದು ಕಳವಳಕರ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ ಅಂದಾಜಿನ ಪ್ರಕಾರ ಪ್ರಪಂಚದ ಸು.300 ಕೋಟಿ ಜನರ ಪೈಕಿ 50 ಕೋಟಿ ಜನ ಈಗಲೂ ಹಸಿವಿನ ಸಂಕಟಕ್ಕೆ ಒಳಗಾಗಿದ್ದಾರೆ. ಸು.100 ಕೋಟಿ ಜನಕ್ಕೆ ಸಾಕಷ್ಟು ಪುಷ್ಟಿ ನೀಡುವ ಆಹಾರ ಹಾಗಿರಲಿ, ಹೊಟ್ಟೆತುಂಬ ಆಹಾರ ಕೂಡ ದೊರೆಯುತ್ತಿಲ್ಲ. ಇವರಲ್ಲಿ ಬಹುಭಾಗ ಏಷ್ಯ ಆಫ್ರಿಕಗಳಲ್ಲೇ ಜೀವಿಸುತ್ತಿದ್ದಾರೆ.

ಆದ್ದರಿಂದ ಎರಡು ನಿಟ್ಟುಗಳಲ್ಲಿ ಈಗ ಜರೂರಾಗಿ ಪ್ರಯತ್ನ ನಡೆಯಬೇಕಾಗಿದೆ. ಮೊದಲನೆಯದಾಗಿ ಜನಸಂಖ್ಯೆಯ ನಿಯಂತ್ರಣ **(ನೋಡಿ- ಕುಟುಂಬಯೋಜನೆ),** ಎರಡನೆಯದಾಗಿ ವೈಜ್ಞಾನಿಕ ವಿಧಾನಗಳಿಂದಲೂ ಸಾಮಾಜಿಕ ಸುಧಾರಣೆಗಳಿಂದಲೂ ಹೆಚ್ಚು ಹೆಚ್ಚು ನೆಲವನ್ನು ಕೃಷಿಗೆ ಒಳಪಡಿಸುವುದರಿಂದಲೂ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನ.

**ಭಾರತದಲ್ಲಿ ಆಹಾರಸಮಸ್ಯೆ:** ಭಾರತಕ್ಕೂ ಆಹಾರಸಮಸ್ಯೆಗೂ ಹಿಂದಿನಿಂದಲೂ ನಂಟು. ಮೂರು ವರ್ಷಕ್ಕೊಮ್ಮೆ ಅಧಿಕಮಾಸ ಹೇಗೋ ಹಾಗೆ ಮೂವತ್ತುವರ್ಷಕ್ಕೊಮ್ಮೆ ಒಂದು ಬರವೆಂಬುದು ನಮ್ಮಲ್ಲಿ ಹಳೆಯ ಪ್ರತೀತಿ. ವಿದೇಶೀಯರ ಆಳ್ವಿಕೆಯ ಕಾಲದಲ್ಲಿ ಕ್ಷಾಮ ಸಾಮಾನ್ಯವಾಗಿತ್ತು. ಆಡಳಿತದ ಉದಾಸೀನತೆ, ಸಾರಿಗೆಯ ಅವ್ಯವಸ್ಥೆ, ಪ್ರಕೃತಿಯ ಕೋಪ-ಇವು ಕ್ಷಾಮಗಳಿಗೆ ಮುಖ್ಯ ಕಾರಣಗಳು ಕಳೆದ ಶತಮಾನದಲ್ಲಿ ಭಾರತದಲ್ಲಿ ಕ್ಷಾಮಗಳಿಂದ ಒಟ್ಟು ಸು.2.14 ಕೋಟಿ ಜನ ಸತ್ತರೆಂದು ಒಂದು ಅಂದಾಜು. 1943ರಲ್ಲಿ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಬಂಗಾಳದಲ್ಲಿ ಸಂಭವಿಸಿದ ಕ್ಷಾಮದಿಂದ ಸತ್ತವರ ಸಂಖ್ಯೆ ಮೂವತ್ತೈದು ಲಕ್ಷ. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಂಥ ಭೀಕರ ಕ್ಷಾಮಗಳು ತಲೆದೋರದಂತೆ ಎಚ್ಚರಿಕೆ ವಹಿಸಲಾಗಿದೆಯಾದರೂ ಆಹಾರ ಸಮಸ್ಯೆಯಂತೂ ಸಂಪೂರ್ಣವಾಗಿ ಮರೆಯಾಗಿಲ್ಲ.

ಭಾರತದ ಆಹಾರಸಮಸ್ಯೆಗೆ ಅನೇಕ ಕಾರಣಗಳನ್ನು ಕೊಡಬಹುದು. ಇಲ್ಲಿನ ವ್ಯವಸಾಯ ಬಹುವಾಗಿ ಮಳೆಯನ್ನೇ ಅವಲಂಬಿಸಬೇಕಾಗಿರುವುದು ಒಂದು ಕಾರಣ. ಕೆಲವು ಪ್ರದೇಶಗಳಲ್ಲಿ, ಕೆಲವು ವರ್ಷಗಳಲ್ಲಿ ಅನಾವೃಷ್ಟಿಯೂ ಸಂಭವಿಸುವುದರಿಂದ ಆಹಾರೋತ್ಪಾದನೆ ಒಂದೇ ಸಮನಾಗಿಲ್ಲ. ಪ್ರಕೃತಿಯೊಂದಿಗೆ ಆಡುವ ಈ ಪಗಡೆಯಾಟದಲ್ಲಿ ಅನೇಕಬಾರಿ ಪ್ರಕೃತಿಯದೇ ವಿಕ್ರಮ.

ಬೇಸಾಯದಲ್ಲಿ ಹಳೆಯ ವಿಧಾನಗಳೂ ಹಿಡುವಳಿ ಪದ್ಧತಿಯೂ ರೈತರಲ್ಲಿ ವಂಶಾನುಗತವಾಗಿ ಬೇಸಾಯದ ನೆಲ ಹರಿದು ಹಂಚಿಹೋಗುತ್ತಿರುವುದೂ ರೈತರ ಬಡತನವೂ ಸಾಲವೂ ಇನ್ನು ಕೆಲವು ಕಾರಣಗಳು (ನೋಡಿ-ಭಾರತದ ಬೇಸಾಯ).

ಏರುತ್ತಿರುವ ಜನಸಂಖ್ಯೆಯನ್ನೂ ಮರೆಯುವಂತಿಲ್ಲ. 1901ರಲ್ಲಿ 23,62,81,245 ಇದ್ದ ಭಾರತದ ಜನಸಂಖ್ಯೆ ಐವತ್ತು ವರ್ಷಗಳಲ್ಲಿ 43,62,35,082ಕ್ಕೆ ಏರಿತು. ಇದೇ ಪ್ರಮಾಣದಲ್ಲಿ ಆಹಾರದ ಉತ್ಪಾದನೆ ಹೆಚ್ಚಾಗಲಿಲ್ಲ. 1918ರಲ್ಲಿ ಪ್ರತಿಯೊಬ್ಬನಿಗೂ ದಿನಕ್ಕೆ ಸರಾಸರಿ ಇಪ್ಪತ್ತು ಔನ್ಸ್ ಆಹಾರ ದೊರಕುತ್ತಿತ್ತು. 1961ರಲ್ಲಿ ಭಾರತದಲ್ಲಿ ಹೆಚ್ಚು ಆಹಾರ ಉತ್ಪತ್ತಿ ಮಾಡುತ್ತಿದ್ದರೂ ದಿನವೊಂದಕ್ಕೆ ತಲಾ 15 ಔನ್ಸ್ ದೊರಕುತ್ತಿತ್ತು. ಏರುತ್ತಿರುವ ಜನಸಂಖ್ಯೆಯ ಫಲವಾಗಿ ಸಮಸ್ಯೆ ದೊಡ್ಡದಾಯಿತು. **(ನೋಡಿ-ಭಾರತದ ಜನಸಂಖ್ಯಾ ಸಮಸ್ಯೆ)**.

ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿಯೂ ಭಾರತದ ರಕ್ಷಣೆಗಾಗಿಯೂ ಅಗಾಧ ಹಣವನ್ನು ವೆಚ್ಚ ಮಾಡುತ್ತಿರುವುದರಿಂದಲೂ ಈ ಸಮಸ್ಯೆ ಉಗ್ರರೂಪ ತಾಳಿದೆ. ಭಾರತದ ಯೋಜನೆಗಳಲ್ಲಿ ಬೃಹತ್ ಪ್ರಮಾಣದ ಉದ್ಯಮಗಳಿಗಾಗಿಯೂ ದೊಡ್ಡ ನೀರಾವರಿ ಕಾಮಗಾರಿಗಳಿಗಾಗಿಯೂ ಹೆಚ್ಚು ಹಣ ವೆಚ್ಚವಾಗುತ್ತಿದೆ. ಇವುಗಳಿಂದ ತತ್‍ಕ್ಷಣವೇ ಫಲ ದೊರಕುವುದು ಸಾಧ್ಯವಾಗದುದರಿಂದ ಜನರ ಕೈಯಲ್ಲಿ ಸೇರಿದ ಅಧಿಕ ಹಣದಿಂದ ಕೊಳ್ಳಲು ಆಹಾರ ಪದಾರ್ಥಗಳು ಸಾಕಷ್ಟು ಪ್ರಮಾಣದಲ್ಲಿ ದೊರಕದಾಗಿದೆ. ಔದ್ಯೋಗೀಕರಣದ ಫಲವಾಗಿ ನಗರಗಳು ಬೆಳೆದಿವೆ. ಗ್ರಾಮಾಂತರ ಪ್ರದೇಶಗಳಿಂದ ನಗರಗಳಿಗೆ ವಲಸೆ ಬಂದವರ ಆಹಾರದ ಬೇಡಿಕೆಯನ್ನು ಪೂರೈಸಲು ಬೇಕಾಗುವಷ್ಟು ಉತ್ಪಾದನೆ ಹೆಚ್ಚದ್ದರಿಂದಲೂ ಪರಿಸ್ಥಿತಿ ತೀವ್ರವಾಗಿದೆ. ಇದು ಸರಬರಾಜಿನ ಸಮಸ್ಯೆ. ಗ್ರಾಮಗಳಲ್ಲಿ ಆಹಾರ ಬೆಳೆಯುವವರು ತಮಗೆ ಆವಶ್ಯಕವಾದುದಕ್ಕಿಂತ ಹೆಚ್ಚು ಬೆಳೆಯುವಂತಾಗಬೇಕು. ಹೆಚ್ಚಾದ ಉತ್ಪನ್ನವನ್ನು ವಿತರಣೆ ಮಾಡುವ ಸಮರ್ಪಕ

ವ್ಯವಸ್ಥೆ ಏರ್ಪಡಬೇಕು. ಬೆಳೆಯುವವನಿಗೂ ಬಳಕೆದಾರನಿಗೂ ನಡುವೆ ಮಧ್ಯವರ್ತಿಗಳು ಆಹಾರವನ್ನು ತಡೆದಿಟ್ಟರೆ ಬೆಲೆ ಏರಿಕೆಯೂ ಕೃತಕ ಅಭಾವ ಪರಿಸ್ಥಿತಿಯೂ ಸಂಭವಿಸುವುದುಂಟು.

ಅಭಿವೃದ್ಧಿ ಯೋಜನೆಗಳಿಂದ ಜನರಲ್ಲಿ ಉದ್ಯೋಗಾವಕಾಶಗಳು ಹೆಚ್ಚಿ, ಅವರ ಆದಾಯ ಏರುತ್ತದೆ. ಅವರ ಆಹಾರ ಪದ್ಧತಿಯಲ್ಲಿ ವ್ಯತ್ಯಾಸಗಳಾಗುತ್ತವೆ. ಅವರ ರುಚಿಗಳು ಬೆಳೆಯುತ್ತವೆ. ಹಿಂದೆ ಅಗ್ಗದ ಧಾನ್ಯಗಳನ್ನು ಸೇವಿಸುತ್ತಿದ್ದವರಿಂದ ಈಗ ಉತ್ತಮ ಆಹಾರಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಇವುಗಳ ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಾಗಿಲ್ಲದಿರುವುದರಿಂದ ಅಭಾವ ಹೆಚ್ಚುತ್ತದೆ. ಬೆಲೆಯೂ ಏರುತ್ತದೆ.

**ಭಾರತ ಸರ್ಕಾರದ ಆಹಾರ ನೀತಿ:** ದೇಶದ ಆಹಾರ ಸಮಸ್ಯೆಯ ಪರಿಹಾರಕ್ಕಾಗಿ ಭಾರತ ಸರ್ಕಾರ ಅನೇಕ ಕ್ರಮಗಳನ್ನು ಕೈಕೊಂಡಿದೆ. ಸರ್ಕಾರದ ಆಹಾರ ನೀತಿಗೆ ಮೂರು ಗುರಿಗಳಿರಬೇಕೆಂಬುದಾಗಿ ಆಹಾರಧಾನ್ಯ ನೀತಿ ನಿರೂಪಣಾ ಸಮಿತಿ ಸೂಚಿಸುತ್ತದೆ. ಉತ್ಪಾದನೆಯಲ್ಲಿ ಸ್ವಸಂಪೂರ್ಣತೆ, ಹವಣಾದ ವಿತರಣೆ, ಆಹಾರದ ಬೆಲೆಯಲ್ಲಿ ಸ್ಥಿರತೆಯ ಸ್ಥಾಪನೆ–ಈ ಎಲ್ಲ ದಿಕ್ಕುಗಳಲ್ಲಿಯೂ ಸರ್ಕಾರ ಸೂಕ್ತಕ್ರಮ ಕೈಗೊಂಡಿದೆ.

ಭಾರತದಲ್ಲಿ ಆಹಾರಾಭಾವವನ್ನು ಪರಿಹರಿಸಲು ಇತರ ದೇಶಗಳಿಂದ ಆಹಾರ ಧಾನ್ಯ ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಲ್ಲಿ ಬಹುಭಾಗ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ಬರುತ್ತಿದೆ. ಪಬ್ಲಿಕ್ ಲಾ 480ರ ಪ್ರಕಾರ ಅಮೆರಿಕದಿಂದ ತರಿಸಿಕೊಳ್ಳುತ್ತಿರುವ ಆಹಾರಧಾನ್ಯವನ್ನು ಭಾರತದಲ್ಲಿ ಮಾರಾಟ ಮಾಡಿ, ಬಂದ ಹಣವನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಸರ್ಕಾರದ ಹೆಸರಿನಲ್ಲಿ ಭಾರತದಲ್ಲೆ ಇಡುವ ವ್ಯವಸ್ಥೆಮಾಡಿದೆ. ಭಾರತದಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಕೈಗೊಳ್ಳುವ ಅಭಿವೃದ್ಧಿ ಯೋಜನೆಗಳಿಗೆ ಈ ಹಣ ಸಾಲವಾಗಿ ದೊರಕುತ್ತದೆ. ಧಾನಧರ್ಮಕಾರ್ಯಗಳಿಗೂ ಈ ಹಣ ಒದಗುತ್ತದೆ. ಈ ಕ್ರಮದಿಂದ ಭಾರತದ ಆಹಾರ ಸಮಸ್ಯೆ ಸ್ವಲ್ಪಮಟ್ಟಿಗೆ ಉಪಶಮನವಾಗಿರುವುದಾದರೂ ವಿದೇಶೀ ಸರ್ಕಾರವೊಂದರ ಲೆಕ್ಕದಲ್ಲಿ ಕೋಟ್ಯಂತರ ರೂಪಾಯಿಗಳು ಭಾರತದಲ್ಲಿ ಶೇಖರವಾಗಿರುವುದರ ಶುಭಾಶುಭಫಲಗಳ ವಿಚಾರದಲ್ಲಿ ವಿವಾದವೂ ಉಂಟಾಗಿದೆ (**ನೋಡಿ– ಪಿ.ಎಲ್. 480**). ಆದರೆ ಸಂಕಟಕಾಲದಲ್ಲಿ ಬಂದ ಈ ವಿದೇಶೀ ನೆರವಿನಿಂದ ಬಿಕ್ಕಟ್ಟನ್ನು ದಾಟಲು ಸಹಾಯವಾಗಿದೆ.

**ಭಾರತದ ಆಹಾರ ಕಾರ್ಪೊರೇಷನ್:** ಆಹಾರ ವಿತರಣೆಯದೂ ಒಂದು ದೊಡ್ಡ ಸಮಸ್ಯೆ. ದೇಶದಲ್ಲಿ ಸಾಕಷ್ಟು ಕೈಗಾವಲು ದಾಸ್ತಾನು ಇಲ್ಲದ್ದರಿಂದ ವಿತರಣೆ ವ್ಯವಸ್ಥೆಯಲ್ಲಿ ಆಗಿಂದಾಗ್ಗೆ ವಿಷಮ ಪರಿಸ್ಥಿತಿ ಏರ್ಪಡುತ್ತದೆ. 1957ರಲ್ಲಿ ಅಶೋಕ ಮೆಹ್ತರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ವಿಚಾರಣಾ ಸಮಿತಿ ಈ ಸಮಸ್ಯೆಯನ್ನು ಕೂಲಂಕಷವಾಗಿ ವಿವೇಚಿಸಿದೆ. ಸಾಕಷ್ಟು ಆಹಾರ ದಾಸ್ತಾನು ಮಾಡಿ ಬೆಲೆಗಳಲ್ಲಿ ಸ್ತಿಮಿತವನ್ನೇರ್ಪಡಿಸಲು ಇದು ನಾನಾ ಸಲಹೆಗಳನ್ನು ಮಾಡಿದೆ. ಈ ಶಿಫಾರಸುಗಳು ಸರ್ಕಾರದ ಒಪ್ಪಿಗೆ ಪಡೆದಿವೆ. ಕೈಗಾವಲು ದಾಸ್ತಾನು ಹೊಂದುವ ಉದ್ದೇಶದಿಂದಲೂ ವಿತರಣೆಯಲ್ಲಿ ಸುವ್ಯವಸ್ಥೆಯನ್ನೇರ್ಪಡಿಸಲೂ ಭಾರತದ ಆಹಾರ ಕಾರ್ಪೊರೇಷನ್ (ಫುಡ್ ಕಾರ್ಪೊರೇಷನ್ ಆಫ್ ಇಂಡಿಯ) ಎಂಬ ಸಂಸ್ಥೆ 1965ರಲ್ಲಿ ಸರ್ಕಾರಿ ವಲಯದಲ್ಲಿ ಸ್ಥಾಪಿತವಾಯಿತು. 100 ಕೋಟಿ ರೂಪಾಯಿಗಳ ಅಧಿಕೃತ ಬಂಡವಾಳದೊಡನೆ ಸ್ಥಾಪಿತವಾದ ಈ ಸಂಸ್ಥೆಯ ನಿರ್ವಹಣ ಬಂಡವಾಳ 31 ಮಾರ್ಚ್ 1968ರಂದು 39 ಕೋಟಿ ರೂಪಾಯಿಗಳು. ಆಹಾರ ಸಂಗ್ರಹಣೆ, ಸಾಗಿಗೆ, ದಾಸ್ತಾನು, ರೇವುಗಳಿಂದ ಒಳನಾಡಿಗೆ ಧಾನ್ಯದ ಸಾಗಾಣಿಕೆ–ಇವೆಲ್ಲವೂ ಆಹಾರ ಕಾರ್ಪೊರೇಷನ್ನಿನ ಹೊಣೆ. ರೈತರ ಹಿತರಕ್ಷಣೆಗಾಗಿ ಬೆಳೆಗಳಿಗೆ ಬೆಂಬಲ ಬೆಲೆ ನೀಡುವುದು, ಆಹಾರಧಾನ್ಯಗಳನ್ನು ರಾಷ್ಟ್ರಾದ್ಯಂತ ಸಾರ್ವಜನಿಕ ವಿತರಣೆ ವ್ಯವಸ್ಥೆಯ ಮೂಲಕ ವಿತರಿಸುವುದು, ಆಹಾರಧಾನ್ಯಗಳನ್ನು ಸಂಗ್ರಹಿಸಿ, ಕಷ್ಟ ಕಾಲಕ್ಕೆ ಒದಗಲೆಂದು ಸುರಕ್ಷಿತವಾಗಿಡುವುದು, ವಿಶೇಷವಾಗಿ ಬಡತನ ರೇಖೆಯಿಂದ ಕೆಳಗಿರುವವರಿಗೆ ಆಹಾರಧಾನ್ಯಗಳನ್ನು ನ್ಯಾಯಬೆಲೆಯಲ್ಲಿ ನೀಡುವುದು. ಬೆಲೆ ಸ್ಥಿರತೆ ಕಾಪಾಡಲು ಮಧ್ಯ ಪ್ರವೇಶಿಸುವುದು–ಆಹಾರ ಕಾರ್ಪೊರೇಷನ್ನಿನ ಧ್ಯೇಯ. ಆಹಾರಧಾನ್ಯದ ಸಗಟು ವ್ಯಾಪಾರದಲ್ಲೂ ವಿತರಣೆಯಲ್ಲೂ ಇದು ತಕ್ಕಮಟ್ಟಿನ ಹತೋಟಿ ಹೊಂದಿ ಸಹಕಾರ ಸಂಘಗಳು ಹಾಗೂ ಚಿಲ್ಲರೆ ವರ್ತಕರ ನೆರವುಗಳಿಂದ ವಿತರಣೆಯನ್ನು ಸುವ್ಯವಸ್ಥೆಗೆ ಒಳಪಡಿಸಬಹುದು. ಆಹಾರಧಾನ್ಯದ ಕೈಗಾವಲು ದಾಸ್ತಾನನ್ನು ಸಾಧ್ಯಗೊಳಿಸಿ ಬೆಲೆಗಳಲ್ಲಿ ಸ್ಥಿರತೆ ಏರ್ಪಡಿಸಬಹುದು.

ಕೋಲ್ಕತದಲ್ಲೂ ಚೆನ್ನೈನಲ್ಲೂ ದೇಶದ ಐದು ಕಡೆಗಳಲ್ಲಿ (ಉತ್ತರ, ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಈಶಾನ್ಯ ಭಾಗಗಳಲ್ಲಿ) ಇಪ್ಪತ್ನಾಲ್ಕು ವಲಯ ಕಾರ್ಯಾಲಯಗಳಿವೆ.

ಆಹಾರ ಕಾರ್ಪೊರೇಷನ್ನು ಸು. 250 ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ಸು. ಸರಾಸರಿ 1500 ಕಿಮೀ. ದೂರ ಸಾಗಿಸುತ್ತದೆ. ಆಹಾರಧಾನ್ಯ ಹೆಚ್ಚುವರಿ ಇರುವಂಥ ರಾಜ್ಯಗಳಿಂದ ಕೊರತೆಯಿರುವ ರಾಜ್ಯಗಳಿಗೆ ಸು. 12 ಲಕ್ಷ (50 ಕೆಜಿ) ಚೀಲಗಳನ್ನು ಪ್ರತಿನಿತ್ಯ ಅದು ಸಾಗಿಸುತ್ತದೆ. (ಎಚ್.ಸಿ.ಕೆ.)

**ಆಹಾರ ಮತ್ತು ಕೃಷಿ ಸಂಸ್ಥೆ:** ವಿಶ್ವಸಂಸ್ಥೆಯೊಂದಿಗೆ ಸಂಯೋಜಿತವಾದ ವಿಶೇಷ ಸಂಸ್ಥೆಗಳಲ್ಲೊಂದು (ಫುಡ್ ಅಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್; ಎಫ್.ಎ.ಒ.) ದ್ವಿತೀಯ ಮಹಾಯುದ್ಧಾನಂತರದಲ್ಲಿ ಎಂದರೆ 1956 ಅಕ್ಟೋಬರ್ 16ರಂದು ಸ್ಥಾಪಿತವಾದ ಇದು ವಿಶ್ವಸಂಸ್ಥೆ ಜನಿಸುವುದಕ್ಕೆ 8 ದಿನ ಮುಂಚೆ ಹುಟ್ಟಿತು. ಹಸಿವಿನ ನಿವಾರಣೆಯೇ ಈ ಸಂಸ್ಥೆಯ ವಿಶೇಷ ಸಮಸ್ಯೆ. ವರ್ಜೀನಿಯದ ಹಾಟ್‌ಸ್ಪ್ರಿಂಗ್ ಎಂಬಲ್ಲಿ ಹಲವು ರಾಷ್ಟ್ರಗಳ ಪ್ರತಿನಿಧಿಗಳ ಸಮಾವೇಶದಲ್ಲಿ ಜನ್ಮತಳೆದ ಈ ಸಂಸ್ಥೆಗೆ ಅದರದೇ ಆದ ನಿಬಂಧನೆಗಳೂ ಸದಸ್ಯ ಸಂಪತ್ತಿಯೂ ಉಂಟು. ಆಹಾರ ಮತ್ತು ಕೃಷಿ ಸಂಸ್ಥೆಯ ಎಲ್ಲ ಸದಸ್ಯರೂ ವಿಶ್ವಸಂಸ್ಥೆಗೆ ಸೇರಿದವರಲ್ಲ. ಇದಕ್ಕೆ ಸದಸ್ಯರು ಕೊಡುವ ವಂತಿಗೆಯ ರೂಪದಲ್ಲಿ ತನ್ನದೇ ಆದ ವರಮಾನವೂ ತನ್ನದೇ ಆದ ನಿಯಂತ್ರಣ ಮಂಡಲಿಯೂ ಉಂಟು. ಈ ಮಂಡಲಿ ಎರಡು ವರ್ಷಕ್ಕೊಮ್ಮೆ ಆಹಾರ ಮತ್ತು ಕೃಷಿಗೆ ಸಂಬಂಧಿಸಿದ ಸಮ್ಮೇಳನಗಳನ್ನು ನಡೆಸುತ್ತದೆ.

ಆಹಾರ ಮತ್ತು ಕೃಷಿ ಸಂಸ್ಥೆಯ ಸ್ಥಾಪನೆಗೆ ಪೂರ್ವದಲ್ಲಿ ಎರಡು ಸಂಸ್ಥೆಗಳು ಈ ಸಂಸ್ಥೆಯ ಕಾರ್ಯ ನಿರ್ವಹಿಸುತ್ತಿದ್ದುವು. ವ್ಯವಸಾಯ ವಸ್ತುಗಳ ಬೆಲೆಗಳಲ್ಲೂ ಬೇಡಿಕೆ ಹಾಗೂ ಸರಬರಾಜುಗಳಲ್ಲೂ ಹಠಾತ್ತನೆ ಸಂಭವಿಸುವ ಏರಿಳಿತಗಳ ಪರಿಣಾಮಗಳಿಂದ ರೈತರನ್ನು ರಕ್ಷಿಸುವುದು 1905ರಲ್ಲಿ ರೋಮಿನಲ್ಲಿ ಸ್ಥಾಪಿತವಾಗಿದ್ದ ಅಂತಾರಾಷ್ಟ್ರೀಯ ಕೃಷಿಸಂಸ್ಥೆಯ ಉದ್ದೇಶವಾಗಿತ್ತು. ಆ ಸಂಸ್ಥೆಯ ಸ್ಥಾನದಲ್ಲಿ ಆಹಾರ ಮತ್ತು ಕೃಷಿ ಸಂಸ್ಥೆ ಸ್ಥಾಪಿತವಾದ್ದರಿಂದ ಅದರ ಕರ್ತವ್ಯ ನಿರ್ವಹಣೆ ಈ ಸಂಸ್ಥೆಯದೇ ಆಯಿತು. ದೇಹಪೋಷಣೆ ಹಾಗೂ ಆರೋಗ್ಯಪಾಲನೆಯ ಸಮಸ್ಯೆಗಳ ಪರಿಹಾರ ಲೀಗ್ ಆಫ್ ನೇಷನ್ಸ್ (**ನೋಡಿ**) ಸಂಸ್ಥೆಯ ಕರ್ತವ್ಯಗಳಲ್ಲೊಂದಾಗಿತ್ತು. ಈ ಕರ್ತವ್ಯವನ್ನೂ ಆಹಾರ ಮತ್ತು ಕೃಷಿ ಸಂಸ್ಥೆ ವಹಿಸಿಕೊಂಡಿತು. ಆ ಎರಡು ಸಂಸ್ಥೆಗಳು ಮುಂದುವರಿದ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಮಾತ್ರವೇ ಈ ಸಮಸ್ಯೆಗಳಿಗೆ ಗಮನ ಹರಿಸುತ್ತಿದ್ದುವು. ಆದರೆ ಆಹಾರ ಮತ್ತು ಕೃಷಿ ಸಂಸ್ಥೆಯ ಸ್ಥಾಪನೆಯಲ್ಲಿ ಹೊಸದಾಗಿ ಸ್ವಾತಂತ್ರ್ಯ ಪಡೆದ ಹಾಗೂ ಅಭಿವೃದ್ಧಿ ಹೊಂದದ ರಾಷ್ಟ್ರಗಳೂ ಆಸಕ್ತಿವಹಿಸಿದ್ದರಿಂದ ಸಹಜವಾಗಿಯೇ ಈ ಸಂಸ್ಥೆಯ ಲಕ್ಷ್ಯ ಇಡೀ ವಿಷ್ವಕ್ಕೇ ವ್ಯಾಪಿಸಿತು.

ದ್ವಿತೀಯ ಮಹಾಯುದ್ಧದ ಫಲವಾಗಿ ಜರ್ಝರಿತವಾದ ಆರ್ಥಿಕ ವ್ಯವಸ್ಥೆಯ ರಾಷ್ಟ್ರಗಳ ಜನಸಮೂಹಗಳ ಆಹಾರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಈ ಸಂಸ್ಥೆ ಆದ್ಯ ಗಮನ ನೀಡಿತು. ಕ್ರಮೇಣ ಇತರರ ಸಮಸ್ಯೆಗಳನ್ನೂ ಇದು ಪರಿಹರಿಸುವ ಕ್ರಮ ಕೈಕೊಂಡಿತು. ಕೆಲವು ರಾಷ್ಟ್ರಗಳಲ್ಲಿ ಹೆಚ್ಚು ಉತ್ಪನ್ನವೂ ಇನ್ನು ಕೆಲವು ರಾಷ್ಟ್ರಗಳಲ್ಲಿ ಆಹಾರಾಭಾವವೂ ಸಂಭವಿಸುತ್ತಿರುವುದನ್ನು ಲಕ್ಷ್ಯಕ್ಕೆ ತೆಗೆದುಕೊಂಡು ವಿಶ್ವದಲ್ಲಿ ಆಹಾರದ ಉತ್ಪಾದನೆಯನ್ನೂ ವಿತರಣೆಯನ್ನೂ ಸುಧಾರಿಸುವತ್ತ ಇದು ದೃಷ್ಟಿ ಹರಿಸಿತು. ಪ್ರಪಂಚದಲ್ಲಿ ಏರುತ್ತಿರುವ ಜನಸಂಖ್ಯೆಯ ದೃಷ್ಟಿಯಿಂದ ಆಹಾರ ಸಮಸ್ಯೆಯ ಗಾತ್ರವನ್ನೂ ಸ್ವರೂಪವನ್ನೂ ಅಳೆದು ಅದರ ಪರಿಹಾರಕ್ಕೆ ತೀವ್ರಕ್ರಮ ಕೈಕೊಳ್ಳುವ ಕೆಲಸದಲ್ಲಿ ನಿರತವಾಯಿತು.

ಹೆಚ್ಚು ಆಹಾರವನ್ನೂ ಇತರ ಬೆಳೆಗಳನ್ನೂ ಉತ್ಪಾದಿಸುವುದು ಹೇಗೆ? ಸಸ್ಯಗಳಿಗೂ ಪ್ರಾಣಿಗಳಿಗೂ ತಗಲುವ ರೋಗಾದ್ಯುಪದ್ರವಗಳನ್ನು ನಿವಾರಿಸುವುದೆಂತು? ಶೇಖರವಾದ ಆಹಾರ ವಸ್ತುಗಳು ಕೆಡದಂತೆ ಅವನ್ನು ರಕ್ಷಿಸುವ ವಿಧಾನ ಯಾವುದು? ಹೊಲ, ಅರಣ್ಯ ಹಾಗೂ ಮತ್ಸ್ಯಕ್ಷೇತ್ರಗಳ ಉತ್ಪನ್ನದ ಮಟ್ಟವನ್ನಧಿಕಗೊಳಿಸುವುದೆಂತು? ಇತ್ಯಾದಿ ವಿಚಾರವಾಗಿ ರಾಷ್ಟ್ರಗಳಿಗೆ ಈ ಸಂಸ್ಥೆಯ ತಜ್ಞರು ಸಲಹೆ ನೀಡುತ್ತಿದ್ದಾರೆ. ಮುಂದುವರಿದ ರಾಷ್ಟ್ರಗಳಲ್ಲಿ ಕೃಷಿಯ ಹೊಸ ವಿಧಾನಗಳನ್ನು ಕಲಿಯಲು ಸಹಾಯವಾಗುವಂತೆ ನಾನಾ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ಈ ಸಂಸ್ಥೆಯಿಂದ ವೇತನಗಳು ದೊರಕುತ್ತವೆ. ವ್ಯವಸಾಯ, ಅರಣ್ಯೋದ್ಯಮ ಹಾಗೂ ಮತ್ಸ್ಯೋದ್ಯಮಗಳಲ್ಲಿ ಉಪಯುಕ್ತವಾಗುವ ಸಾಹಿತ್ಯ ಪ್ರಕಟಣೆಯ ಕಾರ್ಯದಲ್ಲೂ ಈ ಸಂಸ್ಥೆ ಉದ್ಯುಕ್ತವಾಗಿದೆ. ಇದು ವಿಶ್ವ ವ್ಯವಸಾಯ ಪರಿಸ್ಥಿತಿಯನ್ನು ಸರ್ವದಾ ಪರಿಶೀಲಿಸುತ್ತಿದ್ದು ಅದಕ್ಕೆ ಸಂಬಂಧವಾದ ಅಂಕಿಅಂಶಗಳನ್ನೊದಗಿಸುತ್ತದೆ. ಈ ಸಂಸ್ಥೆಯ ಸು.2000 ಪರಿಣತರು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ವ್ಯವಸಾಯಾಭಿವೃದ್ಧಿಯ ವಿಚಾರದಲ್ಲಿ ನೆರವು ನೀಡುತ್ತಿದ್ದಾರೆ. ವಿಶ್ವಬ್ಯಾಂಕೇ ಮುಂತಾದ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ನೆರವಿನಿಂದ ಇದು ಅಭಿವೃದ್ಧಿ ಕಾರ್ಯಗಳಿಗೆ ಬಂಡವಾಳ ಒದಗಿಸುವ ಕೆಲಸದಲ್ಲೂ ನಿರತವಾಗಿದೆ. ಹೊಸ ಹೊಸ ನೆಲವನ್ನು ಕೃಷಿಗೆ ಒಳಪಡಿಸುವ ಕಾರ್ಯದಲ್ಲಿ ಸಹಾಯ ನೀಡುತ್ತಿದೆ. ಇದು 1960ರಲ್ಲಿ ಆರಂಭಿಸಿದ 'ಹಸಿವಿನಿಂದ ವಿಮೋಚನೆ' ಎಂಬ ಚಳವಳಿಯ ಮೂಲಕ ಈ ಸಮಸ್ಯೆಯ ಅರಿವು ಜನರಲ್ಲಿ ಮೂಡುವಂತೆ ಮಾಡಿ, ಇದರ ಪರಿಹಾರಕಾರ್ಯದಲ್ಲಿ ಸಾರ್ವಜನಿಕರ ಬೆಂಬಲ ಗಳಿಸುವುದಕ್ಕೂ ಪ್ರಯತ್ನ ನಡೆಸಿದೆ. ಇದರ ಫಲವಾಗಿ ವಿಶ್ವಸಂಸ್ಥೆ ಹಾಗೂ ಆಹಾರ ಮತ್ತು ಕೃಷಿ ಸಂಸ್ಥೆಗಳ ಸಂಯುಕ್ತ ನೇತೃತ್ವದಲ್ಲಿ ಹತ್ತು ಕೋಟಿ ಡಾಲರುಗಳ ಆರಂಭನಿಧಿಯುಳ್ಳ ವಿಶ್ವ ಆಹಾರಯೋಜನೆಯೊಂದು ರೂಪಿತವಾಗಿದೆ.

1951ರಲ್ಲಿ ಈ ಸಂಸ್ಥೆಯ ಪ್ರಧಾನಕಾರ್ಯಾಲಯ ವಾಷಿಂಗ್‌ಟನ್ನಿನಿಂದ ರೋಮಿಗೆ ವರ್ಗವಾಯಿತು. ಉತ್ತರ ಅಮೆರಿಕಕ್ಕಾಗಿ ಒಂದು ಪ್ರಾದೇಶಿಕ ಕಚೇರಿ ವಾಷಿಂಗ್‌ಟನ್ನಿನಲ್ಲಿ ಸ್ಥಾಪಿತವಾಯಿತು. ಕೈರೊ, ಬಾಂಗ್‌ಕಾಕ್, ನವದೆಹಲಿ, ಸ್ಯಾಂಟಿಯಾಗೊ, ರಯೋಡಿಜನೈರೊ ಮತ್ತು ಮೆಕ್ಸಿಕೊ ನಗರಗಳಲ್ಲೂ ಇದರ ಪ್ರಾದೇಶಿಕ ಕಚೇರಿಗಳ ಸ್ಥಾಪನೆಯಾಯಿತು. ಅರಣ್ಯೋದ್ಯಮಕ್ಕೆ ಸಂಬಂಧಿಸಿದಂತೆ ಜಿನೀವಾದಲ್ಲಿ ಒಂದು ಉಪಕಚೇರಿಯೂ ವಿಶ್ವಸಂಸ್ಥೆಯೊಂದಿಗೆ ಸಂಪರ್ಕ ಹೊಂದಿರುವುದಕ್ಕಾಗಿ ನ್ಯೂಯಾರ್ಕಿನಲ್ಲಿ ಒಂದು ಕಚೇರಿಯೂ ಇವೆ. *

**ಆಹಾರಲೋಹಾಂಶ ಚಲನೆ (ಸಸ್ಯಗಳಲ್ಲಿ):** ಮೇಲುವರ್ಗದ ಸಸ್ಯಗಳಲ್ಲಿ ಆಹಾರ ಮತ್ತು ಖನಿಜಾಂಶಗಳು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಚಲಿಸುವ ಕ್ರಿಯೆ (ಟ್ರಾನ್ಸ್‌ಲೊಕೇಷನ್ ಆಫ್ ಸೊಲ್ಯೂಟ್ಸ್ ಇನ್ ಪ್ಲಾಂಟ್ಸ್). ಇದನ್ನು ತಿಳಿದುಕೊಳ್ಳಬೇಕಾದರೆ ಆಹಾರ, ನೀರು ಮತ್ತು ಲೋಹಗಳನ್ನು ಒಯ್ಯುವ ನಾಳಕೂರ್ಚಗಳ ಪರಿಚಯ ಅಗತ್ಯ. ನಾಳಕೂರ್ಚ ಸೈಲೆಂ (ನೀರ್ಗೊಳವೆ) ಮತ್ತು ಫ್ಲೋಯೆಂ ನಾಳಗಳು ಯಾವಾಗಲೂ ಒಟ್ಟಿಗೆ ಇದ್ದು ಬೇರಿನಿಂದ ಹಿಡಿದು ಎಲೆಗಳ ತುದಿಯವರೆಗೂ ಅನುಬಂಧವಾಗಿ ಸಾಗುತ್ತವೆ. ದ್ವಿದಳಸಸ್ಯಗಳ ಗುಂಪಿಗೆ ಸೇರಿದ ಪೊದರು ಮತ್ತು ಮರಗಳಲ್ಲಿ ಇವೆರಡು ಕಣಧಾತುಗಳ ಮಧ್ಯೆ ಕ್ಯಾಂಬಿಯಂ ಇದೆ. ಇದು ಸಜೀವ ಜೀವಕಣವಾದ ಪೇರೆಂಖೈಮದಿಂದ ಕೂಡಿದೆ.

ಸೈಲೆಂನಲ್ಲಿ ನಾಲ್ಕು ಬಗೆಯ ಜೀವಕಣಗಳಿವೆ: ವೆಸಲ್ ಅಥವಾ ಟ್ರೇಕಿಯ, ಟ್ರೇಕೀಡ್, ಸೈಲೆಂ ತಂತು (ಫೈಬರ್) ಮತ್ತು ಸೈಲೆಂ ಪೇರೆಂಖೈಮ. ಇವುಗಳಲ್ಲಿ ಮೊದಲ ಮೂರು ಬಗೆಯ ಜೀವಕಣಗಳು ನಿರ್ಜೀವವಾಗಿಯೂ ಕೊನೆಯದು ಸಜೀವವಾಗಿಯೂ ಇವೆ. ಫ್ಲೋಯೆಂನಲ್ಲೂ 4 ಬಗೆಯ ಜೀವಕಣಗಳಿವೆ. ಸೀವ್ ಟ್ಯೂಬ್, ಕಂಪ್ಯಾನಿಯನ್ ಜೀವಕಣ, ಫ್ಲೋಯೆಂ ಪೇರೆಂಖೈಮ ಮತ್ತು ಫ್ಲೋಯೆಂ ತಂತು. ಇವುಗಳಲ್ಲಿ ಮೊದಲ 3 ಬಗೆಯವು ಸಜೀವವಾಗಿಯೂ 4ನೆಯದು ನಿರ್ಜೀವವಾಗಿಯೂ ಇವೆ. ಸೆಕೆಂಡರಿ ಬೆಳೆವಣಿಗೆ (ಸೆಕೆಂಡರಿ ಗ್ರೋತ್) ಇರುವ ಸಸ್ಯಗಳಲ್ಲಿ ಸೆಕೆಂಡರಿ ಸೈಲೆಂ ಮತ್ತು ಸೆಕೆಂಡರಿ ಫ್ಲೋಯೆಂಗಳಲ್ಲೆರಡರಲ್ಲೂ ವ್ಯಾಸ್ಕುಲರ್ ರೇಸ್ ಎಂಬ ಪೇರೆಂಖೈಮ ಕಣಧಾತುಗಳಿವೆ ಎಂದ ಮೇಲೆ ಸೈಲೆಂ ಮತ್ತು ಫ್ಲೋಯೆಂಗಳೆರಡರಲ್ಲೂ ಸಜೀವ ಜೀವಕಣಗಳಿರುವುದರಿಂದ ಒಂದಕ್ಕೊಂದಕ್ಕೆ ನಿಕಟಸಂಬಂಧವಿದೆ. ಕ್ಯಾಂಬಿಯಂ ಇರುವ ಸಸ್ಯಗಳಲ್ಲಿ ಈ ಸಂಬಂಧ ಹೆಚ್ಚಾಗಿದ್ದು ಆಹಾರ ಮತ್ತು ಲೋಹಗಳು ಸೈಲೆಂನಿಂದ ಫ್ಲೋಯೆಂಗೂ ಫ್ಲೋಯೆಂನಿಂದ ಸೈಲೆಂಗೂ ಚಲಿಸುವುದಕ್ಕೆ ಅನುಕೂಲವಾಗಿದೆ. ಫ್ಲೋಯೆಂನಲ್ಲಿ ಕಂಡುಬರುವ 4 ಬಗೆಯ ಜೀವಕಣಗಳಲ್ಲಿ ಸೀವ್‌ಟ್ಯೂಬ್ ಆಹಾರ ಚಲನೆಯಲ್ಲಿ ಬಹಳ ಮುಖ್ಯಪಾತ್ರವಹಿಸುತ್ತದೆ. ಇದನ್ನು 1837ರಲ್ಲಿ ಹಾರ್ಟಿಗ್ ಎಂಬ ವಿಜ್ಞಾನಿ ಕಂಡುಹಿಡಿದ. ಇದರ ರಚನೆಯ ಮೇಲೆ ಅನೇಕ ಸಂಶೋಧನೆಗಳು ನಡೆದಿದ್ದರೂ ಇದಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳು ಇನ್ನೂ ನಿರ್ದಿಷ್ಟವಾಗಿ ತಿಳಿದಿಲ್ಲ. ಒಂದು ಸೀವ್‌ಟ್ಯೂಬ್ ಅನೇಕ ಸೀವ್‌ಟ್ಯೂಬ್ ಘಟಕಗಳಿಂದ (ಎಲಿಮೆಂಟ್ಸ್) ಮಾಡಲ್ಪಟ್ಟಿದೆ ; ಈ ಘಟಕ ಜೀವಕಣಗಳು ಫ್ಲೋಯೆಂನಲ್ಲಿ ಬಹಳ ವೈಶಿಷ್ಟ್ಯವುಳ್ಳವು. ಈ ಜೀವಕಣಗಳು ಎಳಸಾಗಿರುವಾಗ ಆಕಾರದಲ್ಲಿ ಚಿಕ್ಕವಾಗಿದ್ದು ಬೀಜಕಣಗಳನ್ನು (ನ್ಯೂಕ್ಲಿಯಸ್) ಹೊಂದಿರುತ್ತವೆ ; ಬಲಿತಾಗ ಕೊಳವೆಯಾಕಾರವಾಗಿದ್ದು ಬೀಜಕಣರಹಿತವಾಗಿರುತ್ತವೆ. ಆದರೂ ಸೈಟೋಪ್ಲಾಸಂ ಇರುತ್ತದೆ. ಒಂದು ಸೀವ್‌ಟ್ಯೂಬ್ ಘಟಕ ಇನ್ನೊಂದನ್ನು ಸೇರುವ ಕಡೆ ಅಡ್ಡ ಭಿತ್ತಿಯಲ್ಲಿ (ಗೋಡೆ) ಜರಡಿಯಂತೆ ರಂಧ್ರಗಳಿರುತ್ತವೆ. ಈ ರಂಧ್ರಗಳಿಗೆ ಸೀವ್‌ಪ್ಲೇಟ್ಸ್ ಎಂದು ಹೆಸರು. ರಂಧ್ರಗಳ ಮೂಲಕ ಒಂದು ಸೀವ್‌ಟ್ಯೂಬ್ ಘಟಕದ ಸೈಟೋಪ್ಲಾಸಂ ಇನ್ನೊಂದರ ಸೈಟೋಪ್ಲಾಸಂಗೆ ಸೇರಿಕೊಂಡಿರುತ್ತದೆ. ಹೀಗೆ ಸೈಟೋಪ್ಲಾಸಂ ಸೀವ್‌ಟ್ಯೂಬಿನ ಉದ್ದಕ್ಕೂ ನಿರಂತರವಾಗಿದೆ.



ಚಿತ್ರ. 1 ಫ್ಲೋಯೆಂ ಕಣಧಾತು
1 ಫ್ಲೋಯೆಂ ಪೇರೆಂಖೈಮ ಜೀವಕಣಗಳು
2 ಕಂಪ್ಯಾನಿಯನ್ ಜೀವಕಣ
3 ಸೀವ್ ಪ್ಲೇಟ್
4 ಸೀವ್ ಟ್ಯೂಬಿನ ಪ್ಲಾಸ್ಟಿಡುಗಳು
5 ಫ್ಲೋಯೆಂ ಪೇರೆಂಖೈಮ ಜೀವಕಣ
6 ಸೀವ್ ಟ್ಯೂಬ್ ಘಟಕಗಳು

**ಆಹಾರಚಲನೆ:** ಆಹಾರದಲ್ಲಿ ಕಾರ್ಬೊಹೈಡ್ರೇಟುಗಳು, ತೈಲ ಸಂಬಂಧ ಪದಾರ್ಥಗಳು ಮತ್ತು ಪ್ರೋಟೀನುಗಳು ಎಂದು ಮೂರು ವಿಧಗಳಿವೆ. ಕಾರ್ಬೊಹೈಡ್ರೇಟುಗಳು ಅದರಲ್ಲೂ ಸಕ್ಕರೆಗಳು ಚಲಿಸುವ ಕ್ರಮದ ವಿಚಾರವಾಗಿ ವಿಜ್ಞಾನಿಗಳು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಆಹಾರ ಚಲನೆಯಲ್ಲಿ ಮೂರು ಬಗೆಗಳಿವೆ: 1. ಎಲೆಗಳಲ್ಲಿ ತಯಾರಾದ ಆಹಾರ, ಬೇರು ಮತ್ತು ಇತರ ಆಹಾರ, ಶೇಖರಣಾಂಗಗಳಿಗೆ ಚಲಿಸಬಹುದು. ಈ ರೀತಿಯ ಅಹಾರಚಲನೆ ದ್ಯುತಿ ಸಂಶ್ಲೇಷಣ ಕ್ರಿಯೆ ನಡೆಯುತ್ತಿರುವಾಗ ಹೆಚ್ಚಿಗೆ ಇರುವುದು. 2. ಶೇಖರಿಸಲ್ಪಟ್ಟ ಭಾಗಗಳಿಂದ (ಉದಾ: ಬೀಜ ಮತ್ತು ಗಡ್ಡೆಗಳಿಂದ) ಆಹಾರ ಮೇಲಕ್ಕೆ ಚಲಿಸಬಹುದು. ಈ ರೀತಿಯ ಆಹಾರಚಲನೆ ಬೀಜಗಳು ಮೊಳೆತು ಸಸ್ಯದ ಎಲೆಗಳು ದ್ಯುತಿಸಂಶ್ಲೇಷಣ ಕ್ರಿಯೆಯನ್ನು ಪ್ರಾರಂಭಿಸುವವರೆಗೆ ಇರುತ್ತದೆ. 3. ಆಹಾರ ಕಾಂಡದಲ್ಲಿ ಚಲಿಸುವಾಗ ಸೈಲೆಂನಿಂದ ಫ್ಲೋಯೆಂಗೂ ಫ್ಲೋಯೆಂನಿಂದ ಸೈಲೆಂಗೂ ಅದರ ಅಡ್ಡಚಲನೆ ಆಗಬಹುದು.

ಆಹಾರ ಸೈಲೆಂ ಮುಖಾಂತರ ಚಲಿಸುತ್ತದೆ ಎಂದು ವಿಜ್ಞಾನಿ ಡಿಕ್ಸನ್ ನಂಬಿದ್ದ. ಆದರೆ ಕರ್ಟಿಸ್ ಮುಂತಾದ ವಿಜ್ಞಾನಿಗಳು ರಿಂಗಿಂಗ್ ಅಥವಾ ಗರ್ಡ್‌ಲಿಂಗ್ ಪ್ರಯೋಗಗಳಿಂದ ಆಹಾರ ಫ್ಲೋಯೆಂ ಮುಖಾಂತರ ಚಲಿಸುತ್ತದೆ ಎಂದು ತೋರಿಸಿದ್ದಾರೆ.

ಚಿತ್ರ 2ರಲ್ಲಿ ತೋರಿಸಿರುವಂತೆ ಒಂದು ಸಜೀವ ಮತ್ತು ದ್ಯುತಿಸಂಶ್ಲೇಷಣ ಕ್ರಿಯೆಯನ್ನು ನಡೆಸುತ್ತಿರುವ ಕಾಂಡದ ಸುತ್ತಲೂ ಉಂಗುರಾಕಾರವಾಗಿ ಸೈಲೆಂ ಹೊರಭಾಗದಲ್ಲಿರುವ ಕಣಧಾತುಗಳನ್ನೆಲ್ಲ ಅಂದರೆ ತೊಗಟೆಯನ್ನು ಕಿತ್ತು ಹಾಕಬೇಕು. ಹೀಗೆ ಮಾಡಿದ ಕೆಲವು ದಿವಸಗಳ ಮೇಲೆ ಆ ಸಸ್ಯವನ್ನು ಪರೀಕ್ಷಿಸಿದರೆ ಉಂಗುರದ ಮೇಲುಭಾಗದಲ್ಲಿ ಒಂದು ವಿಧವಾದ ಗಂಟು ಕಟ್ಟಿಕೊಂಡಿರುತ್ತದೆ. ಏಕೆಂದರೆ ಎಲೆಗಳಲ್ಲಿ ತಯಾರಾದ ಆಹಾರ ಈ ಭಾಗದಲ್ಲಿ ಶೇಖರವಾಗಿರುವುದರಿಂದ ಬೆಳವಣಿಗೆ ಹೆಚ್ಚಾಗಿರುತ್ತದೆ. ಆಹಾರ ಉಂಗುರದಿಂದ ಕೆಳಭಾಗಕ್ಕೆ ಇಳಿಯುವುದಿಲ್ಲ. ಈ ಉಂಗುರದ ಕೆಳಭಾಗದಲ್ಲಿ ಆಹಾರ ಕೊರತೆಯಿರುವುದರಿಂದ ಇಲ್ಲಿ ಬೆಳವಣಿಗೆಯಿರುವುದಿಲ್ಲ;ಮತ್ತು ಮೊದಲೇ ಶೇಖರವಾಗಿದ್ದ ಆಹಾರ ಪ್ರಮಾಣ ಕ್ರಮೇಣ ಕಡಿಮೆಯಾಗಿ ಬೇರುಗಳು ಸತ್ತುಹೋಗುತ್ತವೆ; ಕೊನೆಯಲ್ಲಿ ಸಸ್ಯವೂ ಸತ್ತುಹೋಗುತ್ತದೆ.



**ಚಿತ್ರ. 2 ತೊಗಟೆಯನ್ನು ಉಂಗುರಾಕಾರವಾಗಿ ತೆಗೆದಮೇಲೆ ಕಾಂಡದ ಒಂದು ಭಾಗ ಹೇಗಿರುತ್ತದೆ ಎಂಬುದನ್ನು A ಚಿತ್ರದಲ್ಲೂ ಅದೇಭಾಗ ಸ್ವಲ್ಪ ದಿವಸಗಳಾದಮೇಲೆ ಹೇಗಿರುತ್ತದೆ ಎಂಬುದನ್ನು B ಚಿತ್ರದಲ್ಲೂ ತೋರಿಸಿದೆ. ಎಲೆಗಳಲ್ಲಿ ತಯಾರಾದ ಅಹಾರ ಉಂಗುರದ ಮೇಲುಭಾಗದಲ್ಲೇ ಶೇಖರವಾಗಿರುವುದರಿಂದ ಆ ಭಾಗದಲ್ಲಿ ಒಂದು ವಿಧವಾದ ಗಂಟು ಕಾಣಿಸುತ್ತದೆ.**

ರಿಂಗಿಂಗ್ ಪ್ರಯೋಗದಲ್ಲಿ ಸೈಲೆಂ ತೆಗೆದು ಫ್ಲೋಯೆಂನ್ನು ತೆಗೆಯದೆ ಇದ್ದರೆ ಇಂಥ ಬದಲಾವಣೆಯಾಗುವುದಿಲ್ಲ. ಅಥವಾ ಎಂಡೊಡರ್ಮಿಸ್‌ವರೆಗೆ ಮಾತ್ರ ತೆಗೆದು ಫ್ಲೋಯೆಂನಿಂದ ತೆಗೆಯದೆ ಇದ್ದರೂ ಹೆಚ್ಚಿನ ಬದಲಾವಣೆಗಳಾಗುವುದಿಲ್ಲ. ರಿಂಗಿಂಗ್ ಪ್ರಯೋಗಗಳು ಎರಡು ಗುಂಪು. ಫ್ಲೋಯೆಂನಿಂದ ಎಂದರೆ ಬೈಕೊಲ್ಯಾಟರಲ್ ಬಂಡಲ್ಸ್ (ಜೊತೆ ನಾಳಕೂರ್ಚ) ಇರುವ ಸಸ್ಯಗಳಲ್ಲಿ ಯಶಸ್ವಿಯಾಗುವುದಿಲ್ಲ. ಏಕೆಂದರೆ ಇಂಥ ಸಸ್ಯಗಳಲ್ಲಿ ಈ ಪ್ರಯೋಗಗಳಿಂದ ಇರುವ ಎಲ್ಲ ಫ್ಲೋಯೆಂನ್ನೂ ತೆಗೆದುಹಾಕಲು ಸಾಧ್ಯವಿಲ್ಲದಿರುವುದರಿಂದ ಈ ಪ್ರಯೋಗಗಳು ಯಶಸ್ವಿಯಾಗುವುದಿಲ್ಲ. ಮೇಲಿನ ಪ್ರಯೋಗಗಳಿಂದ ಅಹಾರ ಫ್ಲೋಯೆಂ ಮುಖಾಂತರ ಚಲಿಸುತ್ತದೆ, ಸೈಲೆಂ ಮುಖಾಂತರ ಅಲ್ಲ ಎಂದು ವಿಜ್ಞಾನಿಗಳು ತೋರಿಸಿದ್ದಾರೆ.

ಮಿಟ್ಲರ್, ಕೆನಡಿ ಮುಂತಾದ ವಿಜ್ಞಾನಿಗಳು ಫ್ಲೋಯೆಂ ರಸವನ್ನು ಹೊಸ ವಿಧಾನಗಳಿಂದ ತೆಗೆದು ಅದನ್ನು ಪರೀಕ್ಷಿಸಿದ್ದಾರೆ. ಈ ರಸದಲ್ಲಿ ಸುಕ್ರೋಸ್ ಎಂಬ ಸಕ್ಕರೆ ಅನೇಕ ವಿಧವಾದ ಅಮೈನೋ ಆಮ್ಲಗಳು ಮತ್ತು ಕಡಿಮೆ ಪ್ರಮಾಣದಲ್ಲಿ ಲೋಹಗಳು ಕಂಡುಬಂದಿವೆ. ಕಾರ್ಬೊಹೈಡ್ರೇಟುಗಳಲ್ಲಿ ಕೆಲವು ಸಸ್ಯಗಳಲ್ಲಿ ಸುಕ್ರೋಸ್ (ಡೈಸ್ಯಾಕರೈಡ್) ಮಾತ್ರ ಇದೆ. ಇನ್ನು ಕೆಲವು ಸಸ್ಯಗಳಲ್ಲಿ ಸುಕ್ರೋಸ್, ಜೊತೆಗೆ ರ್ಯಾಫಿನೋಸ್ (ಟ್ರೈಸ್ಯಾಕರೈಡ್) ಮತ್ತು ಸ್ಟ್ಯಾಕಿಯೋಸ್ (ಟೆಟ್ರಸ್ಯಾಕರೈಡ್) ಸಕ್ಕರೆಗಳು ಅತಿ ಕಡಿಮೆ ಪ್ರಮಾಣದಲ್ಲಿ ಕಂಡುಬಂದಿವೆ. ಸೈಲೆಂ ರಸದಲ್ಲಿ ಮುಖ್ಯವಾಗಿ ಲೋಹಗಳು ಸ್ವಲ್ಪ ಪ್ರಮಾಣದಲ್ಲಿ ಅಮೈನೋ ಆಮ್ಲಗಳು ಮತ್ತು ಅತಿ ಸ್ವಲ್ಪ ಪ್ರಮಾಣದಲ್ಲಿ ಸಕ್ಕರೆ ಕಂಡುಬಂದಿವೆ.

ಆಹಾರ ಮುಖ್ಯವಾಗಿ ಫ್ಲೋಯೆಂ ಮುಖಾಂತರ ಚಲಿಸಿದರೂ ಸ್ವಲ್ಪ ಭಾಗವಾದರೂ ಸೈಲೆಂ ಮುಖಾಂತರ ಚಲಿಸುತ್ತದೆ ಎಂಬುದು ಈಗ ದೃಢಪಟ್ಟಿದೆ. ಹಿಂದೆ ಕಾರ್ಬೊಹೈಡ್ರೇಟುಗಳ ಗುಂಪಿಗೆ ಸೇರಿದ ಆಹಾರಗಳು ಗ್ಲೂಕೋಸ್ ಮುಂತಾದ ಮಾನೋಸ್ಯಾಕರೈಡ್‌ಗಳ ರೂಪದಲ್ಲಿ ಚಲಿಸುತ್ತವೆ ಎಂಬ ನಂಬಿಕೆಯಿತ್ತು. ಈಚಿನ ಸಂಶೋಧನೆಗಳು ಕಾರ್ಬೊಹೈಡ್ರೇಟುಗಳು ಸುಕ್ರೋಸ್ ಅಂದರೆ ಡೈಸ್ಯಾಕರೈಡ್ ರೂಪದಲ್ಲಿ ಮುಖ್ಯವಾಗಿಯೂ ಒಂದೊಂದು ವೇಳೆ ಅತಿ ಸಣ್ಣ ಪ್ರಮಾಣದಲ್ಲಿ ಇನ್ನೂ ಮೇಲುವರ್ಗದ ಕಾರ್ಬೊಹೈಡ್ರೇಟುಗಳು, ಅಂದರೆ ಟ್ರೈಸ್ಯಾಕರೈಡ್ ಮತ್ತು ಟೆಟ್ರಸ್ಯಾಕರೈಡ್ ರೂಪದಲ್ಲಿಯೂ ಚಲಿಸುತ್ತವೆ, ಮಾನೋಸ್ಯಾಕರೈಡುಗಳ ರೂಪದಲ್ಲಿ ಅಲ್ಲ ಎಂದು ತಿಳಿಯಬಹುದು. ಸಸ್ಯದಲ್ಲಿ ಆಹಾರ ಯಾವಾಗಲೂ ಅಧಿಕವಾಗಿರುವ ಭಾಗದಿಂದ ಕಡಿಮೆಯಾಗಿರುವ ಭಾಗಕ್ಕೆ ಚಲಿಸಿ ಸಸ್ಯದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಾಧಾರಣವಾಗಿ ವ್ಯಾಪಿಸುತ್ತದೆ (ಡಿಫ್ಯೂಸ್) ಎಂದು ಕೆಲವು ವಿಜ್ಞಾನಿಗಳ ವಾದ. ಆದರೆ ಆಹಾರ ಚಲನೆ ಕೆಲವು ವೇಳೆ ಸಾಮಾನ್ಯವಾಗಿ ವ್ಯಾಪಿಸುವುದಕ್ಕಿಂತ ಬಹಳ ವೇಗವಾಗಿ ನಡೆಯುತ್ತದೆ. ಉದಾಹರಣೆಗೆ ಹತ್ತಿಗಿಡದಲ್ಲಿ ಸುಕ್ರೋಸ್ ಸಕ್ಕರೆಯ ಚಲನೆ ಸಾಮಾನ್ಯ ವ್ಯಾಪನೆಗಿಂತ ಸುಮಾರು 40,000 ಬಾರಿ ಹೆಚ್ಚಿಗೆ ವೇಗದಲ್ಲಿ ನಡೆಯುತ್ತದೆ. ವಿಕಿರಣಶೀಲ (ರೇಡಿಯೊ ಆ್ಯಕ್ಟಿವ್) ಕಾರ್ಬನ್ $C^{14}$ಪ್ರಯೋಗಗಳಿಂದ ಆಹಾರ ಕಬ್ಬಿನಲ್ಲಿ

ಗಂಟೆಗೆ 270 ಸೆಂಟಿಮೀಟರುಗಳ ವೇಗದಲ್ಲೂ ಅವರೆ ಗಿಡದಲ್ಲಿ ಗಂಟೆಗೆ 107 ಸಂಟಿಮೀಟರುಗಳ ವೇಗದಲ್ಲೂ ಚಲಿಸುತ್ತದೆ ಎಂದು ಗೊತ್ತಾಗಿದೆ. ಆಹಾರ ಚಲನೆಗೆ ಉಷ್ಣತೆ ಮತ್ತು ಲವಣಗಳು ಅವಶ್ಯವಾಗಿ ಬೇಕು. ಕಾರ್ಬೊಹೈಡ್ರೇಟುಗಳ ಚಲನೆಯನ್ನು ಬೋರಾನ್ ಕ್ರಮಪಡಿಸುತ್ತದೆ. ಇದರ ವಿವರಗಳು ಇನ್ನೂ ಸರಿಯಾಗಿ ತಿಳಿದಿಲ್ಲ. ಗ್ರಾವ್ಸ್ ಮತ್ತು ದುಗ್ಗಾರ್ ಎಂಬ ವಿಜ್ಞಾನಿಗಳು ಬೋರಾನ್ ಕೊರತೆಯಿರುವ ಟೊಮ್ಯಾಟೋ ಗಿಡಗಳಿಗೆ ಬೋರೇಟುಗಳನ್ನು ಒದಗಿಸಿ ಕೊಡುವುದರಿಂದ ವಿಕಿರಣಶೀಲ ಸಕ್ಕರೆಯ ಚಲನೆ ಬಲುಪಾಲು ಹೆಚ್ಚುತ್ತದೆ ಎಂದು ತೋರಿಸಿದ್ದಾರೆ. ಆಹಾರ ಚಲನೆಯ ಕ್ರಿಯಾವಿಧಿ (ಮೆಕಾನಿಸಿಸಂ) ಇನ್ನೂ ನಿರ್ದಿಷ್ಟವಾಗಿ ತಿಳಿದಿಲ್ಲ. ವಿಜ್ಞಾನಿಗಳು ಅದನ್ನು ಕೆಲವು ತತ್ತ್ವಗಳಿಂದ ವಿವರಿಸಿದ್ದಾರೆ. ಅವುಗಳಲ್ಲಿ ಕೆಳಗೆ ಸೂಚಿಸಿರುವ ಎರಡು ಮುಖ್ಯವಾದುವು: 1. ಸೈಟೋಪ್ಲಾಸಂ ಚಲನೆಗೆ ಸಂಬಂಧಪಟ್ಟ ತತ್ತ್ವ, ಇದನ್ನು 1885ರಲ್ಲಿ ಡಿರೀಸ್ ಎಂಬ ವಿಜ್ಞಾನಿಯೂ ಅನಂತರ 1935ರಲ್ಲಿ ಕರ್ಟಿಸ್ ಎಂಬ ವಿಜ್ಞಾನಿಯೂ ಪ್ರತಿಪಾದಿಸಿದರು. ಈ ತತ್ತ್ವದ ಪ್ರಕಾರ ಆಹಾರ ಸೀವ್‌ಟ್ಯೂಬಿನ ಸೈಟೋಪ್ಲಾಸಂ ಪ್ರವಾಹದಲ್ಲಿ ಸೇರಿ ಒಂದು ಸೀವ್‌ಟ್ಯೂಬಿನಿಂದ ಇನ್ನೊಂದು ಸೀವ್‌ಟ್ಯೂಬಿಗೆ ವ್ಯಾಪಿಸಿ ಹೀಗೆ ಸಸ್ಯದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಚಲಿಸುತ್ತದೆ. ಆದರೆ ಆಹಾರಚಲನೆಯ ವೇಗವನ್ನು ಗಣನೆಗೆ ತೆಗೆದುಕೊಂಡರೆ ಈ ರೀತಿ ವ್ಯಾಪಿಸಬಹುದಾದ ಆಹಾರದ ಪ್ರಮಾಣ ವಾಸ್ತವವಾಗಿ ಚಲಿಸುವ ಆಹಾರದ ಪ್ರಮಾಣಕ್ಕಿಂತ ಬಲು ಕಡಿಮೆ. ಆದ್ದರಿಂದ ಈ ತತ್ತ್ವವನ್ನು ಸುಲಭವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಕೆಲವು ವಿಜ್ಞಾನಿಗಳು ಇದನ್ನು ಸ್ವಲ್ಪ ಮಾರ್ಪಡಿಸಿ ಅಹಾರದ ಕಣಗಳ ವೇಗವನ್ನು ಸೈಟೋಪ್ಲಾಸಂ ಯಾವುದೋ ಒಂದು ಇನ್ನೂ ಸರಿಯಾಗಿ ಗೊತ್ತಿಲ್ಲದ ರೀತಿಯಲ್ಲಿ ಚುರುಕುಗೊಳಿಸುತ್ತದೆ ಎಂದು ವಾದಿಸಿದ್ದಾರೆ. 2. ವ್ಯಾಪಕ ಅಥವಾ ಮಾಸ್‌ಫ್ಲೋ ತತ್ತ್ವ : ಎರ್ನ್‌ಸ್ಟ್ ಮಂಜ್ ಎಂಬ ಜರ್ಮನ್ ವಿಜ್ಞಾನಿ 1930ರಲ್ಲಿ ಸೂಚಿಸಿದ. ಇದನ್ನು ಈ ಕೆಳಗೆ ಸೂಚಿಸಿರುವ ಒಂದು ಮಾದರಿಯಿಂದ ವಿವರಿಸಬಹುದು :



**ಚಿತ್ರ 3 ಮಾಸ್ ಫ್ಲೋತತ್ತ್ವವನ್ನು ಸೂಚಿಸುವ ಮಾದರಿ**

ಮಾದರಿಯಲ್ಲಿ A ಮತ್ತು C ಎಂಬ ಎರಡು ಗೋಳಗಳೂ ಅರೆಪಾರಗಮ್ಯ ಪೊರೆಗಳು (ಸೆಮಿಪರ್ಮಿಯಬಲ್ ಮೆಂಬ್ರೇನ್ಸ್). A ಯಲ್ಲಿ ಸಕ್ಕರೆಯ ತೃಪ್ತ ದ್ರಾವಣವಿದೆ. C ಯಲ್ಲಿ ಸಕ್ಕರೆಯ ದುರ್ಬಲ ದ್ರಾವಣವಿದೆ. A ಮತ್ತು C ಗಳನ್ನು B ಕೊಳವೆಯಿಂದ ಸೇರಿಸಿದೆ. A ಮತ್ತು C ಗಳನ್ನು ನೀರಿನಿಂದ ತುಂಬಿರುವ D ಪಾತ್ರೆಯಲ್ಲಿ ಮುಳುಗಿಸಿದರೆ ಆಸ್ಮಾಸಿಸ್ ತತ್ತ್ವದ ಪ್ರಕಾರ ನೀರು A ಮತ್ತು C ಗಳೆರಡಕ್ಕೂ ಪ್ರವೇಶಿಸುತ್ತದೆ. ಆದರೆ A ಯಲ್ಲಿ C ಗಿಂತ ಹೆಚ್ಚಿಗೆ ಜಲಸ್ಥಿತಿ (ಹೈಡ್ರೊಸ್ಟಾಟಿಕ್) ಸಂಮರ್ದ ಉದ್ಭವಿಸುತ್ತದೆ. ಆದ್ದರಿಂದ ನೀರು ಮೊದಲು A ಯಿಂದ B ಕೊಳವೆ ಮುಖಾಂತರ C ಗೆ ಚಲಿಸುತ್ತದೆ. ಆಮೇಲೆ C ಯಿಂದಲೂ ಹೊರಕ್ಕೆ ಹೋಗಿ ನೀರಿನಿಂದ ತುಂಬಿರುವ ಪಾತ್ರೆಗೆ ಸೇರುತ್ತದೆ. ನೀರಿನ ಜೊತೆಯಲ್ಲಿ ಅದರಲ್ಲಿ ಕರಗಿರುವ ಸಕ್ಕರೆಯೂ A ಯಿಂದ C ಗೆ ಚಲಿಸುತ್ತದೆ. A ಮತ್ತು C ಗಳೆರಡರಲ್ಲೂ ಸಕ್ಕರೆಯ ಸಾಂದ್ರೀಕರಣ (ಕಾನ್‌ಸಂಟ್ರೇಷನ್) ಒಂದೇ ಸಮನಾದಾಗ ಚಲನೆ ನಿಲುತ್ತದೆ. ಈ ಚಲನೆ ನಿರಂತರವಾಗಿರಬೇಕಾದರೆ A ಗೆ ಸಕ್ಕರೆಯನ್ನು ಸೇರಿಸುವುದೂ C ಯಿಂದ ಅದನ್ನು ತೆಗೆಯುವುದೂ ಅನಿವಾರ್ಯ. ಮೇಲೆ ಸೂಚಿಸಿದ ಮಾದರಿ ಮಂಜ್ ಎಂಬುವನ ತತ್ತ್ವದ ಪ್ರಕಾರ ಸಸ್ಯಗಳಲ್ಲಿ ಆಹಾರ ಕೆಳಭಾಗಕ್ಕೆ ಹೇಗೆ ಚಲಿಸುತ್ತದೆ ಎಂಬುದನ್ನು ವಿವರಿಸುತ್ತದೆ.


**ಚಿತ್ರ 4 ಮಂಜನ ತತ್ತ್ವದ ಪ್ರಕಾರ ಆಹಾರ ಚಲನೆ ನಡೆಯುವ ಕ್ರಮವನ್ನು ವಿವರಿಸುವ ರೇಖಾಚಿತ್ರ**

ಸಕ್ಕರೆಗಳು ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ಎಲೆಗಳಲ್ಲಿ ತಯಾರಾಗಿ ಅವನ್ನು ಬಳಸುವ ಬೇರು ಮುಂತಾದ ಭಾಗಗಳಿಗೆ ಸಾಗುತ್ತವೆ. ಬೇರುಗಳಲ್ಲಿ ಅವು ಪಿಷ್ಟವಾಗಿ ಅಂದರೆ ಕರಗದ ಸ್ಥಿತಿಯಲ್ಲಿ ಶೇಖರಗೊಳ್ಳಬಹುದು. ಬೇರುಗಳನ್ನು ಆವರಿಸಿರುವ ಮಣ್ಣಿನಿಂದ ಒಳನುಗ್ಗುವ ನೀರು ಬಾಷ್ಪವಿಸರ್ಜನೆಯ ಕ್ರಿಯೆಯಿಂದ ಹೊರ ಹೋಗುತ್ತದೆ. $L_1$,$L_2$,$L_3$ ಎಲೆಯಲ್ಲಿರುವ (ಚಿತ್ರ 4) ಹಸಿರು ಜೀವಕಣಗಳನ್ನು ಪ್ರತಿನಿಧಿಸುತ್ತವೆ ಮತ್ತು 3ನೆಯ ಚಿತ್ರದ A ಪೊರೆಗೆ ಹೊಂದಿಕೆಯಾಗಿರುತ್ತವೆ.

ಹಾಗೆಯೇ $R_1$,$R_2$,$R_3$ ಬೇರಿನ ಜೀವಕಣಗಳನ್ನು ಪ್ರತಿನಿಧಿಸಿ C ಪೊರೆಗೆ ಹೊಂದಿಕೆಯಾಗಿರುತ್ತವೆ. ಫ್ಲೋಯೆಂನ ಸಂತತ ವ್ಯವಸ್ಥೆಯನ್ನು P ಪ್ರತಿನಿಧಿಸುತ್ತದೆ. X ಸೈಲೆಂನ್ನೂ a ಕೇಂಬಿಯಂನ್ನೂ ಪ್ರತಿನಿಧಿಸುತ್ತವೆ. ಎಲೆಗಳಲ್ಲಿ ದ್ಯುತಿಸಂಶ್ಲೇಷಣ ಕ್ರಿಯೆ ನಡೆಯುವುದರಿಂದ ಅವುಗಳ ಜೀವಕಣಗಳಲ್ಲಿ ಆಸ್ಮಾಸಿಸ್ ಸಂಮರ್ದ ಅಧಿಕವಾಗಿ ಉಳಿಯುತ್ತದೆ. ಬೇರಿನ ಜೀವಕಣಗಳಲ್ಲಿ ವಿನಿಮಯದ ಸಂಮರ್ದ ಕಡಿಮೆಯಾಗುತ್ತದೆ. ಆದ್ದರಿಂದ ಆಹಾರ ಬೇರಿನಿಂದ ಎಲೆಗಳಿಗೆ ಫ್ಲೋಯೆಂ ಮೂಲಕ ಚಲಿಸುತ್ತದೆ. ಎಲೆಗಳ ಜೀವಕಣಗಳಿಗೆ ಸೈಲೆಂ ಮುಖಾಂತರ ನೀರು ಒದಗುತ್ತದೆ. ಆಹಾರಚಲನೆಯನ್ನು ವಿವರಿಸಲು ಈ ತತ್ತ್ವ ಅಥವಾ ಇದರ ಒಂದು ರೂಪ ಬಲು ಮುಖ್ಯಸಾಧನೆ ಎಂದು ಅನೇಕ ವಿಜ್ಞಾನಿಗಳು ಪರಿಗಣಿಸಿದ್ದಾರೆ.

**ಲೋಹಗಳ ಚಲನೆ:** ಲೋಹಗಳ ಅಥವಾ ಖನಿಜಗಳ ಚಲನೆಯ ಸಂಬಂಧವಾಗಿಯೂ ವಿಜ್ಞಾನಿಗಳು ರಿಂಗಿಂಗ್ ಪ್ರಯೋಗಗಳನ್ನು ಮಾಡಿದ್ದಾರೆ. ಇತ್ತೀಚೆಗೆ ರೇಡಿಯೊ ಸಮಸ್ಥಾನಿಗಳು (ಐಸೊಟೋಪುಗಳು) ಅದರಲ್ಲೂ ವಿಕಿರಣಶೀಲ ಪೊಟ್ಯಾಸಿಯಂನ್ನು ಪ್ರಯೋಗಗಳಲ್ಲಿ ಉಪಯೋಗಿಸಿದ್ದಾರೆ. ಸೈಲೆಂ ರಸವನ್ನೂ ತೆಗೆದು ಪರೀಕ್ಷಿಸಲಾಗಿದೆ. ಸೈಲೆಂ ರಸದಲ್ಲಿ ಲೋಹಗಳು, ಅಮೈನೋ ಆಮ್ಲಗಳು ಮತ್ತು ಅತಿ ಸಣ್ಣ ಪ್ರಮಾಣದಲ್ಲಿ ಅನೇಕ ವೇಳೆ ಸಕ್ಕರೆಗಳೂ ಕಂಡುಬಂದಿವೆ. ಫ್ಲೋಯೆಂ ರಸದಲ್ಲಿ ಕಾರ್ಬೊಹೈಡ್ರೇಟುಗಳು, ಅಮೈನೋ ಆಮ್ಲಗಳು ಮತ್ತು ಸಣ್ಣ ಪ್ರಮಾಣದಲ್ಲಿ ಲೋಹಗಳು ಕಂಡುಬಂದಿವೆ. ಲೋಹಗಳ ಚಲನೆಯ ಬಲುಭಾಗ ಸೈಲೆಂ ಮುಖಾಂತರ ನಡೆದರೂ ಸ್ವಲ್ಪಭಾಗವಾದರೂ ಫ್ಲೋಯೆಂ ಮುಖಾಂತರ ನಡೆಯಬಹುದೆಂದು ಪರಿಗಣಿಸಲಾಗಿದೆ. ಲೋಹಗಳ ಚಲನೆಯನ್ನು ಕೆಳಗೆ ಸೂಚಿಸಿರುವಂತೆ ಸಂಕ್ಷೇಪಿಸಬಹುದು. ಬೇರಿನಿಂದ ತೆಗೆದುಕೊಂಡ ಮೇಲೆ ಲೋಹಗಳು ಸೈಲೆಂನಲ್ಲಿ ನೀರಿನ ಮುಖಾಂತರ ಮೇಲುಭಾಗಕ್ಕೆ ಚಲಿಸುತ್ತವೆ. ಅವು ಎಲೆಗಳನ್ನು ತಲುಪಿದ ಮೇಲೆ ಅಲ್ಲಿ ವಿಂಗಡಿಸಲ್ಪಡುತ್ತವೆ. ಎಲೆಗಳಲ್ಲಿ ಉಪಯೋಗಿಸದೆ ಇರುವ ಲೋಹಗಳು ಎಲೆಗಳಲ್ಲಿ ತಯಾರಾದ ಆಹಾರದ ಜೊತೆಗೆ ಸೇರಿ ಅವುಗಳೊಡನೆ ಫ್ಲೋಯೆಂ ಮುಖಾಂತರ ಕೆಳಭಾಗಕ್ಕೆ ಚಲಿಸುತ್ತವೆ. ಹೀಗೆ ಲೋಹಗಳು ಮೇಲುಭಾಗಕ್ಕೆ ಅಥವಾ ಕೆಳಭಾಗಕ್ಕೆ ಚಲಿಸುವಾಗ ಕೆಲವು ಲೋಹಗಳು ಸೈಲೆಂನಿಂದ ಫ್ಲೋಯೆಂಗೂ ಫ್ಲೋಯೆಂನಿಂದ ಸೈಲೆಂಗೂ ಅಡ್ಡವಾಗಿ ಚಲಿಸಬಹುದು. ಆಹಾರದೊಡನೆ ಕೆಳಭಾಗಕ್ಕೆ ಬಂದ ಲೋಹಗಳು ಮತ್ತೆ ಸೈಲೆಂ ಮುಖಾಂತರ ಮೇಲುಭಾಗಕ್ಕೆ ಚಲಿಸಬಹುದು. ಹೀಗೆ ಸಸ್ಯಗಳಲ್ಲಿ ಲೋಹಗಳ ಚಲನೆ ಒಂದು ವಿಧವಾದ ಪರಿಚಲನೆಯೇ (ಸರ್ಕ್ಯುಲೇಷನ್) ಆಗಿರುತ್ತದೆ. (ಎಂ.ಎನ್.)

**ಆಹಾರವಿಜ್ಞಾನ:** ಆಹಾರಗಳ ಸ್ವರೂಪ, ಸಂಯೋಜನೆ, ಗುಣಲಕ್ಷಣಗಳನ್ನು ಪರೀಕ್ಷಿಸಿ, ಆಹಾರ ಸಂಸ್ಕರಣೆಯ ನಾನಾ ಹಂತಗಳಲ್ಲಿ ಆಗಬಹುದಾದ ಮಾರ್ಪಾಡುಗಳನ್ನು ಗಮನಿಸಿ, ಅನಪೇಕ್ಷಿತ ಕ್ರಿಯೆಗಳನ್ನು ತಡೆಗಟ್ಟುವ ವಿಧಾನಗಳನ್ನು ಪರಿಶೀಲಿಸುವ ಶಾಸ್ತ್ರ. ಆಹಾರಗಳನ್ನು ಕೆಡಿಸುವ ಸೂಕ್ಷ್ಮಜೀವಿಗಳ ವಿಚಾರದ ಸೂಕ್ಷ್ಮಜೀವಿಶಾಸ್ತ್ರ, ಬದಲಾವಣೆಯನ್ನುಂಟುಮಾಡುವ ಕಿಣ್ವಗಳ ವಿಚಾರದ ಕಿಣ್ವಶಾಸ್ತ್ರ, ರಾಸಾಯನಿಕ ಪರಿಣಾಮಗಳ ವಿಚಾರದ ಆಹಾರ ರಸಾಯನಶಾಸ್ತ್ರ ಮುಂತಾದುವುಗಳಲ್ಲದೆ ಯಂತ್ರೋಪಕರಣಗಳ ಉಪಯೋಗದ ಬಗೆಯ ಆಹಾರ ತಂತ್ರಶಾಸ್ತ್ರವೂ ಆಹಾರ ವಿಜ್ಞಾನಕ್ಷೇತ್ರಕ್ಕೆ ಒಳಪಟ್ಟಿವೆ.

ಕೇವಲ ಅನುಭವದಿಂದ ಆಹಾರಪದಾರ್ಥಗಳನ್ನು ತಯಾರಿಸಿ ಕಾಪಾಡಿಟ್ಟುಕೊಳ್ಳುತ್ತಿದ್ದ ಕಾಲ ಮರೆಯಾಗಿ, ಕೈಗಾರಿಕಾಮಟ್ಟದಲ್ಲಿ ವಿವಿಧ ಆಹಾರಗಳನ್ನು ತಯಾರಿಸಿ ಮಾರಾಟ ಮಾಡುವ ವ್ಯವಸ್ಥೆ ಏರ್ಪಡುತ್ತಿರುವ ಈ ಕಾಲದಲ್ಲಿ ಡಬ್ಬಗಳಲ್ಲಿ ತುಂಬಿಡುವುದು, ಶೈತ್ಯಾಗಾರಗಳಲ್ಲಿ ಹೆಪ್ಪುಗಟ್ಟಿಸುವುದು, ಉಪ್ಪು ಹುಳಿಗಳಲ್ಲಿ ಊರಿಡುವುದು ಮುಂತಾದ ವಿಧಾನಗಳಿಂದ ಮಾಡಿದ ಅನೇಕ ಆಹಾರಪದಾರ್ಥಗಳನ್ನು ಸಮರ್ಪಕ ರೀತಿಯಲ್ಲಿ ಒದಗಿಸುವುದು ಕೈಗಾರಿಕೆಗಳ ಕರ್ತವ್ಯವಾಗಿದೆ. ಈ ಕೆಲಸದಲ್ಲಿ ಅವರಿಗೆ ಎದುರಾಗುವ ಅನೇಕ ಸಮಸ್ಯೆಗಳನ್ನು ಪರಿಶೀಲಿಸಿ, ಸಂಗ್ರಹಿಸಿದ ಆಹಾರ ಅಣುಜೀವಿಗಳಿಂದ ಕೆಡದಂತೆ ರಕ್ಷಿಸುವುದೂ ರಾಸಾಯನಿಕ ಕ್ರಿಯೆಗಳಿಂದ ಬಣ್ಣ ರುಚಿಗಳೂ ರಚನೆಯೂ ಬದಲಾವಣೆ ಹೊಂದದಂತೆ ಈ ಸಮಸ್ಯೆಗಳನ್ನು ಎದುರಿಸಿ ಅವುಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವುದೂ ಆಹಾರವಿಜ್ಞಾನಿಯ ಕೆಲಸ.

**ಕೇಂದ್ರೀಯ ಆಹಾರ ಸಂಶೋಧನಾಲಯ:** ಆಹಾರವಿಜ್ಞಾನ ವಿವಿಧ ಶಾಖೆಗಳ ವಿಚಾರ ಅಭ್ಯಸಿಸುವುದಕ್ಕೆ ಪ್ರಯೋಗ ಮತ್ತು ಸಂಶೋಧನೆಗಳನ್ನು ನಡೆಸುವುದಕ್ಕೆ ಮೀಸಲಾಗಿ ಮೈಸೂರಿನಲ್ಲಿ ಕೇಂದ್ರ ಸರ್ಕಾರದ ಆಶ್ರಯದಲ್ಲಿ ಸ್ಥಾಪಿತವಾಗಿರುವ ಸಂಸ್ಥೆ (ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್). ಆಹಾರದ ಗುಣ ಪ್ರಮಾಣಗಳೆರಡರಲ್ಲಿಯೂ ಸ್ವಯಂಪೂರ್ಣತೆಯನ್ನು ಸ್ಥಾಪಿಸಿ, ಒಳ್ಳೆಯ ಪೌಷ್ಟಿಕ ಮಟ್ಟವನ್ನು ಸಾಧಿಸುವಂತೆ ದೇಶದ ಎಲ್ಲ ಆಹಾರ ಸಾಧನಗಳನ್ನು ಅತ್ಯಂತ ಸಮರ್ಪಕ ರೀತಿಯಲ್ಲಿ ಬಳಸಿಕೊಂಡು, ಆಧುನಿಕ ಆಹಾರ ತಂತ್ರ ಪ್ರಯೋಗದಿಂದ ದೇಶದ ಆರ್ಥಿಕಾಭಿವೃದ್ಧಿಗೆ ನೆರವಾಗುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಈ ಸಂಶೋಧನಾಲಯದಲ್ಲಿ ಸ್ಥಾಪಿತವಾಗಿರುವ ಆಹಾರ ಕೃಷಿ ಸಂಸ್ಥೆಯ ಅಂತಾರಾಷ್ಟ್ರೀಯ ಆಹಾರ ತಂತ್ರಶಾಸ್ತ್ರ ತರಬೇತಿ ಕೇಂದ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಹಾರ ತಂತ್ರಶಾಸ್ತ್ರದ ಎಂ.ಎಸ್‌ಸಿ. ಪದವಿಗಾಗಿ ಭಾರತ ಹಾಗೂ ದೂರ ಪ್ರಾಚ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ.

ಈ ಸಂಶೋಧನಾಲಯದ 15 ವಿಭಾಗಗಳಲ್ಲಿ ಧಾನ್ಯಾಹಾರಗಳು, ಹಣ್ಣು ತರಕಾರಿಗಳು, ಮಾಂಸಾಹಾರಗಳು, ಸಂಬಾರಜಿನಸಿಗಳು ಹಾಲಿನ ಉತ್ಪನ್ನಗಳು, ಇವೇ ಮೊದಲಾದ ವಿಚಾರಗಳಿಗೆ ಅನೇಕ ಬಗೆಯ ಪ್ರಯೋಗಗಳೂ ಸಂಶೋಧನೆಗಳೂ ಸತತವಾಗಿ ನಡೆಯುತ್ತಿವೆ. ಈ ಕೆಲಸಗಳಿಂದ ನಮ್ಮ ದೇಶದಲ್ಲಿ ಹಲವಾರು ಹೊಸ ಆಹಾರ ಕೈಗಾರಿಕೆಗಳು ಹುಟ್ಟಿಕೊಂಡಿರುವುದಲ್ಲದೆ, ಇರುವ ಕೈಗಾರಿಕೆಗಳವರಿಗೆ ಬಹು ಹೆಚ್ಚಿನ ಸಹಾಯವಾಗುತ್ತದೆ.

**ಡಯಟೆಟಿಕ್ಸ್ ವಿಭಾಗ:** ವಿವಿಧ ಆಹಾರಪದಾರ್ಥಗಳ ಪೋಷಕ ಗುಣ, ಅವುಗಳನ್ನು ಯಾವ ರೀತಿ, ಪ್ರಮಾಣದಲ್ಲಿ ಸೇರಿಸಿದರೆ ಉತ್ತಮ ಪ್ರಯೋಜನ ಪಡೆಯಬಹುದು, ಅಸಮರ್ಪಕ ಆಹಾರಪದ್ಧತಿಗಳಿಂದ ಆಗುವ ದುಷ್ಪರಿಣಾಮಗಳು, ಅದನ್ನು ತಡೆಗಟ್ಟುವ ಬಗೆ, ಈ ವಿಚಾರಗಳನ್ನು ಕುರಿತು ಇಲ್ಲಿ ಕೆಲಸ ನಡೆಯುತ್ತದೆ. ಆಹಾರ ವಸ್ತುಗಳ ರಾಸಾಯನಿಕ ಸಂಯೋಜನೆ–ಅವುಗಳಲ್ಲಿರುವ ಪ್ರೋಟೀನ್, ಕೊಬ್ಬು, ಕಾರ್ಬೊಹೈಡ್ರೇಟುಗಳು, ಲವಣಗಳು, ವಿಟಮಿನ್‌ಗಳು (ಜೀವಸತ್ತ್ವಗಳು) ಇವನ್ನು ಕಂಡುಕೊಂಡು, ಮಕ್ಕಳ ಮತ್ತು ವಯಸ್ಕರ ಸಮರ್ಪಕ ಬೆಳೆವಣಿಗೆ ಮತ್ತು ಆರೋಗ್ಯಕ್ಕೆ ಹೊಸಬಗೆಯ ಆಹಾರ ಸೂತ್ರಗಳನ್ನು ಸೃಷ್ಟಿಸಿ ಪರೀಕ್ಷಿಸುತ್ತಾರೆ. ಕಡಿಮೆ ಬೆಲೆಯ ಪೌಷ್ಟಿಕ ಆಹಾರಗಳನ್ನು ತಯಾರಿಸಲಾಗಿದೆ. ಇದರಿಂದ ಹೆಚ್ಚು ಬೆಲೆಯ ಪ್ರಾಣಿಮೂಲ ಪ್ರೋಟೀನ್ ಆಹಾರಗಳಿಗೆ ಬದಲು ಸಸ್ಯಮೂಲ ಆಹಾರಗಳನ್ನು ಉಪಯೋಗಿಸಬಹುದು. ಈ ವಿಭಾಗದ ಮುಖ್ಯ ಕೊಡುಗೆಗಳೆಂದರೆ: 1. ಎಮ್ಮೆ ಹಾಲಿನಿಂದ ಮಕ್ಕಳ ಆಹಾರವನ್ನು ಭಾರತದಲ್ಲೇ ತಯಾರಿಸಬಹುದೆಂದು ತೋರಿಸಿಕೊಟ್ಟದ್ದು. ಇದರ ಪರಿಣಾಮವಾಗಿ ತಯಾರಿಸಲಾದ ಅಮೂಲ್ ಡಬ್ಬದ ಹಾಲನ್ನು ದೇಶದಾದ್ಯಂತ ಮಕ್ಕಳಿಗಾಗಿ ಉಪಯೋಗಿಸಲಾಗುತ್ತಿದೆ. ಇದನ್ನು ತಯಾರಿಸಲು ಬೇಕಾದ ತಂತ್ರಜ್ಞಾನ ಮತ್ತು ಕ್ರಮವನ್ನು ಆಹಾರ ಸಂಶೋಧನಾಲಯದವರೇ ಕಂಡುಹಿಡಿದದ್ದು. ಇದಕ್ಕೆ ಮೊದಲು ಪರದೇಶಗಳಿಂದ ಹಸುವಿನ ಹಾಲಿನಿಂದ ಮಾಡಿದ ಮಕ್ಕಳ ಆಹಾರವೇ ನಮಗೆ ಸಿಗುತ್ತಿತ್ತು. ಎಮ್ಮೆ ಹಾಲು ಉಪಯೋಗಿಸಲು ಯೋಗ್ಯವಲ್ಲ ಎಂಬ ನಂಬಿಕೆಯಿತ್ತು. 2. ಬಹೂಪಯೋಗಿ ಆಹಾರದ (ಮಲ್ಟಿಪರ್ಪಸ್ ಫುಡ್) ಸೃಷ್ಟಿ. ಭಾರತದಲ್ಲಿ ಮಕ್ಕಳ ಪೋಷಣೆಗೆ ಸಾಕಷ್ಟು ಪ್ರೋಟೀನ್ ಆಹಾರ ದೊರೆಯುತ್ತಿಲ್ಲ. ಇದರಿಂದ ಅವರ ಬೆಳೆವಣಿಗೆ ಕುಂಠಿತವಾಗಿ, ರೋಗಗಳಿಗೆ ತುತ್ತಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಕಡಲೆಕಾಯಿ ಹಿಂಡಿ, ಕೆಲವು ಬೇಳೆಗಳು, ವಿಟಮಿನ್ ಮತ್ತು ಲವಣಗಳನ್ನು ಯುಕ್ತರೀತಿಯಲ್ಲಿ ಬೆರೆಸಿ ವಿವಿಧೋಪಯೋಗಿ ಆಹಾರ ತಯಾರಿಸಲಾಯಿತು. ಇದು ಪೋಷಕಗುಣದಲ್ಲಿ ಬಹಳ ಉತ್ತಮ ರೀತಿಯದಾಗಿದೆ. ಹಲವು ತಯಾರಿಕಾ ಸಂಸ್ಥೆಗಳು ಇದನ್ನು ತಯಾರಿಸಿ ಸರ್ಕಾರಗಳಿಗೆ ಒದಗಿಸುತ್ತಿವೆ. ಇವರು ಶಾಲೆಗಳಲ್ಲಿ, ಆಸ್ಪತ್ರೆಗಳಲ್ಲಿ ಮಕ್ಕಳ ಅಭಿವೃದ್ಧಿಗೆ ಮೀಸಲಾಗಿರುವ ಸಂಸ್ಥೆಗಳಲ್ಲಿ ವಿವಿಧೋಪಯೋಗಿ ಆಹಾರದಿಂದ ತಿಂಡಿಗಳನ್ನು ಮಾಡಿಸಿ ಮಕ್ಕಳಿಗೆ ಹಂಚುತ್ತಿದ್ದಾರೆ. ಇದು ಅಪೌಷ್ಟಿಕತೆಯನ್ನು ಎದುರಿಸಲು ಸಹಾಯ ಮಾಡುತ್ತಿದೆ.

**ಸೂಕ್ಷ್ಮಾಣುಜೀವಿಶಾಸ್ತ್ರ ವಿಭಾಗ:** ಆಹಾರಗಳನ್ನು ಕೆಡಿಸುವ ಸೂಕ್ಷ್ಮಜೀವಿಗಳು, ಅವುಗಳನ್ನು ಹತೋಟಿಗೆ ತರುವ ಕ್ರಮಗಳು, ಅಪೇಕ್ಷಿತ ಸೂಕ್ಷ್ಮಜೀವಿಗಳಿಂದ ಹುದುಗೇಳಿಸಿದ ಆಹಾರಗಳು, ಸೂಕ್ಷ್ಮಜೀವಿಗಳನ್ನೇ ಆಹಾರವಾಗಿ ಉಪಯೋಗಿಸುವುದರ ಸಾಧ್ಯತೆ ಮುಂತಾದ ವಿಚಾರಗಳನ್ನು ಈ ವಿಭಾಗದಲ್ಲಿ ಪರಿಶೀಲಿಸುತ್ತಾರೆ. ಹಣ್ಣು, ತರಕಾರಿ, ಮಾಂಸಾಹಾರ, ಪಾನೀಯಗಳು ಮುಂತಾದುವು ಸಂಗ್ರಹಿಸಿಟ್ಟಾಗ ಕೆಡುತ್ತವೆ. ಇದರಿಂದ ಆಹಾರ ಕೈಗಾರಿಕೆಗಳವರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಬಹುದು. ಆದ್ದರಿಂದ ಅವು ಕೆಡದಂತೆ ಸಂಸ್ಕರಿಸಿ ಸೂಕ್ಷ್ಮಜೀವಿಗಳನ್ನು ತಡೆಗಟ್ಟುವುದು ಬಹುಮುಖ್ಯವಾದ ಕೆಲಸ. ಕೈಗಾರಿಕೆಗಳವರು ತಮ್ಮ ತೊಂದರೆಗಳನ್ನು ಸಂಶೋಧನಾಲಯದವರಿಗೆ ತಿಳಿಸಿ ಅದರಿಂದ ಪರಿಹಾರ ಕ್ರಮಗಳನ್ನು ಪಡೆಯುತ್ತಾರೆ. ಹಣ್ಣಿನ ರಸ, ಕಾಕಂಬಿ, ಯವ (ಮಾಲ್ಟ್) ಮುಂತಾದ ಶರ್ಕರ ಪದಾರ್ಥಗಳಿಂದ ಯೀಸ್ಟ್ ಸೂಕ್ಷ್ಮಜೀವಿ ಹುದುಗೇಳಿಸಿ ವೈನ್ ಪಾನೀಯಗಳನ್ನುಂಟು ಮಾಡುತ್ತದೆ. ಇವುಗಳ ತಯಾರಿಕೆಯ ಬಗ್ಗೆ ಕೈಗಾರಿಕೆಯವರಿಗೆ ತಿಳಿವಳಿಕೆ ನೀಡಲಾಗುತ್ತದೆ. ಕೆಲವು ಕಾಳು, ಬೇಳೆ ಮುಂತಾದುವುಗಳಿಂದ ಹುದುಗೇಳಿಸಿದ ಆಹಾರಗಳನ್ನು ಮಾಡುವ ಕ್ರಮ, ಕಾಕಂಬಿಯಿಂದ ಆಹಾರಯೋಗ್ಯ ಯೀಸ್ಟ್ ತಯಾರಿಸುವ ಕ್ರಮಗಳನ್ನು ಕಂಡುಹಿಡಿಯಲಾಗಿದೆ. ಈ ವಿಭಾಗದ ಕೆಲವು ಮುಖ್ಯ ಕೊಡುಗೆಗಳು: 1. ಬ್ರೆಡ್ ತಯಾರಿಕೆಯಲ್ಲಿ ಮುಖ್ಯವಾಗಿ ಬೇಕಾದ ಯೀಸ್ಟನ್ನು ಒಣರೂಪದಲ್ಲಿ ಕಾಕಂಬಿಯಿಂದ (ಮೊಲಾಸಸ್) ಕೈಗಾರಿಕಾ ಮಟ್ಟದಲ್ಲಿ ತಯಾರಿಸುವ ಕ್ರಮ. ಈ ತಿಳಿವಳಿಕೆಯನ್ನು ಪಡೆದುಕೊಂಡ ಉತ್ತರಭಾರತದ ಕಂಪನಿಯೊಂದು ಈಗ ಯೀಸ್ಟ್ ತಯಾರಿಸಿ ಮಾರಾಟ ಮಾಡುತ್ತಿದೆ. ಹಿಂದೆ ಯೀಸ್ಟ್ ಹೊರದೇಶಗಳಿಂದಲೇ ಬರಬೇಕಾಗಿತ್ತು. 2. ಶಕ್ತಿವರ್ಧಕ ದ್ರಾಕ್ಷಾರಸ (ಟಾನಿಕ್ ವೈನ್), ಮೆಡಿಕೇಟೆಡ್ ದ್ರಾಕ್ಷಾರಸ ಭಾರತದ ವಿವಿಧ ಹಣ್ಣಿನ ರಸಗಳಿಂದ ವೈನ್ ತಯಾರಿಸುವ ಬಗೆ–ಈ ವಿಧಾನಗಳನ್ನು ಕೈಗಾರಿಕೆಯವರಿಗೆ ಒದಗಿಸಲಾಗಿದೆ. 3. ಹಣ್ಣುಗಳಿಂದ ಸುಲಭವಾಗಿ ತಿಳಿಯಾದ ರಸಗಳನ್ನು ತೆಗೆಯಲು ಬೇಕಾದ ಕಿಣ್ವಗಳು, ಇವನ್ನು ತೌಡು (ಬ್ರಾನ್) ಮುಂತಾದುವುಗಳ ಮೇಲೆ ಬೂಷ್ಟು ಬೆಳೆಸಿ ಪಡೆಯಲಾಗುತ್ತದೆ. ಈ ಕ್ರಮವನ್ನು ಕೈಗಾರಿಕೆಯವರಿಗೆ ಕೊಡಲಾಗಿದೆ. ಇವಲ್ಲದೆ ಆಹಾರಗಳಲ್ಲಿ ಕೆಲವು ಜಾತಿಯ ಬೂಷ್ಟುಗಳ ಬೆಳೆವಣಿಗೆಯಿಂದ ಉಂಟಾಗುವ ಅಫ್ಲೋಟಾಕ್ಸಿನ್ ವಿಷದ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆದಿವೆ. ಬೂಷ್ಟು ಬೆಳೆದ ಕಡಲೆಕಾಯಿ, ಕುಸುಬಲು ಅಕ್ಕಿ, ಹಿಂಡಿ ಮುಂತಾದುವು ಆಹಾರಕ್ಕೆ ಅನರ್ಹವೆಂದು ತೋರಿಸಲಾಗಿದೆ. ಕಡಲೆಕಾಯಿ ಹಾಲಿನಿಂದ ಗಿಣ್ಣಿನಂಥ ಪದಾರ್ಥ ತಯಾರಿಸಲಾಗಿದೆ. ಆಹಾರಗಳ ಪೋಷಕ ಗುಣವನ್ನು ಉತ್ತಮಪಡಿಸುವ ಕೆಲವು ಅಮೈನೋ ಆಮ್ಲಗಳನ್ನು ಸೂಕ್ಷ್ಮಜೀವಿಗಳಿಂದ ಪಡೆಯಬಹುದೆನ್ನುವುದನ್ನು ತೋರಿಸಲಾಗಿದೆ.

**ಧಾನ್ಯ ಸಂರಕ್ಷಣೆ ವಿಭಾಗ:** ಮನುಷ್ಯ ಕಷ್ಟಪಟ್ಟು ಬೆಳೆಯುವ ಆಹಾರವನ್ನು ದಾಸ್ತಾನು ಮಾಡಿದಾಗ ಕೀಟಗಳು, ಇಲಿಗಳು ಮತ್ತು ಬೂಷ್ಟುಗಳು ಅದನ್ನು ಹಾಳು ಮಾಡುತ್ತವೆ. ಹೀಗೆ ನಷ್ಟವಾಗುವ ಧಾನ್ಯ, ಕಾಳು ಮುಂತಾದುವನ್ನು ಸಂರಕ್ಷಿಸಲು ಕೀಟನಾಶಕ ಔಷಧಿಗಳು, ಇಲಿ ಪಾಷಾಣ, ರಾಸಾಯನಿಕ ದ್ರವ್ಯ ಮೊದಲಾದುವನ್ನು ಉಪಯೋಗಿಸಲಾಗುತ್ತದೆ. ಚೀಲಗಳನ್ನೂ ಉಗ್ರಾಣವನ್ನೂ ಔಷಧಗಳಿಂದ ಸಿಂಪಡಿಸುವಿಕೆ, ಚೀಲಗಳ ಜೋಡಣೆ ಮತ್ತು ಉಗ್ರಾಣದ ಸಮರ್ಪಕ ರಚನೆ ಮುಂತಾದವುಗಳ ವಿಚಾರವಾಗಿ ಇಲ್ಲಿ ಪ್ರಯೋಗಗಳು ನಡೆಯುತ್ತವೆ. ಹೆಚ್ಚು ಪರಿಣಾಮಕಾರಿಗಳಾದ ಕೀಟನಾಶಕ ಔಷಧಗಳ ತಯಾರಿಕೆಯ ಬಗ್ಗೆಯೂ ಸಂಶೋಧನೆಗಳು ಆಗುತ್ತಿವೆ. ಇಲಿಗಳನ್ನು ಹೊಲಗದ್ದೆಗಳಲ್ಲೂ ಉಗ್ರಾಣಗಳಲ್ಲೂ ಯುಕ್ತ ಪಾಷಾಣಗಳಿಂದ ಹೇಗೆ, ಯಾವ ಸಲಕರಣೆಗಳನ್ನುಪಯೋಗಿಸಿ ನಾಶಪಡಿಸಬಹುದೆಂಬುದನ್ನು ಕಂಡುಕೊಳ್ಳಲಾಗಿದೆ. ಇದನ್ನು ಅನೇಕ ಕಡೆ ಪ್ರಚಾರಕ್ಕೆ ತರಲಾಗಿದೆ. ಈ ವಿಭಾಗದಲ್ಲಿ ನಡೆದ ಕೆಲಸದ ಉಪಯೋಗದಿಂದ ದೇಶದಲ್ಲಿ ನಷ್ಟವಾಗುತ್ತಿದ್ದ ಲಕ್ಷಾಂತರ ಟನ್ನುಗಳಷ್ಟು ಆಹಾರ ಪದಾರ್ಥಗಳನ್ನು ಈಗ ಸಂರಕ್ಷಿಸಲಾಗುತ್ತಿದೆ.

**ಧಾನ್ಯತಂತ್ರ ವಿಭಾಗ:** ಆಹಾರಕ್ಕಾಗಿ ಉಪಯೋಗಿಸುವ ಅಕ್ಕಿ, ಗೋಧಿ, ಜೋಳ, ಕಾಳುಗಳು, ಬೇಳೆಗಳು ಮುಂತಾದುವನ್ನು ಸಂಸ್ಕರಿಸುವಾಗ ಸರಿಯಾದ ಯಂತ್ರ, ಕ್ರಮ ಉಪಯೋಗಿಸದಿದ್ದರೆ ಹೆಚ್ಚುಭಾಗ ನಷ್ಟವಾಗುತ್ತದೆ. ಭತ್ತವನ್ನು ಅಕ್ಕಿಯಾಗಿ ಪರಿವರ್ತಿಸುವಾಗ ನುಚ್ಚು ಹೆಚ್ಚಾಗುತ್ತದೆ. ಕುಸುಬಲು ಅಕ್ಕಿ ತಯಾರಿಸುವಾಗ ಬೂಷ್ಟು ಬೆಳೆದು ಪದಾರ್ಥ ಕೆಟ್ಟು ನಾರುತ್ತದೆ. ಬೇಳೆ ಒಡಕಾಗುತ್ತದೆ. ಈ ಬಗೆಯ ತೊಂದರೆಗಳನ್ನು ಪರಿಶೀಲಿಸಿ ಪರಿಹಾರ ಕ್ರಮಗಳನ್ನು ಸೂಚಿಸಲಾಗಿದೆ. ಹೊಸ ರೀತಿಯ ಸಂಸ್ಕರಣಗಳು, ಹೊಸ ಉತ್ಪನ್ನಗಳು ಇದರಿಂದ ಬಂದಿವೆ. ಮುಖ್ಯ ಕೊಡುಗೆಗಳು : 1. ಹೊಸ ಅಕ್ಕಿಯನ್ನು ಹಬೆಯಿಂದ ಸಂಸ್ಕರಿಸಿ ಹಳೆಯದರ ಸತ್ತ್ವವನ್ನು ಪಡೆಯುವುದು. 2. ಕುಸುಬಲು ಅಕ್ಕಿಯನ್ನು ಕೆಟ್ಟ ವಾಸನೆ ರುಚಿಗಳಿಲ್ಲದಂತೆ ತಯಾರಿಸುವುದು. 3. ದಿಢೀರ್ ದೋಸೆ, ಇಡ್ಲಿ ಮತ್ತು ಜಾಮೂನು, ವಡೆ ಹಿಟ್ಟುಗಳ ತಯಾರಿಕೆಯ ಕ್ರಮ. 4. ಅಕ್ಕಿ ತೌಡಿನಿಂದ ತಿನ್ನಲು ಯೋಗ್ಯವಾದ ಎಣ್ಣೆಯ ತಯಾರಿಕೆ. ಈ ವಿಧಾನಗಳನ್ನು ಈಗ ಅನೇಕ ಕೈಗಾರಿಕೆಗಳವರು ಉಪಯೋಗಿಸತೊಡಗಿದ್ದಾರೆ.

ಈ ವಿಭಾಗದ ಇನ್ನೊಂದು ಶಾಖೆಯಲ್ಲಿ ಬ್ರೆಡ್ಡು, ಬಿಸ್ಕತ್ತು, ಮೆಕರೋನಿ ಮುಂತಾದ ಸಂಸ್ಕರಿಸಿದ ಆಹಾರಗಳ ತಯಾರಿಕೆಯ ವಿಚಾರದಲ್ಲಿ ಕೆಲಸ ನಡೆಯುತ್ತಿದೆ. ಈ ಪದಾರ್ಥಗಳ ಪೋಷಕಗುಣ ಹೆಚ್ಚಿಸುವುದು, ಅವುಗಳ ತಯಾರಿಕೆಗಾಗಿ ಉಪಯೋಗಿಸಬಹುದಾದ ಹೊಸ ಪದಾರ್ಥಗಳು, ಹೊಸ ವಿಧಾನಗಳು, ಮುಂತಾದ ವಿಷಯಗಳನ್ನು ಕುರಿತಾಗಿ ಅನೇಕ ಪ್ರಯೋಗಗಳನ್ನು ಕೈಗೊಂಡು ಈ ಉದ್ಯಮಗಳಲ್ಲಿರುವವರಿಗೆ ಸಹಾಯ ಮಾಡಲಾಗುತ್ತಿದೆ.

ಪ್ರೋಟೀನ್ ವಿಭಾಗ: ಮಕ್ಕಳ ಮತ್ತು ದೊಡ್ಡವರ ಆರೋಗ್ಯ ಮತ್ತು ಬೆಳೆವಣಿಗೆಗೆ ಪ್ರೋಟೀನ್ ಅಥವಾ ಸಸಾರಜನಕ ಪದಾರ್ಥಗಳು ಅತ್ಯಾವಶ್ಯಕವೆಂಬುದು ಎಲ್ಲರಿಗೂ ತಿಳಿದ ವಿಷಯ. ನಮ್ಮ ಜನಸಾಮಾನ್ಯರ ಆಹಾರದಲ್ಲಿ ಇವು ಸಾಕಷ್ಟು ಇರುವುದಿಲ್ಲ. ಈ ಸ್ಥಿತಿಯನ್ನು ಉತ್ತಮಪಡಿಸುವ ದಿಶೆಯಲ್ಲಿ ಸಂಶೋಧನೆಗಳು ನಡೆದಿವೆ. ಭಾರತದಲ್ಲಿ ಪ್ರಾಣಿಮೂಲ ಆಹಾರಗಳು–ಹಾಲು, ಮಾಂಸ, ಮೀನು, ಮೊಟ್ಟೆ ಮುಂತಾದುವು ಹೆಚ್ಚಾಗಿಲ್ಲ. ಇದ್ದರೂ ದುಬಾರಿ ಬೆಲೆಯವು. ಆದ್ದರಿಂದ ಎಲ್ಲರಿಗೂ ಎಟಕುವ ಸಸ್ಯಮೂಲ ಆಹಾರಗಳಿಂದ ಇಡೀ ಪ್ರಯೋಜನವನ್ನು ಪಡೆಯಬೇಕು. ಇದಕ್ಕಾಗಿ ಕಡಲೆಕಾಯಿ, ಎಳ್ಳು, ಹತ್ತಿಕಾಳು ಮುಂತಾದ ಎಣ್ಣೆ ಬೀಜಗಳಿಂದ ಉತ್ತಮ ರೀತಿಯಲ್ಲಿ ತಯಾರಿಸಿದ ಹಿಂಡಿಗಳನ್ನು ಉಪಯೋಗಿಸಬಹುದು. ಇವನ್ನು ಸೂಕ್ತರೀತಿಯಲ್ಲಿ ಸಂಸ್ಕರಿಸಿ ಶುದ್ಧ ಪ್ರೋಟೀನ್ ಪದಾರ್ಥ ಪಡೆಯಬಹುದೆಂದು ಸಂಶೋಧನೆಗಳಿಂದ ತೋರಿಸಿಕೊಡಲಾಯಿತು. ಕಡಲೇಕಾಯಿ ಹಿಂಡಿಯಿಂದ ಪ್ರೋಟೀನ್ ಪದಾರ್ಥವನ್ನು ಮುಂಬಯಿಯ ಕಾರ್ಖಾನೆಯೊಂದು ಈಗ ಅಧಿಕ ಪ್ರಮಾಣದಲ್ಲಿ ತಯಾರಿಸುತ್ತಿದೆ. ಇದಕ್ಕೆ ಬೇಕಾದ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಆಹಾರ ಸಂಶೋಧನಾಲಯವೇ ಒದಗಿಸಿತು. ಈ ಪ್ರೋಟೀನನ್ನು ಹಾಲು, ರೊಟ್ಟಿ, ಬಿಸ್ಕತ್ತು, ಚಾಕೊಲೇಟ್ ಮುಂತಾದುವುಗಳ ತಯಾರಿಕೆಯಲ್ಲಿ ಈಗ ಅನೇಕರು ಉಪಯೋಗಿಸುತ್ತಿದ್ದಾರೆ. ಪ್ರೋಟೀನ್ ಹೆಚ್ಚಾಗಿರುವ ಕೆಲವು ಕಾಳು ಬೇಳೆಗಳಲ್ಲಿ ಅವನ್ನು ಅರಗಿಸಿಕೊಳ್ಳಲು ಅಡಚಣೆ ತರುವ ಕೆಲವು ಪದಾರ್ಥಗಳು (ಇನ್ಹಿಬಿಟರ್ಸ್) ಇರುತ್ತವೆ. ಇವನ್ನು ಹೇಗೆ ಸಂಸ್ಕರಿಸಿದರೆ ಈ ತೊಂದರೆಯನ್ನು ನೀಗಿಸಬಹುದೆಂಬುದನ್ನು ಕಂಡುಕೊಳ್ಳಲಾಗಿದೆ. ಕೆಲವು ಗಿಡಗಳ ಎಲೆಗಳಿಂದಲೂ ಪ್ರೋಟೀನ್ ಪದಾರ್ಥ ಪಡೆಯಬಹುದು. ಈ ದಿಶೆಯಲ್ಲೂ ಅನೇಕ ಪ್ರಯೋಗಗಳು ನಡೆಯುತ್ತಿವೆ.

**ಹಣ್ಣು ತರಕಾರಿಗಳ ವಿಭಾಗ:** ನಮ್ಮ ದೇಶದಲ್ಲಿ ಸಿಗುವ ವಿವಿಧ ಹಣ್ಣು ತರಕಾರಿಗಳನ್ನು ಶೈತ್ಯದಿಂದ, ಡಬ್ಬಗಳಲ್ಲಿ ಸಂಸ್ಕರಿಸುವುದರಿಂದ, ಆರ್ದ್ರೀಕರಿಸುವುದರಿಂದ, ರಾಸಾಯನಿಕಗಳನ್ನು ಸೇರಿಸಿದ ಮೇಣಗಳ ಲೇಪನವನ್ನು ಕೊಡುವುದರಿಂದ ಮುಂತಾಗಿ ಹಲವು ವಿಧಗಳಿಂದ

ಹೇಗೆ ಸಂರಕ್ಷಿಸಿ ಹೆಚ್ಚುಕಾಲ ಉಪಯೋಗಿಸಲು ಸಾಧ್ಯವಾಗುವಂತೆ ಮಾಡಬಹುದೆನ್ನುವ ವಿಚಾರವಾಗಿ ಇಲ್ಲಿ ಪ್ರಯೋಗಗಳು ನಡೆಯುತ್ತಿವೆ. ಶೈತ್ಯಾಗಾರಗಳಲ್ಲಿ ಆಯಾ ಹಣ್ಣು ತರಕಾರಿಗಳಿಗೆ ಎಷ್ಟು ಉಷ್ಣಾಂಶ, ತೇವಾಂಶಗಳಿರಬೇಕು, ಡಬ್ಬಗಳನ್ನು ಸಂಸ್ಕರಿಸುವಾಗ ಯಾವ ತೆರನ ಟಿನ್‌ಪ್ಲೇಟ್ ಉಪಯೋಗಿಸಿ ಎಷ್ಟು ಉಷ್ಣಾಂಶದಲ್ಲಿ ಕಾಯಿಸಬೇಕು ಎಂಬುವುಗಳನ್ನು ನಿರ್ಧರಿಸಲಾಗಿದೆ. ರಾಸಾಯನಿಕ ಮೇಣಗಳನ್ನು ಉಪಯೋಗಿಸುವುದರಿಂದ ಬಾಳೆಹಣ್ಣಿನ ರಫ್ತಿಗೆ ಸಹಾಯವಾಗಿದೆ. ಈಗ ದೇಶದಲ್ಲೆಲ್ಲ ಶೈತ್ಯಾಗಾರಗಳೇರ್ಪಡುತ್ತಿರುವುದ ರಿಂದ ಈ ಸಂಶೋಧನೆಗಳು ವ್ಯಾಪಾರಗಾರರಿಗೆ ಸಹಾಯಮಾಡುತ್ತಿವೆ.

ಇದಲ್ಲದೆ, ಹಣ್ಣಿನ ಉತ್ಪನ್ನಗಳು, ಪರಂಗಿ, ಬೇಲದ ಹಣ್ಣು, ನಿಂಬೆ ಹಣ್ಣಿನ ಸಿಪ್ಪೆ ಮುಂತಾದುವುಗಳಿಂದ ಪೆಕ್ಟಿನ್ ಪದಾರ್ಥ ತಯಾರಿಸುವ ವಿಧಾನ, ನೀರನ್ನು ಸೈನಿಕರಿಗಾಗಿ ಡಬ್ಬದಲ್ಲಿ ಸಂಸ್ಕರಿಸಿಡುವ ವಿಧಾನ ಮುಂತಾದ ಉಪಯುಕ್ತ ಸಂಶೋಧನೆಗಳೂ ಈ ವಿಭಾಗದಲ್ಲಿ ಆಗಿವೆ.

**ಪ್ರಾಣಿಮೂಲ ಆಹಾರ ವಿಭಾಗ:** ಮೀನು, ಮಾಂಸ, ಮೊಟ್ಟೆ ಮುಂತಾದ ಆಹಾರಗಳನ್ನು ವಿವಿಧ ಸಂಸ್ಕರಣೆಯ ವಿಧಾನಗಳಿಂದ ಹೇಗೆ ಸಂರಕ್ಷಿಸಬಹುದು ಎನ್ನುವ ವಿಚಾರದಲ್ಲಿ ಇಲ್ಲಿ ಪ್ರಯೋಗಗಳು ನಡೆಯುತ್ತಿವೆ. ಒಂದು ಋತುವಿನಲ್ಲಿ ಅಧಿಕವಾಗಿ ಸಿಕ್ಕಿ, ಉಪಯೋಗಿ ಸಲಾಗದೆ ಈಗ ನಷ್ಟವಾಗುತ್ತಿರುವ ಸಮುದ್ರ ಮೀನುಗಳಿಂದ ದ್ರಾವಕ ಸಂಸ್ಕರಣೆಯಿಂದ ಪೋಷಣೆಗೆ ಉತ್ತಮವಾದ ಮೀನಿನ ಪುಡಿ ತಯಾರಿಸುವುದು, ಮೊಟ್ಟೆಗಳಿಂದ ಒಣಗಿದ ಪುಡಿ ತಯಾರಿಕೆ, ಮಾಂಸಗಳಿಂದ ಮತ್ತು ಮೀನಿನಿಂದ ಸಾಸೇಜ್ ಮತ್ತು ಒಣಗಿದ ಪದಾರ್ಥ ಪಡೆಯುವುದು–ಈ ಕೈಗಾರಿಕೆಗಳಿಗೆ ಬೇಕಾದ ತಂತ್ರಜ್ಞಾನವನ್ನು ಇಲ್ಲಿ ಕಂಡುಕೊಂಡು ಕೈಗಾರಿಕೆಯವರಿಗೆ ಒದಗಿಸಲಾಗುತ್ತಿದೆ. ಮಂಗಳೂರಿನಲ್ಲಿರುವ ಸಂಸ್ಥೆಯ ಶಾಖೆಯೊಂದು ಮೀನುಗಳ ವಿಚಾರದ ಸಂಶೋಧನೆಗಳಿಗಾಗಿಯೇ ಮೀಸಲಾಗಿದೆ. ಆಧುನಿಕ ತಂತ್ರಪ್ರಯೋಗ ದಿಂದ ಮೀನುಗಳನ್ನು ಡಬ್ಬಗಳಲ್ಲಿ ಸಂಗ್ರಹಿಸುವುದು, ಶೈತ್ಯದಲ್ಲಿ ಹೆಪ್ಪುಗಟ್ಟಿಸುವುದು, ಆರ್ದ್ರೀಕರಿಸುವುದು, ರಾಸಾಯನಿಕಗಳಿಂದ ಮತ್ತು ಕಿರಣ ಪ್ರಯೋಗದಿಂದ ಕೆಡದಂತೆ ಇರಿಸುವುದು ಮೊದಲಾದ ವಿಚಾರಗಳಲ್ಲಿ ಇಲ್ಲಿ ಉಪಯುಕ್ತ ಕೆಲಸಗಳು ನಡೆದಿವೆ.

**ಸಂಬಾರ ದಿನಸಿ ಮತ್ತು ಆಹಾರ ರುಚಿ ವಿಭಾಗ:** ಮೆಣಸು, ಶುಂಠಿ, ಏಲಕ್ಕಿ ಮುಂತಾದ ಸಂಬಾರ ದಿನಸಿಗಳಿಗೆ ಭಾರತವೇ ತೌರು. ಈ ಪದಾರ್ಥಗಳ ಸಾವಿರಾರು ಟನ್ನುಗಳನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಇವನ್ನು ಸಂಸ್ಕರಿಸುವ ವಿಧಾನಗಳು ಅಷ್ಟು ಸಮರ್ಪಕವಾಗಿಲ್ಲ. ಗಾತ್ರ, ಬಣ್ಣ, ವಾಸನೆ, ರುಚಿ ಮುಂತಾದ ಗುಣಗಳಲ್ಲಿ ಅತ್ಯುತ್ತಮ ಪದಾರ್ಥ ಪಡೆಯಲು ಕೈಗೊಳ್ಳಬೇಕಾದ ಕ್ರಮಗಳ ವಿಚಾರ ಸಂಶೋಧನೆಗಳು ನಡೆದು ಕೈಗಾರಿಕೆಯವರಿಗೆ ಅನೇಕ ಉಪಯುಕ್ತ ಸಲಹೆಗಳನ್ನು ಕೊಡಲಾಗಿದೆ. ಉದಾಹರಣೆಗೆ ಏಲಕ್ಕಿಯ ಸಿಪ್ಪೆ ಹಸಿರಾಗಿದ್ದಷ್ಟೂ ಅರಬ್ಬೀ ದೇಶಗಳಲ್ಲಿ ಅದಕ್ಕೆ ಹೆಚ್ಚು ಬೆಲೆ ಬರುತ್ತದೆ. ಈ ಹಸಿರು ಬಣ್ಣವನ್ನು ಹೇಗೆ ಹೆಚ್ಚಿಸಬಹುದು, ದೀರ್ಘಕಾಲ ಕಾಪಾಡಬಹುದು ಎನ್ನುವುದನ್ನು ಸಂಶೋಧನಾಲಯದವರು ಕಂಡುಹಿಡಿದು ಏಲಕ್ಕಿ ಬೆಳೆಯುವವರಿಗೆ ತಿಳಿಸಿಕೊಟ್ಟಿದ್ದಾರೆ. ಹೊರದೇಶಗಳಲ್ಲಿ ಸಂಬಾರದಿನಸಿಗಳಿಂದ ತೈಲ, ಸಾರಪದಾರ್ಥಗಳನ್ನು ತಯಾರಿಸಿ ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ಇವನ್ನು ಆಹಾರಗಳಲ್ಲಿ ಉಪಯೋಗಿಸುವುದು ಸುಲಭ ಮತ್ತು ಲಾಭದಾಯಕ. ಭಾರತದಲ್ಲೂ ಇವುಗಳ ತಯಾರಿಕೆ ನಡೆದು ರಫ್ತಾಗಬೇಕು. ಆಗ ನಮ್ಮ ವಿದೇಶಿ ವಿನಿಮಯದ ಗಳಿಕೆ ಹೆಚ್ಚಾಗುತ್ತದೆ. ಆದರೆ ಇದಕ್ಕೆ ಬೇಕಾದ ತಂತ್ರಜ್ಞಾನ ನಮ್ಮಲ್ಲಿಲ್ಲ. ಇದನ್ನು ಸಂಶೋಧನಾಲಯ ಕಂಡುಕೊಂಡು ಕೈಗಾರಿಕೆಯವರಿಗೆ ಒದಗಿಸುತ್ತದೆ.

ಆಹಾರಗಳ ರುಚಿ ಮತ್ತು ವಾಸನೆ ಬಹಳ ಮುಖ್ಯವಾದುವು. ಇವುಗಳ ಸ್ವರೂಪವನ್ನು ವೈಜ್ಞಾನಿಕವಾಗಿ ಕಂಡುಕೊಂಡು, ವಿವಿಧ ಆಹಾರಗಳ ನಿಜವಾಸನೆ (ಫ್ಲೇವರ್ಸ್) ಹೇಗೆ ಉತ್ತಮಪಡಿಸಬಹುದು ಎನ್ನುವ ದಿಶೆಯಲ್ಲಿ ಸಂಶೋಧನೆಗಳು ಇಲ್ಲಿ ನಡೆಯುತ್ತಿವೆ. ಕಾಫಿ, ಟೀ, ದ್ರಾಕ್ಷಾರಸ, ಮಿಠಾಯಿಗಳು, ಹಾಲಿನ ಉತ್ಪನ್ನಗಳು ಮುಂತಾದ ಆಹಾರಗಳನ್ನು ಕುರಿತ ಅನೇಕ ಉಪಯುಕ್ತ ವಿಷಯಗಳು ತಿಳಿದುಬಂದಿವೆ.

**ಆಹಾರ ಶಿಲ್ಪ ಮತ್ತು ತಂತ್ರ ವಿಭಾಗ (ಫುಡ್ ಎಂಜಿನಿಯರಿಂಗ್ ಅಂಡ್ ಪ್ರೋಸೆಸ್ ಡೆವಲಪ್‌ಮೆಂಟ್):** ಆಹಾರಗಳ ಆರ್ದ್ರೀಕರಣ, ಸಾಂದ್ರೀಕರಣ (ಕಾನ್ಸಂಟ್ರೇಷನ್), ತಿಳಿಯಾಗಿಸುವಿಕೆ (ಕ್ಲ್ಯಾರಿಫಿಕೇಷನ್), ಸಾರ ತೆಗೆಯುವಿಕೆ (ಎಕ್ಸ್‌ಟ್ರಾಕ್ಷನ್) ಮುಂತಾದ ಕ್ರಮಗಳಿಗೆ ಬೇಕಾದ ವಿವಿಧ ಯಂತ್ರೋಪಕರಣಗಳನ್ನು ಈ ವಿಭಾಗದವರು ಒದಗಿಸುತ್ತಾರೆ. ತಾವೇ ಮಾದರಿಗಳನ್ನು (ಡಿಸೈನ್) ಹಾಕಿ ಉಪಕರಣಗಳನ್ನು ತಯಾರಿಸುತ್ತಾರೆ. ಪ್ರಯೋಗಶಾಲೆಯಲ್ಲಿ ಸಣ್ಣ ಪ್ರಮಾಣದಲ್ಲಿ ಕಂಡುಕೊಂಡ ಕೆಲವು ವಿಧಾನಗಳಿಗೆ (ಪ್ರಾಸೆಸ್) ದೊಡ್ಡ ಪ್ರಮಾಣದಲ್ಲಿ ಯಂತ್ರೋಪಕರಣಗಳನ್ನು ಉಪಯೋಗಿಸುವ ಕ್ರಮವನ್ನು ಇವರು ತಿಳಿಸುತ್ತಾರೆ. ಅಲ್ಲದೆ ತಮ್ಮದೇ ಕೆಲವು ಸಂಶೋಧನೆಗಳನ್ನೂ ನಡೆಸುತ್ತಾರೆ. ಯಂತ್ರಗಳಲ್ಲಿ ಸುಧಾರಣೆ, ಹೊಸ ರೀತಿಯ ಉಪಕರಣಗಳು, ಕೆಲವು ಆಹಾರಗಳ ಸಂಸ್ಕರಣೆಯ ರೀತಿ ಮುಂತಾದ ವಿಚಾರಗಳಲ್ಲಿ ಇಲ್ಲಿ ಕೆಲಸ ನಡೆಯುತ್ತದೆ. ಇದಕ್ಕೆ ಸೇರಿದ ಹಾಗೆಯೇ ದೊಡ್ಡ ಆಧುನಿಕ ಕಾರ್ಯಾಗಾರ ಇದೆ. ಇಲ್ಲಿ ಬೇಕಾದ ಉಪಕರಣಗಳನ್ನು ಜೋಡಿಸಲು (ಫ್ಯಾಬ್ರಿಕೇಷನ್) ಬೇಕಾದ ಅನುಕೂಲತೆಗಳೆಲ್ಲವೂ ಇವೆ.

ಅಮೂಲ್ ಮಕ್ಕಳ ಅಹಾರದ ತಯಾರಿಕೆ, ಕಡಲೇಕಾಯಿ ಪ್ರೋಟೀನ್, ಹುಣಸೇಹಣ್ಣಿನ ಸಾರಪದಾರ್ಥ, ಬೇಕರ್ಸ್ ಯೀಸ್ಟ್ ವಿವಿಧೋಪಯೋಗಿ ಆಹಾರ ಮುಂತಾದ ಹಲವಾರು ಕೈಗಾರಿಕೆಗಳು ದೇಶದಲ್ಲಿ ಈಗ ನಡೆಯುತ್ತಿವೆ. ಇದಕ್ಕೆ ತಂತ್ರಜ್ಞಾನ ಒದಗಿಸಿರುವವರು ಈ ಸಂಸ್ಥೆಯವರೇ.

**ಪ್ಯಾಕಿಂಗ್ ವಿಭಾಗ:** ಹಣ್ಣು ತರಕಾರಿಗಳು, ಮೀನು, ಮೊಟ್ಟೆ ಮುಂತಾದ ಆಹಾರಗಳನ್ನು ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ವ್ಯಾಪಾರಗಾರರು ಸಾಗಿಸಲು ಸರಿಯಾದ ಚೀಲ, ಬುಟ್ಟಿ, ಡಬ್ಬ, ಲೋಹದ ಪಾತ್ರೆಗಳು ಮುಂತಾದುವು ಬೇಕಾಗುತ್ತವೆ. ಇವನ್ನು ವೈಜ್ಞಾನಿಕ ರೀತಿಯಲ್ಲಿ ರಚಿಸಿದರೆ ಆಯಾ ಆಹಾರಗಳು ಕೆಡದೆ ಸುರಕ್ಷಿತವಾಗಿ ಗುರಿ ತಲಪುತ್ತವೆ. ಅಸಮರ್ಪಕವಾದ ಪ್ಯಾಕೇಜಿಂಗ್ ಬಳಸಿದರೆ ಅವನ್ನು ಸಾಗಿಸುವಾಗ ಬಿಸಿ, ಅಣುಜೀವಿಗಳು, ತೇವ ಮುಂತಾದುವುಗಳಿಂದ ಆಹಾರ ಪದಾರ್ಥಗಳು ಕೆಡುತ್ತವೆ. ರೈಲು, ಬಸ್ಸು ಮುಂತಾದ ವಾಹನಗಳಲ್ಲಿ ಸಾಗಿಸುವಾಗ ಘರ್ಷಣೆಯಿಂದ ಅವು ಜಜ್ಜಿಹೋಗಬಹುದು. ಬಿದಿರು, ಕಾರ್ಡ್‌ಬೋರ್ಡು, ಪ್ಲೈವುಡ್, ಅಲ್ಯೂಮಿನಿಯಂ ರೇಕು ಮುಂತಾದ ಸುಲಭ ಬೆಲೆಯ ಪದಾರ್ಥಗಳಿಂದ ಹೇಗೆ ವಿವಿಧ ಆಹಾರಗಳಿಗಾಗಿ ಅವುಗಳ ಸಾಗಾಣಿಕೆಗೆ ತಕ್ಕ ಪ್ಯಾಕೇಜಿಂಗ್ ರಚಿಸಬಹುದೆನ್ನುವ ವಿಚಾರದಲ್ಲಿ ಪ್ರಯೋಗಗಳು ನಡೆಯುತ್ತಿವೆ. ಈಗಾಗಲೇ ಹಣ್ಣುಗಳು, ಮೀನು, ಮೊಟ್ಟೆ, ಟೀ ಮುಂತಾದ ಪದಾರ್ಥಗಳಿಗಾಗಿ ಕೈಗಾರಿಕೆಯವರಿಗೆ ಉತ್ತಮ ಪ್ಯಾಕೇಜಿಂಗ್ ವಿನ್ಯಾಸಗಳನ್ನು ಒದಗಿಸಲಾಗಿದೆ. (ವೈ.ಎಸ್.ಎಲ್)

**ಆಹಾರ ವಿಷವೇರಿಕೆ, ಏಕಾಣುಜೀವಿಕ:** ಕೆಡುಕು ಮಾಡುವ ಹಲವಾರು ಕಾರಕಗಳು ಸೇರಿರುವ ಆಹಾರದ ಸೇವನೆಯಿಂದ ರೋಗ ಬರಬಹುದು. ಸಾಮಾನ್ಯ ರಾಸಾಯನಿಕ ವಿಷಗಳು, ವಿಷದ ಗಿಡಮರಗಳು, ಪ್ರಾಣಿಗಳು, ಹಲವು ಗೊತ್ತಾದ ಪ್ರಾಣಿ ಪರಪಿಂಡಿಗಳು, ಜೀವಾಣುಗಳು ಇಂಥವು (**ನೋಡಿ– ಪರಪಿಂಡಿಶಾಸ್ತ್ರ**), ಇಷ್ಟಾದರೂ ಆಹಾರ ವಿಷವೇರಿಕೆಯ ಬಹುವಾಗಿ ಕಾರಣವಾದವು ಸೂಕ್ಷ್ಮ ಜೀವಿಗಳು, ಅದರಲ್ಲೂ ಬ್ಯಾಕ್ಟೀರಿಯಗಳು, ಅಲ್ಲದೆ ಅವು ಬಿಡುವ ವಿಷಗಳು. ಗುತ್ತಿಕಾಯ್ಜೀವಿಗಳು (ಸ್ಟೆಫೈಲೊಕಾಕೈ), ಊರುಬಾಡು ಕದಿರುಜೀವಿಗಳು (ಕ್ಲಾಸ್ಟ್ರಿಡಿಯಂ ಬಾಟುಲೈನಂ) ತೆರನ ಬ್ಯಾಕ್ಟೀರಿಯ ಗಳಿಂದ ಬಂದ ಜೀವಿವಿಷಗಳೇ (ಟಾಕ್ಸಿನ್ಸ್) ಬೇರೆ ನಿಜವಾದ ಏಕಾಣುಜೀವಿಕ ಆಹಾರ ವಿಷವೇರಿಕೆ, ಸಾಲ್ಮನ್ ಜೀವಿಗಳು (ಸಾಲ್ಮೊನೆಲ್ಲ), ಷೀಗಜೀವಿಗಳು (ಷಿಗೆಲ್ಲ) ಸರಕಾಯ್ಜೀವಿಗಳಂಥವಿಂದ (ಸ್ಟ್ರೆಪ್ಟೋಕಾಕೈ) ಬಂದ ಜೀವವಿಷಗಳೇ ಬೇರೆ ಎಂದು ಪರಿಗಣಿಸುವುದುಂಟು (ಎರಡನೆಯ ತಂಡದವೇ ಆಹಾರದ ಸೋಂಕುಗಳು).

ಹಳಸಿದ್ದರೆ, ಸೂಕ್ಷ್ಮಜೀವಿಗಳಿಂದ ಕೊಳೆತರೆ, ಆಹಾರ ವಿಷವೇರುವುದೆಂಬ ನಂಬಿಕೆ ಬಲವಾಗಿದ್ದರೂ ತಿನ್ನಲು ರುಚಿಗೆಟ್ಟಿದ್ದರೂ ಹೊಲಸಾಗಿ ಕಂಡರೂ ಕೆಟ್ಟನಾತ ಬಡಿಯುತ್ತಿದ್ದರೂ ಅಂಥ ಆಹಾರ ಯಾವಾಗಲೂ ವಿಷಕರವೆಂದು ಹೇಳಲುಬಾರದು. ಹಾಗೆ ನೋಡಿದರೆ ಹಳಸಲು, ಕೊಳೆತಗಳನ್ನು ಒಂದು ಮಟ್ಟಕ್ಕೆ ಮಿತಿಗೊಳಿಸುವುದರಿಂದ ಮಾತ್ರವೇ ಚೀಸು, ಕೋಸುಮದ್ಯಗಳ (ಸಾವರ್ ಕ್ರಾಟ್) ತಯಾರಿಕೆ, ಮಾಂಸ ಮಾಗುವಿಕೆ ಸಾಧ್ಯ. ಅದೇ ತೆರನಾಗಿ, ಬಾಯಲ್ಲಿ ನೀರೂರಿಸುವ ತಿನ್ನಲು ರುಚಿಯಾಗಿರುವ ತಿಂಡಿ ತಿನಿಸುಗಳಲ್ಲೇ ಕೆಡುಕುಕಾರಕ ಬ್ಯಾಕ್ಟೀರಿಯ ಅವುಗಳಿಂದೇಳುವ ವಿಷಗಳೂ ಬೇಕಾದಷ್ಟಿರಬಹುದು.

**ಏಕಾಣುಜೀವಿಕ ಜೀವಿವಿಷಗಳಿಂದೇಳುವ ಆಹಾರ ವಿಷವೇರಿಕೆ:** ಗುತ್ತಿಕಾಯ್ಜೀವಿಗಳು: ಉಸಿರಾಡುವ ಗಾಳಿ, ನೆಲ, ಮೈ ಚರ್ಮ, ಮೂಗು, ಗಂಟಲು ಹೀಗೆ ಎಲ್ಲೆಲ್ಲೂ ಗುತ್ತಿಕಾಯ್ಜೀವಿಗಳು ಹೇರಳವಾಗಿವೆ. ದ್ರಾಕ್ಷಿ ಗೊಂಚಲಂತೆ ಗುತ್ತಿ ಗುತ್ತಿಯಾಗಿ ಬೆಳೆವ ದುಂಡನೆಯ ಏಕಾಣುಜೀವಿಗಳಲ್ಲಿ ಕೆಲವು ಹೊರಬಿಟ್ಟ ಜೀವವಿಷದಿಂದ ಆಹಾರ ವಿಷವೇರುತ್ತದೆ. ಬೇರೆ ಏಕಾಣುಜೀವಿಗಳು ಸಾಯುತ್ತಿರುವ ಆವರಣದಲ್ಲಿ ಇವು ಮಾತ್ರ ಹುಲುಸಾಗಿ ಬೆಳೆಯುತ್ತವೆ. ಒಂದಿಷ್ಟು ಉಪ್ಪು, ಸಕ್ಕರೆ ಹಾಕಿದಾಗ ವಿಷಮಶೀತಜ್ವರದ ರೋಗಾಣುಗಳು ಹಳಸಲಿನ ಜೀವಾಣುಗಳು ಇನ್ನು ಬೆಳೆಯದೆ ಸತ್ತರೂ ಗುತ್ತಿಕಾಯ್ಜೀವಿಗಳು ಮಾತ್ರ ಚೆನ್ನಾಗಿಯೇ ಬೆಳೆಯುತ್ತವೆ. ಆದ್ದರಿಂದಲೇ ಊರಿಟ್ಟ ಆಹಾರದಲ್ಲಿ ಹಳಸಿಸುವ ಜೀವಾಣುಗಳು ಬೆಳೆಯದಿದ್ದರೂ ಆಹಾರ ವಿಷಗೊಳಿಸುವ ಗುತ್ತಿಕಾಯ್ಜೀವಿಗಳು ಹುಲುಸಾಗಿ ಬೆಳೆಯಬಹುದು. ವಿಷ ಬಿಡಲಿ ಬಿಡದಿರಲಿ, ಅಹಾರದಲ್ಲಿ ಗುತ್ತಿಕಾಯ್ಜೀವಿಗಳು ಬೆಳೆಯುತ್ತಿರುವು ದನ್ನು ಮಾತ್ರ ರುಚಿಯಿಂದಾಗಲಿ, ವಾಸನೆಯಿಂದಾಗಲಿ ಕಂಡುಕೊಳ್ಳುವಂತಿಲ್ಲ. ಗುತ್ತಿಕಾಯ್ಜೀವಿಗಳಿಂದ ಆಹಾರ ವಿಷವೇರುವುದು ತೀರ ಸಾಮಾನ್ಯ. ಈ ರೋಗಾಣುಗಳು ಮಾನವನನ್ನೂ ಮಂಗನನ್ನೂ ಕಾಡುತ್ತವೆ ; ಇತರ ಪ್ರಾಣಿಗಳನ್ನು ಕಾಡವು. ಪ್ರಪಂಚದಲ್ಲಿ ಇದರಿಂದ ವಾಂತಿ, ಓಕರಿಕೆ ಅನುಭವಿಸದೆ ಬೆಳೆದವರೇ ಇಲ್ಲವೆನ್ನಬಹುದು ; ಆದರೆ, ಎಷ್ಟೋ ವೇಳೆ ಇದನ್ನು ಗುರುತಿಸದಿರಲೂಬಹುದು. ಇಲ್ಲವೇ ಇನ್ನೇತರಿಂದಲೋ ಆಗಿರಬಹುದು ಎಂದುಕೊಳ್ಳಬಹುದು.

ವಿಷಕಾರಕ ತಿಂಡಿ ತಿನಿಸು, ಆಹಾರ ವಸ್ತುಗಳು ಹೆಚ್ಚುತ್ತಿವೆ. ಹಾಲು, ಮೊಸರು, ಮಜ್ಜಿಗೆ, ಹಾಲಿನಿಂದಾದ ಪದಾರ್ಥಗಳು, ರೊಟ್ಟಿಯಂಗಡಿ ತಯಾರಿಕೆಗಳು, ಮಾಂಸ, ಊರಿಟ್ಟ ಮಾಂಸಗಳಿಂದ ಹೀಗಾಗುವುದು ತಿಳಿದೇ ಇದೆ. ಅಡಿಗೆ ಮಾಡಿಟ್ಟಿರುವ ರೊಟ್ಟಿ, ಇಡ್ಲಿ, ದೋಸೆ, ಸಿಹಿ ತಿಂಡಿಗಳಿಂದಲೂ ಹೀಗಾಗುತ್ತದೆ. ಇವನ್ನು ತಿಂದ ಕೆಲವು ತಾಸುಗಳಲ್ಲೇ

ವಿಷವೇರಿದ್ದರ ಲಕ್ಷಣಗಳು ಕಾಣಬರುತ್ತವೆ. ಓಕರಿಕೆ, ವಾಂತಿ, ಹೊಟ್ಟೆಶೂಲೆ, ನುಲಿತ, ಉಚ್ಚಾಟ ಮೊದಲೋ ಕೊನೆಗೋ ಕಾಣಿಸಿಕೊಳ್ಳುವುದು ವಿಶೇಷ. ಇವು ವಿಪರೀತವಾದರೆ, ರೋಗಿ ನಿತ್ರಾಣದಿಂದ ಸುಸ್ತಾಗಿ ಕುಸಿಯುವನು. ವಾಂತಿಯಲ್ಲೋ ಭೇದಿಯಲ್ಲೋ ರಕ್ತಬೀಳಬಹುದು. ಕೊನೆಗೆ, ನಾಡಿಗುಂದಿ ಸೊಕ್ಕೆಯಿಂದ (ಷಾಕ್) ಸುಸ್ತಾಗಬಹುದು. ವಿಷವೇರಿಕೆ ಹೆಚ್ಚಾದರೆ ರೋಗಿ ಸಾಯುವುದು ಹೆಚ್ಚಲ್ಲ ; ಉಳಿದವರು ಕೆಲವು ದಿನಗಳಲ್ಲಿ ಚೇತರಿಸಿಕೊಳ್ಳುತ್ತಾರೆ. ಸಾಲ್ಮೊನೆಲ್ಲ ಜೀವಿಗಳಿಂದಾದ ಆಹಾರ ವಿಷವೇರಿಕೆಯಲ್ಲಿನಂತೆ, ಸೋಂಕಿನಿಂದೇಳುವ ಜ್ವರ ಮತ್ತಿತರ ಲಕ್ಷಣಗಳೇ ಇರವು. ಈ ಆಹಾರ ವಿಷವೇರಿಕೆ ಕೆಲವರಿಗೆ ತಟ್ಟದು. ಆದ್ದರಿಂದ ವಿಷಕರ ಆಹಾರ ಸೇವಿಸಿದವರೆಲ್ಲರೂ ಬೇನೆ ಬೀಳದಿರಬಹುದು.

ಗುತ್ತಿಕಾಯ್ಜೀವಿಯಿಂದಾದ ಆಹಾರ ವಿಷವೇರಿಕೆಗೆ ಕಾರಣವಾದ ಜೀವಿವಿಷ (ಕರುಳಜೀವಿವಿಷ) ಸೇವಿಸುವ ಮೊದಲೇ ಆಹಾರದಲ್ಲಿ ತಯಾರಾಗಿರುತ್ತದೆ. ಅರೆತಾಸು ಕುಸಿದಾಗಲೂ ಸಾಯದೆ ಉಳಿಯುವುದು, ಪ್ರಯೋಗಗಳಲ್ಲಿ ಕಂಡಿದೆ. ಆದ್ದರಿಂದ. ಆಹಾರ ವಿಷಕರವಾಗಬೇಕಾದರೆ ಅದರಲ್ಲಿ ವಿಷಜನಿಕ ಗುತ್ತಿಕಾಯ್ಜೀವಿಗಳಿರಬೇಕು. ಆ ರೋಗಾಣುಗಳು ಬೆಳೆಯಲು ಅನುಕೂಲಿಸುವಂತೆ ಪುಷ್ಟಿಕಾರಕವಾಗಿ ಸಾಕಷ್ಟು ತೇವವೂ ಬೇಕಿರುವ ಆಮ್ಲತೆಯೋ ಕ್ಷಾರತೆಯೋ ಇರಬೇಕು; ಕಾವೂ ತಕ್ಕಂತಿರಬೇಕು; ಅವು ಬೆಳೆದು ಕರುಳಜೀವಿವಿಷ ತಯಾರಿಸಿ ಬಿಡುವಷ್ಟು ಹೊತ್ತು ಹಾಗೇ ಇರಿಸಿರಬೇಕು.

ಗುತ್ತಿಕಾಯ್ಜೀವಿಯಿಂದಾದ ಆಹಾರ ವಿಷವೇರಿಕೆಗೆ ಯಾವ ಗೊತ್ತಾದ ರೋಗರೋಧಕ ಚಿಕಿತ್ಸೆಯೂ ಇಲ್ಲ. ವಾಂತಿ, ಉಚ್ಚಾಟ ಆಗುತ್ತಲೇ ಇರುವುದರಿಂದ ವಿಷವನ್ನು ಮತ್ತೆ ಹೊರತೆಗೆವ ಯಾವ ಉಪಾಯವೂ ಬೇಕಿಲ್ಲ. ಇನ್ನೂ ಹೆಚ್ಚಿನದಾಗಿ, ಇದರಿಂದ ಮೈಯಲ್ಲಿನ ಬಹು ಪಾಲು ನೀರೂ ಉಪ್ಪೂ ಕಳೆವುದರಿಂದ, ಅವನ್ನು ರಕ್ತನಾಳಾಂತರವೋ ಚರ್ಮದಡಿಯೋ ಬೇಗನೆ ಚುಚ್ಚಿ ಸಾಕಷ್ಟು ತುಂಬಿಕೊಟ್ಟು, ಸುಸ್ತುಬಿದ್ದಿರುವ ರೋಗಿ ಚೇತರಿಸಿಕೊಳ್ಳಲು ನೆರವಾಗಬೇಕು.

ಗುತ್ತಿಕಾಯ್ಜೀವಿಯಿಂದ ಆಹಾರ ವಿಷಕರವಾಗುವುದನ್ನು ತಪ್ಪಿಸಲು ಮುಖ್ಯವಾಗಿ, ಇರಿಸಿದರೆ ಕೆಟ್ಟುಹೋಗುವಂಥ ಆಹಾರ ಪದಾರ್ಥಗಳನ್ನು ಶೀತಕದಲ್ಲಿ (ರೆಫ್ರಿಜರೇಟರ್) ಇರಿಸಬೇಕು. ಏಕೆಂದರೆ ಈ ಜೀವಾಣುಗಳು ಆಹಾರದಲ್ಲಿ ಬೆರೆಯುವುದನ್ನು ತಪ್ಪಿಸುವುದಂತೂ ಸುಲಭಸಾಧ್ಯವಲ್ಲ. ತೀರ ತಣ್ಣಗೆ ಕೊರೆವ ತಂಪಿನಲ್ಲಿ ಈ ಜೀವಾಣುಗಳು ನಿಧಾನವಾಗಿ ಬೆಳೆದರೂ ಕೋಣೆಯ ಎಂದಿನ ಕಾವಿನಲ್ಲಿ ಬೇಗನೆ ಬೆಳೆಯುತ್ತವೆ. ಮೈಕಾವಿನಲ್ಲಂತೂ ಬಲುಬೇಗನೆ ಬೆಳೆದುಬಿಡುತ್ತವೆ.

ಊರುಬಾಡುಬೇನೆ (ಬಾಟುಲಿಸಂ): ಊರುಬಾಡು ಕದಿರುಜೀವಿ ಆಹಾರದಲ್ಲೇ ಜೀವಿವಿಷವನ್ನು ಬಿಡುವುದರಿಂದ ಈ ರೋಗ ತಲೆದೋರುತ್ತದೆ. ಕಂಬಿ ಆಕಾರದ ಈ ಏಕಾಣುಜೀವಿಗಳು ಸಾಮಾನ್ಯವಾಗಿ ಮಣ್ಣಿನಲ್ಲೂ ಕೊಳೆಯುತ್ತಿರುವ ಗಿಡಗಂಟೆ ಸೊಪ್ಪು ಸದೆಯಲ್ಲೂ ಇರುತ್ತವೆ. ಪ್ರಯೋಗಾಲಯದಲ್ಲಿ ಆಕ್ಸಿಜನ್ ಇರುವ ಅಗಾರಿನ ಮೇಲೆ ಎಷ್ಟೋ ಏಕಾಣುಜೀವಿಗಳು ಬದುಕಿ ಬೆಳೆದು ಹೆಚ್ಚಿಕೊಂಡರೂ ಇವು ಬೆಳೆಯವು. ಇದಕ್ಕಾಗಿ, ಇವಕ್ಕೆ ನಿರ್ಗಾಳಿಜೀವಿಗಳು (ಅನೀರೊಬ್ಸ್) ಎಂದು ಹೆಸರಿದೆ. ಕಾವಿಗೂ ಜಗ್ಗದ ಬೀಜಕಣಗಳಾಗಿ (ಸ್ಪೋರ್ಸ್) ಇವು ಬದಲಾಗುವುದರಿಂದ ಹೆಚ್ಚು ಹೊತ್ತು ಕುದಿಸಿದರೆ ಸಾಯುತ್ತವೆ. ಈ ರೋಗಾಣುವಿನ ಎ, ಬಿ, ಸಿ, ಡಿ, ಇ, ಎಫ್ ಬಗೆಗಳು ಗೊತ್ತಿವೆ. ಒಂದೊಂದೂ ಒಂದೊಂದು ತೆರನ ಜೀವಿವಿಷವನ್ನು ತಯಾರಿಸುವುದಾದರೂ ರೋಗಿಯಲ್ಲಾಗಲಿ, ಪ್ರಾಣಿಗಳಲ್ಲಾಗಲಿ ಇವೆಲ್ಲ ಒಂದೇ ಬಗೆಯ ಬೇನೆಗೆ ಕಾರಣವಾಗುತ್ತವೆ. ಆದರೆ ಇವುಗಳ ಎದುರಾಗಿ ಚಿಕಿತ್ಸೆಗಾಗಿ ಬಳಸುವ, ಅದರದರ ಜೀವಿವಿಷರೋಧಕಗಳು (ಆ್ಯಂಟಿಟಾಕ್ಸಿನ್) ಮಾತ್ರ ವರ್ತನೆಗಳಲ್ಲಿ ವಿಶಿಷ್ಟವಾಗಿರುತ್ತವೆ. ಅಂದರೆ ಎ ಮಾದರಿ ಜೀವಿವಿಷರೋಧಕ ಎ ಜೀವಿವಿಷವನ್ನು ನಿಷ್ಪರಿಣಾಮಗೊಳಿಸುವುದೇ (ನ್ಯೂಟ್ರಲೈಸ್ ) ಹೊರತು ಉಳಿದ ಯಾವುವನ್ನೂ ಮುಟ್ಟದು. ಎ ಮಾದರಿಯ ಜೀವಿವಿಷ ಹುಳುಕಿನ ರೂಪದಲ್ಲಿ ತಯಾರಾಗಿದೆ. ಅದೊಂದು ಪ್ರೋಟೀನು. ಈ ಜೀವಿವಿಷಗಳು ಬಿಸಿ ತಾಕಿದರೆ ಹಾಳಾಗುತ್ತವೆ. ಕುದಿವ ನೀರಲ್ಲಿ ನಿಮಿಷದಲ್ಲಿ ಕೆಡುತ್ತವೆ.

ಎ, ಬಿ, ಇ, ಮಾದರಿಗಳ ಊರುಬಾಡುಬೇನೆ ಮಾನವ ರೋಗಗಳ ಆಹಾರ ವಿಷವೇರಿಕೆಗಳಲ್ಲಿ ಕಂಡುಬಂದಿದೆ. ಇ ಮಾದರಿಯ ರೋಗಾಣುಮಾತ್ರ $3.33^{\circ}$ ಸೆಂ.ಗ್ರೇ. ನಷ್ಟು ತಣ್ಣಗಾಗಿಸಿದ್ದರೂ ಆರು ವಾರಗಳಲ್ಲಿ ಬೆಳೆದು ಜೀವಿವಿಷವನ್ನು ಬಿಡುತ್ತದೆ. ಕಾಡು ನೀರುಕೋಳಿಯಲ್ಲಿ ಸಹಜವಾಗಿ ತಲೆದೋರುವ ಬೇನೆಗೂ ತುಪ್ಪಳಿನ ವಾಟಿಕೆಗಳಲ್ಲಿ (ಯಾರ್ಡ್ಸ್) ಕಂದುಪ್ಪಳಿಗಳ (ಮಿಂಕ್ಸ್) ಬೇನೆಗೂ ಸಿ ಮಾದರಿ ಕಾರಣ. ದ. ಆಫ್ರಿಕದಲ್ಲಿ ಕುದುರೆಗಳ, ಹೇಸರಕತ್ತೆಗಳ ವಿಷವೇರಿಕೆಗೆ ಡಿ ಮಾದರಿ ಕಾರಣ. ಮುಖ್ಯವಾಗಿ ಡಬ್ಬಿ ತುಂಬಿದ ಮೀನಿನ ತಯಾರಿಕೆಗಳಿಂದ ಮಾನವರಲ್ಲಿ ಕಾಣಿಸಿಕೊಳ್ಳುವುದು ಡಿ ಮಾದರಿಯ ಊರುಬಾಡುಬೇನೆ. ಮನೆಯಲ್ಲಿ ತಯಾರಾದ ಯಕೃತ್ತಿನ ಸರಿಯಿಂದ (ಲಿವರ್ ಪೇಸ್ಟ್) ಬೇರೆ ತೆಗೆದ ಡಿ ಮಾದರಿಯಿಂದ ಡೆನ್ಮಾರ್ಕಿನ (1958) ಊರುಬಾಡು ಬೇನೆ ಕಂಡಿತು. ಇಂಗ್ಲೆಂಡಿನಲ್ಲಿ ಲಾಕ್ ಮೇರೀ ಅನಾಹುತದಲ್ಲಿ (1922), ಮೀನು ಹಿಡಿಯಲು ತೆರಳಿದ್ದ ಎಂಟು ಮಂದಿಯೂ ಬಾತಿನ ಸರಿ (ಡಕ್‌ಪೇಸ್ಟ್) ಹಚ್ಚಿ ರೊಟ್ಟಿ ಮುರುಕನ್ನು ತಿಂದ ಕೂಡಲೇ ಸತ್ತರು.

ಸಾಕಷ್ಟು ಚೆನ್ನಾಗಿ ತಯಾರಿಸದ, ಡಬ್ಬಿ ತುಂಬಿದ ಆಹಾರಗಳೇ ಅಮೆರಿಕದಲ್ಲಿ ಬಹುವಾಗಿ ವಿಷವೇರಿಕೆಗಳಿಗೆ ಕಾರಣ. ಡಬ್ಬಿ ತುಂಬುವ ಆಹಾರ ತಯಾರು ಮಾಡುವವರು ಊರುಬಾಡುಬೇನೆಯನ್ನು ಮೊದಲೇ ಕಂಡುಕೊಂಡು, ಇದನ್ನು ತಪ್ಪಿಸಲು ಸಾಕಷ್ಟು ಎಚ್ಚರಿಕೆಯಿಂದಿದ್ದಾರೆ. ಇಷ್ಟೆಲ್ಲ ಹತೋಟಿಗಳಿದ್ದರೂ ಇದರಿಂದ ಅಲ್ಲಲ್ಲಿ ಜನ ಸತ್ತಿದ್ದಾರೆ. ಇದಕ್ಕೆ ಕಾರಣ, ಇದರ ತಯಾರಿಕೆಯಲ್ಲಿ ಊರುಬಾಡುಬೇನೆಯ ಕದಿರುಜೀವಿಯ ಬೀಜಕಣಗಳನ್ನು ಸಾಯಿಸುವಷ್ಟು ಹೊತ್ತು ಕಾವು ಕೊಡದೆ ತಣ್ಣಗಿರುವಾಗ ಡಬ್ಬಿ ತುಂಬುವ ವಿಧಾನ. ಅದೇ ಒತ್ತಡ ಅಡಿಗೆ ಪಾತ್ರೆಯಲ್ಲಿ (ಪ್ರೆಷರ್ ಕುಕ್ಕರ್) ಪಾತ್ರೆ ತಯಾರಕರ ಸೂಚನೆಗಳಂತೆ, ತಯಾರಿಸಿದರೆ ಬೀಜಕಣಗಳು ಚೆನ್ನಾಗಿ ಸಾಯುತ್ತವೆ. ಸಾಕಷ್ಟು ಆಮ್ಲಗಳಿರದ ಆಹಾರಗಳನ್ನು ಜೋಪಾನಿಸಲು ಈ ವಿಧಾನವೇ ಒಳ್ಳೆಯದು.

ಇಲ್ಲಿಯ ತನಕ ಅಮೆರಿಕದಲ್ಲಿ ಕಂಡುಬಂದ ಊರುಬಾಡುಬೇನೆಗಳಲ್ಲಿ ನಾಲ್ಕರಲ್ಲಿ ಒಂದು ಮನೆಯಲ್ಲೇ ಡಬ್ಬಿಯಲ್ಲಿ ತುಂಬಿಟ್ಟ, ಮುಖ್ಯವಾಗಿ ಕಾಳುಗಳ, ಆಹಾರದಿಂದ ಆಗಿವೆ. ಉಳಿದವು ಮುಸುಕಿನ ಜೋಳ, ಬಸಳೆಸೊಪ್ಪು, ಬೀಟ್‌ಗೆಡ್ಡೆ, ಮೆಣಸಿನಕಾಯಿ, ಮೆಣಸು ಇವುಗಳಿಂದ, ಇದೇ ತೆರನಾಗಿ, ಮನೆಯಲ್ಲಿ ತಯಾರಿಸಿ ಡಬ್ಬಿಯಲ್ಲಿಟ್ಟ ಮಾಂಸ, ಮೀನು, ಹಾಲಿನ ಪದಾರ್ಥಗಳೂ ಹೀಗೆ ಕೆಟ್ಟಿರುತ್ತಿದ್ದವು. ಆದರೆ ಕಾರ್ಖಾನೆಯಲ್ಲಿ ತಯಾರಾದವು ಹೀಗಾದುದು ಬಲು ಅಪರೂಪ. ರಷ್ಯದಲ್ಲಿ ಉಪ್ಪಿನಲ್ಲಿ ನೆನೆಹಾಕಿ, ಒಣಗಿಸಿದ, ಹೊಗೆ ಹಿಡಿಸಿಟ್ಟ ಮೀನುಗಳನ್ನು ತಿಂದಿದ್ದರಿಂದ ಹೀಗಾಗಿದೆ.

ಊರುಬಾಡುಬೇನೆ ಇದ್ದಕ್ಕಿದ್ದ ಹಾಗೆ ಕಾಣಿಸಿಕೊಂಡು ಬೇಗನೆ ರೋಗಿಯನ್ನು ಸಾಯಿಸುತ್ತದೆ. ಈ ಜೀವಿವಿಷದಷ್ಟು ವಿಷಕರವಾದ ಪದಾರ್ಥ ಪ್ರಪಂಚದಲ್ಲಿ ಇನ್ನಿಲ್ಲ. ಒಂದು ಗ್ರಾಂನಷ್ಟು ಜೀವಿವಿಷ ಹಲವಾರು ದಶಲಕ್ಷ ಮಂದಿಯನ್ನು ನೆಲಸಮ ಮಾಡಬಲ್ಲುದು. ಸೇವಿಸಿದಮೇಲೆ ಕರುಳಿನ ಮೂಲಕ ರಕ್ತಗತವಾಗುತ್ತದೆ. ನರಮಂಡಲವನ್ನೇ ಹಾಳುಮಾಡುತ್ತದೆ. ಇದರ ಜೀವಿವಿಷ ಸೇವಿಸಿದ 12–36 ತಾಸುಗಳಲ್ಲೇ ಬೇನೆ ಕಾಣಿಸಿಕೊಳ್ಳುತ್ತದೆ ; 2–3 ತಾಸುಗಳಲ್ಲೇ ಕಾಣಿಸಿಕೊಂಡಿದ್ದೂ ಉಂಟು. ಒಂದು ಬಾರಿ, ಒಬ್ಬ ರೋಗಿ ಆಸ್ಪತ್ರೆ ಸೇರುವ ಮೊದಲು 8 ದಿನಗಳು ಚೆನ್ನಾಗಿ ಓಡಾಡುತ್ತಿದ್ದು, ಹತ್ತನೇ ದಿನ ಸತ್ತ. ಕಣ್ಣಿಗೆ ಎಲ್ಲವೂ ಎರಡಾಗಿ ಕಾಣುವುದು, ನುಂಗುವುದು ಕಷ್ಟ, ಮಾತಾಡಲು ತೊಡಕು, ಏದುಸಿರು ಇವೆಲ್ಲ ಮಿದುಳಿಗೂ ಬೇನೆ ತಾಗಿದ ಲಕ್ಷಣಗಳು. ಸಾಮಾನ್ಯವಾಗಿ ಉಸಿರು ನಿಂತುಹೋಗಿ ರೋಗಿ ಸಾಯುವನು. ಸಾಯುವ ತನಕ ಎಚ್ಚರ ತಪ್ಪದು. ಇದರೊಂದಿಗೆ, ವಾಂತಿ, ಓಕರಿಕೆ ಆಗಿ ಹೊಟ್ಟೆ ಉಬ್ಬರಿಸಿಕೊಳ್ಳುತ್ತದೆ. ಹೊಟ್ಟೆ ನೋವಿರದು. ಆಹಾರ ಎಷ್ಟರಮಟ್ಟಿಗೆ ಕೆಟ್ಟಿದೆ, ಕೆಟ್ಟ ಆಹಾರ ಎಷ್ಟು ಒಳಸೇರಿತು ಎನ್ನುವುದಕ್ಕೆ ತಕ್ಕಂತೆ ಇವೆಲ್ಲ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಆಹಾರ ಕೆಟ್ಟು ವಿಷಕರವಾಗಿದ್ದರೂ 10 ನಿಮಿಷ ಚೆನ್ನಾಗಿ ಕುದಿಸಿದರೆ, ಬೇಯಿಸಿದರೆ ವಿಷ ಹಾಳಾಗುತ್ತದೆ. ಹಸಿ ತರಕಾರಿ ಮತ್ತು ಆಗತಾನೆ ಕೊಯ್ದಿಟ್ಟ ಹಣ್ಣುಗಳಲ್ಲಿ ಮಣ್ಣು ದೂಳುಗಳಿಂದ ಬಂದ ಊರುಬಾಡುಬೇನೆಯ ಬೀಜಕಣಗಳಿದ್ದರೂ ಅವನ್ನು ತಿಂದವರಿಗೆ ಏನೇನೂ ಕೆಡುಕಾಗಿಲ್ಲವಾದ್ದರಿಂದ, ಮಣ್ಣಿನಲ್ಲಿರುವ ಬೀಜಕಣಗಳು ವಿಷಕರವಲ್ಲ ಎನ್ನಬಹುದು. ಆದರೆ ಬೇಯಿಸಿಟ್ಟ, ಕಾಯಿಸಿಟ್ಟ ಆಹಾರಗಳಿಗೆ ಈ ಬೀಜಕಣಗಳು ಸೇರಿದರೆ ಮತ್ತೂ ಅಪಾಯಕಾರಿ.

ಊರುಬಾಡುಬೇನೆಗೆ ಸರಿಯಾದ ಗೊತ್ತಾದ ಚಿಕಿತ್ಸೆಯಿಲ್ಲ. ಬೇನೆಯ ಲಕ್ಷಣಗಳು ಕಾಣಿಸಿಕೊಳ್ಳುವ ಹೊತ್ತಿಗೆ ಸಾಕಷ್ಟು ಕೈಮೀರಿರುತ್ತದೆ. ಆದ್ದರಿಂದಲೇ ಜೀವಿವಿಷರೋಧಕವನ್ನು ಆಮೇಲೆ ಕೊಟ್ಟರೂ ಫಲವಿಲ್ಲ. ಆದರೂ ಇನ್ನಷ್ಟು ಕೆಡುಕಾಗುವುದನ್ನು ತಪ್ಪಿಸಲು ಎ, ಬಿ ಮಾದರಿಗಳ ಜೀವಿವಿಷರೋಧಕಗಳನ್ನಾದರೂ ಎಲ್ಲ ರೋಗಿಗಳಿಗೆ ಚುಚ್ಚುವುದು ಒಳ್ಳೆಯದು. ಅದರ ಒಂದು ತಂಡದಲ್ಲಿ ಬೇನೆ ಕಂಡ ಮೇಲೆ, ಬೇನೆಯ ಲಕ್ಷಣಗಳು ಹೊರಗಾಣದಿದ್ದರೂ ಜೀವಿವಿಷವಿರುವ ಆಹಾರ ಸೇವಿಸಿದವರೆಲ್ಲರಿಗೂ ಜೀವಿವಿಷರೋಧಕವನ್ನು ಚುಚ್ಚಲೇಬೇಕು. ಒಂದೊಂದು ಬಾರಿಯೂ ಸಾಯುವವರ ಅಂಕಿ ಬೇರೆಯಾಗಿರುವುದಾದರೂ 65% ರೋಗಿಗಳು ಬಲಿಯಾಗುವರು.

ಊರುಬಾಡುಬೇನೆಗೆ ಬೀಜಕಣಗಳನ್ನು ಸಾಯಿಸಿ ರೋಗವನ್ನು ತಡೆಗಟ್ಟಲು ಡಬ್ಬಿತುಂಬಿ ಜೋಪಾನಿಸುವ ಆಹಾರಗಳನ್ನು ಸುಧಾರಿತಕ್ರಮದಲ್ಲಿ ತಯಾರಿಸುವುದೇ ಸರಿಯಾದ ದಾರಿ. ಈ ರೋಗಾಣು ಸೇರಿ ಬೆಳೆದಿರುವ ಆಹಾರದ ವಾಸನೆ, ರುಚಿ ಎರಡೂ ಕೆಟ್ಟಿರುವುದಲ್ಲದೆ, ಡಬ್ಬಿ ಕೂಡ ಕೆಲವೇಳೆ ಮೇಲೂ ಕೆಳಗೂ ಉಬ್ಬಿರುತ್ತದೆ. ಇದಕ್ಕಾಗೇ ರುಚಿ, ವಾಸನೆ ಕೆಟ್ಟ, ಉಬ್ಬಿದ ಡಬ್ಬಿಗಳ ಆಹಾರವನ್ನು ಎಂದಿಗೂ ತಿನ್ನದೆ ಬಿಸಾಡಬೇಕು.

**ಜೀವಾಣುಗಳಿಂದಾಗುವ ಆಹಾರ ವಿಷವೇರಿಕೆ:** ಸಾಲ್ಮೊನ್‌ಜೀವಿ ವರ್ಗ: ಈ ವರ್ಗದ ಏಕಾಣುಜೀವಿಗಳಲ್ಲಿ 650ಕ್ಕೂ ಮಿಗಿಲಾಗಿ ಗೊತ್ತಿರುವ ಬಗೆಗಳ ರಸಿಕೆ ಮಾದರಿಗಳಿವೆ. ಉಪವಿಷಮಶೀತಜ್ವರದ (ಪ್ಯಾರಟೈಫಾಯ್ಡ್) ಏಕಾಣುಜೀವಿಗಳಿವು. ಇದರಲ್ಲಿ ಕೆಲವಂತೂ 1888ರಲ್ಲೇ ಆಹಾರ ವಿಷವೇರಿಕೆಗೆ ಕಾರಣವಾಗಿದ್ದುವು. ಆಕಾರ, ಗಾತ್ರ, ಬಣ್ಣವೇರಿಕೆ ಗುಣಗಳು, ಅಂಗಕ್ರಿಯೆ, ಮರೆವಣೆ (ಇಮ್ಯುನಾಲಜಿ), ಕರುಳಲ್ಲಿನ ವಾಸ ಇವಲ್ಲೆಲ್ಲ ಈ ವರ್ಗದವು ವಿಷಮಜ್ವರದ ಏಕಾಣುಜೀವಿಗಳನ್ನೇ ಹೋಲುತ್ತವೆ. ಇವು ಮಾನವ ರೋಗಿಯಲ್ಲೇ ಅಲ್ಲದೆ, ಬೇರೆ ಪ್ರಾಣಿಗಳ ಕರುಳುಗಳಲ್ಲೂ ಇದ್ದು ಬೆಳೆವುದುಂಟು.

ಸಾಲೆಮನ್‌ಜೀವಿವರ್ಗದ ಕೆಲವು ರೋಗಾಣುಗಳಿಂದ ವಿಷಮಶೀತಜ್ವರದ ತೆರನ ಜ್ವರ ಬರುವುದು. ಅದರ ರೋಗಾಣುವನ್ನು ಕಂಡುಕೊಳ್ಳುವುದರಿಂದ ಮಾತ್ರ ರೋಗ ಗೊತ್ತಾಗುವುದು. ಉಳಿದವಿಂದ ಸುಮ್ಮನೆ ಉಚ್ಚಾಟವಾಗುವುದಷ್ಟೆ ಈ ರೋಗಾಣುಗಳಿಲ್ಲವಾದರೆ, ಕುದಿಸಿದಾಗ ರೋಗಾಣುಗಳು ಸತ್ತಿದ್ದರೆ, ಅಂಥ ಆಹಾರದಿಂದ ಈ ಬೇನೆ ಏಳದು. ಈ ರೋಗಾಣುಗಳು ಒಳಸೇರಿದ 7–72 ತಾಸುಗಳಲ್ಲೇ ಆಹಾರ ವಿಷವೇರಿ, ಓಕರಿಕೆ, ವಾಂತಿ, ಹೊಟ್ಟೆನೋವು, ಉಚ್ಚಾಟಗಳಾಗುವುವು. ಮೊದ ಮೊದಲು ತಲೆನೋವು, ಚಳಿ, ನಡುಕ, ತುಸು ಹೊಟ್ಟೆನೋವು, ಉಚ್ಚಾಟಗಳಿರಬಹುದು. ಉಚ್ಚಾಟ ಕೆಟ್ಟನಾತದೊಂದಿಗೆ ನೀರು ನೀರಾಗಿರುತ್ತದೆ. ವಿಪರೀತವಾದಾಗ, ಜ್ವರವೇರಿ ಸುಸ್ತು, ಸ್ನಾಯು ನಿತ್ರಾಣ, ಬವಳಿ ಬರುವಿಕೆ, ಬಾಯಾರಿಕೆ ಆಗುತ್ತದೆ. ಬಿಳಿರಕ್ತಕಣಗಳ ಎಣಿಕೆ ಏರುತ್ತದೆ. ಒಂದೊಂದು ಬಾರಿ ಕಾಣಿಸಿಕೊಂಡ ಬೇನೆಯೂ ಅಷ್ಟೇ ಜೋರಾಗಿರದು. ಹಾಗೆ ಬೇನೆ ಬಿದ್ದವರೆಲ್ಲರಲ್ಲೂ ಒಂದೇ ತೆರನಾಗಿರದು. ಅಂತೂ ಕೆಲವು ತಾಸುಗಳಲ್ಲೋ ದಿನಗಳಲ್ಲೋ ರೋಗಿ ಬೇಗನೆ ಚೇತರಿಸಿಕೊಳ್ಳುವನು.

ಸಾಲೆಮನ್‌ಜೀವಿ ಆಹಾರ ವಿಷವೇರಿಕೆ ಪ್ರಪಂಚದಲ್ಲಿ ಎಲ್ಲೆಡೆಗಳಲ್ಲೂ ಕಾಣಿಸಿಕೊಂಡಿದೆ. ಈ ಬೇನೆ ಬಿದ್ದವರೆಲ್ಲರೂ ವೈದ್ಯರ ಗಮನಕ್ಕೆ ಬಾರದ್ದರಿಂದ ನಿಜವಾದ ರೋಗಿಗಳ ಅಂಕಿ ಖಚಿತವಾಗಿ ಸಿಗುವಂತಿಲ್ಲ. ಅನೇಕವೇಳೆ ಸೋಂಕು ಹತ್ತಿದ ಪ್ರಾಣಿಗಳಿಂದಲೋ ಆಹಾರ ತಯಾರಿಸಿ ಎತ್ತಿಡುವಾಗ ಸೋಂಕು ಹತ್ತಿದ ಪ್ರಾಣಿ ಇಲ್ಲವೇ ಜನರಿಂದಲೋ ಆಹಾರದಲ್ಲಿ ವಿಷಗೂಡುತ್ತದೆ. ಸಾಲ್ಮೊನ್ ಜೀವಿಯಿಂದ ಸೋಂಕು ಹತ್ತಿದ ಆಹಾರದಲ್ಲಿ ಯಾವ ಕೆಟ್ಟ ವಾಸನೆಯಾಗಲಿ, ರುಚಿಯಾಗಲಿ ಇರದು.

ಸಾಲೆಮನ್‌ಜೀವಿ ಸೋಂಕುಗಳನ್ನು ಜೀವಿವಿರೋಧಕಗಳಿಂದ ಚಿಕಿತ್ಸೆ ಮಾಡಬಹುದು. ಸಾಲೆಮನ್‌ಜೀವಿ ಸೋಂಕು ಹತ್ತಿದ ಪ್ರಾಣಿಗಳಿಂದ ಬಂದ ಮಾಂಸವನ್ನು ಪಟ್ಟಣಗಳ ಕಟುಕರ ಅಂಗಡಿಗಳಲ್ಲಿ ಮಾರಲುಬಿಡದೆ, ಜನರು ಕೊಂಡು ಬಳಸದಂತೆ ಪುರಸಭಾಧಿಕಾರಿಗಳು ತಡೆಯುವರು. ಸೋಂಕು ಹತ್ತಿರುವ ಹಸುಗಳಿಂದ ಬಂದ ಹಾಲನ್ನು ಸಾಕಷ್ಟು ಪ್ಯಾಶ್ಚರೀಕರಿಸಿದರೆ, ಸಾಲೆಮನ್ ಜೀವಿಗಳು ಸಾಯುತ್ತವೆ. ಚೆನ್ನಾಗಿ ಕಾಣುವ ಕೆಲವು ಪ್ರಾಣಿಗಳ ಕರುಳುಗಳಲ್ಲೂ ಸಾಲೆಮನ್‌ಜೀವಿಗಳು ಇರಬಹುದಾದ್ದರಿಂದ (ಹೊರುಗಗಳು), ಪ್ರಾಣಿಗಳಿಂದ ಬಂದ ಬೇಯಿಸದ ಆಹಾರಕ್ಕೂ ಸೋಂಕು ಹತ್ತಬಹುದು. ಆಗ ಸಾಲೆಮನ್‌ಜೀವಿಗಳು ತೀರ ಕಡಿಮೆ ಇರುವುದರಿಂದ ಆಹಾರವನ್ನು ಚೆನ್ನಾಗಿ ಬೇಯಿಸಿದರೆ, ನೀರ್ಗಲ್ಲಿನ ತಂಪಿನಲ್ಲಿ ಇರಿಸಿದ್ದರೆ ಯಾವ ಕೆಡುಕೂ ಕಾಣಲಾರದು. ಹೀಗೇ ಇಲಿಗಳೊ, ಚಿಟ್ಟಿಲಿಗಳೊ (ಮೈಸ್) ಸಾಲ್ಮೊನ್‌ಜೀವಿಗಳನ್ನು ಸಾಗಿಸಬಹುದು. ಆದ್ದರಿಂದ ಆಹಾರ ವಸ್ತುಗಳು ಅವಕ್ಕೆ ಎಟುಕದಂತೆ ಎತ್ತಿರಿಸಬೇಕು.

**ಸರಕಾಯ್ಜೀವಿ:** ಈ ಏಕಾಣುಜೀವಿ ಮಾನವರ, ಪ್ರಾಣಿಗಳ ಮಲದಲ್ಲಿ ಇರುವುದು ಸಾಮಾನ್ಯ. ರಕ್ತ, ಅಗಾರ್ ಕೂಡಿದ ತಳಿವರಸೆಗಳಲ್ಲಿ (ಕಲ್ಚರ್ಸ್) ರಕ್ತದ ರಕ್ತಬಣ್ಣಕದಲ್ಲಿನ ರಾಸಾಯನಿಕ ಬದಲಾವಣೆಗಳಿಂದಾಗುವ ಹಸಿರುಬಣ್ಣದ ವಲಯಗಳ ನಡುವೆ ಸೂಜಿ ಮೊನೆ ತೆರನ ಸಂತತಿಗಳಾಗಿ (ಕಾಲೊನೀಸ್) ಬೆಳೆಯುತ್ತವೆ. ಇದರ ಸಂಬಂಧದ ಉಳಿದ ಬಗೆಗಳ ಸರಕಾಯ್ಜೀವಿಗಳಿಂದಲೂ ಆಹಾರ ವಿಷವೇರಿಕೆ ಆಗುವುದು ಅನುಮಾನ.

ಈ ತೆರನ ಆಹಾರ ವಿಷವೇರಿಕೆ ಅಷ್ಟಾಗಿ ಜೋರಾಗಿರದು. ಓಕರಿಕೆ, ಕೆಲವೇಳೆ ವಾಂತಿ, ಹೊಟ್ಟೆನುಲಿವ ನೋವು, ಉಚ್ಚಾಟ ಇವೆಲ್ಲ ಸೋಂಕು ತಗುಲಿದ, ಆಹಾರ ಸೇವಿಸಿದ 5–18 ತಾಸುಗಳಲ್ಲೇ ಕಾಣಿಸಿಕೊಳ್ಳುತ್ತವೆ. ಈ ಬೇನೆಗೆ ಗೊತ್ತಾದ ಚಿಕಿತ್ಸೆ ಇಲ್ಲವಾದರೂ ಸಾಮಾನ್ಯವಾಗಿ 24 ತಾಸುಗಳಲ್ಲೇ ಗುಣವಾಗುವುದು.

ಬೆಕ್ಕುಗಳನ್ನು ಬಿಟ್ಟರೆ, ಇನ್ನಾವ ಪ್ರಾಣಿಗಳಿಗೂ ಈ ಬೇನೆಯ ಸೋಂಕು ಹತ್ತಿದ ಆಹಾರ ತಿನ್ನಿಸಿ ಬೇನೆ ಬೀಳಿಸುವುದು ಆಗಲಾರದು. ಆದರೆ ಬದುಕಿರುವ ಈ ರೋಗಾಣುಗಳನ್ನು ಚೆನ್ನಾಗಿರುವವರಿಗೆ ತಿನ್ನಿಸಿದರೆ ಬೇನೆ ಬೀಳುವವರೇ ಹೊರತು ಬಿಸಿಯಿಂದ ಹಾಯಿಸಿದ ರೋಗಾಣುಗಳು ಇಲ್ಲವೇ ಅವುಗಳ ರಸ ಕುಡಿಸಿದರೆ ಹಾಗಾಗದು. ಸೋಂಕು ಹತ್ತುವ ಆಹಾರಗಳಿಗಂತೂ ಲೆಕ್ಕವಿಲ್ಲ. ಎಷ್ಟೋ ಬಾರಿ ಆಹಾರ ತಯಾರಿಸಿ ಕೋಣೆಯ ಕಾವಿನಲ್ಲಿ ಎಂದಿನ ಹಾಗೆ ಇರಿಸಿದರೆ ರೋಗಾಣುಗಳು ಬೆಳೆಯಲು ಅವಕಾಶವಾಗುತ್ತದೆ. ಸರಕಾಯ್ಜೀವಿಯ ಆಹಾರ ವಿಷವೇರಿಕೆ ತಡೆಯಲು ಆಹಾರಗಳನ್ನು ತಯಾರಕರು, ಬಡಿಸುವವರು, ಉಣ್ಣುವವರು ಶುಭ್ರತೆ ಕಾಪಾಡಿಕೊಳ್ಳುವುದಲ್ಲದೆ, ಬೇಗನೆ ಕೆಡುವ ಆಹಾರಗಳನ್ನು ಬಲು ತಣ್ಣಗೆ ಇಟ್ಟಿರಬೇಕು.

**ಆಹಾರದಿಂದೇಳುವ ಇತರ ಸೋಂಕುಗಳು:** ಹಲವಾರು ಸೋಂಕುಕಾರಕಗಳು ಕೆಲವುವೇಳೆ, ಬಹುಮಟ್ಟಿಗೆ ಆಕಸ್ಮಿಕವಾಗಿ, ಅಹಾರದಲ್ಲಿ ಸೇರಿಕೊಂಡು ವಿಷವೇರಿಕೆಗೆ ಕಾರಣವಾಗಬಹುದು. ವಿಷಮಶೀತಜ್ವರ, ಏಕಾಣುಜೀವಿಕ ಆಮಶಂಕೆ, ಅಮೀಬದ (ಅಮೀಬಿಕ್) ಆಮಶಂಕೆ, ಕೆಂಜ್ವರ (ಸ್ಕಾರ್ಲೆಟ್ ಫೀವರ್), ಗಂಟಲಮಾರಿ (ಡಿಫ್ತೀರಿಯ), ಬ್ರೂಸೆಲ್ಲಬೇನೆ (ಬ್ರೂಸೆಲ್ಲೋಸಿಸ್), ವೀಲನ ರೋಗ, ಸೋಂಕುಕಾರಕ ಯಕೃತ್‌ಉರಿತ (ಹೆಪಟೈಟಿಸ್), ನರಮಜ್ಜೆಯುರಿತ (ಪೋಲಿಯೊ ಮೈಲೈಟಿಸ್)–ಇನ್ನೂ ಎಷ್ಟೋ ರೋಗಗಳ ಸೋಂಕುಕಾರಕಗಳೂ ಆಹಾರ ವಿಷವೇರಿಕೆಗೆ ಕಾರಣವಾಗಬಹುದು. ರೋಗಿಗಳ ಮಲದಲ್ಲಿ ಕಂಡುಬಂದದ್ದರಿಂದಲೇ ಆಹಾರ ವಿಷವೇರಿಕೆಗೆ ಕಾರಣಗಳೆಂದು ಇನ್ನೂ ಎಷ್ಟೋ ಏಕಾಣುಜೀವಿಗಳ ಮೇಲೆ ಅನುಮಾನವಿದ್ದರೂ ರೋಗಕ್ಕೆ ಅದೇ ಕಾರಣವೆನ್ನಲು ಸರಿಯಾದ ಪುರಾವೆಗಳಿಲ್ಲ **(ನೋಡಿ– ಆಹಾರದ–ಜೋಪಾನಿಕೆ, ದಾಸ್ತಾನು (ಮನೆಯಲ್ಲಿ; ಆಹಾರದ–ಜೋಪಾಸನೆ; ಏಕಾಣುಜೀವಿಕ ಮತ್ತು ಸೋಂಕಿನ–ರೋಗಗಳು)**. (ಪಿ.ಎಸ್.ಎಸ್.)

**ಆಹಾರ – ಶುದ್ಧ, ಅಶುದ್ಧ:** ಶರೀರದ ಆರೋಗ್ಯಕ್ಕೆ ಯಾವ ಆಹಾರ ಉತ್ತಮ, ಯಾವ ಆಹಾರ ರೋಗಕಾರಕ ಎಂಬುದು ಮನುಷ್ಯನಿಗೆ ಕಾಲಾನುಗತವಾಗಿ ತಿಳಿದು ಬಂದಿರುವ ವಿಷಯ. ಅಲ್ಪಕಾಲದಲ್ಲಿಯೇ ಕೆಟ್ಟುಹೋಗುವ ಆಹಾರ ಪದಾರ್ಥಗಳಿಂದ ಈ ರೀತಿಯ ಹಾನಿಯುಂಟಾಗುವುದು. ಮಾಂಸ, ಹಣ್ಣು ಮತ್ತು ತರಕಾರಿಗಳು ಇದಕ್ಕೆ ಉದಾಹರಣೆ ಆದರೆ, ಈ ಸಮಸ್ಯೆ ಉದ್ಭವಿಸಲು ಕಾರಣವೇನು ? ಭಾವೀ ಉಪಯೋಗದ ದೃಷ್ಟಿಯಿಂದ ಆಹಾರವನ್ನು ಕೂಡಿಟ್ಟಾಗ, ಆಹಾರ ಈ ರೀತಿ ನಂಜಾಗಿ ಅಥವಾ ರೋಗಕಾರಕ ಸೂಕ್ಷ್ಮಜೀವಿಗಳಿಗೆ ಮಧ್ಯವರ್ತಿಯಾಗಿ ಪರಿಣಮಿಸುವುದು. ಕೆಲವು ಆಹಾರ ಪದಾರ್ಥಗಳು ಹಳಸಿದರೆ, ಅವುಗಳಲ್ಲಿ ಸೂಕ್ಷ್ಮಜೀವಿಗಳು ವೃದ್ಧಿಯಾಗುವುವು. ಇಂಥ ಆಹಾರವನ್ನು ಸೇವಿಸಿದಾಗ ಸೂಕ್ಷ್ಮಜೀವಿಗಳ ದೆಸೆಯಿಂದ ಮತ್ತು ಅವು ಉತ್ಪತ್ತಿ ಮಾಡುವ ನಂಜುವಸ್ತುವಿನಿಂದ ಶರೀರಕ್ಕೆ ಹಾನಿಯುಂಟಾಗುವುದೆಂದು ವೈಜ್ಞಾನಿಕ ಪರಿಶೀಲನೆಗಳಿಂದ ಖಚಿತವಾಗಿದೆ. ಈ ಸಮಸ್ಯೆಯಲ್ಲಿ ಆಹಾರ ಪದಾರ್ಥಗಳ ಪರೀಕ್ಷೆ, ನಿರ್ಮಲವಾತಾವರಣ, ಪಾತ್ರೆ, ಯಂತ್ರಸಾಧನ ಮುಂತಾದುವನ್ನು ತೊಳೆದು ಶುಚಿಯಾಗಿಡುವುದು–ಇವುಗಳನ್ನು ಮುಖ್ಯವಾಗಿ ಪರಿಗಣಿಸಬೇಕಾಗುತ್ತದೆ.

ಆಧುನಿಕ ಜೀವನದಲ್ಲಿ ಹಾನಿಕಾರಕ ಆಹಾರಗಳ ಸಮಸ್ಯೆ ಒಂದಲ್ಲ ಒಂದು ವಿಧದಲ್ಲಿ ನಮ್ಮನ್ನು ಕಾಡುತ್ತಿದೆ. ಆಹಾರ ಪದಾರ್ಥಗಳ ಸಾಗಾಣಿಕೆ, ಅವುಗಳ ತಯಾರಿಕೆ–ಈ ಹಂತಗಳಲ್ಲಿ ಅವು ಅನೇಕ ಕೈಗಳನ್ನು ಹಾಯಬೇಕಾಗುತ್ತದೆ. ಇದರಿಂದ ಆಹಾರ ಪದಾರ್ಥ ಕೆಡುವ ಸಂಭವವಿದೆ. ಪಟ್ಟಣಗಳಲ್ಲಿ ಉಪಾಹಾರ ಹಾಗೂ ಫಲಾಹಾರ ಮಂದಿರಗಳಲ್ಲಿ ಜನ ಆಹಾರ ಪದಾರ್ಥಗಳನ್ನು ಸೇವಿಸುವುದು ಸಾಮಾನ್ಯವಾಗಿದೆ. ಆದರೆ ಇಂಥ ಮಂದಿರಗಳಲ್ಲಿ, ಆಹಾರ ಪದಾರ್ಥಗಳನ್ನು ತಯಾರಿಸುವ ಸ್ಥಳ ಹಾಗೂ ಸಲಕರಣೆಗಳು ಕ್ರಿಮಿರಹಿತವಾಗಿರಬೇಕು. ಜನರು ನಿರ್ದುಷ್ಟವಾದ ಆರೋಗ್ಯಕಟ್ಟಳೆಗಳನ್ನು ಚಾಚೂ ತಪ್ಪದೆ ಪಾಲಿಸುವಂತಿರಬೇಕು. ಆಹಾರ ವಸ್ತುಗಳಲ್ಲಿ ಕೈಯಾಡಿಸುವ ಅನೇಕರ ಕೈಗಳಲ್ಲಿ ಹಲವಾರು ಸೂಕ್ಷ್ಮ ಕ್ರಿಮಿಗಳಿರುವುದು ವ್ಯಕ್ತವಾಗಿದೆ. ಹೀಗೆ, ಕಲ್ಮಷ ಎನ್ನುವುದು ಕಣ್ಣಿಗೆ ಕಾಣುವ ಕೊಳೆಗೆ ಮಾತ್ರವೇ ಅನ್ವಯಿಸದೆ, ಸಾಮಾನ್ಯದೃಷ್ಟಿಗೆ ಅಗೋಚರವಾದ ಸಾವಿರಾರು ಅಷ್ಟೇ ಏಕೆ, ಲಕ್ಷಾಂತರ ಸೂಕ್ಷ್ಮಜೀವಿಗಳಿಗೂ ಸಂಬಂಧಿಸಿದೆ ಎಂದು ತಿಳಿಯಬಹುದು.

ಇತ್ತೀಚಿನ ಪರಿಶೋಧನೆಗಳಿಂದ ಸೂಕ್ಷ್ಮಜೀವಿಗಳ ಬಗೆಗೆ ಇನ್ನೂ ಹೆಚ್ಚು ವಿವರಗಳು ದೊರೆತಿವೆ. ಅವು ಹರಡುವ ರೀತಿ ಆಹಾರ ಪದಾರ್ಥಗಳ ಮೇಲೆ ಅವುಗಳ ಧಾಳಿ–ಈ ವಿವರಗಳನ್ನು ತಿಳಿಯಲು ಸಾಧ್ಯವಾಗಿದೆ. ಈ ಜೀವಿಗಳು ಮೂಗು ನಾಲಗೆ ಮತ್ತು ಮಲಾಶಯಗಳಲ್ಲಿ ಮನೆ ಮಾಡಿದ್ದರೆ, ಅಂಥ ಮನುಷ್ಯರು ಅವುಗಳ ಸಂಗ್ರಹಾಲಯ ವಾಗುವುದರಲ್ಲಿ ಸಂದೇಹವಿಲ್ಲ.

ಸಾಮಾನ್ಯವಾಗಿ ಆರೋಗ್ಯವಂತರ ಮೂಗಿನಲ್ಲಿ ಕೂಡ ಸ್ಟಾಫಿಲೋಕಾಕ್ಕೈ ಎಂಬ ಹಾನಿಕಾರಕ ಸೂಕ್ಷ್ಮಜೀವಿಗಳು ಇರುತ್ತವೆ. ಮೂಗನ್ನು ಮುಟ್ಟಿದಾಗ, ಅದರಲ್ಲೂ ನೆಗಡಿಯಿಂದ ನರಳುವ ಕಾಲದಲ್ಲಿ, ಇವು ಕೈಯನ್ನು ಸೇರುವ ಅವಕಾಶವಿದೆ. ಚರ್ಮದ ಒಳಪದರ ಮತ್ತು ಕೂದಲಿನ ಗ್ರಂಥಿಗಳಲ್ಲಿ ಇವು ವಾಸಿಸಬಲ್ಲವು. ಅಲ್ಲಿಂದ ಆಹಾರವನ್ನು ಸುಲಭವಾಗಿ ಸೇರಲು ಹೆಚ್ಚು ತಡೆಯಿರುವುದಿಲ್ಲ. ಇಂಥ ಸೂಕ್ಷ್ಮಜೀವಿಗಳನ್ನು ಅತಿನೇರಳೆ ಕಿರಣಗಳಿಂದ ನಾಶಗೊಳಿಸಬಹುದು. ಆದರೆ ಇದು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆಂದು ಹೇಳುವುದು ಸಾಧ್ಯವಿಲ್ಲ.

ಸಾಲ್ಮೊನೆಲ್ಲ ಎಂಬ ಸೂಕ್ಷ್ಮಜೀವಿಗಳ ಗುಂಪು ಮನುಷ್ಯ ಮತ್ತು ಇತರ ಪ್ರಾಣಿಗಳ ಕರುಳಿನಲ್ಲಿ ಮನೆಮಾಡಿಕೊಳ್ಳುತ್ತವೆ. ಇವುಗಳಿಂದ ಓಕರಿಕೆ, ದುರ್ಗಂಧಯುಕ್ತ ಮಲ, ಹೊಟ್ಟೆನೋವು, ಬಾಯಾರಿಕೆ ಮುಂತಾದ ಪರಿಸ್ಥಿತಿಗಳು ತಲೆದೋರುತ್ತವೆ. ಈ ಜೀವಿಗಳು ಆಮಶಂಕೆ, ವಿಷಮಶೀತಜ್ವರಗಳ ಕ್ರಿಮಿಗಳೊಂದಿಗೆ ಮಲದಲ್ಲಿ ಹೊರಬೀಳುತ್ತವೆ.

ಮುಖ್ಯವಾಗಿ, ಶುದ್ಧ ಆಹಾರವನ್ನು ಪಡೆಯಲು, ಈ ಮುಂದೆ ಕೊಟ್ಟಿರುವ ಅಂಶಗಳನ್ನು ನೆನಪಿನಲ್ಲಿಡಬೇಕು.

1. ಆಹಾರದಲ್ಲಿ ನಂಜನ್ನುಂಟುಮಾಡುವ ಸೂಕ್ಷ್ಮಜೀವಿಗಳಿಗೆ ಮನುಷ್ಯನ ಶರೀರ ಸ್ವಾಭಾವಿಕ ಆವಾಸಸ್ಥಾನ.

2. ಆಹಾರ ವಸ್ತುಗಳನ್ನು ಕೂಡಿಡುವ ಜಾಗ ಮತ್ತು ಅಡುಗೆಮನೆ ಶುಭ್ರವಾಗಿರಬೇಕು. ಗಾಳಿ ಹಾಗೂ ಬೆಳಕು ಧಾರಾಳವಾಗಿ ಬರುವಂತಿರಬೇಕು. ಪಾತ್ರೆಗಳನ್ನು ಚೊಕ್ಕಟವಾಗಿಡಬೇಕು.

3. ಅಡುಗೆಮಾಡುವವರು ಆರೋಗ್ಯ ವಿಷಯವನ್ನೂ ಆಹಾರ ವಸ್ತುಗಳನ್ನು ನಿರ್ಮಲವಾಗಿ ಬಳಸುವ ಬಗೆಗಳನ್ನೂ ಅರಿತಿರಬೇಕು.

ಹಲವುಬಾರಿ ಕಲಬೆರಕೆಯಾದ ಆಹಾರ ಪದಾರ್ಥಗಳ ಸೇವನೆಯಿಂದ ಹಾನಿ ಸಂಭವಿಸುವುದೂ ಉಂಟು **(ನೋಡಿ– ಆಹಾರದ ಕೀಳ್ಬೆರಕೆ)**. ಅನೇಕರು ಇದರಿಂದ ಮರಣಕ್ಕೆ ಕೂಡ ತುತ್ತಾಗುವರು. ಕಲಬೆರಕೆಯಿಂದ ಆಹಾರ ಪದಾರ್ಥದ ರೂಪ, ಬಣ್ಣ ಮತ್ತು ವಿಶಿಷ್ಟಗುಣಗಳಲ್ಲಿ ಬದಲಾವಣೆಗಳಾಗಬಹುದು. ಆಹಾರ ಪದಾರ್ಥದ ಪೌಷ್ಟಿಕ

ಗುಣ ಸ್ವಲ್ಪಮಟ್ಟಿಗೆ ಅಥವಾ ಬಹಳವಾಗಿಯೇ ನಷ್ಟವಾಗಬಹುದು. ಆಹಾರ ಪದಾರ್ಥಗಳನ್ನು ಕೇವಲ ಲಾಭದ ದೃಷ್ಟಿಯಿಂದ ಮಾರಿದಾಗ ಅಥವಾ ಕೊಂಡಾಗ ಅದು ಬಹುಮಟ್ಟಿಗೆ ಕೆಳದರ್ಜೆಯದಾಗಿರುತ್ತದೆ. ಈ ರೀತಿಯ ಕಲಬೆರಕೆಯಲ್ಲಿ ಹಲವಾರು ವಿಧಗಳಿವೆ. ಮುಖ್ಯವಾಗಿ ಪದಾರ್ಥದ ಪ್ರಮಾಣವನ್ನು ಹೆಚ್ಚಿಸುವುದಕ್ಕೋಸ್ಕರ ಅಥವಾ ಕೀಳುದರ್ಜೆಯ ಪದಾರ್ಥವನ್ನು ಹೆಚ್ಚು ಆಕರ್ಷಣೀಯವಾಗಿ ಮಾಡುವುದಕ್ಕೆಂದು ಕಲಬೆರಕೆ ಮಾಡುತ್ತಾರೆ. ಸಾಮಾನ್ಯಜನತೆ ಇದನ್ನು ವಿವೇಚಿಸಿ ತಿಳಿಯುವುದು ಅಷ್ಟು ಸುಲಭವಲ್ಲ. ಇದಕ್ಕಾಗಿ ಸರ್ಕಾರದವರು ಆಯಾ ಪ್ರಾದೇಶಿಕ ಆಹಾರ ಪದಾರ್ಥಗಳಿಗನುಗುಣವಾಗಿ ಕಾಯಿದೆಗಳನ್ನು ಕೂಡ ಮಾಡಿದ್ದಾರೆ.

ಉದಾಹರಣೆಗೆ, ಕಾಫಿಪುಡಿಗೆ ಸಾಮಾನ್ಯವಾಗಿ ಹುಣಿಸೇಬೀಜ ಅಥವಾ ಖರ್ಜೂರ ಬೀಜದ ಪುಡಿಗಳನ್ನು ಬೆರೆಸುತ್ತಾರೆ. ಒಳ್ಳೆಯ ತುಪ್ಪದೊಡನೆ ವನಸ್ಪತಿಯನ್ನು ಬೆರೆಸಿ ಮಾರುವುದನ್ನು ತಡೆಗಟ್ಟುವುದು ಒಂದು ಸುಪರಿಚಿತ ಸಮಸ್ಯೆಯಾಗಿದೆ. (ಬಿ.ವಿ.ಎಸ್.)

**ಆಹಾರ ಸಸ್ಯಗಳು:** ಮನುಷ್ಯನ ಮತ್ತು ಪ್ರಾಣಿಗಳ ದೇಹದ ಬೆಳೆವಣಿಗೆಗೆ ಅತ್ಯಾವಶ್ಯಕವಾದ ಪಿಷ್ಟಪದಾರ್ಥಗಳು, ನೈಟ್ರೋಜನ್, ಮೇದಸ್ಸು, ಜೀವಸತ್ವಗಳು, ಲವಣ, ಕ್ಯಾಲ್ಸಿಯಂ, ಫಾಸ್ಫರಸ್ ಮುಂತಾದ ಪೋಷಕಾಂಶಗಳನ್ನು ಒದಗಿಸುವ, ತಿನ್ನಲು ಯೋಗ್ಯವಾದ ಸಸ್ಯಗಳು. ಈ ಸಸ್ಯಗಳ ಕಾಯಿ ಹಣ್ಣುಗಳನ್ನೋ ನೇರವಾಗಿ ಅವುಗಳ ಸೊಪ್ಪನ್ನೋ ಗೆಡ್ಡೆ ಬೇರು ದಿಂಡುಗಳನ್ನೋ ಬಳಸುವುದು ರೂಢಿ. ಈ ಎಲ್ಲ ಅಂಶಗಳೂ ಒಂದೇ ಜಾತಿಯ ಸಸ್ಯ ಅಥವಾ ಸಸ್ಯಭಾಗದಲ್ಲಿ ಕೂಡಿರುವುದಿಲ್ಲ. ಬೇರೆ ಬೇರೆ ಸಸ್ಯಗಳಲ್ಲಿ ಬೇರೆ ಬೇರೆ ಪೋಷಕಾಂಶಗಳಿರುತ್ತವೆ. ಆದ್ದರಿಂದ ಬೇರೆ ಬೇರೆ ಆಹಾರ ಸಸ್ಯಗಳನ್ನು ಅವು ನೀಡುವ ಫಲವನ್ನು ಯುಕ್ತರೀತಿಯಲ್ಲಿ ಉಪಯೋಗಿಸಬೇಕು. ಈ ಪೋಷಕಾಂಶಗಳನ್ನು ಪಡೆಯುವಲ್ಲಿ ಸಸ್ಯದ ಉತ್ಪನ್ನಗಳನ್ನು ಬಹುವಾಗಿ ಬಳಸಿದ ಅನಂತರ ಉಳಿದ ಭಾಗವನ್ನು ಪ್ರಾಣಿಗಳ ಸೇವನೆಗೆ ಉಳಿಸುವುದು ರೂಢಿ.

ಪ್ರಾಣಿಗಳ ಆಹಾರಕ್ಕೆ ಹಲವು ಸಸ್ಯಗಳು ಮಾತ್ರ ಉಪಯುಕ್ತ. ಅಂಥ ಸಸ್ಯಗಳ ಪೂರ್ಣಭಾಗ ಪ್ರಾಣಿಗಳಿಗೆ ಆಹಾರವಾಗುತ್ತದೆ. ಉದಾಹರಣೆಗೆ ಬತ್ತ, ರಾಗಿ, ಗೋದಿ. ಇನ್ನು ಕೆಲವು ಸಸ್ಯದ ಕೆಲಭಾಗ ಮಾತ್ರ ಉಪಯುಕ್ತವಾಗುತ್ತವೆ–ಆಲೂಗೆಡ್ಡೆ, ವಿವಿಧ ಹಣ್ಣಿನ ಮರಗಳು. ಪೋಷಕಾಂಶಗಳನ್ನು ಪ್ರಾಣಿಗಳಿಗೆ ಒದಗಿಸುವ ಸಸ್ಯಗಳನ್ನು ಅವುಗಳ ಉಪಯುಕ್ತತೆ ಮತ್ತು ಆ ಸಸ್ಯಗಳಲ್ಲಿರುವ ಪೋಷಕಾಂಶಗಳ ದೃಷ್ಟಿಯಿಂದ ಮೂರು ಮುಖ್ಯ ಪಂಗಡವಾಗಿ ವಿಂಗಡಿಸಬಹುದು: 1. ಧಾನ್ಯ, 2. ತರಕಾರಿ. 3. ಹಣ್ಣುಹಂಪಲು.

**ಧಾನ್ಯಗಳಲ್ಲಿ ಎರಡು ವಿಧಗಳಿವೆ:** ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು. ಏಕದಳಧಾನ್ಯಗಳು ಹುಲ್ಲು ಕುಟುಂಬದ ಜಾತಿಗೆ ಸೇರಿವೆ. ಬತ್ತ, ಗೋದಿ, ರೈ, ಬಾರ್ಲಿ, ರಾಗಿ, ಜೋಳ, ಮುಸುಕಿನಜೋಳ, ನವಣೆ, ಸಜ್ಜೆ ಇವೆಲ್ಲವೂ ಈ ಗುಂಪಿಗೆ ಸೇರಿದುವು. ಮನುಷ್ಯರ ಆಹಾರದಲ್ಲಿ ಇವು ಮುಖ್ಯಪಾತ್ರ ವಹಿಸುತ್ತವೆ. ಪ್ರಾಣಿಮೇವಿಗೂ ಉತ್ಪಾದನೆಯನ್ನು ದಾಸ್ತಾನು ಮಾಡಿಡುವುದಕ್ಕೂ ಇವು ಅನುಕೂಲ. ಮಾನವ ಪ್ರಥಮವಾಗಿ ಧಾನ್ಯಗಳನ್ನು ಬೆಳೆಸಲು ಕಲಿತ. ಶೇಖರಣೆಯ ಸಮಸ್ಯೆ ಮುಂದೆ ಬಂತು. ಧಾನ್ಯ ಶೇಖರಣೆಗಳ ಉಗ್ರಾಣಗಳು ಅತ್ಯಂತ ಪುರಾತನ ಮೊಹೆಂಜೊದಾರೊ ಮುಂತಾದೆಡೆಯಲ್ಲಿ ಕಂಡುಬಂದಿವೆ. ಸಸ್ಯಾಹಾರವೇ ಆಹಾರಕ್ಕೆ ಮೂಲಭೂತವಾದದ್ದು. ಮಾಂಸಾಹಾರ ಹೆಚ್ಚು ಪ್ರಚಲಿತವಿರುವ ದೇಶಗಳಲ್ಲಿ ಸಸ್ಯಗಳನ್ನು ಬೆಳೆಸಿ ವಿವಿಧ ಪ್ರಾಣಿಗಳಿಗೆ ತಿನ್ನಿಸಿ ಅವುಗಳ ಮಾಂಸವನ್ನು ಬಳಸುತ್ತಾರೆ. ಧಾನ್ಯಗಳು ವಿವಿಧ ರೀತಿಯವಾದರೂ ಅವುಗಳಲ್ಲಿನ ಆಹಾರಾಂಶಗಳು ಒಂದೇ ರೀತಿಯವು. ಮೊತ್ತದಲ್ಲಿ ಮಾತ್ರ ಅಂತರವಿರಬಹುದು. ಸಾಮಾನ್ಯವಾಗಿ ಪಿಷ್ಟಪದಾರ್ಥಗಳೇ ಹೆಚ್ಚು. ಎಲ್ಲದರಲ್ಲೂ ಕ್ಯಾಲ್ಸಿಯಂ ಅಂಶ, ಕಬ್ಬಿಣ ಮತ್ತು ಎ ಜೀವಸತ್ವ ಕಡಿಮೆ. ಹಳದಿಬಣ್ಣದ ಮುಸುಕಿನಜೋಳದಲ್ಲಿ ಮಾತ್ರ ಎ ಜೀವಸತ್ವ ಸಮರ್ಪಕವಾಗಿರುತ್ತದೆ. ಧಾನ್ಯಗಳಲ್ಲಿ ಸಾರಜನಕವೂ (ನೈಟ್ರೋಜನ್) ಸೇರಿರುತ್ತದೆ. ಆದರೆ ಅದು ಮೊಟ್ಟೆ, ಹಾಲು, ಮಾಂಸಗಳಲ್ಲಿನ ನೈಟ್ರೋಜನ್ನಿಗಿಂತ ಭಿನ್ನವಾಗಿರುತ್ತದೆ. ಅವುಗಳನ್ನು ಸೇವಿಸುವಾಗ ನ್ಯೂನತೆಯಿರುವ ಆಹಾರಾಂಶ ಒದಗಿಸುವ ಇತರ ವಸ್ತುಗಳನ್ನು ಜೊತೆಗೆ ಸೇರಿಸಿ ಸೇವಿಸುವುದು ಅಗತ್ಯ. ರಾಗಿಯಲ್ಲಿ ಮಾತ್ರ ಕ್ಯಾಲ್ಸಿಯಂ ಅಂಶ ಹೆಚ್ಚಾಗಿದೆ. ಧಾನ್ಯಗಳು ಸಾಕಷ್ಟು ಬಿ ಜೀವಸತ್ವವನ್ನು ಒದಗಿಸುತ್ತವೆ. ಬತ್ತ ಜಗತ್ತಿನಲ್ಲಿ ಅತಿಮುಖ್ಯ ಆಹಾರ. ಇದರಿಂದ ದೊರಕುವ ಅಕ್ಕಿಯನ್ನು ನೇರವಾಗಿ ಬೇಯಿಸಿ ಅಥವಾ ಅದರ ಹಿಟ್ಟಿನಿಂದ ವಿವಿಧ ಮಾದರಿಯ ಆಹಾರ ತಯಾರಿಕೆಗೆ ಉಪಯೋಗಿಸಲಾಗುತ್ತದೆ. ಅಕ್ಕಿಯಂತೆ ಗೋದಿಯೂ ಅತಿಮುಖ್ಯವಾದ ಆಹಾರ. ಇದನ್ನು ಪ್ರಪಂಚದ ಹಲವೆಡೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಇದರಿಂದ ಸಿದ್ಧಪಡಿಸಿದ ಆಹಾರಗಳನ್ನು ದೀರ್ಘಕಾಲ ಕೆಡದ ರೀತಿಯಲ್ಲಿ ಇಡಬಹುದು. ರಾಗಿ, ಜೋಳ, ಮುಸುಕಿನ ಜೋಳಗಳು, ಸಜ್ಜೆ, ನವಣೆ ಇವು ಇತರ ಮುಖ್ಯ ಏಕದಳ ಧಾನ್ಯಗಳು. ಕಬ್ಬು ಸಹ ಇದೇ ಗುಂಪಿಗೆ ಸೇರುತ್ತದೆ. ಕಬ್ಬಿನಿಂದ ತೆಗೆದ ಸಕ್ಕರೆಯನ್ನು ಮಾನವ ಹಲವು ರೀತಿಯಲ್ಲಿ ಬಳಸಿಕೊಂಡಿದ್ದಾನೆ.

ದ್ವಿದಳಧಾನ್ಯಗಳಲ್ಲಿ ವಿವಿಧ ಕಾಳುಕಡ್ಡಿಗಳು ಸೇರುತ್ತವೆ. ನೈಟ್ರೋಜನ್ನನ್ನು ಇವು ಹೆಚ್ಚಾಗಿ ಒದಗಿಸುತ್ತವೆ. ತೊಗರಿ, ಅವರೆ, ಹಲಸಂದೆ, ಉದ್ದು, ಹೆಸರು, ಸೋಯಬೀನ್, ಹುರುಳಿ, ಕಡಲೆ, ಮಡಿಕೆ ಇವೆಲ್ಲವೂ ನೈಟ್ರೋಜನ್‌ಯುಕ್ತ ಆಹಾರಸಸ್ಯಗಳು. ಇವುಗಳಲ್ಲಿ ಈ ಸಸ್ಯಗಳ ಕಾಳು ಮಾತ್ರ ಉಪಯುಕ್ತವಾಗುತ್ತದೆ. ಸಸ್ಯಭಾಗಗಳು ಪ್ರಾಣಿಗಳಿಗೆ ಮೇವು ಒದಗಿಸುತ್ತವೆ. ಇದರಿಂದಲೂ ಬಿ ಜೀವಸತ್ವ ಒದಗುತ್ತದೆ. ಮೊಳಕೆ ಬಂದ ಕಾಳುಗಳಲ್ಲಿ ಸಿ ಜೀವಸತ್ವ ಅಧಿಕ ಪ್ರಮಾಣದಲ್ಲಿರುತ್ತದೆ.

ಆಹಾರದಲ್ಲಿ ತರಕಾರಿಗಳ ಪಾತ್ರ ಬಲು ಹಿರಿದು. ಧಾನ್ಯಗಳಿಗಿಂತ ಇವು ಅತಿಮುಖ್ಯ ಆಹಾರವಾದರೂ ಅವುಗಳ ಬಳಕೆ ಸಮಂಜಸವಾಗಿಲ್ಲ. ಅತ್ಯಲ್ಪ ಕಾಲದಲ್ಲಿಯೇ ಹೆಚ್ಚು ಪ್ರಮಾಣದ ಪೋಷಕಾಂಶಗಳನ್ನು ಇವುಗಳಿಂದ ಪಡೆಯಬಹುದು. ವಿವಿಧಜಾತಿಯ ಸೊಪ್ಪುಗಳು ಮತ್ತು ತಿಂಗಳ ಹುರುಳಿ ಇತ್ಯಾದಿ ಈ ಗುಂಪಿನ ಆಹಾರಕ್ಕೆ ಸೇರಿವೆ. ಒಂದು ನಿಯತ ಅವಧಿಯಲ್ಲಿ ಒಂದು ನಿರ್ದಿಷ್ಟಪ್ರದೇಶದಲ್ಲಿ ಬೆಳೆಯುವ ಧಾನ್ಯಗಳಿಗಿಂತ 4–5ರಷ್ಟು ಹೆಚ್ಚು ಪ್ರಮಾಣದಲ್ಲಿ ತರಕಾರಿಗಳನ್ನು ಬೆಳೆಸಬಹುದು. ಇವುಗಳಲ್ಲಿ ಪಿಷ್ಟಪದಾರ್ಥದ ಜೊತೆಗೆ ಲವಣಾಂಶಗಳೂ ಸಾರಜನಿಕ ಅಂಶ ಮತ್ತು ಅತಿಮುಖ್ಯವಾದ ಜೀವಸತ್ವಗಳೂ ಹೆಚ್ಚಾಗಿರುವುದರಿಂದ ಧಾನ್ಯಗಳೊಡನೆ ಇದನ್ನು ಸೇರಿಸಿ ಸೇವಿಸಿದರೆ ದೇಹಕ್ಕೆ ಹೆಚ್ಚಿನ ಪುಷ್ಟಿ ದೊರಕುತ್ತದೆ.

ಉಪಯುಕ್ತ ಸಸ್ಯಭಾಗಗಳ ಆಧಾರವನ್ನನುಸರಿಸಿ ತರಕಾರಿಗಳನ್ನು ನಾಲ್ಕು ಮುಖ್ಯ ಪಂಗಡಗಳಾಗಿ ವಿಂಗಡಿಸಬಹುದು :

1. ಆಲೂಗೆಡ್ಡೆ, ಗೆಣಸು, ಮರಗೆಣಸು ಮುಂತಾದುವು. ಇವು ಧಾನ್ಯಗಳಂತೆಯೇ ಹೆಚ್ಚಿನ ಪಿಷ್ಟಾಂಶಗಳನ್ನು ಒದಗಿಸುತ್ತವೆ. ಇವು ಭೂಮಿಯೊಳಗಡೆ ಬೆಳೆಯುವ ಆಹಾರವಸ್ತುಗಳು. ಬೇರು ಅಥವಾ ಭೂಮಿಯೊಳಗಿನ ರೆಂಬೆಗಳಲ್ಲಿ ಆಹಾರ ಶೇಖರಿಸಲ್ಪಡುತ್ತದೆ. ಬೀಟ್‌ರೂಟ್, ಕ್ಯಾರೆಟ್, ಮೂಲಂಗಿ, ಈರುಳ್ಳಿ, ಬೆಳ್ಳುಳ್ಳಿ, ಸುವರ್ಣಗಡ್ಡೆ ಮುಂತಾದುವುಗಳೆಲ್ಲ ಉತ್ತಮ ಆಹಾರ ಒದಗಿಸುವ ತರಕಾರಿಗಳು.

2. ಕಾಂಡ ಮತ್ತು ಎಲೆಗಳನ್ನು ಆಹಾರಕ್ಕಾಗಿ ಒದಗಿಸುವ ಸಸ್ಯಗಳು. ಈ ಬಗೆಯ ಸಸ್ಯಗಳು ದೇಹದಲ್ಲಿ ಮಲಬದ್ಧತೆಗೆ ಅವಕಾಶವಿಲ್ಲದಂತೆ ನೋಡಿಕೊಳ್ಳುತ್ತವೆ. ವಿವಿಧ ಜೀವಸತ್ವಗಳನ್ನು ಒದಗಿಸುವ ವಿವಿಧ ಜಾತಿಯ ಸೊಪ್ಪುಗಳಲ್ಲಿ ಲೆಟಿಸ್ ಎಲೆಕೋಸು, ಪುದೀನ, ಬಸಳೆ ಮುಖ್ಯವಾದವು. ಇವುಗಳಲ್ಲಿ ಕ್ಯಾಲ್ಸಿಯಂ, ಕಬ್ಬಿಣ, ಸಿ ಮತ್ತು ಎ ಜೀವಸತ್ವಗಳು ಹೆಚ್ಚು.

3. ಕಾಯಿ ಮತ್ತು ಹಣ್ಣುಗಳನ್ನು ಮಾತ್ರ ಒದಗಿಸುವ ಸಸ್ಯಗಳು ಮೂರನೆಯ ವರ್ಗ. ಇವುಗಳ ಬೇರು, ಕಾಂಡ ಮತ್ತು ಎಲೆ ಉಪಯುಕ್ತವಾಗುವುದಿಲ್ಲ. ಕಾಯಿ ಮತ್ತು ಹಣ್ಣುಗಳು ಉತ್ತಮ ಆಹಾರವಾಗುತ್ತವೆ. ಬದನೆ, ಬೆಂಡೆ, ಟೊಮ್ಯಾಟೊ, ಕುಂಬಳ, ಸೋರೆ, ಪಡವಲ, ಸೌತೆ, ಹಾಗಲ, ಹೀರೆ, ಇವೆಲ್ಲವೂ ಈ ಗುಂಪಿನವು. ಸಿ, ಬಿ, ಮತ್ತು ಎ ಜೀವಸತ್ವಗಳು ಇವುಗಳಲ್ಲಿವೆ.

4. ನಾಲ್ಕನೆಯದು ಸಣ್ಣ ಪಂಗಡ. ಅವುಗಳಲ್ಲಿ ಹೂ ಮಾತ್ರ ಉಪಯುಕ್ತ. ಸಾಮಾನ್ಯವಾಗಿ ಸಮಶೀತೋಷ್ಣ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುವ ಹೂಕೋಸು ಮತ್ತು ಬಾಳೆಯ ಮೋತೆ ಈ ಗುಂಪಿಗೆ ಸೇರಿವೆ.

ಹಣ್ಣುಗಳ ವಿಭಾಗಕ್ಕೆ ವಿವಿಧ ಉಪಯುಕ್ತ ಬೀಜಗಳೂ ಸೇರುತ್ತವೆ. ಹಣ್ಣುಗಳಲ್ಲಿ ಹೊರತಿರುಳು ಅಥವಾ ಒಳಬೀಜ ಉಪಯುಕ್ತವಾಗುತ್ತವೆ. ಹಲವು ಹಣ್ಣುಗಳನ್ನು ಪೂರ್ಣವಾಗಿ ಉಪಯೋಗಿಸಲಾಗುವುದು. ಉದಾ: ಮಾವು, ಹಲಸು, ಸಪೋಟ, ಸೀಬೆ, ನಿಂಬೆ, ಕಿತ್ತಳೆ ಜಾತಿಗಳು, ಪರಂಗಿ, ಬಾಳೆ, ದ್ರಾಕ್ಷಿ, ಸೇಬು, ದಾಳಿಂಬೆ. ಇವುಗಳೆಲ್ಲಲ್ಲ ಸಿ ಜೀವಸತ್ವ ಅಧಿಕವಿರುತ್ತದೆ. ಮಾವು ಮತ್ತು ಪರಂಗಿ ಹಣ್ಣುಗಳಲ್ಲಿ ಎ ಜೀವಸತ್ವ ಇದೆ. ಹಣ್ಣುಗಳಲ್ಲಿ ಕೆಲವನ್ನು ಒಣಗಿಸಿ ಬಲುಕಾಲ ಇಟ್ಟು ಅನಂತರ ಉಪಯೋಗಿಸಬಹುದು. ಖರ್ಜೂರ ಮತ್ತು ದ್ರಾಕ್ಷಿ ಇವುಗಳಿಗೆ ಮುಖ್ಯ ಉದಾಹರಣೆ. ಇವುಗಳಲ್ಲಿ ಕಬ್ಬಿಣದ ಅಂಶ ಹೆಚ್ಚು. ಬಾಳೆಯಲ್ಲಿ ಪಿಷ್ಟಪದಾರ್ಥ ಮತ್ತು ಕೆ ಜೀವಸತ್ವ ಇರುತ್ತವೆ. ಹಣ್ಣುಗಳ ಒಳತಿರುಳು ಆಹಾರಕ್ಕೆ ಉಪಯುಕ್ತವಲ್ಲದೆ, ಕೇವಲ ಬೀಜ ಉಪಯುಕ್ತವಾಗುವುದೂ ಉಂಟು. ನೆಲಗಡಲೆ ಮತ್ತಿತರ ಎಣ್ಣೆಬೀಜಗಳು, ಬಾದಾಮಿ, ಗೋಡಂಬಿ, ಪಿಸ್ತ ಇವುಗಳಲ್ಲಿ ಕೊಬ್ಬಿನ ಅಂಶ ಹೆಚ್ಚು. ಇವು ಉತ್ತಮ ಪೋಷಕ ಆಹಾರ ವಸ್ತುಗಳು.

ಈ ಆಹಾರಸಸ್ಯಗಳಲ್ಲದೆ, ನಾವು ಪ್ರತಿನಿತ್ಯ ಸೇವಿಸುವ ಆಹಾರಕ್ಕೆ ಒಳ್ಳೆಯ ರುಚಿಯನ್ನುಂಟುಮಾಡುವ ಹಲವು ವಸ್ತುಗಳು ಆಹಾರಸಸ್ಯವರ್ಗಕ್ಕೆ ಸಂಬಂಧಿಸಿವೆ. ಮೆಣಸಿನಕಾಯಿ, ಮೆಣಸು, ಏಲಕ್ಕಿ, ದಾಲ್ಚಿನ್ನಿ, ಲವಂಗ, ಮುಂತಾದುವು ರುಚಿಪ್ರಧಾನವಾಗಿ ಉಪಯುಕ್ತವಾದರೂ ಅವುಗಳಲ್ಲಿ ಆಹಾರಾಂಶಗಳೂ ಇವೆ. ಹಸಿ ಮೆಣಸಿನಕಾಯಿಯಲ್ಲಿ ಸಿ ಜೀವಸತ್ವ ಇದೆ. ಮೆಣಸಿನಕಾಯಿ, ಕೊತ್ತಂಬರಿಯಲ್ಲಿ ಕೆರೋಟಿನ್ ಹೆಚ್ಚಾಗಿದೆ. ಅರಿಸಿನ ಮತ್ತು ಹುಣಿಸೆಯಲ್ಲಿ ಕಬ್ಬಿಣಾಂಶ ಹೆಚ್ಚಾಗಿದೆ. ಅಲ್ಲದೆ ಇಂಗು ಮತ್ತು ಬೆಳ್ಳುಳ್ಳಿಯಲ್ಲಿನ ಸತ್ವ ಜೀರ್ಣಕಾರಿಯಾದ ಸೂಕ್ಷ್ಮಜೀವಿಗಳನ್ನು ಕರುಳಿನಲ್ಲಿ ವೃದ್ಧಿಸಿ ಜೀರ್ಣಶಕ್ತಿ ಹೆಚ್ಚಿಸುತ್ತದೆ **(ನೋಡಿ– ತರಕಾರಿಗಳು ; ಹಣ್ಣುಗಳು)**. (ಜಿ.ವಿ.ಬಿ.ಎನ್.)

**ಆಹಿತಾಗ್ನಿ:** ವೇದೋಕ್ತ ಕರ್ಮಗಳನ್ನು ಮಾಡಲು ಆಧಾನ ಕ್ರಿಯೆಯಿಂದ ಸಿದ್ಧವಾದ ದಕ್ಷಿಣಾಗ್ನಿ, ಗಾರ್ಹಪತ್ಯ ಆಹವನೀಯ ಎಂಬ ಮೂರು ವಿಧ ಅಗ್ನಿಗಳನ್ನು ಇಟ್ಟುಕೊಂಡಿರುವ ಗೃಹಸ್ಥ. ಗೃಹಸ್ಥನಿಗೆ ಮಾತ್ರ ಆಹಿತಾಗ್ನಿಯಾಗಲು ಅಧಿಕಾರ. ಆದರೆ ಅವರಲ್ಲೂ ಕುರುಡ, ಕಿವುಡ, ಕುಂಟ ಮೊದಲಾದ ಅಂಗವಿಕಲರು ಅಧಿಕಾರಿಗಳಲ್ಲ.

ವಿವಾಹಾನಂತರದಲ್ಲಿ ಬ್ರಾಹ್ಮಣರಿಗೆ ವಸಂತಋತುವಿನಲ್ಲೂ ಕ್ಷತ್ರಿಯರಿಗೆ ಗ್ರೀಷ್ಮಋತುವಿನಲ್ಲೂ ವೈಶ್ಯರಿಗೆ ಶರದೃತುವಿನಲ್ಲೂ ಅಗ್ನ್ಯಾಧಾನಕ್ರಿಯೆ ವಿಹಿತವಾಗಿದೆ. ಆಧಾನವೆಂದರೆ ಅಗ್ನಿಯನ್ನು ಉತ್ಪತ್ತಿಮಾಡಿ ಮಂತ್ರಪೂರ್ವಕ ಯಜ್ಞಾಂಗಣದ ನಿರ್ದಿಷ್ಟ ಸ್ಥಾನಗಳಲ್ಲಿರುವ ಕುಂಡಗಳಲ್ಲಿ ಸ್ಥಾಪಿಸುವುದು. ಈ ಅಗ್ನಿಗಳಲ್ಲಿ ಬೆಳಗ್ಗೆ ಸಾಯಂಕಾಲಗಳಲ್ಲಿ ಅಗ್ನಿಹೋತ್ರ ಹೋಮವನ್ನು ಮಾಡಬೇಕು. ಅಗ್ನ್ಯಾಧಾನಾನಂತರ ಬರುವ ಮೊದಲನೆಯ ಹುಣ್ಣಿಮೆಯಲ್ಲಿ ದರ್ಶಪೂರ್ಣಮಾಸವೆಂಬ ಯಾಗವನ್ನು ಪ್ರಾರಂಭಿಸಬೇಕು. ಕಾಲಾನು ಗುಣವಾಗಿ ನೈಮಿತ್ತಿಕ ಮತ್ತು ಕಾಮ್ಯೇಷ್ಟಿಗಳನ್ನು ಮಾಡಬೇಕು. ಆಹಿತಾಗ್ನಿಗೆ ವಿಶೇಷವಾದ ನಿಯಮಗಳುಂಟು. ಈ ಮೂರು ಅಗ್ನಿಗಳನ್ನು ಆತ ಮಕ್ಕಳಂತೆ ಎಚ್ಚರಿಕೆಯಿಂದ ನೋಡಿಕೊಳ್ಳ ಬೇಕು. ಒಂದು ವೇಳೆ ಅನಿರೀಕ್ಷಿತವಾಗಿ ಅಗ್ನಿ ನಷ್ಟವಾದರೆ ಅದಕ್ಕಾಗಿ ವಿಶೇಷವಾದ ಪ್ರಾಯಶ್ಚಿತ್ತಾದಿಗಳನ್ನು ಮಾಡಿ ಮತ್ತೆ ಹೊಸದಾಗಿ ಅಗ್ನಿಯನ್ನು ಸ್ಥಾಪಿಸಬೇಕಾಗುತ್ತದೆ. ಅಗ್ನಿಯನ್ನು ಇಟ್ಟುಕೊಳ್ಳುವ ವಿಧಾನದಲ್ಲೂ ಸೌಕರ್ಯಕ್ಕೆ ತಕ್ಕಂತೆ ಕ್ರಮಾಂತರಗಳಿವೆ. ಹೆಂಡತಿ ಇಲ್ಲದವನಿಗೆ ಅಗ್ನಿ ಇರುವುದಿಲ್ಲ. ಆಹಿತಾಗ್ನಿ ಸತ್ತ ಬಳಿಕ ಆತ ಇಟ್ಟುಕೊಂಡಿದ್ದ ಮೂರು ಅಗ್ನಿಗಳಿಂದಲೇ ಆತನನ್ನು ದಹಿಸಬೇಕು. ಸುಟ್ಟದಿನದಿಂದ ಆಶೌಚಕ್ಕೆ ಪ್ರಾರಂಭ. ಅಂತೆಯೇ ಇನ್ನೂ ಕೆಲವು ವಿಶೇಷ ನಿಯಮಗಳಿವೆ. (ಎಸ್.ಎನ್.ಕೆ.)

**ಆಹುತಾತ್ಮರು:** ಎಂದರೆ ಧರ್ಮಕ್ಕಾಗಿ ಪ್ರಾಣ ತೆತ್ತವರು (ಮಾರ್ಟರ್ಸ್). ಇದು ಆ ಪದದ ಸಂಕುಚಿತಾರ್ಥ. ತಮ್ಮ ಧರ್ಮದ ಪರವಾಗಿ ಧೈರ್ಯವಾಗಿ ಕಷ್ಟಗಳನ್ನೂ ಹಿಂಸೆಯನ್ನೂ ಎದುರಿಸಿದವರು ಎಂಬುದು ಆ ಪದದ ವಿಶಾಲಾರ್ಥ. ಆಹುತಾತ್ಮರೆಂದೆನ್ನಿಸಿಕೊಳ್ಳಬಹುದಾದ ವರು ಕೊಲೆಗೆ ಈಡಾಗಬೇಕಾದುದಿಲ್ಲ. ಧರ್ಮದ ನಿಮಿತ್ತವಾಗಿ ಕಾರಾಗೃಹವಾಸ, ಕಶಾಪ್ರಹಾರ, ಮುಂತಾದ ಶಿಕ್ಷೆಗಳಿಗೆ ಒಳಪಟ್ಟವರೂ ಆಹುತಾತ್ಮರೆಂದೆನ್ನಿಸಿಕೊಳ್ಳಲು ಅರ್ಹರು. ಇವರನ್ನಲ್ಲದೆ ಐಹಿಕ ಸುಖಗಳನ್ನು ತೊರೆದು, ಐಶ್ವರ್ಯ, ಅಧಿಕಾರಗಳಿಗೆ ಮರುಳಾಗದೆ ಸದಾ ದೇವರ ಸೇವೆಯಲ್ಲಿ ಧರ್ಮದ ಪ್ರಗತಿಗಾಗಿ ಜೀವವನ್ನು ಸವೆಸಿದವರನ್ನೂ ಆಹುತಾತ್ಮರೆಂದು ಕ್ರೈಸ್ತರು ಭಾವಿಸುತ್ತಾರೆ. ಆಹುತಾತ್ಮರನ್ನು ಧರ್ಮವೀರರೆಂದೂ ಹುತಾತ್ಮರೆಂದೂ ಕರೆಯುವ ವಾಡಿಕೆ ಸರಿಯಾದುದೆಂದು ಒಪ್ಪಬಹುದು. ಸಾಧು ಸಂತರೆಲ್ಲರೂ ಈ ವರ್ಗಕ್ಕೆ ಸೇರಿದವರು. ಕ್ರೈಸ್ತರು ಮೊದಮೊದಲಲ್ಲಿ ಸಾಧುಸಂತರನ್ನು ಆಹುತಾತ್ಮರ ಪಟ್ಟಿಯಲ್ಲಿ ಸೇರಿಸುತ್ತಿರಲಿಲ್ಲ. ಈ ಎಲ್ಲ ವರ್ಗದವರ ಹೆಸರುಗಳನ್ನು ಹೇಳಿ ವಿಶೇಷ ಪ್ರಾರ್ಥನೆಗಳ ಕಾಲದಲ್ಲಿ ಗೌರವಿಸುವ ಮತ್ತು ಅಂಥವರ ಸಮಾಧಿಗಳ ಮೇಲೆ ಅರ್ಘ್ಯ, ಪಾನೀಯ, ದೀಪಧೂಪ ಮುಂತಾದ ಅರ್ಪಣೆಗಳನ್ನು ಸಮರ್ಪಿಸುವ ಸಂಪ್ರದಾಯ ಕ್ರೈಸ್ತರಲ್ಲಿ ಪ್ರ.ಶ. 4ನೆಯ ಶತಮಾನದಿಂದ ಆಚೆನ ಕಾಲದಲ್ಲಿ ಪ್ರಚಾರದಲ್ಲಿತ್ತು. ಈ ಸಂಪ್ರದಾಯಕ್ಕೆ ಮುಖ್ಯವಾಗಿ ಸಿರಿಯದ ಚರ್ಚು ಪ್ರೇರಕವಾಗಿತ್ತು. ಆಮೇಲೆ ಈ ವಿಧವಾಗಿ ಸಂತರಿಗೆ ಮತ್ತು ಆಹುತಾತ್ಮರಿಗೆ ಭಕ್ತಿಪ್ರದರ್ಶಿಸು ವುದು ಕ್ರೈಸ್ತಧರ್ಮ ವಿರುದ್ಧವೆಂಬ ಭಾವನೆ ಬೆಳೆದಂತೆಲ್ಲ ಅದು ಅನಾಗರಿಕ ಸಂಪ್ರದಾಯವೆಂಬ ಚಳವಳಿ ಪ್ರಾರಂಭವಾಯಿತು.

ಆಹುತಾತ್ಮ ಭಾವನೆ ಎಲ್ಲ ಧರ್ಮದವರಲ್ಲೂ ಒಂದೇ ಆಗಿರುವುದಿಲ್ಲ. ಜರತುಷ್ಟ್ರ ಧರ್ಮದವರು ಧರ್ಮಕ್ಕಾಗಿ ಪ್ರಾಣತೆತ್ತವರನ್ನು ಮಾತ್ರ ಆಹುತಾತ್ಮರೆಂದು ಭಾವಿಸುತ್ತಾರೆ. ಅಷ್ಟೇ ಅಲ್ಲ, ಅವರಿಗೆ ಉಳಿದೆಲ್ಲ ಧರ್ಮದವರು ತೋರಿಸುವ ಭಕ್ತಿಗಿಂತ ವಿಶೇಷ ಭಕ್ತಿಯನ್ನು ತೋರಿಸುತ್ತಾರೆ. ಜರತುಷ್ಟ್ರ ಯಜ್ಞದಲ್ಲಿ ತೊಡಗಿದ್ದಾಗ ಪರಧರ್ಮೀಯರಿಂದ ಕೊಲೆಯಾದುದೇ ಈ ವೈಶಿಷ್ಟ್ಯಕ್ಕೆ ಕಾರಣ.

ಆಹುತಾತ್ಮರ ವಿಚಾರವಾಗಿ ಮುಸ್ಲಿಮರ ಭಾವನೆ ಬೇರೆ. ಪರಧರ್ಮದವರೊಡನೆ ಧರ್ಮಯುದ್ಧದಲ್ಲಿ (ಜಿಹಾದ್) ಭಾಗವಹಿಸಿ ಮಡಿದವರನ್ನು ಮಾತ್ರ ಆಹುತಾತ್ಮರೆಂದು ಇವರು ಭಾವಿಸುತ್ತಾರೆ. ಆದ್ದರಿಂದ ಆಹುತಾತ್ಮಸೂಚಕವಾದ ಷಾಹಿದ್ ಎಂಬ ಅರಬ್ಬೀ ಮಾತಿನ ಅರ್ಥ ಇದೇ. ಹಿಂದೂಗಳೊಡನೆ ಹೋರಾಡಿದ ಪ್ರದೇಶಗಳನ್ನು ಗಂಜ್‌ಷಾಹಿದಾನ್ ಎಂದರೆ ಆಹುತಾತ್ಮರ ಭಂಡಾರಗಳೆಂದು ಕರೆದಿರುತ್ತಾರೆ. ಹಾಗೆಯೇ ರಜಪೂತರು, ಸಿಖ್ಖರು ಕೂಡ ಮುಸ್ಲಿಮರೊಡನೆ ಯುದ್ಧದಲ್ಲಿ ಹೋರಾಡಿ ಸತ್ತವನನ್ನು ಆಹುತಾತ್ಮನೆಂದು ಪೂಜಿಸುತ್ತಾರೆ. ಮದುವಣಿಗ ಹಾಗೆ ಸತ್ತ ಧರ್ಮಾತ್ಮರ ಸಮಾಧಿಯ ಸುತ್ತ ಪ್ರದಕ್ಷಿಣೆ ಮಾಡಿದ ಹೊರತು ಮದುವೆಶಾಸ್ತ್ರ ಪೂರ್ಣವಾಗುವುದಿಲ್ಲ. ಹಿಂದೂಗಳಲ್ಲಿ ಮುಸ್ಲಿಮರಂತೆ ಧರ್ಮಸ್ಥಾಪನೆಗಾಗಿ ಯುದ್ಧಹೂಡುವುದು ತುಂಬ ಅಪೂರ್ವ. ಮುಸಲ್ಮಾನರು ಭಾರತಕ್ಕೆ ಬರುವ ಮುನ್ನ ಧರ್ಮಕ್ಕಾಗಿ ಯುದ್ಧಹೂಡಿದ ಯಾವೊಂದು ಪ್ರಸಂಗವೂ ಚರಿತ್ರೆಯಲ್ಲಿ ವರ್ಣಿತವಾಗಿಲ್ಲ. ಭಾರತಕ್ಕೆ ಮುಸ್ಲಿಮರು ಬಂದ ಅನಂತರ ದಶನಾಮಿ ಸಂಪ್ರದಾಯದ ಸಂತರು ಮತ್ತು ಸನ್ಯಾಸಿಗಳು ತಮ್ಮ ಧರ್ಮರಕ್ಷಣೆಗಾಗಿ ಹೋರಾಡಿದ ಪ್ರಸಂಗಗಳು ಅನೇಕವಿವೆ. ಸಿಪಾಯಿದಂಗೆಯ ಸಮಯದಲ್ಲೂ ದಶನಾಮಿ ಸಂನ್ಯಾಸಿಗಳು ಧರ್ಮಯುದ್ಧದಲ್ಲಿ ಪಾತ್ರವಹಿಸಿದರು. ಈ ಶತಮಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾಮಿಶ್ರದ್ಧಾನಂದರು ಪ್ರಾಣ ಒಪ್ಪಿಸಿದ್ದು ಭಾರತೀಯರ ನೆನಪಿನಲ್ಲಿ ಚಿರವಾಗಿ ಉಳಿದಿದೆ.

ಧರ್ಮದ ವಿಚಾರದಲ್ಲಿನ ಭಿನ್ನಾಭಿಪ್ರಾಯಗಳನ್ನು ಭಿನ್ನಸಂಪ್ರದಾಯಗಳನ್ನು ಗೌರವದಿಂದ, ಸಹನೆಯಿಂದ ಕಾಣುವುದು ತುಂಬ ಹಿಂದಿನ ಕಾಲದಿಂದ ನಡೆದುಕೊಂಡು ಬಂದಿರುವ ಸದ್ಭಾವನೆ. ಬೌದ್ಧರು, ಜೈನರು, ವೈದಿಕರು ಒಂದು ಸಮಯದವರು ಇನ್ನೊಂದು ಸಮಯದವರ ಮೇಲೆ ವಾಗ್ಯುದ್ಧ ನಡೆಸಿದ ಪ್ರಸಂಗಗಳು ಉಲ್ಲೇಖಿತವಾಗಿವೆಯೇ ವಿನಾ ಒಂದು ಸಮಯದವರು ಪರಸಮಯದವರ ಮೇಲೆ ಎರಗಿ ಕೊಂದದ್ದು ಉಲ್ಲೇಖಿತವಾಗಿಲ್ಲ ವೆಂದು ಎನ್‌ಸೈಕ್ಲೋಪೀಡಿಯಾ ಆಫ್ ರಿಲಿಜನ್ ಅಂಡ್ ಎಥಿಕ್ಸ್‌ನಲ್ಲಿ ಸೇಂಟ್ಸ್ ಅಂಡ್ ಮಾರ್ಟರ್ಸ್ ಎಂಬ ಲೇಖನವನ್ನು ಬರೆದಿರುವ ಇ.ಜೆ. ಥಾಮಸ್ ಸ್ಪಷ್ಟಪಡಿಸಿದ್ದಾನೆ. ಆದರೆ ಬೌದ್ಧ ಜಾತಕಕಥೆಗಳಲ್ಲಿ (ಜಾತಕ 313) ಬೋಧಿಸತ್ತ್ವ ಧರ್ಮವನ್ನು ಬೋಧಿಸಿದ್ದಕ್ಕಾಗಿ ಅವನನ್ನು ದೊರೆ ಸಿಗಿದು ಹಾಕಿಸಿದನೆಂದು ವರ್ಣಿತವಾಗಿದೆ. ಬುದ್ಧ, ಮಹಾವೀರರು, ವೈದಿಕಧರ್ಮಕ್ಕೆ ಪ್ರತಿಯಾಗಿ ಬೋಧಿಸಿದರೂ ವೈದಿಕರು ಯಾರೂ ಅವರನ್ನು ಕೊಲ್ಲಲು ಪ್ರಯತ್ನಿಸಲಿಲ್ಲ. ಅವರು ಒಂದೆರಡು ಸಲ ಅಪಾಯಕ್ಕೆ ಗುರಿಯಾದದ್ದು ತಮ್ಮ ಶಿಷ್ಯರಿಂದಲೇ. ಬುದ್ಧನೂ ಮಹಾವೀರನೂ ಎಂಬತ್ತರ ಮುಪ್ಪಿನವರೆಗೆ ಬದುಕಿ ನಿರ್ವಾಣ ಹೊಂದಿದ್ದು ಭಾರತದ ಸಹನಾನೀತಿಗೆ ದೃಷ್ಟಾಂತಗಳು.

ಒಂದು ಧ್ಯೇಯಕ್ಕಾಗಿ ಜೀವಿಸಿ ಶ್ರಮಿಸಿ, ವಿರೋಧಿಗಳು ಕೊಟ್ಟ ಎಲ್ಲ ಹಿಂಸೆಯನ್ನೂ ಸಹಿಸಿ, ಅದಕ್ಕಾಗಿಯೇ ಪ್ರಾಣಕೊಟ್ಟವರಲ್ಲಿ ಅತಿ ಹಿಂದಿನವನೆಂದರೆ ಸಾಕ್ರಟೀಸ್, ಅತಿ ನವೀನರೆಂದರೆ ಮಹಾತ್ಮಗಾಂಧಿ, ಮಾರ್ಟಿನ್ ಲೂಥರ್ ಕಿಂಗ್. (ಜಿ.ಎಚ್.)

**ಆಹುತಿ:** ಇದೊಂದು ಸಂಸ್ಕೃತ ಪದ. ಇದರ ಅರ್ಥ ಕರೆಯುವುದು ಅಥವಾ ಆಹ್ವಾನಿಸುವುದು ಎಂದು. ಯಾವುದಾದರೂ ಪೂಜ್ಯ ಶಕ್ತಿಯನ್ನು ನಾವು ಆಹ್ವಾನಿಸುವುದು ಬಹುಶಃ ಮುಖ್ಯವಾಗಿ ಮೂರು ಉದ್ದೇಶಗಳಿಂದ: 1. ಪವಿತ್ರವಾದುದರೊಡನೆ ಆಪ್ತ ಸಂಬಂಧ (ಕಮ್ಯೂನಿಯನ್) ಏರ್ಪಡಿಸಿಕೊಳ್ಳುವುದು ಅಥವಾ ಒಂದಾಗುವುದು. 2. ಒಪ್ಪಂದ ಮಾಡಿಕೊಳ್ಳುವುದು (ಕನ್ಸಿಲಿಯೇಷನ್)–ಅಂದರೆ ನಾನು ನಿನಗೆ ಇದನ್ನು ಅರ್ಪಿಸುತ್ತೇನೆ, ಬದಲಾಗಿ ನನಗೆ ನನ್ನ ಬಯಕೆಯನ್ನು ಸಲ್ಲಿಸು ಅಥವಾ ಕೇಡನ್ನು ನಿವಾರಿಸು ಎಂದು ಬೇಡಿಕೊಳ್ಳುವುದು. 3. ದೈವದ ಒಳ್ಳೆಯ ಸ್ವಭಾವವನ್ನು ಮೆಚ್ಚಿ ಸ್ವಪ್ರೇರಣೆಯಿಂದ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ತನಗೆ ಇಷ್ಟವಾದುದನ್ನು ದೇವರಿಗೆ ಅರ್ಪಿಸುವುದು. ಮೊದಲ ಎರಡು ಉದ್ದೇಶಗಳಂತೆ ಪೂಜ್ಯವಾದ ಶಕ್ತಿಗೆ ಅರ್ಪಿಸಿದ ಬಲಿ ಎಂಬ ಅರ್ಥದಲ್ಲಿ ಮಾತ್ರ ಈ ಪದ ಹೆಚ್ಚು ಉಪಯೋಗದಲ್ಲಿದೆ. ಮೂರನೆ ಬಗೆಯ ಅರ್ಪಣೆ ಅನಾಗರಿಕ ಮತಗಳಲ್ಲಿ ಅಷ್ಟಾಗಿ ಕಾಣದಿದ್ದರೂ ಸಂಪೂರ್ಣವಾಗಿ ಇಲ್ಲವೇ ಇಲ್ಲವೆಂದು ಹೇಳಲಾಗುವುದಿಲ್ಲ. ಅನಾಗರಿಕ ಮತದವರಲ್ಲಿ ವಿಶೇಷವಾಗಿ ನರಮೇಧ ಮತ್ತು ಪಶುಮೇಧ ರೂಪದಲ್ಲಿದ್ದರೂ ಹಣ್ಣು, ಕಾಯಿ, ಕಾಳು ಮುಂತಾದುವುಗಳ ಅರ್ಪಣೆ ಇಲ್ಲದಿಲ್ಲ. ಈ ಅರ್ಪಣೆಗಳೆಲ್ಲ ದ್ರವ್ಯಯಜ್ಞಗಳು. ಯಾವುದೊಂದು ವಸ್ತುವನ್ನೂ ಅರ್ಪಿಸದೆ ಯಾವುದೊಂದು ಪ್ರತಿಫಲವನ್ನೂ ಅಪೇಕ್ಷಿಸದೆ ಕೇವಲ ಮಾನಸಿಕವಾದ ಆತ್ಮಾರ್ಪಣೆ ಅಥವಾ ಆತ್ಮಯಜ್ಞದ ಮೂಲಕ ಪವಿತ್ರಭಾವನೆಯನ್ನು ಅಭಿವ್ಯಕ್ತಿಗೊಳಿಸುವುದು ತುಂಬ ಮೇಲುಮಟ್ಟದ ಆಹುತಿ. ಧ್ಯಾನ, ಪ್ರಾರ್ಥನೆ, ಸ್ವಾರ್ಥತ್ಯಾಗ, ಮಾನಸಿಕ ನೈರ್ಮಲ್ಯ–ಇವುಗಳೇ ಈ ಆತ್ಮಯಜ್ಞದ ಮುಖ್ಯ ರೂಪಗಳು. ದ್ರವ್ಯಯಜ್ಞವಿಲ್ಲದೆ ಪ್ರಾರ್ಥನೆ ಇರಬಹುದು. ಆದರೆ ಪ್ರಾರ್ಥನೆ ಇಲ್ಲದೆ ಯಾವ ದ್ರವ್ಯಯಜ್ಞವೂ ಇರುವುದಿಲ್ಲವಾದುದರಿಂದ ಮಾನಸಿಕ ಅಂಶ ಎಲ್ಲ ರೀತಿಯ ಪವಿತ್ರಭಾವನೆಯ ಅಭಿವ್ಯಕ್ತಿಯಲ್ಲೂ ಲೇಶವಾದರೂ ಇದ್ದೇ ಇರುತ್ತದೆ. ಜನರ ಮತಭಾವನೆಗಳು ಕೆಲವು ಮಟ್ಟಗಳಲ್ಲಿ ಒಂದು ಅಂಶವನ್ನು ಹೆಚ್ಚಾಗಿ ಪಡೆಯಬಹುದು. ಇನ್ನೊಂದು ಅಂಶವನ್ನು ಕಡಿಮೆ ಪ್ರಮಾಣದಲ್ಲಿ ಪಡೆದಿರಬಹುದು. ಆದರೂ ಮತದ ಎಲ್ಲ ಹಂತಗಳಲ್ಲೂ ಆಧ್ಯಾತ್ಮಿಕ ಅಂಶ ಇದ್ದೇ ಇರುತ್ತದೆ. ಕೆಲವು ಕ್ರೈಸ್ತ ಗುಂಪಿನವರು ದ್ರವ್ಯಯಜ್ಞವನ್ನು ಸಂಪೂರ್ಣವಾಗಿ ನಿಷೇಧಿಸಿದ್ದರೂ ಇನ್ನು ಕೆಲವು ಕ್ರೈಸ್ತ ಗುಂಪುಗಳಲ್ಲಿ ದ್ರವ್ಯಯಜ್ಞ ಸ್ವಲ್ಪ ಮಟ್ಟಿಗಾದರೂ ಇದ್ದೇ ಇದೆ. ಇನ್ನು ಯಜ್ಞ ಸ್ವರೂಪ ಪ್ರಾಕೃತರ ಮತದಲ್ಲಿ ಮತ್ತು ಕೆಲವು ಮುಖ್ಯವಾದ ನಾಗರಿಕರ ಮತಗಳಲ್ಲಿ ಯಾವ ಬಗೆಯಾಗಿದೆ ಎಂಬುದನ್ನು ಸ್ಥೂಲವಾಗಿ ಪರಿಚಯ ಮಾಡಿಕೊಳ್ಳಬಹುದು.

ಪ್ರಾಕೃತ ಜನ ಸಾಮಾನ್ಯವಾಗಿ ಒಂಟಿಯಾಗಿ ಬಲಿ ಅರ್ಪಿಸುವುದಕ್ಕಿಂತ ಗುಂಪಿನಲ್ಲಿ ಅರ್ಪಿಸುವುದು ವಾಡಿಕೆ. ಅವರು ಕುಲದೇವತೆಗೆ ಬಲಿ ಅರ್ಪಿಸಬಹುದು ಅಥವಾ ಸತ್ತವನ ಪ್ರೇತಕ್ಕೆ ಅರ್ಪಿಸಬಹುದು. ಅರ್ಪಣೆಯ ವಸ್ತು ಕೆಲವು ವೇಳೆ ಒಬ್ಬ ಮನುಷ್ಯನಾಗಬಹುದು, ಸಾಮಾನ್ಯವಾಗಿ ಒಂದು ಕುರಿ, ಮೇಕೆ ಅಥವಾ ಪ್ರಾಣಿಯಾಗಬಹುದು. ವ್ಯವಸಾಯದ ಮಟ್ಟವನ್ನು ಮುಟ್ಟಿದ ಪ್ರಾಕ್ತನರು ತಾವು ಬೆಳೆದ ಕಾಳು ಹಣ್ಣು ಕಾಯಿಗಳನ್ನು ಅರ್ಪಿಸಬಹುದು. ಹೀಗೆ ಅರ್ಪಿಸಿದುದರಲ್ಲಿ ಸ್ವಲ್ಪಭಾಗವನ್ನು ಯಜ್ಞ ಮಾಡಿದವರು ಪ್ರಸಾದವಾಗಿ ಸೇವಿಸಿ ದೈವದ ಶಕ್ತಿ ತಮ್ಮೊಳಗೆ ಪ್ರವೇಶಿಸಿ ತಮಗೆ ಶಕ್ತಿ ಕೊಡುತ್ತದೆ ಅಥವಾ ತಮ್ಮಲ್ಲಿರುವ ಕುಂದನ್ನು ನಿವಾರಿಸುತ್ತದೆ ಎಂದು ಸಮಾಧಾನ ಪಡೆಯುತ್ತಾರೆ. ಈ ಉದ್ದೇಶದಿಂದಲ್ಲದೆ ಕೆಲವು ವೇಳೆ ತಮ್ಮ ಆಡಿನ, ಕುರಿಯ ಅಥವಾ ಎಮ್ಮೆಗಳ ಮಂದೆ ವೃದ್ಧಿಯಾಗಲೆಂದು ಆಯಾ ಪ್ರಾಣಿಯನ್ನು ದೈವಕ್ಕೆ ಬಲಿ ಕೊಡುವುದೂ ಉಂಟು. ಸತ್ತವರ ಸಮಾಧಿಯಲ್ಲಿ ವಿವಿಧ ಆಹಾರಗಳನ್ನು ಇಡುವುದಲ್ಲದೆ ಜೊತೆಗೆ ಕೆಲವುವೇಳೆ ಅವರ ಕೊಡಲಿ, ಗದೆ ಮುಂತಾದ ಆಯುಧಗಳನ್ನೂ ಇಡುವುದುಂಟು. ಕೆಲವು ಅನಾಗರಿಕ ಗುಂಪಿನವರು ಸತ್ತವರ ಶಕ್ತಿ ತಮ್ಮೊಳಗೆ ಪ್ರವೇಶಿಸಲೆಂದು ಸತ್ತವರ ಶರೀರದಲ್ಲಿ ಸ್ವಲ್ಪ ಭಾಗವನ್ನು ತಿನ್ನುತ್ತಾರೆ. ಅಥವಾ ತಮ್ಮ ದೇಹದ ರಕ್ತವನ್ನು ಶವದೊಳಕ್ಕೆ ಸೇರಿಸುತ್ತಾರೆ. ವೇದದ ಕಾಲದ ಹಿಂದೂಗಳು ತಾವು ಮಾಡಬೇಕಾದ ಕರ್ಮಗಳನ್ನು ನಿತ್ಯ ಮತ್ತು ನೈಮಿತ್ತಿಕ ಎಂದು ಎರಡು ಬಗೆಯಾಗಿ ವಿಂಗಡಿಸಿರುತ್ತಾರೆ. ನಿತ್ಯ ಕರ್ಮಗಳು ಪ್ರತಿದಿನವೂ ಪಕ್ಷಗಳಲ್ಲಿ, ಪುಣ್ಯಕಾಲಗಳಲ್ಲಿ ಅಗತ್ಯವಾಗಿ ಮಾಡಬೇಕಾದುವು. ನೈಮಿತ್ತಿಕ ಕರ್ಮಗಳು ಇಷ್ಟಗಳ

ಪೂರೈಕೆಗಾಗಿ ಮಾಡತಕ್ಕ ಐಚ್ಛಿಕ ಕರ್ಮಗಳು. ಪ್ರಾಯಶ್ಚಿತ್ತ ಕರ್ಮಗಳು ಇವೆರಡರ ಅಂಗಗಳಾಗಿ ಕರ್ಮಗಳಲ್ಲಿನ ಲೋಪದೋಷ ನಿವಾರಣೆಗಾಗಿ ಮಾಡತಕ್ಕವು. ಅಗ್ನಿಹೋತ್ರ ಸಂಧ್ಯಾವಂದನೆ ನಿತ್ಯಕರ್ಮಗಳು. ಇವುಗಳಲ್ಲಿ ಆಹುತಿಗಾಗಿ ಅರ್ಪಿಸುವ ವಸ್ತುಗಳು ಯವ, ಹಾಲು, ಮೊಸರು, ಜೇನುತುಪ್ಪ, ತುಪ್ಪ ಮುಂತಾದುವು. ಅರ್ಘ್ಯಕ್ಕಾಗಿ ಉಪಯೋಗಿಸುವ ವಸ್ತು ನೀರು. ಪಿತೃಗಳಿಗಾಗಿ ಅರ್ಪಿಸುವುದು ತಿಲೋದಕ ಮತ್ತು ಪಿಂಡ. ನೈಮಿತ್ತಿಕ ಕರ್ಮಗಳು ಯಜ್ಞಯಾಗಗಳು ಮೊದಲಾದುವುಗಳ ಉದ್ದೇಶ ಸ್ವರ್ಗಕಾಮ, ಪುತ್ರಕಾಮ, ಐಶ್ವರ್ಯಕಾಮ, ರಾಷ್ಟ್ರದ ಸ್ಥಿರತೆ ಇತ್ಯಾದಿ. ಅಶ್ವಮೇಧ, ನರಮೇಧಗಳಲ್ಲಿ ಪ್ರಾಣಿಗಳನ್ನು ಬಲಿಕೊಡುವುದು ವಾಡಿಕೆಯಾಗಿತ್ತು. ಕಾಲಕ್ರಮದಲ್ಲಿ ನರಮೇಧ ನಿಂತುಹೋಯಿತು. ಪ್ರಾಣಿಗಳನ್ನು ಬಲಿ ಕೊಡುವ ಸಂಪ್ರದಾಯವೂ ಕಡಿಮೆಯಾಗುತ್ತಿದೆ.

ವೇದದ ಕಾಲದಿಂದ ಈಚೆಗೆ ಬಹುಶಃ ಜೀವದಯೆಯನ್ನೇ ಮುಖ್ಯ ಧರ್ಮವಾಗಿ ಅನುಸರಿಸಿದ ಬೌದ್ಧ ಮತ್ತು ಜೈನ ಧರ್ಮಗಳು ಹುಟ್ಟಿದ ಮೇಲೆ, ದೇವರ ಪ್ರೀತಿಯೇ ಪರಮಧರ್ಮವಾಗಿ ಉಳ್ಳ ವೈಷ್ಣವಮತ ಬೆಳೆದ ಅನಂತರ ವೈದಿಕರ ಯಜ್ಞಭಾವನೆಯಲ್ಲಿ ಪರಿವರ್ತನೆಯಾಗಿದೆ. ಬೌದ್ಧ, ಜೈನ ಧರ್ಮಗಳು ದ್ರವ್ಯಯಜ್ಞವನ್ನು ತ್ಯಜಿಸಿ ಆತ್ಮಯಜ್ಞವನ್ನು ಅನುಸರಿಸಿವೆ. ಭಾಗವತ ಪಂಥದ ಭಗವದ್ಗೀತೆ ದ್ರವ್ಯ ಯಜ್ಞಕ್ಕಿಂತ ಆತ್ಮಯಜ್ಞವನ್ನು ಪುರಸ್ಕರಿಸಿದೆ. ಶುದ್ಧಮನಸ್ಸಿನಿಂದ ಶ್ರದ್ಧಾಭಕ್ತಿಯಿಂದ ಮಾಡಿದ ಆತ್ಮಾರ್ಪಣೆ ವಿಷ್ಣುವಿಗೆ ಮೆಚ್ಚಿಕೆಯಾದ ಯಜ್ಞ. ಶಂಕರಾಚಾರ್ಯರು ಕರ್ಮಕ್ಕಿಂತ ಜ್ಞಾನೋಪಾಸನೆ ಮೇಲೆಂದು ಬೋಧಿಸಿದ ಮೇಲೆ ಯಜ್ಞಕರ್ಮಗಳಿಗೆ ಪ್ರಾಶಸ್ತ್ಯ ಕಡಿಮೆಯಾಯಿತು. ನಿಷ್ಕಾಮಸೇವೆಯೇ ಪರಮ ಪವಿತ್ರವಾದ ಯಜ್ಞವೆಂದು ಸಾರಿದ. ಮಹಾತ್ಮ ಗಾಂಧಿಯವರ ಪ್ರಭಾವದಿಂದ ಕಾಳಿ ಮುಂತಾದ ದೇವತೆಗಳಿಗೆ ನಡೆಸುತ್ತಿದ್ದ ಪಶುಮೇಧ ಬಹಿಷ್ಕೃತವಾಗುತ್ತಿದೆ. ಹಿಂದೂಗಳಲ್ಲಿ ಕೆಲವರು ಮಾಟಕ್ಕಾಗಿ ಕೋಳಿ ಮುಂತಾದ ಪ್ರಾಣಿಗಳನ್ನು ಕ್ಷುದ್ರ ಶಕ್ತಿಗಳಿಗೆ ಆಹುತಿ ಕೊಡುತ್ತಾರೆ. ಸತ್ಸಸಂಪ್ರದಾಯದವರು ಇದನ್ನು ನಿಷೇಧಿಸಿರುತ್ತಾರೆ.

ಮುಸ್ಲಿಮರಲ್ಲಿ ಯಜ್ಞಕಾರ್ಯವಿಲ್ಲ. ಪಾಪ ಮಾಡಿದವನಿಗೆ ಪಾಪವಿಮೋಚನೆಗಾಗಿ ಅವರು ಪಶುಯಜ್ಞವನ್ನು ನಿಯಮಿಸಿಲ್ಲ. ಆದರೆ ಅವರಲ್ಲಿ ಪಾಪ ಮಾಡಿದವ ಪ್ರಾಯಶ್ಚಿತ್ತಕ್ಕಾಗಿ ಹತ್ತು ಜನರಿಗೆ ಊಟ ವಸ್ತ್ರಗಳನ್ನು ಕೊಡಬೇಕು, ಅಥವಾ ಒಬ್ಬ ಗುಲಾಮನಿಗೆ ಸ್ವಾತಂತ್ರ್ಯವನ್ನು ಕೊಡಬೇಕು. ಅನ್ನವಸ್ತ್ರಗಳನ್ನು ಕೊಡಲು ಚೈತನ್ಯವಿಲ್ಲದವ ಮೂರು ದಿವಸಗಳ ಪರ್ಯಂತ ಉಪವಾಸ ಆಚರಿಸಬೇಕೆಂಬ ನಿಯಮವಿದೆ. ಯಾತ್ರೆಯ ಉಡುಪಿನಲ್ಲಿರುವಾತ ಬೇಟೆಯಾಡಿ ಯಾವುದಾದರೂ ಪ್ರಾಣಿಯನ್ನು ಕೊಂದರೆ ಅದಕ್ಕೆ ಪ್ರತಿಯಾಗಿ ತನ್ನ ಮನೆಯಲ್ಲಿರುವ ಒಂದು ಕುರಿಯನ್ನೋ ಪಾರಿವಾಳವನ್ನೋ ಕೊಂದು ಕಾಬಾದಲ್ಲಿ ಅರ್ಪಿಸಬೇಕು. ಹೀಗೆ ಮಾಡಬೇಕೆಂದು ವಿಧಿಸಿರುವುದು ಪಾಪವಿಮೋಚನೆಗಾಗಿ ಅಲ್ಲ; ಕಾನೂನನ್ನು ಮುರಿದದ್ದಕ್ಕಾಗಿ. ಪಾಪವಿಮೋಚನೆಗೆ ಇಸ್ಲಾಂ ಮತ ವಿಧಾಯ ಮಾಡಿರುವುದು ಮುಖ್ಯವಾಗಿ ಪಶ್ಚಾತ್ತಾಪ. ಆದರೂ ಕೆಲವು ಮುಸ್ಲಿಮರು ಹಿಂದಿನಿಂದ ಜನರಲ್ಲಿ ರೂಢಿಯಲ್ಲಿದ್ದ ಹರಕೆಯ ಸಂಪ್ರದಾಯವನ್ನನುಸರಿಸಿ ಒಂದು ಮಗುವಾದಾಗ ಅಥವಾ ಒಳ್ಳೆಯದಾದಾಗ ಒಂದು ಕುರಿಯನ್ನು ಬಲಿ ಕೊಡುವುದುಂಟು. ಅರಬ್ಬರು ಮೆಕ್ಕದ ಹತ್ತಿರವಿರುವ ಮದೀನ ಎಂಬ ಸ್ಥಳದಲ್ಲಿ ಕುರಿಗಳನ್ನು ವರ್ಷಕ್ಕೊಮ್ಮೆ ಬಲಿ ಕೊಡುತ್ತಾರೆ. ಇದು ಕೂಡ ಅರಬ್ಬಿಯ ಪೂರ್ವಾಚಾರವೇ ಹೊರತು ತಮ್ಮ ಮತಸಂಪ್ರದಾಯವೆಂದು ಮುಸ್ಲಿಮರು ಭಾವಿಸುವುದಿಲ್ಲ. ಇದು ಬಡಬಗ್ಗರಿಗಾಗಿ ಏರ್ಪಡಿಸಿದ ಕೇವಲ ಖಾಸಗಿ ಸತ್ಕಾರ. ಮುಸ್ಲಿಮರು ಪ್ರಾಣಿಗಳನ್ನು ಆಹಾರಕ್ಕಾಗಿ ಕೊಲ್ಲುವುದು ಮತೀಯ ಸಂಸ್ಕಾರವಲ್ಲ. ಆದರೂ ಪ್ರಾಣಿಗೆ ಹೆಚ್ಚು ನೋವಾಗದಂತೆ ಅದನ್ನು ಕೊಲ್ಲಬೇಕೆಂದು ಇಸ್ಲಾಂ ಮತ ನಿಯಮಿಸಿದೆ. ಮುಸ್ಲಿಮರು ವಧಿಸಿದ ಪ್ರಾಣಿಯ ಮಾಂಸವನ್ನು ಮಾತ್ರ ತಿನ್ನುತ್ತಾರೆ; ಅದರ ರಕ್ತವನ್ನು ಬಿಸಾಡುತ್ತಾರೆ.

ಕ್ರೈಸ್ತಧರ್ಮ ಹುಟ್ಟಿದ್ದು ಯಹೂದಿ ಮತವನ್ನು ನಾಶಗೊಳಿಸುವುದಕ್ಕಲ್ಲ, ಅದನ್ನು ಪರಿಪೂರ್ಣಗೊಳಿಸುವುದಕ್ಕಾಗಿ. ದೇವರ ಕಾನೂನನ್ನು ಪಾಲಿಸಿ ಅದಕ್ಕೆ ವಿಧೇಯವಾಗಿ ಹೃತ್ಪೂರ್ವಕವಾಗಿ ನಡೆಯುವುದನ್ನು ಯಹೂದಿ ಮತ ಒತ್ತಿ ಹೇಳುತ್ತದೆ. ಕ್ರಿಸ್ತ ಆ ಅಂಶವನ್ನು ಪೂರ್ಣವಾಗಿ ಒಪ್ಪಿ ಅದನ್ನೇ ಕ್ರೈಸ್ತಧರ್ಮದ ಮೂಲಭೂತ ತತ್ತ್ವವಾಗಿ ಪ್ರತಿಪಾದಿಸಿದ್ದಾನೆ. ಬಾಹ್ಯ ಸಂಸ್ಕಾರಗಳು ಗೌಣವೆಂದೂ ಆಂತರಿಕ ಭಕ್ತಿಯೇ ಪ್ರಧಾನವೆಂದೂ ಒತ್ತಿ ಹೇಳಿದ್ದಾನೆ. ಕಾಲಕ್ರಮದಲ್ಲಿ ಈ ಬಾಹ್ಯ ಸಂಸ್ಕಾರಗಳು, ಯಜ್ಞಗಳು ಅಳಿದು ಕೃತಜ್ಞತಾಪೂರ್ವಕವಾದ ವಂದನಾರ್ಪಣೆ ಮತ್ತು ಪ್ರಾರ್ಥನೆ ಅಳಿಯದೆ ಉಳಿದುಕೊಳ್ಳುತ್ತವೆ. ಯಹೂದ್ಯರ ದೇವಾಲಯದಲ್ಲಿ ಬಲಿಪೀಠವಿರುತ್ತದೆ. ಆದರೆ ಕ್ರೈಸ್ತರ ಚರ್ಚಿನಲ್ಲಿ ಇರುವುದಿಲ್ಲ. ಚರ್ಚು ಪ್ರಾರ್ಥನಾಮಂದಿರವೇ ಹೊರತು ಯಜ್ಞಮಂದಿರವಲ್ಲ. ಪ್ರಾರ್ಥನೆಯೇ ಅವರು ಮಾಡುವ ಯಜ್ಞ. ದೇವರೊಂದಿಗೆ ತಮ್ಮ ಹೃದಯವನ್ನು ಕೂಡಿಸುವುದೇ ಪವಿತ್ರವಾದ ಪೂಜೆ. ಕ್ರೈಸ್ತ ದೇವರಿಗೆ ರಕ್ತದ ಅರ್ಪಣೆ ಮತ್ತು ಧೂಪಾರಾಧನೆಗಳ ಅಗತ್ಯವಿಲ್ಲ. ಊಟ ಮಾಡುವಾಗ ಕೃತಜ್ಞತಾಪೂರ್ವಕವಾಗಿ ದೇವರನ್ನು ವಂದಿಸಿದರೆ ಸಾಕು.

ಕಾಲಕ್ರಮದಲ್ಲಿ ಸಂತರ ವಿಗ್ರಹಗಳನ್ನು ಪೂಜೆಮಾಡಿ, ಧೂಪದೀಪಗಳನ್ನೂ ಅರ್ಘ್ಯಪಾನೀಯಗಳನ್ನೂ ಅರ್ಪಿಸುವ ಸಂಸ್ಕಾರ ರೂಢಿಗೆ ಬಂತು. ಇತ್ತೀಚೆಗೆ ಸಂತರಿಗೆ ಪೂಜೆ ಸಲ್ಲಿಸುವುದು ಕ್ರಿಸ್ತನ ಉಪದೇಶಕ್ಕೆ ವಿರುದ್ಧವೆಂಬ ಭಾವನೆ ಪ್ರಚಾರಕ್ಕೆ ಬರುತ್ತಿದೆ. ಹಾಗೆಯೇ ಪ್ರಭುಭೋಜನಸಂಸ್ಕಾರವನ್ನು (ಯೂಕರಿಸ್ಟ್) ವಿಸ್ತರಿಸಿ ಅದನ್ನು ನಾಟಕೀಯವಾಗಿ ಆಚರಿಸುವ ವಾರ್ಷಿಕ ಕಟ್ಟಳೆ ರೂಢಿಗೆ ಬಂತು. ಜೊತೆಗೆ (ಬೂದಿ) ಬುಧವಾರ ಮತ್ತು (ಶುಭ) ಶುಕ್ರವಾರದ ದಿನಗಳಲ್ಲೂ ಹಲವು ಸಂಸ್ಕಾರಗಳು ಆಚರಣೆಗೆ ಬಂದುವು.

ಚೀನಿಯರು ದೇವತೆಗಳಿಗೂ ಪಿತೃಗಳಿಗೂ ಆಹುತಿ ಅರ್ಪಿಸುತ್ತಾರೆ. ಬಲಗೈಯಲ್ಲಿ ಮಾಂಸವನ್ನು ಹಿಡಿದು ದೇವರುಗಳಿಗೆ ಅರ್ಪಿಸುವ ಸಂಸ್ಕಾರವನ್ನು ಅವರುಚಿ ಎಂದು ಕರೆಯುತ್ತಾರೆ. ಈ ಮೂಲಕ ಅವರು ದೇವರುಗಳೊಡನೆ ಆಪ್ತಸಂಬಂಧವೇರ್ಪಡಿಸಿಕೊಂಡು ಒಂದಾಗುತ್ತಾರೆ. ಕನ್‌ಫ್ಯೂಷಿಯಸ್‌ನ (ಕೂಂಗ್‌ಪೂಷೆ) ಅನುಯಾಯಿಗಳು ಪಿತೃಪೂಜೆಗೆ ಹೆಚ್ಚು ಮನ್ನಣೆ ಕೊಡುತ್ತಾರೆ. ದೇವರುಗಳಿಗಾಗಲೀ ಪಿತೃಗಳಿಗಾಗಲೀ ಅರ್ಪಿಸಿದ್ದನ್ನು ಶುದ್ಧಾಂತಃಕರಣದಿಂದ ಬಾಹ್ಯಾಡಂಬರವಿಲ್ಲದೆ ಅರ್ಪಿಸಬೇಕು ಎಂದು ಕನ್‌ಫ್ಯೂಷಿಯಸ್ ಒತ್ತಿ ಹೇಳಿದ್ದಾನೆ. (ಜಿ.ಎಚ್.)

**ಆಹ್ನಿಕ:** ಪ್ರತಿನಿತ್ಯವೂ ನಿಯಮಿತಕಾಲಗಳಲ್ಲಿ ಮಾಡಬೇಕೆಂದು ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವ ದೈನಂದಿನ ಕಾರ್ಯ. ಸೂರ್ಯೋದಯಕ್ಕೆ 1½ಗಂಟೆಗಳ ಕಾಲ ಮೊದಲು ಬ್ರಾಹ್ಮೀ ಮುಹೂರ್ತ ಪ್ರಾರಂಭವಾಗುತ್ತದೆ. ಈ ಕಾಲಕ್ಕೆ ಸರಿಯಾಗಿ ಭಗವಂತನನ್ನು ಸ್ಮರಿಸುತ್ತ ಹಾಸಿಗೆಯಿಂದೆದ್ದು ಮುಖ ಕೈಕಾಲುಗಳನ್ನು ತೊಳೆದುಕೊಂಡು ಆಚಮನ ಮಾಡಿ ಭೂಮಿಯನ್ನು ಮುಟ್ಟಿಕೊಂಡು ಪಾದಸ್ಪರ್ಶ ದೋಷವನ್ನು ಮನ್ನಿಸು ಎಂದು ಪ್ರಾರ್ಥಿಸಿ ಮೂತ್ರ ಪುರೀಷೋತ್ಸರ್ಜನಾನಂತರದಲ್ಲಿ ಮೃತ್ತಿಕಾಶೌಚವನ್ನು ಮುಗಿಸಿ ಆಚಮನ ಮಾಡಿ ದಂತಧಾವನ, ಪ್ರಾತಃಸ್ನಾನ, ತಿಲಕಧಾರಣ, ಸಂಧ್ಯಾವಂದನೆಗಳನ್ನು ಮಾಡಬೇಕು. ಇವು ಪ್ರಥಮ ಯಾಮಾರ್ಧದಲ್ಲಿ ಮಾಡುವ ಕಾರ್ಯಗಳು. ದ್ವಿತೀಯ ಯಾಮಾರ್ಧದಲ್ಲಿ ವೇದ ಮತ್ತು ಶಾಸ್ತ್ರಗಳ ಅಭ್ಯಾಸ, ಸಮಿತ್ತು ಪುಷ್ಪಾದಿಗಳ ಸಂಗ್ರಹಣಗಳನ್ನು ಮಾಡಬೇಕು. 3ನೆಯ ಯಾಮಾರ್ಧದಲ್ಲಿ ಮಧ್ಯಾಹ್ನ ಸ್ನಾನಮಾಡಿ 8ನೆಯ ಮುಹೂರ್ತದಲ್ಲಿ (ಸೂರ್ಯೋದಯಾನಂತರ 5 ಗಂಟೆ, 36 ನಿಮಿಷಗಳ ಮೇಲೆ 48 ಮಿನಿಟುಗಳು) ಮಾಧ್ಯಾಹ್ನಿಕವನ್ನು ಮಾಡಿ ಬ್ರಹ್ಮಯಜ್ಞ, ದೇವರ ಪೂಜೆಗಳನ್ನು ಮುಗಿಸಿ ಐದನೆಯ ಯಾಮಾರ್ಧದಲ್ಲಿ ವೈಶ್ವದೇವವನ್ನು ಮಾಡಿ ಭೋಜನಾನಂತರ 6–7ನೆಯ ಯಾಮಾರ್ಧದಲ್ಲಿ ಇತಿಹಾಸ ಪುರಾಣಗಳನ್ನು ಪಠಿಸಿ 8ನೆಯ ಯಾಮಾರ್ಧದಲ್ಲಿ ಲೌಕಿಕವಿಷಯ ಚಿಂತನಾನಂತರ ಸಾಯಂಸಂಧ್ಯಾವಂದನೆಯನ್ನು ಮಾಡಿ ದೇವತಾಸ್ತುತಿಯನ್ನು ಪಠಿಸಬೇಕು. ರಾತ್ರಿ ಭೋಜನಾನಂತರ ಶುಚಿ ಪ್ರದೇಶದಲ್ಲಿ ಮಂಚದಮೇಲೆ ಹಾಸಿಗೆಯನ್ನು ಹಾಸಿ ತಲೆಯ ಪಾರ್ಶ್ವದಲ್ಲಿ ಪೂರ್ಣಕುಂಭವನ್ನಿಟ್ಟು ರಾತ್ರಿಯ ಬಟ್ಟೆಗಳನ್ನು ಧರಿಸಿ ಕೈಕಾಲುಗಳನ್ನು ತೊಳೆದುಕೊಂಡು ಎರಡು ಆಚಮನಗಳನ್ನು ಮಾಡಿ ಪೂರ್ವ ಅಥವಾ ದಕ್ಷಿಣ ದಿಕ್ಕಿಗೆ ತಲೆಯನ್ನಿಟ್ಟುಕೊಂಡು ಭಗವಂತನನ್ನು ಸ್ಮರಿಸುತ್ತ ಮಲಗಬೇಕು. (ಎಸ್.ಎನ್.ಕೆ.)

**ಆಹ್ವಾನಿತ ಧನ:** ಹಣವನ್ನು ಪಾವತಿಮಾಡಬೇಕೆಂಬುದಾಗಿ ತಿಳಿಸುವ ನಿರ್ಣಯದ ತಿಳಿವಳಿಕೆಯನ್ನು ಷೇರುದಾರನಿಗೆ ಕೊಟ್ಟಾಗ ಆತ ಕಂಪೆನಿಗೆ ಸಂದಾಯ ಮಾಡಬೇಕಾದ ಹಣದ ಮೊತ್ತ (ಕಾಲ್ ಮನಿ). ಕೂಡುಬಂಡವಾಳ ಕಂಪನಿಯ ಷೇರುದಾರ ತನ್ನ ಆವೇದನ ಪತ್ರದ ಜೊತೆಯಲ್ಲಿಯೇ ತಾನು ಪಡೆಯುವ ಷೇರಿನ ಪೂರ್ತಿ ಹಣವನ್ನು ಕೊಡಬೇಕಾದ ಅಗತ್ಯವಿಲ್ಲ. ಈ ಹಣವನ್ನು ಹಲವು ಕಂತುಗಳಲ್ಲಿ–ಎಂದರೆ ಆವೇದನ ಪತ್ರ ಸಲ್ಲಿಸುವಾಗ, ಷೇರುಗಳನ್ನು ಹಂಚಿದಾಗ ಮತ್ತು ಹಣ ಬೇಕೆಂದು ಕಂಪೆನಿ ಕರೆ ನೀಡಿದಾಗ–ಹೀಗೆ ಕ್ರಮವಾಗಿ ಪಾವತಿ ಮಾಡಬೇಕಾಗುತ್ತದೆ. ಆದ್ದರಿಂದ ಆಹ್ವಾನಿತಧನವೆನ್ನುವುದು ಷೇರು ಮೌಲ್ಯದ ಒಂದು ಭಾಗ. ಈ ಧನವನ್ನು ಷೇರುದಾರ ಒಂದು ನಿಯಮಿತ ಅವಧಿಯಲ್ಲಿ ಪಾವತಿ ಮಾಡಬೇಕು. ಇಲ್ಲದಿದ್ದರೆ ಅಂಥವನ ಷೇರು ಅಥವಾ ಷೇರುಗಳನ್ನು ಮುಟ್ಟುಗೋಲುಹಾಕಿಕೊಳ್ಳಲು ಕಂಪೆನಿಗೆ ಅಧಿಕಾರವಿರುತ್ತದೆ. (ಸಿ.ಸಿ.ಪಿ.)

**ಆಳಂದಕರ್, ಶಂಕರರಾವ್:** 1905–71. ಚಿತ್ರಕಲಾವಿದ, ಲೇಖಕ. 1905 ಜುಲೈ 7ರಂದು ಕಲಬುರ್ಗಿಯ ಸರಾಫ್ ಮನೆತನದಲ್ಲಿ ಜನಿಸಿದರು. ತಂದೆ ನಾರಾಯಣರಾವ್, ತಾಯಿ ಚಂದುಬಾಯಿ. ಬಾಲ್ಯದಲ್ಲೇ ಇವರ ಕಲಾಸಕ್ತಿಯನ್ನು ಗುರುತಿಸಿ, ಚಿತ್ರಕಲಾ ಶಿಕ್ಷಕ ಜೋಶಿ ಎಂಬುವವರ ಒತ್ತಾಯದಿಂದ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಶಾಲೆ ಸೇರಿದರು. ಅಲ್ಲಿ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿ ಎಂದು ಹೆಸರು ಗಳಿಸಿದರು. ಅನಂತರ ಮುಂಬಯಿಯ ವಿವಿಧ ಕಲಾಶಾಲೆಗಳಲ್ಲಿ ಕಲಾ ಶಿಕ್ಷಕರಾಗಿ ದುಡಿದರು. ಕಲಬುರ್ಗಿಗೆ ಹಿಂದಿರುಗಿ ನೂತನ ವಿದ್ಯಾಲಯದಲ್ಲಿ 150 ರೂಪಾಯಿ ಸಂಬಳದ ಮೇಲೆ ಕಲಾಶಿಕ್ಷಕರಾಗಿ ಸೇರಿದರು (1924). ಚಿತ್ರಕಲೆಯ ಪುನರುಜ್ಜೀವನಕ್ಕಾಗಿ ಪ್ರಯತ್ನಿಸಿದರು. ತಮ್ಮ ಸಮಸ್ತ ಬದುಕನ್ನೇ ಕಲಾಸಾಧನೆಗೆ ಸಮರ್ಪಿಸಿಕೊಂಡರು. ಚಿತ್ರಗಳ ಬ್ಯಾನರ್, ಭಿತ್ತಿ ಚಿತ್ರಗಳನ್ನು ಸಿದ್ಧಪಡಿಸುವುದು, ನಾಟಕ ಪರದೆ, ವೇಷ ಭೂಷಣ ತಯಾರಿಸುವುದರಲ್ಲಿ ನಿರತರಾದರು. ಆರೋಗ್ಯದ ಕಡೆ ಹೆಚ್ಚು ಕಾಳಜಿ ವಹಿಸದೆ 40ನೆಯ ವಯಸ್ಸಿನಲ್ಲಿಯೇ ಕ್ಷಯರೋಗ ಮತ್ತು ಮೂಲವ್ಯಾಧಿಗೆ ತುತ್ತಾದರು. ಆದರೂ ಕಲಾಕೃತಿಗಳ ರಚನೆ, ಕಲಾಚಿಂತನೆ ನಡೆಸಿದರು. ತಮ್ಮ ಶಿಷ್ಯ ಎಸ್.ಎಮ್.ಪಂಡಿತ (ನೋಡಿ)ರನ್ನು ಪ್ರೋತ್ಸಾಹಿಸಿ ಮುಂಬಯಿಗೆ ಕಳುಹಿಸಿ, ಶ್ರೇಷ್ಠ ಕಲಾವಿದರನ್ನಾಗಿ ಮಾಡಿದರು. ಈ ಪಂಡಿತರು ತಮ್ಮ ಗುರುಗಳನ್ನು ಧ್ರುವತಾರೆ ಎಂದು ಕರೆದಿದ್ದಾರೆ.

ಆಳಂದಕರರಿಗೆ ಶಾಸ್ತ್ರೀಯ ಸಂಗೀತದಲ್ಲೂ ಪಿಯಾನೋ ಮತ್ತು ಗಿಟಾರ್ ನುಡಿಸುವುದರಲ್ಲೂ ವಿಶೇಷ ಆಸಕ್ತಿಯಿತ್ತು. ಸಾಹಿತ್ಯದಲ್ಲೂ ಪ್ರೀತಿ. ಕವಿ ರವೀಂದ್ರರ ಅನೇಕ ಶ್ರೇಷ್ಠ ಚಿತ್ರಭಂಗಿಗಳನ್ನು ರಚಿಸಿದ್ದಾರೆ. ನಿಜಾಮರ ಆಳ್ವಿಕೆಯಲ್ಲಿ ಹೈದರಾಬಾದ್ ಸರ್ಕಾರದ ವಾರ್ತಾ ಇಲಾಖೆಯಲ್ಲಿ ಇವರು ಕಲಾವಿದರಾಗಿ ಕೆಲಸ ಮಾಡಿದರು. ಆ ವೇಳೆಯಲ್ಲಿ

ಮಹತ್ತ್ವದ ಕಲಾಕೃತಿಗಳನ್ನು ರಚಿಸಿಕೊಟ್ಟರು. ನಿಜಾಮರ ಪೂರ್ವಜ ಅಸಫಜಹಾ ಅವರ ಸಮಗ್ರ ಜೀವನ ಕಲ್ಪನೆಯನ್ನು ಪ್ರತಿಬಿಂಬಿಸುವ ಬೃಹತ್ ಚಿತ್ರಗಳ ಹೊತ್ತಗೆ ತಯಾರಿಸಿ ನಿಜಾಮರ ಕೃಪೆಗೆ ಪಾತ್ರರಾದರು. ಕರ್ನಾಟಕ ವಿಧಾನಸಭಾ ಸಭಾಂಗಣದಲ್ಲಿ ಹಾಕಲು ಜವಾಹರಲಾಲ್ ನೆಹರು ಅವರ ಪೂರ್ಣ ಕೃತಿಯ ತೈಲಚಿತ್ರವನ್ನು ಇವರು ಬರೆದುಕೊಟ್ಟರು. ಈ ಕಲಾಕೃತಿ ಜನರ ಮೆಚ್ಚುಗೆ ಪಡೆಯಿತು. ಇದಲ್ಲದೆ ರಾಷ್ಟ್ರಾಭಿಮಾನವನ್ನು ಪ್ರೇರೇಪಿಸುವ ಲಿವಿಂಗ್ ಕೋಹಿನೂರ್ ಎಂಬ ಮಹತ್ತ್ವಪೂರ್ಣ ಚಿತ್ರಮಾಲಿಕೆಯ ಎರಡು ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಆಳಂದಕರರು 1956ರಲ್ಲಿ ತಮ್ಮ ಸೇವೆಯನ್ನು ವರ್ಗಾಯಿಸಿಕೊಂಡು ಬೆಂಗಳೂರಿಗೆ ಬಂದರು. ಅನಂತರ ಅನಾರೋಗ್ಯದಿಂದ ಗುಲ್ಬರ್ಗದಲ್ಲೇ ಉಳಿದರು. ಶರಣ ಬಸವೇಶ್ವರ, ಪುರಂದರದಾಸ, ಕನಕದಾಸ, ಕುಮಾರವ್ಯಾಸ, ರಾಘವೇಂದ್ರಸ್ವಾಮಿ ಮೊದಲಾದ ಆಧ್ಯಾತ್ಮಿಕ ಪ್ರಪಂಚದ ಮಹಾಪುರುಷರ ತೈಲಚಿತ್ರಗಳನ್ನು ರಚಿಸಿ ಕನ್ನಡಿಗರ ಗೌರವಕ್ಕೆ ಪಾತ್ರರಾದರು. ಅಖಿಲ ಭಾರತ ಕಲಾ ಸಂಘದ ಸದಸ್ಯರಾಗಿ (1951–57), ರಾಜ್ಯದ ಪ್ರಮುಖ ಕಲಾ ಶೈಕ್ಷಣಿಕ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ತಮ್ಮ ಚಿತ್ರಕಲಾ ಬದುಕಿನಲ್ಲಿ ಇವರು ಒಂದು ಸಾವಿರಕ್ಕೂ ಹೆಚ್ಚು ಚಿತ್ರ ರಚಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ (1965–66). ಇವರು ತಮ್ಮ ಜೀವಿತದ ಕೊನೆಯನ್ನು ಭಗವದ್ಗೀತೆಯ ಮೇರುಕೃತಿ ನಿರ್ಮಿಸುವಲ್ಲಿ ತೊಡಗಿಸಿಕೊಂಡರು. ಒಬ್ಬ ಆದರ್ಶ ಶಿಕ್ಷಕರೂ ಕಲಾತಪಸ್ವಿಯೂ ಕಲಾಪ್ರಪಂಚಕ್ಕೆ ಅಪೂರ್ವ ಕೊಡುಗೆ ನೀಡಿದ ಶ್ರದ್ಧಾವಂತರೂ ಆಗಿದ್ದ ಇವರು 1971 ಮೇ 31ರಂದು ನಿಧನರಾದರು. (ಆರ್.ಜಿ.ಆರ್.)

**ಆಳುಪ ವಂಶ:** 7ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಕೊನೆಯವರೆಗೆ ಆಳುವಖೇಡವನ್ನು (ದಕ್ಷಿಣ ಕನ್ನಡ ಜಿಲ್ಲೆ ಅಥವಾ ತುಳುನಾಡು) ಆಳಿದ ರಾಜಮನೆತನ. ಕೆಲವು ಪುರಾಣಗಳಲ್ಲಿ ಉಕ್ತವಾಗಿರುವ ಆವಿಕ, ಆಲಕ ಅಥವಾ ಆಲದ ಎಂಬ ಶಬ್ದ ಆಳುಪರನ್ನು ಸೂಚಿಸುತ್ತದೆ ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಕ್ರಿ.ಶ.2ನೆಯ ಶತಮಾನದಷ್ಟು ಹಿಂದೆಯೇ ಗ್ರೀಕ್ ಭೂಗೋಳಕಾರ ಟಾಲೆಮಿ ಆಳುವಖೇಡವನ್ನು ಪ್ರಸ್ತಾಪಿಸಿರುವನು. 5ನೆಯ ಶತಮಾನದ ಹಲ್ಮಿಡಿ ಶಾಸನದಲ್ಲಿ ಉಕ್ತನಾಗಿರುವ ಅಳಪಗಣದ ಪಶುಪತಿ ಆಳುಪ ಮನೆತನದವನೇ ಇದ್ದಿರಬಹುದು. ಕದಂಬ ರವಿವರ್ಮನ ಗುಡ್ನಾಪುರ ಶಿಲಾಶಾಸನದಲ್ಲಿ ಆಳುಪರು ಕದಂಬರ ಸಾಮಂತರಾಗಿ ಕಾಣಿಸಿಕೊಳ್ಳುತ್ತಾರೆ. ಚಳುಕ್ಯ ಮಂಗಲೀಶನ (610–42) ಮಹಾಕೂಟ ಸ್ತಂಭ ಶಾಸನದಲ್ಲೂ 2ನೆಯ ಪುಲಕೇಶಿಯ (610–42) ಐಹೊಳೆ ಶಾಸನದಲ್ಲೂ ಆಳುಪರ ಉಲ್ಲೇಖವಿದೆ.

ಖಚಿತವಾಗಿ ತಿಳಿದುಬರುವ ಪ್ರಾಚೀನತಮ ಆಳುಪರಾಜ 1ನೆಯ ಆಳುವರಸ (ಸು.650–63). ಅವನ ಅನಂತರ 10ನೆಯ ಶತಮಾನದ ಮಧ್ಯಭಾಗದವರೆಗೆ ರಾಜ್ಯವಾಳಿದ ಆಳುಪರನ್ನು ಪ್ರಾಚೀನ ಆಳುಪರೆಂದು ಪರಿಗಣಿಸಬಹುದಾಗಿದೆ. ಅವರ ಶಾಸನಗಳು ತಿಳಿಯಗೊಡುವಂತೆ ಆಳುಪರು ಪಾಂಡ್ಯ ಕುಲದವರು, ಮೀನಲಾಂಛನೋಪೇತರು, ಸೋಮಕುಲದವರು, ದೊರೆತಿರುವ ಶಾಸನಗಳ ಆಧಾರದ ಮೇಲೆ ಪ್ರಾಚೀನ ಆಳುಪರ ವಂಶವೃಕ್ಷವನ್ನು ಈ ಕೆಳಗಿನಂತೆ ನೀಡಬಹುದಾಗಿದೆ:

ಆಳುವರಸ 1 (ಆಳುಪ ಮಹಾರಾಜ, ಗುಣಸಾಗರ ಆಳುಪೇಂದ್ರ ಸು.650–63) (ಪತ್ನಿ, ಮಹಾದೇವಿ)
|
ಚಿತ್ರವಾಹನ I ಸು.663–730) (ಪತ್ನಿ, ಕುಂಕುಮದೇವಿ)
|
ಆಳುವರಸ II (ಸು.730–65)
- ಚಿತ್ರವಾಹನ II (ಸು.765–800)
  - ಶ್ವೇತವಾಹನ (ಸು.805–15)
- ರಣಸಾಗರ (ಸು.765–805)
  - ಪೃಥ್ವೀಸಾಗರ (ಆಳುವರಸ III) (ಸು.810–40)
    - ಮಾರಮ್ಮ (ಆಳುವರಸ IV, ಸು.840–70)
      - ವಿಮಳಾದಿತ್ಯ (ಸು.870–900)
        - ಆಳ್ವ ರಣಂಜಯ (ಸು.900–30)
        - ದತ್ತಾಳುಪ 1 (ಸು.930–50)

ಇವರಲ್ಲಿ 1ನೆಯ ಆಳುವರಸ ಚಳುಕ್ಯ 1ನೆಯ ವಿಕ್ರಮಾದಿತ್ಯನ ಸಾಮಂತನೂ ಪರಮಮಿತ್ರನೂ ಆಗಿದ್ದು, ತುಳುನಾಡಿಗಷ್ಟೇ ಅಲ್ಲದೆ ಕದಂಬ ಮಂಡಲಕ್ಕೂ ಪೊಂಬುಚ್ಚ ಪ್ರಾಂತಕ್ಕೂ ದೊರೆಯಾಗಿದ್ದ. ಚಕ್ರವರ್ತಿಯ ಬೇಡಿಕೆಯ ಮೇರೆಗೆ ದೂರದ (ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ) ಕಲ್ಲೂರಿಗೆ ತೆರಳಿದ್ದ ಈತ 663ರಲ್ಲಿ ಅಲ್ಲೇ ಅಸು ನೀಗಿದನೆಂದು ಮಾರುಟೂರು ತಾಮ್ರಶಾಸನದಿಂದ ತಿಳಿಯುತ್ತದೆ. ಅವನ ಮಗ 1ನೆಯ ಚಿತ್ರವಾಹನನ ಸುಮಾರು ಏಳು ದಶಕಗಳ ದೀರ್ಘ ಆಳ್ವಿಕೆಯ ಕಾಲ ಪ್ರಾಚೀನ ಆಳುಪರ ಸುವರ್ಣಯುಗ. ಮಧುರೆಯ ಪಾಂಡ್ಯರ ದಾಳಿಯನ್ನು ಮಂಗಲಪುರದಲ್ಲಿ ತಡೆಹಿಡಿದು ಹಿಮ್ಮೆಟ್ಟಿಸಿ 'ಚಾಲುಕ್ಯ ರಾಜ್ಯಾಭಿವೃದ್ಧಿ ಹೇತುಭೂತಃ' ಎಂದು ಚಳುಕ್ಯರಿಂದ ಹೊಗಳಿಸಿಕೊಂಡ ಈ ಚಿತ್ರವಾಹನ ಚಳುಕ್ಯ ವಿಜಯಾದಿತ್ಯನ ತಂಗಿ ಕುಂಕುಮದೇವಿಯನ್ನು ಮದುವೆಯಾಗಿದ್ದ. ಇವನು ಕದಂಬ ಮಂಡಲ ಮತ್ತು ಪೊಂಬುಚ್ಚ ಪ್ರದೇಶಕ್ಕೆ ಅಧಿಪತಿಯಾಗಿದ್ದ. ಆದರೆ ಇವನ ಮಗ 2ನೆಯ ಆಳುವರಸನ ಆಳಿಕೆಯಲ್ಲಿ ಆಳುಪರು ಚಳುಕ್ಯರೊಡನೆ ವೈಮನಸ್ಯ ಬೆಳೆಸಿ ಕದಂಬಮಂಡಲವನ್ನು ಕಳೆದುಕೊಂಡರಲ್ಲದೆ ಕಾಂಚೀಪುರದ ಪಲ್ಲವರ ಸಾಮಂತರಾದರು. ಅವನು ತೀರಿಕೊಂಡಾಗ ಅವನ ಹಿರಿಯ ಮಗ 2ನೆಯ ಚಿತ್ರವಾಹನ ಪೊಂಬುಚ್ಚ ಪ್ರದೇಶಕ್ಕೂ ಕಿರಿಯ ಮಗ ರಣಸಾಗರ ತುಳುನಾಡಿಗೂ ಅಧಿಪತಿಗಳಾದರು. ರಾಷ್ಟ್ರಕೂಟ 3ನೆಯ ಗೋವಿಂದನ ದಾಳಿಗೆ ತುತ್ತಾಗಿ 2ನೆಯ ಚಿತ್ರವಾಹನ ಪೊಂಬುಚ್ಚ ಪ್ರದೇಶದಿಂದ ಕಾಲ್ತೆಗೆಯಬೇಕಾಗಿ ಬಂದಾಗ ಅವನು ತುಳುನಾಡಿಗೆ ಹಿಂತಿರುಗುವುದು ಅನಿವಾರ್ಯವಾಯಿತು. ಇದರಿಂದ ಉದ್ಭವಿಸಿದ ಯಾದವೀ ಕಲಹಗಳಲ್ಲಿ 2ನೆಯ ಚಿತ್ರವಾಹನ, ಅವನ ಮಗ ಶ್ವೇತವಾಹನ ಮತ್ತು ಸಹೋದರ ರಣಸಾಗರ ಇವರು ಅಸು ನೀಗಿದರು. ಈ ಯಾದವೀ ಕಲಹವನ್ನು ಕೊನೆಗೊಳಿಸಿದವ ರಣಸಾಗರನ ಮಗ ಪೃಥ್ವೀಸಾಗರ. ಅವನ ಮಗ ಮಾರಮ್ಮನು ಪರಮೇಶ್ವರ, ಅಧಿರಾಜರಾಜ ಎಂಬೀ ಪರಮಾಧಿಕಾರ ದ್ಯೋತಕವಾದ ಬಿರುದುಗಳನ್ನು ಧರಿಸಿದ್ದ. ಅವನ ಅನಂತರ ಪಟ್ಟಕ್ಕೆ ಬಂದ ವಿಮಳಾದಿತ್ಯ ಸು.900ರಲ್ಲಿ ರಾಷ್ಟ್ರಕೂಟರ ದಾಳಿಗೆ ತುತ್ತಾದ. ಆಳ್ವ ರಣಂಜಯ ತನ್ನ ಮಗಳು ಎಂಜಲದೇವಿಯನ್ನು ಶಾಂತರ ಮನೆತನದ ಚಾಗಿಶಾಂತರನಿಗೆ ಮದುವೆ ಮಾಡಿಕೊಟ್ಟಿದ್ದ. ಅವನು ತೀರಿಕೊಂಡಾಗ ಅವನ ಮಗ ಪ್ರಾಪ್ತವಯಸ್ಕನಿರದಿದ್ದ ಕಾರಣ, ಅವನ ತಮ್ಮ ದತ್ತಾಳುಪ ಸಿಂಹಾಸನವನ್ನೇರಿದ.

ಈ ಮೇಲಿನ ಆಳುಪ ಅರಸುಗಳು ಹೊರಡಿಸಿದ ಯಾವ ಶಾಸನಗಳಲ್ಲೂ ತೇದಿಯ ವಿವರಗಳಿಲ್ಲವಾದ ಕಾರಣ, ಅವರುಗಳ ಕಾಲನಿರ್ಣಯ ಮಾಡುವಲ್ಲಿ ತೌಲನಿಕ ಲಿಪಿಶಾಸ್ತ್ರವನ್ನು ಮರೆಹೋಗುವುದು ಅನಿವಾರ್ಯ. ಆದರೆ ದತ್ತಾಳುಪನನ್ನು ಪದಚ್ಯುತಗೊಳಿಸಿ ತನ್ನ ತಂದೆಯ ಸಿಂಹಾಸನವನ್ನು ತನ್ನದಾಗಿಸಿಕೊಂಡ ಕುಂದವರ್ಮನ ಕಾಲದಿಂದೀಚೆಗಿನ ಆಳುಪ ಶಾಸನಗಳಲ್ಲಿ ಹೆಚ್ಚಿನವು ತೇದಿಯ ವಿವರಗಳನ್ನೊಳಗೊಂಡಿವೆ. ಈ ಮಧ್ಯಯುಗೀನ ಆಳುಪರ ವಂಶವೃಕ್ಷ ಕೆಳಗಿನಂತಿದೆ.

ಕುಂದವರ್ಮ (950–80)
|
ಜಯಸಿಂಹ 1 (980–1010)
|
ಚೋಳರ ಆಕ್ರಮಣ (1010–20)
|
ಬಂಕಿದೇವ 1 (1020–50)
|
ಪಟ್ಟಿಯೊಡೆಯ ಆಳುವರಸ 5 (1050–80)
|
ಪಾಂಡ್ಯಪಟ್ಟಿಯೊಡೆಯ ಜಯಸಿಂಹ II (1080–1110)
|
ಕವಿ ಆಳುಪೇಂದ್ರ (1110–60)
|
ಪತ್ನಿ, ಪಾಂಡ್ಯಮಹಾದೇವಿ
|
ಕುಲಶೇಖರ I (1160–1220)
|
ಪತ್ನಿ, ಜಾಕಲಮಹಾದೇವಿ
|
ಸಾಂತರ ಮನೆತನದ ಕುಂಡಣ (1220–30)
|
ವಲ್ಲಭದೇವ ದತ್ತಾಳುಪ II (1230–50)
- ವೀರಪಾಂಡ್ಯ II (1250–75) ಪತ್ನಿ ಬಲ್ಲಮಹಾದೇವಿ (1275–92)
  - ನಾಗದೇವರಸ (1290–1300)
- ಮಗಳು
  - 2ನೆಯ ಬಂಕಿದೇವ (1285–1315)
    - ಸೋಯಿದೇವ (1315–35)
      - ಕುಲಶೇಖರ II (1335–46)
        - ಬಂಗಿದೇವ III (1346–55)
          - ಕುಲಶೇಖರ III (1355–90)
            - ವೀರಪಾಂಡ್ಯ II (1390–1400)

ಪ್ರಾಚೀನ ಆಳುಪರು ಕದಂಬ ಮಂಡಲವನ್ನು ಕಳೆದುಕೊಂಡ ಮೇಲೂ ಪೊಂಬುಚ್ಚ ಪ್ರದೇಶದ ಮೇಲಿನ ತಮ್ಮ ಆಧಿಪತ್ಯವನ್ನು ಉಳಿಸಿಕೊಂಡಿದ್ದರಾದರೆ, ಮಧ್ಯಯುಗೀನ ಆಳುಪರ ಅಧಿಕಾರ ತುಳುನಾಡಿಗೆ ಮಾತ್ರ ಸೀಮಿತಗೊಂಡಿತ್ತು. ಪ್ರಾಚೀನ ಆಳುಪರ ಕಾಲದಲ್ಲಿ ಉದಯಪುರ (ಇಂದಿನ ಉದ್ಯಾವರ), ಮಂಗಳಪುರ (ಇಂದಿನ ಮಂಗಳೂರು),



ಕೋಟದ ಹಿರಿಯ ದೇವಾಲಯ

ಪಟ್ಟಿಪೊಂಬುಚ್ಚ (ಇಂದಿನ ಹುಮಚ) ಮತ್ತು ಬನವಾಸಿ ಆಳುಪರ ರಾಜಧಾನಿಗಳಾಗಿ ಮೆರೆದಿದ್ದವಾದರೆ ಮಧ್ಯಯುಗದಲ್ಲಿ ಮಂಗಳಪುರ ಮತ್ತು ಬಾರಹಕನ್ಯಾಪುರ (ಇಂದಿನ ಬಾರಕೂರು) ಅವರ ರಾಜಧಾನಿಗಳಾಗಿದ್ದವು. ರಾಜ್ಯವಿಸ್ತಾರವು ಕುಂಠಿತಗೊಂಡಿದ್ದರೂ ಮಧ್ಯಯುಗದ ಆಳುಪರು ತಮ್ಮ ರಾಜ್ಯದೊಳಗೆ ಸರ್ವತಂತ್ರಸ್ವತಂತ್ರರಾಗಿಯೇ ಮೆರೆದಿದ್ದರಾಗಿ, ಪ್ರಾಚೀನ ಆಳುಪರಿಗಿಂತಲೂ ಹೆಚ್ಚಿನ ಸಂಖ್ಯೆಯ ಆಡಂಬರದ ಬಿರುದುಗಳನ್ನು ಧರಿಸಿದ್ದರು. ಉದಾಹರಣೆಗೆ ಪಾಂಡ್ಯಚಕ್ರವರ್ತಿ, ಸಮಸ್ತಭುವನಾಶ್ರಯ ಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಪರಮ ಭಟ್ಟಾರಕ, ಪಂಡಿತ ಪಾಂಡ್ಯ, ಪಾಂಡ್ಯ ಧನಂಜಯ ಇತ್ಯಾದಿ.

ಕುಂದವರ್ಮನ ಉತ್ತರಾಧಿಕಾರಿಯಾದ 1ನೆಯ ಜಯಸಿಂಹನ ಆಳ್ವಿಕೆಯ ಕೊನೆಯಲ್ಲಿ ತುಳುನಾಡು ಚೋಳರ ದಾಳಿಗೆ ತುತ್ತಾಗಿ ಸುಮಾರು ಹತ್ತು ವರ್ಷಗಳ ಕಾಲ ಅವರ ಆಕ್ರಮಣಕ್ಕೊಳಗಾಗಿತ್ತು. ಪುನಃ ಆಳುಪರ ಅಧಿಕಾರವನ್ನು ಸ್ಥಾಪಿಸಿದ ಕೀರ್ತಿ 1ನೆಯ ಬಂಕಿದೇವನದು. ಪಾಂಡ್ಯ ಪಟ್ಟಿಯೊಡೆಯ 2ನೆಯ ಜಯಸಿಂಹ ದ್ವಾರಸಮುದ್ರದ ಹೊಯ್ಸಳರ ದಾಳಿಯನ್ನು ಎದುರಿಸಿ ಸೋಲನ್ನನುಭವಿಸಬೇಕಾಯಿತು. ಆದರೂ ಈ ದಾಳಿಯಿಂದಾಗಿ ಆಳುಪರ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗಲಿಲ್ಲ. ಅದರಂತೆಯೇ ಕವಿ ಆಳುಪೇಂದ್ರನ ಆಳ್ವಿಕೆಯಲ್ಲಿ ಹೊಯ್ಸಳರು ತುಳುನಾಡಿನ ಮೇಲೆ ನಡೆಸಿದ ಎರಡನೆಯ ದಾಳಿಯಿಂದಲೂ ಆಳುಪರಿಗೆ ಸ್ವಾತಂತ್ರ್ಯಚ್ಯುತಿ ಉಂಟಾಗಲಿಲ್ಲ. ಕವಿ ಆಳುಪೇಂದ್ರನ ಮಹಿಷಿ ಪಾಂಡ್ಯಮಹಾದೇವಿ ಆಡಳಿತ ಕ್ಷೇತ್ರದಲ್ಲಿ ಪ್ರಮುಖಪಾತ್ರ ವಹಿಸಿದ್ದಳು. 1ನೆಯ ಕುಲಶೇಖರನ ರಾಣಿ ಜಾಕಲ ಮಹಾದೇವಿ ಸ್ವತಃ ಜೈನಧರ್ಮದವಳಿದ್ದು ಅನೇಕ ಧರ್ಮಕಾರ್ಯಗಳನ್ನು ನೆರವೇರಿಸಿದಳು.

1ನೆಯ ಕುಲಶೇಖರನ ತರುವಾಯ ಪಟ್ಟಕ್ಕೆ ಬಂದವನು ಶಾಂತರ ಮನೆತನದ ಕುಂಡಣ. ಇವನ ಆಳ್ವಿಕೆಗೆ ಸೇರಿದ ವರಾಂಗ ಶಿಲಾಶಾಸನ ಒಳ್ಳೆಯ ಕಾವ್ಯಶೈಲಿಯಲ್ಲಿ ರಚಿತವಾಗಿದ್ದು, ಅಂದಿನ ತುಳುನಾಡಿನ ರಾಜಕೀಯ ಧಾರ್ಮಿಕ ಸ್ಥಿತಿಗತಿಗಳ ಬಗೆ ಹೆಚ್ಚಿನ ಅಂಶಗಳನ್ನು ಹೊರಗೆಡುಹುವಂತಹದಾಗಿದೆ. 2ನೆಯ ದತ್ತಾಳುಪನ ಉತ್ತರಾಧಿಕಾರಿಯಾದ 1ನೆಯ ವೀರಪಾಂಡ್ಯದೇವ ಆಳುಪೇಂದ್ರದೇವ 25 ವರ್ಷಗಳ ಕಾಲ ರಾಜ್ಯವಾಳಿದ. ಅನಂತರ ಅವನ ಅರಸಿ ಬಲ್ಲಮಹಾದೇವಿ 17 ವರ್ಷಗಳ ಕಾಲ ಆಳುಪ ಸಿಂಹಾಸನವನ್ನಲಂಕರಿಸಿದ್ದಳು. ಅನಂತರ ಅವಳ ಮಗ ನಾಗದೇವರಸ ರಾಜ್ಯವಾಳಿದ ಬಗೆಗೆ ಶಾಸನಾಧಾರ ದೊರೆತಿರುವುದಾದರೂ ಅವಳ ಆಳ್ವಿಕೆಯ ಕಾಲದಲ್ಲೇ 1ನೆಯ ವೀರಪಾಂಡ್ಯದೇವನ ಅಳಿಯನಾದ 2ನೆಯ ಬಂಕಿದೇವ ದಂಗೆಯೆದ್ದಿದ್ದನೆಂದೂ ನಾಗದೇವರಸನ ತರುವಾಯ ಅವನೇ ತುಳುನಾಡಿನ ಏಕಾಧಿಪತಿಯಾದನೆಂದೂ ಅಂದಿನ ಶಾಸನಗಳಿಂದ ತಿಳಿದುಬರುತ್ತದೆ. ಅವನ ಆಳ್ವಿಕೆಯಲ್ಲಿ ತುಳುನಾಡಿನಲ್ಲಿ ಅನಾವೃಷ್ಟಿಯ ತೊಂದರೆ ಉಂಟಾಗಿತ್ತೆಂದೂ ಅವನ ಮೊರೆಗೆ ಓಗೊಟ್ಟು ತಿಮಿರೇಶ್ವರದೇವರು ಮಳೆ ತರಿಸಿದ್ದಕ್ಕೆ ಆ ದೇವರಿಗೆ ಬಂಕಿದೇವನು ದಾನಗಳನ್ನು ನೀಡಿದನೆಂದೂ 1305ರ ಸುಜೇರು ಶಾಸನ ತಿಳಿಸುತ್ತದೆ. 2ನೆಯ ಬಂಕಿದೇವನ ಉತ್ತರಾಧಿಕಾರಿ ಸೋಯಿದೇವನ ಆಳಿಕೆಯಲ್ಲಿ (1333ರಲ್ಲಿ), ಹೊಯ್ಸಳ 3ನೆಯ ಬಲ್ಲಾಳ ತುಳುನಾಡನ್ನು ಆಕ್ರಮಿಸಿಕೊಂಡ. ಹೊಯ್ಸಳರನ್ನು ಹೊಡೆದೋಡಿಸುವ ಶಕ್ತಿ ಸಾಮರ್ಥ್ಯಗಳಿಲ್ಲದ ಆಳುಪರು ತಮ್ಮ ಸಿಂಹಾಸನವನ್ನು ಉಳಿಸಿಕೊಳ್ಳುವ ಸಲುವಾಗಿ ಆಳುಪ ರಾಜಕುಮಾರಿ ಕಿಕ್ಕಾಯಿ ತಾಯಿಯನ್ನು 3ನೆಯ ಬಲ್ಲಾಳನಿಗೆ ಮದುವೆ ಮಾಡಿಕೊಟ್ಟರು. ಅಂದಿನಿಂದ 1345ರ ವರೆಗೂ ಆಳುಪರೂ ಹೊಯ್ಸಳರೂ ತುಳುನಾಡಿನ ಮೇಲೆ ಪರಸ್ಪರ ಸ್ವತಂತ್ರವಾಗಿಯೇ ಅಧಿಕಾರ ಚಲಾಯಿಸುತ್ತಿದ್ದರೆಂಬುದು ಅಂದಿನ ಶಾಸನಗಳಿಂದ ವಿಶದವಾಗುತ್ತದೆ.

2ನೆಯ ಕುಲಶೇಖರನ ಆಳ್ವಿಕೆಯ ಕೊನೆಯ ವರ್ಷ 1345–46ರಲ್ಲಿ ತುಳುನಾಡಿನ ಮೇಲೆ ಆಳುಪರೂ ಹೊಯ್ಸಳರೂ ವಿಜಯನಗರದವರೂ ಪರಸ್ಪರ ಸ್ವತಂತ್ರರಾಗಿಯೇ ಅಧಿಕಾರ ನಡೆಸಿದ ಕುತೂಹಲಕಾರಿಯಾದ ಸನ್ನಿವೇಶ ಒದಗಿಬಂದಿತು. ಅಲ್ಲಿಂದ ಮುಂದೆ ಸುಮಾರು ಐದು ದಶಕಗಳ ಕಾಲ ಆಳುಪ ಮನೆತನದ 3ನೆಯ ಬಂಕಿದೇವ, 3ನೆಯ ಕುಲಶೇಖರ ಮತ್ತು 3ನೆಯ ವೀರಪಾಂಡ್ಯ ಇವರು ಸ್ವತಂತರಾಗಿಯೇ ರಾಜ್ಯವಾಳಿದರು. 15ನೆಯ ಶತಮಾನ ಪ್ರಾರಂಭವಾಗುವ ವೇಳೆಗೆ ಆಳುಪರ ಆಡಳಿತ ಕೊನೆಗೊಂಡು, ತುಳುನಾಡು ವಿಜಯನಗರ ಸಾಮ್ರಾಟರ ಪರಮಾಧಿಕಾರಕ್ಕೊಳಗಾಯಿತು.

**ಶಾಸನಗಳು, ನಾಣ್ಯಗಳು:** 7ನೆಯ ಶತಮಾನದ ಮಧ್ಯಭಾಗದಿಂದ 10ನೆಯ ಶತಮಾನದ ಮಧ್ಯಕಾಲದವರೆಗಿನ, ತುಳುನಾಡಿನ ಕೆಲವೆಡೆಗಳಲ್ಲಿ ಕಂಡುಬರುವ ಪ್ರಾಚೀನ ಆಳುಪರ ಶಿಲಾಶಾಸನಗಳ ಭಾಷೆ, ಸಂಸ್ಕೃತ ಅಥವಾ ಹಳಗನ್ನಡ ಮತ್ತು ಲಿಪಿ ಹಳಗನ್ನಡ. ಈಚೆಗೆ ದೊರೆತಿರುವ, 8ನೆಯ ಶತಮಾನದ ಪೂರ್ವಾರ್ಧದಲ್ಲಿ ಹೊರಬಿದ್ದ ಬೆಳ್ಮಣ್ಣು ತಾಮ್ರಶಾಸನ ಆಳುಪ ಮನೆತನದ ಏಕೈಕ ತಾಮ್ರ ಶಾಸನವಷ್ಟೇ ಅಲ್ಲದೆ, ಕನ್ನಡ ಭಾಷೆಯ ಪ್ರಾಚೀನತಮ ತಾಮ್ರಶಾಸನವೂ ಆಗಿರುತ್ತದೆ. ಉಡುಪಿ ತಾಲ್ಲೂಕಿನ ವಡ್ಡರ್ಸೆಯ ಹಳಗನ್ನಡ ಶಾಸನ ಆಳುಪರ ಶಾಸನಗಳಲ್ಲಿ ಪ್ರಾಚೀನತಮ ತಾಮ್ರಶಾಸನವೂ ಆಗಿರುತ್ತದೆ. ಉಡುಪಿ ತಾಲ್ಲೂಕಿನ ವಡ್ಡರ್ಸೆಯ ಹಳಗನ್ನಡದ ಶಾಸನ ಆಳುಪರ ಶಾಸನಗಳಲ್ಲಿ ಪ್ರಾಚೀನತಮವಾದದ್ದು. ಇದು 1ನೆಯ ಆಳುವರಸನಾಳ್ವಿಕೆಗೆ (ಸು.650– 663) ಸೇರಿದ್ದು. 8–9ನೆಯ ಶತಮಾನದ ಸಂಧಿಕಾಲದಲ್ಲಿ ಆಳುಪರ ನಡುವೆ ನಡೆದು ಹೋದ ಭೀಕರ ಯಾದವೀಕಲಹಕ್ಕೆ ಸಂಬಂಧಿಸಿದ ವೀರಗಲ್ಲು ಶಾಸನಗಳೂ ತುಳುನಾಡಿನ ಕೆಲವೆಡೆಗಳಲ್ಲಿ ದೊರೆತಿವೆ. ಪ್ರಾಚೀನ ಆಳುಪರ ಯಾವ ಶಾಸನಗಳಲ್ಲೂ ತೇದಿಯ ವಿವರಗಳನ್ನು ನೀಡಲಾಗಿಲ್ಲ. ಪ್ರಾಚೀನ ಕಾಲದಲ್ಲಿ

ಆಳುಪ ನಾಣ್ಯಗಳು

ತುಳುನಾಡು ನೆರೆಹೊರೆಯ ಪ್ರಾಂತ್ಯಗಳೊಂದಿಗೆ ಹೆಚ್ಚಾಗಿ ಬೆರೆಯದೆ ಉಳಿದಿತ್ತಾದ ಕಾರಣ ಆ ಕಾಲದ ತುಳುನಾಡಿನ ಶಾಸನಗಳಲ್ಲಿ ಇತರ ಪ್ರಾಂತ್ಯಗಳ ಕನ್ನಡ ಶಾಸನಗಳಲ್ಲಿ ಗುರುತಿಸಬಹುದಾದಷ್ಟು ಬಿರುಸಿನ ಬದಲಾವಣೆಗಳೂ ಬೆಳವಣಿಗೆಗಳೂ ಕಂಡುಬರುವುದಿಲ್ಲ. ಆದಕಾರಣ ಪ್ರಾಚೀನ ಆಳುಪರ ಶಾಸನಗಳ ಕಾಲವನ್ನು ತೌಲನಿಕ ಲಿಪಿಶಾಸ್ತ್ರದ ಸಹಾಯ ಪಡೆದು ನಿರ್ಣಯಿಸುವಲ್ಲಿ ಜಾಗರೂಕತೆ ವಹಿಸಬೇಕಾದುದು ಅತ್ಯಗತ್ಯ. ಪ್ರಾಚೀನ ಆಳುಪರ ಶಾಸನಗಳ ಪಾಠಗಳು ಅತ್ಯಂತ ಸಂಕ್ಷಿಪ್ತವಾಗುವ ಕಾರಣ, ಆ ಕಾಲದ ತುಳುನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಇತಿಹಾಸವನ್ನು ಪುನಾರಚಿಸುವಲ್ಲಿ ಅವುಗಳಿಂದ ಹೆಚ್ಚಿನ ಸಹಾಯ ದೊರೆಯುವುದಿಲ್ಲ. 'ವಾರಕೆಯ್', 'ಮುದಿಮೆಗೆಯ್', 'ನಾಟ್ಟು ಮುದಿಮೆ' ಮುಂತಾದ ಕೆಲವು ಪ್ರಾಂತೀಯ ಪಾರಿಭಾಷಿಕ ಪ್ರಯೋಗಗಳು

ಅಂದಿನ ಆಳುಪರ ಶಾಸನಗಳಲ್ಲಿ ಕಂಡುಬರುವುದನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. 10 ರಿಂದ 14ನೆಯ ಶತಮಾನಗಳವರೆಗಿನ ಮಧ್ಯಯುಗೀನ ಆಳುಪರ ಶಾಸನಗಳೆಲ್ಲ ಶಿಲಾಶಾಸನಗಳು. ಅವುಗಳ ಭಾಷೆ ಸಂಸ್ಕೃತ ಅಥವಾ ಕನ್ನಡ. ಲಿಪಿ ಕನ್ನಡ, ಗ್ರಂಥ ಅಥವಾ ಮಲೆಯಾಳಂ. ಇವುಗಳಲ್ಲಿ ಹೆಚ್ಚಿನವು ತೇದಿಯ ವಿವರಗಳನ್ನೊಳಗೊಂಡಿರುವ ಕಾರಣ ಆ ಕಾಲದ ತುಳುನಾಡಿನ ಇತಿಹಾಸವನ್ನು ಅರಿತುಕೊಳ್ಳುವಲ್ಲಿ ಸಂಶಯಗಳಿಗೂ ಊಹಾಪೋಹಗಳಿಗೂ ಅವಕಾಶ ತೀರ ಕಡಿಮೆ. ಆಳುಪ ಅರಸು ಕುಂದ ವರ್ಮನ ಆಳ್ವಿಕೆಯಲ್ಲಿ ಬರೆಯಲಾದ ಕದಿರಿಯ ಲೋಕೇಶ್ವರ ಪ್ರತಿಮಾ ಶಾಸನ 968 ತೇದಿಯ ವಿವರಗಳನ್ನೊಳಗೊಂಡಿರುವ ಆಳುಪ ಶಾಸನಗಳಲ್ಲಿ ಪ್ರಾಚೀನತಮದ್ದು. ಮಧ್ಯಯುಗೀನ ಆಳುಪರ ಶಾಸನಗಳಲ್ಲಿ ತಿಂಗಳು, ತಿಥಿಗಳನ್ನು ನೀಡುವಲ್ಲಿ ಹೆಚ್ಚಾಗಿ ಸೌರಮಾನ ಪದ್ಧತಿಯನ್ನು ಬಳಸಲಾಗಿದೆ. ಹಲವು ಶಾಸನಗಳ ಪಾಠಗಳು ಸುದೀರ್ಘವಿದ್ದು ಆ ಕಾಲದ ತುಳುನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಬೀರುತ್ತವೆ. ಇಲ್ಲಿಯವರೆಗೆ ದೊರೆತಿರುವಂತೆ 1392ರಲ್ಲಿ ಬರೆಯಲಾದ 2ನೆಯ ವೀರಪಾಂಡ್ಯದೇವನ ಮೂಡಬಿದರೆ ಶಾಸನವೇ ಆಳುಪರ ಕೊನೆಯ ಶಾಸನ. ಈ ಕಾಲದಲ್ಲಿ ಆಳುಪರು ಹೊರಡಿಸಿದ ಕೆಲವು ನಾಣ್ಯಗಳೂ ದೊರಕಿವೆ. ಇವು ವೃತ್ತಾಕಾರದ ತಾಮ್ರನಾಣ್ಯಗಳು. ಮೀನಮಿಥುನದ ಚಿತ್ರ ಮತ್ತು ಶ್ರೀ ಪಾಂಡ್ಯ ಧನಂಜಯ ಎಂಬ ಬರೆಹ ಕನ್ನಡ ಅಥವಾ ನಾಗರಿ ಲಿಪಿಯಲ್ಲಿ ಇರುತ್ತವೆ. ಈ ನಾಣ್ಯಗಳು ದಕ್ಷಿಣ ಕನ್ನಡ ಜಿಲ್ಲೆಯ ಆಸುಪಾಸಿನಲ್ಲಿವೆ ಸಿಂಹಳದಲ್ಲಿ ಸಹ ದೊರಕಿವೆ. (ಕೆ.ವಿ.ಆರ್.)



ಆಳುಪ ಎರಡನೆಯ ಚಿತ್ರವಾಹನನ ಉದ್ಯಾವರ ಶಾಸನ (8ನೆಯ ಶತಮಾನ)

**ವಾಸ್ತುಶಿಲ್ಪ:** ಆಳುಪರ ಆಳ್ವಿಕೆಯಲ್ಲಿಯೇ ಕಟ್ಟಲಾದುವೆಂದು ಶಾಸನಾಧಾರಗಳ ಸಹಿತವಾಗಿ ಹೇಳಬಹುದಾದ ಕಟ್ಟಡಗಳು ಬೆಳಕಿಗೆ ಬಂದಿಲ್ಲ. ಆದರೆ ಈ ಕಾಲದಲ್ಲಿ ಕಣಶಿಲೆಯ ಮತ್ತು ಜಂಬುಕಲ್ಲಿನ ಹಲವು ದೇವಾಲಯಗಳು ರಚಿತವಾಗಿರಬೇಕೆಂದು ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಬಹುದಾಗಿದೆ. ಇವುಗಳ ಬಗ್ಗೆಯೂ ಪ್ರಕಟವಾಗಿರುವ ವಿವರಗಳು ಕಡಿಮೆ. ಬಾರಕೂರಿನ ಪಂಚಲಿಂಗೇಶ್ವರ (ಮಾರ್ಕಂಡೇಶ್ವರ) ದೇವಾಲಯ 8ನೆಯ ಶತಮಾನದ್ದು ಎನ್ನಲಾಗಿದೆ. ಇದು ಗಜಪೃಷ್ಠಾಕಾರದ ತಳವಿನ್ಯಾಸವಿರುವ ಕಟ್ಟಡ. ಬ್ರಹ್ಮಾವರದ ಮಹಾಲಿಂಗೇಶ್ವರ ಸು.9ನೆಯ ಶತಮಾನ, ಕೋಟೇಶ್ವರದ ಕೋಟಿನಾಥ (ಸು.9–10ನೆಯ ಶತಮಾನ), ಕಡಂದಲೆಯ ಸುಬ್ರಹ್ಮಣ್ಯ (ಸು.9ನೆಯ ಶತಮಾನ), ಸುರತ್ಕಲ್ಲಿನ ಸದಾಶಿವ (ಸು.9–10ನೆಯ ಶತಮಾನ) ಈ ದೇವಾಲಯಗಳೂ ಗಜಪೃಷ್ಠಾಕಾರದವೇ. ಈ ಕಾಲದ ದೇವಾಲಯಗಳು ಸಾಮಾನ್ಯವಾಗಿ ಅಡ್ಡಪಟ್ಟಿಕೆಗಳ ಅಧಿಷ್ಠಾನದ, ಅದರ ಮೇಲೆ ಅರೆಗಂಬಗಳು ಮತ್ತು ಕೋಷ್ಠಗಳಿಂದ ಅಲಂಕೃತವಾದ ಭಿತ್ತಿ ಇರುತ್ತವೆ. ಆ ಕಾಲದ ಛಾವಣಿಗಳು ಉಳಿದುಬಂದಂತಿಲ್ಲ. ದೇವಾಲಯಗಳಲ್ಲಿ ಗೋಪುರಗಳಾಗಲೀ ಶಿಖರಗಳಾಗಲೀ ಇದ್ದ ಸೂಚನೆಗಳೂ ದೊರಕುವುದಿಲ್ಲ. ದೇವಾಲಯಗಳ ಭಿತ್ತಿ ಅಲಂಕರಣ, ಚೋಳ ಮತ್ತು ಗಂಗ ರೀತಿಯವುಗಳಿಗೆ ಹೊಂದಿಕೊಳ್ಳುತ್ತದೆ. 11ನೆಯ ಶತಮಾನದ ಸೇನೇಶ್ವರ ಗುಡಿಯಲ್ಲಿ ಮಾತ್ರ ಅಲಂಕರಣ ಸರಳವಾಗಿದ್ದರೂ ಕದಂಬ ನಾಗರ ರೀತಿಯ ಶಿಖರಗಳಿವೆ. ಆಳುಪರ ಕಾಲದ ಶಿಲ್ಪ ಶೈಲಿಯನ್ನು ಪರಿಶೀಲಿಸಿದರೆ ಹೆಚ್ಚಿನ ಅಂಶಗಳಲ್ಲಿ ಆ ಶೈಲಿಯು ಬಾದಾಮಿ ಚಳುಕ್ಯ ಹಾಗೂ ಕಲ್ಯಾಣ ಚಾಳುಕ್ಯ ಶೈಲಿಯನ್ನೇ ಹೋಲುತ್ತದೆ. ಕೆಲವೊಮ್ಮೆ ಪಲ್ಲವ, ಚೋಳ ಶಿಲ್ಪಶೈಲಿಯೂ ಕಂಡುಬರುತ್ತದೆ. ಇದಕ್ಕೆ ಕಾರಣ ಪಲ್ಲವ, ಚೋಳ ರಾಜ್ಯಗಳೊಡನಿದ್ದ ಸಾಂಸ್ಕೃತಿಕ ಸಂಪರ್ಕ. ಆದುದಿರಂದ ಆಳುಪರ ಶಿಲ್ಪಶೈಲಿಯನ್ನು ಪ್ರತ್ಯೇಕವಾದ ಒಂದು ವರ್ಗಕ್ಕೆ ಅನ್ವಯಿಸುವುದು ಕಷ್ಟ. ಆಳುಪ ಕಾಲದ ಬಾದಾಮಿ, ಕಲ್ಯಾಣಚಾಳುಕ್ಯ ಮತ್ತು ಹೊಯ್ಸಳ ಶೈಲಿಗಳಿಗೆ ಈ ಕೆಳಗಿನ ದೃಷ್ಟಾಂತಗಳನ್ನೀಯಬಹುದು. ಬಾದಾಮಿ ಚಳುಕ್ಯ ಶೈಲಿ: ಶ್ರೀವಳ್ಳಿಯ ಕಡಿಯಾಳಿ ಮಹಿಷಮರ್ದಿನಿ, ನಂದಿಕೂರಿನ ಮಹಿಷಮರ್ದಿನಿ, ಬೆಳ್ಮಣ್ಣಿನ ಮಹಿಷಮರ್ದಿನಿ, ಮುಂಡುಕೂರಿನ ಮಹಿಷಮರ್ದಿನಿ, ಮೂಡಬಿದರೆಯ ಮಹಿಷಮರ್ದಿನಿ. ಕಲ್ಯಾಣಚಾಳುಕ್ಯ ಶೈಲಿ: ಬೈಂದೂರು ಸೇನೇಶ್ವರ ದೇವಾಲಯದ ಅಪ್ರತಿಮ ಮೂರ್ತಿಗಳು, ನೀಲಾವರದ ದುರ್ಗಾಭಗವತಿ, ಬಾರಕೂರಿನ ಕೋಟೆಕೇರಿ ವೇಣುಗೋಪಾಲಕೃಷ್ಣ, ಕುಂಭಾಶಿಯ ಕೇಶವ. ಹೊಯ್ಸಳ ಶೈಲಿ: ಕಾರ್ಕಳದ ಅನಂತಶಯನ, ಮಂಗಳೂರಿನ ಅತ್ತಾವರದ ಚಕ್ರಪಾಣಿ ಗೋಪಾಲಕೃಷ್ಣ, ತೊದ್ದಳ್ಳಿ ವಾಸುದೇವ. ಚೋಳರ ಶೈಲಿ: ಉಡುಪಿ ಚಂದ್ರೇಶ್ವರ ದೇವಾಲಯದ ಪಂಚಲೋಹದ ಸದಾಶಿವ, ಪೇರಂಪಳ್ಳಿಯ ಪಂಚಲೋಹದ ಸದಾಶಿವ, ಉಡುಪಿ ಶ್ರೀಕೃಷ್ಣಮಠದ ನಾರಾಯಣ, ಕದ್ರಿ ಲೋಕೇಶ್ವರ.

ಬೈಂದೂರಿನ ಸೇನೇಶ್ವರ ದೇವಾಲಯದಲ್ಲಿರುವ ಸರಸ್ವತಿ

ಶಿಲಾಶಿಲ್ಪಗಳಲ್ಲಿ ಹೆಚ್ಚಿನವೆಲ್ಲ ಕಗ್ಗಲ್ಲಿನಿಂದ ಮಾಡಲ್ಪಟ್ಟವು. ಬಳಪದ ಕಲ್ಲನ್ನೂ ಉಪಯೋಗಿಸಿದೆ. ಕೆಲವೊಮ್ಮೆ ನಸು ಕೆಂಪುಶಿಲೆಯನ್ನೂ ಬಳಸಿಕೊಂಡಿದೆ. ಈ ಶಿಲ್ಪಗಳನ್ನು ಕೊರೆಯುವಲ್ಲಿ ಇತರ ಭಾಗಗಳಿಂದ ಸ್ಥಪತಿಗಳನ್ನು ಕರೆಸಿಕೊಂಡಿರಬಹುದು. ಸ್ಥಳೀಯ ಸ್ಥಪತಿಗಳು ಇತರ ಕಡೆ ಹೋಗಿ ತರಬೇತಿಯನ್ನು ಪಡೆದಿರಬಹುದು. (ಪಿ.ಜಿ.ಬಿ.)

**ಆಳ್ವಾರ್:** ರಾಜಸ್ತಾನದಲ್ಲಿನ ಒಂದು ಪಟ್ಟಣ. ದೆಹಲಿ ಮತ್ತು ಜಯಪುರಗಳ ನಡುವೆ ಇದೆ. ದೆಹಲಿಯಿಂದ 164 ಕಿಮೀ. ಜಯಪುರದಿಂದ 143 ಕಿಮೀ. ಇಲ್ಲಿಯ ಅರಮನೆ, ವಸ್ತುಸಂಗ್ರಹಾಲಯ ಪ್ರಸಿದ್ಧಿ ಪಡೆದಿವೆ. ಶಿಕಾರಿಗಳಿಗೆ ಹೆಸರಾಗಿತ್ತು. ವಿವಿಧ ಪದ್ಧತಿಗಳಲ್ಲಿ ನಿರ್ಮಿಸಿರುವ, ಕಟ್ಟಡಗಳ ಸಮೂಹವಾಗಿರುವ ನಗರದ ಅರಮನೆಯನ್ನು ಸಾಗರ ಎಂಬ ಕೆರೆಯೊಂದು ಬೆಟ್ಟದ ಬುಡದಿಂದ ಪ್ರತ್ಯೇಕಿಸುತ್ತದೆ. ಅರಮನೆಯ ಒಂದು ಭಾಗವಾಗಿರುವ ವಸ್ತುಸಂಗ್ರಹಾಲಯದಲ್ಲಿ ಹಸ್ತಪ್ರತಿಗಳು, ವರ್ಣಚಿತ್ರಗಳು ತುಂಬಿವೆ. ಹಿಂದಿ, ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಯ 7,000 ಹಸ್ತಪ್ರತಿಗಳಲ್ಲಿ 24 ಮೀ ಉದ್ದವಾಗಿರುವ ಸಚಿತ್ರ ಭಾಗವತದ ಸುರುಳಿ ಎದ್ದು ಕಾಣುವ ಕೃತಿ. ಅರಬ್ಬೀ ಭಾಷೆಯ ಕುರಾನಿನ ಹಳೆಯ ಒಂದು ಪ್ರತಿ ಇದೆ. ಅದರ ಪಾರ್ಸಿ ಅನುವಾದವನ್ನು ಕೆಂಪು ಅಕ್ಷರಗಳಲ್ಲಿ ಬರೆಯಲಾಗಿದೆ. ಷೇಕ್ ಸಾದಿ ಬರೆದ ಗುಲಿಸ್ತಾನ ಕಾವ್ಯದ ಸಚಿತ್ರ ಪ್ರತಿಯಿದೆ.

ಶಿಲಿಶೇಢ

ಶಸ್ತ್ರಾಲಯದಲ್ಲಿ ಅಕ್ಬರ್, ಷಹಜಹಾನ್, ದಾರಾ ಶಿಕೋ, ನಾದಿರ್ ಷಾ ಮತ್ತು ಔರಂಗಜೇಬ್ ಮೊದಲಾದವರು ಉಪಯೋಗಿಸುತ್ತಿದ್ದ ಶಸ್ತ್ರಗಳಿವೆ. ಇಲ್ಲಿಗೆ 13 ಕಿಮೀ ದೂರದಲ್ಲಿ ನೈಋತ್ಯದ ಕಡೆ ನಿಸರ್ಗರಮಣೀಯವಾದ ಶಿಲಿಶೇಢ ಸರೋವರವಿದೆ. ಸರೋವರದ ಸುತ್ತ ವಿಪುಲವಾದ ಕಾಡುಗಳೂ ಅಲ್ಲಲ್ಲಿ ನೆರಳಿರುವ ತಂಗುದಾಣಗಳೂ ಇವೆ. ಅಣೆಕಟ್ಟೊಂದರಿಂದ ನಿರ್ಮಾಣವಾದ ಈ ಸರೋವರದ ವಿಸ್ತೀರ್ಣ 10 ಚಕಿಮೀ. ಸರೋವರದ ಮೇಲಿರುವ ಸುಂದರವಾದ ಅರಮನೆ ಪ್ರಶಾಂತ ಸ್ಥಳದಲ್ಲಿದ್ದು ರಜಾದಿನಗಳನ್ನು

ಕಳೆಯಲು ಅತ್ಯುತ್ತಮ ಸ್ಥಳವಾಗಿದೆ. ಇದರ ಹತ್ತಿರವಿರುವ ಪಿಲಾನಿಯಲ್ಲಿ ಬಿರ್ಲಾ ಶಿಕ್ಷಣ ಟ್ರಸ್ಟಿನವರು ಸ್ಥಾಪಿಸಿರುವ ಶೈಕ್ಷಣಿಕ ಕೇಂದ್ರವಿದೆ. ಇಲ್ಲಿಂದ 32 ಕಿಮೀ ದೂರದಲ್ಲಿ ಶ್ರೀಶಿಕಾ ವನ್ಯಜೀವಿ ಸಂರಕ್ಷಣಾಲಯವಿದೆ. ಇಲ್ಲಿ ಹುಲಿ, ಚಿರತೆ, ಜಿಂಕೆ ಮತ್ತು ಇತರ ಪ್ರಾಣಿಗಳು ಅವುಗಳ ಸ್ವಾಭಾವಿಕ ವಾತಾವರಣದಲ್ಲಿರುವುದನ್ನು ಕಾಣಬಹುದು. *

**ಆಳ್ವಾರ್‌ಗಳು:** ಹನ್ನೆರಡುಮಂದಿ ಭಗವದ್ಭಕ್ತರು, ವೇದವೇದಾಂತಗಳಿಂದ ಪ್ರಭಾವಿತರಾಗಿ ಭಾಗವತ ಧರ್ಮವನ್ನು ಕೈಗೊಂಡು ಅದಕ್ಕೆ ಸ್ವಾನುಭವದ ವಿಶಿಷ್ಟ ರೂಪವನ್ನು ಕೊಟ್ಟು ದಕ್ಷಿಣ ಭಾರತದಲ್ಲಿ–ಮುಖ್ಯವಾಗಿ ಪಾಂಡ್ಯ, ಚೋಳ, ಕೇರಳ ರಾಜ್ಯಗಳ ಹರಹಿನಲ್ಲಿ–ಪ್ರಚುರಗೊಳಿಸಿದ ಮಹಾಮಹಿಮರ ಪೈಕಿ ಇವರು ಅಗ್ರಗಣ್ಯರು. ಭಗವದ್ಧ್ಯಾನದಲ್ಲೂ ಭಜನೆಯಲ್ಲೂ ಕೈಂಕರ್ಯದಲ್ಲೂ ಸದಾ ಮುಳುಗಿದ್ದುದರಿಂದ ಇವರಿಗೆ ಆಳ್ವಾರ್ ಎಂಬ ಅನ್ವರ್ಥನಾಮವಾಯಿತು. ಇವರ ಕಾಲ ನಿರ್ದಿಷ್ಟವಾಗಿ ತಿಳಿಯದು. 4–8ನೆಯ ಶತಮಾನದ ವರೆಗೆ ಹರಡಿದೆಯೆಂದು ಕೆಲವರು ಪ್ರಾಜ್ಞರೂ ಮತ್ತೆ ಕೆಲವರು 7–9ನೆಯ ಶತಮಾನದ ಆದಿಭಾಗದವರೆಂದೂ ಅಭಿಪ್ರಾಯಪಡುತ್ತಾರೆ. ಆದರೆ ಸಂಪ್ರದಾಯದ ಪ್ರಕಾರ ಇವರ ಜನ್ಮದಿವಸಗಳು ನಿರ್ದಿಷ್ಟವಾಗಿವೆ. ಈ ಕಾಲ ಪ್ರ.ಶ.ಪೂ. 4203 ರಿಂದ ಪ್ರಾರಂಭವಾಗಿ 2706ಕ್ಕೆ ಮುಗಿಯುತ್ತದೆ. ಕಾಲದ ಪ್ರಕಾರ ಆಳ್ವಾರ್‌ಗಳನ್ನು ಮೂರು ಪಂಗಡಗಳಾಗಿ ವಿಂಗಡಿಸಬಹುದು. ಪೊಯ್‌ಗೈ ಆಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್ ಮತ್ತು ತಿರುಮಳಿಶೈ ಆಳ್ವಾರ್–ಇವರದು ಮೊದಲ ಗುಂಪು. ನಮ್ಮಾಳ್ವಾರ್, ಮಧುರಕವಿ ಆಳ್ವಾರ್, ಕುಲಶೇಖರ ಆಳ್ವಾರ್, ಪೆರಿಯಾಳ್ವಾರ್ ಮತ್ತು ಆಂಡಾಳ್. ಇವರದು ಎರಡನೆಯದು ತೊಂಡರಡಿಪ್ಪೊಡಿ ಆಳ್ವಾರ್, ತಿರುಪ್ಪಾಣಾಳ್ವಾರ್ ಮತ್ತು ತಿರುಮಂಗೈ ಆಳ್ವಾರ್ ಇವರು ಮೂರನೆಯ ಗುಂಪಿಗೆ ಬರುತ್ತಾರೆ. ಅಪೂರ್ವ ಪ್ರತಿಭಾಸಂಪನ್ನರೂ ಜ್ಞಾನಪೂರ್ಣರೂ ಮಹಾನುಭಾವರೂ ಆದ ಇವರಲ್ಲಿ ಎಲ್ಲ ಜಾತಿಗಳವರೂ ವರ್ಗದವರೂ ಇದ್ದಾರೆ. ಒಬ್ಬರು ವೆಳ್ಳಾಳರು, ಒಬ್ಬರು ರಾಜ, ಒಬ್ಬರು ಸ್ತ್ರೀ, ಮೂವರು ಬ್ರಾಹ್ಮಣರು. ನಾಲ್ವರ ಕುಲಗೋತ್ರಗಳು ಗೊತ್ತಿಲ್ಲ. ಆದರೆ ಪೂಜ್ಯತೆಯಲ್ಲಿ ಎಲ್ಲರೂ ಸಮಾನರು; ಮತ್ತು ಆಚಾರ್ಯರುಗಳಿಗಿಂತ ಮಿಗಿಲು. ತಾನೊಲಿದವರಿಗೆ ಆತ್ಮ ತನ್ನ ಮೈಯನ್ನು ವಿವರವಾಗಿ ತೆರೆದು ತೋರುತ್ತದೆ ಎಂಬ ಶ್ರುತಿವಾಕ್ಯಕ್ಕೆ ಈ ಆಳ್ವಾರ್‌ಗಳಿಗಿಂತ ಉತ್ತಮ ನಿದರ್ಶನ ಸಿಕ್ಕಲಾರದು. ಇವರಿಂದ ನಮಗೀಗ ಲಭಿಸಿರುವ ತಮಿಳು ಪ್ರಬಂಧಗಳಲ್ಲಿ ನಾಲ್ಕು ಸಾವಿರ ಬಿಡಿ ಪದ್ಯಗಳಿವೆ. ಶ್ರೀವೈಷ್ಣವರಲ್ಲಿ ಇದಕ್ಕೆ ವೇದಗಳಷ್ಟೇ ಪ್ರಾಮಾಣ್ಯ, ಪ್ರಾಶಸ್ತ್ಯಗಳು ದೊರೆತು ಇವು ಅನೇಕ ನಿಷ್ಠರ ಮುಖಸ್ಥವಾಗಿವೆ. ಇವುಗಳಲ್ಲಿ 215 ಪದ್ಯಗಳು ದಿನವೂ ಹೇಳತಕ್ಕ ನಿತ್ಯಾನುಸಂಧಾನಕ್ಕೆ ಸೇರಿವೆ. ಈ ಪ್ರಬಂಧಗಳಲ್ಲಿ ನಮ್ಮಾಳ್ವಾರರ ತಿರುವಾಯ್‌ಮೊಳಿ ಎಂಬ ಪ್ರಬಂಧ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅತ್ಯಗತ್ಯವಾಗಿದ್ದು ನಮ್ಮಾಳ್ವಾರರಿಗೆ ಆಳ್ವಾರ್ ಸಾಲಿನಲ್ಲಿ ಅಗ್ರ ಪದವಿ ಗಳಿಸಿಕೊಟ್ಟಿದೆ.

ಆಳ್ವಾರ್‌ಗಳ ಸೂಕ್ತಿಗಳಿಂದ ಮೂಡಿಬರುವ ತತ್ತ್ವಾರ್ಥವನ್ನು ಈ ರೀತಿ ಸಂಗ್ರಹಿಸಬಹುದು: ತತ್ತ್ವಗಳು ಮೂರು–ಚಿತ್, ಅಚಿತ್, ಈಶ್ವರ. ಚಿತ್ತೂ ಅಚಿತ್ತೂ ಈಶ್ವರನ ಪ್ರಕಾರಗಳು. ಅವುಗಳಿಂದ ಹೊರತಾಗಿ ಅವನಿಲ್ಲ. ಅವನಿಗೆ ಹೊರತಾಗಿ ಅವೂ ಇಲ್ಲ. ಆದರೆ ಚಿದಚಿದ್ವಿಲಕ್ಷಣವಾಗಿದ್ದಾನೆ, ಈಶ್ವರ. ಮೂರರ ಲಕ್ಷಣಗಳೂ ಬೇರೆ ಬೇರೆ. ಚಿತ್ ಅಂದರೆ ಜೀವಾತ್ಮ. ಅವನ ಸ್ವರೂಪ ಹೀಗಿದೆ. ಆತ 25ನೆಯ ತತ್ತ್ವ. ಮಿಕ್ಕ 24 ಯಾವುವೆಂದರೆ : ಮೂಲ ಪ್ರಕೃತಿ, ಅದರ ಮಹದಾದಿ ಸಪ್ತವಿಕೃತಿಗಳು, ಮತ್ತು ಷೋಡಶ ವಿಕಾರಗಳು; ದೇಹೇಂದ್ರಿಯ ಮನಃಪ್ರಾಣ ಬುದ್ಧ್ಯಾದಿ ವಿಲಕ್ಷಣ; ಅಜಡ; ಆನಂದರೂಪ; ನಿತ್ಯ; ಅಣು; ಅವ್ಯಕ್ತ; ಅಚಿಂತ್ಯ; ನಿರವಯವ; ನಿರ್ವಿಕಾರ; ಜ್ಞಾನಾಶ್ರಯ; ನಿಯಾಮ್ಯ; ಧಾರ್ಯ; ಮತ್ತು ಶೇಷಭೂತ. ಜೀವಾತ್ಮನ ಸ್ವರೂಪ ಹೀಗಿದ್ದರೂ ಅನಾದಿಕಾಲಸಂಚಿತವಾದ ಪುಣ್ಯಪಾಪ ಕರ್ಮಗಳಿಂದ ಕಟ್ಟುವಡೆದು ಈ ಬ್ರಹ್ಮಾತ್ಮಕವಾದ ಪ್ರಪಂಚದಲ್ಲಿ ಹುಟ್ಟಿ ಸಂಚರಿಸುತ್ತಾನೆ. ಇವನೇ ಬದ್ಧಾತ್ಮ, ಸ್ವರೂಪ ಜ್ಞಾನಹೀನ, ಸ್ವಕರ್ಮನಿಗಳ ಬದ್ಧ. ಈತನಿಗೆ ತನ್ನ ನಿಜವನ್ನು ತಾನರಿತು ಸಂಸಾರದಿಂದ ಮುಕ್ತನಾಗಬೇಕೆಂಬ ಪ್ರೇರಣೆ ಭಗವತ್ ಕೃಪೆಯಿಂದಲೇ ಒದಗಬೇಕು. ಹಾಗೆ ದೊರೆತವನೇ ಮುಮುಕ್ಷು. ಪರಮಾತ್ಮನ ಅಂಶವಾದ್ದರಿಂದ ಈತನಲ್ಲೂ ಪರಿಮಿತವಾಗಿ ಜ್ಞಾನ ಶಕ್ತಿಬಲ ಐಶ್ವರ್ಯ ವೀರ್ಯ ತೇಜಸ್ಸು ಸುಖ ದಯೆ ಕ್ಷಮೆ ಶಾಂತಿ ಮುಂತಾದ ಭಗವತ್‌ಗುಣಗಳು ಕಾಣಿಸಿಕೊಳ್ಳುತ್ತವೆ. ಇವು ಭಗವಂತನಲ್ಲಿ ಸರ್ವಕಾಲದಲ್ಲಿ ಸರ್ವಾವಸ್ಥೆಗಳಲ್ಲೂ ಸಂಪೂರ್ಣವಾಗಿಯೂ ಸ್ವಭಾವಸಿದ್ಧವಾಗಿಯೂ ಅನಂತವಾಗಿಯೂ ಅತ್ಯುತ್ಕೃಷ್ಟವಾಗಿಯೂ ಅವಿಚ್ಛಿನ್ನವಾಗಿಯೂ ಇರತಕ್ಕವು. ಕ್ಷುತ್ ಪಿಪಾಸಾದಿ ಹೇಯಗುಣಗಳು ಅಚಿತ್ ಸಂಪರ್ಕವುಳ್ಳ ಬದ್ಧಾತ್ಮನಲ್ಲಿ ಮಾತ್ರ ಕಾಣಬರತಕ್ಕವು. ಆತನ ಸ್ವರೂಪಕ್ಕೆ ಇವು ತಕ್ಕವು. ಕರ್ಮವಶನಲ್ಲದ ಪರಮಾತ್ಮನಿಗೆ ಈ ಹೇಯ ಗುಣಗಳ ಸಂಪರ್ಕ ಸುತಾರಾಂ ಇಲ್ಲ. ಭಗವತ್ ಕೃಪೆಯಿಂದ ಮುಮುಕ್ಷುವಾದ ಬದ್ಧಾತ್ಮ ಅಚಿತ್ ಸಂಸರ್ಗವನ್ನು ಕಳೆದುಕೊಳ್ಳಲು ತೊಡಗಿ ಆ ಪ್ರಯತ್ನದಲ್ಲಿ ಸದ್ಗುರುವನ್ನು ಆಶ್ರಯಿಸಿ ತನ್ಮುಖೇನ ತನಗೂ ಭಗವಂತನಿಗೂ ಇರುವ ನವ ವಿಧ ಸಂಬಂಧಗಳನ್ನು ಅರಿತುಕೊಂಡು ಭಗವತ್ ಸಂಶ್ಲೇಷಣವನ್ನು ಹೊಂದಲು ಪ್ರಯತ್ನಿಸುತ್ತಾನೆ; ದೈವಕೃಪೆಯಿದ್ದರೆ ಸಿದ್ಧಿಯನ್ನು ಹೊಂದುತ್ತಾನೆ. ಈ ಒಂಬತ್ತು ಸಂಬಂಧಗಳು ಈ ಪ್ರಕಾರವಾಗಿವೆ: ಆತ ಪಿತಾ–ಈತ ಪುತ್ರ, ರಕ್ಷಕ–ರಕ್ಷ್ಯ, ಶೇಷಿ–ಶೇಷ, ಭರ್ತೃ–ಭಾರ್ಯೆ, ಜ್ಞೇಯ–ಜ್ಞಾತೃ, ಸ್ವಾಮಿ–ಸ್ವತ್ತು, ಆಧಾರ–ಆಧೇಯ, ಆತ್ಮ–ಶರೀರ, ಭೋಕ್ತೃ–ಭೋಗ್ಯ. ಈ ಸಂಬಂಧಗಳನ್ನು ಕುರಿತೇ ಆಳ್ವಾರರುಗಳ ಪ್ರಬಂಧಗಳು ಪ್ರವರ್ತಿಸುತ್ತವೆ. ಆತ್ಮವೆಂಬ ಶರೀರಕ್ಕೆ ಪ್ರಾಣಭೂತನಾಗಿದ್ದಾನೆ ಪರಮೇಶ್ವರ. ಜೀವಾತ್ಮನಿಗೆ ಭಗವಂತನ ಸಾನ್ನಿಧ್ಯ ಕೈಂಕರ್ಯಗಳಿಗಿಂತಲೂ ಪ್ರಿಯವಾದದ್ದು ಮತ್ತಾವುದೂ ಇಲ್ಲ. ಮುಕ್ತಿಯಲ್ಲೂ ಆತ ಬಯಸುವುದು ಇದನ್ನೇ. ಭಗವಂತನ ದಯೆಯೂ ಅಪಾರವಾದದ್ದು. ಅದನ್ನು ಪಡೆಯಲು ಜ್ಞಾನಕರ್ಮ ಭಕ್ತ್ಯಾದಿ ಯಾವ ಅಧಿಕಾರವೂ ಬೇಕಿಲ್ಲ; ಶರಣಾಗತನಾದರೆ, ಪ್ರಪನ್ನನಾದರೆ ಸಾಕು. ಭಕ್ತಿಮಾರ್ಗಕ್ಕಿಂತಲೂ ಪ್ರಪತ್ತಿಮಾರ್ಗ ಶ್ರೇಷ್ಠವೆಂಬುದು ಆಳ್ವಾರುಗಳ ಅಭಿಮತವೆಂದು ತೋರುತ್ತದೆ. ಭಕ್ತಿಗೆ ನಿರಂತರ ಧ್ಯಾನ ಆವಶ್ಯಕ; ಇದು ಸಂಸ್ಕೃತರಾದ ದೃಢಚಿತ್ತರಿಗೆ ಮಾತ್ರ ಲಭ್ಯವಾಗತಕ್ಕದ್ದು. ಶರಣಾಗತಿಗೂ ಜ್ಞಾನಧ್ಯಾನಾದಿಗಳಾವುವೂ ಬೇಕಿಲ್ಲ. ಶರೀರಿಯೂ ಬೌದ್ಧನೂ ಆದ ಜೀವಾತ್ಮನಿಗೆ ಮಾತ್ರ ಭಗವಂತನ ನಿರ್ಹೇತುಕ ಕರುಣೆಯ ದೇವ ದುರ್ಲಭವಾದ ಭೋಗ. ಅವನೇಣಿಸಿದಂತೆ ಅವನ ದೈವ ಮೈದೋರಿ ಕಾಪಾಡುತ್ತದೆ. ಪರಮಾತ್ಮ ವಿಭುವೂ ಪ್ರಭುವೂ ಆಗಿರುವುದು, ತಾನು ಹಾಗಲ್ಲದಿರುವುದು ಕೂಡ, ಒಂದು ಗುಣವೇ. ಆತ ವಿಭುವಾಗಿರುವುದರಿಂದ ಕೈಂಕರ್ಯವನ್ನು ಒಂದು ಭೋಗವನ್ನಾಗಿ ಕರುಣಿಸುವುದಕ್ಕೆ ತಕ್ಕವ ಆತನೊಬ್ಬನೇ. ಹೀಗೆ ಈ ಸಂಬಂಧಗಳು ಬದ್ಧಾತ್ಮರುಗಳಿಗೂ ಸಕಲಾಂತರ್ಯಾಮಿಗೂ ಇರುವ ಪರಸ್ಪರವಾದ ಮಧುರ ಸಂಬಂಧಗಳನ್ನು ಎತ್ತಿ ತೋರಿಸುತ್ತ, ರಾಮಕೃಷ್ಣಾದಿ ವಿಭವಾವತಾರಗಳನ್ನೂ ವಿವರವಾಗಿ ನೆನೆದು ಕೊಂಡಾಡುತ್ತ ಯೋಗಕ್ಷೇಮಕಾತರವಾದ ಈ ಜಗತ್ತಿನಲ್ಲಿ ಸದ್ಭಾವ ಸಂತೋಷಗಳನ್ನು ಹರಡುತ್ತಿವೆ. ನಮ್ಮಾಳ್ವಾರರ ಶಿಷ್ಯರಾದ ಮಧುರಕವಿಗಳು ಮಾತ್ರ ಭಗವಂತನ ಗೊಡವೆಗೇ ಹೋಗದೆ ಆಚಾರ್ಯರೇ ದೈವವೆಂದು ಬಗೆದು ಆ ನಿಷ್ಠೆಯಲ್ಲಿ ಮುಳುಗಿ ಹನ್ನೊಂದು ಪಾಶುರಗಳಲ್ಲಿ ಅವರನ್ನು ಕೊಂಡಾಡಿ, ಹೊಸ ಮಾರ್ಗವೊಂದನ್ನು ತೆರೆದು, ಆಳ್ವಾರ್ ಪದವಿಗೇರಿದರು. ಈ ಹನ್ನೊಂದು ಪದ್ಯಗಳೂ ಮಿಕ್ಕವಂತೆ ಬಹು ಗಂಭೀರವೂ ಮಧುರವೂ ಆಗಿವೆ.

ಆಳ್ವಾರ್‌ಗಳು ತಮ್ಮ ನಾಡಿನ ಹಲವೆಡೆಗಳಿಗೆ ಬಾನಿನ ಚೆಲುವನ್ನು ತಂದರು. ನಮ್ಮ ನುಡಿಗೆ ಅಪೂರ್ವ ಶೋಭೆಯನ್ನಿತ್ತರು. ಮೇಲ್ಮೆಯಲ್ಲಿ ಸದಾ ಆಸಕ್ತರಾಗಿ ಮೇಲ್ಮೆಯೊಲವನ್ನು ತಮ್ಮ ನಾಡಿನಲ್ಲಿ ಹರಡಿದರು; ಆದುದರಿಂದ ಈ ಮಹನೀಯರು ದೇಶಭಕ್ತರಲ್ಲೂ ಮೊದಲೆಣಿಕೆಗೆ ತಕ್ಕವರು.

ವೇದಗಳಲ್ಲಿ ಉಕ್ತವಾಗಿರುವ ತಿಳಿವನ್ನು ತಮ್ಮ ಸುತ್ತಿನ ಜನರ ಆಡುಭಾಷೆಯಾದ ತಮಿಳಿನಲ್ಲಿ ಹಾಡಿದ ಆಳ್ವಾರುಗಳ ಸೂಕ್ತಿಗಳನ್ನು ತಮಿಳುವೇದವೆಂದೇ ಕರೆಯುತ್ತಾರೆ. ಶ್ರೀವೈಷ್ಣವ ದೇವಾಲಯಗಳಲ್ಲಿ ಆಳ್ವಾರುಗಳ ಮೂರ್ತಿಗಳನ್ನು ಪ್ರತಿಷ್ಠಿಸಿ ಪೂಜಿಸುವ ಪದ್ಧತಿಯಿದೆ. ಆಯಾ ಆಳ್ವಾರುಗಳ ಜನ್ಮಸ್ಥಳಗಳಲ್ಲಿ ಸಾಮಾನ್ಯವಾಗಿ ಅವರ ಮೂರ್ತಿಗಳುಳ್ಳ ಗುಡಿಗಳಿವೆ. ಆಳ್ವಾರುಗಳ ಆರಾಧ್ಯಮೂರ್ತಿಗಳ ಸಹಿತವಾಗಿ ಅವರ ಮೂರ್ತಿಗಳನ್ನು ಪೂಜಿಸುವುದು ಅಲ್ಲಿ ವಾಡಿಕೆ. ದೇವರ ಆರಾಧನೆಯ ಸಮಯದಲ್ಲಿ ಆಳ್ವಾರುಗಳ ಕೃತಿಗಳನ್ನು ಹಾಡುವುದು ಶ್ರೀವೈಷ್ಣವ ಸಂಪ್ರದಾಯ.

**ಪೊಯ್‌ಗೈ ಆಳ್ವಾರ್**: ಆಳ್ವಾರುಗಳಲ್ಲಿ ಮೊಟ್ಟಮೊದಲಿಗರು. ಇವರ ಜನ್ಮಸ್ಥಳ ಕಾಂಚೀನಗರ. ಇವರ ಜನ್ಮದಿನೋತ್ಸವ ತುಲಾಮಾಸದ ಶ್ರವಣ ನಕ್ಷತ್ರದ ದಿವಸದಲ್ಲಿ ಜರುಗುತ್ತದೆ. ಆಳ್ವಾರುಗಳ ಚರಿತ್ರೆಯನ್ನು ಸಂಶೋಧಿಸಲು ಹೊರಟ ವಿದ್ವಾಂಸರಲ್ಲಿ ಕೆಲವರು ಇವರ ಕಾಲ ನಾಲ್ಕನೆಯ ಶತಮಾನದ ಆದಿಭಾಗವೆಂದೂ ಮತ್ತೆ ಕೆಲವರು ಏಳನೆಯ ಶತಮಾನದ ಆದಿಭಾಗವೆಂದೂ ಅಭಿಪ್ರಾಯಪಡುತ್ತಾರೆ. ಇವರ ಕುಲಗೋತ್ರಗಳು ಗೊತ್ತಿಲ್ಲ. ಪೊಯ್ ಎಂಬೊಂದು ಕೊಳದ ತಾವರೆ ಹೂವಿನಲ್ಲಿ ಈ ಮಗು ಇದ್ದುದನ್ನು ಸಾಕಿದವರು ಕಂಡದ್ದರಿಂದ ಈ ಆಳ್ವಾರರಿಗೆ ಪೊಯ್‌ಗೈ ಆಳ್ವಾರ್ ಅಥವಾ ಸರೋಯೋಗಿ ಎಂದೇ ಹೆಸರಾಯಿತೆಂಬ ಅಂಶ ಗುರುಪರಂಪರಾ ಪ್ರಭಾವ ಎಂಬ ಗ್ರಂಥದಿಂದ ತಿಳಿದುಬರುತ್ತದೆ. ಇವರಿಂದ ನಮಗೆ ಲಭ್ಯವಾಗಿರುವ ಪ್ರಬಂಧಕ್ಕೆ ಮೊದಲನೆಯ ತಿರುವಂದಾದಿ ಎಂದು ಹೆಸರು. ಇದರಲ್ಲಿ ನೂರು ಪಾಶುರಗಳು, ಎಂದರೆ ಬಿಡಿ ಪದ್ಯಗಳಿವೆ. ಅಂದಾದಿ ಎಂದರೆ ಒಂದು ಪದ್ಯದ ಕೊನೆಯ ಮಾತು ಮುಂದಿನ ಪದ್ಯದ ಮೊದಲ ಮಾತಾಗಿ ಇಡೀ ಪ್ರಬಂಧವೇ ಪೋಣಿಸಿಕೆಗೊಂಡಿರುವ ಪ್ರಬಂಧ. ಈ ನೂರು ಪದ್ಯಗಳೂ ತುಂಬ ಶ್ರಾವ್ಯವೂ ಭಾವಗರ್ಭಿತವೂ ಪ್ರತಿಭಾಪ್ರಚೋದಿತವೂ ಆಗಿವೆ. ಈ ಆಳ್ವಾರರು ಶ್ರೀಮನ್ಮಹಾವಿಷ್ಣುವಿನ ಪಾಂಚಜನ್ಯಾಂಶವೆಂದು ಪರಿಭಾವಿತರಾಗಿದ್ದಾರೆ.

**ಪೂದತ್ತಾಳ್ವಾರ್:** ಪೊಯ್‌ಗೈ ಆಳ್ವಾರರ ಸಮಕಾಲೀನರು. ಇವರ ಜನ್ಮಸ್ಥಳ ತಿರುಕ್ಕುಡಲ್‌ಮಲ್ಲೈ. ಇವರ ಜನ್ಮದಿನೋತ್ಸವವನ್ನು ತುಲಾಮಾಸದ ಧನಿಷ್ಠಾ ನಕ್ಷತ್ರದ ದಿನ ಆಚರಿಸುತ್ತಾರೆ. ಇವರ ಜನ್ಮ ಮಾಧವೀ ಪುಷ್ಪವೊಂದರಲ್ಲಿ ಎಂದು ಗುರುಪರಂಪರಾಪ್ರಭಾವ ತಿಳಿಸುತ್ತದೆ. ಇವರು ರಚಿಸಿರುವ ಪ್ರಬಂಧಕ್ಕೆ ಎರಡನೆಯ ತಿರುವಂದಾದಿ ಎಂದು ಹೆಸರು. ಇದರಲ್ಲೂ ನೂರು ಬಿಡಿ ಪದ್ಯಗಳಿವೆ. ಇವರು ಶ್ರೀಮನ್ಮಹಾವಿಷ್ಣುವಿನ ಗದಾಂಶರೆಂದು ಪರಿಭಾವಿತರಾಗಿ ಪೂಜೆಗೊಳ್ಳುತ್ತಿದ್ದಾರೆ.

**ಪೇಯಾಳ್ವಾರ್:** ಇವರು ಪೂದತ್ತಾಳ್ವಾರರು ಹುಟ್ಟಿದ ಮರುದಿನ ಜನ್ಮತಾಳಿದರೆಂದು ಸಂಪ್ರದಾಯ ತಿಳಿಸುತ್ತದೆ. ಇವರ ಜನ್ಮದಿನೋತ್ಸವ ತುಲಾಮಾಸದ ಶತಭಿಷಾ ನಕ್ಷತ್ರದ ದಿವಸ ಜರುಗುತ್ತದೆ. ಇವರು ಹುಟ್ಟಿದೂರಿನ ಹೆಸರು ಮಾಮೈಲೈನಗರ ಅಥವಾ

ಮಯೂರಪುರಿ. ಮಿಕ್ಕಿಬ್ಬರದಂತೆ ಇವರ ಹುಟ್ಟು ಬೆಳೆವಣಿಗೆ ವಿದ್ಯಾಭ್ಯಾಸ ರಹಸ್ಯವಾಗಿಯೇ ಉಳಿದಿವೆ. ಅದರೆ ಅರಿವು ಮಾತ್ರ ಮೂರನೆಯ ತಿರುವಂದಾದಿ ಎಂಬ ನೂರು ಬಿಡಿ ಪದ್ಯಗಳ ಪ್ರಬಂಧದಲ್ಲಿ ಮಹೋಜ್ವಲವಾಗಿ ಬೆಳಗುತ್ತಿದೆ. ಇವರು ಮಹಾವಿಷ್ಣುವಿನ ನಂದಕಾಂಶವೆಂದು ಸಂಪ್ರದಾಯ ಸನ್ಮಾನಿಸುತ್ತದೆ.

ಈ ಮೂವರು ಆಳ್ವಾರುಗಳ ವಿಷಯದಲ್ಲಿ ಒಂದು ಮನೋಹರವಾದ ದಂತ ಕಥೆಯುಂಟು. ಇವರು ಹುಟ್ಟಿನಿಂದಲೂ ಜ್ಞಾನ ವೈರಾಗ್ಯ ಭಕ್ತಿಯುಳ್ಳವರಾಗಿ ಯಾವ ಸಮಯಾಚಾರಕ್ಕೂ ಸಾಮಾಜಿಕ ನಿಯಮಗಳಿಗೂ ಸಿಕ್ಕದೆ ಮನಬಂದಂತೆ ಇದ್ದು ಮನಬಂದೆಡೆ ಸಂಚರಿಸುತ್ತ ತಮ್ಮ ಆತ್ಮೈಶ್ವರ್ಯವನ್ನು ನಡೆನುಡಿಗಳಿಂದ ಜನಕ್ಕೆ ಆಗಾಗ ಪ್ರಕಾಶಪಡಿಸುತ್ತ ದಿವ್ಯಕ್ಷೇತ್ರ ಯಾತ್ರೆಗಳಲ್ಲಿ ದಿನಗಳನ್ನು ನೂಕುತ್ತಿರುವಾಗ ಒಂದು ದಿನ ತಿರುಕ್ಕೋವಿಲೂರ್ ಎಂಬ ಪುಣ್ಯಸ್ಥಳದಲ್ಲಿ ಒಬ್ಬರನ್ನೊಬ್ಬರು ಒಂದು ಸಣ್ಣ ಗುಡಿಸಿಲಿನಲ್ಲಿ ಸಂಧಿಸಿದರು. ಸಂತರು ಸಂತರೊಡನೆ ಕಲೆತಾಗ ಆ ಕೂಟದ ಸಂತೋಷವನ್ನು ವರ್ಣಿಸುವುದು ಯಾರಿಗೆ ಸಾಧ್ಯ ? ಹೀಗೆ ಅವರು ಪರಸ್ಪರ ಮಗ್ನರಾಗಿರುವಲ್ಲಿ ಹಗಲೇ ಇರುಳಾಗುವಂತೆ ಒಂದು ಕಾರ್ಮೋಡವೆದ್ದು ದೊಡ್ಡ ಮಳೆ ಬಿತ್ತು. ಆ ಸಂದರ್ಭದಲ್ಲಿ ನಾಲ್ಕನೆಯ ವ್ಯಕ್ತಿಯೊಬ್ಬ ಅವರ ನಡುವೆ ಸೇರಿಕೊಂಡು ಆ ಕಿರಿದೆಡೆಯನ್ನೆಲ್ಲ ತುಂಬಿ ಇವರನ್ನು ಇರುಕಿ ಅವುಕುತ್ತಿರುವ ಅನುಭವ ಈ ಮೂವರಿಗೂ ಆಯಿತು. ಆದರೆ ಆ ವ್ಯಕ್ತಿ ಮಾತ್ರ ಇವರ ಕಣ್ಣಿಗೆ ಬೀಳನು. ಕೈಗೆ ಸಿಕ್ಕನು. ಇದಾರಿರಬಹುದೆಂದು ಇವರು ಬಗೆಹರಿಯದ ಚಿಂತೆಯಲ್ಲಿದ್ದಾಗ ಭಗವಂತ ಕರುಣೆಯಿಂದ ಅವರಿಗೆ ತನ್ನ ದರ್ಶನ ಕೊಟ್ಟ. ತಮ್ಮ ಅಂತರ್ಯಾಮಿ ಪ್ರಭುವೇ ಹೀಗೆ ಹೊರಬಂದು ತಮ್ಮೊಡನೆ ಸೇರಿಕೊಂಡಿದ್ದಾನೆಂಬ ಅಂಶವನ್ನು ಆ ಮಹಾನುಭಾವರು ಸಾಕ್ಷಾತ್ಕರಿಸಿಕೊಂಡು, ಪುರುಷಸೂಕ್ತದಲ್ಲಿ ವರ್ಣಿತನಾದ ವಿರಾಟ್ ಪುರುಷನನ್ನು ಕಣ್ಣಾರೆ ಕಂಡು, ಆ ಜ್ಞಾನಾನಂದದ ಮತ್ತಿನಲ್ಲಿ ಒಬ್ಬೊಬ್ಬರೂ ನೂರು ನೂರು ಪಾಶುರಗಳಲ್ಲಿ ಆತನನ್ನು ಕೊಂಡಾಡಿದರು. ಅದೇ ಈ ಮೂರು ತಿರುವಂದಾದಿಗಳು. ಇವು ನಾಲ್ಕು ಸಾವಿರ ಪ್ರಬಂಧಗಳಲ್ಲಿ ಶ್ರುತಿ ಮನೋಹರವಾಗಿವೆ.

**ತಿರುಮಳಿಶೈ ಆಳ್ವಾರ್:** ಇವರು ಮೊದಲ ಮೂರು ಆಳ್ವಾರುಗಳ ಸಮಕಾಲೀನರು. ಆ ಆಳ್ವಾರುಗಳು ಹುಟ್ಟಿದ ವರ್ಷದಲ್ಲಿಯೇ ಮಕರ ಮಾಸದ ಮಖಾ ನಕ್ಷತ್ರದಲ್ಲಿ ಇವರು ಉದಿಸಿದರೆಂದು ಗುರುಪರಂಪರಾಪ್ರಭಾವ ತಿಳಿಸುತ್ತದೆ. ಇವರ ಜನ್ಮಸ್ಥಳ ತಿರುಮಳಿಶೈ. ಇವರ ಜನಕ ಭೃಗುಮಹರ್ಷಿಯೆಂದೂ ಜನನಿ ಅವರ ತಪಸ್ಸನ್ನು ಕೆಡಿಸಲು ಬಂದ ದೇವಸ್ತ್ರೀ ಎಂದೂ ತಂದೆತಾಯಿಗಳಿಗೆ ಬೇಡದ ಈ ಕೂಸನ್ನು ತಿರುವಾಳನ್ ಎಂಬ ಬೇಡನೂ ಆತನ ಹೆಂಡತಿ ಪಂಗಯಚ್ಚೆಲ್ವಿಯಾರ್ ಎಂಬಾಕೆಯೂ ಬಾಲ್ಯ ತೀರುವವರೆಗೂ ಸಾಕಿಸಲಹಿದರೆಂದೂ ಗುರುಪರಂಪರಾ ಪ್ರಭಾವದಿಂದ ತಿಳಿದುಬರುತ್ತದೆ. ಸುಸ್ನಿಗ್ಧನಾದ ಕಣಿಕೃಷ್ಣ ಎಂಬ ಚತುರ್ಥವರ್ಣದ ಶಿಷ್ಯ–ಮಿತ್ರ ಈ ಆಳ್ವಾರರಿಗೆ ಬಾಲ್ಯದಿಂದಲೂ ದೊರೆತ. ಈತನೋ ಬಹು ಕುಶಲ. ವಿದ್ಯಾವಂತ ಮತ್ತು ಮಮತೆಯುಳ್ಳವ. ತಿರುಮಳಿಶೈ ಆಳ್ವಾರರು ಯಾರಿಂದ ವಿದ್ಯೆಗಳನ್ನು ಕಲಿತರೋ ತಿಳಿಯದು. ಆದರೆ ಆಳ್ವಾರ್‌ಗಳ ಪೈಕಿ ಇವರು ತುಂಬ ವಿದ್ಯಾಸಂಪನ್ನರೆಂದೂ ವೇದಶಾಸ್ತ್ರಗಳಲ್ಲಲ್ಲದೆ ಇತರ ಸಮಯಗಳಲ್ಲೂ ಇವರಿಗೆ ಪ್ರವೇಶವಿತ್ತೆಂದೂ ವಿಪ್ರರು ಮೊದಮೊದಲು ಇವರನ್ನು ಹೀನಾಯವಾಗಿ ಕಂಡರೂ ಕೊನೆಕೊನೆಗೆ ಮರ್ಯಾದೆಯಿಂದ ಕಂಡು ಆದರಿಸುತ್ತಿದ್ದರೆಂದೂ ಇವರ ವಿಷಯಕವಾದ ಕಥೆಗಳಿಂದ ತಿಳಿದುಬರುತ್ತದೆ. ಭಕ್ತರಲ್ಲಿ ಈತ ಏಕಾಂತಿ. ವಿಷ್ಣುವನ್ನಲ್ಲದೆ ಬೇರಾವ ದೈವವನ್ನೂ ನೆನೆಯಲೊಲ್ಲದವರು; ಇದರಿಂದ ಇವರು ಭಕ್ತಿಸಾರ ಎಂಬ ಬಿರುದಿಗೂ ಪಾತ್ರರಾಗಿದ್ದಾರೆ. ಇವರ ಎರಡು ಪ್ರಬಂಧಗಳು ನಾಲ್ಕು ಸಾವಿರದಲ್ಲಿ ಸೇರಿವೆ; ತಿರುಚ್ಚಂದವಿರುತ್ತಂ ಎಂಬುದರಲ್ಲಿ 120 ಬಿಡಿ ಪದ್ಯಗಳೂ ನಾನ್‌ಮುಹನ್ ತಿರುವನ್ದಾದಿ ಎಂಬುದರಲ್ಲಿ 96 ಬಿಡಿ ಪದ್ಯಗಳೂ ಇದ್ದು, ಒಟ್ಟು 216 ಪಾಶುರಗಳು ಇವರಿಂದ ಶ್ರೀವೈಷ್ಣವರಿಗೆ ಪ್ರಾಪ್ತವಾಗಿರುವ ನಿಧಿ. ಭಗವಂತನ ಚಕ್ರಾಂಶರೆಂದು ಸಂಪ್ರದಾಯ ಈ ಆಳ್ವಾರರನ್ನು ಪರಿಭಾವಿಸುತ್ತದೆ.

**ನಮ್ಮಾಳ್ವಾರ್:** ತಾವು ರಚಿಸಿರುವ ಪ್ರಬಂಧಗಳ ಮಹತ್ತ್ವದಿಂದ ಆಳ್ವಾರುಗಳ ಅಗ್ರಪದವಿಗೇರಿದ ಈ ಮಹಾನುಭಾವರ ಕಾಲ ನಿಷ್ಕೃಷ್ಟವಾಗಿ ತಿಳಿಯದು; 6ನೆಯ ಶತಮಾನದ ಆದಿಭಾಗದಲ್ಲಿದ್ದರೆಂದು ಸ್ಥೂಲವಾಗಿ ಹೇಳಬಹುದು. ಕೆಲವರು ಇದನ್ನು ಎಂಟನೆಯ ಶತಮಾನದ ಆದಿಭಾಗಕ್ಕೊಯ್ಯುತ್ತಾರೆ. ವೃಷಭಮಾಸದ ವಿಶಾಖಾ ನಕ್ಷತ್ರದ ದಿವಸ ತಿರುಕ್ಕುರುಹೂರ್ (ತಿನ್ನವೆಲ್ಲಿ ಜಿಲ್ಲೆ) ಎಂಬ ಗ್ರಾಮದಲ್ಲಿ ಈ ವಿಷ್ವಕ್ಸೇನಾಂಶರು ಅವತರಿಸಿದರೆಂದು ಗುರುಪರಂಪರಾಪ್ರಭಾವದಿಂದ ತಿಳಿದುಬರುತ್ತದೆ. ಇವರ ತಂದೆ ವೆಲ್ಲಾಳ ಕುಲದ ಕಾರಿಯರ್ ಎಂಬವರು; ತಾಯಿಯ ಹೆಸರು ಉಡೈಯ ನಂಗೈಯಾರ್. ತಂದೆ ತಾಯಿಗಳು ಹರಕೆ ಹೊತ್ತು ಪಡೆದ ಈ ಮಗನಿಗೆ ಮಾರ ಎಂದು ಹೆಸರಿಟ್ಟರು. ಇವರಿಗೆ ಶಠಾರಿ, ಶಡಗೋಪ ಎಂದೂ ಹೆಸರುಂಟು. ಈ ಕೂಸು ಹುಟ್ಟಿದಾಗಿನಿಂದ ಅಳಲೂ ಇಲ್ಲ, ಉಣ್ಣಲೂ ಇಲ್ಲ; ಆದರೂ ಕಳೆಗುಂದದಿತ್ತು. ಇಂಥ ಮಗುವನ್ನು ಏನು ಮಾಡಬೇಕೆಂದು ತೋಚದೆ ಅವರು ತಮ್ಮೂರ ಹೊಳೆಯ ದಂಡೆಯ ಗುಡಿಯಲ್ಲಿ ಒಂದು ತೊಟ್ಟಿಲನ್ನು ತೂಗುಹಾಕಿ ಕೂಸನ್ನು ಅಲ್ಲಿ ಮಲಗಿಸಿ ಬಂದರು. ಕೂಸು ಯಾರ ಹಂಗೂ ಇಲ್ಲದೆ ಚೆನ್ನಾಗಿ ಬೆಳೆಯಿತು; ಎದ್ದು ಕೂತಿತು; ಕಾಲಾಡಲು ಬಂದಾಗ ನಡೆದುಕೊಂಡು ಹೋಗಿ ದೇವಾಲಯದಲ್ಲಿದ್ದ ಒಂದು ಹುಣಸೆಮರದ ದೊಗರಿನಲ್ಲಿ ನೆಲಸಿತು. ಹೀಗೆ ಸ್ವಾನುಭವದ ಆನಂದಯೋಗದಲ್ಲಿ ಹದಿನಾರು ಪ್ರಾಯ ತುಂಬುವವರೆಗೂ ಮೌನವಾಗಿದ್ದ ಈ ಮರುಳರನ್ನು ಮಧುರಕವಿ ಎಂಬ ಮುಮುಕ್ಷು ಬ್ರಾಹ್ಮಣ ಕಂಡು ಮಾತಾಡಿಸಿದರು. ಇವರಿಬ್ಬರ ಸಂಗಡಿಕೆಯಲ್ಲಿ ನಾವು ಚಾರಿತ್ರಿಕಾಂಶವನ್ನು ಮುಟ್ಟುತ್ತೇವೆ. ನಮ್ಮಾಳ್ವಾರರನ್ನು ಕಂಡು ನುಡಿಸಿದ ಕೂಡಲೆ ಮಧುರಕವಿಗಳು ತಾವು ಶ್ರೇಷ್ಠಕುಲದವರೆಂಬುದನ್ನೂ ವಿದ್ಯಾವಂತರೆಂಬುದನ್ನೂ ಕವಿತಾಸಂಪನ್ನರೆಂಬುದನ್ನೂ ಸಂಪೂರ್ಣವಾಗಿ ಮರೆತಂತೆ ತೋರುತ್ತದೆ. ತಾವು ಅರಸುತ್ತಿದ್ದ ಗುರುವನ್ನು ಈ ಶಡಗೋಪರಲ್ಲಿ ಕಂಡುಕೊಂಡು ಇವರ ಸೇವೆಗೆ ನಿಂತರು, ಮಧುರಕವಿ. ಇವರ ಪ್ರತಿಭೆಯನ್ನು ಪ್ರಚೋದಿಸಿ ಮೌನದ ಮುದ್ರೆಯನ್ನೊಡೆದು ತನ್ಮುಖೇನ ನಾಲ್ಕು ದಿವ್ಯ ಪ್ರಬಂಧಗಳನ್ನು ಹೊರತಂದು, ಮುಖಸ್ಥ ಮಾಡಿಕೊಂಡು ಕೇರಿಕೇರಿಗಳಲ್ಲಿ ಹಾಡಿ ಹರಡಿದರು. ಈ ಗುರು ಶಿಷ್ಯರ ಮಿಲನ ಸಿದ್ಧಿಬುದ್ಧಿಗಳ ಮಿಲನದಂತೆ ತುಂಬ ಮನೋಹರವಾಗಿದೆ.

ನಮ್ಮಾಳ್ವಾರರಿಂದ ಲಭ್ಯವಾಗಿರುವ ರಚನೆಗಳು ನಾಲ್ಕು : ತಿರುವಿರುತ್ತಂ (ನೂರು ಬಿಡಿ ಪದ್ಯಗಳು) ತಿರುವಾಶಿರಿಯಂ (ಏಳು ಬಿಡಿ ಪದ್ಯಗಳು) ಪೆರಿಯ ತಿರುವಂದಾದಿ (87 ಬಿಡಿ ಪದ್ಯಗಳು), ತಿರುವಾಯ್ ಮೊಳಿ (1102 ಪದ್ಯಗಳು), ಒಟ್ಟು 1296 ಬಿಡಿ ಪದ್ಯಗಳು. ತಿರುವಾಯ್ ಮೊಳಿಗೆ ಐದು ದೊಡ್ಡ ವ್ಯಾಖ್ಯಾನಗಳಿವೆ : ಶ್ರೀವೈಷ್ಣವ ಸಮಯವನ್ನರಿಯ ಬಯಸುವವರಿಗೆ ಈ ವ್ಯಾಖ್ಯಾನಗಳು ತುಂಬ ಸ್ವಾರಸ್ಯವಾಗಿವೆ. ಮೊದಲನೆಯ ವ್ಯಾಖ್ಯಾನಕ್ಕೆ ಆರಾಯಿರಪ್ಪಡಿ ಎಂದು ಹೆಸರು; ಇದನ್ನು ರಾಮಾನುಜರು ತಮ್ಮ ಅಗ್ರಶಿಷ್ಯರಾದ ತಿರುಕ್ಕುರುಕೈಪ್ಪಿರಾನ್ ಎಂಬವರಿಂದ ಬರೆಯಿಸಿದರು. ಅಲ್ಲಿಂದ ಮುಂದೆ ಮಿಕ್ಕ ನಾಲ್ಕು ವ್ಯಾಖ್ಯಾನಗಳೂ ಆದುವು. ವೇದಾಂತ ದೇಶಿಕರ್ ಎಂಬ ಆಚಾರ್ಯವರ್ಯರು ದ್ರವಿಡೋಪನಿಷತ್ ತಾತ್ಪರ್ಯ ರತ್ನಾವಳೀ ಎಂಬ ಸಂಸ್ಕೃತ ಪದ್ಯಮಾಲಿಕೆಯಲ್ಲಿಯೂ ಅಳಹಿಯ ಮಣವಾಳಜೀಯರ್ ಎಂಬ ಆಚಾರ್ಯರು ದ್ರವಿಡೋಪನಿಷತ್ಸಂಗತಿ ಎಂಬ ಪದ್ಯಮಾಲಿಕೆಯಲ್ಲಿಯೂ ತಿರುವಾಯ್‌ಮೊಳಿಯ ಸಾರವನ್ನು ಸಂಗ್ರಹಿಸಿದ್ದಾರೆ. ಆಧುನಿಕರಾದ ಶ್ರೀಮಾನ್ ಎಂ.ಟಿ. ನರಸಿಂಹಾಚಾರ್ಯ (ಶ್ರೀ ಕಲ್ಕಿ) ಸ್ವಾಮಿಗಳವರು ಈ ಪ್ರಬಂಧಕ್ಕೆ ಕನ್ನಡದಲ್ಲಿ ಪ್ರತಿ ಪದಾರ್ಥವನ್ನೂ ತಾತ್ಪರ್ಯವನ್ನೂ ಬರೆದು ಪ್ರತಿ ಪದ್ಯವನ್ನೂ ಸಂಸ್ಕೃತದಲ್ಲಿ ಮನೋಹರವಾಗಿ ಅನುವಾದಿಸಿದ್ದಾರೆ. ತಿರುವಾಯ್‌ಮೊಳಿಗೆ ಈ ಪರಿಯಲ್ಲಿ ಆಚಾರ್ಯರೆಲ್ಲರೂ ಪ್ರಾಶಸ್ತ್ಯ ಕೊಟ್ಟಿರುವುದು ತುಂಬ ಉಚಿತವೆನಿಸುತ್ತದೆ. ಜೀವಾತ್ಮನಿಗೆ ಅಚಿತ್ ಸಂಸರ್ಗದಿಂದ ಸುಖಭ್ರಾಂತಿ ಮತ್ತು ಭಗವದ್ವಿಶ್ಲೇಷಣ; ಭಗವತ್ ಸಂಶ್ಲೇಷಣದಿಂದ ಅಚಿತ್ ಸಂಗವಿಮುಕ್ತಿ ಮತ್ತು ಶಾಶ್ವತಸುಖ ಎಂಬುದನ್ನು ಮನಗಾಣಬಯಸುವವರಿಗೆ ಶಠಾರಿಮುನಿಯ ಸೂಕ್ತಿಗಳೊಂದು ರಸನಿಧಿ. ವೇದಾಂತೋದಿತಾರ್ಥಗಳಿಗೆ ಭಾಗವತ ಮಾರ್ಗದ ಭಕ್ತಿರಸವನ್ನು ಹೊಂದಿಸಿ ಒಂದು ಸುಂದರವೂ ಸಹಜವೂ ಸಾರವುಳ್ಳದ್ದೂ ಆದ ದರ್ಶನವನ್ನು ಈ ಗೀತೆಗಳು ರೂಪಿಸಿವೆ. ದಾರ್ಶನಿಕರಿಗೆ ಇಲ್ಲಿ ಸದ್ದರ್ಶನ ಸಿಕ್ಕುತ್ತದೆ, ಲೌಕಿಕ ರಸಿಕರಿಗೆ ಪ್ರತಿಭಾಸಂಪನ್ನವೂ ಸಕಲಾಲಂಕಾರಪೂರ್ಣವೂ ರಸಸ್ಯಂದಿಯೂ ಆದ ಕವಿತೆ ದೊರೆಯುತ್ತದೆ. ಭಕ್ತರಿಗೆ ತಮ್ಮ ನಿಷ್ಠೆ ಹೇಗಿರಬೇಕೆಂಬುದು ಸ್ಪಷ್ಟವಾಗುತ್ತದೆ. ಆಪನ್ನರಿಗೆ ನಲ್ ಮೊರೆಗಳು ಲಭಿಸುತ್ತವೆ.

ಈ ವೇದಂ ತಮಿಳ್ ಶೈದ ಮಾರನ್, ಪ್ರಪನ್ನ ಜನಕೂಟಸ್ಥರೆನಿಸಿದ ನಮ್ಮಾಳ್ವಾರರು ಕೇವಲ 35 ವರ್ಷಗಳು ಬದುಕಿದ್ದರೆಂದೂ ಇದ್ದ ಜಾಗವನ್ನು ಬಿಟ್ಟು ಕದಲಲಿಲ್ಲವೆಂದೂ ಸಂಪ್ರದಾಯ ತಿಳಿಸುತ್ತದೆ. ಆದರೆ ಇವರ ಗೀತೆಗಳಲ್ಲಿ ಅನೇಕ ದಿವ್ಯ ಸ್ಥಳಗಳ ಅರ್ಚಾವತಾರ ಮೂರ್ತಿಗಳ ಸ್ತೋತ್ರಗಳಿರುವುದರಿಂದ ಇವರು ಚೋಳ, ಪಾಂಡ್ಯ, ಕೇರಳ ದೇಶಗಳಲ್ಲಿ ಕ್ಷೇತ್ರಯಾತ್ರೆಗಳನ್ನು ಸ್ವಲ್ಪಕಾಲ ನಡೆಸಿದರೆಂದು ಊಹಿಸಬಹುದು. ಮತ್ತು ತಮ್ಮ ಪ್ರಬಂಧಗಳ ಮಹಿಮೆಯಿಂದ ಇವರು ಬೌದ್ಧ ಜೈನಾದಿ ಇತರ ಮತಗಳ ಪ್ರಾಬಲ್ಯವನ್ನು ಮುರಿದರೆಂಬುದು ಇವರಿಗೆ ಭಕ್ತರಿತ್ತ ಪರಾಂಕುಶ ಎಂಬ ಬಿರುದಿನಿಂದ ವ್ಯಕ್ತವಾಗುತ್ತದೆ.

**ಮಧುರಕವಿ ಆಳ್ವಾರ್:** ಇವರು ಮೇಲೆ ಹೇಳಿದಂತೆ ನಮ್ಮಾಳ್ವಾರ್ ಅವರ ಸಮಕಾಲೀನರು. ಅವರಿಗಿಂತ ವಯಸ್ಸಿನಲ್ಲಿ ಹಿರಿಯರು; ಗುರು ಪರಂಧಾಮವನ್ನೈದಿದ ಬಳಿಕವೂ ಕೆಲಕಾಲವಿದ್ದು ಅವರ ಪ್ರಬಂಧಗಳನ್ನು ಅಜ್ಞರಲ್ಲೂ ತಜ್ಞರಲ್ಲೂ ಹರಡುತ್ತ, ಆಳ್ವಾರರ ವೈಭವವನ್ನು ಕೊಂಡಾಡುತ್ತ ಅವರ ಅರ್ಚಾರೂಪವನ್ನು ಪ್ರತಿಷ್ಠಾಪಿಸಿ ಪೂಜೆಗೈಯುತ್ತಿದ್ದರೆಂದು ಗುರುಪರಂಪರಾಪ್ರಭಾವದಿಂದ ತಿಳಿದುಬರುತ್ತದೆ. ಈ ಆಚಾರ್ಯನಿಷ್ಠರು ಮೇಷ ಮಾಸದ ಚಿತ್ತಾನಕ್ಷತ್ರದಲ್ಲಿ ಪಾಂಡ್ಯ ದೇಶದ ತಿರುಕ್ಕೋಳೂರಿನಲ್ಲಿ ಸಾಮವೇದ ಶಾಖೆಯ ಬ್ರಾಹ್ಮಣ ಕುಲವೊಂದರಲ್ಲಿ ಜನ್ಮತಾಳಿದರು. ವೇದವೇದಾಂಗಗಳಲ್ಲಿ ಪ್ರಾವೀಣ್ಯ ಪಡೆದು ಈ ತತ್ತ್ವಪಿಪಾಸು ಬಹುಕಾಲ ಸತ್ಸಂಗದಲ್ಲೂ ತೀರ್ಥಕ್ಷೇತ್ರಯಾತ್ರೆಗಳಲ್ಲೂ ಕಾಲಕಳೆಯುತ್ತಿದ್ದರು. ಆದರೆ ಮನಸ್ಸು ಮಾತ್ರ ಏತರಿಂದಲೂ ನೆಮ್ಮದಿ ಪಡೆಯದೆ ಸದ್ಗುರುವೊಬ್ಬನನ್ನು ಅರಸುತ್ತಲೇ ಇತ್ತು. ಇವರು ಒಮ್ಮೆ ಅಯೋಧ್ಯೆಯಲ್ಲಿ ಪ್ರವಾಸವಿದ್ದಾಗ ತೆಂಕಣದಿಕ್ಕಿನಲ್ಲಿ ಒಂದು ಜ್ಯೋತಿ ಬಾನಲ್ಲಿ ಬೆಳಗುತ್ತಿದ್ದುದನ್ನು ಕಂಡರು. ಹಿಂದೆಂದೂ ಕಾಣದಿದ್ದ ಆ ಬೆಳಕನ್ನು ಮೂರು ದಿನ ನಿರುಕಿಸಿ ಅದು ನೆಲೆಯಾಗಿದ್ದುದನ್ನು ಕಂಡು, ಅದನ್ನಾರಿಸಿಕೊಂಡು ಆ ನಿಟ್ಟಿನಲ್ಲಿ ಪಯಣಿಸುತ್ತಾ ತಿರುಕುರುಹೊರ್ ಎಂಬಲ್ಲಿಗೆ ಬಂದು ಇಲ್ಲಿನ ಆಶ್ಚರ್ಯವೇನೆಂದು ಕೇಳಲು ಅಲ್ಲಿನವರು ಹುಣಸೆಮರದ ದೊಗರಿನಲ್ಲಿ ಮರುಳರಂತಿದ್ದ ಆ ಮಾರನ್ ಎಂಬುವರನ್ನು ತೋರಿಸಿದರು. ಆ ಬಾಲಯೋಗಿಯ ತೇಜಸ್ಸಿಗೆ ಮರುಳಾಗಿ

ಮಧುರಕವಿಗಳು ಉಪಾಯದಿಂದ ಆತ ಬಹಿರ್ಮುಖರಾಗುವಂತೆ ಮಾಡಿದರು. ಒಂದು ಒಗಟಿನ ಪ್ರಶ್ನೆಯನ್ನು ಹಾಕಿ ಸದುತ್ತರವನ್ನು ಪಡೆದು ಅವರ ಮೇಧಾಶಕ್ತಿಯನ್ನರಿತರು. ಈತನೇ ತಕ್ಕ ಗುರುವೆಂದು ಅಲ್ಲಿಂದ ಮುಂದೆ ಅವರನ್ನು ಆಶ್ರಯಿಸಿ ಅವರ ಸೇವೆಗೆ ನಿಂತು ಅವರ ಶ್ರೀಸೂಕ್ತಿಗಳಲ್ಲಿ ಮುಳುಗಿಹೋದರು. ಇವರು ರಚಿಸಿರುವ ಮಿಕ್ಕ ಗೀತೆಗಳ ಪಾಡೇನಾಯಿತೋ ತಿಳಿಯದು. ನಮಗೆ ಇದರಿಂದ ಲಭ್ಯವಾಗಿರುವುದು ಕೇವಲ ಹನ್ನೊಂದು ಬಿಡಿ ಪದ್ಯಗಳು. ಆಚಾರ್ಯಸ್ತೋತ್ರ ರೂಪವಾದವು. ಕುರುಹೂರ್ ನಂಬಿಗಿಂತ ಮತ್ತೊಂದು ದೈವವನ್ನು ನಾನರಿಯೆ. ನಾನು ಕಲಿತ ವೇದ ಶಾಸ್ತ್ರಗಳ ತತ್ತ್ವ ನನ್ನೆದೆಯಲ್ಲಿ ನೆಲೆಸುವಂತೆ ಮಾಡಿದವರು ಇವರು. ಯಾರು ಬೈದರೇನು, ಬೈದಷ್ಟೂ ಇನಿದಾಗುತ್ತದೆ–ನನಗೂ ನನ್ನ ಆಚಾರ್ಯನಿಗೂ ಇರುವ ಮಧುರ ಬಾಂಧವ್ಯ ಎಂದು ಈ ಪದ್ಯದಲ್ಲಿ ತಮ್ಮ ಆಚಾರ್ಯನಿಷ್ಠೆಯ ಪರಾಕಾಷ್ಠೆಯನ್ನು ಪ್ರಕಾಶಗೊಳಿಸಿ ಶ್ರೀವೈಷ್ಣವ ಸಂಪ್ರದಾಯದಲ್ಲಿ ಒಂದು ಹೊಸ ಬಳಿಯನ್ನೇ ತೆರೆದರು, ನಮ್ಮಾಳ್ವಾರರಲ್ಲಿ ಮುಳುಗಿದ ಈ ಆಳ್ವಾರರು.

**ಕುಲಶೇಖರ ಆಳ್ವಾರ್:** ನಮ್ಮಾಳ್ವಾರ್ ಅವರ ಅನಂತರ ಸ್ವಲ್ಪಕಾಲದ ಮೇಲೆ ಉದಿಸಿದ ಆಳ್ವಾರರು ಕೇರಳ ದೇಶದ ಕೋಳ ಪಟ್ಟಣದ ರಾಜನಾದ ದೃಢವ್ರತನೆಂಬ ರಾಜನ ಪುತ್ರ. ಕುಂಭಮಾಸದ ಪುನರ್ವಸು ನಕ್ಷತ್ರದಲ್ಲಿ ಶ್ರೀಮನ್ಮಹಾವಿಷ್ಣುವಿನ ಕೌಸ್ತುಭಾಂಶರಾಗಿ ಇವರು ಜನಿಸಿದರೆಂದು ಸಂಪ್ರದಾಯಗ್ರಂಥ ತಿಳಿಸುತ್ತದೆ. ಅರಸಾಗಿ ಹುಟ್ಟಿದ್ದರೂ ಇವರಿಗೆ ಭೋಗತೃಷ್ಣೆಯಿರಲಿಲ್ಲ; ಅಸದೃಶವಾದ ದೈವತೃಷ್ಣೆಯಿತ್ತು. ಬಾನನ್ನಾಳುವ ಚಂದ್ರನಂತೆ ಬಿಳಿದಾಗಿರುವ ಈ ಛತ್ರಿಯ ಕೆಳಗೆ ಅಟ್ಟಹಾಸದಿಂದ ಕುಳಿತು ಅರಸರ ಅರಸಾಗಿ ಆಳುವವನ ಸಂಪತ್ತನ್ನು ಸಂಪತ್ತೆಂದು ಒಂದು ಕ್ಷಣಮಾತ್ರವೂ ಭಾವಿಸಲಾರೆ. ಎಲ್ಲರೂ ಕೊಂಡಾಡುವ ಈ ಸಿರಿ ನನಗೆ ಬೆಲೆಯಿಲ್ಲದ್ದು. ಇದಕ್ಕಿಂತಲೂ ತಿರುವೇಂಗಡದ ಬೆಟ್ಟಗಳಲ್ಲಿ ಸ್ವೇಚ್ಛೆಯಾಗಿ ಹರಿದಾಡುವ ಕಾಡುಹೊಳೆಯಾಗಿರುವುದು ಲೇಸು. ಈ ವರವನ್ನು ಭಗವಂತ ನನಗೀಯಲಿ (ಶ್ರೀ ಎಂ. ಯಾಮುನಾಚಾರ್ಯರ ಅನುವಾದ)–ಎಂದು ಒಂದು ಪದ್ಯದಲ್ಲಿ ಇವರು ಮೊರೆಯಿಟ್ಟಿದ್ದಾರೆ. ಇವರು ವಿದ್ಯಾಸಂಪನ್ನರು. ರಾಮಾಯಣ ಭಾಗವತಗಳಲ್ಲಿ ಆಯಾ ಕತೆಗಳ ಪಾತ್ರಗಳಲ್ಲಿ ಲೀನವಾಗುವಷ್ಟು ಇವರಿಗೆ ಉನ್ಮತ್ತ ಪ್ರೀತಿ. ಸಾಧು ಸಂತರ ಸಂತರ್ಪಣೆಯಲ್ಲಿ ತುಂಬ ಶ್ರದ್ಧೆ, ತೀರ್ಥಯಾತ್ರೆಗಳಲ್ಲಿ ವಿಶೇಷವಾದ ಆಸಕ್ತಿ. ಇವರು ಅಧಿಕಾರಕ್ಕಾಗಲಿ ಅಂತಸ್ತಿಗಾಗಲಿ ಎಂದಿಗೂ ಆಸೆ ಪಟ್ಟವರಲ್ಲ. ವಯಸ್ಸಿನ್ನೂ ಮೀರಿರದಾಗಲೇ ಈ ಮಹಾನುಭಾವರು ಮಗನಿಗೆ ಪಟ್ಟಗಟ್ಟಿ ಶ್ರೀರಂಗಕ್ಷೇತ್ರದಲ್ಲಿ ಅಕಿಂಚನರಾಗಿದ್ದುಬಿಟ್ಟರು. ಇವರ ತಿರುಮೊಳಿ ಎಂಬ 105 ಬಿಡಿ ಪದ್ಯಗಳುಳ್ಳ ಪ್ರಬಂಧವೊಂದು ನಮಗೆ ಲಭಿಸಿದೆ. 'ಹೊರೆವ ಒಡೆಯಾ, ಎಷ್ಟು ಕಷ್ಟಗಳನ್ನಾದರೂ ಕೊಡು, ಅದನ್ನು ಹೋಗಿಸುವವನು ನೀನೇ. ಮುನಿಸಿನಿಂದ ತನ್ನನ್ನು ಕಡೆಗಣಿಸಿರುವ ತಾಯನ್ನು ನೆಚ್ಚಳಿಯದೆ ನೆನೆನೆನೆದು ಮಗು ಅಳುವಂತೆ ನಿನ್ನನ್ನು ನೆನೆದು ನೆನೆದೇ ನಾನು ರೋದಿಸುತ್ತೇನೆ.' ಈ ತರದ ಮಾತುಗಳು ಇವರ ಕವಿತೆಯ ತುಂಬ ಇವೆ. ತಮಿಳಿನ ಈ ಪ್ರಬಂಧವೊಂದನ್ನು ಅಲ್ಲದೆ ಸಂಸ್ಕೃತದಲ್ಲಿ ಸರ್ವಾದರಣೀಯವೂ ಶೋಭನವೂ ಪ್ರಶಮನಕರವೂ ಆದ ಮುಕುಂದಮಾಲಾ ಎಂಬ ಸ್ತೋತ್ರವನ್ನು ಈತ ರಚಿಸಿದ್ದಾರೆ.

**ಪೆರಿಯಾಳ್ವಾರ್:** ಕುಲಶೇಖರ ಆಳ್ವಾರರಿಗೆ ಈಚಿನವರು. ಇವರ ತಂದೆ ಶ್ರೀವಿಲ್ಲಿಪುತ್ತೂರಿನ ಮುಕುಂದಾಚಾರ್ಯರ್ ಎಂಬ ವಿಪ್ರೋತ್ತಮರು. ತಾಯಿ ಪದುಮೈಯಾರ್ ಎಂಬಾಕೆ. ಮಿಥುನ ಮಾಸದ ಸ್ವಾತಿ ನಕ್ಷತ್ರದಲ್ಲಿ ಈ ಗರುಡಾಂಶರ ಜನ್ಮದಿನೋತ್ಸವ ನಡೆಯುತ್ತದೆ. ಇವರಿಗೆ ತಾಯಿತಂದೆಗಳು ಇಟ್ಟ ಹೆಸರು ವಿಷ್ಣು ಚಿತ್ತ ಎಂದು; ತಮ್ಮ ಮಹಿಮೆಯಿಂದ ಪಡೆದ ಹೆಸರು ಪಟ್ಟರ್ ಪಿರಾನ್ ಮತ್ತು ಪೆರಿಯಾಳ್ವಾರ್ ಎಂದು. ಇವರು ಗುರುಮುಖೇನ ವಿದ್ಯೆ ಕಲಿತಂತೆ ತೋರುವುದಿಲ್ಲ; ಆದರೆ ಭಗವತ್ ಕೃಪೆಯಿಂದ ಪ್ರತಿಭಾಸಂಪನ್ನರಾಗಿ ಪಾಂಡ್ಯರಾಜನ ನೆರಹಿದ ವಿದ್ವತ್ಸಭೆಯಲ್ಲಿ ವಿದ್ಯಾಶುಲ್ಕವನ್ನು ಗೆದ್ದು ಆ ರಾಜನಿಂದ ಪೂಜೆಗೊಂಡರು. ಆತ ಇವರನ್ನು ಆನೆಯ ಮೇಲೆ ಅಂಬಾರಿಯಲ್ಲಿ ಕೂರಿಸಿ ಮೆರವಣಿಗೆ ತರುತ್ತಿದ್ದಾಗ ನಡುದಾರಿಯಲ್ಲಿ ಗರುಡವಾಹನನಾಗಿ ಶ್ರೀಮನ್ಮಹಾವಿಷ್ಣು ಪ್ರತ್ಯಕ್ಷನಾದ. ಆ ದೈವವನ್ನು ಕಂಡು ಅದರಂದಕ್ಕೆ ಬೆರಗಾಗಿ, ಈ ಅಂದ ಎಂದಿಗೂ ಕೆಡದಿರಲಿ ಎಂದು ಮಂಗಳಾಶಂಸೆಯನ್ನು ಆಳ್ವಾರರು ಹಾಡಿದರು. ಇದೇ ಶ್ರೀ ವೈಷ್ಣವರ ಪೂಜಾಕಾಲದಲ್ಲಿ ನಿತ್ಯವೂ ಅನುಸಂಧಾನ ಮಾಡುವ ಪ್ರಸಿದ್ಧವಾದ ಪಲ್ಲಾಂಡು. ಪಲ್ಲಾಂಡು ಹನ್ನೆರಡು ಪಾಶುರಗಳ ಪದ್ಯ. ಆಳ್ವಾರರು ತಾವು ಪಡೆದ ಧನವನ್ನು ತಮ್ಮೂರ ದೇವರಿಗೆ ಅರ್ಪಿಸಿ ಹೂಗಳನ್ನು ಬೆಳಸಿ ಮಾಲೆಗಟ್ಟಿ ಗುಡಿಗೊಪ್ಪಿಸುವ ಕೆಲಸದಲ್ಲಿ ನಿಂತರು. ಹೀಗಿರುವಲ್ಲಿ ಒಂದು ದಿನ ಇವರ ತೋಟದ ತುಳಸೀವನದಲ್ಲಿ ಒಂದು ಹೆಣ್ಣು ಕೂಸು ಇವರಿಗೆ ದೊರೆಯಿತು. ಈಕೆಯೇ ಗೋದಾದೇವಿ, ಆಳ್ವಾರರು ಈಕೆಯನ್ನು ತುಂಬ ಮಮತೆಯಿಂದ ಸಾಕಿದರು; ಸಂಸ್ಕೃತಳನ್ನಾಗಿ ಮಾಡಿದರು. ದೇವರಿಗೆ ಇವಳು ಒಪ್ಪಿದಳೆಂದು ತಿಳಿದು ಈಕೆಯೊಲಿದ ದೈವಕ್ಕೇ ಇವಳನ್ನೊಪ್ಪಿಸಿ ರಂಗನಾಥನಿಗೆ ಶ್ವಶುರನೆನಿಸಿಕೊಂಡರು. ಇದಿಷ್ಟು ಇವರಿಗೆ ಸಂಬಂಧಿಸಿದ ಕತೆ. ಇವರು ರಚಿಸಿರುವ ಕೃತಿಗಳು ಎರಡು. ತಿರುಪ್ಪಲ್ಲಾಂಡು ಎಂಬ ಪದ್ಯದಲ್ಲಿ 12 ಬಿಡಿ ಪದ್ಯಗಳಿವೆ; ಪೆರಿಯ ತಿರುಮೊಳಿ ಎಂಬ ಪದ್ಯಮಾಲಿಕೆಯಲ್ಲಿ 461 ಬಿಡಿ ಪದ್ಯಗಳಿವೆ. ಈ ಪದ್ಯಗಳು ಶ್ರೀಕೃಷ್ಣಾವತಾರ ಲೀಲೆಗಳನ್ನು, ಅದ್ವಿತೀಯವಾಗಿ ವರ್ಣಿಸುತ್ತವೆ. ಆಳ್ವಾರರಿಗೂ ಅವರ ದೈವಕ್ಕೂ ಇದ್ದ ಸಂಬಂಧ ಪಿತಾ–ಪುತ್ರ ಸಂಬಂಧ; ಇದರಲ್ಲಿ ವಾತ್ಸಲ್ಯಭಾವ ಎದ್ದು ಕಾಣುತ್ತದೆ. ಇವರ ಕವಿತೆಯಲ್ಲಿ ಕಂಡುಬರುವ ಹಳುವು ಹೊಳಲುಗಳ ವರ್ಣನೆಗಳೂ ತುಂಬ ಮನೋಹರವಾಗಿವೆ.

**ಆಂಡಾಳ್:** ಈಕೆ ಪರಿಯಾಳ್ವಾರರ ಸಾಕುಮಗಳು. ಗೋದಾದೇವಿಯೆಂದೂ ಹೆಸರು. ಕಟಕಮಾಸದ ಪೂರ್ವಫಲ್ಗುನೀ ನಕ್ಷತ್ರದಲ್ಲಿ ಸಾಕ್ಷಾತ್ ಭೂದೇವಿ ಎಂದೇ ಪರಿಭಾವಿತಳಾಗಿರುವ ಈಕೆಯ ಜನ್ಮದಿನೋತ್ಸವ ಜರುಗುತ್ತದೆ. ಈಕೆ ಬಾಳಿದ್ದು ಬಹು ಸ್ವಲ್ಪ ಕಾಲ; ಆದರೆ ಜಗಕ್ಕಾದ ಉಪಕಾರವೋ ಅಪಾರ. ಈ ಹೆಣ್ಣು ಮಗಳು ಕನಸಿನ ದೈವವೊಂದಕ್ಕೆ ಉಸಿರು ಹೊಯ್ದು ಆತನನ್ನು ವರಿಸಿ ಆತನಲ್ಲೇ ಮೈಗರೆದಳು. ತಂದೆ ತನ್ನ ತೋಟದಿಂದ ಆರಿಸಿ ತಂದ ಹೂಗಳನ್ನು ಮಾಲೆಗಟ್ಟಿ ಈ ಮಾಲೆ ದೇವರಿಗೆ ಸೊಗಸುವುದೇ ಎಂಬುದನ್ನು ತಾನು ಮೊದಲು ಮುಡಿದು ಪರೀಕ್ಷಿಸಿ ಆಳ್ವಾರರ ಬುಟ್ಟಿಯಲ್ಲಿ ಇಡುತ್ತಿದ್ದ ಈಕೆಯ ಪರಿಪಾಟಿಯನ್ನು ಒಂದು ದಿನ ಅವರು ಕಂಡು ಕೋಪಿಸಿ ಹೂಮಾಲೆಯನ್ನು ಅದು ಅಶುದ್ಧವೆಂಬ ಕಾರಣಕ್ಕಾಗಿ ಗುಡಿಗೊಯ್ಯಲಿಲ್ಲ. ಆದರೆ ವಟಪತ್ರಶಾಯಿಗೆ ಇವಳು ಮುಡಿದ ಮಾಲೆಯಲ್ಲದೆ ಬೇರೊಂದು ಸೇರದು. ಆಳ್ವಾರರು ಈಕೆ ಮುಡಿದದ್ದನ್ನೇ ದೇವರಿಗೊಪ್ಪಿಸಬೇಕಾಯಿತು. ಗೋದಾದೇವಿ ಶೂಡಿಕ್ಕುಡುತ್ತ ನಾಚ್ಚಿಯಾರ್ ಎನಿಸಿದುದು ಈ ರೀತಿಯಲ್ಲಿ. ಹರೆಯಕ್ಕೇರಿ ದೈವವನ್ನು ನಂಬಿ ಉನ್ಮತ್ತಳಂತೆ ಇದ್ದ ಈ ಹುಡುಗಿಯನ್ನು ಏನು ಮಾಡಬೇಕೆಂಬ ಬಗ್ಗೆ ಆಳ್ವಾರರು ಚಿಂತೆಗೀಡಾದರು. ಇದು ಸಿಕ್ಕ ಹಸುಳೆ, ಸಾಕಿದ ಮಗು, ಸುಸಂಸ್ಕೃತಳೂ ಕೋಮಲಮನಸ್ಕಳೂ ಸುಂದರಿಯೂ ಆದ ಇವಳ ವರ್ತನೆಯೋ ಸಾಮಾನ್ಯ ಸ್ತ್ರೀಯರದಿದ್ದಂತಲ್ಲ. ಇವಳನ್ನು ಯಾರಿಗೆ ವಹಿಸಿ ಕೃತಾರ್ಥನಾಗೋಣ ಎಂದವರು ಆತಂಕಗೊಂಡರು. ಒಮ್ಮೆ ಆಂಡಾಳ್ ಇದನ್ನರಿತು ನನ್ನನ್ನು ಹಕ್ಕಿಯ ಬಾಯನ್ನು ಸೀಳಿದ ಮಣಿವರ್ಣನಿಗೆ ವಹಿಸಿಬಿಡಿ ಎಂದಳು; ಆತ ಶ್ರೀರಂಗನಾಥದಲ್ಲಿ ನೆಲಸಿದ್ದಾನೆಂದು ತಂದೆಯ ಮಾತಿನಿಂದಲೇ ತಿಳಿದು ತನ್ನನ್ನು ಆತನಿಗೇ ಅರ್ಪಿಸಲು ಬೇಡಿದಳು. ಶ್ರೀರಂಗನಾಥ ಈ ವಧುವನ್ನೊಪ್ಪಿದ; ಮದುವೆ ಕನಸುಗಳ ಮೂಲಕ ತನ್ನವರಿಗೂ ಆಳ್ವಾರರಿಗೂ ನಡೆಸಬೇಕೆಂದೂ ಆಣತಿಯಿತ್ತ. ಪೆರಿಯಾಳ್ವಾರರು ಕನ್ಯೆಯನ್ನು ಶ್ರೀರಂಗಕ್ಕೆ ಕರೆದೊಯ್ದು ವೈಭವದಿಂದ ವಿವಾಹ ಜರುಗಿಸಿದರು; ಆಂಡಾಳ್ ಸ್ವಾಮಿಗೆ ವರಣಮಾಲೆಯನ್ನು ಹಾಕಿ ಆತನ ಹೃದಯವನ್ನು ಹೊಕ್ಕು ಕಣ್ಮರೆಯಾದಳು. ಇದಿಷ್ಟು ಇವಳ ಕಥೆ. ಈಕೆಯಿಂದ ನಮಗೆ ಲಭಿಸಿರುವುದು ಉಪನಿಷತ್ಸಾರವೆಂದು ಪ್ರಖ್ಯಾತವಾದ ತಿರುಪ್ಪಾವೈ ಎಂಬ ಮೂವತ್ತು ಬಿಡಿ ಪದ್ಯಗಳ ಗೀತ ಮತ್ತು ನಾಚ್ಚಿಯಾರ್ ತಿರುಮೊಳಿ ಎಂಬ 147 ಬಿಡಿ ಪದ್ಯಗಳ ಅವಳಿ. ಈಕೆಯ ಕವಿತೆ ಎಂಥವರ ಮನಸ್ಸನ್ನೂ ಮರುಳು ಮಾಡುತ್ತದೆ. ರಾಮಾನುಜರು ತಿರುಪ್ಪಾವೈ ಎಂಬುದನ್ನು ನಿತ್ಯ ಹೇಳುತ್ತಾ ಆಗಾಗ ಕಣ್ಣೀರಿಡುತ್ತಿದ್ದರಂತೆ. ವೇದಾಂತದೇಶಿಕರು ಗೋದಾ ಸ್ತುತಿ ಎಂಬ ಸುಂದರವಾದ ಸ್ತೋತ್ರದಲ್ಲಿ ಈಕೆಯನ್ನು ಕೊಂಡಾಡಿದ್ದಾರೆ. ಪೂಜಾವೇಳೆಯಲ್ಲಿ ತಿರುಪ್ಪಾವೈಯ ಕೊನೆಯೆರಡು ಪಾಶುರಗಳನ್ನು ಶ್ರೀವೈಷ್ಣವರೆಲ್ಲರೂ ತಪ್ಪದೆ ಅನುಸಂಧಾನ ಮಾಡುತ್ತಾರೆ. ತಾನು ಕನಸಿನಲ್ಲಿ ರಂಗನಾಥನೊಡನೆ ಮದುವೆಗೆ ನಿಂತದ್ದನ್ನು ಈಕೆ ವರ್ಣಿಸಿರುವ ವಾರಣಮಾಯಿರಂ ಎಂಬ ಮಾಂಗಲ್ಯ ಗೀತೆ ಮದುವೆಕಾಲದಲ್ಲಿ ಪ್ರಯುಕ್ತವಾಗುತ್ತಿದೆ.

ಉನ್ ತನ್ನೊಡುತ್ತೋಮೇಯಾವೋಂ ಉನಕ್ಕೇ ನಾಮಾಳ್‌ಚ್ಚೈಯ್ವೋಂ ಮತ್ತೈನಮ್ ಕಾಮಂಗಳ್ ಮಾತ್ತು. ನಿನ್ನೊಡಗೂಡಿಯೇ ಬಾಳುವೆವು, ನಿನಗೇ ಸೇವೆಗೈವೆವು. ಮಿಕ್ಕೆಲ್ಲ ಕಾಮಗಳನ್ನೂ ಕಳೆ. ಇದು ಗೋದಾದೇವಿಯ ಮೊರೆ; ಸಮಸ್ತ ಭಕ್ತ ಮುಮುಕ್ಷುಗಳ ಒಳ ಮೊರೆಯೂ ಇದೇ. ರಾಮಾನುಜ ಸಿದ್ಧಾಂತದ ಪ್ರಕಾರ ಮುಕ್ತರು ಬಯಸುವುದೂ ಈ ಐಶ್ವರ್ಯವನ್ನೇ.

**ತೊಂಡರಡಿಪ್ಪೊಡಿ ಆಳ್ವಾರ್:** ಇವರು ಚೋಳ ದೇಶದ ಮಂಡಂಗುಡಿ ಎಂಬಲ್ಲಿಯ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ಧನುರ್ಮಾಸದ ಜ್ಯೇಷ್ಠಾ ನಕ್ಷತ್ರದ ದಿನ ವನಮಾಲಾಂಶರೆನಿಸಿದ ಇವರ ಜನ್ಮೋತ್ಸವ ಜರಗುತ್ತದೆ. ಇವರಿಗೆ ತಾಯಿ ತಂದೆಗಳಿಟ್ಟ ಹೆಸರು ವಿಪ್ರನಾರಾಯಣ ಎಂದು. ಮೊದಮೊದಲು ಇವರ ಒಲವು ಕಲಿವಿನಲ್ಲೂ ಆಮೇಲೆ ಶ್ರೀರಂಗನಾಥನ ಪುಷ್ಪಕೈಂಕರ್ಯದ ತೋಟಗಾರಿಕೆಯಲ್ಲೂ ತದನಂತರ ಒಬ್ಬಳು ವೇಶ್ಯಾಸ್ತ್ರೀಯಲ್ಲೂ ಹರಿದು ಮರಳಿ ದೈವಕೃಪೆಯಿಂದ ಶ್ರೀರಂಗನಾಥನಲ್ಲೇ ಸ್ಥಿರವಾಗಿ ನೆಲೆಸಿತೆಂದು ಇವರ ವಿಷಯಕವಾದ ಕಥೆ ತಿಳಿಸುತ್ತದೆ. ಇವರ ರಚನೆಗಳು ಎರಡು. ತಿರುಮಾಲೈ ಎಂಬ ನೀಳ್ಗಬ್ಬದಲ್ಲಿ 45 ಪದಗಳಿವೆ. ಮತ್ತು ತಿರುಪಳ್ಳಿ ಎಳಿಚ್ಚಿ ಎಂಬ ಸುಪ್ರಭಾತಗೀತದಲ್ಲಿ 10 ಪದ್ಯಗಳಿವೆ. ಈ ಸುಪ್ರಭಾತಗೀತ ನಿತ್ಯಾನುಸಂಧಾನಕ್ಕೆ ಸೇರಿದೆ. ಇದು ತುಂಬ ಒಳ್ಳೆಯ ಕವಿತೆ. ಇದರೊಂದು ಪದ್ಯದಲ್ಲಿ ಮುಂಜಾನೆಯ ಹೊಳೆಯ ದಡದ ಚಿತ್ರದ ಜೊತೆಗೆ ಆಳ್ವಾರ ನಿಲವಿನ ಒಂದು ಹೊಳಪನ್ನೂ ನಾವು ಕಾಣಬಹುದು "ನರಗಂಪಿನ ಕಮಲಗಳರಳಿವೆ. ಮೊಳಗುವ ಕಡಲಿಂದ ರವಿ ಮೊಳೆತನು, ಹಿಡಿನಡುವಿನ ಹೆಂಗಳು ತಮ್ಮ ಹೆರಳನ್ನೊದರಿ ಹಿಂಡಿ ಮಡಿಬಟ್ಟೆಯುಟ್ಟು ದಡವೇರಿದರು. ಹೊಳೆ ಬಳಸಿರುವ ರಂಗನೇ. ಕಟ್ಟಿದ ತುಳಸಿಯ ಮಾಲೆಯನ್ನು ಬುಟ್ಟಿಯಲ್ಲಿಟ್ಟು ತೋಳಿಗೇರಿಸಿದ ತೊಂಡರಡಿಪ್ಪೊಡಿ ಎಂಬ ಅಡಿಯಾಳನ್ನು ಅನಾಥನೆಂದು ಕರುಣಿಸಿ ನಿನ್ನ ಭಕ್ತರಿಗೆ

ಅಡಿಯಾಳನ್ನಾಗಿ ಮಾಡು; ಹಾಸಿಗೆ ಬಿಟ್ಟೆದ್ದು ಕರುಣಾಕಟಾಕ್ಷವನ್ನು ಬೀರು," ತಿರುಮಾಲೈಯಲ್ಲೂ ಆಪನ್ನರೆಲ್ಲರೂ ನೆನೆದು ನಲ್ಮೆಗಾಣುವ ಹಲವಾರು ಪದ್ಯಗಳಿವೆ. ಅದರಲ್ಲಿ ಊರಿಲೇನ್ಕಾಣಿಯಿಲ್ಲೇನ್ ಎಂಬ ಪಾಶುರವನ್ನು ಆಳ್ವಾರರೇ ಸದಾ ಅನುಸಂಧಾನ ಮಾಡುತ್ತಿದ್ದರಂತೆ. "ನನಗೆ ಊರೊಂದಿಲ್ಲ, ನೆಲವೊಂದಿಲ್ಲ, ಸ್ವತ್ತೊಂದಿಲ್ಲ, ನೆಂಟರಿಷ್ಟರಿಲ್ಲ. ನಿನ್ನಡಿಯನ್ನು ಹಿಡಿದವನೂ ನಾನಲ್ಲ, ಎಲೈ ಪರಮಮೂರ್ತಿ ಕಾರ್ಮುಗಿಲವಣ್ಣಾ, ಕಣ್ಣಾ, ಮೊರೆಯಿಡುತ್ತಿಹೆನು, ನೀನಲ್ಲದೆ ನನಗಾರು ಗತಿ, ರಂಗನಾಥಾ." ಈ ಪಾಶುರವನ್ನು ಶ್ರೀವೈಷ್ಣವರು ಪದೇ ಪದೇ ನೆನೆದು ನೆಮ್ಮದಿ ಪಡೆಯುತ್ತಾರೆ.

**ತಿರುಪ್ಪಾಣಾಳ್ವಾರ್:** ಇವರು ಹುಟ್ಟಿನಿಂದ ಪಂಚಮರೋ ಅಥವಾ ಬಯಲಲ್ಲಿ ಬಿಸುಟಿದ್ದ ಈ ಕೂಸನ್ನು ಪಂಚಮ ದಂಪತಿಗಳು ಸಾಕಿಸಲಹಿದ್ದರಿಂದ ಇವರು ಆ ಕುಲದವರೆನಿಸಿದರೋ ಇದು ರಹಸ್ಯವಾಗಿಯೇ ಉಳಿದಿದೆ. ಇವರ ಮನಸ್ಸಿನ ತಿಳಿಮೆ ಮತ್ತು ನಿಲವು ಸಾಮಾನ್ಯರಿಗೆ ಎಟಕುವಂಥದಲ್ಲ. ತಮ್ಮ ಕುಲದವರೊಡನೆ ಇವರು ಹೊಂದಿಕೊಂಡು ಬಾಳಿದಂತೆ ತೋರುವುದಿಲ್ಲ. ರಂಗನಾಥನ ಗುಡಿಯೆಂದರೆ ಸಾಕ್ಷಾತ್ ವೈಕುಂಠವೆಂದೇ ಇವರ ಭಾವನೆ. ಈ ಆಳ್ವಾರರು ತಮ್ಮೂರಾದ ಉರಿಯೂರ್ ಎಂಬುದನ್ನು ತೊರೆದು ಕಾವೇರಿಯ ಆಚೆ ದಡದಲ್ಲಿ ಶ್ರೀರಂಗನ ಗುಡಿಗೆದುರಾಗಿ ಒಂದು ಗುಡಿಸಲನ್ನು ಹಾಕಿಕೊಂಡು, ಕೈಯಲ್ಲಿ ವೀಣೆಯನ್ನು ಹಿಡಿದು ಭಗವನ್ನಾಮವನ್ನು ಸಂಕೀರ್ತಿಸುತ್ತಾ ಇರುತ್ತಿದ್ದರು. ಹೀಗಿರುವಲ್ಲಿ ಲೋಕಸಾರಂಗ ಮುನಿ ಎಂಬ ಶ್ರೀರಂಗನಾಥನ ಅಂತರಂಗ ಭಕ್ತರಿಗೆ ರಂಗನಾಥ ಸ್ವಪ್ನದಲ್ಲಿ ಕಾಣಿಸಿಕೊಂಡು ಈ ಆಳ್ವಾರರನ್ನು ನಿನ್ನ ಹೆಗಲಮೇಲೇರಿಸಿಕೊಂಡು ನನ್ನಲ್ಲಿಗೆ ಕರೆದು ತಾರೆಂದು ಆಣತಿಗೊಡಲು, ಆತ ಸ್ವಾಮಿಯ ಆಜ್ಞೆಯಂತೆ ನಡೆಸಿದರು. ಆಳ್ವಾರರು ಅನಿರೀಕ್ಷಿತವಾಗಿ ತಮಗೆ ಲಭಿಸಿದ ಈ ಮಹೋತ್ಕರ್ಷವನ್ನು ಹೆಚ್ಚು ಕಾಲ ಬಾಳಲ್ಲಿ ತಾಳದೆ ಹೋದರು. ರಂಗನಾಥನ ಸನ್ನಿಧಿಯಲ್ಲಿ ಆ ಮೂರ್ತಿಯ ಅಂಗಾಂಗಗಳನ್ನು ನೋಡಿನೋಡಿ ನಲಿದು ಹಾಡಿದುದೆಷ್ಟೋ ಅಷ್ಟುಕಾಲ ಜೀವ ಇವರಿಗಂಟಿಕೊಂಡಿತ್ತು. ಕೊನೆಗಲ್ಲೇ ಲೀನವಾಯಿತು. ಇವರಿಂದ ನಮಗೆ ದೊರೆತಿರುವುದು ಅಮಲನಾದಿ ಪಿರಾನ್ ಎಂಬ 10 ಪಾಶುರಗಳ ಪದ್ಯವೊಂದು ಮಾತ್ರ. ಇದು ನಿತ್ಯಾನುಸಂಧಾನಕ್ಕೆ ಸೇರಿದೆ. ಈ ಪದ್ಯಗಳಲ್ಲೂ ಈ ಆಳ್ವಾರರಲ್ಲೂ ಭಗವದ್ರಾಮಾನುಜರಿಗೆ ತುಂಬ ಪ್ರೀತಿ. ಅವರ ಸಚ್ಛಿಷ್ಯರಾದ ವೇದಾಂತ ದೇಶಿಕರು ಈ ಪದ್ಯಗಳಿಗೆ ಮುನಿವಾಹನ ಭೋಗಂ ಎಂಬ ವ್ಯಾಖ್ಯಾನ ಬರೆದಿದ್ದಾರೆ. ಮಾಸ್ತಿ ವೆಂಕಟೇಶಯ್ಯಂಗಾರ್ಯರು ಈ 10 ಪದ್ಯಗಳನ್ನೂ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಅವುಗಳಲ್ಲೊಂದು ಹೀಗಿದೆ: "ನೀಲದ ಒಡಲು, ಆಹಾ, ತುಂಬಿಕೊಂಡವೇ ನನ್ನ ಹೃದಯ ನೀರುಂಡ ಮೇಘದ ಬಣ್ಣದವನು, ಗೋವಳನಾಗಿ ಬೆಣ್ಣೆಯುಂಡ ಬಾಯವನು, ನನ್ನೊಳಗನ್ನು ಕವರಿದವನು, ಬ್ರಹ್ಮಾಂಡದ ಅಧಿಪತಿ ಅಣಿಯ ರಂಗನು, ನನ್ನ ಅಮಲನ್ನು. ಇವನನ್ನು ಕಂಡ ಕಂಗಳು ಮತ್ತೊಂದನ್ನು ಕಾಣವು."

ಇವರನ್ನು ಭಗವಂತನ ಶ್ರೀವತ್ಸಾಂಶವೆಂದು ಸಂಪ್ರದಾಯ ಪರಿಭಾವಿಸಿ ವೃಶ್ಚಿಕ ಮಾಸದ ರೋಹಿಣೀ ನಕ್ಷತ್ರದ ದಿವಸದಲ್ಲಿ ಇವರ ಜನ್ಮದಿನೋತ್ಸವವನ್ನು ಆಚರಿಸುತ್ತದೆ.

**ತಿರುಮಂಗೈ ಆಳ್ವಾರ್:** ಇವರು ಆಳ್ವಾರುಗಳಲ್ಲಿ ಕೊನೆಯವರು, ತಮ್ಮ ಪ್ರಬಂಧಗಳ ಮಹಿಮೆಯಿಂದ ಎರಡನೆಯವರು. ಚೋಳರಾಜನ ಸೇನಾಧಿಪತಿ ನೀಲ ಎಂಬ ಚತುರ್ಥವರ್ಣದವರ ಮಗನಾಗಿ ವೃಶ್ಚಿಕಮಾಸದ ಕೃತ್ತಿಕಾ ನಕ್ಷತ್ರದ ದಿನ ವಿಷ್ಣುವಿನ ಶಾರ್ಙ್ಗಧನುವಿನ ಅಂಶರೆನಿಸಿ ಈ ಆಳ್ವಾರರು ಉದಿಸಿದರೆಂದು ಸಂಪ್ರದಾಯಗ್ರಂಥ ತಿಳಿಸುತ್ತದೆ. ಇವರು ತುಂಬ ಎದೆಗಾರರು. ತಂದೆಯಂತೆ ತಾನೂ ಸೇನಾಧಿಪತಿಯಾಗಿ ರಾಜನಿಂದ ಪರಕಾಲನ್ ಎಂಬ ಬಿರುದನ್ನು ಪಡೆದರು. ಹೆಣ್ಣೆಂದರೆ ಮನಕಳಿವ ಇವರಿಗೆ ಕಾಲಕ್ರಮದಲ್ಲಿ ವೈಶ್ಯಪಾಲಿತೆಯಾದ ಕುಮುದವಲ್ಲಿ ಎಂಬ ಸುಂದರ ಕನ್ಯೆಯೊಬ್ಬಳಲ್ಲಿ ಅನುರಾಗವುಂಟಾಯಿತು. ಆಕೆ "ನೀವು ವೈಷ್ಣವರಾಗುವರಾದರೆ ಮತ್ತು ದಿನವೂ ತಪ್ಪದೆ ಭಗವದ್ಭಕ್ತರಿಗೆ ಅನ್ನಸಂತೃಪ್ತಿಯನ್ನು ನೀಡುವಿರಾದರೆ ನಿಮ್ಮನ್ನು ಮದುವೆಯಾಗುತ್ತೇನೆ" ಎಂದಳು. ಆಳ್ವಾರರು ಈ ನಿಯಮಗಳಿಗೊಪ್ಪಿ ಆಕೆಯನ್ನು ಮದುವೆಯಾದರು. ತದೀಯಾರಾಧನೆಯಿಂದ ಆಳ್ವಾರರ ಬೊಕ್ಕಸ ಬರಿದಾಯಿತು. ರಾಜನ ಮುನಿಸಿನಿಂದ ಅಧಿಕಾರ ಕೈತಪ್ಪಿತು. ಆದರೂ ಪ್ರಣಯಿನಿಗೆ ತಾನಿತ್ತ ವಚನವನ್ನು ಮರೆಯಲಾರದೆ ಆಳ್ವಾರರು ದಸ್ಯುವೃತ್ತಿಯನ್ನು ಕೈಕೊಂಡರು. ಇಂಥ ಪ್ರಣಯನಿಷ್ಠರನ್ನು ತಮ್ಮೆಡೆಗೆ ತಿರುಗಿಸಿಕೊಳ್ಳಬೇಕೆಂದೆನಿಸಿಯೋ ಏನೋ, ಶ್ರೀಮನ್ನಾರಾಯಣ ರಮಾದೇವಿಯರು ಸರ್ವಾಲಂಕಾರಭೂಷಿತರಾಗಿ ವಧೂವರರ ವೇಷದಲ್ಲಿ ಇವರ ಕೈಗೆ ಸಿಕ್ಕಿಬಿದ್ದರು. ಆದರೆ ಅವರಿಂದ ಕಳಚಿಕೊಂಡ ಒಡವೆಗಳ ಮೂಟೆಯನ್ನು ಆಳ್ವಾರರಿಗೆ ಎತ್ತಲಾಗದೆ ಹೋಯಿತು. ಯಾವುದೋ ಮಂತ್ರಹಾಕಿದ್ದಾರೆಂದೂ ಆ ಮಂತ್ರವನ್ನು ತನಗೆ ಹೇಳಿಕೊಡಬೇಕೆಂದೂ ಈತ ದೇವರ ಮೇಲೆ ಕತ್ತಿ ಹಿರಿದ. ಆಗ ಈತನ ಧೈರ್ಯಕ್ಕೆ ಮೆಚ್ಚಿ ದೇವರು ಪ್ರತ್ಯಕ್ಷನಾಗಿ ಅಷ್ಟಾಕ್ಷರೀ ಮಂತ್ರವನ್ನುಪದೇಶಿಸಿ ಕಲಿಯನ್ ಎಂಬ ಬಿರುದಿತ್ತು ಅಂತರ್ಧಾನ ಹೊಂದಿದ. ಅಂದಿನಿಂದ ಇವರಿಗೆ ದೇವರ ಹುಚ್ಚಾಯಿತು. ನಾರಾಯಣನನ್ನು ಹಾಡಿ ಹೊಗಳುವುದರಲ್ಲೂ ಶ್ರೀರಂಗನಾಥನ ಬೃಹದ್ದೇವಾಲಯವನ್ನು ಕಟ್ಟುವುದರಲ್ಲೂ ಶ್ರೀ ವೈಷ್ಣವ ಧರ್ಮವನ್ನು ಹರಡುವುದರಲ್ಲೂ ನಿರತರಾಗಿ ಆಳ್ವಾರ್ ಎನಿಸಿಕೊಂಡರು. ನಮ್ಮಾಳ್ವಾರರ ಪ್ರಬಂಧಗಳನ್ನು ಶ್ರೀರಂಗನಾಥನ ಎದುರಿನಲ್ಲಿ ಹಾಡುವ ಏರ್ಪಾಡನ್ನು ಇವರು ಮಾಡಿದರೆಂದು 'ಗುರುಪರಂಪರೆ' ತಿಳಿಸುತ್ತದೆ. ಇವರಿಂದ ಆರು ಪ್ರಬಂಧಗಳು ನಮಗೆ ಲಭಿಸಿವೆ. ಪೆರಿಯ ತಿರುಮೊಳಿ (1084 ಪದ್ಯಗಳು). ತಿರುಕ್ಕುರುದ್ದಾಂಡಹಂ (20), ತಿರುನೆಡುನ್ದಾಂಡಹಂ (30), ಶಿರಿಯ ತಿರುಮಡಲ್ (77), ಪೆರಿಯ ತಿರುಮಡಲ್ (148), ತಿರುವಳುಕ್ಕೂತ್ತಿರಕ್ಕೈ (2), ಒಟ್ಟು 1361 ಪದ್ಯಗಳು, ಆಶು, ಮಧುರಂ, ಚಿತ್ರಂ, ವಿಸ್ತಾರಂ ಎಂಬ 4 ಬಗೆಯಾದ ಪದ್ಯರಚನೆಗಳಲ್ಲೂ ಇವರು ಶ್ರೇಷ್ಠರೆಂದು ಪರಿಗಣಿತರಾಗಿ ನಾಲ್ ಕವಿಪ್ಪೆರುಮಾಳ್ ಎಂಬ ಬಿರುದನ್ನು ತಮ್ಮ ಕಾಲದ ವಿದ್ವದ್ರಸಿಕರಿಂದ ಪಡೆದರು. ಇವರ ಪ್ರಬಂಧಗಳಲ್ಲಿ ಎದ್ದು ತೋರುವುದು ಸ್ವಾಮಿಗೂ ಭೃತ್ಯನಿಗೂ ಇರುವ ಸಂಬಂಧ. ಭಗವತ್‌ಭಕ್ತಿಯಿಂದ ಕುಲವೂ ಸಂಪತ್ತೂ ಮನುಷ್ಯನಿಗೆ ಪ್ರಾಪ್ತವಾಗುತ್ತವೆ ಎಂದಿವರು ಸಾರಿದುದಲ್ಲದೆ, ತಮ್ಮೈಯೇನಾಳುಂ ವಣಂಗಿತ್ತೊಳುವಾರ್ಕ್ಕುತ್ತಮ್ಮೈಯೇಯೊಕ್ಕವರುಳ್ ಶೈವರ್ (ಪೆ.ತಿ. 1029) ಎಂಬ ಮಾತಿನಲ್ಲಿ ಭಕ್ತನಿಗೆ ಕೊನೆಯಲ್ಲಿ ಭಗವತ್ ಸಾಧರ್ಮ್ಯವೂ ದೊರೆಯುತ್ತದೆಯೆಂಬುದನ್ನು ಉದ್ಘೋಷಿಸಿದ್ದಾರೆ. ಈ ಆಳ್ವಾರರು ದೇವರ ಮೇಲೆ ಕತ್ತಿ ಹಿರಿದ ಉತ್ಸವ ಶ್ರೀ ವೈಷ್ಣವ ದೇವಸ್ಥಾನಗಳಲ್ಲಿ ಬ್ರಹ್ಮೋತ್ಸವ ಸಮಯದಲ್ಲಿ ಈಗಲೂ ಜರುಗುತ್ತದೆ. (ಪಿ.ಟಿ.ಎನ್.)

**ಆಳ್ವಾರ್ ತಿರುನಗರಿ:** ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಶ್ರೀ ವೈಕುಂಠಮ್ ತಾಲ್ಲೂಕಿನಲ್ಲಿ ತಾಮ್ರಪರ್ಣಿ ನದಿಯ ದಡದಲ್ಲಿರುವ ಒಂದು ಊರು. ಹದಿನೆಂಟು ಪ್ರಸಿದ್ಧ ವೈಷ್ಣವಕ್ಷೇತ್ರಗಳಲ್ಲಿ ಒಂದು. ನಮ್ಮಾಳ್ವಾರರ ಜನ್ಮಸ್ಥಳವೆನ್ನುವರು. ಇಲ್ಲಿಯ ಆದಿನಾಥ ದೇವಾಲಯ ತಿರುನಲ್ವೇಲಿ ಜಿಲ್ಲೆಯ ಬೃಹದ್ದೇವಾಲಯಗಳಲ್ಲೊಂದು. ಈ ವಿಷ್ಣುದೇವಾಲಯ ಮೂಲತಃ 10ನೆಯ ಶತಮಾನಕ್ಕಿಂತ ಹಳೆಯದಾಗಿದ್ದಿರ ಬಹುದಾದರೂ ಈಗಿರುವ ಕಟ್ಟಡ ಪಾಂಡ್ಯರಾಜರ ಕಾಲದಲ್ಲಿ ಪ್ರ.ಶ. 13ನೆಯ ಶತಮಾನದಲ್ಲಿ ಕಟ್ಟಿದ್ದು. ಆ ಕಾಲದ ಅನೇಕ ಶಾಸನಗಳು ಈ ದೇವಾಲಯದಲ್ಲಿ ದೊರಕಿವೆ. (ಎಸ್.ಎನ್.)

ಕನ್ನಡ ವರ್ಣಮಾಲೆಯ 3ನೆಯ ಅಕ್ಷರವಾದ ಇ ಕಾರ ಪ್ರಶ.ಪೂ. 3ನೆಯ ಶತಮಾನದ ಅಶೋಕನ ಬ್ರಾಹ್ಮೀ ಲಿಪಿಯ ಶಾಸನಗಳಲ್ಲಿ ತ್ರಿಕೋಣಾಕಾರದ ಮೂರು ಬಿಂದುಗಳ ರೂಪದಲ್ಲಿತ್ತು. ಅನಂತರ 2ನೆಯ ಶತಮಾನದ ಸಾತವಾಹನರ ಕಾಲದಲ್ಲಿ ರೂಪದಲ್ಲಿ ವಿಶೇಷ ಬದಲಾವಣೆಗಳು ಆಗದಿದ್ದರೂ ಬಿಂದುಗಳು ದೊಡ್ಡದಾದುವು. 5ನೆಯ ಶತಮಾನದ ಕದಂಬರ ಕಾಲದಲ್ಲಿ ಒಂದು ಬಿಂದು ಮಾಯವಾಗಿ ಸೇರಿಕೊಂಡ ಎರಡು ಖಂಡವೃತ್ತಗಳ ಕೆಳಭಾಗದಲ್ಲಿ ಎರಡು ಬಿಂದುಗಳು ಮುಂದುವರಿದವು. ಮುಂದಿನ ಶತಮಾನದಲ್ಲಿ ಖಂಡ ವೃತ್ತಗಳು ಅಗಲವಾದವು. 9ನೆಯ ಶತಮಾನದ ರಾಷ್ಟ್ರಕೂಟರ ಕಾಲದಲ್ಲಿ ಬಲಭಾಗದ ಖಂಡವೃತ್ತ ಕೆಳಗಿನವರೆಗೂ ಹರಿದು ಅಕ್ಷರಕ್ಕೆ ಒಂದು ಹೊಸ ರೂಪವೇ ಬಂತು. ಎರಡು ಬಿಂದುಗಳು ಮಾತ್ರ ಹಾಗೆಯೇ ಮುಂದುವರಿದುವು. 11ನೆಯ ಶತಮಾನದ ಕಲ್ಯಾಣಿ ಚಾಳುಕ್ಯರ ಲಿಪಿಯಲ್ಲಿ ಈ ಎರಡು ಬಿಂದುಗಳೂ ಬಲಭಾಗದ ಖಂಡವೃತ್ತಕ್ಕೆ ಸೇರಿ ಕೆಳಭಾಗದ ತುದಿಯಲ್ಲಿ ಒಂದು ಕೊಂಡಿಯ ಆಕಾರವನ್ನು ಹೊಂದಿದುವು. 13ನೆಯ ಶತಮಾನದ ಸಮಯಕ್ಕೆ ಅಕ್ಷರದ ಆಕಾರ ಸ್ಥಿರಗೊಂಡಿತು. ಬಲಭಾಗದ ಕೊಂಡಿಯ ತುದಿ ಕೆಳಕ್ಕೆ ಬಾಗಿತು. ಅನಂತರ ವಿಶೇಷ ಬದಲಾವಣೆಗಳಿಲ್ಲದೆ ಇದೇ ರೂಪ ಮುಂದುವರಿದಿದೆ.



ಈ ಅಕ್ಷರ ಪೂರ್ವ–ಸಂವೃತ ಅಗೋಳ ಹ್ರಸ್ವಸ್ವರವನ್ನು ಸೂಚಿಸುತ್ತದೆ. (ಎ.ವಿ.ಎನ್.)

**ಇಂಕ:** ಪ್ರಾಚೀನ ಕಾಲದಲ್ಲಿ ದಕ್ಷಿಣ ಅಮೆರಿಕದ ಪೆರು ಪ್ರಾಂತ್ಯವನ್ನೊಳಗೊಂಡು ಬೆಳೆದು ಬಾಳಿದ ಸಾಮ್ರಾಜ್ಯ. ಇಂಕ ಎಂಬುದು ಸಾಮ್ರಾಟನ ಹೆಸರಾದರೂ ಈಗ ಆ ಜನರನ್ನೂ ನಿರ್ದೇಶಿಸುತ್ತದೆ. ಇವರು ಕೆಚ್ವಾಭಾಷೆಯನ್ನಾಡುತ್ತಿದ್ದ ಒಂದು ಬುಡಕಟ್ಟಿಗೆ ಸೇರಿದವರು.

ಕೊಲಂಬಸ್ ಅಮೆರಿಕವನ್ನು ಕಂಡುಹಿಡಿಯುವುದಕ್ಕೆ ಬಹಳ ಹಿಂದೆಯೇ ಅಲ್ಲಿ ಅನೇಕ ಸಾಮ್ರಾಜ್ಯಗಳು ಹುಟ್ಟಿ ಬೆಳೆದು ಲಯಹೊಂದಿದುವು. ಇಂದಿನವರೆಗೆ ತಿಳಿದು ಬಂದಿರುವಂತೆ ಈ ಸಂಸ್ಕೃತಿಗಳಲ್ಲಿ ಸಂಪತ್ತು, ಕಲಾಪ್ರೌಢಿಮೆ ಮತ್ತು ನಾಗರಿಕತೆಯ ದೃಷ್ಟಿಯಿಂದ, ಅತ್ಯಂತ ಭವ್ಯವಾದುವು–ಮಾಯಾ, ಆಜ್ಟೆಕ್ ಮತ್ತು ಇಂಕ ಸಂಸ್ಕೃತಿಗಳು. ಮಾಯಾ ನಾಗರಿಕತೆ ಬೆಳೆದದ್ದು ಮಧ್ಯ ಅಮೆರಿಕದ ಅರಣ್ಯಗಳಲ್ಲಿ; ಆಜ್ಟೆಕ್, ಮೆಕ್ಸಿಕೋದಲ್ಲಿ; ಇಂಕ ನಾಗರಿಕತೆ ಪೆರು ರಾಜ್ಯದಲ್ಲಿ. ಅಂತ್ಯದ ವೈಭವದ ಕಾಲದಲ್ಲಿ ಇಂಕ ನಾಗರಿಕತೆ ಉತ್ತರದ ಎಕ್ವಡಾರ್‌ನಿಂದ ದಕ್ಷಿಣದ ಚಿಲಿವರೆಗೂ ಉತ್ತರ ದಕ್ಷಿಣವಾಗಿ 4.000ಕಿಮೀ ದೂರ ವ್ಯಾಪಿಸಿತ್ತು; 4,66,000 ಪ್ರದೇಶವನ್ನೊಳಗೊಂಡಿತ್ತು. ಈ ಜನಾಂಗದಲ್ಲಿ ಬರವಣಿಗೆ ಇರಲಿಲ್ಲವಾದ್ದರಿಂದ ಇವರ ಬಗ್ಗೆ ಆ ಕಾಲದವೇ ಆದ ಯಾವ ಲಿಖಿತ ಆಧಾರಗಳೂ ದೊರೆತಿಲ್ಲ. 16ನೆಯ ಶತಮಾನದಲ್ಲಿ ಇವರ ಮೇಲೆ ಧಾಳಿ ನಡೆಸಿದ ಸ್ಪೇನಿನ ಯೋಧರ ಬರೆಹಗಳು ಇಂದಿಗೂ ಉಳಿದಿರುವ ಈ ಬುಡಕಟ್ಟಿನ ಜನರ ವ್ಯವಹಾರ ಸಂಪ್ರದಾಯಗಳ ಪರಿಶೀಲನೆ, ಸಂಬಂಧಪಟ್ಟ ಸ್ಥಳಗಳಲ್ಲಿ ನಡೆಸಿರುವ ಉತ್ಖನನಾದಿ ಪುರಾತತ್ತ್ವ ಶೋಧನೆಗಳು– ಈ ಆಧಾರಗಳಿಂದ ಇಂಕ ಸಂಸ್ಕೃತಿಯ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ.

**ಚರಿತ್ರೆ:** ಸ್ಪೇನ್ ದೇಶದವರು ಪೆರು ರಾಜ್ಯವನ್ನು ಗೆದ್ದು ಸ್ವಾಧೀನಪಡಿಸಿಕೊಂಡು ಅಲ್ಲಿನ ಚರಿತ್ರೆಯನ್ನು ಬರೆದಿಡುವವರೆಗೂ ಆ ದೇಶದ ಇತಿಹಾಸ ಪರಂಪರಾಗತವಾಗಿ ಬಂದ ಕಥೆಗಳ ರೂಪದಲ್ಲಿತ್ತು. ಹೀಗಾಗಿ ವಾಸ್ತವಾಂಶಗಳನ್ನು ತಿಳಿಯಲು ಬಹಳ ಕಷ್ಟ ವಾಗಿತ್ತು. ಇತ್ತೀಚೆಗೆ ಚಾರಿತ್ರಿಕ ಘಟನೆಗಳನ್ನು ಇನ್ನಷ್ಟು ಖಚಿತವಾಗಿ ತಿಳಿಯಲು ಸಾಧ್ಯ ವಾಗಿದೆ. ಇವೆರಡರ ಮಧ್ಯಕಾಲದ ಚರಿತ್ರೆ ಸ್ವಲ್ಪ ಅನಿರ್ದಿಷ್ಟ. ಯುರೋಪಿನ ದೇಶ ಗಳಲ್ಲಿದ್ದಂತೆಯೇ ಇತಿಹಾಸವನ್ನು ರಾಜರ ಆಳ್ವಿಕೆಯ ಕ್ರಮದಲ್ಲಿ ನಿರೂಪಿಸುವ ವಿಧಾನ ಅಮೆರಿಕದ ಪೆರು ದೇಶದಲ್ಲಿ ಮಾತ್ರ ಕಂಡುಬರುತ್ತದೆ; ಈ ದೊರೆಗಳು ಪೆರು ದೇಶವನ್ನಾಳುತ್ತಿದ್ದರೆಂದು ನಿಷ್ಕೃಷ್ಟವಾಗಿ ತಿಳಿದುಬಂದಿದೆ: 1. ಮ್ಯಾಂಕೊ ಕೃಪಾಕ್ (1200); 2. ಸಿಂಕಿ ರೋಕ; 3. ಲಾಳ ಉಪಾಂಕಿ; 4. ಮೆಯ್ಟ ಕೃಪಾಕ್; 5. ಕೃಪಾಕ್ ಯುಪ್ಯಾಂಕಿ; 6. ಇಂಕ ರೋಕ; 7. ಯಹ್ವಾರ್ ಹುವಾಕ್ಯಾಕ್; 8. ವಿಶಾಕೋ ಜಾ ಇಂಕ; 9. ಪಚಕೂಟಿ ಇಂಕಾ ಯುಆನ್‌ಕಿ (1438–71); 10. ಟೋಪ್ ಇಂಕ ಯುಪ್ಯಾಂಕಿ (1471–93); 11. ಹುಆಯ್ನ ಕೃಪಾಕ್ (1493–1525); 12. ಹುಆಸ್ಕರ್ (1525–32); 13. ಅಟಾಹುಅಲ್ಪ (1532–33).

ಮ್ಯಾಂಕೊ ಕೃಪಾಕ್‌ನ ವಿಷಯದಲ್ಲಿ ತಿಳಿದುಬಂದಿರುವುದರಲ್ಲಿ ಅರ್ಧ ಕಾಲ್ಪನಿಕ. ಅರ್ಧದೇವನೆಂದು ಪರಿಗಣಿತನಾಗಿದ್ದ ಇವನ ವಿಷಯದಲ್ಲಿ ಸ್ಪೇನಿನ ಚರಿತ್ರಕಾರರು ಬರೆದಿರುವುದು ಅನೇಕ ಕಡೆ ಅಸಂಬದ್ಧವಾಗಿದೆ; ಇವನಿಗೆ ದೈವತ್ವವನ್ನು ಆರೋಪಿಸಲಾಗಿದೆ. ಸಿಂಕಿ ರೋಕ ದೊರೆಯಾದಮೇಲೆ ಇವನ ರಾಜವಂಶಕ್ಕೆ ದೈವಿಕಮೂಲ, ಪಾವಿತ್ರ್ಯ ಮತ್ತು ಘನತೆಗಳನ್ನು ಕಲ್ಪಿಸಲಾಯಿತೆಂದು ಕೆಲವರ ಅಭಿಪ್ರಾಯ. ಪೆರು ದೇಶದ ವಾಸ್ತವಿಕ ಇತಿಹಾಸ ಪ್ರಾರಂಭವಾಗುವುದು ಪಚಕೂಟಿಇಂಕನ ಆಳಿಕೆಯಿಂದ ಎಂದು ಹೇಳಬಹುದು. ಅವನ ಕಾಲದಲ್ಲೇ ಪೆರುರಾಜ್ಯದ ವಿಸ್ತರಣಾ ಕಾರ್ಯ ಪ್ರಾರಂಭವಾದದ್ದು; ಈ ಕಾರ್ಯ ವಿಸ್ಮಯಕರವಾದ ರೀತಿಯಲ್ಲಿ ನಡೆಯಿತು. ಸಾಮ್ರಾಜ್ಯ ಅತ್ಯಂತ ಉಚ್ಛ್ರಾಯಸ್ಥಿತಿಯನ್ನೇರಿದ್ದು ಅವನ ಮಗನ ಕಾಲದಲ್ಲಿ, ಮುಂದೆ ಅವನತಿ ಪ್ರಾರಂಭವಾಗಿ 1532ರಲ್ಲಿ ಸ್ಪೇನ್ ದೇಶದವರು ದೇಶವನ್ನೇ ವಶಪಡಿಸಿಕೊಂಡಾಗ ಅದರ ಅಸ್ತಿತ್ವ ಅಳಿಯಿತು. ಸುಮಾರು ಒಂದು ಶತಮಾನಕಾಲ ಮಾತ್ರ ಪೆರು ಸಾಮ್ರಾಜ್ಯ ಸ್ವತಂತ್ರವಾಗಿ ಬಾಳಿದ್ದು, ಪಚಕೊಟಿ, ಟೋಪ್ ಇಂಕ ಇವರಿಬ್ಬರನ್ನೂ ಸಾಮ್ರಾಜ್ಯ ನಿರ್ಮಾಪಕರಲ್ಲಿ ಅಲೆಕ್ಸಾಂಡರ್, ಚಂಗಿಸ್‌ಖಾನ್, ನೆಪೋಲಿಯನ್ನರೊಂದಿಗೆ ಹೋಲಿಸಬಹುದು. ಇಂಕ ಜನರೇ ಅಲ್ಪಸಂಖ್ಯಾತರು; ಆದ್ದರಿಂದ ಗೆದ್ದರಾಜ್ಯಗಳ ಸೈನಿಕರನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡು ಹೊಸರಾಜ್ಯಗಳನ್ನು ಗೆಲ್ಲುತ್ತಿದ್ದರು. ಸಾಮ್ರಾಜ್ಯದಾಹವೇ ಈ ವಿಸ್ತರಣ ಕಾರ್ಯಕ್ಕೆ ಮುಖ್ಯಕಾರಣ. ಪಚಕೂಟಿ ಪ್ರಸಿದ್ಧಿಪಡೆದಿರುವುದು ರಾಜ್ಯವಿಸ್ತರಣ ಕಾರ್ಯದಲ್ಲಿ ಮಾತ್ರ ಅಲ್ಲ; ನಗರನಿರ್ಮಾಣದಲ್ಲೂ ಅವರು ಪ್ರಖ್ಯಾತನಾಗಿದ್ದಾರೆ. ಸಾಮ್ರಾಜ್ಯದ ರಾಜಧಾನಿಯಾದ ಕುಜ್ಕೋನಗರ ವಿಶಾಲವಾಗಿ ಬೆಳೆದು ರಮ್ಯಸೌಧಗಳನ್ನು ಹೊಂದಿದ್ದು ಇವನ ಶ್ರಮದ ಫಲವಾಗಿ, ಸೂರ್ಯನಿಗೆ ಮೀಸಲಾದ ಪ್ರಸಿದ್ಧ ದೇವಮಂದಿರದ ನಿರ್ಮಾಣ ಇವನ ಕಾಲದಲ್ಲಾಯಿತು. ಹಿಂದಿನ ಚಕ್ರವರ್ತಿಗಳ ಮೃತದೇಹಗಳನ್ನು ಸುವಾಸನಾ ದ್ರವ್ಯಗಳಿಂದ ಪರಿಷ್ಕರಿಸಿ ಈತ ಈ ದೇವಾಲಯದಲ್ಲಿಡಿಸಿದ; ಮೂಲಪುರುಷನಾದ ಮ್ಯಾಂಕೊ ಕೃಪಾಕ್‌ನ ದೇಹ ಮಾತ್ರ ಕಲ್ಲಾಗಿ ಪರಿವರ್ತಿತವಾಯಿತಂತೆ. ನಗರವನ್ನು ವಿಸ್ತರಿಸಿ ಅದರ ಪ್ರಜೆಗಳಿಗೆ ಹೆಚ್ಚು ಜಾಗವನ್ನು ಕೊಡುವುದಕ್ಕೆಂದು ಅದರ ಸುತ್ತ ಆರುಮೈಲಿ ಫಾಸಲೆಯ ಗ್ರಾಮವನ್ನೆಲ್ಲ ಸಾಮ್ರಾಜ್ಯ ವಿಶಾಲವಾಗಿತ್ತು, ಇವನ ಅನುಮತಿಯಿಲ್ಲದೆ ಏನೂ ನಡೆಯು ವಂತಿರಲಿಲ್ಲ. ಸಿಂಹಾಸನಕ್ಕೆ ಉತ್ತರಾಧಿಕಾರದ ವಿಷಯದಲ್ಲೂ ಸ್ಪರ್ಧೆ, ಜಗಳಗಳು ಪ್ರಾರಂಭ ವಾದುವು. ಇವನ ಮಗನ ಕಾಲದಲ್ಲಿ ಇದು ಉಗ್ರರೂಪ ತಾಳಿತು.

ಹುಆಯ್ನ ಕೃಪಾಕ್ ತನ್ನ ಆಳ್ವಿಕೆಯ ಕೊನೆಗಾಲವನ್ನು ಎಕ್ವಡಾರ್‌ನ ಕ್ವಿಟೊ ಪ್ರಾಂತ್ಯದಲ್ಲೇ ಕಳೆದ, ಇವನಿಗೆ ರಾಜಧಾನಿಯಾದ ಕುಜ್ಕೊ ನಗರಕ್ಕಿಂತ ಕ್ವಿಟೋನೇ ಹೆಚ್ಚು ಹಿತಕರವಾಗಿ ಕಂಡಿತು. ಇವನ ಮಕ್ಕಳಲ್ಲಿ ರಾಜಕೀಯ ಪ್ರಾಮುಖ್ಯ ಪಡೆದಿದ್ದವರು ಇಬ್ಬರು : ಒಬ್ಬ ಹುಆಸ್ಕರ್, ರಾಣಿಯಾಗಿದ್ದ ರಾಜನ ತಂಗಿಗೆ ಜನಿಸಿದವನು (ಈ ಪದ್ಧತಿ ಕೆಲವುಕಾಲ ರೂಢಿಯಲ್ಲಿತ್ತು); ಇನ್ನೊಬ್ಬ ಅಟಾಹುಅಲ್ಪ, ಕಿರಿಯ ರಾಣಿಯೊಬ್ಬಳ ಮಗ. ನ್ಯಾಯವಾಗಿ ಸಿಂಹಾಸನಕ್ಕೆ ಉತ್ತರಾಧಿಕಾರಿ ಹುಆಸ್ಕರ್; ಅದರೆ ಅಟಾಹುಅಲ್ಪನ ಮೇಲೆ ಇವನಿಗೆ ಹೆಚ್ಚು ಪ್ರೀತಿ. ಅಟಾಹುಅಲ್ಪ ತಂದೆಯೊಂದಿಗೆ ಕ್ವಿಟೋದಲ್ಲಿದ್ದ; ಹುಆಸ್ಕರ್ ಕುಜ್ಕೊದಲ್ಲಿದ್ದ. ಕ್ವಿಟೋ ರಾಜ್ಯವನ್ನೇ ಪ್ರತ್ಯೇಕಿಸಿ ಅದನ್ನು ಅಟಾಹುಅಲ್ಪನಿಗೂ ಉಳಿದ ಭಾಗವನ್ನು ಹುಆಸ್ಕರನಿಗೂ ಹಂಚಬೇಕೆಂದು ಹುಆಯ್ನನ ಯೋಚನೆಯಾಗಿತ್ತೆಂದು ಒಂದು ಕಡೆ ಹೇಳಿದೆ; ಆದರೆ ಇದು ನೆರವೇರಲಿಲ್ಲ. ಇದೇ ಕಾಲದಲ್ಲಿ ಸ್ಪೇನಿನವರು ಯುರೋಪಿನಿಂದ ತಂದ ಅಂಟು ಜಾಡ್ಯವೊಂದು ಸಾಮ್ರಾಜ್ಯದ ಎಲ್ಲ ಕಡೆ ಹರಡಿ ಅಸಂಖ್ಯಾತ ಜನರನ್ನು ಆಹುತಿ ತೆಗೆದು ಕೊಂಡಿತು: ಹುಆಯ್ನನೂ ಈ ಉಪದ್ರವಕ್ಕೆ ತುತ್ತಾದ. ಕುಜ್ಕೊದ ಪುರೋಹಿತ ಹುಅಸ್ಕರ್‌ನನ್ನು ಸಿಂಹಾಸನಕ್ಕೇರಿಸಿದ. ಆದರೆ ಎಕ್ವಡಾರ್‌ನ ಪ್ರಜೆಗಳು ಮತ್ತು ಸೈನಿಕರು ಅಟಾಹುಅಲ್ಪನೇ ತಮಗೆ ದೊರೆಯೆಂದು ಘೋಷಿಸಿದರು. ಯಾದವೀಕಲಹ ಪ್ರಾರಂಭ ವಾಯಿತು. ಸ್ವಲ್ಪಕಾಲ ಯುದ್ಧ ನಡೆದು ಕೊನೆಗೆ ಅಟಾಹುಅಲ್ಪನೇ ಸಾಮ್ರಾಟನಾದ. ತಾವು ಈ ಸಾಮ್ರಾಜ್ಯವನ್ನು ಗೆದ್ದು ವಶಪಡಿಸಿಕೊಳ್ಳಬೇಕೆಂದಿದ್ದ ಕಾಲದಲ್ಲೇ ಅಲ್ಲಿ ಭಯಂಕರ ಯಾದವೀಕಲಹವೆದ್ದುದ್ದು ತಮಗೆ ಅನುಕೂಲವಾದದ್ದು ದೈವೇಚ್ಛೆಯೆಂದೇ ಸ್ಪೇನಿನವರು ನಂಬಿದರು. ಜೆ.ಎ.ಮೇಸನ್ ಎಂಬ ಪ್ರಾಕ್ತನ ಸಂಶೋಧಕ ಹೀಗೆ ಹೇಳಿದ್ದಾನೆ: ಈ ಸ್ಪೇನಿ ನವರು ಹತ್ತುವರ್ಷ ಮುಂಚೆ ಅಥವಾ ಹತ್ತು ವರ್ಷ ತರುವಾಯ ಬಂದಿದ್ದರೆ, ಪಿಜ಼ಾರೊ ದಳಪತಿಯ ಜೊತೆ ಬಂದ ಕೆಲವೇ ಸ್ಪೇನರಿಗೆ ಅವರು ಸೋಲುತ್ತಿರಲಿಲ್ಲ.

ಸಾಮ್ರಾಜ್ಯದ ಅಳಿವು: ಪ್ರಬಲವಾಗಿದ್ದ ಇಂಕ ಸಾಮ್ರಾಜ್ಯವನ್ನೇ ಕೇವಲ 180 ಜನ ಸ್ಪೇನಿನ ಸಾಹಸಿಗ ಯೋಧರು ಗೆದ್ದರು. ನಂಬಲೂ ಕಷ್ಟವಾದ ಈ ಕಥೆ ವಿವಿಧ ಚರಿತ್ರಕಾರ ರಿಂದ ನಾನಾರೀತಿಯಲ್ಲಿ ವರ್ಣಿತವಾಗಿದೆ. ಪ್ರೆಸ್ಕಾಟ್ ಎಂಬ ಚರಿತ್ರಕಾರ ಬರೆದ ಕಾನ್‌ಕ್ವೆಸ್ಟ್ ಆಫ್ ಪೆರು ಎಂಬ ಪುಸ್ತಕದ ಕೆಲವು ಅಂಶಗಳನ್ನು ಇಲ್ಲಿ ಕೊಟ್ಟಿದೆ: ಹುಆಸ್ಕರನನ್ನು ಯುದ್ಧದಲ್ಲಿ ಸೋಲಿಸಿದ ಮೇಲೆ, ಸಿಂಹಾಸನವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಅಟಾಹುಅಲ್ಪ ತನ್ನ ಪಾಳೆಯವಿದ್ದ ಕಜಾಮಾರ್ಕದಿಂದ ರಾಜಧಾನಿಯಾದ ಕುಜ್ಕೊಗೆ ಹೊರಡುವುದರಲ್ಲಿದ್ದ. ಆಗತಾನೆ ತುಂಬೆಸ್ ಎಂಬಲ್ಲೇ ಸ್ಪೇನಿನವರು ಬಂದಿಳಿದ ವರ್ತಮಾನ ಅವನಿಗೆ ತಿಳಿಯಿತು

(1532). ಈ ಹೊರದೇಶದವರು ಬಂದ ಉದ್ದೇಶವನ್ನು ಖಚಿತಪಡಿಸಿಕೊಂಡೇ ಪ್ರಯಾಣ ಮಾಡೋಣವೆಂದು ನಿಶ್ಚಯಿಸಿ ಇದ್ದಲ್ಲಿಯೇ ನಿಂತ. ಅವರು ಕಜಾಮಾರ್ಕಕ್ಕೆ ಬಂದರು. ಅವನೂ ಸೌಜನ್ಯದಿಂದ ಕೊಂಚದೂರಹೋಗಿ ಅವರಿಗೆ ಸ್ವಾಗತ ನೀಡಿದ. ಅವನು ತೋರಿಸಿದ ಸೌಜನ್ಯಕ್ಕೆ ಪ್ರತಿಫಲವಾಗಿ ಸ್ಪೇನರು ಅವನನ್ನು ಕೈಸೆರೆ ಹಿಡಿದು ಅವನ ಪರಿವಾರದವರನ್ನೆಲ್ಲ ಕೊಂದುಹಾಕಿದರು. ತನ್ನನ್ನು ಬಿಡುಗಡೆ ಮಾಡುವಂತಿದ್ದರೆ, ಒಬ್ಬ

ಗದ್ದುಗೆ

ಮನುಷ್ಯನಿಗೂ ಎಟುಕದಿದ್ದಷ್ಟು ಎತ್ತರದ ರಾಶಿ ಪ್ರಶಸ್ತಲೋಹಗಳನ್ನು ಕೊಡುವೆನೆಂದು ಇಂಕರಾಜ ಅವರಿಗೆ ಹೇಳಿದ. ಅವರು ಒಪ್ಪಿಕೊಂಡರು. ಕೂಡಲೆ ದೂತರಮೂಲಕ ರಾಜ್ಯದ ಧನವನ್ನು ಸಂಗ್ರಹಿಸಿ ತರಬೇಕೆಂದು ಎಲ್ಲ ಭಾಗಗಳಿಗೂ ಹೇಳಿಕಳುಹಿಸಿದ. ನಾಡಿನ ಎಲ್ಲ ಭಾಗ ಗಳಿಂದಲೂ ಚಿನ್ನದ ರಾಶಿ ಬಂದು ಬಿತ್ತು. ಕುಜ್ಕೊ ನಗರದ ಸೂರ್ಯ ದೇವಾಲಯದಿಂದಲೇ ಇದರ ಬಹುಭಾಗವೆಲ್ಲ ಬಂದಿತ್ತು. 25ಮೀ ಉದ್ದ 15ಮೀ ಅಗಲದ ಕೋಣೆಯಲ್ಲಿ ದ್ರವ್ಯ ಅವನು ಹೇಳಿದ ಎತ್ತರಕ್ಕೂ ನಿಂತಿತು. ಈ ರಾಶಿ ಪಿಜಾರೊಗೆ ತೃಪ್ತಿ ತಂದಿತು. ಬಿಡುಗಡೆ ದ್ರವ್ಯವೆಷ್ಟು ಬಂದಿದೆಯೆಂದು ಪಾವತಿ ರಸೀತಿಯನ್ನು ಬರೆಸಿಕೊಟ್ಟ. ಅವನ ಜೀವಮಾನದಲ್ಲೇ ಆತ ಸೆರೆಸಿಕ್ಕಿದವರ ವಿಷಯದಲ್ಲಿ ಇಷ್ಟು ಕೃಪೆ ತೋರಿಸಿದವನಲ್ಲ. ಚಕ್ರವರ್ತಿ ಸ್ವತಂತ್ರನೆಂದು ಘೋಷಣೆ ಮಾಡಿದರೂ ಆತ ಹಿಂತಿರುಗಿದರೆ ದೇಶದಲ್ಲಿ ಕ್ಷೋಭೆಯುಂಟಾಗುವುದೆಂಬ ನೆಪದಿಂದ ಅವನನ್ನು ಸ್ಪೇನ್ ಅಂಗರಕ್ಷಕರ ಕಾವಲಿನಲ್ಲಿಡಲಾಯಿತು. ದೊರೆ ಅಲ್ಲಿದ್ದರೆ ತಮ್ಮ ಚಲನವಲನಗಳಿಗೆ ಅಡ್ಡಿಯಾಗಬಹುದೆಂಬ ಕಾರಣದಿಂದ ಸ್ಪೇನ್ ಯೋಧರೆಲ್ಲ ಅವನನ್ನು ಕೊಂದುಬಿಡಬೇಕೆಂದು ಸಲಹೆಕೊಟ್ಟರು.


ಕಟ್ಟಡ

ಪಿಜ್ಹಾರೊ ಒಪ್ಪಿದ. ಅನೇಕ ಕಲ್ಪಿತ ಆಪಾದನೆಗಳನ್ನು ಅವನ ಮೇಲೆ ಹೊರಿಸಲಾಯಿತು. ಹುಆಸ್ಕರನನ್ನು ಕೊಂದದ್ದು, ಅನ್ಯಾಯವಾಗಿ ಸಿಂಹಾಸನ ವನ್ನು ಆಕ್ರಮಿಸಲೆತ್ನಿಸಿದ್ದು, ವಿಗ್ರಹಾರಾಧನೆ, ವ್ಯಭಿಚಾರ, ಸ್ವಗೋತ್ರ ಸಂಭೋಗ ಮುಂತಾದವು ಅವುಗಳಲ್ಲಿ ಕೆಲವು. ತಪ್ಪಿತಸ್ಥನೆಂದು ತೀರ್ಮಾನವಾಗಲಾಗಿ ಅವನಿಗೆ ಮರಣದಂಡನೆಯನ್ನು ವಿಧಿಸಿದರು. ಕಜಾಮಾರ್ಕ ನಗರದ ದೊಡ್ಡ ಚೌಕದಲ್ಲಿ ಅವನನ್ನು ಬಹಿರಂಗವಾಗಿ ಸುಡ ತಕ್ಕದೆಂದು ತೀರ್ಮಾನಿಸಲಾಯಿತು. ಸುಡಲು ಎಲ್ಲವೂ ಸಿದ್ಧವಾದಮೇಲೆ ಆತ ಕ್ರೈಸ್ತಧರ್ಮ ವನ್ನು ಸ್ವೀಕರಿಸಿದರೆ ಸುಡುವುದಿಲ್ಲವೆಂದೂ ಗಲ್ಲಿಗೇರಿಸುತ್ತೇವೆಂದೂ ಪಿಜ್ಹಾರೊ ತಿಳಿಸಿದ. ಅಟಾಹುಅಲ್ಪ ಅದಕ್ಕೊಪ್ಪಿದ. ಅನಂತರ ಅವನನ್ನು ಕತ್ತುಹಿಚುಕಿ ಕೊಂದರು. ಒಬ್ಬ ದೊಡ್ಡ ಸಾಮ್ರಾಟನನ್ನು ಈ ರೀತಿ ಸುಲಿಗೆಮಾಡಿ ಅನಂತರ ಹೀಗೆ ಕೊಂದ ಈ ರಾಕ್ಷಸೀಕೃತ್ಯ ಸ್ಪೇನ್ ಜನಾಂಗಕ್ಕೆ ಎಂದಿಗೂ ಅಳಿಸಲಾಗದ ಕಳಂಕವಾಯಿತು ಎಂದು ಪ್ರೆಸ್ಕಾಟ್ ಹೇಳಿದ್ದಾನೆ.

ಪೆರು ದೇಶವನ್ನು ಲೂಟಿಹೊಡೆದು ಸ್ಪೇನಿನವರು ತಮ್ಮ ದೇಶಕ್ಕೆ ಸಾಗಿಸಿದ ಸಂಪತ್ತಿನ ಬೆಲೆ ಎಷ್ಟಿರಬಹುದೆಂಬುದನ್ನು ಲೆಕ್ಕಮಾಡಲು ಅನೇಕರು ಯತ್ನಿಸಿದ್ದಾರೆ. ಅತ್ಯಂತ ಜಾಗರೂಕತೆ ಯಿಂದ ಎಣಿಕೆಮಾಡಿದ ಲಾತ್ರಾಪ್ ಎಂಬಾತ ಒಂದು ಔನ್ಸಿಗೆ 35–02 ಡಾಲರುಗಳಂತೆ ಅಟಾಹುಅಲ್ಪನ ಬಿಡುಗಡೆಗಾಗಿ ಕೊಟ್ಟ ಚಿನ್ನದ ಬೆಲೆಯೇ 83,44,307 ಡಾಲರುಗಳಾಗುತ್ತ ವೆಂದು ಹೇಳಿದ್ದಾನೆ. ಚಿನ್ನದ ಈಗಿನ ಬೆಲೆಯ ಪ್ರಕಾರ ಅದು ಇನ್ನೂ ಹೆಚ್ಚಾಗುತ್ತದೆ. ಇದೊಂದೇ ಸಂದರ್ಭದಲ್ಲಲ್ಲ, ಸ್ಪೇನಿನವರು ಈ ರೀತಿ ಲೂಟಿ ಹೊಡೆದದ್ದು, ಸ್ಪೇನಿನಿಂದ ಇನ್ನೂ ಹೆಚ್ಚು ಜನರು ವಲಸೆ ಬಂದ ಮೇಲಂತೂ ಇಂಥ ಸುಲಿಗೆ ಅನೇಕವೇಳೆ ನಡೆಯಿತು. ಹೀಗೆ ನಾನಾಕಡೆಗಳಿಂದ ಸುಲಿಗೆ ಮಾಡಿ ಸ್ಪೇನಿಗೆ ಸಾಗಿಸಿದ ಚಿನ್ನದ ಬೆಲೆ 2 ಕೋಟಿ ಡಾಲರುಗಳಿಗಿಂತ ಹೆಚ್ಚಾಗುತ್ತದೆ ಎಂದು ಲಾತ್ರಾಪ್‌ನ ಅಭಿಪ್ರಾಯ. ಇವುಗಳಲ್ಲಿ ಆಭರಣಗಳೇ ಹೆಚ್ಚಾಗಿದ್ದುವು. ಎಲ್ಲವೂ ಚತುರ ಕಲಾಶಿಲ್ಪಿಗಳು ತಯಾರಿಸಿದ ಅತ್ಯಂತ ಸುಂದರ ಆಭರಣಗಳು. ಅವುಗಳ ಕಲಾವೈಶಿಷ್ಟ್ಯದ ಕಡೆ ಗಮನವೇ ಇಲ್ಲದೆ ಎಲ್ಲವನ್ನೂ ಕರಗಿಸಿ ಗಟ್ಟಿ ಮಾಡಲಾಯಿತು. ಹಿಂದಿನ ಆಭರಣಗಳಲ್ಲೊಂದೂ ಈಗ ಉಳಿದಿಲ್ಲ.

ನಾಗರಿಕತೆ: ಇಂಕ ಜನರು ಹರಡಿದ್ದ ದೇಶ ಭೂ ವ್ಯವಸಾಯಕ್ಕೆ ಅನುಕೂಲವಾದ ಪ್ರದೇಶವಾಗಿರಲಿಲ್ಲ. ಆದರೂ ಚತುರರಾದ ಅವರು ಪ್ರಕೃತಿಯೊಡ್ಡಿದ್ದ ಅಡಚಣೆಗಳನ್ನು ನಿವಾರಿಸಿ ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡಿಕೊಂಡರು. ಏರುತಗ್ಗುಗಳಿದ್ದ ಭೂಮಿಯನ್ನು ಕಡಿದು ಪೈರು ಬೆಳೆಯಲು ಯೋಗ್ಯವಾಗುವಂತೆ ಮಾಡಿದರು: ಅಣೆಕಟ್ಟುಗಳನ್ನು ನಿರ್ಮಿಸಿ ಮೇಲು ಕಾಲುವೆಗಳನ್ನು ತೋಡಿ ಅವುಗಳಿಂದ ನೀರುಹಾಯಿಸುವ ಏರ್ಪಾಡು ಮಾಡಿ ಕೊಂಡರು. ಈ ಪರ್ವತಶ್ರೇಣಿ ಕೆಲವುಕಡೆ 4,200ಮೀ ಎತ್ತರವಾಗಿದೆ.


ಪಾತ್ರೆಗಳು

ಈ ಎತ್ತರಕ್ಕನು ಸಾರವಾಗಿ ಉಷ್ಣ ಮತ್ತು ಸಮಶೀತೋಷ್ಣವಲಯದ ಬೆಳೆಗಳನ್ನು ತೆಗೆಯಲು ಇದರಿಂದ ಅನುಕೂಲವಾಯಿತು. ಬಹಳ ಹಿಂದಿನ ಕಾಲದಲ್ಲೇ ಇಂಕ ಜನ ಕಾಡು ಸಸ್ಯಗಳನ್ನು ಆಹಾರ ಯೋಗ್ಯವನ್ನಾಗಿ ಮಾಡುವ ವಿಧಾನವನ್ನರಿತಿದ್ದರು. ಅನೇಕ ಆಹಾರಸಸ್ಯಗಳನ್ನು ಇತರ ದೇಶಗಳ ಜನರು ಇವರಿಂದ ತಿಳಿದರು. ವಿದ್ಯಾಭ್ಯಾಸ ಕೇವಲ ಶ್ರೀಮಂತ ಕುಲೀನ ಮಕ್ಕಳಿಗೆ ಮಾತ್ರ ಮೀಸಲಾಗಿತ್ತು. ಬಹುಪತ್ನೀತ್ವ ಶ್ರೀಮಂತರ ಸ್ವತ್ತಾಗಿತ್ತು. ಆದರೆ ಮೊದಲ ಹೆಂಡತಿಮಾತ್ರ ಗಂಡನ ಸಮಾನ ಸ್ಥಾನದಲ್ಲಿರುತ್ತಿದ್ದಳು. ಉಳಿದವರು ಕೇವಲ ಉಪಪತ್ನಿಯರು. ಅವರ ಮಕ್ಕಳಿಗೂ ತಂದೆಯ ಸ್ಥಾನ ಲಭಿಸುತ್ತಿರಲಿಲ್ಲ. ರಾಜ ತನ್ನ ದೇವಾಂಶವನ್ನು ಶುದ್ಧವಾಗಿ ಉಳಿಸಲೋ ಏನೋ, ಸಾಮಾನ್ಯವಾಗಿ ತನ್ನ ಸಹೋದರಿಯನ್ನೇ ಮದುವೆಯಾಗುತ್ತಿದ್ದ.

ಒಡೆತನದ ಕಾನೂನುಗಳು: ಪೆರು ರಾಜ್ಯದ ಸಮಾಜವ್ಯವಸ್ಥೆಯಲ್ಲಿ ಗಮನಾರ್ಹವಾದ ಎರಡು ಅಂಶಗಳೆಂದರೆ ಅದರ ಹಣಕಾಸಿನ ಕಟ್ಟುಪಾಡು ಮತ್ತು ಆಸ್ತಿಗೆ ಸಂಬಂಧಿಸಿದ ನಿಯಮಗಳು. ಸಾಮ್ರಾಜ್ಯದ ಭೂಮಿಯನ್ನೆಲ್ಲ ಮೂರು ಭಾಗಗಳಾಗಿ ವಿಂಗಡಿಸಿದ್ದರು. ಒಂದು ಭಾಗ ಸೂರ್ಯದೇವನಿಗೆ ಇನ್ನೊಂದು ಭಾಗ ರಾಜನಿಗೆ, ಮೂರನೆಯ ಭಾಗ ಸಾಮಾನ್ಯ ಜನತೆಗೆ. ಈ ವಿಭಜನೆ ಎಲ್ಲ ಪ್ರಾಂತ್ಯಗಳಲ್ಲೂ ಒಂದೇ ಸಮನಾಗಿರಲಿಲ್ಲ. ಸೂರ್ಯನಿಗಾಗಿ ಮೀಸಲಾಗಿದ್ದ ಭಾಗದ ಉತ್ಪನ್ನವೆಲ್ಲ ದೇವಸ್ಥಾನಗಳನ್ನು ನಡೆಸಿಕೊಂಡು ಹೋಗುವುದಕ್ಕೆ, ಹೆಚ್ಚು ಖರ್ಚು ತಗಲುತ್ತಿದ್ದ ಅಲ್ಲಿನ ಶಾಸ್ತ್ರೋಕ್ತ ಕರ್ಮಾಚರಣೆಗಳಿಗೆ ಮತ್ತು ಅಲ್ಲಿನ ಅಸಂಖ್ಯಾತ ಪುರೋಹಿತವರ್ಗಕ್ಕೆ ವಿನಿಯೋಗವಾಗುತ್ತಿತ್ತು. ರಾಜನಿಗೆಂದು ಕಾಯ್ದಿಟ್ಟ ಭಾಗ ಅವನ ಮತ್ತು ಅವನ ಪರಿವಾರ, ಸಿಬ್ಬಂದಿಗಾಗಿ, ಆವಶ್ಯಕವಾದಾಗ ಅನಿರೀಕ್ಷಿತ ಆಡಳಿತ ವೆಚ್ಚಕ್ಕಾಗಿ ಮೀಸಲಾಗಿತ್ತು. ಮೂರನೆಯ ಭಾಗವನ್ನು ಜನರಲ್ಲಿ ಕೆಲವು ನಿಯಮಗಳಿಗನುಸಾರವಾಗಿ ಹಂಚಲಾಗುತ್ತಿತ್ತು. ಪ್ರತಿಯೊಬ್ಬನೂ ಪ್ರಾಪ್ತ ವಯಸ್ಕ ನಾದಾಗ ಮದುವೆಯಾಗಲೇಬೇಕೆಂಬ ನಿಯಮವಿತ್ತು. ಮದುವೆಯ ಕಾಲಕ್ಕೆ ಅವನ ವಾಸಕ್ಕೆ ಮನೆಯನ್ನೊದಗಿಸುವುದು ಸ್ಥಳೀಯ ಸಮಾಜದ ಜವಾಬ್ದಾರಿ. ಅವನ ಮತ್ತು ಅವನ ಪತ್ನಿಯ ಜೀವನ ನಿರ್ವಹಣಕ್ಕೆ ಸಾಕಾಗುವಷ್ಟು ಜಮೀನು ಕೊಡುತ್ತಿದ್ದರು.

ಒಂದೊಂದು ಮಗು ಹುಟ್ಟಿದಾಗಲೂ ಕೊಂಚ ಹೆಚ್ಚು ಭೂಮಿಯನ್ನು ಕೊಡುತ್ತಿದ್ದರು. ಗಂಡುಮಗುವಾದಾಗ ಕೊಡುತ್ತಿದ್ದ ಜಮೀನಿನ ಅರ್ಧದಷ್ಟನ್ನು ಹೆಣ್ಣು ಹುಟ್ಟಿದಾಗ ಕೊಡಲಾಗುತ್ತಿತ್ತು. ಇದಕ್ಕಿಂತ ಹೆಚ್ಚು ಪರಿಷ್ಕಾರವಾದ ಫಲಕಾರಿಯಾದ ಭೂಸ್ವತ್ತಿನ ವ್ಯವಸ್ಥೆ ಕಲ್ಪನೆಗೂ ಮೀರಿದ್ದು. ಆಯಾ ಸ್ಥಳೀಯರೇ ಅಲ್ಲಿನ ಭೂಮಿಯ ಕೃಷಿ ನಡೆಸುತ್ತಿದ್ದರು. ಅವರ ಪ್ರಥಮ ಕರ್ತವ್ಯ ಸೂರ್ಯದೇವನ ಜಮೀನು ಸಾಗುವಳಿ; ಅನಂತರ ವೈದ್ಯರು, ರೋಗಿಗಳು, ವಿಧವೆಯರು, ಯುದ್ಧರಂಗಕ್ಕೆ ಹೋಗಿದ್ದವರು ಮತ್ತು ದಿಕ್ಕಿಲ್ಲದವರ ಭೂಮಿಯ ಕೃಷಿ; ಇದು ಮುಗಿದಮೇಲೆ ಸ್ವಂತ ಜಮೀನಿನ ವ್ಯವಸಾಯಕ್ಕೆ ಅವಕಾಶ. ಆವಶ್ಯಕತೆಯಿದ್ದಾಗ ಪರಸ್ಪರ ಸಹಾಯಕ್ಕೆ ಹೋಗಲೇಬೇಕೆಂಬ ನಿಯಮವಿತ್ತು. ರಾಜನ ಜಮೀನುಗಳ ಬೇಸಾಯ ಮಾಡುತ್ತಿದ್ದವರೂ ಅವರೇ. ಇದೊಂದು ಶಿಷ್ಟಾಚಾರದ, ಸಂಭ್ರಮದ ಸಂದರ್ಭವಾಗಿತ್ತು. ಮೊದಲ ದಿನ ಎಲ್ಲರೂ ಒಂದೆಡೆ ಕಲೆತು, ಸಂತೋಷದಿಂದ ಲಾವಣಿಗಳನ್ನು ಹಾಡುತ್ತ ಕೆಲಸವನ್ನು ಪ್ರಾರಂಭಿಸುತ್ತಿದ್ದರು; ಉಡುಗದ ಉತ್ಸಾಹದಿಂದ ಅವರ ಕೆಲಸ ಮುಂದುವರಿ ಯುತ್ತಿತ್ತು. ಯಾವುದಾದರೂ ಕೈಗಾರಿಕೋದ್ಯಮವನ್ನು ಪ್ರಾರಂಭಿಸುವಾಗಲೂ ಹೀಗೆಯೇ.



ಕಲ್ಲಿನ ಪಾತ್ರೆ

ಅಧಿಕಾರಿಗಳು ಕಾಲಕಾಲಕ್ಕೆ ಜನರನ್ನು ಸಂದರ್ಶಿಸಿ, ಸುಂದರ ಯುವಕ ಯುವತಿಯರನ್ನು ಆರಿಸಿ, ಯುವಕರನ್ನು ರಾಜನ ಅಥವಾ ದೇವಾಲಯಗಳ ಸೇವೆಗಾಗಿ, ಯುವತಿಯರನ್ನು ದೇವಾಲಯ ಮತ್ತು ಅರಮನೆಯ ದಾಸಿಯರನ್ನಾಗಿ ಮತ್ತು ನೇಯ್ಗೆ ಮೊದಲಾದ ಕುಶಲಕರ್ಮಗಳಿಗಾಗಿ ನಿಯೋಜಿಸುತ್ತಿದ್ದರು. ಯಾವುದೇ ಕಾರಣದಿಂದ ಈ ವ್ಯವಸ್ಥೆಯನ್ನು ಒಪ್ಪದ ಜನರನ್ನು ದೂರದೇಶಗಳಿಗೆ ಸಾಗಿಸುವುದು ಪದ್ಧತಿಯಾಗಿತ್ತು. ಒಟ್ಟಿನಲ್ಲಿ ಇಂಕ ಸಾಮ್ರಾಜ್ಯದ ಸಾಮಾನ್ಯ ಜನರ ಜೀವನರೀತಿಯೆಲ್ಲ ರಾಜ್ಯದಿಂದಲೇ ನಿರ್ದೇಶಿಸಲ್ಪಡುತ್ತಿದ್ದುದರಿಂದ ವ್ಯಕ್ತಿಸ್ವಾತಂತ್ರ್ಯ ಮೊಟಕುಗೊಂಡಿತ್ತು. ಹಾಗೆಯೇ ಎಲ್ಲ ಜನರಿಗೂ ಜೀವನೋಪಾಯವನ್ನು ಒದಗಿಸುವುದಕ್ಕೂ ರಾಜ್ಯ ಬದ್ಧವಾಗಿತ್ತು. ಇಂಥ ವ್ಯವಸ್ಥೆಯ ಸುಲಭ ನಿರ್ವಹಣೆಗಾಗಿ ಆಗಿಂದಾಗ್ಗೆ ಜನಗಣತಿ ನಡೆಯುತ್ತಿತ್ತು. ರಾಜ್ಯದ ಎಲ್ಲ ಭಾಗಗಳಲ್ಲೂ ಉತ್ತಮ ರಸ್ತೆಗಳಿದ್ದುವು. ಶಿಸ್ತಿನ ಸೈನ್ಯ, ಉತ್ತಮ ವಸ್ತುಸಾಗಾಣಿಕೆ ವ್ಯವಸ್ಥೆ, ವೇಗದಿಂದ ಸಮಾಚಾರಗಳನ್ನು ಒಯ್ಯುತ್ತಿದ್ದ ಹರಿಕಾರಗಣ-ಇವು ರಾಜ್ಯದ ದಕ್ಷತೆಯನ್ನು ಹೆಚ್ಚಿಸಿದ್ದುವು. ಆದರೆ ಚಕ್ರದ ಗಾಡಿಗಳು ಜನರಿಗೆ ಗೊತ್ತಿರಲಿಲ್ಲ. ಭಾರವನ್ನು ಒಯ್ಯಲು ಸಾಮಾನ್ಯವಾಗಿ ಲಾಮಾ ಎಂಬ ಪ್ರಾಣಿಗಳನ್ನು ಉಪಯೋಗಿಸಲಾಗುತ್ತಿತ್ತು.

ಮರದ ಲೋಟ

ವೈಜ್ಞಾನಿಕ ಕ್ರಮದ ಕೃಷಿ: ಭೂವ್ಯವಸಾಯದಲ್ಲಿ ಇವರು ಅನುಸರಿಸುತ್ತಿದ್ದ ಕ್ರಮ ವೈಜ್ಞಾನಿಕವಾಗಿತ್ತೆಂದೇ ಹೇಳಬೇಕು. ಅವರು ಗುಳಗಳನ್ನು ಪ್ರಯೋಗಿಸುತ್ತಿರಲಿಲ್ಲ. ಭಾರ ವನ್ನೆಳೆಯುವ ಪ್ರಾಣಿಗಳನ್ನೂ ಕಾಣರು. ಆದರೂ ಬೆಳೆ ತೆಗೆಯುವುದರಲ್ಲಿ ಸಮರ್ಥರಾಗಿದ್ದರು. ತುದಿಯಲ್ಲಿ ಚೂಪಾಗಿರುವ ಗಟ್ಟಿಮರದ ಒಂದು ಗೂಟದ ತುದಿಗೆ 30 ಸೆಂ ಮೀ ಮೇಲೆ ಅಡ್ಡವಾದ ಒಂದು ತುಂಡನ್ನು ಭದ್ರವಾಗಿ ಬಿಗಿಯುತ್ತಿದ್ದರು. ಇದೇ ಅವರ ನೇಗಿಲು. ಉಳುವಾತ ಆ ಅಡ್ಡತುಂಡಿನ ಮೇಲೆ ಕಾಲನ್ನೂರಿ ಚೂಪುತುದಿ ನೆಲದೊಳಕ್ಕೆ ಹೋಗುವಂತೆ ಮಾಡುತ್ತಿದ್ದ. ದೊಡ್ಡ ಗೂಟಕ್ಕೆ ಹಗ್ಗಕಟ್ಟಿ ಅದನ್ನು ಆರು ಅಥವಾ ಎಂಟು ಜನ ಎಳೆಯುತ್ತಿದ್ದರು. ಆಯಾಸದ ಪರಿವೆಯೇ ಇಲ್ಲದವರಂತೆ ಗೀತೆಗಳನ್ನು ಹಾಡುತ್ತ ದಿನವಿಡೀ ಕೆಲಸ ಮಾಡುತ್ತಿದ್ದರು. ಹೆಂಗಸರೂ ಅವರೊಂದಿಗಿದ್ದು ಹೆಂಟೆ ಒಡೆಯುವುದು, ಕಳೆ ತೆಗೆಯುವುದು ಮುಂತಾದ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ನೆಲ ಮೃದುವಾಗಿದ್ದುದರಿಂದ ಈ ಉಳುವ ಕೆಲಸ ಸುಲಭವಾಗಿತ್ತು. ಅಭ್ಯಾಸಬಲದಿಂದ, ಎಷ್ಟು ಮಣ್ಣನ್ನು ಬುಡಮೇಲು ಮಾಡಬೇಕೋ ಅಷ್ಟನ್ನೇ ಮಾಡಿಕೊಂಡು ಸರಾಗವಾಗಿ ಕೆಲಸ ನಡೆಸುತ್ತಿದ್ದರು.

ಯಾಂತ್ರಿಕ ಕೌಶಲ: ಬಟ್ಟೆ ತಯಾರಿಕೆಯಲ್ಲಿ ಮತ್ತು ಇತರ ಉಪಯುಕ್ತ ಕಲೆಗಳಲ್ಲಿ ಇವರು ತುಂಬ ಜಾಣ್ಮೆಯನ್ನು ಹೊಂದಿದ್ದರು. ಅರಮನೆಯ ಉಗ್ರಾಣ ಮತ್ತು ಕೋಠಿಗಳಲ್ಲಿ, ದೊರೆಗಳ ಗೋರಿಗಳಲ್ಲಿ, ತುಂಬ ನಯಗೆಲಸದ ವಸ್ತುಗಳು ದೊರೆತಿವೆ. ಚಿನ್ನದ ಕಲಶಗಳು, ಬೆಳ್ಳಿಯ ಕಡಗಗಳು, ಕಂಠಾಭರಣಗಳು ಮತ್ತು ಇತರ ಒಡವೆಗಳು, ಗೃಹೋಪಕರಣಗಳು (ಕೆಲವು ನಯವಾದ ಮಣ್ಣಿನಿಂದ ಮಾಡಿದವು, ಕೆಲವು ತಾಮ್ರದವು). ಗಟ್ಟಿಯಾದ ಪಟ್ಟಿಯಲ್ಲಿ ಸಹ ಈ ಜನ ಉತ್ಕೃಷ್ಟವಾದ ನಯಗೆಲಸ ಮಾಡುತ್ತಿದ್ದರು. ಒಂದು ಜನತೆಯ ಸಂಸ್ಕೃತಿಯ ಮಟ್ಟ ಗೋಚರವಾಗುವುದು ಅವರ ವಾಸ್ತುಶಿಲ್ಪದಲ್ಲಿ, ಸರಳತೆ, ಭಾಗಗಳ ಸಮಸೂತ್ರತೆ, ಭದ್ರತೆ-ಇವು ಅವರು ನಿರ್ಮಿಸಿದ ಕಟ್ಟಡಗಳ ವಿಶಿಷ್ಟ ಗುಣಗಳು-ಎಂದು ಹಂಬೋಲ್ಟ್ ಎಂಬ ಪ್ರಸಿದ್ಧ ಪ್ರವಾಸಿ ಬರೆದಿದ್ದಾನೆ. ಅಲ್ಲಿನ ಅಪಾರ ಸಂಪತ್ತನ್ನು ದೋಚುವುದಕ್ಕೋಸ್ಕರ ಸ್ಪೇನರು ಇವರ ಅನೇಕ ಕಲಾಕೃತಿಗಳನ್ನು ನಾಶಗೊಳಿಸಿದರು; ಭೂಕಂಪ ಮುಂತಾದುವುಗಳಿಂದಲೂ ಇಂಥ ವಿಧ್ವಂಸಕ ಕೃತ್ಯ ನಡೆದಿಲ್ಲವೆನ್ನಬಹುದು. ಆದರೂ ಅಳಿದುಳಿದಿರುವ ಕೆಲವು ಸ್ಮಾರಕಗಳೇ ಪ್ರಾಚೀನಾನ್ವೇಷಕರ ಆಸಕ್ತಿಯನ್ನು ಕೆರಳಿಸುತ್ತಿವೆ-ಎಂದು ಪ್ರೆಸ್ಕಾಟ್ ಹೇಳಿದ್ದಾನೆ.

ರಹಸ್ಯಗರ್ಭಿತ ಕೀಪೂ: ಇಂಕ ಜನರು ಬರೆವಣಿಗೆಯನ್ನರಿತಿರಲಿಲ್ಲ. ದೊರೆತ ಧಾನ್ಯಗಳ ಪ್ರಮಾಣ, ಕೆಲಸಗಾರರಿಗೆ ಹಂಚಿದ ಕಚ್ಚಾ ಪದಾರ್ಥಗಳ ವಿವರ ಮತ್ತು ಅಳತೆ, ತಯಾರಾದ ಬಟ್ಟೆ ಮತ್ತು ಇತರ ಪದಾರ್ಥಗಳ ಲೆಕ್ಕ, ದೊರೆಯ ಉಗ್ರಾಣಗಳಿಗೊದಗಿಸಿದ ವಸ್ತುಗಳ ವಿವರ-ಇವುಗಳನ್ನೆಲ್ಲ ವಿಶಿಷ್ಟರೀತಿಯಲ್ಲಿ ಗುರುತಿಟ್ಟುಕೊಳ್ಳುತ್ತಿದ್ದರು. ನಾನಾ ಬಣ್ಣಗಳ ದಾರಗಳನ್ನು ಸೇರಿಸಿ ಭದ್ರವಾಗಿ ಹೊಸೆದಿದ್ದ ಒಂದು ಹುರಿಯ ಸಹಾಯದಿಂದ ಅವರಿಗೆ ಇಂಥ ಲೆಕ್ಕಾಚಾರ ಸಾಧ್ಯವಾಗಿತ್ತೆಂದರೆ ಆಶ್ಚರ್ಯವಾಗದಿರದು. ಇದರ ಹೆಸರು ಕೀಪೂ ಎಂದು. ಈ ಹುರಿಯಲ್ಲಿ ಗಂಟುಗಳಿದ್ದುವು. ಅಂಚುಕಟ್ಟಿನಂತೆ ಈ ಹುರಿಯಿಂದ ಅನೇಕ ಸಣ್ಣ ದಾರಗಳು ನೇತಾಡುತ್ತಿದ್ದವು. ಕೀಪೂ ಪದದ ಅರ್ಥ ಗಂಟು ಎಂದು. ಬಣ್ಣಗಳು ಇಂದ್ರಿಯಗೋಚರವಾದ ವಸ್ತುಗಳನ್ನು ಸೂಚಿಸುತ್ತಿದ್ದುವು. ಬಿಳುಪು ಬೆಳ್ಳಿಯನ್ನು, ಹಳದಿ ಚಿನ್ನವನ್ನು ಹೀಗೆ ಕೆಲವು ಸಂದರ್ಭಗಳಲ್ಲಿ ಅವು ಭಾವಗಳನ್ನೂ ಸೂಚಿಸುತ್ತಿದ್ದುವು. ಬಿಳುಪು ಶಾಂತಿ, ಕೆಂಪು ಯುದ್ಧ-ಹೀಗೆ. ಕೀಪೂಗಳನ್ನು ಹೆಚ್ಚಾಗಿ ಬಳಸುತ್ತಿದ್ದದ್ದು ಲೆಕ್ಕಾಚಾರಕ್ಕೆ. ಗಂಟು ಸೊನ್ನೆಯ ಚಿಹ್ನೆ. ಗಂಟುಗಳ ಗುಂಪುಗಳು ಅಂಕಿಗಳನ್ನು ಸೂಚಿಸುತ್ತಿದ್ದುವು. ಕೀಪೂ ಲೆಕ್ಕಚಾರದಲ್ಲಿ ಪರಿಣತಿ ಪಡೆದಿದ್ದವರು ಎಲ್ಲ ಎಣಿಕೆಗಳೂ ತಪ್ಪಿಲ್ಲದಂತೆ ಬಲು ಬೇಗ ಮಾಡುತ್ತಿದ್ದರು. ಇವರಿಗೆ ಕೀಪೋಕಾಮಾಯೊ ಎಂದು ಹೆಸರು. ಪ್ರತಿ ಜಿಲ್ಲೆಯಲ್ಲೂ ಇಂಥ ಅಧಿಕಾರಿಗಳಿದ್ದರು. ಆಡಳಿತಕ್ಕೆ ಆವಶ್ಯಕವಾದ ನಾನಾ ವಿಷಯಗಳು ಮತ್ತು ಅಂಕಿಅಂಶ ಗಳನ್ನು ಸರ್ಕಾರಕ್ಕೊದಗಿಸುವುದು ಅವರ ಕರ್ತವ್ಯ. ಈ ಕೀಪೂಗಳನ್ನು ಬಹು ಎಚ್ಚರದಿಂದ ಜೋಡಿಸಿ ಶೇಖರಿಸುತ್ತಿದ್ದರು. ಇದು ಆಗಿನ ರಾಷ್ಟ್ರೀಯ ಪತ್ರಾಗಾರವಾಗಿತ್ತು (ನ್ಯಾಷನಲ್ ಆರ್ಕೈವ್ಸ್). ಪೆರು ಸಂಸ್ಕೃತಿಯ ಇನ್ನೊಂದು ವಿಚಿತ್ರ ವೈಲಕ್ಷಣ್ಯವೆಂದರೆ ಆ ಜನರಿಗೆ ಹಣದ ಜ್ಞಾನವೇ ಇಲ್ಲದಿದ್ದದ್ದು. ಹಣವೇ ಮಾನವನ ಎಲ್ಲ ಅನಿಷ್ಟಗಳ ಮೂಲ ಎಂಬ ಭಾವನೆ ಇವರಿಗಿದ್ದಿರಬಹುದು. ಇವರದು ಅತ್ಯಂತ ದರ್ಪ ವೈಭವಗಳಿಂದ ಮೆರೆದ ವಿಶಾಲಸಾಮ್ರಾಜ್ಯ: ಅಲ್ಲಿದ್ದ ಚಿನ್ನ ಬೆಳ್ಳಿಗಳಿಂದಲೇ ಮುಂದೆ ಯುರೋಪ್ ದೇಶಗಳ ನಾಣ್ಯವ್ಯವಸ್ಥೆ ಸಾಧ್ಯವಾದದ್ದು. ಆದರೂ ಅಲ್ಲಿ ನಾಣ್ಯಗಳೇ ಇರಲಿಲ್ಲ. ಈ ಪ್ರಶಸ್ತ ಲೋಹಗಳಿಗಾಗಿಯೇ ಸ್ಪೇನಿನ ಮತ್ತು ಇತರ ದೇಶಗಳ ಸಾಹಸಿಗರು ಇಲ್ಲಿಗೆ ಬರುವಂತಾದದ್ದು. ಈ ಲೋಹ ಪೆರು ದೇಶದಲ್ಲಿ ಈಗಿಲ್ಲ; ಹಿಂದಿನ ವೈಭವವೂ ಈಗ ಮಾಯವಾಗಿದೆ. ಆದರೆ ಆ ಕಾಲದ ಪೆರು ದೇಶದ ನೆನಪು ತರುವ ಚಾರಿತ್ರಿಕ ಅವಶೇಷಗಳು ಇಂದಿಗೂ ಪ್ರವಾಸಿಗರನ್ನು, ಪ್ರಾಚೀನ ಶೋಧಕರನ್ನು ಸೆಳೆಯುತ್ತಿವೆ.



ಭೂತಗಳು ಹೊತ್ತು ನಿಂತಿರುವ ಆಸನ

ಇಂಕ ವಾಸ್ತುಕಲೆ ಅಚ್ಚರಿಗೊಳಿಸುವಂಥದು. ಕಲ್ಲಿನ ಬೃಹತ್‍ಕಟ್ಟಡಗಳು ರಾಜ್ಯದ ಹಲವೆಡೆಗಳಲ್ಲಿ ಕಂಡುಬಂದಿವೆ. ಈ ಜನ ಕಲ್ಲನ್ನು ಮಟ್ಟಸವಾಗಿ ಕೆತ್ತಿ, ಗಾರೆಯನ್ನು ಉಪಯೋಗಿಸದೆ ಸ್ವಲ್ಪವೂ ಸಂದುಕಾಣದಂತೆ ಒಂದಕ್ಕೊಂದು ಜೋಡಿಸುತ್ತಿದ್ದರು. ಈ ಮಾದರಿಯಲ್ಲಿ ಕಟ್ಟಿದ್ದ ಕುಜ್ಕೋ ಕೋಟೆಯ ಕಲ್ಲುಗಳಲ್ಲಿ ಹಲವು 100 ಟನ್‍ಗಿಂತಲೂ ಭಾರವಾಗಿವೆ. ಮಳೆ ಬಹಳ ಕಡಿಮೆ ಇರುವ ಕರಾವಳಿಯ ಪ್ರದೇಶಗಳಲ್ಲಿ ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳಿಂದ ಕಟ್ಟಡಗಳನ್ನು ಕಟ್ಟುತ್ತಿದ್ದರು. ಆದರೆ ರಚನಾವಿನ್ಯಾಸ ಮತ್ತು ಬೃಹತ್ ಪ್ರಮಾಣದಲ್ಲಿ ಇವು ಪರ್ವತ ಪ್ರದೇಶದ ಕಲ್ಲು ಕಟ್ಟಡಗಳನ್ನೇ ಹೋಲುತ್ತಿದ್ದುವು. ಕೆಲವು ಗೋಡೆಗಳ ಮೇಲೆ ವರ್ಣಚಿತ್ರಗಳ ಅಲಂಕರಣ ಸಹ ಇರುತ್ತಿತ್ತು.

ಈ ಜನರಲ್ಲಿ ಬಳಕೆಯಲ್ಲಿದ್ದ ಶಿಲ್ಪಕಲೆ ಸಾಧಾರಣಮಟ್ಟದ್ದು. ಹೆಚ್ಚಿನವೆಲ್ಲ ಅಲಂಕರಣಕ್ಕಾಗಿ ಮಾಡಿದ ಗೀಚು ಚಿತ್ರಗಳು ಅಥವಾ ಅಲ್ಪ ಉಬ್ಬಿನ ಶಿಲ್ಪಗಳು. ಈ ಜನಗಳಿಗೆ ಕಬ್ಬಿಣದ ಉಪಯೋಗ ತಿಳಿದಿರಲಿಲ್ಲ. ಚಿನ್ನ, ಬೆಳ್ಳಿ ಮತ್ತು ತವರವನ್ನು ಗಣಿಗಳಿಂದ ತೆಗೆಯುತ್ತಿದ್ದರಲ್ಲದೆ ಅವುಗಳಿಂದ ಉತ್ತಮವಾದ ಬಳಕೆಯ ವಸ್ತುಗಳನ್ನು, ಕಲಾತ್ಮಕವಾದ ಆಭರಣಗಳನ್ನು ಮಾಡುತ್ತಿದ್ದರು. ಬೆರಕೆ ಲೋಹಗಳ ಬಳಕೆ ರೂಢಿಯಲ್ಲಿತ್ತು. ಇಂಕ ಜನ ಲೋಹ ವಿದ್ಯೆಯಲ್ಲಿ ಕುಶಲತೆಯನ್ನು ಸಾಧಿಸಿದ್ದರು. ಕಾಲಕಾಲಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಅವು ವ್ಯತ್ಯಾಸಗೊಳ್ಳುತ್ತಿದ್ದವು. ಕೆಲವೆಡೆ ಸಾಮಾನ್ಯವಾದ ಕೆಂಪು ಮಡಕೆಗಳೂ ಬಿಳಿಯ ಬಣ್ಣದ ಮೇಲೆ ಕೆಂಪು ಚಿತ್ರಗಳುಳ್ಳ ಮಡಕೆಗಳೂ ಇನ್ನೂ ಕೆಲವು ಭಾಗಗಳಲ್ಲಿ ನಾನಾ ಪ್ರಾಣಿಯಾಕೃತಿಯಲ್ಲಿ ಮಾಡಿದ ಅಥವಾ ಪ್ರಾಣಿಯ ಅಥವಾ ಮನುಷ್ಯರ ಚಿತ್ರಗಳನ್ನೊಳಗೊಂಡ ಮಡಕೆಗಳೂ ಬಳಕೆಯಲ್ಲಿದ್ದುವು. ಕೆಲವಂತೂ ಅಂದಿನ ಕುಂಬಾರನ ಉನ್ನತಕಲೆಯ ದ್ಯೋತಕಗಳಾಗಿವೆ. ಇಂಕ ಜನರ ಬಟ್ಟೆಗಳಲ್ಲಿ ಕಂಡುಬರುವ ದಾರದ ನಯ, ನೇಯ್ಗೆಯ ತಂತ್ರ ಮತ್ತು ಆಕರ್ಷಕ ರಂಗಿನ ಮಾಟಗಳು ಉಚ್ಚಮಟ್ಟದ್ದಾಗಿದ್ದು, ನೇಯ್ಗೆಯ ಕೆಲಸಕ್ಕೆ ಕಲೆಯ ಸ್ಥಾನವನ್ನು ದೊರಕಿಸಿಕೊಟ್ಟಿವೆ.

ಪಿತೃಪೂಜೆ ಇಂಕ ಜನರ ಧಾರ್ಮಿಕ ನಡವಳಿಕೆಗಳಲ್ಲಿ ಮುಖ್ಯವಾದುದು. ಸತ್ತವರ ದೇಹಗಳನ್ನು ಒಣಗಿಸಿ ಜೋಪಾನವಾಗಿ ಬಟ್ಟೆ ಮುಂತಾದುವುಗಳಲ್ಲಿ ಸಂರಕ್ಷಿಸಿ ಕಾಲಕಾಲಕ್ಕೆ ಪೂಜೆ ಪುನಸ್ಕಾರಗಳನ್ನು ಮಾಡುತ್ತಿದ್ದರು. ಹಲವು ಇಂಕ ದೊರೆಗಳ ಒಣಗಿಸಿದ ದೇಹಗಳು ಕುಜ್ಕೊದ ಸೂರ್ಯ ದೇವಾಲಯದಲ್ಲಿದ್ದುವಂತೆ. ಧಾರ್ಮಿಕ ವಿಧಿಗಳಲ್ಲಿ ಪುರೋಹಿತರು ಮುಖ್ಯಪಾತ್ರವಹಿಸುತ್ತಿದ್ದರು. ಜೋತಿಷ್ಯ, ಶಕುನ, ಯಜ್ಞ, ಪಂಚಾಂಗದ ಪ್ರಕಾರ ಹಬ್ಬಗಳ ನಿಷ್ಕರ್ಷೆ ಮತ್ತು ರೋಗಗಳನ್ನು ಗುಣಪಡಿಸುವುದು–ಪುರೋಹಿತರ ಮುಖ್ಯ ಕೆಲಸವಾಗಿತ್ತು. ದೇಶದ ಮುಖ್ಯ ದೇವತೆ ಸೂರ್ಯ. ವೀರಕೋಚ ಮುಂತಾದ ಹಲವು ದೇವರುಗಳನ್ನು ಪೂಜಿಸುತ್ತಿದ್ದರು. ಪ್ರಮುಖ ನಗರಗಳಲ್ಲಿ ಸೂರ್ಯ ದೇವಾಲಯಗಳು ಇದ್ದುವು. ಹುಯಕ ಎಂದು ಕರೆಯಲ್ಪಡುತ್ತಿದ್ದ ಪುಣ್ಯಸ್ಥಾನಗಳಲ್ಲೂ ಜನ ಪೂಜೆ ಸಲ್ಲಿಸುತ್ತಿದ್ದರು.

(ಎಸ್.ಎನ್.;ಟಿ.ಎಲ್.ಕೆ.)

**ಇಕ್ಸಿಯ:** ಇರಿಡಿಯೇಸಿ ಕುಟುಂಬದ ಒಂದು ಜಾತಿ; ಹೂ ಬಿಡುವ ಲಶುನ ಸಸ್ಯ. ಕಾರನ್ ಲಿಲ್ಲಿ ಇದರ ಪರ್ಯಾಯ ನಾಮ. ಸಸ್ಯದ ತುದಿಯಲ್ಲಿ ಬಿಟ್ಟಿರುವ ಗಾಜಿನಂತಿರುವ ಎಲೆಗಳ ಸುಂದರ ದೃಶ್ಯ ಆಕರ್ಷಕ. ಕುಂಡ ಸಸ್ಯ ಮತ್ತು ಮಡಿಸಸ್ಯವಾಗಿ ಇದನ್ನು ಬೆಳೆಸುತ್ತಾರೆ. ಇಕ್ಸಿಯ ಹೂಗಳನ್ನು ಕಳಸದ ಅಲಂಕಾರಕ್ಕಾಗಿ ಉಪಯೋಗಿಸುವುದುಂಟು. ಇಕ್ಸಿಯ ಜಾತಿಯಲ್ಲಿ ಆಫ್ರಿಕ ಮೂಲನಿವಾಸಿಗಳಾದ ಸುಮಾರು 25 ಪ್ರಭೇದಗಳಿವೆ. ಈ ಸಸ್ಯದ ಕುಬ್ಜಕಾಂಡ ಆಕಾರದಲ್ಲಿ ಗುಂಡು; ಪದರ ಪದರವಾಗಿದ್ದು ಮೇಲುಭಾಗ ನಾರಿನಿಂದ ಕೂಡಿದೆ. ಎಲೆ ಸರಳ. ನೀಳಾಕಾರ; ನಯವಾದ ಅಂಚು. ಮೊನಚು ತುದಿ; ಗಾಜಿನಂತೆ ಹೊಳೆಯುತ್ತದೆ. ನೇರವಾಗಿ ನಿಂತಿರುವ ಹೂಗೊಂಚಲು ಅಂತ್ಯಾರಂಭಿ ಅಥವಾ ಸ್ಪೈಕ್ ಮಾದರಿಯದು. ಆದರೆ ಕೆಲವು ಪ್ರಭೇದದ ಸಸ್ಯಗಳಲ್ಲಿ ಹೂಗೊಂಚಲು ಕವಲೊಡೆದಿರುತ್ತದೆ. ಹೂವು ಆಲಿಕೆಯಾಕಾರ, ಕೂಡುದಳದ ಹೊರಭಾಗ 6; ಹೂವಿನ ಬಣ್ಣಪ್ರಭೇದಕ್ಕೆ ಅನುಗುಣವಾಗಿ ಬಿಳುಪು, ಹಳದಿ, ಕಿತ್ತಲೆ, ಊದಾ, ನಸುಗೆಂಪು, ಕೆಂಪು, ವಿರಳವಾಗಿ ಹಸಿರು, ಕೇಸರುಗಳು 3; ಇವುಗಳ ಬುಡಗಳು ಹೂಗಂಟಲಿಗೆ ಅಂಟಿಕೊಂಡಿವೆ; ಕೇಸರ ಶಲಾಕೆ ಬಿಡಿಯಾಗಿದೆ. ಅಂಡಾಶಯ ಆಯತಾಕಾರ, ಮೂರು ಕೋಶದ್ದಾಗಿದ್ದು ಬಹು ಬೀಜಗಳಿಂದ ಕೂಡಿದೆ. ಕ್ಯಾಪ್‍ಸೂಲ್ ಮಾದರಿಯ ಹಣ್ಣು; ಇದು ಮೂರು ಭಾಗವಾಗಿದೆ; ಇದಕ್ಕೆ ರೆಕ್ಕೆ ಇದೆ.

ಈ ಜಾತಿಯಲ್ಲಿರುವ 25 ಪ್ರಭೇದಗಳ ಪೈಕಿ ಮುಂದೆ ಕಾಣಿಸಿರುವ ಮೂರು ಪ್ರಭೇದಗಳು ಉದ್ಯಾನಗಾರಿಕೆ ದೃಷ್ಟಿಯಿಂದ ಮುಖ್ಯವಾದುವು. ಈ ಮೂರು ಪ್ರಭೇದಗಳಲ್ಲಿ ಅನೇಕ ವಿಧವಾದ ಬಣ್ಣಗಳಲ್ಲಿ ಹೂ ಬಿಡುವ ತಳಿಗಳು ಬೇಸಾಯದಲ್ಲಿವೆ. (ಡಿ.ಎಂ.)

**ಇಕ್ಸೋರ:** ರೂಬಿಯೇಸೀ ಕುಟುಂಬದ 150 ಜಾತಿಗಳ ಪೈಕಿ ಒಂದು. ಹೂ ಬಿಡುವ ಪೊದೆ ಸಸ್ಯ. ಅಗಲವಾದ ಮತ್ತು ಉದ್ದವಾದ ಎಲೆಗಳ ಮಧ್ಯೆ ಚೆಂಡಿನಂತೆ, ಪ್ರಭೇದಗಳಿಗೆ ಅನುಸಾರವಾಗಿ ವಿವಿಧ ಬಣ್ಣಗಳಲ್ಲಿ ಬಿಟ್ಟಿರುವ ಚೆಲುವಾದ ಹೂಗೊಂಚಲುಗಳನ್ನು ಹೊಂದಿದ್ದು ಪೊದೆಯಾಗಿಯೂ ಚಿಕ್ಕಮರವಾಗಿಯೂ ಬೆಳೆಯುತ್ತದೆ. ಸದಾ ಹಸಿರಾಗಿರುವ ಬಹುವಾರ್ಷಿಕ ಸಸ್ಯವಾಗಿ ಬೆಳೆಯುವ ಪ್ರಭೇದಗಳೂ ಇವೆ. ಎಲೆ ಅಭಿಮುಖ ಅಥವಾ ವೃತ್ತ ಜೋಡಣೆಯುಳ್ಳದ್ದು. ಕೊರಿಂಬ್ ಮಾದರಿಯ ಹೂಗೊಂಚಲು ತುದಿ ಅಥವಾ ಕಂಕುಳಲ್ಲಿ ಕಾಣಿಸಿಕೊಳ್ಳುತ್ತದೆ. ಹೂಗಳ ಬಣ್ಣ ಪ್ರಭೇದಗಳಿಗೆ ಅನುಸಾರವಾಗಿ ಬಿಳುಪು, ಗುಲಾಬಿ, ಕೇಸರಿ, ಹೀಗೆ ನಾನಾ ಬಗೆ, ಹೂಗಳಿಗೆ ತೊಟ್ಟು, ಉಪದಳ, ಗಂಟಲಲ್ಲಿ ರೋಮಗಳು ಕೂಡು ದಳದ ಹೊರಭಾಗ 4–5 ಭಾಗವಾಗಿ ಅಗಲವಾಗಿರುತ್ತದೆ. ಕೇಸರಗಳು ಹೂಗಂಟಲಿನ ಮೇಲೆ ಅಂಟಿಕೊಂಡಿರುತ್ತವೆ. ಕೆಳ ಅಂಡಾಶಯ ಮೇಲ್ಭಾಗವಾಗಿದೆ. ಹಣ್ಣು ಗಟ್ಟಿಯಾದ ಅಥವಾ ಮೆದುವಾದ ಬೆರ್‍ರಿ ಮಾದರಿಯದು. ಇವನ್ನು ಉದ್ಯಾನವನ ಲಾನುಗಳಲ್ಲಿ ಮತ್ತು ದಾರಿಗಳ ಪಕ್ಕದಲ್ಲಿ ಬೆಳೆಸುತ್ತಾರೆ. ಹೂವಿನ ಬಣ್ಣಗಳಿಗೆ ಅನುಸಾರವಾಗಿ ಇಕ್ಸೋರವನ್ನು ಹೀಗೆ ವಿಂಗಡಿಸಬಹುದು. ಹಳದಿ ಮತ್ತು ಕಿತ್ತಲೆ ಬಣ್ಣದ ಹೂಗಳವು. 2 ಕಡುಗೆಂಪು ಹೂಗಳವು. 3. ಕರಿಬಣ್ಣದ ಹೂಗಳವು. 4. ಬಿಳಿಬಣ್ಣದ ಹೂಗಳವು. 5. ಕಿತ್ತಲೆ ಮಿಶ್ರಿತ ಕರಿ ಬಣ್ಣದ ಹೂಗಳವು. *

**ಇಂಗರ್‍ಸಾಲ್, ರಾಬರ್ಟ್ ಗ್ರೀನ್:** 1833–99. ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಸಿದ್ಧ ವಕೀಲ. ಬಾಬ್ ಇಂಗರ್‍ಸಾಲ್ ಎಂದು ಜನ ಕರೆಯುತ್ತಿದ್ದರು. ನ್ಯೂಯಾರ್ಕ್ ನಗರದಲ್ಲಿ ಜನಿಸಿದ. ತಂದೆ ಚರ್ಚಿನಲ್ಲಿ ಪುರೋಹಿತ. ಶಾಸ್ತ್ರೀಯ ವಿದ್ಯಾಭ್ಯಾಸ ದೊರಕಿದ್ದುದು ಅತ್ಯಲ್ಪ. ಆದರೆ ಸ್ವತಃ ವಿದ್ಯಾಪಾರಂಗತನಾಗಿ 1854ರಲ್ಲಿ ಇಲಿನಾಯ್ ಎಂಬಲ್ಲಿ ವಕೀಲವೃತ್ತಿಗೆ ಅರ್ಹತೆ ಪಡೆದ. ಪಿಯೋರಿಯ, ವಾಷಿಂಗ್‍ಟನ್, ನ್ಯೂಯಾರ್ಕ್ ನಗರಗಳಲ್ಲಿ ವಕೀಲವೃತ್ತಿಯಿಂದ ಅಧಿಕವಾಗಿ ಹಣಗಳಿಸಿದ. ಇಲಿನಾಯ್‍ನ ಅಶ್ವದಳದಲ್ಲಿ ಸ್ವಯಂಸೇವಕನಾಗಿ ಕರ್ನಲ್ ಅಧಿಕಾರದಲ್ಲಿದ್ದು ಅಚಾತುರ್ಯಕ್ಕೆ ಸಿಕ್ಕಿ ಹುದ್ದೆ ಕಳೆದುಕೊಂಡ (1862); ರಿಪಬ್ಲಿಕನ್ ಪಕ್ಷಕ್ಕೆ ಸೇರಿ ಇಲಿನಾಯ್‍ನಲ್ಲಿ 1867–69ರವರೆವಿಗೆ ಅಟಾರ್ನಿ ಜನರಲ್ ಆಗಿ ನೇಮಕವಾದ. ಆ ಪಕ್ಷದ ಮುಖ್ಯ ಭಾಷಣಕಾರನಾಗಿ ಪ್ರೆಸಿಡೆಂಟ್ ಚುನಾವಣೆಯ 1876 ಮತ್ತು 1880ರ ಚಳವಳಿಗಳಲ್ಲಿ ಹೆಸರು ಗಳಿಸಿದ. ರಿಪಬ್ಲಿಕನ್ ಪಕ್ಷದವರು ಯಾವುದೋ ಒಂದು ನ್ಯಾಯವ್ಯವಹಾರದಲ್ಲಿ ಸಿಕ್ಕಿದಾಗ ಅವರ ಪಕ್ಷದ ವಕೀಲನಾದ. ಕ್ರೈಸ್ತಧರ್ಮವನ್ನು ಖಂಡಿಸಿದುದರಿಂದ, ಮಂತ್ರಿವರ್ಗದಲ್ಲಿಯಾಗಲಿ ರಾಜಕೀಯದಲ್ಲಾಗಲಿ ಮಹತ್ತ್ವದ ಸ್ಥಾನ ದೊರೆಯಲಿಲ್ಲ. ಅವನ ಭಾಷಣಗಳು ಬಹಳ ಮನ್ನಣೆ ಪಡೆದಿದ್ದು ಒಂದು ಸಂಜೆಯ ಭಾಷಣಕ್ಕೆ 3500 ಡಾಲರ್‍ವರೆಗೂ ಸಂಭಾವನೆ ಸಿಗುತ್ತಿತ್ತು.

ಇಂಗರ್‍ಸಾಲ್ ಬೈಬಲ್ಲನ್ನೂ ಕ್ರೈಸ್ತ ನಂಬಿಕೆಗಳನ್ನೂ ಕಟುವಾಗಿ ಟೀಕಿಸುತ್ತಿದ್ದ. ಮಾನವಹಿತಸಾಧನೆಯೇ ಇವನ ಮತವಾಗಿತ್ತು. ಅಲ್ಲದೆ ವಿಜ್ಞಾನವಿಚಾರತತ್ತ್ವಗಳಿಗೆ ಪ್ರಧಾನಸ್ಥಾನ ಕೊಟ್ಟಿದ್ದ. ಈತನ ಭಾಷಣಗಳೂ ನಿರೂಪಣೆಗಳೂ 12 ಹೊತ್ತಿಗೆಗಳನ್ನೊಳಗೊಂಡ ಗ್ರಂಥ ಸಂಪುಟದಲ್ಲಿ, ಕ್ಲಿಂಟನ್ ಪಿ. ಫ್ಯಾರೆಲ್‍ನ ಸಂಪಾದಕತ್ವದಲ್ಲಿ ಪ್ರಕಟವಾಗಿವೆ. ಈತನ ಜೀವನಚರಿತ್ರೆ 1952ರಲ್ಲಿ ಸಿ.ಎಚ್.ಕ್ರೇಮಲ್ ಎಂಬಾತನಿಂದ ರಾಯಲ್ ಬಾಬ್ ಎಂಬ ಹೆಸರಿನಲ್ಲಿ ಹೊರಬಿದ್ದಿದೆ. ಸಮ್ ಮಿಸ್ಟೇಕ್ಸ್ ಆಫ್ ಮೋಸೆಸ್ (1879) ವೈ ಐ ಆ್ಯಮ್ ಎನ್ ಅಗ್ನೋಸ್ಟಿಕ್ (1896), ದಿ ಗಾಡ್ಸ್ ಆ್ಯಂಡ್ ಅದರ್ ಲೆಕ್ಚರ್ಸ್ (1876), ಸೂಪರ್ ಸ್ಟಿಷನ್ (1898) ಎಂಬುವು ಈತನ ಮುಖ್ಯ ಗ್ರಂಥಗಳು. ಈತನನ್ನು ಡಾರ್ವಿನ್ನನ ಪರಮ ಶಿಷ್ಯನೆಂದು ಅಮೆರಿಕದವರು ಕರೆದಿದ್ದಾರೆ. (ಎಸ್.ಎಸ್.ಆರ್.)

**ಇಂಗಳದಾಳು:** ಚಿತ್ರದುರ್ಗ ತಾಲ್ಲೂಕಿನ ಒಂದು ಗ್ರಾಮ. ಚಿತ್ರದುರ್ಗದಿಂದ ಆಗ್ನೇಯಕ್ಕೆ 10ಕಿಮೀ ದೂರದಲ್ಲಿದೆ. ಬಹಳ ಹಿಂದಿನ ಕಾಲದಿಂದ ಅಲ್ಲಿ ಸಿಗುವ ತಾಮ್ರದ ಅದುರನ್ನು ಸಂಸ್ಕರಿಸಿ ಕೆಂಡದಂಥ (ಇಂಗಳ) ವರ್ಣದ ಸ್ವಚ್ಛ ತಾಮ್ರವನ್ನು ಉತ್ಪಾದಿಸುತ್ತಿದ್ದುದರಿಂದ.

ಈ ಪ್ರದೇಶಕ್ಕೆ ಇಂಗಳದಾಳು ಎಂಬ ಹೆಸರು ಬಂದಿದೆ. ರಾಜಧಾನಿ ಬೆಂಗಳೂರಿನಿಂದ 190ಕಿಮೀ ದೂರದಲ್ಲಿದ್ದು ಬೆಂಗಳೂರು– ಮುಂಬಯಿ ರಾಷ್ಟ್ರೀಯ ಹೆದ್ದಾರಿ ಈ ಪ್ರದೇಶದ ಮೂಲಕ ಹಾದುಹೋಗುತ್ತದೆ.

ಕರ್ನಾಟಕದಲ್ಲಿ ಅತಿ ಪ್ರಾಚೀನ ತಾಮ್ರದ ಗಣಿ ಇರುವುದು ಇಂಗಳದಾಳಿನಲ್ಲಿ. ಈ ಪ್ರದೇಶ ಕಡಿದಾದ ಬೆಟ್ಟದ ಸಾಲುಗಳಿಂದ ಆವೃತವಾಗಿದೆ.ಹಸಿರುಡದ ಈ ಬೋಳು ಬೆಟ್ಟಗಳು ಕಡಿದಾಗಿದ್ದು ಸಮುದ್ರಮಟ್ಟಕ್ಕಿಂತ 610ಮೀ.ಗಳಷ್ಟು ಎತ್ತರವಿದೆ. ಈ ಬೆಟ್ಟದ ಸಾಲಿನ ಮಧ್ಯೆ 1007ಮೀ.ಗಳ ಎತ್ತರದ ಬೆಳ್ಳಿ ಗುಡ್ಡ ವಿಶಿಷ್ಟವಾಗಿ ಕಾಣುತ್ತದೆ. ಬೆಳ್ಳಿಗುಡ್ಡದ ಸಾಲಿನ ಪಶ್ಚಿಮ ತಪ್ಪಲಿನ ಗರ್ಭದಲ್ಲಿ 30ಕಿಮೀ ದೂರ ಆಂಟಿಮನಿ, ಆರ್ಸೆನಿಕ್, ಸೀಸ ಮತ್ತು ತಾಮ್ರದ ಅದುರುಗಳು ಕಂಡುಬಂದಿವೆ. ಇತ್ತೀಚೆಗೆ ನಡೆದ ಅಂತರ್ಗತ ಶೋಧನೆಯಿಂದ ತಿಳಿದು ಬಂದಂತೆ 1000ಮೀ ಉದ್ದ ಹಾಗೂ 300ಮೀ. ಆಳದ ಶಿಲಾಸ್ತೋಮದಾದ್ಯಂತ ಅದುರುಗರ್ಭಿತ ಬೆಣಚು ಶಿಲೆಗಳು ಹರಡಿವೆ. ಚಾಲ್ಕೊಪೈರೈಟ್, ಪಿರ್ಹೋಟೈಟ್ ಎಂಬ ತಾಮ್ರ ಹಾಗೂ ಗಂಧಕದ ಅದುರುಗಳು ಸ್ಫಾಲರೈಟ್ ಮತ್ತು ಗೆಲಿನಾ ಎಂಬ ಸತು ಮತ್ತು ಸೀಸದ ಅದುರುಗಳು ಈ ಶಿಲಾಗರ್ಭದಲ್ಲಿವೆ.

ಅನೇಕ ತಜ್ಞರ ಪ್ರಯತ್ನದಿಂದ ಇಲ್ಲಿ ತಾಮ್ರದ ಅದುರಿನ ಉತ್ಪಾದನೆ ಆರಂಭವಾಗಿದೆ. 1974ರಲ್ಲಿ ಅದುರಿನ ಸಂಸ್ಕರಣ ಸ್ಥಾವರವನ್ನು ಸ್ಥಾಪಿಸಲಾಯಿತು. ಕೈಗಾರಿಕೆಗಳಿಗೆ ತಾಮ್ರ ಅತಿ ಮುಖ್ಯ ವಸ್ತುವಾಗಿದ್ದು ಅದನ್ನು ನೀಡುವ ಇಂಗಳದಾಳು ಕರ್ನಾಟಕದ ಹೆಮ್ಮೆಯ ಸ್ಥಳವಾಗಿದೆ. (ವೈ.ಎಲ್.)

**ಇಂಗಳೇಶ್ವರ:** ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನಲ್ಲಿ ಬಾಗೇವಾಡಿಗೆ 10 ಕಿಮೀ ದೂರದಲ್ಲಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಉಪರಾಜಧಾನಿಯಾಗಿತ್ತು. ಕಳಚೂರ್ಯ ಬಿಜ್ಜಳನ ಜನ್ಮಸ್ಥಳವೆಂದು ಚರಿತ್ರಕಾರರು ಹೇಳುತ್ತಾರೆ. ಶೈವ, ವೈಷ್ಣವ, ವೀರಶೈವ ಮತಸ್ಥರ ದೇವಾಲಯಗಳಿವೆ. 11ನೆಯ ಶತಮಾನದ ಕನ್ನಡ ಕವಿ ಅಗ್ಗಳನ ಜನ್ಮಸ್ಥಳವೆಂದೂ ತನ್ನ ಚಂದ್ರಪ್ರಭ ಪುರಾಣವನ್ನು ಆತ ಇಲ್ಲಿಯೇ ಬರೆದನೆಂದೂ ಹೇಳುತ್ತಾರೆ. ಪೂರ್ವದಲ್ಲಿ ಚಂದ್ರಪ್ರಭ ಬಸದಿ ಪ್ರಖ್ಯಾತವಾಗಿತ್ತು; ಈಗ ಅದರ ಕುರುಹಿಲ್ಲ. ಅಲ್ಲಿಯ ವಿಗ್ರಹ ರೇವಣಸಿದ್ಧೇಶ್ವರ ಗವಿಯಲ್ಲಿ ರಕ್ಷಿಸಲ್ಪಟ್ಟಿದೆ. ವೀರಶೈವ ಆಚಾರ್ಯಪುರುಷರಲ್ಲಿ ಒಬ್ಬನಾದ ರೇವಣಸಿದ್ಧನೆಂದು ಹೇಳಲಾದ ಈ ಗವಿಯಲ್ಲಿ ಆ ಮಹಾತ್ಮನ ವಿಗ್ರಹವಿದೆ. ಮತ್ತೊಂದು ಭಾಗದಲ್ಲಿ ಚನ್ನಬಸವಣ್ಣನ ತಾಯಿ ಎನ್ನಲಾದ ಅಕ್ಕನಾಗಮ್ಮನ ಗವಿಯಿದೆ. ಹಿಂದೆ ಇಂಗಳೇಶ್ವರ ದೊಡ್ಡ ನಗರವಾಗಿದ್ದಂತೆ ಕಾಣಬರುತ್ತದೆ. ಇದರ ಶಾಖಾನಗರವೇ ಬಾಗೇವಾಡಿ. ಸಂಸ್ಕೃತ ಬಸವಪುರಾಣಗಳಲ್ಲಿ ಇಂಗಳೇಶ್ವರ ಬಾಗೇವಾಡಿ ಎಂದು ಹೇಳಲಾಗಿದೆ. ಇಲ್ಲಿ ಶಿಲಾಶಾಸನಗಳು, ನಿಸದಿಕಲ್ಲುಗಳು, ಮಹಾಶಾಸನಗಳು ವಿಪುಲವಾಗಿ ಇವೆ. (ಬಿ.ಎಸ್.)

ಇಂಗಳೇಶ್ವರದಲ್ಲಿ ಎರಡು ಗವಿ ದೇವಾಲಯಗಳನ್ನೊಳಗೊಂಡಂತೆ ಎಂಟು ಪುರಾತನ ದೇವಾಲಯಗಳಿವೆ. ಅವುಗಳಲ್ಲಿ ಮೂರನ್ನು 1128ರಲ್ಲಿ ನೀಲಕಂಠನಾಯಕ ಕಟ್ಟಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಸೋಮೇಶ್ವರ ದೇವಾಲಯ 38 ದುಂಡುಗಂಬಗಳಿಂದ ಕೂಡಿದ ದೊಡ್ಡ ದೇವಸ್ಥಾನ. ಮುಖಮಂಟಪದ ಮೇಲ್ಛಾವಣಿಗೆ ಹೊದ್ದಿಸಿರುವ ಅಷ್ಟಕೋಣಾಕೃತಿಯ ಶಿಲೆ ನವಗ್ರಹಗಳನ್ನು ಪ್ರತಿಬಿಂಬಿಸುತ್ತದೆ. ಗರ್ಭಗೃಹದ ಬಾಗಿಲಲ್ಲಿ ಎರಡು ಸ್ತ್ರೀವಿಗ್ರಹಗಳಿವೆ. ಅದರ ಎರಡು ಪಕ್ಕಗಳಲ್ಲಿ ಗರ್ಭಗುಡಿಯಿದ್ದು ಗಣಪತಿ ಮತ್ತು ಈಶ್ವರ ವಿಗ್ರಹಗಳಿವೆ. ಇನ್ನೊಂದು ವೈಷ್ಣವ ದೇವಾಲಯ. 24 ದುಂಡುಗಂಬಗಳಿಂದ ಕೂಡಿದ ಆ ದೇವಾಲಯದಲ್ಲಿ ನಾಲ್ಕು ಅಡಿ ಎತ್ತರದ ಮುದ್ದಾದ ನಾರಾಯಣ ವಿಗ್ರಹವಿದೆ. ಇದು ಪೇಶ್ವೆಯರ ಕಾಲದಲ್ಲಿ ಪ್ರತಿಷ್ಠಾಪಿತವಾಗಿರಬೇಕೆಂದು ತಿಳಿದುಬರುತ್ತದೆ.

ನಾರಾಯಣ ದೇವಸ್ಥಾನದಲ್ಲಿ ಎರಡು ಶಾಸನಗಳೂ ಮತ್ತು ಸೋಮೇಶ್ವರದಲ್ಲಿ ಒಂದು ಶಾಸನವೂ ಇವೆ. ಹಳಗನ್ನಡದಲ್ಲಿರುವ ಆ ಶಾಸನಗಳಲ್ಲಿ ದೇವಸ್ಥಾನವನ್ನು ಕಟ್ಟಿಸಿದವರ ಮತ್ತು ದತ್ತಿಯ ವಿಷಯಗಳನ್ನು ತಿಳಿಸಿದೆ. *

**ಇಂಗಾಲ:** ಒಂದು ರಾಸಾಯನಿಕ ಧಾತು, ಸಂಕೇತ C, ಪರಮಾಣು ಸಂಖ್ಯೆ 6, ಪರಮಾಣು ತೂಕ 12.01115 (ಕಾರ್ಬನ್). ಮೆಂಡಲೀಫನ ಆವರ್ತಕೋಷ್ಟಕದಲ್ಲಿ ನಾಲ್ಕನೆಯ ಗುಂಪಿನಲ್ಲಿ (ಗ್ರೂಪ್) ಇದೆ. ಈ ಗುಂಪಿನಲ್ಲಿ ಸಿಲಿಕಾನ್, ಜರ್ಮೇನಿಯಂ, ತವರ ಮತ್ತು ಸೀಸಗಳಿವೆ. ಇವುಗಳಲ್ಲಿ ಇಂಗಾಲ ಮತ್ತು ಸಿಲಿಕಾನುಗಳು ಮಾತ್ರ ಅಲೋಹಗಳು. ಉಳಿದವು ಲೋಹಗಳು. ಇಂಗಾಲದ ರಸಾಯನವಿಜ್ಞಾನವನ್ನು ಅರಿಯಲು ಅದರ ವೇಲೆನ್ಸಿ ನಾಲ್ಕು ಎಂದೂ ಈ ವೇಲೆನ್ಸಿಗೆ ಋಣ ವಿದ್ಯುತ್ಕಣಗಳ (ಎಲೆಕ್ಟ್ರಾನ್) ಲಾಭ ಅಥವಾ ನಷ್ಟಗಳಲ್ಲದೆ ಇತರ ಪರಮಾಣುಗಳೊಡನೆ ಆಗುವ ಹಂಚಿಕೆಯೇ ಕಾರಣವೆಂದೂ ಮನದಟ್ಟು ಮಾಡಿಕೊಳ್ಳಬೇಕು. ಈ ಬಗೆಯ ವೇಲೆನ್ಸಿಗೆ ಕೋವೇಲೆನ್ಸಿ ಎಂದು ಹೆಸರು.

ಪ್ರಕೃತಿಯಲ್ಲಿ ಇಂಗಾಲ ಮುಕ್ತಸ್ಥಿತಿಯಲ್ಲಿಯೂ ಸಂಯೋಜಿತ ರೂಪದಲ್ಲಿಯೂ ಹೇರಳವಾಗಿ ದೊರೆಯುತ್ತದೆ. ರಾಸಾಯನಿಕವಾಗಿ ಇದು ಜಡವಸ್ತು. ಆದರೆ ಇದನ್ನೊಳಗೊಂಡಿರುವ ಸಂಯುಕ್ತಗಳ ಸಂಖ್ಯೆ ಅನೇಕ. ಇಷ್ಟು ಸಂಖ್ಯೆಯ ಸಂಯುಕ್ತಗಳಿರುವ ಮೂಲವಸ್ತು ಇನ್ನೊಂದಿಲ್ಲ. ಇದರ ಕಾರಣ ಇಂಗಾಲದ ಕೋವೇಲೆನ್ಸಿ. ಇದರಿಂದ ಇಂಗಾಲದ ಪರಮಾಣುಗಳು ಒಂದರೊಡನೊಂದು ಕೂಡಿಕೊಂಡು ಉದ್ದನೆಯ ಸರಪಳಿಗಳು ವೃತ್ತಗಳು ಮೊದಲಾಗಿ ಅನೇಕ ಆಕಾರಗಳಿರುವ ಹಿರಿಯ ಗಾತ್ರದ ಅಣುಗಳ ಸೃಷ್ಟಿಗೆ ಕಾರಣವಾಗಬಲ್ಲವು. ಅಂತೆಯೇ ಸಂಯುಕ್ತಗಳ ವೈವಿಧ್ಯವೂ ಹೆಚ್ಚುತ್ತದೆ. ಪ್ರಕೃತಿಯಲ್ಲಿರುವ ಜೀವಜನ್ಯ ಸಂಯುಕ್ತಗಳೆಲ್ಲವೂ ಇಂಗಾಲವನ್ನೊಳಗೊಂಡಿವೆ ಎಂದರೆ ಪ್ರಪಂಚದಲ್ಲಿ ಇಂಗಾಲದ ಪ್ರಸರಣದ ವ್ಯಾಪ್ತಿ ಅರ್ಥವಾದಂತಾಗುತ್ತದೆ. ಗಾಳಿಯಲ್ಲಿಯೂ ಇದು ಇಂಗಾಲದ ಡೈ ಆಕ್ಸೈಡ್ ರೂಪದಲ್ಲಿವೆ. ಖನಿಜಗಳಾದ ಸುಣ್ಣಕಲ್ಲು (ಲೈಮ್‌ಸ್ಟೋನ್, $CaCO_3$), ಅಮೃತಶಿಲೆ (ಮಾರ್ಬಲ್ $CaCO_3$), ಡೋಲೊಮೈಟ್ ($MgCO_3$) ಮೊದಲಾದುವು ಇಂಗಾಲವನ್ನೊಳಗೊಂಡಿವೆ. ಧಾತುರೂಪದಲ್ಲಿರುವ ಇಂಗಾಲ ಮತ್ತು ಅದರ ಹಲವು ಸರಳ ಸಂಯುಕ್ತಗಳನ್ನು ಕುರಿತು ಇಲ್ಲಿ ಬರೆದಿದೆ.

ಮುಕ್ತ ಸ್ಥಿತಿಯಲ್ಲಿ ದೊರೆಯುವ ಇಂಗಾಲ: ಮೂರು ಮುಖ್ಯ ಬಹುರೂಪಗಳಲ್ಲಿ (ಅಲೊಟ್ರೋಪಿಕ್ ಫಾರ್ಮ್ಸ್) ಮುಕ್ತಸ್ಥಿತಿಯ ಇಂಗಾಲ ದೊರೆಯುತ್ತದೆ : (1) ವಜ್ರ, (2) ಗ್ರ್ಯಾಫೈಟ್ :– ಇವು ಸ್ಫಟಕ (ಕ್ರಿಸ್ಟಲೈನ್) ರೂಪಗಳು: (3) ಅಸ್ಫಟಿಕ (ಅಮಾರ್ಫಸ್) ಇಂಗಾಲ, ಇದ್ದಲುಗಳು, ಕಲ್ಲಿದ್ದಲು, ದೀಪದ ಎಣ್ಣೆಯ ಮತ್ತು ವಿವಿಧ ಅನಿಲ ಉರುವಲುಗಳ ಮಸಿಗಳು–ಇವು ಅಸ್ಫಟಿಕ ರೂಪಗಳು. ವಿವಿಧ ರೂಪಗಳಲ್ಲಿರುವ ಇಂಗಾಲಗಳ ಭೌತಗುಣಗಳಲ್ಲಿ ಬಲು ವ್ಯತ್ಯಾಸವಿದ್ದರೂ ರಾಸಾಯನಿಕ ಗುಣಲಕ್ಷಣಗಳಲ್ಲಿ ವ್ಯತ್ಯಾಸವಿಲ್ಲ ಮತ್ತು ಅವನ್ನು ರಾಸಾಯನಿಕ ಕ್ರಿಯೆಗಳಿಗೆ ಒಳಪಡಿಸದೆ ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಪರಿವರ್ತಿಸಬಹುದು.

ವಜ್ರ: ವಜ್ರದಲ್ಲಿ ಪರಮಾಣುವಿನಿಂದ ಪರಮಾಣುವಿಗೆ ಇರುವ ದೂರ 1.544 ಆಂಗ್‌ಸ್ಟ್ರಾಮ್ ಎಂದೂ ಬಂಧಗಳ ನಡುವಿನ ಕೋನ $109^0 28'$ ಗಳೆಂದೂ ಎಕ್ಸ್‌ಕಿರಣನಮನ (ಎಕ್ಸ್‌ರೇ ಡಿಫ್ರ್ಯಾಕ್ಷನ್) ವಿಧಾನದಿಂದ ಅಳೆಯಲಾಗಿದೆ. ಪ್ರತಿಯೊಂದು ಇಂಗಾಲದ ಪರಮಾಣುವೂ ಆಕಾಶದಲ್ಲಿ (ಸ್ಪೇಸ್) ನಾಲ್ಕು ಬಂಧಗಳನ್ನು ಹೊಂದಿದ್ದು ಇತರ ನಾಲ್ಕು ಪರಮಾಣುಗಳೊಡನೆ ಸಂಪರ್ಕ ಪಡೆದಿರುವುದು ವಜ್ರದ ಮೂರು ಆಯಾಮದ ರಚನೆ ಚಿತ್ರ (1) ರಲ್ಲಿ ತೋರಿಸಿದೆ.



**ಚಿತ್ರ 1. ವಜ್ರದ ರಚನೆ**

ಇಂಥ ರಚನೆಯಲ್ಲಿ ಅಣುಬಂಧಗಳ ಮೇಲೆ ಯಾವ ಒತ್ತಡವೂ ಇಲ್ಲದಿರುವುದರಿಂದಬಂಧಗಳ ಬಂಧನ ಶಕ್ತಿ ಬಲು ಹೆಚ್ಚಿದ್ದು ಈ ರಚನೆಯೇ ವಜ್ರದ ಕಠಿಣತೆಗೆ (ಹಾರ್ಡ್‌ನೆಸ್) ಕಾರಣವಾಗಿದೆ. ಘನಾಕೃತಿ ಅಥವಾ ಅಷ್ಟಮುಖ ಸ್ಫಟಿಕಾಕೃತಿಯಲ್ಲಿ ದೊರೆಯುವ ವಜ್ರ ಕಠಿಣತೆಯಲ್ಲಿ ಇತರ ಎಲ್ಲ ವಸ್ತುಗಳನ್ನೂ ಮೀರಿಸಿದೆ. ಮೋಸ್‌ಕಠಿಣತೆಯ ಮಾನದಲ್ಲಿ (Moh's scale of hardness) ವಜ್ರದ ಮಾನ 10. ಆದರೆ ವಜ್ರ ಸಾಕಷ್ಟು ಪೆಡಸೂ (ಬ್ರಿಟಲ್) ಹೌದು. ವಜ್ರದ ಸಾಂದ್ರತೆ 3.51. ಇದಕ್ಕೆ ಬೆಳಕನ್ನು ಪ್ರಸರಿಸುವ ಶಕ್ತಿ ಅಧಿಕವಾಗಿದೆ. ಇದು ಬಿಳಿಯ ಬೆಳಕನ್ನು ಬಣ್ಣ ಬಣ್ಣದ ಕಿರಣಗಳಾಗಿ ಒಡೆಯುವುದರಿಂದ ಮನೋಹರವಾಗಿ ಕಾಣಬಲ್ಲುದು. ರಾಸಾಯನಿಕವಾಗಿ ವಜ್ರ ಬಲು ಜಡ. ಶೂನ್ಯ ವಾತಾವರಣದಲ್ಲಿ ವಜ್ರವನ್ನು $1500^0$ ಸೆ. ವರೆಗೆ ಕಾಸಿದಾಗಲೂ ಬದಲಾವಣೆ ಕಂಡುಬರುವುದಿಲ್ಲ. ಆದರೆ $1800^0$ ಸೆ. ಉಷ್ಣತೆಯಲ್ಲಿ ಇದು ಗ್ರ್ಯಾಫೈಟ್ ಆಗಿ ಪರಿವರ್ತಿತವಾಗುತ್ತದೆ. $700^0$–$900^0$ ಸೆ. ಉಷ್ಣತೆಯಿರುವಾಗ ಗಾಳಿ, ಆಕ್ಸಿಜನ್‌ಗಳಲ್ಲಿ ಹೊತ್ತಿ ಉರಿದು ಇಂಗಾಲದ ಡೈಆಕ್ಸೈಡನ್ನು ನೀಡುತ್ತದೆ. ಬಲುಮಟ್ಟಿಗೆ ಎಲ್ಲ ರಾಸಾಯನಿಕ ವಸ್ತುಗಳನ್ನು ವಜ್ರ ನಿರೋಧಿಸಬಲ್ಲುದು (**ನೋಡಿ– ವಜ್ರ**).

ಗ್ರ್ಯಾಫೈಟ್ : ಗ್ರ್ಯಾಫೈಟಿನಲ್ಲಿ ಸಹ ಇಂಗಾಲದ ಅಣುಗಳ ಜೋಡಣೆ ಕ್ರಮಬದ್ಧವಾಗಿದೆ. ಆದರೆ ವಜ್ರದಲ್ಲಿನ ಜೋಡಣೆಗಿಂತ ಇದು ಭಿನ್ನ. ಗ್ರ್ಯಾಫೈಟಿನಲ್ಲಿ ಇಂಗಾಲದ ಅಣುಗಳು ಹಾಳೆಗಳಾಗಿ ಜೋಡಣೆಯಾಗಿದ್ದು ಹಾಳೆಯಿಂದ ಹಾಳೆಗೆ ಸಡಿಲಬಂಧವಿದೆ. ಅಂಥ ಹಾಳೆ ಅಥವಾ ಪದರಗಳಲ್ಲಿ ಇಂಗಾಲದ ಅಣುಗಳ ನಡುವಿನ ಅಂತರ 1.421 ಆಂಗ್‌ಸ್ಟ್ರಾಮ್, ಬಂಧಗಳ ನಡುವಿನ ಕೋನ $120^0$ ಮತ್ತು ಹಾಳೆಗಳ ನಡುವಣ ಅಂತರ 3.354 ಆಂಗ್‌ಸ್ಟ್ರಾಮ್. ಈ ಅಂತರ ಹೆಚ್ಚಾಗಿರುವುದರಿಂದಲೇ ಹಾಳೆಯಿಂದ ಹಾಳೆಗಿರುವ ಬಂಧ ಸಡಿಲವಾಗಿದ್ದು ಅವು ಒಂದನ್ನೊಂದು ಬಿಟ್ಟು ಜಾರಬಲ್ಲವು. ಗ್ರ್ಯಾಫೈಟ್ ಮೆದುವಾಗಿರುವುದಕ್ಕೂ



**ಚಿತ್ರ 2. ಗ್ರ್ಯಾಫೈಟಿನ ರಚನೆ**

ಇದೇ ಕಾರಣ. ಕಾಗದದ ಮೇಲೆ ಉಜ್ಜಿದಾಗ ಪದರಗಳು ಬೇರ್ಪಡೆಯಾಗಿ ತೆಳುಪದರವೊಂದು ಕಾಗದದ ಮೇಲೆ ಉಳಿಯುತ್ತದೆ. ಗ್ರ್ಯಾಫೈಟ್ ಪದರಗಳು ಒಂದರ ಮೇಲೊಂದು ಸುಲಭವಾಗಿ ಸರಿಯಬಲ್ಲವಾದ್ದರಿಂದ ಗ್ರ್ಯಾಫೈಟ್ ಉತ್ತಮ ಘರ್ಷಣ ಕ್ಷೀಣಕಾರಿ ಅಥವಾ ಮೃದುಚಾಲಕ (ಲ್ಯೂಬ್ರಿಕೆಂಟ್). ಗ್ರ್ಯಾಫೈಟ್ ಗಣಿಗಳು ಯುರೋಪಿನ ಅನೇಕ ಭಾಗಗಳಲ್ಲಿ, ದಕ್ಷಿಣ ಅಮೆರಿಕದ ಹಲವು ಭಾಗಗಳಲ್ಲಿ ಮತ್ತು ಕೆನಡದಲ್ಲಿ ಇವೆ.

ಉತ್ತಮ ದರ್ಜೆಯ ಗ್ರ್ಯಾಫೈಟಿನ ಅತಿದೊಡ್ಡ ಗಣಿಗಳು ಶ್ರೀಲಂಕ ಮತ್ತು ಮಲೇಷ್ಯ ದ್ವೀಪಗಳಲ್ಲಿವೆ. ಗ್ರ್ಯಾಫೈಟಿನ ಸಾಂದ್ರತೆ 2.25. ದುರ್ಬಲ ಆಮ್ಲಗಳಾಗಲಿ ಕ್ಷಾರವಸ್ತುಗಳಾಗಲಿ ಗ್ರ್ಯಾಫೈಟಿನೊಡನೆ ವರ್ತಿಸಲಾರವು. ತೀವ್ರ ಉತ್ಕರ್ಷಕಾರಿಗಳ ಸಾನ್ನಿಧ್ಯದಲ್ಲಿ ಮತ್ತು $700^0$ ಸೆ. ಉಷ್ಣತೆಯಲ್ಲಿ ಹೊತ್ತಿ ಉರಿದು ಇಂಗಾಲದ ಡೈಆಕ್ಸೈಡ್ ಆಗಿ ಪರಿವರ್ತಿತವಾಗುತ್ತದೆ.

ಗ್ರ್ಯಾಫೈಟನ್ನು ಸೀಸದ ಕಡ್ಡಿಗಳಲ್ಲಿ, ಅನೇಕ ಘರ್ಷಣ ಕ್ಷೀಣಕಾರಿ ತೈಲಗಳಲ್ಲಿ, ಹಲವು ಲೋಹಗಳ ತಯಾರಿಕೆಗಳಲ್ಲಿ ವಿದ್ಯುದ್ಧ್ರುವಗಳಾಗಿ ಮತ್ತು ಮೂಸೆಗಳನ್ನು ತಯಾರಿಸಲು ಹೇರಳವಾಗಿ ಉಪಯೋಗಿಸಲಾಗುತ್ತದೆ.

ಮರಳು ಮತ್ತು ಆ್ಯಂಥ್ರಸೈಟ್ ಅಥವಾ ಕೋಕುಗಳ ಮಿಶ್ರಣವನ್ನು ವಿದ್ಯುಚ್ಛಾಪ ಒಲೆಯೊಂದರಲ್ಲಿ ದೀರ್ಘಕಾಲ $3500^0$ ಸೆ. ಉಷ್ಣತೆಯಲ್ಲಿ ಕಾಸಿದಾಗ ಕೃತಕ ಗ್ರ್ಯಾಫೈಟ್ ದೊರೆಯುತ್ತದೆ. ಈ ಬಗೆಯ ಗ್ರ್ಯಾಫೈಟ್ ಕಲ್ಮಷಗಳಿಲ್ಲದೇ ಸ್ವಚ್ಛವಾಗಿರುತ್ತದಾದರೂ ಇದರ ಬೆಲೆ ಹೆಚ್ಚಾದ್ದರಿಂದ ಸೀಸದ ಕಡ್ಡಿಗಳಿಗೆ ಉಪಯೋಗಿಸುವುದಿಲ್ಲ. ಎಲೆಕ್ಟ್ರೋಡ್ಸ್, ಶುಷ್ಕಕೋಶಗಳು (ಡ್ರೈಸೆಲ್ಸ್), ಘರ್ಷಣ ಕ್ಷೀಣಕಾರಿಗಳು, ವಿದ್ಯುತ್ಕೂರ್ಚಗಳು (ಬ್ರಷ್ ಆಫ್ ಎಲೆಕ್ಟ್ರಿಕ್ ಮೋಟಾರ್ಸ್ ಆರ್ ಜನರೇಟರ್ಸ್) ಇವುಗಳ ತಯಾರಿಕೆಗಳಲ್ಲಿ ಉಪಯೋಗಿಸುತ್ತಾರೆ.

ಅಸ್ಫಟಿಕ ಇಂಗಾಲ: ಕಲ್ಲಿದ್ದಲ ಕಿಟ್ಟ ಅಥವಾ ಕೋಕ್, ಇದ್ದಲುಗಳು ಮತ್ತು ಮಸಿ ಕಪ್ಪುಗಳು ಅಸ್ಫಟಿಕ ಇಂಗಾಲದ ಗುಂಪಿಗೆ ಸೇರುತ್ತವೆ. ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಇಂಗಾಲಪೂರಿತ (ಕಾರ್ಬನೇಷಿಯಸ್) ವಸ್ತುಗಳನ್ನು ಕಡಿಮೆ ಗಾಳಿಯಲ್ಲಿ ದಹಿಸಿದಾಗ ದೊರೆಯುವುದೇ ಇದ್ದಲು. ಮರಗಿಡಗಳನ್ನು ದಹಿಸಿ ತಯಾರಿಸಿದ ಇದ್ದಲನ್ನು ಉರುವಲಾಗಿ ಉಪಯೋಗಿಸುತ್ತೇವೆ. ಸಾಮಾನ್ಯವಾಗಿ ದೊರೆಯುವ ಮರದ ಇದ್ದಲು ಕಪ್ಪು, ಪೆಡಸು (ಬ್ರಿಟಲ್) ಮತ್ತು ಮರದ ಆಕಾರದಲ್ಲಿಯೇ ಇರುತ್ತದೆ. ಇದು ಸಚ್ಛಿದ್ರವಾಗಿದ್ದು ರಂಧ್ರಗಳಲ್ಲಿ ಗಾಳಿಯನ್ನು ತುಂಬಿಕೊಂಡಿರುತ್ತದೆ. ಸಚ್ಛಿದ್ರವಾಗಿರುವುದರಿಂದ ಇತರ ಅನಿಲಗಳನ್ನು ಹೀರಿಕೊಳ್ಳುವ ಶಕ್ತಿಯೂ ಇದೆ. ಪ್ರಾಣಿಗಳ ಮೂಳೆ, ರಕ್ತಗಳು ವಿರಳ ವಾತಾವರಣದಲ್ಲಿ ದಹಿಸಿದಾಗ ಪ್ರಾಣಿಜನ್ಯ ಇದ್ದಿಲು ದೊರೆಯುತ್ತದೆ. ಇದು ಮರದ ಇದ್ದಿಲಿಗಿಂತಲೂ ಹೆಚ್ಚು ಸಚ್ಛಿದ್ರವಾಗಿರುವುದರಿಂದ ಅದಕ್ಕಿಂತಲೂ ಹೆಚ್ಚು ಅನಿಲಗಳನ್ನು ಹೀರಿಕೊಳ್ಳಬಲ್ಲುದು. ಮೂಳೆಯ ಇದ್ದಲು ಅನಿಲಗಳನ್ನು ಮಾತ್ರವಲ್ಲದೆ ದ್ರಾವಣಗಳಿಂದ ಅನೇಕ ಸಂಯುಕ್ತಗಳನ್ನು ಹೀರಿಕೊಳ್ಳಬಲ್ಲ ಪಟುತ್ವ ಪಡೆದಿದೆ.

ಖನಿಜವಾಗಿ ದೊರೆಯುವ ಕಲ್ಲಿದ್ದಿಲಿನ ಮುಖ್ಯ ಭಾಗ ಇಂಗಾಲ. ಹಲವು ಆ್ಯಂಥ್ರಸೈಟ್ ಖನಿಜಗಳಲ್ಲಿ ಶೇ.90ಕ್ಕೂ ಮೀರಿ ಇಂಗಾಲವಿದೆ. ನೆಲದಲ್ಲಿ ಲಕ್ಷಾಂತರ ವರ್ಷಗಳ ಹಿಂದೆ ಹೂತು ಹೋದ ಮರಗಿಡಗಳು ನಿಧಾನವಾಗಿ ರಾಸಾಯನಿಕ ವಿಭಜನೆಗೆ ಒಳಗಾದುದರ ಪರಿಣಾಮವೇ ಕಲ್ಲಿದ್ದಲು. ವಿಭಜನೆಯ ಹಲವಾರು ಹಂತಗಳ ಅನಂತರ ದೊರೆಯುವುದು ಹೆಚ್ಚು ಇಂಗಾಲವಿರುವ ಆ್ಯಂಥ್ರಸೈಟ್. ಯಾವ ಬಗೆಯ ಕಲ್ಲಿದ್ದಿಲನ್ನೇ ಆಗಲಿ ಗಾಳಿಯ ಸಂಪರ್ಕವಿಲ್ಲದಂತೆ ದಹಿಸಿದಾಗ ಅಥವಾ ಬಟ್ಟಿಯಿಳಿಸಿದಾಗ ಅದರಲ್ಲಿ ಸೇರಿಯಾಗಿರುವ ಇಂಗಾಲ ಸಂಯುಕ್ತಗಳು ಮತ್ತು ಅನಿಲಗಳು ಬಿಡುಗಡೆಯಾಗಿ ಸಾಕಷ್ಟು ಶುದ್ಧವಾದ ಇಂಗಾಲ ಮಾತ್ರ ಉಳಿಯುತ್ತದೆ. ಇದೇ ಕಲ್ಲಿದ್ದಿಲ ಕಿಟ್ಟ ಅಥವಾ ಕೋಕ್. ಕಲ್ಲಿದ್ದಿಲು, ಕೋಕುಗಳು ಹೆಚ್ಚು ಉಷ್ಣ ಕೊಡುವ ಉತ್ತಮ ಉರುವಲುಗಳು. ಕೋಕ್ ಸಾಂದ್ರೀಕರಿಸಿದ ಇಂಗಾಲವಾದ್ದರಿಂದ ಇದನ್ನು ಲೋಹವಿದ್ಯೆಯಲ್ಲಿ ಲೋಹದ ಆಕ್ಸೈಡುಗಳನ್ನು ಅಪಕರ್ಷಿಸಲೂ ಉಪಯೋಗಿಸುತ್ತಾರೆ.

ಹೈಡ್ರೋಜನ್-ಕಾರ್ಬನ್ ಸಂಯುಕ್ತಗಳನ್ನೊಳಗೊಂಡಿರುವ ಅನಿಲಗಳು ಮತ್ತು ಎಣ್ಣೆಗಳನ್ನು ವಿರಳ ವಾತಾವರಣದಲ್ಲಿ ಉರಿಸಿ ಸುಡದಿರುವ ಇಂಗಾಲವನ್ನು ಮಸಿಯಾಗಿ ಸಂಗ್ರಹಿಸಬಹುದು. ಈ ಬಗೆಯ ಮಸಿಗಳನ್ನು ಉತ್ತಮಗೊಳಿಸಲು ರಬ್ಬರಿನೊಡನೆ ಬೆರೆಸುತ್ತಾರೆ. ಸಾಕಷ್ಟು ಪ್ರಮಾಣದಲ್ಲಿ ಈ ಮಸಿಗಳನ್ನು ಮುದ್ರಣ ಮಸಿ, ಬಣ್ಣಗಳು, ಮಸಿ ಕಾಗದ, ಪಾದರಕ್ಷೆ ಮತ್ತು ಲೋಹಗಳ ಮೆರುಗುಗಳಲ್ಲಿ ಉಪಯೋಗಿಸುತ್ತಾರೆ.

ಬೆಂದ ಇಂಗಾಲ: ಯಾವುದೇ ಬಗೆಯ ಇಂಗಾಲವನ್ನು $1000^0$–$2000^0$ ಸೆ. ಉಷ್ಣತೆಯಲ್ಲಿ ಹಲವು ಗಂಟೆಗಳ ಕಾಲ ಕಾಸಿದಾಗ ದೊರೆಯುವುದು ಬೆಂದ ಇಂಗಾಲ. ಈ ಬಗೆಯ ಇಂಗಾಲವನ್ನು ವಿದ್ಯುಚ್ಛಾಪ ಕುಲುಮೆ, ವಿದ್ಯುಚ್ಛಾಪ ದೀಪಗಳಲ್ಲಿನ ಧ್ರುವಗಳು ಇತರ ಬಗೆಯ ವಿದ್ಯುತ್ಕುಲುಮೆಗಳ ಧ್ರುವಗಳು, ವಿದ್ಯುತ್ಕೂರ್ಚಗಳು ಮೊದಲಾದುವನ್ನು ತಯಾರಿಸಲು ಉಪಯೋಗಿಸಲಾಗುತ್ತದೆ.

**ಪಟುಗೊಳಿಸಿದ ಇಂಗಾಲ**: ಮಿತ ಪ್ರಮಾಣ ಗಾಳಿಯಲ್ಲಿ ಸೌದೆಯನ್ನು ಉರಿಸಿದರೆ ಇದ್ದಿಲಾಗುವುದು. ಇದು ಸರಂಧ್ರಪದಾರ್ಥ. ಅನಿಲಗಳನ್ನೂ ದ್ರಾವಣಗಳಿಂದ ವಿಲೀನ ವಸ್ತುಗಳನ್ನೂ ಸರಾಗವಾಗಿ ಹೀರಿಕೊಳ್ಳುವ ಶಕ್ತಿ ಇದಕ್ಕಿದೆ. ಅವಶೋಷಿತ ವಸ್ತುಗಳು ಇದ್ದಿಲಿನ ಮೈಮೇಲೆ ಶೇಖರಿಸುತ್ತವೆ. ಈ ಗ್ರಹಣ ಸಾಮರ್ಥ್ಯವನ್ನು ಕೃತಕ ವಿಧಾನಗಳಿಂದ ಹೆಚ್ಚಿಸಬಹುದು. ಹೀಗೆ ಕಾಯಕಲ್ಪ ಹೊಂದಿದ ಇದ್ದಿಲಿಗೆ ಪಟುಗೊಳಿಸಿದ ಇಂಗಾಲ ಎಂದು ಹೆಸರು. ಇದರ ಮೇಲ್ಮೈ ವಿಸ್ತೀರ್ಣ ಒಂದು ಗ್ರಾಮಿಗೆ 600–2000 ಚದರ ಮೀಟರುಗಳಷ್ಟು ಇರುತ್ತದೆ. ಇದು ಇದ್ದಿಲಿನ ರಂಧ್ರಗಳಲ್ಲಿರುವ ಸ್ಥಳಾವಕಾಶದ ಸೂಚಕವಾಗಿದೆ. ಸಾಮಾನ್ಯ ಇದ್ದಲಿನ ಮೈಗೆ ಹೈಡ್ರೊಕಾರ್ಬನ್ ಪದರಗಳು ಅಂಟಿಕೊಂಡಿರುವುವು. ಅವುಗಳನ್ನು ಉಚ್ಚಾಟಿಸಿ ಕ್ರಿಯಾಕ್ಷೇತ್ರವನ್ನು ವಿಸ್ತರಿಸಬಹುದು. ಇದೇ ಪಟುಗೊಳಿಸುವ ವಿಧಾನಗಳ ಮೂಲೋದ್ದೇಶ.

ಇಂಗಾಲವನ್ನು ಪಟುಗೊಳಿಸಲು ಇರುವ ನಾನಾ ವಿಧಾನಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ಒಂದು ವಿಧಾನವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ. ಇಂಗಾಲಯುಕ್ತ ಕಚ್ಚಾವಸ್ತುವನ್ನು (ತೆಂಗಿನ ಚಿಪ್ಪು, ಮರದ ಹೊಟ್ಟು ಇತ್ಯಾದಿ) ಮೊದಲು ಜಿಂಕ್ ಕ್ಲೋರೈಡು ಅಥವಾ ಫಾಸ್ಫಾರಿಕ್ ಆಮ್ಲದಲ್ಲಿ ಚೆನ್ನಾಗಿ ನೆನೆಸಿ $850^0$ ಸೆ. ಉಷ್ಣತೆಗೆ ಕಾಸುವರು. ಲಭ್ಯವಾದ ಇದ್ದಿಲನ್ನು ತೊಳೆದರೆ ಅದಕ್ಕೆ ಅಂಟಿರುವ ಈ ರಾಸಾಯನಿಕಗಳು ನಿವಾರಣೆಯಾಗುವುವು. ಅನಂತರ ಹಬೆ ಅಥವಾ ಇಂಗಾಲದ ಡೈ ಆಕ್ಸೈಡಿನ ಸಂಪರ್ಕದಲ್ಲಿ $850^0$–$1000^0$ ಸೆ. ಉಷ್ಣತಾಮಿತಿಯಲ್ಲಿ ಬಿಡಲಾಗುವುದು. ಈ ಉತ್ಕರ್ಷಕ ವಾತಾವರಣದ ಫಲವಾಗಿ ಇದ್ದಿಲಿನ ಮೈ ಸ್ವಚ್ಛವಾಗಿ, ಮುಚ್ಚಿಹೋಗಿದ್ದ ರಂಧ್ರಗಳೂ ಕ್ರಿಯಾ ಕೇಂದ್ರಗಳಾದ ಅಸಂತೃಪ್ತ ಇಂಗಾಲದ ಪರಮಾಣುಗಳೂ ವ್ಯಕ್ತವಾಗುವುವು. ಇದ್ದಲಿನ ಮೈ ಅಲ್ಲಲ್ಲಿ ತರಚಿದಂತಾಗಿ ಹೊಸ ಅಸಂತೃಪ್ತ ಪರಮಾಣುಗಳು ಹುಟ್ಟಿಕೊಳ್ಳುವುವು. ಪರಿಣಾಮವಾಗಿ ಇದ್ದಿಲಿನ ವಸ್ತುಗ್ರಾಹಕ ಶಕ್ತಿ ವೃದ್ಧಿಯಾಗುವುದು.

ಪಟುಗೊಳಿಸಿದ ಇಂಗಾಲದಲ್ಲಿ ಎರಡು ಮುಖ್ಯ ದರ್ಜೆಗಳಿವೆ: 1. ತೆಂಗಿನ ಚಿಪ್ಪು ಮುಂತಾದ ವಸ್ತುಗಳಿಂದ ತಯಾರಿಸಿದ ಗಟ್ಟಿಯಾದ ಕಾಳುಗಳ ರೂಪದಲ್ಲಿರುವ ಇಂಗಾಲ. ಇದು ಅನಿಲಗಳನ್ನು ಸರಾಗವಾಗಿ ಹೀರಿಕೊಳ್ಳುವುದರಿಂದ ಅನಿಲಗ್ರಾಹಿ ಇಂಗಾಲ ಎನಿಸಿಕೊಂಡಿದೆ. ಇದರಲ್ಲಿ ರಂಧ್ರಗಳ ಸಂಖ್ಯೆ ಹೆಚ್ಚು. ಪ್ರತಿಯೊಂದು ರಂಧ್ರದ ವ್ಯಾಸ 20 ಆಂಗ್‌ಸ್ಟ್ರಾಮ್ ಮೀರಿರುವುದಿಲ್ಲ. 2. ಎರಡನೆಯ ಬಗೆಯ ಇಂಗಾಲ ದ್ರಾವಣಗಳಿಂದ ಅನಗತ್ಯ ಬಣ್ಣ, ವಾಸನೆಗಳನ್ನು ಹೀರಿಕೊಳ್ಳಬಲ್ಲುದು. ಆದ್ದರಿಂದ ಇದನ್ನು ವರ್ಣಗ್ರಾಹಿ ಎಂದು ಕರೆಯುತ್ತಾರೆ. ಸಸ್ಯಾಂಗಾರ (ಪೀಟ್), ಕಂದುಕಲ್ಲಿದ್ದಿಲು (ಲಿಗ್ನೈಟ್) ಮತ್ತು ಮರದ ಹೊಟ್ಟು ಇದರ ತಯಾರಿಕೆಗೆ ಸೂಕ್ತ ಕಚ್ಚಾ ವಸ್ತುಗಳು. ಕಾಗದ ಕಾರ್ಖಾನೆಗಳು ವಿಸರ್ಜಿಸುವ ಪದಾರ್ಥಗಳಿಂದಲೂ ಇದನ್ನು ರೂಪಿಸಬಹುದು. ಹುಡಿಯ ರೂಪದಲ್ಲಿ ಇದು ಬಳಸಲ್ಪಡುತ್ತದೆ. ವರ್ಣಗ್ರಾಹಕ ಇಂಗಾಲ ಮೇಲೆ ಹೇಳಿದಂತೆ ಸಸ್ಯಜನ್ಯ ವಸ್ತುಗಳಿಂದ ಆಗಿರಬಹುದು; ಇಲ್ಲವೇ ಪ್ರಾಣಿಮೂಲಗಳಿಂದ ಪಡೆದುದಾಗಿರಬಹುದು. ಪ್ರಾಣಿಗಳ ಎಲುಬುಗಳಿಂದ ತಯಾರಿಸಿದ ಮೂಳೆ ಇದ್ದಿಲು ಇದಕ್ಕೆ ಉದಾಹರಣೆ. ಇದರಲ್ಲಿ ಶೇ.90% ಹೈಡ್ರಾಕ್ಸಿ ಅಪಟೈಟ್ ಆಗಿದ್ದು ಉಳಿದ ಭಾಗ ಇಂಗಾಲವಾಗಿರುತ್ತದೆ.

ರಾಸಾಯನಿಕ ಮತ್ತು ಆಹಾರ ಉತ್ಪನ್ನಗಳನ್ನು ಶುದ್ಧಿ ಮಾಡಲು ಬಳಸುವ ಇಂಗಾಲದಲ್ಲಿ ನಿರವಯವ ಕಲ್ಮಷಗಳು ಇರಕೂಡದು. ಇದರ ಸಲುವಾಗಿ ಮೊದಲು ಖನಿಜಾಮ್ಲಗಳಿಂದ ಅನಂತರ ನೀರಿನಿಂದ ತೊಳೆಯಬೇಕು. ಉತ್ತಮ ದರ್ಜೆಯ ಪಟುಗೊಳಿಸಿದ ಇಂಗಾಲದಲ್ಲಿ ಶೇ.1 ಕ್ಕಿಂತ ಹೆಚ್ಚು ದ್ರಾವ್ಯ ಕಲ್ಮಷಗಳು ಇರಕೂಡದು.

ಯುದ್ಧಕಾಲದಲ್ಲಿ ಸೈನಿಕರಿಗೆ ವಿಷವಾಯು ಪ್ರಯೋಗವಾಗದಂತೆ ಕಾಪಾಡಲು ಮೊಗವಾಡಗಳನ್ನು ಧರಿಸಲೇಬೇಕೆಂಬ ನಿಯಮವಿದೆ. ಅಂಥ ಮೊಗವಾಡಗಳಲ್ಲಿ ಪಟುಗೊಳಿಸಿದ ಇಂಗಾಲವಿರುತ್ತದೆ. ಅಂದರೆ ಪಟುಗೊಳಿಸಿದ ಇಂಗಾಲದ ಬಳಕೆ ಸೇನಾಕ್ಷೇತ್ರಕ್ಕೇ ಸೀಮಿತವಾಗಿಲ್ಲ. ನಾಗರಿಕ ಜನಜೀವನದಲ್ಲೂ ಅದು ನಿರ್ವಹಿಸುತ್ತಿರುವ ಜವಾಬ್ದಾರಿ ಗುರುತರವಾದುದು. ಅದಕ್ಕೆ ಅಸಂಖ್ಯಾತ ನಿದರ್ಶನಗಳನ್ನು ನೀಡಬಹುದು. ಅನೇಕ ಕೈಗಾರಿಕೆಗಳಲ್ಲಿ ಉಪಯುಕ್ತ ಲೀನಕಾರಿಗಳು ಆವಿಯ ರೂಪದಲ್ಲಿ ಕಾರ್ಖಾನೆಯ ಗಾಳಿ ಅಥವಾ ಧೂಮದಲ್ಲಿ ಬೆರೆತು ಹಾಳಾಗಿಹೋಗುವ ಸಂಭವವಿದೆ. ಅದನ್ನು ಪಾರು ಮಾಡಲು ಪಟುಗೊಳಿಸಿದ ಇಂಗಾಲದ ಪದರಗಳ ಮೂಲಕ ಹಾಯಿಸುವರು. ಆಗ ಲೀನಕಾರಿ ಹೀರಲ್ಪಡುವುದು ನಿರ್ದಿಷ್ಟ ಅವಧಿಯ ಅನಂತರ ಹಬೆಯನ್ನು ಹಾಯಿಸಿದರೆ ಅದರೊಡನೆ ಅವಶೋಷಿತ ಲೀನಕಾರಿ ಹೊರಬೀಳುವುದು. ತಣಿಸಿದಾಗ ಲೀನಕಾರಿ ಪ್ರತ್ಯೇಕವಾಗುವುದು. ಸುಮಾರು ಇದೇ ತತ್ತ್ವದ ಅನ್ವಯದಿಂದ ಪೆಟ್ರೋಲಿಯಂ ಎಣ್ಣೆಯಲ್ಲಿರುವ ಹೈಡ್ರೊಕಾರ್ಬನ್ನುಗಳನ್ನು ಬೇರ್ಪಡಿಸುವರು. ಕಿರಿಯ ಪ್ಯಾರಫಿನ್ನುಗಳ ಕುದಿಯುವ ಬಿಂದುಗಳಲ್ಲಿ ಗಣನೀಯ ಅಂತರವಿರುವುದಿಲ್ಲ. ಆದ್ದರಿಂದ ಆಂಶಿಕ ಬಾಷ್ಪೀಕರಣ ವಿಧಾನದಿಂದ ಬೇರ್ಪಡಿಸುವಂತಿಲ್ಲ. ಆದರೆ ಪಟುಗೊಳಿಸಿದ ಇಂಗಾಲ ಅವನ್ನು ಹಂತ ಹಂತವಾಗಿ ತನ್ನ ಒಲವಿಗೆ ಅನುಗುಣವಾಗಿ ಹೀರಿಕೊಳ್ಳುವುದರಿಂದ ಆಂಶಿಕ ಅವಶೋಷಣಾ ವಿಧಾನ ಅನುಕರಣಯೋಗ್ಯವಾಗಿದೆ.

ಹೈಡ್ರೋಜನ್, ಇಂಗಾಲದ ಡೈ ಆಕ್ಸೈಡ್, ಇಂಗಾಲದ ಮಾನಾಕ್ಸೈಡ್, ಅಸಿಟಲೀನ್ ಮುಂತಾದ ಅನಿಲಗಳನ್ನು ಕಲುಷಿತಗೊಳಿಸುವ ತೈಲದ ಆವಿ ಮತ್ತು ಗಂಧಕದ ಸಂಯುಕ್ತಗಳನ್ನು ಪಟುಗೊಳಿಸಿದ ಇಂಗಾಲ ಹೀರಿಕೊಳ್ಳಬಲ್ಲುದು. ಚಲನಚಿತ್ರ ಮಂದಿರಗಳು, ಉಪಾಹಾರ ಗೃಹಗಳು, ಆಡಳಿತ ಭವನಗಳು, ರೈಲುಬಂಡಿಗಳು, ವಿಮಾನಗಳು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಗಾಳಿನಿಯಂತ್ರಣ ವ್ಯವಸ್ಥೆ ಇರುವುದಷ್ಟೆ. ಅಲ್ಲಿ ಪಟುಗೊಳಿಸಿದ ಇಂಗಾಲದ ಬಳಕೆ ಅನಿವಾರ್ಯ. ವೀನೈಲ್ ಕ್ಲೋರೈಡ್, ಕಾರ್ಬೊನಿಲ್ ಕ್ಲೋರೈಡ್ ಮತ್ತು ಸಲ್ಫ್ಯೂರಿಕ್ ಕ್ಲೋರೈಡುಗಳ ಸಂಯೋಜನೆಯಲ್ಲಿ ಹೈಡ್ರೊಜಿನೇಷನ್ ಮೊದಲಾದ ಸಾವಯವ ಕ್ರಿಯೆಗಳಲ್ಲಿ ವೇಗವರ್ಧಕಗಳಾಗಿ ಅಥವಾ ಅವುಗಳ ವಾಹಕವಾಗಿ ಅನಿಲ ಅಥವಾ ವರ್ಣಗ್ರಾಹಿ ಇಂಗಾಲದ ವಿನಿಯೋಗವಾಗುತ್ತಿದೆ.

ವರ್ಣಗ್ರಾಹಿ ಇಂಗಾಲದ ಮುಖ್ಯ ಉಪಯೋಗ ಕಚ್ಚಾ ಸಕ್ಕರೆಯ ಸಂಸ್ಕರಣದಲ್ಲಿ. 19ನೆಯ ಶತಮಾನದಿಂದಲೂ ಇದಕ್ಕಾಗಿ ಮೂಳೆ ಇದ್ದಲು ಉಪಯೋಗವಾಗುತ್ತಿದೆ. ಸಕ್ಕರೆಯ ಪಾಕವನ್ನು ಇದ್ದಿಲಿನ ಪದರಗಳ ಮೂಲಕ ಜಿನುಗಲು ಬಿಡಲಾಗುವುದು. ಆಗ ಸಕ್ಕರೆಯಲ್ಲಿರುವ ಬಣ್ಣ ಮತ್ತು ನಿರವಯವ ವಸ್ತುಗಳು ಹೀರಲ್ಪಡುವುವು. ಸಕ್ಕರೆ ಶುಭ್ರವಾಗುವುದು. ಇದ್ದಿಲನ್ನು ನೀರಿನಿಂದ ತೊಳೆದು ಅದಕ್ಕೆ ಅಂಟಿರುವ ಸಕ್ಕರೆಯನ್ನೂ

ಪಡೆಯಬಹುದು. ಅನಂತರ ಇದ್ದಿಲನ್ನು ಗೂಡುಗಳಲ್ಲಿ ಕಾಸಿ ಪುನಶ್ಚೇತನಗೊಳಿಸಲಾಗುವುದು. ಈಗ ಇಂಗಾಲದ ಒಂದಂಶ ಉರಿದುಹೋಗುವುದು ನಿಜ. ಆದರೆ ನಿರ್ವರ್ಣೀಕರಣ ಕೋಶಗಳಲ್ಲಿ ಅದು ಹೀರಿಕೊಂಡಿರುವ ಶರ್ಕರೇತರ ಸಾವಯವ ಇಂಗಾಲ ಈ ನಷ್ಟವನ್ನು ತುಂಬುತ್ತದೆ. ಪೌರಸ್ತ್ಯ ದೇಶಗಳಲ್ಲೂ ಇತ್ತೀಚೆಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಸಕ್ಕರೆಯ ಸಂಸ್ಕರಣಕ್ಕೆ ಸಸ್ಯಜನ್ಯ ಇಂಗಾಲವನ್ನು ವಿಶೇಷವಾಗಿ ಬಳಸುತ್ತಿದ್ದಾರೆ. ಸಹಸ್ರಾರು ಟನ್ ಪಟುಗೊಳಿಸಿದ ಇಂಗಾಲ ಸಕ್ಕರೆ ಉದ್ಯಮದಲ್ಲಿ ಖರ್ಚಾಗುತ್ತಿದೆ.

ಸಾರ್ವಜನಿಕ ನೀರು ಸರಬರಾಜಿನ ವ್ಯವಸ್ಥೆಯಲ್ಲಿ ಸಸ್ಯಜನ್ಯ ಇಂಗಾಲದ ಬಳಕೆ ಸರ್ವಸಾಮಾನ್ಯವಾಗಿದೆ. ಜಲಮೂಲದಲ್ಲಿರುವ ಪಾಚಿಗಳು ಕೊಳೆಯುವುದರಿಂದ ಅಥವಾ ಕೈಗಾರಿಕೆಗಳು ವಿಸರ್ಜಿಸುವ ಮಲಿನ ವಸ್ತುಗಳು ಬೆರೆಯುವುದರಿಂದ ನೀರಿಗೆ ಅಹಿತ ರುಚಿ, ವಾಸನೆಗಳು ಪ್ರಾಪ್ತವಾಗುತ್ತವೆ. ಇವನ್ನು ನಿರ್ನಾಮ ಮಾಡದ ಹೊರತು ನೀರು ಪಾನಯೋಗ್ಯವಾಗಲಾರದು. ಅದಕ್ಕಾಗಿ ಪಟುಗೊಳಿಸಿದ ಇಂಗಾಲ ಬಳಸಲ್ಪಡುತ್ತದೆ. ನೀರಿನಲ್ಲಿರುವ ವಿಲಂಬಿತ ಕಶ್ಮಲಗಳು ತಳವೂರುವಂತೆ ಮಾಡಲು ಪಟಿಕವನ್ನು ಕೊಡಿಸುತ್ತೇವಷ್ಟೆ ಆಗ ಒಂದು ಮಿಲಿಯನ್ ಭಾಗ ನೀರಿಗೆ 2–5 ಭಾಗದಷ್ಟು ಇಂಗಾಲ ಸೇರಿಸಿದರೆ ಸಾಕು.

ಕೈಗಾರಿಕೆಗೆ ಅಗತ್ಯವಾದ ಶುದ್ಧನೀರನ್ನು ಪಡೆಯಲೂ ಇದೇ ವಿಧಾನವನ್ನು ಅನುಸರಿಸಲಾಗುತ್ತದೆ. ದ್ರಾಕ್ಷಾರಸ ಮತ್ತು ಇತರ ಆಲ್ಕೊಹಾಲಿನ ಪಾನೀಯಗಳ ತಯಾರಿಕೆಗೆ ಅಗಾಧಪ್ರಮಾಣದ ನೀರಿನ ಅಗತ್ಯವುಂಟು. ಅಂಥ ನೀರು ರೋಗಾಣುರಹಿತವಾಗಿರಬೇಕು. ಆದ್ದರಿಂದ ಅದನ್ನು ಶುದ್ಧಿಮಾಡಲು ಅಧಿಕ ಪ್ರಮಾಣದಲ್ಲಿ ಕ್ಲೋರೀನ್ ಪ್ರಯೋಗಿಸ ಬೇಕಾಗುತ್ತದೆ. ನೀರಿನಲ್ಲಿ ಹೆಚ್ಚುವರಿ ಕ್ಲೋರೀನ್ ಉಳಿಯಬಾರದು. ಇದನ್ನು ಅವಶೋಷಿಸಲೂ ಇತರ ವಾಸನೆ ರುಚಿ ಮೂಲಗಳನ್ನು ತೊಡೆದು ಹಾಕಲೂ ಇಂಗಾಲ ನೆರವಾಗುತ್ತದೆ. ಕೊಬ್ಬು, ತೈಲ ಮೇಣ ಇತ್ಯಾದಿ ಎಸ್ಟರುಗಳು, ಗ್ಲಿಸರಾಲ್, ಗ್ಲೈಕಾಲ್ ಇತ್ಯಾದಿ ಆಲ್ಕೊಹಾಲುಗಳು, ಸಲ್ಫ ಸಂಯುಕ್ತಗಳು, ಜೀವಾತುಗಳು, ಜೀವನಿರೋಧಕಗಳು (ಆಂಟಿಬಯೊಟಿಕ್ಸ್) ಮುಂತಾದ ಔಷಧ ಸಾಮಗ್ರಿಗಳು, ಅಸಿಟಿಕ್, ಬೆಂಜೋಯಿಕ್ ಸಿಟ್ರಿಕ್, ಫ್ಯುಮ್ಯಾರಿಕ್, ಮೆಲೇಯಿಕ್ ಮತ್ತು ಇತರ ಆಮ್ಲಗಳು, ನೈಸರ್ಗಿಕ ಮತ್ತು ಕೃತಕ ಕೆಫೀನ್ ಛಾಯಾಗ್ರಹಣದಲ್ಲಿ ಬಳಸುವ ರಾಸಾಯನಿಕಗಳು ಜೆಲಾಟಿನ್ ಪೆಕ್ಟಿನ್ ಮುಂತಾದ ಆಹಾರ ಸಾಮಗ್ರಿಗಳು, ಬಣ್ಣ ಮಧ್ಯವರ್ತಿ ಗಳು ಮತ್ತು ಇನ್ನೂ ಅನೇಕ ಉತ್ಪನ್ನಗಳ ಸಂಸ್ಕರಣ ಪಟುಗೊಳಿಸಿದ ಇಂಗಾಲವಿಲ್ಲದೆ ನಡೆಯುವಂತಿಲ್ಲ.

ಇತ್ತೀಚೆಗೆ ಪಟುಗೊಳಿಸಿದ ಇಂಗಾಲಕ್ಕೆ ಎರಡು ಪ್ರಮುಖ ಉಪಯೋಗಗಳು ಒದಗಿವೆ. ಹಳೆಯ ರಬ್ಬರನ್ನು ಸಂಸ್ಕರಿಸಿ ಅದರಿಂದ ತೆಳುಬಣ್ಣದ ಅಥವಾ ಬಿಳಿಯ ರಬ್ಬರಿನ ವಸ್ತುಗಳನ್ನು ಮಾಡುತ್ತಾರೆ. ಸಂಸ್ಕರಣ ಕಾಲದಲ್ಲಿ ಉಪಯೋಗಿಸಿದ ಎಣ್ಣೆಗಳು ರಬ್ಬರಿನ ಒಳಪದರಗಳಿಂದ ಹೊರಕ್ಕೆ ಹರಡಿ ಹಳದಿ ಕಲೆಗಳನ್ನುಂಟುಮಾಡಿ ವಿರೂಪ ಗೊಳಿಸುವುವು. ಪಟುಗೊಳಿಸಿದ ಇಂಗಾಲವನ್ನು ರಬ್ಬರಿನೊಂದಿಗೆ ಅರೆದು ಅನಂತರ ಉಪಯೋಗಿಸಿದರೆ ಈ ತೊಂದರೆ ತಪ್ಪುವುದು.

ದ್ರವವಸ್ತುಗಳನ್ನು ಬಹುಕಾಲ ದಾಸ್ತಾನುಮಾಡಿದಾಗ ಅಥವಾ ಶೈತ್ಯಗೊಳಿಸಿದಾಗ ಮಬ್ಬಾಗುವುದುಂಟು. ಆಲ್ಕೊಹಾಲ್ ಪಾನೀಯಗಳ ತಯಾರಿಕೆಯಲ್ಲಿ ಉಪಯೋಗಿಸುವ ಕೆಲವು ಸಕ್ಕರೆಗಳಿಂದಲೂ ಮತ್ತು ಪ್ರೋಟೀನುಗಳು ಒತ್ತರಿಸುವುದರಿಂದಲೂ ಹೀಗಾಗುತ್ತದೆ. ಪಟುಗೊಳಿಸಿದ ಇಂಗಾಲ ಇಂಥ ಅದ್ರಾವ್ಯ ವಸ್ತುಗಳನ್ನು ಧರಿಸಿ ದ್ರವವಸ್ತುವನ್ನು ಸ್ವಚ್ಛವಾಗಿರಿಸುತ್ತದೆ.

ಅನೇಕ ಆಕರ್ಷಕ ವ್ಯವಹಾರನಾಮಗಳಿಂದ (ಉದಾಹರಣೆ, ನ್ಯೂಚಾರ್ ಮಿಂಚಾರಾ ಫಿಲ್ಟ್‌ಚಾರ್ ಕಾರ್ಬೆಕ್ಸ್ ಕ್ಲಿಫ್‌ಚಾರ್, ಬೋನ್‌ಚಾರ್, H.V.W.M -ಪಟುಗೊಳಿಸಿದ ಇಂಗಾಲ, ಸೂಚಾರ್, ಇತ್ಯಾದಿ). ಮಾರುಕಟ್ಟೆಯಲ್ಲಿರುವ ಪಟುಗೊಳಿಸಿದ ಇಂಗಾಲದ ವ್ಯಾಪಕಬಳಕೆ ಯನ್ನು ಕೆಳಕಂಡ ಪಟ್ಟಿಯಲ್ಲಿ ಕ್ರೋಡೀಕರಿಸಲಾಗಿದೆ.

I ಅನಿಲ ವಸ್ತುಗಳ ಅವಶೋಷಣೆ. (i) ನೈಸರ್ಗಿಕ ಅನಿಲದಿಂದ ಪೆಟ್ರೋಲ್ ಸಂಪಾದನೆ. (ii) ಕೃತಕ ರೇಷ್ಮೆ ಮತ್ತು ಚರ್ಮ, ಶುಷ್ಕಮಾರ್ಜಕ ಲೋಹಗಳಿಂದ ಜಿಡ್ಡು ನಿವಾರಣೆ, ಪಾರಕ ಹೊದಿಕೆಗಳು ಮತ್ತು ಫಿಲ್ಮುಗಳು, ರಬ್ಬರ್ ಉತ್ಪನ್ನಗಳು, ಪ್ಲಾಸ್ಟಿಕ್ಕುಗಳು ಮುಂತಾದ ಕೈಗಾರಿಕೆಗಳಲ್ಲಿ ಆವಿಯಾಗಿ ಬಿಡುವ ಲೀನಕಾರಿಕಗಳ ಸಂಪಾದನೆ. (iii) ಹೈಡ್ರೊಜನ್, ನೈಟ್ರೊಜನ್, ಹೀಲಿಯಂ, ಅಸಿಟಲಿನ್, ಅಮೋನಿಯ, ಇಂಗಾಲದ ಮಾನಾಕ್ಸೈಡ್ ಮತ್ತು ಡೈಆಕ್ಸೈಡ್‌ಗಳಲ್ಲಿರುವ ಕಶ್ಮಲಗಳ ನಿರ್ಮೂಲನ. (iv) ಗಾಳಿನಿಯಂತ್ರಣ ವ್ಯವಸ್ಥೆಯಲ್ಲಿ ಹುಟ್ಟುವ ಅಹಿತ ವಾಸನೆಯನ್ನು ಹೋಗಲಾಡಿಸಲು. (v) ಬೆಂಜಾಲ್ ಸಂಪಾದನೆ.

II ದ್ರವವಸ್ತುಗಳ ಶುದ್ಧೀಕರಣ. (i) ಕಬ್ಬು ಅಥವಾ ಬೀಟ್ ಸಕ್ಕರೆ, ಗ್ಲೂಕೋಸ್ ಇತ್ಯಾದಿಗಳ ಸಂಸ್ಕರಣ. (ii) ಹತ್ತಿಬೀಜದ ಎಣ್ಣೆ, ಕೊಬ್ಬರಿ ಎಣ್ಣೆ, ಹಂದಿಯ ಕೊಬ್ಬು ಮತ್ತು ಖನಿಜ ತೈಲಗಳ ಶುದ್ಧೀಕರಣ. (iii) ಜೆಲಾಟಿನ್, ವಿನಿಗರ್, ಪೆಕ್ಟಿನ್, ಕೊಕೊ ಬೆಣ್ಣೆ, ಹಣ್ಣಿನ ರಸಗಳು ಮತ್ತು ಆಲ್ಕೊಹಾಲ್ ಪಾನೀಯಗಳಿಂದ ಕಶ್ಮಲ ನಿವಾರಣೆ. (iv) ಔಷಧ ಮತ್ತು ಆಮ್ಲಗಳಾದಿಯಾಗಿ ಇತರ ರಾಸಾಯನಿಕಗಳ ಶುದ್ಧೀಕರಣ. (v) ಕುಡಿಯುವ ನೀರಿನಿಂದ ಬಣ್ಣ, ವಾಸನೆ ಮತ್ತು ರುಚಿಗಳನ್ನು ತೆಗೆಯುವುದು. (vi) ವಿದ್ಯುತ್ ಲೇಪನಕ್ಕೆ ಉಪಯೋಗಿಸಿದ ದ್ರಾವಣಗಳು ಮತ್ತು ಬಳಸಿದ ಎಣ್ಣೆಗಳಿಂದ ಕಶ್ಮಲ ನಿವಾರಣೆ. (vii) ಚಿನ್ನ, ಬೆಳ್ಳಿ, ಮುಂತಾದ ಲೋಹಗಳನ್ನು ದ್ರಾವಣದಿಂದ ಬೇರ್ಪಡಿಸುವುದು.

III ವೈದ್ಯಕೀಯದಲ್ಲಿ. (i) ದೇಹಗತವಾದ ಅನಿಲಗಳು. ನಂಜುಗಳು ಮತ್ತು ಇತರ ವಿಷಗಳನ್ನು ಹೀರಿ ಉಪಶಮನಗೊಳಿಸುವ ಇಂಗಾಲದ ಮಾತ್ರೆಗಳ ತಯಾರಿಕೆ (ಮಕ್ಕಳ ಸಲುವಾಗಿ ಪಟುಗೊಳಿಸಿದ ಇಂಗಾಲವನ್ನು ಅಳವಡಿಸಿರುವ ಬಿಸ್ಕತ್ತುಗಳು ದೊರೆಯುತ್ತವೆ). (ii) ಅವಶೋಷಿತ ಸ್ಥಿತಿಯಲ್ಲಿ ಮದ್ದನ್ನು ಪ್ರಯೋಗಿಸಬೇಕಾದ ಸಂದರ್ಭದಲ್ಲಿ. (iii) ನಾರುತ್ತಿರುವ ವ್ರಣಗಳಿಂದ ಹುಟ್ಟುವ ದುರ್ವಾಸನೆಯನ್ನು ಹೋಗಲಾಡಿಸಲು.

IV ವೇಗವರ್ಧಕ ಮತ್ತು ಅದರ ವಾಹಕವಾಗಿ. (i) ಫಾಸ್ಜೀನ್ ಇತ್ಯಾದಿಗಳನ್ನು ತಯಾರಿಸುವ ಕ್ಲೋರಿನೇಷನ್ ಕ್ರಿಯೆಗಳಲ್ಲಿ. (ii) ಹೈಡ್ರೋಜಿನೇಷನ್ ಮಾಡುವಾಗ.

(ಎಚ್.ಜಿ.ಎಸ್., ಕೆ.ಟಿ.ಎಸ್.)

ಇಂಗಾಲದ ಸಂಯುಕ್ತಗಳು

**ಇಂಗಾಲದ ಮಾನಾಕ್ಸೈಡ್:** ಇಂಗಾಲದ ಒಂದು ಸಂಯುಕ್ತ (CO). ಇದು ಬಣ್ಣವಿಲ್ಲದ ವಿಷಾನಿಲ. ಇದರ ವಾಸನೆಯಿಂದಲೂ ದಹಿಸಿದಾಗ ಇದು ಉರಿಯುವ ಜ್ವಾಲೆಯಿಂದಲೂ ಈ ಅನಿಲವನ್ನು ಗುರುತಿಸಬಹುದು. 1776ರಲ್ಲಿ ಲಾಸ್ಸೋನ್ ಸತುವಿನ ಆಕ್ಸೈಡನ್ನು ಇದ್ದಲಿನ ಜೊತೆಯಲ್ಲಿ ಕಾಸಿ ಈ ಅನಿಲವನ್ನು ಪಡೆದ. ಇದಾದ 24 ವರ್ಷಗಳ ಅನಂತರ ಕ್ರೂಯಿಕ್‌ಷಾಂಕ್ ಇದರ ರಚನೆಯನ್ನು ಕಂಡುಹಿಡಿದ. ಇಂಗಾಲದ ಮಾನಾಕ್ಸೈಡ್ ಕಲ್ಲಿದ್ದಲಿನ ಅನಿಲದಲ್ಲಿಯೂ ವಾಟರ್‌ಗ್ಯಾಸ್ ಎಂಬ ಹೈಡ್ರೊಜನ್ ಮತ್ತು ಇಂಗಾಲದ ಮಾನಾಕ್ಸೈಡ್ ಮಿಶ್ರಣದಲ್ಲಿಯೂ ಪ್ರೊಡ್ಯೂಸರ್ ಗ್ಯಾಸ್ ಮತ್ತು ಊದುಕುಲುಮೆಯ (ಬ್ಲಾಸ್ಟ್ ಫರ್ನೇಸ್) ಅನಿಲ ಮುಂತಾದ ಅನಿಲ ರೂಪದಲ್ಲಿರುವ ಉರುವಲಗಳಲ್ಲಿಯೂ ವಿಶೇಷವಾಗಿರುತ್ತದೆ. ಈ ಅನಿಲ ಒಂದು ದಹ್ಯವಸ್ತು. ಇದು ಹಸಿರು ನೀಲಿ ಬಣ್ಣದ ಜ್ವಾಲೆಯಿಂದ ಉರಿದು ಇಂಗಾಲದ ಡೈ ಆಕ್ಸೈಡನ್ನು ಕೊಡುತ್ತದೆ. ಆಕ್ಸಿಜನ್ ಕಡಿಮೆ ಇರುವ ಪ್ರದೇಶಗಳಲ್ಲಿ ದಹನವಾಗುವ ಉರುವಲಿನಿಂದ ಇಂಗಾಲದ ಮಾನಾಕ್ಸೈಡ್ ಉಂಟಾಗುವುದು.

$$2C+O_2 \rightarrow 2CO$$

ಕೆಲವು ಕುಲುಮೆಗಳಿಂದ ಉತ್ಪತ್ತಿಯಾಗುವ ಅನಿಲಗಳ ಜೊತೆಯಲ್ಲಿ ಮಿಶ್ರವಾಗಿಯೂ ಪೆಟ್ರೋಲು ಎಣ್ಣೆ ಬಳಸುವ ವಾಹನಗಳ ಯಂತ್ರಗಳಿಂದಲೂ ಕೆಲವು ಜ್ವಾಲಾಮುಖಿಗಳಿಂದ ಹೊರಡುವ ಅನಿಲಗಳ ಜೊತೆಯಲ್ಲಿಯೂ ಇಂಗಾಲದ ಮಾನಾಕ್ಸೈಡ್ ಸೇರಿರುತ್ತದೆ.

ಸತು, ಕಬ್ಬಿಣ, ಮ್ಯಾಂಗನೀಸ್, ಆಕ್ಸೈಡುಗಳನ್ನು ಇದ್ದಲು ಅಥವಾ ಕೋಕ್ ಜೊತೆಯಲ್ಲಿ ಸೇರಿಸಿ ಕಾಸಿದಾಗ ಅಪಕರ್ಷಣದಿಂದ (ರಿಡಕ್ಷನ್) ಈ ಅನಿಲ ಉತ್ಪತ್ತಿಯಾಗುತ್ತದೆ.

$$ZnO+C \rightarrow Zn+CO$$

ಇದಲ್ಲದೆ ಸುಣ್ಣಕಲ್ಲನ್ನು ($CaCO_3$) ಇದ್ದಲು ಅಥವಾ ಸತುವಿನ ಜೊತೆಯಲ್ಲಿ ಕಾಸಿಯೂ ಇದನ್ನು ಪಡೆಯಬಹುದು.

$$CaCO_3+C \rightarrow CaO+2CO$$

ಇಂಗಾಲದ ಡೈಆಕ್ಸೈಡನ್ನು ಕಾದ ಇಂಗಾಲದ ಚೂರುಗಳ ಮೇಲೆ ಹಾಯಿಸಿದರೂ ಇಂಗಾಲದ ಮಾನಾಕ್ಸೈಡ್ ಉತ್ಪತ್ತಿಯಾಗುತ್ತದೆ.

$$CO_2+C \rightarrow 2CO$$

ಪ್ರಯೋಗಶಾಲೆಯಲ್ಲಿ ಈ ಅನಿಲವನ್ನು ಆಕ್ಸಾಲಿಕ್ ಆಮ್ಲದ ಹರಳುಗಳನ್ನು ಪ್ರಬಲ ಗಂಧಕಾಮ್ಲದ ಜೊತೆಯಲ್ಲಿ ಸೇರಿಸಿ ಕಾಸುವುದರಿಂದ ಉತ್ಪತ್ತಿ ಮಾಡುತ್ತಾರೆ. ಈ ಪ್ರಯೋಗದಲ್ಲಿ ಆಕ್ಸಾಲಿಕ್ ಆಮ್ಲದಲ್ಲಿರುವ ನೀರನ್ನು ಗಂಧಕಾಮ್ಲ ಹೀರಿ ಇಂಗಾಲದ ಮಾನಾಕ್ಸೈಡ್ ಮತ್ತು ಡೈ ಆಕ್ಸೈಡುಗಳ ಮಿಶ್ರಣ ದೊರೆಯುತ್ತದೆ. ಇದರಲ್ಲಿರುವ ಇಂಗಾಲಾಮ್ಲವನ್ನು ಕ್ಷಾರಕದ ಸಹಾಯದಿಂದ ತೆಗೆದರೆ ಇಂಗಾಲದ ಮಾನಾಕ್ಸೈಡ್ ಉಳಿಯುತ್ತದೆ. ಅನಿಲವನ್ನು ನೀರಿನ ಪಲ್ಲಟದಿಂದ ಶೇಖರಿಸಬಹುದು.

$$H_2C_2O_4H_2O \rightarrow 2H_2O+CO+CO_2$$

ಫಾರ್ಮಿಕ್ ಆಮ್ಲವನ್ನು ಪ್ರಬಲ ಗಂಧಕಾಮ್ಲದ ಜೊತೆಯಲ್ಲಿ ಕಾಸುವಾಗ ಆ ಆಮ್ಲದ ಅಣು ನೀರಿನ ಅಣುವನ್ನು ಕಳೆದುಕೊಂಡು ಇಂಗಾಲದ ಮಾನಾಕ್ಸೈಡನ್ನು ನೀಡುತ್ತದೆ.

$$HCOOH \rightarrow H_2O+CO$$

ಪೊಟ್ಯಾಸಿಯಂ ಫೆರೋಸಯನೈಡ್ $[K_4Fe(CN)_6]$ ಹರಳುಗಳನ್ನು ಪ್ರಬಲ ಗಂಧಕಾಮ್ಲದ ಜೊತೆಯಲ್ಲಿ ಕಾಸಿದಾಗಲೂ ಇಂಗಾಲದ ಮಾನಾಕ್ಸೈಡ್ ಉತ್ಪತ್ತಿಯಾಗುತ್ತದೆ.

$$K_4Fe(CN)_6+6H_2SO_4+6H_2O \rightarrow$$
$$2K_2SO_4+FeSO_4+3(NH_4)_2SO_4+6CO$$

ಸಿಟ್ರಿಕ್ ಆಮ್ಲ, ಮ್ಯಾಲಿಕ್ ಆಮ್ಲ, ಲ್ಯಾಕ್ಟಿಕ್ ಆಮ್ಲ ಮತ್ತು ಅವುಗಳ ಲವಣಗಳನ್ನು ಪ್ರಬಲ ಗಂಧಕಾಮ್ಲದ ಜೊತೆಯಲ್ಲಿ ಕಾಸಿದಾಗಲೂ ಮೀಥೈಲ್ ಆಲ್ಕೊಹಾಲ್ ($CH_3OH$) ಆವಿಯನ್ನು ಕಾದ ಕ್ಯುಪ್ರಿಕ್ ಆಕ್ಸೈಡು ($CuO$) ಮತ್ತು ಕ್ರೋಮಿಯಂ ಆಕ್ಸೈಡ್ ($Cr_2O_3$) ಅಥವಾ ಸತುವಿನ ಆಕ್ಸೈಡ್ ($ZnO$) ಮತ್ತು ಕ್ರೋಮಿಯಮ್ ಆಕ್ಸೈಡಿನ ಮಿಶ್ರಣದ ಮೂಲಕ ಹಾಯಿಸಿದಾಗ ಅದು ವಿಭಜನೆ ಹೊಂದಿ ಇಂಗಾಲದ ಮಾನಾಕ್ಸೈಡ್ ಮತ್ತು ಹೈಡ್ರೊಜನ್ ಮಿಶ್ರಣವನ್ನು ಕೊಡುತ್ತದೆ. ಈ ಮಿಶ್ರಣದಿಂದ ಇಂಗಾಲದ ಮಾನಾಕ್ಸೈಡನ್ನು ಬೇರ್ಪಡಿಸಬಹುದು. ಮೀಥೈಲ್ ಫಾರ್ಮೇಟ್ ಎಂಬ ಎಸ್ಟರನ್ನು ಸೋಡಿಯಮ್ ಮೀಥಾಕ್ಸೈಡು

ಜೊತೆಯಲ್ಲಿ ಕಾಸಿದರೆ, ಶುದ್ಧವಾದ ಇಂಗಾಲದ ಮಾನಾಕ್ಸೈಡ್ ಉತ್ಪತ್ತಿಯಾಗುತ್ತದೆ. ಕಾರ್ಬನ್ ಮಾನಾಕ್ಸೈಡ್ ಅನೇಕ ಅನಿಲಗಳ ಮಿಶ್ರಣದಲ್ಲಿ ಶೇಕಡಾವಾರು ಯಾವ ಪ್ರಮಾಣದಲ್ಲಿದೆ ಎಂಬುದನ್ನು ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

| ನೀಲಿ ವಾಟರ್ ಗ್ಯಾಸ್ | ಪ್ರೊಡ್ಯೂಸರ್ ಗ್ಯಾಸ್ | ಊದು ಕುಲುಮೆ ಅನಿಲ | ಕೋಕ್ ಕುಲುಮೆ ಅನಿಲ |
|---|---|---|---|
| 37.8–42.8 | 22.0–26.0 | 26.2–27.5 | 5.0–6.8 |

ಇಂಗಾಲದ ಮಾನಾಕ್ಸೈಡ್ ಇರುವ ವಾಟರ್ ಗ್ಯಾಸ್ ಮಿಶ್ರಣವನ್ನು ಮದ್ಯಸಾರಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಈ ಮದ್ಯಸಾರಗಳಲ್ಲಿ ಮುಖ್ಯವಾದ ಈಥೈಲ್ ಆಲ್ಕೊಹಾಲ್ ಎಂಬುದು ಪೆಟ್ರೋಲ್ ಜೊತೆಯಲ್ಲಿ ಮಿಶ್ರ ಮಾಡಿ ಬಳಸುವುದಕ್ಕೆ ಯೋಗ್ಯವಾದ ಉರುವಲು.

ಪರೀಕ್ಷೆಗಳು: ಈ ಅನಿಲಕ್ಕೆ ಆಕ್ಸಿಜನ್ನನ್ನು ಹೀರುವ ಸ್ವಭಾವ ಇದೆ. ಇದರಿಂದ ಕೆಲವು ಪದಾರ್ಥಗಳೊಡನೆ ವರ್ತಿಸಿದಾಗ ಇದು ಉತ್ಪತ್ತಿಮಾಡುವ ಕಠಿಣ ರಚನೆಯುಳ್ಳ ಲವಣಗಳ ಮೂಲಕ ಅನಿಲವನ್ನು ಗುರುತಿಸಬಹುದು. ಅಮೋನಿಯ ದ್ರಾವಣದಲ್ಲಿ ಕರಗಿರುವ ಕ್ಯುಪ್ರಸ್ ಕ್ಲೋರೈಡ್ ಲವಣ ಇದನ್ನು ಬೇಗನೆ ಹೀರುವುದರಿಂದ ಬೇರೆ ಅನಿಲಗಳಿಂದ ಬೇರ್ಪಡಿಸಬಹುದು. ನೀರಿನಲ್ಲಿ ಇದು ಅತ್ಯಲ್ಪ ಪ್ರಮಾಣದಲ್ಲಿ ವಿಲೀನವಾಗುತ್ತದೆ.

ರಾಸಾಯನಿಕ ಲಕ್ಷಣಗಳು: ಸುಮಾರು $300^0$–$1500^0$ ಸೆ. ಗೆ ಕಾದ ಅನೇಕ ಲೋಹಗಳ ಆಕ್ಸೈಡುಗಳ ಮೇಲೆ ಇಂಗಾಲದ ಮಾನಾಕ್ಸೈಡನ್ನು ಹಾಯಿಸಿದಾಗ ಇದು ಆಯಾ ಲೋಹಗಳನ್ನೂ ಇಂಗಾಲಾಮ್ಲವನ್ನೂ ಕೊಡುತ್ತದೆ. ಇಂಥ ಲೋಹಗಳಲ್ಲಿ ಮುಖ್ಯವಾದುವು ಕೋಬಾಲ್ಟ್, ತಾಮ್ರ, ಕಬ್ಬಿಣ, ಸೀಸ. $50^0$–$100^0$ ಸೆ. ಗೆ ಕಾಸಿದ ನಿಕ್ಕಲ್ ಮೇಲೆ ಈ ಅನಿಲವನ್ನು ಹಾಯಿಸಿದಾಗ ಆವಿರೂಪದಲ್ಲಿ ನಿಕ್ಕಲ್ ಕಾರ್ಬೊನೈಲ್ $[Ni(CO)_4]$ ಉತ್ಪತ್ತಿಯಾಗುತ್ತದೆ. ಇದನ್ನು $180^0$–$200^0$ ಸೆ. ಗೆ ಕಾಸಿದರೆ ನಿಕ್ಕಲ್ ಮತ್ತು ಇಂಗಾಲದ ಮಾನಾಕ್ಸೈಡುಗಳು ಪುನಃ ಉತ್ಪತ್ತಿಯಾಗುತ್ತವೆ. ಇದರಿಂದ ನಿಕ್ಕಲ್ ಲೋಹವನ್ನು ಶುದ್ಧೀಕರಿಸಬಹುದು. ಕೋಬಾಲ್ಟ್, ತವರ ಮುಂತಾದ ಇತರ ಲೋಹಗಳೂ ಈ ರೀತಿಯ ಕಾರ್ಬೊನೈಲುಗಳನ್ನು ಕೊಡುತ್ತವೆ. ಕ್ಲೋರೀನ್ ಮತ್ತು ಬ್ರೋಮೀನುಗಳು ಸೂರ್ಯನ ಬೆಳಕಿನಲ್ಲಿ ಪ್ರಾಣಿಗಳ ಎಲುಬುಗಳಿಂದ ತಯಾರಿಸಬಹುದಾದ ಇದ್ದಲಿನ ವೇಗವರ್ಧಕದ ಸಂಪರ್ಕದಲ್ಲಿ ಇಂಗಾಲದ ಮಾನಾಕ್ಸೈಡಿನ ಜೊತೆಯಲ್ಲಿ ವರ್ತಿಸಿ ಕಾರ್ಬೊನೈಲ್ ಕ್ಲೋರೈಡು $(COCl_2)$ ಮತ್ತು ಕಾರ್ಬೊನೈಲ್ ಬ್ರೋಮೈಡುಗಳನ್ನು $(COBr_2)$ ಉತ್ಪತ್ತಿಮಾಡುತ್ತವೆ. ಅಯೊಡೀನ್ ಇಂಗಾಲದ ಮಾನಾಕ್ಸೈಡಿನ ಜೊತೆಯಲ್ಲಿ ವರ್ತಿಸುವುದಿಲ್ಲ. ಹೆಚ್ಚು ಒತ್ತಡದಲ್ಲಿ ಇಂಗಾಲದ ಮಾನಾಕ್ಸೈಡನ್ನು ಸೋಡಿಯಮ್ ಹೈಡ್ರಾಕ್ಸೈಡಿನ ಮೂಲಕ ಹಾಯಿಸಿದರೆ ಸೋಡಿಯಮ್ ಫಾರ್ಮೇಟು ಉತ್ಪತ್ತಿಯಾಗುತ್ತದೆ. ಇದರಿಂದ ಆಕ್ಸಾಲಿಕ್ ಮತ್ತು ಫಾರ್ಮಿಕ್ ಆಮ್ಲಗಳನ್ನು ಪಡೆಯಬಹುದು.

**ಇಂಗಾಲದ ಡೈಆಕ್ಸೈಡ್:** $(CO_2)$. ಬಲು ಹಿಂದಿನಿಂದ ಮಾನವನಿಗೆ ಇದರ ಪರಿಚಯ ವಿದೆ. ಸಾಮಾನ್ಯ ಗಾಳಿಗಿಂತ ಭಿನ್ನವಾದುದೆಂದು ಸೂಚಿಸಲು ಫಾನ್ ಹೆಲ್ಮಾಂಟ್ ಇದನ್ನು ಸಿಲ್ವೆಸ್ಟರ್ ಅನಿಲ ಎಂದು ಕರೆದ. ಖನಿಜೋದಕಗಳಲ್ಲಿದೆಯೆಂದೂ ಸಾವಯವ ವಸ್ತುಗಳು ಕೊಳೆತು ಹುಳಿಹಿಡಿದಾಗ ಮತ್ತು ಇದ್ದಲನ್ನು ಉರಿಸಿದಾಗ ಈ ಅನಿಲ ಉತ್ಪತ್ತಿಯಾಗುವುದೆಂದೂ ಆತ ಮನಗಂಡಿದ್ದ. ಅದು ದಹನಾನುಕೂಲಿಯಲ್ಲ, ಪ್ರಾಣಿಗಳಿಗೆ ಉಸಿರು ಕಟ್ಟುವಂತೆ ಮಾಡುವುದು ಎಂಬುದೂ ಅವನಿಗೆ ಗೊತ್ತಿತ್ತು. ಕಾರ್ಬೊನೇಟೆಡ್ ಕ್ಷಾರಗಳಲ್ಲಿ ಇಂಗಾಲದ ಡೈ ಆಕ್ಸೈಡ್ ಘನರೂಪದಲ್ಲಿ ಬಂಧಿತವಾಗಿರುವುದರಿಂದ ಅದಕ್ಕೆ ಬಂಧಿತಗಾಳಿ ಎಂದು ಹೆಸರಿಟ್ಟವ ಜೋಸೆಫ್ ಬ್ಲ್ಯಾಕ್. ಅದೊಂದು ಇಂಗಾಲದ ಆಕ್ಸೈಡೆಂದು ನಿಸ್ಸಂದೇಹವಾಗಿ ಸಾಧಿಸಿದ ಕೀರ್ತಿ ಲೆವಾಸಿಯೆಗೆ ಸಲ್ಲಬೇಕು.

ಪ್ರಸರಣ : ವಾಯುಮಂಡಲದ ಗಾತ್ರದ 0.03% ಭಾಗ ಇಂಗಾಲದ ಡೈ ಆಕ್ಸೈಡ್ ಆಗಿದೆ. ಇದು ಮಹತ್ತ್ವದ ವಿಷಯ; ಏಕೆಂದರೆ ಭೂಮಿಯ ಮೇಲೆ ಜೀವಧಾರಣೆ ಮತ್ತು ಪೋಷಣೆ ಇದನ್ನು ಅವಲಂಬಿಸಿಕೊಂಡು ಅವ್ಯಾಹತವಾಗಿ ನಡೆದುಬಂದಿದೆ. ಇಂಗಾಲ ಸಂಯುಕ್ತಗಳಿಂದ ಪ್ರಾಣಿಗಳ ಮತ್ತು ಸಸ್ಯಗಳ ರಚನೆಯಾಗಿದೆ. ಇವುಗಳಿಗೆ ವಾಯುಮಂಡಲದಲ್ಲಿರುವ ಇಂಗಾಲದ ಡೈಆಕ್ಸೈಡೇ ಮೂಲಾಧಾರ. ಸೂರ್ಯರಶ್ಮಿಯ ಸಂಪರ್ಕದಲ್ಲಿ ಪತ್ರಹರಿತ್ತಿನ ಸಹಾಯದಿಂದ ಸಸ್ಯಗಳು ಇಂಗಾಲದ ಡೈ ಆಕ್ಸೈಡ್ ಮತ್ತು ನೀರನ್ನು ಬಳಸಿಕೊಂಡು ತಮ್ಮ ಪೋಷಣೆಗೆ ಅಗತ್ಯವಾದ ಶರ್ಕರಪಿಷ್ಟಾದಿಗಳನ್ನು ತಯಾರಿಸಿಕೊಳ್ಳುತ್ತವೆ. ಈ ದ್ಯುತಿಸಂಶ್ಲೇಷಣಕಾರ್ಯ ನಡೆದಾಗ ಇಂಗಾಲದ ಡೈ ಆಕ್ಸೈಡಿನಲ್ಲಿರುವ ಆಕ್ಸಿಜನ್ ಬಿಡುಗಡೆ ಹೊಂದಿ ವಾತಾವರಣದಲ್ಲಿ ಸೇರಿಹೋಗುತ್ತದೆ. ಇಲ್ಲದಿದ್ದರೆ ವಾಯುಮಂಡಲದಲ್ಲಿರುವ ಇಂಗಾಲದ ಡೈ ಆಕ್ಸೈಡಿನ ಅಂಶ ಹೆಚ್ಚುತ್ತ ಹೋಗಿ ಕಾಲಕ್ರಮದಲ್ಲಿ ನಾವು ಬದುಕಿರಲು ಸಾಧ್ಯವಾಗುತ್ತಿರಲಿಲ್ಲ. ಪ್ರಾಣಿಗಳಲ್ಲಿರುವ ಇಂಗಾಲದ ಸಂಯುಕ್ತಗಳು ಸಸ್ಯಸೇವನೆಯಿಂದಲೋ ಅಥವಾ ಇತರ ಪ್ರಾಣಿಗಳನ್ನು ಭಕ್ಷಿಸಿಯೋ ಪಡೆದದ್ದು. ಉಸಿರಾಡಿದಾಗ ಅವುಗಳ ಶ್ವಾಸಕೋಶಗಳು ಇಂಗಾಲದ ಡೈ ಆಕ್ಸೈಡನ್ನು ಹೊರಕ್ಕೆ ಬಿಡುವುವು. ಅಲ್ಲದೆ ಗತಿಸಿದ ಪ್ರಾಣಿ ಮತ್ತು ಸಸ್ಯಗಳು ಕೊಳೆಯುವುದರಿಂದಲೂ ಈ ಅನಿಲ ಉತ್ಪತ್ತಿಯಾಗುತ್ತದೆ. ಹೀಗೆ ಪ್ರಾಣಿ ಮತ್ತು ಸಸ್ಯಗಳ ಜೀವನಕ್ರಿಯೆಗಳು ಪರಸ್ಪರ ಪೂರಕವಾಗಿರುವುದರಿಂದ ವಾಯುಮಂಡಲದಲ್ಲಿರುವ ಇಂಗಾಲದ ಡೈ ಆಕ್ಸೈಡಿನ ಅಂಶ ಕನಿಷ್ಠಮಟ್ಟಕ್ಕೆ ಸೀಮಿತವಾಗಿ ಭೂಮಿಯ ಮೇಲೆ ಜೀವಪೋಷಣೆ ಮುಂದುವರಿಯುತ್ತಿದೆ **(ನೋಡಿ– ಇಂಗಾಲಚಕ್ರ)**.

ಇಂಗಾಲದ ಡೈ ಆಕ್ಸೈಡ್ ನೀರಿನಲ್ಲಿ ಅಲ್ಪದ್ರಾವ್ಯ. ಕೆಲವು ಜಲಚರಗಳ ಮೈಮೇಲಿನ ಚಿಪ್ಪು ಇಂಥ ವಿಲೀನ ಇಂಗಾಲದ ಡೈ ಆಕ್ಸೈಡಿನಿಂದ ಆದುದು. ಅದು ರಾಸಾಯನಿಕವಾಗಿ ಕ್ಯಾಲ್ಸಿಯಂ ಕಾರ್ಬೊನೇಟ್. ಇದೇ ರೀತಿ ವಾಯುಮಂಡಲದ ಇಂಗಾಲದ ಡೈ ಆಕ್ಸೈಡ್‌ನ ಒಂದು ಭಾಗ ಜಗತ್ತಿನಲ್ಲಿ ಅಲ್ಲಲ್ಲಿ ದೊರೆಯುವ ಸುಣ್ಣಕಲ್ಲು, ಚಾಕ್, ಅಮೃತಶಿಲೆ, ಡಾಲೊಮೈಟ್, ಮ್ಯಾಗ್ನಸೈಟ್ ಇತ್ಯಾದಿ ಕಾರ್ಬೊನೇಟ್ ನಿಕ್ಷೇಪಗಳಲ್ಲಿ ಶಾಶ್ವತವಾಗಿ ಹಂಚಿಹೋಗಿದೆ. ಈ ಪರಿವರ್ತನೆ ಇಂದಿಗೂ ನಡೆಯುತ್ತಿದೆ. ಏತನ್ಮಧ್ಯೆ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಉತ್ಪನ್ನಗಳ ದಹನದಿಂದ ಹೊರಬಿದ್ದ ಇಂಗಾಲದ ಡೈ ಆಕ್ಸೈಡ್ ಈ ಕೊರತೆಯನ್ನು ತುಂಬುತ್ತಿದ್ದು ವಾತಾವರಣದಲ್ಲಿ $CO_2$ ಪ್ರಮಾಣ ನಿಯತಗೊಂಡಿದೆ. ಕೆಲವು ವೇಳೆ ಭೂಮಿಯಲ್ಲಿ ಬಿರುಕುಗಳು ಉಂಟಾಗಿ ಅದರಿಂದ $CO_2$ ಹೊರಸೂಸುವ ನಿದರ್ಶನಗಳಿವೆ. ಗಾಳಿಗಿಂತ ಸುಮಾರು ಒಂದೂವರೆಯಷ್ಟು ಭಾರವಾದ್ದರಿಂದ ಅದು ಪಾಳುಬಾವಿಗಳಲ್ಲಿ, ಜ್ವಾಲಾಮುಖಿ ಮತ್ತು ಸುಣ್ಣದ ಗೂಡುಗಳ ಬಳಿ ಇರುವ ತಗ್ಗು ಪ್ರದೇಶಗಳಲ್ಲಿ ಬೇಗ ಶೇಖರಿಸುತ್ತದೆ. ಜಾವಾ ದ್ವೀಪದಲ್ಲಿ ಸಾವಿನ ಕಣಿವೆ ಎಂದು ಸುಪ್ರಸಿದ್ಧವಾದ ಪ್ರದೇಶವಿದೆ. ಇಲ್ಲಿ ಸಂಗ್ರಹವಾದ ಇಂಗಾಲದ ಡೈಆಕ್ಸೈಡಿನಿಂದ ಉಸಿರುಕಟ್ಟಿ ಪ್ರಾಣಬಿಟ್ಟ ಅಸಂಖ್ಯಾತ ಮನುಷ್ಯರ ಮತ್ತು ಪಶುಪಕ್ಷಿಗಳ ಅಸ್ಥಿಪಂಜರಗಳನ್ನು ಎಲ್ಲೆಲ್ಲೂ ಕಾಣಬಹುದೆಂದು ಪ್ರವಾಸಿಗಳ ವರದಿಗಳಿಂದ ಗೊತ್ತಾಗಿದೆ. ನೇಪಲ್ಸ್ ನಗರದ ಬಳಿ ಒಂದು ಗುಹೆಯಿದೆ. ಅದರಲ್ಲಿ ನೆಲದಿಂದ 1800 ಎತ್ತರದಷ್ಟು ಇಂಗಾಲದ ಡೈ ಆಕ್ಸೈಡಿನ ಪದರವಿದೆ. ಆ ಗುಹೆಯನ್ನು ಹೊಕ್ಕ ನಾಯಿಗಳಿಗೆ ಮಾತ್ರ ಇದು ಮಾರಕವಾಗಿ ಅವನ್ನು ಒಯ್ದ ಮನುಷ್ಯರು ಸುರಕ್ಷಿತವಾಗಿ ಈಚೆಗೆ ಬಂದ ಉಲ್ಲೇಖವಿದೆ.

ತಯಾರಿಕೆ: ಇಂಗಾಲದ ಡೈಆಕ್ಸೈಡಿನ ದ್ರವವನ್ನು ಉಕ್ಕಿನ ಉರುಳೆಗಳಲ್ಲಿ (ಸಿಲಿಂಡರು) ಕೂಡಿಟ್ಟಿರುತ್ತಾರೆ. ತುರ್ತು ಸಂದರ್ಭದಲ್ಲಿ ಇದನ್ನು ಉಪಯೋಗಿಸುವರು. ಸಾಮಾನ್ಯವಾಗಿ ಪ್ರಯೋಗಶಾಲೆಯಲ್ಲಿ ಕಿಪ್ಪನ ಉಪಕರಣದಲ್ಲಿ ಅಮೃತಶಿಲೆಯ ಚೂರುಗಳು ದುರ್ಬಲ ಹೈಡ್ರೊಕ್ಲೋರಿಕ್ ಆಮ್ಲದೊಡನೆ ವರ್ತಿಸುವಂತೆ ಮಾಡಿ ಅನಿಲವನ್ನು ಪಡೆಯುವುದು ರೂಢಿ. ಈ ರಾಸಾಯನಿಕ ಕ್ರಿಯೆಯನ್ನು ಕೆಳಕಂಡ ಸಮೀಕರಣದಿಂದ ಸೂಚಿಸಬಹುದು:

$$CaCO_3 + 2HCl \rightarrow CaCl_2 + H_2O + CO_2 \uparrow$$

ಅನಿಲವನ್ನು ಶುಷ್ಕಗೊಳಿಸಲು ಪ್ರಬಲ ಸಲ್ಫ್ಯೂರಿಕ್‌ಆಮ್ಲ ರಂಜಕದ ಪೆಂಟಾಕ್ಸೈಡ್ ಅಥವಾ ನಿರ್ಜಲ ಕ್ಯಾಲ್ಸಿಯಂ ಕ್ಲೋರೈಡನ್ನು ಉಪಯೋಗಿಸಬಹುದು. ಗಾಳಿಗಿಂತ ಭಾರವಾದ್ದರಿಂದ ಇದನ್ನು ಕೆಳಮುಖಸ್ಥಾನಪಲ್ಲಟದಿಂದ ಶೇಖರಿಸಬೇಕು. ಇದರ ತಯಾರಿಕೆಯಲ್ಲಿ ದುರ್ಬಲ ಸಲ್ಫ್ಯೂರಿಕ್ ಆಮ್ಲದ ಬಳಕೆ ನಿಷಿದ್ಧ; ಏಕೆಂದರೆ ಉತ್ಪನ್ನ ವಸ್ತುಗಳಲ್ಲಿ ಒಂದಾದ ಕ್ಯಾಲ್ಸಿಯಂ ಸಲ್ಫೇಟ್ ಅಲ್ಪದ್ರಾವ್ಯ. ಅದು ಉಳಿದ ಅಮೃತ ಶಿಲೆಯ ಚೂರುಗಳನ್ನು ಆವರಿಸುತ್ತದೆ. ಈ ರಕ್ಷಾಕವಚದಿಂದ ಆಮ್ಲದ ಸಂಪರ್ಕ ತಪ್ಪಿ ಕ್ರಿಯೆ ಸ್ಥಗಿತಗೊಳ್ಳುತ್ತದೆ. ಸೋಡಿಯಂ ಬೈಕಾರ್ಬೊನೇಟನ್ನು ಕಾಸಿಯೂ ಇಂಗಾಲದ ಡೈ ಆಕ್ಸೈಡನ್ನು ಪಡೆಯಬಹುದು.

$$2NaHCO_3 \rightarrow Na_2CO_3 + H_2O + CO_2 \uparrow$$

ಕೈಗಾರಿಕಾ ಮಹತ್ತ್ವವುಳ್ಳ ಅನಿಲಗಳ ಪೈಕಿ $CO_2$ ಸಹ ಒಂದು. ಆದ್ದರಿಂದ ದೊಡ್ಡ ಪ್ರಮಾಣದಲ್ಲಿ ಇದನ್ನು ತಯಾರಿಸುವ ಅಗತ್ಯವಿದೆ. ಅದಕ್ಕಾಗಿ ಅನುಸರಿಸುವ ವಿಧಾನಗಳು ಹಲವು. ಸುಣ್ಣಕಲ್ಲನ್ನು ಸುಟ್ಟಾಗ ಅಗಾಧ ಪ್ರಮಾಣದಲ್ಲಿ $CO_2$ ದೊರೆಯುತ್ತದೆ.

$$CaCO_3 \rightarrow CaO + CO_2$$

ಕೋಕ್ ದಹನದಿಂದ ಉಂಟಾದ ಅನಿಲಮಿಶ್ರಣದಲ್ಲಿ $CO_2$ಅಂಶವೇ ಹೆಚ್ಚು. ಅದನ್ನು ಪೊಟ್ಯಾಸಿಯಂ ಕಾರ್ಬೊನೇಟ್ ದ್ರಾವಣ ಸಿಂಪಡಿಸುವ ಕೋಶದ ಮೂಲಕ ಹಾಯಿಸಿದಾಗ ಪೊಟ್ಯಾಸಿಯಂ ಬೈಕಾರ್ಬೊನೇಟ್ ಆಗಿ ಪರಿವರ್ತಿತವಾಗುವುದು. ಈ ದ್ರಾವಣದ ಮೂಲಕ ಮತ್ತೊಮ್ಮೆ ಬಿಸಿಯಾದ ಅನಿಲಮಿಶ್ರಣವನ್ನು ಹಾಯಿಸಿದರೆ ಅದರ ಉಷ್ಣದಿಂದ ಬೈಕಾರ್ಬೊನೇಟು ವಿಭಜಿಸಿ ಪುನಃ ಕಾರ್ಬೊನೇಟಾಗುತ್ತದೆ. ಇದು ಹಿಂದಿನಂತೆ ಮತ್ತೆ ವಿನಿಯೋಗವಾಗುತ್ತದೆ. ಬಿಡುಗಡೆಯಾದ $CO_2$ವನ್ನು ನಿರ್ಜಲ ಕ್ಯಾಲ್ಸಿಯಂ ಕ್ಲೋರೈಡಿನಿಂದ ಶುಷ್ಕಗೊಳಿಸಿ ಸಾಮಾನ್ಯ ಉಷ್ಣದಲ್ಲಿ 100 ವಾಯುಭಾರ (ಅಟ್ಮಾಸ್ಫಿಯರ್) ಒತ್ತಡಕ್ಕೆ ಒಳಪಡಿಸಿದರೆ ದ್ರವರೂಪ ತಳೆಯುವುದು. ದ್ರವಿತ ಅನಿಲವನ್ನು ಉಕ್ಕಿನ ಉರುಳೆಗಳಲ್ಲಿ ತುಂಬಿ ಮಾರುಕಟ್ಟೆಗೆ ಕಳುಹಿಸಲಾಗುವುದು.

ಸಕ್ಕರೆಯ ಅಂಶವಿರುವ ವಸ್ತುಗಳು ಯೀಸ್ಟ್ ಸಸ್ಯದ ಸಂಪರ್ಕದಲ್ಲಿ ಹುಳಿತು ಆಲ್ಕೊಹಾಲನ್ನು ಕೊಡುತ್ತವೆ. ಆಗ ಗಣನೀಯ ಪ್ರಮಾಣದಲ್ಲಿ $CO_2$ ಲಭಿಸುತ್ತದೆ. ಸಾಮಾನ್ಯವಾಗಿ ಕಬ್ಬಿನ ರಸದಲ್ಲಿರುವ ಸಕ್ಕರೆಯಲ್ಲಿ ಸ್ಫಟಿಕೀಕರಿಸುವುದಿಲ್ಲ. ಹೀಗೆ ಹರಳುರೂಪಕ್ಕೆ ಬಾರದಿರುವ ಸಕ್ಕರೆಯನ್ನು ಕಾಕಂಬಿ ಎನ್ನುವರು. ಯೀಸ್ಟಿನಲ್ಲಿರುವ ಕಿಣ್ವಗಳು ಇದನ್ನು ಆಲ್ಕೊಹಾಲ್ ಮತ್ತು $CO_2$ಗೆ ಪರಿವರ್ತಿಸುವುವು. ಇಲ್ಲಿ ನಡೆಯುವ ಮೂಲಕ್ರಿಯೆಗಳನ್ನು ಕೆಳಕಂಡ ಸಮೀಕರಣಗಳು ಸೂಚಿಸುತ್ತವೆ:

$$C_{12}H_{22}O_{11}+H_2O \rightarrow 2C_6H_{12}O_6$$

$$C_6H_{12}O_6 \rightarrow 2C_2H_5OH+2CO_2\uparrow$$

ಲಭ್ಯವಾದ $CO_2$ಅನ್ನು ರೈಕ್ ವಿಧಾನದಿಂದ ಶುದ್ಧಿಗೊಳಿಸಲಾಗುವುದು. ಇದಕ್ಕಾಗಿ ಅನೇಕ ಮಾರ್ಜಕಗಳನ್ನುಳ್ಳ ವ್ಯವಸ್ಥೆ ಇರುತ್ತದೆ. ಮೊದಲನೆಯ ಮಾರ್ಜಕದಲ್ಲಿ ದುರ್ಬಲ ಆಲ್ಕೊಹಾಲನ್ನು ಸಿಂಪಡಿಸಲಾಗುತ್ತದೆ. ಅನಿಲ ಹೊತ್ತು ತಂದಿರುವ ಆಲ್ಕೊಹಾಲಿನ ಅಂಶ ಇಲ್ಲಿ ಉಳಿಯುತ್ತದೆ. ನೀರನ್ನು ಚಿಮುಕಿಸುತ್ತಿರುವ ಎರಡು ಮತ್ತು ಮೂರನೆಯ ಕೋಶಗಳಲ್ಲಿ ದ್ರಾವ್ಯವಸ್ತುಗಳು ನಿವಾರಿಸಲ್ಪಡುತ್ತವೆ. ಪೊಟ್ಯಾಸಿಯಂ ಡೈಕ್ರೋಮೇಟ್ ಮಾರ್ಜಕ ಅನಿಲದೊಡನೆ ತೂರಿಬಂದಿರುವ ಆಲ್ಡಿಹೈಡುಗಳನ್ನು ಉತ್ಕರ್ಷಿಸುವುದು, ಪ್ರಬಲ ಸಲ್ಫ್ಯೂರಿಕ್ ಆಮ್ಲದ ಮಾರ್ಜಕ ಉತ್ಕರ್ಷಣವನ್ನು ಪೂರ್ಣಗೊಳಿಸಿ ಅನಿಲವನ್ನು ಶುಷ್ಕಗೊಳಿಸುವುದು, ಸೋಡಿಯಂ ಕಾರ್ಬೊನೇಟ್ ಮಾರ್ಜಕ ಆಮ್ಲದ ತುಂತುರುಗಳನ್ನು ತೊಡೆದು ಹಾಕುವುದು. ಗ್ಲಿಸರಾಲ್ ಮಾರ್ಜಕ ಉತ್ಕರ್ಷಿತ ಉತ್ಪನ್ನಗಳನ್ನು ಹೀರಿಕೊಳ್ಳುವುದು. ಅನಂತರ ಶುದ್ಧವಾದ ಅನಿಲವನ್ನು ಒತ್ತಡದಲ್ಲಿ ಉಕ್ಕಿನ ಉರುಳೆಗಳಿಗೆ ತುಂಬಲಾಗುವುದು.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೆಲವೆಡೆಗಳಲ್ಲಿ ಭೂಮಿಯಲ್ಲಿರುವ ಬಿರುಕುಗಳಿಂದ ನೈಸರ್ಗಿಕ ಅನಿಲ ಹೊರಹೊಮ್ಮುತ್ತದೆ. ಅದರಲ್ಲಿರುವ ಮುಖ್ಯಾಂಶ ಮೀಥೇನ್. ಅದನ್ನು ಹಬೆಯೊಡನೆ ಬೆರೆಸಿ ಮಿಶ್ರಣವನ್ನು $1000^0$ ಸೆ. ಉಷ್ಣತೆಯಲ್ಲಿ ನಿಕ್ಕಲ್ ವೇಗವರ್ಧಕದ ಮೇಲೆ ಹಾಯಿಸಿದರೆ ಕೆಳಕಂಡ ರಾಸಾಯನಿಕ ಕ್ರಿಯೆಗಳು ನಡೆಯುವುವು:

$$CH_4+H_2O \rightarrow CO+3H_2$$

$$CH_4+2H_2O \rightarrow CO_2+4H_2$$

ದೊರೆತ ಅನಿಲಮಿಶ್ರಣಕ್ಕೆ ಮತ್ತಷ್ಟು ಹಬೆಯನ್ನು ಸೇರಿಸಿ ಕಬ್ಬಿಣದ ಆಕ್ಸೈಡಿನ ಮೇಲೆ ಹಾಯಿಸಿದರೆ ಇಂಗಾಲದ ಮಾನಾಕ್ಸೈಡ್ ಡೈ ಆಕ್ಸೈಡ್ ಆಗುವುದು. ಒತ್ತಡ ಹೇರಿ ನೀರಿನ ಮೂಲಕ ಹಾಯಿಸಿದರೆ ಇಂಗಾಲದ ಡೈ ಆಕ್ಸೈಡ್ ಮಾತ್ರ ವಿಲೀನವಾಗುವುದು. ಸಾಕಷ್ಟು ಅನಿಲ ಈ ರೀತಿ ದೊರೆಯುವುದು.

ಗುಣಗಳು: ಇಂಗಾಲದ ಡೈಆಕ್ಸೈಡ್ ಅಸ್ಪಷ್ಟವಾಸನೆ, ರುಚಿ ಇರುವ ಮತ್ತು ಬಣ್ಣವಿಲ್ಲದ ಅನಿಲ. ವಿಷವಾಯುವಲ್ಲ. ಅದರ ಸೇವನೆಯಿಂದ ರಕ್ತದಲ್ಲಿ ಆಕ್ಸಿಜನ್ನಿನ ಕೊರತೆಯಾಗುತ್ತದೆ. ಕಾಲಕ್ರಮದಲ್ಲಿ ಗಂಭೀರ ಪರಿಣಾಮವಾಗಿ ಸಾವು ಸಂಭವಿಸಬಹುದು. ಆದ್ದರಿಂದ ಎಚ್ಚರಿಕೆಯಿಂದ ಇರುವುದು ಒಳಿತು. ಗಾಳಿಯಲ್ಲಿ 2%–3% ಅನಿಲವಿದ್ದರೆ ಬಾಧಕವಿಲ್ಲ. 5%–6% ಇದ್ದರೆ ನಾಡಿಯ ಬಡಿತ ತೀವ್ರವಾಗಿ ಏದುಸಿರು ಬರುವುದು. 10% ರಷ್ಟಿದ್ದರೆ ಈ ಸ್ಥಿತಿ ಉಲ್ಬಣಗೊಳ್ಳುವುದು. ಈ ಮಿತಿ ಮೀರಿದರೆ ಪ್ರಜ್ಞೆ ತಪ್ಪುವುದು. 25% ಅನಿಲವಿರುವ ಗಾಳಿಯಲ್ಲಿ ಕೆಲವು ಗಂಟೆಗಳ ಕಾಲ ಇದ್ದರೆ ಮರಣ ಅನಿವಾರ್ಯ.

ಸಾಮಾನ್ಯಪರಿಸ್ಥಿತಿಯಲ್ಲಿ ನೀರು ತನ್ನ ಸಮಾನಗಾತ್ರ ಅನಿಲವನ್ನು ವಿಲೀನ ಮಾಡಿಕೊಳ್ಳಬಲ್ಲುದು. ಆದರೆ ಒತ್ತಡಕ್ಕೆ ಗುರಿಪಡಿಸಿದರೆ ಹೆಚ್ಚು ಅನಿಲ ದ್ರಾವ್ಯವಾಗುತ್ತದೆ. ಸೋಡಾ ಮತ್ತು ಇತರ ಪಾನೀಯಗಳ ತಯಾರಿಕೆಯಲ್ಲಿ ಈ ತತ್ತ್ವವನ್ನು ಅವಲಂಬಿಸಿದೆ. ಚದರ ಅಂಗುಲವೊಂದಕ್ಕೆ 60–150 ಪೌಂಡುಗಳ ಒತ್ತಡ ಹೇರಿ ಇಂಥ ಅನಿಲಯುಕ್ತ ಪಾನೀಯಗಳನ್ನು ತಯಾರಿಸುತ್ತಾರೆ. ಸೋಡಾ ಸೀಸೆಯನ್ನು ತೆರೆದಾಗ ಒತ್ತಡ ಕಡಿಮೆಯಾಗಿ ಹುದುಗಿದ್ದ ಅನಿಲ ಹೊರಚೆಲ್ಲುವುದು, ತತ್ಫಲವಾಗಿ ದ್ರಾವಣ ನೊರೆನೊರೆಯಾಗಿ ಆಕರ್ಷಕವಾಗಿ ತೋರುವುದು.

ಇಂಗಾಲದ ಡೈ ಆಕ್ಸೈಡನ್ನು ದ್ರವೀಕರಿಸುವುದು ಸುಲಭ. ಅದನ್ನು ದ್ರವರೂಪದಲ್ಲಿ ಪಡೆದವರ ಪೈಕಿ ಫ್ಯಾರಡೆ ಮೊದಲಿಗ (1823). ಕೈಗಾರಿಕಾಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡನ್ನು ದ್ರವೀಕರಿಸಲು ಬೇಕಾದ ಒತ್ತಡ ಅನಿಲದ ಉಷ್ಣತೆಗೆ ಅನುಗುಣವಾಗಿರುತ್ತದೆ. ಉದಾಹರಣೆಗೆ–$5^0$ ಸೆ.ನಲ್ಲಿ 30.8 ವಾಯುಭಾರ (ಅಟ್ಮಾಸ್ಫಿಯರ್), $5^0$ ಸೆ.ನಲ್ಲಿ 40.4 ವಾಯುಭಾರ ಮತ್ತು $15^0$ ಸೆ. ನಲ್ಲಿ 52.1 ವಾಯುಭಾರ ಒತ್ತಡ ಅಗತ್ಯ. $31.1^0$ ಸೆ. ನಲ್ಲಿ 72.8 ವಾಯುಭಾರ ಒತ್ತಡ ಹೇರಿದರೆ ಮಾತ್ರ ದ್ರವೀಕರಣ ಸಾಧ್ಯ. ಆದರೆ ಈ ಉಷ್ಣತಾಮಿತಿ ಮೀರಿದರೆ ಎಷ್ಟು ಉನ್ನತ ಒತ್ತಡಕ್ಕೂ ಅದು ಮಣಿಯುವುದಿಲ್ಲ. ಈ ಉಷ್ಣತೆಗೆ ಅದರ ಸಂಧಿಗ್ಧ ಅಥವಾ ಅವಧಿಕ (ಕ್ರಿಟಿಕಲ್) ಉಷ್ಣತೆ ಎಂದು ಹೆಸರು.

ದ್ರವಿತ ಇಂಗಾಲದ ಡೈ ಆಕ್ಸೈಡ್ ನಿರ್ವರ್ಣ ವಸ್ತು. ನೀರಿನೊಡನೆ ಬೆರೆಯದೆ ತೇಲುವುದು. ಒಂದು ವಾಯುಭಾರ ಒತ್ತಡದಲ್ಲಿ $-78.5^0$ ಸೆಂ.ಗ್ರೇಡಿನಲ್ಲಿ ಕುದಿಯುವುದು. ಅದನ್ನು ಇಟ್ಟಿರುವ ಉಕ್ಕಿನ ಉರುಳೆಯಿಂದ ಒಂದು ಕ್ಯಾನ್ವಾಸ್ ಚೀಲಕ್ಕೆ ಹರಿಯುವಂತೆ ಮಾಡಿದರೆ ದ್ರವದ ಒಂದು ಭಾಗ ಆವಿಯಾಗುವುದು. ಆಗ ಅದು ಉಳಿದ ದ್ರವದಿಂದ ಉಷ್ಣವನ್ನು ಹೀರುವುದರಿಂದ ಉಷ್ಣ ಇಳಿದು ಘನ ರೂಪಕ್ಕೆ ತಿರುಗುವುದು. ಉರುಳೆಯ ಬಾಯಿಯನ್ನು ಕೆಲವು ನಿಮಿಷಗಳ ಕಾಲ ತೆರೆದಿಟ್ಟರೆ ಚೀಲದಲ್ಲಿ ಸಾಕಷ್ಟು ಬಿಳಿಯ ಘನ ಕೂಡುವುದು.

ಘನರೂಪದ ಇಂಗಾಲದ ಡೈ ಆಕ್ಸೈಡ್ ಮಂಜುಗೆಡ್ಡೆಯಂತೆ ಇರುತ್ತದೆ. ಇದು ದ್ರವಿಸದೆ ನೇರವಾಗಿ ಆವಿಯಾಗುವುದರಿಂದ ಅದರಲ್ಲಿಟ್ಟ ಪದಾರ್ಥಗಳು ಒದ್ದೆಯಾಗುವುದಿಲ್ಲ. ಆದರೆ 5 ವಾಯುಭಾರ ಒತ್ತಡದಲ್ಲಿ ಅದು ಕರಗುವುದು. ಸಾಮಾನ್ಯ ಒತ್ತಡದಲ್ಲಿ ಅದರೊಡನೆ ವ್ಯವಹರಿಸುವುದರಲ್ಲಿ ಅಪಾಯವಿಲ್ಲ. ಆದರೆ ಒತ್ತಡಕ್ಕೆ ಗುರಿಪಡಿಸಿದ ಘನವನ್ನು ಕೈಯಲ್ಲಿ ಹಿಡಿದರೆ ಸುಟ್ಟಾಗ ಆಗುವಂತೆ ಬೊಕ್ಕೆ ಏಳುವುದು. ಶಾಖವಾದ ಮುಂಗೈ ಮತ್ತು ಘನದ ನಡುವೆ ಇರುವ ಅನಿಲ ಪೊರೆ ಹರಿದುಹೋಗುವುದೇ ಹೀಗಾಗಲು ಕಾರಣ. ಘನೀಭವಿಸದ ಇಂಗಾಲದ ಡೈ ಆಕ್ಸೈಡ್ ಈಥರ್ ದ್ರವದಲ್ಲಿ ವಿಲೀನವಾಗುವುದು. ಈಥರ್ ಆವಿಯಾದಂತೆಲ್ಲ ಮಿಶ್ರಣದ ಉಷ್ಣ ಇಳಿಯುವುದು. ಸಾಮಾನ್ಯ ಒತ್ತಡದಲ್ಲಿ $-110^0$ ಸೆ. ಶೈತ್ಯವೂ ಒತ್ತಡ ಇಳಿಸಿದಾಗ $-140^0$ ಸೆ. ಶೈತ್ಯವೂ ಏರ್ಪಡುವುದು. ಈ ಮಿಶ್ರಣ ಉಷ್ಣವಾಹಕವಾದ್ದರಿಂದ ಶೈತ್ಯ ಮಿಶ್ರಣವಾಗಿ ಉಪಯೋಗಿಸಬಹುದು. ಇದರಲ್ಲಿ ತಣಿಸಿದ ನಾಳಗಳ ಮೂಲಕ ಹಾಯಿಸಿದಾಗ ಅನೇಕ ಅನಿಲಗಳು ದ್ರವರೂಪ ಹೊಂದುವುವು. ಈ ಮಿಶ್ರಣದಲ್ಲಿ ಪಾದರಸ ಘನೀಭವಿಸುವುದು. ಇಂಗಾಲದ ಡೈಆಕ್ಸೈಡಿನ ಘನ ಈಗ ಮಾರುಕಟ್ಟೆಯಲ್ಲೂ ದೊರೆಯುತ್ತದೆ. ಡ್ರೈಕೋಲ್ಡ್ ಎಂಬ ಹೆಸರಿನಿಂದ ಶೈತ್ಯಕಾರಕ ಯಂತ್ರಗಳಲ್ಲಿ ಬಳಕೆಯಾಗುತ್ತಿದೆ. ಬೀದಿಯಲ್ಲಿ ಐಸ್‌ಕ್ರೀಂ ಮಾರುವ ಚಿಲ್ಲರೆ ವ್ಯಾಪಾರಿಗಳನ್ನೂ ಬೇಗ ನಾಶವಾಗುವ ಆಹಾರ ಪದಾರ್ಥಗಳನ್ನು ಊರಿಂದೂರಿಗೆ ರೈಲಿನಲ್ಲಿ ರವಾನಿಸುವುದಕ್ಕೂ ಇದು ಸಹಕಾರಿ. ಚರ್ಮದ ಮೇಲಿರುವ ನರಹುರಿಗಳನ್ನು ಇದರ ಸಹಾಯದಿಂದ ತೊಡೆದು ಹಾಕಬಹುದು.

ರಾಸಾಯನಿಕವಾಗಿ ಇಂಗಾಲದ ಡೈ ಆಕ್ಸೈಡ್ ಸ್ಥಿರವಸ್ತು, ಎಂದರೆ ಇದು ಸುಲಭವಾಗಿ ವಿಭಜಿಸುವುದಿಲ್ಲ. ಸಾಮಾನ್ಯ ಒತ್ತಡದಲ್ಲಿ ಕಾಸಿದರೆ, $1478^0$ ಸೆ.ನಲ್ಲಿ ಕೇವಲ 0.32% ರಷ್ಟು ಅನಿಲ ವಿಭಜಿಸುವುದು; ದಹನಾನುಕೂಲಿಯಲ್ಲ; ದಹ್ಯಗುಣವೂ ಇಲ್ಲ. ಆದರೆ ಸೋಡಿಯಂ, ಪೊಟ್ಯಾಸಿಯಂ ಮತ್ತು ಮ್ಯಾಗ್ನೀಸಿಯಂನಂಥ ಕೆಲವು ಪಟುವಾದ ಲೋಹಗಳು ಅದರಲ್ಲಿ ಉರಿಯುವುವು. ಆಗ ನಡೆಯುವ ರಾಸಾಯನಿಕ ಕ್ರಿಯೆಗಳನ್ನು ಸಮೀಕರಣಗಳ ರೂಪದಲ್ಲಿ ಕೆಳಗೆ ಕೊಡಲಾಗಿದೆ:

$$CO_2+2Mg \rightarrow C+2MgO$$

$$2CO_2+2Na \rightarrow CO+Na_2CO_3$$

$$2CO_2+2K \xrightarrow{235^0\ \text{ಸೆ.ಗ್ರೇ.}} K_2C_2O_4$$

ಪೊಟ್ಯಾಸಿಯಂ ಆಕ್ಸಲೇಟ್

ಇಂಗಾಲದ ಡೈ ಆಕ್ಸೈಡ್ ನೀರಿನಲ್ಲಿ ವಿಲೀನವಾದಾಗ ಅದರ ಒಂದು ಭಾಗ ನೀರಿನೊಡನೆ ಸಂಯೋಜಿಸಿ ಕಾರ್ಬಾನಿಕ್ ಆಮ್ಲವಾಗುವುದು.

$$H_2O+CO_2 \rightarrow H_2CO_3$$

ಆದ್ದರಿಂದಲೇ ಶುಷ್ಕವಾದ ಅನಿಲ ಒಣಗಿದ ನೀಲಿ ಲಿಟ್ಮಸ್ ಕಾಗದದ ಬಣ್ಣವನ್ನು ಬದಲಾಯಿಸುವುದಿಲ್ಲ. ಆದರೆ ಲಿಟ್ಮಸ್ ಕಾಗದ ಒದ್ದೆಯಾಗಿದ್ದರೆ ಮಾತ್ರ ಕೆಂಪಾಗುವುದು. ಕಾರ್ಬಾನಿಕಾಮ್ಲದಿಂದ ಹೀಗಾಗುತ್ತದೆ. ಸುಣ್ಣದ ತಿಳಿನೀರಿನ ಮೂಲಕ ಅನಿಲವನ್ನು ಹಾಯಿಸಿದರೆ ಕ್ಯಾಲ್ಸಿಯಂ ಕಾರ್ಬೊನೇಟಿನ ಬಿಳಿಯ ಒತ್ತರ ಉಂಟಾಗಿ ಹಾಲಿನಂತಾಗುವುದು.

$$Ca(OH)_2 +CO_2 \rightarrow CaCO_3+H_2O$$

ಇದರ ಮೂಲಕ ಹೆಚ್ಚು ಅನಿಲ ಹಾಯಿಸಿದರೆ ಅದ್ರಾವ್ಯವಾದ ಕಾರ್ಬೊನೇಟ್ ಬೈಕಾರ್ಬೊನೇಟ್ ಆಗುವುದು. ಇದು ನೀರಿನಲ್ಲಿ ದ್ರಾವ್ಯ, ಆದ್ದರಿಂದ ದ್ರಾವಣ ತಿಳಿಯಾಗುತ್ತದೆ.

$$CaCO_3+H_2O+CO_2 \rightarrow Ca(HCO_3)_2$$

ಇಂಗಾಲದ ಡೈ ಆಕ್ಸೈಡನ್ನು ಗುರುತಿಸಲು ಇದೊಂದು ಪರಿಚಿತ ಪರೀಕ್ಷಾ ಪ್ರಯೋಗ. ಕೆಲವು ನದಿಗಳ ಪಾತ್ರದಲ್ಲಿ ಕ್ಯಾಲ್ಸಿಯಂ ಅಥವಾ ಮ್ಯಾಗ್ನಿಸಿಯಂ ಕಾರ್ಬೊನೇಟುಗಳ ನಿಕ್ಷೇಪ ಇರುವುದುಂಟು. ಆ ಸಂಯುಕ್ತಗಳು ಕ್ರಮೇಣ ಶಿಥಿಲವಾಗಿ ಸೂಕ್ಷ್ಮ ಕಣಗಳ ರೂಪದಲ್ಲಿ ನೀರಿನೊಡನೆ ಬೆರೆತಿರುತ್ತವೆ. ವಾಯುಮಂಡಲದ ಇಂಗಾಲದ ಡೈ ಆಕ್ಸೈಡಿನ ಸಂಪರ್ಕದಲ್ಲಿ ಮೇಲ್ಕಂಡ ಕ್ರಿಯೆ ನಡೆದು ಆಯಾ ಲೋಹಗಳ ಬೈಕಾರ್ಬೊನೇಟುಗಳಾಗಿ ನೀರಿನಲ್ಲಿ ಕರಗಿಹೋಗುತ್ತವೆ. ಪರಿಣಾಮವಾಗಿ ನೀರು ತಾತ್ಕಾಲಿಕವಾಗಿ ಗಡಸಾಗುತ್ತದೆ.

ಇಂಗಾಲದ ಡೈ ಆಕ್ಸೈಡನ್ನು ಅವಶೋಷಿಸಲು ಸೋಡಿಯಂ ಹೈಡ್ರಾಕ್ಸೈಡಿಗಿಂತ ಪೊಟ್ಯಾಸಿಯಂ ಹೈಡ್ರಾಕ್ಸೈಡು ಮೇಲು. ಏಕೆಂದರೆ ಪೊಟ್ಯಾಸಿಯಂ ಕಾರ್ಬೊನೇಟಿಗಿಂತ ಸೋಡಿಯಂ ಕಾರ್ಬೊನೇಟಿನ ದ್ರಾವಣತೆ ಕಡಿಮೆ. ಅದು ಬಲುಬೇಗ ಸ್ಫಟಿಕೀಕರಿಸಿ ಮಾರ್ಜಕ ಉಪಕರಣದ ನಾಳಗಳನ್ನು ಮುಚ್ಚಿಬಿಡುವುದು. ಆದ್ದರಿಂದಲೇ ಈ ಕ್ಷಾರಗಳ ದ್ರಾವಣಗಳನ್ನು ಇಟ್ಟಿರುವ ಗಾಜಿನ ಸೀಸೆಗಳಿಗೆ ರಬ್ಬರಿನ ಬಿರಡೆಗಳನ್ನು ಹಾಕಿರುವುದು. ಇಲ್ಲದಿದ್ದರೆ ವಾಯುಮಂಡಲದಿಂದ ಇಂಗಾಲದ ಡೈ ಆಕ್ಸೈಡು ಹೀರಲ್ಪಟ್ಟು ಒತ್ತರಿಸಿದ ಕಾರ್ಬೊನೇಟು ಸಿಮೆಂಟಿನಂತೆ ವರ್ತಿಸಿ ಗಾಜಿನ ಬಿರಡೆ ಸೀಸೆಗೆ ಭದ್ರವಾಗಿ ಅಂಟಿಕೊಂಡುಬಿಡುತ್ತದೆ.

ಗಾಳಿಯಲ್ಲಿರುವ ಇಂಗಾಲದ ಡೈ ಆಕ್ಸೈಡಿನ ಪ್ರಮಾಣವನ್ನು ನಿರ್ಧರಿಸಲೂ ಸಹ ಈ ಪ್ರಯೋಗವೇ ಆಧಾರ. ನಿರ್ದಿಷ್ಟಗಾತ್ರ ಗಾಳಿ ಗೊತ್ತಾದ ಗಾತ್ರ N/50 ಬೇರಿಯಂ ಹೈಡ್ರಾಕ್ಸೈಡ್ ದ್ರಾವಣದೊಡನೆ ನಿಕಟಸಂಪರ್ಕ ಹೊಂದುವಂತೆ ಚೆನ್ನಾಗಿ ಕುಲುಕಲಾಗುವುದು. ಶೋಧಿತ ದ್ರಾವಣದಲ್ಲಿ ಉಳಿದ ಬೇರಿಯಂ ಹೈಡ್ರಾಕ್ಸೈಡ್ ಇರುವುದು. ಅದನ್ನು ಗೊತ್ತಾದ ಪ್ರಬಲತೆಯುಳ್ಳ ಆಕ್ಸಾಲಿಕ್ ಆಮ್ಲದೊಡನೆ ಫೀನಾಲ್ಫ್‌ಥ್ಯಾಲೀನ್ ಸೂಚಕದ ನೆರವಿನಿಂದ ಅನುಮಾಪನಮಾಡಿ ನಿರ್ಣಯಿಸಲಾಗುವುದು. ಇದಕ್ಕೆ ಪೆಟ್ಟೆನ್ ಕಾಫರ್ ವಿಧಾನವೆಂದು ಹೆಸರು.

ಉಪಯೋಗಗಳು: ಸೋಡಾ ಮತ್ತು ಇತರ ಪಾನೀಯಗಳ ತಯಾರಿಕೆಯಲ್ಲಿ ಇಂಗಾಲದ ಡೈ ಆಕ್ಸೈಡಿನ ಬಳಕೆ ನಮಗೆ ಪರಿಚಿತವಾದುದು. ಉರಿಯನ್ನು ನಂದಿಸುವುದರಿಂದ ಇದನ್ನು ಅಗ್ನಿಶಾಮಕವಾಗಿ ಉಪಯೋಗಿಸುವರು. ಅಗ್ನಿಶಾಮಕ ಉಪಕರಣಗಳಲ್ಲಿ ನಾನಾ ವಿಧಗಳಿವೆ. ಅವುಗಳ ಪೈಕಿ ಕೆಲವನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ:

1. ಒಂದು ಡಬ್ಬದ ತಳದಲ್ಲಿ ಸೋಡಿಯಂ ಬೈಕಾರ್ಬೊನೇಟಿನ ಪ್ರಬಲ ದ್ರಾವಣವಿರುತ್ತದೆ. ಅದರ ಮೇಲ್ಭಾಗದಲ್ಲಿ ದುರ್ಬಲ ಸಲ್ಫ್ಯೂರಿಕ್ ಆಮ್ಲವಿರುವ ಸೀಸೆ ಇದೆ. ಅಗತ್ಯ ಬಿದ್ದಾಗ ಸೀಸೆಯ ಬಿರಡೆಯನ್ನು ಸಡಿಲಿಸಿ ಡಬ್ಬವನ್ನು ಬೋರಲು ಹಾಕಬೇಕು. ಆಗ ಆಮ್ಲ ಬೈಕಾರ್ಬೊನೇಟಿನೊಂದಿಗೆ ವರ್ತಿಸುವುದು. ಉತ್ಪತ್ತಿಯಾದ ಇಂಗಾಲದ ಡೈ ಆಕ್ಸೈಡ್ ದ್ರಾವಣದೊಡನೆ ಮಿಳಿತವಾಗಿ ಡಬ್ಬದ ಪಕ್ಕದಲ್ಲಿರುವ ನಳಿಕೆಯೊಂದರ ಮೂಲಕ ಚಿಮ್ಮುವುದು. ಇದು ಬೆಂಕಿಯನ್ನು ಆವರಿಸಿ ನಂದಿಸುತ್ತದೆ.

2. ಬುರುಗು ಅಗ್ನಿಶಾಮಕಗಳಲ್ಲಿ ಸೋಡಿಯಂ ಬೈಕಾರ್ಬೊನೇಟಿನ ದ್ರಾವಣದ ಜೊತೆಯಲ್ಲಿ ಅತಿಮಧುರದ ಬೇರಿನ ಕಷಾಯವಿರುತ್ತದೆ. ಸೀಸೆಯಲ್ಲಿ, ಆಮ್ಲದ ಬದಲು ಅಲ್ಯೂಮಿನಿಯಂ ಸಲ್ಫೇಟಿನ ದ್ರಾವಣವಿಟ್ಟಿರುತ್ತಾರೆ. ಇವೆರಡು ದ್ರಾವಣಗಳು ಬೆರೆತಾಗ ಕೆಳಕಂಡ ರಾಸಾಯನಿಕ ಕ್ರಿಯೆ ನಡೆಯುತ್ತದೆ:

$$Al_2(SO_4)_3+6NaHCO_3 \rightarrow 2Al(OH)_3+3Na_2SO_4+6CO_2\uparrow$$

ಅತಿಮಧುರದ ಕಷಾಯ ಅಲ್ಯೂಮಿನಿಯಂ ಹೈಡ್ರಾಕ್ಸೈಡಿನೊಡನೆ ಬೆರೆತು ಮಂದವಾದ ದ್ರವಮಿಶ್ರಣವಾಗುತ್ತದೆ. ಇಂಗಾಲದ ಡೈ ಆಕ್ಸೈಡ್ ಇದನ್ನು ನೊರೆಗಟ್ಟಿಸುವುದು. ದಟ್ಟವಾದ ಬುರುಗು ಉರಿಯುತ್ತಿರುವ ವಸ್ತುವಿಗೆ ಭದ್ರವಾಗಿ ಅಂಟಿಕೊಳ್ಳುವುದು. ಆಕ್ಸಿಜನ್ನಿನ ಸಂಪರ್ಕ ಕಡಿದುಹೋಗಿ ಬೆಂಕಿ ಬಲುಬೇಗ ಹತೋಟಿಗೆ ಬರುವುದು. ಎಣ್ಣೆಗಳಿಂದ ಉದ್ಭವಿಸಿದ ಬೆಂಕಿಯನ್ನು ಆರಿಸಲು ಇದು ಬಲು ಅನುಕೂಲ.

3. ವಿದ್ಯುತ್ ಸ್ವಿಚ್‌ಬೋರ್ಡಿನಲ್ಲಿ ಹುಟ್ಟಿದ ಬೆಂಕಿಯನ್ನು ಆರಿಸಲು ಇಂಗಾಲದ ಡೈ ಆಕ್ಸೈಡಿನ ದ್ರವ ಉಪಯೋಗಿಸುವುದು ಉತ್ತಮ. ಅದನ್ನು ಕೂಡಿಟ್ಟಿರುವ ಉರುಳೆಯ ಬಾಯಿಯನ್ನು ತೆರೆದರೆ ಉದ್ಭವಿಸುವ ಘನವಸ್ತು ತತ್‌ಕ್ಷಣ ಬೆಂಕಿಯನ್ನು ಶಮನಗೊಳಿಸುತ್ತದೆ.

ಶ್ವಾಸಕ್ರಿಯೆಯನ್ನು ಪ್ರಚೋದಿಸಲು ಇಂಗಾಲದ ಡೈ ಆಕ್ಸೈಡನ್ನು ಬಳಸುವುದುಂಟು. 5% ಅನಿಲ ಬೆರೆತಿರುವ ಆಕ್ಸಿಜನ್ನನ್ನು ನ್ಯೂಮೋನಿಯಾ ರೋಗಿಗಳಿಗೂ ಮತ್ತು ಇಂಗಾಲದ ಮಾನಾಕ್ಸೈಡನ್ನು ಸೇವಿಸಿ ತೊಂದರೆಗೀಡಾದವರಿಗೂ ಕೊಡುವುದು ಪದ್ಧತಿ. ಸಕ್ಕರೆಯ ತಯಾರಿಕೆಯಲ್ಲಿ ಬಳಸುವ ಸುಣ್ಣದ ಅಧಿಕಾಂಶವನ್ನು ತೆಗೆಯಲು ಸಾಲ್ವೆ ವಿಧಾನದಿಂದ ಸೋಡಿಯಂ ಕಾರ್ಬೊನೇಟನ್ನು ಮಾಡಲು ಬಿಳಿಯ ಲೆಡ್ ಪೆಯಿಂಟಿನ ತಯಾರಿಕೆಯಲ್ಲಿ ಪರೋಕ್ಷವಾಗಿ, ನೀರಿನ ಕೊಳಾಯಿಗಳ ಒಳಭಾಗವನ್ನು ಆವರಿಸುವ ಕಿಟ್ಟವನ್ನು ನಿರ್ಮೂಲ ಮಾಡಲು, ವಿಷವಾಯುಗಳ ವಿರುದ್ಧ ಬಳಸುವ ಮೊಗವಾಡಗಳನ್ನು ಪರೀಕ್ಷಿಸಲು, ಪ್ರಾಣಿಗಳ ಕೃಪಾವಧೆಯಲ್ಲಿ, ರಾಸಾಯನಿಕ ಕ್ರಿಯೆಗಳಲ್ಲಿ ಉತ್ಕರ್ಷಣ ನಡೆಯದಂತೆ ಜಡವಾತಾವರಣ ವನ್ನು ನಿರ್ಮಿಸಲು, ಇಂಗಾಲದ ಡೈ ಆಕ್ಸೈಡ್ ಉಪಯೋಗವಾಗುತ್ತಿದೆ. ಇದರ ರಕ್ಷಣೆಯಲ್ಲಿ ಸೇಬಿನ ಹಣ್ಣುಗಳು ಕೆಡುವುದಿಲ್ಲ. ಅದರಲ್ಲಿ ಸಂಗ್ರಹಿಸಿಟ್ಟ ಮಾಂಸ ಮತ್ತು ಇತರ ಆಹಾರ ಪದಾರ್ಥಗಳು ಸಾಗಾಣಿಕೆಯಲ್ಲಿ ಕೆಡುವುದಿಲ್ಲ. ಧಾನ್ಯದ ಹಗೇವುಗಳಲ್ಲಿ ಉಪಯೋಗಿಸಿದಾಗ ಕೀಟನಾಶಕವಾಗಿ ವರ್ತಿಸುವುದು.

ಲೋಹ ಭಾಗಗಳು ಸಂಕುಚಿತವಾಗಿ ದೃಢವಾಗಿ ಬೆಸೆದುಕೊಳ್ಳಲು ವಿಮಾನ ರಚನೆಯಲ್ಲಿ ಬಳಸುವ ಅಲ್ಯೂಮಿನಿಯಂ ಮಿಶ್ರಲೋಹಗಳ ಬಾಳಿಕೆಯನ್ನು ಹೆಚ್ಚಿಸಲು ದುರಸ್ತಿ ಅಗತ್ಯವಾದಾಗ ಕೊಳಾಯಿ ಮಾರ್ಗದಲ್ಲಿ ಹರಿಯುತ್ತಿರುವ ಅನಿಲ ಅಥವಾ ದ್ರವವಸ್ತುವನ್ನು ಸ್ಥಳೀಯವಾಗಿ ಹೆಪ್ಪುಗಟ್ಟಿಸಲು, ರಕ್ತಸಾರವನ್ನು ಹೆಪ್ಪುಗೊಳಿಸಿ ರಕ್ತವನ್ನು ಸಂರಕ್ಷಿಸಿ ಕೂಡಿಡಲು, ಘನರೂಪದ ಇಂಗಾಲದ ಡೈ ಆಕ್ಸೈಡ್ ವಿನಿಯೋಗವಾಗುತ್ತಿದೆ. (ಎಚ್.ಜಿ.ಎಸ್.: ಕೆ.ಟಿ.ಎಸ್.)

**ಇಂಗಾಲದ ಡೈಸಲ್ಫೈಡ್:** ಇಂಗಾಲದ ಒಂದು ಸಂಯುಕ್ತ ($CS_2$). ಇದು ಬೇಗನೆ ಆವಿ ರೂಪಕ್ಕೆ ಬರುವ ಒಂದು ದ್ರವ. ಇದರ ಸಾಂದ್ರತೆ $0^0$ ಸೆಂ. ಗ್ರೇಡಿನಲ್ಲಿ 1.3%. ಇದು ದಹ್ಯವಸ್ತು ಮತ್ತು ವಿಷ ಪದಾರ್ಥ.–$110^0$ ಸೆಂ.ಗ್ರೇಡಿನಲ್ಲಿ ಘನೀಕರಿಸುತ್ತದೆ. ಗಂಧಕದ (ಸಲ್ಫರ್) ಪುಡಿಯನ್ನೂ ಇಂಗಾಲದ ಚೂರುಗಳನ್ನೂ (ಕೋಕ್) ವಿದ್ಯುತ್ಕುಲುಮೆಯಲ್ಲಿ ಕಾಸುವುದರಿಂದ (ಟೈಲರ್ಸ್ ಪ್ರೋಸೆಸ್) ಪಡೆಯಬಹುದು.

$$C+2S \rightarrow CS_2$$

ಈ ವಿಧಾನದಲ್ಲಿ ದೊರೆಯುವ ಆವಿಯನ್ನು ತಣ್ಣಗೆ ಮಾಡಿದರೆ ಇಂಗಾಲದ ಡೈ ಸಲ್ಫೈಡು ದ್ರವರೂಪಕ್ಕೆ ಬರುತ್ತದೆ. ಇದನ್ನು ಲೆಡ್ ಅಸಿಟೇಟ್ ಲವಣದ ಸಹಾಯದಿಂದಲೂ ಪಾದರಸದ ಜೊತೆಯಲ್ಲಿ ಮಿಶ್ರ ಮಾಡುವುದರಿಂದಲೂ ಶುದ್ಧ ಮಾಡಬಹುದು. ಲಾಂಪಾಡಿಯಸ್ 1796ರಲ್ಲಿ ಪೆರೈಟಿಸ್ ($FeS_2$) ಮತ್ತು ಇದ್ದಲನ್ನು ಕಾಸಿಯೂ ಇಂಗಾಲದ ಡೈ ಸಲ್ಫೈಡನ್ನು ತಯಾರಿಸಿದ. ಇದಾದ ಅನಂತರ ಫಾಸ್ಫರಸ್ ಪೆಂಟಾಕ್ಸೈಡ್ ($P_2O_5$) ಜೊತೆಯಲ್ಲೂ ಬಿಳಿಯ ಮೇಣದ ಜೊತೆಯಲ್ಲೂ ಬಟ್ಟಿ ಇಳಿಸುವುದರಿಂದ ಅತಿ ಶುದ್ಧವಾದ ಇಂಗಾಲದ ಡೈಸಲ್ಫೈಡ್ ಉತ್ಪತ್ತಿಯಾಗುತ್ತದೆ.

ಲಕ್ಷಣಗಳು: ಈ ದ್ರವ $46.25^0$ ಸೆ. ಉಷ್ಣತೆಯಲ್ಲಿ ಆವಿರೂಪ ತಾಳುತ್ತದೆ. ಇದು ನೀರಿನ ಜೊತೆಯಲ್ಲಿ ವಿಲೀನವಾಗದು. ಮದ್ಯಸಾರ, ಈಥರ್ ಮತ್ತು ಎಣ್ಣೆಗಳ ಜೊತೆಯಲ್ಲಿ ವಿಲೀನವಾಗುತ್ತದೆ. ಇದು ಗಂಧಕ, ಬಿಳಿಯ ರಂಜಕ, ರಬ್ಬರ್, ಕರ್ಪೂರ, ಕೆಲವು ಅಂಟುಗಳು ಮುಂತಾದ ವಸ್ತುಗಳಿಗೆ ಒಳ್ಳೆಯ ದ್ರಾವಕ. ವಿಸ್ಕೋಸ್ ವಿಧಾನದಲ್ಲಿ ಕ್ಸಾಂಥೇಟ್ ಮೂಲಕ ಕೃತಕ ರೇಷ್ಮೆಯನ್ನು ತಯಾರಿಸುವಾಗ ಇದನ್ನು ಸೆಲ್ಯುಲೋಸ್ ಜೊತೆಯಲ್ಲಿ ಬಳಸುತ್ತಾರೆ. ಇದರ ಆವಿ ದುರ್ವಾಸನೆಯಿಂದ ಕೂಡಿದೆ. ಉಸಿರಾಡಿದಾಗ ಇದು ನಮಗೆ ಹಾನಿಕರ. ಇಲಿ ಮತ್ತು ಜಿರಳೆಗಳಿಗೆ ಇದು ವಿಷ ಪದಾರ್ಥ. ಇಂಗಾಲದ ಡೈ ಸಲ್ಫೈಡಿನ ಆವಿಯನ್ನೂ ಗಾಳಿಯನ್ನೂ 2 : 5 ಪ್ರಮಾಣದಲ್ಲಿ ಸೇರಿಸಿ ಬೆಂಕಿ ತಗುಲಿಸಿದರೆ, ಆ ಮಿಶ್ರಣ ಸಿಡಿದು ಗಂಧಕದ ಡೈ ಆಕ್ಸೈಡ್ ($SO_2$), ಗಂಧಕದ ಟ್ರೈ ಆಕ್ಸೈಡ್ ($SO_3$), ಇಂಗಾಲದ ಮಾನಾಕ್ಸೈಡ್ (CO), ಇಂಗಾಲದ ಡೈ ಆಕ್ಸೈಡ್ ($CO_2$) ಮುಂತಾದ ಅನಿಲಗಳನ್ನು ಉತ್ಪತ್ತಿ ಮಾಡುತ್ತದೆ. ಇಂಗಾಲದ ಡೈ ಸಲ್ಫೈಡಿನಿಂದ ಕಾರ್ಬನ್ ಟೆಟ್ರಕ್ಲೋರೈಡನ್ನು ತಯಾರಿಸಬಹುದು.

$$CS_2+3Cl_2 \rightarrow S_2Cl_2 + CCl_4$$

(ಕು.ಬಿಂ. $138^0$ ಸೆ.) (ಕು.ಬಿಂ. $77^0$ ಸೆ.)

ಇಂಗಾಲದ ಡೈಸಲ್ಫೈಡಿನಿಂದ ಹೈಡ್ರೊಜನ್ ಸಲ್ಫೈಡ್ ಉತ್ಪತ್ತಿ ಮಾಡಬಹುದು. ಈ ವಿಧಾನದಲ್ಲಿ ಇಂಗಾಲದ ಡೈ ಸಲ್ಫೈಡನ್ನೂ ಹೈಡ್ರೊಜನ್ನನ್ನೂ $450^0$ ಸೆ. ಗೆ ಕಾದ ನಿಕ್ಕಲ್ ವೇಗವರ್ಧಕದ ಮೂಲಕ ಹಾಯಿಸಿದಾಗ ಹೈಡ್ರೊಜನ್ ಸಲ್ಫೈಡ್ ಉತ್ಪತ್ತಿಯಾಗುತ್ತದೆ.

$$CS_2+2H_2 \rightarrow C+2H_2S$$

ನೈಟ್ರಿಕ್ ಆಕ್ಸೈಡಿನ ಪರೀಕ್ಷೆಯಲ್ಲಿ ಇಂಗಾಲದ ಡೈಸಲ್ಫೈಡನ್ನು ಬಳಸುತ್ತಾರೆ. ನೈಟ್ರಿಕ್ ಆಕ್ಸೈಡ್ ಮತ್ತು ಇಂಗಾಲದ ಡೈ ಸಲ್ಫೈಡಿನ ಮಿಶ್ರಣ ದಹಿಸಿದಾಗ ಒಂದು ನೇರಿಳೆ ಬಣ್ಣದ ಜ್ವಾಲೆಯಿಂದ ಉರಿಯುತ್ತದೆ. ಈ ರಾಸಾಯನಿಕ ಪರಿವರ್ತನೆಯಲ್ಲಿ ಇಂಗಾಲಾಮ್ಲ, ಗಂಧಕಾಮ್ಲ, ನೈಟ್ರೊಜನ್ ಅನಿಲಗಳು ಉತ್ಪತ್ತಿಯಾಗುತ್ತವೆ.

**ಇಂಗಾಲದ ಟೆಟ್ರಕ್ಲೋರೈಡ್:** ಇಂಗಾಲದ ಒಂದು ಸಂಯುಕ್ತ ($CCl_4$). ದ್ರವವಸ್ತು. 76.5º. ಸೆ. ಉಷ್ಣತೆಯಲ್ಲಿ ಆವಿಯಾಗುತ್ತದೆ. ಇದು ನೀರಿಗಿಂತಲೂ ಭಾರ. ಸಾಂದ್ರತೆ 1.58 ($21^0$ಸೆ. ಉಷ್ಣತೆಯಲ್ಲಿ). ಕುದಿಯುವ ಇಂಗಾಲದ ಡೈ ಸಲ್ಫೈಡಿನ ($CS_2$) ಮೂಲಕ ಅಯೊಡೀನ್ ವೇಗವರ್ಧಕದ ಜೊತೆಯಲ್ಲಿ ಕ್ಲೋರೀನನ್ನು ಹಾಯಿಸಿದರೆ ರಾಸಾಯನಿಕ ಪರಿವರ್ತನೆಯುಂಟಾಗಿ ಸಲ್ಫರ್‌ಕ್ಲೋರೈಡ್ ($S_2Cl_2$) ಮತ್ತು ಇಂಗಾಲದ ಟೆಟ್ರಕ್ಲೋರೈಡ್ ದ್ರವಗಳ ಮಿಶ್ರಣ ಉತ್ಪತ್ತಿಯಾಗುತ್ತದೆ.

$$3Cl_2+CS_2 \rightarrow CCl_4+S_2Cl_2$$

ಈ ರಾಸಾಯನಿಕ ಬದಲಾವಣೆಯಲ್ಲಿ ಆ್ಯಂಟಿಮೊನಿ ಪೆಂಟಕ್ಲೋರೈಡನ್ನೂ ($SbCl_5$) ಕಬ್ಬಿಣದ ಚೂರುಗಳನ್ನೂ ವೇಗವರ್ಧಕಗಳಾಗಿ ಬಳಸಬಹುದು. ಮೇಲಿನ ಬದಲಾವಣೆಯಲ್ಲಿ ಉಂಟಾಗುವ ಮಿಶ್ರಣವನ್ನು ಭಿನ್ನಬಟ್ಟಿ ಇಳಿಸಿ ಇಂಗಾಲದ ಟೆಟ್ರಕ್ಲೋರೈಡನ್ನು ಬೇರ್ಪಡಿಸಬಹುದು. ಇದರ ಜೊತೆಯಲ್ಲಿ ಬೆರೆತಿರುವ ಕ್ಲೋರೀನನ್ನು ಕ್ಷಾರಕದ ಜೊತೆಯಲ್ಲಿ ಕುದಿಸಿ ತೆಗೆಯಬಹುದು. ಈ ವಿಧಾನದಲ್ಲಿ ಇಂಗಾಲದ ಟೆಟ್ರಕ್ಲೋರೈಡ್ ಶುದ್ಧವಾಗುತ್ತದೆ. ಮೀಥೇನ್ ಅನಿಲದ (ನ್ಯಾಚುರಲ್ ಗ್ಯಾಸ್) ಮೂಲಕ ಕ್ಲೋರೀನನ್ನು ಹಾಯಿಸುವುದರಿಂದಲೂ ಇಂಗಾಲದ ಟೆಟ್ರಕ್ಲೋರೈಡನ್ನು ಪಡೆಯಬಹುದು. ಈ ರಾಸಾಯನಿಕ ಕ್ರಿಯೆಯಲ್ಲಿ ಮೀಥೇನಿನಲ್ಲಿರುವ ಎಲ್ಲ ಹೈಡ್ರೊಜನ್ ಪರಮಾಣುಗಳನ್ನೂ ಕ್ಲೋರೀನ್ ಪರಮಾಣುಗಳು ಪಲ್ಲಟಿಸಿ ಇಂಗಾಲದ ಟೆಟ್ರಕ್ಲೋರೈಡ್ ಉತ್ಪತ್ತಿಗೆ ಕಾರಣವಾಗುತ್ತವೆ.

$$CH_4+4Cl_2 \rightarrow CCl_4+4HCl$$

ಲಕ್ಷಣಗಳು: ಇದು ನೀರಿನೊಡನೆ ಸೇರಿದಾಗ ಜಲವಿಶ್ಲೇಷಣ ಹೊಂದುವುದಿಲ್ಲ. ಇದು ಅದಹ್ಯವಸ್ತು. ಬೆಂಕಿಯನ್ನು ಆರಿಸುವ ಶಕ್ತಿ ಇದೆ. ಈ ಕಾರಣದಿಂದ ಬೆಂಕಿಯನ್ನು ಆರಿಸುವ ಸಲಕರಣೆಗಳಲ್ಲಿ ಇದನ್ನು ಉಪಯೋಗಿಸುತ್ತಾರೆ. ಅಯೊಡೀನ್, ಬ್ರೋಮೀನ್, ಅಂಟುಗಳು, ಎಣ್ಣೆ ಮತ್ತು ಮೇದಸ್ಸುಗಳು, ಕೆಲವು ಬಣ್ಣಗಳು ಮತ್ತು ಇತರ ಕೆಲವು ವಸ್ತುಗಳಿಗೆ ಇದು ಒಳ್ಳೆಯ ದ್ರಾವಕ. ಇದನ್ನು ಕಾರ್ಬಾಲಿಕ್ ಆಮ್ಲ ಮತ್ತು ಕ್ಷಾರಕಗಳ ಜೊತೆಯಲ್ಲಿ ಕುದಿಸಿದಾಗ ಔಷಧದಲ್ಲಿ ಬಳಸುವ ಸ್ಯಾಲಿಸಿಲಿಕ್ ಆಮ್ಲ ಉತ್ಪತ್ತಿಯಾಗುತ್ತದೆ. ಕಾರ್ಬನ್ ಟೆಟ್ರಕ್ಲೋರೈಡ್ ಅಧಿಕ ಉಷ್ಣತೆಗೆ ಕಾದನೀರಿನ ಹಬೆಯ ಸಹಾಯದಿಂದ ಜಲವಿಶ್ಲೇಷಣಹೊಂದಿ ಕಾರ್ಬೊನೈಲ್ ಕ್ಲೋರೈಡನ್ನು ಉತ್ಪತ್ತಿಮಾಡುತ್ತದೆ.

$$CCl_4+H_2O \rightarrow COCl_2+2HCl$$

ಇದನ್ನು ಸಾಮಾನ್ಯವಾಗಿ ಗ್ರೀಸ್ ತೆಗೆದು ರಂಜಕ ಮುಂತಾದ ಪದಾರ್ಥಗಳನ್ನು ಶುದ್ಧ ಮಾಡುವುದಕ್ಕೂ ಕ್ಲೋರೋಫಾರಂ ತಯಾರಿಕೆಗೂ ಕೊಕ್ಕೆ ಹುಳುಗಳನ್ನು ನಾಶಮಾಡುವುದಕ್ಕೆ ಔಷಧದಲ್ಲೂ ಬಳಸುವುದುಂಟು. (ಕೆ.ಎಸ್.ಎಲ್.)

ಕರುಳು ಹುಳುಬೇನೆಯಲ್ಲಿ (ಹೆಲ್ಮಿಂತಿಯಾಸಿಸ್), ಲಾಡಿಹುಳು (ಟೇಪ್‌ವರ್ಮ್), ಕೊಕ್ಕೆಹುಳು (ಹುಕ್‌ವರ್ಮ್) ಕರುಳಲ್ಲಿ ವಿಪರೀತ ಸೇರಿದ್ದಾಗ ಕೊಡುವ ಮದ್ದಾಗಿತ್ತು. ಇಷ್ಟು ಅಪಾಯಕರವಲ್ಲದ ಮದ್ದುಗಳು ಬಂದಾಗಿನಿಂದ ಇದರ ಬಳಕೆ ನಿಂತಿದೆ. ಸರಕ್ಕನೆ ಆರಿಹೋಗುವುದರಿಂದ, ಉಸಿರಲ್ಲಿ ಎಳೆದುಕೊಂಡರೆ ವಿಷಕರ. ಮೊದಲೆರಡು ದಿನಗಳು ಏನೂ ಗೊತ್ತಾಗದು. ಆಮೇಲೆ ಮೂಗು, ಗಂಟಲು, ಕಣ್ಣುಗಳು ಕೆರಳಿ ಉರಿಯುತ್ತವೆ. ತಲೆನೋವು, ತಲೆತಿರುಗು, ಓಕರಿಕೆ, ಹೊಟ್ಟೆಶೂಲೆ, ಹಸಿವುನಾಶ, ನಿತ್ರಾಣಗಳು ಕಾಣುತ್ತವೆ. ಹೆಚ್ಚು ದಿನಗಳು ವಿಷವೇರುತ್ತಿದ್ದರೆ ಮೂತ್ರಪಿಂಡವೋ ಈಲಿಯೋ ಕೆಡುವುದುಂಟು.

(ಡಿ.ಎಸ್.ಎಸ್)

**ಇಂಗಾಲ ಚಕ್ರ (ಭೌತ ವಿಜ್ಞಾನದಲ್ಲಿ):** ಕೆಲವು ನಕ್ಷತ್ರಗಳಲ್ಲಿ ದ್ರವ್ಯರಾಶಿ (ಮಾಸ್) ಅಗಾಧಶಕ್ತಿಯಾಗಿ ಪರಿವರ್ತನೆಗೊಂಡು ವಿಸರಣವಾಗುವ ಉಷ್ಣಬೀಜ ಕ್ರಿಯಾಸರಣಿಗಳು (ಸೀರೀಸ್ ಆಫ್ ಥರ್ಮೋನ್ಯೂಕ್ಲಿಯರ್ ರಿಆ್ಯಕ್ಷನ್ಸ್) (ಕಾರ್ಬನ್ ಸೈಕಲ್). ಸೂರ್ಯನಂಥ ಸಾಧಾರಣ ದರ್ಜೆಯ ನಕ್ಷತ್ರದಿಂದ ಹೊರಸೂಸುತ್ತಿರುವ ಶಕ್ತಿಯ ಮೊತ್ತ ಸೆಕೆಂಡಿಗೆ $4\frac{1}{18}10^{23}$ ಅರ್ಗ್‌ಗಳು. ಇಂಥ ಅಗಾಧಶಕ್ತಿಯ ಉಗಮ ರಾಸಾಯನಿಕ ಕ್ರಿಯೆಗಳಿಂದ (ಎಂದರೆ, ಇಂಧನ+ಆಕ್ಸಿಜನ್→ದಹನ ಎಂಬ ಸೂತ್ರದಿಂದ) ಸಾಧ್ಯವಿಲ್ಲ ಎಂದು ಸುಲಭ ಗಣನೆಗಳಿಂದ ತಿಳಿಯಿತು. ಉದಾಹರಣೆಗೆ ಸೂರ್ಯ ರಾಸಾಯನಿಕವಾಗಿ ದಹಿಸಿ ಶಕ್ತಿ ವಿಸರಿಸುತ್ತಿರುವ ಒಂದು ಇಂಗಾಲಗೋಳ ಎಂದು ಭಾವಿಸಬಹುದು. ಇಂದು ಸೂರ್ಯನಿಂದ ಶಕ್ತಿ ವಿಸರಣೆಯಾಗುತ್ತಿರುವ ಪ್ರಮಾಣದಲ್ಲಿ ಇಂಥ ಇಂಗಾಲಸೂರ್ಯ ಎಂದೋ ನಿರ್ನಾಮವಾಗಿ ಹೋಗಬೇಕಾಗಿತ್ತು. ಆದ್ದರಿಂದ ಸೌರಶಕ್ತಿಯ ರಹಸ್ಯ ಉಷ್ಣಬೀಜಕ್ರಿಯೆಗಳಲ್ಲಿ ಇದೆಯೆಂದು ಭಾವಿಸಿ ಅವುಗಳ ಸೂತ್ರವನ್ನರಸಲಾಯಿತು. ಈ ಕ್ರಿಯೆಗಳಿಂದ ದೊರೆಯುವ ಶಕ್ತಿ ಸೂರ್ಯನ ದ್ರವ್ಯರಾಶಿಯನ್ನು ಅವಲಂಬಿಸಿ $10^{11}$ ವರ್ಷಗಳ ಕಾಲ ವಿಸರಣೆಯಾಗುವುದು ಎಂದು ಗಣನೆಗಳು ತಿಳಿಸಿದುವು. ಮೇಲ್ಮೈ ಉಷ್ಣತೆ $6000^0$ K, ಗರ್ಭದ ಅಂದಾಜು ಉಷ್ಣತೆ $2\frac{1}{18}10^{7}\ {}^0$K ಇರುವ ಸೂರ್ಯನಂಥ ಸಾಧಾರಣ ನಕ್ಷತ್ರದ ಶಕ್ತಿ ರಹಸ್ಯ ಪರಮಾಣುವಿದಳನದಿಂದಲ್ಲ, ಪರಮಾಣು ಸಮ್ಮಿಲನದಿಂದ ಎಂದು ತಿಳಿಯಿತು. ಸೂರ್ಯನಲ್ಲಿ ಸರಿಸುಮಾರು ಸಮಾನ ಪರಿಮಾಣಗಳಲ್ಲಿ ಹೈಡ್ರೊಜನ್ ಮತ್ತು ಹೀಲಿಯಂ ಅನಿಲಗಳಿವೆ; ದ್ರವ್ಯ ರಾಶಿಯ 90% ಇವುಗಳ ಮಿಶ್ರಣವಿದೆ. ಅಲ್ಲಿ 4 ಪ್ರೋಟಾನ್‌ಗಳ ಸಂಯೋಜನೆಯಿಂದ 1 ಹೀಲಿಯಂ ಬೀಜಕಣವೂ ಶಕ್ತಿಯೂ ಉತ್ಪನ್ನವಾಗುತ್ತವೆ.

| | |
|---|---|
| 4 ಪ್ರೋಟಾನ್‌ಗಳ ತೂಕ | 4.03258 AMU |
| 1 ಹೀಲಿಯಂ ಬೀಜಕಣದ ತೂಕ | 4.00387 AMU |
| ತೂಕದಲ್ಲಿ ವ್ಯತ್ಯಾಸ | 0.02871 AMU |

1 AMU ನಿಂದ 931 Mev ಶಕ್ತಿ ಉತ್ಪನ್ನವಾಗುವುದು. ಆದ್ದರಿಂದ ಸೂರ್ಯನಲ್ಲಿ 4 ಪ್ರೋಟಾನ್‌ಗಳು 1 ಹೀಲಿಯಂ ಆಗಿ ಪರಿವರ್ತನೆಯಾಗುವಾಗ ಜನಿಸುವ ಶಕ್ತಿಯ ಬೆಲೆ $0.02871\frac{1}{18}931 = 26.7$ Mev= $42.7\frac{1}{18}10^{-6}$ ಅರ್ಗ್. ಎಂದರೆ ಒಂದೊಂದು ಪ್ರೋಟಾನ್ ಕಣವೂ ಪರಿವರ್ತನೆಗೊಳ್ಳುವಾಗ ಹೊರಸೂಸುವ ಶಕ್ತಿ $42.74 \div 4\frac{1}{18}10^{-6}$ ಅರ್ಗ್

$\gamma$

ಅಥವಾ ಸರಿಸುಮಾರಾಗಿ $10^{-5}$ ಅರ್ಗ್. ಸೂರ್ಯನ ಮೇಲ್ಮೈ ವಲಯದ ಒಂದು ಗ್ರಾಂ ತೂಕದ ವಸ್ತುವಿನಲ್ಲಿ $2\frac{1}{18}10^{23}$ ಪ್ರೋಟಾನುಗಳಿವೆ. ಆದ್ದರಿಂದ ಪ್ರತಿ ಗ್ರಾಂನಿಂದಲೂ ಲಭಿಸಬಹುದಾದ ಶಕ್ತಿ $2\frac{1}{18}10^{18}$ ಅರ್ಗ್‌ಗಳು/ಗ್ರಾಂ. ಸೂರ್ಯನಿಂದ ಬರುತ್ತಿರುವ ಶಕ್ತಿಗೆ ಈ ಬೆಲೆ ಸುಮಾರಾಗಿ ಹೊಂದುತ್ತದೆ. ಸೂರ್ಯನ ಪ್ರಸಕ್ತ ಸ್ಥಿತಿಯಲ್ಲಿ 4 ಪ್ರೋಟಾನ್ ಕಣಗಳು ಏಕಕಾಲದಲ್ಲಿ ಒಂದೇ ಹಂತದಲ್ಲಿ ಪರಿವರ್ತನಗೊಂಡು 1 ಹೀಲಿಯಂ ಕಣವನ್ನೂ ಶಕ್ತಿಯನ್ನೂ ನೀಡುವ ಸಾಧ್ಯತೆ ಅತ್ಯಲ್ಪ. ಇದರ ಬದಲು ಈ ಕ್ರಿಯೆ ಹಂತ ಹಂತವಾಗಿ ನೆರವೇರುವುದು; ಅಥವಾ ಈ ಪರಿಣಾಮವನ್ನುಂಟುಮಾಡುವ ಪರಿವರ್ತನೆಗಳ ಒಂದು ಚಕ್ರವೇ ಇದೆ ಎಂದು ಭಾವಿಸಬಹುದು. ಇಂಥ ಪರಿವರ್ತನಕ್ರಿಯೆಗಳ ವೇಗ ಪ್ರೋಟಾನುಗಳ ಸಂಖ್ಯೆ ಮತ್ತು ಉಷ್ಣತೆಗಳನ್ನು ಅವಲಂಬಿಸಿದೆ. ಉಷ್ಣತೆ ಹೆಚ್ಚಾದಷ್ಟೂ ಈ ಕಣಗಳ ವೇಗ ಮತ್ತು ಘರ್ಷಣ ಸಂಖ್ಯೆ ಹೆಚ್ಚಾಗಿಯೂ ಶಕ್ತಿಯುತವಾಗಿಯೂ ಆಗುತ್ತವೆ. ಈ ರೀತಿಯ ಪರಿವರ್ತನೆಯ ಹೆಸರು ಉಷ್ಣಬೀಜಕ್ರಿಯೆ.

ಪ್ರೋಟಾನುಗಳು ಪರಸ್ಪರ ಸಮ್ಮಿಳನವಾಗಲು ಸಾಕಷ್ಟು ಹತ್ತಿರ ಬರುವಷ್ಟು ಶಕ್ತಿಯನ್ನು ಹೊಂದಿರಬೇಕು. ಸಮೀಪವಾದಷ್ಟೂ ಅವುಗಳಲ್ಲಿ ಪರಸ್ಪರ ದೂರ ನೂಕುವ ಶಕ್ತಿ ಏರುತ್ತದೆ. ಅವೆರಡೂ ಒಂದೇ ರೀತಿಯ ವಿದ್ಯುತ್ತನ್ನು (ಎಂದರೆ ಪಾಸಿಟಿವ್ ಚಾರ್ಜ್) ಹೊಂದಿರುವುದೇ ಇದರ ಕಾರಣ. ದೂರ ನೂಕುವ ಶಕ್ತಿಯನ್ನು ಉತ್ಕ್ರಮಿಸಿ ಸಮ್ಮಿಲನಗೊಳ್ಳಲು ಒಂದೇ ಮಾರ್ಗ–ಪ್ರೋಟಾನುಗಳ ಅತಿ ವೇಗದ ಚಲನೆ. ನಕ್ಷತ್ರಗರ್ಭದ ಅತ್ಯುಷ್ಣತೆಯಿಂದ ಅನಿಲರೂಪದಲ್ಲಿರುವ ಕಣಗಳು ಇಂಥ ವೇಗ ಪಡೆದಿವೆ. ಇದಕ್ಕೆ ಇರಬೇಕಾದ ಉಷ್ಣತೆಯ ಪ್ರಮಾಣ $10^{7}\ {}^{0}$K. ಇಷ್ಟು ಗರಿಷ್ಠಮಟ್ಟದ ಉಷ್ಣತೆಯಲ್ಲಿ ನಕ್ಷತ್ರದ ಧಾತುಗಳೆಲ್ಲವೂ ಅಯಾನ್‌ರೂಪ ತಳೆದಿರುತ್ತವೆ. ಧನ ಮತ್ತು ಋಣ ವಿದ್ಯುತ್ಕಣಗಳಿಂದ ಕೂಡಿದ ನಕ್ಷತ್ರದ ಈ ರೂಪದ ಹೆಸರು ಪ್ಲಾಸ್ಮಾ.

ಹೀಗೆ ಪ್ಲಾಸ್ಮಾರೂಪದಲ್ಲಿರುವ ಒಂದು ನಕ್ಷತ್ರದಲ್ಲಿ ಪ್ರೋಟಾನುಗಳು ಹೀಲಿಯಂ ಆಗಿ ಪರಿವರ್ತನಹೊಂದಲು ಪ್ರೇರಕಧಾತು ಇಂಗಾಲ ಆಗಿರಬಹುದೆಂಬ ಸಲಹೆಯನ್ನು ಬೇಥೆ ಎಂಬ ವಿಜ್ಞಾನಿ ಮಾಡಿದ (1929). ಈ ಸಲಹೆಯ ಪ್ರಕಾರ ಸಮಗ್ರ ಚಕ್ರಕ್ರಿಯೆಯಲ್ಲಿ ಇಂಗಾಲ ಹಂತಹಂತವಾಗಿ ಭಾಗವಹಿಸಿ ಪ್ರೋಟಾನುಗಳನ್ನು ಹೀಲಿಯಂ ಆಗಿ ಪರಿವರ್ತಿಸುತ್ತದೆ. ಕೊನೆಯಲ್ಲಿ ಇಂಗಾಲ ಪ್ರತ್ಯೇಕವಾಗಿ ಉಳಿಯುತ್ತದೆ. ಇದೇ ಇಂಗಾಲ ಚಕ್ರ. ಚಕ್ರದ ಉಪೋತ್ಪನ್ನವಾಗಿ ಶಕ್ತಿ ವಿಸರಣಗೊಳ್ಳುವುದು.

$${}_6C^{12} + {}_1H^1 \rightarrow {}_7N^{13} + \gamma$$

$${}_7N^{13} \rightarrow {}_6C^{13} + \beta^+ + \gamma$$

$${}_6C^{13} + {}_1H^1 \rightarrow {}_7N^{14} + \gamma$$

$${}_7N^{14} + {}_1H^1 \rightarrow {}_8O^{15} + \gamma$$

$${}_8O^{15} \rightarrow {}_7N^{15} + \beta^+ + \gamma$$

$${}_7N^{15} + {}_1H^1 \rightarrow {}_6C^{12} + {}_2He^4$$

ಈ ಸಮೀಕರಣದ ಮೊದಲನೆಯ ಹಂತದಲ್ಲಿ ಇಂಗಾಲದ ಬೀಜಕಣ ಪ್ರೋಟಾನಿನ ಸಮ್ಮಿಲನದಿಂದ ನೈಟ್ರೋಜನ್ನಿನ ಸಮಸ್ಥಾನಿ ಬೀಜಕಣವಾಗಿ ಮಾರ್ಪಟ್ಟು ಸ್ವಲ್ಪ ಶಕ್ತಿಯನ್ನು $\gamma$ ಕಿರಣದ ಮೂಲಕ ಹೊರಚಿಮ್ಮುವುದು.




ಇಂಗಾಲ ಚಕ್ರ

ಈ ಬೀಜಕಣ ಇಂಗಾಲದ ಸಮಸ್ಥಾನಿ ಬೀಜಕಣವಾಗಿ ವ್ಯತ್ಯಾಸವಾಗಿ ಜೊತೆಗೆ ಒಂದು ಪಾಸಿಟ್ರಾನನ್ನೂ ನ್ಯೂಟ್ರಿನೋ ಎಂಬ ಅತಿಸೂಕ್ಷ್ಮವಾದ ಕಣವನ್ನೂ ಹೊರದೂಡುತ್ತದೆ. ಇಂಗಾಲದ ಬೀಜಕಣ ಇನ್ನೊಂದು ಪ್ರೋಟಾನಿನ ಜೊತೆಕೂಡಿ ನೈಟ್ರೋಜನ್ನಿನ ಬೀಜಕಣವಾಗುವುದು ಮತ್ತು ಕಿರಣದ ರೂಪದಲ್ಲಿ ಸ್ವಲ್ಪಶಕ್ತಿಯನ್ನು ಹೊರಕ್ಕೆ ಬಿಡುವುದು. ನಾಲ್ಕನೆಯ ಹಂತದಲ್ಲಿ ನೈಟ್ರೋಜನ್ನಿನ ಕಣ ಮೂರನೇ ಪ್ರೋಟಾನಿನ ಸಂಯೋಗದಿಂದ ಆಕ್ಸಿಜನ್ನಿನ ಬೀಜಕಣವಾಗಿ $\gamma$ ಕಿರಣದ ರೂಪದಲ್ಲಿ ಶಕ್ತಿಯನ್ನು ಹೊರಚಲ್ಲುವುದು. ಆಕ್ಸಿಜನ್ನಿನ ಬೀಜಕಣ ಸ್ಥಿರವಲ್ಲದ ಕಾರಣ ತತ್‌ಕ್ಷಣವೇ ನೈಟ್ರೋಜನ್ನಿನ ಬೀಜಕಣ ಒಂದು ಪಾಸಿಟ್ರಾನ್ ಮತ್ತು ಒಂದು ನ್ಯೂಟ್ರಿನೋ ಕಣಗಳಾಗಿ ಮಾರ್ಪಾಡಾಗುವುದು. ಕೊನೆಯ ಹಂತದಲ್ಲಿ ನೈಟ್ರೋಜನ್ನಿನ ಕಣ ಇನ್ನೊಂದು ಪ್ರೋಟಾನಿನೊಡನೆ ಸೇರಿ ಇಂಗಾಲದ ಬೀಜಕಣ ಮತ್ತು ಹೀಲಿಯಂ ಬೀಜಕಣವಾಗುತ್ತದೆ. ಈ ರೀತಿ 4 ಪ್ರೋಟಾನುಗಳು ಒಟ್ಟುಗೂಡಿ 1 ಹೀಲಿಯಂ ಬೀಜಕಣವಾಗಲು ಇಂಗಾಲದ ಕಣ ಪ್ರೇರಕಧಾತು. ಪ್ರಥಮದಲ್ಲಿ ಇದ್ದ ಇಂಗಾಲದ ಕಣ ಕ್ರಿಯೆ ಪೂರ್ಣವಾದ ಮೇಲೆ ಪುನಃ ಇಂಗಾಲದ ಕಣವಾಗಿ ಪರಿವರ್ತನೆಗೊಳ್ಳುವುದರಿಂದ ಇದಕ್ಕೆ ಇಂಗಾಲದ ಚಕ್ರವೆಂಬ ಹೆಸರು ಬಂದಿದೆ.

ಕೆಲವು ವರ್ಷಗಳವರೆಗೆ ಈ ರೀತಿಯ ಇಂಗಾಲಚಕ್ರದ ಮೂಲಕವೇ ಸೂರ್ಯನಿಂದ ಶಕ್ತಿ ಹೊರಚಿಮ್ಮುತ್ತದೆಂದು ವಿಜ್ಞಾನಿಗಳು ತಿಳಿದಿದ್ದರು. ಆದರೆ ಈ ಚಿತ್ರ ಮೇಲ್ಕಂಡ ರೀತಿಯಲ್ಲಿ ಸತತವಾಗಿ ನಡೆಯಲು ಬೇಕಾದ ಉಷ್ಣತೆ ಸೂರ್ಯನ ಉಷ್ಣತೆಗಿಂತ ಹೆಚ್ಚಾಗಿರಬೇಕೆಂದು ಅಂದಾಜು ಮಾಡಿದೆ. ಇಂಗಾಲ ಚಕ್ರದ ಬದಲಾಗಿ ಪ್ರೋಟಾನ್–ಪ್ರೋಟಾನ್ ಚಕ್ರವೆಂಬ ಬೇರೆ ರೀತಿಯ ಕ್ರಿಯೆಗಳು ಸೂರ್ಯನ ಉಷ್ಣತೆಯಲ್ಲಿ ಆಗಬಹುದೆಂದು ಕಂಡುಹಿಡಿಯಲಾಗಿದೆ. ಈ ಚಕ್ರ ಕೆಳಗೆ ತಿಳಿಸಿರುವ ರೀತಿಯಲ್ಲಿ ಇದೆ.

**(ನೋಡಿ– ನಕ್ಷತ್ರ–ಶಕ್ತಿ:ಸೂರ್ಯ)** **(ಎ.ಪಿ.)**

**ಇಂಗಾಲ ಚಕ್ರ (ರಸಾಯನ ವಿಜ್ಞಾನದಲ್ಲಿ):** ಗಾಳಿಯಿಂದ ನಿರ್ಗಮಿಸಿದ ಇಂಗಾಲ ಪುನಃ ಗಾಳಿಗೆ ಮರಳುವ ರಾಸಾಯನಿಕ ಹಂತಗಳು (ಕಾರ್ಬನ್ ಸೈಕಲ್). ಭೂಮಿಯ ಸುತ್ತ ಇರುವ ವಾಯುಮಂಡಲದಲ್ಲಿ ಇಂಗಾಲಾಮ್ಲ 0.03%ರಷ್ಟು ಸ್ಥಿರಪ್ರಮಾಣದಲ್ಲಿದೆ. ಇದು ಪ್ರಾಣಿ ಮತ್ತು ಸಸ್ಯಗಳ ಜೀವನಕ್ಕೆ ಬಹಳ ಮುಖ್ಯವಾದುದು. ಸಸ್ಯಗಳು ಗಾಳಿಯಿಂದ ಈ ಇಂಗಾಲಾಮ್ಲವನ್ನು ಪಡೆದು ಸೂರ್ಯನ ಬೆಳಕಿನ ಶಕ್ತಿಯಿಂದ ಕೆಲವು ಕಿಣ್ವಗಳ ಮೂಲಕ

ಬೇಕಾದ ಶರ್ಕರ ಪದಾರ್ಥಗಳನ್ನು ಸೃಷ್ಟಿಸಿಕೊಳ್ಳುತ್ತವೆ. ಸಸ್ಯಗಳಲ್ಲಿರುವ ಪಿಷ್ಟ, ಸಕ್ಕರೆ ಮುಂತಾದುವು ಗಾಳಿಯ ಇಂಗಾಲಾಮ್ಲದಿಂದಲೇ ಬಂದವು. ಸಸ್ಯಗಳನ್ನು ಆಹಾರವಾಗಿ ಉಪಯೋಗಿಸುವ ಪ್ರಾಣಿಗಳು ಈ ಶರ್ಕರ ಪದಾರ್ಥಗಳನ್ನು ಅರಗಿಸಿಕೊಳ್ಳುತ್ತವೆ. ದೇಹದಲ್ಲಿ, ಅದರ ಚಟುವಟಿಕೆಗಳಿಗೆ ಬೇಕಾದ ಶಕ್ತಿ ಈ ಶರ್ಕರ ಪದಾರ್ಥಗಳ ಉತ್ಕರ್ಷಣದಿಂದ ಉತ್ಪತ್ತಿಯಾಗುತ್ತದೆ:

$$C_6H_{12}O_6+6O_2 \rightarrow 6CO_2+6H_2O+E$$

ಹೀಗೆ ಬಂದ ಇಂಗಾಲಾಮ್ಲ ಶ್ವಾಸಕೋಶಗಳ ಮೂಲಕ ನಿಶ್ವಾಸದಲ್ಲಿ ದೇಹದಿಂದ ಹೊರಬರುತ್ತದೆ. ಗಾಳಿಯಿಂದ ಮೊದಲು ಹೊರಟ ಇಂಗಾಲ ಪುನಃ ಗಾಳಿಗೇ ಈ ಪ್ರಕಾರ ಸೇರುತ್ತದೆ. ಇದೇ ಇಂಗಾಲ ಚಕ್ರ. (ವೈ.ಎಸ್.ಎಲ್.)

**ಇಂಗಾಲ ಚಕ್ರ (ಪ್ರಾಣಿ ವಿಜ್ಞಾನದಲ್ಲಿ):** ವಾಯುಮಂಡಲದಲ್ಲಿರುವ ಇಂಗಾಲದ ಡೈಆಕ್ಸೈಡ್ ಸಸ್ಯಗಳನ್ನು ಸೇರಿ ದ್ಯುತಿಸಂಶ್ಲೇಷಣೆಯಿಂದ ಕಾರ್ಬೊಹೈಡ್ರೇಟುಗಳಾಗಿ ಪರಿವರ್ತನೆಗೊಂಡು ಮುಂದೆ ಪ್ರಾಣಿಗಳ ದೇಹಗಳನ್ನು ಪ್ರವೇಶಿಸಿ ಅಲ್ಲಿನ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ಕೊನೆಗೆ ವಾಯುಮಂಡಲವನ್ನು ಇಂಗಾಲದ ಡೈ ಆಕ್ಸೈಡ್ ರೂಪದಲ್ಲಿಯೇ ಸೇರುವ ಕ್ರಿಯಾ ಪರಂಪರೆ.

ಘನರೂಪದ ಇಂಗಾಲ ಜೀವಿಯ ದೇಹವನ್ನು ನೇರವಾಗಿ ಸೇರಲಾರದು. ಅದು ಆಕ್ಸಿಜನ್ನಿನೊಡನೆ ಸಂಯೋಜನೆ ಹೊಂದಿ ಇಂಗಾಲದ ಡೈ ಆಕ್ಸೈಡ್ ರೂಪ ತಾಳಿದರೆ ಮಾತ್ರ ಜೀವಜಗತ್ತಿನ ಒಂದು ಭಾಗವಾಗಿ ಜೀವದ್ರವ್ಯದ ನಿರ್ಮಾಣದಲ್ಲಿ ಪಾಲುಗೊಳ್ಳುವುದು ಸಾಧ್ಯ. ಜೀವಜಗತ್ತನ್ನು ಆವರಿಸಿರುವ ವಾಯುಮಂಡಲದಲ್ಲಿ ಈ ಅನಿಲದ ಉಗ್ರಾಣ ಹುದುಗಿದೆ. ವಾಯುವಿನಲ್ಲಿ ಇದರ ಅಂಶ ಸು. 0.04% ಮಾತ್ರ. ಇದು ಇಷ್ಟು ಅಲ್ಪ ಪ್ರಮಾಣದಲ್ಲಿ ಇದ್ದರೂ ಈ ಕೋಠಿಯಿಂದಲೇ ಎಲ್ಲ ಜೀವಿದ್ರವ್ಯಕ್ಕೆ ಬೇಕಾದ ಇಂಗಾಲದ ಪೂರೈಕೆ ಆಗುತ್ತದೆ. ಒಂದು ಎಕರೆ ಭೂಮಿಯ ಮೇಲೆ ಆರು ಟನ್ ಇಂಗಾಲ ವ್ಯಾಪಿಸಿರುವುದಾಗಿ ಅಂದಾಜು ಮಾಡಲಾಗಿದೆ. ಅಂದರೆ ಪ್ರತಿ ವರ್ಷವೂ ಒಂದು ಎಕರೆ ಭೂಪ್ರದೇಶದಲ್ಲಿ ಬೆಳೆಯುವ ಸಸ್ಯಗಳು, ಉದಾಹರಣೆಗೆ ಕಬ್ಬು, ಇಪ್ಪತ್ತು ಟನ್ ಇಂಗಾಲವನ್ನು ಸೆರೆಹಿಡಿದು ತಮ್ಮ ಕೋಶಜಾಲವನ್ನು ನಿರ್ಮಿಸಿಕೊಳ್ಳುವುವೆಂದು ಲೆಕ್ಕ ಹಾಕಲಾಗಿದೆ. ಇಂಗಾಲದ ಡೈ ಆಕ್ಸೈಡ್ ಕೇವಲ ವಾಯುವಿನಲ್ಲಿ ಸೀಮಿತವಾಗಿರದೆ, ಸ್ವಲ್ಪಭಾಗ ನೀರಿನಲ್ಲಿಯೂ ಲೀನವಾಗಿ ಕಾರ್ಬೊನಿಕ್ ಆಮ್ಲವಾಗುತ್ತದೆ. ಈ ಆಮ್ಲ ಅನತಿಕಾಲದಲ್ಲಿಯೇ ಕಾರ್ಬೊನೇಟು ($CO_3$=)ಮತ್ತು ಬೈಕಾರ್ಬೊನೇಟುಗಳಾಗಿ ($HCO_3$–) ಮಾರ್ಪಡುತ್ತದೆ.

ಜೀವಜಗತ್ತಿನಲ್ಲಿ ಹಸಿರು ಸಸ್ಯಗಳು ಮಾತ್ರ ವಾಯುಮಂಡಲದ ಇಂಗಾಲದ ಡೈ ಆಕ್ಸೈಡನ್ನು ಸೆರೆಹಿಡಿದು ತಮಗೆ ಬೇಕಾದ ಆಹಾರ ಸಾಮಗ್ರಿಯನ್ನು ಸಂಕ್ಷೇಪಿಸಿಕೊಳ್ಳುವ ಸಾಮರ್ಥ್ಯ ಪಡೆದಿವೆ. ಸಸ್ಯಗಳು ವಾಯುಮಂಡಲದಲ್ಲಿರುವ ಇಂಗಾಲದ ಡೈ ಆಕ್ಸೈಡನ್ನು ತಮ್ಮ ಪತ್ರರಂಧ್ರಗಳ ಮೂಲಕ ಹೀರಿ ತಮ್ಮ ಬೇರುಗಳಿಂದ ನೀರನ್ನು ಶೋಷಿಸಿಕೊಂಡು ಅಸಿದ್ಧವಸ್ತುಗಳನ್ನು ಹಸಿರಿಗೆ ಕಾರಣವಾದ ಹರಿತ್ತುಗಳಿಗೆ ಸಾಗಿಸಿ ಸೂರ್ಯಪ್ರಕಾಶದ ನೆರವಿನಿಂದ ಗ್ಲೂಕೋಸ್ ರೂಪದ ಸರಳ ಸಕ್ಕರೆಯಾಗಿ ಪರಿವರ್ತಿಸುತ್ತವೆ. ಇಂಥ ಸಿದ್ಧರೂಪದ ಪದಾರ್ಥದಲ್ಲಿ ಸೌರಶಕ್ತಿ ಸ್ಥಿತಿರೂಪದಲ್ಲಿ ಬಂಧನವಾಗಿರುತ್ತದೆ. ಈ ಬಗೆಯ ಆಹಾರ ನಿರ್ಮಾಣದ ಪ್ರತಿಕ್ರಿಯೆಗೆ ದ್ಯುತಿಸಂಶ್ಲೇಷಣೆ ಎಂದು ಹೆಸರು. ಇದರ ಫಲವಾಗಿ ಸರಳರೂಪದ ಕಾರ್ಬೊಹೈಡ್ರೇಟುಗಳು ಸಂಶ್ಲೇಷಣೆಗೊಳ್ಳುವುದಲ್ಲದೆ ಆಕ್ಸಿಜನ್ ಉತ್ಪತ್ತಿಯಾಗಿ ಸಸ್ಯದೇಹದಿಂದ ಹೊರಬಂದು ವಾಯುಮಂಡಲವನ್ನು ಸೇರುತ್ತದೆ.

ಹರಿತ್ತಿನಲ್ಲಿ

$$6CO_2+6HO_2+\text{ಸೌರಶಕ್ತಿ} \qquad C_6H_{12}O_6+6O_2$$

ಹೀಗೆ ಬಿಡುಗಡೆಯಾದ ಆಕ್ಸಿಜನ್ ಜೀವಿಗಳ ಉಸಿರಾಟಕ್ಕೂ ಮತ್ತು ಸೇಂದ್ರಿಯ ಪದಾರ್ಥಗಳ ದಹನಕ್ಕೂ ಅತ್ಯಾವಶ್ಯಕ. ಇತರ ಸಂಶ್ಲೇಷಣ ಕ್ರಿಯಾವಾಹಿನಿಯಲ್ಲಿ ಲವಣಾಂಶಗಳೂ ಕೂಡಿ ಶರ್ಕರಪದಾರ್ಥ, ಪಿಷ್ಟಪದಾರ್ಥ, ಸೆಲ್ಯುಲೋಸ್, ಎಣ್ಣೆ, ಮೇದಸ್ಸು, ಲಿಪಿಡ್, ಅಮೈನೊ ಆಮ್ಲ, ನೈಟ್ರೊಜನ್ ಮೊದಲಾದ ಸೇಂದ್ರಿಯ ವಸ್ತುಗಳು ಸಂಶ್ಲೇಷಣೆಗೊಳ್ಳುತ್ತವೆ. ಇವೆಲ್ಲ ವಸ್ತುಗಳು ತಮಗಾಗಿ ತಯಾರಿಸಿಕೊಂಡ ಪೌಷ್ಟಿಕ ಆಹಾರವಸ್ತುಗಳು. ಇವುಗಳ ನೆರವಿನಿಂದಲೇ ಸಸ್ಯಗಳು ತಮ್ಮ ಜೀವದ್ರವ್ಯವನ್ನು ಸಂರಕ್ಷಿಸಿಕೊಳ್ಳುತ್ತವೆ.

ಹಸಿರಿಲ್ಲದ ಸಸ್ಯ, ಪರತಂತ್ರ ಸಸ್ಯ ಹಾಗೂ ಪ್ರಾಣಿಗಳಿಗೆ ಆಹಾರ ಬೇಕು. ಆದರೆ ಅವು ತಮ್ಮ ದೇಹದಲ್ಲಿ ಅಸಿದ್ಧವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ತಯಾರಿಸಿಕೊಳ್ಳಲು ಬೇಕಾದ ಸಾಮರ್ಥ್ಯ, ರಚನೆಗಳನ್ನು ಪಡೆದಿರುವುದಿಲ್ಲ. ಆದ್ದರಿಂದಲೇ ಇವು ತಮ್ಮ ಆಹಾರಕ್ಕಾಗಿ ಹಸಿರು ಸಸ್ಯಗಳಮೇಲೆ ಪರಾವಲಂಬಿಗಳಾಗಿರುವುದು ಅನಿವಾರ್ಯವಾಗುತ್ತದೆ. ಪ್ರಾಣಿಗಳಲ್ಲಿ ಆಹಾರ ಸೇವನೆ ಹಲವು ಬಗೆ. ಹಸು, ಕುರಿ, ಮೇಕೆ, ಜಿಂಕೆಗಳು ಸಸ್ಯಹಾರಿಗಳು; ಸಸ್ಯವನ್ನೇ ತಿಂದು ಜೀವಿಸತಕ್ಕವು. ಮಾಂಸಾಹಾರಿ ಪ್ರಾಣಿಗಳು (ಹುಲಿ, ಚಿರತೆ, ಕಪ್ಪೆ) ನೇರವಾಗಿ ಅಲ್ಲವಿದ್ದರೂ ಪರೋಕ್ಷವಾಗಿ ಸಸ್ಯಗಳನ್ನು ತಿನ್ನುತ್ತವೆ. ಸಸ್ಯವನ್ನು ತಿಂದು ಜೀವಿಸುವ ಜಿಂಕೆಯನ್ನು ಹುಲಿ ತಿನ್ನುತ್ತದೆ. ಈ ಪರಭಕ್ಷಣ ಜೀವನದ ಸಂಬಂಧದಲ್ಲಿ ಆಹಾರ ಸರಪಣಿಯನ್ನು ಗುರುತಿಸಬಹುದು. ಪರಭಕ್ಷಣ ಜೀವನದ ಆಹಾರ ಸರಪಣಿಯಲ್ಲಿ (ಹುಲ್ಲು→ಜಿಂಕೆ→ಹುಲಿ) ಕೇವಲ ಮೂರು ಕೊಂಡಿಗಳಿರುವುದರ ಬದಲು ಹೆಚ್ಚಿನ ಕೊಂಡಿಗಳಿರಲೂಬಹುದು. ಉದಾಹರಣೆಗೆ, ಪಾಚಿ→ಮೀನು→ಕಪ್ಪೆ→ಬಾತು→ಮೊಸಳೆ. ಈ ಆಹಾರ ಸರಪಣಿಗಳು ಎಷ್ಟೇ ಹ್ರಸ್ವ ಇರಲಿ ಅಥವಾ ದೀರ್ಘ ಇರಲಿ ಇವು ಸದಾ ಆಹಾರೋತ್ಪಾದಕ ಸಸ್ಯಗಳಿಂದಲೇ ಪ್ರಾರಂಭವಾಗುತ್ತವೆ. ಸರಪಣಿಯ ಪ್ರತಿ ಹಂತದಲ್ಲೂ ಪರಭಕ್ಷಿಯ ದೇಹದಲ್ಲಿ ಆಹಾರ ರೂಪದ ಸೇಂದ್ರಿಯ ಪದಾರ್ಥಗಳು ಜೀರ್ಣವಾಗಿ ಅದರಿಂದ ಹೊಸ ಸಾವಯವ ಸಂಕೀರ್ಣ ವಸ್ತುಗಳು ಪುನರ್‌ಸಂಶ್ಲೇಷಣೆಗೊಳ್ಳುತ್ತವೆ. ಹೀಗೆ ಒಂದು ಜೀವಿಯ ದೇಹನಿರ್ಮಾಣದಲ್ಲಿ ಭಾಗಿಯಾಗಿದ್ದ ಇಂಗಾಲ ಆಹಾರ ಸರಪಣಿಯನ್ನು ಸರಿಸುತ್ತ ಪರಭಕ್ಷಿಯ ದೇಹ ನಿರ್ಮಾಣದಲ್ಲಿಯೂ ಪಾಲ್ಗೊಳ್ಳಬಹುದು.

ಪ್ರತಿಯೊಂದು ಜೀವಿಯಲ್ಲಿಯೂ ಪಚನ ಮತ್ತು ಶ್ವಸನ ಕ್ರಿಯಾ ಚಟುವಟಿಕೆಗಳ ನೆರವಿನಿಂದ ಸರಳರೂಪದ ಇಂಗಾಲಯುಕ್ತ ಆಹಾರ ಪದಾರ್ಥಗಳ ಉತ್ಕರ್ಷಣೆಯಾಗುತ್ತದೆ.

$$C_6H_{12}O_6+6O_2 \rightarrow 6CO_2+6H_2O+E$$

ಹಂತಹಂತವಾಗಿ ಸಾಗುವ ದಹನದಲ್ಲಿ ಇಂಗಾಲದ ಡೈ ಆಕ್ಸೈಡ್ ಮತ್ತು ನೀರಿನ ಅಣುಗಳು ರೂಪುಗೊಂಡು ಹೊರಬರುವುವಲ್ಲದೆ ಆಹಾರ ಪದಾರ್ಥದಲ್ಲಿ ಹುದುಗಿರುವ ಸ್ಥಿತಿರೂಪದ ಸೌರಶಕ್ತಿ ಗತಿಶಕ್ತಿಯಾಗಿ ಮಾರ್ಪಟ್ಟು ದೇಹದಲ್ಲಿ ಬಿಡುಗಡೆಯಾಗುತ್ತದೆ. ಈ ಶಕ್ತಿಯ ನೆರವಿನಿಂದ ಮಾತ್ರ ಜೀವಿಯ ಎಲ್ಲ ಚಟುವಟಿಕೆಗಳು ಜರುಗುವುದು ಸಾಧ್ಯ. ಹೀಗೆ ಜೀವಿಗಳ ಶ್ವಸನ ಕ್ರಿಯೆಯಿಂದ ಇಂಗಾಲದ ಡೈ ಆಕ್ಸೈಡ್ ಸದಾ ವಾಯುಮಂಡಲಕ್ಕೆ ಅಥವಾ ನೀರಿಗೆ ಹಿಂತಿರುಗುತ್ತಿರುತ್ತದೆ. ಇದಲ್ಲದೆ ಪ್ರಾಣಿಗಳು ಮೂತ್ರದ ಮೂಲಕ ಯೂರಿಯ ಮತ್ತು ಯೂರಿಕ್ ಆಮ್ಲಗಳನ್ನು ವಿಸರ್ಜನೆ ಮಾಡುತ್ತಿರುತ್ತವೆ. ಈ ವಿಸರ್ಜನವಸ್ತುಗಳು ಇಂಗಾಲಸಂಬಂಧವಾದುದರಿಂದ ಇವು ಕೊನೆಗೆ ನಿಸರ್ಗದಲ್ಲಿ ಇಂಗಾಲದ ಡೈ ಆಕ್ಸೈಡ್ ಮತ್ತು ಅಮೋನಿಯ ಆಗಿ ವಿಭಜನೆ ಹೊಂದಿ ಬೇರ್ಪಡುತ್ತವೆ.

ಆದರೆ ಹಸಿರು ಸಸ್ಯಗಳು ದ್ಯುತಿಸಂಶ್ಲೇಷಣೆಯಿಂದ ಸೆರೆಹಿಡಿದ ಇಂಗಾಲದ ಡೈ ಆಕ್ಸೈಡ್ ಪರಿಮಾಣವನ್ನು ಎಲ್ಲ ಜೀವರಾಶಿಗಳ ಪಚನ, ಶ್ವಸನ ಮತ್ತು ವಿಸರ್ಜನೆ ಚಟುವಟಿಕೆಗಳಿಂದ ವಾಯುಮಂಡಲಕ್ಕೆ ಹಿಂತಿರುಗಿದ ಇಂಗಾಲದ ಡೈ ಆಕ್ಸೈಡ್ ಪರಿಮಾಣ ಸರಿದೂಗಲಾರದು. ಇಂಗಾಲದ ಬಹುಭಾಗ ಸಜೀವಿಯ ದೇಹನಿರ್ಮಾಣದಲ್ಲಿ ಭಾಗವಹಿಸುವುದರಿಂದ ಆ ಜೀವಿ ಸತ್ತುಹೋದರೆ ಇಂಗಾಲ ಬಂಧನಸ್ಥಿತಿಯಲ್ಲಿ ಉಳಿದುಬಿಡುತ್ತದೆ. ಶಾಶ್ವತವಾಗಿ ಕ್ರಿಯಾಹಂತದಲ್ಲಿ ಮುಂದುವರಿಯದೆ ಇಂಗಾಲ ಸಂಗ್ರಹವಾಗಿ ನಿಂತುಬಿಟ್ಟರೆ ಜೀವಜಗತ್ತಿಗೆ ಅಂತ್ಯ ಖಂಡಿತ. ಆದರೆ ಕೊಳೆಸುವ ಬ್ಯಾಕ್ಟೀರಿಯ ಮತ್ತು ಶಿಲೀಂಧ್ರಗಳು ಸತ್ತ ಜೀವಿಯನ್ನು ಬೆಂಬತ್ತಿಯೇ ಇರುತ್ತವೆ. ಇವು ಸತ್ತ ಪ್ರಾಣಿ ಮತ್ತು ಸಸ್ಯಗಳ ದೇಹವನ್ನು ಕೊಳೆಯಿಸುವುದರಿಂದ ಮತ್ತು ಹುಳಿಗೊಳಿಸುವುದರಿಂದ ಸೇಂದ್ರಿಯ ಪದಾರ್ಥಗಳು ವಿಚ್ಛಿದ್ರಗೊಂಡು ಇಂಗಾಲದ ಡೈ ಆಕ್ಸೈಡ್ ಆಗಿ ಪರಿವರ್ತನೆ ಹೊಂದಿ ಪರಿಸರಕ್ಕೆ ಮತ್ತೆ ಹಿಂತಿರುಗುತ್ತವೆ. ತನ್ಮೂಲಕ ಇಂಗಾಲದ ಬಿಡುಗಡೆಯಾಗುತ್ತದೆ. ಇದಲ್ಲದೆ ಸೌದೆ ಮರಮುಟ್ಟುಗಳನ್ನು ಬೆಂಕಿಯಿಂದ ದಹಿಸುವಾಗಲೂ ಮರದ ಸೆಲ್ಯುಲೋಸ್ ಮತ್ತಿತರ ಸಾವಯವ ಪದಾರ್ಥಗಳಲ್ಲಿ ಹುದುಗಿರುವ ಇಂಗಾಲ ಮುಕ್ತಿ ಹೊಂದಿ ಇಂಗಾಲದ ಡೈ ಆಕ್ಸೈಡ್ ರೂಪದಲ್ಲಿ ಹೊರಬೀಳುತ್ತದೆ.

ಸತ್ತ ಜೀವಿಯ ದೇಹದ ಸ್ವಲ್ಪಭಾಗ ಭೂಪದರಲ್ಲಿ ಹುದುಗಿ ಹೋದ ಪಕ್ಷದಲ್ಲಿ ಅದು ಉಷ್ಣ, ಒತ್ತಡ ಮತ್ತಿತರ ಭೌತ ಚಟುವಟಿಕೆಗಳಿಂದ ಕಲ್ಲಿದ್ದಲು ಪೆಟ್ರೋಲಿಯಂ ಇತ್ಯಾದಿಯಾಗಿ ಪರಿವರ್ತನೆ ಹೊಂದಬಹುದು. ಈ ಪಳೆಯುಳಿಕೆ ಸೌದೆಯನ್ನು ಮನೆಮಠಗಳಲ್ಲಿ ಗಿರಣಿ ಕಾರ್ಖಾನೆಗಳಲ್ಲಿ ರೈಲು ಮೋಟಾರು ಮತ್ತು ವಿಮಾನಗಳ ಸಂಚಾರದಲ್ಲಿ ಉರಿಸುವುದರಿಂದ ಅದರಲ್ಲಿ ಅಡಗಿರುವ ಇಂಗಾಲದ ಬಿಡುಗಡೆಯಾಗುತ್ತದೆ. ಕೊನೆಯದಾಗಿ ಕೆಲವು ಬಗೆಯ ಜೀವಿಯ ಚಟುವಟಿಕೆಗಳಿಂದ (ಹವಳದ ಪ್ರಾಣಿಗಳು) ನಿರ್ಮಿತವಾದ ಕಾರ್ಬೊನೇಟ್ ಶಿಲೆಯ ದಿಬ್ಬಗಳು, ಅಮೃತಶಿಲೆಯ ಪದರಗಳು ಕ್ರಮವಾಗಿ ಆಮ್ಲೀಯ ಕ್ರಿಯೆಯಿಂದ ಮತ್ತು ಭೂ ಸವಕಳಿಯಿಂದ ಅದರಲ್ಲಿ ಅಡಗಿರುವ ಇಂಗಾಲ ಇಂಗಾಲದ ಡೈ ಆಕ್ಸೈಡಾಗಿ ಮಾರ್ಪಾಟು ಹೊಂದಿ ವಾಯುವನ್ನು ಸೇರುತ್ತವೆ. ಹೀಗೆ ವಿವಿಧ ಮಾರ್ಗಗಳಲ್ಲಿ ಬಿಡುಗಡೆಯಾದ ಇಂಗಾಲದ ಡೈಆಕ್ಸೈಡನ್ನು ಹಸಿರು ಸಸ್ಯಗಳು ಮರಳಿ ತಮ್ಮ ಆಹಾರಕ್ಕಾಗಿ ಸೆರೆಹಿಡಿಯುತ್ತವೆ. ಇಂಗಾಲದ ಚಕ್ರ ಮುಂದುವರಿಯುತ್ತ ಹೋಗುತ್ತದೆ. ಈ ಭೂಮಿಯ ಮೇಲೆ ಜೀವಿ ಉದ್ಭವಿಸಿ ಪ್ರಾರಂಭಿಸಿದ ಈ ಚಕ್ರ ಎಡೆಬಿಡದೆ ತಿರುಗುತ್ತ ಸಾಗುತ್ತಲಿದೆ. (ಬಿ.ಎನ್.ಬಿ.)

**ಇಂಗಾಲದ ಮಾನಾಕ್ಸೈಡ್ ವಿಷವೇರಿಕೆ:** ಇಂಗಾಲದ ಮಾನಾಕ್ಸೈಡ್ ($CO$) ಮಿಶ್ರಿತವಾದ ಗಾಳಿಯನ್ನು ಸ್ವಲ್ಪಕಾಲ ಎಡೆಬಿಡದೆ ಉಸಿರಾಡಿದರೆ ತಲೆದೋರುವ ಪರಿಣಾಮ (ಕಾರ್ಬನ್ ಮಾನಾಕ್ಸೈಡ್ ಪಾಯ್‌ಸನಿಂಗ್). ಈ ಅನಿಲಕ್ಕೆ ವಾಸನೆ ಬಣ್ಣ ಯಾವುದೂ ಇಲ್ಲ. ಆದ್ದರಿಂದ ಉಸಿರಾಟದ ಗಾಳಿಯಲ್ಲಿ ಇಂಗಾಲದ ಮಾನಾಕ್ಸೈಡ್ ಇದ್ದರೆ ಅದನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಹೀಗೆ ತಿಳಿಯದೆ ಸೇವಿಸಿದ ಈ ಅನಿಲದ ಪರಿಣಾಮ ಘೋರವಾಗಿರುವುದು. ರಕ್ತದ ಬಣ್ಣಕ್ಕೆ ಕಾರಣವಾದ ರಕ್ತಬಣ್ಣಕದೊಡನೆ (ಹೀಮೋಗ್ಲಾಬಿನ್) ಇದು ಬಲು ಸುಲಭವಾಗಿ ಕೂಡಿ ವಿಷವಾಗಿ ಪರಿಣಮಿಸುತ್ತದೆ. ಹಾಗೆ ಸಂಯೋಗವಾಗಿ ಬರುವ ಕಾರ್ಬಾಕ್ಸಿಹೀಮೋಗ್ಲಾಬಿನ್ ರಕ್ತಬಣ್ಣಕದಂತೆ ಆಕ್ಸಿಜನ್ನನ್ನು ಹೀರಿಕೊಳ್ಳದ್ದರಿಂದ ತಕ್ಕಷ್ಟು ಆಕ್ಸಿಜನ್ ಮೈಗೆ ಒದಗುವುದಿಲ್ಲ. ಮೈಯಲ್ಲಿಯೇ ಉಳಿದಿರುವ ರಕ್ತಬಣ್ಣಕ

ಇಂಗಾಲಾಮ್ಲದ ಸಂಗದಲ್ಲಿದ್ದಾಗ ತನ್ನಲ್ಲಿರುವ ಆಕ್ಸಿಜನ್ನನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಗ್ರೀಕರೂ ರೋಮನ್ನರೂ ಕೈದಿಗಳನ್ನು ಮರಣದಂಡನೆಗೆ ಗುರಿಪಡಿಸಿದಾಗ ಇಂಗಾಲದ ಮಾನಾಕ್ಸೈಡನ್ನು ವಿಷವಾಗಿ ಬಳಸುತ್ತಿದ್ದರಂತೆ. ಇದರ ವಿಷವೇರಿಕೆ ಮುಖ್ಯವಾಗಿ ಆಕಸ್ಮಿಕವಾಗಿ ಆಗುತ್ತದೆ. ಅನೇಕವೇಳೆ ಆತ್ಮಹತ್ಯೆಗಳಲ್ಲೂ ಅಪರೂಪವಾಗಿ ಕೊಲೆಗಳಲ್ಲೂ ಕಂಡುಬರುತ್ತದೆ.

ಇಂಗಾಲದ ಮಾನಾಕ್ಸೈಡ್ ಕಬ್ಬಿಣ ಕಾರ್ಖಾನೆಗಳಿಂದ ಹೊರಡುವ ಅನಿಲದಲ್ಲೂ ಸಿಡಿಮದ್ದುಗಳು ಸಿಡಿದಾಗಲೂ ಬೆಂಕಿ ಬಿದ್ದೆಡೆಗಳಲ್ಲೂ ಕಾಣಬರುವುದು. ಈ ಅನಿಲ ಇರುವುದೇ ಗೊತ್ತಾಗದೆ ವಿಷವೇರಿಕೆ ಆಕಸ್ಮಿಕವಾಗಿ ಆಗಬಹುದು. ಅನೇಕ ದೇಶಗಳಲ್ಲಿ ದೀಪಕ್ಕೂ ಒಲೆಗೂ ಬಳಸುವ ಕಲ್ಲಿದ್ದಲಿನ ಅನಿಲದಲ್ಲಿ ಸುಮಾರು 6%–12% ಇಂಗಾಲ ಮಾನಾಕ್ಸೈಡು ಇರುತ್ತದೆ. ಗಾಳಿಯಾಡದ ಕೋಣೆಗಳಲ್ಲಿ ಇದ್ದಲಿನ ಅಗ್ಗಿಷ್ಟಿಕೆಯನ್ನು ಬಹಳ ಹೊತ್ತು ಉರಿಸುತ್ತಿದ್ದರೆ ಇಂಗಾಲದ ಮಾನಾಕ್ಸೈಡ್ ತಯಾರಾಗಿ ಕೋಣೆ ತುಂಬ ಬಹಳಷ್ಟು ತುಂಬುತ್ತದೆ. ಕೋಣೆಯ ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಂಡು ಕಲ್ಲಿದ್ದಲಿನ ಅನಿಲವನ್ನು ಹೊರಬಿಟ್ಟುಕೊಂಡು ಪ್ರಾಣ ಕಳೆದುಕೊಳ್ಳುವುದು ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಸಾಮಾನ್ಯ. ಚಳಿಗಾಲದಲ್ಲಿ ಬೆಚ್ಚಗಿರಲು ಕೊಠಡಿಯ ಕಿಟಕಿ ಬಾಗಿಲುಗಳನ್ನು ಮುಚ್ಚಿ ಬೆಂಕಿ ಹೊತ್ತಿಸಿ ಉರಿಯಬಿಡುವುದು ನಮ್ಮಲ್ಲೂ ಇರುವ ಒಂದು ಅಪಾಯಕರ ವಾಡಿಕೆ. ಆಗ ಬೆಂಕಿ ಉರಿಯಿಂದಾಗುವ ಇಂಗಾಲ ಮಾನಾಕ್ಸೈಡನ್ನು ಮಲಗಿದ್ದವರು ಗೊತ್ತಾಗದೆಯೇ ಇಡೀ ರಾತ್ರಿ ಸೇವಿಸಿ ಸತ್ತಿದ್ದಾರೆ. ಮೋಟಾರು ವಾಹನಗಳು, ವಿಮಾನ ಮುಂತಾದ ಅಂತರ್ದಹನ (ಇಂಟರ್ನಲ್–ಕಂಬಶ್ಚನ್) ಯಂತ್ರಗಳು ಕೆಲಸ ಮಾಡುವಾಗ ಉಚ್ಚಾಟಿಸಿದ ಅನಿಲದಲ್ಲಂತೂ (ಎಕ್ಸಾಸ್ಟ್ ಗ್ಯಾಸ್) ಇಂಗಾಲದ ಮಾನಾಕ್ಸೈಡ್ ಹೆಚ್ಚಾಗಿ ಇದ್ದೇ ಇರುತ್ತದೆ. 20 ಅಶ್ವಸಾಮರ್ಥ್ಯದ ಒಂದು ಮೋಟಾರು ಕಾರನ್ನು ಅದು ಇರುವ ಕೋಣೆಯಲ್ಲೇ ಐದೇ ಮಿನಿಟು ನಡೆಸಿದರೂ ಅಲ್ಲಿನ ಗಾಳಿಯಲ್ಲಿ ಪ್ರಾಣಾಪಾಯಕರ ಮಟ್ಟಕ್ಕೇರುವಷ್ಟು ಇಂಗಾಲ ಮಾನಾಕ್ಸೈಡ್ ಸೇರಿರುತ್ತದೆ. ಆಗ ವಾಹನಚಾಲಕ ಬೇಗ ಹೊರಬರದಿದ್ದರೆ ಇಂಗಾಲದ ಮಾನಾಕ್ಸೈಡ್ ವಿಷವೇರುತ್ತದೆ. ನಗರಗಳಲ್ಲಿ ಕಾರು, ಬಸ್ಸುಗಳು ಸಂದಣಿಯಾಗಿ ಚಲಿಸುತ್ತಿರುವಾಗ ಸಂದುಗೊಂದುಗಳಲ್ಲಿ ಹೀಗೆ ಹೊರಬೀಳುವ ಇಂಗಾಲ ಮಾನಾಕ್ಸೈಡ್ ಆವರಣದಲ್ಲಿ ಕ್ರಮೇಣ ಹೆಚ್ಚಾಗಿ ಓಡಾಡುವ ಜನರಿಗೂ ವಿಶೇಷವಾಗಿ ಅಲ್ಲೇ ಯಾವಾಗಲೂ ಇರುವ ನಿಯಂತ್ರಕ ಪೊಲೀಸರಿಗೂ ವಿಷವೇರುವುದು ಹೆಚ್ಚಲ್ಲ. ಅವರಲ್ಲಿ ತಲೆನೋವು, ಮನಸ್ಸಿನ ಚಂಚಲತೆ ಮುಂತಾದ ತೊಂದರೆಗಳಿಗೆ ಕಾರಣವಾಗುತ್ತದೆ. ಮೋಟಾರು ಕಾರುಗಳಿಗೇ ಮೀಸಲಾಗಿರುವ ನೆಲ ಸುರಂಗ ಮಾರ್ಗಗಳಲ್ಲಿ ಈ ವಿಷವೇರಿಕೆಯನ್ನು ತಡೆಯಲು ಗಾಳಿ ಬೀಸುತ್ತಿರುವಂತೆ ಏರ್ಪಾಡುಗಳಿರುತ್ತವೆ. ರಕ್ತಕೊರತೆಯವರು (ಅನೀಮಿಕ್ಸ್), ವಯಸ್ಸಾದವರು, ಎಳೆಯರೂ ಈ ವಿಷವೇರಿಕೆಗೆ ಸುಲಭವಾಗಿ ಈಡಾಗುತ್ತಾರೆ. ಅನಿಲ ವಿಷವೇರಿಕೆಯ ಸಾವುಗಳಲ್ಲೆಲ್ಲ ಇಂದಿಗೂ ಇಂಗಾಲದ ಮಾನಾಕ್ಸೈಡ್ ವಿಷವೇರಿಕೆಯದೇ ಹೆಚ್ಚು.

ಇಂಗಾಲದ ಮಾನಾಕ್ಸೈಡ್ ಮೈಗೂಡಿದ ಮೇಲೆ ಅಲ್ಲೇ ನೆಲೆಸುವುದರಿಂದ ಇದರ ವಿಷವೇರಿಕೆ ಬರುಬರುತ್ತ ಏರುತ್ತದೆ. ಉಸಿರಿನಲ್ಲಿ ತುಸುವೇ ಇಂಗಾಲದ ಮಾನಾಕ್ಸೈಡ್ ಇದ್ದರೂ ಅದರ ಪ್ರಮಾಣ ಕ್ರಮೇಣ ದೇಹದಲ್ಲಿ ಹೆಚ್ಚಾಗಿ ಪ್ರಾಣಾಪಾಯವೇ ಸಂಭವಿಸಬಹುದು. ಇಂಗಾಲದ ಮಾನಾಕ್ಸೈಡಿನ ಪ್ರಮಾಣ ರಕ್ತಬಣ್ಣಕದಲ್ಲಿ ಹೆಚ್ಚಾದಂತೆ ಹೆಚ್ಚು ಹೆಚ್ಚು ರಕ್ತಬಣ್ಣಕ ಕೆಟ್ಟು ವಿಷವೇರಿಕೆ ತೀವ್ರವಾಗುತ್ತದೆ. ಉಸಿರಾಡುವ ಗಾಳಿಯಲ್ಲಿ ಆಕ್ಸಿಜನ್ ಇಂಗಾಲದ ಮಾನಾಕ್ಸೈಡಿನ 300ರಷ್ಟಿದ್ದರೂ ರಕ್ತದಲ್ಲಿರುವ ಅರೆಪಾಲು ರಕ್ತಬಣ್ಣಕ ಆಕ್ಸಿಜನ್ನಿನೊಡನೆಯೂ ಉಳಿದ ಅರೆಪಾಲು ಇಂಗಾಲದ ಮಾನಾಕ್ಸೈಡಿನೊಂದಿಗೂ ಕೂಡಿಕೊಳ್ಳುತ್ತದೆ. ರಕ್ತಬಣ್ಣಕಕ್ಕಿರುವ ಗುರುತ್ವವನ್ನು ಇದು ತೋರಿಸುತ್ತದೆ. ಮೈರಕ್ತದಲ್ಲಿರುವ ಒಟ್ಟು ಇಂಗಾಲದ ಮಾನಾಕ್ಸೈಡಿನ ಜೊತೆ ರಕ್ತಬಣ್ಣಕದಲ್ಲಿ ಅರೆಪಾಲು ಇಂಗಾಲಾಮ್ಲ ರಕ್ತಬಣ್ಣಕವಾಗಿ ಬದಲಾಗಲು ಕೇವಲ 500 ಮಿಲೀ. ನಷ್ಟು ಇಂಗಾಲದ ಮಾನಾಕ್ಸೈಡು ಸಾಕು. ಉಸಿರಾಡುವ ಗಾಳಿಯಲ್ಲಿ ಇದು 0.1%ರಷ್ಟು ಕಡಿಮೆ ಪ್ರಮಾಣದಲ್ಲಿ ಇದ್ದರೂ ಸುಮಾರು ಒಂದು ತಾಸಿನೊಳಗೇ ಮೈಯಲ್ಲೂ ಇದೇ ಮಟ್ಟಕ್ಕೇರುತ್ತದೆ. ಇನ್ನೂ ಹೆಚ್ಚಿದ್ದರೆ (0.4%) ಮೈಯಲ್ಲೂ ಅಷ್ಟು ಸೇರಲು ಅರೆ ತಾಸೂ ಹಿಡಿಯದು. ಹಾಲ್ಡೇನನೂ ಅವರ ಒಂದಿಗರೂ ಇಂಗಾಲದ ಮಾನಾಕ್ಸೈಡ್ ಸೇವಿಸಿ ಪ್ರಯೋಗಗಳನ್ನು ಮಾಡಿ ಅದರ ವಿಷವೇರಿಕೆಯನ್ನು ಪರೀಕ್ಷಿಸಿರುವರು. ಆರಾಮದಲ್ಲಿದ್ದಾಗ ಮೈರಕ್ತದಲ್ಲಿರುವ ಒಟ್ಟು ರಕ್ತಬಣ್ಣಕದಲ್ಲಿ 20% ಇಂಗಾಲದ ಮಾನಾಕ್ಸೈಡ್ ಒಡಗೂಡಿದ್ದರೂ ತೊಂದರೆ ಏನೂ ಇಲ್ಲ. ಆದರೆ ದುಡಿಯುತ್ತಿರುವಾಗ ತುಸು ತೊಡಕಾಗುತ್ತವೆ. 30% ರಷ್ಟು ಹೀಗೆ ಕೆಟ್ಟಿದ್ದರೆ, ಕೆಲಸ ಮಾಡದೆ ಸುಮ್ಮನಿದ್ದರೂ ತಲೆನೋವು, ತತ್ತರಿಕೆ ಕಾಣಬರುತ್ತವೆ. 50% ರಷ್ಟು ಹೀಗೆ ಕೆಟ್ಟು ಕೆಲಸಕ್ಕೆ ಬಾರದಾಗಿದ್ದರೆ ಎದೆಯಲ್ಲಿ ಮಿಡಿತ, ನೋವು, ಸ್ನಾಯುಗಳ ದಣಿವೂ ಕಾಣಬರುತ್ತವೆ. ಹೀಗಿರುವಾಗ, ದಣಿವಾಗುವಂತೆ ದುಡಿದರೆ ಎಚ್ಚರ ತಪ್ಪಬಹುದು. ಎಚ್ಚರ ತಪ್ಪಿದವನನ್ನು ಒಳ್ಳೆಯ ಗಾಳಿಯ ಆವರಣಕ್ಕೆ ಒಯ್ದ ಮೇಲೂ 3–5 ದಿವಸಗಳ ತನಕ ಎಚ್ಚರಗೊಳ್ಳದೆ ಇರುವುದೂ ಉಂಟು. ಕೊನೆಗೆ 60–80% ರಕ್ತಬಣ್ಣಕದಲ್ಲಿ ಇಂಗಾಲದ ಮಾನಾಕ್ಸೈಡ್ ಒಡಗೂಡಿಬಿಟ್ಟಿದ್ದರೆ ಸಾಮಾನ್ಯವಾಗಿ ರೋಗಿ ಸಾಯುವನು. ಸತ್ತರೂ ಅನೇಕ ದಿವಸಗಳ ತನಕ ಮೈ ಕೆಡದೆ, ಕೊಳೆಯದೆ ಹಾಗೇ ಇರುತ್ತದೆ. ಅಷ್ಟು ದಿವಸಗಳು ಕಳೆದರೂ ಮೈಯಲ್ಲಿ ಈ ವಿಷಾನಿಲ ಇರುವುದನ್ನು ರಾಸಾಯನಿಕ ಪರೀಕ್ಷೆಗಳಿಂದ ಗುರುತಿಸಬಹುದು. ರಕ್ತದಲ್ಲಿ ಇದರ ಪ್ರಮಾಣವನ್ನು ಕರಾರುವಾಕ್ಕಾಗಿ ತೋರಿಸಲು, ರಿವರ್ಷನ್ ರೋಹಿತದರ್ಶಕವನ್ನು (ರಿವರ್ಷನ್ ಸ್ಪೆಕ್ಟ್ರಸ್ಕೋಪ್) ಹಾರ್ಟ್‌ರಿಡ್ಜ್ ಕಂಡುಹಿಡಿದಿದ್ದಾನೆ.

ಇಂಗಾಲದ ಮಾನಾಕ್ಸೈಡಿನ ವಿಷವೇರಿಕೆಯ ಮಟ್ಟವನ್ನು ಅಳೆಯಲು, ಉಸಿರಾಡುತ್ತಿರುವ ಗಾಳಿಯಲ್ಲಿನ ಇಂಗಾಲದ ಮಾನಾಕ್ಸೈಡ್ ಪ್ರಮಾಣ, ಸೇವನೆಯ ಹೊತ್ತು ಎರಡನ್ನೂ ಹೆಂಡರ್‌ಸನ್ ಮತ್ತು ಹ್ಯಾಗಾರ್ಡ್ ಗಣನೆಗೆ ತೆಗೆದುಕೊಂಡಿದ್ದಾರೆ. ಇವರ ಪ್ರಕಾರ ವಿಷಾಳಿ ಸೇವನೆಯ ಹೊತ್ತು (ತಾಸುಗಳಲ್ಲಿ), ಗಾಳಿಯಲ್ಲಿನ ಇಂಗಾಲದ ಮಾನಾಕ್ಸೈಡ್ ಪ್ರಮಾಣ (10 ಲಕ್ಷದಲ್ಲಿರುವ ಭಾಗ) ಇವುಗಳ ಗುಣಲಬ್ಧ 300 ಆಗಿದ್ದರೆ ಏನೂ ತೊಂದರೆ ಇರುವುದಿಲ್ಲ; 600 ಆಗಿದ್ದರೆ ತುಸು ತೊಂದರೆ ; 900 ಆಗಿದ್ದರೆ ಗೊತ್ತಾಗುವಷ್ಟು ತೊಂದರೆಯಾಗುತ್ತದೆ; 1,500 ಅದಕ್ಕೂ ಮೀರಿದ ಗುಣಲಬ್ಧ ಬಂದರೆ ಎಚ್ಚರ ತಪ್ಪಬಹುದಾದ ಸ್ಥಿತಿ ಅಥವಾ ಪ್ರಾಣಾಪಾಯ ಎಂದೇ ತಿಳಿಯಬೇಕು.

ಇಂಗಾಲದ ಮಾನಾಕ್ಸೈಡ್ ವಿಷವೇರಿಕೆಗೆ ರಕ್ತದಲ್ಲಿ ಆಕ್ಸಿಜನ್ ಕೊರತೆಯೇ ಮುಖ್ಯ ಕಾರಣ. ಅಂದಮಾತ್ರಕ್ಕೆ ಈ ಅನಿಲ ರಕ್ತಬಣ್ಣಕದೊಡನೆ ಕೂಡಿಕೊಂಡು ಅದನ್ನು ಕೆಲಸಕ್ಕೆ ಬಾರದಂತೆ ಆಗಿಸುವುದರಿಂದ ಮಾತ್ರ ಈ ಕೊರತೆ ಒದಗುವುದಿಲ್ಲ. ಬೇರೆ ರೀತಿಯಿಂದಲೂ ರಕ್ತಬಣ್ಣಕವನ್ನು ಕೆಲಸಕ್ಕೆ ಬಾರದಂತೆ ಮಾಡಿದಾಗಲೂ ಇದು ಸಾಧ್ಯ. ಆದರೆ ಇಂಥಲ್ಲಿ ಅಪಾಯ ಮೊದಲಿನದಕ್ಕಿಂತ ಕಡಿಮೆ.

**ಲಕ್ಷಣಗಳು:** ಇದರ ವಿಷವೇರಿಕೆಯ ಸೂಚನೆಗಳು ಸಾಮಾನ್ಯವಾಗಿ ಅಲಸಿಕೆ, ಜೋಗರಿಕೆ, ಇಂದ್ರಿಯಗಳ ಜಡತ್ವ, ಕೊನೆಗೆ ಸೆಳವು. ಇದಿಲ್ಲದಿದ್ದರೆ ತಲೆನೋವು, ಎದೆ ಮಿಡಿತ, ಉಸಿರು ಸಿಕ್ಕಿಕೊಂಡಂತಾಗುವಿಕೆ. ಜಾಗ ಬಿಟ್ಟು ಏಳಲೂ ಆಗದಷ್ಟು ಕೈಕಾಲುಗಳಲ್ಲಿ ನಿತ್ರಾಣ, ಕೊನೆಗೆ ಸೆಳವು. ಈ ಸೆಳವು ಜೋರಾಗಿರುವುದು. ಸಾಧಾರಣವಾಗಿ ತುಟಿ, ಕೆನ್ನೆಗಳು ತೊಂಡೆ ಹಣ್ಣಿನಂತೆ ಕೆಂಪಗಿರುತ್ತವೆ. ಆದರೆ ಕೆಲವೇಳೆ ಮೊಗ ಮಂಕಾಗಿ ಬಿಳಚಿಕೊಂಡು ಬೆವರು ಹನಿಗಳಿಂದ ಕೂಡಿರಲೂಬಹುದು. ನೆಟ್ಟ ನೋಟದ, ರೆಪ್ಪೆ ಬಡಿಯದ ತೆರೆದ ಕಣ್ಣುಗಳು, ವೇಗದುಸಿರಾಟ, ದುರ್ಬಲಗತಿಯ ನಾಡಿ, ತಣ್ಣ ಕೈಕಾಲುಗಳು ವಿಷವೇರಿಕೆಯ ಇತರ ಲಕ್ಷಣಗಳು.

**ಚಿಕಿತ್ಸೆ:** ಇಂಗಾಲದ ಮಾನಾಕ್ಸೈಡ್ ವಿಷವೇರಿಕೆಯ ಚಿಕಿತ್ಸೆಯ ಪರಿಣಾಮ, ರೋಗಿಯ ರಕ್ತದಲ್ಲಿ ಅದು ಇರುವ ಪ್ರಮಾಣದಿಂದ ತಿಳಿಯಬಹುದು. ಇದು ಅಷ್ಟು ಮುಖ್ಯವಲ್ಲ. ರೋಗಿಯನ್ನು ಕೂಡಲೇ ಕೆಟ್ಟ ಗಾಳಿಯಿಂದ ಹೊರತೆಗೆದು ಒಳ್ಳೆಯ ಗಾಳಿಯ ಆವರಣಕ್ಕೆ ಸಾಗಿಸಿ, ಬೆಚ್ಚಗೆ ಹೊದ್ದಿಸಿ, ಮೈ ಕಾವೇರುವಂತೆ ಅಂಗೈ ಅಂಗಾಲು ತಿಕ್ಕಿ ತೀಡಿ, ಸಲೀಸಾಗಿ ಒಳ್ಳೆ ಗಾಳಿಯನ್ನೋ ಆಕ್ಸಿಜನ್ನನ್ನೋ ಸೇವಿಸುವ ಹಾಗೆ ಮಾಡುವುದೇ ಸಫಲ ಚಿಕಿತ್ಸೆಯ ತಿರುಳು. ಒಳ್ಳೆಯ ಗಾಳಿಗೆ ಒಡ್ಡಿದ ಕೂಡಲೆ ಅನೇಕವೇಳೆ ರೋಗಿ ಸ್ಥಿತಿ ಕೆಡಬಹುದು. ಕೆಟ್ಟ ಗಾಳಿಯ ಕೋಣೆಯಲ್ಲಿನ ಹೆಚ್ಚಿನ ಇಂಗಾಲದ ಡೈಆಕ್ಸೈಡ್, ರೋಗಿಯ ಉಸಿರಾಟವನ್ನು ಚೋದಿಸುತ್ತಿರುತ್ತದೆ. ಹೊರಗಿನ ಆವರಣದಲ್ಲಿ ಇಂಗಾಲದ ಡೈಆಕ್ಸೈಡ್ ಅಷ್ಟಿರದೆ ಉಸಿರಾಟದ ಚೋದನೆ ತಪ್ಪಿ ಹೀಗಾಗುತ್ತದೆ. ಇದಕ್ಕಾಗೇ ಕೃತಕ ಉಸಿರಾಟವನ್ನು ಕೈಗೊಂಡು ರೋಗಿಗೆ ಆಕ್ಸಿಜನ್ ಶೇ. 60ಕ್ಕಿಂತ ಹೆಚ್ಚಿರದ, ಇಂಗಾಲದ ಡೈಆಕ್ಸೈಡ್ ಸುಮಾರು ಶೇ.5 ರಷ್ಟಿರುವ ಗಾಳಿಯನ್ನು ಉಸಿರಾಡುವಂತೆ ಮಾಡಬೇಕಾಗುವುದು. ಹೀಗೆ ಮಾಡಿದಾಗ, ದೇಹದ ಒಳಹೋಗುವ ಹೆಚ್ಚಿನ ಆಕ್ಸಿಜನ್ ಕ್ರಮೇಣ ಹೆಚ್ಚು ಹೆಚ್ಚು ರಕ್ತಬಣ್ಣಕದ ಒಡಗೂಡಿ ಇಂಗಾಲದ ಮಾನಾಕ್ಸೈಡನ್ನು ಸ್ವಲ್ಪ ಸ್ವಲ್ಪವಾಗಿ ಹೊರದೂಡುತ್ತದೆ. ಮೈಯಿಂದ ಇಂಗಾಲದ ಮಾನಾಕ್ಸೈಡನ್ನು ಪೂರ್ತಿಯಾಗಿ ಹೊರಡಿಸಬೇಕಾದರೆ 5–6 ತಾಸುಗಳೇ ಹಿಡಿಯಬಹುದು. ಉಸಿರಾಟ ಚೋದಕ ಮದ್ದುಗಳನ್ನೂ ಕೊಡಬಹುದು. ಇಂಗಾಲದ ಮಾನಾಕ್ಸೈಡ್ ವಿಷವೇರಿಕೆ ಬಹಳ ಹೊತ್ತಿನದಾಗಿದ್ದರೆ, ಚಿಕಿತ್ಸೆಯಿಂದ ಪೂರ್ತಿ ಗುಣವಾಗುವ ನೆಚ್ಚಿಕೆ ಇಲ್ಲ. ಮಿದುಳಿನಲ್ಲಿ ಶಾಶ್ವತವಾಗಿ ಕೆಲವು ಕೆಡುಕುಗಳು ಉಳಿಯುತ್ತವೆ. ಮರವು, ತುಸು ಇಲ್ಲವೇ ಪೂರ್ಣ ಮನೋವಿಕಲತೆ, ಪಾರ್ಕಿನ್ಸನ್ ಬೇನೆ ಇವು ಹಾಗೇ ಉಳಿದು ಬಿಡಬಹುದು.

ಇಂಗಾಲದ ಮಾನಾಕ್ಸೈಡ್ ಬೇರೆ ತೆರನಾಗೂ ವಿಷವಾಗಬಹುದು. ರಕ್ತಬಣ್ಣಕಕ್ಕೆ ರಾಸಾಯನಿಕವಾಗಿ ಸಂಬಂಧಿಸಿದ, ಕಣಬಣ್ಣಕ (ಸೈಟೋಕ್ರೋಮು) ದೊಳೆಗಳು ಮೈಯಲ್ಲಿನ ಎಲ್ಲ ಜೀವಕಣಗಳಲ್ಲೂ ಇರುತ್ತವೆ. ಇವೂ ಕೂಡ ಇಂಗಾಲದ ಮಾನಾಕ್ಸೈಡ್ ಒಡಗೂಡ ಬಹುದು. ಹಾಗಾದಾಗ ರಕ್ತದಲ್ಲಿ ಆಕ್ಸಿಜನ್ ಬೇಕಾದಷ್ಟಿದ್ದರೂ ಜೀವಕಣಗಳು ಅದನ್ನು ಬಳಸಲಾರವು. ಆಗಲೂ ಜೀವಾಪಾಯ ಇದ್ದೇ ಇರುತ್ತದೆ. ಆದರೆ ಇದು ಯಾವಾಗಲೂ ಹೀಗಾಗುವಂತಿಲ್ಲ. ಹೀಗಾಗಬೇಕಾದರೆ, ಇಂಗಾಲದ ಮಾನಾಕ್ಸೈಡ್ ಸಾಮಾನ್ಯ ವಿಷವೇರಿಕೆ ಗಿಂತ ಸಾವಿರಪಟ್ಟು ಹೆಚ್ಚಿರಬೇಕು (**ನೋಡಿ– ಆಮ್ಲಜನಕ–ಕೊರೆ**). (ಎಸ್.ಆರ್.ಆರ್.)

**ಇಂಗಾಲದ ಸಮಸ್ಥಾನಿಗಳು:** ಪರಮಾಣುಸಂಖ್ಯೆ 6 ಇರುವ ಇಂಗಾಲ ಮೂಲವಸ್ತುವಿನ ಬೇರೆ ಬೇರೆ ಪರಮಾಣುಭಾರಗಳ ಪರಮಾಣುಗಳು (ಐಸೊಟೋಪ್ಸ್ ಆಫ್ ಕಾರ್ಬನ್). ಇಂಗಾಲದ ಸಮಸ್ಥಾನಿಗಳು ಆರು. ಇಂಗಾಲ–10 ($C^{10}$). ಇಂಗಾಲ–11 ($C^{11}$). ಇಂಗಾಲ–12 ($C^{12}$). ಇಂಗಾಲ–13 ($C^{13}$), ಇಂಗಾಲ–14 ($C^{14}$). ಮತ್ತು ಇಂಗಾಲ–15 ($C^{15}$). $C^{12}$ಮತ್ತು $C^{13}$ ಸ್ಥಿರ ಸಮಸ್ಥಾನಿಗಳು. ಅವು ಪ್ರಕೃತಿಯಲ್ಲಿ ದೊರೆಯುತ್ತವೆ.

ಪ್ರಕೃತಿಯಲ್ಲಿರುವ ಪ್ರತಿ 100 ಇಂಗಾಲದ ಪರಮಾಣುಗಳಲ್ಲಿ 98.89 ಭಾಗ $C^{12}$ ಮತ್ತು 1.11 ಭಾಗ $C^{13}$ ಸಮಸ್ಥಾನಿಗಳು ಇವೆ. $C^{10}$, $C^{11}$, $C^{14}$ ಮತ್ತು $C^{15}$ ಇಂಗಾಲದ ಅಸ್ಥಿರ ಸಮಸ್ಥಾನಿಗಳು. ಇವು ರಶ್ಮಿವಿಕಿರಣ ಕ್ರಿಯೆಯನ್ನು (ರೇಡಿಯೋ ಆಕ್ಟಿವಿಟಿ) ಪ್ರದರ್ಶಿಸುತ್ತವೆ. ಗೈಗರ್ ಮಾಪಕ ಉಪಕರಣದಿಂದ ಈ ಕ್ರಿಯೆಯನ್ನು ಪತ್ತೆ ಹಚ್ಚುತ್ತಾರೆ. ಇದು ನಡೆಯುವ ಕಾಲದಲ್ಲಿ ಅದು ರಶ್ಮಿಪುಂಜ (ರೇಡಿಯೇಷನ್) ಹೊರಸೂಸುವುದರ ಜೊತೆಗೆ ಅದರ ಒಂದು ಕಣವೂ ನಾಶ ಹೊಂದುತ್ತಿರುತ್ತದೆ. ಹೀಗೆ ಒಂದು $C^{14}$ ಸಮಸ್ಥಾನಿ 5,730 ವರ್ಷಗಳ ಅವಧಿಯಲ್ಲಿ ತನ್ನ ಮೊದಲಿನ ಅಂಶದ ಅರ್ಧದಷ್ಟಾಗುತ್ತದೆ. ಒಂದು ಪ್ರಾಚೀನ ಮರದ ಕೊಂಬೆಯ ಅವಶೇಷವೊಂದರಲ್ಲಿ ಅದು ಒಣಗಿದಾಗ ಇದ್ದ $C^{14}$ ಸಮಸ್ಥಾನಿಗಳ ಸಂಖ್ಯೆ 1000 ಎಂದು ಭಾವಿಸಿದರೆ ಮುಂದಿನ 5,730 ವರ್ಷಗಳಾದ ಮೇಲೆ ಅದು ಅರ್ಧ ಆಗಿರುತ್ತದೆ. ಅದರ ಮುಂದಿನ 5,730 ವರ್ಷಗಳಲ್ಲಿ ಈ ಅರ್ಧದಲ್ಲಿ ಅರ್ಧಮಾತ್ರ ಉಳಿದಿರುತ್ತದೆ. ಹೀಗೆ ಅದು ಕ್ರಮವಾಗಿ ಕಡಿಮೆಯಾಗಿ ತನ್ನ ಮೊದಲಿನ 1/4 ಭಾಗ ಆಗುವವರೆಗೂ ಉಳಿದಿರುತ್ತದೆ. ಅಂದರೆ ಸುಮಾರು 40,000 ವರ್ಷ ಹಿಂದಿನ $C^{14}$ ಸಮಸ್ಥಾನಿಯನ್ನು ಇಂದು ಗುರ್ತಿಸಬಹುದು. ಈ ಕಾಲದ (5,730 ವರ್ಷ) ಹೆಸರು $C^{14}$ ಸಮಸ್ಥಾನಿಯ ಅರ್ಧಾಯು (ಹಾಫ್ ಲೈಫ್), ಹಾಗೆಯೇ $C^{10}$ರ ಅರ್ಧಾಯು 20 ಸೆಕೆಂಡು,$C^{11}$ರ ಅರ್ಧಾಯು 20.5 ಮಿನಿಟ್, $C^{15}$ರ ಅರ್ಧಾಯು 2.4 ಸೆಕೆಂಡು, $C^{10}$,$C^{11}$ ಮತ್ತು $C^{15}$ ಸಮಸ್ಥಾನಿಗಳ ಅರ್ಧಾಯುಗಳು ಬಲು ಕಡಿಮೆ ಇರುವುದರಿಂದ ಅವು ಹೆಚ್ಚು ಪ್ರಾಮುಖ್ಯ ಪಡೆದಿಲ್ಲ.

1921ರ ವೇಳೆಗೆ ಸಮಸ್ಥಾನಿಗಳ ಅಸ್ತಿತ್ವವನ್ನು ಪತ್ತೆ ಮಾಡಲಾಗಿತ್ತು. ಆದರೂ ಇಂಗಾಲದ ಸಮಸ್ಥಾನಿಗಳನ್ನು ಮೊದಲಿನ ಜಡತ್ವರೋಹಿತ ಲೇಖಕಗಳಲ್ಲಿ (ಮಾಸ್ ಸ್ಪೆಕ್ಟ್ರೊಗ್ರಾಫ್) ಪತ್ತೆ ಹಚ್ಚಲಾಗಿರಲಿಲ್ಲ. ಅವನ್ನು ದ್ಯುತಿರೋಹಿತದಿಂದ (ಆಪ್ಟಿಕಲ್ ಸ್ಪೆಕ್ಟ್ರ) ಕಂಡುಹಿಡಿಯಲಾಯಿತು. 1929ರಲ್ಲಿ ಬರ್ಜ್ ಮತ್ತು ಕಿಂಗ್ $C^{13}$ಸಮಸ್ಥಾನಿಗಳನ್ನು ಇಂಗಾಲದ ಮಾನಾಕ್ಸೈಡಿನಿಂದೊಡಗೂಡಿದ ಇಂಗಾಲದ ಅನಿಲವಸ್ತುಗಳ ಅಣುರೋಹಿತ (ಮೊಲೆಕ್ಯುಲರ್ ಸ್ಪೆಕ್ಟ್ರ) ಅಭ್ಯಸಿಸುವಾಗ ಕಂಡುಹಿಡಿದರು. ಬೆರಿಲಿಯಂ ಮೇಲೆ ಆಲ್ಫ ಕಿರಣ ಹಾಯ್ದಾಗ ಅದು ನ್ಯೂಟ್ರಾನ್ ಹೊರಸೂಸಿ $C^{12}$ ಆಗಿ ಪರಿವರ್ತನೆ ಹೊಂದುವುದನ್ನು 1932ರಲ್ಲಿ ಚಾಡ್‌ವಿಕ್ ಮೊದಲಬಾರಿಗೆ ವಿವರಿಸಿದ. ವುಲ್ಡ್ರಿಡ್ಜ್ ಮತ್ತು ಜೆಂಕಿನ್ಸ್ 1939ರಲ್ಲಿ ರಂಧ್ರವಿದ್ದ 34 ಹರ್ಟ್ಜ್ ಪಂಪುಗಳನ್ನು ಉಪಯೋಗಿಸಿಕೊಂಡು $C^{13}$ಪ್ರಬಲತೆಯನ್ನು 1%–16%ಕ್ಕೆ ಹೆಚ್ಚಿಸಲು ಮೀಥೇನ್ ಅನಿಲದ ವಿರಳಿಸುವ ವಿಧಾನವನ್ನು ಅನುಸರಿಸಿದ. ಮೀಥೇನ್ ಅನಿಲ ಉಪಯೋಗಿಸಿಕೊಂಡು ಉಷ್ಣ ವಿಸರಣ ವಿಧಾನದಿಂದ $C^{12}$ ರಿಂದ $C^{13}$ನ್ನು ಪ್ರತ್ಯೇಕಿಸುವುದನ್ನು 1939ರಲ್ಲಿ ಎಚ್.ಎಸ್. ಟೇಲರ್ ಮಾಡಿದ. 1940ರ ಯುರೇಹೈಡ್ರೊಜನ್ ಸೈಯನೈಡ್ ಅನಿಲ ಮತ್ತು ಸೋಡಿಯಂ ಸೈಯನೈಡ್ ದ್ರವಗಳ ರಾಸಾಯನಿಕ ವಿನಿಮಯಕ್ರಿಯೆಯಿಂದ $C^{13}$ ಸಮಸ್ಥಾನಿಯನ್ನು ತಯಾರಿಸಿದ.

$$HC^{12}N_{(y)}+NaC^{13}_{(aq)}=H^{13}N_{(q)}+NaC^{12}N_{(aq)}$$

ಇಂಗಾಲದ ಡೈಆಕ್ಸೈಡ್ ಮತ್ತು ಅಮೋನಿಯಂ ಕಾರ್ಬೊನೇಟುಗಳಲ್ಲಿನ ಇಂಗಾಲದ ಸಮಸ್ಥಾನಿಗಳ ಅದಲು ಬದಲು ಕ್ರಿಯೆಯಿಂದಲೂ $C^{13}$ ನ್ನು ಬೇರ್ಪಡಿಸಲಾಗಿದೆ.

ಸೈಕ್ಲೊಟ್ರಾನ್ ಮತ್ತು ಪರಮಾಣು ಪೇರಿಕೆಗಳಲ್ಲಿ (ಅಟಾಮಿಕ್ ಪೈಲ್) ನ್ಯೂಟ್ರಾನ್ ಕಣಗಳನ್ನು ಉತ್ಪತ್ತಿಮಾಡಬಹುದು. ಈ ನ್ಯೂಟ್ರಾನುಗಳನ್ನು ಇಂಗಾಲ, ನೈಟ್ರೋಜನ್ನುಗಳ ಮೇಲೆ ತಾಡಿಸಿ ಇಂಗಾಲದ ಅಸ್ಥಿರ ಸಮಸ್ಥಾನಿಗಳನ್ನು ಉತ್ಪತ್ತಿ ಮಾಡಬಹುದು. ವೇಗವಾಗಿ ಚಲಿಸುವ ನ್ಯೂಟ್ರಾನುಗಳನ್ನು ಇಂಗಾಲ 12ರ ಮೇಲೆ ಹಾಯಿಸಿದಾಗ ಇಂಗಾಲ–11 ಅಸ್ಥಿರ ಸಮಸ್ಥಾನಿ ಉತ್ಪತ್ತಿಯಾಗುತ್ತದೆ.

$${}_6C^{12}+{}_o^{n1}\rightarrow{}_6C^{11}+2{}_on^1$$

ವೇಗೋತ್ಕರ್ಷಿತ ಡ್ಯೂಟ್ರಾನ್ ಕಣಗಳನ್ನು ಬೋರಾನ್–10ರ ಮೇಲೆ ತಾಡಿಸಿದಾಗ $C^{11}$ಉತ್ಪತ್ತಿಯಾಗುತ್ತದೆ. $C^{11}$ಅಸ್ಥಿರ ಸಮಸ್ಥಾನಿ ರಶ್ಮಿ ವಿಕಿರಣಕ್ರಿಯೆ ಪ್ರದರ್ಶಿಸುತ್ತದೆ. ಅದರ ಅರ್ಧಾಯು 20.5 ಮಿನಿಟುಗಳು. ಅದು ಒಂದು ಪಾಸಿಟ್ರಾನ್ ಬಿಟ್ಟುಕೊಟ್ಟು ಬೋರಾನ್–11 ಆಗಿ ಪರಿವರ್ತನೆ ಹೊಂದುತ್ತದೆ.

20 ಸೆಕೆಂಡು ಅರ್ಧಾಯು $C^{10}$ ಅಸ್ಥಿರ ಸಮಸ್ಥಾನಿಯನ್ನು ಪ್ರೋಟಾನ್ ಕಣಗಳನ್ನು ಬೋರಾನ್ ಮೇಲೆ ತಾಡಿಸಿ ಪಡೆಯಬಹುದು. ಪ್ರೋಟಾನ್ ಕಣ ಬೋರಾನ್–10 ಪರಮಾಣುವಿನಿಂದ ನ್ಯೂಟ್ರಾನ್ ಕಣ ಬಿಡಿಸಿ ಅದನ್ನು $C^{10}$ ಸಮಸ್ಥಾನಿಯಾಗಿ ಪರಿವರ್ತಿಸುತ್ತದೆ.

$${}_5B^{10}+{}_1P^1\rightarrow{}_6C^{10}+{}_on^1$$

$C^{10}$ರಶ್ಮಿ ವಿಕಿರಣಕ್ರಿಯೆ ಪ್ರದರ್ಶಿಸುವಾಗ ಪ್ರಬಲರಶ್ಮಿ ಪುಂಜವನ್ನು ಬಿಟ್ಟು ಕೊಡುತ್ತದೆ.

ಇಂಗಾಲದ ಸಮಸ್ಥಾನಿಗಳಲ್ಲೆಲ್ಲ ಅತ್ಯಂತ ಕಡಿಮೆ ಅರ್ಧಾಯು ಪಡೆದಿರುವುದು $C^{15}$ ಸಮಸ್ಥಾನಿ, ಅರ್ಧಾಯು 2.4 ಸೆಕೆಂಡುಗಳು. ಇದು ರಶ್ಮಿವಿಕಿರಣ ಕ್ರಿಯೆಯನ್ನು ಪ್ರದರ್ಶಿಸುತ್ತದೆ.

ಇಂಗಾಲದ ಸಮಸ್ಥಾನಿಗಳಲ್ಲೆಲ್ಲ $C^{14}$ ಸಮಸ್ಥಾನಿ ಅಸಾಮಾನ್ಯವಾದುದು. 1940ರಲ್ಲಿ ಎಸ್. ರುಬೆನ್ ಮತ್ತು ಎಂ. ಕ್ಯಾಮೆನ್ $C^{14}$ ಸಮಸ್ಥಾನಿಯನ್ನು ಕಂಡುಹಿಡಿದರು. ಭೂಮಿಯ ವಾತಾವರಣದ ಮೇಲೆ ಬೀಳುವ ಬೆಳಕಿನ ಕಿರಣಗಳು $C^{14}$ನ್ನು ಉತ್ಪತ್ತಿ ಮಾಡುತ್ತವೆ. ಇದು ಸಕಲ ಜೀವಿಗಳ ಕಣಕೂಟದಲ್ಲಿರುತ್ತದೆ. ಭೂಮಿಯಲ್ಲಿ ಸುಮಾರು 20 ಟನ್ $C^{14}$ ಸಮಸ್ಥಾನಿ ಇರುವುದೆಂದು ಅಂದಾಜು ಮಾಡಲಾಗಿದೆ. ಪ್ರಕೃತಿಯಲ್ಲಿ ಒಂದು ನಿಯತ ಪ್ರಮಾಣದಲ್ಲಿ ಯಾವಾಗಲೂ ಸೃಷ್ಟಿ ಮತ್ತು ಲಯವಾಗುತ್ತಿರುವ ಕೆಲವೇ ಸಮಸ್ಥಾನಿಗಳಲ್ಲಿ $C^{14}$ ಅಸ್ಥಿರ ಸಮಸ್ಥಾನಿ ಒಂದಾಗಿದೆ. ಸಂಶೋಧನೆಗಳಲ್ಲಿ ಹೆಚ್ಚು ಹೆಚ್ಚು ಉಪಯೋಗಿಸುತ್ತಿರುವ $C^{14}$ನ್ನು ಪರಮಾಣು ರಿಯಾಕ್ಟರಿನಲ್ಲಿ ಉತ್ಪಾದಿಸುತ್ತಾರೆ. ಬೆರಿಲಿಯಂ ನೈಟ್ರೈಡನ್ನು ಪರಮಾಣು ರಿಯಾಕ್ಟರಿನ ತಿರುಳಿನಲ್ಲಿ ಇಟ್ಟು ಮಂದ (ಸ್ಲೋ) ನ್ಯೂಟ್ರಾನುಗಳ ಪ್ರಭಾವಕ್ಕೆ ಒಳಪಡಿಸಿದಾಗ ನೈಟ್ರೈಡಿನಲ್ಲಿರುವ $N^{14}$ ಸಮಸ್ಥಾನಿ ಪಾಸಿಟ್ರಾನ್ ಬಿಟ್ಟುಕೊಟ್ಟು $C^{14}$ ಸಮಸ್ಥಾನಿಯಾಗಿ ಪರಿವರ್ತನೆ ಹೊಂದುತ್ತದೆ. ಅನಂತರ ಆ ವಸ್ತುವನ್ನು ಆಮ್ಲದೊಡನೆ ವರ್ತಿಸಿ ಬರುವ ಅನಿಲಗಳನ್ನು ಕಾಯಿಸಿದ ತಾಮ್ರದ ಆಕ್ಸೈಡ್ ಮೇಲೆ ಹಾಯಿಸಿ ಇಂಗಾಲದ ಡೈ ಆಕ್ಸೈಡ್ $C^{14}O_2$ ಆಗಿ ಮಾಡಲಾಗವುದು. ಈ $C^{14}O_2$ವನ್ನು ಸೋಡಿಯಂ ಹೈಡ್ರಾಕ್ಸೈಡಿನಲ್ಲಿ ಹೀರಿಸಿದ ಅನಂತರ ಬೇರಿಯಂ ಕಾರ್ಬೋನೇಟ್ $BaC^{14}O_3$ಆಗಿ ಒತ್ತರಿಸುವುದರ ಮೂಲಕ $C^{14}$ಅಸ್ಥಿರ ಸಮಸ್ಥಾನಿಯನ್ನು ಸಾಕಷ್ಟು ಪ್ರಮಾಣದಲ್ಲಿ ತಯಾರಿಸಿದ್ದಾರೆ.

$${}_7N^{14}+{}_on^1={}_6C^{14}+{}_1H^1$$

ಸೈಕ್ಲೊಟ್ರಾನಿನಲ್ಲಿ ಒಂದು ಗ್ರಾಂ $C^{14}$ ಉತ್ಪಾದಿಸಬೇಕಾದರೆ ಸುಮಾರು 80 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಆದರೆ ಪರಮಾಣು ರಿಯಾಕ್ಟರಿನಲ್ಲಿ ಉತ್ಪಾದಿಸುವ $C^{14}$ ಸಮಸ್ಥಾನಿ ಇಂದು ಒಂದು ಗ್ರಾಂಗೆ 80 ರೂಪಾಯಿಗಳಿಗೂ ಕಡಿಮೆ ದರದಲ್ಲಿ ದೊರೆಯುತ್ತದೆ.

ವಾಯುಮಂಡಲದಲ್ಲಿ ಪರಮಾಣು ಬಾಂಬುಗಳ ಆಸ್ಫೋಟನೆ ನಡೆಸಿದಾಗ $C^{14}$ ಸಮಸ್ಥಾನಿ ಉತ್ಪತ್ತಿಯಾಗುತ್ತದೆ. ವೇಗೋತ್ಕರ್ಷಿತ ಡ್ಯೂಟ್ರಾನುಗಳನ್ನು ಇಂಗಾಲದ ಮೇಲೆ ತಾಡಿಸಿದಾಗ $C^{14}$ ಸಮಸ್ಥಾನಿಯಾಗಿ ಪರಿವರ್ತನೆ ಆಗುತ್ತದೆ.

$C^{14}$ ಅಸ್ಥಿರ ಸಮಸ್ಥಾನಿ ರಶ್ಮಿವಿಕಿರಣಕ್ರಿಯೆ ಪ್ರದರ್ಶಿಸುವಾಗ ಎಲೆಕ್ಟ್ರಾನ್ ಬಿಟ್ಟುಕೊಟ್ಟು $N^{14}$ ಆಗಿ ಪರಿವರ್ತನೆ ಹೊಂದುತ್ತದೆ. ಜೊತೆಗೆ 0.156 Mev ನಷ್ಟು ಶಕ್ತಿಯನ್ನೂ ಬಿಡುಗಡೆ ಮಾಡುತ್ತದೆ. ಪ್ರತಿ ಒಂದು ಗ್ರಾಂ ಇಂಗಾಲ ಒಂದು ಮಿನಿಟಿಗೆ 15.6 ಎಲೆಕ್ಟ್ರಾನುಗಳನ್ನು $C^{14}$ ಹೊರಬಿಡುತ್ತಿರುತ್ತದೆ.

$${}_6C^{14}\rightarrow{}_7N^{14}+{}_{-1}e^{o}+\text{ಶಕ್ತಿ}$$

ಕೋಷ್ಟಕ 1

ಇಂಗಾಲದ ಸ್ಥಿರ ಸಮಸ್ಥಾನಿಗಳು

| ಸಮಸ್ಥಾನಿ | ಸಂಕೇತ | ಪರಮಾಣುಭಾರ ಸಾಪೇಕ್ಷ | ಬಾಹುಳ್ಯ (ಸೇಕಡ) (ರಿಲೆಟಿವ್ ಅಬಂಡೆನ್ಸ್) |
|---|---|---|---|
| ಇಂಗಾಲ–12 | $C^{12}$ | 12.000000 | 98.892 |
| ಇಂಗಾಲ–13 | $C^{13}$ | 13.003354 | 1.108 |

ರಾಸಾಯನಿಕ, ಭೌತ, ಜೀವಸಂಬಂಧ ಹಾಗು ವೈದ್ಯಕೀಯ ಕ್ಷೇತ್ರಗಳಲ್ಲಿ ಇಂಗಾಲದ ಸಮಸ್ಥಾನಿಗಳು ಬಹಳ ಉಪಕಾರಿಗಳಾಗಿವೆ. ಅವುಗಳಲ್ಲೂ ಹೆಚ್ಚು ಅಪಾಯಕಾರಿಯಲ್ಲದ $C^{14}$ರಶ್ಮಿ ವಿಕಿರಣ ಸಮಸ್ಥಾನಿ ಒಂದು ವರಪ್ರಸಾದ.

1947ರಲ್ಲಿ ಡಬ್ಲ್ಯೂ. ಎಫ್. ಲಿಬ್ಬಿ $C^{14}$ ಅಸ್ಥಿರ ಸಮಸ್ಥಾನಿಯ ರಶ್ಮಿವಿಕಿರಣ ಕ್ರಿಯೆಯನ್ನು ಅವಲಂಬಿಸಿದ ರಶ್ಮಿ ಇಂಗಾಲಕಾಲನಿರ್ಣಯ (ರೇಡಿಯೋ ಕಾರ್ಬನ್ ಡೇಟಿಂಗ್) ವಿಧಾನವನ್ನು ಕಂಡುಹಿಡಿದ. ಈ ವಿಧಾನದಿಂದ ಅತಿಪುರಾತನಕಾಲದ ಅವಶೇಷಗಳ ಖಚಿತಕಾಲವನ್ನು ನಿರ್ಧರಿಸಲಾಗಿದೆ. ಪ್ರಾಚೀನ ಜೀವಿಗಳ ಕಾಲನಿರ್ಣಯ ಮಾಡಲಾಗಿದೆ. ಮರದ ಶವಪೆಟ್ಟಿಗೆ, ಈಜಿಪ್ಟಿನ ಮಮ್ಮಿಗಳ ಉಡುಪು, ಪ್ರಾಚೀನ ಗೃಹಗಳ ಸುಟ್ಟ ಮರಗಳು, ಗುಹೆಗಳಲ್ಲಿ ದೊರೆತಿರುವ ತಲೆಕೂದಲು, ಮೂಳೆಗಳು ಮತ್ತು ಇದ್ದಲು ಇವೆಲ್ಲವುಗಳ ಕಾಲನಿರ್ಣಯ ಸಾಧ್ಯವಾಗಿದೆ. ಆದಿಮಾನವನ ಬೆಳವಣಿಗೆ ಮತ್ತು ಭೂಮಿಯ ಗತೇತಿಹಾಸ ತಿಳಿಯಲು ಸಾಧನವಾಗಿದೆ. 70,000 ವರ್ಷಗಳ ಭೂತಕಾಲದಲ್ಲಿ ಭೂಮಿಯ ವಾತಾವರಣ ದೊಡನೆ ಸಮಸ್ಥಿತಿ ಪಡೆದಾಗಿರುವ ಇಂಗಾಲಾಂಶ ವಸ್ತುಗಳ ಕಾಲವನ್ನು ನಿರ್ಣಯಿಸಲು ಈ ವಿಧಾನವನ್ನು ಉಪಯೋಗಿಸುವರು.

$C^{14}$ ಸಮಸ್ಥಾನಿ ಎಲ್ಲ ಜೀವಕೋಶಗಳಲ್ಲಿಯೂ ಇದ್ದೇ ಇದೆ. ಬಾಹ್ಯಾಕಾಶದಲ್ಲಿ ಸಂಚರಿಸುವ ಬೆಳಕಿನ ಕಿರಣಗಳಿಗೂ ಭೂಮಿಯ ವಾತಾವರಣಕ್ಕೂ ಘರ್ಷಣೆ ಉಂಟಾಗುತ್ತಿರುವುದರಿಂದ ನ್ಯೂಟ್ರಾನುಗಳು ಉತ್ಪತ್ತಿ ಆಗುತ್ತವೆ. ಗಾಳಿಯಲ್ಲಿ ಹೇರಳವಾಗಿರುವ ನೈಟ್ರೋಜನ್ ಪರಮಾಣುಗಳೊಡನೆ ($N^{14}$) ನ್ಯೂಟ್ರಾನುಗಳು ಸಂಯೋಜನೆ ಹೊಂದುತ್ತವೆ. ಅವುಗಳಿಂದ ಪ್ರೋಟಾನುಗಳನ್ನು ಬಿಡುಗಡೆ ಮಾಡಿಸಿ $C^{14}$ ಪರಮಾಣುಗಳಾಗಿ ಪರಿವರ್ತನೆ ಮಾಡುತ್ತವೆ. ಹೀಗೆ ಉತ್ಪತ್ತಿಯಾಗುತ್ತಿರುವ ರಶ್ಮಿವಿಕಿರಣಶಕ್ತಿ ಪಡೆದ $C^{14}$ ಸಮಸ್ಥಾನಿಗಳು ಕೂಡಲೇ ಆಕ್ಸಿಜನ್ನಿನೊಡನೆ ಉತ್ಕರ್ಷಣಹೊಂದಿ ಇಂಗಾಲದ ಡೈ ಆಕ್ಸೈಡ್ $C^{14}O_2$ಆಗುತ್ತದೆ. ಇದು ಸಸ್ಯಗಳ ಮತ್ತು ಪ್ರಾಣಿಗಳ ಶರೀರವನ್ನು ಅನೇಕ ರೂಪಗಳಲ್ಲಿ ಪ್ರವೇಶಿಸುತ್ತಿರುತ್ತದೆ. ಜೀವವಿರುವವರೆಗೆ ಮಾತ್ರ ಅದು ಜೀವಿಗಳ ಶರೀರವನ್ನು ಪ್ರವೇಶಿಸುತ್ತದೆ. ಜೀವಿ ಸತ್ತಾಗ ಅದರಲ್ಲಿ $C^{14}$ ಪ್ರಬಲತೆ ಕಡಿಮೆ ಆಗತೊಡಗುತ್ತದೆ. ಇಂಗಾಲ–14 ಸಮಸ್ಥಾನಿ ರಶ್ಮಿ ವಿಕಿರಣಕ್ರಿಯೆ ಪ್ರದರ್ಶಿಸುತ್ತಿರುವಾಗ ಒಂದು ಎಲೆಕ್ಟ್ರಾನ್ ಹೊರಗೆಡವಿ ನೈಟ್ರೋಜನ್–14

**ಕೋಷ್ಟಕ ೨**
**ಇಂಗಾಲದ ಅಸ್ಥಿರ ಸಮಸ್ಥಾನಿಗಳು**

| ಸಮಸ್ಥಾನಿ | ಸಂಕೇತ | ರಶ್ಮಿಪುಂಜ | ಅರ್ಧಾಯು | ವಿಕಿರಣ ಶಕ್ತಿ Mev | ಉತ್ಪಾದನ ವಿಧಾನ |
|---|---|---|---|---|---|
| ಇಂಗಾಲ–10 | $C^{10}$ | | 20 ಸೆಕೆಂಡು | 3.4 | B(p,n) |
| ಇಂಗಾಲ–11 | $C^{11}$ | â+ (ಪಾಸಿಟ್ರಾನ್) | 20.5 ಮಿನಿಟ್ | 0.95 | B(d,n)<br>B(p,n)<br>B(p,r)<br>C(n,2n)<br>N(p,d) |
| ಇಂಗಾಲ–14 | $C^{14}$ | â- (ಎಲೆಕ್ಟ್ರಾನ್) | 5730 ವರ್ಷ | 0.156 | N(n,p)<br>C(d,p) |
| ಇಂಗಾಲ–15 | $C^{15}$ | | 2.156 ಸೆಕೆಂಡು | | |

ಆಗಿ ಪರಿವರ್ತನೆ ಹೊಂದುತ್ತಿರುತ್ತದೆ. ಗೈಗರ್‌ಮಾಪಕ ಉಪಕರಣದಿಂದ ರಶ್ಮಿಪುಂಜವನ್ನು ಪತ್ತೆ ಮಾಡುತ್ತಾರೆ. $C^{14}$ ಅರ್ಧಾಯು 5730 ವರ್ಷಗಳು; ಅಂದರೆ ಇಂದಿನ ಸಸ್ಯದಲ್ಲಿರುವ ಅರ್ಧದಷ್ಟು $C^{14}$ ಸಮಸ್ಥಾನಿಗಳು ಕಾಲ ತಿಳಿಯಬೇಕಾಗಿರುವ ನಿರ್ಜೀವ ವಸ್ತುವಿನಲ್ಲಿದ್ದರೆ ಆ ವಸ್ತುವಿನ ಜೀವಕಾಲ 5730 ವರ್ಷಗಳೆಂದಾಗುತ್ತದೆ. ಕೊಟ್ಟಿರುವ ಒಂದು ಇಂಗಾಲದ ವಸ್ತುವಿನಿಂದ ಒಂದು ನಿರ್ದಿಷ್ಟ ಕಾಲದಲ್ಲಿ ಹೊರಸೂಸುವ ಎಲೆಕ್ಟ್ರಾನುಗಳ ಸಂಖ್ಯೆ ಅದರಲ್ಲಿರುವ ರಶ್ಮಿವಿಕಿರಣಶೀಲ $C^{14}$ ಅಸ್ಥಿರ ಸಮಸ್ಥಾನಿಯ ಸಂಖ್ಯೆಗೆ ಅನುಲೋಮಪಾತದಲ್ಲಿ ಸಂಬಂಧಿಸಿರುತ್ತದೆ. ಆದ್ದರಿಂದ ಸಮಕಾಲೀನ ವಸ್ತುವಿನ ರಶ್ಮಿವಿಕಿರಣ ಕ್ರಿಯೆಯೊಂದಿಗೆ ಕಾಲ ತಿಳಿಯಬೇಕಾಗಿರುವ ವಸ್ತುವಿನ ಕ್ರಿಯೆಯನ್ನು ಹೋಲಿಸುವುದರಿಂದ ಅದರ ಕಾಲ tಯನ್ನು ನಿರ್ಣಯಿಸಬಹುದು.

$$t = 8040 \ln \left(\frac{A_0}{A}\right) \text{ ವರ್ಷಗಳು}$$

t = ವಸ್ತುವಿನ ಕಾಲ, $A_o$ ಮತ್ತು A ಕ್ರಮವಾಗಿ ಸಮಕಾಲೀನ ಮತ್ತು ಕೊಟ್ಟವಸ್ತುಗಳ ರಶ್ಮಿವಿಕಿರಣ ಕ್ರಿಯೆ.

ಒಂದು ಜೀವಿ ಸತ್ತಾಗ ಅದರ ಶರೀರದಲ್ಲಿರುವ ಪ್ರತಿ ಒಂದು ಸಾವಿರ ಕೋಟಿ ಸ್ಥಿರ $C^{12}$ ಸಮಸ್ಥಾನಿಗಳಿಗೆ ಕೇವಲ ಒಂದು ಅಸ್ಥಿರ $C^{14}$ಸಮಸ್ಥಾನಿ ಇರುತ್ತದೆ. ಆದ್ದರಿಂದ ಒಂದು ಅವಶೇಷದಲ್ಲಿರುವ $C^{12}$ ಮತ್ತು $C^{14}$ ಪ್ರಮಾಣವನ್ನು ಗಮನಿಸಿದರೆ ಆ ಜೀವಿ ಎಷ್ಟು ಕಾಲದ ಹಿಂದೆ ಜೀವಿಸಿತ್ತು ಎಂದು ಅದರ ಕಾಲವನ್ನು ಖಚಿತವಾಗಿ ನಿರ್ಣಯಿಸಬಹುದು. ಹೀಗೆ ಭೂಮಿಯಲ್ಲಿ ಸಿಗುವ ಶತಮಾನಗಳ ಹಿಂದಿನ ಪ್ರಾಣಿಗಳ ಮತ್ತಿತರ ವಸ್ತುಗಳ ಅವಶೇಷಗಳ ಕಾಲವನ್ನು ಖಚಿತವಾಗಿ ನಿರ್ಣಯಮಾಡಲು $C^{14}$ಸಮಸ್ಥಾನಿ ಬಹಳ ಸಹಾಯಕವಾಗಿದೆ. ಈಚಿನ ಮತ್ತು ಪ್ರಾಚೀನ ಜೀವಾವಶೇಷಗಳಲ್ಲಿ ಕ್ಯಾಲ್ಸೈಟ್ ಖನಿಜದ $C^{13}:C^{12}$ ಪ್ರಮಾಣವನ್ನು ನಿರ್ಧರಿಸಿ ಆ ಮೂಲಕ ಅವುಗಳ ನಿರ್ದಿಷ್ಟ ವಯಸ್ಸನ್ನು ಗೊತ್ತುಪಡಿಸಿದ್ದಾರೆ.

ಸಸ್ಯಗಳಲ್ಲಿ ಇಂಗಾಲದ ಡೈಆಕ್ಸೈಡನ್ನು ಸ್ಥಿರೀಕರಿಸುವ ಕ್ರಿಯೆಗಳಲ್ಲಿ ದ್ಯುತಿ ಸಂಶ್ಲೇಷಣೆ ಅತ್ಯಂತ ಮುಖ್ಯವಾದದ್ದು. ಇದರಲ್ಲಿ ಇಂಗಾಲದ ಪರಮಾಣು ಚಲಿಸುವ ಪಥವನ್ನು ಕ್ಯಾಲ್ವಿನ್ ಎಂಬಾತ ಗುರುತು ಹಚ್ಚಿದ್ದು ಅತ್ಯಂತ ದೊಡ್ಡ ಸಾಧನೆಗಳಲ್ಲೊಂದು. ಕ್ಲೊರೆಲ್ಲಾ ಎಂಬ ಆಲ್ಗೆಯಲ್ಲಿ ಸ್ಥಿರೀಕರಣ ಪಥವನ್ನು ಕಂಡುಹಿಡಿಯಲು ಈತ ರಶ್ಮಿವಿಕಿರಣಶೀಲ ಇಂಗಾಲದ ಡೈಆಕ್ಸೈಡನ್ನು ($C^{14}O_2$) ಉಪಯೋಗಿಸಿ ಪ್ರಯೋಗ ನಡೆಸಿ ಕ್ಲಿಷ್ಟವಾದ ಈ ಕ್ರಿಯೆಯ ಮರ್ಮವನ್ನು ಭೇದಿಸಿದ. ಇದಕ್ಕೂ ಮುಂಚೆ 1939ರಲ್ಲಿ ಎಸ್.ರುಬೆನ್ ಕಡಿಮೆ ಅರ್ಧಾಯು ಪಡೆದಿರುವ $C^{11}$ ವಿಕಿರಣ ಸಮಸ್ಥಾನಿಯ ಪಥನಿರ್ದೇಶಕ ಪ್ರಯೋಗತಂತ್ರ ನಡೆಸಿ ವಿಫಲನಾಗಿದ್ದ.

1961ರವರೆಗೂ ಆಕ್ಸಿಜನ್ನನ್ನು ಆದರ್ಶವಾಗಿಟ್ಟುಕೊಂಡಿದ್ದಾಗ ಭೌತಪರಮಾಣು ಭಾರ ರಾಸಾಯನಿಕಪರಮಾಣು ಭಾರಕ್ಕಿಂತ 1.00028ನಷ್ಟು ಹೆಚ್ಚಾಗಿರುತ್ತಿತ್ತು. ಈ ಎರಡೂ ಭಾರಗಳಲ್ಲಿನ ವ್ಯತ್ಯಾಸವನ್ನು ಹೋಗಲಾಡಿಸಲು $C^{12}$ ಸಮಸ್ಥಾನಿಯ ಪರಮಾಣು ಭಾರವಾದ 12.0000 ಆದರ್ಶವನ್ನು ಎರಡೂ ಮಾನಕಗಳಿಗೆ (ಸ್ಕೇಲ್ಸ್) ಸಮನ್ವಯಿಸುವಂತೆ 1962ರಿಂದ ಈಚೆಗೆ ಏರ್ಪಡಿಸಿದ್ದಾರೆ. $C^{12}$ ಮಾನಕದಿಂದ ರಾಸಾಯನಿಕ ಪರಮಾಣು ಭಾರಗಳಲ್ಲಿ ಆಗಬಹುದಾಗಿದ್ದ ಬದಲಾವಣೆಯನ್ನು ತಪ್ಪಿಸಲು ಸಾಧ್ಯವಾಗಿದೆ. ತತ್ಫಲವಾಗಿ ರಾಸಾಯನಿಕ ಕೈಗಾರಿಕೆಗಳಲ್ಲಿ ಉದ್ಭವಿಸಬಹುದಾಗಿದ್ದ ತೊಂದರೆಗಳನ್ನು ನಿವಾರಿಸಲಾಗಿದೆ.

$C^{14}$ಸಮಸ್ಥಾನಿಯನ್ನು ಪೆಟ್ರೋಲಿಯಂ ನಕ್ಷೆ ಗುರುತಿಸುವ ಸಂಶೋಧನೆಯಲ್ಲಿ ಬಳಸುತ್ತಾರೆ. $C^{13}$ಸಮಸ್ಥಾನಿಯನ್ನು ಪಥ ನಿರ್ದೇಶಕವಾಗಿ ಭಾರ ರೋಹಿತಗಳಲ್ಲಿ ಉಪಯೋಗಿಸುತ್ತಾರೆ.

ಕಾರ್ಲ್ ವ್ಯಾನ್ ವೀಜ್ಸೇಕರ್ ಮತ್ತು ಬೆತೀ ಇವರು ನಕ್ಷತ್ರಗಳಲ್ಲಿ ಅಧಿಕ ಉಷ್ಣ ($T>5x10^{8\,0}K$) ಉತ್ಪತ್ತಿಯಾಗುತ್ತಿರುವುದಕ್ಕೆ $C^{12}$ ಮತ್ತು $C^{13}$ ಸಮಸ್ಥಾನಿಗಳು ವೇಗವರ್ಧಕ ವಸ್ತುಗಳಾಗಿರುವ ಇಂಗಾಲಚಕ್ರ (**ನೋಡಿ**) ಕಾರಣವೆಂದಿದ್ದಾರೆ (1938).

ಯುರೇನಿಯಂ ಆಚೆಯ ಮೂಲವಸ್ತುಗಳನ್ನು ಬೀಜಕ್ರಿಯೆಗಳಿಂದ (ನ್ಯೂಕ್ಲಿಯರ್ ರಿಆ್ಯಕ್ಷನ್ಸ್) ನಿರ್ಮಾಣ ಮಾಡುವುದು ಸಾಧ್ಯ. ಬೀಜಕ್ರಿಯೆಯನ್ನು ಪ್ರೋಟಾನ್, ನ್ಯೂಟ್ರಾನ್, ಡ್ಯೂಟ್ರಾನ್, ಆಲ್ಫಕಣಗಳನ್ನು ಪರಮಾಣು ಬೀಜವನ್ನು ಭೇದಿಸುವಂತೆ ತಾಡಿಸಿ ಪರಮಾಣು ಪೇರಿಕೆಯಲ್ಲಿ ನಡೆಸುತ್ತಾರೆ. ಇಂಗಾಲದ ಸಮಸ್ಥಾನಿಗಳನ್ನು ಈ ಮೂಲ ಪದಾರ್ಥ ಪರಿವರ್ತನೆಯಲ್ಲಿ ಉಪಯೋಗಿಸಿದ್ದಾರೆ. 1954ರಲ್ಲಿ ಸೀಬೋರ್ಗ್ ಎಂಬಾತ ಅತ್ಯಂತ ಶಕ್ತಿಯುತ $C^{12}$ಸಮಸ್ಥಾನಿಗಳನ್ನು ಯುರೇನಿಯಂ ಮೇಲೆ ತಾಡಿಸಿ 98ನೇ ಮೂಲವಸ್ತುವಿನ ಕ್ಯಾಲಿಫೋರ್ನಿಯಂ–246 ಮತ್ತು ಕ್ಯಾಲಿಫೋರ್ನಿಯಂ–244 ಸಮಸ್ಥಾನಿಗಳನ್ನು ನಿರ್ಮಿಸಿದ.

$${}_{92}U^{238} + {}_{6}C^{12} \rightarrow {}_{98}Cf^{246} + 4{}_{0}n^{1}$$

$${}_{92}U^{238} + {}_{6}C^{12} \rightarrow {}_{98}Cf^{244} + 6{}_{0}n^{1}$$

$C^{12}$ಸಮಸ್ಥಾನಿಯನ್ನು ಪ್ಲುಟೋನಿಯಂ–240 ರೊಡನೆ ಬಂಬಾಯಿಸುವುದರಿಂದ 100ನೇ ಮೂಲವಸ್ತು ಫರ್ಮಿಯಂ–248 ಸಮಸ್ಥಾನಿಯನ್ನು ಸೃಷ್ಟಿಸಲಾಗಿದೆ. ವೇಗೋತ್ಕರ್ಷಿತ $C^{12}$ ಸಮಸ್ಥಾನಿಯನ್ನು ಕ್ಯೂರಿಯಂ244ರ ಮೇಲೆ ಬಂಬಾಯಿಸಿದ್ದರಿಂದ ಸೃಷ್ಟಿಯಾದ ಮೂಲವಸ್ತು 102 ನೊಬೆಲಿಯಂನ್ನು 1957ರಲ್ಲಿ ಕಂಡುಹಿಡಿಯಲಾಯಿತು. 1958ರಲ್ಲಿ ಸೀಬೋರ್ಗ್ ವೇಗೋತ್ಕರ್ಷಿತ $C^{12}$ ಮತ್ತು $C^{13}$ ನ್ನು ಕ್ಯೂರಿಯಂ ಮೇಲೆ ತಾಡಿಸಿ ನೊಬೆಲಿಯಂನ ಸಮಸ್ಥಾನಿಗಳನ್ನು ನಿರ್ಮಿಸಿದ. ಹೀಗೆ $C^{12}$ ಮತ್ತು $C^{13}$ ಸಮಸ್ಥಾನಿಗಳು ಮಾನವನಿರ್ಮಿತ ಮೂಲವಸ್ತುಗಳ ಸೃಷ್ಟಿಯಲ್ಲಿ ಮಾಹಾಪಾತ್ರವನ್ನು ವಹಿಸಿವೆ.

1951ರಲ್ಲಿ ಆ್ಯಂಡರ್ಸನ್ ಮತ್ತು ಲಿಬ್ಬಿ ಇವರು ಜೀವವಸ್ತುಗಳು ಪ್ರತಿ ಒಂದು ಗ್ರಾಂ ಇಂಗಾಲದಿಂದ ಒಂದು ಮಿನಿಟಿನಲ್ಲಿ 15.6 ಎಲೆಕ್ಟ್ರಾನ್ ಕಣಗಳನ್ನು ಬಿಟ್ಟುಕೊಡುತ್ತವೆಂದೂ ಆದರೆ ಪಳೆಯುಳಿಕೆ ಇಂಗಾಲದಲ್ಲಿ ಈ ಕ್ರಿಯೆ ಇಲ್ಲದೆ ಇರುವುದನ್ನೂ ಸೂಚಿಸಿದರು. ಇದರಿಂದ ಇಂಗಾಲದ ಒಂದು ವಸ್ತು ಸಂಶ್ಲೇಷಣೆ ಮಾಡಿದ್ದೊ ಅಥವಾ ಪ್ರಕೃತಿಯಲ್ಲಿ ದೊರೆತದ್ದೊ ಎಂದು ತಿಳಿಯಲು ಸಾಧ್ಯ. 1952ರಲ್ಲಿ ಫಾಲ್ಬಿಂಗ್ಸ್ ಒಂದು ವಸ್ತುವಿನ (ಉದಾಹರಣೆ ಅಸಿಟಿಕ್ ಆಮ್ಲ) $C^{14}$ ಬಿಡುವ ಎಲೆಕ್ಟ್ರಾನುಗಳ ಪ್ರಮಾಣದಿಂದ ಅದು ಸಂಶ್ಲೇಷಿಸಿದ್ದೊ ಅಥವಾ ಪ್ರಕೃತಿಯಲ್ಲಿ ದೊರೆತದ್ದೊ ಎಂದು ತಿಳಿಸುವುದರ ಜೊತೆಗೆ ಅವು ಒಂದು ಮಿಶ್ರಣದಲ್ಲಿದ್ದರೆ ಅವುಗಳ ಪ್ರಮಾಣವನ್ನೂ ಕಂಡುಹಿಡಿಯಬಹುದು ಎಂದು ತೋರಿಸಿದ್ದಾನೆ.

$C^{14}$ ಸಮಸ್ಥಾನಿಯ ಗುರುತುಚೀಟಿಹಚ್ಚಿದ (ಲೇಬಲ್ಡ್) ರಾಸಾಯನಿಕ ಮತ್ತು ಜೀವರಾಸಾಯನಿಕ ಸಂಯುಕ್ತಗಳು ಈಗ ದೊರೆಯುತ್ತವೆ. ಬೆಲೆಯೂ ಕಡಿಮೆ. ಇವು ಪ್ರಯೋಗಪಥದಲ್ಲಿ ಬಹು ಸಹಾಯಕಗಳು. (ಪಿ.ಜಿ.ಆರ್.)

**ಇಂಗಾಲ ನಕ್ಷತ್ರ:** ಸಾಮಾನ್ಯವಾಗಿ ಶ್ವೇತಕುಬ್ಜ (ವೈಟ್ ಡ್ವಾರ್ಫ್) ತಾರೆ (ಕಾರ್ಬನ್ ಸ್ಟಾರ್) ಇದರಲ್ಲಿ ಕಾರ್ಬನ್ (ಇಂಗಾಲ) ಧಾತುವು ಹೈಡ್ರೋಜನ್ ಮತ್ತು ಹೀಲಿಯಮ್ ಧಾತುಗಳಿಗಿಂತ ಅಧಿಕವಾಗಿದ್ದು ನಕ್ಷತ್ರಗರ್ಭದಲ್ಲಿಯ ಬೈಜಿಕ ಕುಲುಮೆಗೆ ಇದೇ ಇಂಧನವಾಗುವುದರಿಂದ ಈ ಹೆಸರು ಬಂದಿದೆ. *

**ಇಂಗಾಲ ಸಂಯುಕ್ತ ರಸಾಯನವಿಜ್ಞಾನ:** ಇಂಗಾಲ ಮತ್ತು ಇಂಗಾಲ ಸಂಯುಕ್ತಗಳ ಅಭ್ಯಾಸ ಮಾಡುವ ರಸಾಯನವಿಜ್ಞಾನ ವಿಭಾಗ (ಕಾರ್ಬನ್ ಕಾಂಪೌಂಡ್ ಕೆಮಿಸ್ಟ್ರಿ). ಜೀವಜನ್ಯ–ಎಂದರೆ ಸಸ್ಯ ಮತ್ತು ಪ್ರಾಣಿಜನ್ಯ–ಸಂಯುಕ್ತಗಳ ಅಭ್ಯಾಸ ಮಾಡುವ

ರಸಾಯನವಿಜ್ಞಾನ ವಿಭಾಗವನ್ನು ಮೊದಲು ಸಾವಯವ (ಆರ್ಗ್ಯಾನಿಕ್) ರಸಾಯನವಿಜ್ಞಾನ ವೆಂದು ಕರೆಯುತ್ತಿದ್ದರು. ಅಂದಿನ ವಿಜ್ಞಾನಿಗಳು ಜೀವದ ನೆರವಿಲ್ಲದೆ ಈ ಬಗೆಯ ಸಂಯುಕ್ತಗಳ ತಯಾರಿಕೆ ಸಾಧ್ಯವೇ ಇಲ್ಲವೆಂದು ನಂಬಿದ್ದುದರಿಂದ ಈ ಹೆಸರು ಬಂತು. ಇಂಗಾಲ ಸಂಯುಕ್ತಗಳನ್ನು ಅವುಗಳ ಆಕರಗಳಿಂದ ಬೇರ್ಪಡಿಸಿ ಪರೀಕ್ಷಿಸುವುದು, ಇಂಗಾಲ ಸಂಯುಕ್ತಗಳ ಪರಿವರ್ತನೆಗಳ ಅಭ್ಯಾಸ ಇವು ಬಲು ಹಿಂದಿನಿಂದಲೂ ಪ್ರಚಲಿತವಿದ್ದುವು. ಉದಾಹರಣೆಗೆ ಕೆಲವೊಂದು ಮದ್ಯಸಾರಗಳ ತಯಾರಿಕೆಯನ್ನು ಸಾಧಾರಣವಾಗಿ 9ನೆಯ ಶತಮಾನದವರೆಗೂ ಗುರುತಿಸಲಾಗಿದೆ.

ಪ್ರಕೃತಿಯಲ್ಲಿ ದೊರೆಯುವ ಇಂಗಾಲ ಸಂಯುಕ್ತಗಳ ಕ್ರಮಬದ್ಧ ತಯಾರಿಕೆ ಮತ್ತು ಅಧ್ಯಯನಗಳು ಆರಂಭವಾದದ್ದು 18ನೆಯ ಶತಮಾನದಲ್ಲಿ. ಶೀಲೆ ಎಂಬ ವಿಜ್ಞಾನಿ ಟಾರ್ಟಾರಿಕ್, ಆಕ್ಸಾಲಿಕ್, ಸಿಟ್ರಿಕ್, ಮ್ಯಾಲಿಕ್, ಮ್ಯೂಸಿಕ್ ಮತ್ತು ಲ್ಯಾಕ್ಟಿಕ್ ಆಮ್ಲಗಳನ್ನು ಬೇರ್ಪಡಿಸಿ ಅವುಗಳ ಗುಣ ಲಕ್ಷಣಗಳನ್ನು ಪರೀಕ್ಷಿಸಿದ (1769–1785); ಪ್ರಾಣಿಮೂತ್ರದಲ್ಲಿರುವ ಯೂರಿಯವನ್ನು ಬೇರ್ಪಡಿಸಿದ (1773). ಈ ಬಗೆಯ ಹಲವಾರು ಸಂಯುಕ್ತಗಳು ದೊರೆತ ಅನಂತರ ಇವುಗಳ ಗುಣಲಕ್ಷಣಗಳು ಖನಿಜಜನ್ಯ ಸಂಯುಕ್ತಗಳ ಗುಣಲಕ್ಷಣಗಳಿಗಿಂತ ಭಿನ್ನವಾದುವುಗಳೆಂದು ಕಂಡುಕೊಂಡ ವಿಜ್ಞಾನಿಗಳು ಈ ಸಂಯುಕ್ತಗಳ ರಸಾಯನವಿಜ್ಞಾನವನ್ನು ಪ್ರತ್ಯೇಕವಾಗಿ ಅಭ್ಯಸಿಸತೊಡಗಿದರು. 19ನೆಯ ಶತಮಾನದ ಆದಿಭಾಗದಲ್ಲಿ ಬರ್ಜೀಲಿಯಸ್ ಈ ವಿಭಾಗವನ್ನು ಸಾವಯವ ರಸಾಯನವಿಜ್ಞಾನವೆಂದು ಕರೆದ. ಮುಖ್ಯವಾಗಿ ಕೇವಲ ನಾಲ್ಕು ಧಾತುಗಳಿಂದ–ಎಂದರೆ ಇಂಗಾಲ (ಕಾರ್ಬನ್), ಜಲಜನಕ (ಹೈಡ್ರೊಜನ್), ಆಮ್ಲಜನಕ (ಆಕ್ಸಿಜನ್) ಮತ್ತು ಸಾರಜನಕಗಳಿಂದ (ನೈಟ್ರೊಜನ್) ಬಲುಮಟ್ಟಿನ ಸಾವಯವ ಸಂಯುಕ್ತಗಳು ತಯಾರಾಗಿವೆಯೆಂದು ಲವಾಸ್ಯೆ ಈ ಸಂಯುಕ್ತಗಳ ವಿಶ್ಲೇಷಣದಿಂದ ತೋರಿಸಿದ. ಅದುವರೆಗೆ ನಿರವಯವ ಲವಣಗಳನ್ನು (ಇನಾರ್ಗ್ಯಾನಿಕ್ ಸಾಲ್ಟ್ಸ್) ತಯಾರಿಸಲು ಉಪಯೋಗಿಸುತ್ತಿದ್ದ ಯಾವ ಕ್ರಿಯೆ, ವಿಧಾನಗಳಿಂದಲೂ ಈ ಸಂಯುಕ್ತಗಳನ್ನು ತಯಾರಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಜೈವಿಕ ಸಸ್ಯ ಮತ್ತು ಪ್ರಾಣಿಗಳಲ್ಲಿರುವ ಜೀವಶಕ್ತಿಯ ನೆರವಿಲ್ಲದೆ ಇಂಥವನ್ನು ತಯಾರಿಸುವುದು ಅಸಾಧ್ಯವೆಂದು ಭಾವಿಸಲಾಯಿತು.

ಸಜೀವಿಗಳಲ್ಲಿನ ಅಥವಾ ಕೋಶಗಳಲ್ಲಿನ (ಸೆಲ್) ಜೀವಶಕ್ತಿಯ ನೆರವು ತೆಗೆದುಕೊಳ್ಳದೆ ಪ್ರಯೋಗಶಾಲೆಯಲ್ಲಿ ಅದುವರೆಗೆ ಪರಿಚಿತವಾಗಿದ್ದ ರಾಸಾಯನಿಕ ಕ್ರಿಯೆಗಳನ್ನು ಉಪಯೋಗಿಸಿ ವೋಹ್ಲರ್ ಸಯನೋಜೆನ್ನಿನಿಂದ ($C_2N_2$) ಆಕ್ಸಾಲಿಕ್ ಆಮ್ಲವನ್ನೂ $(COOH)_2$ (1824), ಮುಂದೆ 1828ರಲ್ಲಿ ಅಮೋನಿಯಂ ಸಯನೇಟ್‌ನಿಂದ $[(NH_4)_2CNO]$ ಯೂರಿಯವನ್ನೂ ಸಂಶ್ಲೇಷಿಸಿದ. ವೋಹ್ಲರನ ಈ ಸಂಶ್ಲೇಷಣಗಳು ಸಾವಯವ ಸಂಯುಕ್ತಗಳ ಸಂಶ್ಲೇಷಣೆಗೆ ಜೀವಶಕ್ತಿಯ ನೆರವು ಅಗತ್ಯವಿಲ್ಲವೆಂದೂ ಇತರ ನಿರವಯವ ಸಂಯುಕ್ತಗಳಂತೆ ಅವನ್ನೂ ಪ್ರಯೋಗಶಾಲೆಯಲ್ಲಿ ತಯಾರಿಸಬಹುದೆಂದೂ ತೋರಿಸಿದುವು. ವೋಹ್ಲರನ ಹಾದಿಹಿಡಿದ ವಿಜ್ಞಾನಿಗಳು ಅವನ ಅನಂತರ ಅನೇಕ ಸಾವಯವ ಸಂಯುಕ್ತಗಳನ್ನು ಪ್ರಯೋಗಶಾಲೆಯಲ್ಲಿ ಸಂಶ್ಲೇಷಿಸಿದುದರ ಪರಿಣಾಮವಾಗಿ ಜೀವಶಕ್ತಿವಾದ ಕ್ರಮೇಣ ಕಣ್ಮರೆಯಾಯಿತು.

1848ರ ವೇಳೆಗೆ ಅನೇಕ ಸಾವಯವ ಸಂಯುಕ್ತಗಳ ವಿಶ್ಲೇಷಣೆ, ಸಂಶ್ಲೇಷಣೆಗಳು ನಡೆದಿದ್ದು ಇಂಗಾಲ ಎಲ್ಲ ಸಾವಯವ ಸಂಯುಕ್ತಗಳಲ್ಲಿನ ಆವಶ್ಯಕ ಧಾತುವೆಂದು ತಿಳಿದುಬಂತು. ಅಂದಿನಿಂದ ಈ ವಿಭಾಗಕ್ಕೆ ಇಂಗಾಲ ಸಂಯುಕ್ತರಸಾಯನವಿಜ್ಞಾನವೆಂಬ ಹೆಸರು ಆರಂಭವಾಯಿತು. ಇಂದು ಈ ವಿಭಾಗದಲ್ಲಿ ಜೀವಜನ್ಯ ಸಂಯುಕ್ತಗಳು ಮಾತ್ರವಲ್ಲದೆ ಅನೇಕ ಕೃತಕವಾಗಿ ತಯಾರಿಸಿದ ಇಂಗಾಲ ಸಂಯುಕ್ತಗಳ ಸಂಶ್ಲೇಷಣೆ, ಅಧ್ಯಯನಗಳು ಸೇರಿರುವುದರಿಂದ ಸಾವಸಯವ ರಸಾಯನವಿಜ್ಞಾನ ಎಂಬ ಶೀರ್ಷಿಕೆಗಿಂತಲೂ ಇಂಗಾಲಸಂಯುಕ್ತರಸಾಯನವಿಜ್ಞಾನ ಎಂಬ ಶೀರ್ಷಿಕೆಯೇ ಸೂಕ್ತವಾಗಿದೆ. ಆದರೆ ಮೊದಲೇ ತಿಳಿಸಿದಂತೆ ಈ ವಿಭಾಗದಲ್ಲಿ ಇಂಗಾಲಸಂಯುಕ್ತಗಳೆಲ್ಲವೂ ಸೇರುವುದಿಲ್ಲ. ಸರಳ ಮತ್ತು ಖನಿಜಸಂಬಂಧವಾದ ಸಂಯುಕ್ತಗಳಾದ ಇಂಗಾಲದ ಆಕ್ಸೈಡುಗಳು ಕಾರ್ಬಾನಿಕ್ ಆಮ್ಲ ಮತ್ತು ಅದರ ಲವಣಗಳು, ಹೈಡ್ರೊಸಯನಿಕ್ ಆಮ್ಲ ಮತ್ತು ಅದರ ಲವಣಗಳು, ಸಯನೇಟುಗಳೇ ಮೊದಲಾದುವುಗಳು ನಿರವಯವ (ಇನಾರ್ಗ್ಯಾನಿಕ್) ರಸಾಯನವಿಜ್ಞಾನದ ಗುಂಪಿಗೆ ಸೇರುತ್ತವೆ. ಇಂಗಾಲ ಸಂಯುಕ್ತ ರಸಾಯನವಿಜ್ಞಾನ ವಿಭಾಗದಲ್ಲಿ ಸೇರಿರುವ ಸಂಯುಕ್ತಗಳಲ್ಲಿ ಸಾಮಾನ್ಯವಾಗಿ ಎಲ್ಲದರಲ್ಲಿಯೂ ಇಂಗಾಲದೊಡನೆ ಜಲಜನಕವೂ ಇದ್ದೇ ಇರುತ್ತದೆ.

ಇಂಗಾಲದ ಸಂಯುಕ್ತಗಳು ಅಸಂಖ್ಯಾತ ಸಂಖ್ಯೆಯಲ್ಲಿರಲು ಕಾರಣವನ್ನು ವಿವೇಚಿಸುವಾಗ ಅದರ ಸಂಯೋಗದ ಬಗೆ ಇತರ ಧಾತುಗಳ ಸಂಯೋಗದ ಬಗೆಗಿಂತಲೂ ಭಿನ್ನವಾದುದೆಂದು ತಿಳಿದುಬರುತ್ತದೆ. ನಾಲ್ಕು ವೇಲೆನ್ಸಿ ಎಲೆಕ್ಟ್ರಾನುಗಳನ್ನು ಪಡೆದಿರುವ ಇಂಗಾಲ ಸ್ಥಿರ ಅಯಾನ್ (ಸ್ಟೇಬಲ್ ಅಯಾನ್) ಆಗಲು ನಾಲ್ಕು ವಿದ್ಯುತ್ಕಣಗಳನ್ನು ಕಳೆದುಕೊಳ್ಳಬೇಕು, ಇಲ್ಲವೇ ನಾಲ್ಕನ್ನು ಗಳಿಸಬೇಕು. ಅಯಾನ್ ಸೃಷ್ಟಿಯಾಗಲು ಅಧಿಕ ಶಕ್ತಿಬೇಕು. ಆದ್ದರಿಂದಲೇ ಇಂಗಾಲಸಂಯುಕ್ತಗಳಲ್ಲಿ ಇಂಗಾಲ ಅಯಾನ್ ರೂಪದಲ್ಲಿರುವುದಿಲ್ಲ; ಮತ್ತು ಇಂಗಾಲಸಂಯುಕ್ತಗಳಲ್ಲಿ ಬಂಧಗೊಂಡಿರುವ ಪರಮಾಣುಗಳ ನಡುವೆ ವಿದ್ಯುದಂಶದ ಬೇರ್ಪಡೆಯೂ (ಚಾರ್ಜ್ ಸೆಪರೇಷನ್) ಅಧಿಕವಾಗಿರುವುದಿಲ್ಲ. ಬಂಧವೊಂದರ ನಿರ್ಮಾಣಕ್ಕಾಗಿ ಆವಶ್ಯಕವಾಗಿರುವ ವಿದ್ಯುತ್ಕಣಗಳ ವಿದ್ಯುದಂಶಗಳು ಬಂಧಗೊಂಡಿರುವ ಎರಡು ಪರಮಾಣುಗಳ ನಡುವೆ ಹೆಚ್ಚುಕಡಿಮೆ ಸರಿಸಮವಾಗಿ ಹಂಚಿ ಹೋಗಿರುತ್ತವೆ. ಇಂಥ ಬಂಧನಗಳಲ್ಲಿ ಅಸಮಾಂಗತ್ವ (ಅಸಿಮೆಟ್ರಿ) ಅತ್ಯಲ್ಪವಾದುದರಿಂದ ಇವುಗಳ ಬಂಧ ಅಧಿಕ. ಈ ಕಾರಣದಿಂದಲೇ ಇಂಗಾಲಸಂಯುಕ್ತಗಳ ಸ್ಥಿರತೆಯೂ ಹೆಚ್ಚು. ಈ ತರಹದ ಸರಿಸಮ ವಿದ್ಯುದಂಶ ಅಥವಾ ವಿದ್ಯುತ್ಕಣಗಳ ಹಂಚಿಕೆಯಿಂದ ಪರಮಾಣುಗಳ ನಡುವೆ ಏರ್ಪಡುವ ಬಂಧದ ಹೆಸರು ಸಹ ಸಂಯೋಗಬಂಧ (ಕೋವೆಲೆಂಟ್ ಬಾಂಡ್). ಇಂಥ ಬಂಧಶಕ್ತಿಯನ್ನು ಪಡೆದಿರುವುದರಿಂದಲೇ ಇಂಗಾಲದ ಪರಮಾಣುಗಳ ನಡುವೆ ಪರಸ್ಪರ ಸ್ಥಿರಬಂಧ ಸಾಧ್ಯ. ಈ ಬಗೆಯ ಅಧಿಕಬಂಧಶಕ್ತಿಯುಳ್ಳ ಇಂಗಾಲ ಪರಮಾಣುಗಳ ಸ್ಥಿರವಾದ ಸರಣಿ (ಚೈನ್) ವೃತ್ತ (ರಿಂಗ್) ಮತ್ತು ವಿವಿಧಾಕಾರದ ಜಾಲ (ನೆಟ್‌ವರ್ಕ್) ರಚನೆಗಳು ಸಾಧ್ಯ. ಇಂಗಾಲದ ಪರಮಾಣುಗಳು ಇತರ ಇಂಗಾಲದ ಪರಮಾಣುಗಳೊಡನೆ ಮಾತ್ರವಲ್ಲದೆ ಇತರ ಧಾತುಗಳ ಪರಮಾಣುಗಳೊಡನೆಯೂ ಸ್ಥಿರರೀತಿಯಲ್ಲಿ ಬಂಧಗೊಳ್ಳಬಲ್ಲುವು. ಇಂಗಾಲ–ಇಂಗಾಲ ಬಂಧವಲ್ಲದೆ ಇಂಗಾಲಸಂಯುಕ್ತ ಗಳಲ್ಲಿನ ಮತ್ತೊಂದು ಮುಖ್ಯ ಬಂಧವಾದ ಇಂಗಾಲ–ಜಲಜನಕ ಬಂಧದಲ್ಲಿಯೂ ವಿದ್ಯುದಂಶ ತಕ್ಕಮಟ್ಟಿಗೆ ಸರಿಸಮನಾಗಿಯೇ ಹಂಚಿಕೆಯಾಗಿರುವುದರಿಂದ ಆ ಬಗೆಯ ಬಂಧವೂ ಬಹು ಸ್ಥಿರವಾದುದು. ಈ ಬಗೆಯಾಗಿ ವಿದ್ಯುದಂಶ ಅಥವಾ ವಿದ್ಯುತ್ಕಣಗಳ ಹಂಚಿಕೆಯಿಂದ ಏರ್ಪಡುವ ಬಂಧಗಳನ್ನು ಸಂಯುಕ್ತಗಳಲ್ಲಿ ಈ ಕೆಳಗೆ ತೋರಿಸಿರುವಂತೆ ನಿರ್ದಶಿಸಬಹುದು.




ಚಿತ್ರ 1

ಇಂಗಾಲಸಂಯುಕ್ತಗಳಲ್ಲಿ ಪರಮಾಣುಗಳ ನಡುವಣ ಸಾಮಾನ್ಯ ಮತ್ತು ಸರಳ ಬಂಧ ಏಕಬಂಧ. ಈ ಬಗೆಯ ಬಂಧದಲ್ಲಿ ಎರಡು ಪರಮಾಣುಗಳ ನಡುವೆ ಎರಡು ವಿದ್ಯುತ್ಕಣಗಳು ಸರಿಸಮನಾಗಿ ಹಂಚಿಕೆಯಾಗಿರುತ್ತವೆ. ಇಂಗಾಲ ಮತ್ತು ಇನ್ನೊಂದು ಇಂಗಾಲ ಅಥವಾ ಇತರ ಪರಮಾಣುಗಳ ನಡುವೆ ಸಂಯೋಗಶಕ್ತಿಯ ನಿಯಮಗಳಿಗೆ ಅನುಗುಣವಾಗಿ ದ್ವಿಬಂಧ, ತ್ರಿಬಂಧಗಳೂ ಸಾಧ್ಯ. ದ್ವಿಬಂಧದಿಂದ ಕೂಡಿರುವ ಎರಡು ಪರಮಾಣುಗಳ ನಡುವೆ ನಾಲ್ಕು ವಿದ್ಯುತ್ಕಣಗಳೂ ತ್ರಿಬಂಧದಿಂದ ಕೂಡಿರುವ ಎರಡು




ಚಿತ್ರ 2.

ಪರಮಾಣುಗಳ ಮಧ್ಯೆ ಆರು ವಿದ್ಯುತ್ಕಣಗಳೂ ಹಂಚಿಕೆಯಾಗಿರುತ್ತವೆ. ಮೇಲೆ ತೋರಿಸಿರುವ ಮೀಥೇನ್ ಮತ್ತು ಈಥೇನ್ ಅಣುಗಳಲ್ಲಿರುವ ಎಲ್ಲ ಬಂಧಗಳೂ ಎರಡು ವಿದ್ಯುತ್ಕಣಗ ಳಿಂದಾದ ಏಕಬಂಧಗಳು. ಎಥಿಲೀನ್ ಮತ್ತು ಫಾರ್ಮಾಲ್ಡಿಹೈಡುಗಳು ದ್ವಿಬಂಧವನ್ನುಳ್ಳ

ಸಂಯುಕ್ತಗಳು. ಅಸಿಟಲೀನ್ ಮತ್ತು ಅಸಿಟೋನೈಟ್ರೈಲ್ಲುಗಳು ತ್ರಿಬಂಧವುಳ್ಳ ಸಂಯುಕ್ತಗಳು. ರಚನೆಗಳನ್ನು ತೋರಿಸುವಾಗ ಚುಕ್ಕೆಗಳಾಗಿ ವಿದ್ಯುತ್ಕಣಗಳನ್ನಾಗಲೀ ಬಂಧಗಳನ್ನು ಸೂಚಿಸುವ ಗೆರೆಗಳನ್ನಾಗಲೀ ಉಪಯೋಗಿಸಬಹುದು. ಏಕಬಂಧನವನ್ನು ನಿರ್ದೇಶಿಸಲು ಒಂದು ಗೆರೆಯನ್ನೂ ದ್ವಿಬಂಧಕ್ಕೆ ಎರಡು ಗೆರೆಗಳನ್ನೂ ತ್ರಿಬಂಧಕ್ಕೆ ಮೂರು ಗೆರೆಗಳನ್ನೂ ಉಪಯೋಗಿಸಲಾಗುತ್ತದೆ.

ಸಂಯುಕ್ತಗಳಲ್ಲಿ ಏಕಬಂಧ, ದ್ವಿಬಂಧ, ತ್ರಿಬಂಧಗಳು ಯಾವುದೇ ಇರಲಿ ಪ್ರತಿ ಪರಮಾಣುವೂ ತನ್ನ ವೇಲೆನ್ಸಿ ನಿಯಮಗಳನ್ನು ಅನುಸರಿಸಲೇಬೇಕು–ಎಂದರೆ ಇಂಗಾಲದ ಪರಮಾಣುವಿನ ಬಂಧಗಳು ನಾಲ್ಕು, ಆಮ್ಲಜನಕದ ಪರಮಾಣುವಿನ ಬಂಧಗಳು ಎರಡು, ಸಾರಜನಕದ ಪರಮಾಣುವಿನ ಬಂಧಗಳು ಮೂರು–ಇವೇ ಮೊದಲಾದ ನಿಯಮಗಳ ಉಲ್ಲಂಘನೆ ಆಗುವಂತಿಲ್ಲ.

ಸಮಘಟಕತ್ವ (ಐಸೋಮೆರಿಸಂ): ಇತರ ಧಾತುಗಳ ಸಂಯುಕ್ತಗಳನ್ನು ನಿರ್ದೇಶಿಸುವಾಗ ಸಾಮಾನ್ಯವಾಗಿ ರಚನಾಸೂತ್ರಗಳನ್ನು ಬರೆಯುವುದಿಲ್ಲ; ಕೇವಲ ಅಣುಸೂತ್ರಗಳೇ ಸಾಕು. ಆದರೆ ಇಂಗಾಲ ಸಂಯುಕ್ತಗಳನ್ನು (ಕೆಲವು ಅತಿ ಸರಳವಾದುವುಗಳನ್ನು ಬಿಟ್ಟರೆ) ನಿರ್ದೇಶಿಸಲು ಅಣುಸೂತ್ರಗಳು ಸಾಲವು. ಅಣುಸೂತ್ರ ಒಂದೇ ಆಗಿದ್ದರೂ ರಚನೆಯಲ್ಲಿ ಭಿನ್ನವಾಗಿರುವ ಇಂಗಾಲ ಸಂಯುಕ್ತಗಳು ಅನೇಕವಿವೆ. ಇಂಥ ಸಂಯುಕ್ತಗಳನ್ನು ಪರಸ್ಪರ ಸಮಘಟಕಗಳೆಂದೂ (ಐಸೋಮೆರ್ಸ್) ಈ ವಿಶಿಷ್ಟ ಲಕ್ಷಣವನ್ನು ಸಮಘಟಕತ್ವವೆಂದೂ (ಐಸೋಮೆರಿಸಂ) ಕರೆಯಲಾಗುತ್ತದೆ.

ಹೈಡ್ರೊಕಾರ್ಬನ್ (ಜಲಜನಕೇಂಗಾಲ) ಸಂಯುಕ್ತಗಳಲ್ಲಿ ಬ್ಯೂಟೇನ್ ಮತ್ತು ಅದಕ್ಕಿಂತ ಹಿರಿಯಗಾತ್ರದ ಅಣುಗಳಲ್ಲಿ ಸಮಘಟಕತ್ವವನ್ನು ಕಾಣಬಹುದು.

ಮೇಲೆ ಬರೆದಿರುವ ಎರಡು ಅಣುಗಳ ಅಣುಸೂತ್ರ ಒಂದೇ ಆದರೂ ಅವು ಒಂದೇ ಬಗೆಯವಲ್ಲ. ಎರಡರಲ್ಲೂ ನಾಲ್ಕು ಇಂಗಾಲಗಳಿದ್ದರೂ ಮೊದಲನೆಯದರಲ್ಲಿ ನಾಲ್ಕು ಇಂಗಾಲದ ಪರಮಾಣುಗಳೂ ಒಂದು ನೇರ ಸರಣಿಯಲ್ಲಿವೆ. ಇದು ನಾರ್ಮಲ್ ಬ್ಯೂಟೇನ್. ಎರಡನೆಯದರಲ್ಲಿ ಮೂರು ಮಾತ್ರ ಒಂದು ನೇರ ಸರಣಿಯಲ್ಲಿದ್ದು ನಾಲ್ಕನೆಯದು ಎರಡನೆಯ ಇಂಗಾಲದ ಪರಮಾಣುವಿನಿಂದ ಕವಲಾಗಿ ಸೇರಿಕೊಂಡಿದೆ. ಇದು ಐಸೋಬ್ಯೂಟೇನ್. ನಾರ್ಮಲ್ ಮತ್ತು ಐಸೋಬ್ಯೂಟೇನುಗಳೆರಡರ ಅಣುಸೂತ್ರವೂ $C_4H_{10}$. ಆದರೂ ಅವುಗಳ ರಚನೆಗಳು ಭಿನ್ನವಾಗಿರುವುದರಿಂದ, ಭೌತಲಕ್ಷಣಗಳಲ್ಲಿ ಮತ್ತು ರಾಸಾಯನಿಕ ಪಟುತ್ವಗಳಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತದೆ. ಆದ್ದರಿಂದ ಅವು ಭಿನ್ನ ಸಂಯುಕ್ತಗಳೇ ಹೊರತು ಒಂದೇ ಸಂಯುಕ್ತದ ಭಿನ್ನರೂಪಗಳಲ್ಲ. ಪುಂಜವೊಂದರ (ಮೇಲ್ಕಂಡ ಬ್ಯೂಟೇನುಗಳಲ್ಲಿ ಮೀಥೈಲ್ ಪುಂಜದ) ಸ್ಥಾನಪಲ್ಲಟನ ಈ ಬಗೆಯ ಸಮಘಟಕಗಳಲ್ಲಿರುವ ಪರಸ್ಪರ ವ್ಯತ್ಯಾಸ–ಆದ್ದರಿಂದ ಇವುಗಳ ಹೆಸರು ಸ್ಥಾನೀಯ (ಪೊಸಿಷನಲ್) ಸಮಘಟಕಗಳು. ಸ್ಥಾನೀಯ ಸಮಘಟಕತ್ವವೆಂದು ಈ ಸಮಘಟಕತ್ವದ ಹೆಸರು.



ಇನ್ನೊಂದು ರೀತಿಯ ಸಾಮಾನ್ಯ ಸಮಘಟಕತ್ವ ಕ್ರಿಯಾತ್ಮಕ ಸಮಘಟಕತ್ವ. ಎರಡು ಕ್ರಿಯಾತ್ಮಕ ಸಮಘಟಕತ್ವಗಳ ಅಣುಸೂತ್ರ ಒಂದೇ ಆಗಿದ್ದು ರಚನಾಸೂತ್ರದಲ್ಲಿ ಭಿನ್ನತೆಯಿರುವುದು ಮಾತ್ರವಲ್ಲದೆ ಇವುಗಳ ಗುಣಲಕ್ಷಣಗಳನ್ನು ನಿರ್ಣಯಿಸುವ ಕ್ರಿಯಾಪುಂಜಗಳಲ್ಲಿಯೇ (ಫಂಕ್ಷನಲ್ ಗ್ರೂಪ್) ವ್ಯತ್ಯಾಸವಿರುತ್ತದೆ. ಉದಾಹರಣೆಗೆ $C_2H_6O$ ಎಂಬ ಅಣುಸೂತ್ರವಿರುವ ಎರಡು ಸಂಯುಕ್ತಗಳಿವೆ. ಇವುಗಳಲ್ಲಿ ಮೊದಲನೆಯದು OH ಅಥವಾ ಹೈಡ್ರಾಕ್ಸಿಲ್ ಕ್ರಿಯಾಪುಂಜವನ್ನುಳ್ಳ ಈಥೈಲ್ ಆಲ್ಕೊಹಾಲ್. ಎರಡನೆಯದು ಡೈಮೀಥೈಲ್ ಈಥರ್. ಇವೆರಡಕ್ಕೂ ಭೌತ ಮತ್ತು ರಾಸಾಯನಿಕ ಗುಣಲಕ್ಷಣಗಳಲ್ಲಿ ಬಹಳ ವ್ಯತ್ಯಾಸವಿದೆ. ಎರಡೂ ಬೇರೆ ಬೇರೆ ರಾಸಾಯನಿಕ ವರ್ಗಗಳಿಗೆ ಸೇರಿದ ಸಂಯುಕ್ತಗಳು.

ಇಂಗಾಲ ಪರಮಾಣುವಿನ ರಚನೆ ಮತ್ತು ಇಂಗಾಲಸಂಯುಕ್ತಗಳ ಆಕಾರ: ಎಲ್ಲ ಪರಮಾಣುಗಳಿಗೂ ಮಧ್ಯೆ ಪರಮಾಣುಕೇಂದ್ರ ಅಥವಾ ಬೀಜ (ನ್ಯೂಕ್ಲಿಯಸ್) ಇದೆ. ಬೀಜದ ಸುತ್ತಲೂ ಋಣ ವಿದ್ಯುತ್ಕಣಗಳು ಮುಖ್ಯ ಶಕಲಕಕ್ಷೆಗಳ (ಮೇನ್ ಕ್ವಾಂಟೈಜ್ಡ್ ಆರ್ಬಿಟ್ಸ್) ಮಿತಿಯಲ್ಲಿ ನಿರ್ದಿಷ್ಟ ಕಕ್ಷೆಗಳಲ್ಲಿ ಬಲು ವೇಗವಾಗಿ ಸಂಚರಿಸುತ್ತಿರುತ್ತವೆ. ಬೀಜದ ಸುತ್ತಲಿನ ಪ್ರದೇಶದಲ್ಲಿ ಯಾವ ಎಡೆಯಲ್ಲಿ ಬೇಕಾದರೂ ವಿದ್ಯುತ್ಕಣವೊಂದು ಇರಬಹುದಾದ ಸಂಭಾವ್ಯತೆಯನ್ನು (ಪ್ರಾಬಬಿಲಿಟಿ) ಷ್ರೋಡಿಂಗರ್ ಸಮೀಕರಣವನ್ನು ಉಪಯೋಗಿಸಿ ತಿಳಿಯಬಹುದು. ಆವರಣವೊಂದರಲ್ಲಿ ಹೀಗೆ ಕಂಡುಹಿಡಿದ ಸಂಭಾವ್ಯತೆಯನ್ನು ಪರೀಕ್ಷಿಸಿದಾಗ ಯಾವೊಂದು ಎಡೆ ಅಥವಾ ವರ್ತುಲದಲ್ಲಿಯೂ ಪೂರ್ಣ ಸಂಭಾವ್ಯತೆ (ಎಂದರೆ ಸಂಭಾವ್ಯತೆ 1) ಇಲ್ಲದೆ ಹೋದರೂ ಹಲವೆಡೆಗಳಲ್ಲಿ ಅದು ಹೆಚ್ಚಾಗಿದ್ದು ಅಕ್ಕಪಕ್ಕಗಳಲ್ಲಿ ಕ್ರಮೇಣ ಕಡಿಮೆಯಾಗುವುದು ತಿಳಿದುಬರುತ್ತದೆ. ವಿದ್ಯುತ್ಕಣವನ್ನು ಋಣ ವಿದ್ಯುತ್ತಿನ ಚದರಿ ಹರಡಿದ ಮೋಡದಂತೆ (ಡಿಫ್ಯೂಸ್ಡ್ ಕ್ಲೌಡ್ ಆಫ್ ಎಲೆಕ್ಟ್ರಿಸಿಟಿ) ಚಿತ್ರಿಸಿದರೆ ಸಂಭಾವ್ಯತೆ ಹೆಚ್ಚಿರುವ ಕಡೆಗಳಲ್ಲಿ ದಟ್ಟವಾಗಿಯೂ ಕಡಿಮೆಯಿರುವ ಕಡೆಗಳಲ್ಲಿ ತೆಳುವಾಗಿಯೂ ಇರುತ್ತದೆ. ಸಂಭಾವ್ಯತೆಯನ್ನು ನಿರ್ದೇಶಿಸುವ ನಕ್ಷೆಯಲ್ಲಿ ದಟ್ಟ ಮೋಡದ ನಕ್ಷೆ ಒಂದು ನಿರ್ದಿಷ್ಟ ಆಕೃತಿಯನ್ನು ತಾಳಿರುವುದು ಕಂಡುಬರುತ್ತದೆ. ಈ ನಿರ್ದಿಷ್ಟ ಆಕೃತಿಗಳು ಆಯಾ ವಿದ್ಯುತ್ಕಣಗಳ ಶಕ್ತಿ ಪ್ರತೀಕಗಳು. ಇವನ್ನು ಪರಮಾಣು ಕಕ್ಷೆಯಗಳೆಂದು (ಅಟಾಮಿಕ್ ಆರ್ಬಿಟಲ್) ಕರೆಯಲಾಗುತ್ತದೆ. ನಿರ್ದಿಷ್ಟ ಆಕೃತಿ ಪಡೆದಿರುವ ಈ ಕಕ್ಷೆಯಗಳನ್ನು ಅವುಗಳ ಆಕೃತಿ, ಶಕ್ತಿಮಟ್ಟಗಳಿಗೆ ಅನುಗುಣವಾಗಿ ಹೆಸರಿಸಲಾಗಿದೆ. ಇಂಗಾಲದ ಪರಮಾಣುಸ್ವರೂಪ ಮತ್ತು ಇಂಗಾಲಸಂಯುಕ್ತಗಳ ಆಕಾರವನ್ನು ಅರಿಯಲು ಪ್ರಮುಖ ಆವರಣದ (ಮೇನ್ ಷೆಲ್) ಮಿತಿಯಲ್ಲಿನ S ಮತ್ತು P ಎಂಬ ಪರಮಾಣು ಕಕ್ಷೆಯಗಳ ಆಕೃತಿಗಳನ್ನು ತಿಳಿದುಕೊಂಡರೆ ಸಾಕು. S ಕಕ್ಷೆಯ ಬೀಜದ ಸುತ್ತಲೂ ಸಮನಾಗಿ ಹರಡಿಕೊಂಡು ಪೊಳ್ಳು ಗೋಳಾಕೃತಿಯನ್ನು ಪಡೆದಿರುತ್ತದೆ.



ಚಿತ್ರ 3

ಮೊದಲ ಮುಖ್ಯ ವಲಯದಲ್ಲಿ ಶಕಲ ನಿಯಮಗಳಿಗೆ ಅನುಗುಣವಾಗಿ ಎರಡು ವಿದ್ಯುತ್ಕಣಗಳು ಮಾತ್ರವಿದ್ದು 1s ಪರಮಾಣು ಕಕ್ಷೆಯದಲ್ಲಿರುತ್ತವೆ. ಇವು ಇಂಗಾಲದ ರಾಸಾಯನಿಕ ಸಂಯೋಗ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ. ಮುಂದಿನ ಎರಡು ವಿದ್ಯುತ್ಕಣಗಳು ಗೋಳಾಕೃತಿಯ 2s ಕಕ್ಷೆಯದಲ್ಲಿವೆ. ಮುಂದಿನ 2p ಶಕ್ತಿಹಂತದಲ್ಲಿ ಪರಸ್ಪರ ಲಂಬಕೋನಗಳಲ್ಲಿರುವ ಮೂರು ಕಕ್ಷೆಯಗಳಿವೆ. ಪ್ರತಿ ಕಕ್ಷೆಯವೂ x,y,z ಆಕಾಶ ಅಕ್ಷಗಳ (ಸ್ಪೇಷಿಯಲ್ ಆಕ್ಸಿಸ್) ಮೇಲಿದ್ದು ಎರಡು ಭಾಗಗಳಲ್ಲಿರುತ್ತವೆ. ಇದನ್ನು $P_x, P_y, P_z$ ಕಕ್ಷೆಯಗಳೆಂದು ಕರೆದಿದೆ. Px ಕಕ್ಷೆಯದ ಎರಡು ಭಾಗಗಳು x ಅಕ್ಷದ ಮೇಲೆ ಬೀಜದ ಎಡಬಲ ಭಾಗಗಳಲ್ಲಿದ್ದು ಪ್ರತಿಭಾಗವೂ ಗೋಳಾಕಾರವಾಗಿದೆ. ಎಂದರೆ $P_x$ ನ ಪೂರ್ಣ ಆಕಾರ ಎರಡು ಗೋಳಗಳು ಬೀಜದಲ್ಲಿ



ಚಿತ್ರ 4. ಮೂರು ಸಮಾನಶಕ್ತಿಯ P ಕಕ್ಷೆಯಗಳು

ಪರಸ್ಪರ ತಗುಲಿದಂತಿದೆ. $P_y$ ಮತ್ತು $P_z$ ಕಕ್ಷೆಯಗಳ ಆಕೃತಿಯೂ ಇದೇ ರೀತಿ ಇದೆ. ಆದರೆ ಅವುಗಳ ಇರುವಿಕೆಯ ಅಕ್ಷಗಳು y ಮತ್ತು z ಅಕ್ಷಗಳು.

ಇಂಗಾಲದ ಪರಮಾಣು ಆರು ವಿದ್ಯುತ್ಕಣಗಳನ್ನು ಪಡೆದಿದ್ದು ಅವುಗಳಲ್ಲಿ ಮೊದಲ ನಾಲ್ಕು ಯಾವ ಯಾವ ಕಕ್ಷೆಯದಲ್ಲಿ ಹಂಚಿಕೆಯಾಗಿರುತ್ತವೆಂಬುದನ್ನು ಈಗ ಅರಿತಿದ್ದೇವೆ. ಉಳಿದ ಇನ್ನೆರಡು ವಿದ್ಯುತ್ಕಣಗಳು ಸಮಾನ ಶಕ್ತಿಯನ್ನುಳ್ಳ ಎರಡು P ಕಕ್ಷೆಯಗಳಲ್ಲಿ

ಒಂದೊಂದರಲ್ಲಿ ಒಂದರಂತೆ ಹಂಚಿಕೆಯಾಗಿರುತ್ತವೆ. 2s ಕಕ್ಷೆಯದಲ್ಲಿ ಎರಡು ವಿದ್ಯುತ್ಕಣಗಳಿದ್ದು ಈ ಕಕ್ಷೆಯ ಪೂರ್ಣವಾಗಿ ತುಂಬಿದೆ. ಸಂಯೋಗರೀತಿಯ ನಿಯಮಗಳಿಗನುಗುಣವಾಗಿ ಈ ವಿದ್ಯುತ್ಕಣಗಳು ಬಂಧಗಳಲ್ಲಿ ಭಾಗವಹಿಸುವಂತಿಲ್ಲ. ಇಂಗಾಲದ ಪರಮಾಣುವಿನ ವೇಲೆನ್ಸಿ 2p ಕಕ್ಷೆಯಗಳಲ್ಲಿ ಎರಡರಲ್ಲಿ ಪ್ರತಿಯೊಂದರಲ್ಲಿ ಒಂದೊಂದರಂತೆ ಇರುವ ಎರಡು ವಿದ್ಯುತ್ಕಣಗಳಲ್ಲಿ ಮಾತ್ರ ಅಡಕವಾಗಿದೆ ಎಂದಂತಾಯಿತು. ಇದರಿಂದ ಇಂಗಾಲದ ಸಂಯೋಗಶಕ್ತಿ ಎರಡೆಂದೂ P ಕಕ್ಷೆಯಗಳು ಒಂದಕ್ಕೊಂದು ಲಂಬಕೋನದಲ್ಲಿರುವುದರಿಂದ ಇಂಗಾಲದ ಬಂಧಗಳು ಒಂದಕ್ಕೊಂದು ಲಂಬಕೋನದಲ್ಲಿ ಇವೆಯೆಂದೂ ಅರಿವಾಗುತ್ತದೆ. ಆದರೆ ಇದು ಸತ್ಯಕ್ಕೆ ದೂರವಾದ ವಿಷಯ. ಇಂಗಾಲದ ವೇಲೆನ್ಸಿ ನಾಲ್ಕೆಂದೂ ನಾಲ್ಕು ಬಂಧಗಳೂ ಆಕಾಶದಲ್ಲಿ ಸಮಾನ ಕೋನಾಂತರದಲ್ಲಿ ಪಸರಿಸಿ ಇಂಗಾಲಸಂಯುಕ್ತಗಳಲ್ಲಿ ಇಂಗಾಲದ ಪರಮಾಣು ಸಮಚತುರ್ಮುಖಿಯ (ರೆಗ್ಯುಲರ್ ಟೆಟ್ರಹೆಡ್ರನ್) ಆಕಾರವನ್ನು ತಳೆದಿರುತ್ತದೆಂದೂ ಶಕಲಬಲವಿಜ್ಞಾನದ (ಕ್ವಾಂಟಂ ಮೆಕ್ಯಾನಿಕ್ಸ್) ಉಗಮಕ್ಕಿಂತಲೂ ಎಷ್ಟೋ ಮೊದಲೇ ವಿವಿಧ ಪರಿಶೀಲನೆಗಳಿಂದ ತಿಳಿದಿತ್ತು. ಆದ್ದರಿಂದ ಸಂಯುಕ್ತಗಳಲ್ಲಿರುವ ಇಂಗಾಲದ ಪರಮಾಣುವಿನ ಸ್ವರೂಪ ಮುಕ್ತ ಇಂಗಾಲ ಪರಮಾಣುವಿನ ಸ್ವರೂಪಕ್ಕಿಂತಲೂ ಭಿನ್ನವಾಗಿರಬೇಕು. ಆದರೆ ಮೇಲೆ ವಿವರಿಸಿದ $1s^22s^22p^1_xP^1_y$ ಸ್ಥಿತಿಗಿಂತ ಭಿನ್ನವಾದ ಮತ್ತಾವ ಸ್ವರೂಪವೇ ಆದರೂ ಮುಕ್ತ ಇಂಗಾಲಕ್ಕಿಂತಲೂ ಹೆಚ್ಚು ಪ್ರಚ್ಛನ್ನಶಕ್ತಿಯನ್ನು (ಪೊಟೆನ್ಷಿಯಲ್ ಎನರ್ಜಿ) ಪಡೆದಿರುತ್ತದೆ. ಕನಿಷ್ಠ ಪ್ರಚ್ಛನ್ನಶಕ್ತಿಯನ್ನುಳ್ಳ ಸ್ವರೂಪ ಇತರ ಯಾವುದೇ ಸ್ವರೂಪಕ್ಕಿಂತಲೂ ಸ್ಥಿರವಾದುದು. ಆದ್ದರಿಂದ ಹೆಚ್ಚು ಶಕ್ತಿಯ ಬಿಡುಗಡೆಗೆ ಕಾರಣವಾಗುವ ಮತ್ತೊಂದು ಘಟನೆ ಇರಬೇಕು. ಸ್ಥಿರ ಬಂಧಗಳ ನಿರ್ಮಾಣ ಇಂಥದೊಂದು ಘಟನೆ. ಪರಮಾಣುಗಳ ಕಕ್ಷೆಯಗಳು ಬಳಿಸಾರಿ ಒಂದರ ಮೇಲೊಂದು ವ್ಯಾಪಿಸಿ ಏಕವಾಗುವುದರಿಂದ ಬಂಧ ನಿರ್ಮಾಣವಾಗುತ್ತದೆ. ಹೀಗೆ ಅವು ಏಕವಾದಾಗ ಹಳೆಯ ಎರಡು ಪರಮಾಣು ಕಕ್ಷೆಯಗಳು ಮಾಯವಾಗಿ ಹೊಸದೊಂದು ಕಕ್ಷೆಯ ಸೃಷ್ಟಿಯಾಗುತ್ತದೆ. ಈ ಕಕ್ಷೆಯ ಯಾವೊಂದು ಪರಮಾಣುವಿಗೂ ಸೇರಿದುದಲ್ಲವಾದ್ದರಿಂದ ಅದನ್ನು ಅಣು ಕಕ್ಷೆಯ (ಮಾಲೆಕ್ಯುಲರ್ ಆರ್ಬಿಟಲ್) ಎಂದು ಕರೆದಿದೆ. ಸ್ಥಿರಬಂಧ ನಿರ್ಮಾಣದಲ್ಲಿ ಹೊಸ ಕಕ್ಷೆಯದ ಶಕ್ತಿ (ಎಂದರೆ ಅದರಲ್ಲಿನ ವಿದ್ಯುತ್ಕಣಗಳ ಪ್ರಚ್ಛನಶಕ್ತಿ) ಹಳೆಯ ಪರಮಾಣು ಕಕ್ಷೆಯಗಳ ಶಕ್ತಿಗಿಂತ ಕಡಿಮೆ ಇದ್ದು ಬಂಧ ನಿರ್ಮಾಣವಾಗುವಾಗ ಶಕ್ತಿ ವಿಸರ್ಜನೆಯಾಗುತ್ತದೆ. ಎರಡು ಪರಮಾಣುಗಳ ನಡುವಣ ಅಣು ಕಕ್ಷೆಯವೊಂದರಲ್ಲಿ ಎರಡಕ್ಕಿಂತ ಹೆಚ್ಚು ವಿದ್ಯುತ್ಕಣಗಳು ಇರಲು ಸಾಧ್ಯವಿಲ್ಲ. ಆದ್ದರಿಂದ ವಿದ್ಯುತ್ಕಣಗಳನ್ನುಳ್ಳ ಎರಡು ಪರಮಾಣು ಕಕ್ಷೆಯಗಳು ಬಂಧ ನಿರ್ಮಾಣಕಾರ್ಯದಲ್ಲಿ ಭಾಗವಹಿಸುವುದಾದರೆ, ಅಂಥ ಕಕ್ಷೆಯಗಳಲ್ಲಿ ಒಂದೊಂದೇ ವಿದ್ಯುತ್ಕಣವಿರಬೇಕಾಗುತ್ತದೆ. ಆದ್ದರಿಂದಲೇ ಎರಡು ವಿದ್ಯುತ್ಕಣಗಳನ್ನುಳ್ಳ ಇಂಗಾಲದ 2s ಕಕ್ಷೆಯ ಬಂಧನಿರ್ಮಾಣದಲ್ಲಿ ಪಾಲುಗೊಳ್ಳಲು ಸಾಧ್ಯವಿಲ್ಲ.

ಈಗ ಇಂಗಾಲಸಂಯುಕ್ತಗಳಲ್ಲಿ ಇಂಗಾಲ ಪರಮಾಣುವಿನ ಸ್ವರೂಪವನ್ನು ಪ್ರತ್ಯೇಕವಾಗಿ ಪರಿಶೀಲಿಸಬಹುದು. ಇಂಗಾಲದ ವೇಲೆನ್ಸಿ 4. ಆದ್ದರಿಂದ ವೇಲೆನ್ಸಿಗೆ ಕಾರಣವಾದ ಎರಡನೆಯ ಮುಖ್ಯವಲಯದ ನಾಲ್ಕು ವಿದ್ಯುತ್ಕಣಗಳೂ ಬೇರೆ ಬೇರೆ ಕಕ್ಷೆಯಗಳಲ್ಲಿರಬೇಕು. ಹೀಗಾಗಲು 2s ಕಕ್ಷೆಯದಲ್ಲಿರುವ ವಿದ್ಯುತ್ಕಣವೊಂದು ಹೊಸ ಕಕ್ಷೆಯವನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಅದು ಮರುಹಂತದ ಇನ್ನೂ ತೆರವಾಗಿರುವ ಒಂದು 2p ಕಕ್ಷೆಯವನ್ನು ಸೇರುತ್ತದೆಂದು ಭಾವಿಸಬಹುದು. ಹೀಗೆ ಒಂದು ವಿದ್ಯುತ್ಕಣ ಕೆಳಗಿನ ಶಕ್ತಿಮಟ್ಟಕ್ಕಿಂತ (2s) ಹೆಚ್ಚಿನ ಶಕ್ತಿ ಮಟ್ಟಕ್ಕೆ (2p) ಏರಲು ಶಕ್ತಿಯನ್ನು ಪೂರೈಸಬೇಕಾಗುತ್ತದೆ. ಆದರೆ ಈಗ ಎರಡರ ಬದಲು ನಾಲ್ಕು ಬಂಧಗಳು ನಿರ್ಮಾಣವಾಗುವುದರಿಂದ ಶಕ್ತಿ ವಿಸರ್ಜನೆಯೂ ಹೆಚ್ಚುತ್ತದೆ. ಹೀಗೆ ವಿಸರ್ಜನೆಯಾದ ಶಕ್ತಿ ವಿದ್ಯುತ್ಕಣವೊಂದರ ಶಕ್ತಿ ಮಟ್ಟವನ್ನು ಹೆಚ್ಚಿಸಲು ಬೇಕಾಗುವುದಕ್ಕಿಂತಲೂ ಹೆಚ್ಚಾಗಿದ್ದರೆ ಭಾವಿಸಿರುವಂತೆ ಒಂದು 2s ವಿದ್ಯುತ್ಕಣದ ಶಕ್ತಿಮಟ್ಟ ಹೆಚ್ಚಿ ನಾಲ್ಕು ಬಂಧಗಳು ನಿರ್ಮಾಣವಾಗಬಹುದು. ಶಕ್ತಿ ಪರಿಗಣನೆಗಳಿಂದ ನಾಲ್ಕು ಬಂಧಗಳ ನಿರ್ಮಾಣ ಹೀಗೆ ಸಾಧ್ಯವಾದರೂ ಇಂಗಾಲಸಂಯುಕ್ತಗಳಲ್ಲಿನ ಇಂಗಾಲದ ಪರಮಾಣುವಿನ ಬಂಧಗಳು ಈ ಬಗೆಯ ಬಂಧಗಳಿಗಿಂತ ಸ್ಥಿರವಾದವುಗಳೆಂದು ಶಕಲಬಲವಿಜ್ಞಾನ ಲೆಕ್ಕಾಚಾರಗಳಿಂದ ತಿಳಿದುಬಂದಿದೆ. ಅಷ್ಟೇ ಅಲ್ಲದೆ ಬಂಧಗಳು ಈ ಬಗೆಯಾಗಿ ನಿರ್ಮಾಣವಾಗಿದ್ದಲ್ಲಿ p ಹಂತದ ವಿದ್ಯುತ್ಕಣಗಳು ಭಾಗವಹಿಸಿದ ಮೂರು ಬಂಧಗಳ ಶಕ್ತಿ ಒಂದಾಗಿದ್ದು s ಹಂತದ ವಿದ್ಯುತ್ಕಣದಿಂದಾದ ಬಂಧದ ಶಕ್ತಿ ಬೇರೆಯಾಗಿರಬೇಕಾಗಿತ್ತು. ಅಲ್ಲದೆ ಮೂರು ಬಂಧಗಳು ಒಂದಕ್ಕೊಂದು ಲಂಬಕೋನದಲ್ಲಿದ್ದು ಕಡೆಯ ಬಂಧ ದಿಗ್ರಹಿತ ಬಂಧವಾಗಿರಬೇಕಾಗಿತ್ತು. ಆದರೆ ಇಂಗಾಲದ ಬಂಧಗಳು ನಾಲ್ಕೂ ಸಮಾನ ಶಕ್ತಿಯುಳ್ಳವು ಮತ್ತು ನಾಲ್ಕರ ದಿಕ್ಕುಗಳೂ ನಿರ್ದಿಷ್ಟವಾಗಿದ್ದು ಬಂಧಗಳ ನಡುವಿನ ಕೋನಾಂತರ $109^028^1$, ಆದ್ದರಿಂದ 2s ಮತ್ತು 2p ಕಕ್ಷೆಯಗಳ ಶಕ್ತಿ ಮತ್ತು ಸ್ವರೂಪಗಳಲ್ಲಿ ತೀವ್ರ ಬದಲಾವಣೆಗಳಾಗುವುದು ಆವಶ್ಯಕ. ಸಂಯುಕ್ತ ಸ್ವರೂಪದಲ್ಲಿ ತಮ್ಮ ಪ್ರಚ್ಛನ್ನಶಕ್ತಿಯನ್ನು ಆದಷ್ಟುಮಟ್ಟಿಗೆ ಕಡಿಮೆ ಮಾಡಿಕೊಳ್ಳಲು ಪರಮಾಣು ಕಕ್ಷೆಯಗಳು ಹೊಸ ವಿಧಾನವನ್ನು ಅನುಸರಿಸುತ್ತವೆ. ಕಕ್ಷೆಯಗಳ ಮೇರೆಗಳು ಹಲವು ನಿಯಮಗಳಿಗೆ ಒಳಪಟ್ಟಿದ್ದರೂ ಶಕ್ತಿಯ ಪೂರೈಕೆ ವಿಸರ್ಜನೆಗಳಿಂದ ಅವು ಬದಲಾಗಬಹುದು.

ಇಂಗಾಲದ ಪರಮಾಣುವಿನ 2s ಮತ್ತು ಮೂರು 2p ಕಕ್ಷೆಯಗಳು ಮಿಶ್ರಗೊಂಡು ನಾಲ್ಕು ಹೊಸದಾದ ಸರಿಸಮ ಶಕ್ತಿ ಮತ್ತು ಆಕಾರಗಳನ್ನುಳ್ಳ ಸಂಕರ ಕಕ್ಷೆಯಗಳ (ಹೈಬ್ರಿಡ್ ಆರ್ಬಿಟಲ್ಸ್) ಸೃಷ್ಟಿಯಾಗುತ್ತದೆ. ಈ ಸಂಕರ ಕಕ್ಷೆಯಗಳ ವ್ಯಾಪ್ತಿ S ಮತ್ತು P ಕಕ್ಷೆಯಗಳೆರಡರ ವ್ಯಾಪ್ತಿಗಳಿಗಿಂತಲೂ ಹೆಚ್ಚಿದ್ದು ತಮ್ಮ ಪ್ರಭಾವವನ್ನು ಬೀಜದಿಂದ ಇನ್ನೂ ಸ್ವಲ್ಪ ಹೆಚ್ಚು ದೂರ ಹರಡಬಲ್ಲವಾದ್ದರಿಂದ ಈ ಬಗೆಯ ಕಕ್ಷೆಯಗಳು ಭಾಗವಹಿಸಿರುವ ಬಂಧಗಳು S ಅಥವಾ P ಕಕ್ಷೆಯಗಳಿಂದ ಉಂಟಾಗುವ ಬಂಧಗಳಿಗಿಂತ ಸ್ಥಿರವಾದವು–ಎಂದರೆ ಕಡಿಮೆ ಶಕ್ತಿ ಮಟ್ಟದವು ಅಥವಾ ಇವುಗಳ ನಿರ್ಮಾಣದಲ್ಲಿ ಇನ್ನೂ ಅಧಿಕ ಶಕ್ತಿ ವಿಸರ್ಜನೆಯಾಗುತ್ತದೆ.


ಚಿತ್ರ 5. $Sp^3$ ಸಂಕರ ಕಕ್ಷೆಯಗಳನ್ನುಳ್ಳ ಇಂಗಾಲದ ಪರಮಾಣು

ಶಕಲಬಲವಿಜ್ಞಾನದ ಲೆಕ್ಕಾಚಾರಗಳು ಶಕ್ತಿವೆಚ್ಚ, ಶಕ್ತಿವಿಸರ್ಜನೆಗಳೆರಡನ್ನೂ ಪರಿಗಣನೆಗೆ ತೆಗೆದುಕೊಂಡು ಈ ಬಗೆಯ $sp^3$ ಎಂದೆನ್ನಿಸಿಕೊಳ್ಳುವ ಸಂಕರ ಕಕ್ಷೆಯಗಳಿಂದ ನಿರ್ಮಾಣವಾಗುವ ಬಂಧಗಳು ಕನಿಷ್ಠ ಶಕ್ತಿಮಟ್ಟದವೆಂದು ತೋರಿಸಿವೆ. $sp^3$ ಸಂಕರಕಕ್ಷೆಯಗಳು ಆಕಾಶದಲ್ಲಿ ಸರಿಸಮನಾಗಿ ಹರಡಿಕೊಂಡಿದ್ದು ಯಾವುದೇ ಎರಡು ಕಕ್ಷೆಯಗಳ ನಡುವಿನ ಕೋನಾನಂತರ $109^028'$ ಆಗಿದೆ. ಇಂಗಾಲಸಂಯುಕ್ತಗಳಲ್ಲಿ ಬಂಧಗಳ ನಡುವೆ ಇದೇ ಕೋನಾಂತರ ಇರುವುದನ್ನು ಸಂಕರಕಕ್ಷೆಯಗಳವಾದ ಸಮರ್ಪಕವಾಗಿ ವಿವರಿಸುತ್ತದೆ. ಸಂಯುಕ್ತರೂಪದಲ್ಲಿರುವ ಇಂಗಾಲಪರಮಾಣು ಎಂದರೆ $sp^3$ ಸಂಕರಕಕ್ಷೆಯಗಳನ್ನುಳ್ಳ ಇಂಗಾಲ ಪರಮಾಣುವನ್ನು ಸಮ ಚತುರ್ಮುಖಿಯೊಂದರ ಮಧ್ಯಭಾಗದಲ್ಲಿರುವಂತೆಯೂ ಅದರ ಬಂಧಗಳು ಅಥವಾ ಕಕ್ಷೆಯಗಳು ಚತುರ್ಮುಖಿಯ ನಾಲ್ಕು ಮೂಲೆಗಳ ಕಡೆಗೆ ಚಾಚಿಕೊಂಡಿರುವಂತೆಯೂ ಭಾವಿಸಬಹುದು. ಈ ಬಗೆಯ ನಿರೂಪಣೆ ಏಕಬಂಧಗಳನ್ನುಳ್ಳ ಇಂಗಾಲ ಪರಮಾಣುವಿನ ಸ್ವರೂಪವನ್ನು ಸಂಪೂರ್ಣವಾಗಿ ಸ್ಪಷ್ಟಪಡಿಸುತ್ತದೆ.

ಆದರೆ ದ್ವಿಬಂಧವನ್ನುಳ್ಳ ಇಂಗಾಲ ಪರಮಾಣುವಿನ ಸ್ವರೂಪ ಇದಕ್ಕಿಂತ ಭಿನ್ನವಾಗಿದ್ದು, ಇದರಲ್ಲಿ ಇಂಗಾಲದ ಸುತ್ತಲೂ ಕೇವಲ ಮೂರು ಇತರ ಪರಮಾಣುಗಳು ಒಂದೇ ಸಮತಲದಲ್ಲಿದ್ದು ಬಂಧಕೋನಗಳು (ಬಾಂಡ್ ಆಂಗಲ್ಸ್) $120^0$ ಇರುತ್ತವೆ. ದ್ವಿಬಂಧ ಪರಿಸ್ಥಿತಿಯಲ್ಲಿರುವ ಇಂಗಾಲ ಪರಮಾಣುಗಳಲ್ಲಿ ಆಗುವ ಕಕ್ಷೆಯ ಸಂಕರ $sp^2$ ಮಾದರಿಯದು. ಎಂದರೆ ಒಂದು s ಕಕ್ಷೆಯ ಮತ್ತು ಎರಡು p ಕಕ್ಷೆಯಗಳ ಮಿಶ್ರಣದಿಂದ ಆದುದು. ಹೊಸ ಏಕರೀತಿಯ ಮೂರು ಸಂಕರ ಕಕ್ಷೆಯಗಳು ಒಂದೇ ಸಮತಲದಲ್ಲಿದ್ದು ಅವುಗಳ ಅಕ್ಷಾಂತರ ಕೋನಗಳು $120^0$ ಇರುತ್ತವೆ. ಈ ಸಂಕರ ಕಕ್ಷೆಯಗಳಲ್ಲಿ ಪ್ರತಿಯೊಂದರಲ್ಲೂ ಒಂದೊಂದು ವಿದ್ಯುತ್ಕಣವಿದ್ದು ನಾಲ್ಕನೆಯ ವಿದ್ಯುತ್ಕಣ ಸಂಕರದಲ್ಲಿ ಭಾಗವಹಿಸದ $sp^2$ ಸಂಕರ ಕಕ್ಷೆಯಗಳನ್ನುಳ್ಳ ಸಮತಲಕ್ಕೆ ಲಂಬಕೋನದಲ್ಲಿರುವ p ಕಕ್ಷೆಯದಲ್ಲಿರುತ್ತದೆ (ಚಿತ್ರ 5).


ಚಿತ್ರ 6. ಮೀಥೇನ್ ಅಣುವಿನ ನಿರ್ಮಾಣ

ತ್ರಿಬಂಧವುಳ್ಳ ಇಂಗಾಲದ ಪರಮಾಣುವಿನಲ್ಲಿ ಆಗುವ ಕಕ್ಷೆಯ ಸಂಕರ ಎರಡೇ ಕಕ್ಷೆಯಗಳಿಂದ ಆದದ್ದಾಗಿ sp ಸಂಕರ ಎಂದೆನ್ನಿಸಿಕೊಳ್ಳುತ್ತದೆ. ಎರಡು ಸಮಾನ sp ಸಂಕರ ಕಕ್ಷೆಯಗಳಲ್ಲಿ ಎರಡು ವಿದ್ಯುತ್ಕಣಗಳೂ ಸಂಕರದಲ್ಲಿ ಭಾಗವಹಿಸದ ಎರಡು p ಕಕ್ಷೆಯಗಳಲ್ಲಿ ಒಂದೊಂದರಲ್ಲಿ ಒಂದೊಂದರಂತೆ ಉಳಿದ ಇನ್ನೆರಡು ವಿದ್ಯುತ್ಕಣಗಳೂ ಇರುತ್ತವೆ. sp ಸಂಕರ ಕಕ್ಷೆಯಗಳು ಒಂದೇ ನೇರದಲ್ಲಿದ್ದು ಬೀಜದ ಇಬ್ಬದಿಗಳಲ್ಲಿಯೂ ಇರುತ್ತವೆ. ಅಸಂಕರ p ಕಕ್ಷೆಯಗಳೆರಡೂ ಪರಸ್ಪರ ಲಂಬಕೋನಗಳಲ್ಲಿರುವುದು ಮಾತ್ರವಲ್ಲದೆ ಎರಡೂ ಸಂಕರ ಕಕ್ಷೆಯಗಳ ಅಕ್ಷಕ್ಕೆ ಲಂಬಕೋನಗಳಲ್ಲಿರುತ್ತವೆ. $sp^3$, $sp^2$ ಮತ್ತು sp, ಸಂಕರ ಕಕ್ಷೆಯಗಳು ಬಂಧಗಳಲ್ಲಿ ಹೇಗೆ ಭಾಗವಹಿಸುತ್ತ ವೆಂಬುದನ್ನು ಮೀಥೇನ್, ಎಥಿಲೀನ್ ಮತ್ತು ಅಸಿಟಲೀನ್ ಸಂಯುಕ್ತಗಳನ್ನು ನಿದರ್ಶನಗ ಳಾಗಿ ತೆಗೆದುಕೊಂಡು ಪರಿಶೀಲಿಸಬಹುದು.

$CH_4$ ಎಂಬ ಸೂತ್ರವಿರುವ ಮೀಥೇನಿನಲ್ಲಿ ಇಂಗಾಲ ನಾಲ್ಕು ಏಕಬಂಧಗಳಿಂದ ನಾಲ್ಕು ಹೈಡ್ರೊಜನ್ನುಗಳಿಗೆ ಬಂಧವಾಗಿರುತ್ತದೆ. ಇದರಲ್ಲಿ ಇಂಗಾಲದ ಸಂಕರಕಕ್ಷೇಯರೂಪ $sp^3$. ಹೈಡ್ರೊಜನ್ನಿನಲ್ಲಿ ls ಕಕ್ಷೇಯವೊಂದೇ ಇದ್ದು ಅದರಲ್ಲಿ ಒಂದು ವಿದ್ಯುತ್ಕಣವಿದೆ. ಹೈಡ್ರೊಜನ್ ಪರಮಾಣುವೊಂದು ಇಂಗಾಲದ ಸಂಕರ ಕಕ್ಷೇಯದ ಅಕ್ಷದಲ್ಲಿಯೇ ಇಂಗಾಲದ ಪರಮಾಣುವನ್ನು ಸಮೀಪಿಸಿದಾಗ ಎರಡು ಪರಮಾಣು ಕಕ್ಷೇಯಗಳು ಒಂದಾಗಿ ಅಣುಕಕ್ಷೇಯ ಮತ್ತು C-H ಬಂಧವೊಂದರ ಸೃಷ್ಟಿಯಾಗುತ್ತದೆ. ನಾಲ್ಕು C-H ಬಂಧಗಳೂ ಇದೇ ರೀತಿ ನಿರ್ಮಾಣವಾಗಿ $CH_4$ ಅಣುವಿನ ಉತ್ಪತ್ತಿಯಾಗುತ್ತದೆ. ಹೀಗೆ ಪರಮಾಣುಗಳ ಕಕ್ಷೇಯ ಒಂದೇ ಅಕ್ಷದಲ್ಲಿ ಪರಸ್ಪರ ಸಮೀಪಿಸಿ ನಿರ್ಮಾಣವಾಗುವ ಬಂಧ $\sigma$ ಬಂಧವೆನ್ನಿಸಿಕೊಳ್ಳುತ್ತದೆ. ಮೀಥೇನಿನಲ್ಲಿರುವ ನಾಲ್ಕು ಬಂಧಗಳೂ $\sigma$ ಬಂಧಗಳು.




ಚಿತ್ರ 7. ಎಥಿಲೀನ್ ಅಣುವಿನಲ್ಲಿ  ಮತ್ತು π ಬಂಧಗಳ ನಿರ್ಮಾಣ

ಎಥಿಲೀನಿನಲ್ಲಿ ($H_2C=CH_2$) ಪ್ರತಿ ಇಂಗಾಲ ಪರಮಾಣುವೂ ಮೂರು ಇತರ ಪರಮಾಣುಗಳಿಗೆ ಬಂಧಗೊಂಡಿದೆ. ಇದರಲ್ಲಿ ಇಂಗಾಲಗಳ ಸಂಕರ ಕಕ್ಷೇಯ ರೂಪ $sp^2$. ಪ್ರತಿ ಇಂಗಾಲವೂ ಮತ್ತೊಂದು ಇಂಗಾಲ ಮತ್ತು ಎರಡು ಹೈಡ್ರೊಜನ್ನುಗಳೊಡನೆ ಬಂಧದ ಮೂಲಕ ಬಂಧಗೊಂಡಿರುತ್ತದೆ (ಚಿತ್ರದಲ್ಲಿ $\sigma$ ಬಂಧಗಳನ್ನು ಗೆರೆಗಳ ಮೂಲಕ ತೋರಿಸಿದೆ). C-C ಮತ್ತು ನಾಲ್ಕು C-H ಬಂಧಗಳು ಒಂದೇ ಸಮತಲದಲ್ಲಿವೆ. ಎರಡು ಇಂಗಾಲಗಳ ಉಳಿದ p ಕಕ್ಷೇಯಗಳು ಈ ಸಮತಲಕ್ಕೆ ಲಂಬಕೋನದಲ್ಲಿವೆ. ಇವೆರಡು ಕಕ್ಷೇಯಗಳ ಅಕ್ಷಗಳು ಬೇರೆ ಬೇರೆಯಾಗಿದ್ದರೂ ಎರಡು ಇಂಗಾಲಗಳ ನಡುವಿನ $\sigma$ ಬಂಧ ಅವನ್ನು ಸಮೀಪಕ್ಕೆ ತರುವುದರಿಂದ p ಕಕ್ಷೇಯಗಳು ಒಂದರ ಮೇಲೊಂದು ವ್ಯಾಪಿಸಿ ಅಣು ಕಕ್ಷೇಯವೊಂದು ಸೃಷ್ಟಿಯಾಗಿ ಬಂಧ ಏರ್ಪಡುತ್ತದೆ. ಈ ಬಗೆಯ P-P ಕಕ್ಷೇಯಗಳು ಸೇರಿ ಆಗುವ ಬಂಧದ ಹೆಸರು  ಬಂಧ. ಬಂಧದ ಅಣು ಕಕ್ಷೇಯ ಎರಡು ಭಾಗಗಳಾಗಿದ್ದು  ಬಂಧಗಳನ್ನುಳ್ಳ ಸಮತಲದ ಮೇಲೆ ಮತ್ತು ಕೆಳಗೆ ಒಂದೊಂದು ಭಾಗವಿದೆ.

π ಅಣುಕಕ್ಷೇಯ




ಚಿತ್ರ 8. ಪೂರ್ಣನಿರ್ಮಾಣವಾಗಿರುವ ಎಥಿಲೀನ್ ಅಣು (C-C $\sigma$ ಬಂಧವನ್ನು ತೋರಿಸಿಲ್ಲ)

sp ಸಂಕರ ಕಕ್ಷೇಯವಿರುವ ಅಸಿಟಲೀನಿನಲ್ಲಿ ಒಂದು C-C ಬಂಧ ಮತ್ತು ಎರಡು C-H ಬಂಧಗಳು $\sigma$ ಬಂಧಗಳು.

ಸಂಕರದಲ್ಲಿ ಭಾಗವಹಿಸದೆ ಉಳಿದಿರುವ ನಾಲ್ಕು (ಪ್ರತಿ ಇಂಗಾಲದ ಎರಡೆರಡು) ಕಕ್ಷೇಯಗಳು ಸೇರಿ ಎಥಿಲೀನಿನಲ್ಲಿ ಆದಂತೆ ಎರಡು $\pi$ ಬಂಧಗಳು ನಿರ್ಮಾಣವಾಗುತ್ತವೆ. ಚಿತ್ರದಲ್ಲಿ ಎರಡು $\pi$ ಬಂಧಗಳನ್ನೂ ಅಣು ಕಕ್ಷೇಯಗಳ ಮೂಲಕ ತೋರಿಸುವುದು ಕಷ್ಟವಾದ್ದರಿಂದ ಕಕ್ಷೇಯಗಳ ಅಕ್ಷಗಳನ್ನು ಮಾತ್ರ ತೋರಿಸಿ ಯಾವ ಯಾವ ಕಕ್ಷೇಯಗಳು ಪರಸ್ಪರ ವ್ಯಾಪಿಸಿ ಬಂಧಗಳನ್ನು ನಿರ್ಮಾಣಮಾಡುತ್ತವೆಂಬುದನ್ನು ತೋರಿಸಿದೆ. ಇಂಗಾಲ ಸಂಯುಕ್ತಗಳ ಆಕಾರದ ಸ್ಪಷ್ಟೀಕರಣದ ಅಧ್ಯಯನವಾದ ಪರಮಾಣು ವಿನ್ಯಾಸರಸಾಯನಶಾಸ್ತ್ರ (ಸ್ಟೀರಿಯೋ ಕೆಮಿಸ್ಟ್ರಿ) ಇಂಗಾಲ ರಸಾಯನಶಾಸ್ತ್ರದ ಒಂದು ಮುಖ್ಯಭಾಗ. ಸಂಯುಕ್ತಗಳು




ಚಿತ್ರ 9. $\sigma$ ಮತ್ತು π ಬಂಧಗಳಿಂದ ನಿರ್ಮಾಣವಾದ ಅಸಿಟಲೀನ್ ಅಣುವಿನ ಪ್ರತೀಕ

ಜಟಿಲವಾದಂತೆ ಅವುಗಳ ಆಕಾರ ಸ್ಪಷ್ಟೀಕರಣದ ಸಮಸ್ಯೆಯೂ ಜಟಿಲವಾಗುತ್ತ ಹೋಗುತ್ತದೆ. ಆಕಾರಗಳು ಸಂಯುಕ್ತಗಳ ಲಕ್ಷಣಗಳ ಮೇಲೆ ಪ್ರಭಾವ ಬೀರುವುದರಿಂದ ಅವುಗಳ ಅಧ್ಯಯನ ಅನೇಕ ಬಾರಿ ಅತ್ಯಾವಶ್ಯಕ.

ನಾಮಕರಣ ನಿಯಮಗಳು (ನೋಮೆನ್ ಕ್ಲೆಚರ್ ರೂಲ್ಸ್): ಇಂಗಾಲ ಸಂಯುಕ್ತಗಳ ಸಂಖ್ಯೆ ಅಧಿಕವಾಗಿರುವುದರಿಂದಲೂ ಸಮಘಟಕಗಳ ಇರುವಿಕೆಯಿಂದಲೂ ಇಂಗಾಲಸಂಯುಕ್ತಗಳನ್ನು ಹೆಸರಿಸಲು ಕ್ರಮಬದ್ಧನಿಯಮಗಳು ಅಗತ್ಯವಾಗುತ್ತವೆ. ಕಡಿಮೆ ಸಂಯುಕ್ತಗಳ ಪರಿಚಯವಿದ್ದಾಗ ಬಳಕೆಯಲ್ಲಿದ್ದು ಸಮರ್ಪಕವಾಗಿದ್ದ ಹಳೆಯ ಪದ್ಧತಿಯೊಂದು ಈಗಲೂ ತಕ್ಕಮಟ್ಟಿಗೆ ಉಪಯೋಗದಲ್ಲಿದೆ. ಈ ಪದ್ಧತಿಯ ಪ್ರಕಾರ ಸಂಯುಕ್ತದಲ್ಲಿನ ಒಟ್ಟು ಇಂಗಾಲದ ಪರಮಾಣುಗಳ ಸಂಖ್ಯೆ ಮುಖ್ಯ. ಉದಾಹರಣೆಗೆ, ನಾಲ್ಕು ಇಂಗಾಲವನ್ನುಳ್ಳ ಎರಡು ಪರ್ಯಾಪ್ತ ಹೈಡ್ರೊಕಾರ್ಬನ್ನುಗಳೂ ಬ್ಯೂಟೇನುಗಳೇ. ಅಂತೆಯೇ ಐದು ಇಂಗಾಲಗಳಿರುವ ಎಲ್ಲ ಪರ್ಯಾಪ್ತ ಹೈಡ್ರೊಕಾರ್ಬನ್ನುಗಳೂ ಪೆಂಟೇನುಗಳು. ಈ ನಿಯಮದ ಪ್ರಕಾರ ಕರೆಯಲ್ಪಡುವ ಮೊದಲ ಹತ್ತು ಪರ್ಯಾಪ್ತ ಹೈಡ್ರೊಕಾರ್ಬನ್ನುಗಳ ಹೆಸರುಗಳನ್ನು ಮುಂದೆ ತೋರಿಸಲಾಗಿದೆ.

| ಇಂಗಾಲ ಪರಮಾಣುಗಳ ಸಂಖ್ಯೆ | ಅಣುಸೂತ್ರ | ಹೆಸರು |
|---|---|---|
| 1 | $CH_4$ | ಮೀಥೇನ್ |
| 2 | $C_2H_6$ | ಈಥೇನ್ |
| 3 | $C_3H_8$ | ಪ್ರೊಪೇನ್ |
| 4 | $C_4H_{10}$ | ಬ್ಯೂಟೇನ್ |
| 5 | $C_5H_{12}$ | ಪೆಂಟೇನ್ |
| 6 | $C_6H_{14}$ | ಹೆಕ್ಸೇನ್ |
| 7 | $C_7H_{16}$ | ಹೆಪ್ಟೇನ್ |
| 8 | $C_8H_{18}$ | ಆಕ್ಟೇನ್ |
| 9 | $C_9H_{20}$ | ನೋನೇನ್ |
| 10 | $C_{10}H_{22}$ | ಡೆಕೇನ್ |

ಐದು ಇಂಗಾಲಗಳನ್ನುಳ್ಳ ಮೂರು ಸಮಘಟಕಗಳಿಗೆ ಕೆಳಗೆ ತೋರಿಸಿರುವ ಮೂರು ಹೆಸರುಗಳನ್ನು ಕೊಡಲಾಗಿತ್ತು.

$CH_3$-$CH_2$-$CH_2$-$CH_2$-$CH_3$ ನಾರ್ಮಲ್ ಪೆಂಟೇನ್

$CH_3$-$CH_2$-CH-$CH_3$ } ಐಸೋಪೆಂಟೇನ್
|
$CH_3$

$CH_3$
|
$CH_2$- C - $CH_3$ ನಿಯೋಪೆಂಟೇನ್
|
$CH_3$

ಆದರೆ ಹೆಕ್ಸೇನ್ ಮತ್ತು ಅದಕ್ಕಿಂತ ಹಿರಿಯಗಾತ್ರದ ಹೈಡ್ರೊಕಾರ್ಬನ್ನುಗಳ ಸಮಘಟಕಗಳು ಅಧಿಕ ಸಂಖ್ಯೆಯಲ್ಲಿವೆ. (5 ಹೆಕ್ಸೇನುಗಳು, 9 ಹೆಪ್ಟೇನುಗಳು, 75 ಡೆಕೇನುಗಳು ಇತ್ಯಾದಿ). ಹಳೆಯ ಪದ್ಧತಿಯ ಪ್ರಕಾರ ಹೆಚ್ಚು ಸಂಖ್ಯೆಯ ಸಮಘಟಕಗಳಿಗೆ ಹೆಸರುಗಳನ್ನು ಕೊಡುವುದು ಬಲು ಕಷ್ಟವಾಗುತ್ತದೆ. ಆದ್ದರಿಂದ ಅನೇಕಾನೇಕ ಸಮಘಟಕಗಳಿಗೂ

ಸಮರ್ಪಕವಾಗಿ ಹೆಸರು ಕೊಡಲು ಅನುಕೂಲವಾಗುವಂಥ ಒಂದು ಕ್ರಮಬದ್ಧ ನಿಯಮ ಆವಶ್ಯಕ. ಬಹುಕಾಲ ಈ ನಿಯಮಗಳ ಆವಶ್ಯಕತೆಯ ಬಗ್ಗೆ ವಿಜ್ಞಾನಿಗಳು ವಿಚಾರ ಮಾಡುತ್ತಿದ್ದರು. 1957ರಲ್ಲಿ ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಪ್ಯೂರ್ ಅಂಡ್ ಅಪ್ಲೈಡ್ ಕೆಮಿಸ್ಟ್ರಿ ಸಂಸ್ಥೆ ಈ ನಿಯಮಗಳ ಬಗೆಗೆ ಹಲವು ನಿರ್ಣಯಗಳನ್ನು ನೀಡಿತು. ಇವು ಈಗ ಜಗತ್ತಿನಾದ್ಯಂತ ಅಂಗೀಕೃತವಾಗಿವೆ. ಹಲವು ಮುಖ್ಯ ನಿರ್ಣಯ ನಿಯಮಗಳನ್ನು ಮುಂದೆ ಕೊಡಲಾಗಿದೆ.

ಹೈಡ್ರೊಕಾರ್ಬನ್ನುಗಳು–ಅಚಕ್ರೀಯ ಸಂಯುಕ್ತಗಳು (ನಾನ್‌ಸೈಕ್ಲಿಕ್ ಆರ್ ಅಸೈಕ್ಲಿಕ್ ಕಾಂಪೌಂಡ್ಸ್) ಅಚಕ್ರೀಯ ಪರ್ಯಾಪ್ತ ಹೈಡ್ರೊಕಾರ್ಬನ್ನುಗಳು (ಆಲ್ಕೇನುಗಳು) : ಕವಲೊಡೆಯದ ನೇರ ಸರಣಿಯಲ್ಲಿರುವ ಹೈಡ್ರೊಕಾರ್ಬನ್ನುಗಳ ಹೆಸರುಗಳು ಹಳೆಯ ಪದ್ಧತಿಯಂತೆ ಇಂಗಾಲ ಪರಮಾಣುಗಳ ಸಂಖ್ಯೆಯನ್ನು ಅನುಸರಿಸುತ್ತವೆ.

ಕವಲೊಡೆಯದ ಹೈಡ್ರೊಕಾರ್ಬನ್ನುಗಳಲ್ಲಿ ಅಂತಿಮ ಇಂಗಾಲದಿಂದ ಒಂದು ಹೈಡ್ರೊಜನ್ ನಷ್ಟವಾಗಿ ದೊರೆಯುವ ಒಂದು ವೇಲೆನ್ಸಿಯಿರುವ ಪುಂಜದ ಹೆಸರನ್ನು ಪಡೆಯಲು ಮಾತ್ರ ಸಂಯುಕ್ತದ ಹೆಸರಿನ ಆನ್ ಎಂಬ ಅಂತ್ಯ ಭಾಗವನ್ನು ಐಲ್ ಎಂಬ ಭಾಗದಿಂದ ಪಲ್ಲಟನೆ ಮಾಡಬೇಕು. ಈ ಬಗೆಯ ಪುಂಜಗಳು ನಾರ್ಮಲ್ ಆಲ್ಕೈಲ್ ಪುಂಜಗಳೆನ್ನಿಸಿಕೊಳ್ಳುತ್ತವೆ. ಉದಾಹರಣೆ :

$CH_3.CH_2.CH_2.CH_2$—ಬ್ಯೂಟೈಲ್

$CH_3(CH_2)_{10}$-$CH_2$-ಡೊಡೆಕೈಲ್

ಕವಲೊಡೆದ ಸಂಯುಕ್ತದ ಹೆಸರು ಅತಿ ಉದ್ದದ ನೇರಸರಣಿಯ ಮಾತೃ ಸಂಯುಕ್ತದ ಹೆಸರನ್ನು ಅವಲಂಬಿಸಿದೆ. ಕವಲುಗಳನ್ನು ಆದೇಶಿತ (ಸಬ್ಸ್ಟಿಟ್ಯೂಟೆಡ್) ಆಲ್ಕೈಲ್ ಪುಂಜಗಳೆಂದು ಪರಿಗಣಿಸಬೇಕು. ಈ ಆದೇಶಿತ ಆಲ್ಕೈಲ್ ಪುಂಜದ ಸ್ಥಾನವನ್ನು ನಿರ್ದೇಶಿಸಲು ಮಾತ್ರ ಸಂಯುಕ್ತ ಸರಣಿಯ ಇಂಗಾಲಗಳಿಗೆ ಕ್ರಮಾಂಕಗಳನ್ನು ಕೊಡಬೇಕು. ಕ್ರಮಾಂಕಗಳನ್ನು ಎರಡು ಬಗೆಯಾಗಿ (ಬಲದಿಂದ ಮತ್ತು ಎಡದಿಂದ) ಕೊಡಬಹುದಾದ್ದರಿಂದ ಆದೇಶಿತ ಪುಂಜವನ್ನು ಪಡೆದಿರುವ ಇಂಗಾಲದ ಕ್ರಮಾಂಕ ಕನಿಷ್ಠವಾಗಿರುವಂತೆ ಕೊಡಬೇಕು. ಉದಾಹರಣೆ :

```
  5     4     3     2    1
CH3. CH2. CH2. CH. CH3
                |              2-ಮೀಥೈಲ್ ಪೆಂಟೇನ್
               CH3
              ಅಥವಾ
1    2    3    4  5
CH3.CH2.CH2.CH.CH3
              |          4-ಮೀಥೈಲ್ ಪೆಂಟೇನ್
             CH3
```

ಇವುಗಳಲ್ಲಿ 4–ಮೀಥೈಲ್ ಪೆಂಟೇನ್ ಎಂಬ ಹೆಸರು ತಪ್ಪು. ಅಲ್ಲದೆ ಎರಡು ಆದೇಶಿತ ಆಲ್ಕೈಲ್ ಪುಂಜಗಳಲ್ಲಿ ಹಿರಿಯ ಗಾತ್ರದ ಪುಂಜಕ್ಕೆ ಕನಿಷ್ಠ ಕ್ರಮಾಂಕ ಬರುವಂತೆ ಹೆಸರು ಕೊಡಬೇಕು. ಉದಾಹರಣೆ :

```
1(6)    2(5)    3(4)   4(3)      5(2)   6(1)
CH2  -  CH2  -  CH  -  CH   -   CH2 -  CH3
                 |      |
                C2H5   CH3
```

3–ಮೀಥೈಲ್–4–ಈಥೈಲ್ ಹೆಕ್ಸೇನ್–ತಪ್ಪು

3–ಈಥೈಲ್–3–ಮೀಥೈಲ್ ಹೆಕ್ಸೇನ್–ಸರಿ

ಅಂತಿಮ ಇಂಗಾಲದಿಂದಲ್ಲದೆ ಮಧ್ಯಮ ಇಂಗಾಲವೊಂದರಿಂದ ಹೈಡ್ರೊಜನ್ ನಷ್ಟವಾಗಿ ಪುಂಜಗಳ ಸೃಷ್ಟಿಯಾದಾಗ ವೇಲೆನ್ಸಿಯಿರುವ ಇಂಗಾಲದಿಂದ ಆರಂಭಿಸಿ ಅತಿ ಉದ್ದನೆಯ ಸರಣಿಗೆ ಕ್ರಮಾಂಕಗಳನ್ನು ಕೊಡಬೇಕು ಮತ್ತು ಆದೇಶಿತ ಪುಂಜಗಳ ಸ್ಥಾನಗಳನ್ನು ನಿರ್ದೇಶಿಸಬೇಕು. ಉದಾಹರಣೆ :

```
 4   3    2    1
CH3. CH2 . CH2 .CH.CH3        1 - ಮೀಥೈಲ್ ಬ್ಯೂಟೈಲ್
        |
```

ಕವಲುಗಳು ಒಂದಕ್ಕಿಂತ ಅಧಿಕವಾಗಿದ್ದು ಅಲ್ಲಿ ಸಮಸಂಖ್ಯೆಯ ಇಂಗಾಲಗಳಿದ್ದರೆ ಅವುಗಳಲ್ಲಿ ಅತ್ಯಂತ ಜಟಿಲವಾದುದಕ್ಕೆ ಕನಿಷ್ಠ ಕ್ರಮಾಂಕ ದೊರೆಯಬೇಕು. ಇಲ್ಲವಾದರೆ ಪುಂಜಗಳ ಹೆಸರುಗಳ ಮೊದಲಕ್ಷರಗಳ (ಆಂಗ್ಲಭಾಷೆಯ) ಕ್ರಮದಲ್ಲಿ ಕ್ರಮಾಂಕ ನೀಡಬೇಕು. ಉದಾಹರಣೆ :

```
        CH3                          CH3—CH2—CH—CH2—
         |                                   |
CH3— C——CH2 -       ಮತ್ತು                   CH3
         |
        CH3
```

ಇವುಗಳಲ್ಲಿ ಮೊದಲನೆಯದರ ಕ್ರಮಾಂಕ ಎರಡನೆಯ ಪುಂಜದ ಕ್ರಮಾಂಕಕ್ಕಿಂತಲೂ ಮೊದಲು ಬರುತ್ತದೆ. ಹಲವು ಸರಳ ಪುಂಜಗಳನ್ನು ತಿಳಿಸುವಾಗ ಇಂಗ್ಲಿಷ್ ಅಕ್ಷರಮಾಲೆಯ ಕ್ರಮವನ್ನು ಅನುಸರಿಸಬಹುದು. ಉದಾಹರಣೆ, ಬ್ಯೂಟೈಲ್, ಈಥೈಲ್, ಮೀಥೈಲ್, ಪ್ರೋಪೈಲ್.

ದ್ವಿಬಂಧ ಸಂಯುಕ್ತಗಳ ಅಂತ್ಯ ಈನ್ ಎಂದೂ ತ್ರಿಬಂಧ ಸಂಯುಕ್ತಗಳ ಅಂತ್ಯ ಐನ್ ಎಂದೂ ಇರಬೇಕು. ಮೂಲ ಆಲ್ಕೇನುಗಳ ಹೆಸರಿನಿಂದ ಆನ್ ಎಂಬ ಅಂತ್ಯವನ್ನು ತೆಗೆದ ಅನಂತರ ಉಳಿಯುವುದು. ದ್ವಿಬಂಧ ಅಥವಾ ತ್ರಿಬಂಧ ಸ್ಥಾನಗಳನ್ನು ಆ ಬಗೆಯ ಬಂಧಗಳನ್ನು ಪಡೆದಿರುವ ಇಂಗಾಲದ ಕ್ರಮಾಂಕದಿಂದ ತಿಳಿಸಬೇಕು. ಕ್ರಮಾಂಕಗಳನ್ನು ನಿರ್ದೇಶಿಸಲು ಆದೇಶಿತ ಪುಂಜಗಳ ಗಾತ್ರಗಳನ್ನು ಗಮನಿಸದೆ ಅಪರ್ಯಾಪ್ತ ಬಂಧವನ್ನೊಳಗೊಂಡಿರುವ ಅತಿ ದೀರ್ಘಸರಣಿಯನ್ನು ಆರಿಸಬೇಕು; ಮತ್ತು ಅಪರ್ಯಾಪ್ತ ಬಂಧದ ಸ್ಥಾನವನ್ನು ನಿರ್ದೇಶಿಸುವ ಕ್ರಮಾಂಕ ಕನಿಷ್ಠವಾಗಿರಬೇಕು. ಉದಾಹರಣೆ :

```
 5     4      3     2
CH3 - CH2 - CH2 - C - CH2 - CH2 - CH3
                  ||
                 1CH2
```

2—ಪ್ರೋಪೈಲ್ —1—ಪೆಂಟೇನ್

ಎರಡು ದ್ವಿಬಂಧಗಳುಳ್ಳ ಸಂಯುಕ್ತ - ಡಯೀನ್

ಮೂರು ದ್ವಿಬಂಧಗಳುಳ್ಳ ಸಂಯುಕ್ತ - ಟ್ರಯೀನ್

ಎರಡು ತ್ರಿಬಂಧಗಳುಳ್ಳ ಸಂಯುಕ್ತ – ಡೈಯೈನ್

ಮೂರು ತ್ರಿಬಂಧಗಳುಳ್ಳ ಸಂಯುಕ್ತ – ಟ್ರಯೈನ್

ಆಲ್ಕೀನ್ ಮತ್ತು ಆಲ್ಕೈನ್ ನಿಷ್ಪನ್ನ (ಡೆರಿವಟ್ಯೂ) ಪುಂಜಗಳ ಹೆಸರುಗಳ ಮೂಲ ಸಂಯುಕ್ತದ ಹೆಸರಿಗೆ ಐಲ್ ಸೇರಿಸಿದಾಗ ದೊರೆಯುತ್ತವೆ. ಪುಂಜಗಳಲ್ಲಿ ಕ್ರಮಾಂಕಗಳನ್ನು ವೇಲೆನ್ಸಿಯಿರುವ ಇಂಗಾಲದಿಂದ ಆರಂಭಿಸಬೇಕು. ಉದಾಹರಣೆ:

```
 2    1
CH2= C——        1—ಮೀಥೈಲ್ ಎಥೀನೈಲ್ (ಸಾಮಾನ್ಯ ಹೆಸರು –
     |                 ಐಸೋ ಪ್ರೊಪೀನೈಲ್ )
    CH3
5   4   3   2   1
CH - C -  CH - CH - CH2  - 2— ಪೆಂಟೇನ್—— 4—ಯಿನೈಲ್  :
```

ಹೈಡ್ರೊಕಾರ್ಬನ್ನುಗಳು–ಏಕಚಕ್ರೀಯ ಸಂಯುಕ್ತಗಳು : ಮಾತೃವೃತ್ತಗಳ ಮತ್ತು ಅವುಗಳ ನಿಷ್ಪನ್ನ ಪುಂಜಗಳ ಹೆಸರುಗಳನ್ನು ಪಡೆಯಲು ಅದೇ ಸಂಖ್ಯೆಯ ಇಂಗಾಲ ಪರಮಾಣುಗಳನ್ನುಳ್ಳ ಆಲ್ಕೇನುಗಳ ಹೆಸರುಗಳ ಹಿಂದೆ ಸೈಕ್ಲೋ ಸೇರಿಸಬೇಕು. ಉದಾಹರಣೆ:




**ಚಿತ್ರ 10**

ವೃತ್ತಗಳಲ್ಲಿ ದ್ವಿಬಂಧ, ತ್ರಿಬಂಧಗಳಿದ್ದರೆ ಹೆಸರಿನಲ್ಲಿ ಏನ್ ಅಂತ್ಯದ ಬದಲು ಈನ್ ಅಥವಾ ಐನ್ ಅಂತ್ಯ ಸೇರುತ್ತದೆ. ಎರಡೂ ಇದ್ದರೆ ಕ್ರಮಾಂಕದಲ್ಲಿ ದ್ವಿಬಂಧದ ಕ್ರಮಾಂಕದಲ್ಲಿ ದ್ವಿಬಂಧದ ಕ್ರಮಾಂಕ ಕನಿಷ್ಠ ಉದಾಹರಣೆ:




**ಚಿತ್ರ 11**

ಹೆಚ್ಚು ಅಪರ್ಯಾಪ್ತ ಬಂಧಗಳಿದ್ದರೆ ಈನ್, ಐನ್, ಡಯೀನ್ ಟ್ರಯೀನ್ ಮೊದಲಾದುವನ್ನು ಆ್ಯಲಿಫ್ಯಾಟಿಕ್ ಅಥವಾ ಚಕ್ರೀಯ ಸಂಯುಕ್ತಗಳಲ್ಲಿ ಉಪಯೋಗಿಸುವಂತೆಯೇ ಉಪಯೋಗಿಸಲಾಗುತ್ತದೆ.

ಏಕಚಕ್ರೀಯ ಆರೋಮ್ಯಾಟಿಕ್ ಸಂಯುಕ್ತಗಳಲ್ಲಿ ಮೊದಲನೆಯದಕ್ಕೆ ಬೆಂಜೀನ್ ಎಂದು ಹೆಸರು. ಅನೇಕ ಆದೇಶಿತ ಬೆಂಜೀನ್‌ಗಳಿಗೆ ಹಳೆಯ ಹೆಸರುಗಳೇ ಉಳಿಯುತ್ತವೆ. ಕೂಡಿಕೊಂಡಿರುವ ಬಹುಚಕ್ರೀಯ ಸಂಯುಕ್ತಗಳು ಅಥವಾ ವೃತ್ತಪುಂಜಗಳು ಮತ್ತು

ಹೆಟರೊಸೈಕ್ಲಿಕ್ ಸಂಯುಕ್ತಗಳು : ಇವುಗಳಲ್ಲಿ ಮೊದಲಿನಿಂದ ಪರಿಚಿತವಿರುವ ವೃತ್ತಗಳಿಗೆ ಕ್ರಮಬದ್ಧವಾದ ಹೆಸರಿನ ಬದಲು ಹಳೆಯ ಹೆಸರುಗಳನ್ನೇ ಉಪಯೋಗಿಸಲಾಗುತ್ತದೆ. ಜಟಿಲ ಸಂಯುಕ್ತಗಳಿಗೂ ಕ್ರಮಬದ್ಧವಾದರೂ ಸುಲಭವಲ್ಲದ ಹೆಸರುಗಳಿಗಿಂತಲೂ ಸುಲಭವಾದ ಸಾಮಾನ್ಯ ಹೆಸರುಗಳನ್ನೇ ಉಪಯೋಗಿಸಬಹುದು. ಈ ರೀತಿಯ ಎಲ್ಲ ಬಗೆಯ ವೃತ್ತಗಳ ಹೆಸರುಗಳನ್ನೂ ರಿಂಗ್ಇಂಡೆಕ್ಸ್ ಎಂಬ ಪುಸ್ತಕದಿಂದ ಪಡೆಯಬಹುದು. ಇವುಗಳಲ್ಲಿ ಸ್ಥಾನಗಳ ಕ್ರಮಾಂಕಗಳನ್ನೂ ನಿರ್ದೇಶಿಸಲಾಗುತ್ತದೆ. ಹೊಸದಾಗಿ ಪರಿಚಿತವಾದ ಚಕ್ರೀಯ ಪುಂಜಗಳ ಕ್ರಮಬದ್ಧ ಹೆಸರುಗಳೂ ಈ ಪುಸ್ತಕದಲ್ಲಿವೆ.

ಕ್ರಿಯಾಪುಂಜಗಳು ಮತ್ತು ಅವುಗಳನ್ನುಳ್ಳ ಸಂಯುಕ್ತಗಳ ಹೆಸರುಗಳು :

| | |
|---|---|
| –O– | ಈಥರ್ |
| –OH | ಆಲ್ಕೊಹಾಲ್; ಸಂಯುಕ್ತದ ಹೆಸರಿನ ಅಂತ್ಯ ಆಲ್ |
| –N< | ಅಮೈನ್ |
| –CH–O | ಆಲ್ಡಿಹೈಡ್; ಸಂಯುಕ್ತದ ಹೆಸರಿನ ಅಂತ್ಯ ಆಲ್ |
| –CO– | ಕೀಟೋನ್ (ಆಕ್ಸೋ ಪುಂಜ) |
| –COOH | ಆಮ್ಲ, ಕಾರ್ಬಾಕ್ಸಿಲಿಕ್ ಆಮ್ಲ |
| –CO–N< | ಅಮೈಡ್, ಕಾರ್ಬಾಕ್ಸಮೈಡ್ |
| –COOR | ಎಸ್ಟರ್ |
| –CO–X | ಆಮ್ಲ ಹ್ಯಾಲೈಡ್ |
| –X | ಹ್ಯಾಲೈಡ್ |

ಕೇವಲ ಇಷ್ಟು ನಿಯಮಗಳ ಕಲೆಯುವಿಕೆಯಿಂದ ಎಲ್ಲ ಸಂಯುಕ್ತಗಳ ಹೆಸರುಗಳನ್ನೂ ಸರಿಯಾಗಿ ಹೇಳಲಾಗದು. ಅನೇಕ ಸಂಯುಕ್ತಗಳಿಗೆ ಹಳೆಯ ಹೆಸರುಗಳೇ ಬಹಳವಾಗಿ ಬಳಕೆಯಲ್ಲಿರುವುದರಿಂದ ಆ ಹೆಸರುಗಳನ್ನು ಹಳೆಯ ಹೆಸರುಗಳೆನ್ನುವುದಕ್ಕಿಂತಲೂ ಬಳಕೆಯ ಹೆಸರುಗಳೆನ್ನುವುದು ಸೂಕ್ತ. ಜಟಿಲ ಸಂಯುಕ್ತಗಳಿಗೆ ಹೆಸರಿಡುವಾಗ ಅವುಗಳ ಆಕರ, ಉಪಯುಕ್ತತೆ ಮೊದಲಾದುವನ್ನು ಆಧಾರವಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಇಂಗಾಲಸಂಯುಕ್ತಗಳ ವರ್ಗೀಕರಣ: ಇಂಗಾಲಸಂಯುಕ್ತಗಳಲ್ಲಿ ಅತಿ ಸರಳ ಸಂಯುಕ್ತಗಳೆಂದರೆ ಹೈಡ್ರೊಕಾರ್ಬನ್ನುಗಳು (ಜಲಜನಕೇಂಗಾಲ). ಇವು ಹೈಡ್ರೊಜನ್ ಮತ್ತು ಇಂಗಾಲ ಇವೆರಡೇ ಧಾತುಗಳು ಕೂಡಿ ಆಗಿವೆ. ಇವುಗಳಲ್ಲಿರುವ ಹೈಡ್ರೊಜನ್ನಿನ ಒಂದು ಅಥವಾ ಹೆಚ್ಚು ಪರಮಾಣುಗಳು ಇತರ ಬಗೆಯ ಪುಂಜಗಳಿಂದ ಆದೇಶಿತವಾಗಿ ಇತರ ಬಗೆಯ ಇಂಗಾಲಸಂಯುಕ್ತಗಳ ಸೃಷ್ಟಿಯಾಗಿದೆಯೆಂದು ಭಾವಿಸಬಹುದು. ಈ ಬಗೆಯ ಹೊಸ ಸಂಯುಕ್ತಗಳ ರಾಸಾಯನಿಕ ಗುಣಲಕ್ಷಣಗಳು ಈ ಆದೇಶಿತ ಪುಂಜಗಳನ್ನು ಅವಲಂಬಿಸಿವೆ. ಈ ಸಂಯುಕ್ತಗಳು ಭಾಗವಹಿಸುವ ಕ್ರಿಯೆಗಳಿಗೆ ಅನುಗುಣವಾಗಿ ಸಂಯುಕ್ತಗಳನ್ನು ವರ್ಗೀಕರಿಸಲಾಗುವುದರಿಂದ ಈ ಲಕ್ಷಣಕಾರಣ ಪುಂಜಗಳನ್ನು ಕ್ರಿಯಾಪುಂಜಗಳೆಂದು ಕರೆಯಲಾಗುತ್ತದೆ. ಮೊದಲ ಬಗೆಯ ವರ್ಗೀಕರಣ ಅಣುಗಳ ಆಕಾರಗಳನ್ನು ಅವಲಂಬಿಸಿದೆ. ಆಕಾರಗಳೂ ಸಂಯುಕ್ತಗಳ ಲಕ್ಷಣಗಳ ಮೇಲೆ ಪ್ರಭಾವ ಬೀರುವುದರಿಂದ ಈ ಬಗೆಯ ವರ್ಗೀಕರಣ ಸಂಯುಕ್ತಗಳ ಅಭ್ಯಾಸಕ್ಕೆ ಅನುಕೂಲವಾಗಿದೆ.

**(ನೋಡಿ– ಆರೋಮ್ಯಾಟಿಕ್–ಸಂಯುಕ್ತಗಳು; ಆಲಿಫ್ಯಾಟಿಕ್–ಸಂಯುಕ್ತಗಳು; ಆಲಿಸೈಕ್ಲಿಕ್–ಸಂಯುಕ್ತಗಳು)**.

ಹೆಟರೋಸೈಕ್ಲಿಕ್ ಸಂಯುಕ್ತಗಳು: ಹೆಸರಿನಿಂದಲೇ ವ್ಯಕ್ತವಾಗುವಂತೆ ಈ ಸಂಯುಕ್ತಗಳು ಚಕ್ರೀಯ ಸಂಯುಕ್ತಗಳು. ಇದುವರೆಗೆ ವಿವರಿಸಿದ ಚಕ್ರೀಯ ಸಂಯುಕ್ತಗಳಿಗೂ ಇವುಗಳಿಗೂ ಇರುವ ವ್ಯತ್ಯಾಸವೆಂದರೆ ಈ ಸಂಯುಕ್ತಗಳು ವೃತ್ತ ನಿರ್ಮಾಣದಲ್ಲಿ ಪಾಲುಗೊಂಡಿರುವ ಪರಮಾಣುಗಳೆಲ್ಲ ಇಂಗಾಲಗಳಲ್ಲ. ಚಕ್ರದ ಒಂದು ಅಥವಾ ಅನೇಕ ಪರಮಾಣುಗಳು ಇತರ ಧಾತುಗಳ ಪರಮಾಣುಗಳು. ನೈಟ್ರೊಜನ್, ಆಕ್ಸಿಜನ್, ಸಲ್ಫರುಗಳು ಸಾಮಾನ್ಯವಾಗಿ ಹೆಟರೊಸೈಕ್ಲಿಕ್ ಚಕ್ರಗಳಲ್ಲಿರುವ ಇತರ ಪರಮಾಣುಗಳು. ಇತರ ಚಕ್ರೀಯ ಸಂಯುಕ್ತಗಳಂತೆಯೇ ಈ ಬಗೆಯ ಸಂಯುಕ್ತಗಳಲ್ಲಿಯೂ ಐದು ಅಥವಾ ಆರು ಪರಮಾಣುಗಳನ್ನುಳ್ಳ ಚಕ್ರಗಳೇ ಹೆಚ್ಚುಮಟ್ಟಿಗೆ ಕಾಣಸಿಗುತ್ತವೆ. ಹಲವು ಮುಖ್ಯ ಮತ್ತು ಸಾಮಾನ್ಯ ಹೆಟರೊಸೈಕ್ಲಿಕ್ ಸಂಯುಕ್ತಗಳ ರಚನಾಸೂತ್ರಗಳನ್ನು ಕೆಳಗೆ ಕೊಡಲಾಗಿದೆ.

ಚಿತ್ರದಲ್ಲಿ ತೋರಿಸಿರುವ ಸಂಯುಕ್ತಗಳೆಲ್ಲವೂ ಆರೊಮ್ಯಾಟಿಕ್ ಸಂಯುಕ್ತಗಳಾಗಿದ್ದರೂ ಹೆಟರೊಸೈಕ್ಲಿಕ್ ಸಂಯುಕ್ತ ಆರೊಮ್ಯಾಟಿಕ್ ಸಂಯುಕ್ತವಾಗಿ ಇರಬೇಕಾದ ಆವಶ್ಯಕತೆಯೇನೂ ಇಲ್ಲ. ಚಕ್ರಕ್ಕೆ ಸೇರಿದ ಹೈಡ್ರೊಜನ್ನನ್ನು ಕ್ರಿಯಾಪುಂಜದಿಂದ ಆದೇಶಿಸಿದಾಗ ಕ್ರಿಯಾಪುಂಜಗಳನ್ನುಳ್ಳ ಹೆಟರೋಸೈಕ್ಲಿಕ್ ಸಂಯುಕ್ತಗಳು ದೊರೆಯುತ್ತವೆ.

ಹೆಟರೊಸೈಕ್ಲಿಕ್ ಚಕ್ರಗಳು ಅನೇಕ ಪ್ರಕೃತಿದತ್ತ ಜಟಿಲ ಇಂಗಾಲ ಸಂಯುಕ್ತಗಳಲ್ಲಿವೆ. ಉದಾಹರಣೆಗೆ ಕ್ಲೋರೋಫಿಲ್ ಮತ್ತು ಬಿ–12ಜೀವಾತುವಿನಲ್ಲಿ ಪಿರೋಲ್ ವೃತ್ತಗಳಿವೆ. ಇಂಡಿಗೋ ವರ್ಣದ್ರವ್ಯದಲ್ಲಿ ಇಂಡೋಲ್ ಎಂಬ ಹೆಟರೋಸೈಕ್ಲಿಕ್ ವೃತ್ತ (ರಿಂಗ್) ರಚನೆಯಿದೆ. ಅನೇಕ ಆಲ್ಕಲಾಯ್ಡುಗಳಲ್ಲಿ ಪಿರೋಲ್, ಪಿಡಿನ್, ಕ್ವಿನೋಲಿನ್ ಮತ್ತು ಐಸೋ ಕ್ವಿನೋಲಿನ್ ವೃತ್ತರಚನೆಗಳಿವೆ. ಅದ್ದರಿಂದ ಪ್ರಕೃತಿಯಲ್ಲಿ ದೊರೆಯುವ ಅನೇಕ ಇಂಗಾಲ ಸಂಯುಕ್ತಗಳು ಮತ್ತು ಅದರ ಸಂಬಂಧಿಗಳ ಸಂಶ್ಲೇಷಣೆಗಳಲ್ಲಿ ಹೆಟರೊಸೈಕ್ಲಿಕ್ ಸಂಯುಕ್ತಗಳನ್ನು ಆರಂಭವಸ್ತುಗಳಾಗಿ ಉಪಯೋಗಿಸಲಾಗುತ್ತದೆ. ಅನೇಕ ಹೆಟರೊಸೈಕ್ಲಿಕ್ ಸಂಯುಕ್ತಗಳು ಪ್ರಕೃತಿಯಲ್ಲಿ ದೊರೆಯುವುವು ಮಾತ್ರವಲ್ಲದೆ ಅಸಂಖ್ಯಾತ ಸಂಯುಕ್ತಗಳನ್ನು ಪ್ರಯೋಗಶಾಲೆಯಲ್ಲಿ ಕೃತಕವಾಗಿ ಸಂಶ್ಲೇಷಿಸಲಾಗಿದೆ.



ಚಿತ್ರ. 12

ಜಟಿಲ ಸಂಯುಕ್ತಗಳು: ಇವನ್ನು ಮೇಲೆ ತಿಳಿಸಿದ ಯಾವೊಂದು ವರ್ಗಕ್ಕೂ ಸೇರಿಸಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಅನೇಕ ಕ್ರಿಯಾಪುಂಜಗಳನ್ನು ಪಡೆದಿರುವುದರಿಂದ ಕ್ರಿಯಾಪುಂಜಕ್ಕನುಗುಣವಾಗಿ ಮಾಡಿದ ವರ್ಗೀಕರಣದಲ್ಲೂ ಸೇರಿಸುವಂತಿಲ್ಲ. ಈ ಸಂಯುಕ್ತಗಳ ಪ್ರತ್ಯೇಕ ವರ್ಗೀಕರಣ ವಿಧಾನಕ್ಕೆ ಆಕರಸಾಮ್ಯ, ರಚನಾಸಾಮ್ಯ ಅಥವಾ ಉಪಯುಕ್ತತಾಸಾಮ್ಯಗಳು ಆಧಾರಗಳು.

ಪ್ರಕೃತಿದತ್ತ ಜಟಿಲ ಸಂಯುಕ್ತಗಳಲ್ಲಿ ಮುಖ್ಯವಾದ ಗುಂಪುಗಳು ಪ್ರೋಟೀನ್ ಮತ್ತು ಪಾಲಿಪೆಪ್ಟೈಡುಗಳು, ಶರ್ಕರಪಿಷ್ಟಗಳು (ಕಾರ್ಬೊಹೈಡ್ರೇಟುಗಳು), ತೈಲ ಮತ್ತು ಕೊಬ್ಬುಗಳು (ಆಯ್ಲ್ಸ್ ಅಂಡ್ ಫ್ಯಾಟ್ಸ್), ಆಲ್ಕಲಾಯ್ಡುಗಳು, ಜೀವಾತುಗಳು (ವಿಟಮಿನ್ಸ್), ಸ್ಟೆರಾಯ್ಡುಗಳು, ಹಾರ್ಮೋನುಗಳು. ಅಷ್ಟೇ ಅಲ್ಲದೆ ಅನೇಕ ಔಷಧ ದ್ರವ್ಯಗಳು ಮತ್ತು ವರ್ಣದ್ರವ್ಯಗಳೂ ಪ್ರಕೃತಿಯಲ್ಲಿ ದೊರೆಯುತ್ತವೆ.

ಕೃತಕ ಜಟಿಲ ಇಂಗಾಲ ಸಂಯುಕ್ತಗಳಲ್ಲಿ ಮುಖ್ಯವಾದವು ಕೃತಕ ಔಷಧ ದ್ರವ್ಯಗಳು ಮತ್ತು ಬಹ್ವಂಗಗಳು (ಪಾಲಿಮರುಗಳು). ಕೃತಕ ಎಳೆ, ಕೃತಕ ರಬ್ಬರ್, ಪ್ಲಾಸ್ಟಿಕ್ ಮೊದಲಾದುವು ಗಳೆಲ್ಲ ಬಹ್ವಂಗಗಳು.

ಕ್ರಿಯಾಪುಂಜಗಳಾವುವೂ ಇಲ್ಲದ ಹೈಡ್ರೊಕಾರ್ಬನ್ನುಗಳು ಮೊದಲನೆಯವು. ಅವುಗಳ ನಿಷ್ಪನ್ನಗಳೆಂದು ಪರಿಗಣಿಸಬಹುದಾದ ಇತರ ಸಂಯುಕ್ತಗಳನ್ನು ಕ್ರಿಯಾಪುಂಜಗಳಿಗನುಗುಣವಾಗಿ ವರ್ಗೀಕರಿಸಲಾಗುತ್ತದೆ.

ಹೈಡ್ರೊಕಾರ್ಬನ್ನುಗಳು: ಇವು ಆಲಿಫ್ಯಾಟಿಕ್, ಆಲಿಸೈಕ್ಲಿಕ್ ಅಥವಾ ಆರೊಮ್ಯಾಟಿಕ್ ವರ್ಗಗಳಿಗೆ ಸೇರಿರಬಹುದು. ಆಲಿಫ್ಯಾಟಿಕ್ ಅಥವಾ ಆಲಿಸೈಕ್ಲಿಕ್ ಸಂಯುಕ್ತಗಳಾಗಿರುವಾಗ ದ್ವಿಬಂಧ, ತ್ರಿಬಂಧಗಳನ್ನೊಡಗೊಂಡು ಅಪರ್ಯಾಪ್ತ (ಅನ್‌ಸ್ಯಾಚುರೇಟಡ್) ಸಂಯುಕ್ತಗಳಾಗಿರಬಹುದು. ಅಥವಾ ಏಕಬಂಧಗಳನ್ನು ಮಾತ್ರ ಒಳಗೊಂಡ ಪರ್ಯಾಪ್ತ ಸಂಯುಕ್ತಗಳಾಗಿರಬಹುದು. ಆರೊಮ್ಯಾಟಿಕ್ ಸಂಯುಕ್ತಗಳು ಒಂದು ವಿಶಿಷ್ಟ ರೀತಿಯ ಅಪರ್ಯಾಪ್ತ ಸಂಯುಕ್ತಗಳು. ಪರ್ಯಾಪ್ತ ಸಂಯುಕ್ತಗಳು ಆಲ್ಕೇನ್ ಅಥವಾ ಸೈಕ್ಲೋಆಲ್ಕೇನುಗಳೆನ್ನಿಸಿಕೊಳ್ಳುತ್ತವೆ. ದ್ವಿಬಂಧವುಳ್ಳವು (ಆರೊಮ್ಯಾಟಿಕ್ ಸಂಯುಕ್ತಗಳನ್ನು ಬಿಟ್ಟು) ಆಲ್ಕೀನುಗಳು ಅಥವಾ ಸೈಕ್ಲೋಆಲ್ಕೀನುಗಳು ಮತ್ತು ತ್ರಿಬಂಧವುಳ್ಳ ಸಂಯುಕ್ತಗಳು ಆಲ್ಕೈನುಗಳು.

ಎಲ್ಲ ಬಗೆಯ ಹೈಡ್ರೊಕಾರ್ಬನ್‌ಗಳೂ ಪ್ರಕೃತಿಯಲ್ಲಿ ಪೆಟ್ರೋಲಿಯಂ ಎಣ್ಣೆಯಲ್ಲಿ ದೊರೆಯುತ್ತವೆ. ಆರೋಮ್ಯಾಟಿಕ್ ಸಂಯುಕ್ತಗಳು ತಕ್ಕಮಟ್ಟಿನ ಪ್ರಮಾಣದಲ್ಲಿ ಕಲ್ಲಿದ್ದಲಿನಲ್ಲಿಯೂ ದೊರೆಯುತ್ತವೆ.

ಬಹು ದ್ವಿಬಂಧಗಳನ್ನುಳ್ಳ ಅನೇಕ ಸಂಯುಕ್ತಗಳು ಸ್ಕ್ವಾಲೀನ್, ಅಲ್ಲೀನ್, ಬ್ಯೂಟಡಯೀನ್, 2, 3 – ಡೈಮೀಥೈಲ್ ಬ್ಯೂಟಡಯೀನ್, ಐಸೋಪ್ರೀನ್, ಕ್ಲೋರೋಪ್ರೀನ್ ಮೊದಲಾದವು–ಇಂಗಾಲಸಂಯುಕ್ತ ರಸಾಯನಶಾಸ್ತ್ರದಲ್ಲಿ ಹಲವು ಪ್ರಮುಖ ಸಂಯುಕ್ತಗಳು.

ತ್ರಿಬಂಧವುಳ್ಳ ಆಲಿಫ್ಯಾಟಿಕ್ ಸಂಯುಕ್ತಗಳು ಅಸಿಟಲೀನ್ ಅಥವಾ ಆಲ್ಕೈನ್‌ಗಳು. ಪ್ರಕೃತಿಯಲ್ಲಿ ಅಲ್ಲಲ್ಲಿ ತ್ರಿಬಂಧಪೂರಿತ ಸಂಯುಕ್ತಗಳು ದೊರೆಯುವುವಾದರೂ ಅವು ಬಲು ವಿರಳ. ಸಾಮಾನ್ಯವಾಗಿ ಇವನ್ನು ಕೃತಕವಾಗಿ ಸಂಯೋಜಿಸಲಾಗುತ್ತದೆ. ಅತಿ ಸರಳ ಆಲ್ಕೈನ್ ಗುಂಪಿನ ಹೈಡ್ರೊಕಾರ್ಬನ್ ಆದ ಅಸಿಟಲೀನನ್ನು ಕ್ಯಾಲ್ಸಿಯಂ ಕಾರ್ಬೈಡ್ ಮತ್ತು ನೀರಿನ ವರ್ತನೆಯಿಂದ ಪಡೆಯಬಹುದು. ದ್ವಿಬಂಧ ಸಂಯುಕ್ತಗಳಿಂದ ತ್ರಿಬಂಧ ಸಂಯುಕ್ತಗಳನ್ನು ತಯಾರಿಸಬಹುದು. ತ್ರಿಬಂಧ ಸಂಯುಕ್ತಗಳು ದ್ವಿಬಂಧ ಸಂಯುಕ್ತಗಳಿಗಿಂತಲೂ ಬಲು ಅಸ್ಥಿರ ಅಥವಾ ಪಟು. ಆಲ್ಕೀನುಗಳಂತೆಯೇ ಆಲ್ಕೈನುಗಳೂ ಸಂಕಲನ ಕ್ರಿಯೆಗಳಲ್ಲಿ ಭಾಗವಹಿಸಬಲ್ಲವು. ತ್ರಿಬಂಧ ಇಂಗಾಲಕ್ಕೆ ಸೇರಿದ ಹೈಡ್ರೊಜನ್ ಪರಮಾಣು ಬಲು ಪಟು. ಇದನ್ನು ಸುಲಭವಾಗಿ ಸೋಡಿಯಂನಂಥ ಪಟು ಲೋಹಗಳ ಪರಮಾಣುಗಳಿಂದ ಪಲ್ಲಟಿಸಬಹುದು. ಹಾಗೆ ದೊರೆತ ಅಸಿಟಲೈಡುಗಳೆಂಬ ಆರ್ಗ್ಯಾನೋಲೋಹ ಸಂಯುಕ್ತಗಳು ಅನೇಕ ರಾಸಾಯನಿಕ ಸಂಯೋಜನೆಗಳಲ್ಲಿ ಬಲು ಉಪಯುಕ್ತ ಮಧ್ಯವರ್ತಿಗಳು.

ಹ್ಯಾಲೈಡುಗಳು; ಯಾವುದೇ ಬಗೆಯ ಹೈಡ್ರೊಕಾರ್ಬನ್ನಿನಲ್ಲಿನ ಹೈಡ್ರೊಜನ್ನನ್ನು ಹ್ಯಾಲೊಜನ್ ಪರಮಾಣುವಿನಿಂದ ಆದೇಶಿಸಿದಾಗ ಹ್ಯಾಲೈಡ್ ದೊರೆಯುವುದು. ಒಂದಕ್ಕಿಂತ ಹೆಚ್ಚು ಹೈಡ್ರೊಜನ್ ಪರಮಾಣುಗಳನ್ನೂ ಆದೇಶಿಸಲು ಸಾಧ್ಯ. ಹೈಡ್ರೊಜನ್ನನ್ನು ನೇರವಾಗಿ

ಆದೇಶಿಸಲು ಎಲ್ಲ ಸಂದರ್ಭಗಳಲ್ಲಿಯೂ ಸಾಧ್ಯವಿಲ್ಲ. ಸಾಮಾನ್ಯವಾಗಿ ಆಲ್ಕೊಹಾಲುಗಳಲ್ಲಿನ ಹೈಡ್ರಾಕ್ಸಿಲ್ ಪುಂಜದ ಆದೇಶದಿಂದ ಹ್ಯಾಲೈಡುಗಳನ್ನು ತಯಾರಿಸಲಾಗುತ್ತದೆ. ಹ್ಯಾಲೈಡುಗಳು ಪಟು ಸಂಯುಕ್ತಗಳಾದ್ದರಿಂದ ಆನೇಕ ರಾಸಾಯನಿಕ ಸಂಯೋಜನೆಗಳಲ್ಲಿ ಉಪಯೋಗಕ್ಕೆ ಬರುತ್ತವೆ. ಗ್ರೀನಾರ್ಡ್ ಸಂಯುಕ್ತಗಳೆಂಬ ಬಲುಮುಖ್ಯ ಆರ್ಗ್ಯಾನೋಲೋಹ ಸಂಯುಕ್ತಗಳ ತಯಾರಿಕೆಗೆ ಹ್ಯಾಲೈಡುಗಳೇ ಮೂಲವಸ್ತುಗಳು. ಅಪರ್ಯಾಪ್ತ ಆಲ್ಕೈಲ್ ಹ್ಯಾಲೈಡ್ ಆದ ವೀನೈಲ್ ಕ್ಲೋರೇಡನ್ನು ಪ್ಲಾಸ್ಟಿಕ್ಕುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. ಕ್ಲೋರೋಫಾರಂ ಮೀಥೇನಿನ ಟ್ರೈ ಹ್ಯಾಲೈಡ್. **(ನೋಡಿ– ಆಲ್ಕೊಹಾಲುಗಳು)**

ಈಥರುಗಳು: ಆಲ್ಕೊಹಾಲಿನಲ್ಲಿನ ಹೈಡ್ರಾಕ್ಸಿಲ್ ಪುಂಜದ ಹೈಡ್ರೊಜನ್ನನ್ನು ಆಲ್ಕೈಲ್, ಅರೈಲ ಅಥವಾ ಸೈಕ್ಲೋಆಲ್ಕೈಲ್ ಪುಂಜವೊಂದರಿಂದ ಆದೇಶಿಸಿದಾಗ ದೊರೆಯುವುದು ಈಥರ್. ಇವನ್ನು ತಯಾರಿಸಲು ಆಲ್ಕೊಹಾಲುಗಳೇ ಮೂಲವಸ್ತುಗಳು. ಈಥರುಗಳು ಸ್ವಲ್ಪ ಹೆಚ್ಚು ಕಡಿಮೆ ಆಲ್ಕೇನುಗಳಷ್ಟೇ ಜಡವಸ್ತುಗಳು. ಸಾಮಾನ್ಯವಾಗಿ ಈಥರುಗಳು ಭಾಗವಹಿಸುವ ಎಲ್ಲ ಕ್ರಿಯೆಗಳಲ್ಲೂ ಈಥರ್ ಬಂಧನದ ಭೇದವಾಗುತ್ತದೆ. ತೀವ್ರ ಉತ್ಕರ್ಷಣ ಪರಿಸ್ಥಿತಿಗಳಲ್ಲಿ ಅಣುಭೇದಗೊಂಡು ಈಥರುಗಳು ಆಲ್ಡಿಹೈಡುಗಳನ್ನು ನೀಡುತ್ತವೆ. ಆಕ್ಸಿಜನ್ ಸಂಪರ್ಕದಲ್ಲಿ ಈಥರುಗಳು ಸ್ಫೋಟಕ ಪೆರಾಕ್ಸೈಡುಗಳಾಗಿ ಮಾರ್ಪಡುತ್ತವೆ. ಆದ್ದರಿಂದ ಈಥರುಗಳ ತಯಾರಿಕೆ ಮತ್ತು ಶುದ್ಧೀಕರಣಗಳಲ್ಲಿ ಜಾಗರೂಕತೆ ಆವಶ್ಯಕ. ಸಾಮಾನ್ಯವಾಗಿ ಕೇವಲ ಈಥರ್ ಎಂದೆನಿಸಿಕೊಳ್ಳುವ ಸಂಯುಕ್ತ ಡೈಈಥೈಲ್ ಈಥರ್ ($C_2H_5-O-C_2H_5$). ಎಥಿಲೀನ್ ಅಥವಾ ಎಥನಾಲಿನಿಂದ ಇದನ್ನು ತಯಾರಿಸಬಹುದು. ಇದರ ಮುಖ್ಯ ಉಪಯೋಗಗಳು ವೇದನಾ ಪ್ರತಿಬಂಧಕವಾಗಿ ಮತ್ತು ಸಾರ್ವತ್ರಿಕ ಲೀನಕಾರಿಯಾಗಿ. **(ನೋಡಿ– ಆಲ್ಡಿಹೈಡುಗಳು)**

ಆಮ್ಲಗಳು ಮತ್ತು ಅವುಗಳ ನಿಷ್ಪನ್ನಗಳು: ಕಾರ್ಬಾಕ್ಸಿಲ್ (COOH) ಪುಂಜವನ್ನುಳ್ಳ ಇಂಗಾಲ ಸಂಯುಕ್ತಗಳು ಆಮ್ಲಗಳೆಂದೆನ್ನಿಸಿಕೊಳ್ಳುತ್ತವೆ. ಕಾರ್ಬಾಕ್ಸಿಲ್ ಹೈಡ್ರೊಜನ್ನಿಗೆ ಸುಲಭವಾಗಿ ಬಿಡುಗಡೆಯಾಗುವ ಶಕ್ತಿಯಿದ್ದು ಆಮ್ಲಗಳು ಕ್ಷಾರ ವಸ್ತುಗಳೊಡನೆ ವರ್ತಿಸಿದಾಗ ಈ ಹೈಡ್ರೊಜನ್ ಆದೇಶಗೊಂಡು ಲವಣಗಳು ಕ್ರಿಯಾ ಉತ್ಪನ್ನವಾಗಿ ದೊರೆಯುತ್ತವೆ. ಆದರೆ ಈ ಆಮ್ಲಗಳು ಖನಿಜ ಆಮ್ಲಗಳಿಗಿಂತಲೂ ದುರ್ಬಲವಾದುವುಗಳಾದ್ದರಿಂದ ಈ ಬಗೆಯ ಲವಣಗಳು ಖನಿಜ ಆಮ್ಲಗಳಿಂದ ವಿಭಜನೆಗೊಳ್ಳುತ್ತವೆ. ಅಣುಗಾತ್ರ ಹೆಚ್ಚಿದಂತೆ ಆಮ್ಲೀಯತೆ ಕಡಿಮೆಯಾಗುತ್ತದೆ. ಹಿರಿಯ ಗಾತ್ರದ ಆಮ್ಲಗಳು ಎಣ್ಣೆ, ಕೊಬ್ಬುಗಳಲ್ಲಿ ಎಸ್ಟರುಗಳ ರೂಪದಲ್ಲಿರುತ್ತವೆ. ಬಹುಸಂಖ್ಯೆಯ ಕಾರ್ಬಾಕ್ಸಿಲ್ ಪುಂಜಗಳನ್ನುಳ್ಳ ಆಮ್ಲಗಳೂ ಉಂಟು. ಆಮ್ಲಗಳು ಆಲ್ಕೊಹಾಲುಗಳೊಡನೆ ವರ್ತಿಸಿದಾಗ ದೊರೆಯುವ ನಿಷ್ಪನ್ನಗಳೇ ಎಸ್ಟರುಗಳು.

$$R-COOH+R^1OH \xrightarrow{[H^+]} R-COOR^1+H_2O$$

ಪ್ರಕೃತಿಯಲ್ಲಿ ದೊರೆಯುವ ಆನೇಕ ಸುಗಂಧದ್ರವ್ಯ, ಮಧುರ ದ್ರವ್ಯಗಳಲ್ಲಿ ಎಸ್ಟರುಗಳಿವೆ.

ಆಮ್ಲಗಳು ಅಮೋನಿಯ ಅಥವಾ ಅಮ್ಮೈಡುಗಳೊಡನೆ ವಿಶಿಷ್ಟ ರೀತಿಯಲ್ಲಿ ವರ್ತಿಸಿದಾಗ ದೊರೆಯುವುದು ಅಮ್ಮೈಡುಗಳು.

$$R-COOH+R^1N\ H_2 \longrightarrow RCONHR^1+H_2O$$

ಅಮ್ಮೈಡುಗಳು ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಸಂಯುಕ್ತಗಳ ಸಂಯೋಗದಿಂದ ಆದ ಸಂಯುಕ್ತಗಳಾದ್ದರಿಂದ ಅವು ಬಲುಮಟ್ಟಿಗೆ ಲವಣಸದೃಶ ತಟಸ್ಥ ಅಥವಾ ಪ್ರತ್ಯಾಮ್ಲೀಯ (ಆಂಫೊಟೆರಿಕ್) ಸಂಯುಕ್ತಗಳು. ಖನಿಜ ಆಮ್ಲಗಳೊಡನೆ ಇವು ವರ್ತಿಸಿದಾಗ ವಿಭಜನೆಗೊಂಡು ಆಮ್ಲ ಮತ್ತು ಅಮ್ಮೈನುಗಳ ಬಿಡುಗಡೆಯಾಗುತ್ತದೆ. ಪ್ರೋಟೀನುಗಳು ಅಮ್ಮೈಡುಗಳ ಸರಣಿಗಳಿಂದ ಆದವು. ರೇಷ್ಮೆ ಮತ್ತು ನೈಲಾನ್ ಎಳೆಗಳೂ ಅಮ್ಮೈಡ್ ಸರಣಿಗಳು.

ಆಧುನಿಕ ಇಂಗಾಲ ಸಂಯುಕ್ತ ರಸಾಯನಶಾಸ್ತ್ರ ಅಧ್ಯಯನ; ಹೊಸ ಇಂಗಾಲ ಸಂಯುಕ್ತಗಳ ಪ್ರಕೃತಿಯ ಆಕರಗಳಿಂದ ಬೇರ್ಪಡಿಸಿ ತೆಗೆದು ಶುದ್ಧರೂಪದಲ್ಲಿ ಪಡೆಯುವುದು; ಅವುಗಳ ಸಂಪೂರ್ಣರಚನಾನಿರ್ಣಯ ಮಾಡುವುದು; ಬೇರ್ಪಡಿಸಿದ ಸಂಯುಕ್ತಗಳನ್ನು ಮತ್ತು ಅವುಗಳ ಸಂಬಂಧಿ ಸಂಯುಕ್ತಗಳನ್ನು ಕೃತಕವಾಗಿ ಪ್ರಯೋಗಶಾಲೆಗಳಲ್ಲಿ ಸಂಯೋಜಿಸುವುದು; ಪ್ರಕೃತಿಯಲ್ಲಿ ಸಹಜ ಸಂಯುಕ್ತಗಳು ಸಂಶ್ಲೇಷಣೆ ಹೇಗೆ ಆಗಿದೆಯೆಂದು ಪರಿಶೀಲಿಸುವುದು; ಮತ್ತು ಸಹಜ ಹಾಗೂ ಕೃತಕ ಸಂಯುಕ್ತಗಳ ಉಪಯುಕ್ತತೆಯನ್ನು ಪರಿಶೀಲಿಸುವುದು–ಇವಿಷ್ಟು ಒಬ್ಬ ರಸಾಯನಶಾಸ್ತ್ರಜ್ಞನ ಮೊದಲ ಕರ್ತವ್ಯ. ಇಂಥ ಸಂಶೋಧನೆಗಳಿಂದ ಪ್ರಕೃತಿಯ ರಾಸಾಯನಿಕರಹಸ್ಯಗಳನ್ನು ಅರಿಯಬಹುದು; ಪ್ರಕೃತಿದತ್ತ ಸಂಯುಕ್ತಗಳ ಉಪಯುಕ್ತತೆಗಳನ್ನು ತಿಳಿಯಬಹುದು.

ಎರಡನೆಯ ಕರ್ತವ್ಯ ಅಣುಗಳ ರಚನೆಯ ಬಗ್ಗೆ ರಾಸಾಯನಿಕ ಕ್ರಿಯಾ ರಹಸ್ಯಗಳು. ಕ್ರಿಯಾವೇಗಶಾಸ್ತ್ರ (ಆ್ಯಕ್ಷನ್ ಕೈನೆಟಿಕ್ಸ್) ಮತ್ತು ಕ್ರಿಯೆಗಳು ನಡೆಯಲು ಬೇಕಾಗುವ ಅತಿಸೂಕ್ತ ಪರಿಸ್ಥಿತಿಗಳ ಬಗ್ಗೆ ಸಂಶೋಧನೆ. ಈ ಅಧ್ಯಯನದ ಹೆಸರು ಇಂಗಾಲಸಂಯುಕ್ತ ಭೌತರಸಾಯನಶಾಸ್ತ್ರ. ಮೂರನೆಯ ಕರ್ತವ್ಯ ಭೌತ ವಿಧಾನಗಳನ್ನು ಇಂಗಾಲ ಸಂಯುಕ್ತಗಳ ಅಧ್ಯಯನಕ್ಕೆ ಅಳವಡಿಸುವುದು. ಈ ಶತಮಾನದಲ್ಲಿ ಈ ಬಗೆಯ ಸಂಶೋಧನೆಗಳಲ್ಲಿ ಅಗಾಧಕಾರ್ಯ ನಡೆದಿದ್ದು ಬಲು ಸೂಕ್ಷ್ಮ ಮತ್ತು ನಿಖರ ಭೌತ ಉಪಕರಣಗಳಿಲ್ಲದೆ ಇಂದಿನ ಇಂಗಾಲಸಂಯುಕ್ತರಸಾಯನಶಾಸ್ತ್ರದ ಸಂಶೋಧನೆಗಳು ನಡೆಯುವಂತೆಯೇ ಇಲ್ಲವೆನ್ನಬಹುದು. ಅಣುರಚನೆಯ ಅತಿಸೂಕ್ಷ್ಮ ವಿವರಗಳು ಅಣುಗಳ ಆಕಾರಗಳು, ಅತಿವೇಗದಲ್ಲಿ ನಡೆಯುವ ಕ್ರಿಯೆಗಳ ರಹಸ್ಯಗಳು, ಅತ್ಯಲ್ಪ ಆಯುಸ್ಸುಳ್ಳ ಕ್ರಿಯಾಮಧ್ಯವರ್ತಿಗಳ ಸ್ವರೂಪಗಳು ಮೊದಲಾದುವನ್ನು ಅರಿತುಕೊಳ್ಳುವ ರಂಗದಲ್ಲಿ ಈಗ ನಮ್ಮ ನೆರವಿಗಿರುವ ವಿವಿಧ ರೀತಿಯ ರೋಹಿತ ವಿಧಾನಗಳು, ನಮನ ವಿಧಾನಗಳು, ಗಣಕಯಂತ್ರಗಳೇ ಮೊದಲಾದ ಭೌತವಿಧಾನಗಳು ಮತ್ತು ಸೂಕ್ಷ್ಮ ಉಪಕರಣಗಳ ನೆರವಿಲ್ಲದೆ ಈಗ ಸಾಧಿಸಿರುವ ಅನೇಕ ಸಾಧನಗಳು ಸಾಧ್ಯವೇ ಆಗುತ್ತಿರಲಿಲ್ಲ.

ನಾಲ್ಕನೆಯ ಬಗೆಯ ಅಧ್ಯಯನದ ಹೆಸರು ಔದ್ಯಮಿಕ ಇಂಗಾಲಸಂಯುಕ್ತ ರಸಾಯನಶಾಸ್ತ್ರ. ಮೇಲೆ ಹೇಳಿದ ಮೂರು ಬಗೆಯ ಅಧ್ಯಯನಗಳನ್ನೂ ಇಲ್ಲಿ ಉಪಯೋಗಿಸಿ ಕೊಂಡು ಜನರ ಉಪಯೋಗಕ್ಕೆ ಬೇಕಾಗುವ ಸಂಯುಕ್ತಗಳನ್ನು ಬೇಕಾದಷ್ಟು ಹಿರಿಯ ಪ್ರಮಾಣದಲ್ಲಿ ಒದಗಿಸಲು ಪ್ರಯತ್ನಿಸಲಾಗುವುದು.

ನಿತ್ಯ ಜೀವನದಲ್ಲಿ ಇಂಗಾಲ ಸಂಯುಕ್ತಗಳು: ಅಧಿಕ ಸಂಖ್ಯೆಯ ಜೀವಜನ್ಯ ಸಂಯುಕ್ತಗಳು ಇಂಗಾಲ ಸಂಯುಕ್ತಗಳಾದ್ದರಿಂದ ನಾವು ಹೆಜ್ಜೆ ಹೆಜ್ಜೆಗೂ ಅವನ್ನು ಕಾಣುವುದು ಮತ್ತು ಉಪಯೋಗಿಸುವುದು ಅನಿವಾರ್ಯವೇ ಆಗಿದೆ. ಕೂಲಂಕಷ ಪರಿಶೀಲನೆಯ ಪರಿಣಾಮವಾಗಿ ಜೀವನದ ಇರುವಿಕೆಗೇ ಕಾರಣವಾದ ಇಂಗಾಲ ಸಂಯುಕ್ತಗಳ ವಿಷಯವಾಗಿ ಇಂದು ಅಧಿಕ ಜ್ಞಾನ ಪಡೆದಿದ್ದೇವೆ. ಪ್ರೋಟೀನ್, ಎನ್ಸೈಮ್, ಹಾರ್ಮೋನ್ ಮೊದಲಾದುವುಗಳ ವಿಷಯವಾದ ತಿಳಿವಳಿಕೆ ಜೀವ ರಸಾಯನವಿಜ್ಞಾನ ಮತ್ತು ಅಣುಜೀವಶಾಸ್ತ್ರದ ಅಭ್ಯಾಸಗಳ ಮೊದಲ ಹಂತ. ವಿಜ್ಞಾನದ ಉಳಿದ ಅನೇಕ ವಿಭಾಗಗಳ ಅಭ್ಯಾಸಿಗಳು ಸದಾ ತಮಗೆ ಬೇಕಾದ ಸಲಕರಣೆಗಳಿಗಾಗಿ, ವಿಧಾನಗಳಿಗಾಗಿ ಇಂಗಾಲಸಂಯುಕ್ತಗಳತ್ತ ನೋಡುತ್ತಲೇ ಇರಬೇಕಾಗುತ್ತದೆ. ಜೀವರಸಾಯನವಿಜ್ಞಾನ ಮತ್ತು ಅಣುಜೀವವಿಜ್ಞಾನಗಳು ಇಂಗಾಲ ಸಂಯುಕ್ತ ರಸಾಯನವಿಜ್ಞಾನದಿಂದಲೇ ಅಂಕುರಗೊಂಡಿರುವ ಹೊಸ ರಸಾಯನವಿಜ್ಞಾನ ವಿಭಾಗಗಳು.

ಸಸ್ಯ ಮತ್ತು ಪ್ರಾಣಿಸಂಪತ್ತು: ಕಳೆದ ಮೂವತ್ತೈದು ವರ್ಷಗಳಿಂದ ಪ್ರಪಂಚದ ಪ್ರತಿ ದೇಶದಲ್ಲಿಯೂ ಬೇಸಾಯಗಾರರು ಹೆಚ್ಚು ಬೆಳೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನಗಳಿಗೆ ಪೋಷಕವಾಗಿರುವ ವಸ್ತುಗಳೆಂದರೆ ಕೃತಕ ಗೊಬ್ಬರ ಮತ್ತು ಕೀಟ ವೈರಸ್ ನಾಶಕಗಳು ಮತ್ತು ಕಳೆನಾಶಕಗಳು. ಕೃತಕ ಗೊಬ್ಬರಗಳು ಬಲುಮಟ್ಟಿಗೆ ಇಂಗಾಲ ಸಂಯುಕ್ತಗಳಲ್ಲ – ನಿರವಯವ ಲವಣಗಳು.

ಔಷಧ ವಿಜ್ಞಾನ: ಔಷಧ ರಂಗದಲ್ಲಿ ಉಪಯೋಗಿಸುತ್ತಿರುವ ಅಸಂಖ್ಯಾತ ಸಂಯುಕ್ತಗಳಲ್ಲಿ 90%ಕ್ಕೂ ಮೀರಿದ ಸಂಯುಕ್ತಗಳು ಇಂಗಾಲ ಸಂಯುಕ್ತಗಳು. ಹೊರಗಾಯಕ್ಕೆ ಹಚ್ಚುವ ಮುಲಾವಿನಲ್ಲಿ, ಒಳಹುಣ್ಣಿನ ಉಪಶಮನದಲ್ಲಿ, ಎಲ್ಲ ಬಗೆಯ ದೈಹಿಕ ರೋಗ ಚಿಕಿತ್ಸೆಗಳಲ್ಲಿ ಅನೇಕ ಮಾನಸಿಕ ರೋಗ ಚಿಕಿತ್ಸೆಗಳಲ್ಲಿ ಶಸ್ತ್ರ ಚಿಕಿತ್ಸೆಗಳಲ್ಲಿ (ವೇದನಾಪ್ರತಿ ಬಂಧಕವಾಗಿ), ರೋಗಕಾರಕ ಸೂಕ್ಷ್ಮಾಣು ಜೀವಿಗಳ ಎದುರು ಚಿಕಿತ್ಸೆಗಳಲ್ಲಿ ಶರೀರದ ಅಂಗಗಳ ಕಾರ್ಯಗಳನ್ನು ನಿಯಂತ್ರಿಸಲು, ಜನನ ನಿಯಂತ್ರಣಕ್ಕಾಗಿ–ಹೀಗೆ ಕೊನೆಯಿಲ್ಲ ದಷ್ಟು ಉಪಯೋಗಗಳನ್ನು ಪಡೆದಿರುವ ಔಷಧಗಳು ಬಲು ಪಾಲಿಗೆ ಇಂಗಾಲಸಂಯುಕ್ತಗಳು. ರಾಸಾಯನಿಕ ಚಿಕಿತ್ಸೆ ಇಂದು ನಾವು ಅನೇಕ ರೋಗಗಳನ್ನು ಗೆಲ್ಲಲು ನೆರವು ನೀಡಿದೆ.

ಕೈಗಾರಿಕೋದ್ಯಮಗಳು: ಯಾವ ಕೈಗಾರಿಕೋದ್ಯಮವೂ ಪ್ರಕೃತಿಯ ಕಚ್ಚಾ ವಸ್ತುಗಳಿಲ್ಲದೆ ಬಲುಕಾಲ ನಡೆಯುವಂತಿಲ್ಲ. ಪ್ರಕೃತಿಯ ಬಲುಪಾಲು ವಸ್ತುಗಳು ಇಂಗಾಲ ಸಂಯುಕ್ತಪೂರಿತವಾದ್ದರಿಂದ ಇಂಗಾಲಸಂಯುಕ್ತಗಳನ್ನು ಸ್ವಲ್ಪವಾದರೂ ಉಪಯೋಗಿಸದ ಉದ್ಯಮಗಳೇ ಇಲ್ಲವೆನ್ನಬಹುದು. ಇಂದಿನ ದಿವಸಗಳಲ್ಲಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿರುವ ಪ್ಲಾಸ್ಟಿಕ್ಕುಗಳು, ಕೃತಕ ಎಳೆಗಳು, ಚೊಕ್ಕಾರಕಗಳು, ವಿವಿಧ ಕೃತಕ ಮತ್ತು ಸಹಜ ವರ್ಣದ್ರವ್ಯಗಳು, ವಾಹನಗಳಿಗೆ ಉರುವಲಾಗಿ ಉಪಯೋಗಿಸುತ್ತಿರುವ ಪೆಟ್ರೋಲ್, ಸೀಮೆಎಣ್ಣೆ, ಡೀಸೆಲ್ ಎಣ್ಣೆಗಳ ಮೂಲವಾದ ಪೆಟ್ರೋಲಿಯಂ ಮೊದಲಾದುವುಗ ಳೆಲ್ಲ ಇಂಗಾಲ ಸಂಯುಕ್ತರಸಾಯನಶಾಸ್ತ್ರದ ಅಂಕೆಗೆ ಒಳಪಟ್ಟಿವೆ.

ದೇಶಸಂರಕ್ಷಣೆ: ಯುದ್ಧರಂಗದಲ್ಲಿಯೂ ಇಂಗಾಲ ಸಂಯುಕ್ತಗಳ ಉಪಯೋಗ ಬೇಕಾದಷ್ಟಿದೆ. ಪ್ರಸಿದ್ಧ ಸ್ಫೋಟಕಗಳಾದ ಟಿ.ಎನ್.ಟಿ., ನೈಟ್ರೊಗ್ಲಿಸರಿನ್ ಮೊದಲಾದವುಗಳು ಇಂಗಾಲಸಂಯುಕ್ತಗಳು. ನೈಟ್ರೋಸಂಯುಕ್ತಗಳಿಂದ ಕೂಡಿದ ರಾಕೆಟ್ ಇಂಧನಗಳು, ರಾಕೆಟ್ ಇಂಧನದ ಆವರಣಗಳಿಗಾಗಿ ಉಪಯೋಗಿಸುವ ವಿಶಿಷ್ಟ ದರ್ಜೆಯ ಪ್ಲಾಸ್ಟಿಕ್ಕುಗಳೇ ಮೊದಲಾದುವು ಈ ರಂಗದಲ್ಲಿ ಇಂಗಾಲ ಸಂಯುಕ್ತಗಳ ಮುಖ್ಯ ಉಪಯೋಗಗಳನ್ನು ಪ್ರತಿನಿಧಿಸುತ್ತವೆ. ವಿಪರೀತ ದೈಹಿಕ ಮತ್ತು ಮಾನಸಿಕ ಪರಿಣಾಮಗಳನ್ನುಂಟುಮಾಡುವ ಅಶ್ರುವಾಯುವಿನಂಥ (ಟಿಯರ್ ಗ್ಯಾಸ್) ಮತ್ತು ಅದಕ್ಕೂ ಹೆಚ್ಚು ಹಾನಿಕರವಾದ ಅನೇಕ ಇಂಗಾಲಸಂಯುಕ್ತಗಳನ್ನು ಯುದ್ಧಗಳಲ್ಲಿ ಉಪಯೋಗಿಸಲಾಗುತ್ತದೆ. ಪ್ರತಿ ರಂಗದಲ್ಲಿಯೂ ಎಲ್ಲೆಲ್ಲೂ ಉಪಯೋಗಿಸಲಾಗುತ್ತಿರುವ ಸರ್ವವ್ಯಾಪಿ ಇಂಗಾಲಸಂಯುಕ್ತಗಳ ಉಪಯೋಗಗಳೆಲ್ಲವನ್ನೂ ಇಲ್ಲಿ ಹೇಳಲು ಸಾಧ್ಯವಿಲ್ಲ. ಜೀವನದ ಪ್ರತಿ ರಂಗ, ಪ್ರತಿ

ಹಜ್ಜೆಗಳಲ್ಲೂ ಹಾಸುಹೊಕ್ಕಾಗಿ ಇಂಗಾಲಸಂಯುಕ್ತಗಳು ಇವೆ. ಆದ್ದರಿಂದ ಇಂಗಾಲಸಂಯುಕ್ತರಸಾಯನಶಾಸ್ತ್ರದಲ್ಲಿನ ಹಲವು ಇತ್ತೀಚಿನ ಮುನ್ನಡೆಗಳು ಜನಜೀವನದ ಮೇಲೆ ಬೀರುವ ಅಪಾರ ಪರಿಣಾಮಗಳನ್ನು ಇಲ್ಲಿ ವಿವರಿಸಿದೆ. (ಕೆ.ಟಿ.ಎಸ್.)

**ಇಂಗಾಲಾಮ್ಲಮಿಶ್ರಿತ ನೀರು:** ಸೋಡ ವಾಟರ್, ಲೆಮೊನೇಡ್, ಜಿಂಜರ್ ಇತ್ಯಾದಿ ಹೆಸರುಗಳಿಂದ ಜನಸಾಮಾನ್ಯರಿಗೆ ಪರಿಚಿತವಾದ ಪಾನೀಯಗಳು (ಏರೇಟೆಡ್ ವಾಟರ್). ಇವುಗಳೆಲ್ಲ ಇಂಗಾಲಾಮ್ಲ ($CO_2$) ಹೆಚ್ಚಿನ ಒತ್ತಡದಲ್ಲಿ ವಿಲೀನವಾಗಿರುವುದರಿಂದ ಈ ಹೆಸರು ಬಂದಿದೆ. $CO_2$ಗಾಳಿಯ ಒತ್ತಡದಲ್ಲಿ ನೀರಿನಲ್ಲಿ ತಕ್ಕಮಟ್ಟಿಗೆ ದ್ರಾವ್ಯ. 20° ಸೆ. ಉಷ್ಣತೆ ಮತ್ತು ಗಾಳಿಯ ಒತ್ತಡದಲ್ಲಿ ಒಂದು ಗಾತ್ರ ನೀರಿನಲ್ಲಿ ನೀರಿನ ಗಾತ್ರದ 88ರಷ್ಟು ಗಾತ್ರ $CO_2$ ವಿಲೀನವಾಗುವುದು. ಒಂದು ನಿಯತ ಉಷ್ಣದಲ್ಲಿ $CO_2$ರ ದ್ರಾವಣತೆ ಒತ್ತಡದ ಅಧೀನವಾಗಿದೆ. ಒತ್ತಡ ಹೆಚ್ಚಿದಂತೆಲ್ಲ ದ್ರಾವಣತೆಯೂ ಹೆಚ್ಚುವುದು. ಇಂಗಾಲಾಮ್ಲ ಮಿಶ್ರಿತ ನೀರುಗಳಲ್ಲಿ ಅಧಿಕ ಒತ್ತಡದಲ್ಲಿರುವ $CO_2$ ಸೀಸೆಯ ಬಾಯಿಯ ಮೂಲಕ ಹೊರಸೂಸಿ ಹೋಗದಂತೆ ಬಾಯಿಯನ್ನು ಸೂಕ್ತ ರೀತಿಯಲ್ಲಿ ಮುಚ್ಚಿರುವರು. ಸೋಡ ಸೀಸೆಗಳನ್ನು ಉದಾಹರಿಸಬಹುದು. ಬಲ ಪ್ರಯೋಗಿಸಿ ಸೀಸೆಯ ಮುಚ್ಚಳವನ್ನು ಅಥವಾ ಗೋಲಿಯನ್ನು ತೆಗೆದಾಗ ಹೆಚ್ಚಿನ ಒತ್ತಡದಲ್ಲಿರುವ ಇಂಗಾಲಾಮ್ಲ ಸೀಸೆಯ ಬಾಯಿಯ ಮೂಲಕ ಹೊರಸೂಸುವುದು. ಹೇಗೆ $CO_2$ವಿನ ಒತ್ತಡ ಕಡಿಮೆಯಾಗಿ ನೀರಿನಲ್ಲಿ ಅದರ ವಿಲೀನತೆ ಕಡಿಮೆಯಾಗುವುದು. ಕಡಿಮೆ ಒತ್ತಡದಲ್ಲಿ $CO_2$ವಿನ ವಿಲೀನತೆಯ ಪ್ರಮಾಣಕ್ಕಿಂತ ಹೆಚ್ಚಿಗೆ ಇರುವ ಅನಿಲ ದ್ರಾವಣದಿಂದ ಹೊರಸೂಸುವುದು. ಆದ್ದರಿಂದಲೇ ಸೋಡ ವಾಟರ್ ಸೀಸೆಯ ನೀರನ್ನು ಉಪಯೋಗಿಸುವಾಗ ನೀರಿನಿಂದ ಸ್ವಚ್ಛವಾದ ಅನಿಲ ಘುಳುಘುಳಿಸುವುದು. ಈ ಪಾನೀಯಗಳಲ್ಲಿ $CO_2$ಅನ್ನು ಹೆಚ್ಚಿನ ಒತ್ತಡದಲ್ಲಿ ವಿಲೀನಗೊಳಿಸಿರುವುದಲ್ಲದೆ ಅವುಗಳಿಗೆ ಸುವಾಸನೆ, ರುಚಿ, ಮಾಧುರ್ಯಗಳನ್ನು ಕೊಡಲು ಬೇರೆ ಬೇರೆ ವಸ್ತುಗಳನ್ನು ಉಪಯೋಗಿಸುವರು. ಲೆಮನ್ ಗ್ರಾಸ್ ಎಣ್ಣೆ ನಿಂಬೆ ಹಣ್ಣಿನ ವಾಸನೆಯನ್ನು ಕೊಡುವುದು. ಇತರ ಹಣ್ಣುಗಳ ಸಾರಗಳನ್ನು ಉಪಯೋಗಿಸಿ ಬೇರೆ ಬೇರೆ ಹಣ್ಣುಗಳ ವಾಸನೆಯನ್ನು ಉಂಟುಮಾಡುವರು. ಜಿಂಜರ್ ಅಂದರೆ ಶುಂಠಿಯ ಸಾರ ಪಾನೀಯಕ್ಕೆ ಶುಂಠಿಯ ರುಚಿಕೊಡುವುದು. ಪಾನೀಯಕ್ಕೆ ಹುಳಿ ರುಚಿ ಕೊಡಲು ಫಾಸ್ಫಾರಿಕ್ ಆಮ್ಲ, ಸಿಟ್ರಿಕ್ ಆಮ್ಲ, ಟಾರ್ಟಾರಿಕ್ ಆಮ್ಲ ಮುಂತಾದ ಸೇವಿಸಲು ಯೋಗ್ಯವಾದ ಮತ್ತು ಅಗ್ಗವಾದ ಆಮ್ಲಗಳನ್ನು ಉಪಯೋಗಿಸುವರು. ಮಾಧುರ್ಯ ಕೊಡಲು ಸಕ್ಕರೆಯನ್ನಾಗಲಿ ಅಥವಾ ಸ್ಯಾಕರಿನ್ ಮುಂತಾದ ಅಗ್ಗದ ಅತಿಮಧುರ ವಸ್ತುಗಳನ್ನಾಗಲಿ ಉಪಯೋಗಿಸುವರು.

ಈ ಪಾನೀಯಗಳ ತಯಾರಿಕೆಯಲ್ಲಿ ಉಪಯೋಗಿಸುವ ಬೃಹತ್ಪ್ರಮಾಣದ $CO_2$ ಬಹುಭಾಗ ಮದ್ಯಸಾರದ ತಯಾರಿಕೆಯ ಕಾರ್ಖಾನೆಗಳಲ್ಲಿ ಉತ್ಪನ್ನವಾಗುತ್ತದೆ. ಮದ್ಯಸಾರ ತಯಾರಿಕೆಗೆ ಜೋನಿ ಬೆಲ್ಲವನ್ನು ಹುದುಗಲು ಹಾಕಿದಾಗ ವಿಶೇಷ ಪ್ರಮಾಣದ $CO_2$ ಉತ್ಪನ್ನವಾಗುವುದು. ಇದನ್ನು ದಪ್ಪ ಪಾರ್ಶ್ವಗಳುಳ್ಳ ಕಬ್ಬಿಣದ ಉರುಳೆಗಳಲ್ಲಿ ಹೆಚ್ಚಿನ ಒತ್ತಡದಲ್ಲಿ ತುಂಬಿ ಮಾರುಕಟ್ಟೆಗೆ ಕಳುಹಿಸುವರು. ಇವುಗಳನ್ನು ಉಪಯೋಗಿಸಿಕೊಂಡು ಏರೇಟೆಡ್ ನೀರುಗಳ ತಯಾರಕರು ಜನಪ್ರಿಯವಾದ ಸೋಡವಾಟರ್ ಮುಂತಾದ ಪಾನೀಯಗಳನ್ನು ತಯಾರಿಸುವರು. (ಕೆ.ಎಸ್.ಬಿ.)

**ಇಂಗು:** ಫೆರುಲ ಅಸಫೋಟಿಡ ಎಂಬ ಸಸ್ಯದ ಬೇರನ್ನು ಗಾಯಗೊಳಿಸಿದಾಗ ದೊರೆಯುವ ಗೋಂದುರಾಳ (ಅಸಫೋಟಿಡ) ಇದರ ವಾಸನೆ ವಿಶಿಷ್ಟವಾಗಿದೆ. ಇದನ್ನು ಹಿಂಗು, ರಾಮಠ, ಬಾಹ್ಲೀಕ ಎನ್ನುವುದೂ ಉಂಟು. ಕೊತ್ತಂಬರಿ, ಬ್ರಾಹ್ಮಿ (ಒಂದೆಲಗ ಅಥವಾ ತಿಮರೆ) ಮೊದಲಾದ ಸಸ್ಯಗಳ ಕುಟುಂಬವಾದ ಅಂಬೆಲಿಫೆರಿ (ಏಪಿಯೇಸೀ) ಕುಟುಂಬಕ್ಕೆ ಇಂಗಿನ ಗಿಡ ಸೇರಿದೆ. ಇದರಲ್ಲಿ ಅನೇಕ ಪ್ರಭೇದಗಳಿವೆ. ಗಿಡ 1–1.2 ಮೀ ಎತ್ತರ ಬೆಳೆಯುತ್ತದೆ. ನೆಲದ ಮೇಲಿರುವ ಕಾಂಡ ಮತ್ತು ಎಲೆಗಳು ಬೇಸಿಗೆಯಲ್ಲಿ ಒಣಗಿಹೋದರೂ ಬೇರುಗಂಟು ಮಾತ್ರ ನೆಲದೊಳಗೆ ಅಳಿಯದೆ ಉಳಿಯುತ್ತದೆ. ಮಳೆಗಾಲದಲ್ಲಿ ರೆಂಬೆಗಳು ಮೂಡಿ ಮೇಲೆ ಬೆಳೆದುಕೊಳ್ಳುತ್ತವೆ.

ವ್ಯಾಪಾರದೃಷ್ಟಿಯಿಂದ ಇಂಗಿಗೆ ಬೇಡಿಕೆ ಇರುವುದರಿಂದ ಅದನ್ನು ಕೃಷಿಮಾಡಿ ಬೆಳೆಯುತ್ತಾರೆ. ಹಿಮಾಲಯ, ಕಾಶ್ಮೀರ, ಪಶ್ಚಿಮ ಅಫ್ಘಾನಿಸ್ತಾನ ಮತ್ತು ಪರ್ಷಿಯ ದೇಶಗಳ ಗುಡ್ಡಗಾಡುಗಳ ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿ ಫಲವತ್ತಲ್ಲದ ಭೂಮಿಯಲ್ಲಿ ಇದು ತಾನಾಗಿಯೇ ಬೆಳೆಯುತ್ತದೆ. ಇಂಗಿನ ಗಿಡ ಬೇರುಗಂಟಿನಿಂದ ಮೂಡಿ ಬೆಳೆಯಲು ಪ್ರಾರಂಭವಾದಾಗ ಬೇರಿನ ಮೇಲ್ಭಾಗ ಕಾಣುವಂತೆ ಸುತ್ತಲೂ ಮಣ್ಣನ್ನು ಪ್ರತ್ಯೇಕಿಸಿ ಕಲ್ಲಿಟ್ಟು ಮರೆಮಾಡುತ್ತಾರೆ. ಅನಂತರ ಕಾಂಡವನ್ನು ಕತ್ತರಿಸಿಹಾಕಿ ಬೇರಿನ ಮೇಲ್ಭಾಗದಲ್ಲಿ ಗಾಯಮಾಡುತ್ತಾರೆ. ಗಾಯದಿಂದ ಹಾಲು ಸ್ರವಿಸಿ ಹೆಪ್ಪುಗಟ್ಟುತ್ತದೆ. ಗೋಂದು, ರಾಳ ಇದರ ಬಲವಾದ ವಿಶಿಷ್ಟ ವಾಸನೆಗೆ ಕಾರಣವಾದ ಡೈಸಲ್ಫೈಡುಗಳಿರುವ ಒಂದು ಆರಿಹೋಗುವ ಎಣ್ಣೆಯೂ ಇದರಲ್ಲಿವೆ. ಈ ಗೋಂದುರಾಳವನ್ನು ಸಂಗ್ರಹಿಸಿ ವರ್ತಕರಿಗೆ ಕಳುಹಿಸುತ್ತಾರೆ. ಇಂಥ ಇಂಗು ಬಲು ಉತ್ತಮವಾದುದು. ಬೆಲೆ ಅಧಿಕ. ಅಂಗಡಿಗಳಲ್ಲಿ ಮಾರುವ ಇಂಗು ಮಿಶ್ರಣವಾದುದು. ಇಲ್ಲಿ ಬೇರಿನ ಹಾಲಿನ ಜೊತೆಗೆ ಬೇರನ್ನೂ ಕತ್ತರಿಸಿ ಕುಟ್ಟಿ ಮಿಶ್ರಮಾಡಿ ಉಂಡೆಮಾಡಿ ಸೇರಿಸಿರುತ್ತಾರೆ. ಗಿಡದ ಬೇರಿನ ಮೇಲ್ಭಾಗವನ್ನು ತೆಳುವಾಗಿ ಮೊದಲು ಕತ್ತರಿಸಿ ತೆಗೆಯುತ್ತಾರೆ. ಕತ್ತರಿಸಿದ ಜಾಗದಲ್ಲಿ ರಸ ಸ್ರವಿಸಿ ಹೆಪ್ಪುಗಟ್ಟುತ್ತದೆ. ಬರಿಯ ಗೋಂದನ್ನು ಸಂಗ್ರಹಿಸುವ ಬದಲು ಅದು ಇರುವ ಜಾಗವನ್ನು ತೆಳುವಾಗಿ ಕತ್ತರಿಸಿ ತೆಗೆಯುತ್ತಾರೆ. ಈ ರೀತಿ ತೆಳುವಾದ ಭಾಗಗಳನ್ನು ಬೇರು ಮುಗಿಯುವವರೆಗೂ ಕತ್ತರಿಸಿ ತೆಗೆದು ಗೋಂದು, ಅಂಗಾಂಶ ಎರಡೂ ಹೊಂದಿಕೊಳ್ಳುವ ಹಾಗೆ ಕುಟ್ಟಿ ಉಂಡೆ ಮಾಡುತ್ತಾರೆ. ಇದರ ಜೊತೆ ಗೊಬ್ಬಳಿಯ ಗೋಂದನ್ನು ಮಿಶ್ರಮಾಡುವುದು ಸಾಮಾನ್ಯ. ಇಂಥ ಬೆರಕೆ ಇಂಗು ಅಂಗಡಿಗಳಲ್ಲಿ ದೊರೆಯುತ್ತದೆ. ಇದು ಗಟ್ಟಿ, ಬಣ್ಣ ಕಂದು ಮಿಶ್ರ ಅಥವಾ ಕಂದು. ಭಾರತದಲ್ಲಿ ಇಂಗನ್ನು ಔಷಧಿಗೆ ಬಲುಕಾಲದಿಂದಲೂ ಆಯುರ್ವೇದ ಪಂಡಿತರು ಉಪಯೋಗಿಸುತ್ತಾರೆ. ಅಡಿಗೆಯಲ್ಲಿ ಇದೊಂದು ಅನಿವಾರ್ಯ ಪರಿಕರ. ಇಂಗಿನಲ್ಲಿ ಫೆರುಲಿಕ್ ಆಮ್ಲವೂ ಗಾಳಿಯಲ್ಲಿಟ್ಟರೆ ಆವಿಯಾಗುವ ಸುಗಂಧ ತೈಲಗಳೂ ಇವೆ. ಕರುಳಲ್ಲಿ ಹೆಚ್ಚಾಗಿ ಗಾಳಿ ಸೇರಿದ್ದರೆ ಇಂಗು ಜೀರ್ಣಕಾರಿ. ಉನ್ಮಾದ ರೋಗಗಳಿಗೂ ಎಡೆ ಕೊಡುವುದುಂಟು. (ಎಚ್.ಎನ್.ಪಿ.)

**ಇಂಗುದಿ:** ಟರ್ಮಿನೇಲಿಯ ಕಟಪ್ಪ ಎಂಬ ಶಾಸ್ತ್ರೀಯ ನಾಮವಿರುವ ಮರ; ಬಾದಾಮಿ ಮರ, ಕಾಡು ಬಾದಾಮಿ ಮರ, ಮೆಲುಕ್ಕಾಸ್ ಬಾದಾಮಿ ಮರ ಎಂದು ಕರೆಯುವುದೂ ಇದೆ. ಆದರೆ ನಿಜವಾದ ಬಾದಾಮಿ ಮರ ಪ್ರೂನಸ್ ಅಮೊಗ್ಡಾಲಿಸ್ ಎಂಬ ರೊಸೇಸಿ ಕುಟುಂಬದ ಒಂದು ವೃಕ್ಷ. ಮೂಲತಃ ಇಂಗುದಿ ಮರ ಮೆಲುಕ್ಕಾಸ್ ಮತ್ತು ಅಂಡಮಾನ್ ದ್ವೀಪಗಳ ನಿವಾಸಿ ಎಂದು ಅನೇಕ ಸಸ್ಯ ಶಾಸ್ತ್ರಜ್ಞರ ಅಭಿಪ್ರಾಯ. ಈ ಮರವನ್ನು ಮಲಯದಿಂದ ತಂದು ಭಾರತದ ಎಲ್ಲ ಕಡೆಗಳಲ್ಲೂ ಬೆಳೆಸಲು ಪ್ರಯತ್ನಿಸಲಾಗಿದೆ. ಆದರೆ ಒಣಹವೆಯುಳ್ಳ ಪ್ರದೇಶಗಳಲ್ಲಿ ಮಾತ್ರ ಇದು ಚೆನ್ನಾಗಿ ಬೆಳೆಯುವುದು.



ಎಡಗಡೆಯದು: ಕಾಯಿಯ ಒಳರಚನೆ
ಬಲಗಡೆಯದು: ಕಾಯಿಯ ಹೊರನೋಟ

ಇಂಗುದಿ ಮರ ಕೋಂಬ್ರಿ ಟೇಸಿ ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ ಸಿಮ್ಮಂಡ್ಸರ ಹೇಳಿಕೆಯ (1954) ಪ್ರಕಾರ 2ಟಿ = 24. ಡಿಸೆಂಬರ್–ಜನವರಿ ತಿಂಗಳು ಗಳಲ್ಲಿ ಈ ಮರದ ಎಲೆಗೆಲ್ಲ ಉದುರಿ ಹೋಗುತ್ತವೆ. ಮರದ ಎಲೆಗಳ ಉದ್ದ 5"–12" ಅಗಲ 3"–6". ಇವುಗಳಿಗೆ ಸಣ್ಣ ತೊಟ್ಟುಗಳಿವೆ. ಎಲೆಗಳು ಉದುರುವ ಮೊದಲು, ಅವು ಕೆಂಪು ಬಣ್ಣಕ್ಕೆ ತಿರುಗುತ್ತವೆ. ಮರದ ಹೂಗಳು ಚಿಕ್ಕವು. ಅವು 6"–8" ಉದ್ದವಿರುವ ಹೂಗೊಂಚಲು ಗಳಲ್ಲಿ ಸೇರಿರುತ್ತವೆ. ಹೂಗಳಿಗೆ ಪುಷ್ಪದಳಗಳಿಲ್ಲ. ಆದರೆ 10 ಕೇಸರಗಳು ಇವೆ. ಪರಾಗಕೋಶಗಳು ಬಲು ಚಿಕ್ಕವು. ಒಣಗಿದ ಕಾಯಿಗಳಲ್ಲಿ ತುಪ್ಪಳ ಇರುವುದಿಲ್ಲ. ಅವುಗಳ ಎರಡೂ ಕಡೆ ಚಪ್ಪಟೆ ಆಕಾರ. ಈ ಕಾಯಿಗಳಿಗೆ ಭ್ರೂಣಾಹಾರ ರಹಿತವಾದ ಒಂದೇ ಒಂದು ಬೀಜ ಇದೆ. ಇಂಗುದಿ ಮರದ ಒಳಭಾಗ ಕೆಂಪು. ಮರ ಹಗುರವಾದರೂ ಗಟ್ಟಿಯಾಗಿದ್ದು ಬಲು ಕಾಲ ಬಾಳಿಕೆ ಬರುತ್ತದೆ. ಈ ಮರದ ತೊಗಟೆ ಮತ್ತು ಎಲೆಗಳಿಂದ ಒಂದು ಬಗೆಯ ಕಪ್ಪು ಬಣ್ಣವನ್ನು ತಯಾರಿಸಿ ಹಲ್ಲುಗಳಿಗೆ ಶಾಶ್ವತವಾಗಿ ಕಪ್ಪುಬಣ್ಣ ಬರಿಸಿಕೊಳ್ಳಲು ಹಾಸನದ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಹೆಂಗಸರು ಉಪಯೋಗಿಸುತ್ತಾರೆ. ಬೀಜಗಳಿಂದ ಬೆಲೆಬಾಳುವ ಒಳ್ಳೆಯ ಎಣ್ಣೆ ಸಿಕ್ಕುತ್ತದೆ. ಇದಕ್ಕೆ ಬಾದಾಮಿ ಎಣ್ಣೆಯ ವಾಸನೆಯೇ ಇದೆ. ಆದ್ದರಿಂದ ಬಾದಾಮಿ ಎಣ್ಣೆಯ ಬದಲು ಒಮ್ಮೊಮ್ಮೆ ಇದನ್ನು ಉಪಯೋಗಿಸುತ್ತಾರೆ. ಕುಷ್ಠ ರೋಗ, ಕಜ್ಜಿ, ಮತ್ತಿತರ ಚರ್ಮಸಂಬಂಧ ಕಾಯಿಲೆಗಳನ್ನು ಗುಣಪಡಿಸಲು ಎಲೆಗಳಿಂದ ಒಂದು ಬಗೆಯ ಮುಲಾಮನ್ನು ತಯಾರಿಸುವರು. ಒತ್ತಲೆನೋವಿನಿಂದ ನರಳುವವರಿಗೆ ಎಲೆಯ ಕಷಾಯ ಔಷಧ. ತೊಗಟೆಯ ರಸ ಕೆಲವು ಹೃದ್ರೋಗಗಳಿಗೆ ಔಷಧಿ. ತೊಗಟೆ ಮತ್ತು ಎಲೆಗಳಿಂದ ಟಾನಿಕ್ ತೆಗೆಯಲಾಗುತ್ತದೆ. ಸಿಮಾರುಬೇಸಿ ಕುಟುಂಬಕ್ಕೆ ಸೇರಿದ ಬೆಲಟೈಟಿಸ್ ಈಜಿಪ್ಟಿಕ ಎಂಬ ಸಸ್ಯವನ್ನು ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಇಂಗುದಿ ವೃಕ್ಷ ಎಂದು ಕರೆಯಲಾಗಿದೆ. (ಎಸ್.ಎಸ್.ಆರ್)

**ಇಂಗ್ಲಿಷ್ ಕಡಲ್ಗಾಲುವೆ:** ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ನಡುವೆ ಹಬ್ಬಿ ಎರಡು ದೇಶಗಳನ್ನೂ ಬೇರ್ಪಡಿಸುತ್ತ, ಅಟ್ಲಾಂಟಿಕ್ ಸಾಗರ ಮತ್ತು ಉತ್ತರ ಸಮುದ್ರಗಳನ್ನು ಸೇರಿಸುತ್ತ ಯುರೋಪಿನ ಮೇಲುಭಾಗದ ನೌಕಾಯಾನಕ್ಕೆ ಅತ್ಯುಪಯುಕ್ತವಾಗಿರುವ ಕಡಲ್ಗಾಲುವೆ. ಸು. 562ಕಿಮೀ. ಉದ್ದವಾಗಿದ್ದು 25–160ಕಿಮೀ ಅಗಲವಿದೆ. ಇದರ ಅತ್ಯಂತ ಕಿರಿದಾದ ಭಾಗ ಇಂಗ್ಲೆಂಡಿನ ಡೋವರ್‌ನಿಂದ ಫ್ರಾನ್ಸ್ ದೇಶದ ಗ್ರಿಸ್ ನೆಜ಼್ ಭೂಶಿರದವರೆಗಿನದು. ಬಹುಭಾಗ 46ಮೀ. ಗಳಿಗಿಂತ ಹೆಚ್ಚು ಆಳವಿದೆ. ಅತ್ಯಂತ ಆಳವಾದ ಭಾಗ 175 ಮೀ ಆಳವಿರುವ ಹರ್ಡ್ಸ್ ಎಂಬ ಕೂಪ. ಕಡಲ್ಗಾಲುವೆ ಚಾನಲ್ ದ್ವೀಪಗಳ

ವಾಯವ್ಯಕ್ಕಿದೆ. ಆದಿಭೂಯುಗದ (ಪ್ರಿಕೇಂಬ್ರಿಯನ್) ಕಾಲದಲ್ಲಿ ಇಂಗ್ಲೆಂಡ್ ಮತ್ತು ಯುರೋಪ್ ಖಂಡಗಳಿಗೆ ಭೂಸಂಬಂಧವಿತ್ತೆಂದೂ ಆದರೆ ಪ್ಲೀಸ್ಟೊಸೀನ್ ಅಥವಾ ಮೂರನೆಯ ಭೂಯುಗದ ಮುಂದಿನ ಕಾಲದಲ್ಲಿ ಭೂಸವೆತದ ಪರಿಣಾಮವಾಗಿ ಕಾಲುವೆ ನಿರ್ಮಿತವಾಯಿತೆಂದೂ ತಿಳಿದುಬಂದಿದೆ. ಇಂದಿಗೂ ಈ ಕಾಲುವೆಯ ತೀರ ಪ್ರದೇಶಗಳಲ್ಲಿ ಭೂಸವೆತವಾಗುತ್ತಿದೆ.

ಇಂಗ್ಲಿಷ್ ಕಡಲ್ಗಾಲುವೆಗೆ ಫ್ರಾನ್ಸ್ ದೇಶದ ಸುಮಾರು 106,190 ಚ.ಕಿಮೀ ಜಲಾನಯನ ಪ್ರದೇಶ ಮತ್ತು ಇಂಗ್ಲೆಂಡಿನ ಸು. 20,720 ಚ.ಕಿಮೀ. ಜಲಾನಯನ ಪ್ರದೇಶಗಳು ಅನೇಕ ನದಿಗಳ ಮೂಲಕ ನೀರಿನ್ನೊದಗಿಸುತ್ತವೆ. ಆದ್ದರಿಂದ ಈ ಕಡಲ್ಗಾಲುವೆಯ ನೀರಿನ ಲವಣಾಂಶ (34.8%); ಅಟ್ಲಾಂಟಿಕ್ ಸಾಗರದ ನೀರಿನ ಲವಣಾಂಶಕ್ಕಿಂತ (35.4%) ಕಡಿಮೆ. ಈ ಕಡಲ್ಗಾಲುವೆಗೆ ಸೇರುವ ಮುಖ್ಯ ನದಿಗಳು ಸೀನ್, ಟಮರ್, ಸ್ಟೂರ್, ಟೆಸ್ಟ್, ಅರುಣ್. ಈ ಭಾಗದ ಮೇಲೆ ಪಶ್ಚಿಮಮಾರುತಗಳು ಬೀಸುತ್ತವೆ. ಆಗಾಗ್ಗೆ ಇಲ್ಲಿ ವಾಯುಭಾರದಲ್ಲಿ ಇಳಿತಗಳುಂಟಾಗುವುದರಿಂದ ಮಳೆ ಕಡಿಮೆ. ಹವಾಮಾನ ಹಿತಕರವಲ್ಲ. ಇಲ್ಲಿ ಹೆಚ್ಚಾಗಿ ಮಂಜು ಸುರಿಯುವುದು. ಬೇಸಿಗೆಯಲ್ಲಿ ಉಷ್ಣಾಂಶ 60°. ಫ್ಯಾ (15.5°ಸೆಂ) ಚಳಿಗಾಲದಲ್ಲಿ 45° ಫ್ಯಾ (7.2°ಸೆಂ).

ಈ ಕಾಲುವೆಯಲ್ಲಿ ವೈಟ್ ಮತ್ತು ಚಾನಲ್ ದ್ವೀಪಗಳಿವೆ. ಇಲ್ಲಿ ಅನೇಕ ಹಡಗುಗಳೂ ದೋಣಿಗಳೂ ಸಂಚರಿಸುವುದರಿಂದ ಹಡಗುಗಳಿಗೆ ದಾರಿ ತೋರಿಸಲು ಎತ್ತರವಾಗಿ ಕಟ್ಟಿರುವ ಅನೇಕ ದೀಪದ ಮನೆಗಳಿವೆ. ಇದರ ಎರಡೂ ಪಕ್ಕದಲ್ಲಿ ಅನೇಕ ಬಂದರುಗಳಿವೆ. ಇಂಗ್ಲೆಂಡ್ ದೇಶದ ಕಡೆ ಪ್ಲಿಮತ್, ಸೌತಾಂಪ್ಟನ್, ಪೋರ್ಟ್ಸ್‌ಮತ್, ಡೋವರ್, ಫ್ರಾನ್ಸ್ ದೇಶದ ಕಡೆ ಚೆರ್ ಭೂರ್ಗ್, ಲೀಹಾರ್ವ್, ಕೆಲೆಗಳಿವೆ. ಹೆಚ್ಚಾಗಿ ಮೀನು ದೊರೆಯುವುದರಿಂದ ಇಡೀ ಕಾಲುವೆ ಮೀನುಗಾರಿಕೆಯ ಕೇಂದ್ರವಾಗಿದೆ.

ಈ ನಾಲೆಯ ತಳದಲ್ಲೊಂದು ಸುರಂಗ (**ನೋಡಿ– ಇಂಗ್ಲಿಷ್–ಕಡಲ್ಗಾಲುವೆಯ–ಸುರಂಗ**) ತೋಡಿ ಪ್ಯಾರಿಸ್ ಮತ್ತು ಲಂಡನ್ ಎರಡು ಕಡೆಗೂ ಭೂಸಂಪರ್ಕವನ್ನು ಏರ್ಪಡಿಸುವ ಸಾಹಸ ಬಹಳ ವರ್ಷಗಳ ಕಾಲ ನಡೆದು 1994ರಲ್ಲಿ ಪೂರ್ಣಗೊಂಡಿತು. ವಾಯುಬುರುಡೆಯ (ಬೆಲೂನ್) ಸಹಾಯದಿಂದ 1785ರಲ್ಲೂ ವಿಮಾನವನ್ನುಪಯೋಗಿಸಿ 1909ರಲ್ಲೂ ಈ ಕಡಲ್ಗಾಲುವೆಯನ್ನು ದಾಟುವ ಪ್ರಯತ್ನ ಮೊಟ್ಟಮೊದಲಿಗೆ ನಡೆಯಿತು. ಮ್ಯಾಥ್ಯೂ ವೆಬ್ ಎಂಬುವನು 1875ರಲ್ಲಿ ಈ ಕಡಲ್ಗಾಲುವೆಯನ್ನು ಯಶಸ್ವಿಯಾಗಿ ಈಜಿಕೊಂಡು ದಾಟಿದ.

1926ರಲ್ಲಿ ಸಂಯುಕ್ತ ರಾಷ್ಟ್ರದ ಗರ್ಟ್ರೂಥ್ ಎಡೆಕಿಲ್ ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿದ ಪ್ರಥಮ ಮಹಿಳೆ. 1978ರಲ್ಲಿ ಅಮೆರಿಕದ ಪೆನ್ನಿಲಿ, ಡಿನ್ ಇಂಗ್ಲೆಂಡಿನಿಂದ ಫ್ರಾನ್ಸ್‌ಗೆ ಈಜಿ ದಾಖಲೆ ನಿರ್ಮಿಸಿದರು. 1994ರಲ್ಲಿ ಅಮೆರಿಕದ ಚಡ್ ಹಂಡ್ ಬೈ 7 ಗಂಟೆ, 17 ನಿಮಿಷಗಳಲ್ಲಿ ಈಜಿ ವಿಶ್ವ ದಾಖಲೆ ಮಾಡಿದ. (ಎಸ್.ಎನ್.ಎ.ಆರ್.)

**ಇಂಗ್ಲಿಷ್ ಕಡಲ್ಗಾಲುವೆಯ ಸುರಂಗ:** ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ನಡುವೆ ಇಂಗ್ಲಿಷ್ ಕಡಲ್ಗಾಲುವೆಯ ಕೆಳಗೆ ನಿರ್ಮಿಸಿರುವ ವಾಹನಗಳ ಓಡಾಟಕ್ಕಾದ ಸುರಂಗ. ಇದನ್ನು ಯುರೋಪಿಯನ್ ಚಾನಲ್ ಎಂದೂ ಕರೆಯುವರು. 51 ಕಿಮೀ ಉದ್ದದ ಸುರಂಗವು ಮೂರು ಸುರಂಗಗಳ ಒಂದು ಸಂಕೀರ್ಣ. ಇದರ 38ಕಿಮೀ ಉದ್ದವು ಸಾಗರದಡಿಯಲ್ಲಿದೆ. ಈ ಉದ್ದ ಸಾಗರದಡಿಯ ಭಾಗದ ರೈಲುಸುರಂಗಕ್ಕೆ ವಿಶ್ವದಾಖಲೆಯಾಗಿದೆ.

ಈ ಸಂಕೀರ್ಣದಲ್ಲಿ 7.60 ಮೀ. ವ್ಯಾಸದ ಎರಡು ಸುರಂಗಗಳ ನಡುವೆ 4.80ಮೀ ವ್ಯಾಸದ ಒಂದು ಸುರಂಗವಿದೆ. ಅಗಲ ಸುರಂಗಗಳಲ್ಲಿ ಒಂದೊಂದು ರೈಲು ಮಾರ್ಗವಿದೆ. ಇವುಗಳಲ್ಲಿ ರೈಲುಗಳು ಒಂದು ದಿಕ್ಕಿನಲ್ಲಿ ಸಾಗುತ್ತವೆ, ಅಂದರೆ ಒಂದರಲ್ಲಿ ಬ್ರಿಟನ್ನಿನ ಕಡೆಗೂ, ಇನ್ನೊಂದರಲ್ಲಿ ಫ್ರಾನ್ಸಿನ ಕಡೆಗೂ ಸಾಗುತ್ತವೆ. ಸುರಂಗಗಳ ರೈಲು ಮಾರ್ಗದ ಗೇಜು 1.435 ಮೀ. ಇದನ್ನು ಸ್ಟ್ಯಾಂಡರ್ಡ್ ಗೇಜು ಎನ್ನುವರು. ರೈಲು ಮಾರ್ಗಗಳಲ್ಲಿ ಗಂಟೆಗೆ 200 ಕಿಮೀ ವೇಗದಲ್ಲಿ ರೈಲುಗಳು ಚಲಿಸುವಂತೆ ರೂಪಿಸಲಾಗಿದೆ. ಇವುಗಳ ನಡುವೆ ಇರುವ ಕಿರು ಸುರಂಗದ ಹೆಸರು ಸೇವಾ ಸುರಂಗ. ಇದರ ಮೂಲಕ ರೈಲು ಸುರಂಗಗಳಿಗೆ ತಾಜಾ ಗಾಳಿಯನ್ನು ಒದಗಿಸುವರು. ಸುರಂಗಗಳಲ್ಲಿ ಶೇಖರವಾಗಬಹುದಾದ ನೀರನ್ನು ಹೊರ ಹಾಕಲು ಪೈಪು ಮಾರ್ಗಗಳು ಇದರ ಮೂಲಕ ಹಾಯುತ್ತವೆ. ಈ ಸುರಂಗದ ಉದ್ದಕ್ಕೂ ಎರಡು ಬದಿಗಳಲ್ಲೂ ಗವಿಗಳಿದ್ದು ಅವುಗಳಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರುಗಳನ್ನೂ, ಸ್ವಿಚ್‌ಗೇರ್‌ಗಳನ್ನೂ ಸಿಗ್ನಲ್ ಉಪಕರಣಗಳನ್ನೂ ನೀರನ್ನು ಹೊರಹಾಕಲು ಬೃಹತ್ ಪಂಪುಗಳನ್ನೂ ವಾತಾಯನ ಯಂತ್ರಗಳನ್ನೂ ಸ್ಥಾಪಿಸಿದ್ದಾರೆ.

ಸೇವಾ ಸುರಂಗದಿಂದ ರೈಲು ಸುರಂಗಗಳನ್ನು ಪ್ರವೇಶಿಸಲು, ಪ್ರತಿ 375 ಮೀ ಅಂತರದಲ್ಲಿ ಅಡ್ಡ ಸುರಂಗಗಳಿವೆ. ಈ ಅಡ್ಡ ಸುರಂಗಗಳ ತುದಿಗಳಲ್ಲಿ ಅಗ್ನಿನಿರೋಧಕ ಬಾಗಿಲುಗಳಿವೆ. ಎಂತಹ ಪರಿಸ್ಥಿತಿಯಲ್ಲೂ ಅವು ತೆರದು ಮುಚ್ಚುವಂತಿವೆ. ರೈಲು ಸುರಂಗದಲ್ಲಿ ನಿಂತು ಹೋದರೆ, ಅಥವಾ ಅಪಾಯಕ್ಕೀಡಾದರೆ, ಸೇವಾ ಸುರಂಗದ ಮೂಲಕ 90 ನಿಮಿಷಗಳಲ್ಲಿ ಪಯಣಿಗರನ್ನು ಪಾರು ಮಾಡಬಹುದು. ಸೇವಾ ಸುರಂಗದಲ್ಲಿ ವೈರು ಗಾಲಿಗಳಿರುವ ದೂರ ನಿರ್ದೇಶಿತ ಸಾರಿಗೆ ವ್ಯವಸ್ಥೆ ಇದೆ.

ರೈಲು ಸುರಂಗಗಳು ಸಮಾಂತರವಾಗಿದ್ದು 30 ಮೀ ಅಂತರದಲ್ಲಿದೆ. ಇವು ಎರಡು ಸ್ಥಳಗಳಲ್ಲಿ ಒಂದುಗೂಡುತ್ತವೆ. ಈ ಸ್ಥಳಗಳಲ್ಲಿ ರೈಲುಮಾರ್ಗಗಳು ಒಂದುಗೂಡಿ ದಾಟುತ್ತವೆ. ಇದರ ಉದ್ದೇಶ ರೈಲನ್ನು ಒಂದು ಮಾರ್ಗದಿಂದ ಇನ್ನೊಂದು ಮಾರ್ಗಕ್ಕೆ ಬದಲಿಸಬಹುದು. ಮಾರ್ಗ ದುರಸ್ತಿಗೆ, ರೈಲು ಕೆಟ್ಟು ನಿಂತಾಗ, ಅಪಘಾತಗಳು ನಡೆದಾಗ, ಈ ರೀತಿಯ ಮಾರ್ಗ ಬದಲಾವಣೆಗಳು ಅನಿವಾರ್ಯವಾಗುತ್ತವೆ.

ಚಾನಲ್ ಸುರಂಗವು ಫ್ರಾನ್ಸಿನ ಸಾಂಗೇಟ್ ಬಳಿ ಭೂಪ್ರದೇಶ ಪ್ರವೇಶಿಸಿ ಕಡಲ ತೀರದಲ್ಲಿ 40 ಕಿಮೀ. ಆಳದಲ್ಲಿರುವಂತೆ ಇಳಿಜಾರಾಗಿ ಇಂಗ್ಲಿಷ್ ಕಡಲ್ಗಾಲುವೆಯ ತಳದ ಆಕಾರಕ್ಕೆ ಅನುಗುಣವಾಗಿ ಇಳಿಯುತ್ತಾ ಏರುತ್ತಾ ಎಡಕ್ಕೆ ಬಲಕ್ಕೆ ತಿರುಗುತ್ತಾ, ಬ್ರಿಟನ್ನಿನ ತೀರದಲ್ಲಿ 40 ಮೀ. ಆಳದಲ್ಲಿಳಿದು, ನಂತರ 8.ಕಿಮೀ. ಏರುತ್ತಾ ಒಟ್ಟು 51 ಕಿಮೀ. ಕ್ರಮಿಸಿ, ಷೇಕ್ಸ್‌ಪಿಯರ್ ಕ್ಲಿಫ್‌ನಲ್ಲಿ ಮೇಲ್ಗಡೆ ಬರುವುದು. ಸುರಂಗಗಳು ಕಡಲ ತಳದಿಂದ 40 ಕಿಮೀ. ಆಳದಲ್ಲಿವೆ.

ಈ ಸುರಂಗಗಳನ್ನು ತೋಡುವ ಕಾರ್ಯವು ಒಂದು ಬೃಹತ್ ಯೋಜನೆಯಾಗಿತ್ತು. ಇದನ್ನು ಸಕಾಲದಲ್ಲಿ ಮುಗಿಸಲು ವಿಶೇಷವಾಗಿ ರೂಪಿಸಿದ ಬೃಹತ್ ಸುರಂಗ ಕೊರೆಯುವ ಯಂತ್ರಗಳನ್ನು ಬಳಸಿದರು. ರೈಲು ಸುರಂಗಗಳನ್ನು ಕೊರೆಯಲು ಒಂದೊಂದೂ 1350 ಟನ್ ತೂಗುವ 8.36 ಮೀ. ವ್ಯಾಸದ, ಹಾಗೂ ಸೇವಾ ಸುರಂಗವನ್ನು ಕೊರೆಯಲು 625 ಟನ್ ತೂಗುವ 5.76 ಮೀ. ವ್ಯಾಸದ ಯಂತ್ರಗಳನ್ನು ಬಳಸಿದ್ದಾರೆ. ಈ ಸುರಂಗಗಳನ್ನು ಎರಡು ತುದಿಗಳ ಕಡೆಯಿಂದ ಕೊರೆದರು. ಅವು ಮಧ್ಯೆ ಸಂಧಿಸಿದಾಗ ಅವುಗಳ ಅಲೈನ್‌ಮೆಂಟಿನಲ್ಲಿ ವ್ಯತ್ಯಾಸ ಕೇವಲ 35.8 ಸೆಂಮೀ. ಇಷ್ಟು ನಿಖರತೆಯನ್ನು ಸಾಧಿಸಲು ಸಾಧ್ಯವಾದುದು ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ, ಅತಿ ಸೂಕ್ಷ್ಮ ಥಿಯೋರೋ ಲೈಟುಗಳು ನಿಖರವಾದ ಎಲೆಕ್ಟ್ರಾನಿಕ್ ದೂರಮಾಪಿಗಳು, ಲೇಸರು ಮಾರ್ಗದರ್ಶನ ಮುಂತಾದ ಆಧುನಿಕ ವೈಜ್ಞಾನಿಕ ಸಾಧನಗಳಿಂದ.

ಯುರೋಪಿನಲ್ಲಿನ ಕಾರ್ಯಾಚರಣೆ: ಯುರೋಪಿನಲ್ಲಿನ ದೈನಂದಿನ ಕಾರ್ಯಾಚರಣೆ ಎರಡು ವಿಧವಾಗಿದೆ. ಒಂದು – ಫ್ರಾನ್ಸ್ ಮತ್ತು ಬ್ರಿಟನ್‌ನ ರೈಲು ಮಾರ್ಗಗಳ ನಡುವೆ ಸಂಪರ್ಕ ಕಲ್ಪಿಸುವುದು. ಎರಡು– ಎರಡು ರಾಷ್ಟ್ರಗಳ ನಡುವೆ ರಸ್ತೆ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು. ಎರಡು ರಾಷ್ಟ್ರಗಳ ನಡುವೆ ಓಡುವ ರೈಲುಗಳಿಗೆ ಯೂರೋಸ್ಟಾರ್ ಎನ್ನುವರು. ಇವು ಯುರೋಪಿಗೂ ಇಂಗ್ಲೆಂಡಿಗೂ ನಡುವೆ ನೇರ ಸಂಪರ್ಕ ಕಲ್ಪಿಸುವುವು. ರಸ್ತೆಯ ವಾಹನಗಳ ಸಂಚಾರ ಬಹಳ ವಿಚಿತ್ರವಾದುದು. ಯುರೋಪಿನಲ್ಲಿನ ತುದಿಗಳಲ್ಲಿರುವ ರೈಲು ನಿಲ್ದಾಣಗಳಲ್ಲಿ ಕಾರು, ಬಸ್ಸು, ಸರಕು ವಾಹನಗಳನ್ನು ವಿಶಿಷ್ಟವಾಗಿ ರಚಿಸಿದ ರೈಲು ಬೋಗಿಗಳಿಗೆ ಏರಿಸಿ ಒಂದು ತುದಿಯಿಂದ ಇನ್ನೊಂದು ತುದಿಗೆ ಸಾಗಿಸುವರು. ಅಲ್ಲಿಂದ ಮುಂದೆ ರಸ್ತೆಯ ಮೇಲೆ ಪ್ರಯಾಣ ಮುಂದುವರಿಯುವುದು. ವಾಹನ ಚಾಲಕರೂ ಪಯಣಿಗರೂ ತಮ್ಮ ವಾಹನಗಳಲ್ಲೇ ಕುಳಿತಿರಬಹುದು. ಇಲ್ಲವೇ ಬೋಗಿಗಳಿಗೆ ಅಡ್ಡಾಡಿಕೊಂಡಿರಬಹುದು. ಸುರಂಗದೊಳಗೆ ಕ್ರಮಿಸುವ ಅವಧಿ 35 ನಿಮಿಷಗಳು. ಯುರೋಪಿಯನ್ನರ ಈ ಯೋಜನೆಯು 1986 ಆಗಸ್ಟ್ 13 ರಂದು ಪ್ರಾರಂಭವಾಗಿ 1994 ಮೇ 6 ರಂದು ವಿಧ್ಯುಕ್ತವಾಗಿ ವಾಹನ ಸಂಚಾರವು ಪ್ರಾರಂಭವಾಯಿತು.

20ನೆಯ ಶತಮಾನದ ತಾಂತ್ರಿಕ ಸಾಧನೆಗಳಲ್ಲಿ ಇದೇ ಅತ್ಯದ್ಭುತವಾದುದು. ಇಂಗ್ಲೆಂಡಿಗೂ ಫ್ರಾನ್ಸಿಗೂ ನಡುವೆ ಇರುವ ಉತ್ತರಸಮುದ್ರದಲ್ಲಿ ಡೋವರಿಗೂ ಕೆಲೆಗೂ ಮಧ್ಯೆ ಇಂಗ್ಲಿಷ್ ಕಡಲ್ಗಾಲುವೆ ಇದೆ. ಅದರ ಅಗಲ 34 ಕಿ.ಮೀ. ಆಳ ಹೆಚ್ಚಾಗಿಲ್ಲ. ಸಮುದ್ರದ ತಳದಲ್ಲಿ ಒಂದು ಸುರಂಗವನ್ನು ಕೊರೆದು ಎರಡೂ ದೇಶಗಳ ನಡುವೆ ಭೂಸಂಚಾರವನ್ನು ಏರ್ಪಡಿಸುವ ಯೋಜನೆಯೊಂದನ್ನು ಫ್ರಾನ್ಸಿನ ಇಂಜಿನಿಯರ್ ಮಾಥ್ಯೂ ಫೆವಿಯರ್ 1802ರಲ್ಲಿ ನೆಪೋಲಿಯನ್ನನಿಗೆ ಒಪ್ಪಿಸಿದ. ಅದಾದ ಕೆಲವೇ ವರ್ಷಗಳಲ್ಲಿ ಇಂಗ್ಲೆಂಡಿಗೂ ಫ್ರಾನ್ಸಿಗೂ ಯುದ್ಧ ಪ್ರಾರಂಭವಾದ್ದರಿಂದ ಆ ಯೋಜನೆ ಮೂಲೆಗೆ ಬಿತ್ತು.

ಅನಂತರ ಸಮುದ್ರದ ತಳದ ಮೇಲೆ ಒಂದು ಉಕ್ಕಿನ ಕೊಳಾಯಿಗಳನ್ನಿಡುವ ಸೂಚನೆಯೂ ಒಂದು ಸೇತುವೆಯನ್ನು ಕಟ್ಟುವ ಸೂಚನೆಯೂ ಬಂದುವು. ಕೊನೆಗೆ ಸೂಯೆಜ್‌ನಾಲೆಯಲ್ಲಿ ಲೆಸೆಪ್ಸ್‌ನ ಜೊತೆಯಲ್ಲಿ ಅನುಭವವನ್ನು ಪಡೆದಿದ್ದ ಗ್ಯಾಮೆಂಡ್ ಮತ್ತೊಂದು ಸುರಂಗದ ಯೋಜನೆಯನ್ನು ತಯಾರಿಸಿ ಇಂಗ್ಲೆಂಡಿನ ಮಿತ್ರನಾಗಿದ್ದ ಚಕ್ರವರ್ತಿ ಮೂರನೆಯ ನೆಪೋಲಿಯನ್ನಿಗೆ ಒಪ್ಪಿಸಿದ. "ಈಗಲೇ ಎರಡು ರಾಷ್ಟ್ರಗಳಿಗೂ ಅಂತರ ಕಡಮೆ. ಅದನ್ನು ಇನ್ನೂ ಕಡಿಮೆ ಮಾಡುವುದೇ ?" ಎಂದು ಬ್ರಿಟನ್ನಿನ ಅಂದಿನ ಪ್ರಧಾನಿ ಪಾಮರ್‌ಸ್ಟನ್ ಕೇಳಿದ. ಆದರೆ ಗ್ಲ್ಯಾಡ್‌ಸ್ಟನ್ ಪ್ರಧಾನಿಯಾದ ಮೇಲೆ ಈ ಯೋಜನೆಗೆ ಬೆಂಬಲ ದೊರಕಿತು. 1868ರಲ್ಲಿ ಆ್ಯಂಗ್ಲೊ ಫ್ರೆಂಚ್ ಸುರಂಗಸಮಿತಿ ಸ್ಥಾಪಿತವಾಯಿತು. ಅದರಲ್ಲಿ ಪ್ರಖ್ಯಾತ ಇಂಜಿನಿಯರುಗಳು ರಾಬರ್ಟ್ ಸ್ಟೀವನ್‌ಸನ್ ಮತ್ತು ಬ್ರುಸೆಲ್ ಇದ್ದರು. ಎರಡು ಕಡೆಗಳಿಂದಲೂ ಕೆಲಸವನ್ನು ಆರಂಭಿಸಲು ಸಿದ್ಧತೆಗಳಾದವು. ವಿಕ್ಟೋರಿಯ ರಾಣಿ ಬಕಿಂಗ್ ಹ್ಯಾಮ್ ಅರಮನೆಯಲ್ಲಿ ಗ್ಯಾಮೆಂಡ್‌ನನ್ನು ಆದರಿಸಿದಳು. ಈ ಕಡೆ ಫ್ರಾನ್ಸಿನ ದೊರೆ ಸುರುಂಗದ ಸಮಿತಿಗೆ ಔತಣವನ್ನು ಮಾಡಿಸಿದ.

ಏತನ್ಮಧ್ಯೆ 1870ರಲ್ಲಿ ಪ್ರಾರಂಭವಾದ ಫ್ಯಾಂಕೋ–ಪ್ರಷ್ಯನ್ ಯುದ್ಧ ಬೇಗ ಮುಗಿದರೂ ನೆಪೋಲಿಯನ್ ಸಿಂಹಾಸನವನ್ನು ಕಳೆದುಕೊಂಡ. ಫ್ರಾನ್ಸ್ ಪ್ರಜಾರಾಜ್ಯವಾಯಿತು. 1875ರಲ್ಲಿ ವಿಕ್ಟೋರಿಯ ರಾಣಿಗೂ ಫ್ರಾನ್ಸಿನ ಗಣರಾಜ್ಯಕ್ಕೂ ಒಪ್ಪಂದವಾಗಿ ಸುರಂಗದ ಸಮಸ್ಯೆಗಳನ್ನು

ಕಟ್ಟುವ ಕಾಲದಲ್ಲಿ ಪರಿಹರಿಸಬಹುದೆಂದು ಒಪ್ಪಲಾಯಿತು. 1877ರಲ್ಲಿ ತಯಾರಾದ ಯೋಜನೆಯಲ್ಲಿ ವರ್ತುಲಾಕಾರದ 6.07 ಮೀ ವ್ಯಾಸದ ಎರಡು ಸುರಂಗಗಳನ್ನು ರಚಿಸಿ 106 ಮೀ ಅಂತರದಲ್ಲಿ ಎರಡಕ್ಕೂ ಸಂಬಂಧ ಕಲ್ಪಿಸಲಾಗಿತ್ತು. ಒಂದೊಂದು ಕಡೆಯೂ 6 ಕಿಮೀ ಉದ್ದದ ತೋಡುದಾರಿಯಿತ್ತು. ಬ್ರಿಟನ್ನಿನ ಕಡೆ ಡೋವರ್ ಬೆಟ್ಟಗಳ ಹಿಂದಿನಿಂದ ಹೊರಟು ಸಮುದ್ರ ಮಟ್ಟಕ್ಕೆ 76 ಮೀ ತಗ್ಗಿಗೆ ಸುರಂಗ ಮುಟ್ಟಿ ಅಲ್ಲಿಂದ ನಿಧಾನವಾಗಿ ಇಳಿದು ಆಚೆಯ ದಡದಿಂದ 8 ಕಿಮೀ ದೂರದಲ್ಲಿ ಸಮುದ್ರಮಟ್ಟಕ್ಕೆ 61ಮೀ ಕೆಳಕ್ಕೆ ಇಳಿದು ಕೆಲಗೂ ಬೋಲಾನಿಗೂ ನಡುವೆ ಮಾರ್ಕ್ವೆ ಪಟ್ಟಣದ ಹತ್ತಿರ ಮುಗಿದಿತ್ತು. ಇಂಗ್ಲೆಂಡಿನ ಕಡೆ 1880ರಲ್ಲಿ ಎರಡು ಬಾವಿಗಳನ್ನು ತೋಡಿ ಕೆಲಸವನ್ನು ಆರಂಭಿಸಿದರು. ಮೊದಲು ಕೊರೆದ 1972 ಮೀ ಉದ್ದದ ಪರೀಕ್ಷಾ ಸುರಂಗಗಳೊಳಗೆ ವಿದ್ಯುದ್ದೀಪದ ಬೆಳಕಿನಲ್ಲಿ ಟ್ರಾಲಿಗಳ ಮೇಲೆ ಕುಳಿತು ರಾಣಿ ವಿಕ್ಟೋರಿಯ, ಎಡ್ವರ್ಡ್ ರಾಜಕುಮಾರ ಗ್ಲ್ಯಾಡ್‌ಸ್ಟನ್, ಡಿಸ್ರೇಲಿ–ಇವರು ಭೇಟಿಕೊಟ್ಟರು. ಕೆಲಸ ಏಳೆಂಟು ವರ್ಷಗಳಲ್ಲಿ ಮುಗಿಯುವ ನಿರೀಕ್ಷೆಯಿತ್ತು.

ಆದರೆ ಬ್ರಿಟನ್ನಿನ ಸೇನಾನಾಯಕ ಲಾರ್ಡ್ ವುಲ್ಸ್ಲಿ ಈ ಸುರಂಗದಿಂದ ಇಂಗ್ಲೆಂಡಿನ ಭದ್ರತೆಗೆ ಊನವೆಂದು ವಾದಿಸಿದ (1882). ಇಂಗ್ಲೆಂಡಿನ ಜನತೆಗೆ ಸುರಂಗ ಬೇಕಾಗಿತ್ತು. ಆದರೆ ನೈನ್‌ಟೀನ್ತ್ ಸೆಂಚುರಿ ಮತ್ತು ಟೈಮ್ಸ್ ಪತ್ರಿಕೆಗಳ ಮೂಲಕ ಪ್ರತಿಭಟನೆ ವ್ಯಕ್ತಪಟ್ಟಿತು. ಇಂಗ್ಲೆಂಡಿನ ಮೇಲಿನ ಆಕ್ರಮಣವನ್ನು ಸುರಂಗವಿದ್ದಾಗ ಹೇಗೆ ತಪ್ಪಿಸಬಹುದೆಂದೂ ನೋಡಿದ್ದಾಯಿತು. ಆದರೂ ಸೇನಾನಾಯಕರು ಹಟ ಹಿಡಿದರು. 1884ರಲ್ಲಿ ಬ್ರಿಟನ್ನಿನ ಕಡೆಯ ಕೆಲಸ ನಿಂತಿತು. ಅನಂತರ ಫ್ರೆಂಚರೂ ನಿಲ್ಲಿಸಬೇಕಾಯಿತು.

1909ರಲ್ಲಿ ಫ್ರಾನ್ಸಿನ ಬ್ಲೀರಿಯವ್ ಇಂಗ್ಲಿಷ್ ಕಡಲ್ಗಾಲುವೆಯ ಮೇಲೆ ಹಾರಿದಾಗ ಇಂಗ್ಲೆಂಡ್ ದ್ವೀಪವಾಗಿ ಉಳಿಯಲಿಲ್ಲ. 1913ರಲ್ಲಿ ಇನ್ನೂ ಆಳವಾದ, ಉದ್ದವಾದ ಸುರಂಗವನ್ನು ಕೊರೆಯುವುದಕ್ಕೆ ಕಾಮನ್ಸರ ಸಭೆ ಒಪ್ಪಿತು. ಪ್ರಧಾನಿ ಆಸ್ಕ್ವಿತ್ ಒಪ್ಪಲಿಲ್ಲ. ಆದರೆ ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ ಹಿಂದೆ ಸುರಂಗವನ್ನು ವಿರೋಧಿಸಿದ್ದು ತಪ್ಪು – ಎಂದು ಎಲ್ಲರಿಗೂ ತಿಳಿಯಿತು. ಜರ್ಮನಿಯ ಜೆಪ್ಲಿನ್ನುಗಳಿಂದ ಲಂಡನ್ನಿನ ಮೇಲೆ ಬಾಂಬುಗಳು ಉದುರಿದವು. ಯುದ್ಧ ಮುಗಿದ ಮೇಲಾದರೂ ಅದನ್ನು ಪ್ರಾರಂಭಿಸಬೇಕೆಂಬ ಬುದ್ಧಿ ಬಂತು. ಏತನ್ಮಧ್ಯೆ ಎಂಜಿನಿಯರುಗಳು ಇನ್ನು ಕೆಲವು ಭದ್ರತೆಯ ದಾರಿಗಳನ್ನು ಸೂಚಿಸಿದರು. ಫ್ರೆಂಚರು ಒಪ್ಪಿದರು. ಆದರೆ ಯುದ್ಧ ಮುಗಿದ ಮೇಲೆ 1920ರಲ್ಲಿ ಒಂದು ಸಾರಿ 1924ರಲ್ಲಿ ಇನ್ನೊಂದು ಸಾರಿ, ಬ್ರಿಟಿಷ್ ಸರ್ಕಾರ ಸುರಂಗ ನಿರ್ಮಾಣಕ್ಕೆ ಒಪ್ಪಲಿಲ್ಲ; ಮತ್ತೆ ರ್‍ಯಾಮ್ಸೆ ಮ್ಯಾಕ್‌ಡೋನಾಲ್ಡನ ಕಾಲದಲ್ಲೂ ವಿರೋಧ ವ್ಯಕ್ತಪಟ್ಟಿತು. ತಿರುಗಿ ಬಾಲ್ಡ್ವಿನ್ ಸುರಂಗ ಬೇಕು ಎಂದಾಗ ಯುದ್ಧ ಕಚೇರಿ ಪ್ರತಿಭಟಿಸಿತು. ಬೇಡ ಎನ್ನುವುದು ಮುಖ್ಯವಾಯಿತು; ಕಾರಣಗಳು ಗೌಣವಾದುವು. ಸುರಂಗವಿದ್ದರೆ ಇಂಗ್ಲೆಂಡಿನಲ್ಲಿ ವಿಮಾನಸಂಚಾರಕ್ಕೆ ಧಕ್ಕೆ ತಗಲುತ್ತದೆಯೆಂಬ ವಾದವೂ ಹುಟ್ಟಿತು.

ಅಷ್ಟರಲ್ಲಿ ಎರಡನೆಯ ಮಹಾಯುದ್ಧ ಆರಂಭವಾಯಿತು. 1939ನೆಯ ಡಿಸೆಂಬರಿನಲ್ಲಿ ಯುದ್ಧಸಮಿತಿ ಸುರಂಗ ತೋಡಲು ಎಷ್ಟು ಕಾಲ ಹಿಡಿದೀತು ಎಂದು ಅವಸರವಸರವಾಗಿ ಪ್ರಶ್ನಿಸಿತು. ಮೊದಲ ಪ್ರಶ್ನೆಗೆ ಉತ್ತರವನ್ನು ಹೇಳುವುದು ಎಂಜಿನಿಯರುಗಳಿಗೆ ಅಷ್ಟು ಸುಲಭವಾಗಿರಲಿಲ್ಲ. ತಗಲುವ ವೆಚ್ಚದ ಅಂದಾಜು 6 ಕೋಟಿ ಪೌಂಡು ಎಂದು ಹೇಳಿದರು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಆಗ ದಿನಕ್ಕೆ 6 ಲಕ್ಷ ಪೌಂಡುಗಳನ್ನು ಯುದ್ಧಕ್ಕಾಗಿ ಖರ್ಚು ಮಾಡುತ್ತಿದ್ದುದರಿಂದ ಆ ಹಣವನ್ನು ಒದಗಿಸುವುದು ಕಷ್ಟವಾಗಿರಲಿಲ್ಲ. ಅಷ್ಟರಲ್ಲಿ ಡಂಕರ್ಕ್ ಪಲಾಯನವಾಯಿತು. 1955ರಲ್ಲಿ ಪುನಃ ಕೆಲಸ ಪ್ರಾರಂಭವಾಗಿ ಬ್ರಿಟನ್ನಿನ ನಿರುತ್ಸಾಹದಿಂದ ನಿಂತಿತು. 1980ರಲ್ಲಿ ಈ ಯೋಜನೆಗೆ ಪುನಃ ಜೀವ ಬಂದಿತು. 1985 ರಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಈಗ ಮುಗಿಸಿದ ಅಂತಿಮ ರೂಪು ನಿರ್ಧಾರವಾಯಿತು.

**ಇಂಗ್ಲಿಷ್ ಛಂದಸ್ಸು:** ಇಂಗ್ಲಿಷ್ ಸಾಹಿತ್ಯದಲ್ಲಿನ ಪದ್ಯ ಗದ್ಯಗಳ ಛಂದಸ್ಸಿನ ಸಂಕ್ಷೇಪ ಪರಿಚಯ ಈ ಲೇಖನದಲ್ಲಿದೆ. ಆಧುನಿಕ ಇಂಗ್ಲಿಷ್ ಛಂದಸ್ಸಿನ (ಇಂಗ್ಲಿಷ್ ಪ್ರೊಸೊಡಿ) ಸ್ಥಾಪಕರಲ್ಲಿ ಒಬ್ಬನಾದ ಕ್ರಿಸ್ಟೊಫರ್ ಮಾರ್ಲೊನ ಪ್ರಥಮ ರೂಪಕದ ಪ್ರಥಮ ಪಂಕ್ತಿ ಅಥವಾ ಪಾದ ಹೀಗಿದೆ: ಫ್ರೆಂ ಜಿಗಿಂಗ್ ವೇನ್ಸ್ ಆಫ್ ರೈಮಿಂಗ್ ಮದರ್ ವಿಟ್ಸ್. ಭಾಷೆಗೆ ಮೂಲಭೂತವಾದ ಘಟಕಾಂಶ ಅಕ್ಷರಕ್ಕಿಂತಲೂ ಹೆಚ್ಚಾಗಿ ಉಚ್ಚಾರಾಂಶ (ಸಿಲಬಲ್); ಉಚ್ಚಾರಾಂಶಗಳನ್ನು ಅನುಸರಿಸಿ ಹೇಳಿದರೆ ಮೇಲಣ ಪಂಕ್ತಿ ಹೀಗಾಗುತ್ತದೆ. ಫ್ರಮ್ ಜಿಗ್–ಇಂಗ್ ವೇನ್ಸ್ ಆಫ್ ರೈವ್‌ವ್–ಇಂಗ್ ಮಡ್–ಅರ್ ವಿಟ್ಸ್. ಹತ್ತು ಉಚ್ಚಾರಾಂಶಗಳಿಂದ ರೂಪಿತವಾಗಿದೆ ಈ ಪಂಕ್ತಿ. ಇವುಗಳಲ್ಲಿ ಐದರ ಮೇಲೆ ಭಾರ ಅಥವಾ ಒತ್ತು (ಸ್ಟ್ರೆಸ್) ಉಂಟು; ಮಿಕ್ಕ ಐದರ ಮೇಲೆ ಒತ್ತು ಬಲು ಕಡಿಮೆಯಾದ್ದರಿಂದ ಒತ್ತು ಇಲ್ಲವೆಂದೇ ಛಂದಶಾಸ್ತ್ರದ ನಿರ್ಧಾರ. ಒತ್ತು ಕೂಡಿಕೊಂಡ ಮತ್ತು ಒತ್ತಿಲ್ಲದ ಉಚ್ಚಾರಾಂಶಗಳೇ (ಸೆಸ್ಡ್ ಮತ್ತು ಅನ್‌ಸ್ಟೆಸ್ಡ್ ಸಿಲಬಲ್ಸ್) ಇಂಗ್ಲಿಷ್ ನುಡಿಗಟ್ಟಿಗೆ ಏರಿಳಿತ ಅಥವಾ ಸ್ವರಗತಿಯನ್ನು (ಕ್ಯಾಡೆನ್ಸ್) ತಂದು ಕೊಡುವ ಆಧಾರದ್ರವ್ಯ. ಅವೆರಡರ ಅಂತರವನ್ನು ಸ್ಫುಟವಾಗಿ ಚಿತ್ರಿಸುವುದಕ್ಕಾಗಿ ಬಳಸುವ ರೇಖಾಚಿಹ್ನೆಗಳು (ಗ್ರ್ಯಾಫಿಕ್ ಸೈನ್ ಅಥವಾ ಸಿಂಬಲ್) ಮೂರು ಬಗೆಯವು: a x, – u, |. ∪. ಕೊನೆಯದಾದ | ∪ ವಿಧಾನಕ್ಕೇ ಅಧಿಕ ಪುರಸ್ಕಾರ ದೊರಕಿರುವುದರಿಂದ ಅದನ್ನೇ ಈ ಲೇಖನದಲ್ಲಿ ಇರಿಸಿಕೊಳ್ಳಲಾಗಿದೆ. ಮಾರ್ಲೊನ ಪದ್ಯಪಾದದ ನೈಜ ರೂಪ ಇದು:

ಫ್ರವ್ ಜಿಗ್–ಇಂಗ್ ವೇನ್ಸ್–ಆಫ್ ರೈವ್–ಇಂಗ್ ಮಡ್–ಅರ್ ವಿಟ್ಸ್ ಪದಗಳನ್ನು ಬಿಟ್ಟು ಬರಿ ಸಂಕೇತಗಳನ್ನೇ ಗುರುತಿಸಿದರೆ ಈ ರೇಖಾಕೃತಿ ಹೀಗಾಗುತ್ತದೆ: ∪| ∪| ∪| ∪| ∪|

ಮೊದಲು ಒತ್ತಿಲ್ಲದ ಉಚ್ಚಾರಾಂಶ, ಆಮೇಲೆ ಒತ್ತುಳ್ಳದ್ದು. ಈ ಕ್ರಮದಲ್ಲಿ ನಿಯತವಾಗಿ ಐದು ಬಾರಿ ಅವು ಬಂದಿವೆ. ಎಂದರೆ ಪಾದವನ್ನು ∪| ಮಾದರಿಯ ಐದು ಅಂಗಗಳಾಗಿ ವಿಭಜಿಸಬಹುದು. ಆ ಅಂಗಕ್ಕೆ ಗಣ (ಫುಟ್) ಎಂದು ಹೆಸರು; ಸ್ವರಭಾರ ಎರಡನೆಯ ಜಾಗದಲ್ಲಿ ಇರುವುದರಿಂದ ಇಂಥ ಗಣಗಳ ಓಟ ಅಥವಾ ಲಯವನ್ನು (ರಿದಮ್) ಆರೋಹಣಾಲಯ (ರೈಸಿಂಗ್ ರಿದಮ್) ಎನ್ನುತ್ತಾರೆ. ಪ್ರಾಚೀನ ಗ್ರೀಕರ ಪಾರಿಭಾಷಿಕ ಶಬ್ದವಾದ ಅಯಾಂಬ ಎಂಬುದನ್ನು ಈ ಇಂಗ್ಲಿಷ್ ಗಣಕ್ಕೂ ಅನ್ವಯಿಸುವುದು ವಾಡಿಕೆ. ನಿಷ್ಠುರದೃಷ್ಟಿಯ ಕೆಲವು ಪಂಡಿತೋತ್ತಮರು ಆ ವಾಡಿಕೆ ಸಲ್ಲದೆಂದು ವಾದಿಸುತ್ತಾರೆ. ಏತಕ್ಕೆಂದರೆ ಗ್ರೀಕ್ ವಾಣಿಯಲ್ಲಿ ಶಬ್ದಾಂಶವನ್ನು ಉಚ್ಚರಿಸುವುದಕ್ಕೆ ತಗಲುವ ಹೊತ್ತು ಮುಖ್ಯವಾಗಿತ್ತೇ ಹೊರತು ಅವಧಾರಣೆಯಲ್ಲ. ಭಾಷೆಗಳ ಮೂಲಪ್ರಕೃತಿಯೇ ಹೀಗೆ ಬೇರೆಯಾಗಿರುವಾಗ ಗ್ರೀಕಿನ ಅಯಾಂಬ್ (∪ |), ಟ್ರೋಕಿ (|∪), ಅನಪೀಸ್ಟ್ (∪∪ |), ಡ್ಯಾಕ್ಟಿಲ್ (|∪∪) ಮುಂತಾದವನ್ನು ಇಂಗ್ಲಿಷಿಗೆ ತರುವುದು ಉಚಿತವಾಗದು. ತೀವ್ರಮತೀಯರಾದ ಕೆಲವು ವಿದ್ವಾಂಸರ ಅಭಿಪ್ರಾಯ ಇದು. ಸಮಸ್ತ ಪಾಶ್ಚಾತ್ಯ ಸಾಂಸ್ಕೃತಿಕ ಚಟುವಟಿಕೆಗೂ ಪ್ರಾಚೀನ ಗ್ರೀಕ್ ಸಂಸ್ಕೃತಿಯೇ ಅಡಿಪಾಯವಾಗಿರುವುದರಿಂದ ಕಾಲಕ್ಕೆ ಬದಲು ಭಾರವನ್ನು ಇಟ್ಟುಕೊಂಡು ಪ್ರಸಿದ್ಧವೂ ಉಪಯುಕ್ತವೂ ಆದ ಅದೇ ಅಂಕಿತಗಳನ್ನು ಬಳಸುವುದೇ ಸೂಕ್ತ ಮರ್ಯಾದೆಯೆಂದು ಬಹುಮಂದಿ ತಜ್ಞರ ಅಭಿಪ್ರಾಯ. ಮೇಲಣ ಪಂಕ್ತಿಯಲ್ಲಿ ಗಣಗಳು ನೇಮ ತಪ್ಪದೆ ಬಂದು ಪಂಕ್ತಿಯನ್ನು ಛಂದೋಬದ್ಧವಾಗಿಸಿವೆ. ಅದರ ಛಂದಸ್ಸಿಗೆ (ಮೀಟರ್) ಅಯಾಂಬಿಕ್ ಪೆಂಟಮೀಟರ್ ಎಂದು ಹೆಸರು. ಇಂಗ್ಲಿಷಿನ ಪದ್ಯಕಾವ್ಯದಲ್ಲಿ 14ನೆಯ ಶತಮಾನದಿಂದ ಇತ್ತೀಚಿನವರೆಗೂ ಮುಕ್ಕಾಲು ಮೂರುವೀಸೆ ಪಾಲೆಲ್ಲ ಇದೇ ಛಂದಸ್ಸು ಕಂಡುಬರುತ್ತದೆ.

ಇಂಗ್ಲಿಷ್ ಜನತೆಗೆ ಅತ್ಯಂತ ಅಚ್ಚು ಮೆಚ್ಚಾಗಿದ್ದ ಥಾಮಸ್ ಗ್ರೇ ಕವಿಯ ಶೋಕಗೀತದ (ಎಲಿಜಿ) ಒಂದು ಚರಣ ಹೀಗಿದೆ :

ದ ಕ । ಫ್ಯೂ ಟೋಲ್ಸ್ । ದ ನೆಲ್ ' । ಆಫ್ ಪಾ ' । ಟಿಂಗ್ ಡೇ
ದ ಲೋ । ಯಿಂಗ್ ಹರ್ಡ್ಸ್ । ವೈಂಡ್ ಸ್ಲೋ । ಲಿ ಓಕ್ । ದ ಲೀ
ದ ಪ್ಲೋ । – ಮನ್ ಹೋಮ್ । –ವರ್ಡ್ ಪ್ಲಾಡ್ಸ್ ।
ಹಿಸ್ ವೀಯರಿ । ಇ ವೇ

ನಾಲ್ಕು ಗಣ, ಮೂರು ಗಣಗಳ ಪದ್ಯಸಾಲುಗಳಲ್ಲೂ ಅಯಾಂಬಿಕ್ ಆಧಿಪತ್ಯವೇ ಆಧಿಪತ್ಯ. ಟೆನಿಸನ್ನನ ನುಡಿ ಇದು:

ವೆನ್ ಗಾಡ್ । ಹ್ಯಾತ್ ಮೇಡ್ । ಹಿಸ್ ಪೈಲ್ । ಕಂ – ಪ್ಲೀಟ್

ವರ್ಡ್ಸ್‌ವರ್ತ್ ಕವಿಯ ಒಂದು ಕವನಭಾಗ ಹೀಗಿದೆ :

ದ ರೇನ್ । ಬೊ ಕಮ್ಸ್ । ಅಂಡ್ ಗೋಸ್
ಬೈ ನೈಟ್ । ಆರ್ ಡೇ ।
ಅಂಡ್ ಆಲ್ । ದ ಅರ್ತ್ ಈಸ್ ಗೇ
ದೌ ಚೈಲ್ಡ್ । ಆಫ್ ಜಾಯ್ ।

ಪದ್ಯವಾಗಲಿ ಗದ್ಯವಾಗಲಿ ವಾಕ್ಯವನ್ನು ನುಡಿಯುವಾಗ ಮಧ್ಯೆ ಎಲ್ಲೂ ನಿಲ್ಲದೆ ನುಡಿಯುವುದು ದಿಟವಾಗಿ ಅಸಾಧ್ಯ. ನುಡಿದರೂ ಅದರಿಂದ ಹೇಳುವವನಿಗೂ ಕೇಳುವವನಿಗೂ ಆಯಾಸ. ಇಂಗ್ಲಿಷ್ ಛಂದಸ್ಸಿನಲ್ಲಿ ವಿರಾಮಕ್ಕೆ (ಪಾಸ್) ನಿರ್ದಿಷ್ಟವೂ ಸಾಕಷ್ಟೂ ಆದ ಜಾಗವಿದೆ. ಪಾದಾಂತ್ಯ ಒಂದು ನಿಲ್ದಾಣವೆಂಬುದು ಸ್ವಯಂ ವೇದ್ಯ. ಪಾದದ ಮಧ್ಯದಲ್ಲೋ ಮಧ್ಯದ ಸಮೀಪದಲ್ಲೋ ಒಂದು ಬಾರಿ ವಿರಾಮ ಆಗುವುದು ಸಹಜ : ಅದಕ್ಕೆ ಯತಿ (ಸಿಸ್ಯೂರ) ಎಂದು ಹೆಸರು. ಮೊದಲ ಸಾಲಿನಲ್ಲಿ ವೇನ್ಸ್ ಆದ ಕೂಡಲೆ, ಎರಡನೆಯದರಲ್ಲಿ ವರ್ಡ್ ಆದ ಕೂಡಲೆ ಯತಿ ಬೇಕಾಗುತ್ತದೆ. ಎಂದರೆ ಕಡ್ಡಾಯವಾಗಿ ಯತಿ ಬರಲೇಬೇಕೆಂಬ ನಿಯಮವಿಲ್ಲ; ಒಂದು ಚರಣದಲ್ಲಿ ಇಷ್ಟೇ ಯತಿ ಇರಬೇಕೆಂಬ ನಿರ್ಬಂಧವೂ ಇಲ್ಲ. ಕಾವ್ಯದ ಪಂಕ್ತಿಯನ್ನು ಓದುಗ ತನ್ನ ಇಚ್ಛೆಯಂತೆ ಒಮ್ಮೆಗೇ ಓದಬಹುದು, ಅಲ್ಲಲ್ಲಿ ತಡೆದು ಓದಬಹುದು, ಭಾವಾರ್ಥಕ್ಕೆ ಭಂಗ ತಾರದಂತೆ, ಮಿಲ್ಟನ್ನನ ಈ ಚರಣ ಕವಿಯ ಪ್ರತಿಭೆ ಬಯಸುವ, ಬಳಸುವ ಸ್ವಾತಂತ್ರ್ಯ ಎಷ್ಟೆಂಬುದಕ್ಕೆ ಉತ್ಕೃಷ್ಟ ಸಾಕ್ಷಿ : ರಾಕ್ಸ್, ಕೇವ್ಸ್, ಲೇಕ್ಸ್, ಫೆನ್ಸ್, ಬಾಗ್ಸ್, ಡೆನ್ಸ್ ಅಂಡ್ ಷೇಡ್ಸ್ ಆಫ್ ಡೆತ್. ಇದಷ್ಟೂ ಐದು ಗಣಗಳ ಒಂದು ಚರಣ. ಪದ್ಯದ ಗಣಗಳೂ ಸಾಲುಗಳೂ ಗಣಿತದ ನಿಷ್ಠುರ ನಿಯಮವನ್ನು ಅನುಸರಿಸುತ್ತ ಉರುಳಿದರೆ ಬೇಸರದ ಏಕನಾದ (ಸಿಂಗ್ ಸಾಂಗ್) ಉಂಟಾಗಿ ಇಂಪು

ಕೆಡುತ್ತದೆ. ಸುಮ್ಮನೆ ಟಿ-ಟಮ್ ಟಿ-ಟಮ್ ಟಿ-ಟಮ್ ಟಿ-ಟಮ್ ಎಂಬ ಸದ್ದಿನ ಪುನರುಕ್ತಿಯನ್ನು ಕೇಳುವುದಕ್ಕಾಗದು. ಇಂಗ್ಲಿಷ್ ಛಂದಸ್ಸು ಯುಕ್ತ ರೀತಿಯ ಲಲಿತ ಛಂದೋಭಂಗಕ್ಕೆ ಅಲ್ಲಲ್ಲಿ ಆಸ್ಪದವೀಯುತ್ತ ಸುಶ್ರಾವ್ಯವಾಗಿದೆ, ರಮ್ಯವಾಗಿದೆ. ಮಾರ್ಲೊನ ಎರಡನೆಯ ಪಂಕ್ತಿ, ಮೂರನೆಯ ಪಂಕ್ತಿ ಹೀಗಿವೆ:

ಅ೦ಡ್ ಸಚ್ । ಕ೯ನ್ - ಸೀಟ್ಸ್ । ಆ೯ಸ್ ಕ್ಲೌನ್ । - ಪ್ಜ್ ಕೀಪ್ಸ್ । ಇ೯ನ್ ಪೇ

ವಿ ಲ್ ಲೀಡ್ । ಯು ಟು । ದ ಸ್ಟೇಟ್ । - ಲಿ ಟೆಂಟ್ಸ್ । ಅಫ್ । ವಾರ್

(ವಿ ವಿಲ್)

ಇಲ್ಲಿ ಸಚ್ ಎನ್ನುವುದರ ಮೇಲೆ ಭಾರ ನಿಜವಾಗಿ ಇಲ್ಲ; ಸ್ಥಾನದ ಗೌರವದಿಂದ ಅದಕ್ಕೆ ಭಾರ (ಮೆಟ್ರಿಕಲ್ ಆಕ್ಸೆಂಟ್) ದಕ್ಕಿದೆ. ಆದರೆ ಮೂರನೆಯ ಪಂಕ್ತಿಯ ಯು ಟು ಎಂಬುದರಲ್ಲಿ ಎರಡು ಅಂಶಗಳೂ ಒತ್ತಿಲ್ಲದವು: ಅಂಥ ಗಣಕ್ಕೆ ಫಿರಿಕ್ ಎಂದು ಹೆಸರು. ಎರಡು ಪಂಕ್ತಿಗಳಲ್ಲೂ ನಿಶ್ಚಯವಾಗಿ ಇರುವ ಒತ್ತುಗಳು ನಾಲ್ಕೇ. ಈ ಸಾಲನ್ನು ನೋಡಬಹುದು:

ದ್ ಲೋ - ಇಂಗ್ ಹರ್ಡ್ಸ್ । ವೈಂಡ್ ಸ್ಲೋ - ಲಿ ಓ ರ್ ದ್ ಲೀ

ಇಲ್ಲಿ ಮೂರನೆಯ ಗಣ ಎರಡು ಸ್ವರ ಭಾರಗಳಿಂದ ಆಗಿದೆ. ಅದಕ್ಕೆ ಸ್ಪಾಂಡಿ ಎಂದು ಹೆಸರು. ನಾಲ್ಕನೆಯ ಗಣ ಅದಕ್ಕೆ ಪ್ರತಿಯಾಗಿ ಫಿರ್ರಿಕ್ ಆಗಿರುವುದರಿಂದ ಅವು ಒಂದಕ್ಕೊಂದು ಈಡಾಗಿ ಸಾಲಿನಲ್ಲಿ ಒಟ್ಟು ಐದೇ ಒತ್ತುಗಳು ಉಳಿಯುವಂತೆ ಮಾಡಿವೆ. ಅಯಾಂಬಿಕ್ ಲಯವನ್ನು ರಚಿಸುವಾಗ ಕವಿ ಇಂಥ ಸಮ ಮೊತ್ತವನ್ನು (ಈಕ್ವಿವಲೆನ್ಸ್) ತಂದಿಡುತ್ತಾನೆಂದು ಪ್ರೊ. ಸೇಂಟ್ಸ್‌ಬರಿಯ ಸಿದ್ಧಾಂತ. ಆದರೆ ಎಷ್ಟೋ ಕಡೆ ಸಮತೆ ಸಿದ್ಧಿಸುವುದು ಹೋಗಲಿ, ಅದರ ಸುಳಿವೇ ಕಾಣಿಸುವುದಿಲ್ಲ.

ಲಾಂಗ್ ಲೈನ್ಸ್ । ಆಫ್ ಕ್ಲಿಫ್ । ಬ್ರೇಕ್-ಇಂಗ್ । ಹ್ಯಾವ್ ಲೆಫ್ಟ್ । ಅ ಕ್ಯಾಸ್ಮ್ ।. ಆರು ಒತ್ತುಗಳಿವೆ ಇದರಲ್ಲಿ. ಒಂದು ಟ್ರೋಕಿಯೂ ಇದೆ. ಮಿಲ್ಟನ್ನನ ಪಂಕ್ತಿಯಲ್ಲಿ ಎಂಟು ಒತ್ತುಗಳು ಘಾತಿಸುತ್ತಿರುವ ಸತ್ಯಾಂಶವನ್ನು ಮರೆಮಾಚುವುದಕ್ಕೆ ಆಗದು. ಒತ್ತಿಲ್ಲದ ಉಚ್ಚಾರಾಂಶ ಛಂದಸ್ಸಿನ ಬಲದಿಂದಲೂ ವಚನ ಧೋರಣೆಯ (ರೆಟೊರಿಕಲ್ ಆ್ಯಕ್ಸೆಂಟ್) ಬಲದಿಂದಲೂ ಸ್ವೀಕರಿಸುತ್ತದೆ. ಅದರ ಸಂಕೇತ ಚಿಹ್ನೆ ಇದು: ಈ ಪಂಕ್ತಿಯನ್ನು ಪರಿಶೀಲಿಸಬಹುದು.

ಫಾರ್ ಸನ್ । ಇಸ್ ವರ್ಸ್ । ದ್ಯಾನ್ ಈಸ್ । ಅ ಫ್ರೆಂಡ್ । - ಲಿ ಷೋ

ನೀಳ ಕವನಗಳಲ್ಲೂ ನಾಟಕಗಳಲ್ಲೂ ದಶಾಂಶಗಳ ಚರಣ ಕೆಲವು ಸಾರಿ ಒಂಬತ್ತಕ್ಕೆ ಕುಗ್ಗಬಹುದು, ಕೆಲವು ಸಾರಿ ಹನ್ನೊಂದಕ್ಕೆ ಹೆಚ್ಚಬಹುದು. ನಾಲ್ಕೇ ಒತ್ತುಗಳಿರುವ ಸಾಲುಗಳು ಬೇಕಾದಷ್ಟು. ಆರು ಒತ್ತುಗಳು ಆಗಾಗ ಧ್ವನಿಗೈಯುತ್ತವೆ. ಅಯಾಂಬಿನ ಬದಲು ಸ್ಪಾಂಡಿ ಅಥವಾ ಫಿರಿಕ್ ಬರುವುದು ಸಾಮಾನ್ಯ ವಿದ್ಯಮಾನ; ಅದಕ್ಕೆ ಈಡು (ಸಬ್ಸ್ಟಿಟ್ಯೂಷನ್) ಎಂದು ಹೆಸರು. ಇಂಗ್ಲಿಷ್ ಛಂದಸ್ಸಿನಲ್ಲಿ ಹೇರಳ ವೈವಿಧ್ಯಕ್ಕೆ ಅವಕಾಶವುಂಟು. ಅಯಾಂಬಿಕ್ ಲಯವೂ ಪ್ರಾಸರಹಿತವಾದ ದಶಾಂಶಗಳ ಪದ್ಯಪಂಕ್ತಿಯೂ (ಬ್ಲ್ಯಾಂಕ್ ವರ್ಸ್) ಇಂಗ್ಲಿಷ್‌ಗೆ ವಿಶೇಷವಾಗಿ ಒಗ್ಗಿಬಂದಿದೆ. ಹೊಸ ಹುಟ್ಟು (ರೆನೇಸಾನ್ಸ್) ಎಂಬ ವಿಪರೀತ ಬದಲಾವಣೆಯ ಪರ್ವಕಾಲದಲ್ಲಿ ಅದು ಜನಿಸಿತು. ಆ ಸಮಯದ ನಾಟಕ ಚಕ್ರ, 17ನೆಯ ಶತಮಾನದ ಚಾರಿತ್ರಿಕ ಕಾವ್ಯ, ಭವ್ಯ ಕಾವ್ಯ, 19ನೆಯ ಶತಮಾನದ ಪದ್ಯ, ಆತ್ಮಕಥೆ, ಅರ್ಧಚಾರಿತ್ರಿಕ ಮತ್ತು ಅರ್ಧಪೌರಾಣಿಕ ದೀರ್ಘ ಕೃತಿ-ಎಲ್ಲಕ್ಕೂ ಅದೇ ಆಧಾರ.

ಒತ್ತಿಲ್ಲದ ಉಚ್ಚಾರಾಂಶ ಆಗಾಗ ಒತ್ತನ್ನು ಸ್ವೀಕರಿಸುತ್ತದಷ್ಟೆ. ಛಂದಸ್ಸಿಗಾಗಿ ಅದಕ್ಕೆ ಇನ್ನೆರಡು ಬಗೆಯ ವಿಕಾರಗಳೂ ಆಗುವುದುಂಟು. ಈ ಪಂಕ್ತಿಗಳು ಉದಾಹರಣೆ:

ನೊ ಆಂಗ್। - ಅರ್ ಫ್ರೆಂಡ್। ಇನ್ ದೀ। ಬಟ್ ಪಿಟ್। - (ಇ ಅಂಡ್) । ರುತ್

ಇಲ್ಲಿ ಇ ಅಂಡ್ ಎಂಬುವು ಉಚ್ಚಾರಣೆಯಲ್ಲಿ ಕೂಡಿಕೊಳ್ಳುತ್ತವೆ; ಅವು ಎರಡು ಅಂಶಗಳಲ್ಲ. ಒಂದೇ ಅಂಶ. ಈ ಕ್ರಮಕ್ಕೆ ತೇಲಿಸುವಿಕೆ (ಸ್ಲರಿಂಗ್) ಎಂದು ಹೆಸರು.

ಆಫ್ ಏಂಗ। - ಅ- ಲುಂಡ್। ಟು ಕೌಂಟ್। ಅರ್-ಬೆರ್। (ಇ ದೇ) ಏಂಡ,- 'ಇ ದೇ' ಎಂಬುದೂ ಅದೇ ರೀತಿ ತೇಲಿಕೆಗೆ ಗುರಿಯಾಗುತ್ತದೆ. ಈ ಸಾಲನ್ನು ಆಲಿಸಿ ಕೇಳಬೇಕು.

ಹರ್ಲ್ ಹೆಡ್ । - ಲಾಂಗ್ ಫ್ಲೇವ್ । ಇರಂಗ್ ಫ್ರವ್ । ದ್ ಎಥೀ । - ರೀಲ್ ಸ್ಕೈ।

ಇಲ್ಲಿ ಹರ್ಲೆಡ್ ಎನ್ನುವುದಕ್ಕೆ ಬದಲು ಹರ್ಲ್ಡ್ ಎಂದೂ ದಿ ಎಥೀರೀಲ್ ಎನ್ನುವುದಕ್ಕೆ ಬದಲು ದ ಥಿರೀಲ್ ಎಂದೂ ಉಚ್ಚಾರ ಮಾರ್ಪಾಟಾಗುತ್ತದೆ; ಎಂದರೆ ಇ (e)ಕಾರ ಅಳಿಸಿಹೋಗುತ್ತದೆ. ಈ ವ್ಯವಹಾರವನ್ನು ಲೋಪ (ಇಲಿಷನ್) ಎನ್ನುತ್ತಾರೆ. 18ನೆಯ ಶತಮಾನದಲ್ಲಿ ತಪ್ಪಿಲ್ಲದ ಕವನ (ಕರೆಕ್ಟ್ ವರ್ಸಿಫಿಕೇಷನ್) ಕವಿಗಳಿಗೆ ಆದರ್ಶವಾಗಿತ್ತು; ಅದನ್ನು ರೂಢಿಸುವ ಆತುರದಲ್ಲಿ ಹಲವು ಬಗೆಯ ವೈಪರೀತ್ಯಗಳೂ ಆಭಾಸಗಳೂ ಆಗುವುದನ್ನು ಅವರು ಲಕ್ಷಿಸಲಿಲ್ಲ.

ಅ - ಪೇಸ್ । (ದ್ ಅನ್)ಲರ್ನ್ಡ್ । ಅಂಡ್ ಪೋಕ್ । ದ ಲರ್ನ್ । - ಎಡ್ ಸ್ಮೈಲ್

ಇಲ್ಲಿ ಮೊದಲು ದಿ ಅನ್‌ಲರ್ನೆಡ್ ಎಂಬುದರಲ್ಲಿ ಇ ಅನ್ ಇ ಇಷ್ಟೂ ಮಾಯವಾದಂತೆ ತಿಳಿದು, ಕಡೆಯಲ್ಲಿ ದಿ ಲರ್ನೆಡ್ ಎನ್ನುವಾಗ ಎರಡು ಇ ಕಾರಗಳಿಗೂ ಅಸ್ತಿತ್ವ ಬಂದಂತೆ ಒಪ್ಪಿಕೊಳ್ಳತಕ್ಕದ್ದು!

ಪ್ರಾಸಯುಕ್ತವಾದ ಕವಿತ್ವವೂ ಇಂಗ್ಲಿಷ್‌ನಲ್ಲಿ ಪುಷ್ಕಳವಾಗಿದೆ, ಕರ್ಣರಸಾಯನವಾಗಿದೆ. ಪ್ರಾಸವೇನೂ (ರೈಮ್) ಹೊಸದಲ್ಲ: ಹೊರಚೆಲ್ಲ ಇಂಗ್ಲಿಷಿಗೆ. ಹಳೆಯ ಇಂಗ್ಲಿಷ್ ಮತ್ತು ನಡು ಇಂಗ್ಲಿಷ್ ಎರಡಕ್ಕೂ ಬೇರೆ ಬೇರೆ ಭಾಷೆಗಳೇನೋ ಎಂದು ತೋರುವಷ್ಟು ಅಂತರ. ಅದು ಹಳೆಯ ಸ್ಯಾಕ್ಸನ್, ಹಳೆಯ ಜರ್ಮನ್ ಮೊದಲಾದುವಂತೆ ಒಂದು ಜರ್ಮನಿಕ್ ವಾಕ್ಕು. ಅದರ ಪದ್ಯಪಂಕ್ತಿ ಈ ರೀತಿ ಇತ್ತು:

ಬೆ ಅ ವುಲ್ಫ್ ವಸ್ ಬ್ರೆಮೆ । ಬ್ಲ್ಯಡ್ ವಿಡೆ ಸ್ಪ್ರಂಗ್

– – –

(Beowulf was breme bloeed wide sprang)

– – –

ಪ್ರತಿ ಪಂಕ್ತಿಗೂ ಅದನ್ನು ಹೆಚ್ಚು ಕಡಿಮೆ ಅರ್ಧಗೈಯುವ ಎರಡು ಭಾಗಗಳು: ಅವನ್ನು ಕೊಂಡಿ ಕೂಡಿಸುವ ಅಂಶ ಆದ್ಯಕ್ಷರ ಪ್ರಾಸ ಅಥವಾ ವಡಿ (ಅಲಿಟರೇಷನ್). ಪ್ರತಿ ಅರ್ಧದಲ್ಲೂ ಎರಡು ಒತ್ತುಳ್ಳ ಉಚ್ಚಾರಾಂಶ ಇರಲೇಬೇಕು. ಎರಡನೆಯ ಅರ್ಧದ ಮೊದಲ ಒತ್ತುಳ್ಳ ಉಚ್ಚಾರಾಂಶಕ್ಕೆ ಆದಿಪ್ರಾಸವನ್ನು ಹೊರುವ, ಗೊತ್ತು ಮಾಡುವ ಹೊಣೆಗಾರಿಕೆ; ಅದರೊಡನೆ ಮೊದಲ ಅರ್ಧದಲ್ಲಿ ಒಂದಾದರೂ ಒತ್ತುಳ್ಳ ಉಚ್ಚಾರಾಂಶ ಪ್ರಾಸವಾಗತಕ್ಕದ್ದು; ಎರಡನೆಯದೂ ಪ್ರಾಸ ಕೊಡಬಹುದು. ಆದರೆ ಪಾದದ ಕೊನೆಯ ಉಚ್ಚಾರಾಂಶ ಎಂದಿಗೂ ಪ್ರಾಸಕ್ಕೆ ಸೇರಕೂಡದು. ಸ್ವರಗಳೆಲ್ಲ ಒಂದೇ ಪ್ರಾಸಕ್ಕೆ ಸೇರಿದವು ಎಂಬ ನಂಬಿಕೆಯಿತ್ತು. ಸ್ಕ ಸ್ಟ ಸ್ಪ ಮುಂತಾದವನ್ನು ಏಕಾಕ್ಷರಗಳೆಂದೇ ಬಗೆಯುತ್ತಿದ್ದರು; ಅವು ಒಂದಕ್ಕೊಂದು ಪ್ರಾಸವಾಗುವಂತಿರಲಿಲ್ಲ. ಒಂದು ಪಾದದಲ್ಲಿ ಎಷ್ಟು ಬೇಕಾದರೂ ಒತ್ತಿಲ್ಲದ ಉಚ್ಚಾರಾಂಶಗಳು ಇರಬಹುದಾಗಿತ್ತು; ಅವುಗಳ ಸಂಖ್ಯೆ ಹಳೆಯ ಇಂಗ್ಲಿಷಿನಲ್ಲಿ ಕಡಿಮೆ; ಇತರ ಹಳೆಯ ಜರ್ಮ್ಯಾನಿಕ್ ವಾಣಿಗಳಲ್ಲಿ ಅಧಿಕ. ಒತ್ತಿಲ್ಲದ ಉಚ್ಚಾರಾಂಶಗಳ ಪ್ರಥಮಾಕ್ಷರ ಒಂದೇ ಆಗಿದ್ದರೂ ಅದನ್ನು ಪ್ರಾಸವೆಂದು ಪರಿಗಣಿಸುತ್ತಿರಲಿಲ್ಲ :

ಹೆ ಆನ್ ಹೂ ಸೆಸ್। ಹು ಹಿಮ್ ಹ್ರಿಂಗ್ – ಡೆನೆ.

– – –

Heam huses hu him Hring – Dene

– – –

ಇಲ್ಲಿ ಹು ಹಿಮ್ ಪ್ರಾಸಾಕ್ಷರಗಳಲ್ಲ. ಈ ಛಂದಸ್ಸನ್ನು ತೂರಾಡುವ ಪದ್ಯ ಪಂಕ್ತಿ (ಟಂಬ್ಲಿಂಗ್ ವರ್ಸ್) ಎಂದು ಕೆಲವುಕಾಲ ಅಪಹಾಸ್ಯ ಮಾಡುತ್ತಿದ್ದರು. ಹಳೆಯ ಇಂಗ್ಲಿಷನಲ್ಲೂ ಬರಬರುತ್ತ ಅಂತ್ಯಪ್ರಾಸ (ರೈಮ್) ಎದ್ದು ಬಂದು, ಕವಿವರ್ಗಕ್ಕೆ ಹೆಚ್ಚು ಹೆಚ್ಚು ಪ್ರಿಯವಾದಂತೆ ಕಾಣುತ್ತದೆ, ಅದರಲ್ಲೂ ಸಣ್ಣ ಭಾವಗೀತೆಗಳಲ್ಲಿ.

14ನೆಯ ಶತಮಾನದಲ್ಲಿ ಇಂಗ್ಲಿಷ್ ಭಾಷೆಯಲ್ಲೂ ಇಂಗ್ಲಿಷ್ ಛಂದಸ್ಸಿನಲ್ಲೂ ಬಹಳ ಬದಲಾವಣೆಯಾಯ್ತು. ಮಹಾಕವಿ ಚಾಸರ್ ತನ್ನ ಪ್ರಬಲ ಪ್ರತಿಭೆಯಿಂದ ದೊಡ್ಡ ಕ್ರಾಂತಿಯನ್ನು ಎಬ್ಬಿಸಿದ. ಅವನ ಪದಕೋಶ ನಡು ಇಂಗ್ಲಿಷ್ ಆದರೂ ಕವಿದರ್ಶನದಲ್ಲೂ ಕಾವ್ಯಮಾರ್ಗದಲ್ಲೂ ಛಂದಸ್ಸಿನಲ್ಲೂ ಆಧುನಿಕ ಇಂಗ್ಲಿಷ್ ಕವಿ ಸಂದೇಹಕ್ಕೆ ಅವನೇ ಮೂಲ ಪುರುಷ. ವಿಚಿತ್ರವೆಂದರೆ ಅವನ ಸಮಕಾಲೀನನಾದ ವಿಲಿಯಮ್ ಲ್ಯಾಂಗ್ಲೆಂಡ್ ಅವನಂತೆ ನಡು ಇಂಗ್ಲಿಷ್ ನುಡಿಯನ್ನೇ ಉಪಯೋಗಿಸಿದರೂ ಹಳೆಯ ಇಂಗ್ಲಿಷ್ ಛಂದಸ್ಸಿಗೇ ವಿಧೇಯನಾಗಿ, ಉತ್ತಮ ಕೃತಿಯೊಂದನ್ನು ಕಟ್ಟಿ ಕೀರ್ತವಂತನಾದ. ಉದಾಹರಣೆ :

ಇನ್ ಅ ಸೊಮರ್ ಸೆ ಸೊ ನ್. ವನ್ ಸೋಫ್ಟ್ ವಸ್ ದೆ ಸುನ್ನ

– –

ಅಂಡ್ ಅಸ್ ಇ ಲೇ ಅಂಡ್ ಲೆನೆಡ್ ಅಂಡ್ ಲುಕೆಡ್ ಇನ್ ದೆ ವಾಟೆರಸ್

– – –

ಆದರೂ ಚಾಸರನ ಕೈಯೇ ಮೇಲಾಯ್ತು.

ಚಾಸರ್ ಎಸಗಿದ ಮುಖ್ಯ ಮಾರ್ಪಾಟುಗಳು ನಾಲ್ಕು: 1 ಪದ್ಯಪಂಕ್ತಿಯ ಉಚ್ಚಾರಾಂಶಗಳು ಎಂಟನ್ನೋ ಹತ್ತನ್ನೋ ಮೀರದಂತೆ ಸಂಯಮ ಇರಬೇಕು. 2 ಅವು ಕ್ರಮವರಿತ ಗಣಗಳಾಗಿಯೇ ಇರಬೇಕು. 3 ಅಂತ್ಯಪ್ರಾಸ ಅಗತ್ಯ; ಅದನ್ನು ಅನುಷ್ಠಾನಗೈಯುವಾಗ ಎಚ್ಚರಿಕೆಯೂ ಅಗತ್ಯ. ಶಿಸ್ತನ್ನು ಅದು ಅತಿಕ್ರಮಿಸಬಾರದು ಎಂಬ ಸೂತ್ರಗಳನ್ನು ಆತ ಅನುಷ್ಠಾನಕ್ಕೆ ತಂದನಲ್ಲದೆ 4 ದ್ವಿಪದಿ ತ್ರಿಪದಿ ಚೌಪದಿ ಸಪ್ತಪದಿ (ರೈಮ್ ರಾಯಲ್) ಅಷ್ಟಪದಿ (ಅಟ್ಟಾವ ರೈಮ್) ಇತ್ಯಾದಿ ಇಟ್ಯಾಲಿಯನ್ ವೃತ್ತಗಳನ್ನು (ಸ್ಟ್ಯಾನ್ಜ) ಅತ್ಯಂತ ದಕ್ಷತೆಯಿಂದ ಮನವೊಪ್ಪುವ ಹಾಗೆ ಇಂಗ್ಲಿಷಿಗೆ ಅಳವಡಿಸಿ ಮಹೋಪಕಾರ ಮಾಡಿದ.

ಚಾಸರನನ್ನು ಪಠಿಸುವ ವಿಚಾರದಲ್ಲಿ ನಡೆದ ಒಂದು ಪ್ರಸಂಗ ಬೋಧಪ್ರದವಾಗಿದೆ. ಅವನಾದ ಒಂದೆರಡು ತಲೆಮಾರಿನೊಳಗೆ ಇಂಗ್ಲಿಷ್ ಭಾಷೆಗೆ ಒದಗಿದ ವಿಪರೀತ ಬದಲಾವಣೆಯ ಫಲವಾಗಿ ಅನೇಕ ಶಬ್ದಾಂಶಗಳ ಉಚ್ಚಾರಣೆಯಲ್ಲೂ ಹಲವು ಸ್ವರ

ಕೆಲವು ವ್ಯಂಜನಗಳ ಅಸ್ತಿತ್ವ ಮತ್ತು ಸ್ವರೂಪದಲ್ಲೂ ದೊಡ್ಡ ವ್ಯತ್ಯಾಸ ಏರ್ಪಟ್ಟಿತು. ಅದನ್ನು ಅರಿಯದ ಜನ 17, 18ನೆಯ ಶತಮಾನಗಳಲ್ಲಿ ಚಾಸರನ ಕವಿತ್ವ ಅನಿಶ್ಚಿತ ಮತ್ತು ಕರ್ಕಶವೆಂದು ತೀರ್ಮಾನಿಸಿದರು. ಅವನ ವಾಣಿ ಅವರ ಕಿವಿಗೆ ಕೇಳಿ ಬಂದದ್ದು ಹೀಗೆ:

ವೆನ್ ದ್ಯಟ್ ಏಪ್ರಿಲ್ ವಿತ್ ಹಿಸ್ ಷವರ್ಸ್ ಸೊಟ್

ಅಂಡ್ ಸ್ಮಾಲ್ ಫೌಲ್ಸ್ ಮೇಕ್ಸ್ ಮೆಲಡಿ.

ಇವುಗಳಿಗೆ ಪ್ರಸ್ತಾರ ಹಾಕುವುದು ಹೇಗೆ ? ಆದರೆ ಆ ಪಂಕ್ತಿಗಳನ್ನು ಚಾಸರನ ಕಾಲದವರು ಪ್ರಾಯಶ: ಹೀಗೆ ಅನ್ನುತ್ತಿದ್ದರು :

|

ವ್ಹೆನ್ ಡಟ್ । ಅ–ಪ್ರೀಲ್ । – ಲ ವಿ ತ್ । ಇಸ್ ಷೂ । – ರೆಸ್ ಸ್ವೋಟ

ಅಂಡ್ ಸ್ಮಾಹ್ । – ಲ ಫೂ । – ಲೆಸ್ ಮಾಹ್ । – ಕೆನ್ ಮೆಲ್ । –ಓ ಡೀ ಅ.

ಹೀಗೆ ಮಾಡಿದಾಗ ಚರಣಗಳು ಛಂದೋಬದ್ಧವಾಗುತ್ತವೆ; ನಾದಮಾಧುರ್ಯ ಹೆಚ್ಚುತ್ತದೆ. ನಡು ಇಂಗ್ಲಿಷಿನ ಖಚಿತಜ್ಞಾನ ಹೆಚ್ಚು ಹೆಚ್ಚಾದಂತೆಲ್ಲ ಇಂಗ್ಲಿಷ್ ಕಾವ್ಯಪದ್ಧತಿಗೆ ಚಾಸರನೇ ತಂದೆಯೆಂಬುದು ಅಂಗೀಕೃತ ಸತ್ಯಾಂಶವಾಯ್ತು.

ಚಾಸರನ ತರುವಾಯ ಬಂದ ಕವಿಗಳಲ್ಲಿ ತಮ್ಮದೇ ಆದ ನೂತನ ವೃತ್ತಗಳನ್ನು ಕಂಡುಹಿಡಿದು ಪ್ರಶಸ್ತವಾಗಿ ಉಪಯೋಗಿಸಿದವರು ಒಬ್ಬಿಬ್ಬರು ಮಾತ್ರ. 16ನೆಯ ಶತಮಾನದ ಎಡ್ಮಂಡ್ ಸ್ಪೆನ್ಸರ್ ಒಂಬತ್ತು ಸಾಲಿನ ಸಂಕೀರ್ಣ ಪ್ರಾಸದ ವೃತ್ತವನ್ನು ಕೌಶಲದಿಂದ ಉಪಯೋಗಿಸಿದ; ಅದಕ್ಕೆ ಸ್ಪೆನ್ಸರನ ವೃತ್ತವೆಂದೇ ಅಂಕಿತ. ಅದರ ಎಂಟು ಸಾಲುಗಳು ಐದು ಅಯಾಂಬಿಕ್ ಗಣಗಳಿಂದ ಕೂಡಿದವು; ಒಂಬತ್ತನೆಯದಕ್ಕೆ ಇನ್ನೊಂದು ಗಣ ಹೆಚ್ಚು. ಅದರ ಹೆಸರು ಅಲೆಕ್ಸಾಂಡ್ರಿಯನ್. ಅದೇ ಸಮಯದಲ್ಲಿ ವಯಟ್, ಸರ್ರೆ ಎಂಬ ಇಬ್ಬರು, ಇಟಲಿಯಲ್ಲಿ ಹುಟ್ಟಿ ಬಂದಿದ್ದ ಹದಿನಾಲ್ಕು ಪಂಕ್ತಿಯ ಸಾನೆಟ್ ವೃತ್ತವನ್ನು ಇಂಗ್ಲಿಷಿನಲ್ಲಿ ರಚಿಸಿ ಮಾರ್ಗದರ್ಶಕರಾದರು; ಆದರೆ ಪ್ರಾರಂಭದಿಂದಲೂ ಇಂಗ್ಲಿಷ್ ಸಾನೆಟ್ ಎರಡು ಬಗೆಯದ್ದಾಗಿದೆ. ವೃತ್ತದ ಭಾಗಗಳ ವಿಭಜನೆಯಲ್ಲಿ, ಪ್ರಾಸದ ಯೋಜನೆಯಲ್ಲಿ ಸಾನೆಟ್ಟನ್ನು ಅತಿ ಎತ್ತರದ ಮಟ್ಟಕ್ಕೆ ಏರಿಸಿದವರು ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್. 17, 18ನೆಯ ಶತಮಾನಗಳಲ್ಲಿ ದ್ವಿಪದಿ ಬಹುವಾಗಿ ಬಳಕೆಗೆ ಬಂತು. ಡ್ರೈಡನ್, ಪೋಪ್ ಕವಿಗಳು ಅದಕ್ಕೆ ಸಂಕ್ಷೇಪವನ್ನೂ ಬಿಗಿಯನ್ನೂ ಸತ್ತ್ವವನ್ನೂ ಲಾವಣ್ಯವನ್ನೂ ತಂದುಕೊಟ್ಟುದಲ್ಲದೆ ಅದರ ಮೂಲಕವೇ ಕಾವ್ಯಸಾರ್ಥಕ್ಯವನ್ನು ಪಡೆದುಕೊಂಡರು.

ದ ಫೋರ್ಸ್ । ಅಫ್ ನೇ । – ಚರ್ ಕುಡ್ । ನೊ ಫಾರ್ । – ದರ್ ಗೋ;

ಟು ಮೇಕ್ । ಅ ಥರ್ಡ್ । ಷಿ ಜಾಯಂಡ್ । ದ ಫಾರ್ । – ಮರ್ ಟ್ವೊ.

ದಿಸ್ ಕ್ಯಾಸ್ । – ಕೆಟ್ ಇಂಡ್ । – ಯಸ್ ಗ್ಲೋ । – ಇಂಗ್ ಜೆಮ್ಸ್ । ಅನ್–ಲಾಕ್ಸ್

ಅನ್ಡ್ ಅಲ್ । ಅ–ರೇ । – ಬ್ಯ ಬ್ರೀತ್ಸ್ । ಫ್ರಮ್ ಯರಾಂಡ್ । – ಅರ್‌ಬಾಕ್ಸ್.

ಬರ್ನ್ಸ್ ಕವಿಯ ಆರು ಚರಣಗಳ ವೃತ್ತಕ್ಕೆ ಅವನ ಹೆಸರೇ ಇದೆ. ಟೆನಿಸನ್ ನಾಲ್ಕು ಗಣದ ಒಂದು ಚೌಪದಿಯ ಮೇಲೆ ತನ್ನ ಮುದ್ರೆಯನ್ನು ಒತ್ತಿದ್ದಾನೆ.

ಈ ಎಲ್ಲ ವೃತ್ತಜಾತಿಗಳಲ್ಲೂ ಅಂತ್ಯಪ್ರಾಸದ ನಿಯಂತ್ರಣಕ್ಕೆ ವಿಶೇಷ ಪ್ರಾಧಾನ್ಯ. ಪ್ರಾಸಕ್ರಮವನ್ನು ನಿರೂಪಿಸುವುದಕ್ಕೆ ಇಂಗ್ಲಿಷಿನಲ್ಲಿ ಎ ಬಿ ಸಿ ಡಿ ಇ ಎಫ್ ಜಿ ಅಕ್ಷರಗಳನ್ನು ಸಂಕೇತ ಚಿಹ್ನೆಗಳಾಗಿ ಉಪಯೋಗಿಸುವ ವ್ಯವಸ್ಥೆಯಿದೆ. ದ್ವಿಪದಿಯ ಪ್ರಾಸ ಎ ಎ; ಚೌಪದಿಯ ಪ್ರಾಸ ಸಾಮಾನ್ಯವಾಗಿ ಎ ಬಿ ಎ ಬಿ; ಟೆನಿಸನ್ನನ ಚೌಪದಿಗೆ ಎ ಬಿ ಬಿ ಎ. ಬರ್ನ್ಸ್ ವೃತ್ತದಲ್ಲಿ ಎ ಎ ಎ ಬಿ ಎ ಬಿ. ರೈಮ್ ರಾಯಲಿನಲ್ಲಿ ಎ ಬಿ ಎ ಬಿ ಬಿ ಸಿ ಸಿ. ಸ್ಪೆನ್ಸರನ ವೃತ್ತದ ಕ್ರಮ ಎ ಬಿ ಎ ಬಿ ಬಿ ಸಿ ಬಿ ಸಿ ಸಿ. ಇಟಲಿಯ ಮಾದರಿ ಸಾನೆಟ್ಟಿನ ಪ್ರಾಸಕ್ರಮ ಎ ಬಿ ಬಿ ಎ ಎ ಬಿ ಬಿ ಎ ಸಿ ಡಿ ಇ ಸಿ ಡಿ ಇ; ಇಂಗ್ಲಿಷ್ ಮಾದರಿ ಸಾನೆಟ್ಟಿನ ಕ್ರಮ ಎ ಬಿ ಎ ಬಿ ಸಿ ಡಿ ಸಿ ಡಿ ಇ ಇಫ್ ಇ ಎಫ್ ಜಿ ಜಿ.

ಅವರೋಹಣ ಗತಿಯ ಛಂದಸ್ಸು ಇಂಗ್ಲಿಷಿನಲ್ಲಿ ವಿರಳ. ಟ್ರೋಕಿ ಗಣದ (|∪) ಕೆಲವು ಗೀತೆಗಳು ಗಮನೀಯವಾಗಿವೆ. ಬ್ಲೇಕ್‌ನ ನೈಪುಣ್ಯ ಪ್ರಶಂಸಾರ್ಹ.

ಪೈಪ್ ಅ । ಸಾಂಗ್ ಅ । ಬೌಟ್ ಅ । ಲಾವ್ ∩

ಟೈ–ಗರ್, । ಟೈ–ಗರ್ । ಬರ್ನ್–ಇಂಗ್ । ಬ್ರೈಟ್ ∩

(ಈ ಗುರುತು ∩ ಕ್ಯರೆಟ್ ಎಂಬ ಅಭಿಧಾನದ್ದು; ಒಂದು ಒತ್ತಿಲ್ಲದ ಉಚ್ಚಾರಾಂಶ ಅಲ್ಲಿ ಹ್ರಸ್ವವಾಗಿದೆ ಎಂದು ಅದರ ಸೂಚನೆ). ಲಾಂಗ್‌ಫೆಲೊ ನಾಲ್ಕು ಗಣದ ಟ್ರೋಕಿ ವಿಧಾನದಲ್ಲಿ ಒಂದು ನೀಳ್ಗವಿತೆಯನ್ನು ಬರೆದ.

ಮೂರು ಉಚ್ಚಾರಾಂಶಗಳಿಂದಾಗುವ ಗಣಗಳಲ್ಲಿ ಎರಡು ಬಗೆಗೆ ಮಾತ್ರ ಇಂಗ್ಲಿಷಿನಲ್ಲಿ ಪ್ರಾಸವುಂಟು : ∪∪| ಅನಪೀಸ್ಟ್, |∪∪ ಡ್ಯಾಕ್ಟಿಲ್. ಅಯಾಂಬಿಕ್ ಗಣದ ಕವಿತೆಯಲ್ಲಿ ಆನಪೀಸ್ಟೂ ಟ್ರೋಕೇಕ್ ಗಣದ ಕವಿತೆಯಲ್ಲಿ ಡ್ಯಾಕ್ಟಿಲ್ಲೂ ಆಗಾಗ ಬದಲು ಗಣವಾಗಿ ಬರುತ್ತವೆ. ಉದ್ದಕ್ಕೂ ಅವನ್ನೇ ಬಳಸಿಕೊಳ್ಳುವ ಕಾವ್ಯಗಳು ಅಪೂರ್ವ; ಅಂಥವು ಕೇವಲ ಪರೀಕ್ಷಾಪ್ರಯೋಗಗಳು.

19ನೆಯ ಶತಮಾನದಲ್ಲಿ ಫ್ರಾನ್ಸಿನ ಕವಿಗಳು ಹತ್ತಾರು ವಿಧದ ನವೀನ ಛಂದೋಮಾರ್ಗಗಳನ್ನು ರೂಪಿಸಿದರು; ಅವುಗಳಲ್ಲಿ ಒಂದೆರಡು ಇಂಗ್ಲೆಂಡನ್ನೂ ಹೊಕ್ಕವು. ಯಾವೊಂದು ಗಣದ ಗೋಜಿಗೂ ಹೋಗದೆ, ಉಚ್ಚಾರಾಂಶಗಳ ಸಂಖ್ಯೆಯನ್ನು ಪಾದ ಪಾದಕ್ಕೂ ಭಿನ್ನಗೊಳಿಸುತ್ತ, ಚರಣದ ತೂಕ ಹೆಚ್ಚು ಕಡಿಮೆ ಸಮ ಎಂಬ ರಸಭ್ರಮೆಯನ್ನು ಸೃಜಿಸುತ್ತ, ಕಟ್ಟುವ ಒಂದು ಪದ್ಧತಿ ಪ್ರಸಿದ್ಧ. ಅದನ್ನು ಸ್ವಚ್ಛಂದ ಪದ್ಯಪಂಕ್ತಿ (ಫ್ರೀ ವರ್ಸ್) ಎನ್ನುತ್ತಾರೆ. ಸಂಯುಕ್ತ ಸಂಸ್ಥಾನದ ವಾಲ್ಟ್‌ವಿಟ್ಮನ್ ಅದರಲ್ಲಿ ನಿಷ್ಣಾತ. ಅಲ್ಲಿನ ಕವಿಗಳಿಗೆ ಅದು ಹೊಂದಿ ಬಂದಿರುವಂತೆ ಇಂಗ್ಲೆಂಡಿನ ಕವಿಗಳಿಗೆ ಹೊಂದಿ ಬಂದಿಲ್ಲ; ಒಬ್ಬಿಬ್ಬರ ಒಂದೆರಡು ಕವನಗಳು ಮಾತ್ರ ಓದಲರ್ಹ, ಸ್ಮರಣೀಯ.

ಇದುವರೆಗೂ ವಿವರಿಸಿದ ಇಂಗ್ಲಿಷ್ ಛಂದಸ್ಸಿನ ವಿಧಾನ ಅನೇಕ ಪಂಡಿತವರ್ಯರ ಸಮ್ಮತಿಯನ್ನು ಪಡೆದು ರಸಿಕರಿಗೆ ಪರಿಚಿತವಾದ ವಿಧಾನ. ಇತರ ಮೂರು ನಾಲ್ಕು ವಿಧಾನಗಳನ್ನೂ ಸೂಚಿಸಿದ್ದಾರೆ, ಕೆಲವು ಆಳ್ತನದ ಅಭ್ಯಾಸಿಗಳು. ಒಬ್ಬನ ಅಭಿಪ್ರಾಯದಂತೆ, ಇಂಗ್ಲಿಷ್ ಪದ್ಯಕಾವ್ಯಕ್ಕೂ ಸಂಗೀತಕ್ಕೂ ಏನೂ ವ್ಯತ್ಯಾಸವಿಲ್ಲ; ತಾಳಬದ್ಧವಾದ ಸಂಗೀತದ ಸ್ವರವಿನ್ಯಾಸವನ್ನು ನಿರೂಪಿಸುವ ಸಂಕೇತ ಚಿಹ್ನೆಗಳನ್ನೇ ಉಪಯೋಗಿಸಬಹುದು, ಪದ್ಯಪಂಕ್ತಿಗಳ ನಡೆಯನ್ನು ನಿರೂಪಿಸುವುದಕ್ಕೂ ಇದನ್ನು ಅನುಮೋದಿಸುವವರು ಅತ್ಯಲ್ಪ ಮಂದಿ. ಇಷ್ಟು ದೂರ ಹೋಗದೆ, ಇನ್ನು ಕೆಲವರು ಇಂಗ್ಲಿಷ್ ಪದ್ಯವೂ ಗ್ರೀಕ್ ಲ್ಯಾಟಿನ್ ಪದ್ಯಗಳಂತೆ ಉಚ್ಚಾರಾಂಶದ ಕಾಲದ ಕ್ವಾಂಟಿಟಿ ಮೇಲೆಯೇ ರಚಿತವಾಗಿದೆ ಎಂದು ಸಾರಿದ್ದಾರೆ. ಒಂದು ಸ್ವರಭಾರದಿಂದ ಇನ್ನೊಂದಕ್ಕೆ ಮಧ್ಯೆ ಸವೆಯುವ ಹೊತ್ತು ಸಮಾನವಾಗಿರುತ್ತದೆ, ಆಯಾ ಛಂದಸ್ಸಿನ ಧಾಟಿಗೆ ಅನುರೂಪವಾಗಿ. ಈ ತತ್ತ್ವಕ್ಕೂ ಹೆಚ್ಚು ಮನ್ನಣೆಯಿಲ್ಲ. ಮತ್ತೊಬ್ಬ ಶ್ರದ್ಧಾಳು ಹೇಳಿರುವಂತೆ ಇಂಗ್ಲಿಷ್ ಪದ್ಯದ ಲಯವೆಲ್ಲ ಅವರೋಹಣ ಗತಿಯ ಟ್ರೋಕಿಕ್ ಲಯ : ಮೊದಲ ಒಂದು ಉಚ್ಚಾರಾಂಶವನ್ನು ಪ್ರತ್ಯೇಕಿಸಿ, ಪಠನಕ್ಕೆ ಮುನ್ನ ತೆಗೆದುಕೊಳ್ಳುವ ಉಸಿರಿನಂತೆ ಅದನ್ನು ಭಾವಿಸಿಕೊಂಡು, ಅದಕ್ಕೆ ಬೆಲೆಕೊಡದೆ ನಿರ್ಲಕ್ಷಿಸತಕ್ಕದ್ದು. ಈ ರೀತಿ ಚಿತ್ತ ಬಂದಂತೆ ಕವಿಕೃತಿಯನ್ನು ವಿಭಾಗಮಾಡುತ್ತ ಹೋಗಬಹುದಾದರೆ ಯಾವ ಕ್ರಮವನ್ನು ಬೇಕಾದರೂ ನಾವು ಕಾಣಬಹುದು.

ಇನ್ನು ಗದ್ಯ ಸಾಹಿತ್ಯದ ಛಂದಸ್ಸನ್ನು ನೋಡೋಣ. ಗದ್ಯವೂ ಲಯದಿಂದ ರಕ್ಷಿತವಾಗಿದೆಯೆಂದೂ ಆ ಲಯಸೂಕ್ಷ್ಮವೂ ಸಂಕೀರ್ಣವೂ ಆದದ್ದರಿಂದ ಅದನ್ನು ಲಾಲಿಸುವುದಕ್ಕೆ ಒಳಗಿವಿಯನ್ನು ತೆರೆಯಬೇಕೆಂದೂ ಕೆಲವು ಮೇಧಾವಿಗಳ ದೃಢ ನಿಶ್ಚಯ. ಪಾಶ್ಚಾತ್ಯ ವಿಮರ್ಶೆಯಪಿತನೂ ಶಿಖಾಮಣಿಯೂ ಆದ ಅರಿಸ್ಟಾಟಲ್ ಈ ಸೂತ್ರವನ್ನು ಹಿಂದೆಯೇ ಉದ್ಘೋಷಿಸಿದ: ಗದ್ಯ ಲಯಶೂನ್ಯವಾಗಿರಬಾರದು. ಛಂದೋಬದ್ಧವಾಗಿರಬಾರದು (Arrhythmon, Immetron). ಇಂಗ್ಲಿಷ್ ಗದ್ಯದ ಛಂದೋವಿಧಾನ ಪದ್ಯದ ಛಂದಸ್ಸಿಗಿಂತ ಶಿಥಿಲವಾದದ್ದು. ಹೆಚ್ಚು ಅನಿರ್ಬಂಧವಾದದ್ದು. ಕವನದಂತೆ ಪದವನ್ನು ಒಡೆದು ಉಚ್ಚಾರಾಂಶಗಳನ್ನು ಬೇರ್ಪಡಿಸುವಂತಿಲ್ಲವಾದರೂ ಪ್ರತಿ ಪದವನ್ನೂ ಒಟ್ಟಿಗೇ ತೆಗೆದುಕೊಂಡು ಉದಾರ ಬಗೆಯ ಗಣಗಳನ್ನು ಮಾಡಬೇಕು. ಪದ್ಯದಲ್ಲಿ ಅಪೂರ್ವವಾದ ಮೂರು ಉಚ್ಚಾರಾಂಶಗಳ ಗಣ C C ಆಂಫಿಬ್ರಾಕ್ ಗದ್ಯದಲ್ಲಿ ವಿಶೇಷವಾಗಿ ಬರುತ್ತದೆ. ಪದ್ಯದಲ್ಲಿ ಪ್ರಾಯಶಃ ಇಲ್ಲವೇ ಇಲ್ಲದ ನಾಲ್ಕು ಅಂಶಗಳ ಗಣಗಳು, ಪಿಯನ್, ಎಪಿಟ್ರೈಟ್, ಗದ್ಯದಲ್ಲಿ ಸರ್ವ ಸಾಮಾನ್ಯ. ಐದು ಅಂಶಗಳ ಡಾಕ್ಮಿಯಕ್ ಕೂಡ ಉಂಟು. ಗಣಕ್ಕೂ ಮಿಗಿಲಾಗಿ ಲಯದ ಕಂಪನ್ನು ಪಸರಿಸುವ ಒಂದು ವಿಶಿಷ್ಟ ಭಾವದ ಪದಗುಚ್ಛ ಗದ್ಯಕ್ಕೆ ಮೀಸಲು. ಪ್ರಾಚೀನ ಗ್ರೀಕ್ ಗದ್ಯದಲ್ಲಿ ಅದು ಕಾಣಬರುತ್ತಿತ್ತು; ಪ್ರಾಚೀನ ಲ್ಯಾಟಿನ್ ಗದ್ಯದಲ್ಲಿ ಅದಕ್ಕೆ ಅಧಿಕ ಶೋಭೆ ಬಂತು, ಅಧಿಕ ಗೌರವವೂ ಬಂತು. ಅದಕ್ಕೆ ಕುರ್ಸಸ್ (Cursus = a run) ಎಂದು ಹೆಸರು. ಕುರ್ಸಸ್ ಉದ್ದಕ ಉಚ್ಚಾರಾಂಶ ಅಥವಾ ಗುರುವಿನಿಂದ ಪ್ರಾರಂಭವಾಗಬೇಕು; ಉದ್ದವಲ್ಲದ ಉಚ್ಚಾರಾಂಶ ಅಥವಾ ಲಘುವಿನಿಂದ ಕೊನೆಗೊಳ್ಳಬೇಕು. ರೋಮನ್ನರನ್ನು ಮುಗ್ಧಗೊಳಿಸುತ್ತಿದ್ದ ಕುರ್ಸಸ್‌ಗಳು ಮುಖ್ಯವಾಗಿ ಮೂರು : 1 ಕುರ್ಸಸ್ ಪ್ಲಾನಸ್: -C C-C ಹಾಗೂ -C C-C C ಇಂಗ್ಲಿಷಿನಲ್ಲಿ ಉದಾಹರಣೆ : ವಾಚ್ – ಇಂಗ್ ಅಂಡ್ ವೇಟ್ – ಇಂಗ್. ಸಂಕೇತಚಿಹ್ನೆ ಸಂಕ್ಷಿಪ್ತವಾಗಿ ಹೀಗೆ : 5–2, 6–2; ಕೊನೆಯಿಂದ ಇದನ್ನು ಓದಬೇಕು; ಇದರರ್ಥ ಎರಡನೆಯ ಉಚ್ಚಾರಾಂಶ ಗುರು, ಹಾಗೂ ಐದನೆಯದೂ ಆರನೆಯದೂ ಗುರು; ಮಿಕ್ಕ ಅಂಶಗಳು ಲಘು. 2 'ಕುರ್ಸಸ್ ಟಾರ್ಡಸ್' : -C C-C C ಹಾಗೂ -CCC-C C ಇಂಗ್ಲಿಷ್ ಉದಾಹರಣೆ : ವಿಷನ್ ಆಫ್ ಮೊವರ್–ಅ–ರಿ (6–3); ಸೀ–ಕ್ರೆಟ್ಸ್ ಆಫ್ ಫಿ–ಲಾ–ಸ–ಫಿ (7–3). 3 "ಕುರ್ಸಸ್ ವಿಲಾಕ್ಸ್' : -C C-C-C (7–4–2); ಹಾಗೂ -C C C-C-C (8–4–2). ಇಂಗ್ಲಿಷ್ ಉದಾಹರಣೆ : ಸೂಟ್–ಅ–ಬಲ್ ಕ್ರಿಸ್–ಮಸ್ ಪ್ರೆ–ಸೆಂಟ್ಸ್; ಬ್ರೋಕ್ ಇನ್–ಟು ಅ ಥೌ – ಸಂಡ್ ಪೀ–ಸಸ್.

ಇಂಗ್ಲಿಷ್ ಗದ್ಯದಲ್ಲಿ ಇವನ್ನು ಹೆಕ್ಕಿ ತೆಗೆಯಬಹುದು : ಮತ್ತು ದೇಶೀಯ ಕುರ್ಸಸ್‌ಗಳನ್ನೂ (ನೇಟಿವ್ ಕ್ಯಾಡೆನ್ಸ್) ನೋಡಬಹುದು. ಅವುಗಳಲ್ಲಿ ಶಬ್ದಗುಚ್ಛ ಒತ್ತುಳ್ಳ ಉಚ್ಚಾರಾಂಶದಿಂದ ಆರಂಭವಾಗಿ ಒತ್ತುಳ್ಳ ಉಚ್ಚಾರಾಂಶದಿಂದಲೇ ಕೊನೆಗೊಳ್ಳಬಹುದು: ಲ್ಯಾಂಡ್–ಇಂಗ್

ಔನ್ ದ ರಾಕ್ಸ್ (5–1); ಕೋಲ್ಡ್ ಅರೌಂಡ್ ಸೈ ಲೆಂಟ್ ಏಲ್ (6–3–1). ಗದ್ಯ ಛಂದಸ್ಸಿನ ಸಂಶೋಧನೆಯೂ ವಿಮರ್ಶೆಯೂ ಇನ್ನೂ ಹೆಚ್ಚು ಹೆಚ್ಚಾಗಿ ನಡೆಯ ಬೇಕಾಗಿದೆ. (ಎಸ್.ವಿ.ಆರ್.)

**ಇಂಗ್ಲಿಷ್ ನ್ಯಾಯ:** ಪ್ರಪಂಚದ ನ್ಯಾಯವ್ಯವಸ್ಥೆಗಳಲ್ಲೊಂದು. ಇದರ ಏಕೈಕ ಪ್ರಬಲ ಪ್ರತಿಸ್ಪರ್ಧಿಯೆಂದರೆ ರೋಮನ್ ನ್ಯಾಯ. ಯುರೋಪ್ ಖಂಡಪ್ರದೇಶ ಹಾಗೂ ರಷ್ಯದ ಪಶ್ಚಿಮ ಭಾಗದಲ್ಲಿ ರೋಮನ್ ನ್ಯಾಯದ ಪ್ರಭಾವ ವಿಶೇಷವಾಗಿರುವುದಾದರೂ ಜಗತ್ತಿನ ಅನೇಕ ರಾಷ್ಟ್ರಗಳ ಮೇಲೆ ಇಂಗ್ಲಿಷ್ ನ್ಯಾಯದ ಪ್ರಭಾವವನ್ನು ಕಾಣಬಹುದಾಗಿದೆ. ಇಂಗ್ಲಿಷರು ನೆಲೆಸಿದ ಸ್ಥಳಗಳಲ್ಲೆಲ್ಲ ಅವರು ತಮ್ಮ ನ್ಯಾಯವನ್ನೂ ಹರಡಿದರು. ಆಧುನಿಕ ಭಾರತದ ನ್ಯಾಯಪದ್ಧತಿಯ ಕೆಲವು ಶಾಖೆಗಳ ಮೇಲೆ ಇಂಗ್ಲಿಷ್ ನ್ಯಾಯದ ಆಯಾಶಾಖೆಗಳ ಪ್ರಭಾವ ಹೆಚ್ಚಾಗಿ ಬಿದ್ದಿದೆ. (ಉದಾ: ಕರಾರು ಕಾಯಿದೆ, ಕಂಪನಿ ಕಾಯಿದೆ, ಕ್ರಿಮಿನಲ್ ಕಾಯಿದೆ, ಇತ್ಯಾದಿ) ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮುಂತಾದ ದೇಶಗಳ ಹಾಗೂ ಬ್ರಿಟಿಷ್ ವಸಾಹತುಗಳ ನ್ಯಾಯ ಪದ್ಧತಿಗಳಿಗೆ ಇಂಗ್ಲಿಷ್ ನ್ಯಾಯವೇ ತಳಹದಿ.

ಯುರೋಪ್ ಖಂಡದ ನ್ಯಾಯವ್ಯವಸ್ಥೆಯನ್ನು ಇಂಗ್ಲಿಷ್ ನ್ಯಾಯಪದ್ಧತಿ ಮತ್ತು ರೋಮನ್ ನ್ಯಾಯಪದ್ಧತಿ ಎಂದು ಎರಡು ವಿಭಾಗ ಮಾಡಲಾಗಿದೆ. ರೋಮನ್ ಪದ್ಧತಿ ರಾಜ್ಯದ ಅಭಿವೃದ್ಧಿಗೆ ಪ್ರಮುಖ ಸ್ಥಾನ ನೀಡಿತು. ಇಂಗ್ಲಿಷ್ ನ್ಯಾಯದ ದೃಷ್ಟಿಯಲ್ಲಿ ಪ್ರಜೆಯ ಮೇಲ್ಮೆಯೇ ಪ್ರಧಾನ. ಯುರೋಪಿನ ರಾಜಕೀಯ ಸಾಮಾಜಿಕ ಪರಿಸ್ಥಿತಿಗಳಿಂದಾಗಿ ಅಲ್ಲಿನ ಅನೇಕ ರಾಷ್ಟ್ರಗಳಲ್ಲಿ ಪರಂಪರಾಗತ ಸಂಪ್ರದಾಯ ನಿಯಮಗಳನ್ನು ಬದಿಗಿರಿಸಿ ರೋಮನ್ ನ್ಯಾಯವನ್ನೇ ಅಳವಡಿಸಿಕೊಳ್ಳುವಂಥ ಕಾನೂನಿನ ಕ್ರಾಂತಿ ಸಂಭವಿಸಿತು. ಆದರೆ ಇಂಗ್ಲೆಂಡಿನಲ್ಲಿ ಅಂಥ ಕ್ರಾಂತಿಗೆ ಅವಕಾಶ ದೊರೆಯಲಿಲ್ಲ. ಅದು ಪ್ರಾಚೀನ ಪದ್ಧತಿಗಳನ್ನು ಅಡಿಗಲ್ಲಾಗಿಟ್ಟುಕೊಂಡು ಕ್ರಮಕ್ರಮವಾಗಿ ತನ್ನದೇ ಆದ ಕಾನೂನು ನಿರ್ಮಿಸಿಕೊಂಡಿತು.

ನ್ಯಾಯ ಪರಿಪಾಲನೆಯಲ್ಲಿ ರಾಜ್ಯ ಅಂಗೀಕರಿಸಿ ಪ್ರಯೋಗಿಸುವ ಮೂಲ ತತ್ತ್ವಗಳನ್ನು ಅಥವಾ ನ್ಯಾಯಾಲಯಗಳು ಒಪ್ಪಿ ಜಾರಿ ಮಾಡುವ ನಿಯಮ ನಿಬಂಧನೆಗಳನ್ನು ನ್ಯಾಯವೆಂದು ಕರೆಯಬಹುದೆಂದು ಸರ್‌ಜಾನ್ ಸ್ಯಾಲ್‌ಮಂಡ್ ಹೇಳುತ್ತಾನೆ. ಈ ಪದವನ್ನು ನಿತ್ಯ ಬಳಸಲಾಗುವ ಸಿವಿಲ್ ನ್ಯಾಯಕ್ಕೆ ಮಾತ್ರ ಇಲ್ಲಿ ಬಳಸಲಾಗಿದೆ. ಸ್ಯಾಲ್‌ಮಂಡ್ ಎಲ್ಲ ನ್ಯಾಯಗಳನ್ನೂ ಸಾಮಾನ್ಯ ಮತ್ತು ವಿಶಿಷ್ಟ ಎಂಬ ಎರಡು ವಿಭಾಗಗಳನ್ನಾಗಿ ಮಾಡುತ್ತಾನೆ. ಒಂದನೆಯದು ಸಾರ್ವತ್ರಿಕವಾಗಿ ಎಲ್ಲರಿಗೂ ಎಲ್ಲಕ್ಕೂ ಅನ್ವಯಿಸುವಂಥದು. ಗುಣ, ಮೂಲ, ಉಪಯೋಗಗಳಲ್ಲಿ ವಿಶಿಷ್ಟವೂ ಅಪವಾದಾತ್ಮಕವೂ (ಎಕ್ಸೆಪ್ಷನಲ್) ಆಗಿರುವಂಥದು. ಎರಡನೆಯದು ಸಾಮಾನ್ಯ ಕಾನೂನಿಗೆ ಪೂರಕ, ಅಥವಾ ಅದನ್ನು ತೊಡೆದು ಹಾಕುವಂಥದು. ಸಾಮಾನ್ಯ ನ್ಯಾಯವನ್ನು ಮೂರು ವಿಭಾಗಗಳನ್ನಾಗಿ ಮಾಡಬಹುದು – ಸಂಪ್ರದಾಯ ನ್ಯಾಯ (ಕಾಮನ್ ಲಾ), ಸಾಮ್ಯ ನ್ಯಾಯ (ಎಕ್ವಿಟಿ) ಮತ್ತು ಕಾಯಿದೆಗಳು (ಸ್ಟಾಚೂಟ್ಸ್). ಇಂಗ್ಲಿಷ್ ನ್ಯಾಯವೆಂದರೆ ಸಂಪ್ರದಾಯ ನ್ಯಾಯ, ಸಾಮ್ಯ ನ್ಯಾಯ ಮತ್ತು ಕಾಯಿದೆಗಳ ತ್ರಿವೇಣೀ ಸಂಗಮ. ಇಂದಿನ ಇಂಗ್ಲಿಷ್ ನ್ಯಾಯವನ್ನರಿಯಬೇಕಾದರೆ ಅದರ ಚಾರಿತ್ರಿಕ ಹಿನ್ನೆಲೆ ಬಹಳ ಮುಖ್ಯ.

ಇಂಗ್ಲೆಂಡನ್ನಾಕ್ರಮಿಸಿಕೊಂಡಿದ್ದ ರೋಮನ್ನರು ಐದನೆಯ ಶತಮಾನದ ಆದಿ ಭಾಗದಲ್ಲಿ ಆ ದೇಶ ಬಿಟ್ಟರು. ಅವರೊಂದಿಗೆ ಅವರ ನ್ಯಾಯಪದ್ಧತಿಗಳೂ ಮಾಯವಾದವು. ಬಳಿಕ ಪ್ರ.ಶ. 600ರ ತನಕ ಅನೇಕ ಜರ್ಮನ್ ತಂಡಗಳು ಇಂಗ್ಲೆಂಡಿನ ಮೇಲೆ ದಾಳಿ ನಡೆಸಿ ಅಲ್ಲಿಯ ಉತ್ತಮ ಭೂಮಿಗಳನ್ನು ವಶಪಡಿಸಿಕೊಂಡು ಅಲ್ಲೆ ನೆಲೆ ನಿಂತವು. ಆ ತಂಡಗಳವರ ಪದ್ಧತಿಗಳೂ ಕ್ರಮಗಳೂ ಅಲ್ಲಿ ಬೇರೂರಿದವು. ಈ ಜರ್ಮನ್ ತಂಡಗಳಿಗೆ ರಾಜನಿರಲಿಲ್ಲ. ಪ್ರತಿ ತಂಡವೂ ತನ್ನ ನಾಯಕನನ್ನು ಚುನಾಯಿಸುತ್ತಿತ್ತು. ಪ್ರತಿ ತಂಡಕ್ಕೂ ತನ್ನದೇ ಆದ ಸಭೆಯೂ ತನ್ನದೇ ಆದ ಪದ್ಧತಿಯೂ ಇದ್ದುವು. ತಪ್ಪೊಪ್ಪುಗಳ ನಿರ್ಣಯ ಸಭೆಯ ಅಧೀನ. ಪ್ರಾಚೀನ ಕಾಲದಿಂದಲೂ ಬಂದ ರೂಢಿಯೇ ಕಾನೂನುಗಳಾದವು.

ಆ್ಯಂಗ್ಲೋ–ಸ್ಯಾಕ್ಸನ್ ಜನರ ನ್ಯಾಯಪದ್ಧತಿಯ ಸ್ವರೂಪದ ವಿಚಾರವಾಗಿ ಹೆಚ್ಚೇನೂ ತಿಳಿದುಬರುವುದಿಲ್ಲ. ಎತೆಲ್ಬರ್ಟ್ (ಪ್ರ.ಶ. 616) ಈ ಕಾನೂನುಗಳನ್ನು ಕ್ರೋಡೀಕರಿಸಿದ. ಆದರೆ ಇವುಗಳಲ್ಲಿ ನಿತ್ಯ ಪ್ರಚಲಿತ ಕಾನೂನುಗಳ ವಿಚಾರವಿಲ್ಲ. ಆ ಕಾಲಕ್ಕೆ ನವೀನವೆನಿಸಿದ್ದ ಕಾನೂನುಗಳು ಮಾತ್ರ ವಿಶೇಷವಾಗಿ ಉಕ್ತವಾಗಿವೆ. ಇಂಗ್ಲಿಷರನ್ನು ಕ್ರೈಸ್ತರನ್ನಾಗಿ ಪರಿವರ್ತಿಸುವ ಕಾರ್ಯ ಸು. 597ರಲ್ಲಿ ಪ್ರಾರಂಭವಾಗಿ ಒಂದು ಶತಮಾನಕಾಲ ಸಾಗಿತು. ಕ್ರೈಸ್ತಧರ್ಮ ಪ್ರಚಾರದಿಂದ ಒಂದೇ ರೀತಿಯ ಕಾನೂನುಗಳು ಹಬ್ಬಲು ಸಹಾಯವಾಯಿತು.

ಆಡಳಿತ ದೃಷ್ಟಿಯಿಂದ ಇಂಗ್ಲೆಂಡನ್ನು ಟೌನ್‌ಷಿಪ್, ಹಂಡ್ರೆಡ್ ಮತ್ತು ಷೈರ್‌ಗಳಾಗಿ ಕ್ರಮೇಣ ವಿಂಗಡಿಸಲಾಯಿತು. ಕೆಲವು ಗ್ರಾಮಗಳು ಸೇರಿದ ವಿಭಾಗವೇ ಟೌನ್‌ಷಿಪ್. ಹಲವಾರು ಟೌನ್‌ಷಿಪ್‌ಗಳು ಸೇರಿ ಹಂಡ್ರೆಡ್ ಆಗುತ್ತಿತ್ತು. ಇಂಥವು ಅನೇಕ ಸೇರಿ ಷೈರ್ ಆಗುತ್ತಿತ್ತು. ಟೌನ್‌ಷಿಪ್ ಸಭೆಗಳು ತಿಂಗಳಿಗೊಮ್ಮೆ ಸೇರುತ್ತಿದ್ದುವು. ತಮಗೆ ಬೇಕಾದ ನ್ಯಾಯ ನಿಬಂಧನೆಗಳ ರಚನೆ, ಪುಟ್ಟ ವಿವಾದಗಳ ತೀರ್ಮಾನ, ದಂಡಾಧಿಕಾರಿಯ ನೇಮಕ, ನೆಮ್ಮದಿ ಪಾಲನೆಗಾಗಿ ಕೆಳದರ್ಜೆಯ ಅಧಿಕಾರಿಗಳ ನೇಮಕ, ಹಂಡ್ರೆಡ್ ಮತ್ತು ಷೈರ್‌ಗಳಿಗೆ ಪ್ರತಿನಿಧಿಗಳ ಆಯ್ಕೆ – ಇವು ಆ ಸಭೆಗಳ ಮುಖ್ಯ ಕಾರ್ಯಭಾರ. ಆ್ಯಂಗ್ಲೋ–ಸ್ಯಾಕ್ಸನ್ ಕಾಲದಲ್ಲಿ ಹಂಡ್ರೆಡ್‌ಗಳಿಗೆ ಸ್ವಯಂ ಆಡಳಿತದ ಅಧಿಕಾರವಿತ್ತು. ಅದರ ಸಭೆ ತಿಂಗಳಿಗೊಮ್ಮೆ ಕೂಡುತ್ತಿತ್ತು. ಪ್ರಮುಖ ಭೂಮಾಲೀಕರು, ಟೌನ್‌ಷಿಪ್‌ಗಳ ಪಾದ್ರಿಗಳು, ದಂಡಾಧಿಕಾರಿ ಮತ್ತು ಆಯ್ದ ನಾಲ್ಕು ಮಂದಿ ಪ್ರತಿನಿಧಿಗಳು–ಇವರು ಅದರಲ್ಲಿ ಭಾಗವಹಿಸುತ್ತಿದ್ದರು. ಅದು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ನ್ಯಾಯ ತೀರ್ಮಾನ ಮಾಡುತ್ತಿತ್ತು. ಭಾಗವಹಿಸಿದವರಿಗೆಲ್ಲ ನ್ಯಾಯಧೀಶರಾಗುವ ಹಕ್ಕಿದ್ದರೂ ನ್ಯಾಯಾಲಯವಾಗಿ ಕೆಲಸ ಮಾಡಲು ಹನ್ನೆರಡು ಜನರನ್ನು ನೇಮಕಮಾಡಲಾಗುತ್ತಿತ್ತು. ಹಂಡ್ರೆಡ್‌ನ ನಾಯಕನನ್ನೂ ಚುನಾಯಿಸಲಾಗುತ್ತಿತ್ತು. ಈತನನ್ನು ಹಂಡ್ರೆಡ್ ಎಲ್ಡರ್ ಅಥವಾ ಹಿರಿಯ ಎನ್ನುತ್ತಿದ್ದರು. ಷೈರ್‌ಗಳಲ್ಲೂ ವರ್ಷಕ್ಕೆ ಎರಡು ಬಾರಿ ಕೂಡುವ ಸಭೆಗಳಿದ್ದವು. ಅವುಗಳಲ್ಲಿ ಪ್ರಮುಖ ಭೂಮಾಲೀಕರೂ ಸರ್ಕಾರಿ ಅಧಿಕಾರಿಗಳೂ ಹಂಡ್ರೆಡ್‌ಗಳ ಪ್ರತಿನಿಧಿಗಳೂ ಸೇರುತ್ತಿದ್ದರು. ಅವು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ತೀರಿಸುತ್ತಿದ್ದುವು. ಷೈರ್‌ನ ಮುಖ್ಯಸ್ಥ ಎಲ್ಡರ್‌ಮನ್. ಅವನನ್ನು ದೇಶದ ಸಭೆ ಚುನಾಯಿಸುತ್ತಿತ್ತು. ಎಲ್ಡರ್‌ಮನ್ ಮತ್ತು ಬಿಷಪ್ ಸಭೆಯಲ್ಲಿದ್ದು ಕ್ರಮವಾಗಿ ದೇಶದ ನ್ಯಾಯವನ್ನೂ ಧರ್ಮದ ನ್ಯಾಯವನ್ನೂ ಹೇಳುತ್ತಿದ್ದರು. ನ್ಯಾಯವನ್ನು ಜಾರಿ ಮಾಡುವ ಬಗ್ಗೆಯೂ ರಾಜನ ಭೂಮಿಗಳನ್ನು ನೋಡುವ ಬಗ್ಗೆಯೂ ರಾಜನಿಂದ ನೇಮಕವಾಗಿದ್ದ ಅಧಿಕಾರಿಯೇ ಷೆರಿಫ್. ಸೈನ್ಯದ ಮೇಲ್ವಿಚಾರಣೆ ಎಲ್ಡರ್‌ಮನ್ನನ ಹೊಣೆ.

ರಾಜನಿಂದ ಮತ್ತು ಅವನಿಗೆ ಸಹಾಯಕರಾದ ಬುದ್ಧಿವಂತರಿಂದ ಇಡೀ ದೇಶದ ಸರ್ಕಾರ ನಡೆಯುತ್ತಿತ್ತು. ರಾಜ ಯುದ್ಧ ಸಮಯದಲ್ಲಿ ದೇಶದ ಮುಂದಾಳು, ಶಾಂತಿ ಸಮಯದಲ್ಲಿ ನ್ಯಾಯಾಧೀಶ. ಆದರೆ ಅವನು ತನ್ನ ಬುದ್ಧಿವಂತರ ಕೂಟದ ಬುದ್ಧಿವಾದವನ್ನು ಮೀರಲಾರದವನಾಗಿದ್ದ. ಆ ಕೂಟದಲ್ಲಿ ಮಿತ್ರರು, ಮಂತ್ರಿಗಳು, ಮುಖ್ಯ ಅಧಿಕಾರಿಗಳು, ಬಿಷಪ್‌ಗಳು, ಎಲ್ಡರ್‌ಮನ್ ಮುಂತಾದವರು ಇರುತ್ತಿದ್ದರು.

ಆ್ಯಂಗ್ಲೋ–ಸಾಕ್ಸನ್ ಕಾನೂನು: ಷೈರ್ ಮತ್ತು ಹಂಡ್ರೆಡ್‌ಗಳ ನ್ಯಾಯಾಲಯಗಳಿಗೆ ಸಂಪ್ರದಾಯವೇ ಕಾನೂನು. ಆಂಗ್ಲೋ–ಸ್ಯಾಕ್ಸನರಲ್ಲಿ ಒಬ್ಬ ಇನ್ನೊಬ್ಬನಿಗೆ ತೊಂದರೆ ಕೊಟ್ಟಲ್ಲಿ ತೊಂದರೆಗೊಳಗಾದವನು ತಾನಾಗಿಯೇ ಅದನ್ನು ಇತ್ಯರ್ಥಿಸಲು ಸಾಧ್ಯವಿರಲಿಲ್ಲ. ಮೊದಲು ಆತ ತನಗೆ ಸಂಬಂಧಿಸಿದ ಕೋರ್ಟಿನಲ್ಲಿ ದೂರು ಕೊಡಬೇಕಿತ್ತು. ಯಾರು ಪುರಾವೆಯ ಹೊಣೆ ಹೊರಬೇಕೊ ಆತ ತಾನು ಹೇಳಿದ್ದು ಸತ್ಯವೆಂದು ಪ್ರಮಾಣಮಾಡಿ ಅದನ್ನು ದೃಢಪಡಿಸಬೇಕಿತ್ತು. ಬೇರೆಯವರಿಂದ ಪ್ರಮಾಣ ಮಾಡಿಸುವ ಕೆಲಸದಲ್ಲಿ ಯಶಸ್ಸು ಗಳಿಸಿದವನೇ ಗೆಲ್ಲುತ್ತಿದ್ದ. ಇದಕ್ಕೆ ಇಂಗ್ಲಿಷಿನಲ್ಲಿ ವೇಜರ್ ಆಫ್ ಲಾ ಎನ್ನುತ್ತಾರೆ. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಆಪಾದಿತನಾದವರು ಪ್ರಮಾಣ ಮಾಡುವುದಲ್ಲದೆ, ತಾನು ತಪ್ಪು ಮಾಡಿಲ್ಲವೆಂದು ಸ್ಥಿರಪಡಿಸಲು ಕುದಿಯುವ ಎಣ್ಣೆಯಲ್ಲಿ ಕೈಯಿಕ್ಕುವುದೇ ಮೊದಲಾದ ಉಗ್ರಪರೀಕ್ಷೆಗಳಿಗೂ ಒಳಗಾಗುತ್ತಿದ್ದ. ಅವುಗಳಿಂದಾಗಿ ತೊಂದರೆಯಾಗದಿದ್ದರೆ ಆಪಾದಿತ ತಪ್ಪಿತಸ್ಥನಲ್ಲವೆಂದು ತೀರ್ಪು ಮಾಡಲಾಗುತ್ತಿತ್ತು. ಆದರೆ ಆಂಗ್ಲೋ–ಸ್ಯಾಕ್ಸನ್ ನ್ಯಾಯಾಲಯಗಳಿಗೆ ತಮ್ಮ ತೀರ್ಪುಗಳನ್ನು ಜಾರಿ ಮಾಡುವುದಕ್ಕಾಗಲಿ ಆಪಾದಿತರನ್ನು ತನ್ನ ಮುಂದೆ ಬರಮಾಡಿಕೊಳ್ಳುವುದಕ್ಕಾಗಲಿ ಸರಿಯಾದ ಕ್ರಮವಿರಲಿಲ್ಲ. ಕಾನೂನು ಶೈಶವಾವಸ್ಥೆಯಲ್ಲಿತ್ತು.

ಈ ನ್ಯಾಯಾಲಯಗಳ ನ್ಯಾಯಪದ್ಧತಿಗಳು ಇಂಗ್ಲೆಂಡನ್ನು ನಾರ್ಮನ್ನರು ಆಕ್ರಮಿಸುವ ತನಕ ಸಾಗಿದುವು. ಆದರೆ ಆ್ಯಂಗ್ಲೋ–ಸ್ಯಾಕ್ಸನರ ಕಾಲದಲ್ಲಿ ಸಮಗ್ರ ಇಂಗ್ಲೆಂಡಿಗೆ ಏಕರೀತಿಯ ಸಂಪ್ರದಾಯ ನ್ಯಾಯ ಇರಲಿಲ್ಲ.

**ಊಳಿಗಮಾನ್ಯ ವ್ಯವಸ್ಥೆಯಲ್ಲಿ:** ನಾರ್ಮನ್ನರು ಬರುವುದಕ್ಕೆ ಸ್ವಲ್ಪ ಸಮಯದ ಮೊದಲೇ ಊಳಿಗಮಾನ್ಯ ವ್ಯವಸ್ಥೆ ಇಂಗ್ಲೆಂಡಿನಲ್ಲಿ ತಲೆ ಇಕ್ಕಿತು. ಊಳಿಗಮಾನ್ಯ ಪದ್ಧತಿಯಲ್ಲಿ ಪ್ರತಿಯೊಬ್ಬನ ಕರ್ತವ್ಯಗಳೂ ಹಕ್ಕುಗಳೂ ಅವನಿಗೂ ಅವನು ಹೊಂದಿದ್ದ ಭೂಮಿಗೂ ಇದ್ದ ಸಂಬಂಧಕ್ಕೆ ಅನುಗುಣವಾಗಿ ಇರುತ್ತಿತ್ತು. ಊಳಿಗಮಾನ್ಯ ಪದ್ಧತಿಯಲ್ಲಿ ಆಸ್ತಿ ಪಡೆದವ ಯಾವ ಪ್ರಭುವಿನಿಂದ ಅದನ್ನು ಬೇಸಾಯಕ್ಕಾಗಿ ಪಡೆದನೋ ಅವನ ನಂಬಿಕೆಗೆ ಚ್ಯುತಿ ಬಾರದಂತೆ ಆತನಿಗೆ ವಿಧೇಯನಾಗಿ ನಡೆಯಬೇಕಿತ್ತು. ಆತನಿಗೆ ರಕ್ಷಣೆ ನೀಡುವುದು ಆ ಒಡೆಯನ ಹೊಣೆಯಾಗಿತ್ತು. ಇಡೀ ರಾಜ್ಯ ರಾಜನಿಗೆ ಸೇರಿದ್ದಾಗಿತ್ತು. ಅವನಿಂದಲೇ ಭೂಮಿಯನ್ನು ಪಡೆದವರು ಉನ್ನತ ಮಾನ್ಯತೆ ಪಡೆಯಲು ಅರ್ಹರಾಗಿದ್ದರು. ಅವರನ್ನು ಮುಖ್ಯ ಗೇಣಿದಾರರು (ಟೆನೆಂಟ್ಸ್–ಇನ್–ಚೀಫ್) ಎಂದು ಕರೆಯಲಾಗುತ್ತಿತ್ತು. ಆ ಒಡೆಯರೇ ತಮ್ಮ ಭೂಭಾಗದಲ್ಲಿ ನ್ಯಾಯಾಧೀಶರಾಗಿದ್ದರು. ಕರಾಕರ್ಷಣೆ ಇತ್ಯಾದಿಗಳನ್ನು ಮಾಡಲು ಹಕ್ಕುಳ್ಳವರಾಗಿದ್ದರು. ಅವರಿಗೆ ತಮ್ಮದೇ ಆದ ಸೈನ್ಯ, ನ್ಯಾಯಾಲಯ, ಕೋಟೆ, ಭಂಡಾರಗಳಿದ್ದುವು. ಇತರರು ಅವರಿಂದ ಭೂಮಿ ಪಡೆಯುತ್ತಿದ್ದರು. ಹಾಗೆ ಪಡೆದವರು ಅದನ್ನು ಬಳಿಕ ಇನ್ನೊಬ್ಬರಿಗೆ ಕೊಡಬಹುದಿತ್ತು. ತಮ್ಮ ಭೂ ಪ್ರದೇಶಗಳಲ್ಲಿ ನ್ಯಾಯ ಕೊಡುವುದು, ತೆರಿಗೆ ವಸೂಲು ಮಾಡುವುದು ಇತ್ಯಾದಿ ಹಕ್ಕುಗಳು ಅವರಿಗಿದ್ದುವು. ಕೆಳಗಿದ್ದವನು ಅವನ ಮೇಲಿನವರಿಗೆ ಅಧೀನನಾಗಿದ್ದ. ಹೀಗೆ ಕೇಂದ್ರದ ಅಧಿಕಾರ ಒಬ್ಬರ ಮೇಲೆ ಒಬ್ಬರಂತೆ ಹಂತ ಹಂತವಾಗಿ ಪ್ರಬಲರಾದ ಭೂಮಾಲೀಕ ಅಥವಾ ಪ್ರಭುಗಳ ಸ್ವಾಧೀನವಾಯಿತು. ಈ ಮಾನ್ಯಕ್ರಮದಿಂದ ಒಳ್ಳೆಯ ಸರ್ಕಾರಕ್ಕೆ ತೊಂದರೆಯಾದರೂ ಇದು ನಿರಂಕುಶ ಸರ್ಕಾರವನ್ನು ತಪ್ಪಿಸಿತು. ನಾರ್ಮನ್ ರಾಜಮನೆತನ ಒಂದು ರೀತಿಯಲ್ಲಿ ಈ ಪದ್ಧತಿಗೆ ಇನ್ನಷ್ಟು ಬಲ ಕೊಟ್ಟಿತು.

ಆದರೆ ಇದನ್ನು ಹತೋಟಿಯಲ್ಲಿಡಲೂ ಒಂದು ಉಪಾಯ ಮಾಡಿತು. ಹಳೆಯ ಷೈರ್ ಮತ್ತು ಹಂಡ್ರೆಡ್ಸ್ ಕೋರ್ಟ್‌ಗಳನ್ನು ಊರ್ಜಿತವಾಗಿ ಟ್ಟದ್ದಲ್ಲದೆ ಅವನ್ನು ರಕ್ಷಿಸಿದ್ದೇ ಈ ಮನೆತನ ಕೈಕೊಂಡ ಉಪಾಯ.

ನಾರ್ಮನ್ ರಾಜರು ನಿರಂಕುಶರಾಗಿದ್ದರೂ ಅವರು ತಮ್ಮ ಪ್ರಜೆಗಳಲ್ಲಿ ಪ್ರಬಲರಾದವರ ಅನುಮತಿಯಿಲ್ಲದೆ ಕೆಲಸ ಮುಂದುವರಿಸದವರಾಗಿದ್ದರು. ನಾರ್ಮನ ದೊರೆಗಳ ಕಾಲದಲ್ಲಿ ಹಿಂದಿನ ಸಲಹಾಕೂಟಗಳಂತೆ ಗ್ರೇಟ್ ಕೌನ್ಸಿಲ್ ಎಂಬ ಸಭೆಯಿತ್ತು. ಅದು ನಿರ್ವಹಿಸುತ್ತಿದ್ದ ಕೆಲಸಗಳ ಜೊತೆಗೆ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳಲ್ಲಿ ಅತ್ಯುಚ್ಚ ನ್ಯಾಯಾಲಯ ವಾಗಿಯೂ ಕಾರ್ಯನಿರ್ವಹಿಸುತ್ತಿತ್ತು. ನಾರ್ಮನ್ನರ ಕಾಲದಲ್ಲಿ ಪ್ರಧಾನಮಂತ್ರಿಗೆ ಜಸ್ಟಿಷಿಯರ್ ಎಂದು ಹೆಸರಿತ್ತು. ರಾಜ ಇಂಗ್ಲೆಂಡಿನಿಂದ ಹೊರಗೆ ಹೋದಾಗ ಆತನೇ ರಾಜನ ಪ್ರತಿನಿಧಿಯಾಗಿರುತ್ತಿದ್ದ. ಚಾನ್ಸಲರ್ ಎಂಬುವನು ರಾಜ್ಯದ ಕೋಶಾಧಿಕಾರಿಯಾಗಿದ್ದ. ರಾಜ್ಯದ ಪ್ರಮುಖ ಕಾರ್ಯಗಳೆಂದರೆ ನ್ಯಾಯ ಮತ್ತು ಯುದ್ಧ. ಇವುಗಳಿಗಾಗಿ ಒಂದು ಮಂಡಲಿ ಇತ್ತು. ಇದು ಹಣಕಾಸಿನ ವಿಚಾರವಾಗಿ ಕೆಲಸ ಮಾಡುವಾಗ ಎಕ್ಸ್‌ಚೆಕರ್ ಎಂದೂ ನ್ಯಾಯವಿಚಾರವಾಗಿ ಕೆಲಸ ಮಾಡುವಾಗ ಕ್ಯೂರಿಯ ರೀಜಿಸ್ ಅಥವಾ ದೊರೆಯ ನ್ಯಾಯಾಲಯ ಎಂದೂ ಕರೆಯಲಾಗುತ್ತಿತ್ತು.

ವಿಲಿಯಂ ದಿ ಕಾನ್ಕರರ್ ಎಂಬ ದೊರೆ ಹಂಡ್ರೆಡ್ಸ್ ಮತ್ತು ಷೈರ್ ಕೋರ್ಟುಗಳ ತಂಟೆಗೆ ಹೋಗಲಿಲ್ಲ. ಅವು ಒಂದನೆಯ ಎಡ್ವರ್ಡನ ಕಾಲದಲ್ಲಿ ಹೇಗೆ ಕೆಲಸ ಮಾಡುತ್ತಿದ್ದುವೋ ಹಾಗೆಯೇ ಮಾಡಬೇಕೆಂದು ಹೆನ್ರಿ I ನಿಯಮಿಸಿದ. ಅನೇಕ ವ್ಯಕ್ತಿಗಳಿಗೂ ಸಂಸ್ಥೆಗಳಿಗೂ ತಮ್ಮವೇ ಆದ ನ್ಯಾಯಾಲಯಗಳಿದ್ದವು. ಆದರೆ ರಾಜನೇ ಪ್ರಜೆಗಳ ಅತ್ಯುನ್ನತ ನ್ಯಾಯಾಧೀಶ. ಪ್ರಮುಖ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳಲ್ಲಿ ಅವನೇ ತೀರ್ಪು ನೀಡುತ್ತಿದ್ದದ್ದೂ ಇತ್ತು. ನಾರ್ಮನ್ನರ ಕಾಲದಲ್ಲಿ ನ್ಯಾಯವಿಧಾನದಲ್ಲಿ ಕೆಲವು ಪ್ರಮುಖ ಬದಲಾವಣೆಗಳಾದವು. ನ್ಯಾಯ ಮತ್ತು ಕರ ಇಲಾಖೆಗಳು ಪರಸ್ಪರ ಸಂಬಂಧಿ ವಿಭಾಗಗಳು. ಮೊಕದ್ದಮೆಯಲ್ಲಿಯ ಎರಡೂ ಪಕ್ಷದವರೂ ಪ್ರಜೆಗಳಾಗಿದ್ದರೆ ಎಕ್ಸ್‌ಚಕರಿನ ಪ್ರಮುಖ ಅಧಿಕಾರಿ ನ್ಯಾಯ ತೀರ್ಮಾನ ಮಾಡುತ್ತಿದ್ದ. ರಿಟ್ ಆಫ್ ಕ್ಯುಮೊನಿಸ್ ಎಂಬ ನಿರೂಪದ ಮೂಲಕ ಆ ಅಧಿಕಾರಿ ವಿವಾದವನ್ನು ತನ್ನ ಅಂಕೆಗೆ ಒಳಪಡಿಸುತ್ತಿದ್ದ. ಇದೊಂದು ವಿಚಿತ್ರವಾದ ನಿರೂಪ. ಇದರ ಪ್ರಕಾರ ವಾದಿ ರಾಜನಿಗೆ ಹಣ ಕೊಡಬೇಕು ; ಪ್ರತಿವಾದಿ ವಾದಿಗೆ ಹಣ ಕೊಡಬೇಕು. ಕೊಡಬೇಕಾದ್ದನ್ನು ಕೊಡದಿದ್ದುದರಿಂದ ವಾದಿ ಕೊಡಬೇಕಾದ ಹಣ ಬಾಕಿಯಾಯಿತೆಂದು ಪ್ರತಿವಾದಿಯ ಮೇಲೆ ತಪ್ಪು ಹೊರಿಸಲಾಗುತ್ತಿತ್ತು. ಖಜಾನೆಗೆ ಹಣ ಬಾಕಿಯಾದಲ್ಲಿ ಎಕ್ಸ್‌ಚೆಕರಿಗೆ ಹೇಗೂ ನ್ಯಾಯ ತೀರ್ಮಾನಿಸುವ ಹಕ್ಕಿತ್ತು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗುತ್ತಿದ್ದ ರಾಜನ ನ್ಯಾಯಾಲಯಗಳು ಸ್ಥಳೀಯ ನ್ಯಾಯಾಲಯಗಳ ಕೆಲಸಕ್ಕೆ ಅಡ್ಡಿಯಾಗತೊಡಗಿದುವು. ಇದಕ್ಕಾಗಿ ಅವರು ಕ್ಯೂರಿಯ ರೀಜಿಸ್ ಮತ್ತು ರಾಯಲ್ ಕಮೀಷನರ ಸರ್ಕ್ಯೂಟ್‌ಗಳನ್ನು ಉಪಯೋಗಿಸಿಕೊಂಡರು. ರಾಜನಿಗೆ ಸಂಬಂಧಿಸಿದ ಮೊಕದ್ದಮೆಗಳಲ್ಲೂ ಪ್ರಬಲರಾದ ಗೇಣಿದಾರ ಮುಖ್ಯರಿರುವ ಸ್ಥಳೀಯ ನ್ಯಾಯಾಲಯಗಳು ನ್ಯಾಯ ಕೊಡಲು ಅಸಮರ್ಥವಾದಾಗಲೂ ಮತ್ತು ಅನುಮತಿಯಿಂದ ವಿವಾದವನ್ನು ಯಾರಾದರೊಬ್ಬನಿಗೆ ತನ್ನ ತೀರ್ಪಿಗಾಗಿ ತರಲು ಬಿಟ್ಟಾಗಲೂ ಕ್ಯೂರಿಯ ರೀಜಿಸ್ ನ್ಯಾಯ ತೀರ್ಮಾನ ಕೈಗೊಳ್ಳುತ್ತಿತ್ತು; ವಿಶಿಷ್ಟವಾದ ನಿರೂಪವೊಂದರ (ರಿಟ್) ಮುಖಾಂತರ ಸಿವಿಲ್ ಮೊಕದ್ದಮೆಗಳನ್ನು ತನ್ನ ಅಂಕೆಯೊಳಗೆ ತರುತ್ತಿತ್ತು. ಪ್ರತಿವಾದಿ ತಲೆಮರೆಸಿಕೊಂಡು ಅಲೆಯುತ್ತಿರುವನೆಂದು ಈ ನಿರೂಪದಲ್ಲಿ ಆಪಾದಿಸಿ ಈ ರೀತಿ ರಾಜನ ಶಾಂತಿಗೆ ಭಂಗ ತಂದದ್ದರಿಂದ ಆತನನ್ನು ಕೈದು ಮಾಡಿ ರಾಜನ ಕೋರ್ಟಿಗೆ ತರಲಾಗುತ್ತಿತ್ತು. ಕೆಳಗಿನ ಕೋರ್ಟುಗಳಿಗೆ ಆದೇಶ ನೀಡುವ ಹಕ್ಕು ಅದಕ್ಕಿತ್ತು. ಕೆಳಗಿನ ನ್ಯಾಯಾಧೀಶರ ನ್ಯಾಯಾಲಯಗಳಲ್ಲಿದ್ದ ಕಾಗದ ಪತ್ರಗಳನ್ನು ಪರಾಮರ್ಶೆಗಾಗಿ ಅದು ತರಿಸಿಕೊಳ್ಳುತ್ತಿತ್ತು. ಒಂದನೆಯ ಹೆನ್ರಿಯ ಕಾಲದಲ್ಲಿ ಸರ್ಕ್ಯೂಟ್ ಆಫ್ ರಾಯಲ್ ಕಮೀಷನರ್ಸ್ ಆರಂಭವಾಯಿತು. ಈ ಸಂಚಾರಿ ನ್ಯಾಯಾಧೀಶರು ಸ್ಥಳದಿಂದ ಸ್ಥಳಕ್ಕೆ ನಡೆದು ನ್ಯಾಯ ತೀರ್ಮಾನ ಮಾಡುತ್ತಿದ್ದರು. ಇದರಿಂದಾಗಿ ಸಮಗ್ರ ಇಂಗ್ಲೆಂಡಿನಲ್ಲಿ ಒಂದೇ ವಿಧವಾದ ನ್ಯಾಯವ್ಯವಸ್ಥೆ ಇರುವಂತಾಯಿತು. ಇದು ಕೋರ್ಟುಗಳಿಗೂ ರಾಜನಿಗೂ ನಿಕಟ ಸಂಬಂಧವನ್ನೇರ್ಪಡಿಸಿತು. ಕ್ರಮೇಣ ಊಳಿಗಮಾನ್ಯ ಕೋರ್ಟುಗಳು ರಾಜನ ನ್ಯಾಯಾಲಯಗಳ ವಿಸ್ತೃತ ಶಕ್ತಿಯ ಎದುರು ಕಮರಿ ಹೋಯಿತು. ಎರಡನೆಯ ಹೆನ್ರಿಯ ಕಾಲದಲ್ಲಿ ಗ್ಲೆನ್ ವಿಲೆ ಎಂಬುವನು ಜಸ್ಟಿಷಿಯರ್ ಆಗಿದ್ದ. ಆತನ ಕಾಲದಲ್ಲಿ ಸ್ವತಂತ್ರ ಒಕ್ಕಲಿಗನ ಜಮೀನನ್ನು ಬಲಾತ್ಕಾರವಾಗಿ ಪ್ರಭು ಸೆಳೆದ ಪಕ್ಷದಲ್ಲಿ ಆ ಒಕ್ಕಲಿಗನಿಂದ ದೂರು ಬಂದರೆ ಅದನ್ನು ಪ್ರಭುವಿನ ನ್ಯಾಯಾಲಯದಿಂದ ಒಂದು ವಿಶಿಷ್ಟ ನಿರೂಪದ ಮೂಲಕ ತೆಗೆದುಕೊಂಡು ಒಕ್ಕಲಿಗನಿಗೆ ಸರಿಯಾಗಿ ನ್ಯಾಯ ಸಿಕ್ಕುವಂತೆ ವ್ಯವಸ್ಥೆ ಮಾಡುವ ಹಕ್ಕು ರಾಜನ ನ್ಯಾಯಸ್ಥಾನಕ್ಕೆ ಇತ್ತು. ಪೋನ್ ಎಂಬುದು ಆಗ ಜಾರಿಯಲ್ಲಿದ್ದ ಇನ್ನೊಂದು ಬಗೆಯ ನಿರೂಪ. ಅದರ ಮೂಲಕ ರಾಜನ ನ್ಯಾಯಸ್ಥಾನಗಳು ಷೆರೀಫನ ನ್ಯಾಯಾಲಯದಲ್ಲಿದ್ದ ಮೊಕದ್ದಮೆಗಳನ್ನು ತನ್ನ ತೀರ್ಮಾನಕ್ಕೆ ತರಲು ಸಾಧ್ಯವಾಗುತ್ತಿತ್ತು. ಸ್ಥಳೀಕರು ಪ್ರಮಾಣವಚನ ಸ್ವೀಕರಿಸಿ ಸಾಕ್ಷಿ ನುಡಿಯುವ ಕ್ರಮ ಜಾರಿಗೆ ಬಂತು. ಹೀಗೆ ಈತ ತಂದ ಕ್ರಮವೇ ಮುಂದೆ ನ್ಯಾಯದರ್ಶಿಗಳ (ಜ್ಯೂರಿ) ಮುಖಾಂತರ ನ್ಯಾಯ ತೀರ್ಮಾನ ಮಾಡುವ ಕ್ರಮಕ್ಕೆ ಬುನಾದಿಯಾಯಿತು.

ಎರಡನೆಯ ಹೆನ್ರಿಯ ಕಾಲಕ್ಕೆ ಸರ್ಕ್ಯೂಟ್ ಆಫ್ ರಾಯಲ್ ಕಮಿಷನರ್ಸ್ ಶಾಶ್ವತವಾಯಿತು. ಸ್ಥಳೀಯವಾಗಿದ್ದ ನ್ಯಾಯಾಲಯಗಳ ಕಾರ್ಯಗಳಲ್ಲಿ ಇದು ಆಕ್ರಮಣ ಮಾಡಿತು. ಈ ನ್ಯಾಯಾಲಯಗಳು ಸ್ಥಳದಿಂದ ಸ್ಥಳಕ್ಕೆ ಹೋಗಿ ನ್ಯಾಯ ಕೊಡುತ್ತಿದ್ದುವು. ಬೇರೆ ಬೇರೆ ಸ್ಥಳಗಳಲ್ಲಿ ವಿಧವಿಧವಾದ ನ್ಯಾಯ ನೀಡುವ ಬದಲು ಒಂದೇ ರೀತಿಯ ನ್ಯಾಯವ್ಯವಸ್ಥೆಯನ್ನು ಇದು ಅನುಸರಿಸಲಾರಂಭಿಸಿತು.

ನಾರ್ಮನ್ನರ ಕಾಲದಲ್ಲಿ ಟೌನ್‌ಷಿಪ್‌ಗಳು ಮೇನರುಗಳಾದುವು. ಅಲ್ಲಿನ ನಿವಾಸಿಗಳ ಕೂಟವೇ ಅವರ ನ್ಯಾಯಾಲಯವಾಯಿತು. ಮೇನರುಗಳ ಮೇಲೆ ಹಂಡ್ರಡ್ಡುಗಳ ಅಧಿಕಾರ ಈ ಸಮಯದಲ್ಲಿ ಕಳಚಿಹೋಯಿತು. ಹಂಡ್ರಡ್ ನ್ಯಾಯಾಲಯಗಳ ಕೆಲಸ ದಿನದಿನಕ್ಕೆ ದುರ್ಬಲವಾಗತೊಡಗಿತು. ಷೈರುಗಳು ನಾರ್ಮನ್ ಆಕ್ರಮಣವನ್ನು ತಡೆದುಕೊಂಡರೂ ಷೆರಿಫರ ಅಧಿಕಾರ ಮತ್ತು ರಾಜನ ಸಂಚಾರಿ ನ್ಯಾಯಾಲಯದ ಅಧಿಕಾರ ವಿಸ್ತರಿಸಿತು. ನ್ಯಾಯಸಂಬಂಧವಾಗಿ ಷೆರಿಫ್ ರಾಜನ ಪ್ರತಿನಿಧಿಯಾಗಿ ಷೈರ್ ನ್ಯಾಯಾಲಯದ ಕೆಲಸದಲ್ಲಿ ಕೈಹಾಕುತ್ತಿದ್ದ. ಆತ ಅದರ ಅಧ್ಯಕ್ಷ. ಸ್ಥಳೀಯ ನ್ಯಾಯಾಲಯದಿಂದ ತೆಗೆದು ತಂದ ಮೊಕದ್ದಮೆಗಳನ್ನು ಆತ ರಾಜನ ಪ್ರತಿನಿಧಿಯಾಗಿ ವಿಚಾರಿಸುತ್ತಿದ್ದ. ಪಟ್ಟಣಗಳು ಬೆಳೆದುವು. ಸ್ಥಳೀಯ ನ್ಯಾಯಾಲಯಗಳಿಗೆ ಮನ್ನಣೆ ದೊರಕಿತು.

ವಿಲಿಯಂ ದಿ ಕಾನ್ಕರರಿನ ಕಾಲದಲ್ಲಿ ಸಿವಿಲ್ ಕೋರ್ಟುಗಳು ಧರ್ಮೀಯ ನ್ಯಾಯಾಲಯಗಳಿಂದ ಬೇರ್ಪಟ್ಟವು. ಮೊದಲು ಬಿಷಪ್ ಷೆರೀಫನೊಂದಿಗೆ ಕುಳಿತು ನ್ಯಾಯ ಕೊಡುತ್ತಿದ್ದರೆ ಈಗ ಅವನದೇ ಸ್ವತಂತ್ರ ನ್ಯಾಯಾಲಯವಾಯಿತು. ಅಲ್ಲಿ ಧರ್ಮಕ್ಕೆ ಸಂಬಂಧಪಟ್ಟ ತಪ್ಪುಗಳ ಇತ್ಯರ್ಥವಾಗುತ್ತಿತ್ತು. ಕಡೆಗೆ ಚರ್ಚಿಗೆ ಸೇರಿದ ಧರ್ಮಗುರುಗಳ ತಪ್ಪನ್ನು ಇತ್ಯರ್ಥಿಸುವ ಹಕ್ಕು ಅವರಿಗೆ ಸೇರಿತು. ಅಲ್ಲಿ ಸಂಪ್ರದಾಯನ್ಯಾಯವನ್ನು ಜಾರಿ ಮಾಡದೆ ಮತೀಯ ನ್ಯಾಯವನ್ನು (ಕ್ಯಾನನ್ ಲಾ) ಜಾರಿ ಮಾಡಲಾಗುತ್ತಿತ್ತು. ಆದರೆ ಕಾನ್ಕರರ್ ವಿಲಿಯಂ ಬಿಷಪ್ ಮುಂತಾದವರನ್ನು ಹಿಡಿತದಲ್ಲಿ ಇರಿಸಿಕೊಳ್ಳಲು ಸಾಕಷ್ಟು ಶ್ರಮವಹಿಸಿದ್ದ. ಒಂದನೆಯ ಮತ್ತು ಎರಡನೆಯ ವಿಲಿಯಮರೂ ಒಂದನೆಯ ಹೆನ್ರಿಯೂ ಇಂಗ್ಲಿಷ್ ಶ್ರೀಮಂತ ವರ್ಗವನ್ನು ತಮ್ಮ ಅಂಕೆಯಲ್ಲಿಡುವಷ್ಟು ಬಲಿಷ್ಠರಾಗಿದ್ದರು. ಸ್ಟೀಫನ್ನನ ಕಾಲದಲ್ಲಿ ಅರಸರ ಅಂಕೆ ತಪ್ಪಿ ಮತ್ತೆ ಶ್ರೀಮಂತರು ಬಲಿಷ್ಠರಾದರು. ಇವರು ಹೆಚ್ಚಿನ ಮಟ್ಟಿಗೆ ಇಂಗ್ಲಿಷರಾಗಿದ್ದರು.

ಎರಡನೆಯ ಹೆನ್ರಿ ಬುದ್ಧಿವಂತ. ಒಂದನೆಯ ಹೆನ್ರಿಯಂತೆ ಅವನೂ ಕಟ್ಟು ನಿಟ್ಟಾದ ನ್ಯಾಯವ್ಯವಸ್ಥೆ ಸ್ಥಾಪಿಸಿದ: ಯಾರೇ ಆಗಲಿ, ರಾಜನ ನ್ಯಾಯಾಲಯಕ್ಕೆ ಬಗ್ಗುವಂತೆ ಮಾಡಿದ. ಪ್ರತಿಯೊಬ್ಬ ಪ್ರಭುವೂ ಆತನಿರುವಲ್ಲಿಗೆ ನ್ಯಾಯಾಲಯ ಆಗಮಿಸಿದಾಗ ಅದನ್ನು ಸ್ವಾಗತಿಸಬೇಕಿತ್ತು. ಸ್ವಾಧೀನವಿರುವ ಅಪರಾಧಿಯನ್ನು ಹಿಡಿಯಲು ಬಂದಾಗ ಪ್ರಭುಗಳು ಅವರಿಗೆ ಸಹಾಯ ಮಾಡಬೇಕಿತ್ತು. ಇದರಿಂದಾಗಿ ರಾಜನ ನ್ಯಾಯ ಎಲ್ಲದಕ್ಕಿಂತ ಮಿಗಿಲಾಗಿ ನಿಂತಿತು. ಅದು ನ್ಯಾಯದ ವಿಚಾರದಲ್ಲಿ ಎಲ್ಲರೂ ಒಂದೇ ಎಂಬ ಭಾವನೆಯನ್ನು ತಂದಿತು. ಅವನು ಚರ್ಚುಗಳ ನ್ಯಾಯಪಾಲನೆಯನ್ನು ಹತೋಟಿಗೆ ತರಲು 1164ರಲ್ಲಿ ಕ್ಲಾರೆಂಡನ್ ಸಂವಿಧಾನವೆಂಬ ನಿಯಮಾವಳಿ ತಂದ. ಆದರೆ ಆತನ ಪ್ರಯತ್ನ ಪೂರ್ಣ ಫಲಪ್ರದವಾಗಲಿಲ್ಲ. ಆತನ ಕಾಲದಲ್ಲಾದ ಅನೇಕ ಕಾನೂನುಗಳು ಸಾಮನ್ಯ ಜನತೆಯ ಏಳ್ಗೆಯನ್ನು ತುಂಬ ಸಾಧಿಸಿದುವು.

ಸ್ಟೀಫನ್ ಮತ್ತು ಮೆಟಿಲ್ಡಾರ ಯಾದವೀ ಕಲಹ ನಾರ್ಮನ್ನರ ಕಾಲದಲ್ಲಿ ಕಟ್ಟಿದ ನ್ಯಾಯಕ್ರಮವನ್ನು ಹಾಳುಮಾಡಿತು. ಎರಡನೆಯ ಹೆನ್ರಿ ಅವುಗಳನ್ನು ತಿರುಗಿ ಸ್ಥಾಪಿಸಿ, ವಿಸ್ತಾರಗೊಳಿಸಿ ಕ್ರಮಗೊಳಿಸಿದ. ಆತನ ಕಾಲದಲ್ಲಿ ಕ್ಯೂರಿಯ ರೀಜಿಸ್ ಎಲ್ಲ ಕೋರ್ಟುಗಳ ಕೆಲಸವನ್ನೂ ಸೆಳೆದುಕೊಂಡಿತು. ಅವುಗಳ ನ್ಯಾಯಕ್ರಮ ಸುಧಾರಿತವೂ ಪರಿಣಾಮಕಾರಿಯೂ ಆಗಿತ್ತು. ಆತ 1178ರಲ್ಲಿ ಐದು ಜನ ನ್ಯಾಯಾಧೀಶರ ಸಮಿತಿ ಮಾಡಿ ಅದಕ್ಕೆ ನ್ಯಾಯತೀರ್ಮಾನದ ಸಾಮಾನ್ಯ ಕೆಲಸಗಳನ್ನೆಲ್ಲ ಕೊಟ್ಟ. ಹೆಚ್ಚಿನ ಮಹತ್ತ್ವದ ವ್ಯವಹಾರಗಳಲ್ಲಿ ಮಾತ್ರ ಆತ ಕೈಯಿಕ್ಕುತ್ತಿದ್ದ. ಹೀಗೆ ರೋಮನ್ ನ್ಯಾಯ ಜಾರಿ ಮಾಡುವ ಅತಿ ಪ್ರಾಚೀನವಾದ ಮೂರು ಪ್ರಮುಖ ನ್ಯಾಯಾಲಯಗಳಲ್ಲಿ ಒಂದಾದ ಕೋರ್ಟ್ ಆಫ್ ಕಾಮನ್ ಪ್ಲೀಸ್ ಆರಂಭವಾಯಿತು. ಆತನ ಕಾಲದಲ್ಲಿ ಸಂಚಾರಿ ನ್ಯಾಯಾಲಯಗಳ ಅಧಿಕಾರ ಹೆಚ್ಚಿತು. ಷೆರಿಫನ ಅಧಿಕಾರ ಕಮ್ಮಿಯಾಗುತ್ತ ನಡೆಯಿತು. ಕಡೆಗೆ ಆತ ಎಲ್ಲ ಷೆರಿಫರನ್ನೂ ತೆಗೆದು ಹಾಕಿದ. ರಾಜನ ನ್ಯಾಯಾಲಯಗಳು ಬೇರೆ ನ್ಯಾಯಾಲಯಗಳನ್ನು ಬದಿಗಿರಿಸುವ ಕೆಲಸವನ್ನು ವಿವಿಧ ನಿರೂಪಗಳ (ರಿಟ್) ಮುಖಾಂತರ ಸಾಧಿಸಿದುವು. ಈ ನಿರೂಪಗಳು ಹುಟ್ಟಿ ಸಂಪ್ರದಾಯನ್ಯಾಯವನ್ನು ತಂದಿತೆಂದು ಹೋಲ್ಡ್‌ವರ್ತ್ ಹೇಳುತ್ತಾನೆ. ಈ ಸಾಧನೆಯ ಕಾಲ ಪ್ರ.ಶ. 1150 ರಿಂದ 1250. ಗ್ರಾಂಡ್ ಜ್ಯೂರಿ ಕ್ರಮ 1666ರಲ್ಲಿ ಆರಂಭವಾಯಿತು. ಅವರು ಆಪಾದಿತನನ್ನು ತಂದು ತಪ್ಪನ್ನು ಅವನ ಮೇಲೆ ಹೊರಿಸುತ್ತಿದ್ದರು. ಆಪಾದಿತನಾದವ ಉಗ್ರ ವಿಚಾರಣೆಗೆ ಒಳಗಾಗುತ್ತಿದ್ದ. ಅದರಲ್ಲಿ ಸೋತರೆ ಅವನಿಗೆ ಶಿಕ್ಷೆ ಕೊಡಲಾಗುತ್ತಿತ್ತು. 1215ರಲ್ಲಿ ಉಗ್ರ ಶಿಕ್ಷಾಕ್ರಮ ನ್ಯಾಯಬಾಹಿರವೆಂದು ಸಾರಲಾಯಿತು. ಅದರ ಬದಲಾಗಿ ಈಗ ಇರುವಂತೆ ಪೆಟಿ ಜ್ಯೂರಿ ಕ್ರಮ ಜಾರಿಗೆ ಬಂತು.

ಒಂದೂರಿನಿಂದ ಇನ್ನೊಂದೂರಿಗೆ ರಾಜನ ನ್ಯಾಯಾಲಯ ಹೋಗುತ್ತಿದ್ದುದರಿಂದ ಜನರಿಗೆ ತುಂಬ ತೊಂದರೆಯಾಗುತ್ತಿತ್ತು. ನ್ಯಾಯಕ್ಕಾಗಿ ಜನ ನ್ಯಾಯಾಲಯ ಹೋದಲ್ಲಿಗೆಲ್ಲ ಹೋಗಬೇಕಾಗುತ್ತಿತ್ತು. 1215ರಲ್ಲಿ ಜಾನ್ ದೊರೆಯಿಂದ ಪಡೆದ ಮಹಾಸನ್ನದು ಇದನ್ನು

ಸರಿಪಡಿಸಿತು. ಕೋರ್ಟ್ ಆಫ್ ಕಾಮನ್ಸ್ ಪ್ಲೀಸ್ ಒಂದೇ ಕಡೆಗೆ ನಿಂತು ನ್ಯಾಯ ಕೊಡುವಂತೆ ಅದರಲ್ಲಿ ಸವಲತ್ತು ಕೊಡಲಾಗಿತ್ತು. ಅದರಂತೆ ಕೋರ್ಟು ವೆಸ್ಟ್‌ಮಿನಿಸ್ಟರಿನಲ್ಲಿ ನೆಲೆ ನಿಂತು ನ್ಯಾಯ ಕೊಡತೊಡಗಿತು. ಕ್ಯೂರಿಯ ರೀಜಿಸ್‌ನೊಂದಿಗೆ ಇದ್ದ ಅದರ ಸಂಬಂಧ ಕಳಚಿತು. ಈ ಸನ್ನದಿನ ಇನ್ನೊಂದು ಕಲಮಿನ ಪ್ರಕಾರ ಸ್ಥಿರ ಆಸ್ತಿಗೆ ಸಂಬಂಧಿಸಿದ ವ್ಯವಹಾರದ ತಕ್ಸೀರುಗಳನ್ನು ತೀರ್ಮಾನಿಸಲು ನ್ಯಾಯಾಧೀಶರು ವರ್ಷಕ್ಕೆ ನಾಲ್ಕು ಬಾರಿ ಪರಿಭ್ರಮಣೆ ಗೈಯಬೇಕಿತ್ತು.

ಒಂದನೆಯ ಎಡ್ವರ್ಡ್ ಚರ್ಚ್ ನ್ಯಾಯಾಲಯಗಳ ನ್ಯಾಯತೀರ್ಮಾನದ ಹಕ್ಕನ್ನು ಕಡಿಮೆ ಮಾಡಲು ಯತ್ನಿಸಿದ. ಅವರಿಗೆ ಧರ್ಮಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಮಾತ್ರ ತೀರ್ಮಾನಿಸುವ ಹಕ್ಕು ಕೊಡಲಾಗಿತ್ತು. ಚರ್ಚಿಗೆ ಸಂಬಂಧಿಸಿದ ಜನರ ಅಪರಾಧವನ್ನು ತೀರ್ಮಾನಿಸುವ ಹಕ್ಕೂ ಉಳಿದಿತ್ತು. ಕಾಮನ್ ಪ್ಲೀಸಿನ ಕೋರ್ಟು, ಕ್ಯೂರಿಯ ರೀಜಿಸ್ ನ್ಯಾಯಾಲಯಗಳು ಮತ್ತು ಎಕ್ಸ್‌ಚೆಕರ್ ಇವು ಸ್ವತಂತ್ರವಾಗಿ ಒಂದಕ್ಕೊಂದು ಸಂಬಂಧವಿಲ್ಲದೆ ಅವನ ಕಾಲದಲ್ಲಿ ಕೆಲಸ ಮಾಡತೊಡಗಿದುವು. ಅವುಗಳಿಗೆ ಆಡಳಿತದ ಹಕ್ಕು ಇರಲಿಲ್ಲ. ಎಕ್ಸ್‌ಚೆಕರ್ ಕೋರ್ಟಿಗೆ ರಾಜನ ಬೊಕ್ಕಸದ ವಿಚಾರದಲ್ಲಿಯ ವ್ಯವಹಾರಗಳನ್ನು ಕೈಗೊಳ್ಳುವ ಹಕ್ಕು ಇತ್ತು. ಒಂದನೆಯ ಎಡ್ವರ್ಡನ ಕಾಲದಲ್ಲಿ ರಾಜನ ನ್ಯಾಯ ಸುಭದ್ರವಾಗಿ ನಿಂತಿತು.

ಪ್ರಮುಖ ವ್ಯವಹಾರಗಳಲ್ಲಿ ತೀರ್ಮಾನ ಕೊಡುವ ಹಕ್ಕುಗಳನ್ನು ರಾಜ ಇಟ್ಟುಕೊಂಡಿದ್ದ. ಚಾನ್ಸಲರನ ಮುಖಾಂತರ ಅವನಿಂದ ನ್ಯಾಯ ಬಯಸಿ ಅವನಿಗೆ ಅರ್ಜಿ ಕೊಡಬಹುದಿತ್ತು. ರಾಜನಿಗೆ ನ್ಯಾಯ ತೀರ್ಮಾನದಲ್ಲಿ ಸಹಾಯ ಮಾಡಲು ಅವನ ಪರಿವಾರದವರು, ಅಧಿಕಾರಿಗಳು, ನ್ಯಾಯಾಧೀಶರು ಮುಂತಾದವರನ್ನು ಒಳಗೊಂಡ ಒಂದು ಸಮಿತಿಯಿತ್ತು. ಕಟ್ಟಕಡೆಗೆ ಇದೇ ಸಮಿತಿ ಪ್ರೀವಿ ಕೌನ್ಸಿಲ್ ಆಗಿ ಮಾರ್ಪಟ್ಟಿತು.

ಪೂರ್ವನಿದರ್ಶನಗಳು : ರಾಜನ ನ್ಯಾಯಸ್ಥಾನಗಳು ಕೊಡುತ್ತಿದ್ದ ನ್ಯಾಯಗಳೆಲ್ಲ ಅತಿ ಪ್ರಾಚೀನವಾಗಿ ನಡೆದು ಬಂದ ಪದ್ಧತಿಗಳ ಪ್ರಕಾರವೆಂದು ಹೇಳಲಾಗುತ್ತಿತ್ತು. ವಾಸ್ತವವಾಗಿ ಅವರು ಮಾಡುತ್ತಿದ್ದದ್ದು ಹೊಸ ಕಾಯಿದೆಗಳ ಸೃಷ್ಟಿ. ಅವರ ನ್ಯಾಯ ನಿರ್ಣಯದಲ್ಲಿ ಇಂಗ್ಲಿಷ್, ನಾರ್ಮನ್ ಇತ್ಯಾದಿ ಜನಾಂಗಗಳ ಪದ್ಧತಿಗಳು ಅನೇಕ ಕಡೆಗಳಲ್ಲಿ ಕಂಡುಬಂದಿವೆ. ರೋಮನ್ ನ್ಯಾಯವನ್ನು ಅವರು ಅಕ್ಷರಶಃ ತೆಗೆದುಕೊಳ್ಳದಿದ್ದರೂ ಅದನ್ನೂ ಬಳಸಿದ ನಿದರ್ಶನಗಳೂ ಇವೆ. ಸಂದರ್ಭಕ್ಕೆ ತಕ್ಕಂತೆ ಯಾವುದು ನ್ಯಾಯ ಕಾಣುತ್ತಿತ್ತೋ ಅದನ್ನು ಅವರು ಅನುಸರಿಸುತ್ತಿದ್ದರು.

ಇದರಿಂದಾಗಿ ಹಿಂದೆ ಮಾಡಿದ ತೀರ್ಪುಗಳು (ಪೂರ್ವನಿದರ್ಶನ) ಕಾನೂನಾಗಿ ಮಾರ್ಪಟ್ಟವು. ಒಂದೇ ರೀತಿಯ ಸಂಗತಿಗಳು ತನಿಖೆಗೆ ಬಂದಾಗ ಹಿಂದೆ ಅದೇ ಸಂದರ್ಭದಲ್ಲಿ ಕೊಟ್ಟ ತೀರ್ಪುಗಳನ್ನು ಮುಖ್ಯ ನ್ಯಾಯಾಲಯವೂ ಅದರ ಕೆಳಗಿನ ನ್ಯಾಯಾಲಯಗಳೂ ಅನುಸರಿಸದೆ ನಿರ್ವಾಹವಿರಲಿಲ್ಲ. ಇವು ಈಗಲೂ ಆಚರಣೆಯಲ್ಲಿರುವ ಪೂರ್ವನಿದರ್ಶನಗಳು (ಪ್ರಿಸಿಡೆಂಟ್ಸ್)ಗಳು, ಮೊಕದ್ದಮೆನ್ಯಾಯಗಳು (ಕೇಸ್ ಲಾ) ಇವುಗಳ ಮೂಲ. ಪೂರ್ವನಿದರ್ಶನಗಳು ನೆಲೆಗೊಳಿಸಿದ ನ್ಯಾಯಗಳು ಬರಬರುತ್ತ ಬೆಳೆದುವು. ಇವುಗಳ ಕ್ರೋಡೀಕರಣ ಅಗತ್ಯವಾಯಿತು. ಒಂದನೆಯ ಎಡ್ವರ್ಡನ ಕಾಲದ ಲಾಗಾಯಿತು ನಮಗೆ ಇಂಥ ಕ್ರೋಡೀಕರಣಗಳು ದೊರೆಯುತ್ತವೆ. ನ್ಯಾಯಾಧೀಶರು ಕಾನೂನನ್ನು ಈ ರೀತಿ ವೃದ್ಧಿಪಡಿಸಲು ಸಮರ್ಥರಾಗಿದ್ದರೂ ಅವರಿಗೆ ಹಿಂದಿನ ತೀರ್ಪುಗಳಿಂದ ಉದ್ಭವಿಸಿದ ಹೊಸ ನ್ಯಾಯಗಳನ್ನು ಕೊಡಲು ಹಕ್ಕಿರಲಿಲ್ಲ. ಹೊಸ ಕಾನೂನನ್ನು ಕೊಡುವುದು ಶಾಸನಸಭೆಗಳ ಕೆಲಸ. ಇದರಿಂದಾಗಿ ಸಂಪ್ರದಾಯನ್ಯಾಯದ ಉಪಯೋಗ ಕುಂಠಿತವಾಯಿತು. ಸಂಪ್ರದಾಯ ನ್ಯಾಯ (ಕಾಮನ್ ಲಾ) ತುಂಬಲಾರದ ಸ್ಥಳವನ್ನು ಎಕ್ವಿಟಿ ಅಥವಾ ಸಾಮ್ಯನ್ಯಾಯ ತುಂಬಿತು.

ಸಾಮ್ಯನ್ಯಾಯ: ಕಿಂಗ್ಸ್ ಬೆಂಚ್, ಕಾಮನ್ ಪ್ಲೀಸಿನ ಕೋರ್ಟು, ಎಕ್ಸ್‌ಚೆಕರ್ – ಇವು 13ನೆಯ ಶತಮಾನದ ಅಂತ್ಯದಲ್ಲಿ ಇದ್ದ ಪ್ರಮುಖ ನ್ಯಾಯಾಲಯಗಳು. ಇವುಗಳೆಲ್ಲ ಪರಂಪರಾಗತವಾಗಿ ಬಂದ ಸಂಪ್ರದಾಯಮೂಲವಾದ ನ್ಯಾಯವನ್ನು ಜಾರಿ ಮಾಡುತ್ತಿದ್ದುವು. ಇವುಗಳೆಲ್ಲ ಒಂದಲ್ಲ ಒಂದು ನಿರೂಪದ (ರಿಟ್) ಮುಖಾಂತರವೇ ಆಗಬೇಕಿತ್ತು. ದೊರೆಯ ನ್ಯಾಯಾಲಯಗಳಲ್ಲಿ ನ್ಯಾಯ ಸಿಕ್ಕಬೇಕಾದರೆ ಪರಿಹಾರ ಪಡೆಯಬೇಕಾಗಿದ್ದಾತ ಕೇಳುವ ನಿವೃತ್ತಿಯನ್ನು ಯಾವುದಾದರೊಂದು ರಿಟ್ ಅಥವಾ ನಿರೂಪದ ಒಳಗೆ ಬರುವಂತೆ ಮಾಡಬೇಕಿತ್ತು. ನಿರೂಪ ಇಲ್ಲದಲ್ಲಿ ನ್ಯಾಯ ಅವನಿಗೆ ದೊರೆಯಲು ಅಸಾಧ್ಯವಾಗಿತ್ತು. ಸಂಪ್ರದಾಯನ್ಯಾಯದಲ್ಲಿ ಅನೇಕ ಕುಂದುಗಳಿದ್ದುವು. ಅವುಗಳ ಪ್ರಕಾರ ಎಲ್ಲ ವಿಚಾರಗಳಲ್ಲೂ ನ್ಯಾಯ ದೊರಕುತ್ತಿರಲಿಲ್ಲ. ಅವು ಕೊಡುತ್ತಿದ್ದ ನಿವೃತ್ತಿಗಳು ಅನೇಕ ಸಂದರ್ಭಗಳಲ್ಲಿ ಸರಿಯಾದ್ದಕ್ಕಿಂತ ಕಮ್ಮಿಯಾಗುತ್ತಿದ್ದುವು. ಅಲ್ಲಿ ನ್ಯಾಯವಿಧಾನ (ಪ್ರೊಸೀಜರ್) ಸೂಕ್ತವಾಗಿರಲಿಲ್ಲ. ಇವುಗಳನ್ನು ಪರಿಹರಿಸಲು ಸಾಮ್ಯನ್ಯಾಯ ಬಂತು.

ಶಕ್ತಿಯುತರಾದ ವ್ಯವಹಾರದಾರರು ಲಂಚರುಶುವತ್ತುಗಳಿಂದ ಅಥವಾ ಹೆದರಿಕೆ ಹಾಕಿ ಸಂಪ್ರದಾಯನ್ಯಾಯದ ನ್ಯಾಯದರ್ಶಿಗಳಿಂದ (ಜ್ಯೂರಿ) ತಮಗೆ ಬೇಕಾದ ತೀರ್ಪುಗಳನ್ನು ಪಡೆಯುತ್ತಿದ್ದರು. ಇದರಿಂದಾಗಿ ಸಂಪ್ರದಾಯನ್ಯಾಯಾಲಯಗಳಿಂದ ವಂಚಿತರಾದವರು ರಾಜನಿಗೆ ಅಥವಾ ಅವನ ಮಂತ್ರಿಸಭೆಗೆ ತಮ್ಮ ವ್ಯವಹಾರದ ವಿಚಾರಗಳನ್ನು ಹೇಳಿಕೊಂಡು ದೂರು ಕೊಡುವ ಕ್ರಮ ಬಂತು. ಅವುಗಳನ್ನು ತನಿಖೆ ಮಾಡಲು ಚಾನ್ಸಲರ್ (ಎಕ್ಸ್‌ಚೆಕರಿನ ಪ್ರಮುಖ ಅಧಿಕಾರಿ), ಚಾನ್ಸರಿಯ ಬೇರೆ ಅಧಿಕಾರಿಗಳು, ಪ್ರಮುಖವಾಗಿ ಮಾಸ್ಟರ್ ಆಫ್ ರೋಲ್ಸ್ ಇವರಿದ್ದರು. ಚಾನ್ಸಲರ್ ಈ ಮೊದಲೇ ಎಕ್ಸ್‌ಚೆಕರಿನ ಮುಖ್ಯನಾಗಿ ಸಂಪ್ರದಾಯವನ್ನು ಚಲಾಯಿಸುವ ಹಕ್ಕು ಪಡೆದಿದ್ದ. ಒಂದನೆಯ ಎಡ್ವರ್ಡನ ಕಾಲದಲ್ಲಿ ಅರ್ಜಿಗಳನ್ನು ರಾಜನ ಮಂತ್ರಿಸಭೆ ಚಾನ್ಸಲರನಿಗೆ ಕಳುಹುತ್ತಿತ್ತು. ಈ ಕ್ರಮದಿಂದ ಚಾನ್ಸರಿಯ ಹಕ್ಕು ನಿರ್ಮಿತವಾದಂತೆ ಕಾಣುತ್ತದೆ. ಬರಬರುತ್ತ ಅರ್ಜಿಗಳನ್ನು ಚಾನ್ಸಲರನಿಗೆ ಕೊಡುವ ರೂಢಿ ಬಂತು. ಚಾನ್ಸಲರ್ ರಾಜನ ಆತ್ಮಸಾಕ್ಷಿಯ ನಿರ್ವಾಹಕ (ಕೀಪರ್ ಆಫ್ ಕಿಂಗ್ಸ್ ಕಾನ್ಷನ್ಸ್). ಯಾರ ಮೇಲಾದರೂ ಅರ್ಜಿ ಬಂದಲ್ಲಿ ಆತ ಹಾಜರಾಗುವಂತೆ ಚಾನ್ಸಲರ್ ಆತನಿಗೆ ನಿರೂಪ ಕೊಡುತ್ತಿದ್ದ. ಅವನು ಬಂದು ಅದಕ್ಕೆ ಸರಿಯಾಗಿ ಉತ್ತರವೀಯದಿದ್ದಲ್ಲಿ ಚಾನ್ಸಲರ್ ತನಗೆ ನ್ಯಾಯವೆಂದು ತೋರಿದಂತೆ ಮಾಡುತ್ತಿದ್ದ. ಸಂಪ್ರದಾಯನ್ಯಾಯದ ಕೋರ್ಟುಗಳಲ್ಲಿರುವ ಮೊಕದ್ದಮೆಯನ್ನು ಮುಂದುವರಿಸಕೂಡದೆಂದೂ ತೀರ್ಪು ಪಡೆಯಕೂಡದೆಂದೂ ಆಜ್ಞೆ ಕೊಡುತ್ತಿದ್ದ. ಅದಕ್ಕೆ ತಪ್ಪಿದಲ್ಲಿ ದಂಡ, ಕಾರಾಗೃಹವಾಸ ವಿಧಿಸುವ ಹಕ್ಕು ಆತನಿಗಿತ್ತು.

ಸಾಮ್ಯನ್ಯಾಯವೆಂದರೆ ಸರಿಸಮಾನತೆ (ಈಕ್ವಾಲಿಟಿ), ನ್ಯಾಯ (ಜಸ್ಟಿಸ್) ಮತ್ತು ನೀತಿಯುಕ್ತತೆ (ಫೇರ್‌ನೆಸ್), ಅದು ಸಹಜ ನ್ಯಾಯ ಅಥವಾ ಸ್ವಾಭಾವಿಕ ನ್ಯಾಯ (ನ್ಯಾಚುರಲ್ ಜಸ್ಟಿಸ್.) ಇದು ನ್ಯಾಯಸ್ಥಾನಗಳು ಜಾರಿ ಮಾಡಲು ತಕ್ಕುದಾದ ಸಹಜನ್ಯಾಯವಾಗಿದ್ದರೂ ಚಾರಿತ್ರಿಕ ಕಾರಣಗಳಿಂದ ಸಂಪ್ರದಾಯ ನ್ಯಾಯಾಲಯಗಳು ಜಾರಿ ಮಾಡಲು ಸಾಧ್ಯವಿಲ್ಲದ್ದು. ಇಂಥದನ್ನು ಚಾನ್ಸರಿ ನ್ಯಾಯಾಲಯ ಜಾರಿ ಮಾಡಿದೆ ಎಂದು ಸ್ನೆಲ್ ಹೇಳುತ್ತಾನೆ. ನ್ಯಾಯ ಮತ್ತು ಸಾಮ್ಯವನ್ನು 1873 ಮತ್ತು 1875ರ ನ್ಯಾಯವ್ಯವಸ್ಥೆಯ ಕಾಯಿದೆಗಳು (ಜುಡಿಕೇಚರ್ ಆ್ಯಕ್ಟ್) ಸರಿಹೊಂದಿಸುವ ಮೊದಲೇ ಚಾನ್ಸರಿ ನ್ಯಾಯಾಲಯಗಳು ಜಾರಿಮಾಡುತ್ತಿದ್ದ ನ್ಯಾಯಕ್ಕೆ ಎಕ್ವಿಟಿ ಅಥವಾ ಸಾಮ್ಯನ್ಯಾಯವೆಂದು ಹೇಲ್ಸ್ ಹೇಳುತ್ತಾನೆ.

ಇದರ ಪ್ರಧಾನ ಕೆಲಸವೆಂದರೆ ಸಹಜನ್ಯಾಯ ಕೊಡುವುದು. ಆತ್ಮಸಾಕ್ಷಿ, ಕಾರಣ ಮತ್ತು ನ್ಯಾಯದಲ್ಲಿ ಒಳ್ಳೆಯ ನಂಬಿಕೆ – ಇವುಗಳನ್ನು ಎಕ್ವಿಟಿ ನ್ಯಾಯಾಲಯಗಳು ತಮ್ಮ ಮೂಲತತ್ತ್ವಗಳನ್ನಾಗಿ ಇಟ್ಟುಕೊಂಡಿದ್ದುವೆಂದು ಆದಿಯಲ್ಲಿ ನಂಬಲಾಗಿತ್ತು. ಅದು ಸರ್ವಸಾಮಾನ್ಯವಾಗಿ ನ್ಯಾಯ ಅನ್ಯಾಯಗಳ ವಿಚಾರದಲ್ಲಿ ಜನರಿಗಿರುವ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತದೆಂದು ತಿಳಿಯಲಾಗಿತ್ತು. ಅದುವರೆಗೆ ಸ್ವೀಕೃತವಾಗಿದ್ದ ನ್ಯಾಯವನ್ನೇ ಕೊಡುತ್ತಿದ್ದುವೆಂದು ಪರಿಗಣಿಸಲಾಗಿದ್ದರೂ ವಾಸ್ತವವಾಗಿ ಆ ನ್ಯಾಯಾಲಯಗಳು ಹೊಸ ಹೊಸ ಮೂಲಗಳಿಂದ ತಮ್ಮ ತೀರ್ಪನ್ನು ಸಮರ್ಥಿಸಿವೆ.

ಸಾಮ್ಯನ್ಯಾಯ ಮಾಡಿದ ಕೆಲಸವನ್ನು ಸಂಕ್ಷಿಪ್ತವಾಗಿ ಜೆ. ಎಲ್. ಬ್ರಿಯರನ ಮಾತಿನಲ್ಲಿ ಹೀಗೆ ಹೇಳಬಹುದು : ಸಾಮ್ಯನ್ಯಾಯ ಕಾನೂನಿಗೆ ನ್ಯಾಸ (ಟ್ರಸ್ಟ್)ವಿಚಾರವಾದ ಸಮಗ್ರನ್ಯಾಯವನ್ನು ಅಳವಡಿಸಿತು : ಅದು ಭೋಗ್ಯಗಳ (ಮಾರ್ಟ್‌ಗೇಜ್) ವಿಚಾರವಾಗಿ ಕಾನೂನಿನಲ್ಲಿ ಮಾರ್ಪಾಡು ತಂದಿತು. ಕರಾರುಗಳ ಹಕ್ಕುಗಳನ್ನು ಇನ್ನೊಬ್ಬರಿಗೆ ಕೊಡಲು ಸಾಧ್ಯವಿರುವಂತೆಯೂ ಮೋಸ ತಪ್ಪುಗಳಿಂದ ಆದ ಕರಾರುಗಳಿಗೆ ಇರುವ ನಿವಾರಣೆ ಉತ್ತಮಗೊಳ್ಳುವಂತೆಯೂ ಸಾಧಿಸಿತು. ಸಂಪ್ರದಾಯನ್ಯಾಯದಲ್ಲಿ ಕೊಡುತ್ತಿದ್ದ ನಿವೃತ್ತಿಗಳ ವಿಧಾನಗಳಲ್ಲಿ ಹೆಚ್ಚು ಸುಧಾರಣೆ ತಂದಿತು. ಉದಾಹರಣೆಗಾಗಿ ಕರಾರುಗಳನ್ನು ಮುರಿದಲ್ಲಿ ಬರಿ ನಷ್ಟ ಕೊಡುವುದು ಮಾತ್ರವಲ್ಲದೆ ಕರಾರಿನಂತೆ ನಡೆಯುವಂತೆ (ಸ್ಪೆಸಿಫಿಕ್ ಪರ್ಫಾರ್ಮೆನ್ಸ್) ಮಾಡಲು ತಪ್ಪು ಕೆಲಸ ಮಾಡದಿರುವಂತೆ ನಿರ್ಬಂಧಕ ಆಜ್ಞೆ (ಇಂಜಂಕ್ಷನ್) ಅಥವಾ ತಡೆಆಜ್ಞೆ ನೀಡುವಂತೆಯೂ ಅವಕಾಶ ಕಲ್ಪಿಸಿದವು.

ಸಾಮ್ಯನ್ಯಾಯದ ಕ್ಷೇತ್ರಾಧಿಕಾರವನ್ನು (ಜ್ಯೂರಿಸ್ಡಿಕ್ಷನ್) ಅನನ್ಯ (ಎಕ್ಸ್ ಕ್ಲೂ ಸಿವ್), ಸಹಗಾಮಿ (ಕನ್ಕರೆಂಟ್) ಮತ್ತು ಸಹಾಯಕ (ಆಗ್ಸಿಲಿಯರಿ) ಎಂಬುದಾಗಿ ವಿಂಗಡಿಸಬಹುದು. ತನ್ನ ಸ್ವಂತ ಹಕ್ಕಿನಲ್ಲಿ ಅದು ನ್ಯಾಸವೇ ಮುಂತಾದವುಗಳ ವಿಚಾರಣೆ ನಡೆಸುತ್ತಿತ್ತು. ಇದು ಅದರ ಅನನ್ಯ ಕ್ಷೇತ್ರ. ಸಂಪ್ರದಾಯನ್ಯಾಯದ ಕೋರ್ಟುಗಳಿಂದ ಹಕ್ಕು ಲಭ್ಯವಾಗಿದ್ದೂ ನಿವೃತ್ತಿ ಸಿಗದ ವಿಚಾರಗಳಲ್ಲಿ (ಉದಾ : ತಡೆಆಜ್ಞೆ) ತಕ್ಕ ನಿವೃತ್ತಿಗಳನ್ನು ಕೊಡುವುದು ಅದರ ಸಹಗಾಮಿ ಕ್ಷೇತ್ರಕ್ಕೊಳಪಟ್ಟಿತು. ಸಹಾಯಕ ಕ್ಷೇತ್ರದಲ್ಲಿ ಅದು ಸಂಪ್ರದಾಯ ನ್ಯಾಯಾಲಯಗಳಲ್ಲಿದ್ದ ಮೊಕದ್ದಮೆಗಳ ತೀರ್ಮಾನಕ್ಕೆ ಬೆಂಬಲ ಕೊಡುತ್ತಿತ್ತು. ಉದಾಹರಣೆಗಾಗಿ ದಾಖಲೆಗಳನ್ನು ಕೊಡುವಂತೆ ಆಜ್ಞೆ ಮಾಡಬಹುದಿತ್ತು. ಅವುಗಳನ್ನು ಪರೀಕ್ಷಿಸುವ ಅನುಮತಿ ಇತ್ಯಾದಿಗಳನ್ನು ದೊರಕಿಸಿಕೊಡುತ್ತಿತ್ತು.

ಚಾನ್ಸಲರನ ತೀರ್ಪುಗಳು ಖುಷಿ ಬಂದಂತೆ ಮಾಡುವ ತೀರ್ಪುಗಳೆಂದು ಅಪವಾದ ಬಂದರೂ ಬರಬರುತ್ತ ಸಂಪ್ರದಾಯನ್ಯಾಯದಲ್ಲಿ ಒಮ್ಮೆ ಮಾಡಿದ ತೀರ್ಪುಗಳು ಹೇಗೆ ಮುಂದೆ ಬಂದ ಮೊಕದ್ದಮೆಗಳಲ್ಲಿ ಮಾರ್ಗದರ್ಶಿಗಳಾದ ಕಾನೂನುಗಳಾಗಿ ನಿಂತುವೋ ಹಾಗೆಯೇ ಈ ತೀರ್ಪುಗಳೂ ಮುಂದೆ ಅದೇ ರೀತಿಯ ಸಂದರ್ಭಗಳು ಬಂದಾಗ ಅನುಸರಿಸತಕ್ಕ ಕಾನೂನುಗಳಾಗಿ ನಿಂತವು. ಬೇರೆ ಬೇರೆ ಚಾನ್ಸಲರರು ತಮಗೆ ಸರಿತೋರಿದಂತೆ, ತಮಗೆ ನ್ಯಾಯ ಕಂಡಂತೆ ತೀರ್ಪು ಕೊಡುತ್ತಿದ್ದರೆಂದು ಹೇಳಲಾಗಿದ್ದರೂ ಅವರು ಹಿಂದಿನ ತೀರ್ಪುಗಳ ಬಾಹುಳ್ಯದಿಂದ ನಿಖರವಾದ, ಸುಸ್ಪಷ್ಟವಾದ, ಒಂದೇ ರೀತಿಯ ನ್ಯಾಯಗಳನ್ನು ಕೊಡಬೇಕಾಯಿತು, ಕೊಡುತ್ತಿದ್ದರು.

ಮೊದಲ ಮತ್ತು ಎರಡನೆಯ ಎಡ್ವರ್ಡರ ಕಾಲದಲ್ಲಿ ಚಾನ್ಸರಿ ಕೋರ್ಟುಗಳು ಖಾಯಂ ಆದುವು. ಅನೇಕ ವಿಚಾರಗಳಲ್ಲಿ ಚಾನ್ಸರಿ ಕೋರ್ಟುಗಳ ನ್ಯಾಯತೀರ್ಮಾನಕ್ಕೂ ವಿರೋಧಗಳುಂಟಾಗತೊಡಗಿದುವು. ಅವುಗಳ ತೀರ್ಮಾನದಲ್ಲಿ ಅಭ್ಯಂತರವಿದ್ದಲ್ಲಿ ಚಾನ್ಸರಿ ಕೋರ್ಟಿನ ತೀರ್ಮಾನವೇ ಸ್ವೀಕಾರಾರ್ಹವೆಂದು ಅರ್ಲ್ ಆಫ್ ಆಕ್ಸ್‌ಫರ್ಡ್ ಮೊಕದ್ದಮೆಯಲ್ಲಿ ಒಂದನೆಯ ಜೇಮ್ಸ್ ತೀರ್ಮಾನಿಸಿದ. 1875ರ ಜ್ಯುಡಿಕೇಚರ್ ಕಾಯಿದೆಯ 25ನೆಯ ವಿಧಿಯ ಪ್ರಕಾರ ಒಂದೇ ವಿಚಾರದಲ್ಲಿ ಸಂಪ್ರದಾಯನ್ಯಾಯದ ನಿಯಮಕ್ಕೂ ಸಾಮ್ಯನ್ಯಾಯದ ನಿಯಮಕ್ಕೂ ವಿರೋಧವಿದ್ದಲ್ಲಿ ಸಾಮ್ಯನ್ಯಾಯದ ನಿಯಮವನ್ನು ಅನುಸರಿಸಬೇಕೆಂದು ನಿರ್ಣಯಿಸಲಾಯಿತು.

**ಕಾಯಿದೆಗಳು:** ಸಾರ್ವಜನಿಕ ನ್ಯಾಯದ ಮೂರನೆಯ ಭಾಗ ಕಾಯಿದೆಗಳು. ಕಾಯಿದೆಗಳನ್ನು ಮಾಡುವ ಅಧಿಕಾರ ಪಾರ್ಲಿಮೆಂಟಿನದು ಅಥವಾ ಅದರಿಂದ ಅಧಿಕಾರ ಹೊಂದಿದವರದು. ಇಂಥ ಕಾಯಿದೆಗಳು. ನೂರಾರು ಇವೆ. ಹೆಚ್ಚಿನ ಕಾಯಿದೆಗಳು ಸಾರ್ವಜನಿಕ. ವ್ಯಕ್ತಿ ವ್ಯಕ್ತಿಯ ಸಂಬಂಧದ ಕಾಯಿದೆ (ಪ್ರೈವೇಟ್) ಬಹಳ ಕಡಿಮೆ. ಒಂದನೆಯ ಎಡ್ವರ್ಡನ ಕಾಲದಲ್ಲಿ ಈ ಎರಡು ವಿಭಾಗಗಳಲ್ಲೂ ಕಾಯಿದೆಗಳು ಬಂದುವು. ಬಳಿಕ ಹೆಚ್ಚಿನಮಟ್ಟಿನ ಕಾಯಿದೆಗಳಿಗೆ ರೂಪು ಕೊಡುವ ಕೆಲಸ ನ್ಯಾಯಾಧೀಶರದ್ದಾಗಿತ್ತೆಂದು ಹೇಳಬಹುದು. ನಾಲ್ಕನೆಯ ವಿಲಿಯಂ ದೊರೆಯ ಕಾಲದಲ್ಲಿ ಖಾಸಗಿ ನ್ಯಾಯಕ್ಕೆ ಸಂಬಂಧಿಸಿದ ಅನೇಕ ಕಾಯಿದೆಗಳು ರೂಪು ಪಡೆದುವು. 19ನೆಯ ಶತಮಾನದಲ್ಲಿ ಹೆಚ್ಚಿನ ಕ್ರಿಮಿನಲ್ ಕಾನೂನುಗಳು ಕಾಯಿದೆಗಳ ರೂಪ ಹೊಂದಿದುವು. ಈಗ ಇಂಗ್ಲಿಷ್ ನ್ಯಾಯದ ಬಹಳಷ್ಟು ಅಂಶ ಕಾಯಿದೆಗಳಲ್ಲಿ ಕ್ರೋಡೀಕೃತವಾಗಿದೆ. ಮೆಕ್ಲೀನ್ ಕ್ರೋಡೀಕರಿಸಿದ ಕಾಯಿದೆಗಳ ಪ್ರಥಮ ಸಂಕಲನ 1484ರಲ್ಲಿ ಬೆಳಕು ಕಂಡಿತು. ಬಳಿಕ ಅನೇಕ ಕ್ರೋಡೀಕರಣಗಳು ಬಂದಿವೆ. 1951ರಲ್ಲಿ ಬ್ರಿಟನ್ನಿನ ಕಾಯಿದೆಗಳು ಸ್ಟಾಚ್ಯೂಟ್ಸ್ ರಿವೈಸ್ಡ್ ಎಂಬ ಹೆಸರಿನಿಂದ ಅನೇಕ ಸಂಪುಟಗಳಲ್ಲಿ 1951ರಲ್ಲಿ ಅಚ್ಚಾಗಿವೆ.

**ಸಂಪ್ರದಾಯನ್ಯಾಯ ಮತ್ತು ಸಾಮ್ಯನ್ಯಾಯಗಳ ಮಿಲನ:** 1875ನೆಯ ಇಸವಿಯ ತನಕ ಸಂಪ್ರದಾಯನ್ಯಾಯ ಮತ್ತು ಸಾಮ್ಯನ್ಯಾಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಜಾರಿ ಮಾಡುತ್ತಿದ್ದ ಬೇರೆಬೇರೆ ನ್ಯಾಯಾಲಯಗಳು ಕೆಲಸಮಾಡುತ್ತಿದ್ದುವು. ಆದರೆ ಹೆಚ್ಚಿನ ಮಟ್ಟಿಗೆ ಅವುಗಳೆರಡೂ ಸರಿಸಮಾನ ಮತ್ತು ಹೊಂದಿಕೆಯಾದ ನ್ಯಾಯಗಳನ್ನೇ ಚಲಾಯಿಸುತ್ತಿದ್ದುವು. ಸಾಮ್ಯನ್ಯಾಯಾನುಗಾಮಿ ಎಂಬುದು ಅದರ ಮೂಲತತ್ತ್ವ. ಆದರೂ ಒಂದೇ ವಿಚಾರದಲ್ಲಿ ಇವೆರಡೂ ಬೇರೆಬೇರೆಯಾಗಿದ್ದಲ್ಲಿ ಸಾಮ್ಯನ್ಯಾಯ ನಿಲ್ಲತಕ್ಕದ್ದೆಂದು ಆಗಿತ್ತು. 1875ರಲ್ಲಿ ಜಾರಿಗೆ ಬಂದ 1873ರ ನ್ಯಾಯ ನಿರ್ವಹಣ ಕಾಯಿದೆಯಲ್ಲಿ ಸಾಮ್ಯ ಮತ್ತು ಸಂಪ್ರದಾಯ ನ್ಯಾಯಾಲಯಗಳನ್ನು ಸಮನ್ವಯಗೊಳಿಸಿ ಹೈಕೋರ್ಟ್ ಆಫ್ ಜಸ್ಟಿಸ್ ಎಂಬ ಒಂದೇ ನ್ಯಾಯಾಲಯ ಸ್ಥಾಪಿತವಾಯಿತು. ಸಾಮ್ಯನ್ಯಾಯ ಮತ್ತು ಸಂಪ್ರದಾಯನ್ಯಾಯ ಇವುಗಳ ನಡುವೆ ವಿರೋಧವಿದ್ದಲ್ಲಿ ಸಾಮ್ಯನ್ಯಾಯವನ್ನು ಅನುಸರಿಸತಕ್ಕದ್ದೆಂದು ಅದರ 25ನೆಯ ವಿಧಿಯಲ್ಲಿ ಹೇಳಿದೆ. 1873ರ ನ್ಯಾಯ ನಿರ್ವಹಣೆಕಾಯಿದೆಯನ್ನು 1925ರ ಕಾಯಿದೆಯಿಂದ ತೆಗೆದುಹಾಕಿದೆ. ಅದರ 36ನೆಯ ವಿಧಿಯಲ್ಲಿ ಪರಮೋನ್ನತ ನ್ಯಾಯಾಲಯದ ಎಲ್ಲ ವಿಭಾಗಗಳೂ ಸಾಮ್ಯನ್ಯಾಯ ಮತ್ತು ಸಂಪ್ರದಾಯ ನ್ಯಾಯಗಳನ್ನು ಒಟ್ಟಿಗೆ ಚಲಾಯಿಸಲು ಹಕ್ಕುಳ್ಳವುಗಳಾಗಿವೆ.

**ಈಗಿನ ಇಂಗ್ಲಿಷ್ ನ್ಯಾಯಾಲಯಗಳು : ಸಿವಿಲ್ :** 1946ರ ಲಾಗಾಯ್ತು ಇಂಗ್ಲೆಂಡನ್ನು ಸರ್ಕ್ಯೂಟುಗಳಾಗಿ ವಿಭಾಗಿಸಲಾಗಿ ಪ್ರತಿ ಸರ್ಕ್ಯೂಟಿಗೆ ಸಂಬಂಧಿಸಿದ ನ್ಯಾಯಾಧೀಶ ತನ್ನ ಸರ್ಕ್ಯೂಟಿನ ಒಳಗೆ ಪರಿಭ್ರಮಣ ಮಾಡುತ್ತ ತಕ್ಕೆಡೆಗಳಲ್ಲಿ ನಿಂತು ನ್ಯಾಯ ಕೊಡುತ್ತಿರುತ್ತಾನೆ. ಇವುಗಳಿಗೆ ಕೌಂಟಿ ಕೋರ್ಟುಗಳೆಂದು ಹೆಸರು. ಇವುಗಳು 200 ಪೌಂಡುಗಳವರೆಗಿನ ಪರಿಹಾರ ಕೇಳಿದ ವ್ಯವಹಾರಗಳನ್ನು ತೆಗೆದುಕೊಳ್ಳುವುದು ಸಾಧ್ಯ. ಅದಕ್ಕಿಂತ ಹೆಚ್ಚಿನ ಪರಿಹಾರ ಕೇಳಿದಲ್ಲಿ ವಾದಿ ಪ್ರತಿವಾದಿಗಳು ಒಪ್ಪಿದರೆ ಮಾತ್ರ ಅಲ್ಲಿ ತನಿಖೆ ಸಾಧ್ಯ. ಕೆಲವು ವಿಚಾರಗಳಲ್ಲಿ ತನಿಖೆಯ ಹಕ್ಕೇ ಇಲ್ಲ. ಅವುಗಳ ತೀರ್ಮಾನದ ಮೇಲೆ ಕೋರ್ಟ್ ಆಫ್ ಅಪೀಲಿಗೆ ಅಹವಾಲು ಕೊಂಡು ಹೋಗುವ ಅಧಿಕಾರವನ್ನು ಹೆಚ್ಚಾಗಿ ಕೊಡಲಾಗಿದೆ.

ಹೈಕೋರ್ಟ್ ಆಫ್ ಅಪೀಲ್ ಮತ್ತು ಹೈಕೋರ್ಟ್ ಆಫ್ ಜಸ್ಟಿಸ್ ಇವೆರಡೂ ಸುಪ್ರೀಂ ಕೋರ್ಟ್, ಜ್ಯುಡಿಕೇಚರ್ ಎಂಬ ಹೆಸರಿನಿಂದ ನಡೆಯುತ್ತವೆ. ಹೈಕೋರ್ಟ್ ಆಫ್ ಜಸ್ಟಿಸಿನಲ್ಲಿ ಚಾನ್ಸರಿ, ಕಿಂಗ್ಸ್ ಬೆಂಚ್ ಮತ್ತು ಪ್ರೊಬೇಟ್, ಡೈವರ್ಸ್ ಮತ್ತು ಅಡ್ಮಿರಲ್ಟಿ ಎಂಬ ವಿಭಾಗಗಳಿವೆ. ಸುಪ್ರೀಂ ನ್ಯಾಯಾಲಯದ ಮೇಲಿನ ತೀರ್ಮಾನದ ಹಕ್ಕು ಹೌಸ್ ಆಫ್ ಲಾರ್ಡ್ಸಿಗೆ ಇದೆ. ಆದರೆ ಅಲ್ಲಿಗೆ ಅಪೀಲು ಹೋಗಬೇಕಾದಲ್ಲಿ ಕೋರ್ಟ್ ಆಫ್ ಅಪೀಲಿನ ಒಪ್ಪಿಗೆ ಅಥವಾ ಲಾರ್ಡ್ಸ್ ಸಭೆಯ ಒಪ್ಪಿಗೆ ಬೇಕು.

**ಕ್ರಿಮಿನಲ್:** ಕ್ರಿಮಿನಲ್ ಅಪರಾಧಗಳನ್ನು ತಪ್ಪು ಹೊರಿಸಬಹುದಾದದ್ದು ಮತ್ತು ಕ್ಷಿಪ್ರ (ಸಮ್ಮರಿ) ಎಂದು ವಿಭಾಗ ಮಾಡಲಾಗಿದೆ. ಮೊದಲನೆಯವು ಹೆಚ್ಚಾಗಿ ದೊಡ್ಡ ತಪ್ಪುಗಳು. ಈ ಮೊಕದ್ದಮೆಗಳನ್ನು ಆಪಾದಿತ ಒಪ್ಪಿದರೆ ನ್ಯಾಯಾಧೀಶರು ತಮ್ಮ ಕೋರ್ಟುಗಳಲ್ಲಿ ತನಿಖೆ ಮಾಡುವರು. ಅವರ ತೀರ್ಪಿನ ಮೇಲೆ ಹೆಚ್ಚಾಗಿ ಕಂಟ್ರಿ ಕ್ವಾರ್ಟರ್ ಸೆಷನ್ಸಿಗೆ ಅಪೀಲು ಇದೆ. ತಪ್ಪು ಹೊರಿಸಬಲ್ಲ ಅಪರಾಧದಲ್ಲಿ ಪೆಟಿ ಸೆಷನ್ಸ್ ನ್ಯಾಯಾಲಯದಲ್ಲಿ ಮೇಲ್ನೋಟಕ್ಕೇ (ಪ್ರೈಮ ಫೇಷಿ) ಅಪರಾಧ ಕಂಡುಬಂದರೆ ಆ ಅಪರಾಧವನ್ನು ತೀರ್ಮಾನಕ್ಕೆ ಅಸೈಜಿ ನ್ಯಾಯಾಲಯಕ್ಕಾಗಲಿ ಕ್ವಾರ್ಟರ್ ಸೆಷನ್ನಿಗಾಗಲಿ ಕಳುಹಿಸುತ್ತದೆ. ಅಸೈಜ಼ಿಗೆ ಮಾತ್ರ ಕೆಲವು ಘೋರ ಅಪರಾಧಗಳನ್ನು ತನಿಖೆ ಮಾಡುವ ಹಕ್ಕಿದೆ. ಆಗ ನ್ಯಾಯದರ್ಶಿಗಳು ಅವರೊಂದಿಗೆ ಇರುತ್ತಾರೆ. ಲಂಡನ್ನಿನಲ್ಲಿ ಈ ನ್ಯಾಯಾಲಯ ಓಲ್ಡ್ ಬೈಲಿಯಲ್ಲಿ ಮೊಕದ್ದಮೆಗಳನ್ನು ವಿಚಾರಣೆ ನಡೆಸುತ್ತದೆ. ಕ್ವಾರ್ಟರ್ ಸೆಷನ್ನಿನಲ್ಲಿ ತನಿಖೆ ಮಾಡುವಾಗ ನ್ಯಾಯದರ್ಶಿಗಳೊದಿಗೆ ಜಡ್ಜರು ಅಥವಾ ರೆಕಾರ್ಡರ್ ಕುಳಿತುಕೊಳ್ಳುತ್ತಾರೆ. ಪೆಟಿ ಸೆಷನ್ಸ್ ಅಪೀಲುಗಳ ತನಿಖೆ ನ್ಯಾಯಾಧೀಶರಿಂದಲೇ ಆಗುತ್ತದೆ. ಅಸೈಜ಼್ ಮತ್ತು ಕ್ವಾರ್ಟರ್ ಸೆಷನ್ನಿನಿಂದ ಬಂದ ಕ್ರಿಮಿನಲ್ ಅಪೀಲುಗಳನ್ನು ಕನಿಷ್ಠ ಪಕ್ಷ ಮೂರು ಜನ ಕಿಂಗ್ಸ್ ಬೆಂಚ್ ಜಡ್ಜರಿಂದ ಕೂಡಿದ ಕೋರ್ಟ್ ಆಫ್ ಕ್ರಿಮಿನಲ್ ಅಪೀಲ್ ತೀರ್ಮಾನ ಮಾಡುತ್ತದೆ. ಪ್ರಮುಖವಾದ ನ್ಯಾಯನಿಷ್ಕರ್ಷೆಯ ವಿಚಾರವಿದ್ದರೆ ಹೌಸ್ ಆಫ್ ಲಾರ್ಡ್ಸ್‌ಗೆ ಕೋರ್ಟಿನ ತೀರ್ಮಾನದ ಮೇಲೆ ಅಪೀಲು ಮಾಡಬಹುದು. ಆದರೆ ಇದಕ್ಕೆ ಅಟಾರ್ನಿ ಜನರಲನ ಅನುಮತಿ ಬೇಕು. ಇಂಗ್ಲೆಂಡಿನ ಕ್ರಿಮಿನಲ್ ನ್ಯಾಯದ ಒಂದು ವಿಶೇಷವೆಂದರೆ ಅನೇಕ ಮಂದಿ ಸಾಮಾನ್ಯ ಜನ ಯಾವುದೊಂದೂ ಸಂಬಳವಿಲ್ಲದೆ ಕೆಲಸ ಮಾಡುತ್ತಿರುವುದು. ಅವರಿಗೆ ಕಾನೂನಿನ ಶಿಕ್ಷಣವೇ ಬೇಕೆಂದಿಲ್ಲ. ಆದರೂ ಈ ವ್ಯವಸ್ಥೆ ಸಮರ್ಪಕವಾಗಿ ಕೆಲಸ ಮಾಡುತ್ತಿದೆ.

**ನ್ಯಾಯಾಧೀಶರು:** ಇಂಗ್ಲೆಂಡಿನ ನ್ಯಾಯಾಧೀಶರಾಗಿ ವಕೀಲರ ಸಂಘದಲ್ಲಿ (ಬಾರ್) ಹೆಚ್ಚಿನ ಮಾನ್ಯರನ್ನು ನೇಮಕ ಮಾಡಲಾಗುತ್ತದೆ. ಅವರಿಗೆ ಕೊಡುವ ಸಂಬಳ ಅಧಿಕ. ಅವರ ಸ್ಥಾನಕ್ಕೆ ವಿಶೇಷ ಗೌರವ ಸಲ್ಲುತ್ತದೆ. ಜನರಿಗೆ ಅವರ ಮೇಲೆ ವಿಶೇಷ ನಂಬಿಕೆಯಿದೆ. ಅಲ್ಲಿ ಒಮ್ಮೆ ನ್ಯಾಯಾಧೀಶನಾದರೆ ಬಳಿಕ ಆತ ಸರ್ಕಾರದಿಂದ ಹೆಚ್ಚಿನ ಸ್ಥಾನವನ್ನು ಅಪೇಕ್ಷಿಸುವುದಿಲ್ಲ.

**ನ್ಯಾಯಶಾಸ್ತ್ರಜ್ಞರು:** 1852ರಲ್ಲಿ ಕೌನ್ಸಿಲ್ ಆಫ್ ಲೀಗಲ್ ಎಜುಕೇಷನ್ ಎಂಬ ಸಂಸ್ಥೆ ಆರಂಭವಾಯಿತು. ಅದು ನ್ಯಾಯಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಉಪನ್ಯಾಸ ಪರೀಕ್ಷೆಗಳನ್ನು ಏರ್ಪಡಿಸುತ್ತದೆ. ಅದು ಏರ್ಪಡಿಸಿದ ಪರೀಕ್ಷೆಯಲ್ಲಿ ಉತ್ತೀರ್ಣನಾಗದೆ ನ್ಯಾಯವನ್ನು ಉದ್ಯೋಗವಾಗಿ ಮಾಡಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ನ್ಯಾಯವನ್ನು ಉದ್ಯೋಗವನ್ನಾಗಿ ತೆಗೆದುಕೊಂಡವರಲ್ಲಿ ಎರಡು ಭಾಗ: 1. ಮುಖ್ಯ ಕೋರ್ಟಿನಲ್ಲಿ ಕೆಲಸ ಮಾಡುವವರು. ಇವರನ್ನು ಬ್ಯಾರಿಸ್ಟರುಗಳೆಂದು ಕರೆಯುತ್ತಾರೆ. 2. ಸಾಲಿಸಿಟರುಗಳು. ನ್ಯಾಯಾಲಯದಲ್ಲಿ ಕೆಲಸ ಮಾಡುವ ಬ್ಯಾರಿಸ್ಟರರಲ್ಲೂ ಎರಡು ವಿಧ : ಕಿಂಗ್ಸ್ ಕೌನ್ಸಿಲ್ ಮತ್ತು ಜೂನಿಯರ್ ಬ್ಯಾರಿಸ್ಟರ್. ಕೋರ್ಟಿನಲ್ಲಿ ಆಗಬೇಕಾದ ಕೆಲಸವನ್ನು ಕಿಂಗ್ಸ್ ಕೌನ್ಸಿಲ್ ನಿರ್ವಹಿಸುತ್ತಾನೆ. ಉಚ್ಚನ್ಯಾಯಸ್ಥಾನಗಳಲ್ಲಿ ವಾದ ಮಾಡುವ ಹಕ್ಕು ಅವನಿಗೆ ಮಾತ್ರ ಇರುತ್ತದೆ. ಜೂನಿಯರ್ ಬ್ಯಾರಿಸ್ಟರ್ ಇಲ್ಲದೆ ಮೊಕದ್ದಮೆ ನಡೆಸಲು ಅಗತ್ಯವಾದ ಪೂರ್ವಭಾವಿ ಕೆಲಸ ನಿರ್ವಹಿಸುತ್ತಾರೆ. ಜೂನಿಯರ್ ಬ್ಯಾರಿಸ್ಟರುಗಳು ಕಿಂಗ್ಸ್ ಕೌನ್ಸಿಲ್ ಕೆಲಸ ಮಾಡುವ ಕ್ರಮವಿಲ್ಲ. ಸಾಲಿಸಿಟರುಗಳ ಕೆಲಸವನ್ನು ಪಾರ್ಲಿಮೆಂಟಿನ ಕಾಯಿದೆಗಳು ಕ್ರಮಪಡಿಸಿವೆ. ಅದನ್ನು ಪರಿಪಾಲಿಸುವಂತೆ ನೋಡಿಕೊಳ್ಳುವ ಹಕ್ಕು ಲಾ ಸೊಸೈಟಿಯದು (ನ್ಯಾಯಸಂಘ). ಕಕ್ಷಿಗಾರನಿಗೆ ಬೇಕಾದ ಅನುಭವವನ್ನು ಕೊಡುವುದು. ಕೆಳಗಿನ ಕೋರ್ಟಿನಲ್ಲಿ ಆತನ ಬಗ್ಗೆ ಮೊಕದ್ದಮೆ ನಡೆಸುವುದು. ಆತನ ಬಗ್ಗೆ ಅವನ ವಕೀಲನಿಗೆ (ಕೌನ್ಸಿಲ್) ವಿವರ ನೀಡುವುದು ಮುಂತಾದ ಕೆಲಸಗಳು ಸಾಲಿಸಿಟರನಿಗೆ ಸೇರಿದುದು. ಬ್ಯಾರಿಸ್ಟರನಿಗೆ ಅನುಭವವನ್ನು ಸಾಲಿಸಿಟರ್ ಕೊಡತಕ್ಕದ್ದು.

ನ್ಯಾಯದರ್ಶಿಗಳು ಸಂಪ್ರದಾಯನ್ಯಾಯವನ್ನು ಜಾರಿ ಮಾಡುವ ಕೋರ್ಟುಗಳಲ್ಲಿ ಹೆಚ್ಚಾಗಿ ಒಬ್ಬ ನ್ಯಾಯಾಧೀಶನೂ ಒಬ್ಬ ನ್ಯಾಯದರ್ಶಿಯೂ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆ ನಡೆಸುತ್ತಿದ್ದರು. ನ್ಯಾಯದರ್ಶಿಗಳು ಪುರಾವೆಗಳನ್ನು ವಿಮರ್ಶಿಸಿ ಸತ್ಯಸಂಗತಿಗಳನ್ನು ನಿರ್ಧರಿಸುತ್ತಿದ್ದರು. ಅದಕ್ಕೆ ಸಂಬಂಧಿಸಿದ ನ್ಯಾಯ ನಿರ್ಧರಿಸುವುದು ನ್ಯಾಯಾಧೀಶನ ಕೆಲಸ. ನ್ಯಾಯದರ್ಶಿಗಳು ಸರಿಯಾದ ತೀರ್ಮಾನ ಮಾಡಲು ಆತ ಸರಿಯಾದ ಸೂಚನೆ ಕೊಡದಿದ್ದುದರಿಂದ ಕೆಳಗಿನ ನ್ಯಾಯಾಲಯದ ಅನೇಕ ತೀರ್ಪುಗಳು ಮೇಲಿನ ನ್ಯಾಯಾಲಯದಲ್ಲಿ ರದ್ದಾಗಿವೆ. ನ್ಯಾಯನಿಷ್ಕರ್ಷೆಯ ಹಕ್ಕು ನ್ಯಾಯದರ್ಶಿಗಳದ್ದು. ಸಾಮ್ಯನ್ಯಾಯಾಲಯಗಳು ನ್ಯಾಯದರ್ಶಿಗಳಿಂದ ನ್ಯಾಯ ನಿರ್ಧರಿಸುತ್ತಿರಲಿಲ್ಲ. ಸಿವಿಲ್ ವ್ಯವಹಾರಗಳಲ್ಲಿ ನ್ಯಾಯದರ್ಶಿಗಳ ಉಪಯೋಗ ಕಮ್ಮಿಯಾಗುತ್ತ ನಡೆದಿದೆ.

**ಪೂರ್ವನಿದರ್ಶನಗಳು:** ವಿಶೇಷ ತೀರ್ಪುಗಳನ್ನು ನ್ಯಾಯಾಲಯ ಕೊಟ್ಟಲ್ಲಿ ಈಗ ಅವುಗಳನ್ನು ಕ್ರಮಪಡಿಸಿ ಸಂಪುಟಗಳನ್ನಾಗಿ ಮಾಡಲಾಗುತ್ತದೆ. ಸಂಪ್ರದಾಯನ್ಯಾಯ ಬರೆಯಲ್ಪಡದ ಕಾಯಿದೆ ಎನಿಸಿದೆ. ಪೂರ್ವನಿದರ್ಶನಗಳೇ ಅವುಗಳ ಕಾಯಿದೆಯಾಗಿ ಪರಿಣಮಿಸಿದುವು. ಒಮ್ಮೆ ಆದ ತೀರ್ಪಿನಲ್ಲಿ ಹೇಳಿದ ತತ್ತ್ವಗಳನ್ನು ಮುಂದಿರುವ ಮೊಕದ್ದಮೆಯ ನ್ಯಾಯವಿಚಾರದಲ್ಲಿ ಪಾಲಿಸಬೇಕು. ಹೀಗಿದ್ದಲ್ಲಿ ಮಾತ್ರ ನ್ಯಾಯವನ್ನು ಸರಿಯಾಗಿ ಕೊಡಲು ಸಾಧ್ಯ. ಹೌಸ್ ಆಫ್ ಲಾರ್ಡ್ಸ್ ಮಾಡಿದ ತೀರ್ಪುಗಳನ್ನು ಅದು ಮಾತ್ರವಲ್ಲದೆ ಕೆಳಗಿನ ನ್ಯಾಯಾಲಯಗಳೂ ಪಾಲಿಸಬೇಕು. ಅಪೀಲ್ ನ್ಯಾಯಾಲಯದ ತೀರ್ಪುಗಳನ್ನು ಅದರ ಕೆಳಗಿನ ನ್ಯಾಯವಿಚಾರದಲ್ಲಿ ಪಾಲಿಸಬೇಕು. ಅದೇ ತನ್ನ ತೀರ್ಪುಗಳನ್ನು ಮೀರುವುದು ವಿರಳ. ಉಚ್ಚನ್ಯಾಯಾಲಯದ ತೀರ್ಪುಗಳನ್ನು ಅದರ ಕೆಳಗಿನ ನ್ಯಾಯಾಲಯಗಳು ಪಾಲಿಸಬೇಕು. ಅದು ಸಹ ತನ್ನ ಹಿಂದಿನ ತೀರ್ಪುಗಳನ್ನು

ಹೆಚ್ಚಾಗಿ ಪಾಲಿಸುತ್ತದೆ. ಮೇಲಿನ ನ್ಯಾಯಾಲಯಗಳು ತೀರ್ಪಿಗೆ ಬರಲು ನೆರವಾದ ಕಾರಣಗಳನ್ನೂ ತೀರ್ಪಿಗೆ ಅಗತ್ಯವಿಲ್ಲದ ವಿಚಾರಗಳನ್ನೂ ಹಿಂದಿನ ತೀರ್ಪುಗಳಲ್ಲಿ ಹೇಳಿದ್ದರೆ ಅವುಗಳನ್ನು ಮುಂದೆ ಅನುಸರಿಸಬೇಕಾಗಿಲ್ಲ. ಅವುಗಳಿಗೆ ಇಂಗ್ಲಿಷಿನಲ್ಲಿ ಆಬಿಟರ್ ಡಿಕ್ಟ (ಪ್ರಾಸಂಗಿಕೋಕ್ತಿ) ಎಂದು ಕರೆಯುತ್ತಾರೆ.

**ಇಂಗ್ಲಿಷ್ ನ್ಯಾಯದ ವೈಶಿಷ್ಟ್ಯ:** ನ್ಯಾಯವೂ ಒಂದು ಕಲೆ. ಈ ಭಾವನೆ ಇಂಗ್ಲಿಷ್ ನ್ಯಾಯದ ಅಪ್ರತಿಮ ಸೌಂದರ್ಯಕ್ಕೆ ಕಾರಣವಾಯಿತು. ಇದರಿಂದಾಗಿ ಇಂಗ್ಲಿಷ್ ನ್ಯಾಯ ವ್ಯವಹಾರ್ಯವೂ ವೈಶಿಷ್ಟ್ಯವುಳ್ಳದ್ದೂ ಆಯಿತು. ವ್ಯಕ್ತಿಯ ಸ್ವಾತಂತ್ರ್ಯ ಇಂಗ್ಲಿಷ್ ನ್ಯಾಯದ ಅಡಿಗಲ್ಲು. ಅಲ್ಲಿಯ ರಾಣಿ ಅಥವಾ ರಾಜ ನಿರಂಕುಶತೆಯಿಂದ ರಾಜ್ಯಪರಿಪಾಲನೆ ಮಾಡುವುದು ಅನೇಕಾನೇಕ ಕಾಯಿದೆಗಳಿಂದ ಅಸಾಧ್ಯ. ಇಂಗ್ಲೆಂಡಿನಲ್ಲಿ ನ್ಯಾಯಕಟ್ಟಳೆಗೇ (ರೂಲ್ ಆಫ್ ಲಾ) ಬೆಲೆ. ಯಾವನೂ ನ್ಯಾಯವಿಚಾರದಲ್ಲಿ ಮನಸ್ವಿಯಾಗಿ ವರ್ತಿಸುವಂತಿಲ್ಲ. ಇಂಗ್ಲೆಂಡಿನಲ್ಲಿ ರಾಣಿ ಅಥವಾ ರಾಜ ರಾಜ್ಯಭಾರ ಮಾಡುತ್ತಿದ್ದರೂ ಅಲ್ಲಿ ಪ್ರಜಾಪ್ರಭುತ್ವ ಬಲವಾಗಿ ಬೇರುಬಿಟ್ಟು ನಿಂತಿದೆ. ಅಲ್ಲಿಯ ನ್ಯಾಯವನ್ನು ಪ್ರಜಾಸತ್ತಾತ್ಮಕ ರಾಷ್ಟ್ರಗಳು ಆದರ್ಶವಾಗಿ ಇಟ್ಟುಕೊಂಡರೆ ಆಶ್ಚರ್ಯವಿಲ್ಲ. ಅಲ್ಲಿಯ ನ್ಯಾಯ ಚಿರಾಯು, ಶಾಂತಿಸಾಧಕ ಎಂದು ಆ ದೇಶದ ಜನರ ನಂಬುಗೆ. (ಕೆ.ಜಿ.ಬಿ.)

**ಇಂಗ್ಲಿಷ್ ಬಜ಼ಾರ್:** ಪಶ್ಚಿಮ ಬಂಗಾಲದಲ್ಲಿ ಮಹಾನದಿ ನದಿಯ ಬಲದಂಡೆಯ ಮೇಲಿರುವ ಒಂದು ಚಿಕ್ಕ ಪಟ್ಟಣ. ಆಂಗ್ರೇಜಾಬಾದ್ ಎಂಬ ಹೆಸರೂ ರೂಢಿಯಲ್ಲಿದೆ. ಮಾಲ್ಡ ಜಿಲ್ಲೆಯ ಆಡಳಿತ ಕೇಂದ್ರ. ಸನ್ನಿವೇಶ : 25º ಉ. ಅ. 88º 9º ಪೂ. ರೇ. ಜನಸಂಖ್ಯೆ 161448(2001). ಈ ಪ್ರದೇಶದಲ್ಲಿ ಹಿಪ್ಪುನೇರಳೆ ಹೆಚ್ಚಾಗಿ ಬೆಳೆಯುವುದರಿಂದ ಈಸ್ಟ್ ಇಂಡಿಯ ಕಂಪೆನಿ ಇಲ್ಲೊಂದು ರೇಷ್ಮೆ ಕಾರ್ಖಾನೆಯನ್ನು ಸ್ಥಾಪಿಸಿತು (1676). ಡಚ್ಚರು ಮತ್ತು ಫ್ರೆಂಚರು ಇಲ್ಲಿ ತಮ್ಮ ವಸತಿಗಳನ್ನು ಹೊಂದಿದ್ದರು. 1770ರಲ್ಲಿ ಸ್ಥಳೀಯ ವಾಣಿಜ್ಯ ಕೇಂದ್ರವೆನಿಸಿದ ಈ ಊರಿನಲ್ಲಿ ಈಸ್ಟ್ ಇಂಡಿಯ ಕಂಪೆನಿ ಭಾರತವನ್ನು ಬಿಡುವವರೆಗೂ ತನ್ನ ಪ್ರಾಮುಖ್ಯವನ್ನು ಉಳಿಸಿಕೊಂಡಿತ್ತು.

1869ರಲ್ಲಿ ಇಲ್ಲಿಯ ಪೌರಸಭೆ ಅಸ್ತಿತ್ವಕ್ಕೆ ಬಂತು. ನದಿಯ ಪ್ರವಾಹಗಳಿಂದ ಪಟ್ಟಣವನ್ನು ರಕ್ಷಿಸಲು ದಂಡೆಗುಂಟ ಕಲ್ಲಿನ ಗೋಡೆಯನ್ನು ಕಟ್ಟಿದ್ದಾರೆ. ಈಗ ಇದು ಧಾನ್ಯಗಳ ವ್ಯಾಪಾರ ಕೇಂದ್ರ. ರೇಷ್ಮೆ ವ್ಯಾಪಾರವೂ ಇದೆ. ಈಗಲೂ ಸುತ್ತಲಿನ ಪ್ರದೇಶದಲ್ಲಿ ಗೃಹಕೈಗಾರಿಕೆಯ ರೂಪದಲ್ಲಿ ರೇಷ್ಮೆಯ ತಯಾರಿಕೆ ಇದೆ. (ಕೆ.ಎನ್.ಪಿ.)

**ಇಂಗ್ಲಿಷ್ ಭಾಷೆ:** ಇಂಗ್ಲೆಂಡಿನ ಜನರ ನುಡಿ. ಕಾಮನ್‌ವೆಲ್ತ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇದನ್ನು ಮಾತೃಭಾಷೆಯನ್ನಾಗುಳ್ಳ ಜನರ ಸಂಖ್ಯೆ 25 ದಶಲಕ್ಷ. ಆಫ್ರಿಕ, ಭಾರತ ಮತ್ತು ಜಪಾನುಗಳಂಥ ಇತರ ದೇಶಗಳಲ್ಲಿ ಎರಡನೆಯ ಭಾಷೆಯಾಗಿ ಇಂಗ್ಲಿಷನ್ನು ಬಳಸುವವರ ಸಂಖ್ಯೆಯೂ ಅಷ್ಟೇ ಇದೆ. ಈ ದೃಷ್ಟಿಯಿಂದ ಚೀನಿ ಭಾಷೆಗೆ ಪ್ರಥಮ ಸ್ಥಾನವಾದರೆ ಇಂಗ್ಲಿಷಿಗೆ ದ್ವಿತೀಯ ಸ್ಥಾನ (500 ದಶಲಕ್ಷ). 873 ಮಿಲಿಯನ್ ಇಂಡೊ–ಯುರೋಪಿಯನ್ ವರ್ಗಕ್ಕೆ ಸೇರಿದ ಭಾಷೆಗಳಲ್ಲಿ ಒಂದು. ಇದನ್ನು ಮೊದಲ ಭಾಷೆಯಾಗಿ 309–400 ಮಿಲಿಯನ್ ಜನ ಮಾತನಾಡುತ್ತಾರೆ, ದ್ವಿತೀಯ ಭಾಷೆಯಾಗಿ 199 ಮಿಲಿಯನ್ – 1.4 ಬಿಲಿಯನ್ ಜನ ಮಾತನಾಡುತ್ತಾರೆ. ಒಟ್ಟಾರೆ 500 ಮಿಲಿಯನ್‌ನಿಂದ 1.8 ಬಿಲಿಯನ್. ಇದು 53 ದೇಶಗಳಲ್ಲಿ ಅಧಿಕೃತ ಭಾಷೆಯಾಗಿದೆ. ಆ ವರ್ಗದ ಭಾಷೆಗಳನ್ನು ಪೌರಸ್ತ್ಯ, ಪಾಶ್ಚಾತ್ಯ ಎಂದು ಎರಡು ಪಂಗಡಗಳಾಗಿ ವಿಂಗಡಿಸುವುದು ವಾಡಿಕೆ. ನೂರು ಎಂದು ಅರ್ಥ ಕೊಡುವ ಸಂಸ್ಕೃತದ ಶತಂ ಮತ್ತು ಲ್ಯಾಟಿನಿನ ಸೆಂಟಂ ಆಧಾರದ ಮೇಲೆ ಅವಕ್ಕೆ ಶತಂ ಪಂಗಡವೆಂದೂ ಸೆಂಟಂ ಪಂಗಡವೆಂದೂ ಹೆಸರು ಬಂದಿದೆ. ಶತಂ ಪಂಗಡದಲ್ಲಿ ಸಂಸ್ಕೃತ ಮತ್ತು ಅವುಗಳಿಂದ ಆಧುನಿಕ ಭಾರತೀಯ ಭಾಷೆಗಳೂ ಇರಾನೀ ಮತ್ತು ಅದರ ಉಪಪ್ರಯೋಗಗಳೂ ಸೇರಿವೆ. ಸೆಂಟಂ ಪಂಗಡಗಳಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳೂ ಟ್ಯೂಟಾನಿಕ್ ಅಥವಾ ಜರ್ಮನ್ ಭಾಷೆಗಳೂ ಅವುಗಳಿಂದ ಉಗಮವಾಗಿ ಆಧುನಿಕ ಐರೋಪ್ಯ ಭಾಷೆಗಳೂ ಸೇರಿವೆ. ಇಂಗ್ಲಿಷ್ ಭಾಷೆ ಟ್ಯೂಟಾನಿಕ್ ಒಳಪಂಗಡದ ಶಾಖೆಗಳಲ್ಲಿ ಒಂದು. ಇಂಡೋ–ಯುರೋಪಿಯನ್ ಭಾಷೆಗಳ ಲಕ್ಷಣಗಳಲ್ಲಿ ಲಿಂಗಭೇದ, ಸಂಖ್ಯಾಭೇದ, ಮೊದಲಾದವನ್ನು ಸೂಚಿಸಲು ಮೂಲಪದಗಳಿಗೆ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸುವುದೂ ಒಂದು (ವಿಭಕ್ತಿಗೆ ಇಂಗ್ಲಿಷ್ ಪದ ಇನ್‌ಫ್ಲೆಕ್ಷನ್ ಎಂದು. ಆದ್ದರಿಂದ ಭಾಷೆಗಳು ಇನ್‌ಫ್ಲೆಕ್ಷನಲ್) ಪದಗಳ ಉಚ್ಚಾರಣೆಯಲ್ಲೂ ಈ ಭಾಷೆಗಳಲ್ಲಿ ಸಾದೃಶ್ಯ ಕಂಡುಬರುತ್ತದೆ. ಉದಾಹರಣೆಗೆ, ಸಂಸ್ಕೃತದ ಪಿತರ್ ಲ್ಯಾಟಿನ್ನಿನಲ್ಲಿ, ಪೇಟರ್, ಜರ್ಮನ್ ಭಾಷೆಯಲ್ಲಿ ವೇಟರ್, ಡಚ್ ಭಾಷೆಯಲ್ಲಿ ಇಂಗ್ಲಿಷಿನಲ್ಲಿ ಫಾದರ್ ಆಗಿರುತ್ತದೆ. ಹಾಗೆಯೇ ಮಾತರ್, ಮೇಟರ್, ಮೀಟರ್, ಮದರ್ ಎಂದೂ ಭ್ರಾತರ್, ಫ್ರೇಟರ್, ಬ್ರದರ್ ಎಂದೂ ಸಪ್ತ, ಸೆಪ್ಟೆಮ್, ಜ಼ೀಬೆನ್, ಜ಼ೆವೆನ್, ಸೆವೆನ್ ಎಂದೂ ಆಗುತ್ತವೆ. ಪದಗಳಿಗೆ ಭಾಷಾಶಾಸ್ತ್ರದಲ್ಲಿ ಜ್ಞಾತಿ ಪದಗಳೆಂದು ಹೆಸರು ಬಂದಿದೆ. ಇಂಥ ಒಂದು ಮೂಲಪದದಿಂದ ಬಂದಿರಬೇಕು ಎಂಬುದು ಆ ಶಾಸ್ತ್ರದ ಸಿದ್ಧಾಂತ. ಇದಲ್ಲದೆ ಟ್ಯೂಟಾನಿಕ್ ಗುಂಪಿಗೆ ಸೇರಿದ ಭಾಷೆಗಳು ತಮ್ಮವೇ ಆದ ಸಾಮಾನ್ಯ ಲಕ್ಷಣಗಳನ್ನು ಹೊಂದಿವೆ. ಅವುಗಳಲ್ಲಿ ಭೂತ–ವರ್ತಮಾನ, ಏಕವಚನ–ಬಹುವಚನ, ಕರ್ತರಿಪ್ರಯೋಗ–ಕರ್ಮಣಿ ಪ್ರಯೋಗ–ಹೀಗೆ ಸರಳ ಎರಡೆರಡೇ ವಿಭಾಗಗಳಿರುವುದನ್ನು ಗಮನಿಸಬಹುದು. ಒಂದು ಪದದ ಮಧ್ಯದಲ್ಲಿ ಬರುವ ಸ್ವರವನ್ನು ಬದಲಾಯಿಸುವುದರಿಂದ ಭೂತಕಾಲವನ್ನು ಮಾಡಬಹುದಾದುದು ಇವುಗಳ ಇನ್ನೊಂದು ವೈಶಿಷ್ಟ್ಯ (ಉದಾ: ಸಿಂಗ್, ಸ್ಯಾಂಗ್). ಹೀಗೆ ಬದಲಾಗುವ ಪದಗಳಿಗೆ ಸ್ಟ್ರಾಂಗ್ ವರ್ಬುಗಳೆಂದೂ d, ed ಸೇರಿಸಿ ಭೂತಕಾಲವಾಗುವ ವೀಕ್ ವರ್ಬುಗಳೆಂದೂ ಹೆಸರು. ಗುಣವಾಚಕಗಳು ವಾಕ್ಯದಲ್ಲಿ ಕ್ರಿಯಾಪದದ ಅನಂತರ ಬರಬಹುದು, ನಾಮವಾಚಕದ ಹಿಂದೆ ಬರಬಹುದು. ಉದಾ.ದಟ್ ಬಾಯ್ ಈಸ್ ಗುಡ್; ದಟ್ ಈಸ್ ಎ ಗುಡ್ ಬಾಯ್. ಇಲ್ಲಿ ಎರಡು ಪ್ರಯೋಗಗಳಲ್ಲೂ (ಗುಡ್) ಎಂಬ ಪದದ ರೂಪ ಇದ್ದಂತೆಯೇ ಇರುತ್ತದೆ. ಇತರರ ಭಾಷೆಗಳಲ್ಲಿ ಅದು ಬದಲಾಗುತ್ತದೆ. ಇದೇ ವಾಕ್ಯಗಳ ಕನ್ನಡ ರೂಪ–ಆ ಹುಡುಗ ಒಳ್ಳೆಯವನು; ಅವನು ಒಳ್ಳೆಯ ಹುಡುಗ ಎಂದಾಗುತ್ತವೆ. ಮೂರನೆಯದಾಗಿ ಟ್ಯೂಟಾನಿಕ್ ಭಾಷೆಗಳಲ್ಲಿ ಪದಗಳನ್ನು ಉಚ್ಚರಿಸುವಾಗ ಅವುಗಳ ಒಂದು ಭಾಗದ ಮೇಲೆ ಒತ್ತಡ ಬೀಳುತ್ತದೆ. ಈ ಒತ್ತಡ ನಿರ್ದಿಷ್ಟವಾಗಿದ್ದು ಬದಲಾವಣೆಯಾಗದು (ಇತರ ಭಾಷೆಗಳಲ್ಲಿ ಈ ಒತ್ತಡ ಇಡೀ ಪದದ ಎಲ್ಲ ಭಾಗಗಳ ಮೇಲೂ ಸಮನಾಗಿ ಹರಡಿರುತ್ತದೆ ಅಥವಾ ಕೊನೆಕೊನೆಗೆ ಬರುತ್ತದೆ). ನಾಲ್ಕನೆಯದಾಗಿ, ಟ್ಯೂಟಾನಿಕ್ ಭಾಷೆಗಳಲ್ಲಿ ಇಂಡೋ–ಯುರೋಪಿಯನ್ ಭಾಷೆಯ ವ್ಯಂಜನಗಳು ವ್ಯತ್ಯಾಸ ಹೊಂದಿರುತ್ತವೆ. ಭ–ಬ, ಪ–ಫ, ಘ–ಗ, ಕ–ಹ–ಹೇಗೆ. ಇದರ ಫಲವಾಗಿ ಸಂಸ್ಕೃತದ ಪದಂ ಕ್ರಮೇಣ ಇಂಗ್ಲಿಷಿನ ಫುಟ್, ಸಂಸ್ಕೃತದ ದ್ವಯ ಇಂಗ್ಲಿಷಿನ ಟೂ, ಸಂಸ್ಕೃತದ ದಂತ ಇಂಗ್ಲಿಷಿನ ಟೂತ್ ಆಗುತ್ತದೆ. ಈ ಬದಲಾವಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವಿವರಿಸಿದವರು ಜರ್ಮನಿಯ ಗ್ರಿಮ್ ಮತ್ತು ಡೆನ್ಮಾರ್ಕಿನ ವೆರ್ನರ್. ಈ ವಿಚಾರದಲ್ಲಿ ಅವರು ರೂಪಿಸಿದ ನಿಯಮಗಳು ಗ್ರಿಮ್ಸ್ ಲಾ, ವೆರ್ನರ್ಸ್ ಲಾ ಎಂದು ಪ್ರಸಿದ್ಧವಾಗಿವೆ. ಹೀಗೆ ಟ್ಯೂಟಾನಿಕ್ ಭಾಷೆಗಳೆಲ್ಲವುಗಳ ಗುಣಗಳನ್ನು ಪಡೆದಿರುವುದಲ್ಲದೆ ಇಂಗ್ಲಿಷ್ ತನ್ನದೇ ಆದ ಕೆಲವು ವಿಶೇಷ ಲಕ್ಷಣಗಳನ್ನು ಪಡೆದಿದೆ. ಕೆಲವು ಶತಮಾನಗಳಲ್ಲೇ ಇಂಗ್ಲಿಷ್ ಪದಗಳ ಉಚ್ಚಾರಣೆಯಲ್ಲಿ ಬದಲಾವಣೆಯುಂಟಾಗಿ ಅವುಗಳ ಮೇಲೆ ಬೀಳುವ ಒತ್ತಡ ಪದಗಳ ಅಂತ್ಯಭಾಗದಿಂದ ಆದಿಭಾಗಕ್ಕೆ ಸರಿದುದು ಇವುಗಳಲ್ಲಿ ಒಂದು. ಹದಿನೈದನೆಯ ಶತಮಾನದಲ್ಲಿ ಇಂಗ್ಲಿಷ್ ಪದಗಳು ವಿಭಕ್ತಿ ಪ್ರತ್ಯಯಗಳನ್ನು ಕಳೆದುಕೊಂಡವು. ಇದರ ಫಲವಾಗಿ ವಾಕ್ಯದಲ್ಲಿ ಒಂದು ಪದಕ್ಕೂ ಇನ್ನೊಂದಕ್ಕೂ ಇರುವ ಸಂಬಂಧದ ಸೂಚನೆ ವಾಕ್ಯದಲ್ಲಿ ಆಯಾ ಪದದ ಸ್ಥಾನವನ್ನು ಅವಲಂಬಿಸಿರುತ್ತದೆಯೇ ಹೊರತು ಪದದ ಸ್ವರೂಪವನ್ನಲ್ಲ. ಹೀಗೆ ವಿಭಕ್ತಿ ಪ್ರತ್ಯಯಗಳಿಲ್ಲದ ಕಾರಣ ಇಂಗ್ಲಿಷ್ ವಾಕ್ಯಗಳಲ್ಲಿ ಪದಗಳ ಜೋಡಣೆ ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸಿಯೇ ಬರಬೇಕಾಗುತ್ತದೆ. (ಕರ್ತೃ, ಕ್ರಿಯೆ, ಕರ್ಮ–ಹೀಗೆ). ಈ ಕ್ರಮದಲ್ಲಿ ವ್ಯತ್ಯಾಸವಾದರೆ ಅರ್ಥದಲ್ಲೇ ವ್ಯತ್ಯಾಸವಾಗಬಹುದು. ಪದವನ್ನು ವಾಕ್ಯದಿಂದ ಪ್ರತ್ಯೇಕಿಸಿದರೆ ಅದು ಕರ್ತೃವೋ ಕರ್ಮಪದವೋ ಹೇಳಲಾಗುವುದಿಲ್ಲ. (ಕನ್ನಡದಲ್ಲಿ ಇದು ಬಹು ಸುಲಭ). ವಿಭಕ್ತಿ ಪ್ರತ್ಯಯಗಳಿಲ್ಲದೆ ಹೋಗಿರುವುದರಿಂದ ಕೆಲವು ವೇಳೆ ನೇರವಾಗಿ ಹೇಳುವುದನ್ನು ಬಳಸಿಕೊಂಡು ಹೇಳಬೇಕಾಗುತ್ತದೆ. ಉದಾಹರಣೆಗೆ, ಷಷ್ಠೀವಿಭಕ್ತಿಯಲ್ಲಿ ಆಫ್ ಪದದ ಪ್ರಯೋಗ ಬಳಕೆಗೆ ಬಂದಿದೆ. ಕಿಂಗ್ಸ್ ಪ್ಯಾಲೆಸ್ ಎಂಬ ಮಾತನ್ನು ಪ್ಯಾಲೆಸ್ ಆಫ್ ದಿ ಕಿಂಗ್ ಎಂದು ಹೇಳುವುದು ಇದಕ್ಕೊಂದು ನಿದರ್ಶನ. ಕೆಲವು ವೇಳೆ ಅರ್ಥ ವ್ಯತ್ಯಾಸವನ್ನು ಸೂಚಿಸಲು ಧ್ವನಿವ್ಯತ್ಯಾಸವನ್ನೂ ಮಾಡಬೇಕಾಗುತ್ತದೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಯಾವ ಮೂಲದಿಂದಲಾದರೂ ಸಾಮಗ್ರಿಯನ್ನು ಪಡೆದು ಅದನ್ನು ತನ್ನದಾಗಿ ಮಾಡಿಕೊಳ್ಳುವ ಶಕ್ತಿ ಇಂಗ್ಲಿಷಿನ ಮುಖ್ಯ ಲಕ್ಷಣವೆನ್ನಬಹುದು.

ಇಂಗ್ಲಿಷ್ ಭಾಷೆಯನ್ನು ಹಳೆಯ ಇಂಗ್ಲಿಷ್, ಮಧ್ಯಯುಗದ ಇಂಗ್ಲಿಷ್, ಆಧುನಿಕ ಇಂಗ್ಲಿಷ್ ಎಂದು ಮೂರು ವರ್ಗಗಳಾಗಿ ವಿಭಜಿಸುವುದುಂಟು. ಮೊದಲನೆಯದು ಟ್ಯೂಟಾನಿಕ್ ತಂಡಗಳು ಪ್ರ.ಶ. 449ರಲ್ಲಿ ಬ್ರಿಟನ್ನಿಗೆ ಬರತೊಡಗಿದಂದಿನಿಂದ 1100 ರವರೆಗೆ. ಮಧ್ಯಯುಗ ಸು. 1100ರಿಂದ 1500ರ ವರೆಗೆ. 1500ರಿಂದ ಈಚಿನ ಕಾಲವನ್ನು ಆಧುನಿಕಯುಗವೆನ್ನಬಹುದು.

ಇಂಗ್ಲಿಷ್ ಭಾಷೆಯ ಚರಿತ್ರೆ ಆರಂಭವಾಗುವುದು ಟ್ಯೂಟಾನಿಕ್ ತಂಡಗಳಿಗೆ ಸೇರಿದ ಜ್ಯೂಟರು, ಸ್ಯಾಕ್ಸನರು ಮತ್ತು ಆಂಗ್ಲರು ಸ್ಕಾಂಡಿನೇವಿಯ ಪ್ರದೇಶದಿಂದ ಬ್ರಿಟನ್ನಿಗೆ ಬಂದಾಗ, ಇವರಲ್ಲಿ ಮೂರನೆಯ ತಂಡದವರಾದ ಆಂಗ್ಲರಿಂದಲೇ ಇಂಗ್ಲೆಂಡ್ ಮತ್ತು ಇಂಗ್ಲಿಷ್ ಎಂಬ ಪದಗಳು ಬಂದಿರುವುದು. ಜ್ಯೂಟರು ಕೆಂಟ್ ಮತ್ತು ಐಲ್ ಆಫ್ ವೆಟನಲ್ಲೂ ಸ್ಯಾಕ್ಸನರು ಮೊದಲು ಕೆಂಟನ್ನು ಬಿಟ್ಟು ಥೇಮ್ಸ್ ನದಿಯ ದಕ್ಷಿಣಕ್ಕಿರುವ ಇತರ ಪ್ರದೇಶಗಳಲ್ಲೂ ಅನಂತರ ಥೇಮ್ಸಿನ ಉತ್ತರಕ್ಕಿರುವ ಎಸೆಕ್ಸ್ ಮತ್ತು ಮಿಡ್ಲ್‌ಸೆಕ್ಸ್ ಭಾಗಗಳಲ್ಲೂ ಆಂಗ್ಲರು ಇಂದಿನ ಇಂಗ್ಲೆಂಡಿನ ಉಳಿದೆಲ್ಲ ಭಾಗಗಳಲ್ಲೂ ನೆಲೆಸಿದರು. ಈ ಮೂರು ತಂಡಗಳವರೂ ಒಂದೇ ಭಾಷೆಯ ಉಪಭಾಷೆಗಳನ್ನು ಆಡುತ್ತಿದ್ದವರು. ಕಾಲಕ್ರಮೇಣ ಆ ಉಪಭಾಷೆಗಳೆಲ್ಲವೂ ಬೆರೆತು ಇಂಗ್ಲಿಷ್ ಆಯಿತು. ಅವುಗಳಲ್ಲಿ ಆಂಗ್ಲರ ಉಪಭಾಷೆಯೇ ಪ್ರಧಾನವಾದುದು. ಆದ್ದರಿಂದ ಆ ಸಮ್ಮಿಶ್ರಿತ ಭಾಷೆಗೆ ಇಂಗ್ಲಿಷ್ ಎಂಬ ಹೆಸರು ಬಂದಿರುವುದು ಉಚಿತವೇ ಆಗಿದೆ. ಎಷ್ಟೋ ಕಾಲ ಉಪಭಾಷೆಗಳು ಬೇರೆ ಬೇರೆಯೇ ಆಗಿದ್ದು ಮಧ್ಯಯುಗದಲ್ಲಿ ಇಂಗ್ಲೆಂಡಿನ ಮಧ್ಯಭಾಗದಲ್ಲಿ ಬಳಕೆಯಲ್ಲಿದ್ದ ಈಸ್ಟ್ ಮಿಡ್ಲೆಂಡಿನ ಭಾಷಾಪ್ರಭೇದ ಪ್ರಧಾನ ಸ್ಥಾನ ಪಡೆದು ಪ್ರಮಾಣಭೂತವಾದ ಇಂಗ್ಲಿಷ್ ಆಯಿತು. ಆ್ಯಂಗ್ಲೊ–ಸ್ಯಾಕ್ಸನರು ಇಂಗ್ಲೆಂಡಿಗೆ ಬರುವುದಕ್ಕೆ ಮೊದಲು ಅಲ್ಲಿದ್ದವರು ಕೆಲ್ಟ್ ಬುಡಕಟ್ಟಿನ ಜನ. ಪ್ರ.ಶ.ಪೂ.

55ರಲ್ಲಿ ಈ ಕೆಲ್ಟರು ಜೂಲಿಯಸ್ ಸೀಸರನ ರೋಮನ್ ಸೈನಿಕರ ಆಕ್ರಮಣಕ್ಕೆ ಒಳಗಾದರು. ಇಂಗ್ಲೆಂಡ್ ಸು. 450 ವರ್ಷಗಳ ಕಾಲ ರೋಮನ್ ಸಾಮ್ರಾಜ್ಯದ ಒಂದು ದೂರದ ಪ್ರಾಂತ್ಯವಾಗಿತ್ತು. ಪ್ರ.ಶ. 412ರಲ್ಲಿ ಹೂಣರು ರೋಮಿಗೆ ದಾಳಿಯಿಟ್ಟಾಗ ರೋಮನ್ ಚಕ್ರವರ್ತಿ ಬ್ರಿಟನ್ನಿನಲ್ಲಿದ್ದ ತನ್ನ ಸೈನಿಕರನ್ನೆಲ್ಲ ಹಿಂದಕ್ಕೆ ಕರೆಸಿಕೊಂಡ. ರಕ್ಷಣಾರಹಿತವಾದ ಆ ದ್ವೀಪ ಆ್ಯಂಗ್ಲೊ-ಸ್ಯಾಕ್ಸನರ ಮುತ್ತಿಗೆಗೆ ಸುಲಭವಾಗಿ ಗುರಿಯಾಯಿತು. ಮೊದಮೊದಲು ವಿರಳವಾಗಿಯೂ ಅನಂತರ ತಂಡತಂಡವಾಗಿಯೂ ಬಂದ ಆ್ಯಂಗ್ಲೊ-ಸ್ಯಾಕ್ಸನರು ಕೆಲ್ಟರನ್ನು ಇಂಗ್ಲೆಂಡಿನ ಪೂರ್ವಭಾಗಗಳಿಂದ ಪಶ್ಚಿಮಕ್ಕೂ ಅನಂತರ ವೇಲ್ಸಿಗೂ ಅಟ್ಟಿದರು. ಹಿಂದೆ ಇಂಗ್ಲೆಂಡಿನಲ್ಲಿದ್ದ ಗೇಲಿಕ್ ಬುಡಕಟ್ಟಿನ ಜನ ಕೆಲ್ಟರಿಂದ ಇದೇ ತೆರನಾದ ಉಚ್ಚಾಟನೆಗೆ ಗುರಿಯಾಗಿದ್ದರು. ಈಗ ಕೆಲ್ಟರು ವೇಲ್ಸಿಗೆ ಬಂದಾಗ ಗೇಲರು ಉತ್ತರದ ಸ್ಕಾಟ್ಲೆಂಡಿಗೂ ಪಶ್ಚಿಮದ ಸಮುದ್ರದಾಚೆಯ ಐರ್ಲೆಂಡಿಗೂ ಧಾವಿಸಿದರು. ಈಗಲೂ ವೇಲ್ಸಿನ ಜನಸಾಮಾನ್ಯರು ಆಡುವ ವೇಲ್ಸ್ ಕೆಲ್ಟರ ಸಿಮ್ರಿಕಿನಿಂದ ಬಂದುದು. ಸ್ಕಾಟ್ಲೆಂಡ್ ಮತ್ತು ಐರ್ಲೆಂಡಿನಲ್ಲಿ ಗೇಲಿಕ್ ಭಾಷೆಯ ಸಂತತಿ ಕಂಡುಬರುತ್ತದೆ.

ಆ್ಯಂಗ್ಲೊ-ಸ್ಯಾಕ್ಸನರು ಕೆಲ್ಟರೊಡನೆ ಅರಸು-ಆಳುಗಳ ಸಂಬಂಧವನ್ನು ಮಾತ್ರ ಹೊಂದಿದ್ದರೆಂದು ತೋರುತ್ತದೆ. ಕೆಲ್ಟಿಕ್ ಭಾಷೆಯಿಂದ ಇಂಗ್ಲಿಷಿಗೆ ಬಂದಿರುವ ಪದಗಳು ಬಹಳ ಸ್ವಲ್ಪ. ಬ್ರಿನ್ (ಗುಡ್ಡ), ಟಾರ್ (ಕಡಿದಾದ ಎತ್ತರದ ಬಂಡೆ), ಕ್ರ್ಯಾಗ್ (ಬಂಡೆ), ಕೂಂಬ್ (ಕಣಿವೆ) – ಇಂಥ ಕೆಲವೇ ಪದಗಳು ಸೇರಿವೆ. ಕೆಲವು ಸ್ಥಳಗಳ ಹೆಸರುಗಳಲ್ಲಿ ಕೆಲ್ಟಿಕ್ ಭಾಷೆಯ ಪ್ರಭಾವ ಇನ್ನೂ ಕಂಡುಬರುತ್ತದೆ. ಉದಾ. ಡನ್‌ಕೂಂಬ್ ಹಾಲ್ ಕೂಂಬ್, ಟಾರ್‌ಕ್ರಾಸ್, ಟಾರ್‌ಹಿಲ್, ಲಂಡನ್ (ಮಣ್ಣಿನ ಕೋಟೆ), ಡೋವರ್, ಯಾರ್ಕ್, ಮೊದಲಾದ ಪಟ್ಟಣಗಳ ಹೆಸರುಗಳು ಕೆಲ್ಟರವೇ. ಏವನ್, ಎಸ್ಕ್, ಡೀ, ಡರ್ವೆಂಟ್, ಔಸ್, ಕ್ಯಾಮ್, ಥೇಮ್ಸ್, ಸೇವರ್ನ್ – ಮೊದಲಾದ ನದಿಗಳಿಗೆ ಹೆಸರು ಕೊಟ್ಟವರೂ ಅವರೇ. ಒಟ್ಟಿನ ಮೇಲೆ ಇಂಗ್ಲಿಷಿನಲ್ಲಿ ಕೆಲ್ಟಿಕ್ ಪದಗಳ ಅಭಾವ ಇಷ್ಟು ಹೆಚ್ಚಾಗಿರುವುದನ್ನು ನೋಡಿದರೆ ಕೆಲ್ಟರಿಗೂ ಆ್ಯಂಗ್ಲೊ-ಸ್ಯಾಕ್ಸನರಿಗೂ ಇದ್ದ ಪರಸ್ಪರ ಸಂಬಂಧ ವ್ಯವಹಾರಗಳು ಬಹಳ ಕಡಿಮೆಯಾಗಿದ್ದುವೆಂದು ಕಾಣುತ್ತದೆ.

ಕೆಲ್ಟರ ಅನಂತರ ಇಂಗ್ಲೆಂಡಿನಲ್ಲಿ ಪ್ರಬಲರಾಗಿದ್ದ ರೋಮನರ ಭಾಷೆ ಲ್ಯಾಟಿನ್. ಆದರೆ ಆ ಕಾಲದಲ್ಲಿ ಲ್ಯಾಟಿನ್ನಿನ ಪ್ರಭಾವವೂ ಇಂಗ್ಲಿಷಿನ ಮೇಲೆ ಹೇಳಬಹುದಾದಷ್ಟೇನೂ ಇರಲಿಲ್ಲ. ಇತರ ಭಾಷೆಗಳಿಂದ ಪದಗಳನ್ನು ತೆಗೆದುಕೊಳ್ಳುವ ಪದ್ಧತಿ ಪ್ರಾಚೀನ ಇಂಗ್ಲಿಷಿಗಿನ್ನೂ ಒಗ್ಗಿ ಬಂದಿರಲಿಲ್ಲ. ಬ್ರಿಟನ್ನಿನಲ್ಲಿದ್ದ ರೋಮನ್ ಆಡಳಿತಗಾರರೂ ಸೈನಿಕರೂ ವ್ಯಾಪಾರಿಗಳೂ ಅನಂತರ ಪ್ರ.ಶ. 597ರಿಂದ ಬರತೊಡಗಿದ ಕ್ರೈಸ್ತಪಾದ್ರಿಗಳೂ ಉಪಯೋಗಿಸುತ್ತಿದ್ದ ಕೆಲವು ಪದಗಳು ಮಾತ್ರ ಈ ಯುಗದ ದುರ್ಬಲ ಲ್ಯಾಟಿನ್ ಪ್ರಭಾವವನ್ನು ಪ್ರತಿಬಿಂಬಿಸುತ್ತವೆ. ರೋಮಿನ ಸೈನ್ಯ ಶಿಬಿರಗಳು ಇದ್ದ ಸ್ಥಳಗಳ ಹೆಸರುಗಳು ಇಂದೂ ಆ ಚಾರಿತ್ರಿಕ ಸಂಗತಿಗೆ ಕನ್ನಡಿಗಳಾಗಿವೆ. ಕ್ಯಾಸ್ಟರ್ ಮತ್ತು ಚೆಸ್ಟರ್ (ಕ್ಯಾಸ್ಟ್ರ-ಶಿಬಿರ) ಎಂಬ ಉತ್ತರ ಪ್ರತ್ಯಯಗಳಿಂದ ಅಂತ್ಯವಾಗುವ ಹೆಸರುಗಳು ಇಂಥವು. ಕಾಲ್ಚೆಸ್ಟರ್, ರಾಚೆಸ್ಟರ್, ವಿಂಚೆಸ್ಟರ್, ಡಂಕಾಸ್ಟರ್, ಲಂಕಾಸ್ಟರ್, ಗ್ಲಾಸ್ಟರ್, ಲೆಸ್ಟರ್, ಎಕ್ಸೆಟರ್ ಇವೆಲ್ಲ ಹಿಂದೆ ರೋಮನ್ ಸೈನ್ಯ ಶಿಬಿರಗಳಾಗಿದ್ದುವೆಂದು ಅವುಗಳ ಹೆಸರುಗಳಿಂದಲೇ ಗೊತ್ತಾಗುತ್ತದೆ. ರೋಮನರು ದೊಡ್ಡ ರಸ್ತೆಗಳನ್ನು ನಿರ್ಮಿಸಿದರು. ಅವುಗಳಲ್ಲಿ ಒಂದು ಏವನ್ ನದಿಯನ್ನು ದಾಟಿ ಉತ್ತರಕ್ಕೆ ಹೋಗಿದ್ದ ಸ್ಥಳದಲ್ಲೇ ಮುಂದೆ ಷೇಕ್ಸ್‌ಪಿಯರನ ತೌರೂರಾದ ಸ್ಟ್ರಾಟ್‌ಫರ್ಡ್ ಆನ್ ಏವನ್ ಇದ್ದುದು. (ಸ್ಟ್ರಾಟಾ=ಸ್ಟ್ರೀಟ್=ರಸ್ತೆ) ರೋಮನರಿಂದ ಈ ಅವಧಿಯಲ್ಲಿ ಬಂದ ಇತರ ಕೆಲವು ಪದಗಳು ವ್ಯಾಪಾರಕ್ಕೂ ಸುಖಜೀವನಕ್ಕೂ ಸಂಬಂಧಪಟ್ಟವು. ವೈನ್ (ವೀನಮ್), ಚೀಪ್ (ಚೀಪಿಯನ್), ಮಾಂಗರ್ (ಮಾಂಗಿಯನ್-ಮ್ಯಾಂಗೀರ್=ವ್ಯಾಪಾರ), ಮಿಂಟ್ (ಮೊನೆಟ=ನಾಣ್ಯ), ಪೌಂಡ್ (ಪಾಂಡಾ), ಮೈಲ್, ಮಿಲ್, ಕುಕ್ (ಕೊಕ್ ನೂಸ್), ಕಪ್, ಕೆಟ್ಲ್, ಪಿಲೊ, ಆನಿಯನ್ ಇತ್ಯಾದಿ. ಕ್ರೈಸ್ತಮತದ ಬಿಷಪ್ (ಬಿಸ್ಕಪ್) ಪದವೂ ಈ ಕಾಲದ್ದೇ.

ಆ್ಯಂಗ್ಲೊ-ಸ್ಯಾಕ್ಸನರು ತಮ್ಮೊಡನೆ ತಂದ ಭಾಷೆಯಲ್ಲಿ ಬೇಕಾದಷ್ಟು ಪದಗಳಿದ್ದುವು. ಪುಟ್ಟ ಪದಗಳಿಂದ ಕೂಡಿದ್ದ ಭಾಷೆಯದು. ಆ ಪದಗಳು ಈಗಲೂ ಇಂಗ್ಲಿಷ್ ಭಾಷೆಯ ಬೆನ್ನುಮೂಳೆಯಂತಿವೆ. ಆ್ಯಂಗ್ಲೊ-ಸ್ಯಾಕ್ಸನರು ತಮ್ಮ ಭಾಷೆಯಲ್ಲಿಯ ಪದಗಳನ್ನೇ ಸಂದರ್ಭಾನುಸಾರ ಜೋಡಿಸಿಕೊಂಡು ಹೊಸ ಪದಗಳನ್ನು ಸೃಷ್ಟಿಸುತ್ತಿದ್ದರು. ಅವರು ಬೇರೆ ಭಾಷೆಗಳಿಂದ ಪದಗಳನ್ನು ತೆಗೆದುಕೊಳ್ಳುವುದು ತೀರಾ ಅಪೂರ್ವವಾಗಿತ್ತು. ಆದರೆ ಕಾಲಕ್ರಮೇಣ ಇಂಗ್ಲಿಷ್ ಬೆಳೆದು ಶಕ್ತಿಪೂರ್ಣವಾದುದು ನಾನಾ ಮೂಲೆಗಳಿಂದ ಶಬ್ದಸಂಚಯನ ಮಾಡಿ.

ಆ್ಯಂಗ್ಲೊ-ಸ್ಯಾಕ್ಸನರು ತಮ್ಮದೇ ಆದ ಮತವನ್ನು ಹೊಂದಿದ್ದರು; ಆ ಮತಕ್ಕೆ ಸೇರಿದ ದೇವರುಗಳನ್ನು ಪೂಜಿಸುತ್ತಿದ್ದರು. ಆ ದೇವರುಗಳಲ್ಲಿ ಹಿರಿಯನಾದ ವೋಡೆನನ ಹೆಸರು ಈಗಲೂ ಇಂಗ್ಲಿಷಿನ ವೆಡ್‌ನೆಸ್‌ಡೆ (ಮೋಡೆನ್ಸ್‌ಡೇ, ಬುಧವಾರ) ಅಲ್ಲಿದೆ. ಹೀಗೆಯೇ ಥರ್ಸ್‌ಡೆ ಅವರ ಗುಡುಗು ಸಿಡಿಲುಗಳ ದೇವರು ಥಾರ್ ನಿಂದಲೂ ಫ್ರೈಡೆ ಫ್ರಿಯಾ ಎಂಬ ಸ್ತ್ರೀ ದೇವತೆಯಿಂದಲೂ ಟ್ಯೂಸ್‌ಡೇ ಟ್ಯೂಸ್ ಎಂಬ ದೇವರಿಂದಲೂ ಬಂದಿವೆ. ಪ್ರ.ಶ. 507ರಲ್ಲಿ ಇಂಗ್ಲೆಂಡಿಗೆ ಕ್ರೈಸ್ತಧರ್ಮ ಬಂದಿತು. ಅದರಿಂದ ಬ್ರಿಟನ್ನಿನ ಮುಖ ಅಂದೂ ಅನಂತರವೂ ಯುರೋಪಿನ ಸಂಸ್ಕೃತಿಯ ಕೇಂದ್ರವಾಗಿದ್ದ ಇಟಲಿಯ ಕಡೆ ತಿರುಗಿದ್ದು ಮಾತ್ರವಲ್ಲದೆ ಕ್ರೈಸ್ತಧರ್ಮಕ್ಕೆ ಸಂಬಂಧಪಟ್ಟ ಲ್ಯಾಟಿನ್ ಪದಗಳು ಎಷ್ಟೋ ಇಂಗ್ಲಿಷಿಗೆ ಬಂದವು. ಉದಾ: ಇಂಗ್ಲಿಷಿನ ಮಾಂಕ್, ಮಿನಿಸ್ಟರ್, ಬಿಷಪ್, ಮತ್ತು ಪ್ರೀಸ್ಟ್ ಪದಗಳು ಕ್ರಮವಾಗಿ ಲ್ಯಾಟಿನ್ನಿನ ಮೆನಕಸ್, ಮೊನ್ಯಾಸ್ಟೀರಿಯಮ್, ಎಪಿಸ್ಕೋಪಸ್ ಮತ್ತು ಪ್ರಿಸ್ಬಿಟರ್ ಪದಗಳಿಂದ ಬಂದುವು. ಆ್ಯಬಟ್, ಆಮ್ಸ್, ಆಲ್ಟರ್, ಆನ್ತೆಮ್, ಕ್ಯಾಂಡ್ಲ್, ಕ್ಲರ್ಕ್, ಟೆಂಪ್ಲ್ ಮೊದಲಾದವೂ ಈ ಕಾಲದ ಪದಗಳೇ.

ಪ್ರ.ಶ. 9ನೆಯ ಶತಮಾನದಲ್ಲಿ ಡೆನ್ಮಾರ್ಕಿನ ಡೇನರು (ವೈಕಿಂಗರು) ಇಂಗ್ಲೆಂಡಿಗೆ ದಾಳಿಯಿಟ್ಟು ಅದರ ಕೆಲವು ಭಾಗಗಳನ್ನು ಗೆದ್ದು ರಾಜ್ಯಸ್ಥಾಪನೆಗೈದರು. ಡೇನರೂ ಇಂಗ್ಲಿಷರೂ ಮೂಲತಃ ಒಂದೇ ಬುಡಕಟ್ಟಿಗೆ ಸೇರಿದವರಾದ್ದರಿಂದ ಎಷ್ಟು ಪದಗಳು ಅಥವಾ ಯಾವ್ಯಾವ ಪದಗಳು ಅವರಿಂದ ಇಂಗ್ಲಿಷಿಗೆ ಬಂದವು ಎಂದು ಖಚಿತವಾಗಿ ಹೇಳುವುದು ಕಷ್ಟ. ಏಕೆಂದರೆ ಡೇನರಿಂದ ಬಂದಂತೆ ಕಾಣುವ ಪದ ಮೊದಲೇ ಇಂಗ್ಲಿಷಿನಲ್ಲಿ ಇದ್ದಿರಬಹುದು. ಆದರೆ ಸ್ಕೈ, ಗೇಯ್ಟ್ ಮೊದಲಾದ ನಾಮಪದಗಳೂ ದೆ, ದೇರ್, ದೆಮ್ ಎಂಬ ಸರ್ವನಾಮಗಳೂ ಡೇನಿಷ್ ಭಾಷೆಯಿಂದ ಇಂಗ್ಲಿಷಿಗೆ ದತ್ತವಾದ ಶಬ್ದಗಳು ಎಂಬುದು ನಿರ್ವಿವಾದ. ಸಿಸ್ಟರ್, ಗಿಫ್ಟ್‌ಗಳೂ ಡೇನಿಷ್ ಭಾಷೆಯಿಂದ ಬಂದಂಥವೇ. ಡೇನಿಷ್ ಭಾಷೆಯಲ್ಲಿ ಪಟ್ಟಣಕ್ಕೆ ಬೈ (ಅಥವಾ ಬಿ), ಹಳ್ಳಿಗೆ ಥಾರ್ಪ್ ಎಂದಿದೆ. ಇಂಗ್ಲೆಂಡಿನ ಆಲ್‌ಥಾರ್ಪ್, ಲಿನ್ ಥಾರ್ಪ್, ಡಾರ್ಬಿ, ರಗ್ಬಿ, ಗ್ರಿಮ್ಸ್‌ಬಿ ಎಂಬ ಸ್ಥಳಗಳ ಹೆಸರುಗಳು ಡೇನರು ಇಂಗ್ಲೆಂಡಿನಲ್ಲಿದ್ದ ನೆನಪನ್ನು ನಮಗುಂಟುಮಾಡಿಕೊಡುತ್ತವೆ. ಹೊಲಗಳ ನಡುವಿನ ಮನೆಗೆ ಟಾಫ್ಟ್ ಎಂದೂ ಪ್ರತ್ಯೇಕವಾಗಿರುವ ಸ್ಥಳಕ್ಕೆ ತ್ವೇಯ್ಟ್ ಎಂದೂ ಡೇನಿಷ್ ಭಾಷೆಯ ಪದಗಳು. ಇಂಗ್ಲೆಂಡಿನ ಈಸ್ಟ್‌ಟಾಫ್ಟ್ ನಾರ್ತ್‌ಟಾಫ್ಟ್, ಬ್ರೈತ್ವೇಯಗಳಲ್ಲಿ ಈ ಪದಗಳಿವೆ. ಇಂಗ್ಲಿಷಿನ ಲಾ, ಔಟ್ಲಾ ಪದಗಳೂ ಡೇನರ ಆಳಿಕೆಯ ಕುರುಹುಗಳಾಗಿ ಉಳಿದಿವೆ.

ಡೇನರ ಆಕ್ರಮಣದ ಅನಂತರ ಇಂಗ್ಲೆಂಡಿನಲ್ಲಿ ಸಂಭವಿಸಿದ ಅತಿದೊಡ್ಡ ಘಟನೆಯೆಂದರೆ 1066ರಲ್ಲಿ ಫ್ರಾನ್ಸಿನ ನಾರ್ಮಂಡಿ ಪ್ರಾಂತ್ಯದ ವಿಲಿಯಂ ಆ ದೇಶಕ್ಕೆ ಮುತ್ತಿಗೆ ಹಾಕಿ ಗೆದ್ದು ಫ್ರೆಂಚ್ ಆಡಳಿತವನ್ನು ಸ್ಥಾಪಿಸಿದ್ದು. ನಾರ್ಮಂಡಿ ಪ್ರಾಂತ್ಯದವರೂ ಆ್ಯಂಗ್ಲೊ-ಸ್ಯಾಕ್ಸನರು, ಡೇನರು ಮೊದಲಾದವರ ಹಾಗೆಯೇ ಉತ್ತರದಿಂದ ಬಂದವರೇ. ಆದರೆ ಇಂಗ್ಲೆಂಡಿಗೆ ಬಂದ ಔತ್ತರೇಯರಂತಲ್ಲದೆ ಅವರು ತಾವು ಗೆದ್ದ ದೇಶದ ಜನರ ಭಾಷೆಯನ್ನೂ ಜೀವನಕ್ರಮವನ್ನೂ ಸ್ವೀಕರಿಸಿದ್ದವರು. ತತ್ಫಲವಾಗಿ ಅವರು ಆಡುತ್ತಿದ್ದ ಭಾಷೆಯೂ ಫ್ರೆಂಚ್ ಭಾಷೆಯೇ-ಅದರ ಅಶುದ್ಧವಾದ ಒಂದು ರೂಪ. ವಿಲಿಯಂ ಇಂಗ್ಲೆಂಡಿನ ಅಧಿಪತಿಯಾದಾಗ ಅವನೊಡನೆ ಈ ನಾರ್ಮನ್ ಫ್ರೆಂಚ್ ಜನರ ಮತ್ತು ಅವರ ಭಾಷೆಯ ಪ್ರಾಬಲ್ಯ ಅಲ್ಲಿ ಆರಂಭವಾಗಿ ಸುಮಾರು ನಾಲ್ಕು ಶತಮಾನಗಳ ಕಾಲ ಮುಂದುವರಿಯಿತು. ಇದರಿಂದ ಇಂಗ್ಲಿಷಿನಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳಾದುವು. ಇಂಗ್ಲಿಷ್ ವ್ಯಾಕರಣ ನಿಯಮಗಳು ಸಡಿಲಗೊಂಡು ಸುಲಭವಾದವು. ಉದಾಹರಣೆಗೆ, ಲಿಂಗಭೇದಗಳು ಸ್ತ್ರೀ, ಪುರುಷ, ನಪುಂಸಕ ಎಂದು ಮೂರೇ ಆದುದಲ್ಲದೆ ಪದಗಳಿಗೆ ಲಿಂಗಭೇದಗಳನ್ನು ಆರೋಪಿಸುವ ಪದ್ಧತಿಯಿಲ್ಲದಂತಾಯಿತು. ವಾಕ್ಯದಲ್ಲಿ ಪದಗಳ ವಿನ್ಯಾಸ ಸರಳವಾಯಿತು. ವಿಭಕ್ತಿ ಪ್ರತ್ಯಯಗಳ ಪ್ರಯೋಗ ಕ್ರಮೇಣ ಕಡಿಮೆಯಾಗಿ ಕೊನೆಗೆ ನಿಂತೇ ಹೋಯಿತು. ಇವೆಲ್ಲ ಬದಲಾವಣೆಗಳಿಗೂ ನಾರ್ಮನ್ನರ ಆಕ್ರಮಣ ಒಂದೇ ಕಾರಣವೆಂದಲ್ಲ. ಆದರೆ ಅವು ಅದರಿಂದ ತ್ವರಿತಗೊಂಡುದು ನಿಸ್ಸಂದೇಹ. ನಾರ್ಮನ್ ಆಡಳಿತದ ಸ್ಥಾಪನೆಯಿಂದ ಇಂಗ್ಲಿಷಿನಲ್ಲಿ ಆದ ಅತ್ಯಂತ ಪರಿಣಾಮಕಾರಕವಾದ ಮಾರ್ಪಾಡೆಂದರೆ ಆ ಭಾಷೆಯ ಪದಸಂಪತ್ತಿನ ವೃದ್ಧಿ. ಅದುವರೆಗೂ ಆ್ಯಂಗ್ಲೊ ಸ್ಯಾಕ್ಸನ್ ಭಾಷೆಯೊಂದನ್ನೇ ನಂಬಿಕೊಂಡಿದ್ದ ಇಂಗ್ಲಿಷ್ ಸಾವಿರಾರು ಫ್ರೆಂಚ್ ಪದಗಳನ್ನು ತೆಗೆದುಕೊಂಡಿತು. ಅದಕ್ಕಿಂತಲೂ ಹೆಚ್ಚಾಗಿ ಹೇಗೆ ಪರಭಾಷೆಗಳಿಂದ ಬರುವ ಶಬ್ದಸಂಪತ್ತಿಗೆ ಆಶ್ರಯವೀಯುವ ಅಭ್ಯಾಸ ಅದರಲ್ಲಿ ಬೆಳೆದು ಮುಂದೆಯೂ ಅದರ ಶ್ರೀಮಂತಿಕೆ ಹೆಚ್ಚಲು ಅವಕಾಶವಾಯಿತು. ಸೈನಿಕ ವಲಯ, ಲೌಕಿಕ ಆಡಳಿತ, ಧಾರ್ಮಿಕ ವ್ಯವಸ್ಥೆ, ನ್ಯಾಯ ವ್ಯವಹಾರ, ಸಾಮಾಜಿಕ ಜೀವನ, ಆಹಾರ ಪಾನೀಯಗಳು ಮೊದಲಾದ ನಾನಾ ಕ್ಷೇತ್ರಗಳಲ್ಲಿ ಫ್ರೆಂಚ್ ಪದಗಳು ಇಂಗ್ಲೆಂಡಿಗೆ ತಂಡತಂಡವಾಗಿ ಬಂದವು. ಅನೇಕ ತಲೆಮಾರುಗಳ ಕಾಲ (14ನೆಯ ಶತಮಾನದ ಮಧ್ಯಭಾಗದವರೆಗೆ) ಫ್ರೆಂಚ್ ಭಾಷೆ ತಾನೇ ತಾನಾಗಿ ಇಂಗ್ಲೆಂಡಿನ ಆಳರಸರ, ಆಡಳಿತಗಾರರ, ಶ್ರೀಮಂತವರ್ಗದವರ ಭಾಷೆಯಾಗಿತ್ತು. ಅವರೆಲ್ಲ ಇಂಗ್ಲೆಂಡಿನಲ್ಲೇ ನೆಲೆಸಿ ಇಂಗ್ಲಿಷರೇ ಆದುದರಿಂದ ಆ ಭಾಷೆಯ ಪದಗಳೂ ಇಂಗ್ಲಿಷಿನ ಶಬ್ದಭಂಡಾರವನ್ನು ಸೇರಿ ಅದನ್ನು ಬಹುಮುಖಿಯಾಗಿ ಮಾಡಿದವು. ಇಂದಿಗೂ ಇಂಗ್ಲಿಷ್ ಶಬ್ದಕೋಶದಲ್ಲಿ ದೊಡ್ಡ ಪಾಲು ಫ್ರೆಂಚ್ ಭಾಷೆಯಿಂದ ಬಂದ ಪದಗಳಾಗಿವೆ. ಈ ಪದಗಳೆಷ್ಟೋ ಮೂಲತಃ ಲ್ಯಾಟಿನ್ ಪದಗಳು: ಆ ಭಾಷೆಯಿಂದ ಫ್ರೆಂಚಿಗೆ ಬಂದಿದ್ದು ಫ್ರೆಂಚಿನಿಂದ ಇಂಗ್ಲಿಷಿನ ಮೂಲಕ ನಮ್ಮ ದೇಶದಲ್ಲಿ ಕೂಡ ಅವು ಬಳಕೆಗೆ ಬಂದಿವೆ. ಸ್ಯೂಟ್, ಪ್ಲೀಡ್, ಜಡ್ಜ್, ಜ್ಯೂರಿ, ಜೈಲ್, ಟನ್ಯೂರ್, ಮ್ಯಾರಿ, ಮ್ಯಾರಿಜ್, ಪ್ಯೂನಿ, ಕ್ಲರ್ಜಿ, ಏಂಜಲ್, ಫ್ರಯರ್, ಸರ್ವಿಸ್, ಸೇಂಟ್, ರೆಲಿಕ್, ಫೀಸ್ಟ್, ಸ್ಯಾಕ್ರಿಫೈಸ್, ಪ್ರೇಯರ್, ಸೆರ್ಮನ್, ಪ್ರೀಚ್, ಪಾರ್ಲಿಮೆಂಟ್, ಸಾವರಿನ್, ಸ್ಟೇಟ್, ಗೌರ್ನಮೆಂಟ್, ಕೌನ್ಸಿಲ್, ಕೌನ್ಸೆಲ್, ಎಕ್ಸ್‌ಚೆಕರ್, ಛಾನ್ಸಲರ್, ಮಿನಿಸ್ಟರ್, ಆರ್ಮ್ರ್, ಬ್ಯಾನರ್, ಸೊಲ್ಜರ್ ಆಫೀಸರ್, ಬ್ಯಾಟಲ್, ವಾರ್, ಪೀಸ್, ಅಸಾಲ್ಟ್, ಸಾರ್ಜೆಂಟ್,

ಲೆಫ್ಟಿನೆಂಟ್, ಎನಿಮಿ, ಎಸ್ಕೇಪ್, ನೇವಿ, ಮಾರ್ಚ್, ವೈಕೌಂಟ್, ಬ್ಯಾರನ್, ಡ್ಯೂಕ್, ಪ್ರಿನ್ಸ್, ಕರ್ಟಿಸಿ, ಸ್ಕೂಲ್–ಇವೆಲ್ಲ ಫ್ರೆಂಚ್ ಪದಗಳು. ಅನೇಕ ಹೊಸ ವೃತ್ತಿಗಳೂ ಅವುಗಳಿಗೆ ಸಂಬಂಧಪಟ್ಟ ಪದಗಳೂ ಫ್ರೆಂಚರಿಂದ ಇಂಗ್ಲೆಂಡಿಗೆ ಬಂದುವು – ಹೇಬರ್ ಡ್ಯಾಷರ್, ಡ್ರೇಪರ್ ಮೊದಲಾದವು. ಸುಖೋಪಕರಣಗಳಾದ ಗೌನ್, ವೇಲ್, ಕ್ಲೋಕ್, ಕರ್ಚಿಫ್, ಎಂಬ್ರಾಯ್ಡರಿ, ಜೂಯೆಲ್ ಮೊದಲಾದವೂ ಫ್ರೆಂಚ್‌ನಿಂದ ಬಂದುವೇ. ಫ್ರೆಂಚ್ ಯಜಮಾನರಿಗೆ ಆಹಾರ ಒದಗಿಸುತ್ತಿದ್ದವರು ಇಂಗ್ಲಿಷ್ ಆಳುಗಳು. ಯಜಮಾನರು ಬೀಫ್ (ಎತ್ತು). ವೀಲ್ (ಜಿಂಕೆ), ಮಟನ್ (ಕುರಿ), ಪೋರ್ಕ್ (ಹಂದಿ) ಇತ್ಯಾದಿಯಾಗಿ ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ಪದಗಳನ್ನು; ಉಪಯೋಗಿಸುತ್ತಿದ್ದರು. ಅದೇ ಪ್ರಾಣಿಗಳಿಗೆ ಇಂಗ್ಲಿಷರು ಆಕ್ಸ್, ಡೀರ್, ಷೀಪ್, ಸ್ವೈನ್ ಎಂದು ಹೇಳುತ್ತಿದ್ದರು. ಕಾಲಕ್ರಮೇಣ ಎರಡೆರಡು ಪದಗಳೂ ಇಂಗ್ಲಿಷಿನಲ್ಲಿ ಉಳಿದುಕೊಂಡು ಫ್ರೆಂಚ್ ಪದಗಳು ಮಾಂಸಕ್ಕೂ ಇಂಗ್ಲಿಷ್ ಪದಗಳು ಪ್ರಾಣಿಗಳಿಗೂ ಮೀಸಲಾದವು. ಹೀಗೆ ಇಂಗ್ಲಿಷಿನ ಪದಗಳ ಅರ್ಥನಿಷ್ಕೃಷ್ಟತೆ ಹೆಚ್ಚಿತು. ಇಂಥ ಪದಗಳು ಇನ್ನೂ ಅನೇಕ ಬಂದವು. ಉದಾ. ಹಟ್–ಕಾಟೇಜ್, ಹೌಸ್–ಮನ್‌ಷನ್, ಫ್ರೆಂಡ್‌ಷಿಪ್–ಏಮಿಟಿ, ಹಾರ್ಟ–ಕಾರ್ಡಿಯಲ್, ಎಂಡ್–ಟರ್ಮಿನೇಟ್, ವಿಷ್–ಡಿಸೈರ್, ಹಿಂಡರ್–ಪ್ರಿವೆಂಟ್. ಇವುಗಳಲ್ಲಿ (ಮೊದಲನೆಯ) ಇಂಗ್ಲಿಷ್ ಪದಗಳೂ (ಎರಡನೆಯ) ಫ್ರೆಂಚ್ ಪದಗಳೂ ಮೊದಮೊದಲು ಒಂದೇ ಅರ್ಥವುಳ್ಳವಾಗಿದ್ದು ಬರುಬರುತ್ತ ಅರ್ಥವ್ಯತ್ಯಾಸವನ್ನು ತಳೆದವು. ಫ್ರೆಂಚ್ ಧಾತುಗಳಿಗೆ ಇಂಗ್ಲಿಷಿನ ಪ್ರತ್ಯಯಗಳನ್ನು ಸೇರಿಸಿ ಹೊಸ ಪದಗಳ ನಿರ್ಮಾಣ ಮಾಡುವುದು ನಡೆಯಿತು. ಉದಾ. ಕ್ಲೋಸ್–ನೆಸ್, ಡ್ಯೂಕ್–ಡಮ್, ಕಂಪ್ಯಾನಿಯನ್–ಷಿಪ್. ಈ ಪದಗಳನ್ನು ತೆಗೆದುಕೊಳ್ಳುವಾಗ ಫ್ರೆಂಚ್ ಭಾಷೆಯಲ್ಲಿ ಅವಕ್ಕಿದ್ದ ಉಚ್ಚಾರಣೆಯನ್ನು ಇಂಗ್ಲಿಷಿನ ಉಚ್ಚಾರಣಾ ರೀತಿಗೆ ಹೊಂದಿಸಿಕೊಳ್ಳಲಾಯಿತು. ಮಧ್ಯಯುಗದಲ್ಲಿ ಬಂದ ಫ್ರೆಂಚ್ ಪದಗಳಿಗೂ ಅನಂತರ ಬಂದ ಪದಗಳಿಗೂ ಇದೇ ವ್ಯತ್ಯಾಸ. ಉದಾಹರಣೆಗೆ, ಇತ್ತೀಚಿನ ಕಾಲದಲ್ಲಿ ಫ್ರೆಂಚ್ ಭಾಷೆಯಿಂದ ಇಂಗ್ಲಿಷಿಗೆ ಬಂದಿರುವ ಕಾನಿಸ್ಯೂರ್, ಅಮೆಟ್ಯೂರ್, ಷೆಫ್, ವ್ಯಾಲೆ, ಗ್ಯರಾಜ್ ಪದಗಳ ಉಚ್ಚಾರಣೆಗಳು ಮೂಲದಲ್ಲಿದ್ದಂತೆಯೇ ಇಂಗ್ಲಿಷಿನಲ್ಲೂ ಇವೆ. ಕೊನೆಯ ಪದ ಗ್ಯರಾಜ್ ಇಂಗ್ಲಿಷ್ ಮೋಟಾರು ಮಾಲೀಕರುಗಳಲ್ಲೂ ಚಾಲಕರಲ್ಲೂ ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತಿರುವುದಕ್ಕೆ ಅದರ ಬದಲಾಗುತ್ತಿರುವ ಉಚ್ಚಾರಣೆ ಸಾಕ್ಷಿ. ಗ್ಯಾರೇಜ್ ಎಂದೂ ಅನೇಕರು ಅದನ್ನು ಈಗ ಉಚ್ಚರಿಸುತ್ತಾರೆ. ಎಂದರೆ ಒತ್ತಡ ಪದದ ಮೊದಲ ಭಾಗದ ಮೇಲೆ ಬೀಳುತ್ತದೆ. ಹೀಗಾಗುವುದು ಇಂಗ್ಲಿಷ್ ಪದಗಳ ಉಚ್ಚಾರಣೆಯ ವೈಶಿಷ್ಟ್ಯ. 16ನೆಯ ಶತಮಾನದಿಂದ ಈಚೆಗೆ ಬ್ರಿಗಂಟೀನ್, ರೆಂಡವೋ, ಕಾಸ್ಸೇರ್, ವಾಲಿ, ವಾಸ್, ಮುಸ್ಟಾಷ್, ಪ್ರಾಮೆನೇಡ್, ಪಿಕಂಟ್, ಟ್ಯಾಬ್ಲೊ, ಬ್ಯಾಲೆ, ಲಿಯೇಸಾನ್, ನಯೀವ್, ಪಾನ್‌ಷಾನ್, ಎಮಿಗ್ರೆ, ಕೊರ್, ಕೂಲ್‌ಡಸಾಕ್, ಸಾಲಾನ್, ರೆಸ್ಯೂಮೆ, ಕ್ಲೀಷೆ, ಎಲೀಟ್, ಫಿಆನ್ಸೆ, ರೆಸಾನ್‌ಡೆಟರ್, ಕಾಮುಫ್ಲಾಜ್–ಮೊದಲಾದ ಅನೇಕ ಫ್ರೆಂಚ್ ಪದಗಳು ಇಂಗ್ಲಿಷಿಗೆ ಬಂದು ಅದರ ಸಂಪತ್ತನ್ನು ಹೆಚ್ಚಿಸಿವೆ. ಈ ಪದಗಳ ಉಚ್ಚಾರಣೆ ಮೂಲ ಫ್ರೆಂಚಿನ ಉಚ್ಚಾರಣೆಯೇ ಆಗಿರುವುದನ್ನು ಕಾಣಬಹುದು. ಜನಸಾಮಾನ್ಯರಲ್ಲದೆ ವಿದ್ಯಾವಂತರು ವಿಶಿಷ್ಟ ಉದ್ದೇಶಗಳಿಗಾಗಿ ಅವನ್ನು ತೆಗೆದುಕೊಂಡು ಬಳಸಿರುವುದೇ ಇದಕ್ಕೆ ಕಾರಣ.

15ನೆಯ ಶತಮಾನ ಇಂಗ್ಲಿಷ್ ಭಾಷೆಯ ಇತಿಹಾಸದಲ್ಲಿ ಪರ್ವಕಾಲ. ಆ ಅವಧಿಯಲ್ಲಿ ಇಂಗ್ಲಿಷ್ ಪದಗಳು ತಮ್ಮ ವಿಭಕ್ತಿ ಪ್ರತ್ಯಯಗಳನ್ನು ಕಳೆದುಕೊಂಡುವು. ಅಲ್ಲದೆ ಪದಗಳ ಉಚ್ಚಾರಣೆಯಲ್ಲೂ ವಿಫುಲವಾಗಿ ಬದಲಾವಣೆಯಾಯಿತು. ಉಚ್ಚಾರಣೆ ಮತ್ತು ಒತ್ತಡ ನಿಷ್ಕೃಷ್ಟವಾಗಿಲ್ಲದಿದ್ದಾಗ ಉತ್ತಮ ಕಾವ್ಯ ಬರುವುದು ಅಸಂಭವವಾಯಿತು. ತತ್ಕಾರಣ 15ನೆಯ ಶತಮಾನದ ಇಂಗ್ಲಿಷ್ ಸಾಹಿತ್ಯ ಕ್ಷೇತ್ರ ಬರಡಾಯಿತು. ಪರಿಸ್ಥಿತಿ ಉತ್ತಮಗೊಂಡು ಪದಗಳ ಉಚ್ಚಾರಣೆಯಲ್ಲಿ ಒಂದು ಸ್ತಿಮಿತತೆ ತಲೆದೋರಿದ ಮೇಲೆಯೇ ಮತ್ತೆ ಒಳ್ಳೆಯ ಸಾಹಿತ್ಯ–ಅದರಲ್ಲೂ ಕಾವ್ಯ–ಬರತೊಡಗಿದ್ದು. ಇದು ನಡೆದುದು 16ನೆಯ ಶತಮಾನದ ಎರಡನೆಯ ತಲೆಮಾರಿನ ಸುಮಾರಿಗೆ.

16ನೆಯ ಶತಮಾನದ ಇಂಗ್ಲಿಷ್ ಭಾಷೆ, ಸಾಹಿತ್ಯಗಳೆರಡೂ ಇನ್ನೊಂದು ಪ್ರಬಲವಾದ ಪ್ರಭಾವಕ್ಕೆ ಒಳಗಾದುವು. ಆಗ ನಡೆದ ಸಾಂಸ್ಕೃತಿಕ ನವೋದಯವೇ ಅದು. ಇಟಲಿ, ಪ್ರಾಚೀನ ರೋಮ್ ಮತ್ತು ಗ್ರೀಸ್‌ಗಳ ಸಾಹಿತ್ಯ, ಕಲೆ ಮೊದಲಾದವು ಪಶ್ಚಿಮ ಯುರೋಪಿನ ಜನರ ಮನೋಧರ್ಮದ ಮೇಲೆ ವಿಪುಲವಾದ ಪ್ರಭಾವ ಬೀರಿದ್ದಲ್ಲದೆ ಅವರ ಭಾಷೆಯೂ ಗ್ರೀಕ್ ಮತ್ತು; ಲ್ಯಾಟಿನ್ ಭಾಷೆಗಳಿಂದ ಪದಸಂಪತ್ತನ್ನು ಪಡೆದು ಸಮೃದ್ಧವಾಯಿತು. ಈ ಪದಗಳನ್ನು ತೆಗೆದುಕೊಂಡು ಇಂಗ್ಲಿಷಿನಲ್ಲಿ ಬಳಸಿದವರು ಪಂಡಿತರು–ಪಂಡಿತರಿಗಾಗಿ ಬರೆದ ಪುಸ್ತಕಗಳಲ್ಲಿ. ಆದ್ದರಿಂದ ಮೊದಮೊದಲು ವಿದ್ಯಾವಂತರ ವಲಯಗಳಿಗೆ ಸೀಮಿತವಾಗಿದ್ದ ಈ ಪದಗಳು ವಿದ್ಯೆ ಜನರಲ್ಲಿ ಹರಡಿದಂತೆಲ್ಲ ಸರ್ವಜನಪ್ರಿಯವಾದವು. ಲ್ಯಾಟಿನ್ ಮತ್ತು ಗ್ರೀಕ್ ಪದಗಳನ್ನು ತೆಗೆದುಕೊಳ್ಳುವ ಪ್ರವೃತ್ತಿ ಅಭ್ಯಾಸಗಳಂತೂ ಇಂಗ್ಲಿಷಿನಲ್ಲಿ ಇಂದಿಗೂ ನಿಂತಿಲ್ಲ. ಫ್ರೆಂಚ್ ಪದಗಳೂ ಲ್ಯಾಟಿನ್ ಪದಗಳೂ ಇಂಗ್ಲಿಷಿನ ಶಬ್ದಮಂದಿರದ ಆಧಾರಸ್ತಂಭಗಳಂತಿವೆ. ಎಷ್ಟು ಕ್ಷೇತ್ರಗಳಲ್ಲಿ ಎಷ್ಟು ಬಗೆಯ ಪದಗಳು ಬಂದುವೆಂಬುದು ಕೆಲವು ಉದಾಹರಣೆಗಳನ್ನು ಪರಿಶೀಲಿಸಿದರೆ ವಿದಿತವಾಗುತ್ತದೆ. ಲ್ಯಾಟಿನ್ನಿನ ಇಕ್ವಸ್ ಎಂಬ ಪದದಿಂದ ಇಂಗ್ಲಿಷಿನ ಈಕ್ವಲ್, ಈಕ್ವೇಟರ್, ಈಕ್ವಿವಲೆಂಟ್, ಅಡೆಕ್ವೆಟ್ ಪದಗಳೂ ಅನ್ನಸ್ (ವರ್ಷ) ಪದದಿಂದ ಇಂಗ್ಲಿಷಿನ ಆನ್ಯುಯಲ್, ಬೈಯನಿಯಲ್, ಪೆರಿನಿಯಲ್ ಪದಗಳೂ ಕಾರ್ಪಸ್ ಪದದಿಂದ ಕಾರ್ಪ್ಸ್, ಕೋರ್, ಕಾರ್ಪೊರೇಷನ್, ಕಾರ್ಪುಲೆಂಟ್ ಪದಗಳೂ ಕ್ರೆಡೊದಿಂದ ಕ್ರೀಡ್, ಕ್ರೆಡಿಬಲ್, ಇನ್‌ಕ್ರೆಡಿಬಲ್, ಕ್ರೆಡೆನ್ಸ್, ಮಿಸ್‌ಕ್ರಿಯೆಂಟ್ ಪದಗಳೂ ಮ್ಯಾಗ್ನಸ್ ಪದದಿಂದ ಮೇಜರ್, ಮೇಯರ್, ಮ್ಯಾಗ್ನೇಟ್, ಮ್ಯಾಗ್ನಿಫೈ, ಮ್ಯಾಗ್ನಿಟ್ಯೂಡ್ ಪದಗಳೂ ವೈಭವದಿಂದ ವಿವಿಡ್, ವಿವೇಷಸ್, ರಿವೈವ್, ಸರ್ವೈವ್ ಪದಗಳೂ ಬಂದಿವೆ. ವಾಸ್ತವವಾಗಿ ಇಂಥ ಸಾವಿರಾರು ಉದಾಹರಣೆಗಳನ್ನು ಕೊಡಬಹುದು. ಒಂದು ಲ್ಯಾಟಿನ್ ಮೂಲಪದದಿಂದ ಅನೇಕ ಇಂಗ್ಲಿಷ್ ಪದಗಳು ಹೇಗೆ ಬರಬಹುದೆಂಬುದನ್ನು ಈ ಉದಾಹರಣೆಗಳು ತೋರಿಸುತ್ತವೆ. ಗ್ರೀಕ್ ಭಾಷೆಯಿಂದಲೂ ಇಂಗ್ಲಿಷಿಗೆ ಇದೇ ತೆರನಾದ ಸಹಾಯವಾಗಿದೆ. ವಿದ್ವತ್ಪ್ರಪಂಚಕ್ಕೆ ಸೇರಿದ ನೂರಾರು ಪದಗಳು ಆ ಭಾಷೆಯಿಂದ ಬಂದುವು. ಆಂತ್ರೊಪಾಲಜಿ, ಮಿಸಾಂಚಿತ್ರೋಪ್, ಫಿಲಾಂತ್ರೊಪಿಸ್ಟ್, ಆಟೋಕ್ರಾಟ್, ಆಟೋಗ್ರಾಫ್, ಅನಾಟಮಿ, ಆಟೋಬಯಾಗ್ರಫಿ, ಆಟೊಮೊಬೈಲ್, ಬೈಬಲ್, ಬಿಬ್ಲಿಯಾಗ್ರಫಿ. ಬಿಬ್ಲಿಯೋಮೇನಿಯಕ್, ಇಡಿಯಟ್, ಇಡಿಯಮ್, ಇಡಿಯೊಸಿನ್‌ಕ್ರಸಿ, ಪೇಥಾಸ್, ಆ್ಯಂಟಿಪತಿ, ಸಿಂಪತಿ, ಪೆಟ್ರಿಫೈ, ಪೆಟ್ರೋಲಿಯಮ್, ಪೆರೆಂತೆಸಿಸ್–ಇವೆಲ್ಲ ಅಂಥ ಪದಗಳೇ. ಗ್ರೀಕಿನಿಂದ ಬಂದಿರುವ ಪದಗಳಲ್ಲಿ ಇವು ಕೇವಲ ಕೆಲವು ಮಾತ್ರ. ಸಂಸ್ಕೃತದ ಮೂಲ ಧಾತುಗಳಿಂದ ನಾವು ಸಂದರ್ಭಾನುಸಾರ ಅನೇಕ ಪದಗಳನ್ನು ರೂಪಿಸಿಕೊಳ್ಳಬಹುದಾಗಿರುವಂತೆ ಗ್ರೀಕ್ ಮೂಲಗಳಿಂದಲೂ ಇಂಗ್ಲಿಷರು ಮಾಡಿದ್ದಾರೆ. ಉದಾ : ಜೆಟಿಯೊ (ನಾನು ಅನ್ವೇಷಿಸುತ್ತೇನೆ) ಎಂಬ ಮೂಲಪದದಿಂದ ಜೆಟೆಮಾ (ಅನ್ವೇಷಣ ವಿಷಯ), ಜೆಟೆಟಿಸ್ (ಅನ್ವೇಷಣ ವಿಧಾನ), ಜೆಟೆಟೀಸ್ (ಅನ್ವೇಷಕ), ಜಟೆಟಿಕೋಸ್ (ಅನ್ವೇಷಣ ಶಕ್ತ ಅಥವಾ ಅನ್ವೇಷಣಾಸಕ್ತ)–ಹೀಗೆ ಪದಗಳನ್ನು ಪಡಯಲಾಗಿದೆ. ಈ ಕೆಲಸ ಇಂದೂ ನಡೆಯುತ್ತಿದೆ. ವಿಜ್ಞಾನಿಗಳು ತಮ್ಮ ಅನ್ವೇಷಣೆಗಳಿಗೂ ತಯಾರಿಕೆಗಳಿಗೂ ಹೊಸ ಹೆಸರುಗಳು ಬೇಕಾದಾಗ ಗ್ರೀಕ್ ಮತ್ತು ಲ್ಯಾಟಿನ್ ಮೂಲಗಳಿಗೆ ಕೈಚಾಚಿ ಅರ್ಥಸೂಚಕವಾದ ಹೆಸರುಗಳನ್ನು ಸೃಷ್ಟಿಸಿದ್ದಾರೆ. ಇವಲ್ಲದೆ ಆಲ್ಫಬೆಟ್, ಡ್ರಾಮ, ಕ್ರೈಟೀರಿಯನ್, ಪಾಲೆಮಿಕ್, ಆರ್ಕೆಸ್ಟ್ರಾ, ಡಾಗ್ಮ, ಮ್ಯೂಸಿಯಂ, ಅಟ್ಲಾಸ್, ಮೊದಲಾದ ಪದಗಳೆಲ್ಲ ಗ್ರೀಕ್ ಭಾಷೆಯಿಂದ ಬಂದಿರುವುವೇ, ಇಂಗ್ಲಿಷಿನಲ್ಲಿ ವಿಜ್ಞಾನ, ಕಲೆ, ಸಾಹಿತ್ಯ ವಿಮರ್ಶೆ, ತತ್ತ್ವಶಾಸ್ತ್ರ ಮೊದಲಾದ ವಿಷಯಗಳನ್ನು ವ್ಯಾಸಂಗ ಮಾಡುವವರೆಲ್ಲರೂ ಗ್ರೀಕ್ ಭಾಷೆಗೆ ಋಣಿಗಳು. ಪೇಲಿಯಂಟಾಲಜಿ, ಹೈಡ್ರೊಸ್ಟ್ಯಾಟಿಕ್ಸ್, ಮೆಗಾಲೋ ಮೇನಿಯಾ ಇತ್ಯಾದಿಯಾಗಿ ಪಾರಿಭಾಷಿಕ ಪದಗಳ ದೊಡ್ಡ ಪಟ್ಟಿಯನ್ನೇ ಕೊಡಬಹುದು. ಈ ಲ್ಯಾಟಿನ್ ಮತ್ತು ಗ್ರೀಕ್ ಪದಗಳ ಬಳಕೆಯ ಪರಿಣಾಮವಾಗಿ ಇಂಗ್ಲಿಷಿನಲ್ಲಿ ಪಂಡಿತಮಾನ್ಯವಾದ ಕ್ಲಿಷ್ಟಶೈಲಿಯೊಂದು ಕಡೆ, ಸಾಧಾರಣರಿಗೆ ಅರ್ಥವಾಗಬಲ್ಲ ಸರಳಶೈಲಿಯೊಂದು ಕಡೆ ಬೆಳೆದುವು. ಕಾಲಕ್ರಮೇಣ ಇವೆರಡೂ ಮಿಳನವಾಗಿ ಸಂದರ್ಭೋಚಿತವಾಗಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಿಂದ ಬಂದ ಪದಗಳ–ಆದರೆ ಒಟ್ಟಿನ ಮೇಲೆ ಇಂಗ್ಲಿಷ್ ಪದಗಳ–ಬಳಕೆ ವಾಡಿಕೆಯಾಗಿ ಉತ್ತಮವೂ ಎಲ್ಲ ಭಾವಗಳನ್ನೂ ಅರ್ಥಗಳನ್ನೂ ಸೂಚಿಸಬಲ್ಲುದೂ ಆದ ಶೈಲಿ ಬರಹಗಾರರಿಗೂ ಜನರಿಗೂ ಪ್ರಿಯವಾಗಿವೆ.

ಪ್ರಾಚೀನ ಭಾಷೆಗಳಾದ ಲ್ಯಾಟಿನ್ ಮತ್ತು ಗ್ರೀಕುಗಳಿಗಲ್ಲದೆ ಆಧುನಿಕ ಐರೋಪ್ಯ ಭಾಷೆಗಳಿಗೂ ಇಂಗಿಷ್ ಋಣಿಯಾಗಿದೆ. ಫ್ರೆಂಚ್ ಭಾಷೆಯ ಪ್ರಭಾವವನ್ನು ಕುರಿತು ಆಗಲೇ ಹೇಳಲಾಗಿದೆ. ಇಟ್ಯಾಲಿಯನ್, ಸ್ಪ್ಯಾನಿಷ್, ಪೋರ್ಚುಗೀಸ್, ಜರ್ಮನ್, ಡಚ್, ರಷ್ಯನ್, ಟರ್ಕಿಷ್, ಮೊದಲಾದ ಭಾಷೆಗಳಿಂದಲೂ ಪದಗಳು ಬಂದಿವೆ. ಸಾಹಿತ್ಯ, ಕಲೆ ಮೊದಲಾದ ಕ್ಷೇತ್ರಗಳಿಗೆ ಸೇರಿದ ಪದಗಳು ಇಟ್ಯಾಲಿಯನ್ನಿನಿಂದ ಹೆಚ್ಚಾಗಿ ಬಂದಿರುವುದು ಇಟಲಿ ನವೋದಯದ ತವರುನಾಡಾದುದರಿಂದ. ಸ್ಟೂಡಿಯೊ, ಫ್ರೆಸ್ಕೊ, ಕ್ಯಾರಾಸ್ಕೂರೂ, ರೆಪ್ಲಿಕಾ, ಮಾಟೋ, ಸ್ಟ್ಯಾಂಜಾಕ್ಯುಪೋಲಾ, ಪಯಾಜಾ, ವಾಯ್ಲಿನ್–ಇವೆಲ್ಲ ಇಟ್ಯಾಲಿಯನ್ ಪದಗಳು. ಬೇರೆ ಪದಗಳೂ ಅದರಿಂದ ಬೇಕಾದಷ್ಟು ಬಂದಿವೆ. ಸ್ಪ್ಯಾನಿಷ್ ಭಾಷೆಯಿಂದ ಗ್ರಾಂಡಿ, ನೀಗ್ರೊ, ಪೊಟಾಟೊ, ಎಸ್ಪ್ಲನೇಡ್, ಕೈನ್ಯಾನ್, ರೆನೆಗ್ಯಾಡೊ, ಟೊಬ್ಯಾಕೊ ಮೊದಲಾದ ಪದಗಳೂ ಪೋರ್ಚುಗೀಸ್ ಭಾಷೆಯಿಂದ ಕ್ಯಾಸ್ಟ್, ಪಗೋಡ, ಆಮಾಕೋಕೊ, ವೆರಾಂಡಾ ಮೊದಲಾದ ಪದಗಳೂ ರಷ್ಯನ್ ಭಾಷೆಯಿಂದ ಸ್ಟೆಪ್ಪಿ, ಬಾಲ್ಷೆವಿಕ್ ಪದಗಳೂ ಟರ್ಕಿಷ್ ಭಾಷೆಯಿಂದ ಕಾಫಿ, ಆಗಾ, ಕಿಯಾಸ್ಕ್, ಪಾಷಾ ಮೊದಲಾದವೂ, ಜರ್ಮನ್ ಭಾಷೆಯಿಂದ ಜೀಟ್ಗೀಸ್ಟ್, ಜಿಂಕೆ, ಕಿಂಡರ್‌ಗಾರ್ಟನ್ ಪದಗಳೂ ಡಚ್ ಭಾಷೆಯಿಂದ ಸಮುದ್ರಯಾನಕ್ಕೆ ಸಂಬಂಧಪಟ್ಟ ಕಮೋಡರ್, ಯಾಟ್, ಹಾಪ್, ಡಾಕ್, ಡಿಕ್‌ಯ್‌ಗಳೂ ಚಿತ್ರಲೇಖನಕ್ಕೆ ಸಂಬಂಧಿಸಿದ ಲ್ಯಾಂಡ್‌ಸ್ಕೇಪ್, ಸ್ಕೆಚ್, ಈಸೆಲ್, ಮೊದಲಾದವೂ ಬಂದಿವೆ. ಆಯಾ ದೇಶದ ಪದಗಳು ಆ ದೇಶಗಳು ಯಾವ ಯಾವ ಕಲೆಗಳಿಗೆ, ಶಾಸ್ತ್ರಗಳಿಗೆ, ಕಾರ್ಯಗಳಿಗೆ ಪ್ರಸಿದ್ಧವಾಗಿವೆ ಎಂಬುದನ್ನು ಸೂಚಿಸುತ್ತವೆ.

ಯುರೋಪಿನ ಭಾಷೆಗಳಲ್ಲದೆ ಅಮೆರಿಕದ ಸಂಯಕ್ತ ಸಂಸ್ಥಾನಗಳಿಂದಲೂ ದಕ್ಷಿಣ ಅಮೆರಿಕದಿಂದಲೂ ಇಂಗ್ಲಿಷ್ ಅನೇಕ ಪದಗಳನ್ನು ತೆಗೆದುಕೊಂಡಿದೆ. ಹೊರನಾಡುಗಳೊಂದಿಗೆ ಇಂಗ್ಲೆಂಡಿನ ಸಂಪರ್ಕ ಹೆಚ್ಚಿದಂತೆಲ್ಲ ಈ ಪದಗಳ ಸಂಗ್ರಹಣ ಹೆಚ್ಚುತ್ತಲೇ ಬಂದಿದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಭಾಷೆಯೂ ಇಂಗ್ಲಿಷೇ. ಆದರೆ ಆ ದೇಶಕ್ಕೆ ಯುರೋಪಿನ ನಾನಾ ಪ್ರದೇಶಗಳಿಂದ ವಲಸೆಬಂದ ಜನ ತಮ್ಮ ತಮ್ಮ ಭಾಷೆಗಳ ಪ್ರಭಾವನ್ನು ಅಲ್ಲಿನ ಇಂಗ್ಲಿಷಿನ ಮೇಲೆ ಬೀರಿದ್ದಾರೆ. ಮಾತೃದೇಶವನ್ನು ಬಿಟ್ಟು

ಸಾವಿರಾರು ಮೈಲಿಗಳ ದೂರ ಹೋದ ಅಮೆರಿಕದ ಇಂಗ್ಲಿಷ್ ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನು ಪಡೆಯಿತು. ಪದಗಳ ಉಚ್ಚಾರಣೆಯಲ್ಲೇ ಹಲಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಇಂಗ್ಲಿಷಿನಲ್ಲಿ ಈಗ ಫಿಗರ್, ಗೆಟ್, ಕ್ಯಾಚ್ ಎಂದು ಉಚ್ಚಾರಣೆಯಿರುವ ಪದಗಳು ಅಮೆರಿಕದ ಕೆಲವಡೆಗಳಲ್ಲಿ ಫಿಗ್ಗರ್, ಗಿಟ್, ಕೆಚ್ ಎಂಬ ಉಚ್ಚಾರಣೆ ಪಡೆದಿವೆ. ಹಿಂದೆ ಈ ಪದಗಳು ಇಂಗ್ಲೆಂಡಿನಲ್ಲೂ ಇದೇ ರೀತಿಯ ಉಚ್ಚಾರಣೆಯನ್ನು ಹೊಂದಿದ್ದು ಅನಂತರ ಬದಲಾವಣೆ ಹೊಂದಿದವು. ಅಮೆರಿಕದ ಕೆಲವು ಭಾಗಗಳಲ್ಲಿ ಮಾತೃದೇಶದಲ್ಲೇ ಇಲ್ಲವಾಗಿರುವ ಅಂಥ ಉಚ್ಚಾರಣೆಗಳು ಇನ್ನೂ ಜೀವಂತವಾಗಿವೆ. ಪದಗಳಲ್ಲೂ ವ್ಯತ್ಯಾಸಗಳುಂಟು. ಇಂಗ್ಲಿಷರು ಇಲ್ ಎಂಬುದನ್ನು ಅಮೆರಿಕನ್ನರು ಸಿಕ್ ಎನ್ನುತ್ತಾರೆ. (ಇಂಗ್ಲೆಂಡಿನಲ್ಲಿ ಸಿಕ್ ಎಂದರೆ ವಾಂತಿ ಬರುವಂತಾಗುವುದು ಎಂದರ್ಥ). ಇಂಗ್ಲೆಂಡಿನ ಡ್ರೈವರ್ ಅಮೆರಿಕದ ಇಂಜಿನಿಯರ್, ಇಂಗ್ಲೆಂಡಿನ ಲಗೇಜ್ ಅಮೆರಿಕದ ಬ್ಯಾಗೇಜ್, ಇಂಗ್ಲೆಂಡಿನ ರೈಲ್ವೆ ಅಮೆರಿಕದ ರೈಲ್‌ರೋಡ್, ಇಂಗ್ಲೆಂಡಿನ ಗಾರ್ಡ್ ಅಮೆರಿಕದ ಕಂಡಕ್ಟರ್ ಆಗುತ್ತವೆ. ಆ ದೇಶದ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರಿಂದ, ವಲಸೆ ಬಂದು ನೆಲೆಸಿದ ಸ್ಪ್ಯಾನಿಷ್, ಜರ್ಮನ್, ಐರಿಷ್, ಫ್ರೆಂಚ್, ಮೊದಲಾದವರಿಂದ ಅಲ್ಲಿನ ಇಂಗ್ಲಿಷಿಗೆ ಹಲವಾರು ಪದಗಳು ಬಂದು ಸೇರಿ ಇಂಗ್ಲಿಷ್ ಭಾಷೆಯ ಒಟ್ಟು ಶಬ್ದಸಮೂಹ ಹೆಚ್ಚಿದೆ. ದಕ್ಷಿಣ ಅಮೆರಿಕನ್ನರು ಇಂಗ್ಲಿಷ್ ಕಾಗುಣಿತವನ್ನು ಕೂಡ ಸರಳಗೊಳಿಸಲು ಪ್ರಯತ್ನಿಸಿದ್ದಾರೆ. ಉದಾ: Color, traveler ಪದಗಳು ಇಂಗ್ಲಿಷಿನ colour, traveler ಪದಗಳ ಅಮೆರಿಕನ್ ರೂಪಗಳು. ಉಚ್ಚರಿಸದೆ ಇರುವ ಅಕ್ಷರಗಳನ್ನು ಹೀಗೆ ಬಿಡಲಾಗಿದೆ.

ಪೌರ್ವಾತ್ಯ ದೇಶಗಳಿಂದಲೂ ಇಂಗ್ಲಿಷ್ ಶಬ್ದಭಂಡಾರಕ್ಕೆ ಕೊಡುಗೆ ಸಂದಿದೆ. ಫಕೀರ್, ಜೀರೋ, ಹೌರಿ, ಹೂಕಾ, ಫೌಲ್, ಸಿರಪ್, ಗಾರ್ಬಲ್, ಟ್ಯಾರಿಫ್, ಟ್ಯಾಮರಿಂಡ್, ಅಸ್ಯಾಸಿನ್, ಮ್ಯಾಗಜಿನ್ ಮೊದಲಾದ ಪದಗಳು ಅರಬ್ಬೀ ಭಾಷೆಯಿಂದಲೂ ಪ್ಯಾರಡೈಸ್, ಜಾಸ್ಮಿನ್, ಅಜ್ಯೂರ್, ಖಾಕಿ, ಪಾಲ್, ಚೆಸ್, ಮಸ್ಕ್ ಮೊದಲಾದವು ಪಾರಸೀ ಭಾಷೆಯಿಂದಲೂ ಟೀ, ಕ್ವೋಟೋಗಳು ಚೀನಿಭಾಷೆಯಿಂದಲೂ ಕಿಮೋನೋ, ಹರ–ಕಿರಿ, ಗೈಷ್ಯಾ, ಜುಜಿಟ್ಸು, ಜಿನ್ರಿಕ್ಷ ಪದಗಳು ಜಪಾನಿ ಭಾಷೆಯಿಂದಲೂ ಬೂಮರಾಂಗ್, ಒರಾಂಗ್ ಓಟಾಂಗ್ ಷಿಂಪಾಂಜಿ, ಟ್ಯಾಟೂ, ಟ್ಯಾಬೂ ಮೊದಲಾದವು ಪೆಸಿಫಿಕ್ ದ್ವೀಪಗಳಿಂದಲೂ ಬಂದಿವೆ. ನಮ್ಮ ಭಾರತೀಯ ಭಾಷೆಗಳೂ ಬೇಕಾದಷ್ಟು ಪದಗಳನ್ನು ಇಂಗ್ಲಿಷಿಗೆ ಕೊಟ್ಟಿವೆ. ಕ್ಯಾಲಿಕೋ, ಚಿಂಟ್ಸ್, ಕೋಪ್ರ, ಕಾಯಿರ್, ಷುಗರ್, ಇಂಡಿಗೊ, ಮಾಂಡ್, ಬೀಟ್‌ಲ್, ಅರೆಕ, ಸ್ಯಾಂಡಲ್, ಆಯಾ, ಬ್ಯಾನ್ಯನ್, ಸಾಂಬೂರ್, ಷಿಕಾರ್, ಜಗ್ಗರ್‌ನಾಟ್, ಲೂಟಿ, ಯೋಗಿ, ಧರ್ಮ, ಸಮಾಧಿ, ಸಂಸಾರ, ಪಂಡಿತ ಮೊದಲಾದವುಗಳೆಲ್ಲ ಭಾರತೀಯ ಪದಗಳೇ. ಇಂಥ ಪದಗಳು ಸಾವಿರಾರಿವೆ ಎಂದು ತಜ್ಞರು ಲೆಕ್ಕ ಹಾಕಿದ್ದಾರೆ.

ಮೇಲಿನ ವಿವರಗಳು ಇಂಗ್ಲಿಷ್ ಭಾಷೆ ಹೇಗೆ ನಿಸ್ಸಂಕೋಚವಾಗಿ ಜಗತ್ತಿನ ಎಲ್ಲ ಭಾಷೆಗಳಿಂದಲೂ ತನಗೆ ಬೇಕಾದ, ಅನುಕೂಲವಾದ ಪದಗಳನ್ನು ತೆಗೆದುಕೊಂಡು ವಿವಿಧ ಮುಖಗಳ ಶಬ್ದಸಂಪತ್ತನ್ನು ವೃದ್ಧಿಪಡಿಸಿಕೊಂಡಿದೆ. ಹೀಗೆ ಎಲ್ಲ ಅನುಭವಗಳ, ಭಾವಗಳ, ಆಲೋಚನೆಗಳ ಅಭಿವ್ಯಕ್ತಿಗೂ ಸಾಮರ್ಥ್ಯವನ್ನು ಗಳಿಸಿದೆ ಎಂಬುದರ ಅರಿವು ಸ್ವಲ್ಪಮಟ್ಟಿಗಾದರೂ ನಮಗೆ ತೋರದಿರದು. ಹೀಗೆ ಅದು ಎಲ್ಲ ಕಡೆಯಿಂದಲೂ ಶಬ್ದಸಂಪತ್ತನ್ನು ಪಡೆದಿರುವುದರಿಂದಲೇ ಜಗತ್ತಿನ ಅತ್ಯಂತ ವ್ಯಾಪಕವೂ ಪ್ರಭಾವಯುತವೂ ಆದ ನುಡಿಯಾಗಿ ಶೋಭಿಸುತ್ತಿರುವುದು.

ಇಂಗ್ಲಿಷ್ ಭಾಷೆ ಬೆಳೆದಿರುವುದು ಕೇವಲ ಪರಭಾಷಾಪದಗಳನ್ನು ತೆಗೆದುಕೊಂಡು ತನ್ನ ಭಂಡಾರಕ್ಕೆ ಸೇರಿಸಿಕೊಳ್ಳುವುದರಿಂದಲೇ ಅಲ್ಲ. ಅದರಲ್ಲಿ ಸಾಹಿತ್ಯ ಸೃಷ್ಟಿ ಮಾಡಿರುವ ಪ್ರಸಿದ್ಧ ಲೇಖಕರನೇಕರು ಹೊಸ ಹೊಸ ಪದಗಳನ್ನೂ ಪದಗುಚ್ಛಗಳನ್ನೂ ರೂಪಿಸಿ ಅದರ ಅಭಿವ್ಯಕ್ತಿಶಕ್ತಿಯನ್ನು ಹೆಚ್ಚಿಸಿದ್ದಾರೆ. ಅವರೆಲ್ಲರೂ ತಮ್ಮ ಭಾಷೆಯ ಪದಗಳನ್ನು ಹೊಸ ಹೊಸ ರೀತಿಗಳಲ್ಲಿ ಉಪಯೋಗಿಸಿ ಅವುಗಳಿಗೆ ಹೊಸ ಜೀವವನ್ನೇ ಕೊಟ್ಟಿದ್ದಾರೆ. ಹೊಸ ಪದಗಳನ್ನು ಸೃಷ್ಟಿಸುವುದು ಹೇಗೆ ಭಾಷೆಯ ಭಂಡಾರವನ್ನು ಬೆಳೆಸುವುದೊ ಹಾಗೆಯೇ ಇರುವ ಪದಗಳ ನೂತನ ಸಂಯೋಜನೆ ಮತ್ತು ಪ್ರಯೋಗಗಳು ಅದರಲ್ಲಿರುವ ಅಭಿವ್ಯಕ್ತಿಸಾಧ್ಯತೆಗಳನ್ನು ಬೆಳೆಸುತ್ತವೆ. ಛಾಸರ್, ಸ್ಪೆನ್ಸರ್, ಬೈಬಲಿನ ಪ್ರಸಿದ್ಧ ಇಂಗ್ಲಿಷ್ ಭಾಷಾಂತರವಾದ ದಿ ಆಥರೈಸ್ಡ್ ವರ್ಷನ್ನಿನ ಕರ್ತರು. ಷೇಕ್ಸ್ ಪಿಯರ್, ಸ್ಪೆನ್ಸರ್, ಮಿಲ್ಟನ್ ಇವರನ್ನು ಈ ಸಂದರ್ಭದಲ್ಲಿ ಮುಖ್ಯರೆಂದು ನೆನೆಯಬೇಕು. ಬೈಬಲಿನ ಭಾಷಾಂತರದಿಂದ ಇಂಗ್ಲಿಷಿಗೆ ಪೀಸ್ ಮೇಕರ್, ಲಾಂಗ್ ಸಫರಿಂಗ್, ಲವಿಂಗ್ ಕೈಂಡ್ ನೆಸ್, ಮಾರ್ನಿಂಗ್ ಸ್ಟಾರ್, ಫರ್ಮಮೆಂಟ್, ಡ್ಯಾಮ್ಸೆಲ್ ಮೊದಲಾದ ಮುದ್ದಾದ ಮಾತುಗಳು ಸಿಕ್ಕಿರುವುದಲ್ಲದೆ, ನ್ಯೂ ವೈನ್ ಇನ್ ಓಲ್ಡ್ ಬಾಟಲ್, ಹೌಸ್ ಡಿವೈಡೆಡ್ ಅಗೈನ್ಸ್ಟ್ ಇಟ್‌ಸೆಲ್ಫ್, ದಿ ಅವರ್ ಹ್ಯಾಸ್ ಕಮ್, ದಿ ಇಲೆವಂತ್ ಅವರ್, ಎ ಲೇಬರ್ ಆಫ್ ಲವ್, ಟು ಸಿ ಐ ಟು ಐ, ಕ್ಯಾಸ್ಟ್ ಪರ್ಲ್ಸ್ ಬಿಫೋರ್ ಸ್ವೈನ್, ಮೊದಲಾದ ಅರ್ಥ ಪೂರ್ಣವಾದ ನೂರಾರು ಪದಗುಚ್ಛಗಳು ಬಂದಿವೆ. ಫುಟ್ ಬಾಲ್, ಮಲ್ಟಿ ಟ್ಯೂಡಿನಸ್ ಇನ್ ಕಾರ್ನಡೈನ್, ಹೋಮ್ ಕೀಪಂಗ್, ಎ ಹೆವೆನ್ ಕಿಸಿಂಗ್ ಹಿಲ್, ದಿ ಸಿಯರ್ ಅಂಡ್ ಯಲ್ಲೋ ಲೀಫ್, ಟು ಬಿ ಆರ್ ನಾಟು ಟು ಬಿ, ಅಂಡರ್ ದಿ ಗ್ರೀನ್‌ವುಡ್ ಟ್ರೀ, ದಿ ಟೈಮ್ ಈಸ್ ಔಟ್ ಆಫ್ ಜಾಯಿಂಟ್, ಬ್ರೆವಿಟಿ ಈಸ್ ದಿ ಸೋಲ್ ಆಫ್ ವಿಟ್ ಮೊದಲಾದ, ಇಂಗ್ಲಿಷ್ ಬಲ್ಲವರು ಮತ್ತೆ ಮತ್ತೆ ಉಪಯೋಗಿಸುವ ಸಾವಿರಾರು ಪದಗಳೂ ಪದಗುಚ್ಛಗಳೂ ಷೇಕ್ಸ್‌ಪಿಯರನವು. ನಾಮಪದವನ್ನು ಕ್ರಿಯಾಪದವಾಗಿ ಉಪಯೋಗಿಸುವುದು ಇತ್ಯಾದಿ ಪ್ರಯೋಗಗಳಲ್ಲಿ ಷೇಕ್ಸ್‌ಪಿಯರ್ ಎತ್ತಿದ ಕೈ. ಸ್ಪೆನ್ಸರ್ ಮತ್ತು ಮಿಲ್ಟನರೂ ಇದೇರೀತಿ ತಮ್ಮದೇ ಆದ ಪದಗಳನ್ನು ಸೃಷ್ಟಿಸಿ ಭಾಷೆಗೆ ನೀಡಿದ್ದಾರೆ. ಅವರ ಅನಂತರ ಬಂದ ಲೇಖಕರು ತಮ್ಮ ತಮ್ಮ ಯೋಗ್ಯತಾನುಸಾರ ಈ ಕೆಲಸ ಮಾಡಿರುವರು. ಒಂದು ಭಾಷೆ ಬೆಳೆಯಲು ಅದರಲ್ಲಿ ಕೃತಿರಚನೆ ಮಾಡುವ ಬರೆಹಗಾರರು ಹೇಗೆ ಸಹಾಯಕರಾಗಬಹುದು ಎಂಬುದಕ್ಕೆ ಈ ಇಂಗ್ಲಿಷ್ ಲೇಖಕರು ಅತ್ಯುತ್ತಮ ನಿದರ್ಶನಗಳಾಗಿದ್ದಾರೆ.

ಇಂಗ್ಲಿಷ್ ಭಾಷೆ ಇನ್ನೊಂದು ರೀತಿಯಲ್ಲಿ ಬೆಳೆದಿದೆ. ಒಂದೇ ಅರ್ಥವನ್ನು ಕೊಡುವ ಅನೇಕ ಶಬ್ದಗಳು ಯಾವ ಭಾಷೆಯಲ್ಲಾದರೂ ಬರುವುದುಂಟು. ಸಾಮಾನ್ಯ ಜನ ಅನಾವಶ್ಯಕವಾದ ಇಂಥ ಪದಗಳನ್ನೆಲ್ಲ ಬಳಸಲು ಇಷ್ಟಪಡುವುದಿಲ್ಲ. ಆದ್ದರಿಂದ ಕಾಲಕ್ರಮೇಣ ಅವುಗಳಲ್ಲಿ ಕೆಲವನ್ನು ಮರೆತುಬಿಡಬಹುದು. ಇಲ್ಲದಿದ್ದರೆ ಒಂದು ಅರ್ಥದಲ್ಲಿ ಒಂದು ಅಥವಾ ಎರಡು ಪದಗಳನ್ನು ಇಟ್ಟುಕೊಂಡು ಮಿಕ್ಕ ಪದಗಳನ್ನು ಸ್ವಲ್ಪ ಬೇರೆ ಅರ್ಥಕೊಡುವಂತೆ ಮಾರ್ಪಡಿಸಿಕೊಳ್ಳಬಹುದು. ಇಂಗ್ಲಿಷಿನಲ್ಲೂ ಇಂಥ ಅರ್ಥವ್ಯತ್ಯಾಸ ನಾನಾರೀತಿಯಲ್ಲಿ ನಡೆದಿದೆ. ಅಂಕಿತನಾಮಗಳು ಸಾಮಾನ್ಯನಾಮಗಳಾಗುವುದು ಒಂದು ಉದಾಹರಣೆ. ಸ್ಯಾಂಡ್‌ವಿಚ್ ಎಂದರೆ ಇಂದು ಎರಡು ಬ್ರೆಡ್ ಚೂರುಗಳ ನಡುವೆ ಏನಾದರೂ ವ್ಯಂಜನಪದಾರ್ಥವಿಟ್ಟು ಮಾಡಿರುವ ತಿನಿಸು. ಅದರ ಹೆಸರು ಅದನ್ನು ಮೊದಲು ಬಳಕೆಗೆ ತಂದ ಲಾರ್ಡ್ ಸ್ಯಾಂಡ್ವಿಚ್ಚನದು. ರಸ್ತೆಗೆ ಟಾರು ಹಾಕುವುದಕ್ಕೆ ಮ್ಯಾಕಡಮೈಸ್ ಎನ್ನುವುದುಂಟು–ಮ್ಯಾಕ್ ಆಡಮ್ ಅದರ ಪ್ರವರ್ತಕರಲ್ಲಿ ಒಬ್ಬನಾದ್ದರಿಂದ, ಬಾಯ್ಕಾಟ್, ಲಿಂಡ್, ಮೆಂಟಾರ್, ವೋಲ್ಟ್, ಡಾಹ್ಲಿಯಾ, ಗಿಲೊಟಿನ್, ಪ್ಯಾಶ್ಚರೈಸ್ ಮೊದಲಾದ ಪದಗಳೆಲ್ಲ ಹೀಗೆ ಬಂದವು. ಸ್ಥಳಗಳ ಹೆಸರುಗಳಿಂದಲೂ ಕೆಲವು ಪದಗಳು ಬಂದಿವೆ. ಕ್ಯಾಲಿಕಟ್‌ನಿಂದ ಕ್ಯಾಲಿಕೊ, ಡಾಮಸ್ಕಸಿನಿಂದ ಡಾಮಾಸ್ಕ್, ಈಜಿಪ್ಟಿನಿಂದ ಜಿಪ್ಸಿ, ಇತ್ಯಾದಿ. ಕೆಲವು ಹೆಸರುಗಳು ಮೊದಲು ಒಂದೇ ಒಂದು ವಸ್ತುವನ್ನು ಸೂಚಿಸುತ್ತಿದ್ದು ಈಚೆಗೆ ಸಾಮಾನ್ಯವಾಗಿವೆ. ಮೂಲವಸ್ತುಗಳನ್ನು ಹೋಲುವ ಇತರ ವಸ್ತುಗಳಿಗೂ ಅವನ್ನು ಬಳಸುವ ವಾಡಿಕೆ ಬಂದಿದೆ. ಉದಾ: ಪೈಪ್ ಎಂಬ ಪದ ಮೂಲತ: ಕೊಳವೆ. ಇದನ್ನು ಕೊಳಲು, ನಳಿಗೆ, ಸಿಗಾರು–ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸುತ್ತಾರೆ. ಟಂಗ್, ನಾಲಿಗೆ, ಬೆಂಕಿಯ ಜ್ವಾಲೆ, ಭೂಮಿಯ ಚಾಚು, ಹೀಗೆಲ್ಲಾ ಆಗಿದೆ. ಇನ್ನೂ ಕೆಲವು ಪದಗಳು ಅರ್ಥವಿಸ್ತರಣೆಹೊಂದಿವೆ. ಕಂಪ್ಯಾನಿಯನ್ ಮೊದಲು ಭೋಜನದಲ್ಲಿ ಸಂಗಾತಿಯಾಗಿದ್ದವು. ಈಗ ಯಾವ ಸಂಗಾತಿಯಾದರೂ ಆಗಬಹುದು. ಕರ್ಫ್ಯೂ ಮೊದಲು ರಾತ್ರಿ ಹೊತ್ತಿನಲ್ಲಿ ಮನೆಯಲ್ಲಿರಬೇಕೆಂದಿದ್ದುದು ಈಗ ಯಾವ ಹೊತ್ತಿನಲ್ಲಾದರೂ ಆದೀತು. ಮೇಕೆ ಕೊಲ್ಲುವವನಾಗಿದ್ದ ಬುಚರ್ ಈಗ ಯಾವ ಪ್ರಾಣಿಯನ್ನಾದರೂ ಕಡಿದು ಮಾರುತ್ತಾನೆ. ಈ ಪ್ರವೃತ್ತಿಗೆ ವಿರುದ್ಧವಾದುದು ಅರ್ಥ ಸಂಕುಚಿತವಾಗುವುದು. ಮೀಟ್ ಯಾವ ಆಹಾರವಾದರೂ ಆಗಬಹುದಾಗಿತ್ತು; ಈಗ ಮಾಂಸ ಮಾತ್ರ; ಡೀರ್ ಯಾವ ಪ್ರಾಣಿಯಾದರೂ ಆಗಿದ್ದುದು ಈಗ ಜಿಂಕೆ ಮಾತ್ರ; 'ಸ್ಟಿಂಕ್' ಯಾವ ವಾಸನೆಯಾದರೂ ಆಗಿರಬಹುದಾಗಿದ್ದುದು ಈಗ ಕೆಟ್ಟ ವಾಸನೆ ಮಾತ್ರ. ವಾಯೆಜ್ ಯಾವ ಯಾನವಾದರೂ ಆಗಿದ್ದುದು ಈಗ ನೌಕಾಯಾನ ಮಾತ್ರ. ಕೆಲವು ಸಾರಿ ಕಾಗುಣಿತ ವ್ಯತ್ಯಾಸದಿಂದ ಅರ್ಥವ್ಯತ್ಯಾಸವೂ ಆಗಿಬಿಟ್ಟಿದೆ. ಫ್ರೂ–ಥರೊ, ಹ್ಯೂಮನ್–ಹ್ಯುಮೇನ್, ಟು–ಟೂ, ಮ್ಯಾಂಟಲ್–ಮ್ಯಾಂಟ್ಲ್ ಹೀಗೆ. ಕೆಲವು ಪದಗಳು ಅಶುಭಸೂಚಕವೆಂಬ ಕಾರಣದಿಂದ ಜನ ಅವಕ್ಕೆ ಬದಲಾಗಿ ಬೇರೆ ಪದಗಳನ್ನು ಬಳಸುತ್ತಾರೆ. ಉದಾಹರಣೆಗೆ ಸಮಾಧಿ ಎಂಬ ಅರ್ಥ ಕೊಡುವ ಗ್ರೇವಿಗೆ ಬದಲಾಗಿ ಸಿಮೆಟರಿ ಎನ್ನುವುದು. ಸಿಮೆಟರಿ ವಾಸ್ತವವಾಗಿ ಮಲಗುವ ಸ್ಥಳ ಮಾತ್ರ. ಲಿಂಗಭೇದಗಳನ್ನು ಸೂಚಿಸಲು ಬೇರೆ ಬೇರೆ ಪದಗಳು ಸೃಷ್ಟಿಯಾಗಿ ಪದಗಳು ಬೆಳೆವುದುಂಟು: ಕನ್ನಡದ ಹೆಣ್ಣು ಕುದುರೆ, ಹೆಣ್ಣುನಾಯಿ, ಹೆಣ್ಣು ಹುಲಿ ಮೊದಲಾದ ಪದಗಳಿಗೆ ಇಂಗ್ಲಿಷಿನಲ್ಲಿ ಮೇರ್, ಬಿಚ್, ಟೈಗ್ರೆಸ್ ಇತ್ಯಾದಿಯಾಗಿ ಪ್ರತ್ಯೇಕ ಪದಗಳೇ ಇವೆ. ಕೆಲವು ಪದಗಳ ಅರ್ಥ ಬರಬರುತ್ತ ಉಚ್ಚವಾದರೆ ಇನ್ನು ಕೆಲವು ಪದಗಳ ಅರ್ಥ ಕೀಳಾಗುತ್ತದೆ. ಉದಾ : ಪೈರೇಟ್ ಎಂದರೆ ಸಾಹಸಿ ಎಂದಷ್ಟೆ ಇದ್ದುದು ಈಗ ಕಡಲ್ಗಳ್ಳ ಎಂದಾಗಿದೆ. ಹೊಸ ಅರ್ಥಕ್ಕೂ ಮೂಲ ಅರ್ಥಕ್ಕೂ ಈಗಲೂ ಸ್ವಲ್ಪಮಟ್ಟಿನ ಸಂಬಂಧ ಉಳಿದುಕೊಂಡು ಬಂದಿರುವುದನ್ನು ಗಮನಿಸಬೇಕು. ಸ್ಲೈ, ಕ್ರಾಫ್ಟಿ, ಕನಿಂಗ್ ಎಂಬ ಪದಗಳ ಮೂಲ ಅರ್ಥ ಚತುರ ಎಂದಿದ್ದುದು ಈಗ ಕದೀಮ ಎಂದಾಗಿದೆ. ಇದಕ್ಕೆ ವಿರುದ್ಧವಾಗಿ ಕುದುರೆಯ ಆಳು ಎಂಬರ್ಥದ ಮಾರ್ಷಲ್ ಈಗ ಸೈನ್ಯಾಧಿಕಾರಿಯ ಬಿರುದು; ಸೇವಕ ಎಂದರ್ಥ ಕೊಡುತ್ತಿದ್ದ ಮಿನಿಸ್ಟರ್ ಈಗ ಮಂತ್ರಿ ಅಥವಾ ಧರ್ಮಬೋಧಕ. ಹೀಗೆ ಬೇರೆ ಬೇರೆ ಅರ್ಥ ಬಂದಾಗ ಪದ ಹಿಂದಿನದೇ ಆದರೂ ಅದು ಹೊಸ ಪದದ ಸೃಷ್ಟಿಗೆ ಸಮವಾಗುತ್ತದೆ.

ಇಂಗ್ಲಿಷಿನಲ್ಲಿ ಇಂಥ ಹೊಚ್ಚ ಹೊಸ ಪದಗಳ ಸೃಷ್ಟಿಯೂ ಆಗಿದೆ. ಒಂದು ಪದದಿಂದ ಇನ್ನೊಂದನ್ನು ರೂಪಿಸಿಕೊಳ್ಳುವುದೂ ನಡೆದಿದೆ (ಕ್ರಿಯಾಪದಗಳ ವಿವಿಧ ಭೇದಗಳನ್ನು ಸೂಚಿಸಲು ಈ ರೀತಿಯ ಪದಸೃಷ್ಟಿ ಸಹಾಯಕವಾಗುತ್ತದೆ). ಉದಾ: ಸಿಂಗ್–ಸ್ಯಾಂಗ್–ಸಂಗ್–ಸಾಂಗ್ ಇತ್ಯಾದಿ. ಇದಲ್ಲದೆ ಎರಡು ಬೇರೆ ಬೇರೆ ಪದಗಳನ್ನು ಸೇರಿಸಿ ಒಂದು

ಪದವಾಗಿಸಿರುವುದೂ ಉಂಟು. ಉದಾ : ಹೌಸ್–ಟಾಪ್, ರೇಲ್–ವೇ, ವೀಕ್–ಎಂಡ್, ಸ್ವೀಟ್–ಮೀಟ್, ಅಪ್–ಗ್ರೇಡ್, ಮೊದಲಾದವು. ಪದಗಳನ್ನು ಸಂಕ್ಷಿಪ್ತಗೊಳಿಸಿಯೂ ಬೇರೆ ಪದಗಳನ್ನು ಪಡೆಯಲಾಗಿದೆ. ಆಮ್ನಿಬಸ್ ನಿಂದ ಬಸ್, ಫೋಟೋಗ್ರಾಫಿನಿಂದ ಫೋಟೋ, ಅಮೆಂಡಿನಿಂದ ಮೆಂಡ್, ವೆಟೆರಿನರಿಯಿಂದ ವೆಟ್–ಹೀಗೆ.

ಇವಲ್ಲದೆ ಪ್ರಾಂತೀಯ ಪ್ರಯೋಗಗಳು, ಆಡುಮಾತು, ಅಶಿಷ್ಟಭಾಷೆ, ರಹಸ್ಯಭಾಷೆ ಇವುಗಳಿಂದಲೂ ಬಂದ ಎಷ್ಟೋ ಪದಗಳು ವರ್ಷವರ್ಷವೂ ಇಂಗ್ಲಿಷಿನ ಶಬ್ದಸಂಪತ್ತನ್ನು ವಿಸ್ತರಿಸುತ್ತಿವೆ.

ಇಂಗ್ಲಿಷ್ ಭಾಷೆ ಶಾಖೋಪಶಾಖೆಯಾಗಿ ಹೀಗೆಲ್ಲ ಬೆಳೆದು ಮಹತ್ತರವಾದ ವೃಕ್ಷವಾಗಿ ನಿಂತಿದೆ. ಅದರ ಬೆಳವಣಿಗೆಯ ರಹಸ್ಯವಿರುವುದು ಅದು ಯಾವ ಪ್ರಭಾವಕ್ಕಾದರೂ ತನ್ನ ಬಾಗಿಲನ್ನು ತೆರೆದಿಟ್ಟಿರುವುದು. ಆಧುನಿಕ ಯುಗದಲ್ಲಿ ವಿಜ್ಞಾನಿಗಳು ತಮ್ಮ ಆವಶ್ಯಕತೆಗಳಿಗಾಗಿ ಬೇಕು ಬೇಕಾದಷ್ಟು ಹೊಸ ಪದಗಳನ್ನು ಸೃಷ್ಟಿಸಿಕೊಂಡಿದ್ದಾರೆ, ಸೃಷ್ಟಿಸುತ್ತಲಿದ್ದಾರೆ. ಟೆಲಿಗ್ರಾಫ್, ಟೆಲಿಫೋನ್, ಅಲ್ಯೂಮಿನಿಯಂ ಇತ್ಯಾದಿ ಹೆಸರುಗಳ ಜೊತೆಗೆ ಇತ್ತೀಚಿನ ರೇಡಾರ್, ಸ್ಪೇಸ್ ಷಿಪ್, ಮಾಡ್ಯೂಲ್ ಮೊದಲಾದ ಪದಗಳನ್ನೂ ಇಲ್ಲಿ ಸೂಚಿಸಬಹುದು. ವಿಜ್ಞಾನದ ಬೆಳೆವಣಿಗೆ ಭಾಷೆಯ ಬೆಳೆವಣಿಗೆಗೆ ಹೇಗೆ ಸಾಧಕವಾಗಬಹುದೆಂಬುದಕ್ಕೆ ಇಂಗ್ಲಿಷಿನಲ್ಲಿ ಒಳ್ಳೆಯ ನಿದರ್ಶನಗಳು ದೊರೆಯುತ್ತವೆ. ರೇಡಿಯೋ, ಟೆಲಿವಿಷನ್, ಸಿನಿಮಾ ಮೊದಲಾದವು ಇಂಗ್ಲಿಷನ್ನು ಜಗತ್ತಿನಾದ್ಯಂತವೂ ಹರಡುವ ಸಾಧನಗಳಾಗಿ ಪರಿಣಮಿಸಿವೆ. ಇಂಗ್ಲಿಷಿನ ಕಾಗುಣಿತ ಸ್ವಲ್ಪ ಕ್ಲಿಷ್ಟವೆಂದು ಅದನ್ನು ಹೊಸದಾಗಿ ಕಲಿಯತೊಡಗಿದವರಿಗೆ ಅನ್ನಿಸಬಹುದಾದರೂ ಅದು ದುರ್ಭರವಾಗುವಂಥ ಸಮಸ್ಯೆಯೇನೂ ಅಲ್ಲ. ಇಂಗ್ಲಿಷರೂ ಅಮೆರಿಕದವರೂ ತಾವೇ ಈ ಕಷ್ಟವನ್ನು ಮನಗಂಡು ಕಾಗುಣಿತವನ್ನು ಸುಧಾರಿಸಲು ಪ್ರಯತ್ನಿಸಿದ್ದಾರೆ. ಆದರೆ ಜನ ಅಷ್ಟು ಸುಲಭವಾಗಿ ತಮ್ಮ ಪದ್ಧತಿಗಳನ್ನು ಬಿಟ್ಟುಕೊಡುವುದಿಲ್ಲ. ಇಂಗ್ಲಿಷ್ ವ್ಯಾಕರಣ ವಿಪರೀತ ನಿಯಮಗಳಿಂದ ಭಾಷೆಯ ಉಸಿರುಕಟ್ಟಿಸದೆ ಸುಲಭವಾಗಿದೆ ಯೆಂದೇ ಹೇಳಬಹುದು. ಈ ಎಲ್ಲ ಕಾರಣಗಳಿಂದ ಅದು ಜಗತ್ತಿನ ಅತ್ಯಂತ ಹೆಚ್ಚಿನ ಸಂಖ್ಯೆಯ ಜನ ಮಾತಾಡುವ ಅಥವಾ ಅರ್ಥಮಾಡಿಕೊಳ್ಳಬಲ್ಲ ಭಾಷೆಯಾಗಿದೆ. ಅದರ ಪದಗಳ ಸಂಖ್ಯಾ ವಿಪುಲತೆ ಮತ್ತು ಅರ್ಥನಿಷ್ಕೃಷ್ಟತೆಗಳಿಗೆ ಆ ಭಾಷೆಯಲ್ಲಿ ಬಂದಿರುವ ನಿಘಂಟುಗಳು ಸೂಚಕವಾಗಿವೆ. ಅವುಗಳಲ್ಲಿ 18ನೆಯ ಶತಮಾನದಲ್ಲಿ ಪ್ರಕಟವಾದ ಜಾನ್ಸನ್ನನನಿಘಂಟು ಇಂದೂ ತನ್ನದೇ ಆದ ಒಂದು ಸ್ಥಾನ ಪಡೆದಿದೆ. ಅಲ್ಲಿಂದೀಚೆಗೆ ಬಂದಿರುವ ವೆಬ್ಸ್ಟರ್‌ರವರ ನಿಘಂಟು. ಆಕ್ಸ್‌ಫರ್ಡ್ ನಿಘಂಟು, ರ್‍ಯಾಂಡಮ್ ಹೌಸ್ ನಿಘಂಟು ಮೊದಲಾದುವು ಪ್ರಸಿದ್ಧವಾಗಿವೆ. ಆಕ್ಸ್‌ಫರ್ಡ್ ನಿಘಂಟು ಇಂಗ್ಲಿಷ್ ಭಾಷೆಗೆ ಸಂಬಂಧಪಟ್ಟ ವಿಷಯಗಳಲ್ಲಿ ದೊಡ್ಡ ಪ್ರಮಾಣ ಗ್ರಂಥ. ಈ ನಿಘಂಟುಗಳ ಪುಟಗಳನ್ನು ತಿರುವಿಹಾಕುವುದೇ ಒಂದು ವಿದ್ಯಾಭ್ಯಾಸ. ಇಂಗ್ಲಿಷಿನ ಕಲಿಕೆ ಇಂದು ಇಡೀ ಜಗತ್ತಿನ ಸಂಸ್ಕೃತಿಯನ್ನೂ ಜನರನ್ನೂ ಪರಿಚಯ ಮಾಡಿಕೊಡಬಲ್ಲ ಪರಿಣಾಮಕಾರಿ ಸಾಧನಗಳಲ್ಲಿ ಒಂದು ಎಂದು ನಿಸ್ಸಂದೇಹವಾಗಿ ಹೇಳಬಹುದು. (ಎಂ.ಆರ್.)

**ಇಂಗ್ಲಿಷ್ ಸಾಹಿತ್ಯ ವಿಮರ್ಶೆ:** ಸೃಜನಾತ್ಮಕ ಸಾಹಿತ್ಯ ಮೊದಲು ರಚಿತವಾದ ಅನಂತರ ಅದರ ಲಕ್ಷಣ, ಸ್ವರೂಪಗಳನ್ನು ವಿವರಿಸುವ ವಿಮರ್ಶೆ ಬೆಳೆದು ಬರುತ್ತದೆಂಬ ವಿಷಯ ಎಲ್ಲ ಸಾಹಿತ್ಯಕ್ಕೂ ಅನ್ವಯಿಸುವ ಮಾತು. ಆದರೆ ವಿಮರ್ಶನ ಗ್ರಂಥಗಳು ಸ್ಪಷ್ಟವಾಗಿ ರಚನೆಗೊಳ್ಳುವ ಮೊದಲಿಗೂ ರೂಪುಗೊಂಡ ಸೃಜನಾತ್ಮಕ ಸಾಹಿತ್ಯದಲ್ಲಿ ವಿಮರ್ಶೆಯ ರೇಕುಗಳನ್ನು ಕಂಡಲ್ಲಿ ಆಶ್ಚರ್ಯಪಡಬೇಕಾದುದಿಲ್ಲ. ಇಂಗ್ಲಿಷ್ ಸಾಹಿತ್ಯದ ಅರುಣೋದಯ ಕಾಲದಲ್ಲಿ ಫ್ರೆಂಚ್ ಮತ್ತು ಇಟಾಲಿಯನ್ ಸಾಹಿತ್ಯದಿಂದ ವಸ್ತುವನ್ನು ಆಯ್ಕೆ ಮಾಡುವಲ್ಲಿ, ತನ್ನ ಕಥನ ಕವನಗಳಲ್ಲಿ ಸಾಧಿಸಿರುವ ಸ್ಪಷ್ಟ ಪಾತ್ರಸೃಷ್ಟಿ., ಭಾಷೆಯ ಔಚಿತ್ಯ, ಸಾವಯವ ಪ್ರಮಾಣ–ಮುಂತಾದ ಅನೇಕ ವಿಷಯಗಳಲ್ಲಿ ಚಾಸರ್ ಮಹಾಕವಿ ವಿಮರ್ಶಕನಿಗೆ ಅಗತ್ಯವಾದ ಪ್ರೌಢ ವಿವೇಚನೆಯನ್ನು ತೋರಿಸಿದ್ದಾನೆ. ಆದರೆ ಇಂಗ್ಲಿಷ್ ವಿಮರ್ಶೆ ಪ್ರಾರಂಭವಾದದ್ದು ಹೊಸ ಹುಟ್ಟಿನ ರಿನೇಸಾನ್ಸ್ ಕಾಲದಿಂದ ಎನ್ನುವುದು ನಿಜ.

**ಹೊಸ ಹುಟ್ಟಿನ ಯುಗ–ಎಲಿಜಬೆತ್ ಕಾಲದ ವಿಮರ್ಶೆ:** ಹೊಸ ಹುಟ್ಟಿನ ಯುರೋಪಿಯನ್ ಸಾಹಿತ್ಯದಿಂದ ಪ್ರಭಾವಿತವಾದ 15 ಮತ್ತು 16ನೆಯ ಶತಮಾನದ ಇಂಗ್ಲೆಂಡಿನ ಎಲಿಜಬೆತ್ ಯುಗದಲ್ಲಿ, ಇಂಗ್ಲಿಷ್ ಅಭಿಜಾತ ಸಾಹಿತ್ಯ ಸೃಷ್ಟಿಗೆ ಹೇಗೆ ಮಾದರಿ, ಸ್ಫೂರ್ತಿ ಒದಗಿಸಿತೋ ಹಾಗೆಯೇ ಇಂಗ್ಲಿಷ್ ವಿಮರ್ಶಾ ಪರಂಪರೆಗೂ ಅದು ಪ್ರೇರಣೆ ನೀಡಿತು. ಜಾನ್ಸನ್ನನ ಕಾಲದವರೆಗೂ ಅಭಿಜಾತ ಸಾಹಿತ್ಯದ ಸೂತ್ರ, ಸಿದ್ಧಾಂತಗಳೇ ಇಂಗ್ಲಿಷ್ ವಿಮರ್ಶೆಯ ಮೇಲೆ ಮಹತ್ತರವಾದ ಪ್ರಭಾವ ಬೀರಿದವು. ಸಿಡ್ನಿ, ಸ್ಪೆನ್ಸರ್, ಜಾಪ್‌ಮನ್, ಮಾರ್ಲೊ ಮುಂತಾದ ಪ್ರತಿಭಾನ್ವಿತ ಕವಿಗಳು ಅಭಿಜಾತ ಸಾಹಿತ್ಯದಲ್ಲಿ ಗುರುತಿಸಿದ ಮುಖ್ಯ ಗುಣಗಳೆಂದರೆ ಅಲ್ಲಿನ ಸ್ವಾತಂತ್ರ್ಯ, ಸಮೃದ್ಧಿ ಹಾಗೂ ಭಾಷೆಯ ಔಚಿತ್ಯ. ಈ ಅಂಶಗಳನ್ನು ಅಂದಿನ ವಿಮರ್ಶಕರು ಮಾತ್ರ ಸರಿಯಾಗಿ ಗ್ರಹಿಸಲಿಲ್ಲ. ಎಲಿಜಬೆತ್ ಕಾಲದ ಮೊಟ್ಟಮೊದಲ ವಿಮರ್ಶಾಗ್ರಂಥಗಳೆಂದು ಹೇಳಬಹುದಾದ ಕೃತಿಗಳಲ್ಲಿ ಸಾಹಿತ್ಯ ಚಿಂತನೆಗಿಂತಲೂ ಮಿಗಿಲಾಗಿ, ಕಾವ್ಯವಸ್ತುವಿನ ಮೇಲೆ ಆಧಾರಿತವಾದ ವಿಂಗಡಣೆ, ವಿಭಜನೆ, ಛಂದಸ್ಸಿನ ಸ್ವರೂಪ–ಇವುಗಳನ್ನು ಕುರಿತ ಚರ್ಚೆಯ ಮಂಜು ದಟ್ಟವಾಗಿ ಹರಡಿದೆ. ಮಧ್ಯೆ ಆಗಾಗ ಅತ್ಯಂತ ಕಲ್ಪನಾಮಯವಾದ, ನವಿರಾದ ತಾತ್ತ್ವಿಕ ಚಿಂತನೆ, ವಿಚಾರ ಮಂಥನಗಳೂ ಕಾಣಸಿಗುತ್ತವೆ. ಇವೆಲ್ಲ ಅಭಿಜಾತ ಸಾಹಿತ್ಯದ ಪ್ರೇರಣೆಯಿಂದ ಹೊಮ್ಮಿದ ಅಂಶಗಳಾದರೂ ಪ್ಲೇಟೊ, ಅರಿಸ್ಟಾಟಲರಲ್ಲಿ ಕಾಣುವ ವಿಚಾರವೈಶಾಲ್ಯ, ಗಾಢಚಿಂತನೆಗಳು ಇಲ್ಲಿ ವಿರಳ. ಶಾಶ್ವತಕೀರ್ತಿ ದೊರಕಿಸಿಕೊಂಡ ಇಂಗ್ಲಿಷ್ ವಿಮರ್ಶಾಗ್ರಂಥವೆಂದರೆ–ಫಿಲಿಪ್ ಸಿಡ್ನಿಯ ಅಪಾಲಜಿ ಫಾರ್ ಪೊಯಟ್ರಿ (ಕಾವ್ಯಕ್ಕೊಂದು ಸಮರ್ಥನೆ). ವಿಚಾರದ ಸ್ವೋಪಜ್ಞತೆಗಿಂತ ಹೆಚ್ಚಾಗಿ ಈ ಗ್ರಂಥದಲ್ಲಿ, ಲೇಖಕನ ನವಿರಾದ ತಾತ್ತ್ವಿಕಚಿಂತನೆ, ಕಾವ್ಯವನ್ನು ಕುರಿತ ಉತ್ಕರ್ಷ, ಸುಸಂಸ್ಕೃತ ಅಭಿರುಚಿ, ತನ್ನ ಉತ್ಕೃಷ್ಟ ವ್ಯಕ್ತಿತ್ವಕ್ಕೆ ಅನುಗುಣವಾದ ಸರಳ ಮನೋಧರ್ಮ–ಇವುಗಳನ್ನೇ ಕಾಣುತ್ತೇವೆ. ಮಾರ್ಲೊ, ಷೇಕ್ಸ್‌ಪಿಯರ್ ಮೊದಲಾದವರ ಕೃತಿಗಳು ಅರಳುವುದಕ್ಕೆ ಮುಂಚೆ ಸಿಡ್ನಿ ತನ್ನ ಗ್ರಂಥ ಬರೆದವನಾದ್ದರಿಂದ ಅವನಿಗೆ ತನ್ನ ಕಾಲದ ಜನಪ್ರಿಯ ರಂಗಭೂಮಿಯ ಬಗ್ಗೆ ಅಷ್ಟೇನೂ ಗೌರವವಿರಲಿಲ್ಲ. ಪ್ಲೇಟೊ, ಅರಿಸ್ಟಾಟಲರ ನಡುವೆ ಉಂಟಾದ ಜಿಜ್ಞಾಸೆಯನ್ನೇ ಹೋಲುವ ವಿಚಾರ ಸಮುದಾಯ ಇಂಗ್ಲಿಷ್ ವಿಮರ್ಶೆಯಲ್ಲಿ ಮೊದಲು ಅಭಿವ್ಯಕ್ತಿ ಪಡೆದುದು ಸಿಡ್ನಿಯ ಗ್ರಂಥದಲ್ಲಿ. ಸಿಡ್ನಿ ಕಾವ್ಯದ ಬಗೆಗೆ ಮಾತನಾಡುತ್ತ ಚಿತ್ರ, ಇದರ ಗುರಿ ಉಪದೇಶ ಮತ್ತು ಆನಂದ ಎಂದ. ಕಾವ್ಯವು ಆನಂದವನ್ನು ಕೊಡುತ್ತದೆ. ಧಾರ್ಮಿಕ ಬದುಕಿಗೆ ಪ್ರಚೋದನೆಯನ್ನೂ ನೀಡುತ್ತದೆ. ತತ್ತ್ವಶಾಸ್ತ್ರ, ಅಮೂರ್ತ ಇತಿಹಾಸವು ನಿರ್ದಿಷ್ಟ ವ್ಯಕ್ತಿಗಳ ಸುತ್ತ ಹೆಣೆದುಕೊಳ್ಳುತ್ತದೆ. ಕವಿಯೂ ಮೂರ್ತ, ಅಮೂರ್ತಗಳನ್ನು ಒಂದುಗೂಡಿಸುತ್ತಾನೆ. ಸದ್ಗುಣವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿತ್ತಬಲ್ಲ ಕಾವ್ಯವು ಬೇರಿಲ್ಲ, ಶಾಸ್ತ್ರಗಳನ್ನು ಮೀರಿಸಿದ್ದು; ಇದು ಅವನ ಕಾವ್ಯ ಸಮರ್ಥನೆ. ಬೆನ್ ಜಾನ್ಸನ್ನನ ಡಿಸ್ಕವರೀಸ್ ಎಂಬ ಗ್ರಂಥದಲ್ಲಿ ಅವನ ಶಿಷ್ಟ ಅಭಿರುಚಿ, ಸಂಪ್ರದಾಯಶೀಲತೆಗಳನ್ನು ಕಾಣಬಹುದು. ಅಭಿಜಾತ ಸಾಹಿತ್ಯದಿಂದಲೇ ಎತ್ತಿಕೊಂಡಂತೆ ಕಾಣುವ, ಅವನ ಹಲವು ತಪ್ಪು ಒಪ್ಪುಗಳಿಂದ ತುಂಬಿದ ಕಾವ್ಯಸೂತ್ರಗಳಿಗೆ ಅವನ ವೈದುಷ್ಯಪೂರ್ಣ ವ್ಯಕ್ತಿತ್ವವೇ ಅಚ್ಚುಕಟ್ಟಾದ ಸಮಗ್ರೀಕರಣ ನೀಡುತ್ತದೆ. ಅಭಿಜಾತಸಾಹಿತ್ಯಸೂತ್ರಗಳನ್ನು ಮೊಟ್ಟಮೊದಲು ತನ್ನ ಸೂತ್ರ ಹಾಗೂ ಪ್ರಯೋಗಗಳಲ್ಲಿ ಕಾರ್ಯಪ್ರವೃತ್ತಗೊಳಿಸಿದವ ಬೆನ್‌ಜಾನ್ಸನ್.

**17ನೆಯ ಶತಮಾನ–ಡ್ರೈಡನ್ ಯುಗ:** 17ನೆಯ ಶತಮಾನದಲ್ಲಿ ಬೆಳೆದ ನಿಯೋಕ್ಲಾಸಿಕಲ್ ಸಂಪ್ರದಾಯಕ್ಕೆ ಮೂಲಸ್ಫೂರ್ತಿ ಇಟಲಿಯ ಸಾಹಿತ್ಯ. ಆದರೆ ನಿಯೋಕ್ಲಾಸಿಕಲ್ ಪಂಥದ ಪ್ರಭಾವ ಯುರೋಪಿನಲ್ಲಿ ವ್ಯಾಪಕವಾಗಿ ಪ್ರಸಾರವಾಗಲು ಮುಖ್ಯ ಕಾರಣರಾದವರು ಕಾರ್ನಿಲ್, ಬ್ವಾಲೋ, ರ್‍ಯಾಸಿನ್, ಲಾ ಬೋಸು ಮೊದಲಾದ ಫ್ರೆಂಚ್ ಸಾಹಿತಿಗಳು. ಇವರ ಪ್ರಭಾವ ಇಂಗ್ಲಿಷ್ ಸಾಹಿತ್ಯದ ಮೇಲೂ ಮೈಚಾಚಿ ಹರಡಿತು. ನಿಯೋಕ್ಲಾಸಿಕಲ್ ಪಂಥವನ್ನು ಇಂಗ್ಲೆಂಡಿನಲ್ಲಿ ಪ್ರಚಲಿತಗೊಳಿಸಿ, ಇಂಗ್ಲಿಷ್ ಸಾಹಿತ್ಯ ವಿಮರ್ಶಾಪರಂಪರೆಯನ್ನು ಹೊಸಹಾದಿಗೆ ಹಚ್ಚಿದವರಲ್ಲಿ ಡ್ರೈಡನ್‌ನ ಪಾತ್ರ ಅತ್ಯಂತ ಮುಖ್ಯ. ಸಮಕಾಲೀನ ಫ್ರೆಂಚ್ ಸಾಹಿತ್ಯದ ವಿದ್ಯಮಾನಗಳನ್ನು ಆತ ಚೆನ್ನಾಗಿ ತಿಳಿದಿದ್ದ. ಸ್ವಲ್ಪಮಟ್ಟಿಗೆ ಫ್ರೆಂಚ್ ಸಾಹಿತಿಗಳ ದೃಷ್ಟಿಯನ್ನು ಸಮರ್ಥಿಸುತ್ತಿದ್ದ. ಆದರೂ ಆತ ಸಂಪೂರ್ಣವಾಗಿ ಫ್ರೆಂಚ್ ಪ್ರಭಾವಕ್ಕೆ ಸೋಲಲಿಲ್ಲ. ಫ್ರೆಂಚ್ ವಿಮರ್ಶಕ ಬ್ವಾಲೋ ತನ್ನ ಹಿಂದಿನ ಸಾಹಿತಿಗಳನ್ನು ಕುರಿತು ಅವಹೇಳನ ಮಾಡಿದ ಹಾಗೆ ಡ್ರೈಡನ್ ತಪ್ಪು ದಾರಿ ಹಿಡಿಯಲಿಲ್ಲ. ಫ್ರೆಂಚ್ ನಾಟಕಕಾರರನ್ನು ಮೆಚ್ಚಿಕೊಂಡರೂ ತನ್ನ ಪೂರ್ವಜರಾದ ಬೆನ್ ಜಾನ್ಸನ್, ಷೇಕ್ಸ್‌ಪಿಯರ್ ಮೊದಲಾದವರ ಘನವಾದ ಸಾಧನೆಗಳನ್ನು ಆತ ಮೆಚ್ಚಿಕೊಂಡ. ಉತ್ತಮ ಸಾಹಿತ್ಯ ಕೇವಲ ನೀತಿನಿಯಮಗಳ ಕಠಿಣ ಅನುಸರಣೆಯಿಂದ ಸೃಷ್ಟಿಯಾಗಲಾರದು, ಸಾಹಿತಿಗೆ ಮಿತಿಮೀರಿದ ಪೂರ್ವಗ್ರಹ ಸಲ್ಲದು–ಎಂಬ ವಿಚಾರವನ್ನು ಡ್ರೈಡನ್ ತನ್ನ ಜೀವನದುದ್ದಕ್ಕೂ ಅರಿಯುತ್ತ ಬಂದ. ತನ್ನ ನಾಟಕಗಳಿಗೆ ಆತ ಜೋಡಿಸಿರುವ ಪೀಠಿಕೆಗಳು, ಅರ್ಪಣೆಗಳು, ಹಿನ್ನುಡಿಗಳು ಅವನ ಸೂಕ್ಷ್ಮ ವಿಚಾರದೃಷ್ಟಿ, ಬೌದ್ಧಿಕ ಪ್ರಾಮಾಣಿಕತೆಗಳಿಗೆ ಸಾಕ್ಷಿಯಾಗಿವೆ. ಹಿಂದೆಂದೂ ಯಾವ ಇಂಗ್ಲಿಷ್ ಲೇಖನದಲ್ಲೂ ಕಾಣದ ಉಕ್ತಿಯ ಸರಳತೆ, ಸಂಭಾಷಣರೂಪದ ಆತ್ಮೀಯತೆ, ಮಾತಿನ ಕಸುವುಗಳನ್ನು ಡ್ರೈಡನ್ನನ ರೂಪಕ ಕಾವ್ಯ ಕುರಿತ ಪ್ರಬಂಧ (ಎಸ್ಸೇ ಆನ್ ಡ್ರಮ್ಯಾಟಿಕ್ ಪೊಯಟ್ರಿ), ಕಟ್ಟು ಕಥನಗಳಿಗೆ ಬರೆದ ಪೀಠಿಕೆ (ಪ್ರಿಫೇಸ್ ಟು ದ ಫೇಬಲ್ಸ್)–ಮುಂತಾದ ರಚನೆಗಳಲ್ಲಿ ಕಾಣುತ್ತೇವೆ. ತುಲನಾತ್ಮಕ ವಿಮರ್ಶಾವಿಧಾನವನ್ನು ರೂಪಿಸಿದ ಖ್ಯಾತಿ ಡ್ರೈಡನ್‌ಗೆ ಸಲ್ಲಬೇಕು. ಎರಡು ಸಾಹಿತ್ಯಕೃತಿಗಳು ಅಥವಾ ಇಬ್ಬರು ಸಾಹಿತಿಗಳ ನಡುವೆ ಕಾಣಬಹುದಾದ ಗುಣಲಕ್ಷಣಗಳ ಹೋಲಿಕೆ ವ್ಯತ್ಯಾಸಗಳನ್ನು ವಿವೇಚಿಸಿ, ಸಲ್ಲಬೇಕಾದ ಸ್ಥಾನವನ್ನು ಖಚಿತವಾಗಿ ನಿರ್ಧರಿಸಬೇಕೆನ್ನುವ ವಿಧಾನವನ್ನು ಎಲಿಜಬೆತ್ ಯುಗದ ವಿಮರ್ಶೆಯಲ್ಲಿ ಅಲ್ಲಲ್ಲಿ ಕಂಡರೂ ಅದಕ್ಕೊಂದು ವೈಜ್ಞಾನಿಕ ದೃಷ್ಟಿ, ವ್ಯವಸ್ಥೆ ನೀಡಿದವನು ಡ್ರೈಡನ್. ಆ ಕಾಲದಲ್ಲಿ ಈ ರೀತಿಯ ತುಲನಾತ್ಮಕ ವಿಧಾನದಿಂದ ತಪ್ಪುಗಳಾಗಲಿಲ್ಲವೆಂದಲ್ಲ. ಡ್ರೈಡನ್ ಸಹ ಅಲ್ಲಲ್ಲಿ ತಪ್ಪು ಮಾಡುತ್ತಾನೆ: ಆದರೆ ಆತ ನೀಡಿರುವ ಹೊರೇಸ್, ಜೂವಿನಲ್, ಹೋಮರ್, ವರ್ಜಿಲ್, ಷೇಕ್ಸ್‌ಪಿಯರ್, ಬೆನ್ ಜಾನ್ಸನ್, ಕಾರ್ನಿಲ್–ಇವರನ್ನು ಕುರಿತ ವಿವೇಚನಾಯುಕ್ತ ವಿಶ್ಲೇಷಣೆ ಇಂಗ್ಲಿಷ್ ವಿಮರ್ಶೆಯಲ್ಲಿ ಹೊಸ ಅಧ್ಯಾಯ ತೆರೆದು ತೋರಿಸಿತು.

**18ನೆಯ ಶತಮಾನ–ಪೋಪ್, ಜಾನ್ಸನ್:** 17 ಹಾಗೂ 18ನೆಯ ಶತಮಾನದ ತಾತ್ತ್ವಿಕರು, ದಾರ್ಶನಿಕರು, ಪ್ರಕೃತಿಯನ್ನು ಕುರಿತ ಹಲವು ಸರಳ ವಿಶ್ಲೇಷಣೆಗಳನ್ನು ನೀಡಿದರು. ಪ್ರಕೃತಿಸೃಷ್ಟಿಗೊಂದು ನಿಶ್ಚಿತ ಸ್ವರೂಪವಿದೆಯೆಂದೂ ಅದನ್ನು ಅನುಲಕ್ಷಿಸುವ

ಮಾನವವಿವೇಚನೆಗೆ ಸುಲಭಗ್ರಾಹ್ಯವೆಂದೂ ಅವರು ಸೂಚಿಸಿದರು. ಈ ವಿಚಾರ ಪರಂಪರೆ ಅಂದಿನ ವಿಮರ್ಶಾ ಸಾಹಿತ್ಯದ ಮೇಲೂ ಪ್ರಭಾವ ಬೀರಿತು. ಪ್ರಕೃತಿನಿಯಮವನ್ನು ಜೀವನಕ್ಕೆ ಯಥೋಚಿತವಾಗಿ ಅಳವಡಿಸಿಕೊಳ್ಳುವಂತೆ ಸಾಹಿತ್ಯದ ಮೂಲಸೂತ್ರಗಳನ್ನು ಬಳಸಿಕೊಳ್ಳಬೇಕೆಂದರು. ಈ ಪ್ರವೃತ್ತಿಯ ಮೂರು ಮುಖಗಳನ್ನು ಇಂಗ್ಲಿಷ್ ವಿಮರ್ಶೆಯಲ್ಲಿ ನಾವು ಡ್ರೈಡನ್, ಪೋಪ್ ಹಾಗೂ ಜಾನ್ಸನ್‍ರ ವಿಮರ್ಶಾಕೃತಿಗಳಲ್ಲಿ ಕಾಣುತ್ತೇವೆ. ನಿಯೋಕ್ಲಾಸಿಕಲ್ ತತ್ತ್ವವನ್ನು ಸ್ವಲ್ಪ ಕಠಿಣವಾಗಿ ವಿಧಿಸಿದವನೆಂದರೆ ಪೋಪ್. ಈ ಯುಗದ ಮೊದಲ ಭಾಗದಲ್ಲಿ ಬಂದ ಡ್ರೈಡನ್ನನಿಗೆ, ಕೊನೆಯಲ್ಲಿ ಬಂದ ಜಾನ್ಸನ್ನನಿಗೆ, ಪೋಪನ ಸೂತ್ರಾಂಧತೆ ಸುಲಭ ಸ್ವೀಕೃತವೆನಿಸಲಿಲ್ಲ. ಸಂಕುಚಿತವಾದ ಸೂತ್ರಗಳನ್ನೇ ಪಟ್ಟುಹಿಡಿದು ಸಾಧಿಸಿದ ಆ ಯುಗದಲ್ಲೂ ಷೇಕ್ಸ್‌ಪಿಯರ್‌ನ ಅಸಾಧಾರಣ ಪ್ರತಿಭೆಯನ್ನು ಚರ್ಚಿಸುವಾಗ ಜಾನ್ಸನ್ ತಾನು ನಂಬಿ ಕೈಹಿಡಿದ ಶುಷ್ಕ ಸೂತ್ರಗಳನ್ನು ಬಿಟ್ಟುಕೊಡಬೇಕಾಯಿತು. ಇದಕ್ಕೆ ಅವನ ಗಾಢ ಲೌಕಿಕಜ್ಞಾನ, ವಿಚಾರಶೀಲತೆಗಳೇ ನೆರವಾದವು. ಆದರೆ ಮೂಲತಃ ಅಭಿಜಾತ ಸೂತ್ರಗಳಿಗೆ ಕಟ್ಟುಬಿದ್ದ ಜಾನ್ಸನ್ನನ ಗುಣದೋಷಗಳೆರಡನ್ನೂ ಆತ ತನ್ನ ಗ್ರಂಥಗಳಲ್ಲಿ, ಮುಖ್ಯವಾಗಿ ಕವಿಗಳ ಜೀವನಚರಿತ್ರೆಗಳನ್ನೊಳಗೊಂಡ ಲೈಫ್ಸ್ ಆಫ್ ಪೋಯಟ್ಸ್ ಹಾಗೂ ಷೇಕ್ಸ್‌ಪಿಯರ್‌ನನ್ನು ಕುರಿತ ಪೀಠಿಕೆಗಳಾದ ಪ್ರಿಫೇಸಸ್ ಟು ಷೇಕ್ಸ್‌ಪಿಯರ್ ಎಂಬ ಗ್ರಂಥಗಳಲ್ಲೂ ಕಾಣಬಹುದು.

ಕ್ರಮೇಣ 18ನೆಯ ಶತಮಾನದ ಉತ್ತರಾರ್ಧದಲ್ಲಿ ಬೆಳೆದ, ಇತಿಹಾಸವಾದವೆಂದು (ಹಿಸ್ಟೋರಿಸಿಸಂ) ಪ್ರಸಿದ್ಧವಾದ ಹೊಸ ತತ್ತ್ವಗಳು ಆ ಕಾಲದಲ್ಲಿ ರೂಢಮೂಲವಾಗಿದ್ದ ಅಭಿಪ್ರಾಯಗಳನ್ನು ವಿರೋಧಿಸುವುದರಲ್ಲಿ ಯಶಸ್ವಿಯಾದುವು. ಯಾವ ಸೂತ್ರವೂ ಎಲ್ಲ ಕಾಲಕ್ಕೂ ಅನ್ವಯಿಸುವಂಥದಲ್ಲ. ಪ್ರತಿ ಯುಗದಲ್ಲೂ ಕಾಣುವ ಬದಲಾವಣೆಗಳು ಹೊಸ ಹೊಸ ಮೌಲ್ಯಗಳಿಗೆ ಎಡೆ ಮಾಡಿಕೊಡುತ್ತವೆ. ಹಾಗೆಯೇ ಸಾಹಿತ್ಯಸೂತ್ರಗಳೂ ಕಾಲಕಾಲಕ್ಕೆ ಬದಲಾಯಿಸುತ್ತವೆ. ಅರಿಸ್ಟಾಟಲ್, ಹೋರೇಸರ ಸೂತ್ರಗಳು ಗ್ರೀಕ್, ಲ್ಯಾಟಿನ್ ಸಾಹಿತ್ಯದ ವ್ಯಾಖ್ಯಾನಕ್ಕೆ ಮಾತ್ರ ಪ್ರಸ್ತುತವಾದವು-ಎಂದು ಮುಂತಾಗಿ ಬೆಳೆದ ಇತಿಹಾಸವಾದದ ವಿಚಾರಗಳು 18ನೆಯ ಶತಮಾನದ ಅಭಿಜಾತ ಸಾಹಿತ್ಯ ಸೂತ್ರಗಳ ಕಟ್ಟನ್ನು ಸಡಿಲಿಸಿದುವು. ಕ್ರಮೇಣ ಗ್ರೀಕ್, ರೋಮನ್ ಸಾಹಿತ್ಯಗಳಲ್ಲಿ ಆಸಕ್ತಿ ಕ್ಷೀಣವಾಗದಿದ್ದರೂ ಜಾಗತಿಕ ಸಾಹಿತ್ಯದ ಹಲವು ಹೊಸ ಕ್ಷಿತಿಜಗಳತ್ತ ಗಮನ ಹೊರಳಿತು. ಐಸ್‌ಲೆಂಡ್ ಹಾಗೂ ವೆಲ್ಷ್ ಸಾಹಿತ್ಯದಿಂದ ಉದ್ದಾಮ ಪಂಡಿತ ಥಾಮಸ್ ಗ್ರೇ ಭಾಷಾಂತರಗಳನ್ನು ಮಾಡಿದ. ಗ್ರೀನ್‌ಲೆಂಡ್, ಲ್ಯಾಪ್‌ಲೆಂಡ್ ಹಾಗೂ ದಕ್ಷಿಣ ಅಮೆರಿಕಗಳ ಕಾವ್ಯಗಳನ್ನು ಬಿಷಪ್ ಪರ್ಸಿ ತರ್ಜುಮೆ ಮಾಡಿದ. ವಿಲಿಯಂ ಜೋನ್ಸ್ ಭಾರತೀಯ ಕಾವ್ಯಗಳನ್ನು ಇಂಗ್ಲಿಷ್ ಜನಕ್ಕೆ ಪರಿಚಯ ಮಾಡಿಸಿದ. ಆದ್ದರಿಂದಲೇ 1757ರಲ್ಲಿ ಗ್ರೇ ತನ್ನ ಪ್ರೋಗ್ರೆಸ್ ಆಫ್ ಪೊಯಿಸಿಯಲ್ಲಿ ಕಾವ್ಯದೇವತೆ ಇಂದು ಎರಡು ಧ್ರುವಗಳ ನಡುವೆ ತನ್ನ ಅಧಿಕಾರ ನಡೆಸುತ್ತಿದ್ದಾಳೆಂದು ಘೋಷಿಸಿದ.

**19ನೆಯ ಶತಮಾನ-ರೊಮ್ಯಾಂಟಿಕ್ ಯುಗ:** 17ನೆಯ ಹಾಗೂ 18ನೆಯ ಶತಮಾನಗಳಲ್ಲಿ ಅರಿಸ್ಟಾಟಲನ ಸೂತ್ರಗಳನ್ನು ಅನುಸರಿಸಿದ ವಿಮರ್ಶಕರೆಲ್ಲ ಕಾವ್ಯವು ಜೀವನದ ಪ್ರತಿಬಿಂಬ ಅಥವಾ ಅನುಕರಣೆ ಎಂದೇ ವಾದಿಸಿದರೂ 18ನೆಯ ಶತಮಾನದ ಕೊನೆಯಲ್ಲಿ ಅದಕ್ಕೆ ವಿರುದ್ಧವಾದ ವಿಚಾರಗಳೂ ಹುಟ್ಟಿಕೊಂಡುವು. ಕವಿ ಕೇವಲ ಪ್ರಕೃತಿಯನ್ನು ಅನುಕರಿಸುವುದಿಲ್ಲ, ತಾನು ಕಂಡ ಕನಸನ್ನು ಕಲ್ಪನೆಯ ಮೂಲಕ ಪ್ರತಿರೂಪಿಸುತ್ತಾನೆಂಬ ರೊಮ್ಯಾಂಟಿಕ್ ವಿಚಾರದ ಬೀಜಾಂಕುರ ಎಡ್ಮಂಡ್ ಬರ್ಕ್ 1756ರಲ್ಲಿ ಬರೆದ ಇನ್‌ಕ್ವೈರಿ ಇನ್ ಟು ದಿ ಸಬ್‌ಲೈಮ್ ಅಂಡ್ ಬ್ಯೂಟಿಫುಲ್ ಎನ್ನುವ ಪ್ರಬಂಧದಲ್ಲಿದೆ. ಅದೇ ಕಾಲದ ಸುಮಾರಿನಲ್ಲಿ ಜರ್ಮನಿಯ ತತ್ತ್ವಶಾಸ್ತ್ರಜ್ಞ ಇಮ್ಯಾನ್ಯುಅಲ್ ಕಾಂಟ್ ಮನುಷ್ಯನ ಮನಸ್ಸು ಚೇತನಸ್ವರೂಪವಾದುದು, ಬಹಿರಂಗದ ಅನುಭವವನ್ನು ಕೇವಲ ಯಾಂತ್ರಿಕವಾಗಿ ಅದು ಹಿಡಿದಿಟ್ಟುಕೊಳ್ಳುವುದಿಲ್ಲ. ಇಂದ್ರಿಯಾನುಭವಕ್ಕೆ ಸಿಲುಕುವ ಬಾಹ್ಯಪ್ರಪಂಚಕ್ಕೆ ಅದು ರೂಪ ಕೊಡುತ್ತದೆ-ಎಂದು ಹೇಳಿದ. ಈ ಹೊಸ ವಿಚಾರಧಾರೆಯಿಂದ ವರ್ಡ್ಸ್‌ವರ್ತ್, ಕೋಲ್‌ರಿಜ್, ಡಿಕ್ವೆನ್ಸಿ, ಷೆಲ್ಲಿ-ಮೊದಲಾದ ರೊಮ್ಯಾಂಟಿಕ್ ಸಾಹಿತಿಗಳೆಲ್ಲರೂ ಪ್ರಭಾವಿತರಾದರು. ವರ್ಡ್ಸ್‌ವರ್ತ್ ತನ್ನ ಲಿರಿಕಲ್ ಬ್ಯಾಲಡ್ಸ್ ಎಂಬ ಕಾವ್ಯಸಂಗ್ರಹಕ್ಕೆ ಬರೆದ (1798) ಪೀಠಿಕೆಯಲ್ಲಿ (ಪ್ರಿಫೇಸ್) ಕವಿಯ ಚೇತನ ವಿಭಾವನೆಗಳನ್ನೇ ಕುರಿತು ಸುದೀರ್ಘವಾಗಿ ವಿವೇಚಿಸಿದ. ಕೋಲ್‌ರಿಜ್ ಕವಿ ಬಯಾಗ್ರಾಫಿಯ ಲಿಟರೇರಿಯ ಎಂಬ ಗಾಢ ತಾತ್ತ್ವಿಕ ಗ್ರಂಥದ ಮೂಲಕ ಮುಂದಿನ ವಿಮರ್ಶೆಯ ಪರಂಪರೆಯ ಮೇಲೆ ಅತ್ಯಂತ ಹೆಚ್ಚಿನ ಪರಿಣಾಮ ಬೀರಿದ. ಗ್ರಂಥದ ದೋಷಗಳೇನೇ ಇರಲಿ, ಅದು ಅತ್ಯಂತ ಪ್ರಭಾವಶಾಲಿ ಕವಿಯೊಬ್ಬನ ಅದ್ಭುತ ಕಲ್ಪನೆಯ ತತ್ತ್ವಚಿಂತನೆಯ ಫಲಶ್ರುತಿ. ವರ್ಡ್ಸ್‌ವರ್ತ್ ಮಾನವ ವಿಭಾವನೆಯನ್ನು (ಇಮ್ಯಾಜಿನೇಷನ್) ಅವರ್ಣನೀಯ ದೈವಿಕ ಶಕ್ತಿ ಎಂದು ಕರೆದು, ಮಾತಿನ ಗೊಂದಲವೆಬ್ಬಿಸಿದ. ಆದರೆ ಕೋಲ್‌ರಿಜ್ ಅದೇ ಮಾತಿಗೆ ತಾತ್ತ್ವಿಕವಾದ ಅರ್ಥ ವಿವರಣೆ ಕೊಟ್ಟು ವಿಭಾವನೆ ಮತ್ತು ಕಲ್ಪನೆಗಳೆನ್ನುವ (ಫ್ಯಾನ್ಸಿ) ಪದಗಳನ್ನು ಪಾರಿಭಾಷಿಕ ಶಬ್ದಗಳನ್ನಾಗಿ ಬಳಸಿದ. ವಿಭಾವನೆ ಹೆಚ್ಚು ಉದಾತ್ತವಾದ ಶಕ್ತಿ, ಕಲ್ಪನೆ ಅನುಭವಗಳನ್ನು ಸಂಘಟಿಸಿ ಸಮಗ್ರೀಕರಣ ಮಾಡಿ ಅದಕ್ಕೊಂದು ಹೊಸ ವ್ಯವಸ್ಥೆ, ವ್ಯವಧಾನ ನೀಡುತ್ತದೆಂದು ವಿವರಿಸಿದ. ಅಮೂರ್ತ ಭಾವನೆಗಳು, ಅನಿಸಿಕೆಗಳು, ಕಾಲದೇಶಗಳ ವ್ಯವಸ್ಥೆಯಿಂದಾಚೆ ನಿಂತ ಸ್ಮೃತಿಯ ಒಂದು ವಿಧಾನ; ಮನಸ್ಸು ಗ್ರಹಿಸಿದ ಅನಿಸಿಕೆಗಳನ್ನು ಕಲ್ಪನೆ ಸಂಗ್ರಹಿಸುತ್ತದೆ, ಪರಿಷ್ಕರಿಸುತ್ತದೆ. ವಿಭಾವನೆ ಇದಕ್ಕಿಂತ ಮುಂದೆ ಹೋಗಿ ಬುದ್ಧಿವಿವೇಚನೆಗಳ ನೆರವಿನಿಂದ ಯಥಾರ್ಥತೆಯನ್ನೇ ಹೊಸದಾಗಿ ಕಲ್ಪಿಸುತ್ತದೆ ಎಂದು ಸ್ವಾರಸ್ಯವಾದ ವಿವರಣೆ ನೀಡಿದ. ಕೋಲ್‌ರಿಜ್‌ನ ಅಭಿಪ್ರಾಯಗಳನ್ನು 20ನೆಯ ಶತಮಾನದ ವಿಮರ್ಶಕರು ಕಟುವಾಗಿ ಟೀಕಿಸಿದ್ದರೂ ಅವನ ವಿಚಾರಗಳು ಸಾಹಿತ್ಯ ವಿಮರ್ಶೆಯಲ್ಲಿ ಹೊಸ ಬೆಳಕು ಮೂಡಿಸಿದುವೆನ್ನುವುದು ನಿಜ. ಷೆಲ್ಲಿ ತನ್ನ ಡಿಫೆನ್ಸ್ ಆಫ್ ಪೊಯಟ್ರಿ ಎಂಬ ದೀರ್ಘ ಪ್ರಬಂಧದಲ್ಲಿ ಕಾವ್ಯದ ಆದರ್ಶಗಳನ್ನು ಸೂತ್ರೀಕರಿಸಿದ್ದಾನೆ. ಉದಾತ್ತ ನೀತಿ ಸಾಧಿಸುವುದರಲ್ಲಿ ಪ್ರೇಮ ಸಾರ್ಥಕ್ಯ ಪಡೆಯುತ್ತದೆ. ಅಂಥ ಪ್ರೇಮವನ್ನು ಕುರಿತು ಹಾಡುವುದರ ಮೂಲಕ ಕವಿ ನೀತಿಯ ಮಾರ್ಗದತ್ತ ನಮ್ಮನ್ನು ಕೊಂಡೊಯ್ಯುತ್ತಾನೆ. ತನ್ನ ವಿಭಾವನೆಯ ಮೂಲಕ ನಮ್ಮ ಸಂವೇದನೆ ಕೆರಳಿಸುವ ದ್ರಷ್ಟಾರನಾಗುತ್ತಾನೆ. ಆದ್ದರಿಂದ ವಿಭಾವನೆಯನ್ನು ಉದ್ದೀಪನಗೊಳಿಸುವ ಎಲ್ಲ ಸಾಹಿತ್ಯದಲ್ಲೂ ಕಾವ್ಯದ ಜೀವಾಳವಿದ್ದೇ ಇದೆ. ಶೈಲಿಯ ಇಂಥ ವಿಚಾರ ಪರಂಪರೆ ರೊಮ್ಯಾಂಟಿಕ್ ಯುಗದ ವಿಮರ್ಶಾಸಂಪ್ರದಾಯದ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ಬಿಡಿಬಿಡಿಯಾದ ಸಾಹಿತ್ಯ ಕೃತಿಗಳನ್ನೂ ಬೇರೆ ಬೇರೆ ಸಾಹಿತಿಗಳನ್ನೂ ಕುರಿತು ವಿವೇಚಿಸುವಾಗ ಕಾವ್ಯದ ಆದರ್ಶಗಳನ್ನು ಹಿನ್ನೆಲೆಯಾಗಿ ಕಲ್ಪಿಸಿಕೊಳ್ಳುವ ರೊಮ್ಯಾಂಟಿಕ್ ವಿಧಾನವು ಹ್ಯಾಜ್‌ಲಿಟ್, ಲ್ಯಾಂಬ್ ಮೊದಲಾದವರ ಲೇಖನಗಳಲ್ಲಿ ಕಾಣಸಿಗುತ್ತದೆ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೆಂಡಿನಲ್ಲಿ ಜ್ಞಾನ, ತಿಳಿವಳಿಕೆ, ಶಿಕ್ಷಣ, ಸಂಸ್ಕೃತಿಗಳು ಅತ್ಯಂತ ವಿಸ್ತಾರವಾಗಿ ಹಬ್ಬಿದಾಗ, ಇಂಗ್ಲಿಷ್ ವಿಮರ್ಶಕರು ಯುರೋಪಿನ ಸಾಹಿತ್ಯದತ್ತ ಕಣ್ಣು ಹೊರಳಿಸಿ, ತಮ್ಮ ಕೃಷಿರಂಗವನ್ನು ವಿಸ್ತಾರ ಮಾಡಿಕೊಂಡರು. ಜರ್ಮನಿಯ ಸಾಹಿತ್ಯದಲ್ಲಿ ಇಂಗ್ಲಿಷ್ ಸಾಹಿತಿಗಳು ಹೆಚ್ಚಿನ ಆಸಕ್ತಿ ಬೆಳೆಸಿಕೊಂಡ ಕಾಲ ಅದು. ವಿಮರ್ಶೆಗೆ ವಿಶಾಲವಾದ ಕಾರ್ಯರಂಗ ದೊರೆತಾಗ, ತುಲನಾತ್ಮಕ ವಿಮರ್ಶೆ ಬೆಳೆಯಲು ಹೆಚ್ಚು ನೆರವು ಸಿಕ್ಕಹಾಗಾಯಿತು. ಹೊಸಯುಗದ ಪ್ರತಿನಿಧಿಯಾದ ಮ್ಯಾಥ್ಯು ಆರ್ನಾಲ್ಡ್ ಲೋಕೋತ್ತರವಾದ ವಿಚಾರಗಳ ಚಿಂತನ ಮಂಥನಗಳನ್ನು ಅರ್ಥಮಾಡಿಕೊಂಡು ನಿರ್ವಿಕಾರವಾದ ರೀತಿಯಲ್ಲಿ ಪ್ರಸಾರ ಮಾಡುವುದೇ ವಿಮರ್ಶೆಯ ಉದ್ದೇಶವೆಂದುದು ಈ ಅರ್ಥದಲ್ಲೇ. ಆಚಾರ, ವ್ಯವಹಾರಗಳಲ್ಲಿ ನೈತಿಕಮಟ್ಟ ಕುಗ್ಗಿ, ನಂಬಿಕೆಗಳು ಅಪಮೌಲ್ಯಗೊಳ್ಳುತ್ತಿದ್ದ ಆ ಕಾಲದಲ್ಲಿ ಆರ್ನಾಲ್ಡ್ ಉತ್ತಮ ಸಾಹಿತ್ಯ, ಸಂಸ್ಕೃತಿ, ಔಪಚಾರಿಕ ಮೌಲ್ಯಗಳು ಅನೀತಿಯ ವಿರುದ್ಧ ಹೋರಾಡಲು ಸಾಧನಗಳಾಗಿ ಪರಿಣಮಿಸಿವೆಯೆಂದು ಭಾವಿಸಿದ. ಆದ್ದರಿಂದ ಕಾವ್ಯಕ್ಕೆ ಒಂದು ಉದಾತ್ತ ಉದ್ದೇಶವಿರಬೇಕೆಂದು ಭಾವಿಸಿದ. ಇದಕ್ಕೆ ವಿರುದ್ಧವಾಗಿ ಕಾವ್ಯಕ್ಕೂ ಜೀವನಕ್ಕೂ ಸಂಬಂಧವಿಲ್ಲ. ಕಾವ್ಯದ (ಕಲೆ) ಮೂಲಕ ಜೀವನವನ್ನು ಹಸನುಗೊಳಿಸುವ ಪ್ರಯತ್ನ ನಿರರ್ಥಕ. ಕಲಾಕೃತಿಗಳಿಂದ ಪ್ರೇರಿತವಾಗುವ ಆನಂದ ಒಂದು ಸೌಂದರ್ಯ ಮೌಲ್ಯ. ಆದ್ದರಿಂದ ಜೀವನಕ್ಕಾಗಿ ಕಲೆಯಲ್ಲ, ಕಲೆಗಾಗಿ ಕಲೆ ಎಂಬ ಹೊಸ ಸೌಂದರ್ಯತತ್ತ್ವ ಹುಟ್ಟಿಕೊಂಡಿತು. ಜರ್ಮನಿಯ ಕಾಂಟ್, ಅಮೆರಿಕದ ಪೋಪ್ ಮೊದಲಾದವರು ಪ್ರತಿಪಾದಿಸಿದ ತತ್ತ್ವಗಳನ್ನು ಇಂಗ್ಲೆಂಡಿನಲ್ಲಿ ವಾಲ್ಟರ್ ಪೇಟರ್ ಸಮರ್ಥಿಸಿ ತನ್ನ ಕಾಲದ ಸಾಹಿತ್ಯ ಚಿಂತನೆಯನ್ನು ಗಾಢವಾಗಿ ಪ್ರಚೋದಿಸಿದ. ಒಂದು ಕಲಾಕೃತಿ ನಮ್ಮ ಕಲ್ಪನೆಯನ್ನು ಹೇಗೆ ಕೆರಳಿಸಿ, ತಿಳಿಸುತ್ತದೆ ಎಂಬುದನ್ನು ಬಣ್ಣಿಸುವಾಗ ಮನಸ್ಸಿನ ಪದರ ಪದರಗಳಲ್ಲಿನ ಅನಿಸಿಕೆಯನ್ನು ಚಿತ್ರಯುಕ್ತಶೈಲಿಯಲ್ಲಿ ಬಣ್ಣಿಸುವ ಹೊಸದೊಂದು ಪಂಥವೇ ಪೇಟರನ ಲೇಖನಗಳ ಮೂಲಕ ನಿರ್ಮಿತವಾಯಿತು. ಈ ಪಂಥದ ಉತ್ಕೃಷ್ಟ ಅಭಿವ್ಯಕ್ತಿ ಅಪ್ರಿಸಿಯೇಷನ್ಸ್ ಹಾಗೂ ದಿ ರೆನೇಸಾನ್ಸ್ ಎಂಬ ಗ್ರಂಥಗಳಲ್ಲಿದೆ. ಪೇಟರನ ಸೌಂದರ್ಯತತ್ತ್ವಗಳನ್ನು ತಪ್ಪಾಗಿ ಗ್ರಹಿಸಿದ ಆಸ್ಕರ್ ವೈಲ್ಡ್ ಕಲೆಗಾಗಿ ಕಲೆ ಎಂಬ ತತ್ತ್ವವನ್ನು ಅತಿಯಾಗಿ ಉತ್ಪ್ರೇಕ್ಷಿಸಿ, ನಗೆಪಾಟಲಿಗೀಡುಮಾಡಿದ. ಇಂಗ್ಲೆಂಡಿನಲ್ಲಿ ಗೊಂದಲಕ್ಕೀಡಾದ ಈ ತತ್ತ್ವಕ್ಕೆ ತರ್ಕದ, ದರ್ಶನದ ಬುನಾದಿ ಕಲ್ಪಿಸಿ ಅದನ್ನು ಸೌಂದರ್ಯಶಾಸ್ತ್ರವನ್ನಾಗಿ (ಈಸ್ತೆಟಿಕ್ಸ್) ರೂಪಿಸಿದ ಕೀರ್ತಿ ಈ ಶತಮಾನದ ಇಟಲಿಯ ಮಹಾಸಾಹಿತಿ ಬೆನೆಡಿಟ್ಟೊ ಕ್ರೋಚೆಗೆ ಸಲ್ಲುತ್ತದೆ.

**20ನೆಯ ಶತಮಾನ – ಆಧುನಿಕ ವಿಮರ್ಶೆ:** ಅತ್ಯಂತ ಸಂಕೀರ್ಣವಾದ ಆಧುನಿಕ ಯುಗದಲ್ಲಿ ಒಟ್ಟಾರೆ ಜೀವನವೇ ಅವ್ಯವಸ್ಥೆಗೊಳಗಾಗಿ, ಹಳೆಯ ಮೌಲ್ಯಗಳು ನಶಿಸಿ, ಸಾಹಿತ್ಯ, ಸಂಸ್ಕೃತಿಗಳು ವಿಷಮ ಸನ್ನಿವೇಶಗಳನ್ನು ಎದುರಿಸುತ್ತಿವೆ. ಆದ್ದರಿಂದ ಸಾಹಿತಿ, ವಿಮರ್ಶಕ ಇಬ್ಬರೂ ಅನುಭವ ಹಾಗೂ ಅಭಿವ್ಯಕ್ತಿಯ ಉದ್ವೇಗಗಳನ್ನು ಹಿಗ್ಗಿಸಿಕೊಂಡು ಬೌದ್ಧಿಕಮಟ್ಟವನ್ನು ಹೆಚ್ಚಿಸಿಕೊಳ್ಳಲು ಅನಿವಾರ್ಯವಾಗಿದೆ. ಹೊಸ ಪ್ರಯೋಗಗಳು, ಪ್ರಕಾರಗಳು ರೂಪ ತಾಳುತ್ತಿರುವ ಈ ಕಾಲದಲ್ಲಿ ನಿಶ್ಚಿತವಾದ ಸಂವೇದನೆ ಬೆಳೆಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಮೂಲಭೂತ ಸಮಸ್ಯೆಗಳಿಗೆ ಹೊಸ ಪರಿಹಾರ, ಸಮಾಧಾನಗಳನ್ನು ಕುರಿತು ಶೋಧಿಸುವುದು ವಿಮರ್ಶಕನ ಕರ್ತವ್ಯವಾಗುತ್ತದೆ. ಸಾರ್ವಕಾಲಿಕವಾದ ಮೌಲ್ಯಗಳನ್ನು ರಕ್ಷಿಸುವ ದೃಷ್ಟಿಯಿಂದ ವಿಮರ್ಶೆಗೆ ಕೈ ಹಚ್ಚಿದವರಲ್ಲಿ ಟಿ.ಎಸ್.ಎಲಿಯಟ್, ಐ.ಎ. ರಿಚರ್ಡ್ಸ್ ಮೊದಲಾದವರು ಈ ಯುಗದ ಮಾನವೀಯತೆಯ ಪ್ರತಿನಿಧಿಗಳು. ಮುಖ್ಯವಾಗಿ ಇವರು ರೊಮ್ಯಾಂಟಿಕ್ ತತ್ತ್ವದ ದೋಷಗಳನ್ನು ಎತ್ತಿ ತೋರಿಸಿ, ಬುದ್ಧಿಜೀವಿ ಮಾನವ ಅರ್ಥಪೂರ್ಣ ಜೀವನದ ಮೌಲ್ಯಗಳನ್ನು ಸಾರ್ಥಕಗೊಳಿಸಿಕೊಳ್ಳಬಲ್ಲ ಎಂದು ನಂಬಿದವರು. ಈ ಯುಗದ ಚಿಂತನೆಯ ಮೇಲೆ ಅತ್ಯಂತ ಗಾಢ ವರ್ಚಸ್ಸು ಬೀರಿದ ಫ್ರಾಯ್ಡ್‌ನ ಮನಶ್ಶಾಸ್ತ್ರತತ್ತ್ವಗಳನ್ನು ಹಲವು ವಿಮರ್ಶಕರು ಮನಗಂಡಿದ್ದಾರೆ. ಸಾಹಿತ್ಯದ ಕೃತಿಗಳನ್ನು ಅರ್ಥೈಸಲು ಇವರು

ಮನಶ್ಶಾಸ್ತ್ರದ ತಂತ್ರಪರಿಕರಗಳನ್ನು ಬಳಸುವ ಪ್ರಯತ್ನ ಮಾಡಿದ್ದಾರೆ. ಇವರಲ್ಲಿ ರಾಬರ್ಟ್ ಗ್ರೇವ್ಸ್, ಹರ್ಬರ್ಟ್ ರೀಡ್, ಐ.ಎ. ರಿಚರ್ಡ್ಸ್, ವಿಲಿಯಮ್ ಎಂಪ್ಸನ್ ಮೊದಲಾದವರಿದ್ದಾರೆ. ಇವರ ಗ್ರಂಥಗಳಲ್ಲಿ ಹಳೆಯ ಕವಿಗಳು, ಕೃತಿಗಳನ್ನು ಹೊಸ ಅರಿವಿನ ಬೆಳಕಿನಲ್ಲಿ ಕಾಣುವ ಪ್ರಯತ್ನವೂ ಸೇರಿದೆ. ಆರ್ಕಿಟೈಪಲ್ ಪಂಥ ಇದರ ಒಂದು ಮುಖ.

ಸಮಾಜಶಾಸ್ತ್ರದ ತತ್ತ್ವಗಳನ್ನು ಅನುಸರಿಸಿ ಸಾಹಿತ್ಯಕೃತಿಗಳನ್ನು ಅನುಸರಿಸಿ ಅವಲೋಕಿಸುವ ಪ್ರಯತ್ನವೂ ನಡೆದಿದೆ. ಮಾರ್ಕ್ಸ್, ಎಂಗೆಲ್ಸ್ ಮೊದಲಾದವರ ತಾರ್ಕಿಕ ತತ್ತ್ವಗಳ ಹಿನ್ನೆಲೆಯಲ್ಲಿ ವಿಮರ್ಶೆಯನ್ನು ಬೆಳೆಸಿದವರಲ್ಲಿ ಮುಖ್ಯರಾದವರೆಂದರೆ ಸ್ಪೆಂಡರ್, ಡೇ ಲೂಇಸ್, ಕಾಲ್ಡ್‌ವೆಲ್. ಮಾರ್ಕ್ಸ್‌ವಾದದ ಪ್ರಭಾವ ಕುಗ್ಗಿದಮೇಲೂ ಸಮಾಜಶಾಸ್ತ್ರದ ತತ್ತ್ವದ ಪಾತಳಿಯ ಮೇಲೆ ರಚಿತವಾದ ವಿಮರ್ಶೆಯನ್ನು ಎಲ್.ಸಿ.ನೈಟ್, ವಿಲಿಯಮ್ಸ್ ಮೊದಲಾದವರು ಮುಂದುವರಿಸಿದರು. (ಎಚ್.ಕೆ.ಆರ್.)

ಸೃಜನ ಸಾಹಿತ್ಯವು ಬೆಳೆದಂತೆ ಸಾಹಿತ್ಯ ಮೀಮಾಂಸೆ ವಿಮರ್ಶೆಗಳೂ ಬೆಳವಣಿಗೆಗೊಂಡು 20ನೆಯ ಶತಮಾನದ ಸಾಹಿತ್ಯ ಮೀಮಾಂಸೆ, ವಿಮರ್ಶೆಗಳೂ ಬೆಳೆದವು. ಮಾರ್ಕ್ಸಿಸ್ಟ್ ವಿಮರ್ಶೆಯೂ ವಿಮರ್ಶಕರ ಗಮನವನ್ನು ಸೆಳೆಯಿತು.

1908ರಲ್ಲಿ ಅರ್ಥರ್ ಸೀಮನ್ಸನ ದಿ ಸಿಂಬಲಿಸ್ಟ್ ಮೂವ್‌ಮೆಂಟ್ ಇನ್ ಲಿಟರೇಚರ್ ಪ್ರಕಟವಾಯಿತು. ಸಂಕೇತದ ಸಾಧ್ಯತೆಯತ್ತ ಯೇಟ್ಸ್ ಮತ್ತು ಎಲಿಯಟ್‌ರ ಗಮನವನ್ನು ಸೆಳೆದ ಕೃತಿ ಇದು. 19ನೆಯ ಶತಮಾನದ ಕಡೆಯ ಭಾಗ ಮತ್ತು 20ನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿ ಎ.ಸಿ. ಬ್ರ್ಯಾಡ್ಲೆ, ಡಬ್ಲ್ಯು.ಪಿ.ಕೆರ್, ಎಚ್.ಗ್ರಿಯರ್‌ಸನ್ ಮೊದಲಾದ ಪ್ರಾಧ್ಯಾಪಕರು ವಿಮರ್ಶೆಯ ಕ್ಷೇತ್ರವನ್ನು ಪ್ರಥಮಬಾರಿಗೆ ಪ್ರವೇಶಿಸಿದರು. ಬ್ರ್ಯಾಡ್ಲೆಯ ಉಪನ್ಯಾಸಗಳ ಪ್ರಸಿದ್ಧ ಸಂಗ್ರಹ, ಷೇಕ್ಸ್‌ಪಿಯರ್‌ನ ಟ್ರ್ಯಾಜಿಡಿ 1904ರಲ್ಲಿ ಪ್ರಕಟವಾಯಿತು. ವಿಶ್ವವಿದ್ಯಾಲಯಗಳಲ್ಲಿ ಸಾಹಿತ್ಯದ ಗಂಭೀರ ಅಧ್ಯಯನ ಪ್ರಾರಂಭವಾದ ಕಾಲ ಇದು. ಈ ಕಾಲದಿಂದ ಸಾಹಿತ್ಯ ವಿಮರ್ಶೆಯಲ್ಲಿ ಕಾಲೇಜು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳ ಪಾತ್ರ ಪ್ರಮುಖವಾಯಿತು.

ಸೃಜನಶೀಲ ಬರಹಗಾರರೂ ಈ ಕಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ವಿಮರ್ಶೆ ಬರೆಯಲು ಪ್ರಾರಂಭಿಸಿದರು. ಇವರು ಹೆನ್ರಿ ಜೇಮ್ಸ್‌ನ ಪ್ರಮುಖ ಕಾದಂಬರಿಯನ್ನು ಕುರಿತು ಬರೆಯುತ್ತ, ಸಾಹಿತ್ಯಕೃತಿಯ ಸಾವಯವ ಸ್ವರೂಪವನ್ನು ಒತ್ತಿ ಹೇಳಿದರು. ಮುಂದೆ ಇದು ತತ್ತ್ವ ವಿಮರ್ಶೆಯ ಮುಖ್ಯ ತತ್ತ್ವಗಳಲ್ಲಿ ಒಂದಾಯಿತು.

20ನೆಯ ಶತಮಾನದ ಪೂರ್ವಾರ್ಧದಲ್ಲಿ ಟಿ.ಎಸ್. ಎಲಿಯಟ್ ಮತ್ತು ಐ.ಎ. ರಿಚರ್ಡ್ಸ್ ಇವರ ಹೆಸರು ಬಹು ಪ್ರಸಿದ್ಧವಾಗಿದ್ದಿತ್ತು. ಇವರು ತತ್ತ್ವ ವಿಮರ್ಶೆಯ ಉದ್ಘಾಟಕರು. ಎಲಿಯಟ್‌ನ ಟ್ರೆಡಿಷನ್ ಅಂಡ್ ಇಂಡಿವಿಜ್ಯುಯಲ್ ಟ್ಯಾಲೆಂಟ್ (1919) ಸಾಹಿತ್ಯ ವಿಮರ್ಶೆಯಲ್ಲಿ ಹೆಗ್ಗುರುತಾಯಿತು. ಆದರೆ ಅವನು ಈ ಲೇಖನದಲ್ಲಿ ವ್ಯಕ್ತಪಡಿಸಿದ ಹಲವು ಅಭಿಪ್ರಾಯಗಳು ಮುಂದೆ ಸ್ವಲ್ಪಮಟ್ಟಿಗೆ ಬದಲಾಯಿಸಿದ ಎನ್ನುವುದನ್ನು ಗಮನಿಸಬೇಕು.

ತತ್ತ್ವ ವಿಮರ್ಶೆಯ ಬಹು ದೊಡ್ಡ ಸಾಧನೆ ಎಂದರೆ ಕೃತಿಯ ಮೇಲೆ ಗಮನವನ್ನು ಕೇಂದ್ರೀಕರಿಸಿದ್ದು, ಕೃತಿಕಾರನ ವ್ಯಕ್ತಿತ್ವ ಮತ್ತು ಜೀವನಗಳಿಗೆ ದೊರೆಯುತ್ತಿದ್ದ ಪ್ರಾಧಾನ್ಯವನ್ನು ನಿರಾಕರಿಸಿ ಕೃತಿಯನ್ನು ಅಲ್ಲಿ ವ್ಯಾಖ್ಯಾನಕ್ಕೆ ಆಧಾರವನ್ನಾಗಿ ಮಾಡಿದ್ದು. ಇದನ್ನನುಸರಿಸಿ ಎಕ್ಸ್‌ಪ್ಲಿಕೇಶನ್ (ಕೃತಿಯ ಸೂಕ್ಷ್ಮವಾದ ವಿವರವಾದ ಅಧ್ಯಯನ) ವಿಧಾನವು ಮುಖ್ಯವಾಯಿತು. ಕೃತಿಯ ಸಾವಯವ ಸ್ವರೂಪಕ್ಕೆ ಪ್ರಾಧಾನ್ಯ ದೊರೆತು, ಸಾಹಿತ್ಯ ಕೃಷಿಯ ಬೇರೆಬೇರೆ ಅಂತರ್ಗತ ಅಂಶಗಳನ್ನು (ಘಟನೆ, ಕಥಾವಸ್ತು, ಪಾತ್ರ, ಶೈಲಿ, ಪ್ರತಿಮೆಗಳು ಇತ್ಯಾದಿ) ಪ್ರತ್ಯೇಕ ಪ್ರತ್ಯೇಕವಾಗಿ ಪರಾಮರ್ಶಿಸುವ ಬದಲು ಇಡೀ ಕೃತಿ ನೀಡುವ ಅನುಭವ, ಈ ಅನುಭವದ ಸಂವಹನದ ವಿಧಾನ ಇವುಗಳಿಗೆ ಪ್ರಾಧಾನ್ಯ ದೊರೆಯಿತು. ಕೃತಿಯ ರೂಪದ (ಫಾರಂ) ಗ್ರಹಿಕೆ ಮುಖ್ಯವಾಯಿತು. ವಿಲ್ಸನ್, ನೈಟ್, ವಿಲಿಯಂ ಎಮ್‌ಸನ್, ಎಫ್.ಆರ್.ಲೀವಿಸ್ ಮೊದಲಾದವರು ಈ ಪಂಥದ ಪ್ರಮುಖ ವಿಮರ್ಶಕರು. ಜಾನ್ ಮಿಡ್ಲ್‌ಟನ್ ಮರಿ, ಡಿ.ಎಚ್.ಲಾರೆನ್ಸ್ ಮೊದಲಾದವರನ್ನು ನವ ರೊಮ್ಯಾಂಟಿಕ್ ಗುಂಪಿನವರು ಎಂದು ಗುರುತಿಸುತ್ತಾರೆ. ಮಿಡ್ಲ್‌ಟನ್‌ಮರಿ ಶ್ರೇಷ್ಠ ಕಾವ್ಯವೆಲ್ಲ ತರ್ಕವನ್ನು ಮೀರಿದ ಸತ್ಯದ ಅನಾವರಣ ಎಂಬ ಕಲ್ಪನೆಯನ್ನು ಸ್ವೀಕರಿಸಿದ. ಕಲೆಗಾಗಿ ಕಲೆ ಎಂಬುದೇ ತನ್ನ ಭಾವನೆ ಎಂದು ಹೇಳಿದ ಎಕಿನ್ಸ್ (ಎಂದರೆ ಬದುಕಿಗೂ ಕಲೆಗೂ ಸಂಬಂಧವಿಲ್ಲ ಎಂದು, ಕಾದಂಬರಿಯು, ಒಂದು ಜೀವಂತ ಕ್ಷಣದಲ್ಲಿ ಮನುಷ್ಯನಿಗೂ ವಿಶ್ವಕ್ಕೂ ಇರುವ ಸಂಬಂಧದ ನಿರೂಪಣೆ ಎಂದ) ಕಲಾವಿದನನ್ನು ನಂಬಬೇಡ, ಕಥೆಯನ್ನು ನಂಬು ಎನ್ನುವ ಪ್ರಸಿದ್ಧ ಉಕ್ತಿಯನ್ನು ನೀಡಿದವನು ಇವನು.

ಮಿಥ್ ಕ್ರಿಟಿಸಿಸಂ ಈ ಶತಮಾನದ ವಿಶಿಷ್ಟ ಕೊಡುಗೆ. ಆರ್ಕಿಟೈಪ್ಸ್ ಗಳನ್ನು ಗುರುತಿಸುವ ಪ್ರಯತ್ನವೂ ಈ ಕಾಲದಲ್ಲಿ ನಡೆಯಿತು. ಫ್ರಾಯ್ಡ್, ಯೂಂಗನ ಮನಶ್ಶಾಸ್ತ್ರದ ಆವಿಷ್ಕರಣಗಳು ಈ ಪ್ರಯತ್ನಕ್ಕೆ ಪ್ರೇರಿತ. ಅಧಾರ ಮಾಡ್ ಬಾಡ್ಕಿನ್, ನಾರ್‌ಥ್ರಾಫ್ ಫ್ರೈ, ಲೆಸ್ಲಿ ಫೀಲ್ಡರ್, ಕ್ಲಾಡ್ ಲೆವಿಸ್ಟ್ರಾಸ್ ಮೊದಲಾದವರು ಈ ಪಂಥವನ್ನು ಬೆಳೆಸಿದ್ದಾರೆ. ಈ ವಿಮರ್ಶಕರು ಮತ್ತು ಡಿ.ಡಬ್ಲ್ಯು. ಹಾರ್ಡಿಂಗ್, ಲೈಯೊನೆಟ್ ಟ್ರಿಲಿಂಗ್, ನಾರ್ಮನ್ ಬ್ರೌನ್ ಮೊದಲಾದವರು ಮನೋವಿಜ್ಞಾನ ವಿಮರ್ಶೆಯನ್ನು ಬೆಳೆಸಿದರು. ಮಾರ್ಕ್ಸಿಸ್ಟ್ ಪಂಥ ಇಂಗ್ಲೆಂಡಿನಲ್ಲಿ ವಿಶೇಷವಾಗಿ ಬೆಳೆಯಲಿಲ್ಲ. ಆದರೆ ಇತ್ತೀಚಿಗಿನ ವರ್ಷಗಳಲ್ಲಿ ಈ ಪಂಥದ ಪ್ರಭಾವವಿರುವ ಸಾಂಸ್ಕೃತಿಕ ವಿಶ್ಲೇಷಣೆ ಗರಿಗೆದರಿದೆ. ಸಂಸ್ಕೃತಿಯ ಭಾಗವಾಗಿ ಸಾಹಿತ್ಯದ ಅಧ್ಯಯನ ಬೆಳೆಯುತ್ತ ಬಂದಿದೆ. ಕಳೆದ ಅರ್ಧ ಶತಮಾನದಲ್ಲಿ ಭಾಷಾವಿಜ್ಞಾನದ ಅಧ್ಯಯನವೂ ಸಾಹಿತ್ಯ ವಿಮರ್ಶೆಯ ಮೇಲೆ ಪ್ರಭಾವ ಬೀರಿದೆ. ಎಂ.ಎ.ಕೆ.ಹ್ಯಾಲಿಡೆ ಅಂಥವರು ಭಾಷಾವಿಜ್ಞಾನವನ್ನು ಸಾಹಿತ್ಯ ವಿಮರ್ಶೆಗೆ ಬಳಸಿಕೊಂಡೇ, ಸ್ಟ್ರಕ್ಚರಲಿಸಂ ಒಂದು ಮುಖ್ಯ ಬೆಳವಣಿಗೆ. ಅನಂತರ, ಇತ್ತೀಚೆಗೆ (2004) ತೀರಿಕೊಂಡ ಜೆಲಿಸ್ ಡೆವೀಡ್, ಡಿಕನ್ಸ್ಟ್ರ್ರನ್ ಪಂಥವನ್ನು ಪ್ರಾರಂಭಿಸಿದ. ಇದುವರೆಗೆ ಕೃತಿಯ ಪಠ್ಯ (ಟೆಕ್ಸ್ಟ್)ವನ್ನು ವಿಶ್ಲೇಷಿಸುವುದು ಸಾಹಿತ್ಯ ವಿಮರ್ಶೆಯ ವಿಧಾನವಾಗಿತ್ತು. ಈಗ ದಿ ಸ್ಟೆಬಿಲಿಟಿ ಆಫ್ ದಿ ಟೆಕ್ಸ್ಟ್ (ಪಠ್ಯ ಒಂದೇ ಸಮನೆ ಉಳಿಯುವುದು) ಪ್ರಶ್ನೆಯಾಗಿದೆ ಸ್ಟ್ಯಾನ್ಲಿಫಿಷ್ ಎನ್ನುವ ವಿಮರ್ಶಕನ ಒಂದು ಪುಸ್ತಕದ ಹೆಸರೇ, 'ಈಸ್ ದೇರ್ ಎ ಟೆಕ್ಸ್ಟ್ ಇನ್ ದಿಸ್ ಕ್ಲಾಸ್?'

ಇಂಗ್ಲಿಷ್ ಸಾಹಿತ್ಯ ವಿಮರ್ಶೆಯು ಮೊದಲಿನಿಂದ ಇತರ ಭಾಷೆಗಳ ಸಾಹಿತ್ಯ ವಿಮರ್ಶೆಯ ಪ್ರಭಾವಕ್ಕೆ ಒಳಗಾಗಿದೆ. ಪ್ರಾಚೀನ ಗ್ರೀಸ್, ಫ್ರಾನ್ಸ್, ಜರ್ಮನಿ, ರಷ್ಯ ಮುಂತಾದ ದೇಶಗಳ ಸಾಹಿತ್ಯ ವಿಮರ್ಶೆಗಳೂ ಪ್ರಭಾವ ಬೀರಿವೆ. ಆದರೆ ಕಳೆದ ಅರ್ಧ ಶತಮಾನದಲ್ಲಿ ಅಮೆರಿಕ, ಇಂಗ್ಲೆಂಡ್‌ಗಳ ಸಾಹಿತ್ಯ ವಿಮರ್ಶೆಗಳು ಹೆಣೆದುಕೊಂಡಿವೆ. ಅಲ್ಲದೆ ಡೆರಿಡನಂಥ ಇಂಗ್ಲಿಷೇತರರ ಪ್ರಭಾವವೂ ಗಮನಾರ್ಹವಾಗಿದೆ. ಅಮೆರಿಕ ಮತ್ತು ಯುರೋಪಿನ ಸಾಹಿತ್ಯ ವಿಮರ್ಶೆಗಳ ಪರಿಚಯವಿಲ್ಲದೆ ಇಂಗ್ಲಿಷ್ ಸಾಹಿತ್ಯ ವಿಮರ್ಶೆಯನ್ನು ಅಧ್ಯಯನ ಮಾಡುವುದು ಸಾಧ್ಯವಿಲ್ಲ. *

**ಇಂಗ್ಲಿಷ್ ಸಾಹಿತ್ಯ: ಆ್ಯಂಗ್ಲೊ ಸ್ಯಾಕ್ಸನರ ಯುಗ:** ಇಂಗ್ಲಿಷ್ ಭಾಷೆಯಂತೆಯೇ ಇಂಗ್ಲಿಷ್ ಸಾಹಿತ್ಯವೂ ಆ್ಯಂಗ್ಲೋಸ್ಯಾಕ್ಸನರಿಂದ ಆರಂಭವಾಯಿತು. ಆ್ಯಂಗ್ಲೋಸ್ಯಾಕ್ಸನರು ಸ್ಕ್ಯಾಂಡಿನೇವಿಯ ಪ್ರದೇಶದಿಂದ ಬ್ರಿಟನ್ನಿಗೆ ಬಂದಾಗ ತಮ್ಮ ತಂಡಗಳಲ್ಲಿ ಪ್ರಚಾರದಲ್ಲಿದ್ದ ಹಾಡುಗಬ್ಬಗಳನ್ನು ನೆನೆಪಿನಲ್ಲಿಟ್ಟುಕೊಂಡು ತಂದಿದ್ದರು. ಆ ಹಾಡುಗಳು ಮೂರು ನಾಲ್ಕು ಶತಮಾನಗಳ ಕಾಲ ಬಾಯಿಂದ ಬಾಯಿಗೆ ಬಂದು ಕ್ರಮೇಣ ಲಿಖಿತ ರೂಪಕ್ಕಿಳಿದುವು. ಹೀಗೆ ಅವನ್ನು ಬರೆವಣಿಗೆಗಿಳಿಸಿದವರು ಕ್ರೈಸ್ತಮಠಗಳ ಸನ್ಯಾಸಿಗಳು. ಕ್ರೈಸ್ತಮತ ಇಂಗ್ಲೆಂಡಿಗೆ ಎರಡು ದಿಕ್ಕುಗಳಿಂದ ಬಂದಿತು. ದೊಡ್ಡ ಪ್ರಮಾಣದಲ್ಲಿ ಅದು ಬಂದುದು 597ರಲ್ಲಿ, ಆಗ್ನೇಯದಿಂದ, ಸಂತ ಆಗಸ್ಟೀನನ ಮೂಲಕ. ಇದಕ್ಕೆ ಮೊದಲೇ ಉತ್ತರದಲ್ಲಿ ಐರ್ಲೆಂಡಿನಿಂದ ಕೆಲವರು ಪಾದ್ರಿಗಳು ಬಂದು ಅಲ್ಲಲ್ಲಿ ಕ್ರೈಸ್ತ ಮತವನ್ನು ಜನಗಳಿಗೆ ಪರಿಚಯಮಾಡಿ ಕೊಟ್ಟಿದ್ದರು. ಮಠಗಳನ್ನೂ ಸ್ಥಾಪಿಸಿದ್ದರು. ಈ ಮಠಗಳಲ್ಲಿದ್ದ ಸಂತರು; ಆ್ಯಂಗ್ಲೋಸ್ಯಾಕ್ಸನರ ಕಾವ್ಯವನ್ನು 9ನೆಯ ಶತಮಾನದಲ್ಲಿ ಬರೆದಿಟ್ಟರೆಂದು ಪ್ರತೀತಿಯಿದೆ. ಈ ಕೆಲವು ಕವನಗಳಲ್ಲಿದ್ದ ಯುದ್ಧದ ವರ್ಣನೆಗಳ ತೀವ್ರತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲೆಳಸಿರುವುದೇ ಇದಕ್ಕೆ ಸಾಕ್ಷಿ. ಹೀಗೆ ಬಂದಿರುವ ಆ್ಯಂಗ್ಲೋಸ್ಯಾಕ್ಸನರ ಕವನಗಳಲ್ಲಿ ಅತ್ಯಂತ ಮುಖ್ಯವಾದುದು ಬ್ಯೋವುಲ್ಫ್. ಇದು ಇಂಗ್ಲಿಷ್ ಜನರ ಏಕೈಕ ಮಹಾಕಾವ್ಯ. ಬ್ಯೋವುಲ್ಫ್ ಎಂಬ ವೀರ ಹ್ರಾತ್ಗಾರ್ ಎಂಬ ರಾಜನಿಗೂ ಅವನ ಆಸ್ಥಾನಿಕರಿಗೂ ಮಾರಕವಾಗಿದ್ದ ಗ್ರೆಂಡಲ್ ಎಂಬ ಕಡಲಭೂತವೊಂದನ್ನು ಅದರ ಹುದುಗುದಾಣಕ್ಕೇ ಹೋಗಿ ಕೊಂದುದಲ್ಲದೆ, ಅನಂತರ ತನ್ನವರಿಗೆ ತೊಂದರೆಕೊಡುತ್ತಿದ್ದ ಬೆಂಕಿಯುಗುಳುವ ರಾಕ್ಷಸ ಪ್ರಾಣಿಯೊಂದನ್ನು ಸಂಹರಿಸಹೋಗಿ ಅದನ್ನು ಕೊಂದರೂ ಅದರ ಉಸಿರುತಾಕಿ ತಾನೂ ಪ್ರಾಣಬಿಟ್ಟದ್ದರ ಕಥೆ ಇದು. ಆ್ಯಂಗ್ಲೋಸ್ಯಾಕ್ಸನರಿಗೂ ಕಡಲಿಗೂ ಇದ್ದ ನಿಕಟ ಸಂಬಂಧ ಈ ಕೃತಿಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಬ್ಯೋವುಲ್ಫ್ ಕಡಲಿನಾಳಕ್ಕೆ ಹೋಗಿ ಗ್ರೆಂಡೆಲ್‌ನನ್ನು ಕೊಂದುದು ಆ್ಯಂಗ್ಲೋಸ್ಯಾಕ್ಸನರು ಕಡಲಿನ ಮೇಲೆ ಸ್ಥಾಪಿಸಿದ ನೌಕಾಪ್ರಭುತ್ವದ ಸಾಂಕೇತಿಕ ಚಿತ್ರವೆಂದು ಪರಿಗಣಿಸಲಾಗಿದೆ. ಅದಲ್ಲದೆ ಅವರ ಸಾಮಾಜಿಕ ಜೀವನದ ಆಕರ್ಷಕ ಚಿತ್ರಗಳೂ ಈ ಕಾವ್ಯದಲ್ಲಿ ದೊರೆಯುತ್ತವೆ. ಈ ಕವನವಲ್ಲದೆ ಒಂದೆರಡು ಭಾವಗೀತೆಗಳೂ ಆ್ಯಂಗ್ಲೋಸ್ಯಾಕ್ಸನರಿಂದ ಬಂದಿವೆ. ವಿಡ್‌ಸಿತ್, ಡಿಯೋರ್ಸ್ ಕಂಪ್ಲೇಂಟ್ ಎಂಬುವು ಇವುಗಳಲ್ಲಿ ಮುಖ್ಯವಾದುವು. ಇವೆರಡರಲ್ಲೂ ಶೋಕದ ಧ್ವನಿಯಿದೆ. ದೇಶಬಿಟ್ಟು ದೂರ ಹೋಗಿ ಕೊನೆಯಿಲ್ಲದ ಅಲೆದಾಟಕ್ಕೆ ಗುರಿಯಾಗಿರುವ ಹಾಡುಗಾರನೊಬ್ಬನ ಕಷ್ಟಗಳ ವರ್ಣನೆ ವಿಡ್‌ಸಿತ್. ತನ್ನ ಪ್ರತಿಸ್ಪರ್ಧಿಯೊಬ್ಬನ ಉತ್ಕರ್ಷದಿಂದ ತಾನು ಹೊರದೂಡಲ್ಪಟ್ಟು ಗತಿಗೆಟ್ಟಿರುವ ಆಸ್ಥಾನದ ಹಾಡುಗಾರನೊಬ್ಬನ ಸಂಕಟದ ಅಭಿವ್ಯಕ್ತಿಯನ್ನು 'ಡಿಯೋರ್ಸ್ ಕಂಪ್ಲೇಂಟ್'ನಲ್ಲಿ ಕಾಣಬಹುದು. ದಿ ಸೀಫೇರರ್ ಎಂಬ ಇನ್ನೊಂದು ಕವನವು ಸಮುದ್ರಯಾನದಲ್ಲಿ ಆ್ಯಂಗ್ಲೋಸ್ಯಾಕ್ಸನರಿಗಿದ್ದ ಆಸಕ್ತಿಯನ್ನು ಸೂಚಿಸುತ್ತದೆ. ಇವಲ್ಲದೆ ದಿ ಹಸ್ಬೆಂಡ್ಸ್ ಮೆಸೇಜ್ ಎಂಬ ಪ್ರಣಯ ಕವನವೂ ಒಗಟುಗಳನ್ನೊಳಗೊಂಡ ಕೆಲವು ಸಣ್ಣಕವಿತೆಗಳೂ ಆ ಕಾಲದಿಂದ ಬಂದಿವೆ. ದಿ ರೂಯಿನ್ ಎಂಬ ಕವನದ ವಿಷಯ ಪಾರ್ಥಿವ ವಸ್ತುಗಳ ಅಶಾಶ್ವತತೆ.

ಆ್ಯಂಗ್ಲೊ ಸ್ಯಾಕ್ಸನರ ಕಾಲದಲ್ಲಿ ಕ್ರೈಸ್ತ ಮತಕ್ಕೆ ಸಂಬಂಧಪಟ್ಟ ಕಾವ್ಯವೂ ಸೃಷ್ಟಿಯಾಯಿತು. ಉತ್ತರದ ವಿಟ್ಬೆ ಮತ್ತು ಜಾರೋ ಎಂಬ ಸ್ಥಳಗಳಲ್ಲಿನ ಕ್ರೈಸ್ತಮಠಗಳಲ್ಲಿ ಅದು ನಡೆದುದು. ಕೇಡ್‌ಮನ್ ಮತ್ತು ಕೈನ್‌ವುಲ್ಫ್ ಆ ಗುಂಪಿಗೆ ಸೇರಿದ ಮುಖ್ಯ ಕವಿಗಳು. ಕೇಡ್‌ಮನ್ ಬೈಬಲಿನಲ್ಲಿ ಉಕ್ತವಾಗಿರುವ ಜಗತ್ತಿನ ಸೃಷ್ಟಿಯನ್ನೂ ಕೈನ್‌ವುಲ್ಫ್ ಏಸುಕ್ರಿಸ್ತನ ಚರಿತ್ರೆ ಮತ್ತು ಬೋಧನೆಗಳನ್ನೂ ತಮ್ಮ ಕವಿತೆಗಳಲ್ಲಿ ವರ್ಣಿಸಿದ್ದಾರೆ. ಕೇಡ್‌ಮನ್ನನೇ ಇಂಗ್ಲೆಂಡಿನ ಮೊಟ್ಟಮೊದಲ ಕವಿ ಎನ್ನಬಹುದು. ಕೈನ್‌ವುಲ್ಫ್‌ನ ದಿ ಡ್ರೀಮ್ ಆಫ್ ದಿ ರೂಡ್ ತನ್ನ ಕರ್ತನ ತೀವ್ರವಾದ ಧರ್ಮಾಭಿಮಾನವನ್ನು ಹೊರಸೂಸುತ್ತದೆ. ಜಾರೊ ಮಠದಲ್ಲಿದ್ದ

ಬೀಡೆ (ಅಥವಾ ಬಿಢಾ–673–735) ಇಂಗ್ಲೆಂಡಿನಲ್ಲಿ ಕ್ರೈಸ್ತಮತದ ಬೆಳವಣಿಗೆಯ ಚರಿತ್ರೆಯನ್ನು ಎಕ್ಲೆಸಿಯಾಸ್ಟಿಕಲ್ ಹಿಸ್ಟರಿ ಆಫ್ ಇಂಗ್ಲೆಂಡ್‌ನಲ್ಲಿ ಬರೆದಿದ್ದಾನೆ. ಇದನ್ನು ಬರೆದಿರುವುದು ಲ್ಯಾಟಿನ್ ಭಾಷೆಯಲ್ಲಿ.

ಇಂಗ್ಲಿಷಿನಲ್ಲೇ ಗದ್ಯವನ್ನು ತಂದವನು ಆಲ್ಫ್ರೆಡ್ ದೊರೆ (871–901). ದಕ್ಷಿಣದ ವೆಸೆಕ್ಸ್ ಪ್ರಾಂತ್ಯದಲ್ಲಿ ಆಳಿದ ಆಲ್ಫ್ರೆಡ್ ಇಂಗ್ಲೆಂಡಿಗೆ ಮುತ್ತಿಗೆ ಹಾಕಿ ತಮ್ಮ ಆಧಿಪತ್ಯವನ್ನು ಸ್ಥಾಪಿಸುತ್ತಿದ್ದ ಡೇನರೊಡನೆ ಒಪ್ಪಂದ ಮಾಡಿಕೊಂಡು ತನ್ನ ರಾಜ್ಯದಲ್ಲಿ ಶಾಂತಿಸ್ಥಾಪನೆಗೈದಿದ್ದ. ಆತ ಜನಹಿತಸಾಧನೆಗಾಗಿ ಮಾಡಿದ ಕೆಲಸಗಳಿಗಾಗಿ ಇಂಗ್ಲಿಷ್ ಚರಿತ್ರೆಯಲ್ಲಿ ಅವನಿಗೆ ಮಹಾಶಯ (ದಿ ಗ್ರೇಟ್) ಎಂಬ ಬಿರುದು ಬಂದಿದೆ. ಆತ ಮಾಡಿದ ಕೆಲಸಗಳಲ್ಲಿ ಮುಖ್ಯವಾದುದ್ದು ತನ್ನ ಪ್ರಜೆಗಳಲ್ಲಿ ವಿದ್ಯೆಯನ್ನು ಹರಡಲು ಪ್ರಸಿದ್ಧವಾದ ಕೆಲವು ಲ್ಯಾಟಿನ್ ಕೃತಿಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ್ದು, ಮಾಡಿಸಿದ್ದು. ಪೋಪ್ ಗ್ರಗೊರಿಯ ಪ್ಯಾಸ್ಟೊರಲ್ ಕ್ಯೂರ್, ಒರೋಸಿಯಸ್ಸನ ಚರಿತ್ರೆ, ಬೀಥಿಯಸ್ಸನ ಕಾನ್ಸೊಲೇಷನ್ಸ್ ಆಫ್ ಫಿಲಾಸಫಿ ಮತ್ತು ಬೀಡೆಯ ಎಕ್ಲೆಸಿಯಾಸ್ಟಿಕಲ್ ಹಿಸ್ಟರಿ–ಇವು ಆ ಅನುವಾದಿತ ಗ್ರಂಥಗಳು. ಇವಲ್ಲದೆ ಆಲ್ಫ್ರೆಡ್ ತನ್ನ ರಾಜ್ಯದಲ್ಲಿ ದಿನ ದಿನವೂ ನಡೆಯುತ್ತಿದ್ದ ಘಟನೆಗಳನ್ನು ವಿವರಿಸುವ ದಿ ಸ್ಯಾಕ್ಸನ್ ಕ್ರಾನಿಕಲ್ ಎಂಬ ವರದಿರೂಪದ ದಿನಚರಿ ಗ್ರಂಥವನ್ನು ಆರಂಭಮಾಡಿಸಿದ. ನೂರಾರು ವರ್ಷಗಳು ಬೆಳೆದ ಈ ಗ್ರಂಥ ಆ ಕಾಲದ ಚರಿತ್ರೆಗೆ ಮಾತ್ರವೇ ಅಲ್ಲದೆ ಭಾಷೆಯ ಬೆಳವಣಿಗೆಗೂ ಕನ್ನಡಿಯಾಗಿದೆ. ಎಲ್ಫ್ರಿಕ್ ಎಂಬ ವೈಯಾಕರಣಿ ಮತ್ತು ವುಲ್ಫಸ್ಟನ್ ಎಂಬ ಧರ್ಮಬೋಧಕ ಅಂದಿನ ಇನ್ನಿಬ್ಬರು ಗದ್ಯಲೇಖಕರು.

**ಮಧ್ಯಯುಗ–ಫ್ರೆಂಚ್ ಪ್ರಭಾವ:** ಇಂಗ್ಲಿಷ್ ಸಾಹಿತ್ಯ ಚರಿತ್ರೆಯ ಮಧ್ಯಯುಗದ ಅವಧಿ ಸು. 1066–1500ರ ವರೆಗೆ ಎಂದು ಇಟ್ಟುಕೊಳ್ಳಬಹುದು. ನಾರ್ಮನ್ನರು ಇಂಗ್ಲೆಂಡಿಗೆ ಮುತ್ತಿಗೆ ಹಾಕಿ ಗೆದ್ದು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದು 1066ರಲ್ಲಿ. ಆದರೆ ಅದಕ್ಕೆ ಸ್ವಲ್ಪ ಮೊದಲೇ ಇಂಗ್ಲೆಂಡಿನಲ್ಲಿ ನಾರ್ಮನ್ನರ ಪ್ರಭಾವ ಆರಂಭವಾಗಿತ್ತೆಂದು ಹೇಳಬಹುದು. ಅದರೊಡನೆ ಇಂಗ್ಲಿಷ್ ಸಾಹಿತ್ಯಕ್ಕೆ ಅದರಲ್ಲಿ ಅದುವರೆಗೂ ಇಲ್ಲದಿದ್ದ ಕೆಲವು ಲಕ್ಷಣಗಳು ಬಂದುವು. ಆ್ಯಂಗ್ಲೊಸ್ಯಾಕ್ಸನರ ಕಾವ್ಯದಲ್ಲಿ ಹಗುರವೂ ಹರ್ಷಮಯವೂ ಆದ ಕವಿತೆಯಿರಲಿಲ್ಲ. ಅವರು ಗಂಭೀರ ಸ್ವಭಾವದ ವೀರರು. ಲವಲವಿಕೆಯಿಂದ ಕೂಡಿದ ಜೀವನ, ಬಣ್ಣ ಬಣ್ಣದ ಪ್ರಕೃತಿ ಚಿತ್ರಗಳು, ಪ್ರಣಯಗೀತೆಗಳು, ನೃತ್ಯಗೀತೆಗಳು–ಮೊದಲಾದುವು ಇಂಗ್ಲೆಂಡಿಗಿಂತಲೂ ಹೆಚ್ಚು ಪ್ರಕಾಶಯುತವಾದ ವಾಯುಗುಣವುಳ್ಳ ಫ್ರಾನ್ಸಿನಿಂದ ಇಂಗ್ಲಿಷ್ ಸಾಹಿತ್ಯ ಪ್ರಪಂಚಕ್ಕೆ ಬಂದವು. ಆ್ಯಂಗ್ಲೊ ಸ್ಯಾಕ್ಸನರಿಗಿಂತಲೂ ಹಿಂದೆ ಬ್ರಿಟನ್ನಿನಲ್ಲಿದ್ದ ಕೆಲ್ಟರ ಐತಿಹ್ಯಗಳನ್ನು ಸಂಗ್ರಹಿಸಿ ಬರೆದಿಟ್ಟವರೂ ನಾರ್ಮನ್ನರೇ. ಆರ್ಥರ್ ದೊರೆಯ ಮತ್ತು ಅವನ ಯೋಧರ ಸ್ವಾರಸ್ಯಮಯ ಕಥೆಗಳು ಈ ಕಾಲದಲ್ಲಿ ರೂಪಿತವಾದವು. ಇಂಗ್ಲೆಂಡಿನ ರಾಷ್ಟ್ರೀಯ ಐತಿಹ್ಯಗಳೆನ್ನಬಹುದಾದ ಈ ಕಥೆಗಳು ಇಂಗ್ಲಿಷ್ ಕವಿಗಳನ್ನು ಮತ್ತೆ ಮತ್ತೆ ಆಕರ್ಷಿಸಿವೆ. ಇದೇ ರೀತಿ ಇತರ ವೀರರ ಕಥೆಗಳನ್ನೂ ಪದ್ಯರೂಪದಲ್ಲಿ ನಿರೂಪಿಸುವ ಕಲೆಯನ್ನು ನಾರ್ಮನ್ನರು ಬೆಳೆಸಿಕೊಂಡಿದ್ದರು. ಮೆಟ್ರಿಕಲ್ ಕ್ರಾನಿಕಲ್ಸ್, ಮೆಟ್ರಿಕಲ್ ರೊಮಾನ್ಸಸ್ ಎಂದು ಹೆಸರು ಪಡೆದಿರುವ ಇಂಥ ವೀರಗವಿತೆಗಳನೇಕವು ಈ ಯುಗದ ಮೊದಲ ಭಾಗದಲ್ಲಿ ರಚಿತವಾದವು. ಇವಲ್ಲದೆ ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟ ಕೃತಿಗಳೂ ವೈಯಕ್ತಿಕ ಭಾವಗಳನ್ನು ವ್ಯಕ್ತಪಡಿಸುವ ಕಾವ್ಯಗಳೂ ಕೆಲವು ಬಂದವು. ದಿ ಔಲ್ ಅಂಡ್ ದಿ ನೈಟಿಂಗೇಲ್, ದಿ ಕುಕು ಸಾಂಗ್, ಆಲಿಸಾನ್–ಇಂಥ ಕವಿತೆಗಳು. ಆದರೆ ಮಧ್ಯಯುಗದ ಇಂಗ್ಲಿಷ್ ಸಾಹಿತ್ಯದಲ್ಲಿ ಅತ್ಯುತ್ತಮವೆಂದು ಖ್ಯಾತಿವೆತ್ತಿರುವ ಕವನ ದಿ ಪರ್ಲ್ ಜೀವನದ ಅಶಾಶ್ವತತೆ, ಸಹನೆಯ ಅಗತ್ಯ, ಆತ್ಮದ ಅಮರ್ತ್ಯತೆ, ಮರಣಾನಂತರದ ಜೀವನ–ಇವೆಲ್ಲವುಗಳೂ ಇದರಲ್ಲಿ ಸೂಚ್ಯರೀತಿಯಲ್ಲಿ ಪ್ರತಿಪಾದಿತವಾಗಿರುವುದಲ್ಲದೆ ಮಗಳ ಮರಣದಿಂದ ತಂದೆಯೊಬ್ಬ ಅನುಭವಿಸುವ ಸಹಜಸಂಕಟದ ಅಭಿವ್ಯಕ್ತಿಯೂ ಇದೆ. ಈ ಕಾಲದಲ್ಲೇ ರಚಿತವಾದ ದಿ ಹ್ಯಾರೋಯಿಂಗ್ ಆಫ್ ಹೆಲ್ ಎಂಬುದು ಬೈಬಲ್ ಕಥೆಗಳನ್ನು ಕಾವ್ಯರೂಪದಲ್ಲಿ ನಿರೂಪಿಸುವ ಕೃತಿಗಳಿಗೆ ಪ್ರತಿನಿಧಿಯಾಗಿದೆ. ಕ್ರೈಸ್ತಮತ ಹೇಗೆ ಇಂಗ್ಲೆಂಡಿನಲ್ಲೆಲ್ಲ ಹಬ್ಬಿ ಜನಮನ್ನಣೆ ಪಡೆದಿದ್ದಿತೆಂಬುದಕ್ಕೆ ಈ ಬಗೆಯ ಕವನಗಳು ಸಾಕ್ಷಿಗಳಾಗಿವೆ. ನಾರ್ಮನ್ನರಿಂದ ಇಂಗ್ಲಿಷ್ ಸಾಹಿತ್ಯಕ್ಕೆ ಆದ ಉಪಕಾರ ಇಷ್ಟಕ್ಕೇ ಮುಗಿಯಲಿಲ್ಲ. ಮೂರು ಶತಮಾನಗಳ ಕಾಲ ಫ್ರೆಂಚ್ ಭಾಷೆಯ ಪ್ರಭುತ್ವದ ಪರಿಣಾಮವಾಗಿ ಸಾವಿರಾರು ಫ್ರೆಂಚ್ ಪದಗಳು ಇಂಗ್ಲಿಷಿಗೆ ಬಂದು ಅದರ ಶಬ್ದಸಮೂಹವನ್ನೂ ವೈವಿಧ್ಯವನ್ನೂ ಶಕ್ತಿಯನ್ನೂ ಹೆಚ್ಚಿಸಿದವು. ಇದಲ್ಲದೆ ಹೊಸರೀತಿಯ ಛಂದಸ್ಸೂ ಫ್ರೆಂಚಿನಿಂದ ಇಂಗ್ಲಿಷಿಗೆ ಬಂದಿತು. ಆ್ಯಂಗ್ಲೋಸ್ಯಾಕ್ಸನ್ ಛಂದಸ್ಸಿನ ಆಧಾರ ಆದ್ಯಕ್ಷರ ಪ್ರಾಸವುಳ್ಳ ಎರಡು ಮೂರು ಪದಗಳು ಪಂಕ್ತಿಯ ಮೊದಲರ್ಧದಲ್ಲೂ ಮತ್ತೆ ಅಷ್ಟೇ ಪದಗಳು ಎರಡನೆಯ ಭಾಗದಲ್ಲೂ ಇರಬೇಕೆನ್ನುವುದು ಆ ಕಾವ್ಯದ ಸಂಪ್ರದಾಯವಾಗಿತ್ತು. ಈಗ ಇಂಗ್ಲಿಷಿನಲ್ಲಿ ಬಳಕೆಯಲ್ಲಿರುವ ಪದಗಳ ಧ್ವನಿಯ ಒತ್ತಡವನ್ನು ಅನುಸರಿಸಿದ ಛಂದಸ್ಸನ್ನು ರೂಪಿಸುವ ಕ್ರಮ ಫ್ರೆಂಚ್ ಕಾವ್ಯದಿಂದ ಇಂಗ್ಲಿಷಿಗೆ ದತ್ತವಾದುದು. ಇದರಿಂದ ಇಂಗ್ಲಿಷ್ ಕಾವ್ಯ ಛಂದೋವೈವಿಧ್ಯವನ್ನೂ ನಾದಮಾಧುರ್ಯವನ್ನೂ ಪಡೆಯಲು ಸಾಧ್ಯವಾಯಿತು. ವಾಸ್ತವವಾಗಿ ಎಷ್ಟೋ ಫ್ರೆಂಚ್ ಛಂದಸ್ಸುಗಳೇ ಇಂಗ್ಲಿಷಿನಲ್ಲೂ ಬಳಕೆಗೆ ಬಂದುವು. ಇಂಗ್ಲೆಂಡಿನ ಹಿರಿಯ ಕವಿಗಳಲ್ಲಿ ಪ್ರಥಮನಾದ ಛಾಸರನೇ ಅವುಗಳಲ್ಲಿ ಕೆಲವನ್ನು ಫ್ರೆಂಚಿನಿಂದ ಇಂಗ್ಲಿಷಿಗೆ ತಂದ.

**ಛಾಸರ್:** 1340–1400 ಮಧ್ಯಯುಗದ ಇಂಗ್ಲಿಷ್ ಕವಿಗಳಲ್ಲಿ ಅಗ್ರೇಸರ. ಈ ಅವಧಿಯಲ್ಲಿ ಇಂಗ್ಲೆಂಡಿಗೂ ಫ್ರಾನ್ಸಿಗೂ 100 ವರ್ಷಗಳ ಯುದ್ಧ ನಡೆಯುತ್ತಿತ್ತು. ಈ ಯುದ್ಧ ಕೊನೆಗೊಂಡುದು 15ನೆಯ ಶತಮಾನದ ಮಧ್ಯಭಾಗದ ಸುಮಾರಿಗೆ. ಅದೇ ವೇಳೆಗೆ ಮುಸ್ಲಿಮರು ಕಾನ್‌ಸ್ಟ್ಯಾಂಟಿನೋಪಲ್ ಪಟ್ಟಣವನ್ನು ಹಿಡಿದು ಯುರೋಪಿನ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಸ್ಥಾಪಿಸಿದರು. ತತ್ಫಲವಾಗಿ ಪಶ್ಚಿಮ ಯುರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಂಸ್ಕೃತಿಕ ನವೋದಯದ ಚಳವಳಿ ಆರಂಭವಾಯಿತು. ಇಂಗ್ಲೆಂಡಿನಲ್ಲಿ ದೀರ್ಘಕಾಲದ ಯುದ್ಧದ ಪರಿಣಾಮವಾಗಿ ಜನ ಅಧಿಕ ತೆರಿಗೆ ಕೊಡಬೇಕಾದುದಲ್ಲದೆ ಇತರ ಕಷ್ಟಗಳಿಗೆ ಗುರಿಯಾಗಬೇಕಾಯಿತು. ಜೊತೆಗೆ ಪ್ಲೇಗ್ ರೋಗವೂ ತಲೆದೋರಿ ಅವರ ಸಂಕಟ ದುರ್ಭರವಾಗಿ ಅವರು 1381ರಲ್ಲಿ ದಂಗೆಯೆದ್ದರು. ದಿ ಪೆಸೆಂಟ್ಸ್ ರಿವೋಲ್ಟ್ ಎಂದು ಪ್ರಸಿದ್ಧವಾಗಿರುವ ಈ ದಂಗೆಯ ಫಲವಾಗಿ ಜನಸಾಮಾನ್ಯರ ಪ್ರಾಮುಖ್ಯ ಹೆಚ್ಚಿತು. ಎಲ್ಲರೂ ಸಮ ಎಂಬ ಭಾವನೆ ಬೆಳೆಯಿತು. ಧಾರ್ಮಿಕ ವಿಚಾರಗಳಲ್ಲೂ ಬದಲಾವಣೆ ತಲೆದೋರಿ ಅನೀತಿಯುತರಾದ ಪಾದ್ರಿಗಳು ಮೊದಲಾದವರ ವಿರುದ್ಧವಾಗಿ ಸಾರ್ವಜನಿಕಾಭಿಪ್ರಾಯ ಪ್ರಬಲವಾಯಿತು, ವೈಯಕ್ತಿಕ ನೈತಿಕಜೀವನಕ್ಕೆ ಪ್ರಾಶಸ್ತ್ಯ ಹೆಚ್ಚಿತು.

ಹೀಗೆ ಬದಲಾಯಿಸಿದ ಮನೋದೃಷ್ಟಿ ಮತ್ತು ಪರಿಸ್ಥಿತಿಗಳು ಆ ಕಾಲದ ಮುಖ್ಯ ಲೇಖಕರಲ್ಲಿ ಪ್ರತಿಬಿಂಬಿತವಾಗಿವೆ. ಜಾನ್ ವಿಕ್ಲಿಫ್, ವಿಲಿಯಂ ಲ್ಯಾಂಗ್ಲಂಡ್, ಜಾನ್ ಗವರ್ ಮತ್ತು ಜಫ್ರಿ ಛಾಸರ್–ಇವರೇ ಆ ಲೇಖಕರು. ವಿಕ್ಲಿಫ್ ಗದ್ಯ ಲೇಖಕ, ಧರ್ಮಸುಧಾರಕ. ಚರ್ಚಿನ ವಲಯಗಳಲ್ಲಿ ಎದ್ದು ಕಾಣುತ್ತಿದ್ದ ಅನೀತಿಯನ್ನೂ ಸುಖಲೋಲುಪತೆಯನ್ನೂ ಕಂಡು ಬೇಸತ್ತು ಲೊಲ್ಲಾರ್ಡ್ಸ್ ಎಂಬ ಧರ್ಮಪ್ರಚಾರಕರ ಹೊಸ ತಂಡವನ್ನೇ ಆರಂಭಿಸಿದ. ತನ್ನ ಕಾಲದ ಧಾರ್ಮಿಕ ಅವನತಿಯನ್ನು ಕುರಿತು ಬರೆದುದಲ್ಲದೆ ಬೈಬಲಿನ ಹೊಸ ಒಡಂಬಡಿಕೆಯ ಕೆಲವು ಭಾಗಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದ. ಇಂಗ್ಲಿಷಿನಲ್ಲಿರುವ ಬೈಬಲಿನ ಭಾಷಾಂತರಗಳಲ್ಲಿ ಇದು ಮೊದಲನೆಯದು. ವಿಲಿಯಂ ಲ್ಯಾಂಗ್ಲಂಡ್ ಜನತಾಕವಿ. ದಿ ವಿಷನ್ ಆಫ್ ಪಿಯರ್ಸ್ ದಿ ಪ್ಲೌಮನ್ ಎಂಬ ತನ್ನ ಕವನದಲ್ಲಿ ಸಮಕಾಲೀನ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳನ್ನು ರೂಪಕವಾಗಿ, ಪರೋಕ್ಷವಾಗಿ ಚಿತ್ರಿಸಿದ್ದಾನೆ. ಪಿಯರ್ಸ್ ಪ್ಲೌಮನ್ ಎಂಬಾತ ಗುಡ್ಡವೊಂದರ ಮೇಲೆ ಮಲಗಿ ನಿದ್ದೆ ಹೋದಾಗ ಕನಸಿನಲ್ಲಿ ಒಂದು ಪರಿಷೆಯನ್ನು ಕಾಣುತ್ತಾನೆ. ಅದರಲ್ಲಿ ನಾನಾತರದ ಜನ ಸಮಾಜದ ಬೇರೆಬೇರೆ ಭಾಗಗಳ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾರೆ. ಕವಿಯಿರುವುದು ಬಡವರ ಕಡೆ. ಜಾನ್ ಗವರ್ ಶ್ರೀಮಂತ ಕವಿ. ಆತ ತನ್ನ ವಾಕ್ಸ್ ಕ್ಲಮ್ಯಾಂಟಿಸ್ ಎಂಬ ಇಂಗ್ಲಿಷ್ ಕವನದಲ್ಲಿ ಜನಸಾಮಾನ್ಯರ ದಂಗೆಯನ್ನು ವರ್ಣಿಸಿ ಅವರ ಬೇಡಿಕೆಗಳನ್ನು ನರಿಗಳ ಕೂಗಿಗೆ ಹೋಲಿಸಿದ್ದಾನೆ. ಕನ್‌ಫೆಸಿಯೋ ಆಮ್ಯಾಂಟಿಸ್ ಎಂಬ ಫ್ರೆಂಚ್ ಕವನವನ್ನೂ ಸ್ಪೆಕ್ಯುಲಂ ಮೆಡಿಟ್ಯಾಂಟಿಸ್ ಎಂಬ ಲ್ಯಾಟಿನ್ ಕವನವನ್ನೂ ಆತ ಬರೆದ. ಆತ ಒಂದೊಂದು ಭಾಷೆಯಲ್ಲಿ ಒಂದೊಂದು ಕವನ ರಚಿಸಿರುವುದನ್ನು ನೋಡಿದರೆ ಯಾವುದರಲ್ಲಿ ಕೃತಿ ರಚನೆ ಮಾಡಬೇಕೆಂದು ಅವನ ಮನಸ್ಸಿಗೇ ನಿರ್ಧಾರವಾಗಿಲ್ಲವೆನ್ನಬೇಕು. ಛಾಸರನ ವಿಷಯದಲ್ಲಿ ಇಂಥ ಸಂಶಯಕ್ಕೆ ಅವಕಾಶವೇ ಇಲ್ಲ. ಆತ ಮೊದಲಿನಿಂದಲೂ ಇಂಗ್ಲಿಷಿನಲ್ಲೇ ಬರೆದ. ಆರಂಭದಲ್ಲಿ ರೂಪಕಕಾವ್ಯದಿಂದ ಮೋಹಿತನಾಗಿ ಹೌಸ್ ಆಫ್ ಫೇಮ್ ಎಂಬ ಕವನವನ್ನು ಬರೆದರೂ ಅನಂತರ ತನ್ನ ಕಾಲದ ಇಂಗ್ಲಿಷ್ ಸಮಾಜದ ವಿವಿಧ ಚಿತ್ರಗಳನ್ನು ದಿ ಕ್ಯಾಂಟರ್‌ಬರಿ ಟೇಲ್ಸ್ ಎಂಬ ಹೆಸರಾಂತ ಕೃತಿಯಲ್ಲಿ ಕೊಟ್ಟಿದ್ದಾನೆ. ಬೆಕೆಟ್ ಎಂಬ ಸಂತನ ಸಮಾಧಿಯಿರುವ ಕ್ಯಾಂಟರ್‌ಬರಿಗೆ ಹೋಗುತ್ತಿದ್ದ ಯಾತ್ರಿಕರ ತಂಡದವರು ಹೇಳುವ ಕಥೆಗಳೇ ಈ ಕೃತಿಯ ವಸ್ತು. ಅವರೆಲ್ಲರನ್ನೂ ವರ್ಣಿಸುವ ಪ್ರೊಲೋಗ್ ಎಂಬ ಪೀಠಿಕಾಕವನ ಬಹಳ ಪ್ರಸಿದ್ಧವಾಗಿದೆ. ಅಂದಿನ ಇಂಗ್ಲೆಂಡಿನಲ್ಲಿ ಕಾಣಿಸಿಕೊಂಡಿದ್ದ ಹೊಸ ವೃತ್ತಿಗಳ, ವ್ಯಕ್ತಿಗಳ ಸ್ವಾಭಾವಿಕ ಚಿತ್ರಗಳನ್ನು ನಾವು ಈ ಕವನದಲ್ಲಿ ಕಾಣುತ್ತೇವೆ. ಮಾನವಸ್ವಭಾವದ ವೈವಿಧ್ಯ, ವೈಚಿತ್ರಗಳಲ್ಲಿ ಛಾಸರನಿಗೆ ಖುಷಿ. ಸಮಾಜವನ್ನು ಚಿತ್ರಿಸುವುದರಲ್ಲಿ ಛಾಸರನ ದೃಷ್ಟಿ ವಿಚಾರಪರವಾಗಿದ್ದು, ತಾನು ಮಧ್ಯಕ್ಕೆ ಸೇರಿದ್ದರೂ ಅತ್ಯಾಧುನಿಕನಾದ ಸಮೀಕ್ಷಕನ ಮನೋಧರ್ಮವನ್ನು ಇಲ್ಲಿ ಪ್ರದರ್ಶಿಸುತ್ತಾನೆ. ಇವನದು ನವಿರಾದ ಹಾಸ್ಯ. ಇವನ ಛಂದೋನಿರ್ವಹಣೆ ಸಮರ್ಪಕವಾಗಿದ್ದು, ಇಂಗ್ಲಿಷಿಗೆ ಇದ್ದ ಅನೇಕ ಫ್ರೆಂಚ್ ಪದಗಳ ಮತ್ತು ಛಂದಸ್ಸುಗಳ ಬಳಕೆ ಕಂಡುಬರುತ್ತದೆ. ಕಂಪ್ಲೇಂಟ್ ಟು ಹಿಸ್ ಪರ್ಸ್, ದಿ ಬುಕ್ ಆಫ್ ದಿ ಡಚಸ್ ಎಂಬ ಗೀತರೂಪದ ಪದ್ಯಗಳನ್ನು ಈತ ಬರೆದಿದ್ದಾನೆ. ಇವನ ಸಾಧನೆಯ ಮಿಡ್‌ಲೆಂಡ್ ಉಪಭಾಷೆಯನ್ನು ಇಂಗ್ಲೆಂಡಿನಲ್ಲಿ ಸಾಹಿತ್ಯದ ಮಾಧ್ಯಮವಾಗಿ ನಿಶ್ಚಿತಗೊಳಿಸಿತು.

ಛಾಸರನ ಅನಂತರ 15ನೆಯ ಶತಮಾನದಲ್ಲಿ ಇಂಗ್ಲಿಷ್ ಉಚ್ಚಾರಣೆಯಲ್ಲಿ ಬದಲಾವಣೆ ನಡೆಯಿತು. ಪದಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸುವ ಪದ್ಧತಿ ಕ್ರಮೇಣ ನಿಂತುಹೋಗಿ ಕಾವ್ಯವ್ಯಾಸಂಗ ಮಾಡುವವರಿಗೂ ಕಾವ್ಯಲೇಖಕರಿಗೂ ಯಾವ ರೂಪ ಸರಿ, ಯಾವುದು ತಪ್ಪು ಎಂಬುದೇ ಅನಿರ್ದಿಷ್ಟವಾಯಿತು. ಜೊತೆಗೆ ಅನಿಶ್ಚಿತ ರಾಜಕೀಯ ಪರಿಸ್ಥಿತಿಯೂ ಒಂದಾಗುತ್ತಲೊಂದರಂತೆ ಬಂದ ಯುದ್ಧಗಳೂ ಸಾಹಿತ್ಯಸೃಷ್ಟಿಗೆ ಅಡಚಣೆಗಳಾಗಿದ್ದುವು. ಆದ್ದರಿಂದ ಆ ಯುಗದಲ್ಲಿ ಹೇಳಬಹುದಾದ ಇಂಗ್ಲಿಷ್ ಕವಿಗಳಾರೂ ಬರಲಿಲ್ಲ. ಛಾಸರ್ ಹಾಕಿಕೊಟ್ಟ ಹಾದಿಯಲ್ಲಿ ನಡೆದು ಕಾವ್ಯ ಮಾಡಿದವರೆಂದರೆ ಸ್ಕಾಟ್ಲೆಂಡಿನ ಕೆಲವರು :

ಮೊದಲನೆಯ ಜೇಮ್ಸ್, ರಾಬರ್ಟ್ ಹೆನ್ರಿಸನ್, ವಿಲಿಯಂ ಡನ್‌ಬಾರ್, ಸರ್ ಡೇವಿಡ್ ಲಿಂಡ್ಸೆ. ದಿ ಕಿಂಗ್ಸ್ ಕ್ವೇಯ, ದಿ ಟೆಸ್ಟಮೆಂಟ್ ಆಫ್ ಕ್ರೆಸಿಡ್, ದಿ ಥಿಸಲ್ ಅಂಡ್ ದಿ ರೋಸ್, ದಿ ಡ್ರೀಮ್– ಇವು ಕ್ರಮವಾಗಿ ಅವರ ಕೃತಿಗಳು. ಇವೆಲ್ಲವುಗಳಲ್ಲೂ ಗಮನಾರ್ಹವಾದ ಶಕ್ತಿ ಕಂಡುಬರುತ್ತದೆ. ಇಂಗ್ಲೆಂಡಿನಲ್ಲಿ ಛಾಸರನ ಪ್ರಭಾವಕ್ಕೆ ಒಳಗಾಗಿ ಬರೆದವರೆಂದರೆ ಜಾನ್ ಲಿಡ್‌ಗೇಟ್, ಥಾಮಸ್ ಆಕ್ಲೀವ್ ಮತ್ತು ಜಾನ್ ಸ್ಕೆಲ್ಟನ್. ಇವರಲ್ಲದೆ, ಸರ್ ಥಾಮಸ್ ಮ್ಯಾಲೊರಿ ಎಂಬ ಗದ್ಯಲೇಖನ ಮಾರ್ಟ್ ಡಿ ಆರ್ಥರ್ ಕಥೆಗಳ ಸಂಗ್ರಹವೂ ಈ ಶತಮಾನದ ದ್ವಿತೀಯಾರ್ಧದಲ್ಲಿ ಬಂತು. ಇನ್ನೂ ಇತರ ಕೆಲವು ಪುಸ್ತಕಗಳನ್ನೂ ವಿಲಿಯಂ ಕ್ಯಾಕ್ಸ್‌ಟನ್ ತನ್ನ ಹೊಸ ಮುದ್ರಣಾಲಯದಲ್ಲಿ ಮುದ್ರಿಸಿ ಇಂಗ್ಲೆಂಡಿನ ಪುಸ್ತಕ ಪ್ರಕಟಣೆಯ ಚರಿತ್ರೆಯಲ್ಲಿ ಹೊಸ ಹೆಜ್ಜೆಯಿಟ್ಟ.

ಅಚ್ಚಿನ ಯಂತ್ರ ಬರುವ ಸಮಯಕ್ಕೆ ಸರಿಯಾಗಿ ರಿನೇಸಾನ್ಸ್ ಸಾಂಸ್ಕೃತಿಕ ಉದಯ ಬಂದಿತು. ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯದ ಪರಿಚಯ ಇಟಲಿಯವರಿಗುಂಟಾಗಿ ತನ್ಮೂಲಕ ಹೊಸಬಗೆಯ ಸಾಹಿತ್ಯಸೃಷ್ಟಿ ಆರಂಭವಾಯಿತು. ಮಧ್ಯಯುಗದ ವಿದ್ವಜ್ಜನರ ಮನೋದೃಷ್ಟಿ ಬಹುಮಟ್ಟಿಗೆ ಪಾರಲೌಕಿಕವಾಗಿದ್ದು ಇಹಲೋಕದ ಜೀವನದ ವಿಚಾರದಲ್ಲಿ ನಿರ್ಲಕ್ಷ್ಯದಿಂದಿದ್ದರು. ಛಾಸರ್ ಇದಕ್ಕೊಂದು ಅಪವಾದವಾಗಿದ್ದ. ಆದರೆ ಅವನಿಗೆ ಅನುಯಾಯಿಗಳು ಬರಲಿಲ್ಲ. ರಿನೇಸಾನ್ಸಿನ ಫಲವಾಗಿ ಜಗತ್ತಿನ ಸೌಂದರ್ಯ ಮತ್ತು ಇಹಜೀವನದ ಸ್ವಾರಸ್ಯ ಗ್ರೀಕ್ ಮತು ಲ್ಯಾಟಿನ್ ಸಾಹಿತ್ಯಗಳ ಮೂಲಕ ಜನರ ತಿಳಿವಳಿಕೆಗೆ ಮತ್ತೆ ಬಂದು ಅವರ ಮನೋದೃಷ್ಟಿಯಲ್ಲೇ ಒಂದು ದೊಡ್ಡ ಪರಿವರ್ತನೆಯುಂಟಾಯಿತು; ಸಾಹಿತ್ಯ ಸೃಷ್ಟಿ ಸುಗಮವಾಯಿತು. ಗ್ರೀಕ್ ಮತ್ತು ಲ್ಯಾಟಿನ್ ಕವಿಗಳು, ನಾಟಕಕಾರರು ಮೊದಲಾದವರ ಕೃತಿಗಳನ್ನು ತಮ್ಮ ತಮ್ಮ ಭಾಷೆಗಳಲ್ಲೂ ರಚಿಸಬೇಕೆಂಬ ಬಯಕೆ ಮೂಡಿತು. ರಿನೇಸಾನ್ಸ್‌ನ ಪ್ರಭಾವ ಇಂಗ್ಲೆಂಡಿನಲ್ಲೂ ಕಾಣಿಸಿಕೊಳ್ಳತೊಡಗಿತು. 15ನೆಯ ಶತಮಾನದ ಕೊನೆ ಮತ್ತು 16 ಮತ್ತು 17ನೆಯ ಶತಮಾನಗಳ ಮೊದಲ ಕೆಲವು ವರ್ಷಗಳು ಇಂಗ್ಲಿಷ್ ಸಾಹಿತ್ಯದಲ್ಲಿ ರಿನೇಸಾನ್ಸ್ ಯುಗ, ಹೊಸವಿಷಯಗಳು, ಹೊಸ ಸಾಹಿತ್ಯ ಪ್ರಕಾರ ಸೃಷ್ಟಿ, ಹೊಸ ದೃಷ್ಟಿ, ಜಗತ್ತಿನ ಸುಖಸೌಂದರ್ಯಗಳ ವಿಷಯದಲ್ಲಿ ಒಂದು ಉತ್ಸಾಹ–ಇವು ಈ ಯುಗದ ಮತ್ತು ಈ ಸಾಹಿತ್ಯದ ಹೆಗ್ಗುರುತುಗಳು. ಇಟಲಿಯಲ್ಲಿ ಪೆಟ್ರಾರ್ಕ್, ಬೊಕ್ಯಾಚಿಯೊ ಮೊದಲಾದವರಿಂದ ಆರಂಭವಾಗಿ ಟ್ಯಾಸೊ ಆರಿಯೋಷ್ಟೊ ಮೊದಲಾದ ಕವಿಗಳಿಂದ ಮುಂದುವರಿಸಲ್ಪಟ್ಟ ಈ ವರ್ಗದ ಸಾಹಿತ್ಯ 3 ಶತಮಾನ ಇಂಗ್ಲಿಷ್ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರಿತು. ಕೋಲೆಟ್, ಎರಾಸ್ಮಸ್ ಮತ್ತು ಥಾಮಸ್ ಮೂರ್–ಇವರು ಇಂಗ್ಲೆಂಡಿಗೆ ಈ ಹೊಸ ವಿದ್ವತ್ತನ್ನು ತಂದವರು. ಜನರ ಜೀವನವನ್ನು ಉತ್ತಮಪಡಿಸಬೇಕೆಂದು ಎರಾಸ್ಮಸ್ ಮತ್ತು ಮೂರರ ಬಯಕೆಯಾಗಿತ್ತು. ಅದನ್ನು ತಮ್ಮ ಇನ್ ಪ್ರೈಸ್ ಆಫ್ ಫಾಲಿ ಮತ್ತು ಯೂಟೋಪಿಯ ಗ್ರಂಥಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಇಂಗ್ಲಿಷಿನಲ್ಲಿ ಹೊಸ ಕಾವ್ಯವನ್ನು ತಂದವರು ಸರ್ ಥಾಮಸ್ ವಯಟ್ ಮತ್ತು ದಿ ಅರ್ಲ್‌ಆಫ್ ಸರ್ರೆ ಎಂಬುವರು. ಪೆಟ್ರಾರ್ಕನ ಕೆಲವು ಸಾನೆಟ್ಟುಗಳನ್ನು ವಯಟ್ ಇಂಗ್ಲಿಷಿಗೆ ಭಾಷಾಂತರಿಸಿದ. ತಾನೂ ಕೆಲವು ಭಾವಗೀತೆಗಳನ್ನು ಬರೆದ. ಸರ್ರೆ ವರ್ಜಿಲನ ಈನಿಯಡ್ ಕಾವ್ಯದ ಮೊದಲ ಎರಡು ಕಾಂಡಗಳನ್ನು ಅನುವಾದ ಮಾಡಿದ್ದಲ್ಲದೆ ತನ್ನದೇ ಆದ ಭಾವಗೀತೆಗಳನ್ನೂ ಸಾನೆಟ್ಟುಗಳನ್ನೂ ರಚಿಸಿದ. ಇಬ್ಬರೂ ಹೊಸ ಛಂದಸ್ಸುಗಳನ್ನು ಇಂಗ್ಲಿಷಿಗೆ ನೀಡಿದರು. ಸರಳರಗಳೆಯನ್ನು ಇಂಗ್ಲಿಷಿಗೆ ಕೊಟ್ಟವ ಸರ್ರೆ. ಇವರ ಕವಿತೆಗಳಲ್ಲದೆ ಲಿಲಿಯ ಯೂಫುಯಿಸ್, ಆಸ್ಕಮ್‌ನ ದಿ ಸ್ಕೂಲ್ ಮಾಸ್ಟರ್ ಮತ್ತು ಟಾಕ್ಸೊಫೈಲಸ್, ಎಲಿಯಟ್ಸ್‌ನ ದಿ ಗೌವರ್ನರ್ಸ್ ಬುಕ್ ಮುಂತಾದ ಗ್ರಂಥಗಳೂ ರಿನೇಸಾನ್ಸಿನ ಪರಿಣಾಮವಾಗಿ ಜನರಲ್ಲಿ ಉಂಟಾದ ದೃಷ್ಟಿಭೇದವನ್ನು ತೋರಿಸುತ್ತವೆ. ಮೊದಮೊದಲು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗೇ ಮಾರುಹೋಗಿದ್ದ ಲೇಖಕರೂ ವಿದ್ವಾಂಸರೂ ಬರಬರುತ್ತ ಹೊಸ ಬಗೆಯ ಸಾಹಿತ್ಯವನ್ನು ಸೃಷ್ಟಿಸಿದ್ದಕ್ಕೆ ಇವರು ನಿದರ್ಶನ ಒದಗಿಸುತ್ತಾರೆ. ಇವರಾರೂ ಉನ್ನತಮಟ್ಟದ ಲೇಖಕರಲ್ಲದಿದ್ದರೂ ಚಾರಿತ್ರಕವಾಗಿ ಮುಖ್ಯರು.

ಮೋರ್, ವಯಟ್, ಸರ್ರೆ, ಆಸ್ಕಮ್ ಇವರೆಲ್ಲರೂ 16ನೆಯ ಶತಮಾನದ ಪೂರ್ವಾರ್ಧಕ್ಕೆ ಸೇರಿದವರು; 8ನೆಯ ಹೆನ್ರಿಯ ಆಸ್ಥಾನಿಕರು. ಅವನ ಕಾಲದಲ್ಲೇ ಇಂಗ್ಲೆಂಡಿಗೆ ಪ್ರಾಟೆಸ್ಟಂಟ್ ಮತ ಬಂದು ಕ್ರೈಸ್ತ ಮತ ರೋಮನ್ ಕ್ಯಾಥೊಲಿಕ್ ಮತ್ತು ಪ್ರಾಟೆಸ್ಟಂಟ್ ಎಂದು ಎರಡು ಪಂಗಡಗಳಾಗಿ ವಿಭಜಿತವಾಯಿತು. ಕಾಲಕ್ರಮೇಣ ಈ ಎರಡು ಪಂಗಡಗಳಿಗೂ ಬೆಳೆದ ವೈಷಮ್ಯ ಇಂಗ್ಲಿಷ್ ಸಾಹಿತ್ಯದಲ್ಲೂ ತನ್ನ ಪರಿಣಾಮವನ್ನು ಬೀರಿತು. ಹೆನ್ರಿ ನಿರಂಕುಶ ರಾಜನಾಗಿದ್ದ. ಅವನ ಜೀವನ ಅಷ್ಟೇನೂ ಶುದ್ಧವಾದದ್ದಾಗಲಿ ಸೌಂದರ್ಯಮಯವಾದದ್ದಾಗಲಿ ಆಗಿರಲಿಲ್ಲ. ಅವನ ಮಗಳು ಎಲಿಜಬೆತ್‌ಳ ಆಳ್ವಿಕೆ ಇಂಗ್ಲೆಂಡಿನ ಚರಿತ್ರೆಯಲ್ಲಿ ಸುವರ್ಣಕಾಲವೆಂದು ಹೆಸರು ಪಡೆದಿದೆ. 1588ರಲ್ಲಿ ಸ್ಪೇನ್ ದೇಶದ ಆರ್ಮಡ ಎಂಬ ಮಹಾನೌಕಾತಂಡವೊಂದು ಬಂದು ಇಂಗ್ಲೆಂಡಿನ ತೀರಕ್ಕೆ ಮುತ್ತಿಗೆ ಹಾಕಿ ಸೋತು ದಿಕ್ಕುಪಾಲಾಗಿ ಓಡಿತು. ಅಂದಿನಿಂದ ಎಲಿಜಬೆತ್‌ಳ ಸ್ಥಾನ ಭದ್ರವಾದುದಲ್ಲದೆ ಇಂಗ್ಲೆಂಡಿನ ಹಿರಿಮೆಯೂ ಹೆಚ್ಚಿ ವೈಭವಪೂರ್ಣವಾದ ರಾಷ್ಟ್ರಜೀವನಕ್ಕೆ ಮಾರ್ಗವಾಯಿತು. ದೇಶದ ಒಳಗೆ ಶಾಂತಿ, ವೈಭವ, ಹೊರಗೆ ಗೌರವ, ಸಮುದ್ರದಾಚೆ ಸಾಹಸಗಳಿಂದ ನೌಕಾಯಾನ ಮತ್ತು ಹೊಸದೇಶಗಳ, ಹೊಸ ವಸಾಹತುಗಳ ಸ್ಥಾಪನೆ–ಹೀಗೆ ನಾನಾರೀತಿಯಲ್ಲಿ ಜನರ ಜೀವನ ಮಹತ್ತರವಾಯಿತು. ಉದ್ವೇಗಪೂರ್ಣವಾಯಿತು.

ಈ ಯುಗ ಇಷ್ಟು ಚೈತನ್ಯಮಯವಾದುದರಿಂದಲೇ ಈ ಯುಗದ ಸಾಹಿತ್ಯ ವಿಶಿಷ್ಟ ಪ್ರಕಾರವಾಯಿತು. ಮಧ್ಯಯುಗದಲ್ಲೇ ಚರ್ಚುಗಳಲ್ಲಿ ಧರ್ಮಬೋಧನೆಯ ಸಾಧನವಾಗಿ ಪಾದ್ರಿಗಳಿಂದ ನಡೆಯುತ್ತಿದ್ದ ಬೈಬಲ್ ಕಥೆಗಳ ಪ್ರದರ್ಶನದಿಂದ ಆರಂಭವಾಗಿದ್ದ ನಾಟಕ (ಆ ಕಾಲದ ನಾಟಕಗಳಿಗೆ ಮಿಸ್ಟರಿ ಪ್ಲೇಸ್, ಮಿರಾಕಲ್ ಪ್ಲೇಸ್, ಮೊರ್ಯಾಲಿಟಿ ಪ್ಲೇಸ್ ಎಂದು ಹೆಸರು) 16ನೆಯ ಶತಮಾನದಲ್ಲಿ ಉನ್ನತಮಟ್ಟಕ್ಕೇರಿತು. ಇಂಟರ್‌ಲ್ಯೂಡ್ ಎಂಬ ಕಿರುನಾಟಕ ಪ್ರಕಾರವೂ ಹಾಸ್ಯನಾಟಕಗಳೂ ಬಂದವು. ಪ್ರಾರಂಭದಲ್ಲಿ ಪ್ರದರ್ಶನವು ಚರ್ಚ್‌ಗಳ ಆವರಣದಲ್ಲಿ ನಡೆಯುತ್ತಿತ್ತು. ಅನಂತರ ಚಕ್ರಗಳ ಮೇಲೆ ಚಲಿಸುವ, ಎರಡು ಅಂತಸ್ತುಗಳ ರಂಗವೇದಿಕೆಯು ಕಾಣಿಸಿಕೊಂಡಿತು. ಮುಂದೆ ಲಂಡನ್ನಿನಲ್ಲಿ ಥೇಮ್ಸ್ ನದಿಯಾಚೆ ಕಟ್ಟಿದ ರಂಗಭೂಮಿಯಿಂದ ಇಂಗ್ಲಿಷ್ ನಾಟಕಗಳ ಬೆಳವಣಿಗೆಗೆ ವಿಶೇಷ ನೆರವಾಯಿತು.

ಗ್ಯಾಮರ್ ಗರ್ಟನ್ಸ್ ನೀಡ್ಲ್ ಮತ್ತು ರಾಲ್ಫ್ ರಾಯಿಸ್ಟರ್ ಡಾಯಿಸ್ಟರ್ ಇಂಗ್ಲಿಷಿನ ಮೊದಲ ಹಾಸ್ಯನಾಟಕಗಳೆನ್ನಬಹುದು. ಹಾಸ್ಯ ಅಷ್ಟೇನೂ ಸೂಕ್ಷ್ಮರೀತಿಯದಲ್ಲದಿದ್ದರೂ ಸೆನೆಕನ ಲ್ಯಾಟಿನ್ ದುರಂತ ನಾಟಕಗಳ ಮಾದರಿಯಲ್ಲಿ 1561ರಲ್ಲಿ ಸ್ಯಾಕ್ವಿಲ್ ಮತ್ತು ನಾರ್ಟನ್ ಎಂಬುವರು ಗೋರ್ಬೊಡಕ್ ಎಂಬ ನಾಟಕವನ್ನು ಬರೆದರು. ಇದೇ ಇಂಗ್ಲಿಷಿನ ಮೊಟ್ಟಮೊದಲ ಸರಳರಗಳೆಯ ನಾಟಕ. ಅನಂತರ ಯೂನಿವರ್ಸಿಟಿ ವಿಟ್ಸ್ ಎಂದು ಹೆಸರು ಪಡೆದಿರುವ ಲಿಲಿ, ಪೀಲ್, ಗ್ರೀನ್, ಮಾರ್ಲೊ ಮತ್ತು ಕಿಡ್ ಒಬ್ಬೊಬ್ಬರೂ ಒಂದೊಂದು ಬಗೆಯ ನಾಟಕಕ್ಷೇತ್ರದಲ್ಲಿ–ಹಾಸ್ಯನಾಟಕ, ರುದ್ರನಾಟಕ ಇತ್ಯಾದಿ–ವಿಶೇಷ ಪ್ರತಿಭೆಯನ್ನು ಪ್ರದರ್ಶಿಸಿದರು. ಕಿಡ್ ಬರೆದ ಸ್ಪ್ಯಾನಿಷ್ ಟ್ರಾಜಿಡಿ ಬೀಭತ್ಸಮಯ ದೃಶ್ಯಗಳಿಗೂ ರೋಮಾಂಚಕಾರಕ ಘಟನೆಗಳಿಗೂ ಹತ್ಯೆಗಳಿಗೂ ಪ್ರಸಿದ್ಧವಾಗಿ ಸೆನೆಕನ್ ಟ್ರಾಜಿಡಿ ಎಂಬ ವಿಶಿಷ್ಟವರ್ಗದ ನಾಟಕಗಳಿಗೆ ಮಾದರಿಯಾಯಿತು. ಷೇಕ್ಸ್‌ಪಿಯರನ ಹ್ಯಾಮ್ಲೆಟ್ ನಾಟಕವೂ ಸ್ವಲ್ಪಮಟ್ಟಿಗೆ ಈ ವರ್ಗಕ್ಕೆ ಸೇರಿದ್ದೇ. ವೆಬ್‌ಸ್ಟರ್‌ನ ದಿ ವೈಟ್ ಡೆವಿಲ್ ಮತ್ತು ಡಚೆಸ್ ಆಫ್ ಮ್ಯಾಲ್ಫಿ ಎಂಬ ಪ್ರಖ್ಯಾತ ನಾಟಕಗಳು ಇದೇ ಜಾತಿಯವು. ಯೂನಿವರ್ಸಿಟಿ ವಿಟ್ಸ್‌ಗಳಲ್ಲಿ ಅತ್ಯಂತ ಪ್ರಸಿದ್ಧನೂ ಪ್ರಭಾವಶಾಲಿಯೂ ಆದವನು ಕ್ರಿಸೊಫರ್ ಮಾರ್ಲೊ ಅವನ ಟ್ಯಾಂಬುರ್ಲೇನ್, ದಿ ಜ್ಯೂ ಆಫ್ ಮಾಲ್ಟ, ಡಾಕ್ಟರ್ ಫೌಸ್ಟಸ್, ಎಡ್ವರ್ಡ್ 11–ನಾಟಕಗಳು ತಮ್ಮ ಕಲ್ಪನಾವೈಭವಕ್ಕೂ ಪಾತ್ರಪೋಷಣೆ, ಸಂವಿಧಾನ ವೈಖರಿಗಳಿಗೂ ಭಾಷೆ ಮತ್ತು ಛಂದಸ್ಸುಗಳ ಅಪೂರ್ವಶಕ್ತಿಗೂ ಹೆಸರಾಂತ ಷೇಕ್ಸ್‌ಪಿಯರನಿಗೇ ದಾರಿಮಾಡಿಕೊಟ್ಟವೆಂದು ಹೇಳಲಾಗಿದೆ. ಈ ಯುಗದ ನಾಟಕಕಾರರಲ್ಲೆಲ್ಲ ಶಿಖರಪ್ರಾಯನಾದವ ಲೋಕವಿಖ್ಯಾತನಾದ ಷೇಕ್ಸ್‌ಪಿಯರ್. ರೊಮ್ಯಾಂಟಿಕ್ ಪಂಥಕ್ಕೆ ಸೇರಿದ ಇಂಗ್ಲಿಷ್ ನಾಟಕ ಪ್ರಪಂಚಕ್ಕೆ ಹಿಮಾಲಯ ಸದೃಶನಾದವ ಈ ಕವಿ. ಹಾಸ್ಯನಾಟಕ, ರುದ್ರನಾಟಕ, ಚಾರಿತ್ರಕ ನಾಟಕ ಮೊದಲಾದ ನಾನಾ ಕೇತ್ರಗಳಲ್ಲಿ ಒಂದೇ ಸಮನಾದ ಔನ್ನತ್ಯಪಡೆದ ಸಾಧನೆ ಅವನದು. ಸಾಮಾಜಿಕ ನಾಟಕಗಳನ್ನು ಬರೆಯುವುದರಲ್ಲಿ ಷೇಕ್ಸ್‌ಪಿಯರ್ ಆಸಕ್ತನಾಗಿರಲಿಲ್ಲ. ಮನುಷ್ಯಹೃದಯದಲ್ಲಿ ಕೆಲಸಮಾಡುವ ಭಾವಗಳ ವಿಶ್ಲೇಷಣೆ ಮತ್ತು ಅನ್ವೇಷಣೆ ಅವನ ಮುಖ್ಯ ಉದ್ದೇಶವಾಗಿತ್ತು. 38 ನಾಟಕಗಳನ್ನೂ 2 ದೀರ್ಘ ಕಥನಕವನಗಳನ್ನೂ ಸುಮಾರು 154 ಸಾನೆಟ್ಟುಗಳನ್ನೂ ಷೇಕ್ಸ್‌ಪಿಯರ್ ರಚಿಸಿದ್ದಾನೆ. ಸಾನೆಟ್ (ಸುನೀತ)ಗೆ ಹೊಸ ರೂಪವನ್ನು ಕೊಟ್ಟ. ಸುನೀತ ಚಿತ್ರದಲ್ಲಿ ಸ್ನೇಹ, ಪ್ರೇಮಗಳ ಸೂಕ್ಷ್ಮ ವಿಶ್ಲೇಷಣೆ ಇದೆ. ವೀನಸ್ ಅಂಡ್ ಅಡೊನಿಸ್, ದಿ ರೇಪ್ ಆಫ್ ಲ್ಯುಕ್ರಿಷಿ ಎಂಬುವು ಆ ಕವನಗಳು. ಅವನ ನಾಟಕಗಳಲ್ಲಿ ಮಚ್ ಆ್ಯಡೊ ಅಬೌಟ್ ನಥಿಂಗ್, ದಿ ಟೇಮಿಂಗ್ ಆಫ್ ದಿ ಷ್ರ್ಯೂ, ಆ್ಯಸ್ ಯು ಲೈಕ್ ಇಟ್, ಟ್ವೆಲ್ಫ್‌ತ್ ನೈಟ್, ಮಿಡ್ ಸಮ್ಮರ್ ನೈಟ್ಸ್ ಡ್ರೀಂ, ಮರ್ಚೆಂಟ್ ಆಫ್ ವೆನಿಸ್ ಮುಂತಾದ ಹಾಸ್ಯನಾಟಕಗಳೂ ರೋಮಿಯೋ ಅಂಡ್ ಜೂಲಿಯಟ್, ಮ್ಯಾಕ್ಬೆತ್, ಹ್ಯಾಮ್ಲೆಟ್, ಒಥೆಲೊ, ಕಿಂಗ್ ಲಿಯರ್ ಮುಂತಾದ ರುದ್ರ ನಾಟಕಗಳೂ ದಿ ಟೆಂಪೆಸ್ಟ್, ವಿಂಟರ್ಸ್ ಟೇಲ್ ಮತ್ತು ಸಿಂಬೆಲಿನ್ ಎಂಬ ಟ್ರಾಜಿ–ಕಾಮೆಡಿಗಳೂ (ದುಃಖದಲ್ಲಿ ಆರಂಭವಾಗಿ ಸುಖದಲ್ಲಿ ಕೊನೆಗಾಣುವು) ಜ್ಯೂಲಿಯಸ್ ಸೀಸ಼ರ್, ಕೋರಿಯೋಲನಸ್, ರಿಚರ್ಡ್ II, ಹೆನ್ರಿ V ಮುಂತಾದ ರೋಮ್ ಮತ್ತು ಇಂಗ್ಲೆಂಡುಗಳ ಚರಿತ್ರೆಗಳಿಗೆ ಸಂಬಂಧಪಟ್ಟ ನಾಟಕಗಳೂ ಸಾಹಿತ್ಯ ಪ್ರಪಂಚದ ಅಮೂಲ್ಯರತ್ನಗಳೆಂದು ಪರಿಗಣಿತವಾಗಿವೆ. ವಸ್ತು ಯಾವುದೇ ಆಗಲಿ, ಷೇಕ್ಸ್‌ಪಿಯರ್ ನಾಟಕಗಳು ಮಾನವನ ಹೃದಯಾಂತರಾಳವನ್ನು ತೆರೆದು ತೋರಿಸುವ ದರ್ಪಣಗಳು. ಹೆಸರಿಗೆ ಇಂಗ್ಲಿಷಿನವರು, ರೋಮಿನವರು ಇತ್ಯಾದಿಯಾದರೂ ಅವನ ಪಾತ್ರಗಳು ಎಲ್ಲ ಕಾಲಗಳ ಎಲ್ಲ ಮಾನವರ ಪ್ರತಿನಿಧಿಗಳು. ಅಂತೆಯೇ ಅವನ ನಾಟಕ ಇಡೀ ಪ್ರಪಂಚದ ಒಂದು ತುಣುಕೆಂದರೆ ಉತ್ಪ್ರೇಕ್ಷೆಯಾಗದು.

ಷೇಕ್ಸ್‌ಪಿಯರನ ಗೆಳೆಯನೂ ಸಹನಾಟಕಕಾರನೂ ಆದ ಬೆನ್‌ಜಾನ್ಸನ್ ವಿಡಂಬನಾತ್ಮಕ ಸಾಮಾಜಿಕ ನಾಟಕಗಳನ್ನು ಬರೆದ. ಹಾಸ್ಯನಾಟಕಗಳು ಸಮಾಜಸುಧಾರಣೆಗೆ, ನೀತಿಬೋಧನೆಗೆ ಸಾಧನಗಳಾಗಬೇಕೆಂಬುದು ಅವನ ಮತ. ಆ ಕೆಲಸಕ್ಕಾಗಿ ಆತ ತನ್ನ ಸಮಕಾಲೀನರ

ನ್ಯೂನತೆಗಳನ್ನು ಹೊರಗೆಡಹಬೇಕೆಂದು ಸಾಮಾಜಿಕ ನಾಟಕಗಳನ್ನು ರಚಿಸಿದ. ಅವನ ಕಾಲದಲ್ಲಿ ಪ್ರಚಾರದಲ್ಲಿದ್ದ ಥಿಯರಿ ಆಫ್ ಹ್ಯೂಮರ್ಸ್ ಎನ್ನುವ ಮನಶ್ಶಾಸ್ತ್ರ ಸಿದ್ಧಾಂತವೊಂದನ್ನು ಆತ ತನ್ನ ಕೆಲಸಕ್ಕಾಗಿ ಬಳಸಿಕೊಂಡ. ಪ್ರತಿ ಮನುಷ್ಯನೂ ಒಂದೊಂದು ಪ್ರಬಲ ಪ್ರವೃತ್ತಿಯ ಪ್ರಭಾವಕ್ಕೆ ಒಳಗಾಗುತ್ತಾನೆ. ಅವನ ಕಾರ್ಯಗಳೆಲ್ಲ ಈ ಪ್ರವೃತ್ತಿಯಿಂದ ಪ್ರೇರಿತವಾಗುತ್ತವೆ. ಹಾಗೆ ಹೊರಬಿದ್ದು ತೃಪ್ತಿ ಹೊಂದಿದ ಅನಂತರ ಆ ಪ್ರವೃತ್ತಿ ತನಗೆ ತಾನೇ ಸರಿಹೋಗಬೇಕು ಎಂಬುದೇ ಆ ಸಿದ್ಧಾಂತ. ಈ ಸಹಜ ಪ್ರವೃತ್ತಿಯನ್ನು ಅಂದಿನವರು ಹ್ಯೂಮರ್ ಎನ್ನುತ್ತಿದ್ದರು. ಬೆನ್‌ಜಾನ್‌ಸನ್ನನ ನಾಟಕಗಳ ಪಾತ್ರಗಳು ಒಬ್ಬೊಬ್ಬರೂ ಇಂಥ ಒಂದೊಂದು ಪ್ರವೃತ್ತಿಯ ದಾಸರು. ಆದ್ದರಿಂದ ಅವನ ನಾಟಕಗಳಿಗೆ ಕಾಮಿಡಿ ಆಫ್ ಹ್ಯೂಮರ್ಸ್ ಎಂಬ ಹೆಸರೇ ಬಂದಿದೆ. ಎವೆರಿ ಮ್ಯಾನ್ ಇನ್ ಹಿಸ್ ಹ್ಯೂಮರ್, ಎವೆರಿ ಮ್ಯಾನ್ ಔಟ್ ಆಫ್ ಹಿಸ್ ಹ್ಯೂಮರ್, ದಿ ಆಲ್ಕೆಮಿಸ್ಟ್, ವಾಲ್ಪೋನೆ, ದಿ ಸೈಲೆಂಟ್ ವುಮನ್, ಬಾರ್ತಲೋಮಿಯೋ ಫೇರ್ ಫೇರ್ ಮೊದಲಾದ ಅವನ ನಾಟಕಗಳ ಹೆಸರುಗಳೇ ಅವನ ಉದ್ದೇಶವನ್ನು, ಹ್ಯೂಮರ್ಸ್ ಸಿದ್ಧಾಂತ ಅವನ ನಾಟಕಗಳಲ್ಲಿ ವಹಿಸುವ ಪಾತ್ರವನ್ನು ಸೂಚಿಸುತ್ತವೆ. ಬೆನ್‌ಜಾನ್ಸನ್ ವಾಸ್ತವಿಕ ನಾಟಕಗಳ ರಚನಕಾರ. ಸಮಕಾಲೀನ ಜನರ ನಡೆನುಡಿಗಳು ಅವನ ನಾಟಕಗಳಲ್ಲಿ ಮೂಡಿವೆ. ಇದರ ಫಲವಾಗಿ ಕಾಮೆಡಿ ಆಫ್ ಮ್ಯಾನರ್ಸ್ ಎಂಬ ಸಾಮಾಜಿಕ ನಾಟಕಗಳ ಇನ್ನೊಂದು ವರ್ಗಕ್ಕೂ ಅವನು ಪ್ರವರ್ತಕನಾದ. ಷೇಕ್ಸ್‌ಪಿಯರ್ ಮತ್ತು ಬೆನ್‌ಜಾನ್ಸನ್ನರಲ್ಲದೆ ಈ ಯುಗದ ಇತರ ಗಣ್ಯ ನಾಟಕಕಾರರು ಫೋರ್ಡ್ ಮಿಡ್ಲ್‌ಟನ್, ಹೇವುಡ್, ಡೆಕ್ಕರ್, ಮ್ಯಾಸಿಂಜರ್ ಮತ್ತು ಷರ್ಲೆ. ಫೋರ್ಡನ ದಿ ಬ್ರೋಕನ್ ಹಾರ್ಟ್, ಮಿಡ್ಲ್‌ಟನ್ನನ ದಿ ಛೇಂಜ್‌ಲಿಂಗ್, ಮ್ಯಾಸಿಂಜರನ ಎ ನ್ಯೂ ವೇ ಟು ಪೇ ಓಲ್ಡ್ ಡೆಟ್ಸ್, ಷರ್ಲೆಯ ಹೈಡ್ ಪಾರ್ಕ್, ಹೇವುಡ್‌ನ ಎ ವುಮನ್ ಕಿಲ್ಡ್ ವಿತ್ ಕೈಂಡನೆಸ್– ಇವು ಅವರ ನಾಟಕಗಳಲ್ಲಿ ಪ್ರಸಿದ್ಧವಾಗಿವೆ. ಹೇವುಡ್‌ನ ನಾಟಕ ಕುಟುಂಬಜೀವನದಲ್ಲಿ ಉದ್ಭವಿಸುವ ದುರಂತ ಸನ್ನಿವೇಶಗಳನ್ನು ಚಿತ್ರಿಸಿರುವ ಡೊಮೆಸ್ಟಿಕ್ ಟ್ರ್ಯಾಜಿಡಿ ವರ್ಗಕ್ಕೆ ಸೇರಿದ್ದು. ಡೆಕ್ಕರ್‌ನ ದ ಷ್ಯೂ ಮೇಕರ್ಸ್ ಹಾಲಿಡೆ ಸಮಾಜದ ಕೆಳಮಟ್ಟಕ್ಕೆ ಸೇರಿದ ಜನರ ಜೀವನದ ಚಿತ್ರಗಳನ್ನು ಒಳಗೊಂಡಿದೆ. ಮೋಚಿಯೊಬ್ಬ ಪುರಸಭಾ ಮೇಯರ್ ಆಗುವುದು ಅದರ ಕಥೆ. ಬೋಮಂಟ್ ಮತ್ತು ಫ್ಲೆಚರ್ ಎಂಬ ಇಬ್ಬರು ನಾಟಕಕಾರರು ಒಟ್ಟಿಗೆ ನಾಟಕರಚನೆ ಮಾಡುತ್ತಿದ್ದು ಟ್ರ್ಯಾಜಿ–ಕಾಮೆಡಿ ನಾಟಕವರ್ಗವನ್ನು ಆರಂಭಿಸಿದರು (ಷೇಕ್ಸ್‌ಪಿಯರ್ ತನ್ನ ಕಡೆಯ ನಾಟಕಗಳನ್ನು ಬರೆದಾಗ ಇದರಿಂದ ಪ್ರಭಾವಿತನಾದನೆಂದು ಕೆಲವರು ವಿದ್ವಾಂಸರ ಅಭಿಪ್ರಾಯ). ದುಃಖಪೂರಿತ ಸನ್ನಿವೇಶಗಳಲ್ಲಿ ಆರಂಭವಾಗಿ ಅನಿರೀಕ್ಷಿತವಾದ (ಕೆಲವು ವೇಳೆ ಅತಿಮಾನವವಾದ) ಘಟನೆಗಳ ಪರಿಣಾಮವಾಗಿ ನಾಟಕ ಸುಖಾಂತವಾಗುತ್ತದೆ. ಷೇಕ್ಸ್‌ಪಿಯರ್ ಬರೆದಂಥ ರುದ್ರನಾಟಕಗಳನ್ನು ನೋಡುವುದಕ್ಕೆ ಬೇಕಾದ ಮನಸ್ಸಿನ ದೃಢತೆ ಸಾಕಷ್ಟು ಇಲ್ಲದಿದ್ದ ಪ್ರೇಕ್ಷಕರ ತೃಪ್ತಿಗಾಗಿ ರಚಿತವಾದ ನಾಟಕಗಳಿವು. ಕೃತಕವೂ ಅಸಹಜವೂ ಆದ ಆಗುಹೋಗುಗಳ ಆಧಾರದ ಮೇಲೆ ನಿಂತಿರುವ ಈ ಬಗೆಯ ನಾಟಕಗಳು ಆ ಕಾಲಕ್ಕೆ ಕೊನೆಯಾದುದರಲ್ಲಿ ಆಶ್ಚರ್ಯವೇನಿಲ್ಲ.

**16ನೆಯ ಶತಮಾನಗಳ ಕಾವ್ಯ:** ಎಲಿಜಬೆತ್ ಯುಗದ ನಾಟಕ ಪ್ರಪಂಚಕ್ಕೆ ಷೇಕ್ಸ್‌ಪಿಯರ್ ಇರುವಂತೆ ಆ ಯುಗದ ಕಾವ್ಯಲೋಕಕ್ಕೆ ಎಡ್ಮಂಡ್ ಸ್ಪೆನ್ಸರ್. ಕವಿಗಳ ಕವಿ ಎಂದು ಕೀರ್ತಿಶಾಲಿಯಾಗಿರುವ ಸ್ಪೆನ್ಸರ್ ತನ್ನ ಕಾಲದ ರಾಜಕೀಯ ಮತ್ತು ಧಾರ್ಮಿಕ ಘಟನೆಗಳನ್ನು ರೂಪಕವಾಗಿ ಫೇರಿ ಕ್ವೀನ್ ಎಂಬ ತನ್ನ ಸುದೀರ್ಘವಾದ ಕಾವ್ಯದಲ್ಲಿ ಚಿತ್ರಿಸಿದ್ದಾನೆ. ಮಧ್ಯಯುಗದ ಆದರ್ಶವೀರರ ಕಥೆಗಳ ಮಾದರಿಯ ಮೇಲೆ ರಚಿತವಾಗಿರುವ ಈ ಕಾವ್ಯ ಶ್ರೀಮಂತ ಯುವಕರಿಗೆ ಒಳ್ಳೆಯ ನಡತೆಯ ಶಿಕ್ಷಣವೀಯುವ ಉದ್ದೇಶವುಳ್ಳದ್ದೆಂದು ಸ್ಪೆನ್ಸರನೇ ಹೇಳಿದ್ದಾನೆ. ಅದ್ಭುತ ಘಟನೆಗಳು ನೀತಿಬೋಧಕವಾದ ಸಾಂಕೇತಿಕ ಪ್ರಸಂಗಗಳು, ಸಮಕಾಲೀನ ಘಟನೆಗಳ ಮತ್ತು ವ್ಯಕ್ತಿಗಳ ಪರೋಕ್ಷ ಚಿತ್ರಗಳು ಸುಂದರ ವರ್ಣನೆಗಳು ಸುಮಧುರ ಛಂದೋವಿಲಾಸ ಮುಂತಾದ ಅನೇಕ ಗುಣಗಳಿಂದ ಶೋಭಿಸುವ ಈ ಕಾವ್ಯ ಇಂಗ್ಲಿಷ್ ಕಾವ್ಯಗಳಿಗೆ ಗುರುವಿನಂತಿದೆ. ದಿ ಷೆಪರ್ಡ್ಸ್ ಕ್ಯಾಲೆಂಡರ್ ಎಂಬ ಗೊಲ್ಲಗೀತೆಗಳ ವರ್ಗಕ್ಕೆ ಸೇರಿದ ಕವನವನ್ನೂ ಇನ್ನೂ ಅನೇಕ ಸಣ್ಣಪುಟ್ಟ ಕವನಗಳನ್ನೂ ಸ್ಪೆನ್ಸರ್ ರಚಿಸಿದ್ದಾನೆ. ಏನೇ ಬರೆಯಲಿ ಅವನ ವರ್ಣನಾವೈಖರಿ ಮತ್ತು ನಾದಮಧುರತೆ ಎಲ್ಲೆಲ್ಲೂ ಎದ್ದು ಕಾಣುತ್ತವೆ. ನುರಿತ ಚಿತ್ರಕಾರನಂತೆ ಪದಗಳ ಪ್ರಯೋಗದಿಂದ ಚೆಲುವಿನ ಕೃತಿಗಳನ್ನು ಈತ ಸೃಷ್ಟಿಸಿದ್ದಾನೆ. ಅವನ ಫೇರಿ ಕ್ವೀನ್ ಕವನದ ಛಂದಸ್ಸು ಅನೇಕ ಇಂಗ್ಲಿಷ್ ಕವಿಗಳಿಗೆ ಅಭಿವ್ಯಕ್ತಿ ಮಾಧ್ಯಮವನ್ನೊದಗಿಸಿದೆ. ಇಂಗ್ಲಿಷ್ ಸಾನೆಟ್ಟುಗಳ ಚರಿತ್ರೆಯಲ್ಲೂ ಸ್ಪೆನ್ಸರನಿಗೆ ಹಿರಿಯ ಸ್ಥಾನವಿದೆ. ಅವನ ಸಮಕಾಲೀನನಾಗಿದ್ದ ಸರ್ ಫಿಲಿಪ್ ಸಿಡ್ನಿಯೂ ಪ್ರಸಿದ್ಧ ಸಾನೆಟ್ಟುಗಳನ್ನಲ್ಲದೆ ಇತರ ಬಗೆಯ ಭಾವಗೀತೆಗಳನ್ನೂ ಆರ್ಕೇಡಿಯ ಎಂಬ ರಮ್ಯಕಥೆಯನ್ನೂ ಅಪಾಲಜಿ ಫಾರ್ ಪೊಯಸಿ ಎಂಬ ಕಾವ್ಯಸಮರ್ಥನಾತ್ಮಕವಾದ ಪ್ರಬಂಧವನ್ನೂ ಬರೆದಿದ್ದಾನೆ. ಲಾಡ್ಜ್, ನ್ಯಾಷ್, ಮಾರ್ಲೊ ಇವರೆಲ್ಲರೂ ಹಲಕೆಲವು ಒಳ್ಳೆಯ ಭಾವಗೀತೆಗಳನ್ನು ರಚಿಸಿದ್ದಾರೆ.

**ಮೆಟಫಿಸಿಕಲ್ ಕಾವ್ಯ:** 17ನೆಯ ಶತಮಾನ ಇಂಗ್ಲೆಂಡಿನ ಚರಿತ್ರೆಯಲ್ಲಿ ರಾಜಕೀಯ ಮತ್ತು ಧಾರ್ಮಿಕ ಜಿಜ್ಞಾಸೆಯ ಮತ್ತು ಕಲಹಗಳ ಕಾಲ. ಎಲಿಜಬೆತ್‌ಳ ಯುಗದಂತೆ ತಾರುಣ್ಯದ ಉತ್ಸಾಹ, ಉದ್ವೇಗ, ಭಾವಾತಿಶಯಗಳು ಪ್ರಧಾನವಾಗಿರದೆ ಆಲೋಚನೆ, ವಿಮರ್ಶೆ ಈ ಕಾಲದಲ್ಲಿ ಪ್ರಾಬಲ್ಯಕ್ಕೆ ಬಂದುವು. ಇದಕ್ಕೆ ಅನುಗುಣವಾಗಿ ಚರ್ಚಾತ್ಮಕವಾದ ಗದ್ಯಸಾಹಿತ್ಯ ಈ ಶತಮಾನದಲ್ಲಿ ಬೆಳೆಯಿತು. ಆದರೆ ಕಾವ್ಯಸೃಷ್ಟಿಯೂ ನಡೆಯಿತು. ಇಡೀ ರಾಷ್ಟ್ರಜೀವನವನ್ನು ಪ್ರತಿಬಿಂಬಿಸುವ ಕಾವ್ಯ ಬಂದಿತು. ಪ್ರಾಟೆಸ್ಟಂಟ್ ಮತ ಮತ್ತು ಅದರ ಒಳಪಂಗಡಗಳು, ಕ್ಯಾಥೊಲಿಕ್ ಮತ ಮುಂತಾದುವನ್ನು ಪ್ರತಿನಿಧಿಸುವ ಕವಿಗಳು ಬಂದರು. ಲೌಕಿಕ ಕಾವ್ಯವೂ ಪ್ರಣಯಗೀತೆಗಳ ಮತ್ತು ರಾಜಕೀಯ ವಿಡಂಬನೆಗಳ ರೂಪವನ್ನು ತಳೆದು ಬೆಳೆಯಿತು. ಇಂಥ ಲೌಕಿಕ ಕವಿಗಳಲ್ಲಿ ಮೊದಲು ಹೆಸರಿಸಬೇಕಾದವ ಜಾನ್ ಡನ್. ಮತಸಂಬಂಧವಾದ ಕವಿತೆಗಳನ್ನೂ ಡನ್ ಬರೆದಿದ್ದಾನೆ. ಆದರೆ ಅವನು ತನ್ನ ಯೌವನದಲ್ಲಿ ಬರೆದ ಪ್ರಣಯಗೀತೆಗಳಿಗಿರುವ ಪ್ರಾಶಸ್ತ್ಯ ಅವಕ್ಕಿಲ್ಲ. ಆತ ದಿ ಮೆಟಫಿಜಿಕಲ್ ಸ್ಕೂಲ್ ಎಂಬ ಕಾವ್ಯವರ್ಗವನ್ನು ಆರಂಭಿಸಿದವ. ಈ ಗುಂಪಿನ ಕವನಗಳ ಒಂದು ಲಕ್ಷಣ ಅವುಗಳಲ್ಲಿ ಬುದ್ಧಿಚಮತ್ಕಾರದ ಅಂಶವಿರುವುದು. ಕವಿಸಮಯಗಳನ್ನು ದೂರವಿರಿಸಿ, ಹೊಸ ಪ್ರತಿಮೆಗಳನ್ನು ಬಳಸಿ, ಬುದ್ಧಿ ಚಮತ್ಕಾರಕ್ಕೂ ಪ್ರಾಧಾನ್ಯವಿರುವ ಕವನಗಳನ್ನು ಬರೆದ. ಅವನ ಕವನಗಳು ತೀವ್ರಭಾವಕ್ಕೂ ಅರ್ಥಸ್ಪಷ್ಟತೆಗೂ ನಿಷ್ಕೃಷ್ಟತೆಗೂ ಆಡುಮಾತಿನ ಬಳಕೆಗೂ ಗಮನಾರ್ಹವಾಗಿವೆ; ತತ್ಕಾರಣ ಅವು ಆಧುನಿಕ ಇಂಗ್ಲಿಷ್ ಕವಿಗಳ ಮತ್ತು ವಿಮರ್ಶಕರ ಮನ್ನಣೆ ಪಡೆದಿವೆ.

ಡನ್‌ನ ಅನಂತರ ಬಂದ ಪ್ರಣಯ ಕವಿಗಳಲ್ಲಿ ಕ್ಯಾರ್‍ಯೂ, ಹೆರಿಕ್, ಲವ್ಲೇಸ್, ಸಕ್ಲಿಂಗ್, ರಾಚೆಸ್ಟರ್ ಮೊದಲಾದವರ ಭಾವಗೀತೆಗಳು ಪ್ರಣಯದ ವಿವಿಧ ರೂಪದ ಅಭಿವ್ಯಕ್ತಿಯನ್ನು ಅತ್ಯಂತ ಆಕರ್ಷಕವಾದ ರೀತಿಯಲ್ಲಿ ಮಾಡುತ್ತವೆ. ಇವರೆಲ್ಲರಿಗೂ ಕ್ಯವಾಲಿಯರ್ ಪೊಯಟ್ಸ್ ಎಂಬ ಹೆಸರಿದೆ. ಹಗುರವಾದ ಪ್ರಣಯಭಾವದ ನಾನಾ ಛಾಯೆಗಳನ್ನು ಮನಮೋಹಕವಾದ ರೀತಿಯಲ್ಲಿ ವ್ಯಕ್ತಪಡಿಸುವುದರಲ್ಲಿ ಇವರು ಸಿದ್ಧಹಸ್ತರು. ಪ್ರಣಯನಿಷ್ಠೆಯಾಗಲಿ ಏಕಪತ್ನೀವ್ರತವಾಗಲಿ ಇವರಲ್ಲಿ ಅಪರೂಪ. 17ನೆಯ ಶತಮಾನದ ಪೂರ್ವಾರ್ಧದಲ್ಲಿ ಎಡ್ಮಂಡ್ ವ್ಯಾಲರ್, ಆ್ಯಂಡ್ರ್ಯೂ ಮಾರ್ವೆಲ್, ಏಬ್ರಹಾಮ್ ಕೌಲಿ, ಜಾನ್ ಡ್ರೈಡನ್–ಇವರೆಲ್ಲ ಉತ್ತಮ ಮಟ್ಟದ ಕೆಲವು ಭಾವಗೀತೆಗಳನ್ನೂ ಹಾಡುಗಳನ್ನೂ ಬರೆದರು. ಕೌಲಿ ಮಹಾಕಾವ್ಯವನ್ನು ಬರೆಯಬೇಕೆಂಬ ಬಯಕೆಯಿಂದ ಡೇವಿಡೇಯಿಸ್ ಎಂಬ ಬಹಳ ದೊಡ್ಡ ಕವನವನ್ನೇ ಬರೆದು ತನ್ನ ಕಾಲದಲ್ಲಿ ಬಹು ಪ್ರಖ್ಯಾತನಾಗಿದ್ದ. ಈಗ ಆ ಕಾವ್ಯವನ್ನು ಕೇಳುವವರೇ ಇಲ್ಲ. ಆ ಶತಮಾನಕ್ಕೆ ಸೇರಿದ ಜಾರ್ಜ್ ಹರ್ಬರ್ಟ್, ರಿಚರ್ಡ್ ಕ್ರಾಷಾ, ಹೆನ್ರಿ ವಾಹನ್ ಮತ್ತು ಥಾಮಸ್ ಟ್ರಹರ್ನ್ ಮೆಟಫಿಸಿಕಲ್ ಸ್ಕೂಲ್‌ಗೆ ಸೇರಿದ ಒಳ್ಳೆಯ ಕವಿಗಳು. ಎಲ್ಲರೂ ಅಲೌಕಿಕ ವಿಚಾರಗಳನ್ನು ಕುರಿತು ಅನುಭಾವಿ ಕವನಗಳನ್ನು ಬರೆದಿರುವರು. ಇವರ ಕವನಗಳು 17ನೆಯ ಶತಮಾನದ ಧಾರ್ಮಿಕ ದೃಷ್ಟಿಗೆ ದ್ಯೋತಕವಾಗಿವೆ.

**ಮಿಲ್ಟನ್, ಡ್ರೈಡನ್:** 17ನೆಯ ಶತಮಾನದ ಪ್ರಮುಖ ಕವಿಗಳು ಜಾನ್ ಮಿಲ್ಟನ್ ಮತ್ತು ಜಾನ್ ಡ್ರೈಡನ್. ಮಿಲ್ಟನ್ ಇಂಗ್ಲಿಷಿನ ಪ್ರಸಿದ್ಧ ಮಹಾಕಾವ್ಯಗಳಾದ ಪ್ಯಾರಡೈಸ್ ಲಾಸ್ಟ್ ಮತ್ತು ಪ್ಯಾರಡೈಸ್ ರೀಗೇನ್ಡ್ ಕೃತಿಗಳ ಕರ್ತೃ. ಇವಲ್ಲದೆ ಲಿಸಿಡಾಸ್, ಕೋಮಸ್ ಮುಂತಾದ ಕವನಗಳೂ ಸ್ಯಾಮ್ಸನ್ ಆಗೊನಿಸ್ಟಿಸ್ ಎಂಬ ನಾಟಕವೂ ಅವನವೇ. ಸಾನೆಟ್ ಜಾತಿಯ ಕವಿತೆಗಳಿಗೂ ಮಿಲ್ಟನ್ ಪ್ರಸಿದ್ಧನಾಗಿದ್ದಾನೆ. ಕಾವ್ಯದ ವಿಷಯ, ರೂಪ ಯಾವುದೇ ಆಗಿರಲಿ ಮಿಲ್ಟನ್ ತನ್ನ ಕೃತಿಯಲ್ಲಿ ಔನ್ನತ್ಯ, ಭವ್ಯತೆಗಳನ್ನು ಮೂಡಿಸಿದ್ದಾನೆ. ಅವನ ಹಾಗೆ ಇಂಗ್ಲಿಷ್ ಸರಳ ರಗಳೆಯನ್ನು ಬಳಸಿರುವ ಕವಿ ಬೇರೆ ಯಾರೂ ಇಲ್ಲ. ಅವನ ಕೃತಿಗಳೆಲ್ಲ ಪ್ಯೂರಿಟನ್ ಪಂಥದ ಆದರ್ಶಗಳನ್ನೂ ರೀತಿನೀತಿಗಳನ್ನೂ ವ್ಯಕ್ತಪಡಿಸುತ್ತವೆ. ಡ್ರೈಡನ್ ವಿಡಂಬನೆಯ ಕವಿ. ತನ್ನ ಕಾಲದ ರಾಜಕೀಯ ಮತ್ತು ಧಾರ್ಮಿಕ ಹೋರಾಟಗಳಿಗೆ ಸಂಬಂಧಿಸಿದ ಖ್ಯಾತ ವಿಡಂಬನೆಗಳನ್ನು ಬರೆದಿದ್ದಾನೆ. ಅಬ್ಸಲಾಮ್ ಅಂಡ್ ಅಕಿಟೋಫೆಲ್, ದಿ ಮೆಡಲ್, ಮ್ಯಾಕ್ ಫ್ಲೆಕ್ನೊ, ದಿ ಹೈಂಡ್ ಅಂಡ್ ದಿ ಪ್ಯಾಂತರ್–ಅವನ ಉತ್ತಮ ವಿಡಂಬನೆಗಳು. ಮೊದಲನೆಯ ಎರಡು ರಾಜಕೀಯ ಪ್ರಸಂಗಗಳಿಗೂ ಮೂರನೆಯದು ಸಾಹಿತ್ಯಕ್ಕೂ ನಾಲ್ಕನೆಯದು ಧಾರ್ಮಿಕ ವಿವಾದಕ್ಕೂ ಸಂಬಂಧಪಟ್ಟಿವೆ. ಒಂದೊಂದು ವರ್ಗದಲ್ಲೂ ಮೇಲ್ಮಟ್ಟದ ವಿಡಂಬನೆ ಹೇಗಿರಬೇಕೆಂದು ಕವಿ ತೋರಿಸಿಕೊಟ್ಟಿದ್ದಾನೆ.

**ಗದ್ಯ ನಾಟಕ:** ಮಿಲ್ಟನ್, ಡ್ರೈಡನ್ ಇಬ್ಬರೂ ಗದ್ಯ ಲೇಖಕರೂ ಆಗಿದ್ದರು. ತನ್ನ ಕಾಲದ ರಾಜಕೀಯ ಸಾಮಾಜಿಕ ವಿಚಾರಗಳಿಗೆ ಸಂಬಂಧಪಟ್ಟ ಗದ್ಯಕೃತಿಗಳನ್ನು ಮಿಲ್ಟನ್ ಬರೆದ. ಏರಿಯೋಪ್ಯಾಜಿಟಿಕ ಎಂಬ ಅವನ ಪ್ರಸಿದ್ಧ ಗದ್ಯಪ್ರಬಂಧ ಅಭಿಪ್ರಾಯ ಸ್ವಾತಂತ್ರ್ಯದ ಸಮರ್ಥನೆ. ಅವನ ಕಾವ್ಯಗಳಲ್ಲಿರುವಂತೆ ಗದ್ಯಕೃತಿಗಳಲ್ಲೂ ಒಂದು ಭವ್ಯತೆ, ಶಬ್ದವೈಭವ, ಔನ್ನತ್ಯಗಳು ಎದ್ದು ಕಾಣುತ್ತವೆ. ಡ್ರೈಡನ್ ಆಧುನಿಕ ಇಂಗ್ಲಿಷ್ ಗದ್ಯದ ಪಿತಾಮಹನೆನ್ನಿಸಿಕೊಂಡಿದ್ದಾನೆ. ಅವನ ಗದ್ಯವೆಲ್ಲ ವಿಮರ್ಶಾತ್ಮಕ ಲೇಖನಗಳ ರೂಪವನ್ನು ತಳೆದಿದೆ. ಅವನ ವಿಮರ್ಶೆ ವಿಶಾಲಮನಸ್ಸಿನಿಂದಲೂ ಕಾವ್ಯಪ್ರಜ್ಞೆಯಿಂದಲೂ ಪ್ರೇರಿತವಾದುದು. ಇಂಗ್ಲಿಷ್ ವಿಮರ್ಶೆಯ ಪಿತಾಮಹನೆಂದೂ ಆತ ಹೆಸರು ಗಳಿಸಿದ್ದಾನೆ. ಅವನ ಶೈಲಿ ಸಂದರ್ಭಾನುಸಾರ ಆಡುಮಾತನ್ನೂ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಂದ ಬಂದ ಪದಗಳನ್ನೂ ಉಪಯೋಗಿಸಿಕೊಂಡು ಪರಿಣಾಮಕಾರಿಯಾಗಬಲ್ಲದು. ಮಿಡ್ಲ್ ಸ್ಟೈಲ್ ಎಂಬ ಹೆಸರು ಇದಕ್ಕೆ ಸಾರ್ಥಕವಾಗಿದೆ. ಸರಳವಾದ ಭಾಷಾಪ್ರಯೋಗಕ್ಕೆ ಹೆಸರಿಸಬೇಕಾದುದು ಇದೇಕಾಲದ ಜಾನ್ ಬನ್ಯನ್ನನ ಪಿಲಿಗ್ರಿಮ್ಸ್ ಪ್ರೋಗ್ರೆಸ್ ಎಂಬ ರೂಪಕಕಥೆ.

ಆದರೆ ಮಿಲ್ಟನ್ ಮತ್ತು ಡ್ರೈಡನ್ನರಿಗೆ ಮೊದಲೇ 17ನೆಯ ಶತಮಾನದಲ್ಲಿ ಇತರ ಪ್ರಮುಖ ಗದ್ಯಲೇಖಕರು ಕೆಲವರಿದ್ದರು. ಎಲಿಜಬೆತ್ ಯುಗಕ್ಕೆ ಸೇರಿದ ಇತರ ಗದ್ಯ ಲೇಖಕರಲ್ಲಿ ರಿಚರ್ಡ್ ಹೂಕರ್‌ನ ಎಕ್ಲೆಸಿಯಾಸ್ಟಿಕಲ್ ಪಾಲಿಟಿ ಕ್ರೈಸ್ತಮತದ ಆಡಳಿತ ವ್ಯವಸ್ಥೆಯನ್ನು ಕುರಿತದ್ದು. ಅದು ಗಂಭೀರವಾದ ಗದ್ಯ ಶೈಲಿಗೆ ಪ್ರಸಿದ್ಧವಾಗಿದೆ. ಆನಂತರ ಬಂದ ಗದ್ಯಲೇಖಕರಲ್ಲಿ ಫ್ರಾನ್ಸಿಸ್ ಬೇಕನ್ ಗಣ್ಯನಾದವ. ದಿ ಅಡ್ವಾನ್ಸ್‌ಮೆಂಟ್ ಆಫ್ ಲರ್ನಿಂಗ್ ಮತ್ತು ಎಸ್ಸೇಸ್ ಎಂಬ ಕವನ ಬರಹಗಳು ಖ್ಯಾತಿವೆತ್ತಿವೆ. ಅವನ ಪ್ರಬಂಧಗಳು ಇಂಗ್ಲಿಷ್‌ನಲ್ಲಿ ಆ ಜಾತಿಯ ಮೊಟ್ಟಮೊದಲನೆಯ ಕೃತಿಗಳು. ಎಸ್ಸೆ ಎಂಬ ಪದವನ್ನು ಇಂಗ್ಲಿಷಿಗಿತ್ತವನೂ ಅವನೇ. ಲೌಕಿಕವಾಗಿ ಊರ್ಜಿತವಾಗುವುದು ಹೇಗೆ ಎನ್ನುವುದೇ ಬೇಕನ್‌ನ ಪ್ರಮುಖ ಆಸಕ್ತಿಯಾಗಿತ್ತು. ಇತರರಿಗೂ ಅವನು ಅದನ್ನೇ ಬೋಧಿಸಿದ. ಅವನ ಗದ್ಯ ಬಿಗಿಯಾದ ಅಡಕವಾದ ವಾಕ್ಯಗಳಿಂದ ಕೂಡಿ ಆಲೋಚನಾಭರಿತವಾಗಿದೆ. ಬೇಕನ್‌ನ ಗದ್ಯಕೃತಿಗಳು 17ನೆಯ ಶತಮಾನದ ಮೊದಲ ದಶಕಕ್ಕೆ ಸೇರಿದ ಬರೆಹಗಳು. ಇದೇ ದಶಕದಲ್ಲಿ ಬಂದುದು ಇಂಗ್ಲಿಷ್ ಗದ್ಯ ಕೃತಿಗಳಲ್ಲೆಲ್ಲ ಅತ್ಯಂತ ಪ್ರಭಾವಯುತವಾದ ಬೈಬಲಿನ ಭಾಷಾಂತರ ದಿ ಆಥರೈಸ್ಡ್ ವರ್ಷನ್, ಸರಳವೂ ಸುಂದರವೂ ಕಾವ್ಯಮಯವೂ ಆದ ಈ ಪುಸ್ತಕ ಇಂಗ್ಲಿಷ್ ಲೇಖಕರನೇಕರ ಮೇಲೆ ತನ್ನ ಪ್ರಭಾವವನ್ನು ಬೀರಿದ್ದಲ್ಲದೆ ಇಂಗ್ಲಿಷ್ ಭಾಷೆಯನ್ನು ಸ್ತಿಮಿತಗೊಳಿಸುವುದರಲ್ಲೂ ದೊಡ್ಡ ಉಪಕಾರ ಮಾಡಿದೆ.

17ನೆಯ ಶತಮಾನದ ಇತರ ಗದ್ಯಲೇಖಕರು ರಾಬರ್ಟ್ ಬರ್ಟನ್, ಥಾಮಸ್ ಫುಲ್ಲರ್, ಜೆರೆಮಿ ಟೇಲರ್, ಐಜ಼ಾಕ್ ವಾಲ್ಟನ್, ಸರ್ ಥಾಮಸ್ ಬ್ರೌನ್, ಸ್ಯಾಮ್ಯುಯಲ್ ಪೀಪ್ಸ್, ಥಾಮಸ್ ಹಾಬ್ಸ್ ಮತ್ತು ಜಾನ್ ಲಾಕ್. ಬರ್ಟನ್ನನ ದಿ ಅನಾಟಮಿ ಆಫ್ ಮೆಲಂಕಲಿ, ಫುಲ್ಲರನ ಇಂಗ್ಲಿಷ್ ವರ್ದೀಸ್. ಟೇಲರನ ಹೋಲಿ ಲಿವಿಂಗ್ ಅಂಡ್ ಹೋಲಿ ಡೈಯಿಂಗ್, ವಾಲ್ಟನ್ನನ ದಿ ಕಂಪ್ಲೀಟ್ ಆಂಗ್ಲರ್, ಬ್ರೌನನ ರಿಲಿಜಿಯೋ ಮೆಡಿಚಿ ಮತ್ತು ಆರ್ನ್ ಬರಿಯಲ್, ಪೀಪ್ಸನ ಡಯರಿ, ಹಾಬ್ಸನ ಲೆವಿಯತಾನ್ ಮತ್ತು ಲಾಕ್‌ನ ಎಸ್ಸೆ ಆನ್ ಹ್ಯೂಮನ್ ಅಂಡರ್‌ಸ್ಟ್ಯಾಂಡಿಂಗ್ ಮುಂತಾದವುಗಳ ಗ್ರಂಥಗಳು ಇಂಗ್ಲಿಷ್ ಸಾಹಿತ್ಯಚರಿತ್ರೆಯಲ್ಲಿ ಮೈಲಿಗಲ್ಲುಗಳು.

ಡ್ರೈಡನ್, ಪೀಪ್ಸ್, ಹಾಬ್ಸ್, ಲಾಕ್ ಇವರೆಲ್ಲ 17ನೆಯ ಶತಮಾನದ ಕೊನೆಯ ನಲವತ್ತು ವರ್ಷಗಳಾದ ರೆಸ್ಟೊರೇಷನ್ ಏಜ್ ಎಂಬ ಅವಧಿಗೆ ಸೇರಿದವರು. ಈ ಯುಗ ಇಂಗ್ಲಿಷ್ ಗದ್ಯದ ಚರಿತ್ರೆಯಲ್ಲಿ ಮಾತ್ರವಲ್ಲದೆ, ನಾಟಕದ ಚರಿತ್ರೆಯಲ್ಲೂ ಪ್ರಸಿದ್ಧವಾಗಿದೆ. ಅಂದು ನಾಟಕ ನೋಡುವುದಕ್ಕೆ ಹೋಗುತ್ತಿದ್ದವರನೇಕರು ಸಮಾಜದ ಮೇಲ್ತರಗತಿಗೆ ಸೇರಿದ್ದವರು. ರಾಜ 2ನೆಯ ಚಾರ್ಲ್ಸ್‌ನ ಸಮೀಪವರ್ತಿಗಳು. ಅವನೂ ಅವನ ಅನುಚರರೂ ಅನೀತಿಗೆ ಅತಿಭೋಗಕ್ಕೆ ಹೆಸರಾಗಿದ್ದವರು. ಈ ದೋಷಗಳೇ ಪ್ರಧಾನವಾಗಿರುವ ಗದ್ಯನಾಟಕಗಳು ಈ ಅವಧಿಯಲ್ಲಿ ಬಂದವು. ರೆಸ್ಟೊರೇಷನ್ ನಾಟಕವೆಂದರೆ ಅನೀತಿಯುತ ವಾದುದೆನ್ನುವಷ್ಟರಮಟ್ಟಿಗೆ ಅವುಗಳಲ್ಲಿ ಕೆಲವು ಅಪಖ್ಯಾತಿಯನ್ನು ಪಡೆದಿವೆ. ಅವುಗಳಲ್ಲಿ ಕೆಲವು ಸರ್ ಜಾರ್ಜ್ ಎತಿರೆಜ್, ವಿಲಿಯಂ ವೈಚರ್ಲಿ, ಮಿಸೆಸ್ ಆಫ್ರಾಬೆನ್ ಮತ್ತು ವಿಲಿಯಂ ಕಾಂಗ್ರೀವ್‌ರವರ ನಾಟಕಗಳು ಇಂಥವು. ವೈಚರ್ಲಿಯ ದಿ ಕಂಟ್ರಿ ಹೌಸ್ ಇದಕ್ಕೆ ಒಳ್ಳೆಯ ಉದಾಹರಣೆ, ಕಾಂಗ್ರೀವ್‌ನ ದಿ ವೆ ಆಫ್ ದಿ ವರ್ಲ್ಡ್ ಇಂಗ್ಲಿಷಿನ ಅತ್ಯಂತ ಪ್ರಸಿದ್ಧವಾದ ನಾಟಕಗಳಲ್ಲೊಂದು. ಇದರ ಗದ್ಯದ ಸೊಬಗು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿದೆ. ಈ ನಾಟಕಗಳೂ 17ನೆಯ ಶತಮಾನದ ಆದಿಯಲ್ಲಿ ಬಂದ ವ್ಯಾನ್ ಬ್ರೂ ಮತ್ತು ಫರ್ಕುಹರ್‌ರ ನಾಟಕಗಳೂ ಗದ್ಯ ನಾಟಕಗಳನ್ನು ಇಂಗ್ಲಿಷಿನಲ್ಲಿ ಸ್ಥಾಪಿಸಿದ್ದಲ್ಲದೆ ಕಾಮೆಡಿ ಆಫ್ ಮ್ಯಾನರ್ಸ್ ವರ್ಗದ ನಾಟಕಕ್ಕೂ ಹಿರಿ ಸ್ಥಾನವನ್ನು ತಂದುಕೊಟ್ಟವು.

**ನವಅಭಿಜಾತ ಯುಗ:** 18ನೆಯ ಶತಮಾನ ಇಂಗ್ಲಿಷ್ ಸಾಹಿತ್ಯ ಚರಿತ್ರೆಯಲ್ಲಿ ನಿಯೊಕ್ಲಾಸಿಕಲ್ (ನವಅಭಿಜಾತ) ಯುಗ. ಸರಳವಾದ, ನೇರವಾದ, ಭಾವ ಮತ್ತು ಭಾಷೆಗಳಲ್ಲಿ ಅತಿರೇಕವಿರದಿದ್ದ ಬರಹ, ವೈಚಾರಿಕತೆ, ವಿಡಂಬನೆ ಮುಂತಾದವುಗಳ ಪ್ರಾಧಾನ್ಯ, ರೊಮ್ಯಾಂಟಿಕ್ ಪಂಥದ ಪ್ರಮುಖ ಪ್ರವೃತ್ತಿಗಳಾದ ಪ್ರಕೃತಿಪ್ರೇಮ ಮತ್ತು ಕಲ್ಪನಾವಿಲಾಸಗಳ ಅಭಾವ–ಇವು ಈ ಯುಗದ ಕಾವ್ಯದ ಪ್ರಮುಖ ಲಕ್ಷಣಗಳು. ಇವಕ್ಕೆ ವಿರುದ್ಧ ಲಕ್ಷಣಗಳನ್ನೇ ಪದ್ಯ ಪಡೆಯಿತು.

18ನೆಯ ಶತಮಾನದ ಕವಿಗಳಲ್ಲಿ ಮೊದಲು ಬರುವವ ಅಲೆಕ್ಸಾಂಡರ್ ಪೋಪ್. ಲಂಡನ್ನಿನ ಕವಿಯಾದ ಇವನ ಕೃತಿಗಳು ವಿಡಂಬನೆಗಳು. ಸಮಕಾಲೀನ ಲಂಡನ್ ಸಮಾಜವನ್ನೂ ಸೋದರ ಲೇಖಕರನ್ನೂ ನಿರ್ದಾಕ್ಷಿಣ್ಯವಾಗಿ, ಅನೇಕ ವೇಳೆ ಅನ್ಯಾಯವಾಗಿ, ವೈಯಕ್ತಿಕ ಕಾರಣಗಳಿಗಾಗಿ, ಕಟುವಿಡಂಬನೆಗೆ ಗುರಿಪಡಿಸಿದ್ದಾನೆ. ದಿ ರೇಪ್ ಆಫ್ ದಿ ಲಾಕ್, ಡನ್ಸಿಯಡ್ ಎಂಬ ಇವನ ವಿಡಂಬನಾತ್ಮಕ ಕವಿತೆಗಳು ಪ್ರಸಿದ್ಧ. ಇವುಗಳ ಮಾಧ್ಯಮವಾದ ಹಿರಾಯಿಕ್ ಕಪ್ಲೆಟ್ ಎಂಬ ಛಂದಸ್ಸಿನ ಮೇಲೆ ಅವನಿಗಿರುವ ಸ್ವಾಮ್ಯ ಅಸದೃಶವಾದುದು. ಎಸ್ಸೆ ಅನ್ ಕ್ರಿಟಿಸಿಸಮ್, ಎಸ್ಸೆ ಅನ್ ಮ್ಯಾನ್ ಎಂಬ ಇವನ ಚರ್ಚಾತ್ಮಕ ಕವನಗಳು ಆ ಕಾಲದ ಪದ್ಯವೂ ಹೇಗೆ ಗದ್ಯದ ಕೆಲಸಕ್ಕೆ ಉಪಯೋಗಿಸಲ್ಪಡುತ್ತಿತ್ತು ಎಂಬುದನ್ನು ತೋರಿಸುತ್ತವೆ. ಗಲಿವರ್ಸ್ ಟ್ರಾವೆಲ್ಸ್ ಎಂಬ ಜಗದ್ವಿಖ್ಯಾತ ವಿಡಂಬನಾತ್ಮಕ ಕಥೆಯ ಕರ್ತೃ ಜೊನಾತನ್ ಸ್ವಿಫ್ಟ್. ಅದು ಆ ಕಾಲದ ರಾಜಕೀಯ ಸ್ಥಿತಿಗತಿಗಳನ್ನೂ ಸ್ವಿಫ್ಟನ ನಿರಾಶಾಯುತ ಜೀವನದೃಷ್ಟಿಯನ್ನೂ ಪ್ರತಿಬಿಂಬಿಸುತ್ತದೆ. ದಿ ಬ್ಯಾಟಲ್ ಆಫ್ ಬುಕ್ಸ್ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಡಂಬನೆ. ದಿ ಟೇಲ್ ಆಫ್ ಎ ಟಬ್ ಅವನ ಇನ್ನೊಂದು ಪ್ರಸಿದ್ಧ ಕೃತಿ. ಇಂಗ್ಲಿಷ್ ವಿಡಂಬನಕಾರರಲ್ಲೂ ಗದ್ಯ ಲೇಖಕರಲ್ಲೂ ಸ್ವಿಫ್ಟನ ಸ್ಥಾನ ಗಣ್ಯವಾದುದು. ಅಷ್ಟೇ ಗಣ್ಯರಾದವರು. ರಾಬಿನ್‌ಸನ್ ಕ್ರೂಸೋ ಎಂಬ ಪ್ರಸಿದ್ಧ ಕಥೆಯ ಲೇಖಕ ಡೇನಿಯಲ್ ಡೀಫೋ, ಅಡಿಸನ್ ಮತ್ತು ಸ್ಟೀಲ್. ಇವರು ಇಂಗ್ಲಿಷಿನ ಪ್ರಬಂಧಗಳ ಶ್ರೇಷ್ಠ ನಿರ್ಮಾಪಕರ ಶ್ರೇಣಿಗೆ ಸೇರಿದವರು. ಅವರ ಟ್ಯಾಟ್ಲರ್ ಮತ್ತು ಸ್ಪೆಕ್ಟೇಟರ್ ಪ್ರಬಂಧಗಳು ಸಮಾಜಸುಧಾರಣೆಗಾಗಿ ರಚಿತವಾಗಿದ್ದರೂ ಉತ್ತಮ ಕಲಾಕೃತಿಗಳೂ ಆಗಿವೆ. ಇಬ್ಬರೂ ನಾಟಕಗಳನ್ನೂ ಬರೆದಿದ್ದಾರೆ. ಇವರು ತಮ್ಮ ಸ್ಪೆಕ್ಟೇಟರ ಪ್ರಬಂಧಗಳಲ್ಲಿ ಸೃಷ್ಟಿಸಿದ ಸರ್ ರೋಜರ್ ಡಿ ಕವರ್ಲಿ ಇಂಗ್ಲಿಷ್ ಸಾಹಿತ್ಯಲೋಕದ ವಿಖ್ಯಾತ ವ್ಯಕ್ತಿಗಳಲೊಬ್ಬನಾಗಿರುವುದಲ್ಲದೆ ಮುಂದೆ ಬಂದ ಇಂಗ್ಲಿಷ್ ಕಾದಂಬರಿಗಳ ಬೆಳವಣಿಗೆಯ ಚರಿತ್ರೆಯಲ್ಲೂ ಹೆಸರಾಗಿದ್ದಾನೆ. 18ನೆಯ ಶತಮಾನದ ಇತರ ಗದ್ಯಲೇಖಕರಾದ ಚರಿತ್ರಕಾರ ಎಡ್ವರ್ಡ್ ಗಿಬ್ಬನ್ (ದಿ ರೈಸ್ ಅಂಡ್ ಫಾಲ್ ಆಫ್ ದಿ ರೋಮನ್ ಎಂಪೈರ್‌ನ ಕರ್ತೃ) ವಾಗ್ಮಿ ಎಡ್ಮಂಡ್ ಬರ್ಕ್–ಇಬ್ಬರೂ ಇಂಗ್ಲಿಷ್ ಗದ್ಯದ ಸತ್ತ್ವ ಮತ್ತು ಓಜಸ್ಸುಗಳನ್ನು ತಮ್ಮ ಕೃತಿಗಳಲ್ಲಿ ತೋರಿಸಿದ್ದಾರೆ.

ಪೋಪನ ಅನಂತರ ಬಂದ ಕವಿಗಳಲ್ಲಿ ಆಲಿವರ್ ಗೋಲ್ಡ್‌ಸ್ಮಿತ್ ಮತ್ತು ಸ್ಯಾಮುಅಲ್ ಜಾನ್‌ಸನ್ನರು ಕ್ಲಾಸಿಕಲ್ ಪಂಥದ ಕೃತಿಗಳನ್ನೇ ಬರೆದರು. ಗೋಲ್ಡ್‌ಸ್ಮಿತ್‌ನ ದಿ ಡೆಸರ್ಟಡ್ ವಿಲೇಜ್ ಮತ್ತು ದ ಟ್ರಾವೆಲರ್ ವಿಚಾರಪೂರ್ಣವಾದ ಸಮಸ್ಯಾ ಪ್ರತಿಪಾದಕವಾದ ಕವನಗಳು. ಜಾನ್‌ಸನ್ನನ ದಿ ವ್ಯಾನಿಟಿ ಆಫ್ ಹ್ಯೂಮನ್ ವಿಷಸ್ ಜೀವನದ ಆಶೋತ್ತರಗಳ ನಿರರ್ಥಕತೆಯನ್ನು ಪ್ರತಿಪಾದಿಸುವ ಕವನ. ಈ ಕವನಗಳೆಲ್ಲ ತಮ್ಮ ವಿಷಯಗಳಿಗೆ ಅನುಗುಣವಾಗಿ ಹಿರಾಯಿಕ್ ಕಪ್ಲೆಟ್ ಛಂದಸ್ಸಿನಲ್ಲಿವೆ. ಗೋಲ್ಡ್ ಸ್ಮಿತ್ ಕವಿಯಾಗಿದ್ದುದಲ್ಲದೆ ಪ್ರಬಂಧಕಾರನೂ ನಾಟಕಕಾರನೂ ಕಾದಂಬರಿಕಾರನೂ ಆಗಿದ್ದ. ದಿ ಸಿಟಿಜನ್ ಆಫ್ ದಿ ವರ್ಲ್ಡ್ ಎಂಬ ಅಂಕಿತನಾಮವನ್ನಿಟ್ಟುಕೊಂಡು ಆತ ಬರೆದ ಪ್ರಬಂಧಗಳು ಸಮಕಾಲೀನರ ಗುಣದೋಷಗಳ ವಿಮರ್ಶೆಯನ್ನು ಒಳಗೊಂಡಿವೆ. ಅವುಗಳಲ್ಲಿರುವ ತಿಳಿಹಾಸ್ಯ ಮಾನವ ಪ್ರೇಮಗಳು ಆಹ್ಲಾದಕರವಾಗಿವೆ. ಅವನ ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಜಗತ್ತಿನ ಅತ್ಯಂತ ಪ್ರಸಿದ್ಧ ಕಾದಂಬರಿಗಳಲ್ಲೊಂದು. ಅವನ ನಾಟಕಗಳಾದ ಷಿ ಸ್ಟೂಪ್ಸ್ ಟು ಕಾಂಕರ್ ಮತ್ತು ಗುಡ್ ನೇಚರ್ಡ್‌ಮ್ಯಾನ್ ಇಂಗ್ಲಿಷ್ ನಾಟಕಗಳ ಬೆಳವಣಿಗೆಯನ್ನು ಮುಂದುವರಿಸುವುದರಲ್ಲಿ ಗಣನೀಯ ಪಾತ್ರವಹಿಸಿದವು. ಜಾನ್ಸನ್ ಕವಿಯಾಗಿದ್ದುದರ ಜೊತೆಗೆ ನಿಘಂಟುಕಾರನೂ ಆಗಿದ್ದ. 1755ರಲ್ಲಿ ಪ್ರಕಟವಾದ ಅವನ ಡಿಕ್ಷನರಿ ಇಂಗ್ಲಿಷ್ ಭಾಷೆಯ ನಿಘಂಟುಗಳಲ್ಲಿ ಒಂದು ಘಟ್ಟವನ್ನೇ ಸ್ಥಾಪಿಸಿತು. ಇಂಗ್ಲಿಷ್ ವಿಮರ್ಶಕರ ಶ್ರೇಣಿಯಲ್ಲಿ ಅವನದು ದೊಡ್ಡ ಹೆಸರು. ಅವನ ಲೈವ್ಸ್ ಆಫ್ ಪೊಯಟ್ಸ್ ಮತ್ತು ಪ್ರಿಫೇಸ್ ಟು ಷೇಕ್ಸ್‌ಪಿಯರ್ ಅವನು ವಿಮರ್ಶೆಗೆ ಸಲ್ಲಿಸಿದ ಸೇವೆಯ ಪ್ರತೀಕಗಳಾಗಿ ಇಂದಿಗೂ ವಿದ್ವಾಂಸರಿಗೆ ಆಕರ್ಷಕವಾಗಿವೆ. ಜಾನ್ಸನ್‌ನ ವಿಮರ್ಶೆ ಕ್ಲಾಸಿಕಲ್ ಯುಗದ ಕಾವ್ಯಮೀಮಾಂಸೆ ಮತ್ತು ಕಾವ್ಯಲಕ್ಷಣಗಳಿಗೆ ಕೈಮರದಂತಿದೆ. ಆದರೆ ಈ ಪಂಥಕ್ಕೆ ವಿರುದ್ಧವಾದ ಷೇಕ್ಸ್‌ಪಿಯರ್‌ನ ಔನ್ನತ್ಯವನ್ನು ಗುರುತಿಸಬಲ್ಲ ರಸಜ್ಞೆಯೂ ಅವನಲ್ಲಿತ್ತು.

18ನೆಯ ಶತಮಾನದ ಉತ್ತರಾರ್ಧ ಇಂಗ್ಲಿಷ್ ಕಾದಂಬರಿಯ ಆರಂಭದ ಕಾಲ. ಸ್ಯಾಮ್ಯುಅಲ್ ರಿಚರ್ಡ್‌ಸನ್ ಮತ್ತು ಹೆನ್ರಿ ಫೀಲ್ಡಿಂಗ್ ಇಂಗ್ಲಿಷ್‌ನ ಮೊದಲ ಕಾದಂಬರಿಕಾರರು. ರಿಚರ್ಡ್‌ಸನ್ನನ ಪ್ಯಾಮೆಲಾ ಮತ್ತು ಕ್ಲಾರಿಸ ಫೀಲ್ಡಿಂಗ್‌ನ ಜೋಸೆಫ್ ಆ್ಯಂಡ್ರ್ಯೂಸ್ ಮತ್ತು ಟಾಮ್ ಜೋನ್ಸ್ ಎಂಬ ಪ್ರಸಿದ್ಧ ಕಾದಂಬರಿಗಳು ಈ ಅವಧಿಯಲ್ಲಿ ರಚಿತವಾದುವು. ಟೋಬಿಯಸ್ ಸ್ಮಾಲೆಟ್‌ನ ರೋಡೆರಿಕ್ ರ್ಯಾಂಡಮ್ ಮತ್ತು ಲಾರೆನ್ಸ್‌ಸ್ಟರ್ನನ ಟ್ರಿಸ್ಟ್ರಾಮ್ ಷ್ಯಾಂಡಿ ಮತ್ತು ಸೆಂಟಿಮೆಂಟಲ್ ಜರ್ನಿಗಳು ಇಂಗ್ಲಿಷ್ ಕಾದಂಬರಿಗಳ ಹಿರಿಯ ಪರಂಪರೆಯನ್ನೇ ಸ್ಥಾಪಿಸಿದುವು. ಬರಬರುತ್ತ ಇಂಗ್ಲಿಷ್ ಕಾದಂಬರಿ ಸಾಮಾಜಿಕ ಸಾಹಿತ್ಯದ ದೊಡ್ಡ ಮಾಧ್ಯಮವಾಯಿತು.

**ರೊಮ್ಯಾಂಟಿಕ್ ಯುಗದ ಹರಿಕಾರರು:** 18ನೆಯ ಶತಮಾನದಲ್ಲೆಲ್ಲ ಕ್ಲಾಸಿಕಲ್ ಸಾಹಿತ್ಯವೊಂದೇ ವಿರಾಜಿಸಲಿಲ್ಲ. ಅಂಥ ಸಾಹಿತ್ಯ ಕೆಲವು ವರ್ಷಗಳು ಎಲ್ಲರ ಗಮನವನ್ನೂ ಸೆಳೆದ ಅನಂತರ ರೊಮ್ಯಾಂಟಿಕ್ ಸಾಹಿತ್ಯಪ್ರೇಮ ಅದಕ್ಕೆ ಪ್ರೇರಕವಾದ ಪ್ರವೃತ್ತಿಗಳು ಮತ್ತೆ ಲೇಖಕರ ಮನಗಳಲ್ಲಿ ಕಾಣಿಸಿಕೊಳ್ಳತೊಡಗಿದವು. ಮಧ್ಯಯುಗದ ಐತಿಹ್ಯಗಳು ಕಾಲ್ಪನಿಕ ಕಥೆಗಳು, ಜಾನಪದ ಸಾಹಿತ್ಯ, ಪ್ರಕೃತಿ, ಗ್ರಾಮಜೀವನ–ಇವುಗಳಲ್ಲೆಲ್ಲ ಹೊಸ ಆಸಕ್ತಿಯೊಂದು ಕಾಣಿಸಿಕೊಳ್ಳಲಾರಂಭಿಸಿತು. ಬಿಷಪ್ ಪರ್ಸಿಯ ರೆಲಿಸ್ ಆಫ್ ಏನ್ಷೆಂಟ್ ಇಂಗ್ಲಿಷ್ ಪೊಯಟ್ರಿ ಅನೇಕಾನೇಕ ಲಾವಣಿಗಳ ಸಂಗ್ರಹ, ಲಾವಣಿಗಳ ಸರಳತೆ, ಛಂದೋವೈವಿಧ್ಯ ಮುಂತಾದ ಗುಣಗಳು ಇಂಗ್ಲಿಷ್ ಕಾವ್ಯದ ಮೇಲೆ ಮತ್ತೆ ತಮ್ಮ ಪ್ರಭಾವವನ್ನು ಬೀರತೊಡಗಿದವು. ಹಳೆಯ ಕಾಲದ ಕೃತಿಗಳನ್ನು ಹೋಲುತ್ತಿದ್ದ ಮ್ಯಾಕ್‌ಫರ್ಸನ್‌ನ ಆಸಿಯನ್ ಎಂಬ ಕವನವೂ ಚಾಟರ್‌ಮನ್‌ನ ರೌಲಿ ಪೊಯಮ್ಸ್ ಎಂಬ ಕವನಸಂಗ್ರಹವೂ ಈ ಕಾಲದಲ್ಲೇ ಪ್ರಕಟವಾದುದು ಅರ್ಥಪೂರ್ಣವಾದ ಸಂಗತಿ. ಹೊರೇಸ್ ವಾಲ್ಪೋಲ್‌ನ ಕ್ಯಾಸಲ್ ಆಫ್ ಅಟ್ರೌಂಟೊ ಮಧ್ಯಯುಗದ ಗಾಥಿಕ್ ವರ್ಗದ ಕಲ್ಪನಾವೈಭವದಿಂದ ಕೂಡಿದ ಕಥೆ. ಮಿಸೆಸ್ ಆನ್ ರ್ಯಾಡ್‌ಕ್ಲಿಫ್‌ಳ ದಿ ಮಿಸ್ಟೀರೀಸ್ ಆಫ್ ಉಡಾಲ್ಫೋ ಕೂಡ ಇಂಥದೇ ಕೃತಿ. ಕತ್ತಲು ತುಂಬಿದ ಕಾಡು, ದೆವ್ವಗಳು, ದುಷ್ಟರು, ಪ್ರಕೃತಿಪ್ರೇಮ, ಭಾವೌತ್ಸುಕ್ಯ–ಇವು ಈ ಗ್ರಂಥಗಳ ಲಕ್ಷಣಗಳು.

ಈ ರೊಮ್ಯಾಂಟಿಕ್ ಪ್ರವೃತ್ತಿ 18ನೆಯ ಶತಮಾನದ ಉತ್ತರಾರ್ಧದಲ್ಲಿ ಮಾತ್ರವಲ್ಲದೆ ಮೊದಲಿನಿಂದಲೂ ಇತ್ತು. ಪೋಪ್ ತನ್ನ ವಿಡಂಬನೆಗಳನ್ನೂ ಚರ್ಚಾತ್ಮಕ ಕಾವ್ಯಗಳನ್ನೂ ಬರೆಯುತ್ತಿದ್ದಾಗಲೇ ಜೇಮ್ಸ್ ಥಾಮ್ಸನ್ ತನ್ನ ಸೀಸನ್ಸ್ ಎಂಬ ಋತುಗಳನ್ನು ಕುರಿತ ದೀರ್ಘಕವಿತೆಯನ್ನು ಬರೆದ (1731). ಎಡ್ವರ್ಡ್ ಯಂಗ್‌ನ ನೈಟ್ ಥಾಟ್ಸ್ ಕೆಲವು ವರ್ಷಗಳ ಅನಂತರ ಪ್ರಕಟಗೊಂಡಿತು. ಇವರೆಡರಲ್ಲೂ ಹಳ್ಳಿಯ ಜೀವನ, ಹಳ್ಳಿಗಾಡಿನ ದೃಶ್ಯಗಳು, ಪ್ರಕೃತಿವರ್ಣನೆ, ಮಾನವ ಸಹಜವಾದ ಭಾವಗಳು ವ್ಯಕ್ತವಾಗಿವೆ. ಶತಮಾನದ ಮಧ್ಯಭಾಗಕ್ಕೆ ಸೇರಿದ ಥಾಮಸ್ ಗ್ರೆ ಮತ್ತು ವಿಲಿಯಮ್ ಕಾಲಿನ್ಸ್‌ರಲ್ಲೂ ಈ ಗುಣಗಳುಂಟು. ಗ್ರೆ ಕವಿಯ ಎನ್ ಎಲಿಜಿ ರಿಟನ್ ಇನ್ ಎ ಕಂಟ್ರಿ ಚರ್ಚ್‌ಯಾರ್ಡ್ ಪ್ರಸಿದ್ಧ ಕವನ. ಅದು ಹಳ್ಳಿಯ ಜನರ ಕಷ್ಟ ಸುಖಗಳನ್ನೂ ಒಳಗೊಂಡಿದೆ. ಗ್ರೆ ಕವಿಯೇ ಬರೆದ ದಿ ಬಾರ್ಡ್ ಮತ್ತು ಪ್ರೋಗ್ರೆಸ್ ಆಫ್ ಪೊಯಸಿ ಕವನಗಳು ಕಲ್ಪನೆಯನ್ನು ಕೆರಳಿಸುವ ರಚನೆಗಳು. ಕಾಲಿನ್ಸನ ಓಡ್ ಟು ಈವನಿಂಗ್ ಕವಿತೆಯ ವಸ್ತು ಗ್ರಾಮಸೀಮೆಯ ಸಂಧ್ಯೆಯ ವರ್ಣನೆ. ಪ್ರಾಸರಹಿತವಾದ ಈ ಕವನ ಹಿರಾಯಿಕ್ ಕಪ್ಲೆಟ್ಟಿನ ಸಂಕೋಲೆಯಿಂದ ಹೇಗೆ ಕೆಲವರಾದರೂ ಬೇಸತ್ತಿದ್ದರೆಂದು ತೋರಿಸುತ್ತದೆ. ವಿಲಿಯಮ್ ಕೂಪರ್ ಮತ್ತು ಜಾರ್ಜ್ ಕ್ರ್ಯಾಬ್‌ರೂ ಹಳ್ಳಿಯ ಜೀವನದ ಮತ್ತು ನೋಟಗಳ ಕವಿಗಳು. ಸ್ಕಾಟ್ಲೆಂಡಿನ ಕವಿ ರಾಬರ್ಟ್ ಬರ್ನ್ಸ್ ಹಳ್ಳಿಯವ; ಸ್ವತಃ ರೈತ. ಅವನ ಭಾವಗೀತೆಗಳು ಜನಪ್ರಿಯತೆಯನ್ನು ಗಳಿಸಿವೆ. ಪ್ರಣಯಕವನಗಳ ರಚನೆಯಲ್ಲಿ ಅವನದು ಎತ್ತಿದ ಕೈ. ಅವನ ಭಾಷೆ ಸ್ಕಾಟ್ಲೆಂಡಿನ ಪಶ್ಚಿಮ ಭಾಗದ ಆಡುಭಾಷೆ. ವಿಲಿಯಂ ಬ್ಲೇಕ್ ಅನುಭಾವೀ ಕವಿ. ಅವನ ಕವನಗಳಲ್ಲಿ ದೈವಚಿಂತನೆಯ ಹುಚ್ಚು ಎದ್ದು ಕಾಣುತ್ತದೆ. ಇವರೆಲ್ಲರೂ ಕಲ್ಪನೆಗೆ, ಸಹಜತೆ ಸರಳತೆಗಳಿಗೆ ಪ್ರಕೃತಿಪ್ರೇಮ ಮಾನವಪ್ರೇಮಗಳಿಗೆ ಮಾನ್ಯತೆಯಿತ್ತ ಕವಿಗಳು. ಇವರ ಕೃತಿಗಳು ರೊಮ್ಯಾಂಟಿಕ್ ಯುಗದ ಕಡೆಗೆ ಕೈತೋರಿಸುತ್ತವೆ; ಬರಲಿರುವ ಬದಲಾವಣೆಯನ್ನು ಸೂಚಿಸುತ್ತವೆ. ಆದುದರಿಂದ ಈ ಕವಿಗಳಿಗೆ ಟ್ರಾನ್ಸಿಷನ್ ಪೊಯೆಟ್ಸ್ ಎಂದು ಹೆಸರು ಬಂದಿದೆ. ಒಂದು ಬಗೆಯ ಕಾವ್ಯಪ್ರಪಂಚದಿಂದ ಇನ್ನೊಂದಕ್ಕೆ ಹೋಗುವವರು ಎಂದು ಆ ಮಾತು ಸೂಚಿಸುತ್ತದೆ. ಇವರು ಕ್ಲಾಸಿಕಲ್ ಸಾಹಿತ್ಯಕ್ಕೂ ರೊಮ್ಯಾಂಟಿಕ್ ಸಾಹಿತ್ಯಕ್ಕೂ ಮಧ್ಯೆ ಸೇತುವೆಯಂತಿದ್ದರು. ಇವರಲ್ಲಿ ಒಬ್ಬೊಬ್ಬರಲ್ಲೂ ಬೇರೆ ಬೇರೆಯಾಗಿ ಕಂಡುಬಂದ ಲಕ್ಷಣಗಳೇ ಒಟ್ಟಿಗೆ ಸೇರಿ ವರ್ಡ್ಸ್‌ವರ್ತ್ ಮತ್ತು ಕೋಲರಿಜ್‌ರಲ್ಲಿ ಕಾಣಿಸಿಕೊಂಡು ರೊಮ್ಯಾಂಟಿಕ್ ಯುಗವನ್ನು ತಂದುವು.

**ರೊಮ್ಯಾಂಟಿಕ್ ಸಾಹಿತ್ಯ:** ರೊಮ್ಯಾಂಟಿಕ್ ಸಾಹಿತ್ಯವು ವಿಭಾವನೆ (ಇಮ್ಯಾಜಿನೇಷನ್)ಗೆ ಪ್ರಾಧಾನ್ಯವನ್ನು ನೀಡಿತು. ಹಿಂದಿನ ಯುಗದಲ್ಲಿ ಕವಿಯು ಸಮುದಾಯದ ವಾಣಿಯಾಗಿದ್ದ, ಈ ಯುಗದಲ್ಲಿ ಕವಿಯು ಸಮುದಾಯದ ಕಣ್ಣಾದ. ಬದುಕನ್ನು ವಿಶಿಷ್ಟ ರೀತಿಯಲ್ಲಿ ಗ್ರಹಿಸಿ ಅದಕ್ಕೆ ಕಾವ್ಯದಲ್ಲಿ ರೂಪನೀಡಿದ. ಬದುಕನ್ನು ವಿಚಾರ ಶಕ್ತಿಯಿಂದ ಮಾತ್ರ ಗ್ರಹಿಸಬಹುದೆಂಬ ಭಾವನೆ ಹೋಗಿ ಇಂದ್ರಿಯಾನುಭವಗಳ ಮೂಲಕ ಗ್ರಹಿಸಿ, ವಿಭಾವನೆಯಿಂದ ಅದರ ಒಳ ಸ್ವರೂಪಕಟ್ಟಿ ಗ್ರಹಿಸಬಹುದೆಂಬ ಭಾವನೆ ಬೆಳೆಯಿತು. ಇದರಿಂದ ಕವಿಯ ವಿಶಿಷ್ಟ ದರ್ಶನಕ್ಕೆ ಪ್ರಾಧಾನ್ಯ ಲಭ್ಯವಾಯಿತು. ವಿಡಂಬನೆಯ ಬದಲು ಭಾವಗೀತಾತ್ಮಕತೆ ಚೈತನ್ಯಶೀಲವಾಯಿತು. ನಿಸರ್ಗವು ಜೀವಂತವಾದದ್ದು, ಮಾನವ–ನಿಸರ್ಗಗಳ ನಡುವೆ ಒಂದು ವಿಶಿಷ್ಟ ಸಂಬಂಧವಿದೆ ಎನ್ನುವ ಮನೋಧರ್ಮವನ್ನು ಈ ಯುಗದಲ್ಲಿ ಕಾಣುತ್ತೇವೆ. ಸಾಹಿತ್ಯವೂ ಒಂದು ಬಗೆಯ ತಿಳಿವಳಿಕೆ, ಬದುಕನ್ನು ಅರ್ಥಮಾಡಿಕೊಳ್ಳುವ ಸಾಧನ ಆಯಿತು. ಹಿಂದಿನ ಯುಗದಲ್ಲಿ ಕವಿಯು ಭಾಷೆಯನ್ನು 'ಸರಿ'ಯಾಗಿ ಬಳಸಬೇಕೆಂಬ ಭಾವನೆ ಇತ್ತು. ಕವಿಯು ಭಾಷೆಯನ್ನು ತನ್ನ ಅನುಭವದ, ಪ್ರತಿಭೆಯ ಅಗತ್ಯಗಳಿಗೆ ಅನುಗುಣವಾಗಿ ಪುನಾರೂಪಿಸಿಕೊಳ್ಳುತ್ತಾನೆ ಎಂದು ಕವಿ–ಭಾಷೆಯ ಸಂಬಂಧ ಹೊಸ ಸ್ವರೂಪವನ್ನು ಪಡೆಯಿತು. ಈ ಸಾಹಿತ್ಯದ ಬುನಾದಿ ಸರ್ವಸಮತಾಭಾವ, ಯಾರಿಗೇ ಆಗಲಿ ಹುಟ್ಟು, ಅಧಿಕಾರ, ಅಂತಸ್ತುಗಳಿಗೆ ಸಂಬಂಧವಿಲ್ಲದೆ ಅವರು ಮನುಷ್ಯರೆಂದೇ ಗೌರವ ಸಲ್ಲಬೇಕೆಂಬ ತತ್ತ್ವ. ಇದರಿಂದ ಗ್ರಾಮಜೀವನ, ರೈತರು–ಗೊಲ್ಲರು ಮುಂತಾದ ಸಮುದಾಯಗಳು ಇವರ ಬದುಕೂ ಸಾಹಿತ್ಯದಲ್ಲಿ ಬರುವಂತಾಯಿತು.

ಫ್ರಾನ್ಸಿನ ಮಹಾಕ್ರಾಂತಿಯೂ ಈ ಭಾವನೆಗೆ ಪ್ರೇರಕವಾಯಿತು. ವರ್ಡ್ಸ್‌ವರ್ತ್ ಮತ್ತು ಕೋಲರಿಜ್ ಈ ಯುಗದ ಪ್ರಮುಖರು. ಇವರಿಬ್ಬರೂ 1798ರಲ್ಲಿ ಪ್ರಕಟಿಸಿದ ದಿ ಲಿರಿಕಲ್ ಬ್ಯಾಲಡ್ಸ್ ಎಂಬ ಕವನ ಸಂಕಲನವೂ ಆ ಸಂಕಲನಕ್ಕೆ ವರ್ಡ್ಸ್‌ವರ್ತ್ ಬರೆದ ಪ್ರಸಿದ್ಧ ಪೀಠಿಕೆಯೂ ಈ ನವಯುಗದ ಸಾಹಿತ್ಯವನ್ನು ಅಧಿಕೃತವಾಗಿ ಪ್ರಚಾರಕ್ಕೆ ತಂದವು ಎನ್ನಬಹುದು. ವರ್ಡ್ಸ್‌ವರ್ತ್ ಇಂಗ್ಲಿಷಿನ ಪ್ರಕೃತಿಕಾವ್ಯಲೇಖಕರಲ್ಲಿ ಅತ್ಯಂತ ಹೆಸರಾಂತನಾದವ. ಪ್ರಕೃತಿಯೊಂದೇ ಅಲ್ಲದೆ ಹಳ್ಳಿಯ ಜನ ಮತ್ತು ಅವರ ಜೀವನಗಳೂ ಅವನ ಕಾವ್ಯದ ಮುಖ್ಯ ವಸ್ತುಗಳಾಗಿದ್ದುವು. ಸರಳತೆ, ಸಹಜತೆಗಳು ಅವನ ಕಾವ್ಯದ ಹಿರಿಯ ಕುರುಹುಗಳು. ಅವನ ಟಿಂಟರ್ನ್ ಅಬೆ, ಡ್ಯಾಫೊಡಿಲ್ಸ್, ಸಾಲಿಟರಿ ರೀಪರ್ ಮೊದಲಾದ ಸಣ್ಣ ಕವನಗಳೂ ಪ್ರಿಲ್ಯೂಡ್ ಎಂಬ ಆತ್ಮಕಥಾನಿರೂಪಕವಾದ ದೀರ್ಘಕವನವೂ ಸರ್ವಜನಪ್ರಿಯವಾಗಿವೆ. ಕೋಲರಿಜ್ ಇಂದ್ರಿಯಗೋಚರವಲ್ಲದ, ಬುದ್ಧಿಶಕ್ತಿಗೆ ಅತೀತವಾದ ಘಟನೆಗಳನ್ನು ಅವು ದಿನದಿನದ ಸಹಜ ಘಟನೆಗಳೋ ಎನ್ನುವಂತೆ ವರ್ಣಿಸುವುದರಲ್ಲಿ ನಿಪುಣ. ದಿ ರೈಮ್ ಆಫ್ ದಿ ಏನ್ಷಂಟ್ ಮ್ಯಾರಿನರ್, ಕುಬ್ಲಾಖಾನ್ ಮೊದಲಾದ ಅವನ ಸುಂದರ ಕವನಗಳು ಚಿತ್ತಾಕರ್ಷಕವಾಗಿವೆ. ಕೋಲರಿಜ್ ಇಂಗ್ಲಿಷ್ ವಿಮರ್ಶಕರಲ್ಲೂ ಹಿರಿಯ ಸ್ಥಾನ ಗಳಿಸಿದ್ದಾನೆ. ಅವನ ಬಯಗ್ರಾಫಿಯಾ ಲಿಟರೇರಿಯ ಗ್ರಂಥವಿಮರ್ಶೆ ಮತ್ತು ಕಾವ್ಯಮೀಮಾಂಸೆಯ ಚರಿತ್ರೆಯಲ್ಲಿ ಖ್ಯಾತಿಗಳಿಸಿದೆ. ಇವನು ಗಣ್ಯಶಾಸ್ತ್ರಜ್ಞನು ತಾತ್ತ್ವಿಕನೂ ಆಗಿದ್ದ. ಇವರ ಒಡನಾಡಿಗಳಾದ ರಾಬರ್ಟ್ ಸದೆ, ಲೇಹಂಟ್, ಕ್ಯಾಂಪ್‌ಬೆಲ್, ಸರ್ ವಾಲ್ಟರ್ ಸ್ಕಾಟ್ ಮೊದಲಾದವರೂ ಜನಪ್ರಿಯ ಕವಿಗಳಾಗಿದ್ದಾರೆ. ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ರೊಮ್ಯಾಂಟಿಕ್ ಸಾಹಿತ್ಯದ ಲಕ್ಷಣಗಳನ್ನು ತಮ್ಮ ಕೃತಿಗಳಲ್ಲಿ ತೋರಿಸಿದ್ದಾರೆ. ಇವರಿಗಿಂತಲೂ ಕಿರಿಯರಾದ ಬೈರನ್, ಷೆಲ್ಲಿ, ಕೀಟ್ಸ್ ಕವಿಗಳೂ ರೊಮ್ಯಾಂಟಿಕ್ ಯುಗದ ಪ್ರಖರ ದೀಪಗಳು. ಇವರು ಒಬ್ಬೊಬ್ಬರೂ ಒಂದೊಂದು ರೀತಿಯ ಕಾವ್ಯಲಕ್ಷಣಕ್ಕೆ, ಕಾವ್ಯಶೈಲಿಗೆ, ವಸ್ತು ವೈಶಿಷ್ಟ್ಯಕ್ಕೆ ಪ್ರಸಿದ್ಧರು. ಬೈರನ್ ವೈಯಕ್ತಿಕ ಸ್ವಾತಂತ್ರ್ಯ ಕಲ್ಪನಾವೈಭವಗಳಿಗೂ ಷೆಲ್ಲಿ ಉನ್ನತಾದರ್ಶಗಳಿಗೂ ಕೀಟ್ಸ್ ಸೌಂದರ್ಯೋಪಾಸನೆಗೂ ಹೆಸರಾಗಿದ್ದಾರೆ. ಬೈರನ್ನಿನ ಚೈಲ್ಡ್ ಹೆರಾಲ್ಡ್ಸ್ ಪಿಲ್‌ಗ್ರಿಮೇಜ್ ಮೊದಲಾದ ಕವಿತೆಗಳೂ ಷೆಲ್ಲಿಯ ಓಡ್ ಟು ವೆಸ್ಟ್ ವಿಂಡ್, ಸ್ಕೈಲಾರ್ಕ್ ಮೊದಲಾದ ಭಾವಗೀತೆಗಳೂ ಪ್ರೊಮಿಥ್ಯೂಸ್ ಅನ್ ಬೌಂಡ್ ನಾಟಕವೂ ಅವರ ಆಲೋಚನೆಗೆ, ಕಾವ್ಯಸೌಂದರ್ಯಕ್ಕೆ ದ್ಯೋತಕಗಳಾಗಿವೆ. ಷೆಲ್ಲಿಯ ಡಿಫೆನ್ಸ್ ಆಫ್ ಪೊಯೆಟ್ರಿ ಇಂಗ್ಲಿಷ್ ವಿಮರ್ಶೆಯ ಕ್ಷೇತ್ರದಲ್ಲಿ ಗಣ್ಯ ಕೃತಿಯಾಗಿದೆ. ಕೀಟ್ಸನ ಕವನಗಳಲ್ಲಿ ಮಾಲೆಮಾಲೆಯಾಗಿ ಕಂಡುಬರುವ ಚಿತ್ರಗಳ ಪರಂಪರೆ ಅಪೂರ್ವವಾದುದು. ಸುಂದರಕಾವ್ಯ, ಉನ್ನತವಿಚಾರದೋಹನ, ಆದರ್ಶದ ಪ್ರತಿಪಾದನೆ ಇವಕ್ಕೆ ಇವರ ಕಾವ್ಯ ಪ್ರಸಿದ್ಧವಾಗಿದೆ. ಎಲಿಜಬೆತ್ ಯುಗದ ಕಾವ್ಯದಲ್ಲಿರುವಂತೆಯೇ ಈ ಯುಗದ ಕಾವ್ಯದಲ್ಲೂ ಭಾವೋತ್ಕರ್ಷತೆ ಮತ್ತು ಕಲ್ಪನಾವೈಭವಗಳು ಎದ್ದು ಕಾಣುತ್ತವೆ. ಮನೋಭಾವವೂ ಮಾನವಪ್ರೇಮವೂ ಈ ಕವಿಗಳ ಲಕ್ಷಣಗಳು. ಈ ಯುಗದಲ್ಲಿ ಒಳ್ಳೆಯ ನಾಟಕಗಳು ಬರಲಿಲ್ಲ. ಷೆಲ್ಲಿಯ ಚೆಂಚಿಯೊಂದೇ ಹೇಳಬಹುದಾದಂಥ ನಾಟಕ.

ರೊಮ್ಯಾಂಟಿಕ್ ಯುಗದಲ್ಲಿ ಗದ್ಯವೂ ವಿವಿಧ ರೀತಿಯಲ್ಲಿ ಬರಹಗಾರರನ್ನು ಆಕರ್ಷಿಸಿತು. ಚಾರ್ಲ್ಸ್ ಲ್ಯಾಂಬ್, ವಿಲಿಯಂ ಹ್ಯಾಜ್ಲಿಟ್ ಲೇಹಂಟ್, ಥಾಮಸ್ ಡಿಕ್ವಿನ್ಸಿ ಇವರ ಪ್ರಬಂಧಗಳು ಯಾವ ಸಾಹಿತ್ಯಕ್ಕಾದರೂ ಭೂಷಣಪ್ರಾಯವಾಗಿರುವಂಥವು. ಇವರೆಲ್ಲರೂ ಇಂಗ್ಲಿಷಿನಲ್ಲಿ ಪ್ರಬಂಧ ಸಾಹಿತ್ಯದ ಮುನ್ನಡೆಗೆ ಬಹುಮಟ್ಟಿಗೆ ಕಾರಣರಾದವರು. ಲ್ಯಾಂಬ್‌ನ ಪ್ರಬಂಧಗಳು ಅವನ ಸ್ವಂತ ಜೀವನದ ಘಟನೆಗಳಿಗೆ ಮತ್ತು ಅವನ ಬಂಧುಮಿತ್ರರಿಗೆ ಸಂಬಂಧಪಟ್ಟವು. ತತ್ಕಾರಣ ಅವು ಇಂಗ್ಲಿಷಿನ ಪ್ರಬಂಧಗಳಲ್ಲಿ ವೈಯಕ್ತಿಕತೆಗೆ, ಬರೆಹಗಾರನ ಜೀವನಪ್ರದರ್ಶನಕ್ಕೆ ಪ್ರಸಿದ್ಧವಾಗಿವೆ. ದಿ ಪರ್ಸನಲ್ ಎಸ್ಸೆ ಎನ್ನಿಸಿಕೊಳ್ಳುವ ಈ ಜಾತಿಯ ಪ್ರಬಂಧಗಳಿಗೆ ಮಾದರಿಗಳಾಗಿವೆ. ಲ್ಯಾಂಬ್‌ನ ಲಘುಹಾಸ್ಯ ಆಪ್ಯಾಯಮಾನವಾದುದು ಹ್ಯಾಜ್ಲಿಟ್, ಲೇಹಂಟ್ ಮತ್ತು ಡಿಕ್ವಿನ್ಸಿಯವರ ಪ್ರಬಂಧಗಳೂ ಅವರ ವ್ಯಕ್ತಿತ್ವಗಳನ್ನು ತೆರೆದು ತೋರುವುದಲ್ಲದೆ ವಿಚಾರಗರ್ಭಿತವಾಗಿಯೂ ಇವೆ. ಹ್ಯಾಜ್ಲಿಟ್ ವಿಮರ್ಶಕನೂ ಆಗಿದ್ದ. ಷೇಕ್ಸ್‌ಪಿಯರ್ ಮತ್ತು ಎಲಿಜಬೆತ್ ಯುಗದ ಇತರ ನಾಟಕಕಾರರ ಮೇಲೆ ಆತ ಬರೆದಿರುವ ವಿಮರ್ಶೆ ಇಂದೂ ಮನ್ನಣೆ ಪಡೆದಿದೆ. ಇವರ ಕೃತಿಗಳೂ ಅಲ್ಲದೆ, ಸರ್ ವಾಲ್ಟರ್ ಸ್ಕಾಟ್‌ನ ಪ್ರಸಿದ್ಧ ಕಾದಂಬರಿಗಳೂ ಜೇನ್ ಆಸ್ಟೆನಳ ಪ್ರೈಡ್ ಅಂಡ್ ಪ್ರಿಜುಡಿಸ್, ಎಮ್ಮ ಮೊದಲಾದ ಕಾದಂಬರಿಗಳೂ ಇಂಗ್ಲಿಷ್ ಸಾಹಿತ್ಯಪ್ರೇಮಿಗಳಿಗೆ ಚಿರಪರಿಚಿತವಾಗಿವೆ. ಐತಿಹಾಸಿಕ ಕಾದಂಬರಿ ಸ್ಕಾಟನ ವಿಶಿಷ್ಟ ಕೊಡುಗೆ. ಚರಿತ್ರೆಯ ಶಕ್ತಿಗಳ ಅರಿವು, ವ್ಯಕ್ತಿಗೂ ಅವನ ಸಮುದಾಯದ ಗತಕಾಲಕ್ಕೂ ಇರುವ ಸಂಕೀರ್ಣ ಸಂಬಂಧದ ಅರಿವು ಇವನಿಗಿತ್ತು. ಇವನ ಸ್ಕಾಟಿಷ್ ಕಾದಂಬರಿಗಳೆಲ್ಲ ಸೇರಿ ಒಂದು ಮಹಾಕಾವ್ಯವಾಗುತ್ತದೆ ಎಂದು ಹೇಳುವುದುಂಟು. ಜೇನ್ ಆಸ್ಟಿನ್ ಐರನಿ ಮತ್ತು ಹಾಸ್ಯಗಳನ್ನು ಪಾತ್ರಗಳು ನೈತಿಕವಾಗಿ ಗಟ್ಟಿಯೇ ಟೊಳ್ಳೇ ಎಂಬ ಶೋಧನೆಗೆ ಬಳಸಿದಳು. ಇಂಗ್ಲಿಷ್ ಕಾದಂಬರಿ 'ರೂಪ ಪ್ರಜ್ಞೆ'ಯನ್ನು 'ಸೆನ್ಸ್ ಆಫ್ ಫಾರಂ' ಅನ್ನು ಬಲಗೊಳಿಸಿದಳು. (ಎಂ.ಆರ್.;ಎಲ್.ಎಸ್.ಎಸ್.)

ಈ ಯುಗಕ್ಕೇ ಸೇರಬೇಕಾದ ಲೇಖಕರ ಹೆಸರುಗಳು ಇನ್ನೂ ಅನೇಕವಿವೆ. ಒಟ್ಟಿನ ಮೇಲೆ ಈ ಯುಗ ಇಂಗ್ಲಿಷ್ ಸಾಹಿತ್ಯದ ಅತ್ಯಂತ ರಸಮಯವಾದ ವೈವಿಧ್ಯಪೂರ್ಣವಾದ ವೈಭವೋಪೇತವಾದ ಯುಗಗಳಲ್ಲಿ ಒಂದು.

19ನೆಯ ಶತಮಾನದ ದ್ವಿತೀಯಾರ್ಧ ಇಂಗ್ಲಿಷ್ ಸಾಹಿತ್ಯದ ಚರಿತ್ರೆಯಲ್ಲಿ ವಿಜ್ಞಾನದ ಯುಗ. ಇದನ್ನು ವಿಕ್ಟೋರಿಯ ಯುಗ ಎಂದೂ ಕರೆಯುತ್ತಾರೆ. ಈ ಯುಗ ಇಂಗ್ಲಿಷ್ ಪ್ರಜಾಪ್ರಭುತ್ವದ ವಿಸ್ತರಣಕ್ಕೂ ವ್ಯಾಪಾರದ ಉತ್ಕರ್ಷಕ್ಕೂ ವಿಜ್ಞಾನದ ಬೆಳವಣಿಗೆಗೂ ಹೆಸರಾದುದು. ಇವೆಲ್ಲವುಗಳ ಪರಿಣಾಮ ಸಾಹಿತ್ಯದ ಮೇಲೆ ಆದುದನ್ನು ಕಾಣಬಹುದು. ಸಾಮಾನ್ಯರ ಪ್ರಾಶಸ್ತ್ಯ ಹೆಚ್ಚಿದ್ದರಿಂದ ಅವರಿಗೆ ತಕ್ಕ ಸಾಹಿತ್ಯದ ಸೃಷ್ಟಿಯಾಗಬೇಕಾಯಿತು. ವಾರ್ತಾಪತ್ರಿಕೆಗಳೂ ಮಾಸಪತ್ರಿಕೆ ಮೊದಲಾದವುಗಳೂ ಈ ಸಾಹಿತ್ಯವನ್ನು ಒದಗಿಸಿದುವು. ಕಥೆ, ಕಾದಂಬರಿ ಮೊದಲಾದವನ್ನು ಪ್ರಕಟಿಸಿ ಕಾದಂಬರಿಗಳ ಯುಗವನ್ನೇ ಸ್ಥಾಪಿಸಿದವು. ಸುದೀರ್ಘವಾದ ಸಮಾಜದ ನಾನಾ ಮುಖಗಳನ್ನು ಪ್ರತಿಬಿಂಬಿಸುವ ಕಾದಂಬರಿಗಳು ಮೇಲಿಂದ ಮೇಲೆ ಬಂದವು. ಚಾರಲ್ಸ್ ಡಿಕನ್ಸ್, ವಿಲಿಯಮ್ ಮೇಕ್‌ಪೀಸ್ ಥ್ಯಾಕರೆ, ಜಾರ್ಜ್ ಎಲಿಯಟ್, ಜಾರ್ಜ್ ಮೆರಿಡಿತ್, ಚಾರಲ್ಸ್ ರೀಡ್, ರಾಬರ್ಟ್ ಲೂಯಿ ಸ್ಟೀವನ್‌ಸನ್, ಥಾಮಸ್ ಹಾರ್ಡಿ ಮೊದಲಾದ ಉನ್ನತಮಟ್ಟದ ಕಾದಂಬರಿಕಾರರು ತಮ್ಮ ಕೃತಿಗಳಿಂದ ಇಂಗ್ಲಿಷ್ ಕಾದಂಬರಿ ಪ್ರಪಂಚವನ್ನು ಐಶ್ವರ್ಯಯುತವಾಗಿ ಮಾಡಿದರು.

ಆ ಕಾಲದ ಜನರ ಮನೋಧರ್ಮ, ಆರ್ಥಿಕ ಜೀವನ, ಸಂಸ್ಕೃತಿ ಮೊದಲಾದವನ್ನು ಕುರಿತು ಥಾಮಸ್ ಕಾರ್ಲೈಲ್, ಜಾನ್ ರಸ್ಕಿನ್ ಮತ್ತು ಮ್ಯಾಥ್ಯೂ ಆರ್ನಾಲ್ಡ್ ಮೊದಲಾದವರು ಬರೆದರು. ಥ್ಯಾಕರೆಯ ವ್ಯಾನಿಟಿ ಫೇರ್, ಡಿಕನ್ಸ್‌ನ ಪಿಕ್ವಿಕ್ ಪೇಪರ್ಸ್, ಡೇವಿಡ್ ಕಾಪರ್‌ಫೀಲ್ಡ್, ಆಲಿವರ್ ಟ್ವಿಸ್ಟ್ ಮುಂತಾದ ಕೃತಿಗಳೂ ಜಾರ್ಜ್ ಎಲಿಯಟ್‌ಳ ರೋಮೋಲಾ, ಸೈಲಾಸ್ ಮಾರ್ನರ್, ಮೆರಿಡಿತ್‌ನ ದಿ ಈಗೊಯಿಸ್ಟ್ ಮತ್ತು ಇವಾನ್ ಹ್ಯಾರಿಂಗ್ಟನ್, ಸ್ಟೀವನ್ಸನ್ನಿನ ದಿ ಟ್ರೆಷರ್ ಐಲೆಂಡ್ ಮತ್ತು ಕಿಡ್ನ್ಯಾಪ್ಡ್, ಹಾರ್ಡಿಯ ಟೆಸ್ ಆಫ್ ದಿ ಡಿ ಅರ್ಬರ್‌ವಿಲಿಸ್, ದಿ ರಿಟರ್ನ್ ಆಫ್ ದಿ ನೇಟಿವ್ ಮೊದಲಾದ ಕಾದಂಬರಿಗಳೂ ಜಗತ್ತಿನ ಶ್ರೇಷ್ಠ ಕೃತಿಗಳ ಶ್ರೇಣಿಯಲ್ಲಿ ರಾರಾಜಿಸುತ್ತಿವೆ. ವಿಕ್ಟೋರಿಯಾ ಕಾಲದ ಕಾವ್ಯವೂ ಅತ್ಯುನ್ನತ ಮಟ್ಟದ್ದಲ್ಲದಿದ್ದರೂ ಮಹತ್ತರವಾದುದೇ. ಆಲ್ಫ್ರೆಡ್ ಟೆನಿಸನ್, ರಾಬರ್ಟ್ ಬ್ರೌನಿಂಗ್ ಮತ್ತು ಮ್ಯಾಥ್ಯೂ ಆರ್ನಾಲ್ಡ್ ಈ ಯುಗದ ಮೂರು ಮುಖ್ಯ ಕವಿಗಳು. ಇವರೆಲ್ಲರ ಕಾವ್ಯದಲ್ಲೂ ನೂತನ ವೈಜ್ಞಾನಿಕ ಸಂಶೋಧನೆಗಳಿಂದ (ಅದರಲ್ಲೂ ಡಾರ್ವಿನ್ನನ ವಿಕಾಸವಾದದಿಂದ) ವಿಚಾರಪರರ ಮನಸ್ಸಿನಲ್ಲಿ ಉಂಟಾದ ಜಿಜ್ಞಾಸೆ ಚೆನ್ನಾಗಿ ವ್ಯಕ್ತವಾಗಿದೆ. ತತ್ಫಲವಾಗಿ ಅವರ ಕಾವ್ಯ ಆಲೋಚನಾಮಯ ವಾಗಿದೆ. ಟೆನಿಸನ್ನಿನ ಕೃತಿಗಳು ಸುಂದರ ಚಿತ್ರಗಳ ವರ್ಣನೆಗೆ, ಇಂಪಾದ ಛಂದೋರಚನೆಗೆ ಪ್ರಸಿದ್ಧವಾಗಿವೆ. ಬ್ರೌನಿಂಗ್ ಸಚೇತಕವಾದ ಆಶಾವಾದಿತ್ವಕ್ಕೆ ಹೆಸರಾಗಿದ್ದಾನೆ. ಆರ್ನಾಲ್ಡ್ ಸೂಕ್ಷ್ಮರುಚಿಯ ಸೂಕ್ಷ್ಮ ಮನಸ್ಸಿನ ಸಂವೇದನಾಶೀಲನಾದ ಕವಿ. ಆ ಕಾಲದ ಜನರ ಮನದಲ್ಲಿದ್ದ ತುಮುಲ ಅವನ ಕಾವ್ಯದಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿದೆ. ಅವನು ಪ್ರಸಿದ್ಧ ವಿಮರ್ಶಕನೂ ಆಗಿದ್ದ. ಆಲೋಚನೆಗೆ ಕಾವ್ಯದಲ್ಲಿ ಸ್ಥಾನವಿಲ್ಲ, ಅದು ಗಮನ ಕೊಡಬೇಕಾದುದು ಸೌಂದರ್ಯಕ್ಕೆ ಎಂದು ವಾದಿಸಿ ಈ ಅಭಿಪ್ರಾಯಕ್ಕೆ ಅನುಗುಣವಾಗಿ ಕಾವ್ಯ, ಲೇಖನ ಮಾಡಿದವರು ಪ್ರಿ ರ್‍ಯಾಫೇಲೈಟ್ಸ್ ಎಂಬ ಗುಂಪಿಗೆ ಸೇರಿದ ವಿಲಿಯಂ ಮಾರಿಸ್, ಡಾಂಟೆ ಗೇಬ್ರಿಯಲ್ ರಾಸೆಟಿ, ಮತ್ತು ಛಾರಲ್ಸ್‌ಸ್ವಿನ್‌ಬರ್ನ್, ಮಾರಿಸ್ ಮತ್ತು ರಾಸೆಟಿಯವರ ಕವನಗಳು ಚಿತ್ರಮಯ ವರ್ಣನೆಗಳಿಗೂ ಸ್ವಿನ್‌ಬರ್ನನ ಕವನಗಳು ನಾದಮಾಧುರ್ಯಕ್ಕೂ ಗಮನಾರ್ಹವಾಗಿವೆ. ಮಿಸೆಸ್ ಎಲಿಜಬೆತ್ ಬ್ಯಾರೆಟ್ ಬ್ರೌನಿಂಗ್ ಮತ್ತು ಕ್ರಿಸ್ಟಿನ ರಾಸೆಟಿ ಈ ಕಾಲದ ಗಣ್ಯ ಕವಯಿತ್ರಿಯರು. ಎಮಿಲಿ ಬ್ರಾಂಟೆಯೂ ಅಲ್ಪಸ್ವಲ್ಪ ಕವಿತೆಗಳನ್ನು ರಚಿಸಿದಳು. ಅವಳೂ ಅವಳ ಸೋದರಿಯರೂ ಕಾದಂಬರಿಗಳನ್ನೂ ಬರೆದಿದ್ದಾರೆ. ಇವರಲ್ಲದೆ ಈ ಶತಮಾನದ ಕೊನೆಯ ವೇಳೆಗೆ ಆಸ್ಕರ್ ವೈಲ್ಡ್, ರಡ್ಯಾರ್ಡ್ ಕಿಪ್ಲಿಂಗ್, ಜಾರ್ಜ್ ಗಿಸ್ಸಿಂಗ್, ಫ್ರಾನ್ಸಿಸ್ ಥಾಂಪ್‌ಸನ್ ಮೊದಲಾದ ಕವಿಗಳೂ ಬಂದರು. ಹಾರ್ಡಿಯೂ ಕವಿತೆ ಬರೆದ. ಇದರಲ್ಲಿ ಒಬ್ಬೊಬ್ಬರೂ ಒಂದೊಂದು ರೀತಿಯ ಸಾಹಿತ್ಯ ಪ್ರವೃತ್ತಿಗಳಿಗೆ ಪ್ರತಿನಿಧಿಗಳು. 20ನೆಯ ಶತಮಾನದ ಕಾವ್ಯದ ಗುಣಗಳಲ್ಲಿ ಕೆಲವನ್ನು 19ನೆಯ ಶತಮಾನದಲ್ಲೇ ಅನುಷ್ಠಾನಕ್ಕೆ ತಂದ ಜೆರಾರ್ಡ್ ಮ್ಯಾನ್ಲಿ ಹಾಪ್ಕಿನ್ಸ್ ಇದೇ ಕಾಲದವ. ಅವನ ಕವನಗಳು ಅವನ ಜೀವಿತಕಾಲದಲ್ಲೇ ಪ್ರಕಟವಾಗದಿದ್ದ ಕಾರಣ ಆತ ತನ್ನ ಸಮಕಾಲೀನರ ಮೇಲೆ ಪ್ರಭಾವ ಬೀರಲಾಗಲಿಲ್ಲ.

18ನೆಯ ಶತಮಾನದ ಮಧ್ಯಭಾಗದಿಂದ ಕೈಗಾರಿಕಾ ಕ್ರಾಂತಿಯು ತೀವ್ರಗೊಂಡು, 19ನೆಯ ಶತಮಾನದಲ್ಲಿ ಕೈಗಾರಿಕೆಗಳು ಬೆಳೆಯುತ್ತ ಹೋದವು. ಬ್ರಿಟಿಷ್ ಸಾಮ್ರಾಜ್ಯವೂ ವಿಸ್ತಾರವಾಯಿತು, ಭದ್ರವಾಯಿತು. ದೇಶದ ವ್ಯಾಪಾರವಾಣಿಜ್ಯಗಳು ವೇಗವಾಗಿ ಬೆಳೆದವು. ಕೈಗಾರಿಕೆಗಳ ಮೇಲೂ ನಿಯಂತ್ರಣವಿಲ್ಲದುದರಿಂದ ಮತ್ತು ಸಂಪತ್ತಿನ ನ್ಯಾಯವಾದ ವಿತರಣೆಗೆ ಗಮನ ನೀಡದಿದ್ದುದರಿಂದ ಹಲವಾರು ಸಮಸ್ಯೆಗಳು ತಲೆದೋರಿದ್ದವು. ಕಾರ್ಮಿಕರ ಸ್ಥಿತಿ ದಯನೀಯವಾಯಿತು. ಸಾಮಾಜಿಕ ಕ್ಷೋಭೆ ತಲೆದೋರಿತು. ಸಾಮಾಜಿಕ ಮತ್ತು ನೈತಿಕ ಬದುಕುಗಳಿಗೆ ಸಂಬಂಧಿಸಿದಂತೆ ತೀಕ್ಷ್ಣ ಸಂದಿಗ್ಧಗಳೂ ಸಮಸ್ಯೆಗಳೂ ಕಾಣಿಸಿ ಕೊಂಡವು. ಅಸಾಧಾರಣ ಪ್ರತಿಭೆಯ ಕಾದಂಬರಿಕಾರ ಡಿಕನ್ಸ್, ಇವನ ಸಮಕಾಲೀನರಾದ ಜಾರ್ಜ್ ಎಲಿಯೆಟ್ ಮೊದಲಾದವರ ಕಾದಂಬರಿಗಳಿಗೆ ಈ ಹಿನ್ನೆಲೆ ಇದೆ. ಡಿಕನ್ಸ್, ಷೇಕ್ಸ್‌ಪಿಯರನಿಗೆ ಸಮನಲ್ಲದಿದ್ದರೂ, ಅವನಂತೆ ಒಂದು ವೈವಿಧ್ಯಮಯ ಪಾತ್ರಗಳ ಜಗತ್ತನ್ನೇ ಸೃಷ್ಟಿಸಿದ. ದುಷ್ಟತನದ ಸಮಸ್ಯೆಯನ್ನು ಕಣ್ಣಿಗೆ ಮನಸ್ಸನ್ನು ತಲ್ಲಣಗೊಳಿಸುವಂತೆ ನಿರೂಪಿಸಿದ ಡಿಕನ್ಸನ್ನ ಹಾಸ್ಯಪ್ರಜ್ಞೆ, ವಿಡಂಬನೆ ಇವು ಸಮರ್ಥ ಶಸ್ತ್ರಗಳು. ಜಾರ್ಜ್ ಎಲಿಯೆಟ್ ಎಂಬ ಹೆಸರಿನಲ್ಲಿ ಬರೆದ ಮೇರಿ ಆ್ಯನ್ ಈವನ್ಸ್‌ಳಲ್ಲಿ ನೈತಿಕ ಶ್ರದ್ಧೆ, ಗತಕಾಲ–ವರ್ತಮಾನ ಕಾಲಗಳ ಸಂಬಂಧದ ಶೋಧನೆ ಕಾಣುತ್ತದೆ. ಜಾರ್ಜ್ ಮೆರಿಡಿತ್ ಮಾನಸಿಕ ಪದರಗಳನ್ನು ಶೋಧಿಸುತ್ತಾನೆ. ಈ ವಿಕ್ಟೋರಿಯನ್ ಯುಗದ ಅಂತ್ಯದಲ್ಲಿ ಬರುವ ಈತನೂ ಥಾಮಸ್ ಹಾರ್ಡಿಯೂ ವಿಕ್ಟೋರಿಯನ್ ಯುಗ, ಆಧುನಿಕ ಯುಗಗಳ ನಡುವಣ ಸೇತುವೆ. ಕ್ರೈಸ್ತ ಧರ್ಮವನ್ನು ನಿರಾಕರಿಸಿ ಬರೆದ ಮೊದಲನೆಯ ಕಾದಂಬರಿಕಾರ ಹಾರ್ಡಿ. ಮಾನವ ಜಗತ್ತನ್ನು ಮೀರಿದ ಅದೃಶ್ಯ ಶಕ್ತಿಯುಂಟು, ಅದು ಧರ್ಮ–ನ್ಯಾಯಗಳ ಪರವಲ್ಲ. ಅದರದೇ ವಿಶಿಷ್ಟ ಗುರಿಯತ್ತ ಅದು ಸಾಗುತ್ತದೆ, ಅದರ ಮುನ್ನಡೆಗೆ ಅಡ್ಡಿ ಬರುವವರು ಒಳ್ಳೆಯವರಾಗಲಿ ಕೆಟ್ಟವರಾಗಿರಲಿ ಅವರನ್ನು ತುಳಿಯುತ್ತದೆ ಎಂಬುದು ಇವನ ದೃಷ್ಟಿ. ಶ್ರೇಷ್ಠ ದುರಂತ ಕಾದಂಬರಿಗಳನ್ನು ಇವನು ರಚಿಸಿದ. (ಎಂ.ಆರ್.)

20ನೆಯ ಶತಮಾನದ ಇಂಗ್ಲಿಷ್ ಸಾಹಿತ್ಯ ಶ್ರೀಮಂತವಾಗಿದೆ, ವೈವಿಧ್ಯಮಯವಾಗಿದೆ. ಈ ಸಾಹಿತ್ಯ ಹಲವು ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಕ ಪ್ರಭಾವಗಳಿಗೆ ಒಳಗಾಯಿತು. ಈ ಶತಮಾನದ ಪೂರ್ವಾರ್ಧವು ಎರಡು ಜಾಗತಿಕ ಸಮರಗಳನ್ನು ಕಂಡಿತು. ಕೈಗಾರಿಕಾ ಕ್ರಾಂತಿಯಿಂದ ಅಭೂತಪೂರ್ವ ಆರ್ಥಿಕ ಕ್ರಾಂತಿಯನ್ನು, ಸಮೃದ್ಧಿಯನ್ನು ತಂದಿದ್ದ ವಿಜ್ಞಾನ, ತಂತ್ರಜ್ಞಾನಗಳು ಯುದ್ಧಕ್ಕೆ ಕಾಣಿಕೆ ನೀಡಿ ಹಿಂದೆ ಎಂದೂ ಇಲ್ಲದಷ್ಟು ಯುದ್ಧಗಳು ಕ್ರೂರವೂ ವಿನಾಶಕವೂ ಆಗುವಂತೆ ಮಾಡಿದವು. ವಿಜ್ಞಾನ–ತಂತ್ರಜ್ಞಾನಗಳ ಕ್ರೂರ ಮುಖದ ಅನಾವರಣವಾಯಿತು. ಈ ಅವಧಿಯಲ್ಲೇ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತಗಳು ಹಬ್ಬಿ ಕಾರ್ಮಿಕರ ಚಳವಳಿಗಳು ಬಲವಾದವು. ಕಾರ್ಮಿಕ ಘರ್ಷಣೆಗಳೂ ಪ್ರಾರಂಭವಾದವು. ಫ್ರಾಯ್ಡ್‌ನ ಮನಶಾಸ್ತ್ರದಲ್ಲಿ ರೂಪಿಸಿದ ಸಿದ್ಧಾಂತಗಳು ಮನುಷ್ಯರನ್ನು ಬೆಚ್ಚಿ ಬೀಳಿಸಿದವು. ಮನುಷ್ಯನು ಮನುಷ್ಯನನ್ನು ಅರ್ಥಮಾಡಿಕೊಳ್ಳಲು ಹೊಸ ವಿಧಾನಗಳನ್ನು ಅನುಸರಿಸಿದ. ವಿದ್ಯುಚ್ಛಕ್ತಿ, ಚಲನಚಿತ್ರಗಳು ಬದುಕಿನಲ್ಲಿ ಕ್ರಾಂತಿಯನ್ನುಂಟುಮಾಡಿದವು. ಕಾಲ–ದೇಶಗಳ ಮೇಲಿನ ವಿಜಯ ಇನ್ನೂ ವ್ಯಾಪಕವಾಯಿತು. ದೇಶದ ಒಳಗಡೆ ಸ್ವಯಂಚಾಲಿತ ವಾಹನಗಳ ವೇಗ, ಬಳಕೆ ಹೆಚ್ಚಾದವು. ಜನತೆಯ ಶಿಕ್ಷಣವೂ ಸರ್ಕಾರದ ಹೊಣೆ ಎಂಬ ಅರಿವು ಮೂಡಿತು. 1919ರಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ಪ್ರಾಪ್ತವಾಯಿತು. ಕಾರ್ಮಿಕನಿಗೂ ಈ ಹಕ್ಕು ಲಭ್ಯವಾಯಿತು. 1928ರಲ್ಲಿ 21 ವರ್ಷವಾದವರಿಗೆಲ್ಲ ಮತದಾನದ ಹಕ್ಕನ್ನು ಕೊಡಲಾಯಿತು. ಇಂಗ್ಲೆಂಡ್ ಮುಕ್ತ ವ್ಯಾಪಾರ (ಫ್ರೀ ಟ್ರೇಡ್)ದಿಂದ ರಕ್ಷಣಾನೀತಿ (ಪ್ರೊಟೆಕ್ಷನಿಸ್ಟ್)ಗೆ ವಾಲಿತು. ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ ಬಲವಾಯಿತು. ದಕ್ಷಿಣ ಆಫ್ರಿಕದಲ್ಲಿ ಬೋಯರ್ ಯುದ್ಧ ನಡೆಯಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಸವಾಲುಗಳು ಬಂದವು.

ಈ ಶತಮಾನದ ಉತ್ತರಾರ್ಧದಲ್ಲಿ ಬಾಂಬ್‌ನ ಭಯಂಕರ ಶಕ್ತಿಯಿಂದ ಜಗತ್ತು ಇನ್ನೂ ತಲ್ಲಣಿಸುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯವು ಕರಗಿ ಹೋಗಿ ಅದರ ರಾಜಕೀಯ ಪ್ರಾಬಲ್ಯ ಕುಗ್ಗಿತ್ತು. ಆರ್ಥಿಕ ವ್ಯವಸ್ಥೆಗೆ ಪೆಟ್ಟು ಬಿದ್ದಿತು. ವಿಜ್ಞಾನ–ತಂತ್ರಜ್ಞಾನಗಳು ಬೆಳೆದು ಕಾಲ, ದೇಶಗಳ ಮೇಲೆ ಪ್ರಭುತ್ವ ಹೆಚ್ಚಾಯಿತು. ಕಂಪ್ಯೂಟರ್ ಬದುಕನ್ನೇ ಕ್ರಾಂತಿಗೊಳಿಸಿತು. ಜಗತ್ತಿನಲ್ಲಿ ಎರಡು ಬಣಗಳ ಸ್ಪರ್ಧೆ ತೀವ್ರವಾಗಿ ಘರ್ಷಣೆಗಳೂ ಶೀತಲಸಮರವೂ ತೀಕ್ಷ್ಣವಾದವು. ಆದರೆ ಇದ್ದಕ್ಕಿದ್ದಂತೆ ಸೋವಿಯೆಟ್ ರಷ್ಯ ಕರಗಿಹೋಗಿ, ರಾಜಕೀಯ ಸಮೀಕರಣಗಳು ಬದಲಾದವು. ಇಂಗ್ಲೆಂಡ್, ಜಪಾನ್‌ನಂತಹ ದೇಶಗಳಿಂದ ಆರ್ಥಿಕವಾಗಿ ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಯಿತು. ಜಗತ್ತಿನ ಇತರ ಭಾಗಗಳ ಚಿಂತನೆಗಳು ಮತ್ತು ಸಾಹಿತ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾದವು. ಐನ್‌ಸ್ಟೈನನ ಸಾಪೇಕ್ಷ ಸಿದ್ಧಾಂತವೂ ಅನಂತರದ ವೈಜ್ಞಾನಿಕ ಬೆಳವಣಿಗೆಗಳೂ ಜಗತ್ತಿನ ಚಿಂತನೆಯ ಮೇಲೆ ಗಾಢವಾದ ಪರಿಣಾಮವನ್ನು ಬೀರಿದವು.

ಈ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಕಾವ್ಯರಚನೆ ಮಾಡಿದ ಕವಿಗಳನ್ನು 'ಜಾರ್ಜಿಯನ್ ಕವಿಗಳು' ಎಂದು ಕರೆಯುತ್ತಾರೆ. ಇವರಲ್ಲಿ ಬಹು ಜನಪ್ರಿಯತೆಗಳಿಸಿದವನು ರೂಪರ್ಟ್ ಬ್ರುಕ್ (1893–1918). ಈ ಕವಿಗಳು ನೇರವಾಗಿ ಮಹಾಯುದ್ಧದಲ್ಲಿ ಭಾಗವಹಿಸಿ ದವರು. ಇವರಲ್ಲಿ ಬಹು ಮಂದಿ ಚಿಕ್ಕ ವಯಸ್ಸಿನಲ್ಲಿ ಯುದ್ಧಕ್ಕೆ ಬಲಿಯಾದರು. ಇವರು ಯುದ್ಧದ ನೋವು, ದೇಶಾಭಿಮಾನ ಇವುಗಳಿಗೆ ದನಿಕೊಡುತ್ತಾರೆ. ವಾಲ್ಟರ್ ಡಿ.ಟಿ.ಮೇಕ್, ಡಿ.ಎಚ್.ಲಾರೆನ್ಸ್, ಡಬ್ಲ್ಯು ಬಿ ಯೇಟ್ಸ್, ಟಿ.ಎಸ್.ಎಲಿಯಟ್, ಡಬ್ಲ್ಯು. ಬಿ.ಆಡನ್ ಶತಮಾನದ ಪೂರ್ವಾರ್ಧದ ಪ್ರಮುಖ ಕವಿಗಳು. ಯೇಟ್ಸ್‌ನ ಕವನಗಳು ಬದುಕಿನ ಎಲ್ಲ ಅನುಭವಗಳನ್ನು ಸ್ವೀಕರಿಸಿ, ತನ್ನೊಳಗಿನ ತಳಮಳ–ನಿರಾಸೆ–ಭರವಸೆ ಯಾವುದನ್ನೂ ಮುಚ್ಚಿಡದೆ, ಶಕ್ತವಾದ ವ್ಯಕ್ತಿತ್ವದಿಂದ ಮೂಡಿದ ಕನವಗಳು. ಎಲಿಯೆಟ್ ಮೊದಲ ಮಹಾಯುದ್ಧದ ನಂತರ ಮೂಡಿದ ನಿರಾಸೆ, ಆಧ್ಯಾತ್ಮಿಕ ಶೂನ್ಯ ಇವುಗಳಿಗೆ ಅಭಿವ್ಯಕ್ತಿ ನೀಡಿದ. ಈ ಅಭಿವ್ಯಕ್ತಿಯ ರೀತಿ ಹಿಂದಿನ ಕಾವ್ಯಕ್ಕಿಂತ ತೀರ ಭಿನ್ನವಾಗಿದ್ದು ಹೊಸ ಯುಗಕ್ಕೆ ನಾಂದಿಯಾಯಿತು. ಅನಂತರದ ವರ್ಷಗಳಲ್ಲಿ ಸಮಾಧಾನವನ್ನು ಕಂಡುಕೊಂಡ ಎಲಿಯಟ್ ಬರೆದ 'ದ ಫೋರ್ ಕ್ವಾರ್ಟೆಟ್ಸ್' ಶತಮಾನದ ಅತ್ಯಂತ ಮಹತ್ವದ ಚಿಂತನೆಯ ಕಾವ್ಯವಾಯಿತು. ಉತ್ತರಾರ್ಧದಲ್ಲಿ ಫಿಲಿಪ್ ಲಾರ್ಕಿನ್, ಟೆಡ್ ಹ್ಯೂಸ್, ಇವನ ಹೆಂಡತಿ ಸಿಲ್ವಿಯ ಪ್ಲಾವ್, ಪೀಟರ್ ಪೋರ್ಟರ್ ಮೊದಲಾದವರು ಪ್ರಮುಖ ಕವಿಗಳು.

ರೊಮ್ಯಾಂಟಿಕ್ ಯುಗ ಮತ್ತು ವಿಕ್ಟೋರಿಯನ್ ಯುಗಗಳಲ್ಲಿ ಗಮನಾರ್ಹ ನಾಟಕ ಕಾರರು ಬರಲಿಲ್ಲ. 20ನೆಯ ಶತಮಾನದ ಪೂರ್ವಾರ್ಧದಲ್ಲಿ ಪ್ರಾರಂಭದಲ್ಲಿ ನಾಟಕಕ್ಕೆ ಸ್ವಲ್ಪ ಜೀವಕಳೆ ನೀಡಿದವರು ಆರ್ಥರ್ ಹೆನ್ರಿ ಜೋನ್ಸ್ ಮತ್ತು ಆರ್ಥರ್ ವಿಂಗ್ ಪಿನಿಡೊ. ಆದರೆ, ನಾಟಕ ಮಂದಿರಕ್ಕೆ ಹೊಸ ಜೀವ, ಚೈತನ್ಯ ನೀಡಿದವನು ಜಾರ್ಜ್ ಬರ್ನಾರ್ಡ್ ಷಾ. ನಾಟಕಮಂದಿರವನ್ನು ಚಿಂತನೆಯ ಮಂದಿರವನ್ನಾಗಿ, ಸಾಮಾಜಿಕ ಕ್ರಾಂತಿಯ ರಂಗವನ್ನಾಗಿ ಮಾಡಬಯಸಿದ. ಇವನ ಮಾತಿನ ಚಮತ್ಕಾರ ಅದ್ಭುತವಾದದ್ದು. ವಾದ ವಿವಾದಗಳೆಂದರೆ ಉತ್ಸಾಹ. ನಾಟಕಗಳನ್ನು ಪ್ರಕಟಿಸುವಾಗ ಸುದೀರ್ಘ ಮುನ್ನುಡಿಗಳನ್ನು ಬರೆದ. ಮನುಷ್ಯ ಸ್ವಭಾವವನ್ನು ಆಳವಾಗಿ ಗ್ರಹಿಸದಿದ್ದರೂ ರಂಗಮಂದಿರದಲ್ಲಿ ಮಾತಿನ ಮಿಂಚಿನಿಂದ, ಮೋಡಿಯಿಂದ, ಐರನಿಯಿಂದ ಅತ್ಯಂತ ಪರಿಣಾಮಕಾರಿ ನಾಟಕಕಾರನಾದ. ಈಗ ಆತನ ನಾಟಕಗಳ ಹೊಳಪು ಮಾಸಿದೆ. ಜಾನ್ ಗಾಲ್ಸ್‌ವರ್ದಿ, ಸೀನ್ ಒಡೇಸಿ, ಟೆರೆನ್ಸ್ ರ್‍ಯಾಟಿಗನ್ ಗಮನಿಸಬೇಕಾದ ಇತರ ನಾಟಕಕಾರರು. ಯೇಟ್ಸ್ ಮತ್ತು ಎಲಿಯಟ್ ಕಾವ್ಯರೂಪಕ (ಪೊಯಟಿಕ್ ಡ್ರಾಮ)ಕ್ಕೆ ಮತ್ತೆ ಜೀವ ನೀಡಿದರು. ಕ್ರಿಸ್ಟಫರ್ ಫ್ರೈ, ಜೆ.ಬಿ.ಪ್ರೀಸ್ಟ್ಲಿ, ಆ್ಯಡನ್, ಕ್ರಿಸ್ಟಫರ್ ಇಷರ್‌ವುಡ್ ಇವರು ಇದೇ ಕಾಲದ ನಾಟಕಕಾರರು. ಜೆ.ಎಂ.ಸಿಂಗ್, ಸಾಮರ್‌ಸೆಟ್ ಮಾಮ್, ನೋಯೆಲ್ ಕಾರ್ಡ್ ವೈನೋದಿಕಗಳನ್ನು ಬರೆದರು.

1956 ಮೇ 8ರಂದು ಜಾನ್ ಅಸ್‌ಬಾರ್ನ್‌ನ ಲುಕ್ ಬ್ಯಾಕ್ ಇನ್ ಆ್ಯಂಗರ್ ಎನ್ನುವ ನಾಟಕವು ಪ್ರದರ್ಶಿತವಾಯಿತು. ಇದರೊಂದಿಗೆ ಇಂಗ್ಲಿಷ್ ನಾಟಕ ಹೊಸ ಯುಗಕ್ಕೆ ಕಾಲಿಟ್ಟಿತು. ದಿ ಆ್ಯಂಗ್ರಿ ಯಂಗ್ ಮ್ಯಾನ್ ಥಿಯೇಟರ್ ಜನ್ಮತಾಳಿತು. ಎರಡನೆಯ ಮಹಾಯುದ್ಧದ ಅನಂತರ ತರುಣ ಜನಾಂಗದಲ್ಲಿ ಮೊಳಕೆ ಇಟ್ಟ ಅಸಮಾಧಾನ, ಕ್ರೋಧ ನಿರಾಸೆ ಎಲ್ಲ ಈ ಬಗೆಯ ನಾಟಕಗಳಲ್ಲಿ ಪ್ರಕಟವಾದವು. ಒಂದು ವರ್ಷದ ಅನಂತರ ಪ್ರದರ್ಶಿತವಾದ ಸ್ಯಾಮ್ಯುಎಲ್ ಬೆಕೆಟನ ನಾಟಕ ವೇಯ್‌ಟಿಂಗ್ ಫಾರ್ ಗೋಡೋ ಮನುಷ್ಯನನ್ನು ಅವನ ಮೂಲಸ್ಥಿತಿಗೆ, ಅತ್ಯಂತ ನಿಸ್ಸಹಾಯಕ ಮತ್ತು ಅನಿಶ್ಚಿತತೆಗಳ ಸ್ಥಿತಿಗೆ ಇಳಿಸಿ, ಯಾವುದೇ ಆಸೆ-ಭರವಸೆಗಳ ಕನ್ನಡಕವಿಲ್ಲದೆ ಬದುಕಿನ ವಾಸ್ತವಿಕತೆಯನ್ನು ಕಾಣುವ ಪ್ರಯತ್ನ. ಇದರೊಂದಿಗೆ ಅಬ್ಸರ್ಡ್ ಥಿಯೇಟರ್ ಪ್ರಾರಂಭವಾಯಿತು. ಈ ಕಾಲದ ಇತರ ಗಮನಾರ್ಹ ನಾಟಕಕಾರರು ಆರ್ನಲ್ಡ್ ವೆಸ್ಕರ್, ಜಾನ್ ಆರ್ಡನ್, ಎಡ್ವರ್ಡ್ ಬಾಂಡ್ ಮೊದಲಾದವರು, ವೈನೋದಿಕ ಪ್ರಕಾರದಲ್ಲಿ ಹೆರಾಲ್ಡ್ ಪಿಂಟರ್, ಟಾಮ್ ಸ್ಟಾಫರ್ಡ್, (ಶ್ರೀಮತಿ) ಕಾವಿಟ್ ಚರ್ಚಿಲ್ ಮೊದಲಾದವರು.

ಈ ಅವಧಿಯಲ್ಲಿ ಇಂಗ್ಲಿಷ್ ನಾಟಕವು ಹಲವು ಆಂದೋಲನಗಳನ್ನು ಕಂಡಿತು. ಇವುಗಳಲ್ಲಿ ಪ್ರಮುಖವಾದವು ವರ್ಕರ್ಸ್ ಥಿಯೇಟರ್ ಮೂವ್‌ಮೆಂಟ್, ಫೆಮಿನಿಸ್ಟ್ ಥಿಯೇಟರ್, ಐರಿಷ್ ಥಿಯೇಟರ್.

ಕಾದಂಬರಿ ಪ್ರಕಾರದಲ್ಲಿ 1900-20ರವರೆಗೆ ಮಧ್ಯಂತರ ಅವಧಿ, ವಿಕ್ಟೋರಿಯ, ಯುಗದಿಂದ ಆಧುನಿಕ ಯುಗಕ್ಕೆ ಸೇತುವೆ. 1920ರ ದಶಕದಲ್ಲಿ ಜೇಮ್ಸ್ ಜಾಯ್ಸ್‌ನ ಯೂಲಿಸಿಸ್(1922), ವರ್ಜೀನಿಯ ವುಲ್ಫಳ ಮಿಸೆಸ್ ಡಾಲೊನೆಟ್ (1925) ಮತ್ತು ಡಿ.ಎಚ್.ಲಾರೆನ್ಸನ ಕಾದಂಬರಿಗಳು ಹೊಸ ಯುಗದ ಉದಯವನ್ನು ಸ್ಪಷ್ಟವಾಗಿ ಸಾರಿದವು. ಹಾರ್ಡಿಯ ಕಾದಂಬರಿಗಳಲ್ಲಿಯೂ ಕಥಾವಸ್ತುವಿಗೆ ಪ್ರಾಧಾನ್ಯ. ಕಥಾವಸ್ತುವು ಹಲವು ಘಟನಾವಳಿಗಳ ಸರಪಳಿ. ಆದರೆ ಕ್ರಮೇಣ ಕಥಾವಸ್ತುವಿನ ಪ್ರಾಧಾನ್ಯ ಕಡಿಮೆಯಾಯಿತು. ಓಪನ್ ಎಂಡೆಡ್ ಕಾದಂಬರಿಗಳು (ಪಾತ್ರಗಳ ಪ್ರಾಪಂಚಿಕ ಸ್ಥಿತಿಯನ್ನು ಒಂದು ಸ್ಪಷ್ಟ ಘಟ್ಟಕ್ಕೆ ತಂದು ನಿಲ್ಲಿಸದಿರುವ ಕಾದಂಬರಿಗಳು) ಹೆಚ್ಚಾದವು. ಕಾದಂಬರಿಯಲ್ಲಿ ನೈತಿಕ ನಿಲುವು, ಮನುಷ್ಯನ ಬದುಕಿನ ದರ್ಶನ ಇವು ಮೈದಾಳಿದವು. ಕಾಲ (ಟೈಂ)ದ ಸ್ವರೂಪದಲ್ಲಿ ಆಸಕ್ತಿ ಬೆಳೆಯಿತು. ಭಾಷೆಯ ಸಂವಹನ ಸ್ವರೂಪದಲ್ಲಿ ಆಸಕ್ತಿ ಉಂಟಾಯಿತು.

ಇಂಗ್ಲಿಷ್ ಕಾದಂಬರಿಯ ಚರಿತ್ರೆಯಲ್ಲಿ ಹೆನ್ರಿ ಜೇಮ್ಸ್‌ನ ಸ್ಥಾನದ ಬಗ್ಗೆ ವಿವಾದ ಉಂಟು. ಅವನು ಹುಟ್ಟಿದುದು ಅಮೆರಿಕದಲ್ಲಿ. 33ನೇ ವರ್ಷದಲ್ಲಿ ಇಂಗ್ಲೆಂಡಿಗೆ ಬಂದು ನೆಲಸಿದ. ಇವನು ಪಾತ್ರಗಳ ಮನಸ್ಸಿನಲ್ಲಿಳಿದು ಅನುಭವವನ್ನು ಅವರ ಪ್ರಜ್ಞೆಯೊಳಗಿಂದ ಕಾಣುತ್ತಾನೆ. ಈತನ ಗುರಿ ಸಂಪೂರ್ಣ ಮನುಷ್ಯನನ್ನು ಆತನ ಆವರಣದಲ್ಲಿ ಚಿತ್ರಿಸುವುದು.

ಇವನಿಗೆ ಮುಖ್ಯವಾಗಿದ್ದುದು ಒಂದು ದೃಷ್ಟಿಕೋನ. ದೃಷ್ಟಿಕೋನವೇ ಕಾದಂಬರಿಯ ಆಧಾರ. ಮುಖ್ಯ ಪಾತ್ರದ ಮನಸ್ಸಿನೊಳಗೆ ಇಳಿದು ಅದರೊಳಗಿಂದ ಇವನ ಪಾತ್ರಗಳನ್ನು ಕಾಣುತ್ತಾನೆ. ಇವನು ಕಾದಂಬರಿಯ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟ. ಜಾನ್ ಗಾಲ್ಸ್‌ವರ್ದಿಯ ದ ಫಾರ್‌ಸೈಟ್ ಸಾಗ; ಶ್ರೀಮಂತವರ್ಗದ ವಿಡಂಬನೆ. ಎಚ್.ಜಿ.ವೆಲ್ಸ್ ಸೈಂಟಿಫಿಕ್ ಫಿಕ್‌ಷನ್ ಅಥವಾ ವೈಜ್ಞಾನಿಕ ಕಾಲ್ಪನಿಕ (ಕಾದಂಬರಿ) ರೂಪವನ್ನು ಬಲಗೊಳಿಸಿದವನು. ದ ಟೈಮ್ ಮೆಷೀನ್ ದ ವಾರ್ ಆಫ್ ದ ವರ್ಲ್ಡ್ಸ್ ಮುಂತಾದ ಕಾದಂಬರಿಗಳಲ್ಲಿ ವಿಜ್ಞಾನವು ಗೆದ್ದುಕೊಂಡ ಜ್ಞಾನಕ್ಕೆ ಕಲ್ಪನೆಯ ರೆಕ್ಕೆಗಳನ್ನು ಕೊಡುತ್ತಾನೆ. ಥಾಮಸ್ ಹಾರ್ಡಿ ನಿರಾಶಾವಾದಿ. ಕ್ರೈಸ್ತಮತದ ಕರುಣಾಮಯ ದೇವನ ಪರಿಕಲ್ಪನೆಯನ್ನು ತಿರಸ್ಕರಿಸಿ, ಮನುಷ್ಯನ ಗುಣ, ಯೋಗ್ಯತೆಗಳಿಗೆ ಲಕ್ಷ್ಯಕೊಡದ, ತನ್ನದೇ ಗುರಿ ಇರುವ ಒಂದು ಪ್ರಬಲ ಅದೃಶ್ಯ ಶಕ್ತಿಯನ್ನು ಕಂಡ ಶ್ರೇಷ್ಠ ಟ್ರ್ಯಾಜಿಕ್ ಕಾದಂಬರಿಗಳನ್ನು ಬರೆದ. ಈ ಕಾದಂಬರಿಗಳಲ್ಲಿ ಮಾನವ ಕುಲವನ್ನು ನಿಗೂಢ ವಿಶ್ವದ ಹಿನ್ನೆಲೆಯಲ್ಲಿ ಕಾಣುತ್ತೇವೆ. ಇವನು ಆಧುನಿಕ ಕಾದಂಬರಿಗೆ ಸಿದ್ಧತೆ ಮಾಡಿದವನು. ಡಿ.ಎಚ್.ಲಾರೆನ್ಸ್, ತನ್ನ ಕಾಲದಲ್ಲಿ ಅಶ್ಲೀಲ ಬರಹಗಾರ ಎನ್ನುವ ಆಪಾದನೆಯನ್ನು ಎದುರಿಸಿದ. ಬದುಕನ್ನು ಒಪ್ಪಿಕೊಳ್ಳಬೇಕು, ಸಹಜವಾಗಿ ಅನುಭವಿಸಬೇಕು ಎನ್ನುವುದು ಆತನ ನಿಲುವು. ಜೋಸೆಫ್ ಕಾನ್ರಾಡ್ ಮಾಂಟಾಜ್ ಪರಿಣಾಮವನ್ನು ಸಾಧಿಸುತ್ತಾನೆ. ಅನುಭವದ ಸಂಕೀರ್ಣತೆಯನ್ನು ಮನದಟ್ಟು ಮಾಡಿಕೊಡುತ್ತಾನೆ. ಜಾರ್ಜ್ ಆರ್‌ವೆಲ್ (ಎರಿಕ್ ಬ್ಲೇರ್) ಎರಡು ರಾಜಕೀಯ ಕಾದಂಬರಿಗಳನ್ನು ಬರೆದ, ಎರಡೂ (ಅನಿಮಲ್ ಫಾರ್ಮ್, ನೈನ್‌ಟೀನ್ ಎಯ್ಟಿಫೋರ್) ವಾಮಪಂಥದ ಸಿದ್ಧ ಪದವೃಂದಗಳನ್ನು ಬಳಸುತ್ತಲೇ ಅದಕ್ಕೆ ದ್ರೋಹ ಮಾಡುವುದು ಎಷ್ಟು ಸುಲಭ ಎನ್ನುವುದನ್ನೂ ತೋರಿಸುತ್ತವೆ. ಜೇಮ್ಸ್ ಜಾಯ್ಸ್‌ನ ಹಲವು ಕಾದಂಬರಿಗಳಲ್ಲಿ ಯೂಲಿಸಿಸ್ ಅತ್ಯಂತ ಪ್ರಸಿದ್ಧವಾದದ್ದು. ಈ ಬೃಹತ್ ಕಾದಂಬರಿ ಇಪ್ಪತ್ತನಾಲ್ಕು ಗಂಟೆಗಳಲ್ಲಿ ನಡೆಯುವ ಕ್ರಿಯೆಯನ್ನು ನಿರೂಪಿಸುತ್ತದೆ. ಕಾದಂಬರಿಯು ಸಂಕೇತಗಳಿಂದ ತುಂಬಿಹೋಗಿದೆ. ಭಾಷೆಗೆ ಅಸಾಧಾರಣ ಗಮನಕೊಟ್ಟು, ಪದಪದಕ್ಕೂ, ವಾಕ್ಯವಾಕ್ಯಕ್ಕೂ ವಾಕ್ಯದ ಲಯಕ್ಕೆ ಗಮನಕೊಟ್ಟು ಜಾಯ್ಸ್ ಬರೆದ. ಇವನು ಸ್ಟ್ರೀಮ್ ಆಫ್ ಕಾನ್‌ಷಸ್‌ನೆಸ್ ತಂತ್ರವನ್ನು ಬಳಸಿದ. ವರ್ಜೀನಿಯ ವುಲ್ಫ್ ಸಹ ಇದೇ ತಂತ್ರವನ್ನು ಬಳಸಿದಳು. ಇ.ಎಂ.ಫಾರ್‌ಸ್ಟರ್, ಐ.ವಿ.ಕಾಂಪ್ಟನ್-ಬರ್ನೆಟ್, ಆಲ್ಡಸ್ ಹಕ್ಸ್‌ಲಿ ಈ ಕಾಲದ ಇತರ ಗಮನಾರ್ಹ ಕಾದಂಬರಿಕಾರರು.

ಅನಂತರದ ಅವಧಿಯ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬ ಗ್ರಹಾಂ ಗ್ರೀನ್. ಕಷ್ಟವಾದ ನೈತಿಕ ಆಯ್ಕೆಗಳನ್ನು ಎದುರಿಸುವ ಮನುಷ್ಯ ಇವನ ವಸ್ತು. ಭಗವಂತನ ಗ್ರೇಸ್ (ಕೃಪೆ)ಗೆ ಇವನು ಮಹತ್ವ ನೀಡುತ್ತಾನೆ. ಆರ್ಥರ್ ಕೊಯ್‌ಸ್ಲರ್‌ನ ಬದುಕೇ ಅಸಾಧಾರಣ ಘಟನೆಗಳಿಂದ, ಅನುಭವಗಳಿಂದ ತುಂಬಿಹೋದದ್ದು. ಸ್ವಾತಂತ್ರ್ಯದ ಬಯಕೆ ಇವನ ಕಾದಂಬರಿಗಳಲ್ಲಿ ತೀವ್ರವಾಗಿದೆ. ವಿಲಿಯಂ ಗೋಲ್ಡಿಂಗನೂ ಸಮಾಜದ ಪರಂಪರೆ ಮತ್ತು ಕಟ್ಟುಪಾಡುಗಳಿಂದ ದೂರವಿರುವ ಮನುಷ್ಯರು ಕಷ್ಟವಾದ ನೈತಿಕ ಆಯ್ಕೆಗಳನ್ನು ಮಾಡುವುದನ್ನು ನಿರೂಪಿಸುತ್ತಾನೆ.

2ನೆಯ ಮಹಾಯುದ್ಧದ ಅನಂತರದ ಕಾಲ ನಿರಾಸೆ, ಗೊಂದಲಗಳ ಕಾಲ. ಬದುಕಿನ ಸ್ವರೂಪ-ಮೌಲ್ಯಗಳ, ಮತ್ತೊಂದು ಅನ್ವೇಷಣೆಯ ಕಾಲ. ಫಿಲಿಪ್ ಲಾರ್ಕಿನ್, ವಿಲಿಯಂ ಕೂಪರ್, ಜಾನ್ ವೇಯ್ನ್ ಮೊದಲಾದವರ ಕಾದಂಬರಿಗಳಲ್ಲಿ ಆ್ಯಂಗ್ರಿ ಯಂಗ್ ಮ್ಯಾನ್ (ಕ್ಷುದ್ರ ತರುಣ)ನ ಮನಃಸ್ಥಿತಿಯನ್ನು ಕಾಣುತ್ತೇವೆ. ಡೇವಿಡ್ ಸ್ಟೋರಿ, ಆ್ಯಂಗಸ್ ವಿಲ್ಸನ್ ಮೊದಲಾದವರ ಕಾದಂಬರಿಗಳಲ್ಲಿ 'ಸೋಷಿಯಲ್ ರಿಯಲಿಸಂ' (ಸಾಮಾಜಿಕ ವಾಸ್ತವತೆ, ಕಾಣುತ್ತದೆ. ಎರಡನೆಯ ಮಹಾಯುದ್ಧದ ಅನಂತರದ ಒತ್ತಡಗಳಿಂದ ತಪ್ಪಿಸಿಕೊಳ್ಳುವ'ಫ್ಯಾಂಟಸಿಗಳೂ ಕಾಣಿಸಿಕೊಂಡವು. ಜೇಮ್ಸ್ ಬಾಂಡ್‌ನ ಕಥೆಗಳನ್ನು ಐಯಾನ್ ಫ್ಲೆಮಿಂಗ್ ಬರೆದ. ಹ್ಯಾಡ್ಲಿ ಛೇಸ್ ಇಂಥವೇ ಪಲಾಯನ ಕಾದಂಬರಿಗಳನ್ನು ಬರೆದ. ಇವುಗಳಲ್ಲಿ ನೈತಿಕತೆಯ ಸುಳಿವೇ ಇಲ್ಲ. ಪಾಲ್ ಸ್ಕಾಟ್‌ನಂಥವರು ನಷ್ಟವಾದ ಸಾಮ್ರಾಜ್ಯವನ್ನು ವಸ್ತುವಾಗಿ ಆರಿಸಿಕೊಂಡರು. ಈ ಅವಧಿಯಲ್ಲಿ ಜೀನ್‌ರಿಸ್, ಅನಿತ ಬ್ರುಕ್‌ನರ್ ಮೊದಲಾದ ಹಲವರು ಮಹಿಳೆಯರು ಕಾದಂಬರಿಗಳನ್ನು ಬರೆದರು.

20ನೆಯ ಶತಮಾನದಲ್ಲಿ ಕಾದಂಬರಿಕಾರನು ತತ್ತರಿಸುವ ಅನುಭವಗಳಿಗೆ ಒಳಗಾದ. ಕಾದಂಬರಿಯು ವಸ್ತುಗಳನ್ನು ಆರಿಸಿಕೊಂಡಿತು. ಇದಕ್ಕೆ ಅನುಗುಣವಾಗಿ ರೂಪದಲ್ಲಿ ಪ್ರಯೋಗಗಳಾದವು. ನಿಯತಕಾಲಿಕಗಳ ಮೇಲೆ ಕಾದಂಬರಿಕಾರನ ಅವಲಂಬನೆ ಕಡಿಮೆಯಾದುದರಿಂದ ಹಲವು ರೀತಿಗಳಲ್ಲಿ ಆತನ ಸ್ವಾತಂತ್ರ್ಯ ವಿಸ್ತಾರವಾಯಿತು.

**ಗದ್ಯ:** ಬದುಕು ಹಲವು ದಿಕ್ಕುಗಳಲ್ಲಿ ಚಾಚಿಕೊಂಡಂತೆ ಗದ್ಯವು ನಿರ್ವಹಿಸಬೇಕಾದ ಹೊಣೆಗಳೂ ಹೆಚ್ಚಿದವು. ಹಲವರು ತಮ್ಮ ಅನುಭವಗಳನ್ನು ನಿರೂಪಿಸಿ ಆತ್ಮವೃತ್ತಗಳನ್ನು ಬರೆದರು. ಹಲವರು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ನೈತಿಕ ಸವಾಲುಗಳನ್ನು ಪರಾಮರ್ಶಿಸಿದರು. ವೇಗವಾಗಿ ಬೆಳೆಯುತ್ತಿದ್ದ ವಿಜ್ಞಾನದ ತಿಳವಳಿಕೆಯನ್ನು ಜನಸಾಮಾನ್ಯರಿಗೆ ಕೊಂಡೊಯ್ಯಲು ಮತ್ತು ವಿಜ್ಞಾನದ ಆವಿಷ್ಕಾರಗಳು ಬದುಕಿನ ಮೇಲೆ ಮಾಡುವ ಪ್ರಭಾವವನ್ನು ವಿಮರ್ಶಿಸಲು ವಿಜ್ಞಾನಿಗಳು ಪುಸ್ತಕಗಳನ್ನು ಬರೆದರು. ಜಗವು ಕಿರಿದಾದಂತೆ ಪ್ರವಾಸವೂ ಹೆಚ್ಚಿ, ಪ್ರವಾಸ ಸಾಹಿತ್ಯ ಬೆಳೆಯಿತು. ಇವೆಲ್ಲದರ ನಡುವೆ ಲಲಿತ ಪ್ರಬಂಧ ಸ್ವಲ್ಪಮಟ್ಟಿಗೆ ಹಿಂದಕ್ಕೆ ಸರಿಯಿತು.

ವಿನ್‌ಸ್ಟನ್ ಚರ್ಚಿಲ್, ಲಾನ್ಸ್‌ಲಾಟ್ ಹಾಗ್‌ಬೆನ್, ಎಡ್ಮಂಡ್ ಬ್ಲಂಡನ್, ಜೆ.ಬಿ.ಎಸ್.ಹಾಲ್ಡೇನ್, ಎ.ಎಸ್.ಎಡಿಂಗ್‌ಟನ್, ಸಿ.ಇ.ಎಂ.ಜೋಡ್, ಬರ್ನಾರ್ಡ್ ಷಾ, ಬರ್‌ಟ್ರಂಡ್ ರಸೆಲ್, ಆಲ್ಡಸ್ ಹಕ್ಸ್‌ಲಿ ಮೊದಲಾದವರು ಈ ಯುಗದ ಪ್ರಸಿದ್ಧ ಗದ್ಯ ಬರಹಗಾರರು **(ನೋಡಿ- ಇಂಗ್ಲಿಷ್-ಸಾಹಿತ್ಯ-ವಿಮರ್ಶೆ).**

*

**ಇಂಗ್ಲೆಂಡ್:** ಯುರೋಪ್ ಖಂಡದ ಪಶ್ಚಿಮ ಭಾಗದಲ್ಲಿರುವ ಬ್ರಿಟಿಷ್ ದ್ವೀಪಗಳಲ್ಲಿ ಅತಿ ದೊಡ್ಡದಾದ ಗ್ರೇಟ್ ಬ್ರಿಟನ್ನಿನ ದ್ವೀಪದ ಮೂರು ಘಟಕಗಳಲ್ಲಿ ಹೆಚ್ಚು ಭೂಭಾಗವನ್ನುಳ್ಳ ಪ್ರದೇಶ. ಇದರ ದಕ್ಷಿಣಕ್ಕೆ ಇಂಗ್ಲಿಷ್ ಕಡಲ್ಗಾಲುವೆ ಮತ್ತು ಡೋವರ್ ಜಲಸಂಧಿ; ಪೂರ್ವಕ್ಕೆ ಉತ್ತರ ಸಮುದ್ರ; ಉತ್ತರಕ್ಕೆ ಸ್ಕಾಟ್ಲೆಂಡ್; ಪಶ್ಚಿಮಕ್ಕೆ ಐರಿಷ್ ಸಮುದ್ರ ಹಾಗೂ ವೇಲ್ಸ್ ಸಂಸ್ಥಾನ, ಬ್ರಿಸ್ಟಲ್ ಕಡಲ್ಗಾಲುವೆ ಮತ್ತು ಅಟ್ಲಾಂಟಿಕ್ ಕಡಲು. ಇದರ ವಿಸ್ತೀರ್ಣ 1,30,410 ಚ.ಕಿಮೀ. ಜನಸಂಖ್ಯೆ 497,52,900 (2001). ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತರಾಜ್ಯದಲ್ಲೇ (ಯುನೈಟೆಡ್ ಕಿಂಗ್‌ಡಮ್) ಅತ್ಯಂತ ದೊಡ್ಡ ಘಟಕವಾದ ಇಂಗ್ಲೆಂಡ್ ಉಳಿದ ಎಲ್ಲ ಘಟಕಗಳಿಗಿಂತಲೂ ಹೆಚ್ಚು ಜನಸಂಖ್ಯೆ 70,07,091 ಹೊಂದಿರು ವುದಲ್ಲದೆ ಕೈಗಾರಿಕೆಯಲ್ಲೂ ಹೆಚ್ಚು ಮುಂದುವರಿದಿದೆ. ಲಂಡನ್ ಇದರ ರಾಜಧಾನಿ.

ಯುರೋಪ್ ಖಂಡಕ್ಕೂ ಇಂಗ್ಲೆಂಡಿಗೂ ನಡುವೆ ಕಡಲಿರುವುದಾದರೂ ಇದರ ದಕ್ಷಿಣ ಹಾಗೂ ನೈರುತ್ಯ ತೀರಕ್ಕೂ ಯುರೋಪ್ ಖಂಡಪ್ರದೇಶದ ಪಶ್ಚಿಮ ಭಾಗದಲ್ಲಿರುವ ಫ್ರಾನ್ಸಿಗೂ ಬಹಳ ಸಮೀಪ. ಡೋವರ್ ಜಲಸಂಧಿಯಂತೂ ಬಹಳ ಕಿರಿದು. ಇದರ ಅಗಲ ಕೇವಲ 34 ಕಿಮೀ. ಆದರೆ ಈ ಪ್ರದೇಶದಲ್ಲಿ ಬೀಸುವ ಕ್ಲುಪ್ತ ಮಾರುತಗಳೂ ಸಮುದ್ರದ ಉಬ್ಬರವಿಳಿತಗಳೂ ಶತ್ರುನೌಕೆಗಳಿಗೆ ಪ್ರತಿಕೂಲಕರವೆನಿಸಿವೆ. ಇಂಗ್ಲೆಂಡನ್ನು ಆಕ್ರಮಿಸಲೆಳಸಿದ ಫ್ರಾನ್ಸ್, ಸ್ಪೇನ್ ಮುಂತಾದ ದೇಶಗಳ ಪ್ರಯತ್ನಗಳು ಈ ಹಿಂದೆ ವಿಫಲವಾಗಲು ಈ ಸಮುದ್ರವೇ ಅಡ್ಡಿ. ಆದರೆ ಇತರ ದೇಶಗಳೊಂದಿಗೆ ವಾಣಿಜ್ಯವೇ ಮುಂತಾದ ಸ್ನೇಹಸಂಬಂಧಗಳನ್ನು ಬೆಳೆಸುವುದಕ್ಕೂ ಸಾಮ್ರಾಜ್ಯ ಕಟ್ಟುವುದಕ್ಕೂ ಈ ಸಮುದ್ರ ಅಡ್ಡಿಯಾಗುವ ಬದಲು ಅನುಕೂಲಕರವಾಗಿಯೇ ಪರಿಣಮಿಸಿದೆ.

ಪ್ರಾಕೃತಿಕ ಭೂವಿವರಣೆ: ಇಂಗ್ಲೆಂಡಿನ ಏಳಿಗೆಗೆ ಇದರ ಹಿತಕರ ವಾಯುಗುಣವೂ ಒಂದು ಕಾರಣ. ಯಾವ ಪ್ರದೇಶವೂ ಸಮುದ್ರಕ್ಕಿಂತ ತುಂಬ ದೂರದಲ್ಲಿಲ್ಲ. ಪಶ್ಚಿಮತೀರದ ಹತ್ತಿರ ಗಲ್ಫ್ ಸ್ಟ್ರೀಂ ಎಂಬ ಉಷ್ಣೋದಕ ಪ್ರವಾಹ ಹರಿಯುತ್ತದೆ. ಚಳಿಗಾಲದಲ್ಲಿ

ನೈರುತ್ಯದಿಂದಲೂ ಬೇಸಗೆಯಲ್ಲಿ ಪಶ್ಚಿಮದಿಂದಲೂ ಬೀಸುವ ಮಾರುತಗಳು ಬೇಸಗೆಯ ಸೆಕೆಯನ್ನೂ ಚಳಿಗಾಲದ ಚಳಿಯನ್ನೂ ತಗ್ಗಿಸುತ್ತವೆ. ಪೂರ್ವಕ್ಕಿಂತ ಪಶ್ಚಿಮದ ಕಡೆಯ ಪ್ರದೇಶ ಹೆಚ್ಚು ಹಿತಕರ. ಪಶ್ಚಿಮದ ಮಾರುತಗಳು ವಾಯುಗುಣವನ್ನು ಸಮಧಾತುವಾಗಿ ಇಡುವುದರ ಜೊತೆಗೆ ಪಶ್ಚಿಮತೀರಕ್ಕೆ ಹೆಚ್ಚು ಮಳೆ ಬೀಳಿಸುತ್ತವೆ.

ಇಂಗ್ಲೆಂಡ್ ಸಾಮಾನ್ಯವಾಗಿ ತಗ್ಗುಪ್ರದೇಶವಾದ್ದರಿಂದ ಇಲ್ಲಿ ಮಳೆ ಕಡಿಮೆ. ಪೂರ್ವದಲ್ಲಿ ವರ್ಷಕ್ಕೆ 760 ಮಿಮೀ. ಗಿಂತ ಕಡಿಮೆ ಮಳೆ ಬೀಳುತ್ತದೆ. ಇದರಿಂದ ಗೋಧಿ ಮುಂತಾದ ಧಾನ್ಯಗಳು ಮಾಗುವುದು ಸಾಧ್ಯ. ಥೇಮ್ಸ್ ಆಳಿವೆಯ ಬಳಿ ಬೀಳುವ ಮಳೆಯ ಪ್ರಮಾಣವೇ ಕನಿಷ್ಠ. ಅಲ್ಲಿ ವರ್ಷಕ್ಕೆ 330 ಮಿಮೀ. ಮಳೆ ಬೀಳುತ್ತದೆ ಲಂಡನ್ನಿನಿಂದ ಪಶ್ಚಿಮಕ್ಕೂ ದಕ್ಷಿಣಕ್ಕೂ ಕೆಲವೇ ಕಿಮೀ. ಗಳಾಚೆಗೆ ವರ್ಷಕ್ಕೆ 760 ಮಿಮೀ. ಮಳೆ ಆಗುತ್ತದೆ. ಪರ್ವತಪ್ರದೇಶಗಳಲ್ಲಿ 1015–1142 ಮಿಮೀ. ನೈರುತ್ಯ ಪರ್ಯಾಯ ದ್ವೀಪದ ಡಾರ್ಟ್ ಮೂರ್ ಎಂಬಲ್ಲಿ 1520 ಮಿಮೀ. ಮಳೆಯಾಗುತ್ತದೆ. ಉತ್ತರದ ಪನ್ನೈನ್ ಪರ್ವತ ಪ್ರದೇಶವೇ ಅತ್ಯಂತ ಹೆಚ್ಚಿನ ಮಳೆಯಾಗುವ ಪ್ರದೇಶ. ಹೆಚ್ಚು ಉಷ್ಣತೆ ಇಲ್ಲದ್ದರಿಂದ ಮಳೆಯ ನೀರು ಬೇಗ ಆವಿಯಾಗದೆ ನೆಲದಲ್ಲೇ ಊರುತ್ತದೆ. ಇದರಿಂದ ಸಸ್ಯಗಳ

ಬೆಳವಣಿಗೆಗೆ ಅನುಕೂಲ. ಇಂಗ್ಲೆಂಡಿನ ದಕ್ಷಿಣಭಾಗದಲ್ಲಿ ದಿನಕ್ಕೆ ಸು. 5 ಗಂಟೆ ಬಿಸಿಲಿರುತ್ತದೆ. ಉತ್ತರದಲ್ಲೂ ಮಧ್ಯಪ್ರದೇಶದಲ್ಲೂ 4 ಗಂಟೆಗಿಂತ ಕಡಿಮೆ. ಪಶ್ಚಿಮದಲ್ಲಿ ಚಳಿಗಾಲದಲ್ಲಿ ಕೊರೆಯುವ ಚಳಿಯಿರುವುದಿಲ್ಲ. ಉತ್ತರಕ್ಕಿಂತ ದಕ್ಷಿಣದಲ್ಲಿ ಬೇಸಗೆಯ ಚುರುಕು ಜಾಸ್ತಿ.

ಇಂಗ್ಲೆಂಡಿನಲ್ಲಿ ವ್ಯಾಪಕವಾದ ಪರ್ವತಪ್ರದೇಶಗಳಿಲ್ಲ. ಆದರೆ ಅಲ್ಲಿ ಮಟ್ಟಸವಾದ ಬಯಲುಗಳೂ ಇಲ್ಲ. ದೇಶದ ಬಹುಭಾಗ ಸ್ವಲ್ಪ ಇಳಿಜಾರಾಗಿದೆ. ಇಡೀ ಬ್ರಿಟನ್ನಿನ ಕರಾವಳಿಯಂತೆ ಇಂಗ್ಲೆಂಡಿನ ಕರಾವಳಿಯೂ ವೈವಿಧ್ಯಮಯ. ನದಿಗಳು ತಮ್ಮ ಮುಖಜಭೂಮಿ ಬಳಿ ತಂದು ತುಂಬುವ ಮಣ್ಣನ್ನು ಕಡಲಿನ ಉಬ್ಬರವಿಳಿತಗಳು ಕೊಚ್ಚಿಹಾಕುತ್ತಿರುತ್ತವೆ. ಆದ್ದರಿಂದ ನದಿಗಳು ಸಮುದ್ರವನ್ನು ಕೂಡುವೆಡೆಗಳಲ್ಲಿ ಅಳಿವೆಗಳಾಗಿವೆ. ಇವು ಬಂದರುಗಳಿಗೆ ಬಹಳ ಅನುಕೂಲಕರ. ಪೂರ್ವತೀರದಲ್ಲಿ ಉತ್ತರದ ಟೈನ್ ನದಿಯ ಮುಖಜಭೂಮಿ ಬಳಿ ನ್ಯೂಕ್ಯಾಸಲ್ ಎಂಬ ರೇವುಪಟ್ಟಣವಿದೆ. ವೇರ್ ನದಿಯ ಮುಖಜ ಭೂಮಿ ಬಳಿ ಸಂಡರ್‌ಲೆಂಡ್ ಎಂಬ ಪಟ್ಟಣವಿದೆ. ಟೀಸ್ ಮುಖಜಭೂಮಿ ಬಳಿಯಲ್ಲಿ ಮಿಡ್ಲ್ಸ್‌ಬರೊ ಎಂಬ ಪಟ್ಟಣವಿದೆ. ಇದು ಬಹಳ ದೊಡ್ಡದಾದ ಕಬ್ಬಿಣ–ಉಕ್ಕು ಕೈಗಾರಿಕೆಯ ಕೇಂದ್ರ. ಈಚೆಗೆ ಈ ಪ್ರದೇಶದಲ್ಲಿ ಅನೇಕ ರಾಸಾಯನಿಕ ಕೈಗಾರಿಕಾ ನಗರಗಳು ಎದ್ದಿವೆ. ಇವುಗಳಲ್ಲಿ ಬಿಲ್ಲಿಂಗ್ ಹ್ಯಾಂ ಎಂಬುದು ಮುಖ್ಯ. ಹಂಬರ್ ನದಿಯ ಮುಖಜ ಭೂಮಿ ಬಳಿ ಹಲ್ ರೇವುಪಟ್ಟಣವಿದೆ. ಥೇಮ್ಸ್ ನದಿಯ ಅಳಿವೆಯ ಮೇಲಂತೂ ಬ್ರಿಟನ್ನಿನ ಅತ್ಯಂತ ದೊಡ್ಡ ನಗರ ಹಾಗೂ ರೇವುಪಟ್ಟಣವಾದ ಲಂಡನ್ ಇದೆ. ಬಂಡೆಗಳಿಲ್ಲದ ಈ ನದಿಯ ಪಾತ್ರದ ಉದ್ದಕ್ಕೂ ಸದಾ ಹೂಳು ತೆಗೆಸುತ್ತಿರುವುದರಿಂದ ಸಾಗರಗಾಮಿ ಹಡಗುಗಳು ಲಂಡನ್ನಿನ ಹೊರ ರೇವುಪಟ್ಟಣವಾದ ಟಿಲ್‌ಬರಿಯವರೆಗೂ ಬರುತ್ತವೆ. ಸಾಗರಕ್ಕೆ ಕೊಂಡೊಯ್ಯುವ ಹಡಗುಗಳು ಲಂಡನ್ನಿನ ವಕ್ಷಸ್ಥಲವನ್ನೇ ಪ್ರವೇಶಿಸುತ್ತವೆ.

ದಕ್ಷಿಣದಲ್ಲಿ ಕೆಲವು ಕಿರಿದು ಆಳದ ಕೊಲ್ಲಿಗಳಿವೆ. ಇವುಗಳಲ್ಲಿ ಎರಡರ ಮೇಲೆ ಪೋರ್ಟ್ಸ್‌ಮತ್ ಮತ್ತು ಲ್ಯಾಂಗ್‌ಸ್ಟನ್ ರೇವುಗಳಿವೆ. ಸೌತ್ಯಾಂಪ್ಟನ್‌ವಾಟರ್ ಎಂಬಲ್ಲಿರುವ ಸೌತ್ಯಾಂಪ್ಟನ್ ಬಂದರು ಬಲು ದೊಡ್ಡದು. ಪ್ಲಿಮತ್ ಮತ್ತು ಡೆವನ್‌ಪೋರ್ಟ್ ಇನ್ನೆರಡು ರೇವುಗಳು. ವಾಯವ್ಯದಲ್ಲಿ ಡಿ ನದಿಯ ಅಳಿವೆ ಆಳವಿಲ್ಲ. ಇಲ್ಲಿನ ಚೆಸ್ಟರ್ ಎಂಬ ರೇವುಪಟ್ಟಣ ರೋಮನ್ ಆಧಿಪತ್ಯದ ಕಾಲದಲ್ಲಿ ಪ್ರಸಿದ್ಧವಾಗಿತ್ತು. ಮರ್ಸಿನದಿಯ ಮುಖಜಭೂಮಿ ಬಳಿ ಲಿವರ್‌ಪೂಲ್, ಬರ್ಕನ್‌ಹೆಡ್ ಬಂದರಿವೆ. ಇವು ಲಂಡನ್ನಿಗೂ ಸವಾಲು ಹಾಕುವಷ್ಟು ಉತ್ತಮವಾಗಿವೆ.

ಭೂ ಇತಿಹಾಸ : ಭೂ ಇತಿಹಾಸದ ಅಧ್ಯಯನದಲ್ಲಿ ಇಂಗ್ಲೆಂಡಿಗೆ (ವೇಲ್ಸ್ ಸಹ ಸೇರಿ) ಒಂದು ವಿಶಿಷ್ಟ ಸ್ಥಾನವಿದೆ. ಭೂ ಇತಿಹಾಸದ ವಿವಿಧ ಘಟ್ಟಗಳ ಎಲ್ಲ ಶಿಲಾಸ್ತರಗಳನ್ನು ನಾವಿಲ್ಲಿ ನೋಡಬಹುದು. ಬಹುಶಃ ಇತರ ಯಾವ ಭಾಗದಲ್ಲೂ ಈ ಬಗೆಯ ಶಿಲಾಶ್ರೇಣಿ ಗಳನ್ನು ನೋಡಲಾರೆವು. ಆಂಗ್ಲಿಸಿಯಿಂದ ಲಂಡನ್ನಿಗೆ ನೇರ ಹಾದುಹೋದಲ್ಲಿ ಆರ್ಷೇಯ (ಆರ್ಕೀಯನ್) ಶಿಲೆಗಳಿಂದ ಮೊದಲಾಗಿ ಅನುಕ್ರಮವಾಗಿ ಎಲ್ಲ ಭೂಯುಗಗಳ ಶಿಲಾಸ್ತರ ಗಳು–ಮಯೊಸೀನ್ ಕಲ್ಪವನ್ನು ಬಿಟ್ಟು (ಆಗ ಇಡೀ ಇಂಗ್ಲೆಂಡ್ ಭೂ ಪ್ರದೇಶವಾಗಿತ್ತು). ಒಂದಾದ ಮೇಲೊಂದು ಗೋಚರಗೊಳ್ಳುತ್ತ ಇಡೀ ಭೂ ಇತಿಹಾಸದ ಎಲ್ಲ ಪುಟಗಳನ್ನು ಒಂದೂ ತಪ್ಪಿಹೋಗದಂತೆ ತಿರುವಿ ಹಾಕಿದ ಅನುಭವವಾಗುತ್ತದೆ. ಹೀಗೆ ಕಂಡುಬರುವ ವಿವಿಧ ಭೂಯುಗಗಳ ಶಿಲಾಶ್ರೇಣಿಗಳ ಸೂಕ್ಷ್ಮ ಪರಿಚಯವನ್ನಿಲ್ಲಿ ಕೊಟ್ಟಿದೆ.

ಪುರಾಣ (ಪ್ರಿಕೇಂಬ್ರಿಯನ್) ಕಲ್ಪ (600 ದಶಲಕ್ಷ ವರ್ಷಗಳಿಗೂ ಹಿಂದೆ): ಈ ಕಲ್ಪದ ಶಿಲೆಗಳನ್ನು ಆಂಗ್ಲಿಸಿ, ವೇಲ್ಸಿನ ನೆವಿನ್ ಮತ್ತು ಬಾರ್ಡ್ಸ್ ದ್ವೀಪಗಳ ನಡುವಿನ ಲೆನ್ ಪರ್ಯಾಯದ್ವೀಪ, ಲಾಂಗ್‌ಮಿಂಡ್ ಶ್ರೇಣಿ, ಶೆಕಿನ್ ಬೆಟ್ಟಗಳು, ಚಾರ್ನ್‌ವುಡ್ ಮತ್ತು ಮಾಲ್‌ವೆರ್ನ್‌ಗಳಲ್ಲಿ ನೋಡಬಹುದು. ಇವುಗಳಲ್ಲಿ ಬಹುಭಾಗ ನೈಸ್ (ಗೀರು) ಶಿಲೆಗಳು. ಇವು ಶ್ರೇಣಿಯ ಅತ್ಯಂತ ಹಿರಿದಾದ ಶಿಲೆಗಳೂ ಹೌದು. ಮುಂದೆ ತಲೆದೋರಿದ ಭೂ ಚಟುವಟಿಕೆಗಳಿಗೆ ಒಳಗಾಗಿ ನೈಸುಗಳು ಅಲ್ಲಲ್ಲೆ ಮಡಿಸಿ ಮಡಿಕೆಗಳಾಗಿವೆ. ಸವೆದ ಶಿಲೆಗಳ ಮೇಲೆ ಚಾರ್ನ್ವುಡ್, ಮಾಲ್‌ವೆರ್ನ್ ಮುಂತಾದ ಕಡೆಗಳಲ್ಲಿ ಜ್ವಾಲಾಮುಖಜ ಶಿಲಾಸ್ತರಗಳಿವೆ. ಲಾಂಗ್‌ಮಿಂಡ್ ಮತ್ತು ಇತರ ಕೆಲವೆಡೆಗಳಲ್ಲಿ ಕಂಡುಬರುವ ಗ್ರಿಟ್ ಮತ್ತು ಜೇಡು ಶಿಲಾಸ್ತರಗಳು ಈ ಯುಗದ ಜಲಜಶಿಲೆಗಳು ಸ್ಕಾಟ್ಲೆಂಡಿನ ಟಾರಿಡೋನಿಯನ್ ಜಲಜಶಿಲೆಗಳಿಗೆ ಸರಿಸಮವೆಂದು ಪರಿಗಣಿತವಾಗಿವೆ.

ಒಟ್ಟಿನಲ್ಲಿ ಈ ಕಲ್ಪದ ಶಿಲೆಗಳು ಇಡೀ ಇಂಗ್ಲೆಂಡ್–ವೇಲ್ಸ್ ಉದ್ದಕ್ಕೂ ಅಂತರ್ಗತವಾಗಿದ್ದು ಅವುಗಳ ಮೇಲೆ ಇತರ ಭೂಯುಗಗಳ ಶಿಲಾಸ್ತರಗಳು ನಿಕ್ಷೇಪಗೊಂಡುವೆಂದೂ ಅಭಿಪ್ರಾಯಪಡಲಾಗಿದೆ. ಬಹುಶಃ ಈ ಭೂಭಾಗ ಉತ್ತರದಲ್ಲಿನ ಶಾಶ್ವತ ಭೂಖಂಡವಾಗಿದ್ದ ಅಟ್ಲಾಂಟಿಸ್ಸಿನ ಆಗ್ನೇಯ ತೀರಪ್ರದೇಶವಾಗಿತ್ತೆಂದೂ ಭೂವಿಜ್ಞಾನಿಗಳ ಊಹೆ. ಈ ವಿಶೇಷ ಸನ್ನಿವೇಶದ ಪರಿಣಾಮವಾಗಿಯೇ ಇಂಗ್ಲೆಂಡಿನಲ್ಲಿ ಭೂಇತಿಹಾಸದ ಎಲ್ಲ ಹಂತಗಳ ಶಿಲೆಗಳನ್ನೂ ನೋಡಲು ಸಾಧ್ಯವಾಗಿದೆ.

ಕೇಂಬ್ರಿಯನ್ ಯುಗ (500–600 ದಶಲಕ್ಷ ವರ್ಷಗಳ ಹಿಂದಿನ ಕಾಲ): ಪ್ರಿಕೇಂಬ್ರಿಯನ್ ಕಲ್ಪದ ಭೂಭಾಗದ ಸವೆತ ಮತ್ತು ಭೂ ಚಟುವಟಿಕೆಗಳ ಪ್ರಭಾವದಿಂದ ಈ ಯುಗದಲ್ಲಿ ಇಂಗ್ಲೆಂಡ್ ಭಾಗ ಅಷ್ಟು ಆಳವಿರದ ಸಮುದ್ರವಾಗಿ ಮಾರ್ಪಟ್ಟಿತು. ಇಲ್ಲಿ ಎಂದಿನಂತೆ ವಿವಿಧ ಜಲಜಶಿಲೆಗಳ ಸಂಚಯನ ಮೊದಲಾಯಿತು. ಬಲು ವಿಸ್ತಾರವಾದ ಪ್ರದೇಶದಲ್ಲಿ ದಪ್ಪ ಮರಳು ಶಿಲೆಗಳೂ ಮತ್ತು ಪೆಂಟೆ ಶಿಲೆಗಳೂ ಕೊಂಚ ಆಳವಾದ ಭಾಗಗಳಲ್ಲಿ ಸುಣ್ಣ ಶಿಲೆಯೂ ಶೇಖರಗೊಂಡು ಸಮುದ್ರದ ತಳ ಕ್ರಮೇಣ ಕುಗ್ಗುತ್ತ ಹೋಯಿತು. ಮುಂದೆ ಜೇಡುಶಿಲಾಸ್ತರಗಳೂ ನಿಕ್ಷೇಪಗೊಂಡವು. ಈ ಬಗೆಯ ಜಲಜಶಿಲಾಪ ರಂಪರೆ ಮುಂದೆ ಅನೇಕ ಹಂತಗಳಲ್ಲಿ ತಲೆದೋರಿತು. ಹೀಗಾಗಿ ಯುಗ ಮುಂದುವರೆದಂತೆಲ್ಲ ವೇಲ್ಸ್ ಮತ್ತು ಇಂಗ್ಲೆಂಡಿನ ಬಹುಭಾಗ ಜಲಾಶಯವಾಗಿ ಪರಿವರ್ತಿತವಾಗಿ ನಿಕ್ಷೇಪಗಳು ತಲೆದೋರಿದವು. ಮೆರಿಯೊನೆತ್ ಮತ್ತು ಡೆನ್‌ಬಿಗ್‌ಷೈರುಗಳ ಕೇಂಬ್ರಿಯನ್ ಶಿಲಾಶ್ರೇಣಿಗಳ ಮಂದ 4,877 ಮೀಟರುಗಳನ್ನೂ ಮೀರಿದೆ. ಮೆರಿಯೊನೆತ್ತಿನ ಹಾರ್ಲೆಕ್ ಉಬ್ಬಿನಲ್ಲಿ ಈ ಯುಗದ ಶಿಲೆಗಳು ಬಲು ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿವೆ.

ಆರ್ಡೊವಿಶಿಯನ್ ಮತ್ತು ಸೈಲೂರಿಯನ್ ಯುಗಗಳು (400–500 ದಶಲಕ್ಷ ವರ್ಷಗಳ ಹಿಂದಿನ ಕಾಲ): ಈ ಯುಗಗಳಲ್ಲಿ ವಿಸ್ತಾರವಾದ ಜಿಯೊಸಿಂಕ್ಲೈನಲ್ ಸಮುದ್ರವಿತ್ತು. ಇದರ ವಾಯವ್ಯದತ್ತ ಉತ್ತರ ಅಟ್ಲಾಂಟಿಕ್ ಶಾಶ್ವತ ಭೂಖಂಡ ಮತ್ತು ಫೆನೊಸ್ಕಾಂಡಿಯಾ ಗಳಿದ್ದವು. ಈ ಭೂಭಾಗಗಳನ್ನು ನದಿಗಳು ಸವೆಯಿಸಿ ಆ ಮೂಲಕ ಹೊತ್ತು ತಂದ ಶಿಲಾಕಣಗಳನ್ನು ಸಮುದ್ರದಲ್ಲಿ ಕಲೆಹಾಕಿದವು. ನೀರಿನ ಮಟ್ಟದಲ್ಲಿ ಮತ್ತು ಭೂ–ಜಲಗಳ ಹರವಿನಲ್ಲಿ ವ್ಯತ್ಯಾಸಗಳು ಆಗಾಗ ತಲೆದೋರಿ ಶಿಲಾಸ್ತರಗಳಲ್ಲೂ ವೈವಿಧ್ಯ ಉಂಟಾಯಿತು. ಆರ್ಡೊವಿಶಿಯನ್ ಯುಗದ ಅತ್ಯಂತ ಹಳೆಯ ಎರೆನಿಗ್ ಶಿಲಾಶ್ರೇಣಿಯಲ್ಲಿ ಅನುಕ್ರಮವಾಗಿ ಅಡಿಯಿಂದ ದಪ್ಪ ಹರಳಿನ ಗ್ರಿಟ್, ಮರಳುಶಿಲೆ, ಮರುಳುಯುಕ್ತ ಜೇಡು ಶಿಲೆ ಮತ್ತು ಕಟ್ಟಕಡೆಗೆ ಕರಿಯ ಜೇಡಿನ ಶಿಲಾಸ್ತರಗಳನ್ನು ನೋಡಬಹುದು. ಇವುಗಳ ಅಧ್ಯಯನದಿಂದ ಜಲಾಶಯದ ಆಳ ಹೆಚ್ಚಿದಂತೆಲ್ಲ ಅದರ ಕರಾವಳಿ ದೂರ ದೂರ ಸರಿಯಿತೆಂದು ವ್ಯಕ್ತವಾಗಿದೆ. ಅಲ್ಲದೆ ಮಧ್ಯ ಆರ್ಡೊವಿಶಿಯನ್ ಯುಗದಲ್ಲಿ ಭೂಭಾಗ ತೀವ್ರಗತಿಯಲ್ಲಿ ಮೇಲಕ್ಕೆ ಎತ್ತಲ್ಪಟ್ಟಿತು. ಆಗ ದಪ್ಪ ಕಣಗಳ ಗ್ರಿಟ್ಟುಗಳು ಶೇಖರವಾದವು. ಮುಂದೆ ಬಾಲಾಹಂತದಲ್ಲಿ ನಯಕಣ ರಚನೆಯ ಮರಳುಶಿಲೆ ಮತ್ತು ಜೇಡುಶಿಲಾಸ್ತರಗಳೂ ನಿಕ್ಷೇಪಗೊಂಡವು.

ಈ ವೇಳೆಗೆ ಮಧ್ಯ ಇಂಗ್ಲೆಂಡಿನ ಭಾಗ ಬಹುಪಾಲು ನೆಲವಾಗಿತ್ತು. ಸೈಲೂರಿಯನ್ ಕಲ್ಪದ ಆದಿಯಲ್ಲಿ ಕ್ಯಾಲಿಡೋನಿಯನ್ ಪರ್ವತಜನ್ಯ ಶಕ್ತಿಗಳ ಅವಿರ್ಭಾವ ಮೊದಲಾಯಿತು. ಸಮುದ್ರದ ನಡುವೆ ನೀಳ ದಿಬ್ಬವೊಂದು ಉದ್ಭವಿಸಿ ಜಲಾಶಯ ಎರಡು ಪಾಲಾಯಿತು. ಹೊಸ ಬೆಟ್ಟಗಳ ಸಾಲೂ ಕಾಣಿಸಿಕೊಂಡವು. ಈ ದಿಬ್ಬ ಬೆರ್ವಿಕ್ಕಿನಿಂದ ಮೊದಲಾಗಿ ಸಾಲ್ವೆ ಮೂಲಕ ಹಾದು ವೆಕ್ಸ್ ಫರ್ಡಿನಲ್ಲಿ ಕೊನೆಮುಟ್ಟಿತು. ಸಮುದ್ರದಲ್ಲಿ ಅತಿ ಸೂಕ್ಷ್ಮಕಣಗಳು ಸಂಚಿತವಾದವು. ಕ್ರಮೇಣ ಸಮುದ್ರದ ಉತ್ತರಾರ್ಧ ನೆಲಭಾಗವಾಗಿ ಮಾರ್ಪಟ್ಟಾಗ

ಮೇಲ್ಮೈಲಕ್ಷಣ

ಮರುಳುಶಿಲೆಗಳು ನಿಕ್ಷೇಪಗೊಂಡವು. ಕಾರ್ಡಿಗನ್‌ಷೈರಿನ ಲ್ಯಾಂಡೋವರಿಯನ್ ಶಿಲಾಶ್ರೇಣಿಯಲ್ಲಿ ಗ್ರೇ ವ್ಯಾಕ್ ಮತ್ತು ಜೇಡುಶಿಲಾಸ್ತರಗಳು ಒಂದಾದ ಮೇಲೊಂದು ಕಂಡುಬಂದಿವೆ. ಆರ್ಡೊವಿಶಿಯನ್ ಕಲ್ಪದ ಉತ್ತರಾರ್ಧದಲ್ಲಿ ಲೇಕ್ ಜಿಲ್ಲೆಯಲ್ಲಿ ಅಗ್ನಿಪರ್ವತಗಳ ಚಟುವಟಿಕೆಯಿಂದ ಲಾವಾ, ಟಫ್, ಅಗ್ಲಾಮರೇಟ್ ಶಿಲಾಸ್ತರಗಳು ತಲೆದೋರಿ ಬಾರೊಡೇಲ್ ಶ್ರೇಣಿ ಉಂಟಾಯಿತು. ತದನಂತರ ಜೇಡು ಮತ್ತು ಗ್ರಿಟ್ ಸ್ತರಗಳು ಶೇಖರವಾಗಿ ಮುಂದೆ ರೂಪಾಂತರ ಹೊಂದಿ ಸ್ಕಿಡಾವಾ ಜೇಡುಶಿಲಾ ಶ್ರೇಣಿಗಳೆನಿಸಿದವು.

ಅಷ್ಟು ತೀವ್ರವಲ್ಲದ ಭೂ ಚಟುವಟಿಕೆಗಳ ದೆಸೆಯಿಂದ ಶಿಲಾಸ್ತರಗಳು ಮಡಿಕೆ ಬಿದ್ದು ಯುಗದ ಅಂತ್ಯದಲ್ಲಿ ನೆಲಭಾಗ ಮತ್ತೆ ಕುಸಿದು ಸಮುದ್ರವಾಗಿ ಮಾರ್ಪಟ್ಟಿತು. ಈಗಿನ ವಾಯವ್ಯ ಇಂಗ್ಲೆಂಡಿನಲ್ಲಿರುವ ಆಷ್‌ಗಿಲನ್ ಮತ್ತು ಸೈಲೂರಿಯನ್ ಶಿಲಾಸ್ತರಗಳ ನಿಕ್ಷೇಪ ಮೊದಲಾಯಿತು. ಉತ್ತರ ಭಾಗದಲ್ಲಿ ತಲೆದೋರಿದ್ದ ಕ್ಯಾಲಿಡೋನಿಯನ್ ಪರ್ವತಜನ್ಯ ಶಕ್ತಿಗಳ ಪ್ರಭಾವ ಇಂಗ್ಲೆಂಡ್, ವೇಲ್ಸುಗಳಿಗೂ ಹಬ್ಬಿತು. ಈ ಕಾಲದಲ್ಲೇ ಲೇಕ್ ಜಿಲ್ಲೆಯ ಉಬ್ಬು ಉಂಟಾಯಿತು. ಉತ್ತರ ಮತ್ತು ಪಶ್ಚಿಮ ವೇಲ್ಸ್‌ನಲ್ಲಿ ಪರಸ್ಪರ ಸಮಾನಾಂತರವಾದ ಅಸಂಖ್ಯಾತ ಮೇಲ್ಮಡಿಕೆಗಳೂ ಕೆಳಮಡಿಕೆಗಳೂ ತಲೆದೋರಿದವು.

ಡಿವೋನಿಯನ್ ಯುಗ (350–400 ದಶಲಕ್ಷ ವರ್ಷಗಳ ಹಿಂದಿನ ಕಾಲ) : ಈ ವೇಳೆಗೆ ಇಂಗ್ಲಿಂಡಿನ ಲೇಕ್ ಜಿಲ್ಲೆ ಮತ್ತು ಉತ್ತರ ವೇಲ್ಸಿನ ಬಹುಭಾಗ ಭೂಖಂಡವಾಗಿ ಉಳಿದಿತ್ತು. ಅಸಂಖ್ಯಾತ ನೂತನ ಪರ್ವತಶ್ರೇಣಿಗಳಿಂದ ಕೂಡಿದ ಉತ್ತರ ಅಟ್ಲಾಂಟಿಸ್ ಶಾಶ್ವತ ಭೂಖಂಡವೂ ಇತ್ತು. ಫೆನೊಸ್ಕಾಂಡಿಯಾ ಹೆಚ್ಚು ವಿಸ್ತಾರಗೊಂಡು ಉತ್ತರ ಸಮುದ್ರದ ದಕ್ಷಿಣ ಭಾಗವನ್ನು ಅತಿಕ್ರಮಿಸಿತ್ತು. ಉತ್ತರ ಇಂಗ್ಲೆಂಡ್, ವೇಲ್ಸ್ ಮತ್ತು ಮಧ್ಯ ಐರ್ಲ್‌ಂಡುಗಳನ್ನೊಳಗೊಂಡ ದೊಡ್ಡ ಪರ್ಯಾಯದ್ವೀಪ ತಲೆದೋರಿತು. ಯುಗದ ಉದ್ದಕ್ಕೂ ಕ್ಯಾಲಿಡೋನಿಯನ್ ಪರ್ವತಜನ್ಯ ಶಕ್ತಿಗಳ ಪ್ರಭಾವ ಕ್ರಮೇಣ ಕುಂದುತ್ತ ಪರ್ಯಾಯದ್ವೀಪದ ವಿಸ್ತೀರ್ಣ ಮತ್ತು ರಚನೆಯಲ್ಲಿ ಅನೇಕ ಬದಲಾವಣೆಗಳು ಕಂಡುಬಂದವು. ಉತ್ತರ ಅಟ್ಲಾಂಟಿಸ್ ಮತ್ತು ಪರ್ಯಾಯದ್ವೀಪದ ನಡುವೆ ಅಸಂಖ್ಯಾತ ಖಾರಿಗಳೂ ದಿಬ್ಬಗಳೂ ಇದ್ದು ಶಿಲಾನಿಕ್ಷೇಪದ ಕಾರ್ಯಗತಿಯನ್ನು ಬಹುಮಟ್ಟಿಗೆ ಪ್ರಚೋದಿಸಿದವು.

ವೇಲ್ಸಿನ ಕೆಳ ಡಿವೋನಿಯನ್ ಯುಗದ ಮರಳುಶಿಲಾ ಸ್ತರಗಳು ದಕ್ಷಿಣ ಭಾಗದಲ್ಲಿ ನದೀಮುಖಜ ಭೂಮಿಯೋಪಾದಿ ನಿಕ್ಷೇಪಗೊಂಡವು. ಮಧ್ಯ ಮತ್ತು ಮೇಲಿನ ಡಿವೋನಿಯನ್ ಯುಗಗಳಲ್ಲಿ ಉತ್ತರ ಮತ್ತು ಮಧ್ಯ ವೇಲ್ಸ್ ಭೂಪ್ರದೇಶ ಉತ್ತರ ದಿಕ್ಕಿನತ್ತ ವಿಸ್ತಾರಗೊಂಡು ಅಟ್ಲಾಂಟಿಸ್ ಭೂಖಂಡದೊಡನೆ ಸೇರಿ ಹೋಯಿತು. ಹೀಗೆಯೇ ದಕ್ಷಿಣದ ಕಡೆಯೂ ವಿಸ್ತಾರಹೊಂದಿ ಇಡೀ ದಕ್ಷಿಣ ವೇಲ್ಸನ್ನು ಆಕ್ರಮಿಸಿತು. ಬಹುಶಃ ಈ ಹಂತದಲ್ಲೇ ಡೆವಾನ್ ಪ್ರಾಂತ್ಯದ ಡಿವೋನಿಯನ್ ಶಿಲಾಸ್ತರಗಳು ನಿಕ್ಷೇಪಗೊಂಡವು.

ಕಾರ್ಬೊನಿಫೆರಸ್ ಯುಗ (280–350 ದಶಲಕ್ಷ ವರ್ಷಗಳ ಹಿಂದಿನ ಕಾಲ) : ಡಿವೋನಿಯನ್ ಯುಗದಲ್ಲೇ ಉತ್ತರ ಅಟ್ಲಾಂಟಿಸಿನ ಬಹುಭಾಗ ಸವೆತಕ್ಕೆ ಒಳಗಾಗಿತ್ತು. ಈ ಬೃಹತ್ ಖಂಡದ ಅಳಿದುಳಿದ ಭಾಗಗಳು ಮಧ್ಯ ಸ್ಕಾಟ್ಲೆಂಡ್ ಮತ್ತು ಐಸ್ಲೆಂಡುಗಳ ನಡುವೆ ಅಲ್ಲಲ್ಲೇ ಚದುರಿಹೋಗಿದ್ದವು. ಸ್ಕಾಂಡಿನೇವಿಯ ಭೂಖಂಡವಾಗಿತ್ತು. ಯುರೋಪು ಖಂಡದ ಬಹುಭಾಗ ನೀರಿನಲ್ಲಿ ಮುಳುಗಿ ಅಲ್ಲಲ್ಲೇ ಸಣ್ಣಮಟ್ಟ ದ್ವೀಪಗಳಾದುವು. ಇವುಗಳಲ್ಲಿ ಸೇಂಟ್‌ಜಾರ್ಜ್ ಲ್ಯಾಂಡ್, ಈಸ್ಟ್ ಜಾರ್ಜ್ ಛಾನೆಲ್ ಮತ್ತು ವೇಲ್ಸ್‌ನ ಬಹುಭಾಗ ದ್ವೀಪಗಳೋಪಾದಿಯಲ್ಲಿದ್ದವು. ಸಮುದ್ರಭಾಗಗಳಲ್ಲಿ ಬಗೆಬಗೆಯ ಶಿಲಾಕಣಗಳು ನಿಕ್ಷೇಪಗೊಳ್ಳುತ್ತಿದ್ದವು. ಸಮುದ್ರ ಅಷ್ಟು ಆಳವಿರದಿದ್ದರೂ ಅದರ ತಳ ಕುಗ್ಗುತ್ತಲೇ ಇತ್ತು. ಇಂಗ್ಲೆಂಡಿನಲ್ಲಿ ಕೆಳ ಕಾರ್ಬಾನಿಫೆರಸ್ ಶ್ರೇಣಿಗಳನ್ನು ಆವೋನಿಯನ್ ಶ್ರೇಣಿಗಳೆಂದೂ ಹೆಸರಿಸಿದ್ದಾರೆ. ಇವುಗಳ ಮುಖ್ಯ ಸ್ತರಗಳು ಅಸಂಖ್ಯಾತ ಜೀವಾವಶೇಷಗಳಿಂದ ಕೂಡಿದ ಸುಣ್ಣಶಿಲೆ. ಇವನ್ನು ಆಧರಿಸಿ ಇಡೀ ಶ್ರೇಣಿಯನ್ನು ಕೆಳ ಆವೋನಿಯನ್ (ಟೂರ್ನೇಸಿಯನ್) ಮತ್ತು ಮೇಲಿನ ಆವೋನಿಯನ್ (ವೈಸಿಯನ್) ಎಂದು ವಿಭಜಿಸಲಾಗಿದೆ. ಕೆಲವಡೆ ಕಾರಲ್ ದಿಬ್ಬಗಳಿದ್ದ ದಾಖಲೆಗಳಿವೆ. ಉತ್ತರ ಇಂಗ್ಲೆಂಡ್, ಲೇಕ್ ಜಿಲ್ಲೆ, ವಾಯವ್ಯ ಮತ್ತು ದಕ್ಷಿಣ ವೇಲ್ಸ್ ಮತ್ತು ಕೆಂಟ್–ಇಲ್ಲೆಲ್ಲ ಸುಣ್ಣಶಿಲಾಸ್ತರಗಳು ವ್ಯಾಪಿಸಿದ್ದವು. ವೈಸಿಯನ್ ಹಂತದಲ್ಲಿ ವಾಯವ್ಯ ಇಂಗ್ಲೆಂಡಿನತ್ತ ನೀರಿನ ಮಟ್ಟದಲ್ಲಿ ಏರು ಪೇರುಗಳಾಗಿ ಜೌಗು ಮತ್ತು ಸಮುದ್ರ ಪ್ರದೇಶಗಳು ಅನುಕ್ರಮವಾಗಿ ಆವಿರ್ಭವಿಸುತ್ತಿದ್ದವು. ಹೀಗಾಗಿ ಮರಳು ಶಿಲಾಪ್ರಸ್ತರಗಳ ನಡುವೆ ಅಲ್ಲಲ್ಲೇ ಕಲ್ಲಿದ್ದಲಿನ ತೆಳುವಾದ ಸಿರಗಳು ನಿಕ್ಷೇಪವಾದುವು. ನಡುವೆ ಇರುವ ಸುಣ್ಣಶಿಲಾ ಸ್ತರಗಳನ್ನು ಜೇಡು ಯೋರ್‌ಡೇಲ್ ಶ್ರೇಣಿಗಳೆಂದು ಕರೆಯಲಾಗಿದೆ. ಮೇಲಿನ ಕಾರ್ಬಾನಿಫೆರಸ್ (ನಮೂರಿಯನ್) ಶಿಲಾಸ್ತರಗಳನ್ನು ಕೆಳಗಿನ ಕಾರ್ಬಾನಿಫೆರಸ್ (ಆವೋನಿಯನ್) ಸ್ತರಗಳಿಂದ ಸುಲಭವಾಗಿ ಗುರುತಿಸಬಹುದು.

ಈ ಹಂತಗಳ ನಡುವೆ ಮಂದಗತಿಯ ಭೂ ಚಟುವಟಿಕೆಗಳು ತಲೆದೋರಿ ಆ ಕಾಲದ ಸಮುದ್ರಗಳಲ್ಲಿನ ನಿಕ್ಷೇಪ ಕಾರ್ಯವಿಧಾನವೇ ಬಲುಮಟ್ಟಿಗೆ ಬದಲಾಯಿತು. ಸೇಂಟ್ ಜಾರ್ಜ್‌ಲ್ಯಾಂಡ್ ಮತ್ತು ಪೂರ್ವ ಆ್ಯಂಗ್ಲಿಯ ಒಂದಾಗಿ ಕ್ರಮೇಣ ಬ್ರಂಬಟ್ ದ್ವೀಪದೊಡನೆ ಐಕ್ಯವಾಗಿ ದಕ್ಷಿಣ ಇಂಗ್ಲೆಂಡ್ ವಿಸ್ತಾರಗೊಂಡಿತು. ಬ್ರಿಸ್ಟಲ್ ಕಾಲುವೆ ಇನ್ನೂ ವಿಸ್ತಾರವಾಗಿತ್ತು. ಇಲ್ಲಿ ಜೇಡು ಮತ್ತು ಮರಳು ಶಿಲಾಸ್ತರಗಳಿಂದಾದ ಕಲ್ಮ್ ಮೆಷರ್ಸ್ ಎಂಬ ಶಿಲಾಶ್ರೇಣಿ ನಿಕ್ಷೇಪಗೊಂಡಿತು. ಪೆನ್ನೈನ್ ಪ್ರದೇಶಗಳಲ್ಲಿ ವಿಸ್ತಾರವಾದ ನದೀಮುಖಜ ಭೂಮಿ ಉಂಟಾಗಿ ಇಡೀ ಉತ್ತರ ಇಂಗ್ಲೆಂಡ್ ಮತ್ತು ಈಶಾನ್ಯ ವೇಲ್ಸನ್ನೂ ಕ್ರಮೇಣ ಆಕ್ರಮಿಸಿಕೊಂಡು ಬಹು ವಿಸ್ತಾರವಾದ ಭೂಭಾಗ ತಲೆದೋರಿತು. ಇದು ನಮ್ಮ ದೇಶದ ಗಂಗಾ–ಬ್ರಹ್ಮಪುತ್ರ ಬಯಲಿನಷ್ಟು ವಿಸ್ತಾರವಾಗಿತ್ತೆಂದು ಊಹಿಸಲಾಗಿದೆ. ಇದರ ಶಿಲಾಸಂಯೋಜನೆ ಏಕರೀತಿಯದಾಗಿರದೆ ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ಬದಲಾಯಿಸುತ್ತಿತ್ತು. ಆಗ ಶೇಖರವಾದ ದಪ್ಪ ಕಣ ರಚನೆಯ ಮರಳು ಶಿಲೆಗಳನ್ನು ಮಿಲ್‌ಸ್ಟೋನ್‌ಗ್ರಿಟ್ ಎಂದು ಹೆಸರಿಸಿದ್ದಾರೆ. ಭೂಭಾಗದ ಅನೇಕ ಕಡೆ ಕಾಡುಗಳಿದ್ದವು. ಆಗಾಗ ತೋರಿದ ಭೂ ಕುಸಿತಗಳ ಪರಿಣಾಮವಾಗಿ ಸಸ್ಯರಾಶಿ ಆಳದಲ್ಲಿ ಹುದುಗಿ ಮರಳಿನಿಂದ ಮುಚ್ಚಿಹೋಗಿ ಕಲ್ಲಿದ್ದಲ ಸ್ತರಗಳಾಗಿ ಮಾರ್ಪಟ್ಟಿತು. ಇಂದಿನ ಅನೇಕ ಕಲ್ಲಿದ್ದಲ ಗಣಿಗಳು ಈ ಭಾಗದಲ್ಲೇ ಇವೆ.

ಯುಗದ ಅಂತ್ಯದಲ್ಲಿ ತೀವ್ರಗತಿಯ ಭೂ ಚಟುವಟಿಕೆಗಳು ಮತ್ತೆ ತಲೆದೋರಿದುವು, ಇದಕ್ಕೆ ಸಂಬಂಧಿಸಿದ ಪರ್ವತಜನ್ಯ ಶಕ್ತಿಗಳನ್ನು ಆರ್ಮೊರಿಕನ್, ಹರ್ಸಿನಿಯನ್, ಅಲ್ಟಾಯಿಡ್ ಮತ್ತು ವಾರ್ಸಿಕನ್ ಎಂದು ವಿವಿಧ ಘಟ್ಟಗಳಾಗಿ ಹೆಸರಿಸಲಾಗಿದೆ. ಇದು ಬಹುಮಟ್ಟಿಗೆ ಭೂಭಾಗಗಳ ಮೇಲ್ಮೈ ಲಕ್ಷಣಗಳನ್ನೇ ಬದಲಾಯಿಸಿದವು. ಯುರೋಪ್ ಖಂಡದಲ್ಲಂತೂ ಇವುಗಳ ಹಾವಳಿ ಬಹು ತೀವ್ರವಾಗಿತ್ತು. ಬಹುಶಃ ಪ್ಲಿಯೊಸೀನ್ ಯುಗಕ್ಕೆ ಕೊಂಚ ಮೊದಲು ಈ ಶಕ್ತಿಗಳು ಕುಗ್ಗಿದುವು.

ಪರ್ಮಿಯನ್ ಮತ್ತು ಟ್ರೈಯಾಸಿಕ್ ಯುಗಗಳು: (190–280 ದಶಲಕ್ಷ ವರ್ಷಗಳ ಹಿಂದಿನ ಕಾಲ): ಕಾರ್ಬಾನಿಫೆರಸ್ ಯುಗದ ಅನಂತರ ಮತ್ತು ಪರ್ವತ ಜನ್ಯ ಯುಗದಲ್ಲಿ ಇಡೀ ಬ್ರಿಟನ್ನಿನಲ್ಲಿ ಉಷ್ಣವಲಯದ ಮರಳುಗಾಡಿನ ವಾತಾವರಣವಿತ್ತು. ಮರಳು ಶಿಲೆಗಳು ನಿಕ್ಷೇಪಗೊಂಡವು. ಹಲವಾರು ಸರೋವರಗಳಲ್ಲಿ ಲವಣಗಳು ಶೇಖರವಾದುವು. ಚೆಷೈರ್ ಪ್ರಾಂತ್ಯದ ಸಮುದ್ರಭಾಗಗಳು ಭೂಮಧ್ಯ ಸಮುದ್ರವಾದ ಟೆಥಿಸಿನೊಡನೆ ಸಂಪರ್ಕ ಹೊಂದಿತ್ತು.

ಟ್ರೈಯಾಸಿಕ್ ಶಿಲಾಸ್ತರಗಳು ಮೀಸೋಜೋಯಿಕ್ ಕಲ್ಪದ ಮೊದಲ ಹಂತಕ್ಕೆ ಸೇರಿವೆ. ಪೆನ್ನೈನ್ ಶ್ರೇಣಿ ಈಡನ್ ಮತ್ತು ಕ್ಲಡ್ ಕಣಿವೆಗಳಲ್ಲಿ ಅಷ್ಟು ಮಂದವಲ್ಲದ ಪ್ಲಿಸ್ಟೊಸೀನ್ ಹಿಮಕಲ್ಪದ ಸ್ತರಗಳಿಂದ ಆವೃತವಾಗಿದೆ.

ಜೂರಾಸಿಕ್ ಯುಗ (135–90 ದಶಲಕ್ಷ ವರ್ಷಗಳ ಹಿಂದಿನ ಕಾಲ): ಈ ಯುಗದ ಶ್ರೇಣಿಯಲ್ಲಿ ಮರಳು ಶಿಲೆ ಮತ್ತು ಜೇಡು ಶಿಲಾಸ್ತರಗಳಿವೆ. ಇವು ನೀಳವಾದ ಜಾಡಿನಲ್ಲಿ ಡಾರ್ಸೆಟ್ ತೀರದಲ್ಲಿ ಪ್ರಾರಂಭವಾಗಿ ನಾರ್ಥ್ಯಾಂಪ್ಟನ್‌ಷೈರ್, ಹಂಬರ್ ಕಣಿವೆ. ಪಿಕರಿಂಗ್ ಕಣಿವೆ, ಕ್ಲೀವ್‌ಲ್ಯಾಂಡ್ ಬೆಟ್ಟಗಳು ಮತ್ತು ಉತ್ತರ ಯಾರ್ಕ್‌ಷೈರ್ ಮೈದಾನಗಳಲ್ಲಿ ವಿಸ್ತಾರಗೊಂಡಿವೆ. ಯುಗದಲ್ಲಿ ಇಂಗ್ಲೆಂಡಿನ ಬಹುಭಾಗ ಭೂಪ್ರದೇಶವಾಗಿತ್ತು.

ಕ್ರಿಟೇಷಿಯಸ್ ಯುಗ (65–135 ದಶ ಲಕ್ಷ ವರ್ಷಗಳ ಹಿಂದಿನ ಕಾಲ) : ನೆಲದ ಮಟ್ಟ ಕುಗ್ಗುತ್ತ ಟೆಥಿಸ್ ಸಮುದ್ರ ಹೆಚ್ಚು ವಿಸ್ತಾರವಾಗುತ್ತ ಹೋಯಿತು. ಕ್ರಿಟೇಷಿಯಸ್ (ವೀಲ್ಡನ್) ಪ್ರಸ್ತರಗಳು ಆಗ್ನೇಯ ಇಂಗ್ಲೆಂಡಿನ ತೀರದುದ್ದಕ್ಕೂ ಶೇಖರವಾದವು. ಕಡಲ ತೀರ ಕ್ರಮೇಣ ವೇಲ್ಸಿನತ್ತ ಸರಿಯಿತು. ವೀಲ್ಡ್ ಜೇಡುಶಿಲೆ ಮತ್ತು ಹಸಿರು ಮರಳುಶಿಲೆ ಈ ಕಾಲದ ಮುಖ್ಯ ನಿಕ್ಷೇಪಗಳು. ಮೇಲಿನ ಕ್ರಿಟೇಷಿಯಸ್ ಯುಗದ ವೇಳೆಗೆ ಯುರೋಪಿನ ಬಹುಭಾಗ (ಬ್ರಿಟನ್ನೂ ಸೇರಿ) ಮುಳುಗಡೆಯಾಗಿತ್ತು. ಇದಕ್ಕೆ ಮೂಲಕಾರಣ ಆಲ್ಬಿಯನ್ ಮತ್ತು ಸೈನೊಮೇನಿಯನ್ ಸಮುದ್ರದ ಆಕ್ರಮಣಗಳು. ಹೀಗೆ ಆವೃತವಾದ ಭೂಭಾಗಗಳಲ್ಲಿ ಗಾಲ್ಟ್ ಜೇಡು ಮತ್ತು (ಚಾಕ್) ಸೀಮೆಸುಣ್ಣ ಶಿಲಾಸ್ತರಗಳು ನಿಕ್ಷೇಪ ಕಂಡವು, ಚಾಕ್ ಸ್ತರಗಳನ್ನು ಸ್ಯಾಲಿಸ್ ಬರಿ, ಡಾರ್ಸೆಟ್, ಚಿಲ್ಟರ್ನ್ ಬೆಟ್ಟಗಳು, ಡೋವರ್ ಮತ್ತು ಉತ್ತರಕ್ಕೆ ಯಾರ್ಕ್‌ಷೈರ್ ವೋಲ್ಡುಗಳ ತನಕ ಗುರುತಿಸಬಹುದು. ಹೀಗೆ ಚಾಕ್ ಬ್ರಿಟನ್ನಿನ ಬಹುಭಾಗವನ್ನು ಆವರಿಸಿತ್ತು.

ಯುಗದ ಅಂತ್ಯದಲ್ಲಿ ಇಂಗ್ಲೆಂಡಿನ ಬಹುಭಾಗ ಮಟ್ಟಸವಾದ ಚಾಕ್ ಸ್ತರಗಳಿಂದ ಆವೃತವಾಗಿತ್ತು. ಆಲ್ಪೈನ್ ಪರ್ವತಜನ್ಯ ಯುಗವೇ ಮೊದಲಾಗಿ ಮುಂದೆ ಇಡೀ ಟರ್ಷಿಯರಿ ಯುಗದ ಉದ್ದಕ್ಕೂ ಪಸರಿಸಿತು. ಇದು ಯುರೋಪಿನಲ್ಲಿ ಬಹು ತೀವ್ರವಾಗಿದ್ದು ಇಂಗ್ಲೆಂಡಿನಲ್ಲಿ ಅದರ ಬಿಸಿ ಮಾತ್ರ ತಟ್ಟಿತ್ತು. ವೀಲ್ಡ್ ಉಬ್ಬು ಮತ್ತು ಥೇಮ್ಸ್ ತಗ್ಗು ಈ ಕಾಲದಲ್ಲೇ ತಲೆದೋರಿದುವು.

ಪೇಲಿಯೊಸೀನ್, ಇಯೋಸಿನ್, ಮತ್ತು ಅಲಿಗೊಸಿನ್ ಯುಗಗಳು (25–65 ದಶಲಕ್ಷ ವರ್ಷಗಳ ಹಿಂದಿನ ಕಾಲ): ಇಯೋಸಿನ್ ಯುಗದಲ್ಲಿ ಇಳಿಕಲು ಜಲಾಶಯದ ತುಂಬ ವಿವಿಧ ಬಗೆಯ ಮರಳು ಮತ್ತು ಜೇಡಿಮಣ್ಣು ಶೇಖರವಾದುವು. ಈ ಯುಗದ ಉತ್ತಮ ಉದಾಹರಣೆ ಹ್ಯಾಂಪ್‌ಷೈರ್ ತಗ್ಗು.

ಆಲಿಗೊಸಿನ್ ಯುಗದಲ್ಲಿ ಶೇಖರಣೆ ಬಹುಮಟ್ಟಿಗೆ ಹೀಗೆಯೇ ಮುಂದುವರಿಯಿತಾದರೂ ಆಗಾಗ ಕಡಲಿನ ಮತ್ತು ಸರೋವರ ಸನ್ನಿವೇಶಗಳು ಉಂಟಾಗುತ್ತಿದ್ದವು.

ಮಯೋಸೀನ್ ಯುಗ (12–25 ದಶಲಕ್ಷ ವರ್ಷಗಳ ಹಿಂದಿನ ಕಾಲ): ನೆಲಭಾಗ ಹೆಚ್ಚು ವಿಸ್ತಾರವಾಯಿತು. ಇದಕ್ಕೆ ಕಾರಣ ಭೂಭಾಗ ಮೇಲಕ್ಕೆ ಒಯ್ಯಲ್ಪಟ್ಟಿತು ಅಥವಾ ನೀರಿನ ಮಟ್ಟ ಕುಗ್ಗುತ್ತ ಹೋಯಿತು. ಹೀಗಾಗಿ ಈಗಿನ ಇಡೀ ಇಂಗ್ಲೆಂಡ್ ರೂಪುಗೊಂಡಿತೆನ್ನಬಹುದು. ಯಾವ ಬಗೆಯ ಜಲಜನಿಕ್ಷೇಪಗಳೂ ಶೇಖರವಾಗಲಿಲ್ಲ ನೆಲಭಾಗದಲ್ಲಿ ಭೂಸವೆತ ಮುಖ್ಯವಾಗಿತ್ತು. ಪಶ್ಚಿಮ ಭಾಗಗಳಲ್ಲಿದ್ದ ಚಾಕ್ ಸ್ತರಗಳು ನಶಿಸಿ ವೇಲ್ಸಿನ ಬೆಟ್ಟಗಳು ಪೆನ್ನೈನ್ ಬೆಟ್ಟಗಳು ಲೇಕ್ ಜಿಲ್ಲೆ ಮತ್ತು ಇತರ ಬೆಟ್ಟಗಳ ಸಾಲು ರೂಪುಗೊಂಡವು. ಟ್ರೈಯಾಸಿಕ್ ಶ್ರೇಣಿಗಳು ಸವೆತಕ್ಕೊಳಗಾಗಿ ಪ್ರಸ್ತಭೂಮಿ ತಲೆದೋರಿತು. ಒಟ್ಟಿನಲ್ಲಿ ಈಗಿನ ಮೇಲ್ಮೈ ಲಕ್ಷಣ ರೂಪುಗೊಂಡಿತು.

ಪ್ಲಿಯೊಸೀನ್ ಯುಗ (1–11 ದಶಲಕ್ಷ ವರ್ಷಗಳ ಹಿಂದಿನ ಕಾಲ): ಇಂಗ್ಲೆಂಡಿನ ಸಣ್ಣಪುಟ್ಟ ಪ್ರದೇಶಗಳಲ್ಲಿ ಅದರಲ್ಲೂ ಪೂರ್ವ ಆ್ಯಂಗ್ಲಿಯ ಮತ್ತು ಥೇಮ್ಸ್ ತಗ್ಗುಗಳಲ್ಲಿ ನೀರು ತುಂಬಿತು. ಸಮುದ್ರದ ನೀರಿನ ಮಟ್ಟದಲ್ಲೂ ಕೊಂಚ ಏರುಪೇರಾಯಿತು. ಹೀಗಾಗಿ ಕ್ರ್ಯಾಗ್ ಎಂಬ ವಿಶೇಷ ರೀತಿಯ ಮರಳು, ಜೇಡು ಮತ್ತು ಕಪ್ಪೆಚಿಪ್ಪಿನ ಚೂರುಗಳಿಂದ ಕೂಡಿದ ಜಲಜಶಿಲೆ ಪೂರ್ವ ಆ್ಯಂಗ್ಲಿಯದ ಕರಾವಳಿಯುದ್ದಕ್ಕೂ ನಿಕ್ಷೇಪಗೊಂಡಿತು.

ಪ್ಲಿಸ್ಟೊಸೀನ ಯುಗ (1 ದಶಲಕ್ಷ ವರ್ಷಗಳ ಹಿಂದಿನವರಗೆ): ಪ್ಲಿಯೊಸೀನ್ ಯುಗದ ಅಂತ್ಯದಲ್ಲಿ ಶೀತವಾಯುಗುಣ ತಲೆದೋರಿ ಇಂಗ್ಲೆಂಡಿನ ಅನೇಕ ಭಾಗಗಳು ನೀರ್ಗಲ್ಲಿನ ಪ್ರವಾಹಗಳಿಂದ ಆವೃತವಾದುವು. ಅಲ್ಲದೆ, ಇವುಗಳ ಕಾರ್ಯಾಚರಣೆ ಈಗಿನ ಇಂಗ್ಲೆಂಡಿನ ನೈಸರ್ಗಿಕ ಚೆಲುವಿಗೆ ಮೂಲಕಾರಣವಾಯಿತು. (ಬಿ.ವಿ.ಜಿ.)

ಭೂಗುಣ: ಖನಿಜ ಸಂಪತ್ತು: ವೇಲ್ಸ್ ಭೂಭಾಗವೂ ಸೇರಿದ ದಕ್ಷಿಣ ಬ್ರಿಟನ್ನಿನ ಭೂಪ್ರದೇಶವನ್ನು ಉತ್ತರ–ಪಶ್ಚಿಮಗಳು ಎತ್ತರ ಪ್ರದೇಶವೆಂದೂ ದಕ್ಷಿಣ–ಪೂರ್ವಗಳು ತಗ್ಗು ಪ್ರದೇಶವೆಂದೂ ವಿಂಗಡಿಸುವುದು ಸಾಧ್ಯ. ಇದೇ ಆಧಾರದ ಮೇಲೆ ಇದರ ಭೂಗುಣವನ್ನೂ ವಿಂಗಡಿಸಬಹುದು. ಉತ್ತರ–ಪಶ್ಚಿಮ ಪ್ರದೇಶದ ಮಣ್ಣು ಆಮ್ಲಮಯ.

ಸ್ವಾಭಾವಿಕ ಸಸ್ಯವರ್ಗ

ಅದರ ಫಲವತ್ತು ಕಡಿಮೆ. ಅಧಿಕವಾಗಿ ಬೀಳುವ ಮಳೆಯಿಂದ ಅದರ ಸಾರ ಕೊಚ್ಚಿಹೋಗಿದೆ. ದಕ್ಷಿಣ ಪೂರ್ವ ಪ್ರದೇಶದಲ್ಲಿ ಆಮ್ಲತ್ವವಿಲ್ಲ, ಕ್ಷಾರಗುಣವಿದೆ. ಒಟ್ಟಾರೆ ಇಲ್ಲಿ ಕಲ್ಲು ನೆಲದಿಂದ ಜೇಡಿಮಣ್ಣಿನವರೆಗೆ ಅನೇಕ ಬಗೆಯ ಭೂಗುಣಗಳಿವೆ. ಮಳೆ ತೊಳೆದ ಪರ್ವತಪ್ರದೇಶಗಳಿಂದ ಹಿಡಿದು, ಮೆಕ್ಕಲು ಮಣ್ಣಿನ ನದೀಪ್ರದೇಶದವರೆಗೆ ಉದ್ದಕ್ಕೂ ಮೇಲುಮಣ್ಣಿನ ಪದರದ ಗಾತ್ರವೂ ವ್ಯತ್ಯಾಸವಾಗುತ್ತದೆ. ದಕ್ಷಿಣ–ಪೂರ್ವದ ಇಳಿಜಾರು ನೆಲದಲ್ಲಿ ವ್ಯವಸಾಯ ಹೆಚ್ಚು ಸುಸೂತ್ರ.

ಈ ಪ್ರದೇಶದಲ್ಲಿ ವೈವಿಧ್ಯಪೂರ್ಣ ಖನಿಜಸಂಪತ್ತು ಸಾಕಷ್ಟು ಹರಡಿದೆ. ಖನಿಜಗಳಲ್ಲಿ ಕಲ್ಲಿದ್ದಲು ಮುಖ್ಯ. ಇದು ಅನೇಕ ಕಡೆಗಳಲ್ಲಿ ದೊರಕುತ್ತದೆ. ಪೆನ್ನೈನ್ ಪರ್ವತಶ್ರೇಣಿಯ ಪೂರ್ವ ಪಾರ್ಶ್ವದಲ್ಲಿ ಯಥೇಷ್ಟವಾಗಿದೆ. ಇದನ್ನು ಕಿಟ್ಟವಾಗಿ ಪರಿವರ್ತಿಸಿ ಲೋಹಕೈಗಾರಿಕೆಯಲ್ಲಿ ಉಪಯೋಗಿಸುತ್ತಾರೆ. ಯಾರ್ಕ್‌ಷೈರಿನ ಈಶಾನ್ಯದಲ್ಲಿರುವ ಕ್ಲೀವ್‌ಲ್ಯಾಂಡಿನಲ್ಲೂ ಉತ್ತರ ಲ್ಯಾಂಕ್‌ಷೈರಿನ ಫರ್ನೆಸ್ ಜಿಲ್ಲೆಯಲ್ಲೂ ಕಬ್ಬಿಣದ ಅದಿರು ಸಿಕ್ಕುತ್ತದೆ. ದೇಶಕ್ಕೆ ಅಗತ್ಯವಾದದ್ದಕ್ಕಿಂತ ಹೆಚ್ಚು ಕಲ್ಲಿದ್ದಲು ದೊರಕುವುದರಿಂದ ಅಧಿಕವಾದದ್ದನ್ನು ನಿರ್ಯಾತ

ಪಾರ್ಲಿಮೆಂಟ್ ಭವನಗಳು

ಮಾಡುವುದು ಸಾಧ್ಯ. ಆದರೆ ದೊರಕುವ ಕಬ್ಬಿಣ ದೇಶಕ್ಕೆ ಸಾಲದು. ಇದನ್ನು ಹೊರಗಿನಿಂದಲೂ ತರಿಸಿಕೊಳ್ಳಬೇಕಾಗುತ್ತದೆ. ದಕ್ಷಿಣ ಬ್ರಿಟನ್ನಿನಲ್ಲಿ ಕಟ್ಟಡನಿರ್ಮಾಣಕ್ಕೆ ಅಗತ್ಯವಾದ ಖನಿಜವಸ್ತುಗಳೂ ಪಿಂಗಾಣಿ ಕೈಗಾರಿಕೆಗೆ ಅಗತ್ಯವಾದ ಜೇಡಿಮಣ್ಣೂ ದೊರಕುತ್ತವೆ. ಸುಣ್ಣಶಿಲೆ, ಮರಳುಶಿಲೆ, ಗ್ರ್ಯಾವೆಲ್ ಇವು ಎಲ್ಲೆಲ್ಲೂ ಸಿಗುತ್ತವೆ. ಒಳ್ಳೆಯ ಗ್ರ್ಯಾನೈಟ್ ಶಿಲೆ ಕಾರ್ನ್‌ವಾಲ್, ಲೀಸೆಸ್ಟರುಗಳಲ್ಲೂ ಕಡಪಕಶಿಲೆ ಕಾರ್ನ್ ವಾಲ್ ಮತ್ತು ಡೇವನ್ನಿನಲ್ಲೂ ಸೀಮೆಸುಣ್ಣದ ಶಿಲೆ ಕೆಂಟಿನಲ್ಲೂ ಜಿಪ್ಸಂ, ಕಲ್ಲುಪ್ಪು, ಕಬ್ಬಿಣಶಿಲೆ, ಚಕಮಕಿ ಶಿಲೆ ಇವು ದಕ್ಷಿಣ ಬ್ರಿಟನ್ನಿನಲ್ಲೂ ಇವೆ. ಕಾರ್ನ್‌ವಾಲ್ ಒಂದಾನೊಂದು ಕಾಲದಲ್ಲಿ ತವರಕ್ಕೆ ಪ್ರಖ್ಯಾತವಾಗಿತ್ತು. ಆದರೆ ಅದೆಲ್ಲವೂ ಮುಗಿದಿದೆ. ಚಿನ್ನ ಬೆಳ್ಳಿಗಳೂ ಅಲ್ಲಲ್ಲಿವೆ. ಆದರೆ ಸಾಕಷ್ಟು ಪ್ರಮಾಣದಲ್ಲಿಲ್ಲವಾದ್ದರಿಂದ ಅವನ್ನು ತೆಗೆಯುವ ಪ್ರಯತ್ನ ಲಾಭದಾಯಕವಲ್ಲ.

ವನಸಂಪತ್ತು: ಈ ದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇ. 5ಕ್ಕಿಂತಲೂ ಕಡಿಮೆ ಪ್ರದೇಶದಲ್ಲಿ ಕಾಡುಗಳಿವೆ. ಆದರೆ ಮರಗಳಿಲ್ಲದ ಸ್ಥಳವೇ ಬಹಳ ವಿರಳ. ಅತ್ಯಂತ ಎತ್ತರದ ಪರ್ವತ ಶಿಖರದ ಕೋಡುಗಲ್ಲಿನ ಮೇಲ್ಭಾಗವನ್ನೂ ಅತಿ ತಗ್ಗಿನ ಜೌಗುನೆಲವನ್ನೂ ಬಿಟ್ಟರೆ ಉಳಿದೆಲ್ಲ ಕಡೆಗಳಲ್ಲೂ ಮರಗಳು ಅಸಂಖ್ಯಾತವಾಗಿವೆ. ಬೇಸಾಯದ ನೆಲವನ್ನು ವಿಸ್ತರಿಸುವುದಕ್ಕಾಗಿಯೂ ಮರದ ದಿಮ್ಮಿಗಳಿಗಾಗಿಯೂ ಹಿಂದಿನ ಕಾಲದ ಕಾಡುಗಳು ಬೇಗ ಕರಗುತ್ತಿವೆ. ಲೋಹ ಕೈಗಾರಿಕೆಗೆ ಅಗತ್ಯವಾದ ಇದ್ದಲಿಗೂ ಮರಗಳನ್ನು ಧಾರಾಳವಾಗಿ ಕಡಿಯಲಾಗುತ್ತಿತ್ತು. ಈಗ ಕಲ್ಲಿದ್ದಲ ಕಿಟ್ಟವನ್ನು ಇದಕ್ಕಾಗಿ ಉಪಯೋಗಿಸುತ್ತಿರುವುದರಿಂದ ಮರಗಳು ನಾಶವಾಗುತ್ತಿಲ್ಲ. ಈಚೆಗೆ ಮರದ ದಿಮ್ಮಿಗಳನ್ನೂ ಹೆಚ್ಚಾಗಿ ಆಯಾತ ಮಾಡಿಕೊಳ್ಳಲಾಗುತ್ತಿದೆ. ಹೊಸದಾಗಿ ಮರ ನೆಡುವ ಕಾರ್ಯವೂ ಸಾಗುತ್ತಿದೆ. ಹ್ಯಾಂಪ್‌ಷೈರಿನಲ್ಲೂ ಗ್ಲಾಸೆಸ್ಟರಿನಲ್ಲೂ ಎರಡು ಕಾಡುಗಳನ್ನು ಮಧ್ಯಯುಗದಿಂದಲೂ ರಕ್ಷಿಸಿಡಲಾಗಿದೆ. ಹಳೆಯ ಕಾಲದ ವನವೈಭವವನ್ನೂ ಸ್ವಲ್ಪಮಟ್ಟಿಗೆ ಇಲ್ಲಿ ಕಾಣಬಹುದು. ಉಳಿದ ಕಡೆಗಳಲ್ಲಿ ಕಾಡುಗಳು ಹೆಚ್ಚು ಕಡಿಮೆ ಅದೃಶ್ಯವಾಗಿವೆ.

ದಕ್ಷಿಣದಲ್ಲಿ ಮರಗಳು ಹೊರವಾಗಿ ಬೆಳೆಯುತ್ತವೆ. ಆದರೆ ಇವುಗಳಲ್ಲಿ ಹೆಚ್ಚು ವೈವಿಧ್ಯವಿಲ್ಲ. ಬಹಳ ಹಿಂದೆ, ಹಿಮಯುಗದ ಹಿಂದಿನ ಕಾಲದಲ್ಲಿ ಇಲ್ಲಿದ್ದ ಅನೇಕ ಜಾತಿಯ ಮರಗಳು ಹಿಮಾಚ್ಛಾದದಿಂದ ನಾಶವಾದವು. ಹಿಮದ ಕವಚ ಕರಗುವ ವೇಳೆಗೆ ಅಲ್ಲಿ ಇಂಗ್ಲಿಷ್ ಕಡಲ್ಗಾಲುವೆ ಉದ್ಭವವಾಯಿತು. ಬ್ರಿಟಿಷ್ ಓಕ್, ಬರ್ಚ್, ಬೀಚ್, ಆ್ಯಷ್, ವಿಲ್ಲೊ, ಆಸ್ಪೆನ್, ಆಲ್ಡರ್ ಮುಂತಾದ, ಚಳಿಗಾಲದಲ್ಲಿ ಎಲೆ ಉದುರುವ ಜಾತಿಯ ಮರಗಳು ಸಾಮಾನ್ಯವಾದುವು. ಈ ಜಾತಿಗೆ ಸೇರದ ಮರಗಳೂ ಉಂಟು. ವಾಲ್‌ನಟ್, ಚೆಸ್‌ನಟ್, ಪೈನ್ ಮತ್ತು ಬಾಕ್ಸ್ ಮರಗಳನ್ನು ಹೊರಗಿನಿಂದ ತಂದು ಇಲ್ಲಿ ಬೆಳೆಸಲಾಗಿದೆ.

ದಕ್ಷಿಣ ಬ್ರಿಟನ್ನಿನಲ್ಲಿ ಮರಗಳಿಗಿಂತ ಕುರುಚಲುಗಿಡಗಳು ಅಧಿಕ. ಗ್ರಾಮಪ್ರದೇಶದಲ್ಲಿ ಬೇಲಿಗಾಗಿ ಬೆಳೆಸುವ ಹಥಾರ್ನ್ ಅಲ್ಲದೆ ಹನಿಸಕ್ಲ್, ಹೇಜೆಲ್, ಬ್ರಿಯರ್, ಹಾಲಿಗಾರ್ಸ್ ಮತ್ತು ಹೀದರ್ ಮುಂತಾದವು ಬೆಳೆಯುತ್ತವೆ. ಇನ್ನೂ ನಾನಾ ಗಿಡಮೂಲಿಕೆಗಳೂ ಉಂಟು. ಇಲ್ಲಿನ ಸಾಹಿತ್ಯದಲ್ಲೂ ಇವುಗಳ ಉಲ್ಲೇಖವಿದೆ. ಆನಿವೆಮನಿ, ಬ್ಲೂಬೆಲ್, ಪ್ರಿಮ್‌ರೋಸ್, ಹೈಯಸಿಂಥ್, ಐರಿಸ್, ವೂಡ್ರಫ್, ಸ್ಟ್ರಾಬೆರಿ, ಬಟರ್‌ಕಪ್, ಡೇಯ್ಸಿ, ಡ್ಯಾಂಡೆಲಿಯನ್, ಕಾಡು ಜಿರೇನಿಯಂ, ಸ್ಕಾರ್ಲೆಟ್ ಪಾಪಿ, ಮೆಡೋಸ್ವೀಟ್, ಕೋಲ್ಟ್ಸ್‌ಫೂಟ್, ಸ್ಪೀಡ್‌ವೆಲ್, ಪೆನ್ನಿವಾರ್ಟ್ ಮುಂತಾದುವು ಇಂಥ ಕೆಲವು ಸಸ್ಯಗಳು. ಹುಲ್ಲೂ ಧಾರಾಳ. ಜೌಗು ನೆಲದಲ್ಲಿ ಫರ್ನ್ ಮತ್ತು ಸೆಡ್ಜ್ ಬೆಳೆಯುತ್ತವೆ. ಇಲ್ಲಿದ್ದ ಅನೇಕ ಸಸ್ತನಿ ಪ್ರಾಣಿಗಳು ಈ ನಾಡಿನ ದೀರ್ಘ ಭೂ ಇತಿಹಾಸ ಕಾಲದಲ್ಲಿ ನಶಿಸಿ ಹೋಗಿವೆ. ಈಚಿನವರೆಗೂ ಇದ್ದ ತೋಳ ಈಗಿಲ್ಲ. ಕೆಂಪು ಜಿಂಕೆಯೂ ಹೆಚ್ಚು ಕಡಿಮೆ ಸಾಕುಪ್ರಾಣಿಯಾಗಿದೆ. ನರಿಯೂ ಮೊಲವೂ ಬೇಟೆಗಾರನ ಸ್ವಾರ್ಥಮೂಲವಾದ ಕೃಪೆಯಿಂದ ಇನ್ನೂ ಉಳಿದಿವೆ. ಕುಂದಿಲಿಯೂ ಅಳಿಲೂ ಸ್ವಬುದ್ಧಿಬಲದಿಂದ ಪುರೋಭಿವೃದ್ಧಿ ಹೊಂದುತ್ತಿವೆ. ಜೌಗು ನೆಲಗಳೂ ಹಳ್ಳ ಕೊಳ್ಳಗಳೂ ಬತ್ತಿರುವುದುರಿಂದಲೂ ರಕ್ಷಣೆಯ ಅಭಾವದಿಂದಲೂ ಅನೇಕ ಹಕ್ಕಿಗಳು ಕಣ್ಮರೆಯಾಗಿವೆ. ಇಂಗ್ಲಿಷ್ ಗುಬ್ಬಚ್ಚಿಯೂ ಪಾರಿವಾಳವೂ ರೆಡ್‌ಬ್ರೆಸ್ಟ್ ಪಕ್ಷಿಯೂ ಉಳಿದುಕೊಂಡಿವೆ. ಬ್ಲ್ಯಾಕ್‌ಬರ್ಡ್, ಕುಕೂ, ಲಾರ್ಕ್, ನೈಟಿಂಗೇಲ್, ಟಿಟ್‌ಮೌಸ್, ಫೆಸೆಂಟ್ ಮುಂತಾದವು ಇನ್ನೂ ಬದುಕಿವೆ.

ಜನಸಾಂದ್ರತೆ, ಜನಜೀವನ: ಇಂಗ್ಲೆಂಡಿನ ಜನಸಂಖ್ಯೆ ಒಂದೇ ರೀತಿಯಾಗಿ ಹರಡಿಲ್ಲ. ನಗರ ಪ್ರದೇಶದಲ್ಲಿ ಎಕರೆಗೆ 200 ಜನರಿದ್ದರೆ ಪರ್ವತ ಪ್ರದೇಶದಲ್ಲಿ ನೂರು ಎಕರೆಗೆ ಒಬ್ಬನಂತೆಯೂ ಇಲ್ಲ. ಕಲ್ಲಿದ್ದಲ ಗಣಿಗಳ ಬಳಿಯ ಕೈಗಾರಿಕಾ ಕೇಂದ್ರಗಳಲ್ಲೂ ಲಂಡನ್, ಮ್ಯಾಂಚೆಸ್ಟರ್, ಬರ್ಮಿಂಗ್‌ಹ್ಯಾಂ ಮುಂತಾದ ಕೈಗಾರಿಕಾ ನಗರಗಳಲ್ಲೂ ಜನಸಾಂದ್ರತೆ ಹೆಚ್ಚು. ವ್ಯವಸಾಯ ಪ್ರದೇಶಗಳಲ್ಲಿ ಸಾಂದ್ರತೆ ಕಮ್ಮಿ. ಕಳೆದ ಕೆಲವು ಶತಮಾನಗಳಲ್ಲಿ ವಿವಿಧ ಪ್ರದೇಶಗಳ ಜನಸಾಂದ್ರತೆ ವ್ಯತ್ಯಾಸವಾಗುತ್ತಿದೆ. ಮೊದಲು ಹಳ್ಳಿಗಳಿಂದ ಪಟ್ಟಣಗಳ ಕಡೆಗೆ ಜನಪ್ರವಾಹವಿತ್ತು. ಹೊಲಕ್ಕೆ ಆವರಣ ಹಾಕುವ ಚಳುವಳಿಯ ಫಲವಾಗಿ ಅನೇಕರು ನೆಲ ಕಳೆದುಕೊಂಡು ಪಟ್ಟಣಗಳಿಗೆ ಬಂದರು. 18ನೆಯ ಶತಮಾನದ ಕೊನೆಯಲ್ಲೂ 19ನೆಯ ಶತಮಾನದಲ್ಲೂ ಸಂಭವಿಸಿದ ಕೈಗಾರಿಕಾ ಕ್ರಾಂತಿಯಿಂದ ಪಟ್ಟಣಗಳು ಬೆಳೆದುವು. ಮೊದಲು ಕಲ್ಲಿದ್ದಲ ಗಣಿಗಳ ಬಳಿ ಜನದಟ್ಟಣೆ ಹೆಚ್ಚಿತು. 19ನೆಯ ಶತಮಾನದ ಉತ್ತರಾರ್ಧದಿಂದ ಕೈಗಾರಿಕೆಗಳು ಕಲ್ಲಿದ್ದಲನ್ನೇ ನೇರವಾಗಿ ಅವಲಂಬಿಸುವುದು ಕಮ್ಮಿಯಾಗಿ ಇತರ ಕಡೆಗಳಲ್ಲೂ ಕೈಗಾರಿಕೆಗಳು ಬೆಳೆದುವು. ಅನೇಕ ನಗರಗಳು ಅತಿಯಾಗಿ ಬೆಳೆದವು. ಕೈಗಾರಿಕಾ ಜನಸಂಖ್ಯೆಯ ಭೌಗೋಲಿಕ ವಿತರಣೆಯನ್ನು ಕುರಿತ ಬಾರ್ಲೊ ಸಮಿತಿಯ ಸಲಹೆಯಂತೆ ಲಂಡನ್ನಿನ ಸುತ್ತಲೂ ವಾಯವ್ಯ ಇಂಗ್ಲೆಂಡಿನಲ್ಲೂ ಡರ್‌ಹ್ಯಾಮಿನಲ್ಲೂ ಹೆಚ್ಚುವರಿ ಜನಸಂಖ್ಯೆಗಾಗಿ ಹೊಸ ನಗರಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಯಿತು. 1944ರಲ್ಲಿ ರಚಿತವಾಗಿದ್ದ ವಿಚಾರಣಾ ಸಮಿತಿಯವರು 1949ರಲ್ಲಿ ನೀಡಿದ ವರದಿಯ ಪ್ರಕಾರ ಅಲ್ಲಿ 20ನೆಯ ಶತಮಾನದಲ್ಲಿ ಜನಸಂಖ್ಯೆಯ ಬೆಳವಣಿಗೆ 19ನೆಯ ಶತಮಾನದಲ್ಲಿದ್ದ ಬೆಳವಣಿಗೆಗಿಂತ ಕಮ್ಮಿ. 45 ವರ್ಷಗಳ ಕೆಳಗಿನವರ ಮರಣ ಪ್ರಮಾಣ ಇಳಿಯುತ್ತಿದೆ. ಆಯುಃಪ್ರಮಾಣ ವಿಸ್ತರಿಸುತ್ತಿದೆ. ಜನನ ಪ್ರಮಾಣ 1920–22 ರಿಂದ 1933ರ ವರೆಗಿನ ಅವಧಿಯಲ್ಲಿ ಬಹಳಮಟ್ಟಿಗೆ ಇಳಿಯಿತು; 1933–1941ರ ವರೆಗೆ ಹೆಚ್ಚು ಕಡಿಮೆ ಸ್ಥಿರವಾಗಿತ್ತು; 1942ರಿಂದ ಏರಲಾರಂಭಿಸಿತು. 1920 ರಿಂದ 1941ರ ವರೆಗೆ ಜನನ ಪ್ರಮಾಣ ಇಳಿದಿದ್ದರಿಂದ

ಟವರ್ ಬ್ರಿಜ್

1950ರ ಹಾಗೂ 1960ರ ದಶಕಗಳಲ್ಲಿ 15–19 ವಯಸ್ಸಿನವರೆಗಿನವರ ಪ್ರಮಾಣ ಇಳಿಯುವುದೆಂದೂ 65ಕ್ಕಿಂತ ಹೆಚ್ಚು ವಯಸ್ಸಿನವರ ಪ್ರಮಾಣ ಏರುವುದೆಂದೂ ಆ ಸಮಿತಿ ಅಭಿಪ್ರಾಯಪಟ್ಟಿತ್ತು. ಇಂಗ್ಲೆಂಡಿನಲ್ಲಿ ಬಹಳ ಹಿಂದಿನಿಂದಲೂ ಗಂಡಸರಿಗಿಂತ ಹೆಂಗಸರ ಸಂಖ್ಯೆಯೇ ಹೆಚ್ಚಾಗಿದೆ; ಆದರೆ ಜನಿಸುವ ಶಿಶುಗಳಲ್ಲಿ ಗಂಡುಮಕ್ಕಳದೇ ಹೆಚ್ಚಿನ ಸಂಖ್ಯೆ. ಗಂಡಸರಲ್ಲಿ ಸಾವಿನ ಪ್ರಮಾಣ ಹೆಚ್ಚು. 1953ರಲ್ಲಿ ಪ್ರತಿಸಾವಿರ ಜನಸಂಖ್ಯೆಗೂ 12.2 ಮಂದಿ ಪುರುಷರೂ 10.7 ಮಂದಿ ಸ್ತ್ರೀಯರೂ ಸತ್ತರು.

ಇಂಗ್ಲೆಂಡಿನ ಜನರು ನಾನಾ ಬುಡಕಟ್ಟುಗಳಿಗೆ ಸೇರಿದವರಾದರೂ ಸಮಾನ ಲಕ್ಷಣ ಹೊಂದಿದ್ದಾರೆ. ಹಿಂದೆ ಇಲ್ಲಿದ್ದ ಪುರಾತನ ಶಿಲಾಯುಗದ ಜನರದಾಗಲಿ ಕಂಚುಕಂಚಿನ ಯುಗದ ಜನರದಾಗಲಿ ಕುರುಹುಗಳು ಈಗಿನ ಜನರಲ್ಲಿ ಕಾಣಿಸುವುದಿಲ್ಲ. ಕೆಲ್ಟಿಕ್ ಮಾತಾಡುತ್ತಿದ್ದ

ಒರಟಾದ, ಉದ್ದನೆಯ, ಉದ್ದತಲೆಯ, ನಸು ಹೊಂಬಣ್ಣದ ಬ್ರಿಟನ್ ಜನರ ಛಾಯೆ ಬಹುಮಟ್ಟಿಗೆ ವೇಲ್ಸಿನಲ್ಲೂ ಕೆಲಮಟ್ಟಿಗೆ ಇಂಗ್ಲೆಂಡಿನಲ್ಲೂ ಉಳಿದಿದೆ. ನಾಲ್ಕು ಶತಮಾನಗಳ ಕಾಲ ರೋಮನ್ನರು ಈ ದೇಶವನ್ನಾಕ್ರಮಿಸಿದ್ದರ ಫಲವಾಗಿ ನಿರೀಕ್ಷಿಸಿದಷ್ಟಿಲ್ಲದಿದ್ದರೂ ಅಷ್ಟಿಷ್ಟು ಮಟ್ಟಿಗಾದರೂ ಇಲ್ಲಿ ಮೆಡಿಟರೇನಿಯನ್ ಜನರ ಲಕ್ಷಣಗಳು ಬೆರೆತಿವೆ. ಆಂಗ್ಲ, ಸ್ಯಾಕ್ಸನ್, ಜೂಟ್ ಮತ್ತು ಡೇನ್ ವಲಸೆಗಾರರ ಗುಣಗಳು ಬಹಳಮಟ್ಟಿಗೆ ಮಿಶ್ರವಾಗಿವೆ. ನಾರ್ಮನ್ ಆಕ್ರಮಣವಾದ ಬಹುಕಾಲದ ಮೇಲೆ ಐರಿಷ್ ವಲಸೆಗಾರರೂ ಇಲ್ಲಿ ಮಿಶ್ರಗೊಂಡಿದ್ದಾರೆ. ಆದರೆ ನಾರ್ಮನ್ನರ ಪ್ರಭಾವ ತುಂಬ ಹೆಚ್ಚು. ಯಹೂದಿ ಹಾಗೂ ಹ್ಯೂಗನಾಟ್‌ಗಳ ರಕ್ತಗಳೂ ಸ್ವಲ್ಪ ಮಟ್ಟಿಗೆ ಬೆರೆತಿವೆ.

ಮತ : 1851ರಿಂದೀಚೆಗೆ ಬ್ರಿಟಿಷ್ ಜನಗಣತಿಯಲ್ಲಿ ಪ್ರಜೆಗಳ ಮತಸಂಬಂಧವಾದ ಅಂಕಿ ಅಂಶಗಳನ್ನು ಸೂಚಿಸುತ್ತಿಲ್ಲ. ಆ್ಯಂಗ್ಲಿಕನ್ ಚರ್ಚಿಗೆ ಸೇರಿದವರಿಗಿಂತ ರೋಮನ್ ಕ್ಯಾಥೊಲಿಕ್ ಚರ್ಚಿಗೆ ಸೇರಿದವರ ಸಂಖ್ಯೆಯೇ ಸ್ವಲ್ಪ ಹೆಚ್ಚಾಗಿದೆಯೆಂದು ತಿಳಿದುಬಂದಿದೆ. ಈ ಎರಡು ಪಂಗಡಗಳವರ ಸಂಖ್ಯೆಯನ್ನು ಸೇರಿಸಿದರೆ ಅದು ಇತರ ಎಲ್ಲ ಪ್ರಾಟೆಸ್ಟಂಟ್ ಪಂಗಡಗಳಿಗಿಂತ ಸ್ವಲ್ಪ ಹೆಚ್ಚು. ಆದರೂ ಇಂಗ್ಲೆಂಡಿನಲ್ಲಿ (ವೇಲ್ಸಿನಲ್ಲೂ) ನೆರವೇರುವ ಎಲ್ಲ ವಿವಾಹಗಳಲ್ಲಿ ಅರ್ಧಕ್ಕಿಂತ ಹೆಚ್ಚು ಸಂಖ್ಯೆಯ ಮದುವೆಗಳು ಆ್ಯಂಗ್ಲಿಕನ್ ಚರ್ಚಿನಲ್ಲಿ ನಡೆಯುತ್ತವೆ. ನೂರಕ್ಕೆ ಹತ್ತಕ್ಕಿಂತ ಕಡಿಮೆ ಸಂಖ್ಯೆಯ ವಿವಾಹಗಳು ರೋಮನ್ ಕ್ಯಾಥೊಲಿಕ್ ಚರ್ಚಿನಲ್ಲಿ ನಡೆಯುತ್ತವೆ. ಶೇ.30ರಷ್ಟು ಶಾಸನಿಕ ವಿವಾಹಗಳು ನಡೆಯುತ್ತವೆ. ಆ್ಯಂಗ್ಲಿಕನ್ ಚರ್ಚಿಗೆ ವಿಧಿಬದ್ಧವಾಗಿ ಸೇರದಿದ್ದರೂ ಇಂಗ್ಲೆಂಡಿನಲ್ಲಿ ಹೆಚ್ಚು ಸಂಖ್ಯೆಯ ಜನ ಆ ಸಂಸ್ಥೆಯೊಂದಿಗೆ ಸಂಬಂಧ ಹೊಂದಿದ್ದಾರೆಂಬುದು ಈ ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ **(ನೋಡಿ– ಇಂಗ್ಲೆಂಡಿನ–ಚರ್ಚು)**.

*

**ಇಂಗ್ಲೆಂಡಿನ ಆರ್ಥಿಕ ಬೆಳೆವಣಿಗೆ:** ಮಧ್ಯಯುಗದಲ್ಲಿ ಬೇಸಾಯದ ಸ್ಥಿತಿ: ಮಧ್ಯಯುಗದಲ್ಲಿ ಬ್ರಿಟನ್ನಿನ ವ್ಯವಸಾಯ ತೀರ ಹಿಂದುಳಿದಿತ್ತು. ಬೇಸಾಯದ ನೆಲಕ್ಕೆ ಬೇಲಿ ಹಾಕುವ ಕ್ರಮ ಇನ್ನೂ ಬಂದಿರಲಿಲ್ಲ. ಅನಾವೃತ ನೆಲದಲ್ಲಿ ಬೇಸಾಯ ನಡೆಯುತ್ತಿತ್ತು. ಜಾರಿಯಲ್ಲಿದ್ದುದು ತ್ರಿಪ್ರದೇಶ ವ್ಯವಸಾಯ ಕ್ರಮ. ವ್ಯವಸಾಯಯೋಗ್ಯವಾದ ಜಮೀನನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದ್ದು ಇವುಗಳಲ್ಲಿ ಎರಡು ಭಾಗಗಳಲ್ಲಿ ಮಾತ್ರ ಬೆಳೆ ತೆಗೆಯಲು ಉಪಯೋಗಿಸಿಕೊಂಡು ಮತ್ತೊಂದು ಭಾಗವನ್ನು ಬೀಳುಬಿಡಲಾಗುತ್ತಿತ್ತು. ಪ್ರತಿಯೊಂದು ಭಾಗವನ್ನೂ ಸರದಿಯ ಪ್ರಕಾರ ಬೀಳು ಬಿಡುತ್ತಿದ್ದರು. ಈ ಸರದಿ ಹೀಗೆ ಇರುತ್ತಿತ್ತು.

| ವರ್ಷ | ಮೊದಲನೆಯ ಭಾಗದ ಭೂಮಿಯಲ್ಲಿನ ಬೆಳೆ | ಎರಡನೆಯ ಭಾಗದ ಭೂಮಿಯಲ್ಲಿನ ಬೆಳೆ | ಮೂರನೆಯ ಭಾಗದ ಭೂಮಿಯಲ್ಲಿನ ಬೆಳೆ |
|---|---|---|---|
| ಮೊದಲನೆಯ ವರ್ಷ | ಗೋಧಿ | ಬಾರ್ಲಿ | ಬೀಳು |
| ಎರಡನೆಯ ವರ್ಷ | ಬಾರ್ಲಿ | ಬೀಳು | ಗೋಧಿ |
| ಮೂರನೆಯ ವರ್ಷ | ಬೀಳು | ಗೋಧಿ | ಬಾರ್ಲಿ |

ಈ ಕ್ರಮದಲ್ಲೇ ವ್ಯವಸಾಯ ನಡೆಯುತ್ತಿದ್ದುದರಿಂದ ಉತ್ಪನ್ನ ಬಹಳ ಕಡಿಮೆಯಾಗಿತ್ತು.

ಮಧ್ಯಯುಗದಲ್ಲಿನ ಹಳ್ಳಿಯ ವ್ಯವಸ್ಥೆ ಮೇನರ್ ಪದ್ಧತಿಯಾಗಿತ್ತು. ಸಾಮಾನ್ಯವಾಗಿ ಒಂದೊಂದು ಮೇನರ್ ಒಂದೊಂದು ಹಳ್ಳಿಯಿಂದ ಕೂಡಿರುತ್ತಿತ್ತು. ಕೆಲವೊಮ್ಮೆ ಅನೇಕ ಹಳ್ಳಿಗಳನ್ನೂ ಅದರ ಸುತ್ತಮುತ್ತಲಿನ ಜಮೀನನ್ನೂ ಒಂದೊಂದು ಮೇನರ್ ಅಥವಾ ಜಹಗೀರು ಆಕ್ರಮಿಸಿಕೊಂಡಿರುತ್ತಿದ್ದುದುಂಟು. ಪ್ರತಿಯೊಂದು ಮೇನರಿಗೂ ಒಬ್ಬ ಪ್ರಭುವಿರುತ್ತಿದ್ದ. ಆ ಮೇನರಿಗೆ ಸೇರಿದ ಎಲ್ಲ ನೆಲಕ್ಕೂ ಆತನೇ ಒಡೆಯ. ಪ್ರತಿಯೊಬ್ಬ ಪ್ರಭುವೂ ತನ್ನ ವಶದಲ್ಲಿ ಸ್ವಲ್ಪ ಜಮೀನನ್ನಿಟ್ಟುಕೊಳ್ಳುತ್ತಿದ್ದ. ಸ್ವಲ್ಪವನ್ನು ಸ್ವತಂತ್ರ ಗೇಣಿದಾರರಿಗೂ ಮತ್ತೆ ಸ್ವಲ್ಪವನ್ನು ಜೀತದಾರರಿಗೂ ಕೊಡುತ್ತಿದ್ದ. ಜೀತದಾರರಿಗೆ ಜಮೀನಿನ ಮೇಲೆ ಯಾವ ರೀತಿಯ ಹಕ್ಕೂ ಇರುತ್ತಿರಲಿಲ್ಲ. ಅವರು ತಮ್ಮ ಧಣಿಗಳಿಗೆ ಅನೇಕ ರೀತಿಯ ಸೇವೆ ಸಲ್ಲಿಸಬೇಕಾಗಿತ್ತು. ಪ್ರತಿ ವಾರದಲ್ಲೂ 2–3 ದಿನ ಅವರು ಮಾಲೀಕರ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಮಾಲೀಕರಿಗೆ ಸ್ವಲ್ಪ ಹಣ ತೆರುತ್ತಿದ್ದರು. ಅವರು ಒಂದು ಮೇನರ್ ಬಿಟ್ಟು ಮತ್ತೊಂದಕ್ಕೆ ಹೋಗುವುದು ಸಾಧ್ಯವಿರಲಿಲ್ಲ. ಒಂದು ಪಕ್ಷ ಪಲಾಯನ ಮಾಡಿದರೆ ಅವರನ್ನು ಪತ್ತೆ ಮಾಡಿ ತರಿಸಿ ಶಿಕ್ಷಿಸಲಾಗುತ್ತಿತ್ತು. ಒಟ್ಟಿನಲ್ಲಿ ಊಳಿಗ ವರ್ಗದ ಜನರ ಪರಿಸ್ಥಿತಿ ಶೋಚನೀಯವೆಂದೇ ಹೇಳಬೇಕು. ಗೇಣಿದಾರರ ಒಕ್ಕಲಿಗರಿಗೆ ಇಂಥ ಪರಿಸ್ಥಿತಿಯಿರಲಿಲ್ಲ. ಅವರಿಗೆ ಹೆಚ್ಚಿನ ಸ್ವಾತಂತ್ರ್ಯವಿರುತ್ತಿತ್ತು. ಅವರು ಒಂದು ಮೇನರಿನಿಂದ ಮತ್ತೊಂದು ಮೇನರಿಗೆ ಯಾವ ತೊಂದರೆಯೂ ಇಲ್ಲದೆ ಹೋಗುತ್ತಿದ್ದರು.

ಮೇನರ್ ಪದ್ಧತಿಯ ಬೇಸಾಯದಿಂದ ವ್ಯವಸಾಯದಲ್ಲಿ ಪ್ರಗತಿ ಕುಂಠಿತವಾಗಿತ್ತು. ಅನೂಚಾನವಾಗಿ ನಡೆದುಬಂದ ಪದ್ಧತಿಯಲ್ಲೇ ಬೇಸಾಯ ನಡೆಸುತ್ತಿದ್ದುದರಿಂದ ವ್ಯವಸಾಯ ಕ್ರಮದಲ್ಲಿ ಬದಲಾವಣೆ ಮಾಡುವುದಾಗಲಿ ಹೊಸ ಪ್ರಯೋಗಗಳನ್ನು ನಡೆಸುವುದಾಗಲಿ ಸಾಧ್ಯವೇ ಇರಲಿಲ್ಲ. ಅಲ್ಲದೆ ಭೂಮಿಯನ್ನು ಸಣ್ಣ ಸಣ್ಣ ಭಾಗಗಳಾಗಿ ಒಡೆಯಲಾಗುತ್ತಿತ್ತು. ಇದು ಕ್ಷೇತ್ರಫಲದ ಉಪಯೋಗ ಪಡೆಯುವುದಕ್ಕಾಗಿ ಎಂದು ಹೇಳಲಾಗುತ್ತಿದ್ದರೂ ಇದರ ಪರಿಣಾಮವಾಗಿ ಉತ್ಪನ್ನ ತೀರ ಕಡಿಮೆಯಾಗುತ್ತಿತ್ತು. ಮೇನರ್ ಪದ್ಧತಿ ಕ್ರಮ ಕ್ರಮವಾಗಿ ಕೊನೆಗೊಂಡಿತು. 16ನೆಯ ಶತಮಾನದ ವೇಳೆಗೆ ಇದರ ಅಳಿವು ಪೂರ್ಣವಾಯಿತು. ಈ ಪದ್ಧತಿ ಕೊನೆಗೊಳ್ಳಲು ಅನೇಕ ಕಾರಣಗಳಿದ್ದವು. ಮೊದಲನೆಯದಾಗಿ, ಇಂಗ್ಲೆಂಡಿನಲ್ಲಿ ಬೆಳೆಯುತ್ತಿದ್ದ ಜನಸಂಖ್ಯೆಗೆ ಹೆಚ್ಚಿನ ಆಹಾರದ ಆವಶ್ಯಕತೆಯಿತ್ತು. ಈ ಹೆಚ್ಚಿನ ಬೇಡಿಕೆಯನ್ನು ಪೂರೈಸುವುದಕ್ಕೋಸ್ಕರ ಮೇನರಿನ ವಿಸ್ತೀರ್ಣವನ್ನು ವಿಸ್ತಾರಗೊಳಿಸಬೇಕಾಯಿತು. ಹೊಸದಾಗಿ ಬೇಸಾಯ ಮಾಡಲಾಗುತ್ತಿದ್ದ ಈ ಜಮೀನು ಒತ್ತಾಗಿತ್ತು; ಮೇನರಿನ ಜಮೀನಿನಂತೆ ಛಿದ್ರವಾಗಿರಲಿಲ್ಲ. ಹೊಸ ಜಮೀನಿನಲ್ಲಿ ಬೇಲಿ ಹಾಕಿ ಫಸಲು ಬೆಳೆಯಲಾಗುತ್ತಿತ್ತು. ಅಂದರೆ ಮೇನರಿನ ಅನೂಚಾನ ಕ್ರಮದಿಂದ ಒಂದು ಹೆಜ್ಜೆ ಮುಂದೆ ಇಟ್ಟಂತಾಯಿತು. ಎರಡನೆಯದಾಗಿ ಹಣ ವ್ಯವಸ್ಥೆ ಜಾರಿಗೆ ಬಂದದ್ದರಿಂದ ಹಿಂದಿದ್ದ ಮನೋಭಾವವೂ ಬದಲಾಯಿತು. ಉತ್ಪಾದನೆ ಸ್ವಂತ ಅನುಭೋಗಕ್ಕಾಗಿ ಮಾತ್ರವೆಂಬ ದೃಷ್ಟಿ ಹೋಯಿತು. ಸ್ವಂತ ಅಗತ್ಯಗಳ ಪೂರೈಕೆ ಮಾಡಿಕೊಂಡು ಮಾರಾಟಕ್ಕಾಗಿಯೂ ಒದಗುವಂತೆ ಹೆಚ್ಚುಹೆಚ್ಚಾಗಿ ಉತ್ಪನ್ನ ಮಾಡುವ ಪ್ರವೃತ್ತಿ ಆರಂಭವಾಯಿತು. ಇದರಿಂದ ಮೇನರ್ ಪದ್ಧತಿ ಸಡಿಲವಾಗಲಾರಂಭ ವಾಯಿತು. ಮೇನರಿನ ಕ್ಷೀಣದೆಸೆಗೆ ಮೂರನೆಯ ಮುಖ್ಯ ಕಾರಣವೆಂದರೆ 1348ರಲ್ಲಿ ಇಂಗ್ಲೆಂಡಿನಲ್ಲಿ ಸಂಭವಿಸಿದ ಕರಾಳ ಮೃತ್ಯು. ಇದು ಮೇನರುಗಳಲ್ಲಿದ್ದ ಬೇಸಾಯಗಾರರನ್ನು ಅಧಿಕ ಸಂಖ್ಯೆಯಲ್ಲಿ ಆಹುತಿ ತೆಗೆದುಕೊಂಡಿತು. ಮೇನರ್ ಪದ್ಧತಿಯ ವ್ಯವಸಾಯಕ್ಕೆ ಆವಶ್ಯಕವಾದಷ್ಟು ಮಂದಿ ಒದಗದೆ ಪರಿಸ್ಥಿತಿ ಕಠಿಣವಾಯಿತು.

ಕೈಗಾರಿಕೆಯ ಸ್ಥಿತಿ: ಇಂಗ್ಲೆಂಡಿನ ಕೈಗಾರಿಕೆಯ ವ್ಯವಸ್ಥೆ ಕ್ರಮಕ್ರಮವಾಗಿ ಅನೇಕ ಘಟ್ಟಗಳನ್ನು ದಾಟಿತು. ಇವುಗಳಲ್ಲಿ ಪ್ರಮುಖವಾದುವೆಂದರೆ 1. ಕುಟುಂಬ ವ್ಯವಸ್ಥೆ, 2. ವೃತ್ತಿಸಂಘ ವ್ಯವಸ್ಥೆ, 3. ಹೊರಗೆಲಸ ಕೊಡುವ ವ್ಯವಸ್ಥೆ, 4. ಕಾರ್ಖಾನೆ ವ್ಯವಸ್ಥೆ.

ಕುಟುಂಬ ವ್ಯವಸ್ಥೆಯೊಂದಿಗೆ ಕೈಗಾರಿಕೆಯ ಬೀಜಾಂಕುರವಾಯಿತೆನ್ನಬಹುದು. ಈ ಸ್ಥಿತಿಯ ಉತ್ಪಾದನೆಯಲ್ಲಿ ಮಾರುಕಟ್ಟೆಯ ಪ್ರಶ್ನೆ ಇರಲಿಲ್ಲ. ಪ್ರತಿಯೊಂದು ಕುಟುಂಬವೂ ತನ್ನ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಮಾತ್ರ ಪದಾರ್ಥ ತಯಾರಿಸುತ್ತಿತ್ತು. ಹೊರಗಿನ ಪೇಟೆಗಾಗಿ ಪದಾರ್ಥ ತಯಾರಿಕೆಯ ಕೆಲಸ ನಡೆಯುತ್ತಿರಲಿಲ್ಲ.

12 ಮತ್ತು 13ನೆಯ ಶತಮಾನದಲ್ಲಿ ಪ್ರಾರಂಭವಾದ ವೃತ್ತಿಸಂಘಗಳು ಕೈಗಾರಿಕೆಗೆ ಒಂದು ವಿಶಿಷ್ಟಸ್ಥಾನವನ್ನು ಕಲ್ಪಿಸಿಕೊಟ್ಟವೆಂದು ಹೇಳಬಹುದು. ಇವು ಕೈಗಾರಿಕಾ ರಂಗಕ್ಕೆ ಕೃಷಿ ಹಾಗೂ ವಾಣಿಜ್ಯ ರಂಗಕ್ಕಿಂತ ವಿಭಿನ್ನವಾದ ಆರ್ಥಿಕ ಸ್ಥಾನವನ್ನು ಗಳಿಸಿಕೊಟ್ಟವು. ಸ್ಥಳೀಯ ಮಾರುಕಟ್ಟೆಗಳು ಆರಂಭವಾದವು. ಮಧ್ಯಯುಗದ ಪೂರ್ವದಲ್ಲಿನ ಮುಖ್ಯ ಕಸುಬು ಕೃಷಿಯಾಗಿತ್ತು. ಒರಟಾದ ಬಟ್ಟೆಗಳನ್ನು ಮತ್ತು ತಮಗೆ ಅಗತ್ಯವಾದ ಸಾಧನಗಳನ್ನು ಕೃಷಿಕರೇ ತಯಾರಿಸಿಕೊಳ್ಳುತ್ತಿದ್ದರು. ಆದರೆ ವೃತ್ತಿಸಂಘಗಳ ಆವಿರ್ಭಾವದಿಂದ ಇಂಥ ವಸ್ತುಗಳ ಉತ್ಪಾದನೆಗೆ ಮೀಸಲಾದ ಜನರ ವರ್ಗವೊಂದು ಪ್ರಾರಂಭವಾಯಿತು.

ವೃತ್ತಿಸಂಘವೆಂದರೆ ಒಂದು ವಸ್ತುವಿನ ತಯಾರಿಕೆಯಲ್ಲಿ ತೊಡಗಿಕೊಳ್ಳುವ ಕುಶಲ ಕಾರ್ಮಿಕರ ಸಂಘ. ಇಂಗ್ಲೆಂಡಿನಲ್ಲಿ ನೇಕಾರರಲ್ಲಿ ಪ್ರಥಮವಾಗಿ ಈ ರೀತಿಯ ವೃತ್ತಿಸಂಘ ಪ್ರಾರಂಭವಾಯಿತು. ಅನಂತರ ಎಲ್ಲ ವಸ್ತುಗಳ ಉತ್ಪಾದನೆಗೂ ಇದು ಹರಡಿತು. ಇವು ಪ್ರಾರಂಭವಾದಾಗ ಜನಗಳಿಗೆ ವೃತ್ತಿಸಂಘಗಳ ಬಗ್ಗೆ ವಿಶೇಷ ಗೌರವವಿತ್ತು. ಈ ವೃತ್ತಿಸಂಘಗಳು ಕಾರ್ಮಿಕರಿಗೆ ಸಮಾಜದಲ್ಲಿ ಉತ್ತಮ ಸ್ಥಾನವನ್ನು ದೊರಕಿಸಿಕೊಟ್ಟವು. ವೃತ್ತಿಸಂಘಗಳ ನಿಯಮಬದ್ಧತೆಯಿಂದ ಮೇನರ್ ಪದ್ಧತಿಯಲ್ಲಿ ಬೆಳೆದಿದ್ದ ನೌಕರರಿಗೆ ಶಿಸ್ತು ದೊರಕಿತು. 14ನೆಯ ಶತಮಾನದ ಅನಂತರ ಪಟ್ಟಣಗಳಲ್ಲಿ ವೃತ್ತಿಸಂಘಗಳು ಕೈಗಾರಿಕೆಯ ವ್ಯವಸ್ಥೆಯನ್ನು ಹೆಚ್ಚಿನ ರೀತಿಯಲ್ಲಿ ಸಂಘಟಿಸುವುದಕ್ಕೆ ಪ್ರಾರಂಭಿಸಿದವು. ಹೀಗೆ ವೃತ್ತಿಸಂಘಗಳು ಪಟ್ಟಣ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾದವು. 14ನೆಯ ಶತಮಾನದ ಕೊನೆಯ ವೇಳೆಗೆ ಲಂಡನ್ ಮತ್ತು ಇತರ ಮುಖ್ಯ ಪಟ್ಟಣಗಳಲ್ಲಿ ಇವು ಪ್ರಮುಖವಾಗಿ ಹರಡಿದ್ದವು.

ವೃತ್ತಿಸಂಘಗಳ ಮುಖ್ಯ ಗುರಿಯೆಂದರೆ, ವಸ್ತುಗಳ ಉತ್ಪಾದನೆಯಲ್ಲಿ ಒಳ್ಳೆಯ ಕುಶಲತೆಯನ್ನು ಉಳಿಸಿಕೊಳ್ಳುವುದು ಮತ್ತು ವಸ್ತುಗಳ ಬೆಲೆಯನ್ನು ನ್ಯಾಯದರದಲ್ಲಿ ಕಾಪಾಡಿಕೊಳ್ಳುವುದು. ವೃತ್ತಿಸಂಘಗಳು ತಮ್ಮ ಸದಸ್ಯರ ಕಾರ್ಯನಿರ್ವಹಣೆಯ ಪರಿಶೀಲನೆಗಾಗಿ ಮೇಲ್ವಿಚಾರಕರನ್ನು ನೇಮಕ ಮಾಡುತ್ತಿದ್ದವು. ಮೇಲ್ವಿಚಾರಕರಿಗೆ ಯಾವ ಉತ್ಪಾದನಾ ಸಂಸ್ಥೆಗಾಗಲಿ ಭೇಟಿ ನೀಡುವ ಮತ್ತು ಅದರ ಕೆಲಸಗಳನ್ನು ಪರಿಶೀಲಿಸುವ ಹಕ್ಕಿತ್ತು. ವೃತ್ತಿಸಂಘದ ಎಲ್ಲ ಸದಸ್ಯರ ಸಭೆಗಳು ಪದೇ ಪದೇ ಕೂಡಿ ಮುಖ್ಯವಾದ ವಿಷಯಗಳನ್ನು ಚರ್ಚಿಸುತ್ತಿದ್ದುವು. ಅನೇಕ ವೃತ್ತಿಸಂಘಗಳಲ್ಲಿ ಮಂಡಲಿಗಳಿದ್ದುವು. ಇವು ತಮ್ಮ ಸದಸ್ಯರ ಕಾರ್ಯಚಟುವಟಿಕೆಗಳನ್ನು ನಿಗದಿಮಾಡುತ್ತಿದ್ದುವು. ಇವೇ ಮೇಲ್ವಿಚಾರಕರನ್ನೂ ಚುನಾಯಿಸುತ್ತಿದ್ದವು.

ಪ್ರತಿ ವೃತ್ತಿಸಂಘದಲ್ಲೂ ಮೂರು ರೀತಿಯ ಸದಸ್ಯರಿರುತ್ತಿದ್ದರು. ಕಸಬುದಾರ ಧಣಿ, ಕಾರೇಗಾರರು (ಜರ್ನಿಮೆನ್) ಮತ್ತು ಅಭ್ಯಾಸಿಗಳು. ಕಸಬುದಾರ ಧಣಿಗಳು ಸಂಸ್ಥೆಗಳನ್ನು ಅಥವಾ ಸಣ್ಣ ಉದ್ಯಮಗಳನ್ನು ಸ್ವಂತವಾಗಿ ಪ್ರಾರಂಭಿಸಿ ಕಾರೇಗಾರರು ಹಾಗೂ ಅಭ್ಯಾಸಿಗಳೊಂದಿಗೆ ತಾವೂ ಸೇರಿ ವಸ್ತುಗಳನ್ನು ಉತ್ಪಾದಿಸುತ್ತಿದ್ದರು. ಕಾರೇಗಾರರು ತರಬೇತಿ ಪಡೆದ ಕಾರ್ಮಿಕರಾಗಿದ್ದು ಕೂಲಿಯ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಅಭ್ಯಾಸಿಗಳು ಯಾವ ವಿಧವಾದ ಕೂಲಿಯನ್ನೂ ಪಡೆಯದೆ ಕಲಿಕೆಗಾಗಿ ಕೆಲಸ ಮಾಡುತ್ತಿದ್ದರು.

ಅಂದರೆ ಇವರು ಮೂರು ವರ್ಗದ ಜನರಾಗಿದ್ದರೆಂದಲ್ಲ; ಜೀವನ ಕ್ರಮದ ಮೂರು ಹಂತಗಳಲ್ಲಿದ್ದ ಜನರಾಗಿದ್ದರು. ಕಾರೇಗಾರರಿಗೆ ಸಾಕಷ್ಟು ಬಂಡವಾಳ ಸಿಕ್ಕೊಡನೆ ಅವರು ತಮ್ಮದೇ ಉದ್ಯಮ ಪ್ರಾರಂಭಿಸುತ್ತಿದ್ದು, ಹಾಗೆಯೇ ತಮ್ಮ ತರಬೇತಿ ಮುಗಿದ ತಕ್ಷಣ ಅಭ್ಯಾಸಿಗಳು ಕಾರೇಗಾರರಾಗುತ್ತಿದ್ದರು.

15 ಮತ್ತು 16ನೆಯ ಶತಮಾನಗಳ ಅವಧಿಯಲ್ಲಿ ವೃತ್ತಿಸಂಘಗಳು ಕ್ಷೀಣವಾಗಲು ಪ್ರಾರಂಭಿಸಿದವು. ಕೈಗಾರಿಕೆಯಲ್ಲಿ ಪ್ರಗತಿಯಾದಂತೆಲ್ಲ ಹೆಚ್ಚಿನ ಜನ ವೃತ್ತಿಸಂಘಗಳ ಸದಸ್ಯತ್ವಕ್ಕಾಗಿ ಬೇಡಿಕೆ ಸಲ್ಲಿಸಲು ಪ್ರಾರಂಭಿಸಿದರು. ತಮ್ಮ ಹಿತರಕ್ಷಣೆಯ ದೃಷ್ಟಿಯಿಂದ ಈ ಸಂಘಗಳು ಸದಸ್ಯತ್ವಕ್ಕಾಗಿ ತೀವ್ರವಾದ ನಿಬಂಧನೆ ವಿಧಿಸಲಾರಂಭಿಸಿದವು. ಆಂತರಿಕವಾಗಿ ವೃತ್ತಿಸಂಘಗಳ ಆಡಳಿತ ವ್ಯವಸ್ಥೆ ಸಡಿಲವಾಗಲಾರಂಭಿಸಿತು. ಕೇವಲ ಕೆಲವು ಜನ ವೃತ್ತಿಸಂಘಗಳಲ್ಲಿ ತಮ್ಮ ಹಿತ ಸಾಧಿಸುವುದಕ್ಕೆ ಪ್ರಾರಂಭಮಾಡಿದರು. ಕೆಲವು ವೃತ್ತಿಸಂಘಗಳು ಸದಸ್ಯತ್ವ ಶುಲ್ಕವನ್ನು ತೀರ ಹೆಚ್ಚಿನ ಮಟ್ಟದಲ್ಲಿಟ್ಟು ಸದಸ್ಯತ್ವವೇ ಅಸಾಧ್ಯವಾಗುವಂತೆ ಮಾಡಲಾರಂಭಿಸಿದವು. ಮೂಲಸಂಖ್ಯೆ ಹೆಚ್ಚಾಗದಂತೆ ನೋಡಿಕೊಳ್ಳಲು ಕಾರೇಗಾರರು ಮಾಲೀಕರಾಗುವುದನ್ನು ತಡೆಯುವ ನಿಬಂಧನೆಗಳನ್ನು ಮಾಡಲಾಯಿತು. ತಾವೇ ಮಾಲೀಕರಾಗುವುದು ಅಸಾಧ್ಯವೆಂಬುದನ್ನು ಮನಗಂಡ ಕಾರೇಗಾರರು ಹೆಚ್ಚಿನ ಕೂಲಿ ಬೇಡಲಾರಂಭಿಸಿದರು ಮತ್ತು ಮಾಲೀಕರನ್ನು ತಮಗಿಂತ ಹೆಚ್ಚಿನ ಮಟ್ಟದ ಜನ ಎಂಬ ಭಾವನೆಯಿಂದ ನೋಡಲಾರಂಭಿಸಿದರು. ಅಸೂಯೆ ಹುಟ್ಟಿತು. ಅನೇಕ ಪಟ್ಟಣಗಳಲ್ಲಿ ಕಾರೇಗಾರರು ತಮ್ಮದೇ ಆದ ಸಂಘಗಳನ್ನು ಕಾರೇಗಾರರ ವೃತ್ತಿಸಂಘ ಎಂಬ ಹೆಸರಿನಿಂದ ಪ್ರಾರಂಭಿಸಿದರು. ವರ್ಗಸಂಘರ್ಷ ಅಸ್ತಿತ್ವಕ್ಕೆ ಬರಲಾರಂಭಿಸಿತು. ಬಂಡವಾಳಗಾರರು ಉತ್ಪಾದನೆಯ ರಂಗದಲ್ಲಿ ಏಕಸ್ವಾಮ್ಯ ಪಡೆದುಕೊಳ್ಳುವ ಪ್ರಯತ್ನ ಆರಂಭಿಸಿದರು. ಅವರು ವಿಶಿಷ್ಟ ಪೋಷಾಕು ಧರಿಸಲಾರಂಭಿಸಿ ತಾವು ಶ್ರೀಮಂತ ವರ್ಗಕ್ಕೆ ಸೇರಿದವರೆಂಬುದನ್ನು ಪ್ರದರ್ಶಿಸಹತ್ತಿದರು. ಈ ಬೆಳವಣಿಗೆಯಿಂದಾಗಿ ಕೆಲಸಗಾರರ ಹಾಗೂ ಬಂಡವಾಳಗಾರರ ನಡುವಣ ಅಂತರ ಹೆಚ್ಚಿತು. ವೃತ್ತಿಸಂಘದ ಉತ್ಪಾದಕ ಕೇವಲ ಕೂಲಿಗಾರನಾಗುವ ಸಂದರ್ಭ ಬಂತು. ಹೀಗಾಗಿ ವೃತ್ತಿಸಂಘಗಳು ಕ್ಷೀಣಗೊಳ್ಳಲಾರಂಭಿಸಿದವು.

ವೃತ್ತಿಸಂಘಗಳು ಕ್ಷಯಿಸಿದಂತೆಲ್ಲ ಗೃಹಕೈಗಾರಿಕಾ ವ್ಯವಸ್ಥೆ ಜಾರಿಗೆ ಬರಲಾರಂಭಿಸಿತು. ಈ ವ್ಯವಸ್ಥೆಯ ಮುಖ್ಯ ಅಂಶವೆಂದರೆ ಬಂಡವಾಳಕ್ಕೆ ಇದರಲ್ಲಿ ಹೆಚ್ಚಿನ ಪ್ರಾಶಸ್ತ್ಯ ಸಿಗಲಾರಂಭಿಸಿತು. ಬಂಡವಾಳ ಉಳ್ಳವರು ಉತ್ಪಾದನೋದ್ಯಮಗಳ ಮೇಲೆ ಹೆಚ್ಚಿನ ಹಿಡಿತವನ್ನಿಟ್ಟುಕೊಳ್ಳಲಾರಂಭಿಸಿದರು. ಕೈಗಾರಿಕೆಯ ರಂಗದಲ್ಲಿ ಬಂಡವಾಳಸ್ಥರ ಸ್ಥಾನ ಹಿರಿದಾಗಲು ಮೊದಲಾಯಿತು.

ಮುಂದಿನ ಘಟ್ಟದಲ್ಲಿ, ಬಂಡವಾಳ ಉಳ್ಳ ಈ ಮಧ್ಯಮವರ್ಗದ ಜನ ಹೆಚ್ಚು ಹೆಚ್ಚು ಜನಗಳನ್ನು ಕೂಲಿಗೆ ನೇಮಿಸಿಕೊಂಡು ತಮ್ಮವೇ ಕಾರ್ಖಾನೆಗಳನ್ನು ಪ್ರಾರಂಭಿಸಿದರು. ಕಾರ್ಖಾನೆ ವ್ಯವಸ್ಥೆ ಜಾರಿಗೆ ಬಂತು. ಕೈಗಾರಿಕಾ ಕ್ರಾಂತಿಯವರೆಗೆ ಮುಖ್ಯವಾಗಿ ಹೊರಗುತ್ತಿಗೆ ಕೊಡುವ ವ್ಯವಸ್ಥೆ ಜಾರಿಯಲ್ಲಿತ್ತು. ಕೈಗಾರಿಕಾ ವ್ಯವಸ್ಥೆ ಪ್ರಾರಂಭವಾದ ಅನಂತರ ಉತ್ಪಾದನೆಗೆ ವಿದ್ಯುತ್ತನ್ನು ಬಳಸಿಕೊಳ್ಳಲಾರಂಭಿಸಿದರು.

ಬ್ಯಾಂಕುಗಳ ವ್ಯವಸ್ಥೆ: ಮಧ್ಯಯುಗದಲ್ಲಿ ಆಧುನಿಕ ರೀತಿಯ ಬ್ಯಾಂಕು ವ್ಯವಸ್ಥೆ ಇರಲಿಲ್ಲ. ಬಡ್ಡಿಗೆ ಸಾಲ ಕೊಡುವ ವ್ಯವಸ್ಥೆ ನೀತಿಬಾಹಿರ ಹಾಗೂ ಕಾನೂನುಬಾಹಿರವಾಗಿದ್ದುದರಿಂದ ಆಧುನಿಕ ರೀತಿಯ ಬ್ಯಾಂಕ್ ವ್ಯವಸ್ಥೆ ಸಾಧ್ಯವಿರಲಿಲ್ಲ. **(ನೋಡಿ– ಕುಸೀದ–ಪದ್ಧತಿ)** ಅಕ್ಕಸಾಲಿಗರ ಬಳಿಯಲ್ಲಿ ಭದ್ರ ಕೋಣೆಗಳೂ ತಿಜೋರಿಗಳೂ ಇರುತ್ತಿದ್ದುದರಿಂದ ಅವರ ಗ್ರಾಹಕರು ತಮ್ಮಲ್ಲಿದ್ದ ಚಿನ್ನಬೆಳ್ಳಿ ನಾಣ್ಯಗಳನ್ನು ಕೊಂಡೊಯ್ದು ಅಕ್ಕಸಾಲಿಗರಲ್ಲಿ ಇಡುತ್ತಿದ್ದರು. ಇವನ್ನು ಪಡೆದ ಅಕ್ಕಸಾಲಿಗರು ಕೇಳಿದಾಗ ಹಿಂತಿರುಗಿಸುವ ವಾಗ್ದಾನ ಮಾಡುತ್ತಿದ್ದರು. ಈ ಕೆಲಸಕ್ಕಾಗಿ ಅವರು ತಮ್ಮ ಗ್ರಾಹಕರಿಂದ ಶುಲ್ಕ ಪಡೆಯುತ್ತಿದ್ದರು. ಅವರು ನಂಬಿಕೆಗೆ ತಕ್ಕಂತೆ ನಡೆದುಕೊಳ್ಳುವುದು ಹೆಚ್ಚಿದಂತೆಲ್ಲ ಇದನ್ನೂ ಒಂದು ವ್ಯಾಪಾರವಾಗಿ ಮಾಡಿಕೊಂಡರು. ಅವರು ಪಡೆದ ಠೇವಣಿಗೆ ಪ್ರತಿಯಾಗಿ ಕೊಡುತ್ತಿದ್ದ ರಸೀತಿಗಳು ಹಣದಂತೆಯೇ ನಂಬಿಕೆಗೆ ಪಾತ್ರವಾಗಿ ಕೈಯಿಂದ ಕೈಗೆ ಸಂಚರಿಸಲು ಪ್ರಾರಂಭಿಸಿದುವು. ಅವರು ತಮ್ಮದೇ ಆದ ಅನೇಕ ಬಗೆಯ ಕಾಗದದ ಹಣವನ್ನು ಆವಿಷ್ಕರಿಸಿದ್ದರು. ಅವುಗಳಲ್ಲಿ ಮುಖ್ಯವಾದುವೆಂದರೆ ಚೆಕ್ಕುಗಳು ಮತ್ತು ಬ್ಯಾಂಕುನೋಟುಗಳು **(ನೋಡಿ– ಅಕ್ಕಸಾಲಿಗರ–ಉದ್ಯಮ)**.

ಆದರೆ ಕೆಲವು ಅಕ್ಕ–ಸಾಲಿಗ–ಬ್ಯಾಂಕುಗಳ ಆರ್ಥಿಕ ವ್ಯವಹಾರ ಕೆಡಲಾರಂಭಿಸಿತು. 1670ರಲ್ಲಿ ತೀವ್ರವಾದ ಆರ್ಥಿಕ ಬಿಕ್ಕಟ್ಟು ಒದಗಿ ಇಂಥ ಬ್ಯಾಂಕುಗಳ ವಿಷಯದಲ್ಲಿ ಜನರ ನಂಬಿಕೆ ಕಡಿಮೆಯಾಯಿತು. ಜನರು ವ್ಯವಸ್ಥಿತವಾದ ಬ್ಯಾಂಕಿನ ಆವಶ್ಯಕತೆಯ ಬಗ್ಗೆ ಬೇಡಿಕೆ ಸಲ್ಲಿಸಲಾರಂಭಿಸಿದರು. 1688ರ ಕ್ರಾಂತಿಯ ಅನಂತರ 1694ರಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ ಅಸ್ತಿತ್ವಕ್ಕೆ ಬಂತು **(ನೋಡಿ– ಇಂಗ್ಲೆಂಡಿನ–ಬ್ಯಾಂಕು)**.

ಧನಪ್ರಧಾನತೆ: 16 ರಿಂದ 18ನೆಯ ಶತಮಾನದವರೆಗಿನ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಮರ್ಕಂಟಲಿಸಂ ಎಂಬ ಹೆಸರಿನ ಧನಪ್ರಧಾನವ್ಯವಸ್ಥೆಯಿತ್ತು. ಈ ವ್ಯವಸ್ಥೆ 18ನೆಯ ಶತಮಾನದ ಮಧ್ಯಭಾಗದಿಂದ ಕ್ಷಯಿಸಿದರೂ ಅದರ ಪ್ರಭಾವವನ್ನು ಇಂದಿನ ಪ್ರಪಂಚದ ಆರ್ಥಿಕ ವ್ಯವಸ್ಥೆಯಲ್ಲೂ ಕಡೆಗಣಿಸುವಂತಿಲ್ಲ. ಮಧ್ಯಯುಗದಲ್ಲಿ ಇಂಗ್ಲೆಂಡಿನ ಜನರ ಆಕಾಂಕ್ಷೆ ಪ್ರಾದೇಶಿಕ ಸ್ವಾವಲಂಬನವಾಗಿತ್ತು. ಪ್ರತಿಯೊಬ್ಬನೂ ಸ್ವಾವಲಂಬಿಯಾಗುವುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಿರುತ್ತಿದ್ದ. ಆದರೆ ಮಧ್ಯಯುಗದ ಕೊನೆಯ ವೇಳೆಗೆ ಸಾಮಾಜಿಕ ಬದಲಾವಣೆಗಳಾದ್ದರಿಂದ ಆರ್ಥಿಕ ಚಟುವಟಿಕೆ ಪ್ರಾದೇಶಿಕ ಸ್ವಾವಲಂಬನೆಯಿಂದ ರಾಷ್ಟ್ರೀಯ ಸ್ವಾವಲಂಬನೆಯ ಕಡೆಗೆ ಹರಿಯಿತು. ಸರ್ಕಾರ ಇದನ್ನು ಸಾಧಿಸುವುದಕ್ಕೆ ಜನರ ಆರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳನ್ನು ನಿಯಂತ್ರಿಸಬೇಕೆಂದು ಭಾವಿಸಿತು.

ಬಲವಾದ ಹಾಗೂ ಆರ್ಥಿಕವಾಗಿ ಪರಿಪೂರ್ಣವಾದ ರಾಷ್ಟ್ರ ಕಟ್ಟುವುದೇ ಸರ್ಕಾರದ ಗುರಿಯಾಯಿತು. ಇಂಥ ಗುರಿಯಲ್ಲಿ ನಂಬಿಕೆಯಿಟ್ಟುಕೊಂಡಿದ್ದವರು ಈ ಗುರಿಸಾಧನೆಗಾಗಿ ಅನೇಕ ಯೋಜನೆಗಳನ್ನು ರೂಪಿಸಿದರು. ಪಶುಪಾಲನೆಗಿಂತ ಉಳುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟರು. ಆಹಾರದಲ್ಲಿ ಸ್ವಾವಲಂಬಿಗಳಾಗುವುದು ಅತ್ಯಂತ ಅಗತ್ಯವೆಂದು ಅವರು ನಂಬಿದ್ದರು. ಗೋಧಿ ಇತ್ಯಾದಿ ಫಸಲು ಬೆಳೆಯುವುದಕ್ಕೆ ನೇರವಾದ ಪ್ರೋತ್ಸಾಹ ಸಿಗುತ್ತಿತ್ತು. ಈ ನಿಯಮಗಳಿಂದಾಗಿ ಆದ ಪರಿಣಾಮವೆಂದರೆ ಈ ಯುಗದಲ್ಲಿ ಇಂಗ್ಲೆಂಡ್ ಆಹಾರದ ವಿಷಯದಲ್ಲಿ ಹೆಚ್ಚು ಕಡಿಮೆ ಸ್ವಾವಲಂಬಿಯಾಗಿತ್ತು. ಭೂಮಿಯ ಗೇಣಿ ಹೆಚ್ಚಾಯಿತು.

ಕೈಗಾರಿಕೆಯ ರಂಗದಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಖಾನೆಗಳಿಗೆ ಉತ್ತೇಜನ ಸಿಗುತ್ತಿತ್ತು. ಔದ್ಯೋಗಿಕ ರಂಗಕ್ಕೆ ಅನೇಕ ರೀತಿಯಲ್ಲಿ ಪ್ರೋತ್ಸಾಹ ಕೊಡಲಾಗುತ್ತಿತ್ತು. ಸಿದ್ಧಪಡಿಸಿದ ವಸ್ತುಗಳ ಆಮದನ್ನು ನಿಷೇಧಿಸಲಾಗುತ್ತಿತ್ತು. ಆದರೆ ಕಚ್ಚಾವಸ್ತುಗಳ ಆಮದನ್ನು ಸ್ವಾಗತಿಸಲಾಗುತ್ತಿತ್ತು. ಉದಾಹರಣೆಗೆ, 18ನೆಯ ಶತಮಾನದ ಪ್ರಾರಂಭದಲ್ಲಿ ರೇಷ್ಮೆ ವಸ್ತುಗಳ ನಿರ್ಯಾತಕ್ಕೆ ಪ್ರೋತ್ಸಾಹ ಧನವನ್ನು ಕೊಡಲಾಗುತ್ತಿತ್ತು. ಉಣ್ಣೆ ಕಾರ್ಖಾನೆಗಳಿಗೆ ಉತ್ತೇಜನ ಕೊಡುವುದಕ್ಕಾಗಿ ಎಲಿಜಬೆತ್ ರಾಣಿ ಕುರಿಗಳ ನಿರ್ಯಾತವನ್ನು ರದ್ದು ಮಾಡಿದಳು. ವಿದೇಶೀ ವಸ್ತುಗಳ ಅನುಭೋಗವನ್ನು ನಿಷೇಧಿಸಲಾಗುತ್ತಿತ್ತು. ಇದು ಯಾವ ಮಟ್ಟ ಮುಟ್ಟಿತೆಂದರೆ ಇಂಗ್ಲೆಂಡಿನವರು ವಿದೇಶೀ ಹ್ಯಾಟುಗಳನ್ನು ಧರಿಸಬಾರದು, ಶವವನ್ನು ಇಂಗ್ಲಿಷ್ ಉಣ್ಣೆಯ ಬಟ್ಟೆಯಿಂದಲೇ ಸುತ್ತಿ ಹೂಳಬೇಕು–ಮುಂತಾದ ಕಟ್ಟುಕಟ್ಟಳೆಗಳು ಜಾರಿಗೆಬಂದುವು.

ಅಂತಾರಾಷ್ಟ್ರೀಯ ವ್ಯಾಪಾರವನ್ನು ಸುಂಕ ನಿರ್ಬಂಧಗಳ ಮೂಲಕ ನಿಯಂತ್ರಿಸಲಾಗುತ್ತಿತ್ತು. ತಮ್ಮ ವಸಾಹತುಗಳಿಂದ ಕಚ್ಚಾ ಮಾಲನ್ನು ಆಮದು ಮಾಡಿಕೊಂಡು, ಇಂಗ್ಲೆಂಡಿನ ಕಾರ್ಖಾನೆಗಳಲ್ಲಿ ಅದನ್ನು ಸಿದ್ಧವಸ್ತುವಾಗಿ ಮಾರ್ಪಡಿಸಿ ರಫ್ತು ಮಾಡಿ ಚಿನ್ನ ಸಂಪಾದಿಸುವುದರಲ್ಲಿ ದೃಢವಾದ ನಂಬಿಕೆಯಿತ್ತು. ವಸಾಹತುಗಳು ಇಂಗ್ಲೆಂಡಿನ ಆರ್ಥಿಕ ಬೆಳವಣಿಗೆಯನ್ನು ಪೋಷಿಸಲು ಮಾತ್ರ ಇವೆ ಎಂಬುದಾಗಿ ಈ ಧನಪ್ರಾಧಾನ್ಯವಾದಿಗಳ ಭಾವನೆಯಾಗಿತ್ತು. ಇದು ಬಹಳಮಟ್ಟಿಗೆ ವಸಾಹತುಗಳ ಆರ್ಥಿಕ ಪ್ರಗತಿಯನ್ನು ಕುಂಠಿತಗೊಳಿಸಿತೆಂದು ಹೇಳಬಹುದು. ಸಾಧ್ಯವಾದಷ್ಟು ಮಟ್ಟಿಗೆ ರಾಷ್ಟ್ರಕ್ಕೆ ಚಿನ್ನಬೆಳ್ಳಿಯನ್ನು ಸಂಪಾದಿಸಿ ರಾಷ್ಟ್ರವನ್ನು ಬಲಪಡಿಸುವುದೇ ಗುರಿಯಾಗಿದ್ದ ಈ ನೀತಿಯಿಂದ ರಾಷ್ಟ್ರದ ಸೈನಿಕ ಶಕ್ತಿಯನ್ನು ಬಲಪಡಿಸುವುದಕ್ಕೂ ಸಹಾಯವಾಗುವುದೆಂದು ಅವರು ನಂಬಿದ್ದರು. ಸ್ಪೇನ್, ಪೋರ್ಚುಗಲ್ಲುಗಳಿಗಿದ್ದಂತೆ ಇಂಗ್ಲೆಂಡಿಗೆ ಚಿನ್ನಬೆಳ್ಳಿಯ ಗಣಿಗಳಿರಲಿಲ್ಲ. ಆದ್ದರಿಂದ ಇವುಗಳನ್ನು ಶೇಖರಿಸುವುದು ಅಂತಾರಾಷ್ಟ್ರೀಯ ವ್ಯಾಪಾರದ ಮೂಲಕ ಮಾತ್ರ ಸಾಧ್ಯವಿತ್ತು. ಚಿನ್ನಬೆಳ್ಳಿಯ ನಿರ್ಯಾತವನ್ನು ನಿಷೇಧಿಸಲಾಗಿತ್ತು. ಅವುಗಳ ಆಮದನ್ನು ಸ್ವಾಗತಿಸಲಾಗುತ್ತಿತ್ತು. ಹಡಗುಗಳು ವಿದೇಶೀ ವ್ಯಾಪಾರಕ್ಕೆ ಅತ್ಯಂತ ಅಗತ್ಯವಾಗಿದ್ದುದರಿಂದ ಅವುಗಳನ್ನು ವೃದ್ಧಿಪಡಿಸುವುದಕ್ಕೂ ತೀವ್ರವಾಗಿ ಪ್ರೋತ್ಸಾಹ ನೀಡಲಾಗುತ್ತಿತ್ತು.

ಈ ವ್ಯವಸ್ಥೆಯ ಸಿದ್ಧಿ ಬಹಳ ನಿಯಮಿತವಾಗಿತ್ತೆಂದು ಹೇಳಬಹುದು. ಏಕೆಂದರೆ ಎಲ್ಲ ರಾಷ್ಟ್ರಗಳೂ ಇಂಗ್ಲೆಂಡಿನಂತೆಯೇ ತಮ್ಮ ಚಿನ್ನಬೆಳ್ಳಿಯ ಶೇಖರಣೆಯನ್ನು ರಕ್ಷಿಸಿಕೊಳ್ಳುವುದರಲ್ಲಿ ಆಸಕ್ತವಾಗಿದ್ದವೇ ಹೊರತು ಅದನ್ನು ಇಂಗ್ಲೆಂಡಿಗೆ ನಿರ್ಯಾತ ಮಾಡುವುದರಲ್ಲಲ್ಲ. ಚಿನ್ನಬೆಳ್ಳಿಗಳ ರಫ್ತಿನಲ್ಲಿ ನಿಷೇಧವಿದ್ದರೂ ಪರಸ್ಪರ ರಾಷ್ಟ್ರಗಳಲ್ಲಿ ವ್ಯಾಪಾರ ನಡೆಯಲೇ ಬೇಕಾಗಿದ್ದುದರಿಂದ ಈ ಲೋಹಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗುವುದು ಅತ್ಯಾವಶ್ಯಕವಾಗಿತ್ತು. ಅಂತೂ ಈ ಧೋರಣೆಯಿಂದ ಇಂಗ್ಲೆಂಡಿಗೆ ಉಪಕಾರವಾಯಿತು. ಅದೆಂದರೆ, ವಿದೇಶೀ ಆಮದಿನ ಸುಂಕನಿರ್ಬಂಧದಿಂದಾಗಿ ಅನೇಕ ಕಾರ್ಖಾನೆಗಳು ತೀವ್ರಗತಿಯಲ್ಲಿ ಪ್ರಗತಿ ಹೊಂದುವುದಕ್ಕೆ ಸಾಧ್ಯವಾಯಿತು. ಹಡಗು ನಿರ್ಮಾಣಕ್ಕೆ ಪ್ರೋತ್ಸಾಹ ಸಿಕ್ಕಿದ್ದರಿಂದ ಅದು ಮತ್ತು ಬಂದರು ವಿಸ್ತರಣೆಯ ಕಾರ್ಯ ಕ್ಷಿಪ್ರಗತಿಯಲ್ಲಿ ನಡೆಯಿತು.

ಆದರೂ ಹಣಶೇಖರಣೆಗೆ ಹೆಚ್ಚಿನ ಪ್ರಾಧಾನ್ಯವಿತ್ತು. ಆಯಾತಕ್ಕೆ ಕಡಿಮೆ ಪ್ರಾಮುಖ್ಯವೂ ನಿರ್ಯಾತಕ್ಕೆ ಹೆಚ್ಚಿನ ಪ್ರಾಧಾನ್ಯವೂ ಇದ್ದವು. ಇದರಿಂದ ಸ್ವಾರ್ಥದ ಅಂಶ ಪ್ರಕಟವಾದಂತಾಯಿತು. ಅಂತಾರಾಷ್ಟ್ರೀಯ ಸಹಕಾರಕ್ಕೆ ಬೆಲೆ ಕಡಿಮೆಯಾಯಿತು. ಆದರೂ ಈ ತತ್ತ್ವಗಳು ಸು.200 ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ ಪ್ರಚಲಿತವಿದ್ದವು.

ಈ ಧೋರಣೆಗೆ ಸಂಬಂಧಪಟ್ಟಂತೆ ಎರಡು ಮುಖ್ಯ ವಿಷಯಗಳನ್ನು ನಾವು ಬಳಸಬಹುದು. ಮೊದಲನೆಯದಾಗಿ, ಈ ನೀತಿಯಿಂದಾಗಿ ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್ ಮತ್ತು ಹಾಲೆಂಡುಗಳ ನಡುವೆ ವಾಣಿಜ್ಯ ವಿಷಯಗಳಲ್ಲಿ ಘರ್ಷಣೆ ಆರಂಭವಾಯಿತು. ಇದು ಸುಮಾರು 3 ಶತಮಾನಗಳ ಕಾಲ ಮುಂದುವರಿಯಿತು. ಎರಡನೆಯದಾಗಿ, ಪ್ರಥಮ ಮಹಾಯುದ್ಧದ ಅನಂತರ ಅನೇಕ ರಾಷ್ಟ್ರಗಳು ಈ ತತ್ತ್ವಗಳನ್ನು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಆರ್ಥಿಕ ನೀತಿಯಲ್ಲಿ ಕಾಣಿಸಿಕೊಂಡವು. ಹೆಚ್ಚು ಸ್ವಾವಲಂಬಿಗಳಾಗಬೇಕೆಂಬುದೇ ಇದಕ್ಕೆ ಮುಖ್ಯ ಕಾರಣವಾಯಿತು.

ಕೈಗಾರಿಕಾ ಕ್ರಾಂತಿ: ಯುರೋಪಿನಲ್ಲಿ 18 ಮತ್ತು 19ನೆಯ ಶತಮಾನದಲ್ಲಿ ನಡೆದ ಆರ್ಥಿಕ ಬದಲಾವಣೆಗಳನ್ನು ವಿವರಿಸಲು ಉಪಯೋಗಿಸಲಾಗುತ್ತಿರುವ ಪದವೆಂದರೆ ಕೈಗಾರಿಕಾ ಕ್ರಾಂತಿ. ಕ್ರಾಂತಿ ಎಂದ ಮಾತ್ರಕ್ಕೆ ಇಲ್ಲಿ ವಿಪ್ಲವವಾಗಲಿ ದಂಗೆಯಾಗಲಿ ನಡೆದು ಹಿಂಸೆಯ ತಳಹದಿಯ ಮೇಲೆ ಬದಲಾವಣೆಗಳು ಆದುವೆಂದು ಅರ್ಥವಲ್ಲ. ಆದರೆ ಕೈಗಾರಿಕೆಯ ರಂಗದಲ್ಲಿ ನಡೆದ ತೀವ್ರವಾದ ಈ ಬದಲಾವಣೆಗಳು ಅಗಾಧ ಪ್ರಮಾಣದವು, ಅಭೂತಪೂರ್ವವಾದಂಥವು. ಇವು ಒಂದು ಕ್ರಾಂತಿಯಿಂದ ಆಗಬಹುದಾಗಿದ್ದಷ್ಟೆ ಪರಿಣಾಮಗಳನ್ನುಂಟುಮಾಡಿದ್ದರಿಂದ ಇವಕ್ಕೆ ಕೈಗಾರಿಕಾ ಕ್ರಾಂತಿಯೆಂಬ ಹೆಸರು ಬಂದಿದೆ. ಈ ಕ್ರಾಂತಿ ಸುಮಾರು 150 ವರ್ಷಗಳಲ್ಲಿ ನಡೆದ ಬದಲಾವಣೆಗಳಿಗೆ ಸಂಬಂಧಪಟ್ಟದ್ದು. ಹಿಂದೆ ಈ ಕ್ರಾಂತಿಯ ಫಲವಾಗಿ ವಿಶಿಷ್ಟವಾದ ಒಂದು ಆರ್ಥಿಕ ವ್ಯವಸ್ಥೆ ಜಾರಿಗೆ ಬಂತು.

ಈ ಕ್ರಾಂತಿ ಪ್ರಥಮವಾಗಿ ಸಂಭವಿಸಿದ್ದು ಇಂಗ್ಲೆಂಡಿನಲ್ಲಿ. ಇದು 18ನೆಯ ಶತಮಾನದ ಮಧ್ಯಭಾಗದಲ್ಲಿ ಆರಂಭವಾಗಿ ಸುಮಾರು 70 ವರ್ಷಗಳ ಕಾಲ ಮುಂದುವರಿಯಿತು.

ಈ ಕ್ರಾಂತಿಯ ಫಲವಾಗಿ ಇಂಗ್ಲೆಂಡ್ ಕೃಷಿಪ್ರಧಾನ ರಾಷ್ಟ್ರದಿಂದ ಕೈಗಾರಿಕಾ ಬದಲಾವಣೆ ಹೊಂದಿತು. 1765 ರಿಂದ 1785ರ ವರೆಗೆ ನೇಯ್ಗೆ ಕೈಗಾರಿಕೆಯಲ್ಲಿ ಕ್ರಾಂತಿಕಾರಕ ಆವಿಷ್ಕಾರಗಳಾದವು. 1767ರಲ್ಲಿ ಹಾರ್ ಗ್ರೇವ್ಸ್ ನೂಲುವ ಜೆನ್ನಿ ಕಂಡುಹಿಡಿದ. ಇದು ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಎಳೆಗಳನ್ನು ಸುತ್ತುವ ಪ್ರಥಮ ಸಾಧನವಾಗಿತ್ತು. ಅನಂತರ ಇದು 40 ಎಳೆಗಳನ್ನು ಏಕಕಾಲದಲ್ಲಿ ಎತ್ತುತ್ತಿತ್ತು. 1769ರಲ್ಲಿ ಆರ್ಕ್‍ರೈಟ್ ಕಂಡುಹಿಡಿದ ವಾಟರ್ ಫ್ರೇಮ್ ಎಂಬ ಇನ್ನೊಂದು ಯಂತ್ರದಿಂದ ನೂಲುಬಳಕೆಯಲ್ಲಿ ಒಂದು ಕ್ರಾಂತಿಕಾರಕ ಸಾಧನೆಯೇ ಆಯಿತು. ಇದರಿಂದ ನೇಕಾರ ಲಿನನ್ ಅಥವಾ ಉಣ್ಣೆ ಹಾಸುದಾರವನ್ನು ಆಮದು ಮಾಡಿಕೊಳ್ಳುವುದು ತಪ್ಪಿ ಪೂರ್ಣ ಅರಳೆಯ ಬಟ್ಟೆ ತಯಾರಿಸಲು ಸಾಧ್ಯವಾಯಿತು. 1779ರಲ್ಲಿ ಈ ಎರಡೂ ಯಂತ್ರಗಳನ್ನು ಸಂಯೋಜಿಸಿ ಅತ್ಯಂತ ಉನ್ನತಮಟ್ಟದ ದಾರದ ಎಳೆಗಳನ್ನು ತಯಾರಿಸುವ ಯಂತ್ರವನ್ನು ರೂಪಿಸಿದ ಯಶಸ್ಸು ಕ್ರಾಂಪ್ಟನ್ನನದಾಯಿತು. 1782ರಲ್ಲಿ ಜೇಮ್ಸ್ ವಾಟ್ ಉಗಿಯಂತ್ರವನ್ನು ಸೃಷ್ಟಿಸಿ ಇಡೀ ಉತ್ಪಾದನಾರಂಗದಲ್ಲೇ ಕ್ರಾಂತಿಯನ್ನೆಸಗಿದ. ವಾಟ್ ಯಂತ್ರ ಎಷ್ಟು ಪರಿಷ್ಕೃತವಾಗಿತ್ತೆಂದರೆ 1783ರ ವೇಳೆಗೆ ಕಾರ್ನ್‍ವಾಟ್ ಗಣಿಗಳಲ್ಲಿ ವಿನಾ ಎಲ್ಲ ಸ್ಥಳಗಳಲ್ಲೂ ವಾಟ್ ಯಂತ್ರವೇ ಬಳಕೆಯಲ್ಲಿತ್ತು. ಈ ರೀತಿಯ ಆವಿಷ್ಕಾರಗಳು ಒಂದು ಕೈಗಾರಿಕೆಯಿಂದ ಮತ್ತೊಂದು ಕೈಗಾರಿಕೆಗೆ ಈ ಕಾಲದಲ್ಲಿ ವೇಗವಾಗಿ ಹರಡುತ್ತಿದ್ದವು. ಯಂತ್ರ ಮತ್ತು ಇಂಜಿನ್ನುಗಳ ಬೇಡಿಕೆ ಹೆಚ್ಚಾಗುವುದಕ್ಕೆ ಪ್ರಾರಂಭವಾಗಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಗಳ ಪ್ರಗತಿ ವೇಗವಾಗಲಾರಂಭಿಸಿತು. ಇಂಗ್ಲೆಂಡಿನಲ್ಲಿ ಕಲ್ಲಿದ್ದಲು ಮತ್ತು ಕಬ್ಬಿಣದ ಖನಿಜ ಸಂಪತ್ತು ಹೇರಳವಾಗಿರುವುದು ವರಪ್ರಸಾದವೆನ್ನಬಹುದು. ಕೈಗಾರಿಕಾ ಕ್ರಾಂತಿಯ ಸಿದ್ಧಿಯ ರಹಸ್ಯ ಇವೆರಡರಲ್ಲಡಗಿತ್ತೆಂದೇ ಹೇಳಬಹುದು. ಕೈಗಾರಿಕೆಯ ರಂಗದಲ್ಲಾದ ಈ ಬದಲಾವಣೆ ದೇಶದ ಇತರ ಆರ್ಥಿಕ ರಂಗಗಳಿಗೂ ಪಸರಿಸಿತು. ಉತ್ತಮ ಸಾರಿಗೆ, ವಾಣಿಜ್ಯ, ನೌಕೆ ಇವುಗಳ ಆವಶ್ಯಕತೆ ಹೆಚ್ಚಾದುದರಿಂದ ಈ ದಿಕ್ಕಿನಲ್ಲೂ ಈ ಕ್ರಾಂತಿ ಹಬ್ಬಿತು.

ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಕೈಗಾರಿಕಾ ಕ್ರಾಂತಿ ಒಂದು ರಾತ್ರಿಯಲ್ಲಿ ನಡೆದ ಘಟನೆಯಲ್ಲ. ಆದರೆ ಇದಕ್ಕೆ ಇಂಗ್ಲೆಂಡ್ ಪೂರ್ವಸಿದ್ಧತೆ ಪಡೆದಿತ್ತು. ಶತಮಾನಗಳಿಂದ ನಡೆದ ಪ್ರಯತ್ನ 1760ರ ಅವಧಿಯಲ್ಲಿ ಫಲಿಸಿತೆಂದು ಹೇಳಬಹುದು. 1760–1830ರ ಅವಧಿಯಲ್ಲಿ ಇಂಗ್ಲೆಂಡು ತಯಾರಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಿತು. ಉತ್ಪಾದನೆ ಹೆಚ್ಚಿತು. ಜನಸಂಖ್ಯೆ ವೃದ್ಧಿಯಾಯಿತು. ತಮ್ಮ ಉತ್ಪಾದನೆಗೆ ಬೇಡಿಕೆ ಹೆಚ್ಚಿದ್ದರಿಂದ, ಉತ್ಪಾದಕರು ಹೆಚ್ಚು ಹೆಚ್ಚು ಲಾಭ ಪಡೆದು ಅದನ್ನು ಮತ್ತೆ ಉತ್ಪಾದನೆಯಲ್ಲಿ ತೊಡಗಿಸುವುದು ಸಾಧ್ಯವಾಯಿತು.

ಉತ್ಪಾದನೆಯ ಜೊತೆಗೆ ಜನಸಂಖ್ಯೆಯೂ ಹೆಚ್ಚಿತು. ಮುಖ್ಯವಾದ ಕೈಗಾರಿಕೆಗಳೊಂದಿಗೆ ಹೊಸ ಹೊಸ ಕಾರ್ಖಾನೆಗಳು ಆರಂಭವಾಗಿ ಕೈಗಾರಿಕೆಯ ರಂಗವನ್ನು ಈ ಕಾಲದಲ್ಲಿ ಬಲಪಡಿಸಿದವು.

ಉತ್ಪಾದನೆಯ ವೃದ್ಧಿಯಿಂದ ದೇಶದ ವಿದೇಶೀ ವ್ಯಾಪಾರವೂ ಹೆಚ್ಚಿತು. ಇಂಗ್ಲೆಂಡ್ ಹೆಚ್ಚು ಹೆಚ್ಚು ವಸ್ತುಗಳನ್ನು ರಫ್ತು ಮಾಡಲು ಪ್ರಾರಂಭಿಸಿತು.

ಕೈಗಾರಿಕಾ ಕ್ರಾಂತಿಯ ಮತ್ತೊಂದು ಪರಿಣಾಮವೆಂದರೆ ಜನ ಹಾಗೂ ಬಂಡವಾಳದ ಸ್ಥಾನಪಲ್ಲಟ. ಕ್ರಾಂತಿಪೂರ್ವದಲ್ಲಿ, ಕೈಗಾರಿಕೆಗಳು ಮುಖ್ಯವಾಗಿ ಉತ್ತರದ ಮತ್ತು ಮಧ್ಯಭಾಗದ ಆರು ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿದ್ದವು. ಆದರೆ ಈ ಕ್ರಾಂತಿಯ ಪರಿಣಾಮವಾಗಿ ವಾಯವ್ಯದಲ್ಲಿ ಜನಸಂಖ್ಯೆ ಮತ್ತು ಬಂಡವಾಳ ಕೇಂದ್ರೀಕೃತವಾದವು. (1918ರ ಅನಂತರ ಕೈಗಾರಿಕೆಗಳು ಮತ್ತೆ ದಕ್ಷಿಣದಲ್ಲಿ ಕೇಂದ್ರೀಕೃತವಾಗುವ ಪ್ರವೃತ್ತಿ ಹೊಂದಿದುವು).

ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಇಂಗ್ಲೆಂಡ್ ಕೈಗಾರಿಕಾ ಪ್ರಧಾನವಾದ ರಾಷ್ಟ್ರವಾಯಿತು. 1851ರ ವೇಳೆಗೆ ಒಟ್ಟು ಜನಸಂಖ್ಯೆಯ ಕೇವಲ 17ರಷ್ಟು ಜನ ಮಾತ್ರ ಕೃಷಿಯಲ್ಲಿ ತೊಡಗಿದ್ದರು **(ನೋಡಿ– ಕೈಗಾರಿಕಾ–ಕ್ರಾಂತಿ)**.

ಕೃಷಿ ಕ್ರಾಂತಿ: ಸುಮಾರು ಇದೇ ಕಾಲದಲ್ಲಿ ಕೃಷಿಯಲ್ಲೂ ಕ್ರಾಂತಿಯಾಗತೊಡಗಿತು. ಈ ಕ್ರಾಂತಿಗೆ ಪೂರ್ವದಲ್ಲಿ ಮೇನರ್ ಪದ್ಧತಿ ಜಾರಿಯಲ್ಲಿತ್ತು. ಬೇಲಿ ಕಟ್ಟದೆ ಕೃಷಿ ನಡೆಸಲಾಗುತ್ತಿತ್ತು. ಒಂದು ಭಾಗವನ್ನು ಬೀಳು ಬಿಡುತ್ತಿದ್ದುದರಿಂದ ಮತ್ತು ಭೂಮಿಯನ್ನು ಸಣ್ಣ ಸಣ್ಣ ಭಾಗಗಳನ್ನಾಗಿ ಮಾಡಿ ಬೆಳೆ ತೆಗೆಯುತ್ತಿದ್ದುದರಿಂದ ಉತ್ಪಾದನೆ ಬಹಳ ಕಡಿಮೆಯಿತ್ತು. 16ನೆಯ ಶತಮಾನದಲ್ಲಿ ನೆಲಕ್ಕೆ ಬೇಲಿ ಹಾಕುವ ಚಳವಳಿ (ಆವರಣ ಚಳವಳಿ) ಆರಂಭವಾಯಿತು. ಜಮೀನ್ದಾರರು ಕ್ರಮಕ್ರಮವಾಗಿ ಬೀಳುಭೂಮಿಯನ್ನು ಆಕ್ರಮಿಸಿಕೊಂಡು ಬೇಲಿ ಕಟ್ಟಿ ಅದನ್ನು ದನಕರುಗಳೂ ಕುರಿಗಳೂ ಮೇಯಲು ಅನುಕೂಲವಾಗುವ ಹುಲ್ಲುಗಾವಲನ್ನಾಗಿ ಮಾಡುತ್ತಿದ್ದರು. ಈ ಆವರಣ ಕಾರ್ಯದಲ್ಲಿ ಜಮೀನ್ದಾರರಿಗೆ ಕಾಯಿದೆಯ ಬೆಂಬಲವೂ ಸಿಕ್ಕಿತು.

18ನೆಯ ಶತಮಾನದ ಮಧ್ಯಭಾಗದಲ್ಲೂ ಅನಾವೃತ ನೆಲದ ಬೇಸಾಯ ಪದ್ಧತಿ ಇಂಗ್ಲೆಂಡಿನ ಸುಮಾರು ಅರ್ಧ ಭಾಗದಲ್ಲಿ ಜಾರಿಯಲ್ಲಿತ್ತು. ಕೃಷಿಪದ್ಧತಿ ಇನ್ನೂ ಆಧುನಿಕವಾಗಿರಲಿಲ್ಲ. 18ನೆಯ ಶತಮಾನದಲ್ಲಿ ಜನಸಂಖ್ಯೆ ವೇಗವಾಗಿ ಬೆಳೆಯಲಾರಂಭಿಸಿದುದರಿಂದ ಆಹಾರಕ್ಕೆ ಬೇಡಿಕೆ ಹೆಚ್ಚಿತು.

ಈ ರೀತಿಯ ಜಮೀನು ಆವರಣಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಒಂದು, ಹೆಚ್ಚುತ್ತಿದ್ದ ಜನಸಂಖ್ಯೆಗೆ ಹೆಚ್ಚಿನ ಆಹಾರದ ಅಗತ್ಯ; ಎರಡು, ಆರ್ಥಿಕ ಪ್ರಗತಿಯಿಂದ ಶ್ರೀಮಂತರಾಗುತ್ತಿದ್ದ ವಣಿಕ ವರ್ಗಕ್ಕೆ ತಮ್ಮ ಹಣವನ್ನು ಹೂಡಲು ಜಮೀನು ತಕ್ಕದೆಂದು ಕಾಣಿಸಿದ್ದು. ಇದರಿಂದ ಈ ವರ್ಗದವರು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಬಲಿಷ್ಠರೆಂದು ಹೇಳಿಕೊಳ್ಳಬಹುದಿತ್ತು. ಇವರು ಹೆಚ್ಚು ಹೆಚ್ಚು ಭೂಮಿಯನ್ನು ಕೊಂಡು ಅದನ್ನು ಸುತ್ತುಗಟ್ಟಿ ಬೇಲಿ ಹಾಕಿ ಆಧುನಿಕ ರೀತಿಯಲ್ಲಿ ಬೇಸಾಯ ಮಾಡಿಸುವುದಕ್ಕೆ ಪ್ರಾರಂಭಿಸಿದರು.

ಈ ರೀತಿಯ ಬೇಸಾಯ ಕ್ರಮದಿಂದ ನಷ್ಟಕ್ಕೆ ಗುರಿಯಾದವರೆಂದರೆ ಸಣ್ಣ ಸಣ್ಣ ರೈತರು. ಅವರಿಂದ ಜಮೀನನ್ನು ಶ್ರೀಮಂತ ಜಮೀನ್ದಾರರು ಕೊಳ್ಳುತ್ತಿದ್ದುದರಿಂದ ಅವರು ಅನೇಕ ವೇಳೆ ಜಮೀನನ್ನು ಕಳೆದುಕೊಂಡು ಊರು ಬಿಡಬೇಕಾದ ಪರಿಸ್ಥಿತಿಯಲ್ಲಿರುತ್ತಿದ್ದರು. ಸಣ್ಣ ರೈತರಿಗೆ ಜಮೀನು ಮಾರಲು ಇಷ್ಟವಿಲ್ಲದಿದ್ದರೂ ತಮ್ಮ ಸಣ್ಣ ಬಂಡವಾಳದೊಂದಿಗೆ ಬೇಲಿ ಹಾಕಿ ಪಕ್ಕದಲ್ಲೇ ಉತ್ತಮ ರೀತಿಯಲ್ಲಿ ಬೇಸಾಯ ನಡೆಸುತ್ತಿದ್ದ ಜಮೀನ್ದಾರರೊಡನೆ ಸ್ಪರ್ಧಿಸುವುದಕ್ಕಾಗುತ್ತಿರಲಿಲ್ಲ. ಹೀಗಾಗಿ ಅವರು ಜಮೀನನ್ನು ತಾವಾಗಿಯೇ ಮಾರಬೇಕಾದ ಪರಿಸ್ಥಿತಿ ಬರುತ್ತಿತ್ತು. ಈ ವರ್ಗ ಕ್ರಮಕ್ರಮವಾಗಿ ಮಾಯವಾಗುತ್ತಿದ್ದದ್ದು ಇಂಗ್ಲೆಂಡಿನ ಸಾಮಾಜಿಕ ಜೀವನಕ್ಕೆ ಒದಗಿದ ದೊಡ್ಡ ನಷ್ಟವೆಂದು ಹೇಳಲಾಗಿದೆ. ಬೇಲಿ ಹಾಕಿ ದೊಡ್ಡ ಪ್ರಮಾಣದಲ್ಲಿ ಬೇಸಾಯ ಮಾಡುವ ಪದ್ಧತಿ ಬಂಡವಾಳಪ್ರಧಾನವಾದ ಬೇಸಾಯ ಕ್ರಮಕ್ಕೆ ನಾಂದಿ ಹಾಡಿತೆಂದು ಹೇಳಬಹುದು.

ಭೂಮಿಯ ಉತ್ಪಾದನೆಯನ್ನು ಹೆಚ್ಚಿಸಲು ಉತ್ತಮ ರೀತಿಯ ಬೇಸಾಯವೂ ಅಗತ್ಯವಾಯಿತು. ಹಿಂದೆ ಭೂಮಿಯ ಫಲವತ್ತತೆ ಹೆಚ್ಚಿಸಲು ತ್ರಿಪ್ರದೇಶ ವ್ಯವಸಾಯ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು: ಒಂದು ಭಾಗದ ಭೂಮಿಯನ್ನು ಬೀಳು ಬಿಡುವುದು, ಸರದಿಯ ಪ್ರಕಾರ ಒಂದೊಂದು ಬೆಳೆಯನ್ನು ತೆಗೆಯುವುದು ಮತ್ತು ಪ್ರಾಣಿಗಳ ಗೊಬ್ಬರವನ್ನು ಉಪಯೋಗಿಸುವುದು. ಆದರೆ ಜಮೀನನ್ನು ವಿಸ್ತಾರಗೊಳಿಸಿ ಕೃಷಿ ಮಾಡಲಾರಂಭಿಸಿದ ಮೇಲೆ ಈ ಮಾರ್ಗಗಳು ಅಷ್ಟೇನೂ ಫಲಪ್ರದವಾದುವೆಂದು ಅನ್ನಿಸಲಿಲ್ಲ. ಅದಕ್ಕೆ ಬದಲಾಗಿ ವೈಜ್ಞಾನಿಕ ಬೇಸಾಯಕ್ಕೆ ಗಮನಕೊಡಲಾಯಿತು. ಈ ಎಲ್ಲ ಸಂಶೋಧನೆಗಳಿಂದ ಕೃಷಿಯ ಪ್ರಗತಿಗೆ ಬಹಳ ಸಹಾಯವಾಯಿತು.

ಕೈಗಾರಿಕಾ ಕ್ರಾಂತಿಯಂತೆಯೇ ಕೃಷಿ ಸಹ ಹಂತಹಂತವಾಗಿ ನಡೆದ ಬದಲಾವಣೆ. ಕೃಷಿಗೂ ವಿಜ್ಞಾನವನ್ನು ಅಳವಡಿಸುವ ಪ್ರಯತ್ನ ಸಫಲವಾಯಿತು. 19ನೆಯ ಶತಮಾನದ ಮಧ್ಯಭಾಗದಲ್ಲಿ ಜರ್ಮನಿಯ ರಸಾಯನಶಾಸ್ತ್ರದ ಸಹಾಯದಿಂದ ಕೃಷಿಗೆ ಆಗಬಹುದಾದ ಲಾಭವನ್ನು ಬೇಸಾಯ ಶಾಸ್ತ್ರಜ್ಞ ಜಸ್ಟಸ್ ವಾನ್ ಲೇಬರ್ಗ್ ತೋರಿಸಿಕೊಟ್ಟ. ತತ್ಕ್ಷಣವೇ ಇಂಗ್ಲೆಂಡಿನಲ್ಲಿಯೂ ರಾಸಾಯನಿಕ ಗೊಬ್ಬರದ ಉತ್ಪಾದನೆಯನ್ನು ಕೈಗೊಳ್ಳಲಾಯಿತು. ಕೃಷಿಕರು ಸಹಜ ಗೊಬ್ಬರವನ್ನು ಅವಲಂಬಿಸುವುದನ್ನು ಇದು ತಪ್ಪಿಸಿತು.

ವೈಜ್ಞಾನಿಕ ಕೃಷಿಸಾಧನಗಳ ಆವಿಷ್ಕಾರ ಉತ್ಪಾದನೆಯನ್ನು ತೀವ್ರವಾಗಿ ವೃದ್ಧಿಪಡಿಸುವುದಕ್ಕೆ ಸಹಾಯ ಮಾಡಿತು. ಕೈಗಾರಿಕೆಯ ರಂಗದಲ್ಲಿ ಸಾಧ್ಯವಾದ ಪ್ರಮಾಣದಲ್ಲಿಯೇ ಕೃಷಿರಂಗದಲ್ಲೂ ಯಂತ್ರಗಳ ಪಾತ್ರ ಹೆಚ್ಚುವುದು ಸಾಧ್ಯವಾಗಲಿಲ್ಲ. ಕೃಷಿಯಲ್ಲಿ ನಿಸರ್ಗದ ಪಾತ್ರ ಹಿರಿದು. ಕೈಗಾರಿಕೆಯ ರಂಗದಲ್ಲಿ ಮಾನವರ ಪಾತ್ರ ಹಿರಿದು. ಕೈಗಾರಿಕೆಯ ರಂಗದಲ್ಲಿ ಕಚ್ಚಾ ಮಾಲಿನ ಪರಿಷ್ಕಾರದಿಂದ ಹಿಡಿದು ಒಂದು ವಸ್ತು ಪೂರ್ಣಗೊಳ್ಳುವವರೆಗೂ ಯಂತ್ರಗಳ ಸಹಾಯದಿಂದಲೇ ಕೆಲಸ ಮಾಡಿಸುವುದು ಸಾಧ್ಯವಿದ್ದುದರಿಂದ ಅಲ್ಲಿ ಯಂತ್ರಗಳ ಆವಿಷ್ಕಾರಕ್ಕೆ ಬಹಳ ಪ್ರಾಧಾನ್ಯವಿದ್ದು ಅದು ಸಾಧ್ಯವಾಯಿತು. ಕೃಷಿ ರಂಗದಲ್ಲಿ ಆದ ಆವಿಷ್ಕಾರಗಳು ಕೃಷಿಕಾರ್ಯಗಳನ್ನು ಶೀಘ್ರವಾಗಿ ಮಾಡಿ ಮುಗಿಸುವ ಯಂತ್ರಗಳಿಗೆ ಮಾತ್ರ ಸೀಮಿತವಾಗಿತ್ತು.

1793–1815ರಲ್ಲಿ ಇಂಗ್ಲೆಂಡಿನ ಜಮೀನ್ದಾರರು ಬಹಳ ಉಚ್ಛ್ರಾಯ ಸ್ಥಿತಿಯನ್ನು ಅನುಭವಿಸಿದರು. ಫ್ರಾನ್ಸಿನ ಕ್ರಾಂತಿ, ನೆಪೋಲಿಯನ್ ಯುದ್ಧ ಮುಂತಾದವುಗಳಿಂದಾಗಿ ಇಂಗ್ಲೆಂಡಿನಲ್ಲಿ ಧಾನ್ಯಗಳ ಬೆಲೆ ಏರಹತ್ತಿತು. ಇದರಿಂದಾಗಿ ಹೆಚ್ಚು ಹೆಚ್ಚು ಭೂಮಿಯನ್ನು ಉಳುವುದಕ್ಕೆ ಪ್ರಾರಂಭಿಸಿದರು. 1750–1801ರಲ್ಲಿ ಇಂಗ್ಲೆಂಡಿನ ಪ್ರಜಾಸಂಖ್ಯೆ ದ್ವಿಗುಣವಾದ್ದರಿಂದ ಆಹಾರಧಾನ್ಯಕ್ಕೆ ಬೇಡಿಕೆ ಇನ್ನೂ ಹೆಚ್ಚಿತು. ಇದು ಆವರಣ ಕ್ರಮವನ್ನು

ಇನ್ನೂ ವಿಸ್ತಾರಗೊಳಿಸಿತು. 19ನೆಯ ಶತಮಾನದ ಅಂತ್ಯದ ವೇಳೆಗೆ ಸಣ್ಣ ಸಣ್ಣ ರೈತರ ವರ್ಗ ಹೆಚ್ಚು ಕಡಿಮೆ ಮಾಯವಾಗಿತ್ತೆಂದೇ ಹೇಳಬಹುದು. ಧನಿಕ ಜಮೀನ್ದಾರರು ವಿಸ್ತಾರವಾದ ಭೂಮಿಯಲ್ಲಿ ಬೇಸಾಯವನ್ನು ಆಧುನಿಕ ರೀತಿಯಲ್ಲಿ ಮಾಡುತ್ತಿದ್ದರು. ಕೃಷಿ ಆಧುನಿಕಗೊಂಡಿದ್ದರಿಂದ ಕೃಷಿಯ ಮೇಲೆ ಅವಲಂಬಿತವಾಗಿದ್ದ ಶೇಕಡಾವಾರು ಪ್ರಜಾಸಂಖ್ಯೆ ಇಳಿಮುಖವಾಗುತ್ತ ಬಂತು.

1815ರಲ್ಲಿ ನೆಪೋಲಿಯನ್ ಯುದ್ಧ ಮುಗಿದಾಗ ಧಾನ್ಯಗಳ ಬೆಲೆಗಳು ಕುಸಿಯಬಹುದೆಂಬ ಶಂಕೆಯಿಂದ ಪಾರ್ಲಿಮೆಂಟ್ ಧಾನ್ಯಕಾಯಿದೆಯ ಮೂಲಕ ಗೋಧಿ ಮತ್ತು ಇತರ ಧಾನ್ಯಗಳ ಆಮದನ್ನು ನಿಷೇಧಿಸಿತು. 1846ರಲ್ಲಿ ಈ ಕಾಯಿದೆ ಕೊನೆಗೊಂಡಿತು.

1838ರಲ್ಲಿ ಅಸ್ತಿತ್ವಕ್ಕೆ ಬಂದ ರಾಯಲ್ ಕೃಷಿ ಸಂಸ್ಥೆಯಿಂದ ಕೃಷಿಯ ಪ್ರಗತಿಗೆ ಇಂಗ್ಲೆಂಡಿನಲ್ಲಿ ಬಹಳ ಮಟ್ಟಿಗೆ ಸಹಾಯಕವಾಯಿತು. ಇದು ಕೃಷಿಯ ಹೃದಯ ಹಾಗೂ ಮೆದುಳು ಎಂದು ಪ್ರಸಿದ್ಧವಾಗಿತ್ತು. ಇದು ಕೃಷಿಕರಿಗೆ ಹೊಸ ಹೊಸ ಸಲಹೆಗಳನ್ನು ಕೊಡಲು ಸಮರ್ಥವಾಗಿತ್ತು. ಸರಕಾರವೂ ಕೃಷಿಗೆ ಈ ಅವಧಿಯಲ್ಲಿ ಧಾರಾಳವಾಗಿ ಸಹಾಯ ಮಾಡಿತು.

1850ರ ಅನಂತರ ಸುಮಾರು ಎರಡು ದಶಕಗಳ ಕಾಲ ಇಂಗ್ಲೆಂಡಿನ ಕೃಷಿ ತನ್ನ ಅತ್ಯಂತ ಪ್ರಗತಿಯ ದಿನಗಳನ್ನು ಕಂಡಿತು. ಕೃಷಿ ಕ್ಷೇತ್ರದಲ್ಲಿ ಇಂಗ್ಲೆಂಡಿನೊಂದಿಗೆ ಪೈಪೋಟಿ ಮಾಡುತ್ತಿದ್ದ ರಾಷ್ಟ್ರಗಳಾದ ಅಮೆರಿಕ, ರಷ್ಯ, ಜರ್ಮನಿ ಮತ್ತು ಇತರ ರಾಷ್ಟ್ರಗಳು ಈ ಅವಧಿಯಲ್ಲಿ ತಮ್ಮದೇ ಆದ ಸಮಸ್ಯೆಗಳನ್ನು ಎದುರಿಸುತ್ತಿದ್ದವು. 1860ರಲ್ಲಿ ಅಮೆರಿಕದಲ್ಲಿ ಅಂತರ್ಯುದ್ಧ ಸಂಭವಿಸಿತು. ರಷ್ಯ-ಕ್ರಿಮಿಯನ್ ಯುದ್ಧ ತಲೆ ಎತ್ತುತ್ತಿತ್ತು. ಜರ್ಮನಿ ತನ್ನ ನೆರೆ ರಾಷ್ಟ್ರಗಳ ಮೇಲೆ ಯುದ್ಧ ಹೂಡಿದ ಅನಂತರ ತನ್ನ ಸಂಪತ್ತನ್ನು ರೂಢಿಸಿಕೊಳ್ಳುವುದರಲ್ಲಿತ್ತು. ಹೀಗಾಗಿ, ಗೋಧಿ ಇತ್ಯಾದಿ ಧಾನ್ಯಗಳು ಆ ರಾಷ್ಟ್ರಗಳಿಂದ ಕಡಿಮೆ ಬೆಲೆಗೆ ಇಂಗ್ಲೆಂಡಿಗೆ ಬರುವುದು ಅಸಾಧ್ಯವಾಗಿತ್ತು. ಹೀಗಾಗಿ ಇಂಗ್ಲೆಂಡಿನ ಧಾನ್ಯದ ಬೆಲೆ ಕುಸಿಯಲಿಲ್ಲ. ಬದಲಾಗಿ ಆಸ್ಟ್ರೇಲಿಯ ಮತ್ತು ಕ್ಯಾಲಿಫೋರ್ನಿಯದಿಂದ ಇಂಗ್ಲೆಂಡಿಗೆ ಚಿನ್ನ ಬರುವುದಕ್ಕೆ ಆರಂಭವಾಗಿ ಧಾನ್ಯದ ಬೆಲೆ ಇನ್ನೂ ಹೆಚ್ಚಿತು. ಇಂಗ್ಲೆಂಡಿನ ಕೃಷಿಕರು ಈ ಸುಸಂದರ್ಭವನ್ನು ಉಪಯೋಗಿಸಿಕೊಂಡು ಉತ್ಪಾದನೆ ಹೆಚ್ಚಿಸಿದರು. ಕೃಷಿಗೆ ಯಂತ್ರಸಾಧನೆಗಳನ್ನು ಹೆಚ್ಚು ಹೆಚ್ಚಾಗಿ ಅಳವಡಿಸಲಾಯಿತು.

ಆದರೆ 1874ರ ಅನಂತರ ಕೃಷಿಗೆ ದುರ್ದಿನಗಳು ಬಂದವು. ಇದಕ್ಕೆ ಅನೇಕ ಕಾರಣಗಳಿದ್ದವು. ಮಳೆ ಬೀಳದೆ ಹೋದುದರಿಂದ ಬೆಳೆ ಕಡಿಮೆಯಾಯಿತು. 1873-79ರ ನಡುವೆ ಬೆಳೆ ಸ್ವಲ್ಪವೂ ಆಶಾದಾಯಕವಾಗಿರಲಿಲ್ಲ. ವಿದೇಶೀ ಪೈಪೋಟಿ ತೀರ ಹೆಚ್ಚಾಯಿತು. ಉತ್ತರ ಅಮೆರಿಕದವರು ಧಾನ್ಯಗಳನ್ನು ಅತ್ಯಂತ ಕನಿಷ್ಠ ಬೆಲೆಗೆ ಮಾರುವುದು ಸಾಧ್ಯವಿತ್ತು. ಹೊಸ ಭೂಮಿಯಲ್ಲಿ ಬೆಳೆಯುತ್ತಿದ್ದ ಆ ದೇಶದವರು ಗೋಧಿಯನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಬೆಳೆದು ಇಂಗ್ಲೆಂಡಿಗೆ ರಫ್ತು ಮಾಡುತ್ತಿದ್ದರು. ಅಮೆರಿಕದ ಕಡಿಮೆ ಬೆಲೆಯ ಗೋಧಿ ಇಂಗ್ಲೆಂಡಿನ ಕೃಷಿಕರನ್ನು ಬಹಳ ಕಷ್ಟಕ್ಕೀಡುಮಾಡಿತು. ಅಮೆರಿಕದಿಂದ ಇಂಗ್ಲೆಂಡಿಗೆ ಗೋಧಿ ಸಾಗಿಸುವ ವೆಚ್ಚವೂ ಈ ಸಮಯದಲ್ಲೇ ಕಡಿಮೆಯಾದ್ದರಿಂದ ಗೋಧಿಯ ಬೆಲೆ ಮತ್ತಷ್ಟು ಇಳಿಯಿತು. ಇದರಿಂದಾಗಿ ಇಂಗ್ಲೆಂಡಿನಲ್ಲಿ ಗೇಣಿ ಅತ್ಯಂತ ಕಡಿಮೆಯಾಯಿತು. ಇಂಗ್ಲೆಂಡಿನ ಕೃಷಿಕರು ಕಡಿಮೆ ಭೂಮಿಯಲ್ಲಿ ಬೆಳೆಯಲಾರಂಭಿಸಿದರು. ಹಳ್ಳಿಯ ಜನಸಂಖ್ಯೆ ಇದರಿಂದ ಕಡಿಮೆಯಾಗುವುದಕ್ಕಾರಂಭವಾಯಿತು. ಇದೇ ಸಮಯದಲ್ಲಿ ಅಮೆರಿಕದಲ್ಲಿ ಗೋಧಿ ಬೆಳೆಯುತ್ತಿದ್ದ ಪ್ರದೇಶ ಹೆಚ್ಚಾಯಿತು. ಇದರ ಪರಿಣಾಮವಾಗಿ ಇಂಗ್ಲೆಂಡಿನಲ್ಲಿ ಧಾನ್ಯದ ಉತ್ಪಾದನೆ ಕಡಿಮೆಯಾಯಿತು. ಇಂಗ್ಲೆಂಡಿನ ಜನ ಹೆಚ್ಚು ಹೆಚ್ಚು ಆಮದು ಆಹಾರದ ಮೇಲೆ ಅವಲಂಬಿತರಾದರು. 1875 ಮತ್ತು 1905ರ ನಡುವೆ ಆಹಾರದ ಆಮದು ಶೇಕಡ 130ರಷ್ಟು ಹೆಚ್ಚಿತು.

ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅನೇಕ ಪ್ರಯತ್ನಗಳನ್ನು ಸರ್ಕಾರ ಮಾಡಿತು. ಸಣ್ಣ ಹಿಡುವಳಿ ರಚಿಸಿದರೆ ಉತ್ಪಾದನೆಯಲ್ಲಿ ಪ್ರಗತಿಯಾಗಬಹುದೆಂದು ಸಣ್ಣ ಹಿಡುವಳಿಗಳಿಗೆ ಪ್ರಾರಂಭದಲ್ಲಿ ಪ್ರೋತ್ಸಾಹ ಕೊಡಲಾಯಿತು. ಇದನ್ನು ಜಾರಿಗೆ ತರಲು ಅನೇಕ ಕಾಯಿದೆಗಳನ್ನು ಜಾರಿಗೆ ತರಲಾಯಿತು. 1907ರ ಸಣ್ಣ ಹಿಡುವಳಿ ಮತ್ತು ಹಂಚಿಕೆ ಕಾಯಿದೆಯಲ್ಲಿ ಭೂಮಿಯನ್ನು ಕೊಂಡು ಅಥವಾ ಬಲಾತ್ಕಾರವಾಗಿ ಗೇಣಿಗೆ ಪಡೆದುಕೊಂಡು ಸಣ್ಣ ಸಣ್ಣ ಹಿಡುವಳಿಗಳನ್ನು ಮಾಡಿ ಸಣ್ಣ ರೈತರಿಗೆ ಗುತ್ತಿಗೆಗೆ ಕೊಡುವುದು ಅಥವಾ ಮಾರುವುದು ಸಾಧ್ಯವಾಯಿತು. ಸಣ್ಣ ರೈತರಿಗೆ ಭೂಮಿಯ ಬೆಲೆಯನ್ನು ಸಣ್ಣ ಸಣ್ಣ ಕಂತುಗಳಲ್ಲಿ ಕಟ್ಟುವ ಅನುಕೂಲ ಕಲ್ಪಿಸಿಕೊಡಲಾಗಿತ್ತು.

ಸಣ್ಣ ಹಿಡುವಳಿಗಳನ್ನು ನಿರ್ಮಿಸಿದ್ದಲ್ಲದೆ, ಕೃಷಿಗೆ ಅಗತ್ಯವಾದ ಬೇರೆ ಸೌಕರ್ಯಗಳನ್ನೂ ಕಲ್ಪಿಸಿಕೊಡಲಾಗಿತ್ತು. ಸಹಕಾರಕ್ಕೆ ಹಳ್ಳಿಗಳಲ್ಲಿ ಹೆಚ್ಚಿನ ಪ್ರಾಧಾನ್ಯ ಕೊಡಲಾಯಿತು. ಕೃಷಿಗೆ ಸಾಲ, ವೈಜ್ಞಾನಿಕ ರೀತಿಯ ತರಬೇತಿ ಮತ್ತು ಕೃಷಿಕ ಕಾರ್ಮಿಕ ಸಂಘಗಳನ್ನು ವ್ಯವಸ್ಥೆ ಮಾಡಿ ಕೃಷಿಯನ್ನು ಉತ್ತಮಪಡಿಸುವ ಪ್ರಯತ್ನ ನಡೆಯಿತು.

ಪ್ರಥಮ ಮಹಾಯುದ್ಧದ ಕಾಲದಲ್ಲಿ ಆಹಾರದ ವಿಷಮ ಪರಿಸ್ಥಿತಿ ನಿವಾರಿಸುವುದಕ್ಕಾಗಿ ಸರ್ಕಾರ ನೇರವಾಗಿ ಕೃಷಿರಂಗವನ್ನು ಪ್ರವೇಶಿಸಿತು. 1917ರ ಧಾನ್ಯ ಉತ್ಪಾದನಾ ಕಾಯಿದೆಯನ್ವಯ ಕೌಂಟಿ ಕೃಷಿಸಮಿತಿಗಳನ್ನು ನೇಮಿಸಿತು. ಈ ಸಮಿತಿಗಳಿಗೆ ಉತ್ಪಾದನೆಯನ್ನು ಹೆಚ್ಚಿಸಲು ಅನೇಕ ಹಕ್ಕುಗಳನ್ನು ಕೊಡಲಾಗಿತ್ತು. ಕೃಷಿಕರು ಹೇಗೆ ತಮ್ಮ ಭೂಮಿಯನ್ನು ಉಪಯೋಗಿಸಬೇಕು ಎಂಬುದನ್ನು ಬಲಾತ್ಕಾರವಾಗಿ ನಿರ್ದೇಶಿಸುವ ಹಕ್ಕು ಈ ಸಮಿತಿಗಳಿಗಿತ್ತು. 1918ರಲ್ಲಿ ಗೋದಿ, ಓಟ್ಸ್ ಮತ್ತು ಆಲೂಗೆಡ್ಡೆಯ ಬೆಳೆ ಸುಮಾರು ಶೇ.59ರಷ್ಟು ಹೆಚ್ಚಿತು. ಯುದ್ಧಕಾಲದಲ್ಲಿ ಹೆಚ್ಚಿಗೆ ಜಮೀನನ್ನು ಕೃಷಿಗೆ ಒಳಪಡಿಸಲಾಯಿತು. ಆದರೆ ಯುದ್ಧ ಮುಗಿದ ತಕ್ಷಣ ಸರ್ಕಾರ ಕೃಷಿರಂಗದಿಂದ ವಾಪಸ್ಸಾಯಿತು.

1920ರ ಪ್ರಪಂಚದ ಮಹಾ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಇಂಗ್ಲೆಂಡಿನ ಕೃಷಿಕರು ಮತ್ತೆ ದುರ್ದಿನಗಳನ್ನು ಎದುರಿಸಬೇಕಾಯಿತು **(ನೋಡಿ-ಪ್ರಪಂಚದ ಆರ್ಥಿಕ ಮುಗ್ಗಟ್ಟು)**. ಕೈಗಾರಿಕೆಯ ಕ್ಷೇತ್ರದಲ್ಲಿ ನಿರುದ್ಯೋಗ ಹೆಚ್ಚಿದುದರಿಂದ ಕೃಷಿವಸ್ತುಗಳ ಬೆಲೆಗಳೂ ಕುಸಿಯಲಾರಂಭಿಸಿದವು. ಇಂಗ್ಲೆಂಡ್ ವಿದೇಶೀ ಪೈಪೋಟಿಗೆ ತೀವ್ರವಾಗಿ ತುತ್ತಾಯಿತು. 1932ರಲ್ಲಿ ಗೋಧಿ ಕಾಯಿದೆಯನ್ನು ಜಾರಿಗೆ ತರಲಾಯಿತು. ಇದರ ಪ್ರಕಾರ ಇಂಗ್ಲೆಂಡಿನಲ್ಲಿ ಬೆಳೆದ ಒಂದು ನಿರ್ದಿಷ್ಟ ಪ್ರಮಾಣದ ಗೋಧಿಗೆ ಕನಿಷ್ಠ ಬೆಲೆಯನ್ನು ನಿಗದಿ ಮಾಡಲಾಯಿತು. ಕೃಷಿ ಉತ್ಪಾದನ ಸಾಮಗ್ರಿಗಳನ್ನು ಮಾರುವ ಬೆಲೆಯನ್ನು ನಿಯಂತ್ರಿಸಲು ಅನೇಕ ಮಾರುಕಟ್ಟೆ ಮಂಡಲಿಗಳನ್ನು ರಚಿಸಲಾಯಿತು.

1931 ಮತ್ತು 33ರ ಕೃಷಿ ಉತ್ಪನ್ನ ಮಾರಾಟ ಕಾಯಿದೆಗಳು ಕೃಷಿ ವಸ್ತುಗಳನ್ನು ಸುಲಭವಾಗಿ ಮಾರಲು ಸಹಾಯ ಮಾಡಿದವು. ಇಂಗ್ಲೆಂಡಿನ ಕೃಷಿ ಉತ್ಪಾದನೆಗೆ ಉಪಕಾರಿಯಾಗುವಂತೆ ಅಂಥ ವಸ್ತುಗಳ ಆಯಾತವನ್ನು ನಿಯಂತ್ರಿಸಲು ವ್ಯಾಪಾರದ ಮಂಡಲಿಗೆ ಅಧಿಕಾರ ನೀಡಲಾಯಿತು. ಈ ಕ್ರಮಗಳಲ್ಲದೆ ಅಂತಾರಾಷ್ಟ್ರೀಯ ಒಪ್ಪಂದಗಳ ಮೂಲಕವೂ ಕೃಷಿಯ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸಲಾಯಿತು. 1932ರ ಒಟಾವದ ಸಾಮ್ರಾಜ್ಯ ಸಮ್ಮೇಳನದ ಒಪ್ಪಂದಕ್ಕನುಗುಣವಾಗಿ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡಿನ ಆಹಾರದ ಆಮದನ್ನು ಕಡಿಮೆ ಮಾಡಲಾಯಿತು. ಒಟ್ಟಿನಲ್ಲಿ ಆರ್ಥಿಕ ಕುಸಿತ ಇಂಗ್ಲೆಂಡಿನಲ್ಲಿ ಒಂದು ರಾಷ್ಟ್ರೀಯ ಕೃಷಿ ನಿಯಮವನ್ನು ಜಾರಿಗೆ ತಂದಿತೆಂದು ಹೇಳಬಹುದು. ಕೃಷಿಕರೂ ಸ್ವತಂತ್ರವಾಗಿ ಉತ್ಪಾದನಾವೆಚ್ಚವನ್ನು ಕಡಿಮೆ ಮಾಡುವ ಮತ್ತು ಹೆಚ್ಚು ದೃಢವಾದ ಬೆಳೆಗಳನ್ನು ಬೆಳೆಯುವ ಪ್ರಯತ್ನ ಮಾಡಿದರು.

ಎರಡನೆಯ ಮಹಾಯುದ್ಧದ ಕಾಲದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಈ ಕಾಲದ ಕೃಷಿನೀತಿಯ ಮುಖ್ಯ ಗುರಿಯೆಂದರೆ ಆಹಾರದಲ್ಲಿ ಸ್ವಾವಲಂಬನೆಯ ಸಾಧನೆ. ಉತ್ಪಾದನೆಯನ್ನು ಹೆಚ್ಚಿಸುವ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಹುಲ್ಲುಗಾವಲುಗಳನ್ನು ಧಾನ್ಯ ಬೆಳೆಯುವ ಜಮೀನುಗಳನ್ನಾಗಿ ಪರಿವರ್ತಿಸಲಾಯಿತು. ದೇಶಾದ್ಯಂತ ಯುದ್ಧ ಕೃಷಿ ಸಮಿತಿಗಳನ್ನು ನೇಮಿಸಲಾಯಿತು. ಈ ಸಮಿತಿಗಳು ಕೃಷಿಕರಿಗೆ ಅಗತ್ಯವಾದ ರಾಸಾಯನಿಕ ಗೊಬ್ಬರವನ್ನೂ ಯಂತ್ರಸಾಮಗ್ರಿಗಳನ್ನೂ ಒದಗಿಸುತ್ತಿದ್ದವು. ಇವು ಭೂಮಾಲೀಕರಿಗೆ ಯಾವ ರೀತಿಯ ಬೆಳೆ ಬೆಳೆಯಬೇಕು ಇತ್ಯಾದಿಗಳ ವಿಷಯದಲ್ಲಿ ನಿರ್ದೇಶನ ಕೊಡುತ್ತಿದ್ದವು. ಈ ಕ್ರಮಗಳಿಂದ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸುವುದು ಸಾಧ್ಯವಾಯಿತು.

ಈ ಹೆಚ್ಚಿನ ಉತ್ಪಾದನೆಯ ಸಿದ್ಧಿಗೆ ಸರ್ಕಾರ ತನ್ನ ಕಾಯಿದೆಗಳ ಮೂಲಕ ಸಹಾಯ ಮಾಡಿತು. ಮಾರಾಟ ಸೌಲಭ್ಯಗಳ ಒಪ್ಪಂದದ ಮೂಲಕ ರೈತರಿಗೆ ಖಚಿತ ಬೆಲೆಗಳನ್ನು ಒದಗಿಸಿ ಕೃಷಿಯನ್ನು ಪ್ರೋತ್ಸಾಹಿಸಲಾಯಿತು. ಯುದ್ಧಾನಂತರದಲ್ಲಿ ಸಹ ಈ ಪ್ರೋತ್ಸಾಹಗಳು ಮುಂದುವರಿದುವು.

**ಸಾರಿಗೆ ವ್ಯವಸ್ಥೆಯಲ್ಲಿ ಕ್ರಾಂತಿ:** ಕೈಗಾರಿಕಾಕ್ರಾಂತಿಯ ಫಲವಾಗಿ ಸಾರಿಗೆ ವ್ಯವಸ್ಥೆಯಲ್ಲೂ ಕ್ರಾಂತಿಕಾರಕ ಬದಲಾವಣೆಗಳಾದವು. ಕೈಗಾರಿಕಾ ಕ್ರಾಂತಿ ಆರಂಭವಾದಾಗ ಇಂಗ್ಲೆಂಡಿನ ಸಾರಿಗೆ ವ್ಯವಸ್ಥೆ ತೀರ ಅಸಮರ್ಪಕವಾಗಿತ್ತು. ಇಂಗ್ಲೆಂಡಿನಲ್ಲಿ ರಸ್ತೆ ವ್ಯವಸ್ಥೆಯ ವಿಷಯದಲ್ಲಿ ನಿರ್ದಿಷ್ಟ ಯೋಜನೆಗಳಿಲ್ಲದಿದ್ದುದೇ ಈ ಅವ್ಯವಸ್ಥೆಗೆ ಕಾರಣ. ಸುಂಕದ ರಸ್ತೆ ಕಂಪೆನಿಗಳು ನೂರಾರು ಹುಟ್ಟಿಕೊಂಡಿದ್ದು ಅವೇ ಒಂದಿಷ್ಟು ರಸ್ತೆ ನಿರ್ಮಿಸಿದ್ದವು.

18ನೆಯ ಶತಮಾನದ ಕೊನೆಯಲ್ಲಿ ಮತ್ತು 19ನೆಯ ಶತಮಾನದ ಪ್ರಾರಂಭದಲ್ಲಿ ರಸ್ತೆ ನಿರ್ಮಾಣದಲ್ಲಿ ಅದ್ಭುತ ಪ್ರಗತಿಯಾಯಿತು. ಉತ್ತರ ಇಂಗ್ಲೆಂಡಿನಲ್ಲಿ ಜಾನ್ ಮೆಟ್‌ಕಾಫ್ ಅಚ್ಚುಕಟ್ಟಾದ ಉತ್ತಮ ರಸ್ತೆಗಳನ್ನು ನಿರ್ಮಿಸಿದ. ಟೆಲ್‌ಫೋರ್ಡ್ ಮತ್ತು ಮೆಕಾಡಂ ಎಂಬುವರು ಒಳ್ಳೆಯ ರಸ್ತೆಗಳನ್ನು ನಿರ್ಮಿಸುವುದಕ್ಕೆ ಆರಂಭಿಸಿದರು. (ಪದರ ಪದರವಾಗಿ ಜಲ್ಲಿ ಹಾಕಿ ಗಟ್ಟಿಸಿ ಮಾಡುವ ಮೆಕಾಡಂ ರಸ್ತೆ ವಿಧಾನಕ್ಕೆ ಇವನ ಹೆಸರೇ ಬಂದಿದೆ.) ಇಂತಹ ರಸ್ತೆಗಳ ನಿರ್ಮಾಣದಿಂದಾಗಿ ಸಾಗಾಣಿಕೆ ಬೆಲೆ ಕಡಿಮೆಯಾಯಿತು. ಆದರೆ ರೈಲಿನ ಪ್ರಾರಂಭದಿಂದಾಗಿ ರಸ್ತೆ ನಿರ್ಮಾಣಕ್ಕೆ ಮುಂದೆ ಹೆಚ್ಚು ಗಮನ ಕೊಡಲಾಗಲಿಲ್ಲ. 19ನೆಯ ಶತಮಾನದ ಅಂತ್ಯದ ವೇಳೆಗೆ ಸುಂಕದ ರಸ್ತೆ ಸಂಸ್ಥೆಗಳೆಲ್ಲ ಮಾಯವಾದವು.

ರಸ್ತೆನಿರ್ಮಾಣದಲ್ಲಿ ಪ್ರಗತಿಯಾದರೂ ಕೈಗಾರಿಕೆಯ ಪ್ರಗತಿಗೆ ಇಷ್ಟೇ ಸಾಕಾಗಲಿಲ್ಲ. ಅನೇಕ ಕೈಗಾರಿಕೆದಾರರು ಕಾಲುವೆ ಮಾರ್ಗವನ್ನು ಸುಲಭ ಹಾಗೂ ವೇಗ ಸರಕುಸಾಗಾಣಿಕೆಗಾಗಿ ಉಪಯೋಗಿಸಿಕೊಳ್ಳುವ ವಿಚಾರ ಮಾಡಿದರು. ಕಲ್ಲಿದ್ದಲಿಗೆ ಬೇಡಿಕೆ ಹೆಚ್ಚಾದಾಗ ಅದನ್ನು ಸಾಗಿಸಲು ಇದೇ ಸುಲಭ ಉಪಾಯವಾಗಿ ಕಂಡಿತು. 1761ರಲ್ಲಿ ಜೇಮ್ಸ್ ಬ್ರಿಂಡ್ಲೆ ಎಂಬ ಇಂಜಿನಿಯರ್ ವಾರ್ಸ್ಲೆ ಮತ್ತು ಮ್ಯಾಂಚೆಸ್ಟರ್ ನಡುವೆ ಒಂದು ಕಾಲುವೆ ನಿರ್ಮಿಸಿದ. ಇದಕ್ಕೆ ತಗಲುವ ವೆಚ್ಚವನ್ನು ವಾರ್ಸ್ಲೆಯಲ್ಲಿನ ಗಣಿಯ ಮಾಲಿಕ ಡ್ಯೂಕ್ ಬ್ರಿಡ್ಜ್ ವಾಟರ್

ಒದಗಿಸಿದ. ಈ ಸಾಗಾಣಿಕೆ ವ್ಯವಸ್ಥೆಯ ಪರಿಣಾಮವಾಗಿ ಕಲ್ಲಿದ್ದಲಿನ ಬೆಲೆ ಮ್ಯಾಂಚೆಸ್ಟರಿನಲ್ಲಿ ಅರ್ಧಕ್ಕರ್ಧ ಕಡಿಮೆಯಾಯಿತು. ಈ ಸಾಹಸ ಪ್ರವೃತ್ತಿ ಬಂಡವಾಳವಿದ್ದ ಅನೇಕರಿಗೆ ಆಕರ್ಷಕವಾಗಿ ಕಂಡಿತು. 18ನೆಯ ಶತಮಾನದ ಅಂತ್ಯದ ವೇಳೆಗೆ ಸುಮಾರು 4,800 ಕಿಮೀನಷ್ಟು ಕಾಲುವೆಯ ಮಾರ್ಗ ನಿರ್ಮಿಸಲಾಯಿತು. ಈ ಕಾಲುವೆಮಾರ್ಗಗಳಿಂದ ಅನೇಕ ಉದ್ಯಮಗಳು ಪ್ರಯೋಜನ ಪಡೆದುಕೊಂಡು ಪ್ರಗತಿ ಸಾಧಿಸಿದವು. ಆದರೆ ಉದ್ಯಮರಂಗದಲ್ಲಿ ಅದ್ಭುತ ಪ್ರಗತಿಯಾಗುತ್ತಿದ್ದುದರಿಂದ ಉದ್ಭವಿಸಿದ ಸಾಗಾಣಿಕೆಯ ಸಮಸ್ಯೆಯನ್ನು ಬಗೆಹರಿಸಲು ಕಾಲುವೆಮಾರ್ಗಗಳಿಗೆ ಸಾಧ್ಯವಾಗಲಿಲ್ಲ. ಇದಕ್ಕಿಂತ ಹೆಚ್ಚು ವೇಗವಾಗಿ ಸರಕನ್ನು ಸಾಗಿಸಬಲ್ಲ ರೈಲ್ವೆಗಳು ಬಂದು ಕಾಲುವೆಗಳ ಪ್ರಾಮುಖ್ಯವನ್ನು ಕ್ರಮೇಣ ಕುಗ್ಗಿಸಿದವು.

ಕೈಗಾರಿಕಾಕ್ರಾಂತಿಯ ಸಫಲತೆಯನ್ನು ಪೋಷಿಸಲು 19ನೆಯ ಶತಮಾನದ ಪ್ರಾರಂಭದಲ್ಲಿ ಅಸ್ತಿತ್ವಕ್ಕೆ ಬಂದ ರೈಲು ಬಹಳ ಮಟ್ಟಿಗೆ ಸಹಾಯಕವಾಯಿತು. 1825ರಲ್ಲಿ ಪ್ರಥಮ ರೈಲು ಮಾರ್ಗ ಪ್ರಾರಂಭವಾಯಿತು. ಇದನ್ನು ಸ್ಟಾಕ್ಟನ್ನಿನಿಂದ ಡಾರ್ಲಿಂಗ್ಟನ್ ವರೆಗೆ ಹಾಕಲಾಗಿತ್ತು. ಈ ಮಾರ್ಗ ಆರ್ಥಿಕವಾಗಿ ಲಾಭದಾಯಕವೆಂದು ಕಂಡುಬಂದದ್ದರಿಂದ ರೈಲುಮಾರ್ಗ ನಿರ್ಮಾಣ ಅಲ್ಲಿಂದ ಮುಂದಕ್ಕೆ ವೇಗವಾಗಿ ನಡೆಯಿತು. ಇಂಗ್ಲೆಂಡಿನ ನಾನಾ ಭಾಗಗಳಲ್ಲಿ ರೈಲು ಮಾರ್ಗಗಳನ್ನು ನಿರ್ಮಿಸಲು ರೈಲ್ವೆ ಕಂಪೆನಿಗಳು ಅಸ್ತಿತ್ವಕ್ಕೆ ಬಂದವು. 1838ರ ವೇಳೆಗೆ ಸು. 800 ಕಿಮೀಗಳಷ್ಟು ರೈಲು ಮಾರ್ಗ ನಿರ್ಮಾಣವಾಗಿತ್ತು. 10 ವರ್ಷದ ಅನಂತರ ರೈಲುಮಾರ್ಗ 8,000 ಕಿಮೀಗಳನ್ನು ಮುಟ್ಟಿತೆಂದರೆ ನಿರ್ಮಾಣದ ವೇಗ ಅರ್ಥವಾಗುತ್ತದೆ. ಆದರೆ ರೈಲ್ವೆ ನಿರ್ಮಾಣದಲ್ಲಿದ್ದ ತೊಂದರೆಯೆಂದರೆ, ರೈಲ್ವೆ ನಿರ್ಮಾಣಕ್ಕೆ ಪಾರ್ಲಿಮೆಂಟಿನ ಒಪ್ಪಿಗೆ ಪಡೆಯಬೇಕಾಗಿತ್ತು. ರೈಲುಮಾರ್ಗಗಳನ್ನು ನಿರ್ಮಿಸಲು ಭೂಮಿಯನ್ನು ಆಕ್ರಮಿಸಿಕೊಂಡಾಗ ಅದರ ಮಾಲೀಕರಿಗೆ ಹೆಚ್ಚಿನ ಪರಿಹಾರ ಕೊಡಬೇಕಾಗಿತ್ತು. ಇದೆಲ್ಲ ವೆಚ್ಚದಿಂದಾಗಿ ಇಡೀ ಪ್ರಪಂಚದಲ್ಲೇ ರೈಲ್ವೆ ನಿರ್ಮಾಣದ ವೆಚ್ಚ ಇಂಗ್ಲೆಂಡಿನಲ್ಲಿ ಅತ್ಯಧಿಕವಾಗಿತ್ತು. ಇಂಗ್ಲೆಂಡಿನಲ್ಲಿ ಸರಾಸರಿ 1.6 ಕಿಮೀ ರಸ್ತೆ ನಿರ್ಮಾಣಕ್ಕೆ 56,915 ಪೌಂಡು ವೆಚ್ಚ ತಗಲುತ್ತಿತ್ತೆಂದು ಅಂದಾಜುಮಾಡಲಾಗಿದೆ.

ಆದರೆ ರೈಲ್ವೆ ಕಂಪೆನಿಗಳಿಂದ ಸಿಗುತ್ತಿದ್ದ ಲಾಭಾಂಶದ ಆಶೆಯಿಂದ 1844ರ ಅನಂತರ ಸಣ್ಣ ಪುಟ್ಟ ಆದಾಯದವರು ರೈಲ್ವೆ ಕಂಪೆನಿಗಳಲ್ಲಿ ಹಣ ತೊಡಗಿಸಲು ಪ್ರಾರಂಭಿಸಿದರು. ರೈಲ್ವೆಯ ಪ್ರಾಧಾನ್ಯಯುಗ ಈ ಕಾಲದಲ್ಲಿ ಆರಂಭವಾಯಿತು. ಜಾರ್ಜ್ ಹಡ್‍ಸನ್ ಎಂಬುವನು ರೈಲ್ವೆಯಲ್ಲಿ ಹಣ ತೊಡಗಿಸಿದರೆ ಅಧಿಕ ಲಾಭ ಬರುತ್ತದೆ ಎಂಬುದನ್ನು ತೋರಿಸಿದ. 1844ರಲ್ಲಿ 1288 ಕಿಮೀಗೆ ಹೊಸ ಅನುಮತಿ ದೊರೆಯಿತು. 1844–72ರ ಅವಧಿಯಲ್ಲಿ ಹೊಸ ಹೊಸ ರೈಲು ಮಾರ್ಗ ರಚನೆಗೆ ಹಾಗೂ ಇದ್ದ ರೈಲುಮಾರ್ಗಗಳ ಸಂಯೋಜನೆಗೆ ಕಾಯಿದೆಯ ಬೆಂಬಲ ದೊರೆಯಿತು. 1846ರ ಹೊತ್ತಿಗೆ ಇಂಗ್ಲೆಂಡಿನ ಜನರಿಗೆ ರೈಲ್ವೆ ಹುಚ್ಚು ಹಿಡಿದಿತ್ತು ಎಂದು ಹೇಳಲಾಗಿದೆ.

ಇಂಗ್ಲೆಂಡಿನ ರೈಲ್ವೆ ಬೆಳವಣಿಗೆಯ ವೈಶಿಷ್ಟ್ಯವೆಂದರೆ ಸಂಪೂರ್ಣವಾಗಿ ಖಾಸಗಿ ಕಂಪೆನಿಗಳು ರೈಲ್ವೆಯನ್ನು ನಿರ್ಮಿಸಿದ್ದು. 1830–53ರ ಅವಧಿಯಲ್ಲಿ ಸರ್ಕಾರದ 5 ರೈಲ್ವೆ ಸಮಿತಿಗಳು ರೈಲ್ವೆನೀತಿಯನ್ನು ಕುರಿತು ಚರ್ಚಿಸಿದುವಾದರೂ ರೈಲ್ವೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಹೇಳುವುದರ ಬಗ್ಗೆ ಅವು ಆಸಕ್ತಿ ತೋರಿಸಿರಲಿಲ್ಲ.

ಇಂಗ್ಲೆಂಡಿನಲ್ಲಿ ರೈಲ್ವೆ ನಿರ್ಮಾಣ ಖಾಸಗಿ ಕ್ಷೇತ್ರದಲ್ಲಿದ್ದದ್ದರಿಂದ ಇದರ ಬೆಳವಣಿಗೆ ಯೋಜನಾಬದ್ಧವಾಗಿರಲಿಲ್ಲ. ಖಾಸಗಿಕ್ಷೇತ್ರದ ರೈಲ್ವೆ ಏಕಸ್ವಾಮ್ಯಗಳ ಬಗ್ಗೆ ಪ್ರಾರಂಭದಲ್ಲಿ ಅಷ್ಟೇನೂ ಸಮಸ್ಯೆಯಿರಲಿಲ್ಲ. ಕ್ರಮೇಣ ಇವುಗಳ ಕೆಲವು ನ್ಯೂನತೆಗಳು ಬೆಳಕಿಗೆ ಬಂದವು. ಇವನ್ನು ಅನೇಕರು ಸರ್ಕಾರದ ಗಮನಕ್ಕೆ ತಂದರು. ಈ ಕ್ಷೇತ್ರದಲ್ಲಿ ಸರ್ಕಾರದ ನಿಯಂತ್ರಣ ವಿರಬೇಕೆಂದು ಒತ್ತಾಯ ಮಾಡಿದರು. ರೈಲ್ವೆ ಸಮಿತಿ ದರಗಳನ್ನು ನಿಗದಿಮಾಡುವಂತೆ 1888ರಲ್ಲಿ ಸರ್ಕಾರ ನಿರ್ದೇಶಿಸಿತು. ಈ ಸಮಿತಿ ರೈಲ್ವೆಯ ಕನಿಷ್ಠ ಹಾಗೂ ಗರಿಷ್ಠ ದರಗಳನ್ನು ಗೊತ್ತು ಮಾಡಿತು. 1892ರಲ್ಲಿ ಮತ್ತೆ ಸಮಿತಿ ದರಗಳನ್ನು ಏರಿಸದಂತೆ ನಿರ್ದೇಶಿಸಿತು.

ಮೊದಲನೆಯ ಮಹಾಯುದ್ಧದ ಕಾಲದಲ್ಲಿ ರೈಲ್ವೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಆದರೆ ಇದು ರಾಷ್ಟ್ರದ ಹಿತದೃಷ್ಟಿಯಿಂದ ಮಾತ್ರ ರೈಲ್ವೆಯನ್ನು ನಡೆಸಿದಾಗ ಬಂದ ಅನುಭವದಿಂದ ಅದರ ವಿಷಯದಲ್ಲಿ ಸರ್ಕಾರದ ನಿಲುವು ಬದಲಾಯಿತು. ರೈಲ್ವೆ ಕಂಪೆನಿಗಳನ್ನು ಸಂಯೋಜಿಸಿದರೆ ಲಾಭ ಉಂಟಾಗುತ್ತದೆಂಬುದನ್ನು ಅದು ಮನಗಂಡಿತು. ಇದರ ಪರಿಣಾಮವೇ 1921ರ ರೈಲ್ವೆ ಕಾನೂನು. ಈ ಕಾನೂನಿಗೆ ಅನುಗುಣವಾಗಿ ಇಂಗ್ಲೆಂಡಿನ 121 ಕಂಪೆನಿಗಳನ್ನು ಸಂಯೋಜಿಸಿ 4 ವಿಭಾಗಗಳಾಗಿ ಮಾಡಲಾಯಿತು.

ಎರಡನೆಯ ಮಹಾಯುದ್ಧದ ಕಾಲದಲ್ಲಿ ಸರ್ಕಾರ ರೈಲ್ವೆಗಳನ್ನು ಬಲವಾಗಿ ನಿಯಂತ್ರಿಸಿತು. 1947ರಲ್ಲಿ ಸಾರಿಗೆ ಕಾಯಿದೆಯನ್ನು ಜಾರಿಗೆ ತಂದು ಇಂಗ್ಲೆಂಡಿನಲ್ಲಿ ರೈಲ್ವೆಯನ್ನು ರಾಷ್ಟ್ರೀಕರಿಸಲಾಯಿತು. 1956ರಲ್ಲಿ ರೈಲ್ವೆಗಾಗಿ 15 ವರ್ಷ ಅವಧಿಯ ಒಂದು ಯೋಜನೆಯನ್ನು ರೂಪಿಸಲಾಯಿತು.

ಒಟ್ಟಿನಲ್ಲಿ ರೈಲ್ವೆಪ್ರಗತಿಯು ಇಂಗ್ಲೆಂಡಿನ ಆರ್ಥಿಕ ಪ್ರಗತಿಗೆ ಅತ್ಯಂತ ಸಹಾಯಕವಾಯಿತಲ್ಲದೆ ರಾಷ್ಟ್ರದ ಕೈಗಾರಿಕೆ ಬೆಳವಣಿಗೆಗೆ ಬಹಳ ಮಟ್ಟಿಗೆ ಸಹಾಯ ಮಾಡಿತು.

ಇದೇ ಕಾಲಕ್ಕೆ ಇಂಗ್ಲೆಂಡಿನ ನೌಕಾಸಾರಿಗೆಯ ಬೆಳವಣಿಗೆಯೂ ಆಗದಿದ್ದಿದ್ದರೆ ಅದರ ಕೈಗಾರಿಕಾ ಕ್ರಾಂತಿ ಬಹಳ ಕುಂಠಿತವಾಗುತ್ತಿತ್ತು. ತನಗೆ ಅಗತ್ಯವಾದ ಆಹಾರಧಾನ್ಯಗಳನ್ನು ಮತ್ತು ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಇಂಗ್ಲೆಂಡಿಗೆ ಸಾಗರ ವ್ಯವಸ್ಥೆ ಮೊದಲಿನಿಂದಲೂ ಸಹಾಯಮಾಡಿತು. ಇಂಗ್ಲೆಂಡಿನ ಆರ್ಥಿಕ ಪ್ರಗತಿ ಬಹಳ ಮಟ್ಟಿಗೆ ಈ ಸಾರಿಗೆಯನ್ನೇ ಅವಲಂಬಿಸಿತ್ತು. ಇಂಗ್ಲೆಂಡಿನ ಧನಪ್ರಭುತ್ವವಾದ ಸಿದ್ಧಿಗೆ ಸಹ ಇದು ತೀರ ಅಗತ್ಯವಾಗಿತ್ತು. 1651 ಮತ್ತು 1660ರಲ್ಲಿ ನೌಕಾಕಾಯಿದೆಗಳ ಮೂಲಕ ನೌಕಾಸಾರಿಗೆಗೆ ಪ್ರೋತ್ಸಾಹ ಕೊಡಲಾಯಿತು. 19ನೆಯ ಶತಮಾನದ ಪ್ರಾರಂಭದಲ್ಲಿ ಜಹಜು ಬಳಕೆಗೆ ಬಂದದ್ದರಿಂದ ಸಾರಿಗೆ ಉತ್ತಮವಾಯಿತು. 1869ರಲ್ಲಿ ಪ್ರಾರಂಭವಾದ ಸೂಯೆಜ್ ಕಾಲುವೆ ಇಂಗ್ಲೆಂಡಿನ ವ್ಯಾಪಾರವನ್ನು ಕುದುರಿಸಿ ನೌಕಾನಿರ್ಮಾಣಕ್ಕೆ ಪ್ರೋತ್ಸಾಹ ಕೊಟ್ಟಿತು. 1890ಕ್ಕಿಂತ ಮುಂಚೆ ಪ್ರಪಂಚದ ಒಟ್ಟು ಹಡಗು ನಿರ್ಮಾಣದ ಶೇ.80ರಷ್ಟನ್ನು ಇದು ನಿರ್ವಹಿಸುತ್ತಿತ್ತೆಂದು ಅಂದಾಜು ಮಾಡಲಾಗಿದೆ. 19ನೆಯ ಶತಮಾನದ ಕೊನೆಯ ಭಾಗದ ಅನಂತರ ಇತರ ರಾಷ್ಟ್ರಗಳೂ ಇಂಗ್ಲೆಂಡಿನೊಡನೆ ಹಡಗು ನಿರ್ಮಾಣದಲ್ಲಿ ತೀವ್ರವಾಗಿ ಸ್ಪರ್ಧಿಸಲಾರಂಭಿಸಿದವು.

ಪ್ರಥಮ ಮಹಾಯುದ್ಧದ ಅವಧಿಯಲ್ಲಿ ಇಂಗ್ಲೆಂಡಿನ ನೌಕಾ ವ್ಯವಸ್ಥೆಗೆ ಬಲವಾದ ಪೆಟ್ಟು ಬಿತ್ತು. ಯುದ್ಧಾನಂತರ ಸರ್ಕಾರ ಹೊಸ ನೌಕಾಬಂದರುಗಳನ್ನು ನಿರ್ಮಿಸಿತು. 1920ರ ವೇಳೆಗೆ ಇಂಗ್ಲೆಂಡ್ ಮತ್ತೆ ಚೇತರಿಸಿಕೊಂಡಿತು. 1935ರಲ್ಲಿ ಸರ್ಕಾರ ನೌಕಾಸಂಸ್ಥೆಗಳಿಗೆ ಸಹಾಯಧನ ಹಾಗೂ ಸಾಲವನ್ನು ಕೊಟ್ಟು ಪ್ರೋತ್ಸಾಹಿಸಿತು.

ಎರಡನೆಯ ಮಹಾಯುದ್ಧದ ಕಾಲದಲ್ಲೂ ಇಂಗ್ಲೆಂಡಿನ ನೌಕಾಸಾರಿಗೆಗೆ ಬಹಳ ಪೆಟ್ಟು ಬಿತ್ತು. ವಿಶ್ವದ ಒಟ್ಟು ನೌಕಾ ಸಾರಿಗೆಯಲ್ಲಿ ಬ್ರಿಟನ್ನಿನ ಪಾಲು 1937–47ರ ದಶಕದಲ್ಲಿ ಶೇ. 31.8–ಶೇ.24.6ಕ್ಕೆ ಇಳಿಯಿತು. ಆದರೆ ಹಡಗು ನಿರ್ಮಾಣದಲ್ಲಿ ಜಪಾನ್, ಅಮೆರಿಕ ಮತ್ತು ಇತರ ರಾಷ್ಟ್ರಗಳು ತೀವ್ರವಾಗಿ ಸ್ಪರ್ಧಿಸಿದುದರಿಂದ ಇಂಗ್ಲೆಂಡಿನಲ್ಲಿ ಹಡಗು ನಿರ್ಮಾಣ ಕಡಿಮೆಯಾಯಿತು. ಉದಾಹರಣೆಗೆ, 1947ರಲ್ಲಿ ಪ್ರಪಂಚದ ಒಟ್ಟು ಹಡಗು ನಿರ್ಮಾಣದಲ್ಲಿ ಶೇ.50ರಷ್ಟನ್ನು ಇಂಗ್ಲೆಂಡೊಂದೇ ನಿರ್ವಹಿಸುತ್ತಿತ್ತು. ಆದರೆ 1957ರ ವೇಳೆಗೆ ಈ ಸಂಖ್ಯೆ ಶೇ.20ಕ್ಕೆ ಇಳಿಯಿತು. ಆದರೂ ಇದು ಪ್ರಪಂಚದ ಹಡಗು ಸರಕು ಸಾರಿಗೆಯಲ್ಲಿ ಪ್ರಮುಖವಾಗಿ ಉಳಿದಿದೆ. ನೌಕಾಸಾರಿಗೆ ವ್ಯವಸ್ಥೆಯಿಂದ ಅಂತಾರಾಷ್ಟ್ರೀಯ ವ್ಯಾಪಾರದ ಮೂಲಕ ಹಣ ಗಳಿಸುವುದಕ್ಕೂ ಆಹಾರ ವಸ್ತುಗಳನ್ನು ಆಮದು ಮಾಡಿಕೊಳ್ಳುವುದಕ್ಕೂ ಸಹಾಯವಾಗಿದೆ. ಆರ್ಥಿಕ ಪ್ರಗತಿಗೆ ಇದರಿಂದ ಬಹಳ ಮಟ್ಟಿಗೆ ನೆರವಾಗಿದೆ.

ವಿಮಾನ ಸಾರಿಗೆ ವ್ಯವಸ್ಥೆ ಈಚಿನದು. 1919ರಲ್ಲಿ ಪ್ಯಾರಿಸ್ ಮತ್ತು ಲಂಡನ್ನಿನ ನಡುವೆ ವ್ಯವಸ್ಥಿತ ವಿಮಾನ ಸಂಚಾರ ವ್ಯವಸ್ಥೆ ಆರಂಭವಾಯಿತು. 1939ರಲ್ಲಿ ಬ್ರಿಟಿಷ್ ಓವರ್‍ಸೀಸ್ ವಿಮಾನ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂತು. ಈಚಿನ ದಿನಗಳಲ್ಲಿ ವಿಮಾನ ಸಾರಿಗೆಗೆ ಇಂಗ್ಲೆಂಡಿನಲ್ಲಿ ಹೆಚ್ಚು ಪ್ರಾಶಸ್ತ್ಯ ಸಿಗಲಾರಂಭಿಸಿತು.

**ವಾಣಿಜ್ಯ ಕ್ರಾಂತಿ:** 16, 17 ಮತ್ತು 18ನೆಯ ಶತಮಾನಗಳಲ್ಲಿ ಇಂಗ್ಲೆಂಡಿನ ಅಂತಾರಾಷ್ಟ್ರೀಯ ವ್ಯಾಪಾರದಲ್ಲೂ ಅಗಾಧ ಬದಲಾವಣೆಗಳಾದವು. ಈ ಕ್ರಾಂತಿಯಿಂದ ಮಧ್ಯಯುಗದ ಅಂತಾರರಾಷ್ಟ್ರೀಯ ವ್ಯಾಪಾರ ಆಧುನಿಕ ಯುಗದ ವ್ಯಾಪಾರದ ಕ್ರಮಕ್ಕೆ ಬದಲಾವಣೆ ಹೊಂದಿತು. 15 ಮತ್ತು 16ನೆಯ ಶತಮಾನಗಳಲ್ಲಿ ಹೊಸ ನೆಲಗಳನ್ನು ಕಂಡುಹಿಡಿದಾಗ ಇಂಗ್ಲೆಂಡಿನ ವ್ಯಾಪಾರದ ಪ್ರಗತಿ ಹೆಚ್ಚಿತು. ಭಾರತ ಮತ್ತು ಚೀನ ಇಂಗ್ಲೆಂಡಿನ ವಸ್ತುಗಳಿಗೆ ಒಳ್ಳೆಯ ಮಾರುಕಟ್ಟೆಗಳಾದುವು. ಭಾರತ ಮತ್ತು ಉತ್ತರ ಅಮೆರಿಕದ ಮೇಲೆ ಇಂಗ್ಲೆಂಡ್ ಸಂಪೂರ್ಣ ಅಧಿಕಾರ ಪಡೆದುಕೊಂಡದ್ದರಿಂದ ಅತ್ಯಂತ ವಿಶಾಲವಾದ ಮಾರುಕಟ್ಟೆ ಅದರ ವಸ್ತುಗಳಿಗೆ ದೊರಕಿದಂತಾಯಿತು. 16 ಮತ್ತು 17ನೆಯ ಶತಮಾನಗಳಲ್ಲಿ ಏಕಸ್ವಾಮ್ಯ ಪಡೆದ ಅನೇಕ ವ್ಯಾಪಾರ ಕಂಪೆನಿಗಳು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಸಹಾಯ ಮಾಡಿದವು. ಇವು ಪಡೆದ ವ್ಯಾಪಾರಲಾಭ ಔದ್ಯೋಗಿಕ ಕ್ರಾಂತಿಗೆ ಬಹಳ ಸಹಾಯಕವಾಯಿತು. ತನಗಿದ್ದ ನೌಕಾಸಾಮರ್ಥ್ಯವನ್ನು ಇಂಗ್ಲೆಂಡ್ ವ್ಯಾಪಾರದ ಅನುಕೂಲಕ್ಕಾಗಿ ಚೆನ್ನಾಗಿ ಉಪಯೋಗಿಸಿಕೊಂಡಿತು.

ಅಂತರ್ದೇಶಿಯ ವ್ಯಾಪಾರ ಕ್ರಮಕ್ರಮವಾಗಿ ಅಭಿವೃದ್ಧಿಹೊಂದಿತು. 17ನೆಯ ಶತಮಾನದ ಅಂತ್ಯದಲ್ಲಿ ಇಂಗ್ಲೆಂಡ್ ಮತ್ತು ವೇಲ್ಸಿನ ಆಯಾತ ನಿರ್ಯಾತ ಹೆಚ್ಚು ಕಡಿಮೆ ರಾಷ್ಟ್ರೀಯ ಆದಾಯದ ಶೇ.15 ರಷ್ಟಿತ್ತು. 18ನೆಯ ಶತಮಾನದ ಅಂತ್ಯದ ವೇಳೆಗೆ ಇದು ದ್ವಿಗುಣಗೊಂಡಿತ್ತು. 1870ರ ವೇಳೆಗೆ ರಾಷ್ಟ್ರೀಯ ಆದಾಯದ ಸುಮಾರು ಶೇ.50–60ರಷ್ಟು ವಿದೇಶೀ ವ್ಯಾಪಾರದಿಂದಲೇ ಬರುತ್ತಿತ್ತು. 1870ರ ಅನಂತರ ದೇಶದ ನಿರ್ಯಾತ ರಾಷ್ಟ್ರೀಯ ಆದಾಯದ ಸರಾಸರಿಯ ಶೇ.16–ಶೇ.20ಕ್ಕೆ ಮುಂದುವರಿಯಿತು. 18ನೆಯ ಶತಮಾನದ ಉದ್ದಕ್ಕೂ ಇದರ ವಿದೇಶೀವ್ಯಾಪಾರ ರಾಷ್ಟ್ರೀಯ ಆದಾಯಕ್ಕಿಂತ ವೇಗವಾಗಿ ಬೆಳೆಯಿತು.

16–18ನೆಯ ಶತಮಾನದವರೆಗೆ ವಿದೇಶೀ ವ್ಯಾಪಾರವನ್ನು ಕಂಪನಿಗಳು ನಡೆಸುತ್ತಿದ್ದವು; ಇವುಗಳಿಗೆ ಏಕಸ್ವಾಮ್ಯವಿತ್ತು. ಈ ಕಂಪನಿಗಳು ಎರಡು ರೀತಿಯದಾಗಿರುತ್ತಿದ್ದವು: ನಿಯಂತ್ರಿತ ಮತ್ತು ಕೂಡುಬಂಡವಾಳ ಕಂಪನಿಗಳು. ನಿಯಂತ್ರಿತ ಕಂಪನಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ

ಸ್ವತಂತ್ರವಾಗಿ ವ್ಯಾಪಾರದಲ್ಲಿ ತೊಡಗುತ್ತಿದ್ದ. ಆತ ಕಂಪನಿಯ ನಿಯಮಗಳನ್ನು ಅನುಸರಿಸುತ್ತಿದ್ದ. ಕೂಡುಬಂಡವಾಳ ಕಂಪನಿಯಲ್ಲಿ ಅನೇಕ ಬಂಡವಾಳಗಾರರು ಹಣ ಹೂಡುತ್ತಿದ್ದರು. ಬಂದ ಲಾಭವನ್ನು ಇವರು (ಷೇರುದಾರರು) ಹಂಚಿಕೊಳ್ಳುತ್ತಿದ್ದರು. ಹೊಸ ವ್ಯಾಪಾರಗಾರರು ಕೂಡುಬಂಡವಾಳ ಕಂಪನಿಗೆ ಪ್ರವೇಶಿಸುವುದು ಸುಲಭವಾಗಿತ್ತು (**ನೋಡಿ– ಕೂಡು–ಬಂಡವಾಳ–ಕಂಪನಿ**).

ಈ ಕಂಪನಿಗಳಲ್ಲಿ ಬಹಳ ಪ್ರಸಿದ್ಧವಾಗಿದ್ದದ್ದು ಈಸ್ಟ್ ಇಂಡಿಯ ಕಂಪನಿ. ಇದು 1600ರಲ್ಲಿ ಸ್ಥಾಪಿತವಾಗಿ ಇಂಡಿಯ ಮತ್ತು ಚೀನದೊಂದಿಗೆ ವ್ಯಾಪಾರದಲ್ಲಿ ನೇರ ಸಂಬಂಧ ಬೆಳೆಸಿಕೊಂಡಿತ್ತು. 1657ರಲ್ಲಿ ಇದು ಕೂಡುಬಂಡವಾಳ ಕಂಪನಿಯಾಗಿ ಪರಿವರ್ತಿತವಾಗಿ ವ್ಯಾಪಾರ ಮುಂದುವರಿಸಿತು. ಇಡೀ ಏಷ್ಯದ ದೇಶಗಳೊಡನೆ ವ್ಯಾಪಾರದಲ್ಲಿ ಇದು ಏಕಸ್ವಾಮ್ಯ ಪಡೆದಿತ್ತು. ಆಮದಿನಲ್ಲಿ ಏಕಸ್ವಾಮ್ಯ ಪಡೆದಿದ್ದ ಈ ಕಂಪನಿ ತನಗಿಷ್ಟ ಬಂದಷ್ಟು ಬೆಲೆಗಳನ್ನು ನಿಗದಿಮಾಡಿ ಅತ್ಯಧಿಕ ಲಾಭ ಪಡೆಯುತ್ತಿತ್ತು. ಮುಂದೆ ಇದು ರಾಜಕೀಯದಲ್ಲೂ ಪ್ರವೇಶಿಸಿ ಭಾರತವನ್ನು ಗೆದ್ದಿತು. 1813ರಲ್ಲಿ ಇದು ಭಾರತದೊಡನೆ ವ್ಯಾಪಾರದಲ್ಲಿನ ಏಕಸ್ವಾಮ್ಯವನ್ನು ಕಳೆದುಕೊಂಡಿತು. ಇತರ ಕಂಪನಿಗಳಲ್ಲಿ ಮುಖ್ಯವಾದುವೆಂದರೆ ಹಡ್ಸನ್ ಬೇ ಕಂಪನಿ ಮತ್ತು ಸೌತ್ ಸೀ ಕಂಪನಿ. ಈ ಕಂಪನಿಗಳು ಇಂಗ್ಲೆಂಡಿನ ಪ್ರಗತಿಗೆ ಬಹಳ ಮಟ್ಟಿಗೆ ಸಹಾಯ ಮಾಡಿದುವೆಂದು ಹೇಳಬಹುದು.

ಇಂಗ್ಲೆಂಡಿನ ವಾಣಿಜ್ಯಕ್ರಾಂತಿಯ ಮೂರು ಮುಖ್ಯ ಮುಖಗಳೆಂದರೆ ಮಾರುಕಟ್ಟೆಯ ವಿಸ್ತರಣೆ, ವಸ್ತುಗಳ ತಯಾರಿಕೆಯಲ್ಲಿ ಹೆಚ್ಚಿನ ಪರಿಣತಿ ಮತ್ತು ವ್ಯಾಪಾರದಲ್ಲಿನ ಸಂಯೋಜನೆ. ಈ ಮೂರರಿಂದಾಗಿ ಇಂಗ್ಲೆಂಡಿನ ವಿದೇಶೀ ವ್ಯಾಪಾರ ಅದ್ಭುತ ಪ್ರಗತಿ ಸಾಧಿಸಿತು.

ಕೈಗಾರಿಕೀಕರಣದ ಅನಂತರ ಇಂಗ್ಲೆಂಡಿನ ವಾಣಿಜ್ಯ ಶೀಘ್ರವಾಗಿ ಪ್ರಗತಿ ಹೊಂದುವುದಕ್ಕೆ ಪ್ರಾರಂಭಿಸಿತು. ಇಂಗ್ಲೆಂಡ್ 19ನೆಯ ಶತಮಾನದ ಮಧ್ಯಭಾಗದ ಅನಂತರ ಮುಖ್ಯವಾಗಿ ಕಾರ್ಖಾನೆಯ ಸಿದ್ಧವಸ್ತುಗಳನ್ನು ರಫ್ತು ಮಾಡುತ್ತಿತ್ತು. ಆಹಾರವಸ್ತುಗಳನ್ನು ಮತ್ತು ಕಚ್ಚಾವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ರಫ್ತಿನಲ್ಲಿ ಮುಖ್ಯವಾಗಿದ್ದವೆಂದರೆ ಜವಳಿ, ಯಂತ್ರಗಳು, ಕಲ್ಲಿದ್ದಲು ಮತ್ತು ರಾಸಾಯನಿಕ ವಸ್ತುಗಳು.

1900–14ರ ವರೆಗೆ ಇಂಗ್ಲೆಂಡಿನ ವಿದೇಶೀ ವ್ಯಾಪಾರ ಇನ್ನೂ ಹೆಚ್ಚು ವೇಗವಾಗಿ ಬೆಳೆಯಿತು. ಇತರ ರಾಷ್ಟ್ರಗಳೂ ಕೈಗಾರಿಕಾಭಿವೃದ್ಧಿಯತ್ತ ಹೆಚ್ಚು ಹೆಚ್ಚು ಗಮನಗೊಡುತ್ತಿದ್ದವು. ಇದಕ್ಕೆ ಕಾರಣ ಇಂಗ್ಲೆಂಡ್ ಅವಕ್ಕೆ ಅಗತ್ಯವಾದ ವಸ್ತುಗಳನ್ನು ಸರಬರಾಜು ಮಾಡುವುದರಲ್ಲಿ ಅತ್ಯಂತ ಸಮರ್ಥವಾಗಿತ್ತು. ಹೀಗಾಗಿ ವಾಣಿಜ್ಯ ಪ್ರಗತಿ ವೇಗವಾಗಿ ಬೆಳೆಯಿತು. 1913ರಲ್ಲಿ ಇಂಗ್ಲೆಂಡಿನ ವಾಣಿಜ್ಯ ಸಿದ್ಧಿಗೆ ಸಹಾಯಕವಾಗಿದ್ದುವೆಂದರೆ ಇಂಗ್ಲೆಂಡಿನ ಬ್ಯಾಂಕುಗಳು, ವಿಮೆ ಹಾಗೂ ನೌಕಾವ್ಯವಸ್ಥೆ. 1844ರ ಅನಂತರ ಇಂಗ್ಲೆಂಡಿನ ಬ್ಯಾಂಕುಗಳು ವ್ಯಾಪಾರಕ್ಕೆ ಹಣ ಒದಗಿಸುವುದರ ಮೂಲಕ ಸಹಾಯ ಮಾಡಿದುವು. ವ್ಯವಸ್ಥಿತವಾದ ಹುಂಡಿ ಪೇಟೆ ಸ್ಥಾಪಿಸುವುದಕ್ಕೆ ಇಂಗ್ಲೆಂಡಿಗೆ ಸಾಧ್ಯವಾದದ್ದರಿಂದ ವಾಣಿಜ್ಯ ಪ್ರಗತಿ ವೇಗವಾಗಿ ಸಾಧ್ಯವಾಯಿತು. 1846ರ ಅನಂತರ ಸರ್ಕಾರದ ವಾಣಿಜ್ಯ ನೀತಿಯೂ ಇದಕ್ಕೆ ಸಹಾಯಕವಾಗಿತ್ತು. ರಕ್ಷಿತ ವ್ಯಾಪಾರಕ್ಕಿಂತ ಮುಕ್ತ ವ್ಯಾಪಾರದಿಂದಲೇ ತನಗೆ ಲಾಭವಿದೆ ಎಂಬುದನ್ನು ಅರಿತ ಸರಕಾರ ಇದಕ್ಕೆ ಸಹಾಯಕವಾದ ಕಾಯಿದೆ ರಚಿಸಿ ವ್ಯಾಪಾರಕ್ಕೆ ಪ್ರೋತ್ಸಾಹ ನೀಡಿತು. 1932ರವರೆಗೆ ಅನೇಕ ಅಡ್ಡಿಗಳಿದ್ದರೂ ಮುಕ್ತವ್ಯಾಪಾರ ನೀತಿ ಮುಂದುವರಿಯಿತು. 19ನೆಯ ಶತಮಾನದ ಪ್ರಾರಂಭದಲ್ಲಿ ಇಂಗ್ಲೆಂಡ್ ತನ್ನ ರಫ್ತಿನ ಶೇ.55 ರಷ್ಟನ್ನು ಯುರೋಪಿನ ರಾಷ್ಟ್ರಗಳಿಗೆ ಕಳುಹಿಸುತ್ತಿತ್ತು. ಆದರೆ 1920ರ ವೇಳೆಗೆ ಈ ರಾಷ್ಟ್ರಗಳಿಗೆ ಅದರ ರಫ್ತಿನ ಶೇಕಡ 20 ರಷ್ಟು ಮಾತ್ರ ಹೋಗುತ್ತಿತ್ತು. ಭಾರತ ಮತ್ತು ಇತರ ರಾಷ್ಟ್ರಗಳಿಗೆ ರಫ್ತು ಹೆಚ್ಚಾಯಿತು.

ಪ್ರಥಮ ಮಹಾಯುದ್ಧದ ಅವಧಿಯಲ್ಲಿ ಇಂಗ್ಲೆಂಡಿನ ವಿದೇಶೀ ವ್ಯಾಪಾರ ಬಹಳ ಕಷ್ಟಕ್ಕೀಡಾಯಿತು. ಜಪಾನು ಜವಳಿ ಕೈಗಾರಿಕೆಯಲ್ಲಿ ಪರಿಣತಿ ಪಡೆದುಕೊಂಡು ಇಂಗ್ಲೆಂಡಿನ ಅನೇಕ ಮಾರುಕಟ್ಟೆಗಳನ್ನು ಹಿಡಿದುಕೊಂಡಿತು. ಕೆನಡ, ಆಸ್ಟ್ರೇಲಿಯ, ಅಮೆರಿಕಗಳಲ್ಲೂ ಕೈಗಾರಿಕೆಗಳು ಬೆಳೆದುವು. ಎಲ್ಲ ರಾಷ್ಟ್ರಗಳಿಗೂ ಸ್ವಾವಲಂಬಿಗಳಾಗುವುದರತ್ತ ಗಮನಕೊಡಲಾರಂಭಿಸಿದುವು. ಇಂಗ್ಲೆಂಡಿನ ಹದಗೆಟ್ಟ ಆರ್ಥಿಕ ಪರಿಸ್ಥಿತಿ ಸಹ ವಾಣಿಜ್ಯ ಅಡ್ಡಿಯನ್ನುಂಟು ಮಾಡಿತು. 1920–33ರ ಆರ್ಥಿಕ ಕುಸಿತ ವಾಣಿಜ್ಯಕ್ಕೆ ಭಾರಿ ಕೊಡಲಿ ಪೆಟ್ಟು ಕೊಟ್ಟಿತು. ವಾಣಿಜ್ಯದ ಗತಿಯನ್ನೇ ಬಹಳ ಮಟ್ಟಿಗೆ ಕುಸಿಯುವಂತೆ ಮಾಡಿತು. ದೇಶಗಳ ಮುಕ್ತ ವ್ಯಾಪಾರದ ಬದಲಿಗೆ ವ್ಯಾಪಾರದ ಒಪ್ಪಂದಗಳಾದುವು.

ಇಂಗ್ಲೆಂಡಿನ ವ್ಯಾಪಾರ ಈ ಅವಧಿಯಲ್ಲಿ ತೀರ ನಿರಾಶಾದಾಯಕವಾಗಿತ್ತು. ಇತರ ದೇಶಗಳ ರಫ್ತಿಗೆ ಹೋಲಿಸಿದರೆ ಇಂಗ್ಲೆಂಡಿನ ರಫ್ತು ಅತ್ಯಂತ ಶೋಚನೀಯ ಸ್ಥಿತಿ ಮುಟ್ಟಿತೆಂದು ಹೇಳಬಹುದು. 1913ರಲ್ಲಿ ಪ್ರಪಂಚದ ಒಟ್ಟು ರಫ್ತಿನ 13.11%ರಷ್ಟು ಇಂಗ್ಲೆಂಡಿನದಾಗಿತ್ತು. 1927ರಲ್ಲಿ ಇದು 11.10ಕ್ಕೂ 1932ರಲ್ಲಿ 9.82ಕ್ಕೂ ಇಳಿಯಿತು. 1950ರವರೆಗೆ ಇಂಗ್ಲೆಂಡಿನ ರಫ್ತು 1914ರ ಮಟ್ಟವನ್ನು ತಲುಪಲೇ ಇಲ್ಲ. ರಫ್ತು ಒಂದು ಕಡೆ ಇಷ್ಟು ಕಡಿಮೆ ಮಟ್ಟ ಮುಟ್ಟಿದರೆ, ಆಮದು ಇದೇ ಸಮಯದಲ್ಲಿ ವೃದ್ಧಿ ಹೊಂದಿತು. 1924ರಲ್ಲಿ ಅದು 1913ರ ಮಟ್ಟವನ್ನು ಮೀರಿತು. 1930ರಲ್ಲಿ ಇದು ಕಡಿಮೆ ಮಟ್ಟವನ್ನು ಸೂಚಿಸಿದರೂ 1936ರ ಅನಂತರ 1929ರ ಮಟ್ಟಕ್ಕಿಂತ ಹೆಚ್ಚಾಯಿತು.

ಮೊದಲನೆಯ ಮಹಾಯುದ್ಧದ ಅನಂತರ ಆಮದಿನ ನೀತಿ ಹೆಚ್ಚು ಕಡಿಮೆ 10ನೆಯ ಶತಮಾನದ ಕೊನೆಯ ಭಾಗದ ಆಮದು ನೀತಿಯನ್ನು ಹೋಲುತ್ತಿತ್ತು. ಸಿದ್ಧಪಡಿಸಿದ ವಸ್ತುಗಳನ್ನು ಆಮದುಮಾಡಿಕೊಳ್ಳಲಾಗುತ್ತಿತ್ತು. ಮಾಂಸ ಮತ್ತು ಹೈನು ವಸ್ತುಗಳ ಆಮದು ಶೇ.4.35ರಷ್ಟಿತ್ತು. ಶೇ.30ರಷ್ಟು ಕಚ್ಚಾ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಉಳಿದ ಆಮದು ಸಿದ್ಧ ವಸ್ತುಗಳಿಂದ ಕೂಡಿರುತ್ತಿತ್ತು. ಇಂಗ್ಲೆಂಡಿನ ಆಮದಿನ ಹೆಚ್ಚಳದಿಂದ ಅದರ ಅಂತಾರಾಷ್ಟ್ರೀಯ ಪಾವತಿ ಶುಲ್ಕ ಪ್ರತಿಕೂಲದ್ದಾಗಿತ್ತು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಇಂಗ್ಲೆಂಡ್ ತನ್ನ ವಿದೇಶೀ ನಿವೇಶನದ ಹಣವನ್ನು ಕಡಿಮೆ ಮಾಡಿಕೊಳ್ಳಬೇಕಾಯಿತು. 1945ರಿಂದೀಚೆಗೆ, ವಿದೇಶೀ ವ್ಯಾಪಾರಕ್ಕೆ ಸರ್ಕಾರ ಎಲ್ಲ ರೀತಿಯಲ್ಲೂ ಸಹಾಯ ಮಾಡುತ್ತ ಬಂತು. ಸರ್ಕಾರ ಕಚ್ಚಾ ಮಾಲನ್ನು ರಫ್ತು ಮಾಡುವುದಕ್ಕೆ ಆದ್ಯತೆ, ರಫ್ತಿಗೆ ಸಾಲದ ಭರವಸೆ, ಹೊಸ ಮಾರುಕಟ್ಟೆಗಳನ್ನು ಕಂಡುಹಿಡಿಯುವುದಕ್ಕೆ ಸಹಾಯ ಇವನ್ನೊದಗಿಸಿ ವಿದೇಶೀ ವ್ಯಾಪಾರಕ್ಕೆ ಸಹಾಯ ಮಾಡಿತು. ಇವೆಲ್ಲದರಿಂದಾಗಿ ಅದರ ರಫ್ತು 1957ರಲ್ಲಿ 1948ರ ಬೆಲೆಗಳಿಗೆ ಹೋಲಿಸಿದಂತೆ ಶೇ.60 ರಷ್ಟು ವಿಸ್ತಾರಗೊಂಡಿತು. ಆದರೆ ಜವಳಿಯ ರಫ್ತು ಕಡಿಮೆಯಾಗುತ್ತಲೇ ಬಂತು. ಕಲ್ಲಿದ್ದಲಿನ ರಫ್ತು ನಿಂತೇಹೋಯಿತು. ಆದರೆ ಹೊಸ ಉದ್ಯಮಗಳ ರಫ್ತು ವೃದ್ಧಿಯಾಯಿತು. ಇವುಗಳಲ್ಲಿ ಮುಖ್ಯವಾದುವೆಂದರೆ ಮೋಟರು ಮತ್ತು ವಿಮಾನಯಾನದ ಸಾಮಾನುಗಳು. 1950ರಲ್ಲಿ ಇವು ಒಟ್ಟು ರಫ್ತಿನಲ್ಲಿ ಶೇ.12 ರಷ್ಟಿದ್ದವು. ಸೈನಿಕ ವಿಮಾನ ಸಾಮಗ್ರಿ ಇವುಗಳಲ್ಲಿ ಪ್ರಧಾನವಾಗಿತ್ತು.

**ಕಾರ್ಮಿಕ ಸಂಘ ಚಳವಳಿ:** ಕೈಗಾರಿಕಾಕ್ರಾಂತಿಯ ಇನ್ನೊಂದು ಪರಿಣಾಮವೆಂದರೆ ಕಾರ್ಮಿಕ ಸಂಘಟನೆಯ ಚಳವಳಿ. ಕ್ರಾಂತಿ ನಡೆದಾಗ ಕೂಲಿಗಾರರು ಹಳ್ಳಿಗಳಿಂದ ಪಟ್ಟಣಕ್ಕೆ ವಲಸೆ ಬಂದರು. ಅವರ ಬಳಿ ಮಾರಲು ತಮ್ಮ ಕುಶಲತೆ, ಶ್ರಮ ಇವನ್ನು ಬಿಟ್ಟರೆ ಬೇರೇನೂ ಇರಲಿಲ್ಲ. ಹೀಗಾಗಿ ಬಂಡವಾಳಗಾರರು ಅವರನ್ನು ಶೋಷಿಸುವ ಸಾಧ್ಯತೆ ಉಂಟಾಯಿತು. 18ನೆಯ ಶತಮಾನದ ಆರಂಭದ ವೇಳೆಗೆ ಇಂಗ್ಲೆಂಡಿನ ಕೈಗಾರಿಕೆಯ ರಂಗ ಸಾಕಷ್ಟು ಬಂಡವಾಳಪ್ರಧಾನವಾಗಿ ಬೆಳೆದು ಕಾರ್ಮಿಕ ಹಾಗೂ ಮಾಲಿಕರ ನಡುವೆ ಸಾಕಷ್ಟು ಬಿರುಕನ್ನುಂಟುಮಾಡಿತ್ತು.

16ನೆಯ ಶತಮಾನದ ಕೊನೆಯ ಭಾಗದಲ್ಲಿ ವೃತ್ತಿಸಂಘಗಳು ಕ್ಷಯಿಸಿದ ಅನಂತರ ಕಾರ್ಮಿಕರೇ ಕೆಲವು ಸಂಘಗಳನ್ನು ರಚಿಸಿಕೊಂಡರು. ಆದರೆ ಸರ್ಕಾರದ ಮನೋಭಾವ ಇದಕ್ಕೆ ವಿರೋಧವಾಗಿತ್ತು. ಕೆಲವು ವೃತ್ತಿಗಳಿಗೆ ಗರಿಷ್ಠ ಕೂಲಿಯನ್ನು ಸರ್ಕಾರ ನಿಗದಿ ಮಾಡಿ, ಆ ವೃತ್ತಿಗಳಲ್ಲಿ ಸಂಘಗಳನ್ನು ನಿಷೇಧಿಸಿತು. 1720 ಮತ್ತು 1725ರ ಕಾಯಿದೆಗಳ ಮೂಲಕ ದರ್ಜಿಗಳಲ್ಲಿ, ನೇಕಾರರಲ್ಲಿ ಹೆಣಿಗೆ ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಸಂಘಗಳನ್ನು ನಿಷೇಧಿಸಲಾಗಿತ್ತು.

ಕೈಗಾರಿಕಾಕ್ರಾಂತಿಯೊಡನೆ ಕಾರ್ಮಿಕ ಸಂಘಗಳಿಗೆ ಹೊಸ ಚೇತನ ದೊರೆತಂತಾಯಿತು. 1790ರ ವೇಳೆಗೆ ಕಾರ್ಮಿಕ ಸಂಘಗಳ ಆವಶ್ಯಕತೆಯ ತೀವ್ರತೆಯನ್ನು ಕಾರ್ಮಿಕರು ಮನಗಂಡರು. ಫ್ರಾನ್ಸಿನಲ್ಲಿ ನಡೆದ ಕ್ರಾಂತಿ ಇಂಗ್ಲೆಂಡಿನ ಕಾರ್ಮಿಕರಿಗೆ ಉತ್ತೇಜಕವಾಯಿತು. ಕಾರ್ಮಿಕರು ಕೆಲವು ಸಂಘಗಳನ್ನು ರಚಿಸಿಕೊಂಡರು. ಆದರೆ 1793ರಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವೆ ಯುದ್ಧ ಪ್ರಾರಂಭವಾದುದರಿಂದ 1797 ಮತ್ತು 1800ರ ಕಾಯಿದೆಗಳ ಮೂಲಕ, ಕೂಲಿಯ ಹೆಚ್ಚಳ, ಕೆಲಸ ಗಂಟೆಗಳಲ್ಲಿ ಇಳಿಕೆ, ಬೇಡಿಕೆಗಳ ಪೂರೈಕೆಗಾಗಿ ಮುಷ್ಕರ–ಇವುಗಳಿಗಾಗಿ ರಚಿತವಾಗುವ ಸಂಘಗಳನ್ನು ನಿಷೇಧಿಸಲಾಯಿತು. ಉದ್ಯಮಪದ್ಧತಿಗಳಲ್ಲೂ ಸಂಘರಚನೆಯನ್ನು ನಿಷೇಧಿಸಲಾಯಿತು. ವೃತ್ತಿಸಂಘಗಳ ರಚನೆ ಪಾತಕವೆಂದು ತೀರ್ಮಾನಿಸಲಾಗಿದ್ದರೂ ಕಾರ್ಮಿಕರ ರಹಸ್ಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಯನ್ನು ಮುಂದುವರಿಸಿದವು.

1815ರಲ್ಲಿ ನೆಪೋಲಿಯನ್ನನ ಯುದ್ಧ ಮುಗಿದ ಅನಂತರ ಕಾರ್ಮಿಕರ ಪಾಡು ಇನ್ನೂ ಶೋಚನೀಯವಾಯಿತು. ಆರ್ಥಿಕ ಕುಸಿತ ಅವರ ಸ್ಥಿತಿಯನ್ನು ಮತ್ತೂ ಉಲ್ಬಣಗೊಳಿಸಿತು. ಕೂಲಿಯ ದರ ಕಡಿಮೆಯಾದುದಲ್ಲದೆ ನಿರುದ್ಯೋಗ ಉಲ್ಬಣಿಸಿತು. ಫ್ರಾನ್ಸಿಸ್ ಪ್ಲೇಸ್ ಎಂಬ ಆಚಾರ್ಯದರ್ಜಿ ಕಾರ್ಮಿಕರ ಸ್ಥಿತಿಯನ್ನು ಉತ್ತಮಪಡಿಸುವುದರಲ್ಲಿ ಮುಂದಾದ. ಆತ ರ್‍ಯಾಡಿಕಲ್ ಪಾರ್ಟಿಯ ಜೋಸೆಫ್ ಹ್ಯೂಮನ್ ಸಹಾಯದಿಂದ 1824ರಲ್ಲಿ ಸಂಘರಚನೆಯ ಕಾನೂನನ್ನು ತಿದ್ದುಪಡಿ ಮಾಡಿಸುವುದರಲ್ಲಿ ಯಶಸ್ವಿಯಾದ. ಆಗ ಮುಷ್ಕರವನ್ನು ಕಾಯಿದೆಬದ್ಧ ಮಾಡಲಾಯಿತು. ಪರಿಣಾಮವಾಗಿ 1824ರಲ್ಲಿ ಅನೇಕ ಮುಷ್ಕರಗಳಾದವು. ಆದ್ದರಿಂದ 1825ರಲ್ಲಿ 1824ರ ಕಾನೂನಿಗೆ ಒಂದು ತಿದ್ದುಪಡಿ ಜಾರಿಗೆ ಬಂತು. ಅದು ಮುಷ್ಕರ ಹಾಗೂ ರಾಷ್ಟ್ರೀಯ ಕಾರ್ಮಿಕ ಸಂಘವನ್ನು ಸಂಘಟಿಸುವ ಯತ್ನ ನಡೆಯಿತು. ಅದರ ಪರಿಣಾಮವಾಗಿ 1834ರಲ್ಲಿ ಬೃಹತ್ ರಾಷ್ಟ್ರೀಯ ಕಾರ್ಮಿಕ ಸಂಘ ಅಸ್ತಿತ್ವಕ್ಕೆ ಬಂತು. ಈ ಸಂಸ್ಥೆಯ ಸದಸ್ಯರ ಸಂಖ್ಯೆ ಒಂದು ಕಾಲಕ್ಕೆ ಐದು ಲಕ್ಷದಷ್ಟಿತ್ತೆಂದು ಹೇಳಲಾಗಿದೆ. ರಾಬರ್ಟ್ ಓವೆನ್ ಇದರ ಸ್ಥಾಪಕ. ಆದರೆ ಇದು ಬಹಳ ಕಾಲ ಬಾಳಲಿಲ್ಲ. ಕಾರ್ಮಿಕರು ಮುಖ್ಯ ಉದ್ಯಮಗಳನ್ನು ತಾವೇ ವಶಪಡಿಸಿಕೊಳ್ಳಬೇಕೆಂಬುದು ಇವನ ವಾದವಾಗಿದ್ದುದೇ ಕಾರಣ. ಈ ಸಂಸ್ಥೆಗೆ ಇಂಥ ಕೆಲಸ ಸಾಧ್ಯವಾಗಲಿಲ್ಲ. ಇದಕ್ಕೆ ಅಗತ್ಯವಿದ್ದ ನಿಧಿ ಸಹ ಸಂಸ್ಥೆಯ ಬಳಿ ಇರಲಿಲ್ಲ.

1850ರ ವೇಳೆಗೆ ಮತ್ತೆ ಕಾರ್ಮಿಕ ಸಂಘಗಳು ತಲೆ ಎತ್ತಲಾರಂಭಿಸಿದುವು. ಈಗ ಅವು ತಮ್ಮ ಕ್ರಾಂತಿಕಾರಕ ಭಾವನೆಗಳನ್ನು ಬಿಟ್ಟು ಕಾರ್ಮಿಕರ ಸ್ಥಿತಿಗತಿಗಳನ್ನು ಸರಿಪಡಿಸುವ ಯೋಚನೆಯನ್ನಿಟ್ಟುಕೊಳ್ಳಲಾರಂಭಿಸಿದವು.

ರಾಷ್ಟ್ರೀಯ ಕಾರ್ಮಿಕ ಸಂಘಗಳನ್ನು ಸಂಘಟಿಸುವ ಯೋಜನೆಯನ್ನು ಕೈಬಿಡಲಾಯಿತು. ಬದಲಾಗಿ ಪ್ರತಿಯೊಂದು ವೃತ್ತಿಯಲ್ಲೂ ನಿರತರಾಗಿದ್ದ ಕಾರ್ಮಿಕರ ಸಂಘಗಳ ಸ್ಥಾಪನೆಗೆ ಯತ್ನ ನಡೆಸಲಾಯಿತು. ಎಂಜಿನಿಯರಿಂಗ್ ಉದ್ಯಮದಲ್ಲಿ ತೊಡಗಿದ್ದ ಕಾರ್ಮಿಕರು 1851ರಲ್ಲಿ ಎಂಜಿನಿಯರುಗಳ ಸಂಯೋಜಿತ ಸಂಸ್ಥೆಯೊಂದನ್ನು ಸ್ಥಾಪಿಸಿ ಇಂಥ ಸಂಘಗಳ ರಚನೆಗೆ ಮುಂದಾಳುಗಳಾದರು. ಇದು ರಾಷ್ಟ್ರದ ಎಲ್ಲ ಕುಶಲ ಶಿಲ್ಪ ಕೆಲಸಗಾರರನ್ನೂ ಸದಸ್ಯರನ್ನಾಗಿ ಪಡೆಯುವ ಉದ್ದೇಶವಿಟ್ಟುಕೊಂಡಿತ್ತು. ಇದಕ್ಕೆ ಅಪಾರ ನಿಧಿ ಸಂಗ್ರಹವಾಗಿ ಪ್ರೋತ್ಸಾಹ ದೊರೆಯಿತು. ಕಾರ್ಮಿಕರ ನಿರುದ್ಯೋಗ ಕಾಲದಲ್ಲಿ ಪರಿಹಾರ, ವೈದ್ಯಸೌಲಭ್ಯ, ನಿವೃತ್ತಿವೇತನ, ಮುಷ್ಕರಸಂದರ್ಭದಲ್ಲಿ ಧನ ಸಹಾಯ ಇವುಗಳಿಗೆ ಈ ನಿಧಿಯನ್ನು ಉಪಯೋಗಿಸಿಕೊಳ್ಳಲಾಯಿತು. ಎಲ್ಲ ವೃತ್ತಿಗಳಲ್ಲೂ ಇಂಥ ಸಂಘಗಳು ಹುಟ್ಟಿಕೊಂಡವು. 1869ರ ಕಾರ್ಮಿಕಸಂಘದ ಕಾಯಿದೆಯ ಪ್ರಕಾರ ಕಾರ್ಮಿಕ ಸಂಘಗಳ ನಿಧಿಗೆ ರಕ್ಷಣೆ ಕೊಡಲಾಯಿತು. 1871ರ ಕಾರ್ಮಿಕ ಸಂಘದ ಕಾಯಿದೆ, ಕಾರ್ಮಿಕ ಸಂಘಗಳಿಗೆ ಹೊಸ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟಿತು. ಕಾನೂನಿನ ದೃಷ್ಟಿಯಲ್ಲಿ ಈ ಕಾಯಿದೆಗಳಿಂದಾಗಿ ಕಾರ್ಮಿಕ ಸಂಘಗಳಿಗೆ ಒಂದು ಗೌರವದ ಸ್ಥಾನ ದೊರೆಯಿತು. 1868ರಲ್ಲಿ ಕಾರ್ಮಿಕ ಸಂಘಗಳ ಪರಿಷತ್ತು ಸ್ಥಾಪಿತವಾಯಿತು.

19ನೆಯ ಶತಮಾನದ ಕೊನೆಯ ವೇಳೆಗೆ ಕಾರ್ಮಿಕ ಸಂಘ ಬಹಳ ವೇಗವಾಗಿ ಎಲ್ಲ ದಿಕ್ಕುಗಳಿಗೂ ಹಬ್ಬಲು ಪ್ರಾರಂಭಿಸಿತು. 1880ಕ್ಕಿಂತ ಮುಂಚೆ ಕಾರ್ಮಿಕ ಸಂಘಗಳು ಕುಶಲಕಾರ್ಮಿಕರಿಗೆ ಮಾತ್ರ ಮೀಸಲಾಗಿರುತ್ತಿತ್ತು. ಆದರೆ ಅನಂತರ ಕುಶಲಕಾರ್ಮಿಕರೆಲ್ಲರೂ ಕಾರ್ಮಿಕ ಸಂಘಗಳಲ್ಲಿ ಪ್ರವೇಶ ದೊರಕಲಾರಂಭವಾಯಿತು. 1889ರ ಹಡಗುಕೂಲಿಗಳ ಮುಷ್ಕರದ ವಿಜಯ ಕುಶಲರಲ್ಲದ ಕಾರ್ಮಿಕರ ಸಂಘಗಳಿಗೆ ಆದರ್ಶಪ್ರಾಯವಾಗಿ ಅನೇಕ ಸಂಘಗಳು ಹುಟ್ಟಿಕೊಂಡವು. ಕೃಷಿರಂಗದ ಕಾರ್ಮಿಕರು ಕೂಡ ಕಾರ್ಮಿಕ ಸಂಘ ಆರಂಭಿಸಿದರು. ಆದರೆ ಹಣವಂತರ ವಿರೋಧ ಇದಕ್ಕೆ ಮೊದಲಿಂದಲೂ ಇತ್ತು.

ಈ ಅವಧಿಯ ಮುಖ್ಯವಾದ ಬೆಳವಣಿಗೆಯೆಂದರೆ ಕಾರ್ಮಿಕರ ಮೇಲೆ ಸಮಾಜವಾದದ ಪ್ರಭಾವ. ಇದರಿಂದಾಗಿ ಕಾರ್ಮಿಕಸಂಘಗಳ ಗುರಿಗಳಲ್ಲೂ ಸ್ವಲ್ಪ ಬದಲಾವಣೆಯಾಯಿತು. 1893ರಲ್ಲಿ ಸಮಾಜವಾದದ ಗುರಿಗಳನ್ನುಳ್ಳ ಕಾರ್ಯಕ್ರಮಗಳನ್ನು ಕಾರ್ಮಿಕರಲ್ಲಿ ಪ್ರತಿನಿಧಿಸುವ ಲೇಬರ್ ಪಕ್ಷ ಸ್ಥಾಪಿತವಾಯಿತು. 1898ರಲ್ಲಿ ಕಾರ್ಮಿಕ ಸಂಘಗಳ ಪರಿಷತ್ತು (ಟ್ರೇಡ್ ಯೂನಿಯನ್ ಕಾಂಗ್ರೆಸ್) ಅದಕ್ಕೆ ಮನ್ನಣೆ ನೀಡಿತು.

20ನೆಯ ಶತಮಾನದ ಪ್ರಾರಂಭದಲ್ಲೇ ಕಾರ್ಮಿಕ ಸಂಘಗಳು ಅನೇಕ ಕಠಿಣ ದಿನಗಳನ್ನು ಕಾಣಬೇಕಾಯಿತು. ಟ್ಯಾಫ್ಸ್ ವಾಲ್ ರೈಲ್ವೆ ಕಾರ್ಮಿಕರು ಮುಷ್ಕರ ಹೂಡಿದಾಗ ಕಂಪನಿ ಅದರ ವಿರುದ್ಧ ಮೊಕದ್ದಮೆ ಹೂಡಿ ಕಾರ್ಮಿಕ ಸಂಘದಿಂದ ನಷ್ಟವನ್ನು ವಸೂಲಿ ಮಾಡಿಕೊಂಡಿತು. ಇದರಿಂದ ಕಾರ್ಮಿಕ ಸಂಘದ ನಿಧಿಗೆ ಬಹಳ ನಷ್ಟವಾಯಿತು. 1908ರಲ್ಲಿ ಆಸ್ ಬಾರ್ನ್ ಎಂಬ ವ್ಯಕ್ತಿ ತನ್ನ ಸಂಘ ಚುನಾವಣೆಯಲ್ಲಿ ಹಣ ತೊಡಗಿಸುವುದರ ವಿರುದ್ಧ ಮೊಕದ್ದಮೆ ಹೂಡಿದ. ಆತ ಮೊಕದ್ದಮೆಯಲ್ಲಿ ವಿಜಯಿಯೂ ಆದ. 1913ರಲ್ಲಿ ಜಾರಿಗೆ ಬಂದ ಕಾರ್ಮಿಕ ಸಂಘಗಳ ಕಾಯಿದೆ, ಕಾರ್ಮಿಕ ಸಂಘಗಳು ತಮ್ಮ ರಾಜಕೀಯ ಚಟುವಟಿಕೆಗಳಿಗೆ ಪ್ರತ್ಯೇಕ ಹಣಸಂಗ್ರಹ ಮಾಡಬಹುದೆಂಬ ನಿಯಮಮಾಡಿತು.

ಮೊದಲನೆಯ ಮಹಾಯುದ್ಧ ಪ್ರಾರಂಭವಾಗುವ ವೇಳೆಗೆ ಕಾರ್ಮಿಕ ಸಂಘಗಳು ಇಂಗ್ಲೆಂಡಿನಲ್ಲಿ ಪ್ರಬಲ ಸ್ಥಿತಿಯಲ್ಲಿದ್ದುವು. 1920ರಲ್ಲಿ ಅವುಗಳ ಸದಸ್ಯರ ಸಂಖ್ಯೆ 40 ಲಕ್ಷದಿಂದ 80 ಲಕ್ಷಕ್ಕೇರಿತು. 1922ರ ಚುನಾವಣೆಯಲ್ಲಿ ಕಾರ್ಮಿಕಪಕ್ಷ ಕಾಮನ್ಸ್ ಸಭೆಯಲ್ಲಿ 122 ಸ್ಥಾನಗಳನ್ನು ದೊರಕಿಸಿಕೊಂಡಿತು. ಸಂಯೋಜಿತ ಕಾರ್ಮಿಕ ಸಂಘಗಳು ಹೆಚ್ಚು ಅಸ್ತಿತ್ವಕ್ಕೆ ಬರಲಾರಂಭಿಸಿದುವು. ಪ್ರತಿಯೊಂದು ರಂಗದಲ್ಲೂ ಬೃಹದಾಕಾರದ ಕಾರ್ಮಿಕರ ಸಂಘಗಳು ಬೆಳೆದುಕೊಂಡುವು. ರೈಲ್ವೆ ಸಾರಿಗೆ, ಮುದ್ರಣ ಇವುಗಳಲ್ಲಿ ಬೃಹದಾಕಾರದ ಕಾರ್ಮಿಕ ಸಂಘಗಳು ಪ್ರಾರಂಭವಾದುವು. ಇಡೀ ಕೈಗಾರಿಕಾ ರಂಗದಲ್ಲಿ ಕಾರ್ಮಿಕರ ಸಹಕಾರವಿರಬೇಕೆಂದು ಇವುಗಳ ಉದ್ದೇಶವಿತ್ತು. ಮುಷ್ಕರಗಳಲ್ಲಿ ಎಲ್ಲ ಕಾರ್ಮಿಕ ಸಂಘಗಳೂ ಸಹಕರಿಸಿ ಉದ್ದೇಶಗಳನ್ನು ಪೂರೈಸಿಕೊಳ್ಳುವ ವಿಚಾರ ಪ್ರಧಾನವಾಯಿತು. 1920ರಲ್ಲಿ ಕಲ್ಲಿದ್ದಲ ಕೈಗಾರಿಕೆಯಲ್ಲಿ ನಡೆದ ಮುಷ್ಕರಕ್ಕೆ ಎಲ್ಲ ಕಾರ್ಮಿಕ ಸಂಘಗಳೂ ಸೇರಿ ಸಹಾನುಭೂತಿ ಮುಷ್ಕರ ಹೂಡಿದವು. ಆದರೆ ಈ ಮುಷ್ಕರ ಯಶಸ್ಸು ಸಾಧಿಸಲಿಲ್ಲ. ಸರ್ಕಾರ 1922ರಲ್ಲಿ ಕಾರ್ಮಿಕ ವಿಚಾರ ಹಾಗೂ ಕಾರ್ಮಿಕ ಸಂಘಗಳ ಕಾಯಿದೆಯನ್ನು ಜಾರಿಗೆ ತಂದು ಎಲ್ಲ ಕಾರ್ಮಿಕ ಸಂಘಗಳೂ ಸೇರಿ ಮಾಡುವ ಮುಷ್ಕರವನ್ನು ಕಾನೂನುಬಾಹಿರವೆಂದು ಘೋಷಿಸಿತು. ಈ ಕಾಯಿದೆಯಿಂದ ಕಾರ್ಮಿಕ ಸಂಘದ ಸದಸ್ಯತ್ವ ಬಹಳ ಕಡಿಮೆಯಾಯಿತು. 1930ರಲ್ಲಿ ಸದಸ್ಯರ ಸಂಖ್ಯೆ 37.5 ಲಕ್ಷಕ್ಕಿಳಿಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಕಾರ್ಮಿಕ ಸಂಘಗಳು ದೇಶರಕ್ಷಣೆಯ ವಿಷಯವಾಗಿ ಹೆಚ್ಚು ಜವಾಬ್ದಾರಿ ವಹಿಸಿ ಹೆಚ್ಚಿನ ಉತ್ಪಾದನೆಗೆ ಸಹಾಯಕವಾದವು. ಯುದ್ಧಾನಂತರ ಕಾರ್ಮಿಕ ಪಕ್ಷ ಆಡಳಿತ ಪಕ್ಷವಾಯಿತು. ಈ ಅವಧಿಯಲ್ಲಿ ಕಾರ್ಮಿಕ ಸಂಘಗಳ ಚಟುವಟಿಕೆ ಹೆಚ್ಚಿ ಅವುಗಳ ಸದಸ್ಯರ ಸಂಖ್ಯೆಯೂ ಬೆಳೆಯಿತು. 1939ರಲ್ಲಿ 1,019 ಕಾರ್ಮಿಕ ಸಂಘಗಳಿದ್ದು ಅವುಗಳ ಸದಸ್ಯ ಸಂಖ್ಯೆ 63 ಲಕ್ಷದಷ್ಟಿತ್ತು. ಕಾರ್ಮಿಕ ಸಂಘಗಳು ಪರಸ್ಪರ ವಿಲಯನವಾಗುತ್ತ ನಡೆದು 1959ರ ವೇಳೆಗೆ ದೇಶದಲ್ಲಿ 651 ಕಾರ್ಮಿಕ ಸಂಘಗಳಿದ್ದು ಅವುಗಳ ಸದಸ್ಯ ಸಂಖ್ಯೆ 96 ಲಕ್ಷದಷ್ಟಿತ್ತು. ಆದರೆ ಮಹಾಯುದ್ಧಾನಂತರದ ಅಹಿತಕರ ವಿಷಯವೆಂದರೆ ಕಾರ್ಮಿಕ ಹಾಗೂ ಉದ್ಯಮಪತಿಗಳ ನಡುವೆ ಸಾಮರಸ್ಯ ಕಡಿಮೆಯಾಗಿ ಕಾರ್ಮಿಕವಿವಾದಗಳು ಹೆಚ್ಚಿದುವು. 1957ರಲ್ಲಿ ಸುಮಾರು 2,855 ವಿವಾದಗಳಿದ್ದು 84 ಲಕ್ಷ ಕೆಲಸದ ದಿನಗಳು ನಷ್ಟವಾದುವೆಂದರೆ ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತೆಂಬುದು ಅರ್ಥವಾಗುತ್ತದೆ. ಯುದ್ಧಾನಂತರ ಮತ್ತೊಂದು ಬೆಳವಣಿಗೆಯೆಂದರೆ ಕೈಗಾರಿಕೆಯಲ್ಲೇ ಅಲ್ಲದೆ ಇತರ ವರ್ಗಗಳಲ್ಲೂ ಕಾರ್ಮಿಕ ಸಂಘಗಳು ಹಬ್ಬಿದ್ದು. ಕೃಷಿರಂಗದಲ್ಲಿ ಕಾರ್ಮಿಕ ಸಂಘಗಳು ಹೆಚ್ಚಿದವು.

ಕಾರ್ಮಿಕ ಸಂಘಗಳು ಈಗ ದೇಶದ ರಾಜಕೀಯ ಹಾಗೂ ಆರ್ಥಿಕ ವಿಚಾರಗಳಲ್ಲಿ ಸಕ್ರಿಯವಾದ ಪಾತ್ರ ವಹಿಸುತ್ತಿವೆ. ಬ್ರಿಟನ್ನಿನ ಕಾರ್ಮಿಕ ಸಂಘದ ಚಟುವಟಿಕೆಗಳು ಕಾರ್ಮಿಕಸಂಘಕಾಂಗ್ರೆಸ್ಸಿನ ನಿರ್ದೇಶಕ್ಕನುಗುಣವಾಗಿ ನಡೆಯುತ್ತವೆ. ಪ್ರತಿ ಸೆಪ್ಟಂಬರಿನಲ್ಲಿ ನಡೆಯುವ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧಿವೇಶನದ ಪ್ರಣಾಳಿಕೆಗಳು ಕಾರ್ಮಿಕಪಕ್ಷಕ್ಕೆ ಹೆಚ್ಚು ಕಡಿಮೆ ಆಜ್ಞೆಗಳಿದ್ದಂತೆ. ಕಾರ್ಮಿಕಪಕ್ಷ ಈ ಸಂಘಗಳ ಸದಸ್ಯರ ಬೆಂಬಲ ಪಡೆದುಕೊಂಡು ರಾಜಕೀಯವಾಗಿ ಪ್ರಬಲವಾಗಿದೆ. ಕಾರ್ಮಿಕ ಸಂಘಗಳು ರಾಜಕೀಯ ಹಾಗೂ ಆರ್ಥಿಕ ರಂಗದಲ್ಲಿ ಈಗ ಪ್ರಧಾನ ಪಾತ್ರವಹಿಸುತ್ತಿವೆ.

**ಹಣ ಮತ್ತು ಬ್ಯಾಂಕು ವ್ಯವಸ್ಥೆ:** ಇಂಗ್ಲೆಂಡಿನಲ್ಲಿ ಹಣ ಮತ್ತು ಬ್ಯಾಂಕು ವ್ಯವಸ್ಥೆ ಬೆಳೆಯದೇ ಹೋಗಿದ್ದಿದ್ದರೆ, ಅಲ್ಲಿನ ಕೈಗಾರಿಕೆ ಹಾಗೂ ವಾಣಿಜ್ಯ ಪ್ರಗತಿ ಅಸಾಧ್ಯವಾಗುತ್ತಿತ್ತು. ಇವೆರಡೂ ಒಂದಕ್ಕೊಂದು ಕೂಡಿ ಮುನ್ನಡೆದವು. ಒಂದು ಇನ್ನೊಂದಕ್ಕೆ ಪೂರಕವೂ ಪ್ರೇರಕವೂ ಆಯಿತು. ಮಧ್ಯ ಯುಗದಲ್ಲಿ ಬೆಳ್ಳಿಯ ನಾಣ್ಯಗಳೇ ಪ್ರಧಾನವಾಗಿದ್ದವು. ಚಿನ್ನದ ನಾಣ್ಯಗಳು ಆ ಕಾಲದಲ್ಲಿ ಅಷ್ಟು ಪ್ರಮುಖವಾಗಿರಲಿಲ್ಲ. 1561ರಲ್ಲಿ ಹೊಸನಾಣ್ಯಪದ್ಧತಿಯನ್ನು ಅನುಸರಿಸಲಾಯಿತಾದರೂ ಚಿನ್ನ ಮತ್ತು ಬೆಳ್ಳಿ ನಾಣ್ಯಗಳ ನಡುವೆ ವಿನಿಮಯ ಪ್ರಮಾಣ ನಿಗದಿಮಾಡುವುದು ಕಠಿಣವಾಗಿಯೇ ಉಳಿಯಿತು.

18ನೆಯ ಶತಮಾನದ ಮುಖ್ಯ ಬದಲಾವಣೆಯೆಂದರೆ ಬೆಳ್ಳಿ ನಾಣ್ಯತ್ವವನ್ನು ಹೋಗಲಾಡಿಸಿ ಅದರ ಸ್ಥಾನದಲ್ಲಿ ಸ್ವರ್ಣಾಧಾರವಾದ ಏಕನಾಣ್ಯ ಪದ್ಧತಿ ಜಾರಿಗೆ ತಂದದ್ದು. 1774ರ ನಾಣ್ಯಪದ್ಧತಿಕಾಯಿದೆ ಜಾರಿಗೆ ಬಂದು ದ್ವಿಲೋಹ ನಾಣ್ಯಪದ್ಧತಿಯಿಂದ ಏಕಲೋಹ ನಾಣ್ಯಪದ್ಧತಿಗೆ ಬದಲಾವಣೆಯಾಯಿತು. ಆದರೆ ಬೆಳ್ಳಿ ನಾಣ್ಯ 25 ಪೌಂಡ್ ವರೆಗೆ ವಿಧಿಮಾನ್ಯ ನಾಣ್ಯವಾಗಿ ಮುಂದುವರಿಯಿತು. 1816ರಲ್ಲಿ ಜಾರಿಗೆ ಬಂದ ಕಾನೂನು ಈ ಮಿತಿಯನ್ನು 2 ಪೌಂಡಿಗೆ ಇಳಿಸಿತು. ಹೀಗಾಗಿ ಬೆಳ್ಳಿಯ ನಾಣ್ಯಗಳು ಕೇವಲ ಪ್ರತೀಕನಾಣ್ಯವಾಗಿ ಮುಂದುವರಿದವು. 1816ರ ಕಾಯಿದೆ 1821ರಲ್ಲಿ ಜಾರಿಗೆ ಬಂದು, ಇಂಗ್ಲೆಂಡಿನಲ್ಲಿ ಸ್ವರ್ಣ ಪ್ರಮಾಣವನ್ನು ಸ್ಥಾಪಿಸಿತು. ಇತರ ಅನೇಕ ರಾಷ್ಟ್ರಗಳು ಸಹ ಈ ಪದ್ಧತಿಯನ್ನನುಸರಿಸಿದ್ದರಿಂದ ಚಿನ್ನದ ಸಾಗುವಿಕೆಯನ್ನು ನಿಯಂತ್ರಿಸುವುದು ಅಗತ್ಯವಿತ್ತು. ಬ್ಯಾಂಕ್ ಆಫ್ ಇಂಗ್ಲೆಂಡಿಗೆ ಈ ಕೆಲಸವನ್ನು ಒಪ್ಪಿಸಲಾಯಿತು. ಅದು ತನ್ನ ಬಡ್ಡಿದರದ ಮೂಲಕ ರಾಷ್ಟ್ರದ ಒಳಕ್ಕೆ ಬರುತ್ತಿದ್ದ ಹಾಗೂ ರಾಷ್ಟ್ರದಿಂದ ಹೊರಕ್ಕೆ ಹೋಗುತ್ತಿದ್ದ ಚಿನ್ನದ ಪ್ರಮಾಣವನ್ನು ನಿಯಂತ್ರಿಸುತ್ತಿತ್ತು. ಸ್ವರ್ಣಪ್ರಮಾಣಪದ್ಧತಿ ಬಹಳ ಕಾಲದವರೆಗೆ ಸಮರ್ಪಕವಾಗಿ ಮುಂದುವರಿಯಿತು. 17ನೆಯ ಶತಮಾನದ ಅಂತ್ಯದ ಭಾಗದಲ್ಲಿ ಕಾಗದದ ನೋಟುಗಳ ಚಲಾವಣೆ ಆರಂಭವಾಯಿತು.

ಬ್ಯಾಂಕ್ ಆಫ್ ಇಂಗ್ಲೆಂಡ್ ಸಂಸ್ಥೆ ಬ್ಯಾಂಕ್ ನೋಟುಗಳನ್ನು ಚಲಾವಣೆಗೆ ತಂದಿತು. ಸ್ವರ್ಣಪ್ರಮಾಣಪದ್ಧತಿ ಬಹಳ ಕಾಲ ನಡೆದುಕೊಂಡು ಬಂತು. 1931ರಲ್ಲಿ ಅದನ್ನು ಕೈಬಿಡಲಾಯಿತು.

1844ರಲ್ಲಿ ಜಾರಿಗೆ ಬಂದ ಬ್ಯಾಂಕ್ ಚಾರ್ಟರ್ಸ್ ಕಾಯಿದೆಯಿಂದ ಬ್ಯಾಂಕುಗಳ ನೋಟು ಚಲಾವಣೆಯ ಅಧಿಕಾರಕ್ಕೆ ನಿರ್ಬಂಧವುಂಟಾಯಿತು. ಆದರೆ ಇದರಿಂದ ಕೂಡುಬಂಡವಾಳ ಬ್ಯಾಂಕುಗಳ ಬೆಳವಣಿಗೆಯೇನೂ ಕುಂಠಿತವಾಗಲಿಲ್ಲ. 1844ರ ಕೂಡುಬಂಡವಾಳ ಕಂಪನಿಗಳ ಕಾಯಿದೆ ಪ್ರಕಾರ, ಬ್ಯಾಂಕುಗಳು ಕನಿಷ್ಠ ಪಕ್ಷ ಇಂತಿಷ್ಟು ಬಂಡವಾಳವನ್ನು ಹೊಂದಿರಬೇಕೆಂದೂ ಇಂತಿಷ್ಟು ಪೌಂಡಿಗಿಂತ ಕಡಿಮೆ ಬೆಲೆಯ ಷೇರುಗಳನ್ನು ನೀಡಬಾರದೆಂದೂ ವಿಧಿಸಲಾಯಿತು. ಕೂಡುಬಂಡವಾಳ ಬ್ಯಾಂಕುಗಳು ಪರಸ್ಪರ ಸಂಯೋಗಹೊಂದಿ ದೊಡ್ಡ ಬ್ಯಾಂಕುಗಳಾಗಲಾರಂಭಿಸಿದವು. ಅಂತಿಮವಾಗಿ 5 ಬೃಹತ್ ಬ್ಯಾಂಕುಗಳು ದೇಶದ ಬ್ಯಾಂಕು ವ್ಯವಹಾರದ ಬಹುಭಾಗವನ್ನು ನಡೆಸಲಾರಂಭಿಸಿದವು. ಈ ಬ್ಯಾಂಕುಗಳ ಶಾಖೆಗಳೂ ವೇಗವಾಗಿ ಹರಡಲಾರಂಭಿಸಿದವು. ವಿದೇಶಗಳಲ್ಲೂ ಶಾಖೆಗಳನ್ನು ತೆರೆಯಲಾಯಿತು. ಕೂಡುಬಂಡವಾಳ ಬ್ಯಾಂಕುಗಳಿಗೆ ಎಲ್ಲ ವಿಧದಲ್ಲೂ ಬ್ಯಾಂಕ್ ಆಫ್ ಇಂಗ್ಲೆಂಡ್ ಸಹಾಯಮಾಡುತ್ತಿತ್ತು. 1911ರಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡಿನ ಪ್ರತಿನಿಧಿಗಳ ಬ್ಯಾಂಕುಗಳು ಪ್ರತಿನಿಧಿಗೂ ಇತರ ಆರ್ಥಿಕ ಸಂಘಗಳೂ ಮೂರು ತಿಂಗಳಿಗೊಮ್ಮೆ ಸಭೆ ನಡೆಸುವ ಕ್ರಮದ ಮೂಲಕ ಪರಸ್ಪರ ಸಹಕಾರ ಬೆಳೆಯಿತು. 1940ರಲ್ಲಿ ಬ್ರಿಟಿಷ್ ಬ್ಯಾಂಕುಗಳಿಂದ ನೇರವಾಗಿ ಸಾಲಪಡೆದುಕೊಳ್ಳುವುದಕ್ಕೆ ಪ್ರಾರಂಭಿಸಿತು. ಇದು ಬ್ಯಾಂಕುಗಳಿಗೆ ಅಧಿಕಲಾಭ ತರುವ ವ್ಯವಹಾರವಾಯಿತು. 1946ರಲ್ಲಿ ಫ್ರೆಡ್ ನೀಡ್ಸ್

ರಸ್ತೆಯ ವೃದ್ಧ ವನಿತೆಗೆ ಟ್ರಿಷರಿಯ ವೃದ್ಧನೊಡನೆ ಕಾನೂನುಬದ್ಧವಾದ ವಿವಾಹವಾಯಿತು. ಲೇಬರ್ ಪಕ್ಷ ಜಾರಿಗೆ ತಂದ ರಾಷ್ಟ್ರೀಕರಣದ ಕ್ರಮಗಳಲ್ಲಿ ಇದು ಮೊದಲನೆಯ ಹೆಜ್ಜೆಯಾಗಿತ್ತು (**ನೋಡಿ–ಇಂಗ್ಲೆಂಡಿನ ಬ್ಯಾಂಕು**). (ಸಿ.ಕೆ.ಆರ್.)

**ಇಂಗ್ಲೆಂಡಿನ ಕಲೆ:** 19ನೆಯ ಶತಮಾನದವರೆಗೆ: ರೋಮನ್ನರ ಕಾಲಕ್ಕೆ ಸೇರಿದ ಅನೇಕ ಕಲಾಕೃತಿಗಳು ಲಂಡನ್, ಕಾಲ್ಚೆಸ್ಟರ್, ನಾರ್ಫೋಕ್, ವೆರುಲೇಮಿಯಮ್ ಇತ್ಯಾದಿ ಎಡೆಗಳಲ್ಲಿ ದೊರಕಿವೆ. ಇವುಗಳಲ್ಲಿ ನಾರ್ಫೋಕಿನಲ್ಲಿ ಸಿಕ್ಕಿದ ನೀರೋನ ಕಂಚಿನಪ್ರತಿಮೆ. ಕಾಲ್ಚೆಸ್ಟರಿನಲ್ಲಿ ದೊರಕಿದ ಕ್ಯಾಲಿಗುಲಾನ ಶಿಲಾಪ್ರತಿಮೆ, ಲಂಡನ್ನಿನಲ್ಲಿ ದೊರಕಿದ ಹ್ಯಾಡ್ರಿಯನ್ನಿನ ಕಂಚಿನ ಕಲೆ ಉತ್ತಮ ಕೃತಿಗಳು. ಇವಲ್ಲದೆ ಅನೇಕ ರೋಮನ್ ದೇವವಿಗ್ರಹಗಳೂ ವೀರರ ಸಮಾಧಿ ಕೆತ್ತನೆಗಳುಳ್ಳ ನೆಲಹಂಚುಗಳೂ ಅನೇಕ ಕಡೆಗಳಲ್ಲಿ ದೊರಕಿವೆ. ಇವೆಲ್ಲವೂ ಬಲುಮಟ್ಟಿಗೆ ರೋಮನ್ ಶೈಲಿಯಲ್ಲಿಯೇ ಇದ್ದು, ರೋಮ್ ಸಾಮ್ರಾಜ್ಯದ ಇತರ ಭಾಗಗಳಿಂದ ತಂದಂಥವು. ಇವುಗಳ ಜೊತೆಗೆ ಕೆಲವು ಸ್ಥಳೀಯ ವಿಗ್ರಹಗಳು (ಲಿಕರ್‌ನ ಮಂಗಳ ವಿಗ್ರಹ ಇತ್ಯಾದಿ) ದೊರಕಿದರೂ ಅವುಗಳಲ್ಲಿ ರೋಮನ್ ಕಲೆಯ ವಸ್ತು ಮತ್ತು ವಿನ್ಯಾಸದ ಪ್ರಭಾವ ಗಮನಾರ್ಹವಾಗಿ ಎದ್ದು ಕಾಣುತ್ತದೆ (**ನೋಡಿ–ರೋಮನ್ ಕಲೆ**).

ಇಂಗ್ಲೆಂಡಿನ ಮಧ್ಯಯುಗದ ಮೊದಲ ಭಾಗಕ್ಕೆ ಸಂಬಂಧಪಟ್ಟಂತೆ ಕೆಲವು ಚಿತ್ರಿತ ಹಸ್ತಪ್ರತಿಗಳು (ಕೊಡೆಕ್ಸ್ ಅಮಿಯಾಟಿನಸ್, ಲಿಂಡಿಸ್ ಫರ್ನೆ ಗಾಸ್ಪೆಲ್ ಇತ್ಯಾದಿ) ಮತ್ತು ಶಿಲಾಶಿಲುಬೆಗಳು ಮಾತ್ರ ಉಳಿದಿವೆ. ಕ್ರೈಸ್ತ ಮತಕ್ಕೆ ಸಂಬಂಧಿಸಿದ ಅನೇಕ ಕಥೆಗಳು ಮತ್ತು ವ್ಯಕ್ತಿಗಳೇ ಹಸ್ತಪ್ರತಿಗಳ ಚಿತ್ರಗಳ ಮುಖ್ಯ ವಸ್ತುಗಳು. ಆದರೆ ಜೊತೆಯಲ್ಲೇ ಜ್ಯಾಮಿತೀಯ ಆಕೃತಿಗಳು ಮುಂತಾದ ನಮೂನೆಗಳು ಬಹಳ ಜಾಣ್ಮೆಯಿಂದ ಅಲಂಕರಣಕ್ಕಾಗಿ ಉಪಯೋಗಿಸಲ್ಪಡುತ್ತಿದ್ದುವು. ಈ ನಮೂನೆಗಳು ಮತ್ತು ವ್ಯಕ್ತಿಚಿತ್ರಗಳಲ್ಲಿ ದೇಶೀಯ ಕೆಲ್ಟಿಕ್ ಮತ್ತು ಆ್ಯಂಗ್ಲೊ ಸ್ಯಾಕ್ಸನ್ ಅಂಶಗಳೂ ಹಲವೆಡೆ ಸಮಕಾಲೀನ ಇಟ್ಯಾಲಿಯನ್ ಕಲಾ ಅಂಶಗಳೂ ಬೆರೆತಿರುವುದು ಕಾಣುತ್ತದೆ. ಈ ಚಿತ್ರಗಳಲ್ಲಿ ಕಂಡುಬರುವ ಅನೇಕ ವಾಸ್ತುವಿನ್ಯಾಸಗಳು ಮುಂದೆ ವಾಸ್ತುಶಿಲ್ಪದಲ್ಲಿ ಸಹ ಬಳಕೆಗೆ ಬಂದಿತು. ಹೆಡ್‌ಬೋರ್ನ್ ವರ್ಥಿ ಮತ್ತು ಬ್ರೀಮೋರ್‌ಗಳಲ್ಲಿ ಈ ಕಾಲದ ಕೆಲವು ಶಿಲ್ಪಾವಶೇಷಗಳಿವೆ.

ಇಂಗ್ಲಿಷ್ ಶಿಲ್ಪದ ಮುಂದಿನ ಘಟ್ಟ ರೋಮನೆಸ್ಕ್ ಶೈಲಿಯದು (**ನೋಡಿ–ರೋಮನೆಸ್ಕ್ ಕಲೆ**).ಈ ಕಾಲದ ಶಿಲ್ಪಗಳು ಬಹುಮಟ್ಟಿಗೆ ವಾಸ್ತುರಚನೆಗೆ ಪೂರಕಗಳಾಗಿರುತ್ತವೆ. ಕ್ಯಾಂಟರ್‌ಬರಿ ಕೆಥೀಡ್ರಲ್ ಮತ್ತು ಡರ್ಹಾಮ್ ಕಥೀಡ್ರಲ್‌ಗಳಲ್ಲಿ ಈ ಕಾಲದ ಕೆಲವು ಶಿಲ್ಪಗಳಿವೆ. ಈ ಶಿಲ್ಪಗಳು ಸಮಕಾಲೀನ ಐರೋಪ್ಯ ರೀತಿಯವು. ಲಿಂಕನ್ ಇಗರ್ಜಿ (ಸು. 1145), ಎಲಿಯ ಪ್ರಯರ್ ಬಾಗಿಲುಗಳಲ್ಲಿ (ಸು. 1140) ಇಟ್ಯಾಲಿಯನ್‌ನ ಮತ್ತು ಮಾಲ್ಮೆಸ್‌ಬರಿ (ಸು. 1165)ಯಲ್ಲಿ ಫ್ರೆಂಚ್‌ಶಿಲ್ಪಶೈಲಿಗಳ ಅನುಕರಣೆ ಕಂಡುಬರುತ್ತದೆ. ಇದೇ ಕಾಲದಲ್ಲಿ (1120–30ರ ಸುಮಾರಿನಲ್ಲಿ) ಇಂಗ್ಲಿಷ್ ಚಿತ್ರಕಲೆ ಒಂದು ಹೊಸಹಾದಿ ಹಿಡಿಯುತ್ತದೆ. ಈ ಕಾಲದ ಹಸ್ತಪ್ರತಿಗಳಲ್ಲಿ ಆಲ್ಬನಿ ಸಾರ್ಟರ್ ಇತ್ಯಾದಿ ಚಿತ್ರಣ ಪುಟಪೂರ್ತ ಕಾಣಿಸಿಕೊಳ್ಳುವುದೇ ಇವುಗಳ ವೈಶಿಷ್ಟ್ಯ. ಆಲ್ಬನಿ ಸಾರ್ಟರನ್ನನುಸರಿಸಿ ಬರಿ ಬೈಬಲ್, ಲಾಂಬೆತ್ ಬೈಬಲ್ ಮುಂತಾದ ಹಸ್ತಪ್ರತಿಗಳು ಇದೇ ಜಾಡಿನಲ್ಲಿ ಮುಂದುವರಿದು ಮುಂದಿನ ಗಾಥಿಕ್ ಕಾಲದ ಶೈಲಿಯ ಬೆಳವಣಿಗೆಗೆ ದಾರಿಮಾಡಿಕೊಟ್ಟವು. ಈ ಹಸ್ತಪ್ರತಿಯ ಚಿತ್ರಣವನ್ನು ಅನುಸರಿಸಿದ ದೊಡ್ಡ ಭಿತ್ತಿಚಿತ್ರಗಳು ಈ ಕಾಲದಲ್ಲಿರಬಹುದಾದರೂ ಅವುಗಳಲ್ಲಿ ಗಮನಾರ್ಹವಾದುವಾವುವೂ ಉಳಿದುಬಂದಿಲ್ಲ. ಕ್ಯಾಂಟರ್ಬರಿ ಇಗರ್ಜಿಯ ಸೇಂಟ್ ಆನ್ಸೆಲ್ಮ್ ಛಾಪೆಲ್‌ನಲ್ಲಿ ಅಲ್ಪ ಸ್ವಲ್ಪ ಮಾತ್ರ ಇದೆ.

ಇಂಗ್ಲಿಷ್ ಗಾಥಿಕ್ ಕಾಲದ ಮೊದಲ ಚಿತ್ರಕಲೆ ವೆಸ್ಟ್ ಮಿನ್ಸ್ಟರ್ ಸಾಲ್ಟರ್ (ಸು. 1200), ಕ್ಯಾಂಟರ್ಬರಿ ಸಾಲ್ಟರ್ ಮುಂತಾದ ಹಸ್ತಪ್ರತಿಗಳಲ್ಲಿ ಚೆನ್ನಾಗಿ ಬಿಂಬಿತವಾಗಿದೆ. ಹೊಳಪಿನ ಬಣ್ಣಗಳಿಂದ ರಚಿತವಾಗಿರುವುದು ಇವುಗಳ ವೈಶಿಷ್ಟ್ಯ. 13ನೆಯ ಶತಮಾನದ ಅನೇಕ ಹೊಳಪುಚಿತ್ರದ ಹಸ್ತಪ್ರತಿಗಳಲ್ಲಿ ಅವುಗಳನ್ನು ರಚಿಸಿದ ಕಲೆಗಾರರ (ವಿಲಿಯಮ್ ಡಿ ಬ್ರೈಲ್ಸ್, ಮ್ಯಾಥ್ಯೂ ಪ್ಯಾರಿಸ್) ಸಹಿ ಇರುತ್ತದೆ. ಈ ಕಾಲದ ಚಿತ್ರಗಳ ವಸ್ತು ಸಾಮಾನ್ಯವಾಗಿ ಧರ್ಮಕ್ಕೆ ಸಂಬಂಧಿಸಿದ್ದು, ವೈವಿಧ್ಯಕ್ಕೆ ಅವಕಾಶವಿಲ್ಲದಿದ್ದರೂ ಇಲ್ಲಿನ ವ್ಯಕ್ತಿಚಿತ್ರಣಗಳಲ್ಲಿ ಕಂಡುಬರುವ ಪುಷ್ಟಿ ಮತ್ತು ಗಾಂಭೀರ್ಯ ಮನಸೆಳೆಯುವಂತಿವೆ. ಈ ಹಸ್ತಪ್ರತಿಗಳ ಚಿತ್ರಕಲೆ ವಿಶೇಷವಾಗಿ ಸಿರಿವಂತರ ಪೋಷಣೆಯಲ್ಲಿ ಬೆಳೆದು ಬಂದಿತ್ತು. ಆದರೆ 13ನೆಯ ಶತಮಾನದ ಅಂತ್ಯದಲ್ಲಿ ರಾಜಸ್ಥಾನದ ಪೋಷಣೆಯಲ್ಲಿ ಹುಟ್ಟಿದ ಕಲಾಕೃತಿಗಳು ಹಿಂದಿನ ಮೋಹಕಶೈಲಿಯನ್ನು ಉಳಿಸಿಕೊಂಡಿಲ್ಲ. ಈ ಚಿತ್ರಗಳಲ್ಲಿ ವ್ಯಕ್ತಿಗಳನ್ನು ತಳಮಳಗೊಂಡಿರುವಂತೆ ಏರುಪೇರಾಗಿ ಚಿತ್ರಿಸಿರುವುದೇ ಈ ಅವನತಿಗೊಂದು ಗುರುತು. ಈ ಬಗೆಯ ಚಿತ್ರಗಳು ವೆಸ್ಟ್‌ಮಿನ್ಸ್ಟರ್ ಅಬೆಯಲ್ಲಿವೆ.

ಗಾಥಿಕ್ ಶೈಲಿಯ ಶಿಲ್ಪಕಲೆಯ ಉತ್ತಮ ಉದಾಹರಣೆಗಳು ಲಿಂಕನ್ ಕಥೀಡ್ರಲ್, ವೆಸ್ಟ್ ಮಿನ್ಸ್ಟರ್ ಅಬೆ ಮತ್ತು ಕ್ಯಾಂಟರ್ಬರಿ ಇಗರ್ಜಿಗಳಲ್ಲಿವೆ. ಸಾಮಾನ್ಯವಾಗಿ ಐರೋಪ್ಯ ಗಾಥಿಕ್ ಶೈಲಿಯಲ್ಲಿ ಕಂಡುಬರುವಂತೆ ಇಲ್ಲಿಯೂ ವಾಸ್ತುರಚನೆಗೆ ಶಿಲ್ಪ ಪೂರಕ ಅಂಶಮಾತ್ರವಾದರೂ ವಸ್ತು ಮತ್ತು ನಿರೂಪಣೆಯಲ್ಲಿ ಕೆಲವು ವಿಶಿಷ್ಟ ಆಂಗ್ಲೇಯತ್ವ ಬೆಳೆದಿರುವುದು ಕಾಣುತ್ತದೆ. 14ನೆಯ ಶತಮಾನದ ಹೊತ್ತಿಗೆ ಈ ಹಿಂದಿನ ಕಾಲದ ಸರಳ ಶಿಲ್ಪಗಳ ಬದಲಾಗಿ ವೈವಿಧ್ಯ ಮತ್ತು ವೈಭವಕ್ಕೆ ಹೆಸರಾದ ಅತ್ಯಾಲಂಕೃತ ಶಿಲ್ಪಗಳು ಕಾಣಿಸಿಕೊಳ್ಳುತ್ತವೆ. ಈ ಹೊಸರೀತಿಯ ಶಿಲ್ಪಗಳು ಲಿಂಕನ್ ಇಗರ್ಜಿ (ಸು. 1360ರ ರಾಜರ ಶಿಲ್ಪಗಳು) ಮತ್ತು ವೆಸ್ಟ್‌ಮಿನ್ಸ್ಟರ್ ಹಾಲ್‌ಗಳಲ್ಲಿವೆ. ಆದರೆ ಸಮಕಾಲೀನ ಮೃತರ ಸ್ಮಾರಕಗಳಲ್ಲಿ ಮಾತ್ರ (ವೆಸ್ಟ್‌ಮಿನ್ಸ್ಟರ್‌ನಲ್ಲಿರುವ ಕಂಚಿನ ಬ್ಲಾಕ್ ಪ್ರಿನ್ಸ್‌ನ ಸ್ಮಾರಕ ಇತ್ಯಾದಿ) ಅಲ್ಪಾಲಂಕರಣ ಮತ್ತು ಸ್ನಿಗ್ಧತೆ ಉಳಿದಿದ್ದಿತು.

14ನೆಯ ಶತಮಾನದಲ್ಲಿ ಇಂಗ್ಲೆಂಡಿನ ಧಾರ್ಮಿಕ ಚಿತ್ರಕಲೆಯ ಅವನತಿ ಆರಂಭವಾಯಿತು. ಈ ಅವನತಿ ಮುಂದೆ ಬಂದ ಆಂದೋಳನದಿಂದಾಗಿ ಪೂರ್ಣವಾಗಿ 8ನೆಯ ಹೆನ್ರಿಯ ಕಾಲದಲ್ಲಿ (1509–1547) ಸಂಪೂರ್ಣ ನಿಂತೇಹೋಯಿತು. ಈ ದುಃಸ್ಥಿತಿಯ ಕಾಲದಲ್ಲಿ ಹೊಸಕೃತಿಗಳು ಬೆಳೆಯಲಿಲ್ಲ. ಅಷ್ಟೇ ಅಲ್ಲದೆ, ಹೊಸ ಧರ್ಮದ ಅತ್ಯಾಭಿಮಾನದಿಂದಾಗಿ ಅನೇಕ ಹಳೆಯ ಕೃತಿಗಳು ನಾಶಮಾಡಲ್ಪಟ್ಟವು. ಆದರೆ ಈ ಕಾಲದಲ್ಲಿ ಧಾರ್ಮಿಕ ಚಿತ್ರಣಕ್ಕೆ ಬದಲಾಗಿ ಭಾವಚಿತ್ರರಚನೆ ಬೆಳೆದು ಬಂದುದು ಒಂದು ಮುಖ್ಯ ಅಂಶ. ಈ ಹೊಸ ರೀತಿಯ ಆವಿರ್ಭಾವಕ್ಕೆ ಯುರೋಪ್ ಖಂಡ ಭಾಗದಿಂದ ಇಲ್ಲಿಗೆ ಬಂದ ಹಾಲ್ಬೀನ್ ಮುಂತಾದವರು ಮುಖ್ಯ ಕಾರಣರು. ಇದೇ ಚಿತ್ರಪ್ರಕಾರ ನಿಕೋಲಾಸ್ ಹಿಲ್ಲಿಯರ್ಡ್ (1537–1616) ಐಸ್ಯಾಕ್ ಆಲಿವರ್ (1564–1617) ಮತ್ತು ಅವನ ಮಗ ಪೀಟರ್ ಆಲಿವರ್ ಮುಂತಾದವರಿಂದ ಸ್ಥಳೀಯ ಶೈಲಿಯಲ್ಲಿ ಬೆಳೆಯಿತು.

ಪುನಃ ಸ್ಟುವರ್ಟ್ ಅರಸರ ಕಾಲದಲ್ಲಿ ಸರ್ ಆಂಥೋನಿ ವಾನ್ ಡಿಕ್ (ಇಂಗ್ಲೆಂಡಿನಲ್ಲಿ 1632–1641) ಎಂಬ ವಿದೇಶೀಯನೊಬ್ಬನ ಪ್ರಭಾವದಿಂದ ಇಂಗ್ಲಿಷ್ ಚಿತ್ರಕಲೆಯಲ್ಲಿ ಹೊಸ ಹುರುಪು ಬೆಳೆಯಿತು. ವಿಲಿಯಮ್ ಡಾಬ್ಸನ್ (1610–46). ರಾಬರ್ಟ್ ವಾಕರ್ (1600–59) ಮುಂತಾದವರು ವಾನ್ ಡಿಕ್‌ನ ಶೈಲಿಯನ್ನೇ ಅನುಸರಿಸಿದರು. ಮುಂದೆಯೂ ಅನೇಕ ವಿದೇಶೀ ಚಿತ್ರಗಾರರು ಇಂಗ್ಲೆಂಡಿನ ಚಿತ್ರಕಲೆಯ ಬೆಳವಣಿಗೆಗೆ ಮುಖ್ಯ ಕಾರಣರಾದರು. ಇವರಲ್ಲಿ ಹಾಲೆಂಡಿನ ಸರ್ ಪೀಟರ್ ಲೆಲಿ, ಜರ್ಮನಿಯ ಸರ್ ಗಾಡ್‌ಫ್ರೆ ನೆಲ್ಲರ್ ಮುಖ್ಯರಾದವರು. ಅನೇಕ ಭಿತ್ತಿಚಿತ್ರಗಳನ್ನು ರಚಿಸಿರುವ ರಾಬರ್ಟ್ ಸ್ಟ್ರೀಟರ್ (1624–80) ಮತ್ತು ಜಾನ್ ರಿಲೆ (1646–91) ಈ ಕಾಲದ ಇತರ ಮುಖ್ಯ ಇಂಗ್ಲಿಷ್ ಚಿತ್ರಕಾರರು.

18ನೆಯ ಶತಮಾನದ ಆದಿಭಾಗದಲ್ಲಿ ಗಾಡ್‌ಫ್ರೆ ನೆಲ್ಲರ್ ಪ್ರಭಾವಿಯಾಗಿದ್ದ. ಆದರೆ ಅವನ ಅನಂತರ ಪ್ರಸಿದ್ಧಿಗೆ ಬಂದ ವಿಲಿಯಮ್ ಹೋಗಾರ್ಥ್ (1697–1764) ಉಚ್ಚತಮ ಚಿತ್ರಗಾರ. ಇವನು ತನ್ನ ಪ್ರತಿಭೆಯಿಂದಾಗಿ, ಈ ಹಿಂದಿನ ವೈಶಿಷ್ಟ್ಯವಾಗಿದ್ದ ಭಾವಚಿತ್ರಕಲೆಯನ್ನು ಎದುರಿಸಿ, ಸಮಕಾಲೀನ ಜನಜೀವನದ ಚಿತ್ರಗಳನ್ನು ರೂಪಿಸುವ ಹೊಸಪದ್ಧತಿಯನ್ನು ಉದ್ಘಾಟಿಸಿದ. ಹೊಸ ಆವಿಷ್ಕಾರಕ್ಕೆ ಹೆಸರಾದ ಈ ಕಾಲದ ಇನ್ನೊಬ್ಬ ಚಿತ್ರಕಾರ ಥಾಮಸ್ ಗೈನ್ಸ್‌ಬರೋ (1776–1837). ಇವನನ್ನು ಆಧುನಿಕ ಇಂಗ್ಲಿಷ್ ಚಿತ್ರಕಲೆಯ ತಂದೆ ಎಂದು ಕರೆಯುವ ವಾಡಿಕೆ ಇದೆ. ಇಂಗ್ಲಿಷ್ ಚಿತ್ರಕಲೆಯ ಹೆಮ್ಮೆಯಾದ ಪ್ರಕೃತಿಚಿತ್ರಣವನ್ನು ಆರಂಭಿಸಿದವನು ಗೈನ್ಸ್ ಬರೋ, ರೇನಾಲ್ಡ್ಸ್, ಜಾರ್ಜ್ ಸ್ಟಬ್ಸ್, ಜೇಮ್ಸ್ ವಾರ್ಡ್ ಮತ್ತು ರಿಚರ್ಡ್ ವಿಲ್ಸನ್ ಇವರು 18ನೆಯ ಶತಮಾನದ ಇತರ ಮುಖ್ಯ ಚಿತ್ರಗಾರರು.

ಶಿಲ್ಪಕಲೆಯಲ್ಲಿ ಸಹ 17–18ನೆಯ ಶತಮಾನಗಳಲ್ಲಿ ಹೊಸತನ ಕಾಣಿಸಿಕೊಳ್ಳುತ್ತದೆ. ಚಿತ್ರಕಲೆಯಲ್ಲಿದ್ದಂತೆ ಈ ಕಲಾವಿಧಾನದಲ್ಲೂ ಯುರೋಪಿನ ಖಂಡ ಭಾಗದ ಕಲೆಯ ಪ್ರಭಾವ ಈ ಕಾಲದಲ್ಲಿ ಬಹುವಾಗಿ ಇದೆ. ನಿಕೋಲಸ್ ಸ್ಟೋನ್ (1587–1647), ಜಾನ್ ಬುಷ್ನೆಲ್ (ಸು. 1630–1700), ಎಡ್ವರ್ಡ್ ಪಿಯರ್ಸ್ (ಕೃತಿಗಳು 1656–95), ಜಾನ್ ಮೈಕೆಲ್ ರಿಸ್‌ಬ್ರಾಕ್ (1694–1770), ಲೂಯಿ ಫ್ರಾಂಕೊ ರೂಬಿಲಿಯಾ (ಸು. 1705–63), ಜಾರಲ್ಸ್ ಜೇಮ್ಸ್ ಫಾಕ್ಸ್ ಮುಂತಾದವರು ಈಕಾಲದ ಪ್ರಸಿದ್ಧ ಶಿಲ್ಪಿಗಳು.

ಪ್ರಸಿದ್ಧ ಇಂಗ್ಲಿಷ್ ಕಲೆಗಾರರು ಮತ್ತು ಅವರ ಕೃತಿಗಳಿಗೆ ನೋಡಿ : ಬಾಯ್ಸ್, ರಾಬರ್ಟ್; ವಾನ್ ಬ್ರೂ, ಸರ್ ಜಾನ್; ವೆಬ್, ಜೇಮ್ಸ್; ಹಾಲ್ಬೀನ್, ಹ್ಯಾನ್ಸ್; ವಾನ್ ಡಿಕ್, ಸರ್ ಆಂಥೋನಿ; ಡಾಬ್ಸನ್, ವಿಲಿಯಮ್; ವಾಕರ್, ರಾಬರ್ಟ್; ಲೆಲಿ, ಸರ್ ಪೀಟರ್; ನೆಲ್ಲರ್, ಗಾಡ್‌ಫ್ರೆ; ಹೋಗಾರ್ಥ್, ವಿಲಿಯಮ್; ಗೈನ್ಸ್ ಬರೋ, ಥಾಮಸ್; ವಿಲ್ಸನ್, ರಿಚರ್ಡ್; ಮೋರ್‌ಲ್ಯಾಂಡ್, ಜಾರ್ಜ್; ರೇನಾಲ್ಡ್ಸ್, ಸರ್ ಜೋಷುಯಾ ಇತ್ಯಾದಿ. (ಎಸ್.ಎನ್.)

**ಇಂಗ್ಲೆಂಡಿನ ಚರಿತ್ರೆ: ಇತಿಹಾಸ ಪೂರ್ವಕಾಲ:** ಪ್ಲಿಸ್ಟೊಸೀನ್ ಯುಗದ ಪ್ರಾರಂಭದಲ್ಲಿ ಮೊದಲನೆಯ ಹಿಮಾಚ್ಛಾದಿತ ಕಾಲದಲ್ಲಿ ಇಂಗ್ಲೆಂಡಿನ ಬಹುಭಾಗವನ್ನು ಹಿಮದ ಗೆಡ್ಡೆಗಳು ಮುಚ್ಚಿದ್ದವು. ಅನಂತರದ ಹಿಮಾಚ್ಛಾದಿತ ಕಾಲಗಳಲ್ಲಿ ಇನ್ನೂ ಹೆಚ್ಚಿನ ಭಾಗಗಳು ಹಿಮದ ಗೆಡ್ಡೆಗಳಿಂದ ಮುಚ್ಚಲ್ಪಟ್ಟಿದ್ದಂತೆ ತಿಳಿದುಬರುತ್ತದೆ. ಮಧ್ಯ ಪ್ಲಿಸ್ಟೊಸೀನ್ ಯುಗಕ್ಕೆ ಸೇರಿದ ಭೂಪದರಗಳಲ್ಲಿ ಕೆಂಟಿನ ಸ್ವಾನ್ಸ್ ಕೂಂಬ್ ಎಂಬಲ್ಲಿ ದೊರಕಿರುವ ಮನುಷ್ಯನ ಪಳೆಯುಳಿಕೆಗಳು ಈ ದೇಶದಲ್ಲಿ ನಮಗೆ ದೊರಕಿರುವ ಅತ್ಯಂತ ಹಳೆಯ ಮಾನವನಿಗೆ ಸೇರಿವೆ. ಆದರೆ ಇದಕ್ಕೂ ಹಿಂದೆ ಇಂಗ್ಲೆಂಡಿನಲ್ಲಿ ಆದಿಮಾನವ ವಾಸಿಸುತ್ತಿದ್ದನೆಂಬುದಕ್ಕೆ ಅಲ್ಲಿ ದೊರಕಿರುವ ಕಲ್ಲಿನಾಯುಧಗಳು ಸಾಕ್ಷಿಯಾಗಿವೆ.

ಈಸ್ಟ್ ಆಂಗ್ಲಿಯದ ಕ್ರೋಮರ್, ನಾರ್ವಿಚ್, ಇಪ್ಸ್‌ವಿಚ್ ಮುಂತಾದೆಡೆಗಳಲ್ಲಿ ದೊರಕಿರುವ ಉಪಶಿಲಾಯುಧ ಅಥವಾ ಅತ್ಯಂತ ಹಳೆಯ ಕಾಲದ ಮತ್ತು ಬಹಳ ಒರಟಾದ ಕಲ್ಲಿನಾಯುಧಗಳನ್ನು ಬಹುಶಃ ಅವು ಮಾನವ ನಿರ್ಮಿತವಲ್ಲವೆಂದು ಇತ್ತೀಚೆಗೆ ತಿರಸ್ಕರಿಸಲಾಗಿದೆ. ಕ್ರೋಮರ್ ಪ್ರದೇಶದಲ್ಲಿ ಸ್ವಲ್ಪ ಮುಂದಿನ ಕಾಲಕ್ಕೆ ನಿರ್ದೇಶಿತವಾಗಿರುವ ಭೂಪದರಗಳಲ್ಲಿ ಒರಟೂ ದೊಡ್ಡದೂ ಆದ ಚಕ್ಕೆ ಕಲ್ಲಿನಾಯುಧಗಳು ದೊರೆತು ಇವು

ಇಂಗ್ಲೆಂಡಿನ ಅತ್ಯಂತ ಹಳೆಯ ಮಾನವ ನಿರ್ಮಿತ ಆಯುಧಗಳೆಂದು ಪರಿಗಣಿತವಾಗಿವೆ. ಅನಂತರ ಹಲವಾರು ಪ್ರದೇಶಗಳಲ್ಲಿ ಅಬೆ ವಿಲಿಯನ್ ರೀತಿಯ ಕೈಗೊಡಲಿಗಳು ದೊರೆತು ಆಫ್ರಿಕ ಯುರೋಪು ಸಂಸ್ಕೃತಿಗಳ ಪ್ರಭಾವವನ್ನು ತೋರುತ್ತವೆ.

**ಮಧ್ಯ ಪ್ಲಿಸ್ಟೋಸೀನ್ ಯುಗ:** ಮಧ್ಯ ಪ್ಲಿಸ್ಟೋಸೀನ್ ಯುಗದಲ್ಲಿ ಇಂಗ್ಲೆಂಡಿನ ಅನೇಕ ಪ್ರದೇಶಗಳಲ್ಲಿ ಕೈಗೊಡಲಿ ಸಂಸ್ಕೃತಿಯ ಆಯುಧಗಳು ಬಳಕೆಯಲ್ಲಿದ್ದವು. ಸ್ವಾನ್ಸ್‌ಕೂಂಬಿನ ಮಾನವಪಳೆಯುಳಿಕೆಗಳ ಜೊತೆಯಲ್ಲಿ ಕೈಗೊಡಲಿಗಳು ದೊರೆತಿವೆ. ಈ ಕೈಗೊಡಲಿಗಳು ಅಷೂಲಿಯನ್ ಹಂತಕ್ಕೆ ಸೇರಿದವು. ಬಹುಶಃ ಈ ಕಾಲದಲ್ಲೇ ಥೇಮ್ಸ್ ನದಿ ದಡದಲ್ಲಿ ಕ್ಲಾಕ್ಟನ್ ಆನ್ ಸೀ ಎಂಬಲ್ಲೂ ಮತ್ತಿತರ ಪ್ರದೇಶಗಳಲ್ಲೂ ಕ್ಲಾಕ್ಟೋನಿಯನ್ ರೀತಿಯ ಚಕ್ಕೆ ಕಲ್ಲಿನಾಯುಧಗಳು ದೊರಯುತ್ತವೆ. ಹಿಮಾಚ್ಛಾದಿತ ಕಾಲದಲ್ಲಿ ಶೀತ ಹವಾಗುಣ ಪ್ರಬಲವಾಗಿದ್ದಾಗ ಬೆಚ್ಚನೆಯ ಹವೆಗೆ ಹೊಂದಿಕೊಂಡಿದ್ದ ಕೈಗೊಡಲಿ ನಿರ್ಮಿಸುತ್ತಿದ್ದ ಮಾನವರು ಯುರೋಪ್ ಆಫ್ರಿಕಗಳ ದಿಕ್ಕಿನಲ್ಲಿ ಹಿಂತಿರುಗಿದಾಗ ಆ ಪ್ರದೇಶಗಳಲ್ಲಿ ಈ ಚಕ್ಕೆ ಕಲ್ಲಿನಾಯುಧಗಳ ಸಂಸ್ಕೃತಿ ಹರಡಿ ಪ್ರಬಲವಾಯಿತು. ಈ ಮೇಲಿನ ಸಂಸ್ಕೃತಿಗಳು ಸುಮಾರು ಪ್ರ.ಶ.ಪೂ.5 ಲಕ್ಷದಿಂದ 2 ಲಕ್ಷ ವರ್ಷಗಳವರೆಗೂ ರೂಢಿಯಲ್ಲಿದ್ದವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಮಧ್ಯ ಪ್ಲಿಸ್ಟೋಸೀನ್ ಯುಗದ ಅಂತ್ಯಭಾಗದಲ್ಲಿ ಇಂಗ್ಲೆಂಡಿನ ಸಫೋಕ್ ಪ್ರದೇಶಕ ಹೈ ಲಾಡ್ಜ್ ಮುಂತಾದೆಡೆಗಳಲ್ಲಿ ಕೈಗೊಡಲಿ ಮತ್ತು ಕ್ಲಾಕ್ಟೋನಿಯನ್ ಎರಡರ ಮಿಶ್ರಸಂಸ್ಕೃತಿಗಳು ಬಳಕೆಯಲ್ಲಿದ್ದವು. ಮಾನವ ನಾಗರಿಕತೆಯ ಮುಂದಿನ ಹಂತಗಳಲ್ಲಿ ಕಂಡುಬರುವ ಮತ್ತು ಅದರ ಅಭಿವೃದ್ಧಿಗೆ ಬಹುಮಟ್ಟಿಗೆ ಕಾರಣವಾಗಿರುವ ಈ ಬೇರೆ ಬೇರೆ ಸಂಸ್ಕೃತಿಗಳ ಮಿಶ್ರಣಕಾರ್ಯ ಈ ಯುಗದಲ್ಲಿ ಪ್ರಾರಂಭವಾಗಿರುವುದು ಗಮನಾರ್ಹ. ಬಹುಶಃ ಈ ರೀತಿಯ ಮಿಶ್ರಸಂಸ್ಕೃತಿಗಳು ಸುಮಾರು ಒಂದು ಲಕ್ಷ ವರ್ಷಕಾಲ ಇಂಗ್ಲೆಂಡಿನಲ್ಲಿ ಬಳಕೆಯಲ್ಲಿದ್ದಂತೆ ತಿಳಿದುಬರುತ್ತದೆ.

**ಪೂರ್ವ ಶಿಲಾಯುಗ:** ಪೂರ್ವಶಿಲಾಯುಗದ ಮಧ್ಯಕಾಲೀನ ಸಂಸ್ಕೃತಿಯೆಂದು ಯುರೋಪಿನಲ್ಲಿ ಹೆಸರಾಗಿರುವ ಮೌಸ್ಟೀರಿಯನ್ ಸಂಸ್ಕೃತಿಯನ್ನು ಹೋಲುವ ಸಮಕಾಲೀನ ಸಂಸ್ಕೃತಿಯೊಂದು ಡರ್ಬಿಷೈರಿನ ಕ್ರೆಸ್‌ವಿಲ್ ಕ್ರಾಗ್ಸ್ ಎಂಬಲ್ಲಿ ಕಂಡುಬಂದಿದೆ. ಡೆವಾನ್‌ಷೈರಿನ ಕೆಂಟ್ಸ್ ಗುಹೆಗಳಲ್ಲಿ ಅಷೂಲಿಯನ್ ಮತ್ತು ಲೆವಾಲ್ವಾ ಸಂಸ್ಕೃತಿಗಳಿಂದ ಪ್ರಭಾವಿತವಾದ ಮೌಸ್ಟೀರಿಯನ್ ಸಂಸ್ಕೃತಿಯ ಅವಶೇಷಗಳು ನಿಯಾಂಡರ್ಥಾಲ್ ಮಾನವನ ಅವಶೇಷಗಳೊಂದಿಗೆ ದೊರೆತಿವೆ.

ಪೂರ್ವಶಿಲಾಯುಗದ ಅಂತ್ಯಕಾಲದಲ್ಲಿ ನೈರುತ್ಯ ಯುರೋಪಿನಲ್ಲಿ ಬಹಳ ಉನ್ನತಮಟ್ಟದ ಕಲೆ, ಮೂಳೆಯ ಮತ್ತು ವಿಲಂಬಿತ ಚಕ್ಕೆ ಕಲ್ಲಿನ ಆಯುಧಗಳ ಉಪಯೋಗದಿಂದ ಕೂಡಿದ್ದ ಸಂಸ್ಕೃತಿ ಬೆಳೆಯಿತು. ಇದರ ಪ್ರತಿಧ್ವನಿ ಇಂಗ್ಲೆಂಡಿನ ಕ್ರೆಸ್‌ವಿಲ್ ಕ್ರಾಗ್ಸ್‌ನಲ್ಲಿ ಕಂಡುಬಂದು, ಕ್ರೆಸ್ ವಿಲಿಯನ್ ಸಂಸ್ಕೃತಿಯೆಂದು ಹೆಸರಾಯಿತು (**ನೋಡಿ– ಕ್ರೆಸ್–ವಿಲಿಯನ್–ಸಂಸ್ಕೃತಿ**).

**ಮಧ್ಯ ಶಿಲಾಯುಗ:** ಪ್ಲಿಸ್ಟೋಸೀನ್ ಯುಗದ ಅನಂತರ ಪ್ರಾರಂಭವಾದ ಮಧ್ಯಶಿಲಾ ಯುಗದ ಸಂಸ್ಕೃತಿಯ ಅವಶೇಷಗಳು ಇಂಗ್ಲೆಂಡಿನಲ್ಲಿ ಕಂಡುಬಂದು, ಮೂರು ಗುಂಪುಗಳಾಗಿ ವಿಂಗಡವಾಗುತ್ತದೆ. ಸ್ಕಾಂಡಿನೇವಿಯದ ಪ್ರಭಾವಕ್ಕೊಳಗಾದ ಆಗ್ನೇಯ ಭಾಗಗಳಲ್ಲಿ ಚಕಮಕಿಕಲ್ಲಿನ ಕೊಡಲಿ, ಪಕ್ಕಗಳಲ್ಲಿ ಕಲ್ಲಿನ ಹಲ್ಲುಗಳಿಂದ ಸಜ್ಜಿತವಾದ ಮೂಳೆಯ ಮೀನುಭರ್ಜಿಗಳು ಮತ್ತಿತರ ಬೇಟೆಯ ಆಯುಧಗಳನ್ನೊಳಗೊಂಡಿದ್ದ ಸಂಸ್ಕೃತಿ ನಾರ್ಥಂಬರ್ಲೆಂಡಿನಿಂದ ಈಸ್ಟ್ ಆಂಗ್ಲಿಯದವರೆಗೂ ಹಬ್ಬಿದ್ದಿತು. ಫ್ರಾನ್ಸ್ ಮತ್ತು ಬೆಲ್ಜಿಯಂ ಸಂಸ್ಕೃತಿಗಳಿಂದ ಪ್ರಭಾವಿತವಾಗಿದ್ದ ಎರಡನೆಯ ಗುಂಪಿನ ಸಂಸ್ಕೃತಿಗಳು ಆಗ್ನೇಯ ಇಂಗ್ಲೆಂಡಿನಿಂದ ವೇಲ್ಸ್‌ವರೆಗೂ ಹಬ್ಬಿದ್ದುವು. ಇವರ ಸಂಸ್ಕೃತಿಗೆ ಟಾರ್ಡೆನಾಸಿಯನ್ ಸಂಸ್ಕೃತಿಯೆಂದು ಹೆಸರಿಸಲಾಗಿದೆ (**ನೋಡಿ– ಟಾರ್ಡೆನಾಸೀಯನ್**). ಮೂರನೆಯ ಗುಂಪಿನ ಓಬಾನಿಯನ್ ಸಂಸ್ಕೃತಿ ಫ್ರಾನ್ಸಿನ ಅಜೀಲಿಯನ್ ಸಂಸ್ಕೃತಿಯ ಗುಂಪಿಗೆ ಸೇರಿದ್ದು ಸ್ಕಾಟ್ಲೆಂಡ್ ಮುಖಾಂತರ ಬ್ರಿಟನ್ನಿಗೆ ಬಂದು ಅದರ ಪ್ರಭಾವಗಳು ಉತ್ತರ ಭಾಗಗಳಲ್ಲಿ ಕಂಡುಬರುತ್ತವೆ.

ಈ ಮಧ್ಯಯುಗೀನ ಸಂಸ್ಕೃತಿಯ ಜನ ಬೇಟೆ ಮತ್ತು ಆಹಾರ ಸಂಗ್ರಹಣೆಯಿಂದ ಜೀವನ ನಡೆಸುತ್ತಿದ್ದರು. ಪೂರ್ವ ಶಿಲಾಯುಗಕಾಲದ ಇಲ್ಲಿನ ಜನರು ಹೊರಗಿನಿಂದ ಬಂದ ಜನ ಮತ್ತು ಸಂಸ್ಕೃತಿಗಳನ್ನು ಅಳವಡಿಸಿಕೊಂಡರು. ಮಧ್ಯ ಶಿಲಾಯುಗದ ಉತ್ತರಾರ್ಧದಲ್ಲಿ ಡೆನ್ಮಾರ್ಕ್ ಮುಂತಾದ ಕಾಡುಪ್ರದೇಶಗಳಿಂದ ಬಂದ ಜನ ನಯ ಮಾಡಿದ ಅಂಚುಗಳುಳ್ಳ ಕಲ್ಲಿನ ಕೊಡಲಿಗಳನ್ನು ಮೂಳೆ ಅಥವಾ ಕೊಂಬಿನ ಹಿಡಿಗಳಲ್ಲಿ ಸಿಕ್ಕಿಸಿ ಕಾಡುಗಳನ್ನು ಕಡಿಯಲು ಉಪಯೋಗಿಸಲಾರಂಭಿಸಿದರು. ಈ ಜನ ಸಸ್ಸಿಕ್ಸ್, ಯಾರ್ಕ್‌ಷೈರ್ ಪ್ರದೇಶಗಳಲ್ಲಿ ನೆಲೆಸಿದರು.

**ನೂತನ ಶಿಲಾಯುಗ:** ನೂತನ ಶಿಲಾಯುಗದಲ್ಲಿ ಇಂಗ್ಲೆಂಡಿನಲ್ಲಿ ಕಂಡುಬರುವ ಸಂಸ್ಕೃತಿಗಳಲ್ಲಿ ಮೊದಲನೆಯದು ವಿಂಡ್‌ಮಿ ಸಂಸ್ಕೃತಿ. ಪ್ರ.ಶ.ಪೂ. 3500ರ ಸುಮಾರಿನಲ್ಲಿ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಬಳಕೆಗೆ ಬಂದ ಈ ಸಂಸ್ಕೃತಿ ಕಾಲದಲ್ಲಿ ಆಹಾರೋತ್ಪಾದನೆ ಪ್ರಾರಂಭವಾಗಿ ವ್ಯವಸಾಯ ಮುಖ್ಯ ವೃತ್ತಿಯಾಯಿತು. ದಕ್ಷಿಣಭಾಗದಲ್ಲಿ ವಿರಳವಾಗಿದ್ದ ಕಾಡುಪ್ರದೇಶಗಳಲ್ಲಿ ಗೋದಿ ಮತ್ತು ಬಾರ್ಲಿ ಬೆಳೆಗಳನ್ನು ರೂಢಿಸುವುದಲ್ಲದೆ ಆಡು, ಕುರಿ, ಹಂದಿಗಳನ್ನು ಸಾಕುತ್ತಿದ್ದರು. ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಬಿಲ್ಲುಬಾಣಗಳ ಸಹಾಯದಿಂದ ಬೇಟೆಯಾಡುತ್ತಿದ್ದರು. ಬಯಲು ಪ್ರದೇಶದಲ್ಲಿ ಆಯತಾಕಾರದ ಮನೆಗಳಲ್ಲಿ ಸರೋವರ ತೀರಗಳಲ್ಲಿ ವಾಸಿಸುತ್ತಿದ್ದರು. ತಮ್ಮ ದನಗಳಿಗೆ ದೊಡ್ಡಿಗಳನ್ನು ನಿರ್ಮಿಸುತ್ತಿದ್ದರು. ಇವರ ಸಮಾಧಿ ಮತ್ತು ವಾಸಸ್ಥಳಗಳಲ್ಲಿ ಒರಟಾದ ಹೆಣ್ಣುದೇವತೆಗಳ ಗೊಂಬೆಗಳು ದೊರೆತಿದ್ದು, ಇವರು ಮಾತೃದೇವತೆಯನ್ನು ಪೂಜಿಸುತ್ತಿದ್ದರೆಂಬುದನ್ನು ಸೂಚಿಸುತ್ತದೆ. ಸ್ವಲ್ಪಕಾಲಾನಂತರ ಪಶ್ಚಿಮ ದಿಕ್ಕಿನಿಂದ ಬೃಹತ್ ಶಿಲಾಸಮಾಧಿಗಳ ಉಪಯೋಗ ಪ್ರಮುಖವಾಗಿದ್ದ ನೂತನ ಶಿಲಾಯುಗ ಸಂಸ್ಕೃತಿ ವೇಲ್ಸ್, ಸ್ಕಾಟ್ಲೆಂಡ್ ಮತ್ತು ಪಶ್ಚಿಮ ಇಂಗ್ಲೆಂಡ್ ಪ್ರದೇಶಗಳಲ್ಲಿ ಪ್ರಬಲವಾಯಿತು. ಕಾಟ್ಸ್‌ವಲ್ಡ್, ವಿಲ್ಟ್‌ಷೈರ್, ಆವ್ಬರಿ, ಸಾಮರ್‌ಸೆಟ್ ಮೊದಲಾದ ಪ್ರದೇಶಗಳಲ್ಲಿ ಹರಡಿದ ಈ ಸಂಸ್ಕೃತಿಯಲ್ಲಿ ಸಾಮುದಾಯಿಕವಾದ ದೊಡ್ಡಕಲ್ಲುಗಳಿಂದ ನಿರ್ಮಿತವಾದ ಸಮಾಧಿಗಳು ರೂಪಾಂತರಗಳಲ್ಲಿ ಉಪಯೋಗಕ್ಕೆ ಬಂದವು. ವ್ಯವಸಾಯ, ಪಶುಪಾಲನೆ, ಕಾಡುಗಳನ್ನು ಕಡಿಯುವುದು, ಮಣ್ಣಿನ ಪಾತ್ರೆಗಳ ನಿರ್ಮಾಣ ಇವರ ಮುಖ್ಯ ವೃತ್ತಿಗಳಾಗಿದ್ದವು. ನೂತನಶಿಲಾಯುಗ ಸಂಸ್ಕೃತಿಗಳೆಂದು ಕರೆಯಲ್ಪಡುವ ಈ ಸಂಸ್ಕೃತಿಗಳು ಅಲ್ಲಲ್ಲಿ ಕಂಡುಬರುತ್ತವೆ. ಪೀಟರ್ ಬರೋ ಸಂಸ್ಕೃತಿಯೆಂದು ಹೆಸರಾದ ಈ ಸಂಸ್ಕೃತಿಯಲ್ಲಿ ಬೇಟೆಗಾರಿಕೆ, ಮೀನು ಹಿಡಿಯುವಿಕೆ ಮುಂತಾದ ಆಹಾರ ಸಂಗ್ರಹಣ ಪದ್ಧತಿಗಳು ಆಹಾರೋತ್ಪಾದನಾ ಪದ್ಧತಿಯೊಂದಿಗೆ ಮುಂದುವರಿದವು. ಥೇಮ್ಸ್ ನದೀ ಕಣಿವೆ, ಈಸ್ಟ್ ಆಂಗ್ಲಿಯ, ಸಸೆಕ್ಸ್, ಬ್ರೈಟನ್ ಮತ್ತು ವೆಸಿಕ್ಸ್ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಇದೇ ಗುಂಪಿಗೆ ಸೇರಿದ ಮತ್ತೊಂದು ಸಂಸ್ಕೃತಿಯನ್ನು ಸ್ಕರಬ್ರೇ ಸಂಸ್ಕೃತಿಯೆಂದು ಕರೆಯುತ್ತಾರೆ. ಈ ಸಂಸ್ಕೃತಿಗಳ ಕಾಲ ಸು. ಪ್ರ.ಶ.ಪೂ. 3000 ಎಂದು ನಿರ್ದೇಶನ ಮಾಡಲಾಗಿದೆ.

**ಕಂಚಿನ ಯುಗ:** ಪ್ರ.ಶ.ಪೂ. 2000 ವರ್ಷಗಳ ಅನಂತರ ಲೋಹಗಳು ಉಪಯೋಗಕ್ಕೆ ಬರಲಾರಂಭಿಸಿ ಕಂಚಿನ ಯುಗ ಪ್ರಾರಂಭವಾಯಿತೆನ್ನಬಹುದು. ಈ ಕಂಚಿನಯುಗದ ಪ್ರಾರಂಭ ಉತ್ತರ ಯುರೋಪಿನಿಂದ ಇಂಗ್ಲೆಂಡಿಗೆ ವಲಸೆ ಬರಲಾರಂಭಿಸಿದ ಬೆಲ್ ಬೀಕರ್ ಎಂದು ಹೆಸರಾಗಿರುವ ವಿಶಿಷ್ಟ ಸಂಸ್ಕೃತಿಯೊಂದರಿಂದ ಗುರುತಿಸಲ್ಪಡುತ್ತದೆ. ಕೆಂಟ್, ಸಸೆಕ್ಸ್, ವೆರ್ಸೆಕ್ಸ್, ಯಾರ್ಕ್‌ಷೈರ್, ಡಾರ್ಸೆಟ್ ಮುಂತಾದೆಡೆಗಳಲ್ಲಿ ಈ ಬೀಕರ್ ಎಂಬ ವಿಶಿಷ್ಟ ರೀತಿಯ ಜಾಡಿಗಳು ಈ ಜನರ ಸಮಾಧಿಗಳಲ್ಲಿ ಕಂಡುಬಂದಿವೆ. ಈ ಜನ ಬಿಲ್ಲು, ಹಿಡಿಯಿದ್ದ ಬಾಕು, ಈಟಿ ಮುಂತಾದ ತಾಮ್ರದ ಆಯುಧಗಳಲ್ಲದೆ, ಚಿನ್ನ, ತಾಮ್ರ ಮುಂತಾದ ಲೋಹಗಳ ಆಭರಣಗಳನ್ನು ಬಳಸುತ್ತಿದ್ದರು. ಇವರು ಯುರೋಪಿನ ಹಲವಾರು ಪ್ರದೇಶಗಳಲ್ಲಿ ದೊರಕುತ್ತಿರಬಹುದಾಗಿದ್ದ ಚಿನ್ನ, ತಾಮ್ರ, ಶಿಲಾರಾಳ (ಅಂಬರ್), ಜೆಟ್ (ಒಂದು ಬಗೆಯ ಕಲ್ಲಿದ್ದಲಿನಂತಹ ಖನಿಜ) ಮುಂತಾದವುಗಳನ್ನು ಹುಡುಕುತ್ತಾ ಬಂದವರು. ಇವರು ಇಂಗ್ಲೆಂಡ್, ಯುರೋಪ್ ಮತ್ತಿತರ ಪ್ರದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಬೆಳೆಸಿಕೊಂಡರು. ಆದ್ದರಿಂದ ಇತರ ಸಂಸ್ಕೃತಿಗಳ ಸಂಪರ್ಕವೂ ಹೆಚ್ಚಿತು. ಈ ಕಾರಣಗಳ ದೆಸೆಯಿಂದ ಪ್ರ.ಶ. ಪೂ. 1600–1400 ವರ್ಷಗಳ ಮಧ್ಯಕಾಲದಲ್ಲಿ ಸುಪ್ರಸಿದ್ಧವಾದ ಸ್ಟೋನ್ ಹೆಂಜ್, ವೆಸ್ಸಿಕ್ಸಿನಲ್ಲಿ ನಿರ್ಮಿತವಾಯಿತು (**ನೋಡಿ– ಸ್ಟೋನ್–ಹೆಂಜ್**). ಕಂಚಿನ ಯುಗದ ಮಧ್ಯಹಂತದಲ್ಲಿ (ಪ್ರ.ಶ.ಪೂ. 1400–5000) ಶಾಂತಿಯುತವಾದ ಸಂಸ್ಕೃತಿ ಕ್ರಮೇಣ ಬೆಳೆಯಿತು. ವಿಲ್ಟ್‌ಷೈರ್ ಪ್ರದೇಶದಲ್ಲಿ ಉದ್ದವಾದ ಮಣ್ಣಿನ ದಿಬ್ಬಗಳ ಕೆಳಗೆ ಶವಸಂಸ್ಕಾರ ಮಾಡುತ್ತಿದ್ದ ಆ ಕಾಲದ ಜನ ಕಂಚಿನ ಆಯುಧಗಳನ್ನು ಉಪಯೋಗಿಸುತ್ತ, ಪಶುಪಾಲನೆಗೆ ಹೆಚ್ಚು ಪ್ರಾಧಾನ್ಯ ಕೊಟ್ಟಿದ್ದರು. ಡೆವೆರೆಲ್ ರಿಂಬುರಿಯೆಂದು ಹೆಸರಾಗಿರುವ ಈ ಸಂಸ್ಕೃತಿಯಲ್ಲಿ ಚಪ್ಪಟೆಯಾದ ಸಮಾಧಿಗಳ, ಶವಜಾಡಿಗಳ ಸ್ಮಶಾನಗಳ ಜೊತೆಗೆ ಕಲ್ಲಿನ ವರ್ತುಲಸಮಾಧಿಗಳೂ ಬಳಕೆಗೆ ಬಂದವು. ಕಂಚಿನ ಯುಗದ ಸಂಸ್ಕೃತಿಯ ಕಡೆಯ ಹಂತದಲ್ಲಿ (ಪ್ರ.ಶ.ಪೂ. 900–500) ಯುರೋಪಿನೊಡನೆ ವ್ಯಾಪಾರ ಪುನರಾರಂಭವಾಯಿತು ಮತ್ತು ಮುಂದಿನ ಹಂತದಲ್ಲಿ ವ್ಯವಸಾಯ ಮತ್ತು ಗ್ರಾಮೀಣ ಕೈಗಾರಿಕೆಗಳು ಬೆಳೆಯಲು ಕಾರಣವಾಯಿತು. ಈ ಹಂತದ ಕೊನೆಗಾಲದಲ್ಲಿ ವಿಲ್ಟ್‌ಷೈರಿನಲ್ಲಿ ಕಬ್ಬಿಣದ ಉಪಯೋಗ ಕಂಡುಬಂದಿದೆ. ಇದೇ ಸಮಯದಲ್ಲಿ ಕೆಲ್ಟಿಕ್ ಜನಾಂಗಗಳು ಇಂಗ್ಲೆಂಡಿಗೆ ಬರಲಾರಂಭಿಸಿದುವು.

**ಕಬ್ಬಿಣ ಯುಗ:** ಇಂಗ್ಲೆಂಡಿನಲ್ಲಿ ಮೂರು ಸಂಸ್ಕೃತಿಯ ಅವಶೇಷಗಳನ್ನು ಕಬ್ಬಿಣ ಯುಗದಲ್ಲಿ ಗುರುತಿಸಿದ್ದರೂ ಅವು ಪರಸ್ಪರ ಸಮಕಾಲೀನವೆಂಬುದು ತಿಳಿದುಬರುತ್ತದೆ. ಫ್ರಾನ್ಸಿನ ಗಾಲ್ ಮತ್ತು ಆಗ್ನೇಯ ದಿಕ್ಕುಗಳಿಂದ ಅವು ಪ್ರವೇಶಿಸಿದವು. ಪ್ರ.ಶ.ಪೂ. 450ರ ವೇಳೆಗೆ ಹಾಲ್‌ಸ್ಟಾಟ್ ಕಬ್ಬಿಣಯುಗ ಸಂಸ್ಕೃತಿಯ ಅವಶೇಷಗಳು ವೆಸೆಕ್ಸ್, ಸಾಲಿಸ್‌ಬರಿ, ನಾರ್ಥಾಂಪ್ಟನ್ ಷೈರ್ ಮತ್ತು ಥೇಮ್ಸ್ ಬಯಲಿನಲ್ಲಿ ಕಂಡುಬರುತ್ತವೆ. ಚಚ್ಚೌಕ ಹೊಲಪದ್ಧತಿ, ವ್ಯವಸಾಯ ರಂಗದಲ್ಲಿ ಈ ಜನರ ಮುಖ್ಯ ಕಾಣಿಕೆ. ಗೋದಿ ಬಾರ್ಲಿಗಳನ್ನು ಬೆಳೆಯುತ್ತಿದ್ದರು. ನೇಯ್ಗೆ ಕಲೆ ಪ್ರಾರಂಭವಾಯಿತು. ಕೋಟೆಗಳು ಬಳಕೆಗೆ ಬಂದವು. ಮಧ್ಯಕಾಲೀನ ಸಂಸ್ಕೃತಿಯಾದ ಲ್ಯಾಟಿನ್‌ಸಂಸ್ಕೃತಿ ಪೂರ್ವಪ್ರದೇಶಗಳಲ್ಲಿ ಪ್ರ.ಶ.ಪೂ.300ರ ವೇಳೆಗೆ ಬೆಳಕಿಗೆ ಬಂತು. ಯಾರ್ಕ್‌ಷೈರ್, ಕೆಂಟ್, ವೆರ್ಸೆಕ್ಸ್ ಮುಂತಾದೆಡೆಗಳಲ್ಲಿ ಪ್ರಬಲವಾಗಿದ್ದ ಈ ಸಂಸ್ಕೃತಿಯಲ್ಲಿ ಕತ್ತಿ, ಗುರಾಣಿ, ಕುದುರೆ ಜೀನು, ಯುದ್ಧರಥಗಳ ಬಳಕೆ ಹೆಚ್ಚಾಯಿತು.

ಈ ಜನ ಯುದ್ಧಪ್ರಿಯರಾಗಿದ್ದರು. ಪ್ರ.ಶ.ಪೂ.50ರ ಸುಮಾರಿಗೆ ಅಂತ್ಯಕಾಲೀನ ಕಬ್ಬಿಣಯುಗದ ಬೆಲೆ ಸಂಸ್ಕೃತಿಯ ಪ್ರವೇಶವಾಯಿತು. ಈ ಕಾಲದಲ್ಲಿ ಕೆಲ್ಟಿಕ್ ಟ್ಯುಟಾನಿಕ್ ಪಂಗಡಗಳ ಮಿಶ್ರಜನಾಂಗ ಹುಟ್ಟಿಕೊಂಡಿತು. ಇವರು ಕೆಂಟ್, ವೆರ್ಸೆಕ್ಸ್ ಪ್ರಾಂತ್ಯಗಳಲ್ಲಿ ಪ್ರಬಲರಾಗಿದ್ದರು. ಕೆಂಟ್, ವೆರ್ಸೆಕ್ಸ್ ಹರ್ಟ್‌ಫರ್ಡ್‌ಷೈರ್, ಮಿಡ್‌ಸೆಕ್ಸ್ ಮುಂತಾದ ಪ್ರದೇಶಗಳಲ್ಲಿ ಕ್ರಮೇಣ ಹಬ್ಬಿ, ಸುವ್ಯವಸ್ಥಿತ ರಾಜ್ಯಗಳನ್ನು ಸ್ಥಾಪಿಸಿ ಇತಿಹಾಸಯುಗವನ್ನು ಪ್ರಾರಂಭಿಸಿದರು. ಪ್ರ.ಶ.43ರಲ್ಲಿ ರೋಮನ್ನರು ಇಂಗ್ಲೆಂಡಿನ ಮೇಲೆ ದಾಳಿ ಮಾಡುವವರೆಗೂ ಇವರು ಪ್ರಬಲವಾಗಿದ್ದು ಹಂತಹಂತವಾಗಿ ರೋಮನ್ ಮತ್ತು ಬೆಲ್ಜಿಕ್ ಮಿಶ್ರಸಂಸ್ಕೃತಿಗಳನ್ನು ಇಲ್ಲಿ ಹರಡಿದರು. **(ಬಿ.ಕೆ.ಜಿ.)**

ಇಂಗ್ಲೆಂಡಿನ ಮೂಲನಿವಾಸಿಗಳು ಐಬೀರಿಯನ್ನರು. ಇವರು ಕಪ್ಪು ಬಣ್ಣದ ಕುಳ್ಳರು. ಕಲ್ಲು ಮತ್ತು ಲೋಹದ ಆಯುಧಗಳನ್ನು ಬಳಸುತ್ತಿದ್ದರು. ಯುದ್ಧ ಇವರ ಆಸಕ್ತಿಯ ವಿಷಯ. ಇವರು ಬಟ್ಟೆ, ಬುಟ್ಟಿ, ಲೋಹದ ಸಾಮಾನು ಮುಂತಾದುವನ್ನು ತಯಾರಿಸುತ್ತಿದ್ದರು. ವ್ಯವಸಾಯವೂ ಪಶುಪಾಲನೆಯೂ ಇವರ ಕಸಬು. ಕೆಲ್ಟ್ ಬುಡಕಟ್ಟಿನವರು ಮೇಲೆರಗಿ ಬಂದಾಗ ಇವರು ಸೋತರು. ಕೆಲ್ಟರು ಐಬೀರಿಯನ್ನರನ್ನು ಕೊಂದರು; ಗುಲಾಮರನ್ನಾಗಿ ಮಾಡಿದರು.

ಕೆಲ್ಟರು ಎತ್ತರದ ಬಲಶಾಲಿಗಳು. ಗುಂಪುಗುಳಿತನ ಅವರ ಸ್ವಭಾವ. ಆಗಾಗ್ಗೆ ಅವರವರಲ್ಲೇ ಕಾದಾಟ ನಡೆಯುತ್ತಿತ್ತು. ಅವರು ಪ್ರಕೃತಿಯ ಆರಾಧಕರಾಗಿದ್ದರು. ಐಬೀರಿಯನ್ನರಿಗಿಂತ ಸ್ವಲ್ಪ ಮುಂದುವರಿದಿದ್ದರು.

ಕ್ರಿಸ್ತನ ಜನ್ಮಕ್ಕೆ ಒಂದು ಸಾವಿರ ವರ್ಷಗಳ ಮುನ್ನ ಬ್ರಿಟಿಷ್ ದ್ವೀಪಗಳಿಗೆ ಕೆಲ್ಟರೇ ಅಲ್ಲದೆ ಇನ್ನೂ ಅನೇಕ ಜನಾಂಗದವರು ಬಂದರು; ಇಂಗ್ಲೆಂಡಿನ ನಿರ್ಮಾಣಕ್ಕೆ ಕಾರಣರಾದರು. ಇವರಲ್ಲಿ ಮುಖ್ಯರೆಂದರೆ–ಆ್ಯಂಗ್ಲೋಸ್ಯಾಕ್ಸನರು. ಸ್ಕ್ಯಾಂಡಿನೇವಿಯನ್ನರು, ನಾರ್ಮನ್ನರು ಹಾಗೂ ರೋಮನ್ನರು.

**ರೋಮನ್ನರ ಆಕ್ರಮಣ:** ಜೂಲಿಯಸ್ ಸೀಸರ್ ಇಲ್ಲಿಗೆ ಬಂದ ಮೊದಲ ಮುಖ್ಯ ಆಕ್ರಮಣಕಾರ. ರೋಮನ್ ಆಕ್ರಮಣಕಾರಿಗಳು ತಮ್ಮ ಧರ್ಮ ಮತ್ತು ನಾಗರಿಕತೆಯನ್ನು ಇಲ್ಲಿ ಹರಡಿದರು; ಆದರೆ ಅಪೇಕ್ಷಿತ ಪ್ರಭಾವ ಉಂಟುಮಾಡಲಾಗಲಿಲ್ಲ. ಸೀಸರ್‌ನ ಅನಂತರದ ಚಕ್ರವರ್ತಿ ಕ್ಲಾಡಿಯಸ್ ಆರು ಸಾವಿರ ಸೈನಿಕರನ್ನು ಬ್ರಿಟನ್ನಿನ ಮೇಲೆ ಕಳುಹಿಸಿದ. ಕೆಲಭಾಗ ಆತನ ವಶವಾಯಿತು. ಕ್ಯಾರಕ್ಟಕಸ್ ಎಂಬುವನ ನೇತೃತ್ವದಲ್ಲಿ ಬ್ರಿಟನ್ ರೋಮನ್ನರನ್ನು ಎದುರಿಸಿತು. ಸೆರೆ ಸಿಕ್ಕಿದ ಕ್ಯಾರಕ್ಟಕಸ್ ರೋಮಿಗೆ ಹೋಗಬೇಕಾಯಿತು. 78–85ರಲ್ಲಿ ಬ್ರಿಟನ್ ರೋಮ್ ಆಡಳಿತವನ್ನೊಪ್ಪಿತು. ಇಲ್ಲಿನ ಜನ ಲ್ಯಾಟಿನ್ ಭಾಷೆಗೆ ಮಾರುಹೋದರು. ಇದು ರೋಮ್ ದೇಶದ ಒಂದು ಪ್ರಾಂತ್ಯವಾಯಿತು. ಕೆಲವರು ರೋಮಿನೊಂದಿಗೆ ವ್ಯಾಪಾರ ಪ್ರಾರಂಭಿಸಿ ಎರಡು ದೇಶಗಳ ನಡುವೆ ಬೆಸುಗೆ ಹಾಕಿದರು.

ಆ್ಯಂಗ್ಲೊ–ಸ್ಯಾಕ್ಸನರು: ರೋಮ್ ಸಾಮ್ರಾಜ್ಯದೊಳಗಿನ ಜನರು ದೇಶದ ಭದ್ರತೆಗೆ ಬಿಕ್ಕಟ್ಟನ್ನು ತರಲು ಪ್ರಯತ್ನಿಸಿದರು. ಆ್ಯಂಗಲ್ ಮತ್ತು ಸ್ಯಾಕ್ಸನ್ ಬುಡಕಟ್ಟಿನವರು ಆಗಾಗ್ಗೆ ಬ್ರಿಟಿಷ್ ದ್ವೀಪಗಳ ಮೇಲೆ ನುಗ್ಗಿ ಲೂಟಿಮಾಡಲು ಬರುತ್ತಿದ್ದರು; ಕೊನೆಗೆ ಅಲ್ಲಿಯೇ ನೆಲೆಸಿದರು. ಇಂದಿನ ಬ್ರಿಟನ್ ಸಂಸ್ಕೃತಿ ಮತ್ತು ಆಂಗ್ಲಭಾಷೆ ಆ್ಯಂಗ್ಲೊ–ಸ್ಯಾಕ್ಸನರ ಕೊಡುಗೆ. 9ನೆಯ ಶತಮಾನದಲ್ಲಿ ಎಗ್‌ಬರ್ಟ್ ರಾಜನಾದ. ಆತ ಬ್ರಿಟನ್ನಿನ ಮೊದಲ ದೊರೆ. ಕೆಂಟ್, ಮರ್ಸಿಯ, ನಾರ್ಥಂಬ್ರಿಯ, ಎಸೆಕ್ಸ್ ಪ್ರಸಿದ್ಧ ನಗರಗಳು. ಡೇನರು ಅವುಗಳ ಮೇಲೆ ಸತತ ದಾಳಿ ಮಾಡುತ್ತಿದ್ದರು. ಇಂಗ್ಲೆಡನ್ನು ರಕ್ಷಿಸುವ ಕಾರ್ಯವನ್ನು ಎಗ್ಬರ್ಟ್ ಮಾಡಿದ. ಎಥೆಲ್ ಬರ್ಟ್ ರಾಜನ ಕಾಲದಲ್ಲಿ ರೋಮಿನಿಂದ ಪಾದ್ರಿಗಳ ಗುಂಪೊಂದು ಪೋಪ್ ಗ್ರೆಗರಿಯ ಆದೇಶಾನುಸಾರವಾಗಿ ಇಂಗ್ಲೆಂಡಿಗೆ ಬಂತು. **(ನೋಡಿ– ಇಂಗ್ಲೆಂಡಿನ–ಚರ್ಚು)**. ಆಗಸ್ಟೈನ್ ಎಂಬ ಪಾದ್ರಿ ಈ ಗುಂಪಿನ ನಾಯಕ. ಮೊದಲ ಬಾರಿಗೆ ಇಂಗ್ಲೆಂಡ್ ಜನರು ಹೆಚ್ಚು ಸಂಖ್ಯೆಯಲ್ಲಿ ಕ್ರೈಸ್ತ ಮತವನ್ನು ಅವಲಂಬಿಸಿದರು.

ಆ್ಯಂಗ್ಲೊ–ಸ್ಯಾಕ್ಸನರ ಸಾಧನೆಯೆಂದರೆ ಅವರ ಗ್ರಾಮಜೀವನ. ಗ್ರಾಮಗಳ ಸ್ವಯಂ ಆಡಳಿತ ಅವರ ವೈಶಿಷ್ಟ್ಯ. ಹಂಡ್ರೆಡ್ ಮೂಟ್, ಷೈರ್ ಮೂಟ್, ವಿಲೇಜ್ ಮೂಟ್ ಮುಂತಾದ ಸಭೆಗಳು ಜಾರಿಯಲ್ಲಿದ್ದವು.

**ಡೇನರು:** ಎಗ್‌ಬರ್ಟ್‌ನ ಮರಣಾನಂತರ ಡೇನರು ಇಂಗ್ಲೆಂಡಿನ ಮೇಲೆ ದಾಳಿ ಮಾಡಿದರು. ಇವರು ಸ್ಕಾಂಡಿನೇವಿಯದವರು. ಇವರು ಇಂಗ್ಲೆಂಡನ್ನು ಕೊಳ್ಳೆಹೊಡೆದರು; ಥೇಮ್ಸ್ ನದಿಯನ್ನು ದಾಟಿದರು. ಆಲ್‌ಫ್ರೆಡ್ ಡೇನರನ್ನು ಸೋಲಿಸಿದ. ಈತನ ಕೀರ್ತಿ ಅಪಾರವಾಗಿತ್ತು. ಇಂಗ್ಲೆಂಡಿನ ಸಂಸ್ಕೃತಿಗೆ ಈತನ ಕಾಣಿಕೆ ಮಹತ್ತರವಾದದ್ದು. ಈತನ ಕಾಲದಲ್ಲಿ ಲ್ಯಾಟಿನ್ ಭಾಷೆಯಿಂದ ಆಂಗ್ಲ ಭಾಷೆಗೆ ಅನೇಕ ಪುಸ್ತಕಗಳು ಭಾಷಾಂತರವಾದವು. ಈತನ ಕಾಲದಲ್ಲಿದ್ದ ಬೀಡ್ ಎಂಬ ಪಾದ್ರಿ ಮೊದಲ ಬಾರಿಗೆ ಇಂಗ್ಲೆಂಡಿನ ಚರಿತ್ರೆ ರಚಿಸಿದ. ಇವನ ದೂರದರ್ಶಿತ್ವಕ್ಕೆ ಒಂದು ನಿದರ್ಶನವೆಂದರೆ ಆ್ಯಂಗ್ಲೊ–ಸ್ಯಾಕ್ಸನ್ ಕ್ರಾನಿಕಲ್. ಇತಿಹಾಸ ರಚನೆಗೆ ಆಧಾರ ದೃಷ್ಟಿಯಿಂದ ಇದು ಮೊದಲ ಮೈಲಿಗಲ್ಲಾಗಿದೆ **(ನೋಡಿ–ಆಲ್ಫ್ರೆಡ್–ಮಹಾಶಯ)**.

ಈತನ ಮಗನಾದ ಎಡ್ವರ್ಡನ ಕಾಲದಲ್ಲಿ ಡೇನರ ರಾಜ್ಯ ಪುಡಿಪುಡಿಯಾಯಿತು. ವೆಸೆಕ್ಸ್ ರಾಜ್ಯಕ್ಕೆ ಡೇನರು ಸಾಮಂತರಾದರು. ಈತನ ಕಾಲದ ಮಹತ್ತ್ವದ ಘಟನೆಯೆಂದರೆ ಹೇಸ್ಟಿಂಗ್ಸ್ ಕದನ. ಎಡ್ವರ್ಡ್ ಬಲಹೀನನಾಗಿದ್ದ. ಅದರ ಲಾಭವನ್ನು ಶ್ರೀಮಂತರು ಪಡೆಯಲು ಯತ್ನಿಸಿದರು. ನಾರ್ಮಂಡಿಯ ವಿಲಿಯಮ್ ಸುಸಜ್ಜಿತ ಸೇನೆಯೊಂದಿಗೆ ಸ್ಯಾಕ್ಸನರ ಮೇಲೆ ದಾಳಿ ಮಾಡಿದ. ಸ್ಯಾಕ್ಸನರ ದೊರೆ ಹೆರಾಲ್ಡ್ ರಣರಂಗದಲ್ಲಿ ಸತ್ತ. 1066ರಲ್ಲಿ ವಿಲಿಯಮ್ ಎಂಬುವನು ದಿ ಕಾಂಕರರ್ ಎಂಬ ಬಿರುದು ಧರಿಸಿ ಪಟ್ಟವೇರಿದ. ಈತ ನಾರ್ಮನ್ ದೊರೆ.

**ನಾರ್ಮನ್ನರು:** ಇಂಗ್ಲೆಂಡಿನಲ್ಲಿ ಊಳಿಗಮಾನ್ಯ ಪದ್ಧತಿ ಜಾರಿಗೆ ತಂದವನು ವಿಲಿಯಮನೇ. ಅಂದಿನಿಂದ ಸಮಾಜಕ್ಕೆ ಭೂಮಿಯೇ ಬುನಾದಿಯಾಗಿದೆ. ತನ್ನ ಕಾಲದ ಭೂಪದ್ಧತಿಯನ್ನು ಈತ ಒಂದು ಪುಸ್ತಕದಲ್ಲಿ ಬರೆಸಿಟ್ಟ. ದೇಶದಲ್ಲಿರುವ ಒಟ್ಟು ಜಮೀನು ತೆರಿಗೆ, ಶ್ರೀಮಂತರ ಮನೆಗಳು ಇವುಗಳೆಲ್ಲದರ ಲೆಕ್ಕಾಚಾರವನ್ನು ಅದರಲ್ಲಿ ಬರೆಸಿದ. 1085ರಲ್ಲಿ ಬರೆಸಿದ ಈ ಪುಸ್ತಕ ಡೂಮ್ಸ್ ಡೇ ಬುಕ್ ಎಂದು ಹೆಸರಾಗಿದೆ.

ಸಾಲಿಸ್‌ಬರಿ ಎಂಬಲ್ಲಿ ಜಮೀನುದಾರರನ್ನು ವಿಲಿಯಮ್ ಬರಮಾಡಿಕೊಂಡು ಅವರಿಂದ ಸ್ವಾಮಿಭಕ್ತಿ ಪ್ರತಿಜ್ಞೆ ಪಡೆದ. ಇದೇ ಸಾಲಿಸ್‌ಬರಿಯ ಪ್ರಮಾಣ. ಇವನ ಕಾಲದಲ್ಲಿ ಚರ್ಚ್‌ನಿಂದ ಹಿಡಿದು ನ್ಯಾಯಾಲಯದವರೆಗೆ ಸುಧಾರಣೆಯಾಯಿತು. ದಕ್ಷ ಆಡಳಿತ ಈತನ ಕೊಡುಗೆ.

ಒಂದನೆಯ ಹೆನ್ರಿ ಎರಡನೆಯ ವಿಲಿಯಮ್‌ನ ಸೋದರ. ಈತನ ಕಾಲದಲ್ಲಿ ಕ್ಯೂರಿಯ ರೀಜಿಸ್ ಎಂಬ ಆಡಳಿತ ಸಭೆ ಅಭಿವೃದ್ಧಿ ಹೊಂದಿತು. ಒಬ್ಬ ಮಠಾಧಿಪತಿಯ ನೇಮಕದ ಪ್ರಶ್ನೆಯಿಂದ ಹೆನ್ರಿಗೂ ಚರ್ಚಿಗೂ ಕಾದಾಟವಾಯಿತು. ಇವನನ್ನು ನ್ಯಾಯಸಿಂಹ ಎಂದು ಕರೆಯುತ್ತಿದ್ದರು.

ಎರಡನೆಯ ಹೆನ್ರಿಯ ಕಾಲದಲ್ಲಿ ಸರ್ಕಾರದ ನ್ಯಾಯಾಲಯಗಳು, ಮತೀಯ ನ್ಯಾಯಾಲಯಗಳು ಎಂಬ ಎರಡು ರೀತಿಯ ನ್ಯಾಯಾಲಯಗಳಿದ್ದವು. ಇವುಗಳ ನಡುವೆ ಬಿಕ್ಕಟ್ಟು ಉಂಟಾಯಿತು. ಚರ್ಚಿನ ನ್ಯಾಯಾಲಯಗಳು ಬೇರೆ ಇದ್ದದ್ದನ್ನು ರಾಜ ಸಹಿಸಲಿಲ್ಲ. ಕ್ಯಾಂಟರ್‌ಬರಿಯ ಮಹಾ ಮಠಾಧಿಪತಿ ಥಾಮಸ್ ಬೆಕೆಟ್ ಈ ರಾಜನ ಆತ್ಮೀಯ ಗೆಳೆಯ. ಅಂಥವನ ಜೊತೆ ಇವನು ಕಾದಾಡಿ 1164ರಲ್ಲಿ ಕ್ಲಾರೆನ್‌ಡನ್ ಕಾನೂನನ್ನು ಹೊರಡಿಸಿದ. ಮತೀಯ ನ್ಯಾಯಾಲಯದಲ್ಲಿ ನಡೆದ ಮೊಕದ್ದಮೆಗಳು ಅಂತಿಮವಾಗಿ ರಾಜನ ನ್ಯಾಯಾಲಯಕ್ಕೆ ಬರಬೇಕೆಂಬುದು ಈತನ ಆಜ್ಞೆಯಾಗಿತ್ತು. ಇದಕ್ಕೆ ಒಪ್ಪದ ಥಾಮಸ್ ಬೆಕೆಟ್ ತನ್ನ ಜೀವವನ್ನೇ ತೆತ್ತ **(ನೋಡಿ– ಬೆಕೆಟ್,–ಥಾಮಸ್–ಎ)**.

ನ್ಯಾಯದರ್ಶಿ (ಜ್ಯೂರಿ) ಪದ್ಧತಿ ಈತನ ಕಾಲದ್ದು. ಈ ಪದ್ಧತಿಯನ್ನು ಈತ ಆರ್ಥಿಕ ವ್ಯವಹಾರ ಮತ್ತು ಆಡಳಿತಕ್ಕೆ ಉಪಯೋಗಿಸಿಕೊಂಡ **(ನೋಡಿ– ಇಂಗ್ಲಿಷ್–ನ್ಯಾಯ)**.

ಸಂಪ್ರದಾಯ ನ್ಯಾಯಕ್ಕೆ ಇಂಗ್ಲೆಂಡಿನ ಹೆನ್ರಿಯ ನ್ಯಾಯಾಲಯ ಭದ್ರ ನೆಲಗಟ್ಟಾಗಿತ್ತು. ಈತನ ಅನಂತರ ಬಂದ ಒಂದನೆಯ ರಿಚರ್ಡ್ ಮುಸಲ್ಮಾನರ ವಿರುದ್ಧ ಧರ್ಮಯುದ್ಧದಲ್ಲಿ ಭಾಗವಹಿಸಿದ್ದ. ರಿಚರ್ಡನ ಅನಂತರ ಜಾನ್ ಪಟ್ಟಕ್ಕೆ ಬಂದ. ಈತ ಕ್ರೂರಿಯೂ ಅಸಮರ್ಥನೂ ಆಗಿದ್ದ. ಧರ್ಮಗುರುಗಳು ಹಾಗೂ ಶ್ರೀಮಂತರುಗಳ ಜೊತೆ ಈತ ಸತತವಾಗಿ ಹೋರಾಡಿದ. ಪರಿಣಾಮವಾಗಿ ಈ ಜನ ತಮ್ಮ ಹಕ್ಕುಗಳಿಗಾಗಿ ಚಳವಳಿ ಹೂಡಿದರು. ಮ್ಯಾಗ್ನಕಾರ್ಟ ಆಥವಾ ಮಹಾಸನ್ನದಿಗೆ ದೊರೆ ಕೊನೆಗೂ ಸಹಿ ಹಾಕಬೇಕಾಯಿತು. ಮ್ಯಾಗ್ನಕಾರ್ಟ ಪ್ರಜಾಪ್ರಭುತ್ವದ ತಳಹದಿ, ಸ್ವಾತಂತ್ರ್ಯದ ಸಾಕ್ಷಾತ್ಕಾರ ವಿಚಾರಣೆ ಇಲ್ಲದೆ ಸೆರೆ. ಅನ್ಯಾಯದ ತೆರಿಗೆ ಇವುಗಳ ವಿರುದ್ಧ ರಾಜರಿಂದ ಬರೆಸಿಕೊಂಡ ಈ ಸನ್ನದು ಇಂಗ್ಲೆಂಡಿನ ಸಂವಿಧಾನದ ಮೊದಲ ಮಹಾ ದಾಖಲೆಯೆನಿಸಿದೆ.

ಮೊದಲ ಎಡ್ವರ್ಡ್‌ನ ಕಾಲದಲ್ಲಿ ಕಾಯಿದೆಗಳ ಸುರಿಮಳೆಯೂ ಆಯಿತು. ಪಾರ್ಲಿಮೆಂಟ್ ಇವನ ಕಾಲದಲ್ಲಿ ಪ್ರಾರಂಭವಾಯಿತು. ಪಾರ್ಲಿಮೆಂಟಿನ ಒಪ್ಪಿಗೆಯಿಲ್ಲದೆ ಯಾವುದೇ ಮಸೂದೆಯನ್ನೂ ಜಾರಿಗೆ ತರುವುದು ಕಷ್ಟವಾಗುತ್ತ ಬಂತು. ಅತ್ತ ಪಾರ್ಲಿಮೆಂಟ್ ಶಕ್ತವಾಗುತ್ತ ಬಂತು. ರಾಜನ ಮಂತ್ರಿಗಳನ್ನು ಮಹಾಭಿಯೋಗಕ್ಕೆ ಗುರಿಮಾಡುವ ಅಧಿಕಾರ ಪಾರ್ಲಿಮೆಂಟಿಗೆ ಲಭಿಸಿತು. ಮೂರನೆಯ ಎಡ್ವರ್ಡನ ಕಾಲಕ್ಕೆ ಪಾರ್ಲಿಮೆಂಟಿನ ಬೆಳೆವಣಿಗೆ ಚೆನ್ನಾಗಿ ಆಯಿತು. ಹೌಸ್ ಆಫ್ ಕಾಮನ್ಸ್, ಹೌಸ್ ಆಫ್ ಲಾರ್ಡ್ಸ್‌ಗಳ ರಚನೆ ಈ ಕಾಲದಲ್ಲಿ ಆಯಿತು.

ಮೂರನೆಯ ಎಡ್ವರ್ಡ್‌ನ ಕಾಲದಲ್ಲಿ ಫ್ರಾನ್ಸಿನೊಡನೆ ನೂರು ವರ್ಷಗಳ ಯುದ್ಧ ಆರಂಭವಾಯಿತು. ಇದು ಅವ್ಯಾಹತ ಹೋರಾಟವಲ್ಲ; ಆಗೊಮ್ಮೆ ಈಗೊಮ್ಮೆ ನೂರು ವರ್ಷಗಳ ತನಕ ನಡೆಯಿತು. ಇಂಗ್ಲೆಂಡಿನ ರಾಜರು ಫ್ರೆಂಚ್ ರಾಜರಿಗೆ ಮರ್ಯಾದೆ ತೋರಿಸಬೇಕು ಎಂಬ ಹೇಳಿಕೆ ಈ ಯುದ್ಧಕ್ಕೆ ಪ್ರೇರಣೆಯಾಯಿತು. ಇಂಗ್ಲೆಂಡ್ ದೇಶಕ್ಕೆ ಸ್ಕಾಟ್ಲೆಂಡ್ ವಿರೋಧವಾಗಿತ್ತು. ಅದಕ್ಕೆ ಫ್ರಾನ್ಸ್ ಸಹಾಯ ನೀಡಿತು. ಇಂಗ್ಲೆಂಡ್ ಇದಕ್ಕಾಗಿ ಸಿಡಿದೆದ್ದಿತು. ಪರಿಣಾಮವಾಗಿ ನೂರು ವರ್ಷಗಳ ಯುದ್ಧ ನಡೆಯಿತು. ಮೂರನೆಯ ಎಡ್ವರ್ಡ್, ಐದನೆಯ ಹೆನ್ರಿ ಮತ್ತು ಆರನೆಯ ಹೆನ್ರಿ ಈ ಯುದ್ಧದ ಚಾಲಕರಾದರು.

ಆರನೆಯ ಹೆನ್ರಿಯ ಆಸ್ಥಾನದಲ್ಲಿದ್ದ ಎರಡು ಬಣಗಳ ನಡುವೆ ಯುದ್ಧದ ಬಗ್ಗೆ ನಿಶ್ಚಿತ ನಿಲುವು ಇರಲಿಲ್ಲ. ಒಂದು ಗುಂಪಿಗೆ ಯುದ್ಧ ಬೇಕಿತ್ತು. ಮತ್ತೊಂದು ಶಾಂತಿಗಾಗಿ ಹಂಬಲಿಸುತ್ತಿತ್ತು. ಹೆನ್ರಿಯ ಹೆಂಡತಿ ಮಾರ್ಗರೆಟ್ ಫ್ರಾನ್ಸಿನವಳು. ಆದ್ದರಿಂದ ಅವಳಿಗೆ ಯುದ್ಧ ಬೇಡವಾಗಿತ್ತು. ಲಂಕಾಸ್ಟ್ರಿಯನ್ ಪಂಗಡಕ್ಕೆ ಯುದ್ಧ ಬೇಕಿತ್ತು. ಒಟ್ಟಿನಲ್ಲಿ ಇಂಗ್ಲಿಷರಿಗೆ ನೂರು ವರ್ಷಗಳ ಯುದ್ಧದಲ್ಲಿ ಅಪಜಯವಾಯಿತು.

ಲಂಕಾಸ್ಟ್ರಿಯನ್ನರನ್ನು ರಾಜ್ಯ ಗದ್ದುಗೆಯಿಂದ ಇಳಿಸುವುದು ಯಾರ್ಕರ ಗುರಿಯಾಗಿತ್ತು. ಜೊತೆಗೆ ಫ್ರಾನ್ಸಿನೊಡನೆ ದೀರ್ಘ ಹೋರಾಟ ಮಾಡಿ ಇಂಗ್ಲಿಷರಿಗೆ ಬೇಸರ ಬಂದಿತ್ತು. ಆರನೆಯ ಹೆನ್ರಿಗೆ ಇದ್ದ ಒಬ್ಬ ಮಗ ಪಟ್ಟಕ್ಕೆ ಬರಬೇಕಾದರೆ ಲಂಕಾಸ್ಟ್ರಿಯನ್ನರೊಡನೆ ಯುದ್ಧ ಅನಿವಾರ್ಯವಾಗಿತ್ತು. ಯಾರ್ಕರು ಬಿಳಿಗುಲಾಬಿಯನ್ನೂ ಲಂಕಾಸ್ಟ್ರಿಯನ್ನರು ಕೆಂಪು ಗುಲಾಬಿಯನ್ನೂ ತಮ್ಮ ಚಿಹ್ನೆಗಳಾಗಿ ಉಪಯೋಗಿಸಿದ್ದರಿಂದ ಇವರ ನಡುವೆ ನಡೆದ ಯುದ್ಧಕ್ಕೆ ಗುಲಾಬಿ ಯುದ್ಧವೆಂದು ಹೆಸರಾಯಿತು. ಈ ಯುದ್ಧ ಇಂಗ್ಲೆಂಡಿನ ಶ್ರೀಮಂತರ ಪ್ರಾಬಲ್ಯವನ್ನು ಮುರಿಯಿತು. ನಾರ್ತಾಂಪ್ಟನ್ನಿನಲ್ಲಿ ನಡೆದ ಹೋರಾಟ ಲಂಕಾಸ್ಟ್ರಿಯನ್ನರನ್ನು ಪುಡಿಪುಡಿ ಮಾಡಿತು. ಯಾರ್ಕ್ ಮತ್ತು ಅವರ ಅನುಯಾಯಿಗಳು ಸಾವಿಗೆ ಈಡಾದರು.

ಈ ವೇಳೆಗೆ ಇಟಲಿಯಲ್ಲಿ ಪ್ರಾರಂಭವಾಗಿದ್ದ ಜ್ಞಾನ ಪುನರುಜ್ಜೀವನ ಚಳವಳಿ ಇಂಗ್ಲೆಂಡಿಗೂ ಹಬ್ಬಿತ್ತು. ಮಾನವರಲ್ಲಿ ಬದುಕನ್ನು ಪ್ರೀತಿಸುವಂತೆ, ಸೌಂದರ್ಯವನ್ನು ಆರಾಧಿಸುವಂತೆ, ಮಾನವೀಯತೆಯನ್ನು ಹುಡುಕುವಂತೆ ಇದು ಪ್ರೇರಣೆ ನೀಡಿತು. 4ನೆಯ ಎಡ್ವರ್ಡ್‌ನ ಕಾಲದಲ್ಲಿ ವಿಲಿಯಂ ಕ್ಯಾಕ್ಸ್ ಟನ್ ಒಂದು ಮುದ್ರಣಾಲಯವನ್ನು ಸ್ಥಾಪಿಸಿದ ಅನೇಕ ಗ್ರಂಥಗಳು ಹೊರಬಂದವು. ಈ ನವೋದಯದ ಕಾಲದಲ್ಲಿ ನವೀನ ಶೈಲಿಯ ಕಲೆ, ನವೀನ ಮತಧರ್ಮ, ಸಾಹಿತ್ಯ ವಿಜ್ಞಾನ ಹೊಸ ಹೊಸ ಭೂಸಂಶೋಧನೆ ಇವೆಲ್ಲ ಸಂಭವಿಸಿದವು

**ಟ್ಯೂಡರ್ ದೊರೆಗಳು:** 15ನೆಯ ಶತಮಾನದ ಕೊನೆಯ ಭಾಗದಲ್ಲಿ ಯುರೋಪಿನಲ್ಲಿ ಅನೇಕ ರಾಜಕೀಯ ಬದಲಾವಣೆಗಳಾದವು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿವಾಹ ಸಂಬಂಧಗಳು ಬೆಳೆದವು. ಇಂಗ್ಲೆಂಡಿನಲ್ಲಿ ಈ ಕಾಲದಲ್ಲಿ ಅಧಿಕಾರಕ್ಕೆ ಬಂದ ಟ್ಯೂಡರ್ ದೊರೆಗಳು ನಿರಂಕುಶ ಅಧಿಕಾರ ನಡೆಸಿದರೂ ಕ್ರಮೇಣ ರಾಷ್ಟ್ರೀಯ ಭಾವನೆ ಮೂಡುತ್ತ ಬಂತು.

ಟ್ಯೂಡರ್ ದೊರೆಗಳ ಪೈಕಿ ಏಳನೆಯ ಮತ್ತು ಎಂಟನೆಯ ಹೆನ್ರಿ ಮುಖ್ಯರು. ಏಳನೆಯ ಹೆನ್ರಿಯ ಕಾಲದಲ್ಲಿ ಯಾರ್ಕರು ನಡೆಸಿದ ಪಿತೂರಿಯನ್ನು ಆತ ಸದೆಬಡಿದ; ಶ್ರೀಮಂತರನ್ನು ಮೂಲೆಗುಂಪಾಗಿಸಿದ. ಪಾರ್ಲಿಮೆಂಟಿನ ಅನುಮತಿ ಪಡೆದು ಸ್ಟಾರ್ ಚೇಂಬರ್ ಕೋರ್ಟನ್ನು ಸ್ಥಾಪಿಸಿ ಶ್ರೀಮಂತರನ್ನು ತುಳಿದ. ವೆಸ್ಟ್ ಮಿನ್‌ಸ್ಟರ್‌ನಲ್ಲಿ ಸೇರುತ್ತಿದ್ದ ಈ ಕೋರ್ಟಿನ ಪ್ರಾಂಗಣದ ಒಳ ಚಾವಣಿ ನಕ್ಷತ್ರಗಳಿಂದ ಅಲಂಕೃತವಾಗಿತ್ತು. ಆದ್ದರಿಂದ ಇದಕ್ಕೆ ಸ್ಟಾರ್ ಚೇಂಬರ್ ಕೋರ್ಟ್ ಎಂದು ಹೆಸರು ಬಂತು. ದೇಶದ ಶಿಸ್ತನ್ನು ಕಾಪಾಡುವುದರಲ್ಲಿ ಇದು ಸಹಾಯ ಮಾಡಿತು. ಗುಲಾಬಿ ಯುದ್ಧದಿಂದ ಸುಸ್ತಾಗಿದ್ದ ಇಂಗ್ಲೆಂಡಿಗೆ ಹೆನ್ರಿಯ ಆಡಳಿತ ತಂಪನ್ನೆರಚಿತು. ಇಂಗ್ಲೆಂಡ್ ಪ್ರಗತಿಪರವಾಯಿತು. ಸರ್ಕಾರ ಜನಪ್ರಿಯವಾಯಿತು. ಶಾಂತಿ ಲಭಿಸಿತು. ಟ್ಯೂಡರ್ ರಾಜರು ಜನತೆಯ ಬೆಂಬಲ ಗಳಿಸಿದರು.

ಎಂಟನೆಯ ಹೆನ್ರಿಯ ಕಾಲದಲ್ಲಿ ನವೀನ ಮತಧರ್ಮ ಇಂಗ್ಲೆಂಡನ್ನು ಪ್ರವೇಶಿಸಿತು. ಇವನಿಗೆ ಸಹಾಯಕನಾದವನು ಥಾಮಸ್ ವುಲ್ಸಿ. ಈತ ರಾಜಕಾರ್ಯ ಪ್ರವೀಣ. ಪೋಪನಿಂದ ಮಹಾ ಮಠಾಧಿಪತಿ ಸ್ಥಾನ ಈತನಿಗೆ ಲಭಿಸಿತು. ಇಂಗ್ಲೆಂಡಿನ ವಿದೇಶಾಂಗನೀತಿಯನ್ನು ಮೊದಲ ಬಾರಿಗೆ ರೂಪಿಸಿದವನು ಇವನು. ಶಕ್ತಿಗಳ ಸಮತೋಲ ಈತನ ಗುರಿಯಾಗಿತ್ತು. ಎಂಟನೆಯ ಹೆನ್ರಿ ತನ್ನ ಮೊದಲ ಹೆಂಡತಿ ಕ್ಯಾಥರೀನ್ ಆಫ್ ಅರಗಾನಳೊಂದಿಗೆ ವಿವಾಹವಿಚ್ಛೇದ ಮಾಡಿಕೊಂಡು ಆಸ್ಥಾನದ ಆನ್ ಬೋಲಿನ್‌ಳನ್ನು ಮದುವೆಯಾಗಬಯಸಿದ. ಆದರೆ ಇದಕ್ಕೆ ಪೋಪ್ ಆಶೀರ್ವಾದ ನೀಡಲಿಲ್ಲ. ಆದ್ದರಿಂದ ಈತ ಪೋಪನನ್ನೇ ಧಿಕ್ಕರಿಸಿ ಚರ್ಚಿನ ಸ್ವಾತಂತ್ರ್ಯವನ್ನು ಸಾರಿದ. ಮೊದಲನೆಯ ವಿವಾಹವನ್ನು ಕೊನೆಗೊಳಿಸಲು ಚರ್ಚಿನಿಂದ ಅನುಮತಿಯೂ ಬಂತು. ಆಗ ಈತ ಆನ್ ಬೋಲಿನಳನ್ನು ಮದುವೆಯಾದ. ಇಂಗ್ಲೆಂಡಿನಲ್ಲಿ ಆದ ಮತಸುಧಾರಣೆ ವೈಯಕ್ತಿಕ ಕಾರಣಕ್ಕಾಯಿತು. ಎಂಟನೆಯ ಹೆನ್ರಿ ಪಾರ್ಲಿಮೆಂಟಿನ ಅನುಮತಿಯನ್ನು ಪಡೆಯದೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಟ್ಯೂಡರರ ಕಾಲದಲ್ಲಿ ಪಾರ್ಲಿಮೆಂಟಿನ ಬೆಳವಣಿಗೆ ವ್ಯವಸ್ಥಿತವಾಗಿ ಆಯಿತು. ಎಂಟನೆಯ ಹೆನ್ರಿಯ ಕಾಲದಲ್ಲಿ ಇಂಗ್ಲೆಂಡಿನ ಸಶಸ್ತ್ರ ನೌಕಾಪಡೆಯ ನಿರ್ಮಾಣವಾಯಿತು.

ಆರನೆಯ ಎಡ್ವರ್ಡ್ ಚಿಕ್ಕವನಾಗಿದ್ದಾಗಲೇ ಪಟ್ಟಕ್ಕೆ ಬಂದ. ಈತನ ಕಾಲದಲ್ಲಿ ಪ್ರಾಟೆಸ್ಟೆಂಟ್ ಮತ ಪ್ರಾಬಲ್ಯಕ್ಕೆ ಬಂತು. ಇವನ ಅನಂತರ ಬಂದ ಮೇರಿ ಎಂಟನೆಯ ಹೆನ್ರಿಯ ಮಗಳು. ಆಕೆ ಜಾರಿಯಲ್ಲಿದ್ದ ಎಲ್ಲ ಮತೀಯ ಬದಲಾವಣೆಗಳನ್ನೂ ರದ್ದು ಮಾಡಿದಳು. ಪೋಪನ ಸಾರ್ವಭೌಮತ್ವವನ್ನು ಇಂಗ್ಲೆಂಡ್ ಒಪ್ಪಿತು. ರೋಮನ್ ಕ್ಯಾಥೊಲಿಕ್ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಲು ಪ್ರತಿಸುಧಾರಣೆ ಚಳವಳಿ ಪ್ರಾರಂಭವಾಯಿತು. ಇದರ ನಾಯಕ ಲಯೋಲದ ಇಗ್ನೇಷಿಯಸ್ **(ನೋಡಿ– ಇಗ್ನೇಷಿಯಸ್, ಲಯೋಲದ)**. ಮೇರಿಯ ಆಳ್ವಿಕೆಯಲ್ಲಿ ಪ್ರಾಟೆಸ್ಟೆಂಟ್ ಮತ ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿತು.

1558–1603ರ ವರೆಗೆ ಆಳಿದ ಎಲಿಜಬೆತ್ ರಾಣಿ ಇಂಗ್ಲೆಂಡ್ ದೇಶದ ಚರಿತ್ರೆಯಲ್ಲಿ ಅದ್ವಿತೀಯಳು. ಇಪ್ಪತ್ತೈದನೆಯ ವಯಸ್ಸಿನಲ್ಲಿ ಈಕೆ ಪಟ್ಟಕ್ಕೆ ಬಂದಾಗ ಇದ್ದ ಮತೀಯ ಅಶಾಂತಿಯನ್ನು ಕಡಿಮೆ ಮಾಡುವುದಕ್ಕಾಗಿ ಚಾಣಾಕ್ಷತನದಿಂದ ಆಳಿ ಪೋಪನ ಅಧಿಕಾರವನ್ನು ಅಳಿದಳು. ಈಕೆ ಯಾವ ಬಣಕ್ಕೂ ಸೇರಿರಲಿಲ್ಲ. ಇಂಗ್ಲಿಷ್ ಚರ್ಚಿನ ಮೇಲೆ ಇದ್ದ ಪೋಪನ ಅಧಿಕಾರವನ್ನು ಈಕೆ ಕಿತ್ತೆಸೆದಳು. ಈಕೆಯ ಮತೀಯನೀತಿ ನಿಷ್ಪಕ್ಷದ್ದಾಗಿತ್ತು. ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಮತ್ತು ಪ್ಯೂರಿಟನ್ ಎಂಬ ಮೂರು ಪಂಗಡಗಳು ಈಕೆಯ ಕಾಲದಲ್ಲಿದ್ದವು. ಇಂಗ್ಲೆಂಡಿನ ಚರ್ಚಿಗೆ ತಾನೇ ಮುಖ್ಯ ಗೌರ್ನರಳೆಂದು ಈಕೆ ಘೋಷಿಸಿಕೊಂಡಳು. ಕ್ಯಾಥೊಲಿಕರು ಕೋಪಕೊಂಡು ಈಕೆಯ ವಿರುದ್ಧ ಪಿತೂರಿ ನಡೆಸಿದರು. ಪ್ಯೂರಿಟನ್ನರೂ ವಿರುದ್ಧವಾಗಿ ನಿಂತರು. ಪ್ರಾಟೆಸ್ಟೆಂಟರಿಗೆ ಇವಳ ಅಭಯ ಹಸ್ತವಿದ್ದಿತು. ಎಲಿಜಬೆತ್ ಮತ್ತು ಸ್ಕಾಟ್‌ಲೆಂಡಿನ ಸಂಬಂಧ ವಿಚಿತ್ರವಾದದ್ದು. ಸ್ನೇಹ ಸಂಪಾದನೆಗಾಗಿ ಹೆನ್ರಿಯ ಮಗಳಾದ ಮಾರ್ಗರೇಟಳನ್ನು ಸ್ಕಾಟ್ಲೆಂಡಿನ ನಾಲ್ಕನೆಯ ಜೇಮ್ಸಿಗೆ ವಿವಾಹಮಾಡಿಕೊಡಲಾಗಿತ್ತು. ಎಂಟನೆಯ ಹೆನ್ರಿಯ ಕಾಲದಲ್ಲಿ ಸ್ಕಾಟ್ಲೆಂಡಿನೊಡನೆ ಯುದ್ಧವಾದಾಗ ಜೇಮ್ಸ್ ಮಡಿದಿದ್ದ. ಆತನ ಮಗ 5ನೆಯ ಜೇಮ್ಸ್ ಮತ್ತೊಂದು ಕದನದಲ್ಲಿ ಸತ್ತ. ಸ್ಕಾಟ್ಲೆಂಡಿನ ರಾಜಕುಮಾರಿ ಮೇರಿ ಚಿಕ್ಕ ವಯಸ್ಸಿನವಳು. ಆಕೆಯನ್ನು ಆರನೆಯ ಎಡ್ವರ್ಡನಿಗೆ ವಿವಾಹ ಮಾಡಬೇಕೆಂದು ಪ್ರಯತ್ನಿಸಿ ವಿಫಲರಾದರು. ಸ್ಕಾಟರು ಫ್ರೆಂಚ್ ರಾಜಕುಮಾರನಿಗೆ ಮೇರಿಯನ್ನು ಕೊಟ್ಟು ಮದುವೆ ಮಾಡಿದರು. ಸ್ಕಾಟ್ಲೆಂಡಿನಲ್ಲಿ ಫ್ರೆಂಚರಿಗೂ ಪ್ಯೂರಿಟನರಿಗೂ ಯುದ್ಧವಾಯಿತು. ಎಲಿಜಬೆತ್ ರಾಣಿ ಸ್ಕಾಟರಿಗೆ ಸಹಾಯಮಾಡಿ ಅವರ ಸ್ನೇಹ ಸಂಪಾದಿಸಿದಳು.

1561ರಲ್ಲಿ ವಿಧವೆ ಮೇರಿ ಏಳನೆಯ ಹೆನ್ರಿಯ ಮರಿಮಗನಾದ ಲಾರ್ಡ್‌ಡಾರ್ನ್ಲೆಯನ್ನು ಮದುವೆಯಾದಳು. ಇಂಗ್ಲೆಂಡಿನ ಸಿಂಹಾಸನಕ್ಕೆ ಅವಳ ಹಕ್ಕು ಸ್ಥಾಪಿತವಾಯಿತು. ಎರಡನೆಯ ಫಿಲಿಪ್ ನಾಯಕತ್ವದಲ್ಲಿ ಸ್ಪೇನ್ ಇಂಗ್ಲೆಂಡಿನ ಮೇಲೆ ದಾಳಿ ಮಾಡಲು ಯೋಚಿಸಿತು. ಹಾಲೆಂಡ್ ದೇಶಕ್ಕೆ ಎಲಿಜಬೆತ್ ರಾಣಿ ಸಹಾಯ ಮಾಡಿದ್ದಳೆಂಬುದು ಇದಕ್ಕೆ ಕಾರಣ. ಫಿಲಿಪ್ ಒಂದು ದೊಡ್ಡ ನೌಕಾಬಲವನ್ನು ತಯಾರಿಸಿದ. 130 ಹಡಗುಗಳಿದ್ದ ಸ್ಪ್ಯಾನಿಷ್ ಆರ್ಮೆಡ ಯುದ್ಧಕ್ಕೆ ಸಜ್ಜಾಯಿತು. 1588ರಲ್ಲಿ ಇದು ಇಂಗ್ಲಿಷ್ ಕಡಲ್ಗಾಲುವೆಯನ್ನು ಪ್ರವೇಶಿಸಿದಾಗ ಯಾರೊಬ್ಬರೂ ಅದನ್ನು ವಿರೋಧಿಸಲಿಲ್ಲ. ಆದರೆ ಇಂಗ್ಲಿಷರು ಹಠಾತ್ತಾಗಿ ಅದರ ಮೇಲೆ ಎರಗಿ ಪುಡಿ ಪುಡಿಮಾಡಿದರು. ಸ್ಪೇನ್ ಸೋತಿತು. ಪ್ರಾಟೆಸ್ಟೆಂಟ್ ಮತಕ್ಕೆ ಒದಗಿದ್ದ ಕಂಟಕ ನಿವಾರಣೆಯಾಯಿತು ಈಕೆಯ ಕಾಲ ವಾಣಿಜ್ಯ ಮತ್ತು ವಸಾಹತುಗಳ ದೃಷ್ಟಿಯಿಂದ ಬಹು ಮಹತ್ತ್ವದ್ದು. 1600ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾಯಿತು. ಇಂಗ್ಲೆಂಡ್ ಮತ್ತು ರಷ್ಯಗಳ ನಡುವೆ ವ್ಯಾಪಾರ ಸಂಬಂಧ ಕುದುರಿತು. ಈಕೆಯ ಚಾಣಾಕ್ಷತನ, ಶಾಂತ ಸ್ವಭಾವ ಈಕೆಯನ್ನು ರಾಜಕೀಯದಲ್ಲಿ ಬದುಕಿಸಿದವು. ಈಕೆ ಪಾರ್ಲಿಮೆಂಟನ್ನು ಎಂದೂ ಎದುರು ಹಾಕಿಕೊಳ್ಳಲಿಲ್ಲ.

**ಸ್ಟೂವರ್ಟ್ ರಾಜರು:** ಮುಂದೆ ಆಳಿದ ಸ್ಟೂವರ್ಟ್ ರಾಜರ ಕಾಲದಲ್ಲಿ ಇಂಗ್ಲೆಂಡ್ ಸ್ವತಂತ್ರವಾಗಿ ಬೆಳೆಯಿತು. ಪಾರ್ಲಿಮೆಂಟಿನ ಅಧಿಕಾರ ಹೆಚ್ಚುತ್ತ ಬಂತು. ಇವರ ಕಾಲದಲ್ಲಿ ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡ್ ಒಂದಾದವು.

ಸ್ಕಾಟ್ಲೆಂಡಿನ ಮೇರಿಯ ಮಗನಾದ ಆರನೆಯ ಜೇಮ್ಸ್ ಎಲಿಜಬೆತ್ ಸತ್ತ ಅನಂತರ ಒಂದನೆಯ ಜೇಮ್ಸ್ ಆಗಿ ಆಳಿದ. ಇವನು ಅವಿವೇಕಿ, ಹಠವಾದಿ. ಇವನ ಕಾಲದಲ್ಲಿ ಪಾರ್ಲಿಮೆಂಟಿನೊಡನೆ ತಿಕ್ಕಾಟ ಹೆಚ್ಚಿತು. ತಾನು ದೇವಾಂಶಸಂಭೂತನೆಂದು ಜೇಮ್ಸ್ ತಿಳಿದಿದ್ದ. ಪಾರ್ಲಿಮೆಂಟ್ ಹೆಚ್ಚು ಹೆಚ್ಚಾಗಿ ಈತನ ಆಡಳಿತವನ್ನು ವಿಮರ್ಶೆ ಮಾಡತೊಡಗಿತು. ಮಧ್ಯಮವರ್ಗದ ಜನ ಪಾರ್ಲಿಮೆಂಟಿನ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರು. ತನ್ನನ್ನು ಪ್ರಶ್ನಿಸುವ ಹಕ್ಕು ಪಾರ್ಲಿಮೆಂಟಿಗೆ ಇಲ್ಲವೆಂದು ಈತನ ವಾದ. ಈತ 1610ರಲ್ಲಿ ಪಾರ್ಲಿಮೆಂಟನ್ನು ರದ್ದು ಮಾಡಿದ. ಹನ್ನೊಂದು ವರ್ಷಕಾಲ ತಾನೇ ತಾನಾಗಿ ಆಳಿದ. 1614ರಲ್ಲಿ ಸೇರಿದ್ದ ಪಾರ್ಲಿಮೆಂಟ್ ಏನನ್ನೂ ಸಾಧಿಸಲಿಲ್ಲ. 1621ರಲ್ಲಿ ಜೇಮ್ಸ್ ಪಾರ್ಲಿಮೆಂಟನ್ನು ಸೇರಿಸಿದಾಗ ಅದು ಈತನನ್ನು ಬಹುವಾಗಿ ಟೀಕಿಸಿತು. ಒಂದನೆಯ ಚಾರ್ಲ್ಸನ ವಿವಾಹದ ಪ್ರಶ್ನೆ ಬಂದಾಗ ಪಾರ್ಲಿಮೆಂಟ್ ತನ್ನ ವಾಕ್‌ಸ್ವಾತಂತ್ರ್ಯವನ್ನು ಬಿಟ್ಟುಕೊಡದೆ ಪ್ರತಿಭಟನೆಯನ್ನು ಸೂಚಿಸಿ ಅದನ್ನು ಪಾರ್ಲಿಮೆಂಟಿನ ಪುಸ್ತಕದಲ್ಲಿ ದಾಖಲೆ ಮಾಡಿಸಿತು. ಕೆರಳಿದ ರಾಜ ಆ ಹಾಳೆಯನ್ನೇ ಹರಿದ.

ಒಂದನೆಯ ಜೇಮ್ಸನ ಮಗನಾದ ಮೊದಲನೆಯ ಚಾರ್ಲ್ಸ್ ದೈವದತ್ತ ರಾಜತ್ವದಲ್ಲಿ ನಂಬಿಕೆ ಇಟ್ಟಿದ್ದ. ಈತ ಎಂದೂ ಸ್ವತಂತ್ರ ನಿರ್ಧಾರ ಕೈಗೊಳ್ಳಲಿಲ್ಲ. ಈತ 1625ರಲ್ಲಿ ಪಾರ್ಲಿಮೆಂಟನ್ನು ಕರೆದು ಸ್ಪೇನಿನೊಂದಿಗೆ ಯುದ್ಧಕ್ಕಾಗಿ ಹಣ ಬೇಡಿದ. ಪಾರ್ಲಿಮೆಂಟ್ ಇದನ್ನು ತಿರಸ್ಕರಿಸಿತು. ಹಣದ ಕೊರತೆ ವಿಪರೀತವಾಯಿತು. ಹಣಕಾಸಿನ ಹತೋಟಿ ಪಾರ್ಲಿಮೆಂಟಿನ ಹಿಡಿತದಲ್ಲಿದ್ದರೆ ರಾಜ ಸರಿಹೋಗುತ್ತಾನೆಂದು ನಂಬಲಾಗಿತ್ತು. ಸ್ಪೇನಿನ ಜೊತೆ ಕಾದಾಟದಲ್ಲಿ ಇಂಗ್ಲೆಂಡ್ ಸೋತಿತು. ಸೋಲಿಗೆ ಕಾರಣನಾದವ ದೊರೆಯ ಗೆಳೆಯನಾದ ಬಕಿಂಗ್‌ಹ್ಯಾಮ್ ಎಂದು ಪಾರ್ಲಿಮೆಂಟ್ ಕೆರಳಿತು. ರಾಜ ತನ್ನ ಗೆಳೆಯನಿಗಾಗಿ ಪಾರ್ಲಿಮೆಂಟನ್ನೇ ರದ್ದುಪಡಿಸಿದ. ಮೂರನೆಯ ಬಾರಿ ಪಾರ್ಲಿಮೆಂಟ್ ಸೇರಿತು. ಪಾರ್ಲಿಮೆಂಟ್ ಪೆಟಿಷನ್ ಆಫ್ ರೈಟ್ಸ್ ಎಂಬ ಪತ್ರವೊಂದನ್ನು ತಯಾರಿಸಿ ಬಲತ್ಕಾರದ ತೆರಿಗೆ, ಸಾಲ, ಬಲತ್ಕಾರದ ಸೆರೆ ಇವನ್ನು ಮಾಡಬಾರದೆಂದು ವಿಧಿಸಿತು. ರಾಜ ಇದಕ್ಕೆ ಒಪ್ಪಿಗೆ ಕೊಟ್ಟರೂ ಇದನ್ನು ಪಾಲಿಸಲಿಲ್ಲ. ವಿರೋಧ ಮಾಡಿದ ವ್ಯಕ್ತಿಗಳನ್ನು ಸೆರೆಯಲ್ಲಿಟ್ಟ. ಹಣದ ಪರಿಸ್ಥಿತಿ ಬಿಕ್ಕಟ್ಟಿಗೆ ಬಂದಾಗ 1640ರಲ್ಲಿ ಮತ್ತೆ ಪಾರ್ಲಿಮೆಂಟ್ ಕರೆದ. ಇದನ್ನು ಲಾಂಗ್ ಪಾರ್ಲಿಮೆಂಟ್ ಎಂದು ಕರೆಯುತ್ತಾರೆ. ಈ ಅಧಿವೇಶನದಲ್ಲಿ ಕೆವಿಲಿಯರ್ಸ್ ಮತ್ತು ರೌಂಡ್ ಹೆಡ್ಸ್ ಎಂಬ ಬಣಗಳು ಪಾರ್ಲಿಮೆಂಟಿನಲ್ಲಿ ತಲೆಯೆತ್ತಿದವು. ಪಾರ್ಲಿಮೆಂಟ್

ಒಂಬತ್ತು ತಿಂಗಳ ಕಾಲವಿತ್ತು. ಸದಸ್ಯರು ಇವನನ್ನು ಟೀಕಿಸಿದರು. ಚಾರ್ಲ್ಸನ ಗೆಳೆಯರಿಗೆ ಗಲ್ಲು ಶಿಕ್ಷೆಯಾಯಿತು. ಚರ್ಚಿನ ಆಡಳಿತವನ್ನು ಮಠಾಧಿಪತಿಗಳ ಹಿಡಿತದಿಂದ ತಪ್ಪಿಸುವ ರೂಟ್ ಅಂಡ್ ಬ್ರಾಂಚ್ ಬಿಲ್ ಎಂಬುದನ್ನು ಜಾರಿಗೆ ತಂದರು. ಈ ಸಂದರ್ಭದಲ್ಲಿ ಪಾರ್ಲಿಮೆಂಟಿನ ಒಡಕು ಧ್ವನಿ ಆರಂಭವಾಯಿತು. ಪಾರ್ಲಿಮೆಂಟಿನ ಏಕತೆ ಒಡೆಯಿತು. 1641ರಲ್ಲಿ ಪಾರ್ಲಿಮೆಂಟ್ ಮತ್ತೆ ಸೇರಿದಾಗ ಸೈನಿಕ ಮಸೂದೆಯನ್ನು ಜಾರಿಗೆ ತಂದು ಸೈನ್ಯವನ್ನು ಪಾರ್ಲಿಮೆಂಟಿನ ಹತೋಟಿಗೆ ಒಳಪಡಿಸಲಾಯಿತು. ರಾಜನ ಹಕ್ಕನ್ನೆಲ್ಲ ಕಿತ್ತುಕೊಳ್ಳುವ ಗ್ರ್ಯಾಂಡ್ ರೆಮಾನ್‌ಸ್ಟ್ರೆನ್ಸ್ ಕಾಯಿದೆಯಾಯಿತು. ಕೋಪಗೊಂಡ ಚಾರ್ಲ್ಸ್ ಸಿಕ್ಕಿದವರನ್ನೆಲ್ಲ ಸೆರೆಯಲ್ಲಿಟ್ಟ.

ರಾಜನ ವಿರುದ್ಧ ಪಿತೂರಿಗಳು ನಡೆದವು. ಆಲಿವರ್ ಕ್ರಾಮ್‌ವೆಲ್ ಸೈನ್ಯದಲ್ಲಿ ಸುಧಾರಣೆ ಮಾಡಿದ. ಚಾರ್ಲ್ಸ್ ದೊರೆ ಸ್ಕಾಟ್ಲೆಂಡಿನ ಯುದ್ಧದಲ್ಲಿ ಸೋತು ಕೊನೆಗೆ ಶರಣಾಗತನಾದ. ಪಾರ್ಲಿಮೆಂಟ್ ಮತ್ತು ಸೈನ್ಯದ ನಡುವೆ ಮತೀಯ ಸಂಘರ್ಷ ಏರ್ಪಟ್ಟಿತು. ಪಾರ್ಲಿಮೆಂಟಿನ ಅಧೀನದಲ್ಲಿ ಚಾರ್ಲ್ಸ್ ಆಳ್ವಿಕೆ ನಡೆಸುವ ಹಾಗೆ ಮಾತುಕತೆಯಾಡಿ ಅವನನ್ನು ಬಿಡಿಸಲಾಯಿತು. ಚಾರ್ಲ್ಸ್ ಓಡಿಹೋದ. ಸ್ಕಾಟರ ಜೊತೆ ಸೇರಿ ಪಿತೂರಿ ಹೂಡಿದ. ಪಾರ್ಲಿಮೆಂಟ್ ಆತನನ್ನು ಹಿಡಿದು ವಿಚಾರಣೆ ನಡೆಸಿ 1649ರಲ್ಲಿ ಶಿರಚ್ಛೇದ ಮಾಡಿತು. ಗಣರಾಜ್ಯ ಸ್ಥಾಪಿತವಾದರೂ ಸೈನ್ಯಕ್ಕೆ ಹೆಚ್ಚು ಅಧಿಕಾರವಿತ್ತು. ಆ ಪಾರ್ಲಿಮೆಂಟಿಗೆ ರಂಪ್ ಪಾರ್ಲಿಮೆಂಟ್ ಎಂದು ಕರೆಯುತ್ತಾರೆ. ಕ್ರಾಮ್‌ವೆಲ್ಲನ ನೇತೃತ್ವದಲ್ಲಿ ಸೈನಿಕ ಸರ್ಕಾರದ ಸ್ಥಾಪನೆಯಾಯಿತು.

ಆಲಿವರ್ ಕ್ರಾಮ್‌ವೆಲ್ ಮೇಧಾವಿ ಆದರ್ಶವಾದಿ. ದಕ್ಷ ಆಡಳಿತಗಾರ. ವ್ಯವಹಾರಜ್ಞಾನ ಹೊಂದಿದ್ದವ. ಸಮಯಕ್ಕೆ ಸರಿಯಾಗಿ ನಿರ್ಧಾರ ಕೈಗೊಳ್ಳುತ್ತಿದ್ದ. ಜವಾಬ್ದಾರಿಯನ್ನು ಹೊರುವ ಎದೆಗಾರಿಕೆ ಈತನಿಗಿತ್ತು. 1653–58ರವರೆಗೆ ಈತ ರಾಜ್ಯವಾಳಿದ. ರಾಜನೆಂದು ಕರೆದುಕೊಳ್ಳದೆ ಪಾರ್ಲಿಮೆಂಟನ್ನು ಅನುಸರಿಸಿ ನಡೆದ. ಕೊನೆಗೆ ಪಾರ್ಲಿಮೆಂಟಿಗೂ ಈತನಿಗೂ ಜಗಳ ಪ್ರಾರಂಭವಾಯಿತು. ವಿಗ್ ಪಾರ್ಟಿಯವರು ಈತನನ್ನು ವಿರೋಧಿಸಿದರು. ಪಾರ್ಲಿಮೆಂಟಿನ ಸಹಕಾರ ದೊರೆಯದಿದ್ದಾಗ ಈತ ಸೈನ್ಯದ ಸಹಾಯದಿಂದ ಆಳಿದ. ಇಂಗ್ಲೆಂಡಿನ ಕೀರ್ತಿಯನ್ನು ಯುರೋಪಿನ ರಾಜ್ಯಗಳಲ್ಲಿ ಹರಡಿದ. ವಿದೇಶಾಂಗ ನೀತಿಯಲ್ಲಿ ಈತನಿಗೆ ಎಲಿಜಬೆತ್ ಆದರ್ಶಪ್ರಾಯಳಾಗಿದ್ದಳು. 1638ರಲ್ಲಿ ಕ್ರಾಮ್‌ವೆಲ್ ಕಾಲವಾದ.

ಕ್ರಾಮ್‌ವೆಲ್ಲನ ಅನಂತರ ಅವನ ಮಗ ರಿಚರ್ಡ್ ಪಟ್ಟಕ್ಕೆ ಬಂದ. ಸೈನ್ಯಾಧಿಕಾರಿಗಳೊಂದಿಗೆ ಜಗಳವಾಡಿ ಅಧಿಕಾರ ಕಳೆದುಕೊಂಡ. ಪಾರ್ಲಿಮೆಂಟ್ ಒಂದನೆಯ ಚಾರ್ಲ್ಸನ ಮಗನಾದ ಎರಡನೆಯ ಚಾರ್ಲ್ಸನನ್ನು ದೊರೆಯಾಗಿ ಮಾಡಿತು. ಆತ ಒಳ್ಳೆಯ ಆಡಳಿತ ನಡೆಸುವುದಾಗಿ ಘೋಷಣೆ ಮಾಡಿದ. ಕ್ಲಾರೆನ್ಡನ್ ಈತನ ಮಂತ್ರಿಯಾಗಿದ್ದ. ಕ್ಲಾರೆನ್ಡನ್ ಕೋಡ್ ಎಂಬ ನ್ಯಾಯಸಂಹಿತೆ ಆತನ ಕೊಡುಗೆ. ಇಂಗ್ಲೆಂಡಿನ ಚರ್ಚುಗಳು ಒಂದೇ ಪ್ರಾರ್ಥನಾ ಪುಸ್ತಕವನ್ನು ಬಳಸುವಂತೆ ಈತ ನಿಯಮ ಮಾಡಿದ. ಆಗ ನಡೆದ ಡಚ್ಚರ ಜೊತೆಯ ಯುದ್ಧದಲ್ಲಿ ಇಂಗ್ಲೆಂಡಿಗೆ ಪರಾಭವವಾಯಿತು. ಪರಿಣಾಮವಾಗಿ ಕ್ಲಾರೆನ್ಡನ್ ಕೆಲಸ ಕಳೆದುಕೊಂಡ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಕ್ಕೆ ಆತ ಮಾಡಿದ ಉಪಕಾರ ಸ್ಮರಣೀಯವಾದದ್ದು. ವಿಶ್ವವಿದ್ಯಾನಿಲಯದ ಮುದ್ರಣಶಾಲೆಗೆ ಇಂದಿಗೂ ಅವನ ಹೆಸರು ಇದೆ.

ಎರಡನೆಯ ಚಾರ್ಲ್ಸ್ ಕಾಲದಲ್ಲಿ ಕೆಬಾಲ್ ಪ್ರಸಿದ್ಧವಾಯಿತು. ಇದು ಐದು ಜನರ ಸಮಿತಿ. ಮಂತ್ರಿತ್ವ ಇದರ ಕೆಲಸ ದೇಶದ ಆಡಳಿತದ ನಿರ್ವಹಣೆ ಇದರ ಹೊಣೆ. ಆಧುನಿಕ ಕ್ಯಾಬಿನೆಟ್ ಇದರ ಮೇಲೆ ರೂಪಿತವಾಗಿದೆ. ಈ ಕಾಲದಲ್ಲಿ ಷ್ಯಾಫ್ಟ್‌ಬರಿ ಎಂಬುವನು ವಿಗ್ ಪಾರ್ಟಿಯನ್ನೂ ಡಾನ್‌ಬೀ ಎಂಬುವನು ಟೋರಿ ಪಕ್ಷವನ್ನೂ ಕಟ್ಟಿದರು.

1679–81ರ ವರೆಗೆ ವಿಗ್ಗರು ಬಲಶಾಲಿಗಳಾಗಿದ್ದರು. ಹ್ಯಾಪ್ಸ್‌ಬರ್ಗ್ ವಂಶದ ಎರಡನೆಯ ಚಾರ್ಲ್ಸಿಗೆ ಮಕ್ಕಳಿರಲಿಲ್ಲ. ಯುರೋಪಿನಲ್ಲಿ ರಾಜಕೀಯ ಕಳವಳ ಉಂಟಾಯಿತು. ಆಗ ಸ್ಪೇನಿನ ಸಿಂಹಾಸನಕ್ಕೆ ಹಲವು ಮಂದಿ ಉಮೇದುವಾರರಿದ್ದರು. ಇವರಲ್ಲಿ ಹದಿನಾಲ್ಕನೆಯ ಲೂಯಿಯ ಮೊಮ್ಮಗ ಐದನೆಯ ಫಿಲಿಪ್ ಮತ್ತು ಆಸ್ಟ್ರಿಯದ ಆರ್ಚ್ ಡ್ಯೂಕ್ ಚಾರ್ಲ್ಸ್ ಮುಖ್ಯರಾಗಿದ್ದರು. ಹ್ಯಾಬ್ಸಬರ್ಗ್ ದೊರೆ ತನ್ನ ಮರಣಶಾಸನದಲ್ಲಿ ಐದನೆಯ ಫಿಲಿಪ್‌ಗೆ ಸ್ಪೇನಿನ ಸಿಂಹಾಸನ ನೀಡಬೇಕೆಂದು ಬರೆದಿಟ್ಟಿದ್ದ. ಇದು ಯುದ್ಧಕ್ಕೆ ಕಾರಣವಾಯಿತು. ಇಂಗ್ಲೆಂಡೂ ಈ ಯುದ್ಧದಲ್ಲಿ ಸೇರಿತು. ಸ್ಪೇನ್, ನೆದರ್‌ಲೆಂಡ್ಸ್, ಡ್ಯಾನೂಬ್ ನದಿಯ ಮೇಲ್ದಂಡೆ ಇವುಗಳ ಯುದ್ಧ ಕ್ಷೇತ್ರಗಳು. 1704ರಲ್ಲಿ ಇಂಗ್ಲೆಂಡ್ ಮೈನಾರ್ಕ್ ಮತ್ತು ಜಿಬ್ರಾಲ್ಟರುಗಳನ್ನು ವಶಮಾಡಿಕೊಂಡಿತು. ಫ್ರೆಂಚರಿಗೆ ಸೋಲಾಯಿತು. ಇಂಗ್ಲೆಂಡಿನಲ್ಲಿ ಟೋರಿಗಳು ಯುದ್ಧಕ್ಕೆ ವಿರುದ್ಧವಾಗಿದ್ದರು. 1713ರಲ್ಲಿ ಯುಟ್ರೆಕ್ಟ್ ಒಪ್ಪಂದದಿಂದ ಶಾಂತಿಸ್ಥಾಪನೆಯಾಯಿತು. ಐದನೆಯ ಫಿಲಿಪ್ ಸ್ಪೇನಿನ ರಾಜನಾದ. ಸ್ಪೇನಿನ ವಸಾಹತುಗಳಿಗೆ ವರ್ಷಕ್ಕೊಂದು ಹಡಗನ್ನೂ ನೀಗ್ರೊ ಗುಲಾಮರುಗಳನ್ನೂ ಮಾರುವ ಹಕ್ಕು ಇಂಗ್ಲೆಂಡಿಗೆ ದೊರಕಿತು.

ಆ್ಯನ್ ರಾಣಿಯ ಕಾಲದಲ್ಲಿ ಇಂಗ್ಲೆಂಡಿನೊಂದಿಗೆ ಸ್ಕಾಟ್ಲೆಂಡಿನ ಐಕ್ಯವಾಗಿತ್ತು. ಆಗಿನ ಒಂದು ಒಪ್ಪಂದದ ಪ್ರಕಾರ ಹ್ಯಾನೋವರ್ ರಾಜರು ಸ್ಕಾಟ್ಲೆಂಡಿಗೆ ರಾಜರಾದರು. ಒಂದನೆಯ ಜಾರ್ಜ್ ಇಂಗ್ಲೆಂಡಿನ ರಾಜನಾದ.

**ಹ್ಯಾನೋವರ್ ರಾಜರು:** ವಿಗ್ ಪಕ್ಷ ಒಂದನೆಯ ಜಾರ್ಜನನ್ನು ಇಂಗ್ಲೆಂಡಿನ ಸಿಂಹಾಸನದ ಮೇಲೆ ಕೂರಿಸಿತು. ಆವನಿಗೆ ಇಂಗ್ಲಿಷ್ ಜ್ಞಾನವಿರಲಿಲ್ಲ. ಪಾರ್ಲಿಮೆಂಟಿಗೆ ಇದರಿಂದ ಅನುಕೂಲವಾಯಿತು ರಾಜನ ಅಧಿಕಾರ ಮೊಟಕುಗೊಳಿಸಲು ಅವಕಾಶವಾಯಿತು. ಕ್ಯಾಬಿನೆಟ್ ಪದ್ಧತಿ ಈ ಕಾಲದಲ್ಲಿ ಜಾರಿಗೆ ಬಂತು. ಪ್ರಬಲ ಮಂತ್ರಿಮಂಡಲ ಆಡಳಿತ ನಿರ್ವಹಿಸಿತು ಪಾರ್ಲಿಮೆಂಟ್ ಬಲವಾಗುತ್ತ ಬಂತು. ವಾಲ್ಪೋಲ್ ಇಂಗ್ಲೆಂಡಿನ ಮೊದಲ ಪ್ರಧಾನಮಂತ್ರಿ. ಈತ ರಾಜನಿಂದ ಅನುಜ್ಞೆ ಪಡೆದು ನಡೆದುಕೊಳ್ಳುತ್ತಿದ್ದ. ಅವನ ಕಾಲದಲ್ಲಿ ವಿಲಿಯಂ ಪಿಟ್ ಎಂಬ ಪ್ರಸಿದ್ಧ ವಾಗ್ಮಿಯಿದ್ದ. ವಾಲ್ಪೋಲ್ ಶಾಂತಿಪ್ರಿಯ. ಯುಟ್ರೆಕ್ಟ್ ಕರಾರಿನ ಪ್ರಕಾರ ಇಂಗ್ಲೆಂಡ್ ವಸಾಹತುಗಳಿಗೆ ನೀಗ್ರೊಗಳನ್ನು ಸಾಗಿಸುತ್ತಿತ್ತು. ಆ ಸಂದರ್ಭದಲ್ಲಿ ಸ್ಪೇನಿನವರು ಇಂಗ್ಲೆಂಡಿನ ಕ್ಯಾಪ್ಟನ್ ಜೆಂಕಿನ್ಸ್‌ನ ಕಿವಿಯನ್ನು ಕತ್ತರಿಸಿದರು. ಇದರ ಫಲವಾಗಿ 1739 ರಲ್ಲಿ ಜೆಂಕಿನ್ಸ್ ಕಿವಿಯ ಯುದ್ಧವಾಯಿತು. ವಾಲ್ಪೋಲ್ 1742ರಲ್ಲಿ ಮಂತ್ರಿಪದವಿಗೆ ರಾಜೀನಾಮೆ ನೀಡಿದ. ಇಂಗ್ಲೆಂಡ್ ಇವನ ಕಾಲದಲ್ಲಿ ಆರ್ಥಿಕವಾಗಿ ಸುಧಾರಿಸಿತು.

ಅಮೆರಿಕ ಮತ್ತು ಭಾರತಗಳೊಂದಿಗೆ ನಡೆಸುತ್ತಿದ್ದ ವ್ಯಾಪಾರದಲ್ಲಿ ಫ್ರಾನ್ಸ್ ಇಂಗ್ಲೆಂಡಿನೊಂದಿಗೆ ಸ್ಪರ್ಧಿಸಿತ್ತು. ಹದಿಮೂರು ವಸಾಹತುಗಳನ್ನು ನಿರ್ಮಿಸಿತ್ತು. ಇಂಗ್ಲೆಂಡಿನ ಈ ಮೇಲ್ಮೆಯಿಂದಾಗಿ ಫ್ರೆಂಚರಿಗೂ ಇಂಗ್ಲಿಷರಿಗೂ ನಡುವೆ ಕಾದಾಟ ಸಾಮಾನ್ಯವಾಯಿತು. ಇದು ಏಳು ವರ್ಷಗಳ ಯುದ್ಧವೆಂದು ಹೆಸರಾಗಿದೆ. ಭಾರತದಲ್ಲಿ ಕ್ಲೈವ್ ಮತ್ತು ಡೂಪ್ಲೆ ರಾಜಕೀಯ ಕಣಕ್ಕಿಳಿದರು. ಫ್ರೆಂಚರ ವಸಾಹತುಗಳೆಲ್ಲ ಪುಡಿಪುಡಿಯಾದವು. 1763ರಲ್ಲಿ ಪ್ಯಾರಿಸ್ ಕೌಲಿನಿಂದ, ಏಳು ವರ್ಷಗಳ ಯುದ್ಧ ಕೊನೆಗೊಂಡು ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆಗೆ ಅನುವಾಯಿತು. ವಿಲಿಯಂ ಪಿಟ್ ಕ್ರಮಕ್ರಮವಾಗಿ ತನ್ನ ಪ್ರಾಮಾಣಿಕತೆಯಿಂದ ಇಂಗ್ಲೆಂಡನ್ನು ರಕ್ಷಿಸಿದ. ಇಂದಿಗೂ ಉತ್ತರ ಅಮೆರಿಕದಲ್ಲಿ ಅವನ ಹೆಸರಿನಲ್ಲಿ ನಿರ್ಮಾಣವಾದ ಪಿಟ್ಸ್‌ಬರ್ಗ್ ಇದೆ.

1775ರಲ್ಲಿ ಅಮೆರಿಕದಲ್ಲಿದ್ದ ಹದಿಮೂರು ಬ್ರಿಟಿಷ್ ವಸಾಹತುಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಅದನ್ನು ಗಳಿಸಿದವು. ಅಮೆರಿಕದ ಸ್ವಾತಂತ್ರ್ಯದಿಂದ ಮೂರನೆಯ ಜಾರ್ಜ್ ತನ್ನ ಪ್ರಾಬಲ್ಯ ಕಳೆದುಕೊಂಡ. ಇವನ ಕಾಲದಲ್ಲಿ ಪ್ರಧಾನಿಯಾಗಿ ಬಂದ ಕಿರಿಯ ಪಿಟ್ ಇಂಗ್ಲೆಂಡನ್ನು 18ವರ್ಷಗಳ ಕಾಲ ರಕ್ಷಿಸಿದ. ಹಣಕಾಸಿನ ವಿಚಾರದಲ್ಲಿ ಇವನು ನಿಷ್ಣಾತ. ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸಿನಲ್ಲಿ ಮಹಾಕ್ರಾಂತಿ ನಡೆದು ಇಂಗ್ಲೆಂಡಿಗೆ ಒಂದು ರೀತಿಯ ಪಾಠ ಕಲಿಸಿತು. ಅಮೆರಿಕದ ಸ್ವಾತಂತ್ರ್ಯ ಯುದ್ಧದಲ್ಲಿ ಫ್ರೆಂಚರ ಪಾತ್ರ ಬಲು ಮಹತ್ತ್ವದ್ದಾಗಿತ್ತು. ಮಹಾಕ್ರಾಂತಿಯ ಕಾಲದಲ್ಲಿ ಪಿಟ್ ಯುದ್ಧಮಂತ್ರಿಯಾಗಿ ಕೆಲಸ ಮಾಡಿದ. ಇಂಗ್ಲೆಂಡನ್ನು ಫ್ರೆಂಚರ ಆಕ್ರಮಣದಿಂದ ಕಾಪಾಡುವುದೇ ಅವನ ಮುಖ್ಯ ಕೆಲಸವಾಯಿತು. ಫ್ರಾನ್ಸಿನ ಸರ್ವಾಧಿಕಾರಿಯಾಗಿದ್ದ ನೆಪೋಲಿಯನ್ನನೊಂದಿಗೆ ಇಂಗ್ಲೆಂಡ್ ಅನಿವಾರ್ಯವಾಗಿ ಯುದ್ಧ ಮಾಡಬೇಕಾಗಿ ಬಂತು. ಇಂಗ್ಲಿಷ್ ನೌಕಾಪಡೆ ನೆಪೋಲಿಯನ್ ಸೇನೆಯನ್ನು ಚೂರು ಚೂರು ಮಾಡಿತು. ಪಿಟ್ ಯುರೋಪಿನಲ್ಲಿ ಮಿತ್ರರಾಷ್ಟ್ರಗಳ ಗುಂಪೊಂದನ್ನು ಕಟ್ಟಿದ. ಅವುಗಳ ಸಹಾಯದಿಂದ ಇಂಗ್ಲೆಂಡನ್ನು ರಕ್ಷಿಸಲು ಯತ್ನಿಸಿದ. ನೆಪೋಲಿಯನ್ ಕೈಗೊಂಡ ಖಂಡಾಂತರ ಆರ್ಥಿಕ ದಿಗ್ಬಂಧನ ಇಂಗ್ಲೆಂಡಿನ ಮುಂದೆ ನಿಲ್ಲಲಾರದೆ ಹೋಯಿತು. ನೆಪೋಲಿಯನ್ ಮಿತ್ರರಾಷ್ಟ್ರಗಳ ಎದುರಿಗೆ ಸೋಲೊಪ್ಪಿಕೊಂಡ.

**ಕೈಗಾರಿಕಾ ಕ್ರಾಂತಿ:** ಇಂಗ್ಲೆಂಡಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿ ಅದ್ವಿತೀಯವಾದುದು **(ನೋಡಿ– ಇಂಗ್ಲೆಂಡಿನ ಆರ್ಥಿಕ ಬೆಳೆವಣಿಗೆ)**. ಯಾಂತ್ರೀಕರಣದಿಂದ ಆರ್ಥಿಕ ಸ್ಥಿತಿ ಉತ್ತಮಗೊಂಡಿತು. ಸ್ಪಿನ್ನಿಂಗ್ ಜೆನ್ನಿ, ನೀರಿನ ಶಕ್ತಿಯಿಂದ ಚಲಿಸುವ ಯಂತ್ರ ಮುಂತಾದವುಗಳಿಂದ ಜವಳಿಕೈಗಾರಿಕೆ ಬೆಳೆಯಿತು. ಜೇಮ್ಸ್ ವಾಟನ ಹಬೆಯಂತ್ರ ಉಪಕಾರ ಮಾಡಿತು. ವಿಜ್ಞಾನದಿಂದ ಕೈಗಾರಿಕೆಗಷ್ಟೇ ಅಲ್ಲದೆ ವ್ಯವಸಾಯಕ್ಕೂ ಅನುಕೂಲವಾಯಿತು. ಹೊಸ ಹೊಸ ರಸ್ತೆಯ ನಿರ್ಮಾಣದಿಂದ ಸರಕು ಸಾಗಾಣಿಕೆ ಅನುಕೂಲವಾಯಿತು. ಹಡಗು ನಿರ್ಮಾಣವಾಯಿತು. ಸ್ಟೀಫನ್‌ಸನ್ ಉಗಿಬಂಡಿ ಮಾಂಚೆಸ್ಟರಿನಿಂದ ಲಿವರ್‌ಪೂಲಿಗೆ ಓಡಿತು. ಕಬ್ಬಿಣದ ಉತ್ಪಾದನೆ ಹೆಚ್ಚಾಯಿತು. ಕಲ್ಲಿದ್ದಲು ಗಣಿಗಳು ಹೆಚ್ಚಿದವು. ಸೇಫ್ಟಿ ಲ್ಯಾಂಪನ್ನು ಹಂಫ್ರಿ ಡೇವಿ ಕಂಡುಹಿಡಿದ. ಕೈಗಾರಿಕಾಕ್ರಾಂತಿ ಇಂಗ್ಲೆಂಡಿಗೆ ಫಲದಾಯಕವಾಯಿತು. ಇನ್ನೊಂದು ದಿಕ್ಕಿನಲ್ಲಿ ಕೈಗಾರಿಕಾಕ್ರಾಂತಿ ಮನುಷ್ಯರನ್ನು ಕಡೆಗಣಿಸಿತು. ಭಾರತದಲ್ಲಿ ಕಾಲಾನುಕಾಲದಿಂದ ನಡೆದುಬಂದಿದ್ದ ಮಸ್ಲಿನ್ ಕೈಗಾರಿಕೆಯನ್ನು ಹಾಳುಮಾಡಲು ಇದೂ ಕಾರಣವಾಯಿತು. ಕಾರ್ಖಾನೆಗಳು ಹೆಚ್ಚಿ ಕಾರ್ಮಿಕರ ಸಮಸ್ಯೆ ಹೆಚ್ಚಿತು. ಕಾರ್ಮಿಕರ ಹಿತರಕ್ಷಣೆಗಾಗಿ ಅನೇಕ ಕಾಯಿದೆಗಳನ್ನು ಜಾರಿಯಲ್ಲಿ ತರಬೇಕಾಯಿತು. ಕಾರ್ಮಿಕರು ತಮ್ಮ ದುಃಸ್ಥಿತಿಯನ್ನು ನೆನೆದು ಕೋಪಿಸಿಕೊಳ್ಳುವುದರಲ್ಲಿ ಉಪಯೋಗವಿಲ್ಲವೆಂದೂ ಪಾರ್ಲಿಮೆಂಟಿನಲ್ಲಿ ಅವರು ಭಾಗವಹಿಸಿ ಸುಧಾರಣೆ ತರಬೇಕೆಂದೂ ಹಲವರು ಯೋಚಿಸಿದರು. 3ನೆಯ ಜಾರ್ಜನ ಅಂತಿಮ ಕಾಲದಲ್ಲಿ ಸರ್ಕಾರ ಟೋರಿ ಗುಂಪಿನವರ ಕೈಯಲ್ಲಿತ್ತು. ಲಾರ್ಡ್ ಕ್ಯಾಸಲ್ ರೇ ಇಂಗ್ಲೆಂಡಿನಲ್ಲಿ ರಾಜ್ಯಾಂಗಬದ್ಧ ಸರ್ಕಾರ ಸ್ಥಾಪಿಸಲು ಪ್ರಯತ್ನಿಸಿದ. ಕಾರ್ಮಿಕರ ವಿರುದ್ಧ ಅನೇಕ ಕಾನೂನುಗಳನ್ನು ಜಾರಿಗೆ ತರಲಾಯಿತು. ಲಾರ್ಡ್ ಕ್ಯಾಸಲ್ ರೇಯ ಮರಣಾನಂತರ ಜಾರ್ಜ್ ಕ್ಯಾನಿಂಗ್ ಪ್ರಧಾನಮಂತ್ರಿಯಾದ. ಭಾರತದ ಗೌರ್ನರ್ ಜನರಲ್ಲೂ ಆಗಿದ್ದ. ತನ್ನ ವಿದೇಶಾಂಗ ನೀತಿಯ ವೈಶಿಷ್ಟ್ಯದ ಮೂಲಕ ಈತ ಪ್ರಸಿದ್ಧನಾದ.

ಟೋರಿ ಪಕ್ಷ ಕ್ರಮೇಣ ಕನ್ಸರ್ವೇಟಿವ್ ಪಕ್ಷವಾಯಿತು. ಪೀಲ್ ಅದರ ನಾಯಕನಾದ. ಇವನ ಕಾಲದಲ್ಲಿ ಗೋದಿಗೆ ಕಾನೂನು ರಕ್ಷಣೆ ನೀಡಿದ್ದು ಬಹು ಮುಖ್ಯವಾದ ಘಟ್ಟ. 1844ರಲ್ಲಿ ಬ್ಯಾಂಕ್ ಕಾಯಿದೆಯೊಂದು ಜಾರಿಗೆ ಬಂತು. ನೋಟು ಚಲಾವಣೆಯನ್ನು

ಕ್ರಮಗೊಳಿಸುವುದು ಇದರ ಒಂದು ಉದ್ದೇಶವಾಗಿತ್ತು. 1850ರವರೆಗೆ ಪೀಲ್ ಪಾರ್ಲಿಮೆಂಟಿನ ಸದಸ್ಯನಾಗಿದ್ದ. ಇವನ ಅನಂತರ ಬಂದವ ಪಾಮರ್ಸ್ಟನ್. ಇವನು ಟೋರಿ ಸಂಪ್ರದಾಯವಾದಿ. 1833ರಲ್ಲಿ ಪೋರ್ಚುಗಲ್ಲಿನ ರಾಣಿ ಇಸಬೆಲಳಿಗೂ ಮತ್ತು ಅವಳ ಚಿಕ್ಕಪ್ಪನಿಗೂ ರಾಜ್ಯಕ್ಕಾಗಿ ಜಗಳ ನಡೆದಾಗ ಪಾಮರ್ಸ್ಟನ್ ಅದನ್ನು ಬಗೆಹರಿಸಿ ಅವರು ತಮ್ಮ ತಮ್ಮ ದೇಶಗಳನ್ನೇ ಆಳುವಂತೆ ಮಾಡಿದ. ಬಾಲ್ಕನ್ ದ್ವೀಪ ತುರ್ಕಿಯ ಕೈಯಲ್ಲಿತ್ತು. ಅಲ್ಲಿದ್ದ ಕ್ರೈಸ್ತ ಪ್ರಜೆಗಳು ಸ್ವಾತಂತ್ರ್ಯ ಬಯಸಿದರು. ಇಂಗ್ಲೆಂಡ್ ಈ ವಿಷಯದಲ್ಲಿ ಏನೂ ಮಾಡಲಾರದಾಗಿತ್ತು. ತುರ್ಕಿ ಆಗ ಯುರೋಪಿನ ಕಾಯಿಲೆ ಮನುಷ್ಯನೆನಿಸಿತ್ತು. ರಷ್ಯ ತುರ್ಕಿಯನ್ನು ಹಂಚಿಕೊಳ್ಳಲು ಹವಣಿಸಿತ್ತು. ರಷ್ಯದ ಸ್ನೇಹ ಬಯಸಿದರೆ ಬಾಲ್ಕನ್ ರಾಜ್ಯಗಳಲ್ಲಿ ರಷ್ಯದ ಕೈವಾಡ ಜಾಸ್ತಿಯಾಗುತ್ತದೆಂದು ಹೆದರಿ ಇಂಗ್ಲೆಂಡ್ ತುರ್ಕಿಯ ಕಡೆ ಸೇರಿತು. ರಷ್ಯ ತುರ್ಕಿಗೆ ಸೇರಿದ್ದ ಪಿಲಾಕಿಯ, ಮಾಲ್ದೇವಿಯಗಳನ್ನು ಅತಿಕ್ರಮಿಸಿದ್ದರ ಕಾರಣ ಯುದ್ಧ ಪ್ರಾರಂಭವಾಯಿತು. ಇದಕ್ಕೆ ಕ್ರಿಮಿಯನ್ ಯುದ್ಧವೆಂದು ಹೆಸರು. ತುರ್ಕಿಯೊಂದಿಗೆ ಫ್ರಾನ್ಸ್ ಸೇರಿತು. ಬಾಲಕ್ಲಾವ, ಇಂಕರ್‌ಮನ್ ಮುಂತಾದ ಕಡೆ ಯುದ್ಧ ನಡೆಯಿತು. ಇಂಗ್ಲಿಷರು ರಷ್ಯನ್ನರನ್ನು ಸೋಲಿಸಿದರು. ಆದರೆ ಇಂಗ್ಲಿಷರ ಸ್ಥಿತಿ ಚಿಂತಾಜನಕವಾಯಿತು. 1856ರಲ್ಲಿ ಪ್ಯಾರಿಸ್ ಕೌಲಿನಿಂದ ಯುದ್ಧ ಮುಕ್ತಾಯವಾಯಿತು. ತುರ್ಕಿ ಬದುಕಿತು. ಕ್ರಿಮಿಯನ್ ಯುದ್ಧದಿಂದ ಪಾಮರ್ಸ್ಟನ್ ತನ್ನ ಜೀವನಪರ್ಯಂತ ಪ್ರಧಾನಿಯಾಗುವ ಅವಕಾಶ ಪಡೆದುಕೊಂಡ. ಆದರೆ ಅವನು ಕಾಮನ್ಸ್ ಸಭೆಯ ಮುಂದೆ ಕಾನ್ಸ್ಪಿರೆಸಿ ಟು ಮರ್ಡರ್ ಬಿಲ್ ಎಂಬ ವಿಧೇಯಕ ತಂದಾಗ ಸೋತು ರಾಜೀನಾಮೆ ಕೊಟ್ಟ. ಸ್ವಲ್ಪಕಾಲ ಪಾಮರ್ಸ್ಟನ್ ಮತ್ತು ಗ್ಲಾಡ್‌ಸ್ಟನ್ ಇಂಗ್ಲೆಂಡಿಗೆ ಮಾರ್ಗದರ್ಶನ ನೀಡಿದರು. ಫ್ರಾನ್ಸಿಗೆ ಮುಕ್ತ ವ್ಯಾಪಾರದಲ್ಲಿ ಇಚ್ಛೆ ಇದ್ದುದರಿಂದ ಇಂಗ್ಲೆಂಡ್ ಅದರೊಂದಿಗೆ ಒಪ್ಪಂದ ಮಾಡಿಕೊಂಡಿತು. ಫ್ರಾನ್ಸಿಗೆ ಕಬ್ಬಿಣ, ಇಂಗ್ಲೆಂಡಿಗೆ ರೇಷ್ಮೆ ದೊರಕುವಂತಾಯಿತು. ಪಾಮರ್ಸ್ಟನ್ 60 ವರ್ಷ ಪಾರ್ಲಿಮೆಂಟ್ ಸದಸ್ಯನಾಗಿದ್ದ. 1865ರಲ್ಲಿ ಕಾಲವಾದ.

1874ರಲ್ಲಿ ಬ್ರಿಟನ್ನಿನ ಪ್ರಧಾನಿಯಾದ ಡಿಸ್ರೇಲಿಯ ಸರ್ಕಾರದಲ್ಲಿ ಜನಸಾಮಾನ್ಯಕ್ಕೆ ಉಪಯುಕ್ತವಾದ ಅನೇಕ ಕಾನೂನುಗಳು ಜಾರಿಗೆ ಬಂದವು. ಡಿಸ್ರೇಲಿಯ ವಿದೇಶಾಂಗ ನೀತಿ ಅತ್ಯಂತ ಸ್ಪಷ್ಟವಾಗಿತ್ತು. ಈತ ಇಂಗ್ಲೆಂಡಿಗೆ ಹೊರದೇಶಗಳಲ್ಲಿ ಪ್ರತಿಷ್ಠೆ ದೊರಕಿಸಿಕೊಟ್ಟ. ಈ ವೇಳೆಗೆ ಭಾರತ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಅಂಗವಾಗಿತ್ತು. ಪೂರ್ವದೊಂದಿಗೆ ವ್ಯಾಪಾರಕ್ಕಾಗಿಯೂ ಸಾಮ್ರಾಜ್ಯದ ನಿರ್ವಹಣೆಗಾಗಿಯೂ ಸೂಯೆಜ್ ಕಾಲುವೆಯ ಮೇಲೆ ಹತೋಟಿ ಹೊಂದುವುದು ಅವಶ್ಯವಾಗಿತ್ತು. ಅದಕ್ಕಾಗಿ ಈತ 1875ರಲ್ಲಿ ಈಜಿಪ್ಟಿನ ದೊರೆಯಿಂದ ಸೂಯೆಜ್ ಕಾಲುವೆಯ ಷೇರುಗಳನ್ನು ಕೊಂಡ. ರಷ್ಯದ ಬಗ್ಗೆ ಈತನಿಗೆ ಭೀತಿಯಿತ್ತು. ರಷ್ಯ ಪ್ರಬಲವಾಗುವುದು ಈತನಿಗೆ ಇಷ್ಟವಿರಲಿಲ್ಲ. ಈತನ ಕಾಲದಲ್ಲೇ (1877) ವಿಕ್ಟೋರಿಯಾ ರಾಣಿ ಭಾರತದ ಚಕ್ರವರ್ತಿನಿಯೆನಿಸಿಕೊಂಡಳು. 1876ರಲ್ಲಿ ತುರ್ಕಿಯ ವಿರುದ್ಧ ನಡೆದ ಬಾಲ್ಕನ್ ದಂಗೆಯಿಂದಾಗಿ ರಷ್ಯಕ್ಕೂ ತುರ್ಕಿಗೂ ಯುದ್ಧವಾಯಿತು.

ಡಿಸ್ರೇಲಿ ಅನಂತರ ಪ್ರಧಾನಮಂತ್ರಿಯಾದ ಗ್ಲಾಡ್‌ಸ್ಟನ್ ಐಶ್ವರ್ಯವಂತ, ಸುಶಿಕ್ಷಿತ. ಟೋರಿ ರಾಬರ್ಟ್ ಪೀಲ್ ಗೋದಿಯ ಕಾನೂನನ್ನು ರದ್ದುಮಾಡಲು ಹೋರಾಡಿದಾಗ ಗ್ಲಾಡ್‌ಸ್ಟನ್ ಆತನಿಗೆ ಸಹಾಯಕನಾಗಿದ್ದ. ಪೀಲ್ ಸರ್ಕಾರದಲ್ಲಿ ಈತ ವಾಣಿಜ್ಯ ಸಮಿತಿಯ ಅಧ್ಯಕ್ಷನಾಗಿದ್ದು ಪಾಮರ್ಸ್ಟನ್ನನ ಜೊತೆಯಲ್ಲಿ ಅರ್ಥಸಚಿವನಾದ. ಈತ ಕಾರ್ಮಿಕರ ಪುರೋಭಿವೃದ್ಧಿಗಾಗಿ ಹೊಡೆದಾಡಿದ. ಇಂಗ್ಲೆಂಡಿನ ರಕ್ಷಣೆಯೇ ಈತನ ಆಸಕ್ತಿಯಾಗಿತ್ತು. ಈತ 1906ರಲ್ಲಿ ಬೋಯರ್ ಜನಾಂಗಕ್ಕೆ ಸ್ವಯಮಾಡಳಿತ ದೊರಕಿಸಿಕೊಟ್ಟ.

1901ರಲ್ಲಿ ವಿಕ್ಟೋರಿಯ ರಾಣಿ ಗತಿಸಿದಾಗ 7ನೆಯ ಎಡ್ವರ್ಡ್ ಚಕ್ರವರ್ತಿಯಾದ. ಸಾಮ್ಯವಾದ ಇಂಗ್ಲೆಂಡಿನಲ್ಲಿ ಇಣುಕಿತು. ಕಾರ್ಲ್‌ಮಾರ್ಕ್ಸ್‌ನ ದಾಸ್ ಕ್ಯಾಪಿಟಲ್ ಪ್ರಚಾರವಾಯಿತು. ಸುಪ್ರಸಿದ್ಧ ನಾಟಕಕಾರ ಬರ್ನಾಡ್ ಷಾ ಮುಂತಾದವರು ಅದಕ್ಕೆ ಇಂಬು ಕೊಟ್ಟರು. ಕೇರ್ ಹಾರ್ಡಿ ಎಂಬುವನಿಂದ 1906ರಲ್ಲಿ ಲೇಬರ್ ಪಕ್ಷ ಜನ್ಮ ತಳೆಯಿತು. ಈ ಪಕ್ಷ 1906ರ ವೇಳೆಗೆ ಸಾಕಷ್ಟು ಪ್ರತಿಷ್ಠೆ ಗಳಿಸಿತು. ಕಾರ್ಮಿಕ ಪರಿಹಾರದ ಕಾಯಿದೆ, ಔದ್ಯೋಗಿಕ ಸಂಘಗಳ ಕಾಯಿದೆ, ಶಾಲಾ ಮಕ್ಕಳಿಗೆ ನಡುಹಗಲ ಆಹಾರ ಒದಗಿಸುವ ಕಾಯಿದೆ, ವೃದ್ಧಾಪ್ಯ ವೇತನದ ಕಾಯಿದೆ–ಮುಂತಾದುವುಗಳು 7ನೆಯ ಎಡ್ವರ್ಡನ ಕಾಲದಲ್ಲಿ ಜಾರಿಗೆ ಬಂದುವು.

ಹೀಗೆ ಸುಮಾರು ಸಾವಿರ ವರ್ಷಗಳ ದೀರ್ಘಕಾಲದಲ್ಲಿ ಇಂಗ್ಲೆಂಡಿನ ಇತಿಹಾಸ ಕ್ರಮಕ್ರಮವಾಗಿ ಬೆಳೆಯಿತು ವೇಲ್ಸ್, ಸ್ಕಾಟ್ಲೆಂಡ್, ಉತ್ತರ ಐರ್ಲೆಂಡ್ ಇವುಗಳಿಂದ ಕೂಡಿದ ಸಂಯುಕ್ತ ಪ್ರಭುತ್ವದ ಆವಿಷ್ಕಾರವಾಯಿತು (ಇಂಗ್ಲೆಂಡಿನ ಈಚಿನ ಇತಿಹಾಸಕ್ಕೆ **(ನೋಡಿ– ಗ್ರೇಟ್ ಬ್ರಿಟನ್ನಿನ ಇತಿಹಾಸ)**

(ಎಸ್.ವಿ.ಆರ್.)

**ಇಂಗ್ಲೆಂಡಿನ ಚರ್ಚು:** ಇಂಗ್ಲೆಂಡಿನಲ್ಲಿ 16ನೆಯ ಶತಮಾನದಲ್ಲಿ ರೋಮಿನ ಪೋಪ್ ಗುರುವಿನ ಅಧಿಕಾರವನ್ನು ನಿರಾಕರಿಸಿ ಸ್ವಯಂ ಆಡಳಿತ ಸ್ಥಾಪಿಸಿಕೊಂಡ ಕ್ರೈಸ್ತ ಮತ ಸಂಸ್ಥೆ (ಚರ್ಚ್ ಆಫ್ ಇಂಗ್ಲೆಂಡ್). ಲ್ಯಾಟಿನ್ ಕ್ರೈಸ್ತ ಮಂಡಲಿಯ ಆಂಗ್ಲಶಾಖೆ. ಇಂಗ್ಲೆಂಡಿಗೆ ಕ್ರೈಸ್ತ ಮತ ಬಂದಾಗಿನಿಂದ ಬೆಳೆದು ವಿಶಿಷ್ಟ ಸಂಸ್ಥೆಯಾಗಿ ರೂಪುಗೊಂಡಿರುವ ಇದಕ್ಕೆ ಒಂದು ದೀರ್ಘ ಇತಿಹಾಸವಿದೆ.

ಕ್ರೈಸ್ತಮತ ಇಂಗ್ಲೆಂಡಿಗೆ ಬಂದದ್ದು ಹೇಗೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ಈ ವಿಚಾರವಾಗಿ ಲಭ್ಯವಿರುವ ನಾನಾ ಆಖ್ಯಾಯಿಕೆಗಳನ್ನೂ ಊಹೆಗಳನ್ನೂ ಆಧರಿಸಿ ಸ್ಥೂಲವಾಗಿ ಕೆಲವು ಮಾತು ಹೇಳಬಹುದು. ಸಂತ ಪಾಲನೇ ಇಲ್ಲಿಗೆ ಬಂದ ಮೊದಲ ಉಪದೇಶಕನೆಂದು ಪ್ರತೀತಿ. ಇವನು ಪಶ್ಚಿಮದ ಎಲ್ಲೆಯವರೆಗೂ ಸಂಚರಿಸಿದನೆಂಬುದಾಗಿ ಹೇಳಿರುವ ರೋಮಿನ ಕ್ಲೆಮಂಟನ ಮಾತನ್ನೂ ಸ್ಪೇನ್ ಸಂದರ್ಶನ ಮಾಡಬೇಕೆಂಬುದಾಗಿ ಸಂತ ಪಾಲನೇ ತನ್ನ ಬಯಕೆ ವ್ಯಕ್ತಪಡಿಸಿದ್ದನೆಂಬ ಉಲ್ಲೇಖವನ್ನೂ ಆಧಾರವಾಗಿ ನೀಡುವ ವಾಡಿಕೆಯಿದೆ. ಆದರೆ ಇಷ್ಟರಿಂದಲೇ ಸಂತ ಪಾಲ್ ಇಂಗ್ಲೆಂಡಿಗೆ ಬಂದಿದ್ದನೆಂದು ದೃಢವಾಗಿ ಸಿದ್ಧಪಡಿಸಲಾಗುವುದಿಲ್ಲ. ಅರಿಮಾಥಿಯದ ಸಂತ ಜೋಸೆಫ್ ಇಲ್ಲಿಗೆ ಬಂದು ಈ ನಾಡಿನ ಮೊಟ್ಟ ಮೊದಲ ಚರ್ಚು ಕಟ್ಟಿಸಿದನೆಂದೂ ಕಥೆಯುಂಟು. ಆದರೆ ಇದನ್ನು ಸಿದ್ಧಪಡಿಸುವುದಕ್ಕೂ ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ. ಆಗಿಂದಾಗ್ಗೆ ಇಲ್ಲಿಗೆ ಬರುತ್ತಿದ್ದ ಮುಖ್ಯವಾಗಿ ಗಾಲಿನಿಂದ ಬರುತ್ತಿದ್ದ ಕ್ರೈಸ್ತರು ಇಲ್ಲಿ ತಮ್ಮ ಧರ್ಮಪ್ರಚಾರ ಮಾಡಿದರೆಂದು ಸ್ಥೂಲವಾಗಿ ಹೇಳಬಹುದು. ಇಂಗ್ಲೆಂಡಿನ ಜನರನ್ನು ಕ್ರೈಸ್ತಮತಕ್ಕೆ ಪರಿವರ್ತಿಸುವ ಉದ್ದೇಶದಿಂದಲೇ ಈ ಕಾಲದಲ್ಲಿ ಹೊರಗಿನಿಂದ ಯಾವ ಸಂಘಟಿತ ಪ್ರಯತ್ನ ನಡೆಯಿತೆಂದು ಹೇಳಲಾಗುವುದಿಲ್ಲ. ಈ ವಿಚಾರವಾಗಿ ತನಗೇನೂ ತಿಳಿಯದೆಂದು ಅತ್ಯಂತ ಹಿಂದಿನ ಬ್ರಿಟಿಷ್ ಇತಿಹಾಸಕಾರನಾದ ಗಿಲ್ಡಾಸ್ (516–70) ಎಂಬುವನು ಕೂಡ ಹೇಳಿಕೊಂಡಿದ್ದಾನೆ. ಈ ಪ್ರಶ್ನೆಗೆ ಉತ್ತರ ನೀಡಬಹುದಾಗಿದ್ದ ದಾಖಲೆಗಳನ್ನೆಲ್ಲ ಸ್ಯಾಕ್ಸನ್ ಆಕ್ರಮಣಕಾರರು ನಾಶಮಾಡಿರಬೇಕು; ಅಥವಾ ಇಲ್ಲಿಂದ ಹೊರಕ್ಕೆ ವಲಸೆ ಹೋದವರು ತಮ್ಮೊಡನೆ ತೆಗೆದುಕೊಂಡು ಹೋಗಿರಬೇಕು. ಇದು ಗಿಲ್ಡಾಸನ ಮತ.

ಇತಿಹಾಸ ಗುರುತಿಸಬಹುದಾದ ಈ ದೇಶದ ಪ್ರಥಮ ಕ್ರೈಸ್ತನೆಂದರೆ ಪೆಲೇಗಿಯಸ್ ಎಂಬುವನು. ಇವನೊಬ್ಬ ಶ್ರೀಸಾಮಾನ್ಯ; ತುಂಬ ರೋಮನೀಕರಣವಾದ ಪ್ರದೇಶದಲ್ಲಿದ್ದ. ಈತನಿಗೆ ಸಾಹಿತ್ಯ ಚಟುವಟಿಕೆಯಲ್ಲಿ ಆಸಕ್ತಿಯಿತ್ತು. ಹೊಸ ಒಡಂಬಡಿಕೆಯ ಮೇಲೆ ಈತ ಕೆಲವು ಮುಖ್ಯ ವ್ಯಾಖ್ಯಾನಗಳನ್ನು ಬರೆದಿದ್ದಾನೆ. ಇವನು 380ರಲ್ಲಿ ಈ ದೇಶ ಬಿಟ್ಟು ಹೋದ; ಮತ್ತೆ ಬರಲಿಲ್ಲ. ಈತ ಉಪದೇಶನಿರತನಾಗಿದ್ದನೆಂಬುದಕ್ಕೂ ಆಧಾರವಿಲ್ಲ. ಮುಂದೆ ಪೆಲೇಗಿಯನಿಸಂ ಎಂಬ ಪಂಥದ ಉದಯವಾದದ್ದಕ್ಕೆ 421ರಲ್ಲಿ ರೋಮಿನಿಂದ ಉಚ್ಚಾಟನೆಗೊಂಡು ಇಲ್ಲಿಗೆ ಬಂದ ಪೆಲೇಗಿಯನರು ಕಾರಣ. ಇವರ ಆಕ್ರಮಣವನ್ನೆದುರಿಸಲು ನೆರವು ನೀಡಬೇಕೆಂದು ಈ ದೇಶದ ಜನರು ಪೋಪರಿಗೆ ಮನವಿ ಸಲ್ಲಿಸಿದ್ದುಂಟು. ಸಂತ ಜರ್ಮೇನಸ್ ಎಂಬುವನು 429 ಮತ್ತು 447ರಲ್ಲೂ ಇಲ್ಲಿಗೆ ಬರಲು ಈ ಮನವಿಯೇ ಕಾರಣ.

ಈ ದೇಶದ ಉತ್ತರ ಭಾಗದಲ್ಲಿ ಕ್ರೈಸ್ತಮತದ ಪ್ರಸರಣ ಮಾಡಿದವ ಸೇಂಟ್ ನಿನಿಯನ್ ಎಂಬ ರೋಮನೋ–ಬ್ರಿಟನ್. ಇವನು ರೋಮಿನಲ್ಲಿ ಶಿಕ್ಷಣ ಪಡೆದ; ಇಲ್ಲಿನ ಗಾಲೊವೇ ಜಿಲ್ಲೆಯಲ್ಲಿ ಮತಪ್ರಚಾರ ಕಾರ್ಯದಲ್ಲಿ ತೊಡಗಿದ. ಈ ದೇಶದ ಪ್ರಥಮ ಕ್ರೈಸ್ತ ಮಠವನ್ನು 397ರಲ್ಲಿ ಸ್ಥಾಪಿಸಿದ.

ರೋಮನ್ ಮಾದರಿಗಿಂತ ಭಿನ್ನವಾದ ಅಚ್ಚ ಸ್ವದೇಶಿ ಕ್ರೈಸ್ತಮತ ಇಲ್ಲಿ ಈ ಕಾಲದಲ್ಲಿ ಪ್ರಚಾರದಲ್ಲಿತ್ತೆಂಬ ನಂಬಿಕೆಗೆ ಆಧಾರವಿಲ್ಲ. 5ನೆಯ ಶತಮಾನದಲ್ಲಿ ಪರಾಕ್ರಮಣದಿಂದ ವಿಮೋಚನೆಯಾದಾಗ ತಾತ್ಕಾಲಿಕವಾಗಿ ಈ ದೇಶ ಬಾಹ್ಯ ಜಗತ್ತಿನಿಂದ ಬೇರ್ಪಟ್ಟಿದ್ದಿರಬಹುದು. ಆದರೆ ಧರ್ಮದ ವಿಚಾರದಲ್ಲಿ ಪ್ರತ್ಯೇಕತೆಯೇನೂ ಆಗ ಏರ್ಪಟ್ಟಿರಲಿಲ್ಲ. ಮುಂದೆ ಸ್ಯಾಕ್ಸನರು ಇಲ್ಲಿಗೆ ಬಂದು ಇಲ್ಲಿನ ಚರ್ಚುಗಳಿಗೂ ಮೆಡಿಟರೇನಿಯನ್ ಪ್ರದೇಶಕ್ಕೂ ನಡುವೆ ವೆಜ್ಜ ಹಾಕಿದಾಗ ಈ ಸಂಬಂಧ ಕಡಿದು ಬಿತ್ತು.

**ಆರಂಭ ಕಾಲ:** ಸ್ಯಾಕ್ಸನರ ಆಕ್ರಮಣಗಳ ಫಲವಾಗಿ ಈ ದೇಶದ ಮೇಲೆ ರೋಮನ್ ನಾಗರಿಕತೆಯ ಪ್ರಭಾವ ಬಹಳಮಟ್ಟಿಗೆ ಕಳೆಗುಂದಿತು. ಈ ದ್ವೀಪದ ಪಶ್ಚಿಮದ ಓರೆಗೆ ಮಾತ್ರವೇ ಕ್ರೈಸ್ತಮತದ ಪ್ರಭಾವ ಸೀಮಿತವಾಯಿತು. ಡಮ್ನೋನಿಯದ ಸ್ಥಳೀಯ ರಾಜರ ಆಳ್ವಿಕೆಯಲ್ಲಿ ಜಿಲ್ಲಾ ವ್ಯಾಪ್ತಿಯ ಚರ್ಚ್ ವ್ಯವಸ್ಥೆಯೇರ್ಪಟ್ಟಿತು. ಮುಂದೆ 9ನೆಯ ಶತಮಾನದಲ್ಲಿ ಇದು ಇಂಗ್ಲಿಷ್ ಚರ್ಚಿನಲ್ಲಿ ವಿಲೀನವಾಯಿತು.

ಸ್ಯಾಕ್ಸನ್ ಆಕ್ರಮಣಕಾರರು ಕ್ರೈಸ್ತಮತಕ್ಕೆ ಪರಿವರ್ತನೆ ಹೊಂದಿದ್ದು ಹೊರಗಿನವರ ಪ್ರಯತ್ನದಿಂದ. ಮುಂದೆ ಪೋಪ್ ಆದ 1ನೆಯ ಗ್ರಿಗರಿಯೇ ಇದಕ್ಕೆ ನಿಮಿತ್ತ. ಮೊದಲನೆಯ ಬೆನೆಡಿಕ್ಟ್ ಅಧೀನದಲ್ಲಿ ರೋಮನ್ ಚರ್ಚಿನಲ್ಲಿ ಉನ್ನತ ಧರ್ಮಾಧಿಕಾರಿಯಾಗಿದ್ದಾಗಲೇ ಪೋಪನಿಗೆ ಈ ಹಂಬಲವಿತ್ತು. ಚೆಲುವು ಕೂದಲಿನ ತರುಣ ಸ್ಯಾಕ್ಸನರನ್ನು ರೋಮನ್ ಮಂಟಪದೊಳಕ್ಕೆ ಸೇರಿಸಿಕೊಳ್ಳಬೇಕೆಂದು ಆಗಲೇ ಈತ ಹಂಚಿಕೆ ಹಾಕಿದ್ದ. ಆದರೆ ಆಗಲೇ ಇದನ್ನು ಕಾರ್ಯರೂಪಕ್ಕೆ ತರುವುದು ಅಸಾಧ್ಯವಾಯಿತು. ಏಕೆಂದರೆ ಇದಕ್ಕೆ ಆಗ ತುಂಬ ವಿರೋಧವಿತ್ತು. ಮುಂದೆ ಈತನೇ ಪೋಪನಾದಾಗ ಪರಿಸ್ಥಿತಿ ಕೂಡಿ ಬಂತು.

ಆಗಸ್ಟೀನ್ ಎಂಬುವನು ಈ ಕಾರ್ಯಕ್ಕಾಗಿ ಪೋಪ್ ಗ್ರಿಗರಿಯಿಂದ ನೇಮಿತನಾದ. ಪೋಪ್ ಇವನ ವಶಕ್ಕೆ ನಲವತ್ತು ಮಂದಿ ಸಂನ್ಯಾಸಿಗಳನ್ನೂ ಉದಾರವಾಗಿ ಸಾಮಗ್ರಿಯನ್ನೂ ಗಾಲಿನ ದೊರೆಮಕ್ಕಳಿಗೆ ಒಕ್ಕಣಿಸಿದ ಪತ್ರಗಳನ್ನೂ ಕೊಟ್ಟ. ಕೆಂಟಿನ ಆಗಿನ ದೊರೆಯಾದ ಈಥೆಲ್ ಬರ್ಟ್ ಎಂಬುವನು ಪ್ಯಾರಿಸ್ಸಿನ ಶ್ರೀಮಂತ ಪುತ್ರಿಯೊಂದಿಗೆ ವಿವಾಹ ಸಂಬಂಧ

ಬೆಳೆಸಿದ್ದರಿಂದ ಈ ಸಮಯ ಇವರಿಗೆ ಪ್ರಶಸ್ತವಾಗಿತ್ತು. ಮದುವಣಗಿತ್ತಿ ಬರ್ಥ್ ವಿವಾಹಕಾಲದಲ್ಲಿ ತನ್ನ ಮತವಿಧಿಯನ್ನೇ ಅನುಸರಿಸುವುದೆಂದು ಒಪ್ಪಿಗೆ ಲಭಿಸಿತ್ತು. ಆಗಸ್ಟೀನ್ ಬರುವುದಕ್ಕೆ ಒಂಬತ್ತು ವರ್ಷ ಹಿಂದಿನಿಂದಲೇ ಕೆಂಟಿನ ಆಸ್ಥಾನಕ್ಕೆ ಕ್ರೈಸ್ತಮತದ ಪರಿಚಯವಿತ್ತು.

ಆಗಸ್ಟೀನನ ನಿಯೋಗ 597ರಲ್ಲಿ ಥಾನೆಟ್ ತೀರದ ಮೇಲೆ ಬಂದಿಳಿಯಿತು. ಈ ಆಗಂತುಕರು ಯಕ್ಷಿಣಿ ಮಾಡಬಹುದೆಂದು ಬೆದರಿದ ಈಥೆಲ್ ಬರ್ಟ್ ದೊರೆ ಇವರನ್ನು ಬಟ್ಟಬಯಲಿನಲ್ಲಿ ಎದುರುಗೊಂಡ. ಸಂದರ್ಶನ ಕಾಲದಲ್ಲಿ ದೊರೆಗೆ ಇವರ ಪ್ರಾಮಾಣಿಕತೆಯ ಮನವರಿಕೆಯಾಯಿತು. ಆದರೆ ಇವರು ತಂದ ಸಂದೇಶದ ಸತ್ತ್ವಪರೀಕ್ಷೆಯಾಗಬೇಕಿತ್ತು. ಅಂತೂ ಇವರಿಗೆ ಕ್ಯಾಂಟರ್‌ಬರಿಯಲ್ಲಿ ಎಡೆ ದೊರಕಿತು. ಸರಕು ಸರಂಜಾಮು ಸರಬರಾಜಾಯಿತು. ಇವರು ಪುರಾತನ ಸೇಂಟ್ ಮಾರ್ಟಿನ್ ಚರ್ಚಿನಲ್ಲಷ್ಟೇ ತಮ್ಮ ಕಾರ್ಯವನ್ನಾರಂಭಿಸಿದರು. ಅದು ಆಗ ರಾಣಿಯ ಸುಪರ್ದಿಯಲ್ಲಿತ್ತು. ಬಲು ಬೇಗ ರಾಜನೇ ಈ ಹೊಸ ಮತಕ್ಕೆ ಶರಣುಹೋದ. ಮತಪರಿವರ್ತನೆಯ ಜೋರು ಏರಿದಂತೆಲ್ಲ ಆಗಸ್ಟೀನ್ ಚುರುಕಿನಿಂದ ಕಾರ್ಯನಿರತನಾದ. ಹಳೆಯ ಚರ್ಚುಗಳ ಜೀರ್ಣೋದ್ಧಾರವಾಯಿತು. ಹೊಸ ಚರ್ಚುಗಳು ಮೇಲೆದ್ದವು. ಒಂದೇ ವರ್ಷದಲ್ಲಿ ಈ ಮತದ ಕಲಾಪ ಬೆಳೆದದ್ದರಿಂದ ಇದಕ್ಕೆ ಇಲ್ಲಿ ಕಾಯಂ ವ್ಯವಸ್ಥೆ ಅಗತ್ಯವೆನಿಸಿತು. ಆಗಸ್ಟೀನ್ ಯುರೋಪ್ ಖಂಡ ಪ್ರದೇಶಕ್ಕೆ ಹಿಂದಿರುಗಿ ಲ್ಯೆಯನ್ಸ್‌ನ ಬಿಷಪ್‌ನಿಂದ ಅಭಿಷೇಕ ಹೊಂದಿದ. ಆಗಸ್ಟೀನನ ವಿಜಯದ ಸುದ್ದಿ ರೋಮನ್ನೂ ಮುಟ್ಟಿತು. ಆದರೆ ಆ ಕಾಲದಲ್ಲಿ ಪೋಪ್ ಗ್ರಿಗರಿಯ ಮೈ ಸ್ವಸ್ಥವಿಲ್ಲದ್ದರಿಂದ ಆಗಸ್ಟೀನನಿಗೆ ಪ್ರಧಾನ ಬಿಷಪ್ ಅಧಿಕಾರ ಬರಲು ಕೆಲ ವರ್ಷ ತಡವಾಯಿತು. 601 ರಲ್ಲಿ ಆತನಿಗೆ ಈ ಅಧಿಕಾರದ ಉಡುಗೆ ದತ್ತವಾಯಿತು; ಬೇರೆ ಬೇರೆ ವಿಭಾಗಗಳಿಗೆ ಬಿಷಪ್‌ರನ್ನು ನೇಮಿಸುವ ಅನುಮತಿ ದೊರಕಿತು.

ಈ ರೀತಿ ಲಂಡನ್ನಿನ ಮಠಾಧಿಪತ್ಯ ಸ್ಥಾಪನೆಯಾದರೂ ಕೆಂಟ್ ಪ್ರದೇಶದಿಂದ ಹೊರಗೆ ಇದಕ್ಕೆ ಸಾಕಷ್ಟು ಯಶಸ್ಸು ದೊರಕಲಿಲ್ಲ. ಆಗ ಇನ್ನೂ ಅಲ್ಲಲ್ಲಿ ಆಡಳಿತ ನಡೆಸುತ್ತಿದ್ದ ಹಳೆಯ ಬ್ರಿಟಿಷ್ ಬಿಷಪ್ಪರು ರೋಮನ್ ಸಂಪ್ರದಾಯದೊಳಕ್ಕೆ ಬರಲು ನಿರಾಕರಿಸಿದರು. ಈ ಅಯಶಸ್ಸಿಗೆ ಇನ್ನೂ ಅನೇಕ ಕಾರಣಗಳಿದ್ದುವು. ಈ ಸಂಸ್ಥೆಯ ಪ್ರತ್ಯೇಕತೆಯ ಫಲವಾಗಿ ಸಂಪ್ರದಾಯ ಜಡ್ಡು ಕಟ್ಟಿತ್ತು. ಈ ಪಂಥಕ್ಕೆ ಬಂದ ಹೊಸಬರಲ್ಲಿ ಅಲಸಿಕೆ ಹುಟ್ಟಿತ್ತು.

ಇಂಗ್ಲೆಂಡಿನ ಹಲವು ಭಾಗಗಳಲ್ಲಿ ಕ್ರೈಸ್ತಮತವನ್ನು ಪುನಃ ಸ್ಥಿರೀಕರಣಗೊಳಿಸಿದವರು ಐರಿಷ್ ವಸಾಹತಾದ ಐಯೊನದಿಂದ ಬಂದ ಕೆಲ್ಟಿಕ್ ಪಾದ್ರಿಗಳು. ಐರಿಷ್ ಪಾದ್ರಿಗಳು ತಮ್ಮೊಂದಿಗೆ ವಿಚಿತ್ರ ಸಂಪ್ರದಾಯಗಳನ್ನೂ ತಂದರು. ಇವರ ಆಚಾರಗಳಿಗೂ ರೋಮನ್ ಆಚಾರಗಳಿಗೂ ಹೊಂದಿಕೆಯಾಗದ್ದರಿಂದ ಇವನ್ನು ನೇರ್ಪುಗೊಳಿಸುವ ಉದ್ದೇಶದಿಂದ ನಾರ್ಥಂಬ್ರಿಯದ ದೊರೆ ವಿಟ್ಬಿಯೆಂಬಲ್ಲಿ ಈ ಸಂಪ್ರದಾಯಗಳ ಪ್ರಮುಖ ಸಮರ್ಥಕರ ಸಭೆ ಸೇರಿಸಿದ. ಎರಡೂ ಪಕ್ಷಗಳ ವಾದಗಳನ್ನವಧರಿಸಿದ. ಕೊನೆಗೆ ಈ ದೊರೆ ರೋಮನ್ ಪಕ್ಷದ ಪರವಾಗಿ ತೀರ್ಪು ನೀಡಿದ. 663ರಲ್ಲಿ ನಡೆದ ಈ ಧರ್ಮಸಭೆ ಇತಿಹಾಸ ದೃಷ್ಟಿಯಲ್ಲಿ ಬಲು ಮುಖ್ಯ. ಏಕೆಂದರೆ ವ್ಯರ್ಥ ಜಲ್ಪವಿತಂಡಗಳಲ್ಲಿ ನಿರತರಾಗಿದ್ದ ಮತಪ್ರಮುಖರು ಅಲ್ಲಿಂದ ಮುಂದೆ ಆ ಮಾರ್ಗ ತೊರೆದು ಒಂದಾಗುವುದು ಸಾಧ್ಯವಾಯಿತು. ಥಿಯೊಡೋರಿನ ಆರ್ಚ್ ಬಿಷಪ್‌ನ ಅಡಿಯಲ್ಲಿ ಇಂಗ್ಲಿಷ್ ಚರ್ಚು ಸಂಘಟಿತವಾಯಿತು. ಇಂಗ್ಲೆಂಡಿನ ಪಶ್ಚಿಮ ಯುರೋಪ್‌ಗಳ ನಡುವೆ ವಿಚಾರ ವಿನಿಮಯ ಸುಲಭಸಾಧ್ಯವಾಯಿತು. ಕ್ಯಾಂಟರ್‌ಬರಿಯ ಪೀಠಕ್ಕೆ ಥಿಯೋಡೋರ್ ಬಂದಮೇಲೆ ಇದು ಇಡೀ ಇಂಗ್ಲೆಂಡಿನ ಪ್ರಧಾನಪೀಠವಾಯಿತು. ವೇಲ್ಸಿನ ಕ್ರೈಸ್ತಪಂಥ ಮಾತ್ರ ಮುಂದೆಯೂ ಬಹುಕಾಲ ಪ್ರತ್ಯೇಕವಾಗಿ ಮುಂದುವರಿಯಿತು. 12ನೆಯ ಶತಮಾನದ ಅಂತ್ಯಭಾಗದಲ್ಲಿ ಅದಕ್ಕೂ ಇಂಗ್ಲಿಷ್ ಚರ್ಚಿಗೂ ಸಫಲ ಸಂಲಗ್ನವುಂಟಾಯಿತು.

ಡೇನಿಷ್ ಆಕ್ರಮಣಕಾರರಿಂದ ಆ್ಯಂಗ್ಲೊ–ಸ್ಯಾಕ್ಸನ್ ಚರ್ಚಿಗೆ ಆಘಾತ ಒದಗಿತು. ಆದರೆ ಯುರೋಪಿನ ಪಂಥದೊಂದಿಗೆ ಸಾಹಿತ್ಯಕ ಹಾಗೂ ಇತರ ನಾನಾ ಬಗೆಯ ಸಂಬಂಧಗಳಿದ್ದುದರಿಂದಲೂ ಕೆಳಸೀಮೆಯ ಧರ್ಮಪ್ರಭುವಾಗಿದ್ದ ಸಂತ ಬೋನಿಫೇಸನ ಸಮರ್ಥ ಪ್ರಚಾರದಿಂದಲೂ ಅದು ಅಳಿಯದೆ ಉಳಿಯಿತು.

ನಾರ್ಮನರಿಂದ ನಿಗ್ರಹಕ್ಕೊಳಗಾಗಿದ್ದ ಕಾಲದಲ್ಲಿ ಇಂಗ್ಲಿಷರು ನಾನಾ ಬಗೆಯ ಬವಣೆಗೊಳಗಾದರು. ಅನೇಕ ದೇಶೀಯ ಮಠಾಧಿಪತಿಗಳು ಸ್ಥಾನಭ್ರಷ್ಟರಾದರು. ಆದರೆ ವಿಲಿಯಂ ದೊರೆಯ ಪಟ್ಟ ಭದ್ರವಾದ ಮೇಲೆ ಇಂಗ್ಲೆಂಡಿನ ಚರ್ಚಿಗೆ ಒಳ್ಳೆಯ ದೆಸೆ ಬಂತು. ಅಲ್ಲಿ ನೇಮಕವಾದ ನಾರ್ಮನ್ ಪಾದ್ರಿಗಳು ಇಂಗ್ಲಿಷ್ ಪುರೋಹಿತರಿಗಿಂತ ಕಡಿಮೆಯಿರಲಿಲ್ಲ. ಜ್ಞಾನದಲ್ಲೂ ನಡತೆಯಲ್ಲೂ ಅವರದು ಮೊದಲನೆಯ ದರ್ಜೆ. ನಾರ್ಮನ್ ಶ್ರೀಮಂತರಿಂದಲೂ ಚರ್ಚಿಗೆ ಧಾರಾಳವಾಗಿ ಕೊಡುಗೆಗಳು ಬಂದವು. ಭವ್ಯ ಪೂಜಾಮಂದಿರಗಳು ನಿರ್ಮಿತವಾದವು. ಲ್ಯಾಟಿನ್ ಕ್ರೈಸ್ತ ಜಗತ್ತಿನೊಂದಿಗೆ ಇಂಗ್ಲಿಷ್ ಚರ್ಚಿನ ಸಂಬಂಧ ಬೆಳೆಯಿತು. 1069ರಲ್ಲಿ ಸ್ಯಾಕ್ಸನ್ ಬಂಡಾಯವಾದಾಗ ಕ್ಯಾಂಟರ್‌ಬರಿಯ ಆಗಿನ ಪ್ರಧಾನಾಧಿಕಾರಿಯನ್ನು ವಜಾ ಮಾಡುವುದಕ್ಕೆ ದೊರೆಗೆ ಒಂದು ನೆವ ಸಿಕ್ಕಿತ್ತು. ಆದರೆ ತಾನು ಕೈಗೊಂಡ ಕ್ರಮಕ್ಕೆ ಅವನಿಗೆ ಪೋಪ್ ಅಧಿಕಾರದ ನೆರವು ಬೇಕಿತ್ತು. ಆದ್ದರಿಂದ 1070ರಲ್ಲಿ ಆತ ವಿಂಚೆಸ್ಟರಿನಲ್ಲಿ ಧರ್ಮಸಭೆ ನಡೆಸಿದ. ಕ್ರೈಸ್ತಮಠೀಯರಿಗೆ ಪ್ರತ್ಯೇಕವಾದ ಸ್ವತಂತ್ರ ನ್ಯಾಯಾಲಗಳ ಸ್ಥಾಪನೆಯಾಯಿತು.

ಕ್ರೈಸ್ತಮಠ ಮಂಡಲಿಗೇ ಅನ್ವಯವಾಗುವಂಥ ನೀತಿಸೂತ್ರಗಳ ನಿರ್ಮಾಣ ಅಗತ್ಯವಾಯಿತು. ಇದರಿಂದ ಮುಂದೆ ಚರ್ಚಧಿಕಾರಕ್ಕೂ ಪ್ರಭುತ್ವಾಧಿಕಾರಕ್ಕೂ ನಡುವೆ ತಿಕ್ಕಾಟ ಸಂಭವಿಸುವ ಹಾಗಾಯಿತು. 1ನೆಯ ವಿಲಿಯಂನ ಅನಂತರದ ಕಾಲದಲ್ಲಿ ಇಂಥ ಬಿಕ್ಕಟ್ಟು ಒದಗಿದಾಗ ಇವೆರಡು ಸಂಸ್ಥೆಗಳಿಗೂ ನಡುವೆ ಒಂದು ರೀತಿಯ ಒಪ್ಪಂದವಾಯಿತು. ಎರಡನೆಯ ಹೆನ್ರಿ ದೊರೆಯಾಗಿ ಪಟ್ಟಕ್ಕೆ ಬಂದಾಗ ನ್ಯಾಯಾಡಳಿತದ ಕೆಲವು ಓರೆಕೋರೆಗಳನ್ನು ತಿದ್ದಲು ಯತ್ನಿಸಿದ. ಇದರಿಂದ ಕಷ್ಟಗಳು ಇನ್ನೂ ಹೆಚ್ಚಿದವು. ತನ್ನಲ್ಲಿ ಮುಖ್ಯಾಧಿಕಾರಿಯಾಗಿದ್ದ ಥಾಮಸ್ ಬೆಕೆಟ್‌ನನ್ನೇ ಕ್ಯಾಂಟರ್‌ಬರಿಯ ಪ್ರಧಾನಾಧಿಕಾರಿಯಾಗಿ ಆತ ನೇಮಿಸಿದ. ಇವನು ದೊರೆಯ ಪಕ್ಷದಲ್ಲಿರುವ ಬದಲು ಆತನ ಪ್ರತಿಕಕ್ಷಿಯಾದ. ದೊರೆಯ ನಡವಳಿಕೆಗಳಿಗೆ ಬೆಂಬಲ ನೀಡುವಂತೆ ವರ್ತಿಸಿ ಆಮೇಲಾಮೇಲೆ ವಿರೋಧಿಸಿದ. ದೊರೆಯ ಮರ್ಜಿ ಹಿಡಿಯಲು ನಿರಾಕರಿಸಿದ ಫಲವಾಗಿ ಇವನು ಆರು ವರ್ಷ ಗಡೀಪಾರಾಗಬೇಕಾಯಿತು. ಶಿಕ್ಷೆ ಮುಗಿಸಿಕೊಂಡು ಮರಳಿದ ಕೂಡಲೇ ಚರ್ಚಿವಲ್ಲಿದ್ದ ಇವನ ವಿರೋಧಿಗಳಿಗೆ ಈತನಿಂದ ಶಿಕ್ಷೆ ಕಾದಿತ್ತು. ಅವರನ್ನೆಲ್ಲ ಉಚ್ಚಾಟನೆಗೊಳಿಸಿದಾಗ ಅವರು ದೊರೆಯ ಬಳಿಗೆ ದೂರು ಹೊತ್ತರು. ಇದನ್ನು ಕೇಳಿದಾಗ ದೊರೆಯ ಬಾಯಿಂದ ಹೊರಟ ಉದ್ಗಾರದಿಂದ ಉದ್ರೇಕಗೊಂಡ ಕೆಲವು ಇಂಗ್ಲಿಷ್ ಶ್ರೀಮಂತರು ಬೆಕೆಟ್ ಇದ್ದ ಆರಾಧನ ಮಂದಿರಕ್ಕೆ (ಕಥೀಡ್ರಲ್) ಹೋಗಿ ಅಲ್ಲೇ ಆತನನ್ನು ಕೊಂದರು. ಈ ಕೊಲೆಯ ಫಲವಾಗಿ ದೊರೆಯ ಸುಧಾರಣೆಗಳಿಗೆ ತಾತ್ಕಾಲಿಕವಾಗಿ ಮರ್ಮಾಘಾತವಾಯಿತು **(ನೋಡಿ–ಬೆಕೆಟ್, ಥಾಮಸ್)**.

ಐಹಿಕ ಪಾರಮಾರ್ಥಿಕ ಕ್ಷೇತ್ರಗಳೆರಡರಲ್ಲೂ ಜಾನ್ ದೊರೆಯ ವಿರುದ್ಧವಾಗಿ ಪೋಪ್ ಅಧಿಕಾರ ವ್ಯವಸ್ಥೆ ತನ್ನ ಅಧಿಕಾರ ವ್ಯಾಪ್ತಿಯನ್ನು ಎತ್ತಿ ಹಿಡಿಯಲಾರಂಭಿಸಿತು. ಮುಂದೆ ಕ್ಯಾಂಟರ್‌ಬರಿಯ ಪೀಠ ಖಾಲಿಯಾದಾಗ ಮೂರನೆಯ ಇನೊಸೆಂಟ್ ಪೋಪ್ ತನ್ನ ಕಡೆಯವನಾದ ಸ್ಟೀಫನ್ ಲ್ಯಾಂಗ್ಟನ್‌ನನ್ನು ಆ ಸ್ಥಾನಕ್ಕೆ ನೇಮಿಸಬೇಕೆಂದು ಒತ್ತಾಯಿಸಿದ. ಜಾನ್ ದೊರೆ ನಿರಾಕರಿಸಿದ. ದೊರೆಗೆ ತಕ್ಕ ಶಾಸ್ತಿ ಮಾಡಬೇಕೆಂಬ ಉದ್ದೇಶದಿಂದ ಪೋಪ್ ಗುರು ಇಡೀ ದೇಶಕ್ಕೇ ಬಹಿಷ್ಕಾರ ಶಿಕ್ಷೆ ವಿಧಿಸಿ ಅಲ್ಲಿರುವ ಯಾರಿಗೂ ಧಾರ್ಮಿಕ ಹುದ್ದೆ ಕೊಡಬಾರದೆಂದು ಆಜ್ಞಾಪಿಸಿದ. ದೊರೆ ಜಗ್ಗಲಿಲ್ಲ. ಕೊನೆಗೆ ಜಾನ್ ದೊರೆಯನ್ನೇ ಅಧಿಕಾರದಿಂದ ಇಳಿಸುವ ಆಜ್ಞೆ ಪೋಪ್‌ನಿಂದ ಬಂತು. ಫ್ರಾನ್ಸಿನ ಫಿಲಿಪ್ ಕಿರೀಟ ಧರಿಸಬೇಕೆಂದು ಆಹ್ವಾನ ಹೋಯಿತು. ತನ್ನ ಸ್ಥಾನಕ್ಕೆ ಚ್ಯುತಿ ಬಂದಾಗ ಜಾನ್ ದೊರೆ ರಹಸ್ಯವಾಗಿ ಪೋಪನ ಪ್ರತಿನಿಧಿಯೊಂದಿಗೆ ಒಪ್ಪಂದ ಮಾಡಿಕೊಂಡ. ತನ್ನ ರಾಜ್ಯವನ್ನು ಪೋಪನ ವಶಕ್ಕೆ ಒಪ್ಪಿಸಿದಂತೆ ಮಾಡಿ ಅದನ್ನು ಜಹಗೀರಿಯಾಗಿ ವಾಪಸು ಪಡೆದ. ಪ್ರತಿಯಾಗಿ ವರ್ಷಕ್ಕೆ ಒಂದು ಸಾವಿರ ಮಾರ್ಕುಗಳ ಕಾಣಿಕೆ ಸಲ್ಲಿಸುವುದಾಗಿ ಒಪ್ಪಿಕೊಂಡ.

ಜಾನ್ ಮರಣಾನಂತರ ಮೂರನೆಯ ಹೆನ್ರಿಗೆ ಸಿಂಹಾಸನ ದೊರಕಿಸಲು ಪೋಪ್ ಪ್ರತಿನಿಧಿ ಸಹಾಯ ಮಾಡಿದ. ತತ್ಫಲವಾಗಿ ದೊರೆ ಪೋಪರ ಅನುವರ್ತಿಯಾದ. 1ನೆಯ ಎಡ್ವರ್ಡ್‌ನ ಕಾಲದಲ್ಲಿ ಈ ಸಂಬಂಧದಲ್ಲಿ ಬದಲಾವಣೆಯಾಯಿತು. ಚರ್ಚಿಗೆ ಅಧೀನನಾಗಿರಬೇಕೆಂಬ ನಿರ್ಬಂಧ ಕತ್ತರಿಸಿತು. ಆತನ ಮೊಮ್ಮಗ 3ನೆಯ ಎಡ್ವರ್ಡ್ ಪೋಪ್ ಅಧಿಕಾರಕ್ಕೆ ವ್ಯತಿರಿಕ್ತವಾದ ಕ್ರಮಗಳನ್ನನುಸರಿಸಿದ. ಪೋಪನಿಗೆ ಸಲ್ಲುತ್ತಿದ್ದ ಕಾಣಿಕೆ ನಿಂತಿತು. ವೈಕ್ಲಿಫ್ ಎಂಬುವನು **(ನೋಡಿ–ವೈಕ್ಲಿಫ್, ಜಾನ್)** ಸುಧಾರಣಾವಾದಿಯಾಗಿದ್ದ. ಈತ ಬೈಬಲನ್ನು ಭಾಷಾಂತರಿಸಿದ. ವೈಕ್ಲಿಫನ ಕ್ರಾಂತಿಕಾರಿ ಭಾವನೆಗಳಿಂದ ಜಾಗೃತಿ ಹೊಂದಿದ್ದವರ ಚಳವಳಿಯನ್ನು ಹತ್ತಿಕ್ಕಲು ನಾಲ್ಕನೆಯ ಹೆನ್ರಿಯ ಕಾಲದಲ್ಲಿ ಉಗ್ರಕ್ರಮಗಳು ಜಾರಿಗೆ ಬಂದುವು. 15ನೆಯ ಶತಮಾನದ ವೇಳೆಗೆ ಚರ್ಚಿಗೂ ಪ್ರಭುತ್ವಕ್ಕೂ ನಡುವೆ ಮತ್ತೆ ರಾಜಿಯಾಯಿತು.

**ಟ್ಯೂಡರ್ ಸುಧಾರಣೆ:** ಈ ಎರಡು ಸಂಸ್ಥೆಗಳ ನಡುವೆ ಪದೇ ಪದೇ ನಡೆಯುತ್ತಿದ್ದ ಘರ್ಷಣೆಗಳು 16ನೆಯ ಶತಮಾನದಲ್ಲಿ ಅಂತಿಮಘಟ್ಟ ಮುಟ್ಟಿದ್ದವು. ಟ್ಯೂಡರ್ ದೊರೆಯಾದ ಎಂಟನೆಯ ಹೆನ್ರಿಯ ವಿವಾಹಸಂಬಂಧವಾಗಿ ಗುರುಮನೆಗೂ ಅರಮನೆಗೂ ವೈರ ಮಸೆಯಿತು. ಸಂತಾನಾಭಿಲಾಷೆಯಿಂದಲೂ ಅಸೀಮ ಮೋಹದಿಂದಲೂ ಕೂಡಿದ್ದ ದೊರೆ ತನ್ನ ಪ್ರಥಮ ವಿವಾಹ ಬಂಧನವನ್ನು ಕೊನೆಗೊಳಿಸಿ ಇನ್ನೊಬ್ಬಳನ್ನು ವರಿಸಲೆತ್ನಿಸಿದ. ಚರ್ಚು ಅಡ್ಡ ಬಂತು. ಆಗ ಚರ್ಚಿನ ಬಗ್ಗೆ ಜನಸಾಮಾನ್ಯರಲ್ಲಿ ಹಬ್ಬಿದ್ದ ವಿರೋಧವನ್ನೂ ರಾಷ್ಟ್ರೀಯತಾಭಾವನೆಗಳನ್ನೂ ದೊರೆ ಉಪಯೋಗಿಸಿಕೊಂಡು ರೋಮಿನ ಸಂಬಂಧವನ್ನು ಕಡಿದು ಹಾಕಿದ. ಕ್ರೈಸ್ತಧರ್ಮಕ್ಕೆ ಚ್ಯುತಿ ಬಾರದಂತೆ ಇನ್ನು ಮುಂದೆ ದೊರೆಯೇ ಇಂಗ್ಲೆಂಡಿನ ಚರ್ಚಿಗೂ ಅಧಿಪತಿಯೆಂದು ಸಾರಿಕೊಳ್ಳಲಾಯಿತು (1534). ಈ ಮಧ್ಯೆ ಕ್ಯಾಂಟರ್ಬರಿಯ ಪೀಠಾಧಿಪತಿಯಿಂದ ಹೆನ್ರಿಯ ಪ್ರಥಮ ವಿವಾಹ ರದ್ದಾದ್ದರಿಂದ ಹೆನ್ರಿ ತನ್ನ ಪ್ರಿಯತಮೆಯಾದ ಆನ್ ಬೊಲೀನಳನ್ನು ವಿವಾಹವಾದ. ಮತಾಚಾರಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡದೆ, ರಾಜಕೀಯದಲ್ಲಿ ಪೋಪ್ ಅಧಿಕಾರವನ್ನು ಅಂತ್ಯಗೊಳಿಸುವುದೇ ಹೆನ್ರಿಯ ಉದ್ದೇಶವಾಗಿತ್ತು. ಆದರೆ ಈ ಕ್ರಮದಿಂದ ಜನರು ಮತೀಯ ಸುಧಾರಣೆಗಳ ಕಡೆಗೂ ಗಮನ ಹರಿಸಿದರು. ಆರನೆಯ ಎಡ್ವರ್ಡ್‌ನ ಕಾಲದಲ್ಲಿ ಈ ಬಗೆಯ ಸುಧಾರಣೆ ಮುಂದುವರಿಯಿತು. ಇಂಗ್ಲಿಷ್ ಭಾಷೆಯಲ್ಲಿ ಪ್ರಾರ್ಥನಾ ಪುಸ್ತಕಗಳು ರಚಿತವಾದವು. ಮೇರಿ ರಾಣಿಯ ಕಾಲದಲ್ಲಿ ರೋಮಿನೊಂದಿಗೆ ಸಮರಸತೆ ಏರ್ಪಟ್ಟಿತು. ಆದರೆ ಸುಧಾರಣಾಪ್ರಿಯರ ವಿರುದ್ಧವಾಗಿ

ಕೈಕೊಂಡ ಉಗ್ರಕ್ರಮಗಳಿಂದ ಸಂಪ್ರದಾಯವಾದಿಗಳೂ ಮುನಿದರು. 1558ರಲ್ಲಿ ಎಲಿಜಬೆತ್ ರಾಣಿ ಸಿಂಹಾಸನವನ್ನೇರಿದಾಗ ರಾಷ್ಟ್ರ ಸಂಘಟನೆಯ ಪಣತೊಟ್ಟಳು. 1552ರಲ್ಲಿ ರಚಿತವಾಗಿದ್ದ ಪ್ರಾರ್ಥನಾ ಪುಸ್ತಕಗಳು ಕ್ಯಾಥೊಲಿಕ್ ತಿದ್ದುಪಡಿಗಳೊಂದಿಗೆ ಮತ್ತೆ ರಚಿತವಾದವು. ಆದರೆ ಈ ಸುಧಾರಣೆ ಅಸಂಪೂರ್ಣವೆಂದು ಪ್ರಾಟೆಸ್ಟಂಟ್ ಮತದ ಕೆಲವು ಧರ್ಮಶುದ್ಧಿವಾದಿಗಳು (ಪ್ಯೂರಿಟನ್ಸ್) ಅಭಿಪ್ರಾಯಪಟ್ಟರು. ಅಶಾಸ್ತ್ರೀಯವೂ ದೂಷಣೀಯವೂ ಆದ ಆಚಾರಗಳನ್ನು ತೊಡೆದುಹಾಕಬೇಕೆಂದು ಇವರು ಚಳುವಳಿ ಹೂಡಿದರು. 1570ರಲ್ಲಿ 5ನೆಯ ಪಯಸ್ ಪೋಪ್ ರಾಣಿಗೆ ಬಹಿಷ್ಕಾರ ಹಾಕಿ ಆಕೆಯನ್ನು ಅಧಿಕಾರದಿಂದ ಇಳಿಸಿದ. ರಾಣಿಯ ವಿರುದ್ಧವಾಗಿ ಪಿತೂರಿಗಳು ನಡೆದವು. ರಾಣಿಯೂ ಪೋಪರ ಪಂಥದವರ ಮೇಲೆ ಉಗ್ರಕ್ರಮ ಕೈಗೊಂಡಳು. ಅತಿಗಾಮಿ ಧರ್ಮಶುದ್ಧಿವಾದಿಗಳನ್ನೂ ಶಿಕ್ಷಿಸಿದಳು.

ಎಲಿಜ಼ಬೆತ್‌ಳ ಮರಣಾನಂತರದ ಧರ್ಮಶುದ್ಧಿವಾದಿಗಳು ಕಟ್ಟುಗುರಾಗಿ ತಮ್ಮ ಚಳುವಳಿ ಮುಂದುವರಿಸಿದರು. ಪ್ರಾರ್ಥನಾ ಪುಸ್ತಕವನ್ನು ರದ್ದುಗೊಳಿಸಿ, ಬಿಷಪ್ ಆಡಳಿತವನ್ನೇ ಕೊನೆಗೊಳಿಸಬೇಕೆಂದು ಒತ್ತಾಯ ಹಾಕಿದರು. ಇದೇ ಕಾಲಕ್ಕೆ ದೊರೆಯ ದಬ್ಬಾಳಿಕೆಯ ವಿರುದ್ಧವಾಗಿ ಪಾರ್ಲಿಮೆಂಟು ಚಳವಳಿ ಹೂಡಿತ್ತು. ಮೊದಲನೆಯ ಚಾರ್ಲ್ಸ್ ದೊರೆಗೆ ಸೋಲಾಯಿತು. ಬಿಷಪ್ ಆಡಳಿತ ಕೊನೆಗೊಂಡಿತು. ಪ್ರಾರ್ಥನಾ ಪುಸ್ತಕವನ್ನು ಬಳಸಬಾರದೆಂಬ ಆಜ್ಞೆ ಜಾರಿಗೆ ಬಂತು. 1660ರಲ್ಲಿ ಇಂಗ್ಲೆಂಡಿಗೂ ರಾಜತ್ವವನ್ನು ಪುನಃಸ್ಥಾಪಿಸಿದಾಗ ಅದರೊಂದಿಗೆ ಚರ್ಚಿನ ವ್ಯವಸ್ಥೆಯೂ ಉಸಿರು ತಳೆಯಿತು. ಉಚ್ಚಾಟನೆಗೊಂಡಿದ್ದ ಪುರೋಹಿತವರ್ಗದವರು ಮತ್ತೆ ಬಂದರು. ಧರ್ಮಶುದ್ಧಿವಾದಿಗಳ ತೀವ್ರ ಬೇಡಿಕೆಗಳಿಗೆ ಪುರಸ್ಕಾರ ಸಿಗದಿದ್ದರೂ ಇಂಗ್ಲೆಂಡಿನ ಚರ್ಚು ಸುಧಾರಣೆಗೊಂಡು. ಪೋಪ್ ಅಧಿಕಾರದಿಂದ ವಿಮುಕ್ತಿ ಹೊಂದುವ ಮಟ್ಟಿಗೆ ಪ್ರಾಟೆಸ್ಟಂಟ್ ಆಗಿ, ಆದರೂ ಹಳೆಯ ಕಾಲದ ಧರ್ಮಸಂಪ್ರದಾಯಗಳನ್ನೂ ವಿಧಿಗಳನ್ನೂ ಉಳಿಸಿಕೊಳ್ಳುವ ಮಟ್ಟಿಗೆ ಕ್ಯಾಥೋಲಿಕ್ ಆಗಿ ಒಂದು ವಿಶಿಷ್ಟ ಸಂಸ್ಥೆಯಾಗಿ ಮಾರ್ಪಟ್ಟಿತು. ಆದರೆ ಆಗ ಅದು ಎಲ್ಲ ಜನರ ಸಂಸ್ಥೆಯಾಗಿ ಉಳಿಯಲಿಲ್ಲ. ಈ ಕ್ರಮವನ್ನನುಮೋದಿಸಿ ಕ್ಯಾಥೊಲಿಕರೂ ಪ್ರಾಟೆಸ್ಟಂಟರೂ ಪ್ರತ್ಯೇಕವಾಗಿ ಸಂಘಟಿತರಾದರು.

ಚರ್ಚಿನ ಪುನಃಸ್ಥಾಪನೆಯ ಅನಂತರದಲ್ಲಿ ಅನೇಕ ಪಂಥಗಳು ಬೆಳೆದವು. ಜೆರೆಮಿ ಟೇಲರ್, ಕೋಸಿನ್, ಕೆನ್, ಸ್ಯಾನ್‌ಕ್ರಾಫ್ಟ್, ಥಾಮಸ್ ಬ್ರೇ ಮುಂತಾದ ಉನ್ನತ ಚರ್ಚ್ ಪಂಥದವರು ಚರ್ಚಿನ ಪ್ರಾಚೀನತೆಯನ್ನೂ ಪರಂಪರೆಯನ್ನೂ ಸ್ವಾತಂತ್ರ್ಯವನ್ನೂ ಎತ್ತಿ ಹಿಡಿದರು. ಅವನತ ಚರ್ಚ್ ಪಂಥದವರು ಬೇರೆ ರೀತಿ ಬಗೆದರು. ಚರ್ಚು ಸರ್ಕಾರದ ಆಡಳಿತಾಧಿಕಾರಿಗಳಿಗೆ ಅಧೀನವಾಗಿರಬೇಕೆಂದು ವಾದಿಸಿದರು. ದೈವಿಕದೃಷ್ಟಿಗಿಂತ ನೈತಿಕಾಂಶಗಳಿಗೆ ಹೆಚ್ಚು ಮೌಲ್ಯ ನೀಡಬೇಕೆಂದು ಭಾವಿಸಿದರು. 18ನೆಯ ಶತಮಾನದಲ್ಲಿ ಇನ್ನೂ ಕೆಲವರು, ಕ್ರೈಸ್ತಮತದ ಅಮಾನುಷಾಂಶಗಳನ್ನು ಅಲ್ಲಗಳೆಯದಿದ್ದರೂ ಹೇತುವಾದವನ್ನು ಮುಂದಿಟ್ಟರು. ಬೌದ್ಧಿಕ ನೈತಿಕ ಶ್ರದ್ಧೆ ಹೊಂದಿದ್ದ ಇವರು ಚರ್ಚಿನ ಅತ್ಯುತ್ಸಾಹದ ಬಗ್ಗೆ ಅನಾದರದಿಂದಿದ್ದರು. ತೆಪ್ಪಗೆ ಐಹಿಕ ವ್ಯಾಪಾರನಿರತರಾಗಿರಲೆತ್ನಿಸುತ್ತಿದ್ದ ಇವರ ಧೋರಣೆಯಿಂದ ಚರ್ಚು ಸಾಯದಿದ್ದರೂ ಸತ್ತ್ವ ಹೀನವಾಯಿತು. ಮುಂದೆ ಬಂದ ವೆಸ್ಲಿಗಳು ವ್ಯಕ್ತಿಯ ಪರಿವರ್ತನೆಗೂ ಭಕ್ತಿಗೂ ಬೆಲೆ ಕೊಟ್ಟರು. ಇವರು ಜನರನ್ನು ಕ್ರೈಸ್ತ ಮತಕ್ಕೆ ಪರಿವರ್ತನೆ ಮಾಡುವ ಕಾರ್ಯದಲ್ಲಿ ನಿರತರಾದರು. ಇವರು ಚರ್ಚಿನೊಳಗೇ ಇದ್ದರು. ಅನಂತರದ ಕಾಲದ ಮೆಥಡಿಸ್ಟರು ಚರ್ಚನ್ನೇ ತ್ಯಜಿಸಿದರು (**ನೋಡಿ–ಮೆಥಡಿಸ್ಟ್ ಮಿಷನ್**).

18ನೆಯ ಶತಮಾನದಲ್ಲೂ 19ನೆಯ ಶತಮಾನದಲ್ಲೂ ಚರ್ಚು ಹಿಂದೆ ಸರಿದಿದ್ದಕ್ಕೆ ಅದು ವ್ಯತ್ಯಸ್ತ ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳದಿದ್ದದ್ದೇ ಕಾರಣ. ಮಧ್ಯಯುಗದಿಂದಲೂ ಅದರ ವ್ಯವಸ್ಥೆ ಹಾಗೆಯೇ ಉಳಿದುಕೊಂಡಿತ್ತು. 1830ರಿಂದ ಈಚೆಗೆ ಚರ್ಚ್ ವ್ಯವಸ್ಥೆ ಕಣ್ತೆರೆಯಿತು. 1832ರಲ್ಲಿ ಜಾರಿಗೆ ಬಂದ ರಾಬರ್ಟ್ ಪೀಲನ ಸುಧಾರಣಾ ಕಾಯಿದೆಯಿಂದ ಇದು ಉತ್ತೇಜನ ಪಡೆದು ಹೊಸ ಹೊಸ ಚರ್ಚುಗಳನ್ನು ನಿರ್ಮಿಸಿತು. ಪ್ರಚಾರಕಾರ್ಯ ಭರದಿಂದ ಸಾಗಿತು.

1833ರಲ್ಲಿ ಆಕ್ಸ್‌ಫರ್ಡ್ ಚರ್ಚಿನ ಕೆಲವರು ಹಳೆಯ ಚರ್ಚಿನ ಔನ್ನತ್ಯ ಸ್ಥಾಪನೆ ಮಾಡಲು ಯತ್ನಿಸಿದರು. ಘರ್ಷಣೆಗಳಾದವು. ಇದು ಪೋಪಧಿಕಾರದ ಪಿತೂರಿಯಿರಬಹುದೆಂದೂ ಶಂಕೆಯಾಯಿತು. ಭಿನ್ನ ಭಿನ್ನ ಶ್ರದ್ಧೆಗಳಿಗೆ ಒಳಗಾದ ಪಂಗಡಗಳಲ್ಲಿ ತಿಕ್ಕಾಟವಾಗಿ ಈ ವ್ಯಾಜ್ಯ ಪ್ರಿವಿಕೌನ್ಸಿಲಿನವರೆಗೂ ಹೋಯಿತು. ಕರ್ಮನಿಷ್ಠರು (ರಿಚುಯಲಿಸ್ಟ್ಸ್) ತಮ್ಮ ಪಂಥವೇ ಹೆಚ್ಚೆಂದು ಸಾಧಿಸಲು ಕಾರಾಗೃಹಕ್ಕೆ ಹೋಗಲೂ ಸಿದ್ಧರಾಗಿದ್ದರು.

19ನೆಯ ಶತಮಾನದಲ್ಲಿ ಚರ್ಚಿಗೂ ಪ್ರಭುತ್ವಕ್ಕೂ ನಡುವಣ ಸಂಬಂಧವನ್ನು ನೇರ್ಪುಗೊಳಿಸಲು ನಾನಾ ಕ್ರಮಗಳು ಜಾರಿಗೆ ಬಂದವು. ದೇಶದ ಇತಿಹಾಸದೊಂದಿಗೆ ಬೆಳೆದುಕೊಂಡು ಬಂದ ಚರ್ಚು ಸಂಸ್ಥೆಗೆ ನೀಡಿದ್ದ ಅಧಿಕೃತ ಮನ್ನಣೆಯನ್ನು ಹಿಂತೆಗೆದುಕೊಳ್ಳಬೇಕೆಂಬ ಸೂಚನೆಯೂ ಬಂದಿತ್ತು. ಆದರೆ ಈ ಕ್ರಮದಿಂದ ಅಗಾಧ ಪರಿಣಾಮಗಳಾಗಬಹುದೆಂಬುದು ಅನೇಕರು ವಾದಿಸಿದ್ದರಿಂದ ಈ ಸೂಚನೆ ಜಾರಿಗೆ ಬರಲಿಲ್ಲ. ದ್ವಿತೀಯ ಮಹಾಯುದ್ಧದ ಅನಂತರದ ಕಾಲದಲ್ಲಿ ಚರ್ಚಿನ ವಿಧಿಗಳಲ್ಲೂ ವ್ಯವಸ್ಥೆಯಲ್ಲೂ ನಾನಾ ಮಾರ್ಪಾಟುಗಳಾಗಿವೆ.

20ನೆಯ ಶತಮಾನದಲ್ಲಿ ಉದಾರವಾದ (ಲಿಬರಲಿಸಂ) ಬೆಳೆದಿದೆ. ಇತರ ಕ್ರೈಸ್ತ ಸಂಸ್ಥೆಗಳೊಂದಿಗೆ ಇಂಗ್ಲೆಂಡಿನ ಚರ್ಚಿನ ಬಾಂಧವ್ಯ ಬೆಳೆಯುತ್ತಿದೆ. ಒಮ್ಮೆ ಚರ್ಚಿನ ವ್ಯವಸ್ಥೆಯಿಂದ ಹೊರಬಂದ ಮೆಥಡಿಸ್ಟರ ಪುನರ್ಮಿಲನಕ್ಕಾಗಿ ಬಂದಿರುವ ಸಲಹೆಗಳ ಪರಿಶೀಲನೆ ನಡೆಯುತ್ತಿದೆ.

ಕ್ರೈಸ್ತಮತದ ಮೂಲಭೂತ ತತ್ತ್ವಗಳು ಕೇವಲ ಕೆಲವೇ ಆದ್ದರಿಂದ ಅವನ್ನು ಇಂಗ್ಲೆಂಡಿನ ಚರ್ಚಿನ ಎಲ್ಲರೂ ಒಪ್ಪುತ್ತಾರೆ. ಅಷ್ಟೇನೂ ಅಮುಖ್ಯವಲ್ಲದ ಉಳಿದ ಅನೇಕ ಅಂಶಗಳು ಅವರವರ ಅಭಿಪ್ರಾಯಗಳಿಗೆ ಸಂಬಂಧಪಟ್ಟವಾದ್ದರಿಂದ ಆ ಬಗ್ಗೆ ಇರುವ ಭಿನ್ನತೆಗಳ ಬಗ್ಗೆ ಸಹನೆಯಿದೆ. ಚರ್ಚ್ ವ್ಯವಸ್ಥೆಯಲ್ಲಿ ಭಿನ್ನತೆಗೆ ಎಡೆ ಕೊಟ್ಟಿದ್ದ ಉನ್ನತ, ಅವನತ ಹಾಗೂ ವಿಶಾಲ ಶಾಖೆಗಳವರೆಲ್ಲ ಈ ಸಂಸ್ಥೆಯ ರಕ್ಷೆಯಲ್ಲಿ ಒಂದಾಗಿ ಬಾಳುತ್ತಿದ್ದಾರೆ.

ಇಂಗ್ಲೆಂಡಿನ ಚರ್ಚಿನ ವ್ಯಾಪ್ತಿಗೊಳಪಟ್ಟ ಕ್ಷೇತ್ರವನ್ನು ಎರಡು ಪ್ರಾಂತ್ಯಗಳಾಗಿ ವಿಂಗಡಿಸಿದೆ. ಕ್ಯಾಂಟರ್‌ಬರಿ ಪೀಠದ ವ್ಯಾಪ್ತಿಯಲ್ಲಿ 29 ಮಠಗಳೂ ಯಾರ್ಕ್ ಪೀಠದ ವ್ಯಾಪ್ತಿಯಲ್ಲಿ 14 ಮಠಗಳೂ ಇವೆ (**ನೋಡಿ–ಕ್ಯಾಥೊಲಿಕರು; ಕ್ರೈಸ್ತಮತ, ಪ್ರಾಟೆಸ್ಟೆಂಟರು**). *

**ಇಂಗ್ಲೆಂಡಿನ ನಾಣ್ಯಗಳು:** ಇಂಗ್ಲೆಂಡಿನ ಚರಿತ್ರೆಗಿರುವಂತೆ ಅದರ ನಾಣ್ಯಗಳಿಗೂ ಒಂದು ಭವ್ಯ ಇತಿಹಾಸವಿದೆ. ಪ್ರ.ಶ.ಪೂ. 4ನೆಯ ಶತಮಾನದಿಂದ ಆರಂಭವಾದ ಅಲ್ಲಿನ ನಾಣ್ಯಗಳ ಚರಿತ್ರೆ ವೈವಿಧ್ಯಪೂರ್ಣವೂ ವೈಭವಯುತವೂ ಆಗಿದೆ. ಇಲ್ಲಿ ಕಾಣುವ ಪ್ರಾಚೀನತೆಯ ನಾಣ್ಯಗಳೆಂದರೆ ಗ್ರೀಕ್ ನಾಣ್ಯಗಳು. ಮ್ಯಾಸಿಡೋನಿಯದ 2ನೆಯ ಫಿಲಿಪ್ ರಾಜನ ನಾಣ್ಯಗಳನ್ನು ಅನುಕರಿಸಿ ಮುದ್ರಿತವಾದವುಗಳೇ ಇದುವರೆಗೂ ಇಲ್ಲಿ ದೊರಕಿರುವವುಗಳಲ್ಲಿ ಪ್ರಾಚೀನವಾದವು. (ಪ್ರ.ಶ.ಪೂ.4ನೆಯ ಶತಮಾನದ ಮಧ್ಯಭಾಗ). ಇವು ಚಿನ್ನದಿಂದ ಮಾಡಿದಂತಹವು. ಕಾಲಕ್ರಮೇಣ ಚಿನ್ನದ ಅಂಶ ಕಡಿಮೆಯಾಗುತ್ತ ಬಂತು. ಈ ನಾಣ್ಯಗಳ ಮೇಲೆ ಯಾವ ಬರವಣಿಗೆಯೂ ಕಾಣಬರುವುದಿಲ್ಲ. ಮೂರು ಶತಮಾನಗಳ ಅನಂತರ ರೋಮನ್ನರ ವಿಶ್ವಪ್ರಸಿದ್ಧವಾದ ನ್ಯಾಣಗಳು ಇಂಗ್ಲೆಂಡಿನಲ್ಲಿ ತಮ್ಮ ಪ್ರಭಾವವನ್ನು ಬೀರಲಾರಂಭಿಸಿದವು. ಪ್ರ.ಶ.ಪೂ. ಒಂದನೆಯ ಶತಮಾನದಲ್ಲಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಪ್ರಾರಂಭವಾದವು. ಇವುಗಳಲ್ಲಿ ರಾಜನ ಹೆಸರಿನ ಶಾಸನಗಳು ಕಾಣಬರುತ್ತವೆ. ರೋಮನ್ನರು ಇಂಗ್ಲೆಂಡನ್ನು ತಮ್ಮ ವಶಮಾಡಿಕೊಂಡ ಅನಂತರ, ಇಂಗ್ಲೆಂಡಿನ ಸ್ಥಳೀಯ ನಾಣ್ಯಗಳು ನಾಶವಾದುವು. ಬದಲು ರೋಮನ್ ನಾಣ್ಯಗಳು ಬಳಕೆಗೆ ಬಂದವು. ಲಂಡನ್ನಿನ ಟಂಕಶಾಲೆಯಲ್ಲಿ 5–7ನೆಯ ಶತಮಾನದವರೆಗೆ ಕೀಳುವರ್ಗದ ರೋಮನ್ ನಾಣ್ಯಗಳು ಚಲಾವಣೆಗೆ ಬಂದವು. 7ನೆಯ ಶತಮಾನದ ಅನಂತರ ರೂನಿಕ್ ಲಿಪಿಯ ಶಾಸನಗಳುಳ್ಳ ಸಣ್ಣ ಬೆಳ್ಳಿಯ ನಾಣ್ಯಗಳು ಬಳಕೆಗೆ ಬಂದವು.

8ನೆಯ ಶತಮಾನದಿಂದ ಇಂಗ್ಲೆಂಡಿನ ನಾಣ್ಯಗಳಲ್ಲಿ ಗಮನಾರ್ಹ ಬದಲಾವಣೆಗಳುಂಟಾದುವು. ನಾರ್ಥಾಂಬ್ರಿಯ ರಾಜ್ಯದ ಓಪ ಎಂಬ ರಾಜ ಬೆಳ್ಳಿಯ ಪೆನ್ನಿಗಳನ್ನು ಚಲಾವಣೆಗೆ ತಂದ. ಈ ನಾಣ್ಯ ಬಹುಸುಂದರವಾಗಿದ್ದು ಒಂದು ಕಡೆ ರಾಜನ ಚಿತ್ರವನ್ನು ಹೊಂದಿದೆ. ದಪ್ಪಗೆ ಡೊಂಕಾಗಿರದೆ ಮಟ್ಟಸವಾಗಿ ತೆಳುವಾಗಿದೆ. ಇದು ಬಹಳ ಕಾಲದವರೆಗೆ ಬದಲಾವಣೆಯಿಲ್ಲದೆ ಚಲಾವಣೆಯಲ್ಲಿತ್ತು. ಇದೇ ರಾಜ ಅರಬ್ಬೀ ದೀನಾರಗಳನ್ನು ಹೋಲುವ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದ. ಇದೂ ಬಹು ಸುಂದರವಾದ ನಾಣ್ಯ. ಇದೇ ಸುಮಾರಿಗೆ ಕ್ಯಾಂಟರ್‌ಬರಿಯ ಆರ್ಚ್ ಬಿಷಪ್ ರಾಜನ ಹೆಸರಿನ ಶಾಸನವುಳ್ಳ ನಾಣ್ಯಗಳನ್ನು ಅಚ್ಚು ಹಾಕಿಸಲು ಪ್ರಾರಂಭಿಸಿದ. ಕೆಂಟ್ ಮತ್ತು ಪೂರ್ವ ಆ್ಯಂಗ್ಲಿಯ ರಾಜ್ಯಗಳಲ್ಲೂ ಪೆನ್ನಿ ಬಳಕೆಗೆ ಬಂತು. ವೆಸೆಕ್ಸ್ ಪ್ರಬಲವಾದ ಮೇಲೆ ನಾಣ್ಯಗಳಲ್ಲಿ ಇನ್ನೂ ಕೆಲವು ಹೊಸ ರೀತಿಯವು ಬಳಕೆಗೆ ಬಂದವು. 9 ಮತ್ತು 10ನೆಯ ಶತಮಾನಗಳ ಅನಂತರ ನಾಣ್ಯಗಳ ವಿನ್ಯಾಸ, ಅಂದ, ಲಿಪಿ ಮುಂತಾದವುಗಳಿಗೆ ಹೆಚ್ಚು ಗಮನ ಕೊಡಲಾಯಿತು. ಅಚ್ಚು ಹಾಕಿಸುವ ರಾಜನ ಚಿತ್ರ, ಹೆಸರು ಮತ್ತು ಟಂಕಸಾಲೆಯ ಹೆಸರು ಮುಂತಾದವು ನಾಣ್ಯಗಳಲ್ಲಿ ಇರಬೇಕೆಂಬ ನಿಯಮವೂ ಬಂತು. ಹೀಗಾಗಿ ಈ ಕಾಲದ ನಾಣ್ಯಗಳು ಬಹು ಸುಂದರವಾಗಿದ್ದು ಚರಿತ್ರಕಾರರಿಗೆ ಬಹು ಪ್ರಯೋಜನಕಾರಿಯಾಗಿವೆ. ನಾರ್ಮನ್ ಪ್ರಾಬಲ್ಯ ಹೆಚ್ಚಾದ ಅನಂತರ ನಾಣ್ಯಗಳು ಪದೇ ಪದೇ ಬದಲಾವಣೆಗೊಂಡುವು. ಖೋಟಾನಾಣ್ಯಗಳನ್ನು ತಡೆಯುವುದೇ ಇದರ ಮುಖ್ಯ ಉದ್ದೇಶ. ನಾಣ್ಯಗಳ ಮೂಲಮುದ್ರೆಗಳನ್ನು ಲಂಡನ್ನಿನಲ್ಲಿ ತಯಾರಿಸಿ ದೇಶದ ಟಂಕಸಾಲೆಗಳಿಗೆ ಕಳಿಸಲಾಗುತ್ತಿತ್ತು. 1 ಮತ್ತು 2ನೆಯ ವಿಲಿಯಂ ರಾಜರ ಕಾಲಗಳಲ್ಲಿ ಪೆನ್ನಿಗಳು ಮುಂದುವರಿದವು.

1247ರಲ್ಲಿ 2ನೆಯ ಹೆನ್ರಿ ಟಂಕಸಾಲೆಗಳನ್ನು ಕಡಿಮೆಮಾಡಿ, ನಾಣ್ಯಗಳ ಮೇಲಿದ್ದ ಶಿಲುಬೆಯ ಚಿತ್ರವನ್ನು ದೊಡ್ಡದಾಗಿ ಮಾಡಿದ ಮೊದಲನೆಯ ಎಡ್ವರ್ಡ್ ದೊರೆ ಅರ್ಧ ಪೆನ್ನಿ ಮತ್ತು ಫಾರ್ದಿಂಗು ನಾಣ್ಯಗಳನ್ನೂ ನಾಲ್ಕು ಪೆನ್ನಿ ಮೌಲ್ಯದ ಗ್ರೋಟ್ ಎಂಬ ನಾಣ್ಯವನ್ನೂ ಬಳಕೆಗೆ ತಂದ. ಇವು 2ನೆಯ ಮತ್ತು 3ನೆಯ ಎಡ್ವರ್ಡ್ ದೊರೆಗಳ ಕಾಲದಲ್ಲೂ ಮುಂದುವರಿದುವು. ಮೂರನೆಯ ಹೆನ್ರಿ 20 ಬೆಳ್ಳಿಯ ಪೆನ್ನಿಗಳ ಮೌಲ್ಯದ ಚಿನ್ನದ ಪೆನ್ನಿಗಳನ್ನು ಬಳಕೆಗೆ ತಂದ. ಅನಂತರ ಅದರ ಮೌಲ್ಯವನ್ನು 24 ಬೆಳ್ಳಿಯ ಪೆನ್ನಿಗಳಿಗೆ ಏರಿಸಿದ. ಆದರೆ ಬಹುಬೇಗ ಅದರ ಬಳಕೆಯನ್ನು ನಿಲ್ಲಿಸಿದ. 1344ರಲ್ಲಿ 3ನೆಯ ಎಡ್ವರ್ಡ್ ಅರ್ಧ ಮತ್ತು ಕಾಲುಭಾಗ ಮೌಲ್ಯದ ಫ್ಲೋರಿನ್ ನಾಣ್ಯವನ್ನು ಬಳಕೆಗೆ ತಂದ. ಆಮೇಲೆ ನೋಬಲ್ ಎಂಬ ಚಿನ್ನದ ನಾಣ್ಯವನ್ನೂ ಛಾಪು ಹಾಕಿಸಿದ. ಇದು

1461ರ ವರೆಗೆ 6 ಷಿಲ್ಲಿಂಗ್ ಮತ್ತು 8 ಪೆನ್ನಿಗಳ ಮೌಲ್ಯವನ್ನುಳ್ಳದ್ದಾಗಿತ್ತು. ನಾಣ್ಯದ ಮುಂಭಾಗದಲ್ಲಿ ಮೈಕೆಲನ ಚಿತ್ರವಿರುವುದರಿಂದ ಇದಕ್ಕೆ ಏಂಜಲ್ ಎಂಬ ಹೆಸರು ಬಂತು. ಹಿಂಭಾಗದಲ್ಲಿ ಹಡಗಿನ ಚಿತ್ರಣವಿದೆ. ಇದು ಚಲಾವಣೆಗೆ ಹೆಚ್ಚಾಗಿ ಬರದಿದ್ದರೂ 3–4 ಶತಮಾನಗಳ ಕಾಲ ಅರಮನೆಯಲ್ಲಿ ಮಾತ್ರ ಬಳಕೆಯಲ್ಲಿತ್ತು.

7ನೆಯ ಹೆನ್ರಿಯ ಕಾಲದಲ್ಲಿ ಇಂಗ್ಲೆಂಡಿನ ನಾಣ್ಯಗಳಲ್ಲಿ ಗಮನಾರ್ಹವಾದ ಬದಲಾವಣೆಗಳುಂಟಾದವು. 240 ಗ್ರೇನ್ ಮೌಲ್ಯದ ಸವರನ್ ಎಂಬ ಚಿನ್ನದ ನಾಣ್ಯವನ್ನು ಈತ ಅಚ್ಚು ಹಾಕಿಸಿದ. ಇದರ ಮುಂಭಾಗದಲ್ಲಿ ರಾಜ ಸಿಂಹಸನಾರೂಢನಾಗಿರುವ ಚಿತ್ರಣವಿದೆ. 1583ರಲ್ಲಿ ಇದೇ ರಾಜ ಷಿಲ್ಲಿಂಗ್ ಎಂಬ ನಾಣ್ಯವನ್ನೂ ಬಳಕೆಗೆ ತಂದ. ಅನಂತರ ಬಂದ 8ನೆಯ ಹೆನ್ರಿ ಸವರನ್ ನಾಣ್ಯದ ಚಿನ್ನದ ಮೌಲ್ಯವನ್ನು ತಗ್ಗಿಸಿದ ಮತ್ತು ಕ್ರೌನ್, ಅರ್ಧ ಕ್ರೌನ್ ಎಂಬ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದ. ಅಲ್ಲದೆ ಏಂಜಲ್ ಎಂಬ ನಾಣ್ಯದ ಮೌಲ್ಯವನ್ನು ಹೆಚ್ಚಿಸಿ, ಜಾರ್ಜ್ ನೋಬಲ್ ಎಂಬ ನಾಣ್ಯವನ್ನೂ ಬಳಕೆಗೆ ತಂದ. ಷಿಲ್ಲಿಂಗಿನ ಮೌಲ್ಯವನ್ನೂ ಕಡಿಮೆಮಾಡಿ 12 ಪೆನ್ನಿಯ ಷಿಲ್ಲಿಂಗುಗಳನ್ನು ಬಳಕೆಗೆ ತಂದ. ಕ್ಯಾಂಟರ್ ಬರಿಯ ಟಂಕಸಾಲೆಯನ್ನು ಮುಚ್ಚಿಸಿದ. ಅನಂತರ ಆಳಿದ ಮೇರಿ ಷಿಲ್ಲಿಂಗಿನ ಮೇಲ್ಭಾಗದಲ್ಲಿ ತನ್ನ ಪತಿ ಸ್ಪೇನಿನ ಎರಡನೆ ಫಿಲಿಪ್‌ನ ಚಿತ್ರವನ್ನು ಅಚ್ಚು ಹಾಕಿಸಿದಳು. ಎಲಿಜಬೆತ್ ರಾಣಿ ಸಣ್ಣ ಬದಲಾವಣೆಗಳೊಡನೆ ಹಿಂದಿನ ನಾಣ್ಯಗಳನ್ನು ಮುಂದುವರಿಸಿಕೊಂಡು ಬಂದಳು. ಸ್ಟುವರ್ಟ್ ಮನೆತನದ 1ನೆಯ ಜೇಮ್ಸ್ ವಿವಿಧ ಮೌಲ್ಯದ ಹೊಸ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದ. ತಾಮ್ರದ ಹ್ಯಾರಿಂಗ್ಟನ್ ಫಾರ್ದಿಂಗುಗಳು ಬಳಕೆಗೆ ಬಂದುದು ಇವನ ಕಾಲದಲ್ಲಿ. ಎರಡನೆಯ ಚಾರ್ಲ್ಸ್ ದೊರೆ ಗಿನಿ ಎಂಬ ಚಿನ್ನದ ನಾಣ್ಯವನ್ನು ಬಳಕೆಗೆ ತಂದ. ಆಗ ಇದರ ಮೌಲ್ಯ 20 ಷಿಲ್ಲಿಂಗುಗಳು ಮಾತ್ರ ಇತ್ತು. 1717ರ ಅನಂತರ ಗಿನಿಗೆ 21 ಷಿಲ್ಲಿಂಗುಗಳೆಂದು ನಿರ್ಧರಿಸಲಾಯಿತು. ಈತ ಬೆಳ್ಳಿಯ ಕ್ರೌನ್, ಅರ್ಧ ಕ್ರೌನ್‌ಗಳನ್ನು ಮತ್ತು 1672ರಲ್ಲಿ ಅರ್ಧಪೆನ್ನಿ ಮತ್ತು ಫಾರ್ದಿಂಗು ಮೌಲ್ಯದ ಕಂಚಿನ ನಾಣ್ಯಗಳನ್ನು ಬಳಕೆಗೆ ತಂದ. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಚಿನ್ನದ ಸವರನ್ ಮತ್ತು ಬೆಳ್ಳಿಯ ವಿವಿಧ ನಾಣ್ಯಗಳೂ ಬಳಕೆಗೆ ಬಂದುವು. 1848ರಲ್ಲಿ ವಿಕ್ಟೋರಿಯಾ ರಾಣಿ ಎರಡು ಷಿಲ್ಲಿಂಗಿನ ನಾಣ್ಯವನ್ನು ಅಚ್ಚುಹಾಕಿಸಿದಳು. ಇದು ಬಹಳ ಜನಾನುರಾಗಿಯಾಯಿತು. 1914ರಿಂದ ಬಳಕೆಯಲ್ಲಿಲ್ಲದೇ ಇದ್ದ ಸವರನ್‌ಗಳನ್ನು 1917ರಿಂದ ಮತ್ತೆ ಅಚ್ಚು ಮಾಡಲಾಯಿತು. ಅವೂ ಜನಾನುರಾಗಿಯಾದವು. ಕಾಗದದ ಹಣ ಹೆಚ್ಚಾಗಿ ಬಂದ ಮೇಲೆ ನಾಣ್ಯಗಳ ವೈವಿಧ್ಯ ಮತ್ತು ಸೌಂದರ್ಯಕ್ಕೆ ಧಕ್ಕೆ ಬಂದಿತು. ಆದರೂ ಇತ್ತೀಚೆಗೆ ಇಂಗ್ಲೆಂಡಿನ ನಾಣ್ಯಗಳಲ್ಲಿ ಅನೇಕ ಹೊಸ ರೀತಿಗಳು ಬಳಕೆಗೆ ಬಂದಿವೆ. 2005–06ರಲ್ಲಿಯೂ ಚಾಲ್ತಿಯಲ್ಲಿರುವ ನಾಣ್ಯಗಳೆಂದರೆ ಎರಡು ಪೌಂಡು, ಒಂದು ಪೌಂಡು, 50 ಪೆನ್ಸ್, 20 ಪೆನ್ಸ್, 10 ಪೆನ್ಸ್, 5 ಪೆನ್ಸ್, 2 ಪೆನ್ಸ್ ಮತ್ತು ಒಂದು ಪೆನ್ಸ್. (ಎ.ವಿ.ಎನ್.)

**ಇಂಗ್ಲೆಂಡಿನ ಬ್ಯಾಂಕು:** ಬ್ರಿಟನ್ನಿನ ಕೇಂದ್ರೀಯ ಬ್ಯಾಂಕು (ದಿ ಬ್ಯಾಂಕ್ ಆಫ್ ಇಂಗ್ಲೆಂಡ್). ಇಂಗ್ಲೆಂಡಿನ 3ನೆಯ ವಿಲಿಯಮ್ ದೊರೆಗೆ ಕೊಟ್ಟ ಹನ್ನೆರಡು ಲಕ್ಷ ಪೌಂಡ್ ಸಾಲಕ್ಕೆ ಪ್ರತಿಯಾಗಿ ಲಂಡನ್ ನಗರದ ಕೆಲವು ಮಂದಿ ವರ್ತಕರು ಆ ದೊರೆಯಿಂದ ಸನ್ನದು ಪಡೆದು 1694ರಲ್ಲಿ ಇದನ್ನು ಸ್ಥಾಪಿಸಿದರು. ಥ್ರೆಡ್ ನೀಡ್ಲ್ ರಸ್ತೆಯ ವೃದ್ಧ ವನಿತೆಯೆಂದು ಪ್ರಸಿದ್ಧಿ ಹೊಂದಿರುವ ಈ ಬ್ಯಾಂಕು ಹುಟ್ಟಿದಾಗಲೇ ಕೇಂದ್ರೀಯ ಬ್ಯಾಂಕ್ ಎನಿಸಿಕೊಂಡಿರಲಿಲ್ಲ. ಕ್ರಮೇಣ ಅದಕ್ಕೆ ಈ ಕಾರ್ಯಭಾರ ಲಭ್ಯವಾಯಿತು.



ಬ್ಯಾಂಕಿನ ಒಳಾಂಗಣಗಳಲ್ಲೊಂದು

ಆಗಿನ ಕಾಲದ ಇತರ ಇಂಗ್ಲಿಷ್ ಬ್ಯಾಂಕುಗಳಿಗೂ ಈ ಬ್ಯಾಂಕಿಗೂ ಎರಡು ಮುಖ್ಯ ವ್ಯತ್ಯಾಸಗಳಿದ್ದವು. ಇದು ಸಂಯುಕ್ತ ಬಂಡವಾಳ ಸಂಸ್ಥೆಯಾಗಿ ಸ್ಥಾಪಿತವಾಯಿತು. ಅಲ್ಲದೆ ಇದರ ಬಾಧ್ಯತೆ ಸೀಮಿತವಾದದ್ದಾಗಿತ್ತು. ಇತರ ಬ್ಯಾಂಕುಗಳಂತೆಯೇ ವ್ಯವಹಾರ ನಡೆಸುತ್ತಿದ್ದಾಗ್ಯೂ ಒಂದು ವಿಚಾರದಲ್ಲಿ ಇದು ಅವಕ್ಕಿಂತ ಭಿನ್ನವಾಗಿತ್ತು. ಇದು ಸರ್ಕಾರದ ಬ್ಯಾಂಕಾಗಿತ್ತು. ಈಗಿನಂತೆ ಆಗಲೂ ಸರ್ಕಾರದ ಪರವಾಗಿ ಅದರ ವರಮಾನಗಳನ್ನು ಸ್ವೀಕರಿಸುವುದೂ ಸರ್ಕಾರದ ಆದೇಶದಂತೆ ಅದರ ಪರವಾಗಿ ಹಣ ಪಾವತಿ ಮಾಡುವು ಅಲ್ಲದೆ ಸರ್ಕಾರಕ್ಕೆ ನೇರವಾಗಿ ಸಾಲವನ್ನೂ ನೀಡುತ್ತಿತ್ತು. ಈ ವಿಶೇಷ ಸ್ಥಾನಮಾನಗಳ ಪರಿಣಾಮವಾಗಿ ಕ್ರಮೇಣ ಇದರ ಗೌರವ ಇತರ ಬ್ಯಾಂಕುಗಳದಕ್ಕಿಂತ ಅಧಿಕವಾಯಿತು. ಇದರ ಅಧಿಕಾರ ಬೆಳೆಯಿತು. ಇತರ ಬ್ಯಾಂಕುಗಳ ಮೇಲೆ ಪ್ರಭಾವ ಬೀರುವ ಹಾಗೂ ಅವುಗಳ ಮೇಲೆ ಹತೋಟಿ ಚಲಾಯಿಸುವ ಮಟ್ಟಿಗೆ ಇದರ ಶಕ್ತಿ ಬೆಳೆಯಿತೆನ್ನಬಹುದು. ಹೀಗೆ ಇದು ಕೇಂದ್ರೀಯ ಬ್ಯಾಂಕಾಗಿ ವಿಕಾಸಗೊಂಡಿತು.

ಈ ಬ್ಯಾಂಕಿನ ಸ್ಥಾಪನೆಗಾಗಿ ರಾಜರಿಂದ ಪಡೆದಿದ್ದ ಸನ್ನದಿಗೆ ಇದು ಆಗಿಂದಾಗ್ಗೆ ಜೀವದಾನ ಪಡೆಯಬೇಕಾಗಿತ್ತು. ಈ ಪುನರ್ನವೀಕರಣದ ಒಂದೊಂದು ಸಂದರ್ಭದಲ್ಲೂ ಇದು ರಾಜರಿಗೆ ಕೊಟ್ಟ ಹಣಕ್ಕೆ ಪ್ರತಿಯಾಗಿ ಅದಷ್ಟು ಹೆಚ್ಚು ರಿಯಾಯಿತಿಯನ್ನು ಗಿಟ್ಟಿಸಿಕೊಳ್ಳುತ್ತಿತ್ತು. 1844ರಲ್ಲಿ ಇದರ ಸನ್ನದನ್ನು ಮತ್ತೆ ನವೀಕರಿಸುವ ವೇಳೆಗೆ ಈ ಬ್ಯಾಂಕು ಬಹಳಮಟ್ಟಿಗೆ ತನ್ನ ಪ್ರಾಬಲ್ಯ ಗಳಿಸಿಕೊಂಡಿತು.

ಈ ಬ್ಯಾಂಕಿಗೆ ನೂರು ವರ್ಷ ತುಂಬುವ ವೇಳೆಗೆ ಇದರ ಪ್ರಸಿದ್ಧಿಯೂ ಪ್ರತಾಪವೂ ಎಲ್ಲರ ಗಮನವನ್ನೂ ಸೆಳೆದುವು. ಪಾಶ್ಚಾತ್ಯ ಅರ್ಥಶಾಸ್ತ್ರದ ಪಿತಾಮಹನೆನಿಸಿಕೊಂಡ ಆ್ಯಡಮ್ ಸ್ಮಿತ್ ಕೂಡ ಈ ಸಂಸ್ಥೆಯನ್ನು ಬಾಯಿ ತುಂಬ ಹೊಗಳಿದ. ಈ ಬ್ಯಾಂಕು ಸಾಮಾನ್ಯವಲ್ಲ. ಇದು ಪ್ರಭುತ್ವದ ದೊಡ್ಡ ಚಾಲಕ ಶಕ್ತಿ – ಎಂದು ಅವನು ಬರೆದ.

ಕೇಂದ್ರೀಯ ಬ್ಯಾಂಕಿನ ತತ್ತ್ವಸಿದ್ಧಾಂತಗಳನ್ನು ಕುರಿತು ಆಗಿನ ಕಾಲದಲ್ಲಿ ಇನ್ನೂ ಖಚಿತವಾದ ಭಾವನೆಗಳೇನೂ ಇರಲಿಲ್ಲ. 1877ರಲ್ಲಿ ಬೆಜ್ ಹಟ್ ಎಂಬುವನು ಬರೆದ ಲಂಬಾರ್ಡ್ ಸ್ಟ್ರೀಟ್ ಎಂಬ ಪುಸ್ತಕದಲ್ಲಿ ಮೊಟ್ಟ ಮೊದಲ ಬಾರಿಗೆ ಕೇಂದ್ರೀಯ ಬ್ಯಾಂಕಿನ ವಿಚಾರವಾಗಿ ಸಿದ್ಧಾಂತ ಸಂಹಿತೆಯೊಂದನ್ನು ರಚಿಸಿದ (**ನೋಡಿ– ಬೆಜ್ ಹಟ್**).

18ನೆಯ ಶತಮಾನದಲ್ಲೂ ಈ ಬ್ಯಾಂಕು ಇತರ ಬ್ಯಾಂಕುಗಳಂತೆಯೇ ಮುಂದುವರಿಯಿತು. ಇದರ ಪ್ರಭಾವಾಧಿಕಾರಗಳೇನೋ ಅಧಿಕವಾಗಿದ್ದವು. ಬ್ಯಾಂಕುಗಳ ಕ್ಷೇತ್ರದಲ್ಲಿ ಆಗ ಹಲವಾರು ಬಿಕ್ಕಟ್ಟುಗಳು ಸಂಭವಿಸಿದುವು. ಆದರೆ ತಳಹದಿಯೇ ಅಲುಗಾಡಿತು. ಆಗ ಈ ಬ್ಯಾಂಕು ಹೆಚ್ಚು ಹೆಚ್ಚು ಹೊಣೆಗಾರಿಕೆಯಿಂದ ಆ ಕ್ಷೇತ್ರದ ನೆರವಿಗೆ ಬಂದು ಸ್ಥೈರ್ಯ ಸ್ಥಾಪನೆ ಮಾಡುವುದು ಅವಶ್ಯವಾಗಿತ್ತು. ಆಗ ಅನೇಕ ಬ್ಯಾಂಕುಗಳು ಅತಿಯಾಗಿ ಸಾಲನೀಡಿ ತಮ್ಮ ಮೈಮೇಲೆ ಕಷ್ಟ ತಂದುಕೊಂಡಿದ್ದವು ಅನೇಕ ಬ್ಯಾಂಕುಗಳು ಮುಳುಗಿ ಹೋದವು. ಆದರೂ ಈ ಬ್ಯಾಂಕು ಮೊದಮೊದಲು ಅವುಗಳ ರಕ್ಷಣೆಗಾಗಿ ಏನೂ ಕ್ರಮ ಕೈಕೊಳ್ಳಲಿಲ್ಲ. 1837ರ ವೇಳೆಗೆ ಇದಕ್ಕೆ ತನ್ನ ಹೊಣೆಗಾರಿಕೆಯ ಅರಿವು ಮೂಡಿತು. ಆಗ ಇದು ಸಣ್ಣಪುಟ್ಟ ಬ್ಯಾಂಕುಗಳಿಗೆ ಆಪದ್ಬಂಧುವಾಗಿ ಕಾರ್ಯ ನಿರ್ವಹಿಸಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪದೇ ಪದೇ ಸಂಭವಿಸುತ್ತಿದ್ದ ಈ ಬಿಕ್ಕಟ್ಟುಗಳಿಂದ ಸರ್ಕಾರದ ಕಣ್ಣೂ ತೆರೆಯಿತು. ಈ ಬ್ಯಾಂಕುಗಳು ಹೊಂದಿದ್ದ ನೋಟು ಮುದ್ರಿಸಿ ಚಲಾವಣೆಗೆ ನೀಡುವ, ಹಕ್ಕುಗಳ ಮೇಲೆ ಹತೋಟಿ ಹೊಂದಲು 1844ರಲ್ಲಿ ಒಂದು ಅಧಿನಿಯಮ ಜಾರಿಗೆ ಬಂತು. ಇಂಗ್ಲೆಂಡಿನ ಬ್ಯಾಂಕಿನ ಕಾರ್ಯಭಾರವನ್ನು ಎರಡು ಇಲಾಖೆಗಳಾಗಿ ವಿಂಗಡಿಸಲಾಯಿತು. ದೇಶದ ಅಗತ್ಯಕ್ಕೆ ತಕ್ಕ ಪ್ರಮಾಣದಲ್ಲಿ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ನೀಡುವುದು ನೋಟು ನೀಡಿಕೆ ಇಲಾಖೆಯ ಕರ್ತವ್ಯವಾಯಿತು. ಬ್ಯಾಂಕಿನ ಇತರ ವ್ಯವಹಾರಗಳ ನಿರ್ವಹಣೆ ಬ್ಯಾಂಕಿಂಗ್ ಇಲಾಖೆಯ ಕರ್ತವ್ಯವಾಯಿತು. ಈ ಬ್ಯಾಂಕು 140 ಲಕ್ಷ ಪೌಂಡುಗಳವರೆಗೆ ಯಾವ ನಿರ್ಬಂಧವೂ ಇಲ್ಲದೆ ನೋಟು ಪ್ರಚಾಲನ ಮಾಡಬಹುದಾಗಿತ್ತು. ಈ ಮಿತಿಗಿಂತ ಅಧಿಕವಾಗಿ ಪ್ರಚಾಲನ ಮಾಡುವ ಪ್ರತಿ ನೋಟಿನ ಹಿಂದೆಯೂ ಕೈಗಾವಲಾಗಿ ಚಿನ್ನ ಬೆಳ್ಳಿಗಳನ್ನಿಟ್ಟಿರಬೇಕಾಗಿತ್ತು (**ನೋಡಿ– ನೋಟು–ನೀಡಿಕೆ**). ಆಗ ಇಂಗ್ಲೆಂಡ್ ಬ್ಯಾಂಕಲ್ಲದೆ ಇನ್ನೂ ಎಪ್ಪತ್ತೆರಡು ಬ್ಯಾಂಕುಗಳು ನೋಟು ಪ್ರಚಾಲನ ಮಾಡುತ್ತಿದ್ದುವು. 1844 ರ ಅಧಿನಿಯಮದಲ್ಲಿ ಇತರ ಬ್ಯಾಂಕುಗಳ ನೋಟು ಪ್ರಚಾಲನೆಯ ಅಧಿಕಾರವನ್ನೂ ತೀವ್ರ ಹತೋಟಿಗೆ ಒಳಪಡಿಸಲಾಯಿತು. ಇವು ಇನ್ನು ಮುಂದೆ ತಮ್ಮ ನೋಟು ಪ್ರಚಾಲನೆಯನ್ನು ಈ ಅಧಿನಿಯಮ ಜಾರಿಗೆ ಬಂದಾಗಿನಿಂದ ಹಿಂದಿನ ಹನ್ನೆರಡು ವಾರಗಳ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿಸುವಂತಿರಲಿಲ್ಲ. ಈ ಬ್ಯಾಂಕುಗಳಲ್ಲದೆ ಬೇರೆ ಯಾವ ಬ್ಯಾಂಕಿಗೂ ನೋಟು ನೀಡಿಕೆಯ ಅಧಿಕಾರ ದೊರಕುವಂತಿರಲಿಲ್ಲ. ಈ ಅಧಿಕಾರವಿರುವ ಬ್ಯಾಂಕುಗಳ ಪೈಕಿ ಯಾವುದಾದರೂ ಬ್ಯಾಂಕು ಲಂಡನ್ನಿನಲ್ಲಿ ಒಂದು ಶಾಖೆ ತೆರೆದರಾಗಲಿ, ಇನ್ನೊಂದು ಬ್ಯಾಂಕಿನೊಂದಿಗೆ ಸಮ್ಮಿಲನ ಹೊಂದಿದರಾಗಲಿ ಅದು ತನ್ನ ನೋಟು ನೀಡಿಕೆಯ ಹಕ್ಕು ಕಳೆದುಕೊಳ್ಳುತ್ತಿತ್ತು. ಈ ಕ್ರಮಗಳ ಪರಿಣಾಮವಾಗಿ ಕಾಲಕ್ರಮೇಣ ಇಂಗ್ಲೆಂಡಿನ ಬ್ಯಾಂಕು ಆ ದೇಶದಲ್ಲಿ ಬ್ಯಾಂಕ್ ನೋಟು ನೀಡುವ ಏಕೈಕ ಸಂಸ್ಥೆಯಾಯಿತು. ಉಳಿದ ಬ್ಯಾಂಕುಗಳು ಇದಕ್ಕಿಂತ ಒಂದು ಮೆಟ್ಟಿಲು ಕೆಳಗೆ ನಿಂತುಕೊಂಡುವು.

ಮುಂದಿನ ವರ್ಷಗಳಲ್ಲಿ ಈ ಬ್ಯಾಂಕು ಕೇಂದ್ರೀಯ ಬ್ಯಾಂಕಿನ ಕರ್ತವ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಿತು. ಬ್ಯಾಂಕ್ ದರವೇ ಮುಂತಾದ ನಾನಾ ಉಪಾಯಗಳ ಮೂಲಕ ಇದು ಇತರ ಬ್ಯಾಂಕುಗಳ ಮೇಲೂ ಲಂಡನ್ನಿನ ಹಣದ ಪೇಟೆಯ ಮೇಲೂ ಹೆಚ್ಚು ನಿಯಂತ್ರಣಾಧಿಕಾರ ಹೊಂದಿತು. ಇದರ ಹೊಣೆಯೂ ಬ್ಯಾಂಕುಗಳ ಬ್ಯಾಂಕಾಗಿ, ಬ್ಯಾಂಕುಗಳಿಗೆ ಅಂತಿಮವಾಗಿ ಸಾಲ ನೀಡುವ ಸಂಸ್ಥೆಯಾಗಿ ಇದರ ಸ್ವರೂಪ ಬೆಳೆಯಿತು.

ಅಲ್ಲಿನ ಸರ್ಕಾರದ ಖಜಾನೆಯ ನಿಕಟ ಸಹವರ್ತಿಯಾಗಿ ಈ ಬ್ಯಾಂಕು ಕೆಲಸ ಮಾಡತೊಡಗಿತು. ಸರ್ಕಾರದ ಹಣಕಾಸಿನ ನೀತಿಗಳನ್ನು ಕಾರ್ಯರೂಪಕ್ಕೆ ತರಲು ನೆರವಾಯಿತು. ಈ ಉದ್ದೇಶದಿಂದ ಬ್ಯಾಂಕ್ ದರ ಹಾಗೂ ಪೇಟೆಯ ಬಹಿರಂಗ ವ್ಯವಹಾರಗಳೆಂಬ ಅವಳಿಜವಳಿ ಅಸ್ತ್ರಗಳನ್ನು ಪ್ರಯೋಗಿಸಿ ಪರಿಷ್ಕರಿಸಿತು. ದ್ವಿತೀಯ ಯುದ್ಧಾನಂತರದ ಕಾಲದಲ್ಲಿ ಆ ದೇಶದ ಪೌಂಡ್ ಸ್ಟರ್ಲಿಂಗ್ ನಾಣ್ಯದ ವಿನಿಮಯ ಸ್ತಿಮಿತಗೊಳಿಸುವ ಸಲುವಾಗಿ ಏರ್ಪಟ್ಟ ವಿದೇಶೀ ವಿನಿಮಯ ನಿಧಿಯನ್ನು ನಿರ್ವಹಿಸತೊಡಗಿತು. ಬ್ರಿಟನ್ನಿನ ಚಿನ್ನದ ಸಂಚಿತಿಯಿರುವುದು ಈ ಬ್ಯಾಂಕಿನಲ್ಲಿ. ಜೊತೆಗೆ ಸಾಮಾನ್ಯ ಬ್ಯಾಂಕಿಂಗ್ ವ್ಯವಹಾರವನ್ನೂ ಇದು ಅಲ್ಪ ಪ್ರಮಾಣದಲ್ಲಿ ನಿರ್ವಹಿಸುತ್ತಿದೆ **(ನೋಡಿ– ಕೇಂದ್ರೀಯ–ಬ್ಯಾಂಕು)**.

ದ್ವಿತೀಯ ವಿಶ್ವ ಯುದ್ಧಾನಂತರದಲ್ಲಿ ಬ್ರಿಟನ್ನಿನಲ್ಲಿ ಲೇಬರ್ ಸರ್ಕಾರ ಏರ್ಪಟ್ಟಾಗ ಆ ಸರ್ಕಾರ ಕೈಗೊಂಡ ಮೊಟ್ಟಮೊದಲ ಕ್ರಮವೆಂದರೆ ಈ ಬ್ಯಾಂಕಿನ ರಾಷ್ಟ್ರೀಕರಣ. ಇದು ಆದದ್ದು 1946ರ ಮಾರ್ಚ್ 1ರಂದು. ಆ ದೇಶದ ಕೇಂದ್ರೀಯ ಬ್ಯಾಂಕಾಗಿ ಬೆಳೆದುಕೊಂಡು ಬಂದಿದ್ದ ಈ ಬ್ಯಾಂಕಿನ ಒಡೆತನ ಅಂದಿನಿಂದ ಸರ್ಕಾರಕ್ಕೆ ಹೋಯಿತು. ಆದರೆ ಇದು ಕೇವಲ ವಿಧಿವಿಹಿತ ಬದಲಾವಣೆ ಮಾತ್ರ. ಈ ಸಂಸ್ಥೆಯ ಆಗಿನ ರಚನೆಯಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಲಿಲ್ಲ. ಸರ್ಕಾರಿ ಒಡೆತನಕ್ಕೆ ಹೊಂದಿಕೊಳ್ಳದ ಲಕ್ಷಣಗಳ ವಿನಾ ಬೇರೆ ಯಾವುದನ್ನೂ ಬದಲಾಯಿಸಲಿಲ್ಲ. ಬ್ಯಾಂಕಿನ ನೀತಿಗೆ ಸಂಬಂಧಿಸಿದ ವಿಚಾರಗಳಲ್ಲಿ ಸರ್ಕಾರದ ಅಧಿಕಾರವೂ ಹತೋಟಿಯೂ ಇರುವುದಾದರೂ ಬ್ಯಾಂಕಿನ ದಿನವಹಿ ಆಡಳಿತದಲ್ಲಿ ಸರ್ಕಾರ ತಲೆ ಹಾಕುವುದಿಲ್ಲ. ಆದರೆ 1946ರ ಬ್ಯಾಂಕ್ ಆಫ್ ಇಂಗ್ಲೆಂಡ್ ಕಾಯಿದೆಯ 1 ಮತ್ತು 2ನೆಯ ಉಪನಿಬಂಧನೆಗಳಿಗನುಗುಣವಾಗಿ ಅದಕ್ಕೆ ವಿಶಾಲವಾದ ಅಧಿಕಾರ ಉಂಟು.

ಬ್ಯಾಂಕಿನ ನಿರ್ದೇಶಕ ಮಂಡಲಿಯ (ಬೋರ್ಡ್ ಆಫ್ ಡೈರೆಕ್ಟರ್ಸ್) ರಚನೆಯಲ್ಲಿ ಹಲವು ಬದಲಾವಣೆಗಳಾಗಿವೆ. ಸದಸ್ಯರ ಸಂಖ್ಯೆ ಇಳಿದಿದೆ. ನಿರ್ದೇಶಕರು ಸಾಮಾನ್ಯವಾಗಿ ನಾಲ್ಕು ವರ್ಷಕಾಲ ಅಧಿಕಾರದಲ್ಲಿರುತ್ತಾರೆ. ಅವರ ಪೈಕಿ ನಾಲ್ಕನೆಯ ಒಂದರಷ್ಟು ಸಂಖ್ಯೆಯ ಸದಸ್ಯರು ಸರದಿಯ ಪ್ರಕಾರವಾಗಿ ವರ್ಷ ವರ್ಷ ನಿವೃತ್ತಿ ಹೊಂದುತ್ತಾರೆ. ಯಾವುದೇ ಕಾಲದಲ್ಲಾಗಲಿ ಸರ್ಕಾರ ಎಲ್ಲ ನಿರ್ದೇಶಕರನ್ನೂ ಒಟ್ಟಿಗೆ ವಜಾ ಮಾಡಿ ಅವರ ಸ್ಥಾನಗಳಲ್ಲಿ ಹೊಸಬರನ್ನು ನೇಮಿಸುವಂತಿಲ್ಲ. ಬ್ಯಾಂಕಿನ ಆಡಳಿತ ತಡೆಯಿಲ್ಲದೆ ಮುಂದುವರಿಯುವುದು ಸಾಧ್ಯವಾಗುವಂತೆ ಗವರ್ನರ್ ಮತ್ತು ಡೆಪ್ಯುಟಿ ಗವರ್ನರುಗಳ ಅಧಿಕಾರಾವಧಿಯನ್ನು ಎರಡು ವರ್ಷಗಳಿಂದ ಐದು ವರ್ಷಗಳಿಗೆ ವಿಸ್ತರಿಸಿದೆ.

ದೇಶದ ಕೈಗಾರಿಕೆಗಳ ಪುನರುದ್ಧಾರ ಹಾಗೂ ಪುನಾರಚನೆಯ ಉದ್ದೇಶದಿಂದ ಬ್ಯಾಂಕು ಯುದ್ಧಾನಂತರದ ಕಾಲದಲ್ಲಿ ತನ್ನ ಹಳೆಯ ದೃಷ್ಟಿಯನ್ನು ತ್ಯಜಿಸಿತು. ಲಂಡನ್ ನಗರದ ಹಣಕಾಸಿನ ವ್ಯವಸ್ಥೆಯ ಬಲವನ್ನೂ ಪ್ರಯತ್ನಗಳನ್ನೂ ಒಟ್ಟುಗೂಡಿಸಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಹರಿಯುವಂತೆ ವಿಶಿಷ್ಟವಾದ ಸಂಸ್ಥೆಗಳನ್ನು ನಿರ್ಮಾಣ ಮಾಡಿತು. ಎಲ್ಲ ವರ್ಗಗಳ ಹಿತಗಳನ್ನೂ ಅನುಲಕ್ಷಿಸಿ ಸಾಮಾಜಿಕ ಸುರಕ್ಷತೆ ಸ್ಥಾಪಿಸುವ ಹೊಣೆ ಹೊತ್ತ ಸರ್ಕಾರಕ್ಕೆ ಇದು ಗೆಳೆಯ, ದಾರ್ಶನಿಕ ಹಾಗೂ ಮಾರ್ಗದರ್ಶಿಯಾಗಿ ವರ್ತಿಸುತ್ತದೆ.

ಇಂಗ್ಲೆಂಡಿನ ಈ ಸಂಸ್ಥೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅತ್ಯಂತ ಶ್ರೇಷ್ಠ ಸಂಪ್ರದಾಯಗಳನ್ನು ಸ್ಥಾಪಿಸಿದೆ. ಪ್ರಪಂಚದ ಅತ್ಯಂತ ಹಿರಿಯ ಕೇಂದ್ರೀಯ ಬ್ಯಾಂಕೆಂದರೆ ಇಂಗ್ಲೆಂಡಿನ ಬ್ಯಾಂಕು. ಇತರ ದೇಶಗಳು ಈ ಸಂಸ್ಥೆಯ ಸಂವಿಧಾನವನ್ನೇ ಬಹುಮಟ್ಟಿಗೆ ಅನುಸರಿಸಿ ತಂತಮ್ಮ ಬ್ಯಾಂಕಿಂಗ್ ವ್ಯವಸ್ಥೆಗಳನ್ನು ಸುಭದ್ರವಾದ ಅಸ್ತಿಭಾರದ ಮೇಲೆ ರಚಿಸಿಕೊಂಡಿವೆ. (ಸಿ.ಸಿ.ಪಿ.)

**ಇಂಗ್ಲೆಂಡಿನ ರಾಜಕೀಯ ಬೆಳೆವಣಿಗೆ:** ವೇಲ್ಸ್, ಸ್ಕಾಟ್ಲೆಂಡ್, ಉತ್ತರ ಐರ್ಲೆಂಡುಗಳೊಡಗೂಡಿ ಸಾಂಕುಶ ರಾಜಪ್ರಭುತ್ವ ಹೊಂದಿರುವ ಇಂಗ್ಲೆಂಡು ಪ್ರಪಂಚದ ನಾಗರಿಕತೆಗೆ ನೀಡಿರುವ ಅನೇಕ ಕೊಡುಗೆಗಳ ಪೈಕಿ ಇದರ ಪ್ರಜಾತಾಂತ್ರಿಕ ಸಂಸ್ಥೆಗಳು ಪ್ರಮುಖವಾಗಿವೆ. ಈ ಸಂಸ್ಥೆಗಳ ಹಾಗೂ ಸಂಸದೀಯ (ಪಾರ್ಲಿಮೆಂಟರಿ) ಪದ್ಧತಿಯ ಬೆಳೆವಣಿಗೆಯ ಇತಿಹಾಸವೇ ಇಂಗ್ಲೆಂಡಿನ ಇತಿಹಾಸ. ಪಾರ್ಲಿಮೆಂಟರಿ ಸಂಸ್ಥೆಗಳಿಗೆ ಜನ್ಮ ನೀಡಿ ಅವನ್ನು ವಿಕಾಸಗೊಳಿಸಿ ಬೇರೆ ದೇಶಗಳ ರಾಜಕೀಯ ವ್ಯವಸ್ಥೆಗಳ ಮೇಲೆ ಪ್ರಭಾವ ಬೀರಿದ ಇಂಗ್ಲೆಂಡು ಪಾರ್ಲಿಮೆಂಟುಗಳ ಜನನಿ ಎಂದು ಪ್ರಸಿದ್ಧವಾಗಿದೆ. ರೋಮ್ ಸಾಮ್ರಾಜ್ಯದ ಪತನವಾದಂದಿನಿಂದ ಇಲ್ಲಿ ಕ್ರಮವಾಗಿ ಆಧುನಿಕ ರಾಜಕೀಯ ವ್ಯವಸ್ಥೆ ವಿಕಾಸಗೊಳ್ಳುತ್ತ ಬಂದಿದೆ. ಇತರ ರಾಷ್ಟ್ರಗಳು ಅದೆಷ್ಟೋ ಸಲ ತಮ್ಮ ರಾಜಕೀಯ ವ್ಯವಸ್ಥೆಗಳನ್ನು ಬದಲಾಯಿಸಿಕೊಂಡಿವೆ. ಆದರೆ, ಇದು ಕಳೆದ 9 ಶತಮಾನಗಳಿಂದ ಪಾರ್ಲಿಮೆಂಟರಿ ಸಂಸ್ಥೆಗಳನ್ನು ವಿಕಾಸಗೊಳಿಸುತ್ತ, ಸಮಯಕ್ಕೆ ತಕ್ಕ ಬದಲಾವಣೆಗಳನ್ನು ಹೊಂದುತ್ತ ಬಂದಿದೆ. ಒಂದು ಕಾಲದಲ್ಲಿ ಸರ್ವಾಧಿಕಾರ ಹೊಂದಿದ್ದ ಅರಸುತನ ಇಂದು ಸಾಂಕೇತಿಕ ಸಂಸ್ಥೆ ಮಾತ್ರ. ಪರಮಾಧಿಕಾರ ಅರಸನಿಂದ ಶ್ರೀಮಂತವರ್ಗದವರ ಮೂಲಕವಾಗಿ ಪ್ರಜೆಗಳ ಕೈಸೇರಿದೆ; ಇಂದು ಅದು ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ವ್ಯಾವಹಾರಿಕವಾಗಿ ನೆಲೆಗೊಂಡಿದೆ. ಅರಸನನ್ನೊಳಗೊಂಡ ದ್ವಿಸದನಗಳುಳ್ಳ ಪಾರ್ಲಿಮೆಂಟ್ ಪರಮಾಧಿಕಾರ ಹೊಂದಿದ್ದರೂ ತತ್ತ್ವಶಃ ಅದು ಪ್ರಜೆಗಳಿಗೆ ಸೇರಿದ್ದಾಗಿದೆ. ಈ ರಾಜ್ಯಾಧಿಕಾರ ಪಡೆಯುವ ಸಲುವಾಗಿ ಪ್ರಜೆಗಳು ಅರಸನೊಂದಿಗೆ ಅವಿರತ ಹೋರಾಟ ನಡೆಸಬೇಕಾಯಿತು. 1215ರಲ್ಲಿ ಮ್ಯಾಗ್ನಕಾರ್ಟವೆಂಬ ಮಹಾಸನ್ನದಿಗೆ ಜಾನ್ ದೊರೆಯ ಅಂಕಿತ ಬಿದ್ದಂದಿನಿಂದ ಆರಂಭವಾದ ಈ ಕ್ರಮ ಸಾಂಕುಶ ರಾಜಪ್ರಭುತ್ವ ಹಾಗು ಪಾರ್ಲಿಮೆಂಟಿನ ಸಾರ್ವಭೌಮತ್ವ ಸ್ಥಾಪಿಸುವಲ್ಲಿ ಯಶಸ್ವಿಯಾಗಿ ಮುಂದುವರಿದಿದೆ.

**ರಾಜಕೀಯ ವ್ಯವಸ್ಥೆಯ ವಿಕಾಸ:** ಇಂಗ್ಲೆಂಡನ್ನೊಳಗೊಂಡ ಬ್ರಿಟನ್ನಿನ ಇಂದಿನ ರಾಜಕೀಯ ಹಾಗೂ ಸಾಮಾಜಿಕ ಸಂಸ್ಥೆಗಳು ಅನೇಕ ಶತಮಾನಗಳಿಂದ ಸುಧಾರಣೆಗೊಳ್ಳುತ್ತ, ವಿಕಾಸಗೊಳ್ಳುತ್ತ ಬಂದವುಗಳಾಗಿವೆ. ಇವುಗಳಲ್ಲಿ ಪ್ರಮುಖವಾದವುಗಳಾದ ಪ್ರಜಾತಾಂತ್ರಿಕ ರಾಜಕೀಯ ಸಂಸ್ಥೆ–ಸಂಘಟನೆಗಳು, ಅರಸರ, ಶ್ರೀಮಂತರ ಮತ್ತು ಸಾಮಾನ್ಯ ಪ್ರಜೆಗಳ ನಡುವೆ ಅಧಿಕಾರಕ್ಕಾಗಿ ನಡೆದ ಹೋರಾಟದ ಪರಿಣಾಮವಾಗಿ ಬೆಳೆದುಬಂದಿವೆ. ಇವುಗಳ ವಿಕಾಸಕ್ರಮವನ್ನು ಅರಿಯಲು ಬ್ರಿಟನ್ನಿನ ರಾಜಮನೆತನಗಳ ಇತಿಹಾಸವನ್ನೂ ಅರಸರ ದಬ್ಬಾಳಿಕೆಯನ್ನು ತಡೆಗಟ್ಟಲು ಶ್ರೀಮಂತವರ್ಗವೂ ತದನಂತರದಲ್ಲಿ ಜನಸಾಮಾನ್ಯರೂ ನಡೆಸಿದ ಹೋರಾಟದ ಇತಿಹಾಸವನ್ನೂ ಅರಿತುಕೊಳ್ಳಬೇಕಾದ್ದು ಅಗತ್ಯ.

11ನೆಯ ಶತಮಾನದಿಂದ ಈ ದೇಶದ ಇತಿಹಾಸಯುಗ ಕ್ರಮವಾಗಿ ಆರಂಭವಾಯಿತಾದರೂ ಇದಕ್ಕೆ ಮೊದಲೇ ಇಲ್ಲಿ ಮುಂಬರಲಿದ್ದ ರಾಜಕೀಯ ಸಂಸ್ಥೆಗಳ ರೂಪರೇಷೆಗಳು, ವಿಚಾರಧಾರೆಗಳು ಮೂಡಿದ್ದುವು. ಶಿಲಾಯುಗದಲ್ಲಿ ಐಬೀರಿಯನ್ಸ್ ಎಂಬ ಜನಾಂಗದವರು ನೆಲೆಸಿದ್ದ ಈ ದೇಶದಲ್ಲಿ ಪ್ರ.ಶ.ಪೂ. 6ನೆಯ ಶತಮಾನಕ್ಕೆ ಸ್ವಲ್ಪ ಮುಂಚೆ ಯುರೋಪಿನ ಉತ್ತರಭಾಗದ ಕೆಲ್ಟಿಕ್ ಜನಾಂಗಕ್ಕೆ ಸೇರಿದ ಜನ ಈ ದ್ವೀಪದ ಮೇಲೆ ಹಂತ ಹಂತವಾಗಿ ದಾಳಿಯಿಟ್ಟು ಇಂದಿನ ಇಂಗ್ಲೆಂಡ್ ಹಾಗು ವೇಲ್ಸ್ ಪ್ರದೇಶಗಳಲ್ಲಿ ನೆಲೆಗೊಂಡರು. ಪ್ರ.ಶ.ಪೂ. 55ರಲ್ಲಿ ರೋಮಿನ ಜ್ಯೂಲಿಯಸ್ ಸೀಸ಼ರ್ ತನ್ನ ಸೈನ್ಯದೊಂದಿಗೆ ಬ್ರಿಟನ್ನಿನ ದಕ್ಷಿಣ ಭಾಗದಲ್ಲಿ ಕಾಲಿರಿಸಿದ್ದ. ಒಂದು ಶತಮಾನದ ಅನಂತರ ರೋಮನ್ ವಸಾಹತು ಕಾರ್ಯ ಆರಂಭವಾಗಿ ಪ್ರ.ಶ.85ರ ವೇಳೆಗೆ ಸ್ಕಾಟ್ಲೆಂಡ್ ಪ್ರದೇಶವನ್ನುಳಿದು ಬ್ರಿಟನ್ನಿನ ಇತರ ಭಾಗ ರೋಮ್ ಸಾಮ್ರಾಜ್ಯದ ಅಧೀನವಾಯಿತು. ಪಟ್ಟಣಗಳೂ ಹೆದ್ದಾರಿಗಳೂ ನಿರ್ಮಿತವಾದುವು. ರೋಮ್ ಸಾಮ್ರಾಜ್ಯದಲ್ಲಿ ಸ್ಥಾನೀಯ ಸ್ವಯಂ ಆಡಳಿತಕ್ಕೆ ಅವಕಾಶವಿತ್ತಿದ್ದರಿಂದ ಪಟ್ಟಣಗಳ ಆಡಳಿತ ವ್ಯವಸ್ಥೆ ಪ್ರಾಮುಖ್ಯ ಹೊಂದಿತು.

ಇದೇ ಕಾಲಕ್ಕೆ ಲಂಡನ್ ಕೇಂದ್ರ ಪಟ್ಟಣವಾಯಿತು. ಆದರೆ ರೋಮ್ ಸಾಮ್ರಾಜ್ಯದ ಪತನದೊಂದಿಗೆ ಬ್ರಿಟನ್ನಿನ ಸ್ಥಿತಿ ಬದಲಾಗುತ್ತ ಬಂತು. 5ನೆಯ ಶತಮಾನದ ಆರಂಭದಲ್ಲಿ ಉತ್ತರ ಯುರೋಪಿನಿಂದ ಆಂಗ್ಲ, ಸ್ಯಾಕ್ಸನ್ ಹಾಗು ಜ್ಯೂಟ್ ಜನಾಂಗದವರೂ ಅನಂತರ ಡೇನಿಶ್ ಜನರೂ ಇಲ್ಲಿ ಬಂದು ನೆಲೆಸಿ ಪ್ರಬಲಗೊಂಡು 500–800ರ ವರೆಗೆ ಕೆಂಟ್, ಎಸೆಕ್ಸ್, ವೆಸೆಕ್ಸ್, ಸಸೆಕ್ಸ್, ಪೂರ್ವ ಆಂಗ್ಲಿಯ, ಮರ್ಸಿಯ ಹಾಗೂ ನಾರ್ಥಾಂಬ್ರಿಯ ರಾಜ್ಯಗಳನ್ನು ಕಟ್ಟಿಕೊಂಡರು. ಈ ಮಧ್ಯೆ 597ರಲ್ಲಿ ಪೋಪ್ ಪ್ರಥಮ ಗ್ರಿಗೊರಿ ಕಳಿಸಿದ ಧರ್ಮ ಪ್ರಚಾರದ ಮಂಡಲಿ ಇಲ್ಲಿ ಕ್ರೈಸ್ತಮತ ಪ್ರಚಾರ ಮಾಡಿ ಜನರನ್ನು ಆ ಮತಕ್ಕೆ ಪರಿವರ್ತಿಸಿ ದೇಶದ ಸಾಂಸ್ಕೃತಿಕ ಏಕತೆ ಸಾಧಿಸಿತು. ಮುಂದೆ 9ನೆಯ ಶತಮಾನದ ಆರಂಭದಲ್ಲಿ ಬ್ರಿಟನ್ನಿನ ಚಿಕ್ಕ ಚಿಕ್ಕ ರಾಜ್ಯಗಳು ವೆಸೆಕ್ಸ್ ರಾಜ್ಯದ ನೇತೃತ್ವದಲ್ಲಿ ಒಂದುಗೂಡಿದವು. ಎಗ್ಬರ್ಟ್ ಎಂಬುವನು ಹೀಗೆ ಒಂದುಗೂಡಿದ ರಾಜ್ಯದ ಪ್ರಥಮ ಪ್ರಭುವಾದ. ಆ್ಯಂಗ್ಲೊ–ಸ್ಯಾಕ್ಸನರಿಂದ ಸ್ಥಾಪಿಸಲ್ಪಟ್ಟ ಈ ರಾಜಪ್ರಭುತ್ವ ಸಂಸ್ಥೆ ಅಷ್ಟೊಂದು ಬಲಯುತವಾಗಿರಲಿಲ್ಲ. ಟ್ಯೂಟಾನಿಕ್ ಜನರ ಸಂಪ್ರದಾಯದ ಪ್ರಕಾರ ರಾಜಯೋಗ್ಯ ಮನೆತನದಿಂದ ಅರಸರ ಆಯ್ಕೆಯಾಗುತ್ತಿತ್ತು. ಜನಾಂಗದ ಮುಖ್ಯಸ್ಥ ಹಾಗು ಸೇನಾನಾಯಕನಾಗಿ, ಶ್ರೀಮಂತವರ್ಗದ ಸೇನಾಧಿಪತಿಗಳಿಂದಲೂ, ಬುದ್ಧಿವಂತರಿಂದಲೂ ಪ್ರತಿಷ್ಠಿತ ವ್ಯಕ್ತಿಗಳಿಂದಲೂ ಕೂಡಿದ ಒಂದು ಮಂಡಲಿಯ ಸಲಹೆಯ ಮೇರೆಗೆ ಆತ ರಾಜ್ಯವಾಳುತ್ತಿದ್ದ. ಸರ್ಕಾರದ ಸಕಲಾಧಿಕಾರಗಳು ಅರಸನಲ್ಲಿಯೇ ಕೇಂದ್ರೀಕೃತವಾಗಿದ್ದವು. ಜನಾಂಗದ ಸಂಪ್ರದಾಯಗಳನ್ನು ಅರಸ ಮೀರುವಂತಿರಲಿಲ್ಲ. ಶಾಸನ ಹಾಗೂ ಆಡಳಿತ ಕಾರ್ಯಗಳಲ್ಲಿ ಈ ಮಂಡಲಿ ಮಹತ್ತ್ವದ ಪಾತ್ರ ವಹಿಸುತ್ತಿತ್ತು. ಆಡಳಿತ ಕಾರ್ಯದಲ್ಲಿ ಚರ್ಚಿನ ಹಾಗೂ ಪಾದ್ರಿಗಳ ಪಾತ್ರವಿತ್ತು. ಫೈರ್–ಮೂಟ್ ಎಂಬ ಇನ್ನೊಂದು ಸಭೆ ಸ್ಥಳೀಯ ಆಡಳಿತ ವ್ಯವಹಾರಗಳನ್ನು ಕುರಿತು ಚರ್ಚಿಸುತ್ತಿತ್ತು. ಅರಸನಾದವ ಸ್ಥಳೀಯ ಆಡಳಿತದಲ್ಲಿ ಹೆಚ್ಚಾಗಿ ಕೈಹಾಕುತ್ತಿರಲಿಲ್ಲ. ಇದೇ ಕಾಲದಿಂದ ಸಮಾಜದಲ್ಲಿ ವರ್ಗಗಳು ಏರ್ಪಡಲಾರಂಭಿಸಿದುವು.

ನ್ಯಾಯವಿಧಾನ ಅರಸನಲ್ಲಿ ನಿಹಿತವಾಗಿತ್ತು. ಲಿಖಿತ ಕಾಯಿದೆಗಳಿರಲಿಲ್ಲ. ರೂಢಿ ಸಂಪ್ರದಾಯಗಳೂ ಒಮ್ಮೊಮ್ಮೆ ಅರಸನ ಇಚ್ಛೆಗಳೂ ನ್ಯಾಯದಾನಕ್ಕೆ ಆಧಾರವಾಗಿರುತ್ತಿದ್ದವು. ಬ್ರಿಟನ್ನಿನ ಇತಿಹಾಸದಲ್ಲಿಯೇ ಪ್ರಥಮವಾಗಿ ಕೆಂಟ್ ರಾಜ್ಯದ ಅರಸ ಎಥೆಲ್‌ಬರ್ಟ್ 600ರಲ್ಲಿ 90 ದಂಡಾಜ್ಞೆಗಳನ್ನು ಹೊರಡಿಸಿದ. ಅನಂತರ ಬೇರೆ ಬೇರೆ ಅರಸರು ಕಾನೂನುಗಳನ್ನು ಕ್ರೋಡೀಕರಿಸಲೆತ್ನಿಸಿದರು. ನ್ಯಾಯ ತೀರ್ಪು ಕೊಡಲು ಸ್ಥಳೀಯ ಸಂಸ್ಥೆಗಳು ಇದ್ದುವಲ್ಲದೆ ಕ್ರೈಸ್ತ ಪಾದ್ರಿಗಳು ತಮ್ಮದೇ ಆದ ಖಾಸಗಿ ನ್ಯಾಯಾಲಯಗಳನ್ನು ಹೊಂದಿದ್ದರು.

**ನಾರ್ಮನ್ನರ ಆಳ್ವಿಕೆ:** 1066–1154 ಕೇಂದ್ರೀಕೃತ ರಾಜಪ್ರಭುತ್ವ : ಈ ನಾಡಿನ ಆಕ್ರಮಣಕಾರರಲ್ಲಿ ಕೊನೆಯವರಾದ ನಾರ್ಮನ್ನರು ಹೇಸ್ಟಿಂಗ್ಸ್ ಯುದ್ಧದಲ್ಲಿ ಜಯಹೊಂದಿ ಇಂಗ್ಲೆಂಡಿನ ರಾಜಕೀಯ ಇತಿಹಾಸದಲ್ಲಿ ಒಂದು ಹೊಸ ಯುಗವನ್ನಾರಂಭಿಸಿದರು. ಇಲ್ಲಿನ ಮಂಡಲಿ ಪ್ರಥಮ ವಿಲಿಯಂಗೆ ಪ್ರಭುತ್ವವನ್ನೊಪ್ಪಿಸಿತು. ಯಾರ್ಕ್‌ನ ಕ್ರೈಸ್ತರ

ಪ್ರಧಾನ ಗುರುವಿನಿಂದ 1066ರ ಕ್ರಿಸ್‌ಮಸ್ ದಿನದಂದು ವೆಸ್ಟ್‌ಮಿನ್ಸ್ಟರಿನಲ್ಲಿ ಕಿರೀಟ ಧರಿಸಿಕೊಂಡ ವಿಲಿಯಂ ನಾರ್ಮಂಡಿ (1066–87) ಶೀಘ್ರದಲ್ಲಿಯೇ ಸಶಕ್ತ ಕೇಂದ್ರೀಕೃತ ಸರ್ಕಾರ ಸ್ಥಾಪಿಸುವಲ್ಲಿ ಯಶಸ್ಸು ಪಡೆದ. ಇಂಗ್ಲೆಂಡಿನ ಪ್ರಜೆಗಳ ನಂಬುಗೆ ಗಳಿಸಿಕೊಳ್ಳುವುದಕ್ಕಾಗಿ ಆತ ಬಹುವಾಗಿ ಶ್ರಮಿಸಿದ. ಅವನು ಅವರ ಸಂಪ್ರದಾಯ ರೀತಿನೀತಿಗಳಲ್ಲಿ ಕೈಹಾಕುತ್ತಿರಲಿಲ್ಲ. ಆದ್ದರಿಂದ ಸ್ಥಳೀಯ ಸಂಸ್ಥೆಗಳಲ್ಲಿ ಅಷ್ಟೊಂದು ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಆತನ ಕಾಲದಲ್ಲಿ ಸೈನಿಕ ಉಂಬಳಿ ಹಾಗು ಸಾಮಂತ ಪದ್ಧತಿಗಳು ಬಲಗೊಂಡು ಅರಸನಿಗೆ ಬೆಂಬಲವನ್ನೊದಗಿಸುತ್ತಿದ್ದವು. ಇದರಲ್ಲಿ ಚರ್ಚಿನ ಅಧಿಕಾರಿಗಳೂ ಸೇರಿದ್ದರು. ಹೀಗಾಗಿ ಒಂದು ರೀತಿಯ ಜಹಗೀರಿ ಸಾಮಂತ ಪದ್ಧತಿ ಸ್ಥಾಪಿತವಾಗಿ ಶ್ರೀಮಂತ ವರ್ಗವೊಂದು ಬೆಳೆದು ಬಲಗೊಂಡಿತು. ಆದರೆ ರಾಜ್ಯದ ಭೂಮಿ ಅರಸನ ಒಡೆತನಕ್ಕೆ ಸೇರಿತು. ಮುಂದೆ ಪ್ರಥಮ ಹೆನ್ರಿಯಂಥ (1100–35) ಅರಸರು ಈ ಪದ್ಧತಿಯನ್ನು ಮತ್ತಷ್ಟು ಬಲಪಡಿಸಿದರು. ಈ ಕಾಲದಲ್ಲಿ ಬ್ರಿಟನ್ನಿನ ರಾಜಕೀಯ ಪದ್ಧತಿ ಹೊಸ ರೂಪತಳೆದು ಸ್ಥಿರಗೊಂಡಿತು. ಅರಸನ ಪ್ರಾಬಲ್ಯ ಹೆಚ್ಚಿತು. ಇಂಗ್ಲೆಂಡಿನಲ್ಲಿ ಊಳಿಗಮಾನ್ಯ ಪದ್ಧತಿಯ ಸಮಾಜ ರೂಪುಗೊಂಡಿತು. ಚರ್ಚ್ ಹಾಗು ಇತರ ಸಂಸ್ಥೆಗಳಲ್ಲೂ ಸುಧಾರಣೆ ಜಾರಿಗೆ ಬಂತು. ಸೈನಿಕ ಉಂಬಳಿಯ ಪದ್ಧತಿಯಿಂದ ದೇಶದಲ್ಲಿ ರಾಜಕೀಯ ಸ್ಥಿರತೆಯುಂಟಾಗಿ ಶಾಂತಿ ನೆಲೆಗೊಂಡಿತು. ಅನಂತರ ಅರಸನಾದ ದ್ವಿತೀಯ ಹೆನ್ರಿ (1154–89) ರಾಜ್ಯ ನಿರ್ಮಾಣ ಕಾರ್ಯದಲ್ಲಿ ತೊಡಗಿ ಅರಸನ ನ್ಯಾಯಾಲಯಗಳ ಅಧಿಕಾರಕ್ಷೇತ್ರ ವಿಸ್ತಾರ ಮಾಡಿದ್ದಲ್ಲದೆ ಸಾಮಾನ್ಯ ನ್ಯಾಯವನ್ನು ಜಾರಿಗೆ ತಂದ. ಇದು ಮುಂದೆ ಇಂಗ್ಲೆಂಡಿನ ಪ್ರಜಾಸಂಸ್ಥೆಗಳ ನಿರ್ಮಾಣದಲ್ಲಿ ಮಹತ್ತ್ವದ ಪಾತ್ರ ವಹಿಸಿತು. ದೇಶದಲ್ಲಿ ಸೈನಿಕ ಸಹಾಯ ಪದ್ಧತಿಯಿಂದ ಶಾಂತಿ ನೆಲೆಸಿದ್ದರ ಪರಿಣಾಮವಾಗಿ ಮುಂದಿನ ಪ್ರಜೆಗಳು ವ್ಯಾಪಾರ ಮುಂತಾದ ವೃತ್ತಿಗಳಲ್ಲಿ ತೊಡಗಲು ಅವಕಾಶ ದೊರಕಿತು. ಸ್ವತಂತ್ರ ಸಮಾಜದ ಬೆಳೆವಣಿಗೆಯ ಕ್ರಮದ ಆರಂಭವಾಯಿತು. ಶ್ರೀಮಂತ ವರ್ಗದವರು ಪ್ರಬಲರಾಗತೊಡಗಿ, ಸರ್ಕಾರದ ಕಾರ್ಯವಿಧಾನಗಳಲ್ಲಿ ಭಾಗಿಗಳಾಗಲು ಪ್ರಯತ್ನ ನಡೆಸಿದರು. ಸಮಯ ಒದಗಿದಾಗ ಅವರು ಅರಸನ ವಿರುದ್ಧ ಸಾಮಾನ್ಯ ಪ್ರಜೆಗಳೊಂದಿಗೆ ಕೂಡಿಕೊಳ್ಳಲೂ ಸಿದ್ಧರಿದ್ದರು. ಆದರೆ ಅರಸ ತನ್ನ ಸರ್ವಾಧಿಕಾರವನ್ನುಳಿಸಿಕೊಳ್ಳಲು ಕಾನೂನಿನ ಆಶ್ರಯವನ್ನೂ ನ್ಯಾಯಾಲಯಗಳ ಹಾಗೂ ಅಧಿಕಾರಿಗಳ ನೆರವನ್ನೂ ಪಡೆದ. ಸ್ಥಳೀಯ ಸಂಸ್ಥೆಗಳ ನಿಯಂತ್ರಣದ ಕ್ರಮಗಳು ಜಾರಿಗೆ ಬಂದುವು. ಕೇಂದ್ರದಲ್ಲಿ ವರಮಾನ ಇಲಾಖೆ ರೂಪಿತವಾಯಿತು. ನ್ಯಾಯ ಇಲಾಖೆ ಖಚಿತಗೊಂಡಿತು. ಪ್ರಧಾನ ನ್ಯಾಯಾಧೀಶರ ನೇಮಕವಾಯಿತು.

ನಾರ್ಮನ್ ಅರಸರ ಆಳ್ವಿಕೆಯ ಕಾಲದಲ್ಲಿ ಮ್ಯಾಗ್ನಮ್ ಕನ್‌ಸೀಲಿಯಂ ಹಾಗೂ ಕ್ಯೂರಿಯ ರೀಜಿಸ್ ಎಂಬ ಎರಡು ಪ್ರಮುಖ ರಾಜಕೀಯ ಸಂಸ್ಥೆಗಳು ಬೆಳೆದು ಬಂದವು. ಮ್ಯಾಗ್ನಮ್ ಕನ್‌ಸೀಲಿಯಂ ಅಥವಾ ಮಹಾಸಭೆ ಆ್ಯಂಗ್ಲೋ–ಸ್ಯಾಕ್ಸನ್ ಕಾಲದ ಶ್ರೀಮಂತ ಮಂಡಲಿಯಂತಿತ್ತು. ಆದರೆ ಇದು ಅದರಷ್ಟು ಅಧಿಕಾರ ಹೊಂದಿರಲಿಲ್ಲ. ಅರಸನಿಂದ ನೇಮಿಸಲ್ಪಟ್ಟ ಅಧಿಕಾರವರ್ಗದವರೂ ಶ್ರೀಮಂತರೂ ಕ್ರೈಸ್ತಪಾದ್ರಿಗಳೂ ಸಾಮಂತರೂ ಈ ಸಭೆಯ ಸದಸ್ಯರಾಗಿದ್ದರು. ಆಡಳಿತ, ಶಾಸನ ಹಾಗೂ ನ್ಯಾಯಸಂಬಂಧವಾದ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಅರಸನಿಗೆ ಈ ಸಭೆ ನೆರವಾಗುತ್ತಿತ್ತು. ಈ ಸಭೆಯ ಸಲಹೆಗಳನ್ನು ಅರಸ ಪಡೆಯುತ್ತಿದ್ದನಾದರೂ ಇದರ ನಿಬಂಧನೆಗೊಳಪಟ್ಟಿರಲಿಲ್ಲ. ಅರಸನ ನಿರ್ಣಯವೇ ಅಂತಿಮ ನಿರ್ಣಯ. ಕ್ಯೂರಿಯ ರೀಜಿಸ್ ಎಂಬ ಮತ್ತೊಂದು ಮಹತ್ತ್ವದ ಸಭೆ ಮ್ಯಾಗ್ನಮ್ ಕನ್‌ಸೀಲಿಯಂಗಿಂತ ಚಿಕ್ಕದಾಗಿತ್ತು. ಪ್ರಮುಖ ಅಧಿಕಾರಿಗಳ ಈ ಸಭೆ ಅರಸನ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಈ ಸಭೆಯೂ ಅರಸನಿಗೆ ಮಹತ್ತ್ವದ ಸಲಹೆ ಹಾಗು ಸಹಕಾರ ಒದಗಿಸುತ್ತಿತ್ತು. ಅರಸನಿಗೆ ಹೊಣೆಯಾದ ಮಂತ್ರಿಮಂಡಲದ ರೀತಿಯಲ್ಲಿ ಇದರ ರಚನೆಯಾಗಿತ್ತು.

ಶ್ರೀಮಂತವರ್ಗದವರ ಸಹೃದಯತೆ ಸಂಪಾದಿಸುವ ಉದ್ದೇಶದಿಂದ ಪ್ರಥಮ ಹೆನ್ರಿ ದೊರೆ ಅನುಗ್ರಹಿಸಿದ ಸ್ವಾತಂತ್ರ್ಯಗಳ ಸನ್ನದು (ಚಾರ್ಟರ್ ಆಫ್ ಲಿಬರ್ಟೀಸ್) ಒಂದು ಹೊಸ ಪಥವನ್ನೇ ಆರಂಭಿಸಿತೆನ್ನಬಹುದು. ಅದು ಪ್ರಜೆಗಳ ಸ್ವಾತಂತ್ರ್ಯಪಾಲನೆ ಮಾಡುವುದಾಗಿ ಆಶ್ವಾಸನೆ ನೀಡಿತ್ತು. ಈತನ ಆಳ್ವಿಕೆಯ ಕಾಲದಲ್ಲಿಯೇ ರಾಜ್ಯಾದ್ಯಂತ ನಿಯತ ಕೇಂದ್ರಗಳಲ್ಲಿ ನ್ಯಾಯಾಲಯಗಳು ಸ್ಥಾಪಿತವಾದುವು. ಕ್ಯೂರಿಯ ರೀಜಿಸ್ ಎಂಬ ಸಭೆಯೇ ಶ್ರೀಮಂತವರ್ಗದ ತಪ್ಪಿತಸ್ಥರ ವಿಚಾರಣೆ ನಡೆಸುತ್ತಿತ್ತು. ಕಂದಾಯಸಂಬಂಧವಾದ ವಿವಾದಗಳಲ್ಲಿ ತೀರ್ಪುಗಳನ್ನು ವರಮಾನ ಇಲಾಖೆ ನೀಡುತ್ತಿತ್ತು. ಬ್ರಿಟನ್ನಿನ ಇಂದಿನ ಪ್ರಮುಖ ರಾಜಕೀಯ ಸಂಸ್ಥೆಗಳ ಉಗಮ ಇಲ್ಲಿಂದ ಆರಂಭವಾಯಿತೆಂದು ಹೇಳಬಹುದು.

ದ್ವಿತೀಯ ಹೆನ್ರಿ ದೊರೆ ನಿರ್ಮಿಸಿದ ಪ್ರಬಲ ಕೇಂದ್ರೀಕೃತ ಶಾಸನ ಈ ದೇಶದ ರಾಷ್ಟ್ರೀಯತಾ ಭಾವನೆಯನ್ನು ಹುಟ್ಟಿಸುವಲ್ಲಿ ಸಹಾಯ ಒದಗಿಸಿತಾದರೂ ಮುಂದೆ ಜಾನ್‌ನಂಥ ದೊರೆಗಳು ಅಧಿಕಾರ ದುರುಪಯೋಗಪಡಿಸಿಕೊಳ್ಳುವಂತಾಯಿತು. ಆದರೆ ಶ್ರೀಮಂತ ಸಾಮಂತರ ವಿರುದ್ಧ ಅರಸನಿಗೆ ಯಶಸ್ಸು ದೊರೆಯಲಿಲ್ಲ.

**ಮ್ಯಾಗ್ನಕಾರ್ಟ** (1215): ದ್ವಿತೀಯ ಹೆನ್ರಿಯ ಅನಂತರ ಪಟ್ಟಕ್ಕೆ ಬಂದ ಆತನ ಮಗ ಜಾನ್ ದೊರೆಯ ನಿರಂಕುಶ ಆಡಳಿತವನ್ನು ಹತೋಟಿಗೆ ಒಳಪಡಿಸಲು ಶ್ರೀಮಂತ ಹಾಗೂ ಸಾಮಂತ ವರ್ಗದವರು ಮಾಡಿದ ಪ್ರಯತ್ನದ ಪರಿಣಾಮವೇ ಮ್ಯಾಗ್ನಕಾರ್ಟ ಎಂಬ ಮಹಾಸನ್ನದು. ಅರಸನ ಕ್ರೌರ್ಯ ಎಲ್ಲೆ ಮೀರಿದಾಗ ಕ್ಯಾಂಟರ್‌ಬರಿಯ ಧರ್ಮಗುರು ಸ್ಟೀಫನ್ ಲ್ಯಾಂಗ್ಟನ್ನನ ನಾಯಕತ್ವದಲ್ಲಿ ಅರಸನ ನಿರಂಕುಶ ಪ್ರಭುತ್ವದ ವಿರುದ್ಧ ಸಂಘಟಿತರಾಗೊಂಡಿದ್ದ ಶ್ರೀಮಂತರು ಹಾಗೂ ಪಟ್ಟಣಿಗರು ಸ್ವಾತಂತ್ರ್ಯ ಹಾಗೂ ಸ್ವಯಂ ಶಾಸನ ತತ್ತ್ವಗಳನ್ನೊಳಗೊಂಡಿದ್ದ ಸನ್ನದಿಗೆ ಅಂಕಿತ ಹಾಕಲು ಜಾನ್ ದೊರೆಯನ್ನು ಒತ್ತಾಯಪಡಿಸಿದರು. ಅರಸನನ್ನು ಎದುರಿಸಲು ಸಿದ್ಧರಾಗಿದ್ದ ಶ್ರೀಮಂತ ಸಾಮಂತರೊಂದಿಗೆ ಒಪ್ಪಂದವೋ ಎಂಬಂತೆ ಜಾನ್ ದೊರೆ 1215 ಜೂನ್ 15ರಂದು ಈ ಮಹಾಸನ್ನದಿಗೆ ಅಂಕಿತ ಹಾಕಿದ. ಈ ಸನ್ನದು ಇಂಗ್ಲೆಂಡಿನ ರಾಜಕೀಯ ಹಾಗೂ ಸಂವಿಧಾನದ ಇತಿಹಾಸದಲ್ಲಿ ಪ್ರಜೆಗಳ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಮೈಲಿಗಲ್ಲಿನಂತಿದೆ. ಅರಸನ ನಿರಂಕುಶಾಧಿಕಾರವನ್ನು ಹತೋಟಿಗೊಳಪಡಿಸುವುದೇ ಇದರ ಪ್ರಥಮ ಗುರಿ. ಅರಸನಾದವ ಪ್ರಜೆಗಳಿಂದ ಹಣ ಹೀರದಂತೆ ಆತನ ಅಧಿಕಾರವನ್ನು ಈ ಸನ್ನದು ಮೊಟಕುಗೊಳಿಸಿತು. ಜಮೀನುದಾರರು ಹಾಗೂ ಕ್ರೈಸ್ತ ಗುರುಗಳಿಂದ ಕೂಡಿದ ಸಾಮಾನ್ಯ ಸಮಿತಿಯೊಂದರ ರಚನೆಯ ಅಗತ್ಯ ಇದರಲ್ಲಿ ಪ್ರಕಟವಾಗಿತ್ತು. ಯಾವ ವ್ಯಕ್ತಿಯನ್ನೇ ಆಗಲಿ ಕಾನೂನಿನನ್ವಯವಾಗಲ್ಲದೆ ಅನ್ಯರೀತಿಯಿಂದ ಜೈಲಿನಲ್ಲಿ ಇಡಕೂಡದೆಂದೂ ಆತನ ಆಸ್ತಿಯನ್ನು ನಷ್ಟಪಡಿಸಬಾರದೆಂದೂ ಇದರಲ್ಲಿ ಸೂಚಿಸಲಾಗಿತ್ತು. ಇದು ಪ್ರಜಾಸ್ವಾತಂತ್ರ್ಯ ಹಾಗು ಕಾನೂನಿನ ಆಡಳಿತ ಸ್ಥಾಪಿಸುವಲ್ಲಿ ಪ್ರಥಮ ಮಹಾಯತ್ನವಾಗಿತ್ತು. ಮ್ಯಾಗ್ನ ಕಾರ್ಟ ನೇರವಾಗಿ ಪಾರ್ಲಿಮೆಂಟರಿ ಪ್ರಭುತ್ವ ಪದ್ಧತಿಯನ್ನು ಪ್ರಾರಂಭಿಸಲಿಲ್ಲವಾದರೂ ಪ್ರಜಾಸ್ವಾತಂತ್ರ್ಯಕ್ಕೆ ನಾಂದಿಯಾಯಿತು. ಮುಂದೆ ಹಣಕ್ಕಾಗಿ ಅರಸ ಬೇಡಿಕೆಯನ್ನಿಟ್ಟಾಗಲೆಲ್ಲ ಪ್ರಾತಿನಿಧ್ಯಕ್ಕೆ ಮರುಬೇಡಿಕೆಯನ್ನಿಡಲಾಯಿತು. ಹೀಗಾಗಿ ಮ್ಯಾಗ್ನ ಕಾರ್ಟ ಪಾರ್ಲಿಮೆಂಟಿನ ಶೀಘ್ರಗತಿಯ ಬೆಳೆವಣಿಗೆ ಹಾಗೂ ಪ್ರಜೆಗಳ ಸ್ವಾತಂತ್ರ್ಯಕ್ಕೆ ಕಾರಣವಾಯಿತು. ಪ್ರಜೆಗಳಿಗೆ ಅವರ ಹಕ್ಕುಗಳ ಅರಿವನ್ನುಂಟುಮಾಡಿಕೊಟ್ಟಿತು.

**ಪಾರ್ಲಿಮೆಂಟಿನ ಉದಯ:** ಜಾನ್ ದೊರೆ ಹಣದ ಅಭಾವ ನೀಗಿಸಿಕೊಳ್ಳುವುದಕ್ಕಾಗಿ ಪದೇ ಪದೇ ಕರೆಯಲಾರಂಭಿಸಿದ ಪಾರ್ಲಿಮೆಂಟಿನ ಕ್ರಮ ಮುಂದೆ ತೃತೀಯ ಹೆನ್ರಿಯ (1216–72) ಕಾಲದಲ್ಲಿ ಸ್ಥಿರವಾಯಿತು. ಅರಸನ ಸಮಿತಿಯೊಂದು ನಿರ್ಮಿತವಾಯಿತು. ಮಹಾಸಮಿತಿಯ ಸದಸ್ಯತ್ವವನ್ನು ಪಟ್ಟಣಗಳ ಪ್ರತಿನಿಧಿಗಳ ನೇಮಕದಿಂದ ವಿಸ್ತರಿಸಲಾಯಿತು. ಮ್ಯಾಗ್ನ ಕಾರ್ಟದ ಮೂಲಕ ಅರಸನ ಅಧಿಕಾರವನ್ನು ಸಂವಿಧಾನದ ಇತಿಮಿತಿಗೆ ಒಳಪಡಿಸಿದ್ದರಿಂದ ಹಾಗೂ ಅರಸರಿಗೆ ಹಣದ ಅಭಾವವಿದ್ದರಿಂದ ಮಹಾಸಮಿತಿಯ ಅಧಿಕಾರಿಗಳು ಹೆಚ್ಚುತ್ತ ಬಂದು ಅದು ಪ್ರಬಲವಾಗುತ್ತ ನಡೆಯಿತು. ಈ ಮಧ್ಯೆ ತೃತೀಯ ಹೆನ್ರಿ ಅಧಿಕಾರ ದುರುಪಯೋಗಪಡಿಸಲಾರಂಭಿಸಿದುದರ ಪರಿಣಾಮವಾಗಿ ಅರಸ ಹಾಗೂ ಶ್ರೀಮಂತ ವರ್ಗದವರ ನಡುವೆ ಘರ್ಷಣೆ ಆರಂಭವಾಯಿತು. ಅದರ ಅಂತಿಮ ಪರಿಣಾಮವೇ ಪಾರ್ಲಿಮೆಂಟಿನ ಉದಯ.

ಮೂರನೆಯ ಹೆನ್ರಿ ಚಿಕ್ಕವನಿದ್ದಾಗ ಶ್ರೀಮಂತ ವರ್ಗದವರು ಅರಸನ ಸಮಿತಿಯ ಮೇಲೆ ತಮ್ಮ ಪ್ರಭಾವ ಬೀರಿದರು. ಮುಂದೆ ಹೆನ್ರಿ ವಯಸ್ಕನಾದ ಮೇಲೆ ಶ್ರೀಮಂತ ವರ್ಗದವರು ಅನೇಕ ಬೇಡಿಕೆಗಳನ್ನು ಅರಸನ ಮುಂದಿಟ್ಟರು. 1258ರ ಏಪ್ರಿಲ್‌ನಲ್ಲಿ ಅರಸ ತನ್ನ ಹಣದ ಬೇಡಿಕೆಯನ್ನು ಮಹಾಸಮಿತಿಯ ಮುಂದಿಟ್ಟ. 1258ರ ಜೂನ್ 1ರಂದು ಆಕ್ಸ್‌ಫರ್ಡಿನಲ್ಲಿ ಸೇರಿದ ಮಹಾ ಸಮಿತಿಯವರು ಅನೇಕ ಸುಧಾರಣೆಗಳನ್ನು ಬಯಸಿ ತತ್ಸಂಬಂಧವಾದ ಬೇಡಿಕೆಗಳನ್ನು ಅರಸನ ಮುಂದೆ ಇರಿಸಿದರು. ಆದರೆ ಶ್ರೀಮಂತವರ್ಗದಲ್ಲಿಯೇ ಒಡಕುಂಟಾಯಿತು.

ಆಂತರಿಕ ಕಲಹ ಆರಂಭವಾಯಿತು. ಯುದ್ಧವೂ ನಡೆಯಿತು. ಕೊನೆಗೆ ಕೆಳದರ್ಜೆಯ ಶ್ರೀಮಂತವರ್ಗಕ್ಕೆ ಸೇರಿದ ಸೈಮನ್–ಡಿ–ಮಾಂಟ್‌ಫರ್ಟ್ ಎಂಬುವನು ಅರಸನನ್ನು ಸೋಲಿಸಿ 1265ರಲ್ಲಿ ಪಾರ್ಲಿಮೆಂಟನ್ನು ಕರೆದ. ಇದರಲ್ಲಿ ತನ್ನ ಬೆಂಬಲಿಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಅವನು ಮಧ್ಯಮ ದರ್ಜೆಯ ಸಾಮಾನ್ಯ ಜನತೆಗೆ ಪ್ರಾತಿನಿಧ್ಯ ಹೆಚ್ಚಿಸಿದ. ಅರ್ಲ್ ದರ್ಜೆಯ ಶ್ರೀಮಂತರು, ಬ್ಯಾರನ್ ದರ್ಜೆಯ ಹದಿನೆಂಟು ಶ್ರೀಮಂತರು, ಸೈಮನ್ನಿನ ಬೆಂಬಲಿಗರಾಗಿದ್ದ ಕ್ರೈಸ್ತ ಗುರುಗಳು, ಪ್ರತಿಯೊಂದು ಷೈರಿನಿಂದಲೂ ಇಬ್ಬರು ಕೆಳದರ್ಜೆಯ ಶ್ರೀಮಂತರು, ಪ್ರತಿ ಬರೋವಿನಿಂದಲೂ (ಪೌರಸಂಸ್ಥೆಯುಳ್ಳ ಊರು) ಇಬ್ಬರು ನಾಗರಿಕರಂತೆ 21 ಬರೋಗಳ ಪ್ರತಿನಿಧಿಗಳು–ಹೀಗೆ ಪಾರ್ಲಿಮೆಂಟ್ ವಿಸ್ತಾರಗೊಂಡಿತು. ಸೈಮನ್ನನ ಪಾರ್ಲಿಮೆಂಟ್ ಎಂದು ಇದು ಪ್ರಸಿದ್ಧವಾಯಿತು. ಇದು ಪಾರ್ಲಿಮೆಂಟಿನ ಬೆಳೆವಣಿಗೆಯಲ್ಲಿ ಮಹತ್ತ್ವದ ಮೈಲಿಗಲ್ಲಾಯಿತು. ಇದರ ನೆನಪಿಗಾಗಿ 700 ವರ್ಷಗಳ ಅನಂತರ 1965 ರಲ್ಲಿ ಬ್ರಿಟನ್ನು ತನ್ನ ಪಾರ್ಲಿಮೆಂಟಿನ ಸಪ್ತಮ ಶತಮಾನೋತ್ಸವವನ್ನಾಚರಿಸಿತು.

**ಪಾರ್ಲಿಮೆಂಟ್‌ನ ವಿಕಾಸ:** 1272ರಲ್ಲಿ ಪಟ್ಟಕ್ಕೆ ಬಂದ ಪ್ರಥಮ ಎಡ್ವರ್ಡ್ (1272–1307) ದೊರೆಯ ಆಳ್ವಿಕೆಯ ಕಾಲ ಇಲ್ಲಿನ ಪಾರ್ಲಿಮೆಂಟಿನ ಇತಿಹಾಸದಲ್ಲಿ ಮಹತ್ತ್ವವಾದದ್ದು. ಈತನ ಕಾಲದಲ್ಲಿ ಸಂವಿಧಾನದ ಸುಧಾರಣೆಯಾಗಿ ಪಾರ್ಲಿಮೆಂಟ್ ವಿಕಾಸಗೊಂಡು ಸ್ಥಿರತೆ ಪಡೆಯಿತು. 1295ರಲ್ಲಿ ಸೈಮನ್ ಯೋಜನೆಯ ಮೇರೆಗೆ ಪ್ರಥಮ ಎಡ್ವರ್ಡ್ ದೊರೆಯಿಂದ ಸಮಾವೇಶಗೊಂಡ ಪಾರ್ಲಿಮೆಂಟು ಮಾದರಿ ಪಾರ್ಲಿಮೆಂಟ್ ಎನಿಸಿಕೊಂಡಿತು. 400ಕ್ಕೂ ಹೆಚ್ಚಿನ ಪ್ರತಿನಿಧಿಗಳನ್ನೊಳಗೊಂಡಿದ್ದ ಈ ಪಾರ್ಲಿಮೆಂಟಿನಲ್ಲಿ ಪ್ರಥಮವಾಗಿ ಸಮಾಜದ ಎಲ್ಲ ವರ್ಗಗಳಿಗೆ ಪ್ರಾತಿನಿಧ್ಯ ಕಲ್ಪಿಸಿಕೊಡಲು ಯತ್ನಿಸಲಾಗಿತ್ತು.

ಸಾಮಾನ್ಯ ಸಮಿತಿಯೊಂದನ್ನು ರಚಿಸುವುದೇ ಇದರ ಉದ್ದೇಶವಾಗಿತ್ತು. ಇದಲ್ಲದೆ ಪ್ರಥಮ ಎಡ್ವರ್ಡ್ ದೊರೆ ಅನೇಕ ಮಹತ್ತ್ವದ ಶಾಸನಗಳನ್ನು ಘೋಷಿಸಿದ. ಅವುಗಳಲ್ಲಿ 1275, 1285 ಹಾಗೂ 1290ರ ವೆಸ್ಟ್‌ಮಿನ್ಸ್ಟರ್ ಶಾಸನಗಳು ಸಂವಿಧಾನದ ದೃಷ್ಟಿಯಿಂದ ಅತ್ಯಂತ ಮಹತ್ತ್ವದವುಗಳಾಗಿವೆ. ಈತನ ಆಳ್ವಿಕೆಯ ಕಾಲದಲ್ಲಿ ಕ್ಯೂರಿಯ ರೀಜಿಸ್ ಎಂಬ ಸಭೆ ನ್ಯಾಯಾಂಗ ಸಭೆಯಾಗಿ ಪರಿವರ್ತನೆಗೊಂಡಿತು. ಪಾರ್ಲಿಮೆಂಟ್ ಸಂವಿಧಾನದ ಅಂಗವಾಯಿತು. ಚರ್ಚುಗಳಲ್ಲಿ ಸುಧಾರಣೆ ತರಲಾಯಿತು. ಕಾಯಿದೆ ವ್ಯವಸ್ಥೆಯಲ್ಲಿ ಅನೇಕ ಸುಧಾರಣೆಗಳಾಗಿ, ಪ್ರತ್ಯೇಕ ನ್ಯಾಯಾಲಯಗಳು ರಚಿತಗೊಂಡುವು. ನ್ಯಾಯದರ್ಶಿ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ರೀತಿಯಾಗಿ 13ನೆಯ ಶತಮಾನದ ಇಂಗ್ಲೆಂಡಿನ ರಾಜಕೀಯ ಇತಿಹಾಸ ಪಾರ್ಲಿಮೆಂಟಿನ ಸ್ಥಾಪನೆಯಲ್ಲಿ ಕೊನೆಗೊಂಡು, 14ನೆಯ ಶತಮಾನ ಪಾರ್ಲಿಮೆಂಟ್‌ನ ಬೆಳವಣಿಗೆಯೊಂದಿಗೆ ಆರಂಭವಾಯಿತು.

14ನೆಯ ಶತಮಾನದಿಂದ ಪಾರ್ಲಿಮೆಂಟು ಪ್ರಬಲಗೊಳ್ಳುತ್ತ ಅರಸನಿಂದ ಕ್ರಮವಾಗಿ ಹಕ್ಕುಗಳನ್ನು ಪಡೆಯಲಾರಂಭಿಸಿತು. ಇಲ್ಲಿಂದ ಮುಂದೆ ಊಳಿಗಮಾನ್ಯ ಪದ್ಧತಿ ದುರ್ಬಲವಾಗ ಲಾರಂಭಿಸಿ, ಸಾಮಾನ್ಯ, ಮಧ್ಯಮ ದರ್ಜೆಯ ಪ್ರಜೆಗಳು ಬಲಗೊಂಡರು. ಆರಂಭದಲ್ಲಿ ವೈಯಕ್ತಿಕ ಹಕ್ಕುಗಳ ಬೇಡಿಕೆ ಹಾಗು ಅನಾನುಕೂಲಗಳನ್ನು ಅರಸನೆದುರಿಗೆ ಇರಿಸುವ, ಅರಸನ ಹಣದ ಬೇಡಿಕೆಯನ್ನು ಮನ್ನಿಸುವ ಸಭೆಯಂತೆ ಇದ್ದ ಪಾರ್ಲಿಮೆಂಟು ಕ್ರಮೇಣ 1327ರಿಂದ ಮುಂದೆ ಸಾಮಾನ್ಯ ಆಡಳಿತ ಮೇಲ್ವಿಚಾರಣೆ ಹಾಗೂ ಶಾಸನ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಲಾರಂಭಿಸಿತು. ತೃತೀಯ ವಿಲಿಯಂನ ಆಳ್ವಿಕೆಯ ಕಾಲದಲ್ಲಿ ಪಾರ್ಲಿಮೆಂಟ್ ಪ್ರಮುಖವಾದ ಹಣಕಾಸಿನ ಹಾಗೂ ಆಡಳಿತ ಪರಿಶೀಲನೆಯ ಹಕ್ಕು ಪಡೆದುಕೊಂಡಿತು. ದೊರೆಯಾದವ ಪಾರ್ಲಿಮೆಂಟಿನ ಸಮ್ಮತಿ ಇಲ್ಲದೆ ಪ್ರಜೆಗಳ ಮೇಲೆ ಕರ ಹೇರುವಂತಿರಲಿಲ್ಲ. ಅರಸನ ಮಂತ್ರಿಗಳು, ಪಾರ್ಲಿಮೆಂಟಿಗೆ ಹೊಣೆಯಾಗಿರಬೇಕಾಗಿತ್ತು. ದೇಶದಲ್ಲಿಯ ರಾಜಕೀಯ ಏರಿಳಿತಗಳು, ನೂರು ವರ್ಷಗಳ ಯುದ್ಧ ಹಾಗೂ ಸ್ಕಾಟಿಷ್ ಯುದ್ಧಗಳು ಅರಸನನ್ನು ಪಾರ್ಲಿಮೆಂಟಿಗೆ ಹೊಂದಿಕೊಂಡು ಹೋಗುವಂತೆ ಮಾಡಿದುವು **(ನೋಡಿ– ಇಂಗ್ಲೆಂಡಿನ–ಚರಿತ್ರೆ)**.

ಲಾರ್ಡ್ಸ್ ಸಭೆ ಹಾಗೂ ಕಾಮನ್ಸ್ ಸಭೆಗಳ ಉಗಮ: 14ನೆಯ ಶತಮಾನದ ಮಧ್ಯಭಾಗದಲ್ಲಿ ಪಾರ್ಲಿಮೆಂಟ್ ಸಂಸ್ಥೆಯಲ್ಲಿ ಮತ್ತೊಂದು ಗಮನಾರ್ಹ ಬದಲಾವಣೆಯಾಯಿತು. ಈ ಮೊದಲು ಪಾರ್ಲಿಮೆಂಟ್ ಅರಮನೆಯ ಸಭಾಮಂದಿರದಲ್ಲಿ ಸೇರುತ್ತಿತ್ತು. ಆರಂಭದಲ್ಲಿ ಶ್ರೀಮಂತ ಪ್ರತಿನಿಧಿಗಳು ಕೌನ್ಸಿಲ್ ಮೇಜಿನ ಬಳಿ ಕುಳಿತಿರುತ್ತಿದ್ದರು. ಸಾಮಾನ್ಯ ಪ್ರತಿನಿಧಿಗಳು ಸಭಾವಲಯದ ಹೊರಗೆ ನಿಂತೇ ತಮ್ಮ ಬೇಡಿಕೆಗಳನ್ನು ಸಲ್ಲಿಸುತ್ತಿದ್ದರು. ಆದರೆ 1341ರ ವೇಳೆಗೆ ಸಾಮಾನ್ಯ ಪ್ರತಿನಿಧಿಗಳು ಬೇರೆಡೆ ಸಭೆ ಸೇರಲಾರಂಭಿಸಿದರು. ಪ್ರಮುಖ ಶ್ರೀಮಂತರು, ಪ್ರಮುಖ ಧರ್ಮಗುರುಗಳು ಹಾಗೂ ಅರಸನಿಂದ ಮನ್ನಿಸಲ್ಪಟ್ಟ ಶ್ರೀಮಂತರು ಶ್ರೀಮಂತಸಭೆಯಲ್ಲೂ ಮಧ್ಯಮ ದರ್ಜೆಯ ಶ್ರೀಮಂತರು. ಷೈರ್ ಪ್ರತಿನಿಧಿಗಳು, ನಗರ ಹಾಗೂ ಬರೋ ಪ್ರತಿನಿಧಿಗಳು ಮತ್ತು ಕೆಳದರ್ಜೆಯ ಪಾದ್ರಿಗಳು ಸಾಮಾನ್ಯ ಪ್ರತಿನಿಧಿಗಳ ಸಭೆಯಲ್ಲೂ ಭಾಗವಹಿಸಲಾರಂಭಿಸಿದರು. ಇವುಗಳೇ ಮುಂದೆ ಲಾರ್ಡ್ಸ್ ಸಭೆ (ಹೌಸ್ ಆಫ್ ಲಾರ್ಡ್ಸ್ 9) ಮತ್ತು ಕಾಮನ್ಸ್ ಸಭೆ (ಹೌಸ್ ಆಫ್ ಕಾಮನ್ಸ್) ಎಂದು ಹೆಸರು ತಳೆದುವು.

ಕಾಮನ್ಸ್ ಸಭೆ ಕ್ರಮೇಣ ಹೆಚ್ಚು ಹೆಚ್ಚು ಅಧಿಕಾರ ಪಡೆದುಕೊಳ್ಳಲಾರಂಭಿಸಿತು. ಹಣಕಾಸಿನ ಸಂಬಂಧದಲ್ಲಿ ಕಾಮನ್ಸ್ ಸಭೆಯ ಹಕ್ಕುಗಳು ಬೆಳೆದು ಬಂದಂದಿನಿಂದ ಆ ಸಭೆಯ ಮಹತ್ತ್ವ ಬೆಳೆಯಲಾರಂಭಿಸಿತು. ದ್ವಿತೀಯ ರಿಚರ್ಡನ ಆಳ್ವಿಕೆಯ (1377–99) ಆರಂಭ ಕಾಲದಲ್ಲಿ ಪಾರ್ಲಿಮೆಂಟು ಪ್ರಮುಖ ಅಧಿಕಾರಿಗಳನ್ನು ನೇಮಿಸುವ ಹಾಗೂ ಹಣಕಾಸಿನ ಆಡಳಿತ ನಿಯಂತ್ರಿಸುವ ಅಧಿಕಾರ ಪಡೆದುಕೊಂಡಿತು. ಮುಂದೆ ಶ್ರೀಮಂತ ವರ್ಗದವರಲ್ಲಿ ಭೇದ ಹುಟ್ಟಿದ್ದರಿಂದ ಅರಸ ಹಾಗೂ ಕಾಮನ್ಸ್‌ಸಭೆ ದೇಶದ ಆಡಳಿತ ನಿರ್ವಹಿಸುವಂತಾಯಿತು. ಆದರೆ ದ್ವಿತೀಯ ರಿಚರ್ಡ್ ದೊರೆ ತನ್ನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಪ್ರಬಲನಾಗಬಯಸಿದ್ದರಿಂದ ಕಾಮನ್ಸ್ ಸಭೆ ಆತನನ್ನು 1399ರಲ್ಲಿ ಅಧಿಕಾರದಿಂದ ತೆಗೆದು ಹಾಕಿ ಲ್ಯಾಂಕಾಸ್ಟರ್‌ನ ಹೆನ್ರಿಯನ್ನು 4ನೆಯ ಹೆನ್ರಿ ಎಂಬ ಹೆಸರಿನಲ್ಲಿ ಪಟ್ಟಗಟ್ಟಿತು. 1399ರ ರಕ್ತರಹಿತ ಕ್ರಾಂತಿ ಎಂದು ಹೆಸರಾಗಿರುವ ಈ ಘಟನೆ ಅರಸನ ನಿರಂಕುಶ ಪ್ರಭುತ್ವಕ್ಕೆ ಪ್ರತಿಭಟನೆಯಾಗಿತ್ತು, ಸಂವಿಧಾನವನ್ನು ರಕ್ಷಿಸಿಕೊಳ್ಳಲು ಪ್ರಜೆಗಳು ನಡೆಸಿದ ಪ್ರಯತ್ನವಾಗಿತ್ತು. ಈ ಎಲ್ಲಾ ಘಟನೆಗಳ ಪರಿಣಾಮವಾಗಿ 15ನೆಯ ಶತಮಾನದ ಆರಂಭದ ವೇಳೆಗೆ ಬ್ರಿಟನ್ ಒಂದು ರಾಷ್ಟ್ರವಾಯಿತು. ರಾಜಕೀಯ ಸಾಮಾನ್ಯರ ಸೊತ್ತಾಯಿತು. ಇದುವರೆಗೆ ಅರಸ ಹಾಗೂ ಪ್ರಮುಖ ಶ್ರೀಮಂತರ ಕೈಯಲ್ಲಿ ಕೇಂದ್ರೀಕೃತಗೊಂಡಿದ್ದ ರಾಜ್ಯಾಧಿಕಾರ ಮಧ್ಯಮ ದರ್ಜೆಯ ಶ್ರೀಮಂತರ ವಶವಾಯಿತು. ಇದರಿಂದಾಗಿ ಕಾಮನ್ಸ್ ಸಭೆ ಪ್ರಬಲಗೊಳ್ಳಲಾರಂಭಿಸಿತು.

ಪಾರ್ಲಿಮೆಂಟಿನ ಬೆಂಬಲದಿಂದಾಗಿ ಪಟ್ಟಕ್ಕೆ ಬಂದ 4ನೆಯ ಹೆನ್ರಿ ಅದನ್ನು ಎದುರಿಸುವ ಸಾಹಸ ಮಾಡಲಿಲ್ಲ. ಅನಂತರ ಪಟ್ಟಕ್ಕೆ ಬಂದ ಆತನ ಮಗ 5ನೆಯ ಹೆನ್ರಿ ಯುದ್ಧಕಾರ್ಯಗಳಲ್ಲಿ ತೊಡಗಿರುತ್ತಿದ್ದನಾದ್ದರಿಂದ ಪಾರ್ಲಿಮೆಂಟೇ ಆಡಳಿತ ನಿರ್ವಹಣೆಯ ಕಾರ್ಯವಹಿಸಿತ್ತು. ಮುಂದೆ 6ನೆಯ ಹೆನ್ರಿ ಚಿಕ್ಕವನಾಗಿದ್ದರಿಂದ ಈ ಕ್ರಮ ಮುಂದುವರಿಯಿತು. ಹೀಗೆ ಲ್ಯಾಂಕಾಸ್ಟರ್ ಅರಸರ 60 ವರ್ಷಗಳ ಆಳ್ವಿಕೆಯ ಕಾಲದಲ್ಲಿ ಪಾರ್ಲಿಮೆಂಟಿನ ಅವಿರೋಧ ಅಧಿಕಾರ ಅನೇಕ ಉತ್ತಮ ಬೆಳವಣಿಗೆಗಳಿಗೆ ಕಾರಣವಾಯಿತು. ಅರಸನ ಸಮಿತಿ ಕಾರ್ಯನಿರ್ವಾಹಕ ಸಮಿತಿಯಾಗಿ ಪರಿವರ್ತನೆಗೊಂಡು ಮುಂದಿನ ಕ್ಯಾಬಿನೆಟ್ ಪದ್ಧತಿಯ ಸ್ಥಾಪನೆಗೆ ಎಡೆ ಮಾಡಿಕೊಟ್ಟಿತು. ಅನೇಕ ಒಳ್ಳೆಯ ರೂಢಿ ಸಂಪ್ರದಾಯಗಳು ಸ್ಥಾಪಿತವಾದವು. ಪಾರ್ಲಿಮೆಂಟಿನ ಸದಸ್ಯರ ವಾಕ್‌ಸ್ವಾತಂತ್ರ್ಯ ಬಂಧನಕ್ಕೊಳಗಾಗದಿರುವ ಸ್ವಾತಂತ್ರ್ಯ, ಅರಸ ಹಾಗೂ ಕಾರ್ಯಸಮಿತಿಯ ಮಧ್ಯಪ್ರವೇಶದಿಂದ ಸ್ವಾತಂತ್ರ್ಯ, ಹಣಕಾಸಿನ ಮಸೂದೆಗಳ ಮೇಲೆ ಸಂಪೂರ್ಣ ಹಕ್ಕು, ಆಸಾಮಿ ಹಾಜರಿ ಮುಂತಾದ ಸಂಪ್ರದಾಯಗಳು ಸ್ಥಾಪಿತವಾದವು. ಸಭಾಧ್ಯಕ್ಷನ ಸ್ಥಾನದ ಉಗಮವಾಗಿ ಸಭೆಯ ಸದಸ್ಯರ ವಿಶೇಷ ಹಕ್ಕುಗಳನ್ನು ಸಂರಕ್ಷಿಸುವುದು ಆತನ ಪ್ರಮುಖ ಕರ್ತವ್ಯಗಳಲ್ಲೊಂದಾಯಿತು. ಕಾಮನ್ಸ್ ಸಭೆಯ ಸದಸ್ಯರು ಶಾಸನಕಾರ್ಯದಲ್ಲಿ ಲಾರ್ಡ್ಸ್ ಸಭೆಗೆ ಸಮನಾದ ಹಕ್ಕುಗಳನ್ನು ಪಡೆದುಕೊಂಡರು. 1439ರ ಕಾಯಿದೆಯ ಪ್ರಕಾರ ಜಮೀನುಳ್ಳವರಿಗೆ ಷೈರಿನ ಪ್ರತಿನಿಧಿಗಳನ್ನು ಆರಿಸುವ ಹಕ್ಕು ಕೊಡಲಾಯಿತು. ಆ್ಯಡಮ್ಸ್ ಹೇಳುವಂತೆ 1399–1460ರ ವರೆಗಿನ ಪಾರ್ಲಿಮೆಂಟ್ ತನ್ನ ಸ್ಥಿತಿಯನ್ನು ಸುಧಾರಿಸಿಕೊಳ್ಳುವಲ್ಲಿ ಹಾಗೂ ವಿಶೇಷ ಹಕ್ಕುಗಳನ್ನು ಗಳಿಸಿಕೊಳ್ಳುವಲ್ಲಿ ನಿರತವಾಗಿತ್ತು. ಆಡಳಿತದ ರೀತಿ ನೀತಿಗಳು ಕ್ರಮಬದ್ಧಗೊಂಡವು.

**ಟ್ಯೂಡರ್ ಅರಸರ ಕಾಲ:** ಆಧುನಿಕ ಯುಗದ ಆರಂಭ: ಟ್ಯೂಡರ್ ಅರಸರ ಆಳ್ವಿಕೆಯ ಕಾಲ (1485–1603) ನಿರಂಕುಶಶದ್ದಾದರೂ ರಾಜವೈಭವದ ಘನ ಪ್ರಭುತ್ವದ ಕಾಲವೂ ಆಗಿತ್ತು. ಅದು ಬ್ರಿಟಿಷ್ ಇತಿಹಾಸದಲ್ಲಿ ಒಂದು ಪರ್ವಕಾಲ. ಮಧ್ಯಯುಗದ ಊಳಿಗಮಾನ್ಯಪದ್ಧತಿ ಆಧುನಿಕ ಸಮಾಜವಾಗಿ ಬದಲಾವಣೆ ಹೊಂದುತ್ತಿತ್ತು. ಮಧ್ಯಮ ವರ್ಗದ ಸಾಮಾನ್ಯ ಪ್ರಜೆಗಳು ವಾಣಿಜ್ಯ ಮುಂತಾದ ವೃತ್ತಿಗಳ ಮೂಲಕ ಮುಂದೆ ಬರುತ್ತಿದ್ದರು. ಇದು ಅರಸರ ನಿರಂಕುಶತ್ವಕ್ಕೆ ಎಡೆಮಾಡಿಕೊಟ್ಟಿತ್ತು. ಆದರೆ ಪ್ರಜೆಗಳು ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ಜಾಗೃತಿ ತಳೆದಿದ್ದರು. ಈ ಕಾಲದಲ್ಲಿ ಪರದೇಶಗಳೊಡನೆ ಯುದ್ಧಗಳಾವುವೂ ನಡೆಯಲಿಲ್ಲವಾದ್ದರಿಂದ ಅರಸರಿಗೆ ಪದೇ ಪದೇ ಪಾರ್ಲಿಮೆಂಟನ್ನು ಕರೆಯುವ ಅಗತ್ಯ ಬೀಳುತ್ತಿರಲಿಲ್ಲ. ದೇಶದ ಆಂತರಿಕ ಅಶಾಂತಿಯನ್ನು ಹೋಗಲಾಡಿಸಲು ಅರಸೊತ್ತಿಗೆ ಶಕ್ತಿಯುತವಾಗಬೇಕಾಯಿತು. ಅರಸರು ವೈಭವಯುತವಾಗಿ ರಾಜ್ಯ ಆಳಿದರು. ಟ್ಯೂಡರ್ ಅರಸರ ಈ 120 ವರ್ಷಗಳ ಆಡಳಿತ ಕಾಲ ವೈಭವಯುತ ನಿರಂಕುಶ ಪ್ರಭುತ್ವ ಕಾಲವೆಂದು ಪ್ರಸಿದ್ಧವಾಗಿದೆ.

ಟ್ಯೂಡರ್ ಅರಸರಲ್ಲಿ ಪ್ರಸಿದ್ಧರಾಗಿರುವ 7ನೆಯ ಹೆನ್ರಿ (1485–1509), 8ನೆಯ ಹೆನ್ರಿ (1509–47) ಹಾಗೂ ಪ್ರಥಮ ಎಲಿಜಬೆತ್ ರಾಣಿ (1558–1603) ಇವರು ಪ್ರಬಲರೂ ಚಾಣಾಕ್ಷರೂ ಆಗಿದ್ದು ಆಡಳಿತ ಯಂತ್ರದ ಸುಧಾರಣೆ ಮಾಡಿದರು. ಕುಶಲ ನಿರಂಕುಶರಾಗಿ ಆದರೆ ಪಾರ್ಲಿಮೆಂಟಿನ ಒಪ್ಪಿಗೆ ಪಡೆದು ರಾಜ್ಯವಾಳಿದ ಇವರು ತಮ್ಮ ದೇಶವನ್ನು ಒಂದು ಪ್ರಬಲ ರಾಷ್ಟ್ರವನ್ನಾಗಿ ಮಾಡಿದರು. ಇವರ ಕಾಲದಲ್ಲಿ ಅರಸೊತ್ತಿಗೆ ಒಂದು ಹೊಸ ರೂಪ ತಳೆಯಿತು.

ಇವರ ಆಳ್ವಿಕೆಯ ಕಾಲದಲ್ಲಿ ಪ್ರಿವಿ ಕೌನ್ಸಿಲ್ ರಚಿತಗೊಂಡು ಮುಂದೆ ಅದು ಹೆಚ್ಚಿನ ಪಾತ್ರ ನಿರ್ವಹಿಸುವಂತಾಯಿತು. ಮಧ್ಯಮ ವರ್ಗದ ಶ್ರೀಮಂತರು, ಧರ್ಮಗುರುಗಳು, ನ್ಯಾಯವಾದಿಗಳು ಹಾಗೂ ಸಾಮಾನ್ಯ ಜನರ ಪ್ರತಿನಿಧಿಗಳಿಂದ ಕೂಡಿದ ಈ ಕೌನ್ಸಿಲ್ ಸ್ವಲ್ಪಮಟ್ಟಿಗೆ ಪ್ರತ್ಯೇಕವಾಗಿರುತ್ತಿದ್ದು ದೇಶದ ದೈನಂದಿನ ಆಡಳಿತಕಾರ್ಯನಿರ್ವಹಣೆ ಮಾಡುತ್ತಿತ್ತು. ಇದು ಅರಸರ ನಿರಂಕುಶತ್ವದ ಮೇಲೆ ಹತೋಟಿ ಇಡಲು ಪ್ರಯತ್ನಿಸುತ್ತಿತ್ತು; ಅಲ್ಲದೆ ಶಾಸನಕಾರ್ಯದಲ್ಲಿ ನಿರತವಾಗಿತ್ತು; ನಿರ್ವಹಣೆಯ ಮೇಲ್ವಿಚಾರಣೆಯನ್ನು ನಡೆಸುತ್ತಿತ್ತು. ಈ ಕೌನ್ಸಿಲ್‌ನ ಪ್ರಮುಖ ಅಂಗವಾಗಿದ್ದ ಸ್ಟಾರ್ ಚೇಂಬರ್ ಸದಸ್ಯರೂ ಇದರ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ಕೆಲ ಇತಿಹಾಸಕಾರರು ಟ್ಯೂಡರ್ ಅರಸರ ಕಾಲವನ್ನು ಪ್ರಿವಿ ಕೌನ್ಸಿಲ್ಲಿನ ಸುವರ್ಣಕಾಲವೆಂದು ಅಭಿಪ್ರಾಯಪಡುತ್ತಾರೆ.

ಟ್ಯೂಡರ್ ಅರಸರು ಅನೇಕ ಹೊಸ ನಗರಗಳಿಗೆ ಪ್ರತಿನಿಧಿಗಳನ್ನು ಕಳಿಸುವ ಹಕ್ಕು ನೀಡುವುದರ ಮೂಲಕ ಪಾರ್ಲಿಮೆಂಟಿನಲ್ಲಿ ತಮಗೆ ಬೆಂಬಲ ನೀಡುವ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಂಡರು. ಸಾಮಾನ್ಯ ಸದಸ್ಯರು ಟ್ಯೂಡರ್ ಅರಸರಿಗೆ ಹಾಗೂ ರಾಣಿಗೆ ಸುಧಾರಣಾಕಾರ್ಯಗಳಲ್ಲಿ ಬೆಂಬಲವಿತ್ತರು. ರೋಮ್‌ನಿಂದ ಪ್ರತ್ಯೇಕಗೊಂಡು, ಅರಸನ ನೇತೃತ್ವದಲ್ಲಿ ಇಂಗ್ಲೆಂಡಿನ ಚರ್ಚು ಸ್ಥಾಪಿತಗೊಂಡದ್ದರ ಪರಿಣಾಮವಾಗಿ ಹಾಗೂ ಇತರ ಕಾರಣಗಳಿಂದಾಗಿ ಲಾರ್ಡ್ಸ್ ಸಭೆಯ ಬಲ ಕುಗ್ಗಿತು. ಈ ಹಿಂದೆ ಪಾರ್ಲಿಮೆಂಟಿನ ಸದಸ್ಯರಿಗೆ ನೀಡಲಾಗಿದ್ದ ವಿಶೇಷ ಹಕ್ಕುಗಳು ಮುಂದುವರಿದುವು. ಅರಸರು ನಿರಂಕುಶವಾಗಿ ವರ್ತಿಸುತ್ತಿದ್ದರೂ ಪಾರ್ಲಿಮೆಂಟಿನ ಇಚ್ಛೆಯನ್ನು ಅಲ್ಲಗಳೆಯುತ್ತಿರಲಿಲ್ಲ. ಥಾಮಸ್ ಮೋರ್‌ನಂಥ ಸಭಾಧ್ಯಕ್ಷರು ಪಾರ್ಲಿಮೆಂಟಿನ ಹಾಗೂ ಸದಸ್ಯರ ವಿಶೇಷ ಹಕ್ಕುಗಳ ರಕ್ಷಣೆಗಾಗಿ ಪ್ರಯತ್ನಿಸಿದರು. ಪಾರ್ಲಿಮೆಂಟಿನ ಕಾರ್ಯಪದ್ಧತಿಗಳಲ್ಲಿ ಸುಧಾರಣೆಗಳನ್ನು ತರಲಾಯಿತು. ಟ್ಯೂಡರ್ ಅರಸರ ಕಾಲದಲ್ಲಿ 166 ಹೊಸ ಸದಸ್ಯರನ್ನು ಸೇರಿಸಲಾಗಿ ಪಾರ್ಲಿಮೆಂಟ್ ಒಟ್ಟು 462 ಸದಸ್ಯರನ್ನು ಹೊಂದಿತ್ತು.

ಧಾರ್ಮಿಕ ಸುಧಾರಣೆಯ ಮೂಲಕವಾಗಿ ಉಂಟಾದ ನವಜಾಗೃತಿ ಇಂಗ್ಲೆಂಡಿನ ಹಾಗೂ ಯುರೋಪ್ ಖಂಡದ ಇತಿಹಾಸದಲ್ಲಿ ಹೊಸ ಯುಗವನ್ನಾರಂಭಿಸಿತು. ಪ್ರಥಮ ಎಲಿಜಬೆತ್ ರಾಣಿಯ ಆಡಳಿತ ಕಾಲದಲ್ಲಿ ಇಂಗ್ಲೆಂಡಿನಲ್ಲಿ ನೌಕಾಬಲ ನಿರ್ಮಾಣ

ಮಾಡುವುದರ ಮೂಲಕ ಪರದೇಶಗಳೊಡನೆ ವ್ಯಾಪಾರಕ್ಕೆ ಪ್ರೋತ್ಸಾಹ ನೀಡಲಾಯಿತು. ಜನಸಾಮಾನ್ಯರಿಗಾಗಿ ವಿದ್ಯಾಲಯಗಳು ಸ್ಥಾಪಿತವಾಗಿ ಉತ್ತಮ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಯಿತು. ಈ ಎಲ್ಲ ಕ್ರಮಗಳ ಪರಿಣಾಮವಾಗಿ ನವಯುಗವೊಂದರ ಆರಂಭವಾಯಿತು. ಜನಸಾಮಾನ್ಯರು ಜಾಗೃತಗೊಂಡರಲ್ಲದೆ ಅವರಲ್ಲಿ ಸ್ವತಂತ್ರ ಪ್ರವೃತ್ತಿ ಬೆಳೆಯಲಾರಂಭಿಸಿತು. ಜನ ನಿರಂಕುಶ ಪ್ರಭುತ್ವದ ವಿರುದ್ಧ ಒಂದುಗೂಡಲಾರಂಭಿಸಿತು. ಕೋಕ್, ಪೈಮ್, ಹ್ಯಾಂಪ್ಡೆನ್, ಕ್ರಾಮ್‌ವೆಲ್‌ರಂಥ ಮಧ್ಯಮವರ್ಗದ ಮುಂದಾಳುಗಳು ಜನತೆಗೆ ಯೋಗ್ಯ ನಾಯಕತ್ವವನ್ನೊದಗಿಸಿದರು.

**ಸ್ಟೂಯರ್ಟ್ ಅರಸರ ಕಾಲ:** ಸಂಸದೀಯ ಪ್ರಭುತ್ವ ಸ್ಥಾಪನೆ : ಪ್ರಥಮ ಜೇಮ್ಸ್‌ನ (1603–25) ಆಳ್ವಿಕೆಯೊಂದಿಗೆ ಆರಂಭಗೊಂಡ ಸ್ಟೂಯರ್ಟ್ ಅರಸರ ಆಡಳಿತ ಕಾಲ (1603–1704) ಅರಸನಿಗೂ ಪಾರ್ಲಿಮೆಂಟಿಗೂ ನಡುವೆ ಪರಮಾಧಿಕಾರಕ್ಕಾಗಿ ನಡೆದ ಘರ್ಷಣೆಯ ಇತಿಹಾಸ. ಈ ಕಾಲದಲ್ಲಿ ಎರಡು ರಾಜಕೀಯ ಕ್ರಾಂತಿಗಳು ನಡೆದು, ಪಾರ್ಲಿಮೆಂಟಿನ ಪರಮಾಧಿಕಾರ ಸ್ಥಾಪನೆಯಲ್ಲಿ ಸಾಮಾನ್ಯ ಜನತೆ ಯಶಸ್ಸು ಪಡೆಯಿತು. ಅಲ್ಲದೆ ಇಂದಿನ ಸರ್ಕಾರ ವ್ಯವಸ್ಥೆಯ ಪ್ರಮುಖ ಅಂಗಗಳಾದ ಅರಸ, ಪಾರ್ಲಿಮೆಂಟ್ ಹಾಗೂ ನ್ಯಾಯಾಂಗ ಸ್ಥಾಪಿತಗೊಂಡವು. 1603ರಲ್ಲಿ ಪಟ್ಟಕ್ಕೆ ಬಂದ ಪ್ರಥಮ ಜೇಮ್ಸ್ ದೊರೆ ದೈವದತ್ತ ಅಧಿಕಾರತತ್ತ್ವ ಪ್ರತಿಪಾದನೆ ಮಾಡಿ ನಿರಂಕುಶವಾಗಿ ರಾಜ್ಯವನ್ನಾಳಲು ಯತ್ನಿಸಿದ. ರಾಜಪ್ರಭುತ್ವಕ್ಕೆ ವಿರುದ್ಧವಾಗಿದ್ದ ಪಾರ್ಲಿಮೆಂಟ್ ಹಾಗೂ ಪ್ರಜೆಗಳ ಹಕ್ಕುಗಳನ್ನು ನಿರಾಕರಿಸಿದ. ಆದರೆ ಸ್ವತಂತ್ರ ರಾಜಕೀಯ ವಿಚಾರಗಳನ್ನು ಹೊಂದಿದ್ದ ಪ್ರಜೆಗಳು ಅರಸನನ್ನು ವಿರೋಧಿಸಿದರು. ಪಾರ್ಲಿಮೆಂಟ್ ತನ್ನ ವಿಶೇಷ ಹಕ್ಕುಗಳನ್ನುಳಿಸಿಕೊಳ್ಳಲು ಪೂರ್ಣರೂಪದಿಂದ ಪ್ರಯತ್ನಿಸಿತು. ಜೇಮ್ಸ್‌ನ ಒಟ್ಟು 22 ವರ್ಷಗಳ ಆಡಳಿತಕಾಲದಲ್ಲಿ ನಾಲ್ಕು ಬಾರಿ ಸಮಾವೇಶಗೊಂಡ ಪಾರ್ಲಿಮೆಂಟ್ ಪ್ರತಿಸಲವೂ ದೊರೆಯ ನಿರಂಕುಶತ್ವವನ್ನು ವಿರೋಧಿಸಿತು. ಕೊನೆಯಲ್ಲಿ ತನ್ನ ವಿಶೇಷ ಹಕ್ಕುಗಳನ್ನು ಉಳಿಸಿಕೊಳ್ಳುವುದೇ ಅಲ್ಲದೆ ಮಹಾಭಿಯೋಗದ ಅಧಿಕಾರ ಪಡೆಯುವಲ್ಲಿ ಅದು ಯಶಸ್ಸು ಪಡೆಯಿತು.

ಅನಂತರ 1625ರಲ್ಲಿ ಪಟ್ಟಕ್ಕೆ ಬಂದ ಪ್ರಥಮ ಚಾರ್ಲ್ಸ್ ನಿರಂಕುಶವಾಗಿ ಆಳಲೆತ್ನಿಸಿದ. ಆದರೆ ಆಗ ಪ್ರಜೆಗಳ ಬಲ ಅಧಿಕಗೊಂಡಿದ್ದರಿಂದ ಅವರು ಅರಸನ ಪ್ರತಿಯೊಂದು ಯೋಜನೆಯನ್ನೂ ವಿರೋಧಿಸಿದರು. ಅಲ್ಲದೆ 1628ರಲ್ಲಿ ಅವರು ಹಕ್ಕುಗಳ ಬೇಡಿಕೆಯನ್ನು (ದಿ ಪಿಟಿಷನ್ ಆಫ್ ರೈಟ್ಸ್) ಅರಸನ ಮುಂದಿಟ್ಟರು. ಇದು 1215ರ ಮಹಾಸನ್ನದಿನ ಅನಂತರದ ಮಹಾಸನ್ನದು. ಅರಸನ ಅನ್ಯಾಯದ ಆಡಳಿತವನ್ನು ಅಂಕುಶಕ್ಕೊಳಪಡಿಸುವುದೇ ಇದರ ಉದ್ದೇಶ. ದೊರೆ ನಿರ್ವಾಹವಿಲ್ಲದೆ ಇದಕ್ಕೆ ಮನ್ನಣೆ ನೀಡಿದ. ಆದರೆ ಮರುವರ್ಷದಿಂದಲೇ (1629) ತನ್ನ ವೈಯಕ್ತಿಕ ಆಡಳಿತವನ್ನಾರಂಭಿಸಿದ. ಥಾಮಸ್ ವೆಂಟ್‌ವರ್ತ್ ಹಾಗೂ ಲಾಡ್ ಇವರಿಬ್ಬರ ಸಲಹೆಯಂತೆ ಮುಂದೆ 11 ವರ್ಷಗಳವರೆಗೆ ನಿರಂಕುಶ ಆಡಳಿತ ನಡೆಸಿದ. ಈ ಅವಧಿಯಲ್ಲಿ ದೊರೆ ಕಾಮನ್ಸ್ ಸಭೆಯ ನಾಯಕರನ್ನು ಬಂಧಿಸಿದ; ನ್ಯಾಯಾಲಯಗಳನ್ನು ತನ್ನ ಇಚ್ಛೆಯ ಮೇರೆಗೆ ಉಪಯೋಗಿಸಿಕೊಂಡ. ಅನ್ಯಾಯವಾದ ಹಾಗೂ ಸಂವಿಧಾನವಿರುದ್ಧವಾದ ಮಾರ್ಗಗಳನ್ನನುಸರಿಸಿ ಪ್ರಜೆಗಳಿಂದ ತೆರಿಗೆ ಸುಂಕಗಳನ್ನು ಗಳಿಸಿದ. ವಿರೋಧಿಸಿದವರನ್ನು ಹಿಂಸೆಗೆ ಗುರಿಪಡಿಸಿದ. ಆದರೆ ಇದು ಬಹಳ ಕಾಲ ಮುಂದುವರಿಯಲಿಲ್ಲ. 1640ರಲ್ಲಿ ಹಣದ ಅಭಾವಕ್ಕೊಳಗಾದ ದೊರೆ ಮತ್ತೆ ಪಾರ್ಲಿಮೆಂಟನ್ನು ಕರೆದ. ಲಾಂಗ್ ಪಾರ್ಲಿಮೆಂಟ್ ಎಂದು ಪ್ರಸಿದ್ಧವಾಗಿರುವ ಇದು ಅನೇಕ ಮಹತ್ವದ ಕಾರ್ಯಗಳನ್ನು ಕೈಗೊಂಡಿತು. ಚಾರ್ಲ್ಸ್ ದೊರೆಯಿಂದ ಅನ್ಯಾಯವಾಗಿ ಬಂಧಿಸಲ್ಪಟ್ಟವರನ್ನು ಬಿಡುಗಡೆ ಮಾಡಿತಲ್ಲದೆ ದೊರೆಗೆ ಬೆಂಬಲವಿತ್ತವರನ್ನು ಶಿಕ್ಷಿಸಿತು. ಅನಂತರ ಇದು 6 ಮಹತ್ತ್ವದ ಲಿಖಿತ ಕಾಯಿದೆಗಳನ್ನು ಹೊರಡಿಸಿತು. ಅರಸನ ನಿರಂಕುಶತ್ವವನ್ನೂ ದಬ್ಬಾಳಿಕೆಯನ್ನೂ ತಡೆಗಟ್ಟುವುದೇ ಇವುಗಳ ಉದ್ದೇಶ. ಈ ಮೂಲಕ ಪಾರ್ಲಿಮೆಂಟಿನ ಅವಧಿಯನ್ನು ನಿರ್ದಿಷ್ಟಪಡಿಸಲಾಯಿತು. ಸ್ಟಾರ್ ಚೇಂಬರ್ ಮುಂತಾದ ನ್ಯಾಯಾಲಯಗಳನ್ನು ರದ್ದುಗೊಳಿಸಲಾಯಿತು. ಹೀಗಾಗಿ ಪಾರ್ಲಿಮೆಂಟ್ ಆಡಳಿತದ ಒಂದು ಮುಖ್ಯವಾದ ಅಂಗವಾಯಿತು. ಹಣಕಾಸಿನ ವ್ಯವಹಾರ ಪಾರ್ಲಿಮೆಂಟಿನ ಅಧಿಕಾರಕ್ಕೆ ಒಳಪಟ್ಟಿತು. ಇದಲ್ಲದೆ ದೇಶದಲ್ಲಿ ಕಾಯಿದೆಯ ಪಾರಮ್ಯತತ್ತ್ವ ಪ್ರತಿಷ್ಠಿತಗೊಂಡಿತು. ಆದರೆ ಅನಂತರದ ಒಂದೆರಡು ವರ್ಷಗಳಲ್ಲಿಯೇ ಪಾರ್ಲಿಮೆಂಟಿನಲ್ಲಿ ಒಡಕುಂಟಾಯಿತು. ರಾಜಮನೆತನದವರು ಹಾಗೂ ಶ್ರೀಮಂತರು ದೊರೆಯೊಂದಿಗೆ ಸೇರಿದರು. ವ್ಯಾಪಾರಿ ಹಾಗೂ ಮಧ್ಯಮ ವರ್ಗದ ಜನತೆ ಪಾರ್ಲಿಮೆಂಟ್‌ನೊಂದಿಗೆ ಸೇರಿದರು. 1642 ಜೂನ್ 1ರಂದು ದೊರೆ ಪಾರ್ಲಿಮೆಂಟಿನ ಕಲಾಪಗಳನ್ನು ಒಪ್ಪಲು ನಿರಾಕರಿಸಿದ. ಆಗ ದೇಶದಲ್ಲಿ ಅಂತರ್ಯುದ್ಧ ಆರಂಭವಾಯಿತು. ಧಾರ್ಮಿಕ ಹಾಗೂ ರಾಜಕೀಯ ಕಾರಣಗಳಿಂದ ಸಂಭವಿಸಿದ ಈ ಅಂತರ್ಯುದ್ಧ 1642–1649ರವರೆಗೆ ನಡೆದು ಪಾರ್ಲಿಮೆಂಟ್ ಪಕ್ಷದ ಗೆಲುವಿನಲ್ಲಿ ಮುಕ್ತಾಯಗೊಂಡಿತು. 1649ರಲ್ಲಿ ಚಾರ್ಲ್ಸ್ ದೊರೆಗೆ ಮರಣದಂಡನೆ ವಿಧಿಸಲಾಯಿತು. ಮುಂದೆ ಹನ್ನೊಂದು ವರ್ಷಗಳವರೆಗೆ ಇಂಗ್ಲೆಂಡಿನಲ್ಲಿ ಸಂವಿಧಾನಬದ್ಧ ಹಾಗೂ ನಿರಂಕುಶ ಪ್ರಭುತ್ವ ಜಾರಿಯಲ್ಲಿತ್ತು. ಈ ಅವಧಿಯಲ್ಲಿ ಕಾಮನ್‌ವೆಲ್ತ್ ಹಾಗೂ ಇತರ ರಾಜಕೀಯ ಪದ್ಧತಿಗಳ ಪ್ರಯೋಗಗಳನ್ನು ಕೈಗೊಳ್ಳಲಾಯಿತು. ಆದರೆ ಯಾವುದೂ ಫಲಕಾರಿಯಾಗಲಿಲ್ಲ. ಕೊನೆಗೆ ಆಲಿವರ್ ಕ್ರಾಮವೆಲ್ ಸರ್ವಾಧಿಕಾರಿಯಾದ. ಲಿಖಿತ ಕಾಯಿದೆಗಳ ಮೇರೆಗೆ ಆಡಳಿತ ನಡೆಸಿ ದೇಶದಲ್ಲಿ ಶಾಂತಿ ನೆಲೆಗೊಳ್ಳುವ ಹಾಗೆ ಮಾಡಿದ. ಅಲ್ಲದೆ ಸಂವಿಧಾನಬದ್ಧ ಸರ್ಕಾರ ರಚಿಸಿದ. ಈತನ ಆಡಳಿತ ಕಾಲದಲ್ಲಿ ಬ್ರಿಟಿಷ್ ವಸಾಹತು ವಿಸ್ತಾರಗೊಂಡಿತು.

ಪರಮಾಧಿಕಾರವುಳ್ಳ ರಾಜಪ್ರಭುತ್ವದ ಅಗತ್ಯದ ಪ್ರತಿಪಾದನೆ ಹಾಬ್ಸ್‌ನ ಲೆವಿಯಥಾನ್ (1651) ಕೃತಿಯಲ್ಲಿದೆ **(ನೋಡಿ- ಹಾಬ್ಸ್,-ತಾಮಸ್)**.

**ಸಂವಿಧಾನಬದ್ಧ ರಾಜತ್ವ:** ಕ್ರಾಮ್‌ವೆಲ್‌ನ ಮರಣಾನಂತರ ಅರಾಜಕತೆಯನ್ನನುಭವಿಸಿದ ಜನ ಪುನಃ ಅರಸೊತ್ತಿಗೆಯನ್ನು ಅಸ್ತಿತ್ವಕ್ಕೆ ತಂದರು. ದ್ವಿತೀಯ ಚಾರ್ಲ್ಸ್ ಅರಸನಾದ. ಪಾರ್ಲಿಮೆಂಟ್ ಅರಸನ ಮೇಲೆ ಅನೇಕ ನಿರ್ಬಂಧಗಳನ್ನು ಹಾಕಿ ಮೊದಲಿಗಿಂತಲೂ ಹೆಚ್ಚಿನ ಅಧಿಕಾರಗಳನ್ನು ಪಡೆದುಕೊಂಡಿತು. ದ್ವಿತೀಯ ಚಾರ್ಲ್ಸ್‌ನ ಆಳ್ವಿಕೆಯ (1660–85) ಕಾಲ ಸಂವಿಧಾನಬದ್ಧವಾದ ರಾಜಕೀಯ ಬೆಳವಣಿಗೆಯ ಮಹತ್ತ್ವದ ಕಾಲವಾಗಿತ್ತು. ಜಹಗೀರಿ ಹಾಗೂ ಸೈನಿಕ ಉಂಬಳಿಯ ಪದ್ಧತಿ ಸಂಪೂರ್ಣವಾಗಿ ಸ್ಥಗಿತಗೊಂಡಿತು. ಅರಸೊತ್ತಿಗೆ ಪ್ರಜೆಗಳಿಂದ ನಿರ್ಮಿತಗೊಂಡದ್ದು ಎಂಬ ಭಾವನೆ ಬಲಗೊಂಡಿತು. ಇದರಿಂದಾಗಿ ಪ್ರಜೆಗಳು ಅರಸನನ್ನು ತಮ್ಮ ಇಚ್ಛೆಯ ಮೇರೆಗೆ ಬದಲಾಯಿಸಬಹುದೆಂಬ ತತ್ತ್ವ ನಿಶ್ಚಿತಗೊಂಡಿತು. ಪಾರ್ಲಿಮೆಂಟಿನ ಪ್ರಭುತ್ವ ಸ್ಥಾಪಿಸಲ್ಪಟ್ಟು ದೊರೆ ಕೇವಲ ಸಾಂಕೇತಿಕ ಅಧಿಕಾರಿ ಅಥವಾ ಸಂಸ್ಥೆಯಂತಾದ. ಆತ ಪಾರ್ಲಿಮೆಂಟಿನಲ್ಲಿ ಬಹುಮತ ಉಳ್ಳ ಪಕ್ಷದಿಂದ ಮಂತ್ರಿಗಳನ್ನು ಆರಿಸಬೇಕಾಗುತ್ತಿತ್ತು. ತೆರಿಗೆ ಹೇರುವಲ್ಲಿ ಮತ್ತು ಕಾರ್ಯಾಂಗದ ಹಾಗೂ ಸೈನ್ಯದ ಮೇಲೆ ಪಾರ್ಲಿಮೆಂಟಿನ ಅಧಿಕಾರ ಬಲಗೊಂಡಿತು. ನ್ಯಾಯಾಂಗ ಪ್ರತ್ಯೇಕಿಸಲ್ಪಟ್ಟು ಅರಸನ ವಿರುದ್ಧ ಕೂಡ (ತಪ್ಪಿದ್ದಲ್ಲಿ) ನಿರ್ಣಯ ಕೊಡುವ ಹಕ್ಕು ಪಡೆಯಿತು. ಆಸಾಮಿ ಹಾಜರಿ ಕಾಯಿದೆ (1679) ವೈಯಕ್ತಿಕ ಸ್ವಾತಂತ್ರ್ಯ ರಕ್ಷಣೆಯ ಸಾಧನವಾಯಿತು. ಇವಲ್ಲದೆ ಪಕ್ಷ ವ್ಯವಸ್ಥೆಯ ಉದಯವಾಗಿ ವಿಗ್ ಹಾಗೂ ಟೋರಿ ಪಕ್ಷಗಳು ಸ್ಥಾಪಿತವಾದುವು. ಮಂತ್ರಿಸಂಪುಟ ಪ್ರಮುಖ ಸ್ಥಾನಹೊಂದಿತು.

ದ್ವಿತೀಯ ಚಾರ್ಲ್ಸ್ ದೊರೆಯ ಅನಂತರ ಆತನ ತಮ್ಮನಾದ ದ್ವಿತೀಯ ಜೇಮ್ಸ್ (1685–88) ಪಟ್ಟಕ್ಕೆ ಬಂದ. ನಿರಂಕುಶ ಪ್ರಭುತ್ವ ಸ್ಥಾಪಿಸಲು ನಡೆಸಿದ ಈತನ ಪ್ರಯತ್ನ 1688ರಲ್ಲಿ ಇಂಗ್ಲೆಂಡಿನ ಇತಿಹಾಸದಲ್ಲಿ ಕೊನೆಯ ರಾಜಕೀಯ ಕ್ರಾಂತಿಯಲ್ಲಿ ಕೊನೆಗೊಂಡಿತು. ಪರಿಣಾಮವಾಗಿ ಅರಸನ ಪರಮಾಧಿಕಾರ ಪಾರ್ಲಿಮೆಂಟಿಗೆ (ಪ್ರಜೆಗಳಿಗೆ) ಸ್ಥಳಾಂತರಗೊಂಡು ಸಂಪೂರ್ಣ ಪ್ರಜಾಪ್ರಭುತ್ವ ಸ್ಥಾಪಿಸಲ್ಪಟ್ಟಿತು. ಜಾನ್ ಲಾಕ್ (1632–1704)ನಂಥ ರಾಜಕೀಯ ತತ್ತ್ವಜ್ಞರು ಪ್ರಜೆಗಳ ಸಂಪೂರ್ಣ ಸ್ವಾತಂತ್ರ್ಯ ಪ್ರತಿಪಾದನೆ ಮಾಡಿದರು **(ನೋಡಿ–ಲಾಕ್, ಜಾನ್)**.

ಜೇಮ್ಸ್‌ನ ಪಲಾಯನದ ಅನಂತರ ಪಾರ್ಲಿಮೆಂಟು ಆರೆಂಜಿನ ವಿಲಿಯಂ ಹಾಗೂ ಆತನ ಪತ್ನಿ ಮೇರಿ ಇವರನ್ನು ಆಮಂತ್ರಿಸಿ, ಇಂಗ್ಲೆಂಡಿನ ರಾಜರಾಣಿಯರನ್ನಾಗಿ ಆರಿಸಿ ಪ್ರಭುತ್ವವನ್ನು ಅವರಿಗೆ ಸಂಯುಕ್ತವಾಗಿ ಒಪ್ಪಿಸಿತು. 1689ರಲ್ಲಿ ಪ್ರಭುವಿನಿಂದ ಮಾನ್ಯವಾದ ಹಕ್ಕುಗಳ ಮಸೂದೆ ಅಂತಿಮವಾಗಿ ಪಾರ್ಲಿಮೆಂಟಿನ ಪರಮಾಧಿಕಾರ ಹಾಗೂ ಪ್ರಜೆಗಳ ಸ್ವಾತಂತ್ರ್ಯ ಸ್ಥಾಪನೆ ಮಾಡಿತು. ಕಾಮನ್ಸ್ ಸಭೆಗೆ ಚುನಾಯಿಸುವ ಪದ್ಧತಿ ಜಾರಿಗೆ ಬಂತು. ಹಾಗೆಯೇ ಪ್ರಚಾರ ಸ್ವಾತಂತ್ರ್ಯವೂ ಲಭಿಸಿತು.

**ಮಂತ್ರಿ ಸಂಪುಟದ ಪ್ರಾಬಲ್ಯ ಹಾಗೂ ಪ್ರಧಾನ ಮಂತ್ರಿ ಪದವಿಯ ಉಗಮ :** ಹದಿನೆಂಟನೆಯ ಶತಮಾನದ ಆರಂಭದೊಂದಿಗೆ ಇಂಗ್ಲೆಂಡಿನ ರಾಜಕೀಯ ಇತಿಹಾಸದಲ್ಲಿ ಪ್ರಜಾಪ್ರಭುತ್ವ ಯುಗದ ಆರಂಭವಾಯಿತು. 1688ರ ರಕ್ತರಹಿತ ಕ್ರಾಂತಿಯ ಅನಂತರ ಪಾರ್ಲಿಮೆಂಟ್‌ನ ಅಧಿಕಾರಗಳಲ್ಲಿ ಹೆಚ್ಚಳವಾಯಿತು. ಪಾರ್ಲಿಮೆಂಟ್ ಸ್ಥಿರಸಂಸ್ಥೆಯಾಗಿ ದೇಶದ ರಾಜಕೀಯದಲ್ಲಿ ಮಹತ್ತ್ವದ ಪಾತ್ರ ವಹಿಸಲಾರಂಭಿಸಿತು. ವ್ಯವಹಾರದ ರೀತಿ–ನೀತಿಗಳು ಬೆಳೆದುಬಂದವು. ಪ್ರಜಾತಾಂತ್ರಿಕ ತತ್ತ್ವಗಳು ಆಚರಣೆಗೆ ಬಂದುವಲ್ಲದೆ ಹ್ಯಾನೋವರ್ ಮನೆತನದ ಅರಸರ ಕಾಲದಲ್ಲಿ ಮಂತ್ರಿಸಂಪುಟ (ಕ್ಯಾಬಿನೆಟ್) ಹಾಗೂ ರಾಜಕೀಯ ಪಕ್ಷಗಳು ಪ್ರಾಮುಖ್ಯ ಪಡೆದುವು. ದೊರೆ ಹಾಗೂ ಪಾರ್ಲಿಮೆಂಟಿನ ನಡುವಣ ಘರ್ಷಣೆಯ ಪರಿಣಾಮವಾಗಿ ಪಾರ್ಲಿಮೆಂಟು ಪಡೆದುಕೊಂಡಿದ್ದ ಪರಮಾಧಿಕಾರವನ್ನು ಸಾಮಾನ್ಯ ಪ್ರಜೆಗಳಲ್ಲಿ ಸ್ಥಾಪಿಸುವ ಪ್ರಯತ್ನ ನಡೆಯಿತು. ಈ ಕಾಲದಲ್ಲಿ ಬ್ರಿಟನ್ನಿನಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿ ಹಾಗೂ ಫ್ರಾನ್ಸಿನಲ್ಲಿ ನಡೆದ ರಾಜಕೀಯ ಕ್ರಾಂತಿಯ ಪರಿಣಾಮವಾಗಿ ಜಾಗೃತಗೊಂಡಿದ್ದ ಸಾಮಾನ್ಯ ಪ್ರಜೆಗಳು (ಮುಖ್ಯವಾಗಿ ಮಧ್ಯಮ ವರ್ಗಕ್ಕೆ ಸೇರಿದವರು) ರಾಜ್ಯ ಕಾರ್ಯಗಳಲ್ಲಿ ಭಾಗವಹಿಸಲು ಕಾತರ ಹೊಂದಿದರು.

ಪ್ರಥಮ ಜಾರ್ಜ್ (1714–27) ಹಾಗೂ ದ್ವಿತೀಯ ಜಾರ್ಜ್‌ರ (1727–60) ಆಳ್ವಿಕೆಯ ಕಾಲದಲ್ಲಿ ಕ್ಯಾಬಿನೆಟ್ ಪದ್ಧತಿ ಮಹತ್ತ್ವ ಪಡೆಯಿತು. ಪ್ರಥಮ ಜಾರ್ಜನಿಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲವಾದ್ದರಿಂದ ಆತ ಸಂಪುಟದ ಸಭೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ. ಹೀಗಾಗಿ ಪ್ರಮುಖ ಮಂತ್ರಿಗಳಿಂದ ಕೂಡಿದ ಕ್ಯಾಬಿನೆಟ್ (ಸಂಪುಟ) ಸಂಪೂರ್ಣವಾಗಿ ರಾಜ್ಯದ ಅಧಿಕಾರ ನಿರ್ವಹಿಸುವಂತಾಯಿತು. ಸಂಪುಟದಲ್ಲಿ ದೊರೆಯ ಸ್ಥಾನವನ್ನು ಪ್ರಮುಖ ಮಂತ್ರಿಯೊಬ್ಬ ಅಲಂಕರಿಸುತ್ತಿದ್ದ. ಮುಂದೆ ಆತನೇ ಪ್ರಧಾನಮಂತ್ರಿಯೆಂಬ ನಾಮಕರಣ ಹೊಂದಿದ. ಪ್ರಧಾನ ಮಂತ್ರಿಯ ನೇತೃತ್ವದಲ್ಲಿ ರಚಿತವಾದ ಸಂಪುಟದ ಸದಸ್ಯರು ಸಾಮಾನ್ಯವಾಗಿ ಒಂದೇ ಪಕ್ಷಕ್ಕೆ ಸೇರಿದವರಾಗಿದ್ದು, ಕಾಮನ್ಸ್ ಸಭೆಯ ಬಹುಮತ

ಪಡೆದಿರುತ್ತಿದ್ದರು. ಹೀಗೆ ಪ್ರಥಮ ಜಾರ್ಜ್ ದೊರೆಯ ಕಾಲದಲ್ಲಿ ಪ್ರತ್ಯೇಕವಾಗಿ ರಚಿತವಾದ ಕ್ಯಾಬಿನೆಟ್ ಮುಂದೆ ವಿಕಾಸಗೊಂಡು ಸಂವಿಧಾನ ಹಾಗೂ ಸರ್ಕಾರದ ಪ್ರಮುಖ ಅಂಗವಾಯಿತು. 1721ರಲ್ಲಿ ಸಂಪುಟದ ಮುಖಂಡತ್ವವನ್ನು ವಹಿಸಿದ ವಿಗ್ ಪಕ್ಷದ ವಾಲ್ಪೋಲ್ ಇಂಗ್ಲೆಂಡಿನ ಪ್ರಥಮ ಪ್ರಧಾನಮಂತ್ರಿಯೆನಿಸಿಕೊಂಡ. ಈತ ತನಗೆ ಸರಿದೋರದ ಕೆಲ ಮಂತ್ರಿಗಳನ್ನು ಮಂತ್ರಿಮಂಡಲದಿಂದ ಬೇರ್ಪಡಿಸಿದ. ಅನಂತರ ದ್ವಿತೀಯ ಜಾರ್ಜ್ ಅರಸನ ಆಳ್ವಿಕೆಯ ಕಾಲದಲ್ಲೂ ವಾಲ್ಪೋಲ್ ಪ್ರಧಾನ ಮಂತ್ರಿಯಾಗಿ ಮುಂದುವರಿದು 1748ರ ವರೆಗೆ ಯಶಸ್ವಿಯಾಗಿ ಆಡಳಿತ ನಿರ್ವಹಿಸಿದ. ಈತನ ಯುದ್ಧನೀತಿ ಇಂಗ್ಲೆಂಡಿನ ಜನತೆಗೆ ಸರಿಬೀಳದ್ದರಿಂದ ಅವರು ಈತನನ್ನು ಪ್ರಧಾನಮಂತ್ರಿತ್ವ ತ್ಯಜಿಸಲು ಒತ್ತಾಯಪಡಿಸಿದರು. ಆದರೂ ಈತ ಸ್ಥಾಪಿಸಿದ ಅನೇಕ ಸಂಪ್ರದಾಯಗಳು ಇಂದಿಗೂ ಜಾರಿಯಲ್ಲಿವೆ. ಇಂಗ್ಲೆಂಡಿನ ಪ್ರಧಾನ ಮಂತ್ರಿ ಪದವಿಯ ಹಾಗೂ ಆ ಕಚೇರಿಯ ಮೂಲಪುರುಷನೇ ವಾಲ್ಪೋಲ್.

1760ರಲ್ಲಿ ಪಟ್ಟಕ್ಕೆ ಬಂದ ತೃತೀಯ ಜಾರ್ಜ್ ಟೋರಿ ಪಕ್ಷದ ಬೆಂಬಲದೊಂದಿಗೆ ಸಂಪುಟದ ಅಧಿಕಾರವನ್ನು ಹಿಂದಿರುಗಿ ಪಡೆದು ತಾನೇ ಅಧಿಕಾರ ನಡೆಸಬೇಕೆಂದು ಯತ್ನಿಸಿ, ಸ್ವಲ್ಪಮಟ್ಟಿಗೆ ಯಶಸ್ಸನ್ನೂ ಪಡೆದ. ತನ್ನ ಇಚ್ಛೆಗೆ ವಿರುದ್ಧವಾಗಿ ನಡೆದ ಮಂತ್ರಿಗಳನ್ನು ಪದಚ್ಯುತಿಗೊಳಿಸಿದ. ಅಲ್ಲದೆ ಪಾರ್ಲಿಮೆಂಟಿನ ಇಚ್ಛೆಯನ್ನು ಕಡೆಗಣಿಸಿದ. ಇದರಿಂದಾಗಿ ವಿರೋಧ ಬೆಳೆದು ಬಂದು ಅರಸ ತನ್ನ ಆಳ್ವಿಕೆಯ ಕೊನೆಯಲ್ಲಿ ಘನತೆ ಹಾಗೂ ಅಧಿಕಾರ ಕಳೆದುಕೊಂಡ. 1783ರಲ್ಲಿ ಹಿರಿಯ ಪಿಟ್ ಮಂತ್ರಿಮಂಡಲದ ರಚನೆಯೊಂದಿಗೆ ದೊರೆಯ ವೈಯಕ್ತಿಕ ಆಡಳಿತ ಕೊನೆಗೊಂಡಿತು. ಪಿಟ್ ಅನೇಕ ಸುಧಾರಣೆಗಳನ್ನು ತರಲೆತ್ನಿಸಿದ. 1785ರಲ್ಲಿ ಆತ ಪಾರ್ಲಿಮೆಂಟಿನಲ್ಲಿ ಅದರ ರಚನೆಯ ಸುಧಾರಣೆಗೆ ಸಂಬಂಧಿಸಿದ ಮಸೂದೆಯೊಂದನ್ನು ಮಂಡಿಸಿದ. ಆದರೆ ಅರಸನ ವಿರೋಧದಿಂದಾಗಿ ಅದು ಯಶಸ್ವಿಯಾಗಲಿಲ್ಲ. ಇದೇ ಕಾಲದಲ್ಲಿ ಅಬಾಧಿತ ಚುನಾವಣೆ ಹಾಗೂ ಪಾರ್ಲಿಮೆಂಟಿನ ಚರ್ಚೆಯ ವರದಿಗಳನ್ನು ಪ್ರಕಟಿಸುವ ಹಕ್ಕುಗಳು ದೊರಕಿದವು. ಮುಂದೆ 4ನೆಯ ವಿಲಿಯಂನ (1831–37) ಆಳ್ವಿಕೆಯ ಕಾಲದಲ್ಲಿ ವಿಗ್ ಪಕ್ಷ ಬಲಗೊಂಡಿತು. ಕೈಗಾರಿಕಾ ಕ್ರಾಂತಿ ಹಾಗೂ ಫ್ರೆಂಚ್ ರಾಜಕೀಯ ಕ್ರಾಂತಿಗಳಿಂದ ಉದಿಸಿದ್ದ ಜಾಗೃತಿಯಿಂದಾಗಿ ಕೆಲ ಸುಧಾರಣೆಗಳನ್ನು ಕೈಗೊಳ್ಳಬೇಕಾದ್ದು ಅವಶ್ಯವಾಯಿತು. ಮಧ್ಯಮವರ್ಗದ ಜನತೆ ಮತ ನೀಡುವ ಹಕ್ಕು ಪಡೆಯಲು ಸಕ್ರಿಯವಾಗಿ ಚಳವಳಿಯನ್ನಾರಂಭಿಸಿತು. ಈ ಹಿಂದೆ ಮೂರು ಸಲ ಮಂಡಿಸಲಾಗಿದ್ದ ಸುಧಾರಣಾ ಮಸೂದೆ 1832 ಜೂನ್ 7 ರಂದು ಕಾಯಿದೆಯಾಯಿತು. ಪ್ರಚಲಿತವಾಗಿದ್ದ ಅನೇಕ ಅನಿಯಮಿತ ರೂಢಿಗಳು ಬದಲಾಗಿ ಹೊಸ ನಿಯಮಗಳು ಜಾರಿಯಲ್ಲಿ ಬಂದುವು. 2,000 – 4,000ದ ವರೆಗೆ ಜನಸಂಖ್ಯೆಯುಳ್ಳ ಊರುಗಳು ಪಾರ್ಲಿಮೆಂಟಿಗೆ ಒಬ್ಬೊಬ್ಬ ಪ್ರತಿನಿಧಿಯನ್ನು ಕಳಿಸುವ ಹಕ್ಕು ಪಡೆದುವು. ಚುನಾವಣೆಯ ಜಿಲ್ಲೆಗಳ ಸಂಖ್ಯೆಯನ್ನು 95 ರಿಂದ 160ಕ್ಕೆ ಹೆಚ್ಚಿಸಿ ಸದಸ್ಯರ ಸಂಖ್ಯೆಯನ್ನು 658ಕ್ಕೆ ಏರಿಸಲಾಯಿತು. ಮತ ಕೊಡುವ ಅಧಿಕಾರ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಇದಕ್ಕೆ ವ್ಯಕ್ತಿಯ ಆದಾಯವೇ ಆಧಾರವಾಗಿತ್ತು. ಒಟ್ಟಿನಲ್ಲಿ 1832 ಈ ಕಾಯಿದೆ ಇಂಗ್ಲೆಂಡಿನಲ್ಲಿ ಪ್ರತಿನಿಧಿ ಸರ್ಕಾರ ಹಾಗೂ ಪ್ರಜಾಪ್ರಭುತ್ವದ ತಳಹದಿಯನ್ನು ಭದ್ರಪಡಿಸಿತು. ಪ್ರಥಮವಾಗಿ ಮಧ್ಯಮ ವರ್ಗದ ಸಾಮಾನ್ಯ ಪ್ರಜೆಗಳ ಕೈಯಲ್ಲಿ ಅಧಿಕಾರ ಬಂತು. ಕಾಮನ್ಸ್ ಸಭೆ ನಿಜವಾದ ಪ್ರಜಾಪ್ರತಿನಿಧಿ ಸಭೆಯಾಯಿತು. ಈ ಹೊಸ ಪಾರ್ಲಿಮೆಂಟು ರಚಿತಗೊಂಡ ಅನಂತರ ಆಡಳಿತವನ್ನು ವಹಿಸಿಕೊಂಡ ವಿಗ್ ಪಕ್ಷ ಬ್ರಿಟಿಷ್ ಸಾಮ್ರಾಜ್ಯದಲ್ಲಿ ದಾಸ್ಯಪದ್ಧತಿಯನ್ನು ಕಾನೂನಿನ ಮೂಲಕ ರದ್ದುಗೊಳಿಸಿತು. ಅಲ್ಲದೆ ಸಾಮಾನ್ಯ ಜನರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿತು. ಪೌರಸಭಾ ಕಾಯಿದೆಯ (1835) ಮೂಲಕ ನಗರಾಡಳಿತವನ್ನು ಸುಧಾರಿಸಲಾಯಿತು. ಅದನ್ನು ನೋಡಿಕೊಳ್ಳಲು ಸಮಿತಿಗಳು ಸ್ಥಾಪಿತವಾದುವು.

ವಿಕ್ಟೋರಿಯ ರಾಣಿಯ ಆಳ್ವಿಕೆಯ ಕಾಲದಲ್ಲಿ (1837–1902) ಲಾರ್ಡ್ ಮೆಲ್ಬೋರ್ನ್, ಸರ್ ರಾಬರ್ಟ್ ಪೀಲ್, ಡಿಸ್ರೇಲಿ, ಗ್ಲಾಡ್‌ಸ್ಟನ್ ಇವರು ಪ್ರಧಾನಮಂತ್ರಿಗಳಾಗಿ ಆಡಳಿತ ನಡೆಸಿದರು. ಇವರು ಪಾರ್ಲಿಮೆಂಟರಿ ಪದ್ಧತಿಯ ಸರ್ಕಾರದಲ್ಲಿ ಅನೇಕ ಸುಧಾರಣೆಗಳನ್ನು ತಂದು ಅದನ್ನು ಭದ್ರಪಡಿಸಿದರು. 1867ರಲ್ಲಿ ಜಾರಿಗೆ ಬಂದ ದ್ವಿತೀಯ ಸುಧಾರಣಾ ಕಾಯಿದೆ ಸಾಮಾನ್ಯ ಪ್ರಜೆಗಳ ಮತಕೊಡುವ ಹಕ್ಕನ್ನು ವಿಸ್ತರಿಸಿತು. ಈಗಾಗಲೇ 1832ರ ಕಾಯಿದೆಯೊಂದರ ಪ್ರಕಾರ ಗುಪ್ತಮತದಾನ ಪದ್ಧತಿಯನ್ನು ಆರಂಭಿಸಲಾಗಿತ್ತು. 1884ರ ತೃತೀಯ ಸುಧಾರಣಾ ಕಾಯಿದೆ ವ್ಯವಸಾಯ ಕೂಲಿಕಾರರಿಗೆ ಮತ ನೀಡುವ ಹಕ್ಕು ಕೊಟ್ಟಿತ್ತು. ಈ ಎಲ್ಲ ಬದಲಾವಣೆಗಳಿಂದ ಲಾರ್ಡ್ಸ್ ಸಭೆಯ ಮಹತ್ತ್ವ ಕಡಿಮೆಯಾಗುತ್ತ ಬಂತು. ಅಲ್ಲದೆ 7ನೆಯ ಎಡ್ವರ್ಡ್ ಅರಸನ ಕಾಲದಲ್ಲಿ (1901–10) ನಡೆದ ಪ್ರಮುಖ ಘಟನೆಯೊಂದರಿಂದಾಗಿ ಅದು ಹಣಕಾಸಿನ ಸಂಬಂಧದ ಮಹತ್ತ್ವದ ಅಧಿಕಾರಗಳನ್ನು ಕಳೆದುಕೊಂಡಿತು. 1909ರಲ್ಲಿ ಆಸ್ಕ್ವಿತ್ ಮಂತ್ರಿಯಾಗಿದ್ದಾಗ ಕಾಮನ್ಸ್ ಸಭೆ ಸಮ್ಮತಿಸಿದ ಬಜೆಟ್ಟನ್ನು ಲಾರ್ಡ್ಸ್ ಸಭೆ ತಡೆಹಿಡಿದಾಗ ಸಂವಿಧಾನ ಸಂಬಂಧವಾದ ಸಮಸ್ಯೆ ಉದ್ಭವಿಸಿತು. ಪಾರ್ಲಿಮೆಂಟ್ ವಿಸರ್ಜನೆಗೊಂಡಿತು. ಹೊಸ ಚುನಾವಣೆಗಳು ನಡೆದುವು. ಆಸ್ಕ್ವಿತ್ ಬಹುಮತದೊಂದಿಗೆ ಅಧಿಕಾರಕ್ಕೆ ಹಿಂತಿರುಗಿದ. ಕೊನೆಗೆ 1910ರಲ್ಲಿ ಬಜೆಟ್ ಮಸೂದೆಯನ್ನು ಲಾರ್ಡ್ಸ್ ಸಭೆ ಒಪ್ಪಬೇಕಾಯಿತು. ಆದರೆ ಐದನೆಯ ಜಾರ್ಜ್ ದೊರೆಯ ಆಳ್ವಿಕೆಯ (1910–36) ಕಾಲದ ಆರಂಭದಲ್ಲಿ 1911ರ ಪಾರ್ಲಿಮೆಂಟ್ ಕಾಯಿದೆಯ ಮೂಲಕ ಲಾರ್ಡ್ಸ್ ಸಭೆಯ ಹಣಕಾಸಿನ ಅಧಿಕಾರಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಯಿತಲ್ಲದೆ ಇತರ ಸಂಬಂಧದಲ್ಲೂ ಅದರ ಅಧಿಕಾರಗಳನ್ನು ಮೊಟಕುಗೊಳಿಸಲಾಯಿತು. ಮತ್ತೆ 1949ರಲ್ಲಿ ಈ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಲಾರ್ಡ್ಸ್ ಸಭೆಯ ಅಧಿಕಾರಗಳನ್ನು ಮತ್ತಷ್ಟು ಕಡಿಮೆ ಮಾಡಲಾಯಿತು.

1918ರ ನಾಲ್ಕನೆಯ ಸುಧಾರಣಾ ಕಾಯಿದೆಯನ್ವಯ 21 ವರ್ಷ ವಯಸ್ಸಿನ ಪುರುಷರು ಹಾಗೂ 30 ವರ್ಷ ವಯಸ್ಸಿನ ಸ್ತ್ರೀಯರಿಗೆ ಮತ ನೀಡುವ ಹಕ್ಕು ಕೊಡಲಾಯಿತು. ಮುಂದೆ 1928ರಲ್ಲಿ 21 ವರ್ಷದ ಅಥವಾ ಅದಕ್ಕೆ ಮೇಲ್ಪಟ್ಟ ವಯಸ್ಸಿನ ಸ್ತ್ರೀಪುರುಷರಿಗೆ ಸಮಾನವಾಗಿ ಮತಕೊಡುವ ಹಕ್ಕು ನೀಡಲಾಯಿತು. ಈಗ ಈ ವಯೋಮಿತಿಯನ್ನು 18 ವರ್ಷಗಳಿಗೆ ಇಳಿಸಲಾಗಿದೆ.

**ರಾಜಕೀಯ ಪಕ್ಷಗಳು:** 1642ರಲ್ಲಿ ನಡೆದ ಅಂತರ್ಯುದ್ಧದಲ್ಲಿ ದೊರೆ ಹಾಗೂ ಪಾರ್ಲಿಮೆಂಟಿಗೆ ಬೆಂಬಲವಿತ್ತ ಗುಂಪುಗಳು ಮುಂದೆ ಟೋರಿ ಹಾಗು ವಿಗ್ ರಾಜಕೀಯ ಪಕ್ಷಗಳಾಗಿ ಬೆಳೆದುಬಂದುವು. ದೇಶದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಬಲಗೊಂಡಂತೆ ಈ ಪಕ್ಷಗಳೇ ಕನ್ಸರ್‌ವೇಟಿವ್ (ಸಂಪ್ರದಾಯವಾದಿ) ಹಾಗೂ ಲಿಬರಲ್ (ಉದಾರವಾದಿ) ಪಕ್ಷಗಳಾದುವು. 20ನೆಯ ಶತಮಾನದ ಆರಂಭದಿಂದ ಲೇಬರ್ ಪಕ್ಷ ಬಲಗೊಳ್ಳುತ್ತ ಬಂದು ಪ್ರಥಮ ಮಹಾಯುದ್ಧದ ಅನಂತರ ಕನ್ಸರ್‌ವೇಟಿವ್ ಹಾಗೂ ಲೇಬರ್ (ಕಾರ್ಮಿಕ) ಪಕ್ಷಗಳು ಸ್ಥಿರತೆ ತಳೆದಿವೆ. ಇದರಿಂದಾಗಿ ಇಂಗ್ಲೆಂಡಿನಲ್ಲಿ ಇಂದು ದ್ವಿಪಕ್ಷ ಪದ್ಧತಿ ಸ್ಥಿರವಾಗಿದ್ದು ಇಂಗ್ಲೆಂಡಿನ ಸರ್ಕಾರಕ್ಕೆ ಸುಭದ್ರ ತಳಹದಿಯಾಗಿದೆ. ಈ ಸುಸಂಘಟಿತ ರಾಜಕೀಯ ಪಕ್ಷಗಳು ಇಂದು ಇಂಗ್ಲೆಂಡಿಗೆ ಸ್ಥಿರ ಸರ್ಕಾರಗಳನ್ನು ಒದಗಿಸುತ್ತಿವೆ. ಈ ರಾಜಕೀಯ ಪಕ್ಷಗಳು ಬ್ರಿಟನ್ನಿನ ಪ್ರಜಾಪ್ರಭುತ್ವದ ಮೂಲಾಧಾರಗಳಾಗಿ ನಿಂತಿವೆ. ಆದ್ದರಿಂದಲೇ ಆಡಳಿತ ಪಕ್ಷದಂತೆ ವಿರೋಧ ಪಕ್ಷವೂ ಮನ್ನಣೆ ಪಡೆದಿದೆ.

ಹೀಗೆ ಶತಮಾನಗಳಿಂದ ತನ್ನ ಆವಶ್ಯಕತೆಗಳಿಗನುಗುಣವಾಗಿ ವಿಕಸಿತವಾಗಿರುವುದು ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯ ಒಂದು ವೈಶಿಷ್ಟ್ಯ. ತನ್ನದೇ ಆದ ಲಿಖಿತ ಸಂವಿಧಾನ ಹೊಂದಿರದಿದ್ದರೂ ಅದು ಸರ್ಕಾರ ಪದ್ಧತಿ ಹಾಗೂ ಸಂಸದೀಯ ಸಂಸ್ಥೆಗಳ ತೌರಾಗಿದೆ. ಅಲಿಖಿತವೆಂದು ಕರೆಯಲಾದ ಇಂಗ್ಲಿಷ್ ಸಂವಿಧಾನವೇ ಪ್ರಪ್ರಥಮ ಲಿಖಿತ ಸಂವಿಧಾನವೆನಿಸಿಕೊಂಡಿರುವ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನದ ಮೇಲೂ ಕೆನಡ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಭಾರತ ಮತ್ತು ಪ್ರಪಂಚದ ಇನ್ನೂ ಅನೇಕ ರಾಷ್ಟ್ರಗಳ ಸಂವಿಧಾನಗಳ ಮೇಲೂ ತನ್ನ ಪ್ರಭಾವ ಬೀರಿದೆ. ಎಷ್ಟೋ ಸಂವಿಧಾನಗಳು ಇದುವರೆಗೆ ಅಸ್ತಿತ್ವಕ್ಕೆ ಬಂದು ಉರುಳಿಹೋಗಿವೆ. ಆದರೆ ಬ್ರಿಟಿಷ್ ಸಂವಿಧಾನಕ್ಕೆ ಸಾವೇ ಇಲ್ಲವೆನ್ನಬಹುದು. ಅಂತೆಯೇ ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯೂ ಸುಭದ್ರತೆಗೆ ಇನ್ನೊಂದು ಹೆಸರಾಗಿದೆ. (ಎ.ಎಂ.ಆರ್.)

**ಇಂಗ್ಲೆಂಡಿನ ವಾಸ್ತುಶಿಲ್ಪ:** (19ನೆಯ ಶತಮಾನದವರೆಗೆ): ಪ್ರಾಗೈತಿಹಾಸಿಕ ಕಾಲಕ್ಕೆ ಸಂಬಂಧಿಸಿದ ಸ್ಟೋನ್‌ಹೆಂಜ್ ಮುಂತಾದವುಗಳನ್ನು ಬಿಟ್ಟರೆ, ಇಂಗ್ಲೆಂಡಿನ ಮುಖ್ಯ ವಾಸ್ತುಕೃತಿಗಳು ಆ ದೇಶ ರೋಮ್ ಸಾಮ್ರಾಜ್ಯದ ಅಧೀನದಲ್ಲಿದ್ದ (ಪ್ರ.ಶ.ಪೂ.54–ಪ್ರ.ಶ.410) ಕಾಲಕ್ಕೆ ಸೇರಿದವುಗಳಾಗಿವೆ. ಈ ಕಾಲದ ಕೆಲವು ಸ್ನಾನದ ಕೊಳಗಳ ಉಳಿಕೆಗಳು ಬಾತ್, ಲೀಸ್ಟರ್, ರಾಚೆಸ್ಟರ್ ಮುಂತಾದ ಕಡೆಗಳಲ್ಲಿ ಅನೇಕ ಕೋಟೆಗಳೂ ಬಿಡಿ ಮನೆಗಳ (ವಿಲ) ಅವಶೇಷಗಳೂ ಲಂಡನ್, ಬಿನ್ನೋರ್, ಸಸೆಕ್ಸ್, ಬ್ರೇಡಿಂಗ್, ವುಡ್‌ಚೆಸ್ಟರ್ ಮುಂತಾದೆಡೆಗಳಲ್ಲೂ ಬೆಳಕಿಗೆ ಬಂದಿವೆ. ಈ ಕಾಲದ ಬಿಡಿಮನೆಗಳು ವಿಶೇಷವಾಗಿ ದಕ್ಷಿಣಕ್ಕೆ ತೆರೆದಂತೆ "U" ಆಕೃತಿಯಲ್ಲಿದ್ದು ಐವತ್ತಕ್ಕೂ ಹೆಚ್ಚು ಕೋಣೆಗಳನ್ನು ಒಳಗೊಂಡಿರುತ್ತಿದ್ದವು. ನೆಲವನ್ನು ಸಾಮಾನ್ಯವಾಗಿ ಹಾಸುಹೆಂಚುಗಳಿಂದ ಅಲಂಕರಿಸಲಾಗುತ್ತಿತ್ತು. ಸ್ನಾನದ ಕೊಳ ಮುಂತಾದ ಉಪಯುಕ್ತ ಭಾಗಗಳೂ ಮನೆಯನ್ನು ಶಾಖವಾಗಿಟ್ಟಿರಲು ಮಧ್ಯದಲ್ಲಿ ಒಂದು ಅಗ್ನಿಸ್ಥಾನವೂ ಈ ಕೋಣೆಗಳಲ್ಲಿರುತ್ತಿದ್ದುವು. ರೋಮನ್ ಪಟ್ಟಣಗಳಲ್ಲಿ ವಿಶೇಷವಾಗಿ ಕಂಡುಬರುವ ವರ್ತುಲ ನಾಟಕ ಶಾಲೆ (ಆಂಫಿಥಿಯೇಟರ್) ಮತ್ತು ಸಾಮಾನ್ಯ ನಾಟಕಶಾಲೆಗಳ ಮಾದರಿಯ ಕಟ್ಟಡಗಳ ಅವಶೇಷಗಳು ಕಾಯರ್ ವೆಂಟ್, ವೆರುಲೇಮಿಯಮ್ ಮುಂತಾದೆಡೆಗಳಲ್ಲಿವೆ. ಇತ್ತೀಚೆಗೆ ವೆರುಲೇಮಿಯಮ್‌ನಲ್ಲಿ ನಡೆಸಿದ ಉತ್ಖನನದಿಂದ ಸಮಕಾಲೀನ ನಗರ ವಿನ್ಯಾಸವನ್ನು ತಿಳಿಯಬಹುದು. ಆ ಕಾಲದ ಸಾಮಾನ್ಯ ಗೃಹಗಳು ಚದುರಂಗ ಮನೆಗಳಂತೆ ಅಚ್ಚುಕಟ್ಟಾಗಿ ವಿಂಗಡವಾಗಿದ್ದುವು. ಅಲ್ಲದೆ ಅವುಗಳಲ್ಲಿ ಚಳಿಗಾಲದಲ್ಲಿ ಉಪಯುಕ್ತವಾಗುವಂತೆ ಬಿಸಿಗಾಳಿಯನ್ನು ಮನೆಯಲ್ಲೆಲ್ಲ ತುಂಬುವ ವ್ಯವಸ್ಥೆಯೂ ಸ್ನಾನಗೃಹಗಳೂ ಇದ್ದುವು. ನೆಲವೆಲ್ಲ ಚಿತ್ರಿತ ಹಾಸುಹೆಂಚುಗಳಿಂದ ಅಲಂಕೃತವಾಗಿತ್ತು. ಮನೆಗಳು ಸುಂದರವಾಗಿದ್ದುವು. ಕೋಲ್ಚೆಸ್ಟರ್, ಲಂಡನ್ನಿನ ವಾಲ್ ಬ್ರೂಸ್ ಮುಂತಾದೆಡೆಗಳಲ್ಲಿ ಮಿಥ್ರ ದೇವತೆಯ ಗುಡಿಗಳ ಮತ್ತು ಸೆಲ್ಚೆಸ್ಟರ್ ಎಂಬಲ್ಲಿ ಒಂದು ಕ್ರೈಸ್ತ ಇಗರ್ಜಿಯ ಅವಶೇಷಗಳೂ ಉಳಿದಿವೆ. ವಾಸ್ತುವಿನ್ಯಾಸ ಮತ್ತು ಅಲಂಕರಣದಲ್ಲಿ ಈ ಕಾಲದ ಇಂಗ್ಲೆಂಡಿನ ಕಟ್ಟಡಗಳೆಲ್ಲವೂ ಸಮಕಾಲೀನ ರೋಮನ್ ಶೈಲಿಯ ಅನುಕರಣೆಗಳೆಂದೇ ಹೇಳಬಹುದು **(ನೋಡಿ–ರೋಮನ್ ವಾಸ್ತುಶಿಲ್ಪ)**.

ರೋಮನ್ ಆಳ್ವಿಕೆ ಕೊನೆಗೊಂಡ ಮೇಲೆ ಆ್ಯಂಗ್ಲೊ–ಸ್ಯಾಕ್ಸನ್ ವಲಸೆಗಾರರ ಆಳ್ವಿಕೆಯ ಕಾಲದಲ್ಲಿ 597ರ ವರೆಗೆ ಇಲ್ಲಿ ಕಟ್ಟಿರಬಹುದಾದ ಕಟ್ಟಡಗಳ ಬಗ್ಗೆ ಯಾವ ಮಾಹಿತಿಗಳೂ ದೊರಕುವುದಿಲ್ಲ. 597ರಲ್ಲಿ ಸೇಂಟ್ ಆಗಸ್ಟೀನ್ ಇಂಗ್ಲೆಂಡಿಗೆ ಬಂದು ಕೆಂಟ್ ದೊರೆಯನ್ನು

ಕ್ರೈಸ್ತಧರ್ಮಕ್ಕೆ ಮತಾಂತರಿಸಿದ ಮೇಲೆ ಕ್ಯಾಂಟರ್‌ಬರಿ (ಸೇಂಟ್ ಪೀಟರ್) ಮತ್ತು ಸೇಂಟ್ ಪಾಲ್, 597; ಸೇಂಟ್ ಪಾನ್ಕ್ರಾಸ್ ಪ್ರ.ಶ.ಸು. 600: ಸೇಂಟ್ ಮೇರಿ, ಸು. 620, ರಾಚೆಸ್ಟರ್ (ಸೇಂಟ್ ಆ್ಯಂಡ್ರೂ 604) ಮುಂತಾದೆಡೆಗಳಲ್ಲಿ ಅನೇಕ ಇಗರ್ಜಿಗಳು ಎದ್ದವು. ನಾರ್ಥಾಂಟ್‌ನ್ನ ಬ್ರಿಕ್ಸ್‌ವರ್ತ್ ಎಂಬಲ್ಲಿ ಸು. 670ರಲ್ಲಿ ಕಟ್ಟಲಾದ ಒಂದು ದೊಡ್ಡ ಇಗರ್ಜಿ ಇನ್ನೂ ಉಳಿದಿದ್ದು, ಇದು ಆಲ್ಪ್ಸ್‌ನ ಉತ್ತರ ಭಾಗದಲ್ಲಿ ಉಳಿದುಬಂದಿರುವ, 7ನೆಯ ಶತಮಾನದ ಸ್ಮಾರಕಗಳಲ್ಲಿ ಅತಿ ಭವ್ಯವಾದದ್ದು ಎಂದು ಪ್ರಸಿದ್ಧವಾಗಿದೆ. ಇದು ತಳವಿನ್ಯಾಸದಲ್ಲಿ ಉದ್ದನೆಯ ಚತುರಸ್ರವಾಗಿದ್ದು, ಒಳಭಾಗ ಎರಡು ಸಾಲುಕಂಬಗಳಿಂದ ಉದ್ದುದ್ದಕ್ಕೆ ಮೂರು ಭಾಗಗಳಾಗಿ ಬೇರ್ಪಟ್ಟಿದೆ. ಇಗರ್ಜಿಯ ಹಿಂಭಾಗ ಅರ್ಧವರ್ತುಲಾಕಾರದಲ್ಲಿದೆ. ಮುಂಭಾಗದಲ್ಲಿ ಮಧ್ಯ ಹಜಾರದ ಮೂರು ವಿಭಾಗಗಳಿಗೆ ಸರಿಯಾಗಿ ಮೂರು ಕಮಾನುಗಳಿವೆ. ಚಾವಣಿಯನ್ನು ಮರದಲ್ಲಿ ಮಾಡಿದೆ. 7ನೆಯ ಶತಮಾನದ ಉತ್ತರಾರ್ಧದಲ್ಲಿ ಬೆನೆಡಿಕ್ಟ್ ಇಸ್ಕೋಪ್ ಎಂಬುವನು ಕಟ್ಟಿಸಿದ ಇಗರ್ಜಿಗಳು ನಾರ್ಥಾಂಬ್ರಿಯದ ಮಾಂಕ್ ವಿಯರ್ ಮೌತ್, ಜಾರೊ ಮತ್ತು ಎಸ್ಕಾಂಬ್‌ಗಳಲ್ಲಿವೆ. ಈ ಕಾಲದ ಕಟ್ಟಡಗಳೆಲ್ಲ ವಿನ್ಯಾಸದಲ್ಲಿ ಬ್ರಿಕ್ಸ್‌ವರ್ತ್ ಇಗರ್ಜಿಯ ರೀತಿಯಲ್ಲಿ ಸರಳವಾಗಿಯೇ ಇವೆ. ತ್ರಿಕೋನ, ವಜ್ರ, ಪಟ್ಟಿ, ಚದುರಂಗ ಮನೆ ಮುಂತಾದ ಜ್ಯಾಮಿತೀಯ ಆಕೃತಿಗಳು, ನಡುನಡುವೆ ಏರುವ ಬಳ್ಳಿ, ಭಯಂಕರ ಪ್ರಾಣಿಗಳ ಚಿತ್ರಗಳು-ಇವಿಷ್ಟಕ್ಕೇ ಇವುಗಳ ಅಲಂಕರಣ ಸೀಮಿತ. ಪ್ರ. ಶ. 8–9ನೆಯ ಶತಮಾನಗಳಲ್ಲಿ ಡೇನ್ ಜನರ ಆಕ್ರಮಣಗಳಿಂದಾಗಿ ಇಂಗ್ಲೆಂಡಿನಲ್ಲಿ ಇಗರ್ಜಿಗಳ ನಿರ್ಮಾಣ ಸ್ಥಗಿತವಾಗಿತ್ತು.

**ರೋಮನೆಸ್ಕ್ ಶೈಲಿ:** ಯುರೋಪಿನಲ್ಲಿ ಪ್ರಚಲಿತವಾಗಿದ್ದ ರೋಮನೆಸ್ಕ್ ಶೈಲಿಯನ್ನೇ ಆಧರಿಸಿದ ಅನೇಕ ಇಗರ್ಜಿಗಳು 10ನೆಯ ಶತಮಾನದ ಆರಂಭದಿಂದ ಇಂಗ್ಲೆಂಡಿನಲ್ಲಿ ನಿರ್ಮಾಣವಾದುವು. ಈ ಇಗರ್ಜಿಗಳ ತಳವಿನ್ಯಾಸ ಸಾಮಾನ್ಯವಾಗಿ ಉದ್ದನೆಯ ಚತುರಸ್ರವಾಗಿದ್ದು ಎರಡು ಕಂಬಸಾಲುಗಳಿಂದ ಉದ್ದುದ್ದವಾಗಿ ಮೂರು ಭಾಗಗಳಾಗಿದೆ. ಇದರ ಹಿಂಭಾಗ ಅರ್ಧವೃತ್ತಾಕಾರದಲ್ಲಿದೆ. ಪೂಜ್ಯವಸ್ತುವನ್ನು ಸ್ಥಾಪಿಸಲು ಇದು ಪ್ರಶಸ್ತವಾದ ಭಾಗ. ಮುಂಭಾಗದಲ್ಲಿ ಮೂರು ಕಮಾನು ಬಾಗಿಲುಗಳಿರುತ್ತವೆ. ಕೆಲವು ಕಡೆಗಳಲ್ಲಿ ಉದ್ದನೆಯ ಹಜಾರವನ್ನು ಮಧ್ಯದಲ್ಲಿ ಕತ್ತರಿಸುವಂತೆ ಇನ್ನೊಂದು ನೀಳ ಚತುರಸ್ರಾಕಾರದ ಅಡ್ಡ ಹಜಾರವಿದೆ. ಒಟ್ಟು ತಳವಿನ್ಯಾಸವೇ ಶಿಲುಬೆಯಾಕೃತಿಯಲ್ಲಿರುತ್ತದೆ. ಬಾಗಿಲುಗಳು ಮತ್ತು ಕಿಟಕಿಗಳ ಮೇಲೆ ಅರ್ಧವೃತ್ತದ ಮೇಲು ಕಮಾನುಗಳಿವೆ. ಕೆಲವು ಇಗರ್ಜಿಗಳಲ್ಲಿ ಎತ್ತರದ ಗೋಪುರಗಳೂ ಇರುತ್ತವೆ. ಮೇಲ್ಚಾವಣಿ ಬಹುಮಟ್ಟಿಗೆ ಪೀಪಾಯಿಯಾಕೃತಿಯದು. ಅನೇಕ ಜ್ಯಾಮಿತಿಕ ವಿನ್ಯಾಸಗಳಿರುವ ಪಟ್ಟಿಕೆಗಳು, ಒಂದಕ್ಕೊಂದು ಹೆಣೆದುಕೊಂಡಂತಿರುವ ಕಮಾನು ನಮೂನೆಗಳ ಸಾಲು ಈ ಕಾಲದ ಮುಖ್ಯ ಅಲಂಕರಣ ರೂಪಗಳು. ಕಂಬ, ದ್ವಾರ ಮುಂತಾದವುಗಳ ಮೇಲೆ ಈ ಕಮಾನುಗಳು ವಿಶೇಷವಾಗಿ ಇರುತ್ತವೆ. ಇಂಗ್ಲೆಂಡಿನಲ್ಲಿ 1066ರ ನಾರ್ಮನ್ ಆಕ್ರಮಣದವರೆಗಿನ ವಾಸ್ತುಕೃತಿಗಳನ್ನು ಒಂದು ಘಟ್ಟದವೆಂದೂ ಅನಂತರ 1200ರ ವರೆಗಿನ ಕೃತಿಗಳನ್ನು ಇನ್ನೊಂದು ಘಟ್ಟದವೆಂದೂ ಪರಿಗಣಿಸುವ ರೂಢಿಯಿದೆ. ಮುಂದೆ ಸ್ಯಾಕ್ಸನ್ ಮತ್ತು ನಾರ್ಮನ್ ಎಂದು ಕರೆಯಲಾಗುತ್ತಿದ್ದ ಈ ಎರಡು ಘಟ್ಟಗಳನ್ನೂ ಇತ್ತೀಚೆಗೆ ಆಕ್ರಮಣ ಪೂರ್ವ ರೋಮನೆಸ್ಕ್ ಮತ್ತು ಆಕ್ರಮಣಾನಂತರದ ರೋಮನೆಸ್ಕ್ ಶೈಲಿಗಳೆಂದು ವಿಂಗಡಿಸಿದ್ದಾರೆ. ಆಕ್ರಮಣಪೂರ್ವ ರೋಮನೆಸ್ಕ್ ಶೈಲಿಯ ಒಳ್ಳೆಯ ಉದಾಹರಣೆಗಳು ಗ್ಲಾಸ್ಟರ್‌ಶೈರ್ ಪ್ರಾಂತ್ಯದ ಡೀರ್ ಹರ್ಸ್ಟ್, ವಿಲ್ಟ್ ಪ್ರಾಂತ್ಯದ ಬ್ರಾಡ್‌ಫರ್ಡ್-ಆನ್-ಏವನ್, ಬಕಿಂಗ್ ಹ್ಯಾಮ್‌ಷೈರ್ ಪ್ರಾಂತ್ಯದ ವಿಂಗ್, ಸಸಿಕ್ಸ್ ಪ್ರಾಂತ್ಯದ ವರ್ಥ್, ಬೊಶಾಮ್, ಸೋಂಪ್ಟಿಂಗ್, ನಾರ್ಥಾಂಟ್ಸ್ ಪ್ರಾಂತ್ಯದ ವಿಟರಿಂಗ್, ಆರ್ಲ್ಸ್ ಬಾರ್ಟನ್ ಮುಂತಾದ ಊರುಗಳಲ್ಲಿವೆ. ವೆಸ್ಟ್ ಮಿನ್‌ಸ್ಟರ್‌ನ ಮೊದಲ ಇಗರ್ಜಿ (1050–65) ಸಹ ಇದೇ ಶೈಲಿಯದೇ. ಕ್ಯಾಂಟರ್‌ಬರಿ ಇಗರ್ಜಿಯಲ್ಲಿ ಉಳಿದಿರುವ ಸುಂದರ ನಮೂನೆಯ ಕಲೆ ಗಾಜು ಮತ್ತು ಹಿಲ್ಡೆಶೀಮ್ ಇಗರ್ಜಿಯಲ್ಲಿರುವ ಕಂಚಿನ ದ್ವಾರ ಈ ಕಾಲದ ವಸ್ತುಶಿಲ್ಪ ಸಂಬಂಧದ ಇತರ ಕಲಾಕೃತಿಗಳು. ನಾರ್ಮನ್ನರ ಕಾಲದ (1060–ಸು. 1200) ಆಕ್ರಮಣಾನಂತರದ ರೋಮನೆಸ್ಕ್ ಶೈಲಿಯ ಇಗರ್ಜಿಗಳು ಚಿಚೆಸ್ಟರ್, ಡರ್ಹಾಮ್, ಎಲಿ, ಮೆಲ್ಬೋರ್ನ್, ಆಡೆಲ್ ಮುಂತಾದೆಡೆಗಳಲ್ಲಿವೆ. ಟವರ್ ಆಫ್ ಲಂಡನ್ನಿನಲ್ಲಿರುವ ಒಂದು ಚಿಕ್ಕ ಇಗರ್ಜಿ ಸಹ ಇದೇ ಗುಂಪಿನದು.

ಇಗರ್ಜಿಗಳ ಜೊತೆಗೆ ಈ ಕಾಲದ ಹಲವು ಕೋಟೆಮನೆಗಳು (ಕ್ಯಾಸಲ್) ಸಹ ಉಳಿದುಬಂದಿವೆ. ಈ ಕಾಲದಲ್ಲಿ ಅನೇಕ ಮಾಗಣೆಗಳಿದ್ದು ಒಂದೊಂದು ಮಾಗಣೆಯ ಸರದಾರನೂ ಒಂದೊಂದು ಕೋಟೆಮನೆಯನ್ನು ಕಟ್ಟಿಕೊಳ್ಳುತ್ತಿದ್ದ. ಇವೆಲ್ಲ ಸಾಮಾನ್ಯವಾಗಿ ಕಲ್ಲುಕಟ್ಟಡಗಳಾಗಿದ್ದು, ಕೋಟೆ ಗೋಡೆ ಮತ್ತು ಕಂದಕದಿಂದ ಆವೃತವಾಗಿರುತ್ತಿದ್ದುವು. ಒಳಭಾಗದಲ್ಲಿ ಸೈನಿಕರ ನೆಲೆಗಳೂ ಸರದಾರನ ವಾಸಗೃಹವೂ ಇರುತ್ತಿದ್ದುವು. ಈ ಕೋಟೆಮನೆಗಳು ಅನೇಕ ತರಹವಾಗಿದ್ದು, ಇವುಗಳ ಕಟ್ಟುವಿಕೆಯಲ್ಲಿ ಸಮಕಾಲೀನ ಕಟ್ಟಡಗಳ ಅನುಕರಣೆ ಕಂಡುಬರುತ್ತದೆ. (**ನೋಡಿ– ಕೋಟೆಗಳು**). ಇವುಗಳ ಮುಖ್ಯ ವಿಧಗಳನ್ನು ಲೆಟ್‌ಫರ್ಡ್ (ದಿಬ್ಬದ ರೀತಿ-ಮಾಲ್ವಿ ಟೈಪ್), ಆರ್ಫರ್ಡ್ (ದ್ವಾದಶಭುಜರೀತಿ-ಟ್ವೆಲ್ವ್ ಡೆಡ್ ಕೀಪ್ ಟೈಪ್), ಕ್ಯಾನಿಸ್‌ಬರೋ, ಪೆಂಬ್ರೋಕ್‌ಗಳಲ್ಲಿ (ವರ್ತುಲರೀತಿ –ರೌಂಡ್ ಟೈಪ್) ಕಾಣಬಹುದು.

**ಗಾಥಿಕ್ ಶೈಲಿ:** ಈ ಕಾಲದ ಕೊನೆಯ ಭಾಗದಲ್ಲಿ, ರೋಮನೆಸ್ಕ್ ಶೈಲಿಯಲ್ಲಿ ಸಾಮಾನ್ಯವಾಗಿದ್ದ ಅರ್ಧವೃತ್ತದ ಕಮಾನಿನ ಬದಲು ಚೂಪು ಕಮಾನುಗಳು ಬಳಕೆಗೆ ಬಂದು ಗಾಥಿಕ್ ಎಂಬ ಹೊಸ ವಾಸ್ತುಶೈಲಿಗೆ ಎಡೆ ಮಾಡಿಕೊಟ್ಟಿತು. ಈ ಕಾಲದವರೆಗೆ ಹೆಚ್ಚು ಕಡಿಮೆ ಜೊತೆಜೊತೆಯಾಗಿ ಬೆಳೆದ ಇಂಗ್ಲಿಷ್ ಮತ್ತು ಫ್ರೆಂಚ್ ವಾಸ್ತುಶೈಲಿಗಳು ಇಲ್ಲಿಂದ ಕ್ರಮೇಣ ವ್ಯತ್ಯಸ್ತಗೊಳ್ಳಲಾರಂಭಿಸುತ್ತವೆ. ಇಂಗ್ಲಿಷ್ ಗಾಥಿಕ್ ಶೈಲಿಯಲ್ಲಿ ಮೂರು ಘಟ್ಟಗಳಿವೆ: 1. ಪ್ರಾಚೀನ ಇಂಗ್ಲಿಷ್ ಅಥವಾ ಮೊದಲ ಚೂಪು ಶೈಲಿ (ಸು. 1220–1300), 2. ಅಲಂಕೃತ ಅಥವಾ ಮಧ್ಯಸ್ಥ ಚೂಪು ಶೈಲಿ (ಸು. 1300–70). 3. ಲಂಬ ಅಥವಾ ಅನಂತರದ ಚೂಪು ಶೈಲಿ (ಸು. 1370–1540). ಈ ಘಟ್ಟಗಳತ್ತ ಬದಲಾವಣೆಗಳು ಕ್ರಮ ಕ್ರಮವಾಗಿ ಜರುಗುವುದರಿಂದ, ಕೆಲವು ವಾಸ್ತುಕೃತಿಗಳಲ್ಲಿ ಹಳೆಯ ಮತ್ತು ಹೊಸ ಶೈಲಿಯ ಅಂಶಗಳು ಜೊತೆಗೂಡಿದ್ದು ಇವು ಗಾಥಿಕ್ ಶೈಲಿಯ ಇಂಥ ವಿಭಾಗಕ್ಕೇ ಸೇರಿದ್ದೆಂದು ನಿಖರವಾಗಿ ಹೇಳಲು ಕಷ್ಟವಾಗುತ್ತದೆ. ಇಂಗ್ಲಿಷ್ ಗಾಥಿಕ್ ಶೈಲಿಯಲ್ಲಿ ಇಗರ್ಜಿಗಳು ಬಹಳ ಉದ್ದವಾಗಿರುತ್ತವೆ (ಮಧ್ಯ ಗಾಥಿಕ್ ಚರ್ಚುಗಳಲ್ಲಿ ಅತ್ಯಂತ ದೊಡ್ಡದಾದ ವಿಂಚೆಸ್ಟರ್ ಇಗರ್ಜಿ 556' ಉದ್ದವಿದೆ, ಅವುಗಳ ಅಗಲ ಆ ಉದ್ದದ ಪ್ರಮಾಣಕ್ಕೆ ಬಹಳ ಕಿರಿದು. ಈ ಇಗರ್ಜಿಗಳು ಸಾಮಾನ್ಯವಾಗಿ ಪೂರ್ವಮುಖವಾಗಿದ್ದು ಹಿಂಭಾಗದ ಕೊನೆ ಫ್ರೆಂಚ್ ಗಾಥಿಕ್‌ನಂತೆ ವರ್ತುಲವಾಗಿರದೆ, ಸಾಮಾನ್ಯವಾಗಿ ಚಚ್ಚೌಕವಾಗಿರುತ್ತದೆ. ಉದ್ದನೆಯ ಹಜಾರ ಎರಡು ಕಮಾನುಸಾಲುಗಳಿಂದ ಮೂರು ಭಾಗಗಳಾಗಿ ನೇರ ನೇರವಾಗಿ ವಿಭಜಿಸಲ್ಪಟ್ಟಿರುತ್ತದೆ. ಈ ಉದ್ದ ಭಾಗವನ್ನು ಸುಮಾರು ಸಮಾರ್ಧಕ್ಕೆ ಕತ್ತರಿಸುವಂತೆ, ಉದ್ದನೆಯ ಅಡ್ಡ ಕಟ್ಟಡವೊಂದಿದ್ದು ತಳವಿನ್ಯಾಸ ಮುಖ್ಯವಾಗಿ ಶಿಲುಬೆಯಾಕೃತಿ ತಾಳಿರುತ್ತದೆ. ಇಂಥದೇ ಚಿಕ್ಕ ಚಿಕ್ಕ ಅಡ್ಡಕಟ್ಟಡಗಳು ಅದರ ಮುಂಭಾಗದಲ್ಲಿ ಇರುವುದೂ ಉಂಟು (**ನೋಡಿ– ಗಾಥಿಕ್ ವಾಸ್ತು ಶೈಲಿ**). ಗಾಥಿಕ್ ಕಾಲದ ಕೊನೆಯವರೆಗೂ ಕಟ್ಟಡಗಳ ತಳವಿನ್ಯಾಸ ಅಷ್ಟಾಗಿ ಬದಲಾಯಿಸದಿದ್ದರೂ ಮೇಲೆ ಕಾಣಿಸಿದ ಶೈಲಿಯ ವಿಭಾಗಗಳನ್ನು ಇತರ ಅಂಶಗಳಿಂದ ಗಮನಿಸಬಹುದು. ದಪ್ಪಗೋಡೆಗಳು, ಪೀಪಾಯಿಯಾಕಾರದಲ್ಲಿ ಹೆಚ್ಚು ಬಾಗಿದ ದಪ್ಪ ಚಾವಣಿ, ಚಿಕ್ಕ ಮಟ್ಟಸ ಒದೆಗಂಬಗಳು ಮತ್ತು ಕಿರಿದಾದ ಕಿಟಕಿಗಳು ಗಾಥಿಕ್‌ನ ಮೊದಲ ಹಂತದ ಕೃತಿಗಳಲ್ಲಿದ್ದರೆ, ಮುಂದಿನ ಘಟ್ಟದಲ್ಲಿ ಒದೆಗಂಬಗಳು ದಪ್ಪವಾಗಿ ಗೋಡೆಗಳು ತೆಳುವಾಗಿರುವುದಲ್ಲದೆ ಮೇಲ್ಚಾವಣಿಯೂ ತೆಳುವಾಗಿ ಶಿಲೆಯ ಅಡ್ಡಪಟ್ಟಿಗಳ ಮೇಲೆ ಎತ್ತಲಾಗಿರುತ್ತದೆ. ಈ ಕಾಲದ ಕಿಟಕಿಗಳೂ ಅಗಲವಾಗಿ ಸುಂದರವಾಗಿ ಅಲಂಕೃತವಾಗಿರುತ್ತವೆ. ಕೊನೆಕೊನೆಯ ಹೊತ್ತಿಗೆ ಚಾವಣಿ ಬಹಳ ತೆಳುವಾಗಿ ಅದರ ಭಾರವೆಲ್ಲ ಶಿಲೆಯ ದಪ್ಪ ತೊಲೆಗಳ ಮೇಲಿದ್ದು, ಅವುಗಳನ್ನು ದಪ್ಪ ಒದೆಗಂಬಗಳು ಹೊತ್ತಿರುತ್ತವೆ. ಗೋಡೆ ಬಹಳ ತೆಳುವಾಗಿ, ಬಹಳಮಟ್ಟಿಗೆ ಅನೇಕ ಗಾಜಿನ ಫಲಕಗಳಿಂದ ಅಲಂಕೃತವಾದ ತೆಳು ತೆರೆಯಂತೆ ಕಾಣುತ್ತವೆ. ಒದೆಗಂಬಗಳ ಮೇಲೆ ಶಿಖರಗಳನ್ನು ಎತ್ತಿರುವುದು ಈ ಶೈಲಿಯ ಒಂದು ವೈಶಿಷ್ಟ್ಯ. ಸ್ಯಾಲಿಸ್ಬರಿ, ಲಿಂಕನ್, ಸೌತ್‌ವರ್ಕ್, ಸೌತ್‌ವೆಲ್, ವೋರ್ಸೆಸ್ಟರ್‌ನ ಇಗರ್ಜಿಗಳು. ಡರ್ಹಾಮ್‌ನ ಚಾಪಲ್ ಆಫ್ ನೈನ್ ಆಲ್ಟರ್ಸ್, ಲಂಡನ್ನಿನ ವೆಸ್ಟ್ ಮಿನ್‌ಸ್ಟರ್ ಅಬೆ ಮತ್ತು ಟೆಂಪಲ್ ಚರ್ಚ್‌ನ ಕೆಲವು ಭಾಗಗಳು ಇಂಗ್ಲಿಷ್ ಗಾಥಿಕ್ ಶೈಲಿಯ ಮೊದಲ ಘಟ್ಟಕ್ಕೆ ಒಳ್ಳೆಯ ಉದಾಹರಣೆಗಳು. ಎಕ್ಸೆಟರ್, ಲಿಚ್‌ಫೀಲ್ಡ್, ಬ್ರಿಸ್ಟಲ್, ಲಿಂಕನ್, ಸ್ಯಾಲಿಸ್ಬರಿ, ಮುಂತಾದೆಡೆಗಳಲ್ಲಿರುವ ಇಗರ್ಜಿಗಳ ಅನೇಕ ಭಾಗಗಳು ಗಾಥಿಕ್‌ನ ಎರಡನೆಯ ಘಟ್ಟದ ಶೈಲಿಯಲ್ಲಿವೆ. ಕ್ಯಾಂಟರ್ಬರಿ, ಮ್ಯಾಂಚೆಸ್ಟರ್ ಮತ್ತು ವಿಂಚೆಸ್ಟರ್ ಇಗರ್ಜಿಗಳ ಮುಖ್ಯ ಭಾಗಗಳೂ ಷರ್ಬಾರ್ನ್‌ನ ಇಗರ್ಜಿ, ವಿಂಡ್ಸರ್‌ನ ಸೇಂಟ್ ಜಾರ್ಜ್ ಚಾಪೆಲ್, ಕೇಂಬ್ರಿಜ್‌ನ ಕಿಂಗ್ಸ್ ಕಾಲೇಜ್ ಚಾಪೆಲ್, ವೆಸ್ಟ್ ಮಿನ್‌ಸ್ಟರ್ ಹಾಲ್‌ನ ಚಾವಣಿ. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್‌ಗಳಲ್ಲಿನ ಹಳೆಯ ಕಾಲೇಜು ಕಟ್ಟಡಗಳು ಗಾಥಿಕ್‌ನ ಮೂರನೆಯ ಘಟ್ಟದ ಶೈಲಿಯಲ್ಲಿವೆ.

**ಇಟಲಿಯ ಪ್ರಭಾವ:** 16ನೆಯ ಶತಮಾನದ ಆದಿಭಾಗದಲ್ಲಿ ಇಟಲಿಯ ಪುನರುಜ್ಜೀವನ ಕಾಲದ ಕಲೆ ಇಂಗ್ಲೆಂಡಿನ ಮೇಲೆ ಪ್ರಭಾವ ಬೀರಲಾರಂಭಿಸಿತು. ಇಲ್ಲಿನ ವಾಸ್ತುಕೃತಿಗಳಲ್ಲಿ ಇದರ ಪ್ರಭಾವ ಮೊದಮೊದಲು ಅಲಂಕರಣಕ್ಕಷ್ಟೇ ಸೀಮಿತವಾಗಿದ್ದು, ಕ್ರಮೇಣ ಇತರ ಅಂಶಗಳಲ್ಲೂ ಹೆಚ್ಚಾಗಿ ಕಂಡುಬರುತ್ತದೆ. ಇಂಗ್ಲೆಂಡಿನ 16ನೆಯ ಶತಮಾನದ ವಾಸ್ತುಕಲೆಯನ್ನು ಟ್ಯೂಡರ್ ಶೈಲಿ (16ನೆಯ ಶತಮಾನದ ಆದಿಯಿಂದ ಸು. 1558ರ ವರೆಗೆ). ಎಲಿಜಬೆತನ್ ಶೈಲಿ (1158–1603) ಮತ್ತು ಜಾಕೋಬಿಯನ್ ಶೈಲಿಯೆಂದು (1603–30) ಮೂರು ಭಾಗಗಳಾಗಿ ವಿಭಜಿಸಲಾಗಿದೆ. ಆದರೆ ಈ ರೀತಿಯ ವಿಭಾಗ ಬಹಳ ನಿಖರವಾದದ್ದೇನೂ ಅಲ್ಲ. ಹಲಕೆಲವು ಕಟ್ಟಡಗಳಲ್ಲಿ ಬೇರೆ ಬೇರೆ ಉಪಶೈಲಿಗಳ ಅಂಶಗಳು ಒಂದೇ ಕಡೆ ಕಾಣಸಿಗುವುದು ವಿರಳವೇನಲ್ಲ. 1540–1600ರವರೆಗಿನ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಧಾರ್ಮಿಕ ಆಂದೋಲನಗಳು ತಲೆಯೆತ್ತಿದ್ದರಿಂದಲೂ ಮಧ್ಯಕಾಲೀನ ಇಗರ್ಜಿಗಳು ಬಹು ಸಂಖ್ಯೆಯಲ್ಲಿದ್ದುದರಿಂದಲೂ ಆಗ ಇಗರ್ಜಿಗಳ ನಿರ್ಮಾಣ ಬಹುವಾಗಿ ನಿಂತು ಹೋಗಿತ್ತೆಂದೇ ಹೇಳಬಹುದು. ಆದರೆ ಲೀಪ್ಸ್ ಎಂಬಲ್ಲಿ ಈ ಹೇಳಿಕೆಗೆ ಅಪವಾದವೆಂಬಂತೆ ಆ ಕಾಲದ ಇಗರ್ಜಿಯೊಂದಿಗೆ ವಿಶಿಷ್ಟ ರೀತಿಯ ಮನೆಗಳ ಶಾಲೆಗಳ ಮತ್ತು ಕಾಲೇಜುಗಳ ಕಟ್ಟಡಗಳು ಬಹುವಾಗಿ ಬೆಳೆದದ್ದು ಈ ಕಾಲದ ವೈಶಿಷ್ಟ್ಯ. ಟ್ಯೂಡರ್ ಶೈಲಿಯ ಕಟ್ಟಡಗಳು ಗಾಥಿಕ್ ಮಾದರಿಯಲ್ಲೇ ಇದ್ದರೂ ಅಲಂಕರಣೇತ್ಯಾದಿಗಳಲ್ಲಿ ಇಟ್ಯಾಲಿಯನ್ ಕಲೆಯ

ಅಂಶಗಳನ್ನು ಸ್ವಲ್ಪಮಟ್ಟಿಗೆ ಅನುಸರಿಸಿವೆ. ಹ್ಯಾಂಪ್ಟನ್ ಕೋರ್ಟಿನಲ್ಲಿರುವ ಅರಮನೆ (ಸು. 1520). ವೆಸ್ಟ್‌ಮಿನ್‌ಸ್ಟರ್ ಅಬೆಯಲ್ಲಿರುವ 7ನೆಯ ಹೆನ್ರಿಯ ಗೋರಿ (1512), ಹ್ಯಾಂಪ್‌ಷೈರಿನಲ್ಲಿರುವ ಟಿಚ್‌ಫೀಲ್ಡ್ ಅರಮನೆ ಈ ಶೈಲಿಯ ಕಟ್ಟಡಗಳು.

ಮೊದಲನೆಯ ಎಲಿಜಬೆತ್ ರಾಣಿಯ ಕಾಲದಲ್ಲಿ ಇಟಲಿಯ ವಾಸ್ತುಶಿಲ್ಪದ ಅಂಶಗಳನ್ನು ಹೆಚ್ಚು ಹೆಚ್ಚಾಗಿ ಅನುಸರಿಸಿರುವುದಲ್ಲದೆ, ಕಟ್ಟಡಗಳ ವಿನ್ಯಾಸದಲ್ಲಿ ಉತ್ತಮ ಪ್ರಮಾಣ ಮತ್ತು ಅಚ್ಚುಕಟ್ಟುತನ ಎದ್ದುಕಾಣುತ್ತದೆ. ಕೇಂಬ್ರಿಜ್‌ನ ಗೋನ್ವಿಲ್ ಕಾಲೇಜಿನ ಪ್ರಾಂಗಣ ಈ ಘಟ್ಟದ ವಾಸ್ತುಕೃತಿಗೆ ಒಳ್ಳೆಯ ಉದಾಹರಣೆ. ಈ ಕಾಲದ ಸರ್ ಜಾನ್ ಥೈನ್ ರಾಬರ್ಟ್ ಸ್ಮಿತ್ಸನ್ ಮುಂತಾದ ಪ್ರಸಿದ್ಧ ಶಿಲ್ಪಿಗಳು ರೂಪಿಸಿದ ಅನೇಕ ಮನೆಗಳು ಉಳಿದುಬಂದಿವೆ. ಲಾಂಗ್ಲಿಯೆಟ್ ಎಂಬಲ್ಲಿರುವ ಥೈನ್‌ನ ಸ್ವಂತ ಮನೆ ಬಹು ಉತ್ತಮ ಕೃತಿ. ಸ್ಮಿತ್ಸನ್ ರೂಪಿಸಿದ ವೋಲ್ಲಾರ್ಟನ್‌ನ ಮನೆ, ಇಟಲಿಯ ಸೆರ್ಲಿಯೋ ಎಂಬ ಶಿಲ್ಪಿ ತನ್ನ ಪುಸ್ತಕವೊಂದರಲ್ಲಿ ರೂಪಿಸಿದ್ದ ಒಂದು ವಿನ್ಯಾಸದಲ್ಲೇ ಇದೆ. ಇದು ಇಂಗ್ಲೆಂಡಿನ ಶಿಲ್ಪಿಗಳು ಇಟಲಿ ವಾಸ್ತುಶೈಲಿಗೆ ಎಷ್ಟರಮಟ್ಟಿಗೆ ಋಣಿಗಳಾಗಿದ್ದರೆಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಡರ್ಬಿಷೈರ್‌ನಲ್ಲಿರುವ ಹಾರ್ಡ್‌ವಿಕ್ ಹಾಲ್ (1590–97), ನಾರ್ಥಾಂಪ್ಟನ್ನಿನಲ್ಲಿರುವ ಕಿರ್ಬಿಹಾಲ್, ಸಾಮರ್ಸೆಟ್‌ನಲ್ಲಿರುವ ಮೊಂಟಾಕೊಟ್ ಮನೆ ಈ ಶೈಲಿಯ ಇತರ ಗಮನಾರ್ಹ ಕೃತಿಗಳು.

ಜಾಕೋಬಿಯನ್ ಶೈಲಿ ಬಹುಮಟ್ಟಿಗೆ ಒಂದನೆಯ ಜೇಮ್ಸನ ಕಾಲದಲ್ಲಿ ಪ್ರಚಲಿತವಾಗಿತ್ತು. ಇದೂ ಸಹ ಬಹಳವಾಗಿ ಟ್ಯೂಡರ್ ರೀತಿಗೆ ಸೇರಿದ್ದಾದರೂ ಇದರ ಅಲಂಕರಣದಲ್ಲಿ ರೋಮನ್ ಶೈಲಿಯ ಅರ್ಥವಿಲ್ಲದ ಅನುಕರಣೆಗಳು ವಿಶೇಷವಾಗಿ ಕಾಣುತ್ತದೆ. ಆಕ್ಸ್‌ಫರ್ಡ್ ಕೇಂಬ್ರಿಜ್‌ಗಳ ಅನೇಕ ಕಾಲೇಜುಗಳು ಈ ಶೈಲಿಯಲ್ಲಿವೆ.

**ಪುನರುಜ್ಜೀವನ ಶೈಲಿ:** ಇಂಗ್ಲೆಂಡಿನ ವಾಸ್ತುಕಲೆಯ ನಿಜವಾದ ಪುನರುಜ್ಜೀವನ ಶೈಲಿ 1615ರಿಂದ ಪ್ರಾರಂಭವಾಗುತ್ತದೆ. ಆ ವರ್ಷದಲ್ಲಿ ಇನಿಗೊ ಜೋನ್ಸ್ ಎಂಬುವನು ಅರಮನೆಯ ಶಿಲ್ಪಿಯಾಗಿ ನೇಮಿತನಾದ. ಇವರನ್ನು ತನ್ನ ಅಧಿಕಾರ ಕಾಲದಲ್ಲಿ ರೂಪಿಸಿದ ಕಟ್ಟಡಗಳೆಲ್ಲವೂ ಪೂರ್ಣವಾಗಿ ಇಟಲಿಯ ಸುಂದರ ಪುನರುಜ್ಜೀವನ ಶೈಲಿಯಲ್ಲೇ ಇದ್ದು ಮುಂದಿನ ಇಂಗ್ಲೆಂಡ್ ವಾಸ್ತುಕೃತಿಗಳಿಗೆ ಮಾದರಿಗಳಾದವು. ಗ್ರಿನಿಜ್‌ನಲ್ಲಿರುವ ರಾಣಿಯ ಮನೆ (1617–35), ಲಂಡನ್ನಿನ ವೈಟ್‌ಹಾಲ್‌ನಲ್ಲಿರುವ ಭೋಜನಗೃಹ (1611–22) ಇವನ ಅಮೋಘ ನಿರ್ಮಾಣಗಳು. ಇವು ಇಂಗ್ಲೆಂಡಿನ ವಾಸ್ತುಶಿಲ್ಪ ಬೆಳವಣಿಗೆಯ ಗತಿಯನ್ನೇ ಬದಲಾಯಿಸಿದುವು. ಇಂಗ್ಲೆಂಡಿನ ಹಳೆಯ ಗಾಥಿಕ್ ಶೈಲಿ ನಿಧಾನವಾಗಿ ಮರೆಯಾಗಿ 19ನೆಯ ಶತಮಾನದವರೆಗೂ ಇನಿಗೊ ಜೋನ್ಸ್‌ನಿಂದ ಉದ್ಘಾಟಿತವಾದ ಹೊಸ ರೀತಿ ಅನೇಕ ಆವಿಷ್ಕಾರಗಳೊಡನೆ ಬೆಳೆದು ನಡೆಯಿತು. ಇನಿಗೊ ಜೋನ್ಸ್ ತನ್ನ ಕಟ್ಟಡಗಳಲ್ಲಿ ಇಟಲಿಯ ಪಾಲ್ಲಾಡಿಯೋ ಎಂಬ ಶಿಲ್ಪಿಯ ಕೃತಿಗಳನ್ನೇ ಹೆಚ್ಚು ಅನುಸರಿಸಿದ್ದರಿಂದ ಈ ಒಂದು ವಾಸ್ತುರೀತಿ ಪಾಲಾಡಿಯೋ ಶೈಲಿ ಎಂದೂ ಪ್ರಸಿದ್ಧವಾಗಿದೆ.

ಆದರೆ ಇತರ ಸಮಕಾಲೀನ ಶಿಲ್ಪಗಳಂತೆ ಇಟ್ಯಾಲಿಯನ್ ಶೈಲಿಯನ್ನೇ ಪೂರ್ತಿ ಅನುಕರಿಸದೆ ಡಚ್, ಫ್ರೆಂಚ್ ಮುಂತಾದ ಶೈಲಿಗಳ ಅಂಶಗಳನ್ನು ಅಳವಡಿಸಿಕೊಂಡು ಹೊಸ ಹೊಸ ರೀತಿಯ ವಿನ್ಯಾಸಗಳನ್ನು ಆವಿಷ್ಕರಿಸಿ, ಇಂಗ್ಲೆಂಡಿನ ವಾಸ್ತುಕಲೆಗೆ ಒಂದು ನೂತನಮುಖ ನೀಡಿದ ಕೀರ್ತಿ ಸರ್ ಕ್ರಿಸ್ಟೋಫರ್ ರೆನ್ (1632–1723) ಎಂಬ ಶಿಲ್ಪಿಗೆ ಸಲ್ಲುತ್ತದೆ. ಇನಿಗೊ ಜೋನ್ಸ್‌ನಂತೆ ಈತ ಸಹ ಇಂಗ್ಲೆಂಡಿನ ವಾಸ್ತುಶಿಲ್ಪದ ಇತಿಹಾಸದಲ್ಲಿ ಒಂದು ಅಪೂರ್ವ ಸ್ಥಾನ ಪಡೆದಿದ್ದಾನೆ. ಲಂಡನ್ನಿನ ಸೇಂಟ್ ಪಾಲ್ ಕೆಥೀಡ್ರಲ್‌ನಂಥ ಮಹೋನ್ನತ ಕೃತಿಯನ್ನಲ್ಲದೆ, ವಾಲ್‌ಬ್ರೂಕನ ಸೇಂಟ್ ಸ್ಟೀಫನ್ ಇಗರ್ಜಿ, ಫ್ಲೀಟ್‌ಸ್ಟ್ರೀಟ್‌ನಲ್ಲಿರುವ ಸೇಂಟ್ ಬ್ರೈಡ್ ಇಗರ್ಜಿ ಮುಂತಾದ ಉತ್ತಮ ಕಟ್ಟಡಗಳನ್ನು ಈತ ರೂಪಿಸಿದ್ದಾನೆ.

18ನೆಯ ಶತಮಾನದ ಶಿಲ್ಪಗಳು ರೆನ್ನನ ಶೈಲಿಗಿಂತಲೂ ಹೆಚ್ಚಾಗಿ ಇನಿಗೊ ಜೋನ್ಸ್‌ನಿಂದ ಆರಂಭವಾದ ಪಲಾಡಿಯೋ ಶೈಲಿಯನ್ನೇ ಅನುಕರಿಸಿದ್ದಾರೆ. ಬ್ಲೆನ್‌ಹೀಮ್, ಹೇರ್‌ವುಡ್, ಹೋಲ್ಕಾಮ್ ಮುಂತಾದ ಕೋಠಿಗಳೂ ಗ್ರೀನ್‌ವಿಚ್, ಚೆಲ್ಸಿಯ ಮುಂತಾದೆಡೆಗಳ ಆಸ್ಪತ್ರೆಯ ಕಟ್ಟಡಗಳೂ ಈ ಕಾಲದ ಮುಖ್ಯ ಕಟ್ಟಡಗಳು. ಆಡಮ್, ಆರ್ಚರ್, ಬರ್ಟನ್, ನ್ಯಾಷ್, ವೆಬ್ ಮುಂತಾದ ಪ್ರಸಿದ್ಧ ಶಿಲ್ಪಿಗಳು ಈ ಕಾಲದವರು.

ಇಂಗ್ಲೆಂಡಿನ ಈ ಹಲವು ವಾಸ್ತುಶೈಲಿಗಳಲ್ಲಿರುವ ಕಟ್ಟಡಗಳು ಬ್ರಿಟಿಷರು ಹರಡಿದ್ದ ಎಲ್ಲ ದೇಶಗಳಲ್ಲೂ ಕಾಣಸಿಗುತ್ತವೆ. ಅದರಲ್ಲೂ ವಿಶೇಷವಾಗಿ ಅಮೆರಿಕ, ಆಸ್ಟ್ರೇಲಿಯ ಮತ್ತು ಭಾರತ ದೇಶಗಳಲ್ಲಿ ಗಾಥಿಕ್, ಟ್ಯೂಡರ್, ಎಲಿಜಬೇತನ್ ರಿನೇಸಾನ್ಸ್ ಇತ್ಯಾದಿ ಶೈಲಿಗಳ ಅನೇಕ ಕಟ್ಟಡಗಳು ಕಾಣಸಿಗುತ್ತವೆ. ಕರ್ನಾಟಕದಲ್ಲಿಯೇ ಗಾಥಿಕ್ ಶೈಲಿಗಳ ಅನುಕರಣೆಯನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಮತ್ತು ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚುಗಳಲ್ಲಿಯೂ ರಿನೇಸಾನ್ಸ್ ಶೈಲಿಯ ಪ್ರಭಾವವನ್ನು, ಬೆಂಗಳೂರಿನ ಸರ್ಕಾರೀ ವಸ್ತು ಸಂಗ್ರಹಾಲಯ, ಸಂಶೋಧನಾಲಯ, ನ್ಯಾಯಾಲಯಗಳು ಮುಂತಾದೆಡೆಯಲ್ಲೂ ನೋಡಬಹುದು. ಬೆಂಗಳೂರಿನ ಅರಮನೆ ಟ್ಯೂಡರ್ ಶೈಲಿಯ ಕಟ್ಟಡ. (ಎಸ್.ಎನ್.)

**ಇಂಗ್ಲೆಂಡಿನ ಶಿಕ್ಷಣ ವ್ಯವಸ್ಥೆ:** ಒಂದು ದೇಶದ ಶಿಕ್ಷಣ ಪದ್ಧತಿಯ ಬೆಳವಣಿಗೆ, ರೂಪಲಕ್ಷಣಗಳ ಮೇಲೆ ಆ ದೇಶದ ರಾಜಕೀಯ, ಬೌದ್ಧಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳು ತಮ್ಮ ಪ್ರಭಾವ ಬೀರುತ್ತವೆಯೆಂಬ ಸಾಮಾನ್ಯ ತತ್ತ್ವದ ಪ್ರತಿಪಾದನೆಗೆ ಇಂಗ್ಲೆಂಡ್ ಒಂದು ಉತ್ತಮ ಉದಾಹರಣೆ. ಇಂಗ್ಲೆಂಡಿನ ಶಿಕ್ಷಣದ ಬೆಳವಣಿಗೆಯಲ್ಲಿ ಅಲ್ಲಿಯ ವಿದ್ಯಾಸಂಸ್ಥೆಗಳು ಅನೇಕ ಬಗೆಯ ಪ್ರಯೋಗಗಳಿಗೆ ಒಳಗಾಗಿ ರೂಪುಗೊಂಡಿವೆ. ಆಯಾ ಕಾಲಕ್ಕೆ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು, ಸಮಯ ಸನ್ನಿವೇಶಗಳಿಗೆ ಹೊಂದಿಕೊಂಡು ಈ ವಿದ್ಯಾಸಂಸ್ಥೆಗಳು ದೇಶಕ್ಕೆ ಮಹತ್ತರ ಸೇವೆ ಮಾಡಿವೆ. ಇತ್ತೀಚಿನವರೆಗೂ ಯಾವ ಗೊತ್ತಾದ ಗುರಿಯುಳ್ಳ ನಿಯಮ, ತತ್ತ್ವಗಳಿಗನುಸಾರವಾಗಿಯೂ ಈ ಸಂಸ್ಥೆಗಳು ಬೆಳೆಯಲಿಲ್ಲ. ಅಂತೆಯೇ ಪ್ರತಿಯೊಂದು ಶಾಲೆಯೂ ತನ್ನದೇ ಆದ ವೈಶಿಷ್ಟ್ಯವನ್ನೂ ವ್ಯಕ್ತಿತ್ವವನ್ನೂ ಪರಂಪರೆಯನ್ನೂ ಪಡೆದುಕೊಂಡಿದ್ದುದರಿಂದ ವಿದ್ಯಾಕ್ಷೇತ್ರದಲ್ಲಿ ಪ್ರತಿ ಶಾಲೆಯೂ ಒಂದೊಂದು ಘಟಕವಾಗಿ ಉಳಿಯಿತು. ಇಂದಿಗೂ ಅನೇಕ ಶಾಲೆಗಳು ತಮ್ಮ ನೈಜ ಸ್ವರೂಪ ಲಕ್ಷಣಗಳನ್ನು ಉಳಿಸಿಕೊಂಡು ಬಂದಿವೆ.

ಮಧ್ಯಯುಗದಲ್ಲಿ ಯುರೋಪಿನ ಮಿಕ್ಕ ರಾಷ್ಟ್ರಗಳಂತೆ ಇಂಗ್ಲೆಂಡಿನಲ್ಲೂ ಧಾರ್ಮಿಕ ಪ್ರಭಾವ ಹೆಚ್ಚಾಗಿತ್ತು. ಕ್ರೈಸ್ತಮತಪ್ರಚಾರಕ್ಕೆ ಬಹಳ ಆಸರೆಯೂ ತೀವ್ರವಾದ ಆಸಕ್ತಿಯೂ ಇದ್ದುವು. ಇಂಗ್ಲೆಂಡಿನ ಶಿಕ್ಷಣಪದ್ಧತಿಯ ಬೆಳವಣಿಗೆಯಲ್ಲಿ ಕ್ರೈಸ್ತಧರ್ಮದ ಪಾತ್ರ ಬಹಳ ಮುಖ್ಯವಾದದ್ದು. ಇಂದಿಗೂ ಇಂಗ್ಲೆಂಡಿನ ಶಿಕ್ಷಣದ ಪದ್ಧತಿಯಲ್ಲಿ ಮತಬೋಧನೆಗೆ ಮಹತ್ತ್ವದ ಪಾತ್ರವಿದೆ.

ಚರ್ಚಿನಂತೆಯೇ ಪ್ರಬಲ ಪ್ರಭಾವ ಬೀರಿದ ಮತ್ತೊಂದು ಶಕ್ತಿಯೆಂದರೆ ಜನರಲ್ಲಿ ರಕ್ತಗತವಾದ ಪ್ರಜಾಪ್ರಭುತ್ವ ತತ್ತ್ವ; ಸಂಸದೀಯ ಪದ್ಧತಿಗಳ ವಿಶ್ವಾಸ. ಆದ್ದರಿಂದಲೇ ಪ್ರತಿಯೊಂದು ಸಂಸ್ಥೆಯೂ ಸ್ಥಳೀಯ ಸಂಘವೂ ವ್ಯಕ್ತಿಯೂ ಹೊಂದಿರುವ ಸ್ವಾತಂತ್ರ್ಯಕ್ಕೆ ಕೇಂದ್ರ ಸರ್ಕಾರದಿಂದಾಗಲಿ, ಇತರ ಪ್ರಬಲಶಕ್ತಿಗಳಿಂದಾಗಲಿ ಧಕ್ಕೆ ಉಂಟಾಗಿಲ್ಲ.

ಇಂಗ್ಲಿಷರ ಮತ್ತೊಂದು ಗಮನೀಯ ಗುಣವೆಂದರೆ ಅವರ ಸಂಪ್ರದಾಯಬದ್ಧತೆ, ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುವ ಜಾಡು ಅವರದಲ್ಲ. ಕಾಲಕ್ಕನುಗುಣವಾಗಿ ಬದಲಾವಣೆಗಳ ಅಗತ್ಯ ಬಿದ್ದಾಗ, ಕೂಲಂಕಷವಾಗಿ ಯೋಚಿಸಿ, ಚರ್ಚಿಸಿ, ಎಷ್ಟರಮಟ್ಟಿನ ಬದಲಾವಣೆಗಳು ಅತ್ಯಾವಶ್ಯಕವೋ ಅಷ್ಟನ್ನು ಮಾತ್ರ ಅವರು ಜಾರಿಗೆ ತಂದುಕೊಂಡಿದ್ದಾರೆ. ಇದರಿಂದ ಅನೇಕ ಶತಮಾನಗಳಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದ ಪದ್ಧತಿಗಳು ಇಂದಿಗೂ ಅನೇಕ ಶಾಲೆಗಳಲ್ಲಿವೆ. ಅನೇಕ ಶಾಲಾಪದ್ಧತಿಗಳಲ್ಲಿ, ಪಠ್ಯಕ್ರಮದಲ್ಲಿ, ಬೋಧನೆಯ ರೀತಿಯಲ್ಲಿ ಬಹಳ ಕಾಲದಿಂದಲೂ ಬಂದ ರೂಢಿಗಳು, ಸಂಪ್ರದಾಯಗಳು ಇಂದಿಗೂ ಇವೆ. ಆದರೆ ಸಮಯೋಚಿತ ರೀತಿಯಲ್ಲಿ ವ್ಯತ್ಯಾಸಗಳನ್ನು ಮಾಡಿಕೊಳ್ಳುವ ಜಾಣ್ಮೆಯೂ ಇಂಗ್ಲಿಷರಲ್ಲಿ ಹೇರಳವಾಗಿವೆ.

**ಶಿಕ್ಷಣ ವ್ಯವಸ್ಥೆಯ ಬೆಳವಣಿಗೆ:** ಇಂಗ್ಲೆಂಡಿನಲ್ಲಿ ರೋಮನ್ ಸಾಮ್ರಾಜ್ಯ ಸ್ಥಾಪನೆಯಾದಾಗ ಗ್ರೀಕ್ ಮತ್ತು ರೋಮನ್ ವಿದ್ಯಾಭ್ಯಾಸ ಕ್ರಮವನ್ನನುಸರಿಸಿ ಅನೇಕ ಶಾಲೆಗಳು ಪ್ರಾರಂಭವಾದುವು. ಆದರೆ 5ನೆಯ ಶತಮಾನದಿಂದೀಚೆಗೆ ಕ್ರೈಸ್ತಧರ್ಮದ ಪ್ರಭಾವ ಹೆಚ್ಚಿತು. ಹಳೆಯ ಶಾಲೆಗಳ ಬದಲು ಅನೇಕ ಚರ್ಚ್‌ಶಾಲೆಗಳು ಸ್ಥಾಪಿತವಾದುವು. ಕ್ಯಾಂಟರ್‌ಬರಿ, ಯಾರ್ಕ್ ಮೊದಲಾದ ಕಡೆಗಳಲ್ಲಿ ಕ್ರೈಸ್ತ ಚರ್ಚಿನ ಮತ್ತು ಮಠದ ಶಾಲೆಗಳು ಪ್ರಚಾರಕ್ಕೆ ಬಂದವು. ಡೇನರ ಮತ್ತು ನಾರ್ಮನ್ನರ ದಂಡಯಾತ್ರೆಗಳಿಂದ ಸ್ವಲ್ಪ ತೊಂದರೆಗೀಡಾದರೂ ಈ ಮತೀಯ ಶಾಲೆಗಳು ಬಲಿಷ್ಠವಾದವು. ಪ್ರಾಥಮಿಕ ಶಾಲೆಗಳೇ ಅಲ್ಲದೆ ಗ್ರಾಮರ್ ಶಾಲೆಗಳೆಂದು ಪ್ರಸಿದ್ಧವಾಗಿರುವ ಸೆಕೆಂಡರಿ ಶಾಲೆಗಳೂ ಪ್ರಾರಂಭವಾದುವು. ಮತಬೋಧನೆಗೂ ಪ್ರಚಾರಕ್ಕೂ ಇವೂ ಒದಗಿಬಂದುವು. ಸು. 450–1450ರ ವರೆಗೆ ಒಂದು ಸಾವಿರ ವರ್ಷಗಳಷ್ಟು ಕಾಲ ರೋಮನ್ ಕ್ಯಾಥೊಲಿಕ್ ಮತವೇ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿತ್ತು.

1450–1760ರ ಕಾಲ ಯುರೋಪಿನಲ್ಲಿ ಜ್ಞಾನ ಪುನರುಜ್ಜೀವನ ಕಾಲವೆನಿಸಿಕೊಂಡಿದೆ. ಈ ಕಾಲದಲ್ಲಿ ಅನೇಕ ಮಹತ್ತರ ಘಟನೆಗಳು ನಡೆದು ಕ್ರಾಂತಿಕಾರಕ ಬದಲಾವಣೆಗಳಾದುವು. ಉದ್ಯಮಗಳ ಬೆಳವಣಿಗೆ, ಧರ್ಮ ಸುಧಾರಣೆ, ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಸಾಹಿತ್ಯಗಳ ಪುನರುಜ್ಜೀವನ, ಮುದ್ರಣಕಲೆಯ ಪ್ರಾರಂಭ, ವಿಜ್ಞಾನದ ಉದಯ– ಇವುಗಳಿಂದಾಗಿ ಇಂಗ್ಲೆಂಡಿನಲ್ಲಿ ರೋಮನ್ ಕ್ಯಾಥೊಲಿಕ್ ಮತದ ಪ್ರಾಬಲ್ಯ ಕುಂದಿತು. ಹಳೆಯ ಕ್ರೈಸ್ತ ಮಠಗಳನ್ನು ಮುಚ್ಚಿ ಸುಮಾರು 8,000 ಕ್ರೈಸ್ತ ಪಾದ್ರಿಗಳನ್ನು ಓಡಿಸಲಾಯಿತು. ಇಂಗ್ಲೆಂಡಿನ ಚರ್ಚು ಪೋಪ್ ಅಧಿಕಾರದಿಂದ ಸ್ವತಂತ್ರವಾಯಿತು **(ನೋಡಿ– ಇಂಗ್ಲೆಂಡಿನ– ಚರ್ಚು)**. ಈ ಘಟನೆಗಳಿಂದಾಗಿ ಚರ್ಚಿನವರು ನಡೆಸುತ್ತಿದ್ದ ಶಾಲೆಗಳೆಲ್ಲವೂ ಮುಚ್ಚಿಹೋಗಿ ವಿದ್ಯಾಪ್ರಚಾರಕ್ಕೆ ಬಹಳಮಟ್ಟಿಗೆ ಆಘಾತ ಒದಗಿತು. ಪ್ರಾಂಟೆಸ್ಟಂಟ್ ಮತೀಯರು ಕಾಲಕ್ರಮೇಣ ತಮ್ಮವೇ ಆದ ಅನೇಕ ಶಾಲೆಗಳನ್ನು ಸ್ಥಾಪಿಸಿದರು. ಇದರಿಂದ ಶಿಕ್ಷಣ ಪದ್ಧತಿಯಲ್ಲಿ ಧರ್ಮಕ್ಕೆ ಇದ್ದ ಪ್ರಾಬಲ್ಯವೇನೂ ಕಡಿಮೆಯಾಗಲಿಲ್ಲ. ಕೈಗಾರಿಕಾ ಕ್ರಾಂತಿಯನ್ನು ಮೊದಲು ಕಂಡ ದೇಶವೇ ಇಂಗ್ಲೆಂಡು. **(ನೋಡಿ– ಇಂಗ್ಲೆಂಡಿನ ಆರ್ಥಿಕ ಬೆಳವಣಿಗೆ)**. ಸ್ಥೂಲವಾಗಿ 1760ರಿಂದ 1870ರ ತನಕ ನಡೆದ ಈ ಕ್ರಾಂತಿಯೂ ಸಮಾಜದಲ್ಲಿ ಬಹಳ ಮುಖ್ಯವಾದ ಬದಲಾವಣೆ ಮಾಡಿತು. ಗಿರಣಿಗಳ ಸ್ಥಾಪನೆ, ವಿಜ್ಞಾನದ ಮುನ್ನಡೆ, ಕೂಲಿಗಳ ವಿಷಯದಲ್ಲಿ ತೋರಿಬಂದ ಮಾನವೀಯ ಭಾವನೆ, ನಿರ್ಗತಿಕರ ಕಾಯಿದೆ (1601) ಮತ್ತು ಸುಧಾರಣಾ ಕಾಯಿದೆಗಳ ಜಾರಿ ಇವುಗಳಿಂದ ವಿದ್ಯಾಭ್ಯಾಸಕ್ಕೆ ಮನ್ನಣೆ ಬಂತು. ಕೇಂದ್ರ ಸರ್ಕಾರ ವಿದ್ಯಾಭ್ಯಾಸದಲ್ಲಿ ನೇರ ಪಾತ್ರ ವಹಿಸುವಂತೆ ಆಯಿತು.

1833ರಲ್ಲಿ ಮೊಟ್ಟಮೊದಲ ಬಾರಿಗೆ ಕೇಂದ್ರ ಸರ್ಕಾರ, ಶಾಲೆಗಳ ಕಟ್ಟಡಗಳ ದುರಸ್ತಿಗೆ ಮತ್ತು ನಿರ್ಮಾಣಕ್ಕೆ 20,000 ಪೌಂಡುಗಳ ಧನಸಹಾಯ ನಿಗದಿ ಮಾಡಿತು. ಜನರ ವಿದ್ಯಾಭ್ಯಾಸಕ್ಕಾಗಿ ಸಾರ್ವಜನಿಕ ಹಣ ವಿನಿಯೋಗಿಸುವ ತತ್ತ್ವವನ್ನು ಅಂಗೀಕರಿಸಿದಂತಾಗಿ, ಶಿಕ್ಷಣದಲ್ಲಿ ಸರ್ಕಾರ ಕ್ರಿಯಾತ್ಮಕ ಪಾತ್ರ ವಹಿಸಲಾರಂಭಿಸಿತು. 1870ರಲ್ಲಿ ಮೊದಲನೆಯ ಬಾರಿಗೆ ಶಿಕ್ಷಣ ಕಾಯಿದೆಯೊಂದು ಜಾರಿಗೆ ಬಂತು. ಹಾಗೆಯೇ 1902ರಲ್ಲೂ 1918ರಲ್ಲೂ ಕಾಯಿದೆಗಳು ಬಂದು ದೇಶದ ವಿದ್ಯಾಭ್ಯಾಸ ಕ್ರಮದಲ್ಲಿ ಮಹತ್ತರ ಬದಲಾವಣೆಗಳಾದುವು. ಇತ್ತೀಚೆಗೆ ಅಂಗೀಕೃತವಾದ 1944ರ ಕಾಯಿದೆಯೇ ಇಂಗ್ಲಿಷ್ ವಿದ್ಯಾಭ್ಯಾಸದ ಚರಿತ್ರೆಯಲ್ಲಿ ಅತ್ಯಂತ ಗಣನೀಯವಾದದ್ದು.

ಪ್ರಾಥಮಿಕ ಶಿಕ್ಷಣ: ಇಂಗ್ಲೆಂಡಿನಲ್ಲಿ ಬಹಳ ಕಾಲದಿಂದಲೂ ಪ್ರಚಲಿತವಾದ ಶಾಲೆಗಳಲ್ಲಿ ಬಹು ಸಂಖ್ಯೆಯವು ಪ್ರಾಥಮಿಕ ವರ್ಗಕ್ಕೆ ಸೇರುವಂಥವು; ಚರ್ಚಿನವರ ನೆರವಿನಿಂದ ನಡೆಯುತ್ತಿದ್ದಂತವು. ಈ ಶಾಲೆಗಳಲ್ಲಿ ಮುಖ್ಯವಾದ ಬಗೆಗಳೆಂದರೆ: 1. ಅಜ್ಜಿಯ ಮಠ (ದಿ ಡೇಮ್ ಸ್ಕೂಲ್): ಕೆಲವು ಅಕ್ಷರಸ್ಥ ಮಹಿಳೆಯರು ಅಲ್ಪ ಹಣಪಡೆದು ಕೆಲವು ಮಕ್ಕಳಿಗೆ ತಮ್ಮ ತಮ್ಮ ಮನೆಯಲ್ಲಿ ಬೋಧನೆ ನೀಡುತ್ತಿದ್ದರು. ಇಂಥ ಶಾಲೆಗಳಿಂದ ಉತ್ತಮ ವಿದ್ಯಾಭ್ಯಾಸ ಸಿಕ್ಕದೆ ಹೋದರೂ ಇಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸದ ಅಂಕುರವಾಗುತ್ತಿತ್ತು. 2. ಹಗಲು ಶಾಲೆ (ದಿ ಕಾಮನ್ ಡೇ ಸ್ಕೂಲ್ ಅಥವಾ ಪ್ರೈವೇಟ್ ಡೇ ಸ್ಕೂಲ್): ಅಜ್ಜಿಯ ಮಠಗಳಂತೆಯೇ ಇದ್ದ ಇವುಗಳನ್ನು ಕ್ರೈಸ್ತ ಮಠಕ್ಕೆ ಸೇರಿದ ಕೆಲವು ಗಂಡಸರು ನಡೆಸುತ್ತಿದ್ದರು. 3. ಉಚಿತ ವಿದ್ಯಾಶಾಲೆ (ಚಾರಿಟಿ ಸ್ಕೂಲ್): ಕ್ರೈಸ್ತಧರ್ಮದ ತಿಳಿವಳಿಕೆಯನ್ನು ಪ್ರಚಾರ ಮಾಡಲು ಒಂದು ಸಂಘ 1699ರಲ್ಲಿ ಸ್ಥಾಪಿತವಾಯಿತು. ವಿದ್ಯಾರ್ಥಿಗಳಿಗೆ ಕ್ರೈಸ್ತಧರ್ಮದ ಮುಖ್ಯ ತತ್ತ್ವಗಳನ್ನು ಬೋಧಿಸಲು ಈ ಸಂಘ ಅನೇಕ ಶಾಲೆಗಳನ್ನು ಪ್ರಾರಂಭಿಸಿತು. ಉಚಿತವಾಗಿ ಎಲ್ಲರಿಗೂ ವಿದ್ಯೆ ಕಲಿಸಬೇಕು ಎಂಬ ತತ್ತ್ವವನ್ನು ಮೊದಲು ಜಾರಿಗೆ ತಂದ ಕೀರ್ತಿ ಈ ಶಾಲೆಗೆ ಸಲ್ಲಬೇಕು. 4. ಔದ್ಯೋಗಿಕ ಶಾಲೆ (ಇಂಡಸ್ಟ್ರಿಯಲ್ ಸ್ಕೂಲ್): ಕೈಗಾರಿಕಾ ಕ್ರಾಂತಿಯ ಆರಂಭದಿಂದಾಗಿ ಕುಶಲ ಕೆಲಸಗಾರರ ಅಗತ್ಯ ಕಂಡುಬಂತು. ಅದಕ್ಕಾಗಿ ನೂಲುವುದು, ನೇಯುವುದು, ಹೊಲಿಗೆ, ಪಾದರಕ್ಷೆಗಳ ತಯಾರಿ ಇತ್ಯಾದಿಗಳಲ್ಲಿ ತರಪೇತು ನೀಡಲು ಅಲ್ಲಲ್ಲಿ ಈ ಶಾಲೆಗಳ ಆರಂಭವಾಯಿತು. ಆದರೆ ಈ ಶಾಲೆಗಳಿಗೆ ಕಾರ್ಖಾನೆಗಳ ಮಾಲೀಕರಿಂದಾಗಲಿ, ತಂದೆ ತಾಯಿಯರಿಂದಾಗಲಿ, ಹೆಚ್ಚು ಪ್ರೋತ್ಸಾಹ ದೊರೆಯಲಿಲ್ಲ. ಮಕ್ಕಳು ಗಿರಣಿಗಳಲ್ಲಿ ಕೂಲಿ ಮಾಡುವುದೇ ಈ ಇಬ್ಬರಿಗೂ ಹೆಚ್ಚು ಅನುಕೂಲವಾಗಿತ್ತು. ಆದ್ದರಿಂದ ದೇಶದ 5–14 ವರ್ಷ ವಯಸ್ಸಿನ 1,88,794 ಮಕ್ಕಳಲ್ಲಿ ಕೇವಲ 20,336 ಮಂದಿ ಮಾತ್ರ ಈ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. 5. ಭಾನುವಾರದ ಶಾಲೆ (ದಿ ಸಂಡೆ ಸ್ಕೂಲ್): ಚಿಕ್ಕ ವಯಸ್ಸಿನಲ್ಲೇ ಗಿರಣಿಗಳಲ್ಲಿ ಕೆಲಸ ಮಾಡಲು ಪ್ರಾರಂಭಿಸಿ ಸ್ವಲ್ಪವೂ ಅಕ್ಷರಜ್ಞಾನವಿಲ್ಲದ ಅಸಂಖ್ಯಾತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಆರಂಭಿಸಲಾಯಿತು. ಈ ಹುಡುಗರಿಗೆ ಓದಿನ ಜೊತೆಗೆ ಧಾರ್ಮಿಕ ರೀತಿನೀತಿಗಳನ್ನು ಬೋಧಿಸಲಾಗುತ್ತಿತ್ತು. 1787ರ ಹೊತ್ತಿಗೆ ಈ ಶಾಲೆಗಳಲ್ಲಿ ಸುಮಾರು 2,50,000 ವಿದ್ಯಾರ್ಥಿಗಳಿದ್ದರು. 1801ರಲ್ಲಿ ಲಂಡನ್ ಒಂದರಲ್ಲೇ 1,56,490 ವಿದ್ಯಾರ್ಥಿಗಳಿದ್ದರು. ಮಕ್ಕಳು ಈ ಶಾಲೆಗಳಿಗೆ ಹೋಗಿ ಅಭ್ಯಾಸಮಾಡಲು ಕಾರ್ಖಾನೆಗಳ ಮಾಲೀಕರೂ ಬಡ ತಂದೆತಾಯಂದಿರೂ ಪ್ರೋತ್ಸಾಹ ನೀಡುತ್ತಿದ್ದರು. ಇದರಿಂದ ಹುಡುಗರ ಕೂಲಿಗೆಲಸಕ್ಕೆ ತೊಂದರೆಯಿರಲಿಲ್ಲ; ಅವರಿಗೂ ಅಲ್ಪಸ್ವಲ್ಪ ವಿದ್ಯೆ ಬಂದಂತೆ ಆಗುತ್ತಿತ್ತು. ಈ ಭಾನುವಾರದ ಶಾಲೆಗಳು ಎಷ್ಟೇ ಕೆಳಮಟ್ಟದ ಶಿಕ್ಷಣವನ್ನು ನೀಡುತ್ತಿದ್ದರೂ ಸಾರ್ವಜನಿಕ ವಿದ್ಯಾಭ್ಯಾಸಕ್ಕೆ ಇವುಗಳ ಸೇವೆ ಅಮೂಲ್ಯವಾದದ್ದು. ಹೆಚ್ಚಿನ ಸಂಖ್ಯೆಯ ಜನರಿಗೆ ವಿದ್ಯೆ ದೊರಕಿ ಅವರು ಉತ್ತಮ ಮಾನವರೂ ಪೌರರೂ ಆಗಲು ಇವುಗಳಿಂದ ಸಹಾಯವಾಯಿತು. ಹಾಗೂ ಈ ಶಾಲೆಗಳಲ್ಲಿ ಎಲ್ಲ ವಯಸ್ಸಿನ, ಎಲ್ಲ ವರ್ಗದವರ, ಎಲ್ಲ ಶ್ರೇಣಿಗಳ ಜನ ಕಲೆತು ಕಲಿಯುತ್ತಿದ್ದುದರಿಂದ ಜನಸಾಮಾನ್ಯರಲ್ಲಿ ಪರಸ್ಪರ ಅಭಿಮಾನ ಸಹಕಾರಗಳು ಮೂಡಲು ಸಹಾಯವಾಯಿತು. ಉಚಿತ ವಿದ್ಯಾಶಾಲೆಗಳಂತೆಯೇ ಈ ಶಾಲೆಗಳೂ ಉಚಿತ ಸಾರ್ವಜನಿಕ ಶಿಕ್ಷಣಕ್ಕೆ ಪ್ರಾಮುಖ್ಯ ನೀಡುತ್ತಿದ್ದವು. 6. ಸಂಚಾರಿ ಶಾಲೆ (ಸರ್ಕ್ಯುಲೇಟಿಂಗ್ ಸ್ಕೂಲ್): 1737ರಲ್ಲಿ ವೇಲ್ಸಿನಲ್ಲಿ ಪಾದ್ರಿ ಜೋನ್ಸ್ ಎಂಬಾತ ಬೈಬಲ್ ಬೋಧನೆ ಪ್ರಚಾರಗಳಿಗಾಗಿ ಊರೂರು ಸಂಚರಿಸುವ ಉಪಾಧ್ಯಾಯರನ್ನು ನೇಮಿಸಿದ. ಪ್ರತಿಯೊಂದು ಊರಿನಲ್ಲೂ ಹಲವು ದಿನಗಳ ಕಾಲ, ದೊಡ್ಡವರಿಗೂ ಸಣ್ಣವರಿಗೂ ಬೆಳಗ್ಗೆ–ಸಂಜೆ ಬೈಬಲ್ ಬೋಧಿಸುವುದೇ ಈ ಶಿಕ್ಷಕರ ಕೆಲಸ. 1761ರ ಹೊತ್ತಿಗೆ (ಜೋನ್ಸನ ಮರಣಕಾಲಕ್ಕೆ) ಇಂಥ ಶಾಲೆಗಳು 3,495 ಇದ್ದವು. 1777ರಲ್ಲಿ 6,465 ಆದುವು. ಆದರೆ ಭಾನುವಾರದ ಶಾಲೆಗಳು ಪ್ರವರ್ಧಮಾನಕ್ಕೆ ಬಂದಂತೆಲ್ಲ ಈ ಶಾಲೆಗಳು ನಶಿಸುತ್ತ ಬಂದು 18ನೆಯ ಶತಮಾನದ ಕೊನೆಯ ಕಾಲಕ್ಕೆ ಮಾಯವಾದುವು.

ಇಂಗ್ಲೆಂಡಿನಲ್ಲಿ ಈ ರೀತಿ ಅನೇಕ ಬಗೆಯ ಪ್ರಾಥಮಿಕ ಶಾಲೆಗಳಿದ್ದರೂ ವಿದ್ಯಾಭ್ಯಾಸದ ಮಟ್ಟ ಬಹುಮಟ್ಟಿಗೆ ಕೆಳದರ್ಜೆಯಲ್ಲಿತ್ತೆಂದೇ ಹೇಳಬೇಕು. ಉಪಾಧ್ಯಾಯರ ಸಂಖ್ಯೆ ಸಾಕಷ್ಟು ಇಲ್ಲದ್ದೂ ಸಮಾಜದಲ್ಲಿ ಅವರಿಗಿದ್ದ ಅತ್ಯಂತ ಶೋಚನೀಯ ಸ್ಥಾನವೂ ಅವರ ಯೋಗ್ಯತೆ ಹಾಗೂ ಸಾಮರ್ಥ್ಯಗಳು ಕಡಿಮೆ ಮಟ್ಟದಲ್ಲಿದ್ದದ್ದೂ ಈ ಸ್ಥಿತಿಗೆ ಕಾರಣ. ಆಗ ಚರ್ಚಿನ ಆಳುಗಳೂ ಗಂಟೆ ಬಾರಿಸುವವರೂ ಮುದುಕರೂ ಕುಂಟರೂ ಕೂಲಿಗಳೂ ತಮ್ಮ ಇತರ ಹವ್ಯಾಸಗಳೊಂದಿಗೆ ಶಿಕ್ಷಕರ ಕಾರ್ಯವನ್ನೂ ನಿರ್ವಹಿಸುತ್ತಿದ್ದರು.

ಬೋಧಕರ ಅಸಮರ್ಪಕತೆಯೊಂದಿಗೆ ಪಠ್ಯಪುಸ್ತಕಗಳಲ್ಲಿ ಅಸಾಧಾರಣ ಲೋಪದೋಷಗಳಿದ್ದುವು. ಹೇಳಿಕೊಡುತ್ತಿದ್ದ ವಿಷಯಗಳೆಂದರೆ ಸ್ವಲ್ಪ ಓದು, ಬರೆಹ, ಹಾರ್ನ್ ಬುಕ್ ಎಂಬ ಅಕ್ಷರಮಾಲೆಯ ಬೋರ್ಡುಗಳು ಮತ್ತು ಕ್ಯಾಟಕಿಸಂ ಎಂಬ ಧಾರ್ಮಿಕ ಪ್ರಶ್ನೋತ್ತರ ಮಾಲೆ. 1596ರಲ್ಲಿ 17ನೆಯ ಶತಮಾನದ ಮಧ್ಯಭಾಗದಲ್ಲಿ ಬಾಲಬೋಧೆಯನ್ನು ಮೊಟ್ಟಮೊದಲು ಉಪಯೋಗಿಸಲು ಪ್ರಾರಂಭವಾಯಿತು. ಇದರಲ್ಲಿ ಕ್ರೈಸ್ತಧರ್ಮದ ಮುಖ್ಯ ತತ್ತ್ವಗಳೂ ಕೆಲವು ನೀತಿ ವಾಕ್ಯಗಳೂ ಭಜನೆಗಳೂ ಸೇರಿದ್ದವು. ಸಚಿತ್ರ ಬಾಲಬೋಧೆಗಳು ಕಾಲಕ್ರಮೇಣ ಬಂದುವು. 1596ರಲ್ಲಿ ದಿ ಇಂಗ್ಲಿಷ್ ಸ್ಕೂಲ್ ಮಾಸ್ಟರ್ ಎಂಬ ಕಾಗುಣಿತ ಪುಸ್ತಕದ ಉಪಯೋಗ ಪ್ರಾರಂಭವಾಯಿತು. ಗಣಿತ ಮತ್ತು ಬರಹಗಳು ಪ್ರಾಶಸ್ತ್ಯಕ್ಕೆ ಬಂದದ್ದೂ ನಿಧಾನವಾಗಿಯೇ. ಓದುವುದು, ಕಾಗುಣಿತ ಮತ್ತು ಧರ್ಮಬೋಧೆಯನ್ನು ಉಳಿದು ಮಿಕ್ಕ ಬೋಧನೆಗಳಿಗೆ ವಿಶೇಷ ಹಣ ಕೊಡಬೇಕಿತ್ತು. ಇಂಗ್ಲೆಂಡಿನ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನದ ಬೋಧನೆ ಬಂದದ್ದು 19ನೆಯ ಶತಮಾನದಲ್ಲಿ.

19ನೆಯ ಶತಮಾನದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಕಲಿಸಲು ಮಾನಿಟೋರಿಯಲ್ ಪದ್ಧತಿಯನ್ನು ಪ್ರಾರಂಭಿಸಿದರು. ಆ್ಯಂಡ್ರೂ ಬೆಲ್ ಮತ್ತು ಜೋಸೆಫ್ ಲಾಂಕಾಸ್ಟರ್ ಎಂಬುವರು (ಭಾರತದಲ್ಲಿ ಈ ಪದ್ಧತಿಯ ಸಫಲತೆಯನ್ನು ಕಂಡು ಸ್ಫೂರ್ತಿಗೊಂಡು) ಇಂಗ್ಲೆಂಡಿನ ಪ್ರಾಥಮಿಕ ಶಾಲೆಗಳಲ್ಲಿ ಮಾನಿಟರ್‌ಗಳನ್ನು ನೇಮಿಸಿ, ಒಮ್ಮೆಯೇ ಅನೇಕ ಬಾಲಕರಿಗೆ ಬೋಧಿಸಲು ಸಹಾಯವಾಗುವ ಏರ್ಪಾಡು ಮಾಡಿದರು. 1833ರಲ್ಲಿ ಸರ್ಕಾರ ಈ ಶಾಲೆಗಳ ಪರಿಸ್ಥಿತಿಯನ್ನು ವಿಚಾರಿಸಲು ಒಂದು ಸಮಿತಿ ನೇಮಿಸಿತು. ಈ ವಿಚಾರಣೆಯ ಪ್ರಕಾರ, ಪ್ರತಿ ಹತ್ತು ಶಾಲಾವಯಸ್ಕ ಮಕ್ಕಳಲ್ಲಿ ನಾಲ್ಕು ಮಕ್ಕಳು ಯಾವ ಶಾಲೆಗೂ ಹೋಗುತ್ತಿರಲಿಲ್ಲ; ಮೂವರು ಭಾನುವಾರದ ಶಾಲೆಗಳಿಗೆ ಹೋಗುತ್ತಿದ್ದರು; ಇಬ್ಬರು ಅಸಮರ್ಪಕವಾದ ಅಜ್ಜಿಮಠಕ್ಕೋ ಹಗಲುಶಾಲೆಗೋ ಹೋಗುತ್ತಿದ್ದರು ; ಒಬ್ಬನಿಗೆ ಮಾತ್ರ ತೃಪ್ತಿಕರ ವಿದ್ಯಾಭ್ಯಾಸ ದೊರೆಯುತ್ತಿತ್ತು ಎಂಬ ಅಂಶಗಳು ಬೆಳಕಿಗೆ ಬಂದವು. ಶಾಲಾ ಕಟ್ಟಡಗಳ ಅಭಾವ, ದುರವಸ್ಥೆ, ಶಿಕ್ಷಕರ ಅಸಾಮರ್ಥ್ಯ ಇವುಗಳನ್ನು ಉತ್ತಮಪಡಿಸಬೇಕೆಂಬ ಕೂಗು ಎದ್ದಿತು. 1833ರಲ್ಲಿ ಸರ್ಕಾರ ಮೊಟ್ಟಮೊದಲಬಾರಿಗೆ ಶಾಲಾಕಟ್ಟಡಗಳಿಗೆ ಹಣ ವಿನಿಯೋಗಿಸುವ ತತ್ತ್ವವನ್ನು ಒಪ್ಪಿಕೊಂಡು ಶಿಕ್ಷಣ ಕ್ಷೇತ್ರಕ್ಕೆ ಧುಮುಕಿತು.

1833–70ರ ವರೆಗೆ ಪಾರ್ಲಿಮೆಂಟಿನಲ್ಲೂ ಹೊರಗಡೆಯೂ ವಿದ್ಯಾಭ್ಯಾಸದ ಮುನ್ನಡೆಗಾಗಿ ಶ್ರಮಿಸಿದವರಲ್ಲಿ ಕೇ (1804–77) ಎಂಬುವರನ್ನು ಹೆಸರಿಸಬಹುದು. ಶಾಲೆಗಳ ಕಾರ್ಯಗಳಿಗೆ ಪ್ರೋತ್ಸಾಹ ನೀಡಲು ಅನುದಾನ ಕೊಡಬೇಕೆಂಬ ನಿಯಮವನ್ನು ಕಾಲಕ್ರಮೇಣ ಒಪ್ಪಿಕೊಂಡು, ಸರ್ಕಾರದ ನಿರೀಕ್ಷಕರು (ಇನ್ಸ್‌ಪೆಕ್ಟರುಗಳು) ನಡೆಸುವ ಪರೀಕ್ಷಾಫಲಿತಾಂಶಕ್ಕನುಗುಣವಾಗಿ ಹಣ ನೀಡಬೇಕೆಂಬ ತತ್ತ್ವ ಜಾರಿಗೆ ಬಂತು. ಫಲಿತಾಂಶಕ್ಕನುಗುಣವಾಗಿ ಧನಸಹಾಯ ನೀಡುವ ಈ ತತ್ತ್ವ ಸುಮಾರು 60–70 ವರ್ಷಗಳ ಕಾಲ ಜಾರಿಯಲ್ಲಿತ್ತು.

1870ರಲ್ಲಿ ಸರ್ಕಾರ ಒಂದು ಕಾಯಿದೆ ಹೊರಡಿಸಿತು. ಇಂಗ್ಲಿಷ್ ಪ್ರಾಥಮಿಕ ಶಿಕ್ಷಣದ ಚರಿತ್ರೆಯಲ್ಲಿ ಈ ಕಾಯಿದೆ ಬಹಳ ಮುಖ್ಯ. ಇದರ ಪ್ರಕಾರ ದೇಶವನ್ನು ಹಲವು ಶಾಲಾ ಜಿಲ್ಲೆಗಳಾಗಿ ವಿಂಗಡಿಸಲಾಯಿತು (ಲಂಡನ್ ನಗರವನ್ನು ಒಂದು ಶಾಲಾ ಜಿಲ್ಲೆಯೆಂದು ಪರಿಗಣಿಸಲಾಯಿತು). ಕೇಂದ್ರದಲ್ಲಿ ವಿದ್ಯಾಭ್ಯಾಸ ಇಲಾಖೆ ಸ್ಥಾಪಿತವಾಗಿ ಅದು ಪ್ರತಿಯೊಂದು ಜಿಲ್ಲೆಯ ಶಾಲೆಗಳ ಸ್ಥಿತಿ ಹಾಗೂ ಸ್ಥಳಾವಕಾಶದ ಬಗ್ಗೆ ತನಿಖೆ ನಡೆಸಿ ಯಾವ ರೀತಿ ಅವನ್ನು ಉತ್ತಮಪಡಿಸಬಹುದೆಂದು ತೀರ್ಮಾನ ಕೈಗೊಳ್ಳುವ ಅಧಿಕಾರ ಪಡೆಯಿತು. ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಸ್ಥಳೀಯ ಅಧಿಕಾರ ವ್ಯವಸ್ಥೆ ಸ್ಥಾಪಿತವಾಯಿತು. ಆ ಸ್ಥಳದ ಜನರಿಂದಲೇ ಆಯ್ಕೆ ಹೊಂದಿದ ಶಾಲಾಮಂಡಲಿ ತನ್ನ ಜಿಲ್ಲೆಯ ವಿದ್ಯಾಭ್ಯಾಸದ ಜವಾಬ್ದಾರಿ ಪಡೆಯಿತು. 5–12 ವಯಸ್ಸಿನ ಎಲ್ಲ ಮಕ್ಕಳೂ ಶಾಲೆಗೆ ಹಾಜರಾಗುವಂತೆ ಪ್ರೋತ್ಸಾಹಿಸಬೇಕೆಂದೂ ಶಾಲೆಗಳಲ್ಲಿ ಸ್ಥಳಾವಕಾಶದ ಬಗ್ಗೆ ಮೇಲ್ವಿಚಾರಣೆ ನಡೆಸಬೇಕೆಂದೂ ಅಸಮರ್ಪಕವಾದ ಶಾಲೆಗಳನ್ನು ಸರಿಪಡಿಸಬೇಕೆಂದೂ ಹೊಸದಾಗಿ ಶಾಲೆಗಳ ನಿರ್ಮಾಣದ ಅವಶ್ಯಕತೆ ಕಂಡುಬಂದರೆ ಮಂಡಳಿಯ ಶಾಲೆಗಳನ್ನು ಸ್ಥಾಪಿಸಬೇಕೆಂದೂ ಈ ಕಾಯಿದೆ ನಿಬಂಧನೆ ಮಾಡಿತು. ಬಡಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಸಿಕ್ಕಿತು. 1870ರ ಕಾಯಿದೆ ಶಿಕ್ಷಣಪ್ರಯೋಗದಲ್ಲಿ ದ್ವಂದ್ವ ಪದ್ಧತಿಯನ್ನು (ಡ್ಯೂಯಲ್ ಸಿಸ್ಟಮ್) ಒಪ್ಪಿಕೊಂಡಿತು. ಒಂದು ಕಡೆ ಖಾಸಗಿ ಶಾಲೆಗಳೂ ಇನ್ನೊಂದು ಕಡೆ ಮಂಡಲಿಯ ಶಾಲೆಗಳೂ ನಡೆಯುತ್ತಿದ್ದುವು. ಶಾಲಾಮಂಡಲಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ತಮ್ಮ ಜಿಲ್ಲೆಗಳಲ್ಲಿ ಕಡ್ಡಾಯ ಶಿಕ್ಷಣಪದ್ಧತಿಯನ್ನೂ ಇತರ ಕಾರ್ಯಕ್ರಮಗಳನ್ನೂ ಜಾರಿಗೆ ತಂದುವು. ಇಷ್ಟು ಹೊತ್ತಿಗಾಗಲೇ ಜನಸಾಮಾನ್ಯರಲ್ಲಿ ಶಿಕ್ಷಣದ ಪ್ರಾಮುಖ್ಯ, ಪ್ರಯೋಜನಗಳ ಅರಿವೂ ಜಾಗೃತಿಯೂ ಉಂಟಾಗಿದ್ದುದರಿಂದ 1882ರಲ್ಲಿ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲು ಕಷ್ಟವಾಗಲಿಲ್ಲ. ಈ ಕಾಯಿದೆ ಜಾರಿಗೆ ಬರುವ 12 ವರ್ಷ ಮುಂಚೆ (1870) ಶೇ.40ರಷ್ಟು ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿದ್ದರು. ಇದು ಜಾರಿಗೆ ಬಂದ 20 ವರ್ಷದಲ್ಲಿ (1902) ಎಲ್ಲರೂ ಹೋಗುವಂತಾಯಿತು.

1902ರ ಕಾಯಿದೆಯಲ್ಲಿ ಶಾಲಾಮಂಡಲಿಗಳನ್ನು ರದ್ದುಪಡಿಸಿ ಜಿಲ್ಲೆ ಮತ್ತು ನಗರಸಭೆಗಳನ್ನು ಸ್ಥಾಪಿಸಿ (ಕೌಂಟಿ ಮತ್ತು ಕೌಂಟಿಬರೋ) ಆಯಾ ಸ್ಥಳದ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸದ ಎಲ್ಲ ಕೆಲಸ ಕಾರ್ಯಗಳನ್ನು ಅವುಗಳಿಗೆ ಒಪ್ಪಿಸಲಾಯಿತು.

ಸುಮಾರು 120 ಸಂಖ್ಯೆಯಲ್ಲಿದ್ದ ಇವನ್ನು ಸ್ಥಳೀಯ ಶಿಕ್ಷಣಾಧಿಕಾರ ವ್ಯವಸ್ಥೆ (ಲೋಕಲ್ ಎಜುಕೇಷನ್ ಅಥಾರಿಟಿ) ಎಂದು ಕರೆಯಲಾಯಿತು. 1902ರ ಕಾಯಿದೆ ಇಂಗ್ಲೆಂಡಿನಲ್ಲಿ ಒಂದು ರಾಷ್ಟ್ರೀಯ ಶಿಕ್ಷಣ ಧೋರಣೆಯನ್ನು ಜಾರಿಗೆ ತರಲು ಸಹಾಯಕವಾಯಿತು.

**ಸೆಕಂಡರಿ ಶಿಕ್ಷಣ:** ಇಂಗ್ಲೆಂಡಿನ ಸೆಕಂಡರಿ ಶಿಕ್ಷಣ ಚರಿತ್ರೆಯಲ್ಲಿ ಗ್ರಾಮರ್ ಸ್ಕೂಲ್ ಅಥವಾ ದತ್ತಿ ಶಾಲೆ (ಎಂಡೋಡ್ ಸ್ಕೂಲ್) ಬಹಳ ಪ್ರಾಚೀನವಾದದ್ದು. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಮತ್ತು ಗ್ರಂಥಗಳ ಬೋಧನೆಯೇ ಪ್ರಧಾನವಾಗುಳ್ಳ ಈ ಶಾಲೆಗಳು ರೋಮನ್ನರ ಆಳ್ವಿಕೆಯ ಕಾಲದಲ್ಲಿಯೇ ಪ್ರಾರಂಭವಾದುವೆನ್ನಬಹುದು.

ದತ್ತಿ ಶಾಲೆಗಳು ಅನೇಕ ದಾನಿಗಳಿಂದಲೂ ಸಂಸ್ಥೆಗಳಿಂದಲೂ ಪ್ರಾರಂಭವಾದವು. ಪಾದ್ರಿಗಳಿಂದ ಅಥವಾ ಚರ್ಚಿನಿಂದ ನಡೆಸಲ್ಪಡುತ್ತಿದ್ದವೇ ಹೆಚ್ಚು. ಕೆಲವು ನಗರಗಳಲ್ಲಿ ಬಡ ಹುಡುಗರ ಉನ್ನತ ವಿದ್ಯಾಭ್ಯಾಸಕ್ಕಾಗಿ ಶ್ರೀಮಂತರಿಂದಲೋ ವ್ಯಾಪಾರಿ ವರ್ಗದವರಿಂದಲೋ ಕೆಲವು ಶಾಲೆಗಳು ಸ್ಥಾಪಿಸಲ್ಪಟ್ಟವು. 1382ರಲ್ಲಿ ಪ್ರಾರಂಭವಾದ ವಿಂಚೆಸ್ಟರ್ ಶಾಲೆ, 1440ರಲ್ಲಿ ಆರಂಭವಾದ ಈಟನ್ ಶಾಲೆ – ಇವುಗಳು ಆಗ ಪ್ರಸಿದ್ಧವಾಗಿದ್ದ ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಥಿಗಳನ್ನು ತಯಾರುಮಾಡುವ ಉದ್ದೇಶದಿಂದ ಪ್ರಾರಂಭವಾದುವು.

ಗ್ರಾಮರ್ ಸ್ಕೂಲುಗಳೆಲ್ಲವೂ ದತ್ತಿ ಶಾಲೆಗಳೇ ಇವು ಖಾಸಗಿ ಶಾಲೆಗಳು; ಉನ್ನತ ವಿದ್ಯಾಭ್ಯಾಸಕ್ಕೆ ಮೀಸಲಾದವು. ಮೊದಮೊದಲು ಬಹುಮಟ್ಟಿಗೆ ಈ ಶಾಲೆಗಳೆಲ್ಲವೂ (ವಿಂಚೆಸ್ಟರ್ ಮತ್ತು ಈಟನ್ ಶಾಲೆಗಳನ್ನುಳಿದು) ಬಡಹುಡುಗರ, ನಿರ್ಗತಿಕರ ಶಿಕ್ಷಣಕ್ಕಾಗಿ ಪ್ರಾರಂಭವಾಗಿ, ಬರಬರುತ್ತ ಶ್ರೀಮಂತರ ಪಾಲಾಗಿ ತಮ್ಮ ಸ್ವರೂಪವನ್ನೇ ಪರಿವರ್ತಿಸಿಕೊಂಡವು. ಈ ಗ್ರಾಮರ್ ಶಾಲೆಗಳ ಪೈಕಿ ಅನೇಕ ಶಾಲೆಗಳು ಪಬ್ಲಿಕ್ ಸ್ಕೂಲುಗಳೆಂದು ಪ್ರಸಿದ್ಧಿ ಪಡೆದವು. ರಗ್ಬಿ, ಹ್ಯಾರೋ ಮುಂತಾದ ಶಾಲೆಗಳು ಈ ಪಂಗಡಕ್ಕೆ ಸೇರಿದವು. ಮೊದಲಿನಿಂದಲೂ ಪಬ್ಲಿಕ್ ಶಾಲೆಗಳ ಲಕ್ಷಣಗಳನ್ನು ಹೊಂದಿದ್ದ ಶಾಲೆಗಳೆಂದರೆ ಈಟನ್ ಮತ್ತು ವಿಂಚೆಸ್ಟರ್.

ಇಲ್ಲಿ ಗ್ರಾಮರ್ ಎಂದರೆ ಗ್ರೀಕ್ ಮತ್ತು ಲ್ಯಾಟಿನ್ ಭಾಷೆ, ಸಾಹಿತ್ಯಗಳ ಅಧ್ಯಯನ ಎಂದರ್ಥ. ಅಂತೆಯೇ ಗ್ರಾಮರ್ ಶಾಲೆಗಳಲ್ಲಿ ಈ ಪ್ರಾಚೀನ ಭಾಷೆಗಳ ಮತ್ತು ಗ್ರಂಥಗಳ ಅಧ್ಯಯನಕ್ಕೆ ಬಹಳ ಪ್ರಾಧಾನ್ಯ. ಅದು ಲ್ಯಾಟಿನ್ ಭಾಷೆಯೇ ಸಂಸ್ಕೃತಿಯ ಪರಕಾಷ್ಠೆಯೆಂದು ನಂಬಿಕೆಯಿದ್ದ ಕಾಲ. ಗ್ರೀಕ್ ಶಾಲೆಗಳಲ್ಲಿ ಪ್ರಚಲಿತವಾಗಿದ್ದ ತ್ರಯ (ಟ್ರಿವಿಯಂ) ಮತ್ತು ಚತುಷ್ಟಯ (ಕ್ವಾಡ್ರಿವಿಯಂ) ಇವುಗಳಿಗೆ ಪ್ರಧಾನ ಸ್ಥಾನವಿತ್ತು. ಜ್ಞಾನ ಪುನರುಜ್ಜೀವನ ಕಾಲದಿಂದ ಇಂಗ್ಲಿಷ್ ಭಾಷೆಗೆ ಸ್ವಲ್ಪ ಗೌರವಸ್ಥಾನ ದೊರಕಿತಾದರೂ ಲ್ಯಾಟಿನ್ ಭಾಷೆಯ ಶ್ರೇಷ್ಠತೆಗೆ ಕುಂದು ಬರಲಿಲ್ಲ.

ಪಬ್ಲಿಕ್ ಮತ್ತು ಗ್ರಾಮರ್ ಶಾಲೆಗಳು ಲ್ಯಾಟಿನ್ ಬೋಧನೆಗೆ ಮಾತ್ರ ಪುರಸ್ಕಾರ ನೀಡಿ ಸಂಕುಚಿತ ರೀತಿಯ ಶಿಕ್ಷಣ ನೀಡುತ್ತಿದ್ದುವು. ಅನೇಕ ಶಾಲೆಗಳು ಬಹಳ ಹೀನಸ್ಥಿತಿಯಲ್ಲಿದ್ದು ಅಶಿಸ್ತಿನ ಆಗರಗಳಾಗಿದ್ದುವು. ಆದರೆ ಇಂಗ್ಲೆಂಡಿನ ಸಾರ್ವಜನಿಕ ಜೀವನದಲ್ಲಿ, ಮತೀಯ ಅಧಿಕಾರವರ್ಗದವರಲ್ಲಿ ಉನ್ನತ ಪದವಿಗಳನ್ನು ಅಲಂಕರಿಸಿ ದೇಶಕ್ಕೆ ಅಮೂಲ್ಯ ಸೇವೆ ಮಾಡಿದ ಅನೇಕ ಮಹನೀಯರನ್ನು ತಯಾರು ಮಾಡಿದ ಕೀರ್ತಿ ಈ ಶಾಲೆಗಳಿಗೆ ಸಲ್ಲಬೇಕು. ರಗ್ಬಿ ಶಾಲೆಯ ಥಾಮಸ್ ಆರ್ನಾಲ್ಡರಂಥ (1795–1842) ಸುಪ್ರಸಿದ್ಧ ಮುಖ್ಯೋಪಾಧ್ಯಾಯರ ಸಹಾಯದಿಂದ ಗ್ರಾಮರ್ ಶಾಲೆಗಳ ಕಾರ್ಯಕ್ರಮಗಳೂ ಶಿಸ್ತೂ ಕೀರ್ತಿಯೂ ಹೆಚ್ಚಿದುವು.

ಸಾಧಾರಣವಾಗಿ ಪಬ್ಲಿಕ್ ಮತ್ತು ಗ್ರಾಮರ್ ಸ್ಕೂಲುಗಳು ಬಾಲಕರಿಗೆ ಮೀಸಲಾಗಿದ್ದುವು. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಾಲೆಗಳೂ ಇದ್ದುವು. ಅವರಿಗೆ ಮದುವೆಯೇ ಗುರಿಯಾಗಿದ್ದುದರಿಂದ ಓದು ಬರೆಹ, ಗೃಹಕೃತ್ಯ, ಸಂಗೀತ, ಕಸೂತಿ, ಹೊಲಿಗೆ, ಫ್ರೆಂಚ್ ಇತ್ಯಾದಿ ವಿಷಯಗಳಲ್ಲಿ ಮಾತ್ರ ಬೋಧನೆ ದೊರಕುತ್ತಿತ್ತು. ಗಂಡಸಿಗೆ ಮಾತ್ರ ವಿದ್ಯಾಭ್ಯಾಸದ ಅಗತ್ಯವಿದೆ, ಹೆಂಗಸಿನ ಸ್ಥಾನ ಮನೆಯಲ್ಲಿ ಎಂಬ ಭಾವನೆಗಳ ಪ್ರಭಾವದಿಂದ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯ ದೊರೆಯಲಿಲ್ಲ.

ಗ್ರಾಮರ್ ಶಾಲೆಗಳು ಕಾಲಕ್ರಮೇಣ ಪ್ರಬಲವಾದುವು. ಧರ್ಮಸುಧಾರಣೆಯ ಅನಂತರ ನೂರೈವತ್ತು ವರ್ಷಗಳಲ್ಲಿ 558 ಹೊಸ ಶಾಲೆಗಳು ಪ್ರಾರಂಭವಾದುವು. ಪ್ರಾಟೆಸ್ಟಂಟ್ ಮತದಲ್ಲಿ ಇಂಗ್ಲಿಷ್ ಭಾಷೆಯ ಬೋಧನೆಗೆ ಪ್ರಾಶಸ್ತ್ಯ ದೊರೆಯಿತು. ವಿಜ್ಞಾನಕ್ಕೆ ಪಠ್ಯಕ್ರಮದಲ್ಲಿ ಗೌರವಸ್ಥಾನ ದೊರೆಯಲು ಬಹಳ ಕಾಯಬೇಕಾಯಿತು.

19ನೆಯ ಶತಮಾನದ ಮಧ್ಯಭಾಗದಿಂದ ಜನರಲ್ಲೂ ಸರ್ಕಾರದಲ್ಲೂ ಶಿಕ್ಷಣದ ಬಗ್ಗೆ ಆಸಕ್ತಿ ಆಕಾಂಕ್ಷೆಗಳು ಉಂಟಾದುದರಿಂದಲೂ ಅದರ ಅಗತ್ಯದ ಅರಿವು ಉಂಟಾದ್ದರಿಂದಲೂ ಸೆಕಂಡರಿ ಶಾಲೆಗಳ ಪ್ರಗತಿಗೆ ಅನೇಕ ಪ್ರಯತ್ನಗಳು ನಡೆದುವು. ಅವುಗಳಲ್ಲಿ 1868ರಲ್ಲಿ ಲಾರ್ಡ್ ಟ್ಯಾಮಟನ್ನನ ಅಧ್ಯಕ್ಷತೆಯಲ್ಲಿ ನೇಮಿತವಾದ ಶಾಲಾ ತನಿಖಾ ಆಯೋಗ ಬಹಳ ಮುಖ್ಯವಾದ್ದು. ಈ ಆಯೋಗ 942 ಶಾಲೆಗಳನ್ನು ವೀಕ್ಷಿಸಿ ಅನೇಕ ಸಲಹೆಗಳನ್ನು ನೀಡಿತು. ಸೆಕಂಡರಿ ಶಿಕ್ಷಣದಲ್ಲಿ ಮಕ್ಕಳ ಶಕ್ತಿ ಯೋಗ್ಯತೆಗಳನ್ನನುಸರಿಸಿ ಮೂರು ಹಂತಗಳಿರಬೇಕು; ಮೊದಲನೆಯ ಹಂತ 14ನೆಯ ವಯಸ್ಸಿನಲ್ಲೂ ಎರಡನೆಯದು 16ರಲ್ಲೂ ಮೂರನೆಯದು 18ರಲ್ಲೂ ಮುಕ್ತಾಯವಾಗಬೇಕು. ಗಣಿತ, ವಿಜ್ಞಾನ, ಆಧುನಿಕ ಭಾಷಾಬೋಧನೆ ಹೆಚ್ಚಬೇಕು ; ಎಲ್ಲ ಸೆಕಂಡರಿ ವಿದ್ಯಾಭ್ಯಾಸದ ಮೇಲ್ವಿಚಾರಣೆಗೆ ಒಂದು ಕೇಂದ್ರ ಆಡಳಿತ ಸಮಿತಿಯನ್ನು ನೇಮಿಸಬೇಕು; ಪ್ರಾದೇಶಿಕ ಆಡಳಿತ ಸಮಿತಿಗಳ ನೇಮಕವೂ ಆಗಬೇಕು; ಶಿಕ್ಷಕರ ಮಟ್ಟವನ್ನು ಉತ್ತಮಗೊಳಿಸಲು ಶಿಕ್ಷಕರಿಗೆ ಅರ್ಹತಾಪತ್ರ ಗಳನ್ನು ನೀಡುವ ವ್ಯವಸ್ಥೆಯಾಗಬೇಕು; ಇಂಥ ಪತ್ರನೀಡಿಕೆಗೆ ಸೂಕ್ತ ಪರೀಕ್ಷೆಗಳನ್ನು ನಡೆಸಬೇಕು. ಇವು ಈ ಸಲಹೆಗಳ ಮುಖ್ಯಾಂಶಗಳು. ಈ ತನಿಖಾ ಆಯೋಗದ ವರದಿ ಸೆಕೆಂಡರಿ ಶಿಕ್ಷಣದ ಒಂದು ಪ್ರಮುಖ ಹೆಜ್ಜೆ. ಮುಂದೆ ಜಾರಿಗೆ ಬಂದ ಅನೇಕ ಉತ್ತಮ ಸುಧಾರಣೆಗಳಿಗೆ ಈ ಸಲಹೆಗಳು ತಳಹದಿ ಹಾಕಿದುವು. 1902ರ ಕಾಯಿದೆ, 1908ರ ಕಾಯಿದೆ ಮತ್ತು ಅತ್ಯಂತ ಮುಖ್ಯವಾದ 1944ರ ಕಾಯಿದೆಗಳು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಈಗಿರುವ ಸ್ವರೂಪ ತಂದುಕೊಟ್ಟಿವೆ.

**ವಿಶ್ವವಿದ್ಯಾಲಯಗಳು:** ಮಧ್ಯಯುಗದಿಂದಲೂ ಜಗತ್ಪ್ರಸಿದ್ಧವಾಗಿರುವ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳು ಇಂಗ್ಲಿಷ್ ಶಿಕ್ಷಣದ ಮಹೋನ್ನತ ಸಂಸ್ಥೆಗಳು ಮತ್ತು ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ವಿ.ವಿ. ಗಳಲ್ಲಿ ಎರಡನೆಯದು.

**ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ:** ಇಂಗ್ಲೆಂಡಿನ ಅತ್ಯಂತ ಪ್ರಾಚೀನ ವಿಶ್ವವಿದ್ಯಾಲಯ. ಪ್ರ.ಶ. 1133ರಲ್ಲಿ ಪ್ಯಾರಿಸ್ ವಿಶ್ವವಿದ್ಯಾಲಯದಿಂದ ರಾಬರ್ಟ್ ಪುಲನ್ ಎಂಬ ಧಾರ್ಮಿಕ ಗುರು ಆಕ್ಸ್‌ಫರ್ಡಿಗೆ ಬಂದು ಉಚ್ಚ ತರಗತಿಗಳನ್ನು ಸ್ಥಾಪಿಸಿ ವಿಶ್ವವಿದ್ಯಾಲಯಕ್ಕೆ ತಳಪಾಯ ಹಾಕಿದ. 1163ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂತು. 1214ರ ಹೊತ್ತಿಗೆ ಆಕ್ಸ್‌ಫರ್ಡಿನ ಚಾನ್ಸಲರ್ (ಮಹಾಕುಲಪತಿ) ಚುನಾಯಿತರಾದರು. 1355ರಲ್ಲಿ ಆಕ್ಸ್‌ಫರ್ಡ್ ಪಟ್ಟಣ ಈ ಮಹಾಕುಲಪತಿಯ ಆಡಳಿತಕ್ಕೊಳಪಟ್ಟು ವಿಶ್ವವಿದ್ಯಾಲಯ ನಗರವಾಗಿ ಪರಿವರ್ತನೆಗೊಂಡಿತು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ 38 ಕಾಲೇಜುಗಳಿವೆ. 1261–66ರಲ್ಲಿ ಸ್ಥಾಪಿಸಲ್ಪಟ್ಟ ಬ್ಯಾಲಿಯೊಲ್ ಕಾಲೇಜು ಮೊದಲನೆಯದು. ಅನಂತರ 1280ರಲ್ಲಿ ಯೂನಿವರ್ಸಿಟಿ, 1314–16ರಲ್ಲಿ ಎಕ್ಸ್‌ಟರ್, 1341ರಲ್ಲಿ ಕ್ವೀನ್ಸ್, 1379ರಲ್ಲಿ ವಿಂಚೆಸ್ಟರ್ ಸೇಂಟ್ ಮೇರಿ (ಈಗ ಇದು ನ್ಯೂ ಕಾಲೇಜ್ ಎಂದು ಪ್ರಸಿದ್ಧವಾಗಿದೆ), 1438ರಲ್ಲಿ ಆಲ್ ಸೋಲ್ಸ್, 1532ರಲ್ಲಿ ಕ್ರೈಸ್ಟ್ ಚರ್ಚ್, 1554–55ರಲ್ಲಿ ಟ್ರಿನಿಟಿ, 1571ರಲ್ಲಿ ಜೀಸಸ್, 1624ರಲ್ಲಿ ಪ್ರೆಂಬ್ರೋಕ್, 1714ರಲ್ಲಿ ವೋರ್ಸೆಸ್ಟರ್, 1874ರಲ್ಲಿ ಹರ್ಟ್‌ಫರ್ಡ್–ಈ ಕಾಲೇಜುಗಳು ಆಕ್ಸ್‌ಫರ್ಡಿನ ಕಾಲೇಜುಗಳಲ್ಲಿ ಮುಖ್ಯವಾದುವು. ಆಕ್ಸ್‌ಫರ್ಡಿನಲ್ಲಿ 13ನೆಯ ಶತಮಾನದ ಹೊತ್ತಿಗೆ 1,500 ವಿದ್ಯಾರ್ಥಿಗಳಿದ್ದರೆಂದು ಹೇಳಲಾಗಿದೆ. ಪ್ಯಾರಿಸ್ ವಿಶ್ವವಿದ್ಯಾಲಯವನ್ನು ಬಿಟ್ಟರೆ ಉತ್ತರ ಯುರೋಪಿನಲ್ಲೆಲ್ಲ ಅತ್ಯಂತ ಪ್ರಮುಖ ಕೇಂದ್ರವೆಂದು ಆಕ್ಸ್‌ಫರ್ಡ್ ಹೆಸರಾಯಿತು. ಅದು ರೋಜರ್ ಬೇಕನ್, ಎಡ್ಮಂಡ್ ರಿಚ್ ಮುಂತಾದ ಸುಪ್ರಸಿದ್ಧ ಶಿಕ್ಷಕರನ್ನು ಹೊಂದಿತ್ತು. 14ನೆಯ ಶತಮಾನದ ಹೊತ್ತಿಗೆ 3–4 ಸಾವಿರ ವಿದ್ಯಾರ್ಥಿಗಳು ಇದ್ದಿರಬೇಕು (ಕೆಲವರು 30,000 ವಿದ್ಯಾರ್ಥಿಗಳಿದ್ದರೆಂದು ಹೇಳುವ ಮಾತು ಉತ್ಪ್ರೇಕ್ಷೆಯೆಂದು ಪರಿಗಣಿಸಲಾಗಿದೆ). ಆಕ್ಸ್‌ಫರ್ಡಿನಿಂದ ಹೊರಬಿದ್ದ ಅನೇಕ ವಿದ್ವಾಂಸರು ಪ್ರಸಿದ್ಧ ಪುರುಷರಾಗಿ ಬೆಳಗಿದರು. ಈಗ ಸು.20,300 ವಿದ್ಯಾರ್ಥಿಗಳಿದ್ದಾರೆ. ಅದರಲ್ಲಿ ಸ್ನಾತಕ ಪದವಿಗೆ 11,750, ಸ್ನಾತಕೋತ್ತರ ಪದವಿಗೆ 8,700.

ಜ್ಞಾನಪುನರುಜ್ಜೀವನ ಮತ್ತು ಧರ್ಮಸುಧಾರಣೆಗಳ ಪ್ರಭಾವ ಆಕ್ಸ್‌ಫರ್ಡಿನ ಮೇಲೆ ಬೀಳದೆ ಇರಲಿಲ್ಲ. ಹೊಸ ತತ್ತ್ವಗಳಿಗೂ ಹಳೆಯ ಸಂಪ್ರದಾಯಗಳಿಗೂ ನಿರಂತರ ವಾಗ್ವಾದ ನಡೆಯಿತು. ಕೆಲವು ಆಂತರಿಕ ಬದಲಾವಣೆಗಳೂ ಆದುವು. 18ನೆಯ ಶತಮಾನದಲ್ಲಿ ಇಡೀ ಯುರೋಪಿನಲ್ಲಿ ವಿದ್ಯಾಮಟ್ಟ ಇಳಿದಿತ್ತು. ಆಕ್ಸ್‌ಫರ್ಡಿನಲ್ಲೂ ಇದು ಕ್ಷೀಣದೆಶೆಯಲ್ಲಿತ್ತು. ವಿದ್ಯೆ, ಧರ್ಮ, ನೀತಿ ಇತ್ಯಾದಿ ಸುಂದರ ಮತ್ತು ಉತ್ಕೃಷ್ಟ ಮೌಲ್ಯಗಳ ಸಂರಕ್ಷಣೆ ಮತ್ತು ವಿಕಾಸಕ್ಕಾಗಿ ಶ್ರದ್ಧಾವಂತ ದಾನಿಗಳಿಂದ ಆರಂಭವಾದ ಈ ಕಾಲೇಜುಗಳು ಅಜ್ಞಾನ, ಅಶ್ರದ್ಧೆ, ಲಂಚಕೋರತನ, ವಿಷಯಲಂಪಟತನ ಇವುಗಳ ತೌರಾಗಿವೆಯೆಂದು ಆಕ್ಸ್‌ಫರ್ಡಿನ ವಿಸೆಸಿಮಸ್ ನಾಕ್ಸ್ ಎಂಬ ಹಳೆಯ ವಿದ್ಯಾರ್ಥಿ ಕಟುವಾಗಿ ಟೀಕಿಸಿದ್ದಾನೆ. ಶಿಕ್ಷಕರಿಗೆ ಕೊಡುತ್ತಿದ್ದ ಅಲ್ಪ ವೇತನಗಳೂ ಅವರು ಕ್ರೈಸ್ತಪಾದ್ರಿಗಳಂತೆ ಅವಿವಾಹಿತರಾಗಿರಬೇಕೆಂಬ ನಿಯಮವೂ ವಿದ್ಯಾರ್ಥಿಗಳಲ್ಲಿದ್ದ ನಿರ್ಲಕ್ಷ್ಯವೂ ಪರೀಕ್ಷಾಪದ್ಧತಿಯಲ್ಲಿದ್ದ ಲೋಪದೋಷಗಳೂ ಈ ಪರಿಸ್ಥಿತಿಗೆ ಕಾರಣವಾದವೆನ್ನಬಹುದು. ಆದರೆ ನಿಜವಾದ ಸತ್ತ್ವಪೂರಿತವಾದ ಆಕ್ಸ್‌ಫರ್ಡ್ 19ನೆಯ ಶತಮಾನದಲ್ಲಿ ಚೇತರಿಸಿಕೊಂಡು ತನ್ನನ್ನು ತಾನೇ ಸುಧಾರಿಸಿಕೊಂಡು, ಶಿಕ್ಷಣಪ್ರಪಂಚದಲ್ಲಿ ತನಗಿದ್ದ ಅಗ್ರಸ್ಥಾನವನ್ನು ಪುನಃ ಪಡೆಯಿತು. ಅದು ತನ್ನ ಪರೀಕ್ಷಾ ಪದ್ಧತಿಯನ್ನು ಉತ್ತಮಗೊಳಿಸಿಕೊಂಡಿತು; ಉತ್ತಮ ಶಿಕ್ಷಕರನ್ನು ನೇಮಿಸಿಕೊಂಡಿತು; ವಿದ್ಯಾರ್ಥಿವೇತನ, ಫೆಲೋಷಿಪ್ಪುಗಳನ್ನು; ಯೋಗ್ಯತೆಗನುಸಾರವಾಗಿ ಹಂಚುವ ಕ್ರಮ ಕೈಗೊಂಡಿತು; ಉತ್ತಮ ವಿದ್ಯಾರ್ಥಿಗಳನ್ನು ಪಡೆಯುವುದಕ್ಕಾಗಿ ಆನರ್ಸ್ ತರಗತಿಗಳನ್ನು ತೆರೆಯಿತು. ಹೀಗೆ ಅದು ತನ್ನ ಶಿಕ್ಷಣಮಟ್ಟವನ್ನೇರಿಸಿಕೊಂಡಿತು. ಜೊತೆಗೆ 1854ರ ವಿಶ್ವವಿದ್ಯಾಲಯ ಸುಧಾರಣಾ ಕಾಯಿದೆ, 1881ರ ವಿಶ್ವವಿದ್ಯಾಲಯ ಆಯೋಗ ಇವುಗಳ ಸಲಹೆಗಳ ಪ್ರಕಾರ ಅದರ ಆಡಳಿತದಲ್ಲೂ ಶಿಕ್ಷಣ ವ್ಯವಸ್ಥೆಯಲ್ಲೂ ಉತ್ತಮ ಬದಲಾವಣೆಗಳು ಆದುವು. ಆಕ್ಸ್‌ಫರ್ಡ್ ಮತ್ತೆ ಉನ್ನತಿ ಪಡೆಯಿತು.

**ಕೇಂಬ್ರಿಜ್ ವಿಶ್ವವಿದ್ಯಾಲಯ:** ಯುನೈಟೆಡ್ ಕಿಂಗ್‌ಡಮ್‌ನ ಕೇಂಬ್ರಿಜ್‌ನಲ್ಲಿರುವ, ವಿಶ್ವವಿದ್ಯಾಲಯ ಇಂಗ್ಲೆಂಡಿನ ಉನ್ನತ ಶಿಕ್ಷಣಸಂಸ್ಥೆಗಳಲ್ಲಿ ಒಂದು. ಇದರ ಉಗಮ ಹೇಗಾಯಿತೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ಈ ವಿಶ್ವವಿದ್ಯಾಲಯ ಇದರ

ಕಾಲೇಜುಗಳಿಗಿಂತ ಹಳೆಯದೆಂಬುದಂತೂ ನಿಜ. 13ನೆಯ ಶತಮಾನದ ಆರಂಭಕಾಲದಿಂದ ಇಲ್ಲಿ ವಿದ್ಯಾರ್ಥಿಗಳಿದ್ದ ದಾಖಲೆ ಸಿಗುತ್ತದೆ. 1209ರಲ್ಲಿ ಆಕ್ಸ್‌ಫರ್ಡಿನಿಂದ ಕೆಲವು ವಿದ್ವಾಂಸರು ಇಲ್ಲಿಗೆ ಬಂದರೆಂದೂ ಅನಂತರ ಕೇಂಬ್ರಿಜ್ ವಿಶ್ವವಿದ್ಯಾನಿಲಯ ಆರಂಭವಾಗಿರಬೇಕೆಂದೂ ಖಚಿತವಾಗಿದೆ. ಆಕ್ಸ್‌ಫರ್ಡಿನಂತೆಯೇ ಕೇಂಬ್ರಿಜ್ ಅನೇಕ ಕಾಲೇಜುಗಳನ್ನು ಹೊಂದಿದೆ. 1284ರಲ್ಲಿ ಸೇಂಟ್ ಪೀಟರ್ಸ್, 1326ರಲ್ಲಿ ಕ್ಲೇರ್, 1347ರಲ್ಲಿ ಪೆಂಬ್ರೋಕ್, 1350ರಲ್ಲಿ ಟ್ರಿನಿಟಿಹಾಲ್, 1352ರಲ್ಲಿ ಕಾರ್ಪಸ್ ಕ್ರಿಸ್ಟಿ, 1441ರಲ್ಲಿ ಕಿಂಗ್ಸ್, 1448ರಲ್ಲಿ ಕ್ವೀನ್ಸ್, 1496ರಲ್ಲಿ ಜೀಸಸ್, 1511ರಲ್ಲಿ ಸೇಂಟ್ ಜಾನ್, 1546ರಲ್ಲಿ ಟ್ರಿನಿಟಿ ಕಾಲೇಜುಗಳು ಸ್ಥಾಪಿತವಾದುವು.

ಆಕ್ಸ್‌ಫರ್ಡಿನಲ್ಲಿರುವಂತೆಯೇ ಕೇಂಬ್ರಿಜ್‌ನಲ್ಲೂ ದೇವತಾಶಾಸ್ತ್ರ, ಕಾನೂನು, ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯಗಳ ಅಧ್ಯಯನ–ಇವು ಮುಖ್ಯ ಬೋಧನವಿಷಯಗಳಾಗಿದ್ದುವು. ಜ್ಞಾನಪುನರುಜ್ಜೀವನ ಕಾಲದಿಂದೀಚೆಗೆ ತರ್ಕ, ವಾಕ್ಪ್ರತಿಭೆ, ಗಣಿತ, ಖಗೋಳಶಾಸ್ತ್ರ, ಸಂಗೀತಗಳಲ್ಲಿಯೂ ಪಾಠಪ್ರವಚನಗಳು ಪ್ರಾರಂಭವಾದುವು. ಆದರೆ ಧರ್ಮಸುಧಾರಣೆಯ ಅನಂತರ ಧರ್ಮಶುದ್ಧಿವಾದಿಗಳ (ಪ್ಯೂರಿಟನ್ಸ್) ಪ್ರಭಾವದಿಂದ ಧರ್ಮಬೋಧನೆ ಪುನಃ ಪ್ರತಿಷ್ಠಿತವಾಯಿತು. 1511ರಲ್ಲಿ ಇರಾಸ್‌ಮಸ್ ಕೇಂಬ್ರಿಜ್‌ನ ಪ್ರೊಫೆಸರ್ ಆದ. 1535ರಲ್ಲಿ ಥಾಮಸ್ ಕ್ರಾಮ್‌ವೆಲ್ ಮಹಾಕುಲಪತಿಯಾದದ್ದರಿಂದ ಈ ಬಗೆಯ ಧರ್ಮಶುದ್ಧಿಭಾವನೆಯ ಬೋಧನೆಗೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಮುಂದೆ ವಿಜ್ಞಾನದ ಮತ್ತು ಮಾನವಿಕಶಾಸ್ತ್ರದ ಬೆಂಬಲಿಗರು ಅವಿಚ್ಛಿನ್ನ ಹೋರಾಟ ನಡೆಸಿ ಲೌಕಿಕ ಜ್ಞಾನಬೋಧನೆ ಪ್ರಧಾನವಾಗುವಂತೆ ಮಾಡಿದರು. ಅನಂತರ ಸರ್ ಐಸಾಕ್ ನ್ಯೂಟನ್ ಜಾರ್ಜ್ ಸ್ಟೋಕ್ಸ್, ಆರ್ಥರ್ ಕೇಲಿ, ಲಾರ್ಡ್ ರುದರ್‌ಫರ್ಡ್ ಜೆ.ಎಂ.ಕೀನ್ಸ್, ಟ್ರೆವೆಲಿಯನ್ ಮೊದಲಾದವರೂ ಇತ್ತೀಚೆಗೆ ಸರ್, **(ನೋಡಿ– ಥಾಮ್ಸನ್,–ಜೋಸೆಫ್)** ಮೊದಲಾದ ಪ್ರಸಿದ್ಧ ಶಿಕ್ಷಕರೂ ಕೇಂಬ್ರಿಜ್‌ನಲ್ಲಿ ಬೋಧಕರಾದರು (ಇವರನ್ನು ಕುರಿತ ಆಯಾ ಶೀರ್ಷಿಕೆಗಳನ್ನು ನೋಡಿ).

18ನೆಯ ಶತಮಾನದ ಮಧ್ಯಭಾಗದಲ್ಲಿ ಟ್ರೈಪಾಸ್ ಎಂಬ ಉನ್ನತ ಶ್ರೇಣಿಯ ಪರೀಕ್ಷಾಪದ್ಧತಿಯನ್ನು ವಿವಿಧ ವಿಷಯಗಳಲ್ಲಿ ಸ್ಥಾಪಿಸಿ ಶಿಕ್ಷಣದ ಮಟ್ಟವನ್ನು ಉತ್ತಮಗೊಳಿಸಲಾಯಿತು. ಗಣಿತಶಾಸ್ತ್ರ ಬೋಧನೆಯಲ್ಲಿ ಕೇಂಬ್ರಿಜ್ ಜಗದ್ವಿಖ್ಯಾತವಾಯಿತು. ಗಣಿತೀಯ ಭೌತಶಾಸ್ತ್ರ (ಮ್ಯಾಥಮ್ಯಾಟಿಕಲ್ ಫಿಸಿಕ್ಸ್), ನ್ಯಾಯಶಾಸ್ತ್ರ, ಇತಿಹಾಸ, ನೀತಿಶಾಸ್ತ್ರ, ತತ್ತ್ವಶಾಸ್ತ್ರ, ರಸಾಯನಶಾಸ್ತ್ರಗಳಲ್ಲಿಯೂ ಟ್ರೈಪಾಸ್ ಪರೀಕ್ಷೆಗಳನ್ನು ಏರ್ಪಡಿಸಲಾಯಿತು. 1850ರ ಹೊತ್ತಿಗೆ, ಕೇಂಬ್ರಿಜ್‌ನಲ್ಲಿ ಪ್ರಾಣಿಶಾಸ್ತ್ರ, ಶಸ್ತ್ರಚಿಕಿತ್ಸೆ, ಶರೀರಕ್ರಿಯಾಶಾಸ್ತ್ರ (ಫಿಸಿಯಾಲಜಿ), ವ್ಯವಸಾಯ, ಜೀವಶಾಸ್ತ್ರ ಮೊದಲಾದವುಗಳಲ್ಲಿಯೂ ಸ್ನಾತಕೋತ್ತರ ಶಿಕ್ಷಣಕ್ಕೆ ಅವಕಾಶ ದೊರೆಯಿತು.

ಈ ವಿಶ್ವವಿದ್ಯಾಲಯದಲ್ಲಿ 8614 ಮಂದಿ ಆಡಳಿತ ಸಿಬ್ಬಂದಿಯೂ, ಒಟ್ಟು 18400 ವಿದ್ಯಾರ್ಥಿಗಳೂ (2010), ಅದರಲ್ಲಿ ಸ್ನಾತಕಪೂರ್ವ 12000 ವಿದ್ಯಾರ್ಥಿಗಳು, ಸ್ನಾತಕೋತ್ತರ 6400 ವಿದ್ಯಾರ್ಥಿಗಳಿದ್ದಾರೆ. ಇದಕ್ಕೆ ಸೇರಿದಂತೆ 31 ಕಾಲೇಜುಗಳಿವೆ.

**ಲಂಡನ್ ವಿಶ್ವವಿದ್ಯಾಲಯ:** ಅನೇಕ ಶತಮಾನಗಳ ಕಾಲ ಇಂಗ್ಲೆಂಡಿನಲ್ಲಿ ಇಂಗ್ಲೆಂಡಿನ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಎರಡೇ ವಿಶ್ವವಿದ್ಯಾಲಯಗಳಿದ್ದವು. ಮೂರನೆಯದಾದ ಲಂಡನ್ ವಿಶ್ವವಿದ್ಯಾಲಯವನ್ನು ಲಂಡನ್‌ನಲ್ಲಿ 1836ರಲ್ಲಿ ಸ್ಥಾಪಿತವಾಯಿತು. ಇದು ಜನ್ಮತಳೆಯುವುದಕ್ಕೆ ಮೊದಲಿನಿಂದಲೂ ಲಂಡನ್ ನಗರದಲ್ಲಿ ಮತ್ತು ಸುತ್ತಮುತ್ತ ಅನೇಕ ಪ್ರಸಿದ್ಧ ಕಾಲೇಜುಗಳು ಇದ್ದುವು. ಅವುಗಳೆಲ್ಲವನ್ನೂ ಕೂಡಿಸಿ ಈ ವಿಶ್ವವಿದ್ಯಾಲಯದ ಸ್ಥಾಪನೆಯಾಯಿತು.

ಲಂಡನ್ ವಿಶ್ವವಿದ್ಯಾಲಯಕ್ಕೂ ಆಕ್ಸ್‌ಫರ್ಡ್ ಕೇಂಬ್ರಿಜ್‌ಗಳಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಆಕ್ಸ್‌ಫರ್ಡ್, ಕೇಂಬ್ರಿಜ್‌ಗಳಲ್ಲಿ ವಿವಿಧ ಕಾಲೇಜುಗಳಿದ್ದರೂ ಅವೆಲ್ಲವೂ ಒಂದೇ ಆಡಳಿತ ಸ್ವಾಮ್ಯಕ್ಕೆ ಒಳಪಟ್ಟವು. ಅವುಗಳನ್ನು ಬೋಧಿಸುವ ವಿಶ್ವವಿದ್ಯಾಲಯಗಳು (ಟೀಚಿಂಗ್ ಯೂನಿವರ್ಸಿಟಿ) ಎನ್ನಬಹುದು. ಆದರೆ ಲಂಡನ್ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಕಾಲೇಜುಗಳು ತಮ್ಮವೇ ಆಡಳಿತಗಳನ್ನು ಪಡೆದಿದ್ದುವು. ಲಂಡನ್ ವಿಶ್ವವಿದ್ಯಾಲಯಕ್ಕೆ ಪಠ್ಯಕ್ರಮವನ್ನೂ ಪರೀಕ್ಷೆಗಳನ್ನೂ ಮನ್ನಣೆ ಮಾಡುವ ಮತ್ತು ಪದವೀ ಪ್ರದಾನ ಮಾಡುವ ಅಧಿಕಾರಗಳು ಮಾತ್ರ ಇದ್ದುವು. ಲಂಡನ್ ವಿಶ್ವವಿದ್ಯಾಲಯದ ಮಾದರಿಯಲ್ಲೇ ಭಾರತದಲ್ಲಿ 1857ರಲ್ಲಿ ಬ್ರಿಟಿಷರಿಂದ ಕಲ್ಕತ್ತ, ಬೊಂಬಾಯಿ, ಮದ್ರಾಸ್ ವಿಶ್ವವಿದ್ಯಾಲಯಗಳು ಸ್ಥಾಪಿತವಾದುವು (ಈ ವಿಶ್ವವಿದ್ಯಾಲಯಗಳನ್ನು ಕುರಿತ ಆಯಾ ಲೇಖನಗಳನ್ನು ನೋಡಿ).

ಲಂಡನ್ ವಿಶ್ವವಿದ್ಯಾಲಯದ ಬಗ್ಗೆ ಮೊದಮೊದಲು ಅಷ್ಟಾಗಿ ತೃಪ್ತಿ ಇರಲಿಲ್ಲ. ಅನೇಕ ಆಯೋಗಗಳ ಸಲಹೆಯಂತೆ ಬೋಧನೆಯ ಕಾರ್ಯವನ್ನೂ ಮಾಡುವಂತೆ ವಿಶ್ವವಿದ್ಯಾನಿಲಯಕ್ಕೆ ಸೇರಿದ ಹಲವು ಕಾಲೇಜುಗಳನ್ನು ಸ್ಥಾಪಿಸಲಾಯಿತು. ಈಗ ಲಂಡನ್ ಬೋಧಿಸುವ ಮತ್ತು ನಿಬದ್ಧಿಸುವ (ಅಫಿಲಿಯೇಟಿಂಗ್) ಸಂಸ್ಥೆಯಾಗಿ ಉಳಿದಿದೆ.

ಇತ್ತೀಚೆಗೆ ಇಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆ ಏರಿದೆ. ದೊಡ್ಡ ನಗರಗಳಾದ ಡರ್‌ಹ್ಯಾಂ, ಮ್ಯಾಂಚೆಸ್ಟರ್, ಲೀಡ್ಸ್, ಲಿವರ್‌ಪೂಲ್, ಬ್ರಿಸ್ಟಲ್‌ಗಳಲ್ಲಿ ಪೌರ ವಿಶ್ವವಿದ್ಯಾಲಯಗಳೂ ರೀಡಿಂಗ್, ನಾಟಿಂಗ್‌ಹ್ಯಾಂ, ಸೌತಾಂಪ್ಟನ್, ಸಸೆಕ್ಸ್ ಮೊದಲಾದ ನೂತನ ವಿಶ್ವವಿದ್ಯಾನಿಲಯಗಳೂ ಸ್ಥಾಪಿತವಾಗಿವೆ.

ಇದರಲ್ಲಿ 19 ಪ್ರತ್ಯೇಕ ವಿ.ವಿ. ಸಂಸ್ಥೆಗಳು, 112 ಸಂಶೋಧನ ಸಂಸ್ಥೆಗಳು ಒಟ್ಟು 31 – ಅಂಗ ಸಂಸ್ಥೆಗಳಿವೆ. ಯು.ಕೆ.ಯಲ್ಲಿ ಇದು ಅತ್ಯಂತ ದೊಡ್ಡ ವಿಶ್ವವಿದ್ಯಾಲಯ. ಇದರಲ್ಲಿ 31,11,35,090 ಕ್ಯಾಂಪಸ್ – ಆಧಾರಿತ ವಿದ್ಯಾರ್ಥಿಗಳು ಮತ್ತು ಸು. 45,000 ಅಂತಾರಾಷ್ಟ್ರೀಯ ಯೋಜನೆಗಳ ವಿದ್ಯಾರ್ಥಿಗಳೂ ಇದ್ದಾರೆ.

ವಿಶ್ವವಿದ್ಯಾಲಯ ಶಿಕ್ಷಣದ ಜೊತೆಗೆ ಸೆಕೆಂಡರಿ ವಿದ್ಯಾಭ್ಯಾಸದ ಅನೇಕ ಕಾಲೇಜುಗಳಿವೆ (ಮುಂದೆ ಅವುಗಳ ಬಗ್ಗೆ ವಿವರಣೆ ಕೊಡಲಾಗಿದೆ).

**ಶಿಕ್ಷಣ ವ್ಯವಸ್ಥೆಯ ವಿವರಗಳು:** 1944ರ ಶಿಕ್ಷಣ ಕಾಯಿದೆಯಲ್ಲಿ ಪ್ರತಿಯೊಂದು ಮಗುವಿಗೂ ಅದರ ಶಕ್ತಿಸಾಮರ್ಥ್ಯಗಳಿಗೆ ತಕ್ಕ, ಅದರ ಸರ್ವತೋಮುಖ (ದೈಹಿಕ, ಮಾನಸಿಕ, ನೈತಿಕ, ಬೌದ್ಧಿಕ, ಮತ್ತು ಪಾರಮಾರ್ಥಿಕ) ಬೆಳವಣಿಗೆಗೆ ಸೂಕ್ತವಾದ ಶಿಕ್ಷಣವನ್ನು ಅದರ ಮಾತಾಪಿತರ ಸ್ಥಾನಮಾನವನ್ನು ಲೆಕ್ಕಿಸದೆ ಒದಗಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿ ಎಂಬ ತತ್ತ್ವ ಪ್ರತಿಪಾದಿತವಾಯಿತು. ಇಂಗ್ಲೆಂಡಿನ ಶಿಕ್ಷಣಚರಿತ್ರೆಯಲ್ಲಿ 1944ರ ಶಿಕ್ಷಣ ಕಾಯಿದೆಯ (ಬಟ್ಲರ್ ಆ್ಯಕ್ಟ್) ಸ್ಥಾನ ಅತ್ಯಂತ ಹಿರಿದು. ಶಿಕ್ಷಣ ವ್ಯವಸ್ಥೆ ಈ ಕಾಯಿದೆಗನುಸಾರವಾಗಿ ನಡೆಯುತ್ತಿದೆ. 1944ರ ಕಾಯಿದೆಯ ಮುಖ್ಯ ಅಂಶಗಳಿವು: 1. ಶಿಕ್ಷಣಕ್ಕಾಗಿ ಕೇಂದ್ರದಲ್ಲಿ ಒಬ್ಬ ಮಂತ್ರಿಯ ನೇಮಕ. ನಾಡಿನ ಶೈಕ್ಷಣಿಕ ಧೋರಣೆಯನ್ನು ನಿರೂಪಿಸುವ ಹಕ್ಕು ಈತನ ವಶ. 2. 14–15ಕ್ಕೆ ಕಡ್ಡಾಯ ಶಿಕ್ಷಣ ವಯಸ್ಸಿನ ಮಿತಿಯ ಏರಿಕೆ (ಇದು ಜಾರಿಗೆ ಬಂದದ್ದು 1947ರಿಂದ); 1970–71ರ ಹೊತ್ತಿಗೆ 16ಕ್ಕೆ ಇದರ ಏರಿಕೆ: 3. ಶಿಕ್ಷಣ ಪದ್ಧತಿಯನ್ನು ಪ್ರೈಮರಿ (5–11 ವಯಸ್ಸಿನ ವರೆಗೆ); ಸೆಕೆಂಡರಿ (12–18ರ ವರೆಗೆ) ಮತ್ತು ಮುಂದುವರಿದ (ಫರ್ದರ್) ಶಿಕ್ಷಣ ಎಂಬುದಾಗಿ ವಿಂಗಡಣ; 4. ಜಿಲ್ಲೆಗಳಲ್ಲಿ (ಕೌಂಟಿ) ಹಾಗೂ ದೊಡ್ಡ ನಗರಗಳಲ್ಲಿ (ಕೌಂಟಿಬರೊ) ಸ್ಥಳೀಯ ಶಿಕ್ಷಣ ಅಧಿಕಾರ ಮಂಡಲಿಗಳ ಸ್ಥಾಪನೆ; 5. ಶಾಲೆಗಳಲ್ಲಿ ಪ್ರತಿದಿನವೂ ಕಡ್ಡಾಯವಾಗಿ ಪ್ರಾರ್ಥನೆ ಮತ್ತು ಧರ್ಮಬೋಧೆ.

**ಕೇಂದ್ರ ಶಿಕ್ಷಣಮಂತ್ರಿಯ ಅಧಿಕಾರ:** ಶಿಕ್ಷಣ ವಿಷಯದಲ್ಲಿ ಶಿಕ್ಷಣಮಂತ್ರಿಗೆ ಪರಮಾಧಿಕಾರ. ಆತನೇ ಶಿಕ್ಷಣ ಮತ್ತು ವಿಜ್ಞಾನ ಇಲಾಖೆಯ ಮುಖ್ಯಸ್ಥ. ಕಡ್ಡಾಯ ಶಿಕ್ಷಣದ ಮಟ್ಟದ ತೀರ್ಮಾನ. ಶಾಲಾ ಕಟ್ಟಡಗಳ ಮೇಲ್ವಿಚಾರಣೆ, ಶಿಕ್ಷಕರ ತರಪೇತಿ ಮತ್ತು ಅವರ ಅರ್ಹತಾಮಟ್ಟದ ನಿರ್ಧಾರ, ಶಿಕ್ಷಕರ ಸಂಬಳ ಇತ್ಯಾದಿಗಳ ನಿಗದಿ, ಸ್ಥಳೀಯ ಶಿಕ್ಷಣ ಅಧಿಕಾರ ಮಂಡಲಿಗಳಿಗೆ ಧನಸಹಾಯ, ಎಲ್ಲ ಮಟ್ಟಗಳಲ್ಲಿಯೂ ನಡೆಯುವ ಸಂಶೋಧನೆಗಳಿಗೆ ಸಹಾಯ ಮತ್ತು ಪ್ರೋತ್ಸಾಹ. ಮುಖ್ಯ ಸಂಸ್ಥೆಗಳ ನೇರ ನಿರ್ವಹಣೆ, ಸ್ಥಳೀಯ ಶಿಕ್ಷಣ ಮಂಡಲಿಗಳ ಒಳಗೂ ಮಂಡಲಿಗಳಿಗೂ ಮಾತಾಪಿತೃಗಳಿಗೂ ನಡುವೆಯೂ ಉದ್ಭವಿಸುವ ಭಿನ್ನಾಭಿಪ್ರಾಯಗಳ ತೀರ್ಮಾನ–ಇವುಗಳ ಜವಾಬ್ದಾರಿಯೆಲ್ಲ ಮಂತ್ರಿಗೆ ಸೇರಿದ್ದು. ಕೇಂದ್ರ ನಿರೀಕ್ಷಕರ (ಎಚ್. ಎಂ. ಇನ್ಸ್‌ಪೆಕ್ಟರ್ಸ್) ಹಾಗೂ ಇತರ ಪರಿಣತರ ಮತ್ತು ನಾನಾ ಸಲಹಾಮಂಡಲಿಗಳ ಸಹಾಯದಿಂದ ಈತ ತನ್ನ ಕಾರ್ಯಭಾರವನ್ನು ನಡೆಸಿಕೊಂಡು ಹೋಗುತ್ತಾನೆ. ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರದಲ್ಲಿ ಸರ್ವಾಧಿಕಾರವಿದ್ದರೂ ಈತ ಸ್ಥಳೀಯ ಮಂಡಲಿಗಳೊಂದಿಗೆ ಸೌಹಾರ್ದ ಸಹಕಾರಗಳ ಮೂಲಕ ಶಿಕ್ಷಣ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾನೆ. ಕೇಂದ್ರ ಸರ್ಕಾರಕ್ಕೂ ಸ್ಥಳೀಯ ಸಂಸ್ಥೆಗಳಿಗೂ ಇರುವ ಸಾಮರಸ್ಯ ಸೌಹಾರ್ದಗಳಿಂದ ಇಂಗ್ಲೆಂಡಿನ ಶಿಕ್ಷಣ ಪದ್ಧತಿ ಬಹಳ ಪ್ರಗತಿ ಸಾಧಿಸಿದೆ.

**ಸ್ಥಳೀಯ ಶಿಕ್ಷಣಾಧಿಕಾರ ಮಂಡಲಿ:** ಮುಂಚೆ ಇದ್ದ ಶಾಲಾಜಿಲ್ಲೆಗಳನ್ನು ರದ್ದುಪಡಿಸಿ ಈ ಜಿಲ್ಲೆಗಳ (ಮತ್ತು ನಗರ ಸಭೆಗಳ) ಅಧಿಕಾರ ಮಂಡಲಿಗಳು ಸ್ಥಾಪಿತವಾದುವು. ಈ ಶಿಕ್ಷಣಮಂಡಲಿಗಳಲ್ಲಿ ಅನೇಕ ಸದಸ್ಯರಿದ್ದಾರೆ. ಇದು ಶಿಕ್ಷಣ ಪರಿಣತರಿಂದಲೂ ಸ್ಥಳೀಯ ಚುನಾಯಿತ ಸದಸ್ಯರಿಂದಲೂ ಕೂಡಿರುತ್ತದೆ. ಕಾನೂನುಬದ್ಧವಾಗಿ ನೇಮಕವಾಗಿರುವ ಈ ಮಂಡಲಿಗಳಿಗೆ ಶಿಕ್ಷಣ ವಿಚಾರದಲ್ಲಿ ಹೆಚ್ಚಿನ ಅಧಿಕಾರವೂ ಜವಾಬ್ದಾರಿಯೂ ಇವೆ. ಈಗ ಇಂಗ್ಲೆಂಡಿನಲ್ಲಿ ಇಂಥ 162 ಮಂಡಲಿಗಳಿವೆ.

ಸ್ಥಳೀಯ ಶಿಕ್ಷಣಾಧಿಕಾರಿ ಮಂಡಲಿಗಳ ಮುಖ್ಯ ಕರ್ತವ್ಯಗಳಿವು i. ಕೇಂದ್ರ ಮಂತ್ರಿಗಳು ಹಾಕಿರುವ ಮಟ್ಟಕ್ಕೆ ತಕ್ಕಂತೆ ಶಾಲೆಯ ಕಟ್ಟಡಗಳು ಇರುವಂತೆ ನೋಡಿಕೊಳ್ಳುವುದು; ii ಪ್ರತಿಯೊಂದು ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಯಲ್ಲಿ ಗೊತ್ತಾದ ರೀತಿಯಲ್ಲಿ ಮೇಲ್ವಿಚಾರಕ ಸಮಿತಿ ರಚಿಸಿ ಕಾರ್ಯ ಸುಸೂತ್ರವಾಗಿ ನಡೆಯುವಂತೆ ನಿಯೋಜಿಸುವುದು; iii. ನಿಗದಿಮಾಡಿದ ಪಠ್ಯಕ್ರಮದಂತೆ ಪ್ರತಿದಿನವೂ ಶಾಲೆಗಳಲ್ಲಿ ಪ್ರಾರ್ಥನೆ ಮತ್ತು ಮತಬೋಧೆ ನಡೆಯುತ್ತದೆ ಎಂಬುದನ್ನು ನೋಡಿಕೊಳ್ಳುವುದು; iv ಕಡ್ಡಾಯ ಶಿಕ್ಷಣದ ನಿಬಂಧನೆಗಳನ್ನು ಜಾರಿಗೆ ತರುವುದು; v ಮುಂದುವರಿದ ವಿದ್ಯಾಭ್ಯಾಸಕ್ಕೆ ಸೂಕ್ತ ಏರ್ಪಾಡು ಮಾಡುವುದು; vi ಶಾಲೆಗಳಲ್ಲಿ ಮಕ್ಕಳಿಗೆ ಯುಕ್ತ ವೈದ್ಯಪರೀಕ್ಷೆ ಏರ್ಪಡಿಸುವುದು ಮತ್ತು ಉಚಿತ ಔಷಧೋಪಚಾರ ದೊರಕುವಂತೆ ಮಾಡುವುದು; vii ವಿಶೇಷ ಶಿಕ್ಷಣಕ್ಕೆ ಅರ್ಹರಾದ ಮಕ್ಕಳ ಬಗ್ಗೆ ತಕ್ಕ ಏರ್ಪಾಡು ಮಾಡುವುದು; viii. ಶಾಲಾಮಕ್ಕಳಿಗೆ ಹಾಲು ಮತ್ತು ಆಹಾರದ ಏರ್ಪಾಡು ಮಾಡುವುದು; ix ಶಾರೀರಿಕ ಶಿಕ್ಷಣ ಆಟಪಾಟ ಮತ್ತು ಮನೋರಂಜನೆಯ ಕಾರ್ಯಗಳು ನಡೆಯಲು ಏರ್ಪಾಡು ಮಾಡುವುದು; x ಮೂರು

ಮೈಲಿ ಅಥವಾ ಅದಕ್ಕಿಂತ ಹೆಚ್ಚು ದೂರದಿಂದ ಬರುವ ಮಕ್ಕಳಿಗೆ ವಾಹನ ಸೌಕರ್ಯ ಏರ್ಪಾಡು ಮಾಡುವುದು; xi ಕೇಂದ್ರಮಂತ್ರಿಯ ಸಲಹೆಯಂತೆ ಶಿಕ್ಷಕರ ತರಪೇತಿ ಕಾಲೇಜುಗಳ ಸ್ಥಾಪನೆ ಮಾಡುವುದು ಅಥವಾ ಅವುಗಳಿಗೆ ಸಹಾಯ ನೀಡುವುದು; xii ಮಂತ್ರಿಗೆ ಕಾಲಕಾಲಕ್ಕೆ ವರದಿಗಳನ್ನು ಕಳುಹಿಸುವುದು; xiii ಮುಖ್ಯ ಶಿಕ್ಷಣಾಧಿಕಾರಿಯೊಬ್ಬನನ್ನು ನೇಮಿಸುವುದು; xiv ತಾವು ಪಡೆದ ಹಣದ ಬಗ್ಗೆ ಸರಿಯಾದ ಲೆಕ್ಕಪತ್ರಗಳನ್ನಿಡುವುದು.

ಪ್ರತಿಯೊಂದು ಜಿಲ್ಲಾ ಶಿಕ್ಷಣ ಮಂಡಲಿಯೂ ಕೇಂದ್ರದಿಂದ ಧನಸಹಾಯ ಪಡೆಯುವುದೇ ಅಲ್ಲದೆ, ತನ್ನ ಜಿಲ್ಲೆಯಲ್ಲಿ ತೆರಿಗೆ ಸುಂಕಗಳನ್ನು ಹಾಕಿ ಹಣ ಸಂಪಾದಿಸಿಕೊಳ್ಳುತ್ತದೆ. 1966ರಲ್ಲಿ ತನ್ನ ಹಣದಲ್ಲಿ ಸುಮಾರು ಶೇ.55 ಭಾಗವನ್ನು ಉಪಾಧ್ಯಾಯರ ಮತ್ತು ಇತರರ ಸಂಬಳಕ್ಕಾಗಿಯೂ ಶೇ.17.5 ರಷ್ಟನ್ನು ಕಟ್ಟಡಗಳಿಗಾಗಿಯೂ ಶೇ.7 ರಷ್ಟನ್ನು ವಿದ್ಯಾರ್ಥಿಗಳ ನೆರವಿಗಾಗಿಯೂ ವೆಚ್ಚ ಮಾಡಿತು.

ಎರಡನೆಯ ಮಹಾಯುದ್ಧವಾದ ಮೇಲೆ ಶಾಲೆಗಳ ಕಟ್ಟಡಗಳ ಅವಸ್ಥೆ ಶೋಚನೀಯವಾಗಿತ್ತು. ಕಟ್ಟಡಗಳ ದುರಸ್ತಿ ಮತ್ತು ಅನುಕೂಲವಾದ ಕಟ್ಟಡಗಳ ನಿರ್ಮಾಣವೂ ಆದ್ಯ ಆವಶ್ಯಕತೆಗಳಲ್ಲಿ ಸೇರಿದುವು. 1959ರಲ್ಲಿ 25 ಕೋಟಿ ಪೌಂಡುಗಳ ಖರ್ಚಿನಲ್ಲಿ 1,500 ಹೊಸ ಕಟ್ಟಡಗಳನ್ನು ಕಟ್ಟಲಾಯಿತು. ಬಹಳ ಸಂಶೋಧನೆ ನಡೆಸಿದ ಮೇಲೆ ಈಗ ಶಾಲೆಗಳ ಕಟ್ಟಡಗಳ ಮಾದರಿ ನಿಗದಿಯಾಗಿವೆ. ಕಟ್ಟಡ ನಿರ್ಮಾಣಕ್ಕೆ ಮುಂಚೆ ಕೇಂದ್ರ ಸರ್ಕಾರದ ಅಪ್ಪಣೆ, ಸಹಾಯ ಪಡೆಯಬೇಕೆಂದು ವಿಧಿಸಲಾಯಿತು. ಕಟ್ಟಡಗಳ ನಿರ್ಮಾಣಕಾರ್ಯ ಬಿರುಸಿನಿಂದ ಸಾಗಿತು.

ಶಾಲೆಗಳ ಕಾರ್ಯಗಳ ನಿರೀಕ್ಷಣೆ ಕೇಂದ್ರ ಸರ್ಕಾರದ ನಿರೀಕ್ಷಕರುಗಳಿಂದಲೂ ಸ್ಥಳೀಯ ಮಂಡಲಿಯ ನಿರೀಕ್ಷಕರಿಂದಲೂ ಯಥಾವತ್ತಾಗಿ ನಡೆಯುತ್ತದೆ. ಇವರುಗಳೇ ಅಲ್ಲದೆ ಶಾಲೆಯ ಮುಖ್ಯೋಪಾಧ್ಯಾಯರಿಗೂ ಈ ಅಧಿಕಾರವಿದೆ. ಎಲ್ಲ ಬಗೆಯ ಶಾಲೆಗಳೂ ಈ ನಿರೀಕ್ಷಣೆಗೆ ಒಳಪಡಬೇಕು.

**ಶಾಲೆಗಳ ವ್ಯವಸ್ಥೆ:** ಇಂಗ್ಲೆಂಡಿನಲ್ಲಿ ಪ್ರತಿಯೊಂದು ಶಾಲೆಯೂ ತನ್ನದೇ ಆದ ವ್ಯಕ್ತಿತ್ವವನ್ನೂ ಹೆಚ್ಚಿನ ಸ್ವಾತಂತ್ರ್ಯವನ್ನೂ ಪಡೆದಿದೆ. ಪ್ರತಿ ಶಾಲೆಯಲ್ಲೂ ಒಂದು ಆಡಳಿತ ಮಂಡಲಿ ಇದೆ. ಶಾಲೆಯ ಮುಖ್ಯೋಪಾಧ್ಯಾಯರಿಗೂ ಬಹಳ ಗೌರವಸ್ಥಾನವಿದೆ.

ಶಾಲೆಗಳಲ್ಲಿ ಜಿಲ್ಲಾ ಶಾಲೆಗಳು, ಸ್ವಯಂನಿರ್ಮಿತ ಶಾಲೆಗಳು (ವಾಲಂಟರಿ ಸ್ಕೂಲ್ಸ್), ನೇರ ನೆರವಿನ ಶಾಲೆಗಳು ಮತ್ತು ಸ್ವತಂತ್ರ ಶಾಲೆಗಳು ಎಂಬ ನಾಲ್ಕು ಬಗೆಗಳಿವೆ. ಜಿಲ್ಲಾ ಶಾಲೆ (ಕೌಂಟಿ ಸ್ಕೂಲ್) ಮಂಡಲಿಯಿಂದ ನೇರವಾಗಿ ನಡೆಸಲ್ಪಡುವ ಶಾಲೆ. ಇಂಥವು ಸು. 20,000 ಇವೆ. ಸ್ವಯಂನಿರ್ಮಿತ ಶಾಲೆಗಳಿಗೆ ಮಂಡಲಿಯಿಂದ ಧನಸಹಾಯ ದೊರೆಯುತ್ತದೆ. ಆದರೆ ಅನೇಕ ಅಂಶಗಳಲ್ಲಿ ಆ ಶಾಲೆಯವರೂ ಜವಾಬ್ದಾರಿ ವಹಿಸಬೇಕಾಗುತ್ತದೆ. ದೇಶದಲ್ಲಿ ಸುಮಾರು 10,000 ಸ್ವಯಂನಿರ್ಮಿತ ಶಾಲೆಗಳಿವೆ. 179 ನೇರವಾಗಿ ಕೇಂದ್ರದಿಂದ ಧನಸಹಾಯ ಪಡೆಯುವ ಶಾಲೆಗಳು. ಇವು ಗ್ರಾಮರ್ ಶಾಲೆಗಳು. ಸಾರ್ವಜನಿಕ ಶಾಲೆಗಳಲ್ಲಿ ಓದಿದ ಮಕ್ಕಳಲ್ಲಿ ಕನಿಷ್ಠಪಕ್ಷ ನಾಲ್ಕನೆಯ ಒಂದು ಭಾಗಕ್ಕೆ ಇವು ಪ್ರವೇಶ ನೀಡಬೇಕು. ಸು.3,400 ಸ್ವತಂತ್ರ ಶಾಲೆಗಳಿವೆ. ಅವುಗಳಿಗೆ ಯಾವ ಧನಸಹಾಯವೂ ದೊರೆಯುವುದಿಲ್ಲ. ಆದರೆ ಅವು ಕೇಂದ್ರಸರ್ಕಾರದ ತನಿಖೆಗೆ ಒಳಪಡಬೇಕು. ಈ ಗುಂಪಿನಲ್ಲಿ 300 ಪಬ್ಲಿಕ್ ಸ್ಕೂಲುಗಳು ಸೇರಿವೆ. ಶಾಲೆಗಳು ಧನಸಹಾಯ ಪಡೆಯಲಿ, ಪಡೆಯದೇ ಇರಲಿ ಅವೆಲ್ಲವೂ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದಿರಬೇಕು. ಮನ್ನಣೆ ಪಡೆಯದೆ ಶಾಲೆಗಳನ್ನು ನಡೆಸುವಂತಿಲ್ಲ. ಮಕ್ಕಳನ್ನು ಅಂಥ ಶಾಲೆಗೆ ಕಳುಹಿಸುವಂತಿಲ್ಲ.

**ಪ್ರಾಥಮಿಕ ಶಾಲೆಗಳು:** ಮಕ್ಕಳಿಗೆ ಅವರ 5ನೆಯ ವಯಸ್ಸಿನಿಂದ 11ರವರೆಗೆ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ದೊರೆಯುತ್ತದೆ. ಮೊದಲೆರಡು ಮೂರು ವರ್ಷಗಳು ಕ್ರಿಯಾತ್ಮಕ ಆಟಪಾಠಗಳ ಮೂಲಕ ಶಿಕ್ಷಣ ನಡೆಯುತ್ತದೆ. ಅನಂತರ ಗಣಿತ, ಓದು, ವಾಕ್ಯರಚನೆ, ಚರಿತ್ರೆ, ಭೂಗೋಳ, ವಿಜ್ಞಾನ, ಇತ್ಯಾದಿಗಳಲ್ಲಿ ಬೋಧನೆಯಾಗುತ್ತದೆ. ಇವುಗಳೊಂದಿಗೆ ಚಿತ್ರಕಲೆ, ಸಂಗೀತ, ವ್ಯಾಯಾಮ, ಕೈಕೆಲಸ ಇವುಗಳೂ ಬೋಧನ ವಿಷಯಗಳು. ಮಕ್ಕಳು ಸಾಧಾರಣವಾಗಿ ದಿನವೆಲ್ಲ ಒಬ್ಬನೇ ಉಪಾಧ್ಯಾಯನೊಂದಿಗೆ ಕಳೆಯುತ್ತಾರೆ. ತರಗತಿಗಳಲ್ಲಿ 30–40 ಬಾಲಕರಿರುತ್ತಾರೆ. ಎಲ್ಲ ಪ್ರಾಥಮಿಕ ಶಾಲೆಗಳಲ್ಲೂ ಬಾಲಕ ಬಾಲಕಿಯರು ಒಟ್ಟಿಗೆ ಇರುತ್ತಾರೆ.

ಇಂಗ್ಲೆಂಡಿನ ಶಿಕ್ಷಣ ವ್ಯವಸ್ಥೆಯ ಒಂದು ವಿಶೇಷ ಅಂಶವೆಂದರೆ ಪ್ರಾಥಮಿಕ ಶಿಕ್ಷಣದ ಮುಕ್ತಾಯದಲ್ಲಿ ನಡೆಸುವ ಪರೀಕ್ಷೆ. ವಿದ್ಯಾರ್ಥಿ ಯಾವ ಬಗೆಯ ಸೆಕೆಂಡರಿ ಶಾಲೆಗೆ ಹೋಗಬೇಕು ಎನ್ನುವುದನ್ನು ಹನ್ನೊಂದನೆಯ ವಯಸ್ಸು ತುಂಬಿದ ಮೇಲೆ (11+) ನಡೆಸುವ ಪರೀಕ್ಷೆಯಲ್ಲಿ ನಿರ್ಧರಿಸಲಾಗುತ್ತದೆ. ವಿದ್ಯಾರ್ಥಿಗಳ ಯೋಗ್ಯತೆಯನ್ನು ನಿರ್ಧರಿಸುವುದಕ್ಕಾಗಿ ಈಚೀಚೆಗೆ ಈ ಪರೀಕ್ಷೆಯೊಂದಿಗೆ ಇತರ ಪ್ರಯೋಗಗಳನ್ನೂ ಉಪಯೋಗಿಸಿಕೊಳ್ಳುತ್ತಿದ್ದಾರೆ.

**ಸೆಕೆಂಡರಿ ಶಾಲೆ:** 1944ರ ಕಾಯಿದೆಗೆ ಮೊದಲು ಸೆಕೆಂಡರಿ ಶಿಕ್ಷಣ ಕೆಲವರಿಗೆ ಮಾತ್ರವಾಗಿತ್ತು. ಆದರೆ ಈಗ ಇದು ಪ್ರತಿಯೊಬ್ಬ ವಿದ್ಯಾರ್ಥಿಗೂ ದೊರಕುವಂತಾಗಿದೆ. ಅದಕ್ಕಾಗಿ ಒಂದು ತ್ರಿಪಕ್ಷ ಪದ್ಧತಿಯನ್ನು ಸೆಕೆಂಡರಿ ಶಿಕ್ಷಣದಲ್ಲಿ ಜಾರಿಗೆ ತರಲಾಗಿದೆ. ಸೆಕೆಂಡರಿ ಶಾಲೆಗಳಲ್ಲಿ ಮೂರು ವಿಧ: 1 ಗ್ರಾಮರ್ ಶಾಲೆ, 2 ಸೆಕೆಂಡರಿ, ತಾಂತ್ರಿಕ ಶಾಲೆ ಮತ್ತು 3 ಮಾಡರ್ನ್ ಶಾಲೆ.

**ಗ್ರಾಮರ್ ಸ್ಕೂಲುಗಳು:** ಹಿಂದಿನಿಂದ ಪ್ರಚಲಿತವಾದ ಸೆಕೆಂಡರಿ ಶಿಕ್ಷಣ ಪದ್ಧತಿಯ ಶಾಲೆಗಳು. ಸೇ. 15–20ರಷ್ಟು ಮಕ್ಕಳಿಗೆ ಮಾತ್ರ ಪ್ರವೇಶ ನೀಡುವ ಈ ಶಾಲೆಗಳು ಬಹಳ ಉತ್ತಮ ದರ್ಜೆಯ ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಳ್ಳುತ್ತವೆ. ಪಾಂಡಿತ್ಯ ಶಿಕ್ಷಣಕ್ಕೆ ಪ್ರಾಧಾನ್ಯವಿರುವ ಈ ಶಾಲೆಗಳಲ್ಲಿ ವಿಷಯ, ಪಾಂಡಿತ್ಯ, ಪರಿಶ್ರಮಗಳಿಗೇ ಬೆಲೆ ಹೆಚ್ಚು. ಈ ಶಾಲೆಗಳಲ್ಲಿ ಉಪಾಧ್ಯಾಯ–ವಿದ್ಯಾರ್ಥಿ ಸರಾಸರಿ ಕಡಿಮೆ. 78%ರಷ್ಟು ಶಿಕ್ಷಕರು ಪದವೀಧರರು. ಬಹುಮಟ್ಟಿನ ಶಾಲೆಗಳು ಕೇವಲ ಬಾಲಕರಿಗೆ ಅಥವಾ ಬಾಲಕಿಯರಿಗೆ ಮೀಸಲಾಗಿವೆ. ಇವು ಮೊದಮೊದಲು ಸಾಮಾನ್ಯ ಶಿಕ್ಷಣ ಕೊಟ್ಟು ಅನಂತರ ವಿಶ್ವವಿದ್ಯಾನಿಲಯ ಪ್ರವೇಶಕ್ಕೆ ಅನುಗುಣವಾದ ಪಠ್ಯಕ್ರಮ ಅನುಸರಿಸುತ್ತವೆ. ನಾಲ್ಕು ವರ್ಷ ಅವಧಿಯಲ್ಲಿ ಮತಬೋಧನೆ, ಇಂಗ್ಲಿಷ್, ಚರಿತ್ರೆ, ಭೂಗೋಳ, ಫ್ರೆಂಚ್, ಗಣಿತ, ಸಾಮಾನ್ಯ ವಿಜ್ಞಾನ, ಕಲೆ, ಸಂಗೀತ, ಕೈಕೆಲಸ, ದೈಹಿಕ ಶಿಕ್ಷಣ ಇವುಗಳನ್ನು ಅಭ್ಯಸಿಸಬೇಕು. ಎರಡನೆಯ ವರ್ಷದಲ್ಲಿ ಲ್ಯಾಟಿನ್ ಭಾಷೆಯನ್ನೂ ಕೆಲವು ಕಡೆ ಸೇರಿಸುತ್ತಾರೆ.

ಗ್ರಾಮರ್ ಸ್ಕೂಲುಗಳಲ್ಲಿ ನಡೆಯುವ ಬೋಧನೆ ಜನರಲ್ ಸರ್ಟಿಫಿಕೇಟ್ ಪರೀಕ್ಷೆಗೆ (ಜಿ.ಸಿ.ಇ.) ಕೂರಲು ತಯಾರು ಮಾಡುತ್ತದೆ. ಈ ಪರೀಕ್ಷೆಯನ್ನು ವಿಶ್ವವಿದ್ಯಾನಿಲಯಗಳ ಸಹಾಯದಿಂದ ಒಂಬತ್ತು ಮಂಡಲಿಗಳಿಂದ ನಡೆಸಲಾಗುತ್ತದೆ. ಒಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ಎಷ್ಟು ವಿಷಯಗಳನ್ನಾದರೂ ಆರಿಸಿಕೊಳ್ಳಬಹುದು. ಪ್ರತಿ ವಿಷಯದಲ್ಲೂ ಎರಡು ಶ್ರೇಣಿಗಳಿವೆ–ಸಾಮಾನ್ಯ ಶ್ರೇಣಿ ಮತ್ತು ಉನ್ನತ ಶ್ರೇಣಿ. ಸಾಮಾನ್ಯ ಶ್ರೇಣಿಯ ಪರೀಕ್ಷೆಯನ್ನು 16ನೆಯ ವಯಸ್ಸಿನಲ್ಲೂ ಉನ್ನತ ಶ್ರೇಣಿಯನ್ನು 18ನೆಯ ವಯಸ್ಸಿನಲ್ಲೂ ತೆಗೆದುಕೊಳ್ಳಬಹುದು. ಸ್ಕಾಲರ್‌ಷಿಪ್ ಶ್ರೇಣಿ ಎನ್ನುವುದು ಉನ್ನತ ಶ್ರೇಣಿಗಿಂತಲೂ ಕಠಿಣವೂ ಹೆಚ್ಚಿನದೂ ಆಗಿದೆ. ಜಿ.ಸಿ.ಇ. ಪರೀಕ್ಷೆಯ ಮತ್ತೊಂದು ವಿಶೇಷವೆಂದರೆ, ಶಾಲೆಯಲ್ಲಿ ಓದದೆ ಇರುವವರೂ 16ಕ್ಕಿಂತ ಕಡಿಮೆ ವಯಸ್ಸಿನವರೂ (ಅವರ ಉಪಾಧ್ಯಾಯರ ಅನುಮತಿ ಪಡೆದು) ಇದಕ್ಕೆ ಕೂಡಬಹುದು.

ಗ್ರಾಮರ್ ಸ್ಕೂಲಿನಲ್ಲಿ ಸಾಧಾರಣವಾಗಿ 500 ವಿದ್ಯಾರ್ಥಿಗಳಿರುತ್ತಾರೆ. ಪ್ರತಿವರ್ಷವೂ 90ರಿಂದ 100ರವರೆಗೆ ಹೊಸ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಇದಕ್ಕಿಂತ ಕಡಿಮೆಯ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚಿನ ವಿದ್ಯಾರ್ಥಿಸಂಖ್ಯೆ ಕಾಣಬಹುದು. ಈ ವಿದ್ಯಾರ್ಥಿಗಳನ್ನು ಅವರವರ ಬುದ್ಧಿಗೆ ತಕ್ಕಂತೆ ವಿಂಗಡಿಸಲಾಗುತ್ತದೆ. ಹೆಚ್ಚಿನ ಸಂಖ್ಯೆಯ ಬಾಲಕರಿಗೆ 16ನೆಯ ವಯಸ್ಸಿನ ಜಿ.ಸಿ.ಇ. ಪರೀಕ್ಷೆಯ ಸಾಮಾನ್ಯ ಮಟ್ಟಕ್ಕೆ ಅವರ ಸೆಕೆಂಡರಿ ಶಿಕ್ಷಣ ಪರಿಸಮಾಪ್ತಿಯಾಗುತ್ತದೆ. ಆದರೆ ಈಚೀಚೆಗೆ 18ರ ತನಕ ಮುಂದುವರಿಯುವವರ ಸಂಖ್ಯೆ ಶೇ.40 ರಷ್ಟಾಗಿದೆ.

ಕಡೆಯ (17, 18ನೆಯ ವಯಸ್ಸಿನ) ಎರಡು ವರ್ಷಗಳ ಪಾಠಕ್ರಮವನ್ನು 6ನೆಯ ಫಾರಂ ಎಂದು ಕರೆಯಲಾಗಿದೆ. (ಕೆಲವು ವೇಳೆ ಇದು 3 ವರ್ಷ ಆಗುವುದುಂಟು). 6ನೆಯ ಫಾರಂನಲ್ಲಿ ಓದಿದ ಅನಂತರ ಜಿ.ಸಿ.ಇ. ಉನ್ನತ ಶ್ರೇಣಿಯ ಪರೀಕ್ಷೆಗೆ ಕೂಡಲು ಅವಕಾಶ ಸಿಗುತ್ತದೆ.

ಗ್ರಾಮರ್ ಸ್ಕೂಲುಗಳಲ್ಲಿ ಮಾನವಿಕ (ಆರ್ಟ್ಸ್) ಮತ್ತು ವಿಜ್ಞಾನ ಎಂಬ ಎರಡು ಮುಖ್ಯ ಭಾಗಗಳಲ್ಲಿ ವಿಶೇಷ ಪರಿಶ್ರಮ ಪಡೆಯಬಹುದು. ಶೇ.ಸು.60 ರಷ್ಟು ಮಂದಿ ವಿಜ್ಞಾನ ವಿಷಯಗಳಲ್ಲಿ ನಿರತರಾಗಿದ್ದಾರೆ.

ಸೆಕೆಂಡರಿ, ತಾಂತ್ರಿಕ ಶಾಲೆ: ಕೇವಲ ಶೇ.5ರಷ್ಟು ಮಕ್ಕಳಿಗೆ ಮಾತ್ರ ಈ ಶಿಕ್ಷಣ ನೀಡಲಾಗುತ್ತಿದೆ. ಗ್ರಾಮರ್ ಶಾಲೆಗಳಂತೆ ಈ ಸ್ಕೂಲುಗಳಿಗೆ ಪ್ರವೇಶ ಪಡೆಯುವುದಕ್ಕೂ ಬಹಳ ಪೈಪೋಟಿಯಿದೆ. ಇವುಗಳ ಮುಖ್ಯ ಉದ್ದೇಶ ಉದ್ಯೋಗ ಮತ್ತು ವಾಣಿಜ್ಯ ವಿಷಯಗಳ ಬೋಧನೆ. ಮೊದಲ ಎರಡು ಮೂರು ವರ್ಷಕಾಲ ಗ್ರಾಮರ್ ಶಾಲೆಗಳಂತೆಯೇ ಸಾಮಾನ್ಯ ಶಿಕ್ಷಣ ನೀಡುವ ಈ ಶಾಲೆಗಳು ಕಡೆಯ 3–4 ವರ್ಷಗಳಲ್ಲಿ ತಾಂತ್ರಿಕ, ಔದ್ಯೋಗಿಕ ಮತ್ತಿತರ ಬೋಧನೆಯ ವಿಷಯಗಳನ್ನು ಕಲಿಸುತ್ತವೆ. ಈ ಶಾಲೆಗಳ ಮಕ್ಕಳು ಜಿ.ಸಿ.ಇ. ಸಾಮಾನ್ಯ ಮಟ್ಟದ ಪರೀಕ್ಷೆ ತೆಗೆದುಕೊಳ್ಳುತ್ತಾರೆ. ಕೆಲವು ಶಾಲೆಗಳಲ್ಲಿ 6ನೆಯ ಫಾರಂನಲ್ಲಿ ಗಣಿತ ವಿಜ್ಞಾನಗಳಲ್ಲಿ ಪರಿಶ್ರಮ ಪಡೆದು ಜಿ.ಸಿ.ಇ. ಉನ್ನತಮಟ್ಟದ ಪರೀಕ್ಷೆಗೆ ಕೂರಲು ಅವಕಾಶವಿದೆ. ಈಗ ಇಂಗ್ಲೆಂಡಿನಲ್ಲಿ ಇಂಥ ತಾಂತ್ರಿಕ ಶಾಲೆಗಳು ಸುಮಾರು 200 ಇವೆ.

ಸೆಕೆಂಡರಿ ಮಾಡರ್ನ್ ಶಾಲೆಗಳು: ಪ್ರಾಥಮಿಕ ಶಾಲೆಯಿಂದ ಹೊರಬರುವ ಬಹುಜನ ವಿದ್ಯಾರ್ಥಿಗಳಿಗೆ (ಸು. ಶೇ.75ರಷ್ಟು) ಅವರ 15ನೆಯ ವಯಸ್ಸಿನ ತನಕ ಸಾಮಾನ್ಯಶಿಕ್ಷಣ ಮತ್ತು ಯಾವುದಾದರೂ ಔದ್ಯೋಗಿಕ ತರಬೇತಿ ಕೊಡಲು ಈ ಶಾಲೆಗಳಿವೆ. ಸಾಮಾನ್ಯ ಶಿಕ್ಷಣದಲ್ಲಿ ಇಂಗ್ಲಿಷ್, ಚರಿತ್ರೆ, ಗಣಿತ, ಭೂಗೋಳ, ಸಂಗೀತ, ಕಲೆ ಇವುಗಳನ್ನು ಕಲಿಸಲಾಗುತ್ತದೆ. 15ನೆಯ ವಯಸ್ಸಿನಿಂದ ಮುಂದಕ್ಕೆ ಕೆಲವು ವೇಳೆ ವಿದ್ಯೆ ಕಲಿಸಿ ಜಿ.ಸಿ.ಇ. ಸಾಮಾನ್ಯ ಮಟ್ಟದ ಪರೀಕ್ಷೆಗೆ ಕಟ್ಟಲು ಅವಕಾಶ ಕೊಡುತ್ತಾರೆ.

ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ನಿಗದಿಯಾಗಿಲ್ಲ. ಎಷ್ಟೇ ಆದರೂ ಈ ಶಾಲೆಗಳಿಗೆ ಪ್ರತಿಷ್ಠೆ ಕಡಿಮೆ. ಮಕ್ಕಳನ್ನು ಆಕರ್ಷಿಸುವ ಶಕ್ತಿಯೂ ಕಡಿಮೆ. ಹೀಗೆ ವಿಶಿಷ್ಟವಾಗಿರುವ ಗ್ರಾಮರ್, ತಾಂತ್ರಿಕ ಮತ್ತು ಮಾಡರ್ನ್ ಶಾಲೆಗಳು ವಿದ್ಯಾರ್ಥಿಗಳಲ್ಲಿ ಕೀಳು ಮೇಲು ಭಾವನೆಗಳ ಬೆಳವಣಿಗೆಗೆ ಎಡೆಕೊಟ್ಟಿವೆ. ಇದಕ್ಕಾಗಿ ಈ ಮೂರು ವರ್ಗದ ಶಾಲೆಗಳ

ಉದ್ದೇಶಗಳನ್ನೂ ಒಟ್ಟಿಗೆ ಪೂರೈಸುವ ವ್ಯಾಪಕ (ಕಾಂಪ್ರಿಹೆನ್ಸಿವ್) ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಕೆಲವು ಕಡೆ ಎರಡು ಬಗೆಯ (ಗ್ರಾಮರ್ ಮತ್ತು ಮಾರ್ಡನ್) ಬೋಧನ ಹೊಂದಿರುವ ಶಾಲೆಗಳೂ (ಬೈಲ್ಯಾಟರಲ್ ಸ್ಕೂಲ್ಸ್) ಇವೆ.

ಶಾಲೆಗಳಲ್ಲಿ ಅನೇಕ ಬಗೆಯ ಪಠ್ಯೇತರ ಚಟುವಟಿಕೆಗಳಿಗೆ ಅವಕಾಶವಿದೆ. ಬಾಲಕರು ತಮ್ಮ ಆಸಕ್ತಿಗನುಸಾರವಾಗಿ ಕ್ಲಬ್ಬುಗಳನ್ನು ರಚಿಸಿಕೊಳ್ಳುತ್ತಾರೆ. ಆಟ, ನಾಟಕ ಮತ್ತು ಇತರ ಆಸಕ್ತಿಗಳಿಗಾಗಿ ಗೃಹ (ಹೌಸ್) ಪದ್ಧತಿ ಅನುಸರಿಸುತ್ತಾರೆ. ಇಂಥ ಚಟುವಟಿಕೆಗಳಲ್ಲಿ ಶಿಸ್ತು ಸಾಧಿಸುವ ಉದ್ದೇಶದಿಂದ ಮುಂದುವರಿದ ವಿದ್ಯಾರ್ಥಿಗಳಲ್ಲಿ ಕೆಲವರನ್ನು ಗೃಹನಾಯಕರನ್ನಾಗಿ ಅಥವಾ ಮಾನಿಟರುಗಳನ್ನಾಗಿ ನೇಮಿಸುತ್ತಾರೆ.

ಶಾಲೆಗಳಲ್ಲಿ ವೃತ್ತಿಮಾರ್ಗದರ್ಶನ (ವೊಕೇಷನಲ್ ಗೈಡೆನ್ಸ್) ನೀಡಲು ಅನೇಕ ಸಂಸ್ಥೆಗಳು ಸಹಾಯಮಾಡುತ್ತವೆ. ಎಷ್ಟೋ ಶಾಲೆಗಳಲ್ಲಿ ಇದಕ್ಕಾಗಿಯೇ ಪರಿಶ್ರಮ ಪಡೆದ ಉಪಾಧ್ಯಾಯರೂ ಇರುವುದುಂಟು.

ವಿಶೇಷ ಶಾಲೆಗಳು : ಮೇಲೆ ಹೇಳಿದ ಸಾಮಾನ್ಯ ಶಾಲೆಗಳೇ ಅಲ್ಲದೆ, ಅಂಧರು, ಅಂಗವಿಕಲರು, ಮಂದಬುದ್ಧಿಯವರು, ಉಗ್ಗರು ಇತ್ಯಾದಿ ದೋಷಪೂರಿತ ವಿದ್ಯಾರ್ಥಿಗಳಿಗೆ ವಿಶೇಷ ಶಾಲೆಗಳಿವೆ.

**ಉಚ್ಚ ಶಿಕ್ಷಣ:** ಇಂಗ್ಲೆಂಡಿನಲ್ಲಿ ಉಚ್ಚಶಿಕ್ಷಣ ಮೂರು ಬಗೆಯ ಸಂಸ್ಥೆಗಳಿಂದ ನಡೆಯುತ್ತಿದೆ: (i) ವಿಶ್ವವಿದ್ಯಾನಿಲಯಗಳು ಮತ್ತು ಪದವಿ ಕೊಡುವ ವಿಶ್ವವಿದ್ಯಾನಿಲಯ ಕಾಲೇಜುಗಳು ಮತ್ತು ಇಲಾಖೆಗಳು, (ii) ಉನ್ನತ ತಾಂತ್ರಿಕ ಕಾಲೇಜುಗಳು ಮತ್ತು (iii) ಶಿಕ್ಷಕ ತರಬೇತಿ ಕಾಲೇಜುಗಳು.

**i ವಿಶ್ವವಿದ್ಯಾಲಯಗಳು:** ವಿಶ್ವವಿದ್ಯಾಲಯಗಳು ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಡದೆ ಸ್ವಯಂ ಆಡಳಿತ ನಡೆಸುತ್ತವೆ. 1944ರ ಕಾಯಿದೆ ಕೂಡ ವಿಶ್ವವಿದ್ಯಾಲಯಗಳ ಸ್ವಾತಂತ್ರ್ಯದ ಗೋಜಿಗೆ ಹೋಗಲಿಲ್ಲ. ಆದರೂ ಆಗಿಂದಾಗ್ಗೆ ಕೇಂದ್ರ ಸರ್ಕಾರ ಕೆಲವು ಆಯೋಗಗಳನ್ನು ರಚಿಸಿ ಅವುಗಳ ಅಭಿವೃದ್ಧಿಗೆ ಕಾರಣವಾಗಿದೆ. ಈ ಸಂಸ್ಥೆಗಳೊಂದಿಗೆ ನಿಕಟಸಂಬಂಧ ಹೊಂದಿರುವ ವಿಶ್ವವಿದ್ಯಾಲಯ ಅನುದಾನ ಸಮಿತಿ ಸರ್ಕಾರದಿಂದ ನೇಮಕವಾದದ್ದು. ಇದೇ ವಿಶ್ವವಿದ್ಯಾಲಯಗಳಿಗೆ ಧನಸಹಾಯ ನೀಡುವ ಹಕ್ಕು ಹೊಂದಿದೆ. ಆದರೂ ವಿಶ್ವವಿದ್ಯಾಲಯಗಳ ಆಂತರಿಕ ಆಡಳಿತ, ಪಠ್ಯ, ಬೋಧನೆ, ಇತ್ಯಾದಿಗಳಲ್ಲಿ ಬಹುಮಟ್ಟಿಗೆ ತಲೆಹಾಕುವುದಿಲ್ಲ. ವಿಶ್ವವಿದ್ಯಾಲಯಗಳ ಆಡಳಿತ ವ್ಯವಸ್ಥೆಗಳಲ್ಲಿ ಏಕರೂಪತೆ ಇಲ್ಲ. ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಯಗಳ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಆ ಸಂಸ್ಥೆಗಳಲ್ಲಿನ ಶಿಕ್ಷಕರ ಹಾಗೂ ಅಧಿಕಾರಿಗಳ ವಶದಲ್ಲಿದೆ. ಹೊರಗಿನ ಯಾವ ಸಂಸ್ಥೆಯಾಗಲೀ ಸರ್ಕಾರವಾಗಲೀ, ಸ್ಥಳೀಯ ಶಿಕ್ಷಣಾಧಿಕಾರ ಸಂಸ್ಥೆಯಾಗಲೀ ಏನೊಂದು ಅಧಿಕಾರವನ್ನೂ ಪಡೆದಿಲ್ಲ. ಹೊಸದಾಗಿ ಸ್ಥಾಪಿತವಾದ ವಿಶ್ವವಿದ್ಯಾಲಯಗಳಲ್ಲಿ ಕೋರ್ಟು, ಕೌನ್ಸಿಲ್ ಮತ್ತು ಸೆನೆಟ್ ಎಂಬ ಮೂರು ಬಗೆಯ ಆಡಳಿತ ವ್ಯವಸ್ಥೆಯಿದೆ. ಬಹುಮಟ್ಟಿನ ವಿಶ್ವವಿದ್ಯಾಲಯಗಳಲ್ಲಿ ವೈಸ್‌ಚಾನ್ಸೆಲರ್ (ಕುಲಪತಿ) ಅವರೇ ಅತ್ಯುಚ್ಚ ಶ್ರೇಷ್ಠತಮ ಅಧಿಕಾರಿಗಳು. ಅವರಿಗೆ ಸಹಾಯಕರಾಗಿ ರಿಜಿಸ್ಟ್ರಾರ್ ಅಥವಾ ಕಾರ್ಯದರ್ಶಿ, ಬರ್ಸರ್ (ಕೋಶಾಧಿಕಾರಿ) ಇತ್ಯಾದಿ ಅಧಿಕಾರಿಗಳು ಇರುತ್ತಾರೆ.

ಹಣಕಾಸು ವ್ಯವಸ್ಥೆಯ ಬಗ್ಗೆಯೂ ಏಕರೂಪತೆ ಕಾಣುವುದು ಕಷ್ಟ. 1960–61 ಅಂಕಿ ಅಂಶಗಳ ಪ್ರಕಾರ ವಿಶ್ವವಿದ್ಯಾಲಯಗಳಿಗೆ ಕೇಂದ್ರ ಸರ್ಕಾರದಿಂದ ಶೇ.72.2ರಷ್ಟೂ ಶುಲ್ಕಗಳಿಂದ ಶೇ.9.2 ರಷ್ಟೂ ದಾನದತ್ತಿಗಳಿಂದ ಶೇ.2.9ರಷ್ಟೂ ಸ್ಥಳೀಯ ಅಧಿಕಾರ ಮಂಡಲಿಗಳಿಂದ ಶೇ.2.3ರಷ್ಟೂ ಕೊಡುಗೆ ಇತ್ಯಾದಿಗಳಿಂದ ಶೇ.0.7 ರಷ್ಟೂ ಸಂಶೋಧನೆಗಾಗಿ ಶೇ.9.1ರಷ್ಟೂ ಮತ್ತು ಇತರ ಮೂಲಗಳಿಂದ ಶೇ. 3.6ರಷ್ಟು ಸಂದಾಯವಾಯಿತು. ಅವುಗಳ ಖರ್ಚಿನ ಬಾಬಿನಲ್ಲಿ ಆಡಳಿತ ವೆಚ್ಚಕ್ಕೆ ಶೇ.6.7ರಷ್ಟನ್ನೂ ಉಪಾಧ್ಯಾಯರು ಮತ್ತು ಇತರ ಅಧಿಕಾರಿಗಳಿಗೆ ಸಂಬಳ ಸಾರಿಗೆಗಳಿಗೆ ಶೇ.44.1ರಷ್ಟನ್ನೂ ತಾಂತ್ರಿಕ ಕೆಲಸಗಾರರಿಗೆ ಶೇ.11.2ರಷ್ಟನ್ನೂ, ಗ್ರಂಥಾಲಯ ಮತ್ತು ಇತರ ಇಲಾಖೆಗಳ ವೆಚ್ಚಕ್ಕೆ ಶೇ.14.1ರಷ್ಟನ್ನೂ ಕಟ್ಟಡಗಳ ರಿಪೇರಿ ಮತ್ತು ಮೇಲ್ವಿಚಾರಣೆಗೆ ಶೇ. 3.3ರಷ್ಟನ್ನೂ ವಿನಿಯೋಗಿಸಲಾಯಿತು. ಕೇಂದ್ರದಿಂದ ಐದು ವರ್ಷಕ್ಕೊಮ್ಮೆ ಪಡೆಯುವ ಧನಸಹಾಯವನ್ನು ಪ್ರತಿಯೊಂದು ವಿಶ್ವವಿದ್ಯಾಲಯವೂ ತನಗೆ ತೋರಿದ ರೀತಿಯಲ್ಲಿ ವ್ಯಯಮಾಡುವ ಹಕ್ಕು ಪಡೆದಿದೆ. ಈ ಸಾಮಾನ್ಯ ಖರ್ಚುಗಳ ಜತೆಗೆ, ಹೊಸ ಕಟ್ಟಡಗಳಿಗಾಗಿ ಶೇ.90 ಭಾಗ ವಿಶೇಷ ಧನಸಹಾಯದ ಏರ್ಪಾಡೂ ಇದೆ.

ಸಾಧಾರಣವಾಗಿ ವಿಶ್ವವಿದ್ಯಾಲಯಗಳು ವಿದ್ಯಾಶಾಖೆಗಳನ್ನು (ಫ್ಯಾಕಲ್ಟಿ) ಒಳಗೊಂಡಿರುತ್ತವೆ. ಮಾನವಿಕಶಾಸ್ತ್ರ, ಸಮಾಜಶಾಸ್ತ್ರಗಳು, ವಿಜ್ಞಾನ, ತಂತ್ರಜ್ಞಾನ (ಟೆಕ್ನಾಲಜಿ), ವೈದ್ಯಶಾಸ್ತ್ರ, ದಂತಶಾಸ್ತ್ರ, ವ್ಯವಸಾಯ ಮತ್ತು ಅರಣ್ಯ, ಪಶು ವೈದ್ಯಶಾಸ್ತ್ರ ಇವು ಕೆಲವು ಮುಖ್ಯ ಶಾಖೆಗಳು. ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಮೊದಲ ಮೂರು ವಿಭಾಗಗಳನ್ನು ಬೋಧಿಸುತ್ತಾರೆ. 16 ಸಂಸ್ಥೆಗಳಲ್ಲಿ ವೈದ್ಯಶಾಸ್ತ್ರಬೋಧನೆಗೆ ಅವಕಾಶವಿದೆ; 12ರಲ್ಲಿ ದಂಡಶಾಸ್ತ್ರವನ್ನು ಬೋಧಿಸಲಾಗುತ್ತದೆ. ಹೊಸ ವಿಶ್ವವಿದ್ಯಾಲಯಗಳು ಈ ಶಾಖೆಗಳ ಬದಲು ಶಾಲೆಗಳನ್ನು ತೆರೆಯುತ್ತಿವೆ. ಸಮಾಜಶಾಸ್ತ್ರ ಶಾಲೆ, ಯುರೋಪಿಯ ವಿಷಯ ಶಾಲೆ, ಶಿಕ್ಷಣಶಾಲೆ ಇತ್ಯಾದಿಗಳು ಸಾಮಾನ್ಯವಾಗುತ್ತಿವೆ.

ಪ್ರತಿಯೊಂದು ವಿಶ್ವವಿದ್ಯಾಲಯಕ್ಕೂ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದರಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ಕೆಲವು ತಮ್ಮವೇ ಆದ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತವೆ. ಆದರೆ ಜನರಲ್ ಸರ್ಟಿಫಿಕೇಟ್ ಉನ್ನತ ಪರೀಕ್ಷೆಯ (ಜಿ.ಸಿ.ಇ. ಅಡ್ವಾನ್ಸ್ಡ್) ಫಲಿತಾಂಶವನ್ನವಲಂಬಿಸಿ ಪ್ರವೇಶ ನಿರ್ಧರಿಸುವುದು ಸಾಮಾನ್ಯ ಪದ್ಧತಿ. ಅಭ್ಯರ್ಥಿ ಕಡೆಯ ಪಕ್ಷ ಐದು ಅಥವಾ ಆರು ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಅಥವಾ ವಿದ್ವತ್‌ಶ್ರೇಣಿಯಲ್ಲಿ (ಸ್ಕಾಲರ್‌ಷಿಪ್) ಉತ್ತೀರ್ಣನಾಗಿರಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಅವಕಾಶ ಕಡಿಮೆಯಿರುವುದರಿಂದ ಪ್ರವೇಶಕ್ಕೆ ತೀವ್ರ ಸ್ಪರ್ಧೆಯಿದೆ. ಶಾಲಾ ಉಪಾಧ್ಯಾಯರು ವಿದ್ಯಾರ್ಥಿಗಳ ಬಗ್ಗೆ ಬರೆಯುವ ರಹಸ್ಯ ವರದಿಗಳಿಗೂ ವಿದ್ಯಾರ್ಥಿಗಳು ಭೇಟಿಯ ಸಮಯದಲ್ಲಿ ಪ್ರಕಟಪಡಿಸುವ ಚುರುಕು, ಪರಿಶ್ರಮ, ಪ್ರತಿಭೆಗಳಿಗೂ ಹೆಚ್ಚಿನ ಪ್ರಾಮುಖ್ಯವಿದೆ.

ವಿಶ್ವವಿದ್ಯಾಲಯಗಳು ನೀಡುವ ಪದವಿಗಳು ಎರಡು ಬಗೆ. ಮೊದಲನೆಯ ಬಗೆಯವು ಬಿ.ಎ. ಮತ್ತು ಬಿ.ಎಸ್‌ಸಿ. ಈ ಪದವಿಗಳ ವ್ಯಾಸಂಗ ಕಾಲ ತಲಾ ಮೂರು ವರ್ಷ. ವೈದ್ಯ, ಶಿಲ್ಪಶಾಸ್ತ್ರ ಇತ್ಯಾದಿಗಳಲ್ಲಿ 5–6 ವರ್ಷಗಳ ಅನಂತರವೇ ಮೊದಲ ಪದವಿ ಲಭಿಸುತ್ತದೆ. ಪ್ರಥಮ ಪದವಿಯಲ್ಲಿಯೂ ಪಾಸ್ ಮತ್ತು ಆನರ್ಸ್ ಎಂಬ ಎರಡು ವರ್ಗಗಳಿವೆ. ಸ್ನಾತಕೋತ್ತರ ಪದವಿಗಳಲ್ಲಿ ಎಂ.ಎ., ಎಂ.ಎಸ್‌ಸಿ., ಪಿಎಚ್.ಡಿ. ಮೊದಲಾದ ಪದವಿಗಳಿವೆ. ಎರಡು ವರ್ಷ ವ್ಯಾಸಂಗಮಾಡಿ ಸಂಶೋಧನ ಪ್ರಬಂಧ ಬರೆದರೆ ಸ್ನಾತಕೋತ್ತರ ಎಂ.ಎ. ಅಥವಾ ಎಂ.ಎಸ್‌ಸಿ. ಪದವಿ ದೊರಕುತ್ತದೆ. ಒಂದು ವರ್ಷ ಓದಿದ ಅನಂತರ ಸ್ನಾತಕೋತ್ತರ ಡಿಪ್ಲೊಮ ಪಡೆಯಲವಕಾಶಗಳೂ ಇವೆ.

ಪ್ರತಿ ವರ್ಷದ ಕಡೆಯಲ್ಲೂ ಪರೀಕ್ಷೆಗಳಿರುತ್ತವೆ. ಈ ಪರೀಕ್ಷೆಗಳನ್ನು ಆಯಾ ವಿಶ್ವವಿದ್ಯಾಲಯಗಳೇ ನಡೆಸುತ್ತವೆ. ಬಾಹ್ಯ (ಎಕ್ಸ್‌ಟರ್ನಲ್) ಪರೀಕ್ಷಕರನ್ನು ಉಪಯೋಗಿಸಿಕೊಳ್ಳುವ ಪದ್ಧತಿಯೂ ಇದೆ. ಆಕ್ಸ್‌ಫರ್ಡ್, ಕೇಂಬ್ರಿಜ್‌ಗಳಲ್ಲಿ ಮಾತ್ರ ಆಯಾ ಶಿಕ್ಷಕರೇ ಪರೀಕ್ಷಕರು.

ವಿಶ್ವವಿದ್ಯಾಲಯಗಳಲ್ಲಿ ಬೋಧನೆಯಷ್ಟೇ ಸಂಶೋಧನೆಗೂ ಪ್ರಾಮುಖ್ಯವಿದೆ. ಸುಮಾರು ಅರ್ಧದಷ್ಟು ವೇಳೆಯನ್ನು ಶಿಕ್ಷಕರು ಸಂಶೋಧನೆಗಾಗಿ ವಿನಿಯೋಗಿಸುತ್ತಾರೆ. ಸಂಶೋಧನೆಗಾಗಿ ವಿಶ್ವವಿದ್ಯಾಲಯ ಅನುದಾನ ಸಮಿತಿಗಳಿಗೆ ಹೇರಳವಾಗಿ ಅನುದಾನ ನೀಡುತ್ತದೆ.

ಬೋಧನೆಯಲ್ಲಿ ಉಪನ್ಯಾಸಕ್ರಮಕ್ಕೆ ಬೆಲೆಯಿದ್ದರೂ ಒಬ್ಬರು, ಇಬ್ಬರು ಅಥವಾ ಮೂರು ವಿದ್ಯಾರ್ಥಿಗಳಿಗೆ ಒಬ್ಬೊಬ್ಬ ಅಧ್ಯಾಪಕ ಮೇಲ್ವಿಚಾರಕರನ್ನು ನೇಮಿಸುವ ಟ್ಯುಟೋರಿಯಲ್ ಪದ್ಧತಿಗೆ ಬಹಳ ಪುರಸ್ಕಾರವಿದೆ.

ವಿಶ್ವವಿದ್ಯಾಲಯಗಳ ಶಿಕ್ಷಕರಲ್ಲಿ ಅನೇಕ ವರ್ಗಗಳಿವೆ: ಪ್ರೊಫೆಸರ್, ಅಸೋಸಿಯೇಟ್ಸ್, ಪ್ರೊಫೆಸರ್ ಅಸಿಸ್ಟೆಂಟ್ ಪ್ರೊಫೆಸರ್, ಸಾಧಾರಣವಾಗಿ ಶಿಕ್ಷಕರನ್ನು ಒಮ್ಮೆ ಆರಿಸಿಕೊಂಡ ಮೇಲೆ ಖಾಯಂ ಆಗಿ ಅವರನ್ನು ಇಟ್ಟುಕೊಳ್ಳುತ್ತಾರೆ.

ವಿದ್ಯಾರ್ಥಿಗಳು ಸಾಧಾರಣವಾಗಿ ಒಂದು ಟರ್ಮಿಗೆ 60–75 ಪೌಂಡುಗಳಷ್ಟು ಶುಲ್ಕ ಕೊಡಬೇಕು. ಆದರೆ ಸುಮಾರು ಶೇ. 80ರಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಏರ್ಪಾಡಿದೆ. ಸ್ಥಳೀಯ ಸಂಸ್ಥೆಗಳೂ ದತ್ತಿ ಸಂಸ್ಥೆಗಳೂ ಸರ್ಕಾರವೂ ಉಚ್ಚ ಶಿಕ್ಷಣಕ್ಕೆ ಉದಾರವಾಗಿ ಸಹಾಯ ಮಾಡುತ್ತಿವೆ.

**ii ಉನ್ನತ ತಾಂತ್ರಿಕ ಕಾಲೇಜುಗಳು:** ಇಂಗ್ಲೆಂಡಿನಲ್ಲಿ ಉನ್ನತಮಟ್ಟದ ತಾಂತ್ರಿಕ ಕಾಲೇಜುಗಳೂ ಪ್ರಾದೇಶಿಕ ಕಾಲೇಜುಗಳೂ ರಾಷ್ಟ್ರೀಯ ಕಾಲೇಜುಗಳೂ ಇತರ ಅನೇಕ ಪದವಿಮಟ್ಟದ ಕಾಲೇಜುಗಳೂ ಇದ್ದುವು. ಡಿಪ್ಲೊಮ ಪಡೆದ ವಿದ್ಯಾರ್ಥಿಗಳಿಗೂ ಜಿ.ಸಿ.ಇ. ಪರೀಕ್ಷೆಯ ಐದು ವಿಷಯಗಳಲ್ಲಿ ವಿಶೇಷ ಮಟ್ಟದಲ್ಲಿ ತೇರ್ಗಡೆ ಹೊಂದಿದವರಿಗೂ ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ದೊರಕುತ್ತದೆ. ಸಾಧಾರಣವಾಗಿ ನಾಲ್ಕು ವರ್ಷ ಕಾಲದ ವಿದ್ಯಾಭ್ಯಾಸದ ಅನಂತರ ಪದವಿ ಕೊಡಲಾಗುತ್ತದೆ. ಮುಂದೆ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೂ ಅವಕಾಶವಿದೆ.

ಈ ಕಾಲೇಜುಗಳಲ್ಲಿ ಶುಲ್ಕ ಕಡಿಮೆ. ವಿಶ್ವವಿದ್ಯಾಲಯಗಳಂತೆಯೇ ಇಲ್ಲಿಯೂ ವಿದ್ಯಾರ್ಥಿವೇತನಗಳಿದ್ದು, ಬುದ್ಧಿವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹವಿದೆ. ಸರ್ಕಾರವೂ ಸ್ಥಳೀಯ ಶಿಕ್ಷಣಾಧಿಕಾರ ಮಂಡಲಿಯೂ ಈ ಕಾಲೇಜುಗಳಿಗೆ ಹೆಚ್ಚಿನ ಧನಸಹಾಯ ಮಾಡುತ್ತವೆ.

ಈ ತಾಂತ್ರಿಕ ಕಾಲೇಜುಗಳಲ್ಲಿ ಪೂರ್ಣಕಾಲಿಕ ಮತ್ತು ಒಪ್ಪೊತ್ತಿನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶವಿದೆ.

**iii. ಶಿಕ್ಷಕರ ತರಬೇತಿ ಕಾಲೇಜುಗಳು:** ಶಿಕ್ಷಕರ ತರಬೇತಿಗೆ 24 ವಿಶ್ವವಿದ್ಯಾಲಯಗಳ ಶಿಕ್ಷಣ ಇಲಾಖೆಗಳಿದ್ದು, 162 ಕಾಲೇಜುಗಳಿವೆ. ಪದವೀಧರರಲ್ಲದ ವಿದ್ಯಾರ್ಥಿಗಳಿಗೆ ಮೂರು ವರ್ಷಕಾಲ ಶಿಕ್ಷಕ ತರಬೇತಿ ಕೊಡುವವು. ಗೃಹವಿಜ್ಞಾನವನ್ನು ಸ್ತ್ರೀಯರಿಗೆ ಮಾತ್ರ ಬೋಧಿಸುವವು. ತಾಂತ್ರಿಕ ಮತ್ತು ಔದ್ಯೋಗಿಕ ಶಾಲೆಗಳಲ್ಲಿ ಶಿಕ್ಷಕರಾಗಲು ಬಯಸುವವರಿಗೆ ಒಂದು ವರ್ಷಕಾಲ ತರಬೇತಿ ಕೊಡುವವು. ಕಲೆಯಲ್ಲಿ ನಿಷ್ಣಾತರಾದವರಿಗೆ ಶಿಕ್ಷಕರಾಗಲು ಒಂದು ವರ್ಷಕಾಲ ತರಬೇತಿ ನೀಡುವವು–ಎಂದು ಇವುಗಳಲ್ಲಿ ಬೇರೆ ಬೇರೆ ವಿಧಗಳನ್ನು ಕಾಣಬಹುದು.

ಮೂರು ವರ್ಷ ತರಬೇತಿ ಪಡೆದ ಅಭ್ಯರ್ಥಿ ಪ್ರಾಥಮಿಕ ಅಥವಾ ಸೆಕಂಡರಿ ಶಾಲೆಗಳಲ್ಲಿ ನೇಮಕವಾನಾಗಬಹುದು. ಕೆಲವು ಪಬ್ಲಿಕ್ ಶಾಲೆಗಳು ಪದವಿ ಪಡೆದವರನ್ನು ಮಾತ್ರ ಆರಿಸಿಕೊಳ್ಳುತ್ತವೆ. ಪದವೀಧರರು ಈಚೆಗೆ ಒಂದು ವರ್ಷಕಾಲದ ವಿಶ್ವವಿದ್ಯಾನಿಲಯ ಶಿಕ್ಷಣ ವಿಭಾಗದಲ್ಲಿ ತರಬೇತಿ ಪಡೆದು ಶಾಲಾಶಿಕ್ಷಕರಾಗಿ ಹೋಗುತ್ತಿದ್ದಾರೆ.

18 ವರ್ಷ ವಯಸ್ಸಿನ ಮತ್ತು ಜಿ.ಸಿ.ಇ. ಪರೀಕ್ಷೆಯಲ್ಲಿ ಸಾಮಾನ್ಯಮಟ್ಟದಲ್ಲಿ ಐದು ವಿಷಯಗಳಲ್ಲಿ ತೇರ್ಗಡೆಯಾದವರನ್ನು ಈ ಶಿಕ್ಷಕ ಕಾಲೇಜುಗಳಿಗೆ ಸೇರಿಸುತ್ತಾರೆ. ಸಾಮಾನ್ಯ ಶಿಕ್ಷಣಶಾಸ್ತ್ರದಲ್ಲೂ 5–7 ಅಥವಾ 7–14 ಅಥವಾ 11–18 ವರ್ಷ ವಯಸ್ಸಿನ ಮಕ್ಕಳ ಶಿಕ್ಷಣದ ಬಗ್ಗೆಯೂ ವಿಶೇಷ ಪರಿಶ್ರಮವನ್ನೂ ಯಾವುದಾದರೂ ವಿಷಯಗಳಲ್ಲಿ ಹೆಚ್ಚಿನ ಪರಿಣತಿಯನ್ನೂ ಪಡೆಯಲು ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಯೂ ಪ್ರಯತ್ನಿಸುತ್ತಾನೆ.

ಈ ಕಾಲೇಜುಗಳಲ್ಲಿ ಶುಲ್ಕಗಳು ಭಾರಿ ಪ್ರಮಾಣದಲ್ಲಿದ್ದರೂ ಬ್ರಿಟಿಷ್ ಪ್ರಜೆಯಾದ ಯಾರಾದರೂ ಉಚಿತ ವಿದ್ಯಾಭ್ಯಾಸ ಪಡೆಯಲು ಅರ್ಹತೆಯಿರುತ್ತದೆ. ತರಬೇತಿ ಸಮಯದಲ್ಲಿ ಅವನಿಗೆ ಅನೇಕ ಬಗೆಯ ಧನಸಹಾಯ ದೊರಕುತ್ತದೆ.

ಈ ಕಾಲೇಜುಗಳ ಮೇಲ್ವಿಚಾರಣೆಗಾಗಿ ಪ್ರಾದೇಶಿಕ ತರಬೇತಿ ಆಡಳಿತ ಸಂಸ್ಥೆ (ಏರಿಯ ಟ್ರೇನಿಂಗ್ ಆರ್ಗನೈಸೇಷನ್) ಇದೆ. ಇದು ವಿಶ್ವವಿದ್ಯಾಲಯಗಳಲ್ಲಿನ ಶಿಕ್ಷಕ ಇಲಾಖೆ ಅಥವಾ ಶಿಕ್ಷಕ ಶಾಲೆ, ಸ್ಥಳೀಯ ಶಿಕ್ಷಣಾಧಿಕಾರ ಮಂಡಲಿ ಇವುಗಳ ಸಹಾಯ ಸಹಕಾರಗಳೊಂದಿಗೆ ಶಿಕ್ಷಕರ ತರಬೇತಿ ಕಾಲೇಜುಗಳನ್ನು ನಡೆಸುತ್ತವೆ.

ಇಂಗ್ಲೆಂಡಿನ ವಿಶ್ವವಿದ್ಯಾಲಯಗಳೂ ಉಚ್ಚಶಿಕ್ಷಣ ಕೇಂದ್ರಗಳೂ ಹೆಸರುವಾಸಿಯಾಗಿ, ಪ್ರಪಂಚದ ಅನೇಕ ರಾಷ್ಟ್ರಗಳಿಂದ ಅಭ್ಯರ್ಥಿಗಳನ್ನು ಆಕರ್ಷಿಸುತ್ತಿವೆ. ಇಂದಿಗೂ ಆಕ್ಸ್‌ಫರ್ಡ್, ಕೇಂಬ್ರಿಜ್, ಲಂಡನ್ ಮುಂತಾದ ಸುಪ್ರಸಿದ್ಧ ವಿಶ್ವವಿದ್ಯಾನಿಲಯಗಳಲ್ಲಿ ಪಡೆದ ಶಿಕ್ಷಣ ಅತ್ಯಂತ ಶ್ರೇಷ್ಠವೆಂದು ಭಾವಿಸಲಾಗಿದೆ.

1963ರಲ್ಲಿ ಪ್ರಕಟವಾದ ರಾಬಿನ್ ಸಮಿತಿಯ ವರದಿಯಲ್ಲಿ ಇಂಗ್ಲೆಂಡಿನ ಉಚ್ಚ ಶಿಕ್ಷಣದಲ್ಲಿ ಎರಡು ಮುಖ್ಯ ದೋಷಗಳಿವೆಯೆಂದೂ ಅವುಗಳ ನಿವಾರಣೆಯಾಗಬೇಕೆಂದೂ ತಿಳಿಸಿದೆ. ಮೊದಲನೆಯದಾಗಿ ವಿಶಾಲ ಸ್ವರೂಪದ ಪದವಿ ಪಡೆಯುವವರ ಸಂಖ್ಯೆ ಬಹಳ ಕಡಿಮೆ. ಎರಡನೆಯದಾಗಿ ಸ್ನಾತಕೋತ್ತರ ಶಿಕ್ಷಣಕ್ಕೂ ಸಂಶೋಧನೆಗೂ ಸಾಕಷ್ಟು ಅವಕಾಶವಿಲ್ಲ. ಇವೆರಡು ದೋಷಗಳ ನಿವಾರಣೆಗೆ ಪ್ರಯತ್ನ ನಡೆಸಬೇಕೆಂದು ಕೆಲವು ಸಲಹೆಗಳನ್ನು ಮಾಡಿದ್ದು ಅವುಗಳನ್ನು ಅಳವಡಿಸಿಕೊಳ್ಳಲಾಗಿದೆ. (ಡಿ.ಎನ್.ಎಸ್.ಆರ್.)

**ಇಂಗ್ಲೆಂಡಿನ ಸಂಗೀತ ಪದ್ಧತಿ:** ಇಂಥ ಒಂದು ಪ್ರಕಾರದ ಸ್ಪಷ್ಟ ಸುಳಿವನ್ನು 15ನೆಯ ಶತಮಾನದಿಂದೀಚೆಗೆ ಗುರುತಿಸಬಹುದು. ಜಾನ್ ಡನ್‌ಸ್ಟೇ ಬಲ್ (1370–1453) ಮೊದಲಬಾರಿಗೆ ಷಾನ್‌ಸನ್ ಎಂಬ ಪ್ರಬಂಧಪ್ರಕಾರದಲ್ಲಿ ಲೌಕಿಕ ಗಾನದಲ್ಲೂ ಬೈಬಲಿನ ಮಾತುಗಳನ್ನು ಹಾಡುವ ಮೋಟೆಟ್ ಎಂಬ ಧಾರ್ಮಿಕ ಸಂಗೀತದಲ್ಲೂ ಏಕಕಾಲಿಕವಾದ ಧಾತುವೈವಿಧ್ಯವನ್ನು ಬಳಸಿದ. ಇವನೂ ಇದೇ ಶತಮಾನದಲ್ಲಿ ನೆದರ್‌ಲೆಂಡಿನ ಗಿಲ್ಲೆಡಿ ಬನ್‌ಷ್ವಾ, ಫ್ರಾನ್ಸಿನ ಗ್ವಿಲೋಮೆ ಡ್ಯೂಫೆಯೂ ಇಂಗ್ಲೆಂಡಿನ ಲಯೋನೆಲ್ ಪವರ್‌ಗಳೂ ಇಡೀ ಯುರೋಪಿನಲ್ಲೆಲ್ಲ ಖ್ಯಾತಿಗಳಿಸಿದ್ದರು. ಇಂಗ್ಲೆಂಡಿನಲ್ಲಿ ಪ್ರಾಚೀನಕಾಲದಿಂದಲೂ ಚರ್ಚಿನಲ್ಲಿ ಹಾಡುವ ಗೋಷ್ಠಿಗಾನ (ಕಾಯ್ರ್) ಪ್ರಮುಖವಾಗಿತ್ತು; ಚರ್ಚ್‌ಸಂಗೀತವಾದರೂ ಮುಖ್ಯವಾಗಿ ರೋಮನ್ ಸಂಗೀತದಿಂದ ಪ್ರಭಾವಿತವಾಗಿತ್ತು. ಆದರೆ ಈ ಯುಗದಲ್ಲಿ ಶಬ್ದೋಚ್ಚಾರಣೆಯನ್ನು ಸ್ಫುಟಗೊಳಿಸಿ, ಪ್ರಾಟೆಸ್ಟಂಟರ ಗೀತೆಗಳಿಗೂ ಏಕಕಾಲಿಕ ಧಾತುವೈವಿಧ್ಯ ವನ್ನು ಅನ್ವಯಿಸಲಾಯಿತು.

**ಆಧುನಿಕತೆಯ ಆದಿ:** ಮುಂದಿನ ಶತಮಾನಗಳಲ್ಲಿ ಥಾಮಸ್ ಟ್ಯಾಲಿ (1520–85), ಅವನ ಶಿಷ್ಯನಾದ ವಿಲಿಯಂ ಬರ್ಡ್ (1542–1623), ಸಂಗೀತದಲ್ಲಿ ಡಾಕ್ಟರೇಟ್ ಪಡೆದು ಗ್ರೆಷಾಮ್ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕನಾಗಿದ್ದ ಜಾನ್‌ಬುಲ್ (1563–1628), ಜಾನ್ ಷಫರ್ಡ್ (1520–63), ರಾಬರ್ಟ್ ವೈಟ್ (?–1574) ಮೊದಲಾದವರು ಆಧುನಿಕ ಇಂಗ್ಲಿಷ್ ಸಂಗೀತಕ್ಕೆ ಬುನಾದಿಯನ್ನು ಕಟ್ಟಿದ ಊರ್ಧ್ವಸ್ವರಶ್ರೇಣಿಪದ್ಧತಿಯನ್ನೂ (ಕಾರ್ಡ್) ಪ್ರಬಂಧರೀತಿಗಳನ್ನೂ ಬಳಸಿ ಯಶಸ್ವಿಯಾದರೂ ಇದೇ ಕಾಲದಲ್ಲಿ ಬ್ರೌನ್, ಫೇರ್‌ಫಾಕ್ಸ್, ಕಾರ್ನಿಷ್ ಈ ಮೂವರು ಸೇರಿ ರಚಿಸಿದ ವಿಪುಲವಾದ ಚರ್ಚ್‌ಸಂಗೀತ ಇಂದು ಪ್ರಸಿದ್ಧವಾದ ಈಟನ್ ಕಾಯ್ರ್‌ಬುಕ್ ಎಂಬ ಸಂಗ್ರಹದಲ್ಲಿ ಉಳಿದುಬಂದಿದೆ; ಇವರೂ ಏಕಕಾಲಿಕ ಧಾತುವೈವಿಧ್ಯವನ್ನು ಬಳಸಿದರು; ಹೀಗೆ ಈ ಯುಗದ ಸಂಗೀತ ಏಕಕಾಲಿಕ ಊರ್ಧ್ವಸ್ವರಶ್ರೇಣಿ (ಹಾರ್ಮೋನಿ) ಮತ್ತು ಏಕಕಾಲಿಕ ಧಾತುವೈವಿಧ್ಯ (ಕೌಂಟರ್‌ಪಾಯಿಂಟ್, ಪಾಲಿಫೊನಿ) ಎರಡರಿಂದಲೂ ಮುಂದಿನ ಸಂಗೀತಕ್ಕೆ ಇಂಗ್ಲೆಂಡಿನಲ್ಲಿ ದಿಗ್ದರ್ಶನ ಮಾಡಿಸಿತು. ಇಟಲಿಯಿಂದ ಪ್ರಸಿದ್ಧವಾಗಿದ್ದ ಮ್ಯಾಡ್ರಿಗಲ್ ಎಂಬ ಸುಗಮ ಲಘುಗೀತೆ ಆಂಗ್ಲರನ್ನು ಬಹುವಾಗಿ ಆಕರ್ಷಿಸಿತು. ಆರ್ಲೆಂಡೋ ಗಿಬನ್ಸ್ (1583–1625), ಥಾಮಸ್ ಮಾರ್ಲೆ (1557–1603) ಬಹುಸಂಖ್ಯೆಯಲ್ಲಿ ಉತ್ತಮವಾದ ಮ್ಯಾಡ್ರಿಗಲ್‌ಗಳನ್ನು ರಚಿಸಿದ್ದಾರೆ. ಮಾರ್ಲೆ ಅನೇಕ ಬ್ಯಾಲೆಗಳನ್ನೂ ಸಮಕಾಲೀನನಾದ ಷೇಕ್ಸ್‌ಪಿಯರ್‌ನ ನಾಟಕಗಳ ಹಾಡುಗಳಿಗೆ ಸಂಗೀತವನ್ನೂ ಕ್ಯಾನ್‌ಜೊನೆಟ್ಟುಗಳನ್ನೂ ಆ್ಯಂಥಂಗಳನ್ನೂ ಮೋಟೆಟ್‌ಗಳನ್ನೂ ರಚಿಸಿದ್ದಾನೆ. ಬರ್ಡನ ಶಿಷ್ಯನಾದ ಈತ ವೀಣಾತಂತ್ರವನ್ನು ಕುರಿತ ಪುಸ್ತಕವನ್ನೂ ಇಂಗ್ಲಿಷ್‌ನ ಪ್ರಥಮ ಸಂಗೀತಶಾಸ್ತ್ರ ಗ್ರಂಥವನ್ನೂ ಬರೆದಿದ್ದಾನೆ. ಜಾನ್ ಬೆನೆಟ್ಟನ ಮ್ಯಾಡ್ರಿಗಲ್ಸ್ ಟು ಫೋರ್ ವಾಯ್ಸಸ್ ಅನ್ನು ಸಂಪಾದಿಸಿ ಪ್ರಕಟಿಸಿದ್ದಾನೆ. ಆರ್ಗನ್ ವಾದ್ಯಕೋವಿದರುಗಳಾದ ಜಾನ್ ಟ್ಯಾವರ್ನರ್ (ಸು. 1530) ಮತ್ತು ಕ್ರಿಸ್ಟೋಫರ್ ಟೈ (ಸು. 1572) ಅವರು ವಾದ್ಯಸಂಗೀತದ ರೂಪನಿಷ್ಪತ್ತಿಯನ್ನು ನಿರ್ಣಯಿಸಲು ಸಹಾಯಕರಾಗಿ ಭೂತಭವಿಷ್ಯಗಳ ಸಂಗೀತಪ್ರಬಂಧಗಳಲ್ಲಿ ಸೇತುವೆ ಕಟ್ಟಿದರು. ಅಲ್ಲಿಯವರೆಗೆ ಗಾಯಕರನ್ನು ನೆರಳಿನಂತೆ ಅನುಸರಿಸುತ್ತಿದ್ದ ಪಕ್ಕವಾದ್ಯಗಳು ಸ್ವತಂತ್ರವಾದ್ಯಗಳ ಸ್ಥಾನಮಾನಗಳನ್ನು ಈ ಯುಗದಲ್ಲಿ ಗಳಿಸಿದ್ದಲ್ಲದೆ ನಿಶ್ಚಿತವಾದ ಮನೆಗಳ ಕೀಬೋರ್ಡ್ ವಾದ್ಯಗಳು ಲಕ್ಷ್ಯಲಕ್ಷಣಗಳಲ್ಲಿ ಸುಭದ್ರ ನೆಲೆಯನ್ನು ಪಡೆದುವು. ಈ ಕಾಲದಲ್ಲಿಯೇ ವೀಣೆಯ ತೆರದ ಲೂಟ್, ವಯೊಲ್ ಮುಂತಾದ ವಾದ್ಯಗಳಿಗೆಂದೇ ಬರೆದ ಫ್ಯಾಂಟಸಿ ಎಂಬ ಆಕರ್ಷಕ ಹಾಡಿನ ರೀತಿ ಪ್ರಸಿದ್ಧವಾಯಿತು; ಇಂಗ್ಲೆಂಡ್ ಜಗತ್ತಿಗೆ ಕೊಟ್ಟ ಹಾಡುಗಳಲ್ಲಿ ಮುಖ್ಯವಾದುದು ಇಂಗ್ಲಿಷ್ ಮ್ಯಾಡ್ರಿಗಲ್ ಮತ್ತು ಫ್ಯಾಂಟಸಿ; ಇನ್ ನಾಮಿನಿ ಎಂದು ಪ್ರಸಿದ್ಧವಾದ ಫ್ಯಾಂಟಸಿ ಇಂದಿಗೂ ಉಳಿದುಬಂದಿದೆ. 16ನೆಯ ಶತಮಾನದ ಜಾನ್ ಡೊಲ್ಯಾಂಡ್ ಮತ್ತು 17ನೆಯ ಶತಮಾನದ ಥಾಮಸ್ ಕ್ಯಾಂಪಿಯನ್ನರೂ ಉತ್ತಮ ವಾಗ್ಗೇಯಕಾರರಾಗಿದ್ದರು. ಬುಲ್ ಮತ್ತು ಪೀಟರ್ ಫಿಲಿಪ್ಸರು ನೆದರ್‌ಲೆಂಡಿನಲ್ಲಿ ನೆಲೆಸಿ ಆಂಗ್ಲ ಸಂಗೀತಸೌರಭವನ್ನು ಹರಡಿದರು.

**ಪರ್ಸೆಲ್ ಯುಗ:** ಮಧ್ಯಕಾಲೀನ ಆಂಗ್ಲಸಂಗೀತ ಹೆನ್ರಿ ಪರ್ಸೆಲ್‌ನಿಂದ (1658–95) ತನ್ನ ಅತ್ಯುನ್ನತಿಯನ್ನು ತಲುಪಿತು. ಟ್ಯಾಲಿಸ್ ಮತ್ತು ಬರ್ಡರಿಂದ ಆಂಗ್ಲ ಏಕಕಾಲಿಕ ಧಾತುವೈವಿಧ್ಯವನ್ನೂ ಫ್ರಾನ್ಸಿನ ಪೆಲ್ಹ್ಯಾಂ ಹಂಫ್ರಿಸ್‌ನಿಂದ ಫ್ರೆಂಚ್ ಸಂಗೀತದ ಸಾರವನ್ನೂ ಕೊರೆಲ್ಲಿಯಿಂದ ಇಟ್ಯಾಲಿಯನ್ ಸಂಗೀತದ ಸಾರವನ್ನೂ ಗ್ರಹಿಸಿ ಆತ ಹೃದ್ಯವಾದ, ಶಾಶ್ವತಸ್ಥಾನಗಳಿಸುವ ಸಂಗೀತವನ್ನು ರಚಿಸಿದ್ದಾನೆ. ಕಣ್ಣಿಗೆ ಕಟ್ಟುವಂಥ ಚಿತ್ರಣ, ಉತ್ತಮ ನಾಟಕೀಯತೆ, ಆಳವಾದ ರಸಾನುಭೂತಿ, ನವನವೋನ್ಮೇಷತೆ–ಇವು ಪರ್ಸೆಲ್ಲನ ಸಂಗೀತದ ವೈಶಿಷ್ಟ್ಯಗಳು. ಇಂಗ್ಲೆಂಡಿನಲ್ಲಿ ಬಂದುನೆಲೆಸಿದ ಹ್ಯಾಂಡೆಲ್ ಇವನಿಂದ ಬಹು ಪ್ರಭಾವಿತನಾಗಿ ಇವನ ಸಂಗೀತವನ್ನು ಆಧಾರವಾಗಿಟ್ಟು ಹಲವು ಹಾಡುಗಳನ್ನು ರಚಿಸಿದ್ದಾನೆ. ಅನಂತರದ ಆಂಗ್ಲ ವಾಗ್ಗೇಯಕಾರರು ಮೂಲ ಆಕರವಾದ ಪರ್ಸೆಲ್‌ನನ್ನು ಬಿಟ್ಟು ಹ್ಯಾಂಡೆಲ್‌ನನ್ನು ಅನುಕರಿಸುವ ತಪ್ಪು ಮಾಡಿದುದೇ 17ನೆಯ ಶತಮಾನದ ಅನಂತರದ ಇಂಗ್ಲೆಂಡ್ ಸಂಗೀತ ಅವನತಿಮುಖಿಯಾಗಲು ಕಾರಣವಾಯಿತು. ಎಲಿಜಬೆತ್ ಯುಗದಲ್ಲಿ ಪ್ರಚಲಿತ ವಾಗಿದ್ದು ಚಿತ್ರವಿಚಿತ್ರ ದೃಶ್ಯಪ್ರಧಾನವಾಗಿಯೂ ಸಂಗೀತರೂಪಕವಾಗಿಯೂ ಇದ್ದ ಮಾಸ್ಕ್ ಎಂಬ ಪ್ರಬಂಧವಿಶೇಷದಿಂದ ಪರ್ಸೆಲ್ ಪ್ರಭಾವಿತನಾಗಿ ಬ್ಯಾಲೆ, ಆಪೆರ, ಮ್ಯಾಡ್ರಿಗಲ್ ನಾಟಕದ ಮಟ್ಟುಗಳು, ಆ್ಯಂಥಂ, ಚರ್ಚಿನಲ್ಲಿ ದೀಕ್ಷಾವಿಧಿಯ ಪ್ರಾರ್ಥನೆ, ಮತೀಯ ಸಂಪ್ರದಾಯ ಮೊದಲಾದುವಕ್ಕೆ ಸಂಬಂಧಿಸಿದ ಹಾಡುಗಳು, ಓಡ್ ಎಂಬ ವಿಧದ ಪ್ರೇಮಗೀತೆಗಳು, ಕ್ಯಾಂಟಾಟ ಎಂಬ ಶ್ರವ್ಯನಾಟಕಗಳು, ಆರ್ಗನ್ ಸಂಗೀತ–ಇತ್ಯಾದಿಗಳನ್ನು ಬಹುವಾಗಿ ಬರೆದಿದ್ದಾನೆ. ಡ್ರೈಡನ್ ಕವಿ ಹೆಚ್ಚು ಕಡಿಮೆ ತನ್ನ ಸಮಕಾಲೀನನಾದ ಭಾರತೀಯ ಮೊಗಲ್ ಚಕ್ರವರ್ತಿ ಔರಂಗಜೇಬನನ್ನು ಕುರಿತು ಬರೆದ ದುರಂತ ಗೇಯನಾಟಕಕ್ಕೆ ಸಮಕಾಲೀನನಾದ ಪರ್ಸೆಲ್ ಸಂಗೀತವನ್ನು ರಚಿಸಿರುವುದನ್ನಿಲ್ಲಿ ಉಲ್ಲೇಖಿಸಬಹುದು.

**ಕ್ಷೀಣಯುಗ:** 17ನೆಯ ಶತಮಾನದ ಮೊದಲಲ್ಲಿ ಹೆನ್ರಿ ಲಾಸ್ ಇಂಗ್ಲಿಷ್ ಪದಗಳ ಸಹಜ ಉಚ್ಚಾರಣೆಗಾಗಿ ಸಂಗೀತದಲ್ಲಿ ಶ್ರಮಿಸಿದ; ಮ್ಯಥ್ಯೂ ಲಾಕ್ ಆಪೆರದ ಪೂರ್ಣಸ್ವರೂಪವನ್ನು ಇಂಗ್ಲೆಂಡಿನಲ್ಲಿ ಸಾಕ್ಷಾತ್ಕರಿಸಲು ಶ್ರಮಿಸಿದ; ಹೆನ್ರಿ ಆಲ್ಡ್ರಿಚ್ ಖ್ಯಾತಿವೆತ್ತ ಸಂಗೀತಗಾರನೂ ಶಿಲ್ಪಿಯೂ ಆಗಿದ್ದ. ಜಾನ್ ಬ್ಲೋ ಬಹುವಾಗಿ ಚರ್ಚ್ ಮತ್ತು ನಾಟಕ ಸಂಗೀತವನ್ನು ನಿರ್ಮಿಸಿ, ಪರ್ಸೆಲ್ಲಿಗಿಂತ ಮುಂಚೆಯೂ ಮತಾಚರಣೆಯ ಓಡ್‌ಗಳನ್ನು ರಚಿಸಿದ್ದ.

ಆದರೆ ಪರ್ಸೆಲ್ಲನ ಅನಂತರ ಸು. 150 ವರ್ಷಗಳವರೆಗೆ ಇಂಗ್ಲೆಂಡಿನ ಸ್ವದೇಶೀಸಂಗೀತ ಹೀನಸ್ಥಿತಿಗೆ ಬಂತು. 18ನೆಯ ಶತಮಾನದಲ್ಲಿ ವಿದೇಶೀ ವಾಗ್ಗೇಯಕಾರರ ಪ್ರಭಾವವೇ ಇಂಗ್ಲೆಂಡಿನಲ್ಲಿ ಪ್ರಮುಖವಾಯಿತು. ಈ ಕಾಲದಲ್ಲಿಯೇ ಹೇಡನ್, ಹ್ಯಾಂಡೆಲ್, ಮೆಂಡೆಲ್ ಸ್ಸಾನ್‌ರಂಥ ಮಹಾ ಪ್ರತಿಭಾವಂತರು ಆಂಗ್ಲರನ್ನೇ ಏಕೆ, ಇಡೀ ಯುರೋಪನ್ನು ತಮ್ಮ ಸಂಗೀತದಿಂದ ಸೆರೆಹಿಡಿದಿಟ್ಟಿದ್ದರು. ಈ ವಾಗ್ಗೇಯಕಾರ ಸೂರ್ಯರ ಪ್ರಕಾಶದಲ್ಲಿ ಸ್ವದೇಶೀ ವಿದ್ವಾಂಸರ ಪ್ರತಿಭೆ, ಬೆಳದಿಂಗಳಿನಂತೆ ಮಂಕಾಗಿ ಕೊರಗಿತು. ದಕ್ಷಿಣ ಭಾರತದಲ್ಲೂ ಇದೇ ಕಾಲದಲ್ಲಿ ಸಂಗೀತ ತ್ರಿಮೂರ್ತಿಗಳಾದ ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತ ಮತ್ತು ಶ್ಯಾಮಶಾಸ್ತ್ರಿಗಳ ಪ್ರತಿಭೆ, ಪ್ರಭಾವಗಳ ಕಣ್ಣುಕೋರೈಸುವ ನಾದಜ್ಯೋತಿಯಲ್ಲಿ ಕರ್ನಾಟಕ, ಆಂಧ್ರಗಳಲ್ಲಿನ ಸಹಜಪ್ರತಿಭೆ, ಸೃಷ್ಟಿಶಕ್ತಿಗಳು ಮಂಕು ಕವಿದುಹೋಗಿ ಅಜ್ಞಾತವಾಸವನ್ನು ಸು.100 ವರ್ಷಗಳಿಗೂ ಮೀರಿ ಅನುಭವಿಸಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. 18ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ದಕ್ಷರಾದ ಸಂಗೀತಕಾರರೂ ವಾಗ್ಗೇಯಕಾರರೂ ಇರಲಿಲ್ಲ ವೆಂದಲ್ಲ. ಆಗಸ್ಟೀನ್ ಅರ್ನ್ (1710–78), ಆಪೆರ, ಮಾಸ್ಕ್, ಗೇಯಪ್ರಹಸನ, ಆರ್ಕೆಸ್ಟ್ರಾದ ಪೀಠಿಕಾ ಸಂಗೀತ (ಓವರ್ಚರ್), ಕ್ಯಾನನ್, ಸೊನ್ಯಾಟಾ, ಆರಟೋರಿಯೋಗಳನ್ನೂ ಪಿಟೀಲು, ಆರ್ಗನ್, ಹಾರ್ಪ್ಸಿಕಾರ್ಡ್‌ಗಳಿಗೆ ಸಂಗೀತವನ್ನು ರಚಿಸಿ ಆರಟೋರಿಯೋ ಗೋಷ್ಠಿಗಾನದಲ್ಲಿ ಪ್ರಪ್ರಥಮವಾಗಿ ಸ್ತ್ರೀಗಾನವನ್ನು ಏರ್ಪಡಿಸಿದ. ಈತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಂಗೀತ ಡಾಕ್ಟೊರೇಟ್ ಪದವಿಯನ್ನು ಗಳಿಸಿದ (1759). ವಿಲಿಯಂ ಬಾಯ್ಸ್ ಪ್ರಸಿದ್ಧ ಆರ್ಗನ್ ವಾದಕನೂ ಉತ್ತಮ ವಾಗ್ಗೇಯಕಾರನೂ ಆಗಿದ್ದ (1710–

79). ಚಾರಲ್ಸ್ ಡಿಬ್ಡಿನ್ (1745–1814) ಗಾಯಕ, ನಟ, ವ್ಯವಸ್ಥಾಪಕ, ವಾಗ್ಗೇಯಕಾರ, ಪಕ್ಕವಾದ್ಯಗಾರ, ಲೇಖಕ – ಹೀಗೆ ಬಹುಮುಖಪ್ರತಿಭೆಯನ್ನು ಪಡೆದಿದ್ದ. ಜೇಮ್ಸ್ ಹುಕ್ (1746–1827) ಆರ್ಗನ್ ವಾದಕನೂ ವಾಗ್ಗೇಯಕಾರನೂ ಆಗಿದ್ದ. ಥಾಮಸ್ ಲಿನ್ಲಿ (1732–95) ಗೋಷ್ಠಿಗಾಯಕನಾಗಿಯೂ ಗೇಯನಾಟಕಗಳ ರಚನಕಾರನಾಗಿಯೂ ಇದ್ದವ. ವಿಲಿಯಂ ಫೀಲ್ಡ್ (1748–1829) ಪಿಟೀಲುಗಾರ, ಲೇಖಕ ಮತ್ತು ಕೃತಿರಚನಕಾರ. ಸ್ಟೀಫನ್ ಸ್ಟೋರೇಸ್ (1763–1786) 18 ನಾಟಕ ಸಂಬಂಧಿ ರಚನೆಗಳನ್ನು ಮಾಡಿದ್ದಾನೆ.

ಗ್ಲೀ ಎಂಬ ತನ್ನದೇ ಆದ, ಸರಳ ಏಕಕಾಲಿಕ ಧಾತುಬಾಹುಳ್ಯವುಳ್ಳ ವಾದನವಿಲ್ಲದ, ಮೂರು ನಾಲ್ಕು ಶಾರೀರಗಳನ್ನುಳ್ಳ ಹಾಡಿನ ರೀತಿಯನ್ನು ಈ ಶತಮಾನದಲ್ಲಿ ಇಂಗ್ಲೆಂಡ್ ವಿಶ್ವಸಂಗೀತಕ್ಕೆ ನೀಡಿತು. ಆಲ್ಫ್ರೆಡ್ ಕ್ಯಾಲ್ಡಿಕಾಟ್, ವಿಲಿಯಂ ಕ್ರಾಚ್ ಮತ್ತು ಸ್ಯಾಮುಯಲ್ ವೆಬ್ ಇದನ್ನು ಪ್ರವರ್ತಿಸಿ ಪಸರಿಸಿದರು.

18ನೆಯ ಶತಮಾನದ ಉತ್ತರಾರ್ಧದಲ್ಲಿ ಬ್ಯಾಲಡ್ ಆಪೆರ ಇಂಗ್ಲೆಂಡಿನಲ್ಲಿ ಅತ್ಯಧಿಕವಾಗಿ ಬೆಳೆಯಿತು; ಇದರಿಂದ ಆಂಗ್ಲಸಂಗೀತದ ಸಮತೂಕ ತಪ್ಪಿ ಅದರ ಸರ್ವಾಂಗೀಣ ಪ್ರಗತಿಗೆ ಅಡ್ಡಿಯಾಯಿತೆಂದು ಭಾವಿಸುವವರೂ ಇದ್ದಾರೆ. ಇದು ಹೇಗೇ ಇರಲಿ, ಇದೂ ಗ್ಲೀ ಪ್ರಬಂಧವೂ ಈ ಶತಮಾನದ ಅತ್ಯುತ್ತಮ ಸಾಧನೆಗಳೆಂದು ಭಾವಿಸಿದರೆ ತಪ್ಪಾಗುವುದಿಲ್ಲ.

18ನೆಯ ಶತಮಾನದ ಉತ್ತರಾರ್ಧದಲ್ಲಿ ವಾಗ್ಗೇಯಕಾರರ ಮಹಾಪೂರವೇ ಇಂಗ್ಲೆಂಡಿನಲ್ಲಿ ಹರಿಯಿತು. ಸ್ಫೂರ್ತಿರಹಿತವಾಗಿ ಪ್ರಾರಂಭವಾದ ಈ ಶತಮಾನ ತನ್ನ ಅಂತ್ಯದಲ್ಲಿ ಮಹತ್ತನ್ನೇ ಕೊಟ್ಟಿತು. ಈ ಶತಮಾನದ ಎಲ್ಲ ಪ್ರಮುಖರನ್ನೂ ಹೆಸರಿಸಲು ಇಲ್ಲಿ ಸಾಧ್ಯವಿಲ್ಲ. ವಿಶೇಷ ಸೇವೆ ಸಲ್ಲಿಸಿದವರು ಈ ಕೆಲವರು: ಜಾನ್ ಫೀಲ್ಡ್ಸ್ (1782–1837) ಡಬ್ಲಿನ್ನಿನಲ್ಲಿ ಹುಟ್ಟಿ ಮಾಸ್ಕೋದಲ್ಲಿ ನಿಧನವಾದರೂ ಗ್ರೇಟ್ ಬ್ರಿಟನ್ನಿನಲ್ಲಿ ಅದರಲ್ಲೂ ಇಂಗ್ಲೆಂಡಿನಲ್ಲಿ ಪ್ರಭಾವಶಾಲಿಯಾಗಿದ್ದು ಷೋಪೆನ್ ಮೊದಲಾದ ವಿಭೂತಿ ಪುರುಷರಿಗಿಂತ ಮುಂಚೆಯೇ ನಾಕ್‌ಟೂರ್ನ್ ಎಂಬ ಪ್ರಬಂಧ ಪ್ರಕಾರವನ್ನು ಉದ್ಘಾಟಿಸಿದ; ಪಿಯಾನೋ ವಾದ್ಯದ ಉತ್ಕರ್ಷಕ್ಕಾಗಿ ಶ್ರಮಿಸಿದ. ಸರ್ ವಿಲಿಯಂ ಸ್ಟರ್ನ್‌ಡೇಲ್ (1816–75) ಕೇಂಬ್ರಿಜ್ ವಿಶ್ವವಿದ್ಯಾನಿಲಯದಿಂದ ಸಂಗೀತದಲ್ಲಿ ಡಾಕ್ಟೊರೇಟ್ ಪದವಿ (1856) ಪಡೆದು ಅಲ್ಲಿನ ಸಂಗೀತ ಕಾಲೇಜಿಗೆ ಮುಖ್ಯಾಧಿಕಾರಿಯಾಗಿದ್ದು 1871ರಲ್ಲಿ ಸರ್ ಬಿರುದನ್ನು ಪಡೆದ. ಇವನೂ ಸರ್ ಆರ್ಥರ್ ಸಲಿವನ್ (1842–1900) ಎಂಬುವನೂ ಲೀಪ್ಜಿಗ್ ಕನ್ಸರ್ವೇಟರಿಯಲ್ಲಿ ಕಲಿತ ಧೀಮಂತರು; ಸಲಿವನ್ ಆಪೆರೆಟ್ಟ, ಕಾಮಿಕ್ ಆಪೆರ, ಆರಟೋರಿಯೋ, ಸಿಂಫೊನಿ ಮುಂತಾದ ರಚನೆಗಳಿಂದ ಪ್ರಸಿದ್ಧನಾಗಿದ್ದಾನೆ. ಗೋರಿಕ್ ಥಾಮಸ್ (1850–92) ಅನೇಕ ಆಪೆರಗಳನ್ನು ರಚಿಸಿದ್ದಾನೆ. ಇವನು ಸಲಿವನ್ನನ ಬಳಿಯೂ ಕೆಲಕಾಲ ಕಲಿತಿದ್ದ. ಸರ್ ಚಾರ್ಲ್ಸ್ ಸ್ಟ್ಯಾನ್‌ಫರ್ಡ್ (1852–1924) ಪ್ರಸಿದ್ಧನಾದ ಬಹುಮುಖ ಪ್ರತಿಭೆಯ ವಾಗ್ಗೇಯಕಾರ. ಸರ್ ಚಾರ್ಲ್ಸ್ ಹ್ಯೂಬರ್ಟ್ ಪ್ಯಾರಿ (1848–1918) ಅಷ್ಟೇ ಪ್ರತಿಭಾಸಂಪನ್ನ, ವಾಗ್ಗೇಯಕಾರರ ಜೀವನಚರಿತ್ರೆಯಲ್ಲೂ ಶಾಸ್ತ್ರದ ಬಹು ವಿವಿಧ ವಿಪುಲ ರಚನೆಯಲ್ಲೂ ಈತ ಶ್ರಮಿಸಿದ್ದಾನೆ. ಇವರಿಬ್ಬರಿಂದಲೇ ಈ ಶತಮಾನ ಸುವರ್ಣಯುಗದ ಪ್ರಾರಂಭವೆನ್ನಬಹುದು. ಆದರೆ ಸರ್ ಎಡ್ವರ್ಡ್ ಎಲ್ಗರ್ (1857–1934) ಈ ಯುಗದ ತುತ್ತ ತುದಿ ಎನ್ನುವುದು ನಿಸ್ಸಂದೇಹವಾದದ್ದು; ಆರ್ಗನ್ ಮತ್ತು ಪಿಟೀಲು ವಾದ್ಯಗಳಲ್ಲಿಯೂ ನಿಪುಣನಾದ ಈತ ಗೋಷ್ಠಿನಾಯಕನಾಗಿಯೂ ಸಂಗೀತಕಾರನಾಗಿಯೂ ಇದ್ದು ಹಲಕೆಲವು ವಾದ್ಯಗಳಿಗಾಗಿ ರಚಿಸಿ, ವಿದೇಶ ಪರ್ಯಟನೆ ಮಾಡಿ, ಬಹುಸಂಖ್ಯಾತ ರಚನೆಗಳಿಂದ ಸೇವೆ ಸಲ್ಲಿಸಿದ್ದಾನೆ. ಇದೇ ಕಾಲದಲ್ಲಿ ಆಂಗ್ಲ ಸಂಗೀತದ ಉತ್ಕರ್ಷಗಳನ್ನು ಇತರ ಕೆಲವರೂ ಸಾಧಿಸಿದರು. ಸರ್ ಜಾನ್ ಬ್ರಿಡ್ಜ್‌ನ ಭಾವಪೂರ್ಣವಾದ ಸಂಗೀತ, ಸರ್ ಗ್ರಾನ್‌ವಿಲ್ ಬ್ಯಾನ್‌ಟಕ್‌ನ ಆರ್ಗನ್ ಸಂಗೀತ ಹಾಗೂ ಸ್ವಪ್ನಚಿತ್ರಣ, ಗುಸ್ತಾವ್ ಹೋಲ್‌ಸ್ಟನ ಪ್ರಾಯೋಗಿಕ ಮತಿ, ಸರ್ ಫ್ರಾಂಕ್‌ಬಿಡ್ಜ್‌ನ ಚೇಂಬರ್ ಸಂಗೀತ, ಸರ್ ಜಾನ್ ಬ್ಲ್ಯಾಕ್‌ವುಡ್ ಮ್ಯಕ್ ಈವನ್ನನ ಚತುಸ್ತಂತ್ರೀ ರಚನೆಗಳು, ಜೋಸೆಫ್ ಹಾಲ್‌ಬ್ರೂಕನ ವೈವಿಧ್ಯ ಪೂರ್ಣರಚನಾ ಸಾಧನ, ರಟ್ಲ್ಯಾಂಡ್ ಬೌಟನ್ನನ ಹೊಸ ಬಗೆಯ ಅಪೆರ ರಚನೆ – ಇವುಗಳನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ಸೂಚಿಸಬಹುದು.

ರಾಲ್ಫ್‌ವಾನ್ ವಿಲಿಯಮ್ಸ್‌ನ ಹೆಸರನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕು. ಪಾಶ್ಚಾತ್ಯ ಸಂಗೀತದಲ್ಲಿ ಶಾಶ್ವತವಾಗಿ ನಿಲ್ಲುವ ಹೆಸರು ಈ ಆಧುನಿಕ ವಾಗ್ಗೇಯಕಾರರ ಸಂಗೀತಕಾರನದು. ಶಾಸ್ತ್ರಜ್ಞನೂ ವಾದನಪಟುವೂ ಆದ ಈತ ರಷ್ಯದ ಜನಪದ ಸಂಗೀತದಿಂದ ರಾಷ್ಟ್ರೀಯ ಪ್ರಜ್ಞೆಯನ್ನು ಪಡೆದು ಆಧುನಿಕ ರಷ್ಯನ್ ಸಂಗೀತವನ್ನು ವಿಶ್ವಸಂಗೀತಶ್ರೇಣಿಯಲ್ಲಿ ಎತ್ತಿ ನಿಲ್ಲಿಸಿದ ಮೌಸ್ಸೋರ್‌ಗ್ಸ್ಕಿ, ಬಲಕಿರಫ್ ಬೊರೊಡಿನ್, ಕ್ವಿ, ರಿಮ್ಸಿಕೋರ್ಸಕಾಫ್ ಈ ವಾಗ್ಗೇಯಕಾರ ಪಂಚಕದಂತೆ ಇಂಗ್ಲೆಂಡ್ ಸಂಗೀತಕ್ಕೆ ವಿಶ್ವಮಾನ್ಯತೆಯನ್ನು ದೊರಕಿಸಿಕೊಟ್ಟ. ಜನಪದ ಸಂಗೀತವನ್ನೂ ರಾಷ್ಟ್ರೀಯ ಪ್ರಜ್ಞೆಯನ್ನು ಸಂಕಲಿಸಿದುದರಿಂದ, ಸದ್ರುಚಿ, ಸಂಯಮ, ಮನಮೋಹಕತೆ, ಶ್ರದ್ಧೆ, ಆಳವಾದ ರಸಾನುಭೂತಿ ಇವುಗಳು ಇವನ ಸಂಗೀತದ ವೈಶಿಷ್ಟ್ಯ. ಆಂಗ್ಲ ಸಂಸ್ಕೃತಿಯ ಪ್ರತೀಕವೇ ಇವನ ಸಂಗೀತವೆನ್ನಬಹುದು.

20ನೆಯ ಶತಮಾನ: ಈ ಶತಮಾನ ಆರ್ಥರ್ ಬ್ಲಿಸ್, ಆರ್ಥರ್ ಬೆಂಜ಼ಮಿನ್, ಅರ್ನೆಸ್ಟ್ ಜಾನ್ ಮೊಎರನ್, ಹರ್ಬರ್ಟ್ ಹೊವೆಲ್ಸ್, ಪೀಟರ್, ವಾರ್ಲ್‌ಕ್ ಮೊದಲಾದ ಸ್ಫೂರ್ತಿ ಪಡೆದ ವಾಗ್ಗೇಯಕಾರರ ಶುಭೋದಯದಿಂದ, ನವಚೇತನದಿಂದ ಪ್ರಾರಂಭವಾಗುತ್ತದೆ. ಇವರ ಮತ್ತು ಈ ಯುಗದ ಸಾಧನೆಗಳನ್ನು ಅಳೆಯಲು ಕಾಲದ ದೂರ ಆವಶ್ಯಕವಾದ್ದರಿಂದ ಈ ಶತಮಾನ ಮೌಲ್ಯಮಾಪನವನ್ನಿಲ್ಲಿ ಯತ್ನಿಸಿರುವುದಿಲ್ಲ. ಇಂಗ್ಲೆಂಡಿನ ವಾಗ್ಗೇಯಕಾರರು ಹೆಚ್ಚು ಕಡಿಮೆ ಎಲ್ಲ ಮುಖ್ಯ ಪ್ರಬಂಧರೀತಿಗಳನ್ನೂ ಬಳಸಿ ರಚನೆ ಮಾಡುತ್ತಾರೆ. ಆದರೆ ಚಾರಿತ್ರಿಕ ಕಾರಣಗಳಿಂದಾಗಿ ಕೋರಸ್ ಸಂಗೀತವೇ (ಗೋಷ್ಠಿಗಾಯನ) ಅತ್ಯಂತ ಜನಪ್ರಿಯವಾಗಿ ಉಳಿದಿದೆ. ಇದನ್ನು ಬಿಟ್ಟರೆ ಆಪೆರವೇ ಅತ್ಯಂತ ಜನಾನುರಾಗವನ್ನು ಗಳಿಸಿದೆ. ಇದು ಆಂಗ್ಲರಲ್ಲಿ ಪ್ರಿಯವಾಗಲು ಸರ್ ಚಾರಲ್ಸ್ ಸ್ಟ್ಯಾನ್‌ಫರ್ಡನೂ ವಾನ್ ವಿಲಿಯಂಸನೂ ಲಂಡನ್ನಿನ ಸ್ಯಾಡ್ಲರ್ಸ್‌ವೆಲ್ಸ್ ಥಿಯೇಟರ್ ಎಂಬ ಪ್ರಸಿದ್ಧ ಪುರಾತನ ರಂಗಮಂದಿರವೂ ಮುಖ್ಯ ಕಾರಣ. ಈಚೆಗೆ ಬೆಂಜಮಿನ್ ಬ್ರಿಟನ್ ಮತ್ತು ಪೀಟರ್ ಗ್ರಿಮ್ಸ್‌ರ ಆಪೆರಗಳು ಹೆಚ್ಚು ಪ್ರಚಾರದಲ್ಲಿವೆ. ಇಂಗ್ಲೆಂಡಿನಲ್ಲಿ ಸಂಗೀತಕ್ಕೆ ಪ್ರಭುತ್ವದಿಂದ ವಿಶೇಷ ಸಹಾಯ, ಉತ್ತೇಜನಗಳು ದೊರೆಯುತ್ತವೆ. ಸರ್ಕಾರ ಲಲಿತಕಲೆಗಳ ಪ್ರೋತ್ಸಾಹಕ್ಕಾಗಿ ಬ್ರಿಟಿಷ್ ಕೌನ್ಸಿಲ್ ಎಂಬ ಸಂಸ್ಥೆಯನ್ನು ಸ್ಥಾಪಿಸಿತು (1934). ಅಂತೆಯೇ 1940ರಲ್ಲಿ ಸ್ಥಾಪಿತವಾದ ಕೌನ್ಸಿಲ್ ಫಾರ್ ದಿ ಎನ್‌ಕರೇಜ್‌ಮೆಂಟ್ ಆಫ್ ಮ್ಯೂಸಿಕ್ ಅಂಡ್ ದಿ ಆರ್ಟ್ಸ್ ಎಂಬುದು 1946ರಲ್ಲಿ ಶಾಸನದ ಮಂಜೂರಾತಿಯನ್ನು ಪಡೆದು ಆರ್ಟ್ಸ್ ಕೌನ್ಸಿಲ್ ಆಫ್ ಗ್ರೇಟ್ ಬ್ರಿಟನ್ ಎಂಬ ಹೆಸರಿನಲ್ಲಿ ಕೆಲಸ ಮಾಡುತ್ತಿದೆ. ಈ ಸಂಸ್ಥೆಗಳೂ ಯೆಹೂದಿ ಮೆನುಹಿನ್ ಅಧ್ಯಕ್ಷರಾಗಿರುವ ಏಷ್ಯನ್ ಮ್ಯೂಸಿಕ್ ಸರ್ಕಲ್ ಎಂಬ ಸಾರ್ವಜನಿಕ ಸಂಸ್ಥೆಯೂ ಹೊರದೇಶಗಳಿಂದ ಸಂಗೀತ ವಿದ್ವಾಂಸರನ್ನು ಆಹ್ವಾನಿಸಿ ಕಚೇರಿಗಳನ್ನು ಏರ್ಪಡಿಸುವುದು, ಆಂಗ್ಲ ಸಂಗೀತಗಾರರನ್ನೂ, ಸಂಗೀತದ ಆರ್ಕೆಸ್ಟ್ರಾಗಳನ್ನೂ, ಹೊರದೇಶಗಳಿಗೆ ಕಳುಹಿಸಿ ಅವರ ಸಂಗೀತ ಕಚೇರಿಗಳನ್ನು ಏರ್ಪಡಿಸುವುದು, ಆಂಗ್ಲ ಸಂಗೀತದ ಗ್ರಾಮೊಫೋನ್ ರೆಕಾರ್ಡ್‌ಗಳನ್ನು ತಯಾರಿಸಿ ಹಂಚುವುದು, ಸಂಗೀತೋತ್ಸವಗಳನ್ನು ನಡೆಸುವುದು–ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಸರ್ಕಾರವೇ ಈ ಕೌನ್ಸಿಲುಗಳ ಮುಖಾಂತರವಾಗಿ ದುಬಾರಿಯಾದ ಆಪೆರಗಳನ್ನು ನಡೆಸಲು ಧನಸಹಾಯ ಮಾಡುವುದೂ ಉಂಟು. ಸರ್ಕಾರ ಅಭಿರುಚಿಯ, ಸಂಪ್ರದಾಯದ ವಿಷಯಗಳಲ್ಲಿ ತಲೆಹಾಕದೆ ಸಹಾಯ ಮಾತ್ರ ನೀಡುತ್ತದೆಂಬುದು ಶ್ಲಾಘ್ಯವಾದ ವಿಷಯ. ಇಂಗ್ಲೆಂಡಿನ ಬ್ರಿಟಿಷ್ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಸಂಸ್ಥೆಯೂ ಇಂಥ ಒಂದು ಅಂಗವನ್ನು ನಡೆಸುತ್ತಿದೆ. ಈ ಎಲ್ಲ ಸಂಸ್ಥೆಗಳಲ್ಲೂ ಆಯಾ ಕ್ಷೇತ್ರದಲ್ಲಿ ದಕ್ಷರಾದ ತಜ್ಞರುಗಳನ್ನೊಳಗೊಂಡ ಸಮಿತಿಗಳಿವೆ.

ಇಂಗ್ಲೆಂಡಿನಲ್ಲಿ ನಡೆಯುವ ಪ್ರಸಿದ್ಧ ಸಂಗೀತೋತ್ಸವಗಳನ್ನು ಇಲ್ಲಿ ಹೆಸರಿಸಬಹುದು. ದಿ ತ್ರೀ ಕಾಯ್ರ್ ಫೆಸ್ಟಿವಲ್ 1724 ರಿಂದ ಹೆರ್ಫರ್ಡ್, ಗ್ಲೌಸ್ಟರ್, ಮತ್ತು ವೋರ್ಸೆಸ್ಟರ್ ನಗರದ ತನ್ನ ಶಾಖೆಗಳಲ್ಲಿ ವಾರ್ಷಿಕ ಸಂಗೀತೋತ್ಸವಗಳನ್ನು ನಡೆಸುತ್ತಿರುವ ಪ್ರಾಚೀನತಮ ಸಂಸ್ಥೆ; 1945ರಿಂದೀಚೆಗೆ ಚೆಲ್ಟೆನ್ ಹ್ಯಾಂ ಫೆಸ್ಟಿವಲ್ ಆಫ್ ಕಾಂಟೆಂಪೊರರಿ ಮ್ಯೂಸಿಕ್, ಎಡಿನ್‌ಬರೋದ ಇಂಟರ್‌ನ್ಯಾಷನಲ್ ಫೆಸ್ಟಿವಲ್ ಆಫ್ ಮ್ಯೂಸಿಕ್ ಅಂಡ್ ಡ್ರಾಮಗಳು ಜಗತ್ತಿನಲ್ಲಿಯೇ ಅತ್ಯಂತ ಪ್ರಸಿದ್ಧ ಸುವ್ಯವಸ್ಥಿತ ಸಂಗೀತೋತ್ಸವಗಳು. 1948ರಲ್ಲಿ ಸಫೋಕ್‌ನಲ್ಲಿ ಪ್ರಾರಂಭವಾದ ಇಂಗ್ಲಿಷ್ ಆಪೆರ ಗ್ರೂಪ್ ಮತ್ತು ಸಂಗೀತಾಭಿವೃದ್ಧಿಗಾಗಿ ಗ್ಲಿನ್‌ಡೆನ್‌ಬರ್ನ್‌ನಲ್ಲಿ 1934ರಲ್ಲಿ ಜಾನ್ ಕ್ರಿಸ್ಟಿ ಪ್ರಾರಂಭಿಸಿದ ಮೊಜ಼ಾರ್ಟ್ಸ್ ಗ್ಲಿನ್‌ಡೆನ್‌ಬರ್ನ್ ಫೆಸ್ಟಿವಲ್ ಜಗತ್ತಿನಲ್ಲಿ ಮಾನ್ಯತೆ ಪಡೆದಿದೆ. ಮುಖ್ಯವಾದ ಆರ್ಕೆಸ್ಟ್ರಗಳೆಲ್ಲವೂ ಲಂಡನ್ನಿನಲ್ಲಿಯೇ ಇವೆ: ಲಂಡನ್ ಸಿಂಫೋನಿ ಆರ್ಕೆಸ್ಟ್ರ, ಬಿ.ಬಿ.ಸಿ. ಸಿಂಫೋನಿ ಆರ್ಕೆಸ್ಟ್ರ, ಲಂಡನ್ ಫಿಲ್ ಹಾರ್ಮೋನಿಕ್ ಆರ್ಕೆಸ್ಟ್ರ, ಫಿಲ್ ಹಾರ್ಮೋನಿಯ ಮುಂತಾದುವು ಮುಖ್ಯವಾದುವು. ವಿದ್ವಾಂಸರು ಧನಾಪೇಕ್ಷೆಯಿಲ್ಲದೆ ಸ್ವಯಂ ಪ್ರೇರಣೆಯಿಂದ ಭಾಗವಹಿಸುವ ರಾಯಲ್ ಕಾರಲ್ ಸೊಸೈಟಿ, ದಿ ಬಾಖ್ ಕಾಯ್ರ್, ಹಡರ್ಸ್‌ಫೀಲ್ಡ್ ಕಾಯ್ರ್ ಮತ್ತು ಷೆಫೀಲ್ಡ್ ಕಾಯ್ರ್‌ಗಳನ್ನಿಲ್ಲಿ ಉಲ್ಲೇಖಿಸಬಹುದು. ಬ್ಯಾಂಕು, ಶಾಲೆ, ವ್ಯಾಪಾರೀಸಂಸ್ಥೆಗಳು ಮುಂತಾದವುಗಳಲ್ಲಿರುವ ಬಡವರಿಗೆ ಅಥವಾ ಮಧ್ಯಮ ವರ್ಗದವರಿಗೆ ಸುಲಭ ದರಗಳಲ್ಲಿ ಪ್ರಸಿದ್ಧವೂ ಉತ್ಕೃಷ್ಟವೂ ಆದ ಸಂಗೀತಕ್ಕೆ ಟಿಕೆಟ್ಟುಗಳನ್ನು ಒದಗಿಸುವ ಹಲವು ಸಂಸ್ಥೆಗಳಿವೆ. ಮಕ್ಕಳಿಗಾಗಿ ನಡೆಸುವ, ಮಕ್ಕಳೇ ನಡೆಸುವ, ಸಂಗೀತ ಕಚೇರಿಗಳನ್ನು ಅರ್ನೆಸ್ಟ್ ರೀಡ್ ಮತ್ತು ಸರ್ ರಾಬರ್ಟ್ ಮೇಯರ್ ಪ್ರಾರಂಭಿಸಿದರು. ಇವು ಇಂದು ಪಾಶ್ಚಾತ್ಯ ಪ್ರಪಂಚದಲ್ಲೆಲ್ಲ ಅತ್ಯಂತ ಜನಪ್ರಿಯವಾಗಿವೆ.

ಇಂಗ್ಲೆಂಡಿನಲ್ಲಿ ನಡೆಯುವ ಸಂಗೀತ ಸಂಶೋಧನೆ, ಕಚೇರಿಗಳ ವರ್ತಮಾನ, ಕಲಾವಿದರ ಪರಿಚಯ, ಗ್ರಂಥವಿಮರ್ಶೆ ಮುಂತಾದ ವಿಷಯಗಳನ್ನು ಮ್ಯೂಸಿಕ್ ಅಂಡ್ ಲೆಟರ್ಸ್, ಮ್ಯೂಸಿಕ್ ರೆವ್ಯೂ, ಮ್ಯೂಸಿಕ್ ಟೈಮ್ಸ್, ಟೆಂಪೋ, ಮಂತ್ಲಿ ಮ್ಯೂಸಿಕಲ್ ರಿಕಾರ್ಡ್ ಮೊದಲಾದ ನಿಯತಕಾಲಿಕ ಪತ್ರಿಕೆಗಳು ಪ್ರಕಟಿಸುತ್ತವೆ. ಬ್ರಿಟಿಷ್ ಮ್ಯೂಸಿಯಮ್ಮಿನ ಸಂಗೀತ ವಿಭಾಗ, ಕೇಂಬ್ರಿಜ್, ಆಕ್ಸ್‌ಫರ್ಡ್ ಮುಂತಾದ ಕೇಂದ್ರಗಳಲ್ಲೂ ಲಂಡನ್ ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್ ಸಂಸ್ಥೆಯಲ್ಲೂ ರಾಯಲ್ ಸೊಸೈಟಿ ಆಫ್ ಮ್ಯೂಸಿಕ್ ಸಂಸ್ಥೆಯಲ್ಲೂ ಸಂಶೋಧನೆ, ಶಾಸ್ತ್ರಜಿಜ್ಞಾಸೆಗಳು ನಡೆಯುತ್ತವೆ. ಬಾರ್‌ಕ್ಲೇ ಸ್ಕ್ವೈರ್, ಎಡ್ವರ್ಡ್ ಡೆಂಟ್, ಜೆರಾಲ್ಡ್ ಏಬ್ರಾಹಾಂ, ಜೆ.ಎ. ವೆಸ್ಟ್ರಪ್, ಬೊಸಾಂಕೆ, ಎಚ್. ಜಿ. ಫಾರ್ಮರ್, ಆರ್ನಲ್ಡ್ ಬಾಕೆ, ರಿಚರ್ಡ್ ಮಾರಿಸ್ ಮೊದಲಾದ ಪ್ರಸಿದ್ಧ ಸಂಗೀತ ಶಾಸ್ತ್ರಜ್ಞರನ್ನು ಇಲ್ಲಿ ಹೆಸರಿಸಬಹುದು.

ಪಾಶ್ಚಾತ್ಯ ಪ್ರಪಂಚದಲ್ಲೆಲ್ಲ ಹರಡಿರುವಂತೆ ಬೀಟ್ಲ್ಸ್, ಹಿಪ್ಪಿ, ಪಾಪ್ ಮುಂತಾದ ಅರಾಜಕ, ಸ್ವೇಚ್ಛಾಚಾರದ ಸಂಗೀತ ಆಂಗ್ಲ ತರುಣ ವರ್ಗವನ್ನು ಕಳೆದ ಕೆಲವು ದಶಕಗಳಿಂದಲೂ ಗಮನಾರ್ಹವಾಗಿ ಪ್ರಭಾವಿತಗೊಳಿಸಿವೆ. (ಆರ್.ಎಸ್.ಎನ್.)

**ಇಂಚ್‌ಬಾಲ್ಡ್, ಎಲಿಜ಼ಬೆತ್:** 1753–1821. ಇಂಗ್ಲಿಷ್ ಕಾದಂಬರಿಕಾರ್ತಿ, ನಟಿ. ಜಾನ್ ಸಿಂಪ್ಸನ್ ಎಂಬ ರೈತನ ಮಗಳು. ಜನನ ಸನ್ನಿಂಗ್‌ಫೀಲ್ಡ್‌ನಲ್ಲಿ. 18ನೆಯ ವಯಸ್ಸಿನಲ್ಲಿ ಮನೆ ತೊರೆದು ಲಂಡನ್ನಿಗೆ ಹೋಗಿ ಇಂಚ್‌ಬಾಲ್ಡನ ಸಹನಟಿಯಾಗಿ ಕೆಲಸ ಮಾಡತೊಡಗಿದಳು. ಅನಂತರ ಅವನನ್ನೇ ವರಿಸಿದಳು (1772). ಗಂಡ ತೀರಿಕೊಂಡ ಮೇಲೆ 10 ವರ್ಷಗಳವರೆಗೂ ಪ್ರಮುಖವಾಗಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ನಟಿಯಾಗಿ ಕೆಲಸ ಮಾಡಿದಳು. ಅನಂತರ ಅನೇಕ ನಾಟಕಗಳನ್ನು ರಚಿಸಿದಳು. 10 ಸಂಪುಟಗಳ ದಿ ಮಾಡರ್ನ್ ಥಿಯೇಟರ್ ಎಂಬ ಗ್ರಂಥಶ್ರೇಣಿಯಲ್ಲಿ ಅಂದಿನ ಅನೇಕ ನಾಟಕಗಳನ್ನು ಸಂಗ್ರಹಿಸಿದಳು. ಎ ಸಿಂಪಲ್ ಸ್ಟೋರಿ (1791), ನೇಚರ್ ಅಂಡ್ ಆರ್ಟ್ (1796) ಇವು ಈಕೆಯ ಕಾದಂಬರಿಗಳು. ಮೊದಲನೆಯದು ರಾಗೋದ್ರೇಕಗಳನ್ನುಕ್ಕಿಸುವ ಕಾದಂಬರಿಗಳಲ್ಲಿ ಮೊದಲನೆಯದೆಂದು ಇಂಗ್ಲಿಷ್ ಸಾಹಿತ್ಯದಲ್ಲೇ ಹೆಸರುವಾಸಿಯಾಗಿದೆ. (ಎಚ್.ವಿ.ಎಸ್.)

**ಇಂಜ್, ವಿಲಿಯಮ್ ರಾಲ್ಫ್:** 1860–1954. ಇಂಗ್ಲೆಂಡಿನ ಧರ್ಮಬೋಧಕ ಮತ್ತು ಉದಾತ್ತ ಗ್ರಂಥಕರ್ತ. ಯಾರ್ಕ್‌ಷೈರಿನಲ್ಲಿ ಜನ್ಮತಾಳಿದ. ಈಟನ್ನಿನಲ್ಲೂ ಕೇಂಬ್ರಿಜ್‌ನ ಕಿಂಗ್ಸ್ ಕಾಲೇಜಿನಲ್ಲೂ ಶಿಕ್ಷಣಪಡೆದ. ಅಲ್ಲಿಯೇ 1880–84ರ ವರೆವಿಗೆ ಶಿಕ್ಷಕನಾಗಿದ್ದು 1889–1904ರ ವರೆಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಫೆಲೋ ಆಗಿದ್ದ. 1905ರಲ್ಲಿ ಲಂಡನ್ನಿನಲ್ಲಿ ಆಲ್ ಸೇಂಟ್ಸ್ ಚರ್ಚಿನ ಪಾದ್ರಿಯಾಗಿದ್ದು ಪುನಃ 1907ರಲ್ಲಿ ಕೇಂಬ್ರಿಜ್‌ನಲ್ಲಿ ಮತಧರ್ಮಶಾಸ್ತ್ರದ ಪ್ರಾಧ್ಯಾಪಕನಾದ. 1911ರಲ್ಲಿ ಸೇಂಟ್ ಪಾಲ್ ಕತೀಡ್ರಲ್‌ನ ಡೀನ್ ಪದವಿಗೆ ಏರಿದ. ಅಲ್ಲಿರುವಾಗಲೇ ತನ್ನ ಉದ್ಗ್ರಂಥಗಳನ್ನು ರಚಿಸಿದ. ಈತನ ಗ್ರಂಥಗಳು ತತ್ತ್ವಶಾಸ್ತ್ರ ಪ್ರಪಂಚದಲ್ಲಿ ಅತ್ಯಂತ ಬೋಧಪ್ರದವಾಗಿವೆ. ಭಾಷೆ ಅತಿ ಸುಂದರವಾಗಿದೆ. ಈತನ ಮುಖ್ಯ ಕೃತಿಗಳು: ಕ್ರಿಶ್ಚಿಯನ್ ಮಿಸ್ಟಿಸಿಸಂ (1899); ಫೇತ್ ಅಂಡ್ ನಾಲೆಜ್; ಸ್ಟಡೀಸ್ ಆಫ್ ಇಂಗ್ಲಿಷ್ ಮಿಸ್ಟಿಕ್ಸ್; ಟ್ರೂತ್ ಅಂಡ್ ಫಾಲ್ಸ್‌ಹುಡ್ ಇನ್ ರಿಲಿಜನ್ (1906); ಪರ್ಸನಲ್ ಐಡಿಯಲಿಸಂ ಅಂಡ್ ಮಿಸ್ಟಿಸಿಸಂ: ಫೇತ್ ಅಂಡ್ ಇಟ್ಸ್ ಸೈಕಾಲಜಿ; ದಿ ಫಿಲಾಸಫಿ ಆಫ್ ಪ್ಲಾಟೈನಸ್ (1918); ಔಟ್‌ಸ್ಪೋಕನ್ ಎಸ್ಸೇಸ್ (1919, 1922), ಸೊಸೈಟಿ ಇನ್ ರೋಮ್ ಅಂಡರ್ ದಿ ಸೀಸರ್ಸ್ (1886); ದಿ ಚರ್ಚ್ ಇನ್ ದಿ ವರ್ಲ್ಡ್; ಗಾಡ್ ಅಂಡ್ ದಿ ಅಸ್ಟ್ರಾನಮರ್ಸ್; ಎ ರಸ್ಟಿಕ್ ಮಾರಲಿಸ್ಟ್; ದಿ ಫಾಲ್ ಆಫ್ ದಿ ಐಡಲ್ಸ್; ಮಿಸ್ಟಿಸಿಸಂ ಇನ್ ರಿಲಿಜನ್ (1947); ದಿ ಎಂಡ್ ಆಫ್ ದಿ ಏಜ್ (1948).

ಪ್ಲೇಟೋನ ಅನಂತರ ಬಂದ ಸುಪ್ರಸಿದ್ಧ ತತ್ತ್ವಜ್ಞಾನಿಯಾದ ಪ್ಲಾಟೈನಸ್‌ನ ಸಿದ್ಧಾಂತ ಗಳನ್ನು ಹೊಸರೀತಿಯಲ್ಲಿ ನಿರೂಪಿಸಿ ಎರಡು ಮಹತ್ತ್ವದ ಗ್ರಂಥಗಳನ್ನು ಈತ ಜಗತ್ತಿಗೆ ನೀಡಿದ್ದಾನೆ. ತಾನು ಅವನ ಶಿಷ್ಯನೆಂದೂ 30 ವರ್ಷಗಳ ಕಾಲ ಅವರ ತತ್ತ್ವಗಳನ್ನು ಅಧ್ಯಯನ ಮಾಡಿ ಅವುಗಳ ಶಾಶ್ವತ ಮೌಲ್ಯವನ್ನು ಕಂಡುಕೊಂಡವನೆಂದೂ ಹೇಳಿಕೊಂಡಿ ದ್ದಾನೆ. ಪ್ಲಾಟೈನಸ್‌ನನ್ನು ಪಾಶ್ಚಾತ್ಯರು ಸರಿಯಾಗಿ ಅರ್ಥ ಮಾಡಿಕೊಂಡಿರಲಿಲ್ಲವೆಂದು ಸ್ಪಷ್ಟಪಡಿಸಿ ಕ್ರೈಸ್ತಧರ್ಮದ ಮೂಲವನ್ನೇ ಅದರಲ್ಲಿ ತೋರಿಸಿಕೊಟ್ಟಿದ್ದಾನೆ.

ಮಾನವನ ಅಧ್ಯಾತ್ಮಜೀವನ ಪ್ರತ್ಯಕ್ಷ ಜಗತ್ತಿಗಿಂತಲೂ ಸತ್ಯವಾದುದೆಂದೂ ಭಗವಂತ ಜಗತ್ತನ್ನು ಸೃಷ್ಟಿಸಿ ತನ್ನ ಅಧೀನದಲ್ಲಿಟ್ಟುಕೊಂಡಿದ್ದಾನೆಂದೂ ಮಾನವ ತನ್ನ ವ್ಯಕ್ತಿತ್ವವನ್ನು ಭಗವಂತನ ಇಚ್ಛೆಗೆ ಒಪ್ಪಿಸಿ ಮುಕ್ತಿಪಡೆಯಬೇಕೆಂದೂ ಈತ ತನ್ನ ಗ್ರಂಥಗಳಲ್ಲಿ ಪ್ರತಿಪಾದಿಸಿ ದ್ದಾನೆ. ದೈವಸಾಕ್ಷಾತ್ಕಾರದ ಆವಶ್ಯಕತೆಯನ್ನೂ, ಮಾನವನ ನಶ್ವರತೆಯನ್ನೂ ವಿಶದಪಡಿಸಿದ್ದಾನೆ. ಸಹಜವಾದ ಅಧ್ಯಾತ್ಮಜೀವನವನ್ನು ಬಿಟ್ಟು ಅರ್ಥವಿಲ್ಲದ ಬಾಳನ್ನು ಮಾನವ ನಡೆಸುತ್ತಾನೆಂದು ಶೋಕಿಸಿದ್ದಾನೆ. ಆಧುನಿಕ ಜಗತ್ತಿನ ವೈಜ್ಞಾನಿಕ ನಾಗರಿಕತೆಯ ಅಪಾಯವನ್ನು ಕುರಿತು ಎಚ್ಚರಿಕೆ ಕೊಟ್ಟಿದ್ದಾನೆ. ಸತ್ಯ, ಧರ್ಮ, ಸೌಂದರ್ಯಗಳೇ ಅಂತಿಮ ಮೌಲ್ಯಗಳು, ಅವುಗಳ ಅಂತಿಮ ಸಮರಸವೇ ಭಗವಂತ ಎಂದು ಹೇಳಿದ್ದಾನೆ. ಇವನನ್ನು ಬ್ರಿಟನ್ನಿನ ಅಧ್ಯಾತ್ಮ ಜೀವನದ ಪ್ರತಿನಿಧಿ ಎಂದೂ ಮಾರ್ಗದರ್ಶಕನೆಂದೂ ಹೇಳಬಹುದು.

ತತ್ತ್ವಶಾಸ್ತ್ರಕ್ಕೂ ಮತಧರ್ಮಶಾಸ್ತ್ರಕ್ಕೂ ವಿರೋಧವಿಲ್ಲವೆಂದೂ ಅವೆರಡೂ ಪರಸ್ಪರ ಪೋಷಕಗಳೆಂದೂ ಸಿದ್ಧಾಂತಪಡಿಸಿದವನೀತ. ಭಗವದನುಭವ ವಿಚಾರಶೀಲವಲ್ಲವೆಂದೂ ವಿಚಾರದ ಪರಮಾವಧಿಯೇ ದೈವಸಾಕ್ಷಾತ್ಕಾರವೆಂದೂ ಹೇಳಿದ್ದಾನೆ. ಹೀಗೆ ಆಧುನಿಕ ತತ್ತ್ವಶಾಸ್ತ್ರದ ಸೀಮೆಯನ್ನು ಈತ ವಿಸ್ತರಿಸಿದ್ದಾನೆ. ಜೀವನದರ್ಶನತತ್ತ್ವ ದೇಶಕಾಲಾತೀತ ವಾದುದು ಎಂದು ಪ್ರಚುರಪಡಿಸಿದ್ದಾನೆ. ಐತಿಹಾಸಿಕ ಸಂಶೋಧನೆಯಿಂದ ಸಂಸ್ಕೃತಿಯ ತಾತ್ತ್ವಿಕ ಹಿನ್ನೆಲೆಯನ್ನು ಪರಿಶೀಲಿಸಿದ್ದಾನೆ.

ಜರ್ಮನಿಯ ಕ್ಯಾಂಟ್ ಮತ್ತು ಹೆಗೆಲ್ಲರ ತತ್ತ್ವಗಳಿಗೆ ಈತ ಮನ್ನಣೆ ಕೊಟ್ಟಿಲ್ಲ. ಜರ್ಮನಿಯ ಅರ್ನ್ಸ್ಟ್ ಟ್ರಾಯೆಲ್ಟ್ಷ್ ಎಂಬ ತಾತ್ತ್ವಿಕನೇ ಅತ್ಯುತ್ತಮ ದಾರ್ಶನಿಕನೆಂದು ಈತನ ಭಾವನೆ (**ನೋಡಿ– ಟ್ರಾಯಲ್ಟ್ಷ್–ಅರ್ನ್‌ಸ್ಟ್**). (ಎಸ್.ಎಸ್.ಆರ್.)

**ಇಂಜೆಲೊ, ಜೀನ್:** 1820–97. ಆಂಗ್ಲ ಕವಯಿತ್ರಿ. ಲಿಂಕನ್‌ಷೈರಿನ ಬೋಸ್ಟನ್ ಎಂಬಲ್ಲಿ ಈಕೆಯ ಜನನ. ಭಕ್ತಿಗೀತೆಗಳನ್ನೂ ಹಾಡುಗಬ್ಬಗಳನ್ನೂ ಭಾವಗೀತೆಗಳನ್ನೂ ಬರೆದಿದ್ದಾಳೆ. ಕ್ಯಾಲ್‌ವರ್ಲಿ ಎಂಬಾತ ಇವುಗಳನ್ನು ಅಣಕ ಮಾಡಿ ಜನಪ್ರಿಯ ಹಾಸ್ಯ ಪದ್ಯ ಬರೆದಿದ್ದರಿಂದ ಈ ಕೃತಿಗಳು ನೆನಪಿನಲ್ಲುಳಿದಿವೆ. ಹೈ ಟೈಡ್ ಆನ್ ದಿ ಕೋಸ್ಟ್ ಆಫ್ ಲಿಂಕನ್‌ಷೈರ್ (1871) ಎಂಬುದು ಈಕೆಯ ಅತ್ಯುತ್ತಮ ಕಿರುಗವಿತೆಯೆಂದು ಪರಿಗಣಿಸಲಾ ಗಿದೆ. ಎ ಸ್ಟೋರಿ ಆಫ್ ಡೂಮ್ (1867) ಎಂಬುದು ಪ್ರಕಟವಾದಾಗ ಅದಕ್ಕೆ ಒಳ್ಳೆಯ ಸ್ವಾಗತ ದೊರಕಿತು. 'ಡಿವೈಡೆಡ್' ಎಂಬುದೂ ಒಂದು ಯಶಸ್ವೀಕವಿತೆ.

ಈಕೆ ಮಕ್ಕಳ ಸಾಹಿತ್ಯವನ್ನೂ ಕಾದಂಬರಿಗಳನ್ನೂ ಬರೆದಿದ್ದಾಳೆ. ಮೋಪ್ಸಾ ದಿ ಫೇರಿ (1867) ಎಂಬುದು ಈಕೆ ಮಕ್ಕಳಿಗಾಗಿ ಬರೆದ ಕಥೆಗಳಲ್ಲಿ ಪ್ರಸಿದ್ಧ. ಫೇಟೆಡ್ ಟು ಬಿ ಫ್ರೀ ಎಂಬ ಕಾದಂಬರಿ ನಿಯತಕಾಲಿಕವೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು (1875). ಆಫ್ ಸ್ಕೆಲ್ಲಿಗ್ಸ್ (1877), ಸರಾ ಡಿ ಬೆರೆಂಜರ್ (1879), ಡಾನ್ ವಾನ್ (1881) ಜಾನ್‌ಜೆರೋಮ್ (1886) ಎಂಬುವು ಆಮೇಲೆ ಬಂದ ಕಾದಂಬರಿಗಳು.

(ಎಚ್.ವಿ.ಎಸ್.;ಎನ್.ಎಸ್.ಎಲ್.)

**ಇಂಟರ್‌ಫಿರೋಮೀಟರ್: ನೋಡಿ–ವ್ಯತಿಕರಣಮಾಪಕ.**

**ಇಂಟರ್‌ಫೆರಾನ್:** ಕಶೇರುಕಗಳಲ್ಲಿ ಇನ್‌ಫ್ಲುಯೆಂಜ ಮುಂತಾದ ಸೋಂಕು ರೋಗಗಳು ಅಂಟಿದಾಗ ರೋಗಕಾರಣವಾದ ನಂಜಿನ (ವೈರಸ್) ಬೆಳವಣಿಗೆಯನ್ನು ತಡೆಗಟ್ಟಲು ಪ್ರಾಣಿಗಳ ಕೋಶಗಳಲ್ಲಿ ಉತ್ಪನ್ನವಾಗುವ ಒಂದು ವಿಧದ ರಕ್ಷಣಾ ಪ್ರೋಟೀನ್. ಇಂಗ್ಲಿಷ್ ಭಾಷೆಯಲ್ಲಿ ಇಂಟರ್‌ಫಿಯರ್ ಪದದ ಅರ್ಥ ತಡೆಗಟ್ಟು ಎಂದಿದೆ. ಅಲಿಕ್ ಇಸ್ಸಾಕ್ಸ್ ಎಂಬ ಜೀವರಸಾಯನ ವಿಜ್ಞಾನಿ ಇದನ್ನು ಕಂಡುಹಿಡಿದ (1957). ನಂಜು ಪ್ರಥಮಬಾರಿಗೆ ಸೋಂಕಿದಾಗ ದೇಹದ ಕೋಶಗಳು 24 ಗಂಟೆಗಳ ಕಾಲ ಮಾತ್ರ ಈ ವಸ್ತುವನ್ನು ಉತ್ಪಾದಿಸುತ್ತವೆ. ಎರಡನೆಯ ಬಾರಿಗೆ ಸೋಂಕಿದಾಗ ಇದರ ಉತ್ಪತ್ತಿ ಅಧಿಕ ಪ್ರಮಾಣದಲ್ಲಿ ಪ್ರಾರಂಭವಾಗಿ ನಂಜು ಸೋಂಕಿದ 78–90 ಗಂಟೆಗಳ ಅನಂತರ ಅತ್ಯುನ್ನತ ಮಟ್ಟವನ್ನು ಮುಟ್ಟಿ ಅನಂತರ ತಗ್ಗುತ್ತದೆ. ಇಂಟರ್‌ಫೆರಾನ್ ತನ್ನ ಉತ್ಪತ್ತಿಗೆ ಕಾರಣವಾದ ನಂಜನ್ನು ಮಾತ್ರವಲ್ಲದೆ ಅನೇಕ ಇತರ ತರಹದ ನಂಜುಗಳ ಬೆಳೆವಣಿಗೆಯನ್ನೂ ತಡೆಗಟ್ಟಬಲ್ಲುದು. ಇನ್‌ಫ್ಲುಯಂಜ ನಂಜಿನ ತರಹದ ಆರ್.ಎನ್.ಎ.ಗಳನ್ನೊಳಗೊಂಡ (ರೈಬೋಸ್ ನ್ಯೂಕ್ಲಿಯಿಕ್ ಆಮ್ಲ) ನಂಜುಗಳು ಮತ್ತು ಸಿಡುಬಿನ ನಂಜಿನ ತರಹದ ಡಿ.ಎನ್.ಎ.ಗಳನ್ನೊಳಗೊಂಡ (ಡಿಆಕ್ಸಿ ರೈಬೋಸ್ ನ್ಯೂಕ್ಲಿಯಿಕ್ ಆಮ್ಲ) ನಂಜುಗಳ ಬೆಳೆವಣಿಗೆಯನ್ನು ಇಂಟರ್‌ಫೆರಾನ್ ತಡೆಗಟ್ಟಬಲ್ಲುದು. ಈ ಗುಣದಿಂದಾಗಿ ಇಂಟರ್‌ಫೆರಾನ್ ಕೋಶಗಳ ಸ್ವಭಾವಜನ್ಯವಾದ ರಕ್ಷಣಾಕ್ರಮವಿರಬಹುದೆಂಬ ಅಭಿಪ್ರಾಯಮೂಡಿದೆ.

ಜೀವಂತ ಇನ್‌ಫ್ಲುಯೆಂಜ ನಂಜನ್ನಾಗಲಿ $57^0$ ಸೆ. ಗ್. ಕಾಯಿಸಿ ಕೊಲ್ಲಲ್ಪಟ್ಟ ನಂಜನ್ನಾಗಲೀ ಕೋಳಿಯ ಭ್ರೂಣದ ಕೋಶಗಳಿಗೆ ಸೋಂಕಿಸುವುದರಿಂದ ಈ ಪ್ರೋಟೀನನ್ನು ಉತ್ಪತ್ತಿ ಮಾಡಬಹುದು. ಕರುವಿನ ಮೂತ್ರಜನಕಾಂಗ (ಕಿಡ್ನಿ) ಕೋಶಗಳಲ್ಲಿ ಮತ್ತು ಮೂಗಿಲಿಯ ಮಿದುಳಿನ ಕೋಶಗಳಲ್ಲಿ ಸೋಂಕು ತಗುಲಿದ ಅನಂತರ ಇಂಟರ್‌ಫೆರಾನ್ ಉತ್ಪತ್ತಿಯಾಗುವುದು. ದೇಹದ ಎಲ್ಲ ಅಂಗಾಂಶಗಳ ಕೋಶಗಳಿಗೂ ಈ ಪ್ರೋಟೀನನ್ನು ಉತ್ಪತ್ತಿಮಾಡಬಲ್ಲ ಸಾಮರ್ಥ್ಯವನ್ನು ಪಡೆದಿವೆಯಾದರೂ ಉತ್ಪತ್ತಿಯ ಮಟ್ಟದಲ್ಲಿ ವ್ಯತ್ಯಾಸಗಳಿ ರುತ್ತವೆ. ಮೂಗಿಲಿಯಲ್ಲಿ ಮಿದುಳಿನ ರೋಗಗಳೇ ಅಧಿಕ ಪ್ರಮಾಣದಲ್ಲಿ ಇಂಟರ್‌ಫೆರಾನನ್ನು ಉತ್ಪತ್ತಿ ಮಾಡುತ್ತವೆ. ಇಂಟರ್‌ಫೆರಾನ್ ಉತ್ಪತ್ತಿಮಾಡುವ ಒಂದು ವಿಧಾನದಲ್ಲಿ ಬದುಕಿರುವ ಮೂಗಿಲಿಯ ಮಿದುಳಿಗೆ ΩN–ವೈರಸ್‌ಗಳನ್ನು ಸೇರಿಸಲಾಯಿತು. 3–4 ದಿವಸಗಳ ಅನಂತರ ಮಿದುಳುಗಳನ್ನು ಬೇರ್ಪಡಿಸಿ ಹ್ಯಾಂಕ್‌ನ ಉಪ್ಪಿನದ್ರಾವಣದಲ್ಲಿ ಸಮ್ಮಿಲನ ಮಾಡಿ ಸಮ್ಮಿಶ್ರಣವನ್ನು 44,000 x ಗುರುತ್ವಾಕರ್ಷಣೆಯಲ್ಲಿ (44000g) ಎರಡು ಬಾರಿ ಭ್ರಮಣಯಂತ್ರದಲ್ಲಿ ತಿರುಗಿಸಲಾಯಿತು. ಈ ಕ್ರಮದಿಂದ ನಂಜು ಒತ್ತಡ ರೂಪದಲ್ಲಿ ಶೇಖರವಾಗುತ್ತದೆ. ಇಂಟರ್‌ಫೆರಾನ್ ಮೇಲುದ್ರಾವಣದಲ್ಲಿ ಇರುತ್ತದೆ.

ಈ ಪ್ರೋಟೀನಿನ ಅಣುತೂಕ $35,000 \pm 1500$ PH-2 ರಲ್ಲಿ ಸ್ಥಿರವಾಗಿರುತ್ತದೆ. 60 ಸೆ.ಗೆ. ಉಷ್ಣತೆಯಲ್ಲಿ 30 ನಿಮಿಷ ಕಾಲ ಕಾಯಿಸಿದರೂ ತನ್ನ ಗುಣವನ್ನು ಕಳೆದು ಕೊಳ್ಳುವುದಿಲ್ಲ. ಆದರೆ $100^0$ ಸೆ. ಗ್. ಉಷ್ಣತೆಯಲ್ಲಿ 5 ನಿಮಿಷಗಳ ಕಾಲ ಕಾಯಿಸಿದರೂ ಗುಣ ಬಹುಮಟ್ಟಿಗೆ ನಷ್ಟವಾಗುವುದು. ಪೆಪ್ಸಿನ್ ಮತ್ತು ಟ್ರಿಪ್ಸಿನ್ ಕಿಣ್ವಗಳು ಇಂಟರ್‌ಫೆರಾನಿ ನೊಂದಿಗೆ ವರ್ತಿಸಿದಾಗ ಅದರ ಗುಣ ನಷ್ಟವಾಗುವುದು. ಆದರೆ ಆರ್.ಎನ್.ಎ ಕಿಣ್ವ ಈ ಪ್ರೋಟೀನನ್ನು ನಿಶ್ಚೇತನಗೊಳಿಸುವುದಿಲ್ಲ.

ಕೋಶಗಳಲ್ಲಿ ಇಂಟರ್‌ಫೆರಾನಿನ ಉತ್ಪತ್ತಿಯನ್ನು ನಂಜು ಪ್ರೇರೇಪಿಸುತ್ತದೆ. ಇದರ ಕಾರಣ ಅವುಗಳಲ್ಲಿರುವ ನ್ಯೂಕ್ಲಿಯಿಕ್ ಆಮ್ಲ ಅತಿನೇರಳೆ ಕಿರಣಗಳಿಂದ ಸಂಸ್ಕರಿಸಲ್ಪಟ್ಟ ನಂಜುಗಳು ಈ ಪ್ರೋಟೀನಿನ ಉತ್ಪತ್ತಿಯನ್ನು ಪ್ರಚೋದಿಸಲಾರವು. ಕೋಶಗಳಲ್ಲಿ ಇದರ ಉತ್ಪತ್ತಿಕೋಶಗಳ ಕೇಂದ್ರದಲ್ಲಿರುವ ಡಿಎನ್‌ಎ ವಸ್ತುವಿನ ಹತೋಟಿಯಲ್ಲಿದೆ. ಇಂಟರ್‌ಫೆರಾನಿನ ಉತ್ಪತ್ತಿಗೆ ಬೇಕಾದ ಮಾಹಿತಿಯನ್ನು (ಇನ್‌ಫರ್ಮೇಷನ್) ಡಿಎನ್‌ಎ ಅನುವಂಶಿಯವಾಗಿ ಪಡೆದಿರುತ್ತದೆ. ನಂಜು ಸೋಂಕಿದಾಗ ಡಿಎನ್‌ಎ ಇಂಟರ್‌ಫೆರಾನಿನ ಉತ್ಪತ್ತಿಗೆ ಬೇಕಾದ ದೂತ (ಮೆಸೆಂಜರ್) ಆರ್‌ಎನ್‌ಎ ಎಂಬ ನೂತನ ರೈಬೋನ್ಯೂಕ್ಲಿಯಿಕ್ ಆಮ್ಲಗಳನ್ನು ಸೃಷ್ಟಿಸುತ್ತದೆ. ಇವುಗಳ ಸಹಾಯದಿಂದ ಕೋಶದ ಆರ್‌ಎನ್‌ಎ ಇಂಟರ್‌ಫೆರಾನನ್ನು ಉತ್ಪತ್ತಿ ಮಾಡುತ್ತದೆ. ಡಿಎನ್‌ಎ ನಿರ್ದೇಶಿತವಾದ ನೂತನ ದೂತ ಆರ್‌ಎನ್‌ಎ ಸೃಷ್ಟಿಯನ್ನು

ತಡೆಗಟ್ಟಬಲ್ಲ ಯಾವುದೊಂದು ವಸ್ತುವೂ ಇಂಟರ್‌ಫೆರಾನಿನ ಉತ್ಪತ್ತಿಯನ್ನು ನಿರೋಧಿಸಬಲ್ಲದು. ಆಕ್ಟಿನೋಮೈಸಿನ್ ಡಿ ಮತ್ತು ಮೈಟೋಮೈಸಿನ್ ಎಂಬ ಜೀವನಿರೋಧಕಗಳು ಕೋಶಗಳಲ್ಲಿ ಈ ಪ್ರೋಟೀನಿನ ಉತ್ಪತ್ತಿಯನ್ನು ತಡೆಯುತ್ತವೆ. ಆತಿಥೇಯ ಕೋಶಗಳನ್ನು ಅತಿನೇರಳೆ ಕಿರಣಗಳಿಂದ ಸಂಸ್ಕರಿಸಿದರೂ ಈ ವಸ್ತು ಉತ್ಪತ್ತಿಯಾಗುವುದಿಲ್ಲ. ಕೋಶಗಳಲ್ಲಿ ಆರ್‌ಎನ್‌ಎ ಉತ್ಪತ್ತಿಯನ್ನು ತಡೆಗಟ್ಟುವ ಪಿಕೊರ್ನಾ ಗುಂಪಿನ ನಂಜುಗಳು ಇಂಟರ್‌ಫೆರಾನಿನ ಉತ್ಪತ್ತಿಯನ್ನು ಪ್ರೇರೇಪಿಸುವುದಿಲ್ಲ. ಈ ಜಾತಿಯ ನಂಜುಗಳು ಆಕ್ರಮಿಸಿದ ಅನಂತರ ಕೋಶಗಳನ್ನು ಇಂಟರ್‌ಫೆರಾನಿನಿಂದ ಸಂಸ್ಕರಿಸಿದರೂ ನಂಜುಗಳ ಬೆಳೆವಣಿಗೆ ನಿಲ್ಲುವುದಿಲ್ಲ. ಆದರೆ ಪೂರ್ವಭಾವಿಯಾಗಿ ಇಂಟರ್‌ಫೆರಾನಿನಿಂದ ಸಂಸ್ಕರಿಸಲಾದ ಕೋಶಗಳಲ್ಲಿ ಈ ಜಾತಿಯ ನಂಜುಗಳು ಬೆಳೆಯುವುದಿಲ್ಲ. ಕೋಶಗಳಲ್ಲಿ ಇಂಟರ್‌ಫೆರಾನಿನ ಉತ್ಪತ್ತಿಕೋಶ ನಂಜಿನ ಸೋಂಕನ್ನು ತಡೆಗಟ್ಟುವ ಪ್ರಥಮ ರಕ್ಷಣಾಕ್ರಮವಿರಬಹುದು. ನಂಜುಗಳು ತಮ್ಮ ಪುನರುತ್ಪತ್ತಿಗೆ ಆತಿಥೇಯ ಕೋಶಗಳಲ್ಲಿ ತಮಗೇ ವಿಶಿಷ್ಟವಾದ ಪ್ರೋಟೀನ್ ಮತ್ತು ನ್ಯೂಕ್ಲಿಯಿಕ್ ಆಮ್ಲವನ್ನು ಉತ್ಪತ್ತಿ ಮಾಡಿಕೊಳ್ಳುತ್ತವೆ. ಇಂಟರ್‌ಫೆರಾನಿನಿಂದ ಸಂಸ್ಕರಿಸಿದ ಕೋಶಗಳಲ್ಲಿ ನಂಜುಗಳಿಗೆ ವಿಶಿಷ್ಟವಾದ ಪ್ರಾಥಮಿಕ ಪ್ರೋಟೀನುಗಳು ಉತ್ಪತ್ತಿಯಾಗುತ್ತವೆ. ಆದರೆ ಆರ್‌ಎನ್‌ಎ ಆಗಲಿ, ಸೋಂಕಿಗೆ ಕಾರಣವಾದ ಆರ್‌ಎನ್‌ಎ ಆಗಲಿ ಉತ್ಪತ್ತಿಯಾಗುವುದಿಲ್ಲ. ಉದಾಹರಣೆಗೆ, ಇಂಟರ್‌ಫೆರಾನ್ ಸೆಮ್ಲಿಕ್ಫಾರೆಸ್ಟ್ ನಂಜುಗಳ ಬೆಳೆವಣಿಗೆಗೆ ಬೇಕಾದ ದ್ವಿತಂತು (ಡಬಲ್ ಸ್ಟ್ಯಾಂಡರ್ಡ್) ಆರ್‌ಎನ್‌ಎ ರಚನೆಯನ್ನು ತಡೆಗಟ್ಟುತ್ತದೆ. ಆದ್ದರಿಂದ ಈ ಪ್ರೋಟೀನು ನಂಜುಗಳ ಉತ್ಪತ್ತಿಗೆ ಕಾರಣವಾದ ಜೈವಿಕ ಕ್ರಿಯೆಗಳಲ್ಲಿ ಆರ್‌ಎನ್‌ಎಗಳ ರಚನೆಗಳ ಮಧ್ಯವರ್ತಿ ಹಂತಗಳನ್ನು ತಡೆಗಟ್ಟಬಹುದು. ನಂಜಿನಿಂದ ಆಕ್ರಮಿತವಾದ ಕೋಶಗಳಲ್ಲಿ ನಂಜಿಗೆ ವಿಶಿಷ್ಟವಾದ ನ್ಯೂಕ್ಲಿಯಿಕ್ ಆಮ್ಲಗಳ ರಚನೆಗೆ ಅಡ್ಡಬರುವ ಪ್ರೋಟೀನುಗಳು ಉತ್ಪತ್ತಿಯಾಗುತ್ತವೆ. ಇಂಟರ್‌ಫೆರಾನ್ ನಂಜುಗಳ ಬೆಳೆವಣಿಗೆಯನ್ನು ನೇರವಾಗಿ ತಡೆಗಟ್ಟದೆ ನ್ಯೂಕ್ಲಿಯಿಕ್ ಆಮ್ಲಗಳ ರಚನೆಗೆ ಅಡ್ಡಬರುವ ಪ್ರೋಟೀನುಗಳ ಉತ್ಪತ್ತಿಗೆ ಕಾರಣವಾಗುವುದರ ಮೂಲಕ ಪರೋಕ್ಷವಾಗಿ ಅಡ್ಡಿಮಾಡಬಹುದು. ಕೋಶಗಳು ಸ್ವಭಾವಜನ್ಯವಾಗಿ ಈ ಪ್ರೋಟೀನುಗಳನ್ನು ಉತ್ಪತ್ತಿಮಾಡುವ ಸಾಮರ್ಥ್ಯಪಡೆದಿದ್ದರೂ ಸಾಧಾರಣ ಪರಿಸ್ಥಿತಿಯಲ್ಲಿ ಇವುಗಳ ಆವಶ್ಯಕತೆಯಿಲ್ಲದಿರುವುದರಿಂದ ಈ ಸಾಮರ್ಥ್ಯ ಹತೋಟಿಗೊಳಗಾಗಿರುತ್ತದೆ. ಇಂಟರ್‌ಫೆರಾನ್ ಈ ಹತೋಟಿಯನ್ನು ಹೋಗಲಾಡಿಸಿ ನಂಜುಗಳ ಬೆಳೆವಣಿಗೆಗೆ ಅಡ್ಡಬರುವ ಪ್ರೋಟೀನುಗಳ ಉತ್ಪತ್ತಿಗೆ ಅವಕಾಶಮಾಡಿಕೊಡುತ್ತದೆ. (ಎಚ್.ಎಸ್.ಎಸ್.)

**ಇಂಟರ್‌ಲಾಕೆನ್:** ಸ್ವಿಟ್ಜರ್‌ಲೆಂಡಿನ ಬರ್ನ್ ಸಂಸ್ಥಾನದ ಒಂದು ಪಟ್ಟಣ. ಆರೆ ಎಂಬ ನದಿಯ ದಡದ ಮೇಲಿದೆ. ಪೂರ್ವದಲ್ಲಿ ಬ್ರೀನ್ಸ್ ಮತ್ತು ಪಶ್ಚಿಮದಲ್ಲಿ ಟೂನ್ ಈ ಎರಡೂ ಸರೋವರಗಳ ಮಧ್ಯದ ಬಯಲಲ್ಲಿರುವುದರಿಂದ ಈ ಹೆಸರು ಬಂದಿದೆ. ಪ್ರಸಿದ್ಧ ಪ್ರವಾಸಿಕೇಂದ್ರ ಮತ್ತು ಸುಂದರ ನಗರ, ಜನಸಂಖ್ಯೆ 5389 (2009). ಇವರಲ್ಲಿ ಜರ್ಮನ್ ಭಾಷೆ ಬಳಸುವ ಪ್ರಾಟೆಸ್ಟಂಟರೇ ಹೆಚ್ಚು. 4115ಮೀ ಎತ್ತರವಿರುವ ಯೂಂಗ್‌ಫ್ರೌ ಶಿಖರದ ಭವ್ಯನೋಟ ಪ್ರವಾಸಿಗರನ್ನು ಆಕರ್ಷಿಸಿದೆ. ಇದು ಸ್ವಿಟ್ಜರ್‌ಲೆಂಡಿನ ಅತ್ಯಂತ ಪ್ರಾಚೀನ ಪ್ರವಾಸಿತಾಣಗಳಲ್ಲೊಂದು. ಊರಿನ ನಿವಾಸಿಗಳಿಗಿಂತ ಬಂದುಹೋಗುವ ಪ್ರವಾಸಿಗರೇ ಹೆಚ್ಚು. 1130ರಲ್ಲಿ ಕ್ರೈಸ್ತಧರ್ಮ ಮಂಡಲಿಯ ಸನ್ಯಾಸಿನಿ ಆಶ್ರಮವೊಂದನ್ನು ನಿರ್ಮಿಸಲಾಯಿತು. ಅವರೆಲ್ಲ ಅಗಸ್ಟೀನ್ ಪಂಥಕ್ಕೆ ಸೇರಿದವರಾಗಿದ್ದರು. 1528ರಲ್ಲಿ ಆ ಆಶ್ರಮವನ್ನು ನಿರ್ಮೂಲಗೊಳಿಸಲಾಯಿತು. ಹಿಂದಿನ ಆಶ್ರಮದ ಮುಖ್ಯ ಕಟ್ಟಡವನ್ನು ಸಂಸ್ಥಾನದ ಕೇಂದ್ರ ಕಚೇರಿಯನ್ನಾಗಿಯೂ ಇತರ ಕಟ್ಟಡಗಳನ್ನು ಆರಾಧನಾಮಂದಿರಗಳನ್ನಾಗಿಯೂ ಉಪಯೋಗಿಸಲಾಗುತ್ತಿದೆ. ಇತ್ತೀಚೆಗೆ ಇಲ್ಲಿ ಉಣ್ಣೆ ನೇಯ್ಗೆ ಉದ್ಯಮ ಬೆಳೆದಿದೆ. *

**ಇಂಡಿ:** ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಈ ತಾಲ್ಲೂಕು ಪೂರ್ವಕ್ಕೆ ಗುಲ್ಬರ್ಗ ಜಿಲ್ಲೆ, ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ರಾಜ್ಯ. ದಕ್ಷಿಣಕ್ಕೆ ಬಿಜಾಪುರ ಮತ್ತು ಸಿಂದಗಿ ತಾಲ್ಲೂಕುಗಳಿಂದ ಸುತ್ತುವರೆದಿದೆ. ವಿಸ್ತೀರ್ಣ 22,245ಚಕಿಮೀ. ಜನಸಂಖ್ಯೆ 3,56,768. ಇದರಲ್ಲಿ ಇಂಡಿ, ಚಡಚಣ ಮತ್ತು ಬಲ್ಲೊಳ್ಳಿ ಮೂರು ಸರ್ಕಲ್‌ಗಳಿದ್ದು 122 ಗ್ರಾಮಗಳಿವೆ.

ಈ ಪ್ರದೇಶ ಟ್ರ್ಯಾಪ್ ಕಲ್ಲಿನದು. ಕರಿಮಣ್ಣಿನ ಭೂಮಿ. ಸರಾಸರಿ ವಾರ್ಷಿಕ ಮಳೆ 637ಮಿಮೀ. ತಾಲ್ಲೂಕು ಉತ್ತರಕ್ಕೆ ಇಳಿಜಾರಾಗಿದೆ. ಭೀಮಾನದಿ ಈ ತಾಲ್ಲೂಕಿನ ಉತ್ತರ ಗಡಿಯಾಗಿ ಹರಿಯುವುದು. ಇಲ್ಲಿಯ ಬೋರಿ, ಸತ್ನಾಳ ಮೊದಲಾದ ತೊರೆಗಳು ಭೀಮಾನದಿಯನ್ನು ಸೇರಿಕೊಳ್ಳುತ್ತವೆ. ನೀರಾವರಿಗೆ ನಾಲೆ, ಕೆರೆ ಮತ್ತು ಬಾವಿಗಳು ಇವೆ. ಇಲ್ಲಿನ ಮುಖ್ಯಬೆಳೆ ಜೋಳ, ಹತ್ತಿ ಮತ್ತು ಸೇಂಗ. ಇವುಗಳ ಜೊತೆಗೆ ಭತ್ತ, ಕಬ್ಬು ಗೋದಿ, ಸಜ್ಜೆ, ಮೆಣಸಿನಕಾಯಿ ಮತ್ತು ದ್ವಿದಳ ಧಾನ್ಯಗಳನ್ನು ಸ್ವಲ್ಪಮಟ್ಟಿಗೆ ಬೆಳೆಯುತ್ತಾರೆ. ಲಚ್ಯಾಣ ಎಂಬ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರವಿದೆ. (ಬಿ)

ಅಗರಖೇಡ (ನೋಡಿ) ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲೊಂದು. ಬಂಥನಾಳದಲ್ಲಿ ಸಂಗನಬಸವೇಶ್ವರ ಮಠವಿದ್ದು ಈಗ ಸರ್ಕಾರ ಒಂದು ವಿದ್ಯಾಪೀಠ ತೆರೆದಿದೆ. ಚಡಚಣ ಗ್ರಾಮದಲ್ಲಿ ಒಂದು ಆರ್ಟ್ಸ್ ಕಾಲೇಜು ಮತ್ತು ಪರಮಾನಂದರ ಪುರಾತನ ದೇವಾಲಯವಿದೆ. ಪ್ರತಿವರ್ಷ ಇಲ್ಲಿ ಸಂಗಮೇಶ್ವರ ಜಾತ್ರೆ ನಡೆಯುತ್ತದೆ. ದೇವರನಿಂಬರಗಿಯಲ್ಲಿ ಗುರುಲಿಂಗಪ್ಪ ಮಹಾರಾಜರ ಸಮಾಧಿ ಇದೆ. ಹಲಸಂಗಿ ಊರಲ್ಲಿ ಆದಿಲ್‌ಷಾಹೀ ಕಾಲದ ಒಂದು ಹಳೇ ಕೋಟೆ ಉಂಟು. ಕವಿ ಮಧುರಚೆನ್ನರಿದ್ದ ಈ ಊರಿನಲ್ಲಿ ಅರವಿಂದ ಮಂಡಳಿ ಮತ್ತು ಅರವಿಂದ ಪ್ರೌಢಶಾಲೆ ಇವೆ. ಹೊರ್ತಿ ಗ್ರಾಮದಲ್ಲಿ ಸಿದ್ಧೇಶ್ವರ ಮತ್ತು ಮಲ್ಲಿಕಾರ್ಜುನ ಎಂಬ ಎರಡು ಪುರಾತನ ದೇವಾಲಯಗಳಿವೆ. ಇಂಚಗೇರಿಯಲ್ಲಿ ಗುರುಲಿಂಗ ಮಹಾರಾಜ್, ಭಾವುಸಾಹೇಬ್ ಮಹಾರಾಜ್ ಮತ್ತು ಗಿರಿಮಲ್ಲಪ್ಪ ಮಹಾರಾಜ್ – ಈ ಮೂರು ಮಂದಿ ಸಂತರು ಇದ್ದರು. ಮಿರಗಿಯಲ್ಲಿ ಸಂಗಮೇಶ್ವರ ದೇವಾಲಯವಿದೆ. ಇದು ರಮಾನಂದ ಸ್ವಾಮಿಯವರಿದ್ದ ಪವಿತ್ರ ಸ್ಥಳ. ನಿಂಬಾಳ ಮಹಾಶಿಲ್ಪಿ ಜಕ್ಕಣಾಚಾರ್ಯ ಇದ್ದ ಊರು ಎನ್ನುವರು. ಇಲ್ಲಿ ಆರ್.ಡಿ. ರಾನಡೆಯವರು ಸ್ಥಾಪಿಸಿದ ಆಧ್ಯಾತ್ಮಿಕ ಕೇಂದ್ರವಿದೆ. ಸಾಲೋಟಗಿ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತೆಂದು 945ರ ಒಂದು ಶಾಸನದಲ್ಲಿ ಹೇಳಲಾಗಿದೆ. ಇಲ್ಲಿ ಶಿವಯೋಗೀಶ್ವರ ದೇವಾಲಯವಿದೆ.

ಇಂಡಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಗದಗ– ಸೊಲ್ಲಾಪುರ ರೈಲು ಹಾದಿಯಲ್ಲಿರುವ ಇಂಡಿರೋಡ್ ರೈಲು ನಿಲ್ದಾಣದಿಂದ ಆಗ್ನೇಯ ದಿಕ್ಕಿನಲ್ಲಿ 6ಕಿಮೀ ದೂರದಲ್ಲಿದೆ. ಜನಸಂಖ್ಯೆ 31,483. ಇಂಡಿಪಟ್ಟಣ ಪಂಚಾಯಿತಿ ಆಡಳಿತಕ್ಕೆ ಸೇರಿದೆ. ಇಲ್ಲಿ ಅಸಿಸ್ಟೆಂಟ್ ಕಮಿಶನರ ಕಛೇರಿ, ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಪಶುವೈದ್ಯಾಲಯ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಸಿಂಡಿಕೇಟ್ ಬ್ಯಾಂಕುಗಳ ಶಾಖೆಗಳು ಮತ್ತು ಪ್ರೌಢಶಾಲೆಗಳು ಇವೆ. ಇಲ್ಲಿಯ ಶಾಂತೇಶ್ವರ ದೇವಸ್ಥಾನ ಬಹು ಪ್ರಸಿದ್ಧವಾದುದು. ಗೋಪುರ ಅಷ್ಟಮುಖಗಳಿಂದ ಕೂಡಿದ್ದು ಸುಂದರ ಶಿಲ್ಪಗಳನ್ನು ಒಳಗೊಂಡಿದೆ. *

**ಇಂಡಿಗೋ (ಇಂಡಿಗೋಟಿನ್):** ಎರಡು ಇಂಡೋಲ್ ಆವರ್ತಗಳ ಸಂಯೋಜನೆಯಿಂದ ಉತ್ಪತ್ತಿಯಾಗುವ ವಸ್ತು. ಅಣುಸೂತ್ರ $C_{16}H_{10}N_{2}0_{2}$. **(ನೋಡಿ– ಇಂಡೋಲ್)**. ಕನ್ನಡದಲ್ಲಿ ನೀಲಿ ಎನ್ನುತ್ತಾರೆ. ಸಾಮಾನ್ಯವಾಗಿ ಇದರ ಉಪಯೋಗ ಬಟ್ಟೆಯ ಚೆಲುವೆಗೆ. ಈ ಪದಾರ್ಥ ಇಂಡಿಕಾನ ಎಂಬ ವಸ್ತುವಿನ ರೂಪದಲ್ಲಿ, ಇಂಡಿಗೋಫೆರ ಟಿಂಕ್ಟೋರಿಯ ಎಂಬ ಜಾತಿಗೆ ಸೇರಿದ ಸಸ್ಯಗಳಲ್ಲಿ ಉತ್ಪತ್ತಿಯಾಗುತ್ತದೆ. ಕೃತಕವಾಗಿ ನೀಲಿವರ್ಣದ್ರವ್ಯ ತಯಾರು ಮಾಡುವುದಕ್ಕೆ ಮೊದಲು ಭಾರತದಲ್ಲಿ ಈ ಗಿಡವನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು.

ಗುಣಗಳು: ಅಪ್ಪಟ ನೀಲಿ ಬಣ್ಣದ ಹರಳಿನ ರೂಪದಲ್ಲಿರುವ ವಸ್ತು. 300° ಸೆ. ನಲ್ಲಿ ನೇರವಾಗಿ ಆವಿಯಾಗುತ್ತದೆ (ಎಂದರೆ ದ್ರವಿಸುವುದಿಲ್ಲ) ಮತ್ತು ಛಿದ್ರವಾಗುತ್ತದೆ. ನೀರು, ಈಥರ್ ಮತ್ತು ಮದ್ಯಸಾರದಲ್ಲಿ ವಿಲೀನವಾಗುವುದಿಲ್ಲ. ಆದರೆ ಅನಿಲೀನ್, ನೈಟ್ರೋಬೆಂಜೀನ್, ಕ್ಲೋರೋಫಾರ್ಮ್, ಪ್ರಬಲ ಅಸಿಟಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳಲ್ಲಿ ವಿಲೀನವಾಗುತ್ತದೆ.

ಉತ್ಪತ್ತಿ, ತಯಾರಿಕೆ : ಇಂಡಿಗೋಫೆರ ಸಸ್ಯಗಳ ಸಣ್ಣ ಸಣ್ಣ ರಂಬೆಗಳು ಮತ್ತು ಎಲೆಗಳನ್ನು ನೀರಿನೊಂದಿಗೆ ಹುದುಗಿಸಿದಾಗ ಇಂಡಿಕಾನ್ ವಿಭಜನೆಯಾಗುತ್ತದೆ. ಫಲಿತವನ್ನು ಗಾಳಿಯಲ್ಲಿ ಉತ್ಕರ್ಷಿಸಿದಾಗ ಇಂಡಿಗೋ ಒತ್ತರದ ರೂಪದಲ್ಲಿ ಹೊರಬೀಳುತ್ತದೆ. ಈ ವಿಧಾನ ಈಗ ಬಳಕೆಯಲ್ಲಿಲ್ಲ. ಕೃತಕವಾಗಿ ನೀಲಿಯನ್ನು ಅನಿಲೀನ್ ಮತ್ತು ಕ್ಲೋರಲಿಸಿಟಿಕ್ ಆಮ್ಲಗಳನ್ನು ($clcH_{2}.COOH$) ಸಂಯೋಗ ಮಾಡುವುದರಿಂದ ಉತ್ಪತ್ತಿಯಾಗುವ ಫೀನೈಲ್ ಗ್ಲೈಸಿನ್ ವಸ್ತುವನ್ನು ಪ್ರತ್ಯಾಮ್ಲ ಮತ್ತು; ಸೋಡಿಯಂ ಅಮೈಡ್‌ಗಳೊಂದಿಗೆ ಬೆಸೆದು ಉತ್ಪತ್ತಿಮಾಡುತ್ತಾರೆ. ಕೃತಕವಾಗಿ ಉತ್ಪತ್ತಿಯಾಗುವ ನೀಲಿ ವಾಸ್ತವ ಮೂಲಗಳಿಂದ ತಯಾರುಮಾಡುವ ವಸ್ತುವಿಗಿಂತ ಉತ್ತಮವಾಗಿರುವುದೆಂದು ಪರಿಗಣಿಸಲಾಗಿದೆ.

ಉಪಯೋಗಗಳು: ಹತ್ತಿಯ ಬಟ್ಟೆಗಳಿಗೆ ಬಣ್ಣವನ್ನು ಕೊಡುವುದಕ್ಕೆ; ಶಾಯಿಗಳ ತಯಾರಿಕೆಯಲ್ಲಿ; ಇಂಡಿಗೋದಿಂದ ಉತ್ಪತ್ತಿಯಾಗುವ ವಸ್ತುಗಳ ತಯಾರಿಕೆಯಲ್ಲಿ, ಬಣ್ಣಗಳ ತಯಾರಿಕೆಯಲ್ಲಿ. (ಎಚ್.ಎಸ್.ಎಸ್.)

**ಇಂಡಿಯಂ:** ಒಂದು ಲೋಹಧಾತು. ಚಿಹ್ನೆ In. ಪರಮಾಣುಸಂಖ್ಯೆ 49. ಪರಮಾಣು ತೂಕ 114.82. ವೇಲೆನ್ಸ್ ವಿನ್ಯಾಸ $5s^2$ $5p^1$. ಸಾಂದ್ರತೆ 7.28. ಕಾಠಿಣ್ಯ 1.2; ಕರಗುವ ಬಿಂದು 155° ಸೆಂ.ಗ್ರೇ; ಕುದಿಯುವ ಬಿಂದು 21° ಸೆಂ.ಗ್ರೇ; ಡಯಾಮ್ಯಾಗ್ನೆಟಿಕ್ ಗುಣವಿದೆ. 1863ರಲ್ಲಿ ರೈಕ್ ಮತ್ತು ರಿಕ್ಟರ್ (ನೋಡಿ) ಎಂಬ ಸಂಶೋಧಕರು ಜಿಂಕ್ ಬ್ಲೆಂಡು ಅದುರನ್ನು ಥಾಲಿಯಂ ಲೋಹಕ್ಕಾಗಿ ಶೋಧಿಸುತ್ತಿದ್ದಾಗ ಈ ಧಾತುವಿನ ಅಸ್ತಿತ್ವ ಬೆಳಕಿಗೆ ಬಂತು. ರೋಹಿತದರ್ಶಕದಿಂದ ಪರೀಕ್ಷಿಸಿದಾಗ ಇಂಡಿಗೋ ಬಣ್ಣದ ನೂತನ ರೇಖೆಯೊಂದು ಗೋಚರವಾಯಿತು. ಆದ್ದರಿಂದ ಇಂಡಿಯಂ ಎಂದು ಹೆಸರಾಯಿತು. ಇಂಡಿಯಂ ಪ್ರಕೃತಿಯಲ್ಲಿ ಮೊದಲ ರೂಪದಲ್ಲಿ ದೊರೆಯುವುದಿಲ್ಲ. ಭೂಮಿಯ ತೊಗಟೆಯಲ್ಲಿ

(ಕ್ರಸ್ಟ್) ಶೇ.$10^{-5}$% ಅಂಶದಷ್ಟು ಮಾತ್ರ ದೊರೆಯುತ್ತದೆ. ಸುಮಾರು 50 ವಿವಿಧ ಖನಿಜಗಳಲ್ಲೂ ಅದುರುಗಳಲ್ಲೂ ಈ ಅಲ್ಪಾಂಶ ಹರಡಿ ಹೋಗಿದೆ. ಇದರ ಸಂಯುಕ್ತಗಳೂ ವಿರಳ. ಜಿಂಕ್ ಬ್ಲೆಂಡಿನ ಕೆಲವು ನಮೂನೆಗಳಲ್ಲಿ ಸ್ವಲ್ಪ ಹೆಚ್ಚಾಗಿ ದೊರೆಯುವುದು ಶೇ. 0.1. ಅದನ್ನು ಬೇರ್ಪಡಿಸುವುದು ಕಷ್ಟ. ಅದುರಿನಿಂದ ಉಳಿದೆಲ್ಲ ಲೋಹಗಳನ್ನು ಬೇರ್ಪಡಿಸಿ ಬಂದ ಇಂಡಿಯಂ ಸಲ್ಫೇಟನ್ನು ವಿದ್ಯುದ್ವಿಭಜನೆ ಮಾಡಿದರೆ ಲೋಹ ಲಭಿಸುವುದು. ಬೆಳ್ಳಿಯಂತೆ ಶುಭ್ರ, ಸೀಸಕ್ಕಿಂತ ಮೆದು. ತಗಡಾಗಿ ತಟ್ಟಬಹುದು, ತಂತಿಯಾಗಿ ಎಳೆಯಬಹುದು. ಶುಷ್ಕ ವಾತಾವರಣದಲ್ಲಿ ಸ್ಥಿರ. ಆಕ್ಸಿಜನ್ನಿನಲ್ಲಿ ತೀವ್ರವಾಗಿ ಕಾಯಿಸಿದರೆ ಸೆಸ್ಕ್ವಿ ಆಕ್ಸೈಡ್ ($In_2O_3$) ಉಂಟಾಗುವುದು. ಕ್ಲೋರೀನ್ ಮತ್ತು ಗಂಧಕಗಳೊಡನೆ ಸಂಯೋಗವಾಗುವುದು. ದುರ್ಬಲ ಆಮ್ಲಗಳಲ್ಲಿ ವಿಲೀನವಾಗಿ ಹೈಡ್ರೊಜನ್ ಕೊಡುವುದು. ಸೂಕ್ಷ್ಮಕಣಗಳ ರೂಪದಲ್ಲಿದ್ದರೆ ಮಾತ್ರ ಕುದಿಯುವ ನೀರು ಮತ್ತು ಕ್ಷಾರಗಳೊಡನೆ ವರ್ತಿಸುವುದು. ಸಾಮಾನ್ಯ ಸಂಯೋಗ ಶಕ್ತಿ 3.1 ಮತ್ತು 2 ಸಂಯೋಗಶಕ್ತಿಯನ್ನು ಹೊಂದಿದೆ. ಅದರೆ ತ್ರಿಸಂಯೋಗ ಶಕ್ತಿಯಿಂದಾದ ಸಂಯುಕ್ತಗಳು ಸ್ಥಿರವಾಗಿರುವುವು.

ಮುಖ್ಯ ಉಪಯೋಗ ವಿಮಾನ ರಚನೆಯಲ್ಲಿ ಬಳಸುವ ಸ್ಲೀವ್ ಬೇರಿಂಗುಗಳಲ್ಲಿ. ಕುಲುಮೆಯ ಮಾದರಿಗಳು, ಸುರಕ್ಷಾಬೆಣೆಗಳು (ಸೇಫ್ಟಿ ಪ್ಲಗ್ಸ್), ಶಸ್ತ್ರಕ್ರಿಯೆಯ ಗಾಯಪಟ್ಟಿಗಳು ಇತ್ಯಾದಿಗಳಿಗೆ ಬೇಕಾದ, ಸುಲಭವಾಗಿ ಕರಗುವ ಮಿಶ್ರಲೋಹಗಳ ತಯಾರಿಕೆಯಲ್ಲಿ ಮತ್ತು ನ್ಯೂಟ್ರಾನ್ ಎಣಿಕೆ ಸಾಧನಗಳಲ್ಲಿ ಇಂಡಿಯಮ್ ಉಪಯೋಗವಾಗುತ್ತಿದೆ. ಇಂಡಿಯಮ್ ಆಕ್ಸೈಡ್, ಸಲ್ಫೈಡ್, ಟೆಲುರೈಡ್, ಆರ್ಸಿನೈಡ್ ಮತ್ತು ಆಂಟಿಮೊನೈಡುಗಳೆಲ್ಲ ಅರೆಮಿದ್ಯುದ್ವಾಹಕಗಳು (ಸೆಮಿ ಕಂಡಕ್ಟರ್ಸ್). ಆದ್ದರಿಂದ ಇಂಡಿಯಮ್ ಆಂಟಿಮೊನೈಡು ಟ್ರಾನ್ಸಿಸ್ಟರುಗಳಲ್ಲಿ ಆಕ್ಸೈಡುರೋಧಕವಾಗಿ (ರೆಸಿಸ್ಟರ್), ಸಲಿನೈಡು ದ್ಯುತಿವಿದ್ಯುದ್ವಾಹಿಯಾಗಿ (ಫೋಟೋಕಂಡಕ್ಟರ್) ಮತ್ತು ಸಲ್ಫೈಡು ರಂಜಕ ವಸ್ತುವಾಗಿ (ಫಾಸ್ಫರ್) ವಿನಿಯೋಗವಾಗುತ್ತಿದೆ. ಇಂಡಿಯಮ್ ಲೇಪನದಿಂದ ಕನ್ನಡಿಗಳ ಪ್ರತಿಫಲನ ಶಕ್ತಿ ಹೆಚ್ಚುವುದರಿಂದ ಮೋಟಾರು ವಾಹನಗಳ ತಲೆದೀಪದಲ್ಲಿ (ಹೆಡ್ ಲೈಟ್ಸ್) ಉಪಯೋಗವಿದೆ. ಇಂಡಿಯಮ್ ಅಮಾಲ್ಗಂ ದಂತ ಚಿಕಿತ್ಸೆಯಲ್ಲಿ ಪ್ರಯೋಜನಕಾರಿ (**ನೋಡಿ– ಗ್ಯಾಲಿಯಮ್; ಥಾಲಿಯಂ**). (ಎಚ್.ಜಿ.ಎಸ್.)

**ಇಂಡಿಯದ ಹೆಬ್ಬಾಗಿಲು:** ಬ್ರಿಟಿಷ್ ದೊರೆಯಾದ ಐದನೆಯ ಜಾರ್ಜ್ ಮತ್ತು ರಾಣಿ ಮೇರಿ ಇವರು ಭಾರತಕ್ಕೆ 1921 ಡಿಸೆಂಬರ್ ತಿಂಗಳಲ್ಲಿ ಭೇಟಿ ಕೊಟ್ಟಿದ್ದರ ಜ್ಞಾಪಕಾರ್ಥವಾಗಿ ಮುಂಬಯಿ ನಗರದ ಸಮುದ್ರ ತೀರದಲ್ಲಿ ಭವ್ಯವಾಗಿ ಕಟ್ಟಿರುವ ಕಟ್ಟಡ (ಗೇಟ್ ವೇ ಆಫ್ ಇಂಡಿಯ). ಈ ಕಟ್ಟಡ ಇರುವ ಸ್ಥಳ ಮೊದಲಿನಿಂದಲೂ ಸಮುದ್ರ ಸಂಚಾರಿಗಳಿಗೆ ಬಂದರಾಗಿಯೂ ಗುರುತಿನ ಸ್ಥಳವಾಗಿಯೂ ಇತ್ತು. ಪ್ರಯಾಣಿಕರ



ಉಪಯೋಗಕ್ಕಾಗಿ ಅಲ್ಲಿ ಮೊಗಲ್ ರೀತಿಯ ಒಂದು ಸಣ್ಣ ಕಟ್ಟಡವನ್ನು ಕಟ್ಟಿದ್ದರು. ಅನಂತರ ಬ್ರಿಟಿಷ್ ರಾಜರಾಣಿಯರನ್ನು ಸ್ವಾಗತಿಸುವ ಸಲುವಾಗಿ ಅದನ್ನು ತೆಗೆದು ತಾತ್ಕಾಲಿಕವಾದ ಮಂಟಪವನ್ನೂ ಸಭಾಂಗಣವನ್ನೂ ಕಟ್ಟಿಸಿದರು. ಅನಂತರ ಬ್ರಿಟಿಷ್ ಶಿಲ್ಪಿ ಜಿ. ವಿಟೆಟ್ ಎಂಬುವನು ಈಗಿರುವ ಕಟ್ಟಡ ನಿರ್ಮಿಸಿದ. ಇದು 16ನೆಯ ಶತಮಾನದ ಗುಜರಾತಿ ಶೈಲಿಯಲ್ಲಿದ್ದು ಹಿಂದೂ ಮತ್ತು ಮುಸ್ಲಿಂ ಮಾರ್ಗಗಳ ಸಮ್ಮಿಳನಕ್ಕೊಂದು ಸಾಕ್ಷಿಯಾಗಿದೆ. ಮುಂಬಯಿಯ ಹತ್ತಿರ ಸಿಗುವ, ಹಳದಿ ಅಗ್ನಿಶಿಲೆಗಳನ್ನು (ಯೆಲೋ ಬೆಸಾಲ್ಟ್) ಕಟ್ಟಡಕ್ಕೆ ಬಳಸಲಾಗಿದೆ. ಕಮಾನುಗಳಿಗೆ ಉಪಯೋಗಿಸಿರುವ ಕಲ್ಲುಗಳು ಗ್ವಾಲಿಯರ್‌ನಿಂದ ತರಿಸಿದವು. ಈ ಸ್ಮಾರಕದ ಆರಂಭೋತ್ಸವವನ್ನು 1924 ಡಿಸೆಂಬರ್ 24ರಂದು ಆಗಿನ ವೈಸ್‌ರಾಯ್ ಅರ್ಲ್ ರೀಡಿಂಗ್ ನೆರವೇರಿಸಿದ. ಮುಂಬಯಿಯ ಜನರಿಗೂ ಪ್ರವಾಸಿಗಳಿಗೂ ಪ್ರಿಯವಾದ ವಿಹಾರಸ್ಥಳ. (ಎಚ್.ಎಸ್.ಆರ್.)

**ಇಂಡಿಯನ್ ಅಂಡ್ ಈಸ್ಟರ್ನ್ ನ್ಯೂಸ್ ಪೇಪರ್ ಸೊಸೈಟಿ: ನೋಡಿ– ಅಖಿಲ ಭಾರತ ಪತ್ರಿಕಾ ಸಂಘಗಳು.**

**ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್:** (ಭಾರತ ಕೃಷಿ ಸಂಶೋಧನ ಸಂಸ್ಥೆ): ವ್ಯವಸಾಯಿಕ ಸಂಶೋಧನೆಗಾಗಿ 1905ರಲ್ಲಿ ಸ್ಥಾಪಿತವಾದ ಸಂಸ್ಥೆ. ಇದರ ಕಾರ್ಯಾಲಯ ಮೊದಲು ಬಿಹಾರದ ಪೂಸಾದಲ್ಲಿತ್ತು. ವಿಶ್ವವಿದ್ಯಾನಿಲಯದ ಅಂತಸ್ತು ದೊರಕಿಸಿಕೊಂಡಿರುವ ಈ ಸಂಸ್ಥೆಯ ಈಗಿನ ಕಾರ್ಯಸ್ಥಾನ ದೆಹಲಿ. ಇದು ಈಗ ಮೂಲಭೂತ (ಫಂಡಮೆಂಟಲ್) ಹಾಗೂ ಆನ್ವಯಿಕ (ಅಪ್ಲೈಡ್) ಸಂಶೋಧನೆಯಲ್ಲೂ ಸ್ನಾತಕೋತ್ತರ ಶಿಕ್ಷಣ ನೀಡುವ ಕಾರ್ಯದಲ್ಲೂ ನಿರತವಾಗಿದೆ. 1947ಕ್ಕೆ ಮುಂಚೆ ಈ ಸಂಸ್ಥೆಯ ಹೆಸರು ಇಂಪೀರಿಯಲ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್. ಸ್ವಾತಂತ್ರ್ಯಾನಂತರ ಇಂಡಿಯನ್ ಅಗ್ರಿಕಲ್ಚರಲ್ ಇನ್‌ಸ್ಟಿಟ್ಯೂಟ್ ಎಂದು ಬದಲಿಸಲಾಯಿತು. 1960–70ರ ಹಸಿರು ಕ್ರಾಂತಿಗೆ ಕಾರಣ ಭೂತವಾದ ಸಂಸ್ಥೆ. ಈಗ ಆರ್.ಬಿ. ಸಿಂಗ್ ಅದರ ನಿರ್ದೇಶಕರು.*

**ಇಂಡಿಯನ್ ಅಸೋಸಿಯೇಷನ್ ಆಫ್ ಇಂಡಸ್ಟ್ರಿಯಲ್ ಎಡಿಟರ್ಸ್:** (ಭಾರತ ಕೈಗಾರಿಕಾ ಸಂಪಾದಕ ಸಂಘ): ಈ ಸಂಘ 1956ರಲ್ಲಿ ಮುಂಬಯಿಯಲ್ಲಿ ಸ್ಥಾಪಿತವಾಯಿತು. ಕೈಗಾರಿಕಾ ಮಾಲೀಕರುಗಳಲ್ಲಿ ಪ್ರಚಾರತಂತ್ರದ ಪ್ರಾಮುಖ್ಯವನ್ನು ತಿಳಿಸಿ ಕೈಗಾರಿಕಾ ಪತ್ರಿಕೋದ್ಯಮ ಜ್ಞಾನವನ್ನು ಅಭಿವೃದ್ಧಿಪಡಿಸುವುದು. ಕೈಗಾರಿಕಾ ಸಂಪಾದಕರುಗಳ ಸ್ಥಾನಮಾನಗಳನ್ನು ಹೆಚ್ಚಿಸುವುದು ಮತ್ತು ಕಂಪನಿ ಪ್ರಕಟಣೆಗಳ ಅಭಿವೃದ್ಧಿಗಾಗಿ ದುಡಿಯುವುದು–ಇವೇ ಈ ಸಂಘದ ಮುಖ್ಯ ಉದ್ದೇಶಗಳು. ಸದಸ್ಯರ ಅನುಕೂಲಕ್ಕಾಗಿ ಆಗಾಗ್ಗೆ ಸಭೆಗಳನ್ನು ನಡೆಸುವುದಲ್ಲದೆ ಕೈಗಾರಿಕಾ ಪತ್ರಿಕೋದ್ಯಮದ ಸಮಸ್ಯೆಗಳನ್ನು ಚರ್ಚಿಸಲು ವರ್ಷಕ್ಕೊಂದು ಸಲ ವಿಚಾರಗೋಷ್ಠಿಯನ್ನು ಈ ಸಂಘ ಏರ್ಪಡಿಸುತ್ತದೆ. ಈ ವಿಚಾರಗೋಷ್ಠಿಯಲ್ಲಿ ಸಂಘದ ಸದಸ್ಯರಲ್ಲದೆ, ಪತ್ರಿಕೋದ್ಯಮ ವೃತ್ತಿಯಲ್ಲಿ ಆಸಕ್ತಿಯುಳ್ಳವರೆಲ್ಲರೂ ಭಾಗವಹಿಸಲು ಅವಕಾಶ ನೀಡಲಾಗುತ್ತದೆ. ಅಂತಾರಾಷ್ಟ್ರೀಯ ಕೈಗಾರಿಕಾಸಂಪಾದಕರುಗಳ ಸಮ್ಮೇಳನದ ಸದಸ್ಯತ್ವವನ್ನು ಪಡೆದಿರುವ ಈ ಸಂಘದಲ್ಲಿ ನೂರಕ್ಕೂ ಹೆಚ್ಚು ಸದಸ್ಯರಿದ್ದಾರೆ. ಕೈಗಾರಿಕಾ ವಿಷಯಗಳನ್ನೇ ಪ್ರಧಾನವಾಗಿಟ್ಟುಕೊಂಡು ಪತ್ರಿಕೋದ್ಯಮದಲ್ಲಿ ಬಾಂಬೆ ಕಾಲೇಜ್ ಆಫ್ ಜರ್ನಲಿಸಂ ಸಂಸ್ಥೆಯ ಮೂಲಕ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಈ ಸಂಘ ತನ್ನ ಸಂಪೂರ್ಣ ನೆರವನ್ನು ನೀಡುತ್ತಿದೆ. (ಎನ್.ಕೆ.)

**ಇಂಡಿಯನ್ ಅಸೋಸಿಯೇಷನ್ ಫಾರ್ ಎಜುಕೇಷನ್ ಇನ್ ಜರ್ನಲಿಸಂ:** (ಭಾರತ ಪತ್ರಿಕೋದ್ಯಮ ಶಿಕ್ಷಣ ಸಂಘ): ಈ ಸಂಘ 1955ರ ನವೆಂಬರ್‌ನಲ್ಲಿ ನವದೆಹಲಿಯಲ್ಲಿ ಸ್ಥಾಪಿತವಾಯಿತು. ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿರುವ ಪತ್ರಿಕೋದ್ಯಮ ಇಲಾಖೆಯ ಮುಖ್ಯಾಧಿಕಾರಿಗಳೆಲ್ಲರೂ ಈ ಸಂಸ್ಥೆಯ ಸದಸ್ಯರು. ಪಂಜಾಬ್ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಇಲಾಖೆಯ ಮುಖ್ಯಸ್ಥ ಪೃಥ್ವಿಪಾಲ್‌ಸಿಂಗರ ಮಾರ್ಗದರ್ಶನ ಈ ಸಂಸ್ಥೆಗೆ ದೊರೆತಿದೆ. ಭಾರತದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಅಭಿವೃದ್ಧಿಗೊಳಿಸುವುದು ಮತ್ತು ಪತ್ರಿಕೋದ್ಯಮ ವೃತ್ತಿಯಲ್ಲಿರುವವರಿಗೂ ಪತ್ರಿಕೋದ್ಯಮ ಶಿಕ್ಷಣ ಪಡೆಯುತ್ತಿರುವವರಿಗೂ ಮಧುರಬಾಂಧವ್ಯವನ್ನೇರ್ಪಡಿಸಿ, ವೃತ್ತಿಯ ಘನತೆಯನ್ನು ಎಲ್ಲ ವಿಧಗಳಲ್ಲಿ ಕಾಪಾಡುವುದು ಮತ್ತು ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಪತ್ರಿಕೋದ್ಯಮ ಶಿಕ್ಷಣದ ಏರ್ಪಾಡಿಗೆ ಸಂಪೂರ್ಣ ಬೆಂಬಲ ಕೊಟ್ಟು, ಪತ್ರಿಕೋದ್ಯಮ ವೃತ್ತಿಯಲ್ಲಿ ಕೆಲಸ ಮಾಡುವವರಿಗೆ ತರಬೇತಿಯ ಅವಕಾಶವನ್ನುಂಟು ಮಾಡಿಕೊಡುವುದು–ಇವೇ ಈ ಸಂಘದ ಮುಖ್ಯ ಉದ್ದೇಶಗಳು. ವರ್ಷಕ್ಕೊಂದು ಸಲ ವಿಶ್ವವಿದ್ಯಾನಿಲಯದ ಕೇಂದ್ರವೊಂದರಲ್ಲಿ ಸಂಘದ ಸಭೆ ಸೇರುತ್ತದೆ. ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣ ಕೊಡುವ ಎಲ್ಲ ವರ್ಗದ ಅಧ್ಯಾಪಕರೂ ಸಂಘದ ಸದಸ್ಯರಾಗಿದ್ದಾರೆ. (ಎನ್.ಕೆ.)

**ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್:** ಭಾರತದಲ್ಲಿ ಪೆಟ್ರೋಲಿಯಂ ಉತ್ಪಾದನೆಗಳ ತಯಾರಿಕೆ, ಆಮದು ಹಾಗೂ ವಿತರಣದಲ್ಲಿ ಹೊಂದಾಣಿಕೆಯೇರ್ಪಡಿಸುವ ಉದ್ದೇಶದಿಂದ 1964ರ ಸೆಪ್ಟಂಬರ್ 1ರಂದು ಇಂಡಿಯನ್ ಆಯಿಲ್ ಕಂಪನಿ ಲಿಮಿಟೆಡ್ ಎಂಬ ಎರಡು ಸರ್ಕಾರಿ ಸ್ವಾಮ್ಯದ ಉದ್ಯಮ ಸಂಸ್ಥೆಗಳನ್ನು ಸಂಯೋಜಿಸಿ ಸ್ಥಾಪಿಸಿದ ಸರ್ಕಾರಿ ಒಡೆತನದ ಉದ್ಯಮ.

ಪೆಟ್ರೋಲಿಯಂನ ಪರಿಷ್ಕೃತ ಉತ್ಪಾದನೆಗಳನ್ನೂ ಅಕ್ಷತೈಲ (ಆಕ್ಸ್ಲ್ ಆಯಿಲ್) ಮೃದು ಚಾಲಕ ತೈಲಗಳು (ಲೂಬ್ರಿಕೇಟಿಂಗ್ ಆಯಿಲ್ಸ್), ಗ್ರೀಸ್, ವಿದ್ಯುತ್ ಪರಿವರ್ತಕ ತೈಲ (ಟ್ರಾನ್ಸ್‌ಫಾರ್ಮರ್ ಆಯಿಲ್), ವಾಯುಯಾನ ತಿರುಬಾನಿ ತೈಲ (ಏವಿಯೇಷನ್ ಟರ್ಬೈನ್ ಆಯಿಲ್), ಮುಂತಾದುವನ್ನೂ ರೂಪಾಯಿ ಪಾವತಿಮಾಡಿಯಾಗಲಿ, ಬೇರೆ ವಿಧಾನಗಳಿಂದಾಗಲಿ ಈ ಸಂಸ್ಥೆ ಆಮದು ಮಾಡಿಕೊಳ್ಳುತ್ತದೆ. ಈ ಉತ್ಪಾದನೆಗಳ ದಾಸ್ತಾನು ಹಾಗೂ ವಿತರಣೆಗಾಗಿ ಇದು ಮುಕ್ತ ವ್ಯವಸ್ಥೆ ಮಾಡಿದೆ. ಕಾರ್ಪೊರೇಷನ್ನಿನಲ್ಲಿ ತೈಲ ಪರಿಷ್ಕರಣ ಶಾಖೆ ಹಾಗೂ ಮಾರಾಟ ಶಾಖೆಯೆಂಬ ಎರಡು ವಿಭಾಗಗಳಿವೆ. ಭಾರತದ ಮುಖ್ಯ ನಗರಗಳಲ್ಲಿರುವ ಲೂಬ್ ತೈಲ ಮಿಶ್ರಣ ಯಂತ್ರ ಸ್ಥಾವರಗಳನ್ನು ನಡೆಸುತ್ತಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಅಮೆರಿಕ ಸಂಯುಕ್ತ ಸಂಸ್ಥಾನದ ಮೊಬಿಲ್ ಪೆಟ್ರೋಲಿಯಂ ಇನ್ಕಾರ್ಪೊರೇಟೆಡ್ ಎಂಬ ಸಂಸ್ಥೆಯೊಂದಿಗೆ ಸಮಪಾಲು ಹೊಂದಿದೆ.

ಗುವಾಹಟಿ–ಸಿಲಿಗುರಿ, ಹಾಲ್ದಿಯ, ಬತಾನಿ–ಕಾನ್ಪುರ, ಕೋಯಲಿ–ಅಹಮದಾಬಾದ್‌ಗಳ ತೈಲ ರವಾನೆ ಕೊಳವೆಗಳು ಈ ಸಂಸ್ಥೆಗೆ ಸೇರಿವೆ. 'ಫಾರ್ಚೂನ್ ಗ್ಲೋಬಲ್ 500' ಕಂಪನಿಗಳಲ್ಲಿ ಇದು 105ನೆಯ ಸ್ಥಾನ ಪಡೆದಿದೆ. ಇಂಡಿಯನ್ ಆಯಿಲ್ ಮತ್ತು ಅದರ ಅಂಗಸಂಸ್ಥೆಗಳು, ಭಾರತದ ಪೆಟ್ರೋಲಿಯಂ ಉತ್ಪಾದಕ ವಸ್ತುಗಳ ಶೇ.47 ಭಾಗ ಹೊಂದಿವೆ. ಭಾರತದ 19 ತೈಲ ಸಂಸ್ಕರಣ ಘಟ್ಟಗಳಲ್ಲಿ ಇದು 10 ಘಟ್ಟಗಳ ಸ್ವಾಮ್ಯ ಪಡೆದಿದೆ. ಇದರ ಒಟ್ಟು ಸಂಸ್ಕರಣ ಸಾಮರ್ಥ್ಯ 60 ವಾರ್ಷಿಕ 60.2 ಮಿಲಿಯನ್ ಮೆಟ್ರಿಕ್ ಟನ್ನುಗಳು.

ಇಂಡಿಯನ್ ಆಯಿಲ್ ಕಂಪನಿಯು ಭಾರತದಲ್ಲಿ ಒಟ್ಟು 17606 ಪೆಟ್ರೋಲ್ ಪಂಪುಗಳನ್ನು ಹೊಂದಿದೆ. ಅದು ಆಟೋ ಎಲ್‌ಪಿಜಿ ಯನ್ನೂ ಮಾರುತ್ತದೆ. ಅಲ್ಲದೆ 'ಇಂಡೇನ್' ಎಂಬ ಹೆಸರಿನ ಅಡುಗೆ ಅನಿಲ ಕಂಪನಿಯನ್ನು ಹೊಂದಿದ್ದು, ಸು. 4.7 ಮಿಲಿಯನ್ ಮನೆಗಳಿಗೆ ಅಡುಗೆ ಅನಿಲ ಒದಗಿಸುತ್ತದೆ. ಈ ಕಂಪನಿ ಒಟ್ಟು ಆದಾಯ 59.17 ಬಿಲಿಯನ್ ಡಾಲರುಗಳು (272,689 ಕೋಟಿ ರೂ.). 2009–10ರಲ್ಲಿ ಷೇರು ಬಂಡವಾಳ 11.686 ಬಿಲಿಯನ್ ಡಾಲರುಗಳು. ಒಟ್ಟು 36,307 ಸಿಬ್ಬಂದಿ ಹೊಂದಿದೆ (2009). ಪೆಟ್ರೋಲ್, ಡೀಸಲ್ ಮತ್ತು ಅಡುಗೆ ಅನಿಲಗಳ ಬೆಲೆಗಳನ್ನು ಸರ್ಕಾರವೇ ನಿರ್ಧರಿಸುವುದರಿಂದ, ಅಂತಾರಾಷ್ಟ್ರೀಯವಾಗಿ ಇವುಗಳ ಬೆಲೆ ಏರಿದಂತೆ ಏರಿಸಲು ಸ್ವಾತಂತ್ರ್ಯವಿಲ್ಲದಿರುವುದರಿಂದ ತೈಲ ಬೆಲೆ ತೀವ್ರವಾಗಿ ಏರಿದಾಗ ಈ ಕಂಪನಿ ನಷ್ಟ ಅನುಭವಿಸಬೇಕಾಗುವುದು. *

**ಇಂಡಿಯನ್ ಇಂಕ್:** ನಕಾಸೆ ಮತ್ತು ಚಿತ್ರಕಲೆಗಳಲ್ಲಿ ವಿಶೇಷವಾಗಿ ಬಳಸುವ ಈ ಶಾಯಿಯನ್ನು ಕಾಡಿಗೆ ಅಥವಾ ದೀಪದ ಮಸಿಯಿಂದ ತಯಾರಿಸುವರು. ಚೀನಿ ಇಂಕ್ ಎಂದೂ ಹೆಸರು ಇತ್ತು. ಕಾಡಿಗೆಯನ್ನು ಗೋಂದಿನಲ್ಲಿ ಕಲಸಿ ಒಣಗಿಸಿ, ಕಡ್ಡಿ ಅಥವಾ ಬಿಲ್ಲೆಗಳಾಗಿ ಮಾಡಲಾಗುವುದು. ಚೀನಿ ಇತಿಹಾಸಕಾರರ ಪ್ರಕಾರ ಪ್ರ.ಶ.ಪೂ. 2697–2597ರ ಅವಧಿಯಲ್ಲಿ ಜೀವಿಸಿದ್ದ ಟೇನ್‌ಷಿನ್ ಎಂಬಾತ ಇದನ್ನು ಕಂಡುಹಿಡಿದನಂತೆ. ಇದರ ತಯಾರಿಕೆಗೆ ಅಗತ್ಯವಾದ ಕಾಡಿಗೆಯನ್ನು ನಾನಾ ಮೂಲಗಳಿಂದ ಪಡೆಯಬಹುದು. ಅವುಗಳ ಪೈಕಿ ಫರ್ ಮತ್ತು ಪೈನ್ ಮರ, ಹೈಬಿಸ್‌ಕಸ್ ಮ್ಯುಟಾಬಿಲಿಸ್ ಗಿಡದ ಕಷಾಯದಲ್ಲಿ ನೆನೆದ ಅಕ್ಕಿ, ವಿನೆಗರ್ ಹೀರಿಕೊಂಡಿರುವ ದಾಳಿಂಬೆ ತೊಗಟೆ, ಎಳ್ಳು ಮತ್ತು ಮರದೆಣ್ಣೆಗಳನ್ನು ಹೆಸರಿಸಬಹುದು. ದನದ ಅಥವಾ ಮೀನಿನ ಅಂಟು ಆವಶ್ಯಕ. ಅಂಟಿನೊಂದಿಗೆ ನಾದಿದ ಕಾಡಿಗೆಯನ್ನು ಮರದ ಎರಕಗಳಲ್ಲಿ ತುಂಬಿ ತಂಪಾದ ಶುಷ್ಕ ಹವೆಯಲ್ಲಿ ಆರಲು ಬಿಡಬೇಕು. ದೀರ್ಘಕಾಲ ಬಿಟ್ಟಷ್ಟೂ ವಸ್ತುವಿನ ಗುಣಮಟ್ಟ ಹೆಚ್ಚುವುದು. ಶಾಯಿಯ ಬಣ್ಣ ವಾಸನೆಗಳನ್ನು ಆಕರ್ಷಕಗೊಳಿಸಲು ಕಸ್ತೂರಿ, ಕರ್ಪೂರ ಮತ್ತು ತತ್ಸಮವಾದ ಸುಗಂಧದ್ರವ್ಯಗಳನ್ನು ಬೆರೆಸುವುದು ವಾಡಿಕೆ. ಈಗ ಇದನ್ನು ಜಲಾಭೇದ್ಯವನ್ನಾಗಿ ಮಾಡಿದ್ದಾರೆ. (ಎಚ್.ಜಿ.ಎಸ್.)

**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ:** ಭಾರತದ ಕೈಗಾರಿಕೆಗಳಿಗೆ ಆವಶ್ಯಕವಾದ ತಾಂತ್ರಿಕ ಎಂಜಿನಿಯರಿಂಗ್ ಮತ್ತು ಪರಿಣತಿಯನ್ನು ಹೆಚ್ಚಿಸುವ ಉದ್ದೇಶದಿಂದ ಸ್ಥಾಪಿತವಾದ ಈ ಹೆಸರಿನ ಸಂಸ್ಥೆಗಳು ಭಾರತದಲ್ಲಿ 15 ಸ್ಥಳಗಳಲ್ಲಿವೆ. ಮೊದಲನೆಯದು 1951ರಲ್ಲಿ ಖರಗ್ಪುರದಲ್ಲಿ ಪ್ರಾರಂಭವಾಯಿತು. ಮುಂಬಯಿ ಮತ್ತು ಚೆನ್ನೈನ ಸಂಸ್ಥೆಗಳು ಪ್ರಥಮ ತಂಡದ ವಿದ್ಯಾರ್ಥಿಗಳನ್ನು ಕ್ರಮವಾಗಿ 1958 ಮತ್ತು 59ರಲ್ಲಿ ಸೇರಿಸಿಕೊಂಡವು. ಕಾನ್ಪುರದ ಸಂಸ್ಥೆ 1959ರಲ್ಲಿ ಪ್ರಥಮ ತಂಡದ ವಿದ್ಯಾರ್ಥಿಗಳನ್ನು ದಾಖಲುಮಾಡಿಕೊಂಡಿತು. 1963ರಲ್ಲಿ ದೆಹಲಿಯ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸ್ಥಾನಮಾನಕ್ಕೆ ಏರಿಸಲಾಯಿತು. ಮುಂಬಯಿ, ಚೆನ್ನೈ ಮತ್ತು ಕಾನ್ಪುರದ ಇನ್‌ಸ್ಟಿಟ್ಯೂಟ್ ಸ್ನಾತಕ ಪೂರ್ವ ವಿದ್ಯಾಭ್ಯಾಸಕ್ಕೆ 1,600 ಮತ್ತು ಸ್ನಾತಕೋತ್ತರ ಹಾಗೂ ಸಂಶೋಧನ ವಿದ್ಯಾಭ್ಯಾಸಕ್ಕೆ 400 ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವ ಸಾಮರ್ಥ್ಯ ಪಡೆದಿದೆ. 2,000 ಸ್ನಾತಕಪೂರ್ವ ಹಾಗೂ 400 ಸ್ನಾತಕೋತ್ತರ ಅಲ್ಲದೆ ಸಂಶೋಧನ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವುದು ಖರಗ್ಪುರದ ಸಂಸ್ಥೆಯ ಗುರಿ. ದೆಹಲಿ ಕಾಲೇಜಿನಲ್ಲಿ 1,250 ಸ್ನಾತಕ ಪೂರ್ವ ವಿದ್ಯಾರ್ಥಿಗಳಿಗೂ 300 ಸ್ನಾತಕೋತ್ತರ ಹಾಗೂ ಸಂಶೋಧನ ವಿದ್ಯಾರ್ಥಿಗಳಿಗೂ ಪ್ರವೇಶ ದೊರಕಿಸಿಕೊಡುವ ಸಾಧ್ಯತೆಯಿದೆ. ಈ ಇನ್‌ಸ್ಟಿಟ್ಯೂಟ್‌ಗಳ ಉದ್ದೇಶ ವಿಶೇಷ ತಾಂತ್ರಿಕ ಜ್ಞಾನವುಳ್ಳ ಪದವೀಧರರನ್ನು ತಯಾರು ಮಾಡುವುದು ಮತ್ತು ತಾಂತ್ರಿಕ ರಂಗದಲ್ಲಿ ಉನ್ನತಮಟ್ಟದ ಸಂಶೋಧನೆ ನಡೆಸುವುದು. ಇತರ ಸಂಸ್ಥೆಗಳು ಗುವಾಹಟಿ (1994), ರೂರ್ಕಿ (2001), ರೋಪಡ್ (2008), ಭುವನೇಶ್ವರ (2008), ಗಾಂಧಿನಗರ (2008), ಜೋಧ್‌ಪುರ (2008), ಹೈದರಾಬಾದು (2008), ಪಾಟ್ನ (2008), ಮಂಡಿ (2009), ಇಂಡೂರ್ (2009)ಗಳಲ್ಲಿ ಇವೆ. ಸು. 15,500 ಸ್ನಾತಕ ಪೂರ್ವ ವಿದ್ಯಾರ್ಥಿಗಳು ಮತ್ತು 12,000 ಸ್ನಾತಕ ವಿದ್ಯಾರ್ಥಿಗಳು ಐಐಟಿಗಳಲ್ಲಿ ಓದುತ್ತಾರೆ. (ಸಿ.ಕೆ.ಆರ್.)

**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಯಾಕೇಜಿಂಗ್:** 1966ರಲ್ಲಿ ಮುಂಬಯಿಯಲ್ಲಿ ಸ್ಥಾಪಿತವಾದ ಸಂಸ್ಥೆ. ಸಂವೇಷ್ಟನ (ಪ್ಯಾಕೇಜಿಂಗ್) ಕೈಗಾರಿಕೆಗೆ ಅಗತ್ಯವಾದ ಕಚ್ಚಾ ಸಾಮಗ್ರಿಯ ಬಗ್ಗೆ ಸಂಶೋಧನೆ ನಡೆಸುವುದೂ ಸಂವೇಷ್ಟನ ಕ್ಷೇತ್ರದಲ್ಲಿ ಪ್ರಪಂಚದ ನಾನಾ ದೇಶಗಳಲ್ಲಾಗುತ್ತಿರುವ ಪ್ರಗತಿಯಲ್ಲಿ ಭಾರತ ಹಿಂದುಳಿಯದಂತೆ ಕ್ರಮ ಕೈಗೊಳ್ಳುವುದೂ ಸಂವೇಷ್ಟನ ತಂತ್ರದ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನೇರ್ಪಡಿಸುವುದೂ ಒಳ್ಳೆಯ ಸಂವೇಷ್ಟನದ ಅಗತ್ಯವನ್ನು ಕುರಿತು ಜನರಲ್ಲಿ ಸರಿಯಾದ ತಿಳಿವಳಿಕೆ ಬೆಳೆಸುವುದೂ ಈ ಸಂಬಂಧವಾಗಿ ಕೈಗಾರಿಕೆಗಳಿಗೆ ಸೂಕ್ತ ಸಲಹೆ ನೀಡುವ ವ್ಯವಸ್ಥೆಯೇರ್ಪಡಿಸುವುದೂ ಈ ಸಂಸ್ಥೆಯ ಮುಖ್ಯ ಉದ್ದೇಶ. ಭಾರತ ಸರ್ಕಾರವೂ, ವ್ಯಾಪಾರ ಹಾಗೂ ಕೈಗಾರಿಕೆ ಸಂಸ್ಥೆಗಳೂ, ವಿಶ್ವವಿದ್ಯಾನಿಲಯಗಳೂ, ಸಂಶೋಧನ ಕೇಂದ್ರಗಳೂ ಈ ಸಂಸ್ಥೆಗೆ ಅಗತ್ಯ ನೆರವು ನೀಡುತ್ತಿರುವುದಲ್ಲದೆ ಇದರ ಕಲಾಪಗಳಲ್ಲಿ ಭಾಗಿಗಳಾಗಿವೆ. *

ಕೋಲ್ಕತ್ತ, ನವದೆಹಲಿ ಮತ್ತು ಚೆನ್ನೈಗಳಲ್ಲಿ ಪ್ರಾಂತೀಯ ಪರೀಕ್ಷಣೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳನ್ನು ಹೊಂದಿದೆ. ಈ ಸಂಸ್ಥೆಯು ಪ್ಯಾಕೇಜಿಂಗ್‌ನಲ್ಲಿ ಸರ್ಟಿಫ಼ಿಕೇಟ್ ಕೋರ್ಸು, ಸ್ನಾತಕೋತ್ತರ ಡಿಪ್ಲೊಮ ಕೋರ್ಸು, ಪ್ಯಾಕೇಜಿಂಗ್ ತಂತ್ರಜ್ಞಾನದ ಬಗ್ಗೆ, 18 ತಿಂಗಳ ದೂರ ಶಿಕ್ಷಣ ಕೋರ್ಸುಗಳನ್ನು ನಡೆಸುತ್ತದೆ. *

**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರಿನ್ ಟ್ರೇಡ್:** ಭಾರತದ ವಿದೇಶೀ ವ್ಯಾಪಾರಾಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಒಂದು ಸ್ವಯಾಡಳಿತ ಸಂಸ್ಥೆ. 1963ರಲ್ಲಿ ಇದು ಆರಂಭವಾಯಿತು. ಭಾರತದ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಆಧುನಿಕ ವಿಧಾನಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುವಂತೆ ವಿದೇಶೀ ವ್ಯಾಪಾರನಿರತ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡುವುದು ಇದರ ಉದ್ದೇಶಗಳಲ್ಲೊಂದು. ವಿದೇಶೀ ವ್ಯಾಪಾರಕ್ಕೆ ಸಂಬಂಧಿಸಿದ ನಾನಾ ಸಮಸ್ಯೆಗಳ ಬಗ್ಗೆ ಸಂಶೋಧನೆಗಳಿಗೆ ಯಥೋಚಿತ ಸಲಹೆ ಸೌಲಭ್ಯ ನೀಡುವ ಕಾರ್ಯವನ್ನೂ ಇದು ಕೈಗೊಂಡಿದೆ. ಭಾರತದ ಸರಕುಗಳಿಗೆ ಅನ್ಯದೇಶಗಳ ಮಾರುಕಟ್ಟೆಗಳಲ್ಲಿ ಗಿರಾಕಿ ಹೆಚ್ಚಿಸಲು ಅಗತ್ಯವಾದ ಸಂಶೋಧನೆ, ಪದಾರ್ಥ ಪರಿಶೀಲನೆ, ಮಾರಾಟ ಪರಿಶೋಧನೆ ಮುಂತಾದುವನ್ನು ಸಂಘಟಿಸಿ, ಸಾರ್ವಜನಿಕರ ತಿಳಿವಳಿಕೆಗಾಗಿ ಈ ಬಗ್ಗೆ ಆಗಿಂದ್ದಾಗ್ಗೆ ಪ್ರಕಟನೆ ಹೊರಡಿಸುವುದು ಈ ಸಂಸ್ಥೆಯ ಕಾರ್ಯಭಾರ. *

**ಇಂಡಿಯನ್ ಇನ್‌ಸ್ಟಿಟ್ಯೂಟ್ಸ್ ಆಫ್ ಮ್ಯಾನೇಜ್‌ಮೆಂಟ್:** ಗುಜರಾತ್ ರಾಜ್ಯದ ಅಹಮದಾಬಾದಿನಲ್ಲಿರುವ ಒಂದು ಮುಖ್ಯ ವಿದ್ಯಾಸಂಸ್ಥೆ. ಉನ್ನತಮಟ್ಟದ ತರಬೇತು ನೀಡುವುದೂ ಶ್ರೇಷ್ಠ ಆಡಳಿತಗಾರರನ್ನು ತಯಾರುಮಾಡುವುದೂ ವಾಣಿಜ್ಯ ಹಾಗೂ ವಾಣಿಜ್ಯಾಡಳಿತದ ವಿಷಯದಲ್ಲಿ ಉನ್ನತಮಟ್ಟದ ಸಂಶೋಧನೆಯನ್ನು ನಡೆಸಿ ಪ್ರಕಟಿಸುವುದೂ ಈ ಸಂಸ್ಥೆಗಳ ಉದ್ದೇಶಗಳು. ಭಾರತದ ಮೇಧಾವಿ ವಿದ್ಯಾರ್ಥಿಗಳನ್ನು ಗುರುತಿಸಿ, ವಿಶ್ವದ ಅತ್ಯುತ್ತಮ ಆಡಳಿತ ನಿರ್ವಹಣಾ ತಂತ್ರಕೌಶಲಗಳನ್ನು ಕಲಿಸಲು ಮತ್ತು ಭಾರತದ ಆರ್ಥಿಕ ಪರಿಸ್ಥಿತಿಯನ್ನು ನಿರ್ವಹಿಸಲು ಶ್ರೇಷ್ಠ ಮ್ಯಾನೆಜರುಗಳನ್ನು ಸೃಷ್ಟಿಸಲು ಭಾರತ ಸರ್ಕಾರ ರೂಪಿಸಿದ ಸಂಸ್ಥೆಗಳು–ಇವು ಐ.ಐ.ಎಂ. ಸಂಸ್ಥೆಗಳು. ರಾಷ್ಟ್ರದ ಆಡಳಿತ ನಿರ್ವಹಣೆಯಲ್ಲಿ ಮಾನವಶಕ್ತಿಯನ್ನು ಬಳಸುವಲ್ಲಿ, ಪ್ರಮುಖ ಪಾತ್ರವಹಿಸುತ್ತವೆ. ಈ ಸಂಸ್ಥೆಗಳು ಬೋಧನೆ, ಸಂಶೋಧನೆ. ಮತ್ತು ಕೈಗಾರಿಕೆಗಳ ನಿರ್ವಹಣೆಯಲ್ಲಿ ಜಾಗತಿಕ ಮಟ್ಟದ ಶ್ರೇಷ್ಠವಾದ ಸಂಸ್ಥೆಗಳಿಗೆ ಸರಿಗಟ್ಟಿ ನಿಲ್ಲುವ ಪ್ರಮುಖ ಮ್ಯಾನೆಜ್‌ಮೆಂಟ್ ಸಂಸ್ಥೆಗಳೆಂದು ಪರಿಗಣಿಸಲ್ಪಟ್ಟಿವೆ. ಐ.ಐ.ಎಂ.ಗಳನ್ನು ಭಾರತದ ಶ್ರೇಷ್ಠ ವ್ಯವಹಾರ ತರಬೇತಿ ಶಾಲೆಗಳೆಂದು ಪರಿಗಣಿಸಲಾಗಿದೆ. ಎಲ್ಲ ಐ.ಐ.ಎಂ.ಗಳೂ ಸಂಪೂರ್ಣವಾಗಿ ಸ್ವಾಯತ್ತವಾಗಿದ್ದು ಕೇಂದ್ರ ಸರ್ಕಾರದ ಧನಸಹಾಯ ಪಡೆದಿವೆ. ಕೋಲ್ಕತ್ತ (ಸ್ಥಾಪನೆ 1961), ಅಹಮದಾಬಾದ್ (1961), ಬೆಂಗಳೂರು (1973), ಲಕ್ನೌ (1984), ಕ್ಯಾಲಿಕಟ್ (1996), ಇಂಡೋರ್ (1998) ಮತ್ತು ಷಿಲ್ಲಾಂಗ್ (2005) ನಗರಗಳಲ್ಲಿ ಐ.ಐ.ಎಂ.ಸಂಸ್ಥೆಗಳಿವೆ. ಇವು ಎಂ.ಬಿ.ಎ.ಗೆ ಸಮಾನವಾದ ಸ್ನಾತಕೋತ್ತರ ಶಿಕ್ಷಣ ನೀಡುತ್ತವೆ. ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ 2012 ರ ವೇಳೆಗೆ ಇನ್ನೂ 7 ಹೊಸ ಐ.ಐ.ಎಂ. ಸಂಸ್ಥೆಗಳನ್ನು ರಾಂಚಿ, ರೋತಕ್, ರಾಯಪುರ್, ತಿರುಚಿರಾಪಳ್ಳಿ, ಜಮ್ಮು ಕಾಶ್ಮೀರ, ರಾಜಸ್ತಾನ ಮತ್ತು ಉತ್ತರಾಖಂಡದ ಕಾಶೀಪುರದಲ್ಲಿ, ಆರಂಭಿಸಬೇಕೆಂದು ಯೋಜಿಸಲಾಗಿದೆ. (ಸಿ.ಕೆ.ಆರ್.)

**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಭಾರತ ವಿಜ್ಞಾನ ಸಂಸ್ಥೆ):** ತಾತಾ ಇನ್‌ಸ್ಟಿಟ್ಯೂಟ್ ಎಂದೂ ಹೆಸರಿದೆ. ಬೆಂಗಳೂರಿನಲ್ಲಿರುವ ಈ ಸಂಸ್ಥೆ ಭಾರತದ ಸಂಶೋಧನಾಲಯಗಳಲ್ಲಿ ಬಹು ಮುಖ್ಯವಾದದ್ದು.

**ಚಾರಿತ್ರಿಕ ಹಿನ್ನೆಲೆ:** ಭಾರತಕ್ಕೆ ಇಂಥದೊಂದು ಸಂಸ್ಥೆ ಆವಶ್ಯಕವೆಂದು ಮೊದಲು ಯೋಚಿಸಿದವರು ಮುಂಬಯಿಯ ಸುಪ್ರಸಿದ್ಧ ಕೈಗಾರಿಕೋದ್ಯಮಿ ಜೆಮ್‌ಷೆಡ್‌ಜಿ ನಸರವಾನ್‌ಜಿ ತಾತಾರವರು. ದೂರದರ್ಶಿಗಳಾದ ಇವರು ಭಾರತ ಮುಂದೆ ಬರಬೇಕಾದರೆ ಕೇವಲ ಕೃಷಿಯೊಂದನ್ನೇ ಅವಲಂಬಿಸಿರುವುದರ ಬದಲು ತನ್ನ ಅಪಾರ ಪ್ರಕೃತಿ ಸಂಪತ್ತನ್ನು ಉಪಯೋಗಿಸಿ ಕೈಗಾರಿಕೆಗಳನ್ನು ಬೆಳೆಸಿಕೊಳ್ಳಬೇಕೆಂದು ಗ್ರಹಿಸಿದರು. ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೂ ವೈಜ್ಞಾನಿಕ ಸಂಶೋಧನೆ ಮತ್ತು ಪ್ರೌಢ ವ್ಯಾಸಂಗ ನಡೆಯಲು ಅನುಕೂಲವಾದ ಸಂಸ್ಥೆಯನ್ನು ಸ್ಥಾಪಿಸಲು ಮುಂದಾದರು. ಒಂದು ಸಮಾಜ ಅಥವಾ ದೇಶ ಮುಂದೆ ಬರಬೇಕಾದರೆ ಆ ಜನಾಂಗದ ದುರ್ಬಲರ ಮತ್ತು ದರಿದ್ರರ ಮಟ್ಟವನ್ನು ಎತ್ತುವುದಕ್ಕಿಂತ ಅಲ್ಲಿಯ ಪ್ರತಿಭಾವಂತರಿಗೆ ವಿದ್ಯೆ ಮತ್ತು ಶಿಕ್ಷಣ ದೊರೆಯುವಂತೆ ಮಾಡಿ ಅದರಿಂದ ದೇಶೋದ್ಧಾರವಾಗುವಂತೆ ಮಾಡುವುದು ಹೆಚ್ಚು ಉತ್ತಮವೆಂದು ಇವರ ಅಭಿಪ್ರಾಯವಾಗಿತ್ತು. ಈ ಉದ್ದೇಶದಿಂದ ಇವರು 1898ರ ಸೆಪ್ಟೆಂಬರಿನಲ್ಲಿ ಮುಂಬಯಿ

## ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಭಾರತ ವಿಜ್ಞಾನ ಸಂಸ್ಥೆ)

ಪಟ್ಟಣದಲ್ಲಿದ್ದ ತಮ್ಮ ಆಸ್ತಿಯಲ್ಲಿ 30 ಲಕ್ಷ ರೂಪಾಯಿ ಬೆಲೆಬಾಳುವ ಆಸ್ತಿಯನ್ನು ಈ ಸಂಸ್ಥೆಯ ಸ್ಥಾಪನೆಗೆಂದು ತೆಗೆದಿರಿಸಿದರು. ಮೊದಲು ತಾತಾರವರು ಈ ವಿಷಯದಲ್ಲಿ ಭಾರತದ ಮತ್ತು ಬ್ರಿಟನ್ನಿನ ತಜ್ಞರ ಸಲಹೆ ಕೇಳಿ ಈ ಸಂಸ್ಥೆಗೋಸ್ಕರ ಒಂದು ಕರಡುಪ್ರತಿ ತಯಾರಿಸಲು ಒಂದು ಹಂಗಾಮಿ ಸಮಿತಿಯನ್ನು ನೇಮಿಸಿದರು. 1898ರ ಡಿಸೆಂಬರಿನಲ್ಲಿ ಈ ಸಮಿತಿ ತಯಾರಿಸಿದ ಯೋಜನೆಯನ್ನು ವೈಸ್‌ರಾಯ್ ಲಾರ್ಡ್ ಕರ್ಜನ್‌ರವರ ಮುಂದಿಡಲಾಯಿತು. ಭಾರತ ಸರ್ಕಾರ ಇದನ್ನು ಅಂಗೀಕರಿಸಿ ಇದಕ್ಕೆ ಬೇಕಾದ ಕಾನೂನನ್ನು ಜಾರಿಗೆ ತರಲು ಒಪ್ಪಿಕೊಂಡಿತು. ತಾತಾರವರ ಮಿತ್ರರೂ ಮೈಸೂರಿನ ದಿವಾನರೂ ಆಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್‌ರವರು ಬೆಂಗಳೂರಿನ ಉತ್ತರದಲ್ಲಿ 372 ಎಕರೆ ಭೂಮಿಯನ್ನು ಈ ಸಂಸ್ಥೆಗೋಸ್ಕರ ಅಂದಿನ ಮೈಸೂರು ಸರ್ಕಾರ ಕೊಡುವುದಾಗಿ ತಿಳಿಸಿದರು.

ಸಮಿತಿ ತಯಾರಿಸಿದ ಯೋಜನೆಯನ್ನು ಸಮರ್ಥ ಮಾರ್ಗದರ್ಶನ ನೀಡಿ ಪರಿಪೂರ್ಣಗೊಳಿಸಲು ಲಂಡನ್ ವಿಶ್ವವಿದ್ಯಾನಿಲಯದ ಸರ್ ವಿಲಿಯಂ ರ್‍ಯಾಂಸೇ, ಮೆಲ್‌ಬೊರ್ನ್ ವಿಶ್ವವಿದ್ಯಾನಿಲಯದ ಓರ್ಮ್‌ಮಾಸನ್ ಮತ್ತು ರೂರ್ಕಿ ಎಂಜಿನಿಯರಿಂಗ್ ಕಾಲೇಜಿನ ಲೆಫ್ಟಿನೆಂಟ್ ಕರ್ನಲ್ ಕ್ಲಿಬರ್ನ್‌ರವರ ಸಹಾಯ ಪಡೆಯಲಾಯಿತು. ಇವರೆಲ್ಲರ ಅಭಿಪ್ರಾಯ ಈ ಸಂಸ್ಥೆಯನ್ನು ಅನ್ವಯ ವಿಜ್ಞಾನಕ್ಕೆ ಮೀಸಲಾಗಿಟ್ಟು ವಿದ್ಯಾರ್ಥಿಗಳಿಗೆ

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕಟ್ಟಡ

ಪ್ರಯೋಗ ಮಾರ್ಗಗಳಲ್ಲಿ ತರಬೇತು ಕೊಡಬೇಕು. ಇಲ್ಲಿ ಸ್ವತಂತ್ರವಾದ ಸಂಶೋಧನೆಗಳನ್ನು ನಡೆಸುತ್ತ ಅವುಗಳಲ್ಲಿ ಒದಗಬಹುದಾದ ಸಮಸ್ಯೆಗಳಿಗೆ ಅಂತಿಮ ನಿರ್ಣಯ ನೀಡುವ ಅಧಿಕಾರ ಈ ಸಂಸ್ಥೆಯೇ ಹೊಂದಿರಬೇಕು-ಎಂದಿತ್ತು.

ತಮ್ಮ ಕನಸು ನನಸಾಗುವುದಕ್ಕೆ ಮುಂಚೆಯೇ ತಾತಾರವರು 1904ರಲ್ಲಿ ಯುರೋಪಿನಲ್ಲಿ ನಿಧನರಾದರು. ಆದರೆ ಅವರ ಮಕ್ಕಳು ಸರ್ ದೊರಾಬ್ ತಾತಾ ಮತ್ತು ಸರ್ ರತನ್ ತಾತಾರವರು ತಮ್ಮ ತಂದೆಯವರ ಅಭಿಲಾಷೆಯನ್ನು ಪೂರ್ತಿಗೊಳಿಸುವುದಾಗಿ ತಿಳಿಸಿದರು.

ಮೈಸೂರು ಸರ್ಕಾರ ಸಂಸ್ಥೆಗೆ ಸ್ಥಳ ನೀಡಿತು. ಅಲ್ಲದೆ ಆರಂಭದ ಬಂಡವಾಳವಾಗಿ 5 ಲಕ್ಷ ರೂಪಾಯಿಗಳನ್ನೂ ವಾರ್ಷಿಕ ಸಹಾಯಧನವಾಗಿ 5,000 ರೂಪಾಯಿಗಳನ್ನೂ ಕೊಡುವುದಾಗಿ ಆಶ್ವಾಸಿಸಿತು. ಈ ಸಂಸ್ಥೆಯ ಸ್ಥಾಪನೆಯಲ್ಲಿ ಆಗಿನ ಮೈಸೂರು ಸರ್ಕಾರ ವಹಿಸಿದ ಪಾತ್ರ ಬಲು ಹಿರಿಯದು. ಆರಂಭದ ಬಂಡವಾಳವೆಂದು 2 1/2 ಲಕ್ಷ ರೂಪಾಯಿಗಳನ್ನು ಪ್ರತಿವರ್ಷ 1 ½ ಲಕ್ಷ ರೂಪಾಯಿಗಳಿಗೆ ಹೆಚ್ಚಿಲ್ಲದಂತೆ ಸಹಾಯಧನವನ್ನೂ ಆಗ ಗ್ರಾಂಟ್-ಇನ್-ಏಡ್ ಸಂಸ್ಥೆಗಳಿಗೆ ಕೊಡುತ್ತಿದ್ದಂತೆ ಸ್ಥಳೀಯ ಆದಾಯದ ಆಧಾರದ ಮೇಲೆ ಕೊಡುವುದಾಗಿ ಭಾರತ ಸರ್ಕಾರ ಒಪ್ಪಿತು.

ರಾಯಲ್ ಸೊಸೈಟಿಯವರ ಸಲಹೆಯಂತೆ ಮಾರಿಸ್ ಡಬ್ಲ್ಯು ಟ್ರಾವರ್ಸ್ ಅವರನ್ನು ಇದರ ಮೊದಲ ನಿರ್ದೇಶಕರಾಗಿ (ಡೈರೆಕ್ಟರ್) ನೇಮಿಸಲಾಯಿತು. 1906ನೆಯ ಆಗಸ್ಟ್‌ನಲ್ಲಿ ನೇಮಿತರಾದ ಟ್ರಾವರ್ಸ್ ರವರು ಅದೇ ನವಂಬರಿನಲ್ಲಿ ಭಾರತಕ್ಕೆ ಬಂದು ಸರ್ ದೊರಾಬ್ ತಾತಾ, ಸರ್ ರತನ್ ತಾತಾರೊಂದಿಗೂ ಭಾರತ ಸರ್ಕಾರ ಮತ್ತು ಮೈಸೂರು ಸರ್ಕಾರಗಳೊಡನೆಯೂ ಸಮಾಲೋಚನೆ ನಡೆಸತೊಡಗಿದರು.

ಇದರ ಕ್ಯಾಂಪಸ್ಸು ಬೆಂಗಳೂರಿನ ಉತ್ತರ ಭಾಗಕ್ಕೆ ರೈಲ್ವೆ ನಿಲ್ದಾಣದಿಂದ 4 ಕಿಮೀ.ಗಳ ದೂರದಲ್ಲಿದೆ.

ಕ್ಯಾಂಪಸ್‌ನಲ್ಲಿ 6 ಕ್ಯಾಂಟೀನ್‌ಗಳು, ಜಿಮ್, 3 ಭೋಜನ ಶಾಲೆಗಳು, ಪುರುಷರ 9 ಹಾಸ್ಟೆಲುಗಳು, 5 ಮಹಿಳೆಯರ ಹಾಸ್ಟೆಲುಗಳು, ಎರಡು ಮಾರಾಟ ಕೇಂದ್ರಗಳು ಮೊದಲಾದವು ಇವೆ.

ಯಾವ ಕಾನೂನೇ ಆಗಲಿ ಜಾರಿಗೆ ಬಂದಮೇಲೆ ಅದನ್ನು ಬದಲಾಯಿಸುವುದು ಸುಲಭವಲ್ಲ. ಈ ಸಂಸ್ಥೆ ಆ ಕಾಲಕ್ಕೆ ವಿನೂತನ ಪ್ರಯೋಗವಾಗಿತ್ತು. ಸಂಸ್ಥೆಯ ಭವಿಷ್ಯದ ಹಿತದೃಷ್ಟಿಯಿಂದ ಇದಕ್ಕಾಗಿ ಹೊಸ ಕಾನೂನನ್ನು ಆಗ ಮಾಡಲಿಲ್ಲ. ಬದಲು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ಸೌಲಭ್ಯವಿದ್ದ 1890ರ ಚಾರಿಟಬಲ್ ಎಂಡೋಮೆಂಟ್ ಆ್ಯಕ್ಟ್ ಎಂಬ ಕಾನೂನಿನ ಪ್ರಕಾರ ಭಾರತ ಸರ್ಕಾರದ ಗೃಹ ಇಲಾಖೆ 1909 ಮೇ 27ನೆಯ ತಾರೀಖು ತಾತಾರವರು ಈ ಸಂಸ್ಥೆಗಾಗಿ ಇರಿಸಿದ್ದ ಆಸ್ತಿಪಾಸ್ತಿಗಳನ್ನು ಒಂದು ನ್ಯಾಸಮಂಡಲಿಗೆ ವಹಿಸಿಕೊಟ್ಟಿದೆಯೆಂಬ ಆಜ್ಞೆಯನ್ನು ಹೊರಡಿಸಿತು. ಸರ್ಕಾರದ ಹೇಳಿಕೆ ಹೀಗಿತ್ತು : "ಈ ಯೋಜನೆಯ ಪ್ರವರ್ತಕರ ಧ್ಯೇಯಗಳ ಬಗೆಗೆ ಸರ್ಕಾರಕ್ಕೆ ಹಾರ್ದಿಕ ಸಹಾನುಭೂತಿ ಇದ್ದರೂ ಗೌರ್ನರ್ ಜನರಲ್‌ರವರು ಈ ಸಂಸ್ಥೆಯ ಆಡಳಿತದೊಡನೆ ನಿಕಟ ಸಂಪರ್ಕ ಹೊಂದಲು ಇಚ್ಛಿಸುವುದಿಲ್ಲ. ಇಲ್ಲಿ ಯಾವ ಬಗೆಯ ಸಂಶೋಧನೆಗಳು ನಡೆಯಬೇಕೆಂದಾಗಲೀ ಬೋಧನ ಮಾರ್ಗ ಹೇಗಿರಬೇಕೆಂದಾಗಲೀ ನಿರ್ಧರಿಸುವ ಹಕ್ಕು ತಮ್ಮದೇ ಆಗಿರಬೇಕೆಂದು ಆಶಿಸುವುದಿಲ್ಲ. ಸಂಸ್ಥೆ ಪ್ರೋತ್ಸಾಹಿಸಿ ನಡೆಸುವ ಬೌದ್ಧಿಕ ಚಟುವಟಿಕೆಗಳು ಮತ್ತು ಆರ್ಥಿಕ ಉದ್ಯಮಗಳ ಬೆಳವಣಿಗೆಯಲ್ಲಿ ಯಾವ ರೀತಿಯಲ್ಲೂ ಮಧ್ಯೆ ಪ್ರವೇಶಿಸಬಾರದೆಂಬುದು ಸರ್ಕಾರದ ಅಪೇಕ್ಷೆ. ಸರ್ಕಾರ ಇದಕ್ಕೆ ಗಣನೀಯ ಪ್ರಮಾಣದಲ್ಲಿ ಸಹಾಯದ್ರವ್ಯ ನೀಡುವುದರಿಂದ ಸಂಸ್ಥೆಯ ಮೇಲೆ ಆದಷ್ಟು ಕಡಿಮೆ ಹತೋಟಿಯನ್ನಿಟ್ಟುಕೊಳ್ಳಬಹುದು".

1 ಫೆಬ್ರವರಿ 1911 ರಂದು ಈ ಸಂಸ್ಥೆಯ ಪ್ರಧಾನ ಕಟ್ಟಡದ ಶಂಕುಸ್ಥಾಪನೆಯನ್ನು ಆಗ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರವರು ನೆರವೇರಿಸಿದರು. ಸುವ್ಯವಸ್ಥಿತ ರೀತಿಯಲ್ಲಿ ವೈಜ್ಞಾನಿಕ ಸಂಶೋಧನೆ ಅಂದಿನಿಂದ ಭಾರತದಲ್ಲಿ ಮೊದಲಾಯಿತು.

ಅಂದಿನಿಂದ ಇದುವರೆಗೂ ದಕ್ಷರಾದ ನಿರ್ದೇಶಕರು ಈ ಸಂಸ್ಥೆಗೆ ಯೋಗ್ಯ ಮಾರ್ಗದರ್ಶನ ನೀಡುತ್ತ ಬಂದಿದ್ದಾರೆ. ಡಾ.ಟ್ರಾವರ್ಸ್‌ರವರಾದ ಮೇಲೆ ಸರ್ ಎ. ಜಿ. ಬೊರ್ನ್ (1915-21), ಸರ್ ಎಂ. ಒ. ಫಾರ್‌ಸ್ಟರ್, ಎಫ್.ಆರ್.ಎಸ್. (1922-33). ಸರ್. ಸಿ. ವಿ. ರಾಮನ್ (1933-37), ಎಫ್. ಆರ್. ಎಸ್; ಎನ್.ಎಲ್; ಸರ್ ಜೆ. ಸಿ. ಘೋಷ್ (1939-48). ಎಂ.ಎಸ್. ಥ್ಯಾಕರ್ (1949-55), ಎಸ್. ಭಗವಂತಂ (1957-62), ಎಸ್. ಧಾವನ್ (1962-81 ) ಡಿ.ಕೆ.ಬ್ಯಾನರ್ಜಿ, (1971-72), ಎಸ್. ರಾಮಶೇಷನ್ (1981-84), ಸಿ.ಎನ್.ಆರ್. ರಾವ್ (1984-94), ಜಿ. ಪದ್ಮನಾಭನ್ (1994-98), ಜಿ. ಮೆಹ್ತ (1998-2005), ಪಿ. ಬಲರಾಮ್ (2005).

**ವಿವಿಧ ವಿಭಾಗಗಳು:** 1911ರಲ್ಲಿ ಇಲ್ಲಿ ಸಾಮಾನ್ಯ ಮತ್ತು ಆನ್ವಯಿಕ ರಾಸಾಯನಿಕ ವಿಜ್ಞಾನ ವಿಭಾಗಗಳು ಕೆಲಸ ಮಾಡಲಾರಂಭಿಸಿದುವು. 1911 ಜುಲೈಯಲ್ಲಿ ಮೊಟ್ಟಮೊದಲು ಇಲ್ಲಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಂಡರು. ಮುಂದೆ ಕೆಲವು ಕಾಲದಲ್ಲೇ ಇಂಗಾಲ ರಸಾಯನವಿಜ್ಞಾನ ವಿಭಾಗ ಪ್ರಾರಂಭವಾಯಿತು. 1921ರಲ್ಲಿ ಜೀವ ರಸಾಯನವಿಜ್ಞಾನ ವಿಭಾಗವನ್ನೂ, 1933ರಲ್ಲಿ ಭೌತವಿಜ್ಞಾನ ವಿಭಾಗವನ್ನೂ ತೆರೆದರು.

ದೇಶದ ಅತ್ಯುತ್ತಮ ಪ್ರಯೋಗಶಾಲೆಗಳು ಇಲ್ಲಿಯೇ ಇದ್ದುದರಿಂದ ಎರಡನೆಯ ಮಹಾಯುದ್ಧದ ಕಾಲದಲ್ಲಿ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಸಂಸ್ಥೆ (ಸಿ.ಎಸ್.ಐ.ಆರ್.), ಭಾರತೀಯ ವ್ಯವಸಾಯ ಸಂಶೋಧಕ ಸಂಸ್ಥೆ, ಭಾರತೀಯ ವೈದ್ಯಶಾಸ್ತ್ರ ಸಂಶೋಧನ ಸಂಸ್ಥೆ ಮತ್ತು ತಮಿಳುನಾಡು ಮತ್ತು ಮೈಸೂರು ಸರ್ಕಾರಗಳು-ಇವೆಲ್ಲ ಮುಂದಿಟ್ಟ ಸಮಸ್ಯೆಗಳ ಅಧ್ಯಯನವನ್ನು ಇನ್‌ಸ್ಟಿಟ್ಯೂಟ್ ವಹಿಸಿಕೊಂಡಿತು. ಅಲ್ಲದೆ ರಕ್ಷಣಾ ದಳದೊಡನೆಯೂ ಸಹಕರಿಸಿ ಹಲವು ಸಂಶೋಧನೆಗಳನ್ನು ನಡೆಸಿತು.

1942ರಿಂದೀಚೆಗೆ ಅನ್ವಯಗಣಿತ, ಹೈ ಓಲ್ಟೇಜ್ ಎಂಜಿನಿಯರಿಂಗ್ ಮುಂತಾದ 40 ವ್ಯಾಸಂಗ ವಿಭಾಗಗಳನ್ನು ತೆರೆದಿದ್ದಾರೆ.

1956ರ ಪಂಚವಾರ್ಷಿಕ ಯೋಜನೆಯ ಅಂಗವಾಗಿ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೋಸ್ಕರ ಆಟೋಮೊಬೈಲ್ ಎಂಜಿನಿಯರಿಂಗ್ (1956). ಸಾಯಿಲ್ ಮೆಕ್ಯಾನಿಕ್ಸ್ ಮತ್ತು ಫೌಂಡೇಷನ್ ಎಂಜಿನಿಯರಿಂಗ್ (1957), ಫೌಂಡ್ರಿ ಎಂಜಿನಿಯರಿಂಗ್ (1956). ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ (1956), ಅಲ್ಟ್ರಾ ಎಂಜಿನಿಯರಿಂಗ್ ಮತ್ತು ಅಕೌಸ್ಟಿಕಲ್ ಎಂಜಿನಿಯರಿಂಗ್-ಮುಂತಾದ ಅನೇಕ ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ.

**ಪುಸ್ತಕ ಭಂಡಾರ:** ಇಲ್ಲಿ ಅತ್ಯುತ್ತಮವಾದ ಪುಸ್ತಕ ಭಂಡಾರವಿದೆ. ಇದರಲ್ಲಿ 1,25,000 ಕ್ಕಿಂತಲೂ ಹೆಚ್ಚು ಪುಸ್ತಕಗಳಿವೆಯಲ್ಲದೆ ಮುಖ್ಯ ನಿಯತಕಾಲಿಕಗಳು ಬರುತ್ತವೆ. ಅಲ್ಲದೆ ಅನೇಕ ಅಂತಾರಾಷ್ಟ್ರೀಯ ವಿಜ್ಞಾನ ಸಂಸ್ಥೆಗಳ ತಾಂತ್ರಿಕ ವರದಿಗಳು, ಭಾರತೀಯ, ಅಮೆರಿಕನ್ ಮತ್ತು ಬ್ರಿಟಿಷ್ ಮಾಸಿಕಗಳು ಮತ್ತು ಭಾರತದ ಪೇಟೆಂಟುಗಳು ಇಲ್ಲಿಗೆ ಬರುತ್ತವೆ.

ಕಟ್ಟಡದ ನಿಯೋಜನೆ ಭಾರತದಲ್ಲೇ ಅತ್ಯುತ್ತಮವಾದುದೆಂದು ಪ್ರಾಜ್ಞರ ಅಭಿಪ್ರಾಯ. ಬೇಕೆಂದಾಗ ಮೈಕ್ರೊಫಿಲ್ಮುಗಳು ಫೋಟೊ ಕಾಪಿಗಳನ್ನೂ, ಇನ್ಸ್‌ಡಾಕಿನ ಪ್ರಾದೇಶಿಕ ಶಾಖೆ ತಯಾರಿಸಿಕೊಡುತ್ತದೆ ಮತ್ತು ಗ್ರಂಥ ವಿವರಣಾ ಪಟ್ಟಿಗಳನ್ನೂ ಒದಗಿಸುತ್ತದೆ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ತ್ರೈಮಾಸಿಕ ಪತ್ರಿಕೆ ಇನ್‌ಸ್ಟಿಟ್ಯೂಟಿನ ವಿವಿಧ ವಿಭಾಗಗಳಲ್ಲಿ ನಡೆದ ಸ್ವತಂತ್ರ ಸಂಶೋಧನೆಗಳ ವಿಷಯವನ್ನು ಪ್ರಕಟಿಸುತ್ತದೆ.

ವಿದ್ಯಾರ್ಥಿಗಳು ಸ್ಥಳದಲ್ಲೇ ಇದ್ದು ತಮ್ಮ ಪೂರ್ಣಕಾಲವನ್ನು ವ್ಯಾಸಂಗಕ್ಕಾಗಿ ವಿನಿಯೋಗ ಮಾಡಲೆಂಬ ಉದ್ದೇಶದಿಂದ ಸುಸಜ್ಜಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದಾರಲ್ಲದೆ ವಿದ್ಯಾಮಂದಿರದ ವತಿಯಿಂದ ಒಂದು ಆಸ್ಪತ್ರೆಯನ್ನೂ ನಡೆಸುತ್ತಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿಪುಲವಾದ ವಿದ್ಯಾರ್ಥಿವೇತನಗಳನ್ನು ಕೊಡುವ ವ್ಯವಸ್ಥೆಯೂ ಇದೆ.

**ಇನ್‌ಸ್ಟಿಟ್ಯೂಟ್ ಜಂಖಾನ:** ಇದರ ಆಶ್ರಯದಲ್ಲಿ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಪಠ್ಯೇತರ ಚಟುವಟಿಕೆಗಳು ನಡೆಯುತ್ತವೆ. ಇದು 1912ರಲ್ಲಿ ಸ್ಥಾಪಿತವಾಯಿತು. ಜಸ್ಟಿಸ್ ರಾನಡೆಯವರ ಹೆಸರಿನ ಒಂದು ವಾಚನಾಲಯ ಮತ್ತು ಪುಸ್ತಕ ಭಂಡಾರ, ಈಜುಕೊಳ, ವ್ಯಾಯಾಮ ಶಾಲೆ, ರೈಫಲ್ ಕ್ಲಬ್, ಸಂಗೀತ ಮತ್ತು ಸಾಹಿತ್ಯ ಸಂಘ. ಸಿನಿಮಾಸಂಘ ಮತ್ತು ಒಂದು ಅಂಗಡಿ ಸಹ ಇದರಲ್ಲಿವೆ. ಕಳೆದ ಕೆಲವು ವರ್ಷಗಳಿಂದ ಇದು ಒಂದು ಪತ್ರಿಕೆಯನ್ನೂ ಹೊರಡಿಸುತ್ತಿದೆ.

**ವೈಜ್ಞಾನಿಕ ಸಂಘಗಳು ಮತ್ತು ಸಮಿತಿಗಳು:** ಈ ಕೆಳಗಿನ ಸಂಘಗಳು ಇನ್‌ಸ್ಟಿಟ್ಯೂಟ್‌ನಲ್ಲಿ ಆಗಿಂದಾಗ್ಗೆ ಭಾಷಣಗಳು, ಸಭೆಗಳು ಮತ್ತು ವಿಚಾರಗೋಷ್ಠಿಗಳನ್ನೇರ್ಪಡಿಸುವುವು. 1. ಭಾರತೀಯ ವೈಜ್ಞಾನಿಕ ಕೆಲಸಗಾರರ ಸಂಘ; 2. ಜೀವ ರಸಾಯನವಿಜ್ಞಾನ ಸಂಘ; 3. ಬ್ರಿಟಿಷ್ ರೇಡಿಯೋ ಎಂಜಿನಿಯರುಗಳ ಸಂಘದ ಭಾರತೀಯ ವಿಭಾಗದ ಬೆಂಗಳೂರು ಶಾಖೆ; 4. ರಾಸಾಯನಿಕ ಎಂಜಿನಿಯರಿಂಗ್ ಅಸೋಸಿಯೇಷನ್; 5. ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಸೊಸೈಟಿ; 6. ಎಲೆಕ್ಟ್ರೋ ಕೆಮಿಕಲ್ ಸೊಸೈಟಿಯ ಭಾರತೀಯ ಶಾಖೆ: 7. ಎಂಜಿನಿಯರಿಂಗ್ ಸೊಸೈಟಿ; 8. ಭಾರತೀಯ ಲೋಹ ಇನ್‌ಸ್ಟಿಟ್ಯೂಟಿನ ಬೆಂಗಳೂರು ಶಾಖೆ; 9. ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಕೆಮಿಸ್ಟ್ರಿಯ ಬೆಂಗಳೂರು ಶಾಖೆ; 10. ಭಾರತೀಯ ವೈಜ್ಞಾನಿಕ ಫಿಲ್ಮ್ ಸೊಸೈಟಿ; 11 ಜೈವಿಕ ರಸಾಯನ ವಿಜ್ಞಾನಿಗಳ ಸಂಘ.

ಈ ಯೋಜನೆ ಆಗಿಂದಾಗ ಬದಲಾಯಿಸುತ್ತ ಬಂದಿದೆ. 1951ರಲ್ಲಿ ಜಾರಿಗೆ ಬಂದ ಯೋಜನೆಯಂತೆ ಈ ಸಂಸ್ಥೆಯ ಅಧಿಕಾರ ನಿರ್ವಹಣಾ ವರ್ಗ ಈ ಕೆಳಕಂಡಂತಿದೆ: 1. ಸಮೀಕ್ಷಕ (ವಿಸಿಟರ್): 2. ಕೋರ್ಟು; 3. ಕೌನ್ಸಿಲ್; 4. ಹಣಕಾಸಿನ ಸಮಿತಿ; 5. ಸೆನೇಟು; 6. ಫ್ಯಾಕಲ್ಟಿಗಳು; 7. ಆಸ್ತಿಗಳ ಮೇಲ್ವಿಚಾರಕರು; 8. ಧರ್ಮದರ್ಶಿ ಮಂಡಲಿ, 9. ನಿರ್ದೇಶಕ (ಡೈರೆಕ್ಟರ್).

**ಸಂಸ್ಥೆಯ ಆದಾಯ ಮತ್ತು ವ್ಯಯ:** ಸು.1949ರ ವರೆಗೂ ಇದರ ಆದಾಯದ ಹೆಚ್ಚು ಭಾಗ ತಾತಾರವರ ಪುದುವಟ್ಟಿನಿಂದ ಹಾಗೂ ಮೈಸೂರು ಮತ್ತು ಕೇಂದ್ರ ಸರ್ಕಾರಗಳಿಂದ ಬರುತ್ತಿತ್ತು. ಅಲ್ಲಿಂದೀಚೆಗೆ ಇದಕ್ಕೆ ಕೇಂದ್ರ ಸರ್ಕಾರ ಧಾರಾಳವಾಗಿ ಹಣ ಕೊಡುತ್ತಿದೆ. 1911–12ರಲ್ಲಿ 1,48,000 ರೂಪಾಯಿಗಳು ಖರ್ಚು ಆಗುತ್ತಿದ್ದು 1968ರಲ್ಲಿ 1,12,43,134 ರೂಪಾಯಿಗಳಿಗೇರಿದೆ.

ಹೀಗೆ ಈ ಸಂಸ್ಥೆ ಜನ್ಮ ತಳೆದಂದಿನಿಂದ ಇದುವರೆಗೂ ಅಭಿವೃದ್ಧಿಯಾಗುತ್ತ ಬಂದಿದೆ. ಇದನ್ನು ಸ್ಥಾಪಿಸಿದುದರ ಮುಖ್ಯ ಉದ್ದೇಶ ವಿದ್ಯಾರ್ಥಿಗಳಿಗೆ ಪ್ರೌಢ ಶಿಕ್ಷಣ ಒದಗಿಸಿ ವಿಜ್ಞಾನದ ಎಲ್ಲ ಶಾಖೆಗಳಲ್ಲೂ, ಮುಖ್ಯವಾಗಿ ಭಾರತದ ಔದ್ಯೋಗಿಕ ಮತ್ತು ಸಾಂಪತ್ತಿಕ ಬೆಳವಣಿಗೆಗೆ ಸಹಾಯಮಾಡಬಹುದಾದ ಶಾಖೆಗಳಲ್ಲಿ ಸ್ವತಂತ್ರ ಸಂಶೋಧನೆ ನಡೆಸುವುದು ಎಂದಿದೆ. ಭಾರತದ ಮುನ್ನಡೆಯಲ್ಲಿ ಈ ಸಂಸ್ಥೆ ಹಿರಿಯ ಪಾತ್ರ ವಹಿಸಿದೆ ಎಂಬುದರಲ್ಲಿ ಸಂದೇಹವಿಲ್ಲ. (ಎಂ.ಆರ್.ಆರ್.)

**ಇಂಡಿಯನ್ ಎಕ್ಸ್‌ಪ್ರೆಸ್:** ಭಾರತದ ಒಂದು ಪ್ರಸಿದ್ಧ ಇಂಗ್ಲಿಷ್ ಸುದ್ದಿ ಪತ್ರಿಕೆ. ಪ್ರಸಿದ್ಧ ಕೈಗಾರಿಕೋದ್ಯಮಿ ರಾಮನಾಥ ಗೋಯೆಂಕಾ ಅವರು 'ಎಕ್ಸ್‌ಪ್ರೆಸ್ ಬಳಗ' ಪ್ರಾರಂಭಿಸಿದರು. ಫ್ರೀಪ್ರೆಸ್ ಗುಂಪಿನ ಒಡೆತನದಲ್ಲಿದ್ದ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯನ್ನು 1935ರಲ್ಲಿ ಗೋಯೆಂಕಾ ಪಡೆದುಕೊಂಡರು. ಎಕ್ಸ್‌ಪ್ರೆಸ್ ಪತ್ರಿಕೆ ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಹೋರಾಟದ ಧ್ವನಿಯಾಗಿತ್ತು. ಸ್ವಾತಂತ್ರ್ಯಾನಂತರ ತನಿಖಾವರದಿಗಳ ಮೂಲಕ ಭ್ರಷ್ಟಾಚಾರದ ಮುಖಗಳನ್ನು ಬಯಲು ಮಾಡುವ ನಿರ್ಭೀತ ಪತ್ರಿಕೆಯಾಯಿತು. ಎಕ್ಸ್‌ಪ್ರೆಸ್ ಬಳಗದ ಪತ್ರಿಕೆಗಳ ಒಡೆಯರಾಗಿದ್ದ ರಾಮನಾಥ ಗೋಯೆಂಕಾ ಭಾರತಾದ್ಯಂತ ಪತ್ರಿಕೆಗಳ ಜಾಲ ಹೆಣೆದು ಪತ್ರಿಕೋದ್ಯಮದ ಒಬ್ಬ ಧೀಮಂತ ವ್ಯಕ್ತಿ ಎನಿಸಿಕೊಂಡರು.

ಮುಂಬೈಯಲ್ಲಿ ಪ್ರಕಟವಾಗುತ್ತಿದ್ದ 'ಮಾರ್ನಿಂಗ್ ಸ್ಟ್ಯಾಂಡರ್ಡ್', ದೆಹಲಿಯಲ್ಲಿ ಪ್ರಕಟವಾಗುತ್ತಿದ್ದ 'ನ್ಯೂಸ್ ಕ್ರಾನಿಕಲ್' ಪತ್ರಿಕೆಗಳನ್ನು ಎಕ್ಸ್‌ಪ್ರೆಸ್ ಬಳಗಕ್ಕೆ ಸೇರಿಸಿಕೊಳ್ಳುವುದರ ಮೂಲಕ ಎಕ್ಸ್‌ಪ್ರೆಸ್ ಸಾಮ್ರಾಜ್ಯದ ವಿಸ್ತರಣೆ ಕಾರ್ಯವನ್ನು ಸಾಹಸ ಮತ್ತು ಕೆಚ್ಚಿನಿಂದ ಗೋಯೆಂಕಾ ನಿರ್ವಹಿಸಿದರು.

ಭಾರತದ ಪತ್ರಿಕಾ ಸಮೂಹದಲ್ಲಿ ಅಗ್ರಮಾನ್ಯ ಸ್ಥಾನಗಳಿಸಿದ್ದ ಎಕ್ಸ್‌ಪ್ರೆಸ್ ಬಳಗ ಈಚಿನ ವರ್ಷಗಳಲ್ಲಿ ತೀವ್ರ ಪೈಪೋಟಿ ಎದುರು ಕೆಲವು ಪ್ರದೇಶಗಳಲ್ಲಿ ಸೊರಗಿದಂತೆ ಕಾಣುತ್ತದೆಯಾದರೂ ಅದರ ದಿಟ್ಟ ನಿಲುವುಗಳು, ಹೋರಾಟದ ಮನೋಧರ್ಮಗಳನ್ನು ಉಳಿಸಿಕೊಂಡ ಕೆಲವೇ ಪತ್ರಿಕೆಗಳಲ್ಲಿ ಒಂದು ಎನಿಸಿಕೊಂಡಿದೆ.

ಕಳೆದ ದಶಕದಲ್ಲಿ ಎಕ್ಸ್‌ಪ್ರೆಸ್ ಒಡೆತನದ ವಿಚಾರದಲ್ಲಿ 1991ರಲ್ಲಿ (ರಾಮನಾಥ ಗೋಯೆಂಕಾ ಅವರ ನಿಧನಾನಂತರ) ಭಿನ್ನಾಭಿಪ್ರಾಯಗಳು ತಲೆದೋರಿ ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಪ್ರತ್ಯೇಕ ಅಸ್ತಿತ್ವಗಳಲ್ಲಿ ಮುಂದುವರಿದಿದೆ. ಮುಂಬೈಯನ್ನು ಪ್ರಧಾನ ಕಛೇರಿಯನ್ನಾಗುಳ್ಳ ನ್ಯೂಸ್‌ಪೇಪರ್ಸ್ (ಬಾಂಬೆ) ಲಿಮಿಟೆಡ್ 'ದಿ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಭಾರತದ ಉತ್ತರ ಮತ್ತು ಪಶ್ಚಿಮ ಪ್ರಾಂತ್ಯಗಳಲ್ಲಿ ಪತ್ರಿಕಾಜಾಲ ವ್ಯಾಪಿಸಿಕೊಂಡು ಮುಂಬೈ, ಪುಣೆ, ನಾಗಪುರ, ಅಹಮದಾಬಾದ್, ಕೋಲ್ಕೊತ, ದೆಹಲಿ, ಚಂಡೀಘಡ ಮತ್ತು ಲಖನೌ–ಈ ಎಂಟು ಕಡೆಗಳಿಂದ ಪ್ರಕಟವಾಗುತ್ತಿದೆ. ವಿವೇಕ ಗೋಯೆಂಕಾ ಈ ಪತ್ರಿಕಾ ಸಮೂಹದ ಇಂಡಿಯನ್ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್ಸ್ ಬಾಂಬೆ ಲಿ., ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕರು. ಫೈನಾನ್ಷಿಯರ್ ಎಕ್ಸ್‌ಪ್ರೆಸ್, 'ಸ್ಕ್ರೀನ್' ಪತ್ರಿಕೆಗಳೂ ಈ ಗುಂಪಿಗೆ ಸೇರಿದವು.

ಚೆನ್ನೈನಲ್ಲಿ ಪ್ರಧಾನ ಕಛೇರಿ ಇರುವ ಎಕ್ಸ್‌ಪ್ರೆಸ್ ಪಬ್ಲಿಕೇಷನ್ಸ್ (ಮಧುರೈ) ಲಿಮಿಟೆಡ್ (ಇಪಿಎಂಎಲ್) ಸಂಸ್ಥೆ ದಕ್ಷಿಣ ಪ್ರಾಂತ್ಯದಲ್ಲಿ 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯನ್ನು ಒಟ್ಟು ಹದಿನಾಲ್ಕು ಕೇಂದ್ರಗಳಿಂದ ಪ್ರಕಟಿಸುತ್ತಿದೆ.

'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಬೆಂಗಳೂರು, ಬೆಳಗಾಂವಿ, ಶಿವಮೊಗ್ಗ, ಚೆನ್ನೈ, ಮಧುರೈ, ಕೊಯಿಮತ್ತೂರು, ತಿರುಚಿ, ಕೋಜಿಕೋಡ್, ತಿರುವನಂತಪುರ, ಹೈದರಾಬಾದ್, ವಿಜಯವಾಡ, ವಿಶಾಖಪಟ್ಟಣ, ಭುವನೇಶ್ವರ–ಇವೇ ಈ ಹದಿನಾಲ್ಕು ಕೇಂದ್ರಗಳು. 'ಇಪಿಎಂಎಲ್' ನ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ಮನೋಜ್ ಕುಮಾರ್ ಸೊಂತಾಲಿಯ.

'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಬಳಗದಲ್ಲಿ ಕನ್ನಡದಲ್ಲಿ ಕನ್ನಡಪ್ರಭ (ನಾಲ್ಕು ಕೇಂದ್ರಗಳಿಂದ) ತಮಿಳಿನಲ್ಲಿ ದಿನಮಣಿ (ನಾಲ್ಕು ಕೇಂದ್ರಗಳಿಂದ) ದಿನ ಪತ್ರಿಕೆಗಳಿವೆ. ದಿನಪತ್ರಿಕೆಗಳಲ್ಲದೆ ಈ ಸಂಸ್ಥೆಯ ತಮಿಳಿನಲ್ಲಿ ಪಕ್ಷ ಪತ್ರಿಕೆ, ಸಿನಿಮಾ ಎಕ್ಸ್‌ಪ್ರೆಸ್, ತಮಿಳಿನಲ್ಲಿ ವಾರ ಪತ್ರಿಕೆ ' ಟ್ಯಾಮಿಲಿಯನ್ ಎಕ್ಸ್‌ಪ್ರೆಸ್', ಮಲೆಯಾಳಂನಲ್ಲಿ 'ಮಲೆಯಾಳಂ ವಾರಿಕಾ' ವಾರಪತ್ರಿಕೆಯನ್ನು ಪ್ರಕಟಿಸುತ್ತಿದೆ.

ಇಪಿಎಂಎಲ್ ಎಂದು ಪ್ರಮುಖ ಇಂಟರ್‌ನೆಟ್ ಪ್ರಕಾಶಕ ಕೂಡ. ಇಂಡಿಯಾ ವಾರ್ತಾ, ನ್ಯೂಇಂಡ್‌ಪ್ರೆಸ್, ಕನ್ನಡಪ್ರಭ, ದಿನಮಣಿ, ಸಿನಿಮಾ ಎಕ್ಸ್‌ಪ್ರೆಸ್, ಮಲೆಯಾಳಂ ವಾರಿಕಾ, ಟ್ಯಾಮಿಲಿಯನ್ ಎಕ್ಸ್‌ಪ್ರೆಸ್ ಮತ್ತು ಈವೆಂಟ್‌ಎಕ್ಸ್‌ಪ್ರೆಸ್ – ಈ ಎಂಟು ವೆಬ್ ಸೈಟುಗಳಿವೆ.

ಎಕ್ಸ್‌ಪ್ರೆಸ್ ಪಬ್ಲಿಕೇಷನ್ಸ್ ಮಧುರೈ ಲಿಮಿಟೆಡ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್ಸ್ ಬಾಂಬೆ ಲಿಮಿಟೆಡ್ ಎರಡು ಪ್ರತ್ಯೇಕ ಅಸ್ತಿತ್ವ ಹೊಂದಿವೆಯಾದರೂ ಅಖಿಲ ಭಾರತ ಸುದ್ದಿ ಸಂಗ್ರಹಣೆ, ಹಂಚಿಕೆಯ ಬಗೆ ಪರಸ್ಪರ ಸಹಕಾರವಿದೆ. *

**ಇಂಡಿಯನ್ ಒಪಿನಿಯನ್:** ದಕ್ಷಿಣ ಆಫ್ರಿಕದ ಡರ್ಬನಿನಲ್ಲಿ, ಮನ್ ಸುಖ್‌ಲಾಲ್ ನಾಜರ್ ಅವರ ಸಂಪಾದಕತ್ವದಲ್ಲಿ 1904ರ ಡಿಸೆಂಬರ್ 24ರಂದು ಗಾಂಧೀಜಿ ಪ್ರಾರಂಭಿಸಿದ ವಾರಪತ್ರಿಕೆ.

ಸವಿನಯ ಕಾಯಿದೆಭಂಗ ಚಳವಳಿಯ ಮುಖಪತ್ರವಾಗಿ, 1913ರಲ್ಲಿ ದಕ್ಷಿಣ ಆಫ್ರಿಕ ಸರ್ಕಾರ ಮಂಡಿಸಿದ್ದ ವಲಸೆಗಾರರ ನಿಯಂತ್ರಣ ವಿಧೇಯಕವನ್ನು ವಿರೋಧಿಸುವಲ್ಲಿ ಈ ವಾರಪತ್ರಿಕೆಯ ಪಾತ್ರ ಮಹತ್ತ್ವದ್ದು. ಅಲ್ಲಿನ ಭಾರತೀಯರಲ್ಲಿ ಜಾಗೃತಿ ಮೂಡಿಸುವಲ್ಲಿ ಈ ಪತ್ರಿಕೆ ಪ್ರಮುಖ ಪಾತ್ರ ವಹಿಸಿತು. ಅಹಿಂಸಾತ್ಮಕ, ಸವಿನಯ, ವಿರೋಧ ಮೂಲ ಹೋರಾಟಕ್ಕೆ ಸತ್ಯಾಗ್ರಹ ಎಂದು ಹೆಸರು (ಸೂಚಕರು; ಮದನ್ ಲಾಲ್ ಗಾಂಧಿ) ಬಂದದ್ದೂ ಈ ಪತ್ರಿಕೆಯಿಂದಲೇ.

ನಾಲ್ಕು ಭಾಷೆಗಳಲ್ಲಿ (ಇಂಗ್ಲಿಷ್, ಹಿಂದೀ, ಗುಜರಾತಿ ಮತ್ತು ತಮಿಳು) ಫೂಲ್ಸ್‌ಕ್ಯಾಪ್ ಆಕಾರದಲ್ಲಿ ಪ್ರಕಟವಾಗುತ್ತಿದ್ದ ಈ ಪತ್ರಿಕೆಯ ಇಂಗ್ಲಿಷ್ ವಿಭಾಗ ಗಾಂಧೀಜಿಯ ಲೇಖನಿಗೆ ಮೀಸಲಾಗಿದ್ದವು. ಜನಪ್ರಿಯವಾಗಿದ್ದ ವೀಕ್ಲಿ ಡೈರಿ ಅಲ್ಲದೆ ಲೇಖನಮಾಲೆಯಾಗಿ ಗಾಂಧೀಜಿಯ ಹಿಂದ್ ಸ್ವರಾಜ್ಯ ಗ್ರಂಥ ಪ್ರಕಟನೆ ಈ ಪತ್ರಿಕೆಯ ವೈಶಿಷ್ಟ್ಯ.

ಡರ್ಬನಿನಿಂದ ಫೋನಿಕ್ಸ್‌ನ ಸಾಮುದಾಯಿಕ ವ್ಯವಸಾಯ ಕ್ಷೇತ್ರಕ್ಕೆ ಸ್ಥಳಾಂತರಗೊಂಡು, ಅಲ್ಲಿನ ಚಿಕ್ಕ ದೊಡ್ಡವರೆಲ್ಲರ ಬಿಡುವಿನ ದುಡಿಮೆಯೊಂದಿಗೆ, ಟ್ರೆಡಲ್ ಯಂತ್ರದಲ್ಲಿ ಅಚ್ಚಾಗುತ್ತಿದ್ದ ಈ ಪತ್ರಿಕೆ ಮುಂದೆ ತನ್ನ ಪ್ರಕಟಣೆಯನ್ನು ನಿಲ್ಲಿಸಿತು **(ನೋಡಿ– ಗಾಂಧೀ,–ಮೋಹನ್‌ದಾಸ್–ಕರಮ್‌ಚಂದ್)**. (ಪಿ.ಆರ್.ಕೆ.)

**ಇಂಡಿಯನ್ ಕೋ ಆಪರೇಟಿವ್ ರಿವ್ಯು:** ನ್ಯಾಷನಲ್ ಕೋ ಆಪರೇಟಿವ್ ಯೂನಿಯನ್ನಿನಿಂದ ಮೂರು ತಿಂಗಳಿಗೊಮ್ಮೆ ಪ್ರಕಟವಾಗುವ ಪತ್ರಿಕೆ. ಭಾರತದಲ್ಲಿ ಮತ್ತು ವಿದೇಶಗಳಲ್ಲಿ ನಡೆಯುತ್ತಿರುವ ಸಹಕಾರಿ ರಂಗದ ಪ್ರಗತಿ ಚಿತ್ರ. ಸಹಕಾರಿ ರಂಗದಲ್ಲಿ ನಡೆಯುವ ಸಂಶೋಧನೆ ಮುಂತಾದುವನ್ನು ಕುರಿತು ಉನ್ನತ ಮಟ್ಟದ ಪ್ರಬಂಧಗಳನ್ನು ಈ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ. ಈ ಪತ್ರಿಕೆಯನ್ನು 1965ರಲ್ಲಿ ಪ್ರಾರಂಭಿಸಲಾಯಿತು. ಕೇಂದ್ರ ಕಚೇರಿ ನವದೆಹಲಿ. ಇಂದಿಗೂ ಇದು ಪ್ರಕಟವಾಗುತ್ತಿದೆ **(ನೋಡಿ– ನ್ಯಾಷನಲ್–ಕೊ–ಆಪರೇಟಿವ್ ಯೂನಿಯನ್ ಆಫ್ ಇಂಡಿಯ)**. (ಸಿ.ಕೆ.ಆರ್.)

**ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್:** ವ್ಯವಸಾಯ ಕ್ಷೇತ್ರದಲ್ಲಿ ಸಂಶೋಧನೆಗಳ ಪ್ರವರ್ತನೆ, ನಿರ್ದೇಶನ ಹಾಗೂ ಸುಸಂಘಟನೆ ಉದ್ದೇಶದಿಂದ 1929ರಲ್ಲಿ ಭಾರತದಲ್ಲಿ ಸ್ಥಾಪಿತವಾದ ಸಂಸ್ಥೆ. ಇದರ ನೇರ ಆಡಳಿತಕ್ಕೊಳಪಟ್ಟ ಯಾವ ಸಂಶೋಧನ ವಿಭಾಗವೂ ಇಲ್ಲ. ಕೇಂದ್ರ ಹಾಗೂ ರಾಜ್ಯ ಸಂಸ್ಥೆಗಳಲ್ಲೂ ವಿಶ್ವವಿದ್ಯಾನಿಲಯದಲ್ಲೂ ಪುರಸ್ಕೃತ ಖಾಸಗಿ ಸಂಸ್ಥೆಗಳಲ್ಲೂ ಸಂಶೋಧನೆಯ ವ್ಯವಸ್ಥೆ ಏರ್ಪಡಿಸುವ

ಹೊಣೆಗಾರಿಕೆ ಇದರದು. ಸರ್ಕಾರದ ಅನುದಾನದಿಂದಲೂ ಇತರ ಮೂಲಗಳಿಂದಲೂ ನಿರ್ಯಾತವಾಗುವ ಕೆಲವು ವ್ಯವಸಾಯೋತ್ಪನ್ನಗಳ ಮೇಲೆ ವಿಧಿಸಲಾಗುವ ಶೇಕಡ ಅರ್ಧದಷ್ಟು ಸುಂಕದಿಂದಲೂ ಇದು ತನ್ನ ಕಲಾಪಗಳಿಗೆ ಅಗತ್ಯವಾದ ಹಣ ಪಡೆಯುತ್ತದೆ. *

**ಇಂಡಿಯನ್ ಕೌನ್ಸಿಲ್ ಆಫ್ ಟ್ರೇಡ್ ಫೇರ್ಸ್ ಅಂಡ್ ಎಕ್ಸಿಬಿಷನ್ಸ್:** ಭಾರತದ ಸರಕುಗಳ ನಿರ್ಯಾತ ಬೆಳೆಸುವ ಉದ್ದೇಶದಿಂದ ಭಾರತದಲ್ಲೂ ಇತರ ದೇಶಗಳಲ್ಲೂ ಕೈಗಾರಿಕೆ ಹಾಗೂ ವ್ಯಾಪಾರ ಪ್ರದರ್ಶನಗಳನ್ನು ಪ್ರವರ್ತಿಸುವುದೂ ಇವುಗಳಲ್ಲಿ ಭಾಗವಹಿಸುವಂತೆ ಕೈಗಾರಿಕೆ ಹಾಗೂ ವ್ಯಾಪಾರಸಂಸ್ಥೆಗಳನ್ನು ಪ್ರೋತ್ಸಾಹಿಸುವುದೂ ದೃಗ್ಗೋಚರ ವಿಧಾನದ ವಾಣಿಜ್ಯಕ ಪ್ರಕಟನೆಗಳನ್ನು ತೀವ್ರಗೊಳಿಸುವುದೂ ಈ ಸಂಸ್ಥೆಯ ಉದ್ದೇಶ. ಇದೊಂದು ಸ್ವಯಮಾಡಳಿತ ಸಂಸ್ಥೆ. *

**ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್:** ಭಾರತ ಮತ್ತು ಇತರ ದೇಶಗಳ ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ ಸರ್ಕಾರದ ನೆರವಿನಿಂದ ದೆಹಲಿಯಲ್ಲಿ ಸ್ಥಾಪಿತವಾಗಿರುವ ಸ್ವಯಮಾಡಳಿತ ಸಂಸ್ಥೆ.

ಪರಿಚಯ (ಓರಿಯಂಟೇಷನ್) ಶಿಕ್ಷಾಕ್ರಮ, ಬೇಸಗೆಶಿಬಿರ, ವಿದೇಶೀ ವಿದ್ಯಾರ್ಥಿಗಳ ಸಲುವಾಗಿ ಸ್ನೇಹಮಿಲನ ಕಾರ್ಯಕ್ರಮ, ವಿಖ್ಯಾತ ವಿದ್ವಾಂಸರ ವಿನಿಮಯ, ಭಾರತದ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಭಾರತೀಯಶಾಸ್ತ್ರ ಪೀಠಗಳ ಸ್ಥಾಪನೆ, ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಅಧ್ಯಾಪಕರ ನೇಮಕ, ಭಾರತದಲ್ಲಿರುವ ವಿದೇಶೀ ವಿದ್ಯಾರ್ಥಿಗಳ ಕ್ಷೇಮಪಾಲನೆ, ಅನ್ಯದೇಶಗಳಿಂದ ಭಾರತಕ್ಕೆ ಆಗಮಿಸುವ ಗಣ್ಯ ಅತಿಥಿಗಳ ಸ್ವಾಗತವ್ಯವಸ್ಥೆ, ಭಾರತೀಯ ಸಂಸ್ಕೃತಿಯನ್ನು ಕುರಿತು ಪ್ರದರ್ಶನಗಳ ಏರ್ಪಾಡು–ಇವು ಈ ಸಂಸ್ಥೆಯ ಮುಖ್ಯ ಕಾರ್ಯಕಲಾಪಗಳು.

ಈ ಸಂಸ್ಥೆ ಇಂಡೋ–ಏಷ್ಯನ್ ಕಲ್ಚರ್ ಎಂಬ ಆಂಗ್ಲ ತ್ರೈಮಾಸಿಕವನ್ನೂ ತಕಾಫತ್–ಉಲ್–ಹಿಂದ್ ಎಂಬ ಅರಬ್ಬೀ ತ್ರೈಮಾಸಿಕವನ್ನೂ ಪ್ರಕಟಿಸುತ್ತದೆ. ಕಲ್ಚರಲ್ ನ್ಯೂಸ್ ಫ್ರಂ ಇಂಡಿಯ ಎಂಬ ದ್ವೈಮಾಸಿಕ ವಾರ್ತಾಪತ್ರವನ್ನು ಪ್ರಕಟಿಸುತ್ತದೆ. ಇದು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಕೃತಿಗಳ ಪ್ರಕಟನೆಯ ಕಾರ್ಯವನ್ನೂ ವಿದೇಶೀಭಾಷೆಗಳಿಗೆ ಅವುಗಳ ಅನುವಾದಕಾರ್ಯವನ್ನೂ ಕೈಕೊಂಡಿದೆ. ಶಾಂತಿ ಹಾಗೂ ಅಂತಾರಾಷ್ಟ್ರೀಯ ಸೌಹಾರ್ದದ ಬೆಳವಣಿಗೆಗಾಗಿ ಭಾರತ ಸರ್ಕಾರದಿಂದ ಸ್ಥಾಪಿತವಾದ ಜವಾಹರಲಾಲ್ ನೆಹರು ಪಾರಿತೋಷಕ ಪ್ರದಾನ ಕಾರ್ಯವನ್ನು ಈ ಸಂಸ್ಥೆ ನಿರ್ವಹಿಸುತ್ತದೆ. (ಸಿ.ಕೆ.ಆರ್.)

**ಇಂಡಿಯನ್ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಐ ಟಿ ಡಿ ಸಿ):** 1966ರಲ್ಲಿ ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಸ್ಥಾಪಿತವಾದ ಸರ್ಕಾರಿ ವಲಯಸಂಸ್ಥೆ. ಭಾರತದಲ್ಲಿ ಪ್ರವಾಸೋದ್ಯಮ ಬೆಳೆಸುವುದು ಇದರ ಮೂಲೋದ್ದೇಶ. ಭೋಜನ, ವಸತಿಗೃಹಗಳ ನಿರ್ಮಾಣ, ಪ್ರವಾಸಿ ಮಂದಿರ ಹಾಗೂ ಉಪಾಹಾರ ಗೃಹಗಳ ನಿರ್ವಹಣೆ, ಪ್ರವಾಸಿಗಳಿಗೆ ಸಾರಿಗೆ ಸೌಲಭ್ಯ ನೀಡಿಕೆ. ಪ್ರವಾಸಸಂಬಂಧವಾದ ಜಾಹೀರಾತು, ಕರಪತ್ರ, ಕೈಪಿಡಿಗಳ ಪ್ರಕಟನೆ, ಪ್ರವಾಸಿಗಳ ಮನೋರಂಜನೆಯ ಕಾರ್ಯಕ್ರಮಗಳ ಏರ್ಪಾಡು, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲೂ ರೇವುಪಟ್ಟಣಗಳಲ್ಲೂ ಸುಂಕರಹಿತ ಅಂಗಡಿಗಳ ಸ್ಥಾಪನೆ–ಇವು ಈ ಸಂಸ್ಥೆಯ ಕಾರ್ಯಭಾರ.

ಈ ಸಂಸ್ಥೆಯು ಪ್ರವಾಸಿಗರಿಗೆ ನಾನಾ ಕಡೆಗಳಲ್ಲಿ ಹೊಟೇಲುಗಳನ್ನೂ ರೆಸ್ಟೋರೆಂಟು ಗಳನ್ನೂ, ಸಾರಿಗೆ ವ್ಯವಸ್ಥೆಯನ್ನೂ ಏರ್ಪಡಿಸುತ್ತದೆ. ಸದ್ಯ ಐ ಟಿ ಡಿ ಸಿ ಎಂಟು ಅಶೋಕ ಹೋಟೆಲುಗಳನ್ನೂ, ಆರು ಜಂಟಿ ಉದ್ಯಮದ ಹೊಟೆಲುಗಳನ್ನು, ಎರಡು ರೆಸ್ಟೋರೆಂಟುಗಳನ್ನು, 37 ತೆರಿಗೆ ರಹಿತ ಅಂಗಡಿಗಳನ್ನು ಹೊಂದಿದೆ. *

**ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿಮಿಟೆಡ್ (ಐ ಟಿ ಐ):** ಭಾರತದ ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಾಪನೆಯಾದ ಮೊಟ್ಟಮೊದಲ ಉದ್ಯಮ. ಬ್ರಿಟನ್ನಿನ ಆಟೋಮ್ಯಾಟಿಕ್ ಟೆಲಿಫೋನ್ ಅಂಡ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ ಸಂಸ್ಥೆಯ ತಾಂತ್ರಿಕ ನೆರವಿನಿಂದ ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಭಾರತ ಸರ್ಕಾರ ತೀರ್ಮಾನಿಸಿ, 1948 ಮೇ ತಿಂಗಳಿನಲ್ಲಿ ಒಪ್ಪಂದಕ್ಕೆ ಸಹಿ ಹಾಕಿತು. ಅನಂತರ ಕಾರ್ಖಾನೆ ಬೆಂಗಳೂರಿನಲ್ಲಿ ಸ್ಥಾಪನೆಗೊಂಡಿತು. 15 ವರ್ಷಗಳವರೆಗಿನ ಒಪ್ಪಂದದ ಅವಧಿ ಮುಕ್ತಾಯವಾದದ್ದು 1963ರಲ್ಲಿ. ಇದನ್ನು 1950ರಲ್ಲಿ ಒಂದು ಖಾಸಗಿ ಸಂಸ್ಥೆಯನ್ನಾಗಿ ಪರಿವರ್ತಿಸಲಾಯಿತು. 200 ಲಕ್ಷ ರೂಪಾಯಿಗಳ ಬಂಡವಾಳದಿಂದ ಪ್ರಾರಂಭಮಾಡಿ ಈ ಮೊತ್ತವನ್ನು 1954ರಲ್ಲಿ 400 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿ ಅನಂತರ 1964ರಲ್ಲಿ 500 ಲಕ್ಷ ರೂಪಾಯಿಗಳಿಗೆ ಏರಿಸಲಾಯಿತು. ಈ ಸಂಸ್ಥೆಯ ಪಾಲುಗಳಲ್ಲಿ ಶೇ.90 ರಷ್ಟು ಭಾರತದ ಕೇಂದ್ರ ಸರ್ಕಾರದ್ದು, ಉಳಿದ ಶೇ.10 ರಷ್ಟನ್ನು ಮೈಸೂರು ಸರ್ಕಾರವೂ ಬ್ರಿಟನ್ನಿನ ಕಂಪನಿಯೂ ಪಾಲುಗೊಂಡಿವೆ. ಎಲ್ಲ ಬಗೆಯ ದೂರವಾಣಿಗಳನ್ನೂ (ಟೆಲಿಫೋನ್ಸ್), ತತ್ಸಂಬಂಧಿ ಉಪಕರಣಗಳನ್ನೂ ಬಹುದೂರದ ವಾಹಕ ಸಲಕರಣೆಯನ್ನೂ (ಲಾಂಗ್–ಡಿಸ್ಟನ್ಸ್ ಕ್ಯಾರಿಯರ್ ಎಕ್ವಿಪ್‌ಮೆಂಟ್) ಈ ಕಾರ್ಖಾನೆ ತಯಾರಿಸುತ್ತದೆ. ಇದು ತನ್ನ ಮಂಕಪುರ್ ಮತ್ತು ರಾಯ್‌ಬರೇಲಿಯ ಕೇಂದ್ರಗಳಲ್ಲಿ GSM ನೊಬೆಲ್ ಉಪಕರಣವನ್ನು ತಯಾರಿಸುತ್ತದೆ. ಈ ಎರಡು ಕೇಂದ್ರಗಳು ವಾರ್ಷಿಕ ಒಂಬತ್ತು ಮಿಲಿಯನ್ ಸಂಪರ್ಕಗಳನ್ನು ಸ್ವದೇಶೀ ಹಾಗೂ ವಿದೇಶೀ ಮಾರುಕಟ್ಟೆಗಳಿಗೆ ಒದಗಿಸುತ್ತದೆ. ಇದು ಭಾರತದ ಸೈನಿಕ ಸೇವೆಗೆ 'ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸಿಸ್ಟಂ'ಗಳನ್ನೂ, 'ಎನ್‌ಕ್ರಿಪ್ಷನ್' ಹಾಗೂ ನೆಟ್‌ವರ್ಕಿಂಗ್ ಸಲ್ಯೂಷನ್'ಗಳನ್ನು ಒದಗಿಸುತ್ತದೆ (**ನೋಡಿ–ದೂರವಾಣಿ; ಭಾರತದ–ಕೈಗಾರಿಕೆಗಳು**). *

**ಇಂಡಿಯನ್ ನೇಷನ್:** ಪಾಟ್ನದಲ್ಲಿ 1931ರಲ್ಲಿ ಪ್ರಾರಂಭವಾದ ಇಂಗ್ಲಿಷ್ ಭಾಷಾ ದಿನಪತ್ರಿಕೆ. ಸುಪ್ರಸಿದ್ಧ ಪ್ರಕಟನೋದ್ಯಮಿಗಳಾದ ಸಚ್ಚಿದಾನಂದ ಸಿನ್ಹರು ಈ ಪತ್ರಿಕೆಯನ್ನು ಪ್ರಾರಂಭಿಸಿದರು. ಆಗ ಪ್ರಚಾರದಲ್ಲಿದ್ದ ಸರ್ಚ್‌ಲೈಟ್ ಎಂಬ ದಿನಪತ್ರಿಕೆ ಕಾಂಗ್ರೆಸ್ ಪಕ್ಷದ ರೀತಿನೀತಿಗಳನ್ನೇ ಸಮರ್ಥಿಸುತ್ತಿದ್ದು, ವಿರೋಧ ಪಕ್ಷಗಳ ಅಭಿಪ್ರಾಯಕ್ಕೆ ಸಾಕಷ್ಟು ಮನ್ನಣೆ ಕೊಡುತ್ತಿರಲಿಲ್ಲವಾದ ಕಾರಣ ದರ್ಭಾಂಗ ಮಹಾರಾಜರ ಸಹಾಯದಿಂದ ಈ ಪತ್ರಿಕೆಯನ್ನು ಹೊರಡಿಸಲಾಯಿತು. ಹಾರ್ಡಿ, ಚಟರ್ಜಿ, ಸಚ್ಚಿದಾನಂದ ಸಿನ್ಹ, ವೈಮಾಂಟ್, ಜೆ.ಸಿ. ರೋಮ್, ಸೋಮಯಾಜುಲು, ಸಿ.ವಿ.ಎಚ್. ರಾಮ್, ಎಸ್.ವಿ. ಚಾರಿ ಮತ್ತು ಡಾ. ಸಚಿನ್ ಸೇನರು ಈ ಪತ್ರಿಕೆಯ ಸಂಪಾದಕರುಗಳಾಗಿ ಕೆಲಸ ಮಾಡಿ ಇದನ್ನು ಬಿಹಾರದ ಉತ್ತಮ ಇಂಗ್ಲಿಷ್ ದಿನಪತ್ರಿಕೆಗಳಲ್ಲೊಂದನ್ನಾಗಿ ಮಾಡಿದರು. ಈ ಪತ್ರಿಕೆಯ ಅಭಿವೃದ್ಧಿಯಲ್ಲಿ ಸುಪ್ರಸಿದ್ಧ ಪತ್ರಿಕೋದ್ಯಮಿಗಳಾದ ಸಿ.ವೈ. ಚಿಂತಾಮಣಿ ಮತ್ತು ಎಸ್. ಐಯಂಗಾರ್ಯರು ಆಗಾಗ್ಗೆ ನೆರವು ನೀಡಿದ್ದಾರೆ. ಕಾಂಗ್ರೆಸ್ಸಿನ ರೀತಿನೀತಿಗಳನ್ನು ಮೊದ ಮೊದಲು ವಿರೋಧಿಸಿದರೂ 1942ನೆಯ ಆಗಸ್ಟ್ ಚಳವಳಿಯಲ್ಲಿ ಬಿಹಾರ ಸರ್ಕಾರದ ಸುದ್ದಿ ನಿಯಂತ್ರಣಾಧಿಕಾರವನ್ನು ಪ್ರಬಲವಾಗಿ ವಿರೋಧಿಸಿ, ಮಹಾತ್ಮ ಗಾಂಧಿಯವರ ದಸ್ತಗಿರಿಯನ್ನು ಕಟುವಾಗಿ ಖಂಡಿಸಿ, ಈ ಪತ್ರಿಕೆ ತನ್ನ ರಾಷ್ಟ್ರೀಯ ಮನೋಭಾವವನ್ನು ವ್ಯಕ್ತಗೊಳಿಸಿತು. ಕಾರ್ಯಾಲಯದ ಎಲ್ಲ ಶಾಖೆಗಳೂ ಆಧುನಿಕ ಉಪಕರಣಗಳಿಂದ ಸಜ್ಜಿತವಾಗಿದ್ದು ಒಳ್ಳೆಯ ಮುದ್ರಣ ಮತ್ತು ಯೋಗ್ಯ ವಿಷಯಗಳಿಂದಾಗಿ ಈ ಪತ್ರಿಕೆ ಬಿಹಾರದ ಜನಪ್ರಿಯ ಇಂಗ್ಲಿಷ್ ಪತ್ರಿಕೆಯೆಂದು ಹೆಸರು ಗಳಿಸಿತು. 1932–42 ರವರೆಗೆ ನಿಲ್ಲಿಸಲಾಗಿದ್ದ ಈ ಪತ್ರಿಕೆಯನ್ನು 1943 ರಲ್ಲಿ ಪುನರಾರಂಭಿಸಲಾಯಿತು. 1990ರ ದಶಕದಲ್ಲಿ ಮಧ್ಯೆ ನಿಂತು, ಪುನರಾರಂಭ ಗೊಂಡು 90ರ ದಶಕದ ಕೊನೆಯಲ್ಲಿ ಇದರ ಪ್ರಕಟಣೆ ನಿಂತುಹೋಯಿತು. (ಎನ್.ಕೆ.)

**ಇಂಡಿಯನ್ ನ್ಯಾಷನಲ್ ಆರ್ಮಿ:** ಈ ಹೆಸರಿನ ಸೈನ್ಯವನ್ನು ಕಟ್ಟಿದವರು ಸುಭಾಸ್‌ಚಂದ್ರ ಬೋಸ್. ಒಂದನೆಯ ಮಹಾಯುದ್ಧವಾದ ಮೇಲೆ ಭಾರತೀಯ ರಾಷ್ಟ್ರೀಯ ಚಳವಳಿಯನ್ನು ದೂರ ಪ್ರಾಚ್ಯದಲ್ಲೂ ಹರಡಲು ಮೊಟ್ಟಮೊದಲನೆಯದಾಗಿ ಪ್ರಯತ್ನ ಮಾಡಿದವರು ರಾಶ್‌ಬಿಹಾರಿ ಬೋಸ್. ಈ ಪ್ರಯತ್ನದ ಫಲವಾಗಿ ಜಪಾನಿನಲ್ಲಿ ಭಾರತೀಯ ಸ್ವಾತಂತ್ರ್ಯ ಮಂಡಲಿ ಸ್ಥಾಪಿತವಾಯಿತು. ಜಪಾನೀಯರ ಸಹಾಯ, ಸಹಕಾರದಿಂದ ಕೆಲಸವನ್ನು ಆರಂಭಿಸಿದ ರಾಶ್‌ಬಿಹಾರಿ ಬೋಸ್ ಎರಡನೆಯ ಮಹಾಯುದ್ಧ ಪ್ರಾರಂಭವಾಗುವವರೆಗೆ ಅಹೋರಾತ್ರಿ ದುಡಿದರು. ಬ್ರಿಟನ್ ಮತ್ತು ಅಮೆರಿಕದ ವಿರುದ್ಧವಾಗಿ 1941ರಲ್ಲಿ ಜಪಾನ್ ಯುದ್ಧವನ್ನು ಘೋಷಿಸಿದಾಗ ಜಪಾನಿನ ಭಾರತೀಯ ಸ್ವಾತಂತ್ರ್ಯದ ಮಂಡಲಿಯ ಆಶ್ರಯದಲ್ಲಿ ಭಾರತವನ್ನು ಬ್ರಿಟನ್ನಿನ ಹಿಡಿತದಿಂದ ಮುಕ್ತಿಗೊಳಿಸಲು ಶಸ್ತ್ರಾಸ್ತ್ರಗಳ ಚಳವಳಿಯನ್ನು ಆರಂಭಿಸಲು ತಮಗೆ ಎಲ್ಲ ನೆರವನ್ನು ನೀಡಬೇಕೆಂದು ಬೋಸರು ಮತ್ತು ಮಿತ್ರರು ಜಪಾನ್ ಸರ್ಕಾರವನ್ನು ಪ್ರಾರ್ಥಿಸಿದರು. ಬೋಸ್‌ರ ಯೋಜನೆಯನ್ನು ಜಪಾನಿನ ಪ್ರಧಾನಿ ಟೋಜೊ ಬಹುವಾಗಿ ಮೆಚ್ಚಿಕೊಂಡು, ಎಲ್ಲ ಸಹಾಯವನ್ನು ಒದಗಿಸಿಕೊಟ್ಟ, ದೂರಪ್ರಾಚ್ಯದಲ್ಲಿ ನೆಲೆಸಿದ್ದ ಎಲ್ಲ ಭಾರತೀಯರ ಅಭಿಪ್ರಾಯವನ್ನು ಪಡೆದು ಬ್ಯಾಂಕಾಕ್‌ನಲ್ಲಿ ಭಾರತೀಯ ಸ್ವಾತಂತ್ರ್ಯ ಮಂಡಲಿಯ ಆಶ್ರಯದಲ್ಲಿ ಪೂರ್ವ ಏಷ್ಯದಲ್ಲಿ ನೆಲಸಿದ್ದ ಭಾರತೀಯರ ಪ್ರತಿನಿಧಿಗಳ ಸಭೆ ಕರೆದು, ಬೋಸರನ್ನು ಅದರ ನಾಯಕರನ್ನಾಗಿ ಆರಿಸಲಾಯಿತು. ಸಭೆ ಮುಕ್ತಾಯಗೊಂಡ ಮೇಲೆ ಮಂಡಲಿಯ ಶಾಖೆಗಳನ್ನು ಪ್ರಮುಖ ನಗರಗಳಲ್ಲಿ ಸ್ಥಾಪಿಸಲಾಯಿತು. ಸಿಂಗಪುರದಲ್ಲಿ ಶಸ್ತ್ರಸಜ್ಜಿತ ಸೇವಕರುಗಳಿಗೆ ತರಬೇತು ಕೊಡಲಾಯಿತು. ಆ ಪಡೆಯಲ್ಲಿ ಯುದ್ಧಕೈದಿಗಳೇ ಅಧಿಕ ಸಂಖ್ಯೆಯಲ್ಲಿದ್ದರು. ಸುಭಾಸ್‌ಚಂದ್ರಬೋಸರೇ ಸ್ವಾತಂತ್ರ್ಯ ಚಳವಳಿಯನ್ನು ಮುನ್ನಡೆಸಲು ತಕ್ಕವರೆಂದು ಭಾವಿಸಿ, ರಾಶ್ ಬಿಹಾರಿ ಬೋಸ್ ಜಪಾನ್ ಸರ್ಕಾರದ ಅನುಮತಿ ಪಡೆದು ಅವರನ್ನು ಪೂರ್ವ ಏಷ್ಯಕ್ಕೆ ಬರುವಂತೆ ಆಹ್ವಾನಿಸಿದರು. ಸುಭಾಸ್‌ಚಂದ್ರ ಬೋಸ್ 1943ರ ಜೂನ್ 13ರಂದು ಟೋಕಿಯೊಗೆ ಆಗಮಿಸಿದರು. ಭಾರತೀಯ ಸ್ವಾತಂತ್ರ್ಯದ ಮಂಡಲಿಯ ಅಧ್ಯಕ್ಷರಾಗಿ ಅವರು 1943ನೆಯ ಅಕ್ಟೋಬರ್ 21ರಂದು ಆಜ್ಹಾದ್ ಹಿಂದ್ ತಾತ್ಕಾಲಿಕ ಸರ್ಕಾರವನ್ನು ಘೋಷಿಸಿದರು. ಚಳವಳಿಯನ್ನು ತೀವ್ರಗೊಳಿಸುವುದಕ್ಕಾಗಿ ಭಾರತ ರಾಷ್ಟ್ರೀಯ ಸೇನೆಯನ್ನು ಕಟ್ಟಿದರು.

ಜಪಾನೀಯರ ಶಸ್ತ್ರಾಸ್ತ್ರಗಳನ್ನು ಒದಗಿಸಿಕೊಟ್ಟು ಬೋಸರು ಸೇನೆಗೆ ಹೊಸ ಚೇತನವನ್ನು ತುಂಬಿದರು. ಜೈಹಿಂದ್, ಚಲೋ ದಿಲ್ಲಿ–ಎಂಬ ವೀರ ಘೋಷಣೆಗಳನ್ನು ಬಳಕೆಗೆ ತಂದರು. ಯುದ್ಧದಿಂದಲ್ಲದೆ ಬೇರಾವ ಸಾಧನದಿಂದಲೂ ಭಾರತದ ಸ್ವಾತಂತ್ರ್ಯ ಸಾಧ್ಯವಿಲ್ಲವೆಂದು ಘೋಷಿಸಿ, ಚಳವಳಿಯನ್ನು ಸಮರದ ತಳಹದಿಯ ಮೇಲೆ ರೂಪಿಸಿ, ತೀವ್ರಗೊಳಿಸಿದರು. ಮುಖ್ಯ ಸೇನಾಧಿಪತ್ಯವನ್ನು ತಾವೇ ವಹಿಸಿಕೊಂಡು, ದಂಡೆತ್ತಿ ಹೋಗಿ ಬ್ರಿಟಿಷ್ ಸೈನ್ಯದ ಮೇಲೆ ಬಿದ್ದು, ಅವರನ್ನೂ ಅವರ ನೆಲಗಳನ್ನೂ ಧ್ವಂಸ ಮಾಡತೊಡಗಿದರು. ಚಳವಳಿಯನ್ನು ಕ್ರಮಬದ್ಧವಾಗಿಯೂ ದಕ್ಷತೆಯಿಂದಲೂ ನಡೆಸುವ ಉದ್ದೇಶದಿಂದ ಅವರು ಆಜ್ಹಾದ್ ಹಿಂದ್ ತಾತ್ಕಾಲಿಕ ಸರ್ಕಾರದ ಮೂಲ ಕೇಂದ್ರವನ್ನು ಸಿಂಗಪುರದಿಂದ ರಂಗೂನಿಗೆ ಇಂದಿನ ಮಯನ್ಮಾರ್‌ನ ರಾಜಧಾನಿ ಯಾಂಗಾನ್‌ಗೆ ವರ್ಗಾಯಿಸಿದರು.

1944ನೆಯ ಸೆಪ್ಟೆಂಬರ್‌ನಲ್ಲಿ ಇಟಲಿ ಸೋತು ಶರಣಾದುದು ಆಜ಼ಾದ್ ಹಿಂದ್ ಚಳವಳಿಗೆ ಭಾರಿ ಪೆಟ್ಟು ಬಿದ್ದಂತಾಯಿತು. ಅಮೆರಿಕ ಪೆಸಿಫಿಕ್ ಸಾಗರದಲ್ಲಿ ತನ್ನ ನೆಲೆಗಳನ್ನು ಮತ್ತೆ ಪಡೆದುಕೊಂಡದ್ದರಿಂದ ಜಪಾನ್ ಹೆಚ್ಚಿನ ಗಮನವನ್ನು ತನ್ನ ನಗರ ರಕ್ಷಣೆಯ ಕಡೆ ಹರಿಸಬೇಕಾಯಿತು. ತತ್ಪರಿಣಾಮವಾಗಿ ಆಜ಼ಾದ್ ಹಿಂದ್ ಸೈನ್ಯಕ್ಕೆ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ನೆರವನ್ನು ಜಪಾನ್ ಕೊಡಲಾರದೆ ಹೋಯಿತು. ಇಂಡೋ–ಬರ್ಮ ಇಂದಿನ ಮಯನ್ಮಾರ್ ಗಡಿಯಲ್ಲಿ ಆಜ಼ಾದ್ ಹಿಂದ್ ಸೈನ್ಯ ನಡೆಸಿದ ಹೋರಾಟ ಸಾರ್ಥಕವಾಗಲಿಲ್ಲ. ಸೈನ್ಯ ವೀರಾವೇಶದಿಂದ ಯುದ್ಧ ಮಾಡಿದರೂ ಇಂಫಾಲ್ ಮತ್ತು ಕೊಹಿಮ ಆಕ್ರಮಣಗಳಲ್ಲಿ ಸೋತುಹೋಯಿತು. ಮಣಿಪುರವನ್ನು ರಕ್ಷಿಸುವುದಕ್ಕಾಗಿ ಬ್ರಿಟನ್ ಶಕ್ತಿಮೀರಿ ಹೋರಾಡಿತು. ಅದರ ಶಸ್ತ್ರಾಸ್ತ್ರಗಳು ಉತ್ತಮ ದರ್ಜೆಯವಾಗಿದ್ದುವು. ಸ್ವಲ್ಪಕಾಲದ ಮೇಲೆ ಗಡಿಯ ಸಮರಗಳಲ್ಲಿ ಬ್ರಿಟಿಷ್ ಯುದ್ಧ ಯಂತ್ರಗಳ ಬಳಕೆಯನ್ನು ಕಡಿಮೆ ಮಾಡಲು ಸಾಧ್ಯವಾಗಲೇ ಇಲ್ಲ. 1944ರ ಹೊತ್ತಿಗೆ ಆಜ಼ಾದ್ ಹಿಂದ್ ಸೈನ್ಯ ಯುದ್ಧವನ್ನು ಪೂರ್ಣವಾಗಿ ಕಳೆದುಕೊಂಡಿತೆಂದೇ ಹೇಳಬಹುದು. 1945ರ ಆದಿಭಾಗದಲ್ಲಿ ಮಯನ್ಮಾರಿನ ಬರ್ಮದ ಹಿಂದಿನ ಉತ್ತರ ಮತ್ತು ದಕ್ಷಿಣ ಭಾಗಗಳಿಗೆ ಬ್ರಿಟಿಷ್ ಸೈನ್ಯ ತಂಡೋಪತಂಡವಾಗಿ ಧಾವಿಸಲು ಪ್ರಾರಂಭಿಸಿತು. ಅವರು ಮಾಂಡಲೆಯನ್ನು ವಶಪಡಿಸಿಕೊಂಡು ಅನಂತರ ಅಂದಿನ ರಂಗೂನನ್ನು ತಮ್ಮ ಅಧೀನಪಡಿಸಿಕೊಂಡರು. 1945ರ ಆಗಸ್ಟ್‌ನಲ್ಲಿ ಜಪಾನ್ ಶರಣಾಗತವಾಯಿತು. ಇದರ ಜೊತೆಯಲ್ಲಿಯೇ ಆಜ಼ಾದ್ ಹಿಂದ್ ಚಳವಳಿ ನಿಂತಿತು. ಈ ಚಳವಳಿ ಜಪಾನೀಯರ ಯುದ್ಧದೊಂದಿಗೆ ಬೆರೆತುಹೋದದ್ದರಿಂದ ಜಪಾನ್ ಸೋತಾಗ ಚಳವಳಿಯೂ ಕೊನೆಗೊಂಡಿತು.

ಭಾರತ ರಾಷ್ಟ್ರೀಯ ಸೇನೆಯ ಅಧಿಕಾರಿಗಳನ್ನು ಭಾರತದಲ್ಲಿ ವಿಚಾರಣೆಗೆ ಗುರಿಪಡಿಸಿದಾಗ ಆ ಸೇನೆಯ ಮಹತ್ತ್ವವೇನೆಂಬುದು ಎಲ್ಲರಿಗೂ ಗೊತ್ತಾಯಿತು. ಭಾರತದ ರಾಜಕೀಯ ಪಕ್ಷಗಳೂ ಜನತೆಯೂ ಅವರನ್ನು ಸ್ವಾತಂತ್ರ್ಯಯೋಧರೆಂದು ಗೌರವಿಸಿದರು. ಅವರನ್ನು ಸೆರೆಮನೆಗಳಿಂದ ಬಿಡುಗಡೆ ಮಾಡಬೇಕೆಂದು ಭಾರತದಲ್ಲಿ ಗಲಭೆಗಳು, ಚಳವಳಿಗಳು ನಡೆದವು. ಭಾರತದ ಕೋಟಿ ಕೋಟಿ ಜನರ ಮನಸ್ಸಿನಲ್ಲಿ ಭಾರತ ರಾಷ್ಟ್ರೀಯ ಸೈನ್ಯ ಶಾಶ್ವತ ಸ್ಥಾನವನ್ನು ಪಡೆದಿದೆ. ಅದು ವಿಶ್ವದ ವಿವಿಧ ಭಾಗಗಳಲ್ಲಿ ಜರುಗಿದ ಸಮರಗಳಲ್ಲಿ ಭಾಗವಹಿಸಿ, ತನ್ನ ಧೈರ್ಯೋತ್ಸಾಹಗಳನ್ನು ಪ್ರದರ್ಶಿಸಿ ಭಾರತೀಯರಿಗೆ ಕೀರ್ತಿಯನ್ನು ತಂದುಕೊಟ್ಟಿತು. ವಿಶ್ವದ ದೃಷ್ಟಿಯಲ್ಲಿ ಅದರ ಗೌರವ ಘನತೆಗಳು ಮೇಲೇರಿದವು. ಭಾರತದ ಸ್ವಾತಂತ್ರ್ಯ ಸಾಧನೆಗೆ ಭಾರತ ರಾಷ್ಟ್ರೀಯ ಸೇನೆಯ ಕೊಡುಗೆ ಗಮನಾರ್ಹವಾದದ್ದು. *

**ಇಂಡಿಯನ್ ನ್ಯಾಷನಲ್ ಕಮಿಟಿ ಆನ್ ಸ್ಪೇಸ್ ರಿಸರ್ಚ್:** ಬಾಹ್ಯಾಂತರಿಕ್ಷದ ಅಧ್ಯಯನ, ಸಂಶೋಧನೆಗಳಿಂದ ದೊರೆವ ಮಾಹಿತಿಗಳನ್ನು ಶಾಂತಿಯುತ ಕಾರ್ಯಗಳಿಗಾಗಿ ಬಳಸಿಕೊಳ್ಳಲು ಯೋಜನೆಗಳನ್ನು ರಚಿಸಿ ಕಾರ್ಯಗತ ಮಾಡಲೋಸುಗ ಈ ರಾಷ್ಟ್ರೀಯ ಆಕಾಶ ಸಂಶೋಧನ ಮಂಡಲಿಯನ್ನು (ಇನ್‌ಕೊಸ್ಪಾರ್) ರಚಿಸಲಾಯಿತು (1962). ಇದು ಭಾರತ ಸರ್ಕಾರದ ಪರಮಾಣುಶಕ್ತಿ ವಿಭಾಗಕ್ಕೆ ಸಲಹೆಗಳನ್ನೀಯುತ್ತದೆ. ಈ ಮಂಡಲಿಯ ಸೂಚನೆಯ ಪ್ರಕಾರ ಕೇರಳ ರಾಜ್ಯದ ತುಂಬಾದಲ್ಲಿ ರಾಕೆಟ್ ಉಡಾವಣಾ ಕೇಂದ್ರದ ಸ್ಥಾಪನೆಗೊಂಡು 1963ರಿಂದಲೂ ಅನೇಕ ಪರೀಕ್ಷಕ ರಾಕೆಟ್ಟುಗಳನ್ನು ಹಾರಿಸಲಾಗಿದೆ. ಇಂಥ ಉಡಾವಣೆಗಳಿಂದ ಕಾಂತೀಯ ಸಮಭಾಜಕ ಪ್ರದೇಶದಲ್ಲಿಯ (ಮ್ಯಾಗ್ನೆಟಿಕ್ ಈಕ್ವೆಟೋರಿಯಲ್ ರೀಜನ್) ವೈಜ್ಞಾನಿಕ ಸಂಶೋಧನೆಗೆ ಅವಕಾಶವೊದಗಿದೆ. ಪರೀಕ್ಷಕ ರಾಕೆಟ್ಟುಗಳನ್ನು ಸಂಪೂರ್ಣವಾಗಿ ಭಾರತದಲ್ಲೇ ರಚಿಸುವ ಯೋಜನೆಗಳನ್ನು ಈ ಮಂಡಲಿ ರೂಪಿಸಿದೆ. ತುಂಬಾದ ಬಳಿಯಲ್ಲಿಯೇ ವೇಲಿಮಲೈ ಎಂಬಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ತಂತ್ರವಿದ್ಯೆ ಕೇಂದ್ರವೊಂದು ಕೆಲಸ ಮಾಡುತ್ತಿದೆ. ಇದನ್ನು ಸ್ಥಾಪಿಸಿದ್ದು ಈ ಮಂಡಲಿಯೇ. ಉತ್ಕೃಷ್ಟ ಕಾರ್ಯನಿರ್ವಹಣೆಯ ಪರೀಕ್ಷಕ ರಾಕೆಟ್ಟುಗಳನ್ನು ರಚಿಸುವುದು, ವಾಯುಯಾನ ತಂತ್ರವಿದ್ಯೆ ಮತ್ತು ನೆಲದ ಮೇಲೆ ನಡೆಸುವ ಪರೀಕ್ಷಾಪ್ರಯೋಗಗಳು ಹಾಗೂ ಪಾವತಿ ಹೊರೆಗಳ (ಪೇ ಲೋಡ್ಸ್) ತಯಾರಿಕೆ ಮುಂತಾದ ವಿಚಾರಗಳ ಬಗ್ಗೆ ತಜ್ಞ ಸಲಹೆಗಳನ್ನು ನೀಡುವುದು ಈ ಕೇಂದ್ರದ ಮುಖ್ಯ ಹೊಣೆಗಾರಿಕೆ. ಅಹಮದಾಬಾದಿನಲ್ಲಿ ಒಂದು ಪರೀಕ್ಷಕ ಸಂಪರ್ಕಸಾಧನೋಪಗ್ರಹ ಕೇಂದ್ರವನ್ನು ಸ್ಥಾಪಿಸಲಾಗಿದೆ (1967). ಭಾರತ ಮತ್ತು ಇತರ ಅಭಿವೃದ್ಧಿಶೀಲ ಇತರ ದೇಶಗಳ ವಿಜ್ಞಾನಿಗಳು ಮತ್ತು ತಂತ್ರವಿದ್ಯರಿಗೆ ಅಂತರಿಕ್ಷ ಸಂಪರ್ಕ ಸಾಧನೋಪಗ್ರಹಗಳ ತಂತ್ರವಿದ್ಯೆಯಲ್ಲಿ ಶಿಕ್ಷಣ ನೀಡುವುದು ಈ ಕೇಂದ್ರದ ಮುಖ್ಯ ಉದ್ದೇಶ. *

**ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್:** ಭಾರತದ ಕೇಂದ್ರ ಕಾರ್ಮಿಕ ಸಂಸ್ಥೆಗಳಲ್ಲೊಂದು. 1947ರಲ್ಲಿ ಪ್ರಾರಂಭವಾಯಿತು. ಮೊದಲಲ್ಲಿ 35 ಸಂಸ್ಥೆಗಳ ಸದಸ್ಯತ್ವವಿದ್ದ ಈ ಸಂಸ್ಥೆಗೆ ಕ್ರಮೇಣ 1,57,000 ಕಾರ್ಮಿಕರು ಸದಸ್ಯರಾಗಿದ್ದರು. ಇದಕ್ಕೆ ಪ್ರಾರಂಭದಿಂದಲೂ ಕಾಂಗ್ರೆಸ್ ಸಂಸ್ಥೆಯ ಬೆಂಬಲ ಹಾಗೂ ಪ್ರೋತ್ಸಾಹವಿದೆ. 1948ರಲ್ಲಿ ಕಾಂಗ್ರೆಸ್‌ನಿಂದ ಬೇರ್ಪಟ್ಟ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಹಿಂದ್ ಮಜದೂರ್ ಸಭಾ ಎಂಬ ಮತ್ತೊಂದು ಕಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿಕೊಂಡರು. 1963ರಲ್ಲಿ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಸದಸ್ಯ ಸಂಸ್ಥೆಗಳು 1,219 ಇದ್ದು ಸದಸ್ಯರ ಸಂಖ್ಯೆ 12.7 ಲಕ್ಷವಿತ್ತು.

ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಸಂಸ್ಥೆಯ ಪ್ರಣಾಳಿಕೆಯ ಪ್ರಕಾರ ಅದರ ಮುಖ್ಯ ಗುರಿಗಳಿವು: ಎಲ್ಲ ವರ್ಗದ ಕಾರ್ಮಿಕರಿಗೂ ಒಂದು ಸಂಘಟಿತ ಸಂಸ್ಥೆಯನ್ನೊದಗಿಸಿಕೊಡುವುದು; ಉದ್ಯಮ ರಂಗದಲ್ಲಿ ಹಾಗೂ ಸಮಾಜದಲ್ಲಿ ಕಾರ್ಮಿಕರಿಗೆ ಸ್ಥಾನಮಾನ ಕಲ್ಪಿಸಿ ಅವರ ಜೀವನಮಟ್ಟವನ್ನು ಉತ್ತಮಗೊಳಿಸುವುದು; ಉತ್ಪಾದನೆಗೆ ತೊಂದರೆ ಬರದಂತೆ, ಮುಷ್ಕರ ಮಾಡದೆ ಉದ್ಯಮಪತಿಗಳೊಡನೆ ಚರ್ಚೆ, ಸಂಧಾನಗಳ ಮೂಲಕ ಕಾರ್ಮಿಕರಿಗಿರುವ ತೊಂದರೆಗಳನ್ನು ಪರಿಹರಿಸಲು ಯತ್ನಿಸುವುದು; ಕಾರ್ಮಿಕರಲ್ಲಿ ಸಮೂಹ ಹಾಗೂ ಉದ್ಯಮಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿಯುತರಾಗಿ ನಡೆದುಕೊಳ್ಳುವ ಮನೋಭಾವವನ್ನುಂಟು ಮಾಡುವುದು ಮತ್ತು ಕಾರ್ಮಿಕರ ಉತ್ಪಾದಕತೆ ಹಾಗೂ ಶ್ರದ್ಧೆಯನ್ನು ಹೆಚ್ಚಿಸುವುದು.

ಈ ಗುರಿಗಳನ್ನು ಶಾಂತಿಯುತ ಮಾರ್ಗಗಳಿಂದ ಸಾಧಿಸುವುದು ಈ ಸಂಸ್ಥೆಯ ಉದ್ದೇಶ. ಕಾಂಗ್ರೆಸ್ ಸಂಸ್ಥೆಗಳೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿರುವ ಈ ಸಂಸ್ಥೆ ಸರ್ಕಾರದ ಪಂಚವಾರ್ಷಿಕ ಯೋಜನೆಗಳಿಗೆ ನೇರ ಬೆಂಬಲವನ್ನು ಕೊಡುವ ಭರವಸೆ ಕೊಟ್ಟಿದೆ. (ಸಿ.ಕೆ.ಆರ್.)

**ಇಂಡಿಯನ್ ಪೀನಲ್ ಕೋಡ್:** ಭಾರತದಲ್ಲಿ ನ್ಯಾಯಾಲಯಗಳ ದೃಷ್ಟಿಯಿಂದ ದಂಡಾರ್ಹವಾದ ಅಪರಾಧಗಳನ್ನೂ ಈ ಅಪರಾಧಗಳಿಗೆ ವಿಧಿಸಬೇಕಾದ ಶಿಕ್ಷೆಗಳನ್ನೂ ವಿವರಿಸುವ ಕಾನೂನುಗಳ ಸಂಗ್ರಹ–ಭಾರತೀಯ ದಂಡ ಸಂಹಿತೆ **(ನೋಡಿ–ದಂಡನೆ)**.

ಭಾರತದ 1833ರ ಚಾರ್ಟರ್ ಕಾಯಿದೆಯ ಮೇರೆಗೆ 1834ರಲ್ಲಿ ಲಾರ್ಡ್ ಮಕಾಲೆಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಮೊದಲನೆಯ ಇಂಡಿಯನ್ ಲಾ ಕಮಿಷನ್ ಎಂಬ ಆಯೋಗದವರು ಇಂಡಿಯನ್ ಪೀನಲ್ ಕೋಡಿನ ಕರಡು ಮಸೂದೆ ಸಿದ್ಧಪಡಿಸಿ, ಇದನ್ನು ಗೌರ್‍ನರ್ ಜನರಲ್‌ರವರಿಗೆ 1837 ಅಕ್ಟೋಬರ್ 14ರಂದು ಒಪ್ಪಿಸಿದರು. ಈ ಮಸೂದೆಗೆ ಸರ್ ಬ್ಯಾರನ್ಸ್ ಪೀಕಾಕ್, ಕಾಲ್‌ವಿಲ್ ಮುಂತಾದವರಿಂದ ಹಲವಾರು ಗಣನೀಯ ಮಾರ್ಪಾಡುಗಳಾದ ಅನಂತರ ಇದು 1860 ಅಕ್ಟೋಬರ್ 6ರಂದು ವಿಧಾನ ಮಂಡಲದಿಂದ ಅಂಗೀಕೃತವಾಯಿತು. ಇದು ಕಾಯಿದೆಯಾಗಿ 1862 ಜನವರಿ 1ರಿಂದ ಜಾರಿಗೆ ಬಂತು.

ಈ ಕಾಯಿದೆ ಜಾರಿಗೆ ಬರುವ ಮುನ್ನ ಇಡೀ ಭಾರತಕ್ಕೆ ಅನ್ವಯವಾಗುವ ಏಕರೀತಿಯ ದಂಡಶಾಸನವಿರಲಿಲ್ಲ. ಮುಸ್ಲಿಮರಿಗೆ ಸಂಬಂಧಿಸಿದಂತೆ ಕುರಾನಿನ ಆಧಾರದ ಮೇಲೆ ರಚಿತವಾಗಿದ್ದ ಅಪರಾಧ ಕಾನೂನುಗಳು ಮೊಗಲರ ಆಡಳಿತ ಕಾಲದಿಂದ ಜಾರಿಯಲ್ಲಿದ್ದುವು. ಪ್ರೆಸಿಡೆನ್ಸಿ ರಾಜ್ಯಗಳಾಗಿದ್ದ ಮುಂಬಯಿ, ಮದ್ರಾಸ್ ಮತ್ತು ಕೊಲ್ಕತ್ತಗಳಲ್ಲಿ ಇಂಗ್ಲೆಂಡಿನ ಅಪರಾಧ ಕಾಯಿದೆಗಳು ಜಾರಿಯಲ್ಲಿದ್ದವು. ಗ್ರಾಮಾಂತರ ಪ್ರದೇಶದ ನ್ಯಾಯಾಲಯಗಳಲ್ಲಿ ಅಪರಾಧದ ಕಾಯಿದೆ ಮತ್ತು ಬಳಕೆ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಮುಂಬಯಿ ಪ್ರಾಂತ್ಯದಲ್ಲಿ ನ್ಯಾಯ ನಿರ್ವಹಣೆಯ ಕಾರ್ಯದಲ್ಲಿ ಸೂಕ್ತವಾದ ಹಲವು ಮಾರ್ಪಾಡುಗಳಾಗಿದ್ದುವು. ಒಟ್ಟಿನಲ್ಲಿ ಈ ಕಾಯಿದೆಗಳ ಬಳಕೆಯಲ್ಲಿ ಅನೇಕ ನ್ಯೂನತೆಗಳೂ ತಾರತಮ್ಯಗಳೂ ಇದ್ದುವು. ಇವುಗಳನ್ನು ನಿವಾರಿಸಿ ಇಡೀ ದೇಶಕ್ಕೆ ಅನ್ವಯಿಸುವ ಏಕೈಕ ಕಾಯಿದೆಯನ್ನು ರೂಪಿಸುವ ಉದ್ದೇಶದಿಂದ ಇಂಡಿಯನ್ ಪೀನಲ್ ಕೋಡನ್ನು ಸಿದ್ಧಪಡಿಸಿ ಜಾರಿಗೆ ತರಲಾಯಿತು.

ಈ ಕಾಯಿದೆಯಲ್ಲಿ 23 ಅಧ್ಯಾಯಗಳಿದ್ದು, 511 ಕಲಮುಗಳಿವೆ. ಅಪರಾಧಗಳನ್ನು ನಿರ್ದಿಷ್ಟವಾಗಿ ನಿರ್ಣಯಿಸುವ ಕಲಂಗಳು ಇದರಲ್ಲಿವೆ. ಶಿಕ್ಷೆಯನ್ನು ಹಾಗೂ ಶಿಕ್ಷೆಯ ಪರಿಮಿತಿಯನ್ನು ನಿರ್ಣಯಿಸುವ ಕಲಂಗಳೂ ಇವೆ. ಕಾಯಿದೆಯ ಕ್ಷೇತ್ರಾಧಿಕಾರ ಸುವಿಸ್ತಾರವಾಗಿದೆ. ಭಾರತ ದೇಶದಲ್ಲಿ ವಾಸಿಸುವವರೆಲ್ಲರಿಗೂ (ಪ್ರವಾಸಿಗಳಿಗೂ) ಅನ್ಯದೇಶದ ಇದು ಅನ್ವಯಿಸುತ್ತದೆ. ರಾಷ್ಟ್ರಾಧ್ಯಕ್ಷರು, ರಾಜ್ಯಪಾಲರುಗಳು, ಅನ್ಯ ದೇಶದ ರಾಷ್ಟ್ರಾಧ್ಯಕ್ಷರು, ರಾಜಮಹಾರಾಜರು ಮತ್ತು ರಾಯಭಾರಿಗಳು ಈ ಕಾಯಿದೆಗೆ ಅತೀತರಾಗಿರುತ್ತಾರೆ. ಅಪರಾಧಿಗಳನ್ನು ಶಿಕ್ಷಿಸಲು ಅನುಸರಿಸಬೇಕಾದ ನಡೆವಳಿಕೆಯೇನೆಂಬುದು 1898ರಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ನಿರ್ಣಯವಾಗಿದೆ **(ನೋಡಿ– ಕ್ರಿಮಿನಲ್ ಪ್ರೊಸೀಜರ್ ಕೋಡ್)**.

ಕಾಯಿದೆಯ ಕ್ಷೇತ್ರಾಧಿಕಾರವನ್ನು ನಿರ್ಣಯಿಸುವ ಕಲಂಗಳು ಈ ಸಂಹಿತೆಯ ಮೊದಲನೆಯ ಅಧ್ಯಾಯದಲ್ಲಿವೆ. (ಕಲಂ 1 ರಿಂದ 5), ಕಾಯಿದೆಯಲ್ಲಿ ಬಳಸಿರುವ ಪದಗಳ ವ್ಯಾಖ್ಯೆಗಳು ಎರಡನೆಯ ಅಧ್ಯಾಯದಲ್ಲಿ 6 ರಿಂದ 52ಎ ವರೆಗಿನ ಕಲಂಗಳಲ್ಲಿವೆ. ಶಿಕ್ಷೆ, ಅದರ ವಿವಿಧ ರೂಪಗಳು ಮತ್ತು ಕಾಯಿದೆಯ ವಿನಾಯಿತಿ ಸಂದರ್ಭಗಳು ಮುಂದಿನೆರಡು ಅಧ್ಯಾಯಗಳಲ್ಲಿವೆ (ಕಲಂ 53ರಿಂದ 106), 5, 6 ಮತ್ತು 7ನೆಯ ಅಧ್ಯಾಯಗಳಲ್ಲಿ ದುಷ್ಪ್ರಾನುಕೂಲ (ಅಬೆಟ್‌ಮೆಂಟ್, 107), ತಕ್ಸೀರಿನ ಒಳಸಂಚು (ಕ್ರಿಮಿನಲ್ ಕಾನ್ಸ್‌ಪಿರಸಿ, 120ಎ), ದೇಶದ್ರೋಹಾತ್ಮಕ ಪಿತೂರಿ (121 ರಿಂದ 130) ಮತ್ತು ಭಾರತಸೈನ್ಯಕ್ಕೆ ಸಂಬಂಧಿಸಿದ ಅಪರಾಧಗಳನ್ನು (131 ರಿಂದ 140) ನಿರ್ಣಯಿಸಲಾಗಿದೆ. ನ್ಯಾಯಬಾಹಿರಸಭೆ (ಅನ್‌ಲಾಫುಲ್ ಅಸೆಂಬ್ಲಿ, 141), ಬೀದಿ ಜಗಳ (ಅಫ್ರೇ, 159), ಸರ್ಕಾರಿ ಕಾರ್ಯನಿರತರಾದವರ ಕರ್ತವ್ಯನಿರ್ವಹಣೆಯಲ್ಲಿ ಅಡ್ಡಿ ಆತಂಕ ನಿರ್ಮಾಣ (172 ರಿಂದ 190), ಚುನಾವಣೆಯ ಅಪರಾಧಗಳು (171ಎ ಯಿಂದ 171ಜಿ)–ಇವು ಈ ಸಂಹಿತೆಯ 8ರಿಂದ 10ರ ವರೆಗಿನ

ಅಧ್ಯಾಯಗಳಲ್ಲಿ ನಿರ್ಣಯವಾಗಿವೆ. ಸುಳ್ಳು ಸಾಕ್ಷ್ಯ (ಫಾಲ್ಸ್ ಎವಿಡೆನ್ಸ್, 191), ಸುಳ್ಳು ಸಾಕ್ಷ್ಯ ಸೃಷ್ಟನೆ (ಫ್ಯಾಬ್ರಿಕೇಟಿಂಗ್ ಫಾಲ್ಸ್ ಎವಿಡೆನ್ಸ್, 192) ಖೋಟಾ ನಾಣ್ಯ ತಯಾರಿಕೆ (231), ಅಳತೆ ತೂಕಗಳ ಅಪರಾಧಗಳು (264 ರಿಂದ 267), ಸಾರ್ವಜನಿಕ ಪೀಡೆ (ಪಬ್ಲಿಕ್ ನ್ಯೂಸೆನ್ಸ್, 268), ಸಾರ್ವಜನಿಕರ ಆರೋಗ್ಯ, ರಕ್ಷಣೆ, ಸೌಕರ್ಯ ನೀತಿನಿಯಮಗಳು ಹಾಗೂ ಮತಕ್ಕೆ ಸಂಬಂಧಪಟ್ಟ ಅಪರಾಧಗಳು–ಇವನ್ನು 11 ರಿಂದ 15ರವರೆಗಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ದಂಡಾರ್ಹ ನರಹತ್ಯೆ (ಕಲ್ಪಬಲ್ ಹಾಮಿಸೈಡ್ 299), ಕೊಲೆ (ಮರ್ಡರ್, 300). ಬಾಧೆ (ಹರ್ಟ್, 319), ತೀವ್ರ ಬಾಧೆ (ಗ್ರೀವಸ್ ಹರ್ಟ್, 320). ಅಕ್ರಮವಾದ ತಡೆ (ಕ್ರಿಮಿನಲ್ ರಿಸ್ಟ್ರೈನ್ಟ್, 339) ಮತ್ತು ಅವರೋಧ (ಕ್ರಿಮಿನಲ್ ಕನ್‌ಫೈನ್‌ಮೆಂಟ್, 340), ದುರಾಕ್ರಮಣ (ಅಸಾಲ್ಟ್, 351), ಬಾಲಾಪಹರಣ (ಕಿಡ್‌ನ್ಯಾಪಿಂಗ್, 359), ಮಾನವಾಪಹರಣ (ಅಬ್ಡಕ್ಷನ್, 362), ಬಲಾತ್ಕಾರ ಸಂಭೋಗ (ರೇಪ್, 375) ಮುಂತಾದವುಗಳ ವಿವೇಚನೆ 16ನೆಯ ಅಧ್ಯಾಯದಲ್ಲಿದೆ.

ಹದಿನೇಳನೆಯ ಅಧ್ಯಾಯದಲ್ಲಿ ಕಳ್ಳತನ (ತೆಫ್ಟ್ 378), ಸುಲಿಗೆ (ಎಕ್ಸ್ಟಾರ್ಷನ್, 383), ದರೋಡೆ (ರಾಬರಿ, 390), ಡಕಾಯಿತಿ (391), ದುರುಪಯೋಗ (ಮಿಸ್ ಅಪ್ರೋಪ್ರಿಯೇಷನ್, 403), ದಂಡಾರ್ಹವಾದ ನ್ಯಾಸಭಂಗ (ಕ್ರಿಮಿನಲ್ ಬ್ರೀಚ್ ಆಫ್ ಟ್ರಸ್ಟ್, 405), ಕಳ್ಳಮಾಲು ಸ್ವೀಕರಣೆ, ಕಳ್ಳನಿಗೆ ಶಾಮೀಲು (411), ಮೋಸ (ಚೀಟಿಂಗ್, 418–420), ಕೇಡು (ಮಿಸ್ಚೀಫ್, 425) ದಂಡಾರ್ಹ ಅತಿಕ್ರಮಣ (ಕ್ರಿಮಿನಲ್ ಟ್ರೆಸ್‌ಪಸ್, 441), ಹಗಲುಗಳವು, ಮನೆಗಳವು (ಹೌಸ್ ಬ್ರೇಕಿಂಗ್, 445) – ಇವನ್ನು ವಿವರಿಸಲಾಗಿದೆ.

ಫೋರ್ಜರಿ (ಕಳ್ಳರುಜು, ಸುಳ್ಳುಪತ್ರ ಸೃಷ್ಟನೆ, 463), ಖೋಟಾ ನೋಟು ತಯಾರಿಕೆ (489ಎ), ದ್ವಿಪತ್ನೀತ್ವ (ಬಿಗಮಿ, 494) ಮತ್ತು ಮಾನನಷ್ಟ (ಡಿಫಮೇಷನ್, 499) – ಇವು ಮುಂದಿನ ಅಧ್ಯಾಯಗಳಲ್ಲಿವೆ.

ಅಂತಿಮ ಅಧ್ಯಾಯದಲ್ಲಿನ 511ನೆಯ ಕಲಮಿನಲ್ಲಿ ಅಪರಾಧ ಪ್ರಯತ್ನವೂ ದಂಡಾರ್ಹವೆಂದು ತಿಳಿಸಲಾಗಿದೆ. ಜೇಬುಗಳ್ಳನೊಬ್ಬ ಜೇಬು ಕತ್ತರಿಸಿದಾಗ ಅವನಿಗೆ ಏನೂ ಸಿಕ್ಕದಿದ್ದರೂ ಅವನ ಕೃತ್ಯ ಅಪರಾಧವಾಗುತ್ತದೆ. ಆದರೆ ಕಲಂ 511ರ ಪ್ರಕಾರ, ಪೀನಲ್ ಕೋಡಿನಲ್ಲಿ ನಿರ್ಣಯಿಸಲಾಗಿರುವ ಶಿಕ್ಷೆಯಲ್ಲಿ ಅರ್ಧಭಾಗವನ್ನು ಮಾತ್ರ ಅವನ ಮೇಲೆ ವಿಧಿಸಬಹುದು.

(ಎಂ.ಎಸ್.ಆರ್.)

**ಇಂಡಿಯನ್ ಫೋಕ್‌ಲೋರ್ ಸೊಸೈಟಿ:** ಇದು 1957ರಲ್ಲಿ ಸ್ಥಾಪಿತವಾಯಿತು. ಅದಕ್ಕೂ ಒಂದು ವರ್ಷ ಮೊದಲು, ಜಾನಪದದಲ್ಲಿ ಆಸಕ್ತರಾದ ಕೆಲವರು ಕೋಲ್ಕತದಲ್ಲಿ ಸಭೆಸೇರಿ ಇಂಥದೊಂದು ಸಂಘವನ್ನು ಸ್ಥಾಪಿಸಲು ನಿರ್ಧರಿಸಿದ್ದರು. ಸಮಗ್ರ ಭಾರತದ ಜಾನಪದವನ್ನು ಸಂಗ್ರಹಿಸುವುದು, ಆಯುವುದು, ವಿಶ್ಲೇಷಿಸುವುದು, ವರ್ಗೀಕರಿಸುವುದು, ಆ ಮೂಲಕವಾಗಿ ಜಾನಪದ ಅಧ್ಯಯನಕ್ಕೆ ಅವಕಾಶ, ಪ್ರೋತ್ಸಾಹ ನೀಡುವುದು – ಇವು ಸಂಘವನ್ನು ಸ್ಥಾಪಿಸಬೇಕೆಂದಿದ್ದವರ ಎದುರಿಗಿದ್ದ ಮುಖ್ಯ ಉದ್ದೇಶಗಳಾಗಿದ್ದುವು. ಕೋಲ್ಕತ್ತದಲ್ಲಿ ಕೇಂದ್ರ ಕಚೇರಿಯಿರುವ ಈ ಸಂಘಕ್ಕೆ ಎಲ್.ಎನ್. ಸಾಹು ಮೊದಲ ಅಧ್ಯಕ್ಷರಾಗಿದ್ದರು. 1969 ರಲ್ಲಿ ಶ್ರೀಮತಿ ಸೋಫಿಯಾ ವಾಡಿಯ ಆ ಸ್ಥಾನದಲ್ಲಿದ್ದರು. ಅನಂತರ ಶ್ರೀಶಂಕರಸೇನ್ ಗುಪ್ತ ಆ ಸ್ಥಾನವನ್ನು ಅಲಂಕರಿಸಿದರು.

ಜಾನಪದದ ಸರ್ವಾಂಗೀಣ ಪ್ರಗತಿಯನ್ನು ತನ್ನ ಧ್ಯೇಯವನ್ನಾಗಿರಿಸಿಕೊಂಡ ಈ ಸಂಘಕ್ಕೆ ಆಸಕ್ತರಾದ ಯಾರು ಬೇಕಾದರೂ ಸದಸ್ಯರಾಗಬಹುದು. ಇದರಲ್ಲಿ ಆರು ಸದಸ್ಯವರ್ಗಗಳಿವೆ. ಸಭೆ, ಸಮ್ಮೇಳನಗಳನ್ನು ಕೂಡಿಸುವುದು, ಪುಸ್ತಕ, ಪತ್ರಿಕೆಗಳನ್ನು ಪ್ರಕಟಿಸುವುದು ಸಂಘದ ಕಾರ್ಯಕ್ರಮಗಳಲ್ಲಿ ಸೇರಿವೆ. (ಎಚ್.ಎಂ.ಎನ್.)

**ಇಂಡಿಯನ್ ಮರ್ಚೆಂಟ್ಸ್ ಚೇಂಬರ್:** ಲೋಕಮಾನ್ಯ ತಿಲಕ್, ಜಸ್ಟಿಸ್ ರಾನಡೆ ಮೊದಲಾದವರ ಸ್ಫೂರ್ತಿಯಿಂದ 1907 ಸೆಪ್ಟೆಂಬರ್ 7ರಂದು ಪ್ರಾರಂಭವಾದ ಈ ಸಂಸ್ಥೆಯಲ್ಲಿ 1740ಕ್ಕೂ ಮಿಕ್ಕು ಸದಸ್ಯರಿದ್ದಾರೆ. ಜವಳಿ, ರೇಷ್ಮೆ, ಎಂಜಿನಿಯರಿಂಗ್ ವಸ್ತುಗಳು, ಲೋಹ, ರಾಸಾಯನಿಕ ವಸ್ತುಗಳು, ಹತ್ತಿ, ಬ್ಯಾಂಕಿಂಗ್, ವಿಮೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಮುಂಬಯಿ ನಗರ, ಮಹಾರಾಷ್ಟ್ರ ಮತ್ತು ಗುಜರಾತಿನ ಉದ್ಯಮಪತಿಗಳನ್ನೂ ವಾಣಿಜ್ಯಸಂಘಗಳನ್ನೂ ಈ ಸಂಸ್ಥೆಯ ಸದಸ್ಯತ್ವ ಒಳಗೊಂಡಿದೆಯಲ್ಲದೆ ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಇದು ನೇರವಾಗಿ ಭಾಗವಹಿಸುತ್ತದೆ. ನಾಡಿನ ವಾಣಿಜ್ಯ ಕೈಗಾರಿಕೆಗಳಿಗೆ ಸಂಬಂಧಿಸಿದ ನಾನಾ ಸಮಸ್ಯೆಗಳ ಪರಿಹಾರ ಹಾಗೂ ಕ್ಷೇತ್ರದ ಹಿತರಕ್ಷಣೆಗಾಗಿ ಶ್ರಮಿಸುತ್ತಿದೆ. ವಾಣಿಜ್ಯ ಹಾಗೂ ಕೈಗಾರಿಕಾ ಕ್ಷೇತ್ರಗಳಿಗೆ ಅಗತ್ಯವಾದ ಸಿಬ್ಬಂದಿಯ ತರಬೇತಿಗಾಗಿ ಪ್ರೋತ್ಸಾಹ ನೀಡುವ ಉದ್ದೇಶದಿಂದ ದೇಶಾದ್ಯಂತ ವಾಣಿಜ್ಯ ಪರೀಕ್ಷೆಗಳನ್ನು ನಡೆಸಿ ಡಿಪ್ಲೊಮಾಗಳನ್ನು ನೀಡುತ್ತಿದೆ. (ಸಿ.ಕೆ.ಆರ್.)

**ಇಂಡಿಯನ್ ಮ್ಯೂಸಿಯಂ:** ಕೋಲ್ಕತದಲ್ಲಿರುವ ವಸ್ತುಸಂಗ್ರಹಾಲಯ. 1814ರಲ್ಲಿ ಏಷ್ಯಾಟಿಕ್ ಸೊಸೈಟಿಯ ವತಿಯಿಂದ ಡೆನ್ಮಾರ್ಕಿನ ನಥೇನಿಯರ್ ವ್ಯಾಲಿಚ್‌ನಿಂದ ಸ್ಥಾಪಿತವಾದ ಈ ಸಂಸ್ಥೆ ದಿನ ದಿನಕ್ಕೆ ತನ್ನ ಸಂಗ್ರಹವನ್ನು ಬೆಳೆಸಿಕೊಂಡು ಈಗ ಭಾರತದಲ್ಲೇ ಅತಿ ದೊಡ್ಡ ವಸ್ತು ಸಂಗ್ರಹಾಲಯವೆಂದು ಲೋಕಪ್ರಸಿದ್ಧವಾಗಿದೆ. ಇದರಲ್ಲಿ ಕೈಗಾರಿಕೆ, ಅರ್ಥವ್ಯವಸ್ಥೆ, ಮಾನವಶಾಸ್ತ್ರ, ಪುರಾತತ್ತ್ವ ಕಲೆ, ಭೂಗರ್ಭಶಾಸ್ತ್ರ ಮತ್ತು ಪ್ರಾಣಿವಿಜ್ಞಾನಗಳಿಗೆ ಮೀಸಲಾದ ಆರು ವಿಭಾಗಗಳಿವೆ. ಮಾನವವಿಜ್ಞಾನ ವಿಭಾಗದಲ್ಲಿ ಅಂಡಮಾನ್, ನಿಕೋಬಾರ್ ಮತ್ತು ಅಸ್ಸಾಂ ಪ್ರದೇಶಗಳ ಗಿರಿಜನರ ಜೀವನ ವಿಧಾನವನ್ನು ನಿರೂಪಿಸುವ ಚಿತ್ರಗಳು, ಬೊಂಬೆಗಳು ಮತ್ತು ವಸ್ತುಗಳು ಭಾರತದಲ್ಲಿ ಉಪಯೋಗದಲ್ಲಿರುವ ವಿವಿಧ ರೀತಿಯ ವಾದ್ಯಗಳು ಅನೇಕ ರೀತಿಯ ಜೀವನ ಸಲಕರಣೆಗಳಿಗೂ ಸಂಗ್ರಹಗೊಂಡಿವೆ. ಪುರಾತತ್ತ್ವ ವಿಭಾಗದಲ್ಲಿ ಭಾರತದ ಬೇರೆ ಬೇರೆ ಕಾಲಗಳಿಗೆ ಸಂಬಂಧಿಸಿದ ಉತ್ಖನನಗಳಲ್ಲಿ ದೊರೆತ ವಸ್ತುಗಳು, ಶಿಲ್ಪಗಳು, ನಾಣ್ಯಗಳು, ಶಿಲಾ ಮತ್ತು ತಾಮ್ರ ಲೇಖಗಳು ವ್ಯವಸ್ಥಿತವಾಗಿ ಜೋಡಿಸಲ್ಪಟ್ಟಿವೆ.

ಇಂಡಿಯನ್ ಮ್ಯೂಸಿಯಂ (ಹೊರನೋಟ)

ಇವುಗಳ ಪೈಕಿ ಬಾರ್ಹುತ್ ಸ್ತೂಪದ ಅವಶೇಷಗಳು ಪ್ರಸಿದ್ಧವಾದುವು. ಕೈಗಾರಿಕಾ ವಿಭಾಗದಲ್ಲಿ ಕೈಗಾರಿಕೆಗಳಿಗೆ ಉಪಯುಕ್ತವಾದ ವ್ಯವಸಾಯ. ಅರಣ್ಯ ಉತ್ಪನ್ನಗಳೂ ಪ್ರಾಣಿವಿಜ್ಞಾನ ವಿಭಾಗದಲ್ಲಿ ವಿವಿಧ ವರ್ಗಗಳ ಪ್ರಾಣಿರೂಪಗಳೂ ಭೂಗರ್ಭವಿಜ್ಞಾನ ವಿಭಾಗದಲ್ಲಿ ನಾನಾರೀತಿಯ ಕಲ್ಲುಗಳೂ, ಅದಿರುಗಳೂ, ಪುರಾತನ ಜೀವಿಗಳ ಪಳೆಯುಳಿಕೆಗಳೂ ಪ್ರದರ್ಶಿತವಾಗಿವೆ. ಕಲಾತ್ಮಕ ಜವಳಿಗಳು, ಪರ್ಷಿಯ, ಟಿಬೆಟ್ ಮುಂತಾದೆಡೆಯ ಕಂಬಳಿಗಳು, ಕಂಚಿನ ವಿಗ್ರಹಗಳು ಮತ್ತು ಚಿತ್ರಗಳು ಕಲಾವಿಭಾಗದಲ್ಲಿವೆ. ಇವೆಲ್ಲವೂ ಸಾರ್ವಜನಿಕ ಜ್ಞಾನವರ್ಧನೆಗಾಗಿ ಸಾಕಷ್ಟು ಮಾಹಿತಿಯೊಡನೆ ಪ್ರದರ್ಶಿತವಾಗಿವೆ. ಇಷ್ಟಲ್ಲದೆ ವಿದ್ವಾಂಸರಿಗೆ ಉಪಯುಕ್ತವಾಗುವಂತೆ ಹಲವು ಪ್ರಕಟನೆಗಳನ್ನೂ ಈ ಸಂಸ್ಥೆ ಆಗಾಗ್ಗೆ ಹೊರತರುತ್ತದೆ. ಇಲ್ಲಿ ಒಟ್ಟು 1,02,646 ವಸ್ತುಗಳನ್ನು ಸಂಗ್ರಹಿಸಲಾಗಿದೆ (2004). ಪ್ರಪಂಚದ ಅತ್ಯಂತ ಪ್ರಾಚೀನ ವಸ್ತುಸಂಗ್ರಹಾಲಯಗಳಲ್ಲೊಂದಾದ ಇದು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದಡಿ ಕೆಲಸ ಮಾಡುವ ಸ್ವಾಯತ್ತ ಸಂಸ್ಥೆ. (ಎಸ್.ಎನ್.)

**ಇಂಡಿಯನ್ ರೋಡ್ಸ್ ಕಾಂಗ್ರೆಸ್:** ಭಾರತೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ರಸ್ತೆ ಸಾರಿಗೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ತಾಂತ್ರಿಕ ಪರಿಹಾರ ಸೂಚಿಸಲು ಈ ಸ್ಥಾಪಿತವಾದ ಎಂಜಿನಿಯರುಗಳ ಸಂಸ್ಥೆ ಸ್ಥಾಪನೆ 1934. ಕೇಂದ್ರ ಕಾರ್ಯಾಲಯ ನವದೆಹಲಿಯಲ್ಲಿದೆ. ಇದು ಪ್ರತಿವರ್ಷ ಒಂದು ಮಹಾ ಅಧಿವೇಶನ ನಡೆಸುವುದು. ಇದರಲ್ಲಿ ರಾಷ್ಟ್ರಾದ್ಯಂತ 150ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವರು. ಇದರ ಸಾಮಾನ್ಯ ಅಧಿವೇಶನಗಳಲ್ಲಿ ತಾಂತ್ರಿಕ ವಿಷಯಗಳನ್ನು ಕುರಿತ ಚರ್ಚೆ ನಡೆಯುತ್ತದೆ. ಅಧ್ಯಯನ ನಡೆಸಿ ಸಿದ್ಧಪಡಿಸಲಾದ ಪ್ರಬಂಧಗಳನ್ನು ಸಮ್ಮೇಳನದಲ್ಲಿ ಮಂಡಿಸಲಾಗುವುದು. ಇದರ ಪ್ರಮುಖ ಕಾರ್ಯಗಳನ್ನು ಸಂಬಂಧಿಸಿದ ಸಮಿತಿ, ಉಪಸಮಿತಿ ನಿರ್ವಹಿಸುವುವು. ಇವು ಮುಖ್ಯವಾಗಿ ಎಂಜಿನಿಯರುಗಳ ಶಿಕ್ಷಣ, ಕೊಳುಕೊಡು ಪ್ರಶ್ನೆ, ಕಲೆಯ ದೃಷ್ಟಿಯಿಂದ ರಸ್ತೆಗಳು ಸೇತುವೆಗಳ ನಿರ್ಮಾಣ ಮೊದಲಾದವುಗಳನ್ನು ಒಳಗೊಂಡಿವೆ. ಜರ್ನಲ್ ಎಂಬ ತ್ರೈಮಾಸಿಕವನ್ನು ಟ್ರಾನ್ಸ್‌ಪೋರ್ಟ್ ಕಮ್ಯುನಿಕೇಷನ್ ಮಂತ್ಲಿ ರಿವ್ಯೂ ಎಂಬ ಮಾಸಿಕವನ್ನು ಇದು ಪ್ರಕಟಿಸುತ್ತದೆ. ರಸ್ತೆಗಳ ನಿಯಮ ಕುರಿತು ಲಘುಹೊತ್ತಿಗೆಗಳನ್ನು (ಬುಲೆಟಿನ್) ಪ್ರಕಟಿಸುತ್ತಿದೆ. ಸಂಸ್ಥೆಗೆ ಒಂದು ಸುಸಜ್ಜಿತ ಗ್ರಂಥಭಂಡಾರ ಇದೆ. ರಸ್ತೆ ನಿರ್ಮಾಣ ಕುರಿತು ಎಂಜಿನಿಯರುಗಳಿಂದ ಬಂದ ಪ್ರಶ್ನೆಗಳಿಗೆ ಈ ಸಂಸ್ಥೆ ಉತ್ತರಿಸುತ್ತದೆ.*

**ಇಂಡಿಯನ್ ಲ್ಯಾಂಗ್ವೇಜ್ ನ್ಯೂಸ್‌ಪೇಪರ್ಸ್ ಅಸೋಸಿಯೇಷನ್:** **ನೋಡಿ–ಅಖಿಲ ಭಾರತ ಪತ್ರಿಕಾ ಸಂಘಗಳು.**

**ಇಂಡಿಯನ್ ಲಿಂಗ್ವಿಸ್ಟಿಕ್ ಸೊಸೈಟಿ:** ಲಿಂಗ್ವಿಸ್ಟಿಕ್ ಸೊಸೈಟಿ ಆಫ್ ಇಂಡಿಯ (ಭಾರತೀಯ ಭಾಷಾವಿಜ್ಞಾನ ಸಂಘ) ಎನ್ನುವ ಹೆಸರನ್ನುಳ್ಳ ಈ ಸಂಸ್ಥೆ ಆಧುನಿಕ ಭಾಷಾವಿಜ್ಞಾನ ರೀತ್ಯಾ ಭಾರತೀಯ ಭಾಷೆಗಳ ವೈಜ್ಞಾನಿಕ ಅಧ್ಯಯನ ಹಾಗೂ ಸಂಶೋಧನೆಯ ಪ್ರೋತ್ಸಾಹ ಹಾಗೂ ಬೆಳವಣಿಗೆಗಾಗಿ 1928 ಏಪ್ರಿಲ್‌ನಲ್ಲಿ ಲಾಹೋರಿನಲ್ಲಿ ಸ್ಥಾಪನೆಯಾಯಿತು. ಸ್ಥಾಪನೆಗೆ ಕಾರಣರಾದ ಮಹನೀಯರುಗಳಲ್ಲಿ ತಾರಾಪೂರ್‌ವಾಲಾ, ಸುನೀತಿಕುಮಾರ ಚಟರ್ಜಿ ಮತ್ತು ಸಿದ್ಧೇಶ್ವರ ವರ್ಮ ಇವರ ಹೆಸರುಗಳನ್ನು ಸ್ಮರಿಸಬಹುದು. ಮುಂದೆ ಸಂಸ್ಥೆಯ ಅಭಿವೃದ್ಧಿಗಾಗಿ ದುಡಿದವರಲ್ಲಿ ಸುಕುಮಾರ ಸೇನ್, ಎಸ್.ಎಂ. ಕತ್ರೆ, ಬಾಬು ರಾಮ ಸಕ್ಸೆನಾ, ಮೀನಾಕ್ಷಿ ಸುಂದರಂ ಮುಂತಾದವರು ಪ್ರಮುಖರು. 1928ರ

ನವೆಂಬರ್ ತಿಂಗಳಲ್ಲಿ ನಡೆದ ಸರ್ವಸದಸ್ಯರ ಪ್ರಥಮ ಸಭೆಯಲ್ಲಿ ತಾರಪೂರ್ ವಾಲಾರನ್ನು ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿ ಚುನಾಯಿಸಲಾಯಿತು. ಇದಕ್ಕೂ ಹಿಂದೆ ಅಂದರೆ 1922ರ ಓರಿಯಂಟಲ್ ಕಾನ್‌ಫರೆನ್ಸಿನಲ್ಲಿ ಅವರು ಇಂಥ ಒಂದು ಸಂಸ್ಥೆಯ ಸ್ಥಾಪನೆಯ ಕನಸು ಕಂಡಿದ್ದರು. ಆಮೇಲೆ ಈ ಸಂಸ್ಥೆ ಇಂಡಿಯನ್ ಫಿಲಲಾಜಿಕಲ್ ಸೊಸೈಟಿ ಎನ್ನುವ ಸಂಸ್ಥೆಯೊಡನೆ ವಿಲೀನವಾಯಿತು. 1938ರಲ್ಲಿ ಇದರ ಕಚೇರಿಯನ್ನು ಕೋಲ್ಕತ್ತಗೂ 1954ರಲ್ಲಿ ಪುಣೆಯ ಡೆಕ್ಕನ್ ಕಾಲೇಜ್‌ಗೂ ವರ್ಗಾಯಿಸಲಾಯಿತು.

ಭಾಷಾವಿಜ್ಞಾನದ ಪ್ರಗತಿಗಾಗಿ ಈ ಸಂಸ್ಥೆ ನಡೆಸುತ್ತಿರುವ ಕಾರ್ಯಕಲಾಪಗಳು ಹೀಗಿವೆ:

1 ಭಾಷಾವಿಜ್ಞಾನಿಗಳ ಸಮ್ಮೇಳನಗಳನ್ನು ನಡೆಸಿ ವಿದ್ವಾಂಸರು ಬರೆದು ಓದುವ ಸಂಶೋಧನ ಪ್ರಬಂಧಗಳ ಮೇಲೆ ಚರ್ಚೆ ನಡೆಸುವುದು.

2 ಸದಸ್ಯರು ಬರೆದ ಪ್ರಬಂಧಗಳನ್ನು ನಿಯತಕಾಲಿಕದಲ್ಲಿ ಪ್ರಕಟಿಸುವುದು.

3 ಭಾರತೀಯ ಭಾಷೆಗಳ ವೈಜ್ಞಾನಿಕ ಸಂಶೋಧನೆಗೆ ಸಂಬಂಧಪಟ್ಟ ಮಹಾಪ್ರಬಂಧಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುವುದು.

4 ಭಾಷಾವಿಜ್ಞಾನದ ಪುಸ್ತಕಗಳುಳ್ಳ ಒಂದು ಗ್ರಂಥಾಲಯವನ್ನು ನಡೆಸುವುದು.

5 ಭಾಷಾವಿಜ್ಞಾನದ ಬೇಸಗೆ ಶಾಲೆಗೆ ಬೇಕಾದ ಸಹಾಯ ನೀಡುವುದು.

6 ಭಾಷಾವಿಜ್ಞಾನದ ಪುರೋಭಿವೃದ್ಧಿಗಾಗಿ ಶ್ರಮಿಸಿದ ವಿದ್ವಾಂಸರನ್ನು ಸನ್ಮಾನಿಸುವುದು ಇತ್ಯಾದಿ.

ಈ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಮತ್ತು ಕೆಲವು ಸದಸ್ಯರುಗಳನ್ನೊಳಗೊಂಡ ಒಂದು ಕಾರ್ಯಕಾರಿ ಸಮಿತಿ ರಚಿತವಾಗಿದ್ದು ಪ್ರತಿವರ್ಷ ಸರ್ವಸದಸ್ಯರ ಸಭೆಯಲ್ಲಿ ಇದಕ್ಕೆ ಚುನಾವಣೆ ನಡೆಯುತ್ತದೆ. ಸದಸ್ಯರಿಂದ ಮತ್ತು ಪೋಷಕರಿಂದ ಪಡೆದ ಚಂದಾ ಹಣ, ಭಾರತ ಮತ್ತು ಅಮೆರಿಕದ ದಾನಿಗಳಿಂದ ಪಡೆದ ಹಣ ಹಾಗೂ ಸರ್ಕಾರದಿಂದ ಸಹಾಯಾರ್ಥವಾಗಿ ಪಡೆದ ಧನದಿಂದ ಈ ಕಾರ್ಯಗಳು ನಡೆಯುತ್ತಿವೆ.

ಮೇಲೆ ಕಾಣಿಸಿದ ಧ್ಯೇಯಗಳ ಸಾಧನೆಗಾಗಿ ಸಂಘ ಈಗಾಗಲೇ ತುಂಬಾ ಶ್ರಮಿಸಿದೆ. ಸಮ್ಮೇಳನಗಳ ಮೂಲಕ ಭಾರತೀಯ ಹಾಗೂ ವಿದೇಶೀಯ ಭಾಷಾವಿಜ್ಞಾನಿಗಳನ್ನು ಒಂದೆಡೆ ಸೇರಿಸಿ ಉಚ್ಚಮಟ್ಟದ ವಿಚಾರ ವಿನಿಮಯದ ವ್ಯವಸ್ಥೆ ಮಾಡುತ್ತಿದೆ. ಸಂಸ್ಥೆ ಪ್ರಾರಂಭವಾದಂದಿನಿಂದಲೂ ಇಂಡಿಯನ್ ಲಿಂಗ್ವಿಸ್ಟಿಕ್ ಸಂಪುಟಗಳ ಮೂಲಕ ಸಂಶೋಧನ ಬರೆಹಗಳನ್ನು ಪ್ರಕಾಶಕ್ಕೆ ತರುತ್ತಿದೆಯಲ್ಲದೆ ಕೆಲವು ಪುಸ್ತಕಗಳನ್ನೂ ಪ್ರಕಟಿಸಿದೆ. ಗ್ರಂಥಾಲಯದಲ್ಲಿ ಭಾಷಾವಿಜ್ಞಾನಕ್ಕೆ ಸಂಬಂಧಪಟ್ಟ ನವೀನ ಪ್ರಕಟನೆಗಳು ದೊರೆಯುತ್ತವೆ. 1954ರಿಂದ ಪ್ರತಿ ಬೇಸಗೆಯಲ್ಲಿ ನಡೆಯುವ ಭಾಷಾವಿಜ್ಞಾನದ ತರಪೇತು ಶಾಲೆಗೆ ಗ್ರಂಥಾಲಯ ಸೌಲಭ್ಯ ಮುಂತಾದ ಸಹಾಯಗಳನ್ನಿತ್ತಿದೆ. ಅನೇಕ ವಿದ್ವಾಂಸರನ್ನು ಸನ್ಮಾನಿಸಿ ಅವರ ಹೆಸರಿನಲ್ಲಿ ಸ್ಮಾರಕ ಹಾಗೂ ಸನ್ಮಾನ ಸಂಚಿಕೆಗಳನ್ನು ಹೊರಡಿಸಿದೆ. ಭಾರತದಲ್ಲಿ ಭಾಷಾವಿಜ್ಞಾನದ ಅಧ್ಯಯನದ ಪ್ರಚಾರಕಾರ್ಯದಲ್ಲಿ ಈ ಸಂಸ್ಥೆಯ ಪಾತ್ರ ತುಂಬ ಮಹತ್ತ್ವದ್ದಾಗಿದೆ.(ಯು.ಪಿ.ಯು.)

**ಇಂಡಿಯನ್ ಸಿವಿಲ್ ಸರ್ವಿಸ್:** ಭಾರತವನ್ನು ಬ್ರಿಟಿಷರು ಆಳುತ್ತಿದ್ದಾಗ ದೇಶದ ಆಡಳಿತ ಸುವ್ಯವಸ್ಥೆಗಾಗಿ ನಿರ್ಮಿಸಿದ ಇಲಾಖಾ ಸೇವಾ ವ್ಯವಸ್ಥೆ ಅದರ ಲೋಕಸೇವಾ ಅಧಿಕಾರಿವರ್ಗ (ಐಸಿಎಸ್). ಸ್ವತಂತ್ರ ಭಾರತದಲ್ಲಿ ಈ ಹಳೆಯ ವ್ಯವಸ್ಥೆ ಕೊನೆಗೊಂಡಿದ್ದು ಅದರ ಸ್ಥಾನದಲ್ಲಿ ಹೊಸದೊಂದು ವ್ಯವಸ್ಥೆ ರೂಪುಗೊಂಡಿದೆ (ಐ.ಎ.ಎಸ್). ಭಾರತದ ಲೋಕಸೇವೆಯ ಇತಿಹಾಸ ಈಸ್ಟ್ ಇಂಡಿಯ ಕಂಪನಿಯ ಆಡಳಿತ ಚರಿತ್ರೆಯೊಂದಿಗೆ ಸೇರಿದೆ. ರಾಜಕೀಯ ಅಧಿಕಾರ ಕಂಪನಿಯ ಕೈಗೆ ಸಿಕ್ಕಿದರೂ ಸರ್ಕಾರದ ಆಡಳಿತದ ಕೆಳದರ್ಜೆಯ ಅಧಿಕಾರಿಗಳು ಭಾರತೀಯರೇ ಆಗಿದ್ದರು. ಕಂಪನಿ ನೇಮಿಸಿಕೊಂಡಿದ್ದ ಕೆಲವು ನೌಕರರಿಗೆ ತಮ್ಮ ಕೆಲಸಗಳಲ್ಲಿ ಯಾವ ತರಬೇತೂ ಇರಲಿಲ್ಲ. ಅವರಿಗೆ ತುಂಬ ಕಡಿಮೆ ಸಂಬಳ ಕೊಡಲಾಗುತ್ತಿತ್ತು. ತಮಗೆ ಆಗುತ್ತಿದ್ದ ಖೋತಾವನ್ನು ಅವರು ಖಾಸಗಿ ವ್ಯಾಪಾರದಿಂದಲೂ ಇನಾಮುಗಳನ್ನು ಸ್ವೀಕರಿಸಿಯೂ ಭರ್ತಿಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಅವರು ಕಡಿಮೆ ಸಂಬಳ ಪಡೆಯುತ್ತಿದ್ದರೂ ಬಹುಬೇಗ ಶ್ರೀಮಂತರಾಗುತ್ತಿದ್ದರು. ಇದನ್ನು ತಡೆಯಲು ನೌಕರರು ಕಂಪನಿಯೊಂದಿಗೆ ಒಂದು ಹೊಸ ಒಪ್ಪಂದ ಮಾಡಿಕೊಳ್ಳಬೇಕೆಂದು ಲಾರ್ಡ್ ಕ್ಲೈವ್ ಬಲಾತ್ಕರಿಸಿದ. ಇದರ ಪ್ರಕಾರ ಅವರು ಖಾಸಗಿ ವ್ಯಾಪಾರ ಮಾಡುವಂತಿರಲಿಲ್ಲ; ಬೇರೆಯವರಿಂದ ಸಂಭಾವನೆಗಳನ್ನೂ ಸ್ವೀಕರಿಸಬಾರದೆಂದಿತ್ತು. ಈ ಕಾರಣದಿಂದಲೇ ಲೋಕಸೇವೆಯನ್ನು ಕರಾರುಬದ್ಧ ಲೋಕಸೇವೆಯೆಂದು (ಕವಿನೆಂಟೆಡ್ ಸಿವಿಲ್ ಸರ್ವಿಸ್) ಕರೆಯಲಾಯಿತು. ನಷ್ಟವನ್ನು ಭರ್ತಿಮಾಡಿಕೊಡುವ ಉದ್ದೇಶದಿಂದ ಲಾರ್ಡ್ ಕ್ಲೈವ್ ಒಂದು ಹೊಸ ಯೋಜನೆಯನ್ನು ರೂಪಿಸಿ ಇಂಗ್ಲೆಂಡಿಗೆ ಕಳುಹಿಸಿಕೊಟ್ಟ. ಆದರೆ ಅದನ್ನು ಕಂಪನಿಯ ನಿರ್ದೇಶಕರು ನಿರಾಕರಿಸಿದರು.

**ಕಾರ್ನ್‌ವಾಲಿಸನ ಸುಧಾರಣೆಗಳು:** ಕಂಪನಿಯ ಆಡಳಿತದಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತಂದ ಕೀರ್ತಿ ಕಾರ್ನ್‌ವಾಲಿಸನಿಗೆ ಸಲ್ಲುತ್ತದೆ. ಈತ ಎಲ್ಲ ಉನ್ನತ ಹುದ್ದೆಗಳನ್ನೂ ಇಂಗ್ಲಿಷರಿಗೂ ಐರೋಪ್ಯರಿಗೂ ಕಾದಿರಿಸಿದ. ತಮ್ಮ ಹುಟ್ಟಿನ ಬಲದಿಂದಲೂ ತಾವು ಪಡೆದ ತರಬೇತಿಯಿಂದಲೂ ರಾಜ್ಯಾಡಳಿತಕ್ಕೆ ಇಂಗ್ಲಿಷರು ಮತ್ತು ಐರೋಪ್ಯರು ಅರ್ಹರೆಂದು ಆತ ಭಾವಿಸಿದ್ದ. ಆದಾಗ್ಯೂ ಆಡಳಿತದ ಕೆಳದರ್ಜೆಯ ಅಧಿಕಾರದಲ್ಲಿದ್ದವರು ಭಾರತೀಯರೇ. ಕಂಪನಿಯ ನೌಕರರು ಖಾಸಗಿ ವ್ಯಾಪಾರದಲ್ಲಿ ನಿರತರಾಗಿರಕೂಡದೆಂದೂ ಕಾಯಿದೆಯನ್ನು ಉಲ್ಲಂಘಿಸಿದವರಿಗೆ ಕಠಿಣಶಿಕ್ಷೆ ವಿಧಿಸಲಾಗುವುದೆಂದೂ ಅವನು ಪ್ರಚುರಪಡಿಸಿದ. ಕಂಪನಿಯ ನೌಕರರು ಅಚ್ಚುಕಟ್ಟಾದ ಜೀವನ ನಡೆಸಿ, ಬಂದ ಸಂಬಳದಲ್ಲಿ ಅಲ್ಪಸ್ವಲ್ಪ ಉಳಿಸಿ ತಮ್ಮ ಸ್ವದೇಶಕ್ಕೂ ತೆಗೆದುಕೊಂಡು ಹೋಗುವಂತೆ ಮಾಡಲು ಆತ ಅವರ ಸಂಬಳ ಹೆಚ್ಚಿಸಿದ. ನೌಕರರಲ್ಲಿ ಪ್ರಾಮಾಣಿಕತೆಯನ್ನೂ ದಕ್ಷತೆಯನ್ನೂ ಹೆಚ್ಚಿಸುವುದೇ ಸುಧಾರಣೆಗಳ ಮುಖ್ಯೋದ್ದೇಶವಾಗಿತ್ತು. 1793ರ ಕಾಯಿದೆಯಲ್ಲಿ ಕಾರ್ನ್‌ವಾಲಿಸನ ಸುಧಾರಣೆಗಳು ಕಟ್ಟುನಿಟ್ಟಾಗಿ ಜಾರಿಗೆ ಬಂದುವು. ಕರಾರುಬದ್ಧಸೇವೆಯಲ್ಲಿ ಕೊನೆಯ ಪಕ್ಷ ಮೂರು ವರ್ಷಗಳವರೆಗೂ ಇರದ ಯಾವ ನೌಕರನನ್ನೂ ಐನೂರು ಪೌಂಡು ವಾರ್ಷಿಕವೇತನವಿರುವ ಹುದ್ದೆಗಳಿಗೆ ನೇಮಿಸಕೂಡದೆಂದು ಅವನು ನಿರ್ಣಯಿಸಿದ. ಹಿರಿಯರಿಗೆ ಮಾತ್ರ ಬಡ್ತಿ ದೊರೆಯುತ್ತಿತ್ತು.

**ಲಾರ್ಡ್ ವೆಲ್ಲೆಸ್ಲಿ:** ತರುಣ ನೌಕರರ ತರಬೇತಿಗಾಗಿ ಈತ ಕೋಲ್ಕತದಲ್ಲಿ ಒಂದು ಕಾಲೇಜು ಸ್ಥಾಪಿಸಿದ. ಕಂಪನಿಯ ನೌಕರರಾಗಿ ನೇಮಕವಾಗಿ ಬಂದ ಎಲ್ಲ ಇಂಗ್ಲಿಷರು ಈ ತರಬೇತಿ ಕಾಲೇಜಿನಲ್ಲಿ ಮೂರು ವರ್ಷಗಳ ಕಾಲ ಇದ್ದು ಭಾರತೀಯ ಚರಿತ್ರೆ, ನ್ಯಾಯ ಮತ್ತು ಭಾಷೆಗಳ ಬಗ್ಗೆ ಶಿಕ್ಷಣ ಪಡೆಯಬೇಕಾಗಿತ್ತು. ನಿರ್ದೇಶಕರು ಅದನ್ನು ಒಪ್ಪದ್ದರಿಂದ ಆ ಕಾಲೇಜನ್ನು ಮುಚ್ಚಬೇಕಾಯಿತು. ಆದರೂ ಆ ನಿರ್ದೇಶಕರೇ ಸ್ವಯಂ ಪ್ರೇರಣೆಯಿಂದ 1806ರಲ್ಲಿ ಹೈಲ್ ಬರಿ ಎಂಬಲ್ಲಿ ಒಂದು ಕಾಲೇಜು ಸ್ಥಾಪಿಸಿದರು. ಹೈಲ್‌ಬರಿಯಲ್ಲಿ ನಾಲ್ಕು ಕಾಲಾವಧಿಯವರೆಗೆ ಇರದ ಯಾರನ್ನೂ ಭಾರತದಲ್ಲಿ ಗುಮಾಸ್ತೆಯಾಗಿ ನೇಮಕ ಮಾಡಿಕೊಳ್ಳಕೂಡದೆಂಬುದಾಗಿ 1813ರಲ್ಲಿ ಜಾರಿಗೆ ಬಂದ ಸನ್ನದು ಕಾಯಿದೆ ವಿಶದಪಡಿಸಿತು. ಅಲ್ಲದೆ ನೌಕರಿಗಾಗಿ ಬರುವ ಅಭ್ಯರ್ಥಿ ನೀತಿನಿಯಮಗಳನ್ನು ತಿಳಿದುಕೊಂಡಿದ್ದಾನೆಂದೂ ನೌಕರನಾಗಲು ಅರ್ಹತೆ ಪಡೆದಿರುವನೆಂದೂ ಆ ಕಾಲೇಜಿನ ಪ್ರಿನ್ಸಿಪಾಲರಿಂದ ಬರೆಸಿಕೊಂಡು ಬರಬೇಕಾಗಿತ್ತು. ಆ ಕಾಲೇಜಿಗೆ ಸೇರಿಕೊಳ್ಳುತ್ತಿದ್ದ ತರುಣ ಇಂಗ್ಲಿಷರನ್ನು ನಿರ್ದೇಶಕರು ನಾಮಕರಣ ಮಾಡುತ್ತಿದ್ದರು. ಹೈಲ್‌ಬರಿ ಕಾಲೇಜು 1858ರ ವರೆಗೆ ಸಮರ್ಪಕವಾಗಿ ತನ್ನ ಜವಾಬ್ದಾರಿ ನಿರ್ವಹಿಸಿತು. ಕಂಪನಿಯ ನಿರ್ದೇಶಕರು ಅನುಭವಿಸಿಕೊಂಡು ಬರುತ್ತಿದ್ದ ವಿಶೇಷವಾದ ಹಕ್ಕನ್ನು 1853ರಲ್ಲಿ ಜಾರಿಗೆ ಬಂದ ಕಾಯಿದೆ ಕಿತ್ತುಕೊಂಡಿತು. ಕರಾರುಬದ್ಧ ಲೋಕಸೇವೆಯ ಕಡ್ಡಾಯ ವಿಧಿಗಳನ್ನು ಸಡಿಲಿಸಿತು. ಇಂಗ್ಲೆಂಡಿನಲ್ಲಿ ಹುಟ್ಟಿದ ಪ್ರತಿಯೊಬ್ಬ ಆಂಗ್ಲೀಯನೂ ಆ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿತ್ತು. ಭಾರತದ ಆಡಳಿತವರ್ಗಕ್ಕೆ ಅತ್ಯುತ್ತಮ ಹಾಗೂ ಉದಾರ ಶಿಕ್ಷಣ ಪಡೆದ ಯುವಕರನ್ನು ಒದಗಿಸಿಕೊಡುವುದೇ ಸ್ಪರ್ಧೆಯ ಮುಖ್ಯ ಗುರಿಯಾಗಿತ್ತು ಎಂಬುದು ಸರ್ ಜಾನ್ ಸ್ಟ್ರಾಚಿಯ ಅಭಿಪ್ರಾಯ. ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ವಿಶ್ವವಿದ್ಯಾನಿಲಯಗಳಲ್ಲಿದ್ದ ಆನರ್ಸ್ ವಿಷಯಗಳನ್ನು ಈ ಪರೀಕ್ಷೆಯ ಯೋಜನೆ ಒಳಗೊಂಡಿತ್ತು.

ಸುಧಾರಣೆಗಳ ವಿಷಯದಲ್ಲಿ ಕಾರ್ನ್‌ವಾಲಿಸ್ ಪ್ರಾಮಾಣಿಕತೆಯಿಂದಲೇ ನಡೆದುಕೊಂಡಿದ್ದನೋ ನಿಜ, ಆದರೆ ಇವುಗಳ ಪರಿಣಾಮ ಭಾರತೀಯರ ಮೇಲೆ ವಿಪತ್ಕಾರಕವಾಗಿತ್ತು. ಕಂಪನಿ ಉನ್ನತ ಹುದ್ದೆಗಳಿಗೆ ಭಾರತೀಯರನ್ನು ಪೂರ್ಣವಾಗಿ ಕೈಬಿಡಲಾಗಿದ್ದದ್ದು ಇವುಗಳ ಒಂದು ದೊಡ್ಡ ದೋಷ. ಬ್ರಿಟಿಷ್ ಭಾರತದಲ್ಲಿರುವಂತೆ ಇನ್ನಾವ ದೇಶದಲ್ಲೂ ದೇಶೀಯರನ್ನು ತಮ್ಮ ದೇಶದ ಸರ್ಕಾರದ ಕೆಲಸಗಳಿಂದ ಪೂರ್ಣವಾಗಿ ಪ್ರತ್ಯೇಕಿಸಿರುವ ಉದಾಹರಣೆ ದೊರೆಯಲಾರದು ಎಂಬುದಾಗಿ ಸರ್ ಥಾಮಸ್ ಮನ್ರೊ ಬರೆಯುತ್ತಾನೆ. ದೇಶೀಯರಿಗೆ ಅವಕಾಶವಿಲ್ಲದ್ದನ್ನು ನೋಡಿ ಆತ ಮರುಗಿದ. ನಮ್ಮ ಅಧಿಕಾರ ವಿಸ್ತರಿಸುತ್ತಿರುವಂತೆ ಈ ದಿಶೆಯಲ್ಲಿ ತಗ್ಗು ಜಾಸ್ತಿಯಾಗುತ್ತಿದೆ. ಆಡಳಿತಾಧಿಕಾರದಲ್ಲಿ ಭಾರತೀಯರನ್ನು ನಾವು ಸೇರಿಸಿಕೊಳ್ಳಲೇಬೇಕು ಎಂಬುದು ಇನ್ನೊಬ್ಬ ಆಂಗ್ಲ ಅಧಿಕಾರಿಯ ಅಭಿಪ್ರಾಯ. 1833ರ ಸನ್ನದು ಕಾಯಿದೆ ಕೊರತೆಯನ್ನು ತೆಗೆದುಹಾಕಿತು. ಯಾವ ಪ್ರದೇಶಗಳ ನಿವಾಸಿಗಳನ್ನಾಗಲೀ ಚಕ್ರವರ್ತಿಯ ಪ್ರಜೆಗಳನ್ನಾಗಲೀ ಅವರ ಮತ, ಹುಟ್ಟಿದ ಸ್ಥಳ, ವಂಶ, ವರ್ಣ ಅಥವಾ ಇಂಥ ಇನ್ನಾವ ಕಾರಣದಿಂದಲಾದರೂ ಕಂಪನಿಯಲ್ಲಿರುವ ಸ್ಥಾನಗಳಿಗೂ ಉದ್ಯೋಗಗಳಿಗೂ ಅನರ್ಹರೆಂದು ಹೇಳಕೂಡದು ಎಂಬುದಾಗಿ 1833ರ ಕಾಯಿದೆ ಶ್ರುತಪಡಿಸಿತು. ಆದರೂ ಆ ಕಾಯಿದೆಯೂ ಸತ್ತ ಕಾಗದವಾಗಿ ಉಳಿಯಿತು. ಭಾರತೀಯರ ಕುಂದುಕೊರತೆಗಳನ್ನು ನೀಗಿಸುವ ದೃಷ್ಟಿಯಿಂದ 1853ರಲ್ಲಿ ರಾಣಿ ವಿಕ್ಟೋರಿಯ ಇನ್ನೊಂದು ಘೋಷಣೆ ಹೊರಡಿಸಿದಳು. ನಮ್ಮ ಪ್ರಜೆಗಳು ಯಾವ ವರ್ಣದವರಾಗಲಿ ಅಥವಾ ಮತೀಯರಾಗಿರಲಿ, ಅವರನ್ನು ಸ್ವತಂತ್ರ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ನಮ್ಮ ಲೋಕಸೇವೆಯ ಸ್ಥಾನಗಳಿಗೆ ಸೇರಿಸಿಕೊಳ್ಳುವುದು ನಮ್ಮ ಅಭಿಲಾಷೆ. ಅಂಥವರು ತಮ್ಮ ಜವಾಬ್ದಾರಿಯ ನಿರ್ವಹಣೆಗೆ ತಕ್ಕ ಶಿಕ್ಷಣ, ದಕ್ಷತೆ ಮತ್ತು ಪ್ರಾಮಾಣಿಕತೆ ಪಡೆದಿರಬೇಕು ಎಂಬುದಾಗಿ ಆ ಘೋಷಣೆ ವಿಶದಪಡಿಸಿತು. ಹೀಗೆ ಕೊಟ್ಟ ಮಾತನ್ನು ಕಾರ್ಯರೂಪಕ್ಕಿಳಿಸುವುದಕ್ಕಾಗಿ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ 1860ರಲ್ಲಿ ಒಂದು ಸಮಿತಿ ನೇಮಿಸಿದ. ಭಾರತೀಯರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸುವುದಕ್ಕಾಗಿ ಏಕಕಾಲದಲ್ಲಿ ಇಂಗ್ಲೆಂಡ್ ಭಾರತಗಳೆರಡರಲ್ಲೂ ಪರೀಕ್ಷೆಗಳನ್ನು ಇಟ್ಟುಕೊಳ್ಳಬೇಕೆಂದು ಆ ಸಮಿತಿ ಸೂಚಿಸಿತು. ಆದರೆ ಮಾಡಿದ ಶಿಫಾರಸುಗಳನ್ನು ಅದು ಕಾರ್ಯಗತ ಮಾಡಲಿಲ್ಲ.

**ಇಂಡಿಯನ್ ಸಿವಿಲ್ ಸರ್ವಿಸ್ ಕಾಯಿದೆ:** 1861ರಲ್ಲಿ ಈ ಕಾಯಿದೆ ಜಾರಿಗೆ ಬಂತು. 1793ರ ಕಾಯಿದೆಯ ಷರತ್ತುಗಳ ವಿರುದ್ಧವಾಗಿ ಮಾಡಿದ ಕೆಲವು ನೇಮಕಗಳನ್ನು ಊರ್ಜಿತಗೊಳಿಸುವುದು ಮತ್ತು ಉನ್ನತ ಹುದ್ದೆಗಳನ್ನು ಕರಾರುಬದ್ಧ ಲೋಕಸೇವಾ ನೌಕರರಿಗೆ ಮೀಸಲಾಗಿಸುವುದು ಅದರ ಮುಖ್ಯ ಉದ್ದೇಶಗಳು. ವಿಶೇಷ ಸಂದರ್ಭಗಳಲ್ಲಿ ಭಾರತ ಸರ್ಕಾರವೇ ಲೋಕಸೇವಾ ಕ್ಷೇತ್ರದಲ್ಲಿ ಬೇರೆಯವರನ್ನೂ ನೇಮಿಸಬಹುದಾಗಿತ್ತು. ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಗೆ ಕಾಗದ ಬರೆದು ಆ ರೀತಿ ನೇಮಕಮಾಡಿಕೊಳ್ಳುವುದಕ್ಕೆ ಕಾರಣಗಳನ್ನು ತಿಳಿಸಿ, ಅವರಿಂದ ಹನ್ನೆರಡು ತಿಂಗಳೊಳಗಾಗಿ ಅನುಮತಿ ಪಡೆಯಬೇಕಾಗಿತ್ತು. ಕರಾರುಬದ್ಧ ಲೋಕಸೇವೆಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಳ್ಳುವಾಗ ಲೋಕಸೇವಾ ಕಮಿಷನರರ ಮೇಲ್ವಿಚಾರಣೆಯಲ್ಲಿ ಪ್ರತಿ ವರ್ಷವೂ ಲಂಡನ್ನಿನಲ್ಲಿ ಸ್ಪರ್ಧಾ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. 1860ರಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುವಾಗ ಅಭ್ಯರ್ಥಿಗಳ ಕನಿಷ್ಠ ವಯಸ್ಸು 22 ಆಗಿರಬೇಕಾಗಿತ್ತು. 1866ರಲ್ಲಿ ವಯಸ್ಸಿನ ಮಿತಿಯನ್ನು 21ಕ್ಕೆ ಇಳಿಸಲಾಯಿತು. 1878ರಲ್ಲಿ ಅದನ್ನು 19ಕ್ಕೆ ಇಳಿಸಲಾಯಿತು. ತತ್ಪರಿಣಾಮವಾಗಿ ಭಾರತೀಯರು ಈ ಪರೀಕ್ಷೆಗಳಲ್ಲಿ ಸ್ಪರ್ಧಿಸುವುದು ಅಸಾಧ್ಯವಾಯಿತು. 1870ರವರೆಗೆ ಒಬ್ಬ ಭಾರತೀಯ ಮಾತ್ರ ಈ ಪರೀಕ್ಷೆಯಲ್ಲಿ ಉತ್ತೀರ್ಣನಾದ, ವಯಸ್ಸು ಸಾಮಾಜಿಕ, ಮತೀಯ, ಆರ್ಥಿಕವೇ ಮುಂತಾದ ಕಾರಣಗಳೂ ಭಾರತೀಯರು ಮುಂದೆ ನುಗ್ಗಿ ಇಂಗ್ಲೆಂಡಿಗೆ ಹೋಗಿ ಪರೀಕ್ಷೆಗಳಲ್ಲಿ ಇಂಗ್ಲಿಷರಂತೆ ಸ್ಪರ್ಧಿಸಲು ತಡೆಯೊಡ್ಡಿದುವು. ಲಾರ್ಡ್ ಲಾರೆನ್ಸ್ ಬುದ್ಧಿವಂತರಾದ ಬಡ ಭಾರತೀಯರು ಮುಂದೆ ನುಗ್ಗಿ ಇಂಗ್ಲೆಂಡಿಗೆ ಹೋಗಿ ಭಾರತದ ವಿವಿಧ ಆಡಳಿತ ವರ್ಗಗಳಿಗೆ ಅರ್ಹತೆ ಹೊಂದಲು ಶಿಕ್ಷಣ ಪಡೆಯುವುದು ಸಾಧ್ಯವಾಗುವಂತೆ ವರ್ಷಕ್ಕೆ 200 ಪೌಂ. ವಿದ್ಯಾರ್ಥಿವೇತನ ನಿಗದಿಮಾಡಿ, ಆಯ್ಕೆಯಾದ ವಿದ್ಯಾರ್ಥಿ ಅಲ್ಲಿ ಮೂರುವರ್ಷಗಳ ಕಾಲ ಇರುವುದಕ್ಕಾಗಿ ಅವಕಾಶ ಮಾಡಿಕೊಟ್ಟ. ಈ ರೀತಿಯಾಗಿ ಹನ್ನೊಂದು ವಿದ್ಯಾರ್ಥಿವೇತನಗಳನ್ನು ಕೊಡಬೇಕೆಂದು ಅವನ ಶಿಫಾರಸ್ಸನ್ನು ಆಗ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಡ್ಯೂಕ್ ಆಫ್ ಆರ್ಗಿಲ್ ತಳ್ಳಿಹಾಕಿದ. 1870ರ ಕಾಯಿದೆ ಲೋಕಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದ ಭಾರತೀಯರನ್ನು ಕರಾರುಬದ್ಧ ನೌಕರಿಗಳಲ್ಲಿ ಮೀಸಲಾದ ಸ್ಥಾನಗಳಿಗೆ ನೇಮಿಸಬಹುದೆಂದು ಅವಕಾಶ ಮಾಡಿಕೊಟ್ಟಿತು. ಆದರೆ ಇವುಗಳ ಬಗ್ಗೆ ಸೂತ್ರಗಳನ್ನು ರೂಪಿಸಿಕೊಳ್ಳಲು ಹನ್ನೊಂದು ವರ್ಷ ಹಿಡಿಯಿತು. ಭಾರತೀಯರು ಕರಾರುಬದ್ಧ ಲೋಕಸೇವೆಗಳಿಗೆ ಕಾಲಿಡದಂತೆ ಮಾಡಿ, ಅವರಿಗೆ ಪ್ರತ್ಯೇಕವಾಗಿ ಒಂದು ದೇಶೀಯ ಸೇವೆಯನ್ನು (ನೇಟಿವ್ ಸರ್ವಿಸ್) ನಿರ್ಮಿಸುವ ಲಾರ್ಡ್ ಲಿಟನ್ನನ ಹೊಸ ಯೋಜನೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಒಪ್ಪಲಿಲ್ಲ. 1870ರ ಕಾಯಿದೆಗೆ ಸೂತ್ರಗಳನ್ನು ರೂಪಿಸಿದ ಮೇಲೆ ಗವರ್ನರ್ ಜನರಲ್ ಕರಾರುಬದ್ಧ ಲೋಕಸೇವೆಗಳಲ್ಲಿ ಮೀಸಲಾಗಿದ್ದ ಸ್ಥಾನಗಳಿಗೆ ಒಳ್ಳೆಯ ಮನೆತನಕ್ಕೆ ಸೇರಿದ ಹಾಗೂ ಸಾಮಾಜಿಕ ಸ್ಥಾನಮಾನಗಳಿರುವ ಭಾರತೀಯರನ್ನು ನೇಮಿಸಬೇಕೆಂದು ವಿವರಿಸಲಾಯಿತು. ಈ ನೇಮಕಗಳು ಸೆಕ್ರೆಟರಿ ಆಫ್ ಸ್ಟೇಟ್ ಪ್ರತಿವರ್ಷವೂ ಮಾಡುವ ನೇಮಕಗಳ ಆರನೆಯ ಒಂದು ಭಾಗಕ್ಕಿಂತ ಹೆಚ್ಚಾಗಿರಬಾರದಿತ್ತು. ಕಾಯಿದೆಬದ್ಧ ಲೋಕಸೇವೆ (ಸ್ಟಾಚುಟರಿ ಸಿವಿಲ್ ಸರ್ವಿಸ್) ಹೊಸದಾಗಿ ಸ್ಥಾಪಿತವಾದರೂ ಅದು ಕಾರ್ಯರೂಪಕ್ಕೆ ಬರಲಿಲ್ಲ. 1885ರಲ್ಲಿ ಸ್ಥಾಪಿತವಾದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಈ ವಿಚಾರವನ್ನು ಪರಿಶೀಲಿಸಿತು. ಕರಾರುಬದ್ಧ ಲೋಕಸೇವೆಗಳಿಗೆ ಆಯ್ಕೆ ಮಾಡುವುದಾದರೆ ಭಾರತ ಮತ್ತು ಇಂಗ್ಲೆಂಡು ಇವೆರಡರಲ್ಲೂ ಪ್ರತಿವರ್ಷವೂ ಏಕಕಾಲದಲ್ಲಿ ಪರೀಕ್ಷೆಗಳನ್ನು ನಡೆಸಬೇಕೆಂದು ಅದು ನಿರ್ಣಯಿಸಿತು.

**ಐಚಿಸನ್ ಆಯೋಗ:** ಈ ಪರಿಸ್ಥಿತಿಯನ್ನು ಪರಿಶೀಲಿಸುವ ದೃಷ್ಟಿಯಿಂದ ಲಾರ್ಡ್ ಡಫರಿನ್ 1886ರಲ್ಲಿ ಸರ್ ಚಾರಲ್ಸ್ ಐಚಿಸನ್ನನ ಅಧ್ಯಕ್ಷತೆಯಲ್ಲಿ ಒಂದು ಆಯೋಗ ನೇಮಿಸಿದ. ಲೋಕಸೇವೆಯಲ್ಲಿ ತಮಗೆ ಹೆಚ್ಚಿನ ಉದ್ಯೋಗಾವಕಾಶ ದೊರೆತು ಉನ್ನತಸ್ಥಾನಗಳನ್ನು ಅಲಂಕರಿಸುವ ಹಕ್ಕು ತಮಗೆ ಬರಬೇಕೆಂಬ ಭಾರತೀಯ ಕೇಳಿಕೆಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುವುದೇ ಅದರ ಮುಖ್ಯ ಕೆಲಸ. ಭಾರತ ಮತ್ತು ಇಂಗ್ಲೆಂಡುಗಳಲ್ಲಿ ಏಕಕಾಲದಲ್ಲಿ ಪರೀಕ್ಷೆ ನಡೆಸಬೇಕೆಂಬುದರ ವಿರುದ್ಧವಾಗಿ ಅದು ವರದಿ ಮಾಡಿತು. ಈ ರೀತಿಯಾಗಿ ನಡೆಸುವ ಸ್ಪರ್ಧಾ ಪರೀಕ್ಷೆಗಳಿಂದ ಕೇವಲ ಕೆಲವು ವರ್ಗಗಳು ಮಾತ್ರ ಲಾಭ ಪಡೆಯುತ್ತವೆಂದು ಅದು ತಿಳಿಸಿತು. ಖಾಲಿ ಜಾಗಗಳು ಕೆಲವೇ ಇದ್ದು ಅಭ್ಯರ್ಥಿಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಎಲ್ಲರಿಗೂ ಉದ್ಯೋಗ ಒದಗಿಸಿಕೊಡಲು ಸಾಧ್ಯವಿಲ್ಲವೆಂದೂ ನೌಕರಿ ದೊರಕದ ಅಭ್ಯರ್ಥಿಗಳು ಮುಂದೆ ದೇಶದಲ್ಲಿ ಅತೃಪ್ತಿ ಹರಡುವರೆಂದೂ ಅದು ವಾದಿಸಿತು. ಕರಾರುಬದ್ಧ ಹಾಗೂ ಕರಾರುಬದ್ಧವಲ್ಲದ ಲೋಕಸೇವೆಗಳೆಂಬ ತಾರತಮ್ಯವನ್ನು ರದ್ದುಗೊಳಿಸಬೇಕೆಂದು ಅದು ಶಿಫಾರಸು ಮಾಡಿತು. ಆಡಳಿತ ವರ್ಗವನ್ನು ಸಾಮ್ರಾಜ್ಯ ಸೇವಾವರ್ಗ (ಇಂಪೀರಿಯಲ್ ಸರ್ವಿಸಸ್) ಪ್ರಾಂತೀಯ ಸೇವಾವರ್ಗ (ಪ್ರೊವಿನ್ಷಿಯಲ್ ಸರ್ವಿಸಸ್) ಮತ್ತು ಕೆಳದರ್ಜೆಯ ಸೇವಾವರ್ಗ (ಸಬಾರ್ಡಿನೇಟ್ ಸರ್ವಿಸಸ್) ಎಂಬುದಾಗಿ ಮೂರು ಭಾಗಗಳಾಗಿ ವಿಂಗಡಿಸಿ, ಪ್ರಮುಖ ಹುದ್ದೆಗಳನ್ನು ಮೊದಲಿನ ಎರಡು ವರ್ಗದವರು ಅನುಭವಿಸಿಕೊಂಡು ಬರಬೇಕೆಂದು ಅದು ವಿವರಿಸಿತು. ಅಲ್ಲದೆ ಕಾಯಿದೆಬದ್ಧ ಲೋಕಸೇವೆಯನ್ನು ರದ್ದುಪಡಿಸಬೇಕೆಂದು ಶಿಫಾರಸು ಮಾಡಿತು. 1893ರಲ್ಲಿ ಕಾಮನ್ಸ್ ಸಭೆ ಒಂದು ನಿರ್ಣಯ ಮಾಡಿ, ಭಾರತದ ಲೋಕಸೇವೆಗಳಿಗಾಗಿ ನೇಮಕ ಮಾಡಲು ಇಂಗ್ಲೆಂಡ್ ಒಂದರಲ್ಲೇ ನಡೆಸುತ್ತಿದ್ದ ಸ್ಪರ್ಧಾ ಪರೀಕ್ಷೆಗಳನ್ನು ಇನ್ನು ಮುಂದೆ ಇಂಗ್ಲೆಂಡ್ ಮತ್ತು ಭಾರತಗಳೆರಡರಲ್ಲೂ ನಡೆಸಬೇಕೆಂದು ವಿಶದಪಡಿಸಿತು. ಅದು ಅಪಾಯಕಾರಿಯಾದ ಕೆಲಸವೆಂದು ಭಾವಿಸಿದ ಭಾರತ ಸರ್ಕಾರ ಅದರ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

**ಇಸ್ಲಿಂಗ್‍ಟನ್ ಆಯೋಗ:** ಭಾರತದ ಲೋಕಸೇವೆಗಳ ಸ್ಥಿತಿಗತಿಗಳನ್ನು ಪರಿಶೀಲಿಸಲು 1912ರಲ್ಲಿ ಲಾರ್ಡ್ ಇಸ್ಲಿಂಗ್‍ಟನ್ನನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲಾಯಿತು. ಅದರ ವರದಿ 1915ರಲ್ಲಿಯೇ ಸಿದ್ಧವಾದರೂ ಅದರ ಪ್ರಕಟನೆಯ ಕೆಲಸ ನಡೆದದ್ದು ಜೂನ್ 1917ರಲ್ಲಿ. ಅದರ ಶಿಫಾರಸುಗಳು ಜಾರಿಗೆ ಬರುವುದಕ್ಕೆ ಮೊದಲೇ 1917ರ ಆಗಸ್ಟ್ ಘೋಷಣೆ ಹೊರಬಿದ್ದಿತು. ಪ್ರತಿಯೊಂದು ಆಡಳಿತ ಶಾಖೆಯಲ್ಲೂ ಭಾರತೀಯರನ್ನು ಹೆಚ್ಚಿಸುವುದೇ ಸರ್ಕಾರದ ನೀತಿಯಾಗಿದೆ ಎಂದು ಸೆಕ್ರೆಟರಿ ಆಫ್ ಸ್ಟೇಟ್ ಮಾಂಡೆಗೊ ಕಾಮನ್ಸ್ ಸಭೆಯಲ್ಲಿ ಘೋಷಿಸಿದ (ನೋಡಿ– ಇಸ್ಲಿಂಗ್‍ಟನ್–ಆಯೋಗ).

**1918ರ ವರದಿಯ ಶಿಫಾರಸುಗಳು:** ಆಡಳಿತ ಸಮಸ್ಯೆಗಳ ನಿಜವಾದ ಅನುಭವ ಪಡೆಯಲು ಕೆಲವೇ ಜನ ಅವಕಾಶ ಹೊಂದಿರುವುದು ಭಾರತೀಯ ಲೋಕಸೇವೆಯಲ್ಲಿ ಒಂದು ದೊಡ್ಡ ದೌರ್ಬಲ್ಯವೆಂದೂ ದೇಶದ ಆಡಳಿತ ಯಂತ್ರದಲ್ಲಿ ಹೆಚ್ಚು ಹೆಚ್ಚು ಮಂದಿ ಭಾರತೀಯರನ್ನು ಸೇರಿಸಿಕೊಳ್ಳಬೇಕೆಂದೂ ವರ್ಣದ ಮೇಲೆ ರೂಪಿತವಾದ ತಾರತಮ್ಯವನ್ನು ತೆಗೆದುಹಾಕಬೇಕೆಂದೂ ಇಂಗ್ಲೆಂಡ್ ಮತ್ತು ಭಾರತಗಳೆರಡರಲ್ಲೂ ಏಕಕಾಲದಲ್ಲಿ ಸ್ಪರ್ಧಾ ಪರೀಕ್ಷೆಗಳನ್ನು ನಡೆಸಬೇಕೆಂದೂ ಭಾರತೀಯ ಲೋಕಸೇವೆಯ ಶ್ರೇಷ್ಠ ಹುದ್ದೆಗಳಲ್ಲಿ ಶೇ. 33ರಷ್ಟು ನೇಮಕವನ್ನು ಭಾರತದಲ್ಲೇ ಮಾಡಬೇಕೆಂದೂ ಈ ಪ್ರಮಾಣವನ್ನು ಪ್ರತಿವರ್ಷವೂ ಶೇಕಡ 1.5 ರಂತೆ ಹೆಚ್ಚು ಮಾಡುತ್ತ ಹೋಗಬೇಕೆಂದೂ ಇತರ ಆಡಳಿತ ವರ್ಗಗಳಲ್ಲಿಯೂ ಇದೇ ಪ್ರಮಾಣವನ್ನು ಇಟ್ಟುಕೊಳ್ಳಬೇಕೆಂದೂ ಅತ್ಯುತ್ತಮ ಐರೋಪ್ಯ ಮತ್ತು ಇಂಗ್ಲಿಷ್ ಅಧಿಕಾರಿಗಳನ್ನು ಭಾರತಕ್ಕೆ ಆಕರ್ಷಿಸುವ ದೃಷ್ಟಿಯಿಂದ ಹೆಚ್ಚಿನ ಸಂಬಳ, ವಿಶ್ರಾಂತಿವೇತನ, ರಜಾ ಮತ್ತು ಸಮುದ್ರದಾಚೆಯ ಭತ್ಯೆಗಳನ್ನು ಕೊಡಬೇಕೆಂದೂ ಪ್ರತಿಯೊಬ್ಬ ನೌಕರನೂ ಅವನು ಎಲ್ಲೇ ಇರಲಿ, ತನ್ನ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುವಾಗ ಆತನಿಗೆ ರಕ್ಷಣೆ ಮತ್ತು ಬೆಂಬಲ ಕೊಡುವುದು ಸರ್ಕಾರದ ಆದ್ಯ ಕರ್ತವ್ಯವೆಂದೂ 1918ರ ವರದಿ ಹೇಳಿತು.

ಭಾರತದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದಾಗಿ ಬ್ರಿಟಿಷ್ ಸರ್ಕಾರ ಘೋಷಣೆ ಹೊರಡಿಸಿದ ಮೇಲೆ ಲೋಕಸಭೆಯ ಸದಸ್ಯರು ಬಹಳ ಪೇಚಿಗೆ ಸಿಕ್ಕಿಕೊಂಡರು. ಮೊದಲು ಅವರೇ ರಾಜ್ಯಾಡಳಿತ ನಡೆಸುತ್ತಿದ್ದರು. ಹೊಸದಾಗಿ ಸ್ಥಾಪಿಸಿದ ಸರ್ಕಾರದಲ್ಲಿ ತಮ್ಮನ್ನು ಭಾರತೀಯ ಮಂತ್ರಿಗಳು ಹತೋಟಿಯಲ್ಲಿಟ್ಟುಕೊಂಡು, ತಮ್ಮ ಮೇಲೆ ದಬ್ಬಾಳಿಕೆ ನಡೆಸುವರೆಂದು ಅವರು ಹೆದರಿದರು. ತಾವು ಅವಮಾನಿತರಾಗುವ ಸಂಭವವೂ ಉಂಟೆಂದು ಭಾವಿಸಿ ಅವರು ತಮಗೆ ರಕ್ಷಣೆ ಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಿದರು. ವಿಶ್ರಾಂತಿ ವೇತನವನ್ನು ಪಡೆಯುವುದಕ್ಕೆ ಎಷ್ಟು ಕಾಲಪರಿಮಿತಿ ಬೇಕೋ ಅದಕ್ಕಿಂತ ಮೊದಲೇ ಇಚ್ಛೆಪಟ್ಟಲ್ಲಿ ಭಾರತದ ಸೇವಾವರ್ಗದಿಂದ ನಿವೃತ್ತಿ ಹೊಂದಬಹುದೆಂದೂ ಅಂಥವರಿಗೆ ಅವರ ಸೇವೆಗನುಗುಣವಾಗಿ ವಿಶ್ರಾಂತಿ ವೇತನ ದೊರಕಿಸಿ ಕೊಡುವುದಾಗಿಯೂ ಸರ್ಕಾರ ಭರವಸೆ ಕೊಟ್ಟಿತು. ಇಷ್ಟಾದರೂ ಆಡಳಿತವರ್ಗದವರಿಗೂ ಭಾರತೀಯ ಜನತೆಗೂ ಇದ್ದ ಬಾಂಧವ್ಯ ಕೆಟ್ಟಿತು. ಶಾಸನ ಸಭೆಗಳಲ್ಲಿ ಅವರನ್ನು ಟೀಕಿಸಲಾಯಿತು. ಅಸಹಕಾರ ಚಳವಳಿಯ ಕಾಲದಲ್ಲಿ ಈ ನೌಕರರೂ ಇವರ ಸಂಸಾರದವರೂ ಜನರ ಸಂಶಯಕ್ಕೆ ಗುರಿಯಾದರು. ಪದಾರ್ಥಗಳ ಬೆಲೆ ದುಬಾರಿಯಾದ್ದರಿಂದ ಇವರ ಸ್ಥಿತಿ ಸ್ವಲ್ಪ ಕೆಟ್ಟಿತು. 1924ರಲ್ಲಿ ಸುಮಾರು 345 ಉನ್ನತ ಅಧಿಕಾರಿಗಳು ನಿವೃತ್ತಿ ಪಡೆದರು. ಅಧಿಕ ಸಂಖ್ಯೆಯಲ್ಲಿ ಐರೋಪ್ಯರು ಮತ್ತು ಇಂಗ್ಲಿಷರು ಭಾರತೀಯ ಆಡಳಿತ ವರ್ಗಕ್ಕೆ ಸೇರದಿದ್ದದ್ದು ಸರ್ಕಾರಕ್ಕೆ ಒಂದು ಕಠಿಣ ಸಮಸ್ಯೆಯನ್ನು ತಂದೊಡ್ಡಿತು. ಆಡಳಿತ ವರ್ಗದ ಭಾರತೀಕರಣವಾಗುತ್ತಿಲ್ಲವೆಂದು ಭಾರತೀಯರು ಟೀಕಿಸುತ್ತಲೇ ಇದ್ದರು. ಆಡಳಿತವರ್ಗದ ಆಯ್ಕೆ ಹಾಗೂ ಹತೋಟಿಯ ಬಗ್ಗೆ ಸೆಕ್ರೆಟರಿ ಆಫ್ ಸ್ಟೇಟ್ ಯಾವ ಅಧಿಕಾರವನ್ನೂ ಹೊಂದಿರಕೂಡದೆಂದು ಅವರು ವಾದಿಸಿದರು.

ಬ್ರಿಟಿಷರ ಆಡಳಿತಭದ್ರತೆಗೆ ಭಾರತೀಕರಣ ಬಹಳ ಸಹಾಯಕವಾಯಿತು. ಪ್ರತಿಯೊಂದು ಕಡೆಯೂ ಆಡಳಿತ ವರ್ಗದ ಒಂದು ಪಡೆಯ, ಪಾಳೆಯದ ನಿರ್ಮಾಣವಾಯಿತು. ಯುದ್ಧ ಮಾಡುವ ಸೈನ್ಯಕ್ಕಿಂತ ಈ ಅಧಿಕಾರಿಗಳ ತಂಡ ಹೆಚ್ಚು ಪ್ರಯೋಜನಕಾರಿಯಾಯಿತು. ಈ ಪಡೆಯಲ್ಲಿ ದೇಶಾಭಿಮಾನಿಗಳೂ ರಾಷ್ಟ್ರೀಯ ಭಾವನೆಯುಳ್ಳವರೂ ಅನೇಕರಿದ್ದರು. ಆದರೆ ವೈಯಕ್ತಿಕವಾಗಿ ದೇಶಾಭಿಮಾನವಿದ್ದರೂ ಸೈನಿಕರಂತೆ ಅವರಿಗೂ ಒಂದು ಆಡಳಿತ ನಿಯಮವಿತ್ತು. ಅವಿಧೇಯತೆ, ದ್ರೋಹ ಅಥವಾ ಪ್ರತಿಭಟನೆಗಳಿಗೆ ಕ್ರೂರ ಶಿಕ್ಷೆ ಕಾದಿರುತ್ತಿತ್ತು. ಹೀಗೆ ಈ ಒಂದು ಆಡಳಿತವರ್ಗದ ನಿರ್ಮಾಣವಾಯಿತಲ್ಲದೆ ಇದರಲ್ಲಿನ ಅಧಿಕಾರದ ಆಸೆಯಿಂದ ಇತರರಲ್ಲೂ ಹೆಚ್ಚಾಗಿ ಅನೀತಿ ಬೆಳೆಯಿತು. ಈ ಆಡಳಿತ ವರ್ಗದವರು ಬ್ರಿಟಿಷ್ ಅಧಿಕಾರಿಗಳಿಗೂ ಜನರಿಗೂ ಮಧ್ಯಸ್ಥರಾದರು.

ದೇಶದಲ್ಲಿ ಇತರ ಉದ್ಯಮಗಳಿಗೆ ಅವಕಾಶವಿಲ್ಲದೆ ಜೀವನಕ್ಕೆ ಬೇರೆ ಮಾರ್ಗವಿಲ್ಲದ್ದರಿಂದ ಸರಕಾರಿ ನೌಕರಿಗೆ ಒಂದು ವಿಶೇಷ ಪ್ರಾಮುಖ್ಯ ದೊರೆಯಿತು. ನ್ಯಾಯವಾದಿಗಳೂ ವೈದ್ಯರೂ ಆಗಲು ಕೆಲವರಿಗೆ ಅವಕಾಶವಿದ್ದರೂ ಹೆಚ್ಚು ಸಂಪಾದನೆಯ ಭರವಸೆ ಇರಲಿಲ್ಲ.

ಕೈಗಾರಿಕೆಗಳಿರಲಿಲ್ಲ. ವ್ಯಾಪಾರವೆಲ್ಲ ಅನೇಕ ತಲೆಮಾರುಗಳಿಂದ ಒಂದೇ ವರ್ಗದವರ ಕೈಯಲ್ಲಿತ್ತು. ಹೊಸ ವಿದ್ಯಾಭ್ಯಾಸದಿಂದ ವ್ಯಾಪಾರ ಅಥವಾ ಕೈಗಾರಿಕೆಗೆ ಪುರಸ್ಕಾರ ದೊರೆಯಲಿಲ್ಲ. ಅದರ ಮುಖ್ಯ ಉದ್ದೇಶವೇ ಸರ್ಕಾರಿ ನೌಕರಿ. ವಿದ್ಯಾಭ್ಯಾಸದ ಪದ್ಧತಿಯೇ ಸಂಕುಚಿತವಾಗಿದ್ದರಿಂದ ಉದ್ಯೋಗಶಿಕ್ಷಣ ಪಡೆಯಲು ಅವಕಾಶವೂ ಬಹಳ ಕಡಿಮೆ ಇತ್ತು. ಕಾಲೇಜುಗಳ ಪದವೀಧರರು ಅಧಿಕ ಸಂಖ್ಯೆಯಲ್ಲಿ ಹೊರಬರಲಾರಂಭಿಸಿದ್ದರಿಂದ ಸರ್ಕಾರದ ಆಡಳಿತ ಶಾಖೆ ಬೆಳೆಯುತ್ತಿದ್ದರೂ ಅವರೆಲ್ಲರಿಗೂ ಸ್ಥಾನ ಕಲ್ಪಿಸಲು ಸಾಧ್ಯವಾಗದೆ ಪೈಪೋಟಿ ಆರಂಭವಾಯಿತು. ಒಟ್ಟಿನಲ್ಲಿ ಬ್ರಿಟಿಷ್ ಸರ್ಕಾರ ಭಾರತದಲ್ಲಿ ನೌಕರಿ ಕೊಡುವ ಒಂದು ದೊಡ್ಡ ಸಂಸ್ಥೆಯಾಯಿತು. ಈ ಅಧಿಕಾರ ವರ್ಗ ಒಂದು ದೊಡ್ಡ ಯಂತ್ರವಾಯಿತು. ಯಂತ್ರಸೂತ್ರಗಳೆಲ್ಲ ಮೇಲಾಧಿಕಾರಿಗಳ ಕೈಯಲ್ಲಿದ್ದು ಬಿಗಿಯಿಂದ ನಡೆಯುತ್ತಿತ್ತು. ಅಧಿಕಾರ ಹಂಚಲು ಇದ್ದ ದೊಡ್ಡ ಅವಕಾಶವನ್ನು ಬ್ರಿಟಿಷರು ದೇಶದಲ್ಲಿ ಅಧಿಕಾರವನ್ನು ಭದ್ರಗೊಳಿಸುವುದಕ್ಕೂ ಅಸಮಾಧಾನಗೊಂಡ ವಿರೋಧಿಗಳನ್ನು ತುಳಿಯುವುದಕ್ಕೂ ಸರ್ಕಾರದ ನೌಕರಿಯಲ್ಲಿ ಸೇರಿಕೊಳ್ಳಲು ಕಾತರರಾಗಿದ್ದ ಬೇರೆ ಬೇರೆ ಪಂಗಡಗಳಲ್ಲಿ ಪೈಪೋಟಿ ವೈಷಮ್ಯಗಳನ್ನು ಹೆಚ್ಚಿಸುವುದಕ್ಕೂ ದುರುಪಯೋಗಪಡಿಸಿಕೊಂಡರು.

**ಲೀ ಆಯೋಗ (1923):** ಭಾರಿ ಭಾರಿ ಹುದ್ದೆಗಳನ್ನು ಭಾರತೀಯರಿಗೆ ಕೊಡುವ ಬಗ್ಗೆ 1923ರಲ್ಲಿ ಒಂದು ಸಮಿತಿ ಅಸ್ತಿತ್ವಕ್ಕೆ ಬಂತು. ಅದರ ಅಧ್ಯಕ್ಷ ಲೀ ಆಗಿದ್ದುದರಿಂದ ಅದಕ್ಕೇ ಲೀ ಆಯೋಗವೆಂದು ಹೆಸರಾಯಿತು. ಅದು ಅನೇಕ ಶಿಫಾರಸುಗಳನ್ನು ಮಾಡಿತು. ಭಾರತೀಯ ಲೋಕಸೇವೆಯ ಬಗ್ಗೆ ಇಂಡಿಯನ್ ಪೊಲೀಸ್ ಸರ್ವಿಸ್, ಇಂಡಿಯನ್ ಫಾರೆಸ್ಟ್ ಸರ್ವಿಸ್ ಮತ್ತು ನೀರಾವರಿ ಕೆಲಸಗಳಿಗಾಗಿ ನೇಮಕಗೊಂಡ ಎಂಜಿನಿಯರ್ಸ್ ಸರ್ವಿಸ್ ಇವುಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ಸ್ವತಃ ನೋಡಿಕೊಳ್ಳಬೇಕೆಂದು ಸೂಚಿಸಲಾಯಿತು. ಇಂಡಿಯನ್ ಎಜುಕೇಷನಲ್ ಸರ್ವಿಸ್, ಇಂಡಿಯನ್ ವೆಟರ್ನರಿ ಸರ್ವಿಸ್ ಮತ್ತು ಇಂಡಿಯನ್ ಮೆಡಿಕಲ್ ಸರ್ವಿಸ್ (ಅಸೈನಿಕ) ಪೂರ್ಣವಾಗಿ ಪ್ರಾಂತ್ಯದ ಮಂತ್ರಿಗಳ ಹತೋಟಿಯಲ್ಲಿಯೇ ಇರಬೇಕೆಂದೂ ಸಮಗ್ರ ಭಾರತದ ಆಧಾರದ ಮೇಲೆ ಮಾಡಲಾಗುತ್ತಿದ್ದ ನೇಮಕಗಳನ್ನು ಕೂಡಲೇ ನಿಲ್ಲಿಸಬೇಕೆಂದೂ ವಿಧೇಯಕವಾಯಿತು. ಅಷ್ಟರೊಳಗೆ ಯಾರು ಯಾರು ನೇಮಕಗೊಂಡಿದ್ದರೋ ಅವರೆಲ್ಲರೂ ಸಮಗ್ರ ಭಾರತದ ಸ್ಥಾನಮಾನಗಳೆಲ್ಲವನ್ನೂ ಉಳಿಸಿಕೊಳ್ಳತಕ್ಕದ್ದೆಂದು ತಿಳಿಸಲಾಯಿತು. ಆದಾಗ್ಯೂ ಆಡಳಿತವರ್ಗಗಳಿಗೆ ಹೊಸದಾಗಿ ಮಾಡುವ ನೇಮಕಗಳ ಪೂರ್ಣ ಜವಾಬ್ದಾರಿ ಪ್ರಾಂತ್ಯ ಸರ್ಕಾರಗಳಿಗಿರುತ್ತದೆಂದೂ ವಿವರಿಸಲಾಯಿತು. ಆದರೆ ಈ ಬದಲಾವಣೆ ಇಂಡಿಯನ್ ಮೆಡಿಕಲ್ ಸರ್ವಿಸಿಗೆ ಅನ್ವಯಿಸುವಂತಿರಲಿಲ್ಲ. ಪ್ರತಿಯೊಂದು ಸಂಸ್ಥಾನವೂ ತನ್ನ ವೈದ್ಯ ವಿಭಾಗಕ್ಕೆ ಎಷ್ಟು ಮಂದಿ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ಮಂದಿಯನ್ನು ಭಾರತದ ಮೆಡಿಕಲ್ ಡಿಪಾರ್ಟ್‌ಮೆಂಟ್ ಆಫ್ ದಿ ಆರ್ಮಿ ಎಂಬುದರಿಂದ ಎರವಲು ಪಡೆಯ ಬೇಕಾಗಿತ್ತು. ಭಾರತೀಕರಣ ಅತಿವೇಗದಿಂದ ಸಾಗಬೇಕೆಂದು ಲೀ ಆಯೋಗ ಶಿಫಾರಸು ಮಾಡಿತು. ಭಾರತೀಯ ಲೋಕಸೇವೆಯಲ್ಲಿ ಶೇ.19 ರಷ್ಟು ಉನ್ನತ ಹುದ್ದೆಗಳನ್ನು ಐರೋಪ್ಯರನ್ನೂ ಭಾರತೀಯರನ್ನೂ ಸಮಾನ ಸಂಖ್ಯೆಯಲ್ಲಿ ಆರಿಸಿಕೊಳ್ಳಬೇಕೆಂದೂ ವಿವರಿಸಲಾಯಿತು. 15 ವರ್ಷದೊಳಗಾಗಿ ಭಾರತೀಯ ಲೋಕಸೇವೆಯಲ್ಲಿ ಅರ್ಧ ಭಾರತೀಯರೂ ಉಳಿದರ್ಧ ಐರೋಪ್ಯರೂ ಇರುವರೆಂದು ಲೆಕ್ಕ ಹಾಕಲಾಯಿತು. ಇಂಡಿಯನ್ ಪೊಲೀಸ್ ಸರ್ವಿಸ್‌ನಲ್ಲಿ ಐದು ಮಂದಿ ಐರೋಪ್ಯರಿಗೆ ಮೂರು ಮಂದಿ ಭಾರತೀಯರಂತೆ ಆಯ್ಕೆ ನಡೆಸಬೇಕಾಯಿತು. 1949ರ ಹೊತ್ತಿಗೆ ಪೊಲೀಸ್ ಇಲಾಖೆಯಲ್ಲಿ ಅರ್ಧದಷ್ಟು ಮಂದಿ ಐರೋಪ್ಯರೂ ಇನ್ನರ್ಧ ಭಾರತೀಯರೂ ಇರುವರೆಂದು ಅಂದಾಜು ಹಾಕಲಾಯಿತು. ಅರಣ್ಯ ಇಲಾಖೆಗೆ ನೂರಕ್ಕೆ 75 ಭಾರತೀಯರನ್ನೂ 25 ಐರೋಪ್ಯರನ್ನೂ ಆಯ್ಕೆ ಮಾಡಬೇಕಾಗಿತ್ತು. ನೀರಾವರಿ ಶಾಖೆಗೆ ಎಂಜಿನಿಯರನ್ನು ನೇಮಕ ಮಾಡಿಕೊಳ್ಳುವಾಗ ಸಮಾನ ಸಂಖ್ಯೆಯಲ್ಲಿ ನೇರವಾಗಿ ಭಾರತೀಯರನ್ನೂ ಐರೋಪ್ಯರನ್ನೂ ಆಯ್ಕೆ ಮಾಡಬಹುದಾಗಿತ್ತು.

ಕೇಂದ್ರ ಇಲಾಖೆಗಳ ಬಗ್ಗೆ ಲೀ ಕಮಿಷನ್ ಕೆಲವು ಶಿಫಾರಸುಗಳನ್ನು ಮಾಡಿತು: 1 ರಾಜಕೀಯ ಇಲಾಖೆಗೆ ಪ್ರತಿವರ್ಷವೂ ಆಯ್ಕೆಯಾಗುವ ಒಟ್ಟು ಸಂಖ್ಯೆಯಲ್ಲಿ 25 ಸ್ಥಾನಗಳನ್ನು ಭಾರತೀಯರಿಗೆ ಕೊಡಬೇಕು. 2 ಇಂಪೀರಿಯಲ್ ಕಸ್ಟಮ್ಸ್‌ಗೆ ಅರ್ಧಕ್ಕಿಂತ ಕಡಿಮೆ ಇಲ್ಲದಂತೆ ಭಾರತೀಯರನ್ನು ತೆಗೆದುಕೊಳ್ಳಬೇಕು. 3 ಉನ್ನತ ಟೆಲಿಗ್ರಾಫ್ ಮತ್ತು ವೈರ್‌ಲೆಸ್ ವಿಭಾಗಕ್ಕೆ ಶೇಕಡ 25 ಜನರನ್ನು ಇಂಗ್ಲೆಂಡಿನಲ್ಲೂ ಶೇ.75ರಷ್ಟು ಮಂದಿಯನ್ನು ಭಾರತದಲ್ಲೂ ನೇಮಿಸಿಕೊಳ್ಳಬೇಕು. 4 ರೈಲ್ವೆಗಳಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ಭಾರತೀಯರನ್ನು ಶೇ.75ರಷ್ಟಕ್ಕೆ ಏರಿಸಿ, ಉಳಿದ ಶೇ.25ರಷ್ಟು ಅಧಿಕಾರಿಗಳನ್ನು ಇಂಗ್ಲೆಂಡಿನಲ್ಲಿ ಆರಿಸಬೇಕು. ಅಲ್ಲದೆ ನೌಕರರಿಗೆ ಹೆಚ್ಚು ಸಂಬಳವನ್ನೂ ಇತರ ಅನುಕೂಲಗಳನ್ನೂ ಒದಗಿಸಬೇಕೆಂದೂ ಈ ಸಮಿತಿ ಸರಕಾರಕ್ಕೆ ತಿಳಿಸಿತು. ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಐರೋಪ್ಯರೂ ಅವರ ಪತ್ನಿಯರೂ ಸ್ವದೇಶಕ್ಕೆ ನಾಲ್ಕು ಬಾರಿ ಹೋಗಿ ಬರುವುದಕ್ಕೂ ಅವಕಾಶವಿತ್ತು. ಅವರಿಗೆ ಐರೋಪ್ಯ ವೈದ್ಯರ ಸೌಲಭ್ಯ ದೊರೆಯುವಂತೆ ಆಯಿತು. ಭಾರತದಲ್ಲಿರುವಾಗ ಸಿವಿಲ್ ಸದಸ್ಯ ಸತ್ತರೆ ಅವನ ಪತ್ನಿಯನ್ನು ಸರಕಾರವೇ ತನ್ನ ಖರ್ಚಿನಿಂದ ಸ್ವದೇಶಕ್ಕೆ ಕಳುಹಿಸಬೇಕಾಯಿತು. ಭಾರತೀಯ ಲೋಕಸೇವೆಯ ಅಧಿಕಾರಿ ಉನ್ನತ ದರ್ಜೆ ಮುಟ್ಟಿದರೆ ಆತನ ವಿಶ್ರಾಂತಿವೇತನ ಜಾಸ್ತಿಯಾಗುತ್ತಿತ್ತು. ಕುಟುಂಬ ಪಿಂಚಣಿ ನಿಧಿ ಯೋಜನೆ ಜಾರಿಗೆ ಬಂತು. ಭಾರತದಲ್ಲಿ ಒಂದು ಲೋಕಸೇವಾ ಆಯೋಗವಿರಬೇಕೆಂದು 1919ರ ಕಾಯಿದೆ ಸೂಚಿಸಿತು. ಆದರೆ ಅದು ಅಸ್ತಿತ್ವಕ್ಕೆ ಬರಲಿಲ್ಲ. ಲೀ ಆಯೋಗವೂ ಕೂಡಲೇ ಒಂದು ಲೋಕಸೇವಾ ಆಯೋಗ ರಚಿತವಾಗಬೇಕೆಂದು ಶಿಫಾರಸು ಮಾಡಿತು.

**ಭಾರತ ಸರ್ಕಾರದ ಕಾಯಿದೆ (1935):** 1935ರ ಮಸೂದೆ ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಬಂದಾಗ, ಅದು ಕಾಯಿದೆಯಾಗುವ ಸೂಚನೆಗಳನ್ನು ಕಂಡ ಭಾರತೀಯ ನೌಕರರು ಹೊಸದಾಗಿ ನಿರ್ಮಾಣಗೊಳ್ಳಲಿದ್ದ ಸರ್ಕಾರದಲ್ಲಿ ತಮ್ಮ ಸ್ಥಾನಮಾನಗಳಿಗೆ ಎಲ್ಲಿ ಧಕ್ಕೆ ಬರುವುದೋ ಎಂದು ಹೆದರಿ ತಮಗೆ ಸರಿಯಾದ ರಕ್ಷಣೆಗಳನ್ನು ಕೊಡಬೇಕೆಂದು ಮನವಿ ಸಲ್ಲಿಸಿದರು. ತತ್ಪರಿಣಾಮವಾಗಿ 1935ರ ಕಾಯಿದೆಯಲ್ಲಿ ಭಾರತೀಯ ಲೋಕಸೇವೆಯ ಬಗ್ಗೆ ಕೆಲವು ನಿಯಮಗಳನ್ನು ಮಾಡಲಾಯಿತು. ಮುಂದೆ ನಡೆಯುವ ಎಲ್ಲ ನೇಮಕಗಳಿಗೂ ಒಂದು ರೀತಿಯಾದ ಹೊಸ ರೂಪ ಕೊಡಲಾಯಿತು. ನೌಕರರು ಅನುಭವಿಸುತ್ತಿದ್ದ ಎಲ್ಲ ರಿಯಾಯಿತಿಗಳನ್ನೂ ಮಾನ್ಯ ಮಾಡಲಾಯಿತು. ಸಂವಿಧಾನ ಕಾಯಿದೆಯಲ್ಲಿ ನಮೂದಿಸಲಾಗಿರುವ ಭಾರತೀಯ ಲೋಕಸೇವಾ ಸದಸ್ಯರ ಹಕ್ಕು ಬಾಧ್ಯತೆಗಳನ್ನೂ ಅವರ ನ್ಯಾಯಬದ್ಧವಾದ ಅಭಿರುಚಿಗಳನ್ನೂ ರಕ್ಷಿಸುವುದಕ್ಕಾಗಿ ಗವರ್ನರ್ ಜನರಲ್ಲನಿಗೂ ಪ್ರಾಂತ್ಯದ ಗವರ್ನರುಗಳಿಗೂ ವಿಶೇಷವಾದ ಅಧಿಕಾರ ಕೊಡಲಾಯಿತು. ಭಾರತದಲ್ಲಿರುವ ಪ್ರತಿಯೊಬ್ಬ ನೌಕರನೂ ಚಕ್ರವರ್ತಿಯ ಇಚ್ಛೆಗನುಗುಣವಾಗಿ ತನ್ನ ನೌಕರಿ ಹೊಂದಿರಬಲ್ಲನೆಂದು ವಿವರಿಸಲಾಯಿತು. ನೌಕರನ ಹುದ್ದೆಯನ್ನು ರದ್ದುಗೊಳಿಸಿದ್ದಾದರೆ ಅವನಿಗೆ ಪರಿಹಾರ ಕೊಡಬೇಕಾಗಿತ್ತು. ಚಕ್ರವರ್ತಿ ಅನ್ಯಾಯವಾಗಿ ಯಾರನ್ನಾದರೂ ನೌಕರಿಯಿಂದ ತೆಗೆದು ಹಾಕಿದರೆ ಆ ಆಜ್ಞೆಯ ಕ್ರಮಬದ್ಧತೆಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗಬಹುದಿತ್ತು. ನೇಮಕ ಮಾಡಿಕೊಳ್ಳುವ ಅಧಿಕಾರಿಗಿಂತ ಕಡಿಮೆ ಅಧಿಕಾರವುಳ್ಳವನು ಯಾವ ನೌಕರನನ್ನೂ ಕೆಲಸದಿಂದ ತೆಗೆದುಹಾಕುವ ಹಕ್ಕು ಪಡೆದಿರುತ್ತಿರಲಿಲ್ಲ. ತನ್ನ ಕೃತ್ಯದ ಬಗ್ಗೆ ಆತನಿಂದ ಸಮಜಾಯಿಷಿ ಕೇಳಿ ಪಡೆಯುವವರೆಗೆ ಯಾವ ನೌಕರನನ್ನೂ ತೆಗೆಯುವಂತೆಯೂ ಇರಲಿಲ್ಲ. ಅವನನ್ನು ಕೆಳದರ್ಜೆಗೆ ಇಳಿಸು ವಂತೆಯೂ ಇರಲಿಲ್ಲ. ಫೆಡರಲ್ ಕ್ಷೇತ್ರದಲ್ಲಿ ಲೋಕಸೇವೆಗೆ ನೌಕರರನ್ನು ನೇಮಕಮಾಡುವ ಅಧಿಕಾರವನ್ನು ಗವರ್ನರ್ ಜನರಲ್ಲನಿಗೆ ಕೊಡಲಾಯಿತು. ಆದರೆ ಆತ ಭಾರತೀಯ ಲೋಕಸೇವೆ, ಪೊಲೀಸ್ ಇಲಾಖೆ ಮತ್ತು ವೈದ್ಯ ಇಲಾಖೆಗಳಿಗೆ (ಅಸೈನಿಕ) ನೇಮಕ ಮಾಡುವಂತಿರಲಿಲ್ಲ. ಅಲ್ಲದೆ ಆತ ಸೇವಾನಿಯಮಾವಳಿಯನ್ನೂ ಅವರೇ ಮಾಡಬೇಕಾಗಿತ್ತು. ರೈಲ್ವೆ ಇಲಾಖೆಗೆ ಅಧಿಕಾರಿಗಳನ್ನು ನೇಮಿಸುವಾಗ ಗವರ್ನರ್ ಜನರಲ್ ತನ್ನ ಅಧಿಕಾರವನ್ನು ಫೆಡರಲ್ ರೈಲ್ವೆಗೆ ವಹಿಸುತ್ತಿದ್ದ. ರೈಲ್ವೆಯಲ್ಲಿ ಉನ್ನತ ಹುದ್ದೆಗಳಿಗೆ ನೇಮಕ ಮಾಡುವಾಗ ಫೆಡರಲ್ ರೈಲ್ವೆ ಲೋಕಸೇವಾ ಆಯೋಗದ ಸಲಹೆ ಪಡೆಯಬೇಕಾಗಿತ್ತು. ಯಾವ ಅಧಿಕಾರಿಯೊಂದಿಗಾಗಲಿ ವ್ಯವಹರಿಸುವಾಗ ಸೆಕ್ರೆಟರಿ ಆಫ್ ಸ್ಟೇಟ್, ಗವರ್ನರ್–ಜನರಲ್ ಮತ್ತು ಗವರ್ನರುಗಳು ಸಮಾನವಾದ ಅಧಿಕಾರ ಹೊಂದಿರುತ್ತಿದ್ದರು. ನೊಂದ ನೌಕರರು ತಮ್ಮ ಅಹವಾಲುಗಳನ್ನು ಗವರ್ನರ್, ಗವರ್ನರ್–ಜನರಲ್ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಇವರಿಗೆ ಸಲ್ಲಿಸಬಹುದಾಗಿತ್ತು. ಯಾರಿಗಾದರೂ ಅನ್ಯಾಯವಾಗಿದ್ದ ಪಕ್ಷಕ್ಕೆ ಅವರಿಗೆ ಸೆಕ್ರೆಟರಿ ಪರಿಹಾರ ಕೊಡಬಹುದಾಗಿತ್ತು. ನೌಕರರ ಸಂಬಳ ಸಾರಿಗೆ ಮತ್ತು ವಿಶ್ರಾಂತಿವೇತನ–ಇವುಗಳಾವುವೂ ಶಾಸನಸಭೆಗಳ ಮತಕ್ಕೆ ಒಳಪಟ್ಟಿರುತ್ತಿರಲಿಲ್ಲ. ನಿವೃತ್ತಿ ವೇತನವನ್ನು ಭಾರತದ ಬೊಕ್ಕಸದಿಂದ ಕೊಡುತ್ತಿರಲಿಲ್ಲ. ಭಾರತೀಯ ಸೈನಿಕನ ವಿಧವೆ ಹಾಗೂ ಅನಾಥರ ಸಂಚಿತನಿಧಿ, ಉನ್ನತಸೇವಾ (ಭಾರತೀಯ) ಸಂಸಾರದ ನಿವೃತ್ತಿವೇತನದ ನಿಧಿ ಮತ್ತಿತರ ಸಂಚಿತ ನಿಧಿಗಳನ್ನು ಚಕ್ರವರ್ತಿಯಿಂದ ನೇಮಕವಾದ ಕಮಿಷನರುಗಳ ಕೈಯಲ್ಲಿ ಇಡಲಾಗುತ್ತಿತ್ತು. ಇಷ್ಟಲ್ಲದೆ 1935ರ ಕಾಯಿದೆ ಕೇಂದ್ರದಲ್ಲಿ ಫೆಡರಲ್ ಲೋಕಸೇವಾ ಆಯೋಗವಿರಬೇಕೆಂದೂ ಸೂಚಿಸಿತು. ಎರಡು–ಮೂರು ಪ್ರಾಂತ್ಯಗಳ ಉಪಯೋಗಕ್ಕಾಗಿ ಸಂಯುಕ್ತ ಲೋಕಸೇವಾ ಆಯೋಗವಿರಬೇಕೆಂದೂ ಅದು ಅವಕಾಶ ಮಾಡಿಕೊಟ್ಟಿತು. ಫೆಡರಲ್ ಲೋಕಸೇವಾ ಆಯೋಗದಲ್ಲಿರಬೇಕಾದ ಸದಸ್ಯ ಸಂಖ್ಯೆಯನ್ನು ಗವರ್ನರ್–ಜನರಲ್ಲನೂ ಪ್ರಾಂತ್ಯಗಳ ಲೋಕಸೇವಾ ಆಯೋಗಗಳ ಸಂಖ್ಯೆಯನ್ನು ಪ್ರಾಂತ್ಯ ಗವರ್ನರುಗಳೂ ನಿರ್ಣಯಿಸಬೇಕಾಗಿತ್ತು. ಅವುಗಳಲ್ಲಿದ್ದ ಅರ್ಧದಷ್ಟು ಸದಸ್ಯರು ಭಾರತದಲ್ಲಿ ಕೊನೆಯ ಪಕ್ಷ ಹತ್ತು ವರ್ಷಗಳವರೆಗಾದರೂ ನೌಕರಿಯಲ್ಲಿರಬೇಕಾಗಿತ್ತು.

**ಸ್ವತಂತ್ರ ಭಾರತದಲ್ಲಿ:** ಭಾರತ ಸ್ವಾತಂತ್ರ್ಯ ಕಾಯಿದೆಯ ಹತ್ತನೆಯ ಪ್ರಕರಣದ ಪ್ರಕಾರ ಇಂಡಿಯನ್ ಸಿವಿಲ್ ಸರ್ವಿಸ್ ರದ್ದಾಯಿತು. ಈ ವ್ಯವಸ್ಥೆಯಲ್ಲಿದ್ದ ಅಧಿಕಾರಿಗಳಿಗೆ ಪರಿಹಾರ ಕೊಡಬೇಕೆಂದು ವಾದವನ್ನು ಸರ್ದಾರ್ ಪಟೇಲರು ಒಪ್ಪಲಿಲ್ಲ. ಕೊನೆಗೆ ಐರೋಪ್ಯ ಅಧಿಕಾರಿಗಳನ್ನು ನಿವೃತ್ತಿಗೊಳಿಸಿ ಅವರಿಗೆ ಪರಿಹಾರ ಕೊಡತಕ್ಕದ್ದೆಂದೂ ಭಾರತೀಯ ಅಧಿಕಾರಿಗಳು ತಮ್ಮ ಸೇವಾವಧಿ ಮುಗಿಯುವವರೆಗೂ ಮುಂದುವರಿಯತಕ್ಕದ್ದೆಂದೂ ತೀರ್ಮಾನವಾಗಿ ಇವರಿಗೆ ಕೆಲವು ವಿನಾಯಿತಿಗಳನ್ನು ಕೊಡಲಾಯಿತು. ರದ್ದಾದ ಈ ವ್ಯವಸ್ಥೆಯ ಸ್ಥಾನದಲ್ಲಿ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ (ಐಎಎಸ್) ಎಂಬ ಹೊಸ ವ್ಯವಸ್ಥೆಯ ರಚನೆಯಾಯಿತು.

**ಭಾರತದ ಹೊಸ ರಾಜ್ಯಾಂಗದಲ್ಲಿ ಲೋಕಸೇವಾ ಆಯೋಗಗಳು:** ಭಾರತದ ಹೊಸ ಸಂವಿಧಾನ ಲೋಕಸೇವೆಗಳ ಬಗ್ಗೆ ಪ್ರತ್ಯೇಕ ಕಾನೂನುಗಳನ್ನು ರಚಿಸಿದೆ. ರಾಜ್ಯಾಂಗದ 309ನೆಯ ಅನುಚ್ಛೇದದ ಪ್ರಕಾರ ಶಾಸಕಾಂಗ ಆಡಳಿತ ವರ್ಗಗಳಿಗೆ ನೌಕರರನ್ನು ಆರಿಸಿಕೊಳ್ಳುವ ವಿಧಾನವನ್ನು ಸುಧಾರಿಸಿ, ಕೇಂದ್ರ ಮತ್ತು ಸಂಸ್ಥಾನಗಳ ಸಹಾಯ ಸಹಕಾರಗಳಿಂದ ಲೋಕಸೇವೆಗಳಿಗೆ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಅವರ ಸೇವಾನಿಯಮಾವಳಿ ಮತ್ತಿತರ ಪ್ರಶ್ನೆಗಳನ್ನು ಕೂಲಂಕಷವಾಗಿ ವಿಮರ್ಶಿಸಿ, ನಿರ್ಣಯ ಮಾಡಬೇಕಾಗಿದೆ. ಶಾಸಕಾಂಗ ಇನ್ನಷ್ಟು ಮಾಡುವುದಕ್ಕೆ ಮೊದಲು ರಾಷ್ಟ್ರಾಧ್ಯಕ್ಷರಾಗಲಿ ಗವರ್ನರ್ ಆಗಲಿ ನೌಕರರ ಕ್ಷೇಮಾಭ್ಯುದಯಕ್ಕೆ ಮತ್ತು ಅವರ ಆಯ್ಕೆಗೆ ಸಂಬಂಧಪಟ್ಟ ನಿಯಮವನ್ನು ರಚಿಸುವುದು ಅವರ ಅಧಿಕಾರಕ್ಕೆ ಬಿಟ್ಟದ್ದಾಗಿದೆ. 310ನೆಯ ಅನುಚ್ಛೇದದ ಪ್ರಕಾರ, ರಕ್ಷಣಾ ಇಲಾಖೆಯಾಗಲಿ ಭಾರತದ ಇನ್ನಾವ ಇಲಾಖೆಯಲ್ಲಾಗಲಿ ಕೆಲಸಮಾಡುವ ವ್ಯಕ್ತಿ ರಾಷ್ಟ್ರಾಧ್ಯಕ್ಷರ ಇಚ್ಛೆಗನುಸಾರವಾಗಿ ಸೇವೆ ಸಲ್ಲಿಸಬೇಕು. ಸಂಸ್ಥಾನದ ಲೋಕಸೇವೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಸಂಸ್ಥಾನದ ಗವರ್ನರ್ ಸುಪ್ರೀತನಾಗುವಂತೆ ತನ್ನ ಜವಾಬ್ದಾರಿ ನಿರ್ವಹಿಸಬೇಕು. 311ನೆಯ ಅನುಚ್ಛೇದದ ಪ್ರಕಾರ ಕೇಂದ್ರದ ಲೋಕಸೇವೆಯಲ್ಲಿರುವ ಅಥವಾ ಸಮಗ್ರ ಭಾರತದ ಸೇವೆಯಲ್ಲಿರುವ ಅಥವಾ ಸಂಸ್ಥಾನದ ಆಡಳಿತ ವರ್ಗದಲ್ಲಿರುವ ಯಾವ ಅಧಿಕಾರಿಯನ್ನಾಗಲಿ ಸರಿಯಾದ ಕಾರಣವಿಲ್ಲದೆ ಕೆಲಸದಿಂದ ತೆಗೆಯುವಂತಿಲ್ಲ. ಕಾರಣಗಳನ್ನು ಕೊಡಲು ಸಾಕಷ್ಟು ಅವಕಾಶ ಕೊಡದೆಯೂ ಯಾವ ಅಧಿಕಾರಿಯನ್ನಾಗಲಿ ಕೆಲಸದಿಂದ ತೆಗೆಯುವಂತಿಲ್ಲ. ಅವನನ್ನು ಆಗಿನ ಸ್ಥಾನಮಾನದಿಂದ ಕೆಳದರ್ಜೆಗೆ ಇಳಿಸುವಂತೆಯೂ ಇಲ್ಲ. ಆದರೆ ಕಳ್ಳರಿಗೂ ರಾಷ್ಟ್ರದ್ರೋಹಿಗಳಿಗೂ ಇದು ಅನ್ವಯಿಸುವುದಿಲ್ಲ.

**ಲೋಕಸೇವಾ ಆಯೋಗಗಳು:** 315ನೆಯ ಅನುಚ್ಛೇದದ ಪ್ರಕಾರ ಭಾರತದ ಒಕ್ಕೂಟಕ್ಕೆ ಒಂದು ಲೋಕಸೇವಾ ಆಯೋಗವೂ ಪ್ರತಿ ರಾಜ್ಯಕ್ಕೂ ಒಂದು ಲೋಕಸೇವಾ ಆಯೋಗವೂ ಇರಬೇಕಾಗಿದೆ. ಎರಡು ಅಥವಾ ಹೆಚ್ಚಿನ ಸಂಖ್ಯೆಯ ರಾಜ್ಯಗಳು ಒಟ್ಟಿಗೆ ಸೇರಿ ತಮಗೆ ಒಂದೇ ಲೋಕಸೇವಾ ಆಯೋಗ ಸಾಕೆಂದು ಹೇಳಿ, ಆ ರಾಜ್ಯಗಳ ಶಾಸನಾಂಗಗಳು ಒಂದು ನಿರ್ಣಯಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟರೆ, ಸಂಸತ್ತು ಆ ನಿರ್ಣಯದ ಆಧಾರದ ಮೇಲೆ ಒಂದು ಆಜ್ಞೆ ಹೊರಡಿಸಿ, ಸಂಯುಕ್ತ ರಾಜ್ಯ ಲೋಕಸೇವಾ ಆಯೋಗ ಸ್ಥಾಪಿಸ ಬಹುದು. ರಾಜ್ಯಪಾಲರ ಪ್ರಾರ್ಥನೆಯ ಮೇಲೆ ಕೇಂದ್ರ ಲೋಕಸೇವಾ ಆಯೋಗವೇ, ರಾಷ್ಟ್ರಾಧ್ಯಕ್ಷರ ಅಪ್ಪಣೆ ಪಡೆದು, ರಾಜ್ಯದ ಕೆಲಸವನ್ನೂ ನಿರ್ವಹಿಸಬಹುದು. 316ನೆಯ ಅನುಚ್ಛೇದದ ಪ್ರಕಾರ ಒಕ್ಕೂಟದ ಆಯೋಗದ ಅಥವಾ ಸಂಯುಕ್ತ ಆಯೋಗದ ಅಧ್ಯಕ್ಷನನ್ನು ರಾಷ್ಟ್ರಾಧ್ಯಕ್ಷರೂ ರಾಜ್ಯದ ಆಯೋಗದ ಅಧ್ಯಕ್ಷನನ್ನು ರಾಜ್ಯಪಾಲರೂ ನೇಮಿಸಬಹುದಾಗಿದೆ. ಪ್ರತಿ ಆಯೋಗದ ಅರ್ಧದಷ್ಟು ಸದಸ್ಯರೂ ತಾವು ಅದರ ಸದಸ್ಯರಾಗುವುದಕ್ಕೆ ಮುನ್ನ ಹತ್ತು ವರ್ಷಗಳ ಕಾಲ ಕೇಂದ್ರ ಸರಕಾರದಲ್ಲೂ ಸಂಸ್ಥಾನದಲ್ಲೂ ಸೇವೆ ಸಲ್ಲಿಸಿರಬೇಕು. ಪ್ರತಿಯೊಬ್ಬ ಸದಸ್ಯನೂ ಸಾಮಾನ್ಯವಾಗಿ ಆರು ವರ್ಷ ಕಾಲ ಆ ಪದವಿಯಲ್ಲಿರಬಹುದು.
(ಬಿ.ಎಂ.)

**ಇಂಡಿಯನ್ ಸೊಸೈಟಿ ಆಫ್ ಅಡ್ವರ್ಟೈಸರ್ಸ್:** ಜಾಹೀರಾತು ಸಂಸ್ಥೆಗಳು ಯೋಗ್ಯರೀತಿಯಲ್ಲಿ ಪ್ರಸಾರ ಮಾಡುವಂತೆ ನೆರವು ನೀಡುವ ಸಂಸ್ಥೆ (ಐ.ಎಸ್.ಎ.). 1952 ಸೆಪ್ಟಂಬರ್‌ನಲ್ಲಿ ಮುಂಬಯಿಯಲ್ಲಿ ಅಸ್ತಿತ್ವಕ್ಕೆ ಬಂತು. ಜಾಹೀರಾತುಗಳನ್ನು ಕುರಿತ ಆರ್ಥಿಕ, ನೈತಿಕ ರೀತಿನೀತಿಗಳನ್ನು ರೂಪಿಸುವುದು, ಸದಸ್ಯರಿಗೆ ಈ ವಿಷಯದಲ್ಲಿ ಮಾರ್ಗದರ್ಶನ ಮಾಡುವುದು, ಅವರ ಹಿತ ಸಂಬಂಧಗಳನ್ನು ಕಾಪಾಡುವುದು–ಇವು ಈ ಸಂಸ್ಥೆಯ ಮುಖ್ಯ ಉದ್ದೇಶಗಳಾಗಿವೆ. ಜೊತೆಗೆ ಈ ವೃತ್ತಿಯಲ್ಲಿನ ವಂಚನೆ, ಮೋಸಗಾರಿಕೆಗಳನ್ನು ಬಯಲಿಗೆಳೆವ ಕಾರ್ಯವೂ ಇದಕ್ಕೆ ಸೇರಿದ್ದು. ಜಾಹೀರಾತುಗಳ ವಿಷಯದಲ್ಲಿ ಸದಸ್ಯರಲ್ಲಿ ಪರಸ್ಪರ ಸಮಾನತೆಯನ್ನು ಕಾಪಾಡಿಕೊಳ್ಳುವುದೂ ಅವರಿಗೆ ಅಗತ್ಯವಾದ ಮಾಹಿತಿಯನ್ನು ಒದಗಿಸುವುದೂ ಇದರ ಕೆಲಸಗಳಾಗಿವೆ. (ಎಸ್.ವಿ.ಪಿ.ಎ.)

**ಇಂಡಿಯನ್ ಸೋಷಿಯಲ್ ರಿಫಾರ್ಮರ್:** 1890ರಲ್ಲಿ ಹಿಂದೂ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲವು ತರುಣರು, ಹಿಂದೂ ಸಮಾಜದಲ್ಲಿ ಆಗಬೇಕಾದ ಕೆಲವು ಸುಧಾರಣೆಗಳನ್ನು ಪ್ರಚಾರ ಮಾಡಲೋಸುಗ, ಕಾಮಾಕ್ಷಿ ನಟರಾಜನ್ ಎಂಬುವರ ಸಂಪಾದಕತ್ವದಲ್ಲಿ ಈ ಇಂಗ್ಲಿಷ್ ವಾರಪತ್ರಿಕೆಯನ್ನು ಚೆನ್ನೈನಲ್ಲಿ ಪ್ರಾರಂಭಿಸಿದರು. 1892ರಲ್ಲಿ ನಟರಾಜನ್ ಮುಂಬಯಿಗೆ ಹೋದ ಮೇಲೆ ಅಲ್ಲಿಂದ ಈ ಪತ್ರಿಕೆ ಪ್ರಕಟಗೊಂಡಿತು.

ರಾನಡೆಯವರ ತತ್ತ್ವಗಳಿಗೆ ವಿರೋಧವಾಗಿ ಬರೆದದ್ದು, ದಿವಾನ್ ಬಹದ್ದೂರ್ ರಘುನಾಥರಾಯನ ಮೀನ–ಮೇಷ ನೀತಿಯನ್ನು ಖಂಡಿಸಿದ್ದು, ತೆಲಾಂಗ್ ಮತ್ತು ಮಧೋಳ್ಕರರ ರೀತಿನೀತಿಯನ್ನು ಟೀಕಿಸಿದ್ದು, ಬಾಲಗಂಗಾಧರ ತಿಲಕರ ಸಮಾಜಸೇವೆಯನ್ನು ಶ್ಲಾಘಿಸಿದ್ದು–ಇವೇ ಈ ಪತ್ರಿಕೆಯ ಬಿಚ್ಚು ಮನಸ್ಸಿನ ಧೋರಣೆಗೆ ಸಾಕ್ಷಿ. ತನ್ನದೇ ಆದ ವೈಶಿಷ್ಟ್ಯ ಹೊಂದಿದ್ದು, ಸಮಾಜಸೇವೆಯನ್ನು ಮಾಡುವ ವಿಷಯದಲ್ಲಿ ಸ್ವತಂತ್ರನೀತಿಯನ್ನು ಪಾಲಿಸಿಕೊಂಡು ಶಾಸನಸಭೆಗಳಲ್ಲಿ ಮತ್ತು ಇತರ ಸೇವಾವರ್ಗಗಳಲ್ಲಿ ಜಾತೀಯ ಪ್ರಾತಿನಿಧ್ಯವನ್ನು ವಿರೋಧಿಸಿ ಧೈರ್ಯವಾಗಿ ಬರೆದ ಪತ್ರಿಕೆ ಆಗಿನ ಕಾಲಕ್ಕೆ ಇದೊಂದೇ. 1953ನೆಯ ಇಸವಿಯವರೆಗೂ ನಡೆದ ಈ ಪತ್ರಿಕೆಗೆ, ಭಾರತದಲ್ಲಿ ಸಮಾಜ ಸುಧಾರಣೆಗಾಗಿ ಸೇವೆ ಮಾಡಿದ ವಾರಪತ್ರಿಕೆಗಳಲ್ಲಿ ಅಗ್ರಸ್ಥಾನ ಸಲ್ಲಬೇಕು. (ಎನ್.ಕೆ.)

**ಇಂಡಿಯನ್ನರು, ಉತ್ತರ ಅಮೆರಿಕದ:** ಉತ್ತರ ಅಮೆರಿಕದ ಮೂಲನಿವಾಸಿಗಳು. ಯುರೋಪಿಯನ್ನರು ಉತ್ತರ ಅಮೆರಿಕಕ್ಕೆ ವಲಸೆ ಬರುವುದಕ್ಕೆ ಮುಂಚಿನಿಂದಲೂ ಇವರು ಅಲ್ಲಿ ವಾಸಿಸುತ್ತಿದ್ದಾರೆ. ಅಮೆರಿಕವನ್ನು ಮೊದಲ ಬಾರಿ ಕಂಡ ಕೊಲಂಬಸ್ ತಾನು ಇಂಡಿಯದ ಪೂರ್ವತೀರವನ್ನು ತಲಪಿದ್ದನೆಂದು ಭಾವಿಸಿದ್ದರಿಂದ ಅಲ್ಲಿ ವಾಸಿಸುತ್ತಿದ್ದ ಜನರನ್ನು ಇಂಡಿಯನ್ನರೆಂದು ಕರೆದ. ಇವರು ಅಮೆರಿಕದವರಾದ್ದರಿಂದ ಇವರಿಗೆ ಈ ಹೆಸರು ಬಂತು. ಇವರ ಪೂರ್ವಿಕರು ಏಷ್ಯದ ಈಶಾನ್ಯಭಾಗದಿಂದ ಬೇರಿಂಗ್ ಜಲಸಂಧಿಯ ಮೂಲಕ ವಲಸೆ ಬಂದವರು ಎಂಬುದು ಈಗ ಬಹಳ ಮಟ್ಟಿಗೆ ಖಚಿತವಾಗಿದೆ. ಇವರು ಅಲೆ ಅಲೆಯಾಗಿ ಬಂದು ಬೇರೆ ಬೇರೆಡೆಗಳಲ್ಲಿ ನೆಲೆಸಿದ್ದರಿಂದ ಇವರಲ್ಲಿ ಅನೇಕ ಭಾಷಾವರ್ಗಗಳಿವೆ (ನೋಡಿ– ಅಮೆರಿಕದ–ಇಂಡಿಯನರ–ಭಾಷೆಗಳು).

ನೆಲೆಸಿದ ಪ್ರದೇಶದ ಭೂಸ್ಥಿತಿ, ವಾಯುಗುಣ ಮುಂತಾದವುಗಳಿಗೆ ಅನುಗುಣವಾಗಿ ಇವರ ನಾಗರಿಕತೆಯಲ್ಲೂ ವೈವಿಧ್ಯವುಂಟಾಯಿತು (ನೋಡಿ– ಅಮೆರಿಕದ–ಆದಿವಾಸಿಗಳು).

ಇವರು ಮಂಗೋಲ್ ಬುಡಕಟ್ಟಿಗೆ ಸೇರಿದ್ದು, ಇವರೆಲ್ಲ ಒಂದೇ ಕಡೆಯಿಂದ ವಲಸೆ ಬಂದವರಾದ್ದರಿಂದ ಇವರ ದೈಹಿಕ ಲಕ್ಷಣಗಳು ಸಾಮಾನ್ಯವಾಗಿ ಒಂದೇ ರೀತಿಯಾಗಿವೆ. ಇವರ ತಲೆಗೂದಲು ಕಪ್ಪು, ಒರಟು; ಕಣ್ಣುಗಳು ಕಪ್ಪು; ಮೈ ಮೇಲೆ ಕೂದಲು ವಿರಳ; ಚರ್ಮದ್ದು ಕಂದುಬಣ್ಣ. ನವಶಿಲಾಯುಗದ ಸಂಸ್ಕೃತಿಯನ್ನೇ ಇವರು ತಮ್ಮೊಡನೆ ತಂದರು. ತಿರುಗಣೆಯನ್ನು ತಿರುಗಿಸಿ ಇವರು ಬೆಂಕಿ ಮಾಡುತ್ತಿದ್ದರು; ನಾಯಿ ಸಾಕುತ್ತಿದ್ದರು; ಕುಕ್ಕೆ ಹೆಣೆಯುತ್ತಿದ್ದರು; ಕಲ್ಲಿನ ಸಲಕರಣೆ ಉಪಯೋಗಿಸುತ್ತಿದ್ದರು.

ಯುರೋಪಿಯನ್ನರು ಬರುವುದಕ್ಕೆ ಮುಂಚೆಯೇ ಇಂಡಿಯನ್ನರು ಭೂವ್ಯವಸಾಯದಲ್ಲಿ ಮುಂದುವರಿದಿದ್ದರು. ಹತ್ತಿ, ಹೊಗೆಸೊಪ್ಪು, ಆಲೂಗೆಡ್ಡೆ, ಮುಸುಕಿನ ಜೋಳ, ಹುರಳಿ, ಪರಂಗಿಹಣ್ಣು ಮುಂತಾದುವನ್ನು ಬೆಳೆಯುತ್ತಿದ್ದರು. ಬಾಣ ಈಟಿ ಭರ್ಜಿಗಳಿಂದ ಬೇಟೆಯಾಡುತ್ತಿದ್ದರು. ಸ್ಲೆಡ್ಜ್ ಅಥವಾ ಜಾರು ಬಂಡಿಗಳಲ್ಲಿ, ಹರಿಗೋಲುಗಳಲ್ಲಿ ಪ್ರಯಾಣ ಮಾಡುತ್ತಿದ್ದರು. ಕುಶಲ ಕಲೆಗಳಲ್ಲಿ ಬಹಳ ಮುಂದುವರಿದಿದ್ದರು; ಕೊಳಲು, ಮದ್ದಲೆ ಮುಂತಾದುವನ್ನು ಗಾಯನಕ್ಕೆ ಉಪಯೋಗಿಸುತ್ತಿದ್ದರು; ಚರ್ಮ, ಮಡಕೆ, ಮೂಳೆಗಳ ಮೇಲೆ ಅಂದವಾದ ಚಿತ್ರಗಳನ್ನು ಬರೆಯುತ್ತಿದ್ದರು. ಅನೇಕ ದೇವತೆಗಳನ್ನು ಆರಾಧಿಸುತ್ತಿದ್ದರು. ಪ್ರಕೃತಿಯ ಪ್ರತಿಯೊಂದು ಕ್ರಿಯೆಯಲ್ಲೂ ದೇವತಾಶಕ್ತಿಯೊಂದು ವ್ಯಕ್ತಪಡುತ್ತದೆಯೆಂದು ನಂಬಿ ಈ ಶಕ್ತಿಗಳನ್ನು ಪೂಜಿಸುತ್ತಿದ್ದರು. ಈ ಎಲ್ಲ ಶಕ್ತಿಗಳ ಹಿನ್ನೆಲೆಯಲ್ಲಿ ವಿಶ್ವದ ಜೀವಕ್ಕೆ ಕಾರಣಭೂತನಾದ ಅನಂತನಾದ ನಿತ್ಯನಾದ ಶಕ್ತಿಸ್ವರೂಪ ಭಗವಂತನಿದ್ದಾನೆ ಎಂದು ನಂಬಿದ್ದರು. ಮಾನವನ ಆತ್ಮ ಈ ಶಕ್ತಿಯ ಒಂದು ಅಂಶವಾದ್ದರಿಂದ ಅದೂ ಅಮರವೆಂದು ಇವರ ನಂಬಿಕೆ. ಒಂದೊಂದು ಬಣಕ್ಕೂ ಒಂದೊಂದು ಬುಡಕಟ್ಟಿಗೂ ಪ್ರತ್ಯೇಕ ದೇವತೆಯುಂಟು. ಈ ಗುಂಪಿನ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಈ ದೇವತೆಯ ಕೆಲಸ. ಈ ಸ್ಥಾನಿಕ ದೇವತೆಗಳೆಲ್ಲ ಸಾಮಾನ್ಯವಾಗಿ ಉಪಕಾರಿಗಳು, ಧರ್ಮಶೀಲರು. ಇದು ಈ ಜನರ ಸಾಮಾನ್ಯ ನಂಬಿಕೆ. ಸಮಾಜ ರಚನೆಯಲ್ಲಿ ಮಾತ್ರ ಇವರಲ್ಲಿ ವೈವಿಧ್ಯವನ್ನು ಕಾಣಬಹುದು. ಇರಕ್ವಾಯ್ಸ್, ನಚೀಸ್, ಪ್ಯುಬ್ಲೊ ಇಂಡಿಯನ್ನರು ಹೆಚ್ಚು ನಾಗರಿಕರಾಗಿ ವ್ಯವಸ್ಥಿತ ಸಮಾಜ ಜೀವನ ನಡೆಸುತ್ತಿದ್ದರು.

ಕೊಲಂಬಸ್ ಅಮೆರಿಕಕ್ಕೆ ಬಂದ ಕಾಲದಲ್ಲಿ 12 ಲಕ್ಷಕ್ಕೂ ಹೆಚ್ಚು ಇಂಡಿಯನ್ನರು ಅಲ್ಲಿ ವಾಸಿಸುತ್ತಿದ್ದರೆಂದು ಕಂಡುಬಂದಿದೆ. 20ನೆಯ ಶತಮಾನದ ಮೊದಲ ವರ್ಷಗಳಲ್ಲಿ ಇವರ ಸಂಖ್ಯೆ ಸುಮಾರು 4 ಲಕ್ಷಕ್ಕೆ ಕುಗ್ಗಿತ್ತು. ಈ ದೇಶಕ್ಕೆ ಬಂದ ಐರೋಪ್ಯ ವಲಸೆಗಾರ ರೊಂದಿಗೆ ನಡೆದ ಯುದ್ಧಗಳಲ್ಲಿ ಇವರು ಪದೇ ಪದೇ ಅನುಭವಿಸಿದ ಸೋಲುಗಳೂ ಬಿಳಿಯರಿಂದ ಇವರು ಕಲಿತ ಕುಡಿತವೇ ಮುಂತಾದ ದುಶ್ಚಟಗಳೂ ಹಳೆಯ ಜಗತ್ತಿನಿಂದ ಬಂದ ಬಿಳಿಯರು ತಮ್ಮೊಂದಿಗೆ ತಂದು ಹರಡಿದ ರೋಗಗಳೂ ಬಂದೂಕದ ಆಗಮನವೂ ಇವರ ಜನಸಂಖ್ಯೆ ತೀವ್ರವಾಗಿ ಕುಗ್ಗಲು ಕಾರಣ. 19ನೆಯ ಶತಮಾನದ ಮಧ್ಯಕಾಲದಿಂದ ಇವರು ಪ್ರತ್ಯೇಕ ಭೂ ಪ್ರದೇಶದಲ್ಲಿ ವಾಸಿಸುವಂತೆ ಕಡ್ಡಾಯ ಮಾಡಲಾಯಿತು. ಒಂದು ಸ್ಥಳದಲ್ಲಿ ನೆಲೆನಿಂತು ಬೇಸಾಯದಲ್ಲಿ ತೊಡಗುವ ಅಭ್ಯಾಸ ಇವರಲ್ಲಿರಲಿಲ್ಲವಾದ್ದರಿಂದ ಮೊದಮೊದಲು ಇವರಿಗೆ ಹಿಂಸೆಯಾಯಿತು. ಕ್ರಿಯಾಹೀನತೆಯೂ ಅಭಿಮಾನಶೂನ್ಯತೆಯೂ ಇವರ ಕ್ಷೀಣದೆಸೆಗೆ ಕಾರಣಗಳಾದುವು.

ಅಮೆರಿಕದಲ್ಲಿ ಬೆಳೆಯುತ್ತಿದ್ದ ಕೈಗಾರಿಕೆಗಳಿಗೆ ಸ್ಥಳೀಯ ಕಾರ್ಮಿಕರ ಬೇಡಿಕೆ ಅಧಿಕವಾದಾಗ ಇವರು ಮತ್ತೆ ಉಪಯುಕ್ತ ಜೀವನದಲ್ಲಿ ಹೆಚ್ಚು ಹೆಚ್ಚಾಗಿ ತೊಡಗುವುದು ಸಾಧ್ಯವಾಯಿತು. ಹಿಂದಿನ ತಲೆಮಾರುಗಳ ಗಾಯದ ಗುರುತುಗಳನ್ನು ಮರೆತು ಇವರು ಹೊಸ ಪರಿಸ್ಥಿತಿಗೆ ಹೊಂದಿಕೊಂಡರು. ಜನಸಂಖ್ಯೆಯ ಇಳಿತಕ್ಕೆ ತಡೆಯುಂಟಾಯಿತು. ಇವರ ಸಂಖ್ಯೆ ನಿಧಾನವಾಗಿ ಬೆಳೆಯಲಾರಂಭಿಸಿತು.

ಒಂದು ಶತಮಾನದಿಂದೀಚೆಗೆ ಸಂಯುಕ್ತ ಸಂಸ್ಥಾನದ ಸರ್ಕಾರ ಈ ಇಂಡಿಯನ್ನರ ಕ್ಷೇಮಾಭ್ಯುದಯಗಳ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಿ ಅವರ ವಿದ್ಯಾಭ್ಯಾಸಕ್ಕಾಗಿ ಸುವ್ಯವಸ್ಥೆ ಕಲ್ಪಿಸಿದೆ. ಮೆಸಾಚೂಸೆಟ್ಸ್‌ನಲ್ಲಿರುವ ಸ್ಟಾಕ್ ಬ್ರಿಜ್ ನಗರದ ಇಂಡಿಯನ್ ಪ್ರೌಢ ವಿದ್ಯಾಶಾಲೆಯಂಥ ಶಿಕ್ಷಣ ಕೇಂದ್ರಗಳಲ್ಲಿ ಉನ್ನತ ಶಿಕ್ಷಣವೂ ಇವರಿಗೆ ದೊರಕುತ್ತದೆ. 1924ರಲ್ಲಿ ಇವರಿಗೆ ಪೌರತನದ ಮಾನ್ಯತೆ ನೀಡಲಾಯಿತು. ಸುಮಾರು ನಾಲ್ಕು ಲಕ್ಷ

ಇಂಡಿಯನ್ನರು ಸಂಯುಕ್ತ ಸಂಸ್ಥಾನದಲ್ಲಿದ್ದಾರೆ. ಕೆನಡದಲ್ಲಿ ಇವರ ಸಂಖ್ಯೆ ಒಂದೂಕಾಲು ಲಕ್ಷ. ಅಲ್ಲಿ ಇವರು ಅಲ್ಪ ಸಂಖ್ಯಾತರೆಂದು ಪರಿಗಣಿತರಾಗಿದ್ದು ಸರ್ಕಾರದ ರಕ್ಷಣೆ ಪಡೆದಿದ್ದಾರೆ. ಅಲ್ಲೂ ಇವರಿಗೆ ಪೌರತ್ವ ನೀಡಲಾಗಿದೆ. *

**ಇಂಡಿಯನ್ನರು, ಲ್ಯಾಟಿನ್ ಮತ್ತು ಮಧ್ಯ ಅಮೆರಿಕದ:** ಲ್ಯಾಟಿನ್ ಮತ್ತು ಮಧ್ಯ ಅಮೆರಿಕದ ಮೂಲವಾಸಿಗಳು. ಯುರೋಪಿಯನ್ನರು ವಲಸೆ ಬರುವ ಮೊದಲು ಇಲ್ಲಿ ಇವರ ಸಂಖ್ಯೆ 20 ಲಕ್ಷಕ್ಕೂ ಹೆಚ್ಚಾಗಿತ್ತೆಂಬ ಅಭಿಪ್ರಾಯವಿದೆ. ಮೆಕ್ಸಿಕೊ ಮತ್ತು ನೆರೆಹೊರೆಯ ಪ್ರದೇಶಗಳಲ್ಲೂ ಆ್ಯಂಡೀಸ್ ಪರ್ವತ ಪ್ರದೇಶದಲ್ಲೂ ಇವರು ಹೆಚ್ಚು ಸಂಖ್ಯೆಯಲ್ಲಿದ್ದರು. ಮೆಕ್ಸಿಕೊ, ಗ್ವಾಟೆಮಾಲ, ಈಕ್ವೆಡಾರ್, ಬೊಲಿವಿಯ ಮತ್ತು ಪೆರು ಪ್ರಾಂತ್ಯಗಳಲ್ಲಿ ಈಗಲೂ ಸುಮಾರು ಅರ್ಧ ಭಾಗದಷ್ಟು ಜನ ಇಂಡಿಯನ್ನರು. ಒಂದು ಕಾಲದಲ್ಲಿ ಕ್ರಮೇಣ ನಶಿಸುತ್ತಿದ್ದ ಈ ಜನಾಂಗ ಇತ್ತೀಚೆಗೆ ಬೆಳೆಯುತ್ತಿರುವುದಲ್ಲದೆ ಆಧುನಿಕ ನಾಗರೀಕತೆಗೆ ಹೊಂದಿಕೊಳ್ಳುತ್ತಿದೆ.

ಸು. ಪ್ರ.ಶ.ಪೂ. 35,000 ವರ್ಷಗಳಷ್ಟು ಹಿಂದಿನಿಂದ ಮೂರನೆಯ ಸಹಸ್ರಮಾನದ ವರೆಗೂ ಬೇರಿಂಗ್ ಜಲಸಂಧಿಯ ಮಾರ್ಗವಾಗಿ ಅಲೆ ಅಲೆಯಾಗಿ ವಲಸೆ ಬರುತ್ತಿದ್ದ ಈ ಜನ ಇಡೀ ಅಮೆರಿಕ ಖಂಡದಲ್ಲಿ ಹಬ್ಬಿ ಬೇಟೆ, ಮೀನುಗಾರಿಕೆಗಳಿಂದ ಜೀವಿಸುತ್ತಿದ್ದರು. ಪ್ರ.ಶ.ಪೂ. 2ನೆಯ ಸಹಸ್ರಮಾನದಲ್ಲಿ ವ್ಯವಸಾಯವನ್ನು ಪ್ರಾರಂಭಿಸಿ ಗ್ರಾಮೀಣ ಮತ್ತು ನಗರ ಸಂಸ್ಕೃತಿಗಳನ್ನು ಬೆಳೆಸಿಕೊಂಡರು. ಪ್ರಾದೇಶಿಕ ವೈವಿಧ್ಯಗಳ ಪ್ರಭಾವದಿಂದ ಹಲವಿಧ ಸಂಸ್ಕೃತಿಗಳು ಹುಟ್ಟಿಕೊಂಡವು. ಈ ಜನರಲ್ಲಿ ಸು.1,700 ಭಾಷೆಗಳು ಬಳಕೆಯಲ್ಲಿದ್ದುವು. ಪ್ರತಿಯೊಂದು ಗುಂಪಿನವರೂ ತಮ್ಮದೇ ಆದ ಭಾಷೆ ಬಳಸುತ್ತಿದ್ದರು **(ನೋಡಿ– ಅಮೆರಿಕದ–ಇಂಡಿಯನ್ನರ–ಭಾಷೆಗಳು)**.

ಮಧ್ಯ ಅಮೆರಿಕ ಅಥವಾ ಮೆಕ್ಸಿಕೊ ಮತ್ತು ಅಕ್ಕಪಕ್ಕದ ಪ್ರದೇಶಗಳಲ್ಲಿ, ಅಮೆರಿಕ ಸಂಯುಕ್ತ ಸಂಸ್ಥಾನ ಆ ಪ್ರದೇಶಗಳನ್ನು ಗೆಲ್ಲುವ ಮೊದಲು, ಅನೇಕ ಗುಂಪುಗಳ ಇಂಡಿಯನ್ನರು ವಾಸಿಸುತ್ತಿದ್ದರು. ಅವರಲ್ಲಿ ನವಹೋ, ಪ್ಯುಬ್ಲೊ, ಹುಯಿಚೋಲ್ ಮುಂತಾದ ಪಂಗಡಗಳು ಮುಖ್ಯವಾದುವು. ಪ್ರ.ಶ. 2ನೆಯ ಶತಮಾನದ ಅನಂತರ ಮೆಕ್ಸಿಕೊದಲ್ಲಿ ಆಜ್ಟೆಕರೂ ಮಧ್ಯ ಅಮೆರಿಕದಲ್ಲಿ ಮಾಯ ಪಂಗಡದವರೂ ಉನ್ನತಮಟ್ಟದ ಸಂಸ್ಕೃತಿಗಳನ್ನು ಬೆಳೆಸಿಕೊಂಡರು. ಹೈರೊಗ್ಲಿಫಿಕ್ ಬರವಣಿಗೆಯನ್ನೂ ಉನ್ನತಮಟ್ಟದ ರಾಜಕೀಯ ಮತ್ತು ಮತೀಯ ಪದ್ಧತಿಗಳನ್ನೂ ಕಲೆ ವಿಜ್ಞಾನಗಳನ್ನೂ ಬೆಳೆಸಿಕೊಂಡಿದ್ದರು.

ಆಜ್ಟೆಕ್ ಜನ ಉತ್ತರದಿಂದ ವಲಸೆ ಬಂದ ಯುದ್ಧಪ್ರಿಯರು; ಅಲೆಮಾರಿ ವರ್ಗಕ್ಕೆ ಸೇರಿದವರು. ಇವರಲ್ಲಿ ನರಬಲಿ ರೂಢಿಯಲ್ಲಿತ್ತು. ಇವರು ಉತ್ತಮ ಲೋಹದ ವಸ್ತುಗಳನ್ನೂ ಮಣ್ಣಿನ ಪಾತ್ರೆಗಳನ್ನೂ ತಯಾರಿಸುತ್ತಿದ್ದರು. ವ್ಯವಸಾಯದಲ್ಲಿ ಪ್ರಗತಿ ಪರರಾಗಿದ್ದರು. ಇವರು ಹೆಚ್ಚಾಗಿ ಜೋಳ ಬೆಳೆಯುತ್ತಿದ್ದರು. ಎತ್ತರದ ಕಂಬಗಳಿಂದಲೂ ರೆಕ್ಕೆಯುಳ್ಳ ಸರ್ಪಗಳಿಂದಲೂ ಅಲಂಕೃತವಾದ ವಾಸ್ತುಶಿಲ್ಪಗಳನ್ನು ನಿರ್ಮಿಸಿದ್ದರು. ಈ ಸಂಸ್ಕೃತಿಯಲ್ಲಿ ಮತಸಂಬಂಧವಾದ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯವಿತ್ತು **(ನೋಡಿ– ಆಜ್ಟೆಕ್–ಸಂಸ್ಕೃತಿ) (ನೋಡಿ– ಆದಿಮಜನರ–ಕಲೆ)**.

ಮಧ್ಯ ಅಮೆರಿಕದ ಮಾಯ ಜನರ ನಗರಗಳು ಪ್ರ.ಶ. 14ನೆಯ ಶತಮಾನದ ಆದಿಭಾಗದಲ್ಲಿ ಪ್ರಾರಂಭವಾಗಿ ಪ್ರ. ಶ. 1511ರಲ್ಲಿ ಸ್ಪ್ಯಾನಿಷ್ ಜನರಿಂದ ನಾಶಗೊಂಡುವು. ಇವರು ಕಾಡು ಕಡಿದು ಬೇಸಾಯ ಮಾಡುತ್ತಿದ್ದರು. ಒಂದೆಡೆಯಲ್ಲಿ ಭೂಮಿಯ ಸಾರ ಮುಗಿದಾಗ ಆ ಸ್ಥಳ ಬಿಟ್ಟು ಬೇರೆಡೆಗೆ ಹೋಗುತ್ತಿದ್ದರು. ಅಲ್ಲಿ ಮತ್ತೆ ಇದೇ ರೀತಿ ವ್ಯವಸಾಯ ಮುಂದುವರಿಸುತ್ತಿದ್ದರು. ಅಡಿಗಡಿಗೆ ವ್ಯವಸಾಯ ಕ್ಷೇತ್ರ ಬದಲಾಗುತ್ತಿದ್ದುದರ ಫಲವಾಗಿ ಗ್ರಾಮಗಳು ಸ್ಥಳಾಂತರಗೊಳ್ಳುತ್ತಿದ್ದುದರಿಂದ ಇವರ ನಾಗರಿಕಜೀವನ ಬೆಳೆಯಲು ಅವಕಾಶವಿರಲಿಲ್ಲ. ಆದರೆ ಮತನಾಯಕರ ನಿವಾಸಕ್ಕಾಗಿ ಇವರು ದೇವಾಲಯ ಕೇಂದ್ರಸ್ಥಳಗಳಾದ ದೊಡ್ಡ ನಗರಗಳನ್ನು ನಿರ್ಮಿಸಿದ್ದರು. ಶಾಂತಿಪ್ರಿಯರಾದ ಈ ಜನರಲ್ಲಿ ಮತೀಯ ಜೀವನಕ್ಕೆ ಪ್ರಾಧಾನ್ಯವಿತ್ತು. ವಾಸ್ತುಶಿಲ್ಪವೂ ಶಿಲ್ಪಕಲೆಯೂ ಪಂಚಾಂಗ ಪದ್ಧತಿಯೂ ಉನ್ನತಮಟ್ಟಕ್ಕೇರಿದ್ದುವು. ದೇವಾಲಯಗಳನ್ನು ಇವರು ಕೃತಕ ದಿಬ್ಬದ ಮೇಲೋ ಪಿರಮಿಡ್ಡುಗಳ ಮೇಲೋ ನಿರ್ಮಿಸುತ್ತಿದ್ದರು. ಲೋಹದ ಬಳಕೆ ವಿರಳವಾಗಿತ್ತು. ಮರದಲ್ಲೂ ಅಮೂಲ್ಯವಾದ ಶಿಲೆಯಲ್ಲೂ ಜೇಡಿಯ ಮಣ್ಣಿನಲ್ಲೂ ಬಣ್ಣ ಬಣ್ಣದ ಶಿಲ್ಪಗಳನ್ನು ನಿರ್ಮಿಸುತ್ತಿದ್ದರು.

ಆ್ಯಂಡೀಸ್ ಪರ್ವತಗಳ ದಕ್ಷಿಣದಲ್ಲಿ ಬಹುಸಂಖ್ಯೆಯ ಇಂಡಿಯನ್ನರು ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಬೇಟೆಯೂ ಮೀನುಗಾರಿಕೆಯೂ ರೂಢಿಯಲ್ಲಿದ್ದುವು. ಸ್ವಯಂಪೂರ್ಣವಾಗಿದ್ದ ಈ ಗ್ರಾಮಗಳಲ್ಲಿ ಆನುವಂಶಿಕ ನಾಯಕರಿರುತ್ತಿದ್ದರು. ಮತೀಯ ಕಲಾಪಗಳು ವೈದ್ಯ, ಮಂತ್ರ, ತಂತ್ರ–ಎಲ್ಲವೂ ನಾಯಕರ ನಿರ್ದೇಶನದಲ್ಲಿ ನಡೆಯುತ್ತಿದ್ದುವು. ನರಬಲಿಗಾಗಿ ಜನರನ್ನೊದಗಿಸಿಕೊಳ್ಳುವುದಕ್ಕೂ ತಮ್ಮ ವಿಜಯ ಸಂಕೇತಗಳಾಗಿ ಮಾನವರ ತಲೆಗಳನ್ನು ಸಂಗ್ರಹಿಸುವುದಕ್ಕೂ ಈ ಜನ ಆಗಿಂದಾಗ್ಗೆ ಯುದ್ಧಗಳಲ್ಲಿ ತೊಡಗುತ್ತಿದ್ದರು.

ಕೆರಿಬಿಯನ್ ಸಮುದ್ರ ಮತ್ತು ಆ್ಯಂಡೀಸ್ ಪರ್ವತಗಳ ನೆರೆಹೊರೆಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಇಂಡಿಯನ್ನರು ಗ್ರಾಮೀಣ ಸಂಸ್ಕೃತಿ ವರ್ಗಕ್ಕೆ ಸೇರಿದ್ದರು. ವ್ಯವಸಾಯ ಇವರ ಮುಖ್ಯ ಕಸಬು. ಮಣ್ಣಿನ ಪಾತ್ರೆ, ನೇಯ್ದ ಬುಟ್ಟಿ, ತೂಗುಮಂಚ, ಹುಲ್ಲುಚಾವಣಿಯ ಮನೆ–ಇವು ಇವರ ಜೀವನ ಸಾಧನ. ಇವರು ನಿತ್ಯಬಳಕೆಯ ವಸ್ತುಗಳನ್ನು ಹೆಚ್ಚಾಗಿ ತಯಾರಿಸುತ್ತಿದ್ದರು; ವ್ಯಾಪಾರ ವ್ಯವಹಾರಗಳಲ್ಲೂ ನಿರತರಾಗಿದ್ದರು. ಆನುವಂಶಿಕ ನಾಯಕರು ಸಮಾಜದ ಮೇಲೆ ಬಿಗಿಯಾದ ನಿಯಮಗಳನ್ನು ಹೊರಿಸಿದ್ದರು. ಯೋಧರಿಗೂ ಪುರೋಹಿತ ವರ್ಗಕ್ಕೂ ಪ್ರಾಧಾನ್ಯವಿತ್ತು. ಇವರ ಗುಂಪುಗಳು ರಾಜಕೀಯವಾಗಿ ಆಗಾಗ ಒಂದಾದರೂ ತಮ್ಮ ಪ್ರತ್ಯೇಕತೆಯನ್ನುಳಿಸಿಕೊಂಡಿರುತ್ತಿದ್ದುವು; ಮಧ್ಯ ಆ್ಯಂಡೀಸ್ ಪ್ರದೇಶಗಳು ಸಾಂದ್ರ ವ್ಯವಸಾಯ ಪಶುಪಾಲನೆಗಳಿಂದ ಜನನಿಬಿಡವಾಗಿದ್ದು, ದಕ್ಷ ಮತ್ತು ಸುವ್ಯವಸ್ಥಿತ ಆಡಳಿತಕ್ಕೊಳಪಟ್ಟಿದ್ದುದರಿಂದ ಬಹಳ ಮುಂದುವರಿದಿದ್ದು, ನಾಗರಿಕ ಸಂಸ್ಕೃತಿ ಹೊಂದಿದ್ದುವು. ದೇವಾಲಯವೇ ಸಮಾಜಜೀವನದ ಕೇಂದ್ರವಾಗಿ ಕ್ರಮೇಣ ಜಾತಿಪದ್ಧತಿಗಳು ಬೆಳೆದುವು. ಉತ್ತಮ ವರ್ಗದವರು ರಾಜಕೀಯ ಮತ್ತು ಮತೀಯ ಚಟುವಟಿಕೆಗಳಲ್ಲೂ ಕೆಳವರ್ಗದವರು ವ್ಯವಸಾಯ ಕೈಗಾರಿಕೆಗಳಲ್ಲೂ ತೊಡಗಿದ್ದರು.

ಚಾಕೋ, ಬ್ರೆಜಿಲ್, ಚಿಲಿ, ಪೆಟಗೋನಿಯ ಮುಂತಾದ ಹೊರವಲಯದ ಕಾಡುಪ್ರದೇಶಗಳ ಜನ ಸರಳಜೀವನ ನಡೆಸುತ್ತಿದ್ದರು. ಇವರ ಸಾಮಾಜಿಕ ಜೀವನ ಹಿಂದುಳಿದಿತ್ತು. ಬೇಟೆ, ಆಹಾರ ಸಂಗ್ರಹಣೆ ಅಥವಾ ಕೀಳ್ಮಟ್ಟದ ವ್ಯವಸಾಯಗಳಲ್ಲಿ ತೊಡಗಿರುತ್ತಿದ್ದ ಇವರು ಅಲೆಮಾರಿ ಜೀವನ ನಡೆಸುತ್ತಿದ್ದರು. ವ್ಯವಸ್ಥಿತ ಆಡಳಿತ ಪದ್ಧತಿ ಇವರಿಗೆ ಗೊತ್ತಿರಲಿಲ್ಲ. ದೇಹದ ಶೃಂಗಾರವೂ ನೃತ್ಯ ಸಂಗೀತಗಳೂ ವಿವಿಧ ರೀತಿಯ ಆಟಗಳೂ ಬಳಕೆಯಲ್ಲಿದ್ದುವು. ಮಂತ್ರ ಮಾಟಗಳು ಇವರ ಮತೀಯ ಚಟುವಟಿಕೆಗಳು. ಇವರು ಯುದ್ಧವಿದ್ಯೆಯಲ್ಲಿ ಹಿಂದುಳಿದಿದ್ದರು, ಇವರು ಹೋರಾಡುತ್ತಿದ್ದುದ್ದು ಕೇವಲ ಆತ್ಮರಕ್ಷಣೆಗಾಗಿ ಮಾತ್ರ.

ಲ್ಯಾಟಿನ್ ಅಮೆರಿಕದ ಎಲ್ಲೆಡೆಗಳಲ್ಲೂ ಈ ಜನರ ಚರಿತ್ರೆಯಲ್ಲಿ ಬಹಳ ಸಾಮ್ಯಗಳು ಕಂಡುಬರುತ್ತವೆ. ಇಂಥ ನಾಗರಿಕತೆಯ ಅವಶೇಷಗಳು ಎಲ್ಲ ಭಾಗಗಳಲ್ಲಿ ಕಂಡು ಬಂದರೂ ಪ್ರತಿಯೊಂದು ಪ್ರದೇಶದಲ್ಲೂ ಪ್ರತ್ಯೇಕವಾದ ಕಲೆ ಕೈಗಾರಿಕೆಗಳೂ ಬೆಳೆದು ಬಂದುವು. ಎಕ್ವೆಡಾರಿನಲ್ಲಿ ಚಿತ್ರಗಳಿಂದ ಅಲಂಕೃತವಾದ ದೊಡ್ಡ ಪ್ರತಿರೂಪದ ಶವದ ಜಾಡಿಗಳೂ ಬಹಳ ಹಳೆಯವಾದ ಕಲ್ಲಿನ ಕುರ್ಚಿಗಳೂ ಅಲ್ಲಲ್ಲಿ ಕಂಡುಬರುತ್ತವೆ. ಕೊಲಂಬಿಯದಲ್ಲಿ ಚಿನ್ನದ ಕುಶಲ ಕೆಲಸಗಾರಿಕೆ, ದೊಡ್ಡ ಶವದ ಜಾಡಿಗಳು, ಚಿನ್ನ ಮತ್ತು ತಾಮ್ರದ ಚಪ್ಪಟೆಯಾದ ಶಿಲ್ಪಗಳು, ಕಲ್ಲಿನ ಪ್ರತಿಮೆಗಳು ಗಮನಾರ್ಹ. ದಕ್ಷಿಣಕ್ಕೆ ಹೋದ ಹೋದಂತೆ ದುರ್ಗಮವಾದ ಬೆಟ್ಟಕಾಡುಗಳಿರುವುದರಿಂದ ಮುಂದುವರಿದ ನಾಗರಿಕತೆಯ ಕುರುಹುಗಳು ಕಂಡುಬರುವುದಿಲ್ಲ. ಎಲ್ಲೆಡೆಗಳಲ್ಲೂ ಹಳೆಯ ಕಾಲದ ಮಡಿಕೆಗಳೂ ಆಭರಣಗಳೂ ಲೋಹದ ವಸ್ತುಗಳೂ ಕಾಣಬರುತ್ತವೆ. ವಾಸ್ತುಶಿಲ್ಪದ, ಶವಸಂಸ್ಕಾರ ಪದ್ಧತಿಯೇ ಮುಂತಾದ, ಜನಜೀವನ ರೀತಿಗಳ ಮೇಲೆ ಬೆಳಕು ಬೀರುವಂಥ, ಅನೇಕ ಮಾಹಿತಿಗಳು ದೊರಕಿವೆ **(ನೋಡಿ– ಅಮೆರಿಕದ–ಆದಿವಾಸಿಗಳು) (ಇಂಕ)**. (ಬಿ.ಕೆ.ಜಿ.)

**ಇಂಡಿಯ ರಬ್ಬರ್ ಮರ:** ಮೊರೇಸೀ ಕುಟುಂಬದ ಫೈಕಸ್ ಇಲಾಸ್ಟಿಕ ಎಂಬ ಹೆಸರಿನ ದೊಡ್ಡ ಗಾತ್ರದ ನಿತ್ಯಹರಿದ್ವರ್ಣದ ಮರ. 50 ಮೀ. ಎತ್ತರ ಬೆಳೆದ ದಾಖಲೆಗಳಿವೆ. ಸಸ್ಯಕ್ಷೀರದಿಂದ (ಲ್ಯಾಟೆಕ್ಸ್) ರಬ್ಬರ್ ಉತ್ಪನ್ನವಾಗುತ್ತದೆ. ಮರಕ್ಕೆ ಬಿಳಲುಗಳು, ಬೇರುಗಳು, ವಿಪುಲವಾಗಿವೆ. ಎಲೆಗಳ ಉದ್ದ 12-25 ಸೆಂಮೀ. ಒರಟು, ತೊಗಟೆಯ ಬಣ್ಣ ಬೂದು ಅಥವಾ ಕೆಂಪು ಮಿಶ್ರಿತ ಕಂದು. ಈ ಮರದ ವ್ಯಾಪ್ತಿ ಹಿಮಾಲಯದ ತಪ್ಪಲಿನಲ್ಲಿ, ನೇಪಾಲದಿಂದ ಬರ್ಮದವರೆಗಿನ ತೇವಪೂರಿತ ಕಣಿವೆಗಳಲ್ಲಿ ಮತ್ತು ಇಳಿಜಾರುಗಳಲ್ಲಿದೆ. (ಎ.ಕೆ.ಎಸ್.)

ಮರದ ಮೂಲಸ್ಥಾನ ಭಾರತ. ಅಸ್ಸಾಮಿನಲ್ಲಿ 1874ರಲ್ಲಿಯೇ ಇದರ ತೋಟಗಳಿದ್ದವು. ಮುಂದೆ ಮೈಸೂರು, ತಮಿಳುನಾಡುಗಳಲ್ಲೂ ಇದರ ಕೃಷಿ ಮಾಡಿದರು. ಆದರೆ ಆರ್ಥಿಕವಾಗಿ ಹೆಚ್ಚು ಲಾಭದಾಯಕವಾದ ಪ್ಯಾರಾ ರಬ್ಬರ್ ಮರ (ಹೀವಿಯ ಬ್ರೆಜಿಲಿಯನ್ಸಿಸ್) ಇಂಡಿಯ ರಬ್ಬರ್ ಮರದ ಸ್ಥಾನವನ್ನೂ ಆಕ್ರಮಿಸಿತು. ಆದರೂ ಅಸ್ಸಾಂ ಮತ್ತು ಬರ್ಮಗಳಲ್ಲಿ ಕೊಂಚಮಟ್ಟಿಗೆ ಇದರಿಂದ ರಬ್ಬರ್ ಪಡೆಯುವುದುಂಟು.

ಬೀಜಗಳಿಂದ ಅಥವಾ ಕೊಂಬೆಗಳಿಂದ ಇದನ್ನು ಬೆಳೆಸಬಹುದು. ಸಸಿಗಳಿಂದ ಬೆಳೆಸಿದ ಮರಗಳು ಉತ್ತಮ ಎಂದು ಕಂಡುಬಂದಿದೆ. ಅಸ್ಸಾಮಿನಲ್ಲಿ ಮಳೆಗಾಲದಲ್ಲಿ ಬೀಜ ನೆಡುತ್ತಾರೆ. ಒಂದೆರಡು ವಾರಗಳಲ್ಲಿ ಮೊಳಕೆಯೊಡೆಯುತ್ತವೆ. ಸಸಿಗಳು 30–60 ಸೆಂಮೀ ಎತ್ತರಕ್ಕೆ ಬೆಳೆದಾಗ ನರ್ಸರಿಗಳಿಗೆ ವರ್ಗಾಯಿಸುತ್ತಾರೆ. ಸುಮಾರು 3 ವರ್ಷಗಳಾದ ಮೇಲೆ, ಗಿಡಗಳು 3-4ಮೀ. ಎತ್ತರಕ್ಕೆ ಬೆಳೆದಾಗ, 9 ಮೀ. ಅಂತರಕ್ಕೊಂದರಂತೆ ತೋಟದಲ್ಲಿ ನೆಡುತ್ತಾರೆ.

ಕಾಂಡ ಮತ್ತು ದೊಡ್ಡ ದೊಡ್ಡ ಕೊಂಬೆಗಳಿಂದ ಸಸ್ಯಕ್ಷೀರವನ್ನು ಪಡೆಯಬಹುದು. ಕಾಂಡದ ಮೇಲೆ ಕೊಂಬೆಗಳ ಮೇಲೆ ಅಡ್ಡವಾಗಿ ಕತ್ತಿಯಿಂದ ಕೊಯ್ದು ಗಾಯಮಾಡಿ ಅಲ್ಲಿಂದ ಸೋರುವ ಕ್ಷೀರವನ್ನು ಎಲೆ ಅಥವಾ ಚಾಪೆಗಳಲ್ಲಿ ಶೇಖರಿಸುತ್ತಾರೆ. ಕೊಂಚಭಾಗ ಕೊಯ್ದಿರುವ ಜಾಗದಲ್ಲೇ ಗಟ್ಟಿಯಾಗುತ್ತದೆ. ಗಟ್ಟಿಯಾಗಿರುವುದನ್ನೂ ಚಾಪೆಗಳಲ್ಲಿ ಶೇಖರವಾಗಿರುವುದನ್ನೂ ತೆಗೆದು ಶುಚಿಮಾಡಿ ಒಣಗಿಸಿ ಉಂಡೆ ಕಟ್ಟುತ್ತಾರೆ.

ಕ್ಷೀರ ತೆಗೆಯುವುದು ಸಾಮಾನ್ಯವಾಗಿ ಮೂರು ವರ್ಷಗಳಿಗೊಂದಾವರ್ತಿ, ಬಿಸಿಲಿನಲ್ಲಿ ಒಣಗಿದಾಗ ಕ್ಷೀರ ರಬ್ಬರ್ ಆಗುತ್ತದೆ. ಟ್ಯಾನಿಕ್ ಆಮ್ಲ ಮತ್ತು ಆ್ಯಲಂ (ಪಟಿಕ) ಸೇರಿಸಿ ಇದನ್ನು ಹೆಪ್ಪುಗಟ್ಟಿಸಬಹುದು. ರಬ್ಬರಿನ ಉತ್ಪನ್ನ ಪ್ರಮಾಣದ ದೃಷ್ಟಿಯಿಂದ ನೋಡಿದರೆ ಇಂಡಿಯ ರಬ್ಬರ್ ಲಾಭದಾಯಕವಲ್ಲ. ಇದರ ಉತ್ಪನ್ನ ಒಂದು ಎಕರೆಗೆ ಸರಾಸರಿ 6–

15 ಕೆಜಿ. ಪೌಂಡ್, (ಪ್ಯಾರಾ ರಬ್ಬರ್ ಮರದ ಉತ್ಪನ್ನ ಎಕರೆಗೆ 100–150 ಕೆಜಿ.). ಅಲ್ಲದೆ ಇದರ ಸಸ್ಯಕ್ಷೀರದಲ್ಲಿ ರಾಳಪದಾರ್ಥ ಹೆಚ್ಚಾಗಿರುವುದರಿಂದ ಇದರಿಂದ ಬಂದ ರಬ್ಬರ್ ಕೆಲಕಾಲಾನಂತರ ಬಹಳ ಗಟ್ಟಿಯಾಗಿ ಬಿರುಸಾಗಿ ಬಿಡುತ್ತದೆ. ಪ್ಯಾರಾ ರಬ್ಬರ್ ಹೀಗಲ್ಲ. (ಕೆ.ಬಿ.ಎಸ್.)

**ಇಂಡಿಯಾನ:** 11 ಡಿಸೆಂಬರ್ 1816ರಲ್ಲಿ ರಚಿತವಾದ ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ವಿಸ್ತೀರ್ಣ 94,321. ಚ.ಕಿಮೀ. ಜನಸಂಖ್ಯೆ 6,483,802 (2010). ರಾಜಧಾನಿ: ಇಂಡಿಯಾ ಪೊಲೀಸ್. 1800ರಲ್ಲಿ ರಚಿತವಾದ ಈ ರಾಜ್ಯದಲ್ಲಿ 92 ಕೌಂಟಿಗಳುಂಟು. ವಾಯವ್ಯದಲ್ಲಿ ಮಿಷಿಗನ್ ಸರೋವರವಿದೆ. ದಕ್ಷಿಣದಲ್ಲಿ ಓಹೈಓ ನದಿಯೂ ಪಶ್ಚಿಮದಲ್ಲಿ ಭಾಗಶಃ ವಬಾಷ್ ನದಿಯೂ ಇದರ ಎಲ್ಲೆಗಳು. ಉಳಿದ ಭಾಗದ



ಎಲ್ಲೆಕಟ್ಟು ಮಾನವ ನಿರ್ಮಿತ. ಒಳನಾಡಿನ ರಾಜ್ಯವಾದರೂ ಉತ್ತರಕ್ಕಿರುವ ಮಹಾ ಸರೋವರಗಳೂ ಓಹೈಓ ಮಿಸಿಸಿಪ್ಪಿ ನದಿಗಳೂ ಇದಕ್ಕೆ ಉತ್ತಮ ಜಲಮಾರ್ಗ ಸಂಪರ್ಕ ಕಲ್ಪಿಸಿವೆ. ಭೌಗೋಳಿಕ ಸನ್ನಿವೇಶದ ಕಾರಣದಿಂದ ಈ ರಾಜ್ಯದಲ್ಲಿ ಹೆಚ್ಚು ಉಷ್ಣತೆಯುಳ್ಳ ಮತ್ತು ಮಳೆ ಬೀಳುವ ಬೇಸಿಗೆಯೂ ಅತಿ ಶೀತವಾದ ಚಳಿಗಾಲವೂ ಇರುವ ಖಂಡಾಂತರ ವಾಯುಗುಣವಿದೆ. ಚಳಿಗಾಲದಲ್ಲಿ ಉತ್ತರದಲ್ಲಿ 30° ಫ್ಯಾ.ಗೂ (1°ಸೆಂ) ಕಡಿಮೆ ಉಷ್ಣತೆಯಿರುತ್ತದೆ. ದಕ್ಷಿಣದಲ್ಲಿ ಉಷ್ಣತೆ ಹೆಚ್ಚು. ಬೇಸಿಗೆಯಲ್ಲಿ 21–23.9ಸೆಂ. 70°–75° ಫ್ಯಾ. ಉಷ್ಣತೆಯೇ ಸಾಮಾನ್ಯ. ದಕ್ಷಿಣದಲ್ಲಿ ವರ್ಷಕ್ಕೆ 100–120 ಸೆಂ.ಮೀ. ಮತ್ತು ಉತ್ತರದಲ್ಲಿ 90–100 ಸೆಂ.ಮೀ. ಮಳೆ ಬೀಳುತ್ತದೆ. ಇದು ವರ್ಷವೆಲ್ಲ ಹರಡಿರುತ್ತದೆ.

ಇಂಡಿಯಾನದಲ್ಲಿ ಮೊದಲು ಓಕ್ ಮತ್ತು ದಾರುಜಾತಿಯ ಮರಗಳಿಂದ ಕೂಡಿದ ಕಾಡುಗಳು ವಿಶೇಷವಾಗಿದ್ದುವು. ಮಧ್ಯ ಪಶ್ಚಿಮದಲ್ಲಿ ಹುಲ್ಲುಗಾವಲಿತ್ತು.

ರಾಜ್ಯದ ಆರ್ಥಿಕ ಆದಾಯದಲ್ಲಿ ವ್ಯವಸಾಯದ ಪಾತ್ರವೇ ಹೆಚ್ಚು. ಮೆಕ್ಕೆಜೋಳ, ಓಟ್ಸ್, ಗೋಧಿ, ಆಲೂಗೆಡ್ಡೆ, ಸೋಯಬೀನ್ಸ್, ಹಣ್ಣು, ತರಕಾರಿ ಮುಂತಾದುವು ಮುಖ್ಯ ಬೆಳೆಗಳು. ಹಂದಿಗಳನ್ನೂ ದನಕರುಗಳನ್ನು ಅಧಿಕ ಸಂಖ್ಯೆಯಲ್ಲಿ ಸಾಕುತ್ತಾರೆ. ಸುಣ್ಣಕಲ್ಲೂ ಕಲ್ಲಿದ್ದಲೂ ಹೆಚ್ಚಾಗಿ ಸಿಕ್ಕುತ್ತವೆ. ಪೆಟ್ರೋಲಿಯಂ ಅಲ್ಪಸ್ವಲ್ಪ. ರಾಜ್ಯದ ಕೈಗಾರಿಕೆಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಅತ್ಯಂತ ದೊಡ್ಡದು. ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಕಬ್ಬಿಣ ಮತ್ತು ಉಕ್ಕಿನ ಕಾರ್ಯಾಗಾರಗಳಿರುವ ಗ್ಯಾರಿ ಪಟ್ಟಣದಲ್ಲಿ ಈ ಕೈಗಾರಿಕೆ ಕೇಂದ್ರೀಕೃತವಾಗಿದೆ. ಮಿಷಿಗನ್ ಸರೋವರದ ದಕ್ಷಿಣದ ಅಂಚಿನಲ್ಲಿ ಈ ಪಟ್ಟಣವಿದೆ. ವಾಹನಗಳ ಬಿಡಿ ಭಾಗಗಳು, ವಿಮಾನದ ಎಂಜಿನ್ನುಗಳು, ರೈಲ್ವೆಗೆ ಆವಶ್ಯಕವಾದ ವಸ್ತುಗಳು, ವಿದ್ಯುತ್ ಯಂತ್ರಗಳು, ವ್ಯವಸಾಯದ ಯಂತ್ರೋಪಕರಣಗಳು, ಪೆಟ್ರೋಲಿಯಂ, ರಾಸಾಯನಿಕ ವಸ್ತುಗಳು, ಸೋಪು, ಸಿಮೆಂಟು, ಇಟ್ಟಿಗೆ, ಆಹಾರವಸ್ತುಗಳು ಮುಂತಾದ ಕೈಗಾರಿಕೆಗಳು ಇಲ್ಲಿನ ನಾನಾ ನಗರಗಳಲ್ಲಿ ಬೆಳೆದಿವೆ. ಒಟ್ಟು ಜನಸಂಖ್ಯೆಯಲ್ಲಿ ಶೇ.60 ಜನ ನಗರವಾಸಿಗಳು. ಇಂಡಿಯಾನಾಪೊಲಿಸ್, ಗ್ಯಾರಿ, ಪೋರ್ಟ್‌ವೇನ್, ಸೌತ್ ಬೆಂಡ್, ಇವಾನ್ಸ್‌ವಿಲ್ ಮತ್ತು ಹ್ಯಾಮಂಡ್ ಎಂಬುವು ದೊಡ್ಡ ಕೈಗಾರಿಕಾ ಕೇಂದ್ರಗಳು.

ರಾಜಧಾನಿ ಇಂಡಿಯಾನ ಪೊಲೀಸ್; ಪ್ರಾಂತ್ಯದ ಮಧ್ಯ ಹಾಗೂ ವೈಟ್ ನದಿಯ ದಂಡೆಯಲ್ಲಿದೆ. ಜನಸಂಖ್ಯೆ. 807,584 (2009). ಇದನ್ನು 1825ರಲ್ಲಿ ರಾಜಧಾನಿಯಾಗಿ ಪರಿಗಣಿಸಲಾಯಿತು. ರೈಲು, ರಸ್ತೆ ಮತ್ತು ವಿಮಾನ ಸಂಚಾರ ಸಂಪರ್ಕ ಕಲ್ಪಿಸುವ ಕೇಂದ್ರ. ಪ್ರಮುಖ ಧಾನ್ಯ ಮಾರುಕಟ್ಟೆ ಮತ್ತು ಪ್ರಮುಖ ಕೈಗಾರಿಕಾಕೇಂದ್ರ. ಔಷಧಿಗಳ ತಯಾರಿಕೆ, ಯಂತ್ರೋಪಕರಣ, ಸಾರಿಗೆ ಮತ್ತು ವಿದ್ಯುದುಪಕರಣಗಳ ಕೈಗಾರಿಕೆಗಳಿವೆ. ಪ್ರಸಿದ್ಧ ಸ್ಪೀಡ್‌ವೇ ಸಂಗ್ರಹಾಲಯವಿದೆ. ಅನೇಕ ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಗಳಿವೆ. ಪ್ರತಿವರ್ಷ ಅಂತಾರಾಷ್ಟ್ರೀಯಮಟ್ಟದ ಇಂಡಿಯಾನ ಪೊಲಿಸ್ 500 ವಾಹನ ಓಟ ಸ್ಪರ್ಧೆ ನಡೆಯುತ್ತದೆ. (ಪಿ.ಎಂ.)

**ಇಂಡೀನ್:** ಬಣ್ಣವಿಲ್ಲದ ದ್ರವರೂಪದ ಹೈಡ್ರೋಕಾರ್ಬನ್. ಇದರ ರಾಸಾಯನಿಕ ನಾಮ ಬೆಂಝೋಸೈಕ್ಲೊಪೆಂಟಡೀನ್ $C_9H_8$.181° ಸೆ.ಗ್ರೇ. ಉಷ್ಣತೆಯಲ್ಲಿ ಕುದಿಯುತ್ತದೆ. –2° ಸೆ.ಗ್ರೇ. ಉಷ್ಣತೆಯಲ್ಲಿ ಘನೀಭವಿಸುತ್ತದೆ. ಕಲ್ಲಿದ್ದಲನ್ನು ವಿಧ್ವಂಸಕ ಬಟ್ಟಿ ಇಳಿಸುವ (ಡಿಸ್ಟ್ರಕ್ಟಿವ್ ಡಿಸ್ಟಿಲ್ಲೇಷನ್) ವಿಧಾನದಿಂದ ದೊರೆವ ಲೈಟ್ ಆಯಿಲ್ ಅಂಶದಿಂದ (ಲೈಟ್ ಆಯಿಲ್ ಫ್ರಾಕ್ಷನ್) ಇದನ್ನು ಪಡೆಯಬಹುದು. ಕೆಲವು ಪೆಟ್ರೋಲಿಯಂ ಅಂಶಗಳ ಉತ್ತಾಪವಿಚ್ಛೇದನೆಯಿಂದಲೂ (ಪೈರೋಲಿಸಿಸ್) ಇದನ್ನು ಪಡೆಯಬಹುದು. ಸೈಕ್ಲೊಪೆಂಟಡೀನನ್ನು ಇದು ಹೋಲುವುದಾದರೂ ಅದರ ಮೆಥಿಲೀನ್ ($CH_2$) ಗುಂಪಿನ ಹೈಡ್ರೊಜನ್ನಿಗೆ ಬದಲಾಗಿ ಒಂದು ಸೋಡಿಯಂ ಅಣು ಇರುತ್ತದೆ. ಇಂಡೀನನ್ನು ಉತ್ಕರ್ಷಿಸಿದರೆ ಥ್ಯಾಲಿಕ್ ಆಮ್ಲವೂ ಅಪಕರ್ಷಿಸಿದರೆ ಇಂಡಾನ್ ($C_9H_{10}$) ಎಂಬ ಹೈಡ್ರೋಕಾರ್ಬನ್ನೂ ಉಂಟಾಗುತ್ತದೆ. ಆಮ್ಲದ ಜೊತೆ ಇಂಡೀನ್ ಬಹ್ವಂಗೀಕರಣಗೊಳ್ಳುತ್ತದೆ (ಪಾಲಿಮರೈಜ಼್) ಬೆಂಝೋಪ್ಯುರಾನಿನ ಜೊತೆಯಲ್ಲಿಯೇ ಸಹ ಬಹ್ವಂಗೀಕಾರಕಗಳನ್ನು (ಕೋಪಾಲಿಮರ್ಸ್) ಅಲ್ಪ ಪ್ರಮಾಣದಲ್ಲಿ ತಯಾರಿಸಲಾಗಿದ್ದು ಅವನ್ನು ಲೇಪನಕಾರ್ಯದಲ್ಲೂ ನೆಲಕ್ಕೆ ಹೊದಿಕೆಗಳನ್ನು ಕೊಡುವಲ್ಲೂ ಉಪಯೋಗಿಸುತ್ತಾರೆ. *

**ಇಂಡೋನೇಷ್ಯ:** ಆಗ್ನೇಯ ಏಷ್ಯದಲ್ಲಿ ಸಮಭಾಜಕ ವೃತ್ತದ ಮೇಲೆ ಉ.ಅ. 6°, ದ.ಅ. 11° ಹಾಗೂ ಪೂ.ರೇ. 95°–141° ವರೆಗೆ ಇಂಡೋನೇಷ್ಯ ಗಣರಾಜ್ಯ ಹರಡಿಕೊಂಡಿದೆ. ಈ ಗಣರಾಜ್ಯಕ್ಕೆ ಸೇರಿಲ್ಲದ ಪ್ರದೇಶಗಳನ್ನೂ ಒಳಗೊಂಡು ಈ ವಲಯದಲ್ಲಿರುವ ಎಲ್ಲ ದ್ವೀಪ ಸ್ತೋಮಗಳನ್ನು ಇಂಡೋನೇಷ್ಯವೆಂದು ಕರೆಯುವುದೂ ಉಂಟು. ಸುಮಾತ್ರ, ಜಾವ, ಮಧುರ, ಕಾಲಿಮಾಂಟನ್ (ಇದರ ಮೊದಲಿನ ಹೆಸರು ಬೋರ್ನಿಯೋ), ಸುಲವೇಶಿ ನೂಸಾತೆಂಗರ, ಮಲುಕು (ಮಲಕ್ಕ), ನ್ಯೂಗಿನಿಯ ಪಶ್ಚಿಮಭಾಗ (ಇರಿಯನ್ ಭಾರತ್) ಹಾಗೂ 17,508 ಸಣ್ಣಪುಟ್ಟ ದ್ವೀಪಗಳು ಇಂಡೋನೇಷ್ಯ ಗಣರಾಜ್ಯಕ್ಕೆ ಸೇರಿವೆ. ವಿಸ್ತೀರ್ಣ 1919,400 ಚಕಿಮೀ ಉತ್ತರಕ್ಕೆ ದಕ್ಷಿಣ ಚೀನ ಸಮುದ್ರವೂ ಉತ್ತರ ಮತ್ತು ಪೂರ್ವಕ್ಕೆ ಪೆಸಿಫಿಕ್ ಸಾಗರವೂ ದಕ್ಷಿಣ ಮತ್ತು ಪಶ್ಚಿಮಕ್ಕೆ ಹಿಂದೂ ಸಾಗರವೂ ಇವೆ. ಜಾವಾದಲ್ಲಿ ವಾಸಿಸುವ ಜನರನ್ನು ಜಾವನೀಸರೆಂದೂ ಬಾಲಿ ದ್ವೀಪದಲ್ಲಿರುವವರನ್ನು ಬಾಲಿನೀಸರೆಂದೂ ಪಶ್ಚಿಮ ಜಾವಾದಲ್ಲಿರುವವರನ್ನು ಸುಂಡನೀಸರೆಂದೂ ಪೂರ್ವ ಜಾವಾದಲ್ಲಿರುವವರನ್ನು ಮಧುರೀಸರೆಂದೂ ಸುಮಾತ್ರದಲ್ಲಿರುವವರನ್ನು ಅಟ್ಟೆ, ಬಟಕ್

ರಾಜಕೀಯ ಭೂಪಟ

ಮತ್ತು ವಿನಂಗ್‌ಕಬರ್ ಎಂದೂ ಇರಿಯನ್ ಭಾರತ್‌ದಲ್ಲಿರುವವರನ್ನು ಮಲುಕು ಎಂದೂ ಕರೆಯುತ್ತಾರೆ. ಇವರಲ್ಲದೆ ಚೀನದೇಶದವರು ಅರಬ್ಬರು ಮತ್ತು 1602–1949ರಲ್ಲಿ ಇಂಡೋನೇಷ್ಯವನ್ನಾಳಿದ ಡಚ್ ನೆಲೆಸಿಗರ ಪೈಕಿ ಅಲ್ಪ ಸ್ವಲ್ಪ ಜನರೂ ಇಲ್ಲಿದ್ದಾರೆ. ಈ ಮಧ್ಯೆ 1942–1945ರಲ್ಲಿ ಜಪಾನ್ ದೇಶದವರು ಇಲ್ಲಿ ನೆಲೆಸಿದ್ದರು. 2010ರ ಇಂಡೋನೇಷ್ಯದ ಜನಸಂಖ್ಯೆ 23,7575,363 ಇದ್ದು ಇದರಲ್ಲಿ ಶೇಕಡ 50 ಜಾವಾ ದ್ವೀಪವೊಂದರಲ್ಲೇ ಕೇಂದ್ರಿಕೃತವಾಗಿತ್ತು. ರಾಜಧಾನಿಯಾದ ಜಕಾರ್ತದ ಜನಸಂಖ್ಯೆ 2010ರಲ್ಲಿ 9,580,000 (2010) ಇತ್ತು.

**ಮೇಲ್ಮೈ ಲಕ್ಷಣ:** ಇಂಡೋನೇಷ್ಯ ದ್ವೀಪಗಳು ಮತ್ತು ಪಟ್ಟಣಗಳ ಉತ್ಪನ್ನಗಳು ಆ ದೇಶಗಳ ಪ್ರಾಕೃತಿಕ ಸಂಪತ್ತನ್ನು ಪ್ರತಿಬಿಂಬಿಸುತ್ತವೆ. ಸಮುದ್ರ ತೀರ ಮತ್ತು ಅದರ ಹತ್ತಿರದ ತಗ್ಗುಪ್ರದೇಶಗಳಿಂದ ಪರ್ವತಶ್ರೇಣಿಗೆ ಎತ್ತರ ಕ್ರಮೇಣ ಹೆಚ್ಚುತ್ತ ಹೋಗಿದೆ. ಇಂಡೋನೇಷ್ಯದ ಅಗ್ನಿಪರ್ವತಗಳು, ಅದರಲ್ಲೂ ಮುಖ್ಯವಾಗಿ ಬಾಲಿ ಅಗ್ನಿಪರ್ವತಗಳು ಪ್ರಪಂಚದಲ್ಲೇ ಹೆಸರುವಾಸಿಯಾಗಿವೆ. ಈ ಅಗ್ನಿಪರ್ವತಗಳಲ್ಲಿ ಗುನಂಗ್ ಅಗಂಗ್ (5,900 ಮೀ) ಗುನಂಗ್ ಬಟುಕ್ (1,734 ಮೀ), ಗುನಂಗ್ ಕೌ (2,392 ಮೀ), ಗುನಂಗ್ ಬಕುಂಗನ್ (1,515 ಮೀ) ಮುಂತಾದ ಹೆಸರಾಂತ ಶಿಖರಗಳಿವೆ. ಬಾಲಿ ದ್ವೀಪದಲ್ಲಿ ಉತ್ತರದ ತೀರಪ್ರದೇಶ ಹೆಚ್ಚಾಗಿ ಸಾಗುವಳಿಗೊಳಗಾಗಿರುವ ದಕ್ಷಿಣದ ತೀರಪ್ರದೇಶಕ್ಕಿಂತಲೂ ಕಿರಿದಾಗಿದೆ. ಅಲ್ಲದೆ ಜಾವಾ ಮತ್ತು ಲೊಂಬೋಕ್‌ಗಳಲ್ಲಿ ಸಮೇರುಶಿಖರದಂಥ (3,723 ಮೀ) ಅನೇಕ ಶಿಖರಗಳಿವೆ. ಅಗ್ನಿಪರ್ವತದ ಅಪಾಯದ ಮುನ್ಸೂಚನೆ ಗೊತ್ತಾದಕೂಡಲೆ ಸುತ್ತಮುತ್ತಲ ಪ್ರದೇಶವನ್ನೆಲ್ಲ ತೆರವು ಮಾಡಿ ಆ ಪ್ರದೇಶಕ್ಕೆ ಯಾರೂ ಪ್ರವೇಶಿಸದಂತೆ ಕ್ರಮ ಕೈಕೊಳ್ಳಲಾಗುತ್ತದೆ. ಜಾವಾ, ಬಾಲಿ ಮತ್ತು ಲೊಂಬೋಕ್‌ಗಳಲ್ಲಿ ದಟ್ಟವಾದ ಜೌಗು ಅರಣ್ಯಗಳೂ ವ್ಯವಸಾಯಕ್ಕೆ ಯೋಗ್ಯವಾದ ಪರ್ವತದ ಇಳಿಜಾರು ಪ್ರದೇಶಗಳೂ ಕಂಡುಬರುತ್ತವೆ. ಕಾಲಿಮಾಂಟನಿನಲ್ಲಿ ದಟ್ಟವಾದ ಜೌಗು ಅರಣ್ಯಗಳು ಅಧಿಕ. ಸುಮಾತ್ರದ ಮೇಲ್ಮೈಲಕ್ಷಣದ ಆಧಾರದ ಮೇಲೆ ಅದನ್ನು ಪೂರ್ವ, ಪಶ್ಚಿಮ, ಮಧ್ಯ ಸುಮಾತ್ರವೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಇವು ಸಂಪರ್ಕ ವ್ಯವಸ್ಥೆಗೆ ಅಸಂಖ್ಯಾತ ಸಮಸ್ಯೆಗಳನ್ನು ತಂದೊಡ್ಡಿವೆ. ಇದರಿಂದ ಸುಮಾತ್ರದ ಈ ಮೂರು ಭಾಗಗಳಲ್ಲೂ ರೈಲು



ಮೇಲ್ಮೈಲಕ್ಷಣ

ಸಂಚಾರ ಸೌಕರ್ಯವಿದ್ದರೂ ಪರ್ವತಗಳು ಮತ್ತು ಕಮರಿಗಳಿರುವುದರಿಂದ ಈ ಭಾಗಗಳ ಪರಸ್ಪರ ಸಂಪರ್ಕವ್ಯವಸ್ಥೆ ಆರ್ಥಿಕ ದೃಷ್ಟಿಯಿಂದ ಸಾಧ್ಯವಾಗಿಲ್ಲ. ಸುಮಾತ್ರದ ಸಮುದ್ರತೀರ ಪ್ರದೇಶದ ಸುತ್ತ ಉಸುಬು ನೆಲ ಮತ್ತು ಪ್ರವಾಹದಿಂದಾದ ಭೂಮಿಯಿದೆ; ಒಳನಾಡಿನಲ್ಲಿ ಮೆಟ್ಟಲು ದಿಬ್ಬಗಳನ್ನೊಳಗೊಂಡ ಫಲವತ್ತಾದ ಪ್ರದೇಶವಿದೆ. ಸುಲವೇಶಿಯಲ್ಲಿ ಪರ್ವತಗಳು ಹೆಚ್ಚು.

**ವಾಯುಗುಣ:** ಇಂಡೋನೇಷ್ಯದ್ದು ಅಧಿಕ ಮಳೆ, ಆರ್ದ್ರತೆ ಮತ್ತು ಉಷ್ಣತೆ ಇರುವ ಉಷ್ಣವಲಯದ ವಾಯುಗುಣ. ನವೆಂಬರ್-ಮಾರ್ಚ್ ತಿಂಗಳಿನವರೆಗೆ ಮಳೆಗಾಲ. ಮುಂದೆ ಮಳೆ ಕ್ರಮೇಣ ಕಡಿಮೆಯಾಗಿ ಜೂನ್-ಅಕ್ಟೋಬರ್ ವರೆಗೆ ಒಣಹವೆಯಿರುತ್ತದೆ. ಬೇಸಗೆಯಲ್ಲಿ ಸೆಕೆ ವಿಪರೀತ. ಇಂಡೋನೇಷ್ಯದಲ್ಲಿ ಮುಂಗಾರಿನ ಪ್ರಭಾವ ಹೆಚ್ಚು. ತಗ್ಗು ಪ್ರದೇಶಗಳಲ್ಲಿ ಬರುವ ಮಳೆಯ ವಾರ್ಷಿಕ ಪ್ರಮಾಣ ಸರಾಸರಿ 243 ಸೆಂಮೀ.ಗಳಷ್ಟಿದ್ದು ಕೆಲವು ಪರ್ವತ ಪ್ರದೇಶಗಳಲ್ಲಿ 600 ಸೆಂಮೀ.ಗಳಷ್ಟು ಹೆಚ್ಚಾಗುತ್ತದೆ. ಸುಮಾತ್ರದ ತಗ್ಗು ಪ್ರದೇಶಗಳಲ್ಲಿ ಮಳೆ ಸಾಮಾನ್ಯವಾಗಿ ದಕ್ಷಿಣಕ್ಕೆ ಬಂದಂತೆ ಈ ಪ್ರಮಾಣ ಕಡಿಮೆಯಾಗುತ್ತದೆ. ದಕ್ಷಿಣ ಭಾಗದಲ್ಲಿ ಆಸ್ಟ್ರೇಲಿಯ ಮರುಭೂಮಿಯ ಪರಿಣಾಮ ಕಂಡುಬರುತ್ತದೆ. ಇಂಡೊನೇಷ್ಯದ ಸರಾಸರಿ ತೇವಾಂಶ ಶೇ.82. ಇಂಡೊನೇಷ್ಯ ತೀರದ ಉಷ್ಣತೆಯನ್ನು ಋತುಗಳಿಗಿಂತಲೂ ಆ ಭಾಗದ ಎತ್ತರವೇ ಬಹಳಮಟ್ಟಿಗೆ ನಿರ್ಣಯಿಸುತ್ತದೆ. ವರ್ಷದ ಸರಾಸರಿ ಉಷ್ಣತೆ ಸು. $77^0$–$81^0$ ಫ್ಯಾ. ದಿನಂಪ್ರತಿ ಉಷ್ಣತೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಒಳಭಾಗದಲ್ಲಿ ಅತ್ಯಧಿಕ ಉಷ್ಣತೆ ಎತ್ತರಭಾಗದಲ್ಲಿ ಕಡಿಮೆ. ಜಕಾರ್ತದಲ್ಲಿ ವರ್ಷದ ಸರಾಸರಿ ಉಷ್ಣತೆ $78^0$; ಮಳೆಯ ಸರಾಸರಿ ಪ್ರಮಾಣ $80^{''}$.

**ಬೆಳೆ, ಖನಿಜ, ಕೈಗಾರಿಕೆ:** ಇಂಡೋನೇಷ್ಯದ ಪ್ರತಿಯೊಂದು ದ್ವೀಪವೂ ಯಾವುದಾದರೊಂದು ವಿಷಯದಲ್ಲಿ ಪ್ರಸಿದ್ಧಿ ಪಡೆದಿದೆ; ದೇಶದ ಸಂಪತ್‌ಸಮೃದ್ಧಿಗೆ ನೆರವು ನೀಡಿದೆ; ದಕ್ಷಿಣ ಸುಮಾತ್ರ ಚಿನ್ನಕ್ಕೆ ಹೆಸರಾಗಿದೆ. ರೆಡ್‌ಜಂಗಲ್‌ಬಾಂಗ್‌ನ ಸುತ್ತಲೂ ಸೀಸದ ಅದಿರುಗಳಿವೆ. ಪಂಕಂಬಾರು ಮತ್ತು ಪಲೆಂಬಾಂಗ್‌ನಲ್ಲಿ ಪೆಟ್ರೋಲ್ ಸಿಗುತ್ತದೆ. ಬಂಕಾ ದ್ವೀಪಗಳಲ್ಲಿ ಸಂಪದ್ಯುಕ್ತವಾದ ಅರಣ್ಯವಿದೆ. ಇಲ್ಲಿ ರಬ್ಬರು, ಕೋಕೊ, ಕಾಫಿ ಅಧಿಕ ಪ್ರಮಾಣದಲ್ಲಿ ದೊರಕುತ್ತವೆ. ಪಲೆಂಬಾಂಗ್ ಪ್ರದೇಶದಲ್ಲಿ ಅನಾನಾಸ್ ಬೆಳೆಯುತ್ತದೆ. ಜಾವಾ ದ್ವೀಪದಲ್ಲಿರುವ ಜಕಾರ್ತ ನೂಲಿನ ಬಟ್ಟೆಗಳಿಗೂ ಮೋಟಾರು ಸೈಕಲ್ಲುಗಳಿಗೂ ಹೆಸರುವಾಸಿ. ಬೋಬೋರ್ ಟೈರು ಕಾರ್ಖಾನೆಯನ್ನಲ್ಲದೆ ವಿಜ್ಞಾನ ಸಸ್ಯೋದ್ಯಾನವೊಂದನ್ನು ಹೊಂದಿದೆ. ಜಿಲಟ್ಟ ಜಾಪ್ ಎಂಬುದು ಮೀನಿನ ಉತ್ಪನ್ನಗಳಿಗೂ ಕೈಕಸುಬುಗಳಿಗೂ ಕೈಮಗ್ಗ ಹಾಗೂ ಹತ್ತಿ ಕೈಗಾರಿಕೆಗಳಿಗೂ ಪ್ರಸಿದ್ಧ. ಇಂಡೋನೇಷ್ಯದ ಸ್ತ್ರೀಯರ ರಾಷ್ಟ್ರೀಯ ಉಡುಗೆ ಬಾಟಿಕ್ ಎಂಬುದರ ತಯಾರಿಕೆಗೆ ಇದು ಹೆಸರು ಪಡೆದಿದೆ. ಈ ಉಡುಪು ಭಾರತದ ಸೀರೆಯನ್ನೇ ಬಹುಮಟ್ಟಿಗೆ ಹೋಲುತ್ತದೆ. ಇಲ್ಲಿ ಹಣ್ಣು ತರಕಾರಿಗಳನ್ನೂ ಹೆಚ್ಚಾಗಿ ಬೆಳೆಯುತ್ತಾರೆ. ಗಾಜಿನ ಕಾರ್ಖಾನೆಯೂ ಇದೆ. ಮಧುರದಲ್ಲಿರುವ ಪಾಮೆಕಾಸನ್ ಧಾನ್ಯಕ್ಕೆ ಹೆಸರು ಪಡೆದಿದೆ. ಮಧ್ಯ ಜಾವಾದಲ್ಲಿ ಬಾಳೆಯ ಗಿಡಗಳು ಹೆಚ್ಚು. ಜಕಾರ್ತ (ಜೋಗ್ಯಕಾರ್ತ) ದಲ್ಲಿ ನಡೆಯುವ ಬೆಳ್ಳಿಯ ಕೆಲಸ ಬಹಳ ಪ್ರಸಿದ್ಧ.



ಖನಿಜಸಂಪತ್ತು

ನುಸಾತೆಂಗರ ದ್ವೀಪಸ್ತೋಮಕ್ಕೆ ಸೇರಿದ ಬಾಲಿದ್ವೀಪದ ಸಿಂಗರಡ್ಜ ಕುಶಲ ಕೈಗಾರಿಕೆಗೆ ಹೆಸರುವಾಸಿಯಾಗಿದ್ದು ಇಂಡೋನೇಷ್ಯಕ್ಕೆ ವಿದೇಶಿ ವಿನಿಮಯವನ್ನು ಹೆಚ್ಚಾಗಿ ಒದಗಿಸುತ್ತದೆ. ಬಾಲಿಯ ದೊಡ್ಡನಗರವಾದ ಡೆಪಸರ್‌ನಲ್ಲಿ ಹಿತಕರ ವಾಯುಗುಣ, ಮನಮೋಹಕ ನೈಸರ್ಗಿಕ ಸೌಂದರ್ಯ ಇರುವುದರಿಂದ ಇದು ಅಸಂಖ್ಯಾತ ಪ್ರವಾಸಿಗರನ್ನು ಸೆಳೆಯುತ್ತಿದೆ. ಲೊಂಬೋಕಿನ ರಾಜಧಾನಿಯಾದ ಮಟರಾಮ್ ಗೋಮಾಂಸ ಮತ್ತು ದನಕರುಗಳಿಗೆ ಪ್ರಸಿದ್ಧ. ಬೀಮ, ಎಂಡೆಹ್, ಸುಂಬ ಮತ್ತು ಇತರ ದ್ವೀಪಗಳು ಗೋಮಾಂಸವನ್ನು ಉತ್ಪಾದಿಸುತ್ತವೆ. ಇದನ್ನು ಹಾಂಕಾಂಗ್ ಮತ್ತು ಆಗ್ನೇಯ ಏಷ್ಯ ದೇಶಗಳಿಗೆ ರಫ್ತು ಮಾಡುತ್ತಾರೆ. ತಿಮೂರ್ ಒಣಹವೆಯ ಪಟ್ಟಣ. ಮೆದುಬಂಡೆಗಳಿಂದ ಕೂಡಿದ ಇಲ್ಲಿ ಉಷ್ಣವಲಯದ ಮಳೆಯ ಕಾಡುಗಳು ಯಥೇಚ್ಛ. ಇಲ್ಲಿ ಕೆಲಮಟ್ಟಿಗೆ ದನಕರುಗಳನ್ನು ಸಾಕುತ್ತಾರೆ. ಸುಂಬದಲ್ಲಿ ಕಮೊಡೊ ಎಂಬ ಒಂದು ಕಶೇರುಕ ಪ್ರಾಣಿ ಕಂಡುಬರುತ್ತದೆ **(ನೋಡಿ- ಕಮೋಡೋ)**. ಹಲ್ಲಿಯಂತಿರುವ ಈ ಪ್ರಾಣಿ ಪ್ರಪಂಚದ ಉಳಿದೆಡೆಗಳಲ್ಲಿ ವಿರಳ. ನುಸಾತೆಂಗರದ ಸುಂಬ ಮತ್ತು ಸಂಭಾಪಾಗಳಲ್ಲಿ ಕ್ರೀಡೆಗಳೂ ಮತ್ತು ರಫ್ತು ಮಾಡುವುದಕ್ಕೂ ಕುದುರೆಗಳನ್ನು ಸಾಕುತ್ತಾರೆ.

ಕಾಲಿಮಾಂಟನ್ ಮತ್ತು ಸಿಂಗಪುರಗಳ ನಡುವೆ ಇರುವ ಆಳವಾದ ಕರಿಮಾತ ಜಲಸಂಧಿ ಮೀನು ಹಿಡಿಯುವುದಕ್ಕೆ ಯೋಗ್ಯ. ಪಾಂಟಿಯನಾಕಿ ರಬ್ಬರ್ ಮತ್ತು ಅರಣ್ಯಗಳಿಗೂ ಬಾಲಿಕ್ ಪಾಪನ್ ಪೆಟ್ರೋಲಿಗೂ ಸಮವಿಂಡ ಹತ್ತಿ ಜವಳಿಗೂ ತಾರಕನ್ ಪೆಟ್ರೋಲಿಗೂ



ಸ್ವಾಭಾವಿಕ ಸಸ್ಯವರ್ಗ

ಬಂಜಾರ್ ಮಾಸಿನ್ ಮೀನಿಗೂ ಮಾರ್ತಾಪುರ ಆಭರಣಗಳಿಗೂ ಪ್ರಸಿದ್ಧ. ಕಾಲಿಮಾಂಟನ್ ಮತ್ತು ಸುಲವೇಶಿಗಳ ನಡುವೆ ಇರುವ ಆಳವಾದ ಜಲಸಂಧಿ ಮೀನು ಹಿಡಿಯಲು ಯೋಗ್ಯ; ಕಾಲಿಮಾಂಟನ್ ಅರಣ್ಯದ ಮರವನ್ನು ಜಪಾನಿಗೆ ರಫ್ತು ಮಾಡುತ್ತಾರೆ.

ಸುಲವೇಶಿ ದ್ವೀಪದಲ್ಲಿರುವ ಗೊರೊಂಟಲೊ ರಬ್ಬರಿಗೂ ಪೊಸೊ ಆಳ ಸಮುದ್ರದ ಮೀನುಗಾರಿಕೆಗೂ ಕೆಂಡಲ್ ಉಪ್ಪು ಮೀನಿಗೂ ಪ್ರಸಿದ್ಧ. ಪಿಂಡಾಂಗ್‌ನಲ್ಲಿ ಉಪ್ಪು ಮೀನುಗಳ ಸಂರಕ್ಷಣಾ ಸಂಸ್ಕರಣಾಲಯವಿದೆ. ಮಕಾಸರ್ ಕೈಮಗ್ಗ ಮತ್ತು ಗೃಹ ಕೈಗಾರಿಕೆಗಳಿಗೂ ಕೊಬ್ಬರಿಯ ಉತ್ಪನ್ನಕ್ಕೂ ಪ್ರಸಿದ್ಧ ಪಡೆದಿದೆ. ಸುಲವೇಶಿಯಲ್ಲಿರುವ ಪಲೋಪೊ ಶುಷ್ಕಪ್ರದೇಶ. ಮಲುಕು, ಬುರು, ಸೆರಾನ್, ಅಂಬನ್ ಮತ್ತು ಬಂಡ ದ್ವೀಪಗಳು ಮುತ್ತುಗಳಿಗೆ ಪ್ರಸಿದ್ಧ. ಇಂಡೋನೇಷ್ಯದಲ್ಲಿ ಇಷ್ಟೆಲ್ಲ ಇದ್ದರೂ ಶಾಂತಿ ನೆಮ್ಮದಿಗಳ ದೃಷ್ಟಿಯಿಂದ ಇಲ್ಲಿ ಅನೇಕ ಸಮಸ್ಯೆಗಳಿವೆ. ಜಗತ್ತಿನ ಹಲವು ರಾಷ್ಟ್ರಗಳೊಂದಿಗೆ ಹೋಲಿಸಿದರೆ ಇಂಡೋನೇಷ್ಯದಲ್ಲಿ

ಮಿತಿಮೀರಿದ ಜನಸಂಖ್ಯೆಯಿದೆ. ಮಧ್ಯದಲ್ಲಿನ ಜಾವಾ ದ್ವೀಪದಲ್ಲಂತೂ ಅತ್ಯಧಿಕ. ಉದ್ದಕ್ಕೂ ಹರಡಿಕೊಂಡಿರುವ ಈ ಬೃಹತ್ತಾದ ದ್ವೀಪ ಸಮುದಾಯಗಳ ಆಡಳಿತ ಸುಲಭವಲ್ಲ. ಕಾಲಿಮಾಂಟನ್ನಿನ ಉತ್ತರಕ್ಕಿರುವ ಸಲಾ ಎಂಬುದು ಮಲೇಷ್ಯ ಮತ್ತು ಫಿಲಿಪೀನ್ಸ್ ನಡುವಿನ ಬಡಿದಾಟಕ್ಕೆ ಕಾರಣ. ಸುಮಾತ್ರದ ಪಶ್ಚಿಮಕ್ಕಿರುವ ಮಲೇಷ್ಯಕ್ಕೆ ನೆಲದ ಹಸಿವು ಬಹಳ. ತಿಮುರ್ ದ್ವೀಪದಲ್ಲಿ ಪೋರ್ಚುಗೀಸರಿಗೂ ಪಾಲುಂಟು. ಇಂಡೊನೇಷ್ಯಕ್ಕೆ ಸೇರಿದ ಇರಿಯನ್ ಭಾರತದ ಮಗ್ಗುಲಲ್ಲಿ ಆಸ್ಟ್ರೇಲಿಯದ ಪ್ರದೇಶವಿದೆ. ಮಲುಕು ದ್ವೀಪಗಳಲ್ಲಿ ಡಚ್ಚರ ಪ್ರಭಾವ ಕಡಿಮೆಯಾಗಿದ್ದರೂ ಇನ್ನೂ ಪೂರ್ತಿ ಅಳಿಸಿಲ್ಲ. ಅನಾಹುತವನ್ನೆಸಗುವ ಜ್ವಾಲಾಮುಖಿಗಳ ಭಯವಂತೂ ನಿತ್ಯದ ವಿಷಯ. ಇದೂ ಅಲ್ಲದೆ ಇಲ್ಲಿನ ಜನ ನಾನಾ ಬುಡಕಟ್ಟಿನವರು, ನಾನಾ ಮತೀಯರು. ರಾಜಕೀಯದಲ್ಲಿ ನಾನಾ ಹಿತಾಸಕ್ತಿಗಳ ಘರ್ಷಣೆ ಇದ್ದೇ ಇದೆ. 1948ರ ಸೆಪ್ಟಂಬರ್ 20ರಂದು ಜನ್ಮತಾಳಿದ ಇಂಡೊನೇಷ್ಯ ಗಣರಾಜ್ಯ ಉದ್ದಕ್ಕೂ ಹಲವಾರು ಗಂಡಾಂತರಗಳನ್ನು ಎದುರಿಸಬೇಕಾಗಿ ಬಂದಿರುವುದಕ್ಕೆ ಇವು ಮುಖ್ಯ ಕಾರಣಗಳು.

ಇಂಡೊನೇಷ್ಯದ ಅರಣ್ಯೋತ್ಪಾದನೆ: ಮರದ ದಿಮ್ಮಿ ಮತ್ತು ಕೊಯ್ದ ಮರಗಳು ಇದ್ದಲು ಇವುಗಳು ಹೆಚ್ಚು. ಗಣಿಗಳಿಂದ ತವರ ಬಾಕ್ಸೈಟ್ ಇದ್ದಲು ಮತ್ತು ಉತ್ಪಾದನೆಯಿದೆ.

**ಸಂಪರ್ಕ ಸಾಧನೆ:** ಸರಪಣಿಯ ಕೊಂಡಿಗಳಂತೆ ಹಬ್ಬಿರುವ ಇಂಡೋನೇಷ್ಯ ದ್ವೀಪಗಳ ವಿವಿಧ ಪ್ರದೇಶಗಳಿಗೆ ಹಡಗು ಮತ್ತು ವಿಮಾನಗಳೇ ಮುಖ್ಯ ಸಂಪರ್ಕ ಸಾಧನಗಳು. ದೊಡ್ಡ ದೊಡ್ಡ ದ್ವೀಪಗಳಲ್ಲಿ ರಸ್ತೆ ಮತ್ತು ರೈಲು ಸೌಕರ್ಯಗಳನ್ನು ಒದಗಿಸಲಾಗಿದೆ. 3,46,863 ಕಿಮೀ. ರಸ್ತೆಗಳೂ 6640 ಕಿಮೀ. ರೈಲು ಮಾರ್ಗಗಳೂ (1998) ಇದ್ದುವು.

**ನಾಣ್ಯ ವ್ಯವಸ್ಥೆ:** ರುಪೈಯ ಎಂಬುದು ಇಂಡೊನೇಷ್ಯದ ನಾಣ್ಯ. ಇದನ್ನು 100 ಸೆನ್‍ಗಳಾಗಿ ವಿಭಾಗಿಸಲಾಗಿದೆ. 1, 2, 5, 10, 25, 50 ಮತ್ತು 100 ರುಪೈಯ ನೋಟುಗಳಿವೆ.

**ಧರ್ಮಗಳು:** ಇಂಡೊನೇಷ್ಯದ ಬಾಲಿ ದ್ವೀಪಗಳಲ್ಲಿ ಹಿಂದೂಗಳು ಹೆಚ್ಚಾಗಿದ್ದಾರೆ. ಇಡೀ ಇಂಡೊನೇಷ್ಯದಲ್ಲಿ ಮುಸ್ಲಿಮರು ಬಹುಸಂಖ್ಯಾತರು. ಪಾಶ್ಚಾತ್ಯ ಪ್ರಭಾವದಿಂದ ಕ್ರೈಸ್ತಿಯನ್ನರೂ ತಕ್ಕಮಟ್ಟಿನ ಸಂಖ್ಯೆಯಲ್ಲಿದ್ದಾರೆ. ನುಸಾತೆಂಗರ ದ್ವೀಪಗಳಲ್ಲೂ ಕಾಲಿಮಾಂಟನ್ನಿನ ಚೀನಿ ಬಹುಸಂಖ್ಯಾತ ಪ್ರದೇಶಗಳಲ್ಲೂ ಬೌದ್ಧರಿದ್ದಾರೆ. ಜಾವ ಮತ್ತು ಸುಮಾತ್ರದಲ್ಲಿ ಮುಸ್ಲಿಮರೇ ಹೆಚ್ಚು. (ಇ.ಎ.ಎ.)

**ಇಂಡೊನೇಷ್ಯದ ಚರಿತ್ರೆ: ಪ್ರಾಗಿತಿಹಾಸ:** ಪೂರ್ವಶಿಲಾಯುಗದ ಆದಿಭಾಗಕ್ಕೆ ಸೇರಿದ ಕಪಿಮಾನವನ ಪಳೆಯುಳಿಕೆಗಳು ಜಾವಾದ್ವೀಪದಲ್ಲಿ ದೊರಕಿದರೂ ಆ ಕಾಲದ ಶಿಲಾಯುಧಗಳು ದೊರಕಿಲ್ಲ. ಆ ಯುಗದ ಮಧ್ಯಕಾಲದಲ್ಲಿ ಪಜ್ಜಿ ಟೇನಿಯನ್ ಸಂಸ್ಕೃತಿಯ ಉಂಡೆಕಲ್ಲಿನ ಆಯುಧಗಳು ಜಾವಾದ್ವೀಪದಲ್ಲಿ ದೊರಕಿವೆ. ಇದು ಮಲಯದ ಕಂಪಾನಿಯನ್, ಬರ್ಮಾದ ಅನ್ಯಾಥಿಯನ್, ಚೀನಾದ ಚೌಕೌಟಿಯನ್ ಮತ್ತು ಭಾರತದ ಸೋಹನ್ ಸಂಸ್ಕೃತಿಗಳ ಗುಂಪಿಗೆ ಸೇರುತ್ತದೆ. ಜಾವಾದ ಸೋಲೋ ನದೀ ತೀರದಲ್ಲಿ ಆ ಯುಗದ ಅಂತ್ಯಕಾಲದ ಮೂಳೆಯ ಆಯುಧಗಳೂ ಕೈಯಲ್ಲಿ ಚಕ್ಕೆಗಳೂ ಒರೆಯುವ ಆಯುಧದ ಮೊನೆಗಳೂ ಮಾನವ ಪಳೆಯುಳಿಕೆಗಳೂ ದೊರಕಿ ಪೂರ್ವಶಿಲಾಯುಗ ಸಂಸ್ಕೃತಿಯ ಮತ್ತು ಆ ಮಾನವರ ಮುನ್ನಡೆಯನ್ನು ರೂಪಿಸುತ್ತವೆ. ಅನಂತರ ಅನೇಕ ಕಡೆಗಳಲ್ಲಿ ಶಿಲಾಯುಗ ಸಂಸ್ಕೃತಿಯ ಕಡೆಗಾಲದ ಆಯುಧಗಳು ದೊರೆತಿವೆ. ಇವು ನಿರ್ಮಾಣ ವಿಧಾನಗಳ ಮತ್ತು ಆಕಾರ ರೀತ್ಯ ಮಧ್ಯಶಿಲಾಯುಗಕ್ಕೆ ಸೇರುವುದಿಲ್ಲವಾದರೂ ನವಶಿಲಾ ಯುಗಕ್ಕಿಂತಲೂ ಹಳೆಯವಾದುದರಿಂದ ಇವನ್ನು ಮಧ್ಯಶಿಲಾಯುಗೀನ ಸಂಸ್ಕೃತಿಗಳೆಂದು ಕರೆಯಲಾಗಿದೆ. ಇವುಗಳಲ್ಲಿ ಕೈಗೊಡಲಿಗಳು, ಚಕ್ಕೆಕಲ್ಲಿನಾಯುಧಗಳು, ಸೂಕ್ಷ್ಮ ಶಿಲಾಯುಧಗಳು ಮತ್ತು ಜಾವಾದ ಗುಹೆಗಳಲ್ಲಿನ ಮೂಳೆ ಮತ್ತು ಚಕ್ಕೆ ಕಲ್ಲಿನಾಯುಧಗಳು ಸೇರಿವೆ.

ನೂತನ ಶಿಲಾಯುಗದಲ್ಲಿ ಸಾಂಸ್ಕೃತಿಕ ಲಕ್ಷಣಗಳು ಸ್ಪಷ್ಟವಿಲ್ಲದುದರಿಂದ ದೊರೆತಿರುವ ವಿವಿಧ ಆಯುಧಗಳ ತಳಹದಿಯ ಮೇಲೆ ಆಗಿನ ಅವಶೇಷಗಳನ್ನು ಪರಿಶೀಲಿಸಬೇಕಾಗುತ್ತದೆ. ಫಾರ್ಮೋಸ ಮಾರ್ಗವಾಗಿ ಗುಂಡು–ಕೊಡಲಿ ಸಂಸ್ಕೃತಿಯೂ ಇಂಡೊನೇಷ್ಯ ಭಾಷೆ ಮತ್ತು ಅನೇಕ ಸಾಂಸ್ಕೃತಿಕ ಸಂಪ್ರದಾಯಗಳನ್ನು ತಂದ ಜನರೊಂದಿಗೆ ಮಲೆಯ ಪರ್ಯಾಯ ದ್ವೀಪದಿಂದ ಚೌಕೋನದ ಕೊಡಲಿ ಸಂಸ್ಕೃತಿಯೂ ಈಶಾನ್ಯ ದಿಕ್ಕಿನಿಂದ ಭುಜಾ ಕೃತಿಯ ಬಾಚಿ ಸಂಸ್ಕೃತಿಯೂ ಇಂಡೊನೇಷ್ಯಕ್ಕೆ ಬಂದಂತೆ ಕಂಡುಬರುತ್ತದೆ. ಮಲೆಯ ಭೂಭಾಗದಿಂದ ಬಂದು ಕಂಚಿನ ಯುಗದ ಡಾಂಗ್ಸನ್ ಸಂಸ್ಕೃತಿಯಲ್ಲಿ ಕಂಚಿನ ಕೆತ್ತನೆಯ ಕೆಲಸದ ಕೊಡಲಿಗಳೂ ತಾಮ್ರದ ಅಲಂಕೃತ ಕಡಾಯಿಗಳೂ ವಿವಿಧ ರೀತಿಯ ಮಣ್ಣಿನ ಪಾತ್ರೆಗಳೂ ದೊರಕಿ ಅನೇಕ ಸಂಸ್ಕೃತಿಗಳ ಪ್ರಭಾವಗಳನ್ನು ಪ್ರದರ್ಶಿಸುತ್ತವೆ. ಇಂಡೊನೇಷ್ಯದಲ್ಲಿ ಖಚಿತವಾದ ಕಬ್ಬಿಣಯುಗದ ಸಂಸ್ಕೃತಿಯೆಂದು ಹೇಳಲಾಗದಿದ್ದರೂ ಅಲ್ಲಿ ಕಂಡು ಬರುವ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಕಾಲದಲ್ಲಿ ಚಾರಿತ್ರಿಕ ಯುಗದ ಪ್ರಾರಂಭವಾಯಿತೆಂದು ಹೇಳಬಹುದು.

**ಇತಿಹಾಸ:** ಇಂಡೊನೇಷ್ಯದಲ್ಲಿನ ಮೂಲನಿವಾಸಿಗಳ ನಾಗರಿಕತೆಯ ಅನೇಕ ಹಂತಗಳು ಅಲ್ಲಲ್ಲಿ ಕಾಣಬರುತ್ತದೆ. ಗುಡ್ಡಗಾಡುಗಳಲ್ಲಿ ಅಲೆಯುವ ಪೂರ್ವ ನಿವಾಸಿಗಳೂ ಬೇಟೆಯಿಂದಲೇ ಜೀವಿಸುತ್ತ, ನೆಲೆ ಇಲ್ಲದೆ ಅಲೆಯುವ ಭಿಲ್ಲರೂ ಈಗಲೂ ಇದ್ದಾರೆ. ಅನಂತರ ವಲಸೆ ಬಂದ ಸಿಂಹಳದ ಒಡ್ಡ ಪಂಗಡದವರೂ ಕರಿಯ ನೀಗ್ರೊ ತಂಡದವರೂ ಅಲ್ಲಲ್ಲಿಯೆ ಹರಡಿಕೊಂಡಿದ್ದಾರೆ. ಇವರನ್ನುಳಿದು ಮಿಕ್ಕವರು ಮನೆಮಠ ಮಾಡಿಕೊಂಡು ನಾಗರಿಕರೆನಿಸಿ ಕೊಂಡಿದ್ದಾರೆ. ಒಂದೊಂದು ದ್ವೀಪದಲ್ಲಿಯೂ ಬೇರೆ ಬೇರೆ ಜನಾಂಗಗಳಿದ್ದರೂ ಅವರವ ರಲ್ಲಿಯೇ ಕೂಡುವಳಿಯಾಗಿದೆ. ಎಲ್ಲರೂ ಒಟ್ಟಿನಲ್ಲಿ ಒಂದೇ ಭಾಷೆ ಆಡುತ್ತಾರೆ. ಒಳ ಅಂತರಗಳಿದ್ದರೂ ಅವರಲ್ಲಿ ಒಂದೇ ಸಂಸ್ಕೃತಿಯ ಮೇಲ್ಮೈ ಕಾಣುತ್ತದೆ.

**ಮೂಲನಿವಾಸಿಗಳು:** ಮೂಲನಿವಾಸಿಗಳ ಪೈಕಿ, ಬೇಟೆಯಾಡಿ ಬದುಕುತ್ತಿರುವ ಅನಾಗರಿಕ ಭಿಲ್ಲರಾದ ಸಿಮಾಂಗ್ ಎಂಬ ಹೆಸರಿನ ಕುಳ್ಳರು ಮುಖ್ಯರಾದವರು. ತೊಲೆಯ ಅಟ್ಟದಮೇಲೆ ಕಟ್ಟಿದ ಬಿದಿರು ಗುಡಿಸಲುಗಳಲ್ಲಿ ವಾಸಿಸುವ ಈ ಜನರಿಗೆ ಭೂತ, ಪಿಶಾಚಿಗಳಲ್ಲಿ ತುಂಬ ನಂಬಿಕೆ. ನೆತ್ತಿಯ ಮೇಲೆ ಪಿಳ್ಳೆಜುಟ್ಟುಗಳನ್ನು ಬಿಟ್ಟುಕೊಂಡು ಸಾಧಾರಣವಾಗಿ ಬೆತ್ತಲೆಯಾಗಿಯೇ ಉಳಿದಿರುವ ಈ ಜನ ಮುಖಕ್ಕೆ ಬಣ್ಣ ಹಚ್ಚಿ, ಕಾಡುಹೂ ಮುಡಿದು, ಪಿಳ್ಳೆಜುಟ್ಟಿಗೆ ಬಿದಿರಿನ ಬಾಚಣಿಗೆಗಳನ್ನು ಸಿಕ್ಕಿಸಿಕೊಳ್ಳುತ್ತಾರೆ. ಇವರಿಗೆ ಹಾಡು, ಕುಣಿತಗಳಲ್ಲಿ ತುಂಬ ಆಸಕ್ತಿ. ಎರಡನೆಯದಾಗಿ ನೌಕ್ಯೆ ಮತ್ತು ಜಾಕುನ್ ಎಂಬ ಹೆಸರಿನ ಕುರುಚಲು ಕೂದಲಿನ ಒಡ್ಡಜನರು ಕಾಡು ಕಡಿದು ಸುಟ್ಟ ಭೂಮಿಯನ್ನು ಚೂಪಾದ ಈಟಿಯಿಂದ ಕುಕ್ಕಿ ಅದರೊಳಗೆ ಕಾಳು ಚೆಲ್ಲಿ ಬತ್ತ, ಕಬ್ಬು, ಅವರೆ ಬೆಳೆಯುತ್ತಾರೆ. ಮೀನುಗಾರಿಕೆಯಲ್ಲೂ ಬೇಟೆಯಲ್ಲೂ ಚತುರರಾದ ಇವರು ಸುವ್ಯವಸ್ಥಿತ ಹಳ್ಳಿಗಳಲ್ಲಿ ನೆಲೆಸಿ ನಾಯಕನ ನೇತೃತ್ವದಲ್ಲಿ ಜೀವನ ಮಾಡುತ್ತಾರೆ. ಸಂಪತ್ ಸಮೃದ್ಧಿಯ ಬೋರ್ನಿಯೊ ದ್ವೀಪದಲ್ಲಿನ ಡಾಕ್ ಎಂಬ ಮಂದಿ, ಬೇರೆ ಬೇರೆ ಮನೆಗಳಲ್ಲಿ ವಾಸಿಸುವುದಿಲ್ಲ. ನಾನೂರು ಗಜ ಉದ್ದ, ಮೂವತ್ತು ಗಜ ಅಗಲ ಇರುವ ಹಟ್ಟಿಗಳನ್ನು ಹತ್ತು ಅಡಿ ಎತ್ತರದ ಮರದ ತೊಲೆಗಳ ಮೇಲೆ ನಿರ್ಮಿಸಿ ಅವುಗಳಲ್ಲಿ ಸಾಮೂಹಿಕ ಜೀವನ ನಡೆಸುತ್ತಾರೆ. ಇಂಥ ಎರಡು ಮೂರು ಹಟ್ಟಿಗಳು ಕೂಡಿ ಹಳ್ಳಿಯಾಗುತ್ತದೆ. ಈ ಜನ ವ್ಯವಸಾಯ ವ್ಯಾಪಾರಗಳಲ್ಲಿ ಚತುರರಾಗಿ, ಗಿರಿದೇವತೆ, ನದೀದೇವತೆ, ಬಳೆದೇವತೆಗಳನ್ನು ಪೂಜಿಸುತ್ತಾರೆ. ಈ ದ್ವೀಪಸಮೂಹದಲ್ಲಿ ತುಂಬ ಸುಂದರವಾದ ಬಾಲಿ ದ್ವೀಪದ ಜನ ಕಾಲಕ್ರಮವಾಗಿ ಹಿಂದೂ, ಬೌದ್ಧ ಹಾಗೂ ಇಸ್ಲಾಂ ಧರ್ಮಗಳನ್ನು ಅನುಸರಿಸಿದ್ದಾರೆ. ದಕ್ಷಿಣ ಭಾರತದಲ್ಲಿರುವಂತೆ ಹಲವಾರು ಪ್ರಾಕಾರಗಳ ಗುಡಿಗೋಪುರಗಳನ್ನು ಕಟ್ಟಿದ್ದಾರೆ. ಶಿವನೂ ಆತನ ಪತ್ನಿ ಉಮೆಯೂ ಸೂರ್ಯದೇವನೂ ಇವರ ದೇವತೆಗಳು. ಸ್ವರ್ಗಾಧಿಪ ಇಂದ್ರ, ನರಕನಾಯಕ ಯಮ, ವಿದ್ಯಾಮೂರ್ತಿ ಗಣೇಶರಿಗೆ ಪೂಜೆ ಸಲ್ಲುತ್ತದೆ. ಬುದ್ಧದೇವ ಶಿವನ ತಮ್ಮನೆಂದು ಇಲ್ಲಿನ ನಂಬಿಕೆ. ಭಾರತದಂತೆ ವರ್ಣಾಶ್ರಮ ಧರ್ಮಗಳೂ ಆತ್ಮ, ದೇಹಗಳನ್ನು ಕುರಿತ ತತ್ತ್ವ ಜ್ಞಾನವೂ ಆಚರಣೆಯಲ್ಲಿವೆ. ನೃತ್ಯ ಗೀತ ಗಾಯನಗಳಲ್ಲಿ ಪ್ರೌಢಿಮೆ ಗಳಿಸಿರುವ ಈ ಜನದ ಮೇಲೆ ಭಾರತೀಯ ಸಂಸ್ಕೃತಿಯ ಅಚ್ಚು ಒತ್ತಿದೆ. ಪೌರಸ್ತ್ಯನಂದನವೆಂದು ಹೆಸರಾಗಿರುವ ಜಾವಾದ್ವೀಪ ಲಲಿತಕಲೆಗಳಿಗಾಗಿ ಹೆಸರು ಪಡೆದಿದೆ. ಈ ಸುಂದರ ದ್ವೀಪದ ಜನ ಮುಖ್ಯವಾಗಿ ಇಸ್ಲಾಂ ಮತಾವಲಂಬಿಗಳು. ಇಲ್ಲಿನ ಟೆಂಗುವನ್ ಎಂಬ ಹೆಸರಿನ ಜನ ವ್ಯವಸಾಯ ನೇಯ್ಗೆ ಚಮಕಿ ಕೆಲಸ, ಚಿನ್ನ ಬೆಳ್ಳಿಯ ಕುಸುರಿ ಕೆಲಸ, ಎರಕದ ಪಾತ್ರೆಯ ಕೆಲಸಗಳಲ್ಲಿ ಪ್ರವೀಣರು. ಪಟ ಹಾರಿಸುವುದರಲ್ಲಿ, ಸೂತ್ರದ ಗೊಂಬೆಯಾಟದಲ್ಲಿ, ಮುಖವಾಡದ ನಾಟಕಾಭಿನಯದಲ್ಲಿ ಇವರಿಗೆ ಎಣೆ ಇಲ್ಲದ ಉತ್ಸಾಹ. ಬೋರೋಬುದರ್ ಎಂಬಲ್ಲಿನ, ಮೆದುಕಲ್ಲಿನಲ್ಲಿ ಕಡೆದು ಮಾಡಿದ, ಕಲಾಮಂಟಪಗಳು ಜಗತ್ಪ್ರಸಿದ್ಧ. ಈ ಗುಹಾಂತರ್ದೇವಾಲಯಗಳ ಸಮೂಹದಲ್ಲಿ ಜನಜೀವನದ ನಾನಾ ಚಿತ್ರಗಳನ್ನೂ ಬುದ್ಧದೇವನ ಜೀವನಚಿತ್ರಗಳನ್ನೂ ಕಡೆದು ನಿಲ್ಲಿಸಿದ ಕಲಾಸೌಂದರ್ಯ ಎಂಟನೆಯ ಶತಮಾನದಿಂದ ಮಾಸದೆ ನಿಂತಿದೆ. ಸುಮಾತ್ರ ದ್ವೀಪದ ಬಾಟಕ್ ಹಾಗೂ ಮೆನಾಂಗ್ ಬೌ ಜನಾಂಗದಲ್ಲಿ ಹೆಣ್ಣಿಗೆ ಪ್ರಾಶಸ್ತ್ಯ ಹೆಚ್ಚು. ಒಟ್ಟು ಪಂಗಡವೆಲ್ಲ ಮಹಾಗರ್ಭ ಎಂಬ ಹೆಸರಿನ ಒಂದೇ ವಿಶಾಲವಾದ ತೊಟ್ಟಿಯಲ್ಲಿ ವಾಸಮಾಡುತ್ತದೆ. ಇಂಥ ನಾಲ್ಕಾರು ಮಹಾಗರ್ಭಗಳು ಕೂಡಿ ಸುಕು ಎಂಬ ಒಂದು ಗ್ರಾಮವಾಗುತ್ತದೆ. ನಾಯಿಯ ಹಲ್ಲಿನಂತೆ ಕಾಣದಿರಲಿ ಎಂದು ಈ ಜನ ಹಲ್ಲಿಗೆ ಸಾಣೆ ಹಿಡಿಸಿಕೊಂಡು ಕಾಚು ಹಚ್ಚಿಕೊಳ್ಳುತ್ತಾರೆ.

**ಭಾರತದೊಡನೆ ಸಂಬಂಧ:** ಭಾರತಕ್ಕೂ ಇಂಡೊನೇಷ್ಯಕ್ಕೂ ಪ್ರಾಚೀನ ಕಾಲದಿಂದಲೂ ಸಾಂಸ್ಕೃತಿಕ ಸಂಪರ್ಕಗಳೇರ್ಪಟ್ಟಿದ್ದವು. ನಮ್ಮ ಪುರಾಣಗ್ರಂಥಗಳಲ್ಲೂ ಭೂಗೋಳಶಾಸ್ತ್ರಜ್ಞ ಟಾಲೆಮಿಯ ಗ್ರಂಥದಲ್ಲೂ ಇಂಡೊನೇಷ್ಯದ ಅನೇಕ ಭಾಗಗಳ ಉಲ್ಲೇಖವಿದೆ. ಅಂದರೆ ಕ್ರಿ. ಶ. ಒಂದು ಎರಡನೆಯ ಶತಮಾನಗಳಿಂದಲೇ ಈ ಸಂಬಂಧಗಳು ಬಲವತ್ತರವಾಗಿದ್ದುವು. ಕ್ರಿ. ಶ. ಒಂದನೆಯ ಶತಮಾನದಲ್ಲಿ ಲಂಗ್–ಯು–ಸು ಎಂಬ ರಾಜ್ಯವಿತ್ತೆಂದು ಲಿಯಾಮಗ್ ವಂಶಾನುಚರಿತೆಯಿಂದ ತಿಳಿಯುತ್ತದೆ. ಅದೇ ರೀತಿಯಲ್ಲಿ ಕರ್ಮರಂಗ, ಕಲಶಪುರ, ಕಲಾ, ಕಾನ್ತೊಲಿ ಮುಂತಾದ ಭಾರತೀಯ ರಾಜ್ಯಗಳಿದ್ದುವು. ಇಂಡೊನೇಷ್ಯದ ವಿವಿಧ ಸ್ಥಳಗಳಲ್ಲಿ ನಡೆದಿರುವ ಉತ್ಖನನಗಳಿಂದ ಈ ಅಂಶಗಳು ಸ್ಪಷ್ಟವಾಗುತ್ತವೆ. ಸುಂಗೈ ಎಂಬಲ್ಲಿ ಶಿವ, ದುರ್ಗ, ಗಣೇಶ, ನಂದಿ ಮುಂತಾದ ದೇವತೆಗಳ ವಿಗ್ರಹಗಳ ಒಂದು ದೇವಾಲಯವೂ ಕೆಡ್ಡಾದಲ್ಲಿ ಸಂಸ್ಕೃತಶಾಸನಗಳಿರುವ ಬೌದ್ಧ ದೇವಾಲಯವೂ ಸಿಂಗ್‍ನಲ್ಲಿ ವಿಷ್ಣುವಿನ ವಿಗ್ರಹವೂ ದೊರಕಿದೆ.

ಭಾರತದೊಂದಿಗೆ ಸಾಂಸ್ಕೃತಿಕ ಸಂಪರ್ಕಗಳು ಬಲವಾಗಿ, ಇಂಡೊನೇಷ್ಯದಲ್ಲಿ ಹಿಂದೂ ರಾಜ್ಯಗಳು ಸ್ಥಾಪಿತವಾದುವು. ಅಜಿಶಕ ಎಂಬ ಭಾರತೀಯ ಮೊಟ್ಟಮೊದಲಿಗೆ ಯವ (ಜಾವಾ) ದ್ವೀಪಕ್ಕೆ ಹೋಗಿ ಅಲ್ಲಿನ ರಾಕ್ಷಸ ಜನಗಳಿಗೆ ನಾಗರಿಕತೆ ಕಲಿಸಿದನೆಂದು ದಂತ ಕಥೆಗಳು ತಿಳಿಸುತ್ತವೆ. ಇನ್ನೊಂದು ಕಥೆಯಿಂದ ಕಳಿಂಗ ದೇಶದಿಂದ ಇಪ್ಪತ್ತು ಸಾವಿರ

ಸಂಸಾರಗಳು ಜಾವಾದ್ವೀಪಕ್ಕೆ ಹೋಗಿ, ಅಲ್ಲಿಯೇ ನೆಲೆಸಿ ನಾಗರಿಕತೆ ಬೆಳೆಸಿದವೆಂದು ಗೊತ್ತಾಗುತ್ತದೆ. ಜಾವಾದ್ವೀಪದ ಮೊದಲನೆಯ ರಾಜ ದೇವವರ್ಮ 132ರಲ್ಲಿ ಚೀನದೇಶಕ್ಕೆ ರಾಯಭಾರಿಯನ್ನು ಕಳುಹಿಸಿದ್ದ. ಫಾಹಿಯಾನ್ ಜಾವಾಕ್ಕೆ ಭೇಟಿ ಕೊಟ್ಟಾಗ, ಅಲ್ಲಿ ಬೌದ್ಧ ಧರ್ಮ ವಿಶೇಷವಾಗಿ ಪ್ರಚಾರದಲ್ಲಿತ್ತು. ಅಲ್ಲಿ ಆಳುತ್ತಿದ್ದ ಪೂರ್ಣವರ್ಮ ರಾಜ ಬಹು ಪ್ರಸಿದ್ಧ. ಮಧ್ಯ ಜಾವಾದಲ್ಲಿ ಹೊಲಿಂಗ್ ಅಥವಾ ಕಳಿಂಗ ಎಂಬ ಇನ್ನೊಂದು ರಾಜ್ಯವಿತ್ತು.

ಭಾರತ ಮತ್ತು ಚೀನಾ ದೇಶಗಳ ಮಾರ್ಗ ಮಧ್ಯದಲ್ಲಿ ಸುಮಾತ್ರ ಇರುವುದರಿಂದ ಕ್ರಿಸ್ತಪೂರ್ವದಲ್ಲಿಯೇ ಇಲ್ಲಿಗೆ ಹಿಂದೂಗಳು ಬಂದು ನೆಲೆಸಿರಬೇಕೆಂದು ಊಹೆ. ಅಮರಾವತಿ ಶಿಲ್ಪಕಲೆಗೆ ಸೇರಿದ ಬುದ್ಧನ ವಿಗ್ರಹವೊಂದು ಪಾಲೆಂಬಾಗ್ ಎಂಬಲ್ಲಿ ದೊರಕಿರುವುದು ಗಮನಾರ್ಹ. ಸುಮಾತ್ರದ ಅತಿ ಮುಖ್ಯ ರಾಜ್ಯ ಶ್ರೀವಿಜಯ. ಇದು 4ನೆಯ ಶತಮಾನದಲ್ಲಿ ಸ್ಥಾಪಿತವಾಯಿತು. ಇತ್ಸಿಂಗನ ಬರವಣಿಗೆಯ ಪ್ರಕಾರ ಶ್ರೀವಿಜಯ ಪ್ರಮುಖ ಬೌದ್ಧ ಯಾತ್ರಾಸ್ಥಳವೂ, ಮುಖ್ಯ ವ್ಯಾಪಾರ ಕೇಂದ್ರವೂ ಆಗಿತ್ತು. 64ರಿಂದ ಶ್ರೀವಿಜಯ ರಾಜ್ಯ ಚೀನಾದೇಶದೊಡನೆ ರಾಜತಾಂತ್ರಿಕ ಸಂಬಂಧ ಬೆಳೆಸಿಕೊಂಡಿತು.

4ನೆಯ ಶತಮಾನಕ್ಕೆ ಸೇರಿದ ನಾಲ್ಕು ಸಂಸ್ಕೃತ ಶಾಸನಗಳು ಬೋರ್ನಿಯೊದಲ್ಲಿ ದೊರಕಿರುವುದರಿಂದ, ಆ ಕಾಲಕ್ಕಾಗಲೇ ಅಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವ ಹರಡಿತ್ತೆಂದು ಗೊತ್ತಾಗುತ್ತದೆ. ಕುಂಡುಂಗ ಅಥವಾ ಕೌಂಡಿನ್ಯ ಎಂಬುವನ ಮೊಮ್ಮಗನೂ ಅಶ್ವವರ್ಮನ ಮಗನೂ ಆದ ಮೂಲವರ್ಮನೆಂಬ ಇಲ್ಲಿಯ ರಾಜ ಬಹುಸುವರ್ಣಕ ಯಜ್ಞ ಮಾಡಿ, ಕುಟೆ ಎಂಬಲ್ಲಿ ಯೂಪಶಾಸನ ಬರೆಯಿಸಿದ. ಕೆಲವು ಕಡೆಗಳಲ್ಲಿ ಶೈವ ಮತ್ತು ಬೋರ್ನಿಯೊಳಗಿದ್ದ ಸಾಂಸ್ಕೃತಿಕ ಸಂಬಂಧದ ಪ್ರಾಚೀನತೆ ಸ್ಪಷ್ಟಪಡುತ್ತದೆ.

ಜಾವಾದ್ವೀಪಕ್ಕೆ ಸಮೀಪವಾಗಿರುವ ಬಾಲಿದ್ವೀಪ ಇಂದಿಗೂ ಅದೇ ಭಾರತೀಯ ಹೆಸರನ್ನೂ ಬಹುಮಟ್ಟಿಗೆ ಭಾರತೀಯ ಸಂಸ್ಕೃತಿಯ ಪ್ರಭಾವವನ್ನೂ ಉಳಿಸಿಕೊಂಡು ಬಂದಿದೆ. ಆದರೆ ಪ್ರಾಚೀನ ಅವಶೇಷಗಳು ಇಲ್ಲಿ ದೊರಕಿಲ್ಲವಾದ್ದರಿಂದ ಚೀನೀ ವಂಶಾನು ಚರಿತೆಗಳೇ ಬಾಲಿದ್ವೀಪದ ಪ್ರಾಚೀನ ಚರಿತ್ರೆಗೆ ಆಧಾರಗಳಾಗಿವೆ. ಕ್ರಿ. ಶ. ಆರನೆಯ ಶತಮಾನದ ಸುಯಿ ರಾಜವಂಶ ಚರಿತ್ರೆಯಿಂದ, ಬಾಲಿದ್ವೀಪದ ರಾಜ ಕೌಂಡಿನ್ಯವಂಶದ ಕ್ಷತ್ರಿಯನಾಗಿದ್ದನೆಂದೂ ಅವನು ಸರ್ವಾಸ್ತಿವಾದ ಪಂಥದ ಬೌದ್ಧ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟಿದ್ದನೆಂದೂ ಗೊತ್ತಾಗುತ್ತದೆ.

8ನೆಯ ಶತಮಾನದಲ್ಲಿ ಈ ಎಲ್ಲ ದ್ವೀಪಗಳನ್ನೂ ಒಟ್ಟುಗೂಡಿಸಿ ಶೈಲೇಂದ್ರ ವಂಶದ ಅರಸರು ಶೈಲೇಂದ್ರ ಸಾಮ್ರಾಜ್ಯ ಸ್ಥಾಪನೆ ಮಾಡಿದರು. ಇದರಿಂದ ಇಂಡೊನೇಷ್ಯದಲ್ಲಿ ಮೊಟ್ಟಮೊದಲ ಬಾರಿಗೆ ರಾಜಕೀಯ ಭದ್ರತೆ ಉಂಟಾಯಿತು. ಈ ಶೈಲೇಂದ್ರರು ತಮಿಳುನಾಡಿನವರೇ, ಬಂಗಾಳದವರೇ, ಕಂಬುಜದವರೇ, ಆಂಧ್ರರೇ ಅಥವಾ ಕನ್ನಡಿಗರೇ ಎಂಬ ವಿಚಾರದಲ್ಲಿ ಒಮ್ಮತವಿಲ್ಲ. ಇವರು ಕಂಬುಜ, ಚಂಪ ಮುಂತಾದ ರಾಜ್ಯಗಳ ಮೇಲೆ ಯುದ್ಧ ಮಾಡಿ, ಬಲಿಷ್ಠರಾದ ರಾಜರೆನಿಸಿಕೊಂಡರು. 11ನೆಯ ಶತಮಾನದಲ್ಲಿ ಶೈಲೇಂದ್ರರೂ ಭಾರತದ ಚೋಳರೂ ಸ್ನೇಹದಿಂದಿದ್ದರು. ಶೈಲೇಂದ್ರ ರಾಜ ಚೂಡಾಮಣಿವರ್ಮ ದಕ್ಷಿಣಭಾರತದ ನಾಗಪಟ್ಟಣದಲ್ಲಿ 1005ರಲ್ಲಿ ಒಂದು ಬೌದ್ಧವಿಹಾರ ನಿರ್ಮಿಸಿದ. ಇದಕ್ಕಾಗಿ ಚೋಳ ರಾಜರಾಜ ಒಂದು ಹಳ್ಳಿಯನ್ನು ದತ್ತಿಯಾಗಿ ಬಿಟ್ಟುಕೊಟ್ಟ. ಆದರೆ ಇವರ ಸ್ನೇಹ ಬಹುಕಾಲ ಉಳಿಯಲಿಲ್ಲ. ರಾಜೇಂದ್ರ ಚೋಳ 1024–25ರಲ್ಲಿ ಶ್ರೀವಿಜಯದ ಶೈಲೇಂದ್ರರ ಮೇಲೆ ಬಲಯುತವಾದ ನೌಕಾ ಸೈನ್ಯ ಕಳುಹಿಸಿದ. ಶೈಲೇಂದ್ರರು ಸೋತರು. ಮೇಲಿಂದ ಮೇಲೆ ಯುದ್ಧ ಮಾಡಿದ ಶೈಲೇಂದ್ರರು ದುರ್ಬಲರಾಗಿ 14ನೆಯ ಶತಮಾನದ ಸಮಯಕ್ಕೆ ಅವನತಿ ಹೊಂದಿದರು.

ಈ ಮಧ್ಯದಲ್ಲಿ ಮಧ್ಯಜಾವಾದಲ್ಲಿ ಸನ್ನಹ ಎಂಬುವನಿಂದ ಎಂಟನೆಯ ಶತಮಾನದಲ್ಲಿ ಮತರಾಂ ರಾಜ್ಯ ಸ್ಥಾಪನೆಯಾಯಿತು. ಶೈಲೇಂದ್ರರು ಬಲಯುತರಾಗಿದ್ದುದರಿಂದ, ರಾಜಕೀಯದಲ್ಲಿ ಮತರಾಂ ರಾಜ್ಯವು ಹೆಚ್ಚಿಗೆ ಏನನ್ನೂ ಸಾಧಿಸಲಿಲ್ಲ. ಆದರೆ ಈ ಕಾಲ ಜಾವ ಸಾಹಿತ್ಯ ದೃಷ್ಟಿಯಿಂದ ಬಹು ಮುಖ್ಯವಾದದ್ದು. ಸಂಸ್ಕೃತ ಗ್ರಂಥಗಳು ಜಾವಾ ಭಾಷೆಗೆ ಭಾಷಾಂತರಿಸಲ್ಪಟ್ಟವು. ಪೂರ್ವಜಾವಾದಲ್ಲಿ ಸಿಂಡಕ್ ಎಂಬ ರಾಜ ಶ್ರೀ ಈಶಾನ ವಿಕ್ರಮ ಧರ್ಮೋತ್ತುಂಗ ವಿಜಯದೇವ ಎಂಬ ಹೆಸರಿನಿಂದ 929ರಿಂದ ರಾಜ್ಯವಾಳಿದ. ಇವರ ವಂಶಜನಾದ ಏರ್ಲಂಗ (**ನೋಡಿ– ಏರ್ಲಂಗ**) ಜಾವಾ ಚರಿತ್ರೆಯಲ್ಲಿ ಅತ್ಯಂತ ಪ್ರತಿಭಾವಂತರಾಜ. ಏರ್ಲಂಗನ ಮರಣಾನಂತರ ಕಡಿರಿ ರಾಜ್ಯಸ್ಥಾಪನೆಯಾಯಿತು (**ನೋಡಿ– ಕಡಿರಿ–ರಾಜ್ಯ**). ಈ ರಾಜ್ಯ ಹದಿಮೂರನೆಯ ಶತಮಾನದಲ್ಲಿ ನಾಶವಾದ ಅನಂತರ ಸಿಂಘಸಾರಿ ರಾಜ್ಯ ನಾಶವಾಗಿ ಮಜಪಹಿತ್ ರಾಜ್ಯ ತಲೆಯೆತ್ತಿತು. ಕೃತರಾಜಸ್, ಜಯನಗರ, ರಾಜಸನಗರ ಮುಂತಾದ ರಾಜರುಗಳು ಆಳಿದ ಮೇಲೆ 1447ರಲ್ಲಿ ಈ ರಾಜ್ಯ ನಾಶವಾಯಿತು. ಶೈವ ವೈಷ್ಣವ ಧರ್ಮಗಳಿಗೆ ವಿಶೇಷ ಪ್ರೋತ್ಸಾಹ ಕೊಟ್ಟಿತು.

15ನೆಯ ಶತಮಾನದ ಅನಂತರ ಭಾರತೀಯ ಸಂಸ್ಕೃತಿಯ ಪ್ರಭಾವ ಕಡಿಮೆಯಾಯಿತು. ಬಾಲಿದ್ವೀಪ ಮಹಮ್ಮದೀಯರ ಆಳ್ವಿಕೆಗೆ ಸೇರಿತು. ಮಲಕ್ಕ ರಾಜ್ಯ ಪೋರ್ಚುಗೀಸರ ವಶವಾಯಿತು. ಮಹಮ್ಮದೀಯ ವ್ಯಾಪಾರಗಾರರು ಜಾವಾದ ರಾಜಕೀಯದಲ್ಲಿ ಪ್ರವೇಶಿಸಿ, ಹದಿನಾರನೆಯ ಶತಮಾನದ ಹೊತ್ತಿಗೆ ಅದು ಅವರ ವಶವಾಯಿತು. ಹಿಂದೂ ರಾಜ್ಯಗಳು ನಾಶವಾದುವು.

**ಈಚಿನ ಇತಿಹಾಸ:** ಡಚ್ಚರು ಪಶ್ಚಿಮ ಜಾವಾದಲ್ಲಿ ವ್ಯಾಪಾರ ಪ್ರಾರಂಭಿಸಿದ್ದು 1602ರಲ್ಲಿ. ಇಂಡೊನೇಷ್ಯದ ಖನಿಜಸಂಪತ್ತು ಹಾಗೂ ಎಲ್ಲ ಉತ್ಪನ್ನಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ವ್ಯಾಪಾರದ ಏಕಸ್ವಾಮ್ಯ ಪಡೆದುಕೊಳ್ಳುವ ಸಲುವಾಗಿ ಅವರು ಪೋರ್ಚುಗೀಸರೊಡನೆ ಹಾಗೂ ಇಂಗ್ಲಿಷರೊಡನೆ ಯುದ್ಧ ಮಾಡಿದರು. ಹದಿನೆಂಟನೆಯ ಶತಮಾನದ ಅಂತ್ಯಭಾಗದೊಳಗಾಗಿ, ವ್ಯಾಪಾರದೊಡನೆ ರಾಜಕೀಯವೂ ಕೂಡಿ, ಡಚ್ಚರು ಇಂಡೊನೇಷ್ಯದ ಮೇಲೆ ಬಿಗಿಯಾದ ಆಡಳಿತವನ್ನೇ ಪ್ರಾರಂಭಿಸಿದರು. ನೆಲದ ಜನ ದಂಗೆ ಎದ್ದರು. ಅವರ ಜೊತೆಗೆ ವಲಸೆ ಬಂದ ಚೀನೀಯರೂ ಕೂಡಿಕೊಂಡರು. ಬಿಳಿಯರು ಎರಡು ಶತಮಾನಗಳ ಕಾಲ ಇಂಡೊನೇಷ್ಯದ ಜನರೊಂದಿಗೆ ವಿವಾಹ ಸಂಬಂಧ ಬೆಳೆಸಿದ್ದರಿಂದ ಹೊಸದಾಗಿ ಹುಟ್ಟಿದ ಒಂದು ಜನಾಂಗದವರು ಮಾತೃಭೂಮಿಯ ಸಮಸ್ಯೆ ಸ್ವಾತಂತ್ರ್ಯಗಳನ್ನು ಕುರಿತು ಚಿಂತಿಸತೊಡಗಿದರು. ದಂಗೆಗಳ ಫಲವಾಗಿ ಜಾವಾ, ಸುಮಾತ್ರ, ಬೋರ್ನಿಯೊ ಹಾಗೂ ಸೆಲಿಬಸ್ ದ್ವೀಪಗಳಷ್ಟೇ ಡಚ್ಚರ ಅಧೀನದಲ್ಲಿ ಉಳಿದು ತುಯ್ದಾಡ ತೊಡಗಿದಾಗ 1798ರಲ್ಲಿ ಡಚ್ ಈಸ್ಟ್ ಇಂಡಿಯ ಕಂಪನಿಯನ್ನು ಮುಚ್ಚಬೇಕಾಯಿತು. 1811ರಲ್ಲಿ, ಡಚ್ ಹಾಗೂ ಫ್ರೆಂಚ್ ಪಡೆಗಳನ್ನು ಸೋಲಿಸಿದ ಇಂಗ್ಲಿಷರು ಜಾವಾ ದ್ವೀಪವನ್ನು ವಶಪಡಿಸಿಕೊಂಡು, ಮುಂದೆ 1816ರಲ್ಲಿ ಹಿಂದಿರುಗಿಸಿ ಅದಕ್ಕೆ ಬದಲಾಗಿ ಸಿಂಹಳದ್ವೀಪದ ಮೇಲಿನ ತಮ್ಮ ಸ್ವಾಮ್ಯ ಸ್ಥಿರಪಡಿಸಿಕೊಂಡರು. ಅದರಿಂದಾಗಿ, ಮತ್ತೆ ಇಂಡೊನೇಷ್ಯದ ಮೇಲೆ ಡಚ್ಚರ ಆಡಳಿತ ಬಿಗಿಯಾಯಿತು. ಹಾಲೆಂಡಿನ ಸಾರ್ವಭೌಮರು ನಿಯೋಜಿಸಿದ ಒಬ್ಬ ಗವರ್ನರ್–ಜನರಲ್ಲನ ಅಧಿಕಾರದಲ್ಲಿ–ಹೆಚ್ಚು ಕಡಿಮೆ ನಿರಂಕುಶವೆನಿಸುವಂಥ ಅಧಿಕಾರದಲ್ಲಿ ಆ ದ್ವೀಪಸಮೂಹ ಉಳಿದು, ಒಳಗೊಳಗೆ ತಳಮಳಿಸಿ ಸ್ವಾತಂತ್ರ್ಯ ಸಾಧನೆಗೆ ನಿಯೋಜಿತ ಕಾರ್ಯಕ್ರಮ ರೂಪಿಸಿಕೊಂಡಿತು. 1920ರವರೆಗೂ ಆಡಳಿತ ಸಲಹಾ ಮಂಡಳಿಯಲ್ಲಿ ಒಬ್ಬ ಇಂಡೊನೇಷ್ಯನ್ನನಿಗೂ ಸ್ಥಾನವಿರಲಿಲ್ಲ. ಜನಮತವನ್ನು ಕಡೆಗಣಿಸಲಾರದೆ ಆ ವರ್ಷ ಐದು ಮಂದಿಯ ಆ ಸಲಹಾಸಮಿತಿಗೆ ಇಬ್ಬರು ಇಂಡೊನೇಷ್ಯರನ್ನು ಸೇರಿಸಿಕೊಳ್ಳಲಾಯಿತು. 1916ರಲ್ಲಿ ನಿಯೋಜಿಸಿದ ವೋಕ್ಸ್ ರಾಡ್ ಎಂಬ ಹೆಸರಿನ ಈ ಜನತಾ ಸಮಿತಿಗೆ ಜನತೆಯ ಬೆಂಬಲ ಸ್ವಲ್ಪವಾದರೂ ದೊರಕಿದ್ದು 1920ರಲ್ಲಿ. ವರ್ಷದಿಂದ ವರ್ಷಕ್ಕೆ ಮತ್ತೆ ಮತ್ತೆ ಸುಧಾರಣೆಗಳಾಗಿ, 1930ರಲ್ಲಿ ಆ ಸಭೆಯ ಅರವತ್ತುಮಂದಿ ಸದಸ್ಯರಲ್ಲಿ ಅರ್ಧಪಾಲಿನಷ್ಟು ಸಂಖ್ಯೆಯಲ್ಲಿ ನೆಲದ ಜನರೇ ಇರಬೇಕೆಂಬ ನಿರ್ಣಯವನ್ನು ಡಚ್ಚರು ಕೈಗೊಳ್ಳಬೇಕಾಯಿತು. 1938ರಲ್ಲಿ ಆಡಳಿತದ ಹೊಣೆಗಾರಿಕೆಯಲ್ಲಿ ಪಾಲನ್ನು ಇಂಡೊನೇಷ್ಯನ್ನರಿಗೆ ಕೊಡುವ ನಿರ್ಣಯವೂ ಆಯಿತು. ಆದರೆ ಇಂಡೊನೇಷ್ಯದಲ್ಲಿ ಡಚ್ಚರಿಗೂ ನಿವಾಸಿಗಳಿಗೂ ಪ್ರತ್ಯೇಕವಾದ ವಿದ್ಯಾಭ್ಯಾಸ ಪದ್ಧತಿಯೂ ನ್ಯಾಯದಾನ ಪದ್ಧತಿಯೂ ಆಚರಣೆಯಲ್ಲಿದ್ದುವು.

ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೂಡಿದ ಆಂದೋಳನದ ನಡೆಯನ್ನು ಇಂಡೊನೇಷ್ಯದ ಸ್ವಾತಂತ್ರ್ಯ ಪ್ರೇಮಿಗಳು ಆಸಕ್ತಿಯಿಂದ ವೀಕ್ಷಿಸುತ್ತಿದ್ದರು. ಮಾತೃಭೂಮಿಯ ಸ್ವಾತಂತ್ರ್ಯ ಸಾಧನೆಗಾಗಿ 1931ರಲೇ ಇಂಡೊನೇಷ್ಯನ್ ಪಕ್ಷ ಅಲ್ಲಿ ಅಸಹಕಾರದ ಆಂದೋಳನ ಪ್ರಾರಂಭಿಸಿತು. 1936ರಲ್ಲಿ ಹಿಂದೆ ಹೇಳಿದ ವೋಕ್ಸ್ ರಾಡ್ ಎಂಬ ಹೆಸರಿನ ಆಡಳಿತ ಸಲಹೆಗಾರ ಮಂಡಳಿ ಅಧಿರಾಜ್ಯ ಸ್ಥಾನ ಬೇಕೆಂಬ ಒತ್ತಾಯದ ಬೇಡಿಕೆಯನ್ನು ಹಾಲೆಂಡಿನ ಮುಂದೆ ಇಟ್ಟಿತು. ಯಾವ ಉಪಯೋಗವೂ ಆಗದಿದ್ದುದರಿಂದ ಮತ್ತೆ ಆಂದೋಳನಗಳೂ ದಂಗೆಗಳೂ ಸಂಭವಿಸಿದುವು. ಅಷ್ಟರಲ್ಲಿ ಎರಡನೆಯ ಮಹಾಯುದ್ಧ ಬಂತು. ಇಂಡೊನೇಷ್ಯದಲ್ಲಿನ ಡಚ್ ಆಡಳಿತ ಕುಸಿಯಿತು. ಯುದ್ಧ ಮುಗಿದೊಡನೆಯೇ ಸ್ವಾತಂತ್ರ್ಯ ಕೊಡುವುದಾಗಿ ಘೋಷಿಸಿದ ಡಚ್ಚರು ತಮ್ಮ ವಸಾಹತನ್ನು ಇನ್ನೂ ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರು. ಫೆಬ್ರವರಿ 1942ರಲ್ಲಿ ಇಲ್ಲಿ ಜಪಾನೀ ಆಕ್ರಮಣವಾಯಿತು. 1943ನೆಯ ಅಕ್ಟೋಬರ್ ತಿಂಗಳಲ್ಲಿ ಜಪಾನೀಯರು ಇಂಡೊನೇಷ್ಯದ ಕೇಂದ್ರಸಮಿತಿಯನ್ನು ನಿರ್ಮಿಸಿದರು. ಆಡಳಿತದಲ್ಲಿ ಅಲ್ಲಿನ ಜನರಿಗೂ ಪಾಲುಕೊಟ್ಟರು. ಮುಂದೆ ಸಂಪೂರ್ಣ ಸ್ವಾತಂತ್ರ್ಯ ಕೊಡುವುದಾಗಿ ಘೋಷಿಸಿದರು. ಪಶ್ಚಿಮ ಹಾಗೂ ಮಧ್ಯಜಾವಾಕ್ಕೆ ಗವರ್ನರುಗಳಾಗಿ ಇಬ್ಬರು ಇಂಡೊನೇಷ್ಯನ್ನರನ್ನೇ ನೇಮಿಸಿದರು. ಇಷ್ಟರಲ್ಲಿ ಡಚ್ಚರಿಂದ ಬಂಧಿತರಾಗಿದ್ದ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಅಧ್ವರ್ಯ ಡಾ. ಸುಕರ್ನೊ ಬಿಡುಗಡೆಗೊಂಡರು. ಐದುಕೋಟಿ ಇಂಡೊನೇಷ್ಯನ್ನರ ಪ್ರತಿನಿಧಿಯೆನಿಸಿ ಅವರು ಜಪಾನಿಗೆ ತೆರಳಿ ಅಲ್ಲಿ ಸಾಮ್ರಾಟರಿಂದ ಪ್ರಶಸ್ತಿ ಪಡೆದು ಹಿಂದಿರುಗಿ ಬಂದರು. ಸ್ವಾತಂತ್ರ್ಯ ಸಾಧಕ ಪಡೆಕಟ್ಟಿ ಶಿಕ್ಷಣ ಕೊಟ್ಟರು. ಭಾರತದ ಬಿಡುಗಡೆಗಾಗಿ ನೇತಾಜಿ ಸುಭಾಷ್‌ಚಂದ್ರ ಬೋಸರು ಕಟ್ಟಿದ ಸ್ವಾತಂತ್ರ್ಯ ಯೋಧರ ಪಡೆಯಂತೆಯೇ ಅದೂ ಸಿದ್ಧವಾಯಿತು. ಹೆಣ್ಣು ಮಕ್ಕಳೂ ಕಣಕ್ಕಿಳಿದರು. 1945ರ ಆಗಸ್ಟ್ 17ರಂದು ಜಪಾನೀಯರು ಸೋತು ಮಿತ್ರರಾಷ್ಟ್ರಗಳಿಗೆ ಶರಣಾಗತರಾದರು. ಎರಡೇ ದಿನಗಳ ಅನಂತರ ಸುಕರ್ನೊ ತಮ್ಮ ಅಧ್ಯಕ್ಷತೆಯಲ್ಲಿ ಇಂಡೊನೇಷ್ಯನ್ ಗಣತಂತ್ರ ರಾಜ್ಯ ಘೋಷಿಸಿದರು. ಮಹಮದ್ ಹಟ್ಟಾ ಉಪಾಧ್ಯಕ್ಷರಾದರು. ಅಷ್ಟರಲ್ಲಿ ಡಚ್ಚರು ಧಾವಿಸಿ ಬಂದರು. ಸ್ವತಂತ್ರ ಇಂಡೊನೇಷ್ಯವನ್ನು ಪುರಸ್ಕರಿಸಲು ಅವರು ಒಪ್ಪಲಿಲ್ಲ. ಮತ್ತೆ ಸಂಗ್ರಾಮ ಆರಂಭವಾಯಿತು. ಸುಕರ್ನೊ ವಿಶ್ವಸಂಸ್ಥೆಯ ನೆರವು ಬೇಡಿದರು. ನೆರೆ ರಾಷ್ಟ್ರಗಳ ನೇತಾರರನ್ನು ಆಹ್ವಾನಿಸಿದರು; ಅವರು ಪರಿಸ್ಥಿತಿಯನ್ನು ಪರಿಶೀಲಿಸಿ ಪ್ರಪಂಚಕ್ಕೆ ತಿಳಿಸುವಂತೆ ಕೇಳಿಕೊಂಡರು. ಡಚ್ಚರ ಬಗ್ಗೆ ಇಂಡೊನೇಷ್ಯದ

ಜನತೆ ರೊಚ್ಚಿಗೆದ್ದಿತು. ಮತ್ತೆ ಮತ್ತೆ ಏರಿ ಬಂದ ಡಚ್ಚರನ್ನು ಹತ್ತಿಕ್ಕಿತು. 1949 ಡಿಸೆಂಬರ್ 27ರಂದು ನ್ಯೂಗಿನಿಯ ಪಶ್ಚಿಮ ಭಾಗವನ್ನು (ಪಶ್ಚಿಮ ಇರಿಯನ್) ಬಿಟ್ಟು ಉಳಿದ ಪ್ರದೇಶದ ಸಂಪೂರ್ಣ ಅಧಿಕಾರ ಇಂಡೊನೇಷ್ಯ ಗಣರಾಜ್ಯಕ್ಕೆ ವರ್ಗವಾಯಿತು. ಮುಂದೆ ವಿಶ್ವಸಂಸ್ಥೆಯ ಮಧ್ಯ ಪ್ರವೇಶದಿಂದ ಪಶ್ಚಿಮ ಇರಿಯನ್ ಪ್ರದೇಶ ಅದಕ್ಕೆ ಸೇರಿತು. ಇಂಡೊನೇಷ್ಯ ವಿಶ್ವಸಂಸ್ಥೆಯ ಸದಸ್ಯತ್ವವನ್ನೂ ಪಡೆದುಕೊಂಡಿತು. ಈ ದೇಶದ ಇತಿಹಾಸದ ಮುಂದಿನ ಮೈಲಿಗಲ್ಲು ಎಂದರೆ 1955ರಲ್ಲಿ ಇಂಡೊನೇಷ್ಯದ ಬಾಂಡುಂಗ್ ನಗರದಲ್ಲಿ ಸಮಾವೇಶವಾದ ಪೌರಸ್ತ್ಯರಾಷ್ಟ್ರಗಳ ಮಹಾ ಸಮ್ಮೇಳನ (**ನೋಡಿ– ಬಾಂಡುಂಗ್–ಸಮ್ಮೇಳನ**). ಆಫ್ರಿಕ ಮತ್ತು ಏಷ್ಯ ಖಂಡಗಳ ಇಪ್ಪತ್ತೊಂಬತ್ತು ರಾಷ್ಟ್ರಗಳು ಭಾಗವಹಿಸಿದ್ದ ಈ ಮಹಾ ಸಮ್ಮೇಳನದಲ್ಲಿ ಪಂಚಶೀಲ ತತ್ತ್ವಗಳನ್ನು ಅಂಗೀಕರಿಸಲಾಯಿತು (**ನೋಡಿ– ಪಂಚಶೀಲ–2**). (ಆರ್.ಎಚ್.ಕೆ.;ಎ.ಎಂ.ಆರ್.)

**ಇಂಡೊನೇಷ್ಯದ ವಾಸ್ತುಶಿಲ್ಪ:** ಇಂಡೊನೇಷ್ಯದಲ್ಲಿ ಪ್ರಶಕೆಯ ಪ್ರಾರಂಭಕಾಲದಿಂದ ಸು.15ನೆಯ ಶತಮಾನದವರೆಗೆ ಭಾರತೀಯ ಸಂಸ್ಕೃತಿಯ ಪ್ರಭಾವ ಯಾವ ರೀತಿ ಹರಡಿದ್ದಿತೆಂಬುದನ್ನು ಅದರ ಚರಿತ್ರೆಯಲ್ಲೇ ಅಲ್ಲದೆ ಆಡಳಿತ ವ್ಯವಸ್ಥೆ, ಸಾಮಾಜಿಕ ಮತ್ತು ಧಾರ್ಮಿಕ ಜೀವನ, ಸಾಹಿತ್ಯ ಮತ್ತು ವಾಸ್ತುಶಿಲ್ಪಕಲೆಗಳಲ್ಲಿ ಪ್ರತಿಬಿಂಬಿತವಾಗಿದೆ. ಅದರಲ್ಲೂ ವಾಸ್ತುಶಿಲ್ಪದಲ್ಲಿ ಈ ಪ್ರಭಾವವನ್ನು ಬಹು ಹೆಚ್ಚಾಗಿ ಕಾಣಬಹುದು. ಭಾರತೀಯ ವಾಸ್ತುಶಿಲ್ಪ ಕಲಾಕಾರರು ಇಂಡೊನೇಷ್ಯದ ವಿವಿಧ ರಾಜ್ಯಗಳಲ್ಲಿ ಭಾರತೀಯ ವಾಸ್ತುಶಿಲ್ಪ ಕೃತಿಗಳನ್ನು ನಿರ್ಮಿಸತೊಡಗಿ ಪಲ್ಲವ, ಪಾಲ, ಚಾಲುಕ್ಯ, ಅಮರಾವತಿ ಮುಂತಾದ ವಾಸ್ತುಶಿಲ್ಪ ಶೈಲಿಗಳು ಇಂಡೊನೇಷ್ಯದಲ್ಲಿ ಬಳಕೆಗೆ ಬಂದವು. ಕಾಲಕ್ರಮೇಣ ಸ್ಥಳೀಯ ವೈಶಿಷ್ಟ್ಯಗಳೊಂದಿಗೆ ಮಿಳಿತವಾದ ಭಾರತೀಯ ಕಲಾಕೃತಿಗಳ ಪಂಥ ತಲೆಯೆತ್ತಿತು. ಇದರಲ್ಲಿಯೂ ವಸ್ತು, ಶೈಲಿ, ಮುಂತಾದ ಮುಖ್ಯ ಗುಣಗಳು ಭಾರತೀಯವೇ ಆಗಿದ್ದು, ಸ್ಥಳೀಯ ವೈಶಿಷ್ಟ್ಯಗಳು ಮುಖ್ಯಲಕ್ಷಣಗಳಿಗೆ ಮಾತ್ರ ಮೀಸಲಾಗಿದ್ದವು. ಚಂಡಿ ಮೆಂದುಕ್‌ನ ಇಲ್ಲವೇ ಬೆಲ್ಲನ್‌ನ ವಿಷ್ಣು ವಿಗ್ರಹವನ್ನು ಪರೀಕ್ಷಿಸಿದರೆ, ಕಿರೀಟದಿಂದ ಕಾಲಿನವರೆಗೆ ಕಾಣುವ ಎಲ್ಲ ಲಕ್ಷಣಗಳೂ ಭಾರತೀಯವಾಗಿದ್ದು, ಮುಖ ಮಾತ್ರ ಸ್ಥಳೀಯ ಲಕ್ಷಣಗಳಿಗನುಸಾರವಾಗಿರುವುದು ಗಮನ ಸೆಳೆಯುತ್ತದೆ.

ಇಂಡೊನೇಷ್ಯದ ಇತಿಹಾಸದಲ್ಲಿ ಜಾವದ ಪಾತ್ರ ಮುಖ್ಯವಾಗಿದ್ದಂತೆಯೇ ವಾಸ್ತುಶಿಲ್ಪದಲ್ಲಿ ಅದರ ಕೊಡುಗೆ ಮಹತ್ತರವಾದದ್ದು. ಇಲ್ಲಿನ ವಾಸ್ತುಕಲೆಯಲ್ಲಿ ದೇವಾಲಯಗಳೇ ಮುಖ್ಯವಾದವು. ಇವುಗಳಿಗೆ ಚಂಡಿ ಎಂದು ಹೆಸರು. ಜಾವದ ದೇವಾಲಯಗಳು ಸಾಮಾನ್ಯವಾಗಿ ಜಗಲಿ ಅದರ ಮೇಲಿನ ಚೌಕದೇವಾಲಯ ಮತ್ತು ಅದರ ಮೇಲಿರುವ ಶಿಖರವನ್ನೊಳಗೊಂಡಿರುತ್ತವೆ. ಇವುಗಳಲ್ಲಿ ಸ್ತಂಭಗಳು ಇರುವುದಿಲ್ಲ. ಮಧ್ಯಜಾವದ ದೇವಾಲಯಗಳು ಪ್ರ.ಶ. 8ನೆಯ ಶತಮಾನದಿಂದ 12ನೆಯ ಶತಮಾನದವರೆಗೆ ನಿರ್ಮಿತವಾದವು. ಡೀಂಗ್ ಪ್ರಸ್ಥಭೂಮಿಯ ಗುಡ್ಡಗಳಲ್ಲಿ ಅನೇಕ ದೇವಾಲಯಗಳಿವೆ. ಜಾವದಲ್ಲಿ ದೊರಕಿರುವ ದೇವಾಲಯಗಳಲ್ಲಿ ಇವೇ ಅತ್ಯಂತ ಪ್ರಾಚೀನ. ಚಂಡಿ ಭೀಮ, ಚಂಡಿ ಅರ್ಜುನ, ಚಂಡಿ ಪ್ರಂತದೇವ ಇವು ಮುಖ್ಯವಾದವು. ಇವುಗಳು ಸಣ್ಣ ದೇವಾಲಯಗಳಾದರೂ ನೋಡಲು ಸುಂದರವಾಗಿವೆ. ಇವುಗಳಲ್ಲಿ ಗುಪ್ತರ ಕಾಲದ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ಇಲ್ಲಿ ದೊರಕಿರುವ ಶಿಲ್ಪಗಳಲ್ಲಿ ಮುಖ್ಯವಾದುವು ಶಿವ, ದುರ್ಗ, ಗಣೇಶ, ಬ್ರಹ್ಮ ಮತ್ತು ವಿಷ್ಣು. ಪ್ರಂಬನಸ್ ಎಂಬಲ್ಲಿರುವ ದೇವಾಲಯಗಳು ಮಧ್ಯ ಜಾವದಲ್ಲಿ ಹೆಸರು ಪಡೆದಿವೆ. ಚಂಡಿ ಕಲಶನ್, ಚಂಡಿ ಸಾರಿ, ಚಂಡಿ ಸೇವ್ರ ಇಲ್ಲಿಯ ಮುಖ್ಯ ಕಟ್ಟಡಗಳು. ಬೊರಬೊದೂರನ್ನು ಬಿಟ್ಟರೆ ಚಂಡಿ ಸೇವು ದೇವಾಲಯವೇ ಅತ್ಯಂತ ದೊಡ್ಡದು. ಚಂಡಿ ಸೇವು ದೇವಾಲಯವನ್ನು ಒಂದು ದೇವಾಲಯ ಎನ್ನುವುದಕ್ಕಿಂತ, ದೇವಾಲಯ ಸಮೂಹ ಎನ್ನುವುದೇ ಉಚಿತ. ಏಕೆಂದರೆ ಮಧ್ಯ ದೇವಾಲಯದ ಸುತ್ತಲೂ ಸು.250 ಸಣ್ಣ ಸಣ್ಣ ದೇವಾಲಯಗಳಿವೆ. ಮಧ್ಯ ದೇವಾಲಯ ಅತ್ಯಂತ ಎತ್ತರವಾದ ಜಗಲಿಯ ಮೇಲಿದ್ದು ಸುತ್ತಲಿನ ಸಣ್ಣ ದೇವಾಲಯಗಳು, ಇದಕ್ಕಿಂತ ಕಡಿಮೆ ಎತ್ತರದಲ್ಲಿವೆ. ಈ ದೇವಾಲಯಸಮೂಹ ಪ್ರ.ಶ. 9ನೆಯ ಶತಮಾನದಲ್ಲಿ ನಿರ್ಮಾಣವಾಯಿತು. ಸುಮಾರು ಇದೇ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳನ್ನು ಕೆಡು ಎಂಬಲ್ಲಿ ನೋಡಬಹುದು. ಇವುಗಳಲ್ಲಿ ಮುಖ್ಯವಾದವು ಚಂಡಿ ಮೆಂದುಕ್ ಮತ್ತು ಚಂಡಿ ಪವನ್. ಚಂಡಿ ಮೆಂದುತ್ ಬೌದ್ಧ ದೇವಾಲಯ. ಈ ದೇವಾಲಯದ ಗೋಡೆಗಳ ಹೊರಭಾಗ ಒಳಭಾಗಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಿಸಿದ ಅನೇಕ ಕಥೆಗಳಲ್ಲೂ ಮತ್ತು ಎತ್ತರದ ಬೋಧಿಸತ್ವನ ವಿಗ್ರಹಗಳು ನಿರ್ಮಿತವಾಗಿವೆ. ಕೇಂದ್ರದಲ್ಲಿರುವ ಬುದ್ಧನ ಮತ್ತು ಲೋಕೇಶ್ವರನ ವಿಗ್ರಹಗಳು ಅತ್ಯುತ್ತಮವಾದ ಶಿಲ್ಪಗಳು, ಪಶ್ಚಿಮ ಭಾರತದ ಬೌದ್ಧ ಗುಹಾಂತರ್ದೇವಾಲಯಗಳಲ್ಲಿ ಕಾಣಬರುವ ಶಿಲ್ಪಶೈಲಿಗೆ ಸೇರಿದ ಈ ವಿಗ್ರಹಗಳು ಜಾವದೇಶದ ಶಿಲ್ಪಚರಿತ್ರೆಯಲ್ಲಿ ಗಮನಾರ್ಹವಾದವು. ಚಂಡಿ ಪವನ್ ದೇವಾಲಯ ಕುಬೇರನಿಗೆ ಮೀಸಲಾದ ದೇವಾಲಯ. ಸಣ್ಣದಾದರೂ ಶಿಲ್ಪದ ದೃಷ್ಟಿಯಿಂದ ಮುಖ್ಯವಾದದ್ದು.

ಬೊರ್‌ಬೊದೂರ್ ದೇವಾಲಯ ಇಂಡೊನೇಷ್ಯದ ವಾಸ್ತುಶಿಲ್ಪದಲ್ಲಿ ಅತ್ಯಂತ ಪ್ರಸಿದ್ಧವಾದ ದೇವಾಲಯ. ಮಧ್ಯದಲ್ಲಿರುವ ಘಂಟಾಕೃತಿಯ ಸುತ್ತಲೂ ಒಂದಕ್ಕಿಂತ ಮತ್ತೊಂದು ಕೆಳಗಿರುವಂತೆ ಒಟ್ಟು ಒಂಬತ್ತು ಹಂತಗಳಿವೆ. ಇವುಗಳಲ್ಲಿ ಹೊರಗಿನ ಆರು ಚೌಕಾಕೃತಿಯವಾಗಿದ್ದರೆ, ಒಳಗಿನ ಮೂರು ವೃತ್ತಾಕಾರದವು. ವೃತ್ತಾಕಾರದ ಮೂರು ಹಂತಗಳಲ್ಲಿ ಸುತ್ತಲೂ ಸಣ್ಣ ಸ್ತೂಪಗಳಿವೆ. ಪ್ರತಿಯೊಂದು ಸ್ತೂಪದಲ್ಲಿಯೂ ಒಂದೊಂದು ಬುದ್ಧನ ವಿಗ್ರಹಗಳಿವೆ. ಒಂದು ಹಂತದಿಂದ ಮುಂದಿನ ಹಂತಕ್ಕೆ ಹೋಗಲು ಮೆಟ್ಟಿಲುಗಳಿವೆ. ಪ್ರತಿಯೊಂದು ಹಂತದಲ್ಲಿಯೂ ಶಿಲ್ಪಫಲಕಗಳಿವೆ. ಇಲ್ಲಿ ಒಟ್ಟು ಸುಮಾರು ಸಾವಿರದ್ನೆನೂರು ಶಿಲ್ಪಫಲಕಗಳಿವೆ. ಇವುಗಳಲ್ಲಿ ಜಾತಕದ ಕಥೆಗಳು, ಬುದ್ಧನ ಜೀವನಕ್ಕೆ ಸಂಬಂಧಿಸಿದ ಇತರ ಕಥೆಗಳು ಮುಖ್ಯವಾದವು. ಭಾರತದಲ್ಲೂ ನಿರ್ಮಾಣವಾಗದಂಥ ಶ್ರೇಷ್ಠ ವಾಸ್ತುಶಿಲ್ಪಕೃತಿ ಇದೆಂದು ಬೊರ್‌ಬೊದೂರ್ ಪ್ರಸಿದ್ಧಿ ಪಡೆದಿದೆ.

ಲೊರೊ ಜೊಂಗ್ರೊಂಗ್ ಎಂಬಲ್ಲಿರುವ ಎಂಟು ದೇವಾಲಯಗಳು ಶೈವ ಮತ್ತು ವೈಷ್ಣವ ಧರ್ಮಕ್ಕೆ ಸೇರಿದವು. ಮಧ್ಯದಲ್ಲಿರುವ ಶಿವನ ದೇವಾಲಯ ಅತ್ಯಂತ ಭವ್ಯವಾದ ಕಟ್ಟಡ. ಇದರ ಗೋಡೆಯ ಮೇಲೆ ರಾಮಾಯಣ ಕಥೆ ಅತ್ಯಂತ ರಮಣೀಯವಾಗಿ ಶಿಲ್ಪಿತವಾಗಿದೆ. ಇದು ಇಲ್ಲಿಯ ವೈಶಿಷ್ಟ್ಯ. ಇಲ್ಲಿಯ ಶಿಲ್ಪಗಳು ಗಾತ್ರದಲ್ಲಿ ಬೊರ್‌ಬೊದೂರಿನಷ್ಟು ದೊಡ್ಡವಲ್ಲದಿದ್ದರೂ ಅದಕ್ಕಿಂತ ಉತ್ತಮವಾದ ಭಾವನೆಗಳನ್ನು ವ್ಯಕ್ತಪಡಿಸುತ್ತವೆ.

ಪೂರ್ವಜಾವದ ದೇವಾಲಯಗಳಲ್ಲಿ ಚಂಡಿಕಿಡಲ್ ಮುಖ್ಯವಾದದ್ದು. ರಾಜನಾದ ಅನೂಷಪತಿಯ ಮರಣಾನಂತರ (1248) ನಿರ್ಮಿತವಾದ ಈ ದೇವಾಲಯ ಹೊಸ ಶೈಲಿಯಲ್ಲಿ ರಚನೆಗೊಂಡಿದೆ. ಸಿಂಘಸಾರಿ ಸಾಮ್ರಾಜ್ಯಕಾಲದಲ್ಲಿ ಚಂಡಿ ಸಿಂಘಸಾರಿ, ಚಂಡಿ ಜಾಗೊ ಮುಂತಾದವು ಗೋಪುರ ದೇವಾಲಯಗಳು. ಪನತರನ್ ಎಂಬಲ್ಲಿರುವ ದೇವಾಲಯ ಸಮೂಹ ಪೂರ್ವಜಾವದಲ್ಲಿ ಹೆಚ್ಚು ಪ್ರಖ್ಯಾತವಾಗಿದೆ. ರಾಮಾಯಣ ಮತ್ತು ಕೃಷ್ಣಾಯಣ ಗ್ರಂಥಗಳ ಕಥೆಗಳು ಇಲ್ಲಿಯ ದೇವಾಲಯಗಳ ಗೋಡೆಗಳ ಮೇಲೆ ಶಿಲ್ಪಿತವಾಗಿವೆ. ಪನತರನ್ ದೇವಾಲಯಗಳಲ್ಲಿ ಭಾರತೀಯ ಶಿಲ್ಪಪ್ರಭಾವ ಸ್ವಲ್ಪ ಕಡಿಮೆಯಾಗಿ ಕಾಣಬರುತ್ತದೆ. ಸಿಂಘಸಾರಿಯ ಪ್ರಜ್ಞಾಪಾರಿಮಿತ ಶಿಲ್ಪ, ಬೆಲ್ಲನ್ನಿನ ವಿಷ್ಣುವಿನ ಶಿಲ್ಪ, ಅನೂಷಪತಿಯ ಕಾಲದ ಶಿವನ ಶಿಲ್ಪ ಮುಂತಾದವು ಈ ಶೈಲಿಯ ಮುಖ್ಯ ಉದಾಹರಣೆಗಳು.

ಬೋರ್ನಿಯೊದಲ್ಲಿ ದೇವಾಲಯಗಳು ದೊರಕಿಲ್ಲವಾದರೂ ಅನೇಕ ಕಡೆಗಳಲ್ಲಿ ನಡೆದ ಉತ್ಖನನಗಳಿಂದ ಪ್ರಾಚೀನ ವಾಸ್ತುಶಿಲ್ಪಗಳ ವಿಚಾರ ತಿಳಿದುಬರುತ್ತದೆ. ಕುಟ್ಟೆ ಜಿಲ್ಲೆಯ ಮೌರಕಮನ್ ಎಂಬಲ್ಲಿ ವಿಷ್ಣುವಿನ ಚಿನ್ನದ ಮೂರ್ತಿಯೂ ದೇವಾಲಯದ ಸ್ತಂಭಗಳೂ ದೊರಕಿವೆ. ಇಲ್ಲಿಗೆ ಸ್ವಲ್ಪದೂರದಲ್ಲಿರುವ ಕೊಂಬೆಂಗ್ ಎಂಬಲ್ಲಿ ಗುಹಾಲಯ ಪತ್ತೆಯಾಗಿದೆ. ಇಲ್ಲಿ ಶಿವ, ಗಣೇಶ, ನಂದಿ, ಅಗಸ್ತ್ಯ, ಬ್ರಹ್ಮ, ಸ್ಕಂದ ಮಹಾಕಾಲ ಮುಂತಾದ ದೇವತೆಗಳ ವಿಗ್ರಹಗಳು ದೊರಕಿವೆ. ಸೆಪಾಕ್ ಎಂಬಲ್ಲಿ ಮುಖಲಿಂಗ ದೇವಾಲಯವೂ ಒಟುಪಹಟ್ ಎಂಬಲ್ಲಿ ಸ್ತೂಪಗಳೂ ಅವಶೇಷಗಳೂ ದೊರಕಿವೆ. ಬಾಲಿ ದ್ವೀಪದಲ್ಲಿ ಬಂಡೆಕಲ್ಲಿನ ಮೇಲೆ ಕೆತ್ತಲಾದ ಶಿಲ್ಪಗಳು ದೊರಕಿವೆ. ಯಹ್‌ಪುಲು ಎಂಬಲ್ಲಿ ಈ ರೀತಿಯ ಶಿಲ್ಪಗಳು ಗುರುತಿಸಲ್ಪಟ್ಟಿವೆ. ಸು. 11ನೆಯ ಶತಮಾನಕ್ಕೆ ಸೇರಬಹುದಾದ ಈ ಶಿಲ್ಪಗಳ ವಿಚಾರದಲ್ಲಿ ಖಚಿತವಾದ ಸಂಗತಿಗಳು ಇನ್ನೂ ತಿಳಿದಿಲ್ಲ. ಸುಮಾತ್ರ ದ್ವೀಪದಲ್ಲಿಯೂ ಉತ್ಖನನಗಳಿಂದ ಅನೇಕ ಶಿಲ್ಪಗಳು ಬೆಳಕಿಗೆ ಬಂದಿವೆ. ಸುಂಗ್ಗೆ ಬಟು ಎಂಬಲ್ಲಿ ದೇವಾಲಯವೂ ಶಿವ, ದುರ್ಗ, ಗಣೇಶ, ನಂದಿ ಮುಂತಾದ ದೇವತೆಗಳ ವಿಗ್ರಹಗಳೂ ದೊರಕಿವೆ. ತಾಕುವಾಪ ಎಂಬಲ್ಲಿ ವಿಷ್ಣುವಿನ ಮತ್ತು ಇತರ ವೈಷ್ಣವ ದೇವತೆಗಳ ವಿಗ್ರಹಗಳೂ ಸಿಕ್ಕಿವೆ. ಒಟ್ಟಿನಲ್ಲಿ ಭಾರತೀಯ ವಾಸ್ತುಶಿಲ್ಪ ಇಂಡೊನೇಷ್ಯದ ವಾಸ್ತುಶಿಲ್ಪದ ಮೇಲೆ ವಿಶೇಷ ಪ್ರಭಾವ ಬೀರಿ, ವಿಶ್ವ ಪ್ರಸಿದ್ಧವಾದ ಕಲಾಕೃತಿಗಳು ನಿರ್ಮಾಣವಾಗಲು ಕಾರಣವಾಯಿತು. (ಎ.ವಿ.ಎನ್.)

**ಇಂಡೊನೇಷ್ಯ ಭಾಷೆ:** ಭಾಷಾ ಇಂಡೊನೇಷ್ಯ ಎಂಬ ಹೆಸರಿನ ಈ ಭಾಷೆ ಇಂಡೊನೇಷ್ಯ ಗಣರಾಜ್ಯದ ಅಧಿಕೃತ ಭಾಷೆ. ಇದು ಭಾಷೆಯ ಶಿಷ್ಟರೂಪಗಳಲ್ಲಿ ಒಂದು. ಅದರ ಇನ್ನೊಂದು ಶಿಷ್ಟರೂಪ ಮಲೆಯದ ಭಾಷೆ. ಇದನ್ನು ಅನೇಕ ವೇಳೆ ಮಲ್ಯೆ ಎಂದು ಕರೆಯುವ ವಾಡಿಕೆಯುಂಟು. ಶಬ್ದ ಸಂಪತ್ತು ಮತ್ತು ಅದಕ್ಕೆ ಸಂಬಂಧಿಸಿದ ಅಕ್ಷರ ಸಂಯೋಜನ ವಿಧಾನಗಳಲ್ಲಿ ಈ ಶಿಷ್ಟರೂಪಗಳು ಬಹುಮಟ್ಟಿಗೆ ಒಂದಕ್ಕಿಂತ ಒಂದು ಭಿನ್ನವಾಗಿವೆಯಾದರೂ ಇವುಗಳ ಮೂಲಭೂತ ರಚನೆ ಮತ್ತು ಶಬ್ದಕೋಶ ಒಂದೇ ಆಗಿದೆ. ಪರ್ಯಾಯದ್ವೀಪದಲ್ಲಿ ಬಳಸುವ ಮಲ್ಯೆ ಭಾಷೆಗೆ ಲ್ಯಾಟಿನ್ ಮತ್ತು ಅರಬ್ಬೀ ವರ್ಣಮಾಲೆಯನ್ನೇ ಅಧಿಕೃತವಾಗಿ ಬಳಸಲಾಗುತ್ತಿದೆ. ಆದರೆ ಇಂಡೊನೇಷ್ಯ ಭಾಷಾ ಲಿಪಿ ಲ್ಯಾಟಿನ್ನಿನದಾಗಿದೆ. ಇಂಡೊನೇಷ್ಯನ್ ಭಾಷೆಯ ಅಕ್ಷರ ಸಂಯೋಜನೆ ಮಲ್ಯೆ ಭಾಷೆಯ ಅಕ್ಷರ ಸಂಯೋಜನೆಗಿಂತ ಭಿನ್ನವಾಗಿದೆ. ಅಲ್ಲಿ ಟ್ಜ, ಢ್ಜ, ನ್ಜ, ಜ ಗಳಿಗೆ ಬದಲಾಗಿ ಛ, ಜ, ನ್ಯ, ಯ ಗಳನ್ನು ಕ್ರಮವಾಗಿ ಬಳಸುತ್ತಾರೆ.

ಇಂಡೊನೇಷ್ಯ ಭಾಷೆ ರಾಷ್ಟ್ರದ ಅಧಿಕೃತ ಭಾಷೆಯಾಗಿದ್ದರೂ ಅದು ಅಲ್ಲಿಯ ಜನಸಂಖ್ಯೆಯ ಸು. 10ನೆಯ ಒಂದು ಭಾಗದಷ್ಟು ಜನರ ಪ್ರಥಮ ಭಾಷೆ ಮಾತ್ರ ಆಗಿದೆ. ಇವರಲ್ಲಿ ಬಹುಪಾಲು ಮಲೆಯನ್ನರೇ ಇದ್ದಾರೆ. ಮತ್ತೆ ಕೆಲವರು ಇಂಡೊನೇಷ್ಯ ಭಾಷೆಯನ್ನು ತಮ್ಮ ಮನೆಯ ಭಾಷೆಯನ್ನಾಗಿ ಸ್ವೀಕರಿಸಿರುವ ತಂದೆ ತಾಯಿಗಳ ಮಕ್ಕಳು. ಉಳಿದವರಿಗೆಲ್ಲ ಈ ಭಾಷೆಯನ್ನು ಶಾಲೆಯಲ್ಲಿ ಹೇಳಿಕೊಡಬೇಕಾಗಿದೆ. ಇಂಡೊನೇಷ್ಯದ ಎಲ್ಲ ಭಾಷೆಗಳೂ ಒಂದಲ್ಲ ಒಂದು ರೀತಿಯಲ್ಲಿ ಮಲ್ಯೆ ಭಾಷೆಗೆ ಸಂಬಂಧಪಟ್ಟಿರುವುದರಿಂದ ದ್ವಿತೀಯ ಭಾಷೆಯಾಗಿ ಇಂಡೊನೇಷ್ಯ ಭಾಷೆಯನ್ನು ಕಲಿಯುವುದು ಸುಲಭ.

1928ರಲ್ಲಿ ಮಲೈ ಭಾಷೆಯನ್ನು ರಾಷ್ಟ್ರೀಯ ಚಳವಳಿಯ ಹಾಗೂ ಭವಿಷ್ಯದಲ್ಲಿ ರೂಪು ತಳೆಯಲಿದ್ದ ಸ್ವತಂತ್ರ ಇಂಡೊನೇಷ್ಯ ರಾಷ್ಟ್ರದ ಭಾಷೆಯಾಗಿ ಸ್ವೀಕರಿಸಲಾಯಿತು. ಈಸ್ಟ್ ಇಂಡಿಯ ದ್ವೀಪಸ್ತೋಮದಾದ್ಯಂತವೂ ಸಂಪರ್ಕಭಾಷೆಯಾಗಿ ಮಲೈ ಭಾಷೆಯನ್ನು ಬಹುಕಾಲದಿಂದ ವ್ಯಾಪಕವಾಗಿ ಬಳಸುತ್ತಿದ್ದರು. ಅಲ್ಲದೆ ಮಲೈ ಭಾಷೆಯನ್ನು ಸ್ವೀಕರಿಸುವುದ ರಿಂದ ಈ ಮೊದಲೇ ಪ್ರಬಲವಾಗಿದ್ದಂಥ ವರ್ಗವೊಂದಕ್ಕೆ ರಾಜಕೀಯ ಪ್ರಾಬಲ್ಯ ದೊರೆತಂತಾಗುವುದಿಲ್ಲವೆಂಬ ಅಂಶವನ್ನೂ ಗಣನೆಗೆ ತೆಗೆದುಕೊಳ್ಳಲಾಯಿತು. ಹೀಗಾಗಿ ಬಹುಸಂಖ್ಯಾತರ ಭಾಷೆಗಳಾಗಿದ್ದ ಇತರ ಭಾಷೆಗಳನ್ನು, ಉದಾಹರಣೆಗೆ–ಜಾವ ಭಾಷೆಯನ್ನು ಬದಿಗಿರಿಸಿ ಮಲೈ ಭಾಷೆಯನ್ನು ಸ್ವೀಕರಿಸಲು ಇವೇ ಪ್ರಮುಖ ಕಾರಣಗಳಾದವು.

ಇಂಡೊನೇಷ್ಯದ ಮೇಲಿನ ಅಧಿಕಾರ ಉಳಿಸಿಕೊಳ್ಳಲು ನಡೆದ ಯತ್ನದ ಅವಧಿಯಲ್ಲಿ ಜಪಾನೀಯರೇ ಇಂಡೊನೇಷ್ಯ ಭಾಷೆಯನ್ನು ಬಳಸಿ ಬೆಳೆಸಿದ್ದಾರಾದರೂ ಯುದ್ಧ ಮುಗಿದು ದೇಶ ಸ್ವಾತಂತ್ರ್ಯವನ್ನು ಗಳಿಸಿದ ಮೇಲೆಯೇ ಈ ಭಾಷೆಯನ್ನು ವ್ಯಾಪಕವಾಗಿ ಬಳಸಲು ತೀವ್ರ ಕ್ರಮಕೈಗೊಳ್ಳಲಾಯಿತು. ವಿಜ್ಞಾನ ಕ್ಷೇತ್ರದಲ್ಲಿ ಹಾಗೂ ಸಾಮಾನ್ಯ ಬಳಕೆಯಲ್ಲಿ ಯಾವ ಶಬ್ದಗಳನ್ನು ಸ್ವೀಕರಿಸಬೇಕು, ಯಾವ ಶಬ್ದಗಳನ್ನು ಬಿಡಬೇಕು ಎಂಬ ವಿಚಾರವನ್ನು ನಿರ್ಣಯಿಸುವ ಅಧಿಕಾರವನ್ನು ಪಾರಿಭಾಷಿಕಶಬ್ದ ಸಮಿತಿಯೊಂದಕ್ಕೆ ನೀಡಲಾಯಿತು. ಇಂದು ಅಧಿಕೃತ ಪ್ರಕಟಣೆಗಳಲ್ಲಿ, ವರ್ತಮಾನ ಪತ್ರಿಕೆಗಳಲ್ಲಿ, ನಿಯತಕಾಲಿಕ ಪತ್ರಿಕೆಗಳಲ್ಲಿ, ಮಾತ್ರವಲ್ಲದೆ ಪಠ್ಯಪುಸ್ತಕಗಳಲ್ಲೂ ವೈಜ್ಞಾನಿಕ ಮತ್ತು ಸಾಹಿತ್ಯಕ ಪ್ರಕಟಣೆಗಳಲ್ಲೂ ಇಂಡೊನೇಷ್ಯ ಭಾಷೆಯನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. (ಐ.ಡಿ.)

**ಇಂಡೊ–ಆರ್ಯನ್ ಭಾಷೆಗಳು:** ಈಗ ಭಾರತದಲ್ಲಿ ಬಳಕೆಯಲ್ಲಿರುವ ಸಂಸ್ಕೃತಿ ಮತ್ತು ತಜ್ಜನ್ಯ ಭಾಷೆಗಳು. ಜಗತ್ತಿನ ಭಾಷೆಯ ಗುಂಪುಗಳಲ್ಲಿ ಇದೂ ಒಂದು ಪ್ರಮುಖ ಗುಂಪು. ಆದರೆ ಇದು ಒಂದು ಸ್ವತಂತ್ರ ಘಟಕವಾಗಿರದೆ ಜಗತ್ತಿನ ಅತಿ ಮಹತ್ತ್ವದ ಇಂಡೋ–ಯುರೋಪಿಯನ್ ಭಾಷಾವರ್ಗದ ಅತಿಮಹತ್ತ್ವದ ಶಾಖೆಯಾಗಿದೆ. (ನೋಡಿ–ಇಂಡೊ–ಯುರೋಪಿಯನ್–ಭಾಷೆಗಳು) ಇಂಡೊ–ಯುರೋಪಿಯನ್ ಶಾಖೆಯ (ಶತಮ್) ಗುಂಪಿಗೆ ಇವು ಸೇರಿವೆ. ಕೆಂಟುಮ್ ಇನ್ನೊಂದು ಗುಂಪು. ಇನ್ನು ಕೆಲವರ ಪ್ರಕಾರ ಇದಕ್ಕೂ ಹಿಂದಿನದು ಇಂಡೋಹೆಟ್ಟೈಟ್ ಶಾಖೆ. ವಿವಾದಾಸ್ಪದವಾದ ಈ ಇಂಡೋಹೆಟ್ಟೈಟ್ ಗುಂಪಿನ ಸ್ಥಾನದ ಉಲ್ಲೇಖವನ್ನು ಕಡೆಗಣಿಸಿ, ಇಂಡೊ–ಯುರೋಪಿಯನ್ ಗುಂಪಿನಿಂದ ವಂಶವೃಕ್ಷವನ್ನು ಪ್ರಾರಂಭಿಸಿದರೆ ಅದರಲ್ಲಿ ಇಂಡೊ–ಇರಾನಿಯನ್, ಗ್ರೀಕ್, ಲ್ಯಾಟಿನ್ ಮುಂತಾದ ಶಾಖೆಗಳಾಗುತ್ತವೆ. ಆಮೇಲೆ ಈ ಇಂಡೋ–ಇರಾನಿಯನ್ ಶಾಖೆಯಲ್ಲಿ ಇರಾನಿಯನ್ ಮತ್ತು ಇಂಡೋ–ಆರ್ಯನ್ ಎಂಬ ಶಾಖೆಗಳೊಡೆಯುತ್ತವೆ. ಇಂಡೊ–ಇರಾನಿಯನ್ ಶಾಖೆ ಆರ್ಯರು ಇನ್ನೂ ಭಾರತವನ್ನು ಪ್ರವೇಶಿಸುವುದಕ್ಕಿಂತ ಮುಂಚಿನ ಘಟ್ಟ. ಇದು ಪ್ರ.ಶ.ಪೂ. 2000 ವರ್ಷಗಳಷ್ಟು ಪೂರ್ವದಲ್ಲಿಯೇ ಮೆಸೊಪೊಟೇಮಿಯ ಪ್ರದೇಶದಲ್ಲಿ ಬಳಕೆಯಲ್ಲಿತ್ತು. ಇಲ್ಲಿ ಇಂದ್ರ, ಮಿತ್ರ, ವರುಣ, ಸೂರ್ಯ ಮುಂತಾದ ಮುಂದಿನ ಆರ್ಯದೇವತೆಗಳು ಪ್ರಚಾರದಲ್ಲಿದ್ದುದು ಈ ಮಾತಿಗೆ ಪುಷ್ಟಿಯನ್ನೊದಗಿಸುತ್ತವೆ. ಈ ಆರ್ಯರಲ್ಲಿಯ ಒಂದು ಗುಂಪು ಈಗಿನ ಇರಾನ್ ಮತ್ತು ಅದರ ಸುತ್ತುಮುತ್ತಲಿನ ಪ್ರದೇಶದಲ್ಲಿ ನೆಲೆನಿಂತು ಇರಾನಿ ಶಾಖೆಗೆ ಕಾರಣವಾಯಿತು. ಇನ್ನೊಂದು ಗುಂಪು ಹಾಗೇ ಮುಂದುವರಿದು ಭಾರತವನ್ನು ಪ್ರವೇಶಿಸಿದ ಮೇಲೆ ಇಂಡೊ–ಆರ್ಯನ್ ಶಾಖೆ ಉಂಟಾಯಿತು. ಇಂಡೊ–ಆರ್ಯನ್ ಭಾಷೆಗಳ ಇತಿಹಾಸ ಪ್ರಾರಂಭವಾಗುವುದು ಆರ್ಯರು ಭಾರತದಲ್ಲಿ ಕಾಲಿಟ್ಟದಿನಿಂದ.

ಇಂಡೊ–ಇರಾನಿಯನ್ ಮತ್ತು ಇಂಡೊ–ಆರ್ಯನ್‌ಗಳಲ್ಲಿಯ ಭಿನ್ನತೆಯನ್ನು ಕುರಿತು ವಿವೇಚಿಸುವಾಗ ಧ್ವನಿಭಿನ್ನತೆಯನ್ನು ಉದಾಹರಣೆಯಾಗಿ ಗಮನಿಸಬಹುದು.

1. ಇಂಡೊ–ಇರಾನಿಯನ್ gzh, bzh ಮುಂತಾದ ಘೋಷದ್ವನಿಗಳು ಇಂಡೊ–ಆರ್ಯನ್‌ನಲ್ಲಿ ಅಘೋಷಗಳಾಗಿವೆ (ದವ್ಜ್ಞಾ–ದಿಪ್ಸಾ). 2. z ಎಲ್ಲಕಡೆಗೂ ಲೋಪವಾಗಿದೆ. (ಮಜ್ದಾ–ಮೇಧಾ). 3. ಸ್ ಧ್ವನಿಮಾ ಹ ಆಗಿ ಮಾರ್ಪಡುತ್ತದೆ (ಅಹುರ್–ಅಸುರ). 4. dh ಮತ್ತು bhಗಳು h ಆಗುತ್ತವೆ (ಇಧ–ಇಹ).

ಭಾರತದ ನೆಲದಲ್ಲಿ ಕಾಲಿಟ್ಟವರಲ್ಲಿ ಆರ್ಯರೇ ಪ್ರಥಮರೇನಲ್ಲ. ಅವರಿಗಿಂತಲೂ ಹಿಂದೆ ನಿಗ್ರಿಟೊ. ಆಸ್ಟ್ರಿಕ್ ಮತ್ತು ದ್ರಾವಿಡ ಜನಾಂಗಗಳು ಇಲ್ಲಿದ್ದುವು. ಅವೆಲ್ಲ ಭಾಷೆಗಳ ಅವಶೇಷಗಳನ್ನು ವೇದ ಮತ್ತು ಸಂಸ್ಕೃತ ಭಾಷೆ ಉಳಿಸಿಕೊಂಡಿವೆ.

ಇಂಡೊ–ಆರ್ಯನ್ ಶಾಖೆಯ ಅತಿ ಪ್ರಾಚೀನ ಉಲ್ಲೇಖವೆಂದರೆ ಋಗ್ವೇದ. ವೇದಗಳ ಕಾಲದ ಬಗೆಗಿನ ಅನೇಕ ಸಿದ್ಧಾಂತಗಳನ್ನು ತೂಗಿನೋಡಿ ಭಾಷಾಶಾಸ್ತ್ರದ ಆಧಾರದಿಂದ ಪರಿಶೀಲಿಸಿದರೆ ಅದು ಪ್ರ. ಶ. ಪೂ. 1500–1300ರ ಸುಮಾರು ಎಂದು ಹೇಳಬಹುದು. ವೇದಗಳಿಂದ ಪ್ರಾರಂಭವಾಗಿ ಈಗ ಎಲ್ಲೆಡೆಯೂ ಪ್ರಚಾರದಲ್ಲಿರುವ ಆ ಶಾಖೆಯ ಅನೇಕ ಭಾಷೆಗಳಿಗೆ ಸು.3000 ವರ್ಷಗಳ ಅವ್ಯಾಹತ ಇತಿಹಾಸವಿದೆ. ಭಾಷೆಗಳು ಯಾವಾಗಲೂ ಬದಲಾಗುತ್ತಿರುವುದು ಅನಿವಾರ್ಯ. ಇಂಥ ಸುದೀರ್ಘ ಇತಿಹಾಸವನ್ನುಳ್ಳ ಇಂಡೊ–ಆರ್ಯನ್ ಭಾಷೆಗಳು ಬದಲಾವಣೆಯ ಅನೇಕ ಘಟ್ಟಗಳನ್ನು ಕಾಣಬಹುದು. 1. ಪೂರ್ವ ಇಂಡೋ–ಆರ್ಯನ್: ವೇದದ ಸಂಸ್ಕೃತ ಮತ್ತು ಅಭಿಜಾತ ಸಂಸ್ಕೃತ; 2. ಮಧ್ಯ ಇಂಡೋ–ಆರ್ಯನ್: ಪಾಲಿ, ಪ್ರಾಕೃತ, ಅಪಭ್ರಂಶ; 3. ನವ ಇಂಡೋ–ಆರ್ಯನ್; ಹಿಂದಿ, ಬಂಗಾಲಿ, ಗುಜರಾತಿ, ಲಹಂದಾ, ಪಂಜಾಬಿ, ಪಹಾಡಿ, ಬಿಹಾರಿ, ಮರಾಠಿ, ಸಿಂಧಿ, ರಾಜಾಸ್ತಾನಿ, ಉಡಿಯಾ, ಅಸ್ಸಾಮೀ.

**ಪೂರ್ವ ಇಂಡೊ–ಆರ್ಯನ್:** ಈ ಘಟ್ಟದ ಪ್ರಮುಖ ಅಂಗಗಳಾದ ವೈದಿಕ ಸಂಸ್ಕೃತ ಮತ್ತು ಅಭಿಜಾತ ಸಂಸ್ಕೃತ ಭಾಷೆಗಳಲ್ಲೇ ಬೇಕಾದಷ್ಟು ಭಿನ್ನತೆ ಕಂಡುಬರುತ್ತದೆ. ಇವೆರಡರ ರಚನೆ ಇದಕ್ಕೆ ಬೇಕಾದಷ್ಟು ಸಾಮಗ್ರಿಯನ್ನು ಒದಗಿಸುತ್ತದೆ. ಈ ವಿಭಾಗವೇನೂ ಹೊಸದಾಗಿ ಮಾಡಿದ್ದಲ್ಲ. ಹಿಂದಿನ ಸಂಸ್ಕೃತ ವೈಯಾಕರಣರೇ ಅದನ್ನು ಮಾಡಿದ್ದಾರೆ. ವೇದದಿಂದ ಪ್ರಾರಂಭವಾಗಿ ಪಾಣಿನಿಯವರೆಗೆ (ಪ್ರ.ಶ.ಪೂ. 4ನೆಯ ಶತಮಾನ) ಪೂರ್ವ ಇಂಡೋ–ಆರ್ಯನ್ ಯುಗ, ವೇದಗಳು ಆಡುನುಡಿಗೆ ಬಹಳ ಸಮೀಪವಿದ್ದುವು. ಅಂತೆಯೇ ಆ ಪ್ರಯೋಗಗಳಲ್ಲಿ ಸ್ವಚ್ಛಂದತೆ ಇತ್ತು, ವೈವಿಧ್ಯವಿತ್ತು. ಇವೆರಡೂ ಅಭಿಜಾತ ಸಂಸ್ಕೃತದಲ್ಲಿ ಕಾಣುವುದಿಲ್ಲ. ಧ್ವನಿ ವಿಭಾಗದಲ್ಲಿ ಬಹಳಷ್ಟು ಬದಲಾವಣೆಯಿದೆ. ಧ್ವನಿವಿಭಾಗದಲ್ಲಿ ಬಹುಪ್ರಮುಖ ವಿಷಯವೆಂದರೆ ವೇದಗಳಲ್ಲಿ ಬರುವ ಸ್ವರಾಘಾತದ (ಉದಾತ್ತ, ಅನುದಾತ್ತ, ಸ್ವರಿತ) ಪ್ರಾಬಲ್ಯ ಮುಂದೆ ಕಡಿಮೆಯಾಗುವುದು.

ವ್ಯಾಕರಣ ವಿಭಾಗದಲ್ಲಿ ವೇದಭಾಷೆ ವಿವಿಧ ಪ್ರಯೋಗಗಳ ಮೂಲಕ ಬಹು ಶ್ರೀಮಂತವಾಗಿದೆ. ಇದು ಇಂಡೊ–ಯುರೋಪಿಯನ್ ಅಂಶವನ್ನು ಉಳಿಸಿಕೊಂಡುದರ ಸಂಕೇತ. ಅಭಿಜಾತ ಸಂಸ್ಕೃತದಲ್ಲಿ ನಾಮಪದೋತ್ಪತ್ತಿಯ ವಿಷಯದಲ್ಲಿ ವೈವಿಧ್ಯ ಕಡಿಮೆಯಾಗು ತ್ತದೆ. ವೇದದ ನಾಮಪ್ರತ್ಯಯ–ಯು (ಯಜ್ಯ–ಧಾರ್ಮಿಕ, ದೇವಯು–ದೇವಭಕ್ತ) ಮುಂದೆ ಉಳಿಯಲಿಲ್ಲ. ವೇದಗಳ ಕ್ರಿಯಾರೂಪಗಳಲ್ಲಿ ಶ್ರೀಮಂತಿಕೆ ಇದ್ದು ಅವು ಪೂರ್ಣವಾಗಿವೆ. ಅದೇ ಅಭಿಜಾತ ಸಂಸ್ಕೃತದಲ್ಲಿ ಅನೇಕ ಪ್ರಯೋಗಗಳು ನಶಿಸಿ, ವ್ಯವಸ್ಥೆ ಮತ್ತು ಸರಳತೆ ಕಾಣುತ್ತದೆ. ವೇದಗಳಲ್ಲಿನ ಪುನು ರುಕ್ತಿ ಮತ್ತು ಸಹಾಯಕ ಕ್ರಿಯಾಪದಗಳು ಭೂತಕಾಲದಲ್ಲಿ ಮುಂದೆ ಕಂಡುಬರುತ್ತವೆ (ಜೂ–ಜೂಜು, ವಚ್–ವವಾಚೇ, ಭೂ–ಬಭೂವ). ವೇದಗಳಲ್ಲಿ ಪೂರ್ವ ಪ್ರತ್ಯಯ ವಿಷಯದಲ್ಲಿ ಸ್ವಚ್ಛಂದತೆಯಿತ್ತು. ಅದು ಕ್ರಿಯಾಪದಕ್ಕಿಂತ ನಾಲ್ಕಾರು ಶಬ್ದಗಳ ಮೊದಲು ಇಲ್ಲವೆ ಸ್ವತಂತ್ರವಾಗಿಯೂ ಬಳಕೆಯಾಗುತ್ತಿತ್ತು. ಮುಂದೆ ಅದರ ಸ್ಥಾನ ನಿರ್ದಿಷ್ಟವಾಯಿತು.

ವೇದಗಳಲ್ಲಿ ಪ್ರಚುರವಾಗಿದ್ದ ಅನೇಕ ಶಬ್ದಗಳು ಶಬ್ದವಿಭಾಗದಲ್ಲಿ ಮುಂದೆ ಇಲ್ಲವಾಗಿವೆ (ಅತಕ್–ಅಡುಗೆ, ಅಪಸ್–ಕೆಲಸ, ಆಪಿ–ಗೆಳೆಯ, ಗಾತು–ಮಾರ್ಗ). ಎಷ್ಟೋ ಶಬ್ದಗಳು ಹೊಸತಾಗಿ ಸೇರಿವೆ.

**ಮಧ್ಯ ಇಂಡೊ–ಆರ್ಯನ್:** ಸಂಸ್ಕೃತ ಬಳಕೆಯಲ್ಲಿದ್ದಾಗಲೇ ಮಧ್ಯ ಇಂಡೊ–ಆರ್ಯನ್ ಭಾಷೆಗಳು ಅದರ ಸ್ಪರ್ಧಿಗಳೆಂಬಂತೆ ಅನೇಕ ರೂಪದಲ್ಲಿ ಬೆಳೆದಿದ್ದವು. ಅವು ಹೆಚ್ಚಾಗಿ ಆಡುಮಾತುಗಳಾಗಿದ್ದರೂ ಗ್ರಂಥಸ್ಥವಾಗಿಯೂ ಇದ್ದುವು. ಈ ಸ್ಪರ್ಧೆ ಮೊದಮೊದಲು ಅತಿಯಾಗಿತ್ತು. ವಿಚಿತ್ರವೆಂದರೆ, ಸಂಸ್ಕೃತಭಾಷೆ ಸಂಸ್ಕೃತಿ ಮತ್ತು ಆಡಳಿತಗಳ ಭಾಷೆಯಾಗಿ ಪೂರ್ಣ ಬೆಳವಣಿಗೆ ಹೊಂದಿದ್ದು ಅದು ತಾಯಿನುಡಿಯ ಸ್ಥಾನದಿಂದ ದೂರವಾದ ಮೇಲೆ, ಪ್ರ.ಶ.ಪೂ. 500 ರ ಸುಮಾರಿಗೆ ಬೌದ್ಧ ಮತ್ತು ಜೈನ ಧರ್ಮಗಳ ಉದಯದೊಂದಿಗೆ ಮಧ್ಯ ಇಂಡೊ–ಆರ್ಯನ್ ಭಾಷೆಗಳೂ ಪ್ರಾಮುಖ್ಯ ಪಡೆದುವು. ಈ ಮತಸ್ಥಾಪಕರು ಪ್ರಜ್ಞಾಪೂರ್ವಕವಾಗಿ ಆಡುನುಡಿಯನ್ನೇ ತಮ್ಮ ಧರ್ಮಪ್ರಚಾರಕ್ಕೆ ಉಪಯೋಗಿಸಿದ್ದೇ ಇದಕ್ಕೆ ಕಾರಣ. ಅಶೋಕನ ಶಾಸನಗಳೆಲ್ಲ ಪ್ರಾಕೃತದಲ್ಲೇ ಇರುವುದು ಈ ಮಾತಿಗೆ ನಿದರ್ಶನ. ಶಾಸನಗಳಲ್ಲಿ ಸಂಸ್ಕೃತಕ್ಕಿಂತ ಮೊದಲು ಪ್ರಾಕೃತ ಬಳಕೆಯಾದದ್ದನ್ನು ಗಮನಿಸಬೇಕು. ಜೈನ ಬೌದ್ಧಧರ್ಮಗಳ ಪ್ರಾರಂಭದ ಗ್ರಂಥಗಳೆಲ್ಲ ಮಧ್ಯ ಇಂಡೋ–ಆರ್ಯನ್ ಭಾಷೆಗಳಲ್ಲೇ ಇವೆ. ಬರಬರುತ್ತ ಸಂಸ್ಕೃತದ ಕೈಮೇಲಾಗಿ ಬೌದ್ಧ ಜೈನಧರ್ಮಗ್ರಂಥಗಳಿಗೂ (ಸ್ವಲ್ಪ ತಡವಾಗಿಯಾದರೂ) ಸಂಸ್ಕೃತವೇ ಮಾಧ್ಯಮವಾಯಿತು. ಸಂಸ್ಕೃತ ಮತ್ತು ಪ್ರಾಕೃತಗಳ ಏರು ಪೇರು ಬ್ರಾಹ್ಮಣ ಧರ್ಮ ಮತ್ತು ಜೈನಧರ್ಮಗಳ ಏರುಪೇರುಗಳೊಡನೆ ಹೆಣೆದುಕೊಂಡಿದೆ. ಕೊನೆಗೆ ಬ್ರಾಹ್ಮಣಧರ್ಮ ಮತ್ತೆ ಪ್ರಬಲವಾಗಿ ಸಂಸ್ಕೃತವೇ ಭರತಖಂಡಕ್ಕೆಲ್ಲ ಏಕಮುಖ ಭಾಷಾಸಾಧನವಾಯಿತು. ಸಂಸ್ಕೃತ ನಾಟಕಗಳಿಂದ ಬೇಕಾದಷ್ಟು ನಿದರ್ಶನಗಳು ಸಿಕ್ಕುತ್ತವೆ. ನಾಟಕಗಳಲ್ಲಿ ಕೆಲವು ಪಾತ್ರಗಳು ಸಂಸ್ಕೃತದಲ್ಲೂ ಇನ್ನೂ ಕೆಲವು ಪಾತ್ರಗಳು ಪ್ರಾಕೃತದಲ್ಲೂ ಮಾತನಾಡುವುದು ಪದ್ಧತಿ. ರಾಜರು, ಮಂತ್ರಿಗಳು, ಬ್ರಾಹ್ಮಣರು ಮುಂತಾದ ಉಚ್ಚವರ್ಗದವರು ಸಂಸ್ಕೃತವನ್ನೂ ಸ್ತ್ರೀಯರು, ಮಕ್ಕಳು, ವಿದೂಷಕ (ಇವನು; ಬ್ರಾಹ್ಮಣನಾಗಿದ್ದರೂ) ಪ್ರಾಕೃತವನ್ನೂ ಮಾತನಾಡಬೇಕು. ತಾತ್ಪರ್ಯವಿಷ್ಟು, ಪ್ರಾಕೃತಗಳು ಆಡುನುಡಿಗಳಾಗಿದ್ದುವು. ಸಾಮಾನ್ಯ ಜನರೇಕೆ, ಸಾಮಾನ್ಯ ಬ್ರಾಹ್ಮಣರು ಕೂಡ ಅವುಗಳನ್ನೇ ಬಳಸುತ್ತಿದ್ದರು. ಸಂಸ್ಕೃತ ಗ್ರಂಥಭಾಷೆಯಾಗಿತ್ತು. ಧರ್ಮಚರ್ಚೆ, ಆಡಳಿತ ಮುಂತಾದವುಗಳಿಗಾಗಿ ಮಾತ್ರ ಅದರ ಉಪಯೋಗವಾಗುತ್ತಿತ್ತು.

ಈ ಮಧ್ಯೆ ಇಂಡೊ–ಆರ್ಯನ್ ಭಾಷೆಗಳಲ್ಲಿ ಪ್ರಾದೇಶಿಕ ಭಿನ್ನತೆಯಿಂದಾಗಿ ಉಂಟಾಗಿರುವ ವೈವಿಧ್ಯ ಮೂರು ತೆರನಾಗಿದೆ: 1. ಉದೀಚ್ಯ, 2. ಮಧ್ಯದೇಶ ಮತ್ತು 3. ಪ್ರಾಚ್ಯ. ಉದೀಚ್ಯದಲ್ಲಿ ಧ್ವನಿಸಾಂಪ್ರದಾಯಿಕತೆ ಹೆಚ್ಚು, ಪ್ರಾಚ್ಯದಲ್ಲಿ ಧ್ವನಿ ನಾಶ ಹೆಚ್ಚಾಗಿ ಕಂಡುಬರುತ್ತದೆ. ಮೂರ್ಧನ್ಯ ಧ್ವನಿಗಳು ಈ ಗುಂಪಿನ ಭಾಷೆಯ ಒಂದು ವೈಶಿಷ್ಟ್ಯ. ದ್ರಾವಿಡ ಭಾಷೆಗಳ ಪ್ರಭಾವವೇ ಇರಲಿ, ಮತ್ತೇನೇ ಇರಲಿ, ಲ್ + ತ್ (ಹ್) → ಟ್

(ಹ್), ಲ್+ದ್(ಹ್)–> ಡ್(ಹ್), ಲ್+ನ್–>ಣ್ ಆಗುವುದನ್ನು ಕಾಣುತ್ತೇವೆ. ಶಬ್ದಾಂತ್ಯ ವ್ಯಂಜನಗಳು ಲೋಪವಾಗುತ್ತವೆ (ವಿದ್ಯುತ್–>ವಿಜ್ಜು). ಸ್ವರಮಧ್ಯಸ್ಪರ್ಶ (ಸ್ಟಾಪ್) ಧ್ವನಿ ಘರ್ಷಧ್ವನಿಯಂತೆ ಉಚ್ಚರಿಸಲ್ಪಡುತ್ತದೆ. (nadi) (ನದಿ) –> Nadi, ati (ಅತಿ) - Adi). ಮಧ್ಯ ಇಂಡೊ–ಆರ್ಯನ್ನಿನಲ್ಲಿ ಸಮರೂಪಧಾರಣೆ (ಅಸಿಮಿಲೇಷನ್) ಒಂದು ಮಹತ್ತ್ವದ ಅಂಶ. ಈ ಅಂಶವೇ ಪೂರ್ವಘಟ್ಟದಿಂದ ಮಧ್ಯಘಟ್ಟವನ್ನು ಬೇರ್ಪಡಿಸುವ ಮಹತ್ತ್ವದ ಸಾಧನ. ಈ ಸಮರೂಪಧಾರಣೆ ವ್ಯಂಜನದ್ವಿತ್ವಾಕ್ಷರಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ (ಅದ್–> ಉತ್ತುಮ್, ಲಭ್–> ಲಬ್ಧುಮ್ ಎರಡೂ ಕಡೆಗಳಲ್ಲಿ – ತ ಪ್ರತ್ಯಯವಿದೆ). ಅನುನಾಸಿಕಗಳು ಹಿಂದಿನ ಸ್ಪರ್ಶಧ್ವನಿಯೊಡನೆ ಸಮರೂಪಧಾರಣೆ ಮಾಡುತ್ತವೆ (ಅಗ್ನಿಸ್ಕಂಧಾನಿ–> ಅಗ್ನಿಕಂಧನಿ, ಆತ್ಮ–>ಅತ್ತ :: ಅಶೋಕನ ಶಾಸನಗಳು).

**ನವ ಇಂಡೊ–ಆರ್ಯನ್:** ಪ್ರ.ಶ. 1000ದ ಸುಮಾರಿಗೆ ಆರ್ಯನ್ ಭಾಷೆ ತನ್ನ ಮುಂದಿನ ಹಂತದಲ್ಲಿ ಕಾಲಿಟ್ಟಿತು. ಅದೇ ನವ ಇಂಡೊ–ಆರ್ಯನ್. ಪ್ರಾಕೃತ ಭಾಷೆಗಳು ಪ್ರಾದೇಶಿಕ ಅಪಭ್ರಂಶಗಳ ಮುಖಾಂತರ ನವ ಇಂಡೊ–ಆರ್ಯನ್ ಭಾಷೆಗಳಾಗಿ ಪರಿವರ್ತಿತವಾದವು. ಸಂಸ್ಕೃತವಂತೂ ಇದ್ದೇ ಇತ್ತು. ಹೆಚ್ಚಾಗಿ ಬರಹದ ಭಾಷೆಯಾಗಿ. ಈ ಪ್ರಾದೇಶಿಕ ಭಾಷೆಗಳೆಲ್ಲ ಆಡುನುಡಿಗಳಾದುದರಿಂದ (ಮುಂದೆ ಒಂದೆರಡು ಶತಮಾನಗಳಲ್ಲಿ ಗ್ರಂಥಸ್ಥ ಭಾಷೆಗಳೂ ಆದವು) ಮೂಲಕ್ಕಿಂತ ಭಿನ್ನ ಭಿನ್ನ ರೀತಿಯಲ್ಲಿಯೇ ಬೆಳೆಯಲಾರಂಭಿಸಿದುವು. ಸಂಸ್ಕೃತ ತನ್ನ ಗತವೈಭವವನ್ನು ಹೊತ್ತುಕೊಂಡು ನಿಂತಿದ್ದರೂ ಪ್ರಾದೇಶಿಕ ಭಾಷೆಗಳು ವರ್ತಮಾನವನ್ನು ರೂಪಿಸುವಲ್ಲಿ ಮುಖ್ಯ ಪಾತ್ರವಹಿಸಬೇಕಾಗಿತ್ತು.

ನವ ಇಂಡೊ–ಆರ್ಯನ್ ಭಾಷೆಗಳಿಗೆ ಕಾವ್ಯಸಾಹಿತ್ಯ ಬಂದದ್ದು ಸಂಸ್ಕೃತ, ಪಾಲಿ, ಪ್ರಾಕೃತಗಳ ಬಳುವಳಿಯಾಗಿ, ಗದ್ಯಸಾಹಿತ್ಯ ಹಿಂದೆಯೂ ಅಪೂರ್ವವಾಗಿದ್ದಿತಾದರೂ ಇದ್ದಷ್ಟು ಪ್ರಮಾಣದಲ್ಲೂ ಅದು ನವ ಇಂಡೋ–ಆರ್ಯನ್ ಭಾಷೆಗಳಲ್ಲಿ ಮುಂದುವರಿಯಲಿಲ್ಲ. ಎಲ್ಲ ನವ ಇಂಡೊ–ಆರ್ಯನ್ ಭಾಷೆಗಳಲ್ಲಿ ಸಾಹಿತ್ಯರಚನೆ ಸಾಮಾನ್ಯವಾಗಿ ಸಮಕಾಲೀನವಾಗಿದ್ದುದು ಕಂಡುಬರುತ್ತದೆ. ಮರಾಠಿಯಲ್ಲಿ 10ನೆಯ ಶತಮಾನ ಗುಜರಾತಿಯಲ್ಲಿ 12ನೆಯ ಶತಮಾನ, ಪಂಜಾಬಿಯಲ್ಲಿ 11ನೆಯ ಶತಮಾನ, ಅಸ್ಸಾಮಿನಲ್ಲಿ 13ನೆಯ ಶತಮಾನ, ಹಿಂದಿಯಲ್ಲಿ 13ನೆಯ ಶತಮಾನಗಳಲ್ಲಿ ಕೃತಿಗಳ ರಚನೆ ಮೊದಲಾಯಿತೆಂದು ತಿಳಿಯುತ್ತದೆ.

ಹಿಂದಿನ ಘಟ್ಟಗಳಿಂದ ನವ ಇಂಡೋ–ಆರ್ಯನ್ ಭಾಷೆಗಳ ಭಿನ್ನತೆಯನ್ನವಲೋಕಿಸುವಾಗ, ಧ್ವನಿವಿಭಾಗದಲ್ಲಿ ವ್ಯತ್ಯಾಸವಾಗಿದ್ದರೂ ಅದು ನಿಚ್ಚಳವಾಗಿಲ್ಲ. ಭಾಷೆಗಳಲ್ಲಿ ಪ್ರಾದೇಶಿಕ ಭಿನ್ನತೆಯಿಂದ ವೈಯಕ್ತಿಕತೆ ಹೆಚ್ಚಿ, ಒಂದೊಂದು ಭಾಷೆಯಲ್ಲಿ ಒಂದೊಂದು ರೀತಿಯ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಉದಾ: ಪೂರ್ವ ಮತ್ತು ಮಧ್ಯ ಇಂಡೋ–ಆರ್ಯನ್ c, j ಮರಾಠಿಯಲ್ಲಿ (ಕೆಲ ಪರಿಸರಗಳಲ್ಲಿ ಮಾತ್ರ), ಉಡಿಯಾ ಭಾಷೆಯಲ್ಲಿ, ಗುಜರಾತಿಯಲ್ಲಿ ಕೆಲ ರಾಜಾಸ್ತಾನೀ ಉಪಭಾಷೆಗಳಲ್ಲಿ ಗೋರ್ಖಾಲಿಯಲ್ಲಿ ಮತ್ತು ಪೂರ್ವ ಬಂಗಾಲಿಯಲ್ಲಿ ts, dz ಆಗಿವೆ.

ಪರ್ಷಿಯನ್ ಭಾಷೆಯ ಸಂಪರ್ಕದಿಂದ ಹಿಂದಿಯಲ್ಲಿ f, ae, x, y, s, z ಧ್ವನಿಗಳು ಸಮಾವೇಶವಾಗಿವೆ. ಧ್ವನಿನಾಶ ತತ್ತ್ವ ಹಾಗೇ ಮುಂದುವರಿದು (ಹ್) ಕೆಲವು ಭಾಷೆಗಳಲ್ಲಿ ಲೋಪವಾಗಿದೆ; ಇನ್ನೂ ಕೆಲವು ಭಾಷೆಗಳಲ್ಲಿ (?) ಆಗಿದೆ. ಅದೇ ಹಿಂದಿಯಲ್ಲಿ ಇದು ಸ್ಪಷ್ಟವಾಗಿ ಉಳಿದಿದೆ. (ಬಾರಹ್–12. ಬಾಘ್–ಹುಲಿ, ~ ಸಾಂಝ್ – ಸಂಜೆ).

ಆಕೃತಿಮಾ ವಿಭಾಗದಲ್ಲಿ ಹಳೆಯ ಸಾಮಗ್ರಿಯ ಕಲಸುಮೇಲೋಗರವಾಗಿದೆ. ಒಂದು ವಿಭಕ್ತಿಪ್ರತ್ಯಯದ ಅರ್ಥವನ್ನು ತಿಳಿಸಲು, ಅದಕ್ಕೆ ಬದಲಾಗಿ ಬೇರೆ ವಿಧಾನಗಳು ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಲ್ಲಿ ಬಂದುವು (ತಸ್ಮೈ ದತ್ತಮ್‌ಗೆ ಬದಲಾಗಿ ತಸ್ಯಾರ್ಥೇ ಅಥವಾ ತಸ್ಯಕೃತೇ ದತ್ತಮ್). ಹಿಂದಿನ ಪೂರ್ವ ಪ್ರತ್ಯಯಗಳು ಕೇವಲ ಕ್ರಿಯಾಪೂರ್ವಿಗಳಾಗಿ ಪರಿಣಾಮ ಹೊಂದಿದ್ದರಿಂದ ಕ್ರಿಯೆಯೊಡನೆ ಒಟ್ಟು ವಾಕ್ಯದಲ್ಲಿ ಸಂಬಂಧ ಸೂಚಿಸುವ ಅವುಗಳ ಸತ್ತ್ವ ಅಡಗಿತು. ಹೊಸ ಪ್ರತ್ಯಯಗಳು ಹುಟ್ಟಿಕೊಂಡವು. ಬಂಗಾಲಿ ಷಷ್ಠೀ ಎರ್,–ರ್; ಸಿಂಧೀ ಷಷ್ಠೀ–ಜೋ,–ಜೀ; ರಾಜಾಸ್ತಾನೀ, ಗುಜರಾತೀ ಚತುರ್ಥೀ–ನೆ; ಪಂಜಾಬೀ ಚತುರ್ಥೀ–ನು ಇತ್ಯಾದಿ. ಸಮಾನಾರ್ಥಕ ಪದಗಳ ಕ್ರಮೇಣ ಬೆಳೆವಣಿಗೆ ನವ ಇಂಡೋ–ಆರ್ಯನ್ ಭಾಷೆಗಳ ವೈಶಿಷ್ಟ್ಯವೆನ್ನಬೇಕು.

ನವ ಇಂಡೊ–ಆರ್ಯನ್ ಭಾಷೆಗಳು, ಸಂಸ್ಕೃತದ ವಾತಾವರಣದಲ್ಲಿಯೇ ಬೆಳೆದವೆನ್ನಬಹುದು. ಸಂಸ್ಕೃತದಿಂದ ನೇರ ಸ್ವೀಕರಣ ಇಲ್ಲಿ ಅತಿಯಾಗಿ ಕಂಡುಬರುತ್ತದೆ. ಅನೇಕ ಭಾಷೆಗಳನ್ನು – ಕೆಲ ಆರ್ಯೇತರ ಭಾಷೆಗಳನ್ನು ಕೂಡ–ಸಂಸ್ಕೃತವಿಲ್ಲದೆ ಕಲ್ಪಿಸಲು; ಕೂಡ ಸಾಧ್ಯವಿಲ್ಲ. ತತ್ಸಮ, ಅರ್ಧತತ್ಸಮ, ತದ್ಭವ ಹೀಗೆ ನಾನಾ ರೂಪಗಳಲ್ಲಿ ಭಾರತದ ಎಲ್ಲಾ ಭಾಷೆಗಳೂ ಸಂಸ್ಕೃತದಿಂದ ಎರವಲು ಪಡೆದಿವೆ. (ಜೆ.ಎಸ್.ಕೆ.)

**ಇಂಡೊ–ಗ್ರೀಕರು:** ಪ್ರಾಚೀನ ಭಾರತದಲ್ಲಿ ಮೌರ್ಯ ಸಾಮ್ರಾಜ್ಯದ ಪತನಾನಂತರ ಸು. 200 ವರ್ಷಗಳ ಕಾಲ ಭಾರತದ ವಾಯವ್ಯ ಪ್ರದೇಶಗಳಲ್ಲಿ ಪ್ರಬಲವಾಗಿದ್ದ ಗ್ರೀಕರು, ಆಗಿನ ಕಾಲಕ್ಕೆ ಸಂಬಂಧಿಸಿದ ಚರಿತ್ರೆಯಲ್ಲಿ ಇವರು ಯವನರೆಂದು ಪ್ರಸಿದ್ಧರಾಗಿದ್ದಾರೆ. ಆಗ ಇವರು ನಡೆಸಿದ ಆಕ್ರಮಣವನ್ನು ಗ್ರೀಕರ ಎರಡನೆಯ ಮುತ್ತಿಗೆ ಎಂದೂ ಕರೆಯಲಾಗಿದೆ. ಭಾರತದಲ್ಲಿ ಇಂಡೊ–ಗ್ರೀಕರ ಚರಿತ್ರೆಯನ್ನು ತಿಳಿಯಲು ಅವರು ಚಲಾವಣೆಗೆ ತಂದ ನಾಣ್ಯಗಳೂ ಶಾಸನಗಳೂ ಮುಖ್ಯ ಆಧಾರಗಳು. ಅಲ್ಲದೆ ಗ್ರೀಕ್ ಬರೆಹಗಾರರಾದ ಸ್ಟ್ರಾಬೋ, ಪ್ಲಿನಿಪಾಲಿಬೊನ್, ಜಸ್ಟಿನ್ ಇವರ ಕೃತಿಗಳಲ್ಲೂ ಇಂಡೊ–ಗ್ರೀಕರಿಗೆ ಸಂಬಂಧಿಸಿದ ಉಲ್ಲೇಖಗಳು ದೊರೆಯುತ್ತವೆ. ಬೌದ್ಧಧರ್ಮ ಪಾಳಿ ಗ್ರಂಥವಾದ ಮಿಲಿಂದಪನ್ಹದಲ್ಲಿ ಇವರಲ್ಲೊಬ್ಬನಾದ ಮೊನಾಂಡರನಿಗೆ ಸಂಬಂಧಿಸಿದ ವಿವರಗಳಿವೆ. ಪತಂಜಲಿಯ ಮಹಾಭಾಷ್ಯ, ಪಾಣಿನಿಯ ಅಷ್ಟಾಧ್ಯಾಯಿ ಮೊದಲಾದ ಗ್ರಂಥಗಳಲ್ಲಿ ಯವನರ ವಿಷಯವಾದ ಹೇಳಿಕೆಗಳು ದೊರೆಯುತ್ತವೆ. ಎರಡು ಶತಮಾನಗಳ ಕಾಲ ಭಾರತದ ವಾಯವ್ಯ ಭಾಗದಲ್ಲಿ ಗ್ರೀಕರು ತಮ್ಮ ರಾಜಕೀಯ ಪ್ರಾಬಲ್ಯವನ್ನು ಸ್ಥಾಪಿಸಿದ್ದರು. ಕ್ರಮೇಣ ಇವರು ಶಕ ಮತ್ತು ಪಲ್ಲವರಿಂದ ಪರಾಜಿತಗೊಂಡರು. ಆದರೆ ಅಷ್ಟು ದೀರ್ಘಕಾಲ ಎರಡು ಸಂಸ್ಕೃತಿಗಳು ಒಂದನ್ನೊಂದು ಸಂಧಿಸಿದುದರ ಪರಿಣಾಮಗಳು ಗಹನವಾದವು.

ಮೌರ್ಯ ಸಾಮ್ರಾಜ್ಯದ ಪತನಾನಂತರ ಬ್ಯಾಕ್ಟ್ರಿಯಾದ ಗ್ರೀಕರು ಭಾರತದ ವಾಯವ್ಯ ಪ್ರದೇಶದ ಮೇಲೆ ದಾಳಿ ಪ್ರಾರಂಭಿಸಿದರು. ಬ್ಯಾಕ್ಟ್ರಿಯ ಸಿರಿಯ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಮೊದಲ ಆಂಟಿಯೋಕಸ್ ಸಾಮ್ರಾಟ ಪ್ರ.ಶ.ಪೂ. 3ನೆಯ ಶತಮಾನದ ಪ್ರಾರಂಭದಲ್ಲಿ (ಪ್ರ.ಶ.ಪೂ.ಸು.280) ಡಯೋಡಟಸ್ ಎಂಬುವನನ್ನು ಸಂಪದ್ಭರಿತವಾದ ಬ್ಯಾಕ್ಟ್ರಿಯ ಪ್ರಾಂತ್ಯದ ಸತ್ರಪನನ್ನಾಗಿ ನೇಮಿಸಿದ. ಡಯೋಡಟಸ್ ಕ್ರಮೇಣ ಪ್ರಬಲವಾಗಿ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ. ಅದೇ ವೇಳೆಗೆ ಪಾರ್ಥಿಯ ಪ್ರಾಂತ್ಯವೂ ಸಿರಿಯದಿಂದ ಬೇರ್ಪಟ್ಟು ಸ್ವತಂತ್ರವಾಯಿತು. ಡಯೋಡಟಸ್ಸನ ಮಗನಾದ ಇಮ್ಮಡಿ ಡಯೋಡಟಸ್ ಪಾರ್ಥಿಯ ರಾಜ್ಯದೊಡನೆ ಮೈತ್ರಿ ಬೆಳೆಸಿ ಅತ್ಯಂತ ಪ್ರಬಲನಾಗಿ ರಾಜ್ಯ ವಿಸ್ತರಿಸಿದ. ರಾಜನಾದ ಯೂಥಿಡೆಮಸ್ಸನಿಗೂ ಡಯೋಡಟಸ್ಸನಿಗೂ ಇದ್ದ ಸಂಬಂಧವೇನು ಎಂಬ ವಿಷಯವಾಗಿ ಏನೂ ತಿಳಿದುಬರುವುದಿಲ್ಲ. ಪ್ರ.ಶ. ಪೂ. 3ನೆಯ ಶತಮಾನದ ಅಂತ್ಯದಲ್ಲಿ ಮುಮ್ಮಡಿ ಆಂಟಿಯೋಕಸ್ ಎಂಬುವನು ಬ್ಯಾಕ್ಟ್ರಿಯ ಮತ್ತು ಪಾರ್ಥಿಯ ಪ್ರಾಂತ್ಯಗಳನ್ನು ಪುನಃ ಸೆಲ್ಯೂಕಸ್ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲು ದಂಡೆತ್ತಿ ಬಂದ. ಆ ವೇಳೆಗೆ ಯೂಥಿಡೆಮಸ್ ಬ್ಯಾಕ್ಟ್ರಿಯವನ್ನು ಆಳುತ್ತಿದ್ದ. ಆಂಟಿಯೋಕಸ್ಸನಿಗೂ ಯೂಥಿಡೆಮಸ್ಸನಿಗೂ ಉಗ್ರವಾದ ಕದನ ನಡೆಯಿತು. ಬ್ಯಾಕ್ಟ್ರಿಯದ ರಾಜಧಾನಿಯಾದ ಬಾಲ್ಕ್ ನಗರಕ್ಕೆ ಆಂಟಿಯೋಕಸ್ ಮುತ್ತಿಗೆ ಹಾಕಿದ. ಈ ಮುತ್ತಿಗೆ ದೀರ್ಘಕಾಲ ನಡೆದರೂ ಯೂಥಿಡೆಮಸ್ ಸೋಲಲಿಲ್ಲ. ಕೊನೆಗೆ ಅವರಿಬ್ಬರಿಗೂ ಒಪ್ಪಂದವಾಗಿ ಬ್ಯಾಕ್ಟ್ರಿಯ ಸ್ವತಂತ್ರ್ಯ ರಾಜ್ಯವೆಂದು ಆಂಟಿಯೋಕಸ್ ಒಪ್ಪಿಕೊಂಡ. ಈ ಒಪ್ಪಂದದಲ್ಲಿ ಯೂಥಿಡೆಮಸ್ಸನ ಮಗನಾದ ಡೆಮಿಟ್ರಿಯಸ್ ಮುಖ್ಯ ಪಾತ್ರ ವಹಿಸಿದ್ದ. ಡೆಮಿಟ್ರಿಯಸ್ಸನನ್ನು ಬಹುವಾಗಿ ಮೆಚ್ಚಿಕೊಂಡ ಮುಮ್ಮಡಿ ಆಂಟಿಯೋಕಸ್ ತನ್ನ ಮಗಳನ್ನು ಆತನಿಗೆ ಕೊಟ್ಟು ಮದುವೆ ಮಾಡಿದ.

ಆಂಟಿಯೋಕಸ್ ಹಿಂದೂಕುಷ್ ಶ್ರೇಣಿಯನ್ನು ದಾಟಿ ಭಾರತದತ್ತ ಮುಂದುವರಿದ. ಕಾಬೂಲ್ ಕಣಿವೆಯಲ್ಲಿ ಮೌರ್ಯ ಸಾಮ್ರಾಜ್ಯದ ಪತನಾನಂತರ ಸುಭಗಸೇನ ಎಂಬ ರಾಜ ಸ್ವತಂತ್ರ್ಯನಾಗಿ ಆಳುತ್ತಿದ್ದ. ಈತ ಆಂಟಿಯೋಕಸ್ಸನಿಂದ ಪರಾಜಿತನಾಗಿ ಮೈತ್ರಿಯನ್ನ ಪೇಕ್ಷಿಸಿದ. ಸುಭಗಸೇನ ಅಶೋಕನ ಮೊಮ್ಮಗನಾಗಿರಬೇಕೆಂದು ಹಲವು ಚರಿತ್ರಕಾರರ ಅಭಿಪ್ರಾಯ. ಆಂಟಿಯೋಕಸ್ ತನ್ನ ವಿಜಯಯಾತ್ರೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ತನ್ನ ಸಾಮ್ರಾಜ್ಯದಲ್ಲಿ ಅನಾಯಕತೆ ತಲೆದೋರಿದ್ದರಿಂದ ಆತ ಹಿಂದಿರುಗಿದ. ಅವನು ಹಿಂದಿರುಗಿದ ಸ್ವಲ್ಪ ಕಾಲದಲ್ಲಿ ಆತ ಜಯಿಸಿದ್ದ ಭಾಗಗಳನ್ನು ಯೂಥಿಡೆಮಸ್ ಆಕ್ರಮಿಸಿಕೊಂಡ. ಈತ ಪ್ರ.ಶ.ಪೂ. 190ರ ಸುಮಾರಿನಲ್ಲಿ ಮರಣ ಹೊಂದಿದ. ಡೆಮಿಟ್ರಿಯಸ್ ತನ್ನ 35ನೆಯ ವಯಸ್ಸಿನಲ್ಲಿ ವಿಸ್ತಾರವಾದ ಬ್ಯಾಕ್ಟ್ರಿಯ ರಾಜ್ಯದ ಸಿಂಹಾಸನವನ್ನೇರಿದ. ಆ ವೇಳೆಗೆ ಬ್ಯಾಕ್ಟ್ರಿಯ ಪ್ರಬಲ ರಾಜ್ಯವಾಗಿದ್ದು ಶಾಂತಿ ಸಮೃದ್ಧಿಯ ಬೀಡಾಗಿತ್ತು. ಆದ್ದರಿಂದ ಈತ ಜೈತ್ರಯಾತ್ರೆಯಲ್ಲಿ ತೊಡಗಿದ. ಭಾರತದ ವಾಯವ್ಯ ಪ್ರದೇಶದ ರಾಜಕೀಯ ಸ್ಥಿತಿಗಳು ಡೆಮಿಟ್ರಿಯಸ್ಸನಿಗೆ ಅನುಕೂಲಕರವಾಗಿದ್ದುವು. ಈತ ಹಿಂದೂಕುಷ್ ಶ್ರೇಣಿಗಳನ್ನು ದಾಟಿ ಪಂಜಾಬ್ ಮತ್ತು ಸಿಂಧೂ ಪ್ರದೇಶದ ಹಲವು ಭಾಗಗಳನ್ನು ಜಯಿಸಿದ. ಸಿಂಧೂ ಪ್ರದೇಶ, ಸೌರಾಷ್ಟ್ರ ಮತ್ತು ಕಚ್ ಪ್ರದೇಶಗಳು; ಯವನರ ಅಧೀನವಾದವೆಂದು ಸ್ಟ್ರಾಬೋನ ಬರೆವಣಿಗೆಗಳಿಂದ ತಿಳಿದುಬರುತ್ತದೆ. ಯವನರು ಸಾಕೇತವನ್ನು ಮುತ್ತಿದ್ದರೆಂದು ಯುಗಪುರಾಣ ತಿಳಿಸುತ್ತದೆ. ಪತಂಜಲಿ ತನ್ನ ಮಹಾಭಾಷ್ಯದಲ್ಲಿ ಯವನರ ಆಕ್ರಮಣವನ್ನು ಉಲ್ಲೇಖಿಸುತ್ತಾನೆ. ಗೆದ್ದ ಪ್ರದೇಶಗಳಲ್ಲಿ ಡೆಮಿಟ್ರಿಯಸ್ ಹಲವು ನಗರಗಳನ್ನು ನಿರ್ಮಿಸಿದ. ಅಲ್ಲಲ್ಲಿ ಗ್ರೀಕ್ ಪಡೆಗಳನ್ನು ನೆಲೆಗೊಳಿಸಿದ. ಟಾರನ್ ಎಂಬ ವಿದ್ವಾಂಸ ಡೆಮಿಟ್ರಿಯಸ್‌ನನ್ನು ಅಲೆಕ್ಸಾಂಡರನಿಗೂ ಬ್ಯಾಕ್ಟ್ರಿಯವನ್ನು ಮ್ಯಾಸಡೋನಿಯ ದೇಶಕ್ಕೂ ಹೋಲಿಸಿದ್ದಾನೆ. ಡೆಮಿಟ್ರಿಯಸ್ಸನ ಸಾಮ್ರಾಜ್ಯ ಸೆಲ್ಯೂಕಸ್ಸನ ಸಾಮ್ರಾಜ್ಯಕ್ಕಿಂತಲೂ ವಿಶಾಲವಾಗಿತ್ತು. ಆಫ್ಘಾನಿಸ್ತಾನ, ಬಲೂಚಿಸ್ತಾನ, ರಷ್ಯದ ತುರ್ಕಿಸ್ತಾನ, ಚೀನದ ತುರ್ಕಿಸ್ತಾನ ಮತ್ತು ಭಾರತದ ಪಂಜಾಬ್ ಹಾಗೂ ಸಿಂಧೂ ಪ್ರದೇಶಗಳು ಡೆಮಿಟ್ರಿಯಸ್ಸನ ಸಾಮ್ರಾಜ್ಯದ ಭಾಗಗಳಾಗಿದ್ದುವು. ಈತ ಭಾರತದಲ್ಲಿ ರಾಜ್ಯವಿಸ್ತರಣೆಯ ಕಾರ್ಯವನ್ನು ತನ್ನ ನೆಚ್ಚಿನ ಇಬ್ಬರು ದಳಪತಿಗಳಿಗೆ ವಹಿಸಿದ. ಅವರಲ್ಲೊಬ್ಬನಾದ ಮೆನಾಂಡರ್ ಪಾಟಲೀಪುತ್ರಾಭಿಮುಖವಾಗಿಯೂ ಮತ್ತೊಬ್ಬ ದಳಪತಿಯಾದ ಅಪಲೊಡೋಟಸ್ ಸೌರಾಷ್ಟ್ರ ಮತ್ತು ಇತರ ದಕ್ಷಿಣ ಪ್ರದೇಶಗಳ ಕಡೆಗೂ ಮುಂದುವರಿಯಬೇಕಾಗಿತ್ತು. ಪ್ರ.ಶ.ಪೂ. 175ರ ವೇಳೆಗೆ ಬ್ಯಾಕ್ಟ್ರಿಯ ಸಾಮ್ರಾಜ್ಯದಲ್ಲಿ ದಂಗೆಗಳು ತಲೆದೋರಿದುವು. ಯೂಕ್ರಟೈಡ್ಸ್ ಎಂಬುವನು ಬ್ಯಾಕ್ಟ್ರಿಯವನ್ನು ಆಕ್ರಮಿಸಿದ.

ಆದ್ದರಿಂದ ಡೆಮಿಟ್ರಿಯಸ್ ಭಾರತದಲ್ಲಿ ತಾನು ಗೆದ್ದಿದ್ದ ಭಾಗಗಳನ್ನು ತನ್ನ ದಳಪತಿಗಳ ಆಡಳಿತಕ್ಕೆ ಬಿಟ್ಟು ಬ್ಯಾಕ್ಟ್ರಿಯದತ್ತ ಧಾವಿಸಿದ. ಡೆಮಿಟ್ರಿಯಸ್ಸನ ಅಂತ್ಯ ಎಲ್ಲಿ ಎಂದು ಮತ್ತು ಹೇಗಾಯಿತೆಂಬುದನ್ನು ಖಚಿತವಾಗಿ ತಿಳಿಸುವ ಆಧಾರಗಳಿಲ್ಲ. ಜಸ್ಟಿನ್ ಎಂಬ ಗ್ರೀಕ್ ಬರೆಹಗಾರನ ಪ್ರಕಾರ ಡೆಮಿಟ್ರಿಯಸ್ ಭಾರತದಲ್ಲೂ ಯೂಕ್ರಟೈಡೀಸ್ ಬ್ಯಾಕ್ಟ್ರಿಯದಲ್ಲೂ ಮಿಥ್ರೇಡೇಟಸ್ ಪಾರ್ಥಿಯಾದಲ್ಲೂ ಪ್ರ.ಶ. ಪೂ. 170ರ ಸುಮಾರಿನಲ್ಲಿ ಸಮಕಾಲೀನರಾಗಿ ಆಡಳಿತ ನಡೆಸುತ್ತಿದ್ದರೆಂದು ತಿಳಿದುಬರುತ್ತದೆ. ಮತ್ತೆ ಕೆಲವು ಆಧಾರಗಳ ಪ್ರಕಾರ ಡೆಮಿಟ್ರಿಯಸ್ ಬ್ಯಾಕ್ಟ್ರಿಯಕ್ಕೆ ಹಿಂದಿರುಗಿ ಯೂಕ್ರಟೈಸ್ಸನನ್ನು ಎದುರಿಸಿ ಮರಣ ಹೊಂದಿದನೆಂದು ಕೆಲವರು ಹೇಳಿದರೆ ಮತ್ತೆ ಕೆಲವು ಆಧಾರಗಳ ಪ್ರಕಾರ ಪರಾಭವಗೊಂಡು ಪುನಃ ಭಾರತಕ್ಕೆ ಬಂದು ಇಲ್ಲಿ ಮರಣ ಹೊಂದಿದನೆಂದು ತಿಳಿದುಬರುತ್ತದೆ. ಡೆಮಿಟ್ರಿಯಸ್ಸನನ್ನು ಸೋಲಿಸಿದ ಅನಂತರ ಯೂಕ್ರಟೈಡೀಸ್ ಬ್ಯಾಕ್ಟ್ರಿಯ ಸಿಂಹಾಸನವನ್ನೇರಿದ. ಆಡಳಿತವನ್ನು ವ್ಯವಸ್ಥೆಗೊಳಿಸಿ ಭಾರತದತ್ತ ದಂಡಯಾತ್ರೆ ಕೈಗೊಂಡ. ಅವರ ದಂಡಯಾತ್ರೆಯ ವಿವರಗಳು ತಿಳಿದುಬರುವುದಿಲ್ಲ. ಜಸ್ಟಿನ್ನನ ಪ್ರಕಾರ ಆತ ಭಾರತದ ಹಲವು ಭಾಗಗಳನ್ನು ಗೆದ್ದು ಒಂದು ಸಹಸ್ರ ಪಟ್ಟಣಗಳ ಅಧಿಪತಿಯಾಗಿದ್ದ. ಭಾರತದಿಂದ ಬ್ಯಾಕ್ಟ್ರಿಯ ದೇಶಕ್ಕೆ ಹಿಂದಿರುಗಿ ಹೋಗುವಾಗ ತನ್ನ ಮಗನಾದ ಹೆಲಿಯೋಕ್ಲಿಸ್ ಎಂಬುವವನಿಂದ ಮರಣ ಹೊಂದಿದನೆಂದು ಕೆಲವರೂ ಡೆಮಿಟ್ರಿಯಸ್ ಅಥವಾ ಆತನ ದಳಪತಿಗಳಲ್ಲಿ ಒಬ್ಬ ಈತನನ್ನು ಕೊಂದುಹಾಕಿರಬೇಕೆಂದು ಇನ್ನು ಕೆಲವರು ಅಭಿಪ್ರಾಯಪಡುತ್ತಾರೆ. ಪ್ರ.ಶ.ಪೂ.2ನೆಯ ಶತಮಾನಾರ್ಧದಲ್ಲಿ ಯೂಥಿಡೀಮಸ್ ಮತ್ತು ಯೂಕ್ರಟೈಡೀಸ್‌ನ ಸಂತತಿಯವರು ಸಾಮ್ರಾಜ್ಯವನ್ನು ಎರಡು ಬೇರೆ ಬೇರೆ ರಾಜ್ಯಗಳನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಕಾಬೂಲ್, ಗಾಂಧಾರ ಮತ್ತು ತಕ್ಷಶಿಲೆ ಪ್ರದೇಶಗಳನ್ನೂ ಯೂಕ್ರಟೈಡೀಸ್‌ನ ಸಂತತಿಯವರು ಆಳುತ್ತಿದ್ದರು. ಪ್ರ.ಶ.ಪೂ.130ರ ವೇಳೆಗೆ ಶಕ ಅಥವಾ ಸಿಥಿಯನ್ನರು ಬ್ಯಾಕ್ಟ್ರಿಯವನ್ನು ಆಕ್ರಮಿಸಿದರು. ಕ್ರಮೇಣ ಭಾರತದವರೆಗಿನ ಪ್ರದೇಶಗಳು ಯೂಕ್ರಟೈಡೀಸ್ ಮತ್ತು ಯೂಥಿಡೀಮಿಸ್ಸನ ಮನೆತನದವರ ಕೈಬಿಟ್ಟುಹೋದುವು. ಭಾರತದಲ್ಲೂ ಈ ಎರಡು ಸಂತತಿಯವರಿಗೂ ಅನೇಕ ಯುದ್ಧಗಳಾದುವು. ಇಂಡೊ-ಗ್ರೀಕರ ರಾಜರೆಲ್ಲ ಅತ್ಯಂತ ಪ್ರಸಿದ್ಧನಾದ ಮೆನಾಂಡರ್ ಭಾರತದ ವಾಯವ್ಯ ಭಾಗದಲ್ಲಿ ಹಿರಿದಾದ ರಾಜ್ಯ ಕಟ್ಟಿದ.

ಮೆನಾಂಡರ್ ಯೂಥಿಡೀಮಿಸ್ಸನ ವಂಶಸ್ಥ. ಈತ ಡೆಮಿಟ್ರಿಯಸ್ಸನ ಮಗಳಾದ ಅಗೆತೋಕ್ಲೀಸ್ ಎಂಬುವಳನ್ನು ಮದುವೆಯಾಗಿದ್ದ. ಈತ ಪ್ರ.ಶ.ಪೂ.2ನೆಯ ಶತಮಾನದ ಉತ್ತರಾರ್ಧದಲ್ಲಿ ಆಳುತ್ತಿದ್ದ. ಮೆನಾಂಡರನ ರಾಜ್ಯ ಗಾಂಧಾರದಿಂದ ಮಧುರೆಯವರೆಗೂ ವಿಸ್ತರಿಸಿತ್ತು. ಸಕಲ ಅಥವಾ ಸಯಾಲ್ ಕೋಟೆ ಈತನ ರಾಜಧಾನಿ. ಯವನ ರಾಜರಲ್ಲೆಲ್ಲ ಅತ್ಯಂತ ವೈವಿಧ್ಯಮಯವಾದ ನಾಣ್ಯಗಳು ಇವರಿಂದ ಚಲಾವಣೆಗೆ ಬಂದವು. ಮೊನಾಂಡರ್ ತನ್ನ ಚಿತ್ರವನ್ನು ಹಲವು ನಾಣ್ಯಗಳ ಮೇಲೆ ಅಚ್ಚು ಹಾಕಿಸಿದ್ದ. ಗ್ರೀಕ್ ದೇವತೆಯ ಚಿತ್ರವೂ ಬೌದ್ಧಮತದ ಸಂಕೇತಗಳೂ ಇತರ ನಾಣ್ಯಗಳ ಮೇಲೆ ಕಾಣಬರುತ್ತವೆ. ಇವನು ಮಿಲಿಂದ ಎಂಬ ಹೆಸರಿನಿಂದ ಭಾರತದ ಚರಿತ್ರೆಯಲ್ಲಿ ಪ್ರಸಿದ್ಧನಾಗಿದ್ದಾನೆ. ಮಿಲಿಂದ ಪನ್ಹ ಎಂಬ ಬೌದ್ಧಮತೀಯ ಗ್ರಂಥದಲ್ಲಿ ಈತನಿಗೆ ಸಂಬಂಧಿಸಿದ ಹೆಚ್ಚು ವಿಷಯಗಳು ದೊರೆಯುತ್ತವೆ. ಮೊನಾಂಡರ್ ದಕ್ಷ ಆಡಳಿತಗಾರ, ವಿದ್ಯಾಪಕ್ಷಪಾತಿ. ಇವರ ರಾಜಧಾನಿಯಾದ ಸಕಲ ನಗರ ವಿದ್ವಾಂಸರಿಗೆ ಆಕರ್ಷಕಸ್ಥಾನವಾಗಿತ್ತು; ಮತದ ಮತ್ತು ಅಂತಾರಾಷ್ಟ್ರೀಯ ವ್ಯಾಪಾರದ ಕೇಂದ್ರವಾಗಿತ್ತು.

ಮಿಲಿಂದ ಪನ್ಹದ ಪ್ರಕಾರ ನಾಗಸೇನ ಎಂಬ ಪ್ರಸಿದ್ಧ ಬೌದ್ಧ ಸನ್ಯಾಸಿಗೂ ಮೆನಾಂಡರನಿಗೂ ಮತ ತತ್ತ್ವಗಳಿಗೆ ಸಂಬಂಧಿಸಿದಂತೆ ಗಹನ ಚರ್ಚೆ ನಡೆಯಿತು. ನಾಗಸೇನನಿಂದ ಈತ ಬೌದ್ಧ ಧರ್ಮ ಪ್ರಭಾವಕ್ಕೊಳಗಾಗಿ ಆ ಧರ್ಮವನ್ನವಲಂಬಿಸಿದ. ಈತ ಅತ್ಯಂತ ಸುಂದರವಾದ ಬುದ್ಧದೇವನ ಪ್ರತಿಮೆ ಮಾಡಿಸಿದನೆಂಬುದಾಗಿ ಪ್ರತೀತಿಯಿದೆ. ಶುಂಗ ವಂಶದ ರಾಜರು ಬೌದ್ಧಧರ್ಮೀಯರನ್ನು ಹಿಂಸಿಸುತ್ತಿದ್ದರೆಂದೂ, ಆ ಸಮಯದಲ್ಲಿ ಮೆನಾಂಡರ್ ಆ ಧರ್ಮಾನುಯಾಯಿಗಳಿಗೆ ರಕ್ಷಣೆ ನೀಡಿ ವಿಶೇಷವಾಗಿ ಪ್ರೋತ್ಸಾಹಿಸಿದನೆಂದೂ ತಿಳಿದು ಬರುತ್ತದೆ. ಮೆನಾಂಡರನ ಕೀರ್ತಿ ಮಧ್ಯ ಏಷ್ಯ ಮತ್ತು ಗ್ರೀಸ್ ದೇಶದವರೆಗೂ ವ್ಯಾಪಿಸಿತ್ತು. ಇವನು ತನ್ನ ಕೊನೆಗಾಲದಲ್ಲಿ ಬ್ಯಾಕ್ಟ್ರಿಯವನ್ನು ಪುನಃ ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿ ಯುದ್ಧರಂಗದಲ್ಲಿ ಮಡಿದನೆಂಬುದು ವಿದ್ವಾಂಸರ ಮತ. ಮೊನಾಂಡರನ ಮರಣಾನಂತರ ಆತನ ಅವಶೇಷಗಳನ್ನು ಪಡೆಯಲು ಸಹಸ್ರಾರು ನಗರಗಳ ಮಂಡಲಾಧಿಪತಿಗಳು ಮುಂದಾದರೆಂದು ಸ್ಟ್ರಬೋನ ಬರೆವಣಿಗೆಗಳಿಂದ ತಿಳಿದುಬರುತ್ತದೆ.

ಮೆನಾಂಡರನ ಮರಣಾನಂತರ ಅವರ ಮಗನಾದ ಒಂದನೆಯ ಸ್ಟ್ರಾಟೊ ಎಂಬುವನು ಪಟ್ಟಕ್ಕೆ ಬಂದ. ಈತ ಆಗ ಇನ್ನೂ ಬಾಲಕನಾಗಿದ್ದ. ಆದ್ದರಿಂದ ಈತನ ತಾಯಿಯಾದ ಅಗೆತೋಕ್ಲಿಯಾ ಎಂಬುವಳು ಆಡಳಿತವನ್ನು ನೋಡಿಕೊಳ್ಳುತ್ತಿದ್ದಳು. ರಾಜ್ಯ ಒಡೆದುಹೋಯಿತು. ಅನೇಕ ಸಣ್ಣಪುಟ್ಟ ಸಂಸ್ಥಾನಗಳು ತಲೆಯೆತ್ತಿದವು. ಅವುಗಳ ಪೈಕಿ ಗಾಂಧಾರ ಪ್ರದೇಶದಲ್ಲಿ ಆಳುತ್ತಿದ್ದ ಅಂಟಾಲ್ಸಿಡಾಸ್ ಪ್ರಮುಖ. ಒಂದನೆಯ ಸ್ಟ್ರಾಟೋನ ಅನಂತರ ಇಮ್ಮಡಿ ಸ್ಟ್ರಾಟೋ ಸ್ವಲ್ಪಕಾಲ ಸಯಾಲ್ಕೋಟೆಯಲ್ಲಿ ಆಳುತ್ತಿದ್ದ. ಹರ್ಮಿಯಸ್ ಎಂಬುವನು ಯವನರ ಕೊನೆಯ ರಾಜ. ಆ ವೇಳೆಗೆ ಶಕ ಮತ ಪಹ್ಲವರು ಭಾರತದ ವಾಯವ್ಯ ಭಾಗಗಳನ್ನು ಆಕ್ರಮಿಸಿದರು.

ಅಲೆಕ್ಸಾಂಡರನ ದಂಡಯಾತ್ರೆಗಿಂತಲೂ ಬ್ಯಾಕ್ಟ್ರಿಯನ್ನರ ಭಾರತದ ಆಕ್ರಮಣ ಮತ್ತು ಆಳ್ವಿಕೆ ಬಹಳ ಪರಿಣಾಮಕಾರಿಯಾದದ್ದು. ಪ್ರಾರಂಭದಲ್ಲಿ ಯವನರು ತಮ್ಮದೇ ರೀತಿಯ ಆಡಳಿತಕ್ರಮವನ್ನು ಜಾರಿಗೆ ತರಲು ಪ್ರಯತ್ನಪಟ್ಟರು. ಕ್ರಮೇಣ ಅವರು ಭಾರತದ ಸಂಪ್ರದಾಯಗಳಿಗೆ ತಮ್ಮ ಆಡಳಿತಪದ್ಧತಿಯನ್ನು ಹೊಂದಿಸಿಕೊಂಡರು. ಸುಮಾರು ಎರಡು ಶತಮಾನಗಳ ಕಾಲ ಹಿರಿದಾದ ಎರಡು ಪ್ರಾಚೀನ ಸಂಸ್ಕೃತಿಗಳು ಭಾರತದ ವಾಯವ್ಯ ಭಾಗದಲ್ಲಿ ಸಂಧಿಸಿದುವು. ಭಾರತ ಮತ್ತು ಪಶ್ಚಿಮ ರಾಷ್ಟ್ರಗಳೊಡನೆ ವ್ಯಾಪಾರ, ಕಲೆ, ವಿಜ್ಞಾನ ಮುಂತಾದ ಸಂಪರ್ಕಗಳು ವಿಶೇಷವಾಗಿ ಬೆಳೆದವು. ಭಾರತೀಯ ಸಂಸ್ಕೃತಿಯ ಹಲವಂಶಗಳ ಮೇಲೆ ಯವನ ಸಂಸ್ಕೃತಿಯ ಪ್ರಭಾವ ನೆಲೆಯೂರಿತೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಭಾರತದಲ್ಲಿ ಗ್ರೀಕರ ನಾಣ್ಯಪದ್ಧತಿ ಜಾರಿಗೆ ಬಂತೆಂದು ಹಲವರ ನಂಬುಗೆ. ಗ್ರೀಕ್ ನಾಣ್ಯಗಳು ಕಲಾತ್ಮಕವಾಗಿದ್ದುವು. ಹಲವು ಕಾಲ ಭಾರತದ ಉತ್ತರ ಭಾಗದಲ್ಲಿ ಆಳಿದ ರಾಜರು ಅವುಗಳನ್ನು ಚಲಾವಣೆಗೆ ತಂದರು. ಆದರೆ ಗುಪ್ತ ಸಂತತಿಯ ಸ್ಥಾಪನೆಯಾದ ಅನಂತರ ಈ ಪದ್ಧತಿಯನ್ನು ತ್ಯಜಿಸಲಾಯಿತು. ಗುಪ್ತ ಸಾರ್ವಭೌಮರು ಭಾರತದ ಪ್ರಾಚೀನ ನಾಣ್ಯಪದ್ಧತಿಯನ್ನು ಸುಧಾರಿಸಿ ಭಾರತೀಯವೇ ಎನ್ನಬಹುದಾದ ನಾಣ್ಯಗಳನ್ನು ಜಾರಿಗೆ ತಂದರು. ಹಲವು ಚರಿತ್ರಕಾರರು ಸಾಹಿತ್ಯ, ವೈದ್ಯ, ಖಗೋಳಶಾಸ್ತ್ರ ಮತ್ತು ಇತರ ವೈಜ್ಞಾನಿಕ ವಿಷಯಗಳಲ್ಲಿ ಭಾರತೀಯರು ಗ್ರೀಕರಿಂದ ಪ್ರಭಾವಿತರಾದರೆಂದು ವಾದಿಸಿದ್ದಾರೆ. ಮೇಲ್ಕಂಡ ವಿಷಯಗಳಲ್ಲಿ ಗ್ರೀಕರ ಪ್ರೌಢಿಮೆಯನ್ನು ಭಾರತೀಯರು ಗುರುತಿಸಿದರಾದರೂ ಅವುಗಳನ್ನು ಅಳವಡಿಸಿಕೊಳ್ಳಲಿಲ್ಲವೆಂದು ಇನ್ನೂ ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಆಗಿನ ಕಾಲದ ಕಲೆಯಲ್ಲಿ ಗ್ರೀಕರ ಪ್ರಭಾವವನ್ನು ಗುರುತಿಸಬಹುದು. ಗಾಂಧಾರ ಶಿಲ್ಪಕಲೆ ಒಂದು ಉದಾಹರಣೆ. ಇದು ಗ್ರೀಕ್ ಮತ್ತು ಭಾರತೀಯ ಕಲೆಯ ಸಮ್ಮಿಲನದಿಂದ ಹೊರಚಿಮ್ಮಿತೆಂದು ಬಹುಮಂದಿ ವಿದ್ವಾಂಸರ ನಂಬಿಕೆ. ಕಾಲಕ್ರಮದಲ್ಲಿ ಗಾಂಧಾರ ಕಲೆ ಸಂಪೂರ್ಣ ಭಾರತೀಯ ಸಂಪ್ರದಾಯವನ್ನು ಅಳವಡಿಸಿಕೊಂಡಿತು. ಮಿಗಿಲಾಗಿ ಗ್ರೀಕರು ಭಾರತೀಯ ಮತಾನುಯಾಯಿಗಳಾದರು. ಹೆಚ್ಚು ಮಂದಿ ಬೌದ್ಧಧರ್ಮವನ್ನವಲಂಬಿಸಿದರು. ಗ್ರೀಕರ ಸಂಪರ್ಕವಿಲ್ಲದೆ ಇದ್ದಿದ್ದರೂ ಭಾರತೀಯರು ತಮ್ಮ ಸಂಪ್ರದಾಯಗಳನ್ನು ಬೆಳೆಸಿಕೊಂಡು ಮುಂದುವರಿಯುತ್ತಲೇ ಇದ್ದರು – ಎಂದು ಟಾರನ್ ಅಭಿಪ್ರಾಯಪಟ್ಟಿದ್ದಾನೆ. (ಜಿ.ಆರ್.ಆರ್.)

**ಇಂಡೊ-ಚೀನ:** ಫ್ರೆಂಚ್ ಸಂರಕ್ಷಿತ ರಾಜ್ಯಗಳಾಗಿದ್ದ ಟಾಂಕಿನ್, ಅನ್ನಾಂ, ಕಾಂಬೋಡಿಯ, ಲಾವೋಸ್‌ಗಳನ್ನೂ ಫ್ರೆಂಚ್ ವಸಾಹತಾದ ಕೊಚಿನ್-ಚೀನವನ್ನೂ ಒಳಗೊಂಡ ಪ್ರದೇಶ. ಉತ್ತರಕ್ಕೆ ಚೀನಾದ ಯುನ್ನಾನ್ ಮತ್ತು ಕ್ವಾಂಗ್ಸಿ ಪ್ರಾಂತ್ಯಗಳು; ಪೂರ್ವಕ್ಕೂ ದಕ್ಷಿಣಕ್ಕೂ ದಕ್ಷಿಣ ಚೀನ ಕಡಲು; ಪಶ್ಚಿಮಕ್ಕೆ ಥೈಲೆಂಡ್ ಮತ್ತು ಈಗಿನ ಮಯನ್ಮಾರ್-ಇದು ಈ ಪ್ರದೇಶದ ಚೌಹದ್ದು. 20ನೆಯ ಶತಮಾನದ ನಡುಗಾಲದ ವೇಳೆಗೆ ಈ ಪ್ರದೇಶ ಒಡೆಯಿತು. ವಿಯೆಟ್ನಾಂ, ಕಾಂಬೋಡಿಯ ಮತ್ತು ಲಾವೋಸ್ ಎಂಬ ಮೂರು ಪ್ರತ್ಯೇಕ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಟಾಂಕಿನ್, ಅನ್ನಾಂ ಮತ್ತು ಕೊಚಿನ್-ಚೀನಾ ಎಂಬ ಹೆಸರುಗಳು ಈಗ ಕ್ರಮವಾಗಿ ವಿಯೆಟ್ನಾಮಿನ ಉತ್ತರ, ಪ್ರಾಕೃತಿಕ ಭೂವಿವರಣೆ: ಇಂಡೊ-ಚೀನ ಪ್ರದೇಶದಲ್ಲಿ ಆಚೀಚೆಗೆ ಎರಡು ತಗ್ಗಿನ ಬಯಲುಗಳಿವೆ. ಉತ್ತರದಲ್ಲಿ ಕೆಂಪು ನದೀ ಕಣಿವೆಯೂ ದಕ್ಷಿಣದಲ್ಲಿ ಮೆಕಾಂಗ್ ಕಣಿವೆಯೂ ಇವೆರಡರ ನಡುವೆ ಪರ್ವತದ ಸಾಲೂ ಇವೆ. ಈ ಪರ್ವತಶ್ರೇಣಿಯ ಉತ್ತರ ಪಾರ್ಶ್ವದಲ್ಲಿ ಎತ್ತರದ ಪ್ರಸ್ಥಭೂಮಿಯುಂಟು. ಕರಾವಳಿಯಲ್ಲಿ ಮೆಕ್ಕಲು ಮಣ್ಣಿನ ನೆಲವೂ, ಉಪ್ಪುನೀರಿನ ಕೊಳ್ಳಗಳೂ, ಮರಳುಗುಪ್ಪೆಗಳೂ ಇವೆ. ಮಧ್ಯ ವಿಯೆಟ್ನಾಮಿನ ದಕ್ಷಿಣ ಭಾಗದಲ್ಲಿ ಸುರಕ್ಷಿತವಾದ ಹಾಗೂ ಆಳವಾದ ಕೊಲ್ಲಿಗಳಿವೆ. ಉತ್ತರದ ಕಡಲ ಅಂಚಿನಲ್ಲಿ ಬೆಣಚು ಕಲ್ಲುಬಂಡೆ ತುಂಬಿದ ದ್ವೀಪಮಾಲೆ ಹಬ್ಬಿಕೊಂಡಿದೆ.

ಇಂಡೊ-ಚೀನದ್ದು ಉಷ್ಣವಲಯದ ಮಾನ್ಸೂನ್ ವಾಯುಗುಣ. ಚಳಿಗಾಲದಲ್ಲಿ ಈಶಾನ್ಯಮಾರುತಗಳೂ ಬೇಸಗೆಯಲ್ಲಿ ನೈಋತ್ಯಮಾರುತಗಳೂ ಬೀಸುತ್ತವೆ. ಇಡೀ ಪರ್ಯಾಯದ್ವೀಪದಲ್ಲಿ ಜುಲೈ ತಿಂಗಳಲ್ಲಿ $80^0$ ಫ್ಯಾ. ಸುತ್ತಲೇ ಉಷ್ಣತೆಯಿರುತ್ತದೆ. ಆದರೆ ಚಳಿಗಾಲದಲ್ಲಿ ದಕ್ಷಿಣಕ್ಕಿಂತ ಉತ್ತರದಲ್ಲಿ ಚಳಿ ಹೆಚ್ಚು. ಜನವರಿ ತಿಂಗಳಿನಲ್ಲಿ ಉತ್ತರ ಹ್ಯಾನಾಯ್‌ನಲ್ಲಿ $63^0$ ಫ್ಯಾ. ಉಷ್ಣತೆಯಿದ್ದರೆ ಸೈಗಾನಿನಲ್ಲಿ $79^0$ ಫ್ಯಾ. ಇರುತ್ತದೆ. ಇದು ಬೇಸಗೆಯ ಮಳೆಯ ಪ್ರದೇಶ. ಆದರೆ ಮಧ್ಯ ವಿಯೆಟ್ನಾಮಿನ ಕಡಲಂಚಿನಲ್ಲಿ ಚಳಿಗಾಲದಲ್ಲಿ ಮಳೆ ಹೆಚ್ಚು. ನೈಋತ್ಯ ಮಾರುತವೇ ಇದಕ್ಕೆ ಕಾರಣ. ಜುಲೈನಿಂದ ನವೆಂಬರ್ ತಿಂಗಳವರೆಗೆ ಸಾಮಾನ್ಯವಾಗಿ ಬಿರುಗಾಳಿಯಿಂದಾಗಿ ಮಳೆ ಸುರಿಯುತ್ತದೆ.

ಈ ಪ್ರದೇಶದ 2/3 ಭಾಗ ಕಾಡು. ತಗ್ಗಿನ ನೆಲದಲ್ಲಿ ಸವನ್ನ ಹುಲ್ಲುಗಾವಲುಗಳೂ ಬೇಸಾಯದ ನೆಲವೂ ಇವೆ. ಹೆಚ್ಚು ಮಳೆ ಸುರಿಯುವ ಎಡೆಯಲ್ಲಿ ನಿತ್ಯಹಸುರಿನ ಕಾಡುಗಳು ಹಬ್ಬಿವೆ. ವರ್ಷವೆಲ್ಲ ಮಳೆ ಸುರಿಯುವ ಪ್ರದೇಶಗಳಲ್ಲಿ ಪರ್ಣಪಾತೀ (ಡೆಸಿಡ್ಯುಯಸ್) ವನಗಳಿವೆ. ಕಾಡು ಕಡಿದುಬಿಟ್ಟ ಸ್ಥಳಗಳಲ್ಲಿ ಬಿದಿರುಮೆಳೆ ಧಾರಾಳ. ಕೆಂಪು ನದಿಯ ಹಾಗೂ ಮೆಕಾಂಗ್ ನದಿಯ ಮುಖಜಭೂಮಿಗಳ ಸೆರಗಿನಲ್ಲಿ ಗುಲ್ಮವೃಕ್ಷಗಳು ಹಬ್ಬಿವೆ. ಹೆಚ್ಚು ಒತ್ತಾದ ಮರಗಳಿಲ್ಲದ ಕಾಡುಗಳಲ್ಲೂ ಸವನ್ನ ಹುಲ್ಲುಗಾವಲುಗಳಲ್ಲೂ ಆನೆ, ಹುಲಿ, ಕಾಡು ದನ, ಜಿಂಕೆ ಮುಂತಾದ ವಿಧವಿಧ ಪ್ರಾಣಿ ಸಮೂಹಗಳಿವೆ.

ವ್ಯವಸಾಯ: ವ್ಯವಸಾಯವೇ ಇಲ್ಲಿನ ಮುಖ್ಯ ಕಸುಬು. ಆದರೆ ಕಾಡು ತುಂಬಿದ ಪರ್ವತ ಪ್ರದೇಶಗಳು ಹೆಚ್ಚಾಗಿರುವುದರಿಂದ ಒಟ್ಟು ನೆಲದ 1/12 ಭಾಗಕ್ಕಿಂತ ಸ್ವಲ್ಪ ಹೆಚ್ಚು ನೆಲದಲ್ಲಿ ಮಾತ್ರ ಸಾಗುವಳಿಯಾಗುತ್ತಿದೆ. ಭತ್ತ ಮುಖ್ಯ ಬೆಳೆ. ಬೇಸಾಯದ ನೆಲದ ಹತ್ತರಲ್ಲೊಂಬತ್ತು ಪಾಲು ಬತ್ತಕ್ಕೆ ಮೀಸಲು. ಕೆಂಪು ನದೀಮುಖಜಭೂಮಿಯಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ. ಆದರೆ ಮೆಕಾಂಗ್ ನದಿಯ ಕುದುರಿನಲ್ಲೇ ಹೆಚ್ಚು ಫಸಲು. ಇಲ್ಲಿ ಉಪಯೋಗಿಸಿ ಮಿಕ್ಕಿದ್ದು ನಿರ್ಯಾತಕ್ಕೆ ಒದಗುತ್ತದೆ. ಈ ಎರಡು ಪ್ರದೇಶಗಳಲ್ಲೂ ನೀರಾವರಿಯ ಸೌಲಭ್ಯಗಳಿವೆ. ಮುಸುಕಿನ ಜೋಳ, ಕಡಲೆಕಾಯಿ (ಸೇಂಗ), ಕಬ್ಬು, ಹೊಗೆಸೊಪ್ಪು, ಮೆಣಸು ಇವು ಇತರ ಫಸಲುಗಳು. ದನಕರು ಕಡಿಮೆ. ಏಕೆಂದರೆ ಜನಸಂಖ್ಯೆಯ ಒತ್ತಡದ ದೆಸೆಯಿಂದ ಫಲವತ್ತಾದ ಹುಲ್ಲು ನೆಲವೆಲ್ಲ ಆಹಾರಬೆಳೆಗೆ ಬೇಕು. ಪ್ಲಾಂಟೇಷನ್ ವ್ಯವಸಾಯವೂ ತಕ್ಕಮಟ್ಟಿಗೆ ಬೆಳೆದಿದೆ. ರಬ್ಬರ್ ಮುಖ್ಯ ಬೆಳೆ. ಕಾಫಿ, ಚಹ ಇವು ಇನ್ನೆರಡು ಉತ್ಪನ್ನಗಳು. ಮತ್ಸ್ಯೋದ್ಯಮವೂ ಸರ್ವೇಸಾಮಾನ್ಯ. ಅರಣ್ಯೋದ್ಯಮವೂ ಬೆಳೆಯುತ್ತಿದೆ. ಮರಕ್ಕೆ ಕ್ಷಾಮವೊದಗದಂತೆ ಅರಣ್ಯ ಸಂರಕ್ಷಣೆಯ ಕಾರ್ಯವೂ ಮುಂದುವರಿಯುತ್ತಿದೆ. ಮರದ ದಿಮ್ಮಿಗಳನ್ನು ತೆಪ್ಪಗಳಂತೆ ಕಟ್ಟಿ ಅವನ್ನು ನದಿಗಳಲ್ಲಿ ತೇಲಿಬಿಟ್ಟು ಉದ್ದಿಷ್ಟ ಪ್ರದೇಶಗಳಿಗೆ ತಲಪಿಸುತ್ತಾರೆ.

ಗಣಿಗಾರಿಕೆ, ಕೈಗಾರಿಕೆ, ವ್ಯಾಪಾರ, ಸಂಚಾರ ಮಾರ್ಗ: ಕಲ್ಲಿದ್ದಲು, ಸತು, ತವರ, ಕಬ್ಬಿಣ, ಚಿನ್ನ ಮತ್ತು ಫಾಸ್ಫೇಟು ಮುಖ್ಯ ಖನಿಜಗಳು. ಮೊದಲ ಮೂರು ಖನಿಜಗಳು ಹೆಚ್ಚು ಮುಖ್ಯ. ಕೆಂಪು ನದೀಮುಖಜಭೂಮಿಯ ಬಳಿಯಲ್ಲೇ ಕಲ್ಲಿದ್ದಲು ದೊರಕುತ್ತದೆ. ಇಲ್ಲಿ ಕಾರ್ಮಿಕರು ಧಾರಾಳವಾಗಿ ವಾಸಿಸುವುದರಿಂದ ಈ ಪ್ರದೇಶದಲ್ಲಿ ಹತ್ತಿ, ಜವಳಿ, ಸಿಮೆಂಟು, ಮದ್ಯಸಾರ, ಕಾಗದ ಮುಂತಾದ ಕೈಗಾರಿಕೆಗಳು ಬೆಳೆದಿವೆ. ದಕ್ಷಿಣ ವಿಯೆಟ್ನಾಮಿನ ಜೊಲಾನ್ ಎಂಬುದು ಇನ್ನೊಂದು ಮುಖ್ಯ ಕೈಗಾರಿಕಾಕೇಂದ್ರ. ಅಕ್ಕಿಯ ಗಿರಣಿಗಳೂ, ಸಕ್ಕರೆ ಕಾರ್ಖಾನೆಗಳೂ, ಹೊಗೆಸೊಪ್ಪಿನ ಕೈಗಾರಿಕೆಗಳೂ, ಮದ್ಯೋದ್ಯಮಗಳೂ ಇಲ್ಲಿ ಬೆಳೆದಿವೆ. ಯುದ್ಧಕಾಲದಲ್ಲಿ ಜಪಾನೀಯರ ಆಕ್ರಮಣದಿಂದಲೂ ಅನಂತರದ ರಾಜಕೀಯ ಅಸ್ಥಿರತೆಯಿಂದಲೂ ಈ ಪ್ರದೇಶದ ಕೈಗಾರಿಕೆ ಹಾಗೂ ವ್ಯಾಪಾರಕ್ಕೆ ತುಂಬ ಅಡಚಣೆಯೊದಗಿತ್ತು. ಈಚೆಗೆ ಪರಿಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಿದೆ. ಅಸಿದ್ಧವಸ್ತು ಅಕ್ಕಿ, ರಬ್ಬರ್, ಕಲ್ಲಿದ್ದಲು ಮತ್ತು ಸಿಮೆಂಟು ಮುಖ್ಯ ನಿರ್ಯಾತಗಳು. ಅನ್ಯದೇಶಗಳಿಂದ ಸಿದ್ಧವಸ್ತುಗಳನ್ನು ತರಿಸಿಕೊಳ್ಳಲಾಗುತ್ತಿದೆ. ವಿದೇಶೀ ವ್ಯಾಪಾರದಲ್ಲಿ ಫ್ರಾನ್ಸಿನದೇ ಸಿಂಹಪಾಲು, ಅಮೆರಿಕ ಸಂಯುಕ್ತಸಂಸ್ಥಾನ, ಚೀನ, ಹಾಂಗ್‍ಕಾಂಗ್, ಸಯಾಂ, ಬ್ರಿಟನ್, ಜಪಾನ್, ಮಲಯ ದೇಶಗಳು ಈ ಪ್ರದೇಶದೊಂದಿಗೆ ವ್ಯಾಪಾರ ಮಾಡುವ ಇತರ ರಾಷ್ಟ್ರಗಳು.

ನದಿಗಳೇ ಒಳನಾಡಿನ ಮುಖ್ಯ ಸಂಪರ್ಕಸಾಧನ. ಮೆಕಾಂಗ್ ಹಾಗೂ ಕೆಂಪು ನದಿಗಳೂ ಅದರ ಉಪನದಿಗಳೂ ನೌಕಾಸಂಚಾರಕ್ಕೆ ತಕ್ಕಮಟ್ಟಿಗೆ ಅನುಕೂಲಕರ. ಕರಾವಳಿಯ ಉದ್ದಕ್ಕೂ ಅಡ್ಡಕ್ಕೂ ಅನೇಕ ಸರ್ವಋತು ರಸ್ತೆಗಳಿವೆ. ಈ ರಸ್ತೆ ವ್ಯವಸ್ಥೆಯಲ್ಲಿ ಹ್ಯಾನಾಯ್-ಸೈಗಾನಗಳು ಎರಡು ಮುಖ್ಯ ಬಿಂದುಗಳು. ಸೈಗಾನಿನಿಂದ ಹೊರಟು, ಮೆಕಾಂಗ್ ಕಣಿವೆಯನ್ನು ಹಾದು, ಲುವಾಂಗ್ ಪ್ರಬಾಂಗ್ ತಲುಪುವ ಇನ್ನೊಂದು ಭೂಮಾರ್ಗ ವ್ಯವಸ್ಥೆಯಿದೆ. ರೈಲುಮಾರ್ಗವೂ ಸ್ಥೂಲವಾಗಿ ರಸ್ತೆಗಳನ್ನೇ ಅನುಸರಿಸುತ್ತದೆ. ಸೈಗಾನಿನಿಂದ ಚೀನೀ ಸರಹದ್ದಿನವರೆಗೂ ನಾಂಪೆನ್ಹ್‍ನಿಂದ ಸಯಾಮಿನವರೆಗೂ ಇರುವ ಎರಡು ರೈಲುಮಾರ್ಗಗಳು ಮುಖ್ಯ. ರೇವುಪಟ್ಟಣಗಳಲ್ಲಿ ಸೈಗಾನ್ ಮುಖ್ಯ. ಹೈಫಾಂಗ್, ನಾಂಪೆನ್ಹ್ ಇನ್ನೆರಡು ರೇವು ಪಟ್ಟಣಗಳು. ಸೈಗಾನ್, ಹೆನಾಯ್, ಹೈಫಾಂಗ್, ನಾಂ ಪೆನ್ಹ್ ಮುಖ್ಯ ವಿಮಾನ ನಿಲ್ದಾಣಗಳು.

ಜನಸಾಂದ್ರತೆ, ಮತಪದ್ಧತಿ : ಹೆಚ್ಚಿನ ಪ್ರಮಾಣದಲ್ಲಿ ಜೀವನಾಧಾರದ ಬೆಳೆ ತೆಗೆಯುವುದು ಸಾಧ್ಯವಾದ ತಗ್ಗು ನೆಲಪ್ರದೇಶದಲ್ಲಿ ಜನಸಾಂದ್ರತೆ ಅತೀವವಾಗಿದೆ. ಇಡೀ ಜಗತ್ತಿನಲ್ಲೇ ಅತ್ಯಂತ ಜನದಟ್ಟಣೆಯ ಪ್ರದೇಶಗಳಲ್ಲಿ ಕೆಂಪುನದಿ ಪ್ರದೇಶವೂ ಒಂದು. ಮಧ್ಯ ವಿಯೆಟ್ನಾಂ ತೀರಪ್ರದೇಶದಲ್ಲಿ ಮೆಕಾಂಗ್ ಮುಖಜಭೂಮಿಯಲ್ಲೂ ಜನಸಾಂದ್ರತೆ ಹೆಚ್ಚು. ಪರ್ವತ ಪ್ರದೇಶದಲ್ಲಿ ಬಹು ವಿರಳ.

ಅನ್ನಾಮೀ ಜನ ಹೆಚ್ಚುಸಂಖ್ಯೆಯಲ್ಲಿದ್ದಾರೆ. ತೆಳು ನಿಲುವು, ಹಳದಿ ಬಿಳುಪು ಬಣ್ಣ, ಕಪಾಲದ ಉಬ್ಬು ಮೂಳೆ, ಓರೆಗಣ್ಣು-ಇವು ಈ ಜನರ ಲಕ್ಷಣ. ಇವರ ಭಾಷೆ ಸಂಸ್ಕೃತಿಗಳ ಮೇಲೆ ಚೀನೀಯರ ಪ್ರಭಾವ ಹೆಚ್ಚು. ಕನ್ಫ್ಯೂಷಿಯನ್ ಧರ್ಮವನ್ನು ಇವರು ಹೆಚ್ಚಾಗಿ ಅನುಸರಿಸುತ್ತಾರೆ. ಬೌದ್ಧಧರ್ಮೀಯರೂ ಇವರಲ್ಲುಂಟು. ಕಾಂಬೋಡಿಯನ್ನರದು ಕಪ್ಪುಛಾಯೆ, ದಪ್ಪ ಮೈಕಟ್ಟು. ಇವರು ಬೌದ್ಧಧರ್ಮಾವಲಂಬಿಗಳು. ಇವರ ನೃತ್ಯನಾಟಕಗಳಲ್ಲಿ ಬೌದ್ಧಕಥೆಗಳು ಹಾಸುಹೊಕ್ಕಾಗಿವೆ. ಇವರ ಸಂಸ್ಕೃತಿಯ ಮೇಲೆ ಹಿಂದೂ ಪ್ರಭಾವವೂ ಉಂಟು. ದಕ್ಷಿಣ ಮಧ್ಯ ಇಂಡೊ-ಚೀನದ ಎತ್ತರ ಪ್ರದೇಶದಲ್ಲಿರುವ ಮಾಯ್ ಜನರು ಕುಳ್ಳರು, ತಾಮ್ರವರ್ಣೀಯರು. ಇವರಿಗೆ ಗುಂಗುರು ಕೂದಲೂ ಅಗಲ ಮೂಗೂ ಇವೆ. ಇವರು ಪ್ರಕೃತಿಯ ಆರಾಧಕರು. ಉತ್ತರದ ಪರ್ವತಪ್ರದೇಶದಲ್ಲಿ ಥಾಯ್ ಜನರು ಹೆಚ್ಚಾಗಿದ್ದಾರೆ. ಇವರಿಗೆ ಸಯಾಮೀಯರ ಸಂಬಂಧವಿದೆ. ಇವರದು ಮಧ್ಯಸ್ಥ ನಿಲುವು, ತೆಳು ಕಂದು ವರ್ಣ. ಇವರ ಸಂಸ್ಕೃತಿಯ ಮೇಲೂ ಚೀನೀ ಪ್ರಭಾವ ಹೆಚ್ಚು. ಇವರಲ್ಲದೆ ಇಲ್ಲಿ ಮಿಯಾವೂ ಮತ್ತು ಲೋಲೊ ಜನಾಂಗಗಳಿಗೆ ಸೇರಿದ ಜನರೂ ಇದ್ದಾರೆ. *

**ಇಂಡೊ-ಚೀನದ ಇತಿಹಾಸ:** ಇಂಡೊ-ಚೀನದ ಮೇಲ್ಮೈಯ ಲಕ್ಷಣಕ್ಕೂ ಈ ಪ್ರದೇಶದ ಇತಿಹಾಸಕ್ಕೂ ನೇರ ಸಂಬಂಧವಿದೆ. ಇದರ ಪರ್ವತಶ್ರೇಣಿಗಳು ಉತ್ತರ-ದಕ್ಷಿಣವಾಗಿ ಹಬ್ಬಿರುವುದರಿಂದ ಇಲ್ಲಿ ಜನಪ್ರವಾಹವೂ ಇದೇ ದಿಕ್ಕಿನಲ್ಲೇ ಹರಿದಿದೆ. ಸಯಾಮೀ ಜನ ಮೆನಾಂಗ್ ಕಣಿವೆಯಲ್ಲೂ ಲಾವೋಸ್ ಜನ ಮೆಕಾಂಗ್ ಕಣಿವೆಯಲ್ಲೂ ಅನ್ನಾಮಿಗಳು ಚೀನ ಕಡಲ ಕರೆಯಲ್ಲೂ ಹರಡಿಕೊಂಡರು. ಇವರು ದಕ್ಷಿಣದಲ್ಲಿದ್ದ ಖ್ಮೇರ್ ಚಕ್ರಾಧಿಪತ್ಯವನ್ನೂ ಚಾಮ್ ಆಡಳಿತವನ್ನೂ ಉರುಳಿಸಿದರು. ಪೂರ್ವ ಇಂಡೊ-ಚೀನದಲ್ಲಿ ಪರ್ವತಗಳು ಹಿಂದುಳಿದ ಜನಾಂಗಗಳ ತೊಟ್ಟಿಲುಗಳಾಗಿವೆ. ಬಯಲುಪ್ರದೇಶಗಳ ಜನರೇ ಹೆಚ್ಚು ಮುಂದುವರಿದಿದ್ದಾರೆ. ಅಧಿಕಾರ ಪ್ರಭಾವಗಳೆಲ್ಲ ಉದ್ದಕ್ಕೂ ಅವರ ಕೈಯಲ್ಲೇ ಇವೆ. ಈಗಿನ ಇಂಡೊ-ಚೀನದ ಜನಜೀವನದ ಮೇಲೆ ಇಂಡೊನೇಷ್ಯನ್, ಭಾರತೀಯ ಹಾಗೂ ಚೀನೀ ನಾಗರಿಕತೆಗಳು ಪ್ರಭಾವ ಬೀರಿವೆ. ಪೂರ್ವಪರ್ವತದ ಮಾಯ್ ಜನದ ಮೇಲೆ ಇಂಡೊನೇಷ್ಯದ ಪ್ರಭಾವವೂ ದಕ್ಷಿಣದ ಚಾಂ ಮತ್ತು ಖ್ಮೇರ್‍ಗಳ ಮೇಲೆ ಭಾರತದ ಪ್ರಭಾವವೂ ಅನ್ನಾಮೀ ಜನರ ಮೇಲೆ ಚೀನಿ ಪ್ರಭಾವವೂ ಬಿದ್ದಿವೆ.

ಮೊಟ್ಟಮೊದಲು ಆಗ್ನೇಯ ಏಷ್ಯದಲ್ಲಿ ನೆಲೆಸಿದ ಜನಾಂಗಗಳಲ್ಲಿ ಆಸ್ಟ್ರಲಾಯಿಡ್, ನೆಗ್ರಿಟೋ, ಮಲೆನೇಸಿಯಡ್ ಮತ್ತು ಇಂಡೊನೇಷ್ಯನ್ ಇವು ಮುಖ್ಯವಾದುವು. ಮೊದಲಿನ ಮೂರು ಜನಾಂಗಗಳೂ ಹಳೆ ಶಿಲಾಯುಗ ಮತ್ತು ಹೊಸ ಶಿಲಾಯುಗದ ನಡುವಣ ಸಂಸ್ಕೃತಿಗೆ ಸೇರಿದವು. ಕೊನೆಯ ಇಂಡೊನೇಷ್ಯನ್ ಜನಾಂಗ ಪ್ರ.ಶ. ಪೂ. ಸು. 2500ರಿಂದ 1500 ವರ್ಷಗಳ ಹಿಂದೆ ಆಗ್ನೇಯ ಏಷ್ಯಾದಲ್ಲಿ ತಳವೂರಿದಂತೆ ಕಾಣುತ್ತದೆ. ಇವರಿಂದಲೇ ಹೊಸ ಶಿಲಾಯುಗ ಪ್ರಾರಂಭವಾಯಿತು. ಈ ಸ್ಥಿತಿ ಕೆಲ ಶತಮಾನ ಕಳೆದ ಅನಂತರ ಇಲ್ಲಿ ಕಬ್ಬಿಣಯುಗ ಪ್ರಾರಂಭವಾಯಿತು.

ಈ ಪ್ರದೇಶಗಳೊಂದಿಗೆ ಬಹು ಹಿಂದಿನಿಂದಲೂ ಚೀನಿಯರು ಸಂಪರ್ಕ ಹೊಂದಿದ್ದರು. ಪ್ರ.ಶ.ಪೂ. ಸು.300ರಷ್ಟು ಹಿಂದೆಯೇ ಇಲ್ಲಿ ಚೀನಿಯರು ವ್ಯಾಪಾರ ಮಾಡುತ್ತಿದ್ದು, ಅನೇಕ ವ್ಯಾಪಾರ ಸಂಸ್ಥೆಗಳನ್ನು ಸ್ಥಾಪಿಸಿದ್ದರೆಂದು ಐತಿಹ್ಯವಿದೆ. ಪಶ್ಚಿಮ ಹಾನ್ ರಾಜವಂಶದ ಕಾಲಕ್ಕೆ (ಪ್ರ.ಶ.ಪೂ. 206 ಪ್ರ.ಶ. 209ರ ವರೆಗೆ) ಚೀನೀಯರು ಭಾರತಕ್ಕೆ ಹೋಗಲು ಕಷ್ಟಸಾಧ್ಯವಾಗಿದ್ದ ಮಧ್ಯ ಏಷ್ಯದ ಮಾರ್ಗದ ಬದಲು ಸಮುದ್ರಮಾರ್ಗವನ್ನು ಕಂಡುಹಿಡಿದರು. ಈಗಿನ ಇಂಡೊ-ಚೀನದ ರಾಷ್ಟ್ರಗಳು ಈ ಮಾರ್ಗದ ಮಧ್ಯದಲ್ಲೇ ಇದ್ದದ್ದರಿಂದ ಸಹಜವಾಗಿಯೇ ಚೀನದೊಡನೆ ಇವುಗಳ ಸಾಂಸ್ಕೃತಿಕ ಸಂಬಂಧ ಬೆಳೆಯಿತು. ಪೂರ್ವದ ಹಾನ್ ವಂಶಜರು (ಪ್ರ.ಶ. 26ರಿಂದ 221) ಟಾಂಕಿನ್ ಅಥವಾ ಈಗಿನ ಉತ್ತರ ವಿಯೆಟ್ನಾಂ ಪ್ರಾಂತ್ಯವನ್ನು ಪ್ರತ್ಯಕ್ಷ ಚೀನೀ ಆಡಳಿತಕ್ಕೆ ಒಳಪಡಿಸಿದರು.

ಮುಂದಿನ ಪ್ರಬಲ ಸಾಂಸ್ಕೃತಿಕ ಸಂಬಂಧ ಭಾರತದ್ದು. ಭಾರತೀಯರು ನೆಲ ಮತ್ತು ಜಲ ಮಾರ್ಗದಿಂದ ಇಂಡೊ-ಚೀನ ತಲಪಿದ್ದು ಪ್ರ.ಶ.ಪೂ. 1-2ನೆಯ ಶತಮಾನಗಳಲ್ಲಿ. ಬ್ರಹ್ಮಪುತ್ರ ಕೊಳ್ಳದಿಂದ ಟಾಂಕಿನ್‍ವರೆಗಿನ ಭೂಮಾರ್ಗ ತೀರ ಪ್ರಾಚೀನ ಕಾಲದಿಂದ ಬಳಕೆಯಲ್ಲಿತ್ತು. ಪುರಾತನ ಕಾಲದಿಂದಲೂ ಅನ್ನಾಂ ಚೀನಗಳೊಡನೆ ಪೂರ್ವಭಾರತದ ವ್ಯಾಪಾರ ಸಂಬಂಧವಿತ್ತು. ಉತ್ತರ ಬರ್ಮಾದ ಯುನ್ನಾನ್ ಪ್ರಾಂತ್ಯ ಗಾಂಧಾರವೆಂಬ ಹಿಂದೂ ಹೆಸರಿನಿಂದ ಸಾಕಷ್ಟು ಪರಿಚಿತವಿತ್ತು. ಪ್ರ.ಶ.ದ ಆರಂಭ ಕಾಲದಿಂದ ಇಂಡೊ-ಚೀನದ ಕರಾವಳಿಯ ನಾಡುಗಳಲ್ಲಿ ಆಳಿದ ಹಿಂದೂ ರಾಜಮನೆತನಗಳ ಇತಿಹಾಸ ನಮಗೆ ಸಾಕಷ್ಟು ದೊರೆತಿದೆ.

ಫೂನಾನ್: ಕಾಂಬೋಡಿಯಾದ ತೀರ ಪ್ರಾಚೀನ ರಾಜ್ಯವನ್ನು ಚೀನಿಯರು ಫೂನಾನ್ ಎಂದು ಕರೆದಿದ್ದಾರೆ. ಮೊದಲಿನ ಹಿಂದೂ ಅರಸನ (ಹ್ಯೂನ್ ಟಿಯನ್) ಹೆಸರು ಕೌಂಡಿನ್ಯ. ಚೀನಿ ರಾಜವಂಶ ಚರಿತ್ರೆಯಿಂದ ಫೂನಾನ್ ರಾಜ್ಯ ಚಂಪಾರಾಜ್ಯದ ಪಶ್ಚಿಮಕ್ಕೆ ಇದೆ. ಕೋಟೆಗಳಿಂದ ಕೂಡಿದ ಅನೇಕ ಪಟ್ಟಣಗಳು ಈ ರಾಜ್ಯದಲ್ಲಿದ್ದು ಇಲ್ಲಿ ಭದ್ರ ಮನೆಗಳೂ ಅರಮನೆಗಳೂ ಇವೆ. ಜನ ಕಪ್ಪು ಬಣ್ಣದವರು, ಕುರೂಪಿಗಳು, ತೀರ ಸಾಧುಗಳು. ತುಡುಗು ಕಳವುಗಳು ಇವರಿಗೆ ಗೊತ್ತಿಲ್ಲ. ಇವರು ಮುಖ್ಯವಾಗಿ ಬೇಸಾಯಗಾರರು. ಆಭರಣ ಮಾಡುವುದರಲ್ಲಿ ತುಂಬ ಆಸಕ್ತಿಯುಳ್ಳವರು. ಬೆಳ್ಳಿಯ ಪಾತ್ರೆಗಳನ್ನು ಊಟಕ್ಕೆ ಬಳಸುವವರು. ಬೆಳ್ಳಿ, ಬಂಗಾರ, ಮುತ್ತುಗಳು ಮತ್ತು ಸುಗಂಧ ದ್ರವ್ಯಗಳ ರೂಪದಲ್ಲಿ ಕರಗಳನ್ನು ಕೊಡುವವರು. ಇವರ ಹತ್ತಿರ ಬಹಳ ಗ್ರಂಥಗಳಿದ್ದು ವಾಚನಾಲಯಗಳೂ ಇವೆ. ತಮ್ಮ ಭಾಷೆಗೆ ಭಾರತದ ಲಿಪಿಯೊಂದನ್ನು ಅಳವಡಿಸಿಕೊಂಡಿದ್ದಾರೆ. ಇವರ ಲಗ್ನ, ಶ್ರಾದ್ಧ ಮುಂತಾದ ಸಂಸ್ಕಾರಗಳು ಚಂಪಾದೇಶದ ಜನರಂತೆಯೇ.

ಅನೇಕ ಚೀನಿ ವರದಿಗಳಿಂದಲೂ ಅಲ್ಲಿ ದೊರೆತ ಸಂಸ್ಕೃತ ಶಿಲಾಶಾಸನಗಳಿಂದಲೂ ಫೂನಾನ್ ಮೇಲೆ ಭಾರತೀಯ ಸಂಸ್ಕೃತಿಯ ಪ್ರಭಾವ ಎಷ್ಟರಮಟ್ಟಿಗೆ ಇತ್ತೆಂಬುದು ಗೊತ್ತಾಗುತ್ತದೆ. ಇಲ್ಲಿಯ ಅರಸರು ಕೌಂಡಿನ್ಯ, ಜಯವರ್ಮ, ಗುಣವರ್ಮ, ಮೊದಲಾದ ಹಿಂದೂ ಹೆಸರುಗಳನ್ನು ಧರಿಸುತ್ತಿದ್ದರು. ಈ ಅರಸರು ಚೀನದೊಡನೆ ನಿಕಟ ರಾಜಕೀಯ ಸಂಬಂಧವನ್ನಿಟ್ಟುಕೊಂಡಿದ್ದರು. ಇವರ ಹೆಸರುಗಳ ಚೀನಿ ರೂಪಾಂತರಗಳು ಚೀನಿ ಇತಿಹಾಸದಲ್ಲಿ ದೊರಕುತ್ತವೆ. ಭಾರತದ ಶೈವ, ವೈಷ್ಣವ ಮತ್ತು ಬೌದ್ಧ ಧರ್ಮಗಳು ಫೂನಾನ್‍ನಲ್ಲಿಯೂ ವರ್ಧಿಸಿದವು. ಭಾರತೀಯ ತತ್ತ್ವಜ್ಞಾನಗಳೂ, ಪೌರಾಣಿಕ, ಧಾರ್ಮಿಕ

ಪರಂಪರೆಗಳೂ ಇಲ್ಲೂ ವ್ಯಾಪಿಸಿದ್ದವು. ಸಂಸ್ಕೃತ, ಸಾಹಿತ್ಯ, ಶಿಲ್ಪಕಲೆ, ವರ್ಣಾಶ್ರಮ ಧರ್ಮವ್ಯವಸ್ಥೆ ಇವು ತಮ್ಮ ವಿಶಾಲರೂಪದಲ್ಲಿ ಇಲ್ಲೂ ಊರ್ಜಿತವಾದವು. 6ನೆಯ ಶತಮಾನದ ಹೊತ್ತಿಗೆ ಭಾರತೀಯ ಸಂಸ್ಕೃತಿ ನಿಚ್ಚಳವಾಗಿ ಈ ಪ್ರದೇಶದಲ್ಲಿ ಒಡಮೂಡಿತು.

ಕಂಬುಜ: ಅನಂತರ ಬೆಳೆದ ಕಂಬುಜ ರಾಜ್ಯ ಈ ಸಂಸ್ಕೃತಿಯನ್ನು ಅತ್ಯುಚ್ಚ ಶಿಖರಕ್ಕೆ ಮುಟ್ಟಿಸಿತು. ರಾಜ್ಯ ವಿಸ್ತರಣೆ ಪ್ರಾರಂಭವಾಗಿ ಪೂರ್ವ ಪಶ್ಚಿಮಕ್ಕೆ ಬೆಳೆದದ್ದಲ್ಲದೆ ಈಗಿನ ಸಯಾಂ ಅಥವಾ ಥೈಲೆಂಡನ್ನು ಒಳಗೊಂಡಿತ್ತು. ಈ ಪ್ರದೇಶದಲ್ಲಿ ದೊರೆತ ನೂರಾರು ಶಿಲಾಶಾಸನಗಳು ಪ್ರ.ಶ. 8ನೆಯ ಶತಮಾನದಿಂದ 15ನೆಯ ಶತಮಾನದವರೆಗೆ ಆಳಿದ ಹಿಂದೂ ಅರಸರ ವೈಭವವನ್ನು ಸಾರುತ್ತವೆ. ಮೊದಲನೆಯ ಅರಸನಾದ ಶ್ರುತವರ್ಮನಿಂದ (ಸು.ಪ್ರ.ಶ.4ನೆಯ ಶತಮಾನ) ಇಲ್ಲಿನ ಇತಿಹಾಸ ಸಿಗುತ್ತದೆ. ಶ್ರುತವರ್ಮನ ಮಗ ಶ್ರೇಷ್ಠವರ್ಮ ಶ್ರೇಷ್ಠಪುರವೆಂಬ ನಗರವನ್ನು ಕಟ್ಟಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಪಕ್ಕದ ಲಿಂಗಪರ್ವತದಲ್ಲಿ (ಈಗಿನ ವಾಟ್ ಫೂ ಬೆಟ್ಟ) ಈ ಅರಸರ ಕುಲದೇವತೆಯಾದ ಭದ್ರೇಶ್ವರ ಶಿವನ ದೇವಾಲಯವಿತ್ತು.

ಪ್ರ.ಶ. 637–674ರ ತನಕ ಆಳುತ್ತಿದ್ದ ಮೊದಲನೆಯ ಜಯವರ್ಮನವರೆಗೆ ಇಲ್ಲಿನ ಇತಿಹಾಸವನ್ನರಿಯುವುದಕ್ಕೆ ಸಾಕಷ್ಟು ದಾಖಲೆಗಳಿವೆ. ಮುಂದೆ ಒಂದು ಶತಮಾನದವರೆಗೆ ನಿರ್ದಿಷ್ಟ ಪುರಾವೆಗಳಿಲ್ಲ. ಆದರೆ ಈ ಕಾಲದಲ್ಲಿ ರಾಜ್ಯ ಭದ್ರವಾಗಿಯೇ ಉಳಿಯಿತೆನ್ನಬಹುದು. ಚೀನ ಭಾರತಗಳೊಡನೆ ಈ ದೇಶ ರಾಜಕೀಯ ಸಂಬಂಧ ಇಟ್ಟುಕೊಂಡಿತ್ತು. 9ನೆಯ ಶತಮಾನದ ಪ್ರಾರಂಭದಲ್ಲಿ ಪಟ್ಟವೇರಿದ ಎರಡನೆಯ ಜಯವರ್ಮನಿಂದ ಮುಂದಕ್ಕೆ ಪುನಃ ಕಂಬುಜರ ಇತಿಹಾಸ ತಿಳಿಯುತ್ತದೆ. ಈ ಅರಸ ತುಂಬ ಜನಪ್ರಿಯನಾಗಿದ್ದ. ಈತನ ಆಳ್ವಿಕೆಯಲ್ಲಿ ಅನೇಕ ರಾಜಧಾನಿಗಳಿದ್ದುವು. ಕಂಬುಜದ ಪ್ರಮುಖ ದೇವಾಲಯಗಳನ್ನೂ ಇತರ ಕಟ್ಟಡಗಳನ್ನೂ ಈತ ಕಟ್ಟಿಸಿದ. ಕಾಂಬೋಡಿಯದ ಜನಪದ ಸಾಹಿತ್ಯದಲ್ಲಿ ಈತನಿಗೆ ನಮ್ಮಲ್ಲಿ ವಿಕ್ರಮನಿಗಿರುವಂಥದೇ ಸ್ಥಾನವಿದೆ. ಪ್ರಸಿದ್ಧ ಆಂಗ್ಕೋರ್ ವಾಟ್ ಕಟ್ಟಡ ಈತನದೇ ಎಂಬ ಊಹೆಯಿದೆ. ಈತ ಕಂಬುಜ ರಾಜೇಂದ್ರನೆಂಬ ಬಿರುದು ಧರಿಸಿದ. ಕಂಬು ಎಂಬ ಸೂರ್ಯವಂಶದ ಅರಸನಿಂದ ಈತನ ವಂಶ ಪ್ರಾರಂಭವಾಯಿತೆಂದು ಈತನ ಶಾಸನಗಳು ತಿಳಿಸುತ್ತವೆ. ಇವನಿಂದ ಮುಂದಿನ ಅರಸರೆಲ್ಲ ಕಂಬುಜೇಶ್ವರರೆಂದೇ ಪ್ರಸಿದ್ಧರಾದರು.

ಭಾರತೀಯ ಸಂಸ್ಕೃತಿಯೊಂದಿಗೆ ಶಿಲ್ಪಕಲೆಯನ್ನು ಕಂಬುಜದ ಜನ ತಮಗೆ ಬೇಕಾದಂತೆ ಅಳವಡಿಸಿಕೊಂಡರು. ಸ್ಥಾನಿಕ ಸಂಪ್ರದಾಯದೊಂದಿಗೆ ಭಾರತೀಯ ಕಲೆ ಸುಂದರವಾಗಿ ಮೇಳಗೊಂಡಿತು. ಆಂಗ್ಕೋರದ ಕಟ್ಟಡ ಪರಂಪರೆಗೆ ಸೇರಿದ್ದಾದರೂ ಭಾರತೀಯತೆಯೇ ಅದರ ಜೀವಾಳ. ಈ ಸಂಸ್ಕೃತಿಯ ಹಬ್ಬುಗೆಯೊಂದಿಗೆ ರಾಜ್ಯವೂ ವಿಸ್ತಾರವಾಯಿತು. ಪ್ರ.ಶ. 863ರ ಚೀನೀ ಬರೆಹಗಳಿಂದ ಖ್ಮೇರ ರಾಜ್ಯ ಇಡೀ ಇಂಡೊ-ಚೀನವನ್ನಲ್ಲದೆ ದಕ್ಷಿಣ ಯೂನಾನ್‌ವರೆಗೂ ಮುಟ್ಟಿತೆಂದು ತಿಳಿದುಬರುತ್ತದೆ. ಖ್ಮೇರರು ಬಲಾಢ್ಯರಿದ್ದು ಇತರ ಅರಸರಿಂದ ಕಪ್ಪವನ್ನೆತ್ತುತ್ತಿದ್ದರು ಎನ್ನುವುದು ಅರಬ್ಬರ ಬರೆಹಗಳಿಂದ ಗೊತ್ತಾಗುವ ಸಂಗತಿ.

ಕಂಬುಜದ ರಾಜ್ಯ ವ್ಯವಸ್ಥೆಗೆ ಭಾರತೀಯ ಪರಂಪರೆಯಂತೆ ಧರ್ಮಶಾಸ್ತ್ರಗಳು ಆಧಾರವಾಗಿದ್ದುವು. ಅರಸರಿಗೆ ಸಚಿವರೂ ಮಂತ್ರಿಗಳೂ ಆಚಾರ್ಯರೂ ಸಲಹೆ ನೀಡುತ್ತಿದ್ದರು. ರಾಜ್ಯವನ್ನು ಅನೇಕ ಜಿಲ್ಲೆಗಳಾಗಿ ವಿಭಾಗಿಸಲಾಗಿತ್ತು. ಇವುಗಳ ಆಡಳಿತ ಸುಬೇದಾರರಿಗೆ ಒಳಪಟ್ಟಿತ್ತು. ತಾಮ್ರಪುರ, ಧ್ರುವಪುರ, ವಿಕ್ರಮಪುರ, ಶ್ರೇಷ್ಠಪುರ ಮುಂತಾದುವು ಇಲ್ಲಿನ ಊರುಗಳ ಹೆಸರುಗಳಾಗಿದ್ದುವು. ಸಾಮಾನ್ಯವಾಗಿ ಊರುಗಳ ಸುತ್ತಲೂ ಕೋಟೆಗಳಿದ್ದುವು. ವಿಪ್ರಶಾಲೆ (ವಿದ್ವಜ್ಜನರ ಸಮಿತಿ), ಸರಸ್ವತಿ (ಸಾರ್ವಜನಿಕರ ಶಾಲೆ), ಪುಸ್ತಕಾಶ್ರಮ (ವಾಚನಾಲಯ), ಸತ್ರಗಳು ಮತ್ತು ಆರೋಗ್ಯಶಾಲೆಗಳೇ ಮುಂತಾದ ಸಾರ್ವಜನಿಕ ಸಂಸ್ಥೆಗಳು ಪ್ರತಿ ಊರಿನಲ್ಲೂ ಇದ್ದುವು. ಮುಖ್ಯ ಮಾರ್ಗಗಳಲ್ಲೂ ಕೂಟಗಳಲ್ಲೂ ವಹ್ನಿಗೃಹಗಳು (ಧರ್ಮಶಾಲೆ) ಇದ್ದವು.

ಸಂಸ್ಕೃತಿ, ಸಾಹಿತ್ಯಗಳಲ್ಲೂ ಕಂಬುಜ ಪರಿಪೂರ್ಣತೆ ಪಡೆಯಿತು. ಶಿಲ್ಪಕಲೆಯಂತೂ ಶಿಖರಕ್ಕೆ ಏರಿದ್ದನ್ನು ಆಂಗ್ಕೋರ್ ವಾಟ್ ಮತ್ತು ಆಂಗ್ಕೋರ್‌ಥಾಮ್ ಸಾರುತ್ತವೆ. ಹೀಗೆ ಸುಮಾರು ಆರು ಶತಮಾನಗಳ ಕಾಲ ವೈಭವದಿಂದಿದ್ದ ಮೇಲೆ ಈ ರಾಜ್ಯಕ್ಕೆ ಪೂರ್ವದಿಂದ ಅನ್ನಾಂ ದಾಳಿಗಾರರೂ ಪಶ್ಚಿಮದಿಂದ ಥಾಯ್ ಆಕ್ರಮಣಕಾರರೂ ನುಗ್ಗಿ ಇದನ್ನು ಹಾಳುಗೆಡವಿದರು. ಹೀಗೆ ಅರಸರ ಬಲ ಕುಗ್ಗುತ್ತ ನಡೆದು 18ನೆಯ ಶತಮಾನದಲ್ಲಿ ಫ್ರೆಂಚರು ಇಲ್ಲಿಯ ರಾಜ್ಯದ ಸೂತ್ರಧಾರರಾದರು. ಆದರೆ ಮೊದಲಿನ ಅರಸರ ಯುದ್ಧ ವಿಜಯಗಳ ಸ್ಮಾರಕಗಳೂ, ಧಾರ್ಮಿಕ ದಾನ ದತ್ತಿಗಳೂ, ಎಲ್ಲಕ್ಕೂ ಹೆಚ್ಚಾಗಿ ಭಯ ಕಟ್ಟಡಗಳೂ ಈ ಜನ ಅರಗಿಸಿಕೊಂಡ ಭಾರತೀಯ ಸಂಸ್ಕೃತಿಯ ಕಥೆಯನ್ನೇ ಸಾರುತ್ತವೆ.

ಚಂಪ: ಕಾಂಬೋಡಿಯದ ಪೂರ್ವಕ್ಕೆ ಚಂಪ (ಅನಂತರ ಇದು ಅನ್ನಾಂನ ಒಂದು ಭಾಗವಾಯಿತು) ಎಂಬ ಇನ್ನೊಂದು ಹಿಂದೂ ರಾಜ್ಯ ಅನೇಕ ಶತಕಗಳ ಕಾಲ ಘನತೆಯಿಂದ ಮೆರೆಯಿತು. ಚೀನಿಯರು ಈ ನಾಡನ್ನು ಲಿನ್‌ಯಿ ಎಂದು ಕರೆಯುತ್ತಿದ್ದರು. ಚಿನ್ ವಂಶದ ಮೊದಲನೆಯ ಅರಸನ ಕಾಲಕ್ಕೆ ಲಿನ್‌ಯಿ ಜನ ಘೂನಾನದ ಬೆಂಬಲದೊಂದಿಗೆ ಚೀನಿ ಪ್ರದೇಶದ ಮೇಲೆ ಆಗಿಂದಾಗ್ಗೆ ದಾಳಿ ಮಾಡುತ್ತಿದ್ದರೆಂದು ಉಲ್ಲೇಖವಿದೆ. 3ನೆಯ ಶತಮಾನದಲ್ಲಿ ಶ್ರೀಮಾರನಿಂದ ಸ್ಥಾಪಿಸಲ್ಪಟ್ಟ ಈ ರಾಜ್ಯ 15ನೆಯ ಶತಮಾನದವರೆಗೆ ಬಾಳಿತು. ಚಂಪ ದೇಶದವರನ್ನು ಚೀನಿಯರು ಚಾಮ್ ಎಂದು ಕರೆಯುತ್ತಿದ್ದರು. ಈ ದೇಶದ ಜನರ ನಡೆನುಡಿಗಳು ಚೀನೀ ವೃತ್ತಗಳಲ್ಲಿ ಉಲ್ಲೇಖಿತವಾಗಿವೆ. ಭದ್ರವರ್ಮನೆಂಬ ಅರಸರ ಬಗ್ಗೆ ಅನೇಕ ಶಾಸನಗಳಿವೆ. ಈತ ಕಟ್ಟಿಸಿದ ಭದ್ರೇಶ್ವರ ದೇವಸ್ಥಾನವೊಂದಿದೆ. ಒಂದು ಶಾಸನದಲ್ಲಿ ನಾಗದೇವತೆಯ ಬಗ್ಗೆ ವರ್ಣನೆಯಿದೆ. ನಾಗಶಿವ ಸಂಪ್ರದಾಯ ಚಂಪಾದಲ್ಲಿ ನೆಲೆಯೂರಿತೆನ್ನುವುದಕ್ಕೆ ಇದೊಂದು ಉದಾಹರಣೆ. 13ನೆಯ ಶತಮಾನದ ಚೀನಿ ಪ್ರವಾಸಿಗ ಮಾ–ತ್ವಾನ್–ಲಿನ್ ಈ ದೇಶವನ್ನು ಸಂದರ್ಶಿಸಿ ಇಲ್ಲಿನ ನಡೆನುಡಿಗಳು ಘೂನಾನ್‌ನಲ್ಲಿರುವಂತೆಯೇ ಇವೆಯೆಂದು ಬಣ್ಣಿಸಿದ್ದಾನೆ. ಇಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ಥಾನಮಾನಗಳಿದ್ದುವು. ಇವರಿಗೆ ತಮ್ಮ ಪತಿಗಳನ್ನು ತಾವೇ ಆರಿಸುವ ಅಧಿಕಾರವಿತ್ತು. ಅನೇಕ ವಂಶಗಳ ಅರಸರು ಅಮರಾವತಿ, ಪಾಂಡುರಂಗ, ಶ್ರೀವಿಜಯ, ಕೌಠಾರ ಮುಂತಾದ ಬೇರೆ ಬೇರೆ ರಾಜಧಾನಿಗಳಿಂದ ಈ ದೇಶವನ್ನಾಳಿದರು. ಉತ್ತರದಲ್ಲಿ ಚೀನದೊಂದಿಗೆ ಚಕಮಕಿಗಳು ನಡೆಯುತ್ತಿದ್ದವು. ಮಂಗೋಲರು, ಕಂಬುಜರು, ಥಾಯ್ ಜನ ಆಗಾಗ್ಗೆ ದಾಳಿ ನಡೆಸುತ್ತಿದ್ದರು. ಈ ದಾಳಿಗಳಿಂದ ಕೊನೆಗೊಮ್ಮೆ ಈ ರಾಜ್ಯ ಬಲಹೀನವಾಯಿತು. ಅನ್ನಾಂನ ಜನ ಬಂದು ಇಲ್ಲಿನ ಪಟ್ಟಣಗಳನ್ನೂ ಫಲವತ್ತಾದ ಕೊಳ್ಳಗಳನ್ನೂ ವಿಧ್ವಂಸಗೊಳಿಸಿದರು. ಹೀಗಾಗಿ ಭಾರತೀಯ ಸಂಸ್ಕೃತಿಯ ಕೀರ್ತಿಸ್ತಂಭಗಳಂತಿದ್ದ ಎಷ್ಟೋ ಸ್ಥಳಗಳು ನಿರ್ನಾಮವಾದವು. ದಂಡೆತ್ತಿ ಬಂದ ಅನೇಕ ತಂಡಗಳು ಅಲ್ಲಲ್ಲಿ ನೆಲೆಸಿ ಹೊಸ ನಾಗರೀಕತೆಯನ್ನು ಕಟ್ಟಿದುವು. ಈಗ ಅಳಿದುಳಿದ ಪಾಳು ಕಟ್ಟಡಗಳು ಘನತೆವೆತ್ತ ಹಿಂದೂ ಸಂಸ್ಕೃತಿಯ ಗತವೈಭವದ ಮೂಕಸಾಕ್ಷಿಗಳಾಗಿ ನಿಂತಿವೆ.

ಮಲೆಯ ದ್ವೀಪಕಲ್ಪದಲ್ಲಿ ಪ್ರ.ಶ.775ರಲ್ಲಿ ರಾಜ್ಯ ಸ್ಥಾಪಿಸಿದ ಶೈಲೇಂದ್ರ ವಂಶದ ಅರಸರು ಸಾಮ್ರಾಜ್ಯವಿಸ್ತಾರದ ಮಹತ್ತ್ವಾಕಾಂಕ್ಷೆಯುಳ್ಳವರಾಗಿದ್ದರು. ಆಗ್ನೇಯ ಏಷ್ಯದ ಅನೇಕ ದ್ವೀಪಗಳಲ್ಲಿ ತಮ್ಮ ಸತ್ತೆಯನ್ನು ಸ್ಥಾಪಿಸಿದ್ದಲ್ಲದೆ ಅನ್ನಾಂ, ಕಾಂಬೋಡಿಯಾಗಳ ಮೇಲೂ ಪ್ರಭಾವ ಬೀರಿದರು. ಅನಂತರ ಬಂದ ಮಜಪಹಿತ್ ಮತ್ತು ಪೂರ್ವ ಜಾವಾ ಅರಸುಮನೆತನಗಳೂ ಈ ರಾಜ್ಯಹವ್ಯಾಸದ ಪರಂಪರೆಯನ್ನು ಬೆಳೆಸಿ ಇಂಡೋ-ಚೀನದಲ್ಲಿಯ ರಾಜ್ಯಗಳ ಮೇಲೆ ತಮ್ಮ ಪ್ರಭಾವ ಬೀರಿದುವು. ಈ ಪ್ರದೇಶದಲ್ಲಿ ಪ್ರತ್ಯಕ್ಷ ಚೀನೀ ಸಂಪರ್ಕ ಬೆಳೆದದ್ದು 13ನೆಯ ಶತಮಾನದಲ್ಲಿ, ಮಂಗೋಲರು ಅಧಿಕಾರಕ್ಕೆ ಬಂದ ಮೇಲೆ. 1257–58ರಲ್ಲಿ ಇವರು ಅನ್ನಾಂ ಪ್ರಾಂತ್ಯವನ್ನು ಆಕ್ರಮಿಸಿದರು. ಮುಂದೆ ಬಂದ ಮಿಂಗ್ ವಂಶದವರೂ ಇದೇ ಧೋರಣೆ ಮುಂದುವರಿಸಿ ಅನ್ನಾಂ ಮತ್ತು ಇತರ ಪ್ರದೇಶಗಳನ್ನು ಗೆದ್ದುಕೊಂಡರು. ಆದರೆ 1421ರಲ್ಲಿ ರಾಜಧಾನಿಯನ್ನು ನ್ಯಾನ್‌ಕಿಂಗ್‌ನಿಂದ ಪೀಕಿಂಗ್‌ಗೆ ಬದಲಾಯಿಸಿದ ಮೇಲೆ ದಕ್ಷಿಣದ ಈ ರಾಜ್ಯಾಕಾಂಕ್ಷೆ ಕಡಿಮೆಯಾಯಿತು. ಮಂಗೋಲ್ ಚಕ್ರವರ್ತಿ ಕುಬ್ಲೈಖಾನನ ಕಾಲಕ್ಕೆ ವೆನಿಸ್‌ನ ಪ್ರವಾಸಿ ಮಾರ್ಕೊ ಪೋಲೊ ಚೀನವನ್ನು ಸಂದರ್ಶಿಸಿದ. ಮಾತೃಭೂಮಿಗೆ ಹಿಂತಿರುಗುವಾಗ ಈತ ಆಗ್ನೇಯ ಏಷ್ಯದ ಅನೇಕ ಸ್ಥಳಗಳನ್ನೂ ಕಂಡ. ಇವನು ಚಂಪ ಮತ್ತು ಜಾವಾಗಳನ್ನು ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸಿದ್ದಾನೆ (ನೋಡಿ– ಕುಬ್ಲೈಖಾನ್).

ಈ ಕಾಲದಲ್ಲಿಯೇ ಮಲೆಯ ದ್ವೀಪಗಳಲ್ಲೂ ಸುಮಾತ್ರ, ಜಾವಾಗಳಲ್ಲೂ ಇಸ್ಲಾಂ ಧರ್ಮ ಹಬ್ಬತೊಡಗಿತ್ತು. ಆದರೆ ಈಗಿನ ಮಯನ್ಮಾರ್ ದೇಶದಿಂದ ಟಾಂಕಿನ್‌ನವರೆಗಿನ ಪ್ರದೇಶ ಈ ಪ್ರಭಾವಕ್ಕೆ ಒಳಗಾಗಲಿಲ್ಲ. ಮುಸ್ಲಿಂ ಸಂಸ್ಕೃತಿಗೆ ಇಲ್ಲಿ ಅವಕಾಶವೇ ಕೊಡದಷ್ಟು ಮಟ್ಟಿಗೆ ಬೌದ್ಧಧರ್ಮ ಆಳವಾಗಿ ತಳವೂರಿತ್ತು ಅಥವಾ ವ್ಯಾಪಾರಕ್ಕೆ ಬಂದ ಮುಸ್ಲಿಮರು ಇಂಡೊ-ಚೀನಕ್ಕೆ ವಿಶೇಷವಾಗಿ ಹೋಗಲಿಲ್ಲ. ಚೀನಿಯರ ಒಡೆತನದ ಅನಂತರ ಒಮ್ಮೆಲೇ ಪಾಶ್ಚಾತ್ಯರ ಪ್ರವೇಶವಾಗಿ 15ನೆಯ ಶತಮಾನದ ಅನಂತರ ಅವರ ಪ್ರಭಾವ ಹೆಚ್ಚು ಹೆಚ್ಚಾಗಿ ಹರಡತೊಡಗಿತು **(ನೋಡಿ– ಆಗ್ನೇಯ-ಏಷ್ಯ)**.

ಫ್ರೆಂಚರ ಪ್ರಭಾವ: ಇಂಡೊ-ಚೀನದಲ್ಲಿ ಫ್ರೆಂಚರ ಚಟುವಟಿಕೆಗಳು 1787ರಿಂದಲೂ ನಡೆದೇ ಇದ್ದುವು. ಫ್ರೆಂಚ್ ಪಾದ್ರಿಯೊಬ್ಬನ ಪ್ರಯತ್ನದಿಂದ ಕೊಚಿನ್-ಚೀನದ ಅರಸು ಮತ್ತು ಹದಿನೈದನೆಯ ಲೂಯಿಯ ನಡುವೆ ಒಪ್ಪಂದವಾಗಿ ಫ್ರೆಂಚರು ಹೆಚ್ಚು ಹೆಚ್ಚಾಗಿ ಇಂಡೊ-ಚೀನಕ್ಕೆ ಬರತೊಡಗಿದರು. ಅನ್ನಾಂನ ರಾಜಪುತ್ರನೊಬ್ಬನಿಗೆ ಪಟ್ಟವೇರಲು ಸಹಾಯ ಮಾಡಿ ಇವರೂ ಈ ಯಾದವೀ ಕಲಹದಲ್ಲಿ ಸೇರಿದರು. ಆದರೆ 19ನೆಯ ಶತಮಾನದಲ್ಲಿ ಕ್ರೈಸ್ತ ಪಾದ್ರಿಗಳ ಬಗ್ಗೆ ಜನರಿಗೆ ಅಸಹನೆ ಉಂಟಾಯಿತು. ಮತಾಂತರ ಹೊಂದಿದ ಜನರೂ ಪಾದ್ರಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಕೊಲೆಗೆ ಈಡಾದರು. ಫ್ರಾನ್ಸ್ ಮತ್ತು ಸ್ಪೇನ್‌ಗಳ ಸರ್ಕಾರಗಳು ಮಧ್ಯಸ್ತಿಕೆ ವಹಿಸಿ ಈ ರಕ್ತಪಾತವನ್ನು ನಿಲ್ಲಿಸಿದುವು. 1858ರಲ್ಲಿ ಟೂರಿನ್ ಎಂಬ ಮಹತ್ತ್ವದ ಬಂದರನ್ನೂ 1862ರಲ್ಲಿ ಸೈಗಾನನ್ನೂ ಗೆದ್ದ ಮೇಲೆ ಕೊಚಿನ್-ಚೀನದ ಪೂರ್ವದ ಮೂರು ಪ್ರಾಂತ್ಯಗಳೂ ಪ್ರತ್ಯಕ್ಷವಾಗಿ ಫ್ರೆಂಚರ ಅಧೀನಕ್ಕೆ ಬಂದವು.

1873ರಲ್ಲಿ ಸೈಗಾನಿನಲ್ಲಿ ಸೈನಿಕ ಕಾಲೇಜೊಂದನ್ನು ಸ್ಥಾಪಿಸಲಾಯಿತು. ಅದೇ ವರ್ಷ ಟಾಂಕಿನ್ ಪ್ರಾಂತ್ಯವೂ ಫ್ರೆಂಚರ ವಶವಾಯಿತು. 1887ರಲ್ಲಿ ಇಂಡೊ-ಚೀನ ಒಕ್ಕೂಟದ ನಿರ್ಮಾಣವಾಯಿತು. ಫ್ರೆಂಚ್ ವಸಾಹತಾದ ಕೊಚಿನ್-ಚೀನವೂ ಸಂರಕ್ಷಿತ ದೇಶಗಳಾದ ಅನ್ನಾಂ, ಟಾಂಕಿನ್ ಮತ್ತು ಕಾಂಬೋಡಿಯಗಳೂ ಇದಕ್ಕೆ ಒಳಪಟ್ಟುವು. ಇಲ್ಲಿಗೆ ಶತಮಾನಗಟ್ಟಲೆ ನಡೆದುಬಂದ ಚೀನಿಯರ ಆಧಿಪತ್ಯ ಮುಕ್ತಾಯವಾಯಿತು. ಚೀನಿ ಫ್ರೆಂಚ್ ಗಡಿಗಳನ್ನು ನಿರ್ಧರಿಸಲಾಯಿತು. ಅದೇ ವರ್ಷ ಫ್ರೆಂಚ್ ಗವರ್ನರ್-ಜನರಲ್‌ನೊಬ್ಬನ

ನೇಮಕವಾಯಿತು. ಫ್ರೆಂಚ್ ಆಳರಸರ ಮತ್ತು ಪ್ರಜೆಗಳ ಮಧ್ಯೆ ವಿರಸ ಬೆಳೆಯಿತು. ಆಗಾಗ ಏಳುತ್ತಿದ್ದ ದಂಗೆಗಳನ್ನು ಫ್ರೆಂಚರು ಹತ್ತಿಕ್ಕಿದ್ದರು. 1893ರಲ್ಲಿ ಲಾವೋಸನ್ನೂ ಇಂಡೊ-ಚೀನದಲ್ಲಿ ವಿಲೀನಗೊಳಿಸಲಾಯಿತು.

ಎರಡನೆಯ ಮಹಾಯುದ್ಧದ ಕಾಲಕ್ಕೆ ಈ ಪ್ರದೇಶದಲ್ಲಿ ಫ್ರೆಂಚರ ಪ್ರಾಬಲ್ಯ ಬಹಳ ಕುಗ್ಗಿತು. 1940ರಲ್ಲಿ ಫ್ರಾನ್ಸ್ ಜರ್ಮನಿಗೆ ಶರಣಾದಾಗ ಜಪಾನು ಇಂಡೊ-ಚೀನವನ್ನಾಕ್ರಮಿಸಿ ಕೊಂಡಿತು. 1945ರಲ್ಲಿ ಜಪಾನ್ ಸೋತು ಹಿನ್ನಡೆದಾಗ ಫ್ರಾನ್ಸ್ ಮತ್ತೆ ಇಂಡೊ-ಚೀನಕ್ಕೆ ಬಂತು. ಆದರೆ ಅದು ರಾಷ್ಟ್ರೀಯ ಚಳವಳಿಯ ಪ್ರಬಲ ವಿರೋಧವನ್ನೆದುರಿಸಬೇಕಾಯಿತು. ಕಮ್ಯೂನಿಸ್ಟರ ಪ್ರೋತ್ಸಾಹ ಬೆಂಬಲಗಳಿಂದ ಹೊಚಿ ಮಿನ್ಹರ (**ನೋಡಿ – ಹೋಚಿಮಿನ್ಹ್**) ಪಡೆಯನ್ನೆದುರಿಸಲಾರದ ಫ್ರೆಂಚರು ಬಾವೊದಾಯನನ್ನು ಚಕ್ರವರ್ತಿಯಾಗಿ ಮಾಡಿ ಆತನಿಗೆ ವಿಧೇಯರಾದ ಜನರನ್ನೆಲ್ಲ ಸಂಘಟಿಸಿ ಹೊ ಚಿ ಮಿನ್ಹ್ ಪಡೆಯನ್ನು ಹತ್ತಿಕ್ಕಲೆತ್ನಿಸಿ ವಿಫಲರಾದರು. 1954ರಲ್ಲಿ ಜಿನೀವದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನವೊಂದು ನಡೆಯಿತು. ಆಗ ಶಾಂತಿ ಏರ್ಪಟ್ಟಿತು. ವಿಯೆಟ್ನಾಮನ್ನು ಹದಿನೇಳನೆಯ ಅಕ್ಷಾಂಶಕ್ಕೆ ವಿಭಾಗಿಸಲಾಯಿತು. ಅಲ್ಲಿ ಎರಡು ರಾಜ್ಯಗಳು ಸೃಷ್ಟಿಯಾದವು. ಆ ಪ್ರದೇಶದ ಇನ್ನೆರಡು ರಾಜ್ಯಗಳಾದ ಲಾವೋಸ್ ಕಾಂಬೋಡಿಯಗಳಲ್ಲಿ ತಕ್ಕಮಟ್ಟಿನ ಶಾಂತಿಯೇರ್ಪಟ್ಟಿತಾದರೂ ಉತ್ತರ-ದಕ್ಷಿಣ ವಿಯೆಟ್ನಾಮುಗಳ ನಡುವೆ ಯುದ್ಧ ಮುಂದುವರಿದಿದೆ. ದಕ್ಷಿಣ ವಿಯೆಟ್ನಾಮಿನಲ್ಲಿ ಸರ್ಕಾರವಿರೋಧಿ ಚಳವಳಿಗಾರರಿಗೆ ಉತ್ತರ ವಿಯೆಟ್ನಾಮಿನ ಪ್ರೋತ್ಸಾಹವಿದೆಯೆಂಬ ಕಾರಣದಿಂದ ಅಮೆರಿಕ ಮೊದಲ್ಗೊಂಡು ಅನೇಕ ರಾಜ್ಯಗಳು ಇಲ್ಲಿನ ಯುದ್ಧದ ಸುಳಿಯೊಳಕ್ಕೆ ಸಿಕ್ಕಿವೆ. (ಜಿ.ಎಸ್.ಡಿ.)

**ಇಂಡೊ-ಪಾರ್ಥಿಯನ್ನರು:** ಈ ರಾಜವಂಶದ ಮೂಲದ ಬಗ್ಗೆ ಎರಡು ಅಭಿಪ್ರಾಯಗ ಳಿವೆ. ಭಾರತದ ವಾಯವ್ಯ ಭಾಗದಲ್ಲಿ ಪ್ರ.ಶ.ಪೂ. 2ನೆಯ ಶತಮಾನದಿಂದ ಪ್ರ.ಶ. 1ನೆಯ ಶತಮಾನದವರೆಗೆ ರಾಜ್ಯಾಡಳಿತ ನಡೆಸುತ್ತಿದ್ದ ಗವರ್ನರುಗಳು ಇಂಡೊ-ಪಾರ್ಥಿಯನ್ ಎಂಬ ನಾಮಾಂಕಿತದಿಂದ ಇತಿಹಾಸದಲ್ಲಿ ಬೆಳಕಿಗೆ ಬಂದರೆಂಬುದು ಮೊದಲನೆಯ ಅಭಿಪ್ರಾಯವಾದರೆ, ಆ ಕಾಲದಲ್ಲಿ ಆ ಪ್ರದೇಶವನ್ನು ಆಳುತ್ತಿದ್ದವರು ಶಕರಲ್ಲದೆ ಬೇರೆಯಲ್ಲ ವೆಂದೂ ಪಾರ್ಥಿಯನ್ನರ ಬಿರುದು ಬಾವಲಿಗಳನ್ನು ಅವರು ಉಪಯೋಗಿಸುತ್ತಿದ್ದುದರಿಂದ ಅವರನ್ನು ಇಂಡೊ-ಪಾರ್ಥಿಯನ್ನರೆಂದು ಕರೆಯಲಾಯಿತೆಂದೂ ಇರಾನೀ ಶಾಸನಗಳ ಆಧಾರದಿಂದ ಹೇಳಬಹುದೆಂಬುದು ಎರಡನೆಯ ಅಭಿಪ್ರಾಯ.

ಮೊದಲನೆಯ ದೊರೆ ಮಿತ್ರಡೇಟಸ್ (ಪ್ರ.ಶ.ಪೂ. 171-136) ಯುಕ್ರಟೈಡಸ್‌ನ ಸಮಕಾಲೀನನಾಗಿದ್ದ. ಭಾರತದ ಮೇಲೆ ದಂಡಯಾತ್ರೆ ನಡೆಸಿ ಜೀಲಂ ಮತ್ತು ಸಿಂಧೂ ನದಿಗಳ ನಡುವಣ ಪ್ರದೇಶಗಳನ್ನು ವಶಪಡಿಸಿಕೊಂಡ. ಇವನ ಮರಣಾನಂತರ ಪಾರ್ಥಿಯನ್ ಗವರ್ನರುಗಳು ಸ್ವತಂತ್ರ ಸಂಸ್ಥಾನಗಳನ್ನು ಸ್ಥಾಪಿಸಿದರು.

ಈ ವಂಶದ ಮತ್ತೊಬ್ಬ ಪ್ರಸಿದ್ಧನಾದ ದೊರೆಯೆಂದರೆ ಮಾಯುಸ್ (ಮೊಗ). ಗ್ರೀಕ್ ರಾಜರುಗಳ ರಾಜನೆಂಬ ಬಿರುದನ್ನು ಪಡೆದು ತಕ್ಷಶಿಲೆಯನ್ನು ರಾಜಧಾನಿಯನ್ನಾಗುಳ್ಳ ಒಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿ ಬಹಳ ವರ್ಷಗಳ ಕಾಲ ಆಳಿದ ಮೊಗ ಎಂಬುವನೇ ಈ ದೊರೆಯೆಂದು ತಕ್ಷಶಿಲೆಯ ಶಾಸನದಿಂದ ಗೊತ್ತಾಗುತ್ತದೆ. ಮಿತ್ರಡೇಟಸ್ II ಮತ್ತೊಬ್ಬ ಪ್ರಖ್ಯಾತ ದೊರೆ. ಗೆದ್ದ ಭಾರತೀಯ ಪ್ರದೇಶಗಳನ್ನು ಈತ ಕ್ರೋಡೀಕರಿಸಿದನಲ್ಲದೆ ಶಕರ ಮೇಲೆ ಯುದ್ಧ ಮಾಡಿದ. ಈತನ ಅನಂತರ ದೂರ ದೂರ ಪ್ರಾಂತ್ಯಗಳಲ್ಲಿದ್ದ ಗವರ್ನರುಗಳು ಸ್ವತಂತ್ರ್ಯರಾದರು. ಅಜಿಸ್ I ಮತ್ತು ಅಜಿಸ್ II ಹೆಸರಾಂತ ಇಂಡೊ-ಪಾರ್ಥಿಯನ್ ನಾಯಕರುಗಳಾಗಿದ್ದರೂ ಅವರ ಬಗ್ಗೆ ಹೆಚ್ಚಿನ ವಿಷಯಗಳೇನೂ ತಿಳಿದುಬಂದಿಲ್ಲ.

ಗೊಂಡೊಫರ್ನಿಸ್ (ಗೂಡಾಫರ್ನಾ) (ಪ್ರ.ಶ.20-41) ಇಂಡೊ-ಪಾರ್ಥಿಯನ್ ರಾಜರುಗಳಲ್ಲೆಲ್ಲ ಬಹುಶ್ರೇಷ್ಠನೂ ವೀರನೂ ಆಗಿದ್ದ. ಯುರೋಪಿನಿಂದ ಬಂದ ಥಾಮಸ್ ಎಂಬ ಪಾದ್ರಿ ಇವನನ್ನೂ ಗದ್ ಎಂಬ ಇವನ ತಮ್ಮನನ್ನೂ ಇವನ ಜನಗಳನ್ನೂ ಕ್ರೈಸ್ತಮತಕ್ಕೆ ಸೇರಿಸಿದುದಾಗಿ ತಿಳಿದುಬರುತ್ತದೆ. ಆದರೆ ಇದು ಒಂದು ನಂಬಲಾಗದ ಕಥೆಯಲ್ಲದೆ ಬೇರೆಯಲ್ಲವೆಂದು ಇತಿಹಾಸಕಾರ ಸ್ಮಿತ್ ಇದನ್ನು ನಿರಾಕರಿಸಿದ್ದಾನೆ.

ಗೊಂಡೊಫರ್ನಿಸ್ಸನ ಕಾಲದಲ್ಲಿ, ಗೊಂಡೊಫರ್ನಿಸ್ ಮತ್ತು ಅವನ ವಂಶೀಕರು (ಪರ್ಷಿಯನ್ ಪ್ರಭಾವಕ್ಕೆ ಒಳಗಾದ ಶಕರು) ಮತ್ತು ಅಪ್ಪಟ ಪಾರ್ಥಿಯನ್ ಗುಂಪಿಗೆ ಸೇರಿದವರು ಎಂಬುದಾಗಿ ಎರಡು ಗುಂಪುಗಳನ್ನು ಕಾಣಬಹುದಾಗಿತ್ತು. ಪ್ರ.ಶ. 1ನೆಯ ಶತಮಾನ ಪೂರ್ತಿಯಾಗಿ ಇವರು ತಮ್ಮತಮ್ಮೊಳಗೆ ಜಗಳವಾಡುತ್ತಿದ್ದರು. ಕುಶಾನ ದೊರೆಯಾದ ವಿಮಾ ಕ್ಯಾಡ್‌ಫಿಸಸ್ ಅವರ ರಾಜ್ಯದ ಬಹುಭಾಗಗಳನ್ನು ವಶಪಡಿಸಿಕೊಂಡದ್ದರಿಂದ ಪಾರ್ಥಿಯನ್ನರು ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಉಳಿಯಲು ಸಾಧ್ಯವಾಗಲಿಲ್ಲ. (ಬಿ.ಎಂ.)

**ಇಂಡೋ-ಬ್ಯಾಕ್ಟ್ರಿಯನ್ನರು:** ಅಲೆಕ್ಸಾಂಡರನ ಅನಂತರ ಪ್ರಾಬಲ್ಯಕ್ಕೆ ಬಂದ ಒಂದು ಅರಸುಮನೆತನ. ಅಲೆಕ್ಸಾಂಡರ್ ನಿರ್ಮಿಸಿದ ವಿಶಾಲ ಸಾಮ್ರಾಜ್ಯವನ್ನು (ಮ್ಯಾಸಿಡೋನಿಯ, ಸಿರಿಯ, ಬ್ಯಾಕ್ಟ್ರಿಯ, ಪಾರ್ಥಿಯ, ಆಫ್ಘಾನಿಸ್ತಾನ ಮತ್ತು ವಾಯವ್ಯ ಭಾರತ) ಸ್ವಲ್ಪ ಕಾಲದವರೆಗೆ ಸೆಲ್ಯೂಕಸ್ ಬಹು ದಕ್ಷತೆಯಿಂದ ಆಳಿದ. ಕ್ರಮೇಣ ಕೆಲವು ಭಾಗಗಳನ್ನು (ಆಫ್ಘಾನಿಸ್ತಾನ ಮತ್ತು ವಾಯವ್ಯ ಭಾರತ) ಆತ ಚಂದ್ರಗುಪ್ತಮೌರ್ಯನಿಗೆ ಬಿಟ್ಟುಕೊಡಬೇಕಾಯಿತು. ಸೆಲ್ಯೂಕಸ್‌ನ ಮೊಮ್ಮಗನಾದ 2ನೆಯ ಆ್ಯಂಟಿಯೋಕಸ್ಸನ ಕಾಲಕ್ಕೆ ಸಾಮ್ರಾಜ್ಯ ಕುಸಿಯತೊಡಗಿತು. ಅವನ ಆಳ್ವಿಕೆ ಮುಗಿಯುವಷ್ಟರಲ್ಲಿ ಡಿಯೊಡೊಟಸ್ ಎಂಬುವನ ನೇತೃತ್ವದಲ್ಲಿ ಬ್ಯಾಕ್ಟ್ರಿಯನ್ನರೂ ಅರ್ಸಕಸ್ ಎಂಬುವನ ನಾಯಕತ್ವದಲ್ಲಿ ಪಾರ್ಥಿಯನ್ನರೂ ಸ್ವತಂತ್ರರಾಜ್ಯಗಳನ್ನು ನಿರ್ಮಿಸಲು ಸಿದ್ಧರಾದರು. ಮೌರ್ಯಸಾಮ್ರಾಜ್ಯ ಮುರಿದುಬಿದ್ದುದರಿಂದ ಭಾರತದಲ್ಲಿ ಬಲಿಷ್ಠರಾದ ರಾಜರುಗಳಾರೂ ಇರಲಿಲ್ಲ. ಇಂಥ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಬ್ಯಾಕ್ಟ್ರಿಯ ಮತ್ತು ಪಾರ್ಥಿಯದ ಗ್ರೀಕ್ ರಾಜರು ತಮ್ಮ ಆಕ್ರಮಣಗಳನ್ನು ಆಗ್ನೇಯದ ಕಡೆ ಮುಂದುವರಿಸಿದರು. ಅವರು ಭಾರತದ ವಾಯವ್ಯಭಾಗದಲ್ಲಿ ಇಂಡೋ-ಗ್ರೀಕ್ ಅಥವಾ ಇಂಡೋ-ಬ್ಯಾಕ್ಟ್ರಿಯನ್ ಮತ್ತು ಇಂಡೋ-ಪಾರ್ಥಿಯನ್ ರಾಜ್ಯಗಳನ್ನು ಸ್ಥಾಪಿಸಿದರು.

ಹಿಂದೂಕುಷ್‌ನ ಆಚೆ ಇರುವ ಬ್ಯಾಕ್ಟ್ರಿಯ ಸಂಪದ್ಭರಿತವಾಗಿದ್ದು ಅಲೆಕ್ಸಾಂಡರನ ಕಾಲದಲ್ಲಿ ಪ್ರಮುಖವಾದ ಸತ್ರಪಿಯಾಗಿತ್ತು. ಸೆಲ್ಯೂಕಸನ ಕಾಲದಲ್ಲಿ ಅದು ಪೂರ್ಣವಾಗಿ ಗ್ರೀಕ್ ಸಂಸ್ಕೃತಿಯ ಕೇಂದ್ರವಾಯಿತು. ಪ್ರ.ಶ. ಪೂ. 252ರಲ್ಲಿ ಅದರ ಆಡಳಿತಾಧಿಕಾರಿಯಾದ ಡಯೋಡಟಸ್ ಸಮಯ ನೋಡಿ ಸ್ವಾತಂತ್ರ್ಯ ಪತಾಕೆ ಹಾರಿಸಿದ. ಅವನ ಉತ್ತರಾಧಿಕಾರಿಗಳಾದ ಡಯೋಡಟಸ್ II ಮತ್ತು ಯೂಕಿಡಿಮಾಸ್ ತಮ್ಮ ಸ್ಥಾನಮಾನಗಳನ್ನು ಭದ್ರಪಡಿಸಿಕೊಳ್ಳುವ ಉದ್ದೇಶದಿಂದ ಮಧ್ಯ ಏಷ್ಯದಲ್ಲಿ ಕಾರ್ಯನಿರತರಾಗಿದ್ದರು. ಆದರೆ 4ನೆಯ ದೊರೆಯಾದ ಡೆಮಿಟ್ರಿಯಸ್ ಭಾರತದ ಮೇಲೆ ದಾಳಿ ಮಾಡಿ, ವಾಯವ್ಯಭಾಗದಲ್ಲಿ ಇಂಡೋ-ಬ್ಯಾಕ್ಟ್ರಿಯನ್ ರಾಜ್ಯವನ್ನು ಸ್ಥಾಪಿಸಿ, ಸಕಲ (ಸಯಾಲ್ ಕೋಟೆ) ಎಂಬುದನ್ನು ರಾಜಧಾನಿಯನ್ನಾಗಿ ಮಾಡಿಕೊಂಡ.

**ಡೆಮಿಟ್ರಿಯಸ್** (ಪ್ರ.ಶ.ಪೂ 200-175): ತನ್ನ ಮಾವನಾದ ಸಿರಿಯದ ಆ್ಯಂಟಿಯೊಕಸ್ಸನ ಹಾದಿಯಲ್ಲೇ ನಡೆಯಬೇಕೆಂಬ ಉದ್ದೇಶದಿಂದ ಈತ ದಂಡಯಾತ್ರೆ ಹೊರಟು ಭಾರತದ ಸ್ವಲ್ಪಭಾಗವನ್ನು ವಶಪಡಿಸಿಕೊಂಡ. ಬಲಿಷ್ಠನಾದ ದೊರೆಯೊಬ್ಬ ಇಲ್ಲದ್ದರಿಂದ ಭಾರತ ಛಿದ್ರಗೊಂಡು ದುಃಸ್ಥಿತಿಯಲ್ಲಿರುವುದೆಂದೂ ತನ್ನ ಕಾರ್ಯಸಾಧನೆಗೆ ಇದೇ ತಕ್ಕ ಸಮಯವೆಂದೂ ಭಾವಿಸಿದ ಈತ ಭಾರತದ ಮೇಲೆ ಮತ್ತೊಮ್ಮೆ ದಾಳಿಮಾಡಲು ನಿಶ್ಚಯಿಸಿದ. ಅಲೆಕ್ಸಾಂಡರನಂತೆ ತಾನೂ ವಿಶ್ವವಿಖ್ಯಾತನಾಗಬೇಕೆಂದೂ ಭಾರತದಲ್ಲಿರುವ ಐಶ್ವರ್ಯವನ್ನು ಲೂಟಿ ಹೊಡೆಯಬೇಕೆಂದೂ ಈತ ಇಚ್ಛಿಸಿದ. ಖರೋಷ್ಠಿ ಮತ್ತು ಗ್ರೀಕ್ ಭಾಷೆಗಳಲ್ಲಿರುವ ನಾಣ್ಯಗಳ ಆಧಾರದ ಮೇಲೆ ಈತ ಆಫ್ಘಾನಿಸ್ತಾನದಲ್ಲೆಲ್ಲ ದಾಳಿ ಮಾಡಿ, ಭಾರತದ ವಾಯವ್ಯದಲ್ಲಿದ್ದ ಕೆಲವು ರಾಜ್ಯಗಳನ್ನು ಕಟ್ಟಿಕೊಂಡು ಭಾರತೀಯರ ರಾಜನೆಂಬ ಬಿರುದನ್ನು ಪಡೆದನೆಂದು ಹೇಳಬಹುದು. ಇವನ ಆಳ್ವಿಕೆಯ ಕೊನೆಯ ಹೊತ್ತಿಗೆ ಬಾಲ್ಕ್ ಎಂಬ ಪ್ರದೇಶ ದಂಗೆ ಎದ್ದುದರಿಂದ ಈತ ತನ್ನ ಸಾಮ್ರಾಜ್ಯದ ಕೆಲವು ಭಾಗಗಳನ್ನು ಕಳೆದುಕೊಳ್ಳಬೇಕಾಯಿತು.

ಭಾರತದ ಆಕ್ರಮಿತ ಪ್ರದೇಶಗಳನ್ನು ಕ್ರೋಡೀಕರಿಸುವ ಕಾರ್ಯದಲ್ಲಿ ಡೆಮಿಟ್ರಿಯಸ್ ನಿರತನಾಗಿದ್ದಾಗ ಯೂಕ್ರಟೈಡಿಸ್ ಬಾಲ್ಕ್‌ನಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದ. ಅನಂತರ ಡೆಮಿಟ್ರಿಯಸ್‌ನ ಭಾರತದ ನೆಲೆಗಳನ್ನು ಆಕ್ರಮಿಸಿಕೊಂಡ ಎಂಬುದಾಗಿ ಊಹಿಸಲಾಗಿದೆ. ಅವನ ಮರಣಾನಂತರ ಡೆಮಿಟ್ರಿಯಸ್ ಮತ್ತು ಯೂಕ್ರಟೈಡಿಸ್‌ರ ಬಂಧುಗಳಾದ ಅನೇಕ ಗ್ರೀಕ್ ರಾಜರು ಉತ್ತರ ಭಾರತವನ್ನು ತಮ್ಮ ಇಷ್ಟಾನುಸಾರ ಹಂಚಿಕೊಂಡರೆಂಬುದು ವಿದ್ವಾಂಸರ ಅಭಿಪ್ರಾಯ. ಪ್ರ.ಶ.ಪೂ. 130ರ ಅನಂತರ ಬ್ಯಾಕ್ಟ್ರಿಯನ್ನರ ರಾಜ್ಯ ಕ್ಷೀಣದೆಸೆಗೆ ಬಂತು. (ಬಿ.ಎಂ.)

**ಇಂಡೋ-ಬ್ರಹ್ಮ ನದಿ:** ಸು. 2 ಕೋಟಿ ವರ್ಷಗಳ ಹಿಂದೆ (ಮಯೋಸೀನ್ ಯುಗ) ಹಿಮಾಲಯ ತಪ್ಪಲಿನಲ್ಲಿ ಹುಟ್ಟಿ ಹರಿಯುತ್ತಿತ್ತೆಂದು ನಂಬಲಾದ ಒಂದು ಮಹಾನದಿ. ಭಾರತ ದೇಶದ ಭೂವೈಜ್ಞಾನಿಕ ಸರ್ವೇ ಸಂಸ್ಥೆಯಲ್ಲಿ ಅಧಿಕಾರಿಯಾಗಿದ್ದ ಇ.ಎಚ್. ಪ್ಯಾಸ್ಕೊ ಇದರ ಗತಿ, ಪಥಗಳನ್ನು ಸಂಶೋಧಿಸಿ ಈ ಹೆಸರು ಕೊಟ್ಟ. ಈಗಿನ ಬ್ರಹ್ಮಪುತ್ರ ನದಿ ಭಾರತ ದೇಶವನ್ನು ಅಸ್ಸಾಮಿನಲ್ಲಿ ಪ್ರವೇಶಿಸುವ ಪ್ರಾಂತ್ಯದಲ್ಲಿ ಇಂಡೋ-ಬ್ರಹ್ಮ ನದಿ ಹುಟ್ಟಿತೆಂಬುದು ಇವನ ಅಭಿಪ್ರಾಯ. ಅದರ ಸಮರ್ಥನೆ ಹೀಗಿದೆ: ಆ ಕಾಲದಲ್ಲಿ ಹಿಮಾಲಯ ಪರ್ವತಶ್ರೇಣಿಗಳ ದಕ್ಷಿಣ ಭಾಗದ ಅಂಚಿನಲ್ಲಿ 4,000 ಕಿಮೀ ಉದ್ದವಾದ ಒಂದು ಆಳವಾದ ಕಣಿವೆ ಇತ್ತು. ಇಂಡೋ-ಬ್ರಹ್ಮ ನದಿ ಈ ಕಣಿವೆಯಲ್ಲಿ ಪಶ್ಚಿಮಾಭಿಮುಖವಾಗಿ ಡೆಹರಾಡೂನ್ ವರೆಗೆ 1600 ಕಿಮೀ ಪ್ರವಹಿಸಿ ಅಲ್ಲಿಂದ ವಾಯವ್ಯಕ್ಕೆ ತಿರುಗಿ ಪಾಕಿಸ್ತಾನದಲ್ಲಿರುವ ಮರ್‍ರೀಯ ಮಾರ್ಗವಾಗಿ ಅಟಾಕನ್ನು ಸೇರಿ ಅಲ್ಲಿ ಸಿಂಧೂನದಿಯನ್ನು ಉಪನದಿಯಾಗಿ ಪಡೆದು ದಕ್ಷಿಣಕ್ಕೆ ತಿರುಗಿ ಸಿಂಧ್ ಪ್ರಾಂತದ ಹತ್ತಿರ ಅರಬ್ಬೀ ಸಮುದ್ರವನ್ನು ಸೇರುತ್ತಿತ್ತು. ಗಂಗಾ, ಯಮುನಾ, ಸರಸ್ವತೀ, ಪಂಜಾಬಿನ ಪಂಚನದಿಗಳು ಮತ್ತು ಸಿಂಧೂ ಇದರ ಇತರ ಉಪನದಿಗಳು. ಭಾರತದ ಉತ್ತರ ಪ್ರದೇಶದಲ್ಲಿ ಇಂಡೋ-ಬ್ರಹ್ಮ ನದಿ ಸು.15 ಲಕ್ಷ ವರ್ಷಗಳ ಕಾಲ ಬಹಳ ಪ್ರಬಲವಾದ ನದಿಯಾಗಿತ್ತು. ಆದರೆ ಪರಿಸ್ಥಿತಿ ಹೀಗೆಯೇ ಉಳಿಯಲಿಲ್ಲ. ಸು.5 ಲಕ್ಷ ವರ್ಷಗಳ ಹಿಂದೆ ಹಿಮಾಲಯ ಪ್ರದೇಶದಲ್ಲಿ ತಲೆದೋರಿದ ಭೂಕಂಪಗಳ ಪರಿಣಾಮವಾಗಿ ಇಂಡೋ-ಬ್ರಹ್ಮ ನದಿಯ ಕಣಿವೆಯ ಒಂದು ಭಾಗ ಉಬ್ಬಿ ಎತ್ತರವಾಯಿತು. ನದಿಯ ಗತಿ, ಚಲನೆ, ಉಪನದಿಗಳ ಅಸ್ತಿತ್ವ-ಇವು ಕುಂಠಿತಗೊಂಡುವು. ಗಂಗಾ ಮತ್ತು ಯಮುನಾ ನದಿಗಳು ಮೂಲ ನದಿಯನ್ನು ಸೇರದೆ ಅದನ್ನು ಭೇದಿಸಿಕೊಂಡು ಪೂರ್ವಾಭಿ

ಮುಖವಾಗಿ ಇಳಿಜಾರಾಗಿರುವ ಪೂರ್ವ ಪ್ರದೇಶವನ್ನು ಹೊಕ್ಕು ಬಂಗಾಳಕೊಲ್ಲಿಯನ್ನು ಸೇರಿದವು. ಸರಸ್ವತೀ ನದಿ ರಾಜಸ್ತಾನದ ಮೂಲಕ ಪ್ರವಹಿಸಿ, ಕಚ್ ಪ್ರದೇಶದ ಹತ್ತಿರ ಅರಬ್ಬೀ ಸಮುದ್ರವನ್ನು ಸೇರಿತು. ಸಿಂಧೂ ನದಿ ಪ್ರಬಲವಾಗಿ ಇಂಡೋ–ಬ್ರಹ್ಮದ ಮಾರ್ಗವಾಗಿ ಹರಿಯುವ ಮೂಲನದಿಯಾಯಿತು. ಪಂಚನದಿಗಳು ಸಿಂಧೂವಿನ ಉಪನದಿಗಳಾದವು. ಇದರಿಂದ ಇಂಡೋ–ಬ್ರಹ್ಮನದಿಯ ಪಶ್ಚಿಮ ಭಾಗ ನೀರಿಲ್ಲದೆ ಸಿಂಧೂನದಿಗೆ ಉಪನದಿಯಾಗ ಬೇಕಾಯಿತು. ಈಗ ಆ ಇಂಡೋ–ಬ್ರಹ್ಮದ ಭಾಗ ಪಾಕಿಸ್ತಾನದಲ್ಲಿ ಸೋಹನ್ ಎಂಬ ಹೆಸರಿನಿಂದ ಸಿಂಧೂವಿನ ಉಪನದಿಯಾಗಿದೆ. ಕೆಲವು ಸಾವಿರ ವರ್ಷಗಳ ಹಿಂದೆ ಯಮುನಾ ನದಿಯ ಪಕ್ಕದಲ್ಲಿದ್ದ ಸರಸ್ವತೀ ನದಿಯ ಕೆಲವು ನೀರಾವರಿ ಭಾಗಗಳನ್ನು ಆಕ್ರಮಿಸಿಕೊಂಡಿತು. ಇದರಿಂದ ಚಲನಶಕ್ತಿ ಕಡಿಮೆಯಾದ ಸರಸ್ವತೀ ನದಿ ಸಮುದ್ರವನ್ನು ಸೇರದೆ ರಾಜಾಸ್ಥಾನದಲ್ಲಿರುವ ಪುಷ್ಕರವೆಂಬ ಸರೋವರದವರೆಗೂ ಪ್ರವಹಿಸಿ ಭೂಮಿಯಲ್ಲಿ ಇಂಗಿಹೋಯಿತು. ಇದರ ಮೂಲ ಭಾಗ ಈಗ ದೆಹಲಿಯ ಉತ್ತರ ಭಾಗದಲ್ಲಿ ಘಘರ್ ಎಂಬ ಹೆಸರಿನಿಂದ ಚಿಕ್ಕನದಿಯಾಗಿದೆ. ಯಮುನಾ ನದಿ ಸರಸ್ವತಿಯ ಒಂದು ಭಾಗವನ್ನು ಮೂಲದಲ್ಲಿ ಆಕ್ರಮಿಸಿದ್ದರಿಂದ ಜನ ಅಲಹಾಬಾದಿನ ತ್ರಿವೇಣೀ ಸಂಗಮದಲ್ಲಿ ಸರಸ್ವತೀ ನದಿಯೂ ಇದೆಯೆಂದು ನಂಬಿದ್ದಾರೆ. ಇಂಡೋ–ಬ್ರಹ್ಮ ನದಿಯ ಅಸ್ತಿತ್ವವನ್ನು ಕುರಿತು ವಿದ್ವಾಂಸರಲ್ಲಿ ಅಭಿಪ್ರಾಯಭೇದವಿದೆ. (ಎನ್.ಕೆ.ಎನ್.ಐ.)

**ಇಂಡೋ–ಯುರೋಪಿಯನ್ ಅಥವಾ ಮೈಥಲಾಜಿಕಲ್ ಸಿದ್ಧಾಂತ:** ಜನಪದ ಕಥೆಗಳ ಮೂಲವನ್ನು ಕುರಿತ ಒಂದು ಸಿದ್ಧಾಂತ. ಅನೇಕ ವಿದ್ವಾಂಸರು ಕಳೆದ ಶತಮಾನ ದಿಂದಲೂ ಇಂಥ ಸಾಹಿತ್ಯದ ಇತಿಹಾಸವನ್ನು ಶೋಧಿಸಲು ಪ್ರಯತ್ನಿಸಿದ್ದಾರೆ. ಜನಪದ ಕಥೆಗಳ ಉಗಮ ಹೇಗಾಯಿತು. ಅವು ಎಲ್ಲಿಂದ ಎಲ್ಲಿಗೆ ಸಂಚಾರವನ್ನು ಕೈಗೊಂಡಿರಬಹುದು. ಮಾನವನ ಬದುಕಿನ ಮೇಲೆ ಅವು ಹೇಗೆ ಬೆಳಕು ಚೆಲ್ಲುತ್ತವೆ–ಈ ಮುಂತಾದ ವಿಷಯಗಳ ಮೇಲೆ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡಿವೆ. ಗ್ರಿಮ್ ಸೋದರರು, ಮ್ಯಾಕ್ಸ್ ಮುಲ್ಲರ್, ಆ್ಯಂಡ್ರು ಲ್ಯಾಂಗ್, ಆರ್ನೆ ಆಂಟಿ, ಸ್ಟಿತ್ ಥಾಮ್ಸನ್ ಮುಂತಾದ ಅನೇಕ ವಿದ್ವಾಂಸರು ಜನಪದ ಕಥೆಗಳ ಮೂಲದ ಬಗ್ಗೆ ತಮ್ಮದೇ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ.

1819ರಲ್ಲಿ ಗ್ರಿಮ್ ಸೋದರರ ಜರ್ಮನ್ ಜಾನಪದ ಕಥೆಗಳ ಸಂಕಲನ ಪ್ರಕಟವಾದಾಗಲೇ ಜನಪದ ಕಥೆಗಳನ್ನು ಕುರಿತು ಸ್ವಲ್ಪಮಟ್ಟಿನ ವೈಜ್ಞಾನಿಕ ವಿವೇಚನೆ ಆರಂಭವಾಯಿತು. ಅದೇ ಸಂದರ್ಭದಲ್ಲಿ ಇತರ ದೇಶಗಳ ಜಾನಪದ ಕಥೆಗಳ ಸಂಕಲನಗಳೂ ಪ್ರಕಟವಾದುವಾಗಿ ಆ ಎಲ್ಲ ಕಥೆಗಳಲ್ಲಿ ಅನೇಕ ಸಾಮ್ಯಗಳನ್ನು ಗುರುತಿಸಲಾಯಿತು. ವಸ್ತು ರೀತಿಗಳ ಈ ಸಾಮ್ಯವನ್ನು ಅವಲೋಕಿಸಿದ ವಿದ್ವಾಂಸರು ಇದರ ಹಿನ್ನೆಲೆ ಕುರಿತು ಉತ್ತರ ಕೊಡಲು ಪ್ರಯತ್ನಪಟ್ಟರು. 1856ರ ವೇಳೆಗೆ ವಿಲಿಯಂ ಗ್ರಿಮ್ ಜನಪದ ಕಥೆಗಳನ್ನು ಕುರಿತು ಅವೆಲ್ಲವೂ ಇಂಡೋ–ಯುರೋಪಿಯನ್ ಭಾಷಾಮೂಲದಿಂದ ಬಂದು ಬೇರೆ ಬೇರೆ ಬೆಳೆವಣಿಗೆಯನ್ನು ಪಡೆದುಕೊಂಡಿರಬಹುದು, ಜೊತೆಗೆ ಪುರಾಣಗಳೇ ಕ್ರಮೇಣ ಕರಗಿ ಜನಪದ ಕಥೆಗಳ ರೂಪನ್ನು ಧರಿಸಿರಬಹುದು ಎಂದು ಸಾರಿದ.

ಗ್ರಿಮ್ ಸೋದರರ ಈ ಸಿದ್ಧಾಂತಕ್ಕೆ ಮೂಲಕಾರಣ 19ನೆಯ ಶತಮಾನದಲ್ಲಿ ಆರಂಭವಾದ ತೌಲನಿಕ ಭಾಷಾಧ್ಯಯನ. 18ನೆಯ ಶತಮಾನದ ಅಂತ್ಯದ ವೇಳೆಗೆ ಸಂಸ್ಕೃತದ ಬಗ್ಗೆ, ಪಾಶ್ಚಾತ್ಯ ಭಾಷಾಸಾಹಿತ್ಯಗಳ ಬಗ್ಗೆ ಪಾಶ್ಚಾತ್ಯದೇಶಗಳಲ್ಲಿ ಉಂಟಾದ ಜಾಗೃತಿ ಅನೇಕ ಯುರೋಪಿಯನ್ ವಿದ್ವಾಂಸರ ಆಸಕ್ತಿಯನ್ನು ಭಾರತದತ್ತ ಸೆಳೆಯಿತು. ಮುಂದೆ ಮ್ಯಾಕ್ಸ್‌ಮುಲ್ಲರ್ ಮೊದಲಾದ ವಿದ್ವಾಂಸರು ಗ್ರಿಮ್ ಸೋದರರ ವಾದಕ್ಕೆ ಸಮರ್ಥನೆಯನ್ನೊದಗಿಸಿ ಆ ಸಿದ್ಧಾಂತವನ್ನು ಸ್ಥಾಪಿಸಲು ಪ್ರಯತ್ನಿಸಿದರು.

ಜರ್ಮನಿಯ ಥುರಿಂಜೆನ್ ಅಡವಿಗಳಲ್ಲೂ ನಾರ್ವೆಯಲ್ಲೂ ಭಾರತದಲ್ಲೂ ಚಿಕ್ಕಮಕ್ಕಳಿಗೆ ಹೇಳುವ ಕಥೆಗಳು ಇಂಡೋ–ಯುರೋಪಿಯನ್ ಜನಾಂಗಕ್ಕೆಲ್ಲ ಸಾಮಾನ್ಯವಾದ ಮಗ್ಗದಿಂದ ರೂಪುಗೊಂಡವು. ಉತ್ತರಕ್ಕೂ ದಕ್ಷಿಣಕ್ಕೂ ಚದುರಿಹೋದ ಆರ್ಯಜನಾಂಗದವರು (ಸೂರ್ಯ, ಪ್ರಾತಃಕಾಲ ಮುಂತಾದ ಹೆಸರುಗಳನ್ನು ಕೊಂಡೊಯ್ದಂತೆ) ಯಕ್ಷಿಣಿ ಕಥೆಗಳ ಮೂಲಘಟಕಗಳನ್ನು ತಮ್ಮೊಡನೆ ತೆಗೆದುಕೊಂಡು ಹೋದರು. ಅವುಗಳಿಂದ ಈ ಕಥೆಗಳು ಟಿಸಿಲೊಡೆದು ಹಬ್ಬಿದುವು. ಆದರೆ ಈ ಪ್ರಾಚೀನ ಕಥೆಗಳಲ್ಲಿ ಅನೇಕ ಕಥೆಗಳು ಅರ್ಥಮರವು ಅಥವಾ ತಪ್ಪು ತಿಳುವಳಿಕೆಯಿಂದ ಹೊಸರೂಪ ತಳೆದ ಪ್ರಾಚೀನ ಪುರಾಣದ ಮುರುಕು ಚೂರುಗಳು. ಪ್ರಾರಂಭದಲ್ಲಿ ಜಾನಪದ ಕಥೆಗಳು ಹಿಂದಿನ ಪುರಾಣಕಥೆ ಅಥವಾ ಐತಿಹ್ಯಗಳ ಪುನರಾವೃತ್ತಿಯಾದರೂ ಅದ್ಭುತಕಥೆಗಳನ್ನು ಕುರಿತಾದ ಅಭಿರುಚಿಯ ಮೂಲಕ ಅನೇಕ ದಾದಿಯರೂ ಅಜ್ಜಿಯರೂ ಹೊಸ ಹೊಸ ಜಾನಪದ ಕಥೆಗಳನ್ನು ಕಲ್ಪಿಸಿದರು. ಮುಂದೆ ಡಾಸೆಂಟ್ ತನ್ನ ನಾರ್ಸ್ ದೇಶಗಳ ಜಾನಪದ ಕಥೆಗಳು ಎಂಬ ಗ್ರಂಥದ ಮುನ್ನುಡಿಯಲ್ಲಿ ಪ್ರತಿಪಾದಿಸಿದ ವಿಚಾರಗಳನ್ನೂ ಪೌರಾಣಿಕ ಸಿದ್ಧಾಂತದ ಸಮರ್ಥನೆಗೆ ಬಳಸಿಕೊಳ್ಳಲಾಗಿದೆ. ನಾರ್ಸ್ ಜನಕ್ಕೆ ಸಂಬಂಧಿಸಿದ ಕಾಡುಬೇಟೆಗಾರ (ವೈಲ್ಡ್ ಹಂಟ್ಸ್‌ಮನ್) ಎಂಬ ಕಥೆ ಪುರಾಣರೂಪದಿಂದ ಸಾವಕಾಶವಾಗಿ ಜಾನಪದ ಕಥೆಯ ರೂಪಕ್ಕೆ ತಿರುಗಿದ ಹಂತಗಳನ್ನು ಡಾಸೆಂಟ್ ಗುರುತಿಸಿದ್ದಾನೆ. ಆ ಬೇಟೆಗಾರ ಜರ್ಮನಿಯ ಪ್ರಾಚೀನ ದೇವ ಓಡಿನ್ನನೇ ಆಗಿದ್ದಾನೆ ಎಂಬ ವಿಚಾರವನ್ನು ಮ್ಯಾಕ್ಸ್‌ಮುಲ್ಲರ್ ಸಮರ್ಥಿಸಿ ಬೇಟೆಗಾರ ಓಡಿನ್ನನ ತೀರ ಪ್ರಾಚೀನವಾದ ಎಳೆಗಳನ್ನು ವೇದಮೂಲಕ್ಕೆ ಕೊಂಡೊಯ್ಯಬಹುದೆಂದು ತಿಳಿಸಿದ್ದಾನೆ. ವೇದದ ಇಂದ್ರನು ಗುಡುಗು, ಬಿರುಗಾಳಿ, ಮಳೆಗಳ ದೇವತೆಯಾಗಿದ್ದಾನೆ. ವಿಲಿಯಂ ಟೆಲ್ ಎಂಬ ಹೆಸರಾಂತ ಬಿಲ್ಲುಗಾರನ ಕಥೆಯಲ್ಲಿನ ಆ ಬಿಲ್ಲುಗಾರ ಸೂರ್ಯನ ಪ್ರತಿಬಿಂಬವೇ. ಗುರಿಯನ್ನು ಬಾಣದಿಂದ ಹೊಡೆಯುವಾತ ಇಂದ್ರ. ಅಪೊಲೊ, ಯೂಲಿಸಿಸ್ ಮೊದಲಾದ ಯಾವ ಪುರಾಣವೀರನಾದರೂ ಸೂರ್ಯನೇ. ಏಕೆಂದರೆ ಆ ಬಾಣಗಳು ಸೂರ್ಯಕಿರಣಗಳೇ–ಹೀಗೆಂದು ಮ್ಯಾಕ್ಸ್‌ಮುಲ್ಲರ್‌ನ ಅಭಿಪ್ರಾಯ.

ಕಗ್ಗತ್ತಲೆಯ ಸೆರೆಮನೆಗಳಲ್ಲಿ ಬಂಧಿತರಾದ ಶ್ವೇತಕುಮಾರಿಯರನ್ನು (ಸ್ನೋ ವೈಟ್ ಪ್ರಿನ್ಸೆಸ್) ಹೊಳೆಯುವ ವೀರ ಬಿಡಿಸುವುದು ಅಸಂಖ್ಯ ಕಥೆಗಳಲ್ಲಿದೆ. ಪುರಾಣಪರಂಪರೆಯಲ್ಲಿನ ಚಳಿಗಾಲದ ಬಂಧನದಿಂದ ವಸಂತವನ್ನು ಬಿಡಿಸುವ ಕಥೆ ಅದಕ್ಕೆ ಮೂಲವಾಗಿದೆ. ಸೂರ್ಯನನ್ನು ರಾತ್ರಿಯ ಕತ್ತಲೆಯಿಂದ ಬಿಡಿಸುವ ಕಥೆಯೂ ಆಕಳುಗಳೆಂದು ಕರೆಯಲಾದ ಮೋಡಗಳ ನೀರನ್ನು ತುಡುಗರು ಗವಿಗಳಲ್ಲಿ ಅಡಗಿಸಿಟ್ಟಾಗ ಅದನ್ನು ಬಿಡುಗಡೆಗೊಳಿಸಿದ ಕಥೆಯೂ ಒಂದೇ ನಿಸರ್ಗ ಪುರಾಣದ ಮಾದರಿಯವಾಗಿವೆ. ಇವುಗಳಲ್ಲಿನ ಎಲ್ಲ ಮಾದರಿಗಳನ್ನೂ ಜರ್ಮನ್ ಜಾನಪದ ಕಥೆಗಳಲ್ಲಿ ಗುರುತಿಸಬಹುದು. ನಿಸರ್ಗಶಕ್ತಿಗಳ ಪ್ರಣಯಗಳೂ ಹೋರಾಟಗಳೂ ಮೊದಲು ದೇವತೆಗಳ ಕಥೆಗಳಾಗಿರುತ್ತವೆ. ಆಮೇಲೆ ವೀರರ ಐತಿಹ್ಯಗಳಾಗಿ ರೂಪತಳೆದು ಕೊನೆಗೆ ಯಕ್ಷಿಣಿಯರ ಹಾಗೂ ಚಿಕ್ಕ ಭೂತಗಳ (ಇಂಪ್ಸ್) ಕಥೆಗಳಾಗುತ್ತವೆ. ಪುರಾಣಕಥೆಗಳ ದೇವತೆಗಳನ್ನು ತೆಗೆದು ಹಾಕಿದ ಕ್ರೈಸ್ತ ಕಥೆಗಳಲ್ಲೂ ಇವುಗಳ ಮಾದರಿಯಿದೆ. ಪ್ಲೂಟೊ ದೇವನನ್ನು ದುಷ್ಟಭೂತ (ಡೆವಿಲ್) ಎಂಬಂತೆ ಅಲ್ಲಿ ಮಾರ್ಪಡಿಸಿದ್ದಾರೆ ಎಂದು ಮ್ಯಾಕ್ಸ್ ಮುಲ್ಲರನ ಅಭಿಪ್ರಾಯ.

ಸರ್ ಜಾರ್ಜ್ ಕಾಕ್ಸ್ ಈ ಸಿದ್ಧಾಂತವನ್ನು ಸಮರ್ಥಿಸಿದ್ದಾನೆ. ಪುರಾಣಕಥೆಗಳಲ್ಲೂ ಪ್ರಾಚೀನ ಮಹಾಕಾವ್ಯಕಥೆಗಳಲ್ಲೂ ಮ್ಯಾಕ್ಸ್ ಮುಲ್ಲರನಂತೆ ಈತನೂ ನಿಸರ್ಗ ವ್ಯಾಪಾರಗಳನ್ನು ಕಾಣುತ್ತಾನೆ. ಪ್ಯಾರಿಸ್ ಹೆಲೆನಳನ್ನು ಹರಣ ಮಾಡಿದ ಕಥೆಯೂ ಪರ್ಸಿಯಸ್ ಹಾಗೂ ಹೆರಾಕ್ಲಿಸನ ಸಾಹಸಗಳೂ ಹೆರಾಕ್ಲಿಸನ ಮರಣವೂ ಪರ್ಷಿಯದ ಫಿರ್ದೂಸಿ ಬರೆದ ಶಹನಾಮೆ ಎಂಬ ಮಹಾಕಾವ್ಯದಲ್ಲಿ ಬರುವ ಇಸ್ಫಂಡಿಯರ್, ಸೊಹ್ರಾಬ್ ಮೊದಲಾದವರ ಕಥೆಗಳೂ ಸೂರ್ಯನ ಕಥೆಗಳೇ ಆಗಿವೆ. ಚಿನ್ನದ ಬಣ್ಣದ ಹುಡುಗ ಹುಡುಗಿಯರು, ಚಿನ್ನದ ಬಣ್ಣದ ಅಂಗಿ, ಚಿನ್ನದ ಬಾಣಗಳು, ಚಿನ್ನದ ಖಡ್ಗ, ಹೊಳೆಯುವ ಚಿನ್ನದ ಅರಮನೆಗಳು ಬಂದ ಕಡೆಗಳಲ್ಲೆಲ್ಲ ಸೂರ್ಯಪುರಾಣದ ಸಂಕೇತವಿದೆ. ಟ್ಯುಟನ್ನರ ಪುರಾಣಗಳು, ಗ್ರೀಕ್ ಮಹಾಕಾವ್ಯಗಳು, ಆರ್ಥರ್, ಷಾರ್ಲಮಾನನ ಕಥಾಚಕ್ರಗಳು – ಇವೆಲ್ಲ ಬಾಹ್ಯಜಗತ್ತಿನ ದೃಶ್ಯ ಮತ್ತು ಶ್ರವ್ಯಲೋಕಗಳನ್ನು ಚಿತ್ರಿಸುತ್ತವೆ. ಇದೇ ಹೋಲಿಕೆ ಜರ್ಮನಿ, ಸ್ಕ್ಯಾಂಡಿನೇವಿಯ, ಗ್ರೀಸ್, ರೋಮ್, ಪರ್ಷಿಯ ಮತ್ತು ಭಾರತಗಳ ಜಾನಪದ ಕಥೆಗಳಲ್ಲೂ ಕಾಣಸಿಗುತ್ತದೆ.

ಹೀರಡಟಸ್ ವರ್ಣಿಸಿದ ರ್‍ಹಾಂಪ್ಸಿನಿಟೋಸ್ ಕಥೆಯೂ ನಾರ್ಸ್‌ದೇಶಗಳ ಕಳ್ಳರ ಗುರುವಿನ ಕಥೆಯೂ ಹಿತೋಪದೇಶದ ಬ್ರಾಹ್ಮಣನ ಆಡನ್ನು ಲಪಟಾಯಿಸಿದ ಕಳ್ಳರ ಕಥೆಯೂ ಆರ್ಯರು ಬೇರೆ ಬೇರೆಯಾಗಿ ಚದುರುವ ಮೊದಲಿನ ಕಥೆಗಳ ಅವಶೇಷಗಳೆಂದು ಹೇಳಿ ಇಲ್ಲೂ ಗ್ರೀಕರ ಚೋರದೇವ ಹರ್ಮಿಸ್‌ನ ಕಥೆಯ ಪುನರಾವೃತ್ತಿ ಕಾಣುತ್ತದೆಯೆಂದು ಕಾಕ್ಸ್ ಅಭಿಪ್ರಾಯಪಡುತ್ತಾನೆ.

ಆದರೆ ಈ ರೀತಿಯಲ್ಲಿ ಎಲ್ಲ ಕಡೆಗೂ ಸೂರ್ಯಪುರಾಣವನ್ನು ಸ್ಥಾಪಿಸುವ ಪದ್ಧತಿ ತೀವ್ರ ಟೀಕೆಗೊಳಗಾಯಿತು. ಮ್ಯಾಕ್ಸ್ ಮುಲ್ಲರ್ ಸಹ ತನ್ನ ನ್ಯಾಚುರಲ್ ರಿಲಿಜನ್ ಎಂಬ ಗ್ರಂಥದಲ್ಲಿ ನೆಪೋಲಿಯನ್, ಮಿ. ಬ್ರೈಟ್ ಹಾಗೂ ತಾನು ಸಹ ಸೂರ್ಯಪುರಾಣವೆಂದು ಹಾಸ್ಯ ಮಾಡಿದ ಉದಾಹರಣೆಯನ್ನೆತ್ತಿ ಹೇಳಿ ಬಂದ ಸಾದೃಶ್ಯದಿಂದಲೇ ಸಿದ್ಧಾಂತವನ್ನು ಮಾಡುವುದರಲ್ಲಿನ ತೊಂದರೆಯನ್ನು ವಿವರಿಸಿದ್ದಾನೆ. ಆರ್ಯಭಾಷೆಗಳಲ್ಲಿನ ಹೆಸರುಗಳ ಹೋಲಿಕೆಗಳಿಂದ ಆತ ಸಿದ್ಧಮಾಡಿದ ಅರ್ಥ ಕೆಲವೊಮ್ಮೆ ಸಮರ್ಪಕವಾದರೂ ಗ್ರೀಸಿನ ಕಾರಿಟೀಜ್ (charites) ಹಾಗೂ ವೇದದ ಹರಿತ್‌ಗಳು ಒಂದೇ ಎಂದುದೂ ಇತರ ಉತ್ಪತ್ತಿಗಳೂ (ವರುಣ ಗ್ರೀಸ ಯುರೇನಸ್ ಎಂದುದೂ) ವಿದ್ವಾಂಸರನೇಕರ ಒಪ್ಪಿಗೆ ಪಡೆಯಲಿಲ್ಲ.

ಅನೇಕ ಜನಪದ ಕಥೆಗಳು ಪುರಾಣಕಥೆಗಳಿಂದ ಪ್ರಭಾವಹೊಂದಿರುವುದು ನಿಜವಾದರೂ ವ್ಯಾಸಭಾರತ, ಒಡಿಸ್ಸಿ ಮುಂತಾದ ಗ್ರಂಥಗಳಲ್ಲಿ ಅನೇಕ ಜಾನಪದ ಕಥೆಗಳು ಸೇರಿರುವುದು ಕಾಣುತ್ತದೆ. ಪಾಲಿಫೀಮಸ್ ಎಂಬ ಒಕ್ಕಣ್ಣಿನ ರಾಕ್ಷಸನನ್ನು ಒಡೀಸಿಯಸ್ (ಯೂಲಿಸಿಸ್) ತಂತ್ರದಿಂದ ಕೊಂದ ರೀತಿ ಜನಪದ ಕಥಾತಂತ್ರದ ಮಾದರಿಯದು. ಪರ್ಸಿಯಸ್ಸನ ಐತಿಹ್ಯದಲ್ಲೂ ಹೇಲಿಡೇ ಹೇಳುವಂತೆ ಅನೇಕ ಜಾನಪದ ಕಥಾಸೂತ್ರಗಳಿವೆ. ವಾಸ್ತವವಾಗಿ ಪುರಾಣಕಥೆ ಬೇರೆ, ಜನಪದ ಕಥೆ ಬೇರೆಯೆಂಬ ಕಲ್ಪನೆ ತೀರ ಪ್ರಾಚೀನ ಜನರಿಗಿರಲಿಲ್ಲ. ಪುರಾಣ ಕಥೆಗಳು ಜನಪದ ಕಥೆಗಳ ಒಂದು ಪ್ರಕಾರವೆಂದು ಹೇಳಬಹುದು ಎಂದು ಸ್ಟಿತ್ ಥಾಂಪ್ಸನ್ ಬರೆದಿದ್ದಾನೆ.

ಜಗತ್ತಿನ ವಿವಿಧ ಭಾಗಗಳ ಜನಪದ ಕಥೆಗಳ ಮುಖ್ಯತಂತ್ರಗಳಲ್ಲಿ ಬಹಳ ಸಾಮ್ಯವಿದೆ. ಮಾನವಶಾಸ್ತ್ರದ ಆಧಾರದ ಮೇಲೆ ಆರ್ಯಪುರಾಣ ಅಥವಾ ಪದ್ಧತಿಗಳು ಪುರಾತನ ಅನಾಗರಿಕ ಜನಾಂಗಗಳ ನಂಬಿಕೆ ಆಚರಣೆಗಳ ಅವಶೇಷವೆಂದು ಈಗಲೂ ಕಾಣುವ

ಕಾಡುಜನಾಂಗಗಳ ಸಂಪ್ರದಾಯದಿಂದ ಆ್ಯಂಡ್ರೂ ಲ್ಯಾಂಗ್ ಸಮರ್ಥಿಸುತ್ತಾನೆ. ಪುರಾತನ ಆರ್ಯರು ಅನಾಗರಿಕರಾದರೂ ಅವರನ್ನು ಈಗಿನ ಅನಾಗರಿಕರೊಡನೆ ಹೋಲಿಸುವುದು ಸರಿಯಲ್ಲವೆಂದು ಮ್ಯಾಕ್ಸ್ ಮುಲ್ಲರ್ ಹೇಳಿದ್ದಾನೆ. ಆದರೆ ಈಗಿನ ಜೂಲೂ ಮನುಷ್ಯನೂ ಆಧುನಿಕ ರೆಡ್ ಇಂಡಿಯನ್ನನೂ ವೇದದ ವಿಧಿಕ್ರಮವು (ರಿಚುಅಲ್) ತಮಗೆ ಪರಿಚಿತವಾದ ಸಂಪ್ರದಾಯವನ್ನು ಬಹಳ ಹೋಲುತ್ತವೆಯೆಂದು ಗುರುತಿಸಬಲ್ಲರು ಎಂದು ಓಲ್ಡೆನ್ ಬರ್ಗ್ ಹೇಳುವುದು ನಿಜವಾಗಿದೆ. ಆರ್ಯಜನಾಂಗಗಳ ಅನೇಕ ಜಾನಪದ ಕಥೆಗಳೂ ಪುರಾಣಕಥೆಗಳೂ ಪ್ರಾಗೈತಿಹಾಸಿಕ ಯುಗದಲ್ಲಿಯೇ ಈಜಿಪ್ಟ್ ಮತ್ತು ಬ್ಯಾಬಿಲೋನಿಯದ ಜನರಿಂದ ಪ್ರಭಾವಿತವಾಗಿವೆ. ಗ್ರೀಕರು ಈಜಿಪ್ಟಿನ ದೇವತೆಗಳನ್ನು ತೆಗೆದುಕೊಂಡರು ಎಂದು ಹೀರಡಟಸ್ ಹೇಳಿದರೆ ಫಿಲೋ ಫಿನಿಷಿಯನ್ನರ ಪುರಾಣ ಕಥೆಗಳನ್ನು ತೆಗೆದು ಕೊಂಡರೆನ್ನುತ್ತಾನೆ. ಐಗುಪ್ತ ನಾಗರಿಕತೆಯನ್ನೂ ಪುರಾಣ ಕಥೆಗಳನ್ನೂ ಜಗತ್ತಿನ ನಾವಿಕರಾದ ಫಿನಿಷಿಯನ್ನರು ಜಗತ್ತಿನಾದ್ಯಂತ ಹಬ್ಬಿಸಿದರೆಂದು ಟಿ. ಈಲಿಯಟ್ ಸ್ಮಿತ್ ಬರೆದಿದ್ದಾನೆ.

ಆಧುನಿಕ ಸಂಶೋಧನೆಯ ಪರಿಣಾಮಗಳು ಬ್ಯಾಬಿಲೋನಿಯದ ಸುಮೇರಿಯನ್ನರೂ ಪ್ರಾಗೈತಿಹಾಸಿಕ ಯುಗದ ಈಜಿಪ್ಷಿಯನ್ನರೂ ನವಶಿಲಾಯುಗದ ಯುರೋಪಿಯನ್ನರೂ ದಕ್ಷಿಣ ಪರ್ಷಿಯನ್ನರೂ ಭಾರತದ ಆರ್ಯರೂ ದೂರದ ವಂಶಸಂಬಂಧವುಳ್ಳವರೆಂಬುದನ್ನು ತೋರಿಸುವ ಒಲವು ಕಾಣುತ್ತದೆ ಎಂದು ಡೊನಾಲ್ಡ್ ಎ. ಮಿಕೆಂಜಿ ಬರೆದಿದ್ದಾನೆ. ಆರ್ಯ ಜಾನಪದ ಕಥೆಗಳು ಸೂರ್ಯ ಪುರಾಣಗಳೆಂದಾಗಲಿ ಆರ್ಯಪುರಾಣಗಳ ಚೂರುಗಳೆಂದಾಗಲಿ ಹೇಳುವುದು ಬಲುಮಟ್ಟಿಗೆ ಸರಿಯಲ್ಲ. ಅನೇಕ ಜನಾಂಗಗಳವರ ಜಾನಪದ ಕಥೆಗಳಲ್ಲೂ ಸೂರ್ಯ, ಚಂದ್ರ, ತಾರೆಗಳೂ ಪುರಾಣ ದೇವತೆಗಳೂ ಪಾತ್ರ ವಹಿಸುವುದು ನಿಜವಾದರೂ ಮ್ಯಾಕ್ಸ್ ಮುಲ್ಲರ್ ಹೇಳುವ ಕಪ್ಪೆರಾಜನ ಕಥೆಯೂ ಪಂಜಾಬಿನ ಭೇಕಿಯ (ಹೆಣ್ಣು ಕಪ್ಪೆ) ಕಥೆಯೂ ಸೂರ್ಯಪುರಾಣವೆಂಬುದು ಸರಳ ಜಾನಪದ ಕಥೆಗಾರರ ಊಹೆಗೆ ಮೀರಿದ ಕಲ್ಪನೆಗಳು.

ಈ ಎಲ್ಲ ವಿಚಾರಗಳನ್ನೂ ಮಥನ ಮಾಡಿದಾಗ ತೋರುವ ಸಾರಾಂಶ ಇಷ್ಟು. ಜಾನಪದ ಕಥೆಗಳಿಗೆಲ್ಲ ಒಂದೇ ಮೂಲ, ಅದು ಪೌರಸ್ತ್ಯವಾದುದು ಎಂಬ ಹೇಳಿಕೆ ಪೂರ್ಣ ಸತ್ಯವಾಗಲಾರದು. ಅದು ಭಾಗಶಃ ಮಾತ್ರ ನಿಜ. (ಎಲ್.ಆರ್.ಎಚ್.)

**ಇಂಡೋ–ಯುರೋಪಿಯನ್ ಭಾಷೆಗಳು:** ಈ ಗುಂಪಿಗೆ ಸೇರಿದ ಭಾಷೆಗಳು ಇತರ ಯಾವುದೇ ಗುಂಪಿಗೆ ಸೇರಿದ ಭಾಷೆಗಳಿಗಿಂತಲೂ ಹೆಚ್ಚು ವಿಸ್ತಾರವಾಗಿ ಪ್ರಪಂಚದಲ್ಲಿ ವ್ಯಾಪಿಸಿವೆ. ಅಲ್ಲದೆ ಈ ಭಾಷೆಗಳ ಸಂಖ್ಯೆಯೂ ಅಧಿಕವಿದ್ದು ಮಿಕ್ಕೆಲ್ಲ ಭಾಷೆಗಳಿಗಿಂತ ಹೆಚ್ಚು ವಿಸ್ತಾರವಾಗಿ ಪುನರ್ವಿಂಗಡಣೆಗೊಂಡಿದೆ. ಭಾರತದ ಜನಸಂಖ್ಯೆಯಲ್ಲಿನ ಅಧಿಕಪಾಲು ಜನ ಈ ಮೂಲದ ಭಾಷೆಗಳನ್ನೇ ಆಡುತ್ತಾರೆ. ಈ ಭಾಷೆಗಳಲ್ಲಿ ಹಿಂದೀ, ಉರ್ದು, ಬಂಗಾಳಿ, ಅಸ್ಸಾಮಿ, ಒರಿಯಾ, ಮರಾಠಿ, ಪಂಜಾಬಿ ಮತ್ತು ಕಾಶ್ಮೀರಿ–ಇವು ಮುಖ್ಯವಾದುವು. ಇವುಗಳಿಗೆ ಸಿಂಹಳದ ಸಿಂಹಳಿ ಭಾಷೆಯನ್ನೂ ಸೇರಿಸಬಹುದು. ಇಂಡೋ–ಆರ್ಯನ್ ಪಂಗಡದ ಪ್ರಾಚೀನ ಸ್ತರಗಳಲ್ಲಿ (i) ವೈದಿಕ ಭಾಷೆ (ii) ಭಾಷೆಯಲ್ಲಿನ ಪ್ರಾಚೀನತಮ ಗ್ರಂಥಗಳ ಕಾಲ ಸು.ಪ್ರ.ಶ.ಪೂ. 2000 ಇರಬಹುದು: (ii) ಅಭಿಜಾತ ಸಂಸ್ಕೃತ ಭಾಷೆ; (iii) ಪಾಲಿ, ಪ್ರಾಕೃತ ಮತ್ತು ಅಪಭ್ರಂಶವನ್ನೊಳಗೊಂಡಂತಿರುವ ಮಧ್ಯಯುಗದ ಇಂಡೋ–ಆರ್ಯನ್ ಭಾಷೆ. ಇದರಲ್ಲಿ ಮೂರು ಹಂತಗಳಿವೆ. ಪ್ರಾಚೀನ ಇಂಡೋ–ಆರ್ಯನ್ ಭಾಷೆ (ವೈದಿಕ) ಹಳೆಯ ಇರಾನೀ ಭಾಷೆಗೆ ನಿಕಟವಾಗಿ ಸಂಬಂಧಿಸಿದೆ. ಮಧ್ಯಕಾಲದ ಪರ್ಷಿಯನ್ (ಪಹ್ಲವಿ), ಪಾರ್ಥಿಯನ್, ಸೊಗ್‌ಡಿಯನ್, ಜೋರಾಸ್ಮಿಯನ್ ಮತ್ತು ಶಕ ಭಾಷೆಗಳಿಂದ ಮಧ್ಯಕಾಲದ ಇರಾನಿ ಹಂತ ಪ್ರತಿನಿಧಿತವಾಗಿದೆ. ಆಧುನಿಕ ಇರಾನೀ ಭಾಷೆಗಳಲ್ಲಿ ಪರ್ಷಿಯನ್ ಮತ್ತು ಪಸ್ತುಭಾಷೆಗಳು ಮುಖ್ಯ. ಇವುಗಳಿಗೆ ಕೆಲವಾರು ಸಣ್ಣಪುಟ್ಟ ಪ್ರಾಂತೀಯ ಭಾಷೆಗಳನ್ನು ಸೇರಿಸಬಹುದು. ಇವುಗಳಲ್ಲಿ ಓಸೆಟಿಕ್ ಭಾಷೆ ಅತ್ಯಂತ ಗಮನಾರ್ಹ.

1. ಮೇಲಿನ ಎಲ್ಲ ಭಾಷೆಗಳೂ ಇಂಡೋ–ಯುರೋಪಿಯನ್ ಭಾಷಾ ಮನೆತನದ ಒಂದು ವಿಭಾಗವಾಗಿದೆ. ಇತರ ಮುಖ್ಯ ವಿಭಾಗಗಳು ಹೀಗಿವೆ:

2. ಬಾಲ್ಟೋ–ಸ್ಲ್ಯವೋನಿಕ್: ಬಾಲ್ಟಿಕ್ ಗುಂಪಿನಲ್ಲಿ ಲಿಥುವೇನಿಯನ್, ಲೆಟಿಷ್ ಮತ್ತು ಅಳಿದುಹೋದ ಹಳೆಯ ಪ್ರಷ್ಯನ್ ಭಾಷೆಗಳಿವೆ. ಸ್ಲ್ಯವೋನಿಕ್ ಭಾಷೆ ಮೊದಮೊದಲು ಚರ್ಚುಗಳಲ್ಲಿ ಬಳಸುತ್ತಿದ್ದ ಹಳೆಯ ರೂಪದಲ್ಲಿ ಕಂಡುಬರುತ್ತದೆ. ಇದರ ಬಗ್ಗೆ ಪ್ರಾಚೀನ ದಾಖಲೆಗಳು 9ನೆಯ ಶತಮಾನದವಾಗಿವೆ. ಇತ್ತೀಚೆಗೆ ಈ ಭಾಷೆ ರಷ್ಯನ್, ಪೋಲಿಷ್, ಜೆಕ್, ಸರ್‌ಬೊ–ಕ್ರೋಟ್ ಮತ್ತು ಬಲ್ಗೇರಿಯನ್ ಭಾಷೆಗಳಿಂದ ಪ್ರತಿನಿಧಿತವಾಗಿದೆ.

3. ಅಮೆರಿಕನ್ ಭಾಷೆ: ಇದನ್ನು 5ನೆಯ ಶತಮಾನದಿಂದಲೂ ಗುರುತಿಸಲಾಗಿದೆ.

4. ಅಲ್ಬೇನಿಯ ಭಾಷೆ: ಈಚೆಗೆ ಇದನ್ನು ಗುರುತಿಸಲಾಗಿದೆ.

ಈ ನಾಲ್ಕು ಗುಂಪುಗಳನ್ನು ಒಟ್ಟಾಗಿ ಶತಮ್ ಭಾಷೆಯೆನ್ನುತ್ತಾರೆ. ಇದಕ್ಕೆ ತದ್ವಿರುದ್ಧವಾಗಿರುವ ಇಂಡೋ–ಯುರೋಪಿಯನ್ ಭಾಷೆಯ ಇತರ ಶಾಖೆಗಳನ್ನು ಕೆಂಟುಮ್ ಭಾಷೆಯೆಂದು ಕರೆಯುತ್ತಾರೆ. ಹನ್ಡ್ರಡ್ ಎಂಬ ಅರ್ಥಬರುವ ಪದದಲ್ಲಿನ ಐಇ ಕೆ ಎಂಬುದನ್ನು ಅವರು ಉಚ್ಚರಿಸುವ ರೀತಿಯಿಂದಾಗಿ ಈ ಎರಡು ಗುಂಪುಗಳಿಗೆ ಈ ಹೆಸರು ಬಂದಿದೆ. ಕೆಂಟುಮ್ ಭಾಷೆಗಳು ಇವನ್ನು ಯಥಾವತ್ತಾಗಿ ಉಳಿಸಿಕೊಳ್ಳುತ್ತವೆ. ಆದರೆ ಶತಮ್ ಭಾಷೆಗಳಲ್ಲಿ ಇದು ಒಂದು ರೀತಿಯ ಊಷ್ಮ ವರ್ಣಾಕ್ಷರವಾಗಿ ಮಾರ್ಪಡುತ್ತದೆ. ಇದೇ ಬಗೆಯ ವ್ಯತ್ಯಾಸ ಐಇ ಜಿ, ಘ್‌ಗಳಲ್ಲೂ ಕಂಡುಬರುತ್ತದೆ. ಕಂಠ್ಯೋಷ್ಠ್ಯಗಳ ವಿಚಾರಗಳಲ್ಲೂ ಈ ಶತಮ್ ಭಾಷೆಗಳು ಓಷ್ಠ್ಯಾಂಶವನ್ನು ಕಳೆದುಕೊಂಡು ಸಾಮ್ಯವನ್ನು ಹೊಂದುತ್ತವೆ. ಕೆಂಟುಮ್ ಭಾಷೆಗಳ ಉಪಭಾಗಗಳು ಹೀಗಿವೆ:

5. ಅನೇಕ ಉಪಭಾಷೆಗಳನ್ನುಳ್ಳ ಗ್ರೀಕ್ ಭಾಷೆ: ಪ್ರ.ಶ.ಪೂ.8ನೆಯ ಶತಮಾನದ ಹೋಮರನ ಕಾವ್ಯಗಳಿಂದ ಇದರ ಸಾಹಿತ್ಯ ಪ್ರಾರಂಭವಾಗುತ್ತದೆ. ಆದರೆ ದೊರೆತಿರುವ ಮೈಸೀನಿಯನ್ ದಾಖಲೆಗಳಿಂದಾಗಿ, ಈ ಭಾಷೆಯ ಸಾಹಿತ್ಯ ಚರಿತ್ರೆ ಪ್ರ.ಶ.ಪೂ. 1200ರಷ್ಟು ಹಳೆಯದೆಂದು ತಿಳಿದುಬಂದಿದೆ.

6. ಪ್ರ.ಶ.ಪೂ. 200 ರಿಂದೀಚೆಗೆ ಗುರುತಿಸಲಾಗಿರುವ ಲ್ಯಾಟಿನ್ ಭಾಷೆಯನ್ನೊಳ ಗೊಂಡಿರುವ ಇಟ್ಯಾಲಿಕ್ ಭಾಷೆ ಮತ್ತು ಓಸಿ–ಅಂಬ್ರಿಯನ್ ಉಪಭಾಷೆಗಳು: ಫ್ರೆಂಚ್, ಇಟ್ಯಾಲಿಯನ್, ಸ್ಪ್ಯಾನಿಷ್, ಪೋರ್ಚುಗೀಸ್, ರುಮೇನಿಯನ್ ಮುಂತಾದ ಆಧುನಿಕ ರೋಮಾನ್ಸ್ ಭಾಷೆಗಳಾಗಿ ಲ್ಯಾಟಿನ್ ಅಭಿವೃದ್ಧಿ ಹೊಂದಿದೆ. ಇಟ್ಯಾಲಿಯನ್ ಪ್ರಾಂತೀಯ ಭಾಷೆಗಳ ಪರಿಚಯ ಶಾಸನ ಬರಹಗಳಿಂದ ಸ್ವಲ್ಪ ಮಾತ್ರ ಆಯಿತಾದರೂ ಅವು ರೋಮನ್ನರ ಇಟಲಿ ವಿಜಯದ ಪರಿಣಾಮದಿಂದಾಗಿ ನಶಿಸಿಹೋದವು.

7. ಕೆಲ್ಟಿಕ್ ಭಾಷೆ : ಒಂದಾನೊಂದು ಕಾಲದಲ್ಲಿ ಬಹು ವ್ಯಾಪಕವಾಗಿದ್ದ ಈ ಭಾಷೆ ಈಗ ಬ್ರಿಟಿಷ್ ದ್ವೀಪಗಳು ಮತ್ತು ಬ್ರಿಟನ್ನಿನ ಕೆಲವು ಭಾಗಗಳಿಗೆ ಮಾತ್ರ ಸೀಮಿತವಾಗಿದೆ. ಇದರ ಎರಡು ಮುಖ್ಯವಾದ ಶಾಖೆಗಳೆಂದರೆ ಗ್ಯಾಲಿಕ್ (ಐರಿಷ್) ಮತ್ತು ವೆಲ್ಷ್. ಲುಪ್ತ ಕಾರ್ನಿಷ್ ಮತ್ತು ಬ್ರಿಟನ್‌ಗಳನ್ನೊಳಗೊಂಡ ಬ್ರಿಟ್ಯಾನಿಕ್ ಭಾಷೆಗಳು.

8. ಜರ್ಮ್ಯಾನಿಕ್ ಭಾಷೆ: ಇದನ್ನು ಪೂರ್ವ ಜರ್ಮ್ಯಾನಿಕ್ ಅಥವಾ ಲುಪ್ತಗಾಥಿಕ್ ಭಾಷೆ, ಉತ್ತರ ಜರ್ಮ್ಯಾನಿಕ್ ಸ್ಕಾಂಡಿನೇವಿಯನ್ ಮತ್ತು ಇಂಗ್ಲಿಷ್, ಜರ್ಮನ್ ಸೇರಿದಂತೆ ಪಶ್ಚಿಮ ಜರ್ಮ್ಯಾನಿಕ್ ಭಾಷೆ – ಎಂಬುದಾಗಿ ವಿಂಗಡಿಸಬಹುದು. ಬೈಬಲಿನ ಗಾಥಿಕ್ ಭಾಷಾಂತರವೇ (4ನೆಯ ಶತಮಾನ) ಜರ್ಮ್ಯಾನಿಕ್ ಭಾಷೆಯ ಪ್ರಾಚೀನತಮ ಸಾಹಿತ್ಯಸ್ಮಾರಕವಾಗಿದೆ.

9. ಟೋಕೇರಿಯನ್ ಭಾಷೆಯ ಉಪಭಾಷೆಗಳಾಗಿದ್ದು ಸಂಪ್ರದಾಯದ ರೀತಿಯಲ್ಲಿ ಎ ಮತ್ತು ಬಿ ಗಳೆಂದು ಕರೆಯಲಾಗಿರುವ ಉಪಭಾಷೆಗಳು 6–10ನೆಯ ಶತಮಾನದವರೆಗಿನ ಮಧ್ಯ ಏಷ್ಯದ ಬೌದ್ಧರ ಹಸ್ತಪ್ರತಿಗಳಲ್ಲಿ ಕಾಣಸಿಕ್ಕಿವೆ. ಈ ಭಾಷೆಗಳನ್ನು 20ನೆಯ ಶತಮಾನದ ಆದಿಯಲ್ಲಿ ಗುರುತಿಸಲಾಯಿತು.

10. ಹಿಟ್ಟೈಟ್ ಮತ್ತು ಅನಟೋಲಿಯನ್ ಭಾಷೆಗಳನ್ನು ಮುಖ್ಯವಾಗಿ 20ನೆಯ ಶತಮಾನದ ಆದಿಯಲ್ಲೇ ಗುರುತಿಸಿದ್ದಾರೆ. ಇವುಗಳಲ್ಲಿ ಅತಿ ಪ್ರಮುಖವಾದದ್ದು ಕ್ಯೂನಿಫಾರಮ್ ಲಿಪಿಯುಳ್ಳ ಹಿಟ್ಟೈಟ್ ಭಾಷೆ. ಇದರ ಪ್ರ.ಶ.ಪೂ. 1400–1200 ಅವಧಿಯ ದಾಖಲೆಗಳು ಜೇಡಿಮಣ್ಣಿನ ಫಲಕಗಳ ಮೇಲೆ ಕಂಡುಬಂದಿದ್ದು ಅವನ್ನು ಸಂರಕ್ಷಿಸಿಡಲಾಗಿದೆ. ಈ ಪಂಗಡಕ್ಕೆ ಸೇರಿದ್ದು, ಇದರಷ್ಟು ಬೆಳಕಿಗೆ ಬಾರದಿರುವ ಇತರ ಭಾಷೆಗಳೆಂದರೆ ಲೂವಿಯನ್, ಪಾಲಿಯನ್ ಮತ್ತು ಹೈರೋಗ್ಲಿಫಿಕ್ ಹಿಟ್ಟೈಟ್.

ಮೇಲೆ ತಿಳಿಸಿರುವ ಭಾಷೆಗಳ ಜೊತೆಗೆ ಬಹಳ ಹಿಂದೆ ಇದ್ದು ಈಗ ಲುಪ್ತವಾದ ಭಾಷೆಗಳು ಗಣನೀಯ ಸಂಖ್ಯೆಯಲ್ಲಿವೆ. ಇಲ್ಲೀರಿಯನ್, ಥ್ರೇಸಿಯನ್, ಫ್ರಿಜಿಯನ್ ಇತ್ಯಾದಿಗಳು ಈ ವರ್ಗದವಾಗಿವೆ.

ಮೊದಲು ತಿಳಿಸಿರುವಂತೆ ಅತಿ ಹಿಂದೆಯೇ ಇಂಡೋ–ಯುರೋಪಿಯನ್ ಭಾಷೆಗಳು ಬಹಳವಾಗಿದ್ದು ವಿಸ್ತಾರವಾಗಿ ವ್ಯಾಪಿಸಿದ್ದುವು. ಇತಿಹಾಸಪೂರ್ವ ಯುಗದಲ್ಲಿ ಜನರ ವಲಸೆ ಮತ್ತು ಚಲನವಲನಗಳು ಬಹು ವ್ಯಾಪಕವಾಗಿ ಇದ್ದವು ಎನ್ನಲು ಇದೂ ಒಂದು ಆಧಾರವಾಗುತ್ತದೆ. ಇಂಡೋ–ಯುರೋಪಿಯನ್ ಭಾಷಾವರ್ಗದ ಮೂಲಸ್ಥಾನ ವಾವುದೆಂಬುದರ ಬಗ್ಗೆ ವಿಪುಲವಾಗಿ ಚರ್ಚೆ ನಡೆದಿದೆ. ಮೂಲಸ್ಥಾನ ಯುರೋಪ್ ಎಂಬ ಭಾವನೆ ಖಚಿತವಾಗಿ ಅದು ಮಧ್ಯ ಏಷ್ಯ ಎಂಬ ಹಳೆಯ ಕಲ್ಪನೆಯನ್ನು ಈಗ ಕೈಬಿಡಲಾಗಿದೆ. ಮಧ್ಯ ಯುರೋಪ್ ಮತ್ತು ಡ್ಯಾನ್ಯೂಬ್ ಕಣಿವೆಗಳು ಈ ಭಾಷೆಗಳ ಮೂಲಸ್ಥಾನವಾಗಿರಬೇಕೆಂದು ಕಾಣುತ್ತದೆ. ಪ್ರತ್ಯೇಕಗೊಂಡ ಭಾಷೆಗಳಲ್ಲಿ ಬಹುಶಃ ಹಿಟ್ಟೈಟ್ ಮತ್ತು ಅನುಟೋಲಿಯನ್ ಭಾಷೆಗಳು ಬಹಳ ಮೊದಲೇ ಮೂಲದಿಂದ ಕವಲೊಡೆದಿರ ಬಹುದು. ಇಂಡೋ–ಯುರೋಪಿಯನ್ ಭಾಷೆಗಳನ್ನು ಭಾರತಕ್ಕೆ ತಂದ ಇಂಡೋ–ಆರ್ಯನ್ನರ ವಲಸೆಯ ಕೊನೆಯ ಹಂತ ಪ್ರ.ಶ.ಪೂ. 1500ರ ಸುಮಾರಿನಲ್ಲಿ ಆಗಿದ್ದಿರಬೇಕು. ಇದೇ ಕಾಲದಲ್ಲೇ ಗ್ರೀಕ್ ಭಾಷೆಯನ್ನಾಡುತ್ತಿದ್ದ ಜನಾಂಗಗಳು ಗ್ರೀಸನ್ನು ಆವರಿಸಿಕೊಂಡ ವೆಂದು ಕಾಣುತ್ತದೆ. ಅನಂತರದ ಕೆಲ್ಟ್, ಜರ್ಮನ್ ಮತ್ತು ಸ್ಲ್ಯಾವ್ ಜನರ ವಲಸೆಗಳು ಚಾರಿತ್ರಿಕ ಸಂಗತಿಗಳಾಗಿದ್ದು, ಅವರ ವಿಷಯದಲ್ಲಿ ಗಮನಿಸಬೇಕಾದ ಘಟನೆಗಳ ಉಲ್ಲೇಖ ಬಹುಶಃ ಇತಿಹಾಸಪೂರ್ವಕಾಲದಲ್ಲಿ ನಡೆದುದರ ಪುನರಾವರ್ತನೆಯಾಗುತ್ತದೆ. (ಟಿ.ಬಿ.)

**ಇಂಡೋಲ್:** ಇಂಗಾಲ, ಹೈಡ್ರೊಜನ್ (ಜಲಜನಕ) ಮತ್ತು ನೈಟ್ರೊಜನ್‌ಗಳನ್ನು (ಸಾರಜನಕ) ಒಳಗೊಂಡ ವಿಷಮ ಆವರ್ತವುಳ್ಳ ಸಂಯುಕ್ತ. ಬೆಂಜ಼ೀನ್ ಮತ್ತು ಫಿರೋಲ್ ಆವರ್ತಗಳ ಬೆಸುಗೆಯಿಂದ ಇಂಡೋಲ್‌ಗಳ ಆವರ್ತ ಉದ್ಭವಿಸುತ್ತದೆ. ಇಂಡೋಲ್ (I) ಈ ಗುಂಪಿನ ಪ್ರಥಮ ಮತ್ತು ಮಾದರಿಯ ವಸ್ತು. ಸಮಘಟಕಗಳ (ಐಸೊಮೆರಿಕ್)

ಗುಂಪಿನ ಹೆಸರು ಇಂಡೋಲಿನಿನ್. ಈ ವಸ್ತುಗಳ ಪೈಕಿ ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿ ಎರಡು ಗುಂಪುಗಳನ್ನೊಳಗೊಂಡ ಸಂಯುಕ್ತಗಳು ಮುಖ್ಯ (II, III, IV). ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿ ಆಕ್ಸಿಜನ್ ಒಳಗೊಂಡ ಇಂಡೋಲ್‌ಗಳು ಚಿರಪರಿಚಿತವಾಗಿವೆ. ಉದಾಹರಣೆಗೆ, ಆಕ್ಸಿಂಡೋಲ್ (V) ಇಂಡಾಕ್ಸಿಲ್ (VI) , ಡೈಆಕ್ಸಿ ಇಂಡೋಲ್ (VII) ಮತ್ತು ಇಸಾಟಿನ್ (VIII). ಪ್ರಕೃತಿಯಲ್ಲಿ ದೊರಕುವ ಅನೇಕ ಸಂಯುಕ್ತಗಳು ಇಂಡೋಲ್ ಆವರ್ತವ್ಯವಸ್ಥೆಯನ್ನು ಒಳಗೊಂಡಿವೆ. ಇವುಗಳಲ್ಲಿ ಮುಖ್ಯವಾಗಿ ಇಂಡಿಗೋ (ನೀಲಿ) (IX). ಸಸ್ಯಗಳ ಬೆಳವಣಿಗೆಗೆ ಚೋದಕ ದ್ರವ್ಯವಾದ ಹೆಟಿರೋ ಆಕ್ಸಿನ್ (X), ಅಮೈನೋ ಆಮ್ಲವಾದ ಟ್ರಿಪ್ಟೋಫೇನ್ (XI) ಮತ್ತು ಮಾದಕದ್ರವ್ಯಗಳ (ಆಲ್ಕಲಾಯ್ಡ್ಸ್) ಗುಂಪಿಗೆ ಸೇರಿದ ಸ್ಟ್ರಿಕ್ನೈನ್‌ಗಳನ್ನು (XII) ಉದಾಹರಿಸಬಹುದು.

ಟ್ರಿಪ್ಟೋಫೆನ್ ಮಾನವನಿಗೆ ಆವಶ್ಯಕವಾಗಿ ಬೇಕಾದ ಅಮೈನೋ ಆಮ್ಲ, ಅಲ್ಲದೆ ಸಸ್ಯಗಳಲ್ಲಿ ಉತ್ಪತ್ತಿಯಾಗುವ ಇಂಡೋಲ್ ಗುಂಪಿನ ಮಾದಕ ದ್ರವ್ಯಗಳಿಗೆ ಮೂಲವಸ್ತು. ಪ್ರೋಟೀನ್‌ಗಳು ಕೊಳೆಯುವಾಗ ಉತ್ಪತ್ತಿಯಾಗುವ ಇಂಡೋಲ್ ಮತ್ತು ಸ್ಕಟೋಲ್‌ಗಳಿಗೆ (ಸ್ಕಟೋಲ್–3–ಮೀಥೈಲ್ ಇಂಡೋಲ್) ಈ ಅಮೈನೋ ಆಮ್ಲವೇ ಮೂಲವಾಗಿರಬಹುದು.

ತಯಾರಿಕೆ: ಸಾಮಾನ್ಯವಾಗಿ ನೈಟ್ರೊಜನ್ನನ್ನು ಒಳಗೊಂಡ ಐದು ಪರಮಾಣುಗಳಿರುವ ಆವರ್ತವನ್ನು (ಫೈವ್ ಮೆಂಬರ್ಡ್ ರಿಂಗ್) ಬೆಂಝೀನ್ ಆವರ್ತಕ್ಕೆ ಬೆಸೆಯುವುದರಿಂದ (ಫ್ಯೂಸ್) ಇಂಡೋಲ್‌ಗಳು ಉತ್ಪತ್ತಿಯಾಗುತ್ತವೆ. ವಿಧಾನಗಳು ಹಲವಾರು ಇವೆ. ಇವುಗಳ ಪೈಕಿ ಫಿಷರ್‌ನ ವಿಧಾನ ಇಂಡೋಲ್ ಮತ್ತು ಇತರ ಜನ್ಯವಸ್ತುಗಳನ್ನು ತಯಾರಿಸಲು ಅನುಕೂಲವಾಗಿರುವುದರಿಂದ ಜನಪ್ರಿಯವಾಗಿದೆ. ಈ ವಿಧಾನದಲ್ಲಿ ಯಾವುದೊಂದು ಆಲ್ಡಿಹೈಡ್ ಅಥವಾ ಕೀಟೋನ್‌ಗಳು ಫೀನೈಲ್ ಹೈಡ್ರಾಝೀನ್‌ನೊಂದಿಗೆ ವರ್ತಿಸಿ ಉಂಟಾಗುವ ಫಲಿತವನ್ನು (XIII) ಆಮ್ಲದೊಂದಿಗೆ ಸೇರಿಸಿದಾಗ ಒಂದು ಇಂಡೋಲ್ ಉತ್ಪತ್ತಿಯಾಗುತ್ತದೆ. ಅಸಿಟೋನ್ ಪ್ರಾರಂಭವಸ್ತುವಾದರೆ 2–ಮೀಥೈಲ್ ಇಂಡೋಲ್ ಉತ್ಪತ್ತಿಯಾಗುವುದು. ಈ ವಿಧಾನದಲ್ಲಿ ಅನುಗುಣವಾದ ಆಲ್ಡಿಹೈಡ್ ಮತ್ತು ಕೀಟೋನನ್ನು ಮೂಲವಸ್ತುವನ್ನಾಗಿ ಆರಿಸಿ R ಗುಂಪಿನ ಪ್ರಕೃತಿಯನ್ನು ಇಷ್ಟಬಂದಂತೆ ಬದಲಾಯಿಸಬಹುದು–ಇದೊಂದು ಅನುಕೂಲ. ಇನ್ನೊಂದು ವಿಧಾನದಲ್ಲಿ ಆರ್ಥೋ ಟಾಲ್ಯುಐಡ್ ಜನ್ಯವಸ್ತುಗಳನ್ನು (XIV) ಪ್ರಬಲ ಪ್ರತ್ಯಾಮ್ಲ ಪ್ರಕೃತಿಯುಳ್ಳ ವಸ್ತುಗಳ ನೆರವಿನಿಂದ ಆವರ್ತಿಸುವುದರ ಮೂಲಕ ಇಂಡೋಲ್‌ಗಳನ್ನು ತಯಾರಿಸಬಹುದು (XV).

**ಗುಣಗಳು:** ಇಂಡೋಲ್ (I) ನೀರಿನ ಆವಿಯೊಂದಿಗೆ ಹಬೆಯಾಗಬಲ್ಲ ನಿರ್ವರ್ಣ ವಸ್ತು. ದ್ರವಿಸುವ ಉಷ್ಣತೆ 52° ಸೆ.; ಕುದಿಯುವ ಉಷ್ಣತೆ 254° ಬೆಳಕು ಮತ್ತು ಗಾಳಿಗೆ ತೆರೆದಿಟ್ಟಾಗ ಕೆಂಪುಬಣ್ಣಕ್ಕೆ ತಿರುಗುತ್ತದೆ. ಹೆಚ್ಚಿನ ಸಾಂದ್ರಣವಿದ್ದಾಗ ಅಸಹನೀಯ ವಾಸನೆ ಬರುತ್ತದೆ. ಕ್ಯಾನ್ಸರ್ ರೋಗವನ್ನುಂಟು ಮಾಡಬಲ್ಲ ವಸ್ತು. ಆಲ್ಕೊಹಾಲ್, ಈಥರ್, ಬಿಸಿನೀರುಗಳಲ್ಲಿ ಕರಗುತ್ತದೆ. ಕಲ್ಲಿದ್ದಲಿನ ಟಾರ್, ಮಲ ಮತ್ತು ಹೂ ಎಣ್ಣೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ದೊರೆಯುತ್ತದೆ. ನೈಟ್ರೊಜನ್ನಿಗೆ ಸೇರಿರುವ ಹೈಡ್ರೊಜನ್ ಪರಮಾಣುವನ್ನು ಲೋಹಗಳಿಂದ ಸ್ಥಳಪಲ್ಲಟ ಮಾಡಬಹುದಾದರೂ ಈ ವಸ್ತುವನ್ನು ಆಮ್ಲವೆಂದಾಗಲೀ ಪ್ರತ್ಯಾಮ್ಲವೆಂದಾಗಲೀ ಪರಿಗಣಿಸಿಲ್ಲ. ಸಾಮಾನ್ಯವಾಗಿ ಇಂಡೋಲನ್ನು ಹೆಚ್ಚಿನ ಚಟುವಟಿಕೆಯುಳ್ಳ ಆರೋಮ್ಯಾಟಿಕ್ ಸಂಯುಕ್ತವೆಂದು ಪರಿಗಣಿಸಬಹುದು. ಆಕ್ಸಿಜನ್, ಓಝೋನ್, ಪೆರಾಕ್ಸೈಡ್‌ಗಳು, ಇಂಡೋಲ್‌ಗಳನ್ನು ಸಂಯುಕ್ತದ ಎರಡು ಮತ್ತು ಮೂರನೆಯ ಸ್ಥಾನಗಳ ಬಂಧನವನ್ನು ಆಕ್ರಮಿಸುವುದರ ಮೂಲಕ ಪರಿವರ್ತಿಸುತ್ತದೆ. ವೇಗವರ್ಧಕಗಳ ಸಹಾಯದಿಂದ ಹೈಡ್ರೊಜನ್ನನ್ನು ಇಂಡೋಲಿಗೆ ಸೇರಿಸಿದಾಗ ಡೈಹೈಡ್ರೋ ಇಂಡೋಲ್ ಅಥವಾ ಇಂಡೋಲಿನ್ (XV) ದೊರೆಯುತ್ತವೆ.



I



II



III



IV



V ಆಕ್ಸಿಂಡೋಲ್



VI ಇಂಡಾಕ್ಸಿಲ್



VII ಡೈ ಆಕ್ಸಿ ಇಂಡೋಲ್



VIII ಇಸಾಟಿನ್



IX ಇಂಡಿಗೊ (ನೀಲಿ)



X
ಹೆಟಿರೊ ಆಕ್ಸಿನ್



XI ಟ್ರಿಪ್ಟೋಫೇನ್



XII ಸ್ಟ್ರಿಕ್ನಿನ್

# ಇಂಡೋಲ್



XIII



XIV XV



XV





XIX



XX

ಇಂಡೋಲ್‌ಗಳಲ್ಲಿ ಆದೇಶಕ್ರಿಯೆಗಳು (ಸಬ್‌ಸ್ಟಿಟ್ಯೂಷನ್) ಸಾಮಾನ್ಯವಾಗಿ 3ನೆಯ ಸ್ಥಾನದಲ್ಲಿ ನಡೆಯುತ್ತವೆ. ಅನೇಕ ವೇಳೆ ಎರಡನೆಯ ಸ್ಥಾನದಲ್ಲಿ ನಡೆಯಬಹುದು. ಆದರೆ ಬೆಂಜೀನ್ ಆವರ್ತದಲ್ಲಿ ನಡೆಯುವುದು ಬಲು ವಿರಳ. ಆದೇಶ ಕ್ರಿಯೆಯಿಂದ ಕ್ಲೋರೋ, ಅಯಡೋ, ನೈಟ್ರೋ ಮತ್ತು ಆಜೋ ಇತ್ಯಾದಿ ಗುಂಪುಗಳನ್ನು ಇಂಡೋಲ್ ಆವರ್ತಕ್ಕೆ ಸೇರಿಸಬಹುದು. ಕ್ಲೋರೋಫಾರ್ಮ್ ಮತ್ತು ಪ್ರತ್ಯಾಮ್ಲಗಳ ಮಿಶ್ರಣದೊಂದಿಗೆ ಇಂಡೋಲ್ ವರ್ತಿಸಿದಾಗ ಇಂಡೋಲ್ 3 ಕಾರ್ಬಾಕ್ಸಾಲ್ಡಿಹೈಡ್‌ಗಳು ಉತ್ಪತ್ತಿಯಾಗುತ್ತವೆ.

ಹೈಡ್ರೋಜನ್ನನ್ನು ನೈಟ್ರೋಜನ್ನಿಗೆ ಸೇರಿರುವ ಸೋಡಿಯಂನಿಂದ ಆದೇಶಿಸಿದಾಗ ಬರುವ ಫಲಿತ ಮೀಥೈಲ್ ಅಯೊಡೈಡಿನೊಂದಿಗೆ ವರ್ತಿಸಿ 1–ಮೀಥೈಲ್ ಇಂಡೋಲನ್ನು ಉತ್ಪಾದಿಸುತ್ತದೆ. ಈಥೈಲ್ ಮೆಗ್ನೀಷಿಯಂ ಅಯೊಡೈಡ್ (ಗ್ರಿನ್ಯಾರ್ಡ್ ರೀಏಜೆಂಟ್) ಇಂಡೋಲಿನೊಂದಿಗೆ ವರ್ತಿಸಿ 1–ಇಂಡೋಲೈಲ್ ಮೆಗ್ನೀಷಿಯಂ ಅಯೊಡೈಡ್ ಸಂಯುಕ್ತವನ್ನು ಕೊಡುತ್ತದೆ. ಈ ಸಂಯುಕ್ತ ಆಲ್ಕೈಲ್ ಹ್ಯಾಲೈಡ್, ಅಸೈಲ್ ಆಲ್ಡಿಹೈಡ್, ಇಂಗಾಲದ ಡೈಆಕ್ಸೈಡ್, ಈಥೈಲ್ ಕ್ಲೋರೊ ಕಾರ್ಬೊನೇಟ್, ಫಾರ್ಮಾಲ್ಡಿಹೈಡ್ ಮತ್ತು ಈಥೈಲ್ ಆರ್ಥೋ ಫಾರ್ಮೇಟ್‌ಗಳೊಂದಿಗೆ ವರ್ತಿಸಿ ಅನುಕ್ರಮವಾಗಿ 3–ಆಲ್ಕೈಲ್ ಇಂಡೋಲ್‌ಗಳು. 3–ಅಸೈಲ್ ಇಂಡೋಲ್‌ಗಳು, ಇಂಡೋಲ್–3–ಕಾರ್ಬಾಕ್ಸಿಲಿಕ್ ಆಮ್ಲಗಳು–ಇವುಗಳಿಗೆ ಸಂಬಂಧಪಟ್ಟ ಎಸ್ಟರ್‌ಗಳು, 3–ಹೈಡ್ರಾಕ್ಸಿ ಮೀಥೈಲ್ ಇಂಡೋಲ್‌ಗಳು ಮತ್ತು ಇಂಡೋಲ್ –3– ಕಾರ್ಬಾಕ್ಸಾಲಿಹೈಡ್‌ಗಳನ್ನು ಉತ್ಪಾದಿಸುತ್ತದೆ.



XXI



ಇಂಡೋಲ್ ಅನೇಕ ಉಪಯುಕ್ತ ವಸ್ತುಗಳ ಮೂಲ. ಇಂಡೋಲ್ ಆವರ್ತ ಇರುವ ಸರಳವಾದ ಮಾದಕದ್ರವ್ಯಗಳಲ್ಲಿ ಗ್ರಾಮಿನ್ (XVI) ಒಂದು. ಇದನ್ನು ಇಂಡೋಲ್, ಡೈಮೀಥೈಲ್ ಅಮೀನ್ ಮತ್ತು ಫಾರ್ಮಾಲ್ಡಿಹೈಡ್‌ಗಳನ್ನು ಘನಿಸುವುದರಿಂದ (ಕಂಡೆನ್ಸ್) ತಯಾರಿಸಬಹುದು. ಗ್ರಾಮಿನ್‌ನಿಂದ ಹೆಟಿರೋ ಆಕ್ಸಿನ್ (XVII), ಟ್ರಿಪ್ಟಾಮೀನ್ (XVIII) ಮತ್ತು ಟ್ರಿಪ್ಟೋಫೇನ್‌ಗಳನ್ನು ತಯಾರಿಸಬಹುದು. ಸೆರ್ ಟಾನಿನ್ ಅಥವಾ 5–ಹೈಡ್ರಾಕ್ಸಿ ಟ್ರಿಪ್ಟಾಮೀನ್ ಎಂಬ ವಸ್ತು ದೇಹದ ಎಲ್ಲ ಕಡೆಯಲ್ಲೂ ವ್ಯಾಪಿಸಿರುತ್ತದೆ. ಈ ವಸ್ತು ರಕ್ತನಾಳವನ್ನು ಸ್ಥಳೀಯವಾಗಿ ಸಂಕುಚಿಸಬಲ್ಲದು. ಬ್ಯೂಫೋಟಿನಿನ್ (XIX) ಸಾಮಾನ್ಯವಾಗಿ ಕಪ್ಪೆಯ ಚರ್ಮದಲ್ಲಿ ದೊರಕುತ್ತದೆ. ಇದಕ್ಕೆ ರಕ್ತನಾಳಗಳನ್ನು ಹಿಗ್ಗಿಸುವ ಶಕ್ತಿ ಇದೆ. ಇವೆರಡು ವಸ್ತುಗಳನ್ನು ಕೃತಕವಾಗಿ ತಯಾರಿಸಿದೆ. ಜೈವಿಕ ವ್ಯವಸ್ಥೆಯಲ್ಲಿ ಟೈರೋಸೀನ್ ಅಮೈನೋ ಆಮ್ಲ 5,6 ಡೈಹೈಡ್ರಾಕ್ಸಿ ಇಂಡೋಲಿಗೆ ಪರಿವರ್ತನೆಯಾಗಿ ಉತ್ಕರ್ಷ ಹೊಂದಿ ಅಂತ್ಯದಲ್ಲಿ ಚರ್ಮಕ್ಕೆ ಕಪ್ಪು ಬಣ್ಣವನ್ನು ಕೊಡುವ ಮೆಲಾನಿನ್ ಎಂಬ ವಸ್ತುವಾಗಿ ಪರಿವರ್ತನೆಯಾಗುತ್ತದೆ. ಇಂಡೋಲಿನ್ ಗುಂಪಿಗೆ ಸೇರಿದ ಎಸರಿನ್ ಅಥವಾ ಫೈಸೋ ಸ್ಟಿಗ್ಮೈನ್ (XXI) ಎಂಬ ವಸ್ತು ನರಗಳ ಕ್ರಿಯೆಗೆ ಪ್ರತಿಬಂಧಕದಂತೆ ವರ್ತಿಸುತ್ತದೆ. ಗ್ಲಿಯಾಟಾಕ್ಸಿನ್ ಎಂಬ ಆ್ಯಂಟಿಬಯಾಟಿಕ್ ಶಿಲೀಂಧ್ರಗಳಲ್ಲಿ ಉತ್ಪತ್ತಿಯಾಗುತ್ತದೆ.

ಇಂಡಿಗೋ ಎಂಬ ನೀಲಿಬಣ್ಣ ಅನೇಕ ಶತಮಾನಗಳಿಂದ ಪರಿಚಿತವಾಗಿದೆ. ಇದರ ತಯಾರಿಕೆ ಭಾರತ ಮತ್ತು ಆಗ್ನೇಯ ಏಷ್ಯ ದೇಶಗಳಲ್ಲಿ ಬೆಳೆಯುವ ಇಂಡಿಗೋಫೆರ ಎಂಬ ಸಸ್ಯಜಾತಿಯಿಂದ ನಡೆಯುತ್ತಿತ್ತು. ಈ ಸಸ್ಯಗಳು ಇಂಡಿಕಾನ್ ಎಂಬ ವಸ್ತುವನ್ನು

ಉತ್ಪಾದಿಸುತ್ತವೆ. ಇಂಡಿಕಾನ್ ಅನ್ನು ಹುದುಗೇಳಿಸುವುದರಿಂದ ಇಂಡಿಗೋ ದೊರೆಯುತ್ತದೆ. ಈಚೆಗೆ ಕೃತಕವಾಗಿ ಇಂಡಿಗೋವನ್ನು ತಯಾರಿಸುವುದರಿಂದ ಮೇಲೆ ಹೇಳಿದ ವಿಧಾನಕ್ಕೆ ಕೇವಲ ಐತಿಹಾಸಿಕ ಮಹತ್ತ್ವ ಇದೆ. ಇಂಡಿಗೋದ (XXI) ತಯಾರಿಕೆಯ ವಿಧಾನಗಳು ಹಲವಾರು. ಅವುಗಳಲ್ಲಿ ಮುಖ್ಯವಾದದ್ದನ್ನು ಕೆಳಗೆ ಸೂಚಿಸಲಾಗಿದೆ. ಇಂಡಿಗೋದಿಂದ ತಯಾರಾದ ಅನೇಕ ವರ್ಣದ್ರವ್ಯಗಳು ಬಳಕೆಯಲ್ಲಿವೆ. ಮೆಡಿಟರೇನಿಯನ್ ಬಸವನಹುಳುವಿನಿಂದ ತೆಗೆಯುವ ಟೆರಿಯನ್ ಪರ್ಪಲ್ ಎಂಬ ಬಣ್ಣ ಪುರಾತನಕಾಲದಿಂದ ಬಳಕೆಯಲ್ಲಿದೆ.

3 ಹೈಡ್ರಾಕ್ಸಿ ಇಂಡೋಲ್ ಅಥವಾ ಇಂಡಾಕ್ಸಿಲ್ ದುರ್ಗಂಧವುಳ್ಳ ಹಳದಿ ಬಣ್ಣದ ವಸ್ತು. ಇದನ್ನು ಗಾಳಿ ಅಥವಾ ಫೆರಿಕ್ ಕ್ಲೋರೈಡಿನಿಂದ ಉತ್ಕರ್ಷಿಸಿದರೆ ಇಂಡಿಗೋ ಉತ್ಪತ್ತಿಯಾಗುತ್ತದೆ. ಆಕ್ಸಿಂಡೋಲ್ ಡೈಆಕ್ಸಿಂಡೋಲ್, ಇಸಾಟಿನ್–ಇವು ಇಂಡೋಲಿನಿಂದ ಉತ್ಪತ್ತಿಯಾಗುವ ಇತರ ವಸ್ತುಗಳು. ಇಸಾಟಿನ್‌ನನ್ನು ಇಂಡಿಗೊ ಮತ್ತು ಕ್ವಿನೋಲಿನ್‌ಗಳಿಗೆ ಪರಿವರ್ತಿಸಬಹುದು.

ಉಪಯೋಗಗಳು: ಇಂಡೋಲನ್ನು ರಾಸಾಯನಿಕ ಪರಿವರ್ತಕವನ್ನಾಗಿ (ರೀಏಜೆಂಟ್) ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಸುಗಂಧದ್ರವ್ಯಗಳ ತಯಾರಿಕೆಯಲ್ಲಿ, ಔಷಧವಾಗಿ, ರುಚಿಕೊಡುವ ವಸ್ತುವಾಗಿಯೂ ಇದರ ಉಪಯೋಗವಿದೆ. (ಎಚ್.ಎಸ್.ಎಸ್.)

**ಇಂಡೋಲ್ ಅಸಿಟಿಕ್ ಆಮ್ಲ:** ಪೂರ್ಣ ಹೆಸರು 3–ಇಂಡೋಲ್ ಅಸಿಟಿಕ್ ಆಮ್ಲ (ಬೀಟ ಇಂಡೋಲ್ ಅಸಿಟಿಕ್ ಆಮ್ಲ. ಬೀಟ ಇಂಡೋಲೈಲ್ ಅಸಿಟಿಕ್ ಆಮ್ಲ). ಇದು ಆಕ್ಸಿನ್ ಗುಂಪಿಗೆ ಸೇರಿದ ಒಂದು ಪ್ರಮುಖ ಚೋದಕ ದ್ರವ. ಇದರ ರಾಸಾಯನಿಕಸೂತ್ರ $C_8H_6NCH_2COOH$. ಈ ಆಮ್ಲ ಹರಳಿನ ರೂಪದಲ್ಲಿ ದೊರೆಯುತ್ತದೆ. ಹರಳುಗಳು $168^\circ$–$170^\circ$ ಸೆಂ. ಉಷ್ಣತೆಯಲ್ಲಿ ದ್ರವಿಸುತ್ತವೆ. ಇವು ನೀರಿನಲ್ಲಿ ವಿಲೀನವಾಗುವುದಿಲ್ಲ; ಆಲ್ಕೋಹಾಲ್ ಮತ್ತು ಈಥರ್‌ಗಳಲ್ಲಿ ವಿಲೀನವಾಗುತ್ತವೆ. ಈ ಚೋದಕ ದ್ರವಗಳು ಸಸ್ಯಗಳ ಬೆಳವಣಿಗೆಯನ್ನು ಪ್ರೇರೇಪಿಸುತ್ತವೆ. ನೆರಳಿನಲ್ಲಿ ಬೆಳೆಯುವ ಗಿಡಗಳ ಹಸಿರು ಕೊನೆಗಳಲ್ಲಿ ಮತ್ತು ಬೇರಿನ ಕೊನೆಗಳಲ್ಲಿ ಈ ಆಮ್ಲ ಸ್ವಾಭಾವಿಕವಾಗಿ ದೊರೆಯುತ್ತದೆ. ಹೆಚ್ಚಿನ ಸಾಂದ್ರಣದಲ್ಲಿ ಸಸ್ಯಗಳ ಬೆಳವಣಿಗೆಯನ್ನು ಇದು ನಿರೋಧಿಸುತ್ತದೆ. ಈ ಕಾರಣದಿಂದಾಗಿ ನಿರ್ಮೂಲ ಮಾಡಲು ಇದರ ಬಳಕೆ ಇದೆ. ತರಕಾರಿಗಳನ್ನು ಶೇಖರಿಸಿಡುವ ಸಮಯದಲ್ಲಿ ಅವು ಮೊಳಕೆಯೊಡೆಯದಂತೆ ಮಾಡಲೂ ಗಿಡದಲ್ಲಿ ಹಣ್ಣಿನ ಬೆಳವಣಿಗೆಯನ್ನು ಪ್ರೇರೇಪಿಸಲೂ ಆಮ್ಲವನ್ನು ಬಳಸುತ್ತಾರೆ. (ಎಚ್.ಎಸ್.ಎಸ್.)

**ಇಂದಿರಾ ಗಾಂಧಿ:** 1917–84. ಭಾರತದ ಪ್ರಧಾನಮಂತ್ರಿ (1966–77 ಮತ್ತು 1980–84). ಮೋತಿಲಾಲ್ ನೆಹರು ಅವರ ಮೊಮ್ಮಗಳು. ಜವಾಹರಲಾಲ್ ನೆಹರು ಹಾಗೂ ಕಮಲ ನೆಹರು ಅವರ ಪುತ್ರಿ. 1917 ನವೆಂಬರ್ 19ರಂದು ಅಲಹಾಬಾದಿನಲ್ಲಿ ಜನಿಸಿದರು. ತಾತ ಮೋತಿಲಾಲ್ ನೆಹರು ಅಲಹಾಬಾದಿನ ಶ್ರೀಮಂತ, ಪ್ರಖ್ಯಾತ ನ್ಯಾಯವಾದಿ. ತಂದೆ ಜವಾಹರ್‌ಲಾಲ್ ನೆಹರು ಕೂಡ ವಿಖ್ಯಾತರು. ಇಬ್ಬರೂ ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ತಮ್ಮ ಶ್ರೀಮಂತ ವಿಲಾಸದ ಜೀವನವನ್ನು ಸರಳಗೊಳಿಸಿ ಸೇವೆಗೆ ಮುಡಿಪಾಗಿಟ್ಟರು. ಅವರ ಅಲಹಾಬಾದಿನ ಶ್ರೀಮಂತ ಗೃಹ ರಾಜಕೀಯ ಚಟುವಟಿಕೆಯ ಕೇಂದ್ರವಾಯಿತು; ಸ್ವಾತಂತ್ರ್ಯ ಹೋರಾಟಗಾರರ ಸ್ಫೂರ್ತಿಯ ನೆಲೆಯಾಯಿತು. ರಾಜಕೀಯಾವೇಶಗಳ ಆ ಸನ್ನಿವೇಶದಲ್ಲಿ ಇವರು ಬೆಳೆದರು. ಇವರ ತಂದೆಯೂ ತಾತನೂ ಸ್ವೀಕರಿಸಿದ್ದ ಸ್ವಾತಂತ್ರ್ಯ ಹೋರಾಟ ದೀಕ್ಷೆ ದಲಿತರ ಸೇವೆಯ ವ್ರತ ಎಳೆಯಮನಸ್ಸಿನ ಮೇಲೆ ವಿಶಿಷ್ಟ ಮುದ್ರೆಯನ್ನೊತ್ತಿದುವು. ತಂದೆಯಿಂದ ದೇಶಪ್ರೇಮವನ್ನೂ ಅಂತಾರಾಷ್ಟ್ರೀಯ ದೃಷ್ಟಿಯನ್ನೂ ಪಡೆದುಕೊಂಡರು.

ನೆಹರು ಅವರು ಕಾರಾಗೃಹದಿಂದ ಮಗಳಿಗೆ ಬರೆದ ಕೆಲವು ಪತ್ರಗಳು ಪುಸ್ತಕರೂಪದಲ್ಲಿ ಪ್ರಕಟವಾಗಿವೆ. ತಂದೆಯೇ ಇವರಿಗೆ ಆದರ್ಶ, ಗುರು, ದಾರ್ಶನಿಕ. ಬಾಲ್ಯದಲ್ಲೆ ಇವರೂ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ರೀತಿಯಲ್ಲಿ ಭಾಗವಹಿಸಿದರು. ವಾನರ ಸೇನಾ ಮತ್ತು ಚರಖಾ ಸಂಘಗಳನ್ನು ಇವರು ಸಂಘಟಿಸಿದರು. ಆಗ ಇವರಿಗೆ ಕೇವಲ 12 ವರ್ಷ. ಅಲಹಾಬಾದ್, ಸ್ವಿಟ್ಜರ್ಲೆಂಡ್, ಆಕ್ಸ್‌ಫರ್ಡ್, ಶಾಂತಿನಿಕೇತನಗಳಲ್ಲಿ ವ್ಯಾಸಂಗಮಾಡಿದರು. ಆ ಕಾಲದಲ್ಲೂ ಇವರು ಅನೇಕ ವಿದ್ಯಾರ್ಥಿ ಚಳವಳಿಗಳಲ್ಲಿ ಭಾಗ ವಹಿಸುತ್ತಿದ್ದರು. ಲಂಡನ್ನಿನ ಇಂಡಿಯ ಲೀಗಿನ ಚಟುವಟಿಕೆಗಳಲ್ಲಿ ಇವರು ವಹಿಸಿದ ಪಾತ್ರ ಪ್ರಧಾನವಾದುದ್ದು. 1938ರಲ್ಲಿ ಇವರು ಕಾಂಗ್ರೆಸಿನ ಸದಸ್ಯೆಯಾದರು. ಅಂದಿನಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಇವರು ನೇರವಾಗಿ ಭಾಗವಹಿಸಲಾರಂಭಿಸಿದರು. 1942ರಲ್ಲಿ ಫಿರೋಜ಼್ ಗಾಂಧಿಯವರನ್ನು ಇವರು ವಿವಾಹವಾದರು. 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಪತಿಯೊಡನೆ ಇವರಿಗೂ ಕಾರಾಗೃಹವಾಸ ಪ್ರಾಪ್ತವಾಯಿತು (1942). ಬಂಧನದಿಂದ ಬಿಡುಗಡೆ ಹೊಂದಿದ ಮೇಲೆ ಇವರು ದೇಶಸೇವಾಕಾರ್ಯವನ್ನು ಮುಂದುವರಿಸಿದರು. ಇವರಿಗೆ 1944ರಲ್ಲಿ ರಾಜೀವ್ ಗಾಂಧಿ ಹಾಗೂ 1946ರಲ್ಲಿ ಸಂಜಯ ಗಾಂಧಿ ಎಂಬ ಇಬ್ಬರು ಮಕ್ಕಳು ಜನಿಸಿದರು. 1947ರಲ್ಲಿ ಇವರು ದೆಹಲಿಯಲ್ಲಿ ಮತೀಯ ಗಲಭೆಗಳಿಗೆ ತುತ್ತಾದ ಪ್ರದೇಶದಲ್ಲಿ ಗಾಂಧಿಯವರ ನೇತೃತ್ವದಲ್ಲಿ ಪರಿಹಾರಕಾರ್ಯ ಕೈಗೊಂಡರು. ಜವಾಹರಲಾಲ್ ನೆಹರು ಅವರು ಪ್ರಧಾನಿಯಾದ ಮೇಲೆ ಇಂದಿರಾ ಗಾಂಧಿಯವರು ರಾಜಕೀಯದಲ್ಲಿ ಅವರಿಗೆ ಸಹಾಯಕಿಯಾದರು, ಹಲವು ಆಫ್ರಿಕನ್ ದೇಶಗಳಲ್ಲಿ ಪ್ರವಾಸ ಮಾಡಿದರು. ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ನೇಮಕಗೊಂಡು (1955) ಇಂದಿರಾ ಗಾಂಧಿಯವರು ರಾಜಕೀಯವನ್ನು ನೇರವಾಗಿ ಪ್ರವೇಶಿಸಿ ಅದೇ ವರ್ಷ ಇವರು ಕಾಂಗ್ರೆಸಿನ ಕೇಂದ್ರ ಚುನಾವಣಾ ಸಮಿತಿಯ ಸದಸ್ಯೆಯೂ ಆದರು. ಮರುವರ್ಷ ಅಲಹಾಬಾದ್ ನಗರ ಕಾಂಗ್ರೆಸಿನ ಅಧ್ಯಕ್ಷೆಯಾದರು. ಸ್ವಲ್ಪ ಕಾಲದಲ್ಲೇ ಕೇಂದ್ರ ಸಂಸದೀಯ ಮಂಡಲಿಯ ಸದಸ್ಯತ್ವ ಪಡೆದರು. 1959ರಲ್ಲಿ ಇವರು ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷೆಯಾಗಿ ಆಯ್ಕೆಯಾಗಿ ಯು. ಎನ್. ಢೇಬರರಿಂದ ಅಧಿಕಾರ ವಹಿಸಿಕೊಂಡರು. ಕಾಂಗ್ರೆಸಿನ ಅಧ್ಯಕ್ಷತೆ ವಹಿಸಿದ ನೆಹರು ವಂಶದವರ ಪೈಕಿ ಇವರು ಮೂರನೆಯವರು. ಆಗ ಇವರಿಗೆ ಇನ್ನೂ 42 ವರ್ಷ. ರಾಷ್ಟ್ರದ ಉನ್ನತ ವಿದ್ಯಮಾನಗಳಲ್ಲಿ ಯುವಜನದ ಪ್ರತೀಕವಾಗಿ ಇವರು ಆಗಮಿಸಿದರೆನ್ನಬಹುದು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಇವರು ಕಿರಿ ವಯಸ್ಸಿನವರನ್ನು ಆರಿಸಿಕೊಂಡರು.

ಇವರು ಕಾಂಗ್ರೆಸಿನ ಅಧ್ಯಕ್ಷೆಯಾಗಿದ್ದಾಗ ಕೇರಳ ಹೊರತು ಪಡಿಸಿ ಎಲ್ಲ ರಾಜ್ಯಗಳಲ್ಲೂ ಕಾಂಗ್ರೆಸ್ ಮಂತ್ರಿಮಂಡಲಗಳಿದ್ದುವು. ಕೇರಳದಲ್ಲಿ ಇ.ಎಂ.ಎಸ್. ನಂಬೂದಿರಿಪಾಡರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಸರ್ಕಾರವಿತ್ತು. ಈ ಸರ್ಕಾರ ಜಾರಿಗೆ ತರಲು ಆಲೋಚಿಸಿದ್ದ ಶಿಕ್ಷಣ ಸುಧಾರಣಾ ವಿಧೇಯಕದ ವಿರುದ್ಧ ತೀವ್ರ ಚಳವಳಿ ನಡೆಯುತ್ತಿದ್ದ ಕಾರಣ ಆ ಮಂತ್ರಿಮಂಡಲ ವಜಾ ಆದದ್ದು ಇವರು ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದಾಗ. ಕೇರಳದಲ್ಲಿ ಕಾಂಗ್ರೆಸ್ ನಾಯಕತ್ವ ಮುನ್ನುಗ್ಗುವ ಧೋರಣೆ ಅನುಸರಿಸುವಂತೆ ಮಾಡಿದರು. ಇತರ ಪಕ್ಷಗಳೊಂದಿಗೆ ಕಾಂಗ್ರೆಸ್ ಏರ್ಪಡಿಸಿಕೊಂಡ ಸಂಯುಕ್ತ ರಂಗ ಕೇರಳದ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂತು. ದ್ವಿಭಾಷಾ ರಾಜ್ಯವಾಗಿದ್ದ ಬೊಂಬಾಯಿಯನ್ನು ಒಡೆದು ಮಹಾರಾಷ್ಟ್ರ, ಗುಜರಾತ್ ರಾಜ್ಯಗಳನ್ನು ರಚಿಸಲಾಯಿತು. ಇದರಿಂದ ಮರಾಠಿ ಮತ್ತು ಗುಜರಾತಿ ಭಾಷೆಗಳನ್ನಾಡುವವರ ಆಶೋತ್ತರಗಳು ಈಡೇರಿದಂತಾಯಿತು. ಮರುವರ್ಷ ಎನ್.ಸಂಜೀವರೆಡ್ಡಿಯವರಿಗೆ ಇವರು ಕಾಂಗ್ರೆಸ್ ಅಧ್ಯಕ್ಷತೆಯನ್ನು ವಹಿಸಿಕೊಟ್ಟರು. ಆ ವರ್ಷ ಪತಿ ಫಿರೋಜ಼್ ಗಾಂಧಿಯವರು ನಿಧನ ಹೊಂದಿದರು (1960).

ಪ್ಯಾರಿಸಿನಲ್ಲಿ ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಸಾಂಸ್ಕೃತಿಕ ಸಂಸ್ಥೆಗೆ (ಯುನೆಸ್ಕೊ) ಭಾರತ ನಿಯೋಗದ ಸದಸ್ಯೆಯಾಗಿ ಇವರು 1960ರಲ್ಲಿ ನೇಮಕಗೊಂಡರು. ನಾಲ್ಕು ವರ್ಷ ಆ ಸಂಸ್ಥೆಗಾಗಿ ಕೆಲಸ ಮಾಡಿದರು; ಅನಂತರ ಅದರ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯತ್ವವನ್ನೂ ಪಡೆದಿದ್ದರು. 1964 ಮೇ ತಿಂಗಳಲ್ಲಿ ನೆಹರು ನಿಧನ ಹೊಂದಿದಾಗ ಲಾಲ್ ಬಹಾದ್ದೂರ್‌ಶಾಸ್ತ್ರಿ ಭಾರತದ ಪ್ರಧಾನಿಯಾದರು. ಶಾಸ್ತ್ರಿಯವರ ಸಂಪುಟದಲ್ಲಿ ಇವರು ಸಮಾಚಾರ ಮತ್ತು ಪ್ರಸಾರ ಖಾತೆ ಮಂತ್ರಿಯಾಗಿದ್ದರು. ಉತ್ತರ ಪ್ರದೇಶದ ವಿಧಾನಸಭೆಯಿಂದ ರಾಜ್ಯಸಭೆಗೆ ಇವರು ಅವಿರೋಧವಾಗಿ ಆಯ್ಕೆಯಾದ್ದು 1964 ಆಗಸ್ಟ್ ತಿಂಗಳಿನಲ್ಲಿ. 1966 ಜನವರಿಯಲ್ಲಿ ಪ್ರಧಾನಿ ಲಾಲ್‌ಬಹಾದ್ದೂರ್‌ಶಾಸ್ತ್ರಿ ಯವರು ತಾಷ್ಕೆಂಟಿನಲ್ಲಿ ನಿಧನರಾದಾಗ ಇವರು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿಯಾಗುವುದರ ಮೂಲಕ ಭಾರತದ ಪ್ರಧಾನಿಯಾಗಿ ಆಯ್ಕೆಗೊಂಡರು. 1966 ಜನವರಿ 24ರಂದು ಆಗ ಇವರ ಪ್ರತಿಸ್ಪರ್ಧಿಯಾಗಿದ್ದವರು ಮೊರಾರ್ಜಿ ದೇಸಾಯಿ.

ಆಗ ದೇಶ ತುಂಬ ಕಷ್ಟದ ದಿನಗಳನ್ನು ಎದುರಿಸಬೇಕಾಗಿತ್ತು. ಹಿಂದಿನ ವರ್ಷದ ಪಾಕಿಸ್ತಾನಿ ಆಕ್ರಮಣದಿಂದ ಆರ್ಥಿಕವಾಗಿ ಬಹಳ ನಷ್ಟ ಸಂಭವಿಸಿ ಕೃಷಿ ಕೈಗಾರಿಕೆಗಳ ಯೋಜನಾಬದ್ಧ ಪ್ರಗತಿಗೆ ಅಡಚಣೆ ಉಂಟಾಗಿತ್ತು. ವಿದೇಶೀ ನೆರವು ನಿಂತಿತ್ತು. ಮುಂಗಾರು ಮಳೆ ಬಾರದೆ ಕೇರಳ, ಪಶ್ಚಿಮ ಬಂಗಾಲಗಳಲ್ಲಿ ಆಹಾರಾಭಾವ ತಲೆದೋರಿ ಬೆಲೆಗಳು ಏರಿದ್ದುವು. ಪೂರ್ವ ಭಾರತದ ಗಿರಿಜನರು ಬಂಡಾಯ ಎಬ್ಬಿಸಿದ್ದರಿಂದ ಅಸ್ಸಾಮಿನಲ್ಲಿ ಪ್ರಕ್ಷುಬ್ಧತೆ ಉಂಟಾಗಿತ್ತು. ಇವರು ಮಿಜ಼ೋ ಬೆಟ್ಟಗಳ ಪ್ರದೇಶಕ್ಕೆ ಹೋಗಿ ಅಲ್ಲಿಯ ಪರಿಸ್ಥಿತಿಯ ಪರಿಶೀಲನೆ ನಡೆಸಿದರು. ಅನಂತರ ಆ ಜನರಿಗಾಗಿ ಮಿಜ಼ೋರಾಂ ಎಂಬ ಪ್ರತ್ಯೇಕ ರಾಜ್ಯ ರಚಿತವಾಯಿತು. ಪಶ್ಚಿಮದಲ್ಲಿ ಪಂಜಾಬ್ ಹರಿಯಾಣ ರಾಜ್ಯಗಳು ರಚನೆಗೊಂಡುವು.

1966ರಲ್ಲಿ ಅಮೆರಿಕ, ಬ್ರಿಟನ್, ಲಂಡನ್, ಮಾಸ್ಕೊ, ಯೂಗೋಸ್ಲಾವಿಯ, ಸೋವಿಯೆತ್ ಒಕ್ಕೂಟ, ಅರಬ್ ಸಂಯುಕ್ತ ಗಣರಾಜ್ಯ, ನೇಪಾಲ–ಈ ದೇಶಗಳಿಗೆ ಭೇಟಿಯಿತ್ತರು. ಇವರ ನೇತೃತ್ವದಲ್ಲಿ 1966 ಅಕ್ಟೋಬರಿನಲ್ಲಿ ಯೂಗೋಸ್ಲಾವಿಯದ ಅಧ್ಯಕ್ಷ ಟಿಟೋ,

ಅರಬ್ ಅಧ್ಯಕ್ಷ ನಾಸೆರ್ ಇವರ ಸಭೆಯೊಂದು ದೆಹಲಿಯಲ್ಲಿ ನಡೆಯಿತು. 1967ರಲ್ಲಿ ದೇಶದ 4ನೆಯ ಮಹಾ ಚುನಾವಣೆಗಳು ನಡೆದಾಗ ಇವರು ದೇಶಾದ್ಯಂತ ಸಂಚರಿಸಿ ತಮ್ಮ ಪಕ್ಷದ ಪ್ರಚಾರಕಾರ್ಯದಲ್ಲಿ ನಿರತರಾದರು. ಸಂಸತ್ತಿನಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂತಾದರೂ ರಾಜ್ಯಗಳಲ್ಲಿ ಅದರ ಗಳಿಕೆ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಅರ್ಧದಷ್ಟು ರಾಜ್ಯಗಳಲ್ಲಿ ಕಾಂಗ್ರೆಸೇತರ ಸರ್ಕಾರಗಳು ಸ್ಥಾಪಿತವಾದುವು. ಇವರು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿಯಾಗಿ ಮತ್ತೆ ಆಯ್ಕೆಗೊಂಡು ಮತ್ತೆ ಸರ್ಕಾರ ರಚಿಸಿದರು. ಇವರು ತಮ್ಮ ಸಂಪುಟಕ್ಕೆ ಅನುಭವಿಗಳನ್ನೂ ಯುವಕರನ್ನೂ ಆರಿಸಿಕೊಂಡರು.

1967 ಮೇ ತಿಂಗಳಿನಲ್ಲಿ ಝಾಕಿರ್ ಹುಸೇನರು ರಾಷ್ಟ್ರಪತಿಯಾಗಿಯೂ ವಿ. ವಿ. ಗಿರಿಯವರು ಉಪರಾಷ್ಟ್ರಪತಿಯಾಗಿಯೂ ಆಯ್ಕೆಯಾದರು. ಎರಡು ವರ್ಷಗಳ ಅನಂತರ (1969) ಝಾಕಿರ್ ಹುಸೇನರು ನಿಧನ ಹೊಂದಿದಾಗ ಕಾಂಗ್ರೆಸಿನ ಎನ್. ಸಂಜೀವರೆಡ್ಡಿಯವರಿಗೆ ಬೆಂಬಲ ನೀಡಿದರು. ಇವರು ಹಾಗೂ ಬೆಂಬಲಿಗರೂ ಉಪರಾಷ್ಟ್ರಪತಿಗಳಾಗಿದ್ದ ವಿ.ವಿ.ಗಿರಿ ಯವರಿಗೆ ಬೆಂಬಲ ನೀಡಿ ಗಿರಿಯವರು ರಾಷ್ಟ್ರಪತಿಯಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಆದ ಒಡಕು ದೊಡ್ಡದಾಗಿ ಹಳೆಯ ಕಾಂಗ್ರೆಸಿಗರೂ ಇಂದಿರಾಗಾಂಧಿಯವರ ಪರವಾಗಿದ್ದವರೂ ಇಂಡಿಕೇಟ್-ಸಿಂಡಿಕೇಟ್ ಎಂದು ಎರಡು ಪ್ರತ್ಯೇಕ ಕಾಂಗ್ರೆಸ್‌ಗಳ ಅಡಿಯಲ್ಲಿ ಬಂದರು. ಹಳೆಯ ನಾಯಕರ ಕಾಂಗ್ರೆಸ್ (ಸಂಸ್ಥಾ ಕಾಂಗ್ರೆಸ್) ಸಂಸತ್ತಿನಲ್ಲಿ ವಿರೋಧ ಪಕ್ಷವಾಯಿತು.

1970 ಡಿಸೆಂಬರಿನಲ್ಲಿ ಇವರು ಸಂಸತ್ತನ್ನು ವಿಸರ್ಜಿಸಿ, ನಡುಗಾಲದ ಚುನಾವಣೆಯಲ್ಲಿ ತಮ್ಮ ಪಕ್ಷದ ಬಲಪರೀಕ್ಷೆ ಮಾಡಬೇಕೆಂದು ತೀರ್ಮಾನಿಸಿದರು. 1971ರಲ್ಲಿ ನಡೆದ ಚುನಾವಣೆ ಯಲ್ಲಿ ಇವರ ಪಕ್ಷಕ್ಕೆ ಪ್ರಚಂಡ ವಿಜಯ ಪ್ರಾಪ್ತವಾಯಿತು. ಕಾಂಗ್ರೆಸೇತರ ಸರ್ಕಾರಗಳಿದ್ದ ರಾಜ್ಯಗಳೂ ಕಾಂಗ್ರೆಸಿಗೆ ಬಹುಮತ ನೀಡಿದ್ದರಿಂದ ಇವರು ಮತ್ತೆ ಅಧಿಕಾರಕ್ಕೆ ಬಂದರು.

ವಿಜಯಸಮಯದಲ್ಲೇ ಹೊಸ ಆತಂಕಗಳು ಹುಟ್ಟಿಕೊಂಡವು. ಆಗ ಪೂರ್ವ ಪಾಕಿಸ್ತಾನವೆನಿಸಿದ್ದ ಬಾಂಗ್ಲಾದೇಶದಲ್ಲಿ ಚುನಾಯಿತ ಅವಾಮಿ ಲೀಗಿನ ಸದಸ್ಯರಿಗೆ ಸರ್ಕಾರ ರಚಿಸಲು ಅವಕಾಶ ಲಭಿಸಿರಲಿಲ್ಲ. ಪಾಕಿಸ್ತಾನದ ಅಧ್ಯಕ್ಷ ಯಹ್ಯಾಖಾನ್ ಬಾಂಗ್ಲಾ ಜನರ ಮೇಲೆ ಹೊಸ ದಬ್ಬಾಳಿಕೆ ಕ್ರಮ ಕೈಗೊಂಡ. ಅನೇಕರು ಗಡಿ ದಾಟಿ ಭಾರತಕ್ಕೆ ಬಂದು ರಕ್ಷಣೆ ಪಡೆದರು. ಗಾಂಧಿಯವರು ಆ ಸಂದರ್ಭದಲ್ಲಿ ಧೈರ್ಯ ಚಾತುರ್ಯ ಸಹಾನು ಭೂತಿಗಳಿಂದ ವರ್ತಿಸಿ, ನಿರಾಶ್ರಿತರಿಗಾಗಿ ನೆರವನ್ನು ಸಂಘಟಿಸಿದರು. ನಿರಾಶ್ರಿತರು ಗೌರವದಿಂದ ತಮ್ಮ ದೇಶಕ್ಕೆ ಹಿಂದಿರುಗುವಂತೆ ಮಾಡುವುದಾಗಿ ವಾಗ್ದಾನ ಮಾಡಿದರು. ಬಾಂಗ್ಲಾ ವಿಮೋಚನಾ ಹೋರಾಟಗಾರರು ಸ್ವಾತಂತ್ರ್ಯ ಘೋಷಿಸಿಕೊಂಡು ಪಾಕಿಸ್ತಾನದ ಸಶಸ್ತ್ರ ಪಡೆಯನ್ನು ಎದುರಿಸಿದರು. ಸ್ವಾತಂತ್ರ್ಯ ಯೋಧರಿಗೆ ಭಾರತ ಬೆಂಬಲ ನೀಡು ತ್ತಿದ್ದುದನ್ನು ಕಂಡು ಪಾಕಿಸ್ತಾನ ಭಾರತದ ಮೇಲೆ ಯುದ್ಧ ಹೂಡಿತು. 14ದಿನ ನಡೆದ ಯುದ್ಧದಲ್ಲಿ ಪೂರ್ವ ಪಶ್ಚಿಮ ರಂಗಗಳೆರಡರಲ್ಲೂ ಪಾಕಿಸ್ತಾನಕ್ಕೆ ಭಾರಿ ಪೆಟ್ಟು ಬಿತ್ತು. ಪೂರ್ವ ಭಾಗ ಸಂಪೂರ್ಣ ಸ್ವತಂತ್ರವಾಯಿತು; ಬಾಂಗ್ಲಾದೇಶದ ಉದಯದಿಂದ ಇವರ ವಾಗ್ದಾನ ನೆರವೇರಿದಂತಾಯಿತು. ನಿರಾಶ್ರಿತರು ಗೌರವದಿಂದ ತಮ್ಮ ದೇಶಕ್ಕೆ ಹಿಂದಿರುಗಿದರು. ಪ್ರಪಂಚದಲ್ಲಿ ಭಾರತದ ಗೌರವ ಅಧಿಕವಾಗಿ ಇವರ ಕೀರ್ತಿಯೂ ಹೆಚ್ಚಿತು. ರಾಷ್ಟ್ರಪತಿಗಳು ಇವರಿಗೆ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿದರು (1971).

ಇವರ ಪ್ರಧಾನಿತ್ವದ ಅಧಿಕಾರಕಾಲದಲ್ಲಿ ವಾದಗ್ರಸ್ತವೂ ಕ್ರಾಂತಿಕಾರಿಯೂ ಆದ ಅನೇಕ ವಿಧೇಯಕಗಳು ಜಾರಿಗೆ ಬಂದಿವೆ. 14 ಪ್ರಧಾನ ಬ್ಯಾಂಕುಗಳ ರಾಷ್ಟ್ರೀಕರಣ, ರಾಜಧನ ರದ್ದು, ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಗಳ ಸವಲತ್ತುಗಳ ವಜಾ, ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣ-ಇವು ಇಂಥ ವಿಧೇಯಕಗಳಲ್ಲಿ ಮುಖ್ಯವಾದುವು. ಬಡತನವನ್ನು ನಿವಾರಿಸುವುದು ಇವರ ಚುನಾವಣಾ ಕಾಲದ ಘೋಷಣೆ.

ಪಾಕಿಸ್ತಾನದ ವಿರುದ್ಧ ನಡೆದ ಯುದ್ಧದಲ್ಲಿ ಭಾರತ ಜಯಗಳಿಸಿ ಬಾಂಗ್ಲಾ ದೇಶವನ್ನು ವಿಮೋಚನೆಗೊಳಿಸಿತಾದರೂ ಪಾಕಿಸ್ತಾನದೊಂದಿಗೆ ಶಾಂತಿಯುತವಾಗಿ ಬಾಳಬೇಕೆಂಬುದೇ ಇವರ ಆಕಾಂಕ್ಷೆ. ಇದಕ್ಕಾಗಿ ಇವರು 1972 ಜೂನ್ ತಿಂಗಳಲ್ಲಿ ಪಾಕಿಸ್ತಾನದ ಅಧ್ಯಕ್ಷ ಝೆಡ್.ಎ.ಭುಟ್ಟೋ ಅವರೊಂದಿಗೆ ಸಿಮ್ಲಾದಲ್ಲಿ ಸಭೆ ನಡೆಸಿ ಜುಲೈ 2ರಂದು ಪರಸ್ಪರ ಅನಾಕ್ರಮಣ ಒಪ್ಪಂದವೊಂದಕ್ಕೆ ಸಹಿಯಾಯಿತು. ಕಾಶ್ಮೀರದಲ್ಲಿ ವಾಸ್ತವ ಹತೋಟಿ ರೇಖೆಯ ನಿರ್ಧಾರವಾಗಿದೆ. ಅಂತಾರಾಷ್ಟ್ರೀಯ ಗಡಿಗೆ ಭಾರತ-ಪಾಕ್ ಸೇನೆಗಳು ವಾಪಸ್ಸಾಗಿವೆ. ಭಾರತ-ಪಾಕಿಸ್ತಾನಗಳ ನಡುವಣ ಇತರ ಸಮಸ್ಯೆಗಳೂ ಇತ್ಯರ್ಥವಾಗಿ ಭಾರತ ಉಪಖಂಡದ ಇತಿಹಾಸದಲ್ಲಿ ಶಾಂತಿಯ ಹೊಸ ಅಧ್ಯಾಯವೊಂದು ಆರಂಭ ವಾಗಬೇಕೆಂದು ಇವರು ಶ್ರಮಿಸಿದರು. ಆದರೆ 1975 ಜೂನ್‌ನಲ್ಲಿ ಇವರು ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿದ್ದು ಒಂದು ಕಪ್ಪುಚುಕ್ಕೆಯಾಯಿತು. ಅಲಹಾಬಾದ್ ಹೈಕೋರ್ಟ್, ಲೋಕಸಭೆಗೆ ಇವರ ಆಯ್ಕೆಯನ್ನು ಅಸಿಂಧುಗೊಳಿಸಿದ್ದೇ ಇದಕ್ಕೆ ಮೂಲ ಕಾರಣವಾಯಿತು. ಲೋಕನಾಯಕ ಜಯಪ್ರಕಾಶ್‌ನಾರಾಯಣ್ ಸೇರಿದಂತೆ ಅಸಂಖ್ಯ ಪ್ರತಿಪಕ್ಷ ನಾಯಕರು, ರಾಜಕೀಯ ಕಾರ್ಯಕರ್ತರನ್ನು ಜೈಲಿಗೆ ಅಟ್ಟಿದರು. ಪತ್ರಿಕಾಸ್ವಾತಂತ್ರ್ಯ ಮೊಟಕುಗೊಂಡಿತು. ಆದರೆ ಮಾರ್ಚ್ 1977ರಲ್ಲಿ ಚುನಾವಣೆ ಘೋಷಿಸಿದರು. ಇವರು ಹಾಗೂ ಇವರ ಕಾಂಗ್ರೆಸ್ ಘೋರ ಪರಾಭವ ಅನುಭವಿಸಿತು. ಪ್ರತಿಪಕ್ಷಗಳು ಒಂದಾಗಿ ಜನತಾಪಕ್ಷ ಹುಟ್ಟಿಕೊಂಡು ಅಧಿಕಾರ ಹಿಡಿಯಿತು. ಆದರೆ ಆಂತರಿಕ ಕಚ್ಚಾಟದಿಂದಾಗಿ ಮತ್ತೆ ಮಧ್ಯಂತರ ಚುನಾವಣೆ ನಡೆದು 1980 ಜನವರಿ 14 ರಂದು, ಇವರು ಮತ್ತೆ ಪ್ರಧಾನಿಯಾದರು. ಇದಕ್ಕೂ ಮುಂಚೆ ಇವರು ಕರ್ನಾಟಕದ ಚಿಕ್ಕಮಗಳೂರಿನಿಂದ ಲೋಕಸಭೆಗೆ ನಡೆದ ಮರುಚುನಾವಣೆಯಲ್ಲಿ ವೀರೇಂದ್ರ ಪಾಟೀಲ್ ವಿರುದ್ಧ ಜಯಗಳಿಸಿ ರಾಜಕೀಯ ಮರುಜೀವ ಪಡೆದರು. 1984 ಅಕ್ಟೋಬರ್ 31ರಂದು ಇವರ ಅಂಗರಕ್ಷಕರೇ ಇವರನ್ನು ಬರ್ಬರ ಹತ್ಯೆಮಾಡಿದರು. ಪಂಜಾಬಿನಲ್ಲಿ ಸಿಖ್ ಭಯೋತ್ಪಾದಕತೆ ನಿಗ್ರಹಿಸುವ ಅಂಗವಾಗಿ ಸ್ವರ್ಣಮಂದಿರಕ್ಕೆ ಸೇನೆಪ್ರವೇಶ (ಆಪರೇಷನ್ ಬ್ಲೂ ಸ್ಟಾರ್) ಇವರು ಕೈಗೊಂಡ ದುಸ್ಸಾಹಸ ಸಿಖ್ ಭಾವನೆಗಳನ್ನು ಕೆರಳಿಸಿತು. ಇವರ ಹತ್ಯೆ ಅನಂತರ ದೆಹಲಿ, ಇತರೆಡೆ ಸಂಭವಿಸಿದ ವ್ಯಾಪಕ ಸಿಖ್ ವಿರೋಧಿ ಹಿಂಸಾಚಾರ, ಸ್ವತಂತ್ರಭಾರತದ ಇತಿಹಾಸದಲ್ಲಿ ಮತ್ತೊಂದು ಕರಾಳ ಅಧ್ಯಾಯವಾಯಿತು. ಹೀಗೆ ಇವರ ಸೇವೆ-ಸಾಧನೆ ಅತ್ಯಂತ ವಿವಾದಾಸ್ಪದ ಹಾಗೆಯೇ ಅತಿವಿಶಿಷ್ಟ ಸಂಜಯ್‌ಗಾಂಧಿ, ರಾಜೀವ್ ಗಾಂಧಿ-ಇವರ ಇಬ್ಬರು ಪುತ್ರರು. (ಎಸ್.ಎಂ.ಎ.;ಕೆ.ಎಸ್.ಎ.)

**ಇಂದಿರಾ, ಎಂ.ಕೆ.:** 1917-94. ಕನ್ನಡದ ಪ್ರಸಿದ್ಧ ಲೇಖಕಿ, ಕಾದಂಬರಿಗಾರ್ತಿ. ಇವರು 1917 ಜನವರಿ 5ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಜನಿಸಿದರು. ತಂದೆ ತರೀಕೆರೆಯ ಸೂರ್ಯ ನಾರಾಯಣರಾವ್, ತಾಯಿ ಬನಶಂಕರಮ್ಮ. ಪ್ರಜಾವಾಣಿ ಪತ್ರಿಕೆಯ ಸಂಪಾದಕರಾಗಿದ್ದ ಟಿ.ಎಸ್.ರಾಮಚಂದ್ರರಾವ್ (ನೋಡಿ) ಇವರ ಸೋದರ. ಹೊಯಿಸಳ (ನೋಡಿ) ಎಂಬ ಕಾವ್ಯನಾಮದಿಂದ ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನಿತ್ತ ಅರಗ ಲಕ್ಷ್ಮಣರಾಯ ಇವರ ತಾತ. ಇಂದಿರಾ ಅವರ ಶಾಲಾಶಿಕ್ಷಣ ಮಾಧ್ಯಮಿಕ ಶಾಲೆಯ ಎರಡನೆಯ ತರಗತಿಯವರೆಗೆ ಮಾತ್ರ ನಡೆಯಿತು. ಆದರೆ ಇವರು ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ರಾಮಾಯಣ, ಮಹಾಭಾರತಗಳನ್ನು ಓದುವ ಅಭಿರುಚಿ ಮತ್ತು ವಿವಿಧ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಜೊತೆಗೆ ಮಲೆನಾಡಿನ ಪ್ರಕೃತಿ ಸೌಂದರ್ಯ ಇವರ ಉತ್ಸಾಹ, ಚೈತನ್ಯವನ್ನು ಅರಳಿಸುತ್ತಿತ್ತು.

ಹನ್ನೆರಡನೆಯ ವಯಸ್ಸಿನಲ್ಲಿ ತಾಯಿಯ ಚಿಕ್ಕಪ್ಪನ ಮಗ ಮಂಡಗದ್ದೆ ಕೃಷ್ಣರಾಯರೊಡನೆ ಇಂದಿರಾ ಅವರ ವಿವಾಹ ನಡೆಯಿತು (1929). ಈ ದಂಪತಿಗಳದು ಸರಳ, ಸರಸ, ಸಜ್ಜನಿಕೆಯ ಜೀವನ. ಇವರಿಗೆ ಎಂಟು ಮಂದಿ ಮಕ್ಕಳು. ಅವರಲ್ಲಿ ನಾಲ್ವರು ಗತಿಸಿ ನಾಲ್ವರು ಉಳಿದರು. 1969ರಲ್ಲಿ ಪತಿ ಕೃಷ್ಣರಾಯರು ಅಸ್ತಮಾ ಕಾಯಿಲೆಯಿಂದ ನಿಧನರಾದರು. ನಿಧನದ ಸಂದರ್ಭದಲ್ಲಿ 'ನನ್ನ ಸಾವಿನ ಅನಂತರ ನೀನು ಯಾವುದೇ ಅಂಧಶ್ರದ್ಧೆಗೆ ಬಲಿಯಾಗಬೇಡ ಮಾಂಗಲ್ಯ ವಿನಾ ಉಳಿದೆಲ್ಲ ಹಾಗೆಯೇ ಇರಲಿ. ಬಳೆ, ಕಾಲುಂಗರ, ಮೂಗುತಿ, ಕುಂಕುಮ ಯಾವುದನ್ನು ತೆಗೆಯಬೇಡ' ಎಂದಿದ್ದರಂತೆ.

ಇಂದಿರಾ ಅವರು ತಮ್ಮ ನಲವತ್ತೈದನೆಯ ವಯಸ್ಸಿನ ಅನಂತರ ಬರೆಯಲು ಪ್ರಾರಂಭಿಸಿದರು. ಸಂಪ್ರದಾಯ, ಅಂಧಶ್ರದ್ಧೆಯ ಪರಿಸರದಲ್ಲಿ ಬೆಳೆದು ಬಂದರೂ ವಿಚಾರವಂತಿಕೆಯನ್ನು ರೂಢಿಸಿಕೊಂಡರು. ಪತಿ ಕೃಷ್ಣರಾಯರ ಒತ್ತಾಸೆ, ಪ್ರೋತ್ಸಾಹಗಳಿಂದ ಲೇಖಕಿಯಾಗಿ ರೂಪುಗೊಂಡರು. ಇವರು 1960ರಲ್ಲಿಯೇ ಬರೆದ ತುಂಗಭದ್ರ ಚೊಚ್ಚಲ ಕಾದಂಬರಿ ಪ್ರಕಾಶಕರೊಬ್ಬರ ಅಜಾಕರೂಕತೆಯಿಂದಾಗಿ ಹಸ್ತಪ್ರತಿಯಲ್ಲಿಯೇ ಕಳೆದುಹೋಯಿತು. ನೆನಪಿನ ಆಧಾರದಿಂದ ಆ ಕಾದಂಬರಿಯನ್ನು 1963ರಲ್ಲಿ ಪುನಃ ಸೃಷ್ಟಿಸಿ ಪ್ರಕಟಿಸುವುದರ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು.

ಇವರು 40 ಕಾದಂಬರಿಗಳನ್ನೂ 12 ಕಥಾಸಂಕಲನಗಳನ್ನೂ ಹರಟೆ, ಪ್ರವಾಸಕಥನ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಬಾಲ್ಯವಿವಾಹ, ವೇಶ್ಯಾ ಸಮಸ್ಯೆ, ವರದಕ್ಷಿಣೆ, ಅಂಗವಿಕಲತೆ, ಬಂಜೆತನ, ಕಪಟ ಸಂನ್ಯಾಸಿಗಳ ವಂಚನೆ, ಸ್ತ್ರೀ ಶೋಷಣೆ, ಭಗ್ನಪ್ರಣಯ, ಅಂತರ್ಜಾತಿ ವಿವಾಹ ಮೊದಲಾದ ಸಮಸ್ಯೆಗಳು ಇವರ ಕಾದಂಬರಿಗಳ ವಸ್ತುಗಳಾಗಿವೆ. ಜಾಲ ಕಾದಂಬರಿಯಲ್ಲಿರುವ ಪಾರ್ವತಿಯ ಪಾತ್ರ ಕ್ಷಣಿಕ ಆಸೆಗಾಗಿ, ಮನೋದೌರ್ಬಲ್ಯಕ್ಕೊಳಗಾಗಿ ಹಾಳಾಗುವುದನ್ನು ಕಾಣಬಹುದು. ನಾಗವೀಣಾ ಕಾದಂಬರಿಯಲ್ಲಿ ವಿಲಾಸ ಜೀವನಕ್ಕೆ ಮಾರುಹೋದ ತಾಯಿಯಿಂದ ಮೃದುಸ್ವಭಾವದ ಮಗಳು ನೋವುಂಡು ದುರಂತದಲ್ಲಿ ಸಾವನ್ನಪ್ಪುವ ಚಿತ್ರಣವಿದೆ. ಗೆಜ್ಜೆಪೂಜೆ ಕಾದಂಬರಿಯಲ್ಲಿ ವೇಶ್ಯಾಪದ್ಧತಿಗೆ ಕಾರಣವಾಗಬಹುದಾದ ಧನದಾಹ, ಹೆಣ್ಣಿನ ಅಬಲೆತನ,

ಗಂಡಿನ ಸ್ವಾರ್ಥಗಳ ಸೂಕ್ಷ್ಮದುರಂತ ಚಿತ್ರಣವಿದೆ. ಸದಾನಂದ ಕಾದಂಬರಿಯಲ್ಲಿ ಅಂಗವಿಕಲತೆ, ವಿಧವಾ ಸಮಸ್ಯೆಯನ್ನೂ ಅದಕ್ಕೆ ಪರಿಹಾರವನ್ನೂ ವ್ಯಕ್ತಿಗಳ ಹಂತದಲ್ಲಿ ಬದಲಾವಣೆ ತರಲು ಸಾಧ್ಯವೆಂಬ ವಿಚಾರವನ್ನೂ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಫಣಿಯಮ್ಮ ಕಾದಂಬರಿಯಲ್ಲಿ ಬಾಲ್ಯದಲ್ಲಿಯೇ ವಿಧವೆಯಾದ ಫಣಿಯಮ್ಮ ಬದುಕಿನುದ್ದಕ್ಕೂ ಶೋಷಿತಳಾಗುವುದು ಕಂಡುಬಂದರೆ, ಅದೇ ಕಾದಂಬರಿಯಲ್ಲಿ ಬರುವ ದಾಕ್ಷಾಯಿಣಿ ವಿಧವೆಯಾದರೂ ಗರ್ಭ ಧರಿಸುವುದರ ಮೂಲಕ ಬಂಡಾಯ ಪ್ರವೃತ್ತಿಯ ಸಂಕೇತವಾಗಿ ನಿಲ್ಲುತ್ತಾಳೆ. ಫಣಿಯಮ್ಮ (ಮಲಯಾಳಂ), ತುಂಗಭದ್ರ (ತೆಲುಗು), ಗೆಜ್ಜೆಪೂಜೆ (ಗುಜರಾತಿ ಹಾಗೂ ತೆಲುಗು) – ಈ ಕಾದಂಬರಿಗಳು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ಗೆಜ್ಜೆಪೂಜೆ, ಸದಾನಂದ, ಫಣಿಯಮ್ಮ, ಹೂಬಾಣ (ಮುತ್ತು ಒಂದು ಮುತ್ತು) ಕಾದಂಬರಿಗಳು ಚಲನಚಿತ್ರಗಳಾಗಿವೆ.

ಇಂದಿರಾ ಅವರು ಬರೆದಿರುವ ಕಥೆಗಳಲ್ಲಿ ಸಮಾಜದ ವಿವಿಧ ವ್ಯಕ್ತಿಗಳ ಬದುಕನ್ನು ಭಿನ್ನ ನೆಲೆಗಳಿಂದ ನೋಡುವ ಪರಿ ಕಂಡುಬರುತ್ತದೆ. ಮಾನವೀಯತೆ, ಸತ್ಯ, ಪ್ರಾಮಾಣಿಕತೆ, ತ್ಯಾಗ, ಆದರ್ಶ, ಪ್ರೀತಿ, ಪರೋಪಕಾರ, ಕೃತಜ್ಞತೆ ಮೊದಲಾದವುಗಳನ್ನು ಪ್ರತಿನಿಧಿಸುವ ಪಾತ್ರಗಳು ಬರುತ್ತವೆ. 'ನಗಬೇಕು' ಹರಟೆಗಳ ಸಂಕಲನ. 'ಚಿತ್ರಭಾರತ' ಚಲನಚಿತ್ರರಂಗದ ಹಲವಾರು ಮುಖಗಳನ್ನು ವಿವಿಧ ಕೋನಗಳಿಂದ ನೋಡಿರುವ ಕೃತಿ. 'ಚಿತ್ರಶಿಲ್ಪಿ ಪುಟ್ಟಣ್ಣಕಣಗಾಲ' ಚಲನಚಿತ್ರ ನಿರ್ದೇಶಕರನ್ನು ಕುರಿತದ್ದು. 'ಅನುಭವ ಕುಂಜ' ಪ್ರವಾಸ ಕಥನ.

ಇವರ ಸಾಹಿತ್ಯ ಸಾಧನೆಗೆ ಅನೇಕ ಸನ್ಮಾನ, ಪುರಸ್ಕಾರಗಳು ದೊರೆತಿವೆ. ತುಂಗಭದ್ರ ಕಾದಂಬರಿಗೆ ಪ್ರಾದೇಶಿಕ ಉತ್ತಮ ಕತೆ ಪ್ರಶಸ್ತಿ (1965), ಸದಾನಂದ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ (1965), ನವರತ್ನ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ (1970), ಫಣಿಯಮ್ಮ ಕಾದಂಬರಿಗೆ ಕರ್ನಾಟಕ ರಾಜ್ಯ ಪ್ರಶಸ್ತಿ (1976) ಲಭಿಸಿವೆ. ಇವರು ಸಲ್ಲಿಸಿದ ಅನುಪಮ ಸಾಹಿತ್ಯ ಸೇವೆಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನಿಸಿದೆ (1980). ದಾವಣಗೆರೆಯಲ್ಲಿ ಕರ್ನಾಟಕ ಲೇಖಕಿಯರ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷೆಯಾಗಿದ್ದರು (1981). ಇವರಿಗೆ ಸುರಗಿ ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಲಾಗಿದೆ (1991). ಇವರು 1994 ಮಾರ್ಚ್ 15ರಂದು ನಿಧನರಾದರು.

(ಎಂ.ಎಲ್.ಎನ್.)

**ಇಂದುಮತಿ:** 1. ವಿದರ್ಭದ ಭೋಜರಾಜನ ಮಗಳು. ಕಾಕುತ್ಸ್ಥವಂಶದ ಅಜನನ್ನು ಮದುವೆಯಾಗಿ ದಶರಥನನ್ನು ಪಡೆದಳು. ತೃಣಬಿಂದುವೆಂಬ ರಾಜನ ತಪೋಭಂಗ ಮಾಡಲೆಂದು ಹೋದ ಹರಿಣಿಯೆಂಬ ಅಪ್ಸರೆ ಅವನ ಶಾಪದಿಂದ ವಿದರ್ಭ ರಾಜಮನೆತನದಲ್ಲಿ ಜನಿಸಿದಳೆಂದೂ ಆಖ್ಯಾಯಿಕೆಯಿದೆ. ನಾರದನ ವೀಣೆಯ ಮೇಲಣ ಹೂಮಾಲೆ ಇವಳ ಮೇಲೆ ಬಿದ್ದುದರಿಂದ ಸತ್ತಳು.

2. ಚಂದ್ರವಂಶದ ಆಯುರಾಜನ ಹೆಂಡತಿ ಸ್ವರ್ಭಾನವಿಯ ನಾಮಾಂತರ.

3. ಸಿಂಹಳ ದ್ವೀಪದ ಅರಸ ಚಂದ್ರಸೇನನ ಕಿರಿಯ ಮಗಳು. ಮದ್ರದೇಶದ ರಾಜಪುತ್ರ ಚಾರುದೇಷ್ಣನ ಪತ್ನಿ.

*

**ಇಂದೋರ್:** ಮಧ್ಯಪ್ರದೇಶದ ಒಂದು ಜಿಲ್ಲೆ ಹಾಗೂ ಜಿಲ್ಲಾ ಕೇಂದ್ರ ನಗರ. ಜಿಲ್ಲಾ ವಿಸ್ತೀರ್ಣ 3,898 ಚ.ಕಿಮೀ. ಜನಸಂಖ್ಯೆ: 25,85,321 (2001). ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಇಂದೋರ್ ಸಂಸ್ಥಾನದ ರಾಜಧಾನಿಯಾಗಿತ್ತು. ಸನ್ನಿವೇಶ: 22° 43' ಉ.ಅ.: 75° 54' ಪೂ.ರೇ. ಖಾನ ಮತ್ತು ಸರಸ್ವತೀ ನದಿಗಳ ಸಂಗಮದಲ್ಲಿದೆ. ಸಮುದ್ರಮಟ್ಟದಿಂದ 530ಮೀ ಎತ್ತರದಲ್ಲಿದೆ. ಮಧ್ಯಪ್ರದೇಶದ ಬೇಸಗೆ ರಾಜಧಾನಿ. ಜನಸಂಖ್ಯೆ 1,639,044. ರಾಜ್ಯದಲ್ಲೇ ದೊಡ್ಡನಗರ. ಇದೊಂದು ಪ್ರಮುಖ ವಾಣಿಜ್ಯ ಕೇಂದ್ರ. ಅನೇಕ ಹತ್ತಿ ಗಿರಣಿಗಳಿವೆ.

25 ಕಿಮೀ ದೂರದಲ್ಲಿರುವ ಕಂಪಾಲದ ಜಮೀನ್ದಾರನೊಬ್ಬ ಒಂದು ಗ್ರಾಮವಾಗಿ ಇದನ್ನು ಸ್ಥಾಪಿಸಿದ (1715). 1741ರಲ್ಲಿ ಇಂದ್ರೇಶ್ವರನ ದೇವಸ್ಥಾನ ಕಟ್ಟಲಾಯಿತು. ಅದರಿಂದಲೇ ಪಟ್ಟಣಕ್ಕೆ ಇಂದೋರ್ ಎಂಬ ಹೆಸರು ಬಂತು. 1964ರಲ್ಲಿ ಇಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ. ರಾಜಕುಮಾರರಿಗಾಗಿಯೇ ಎಂದು ಪ್ರಾರಂಭದಲ್ಲಿ ಮೀಸಲಾಗಿದ್ದ ಡೇಲಿ ಕಾಲೇಜು ಇಲ್ಲಿರುವ ಅಮೃತಶಿಲೆಯ ಸುಂದರ ಕಟ್ಟಡಗಳಲ್ಲೊಂದು. (ಎಂ.ಎಸ್.)

**ಇಂದೋರಿನ ಹೋಳ್ಕರರು:** ಮಧ್ಯಪ್ರದೇಶದಲ್ಲಿದ್ದ ಇಂದೋರ್ ಸಂಸ್ಥಾನದ ರಾಜರು. 18ನೆಯ ಶತಮಾನದಲ್ಲಿ ಪೇಷ್ವೆ ಮೊದಲನೆಯ ಬಾಜೀರಾಯ. ಮಲ್ಹಾರಿರಾವ್ ಹೋಳ್ಕರನಿಗೆ ಕೊಟ್ಟ ಜಹಗೀರಿಯಿಂದ ಈ ರಾಜ್ಯ ಪ್ರಾರಂಭವಾಯಿತು. ವಂಶದ ಮೂಲಪುರುಷ ಮಲ್ಹಾರಿರಾವ್ ಹೋಳ್ಕರ್ ಧಂಗರ್ ಅಥವಾ ಕುಬಪೈಕದವನಾಗಿದ್ದ. ಈತ ತನ್ನ ಶಕ್ತಿಪರಾಕ್ರಮಗಳಿಂದ ಪೇಷ್ವೆಯ ಅಶ್ವದಳದ ಅಧಿಪತಿಯಾದ. ಜನ್ಮಸ್ಥಳ ಪೂನಾದ ಬಳಿಯಿರುವ ಹೋಳ್ ಎಂಬ ಊರಾದ್ದರಿಂದ ಇವನ ವಂಶಕ್ಕೆ ಹೋಳ್ಕರರೆಂಬ ಹೆಸರು ಬಂತು. ಈತ 1766ರಲ್ಲಿ ಸಾಯುವ ಮೊದಲು ತನ್ನ ಶಕ್ತಿಪರಾಕ್ರಮಗಳಿಂದ ತನ್ನ ರಾಜ್ಯವನ್ನು ವಿಸ್ತರಿಸಿದ. ಇವನ ಅನಂತರ ಕ್ರಮವಾಗಿ ಮಲೇರಾಯ ಮತ್ತು ಅಹಲ್ಯಾಬಾಯಿ ರಾಜ್ಯವಾಳಿದರು. ಅಹಲ್ಯಾಬಾಯಿ 1766–95ರ ವರೆಗೆ ರಾಜ್ಯವನ್ನು ತುಂಬ ದಕ್ಷತೆಯಿಂದ ಆಳಿ ಜನರ ಸುಖ ಸಂಪತ್ತುಗಳನ್ನು ಹೆಚ್ಚಿಸಿದ ಈಕೆ ಈ ವಂಶದಲ್ಲಿ ಅತ್ಯಂತ ಪ್ರಸಿದ್ಧಳು **(ನೋಡಿ– ಅಹಲ್ಯಾಬಾಯಿ ಹೋಳ್ಕರ್)**. ಈಕೆಯ ಮರಣಾನಂತರ ಸೈನ್ಯಾಧಿಕಾರಿಯಾಗಿದ್ದ ತುಕೋಜಿ ಹೋಳ್ಕರ್ ಪಟ್ಟಕ್ಕೆ ಬಂದು ಈಕೆಯ ಸಂಪ್ರದಾಯಗಳನ್ನೇ ಮುಂದುವರಿಸಿದ. ಈತನ ಮರಣಾನಂತರ (1797) ರಾಜ್ಯದಲ್ಲಿ ಅನಾಯಕತ್ವ ಪ್ರಾರಂಭವಾಯಿತು.

ತುಕೋಜಿ ಹೋಳ್ಕರನ ಅನಂತರ ಜಸವಂತರಾವ್ ಹೋಳ್ಕರ್ ಪಟ್ಟಕ್ಕೆ ಬಂದ. 2ನೆಯ ಬಾಜಿರಾಯ ಬೆಸ್ಸಿನ್ ಒಪ್ಪಂದಕ್ಕೆ ಸಮ್ಮತಿಸಿದ್ದು ಇವನಿಗೆ ಸರಿಬೀಳಲಿಲ್ಲ. ಇದರಿಂದ 2ನೆಯ ಮರಾಠಾ ಯುದ್ಧ ಪ್ರಾರಂಭವಾಯಿತು. ಈತ ಹಾಕಿದ ಷರತ್ತುಗಳನ್ನು ಇಂಗ್ಲಿಷರು ಒಪ್ಪಲಿಲ್ಲ. 1804ರಲ್ಲಿ ಜಯಪುರದ ಲೂಟಿಯಾದ್ದರಿಂದ ಇಂಗ್ಲಿಷರು 1804ರಲ್ಲಿ ಯುದ್ಧ ಘೋಷಿಸಿದರು. ಕೋಟಾಕದನದಲ್ಲಿ ಇಂಗ್ಲಿಷ್ ಸೈನ್ಯಗಳನ್ನು ಸೋಲಿಸಿ ದೆಹಲಿಯನ್ನು ಮುತ್ತಿದರೂ ಇವನಿಗೆ ಅದನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಫರೂಕಾಬಾದ್ ಕದನದಲ್ಲಿ ಈತ ಪರಾಭವಗೊಂಡ. 1806ರಲ್ಲಿ ಆದ ಒಪ್ಪಂದದ ಪ್ರಕಾರ ಈತ ರಾಜ್ಯದ ಹೆಚ್ಚು ಭಾಗವನ್ನು ಇಂಗ್ಲಿಷರಿಗೆ ಬಿಟ್ಟುಕೊಡಬೇಕಾಯಿತು. ಇವನನ್ನು ಇಂಗ್ಲಿಷರು ತಮ್ಮ ಅತ್ಯಂತ ಪ್ರಬಲ ಶತ್ರುವೆಂದು ಭಾವಿಸಿದ್ದರು. ಈತ ಅತ್ಯಂತ ದಕ್ಷಸೇನಾಪತಿಯೂ ವಿದ್ಯಾವಂತನೂ ಕ್ರೂರಿಯೂ ಆಗಿದ್ದ. ದುರಾಸೆ ಇವನಲ್ಲಿದ್ದ ದೊಡ್ಡ ದುರ್ಗುಣ. ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಈತನಿಗೆ ಬುದ್ಧಿಭ್ರಮಣೆಯಾದುದರಿಂದ ತಮ್ಮನನ್ನೂ, ಸೋದರಳಿಯನನ್ನೂ ಕೊಲ್ಲಿಸಿದ. 1811ರಲ್ಲಿ ಸತ್ತ. ಅನಂತರ ಇವನ ಮಗ, ನಾಲ್ಕು ವರ್ಷ ವಯಸ್ಸಿನ 2ನೆಯ ಮಲ್ಹಾರಿರಾಯ, ಪಟ್ಟಕ್ಕೆ ಬಂದ. ಈತನ ಸಾಕುತಾಯಿ ತುಳಸೀಬಾಯಿಯೇ ರಕ್ಷಕಳಾಗಿ ನಿಂತಳು. ಈಕೆ ಸುಂದರಿಯೂ ಬುದ್ಧಿವಂತಳೂ ದೃಢಮನಸ್ಕಳೂ ಆಗಿದ್ದಳು. ಆದರೂ ರಾಜ್ಯಾಧಿಕಾರ ಅಮೀರ್‌ಖಾನ್ ಮತ್ತು ಗಫೂರ್‌ಖಾನ್ ಎಂಬ ಪಠಾಣರ ಕೈಯಲ್ಲಿತ್ತು. ಇದು ರಾಜ್ಯದ ಮರಾಠಾ ಸಿಪಾಯಿಗಳಿಗೆ ಸರಿಬೀಳದ್ದರಿಂದ ಪ್ರಾಣರಕ್ಷಣೆಗಾಗಿ ರಾಜಪುಟಾಣದ ಕೋಟಾರಾಜ್ಯಕ್ಕೆ ಓಡಿಹೋದಳು. ಗಫೂರ್‌ಖಾನ್ ಮತ್ತು ಅವನ ಅನುಯಾಯಿಗಳಿಂದ ಪರಿಸ್ಥಿತಿಯನ್ನೆದುರಿಸಲಾಗಲಿಲ್ಲ. ಎಲ್ಲೆಲ್ಲೂ ಅನಾಯಕತ್ವ ತಲೆದೋರಿತು (1817). ತುಳಸೀಬಾಯಿ ಇಂಗ್ಲಿಷರ ಪರವಾಗಿದ್ದಳು. ಗಫೂರ್‌ಖಾನ್ ಎರಡನೆಯ ಬಾಜೀರಾಯನ ಪಕ್ಷ ಸೇರಿ ಇಂಗ್ಲಿಷರ ಮೇಲೆ ಯುದ್ಧ ಘೋಷಿಸಿದರು, ಹೋಳ್ಕರನ ಸೈನ್ಯ ಮಹಿದ್‌ಪುರದ ಕದನದಲ್ಲಿ ಸೋತಿತು. ಇಂದೋರಿನಲ್ಲಿ ಇಂಗ್ಲಿಷರ ಸಾರ್ವಭೌಮತ್ವ ಸ್ಥಾಪನೆಯಾಗಿ ಅನಾಯಕತ್ವ ಕೊನೆಗೊಂಡಿತು. ಮಂಡೇಸರ್ ಒಪ್ಪಂದದ (1818) ಪ್ರಕಾರ ಹೋಳ್ಕರನ ಅರ್ಧ ರಾಜ್ಯ ಇಂಗ್ಲಿಷರ ವಶವಾಯಿತು. ಹೋಳ್ಕರನ ರಾಜ್ಯದಲ್ಲಿ ಅಂತರ್ಯುದ್ಧಗಳೂ ಹೆಚ್ಚಾಗಿ ಮಧ್ಯೆ ಮಧ್ಯೆ ಶಾಂತಿಸ್ಥಾಪನೆಗೆ ಇಂಗ್ಲಿಷರು ಪ್ರವೇಶಿಸಬೇಕಾಯಿತು. 1857ರಲ್ಲಿ ಹೋಳ್ಕರನ ಸೈನ್ಯ ಬ್ರಿಟಿಷ್ ರೆಸಿಡೆನ್ಸಿಯನ್ನು ಮುತ್ತಿತು. ಈ ಮುತ್ತಿಗೆಯನ್ನು ಇಂಗ್ಲಿಷರು ಅತಿ ಪ್ರಯಾಸದಿಂದ ಹತ್ತಿಕ್ಕಿದರು. 1899 ರಿಂದ ಹೋಳ್ಕರನ ರಾಜ್ಯದಲ್ಲಿ ವ್ಯವಸ್ಥಿತವಾದ ಸರ್ಕಾರ ಏರ್ಪಟ್ಟು ಜನರಿಗೆ ಶಾಂತಿ ಸಮಾಧಾನ ದೊರೆಯುವಂತಾಯಿತು. (ಎಚ್.ಜಿ.ಆರ್.)

**ಇಂದ್ರ:** ವೈದಿಕ ಆರ್ಯರ ದೇವತೆಗಳಲ್ಲೆಲ್ಲ ಪ್ರಪ್ರಥಮ ಸ್ಥಾನ ಪಡೆದವ, ಅವೆಸ್ತ ಭಾಷೆಯಲ್ಲೂ ಇಂದ್ರ ಶಬ್ದ ಕಂಡುಬರುತ್ತದೆ. ಆದರೆ ಅಲ್ಲಿ ವೇದದಲ್ಲಿರುವಂತೆ ಇಂದ್ರ ದೈವೀಶಕ್ತಿಯಲ್ಲ; ಅದೊಂದು ದುಷ್ಟಶಕ್ತಿ (ಡೆಮನ್). ವೇದದಲ್ಲಿ ಬರುವ ವೃತ್ರಹನ್ ಶಬ್ದ ಇಂದ್ರನಿಗೆ ಅಸಾಧಾರಣವಾದ ಗುಣವಾಚಕಗಳಲ್ಲೊಂದು. ಅದೇ ಅವೆಸ್ತ ಧರ್ಮದಲ್ಲಿ ವೆರೆಥ್ರಘ್ನ ಒಂದು ವಿಜಯಾಭಿಮಾನದೇವತೆ.

**ವೇದಗಳಲ್ಲಿ ಇಂದ್ರ:** ವೈದಿಕ ಆರ್ಯರ ಮೆಚ್ಚಿನ ರಾಷ್ಟ್ರೀಯ ದೇವತೆಯಾದ ಇಂದ್ರನಿಗೆ ಋಗ್ವೇದದ 1028 ಸೂಕ್ತಗಳಲ್ಲಿ ಸುಮಾರು ನಾಲ್ಕನೆಯ ಒಂದು ಪಾಲು ಸೂಕ್ತಗಳು ಮೀಸಲಾಗಿವೆ.

ಇತರ ಎಲ್ಲ ದೇವತೆಗಳಿಗಿಂತಲೂ ಹೆಚ್ಚಾದ ಮಾನವತ್ವಾರೋಪಣೆ ಇಂದ್ರನಿಗಿದೆ. ಇಂದ್ರನದು ದೊಡ್ಡ ಆಕಾರ. ಭೂಮಿಯ ಹತ್ತರಷ್ಟಕ್ಕಿಂತ ಹೆಚ್ಚು. ಮೂರು ಕೊಳ ಸೋಮರಸವನ್ನು ಒಂದೇ ಸಾರಿಗೆ ಹೀರಬಲ್ಲ ದೊಡ್ಡ ಹೊಟ್ಟೆ ಅವನದು. ಅವನ ಮೈ, ತಲೆಕೂದಲು, ಗಡ್ಡ, ಕುದುರೆಗಳು ಎಲ್ಲವೂ ಕಂದು (ಹರಿ) ಬಣ್ಣ. ಅವನದು ಸಿಡಿಲುಗೈ (ವಜ್ರಹಸ್ತ–ವಜ್ರಬಾಹು). ಆ ವಜ್ರಾಯುಧ ಕಬ್ಬಿಣ, ಚಿನ್ನ ಅಥವಾ ಕಗ್ಗಲ್ಲಿನಿಂದ ತ್ವಷ್ಟ ಮಾಡಿಕೊಟ್ಟದ್ದು. ನಿಶ್ಚಿತವಾದ ಅನೇಕ ಅಲಗು (ಧಾರೆ) ಗಳುಳ್ಳ ಅದು ಅವನ ಬಣ್ಣಕ್ಕೇ ಇದೆ. ಕೆಲವು ವೇಳೆ ಆತ ಅಂಕುಶಪಾಣಿಯೂ ಹೌದು. ಅವನ ರಥ ಮತ್ತು ಕುದುರೆಗಳನ್ನು ದೇವತೆಗಳ ಬಡಗಿಗಳಾದ ಋಭುಗಳು ಮಾಡಿಕೊಟ್ಟರು. ಅವನ ಪ್ರಿಯವಾದ ಪಾನೀಯ ಸೋಮರಸ. ಇವನಿಗೆ ಸೋಮಪಾ–ಸೋಮವನ್ನು ಪಾನ ಮಾಡುವವನು–ಎಂಬ ಹೆಸರೂ ಇದೆ. ವೃತ್ರನನ್ನು ಕೊಲ್ಲಲು ಹೊರಡಬೇಕಾದರೆ ಮೊದಲು ಮೂರು ಕೆರೆಯಷ್ಟು ಸೋಮವನ್ನು ಕುಡಿದ. ಋಗ್ವೇದದ ಒಂದು ಪೂರ್ಣ ಸೂಕ್ತವೇ ಸೋಮವನ್ನು ಕುಡಿದು ಅಮಲಿನಲ್ಲಿರುವ ಇಂದ್ರನ ವಿಜೃಂಭಣೆಯ ವರ್ಣನೆಯಾಗಿದೆ.

ಇಂದ್ರನಿಗೆ ದ್ಯೌಃ ತಂದೆ, ಕೆಲವು ಕಡೆ ತ್ವಷ್ಟವೆಂದೂ ಭಾಸವಾಗುತ್ತದೆ. ಅಗ್ನಿ ಮತ್ತು ಪೂಷನ್ ಸಹೋದರರು, ಹೆಂಡತಿ ಇಂದ್ರಾಣಿ. ಇಂದ್ರ ಪರಾಕ್ರಮಕ್ಕೆ–ಶಚಿಗೆ ಪತಿ, ಶಚೀಪತಿ, ಸಚೀವಾನ್, ಮರುತ್ತುಗಳು ಮುಖ್ಯ ಬೆಂಬಲಿಗರು. ಆದ್ದರಿಂದ ಮರುತ್ವಾನ್, ವರುಣ, ಬೃಹಸ್ಪತಿ, ಮಿತ್ರ, ವಾಯು, ಸೋಮ, ವಿಷ್ಣು ಇವರೂ ಇಂದ್ರನ ಸಂಪರ್ಕವಿಟ್ಟುಕೊಂಡಿದ್ದಾರೆ.

ಭೂಮಾತೆ ಮತ್ತು ಪರಾಕ್ರಮಗಳಿಗೆ ಇಂದ್ರನ ಹೆಸರು ಹೇಳಬೇಕು. ದೇವಮಾನವಾದಿಗಳೆಲ್ಲರೂ ಇವುಗಳ ಮಿತಿ ಮುಟ್ಟರು. ಶಕ್ರ, ಶತಕ್ರತು (ಮೂರು ವಿಕ್ರಮಗಳು) ಮತ್ತು ಮೇಲೆ ಹೇಳಿದ ಶಚೀಪತಿ ಇವರ ಸ್ವಂತ ವಿಶೇಷಣಗಳು. ವೇದಗಳಲ್ಲಿ ಇಂದ್ರನ ಅನೇಕ ಸಾಹಸಕಥೆಗಳು ವರ್ಣಿತವಾಗಿವೆ.

ಇಂದ್ರ ಆಕಾಶ ದೇವತೆಗಳ ಅಗ್ರಣಿ. ತಡೆಹಿಡಿಯಲ್ಪಟ್ಟಿದ್ದ ನೀರನ್ನು ಬಿಡುಗಡೆ ಮಾಡಿ ಜನರಿಗೆ ಸಹಾಯ ಮಾಡಿದವ. ಇದರಿಂದಲೇ ಮಳೆರಾಯನೆಂಬ ಪ್ರಶಸ್ತಿ. ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು, ಸೂರ್ಯನನ್ನು, ಉಷಃಪ್ರಭಾತವನ್ನು ಕೊಟ್ಟವನಾತ. ನೀರನ್ನು ತಡೆಹಿಡಿದಿದ್ದವರು ವೃತ್ರ ಅಹಿ, ಶಂಬರವಲ. ಇಂದ್ರವೃತ್ರರ ಯುದ್ಧ ವರ್ಣನೆ ಅದ್ಭುತವಾದುದು. ಆ ಕಾಲದಲ್ಲಿ ಭೂಮ್ಯಂತರಿಕ್ಷಗಳು ತಲ್ಲಣಿಸಿ ಕಂಪಿಸಿದವು. ದೇವತೆಗಳು ಕಂಗೆಟ್ಟು ದಿಕ್ಪಾಪಾಲಾಗಿ ಓಡಿದರು; ಇಂದ್ರನ ತಾಯಿಯೂ ಬೆದರಿದಳು. ಅಜೇಯನೆಂದುಕೊಂಡಿದ್ದ ವೃತ್ರ ಇಂದ್ರನ ವಜ್ರಶಕ್ತಿಯ ಮುಂದೆ ತತ್ತರಿಸಿ ಕುಸಿದು ಕುಕ್ಕರಿಸಿದ. ಅವರ ಕೋಟೆ ಒಡೆದು ಹೋಳು ಹೋಳಾಯಿತು (ಪೂರ್ಭಿದ್). ನೀರು ಉಕ್ಕಿ ಹರಿದು ಹೊರನುಗ್ಗಿತು. ಸಪ್ತಸಿಂಧುಗಳೂ ಬಿಡುಗಡೆಯಾದುವು. ಅರ್ಥ ಇಷ್ಟೇ: ಮೋಡಗಳೆಂಬ ಪರ್ವತಗಳಲ್ಲಿ ಅಡಗಿಕೊಂಡಿರುವ ನೀರನ್ನು ಬಿಡಿಸಿ ಜನರ ಸುಖಕ್ಕೋಸ್ಕರ ಮಳೆರಾಯ ಮಳೆಗರೆದ. ಇದೇ ಚಿತ್ರ ಇಂದ್ರ–ವಲ ಯುದ್ಧಗಳು ನಿರಂತರವಾದುವು.

ಇಂದ್ರನ ವೈಶ್ವೀವಿಕ್ರಮಗಳು ಹಲವಾರು. ಕತ್ತಲೆಯನ್ನು ಹರಿದೋಗೆದು ಸೂರ್ಯನನ್ನು ಕಾಣುವಂತೆ ನಿಲ್ಲಿಸಿದುದು, ಉಷಃಪ್ರಭಾತವನ್ನುಂಟುಮಾಡಿದುದು, ಅಲುಗಾಡುತ್ತಿದ್ದ ಬೆಟ್ಟಗಳನ್ನು, ಕಂಪಿಸುತ್ತಿದ್ದ ಪೃಥ್ವಿಯನ್ನು ಸುಸ್ಥಿರವನ್ನಾಗಿ ಮಾಡಿದುದು; ಭೂಮ್ಯಂತರಿಕ್ಷಗಳನ್ನು ಸ್ವಸ್ಥಾನದಲ್ಲಿ ನಿಲ್ಲಿಸಿದುದು; ಅಸತ್ತನ್ನು ಸತ್ ಆಗಿ ಪರಿವರ್ತಿಸಿದುದು; ಇನ್ನೂ ಹಲವಾರು ವಿಕ್ರಮಗಳು ಇವನಿಂದ ಸಾಧ್ಯ. ಬ್ರಹ್ಮನನ್ನು ಕಾಣುವ ಶಕ್ತಿ ಇಂದ್ರನಿಗೆ ಮಾತ್ರ. ಸೋಮವನ್ನು ಗೆದ್ದುಕೊಂಡವ ಇಂದ್ರ. ಗರುಡ ಇವನಿಗಾಗಿ ಸ್ವರ್ಗದಿಂದ ಅಮೃತ ತಂದದ್ದು.

ಆರ್ಯರಿಗೆ ಇಂದ್ರ ಬಹಳ ಉಪಕಾರಿ. ಆತ ಮಘವನ್–ಸಂಪದ್ಭರಿತ. ಅವರಿಗೆ ಗೋವುಗಳು, ಕುದುರೆಗಳು ಮತ್ತು ವೀರಪುತ್ರರನ್ನೀಯುತ್ತಾನೆ. ಯುದ್ಧದಲ್ಲಿ ಸಹಾಯ ಮಾಡುತ್ತಾನೆ. ಸುದಾಸನೆಂಬ ರಾಜನಿಗೆ ಆತನ ಶತ್ರುನಿಗ್ರಹಕ್ಕೆ, ದಸ್ಯುಗಳ ವಧೆಗೆ ಸಹಾಯ ಮಾಡಿದ. ಸಹಸ್ರ ಸಂಖ್ಯೆಯ ಐವತ್ತು ಸಹಸ್ರ–ದಸ್ಯುಗಳನ್ನು ಆರ್ಯರ ಗುಲಾಮರನ್ನಾಗಿ ಮಾಡಿದ.

ಶಾರೀರಿಕ ಪರಾಕ್ರಮದಲ್ಲಿ, ಭೌತಿಕ ಪ್ರಪಂಚದ ಪ್ರಭುತ್ವದಲ್ಲಿ ಇಂದ್ರನ ಕೈ ಮೇಲಾದರೂ ನೈತಿಕವಾಗಿ ಇಂದ್ರ ತಲೆ ತಗ್ಗಿಸಬೇಕು. ಸಿಕ್ಕಾಪಟ್ಟೆ ಕುಡಿತ, ಅಳತೆ ಮೀರಿದ ಊಟ, ಸ್ವಂತ ಪಿತೃವಿನ–ತ್ವಷ್ಟೃವಿನ–ಹತ್ಯೆ ಮುಂತಾದ ಪತಿತ ಗುಣಗಳನ್ನುಳ್ಳ ಈತ ಸರ್ವರಿಗೂ ಶಾಂತಿ, ನ್ಯಾಯ ನೀತಿಮಾರ್ಗದ ದರ್ಶನಗಳ ವಿತರಣೆ ಮಾಡುವ ಉದಾತ್ತ ಗುಣದ ವರುಣನಿಗೆ ಬಹುದೂರ.

**ಇತಿಹಾಸ, ಪುರಾಣಗಳಲ್ಲಿ ಇಂದ್ರ :** ಇಂದ್ರ ಅಮರೇಂದ್ರ. ಅಮರಾವತಿ ಅವನ ಪಟ್ಟಣ. ಅಲ್ಲೊಂದು ಇಂದ್ರಸಭೆ. ಅಷ್ಟದಿಕ್ಪಾಲಕರು, ಸಪ್ತಋಷಿಗಳು, ಆಸ್ಥಾನಿಕರು, ಊರ್ವಶಿ, ಮೇನಕೆ, ರಂಭೆ, ತಿಲೋತ್ತಮೆ ಇವರೇ ಮೊದಲಾದ, ಹೇಳಿದಂತೆ ಕುಣಿಯುವ ಮತ್ತು ಅವನ ಕಟಾಕ್ಷಕ್ಕೆ ಸದಾ ಕಾತರರಾಗಿರುವ ರೂಪಸಿಯರಾದ ಅಪ್ಸರೆಯರು ಇವನ ಪರಿಸರದವರು. ಆರಾಮಕ್ಕೆ, ಆಹ್ಲಾದಕ್ಕೆ ನಂದನವನ, ಐರಾವತವೆಂಬ ಬಿಳಿಯಾನೆ, ಉಚ್ಚೈಶ್ರವಸ್ಸೆಂಬ ಬಿಳಿಯ ಕುದುರೆ, ಕೇಳಿದ್ದನ್ನು ಕೊಡುವ ಕಲ್ಪವೃಕ್ಷ, ಕಾಮಧೇನುಗಳು ಸಮುದ್ರಮಥನಾನಂತರ ಇಂದ್ರನಿಗೆ ದಕ್ಕಿದವು. ಕಷ್ಟಪಟ್ಟು ಅಸುರರನ್ನು ವಂಚಿಸಿ ಸುರರು ಅಮೃತಪಾನ ಮಾಡಿ ಅಮರರಾದರು.

ಶಚೀದೇವಿ ಇಂದ್ರನ ಪಟ್ಟದ ರಾಣಿ, ವೈಜಯಂತ ಮಗ, ತಾಯಿ ಅದಿತಿ, ತಂದೆ ಕಶ್ಯಪ, ಅವತಾರಿ ವಿಷ್ಣು (ಉಪೇಂದ್ರ) ಇಂದ್ರನ ತಮ್ಮ. ಬೃಹಸ್ಪತಿ ಗುರು. ಮಾತಲಿ ಸಾರಥಿ, ಅಂತೆಯೇ ಮಿತ್ರ. ವೇದಗಳ ಕಾಲದ ಮೂವತ್ತು ಮೂರು ದೇವತೆಗಳು ಇಲ್ಲಿ ಮೂವತ್ತು ಮೂರು ಕೋಟಿಗೆ ಏರಿದ್ದಾರೆ. ವೇದದಲ್ಲಿ ಅಸುರ ಎಂದರೆ ಸಚ್ಛಕ್ತಿ. ಈಗ ಅದು ದುಷ್ಟಶಕ್ತಿ ಸೂಚಕ. ಅಸುರರದೂ ಒಂದು ಸೈನ್ಯವಿದೆ. ಶುಕ್ರಾಚಾರ್ಯ ಅವರ ಗುರು. ಅವರೆಲ್ಲ ಇಂದ್ರನ ಶತ್ರುಗಳು. ಅವರು ಇಂದ್ರನ ಮಲತಾಯಿ ದಿತಿಯ ಮಕ್ಕಳು, ದೈತ್ಯರು. ಸುರಾಸುರ ಯುದ್ಧ ಪ್ರತಿ ದಿನವೂ ಇಂದ್ರನ ತಲೆ ಕೊರೆಯುವ ಕೀಟ.

ಕಠೋರ ತಪಸ್ಸು ಮಾಡುವವರು, ಹೆಚ್ಚು ಎಂದರೆ ನೂರು–ಯಜ್ಞಗಳನ್ನು ಮಾಡುವವರು ಇಂದ್ರ ಪಟ್ಟಕ್ಕೆ ಭಯೋತ್ಪಾದಕರು, ನಹುಷ ಶತಕ್ರತುವಾಗಿ–ಇಂದ್ರನಾಗಿ–ಹಳೆಯ ಇಂದ್ರನಿಗೆ ಅಧಿಕಾರ ಹೋಯಿತು. ಕೊನೆಗೆ ಅಗಸ್ತ್ಯರ ಶಾಪದಿಂದ ನಹುಷ ಅಜಗರವಾಗಿ ಭೂಮಿಗೆ ಬಿದ್ದ. ನರಕಾಸುರ ಇಂದ್ರ ಪಟ್ಟಕ್ಕೆಳಸಿದಾಗ ಅವನನ್ನು ಹತ್ತಿಕ್ಕಲು ಇಂದ್ರನಿಂದಾಗದೆ ವಿಷ್ಣು ಆ ಕೆಲಸ ಮಾಡಿದ. ವಿಶ್ವಾಮಿತ್ರ, ಯವಕ್ರೀತ, ದಧೀಚಿ, ಶರದ್ವತ ಮುಂತಾದ ಮುನಿಗಳ ತಪೋಭಂಗ ಮಾಡಲು ಮೇನಕೆ, ಜನಪದಾ, ಅಲಂಬುಷಾ ಇತ್ಯಾದಿ ಸುರಕನ್ಯೆಯರನ್ನು ಕಳುಹಿಸುತ್ತಾನೆ, ಇಂದ್ರ.

ಪೌರಾಣಿಕ ಇಂದ್ರ ವೈದಿಕ ಇಂದ್ರನಂತೆ ಸರ್ವಶಕ್ತನಲ್ಲವೆಂಬುದು ಸ್ಪಷ್ಟ. ನರಕಾಸುರ, ತಾರಕಾಸುರರನ್ನು ಕೊಲ್ಲಲು ಆತ ವಿಷ್ಣುವಿನ, ಶಿವನ ಮೊರೆ ಹೋಗಬೇಕಾಯಿತು. ದಧೀಚಿ ಋಷಿಯ ಬೆನ್ನುಮೂಳೆಯಿಂದ ಹೊಸ ವಜ್ರಾಯುಧವನ್ನು ಮಾಡಿಸಿ ಕೊಳ್ಳಬೇಕಾಯಿತು. ತ್ರಿಪುರದಹನ ಇವನಿಂದ ಆಗದೆ ರುದ್ರ ಬರಬೇಕಾಯಿತು. ಪ್ರಹ್ಲಾದನೆಂಬೊಬ್ಬ ಇಂದ್ರತ್ವವನ್ನೇ ಕಿತ್ತುಕೊಂಡ. ಮಾಂಧಾತ್ರವೆಂಬ ಭೂಲೋಕದ ರಾಜ ಇಂದ್ರನ ತರ್ಜನಿ ಬೆರಳನ್ನೇ ಕಚ್ಚಿಬಿಟ್ಟಿದ್ದೂ ಅಲ್ಲದೆ ಅವನ ಅರ್ಧಾಸನವನ್ನೂ ಗಿಟ್ಟಿಸಿಬಿಡುತ್ತಾನೆ. ಉಪರಿಚರನೆಂಬ ವಸುವಿಗೆ ಆಸನಾರ್ಧ, ಶಯನಾರ್ಧ ಕೊಡಬೇಕಾಗುತ್ತದೆ. ಇತರ ದೇವತೆಗಳಂತೆ ಅಷ್ಟದಿಕ್ಪಾಲಕರಲ್ಲಿ ಇಂದ್ರನೊಬ್ಬ.

ಋಷಿಗಳ ತಪೋಶಕ್ತಿಯ ಎದುರು ಇಂದ್ರಶಕ್ತಿ ಕುಬ್ಜವಾಗಿಬಿಡುತ್ತದೆ. ಶರ್ಯಾತಿಯ ಯಜ್ಞಕ್ಕೆ ಅಶ್ವಿನೀ ದೇವತೆಗಳನ್ನು ಕಳುಹಿಸಲೇಬೇಕೆಂದು ಚ್ಯವನ ಮಹರ್ಷಿ ಬಲಾತ್ಕರಿಸುತ್ತಾನೆ. ವಾಲಖಿಲ್ಯರು ಕುಪಿತರಾಗಿ ಇಂದ್ರನನ್ನು ಶಪಿಸಿ ಮತ್ತೊಬ್ಬ ಇಂದ್ರನನ್ನು–ಗರುಡನನ್ನು–ಸೃಷ್ಟಿಸಲು, ಕಶ್ಯಪರು ಮಧ್ಯ ಪ್ರವೇಶಿಸಿ ಗರುಡನನ್ನು ಪಕ್ಷೀಂದ್ರನನ್ನಾಗಿ ಮಾಡಿ ಹರಸುತ್ತಾರೆ. ಜಾಮದಗ್ನ್ಯ ರಾಮನಿಗೆ ಇಂದ್ರ ತನ್ನ ವೈಜಯಂತವೆಂಬ ಬಿಲ್ಲನ್ನು ಸೋಲಬೇಕಾಗುತ್ತದೆ. ಕೌಶಿಕನ ಶಾಪದಿಂದ ಇಂದ್ರನ ಶೇಪವೇ (ಬೀಜಾಂಡ, ವೃಷಣ) ಹೋಗಿಬಿಡುತ್ತದೆ. ಗೌತಮರ ಶಾಪದಿಂದ ಹಸಿರು ಗಡ್ಡದವ (ಹರಿಶ್ಮಶ್ರು) ಆಗಿಬಿಡುತ್ತಾನೆ. ಅಷ್ಟಲ್ಲದೆ ಮೈಯೆಲ್ಲ ಕಣ್ಣಾಗಿಬಿಡುತ್ತದೆ (ಸಹಸ್ರಾಕ್ಷ). ಅರ್ಥಶಾಸ್ತ್ರದಲ್ಲಿ ಕೌಟಿಲ್ಯ ಸಹಸ್ರಾಕ್ಷ ಎಂಬುದಕ್ಕೆ ಸಾವಿರ ಕಣ್ಣಾಗಿ ಇಂದ್ರ ಆಡಳಿತ ನಡೆಸುತ್ತಾನೆಂಬ ಅರ್ಥ ಕೊಡುತ್ತಾನೆ.

ಇಂದ್ರನ ಭೂಲೋಕಸಂಬಂಧ ಬಹಳ ನಿಕಟ. ಅರ್ಜುನ, ವಾಲಿಯಂಥವರು ಇಲ್ಲಿ ಅವನ ವರಪುತ್ರರು. ದಮಯಂತೀ ಸ್ವಯಂವರದಲ್ಲಿ ಇಂದ್ರನಿಗೂ ಚಾಪಲ್ಯ. ಅರ್ಜುನನ ರಕ್ಷಣೆಗಾಗಿ ಇಂದ್ರ ಕರ್ಣನನ್ನು ವಂಚಿಸುತ್ತಾನೆ. ಅರ್ಜುನ ಅಮರಾವತಿಗೆ ಬಂದಾಗ ಅವನ ಷೋಡಶೋಪಚಾರಕ್ಕೆ ತನ್ನ ಊರ್ವಶಿಯನ್ನೇ ಕಳುಹಿಸುತ್ತಾನೆ. ಅವನನ್ನು ಕಾಪಾಡಲು ಕರ್ಣನಿಗೆ ತಾನಿತ್ತಿದ್ದ ಐಂದ್ರಾಸ್ತ್ರವನ್ನು ಘಟೋತ್ಕಚನ ಮೇಲೆ ಪ್ರಯೋಗಿಸುವಂತೆ ಮಾಡುತ್ತಾನೆ.

ವೈದಿಕ ಇಂದ್ರನ ಅನೈತಿಕ ಭಾವನೆಗಳು ಇಲ್ಲಿ ಮತ್ತಷ್ಟು ಡೊಳ್ಳು ಬೆಳೆಸಿಕೊಂಡಿವೆ. ನಮುಚಿ ಎಂಬುವನನ್ನು ಈತ ನಂಬಿಸಿ ಕೊಲ್ಲುತ್ತಾನೆ; ಪ್ರಹ್ಲಾದನಲ್ಲಿಗೆ ಬ್ರಾಹ್ಮಣ ವೇಷದಿಂದ ಹೋಗಿ ಅವನಲ್ಲಿ ಜ್ಞಾನಸಂಪಾದನೆ ಮಾಡಿ ಅವನನ್ನೇ ವಂಚಿಸುತ್ತಾನೆ; ಕರ್ಣನನ್ನಂತೂ ಅವನ ಶಸ್ತ್ರವಿದ್ಯಾಭ್ಯಾಸದಿಂದ ಹಿಡಿದು ಸಾಯುವವರೆಗೂ ವಂಚಿಸುತ್ತಾನೆ; ಗೌತಮರ ಪತ್ನಿ ಅಹಲ್ಯೆಯ ವಿಚಾರದಲ್ಲಿ ಜಾರನಾಗುತ್ತಾನೆ; ಚಂಡಾಲ ವೇಷದಲ್ಲಿ ಹೋಗಿ ಉತ್ತಂಕನಿಗೆ ಅಮೃತವನ್ನು ಮೂತ್ರ ರೂಪದಲ್ಲಿ ಕೊಡುತ್ತಾನೆ. ವಿಶ್ವರೂಪ ತ್ರಿಶಿರಸನನ್ನು ಕೊಂದು ಬ್ರಹ್ಮಹತ್ಯೆ ಬಂದು ತಲೆಮರೆಸಿಕೊಂಡು ತಿರುಗುತ್ತಾನೆ.

ಇಂದ್ರ ಚಾರಿತ್ರ್ಯದಲ್ಲಿ ಇಂಥ ಇಳಿಮುಖ ಕಂಡುಬರುತ್ತದೆ. ಸೇಂದ್ರಾಯ ತಕ್ಷಕಾಯ ಸ್ವಾಹಾ ಎಂದು ಯಜ್ಞದಲ್ಲಿ ಸಾಮಾನ್ಯ ಮಾನವಪುರೋಹಿತನೊಬ್ಬ ಘೋಷಿಸಿದಾಗ ತಕ್ಷಕನನ್ನು ಇಂದ್ರ ರಕ್ಷಿಸುವುದಿರಲಿ, ಇಂದ್ರನನ್ನೇ ರಕ್ಷಿಸಬೇಕಾಗುತ್ತದೆ. ದೇವತೆಯ ಕಲ್ಪನೆ ಹುಟ್ಟಿ ಬೆಳೆದು ಕಾಲಕಾಲಕ್ಕೆ ಬದಲಾವಣೆಗೊಂಡು ಯಾವ ಯಾವ ರೂಪ ಪಡೆಯುತ್ತದೆಂಬುದಕ್ಕೆ ಇಂದ್ರನ ಚರಿತ್ರೆ ಒಳ್ಳೆಯ ನಿದರ್ಶನವಾಗಿದೆ. (ಸಿ.ಜಿ.ಪಿ.)

**ಇಂದ್ರಕೀಲ:** ಮಹಾಭಾರತದಲ್ಲಿ ಹೇಳಿರುವಂತೆ ಹಿಮವತ್ಪ್ರಾಂತ್ಯದ ಮಧ್ಯದಲ್ಲಿರುವ ಒಂದು ಪರ್ವತ. ವ್ಯಾಸಮಹರ್ಷಿಯ ಉಪದೇಶದ ಪ್ರಕಾರ ಇಲ್ಲಿ ತಪಸ್ಸು ಮಾಡಿದ ಅರ್ಜುನನಿಗೆ ಇಂದ್ರ ಪ್ರತ್ಯಕ್ಷನಾಗುವಂತೆ ಸಹಾಯ ಮಾಡಿದ ಪವಿತ್ರ ಸ್ಥಳ. ಅಲ್ಲದೆ ಅವನ ಸೂಚನೆಯಂತೆ ಶಿವನನ್ನೂ ಮೆಚ್ಚಿಸಿಕೊಂಡ ಅರ್ಜುನನಿಗೆ ಪಾಶುಪತವೆಂಬ ಅಸ್ತ್ರವನ್ನೂ ಈ ಕ್ಷೇತ್ರ ದೊರಕಿಸಿಕೊಡುತ್ತದೆ. ಕ್ರೋಧ, ಹರ್ಷಗಳಿಂದ ದೂರರಾಗಿ ಶಾಂತಸ್ವಭಾವವುಳ್ಳ ತಪಸ್ವಿಗಳ ವಾಸಕ್ಕೆ ಉಚಿತವಾಗಿರುವ ಪ್ರದೇಶವೆಂದು ಪ್ರಸಿದ್ಧವಾಗಿದೆ. (ಬಿ.ಕೆ.ಎಸ್.)

**ಇಂದ್ರಗಿರಿ:** ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದಲ್ಲಿ ಎದುರು ಬದುರಾಗಿರುವ ಎರಡು ಬೆಟ್ಟಗಳಲ್ಲಿ ಒಂದು. ಇತಿಹಾಸ ಹಾಗೂ ಪುರಾಣ ಪ್ರಸಿದ್ಧವಾದ ಗೊಮ್ಮಟೇಶ್ವರನ ವಿಗ್ರಹ ಇರುವುದು ಈ ಬೆಟ್ಟದ ಮೇಲೆಯೇ. ಇನ್ನೊಂದು ಬೆಟ್ಟ ಚಂದ್ರಗಿರಿ (**ನೋಡಿ– ಚಂದ್ರಗಿರಿ–1**).

ಇಂದ್ರಗಿರಿಯ ಶಿಖರ ಸಮುದ್ರ ಮಟ್ಟದಿಂದ 991ಮೀ ಎತ್ತರದಲ್ಲೂ ಊರಿನ ಮಟ್ಟದಿಂದ 122ಮೀ ಎತ್ತರದಲ್ಲೂ ಇದೆ. ಇಂದ್ರಗಿರಿಯಲ್ಲಿ ಚೌವಿಸ ತೀರ್ಥಂಕರ, ಚೆನ್ನಣ್ಣ, ಬದೆಗಲ್ಲು, ತ್ರಿಕೂಟ ಮತ್ತು ಸಿದ್ಧರ ಬಸದಿಗಳು ಇವೆ. ಉತ್ತರ ದಿಕ್ಕಿಗೆ ತಿರುಗಿ ನಿಂತಿರುವ ಗೊಮ್ಮಟೇಶ್ವರ ವಿಗ್ರಹ ಈ ಬೆಟ್ಟಕ್ಕೆ ಕಳಶಪ್ರಾಯವಾಗಿದೆ (**ನೋಡಿ– ಗೊಮ್ಮಟೇಶ್ವರ: ಶ್ರವಣಬೆಳಗೊಳ**). (ಬಿ.ಎಂ.)

**ಇಂದ್ರಜಾಲ: ನೋಡಿ–ಜಾದೂ**

**ಇಂದ್ರಜಿತು:** ರಾವಣನ ಮಗ. ರಾವಣವೈರಿಯಾದ ಇಂದ್ರನನ್ನು ಜಯಿಸಿದುದರಿಂದ ಈ ಹೆಸರು. ಜನಿಸಿದ ತಕ್ಷಣ ಮೇಘದಂತೆ ನಾದ ಮಾಡಿದುದರಿಂದ ಮೇಘನಾದ ಎಂಬ ಹೆಸರನ್ನಿಟ್ಟಿದ್ದರು. ಹನುಮಂತ ಸೀತೆಯ ಅನ್ವೇಷಣೆಗಾಗಿ ಲಂಕೆಗೆ ಹೋದಾಗ ಅವನನ್ನು ಬಂಧಿಸಿದ. ರಾಮಾಯಣ ಯುದ್ಧದಲ್ಲಿ ಅಂಗದನನ್ನು ಪರಾಭವಗೊಳಿಸಿದ. ಇವನ ನಾಗಪಾಶದಿಂದ ರಾಮಲಕ್ಷ್ಮಣರು ಮೂರ್ಛಿತರಾದರು. ನಿಕುಂಭಿಳಾ ಯಾಗ ಮಾಡಿ

ಮಾಯಾಸೀತೆಯನ್ನು ಸೃಷ್ಟಿಸಿ, ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಯುದ್ಧಭೂಮಿಗೆ ಕರೆತಂದ. ಸುಗ್ರೀವಾದಿ ವಾನರರಿಗೆ ಇದರಿಂದ ದಂಗು ಬಡಿಯಿತು. ಆದರೆ ಇವನ ಮಾಯಾಜಾಲವನ್ನು ಅರಿತಿದ್ದ ವಿಭೀಷಣ ಅದನ್ನು ರಹಸ್ಯವಾಗಿ ರಾಮನಿಗೆ ತಿಳಿಸಿದ. ಹನ್ನೆರಡು ವರ್ಷಗಳ ಕಾಲ ಬ್ರಹ್ಮಚರ್ಯ ಪಾಲಿಸಿದವನಿಂದಲೇ ತನಗೆ ಸಾವು ಬರಬೇಕೆಂದು ಇಂದ್ರಜಿತು ವರ ಪಡೆದಿದ್ದ. ಅದರಂತೆಯೇ ಲಕ್ಷ್ಮಣನಿಂದ ಹತನಾದ. ಬಂಗಾಳದ ಪ್ರಸಿದ್ಧ ಕವಿ ಮೈಕೇಲ್ ಮಧುಸೂದನ ದತ್ತ (1824–67) ಇಂದ್ರಜಿತುವನ್ನು ಕುರಿತಂತೆ ಮೇಘನಾದ ವಧ ಎಂಬ ಮಹಾಕಾವ್ಯವನ್ನು ಬರೆದಿದ್ದಾನೆ. ಕುವೆಂಪು ಅವರ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಇಂದ್ರಜಿತುವಿನ ಪಾತ್ರವನ್ನು ವಿಶಿಷ್ಟ ರೀತಿಯಲ್ಲಿ ಚಿತ್ರಿಸಲಾಗಿದೆ. *

**ಇಂದ್ರಪ್ರಸ್ಥ:** ಮಹಾಭಾರತದಲ್ಲಿ ಕಂಡುಬರುವಂತೆ ಕೌರವರ ರಾಜಧಾನಿಯಾದ ಹಸ್ತಿನಾಪುರದ ಸಮೀಪದಲ್ಲಿರುವ ಒಂದು ಪಟ್ಟಣ. ಯಮುನಾ ನದಿಯ ತೀರಭಾಗದಲ್ಲಿದೆ. ದ್ರೌಪದೀಸ್ವಯಂವರಾನಂತರ ಧೃತರಾಷ್ಟ್ರ ಪಾಂಡವರನ್ನು ಬರಮಾಡಿಕೊಂಡು ಅವರಿಗೋಸ್ಕರ ರಚಿಸಿಕೊಟ್ಟ ವಾಸಸ್ಥಳ. ವಿಶ್ವಕರ್ಮನಿಂದ ನಿರ್ಮಿತವಾಗಿ ಇಂದ್ರನ ಅಪೇಕ್ಷೆಯಂತೆ ಇಂದ್ರಪ್ರಸ್ಥ ವೆಂಬ ಹೆಸರನ್ನು ಪಡೆಯಿತು. ಶ್ರೀಕೃಷ್ಣನ ಅಪ್ಪಣೆಯ ಮೇರೆಗೆ ಪ್ರಾಕಾರಗಳಿಂದಲೂ ಸೌಧಗಳಿಂದಲೂ ಎಲ್ಲ ಸಂಪತ್ತಿನಿಂದಲೂ ಕೂಡಿ ಮಹೇಂದ್ರಪುರಕ್ಕೆ ಸಮಾನವಾಗಿರುವಂತೆ ವಿಶ್ವಕರ್ಮನಿಂದ ಸಿದ್ಧಗೊಂಡಿತು. ಮಹಾಪ್ರಸ್ಥಾನ ಸಮಯದಲ್ಲಿ ಪಾಂಡವರು ಶ್ರೀಕೃಷ್ಣನ ಮೊಮ್ಮಗನಾದ ವಜ್ರನಿಗೆ ಪಟ್ಟಗಟ್ಟಿದ ಸ್ಥಳ. ಈಗಿನ ಹಳೆಯ ದೆಹಲಿಯೇ ಇದೆಂದು ಪ್ರತೀತಿ. (ಬಿ.ಕೆ.ಎಸ್.)

**ಇಂದ್ರವರ್ಮನ್:** ಭಾರತದ ಹಾಗೂ ಅದರ ಪ್ರಭಾವಕ್ಕೆ ಒಳಗಾದ ದೇಶಗಳ ಚರಿತ್ರೆಯಲ್ಲಿ ಈ ಹೆಸರಿನ ರಾಜರು ಅನೇಕರಿದ್ದಾರೆ. ಅವರಲ್ಲಿ ಮುಖ್ಯರಾದವರನ್ನು ಕುರಿತ ವಿವರಗಳನ್ನು ಮುಂದೆ ಕೊಟ್ಟಿದೆ.

**ಇಂದ್ರವರ್ಮನ್ (ವಿಷ್ಣುಕುಂಡಿನ್ ಮನೆತನ):** 5–6ನೆಯ ಶತಮಾನಗಳಲ್ಲಿ ಆಂಧ್ರದೇಶದ ಕೆಲವು ಪ್ರದೇಶಗಳನ್ನಾಳುತ್ತಿದ್ದ ವಿಷ್ಣುಕುಂಡಿನ್ ಸಂತತಿಯ ಅರಸರಲ್ಲೊಬ್ಬ (480–515). ಒಂದನೆಯ ವಿಕ್ರಮೇಂದ್ರವರ್ಮನ ಅನಂತರ ಬಂದವ. ಈತನಿಗೆ ಇಂದ್ರಭಟ್ಟಾರಕ ಎಂಬ ಬಿರುದಿದ್ದಿತು. ಇಂದ್ರವರ್ಮನ್ ಪರಾಕ್ರಮಿ ಹಾಗೂ ವಿದ್ಯಾಪಕ್ಷಪಾತಿ. ಹೆಚ್ಚು ಹಣ ವ್ಯಯಮಾಡಿ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿದ. ಇಂದ್ರವರ್ಮನ ದಾಯಾದಿಯಾದ ಇಮ್ಮಡಿ ಮಾಧವವರ್ಮನ್ ತನಗೂ ರಾಜ್ಯದ ಹಕ್ಕಿದೆಯೆಂದು ಇಂದ್ರವರ್ಮನನ್ನು ಎದುರಿಸಿದ. ಕೊನೆಗೆ ಅವರಿಬ್ಬರಿಗೂ ರಾಜಿಯಾಯಿತು. ಇಂದ್ರವರ್ಮನ್ ಅವನಿಗೆ ಸ್ವಲ್ಪ ನೆಲ ಕೊಟ್ಟ. ಮಾಧವವರ್ಮನ್ ಮುಂದೆ ಇಂದ್ರವರ್ಮನ ಅಧೀನದಲ್ಲಿ ರಾಜ್ಯವಾಳುತ್ತಿದ್ದ. ಇಂದ್ರವರ್ಮನ ಆಳ್ವಿಕೆಯ ಕೊನೆಗಾಲದಲ್ಲಿ ಅವನಿಗೂ ಪೂರ್ವಗಂಗ ಮನೆತನದ ಒಂದನೆಯ ಇಂದ್ರವರ್ಮನಿಗೂ ಯುದ್ಧ ನಡೆದು ವಿಷ್ಣುಕುಂಡಿನ್ ಇಂದ್ರವರ್ಮನ್ ತನ್ನ ರಾಜ್ಯದ ಸ್ವಲ್ಪ ಭಾಗವನ್ನು ಕಳೆದುಕೊಂಡ. ಈತನ ತರುವಾಯ ಇಮ್ಮಡಿ ವಿಕ್ರಮೇಂದ್ರ ಪಟ್ಟಕ್ಕೆ ಬಂದ.

**ಇಂದ್ರ ವರ್ಮನ್ I (ಪೂರ್ವ ಗಂಗ ಮನೆತನ):** ಪೂರ್ವಗಂಗರೆಂದೂ ಕಳಿಂಗಗಂಗರೆಂದೂ ಕರೆಯಲಾಗಿರುವ ಮನೆತನದ ಸ್ಥಾಪಕ (496–535). ಗಂಜಾಂ ಜಿಲ್ಲೆಯಲ್ಲಿರುವ ಕಳಿಂಗ ನಗರ (ಇಂದಿನ ಮುಖಲಿಂಗಂ ಪಟ್ಟಣ) ಇವನ ರಾಜಧಾನಿ. ಈ ಇಂದ್ರವರ್ಮನನ್ನು ಶಾಸನಗಳಲ್ಲಿ ಕಳಿಂಗದ ಸ್ವಾಮಿ ಎಂದು ವರ್ಣಿಸಲಾಗಿದೆ. ಮಹಾರಾಜ ಇಂದ್ರವರ್ಮನ್ ತನ್ನದೇ ಆದ ಶಕೆಯನ್ನು ಜಾರಿಗೆ ತಂದ. ಈತನ ಸಂತತಿಯವರು ಅದೇ ಕಾಲಗಣನೆಯನ್ನು ಮುಂದುವರೆಸಿದರು. ಈತ ವಿಷ್ಣುಕುಂಡಿನ್ ಸಂತತಿಯ ಇಂದ್ರವರ್ಮನ್ ರಾಜನನ್ನು ಯುದ್ಧದಲ್ಲಿ ಸೋಲಿಸಿ ಅವನ ರಾಜ್ಯದ ಕೆಲವು ಭಾಗಗಳನ್ನು ವಶಪಡಿಸಿಕೊಂಡ. ಈತನ ಸಂತತಿಯವರು ಸು.400 ವರ್ಷಗಳ ಕಾಲ ರಾಜ್ಯವಾಳಿದರು.

**ಇಂದ್ರವರ್ಮನ್ II:** ಪೂರ್ವಗಂಗ ರಾಜಮನೆತನ ಸ್ಥಾಪಕನಾದ ಮೊದಲನೆಯ ಇಂದ್ರವರ್ಮನ ಮೊಮ್ಮಗ (583–87). ಈತನಿಗೆ ಪರಮ ಮಹೇಶ್ವರ ಮತ್ತು ಇಡೀಕಳಿಂಗದ ಸ್ವಾಮಿ ಎಂಬ ಬಿರುದುಗಳಿದ್ದುವು.

**ಇಂದ್ರವರ್ಮನ್ III:** ಇಮ್ಮಡಿ ಇಂದ್ರವರ್ಮನ ಮಗ. 624ರಲ್ಲಿ ಪಟ್ಟಕ್ಕೆ ಬಂದನೆಂದು ತಿಳಿದುಬರುತ್ತದೆ. ಈತನ ದಾಯಾದಿಯಾದ ಧನಾರ್ಣವನಿಗೂ ಸಿಂಹಾಸನಕ್ಕಾಗಿ ಕದನಗಳು ನಡೆದವೆಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ.

**ಇಂದ್ರವರ್ಮನ್ IV:** ಈತ ಧನಾರ್ಣವನೆಂಬುವನ ಮಗ. ಮುಮ್ಮಡಿ ಇಂದ್ರವರ್ಮನನ್ನು ಓಡಿಸಿ 650ರಲ್ಲಿ ಸಿಂಹಾಸನ ಹತ್ತಿದ. ಈಶ್ವರಭಕ್ತನಾಗಿದ್ದನೆಂದು ವರ್ಣಿಸಲಾಗಿದೆ.

**ಇಂದ್ರವರ್ಮನ್ (ಪೂರ್ವ ಚಾಲುಕ್ಯ):** ಪೂರ್ವಚಾಲುಕ್ಯ ಸಂತತಿಯ ಒಂದನೆಯ ವಿಷ್ಣುವರ್ಧನನ ಮಗ (ಸು.663). ವಿಷ್ಣುವರ್ಧನನ ಮರಣಾನಂತರ ಈತನ ಹಿರಿಯ ಮಗನಾದ ಒಂದನೆಯ ಜಯಸಿಂಹ ರಾಜನಾದ. ಜಯಸಿಂಹನ ಆಳ್ವಿಕೆಯ ಕೊನೆಗಾಲದಲ್ಲಿ ಈತನ ತಮ್ಮನಾದ ಇಂದ್ರವರ್ಮನ್ ಆಡಳಿತ ಕಾರ್ಯವನ್ನು ನಿರ್ವಹಿಸುತ್ತಿದ್ದು, 1ನೆಯ ಜಯಸಿಂಹನ ಮರಣಾನಂತರ ತಾನೇ ರಾಜನಾದ. ಈತ ಕೇವಲ ಒಂದು ವಾರ ರಾಜ್ಯವಾಳಿದನೆಂದು ತಿಳಿದುಬರುತ್ತದೆ. ಇವನಿಗೆ ಇಂದ್ರರಾಜ, ತ್ಯಾಗಧೇನು ಎಂಬ ಬಿರುದುಗಳೂ ಇದ್ದುವು. ಇಂದ್ರವರ್ಮನ ಅನಂತರ ಇಮ್ಮಡಿ ವಿಷ್ಣುವರ್ಧನ ರಾಜನಾದ.

**ಇಂದ್ರವರ್ಮನ್ I (ಚಂಪ):** 8ನೆಯ ಶತಮಾನದ ಉತ್ತರಾರ್ಧದಲ್ಲಿ ಆಗ್ನೇಯ ಏಷ್ಯದ ಚಂಪ ದ್ವೀಪದಲ್ಲಿ ಆಡಳಿತ ಮಾಡತೊಡಗಿದ ಪಾಂಡುರಂಗ ಸಂತತಿಯ ರಾಜನಾದ ಪೃಥ್ವೀಂದ್ರವರ್ಮನ ಅನಂತರ ಆಳಿದ ರಾಜ ಪೃಥ್ವೀಂದ್ರವರ್ಮನ ಹಿರಿಯ ಮಗ. ಈತನ ಕಾಲದಲ್ಲಿ (787) ಜಾವದ್ವೀಪದ ರಾಜ ಚಂಪ ರಾಜ್ಯಕ್ಕೆ ಮುತ್ತಿಗೆ ಹಾಕಿದ. ಯುದ್ಧಕಾಲದಲ್ಲಿ ಚಂಪದ ಹಲವು ಪವಿತ್ರ ದೇವಾಲಯಗಳು ನಾಶವಾದವು. ಇಂದ್ರವರ್ಮನ್ ಶತ್ರುಗಳನ್ನು ಹಿಮ್ಮೆಟ್ಟಿಸಿ ನಾಶವಾದ ದೇವಮಂದಿರಗಳನ್ನು ಜೀರ್ಣೋದ್ಧಾರ ಮಾಡಿಸಿ ಇಂದ್ರ ಭದ್ರೇಶ್ವರ, ಇಂದ್ರ ಭೋಗೇಶ್ವರ ಮತ್ತು ಇಂದ್ರ ಪರಮೇಶ್ವರ ಮೊದಲಾದ ವಿಗ್ರಹಗಳನ್ನು ಸ್ಥಾಪಿಸಿದನಲ್ಲದೆ ಚೀನ ಚಕ್ರಾಧಿಪತ್ಯದೊಡನೆ ಕಡಿದುಹೋಗಿದ್ದ ರಾಜಕೀಯ ಸಂಬಂಧವನ್ನು ಪುನಃ ಸ್ಥಾಪಿಸಿದ. ಪ್ರ.ಶ. ಸುಮಾರು 801ರಲ್ಲಿ ಮರಣ ಹೊಂದಿದ.

**ಇಂದ್ರವರ್ಮನ್ I (ಕಂಬುಜ):** 877–89 : 877ರಲ್ಲಿ ಈಗಿನ ಇಂಡೋ–ಚೀನ ಎಂದು ಕರೆಸಿಕೊಳ್ಳುವ ಪ್ರದೇಶದ ಭಾಗವಾಗಿದ್ದು ಕಂಬುಜವೆಂಬುದಾಗಿ ಕರೆಯಲ್ಪಡುತ್ತಿದ್ದ ರಾಜಮನೆತನದ ಆದ್ಯ ಪ್ರವರ್ತಕ. ಈತನ ರಾಣಿಯಾದ ಇಂದ್ರಾದೇವಿ ಭಾರತೀಯ ಸಂಜಾತಳೆಂದು ತಿಳಿದುಬರುತ್ತದೆ. ಇವನು ಪರಾಕ್ರಮಿ ಮತ್ತು ಕಲಾಭಿಮಾನಿ. ಈತನ ಕಾಲದಲ್ಲಿ ಕಂಬುಜದಲ್ಲಿ ಅನೇಕ ಭವ್ಯ ಕಟ್ಟಡಗಳು ನಿರ್ಮಾಣವಾದವು. ಈತ ಇಂದ್ರತಟಾಕವೆಂಬ ದೊಡ್ಡ ಕೆರೆಯೊಂದನ್ನು ಕಟ್ಟಿಸಿದ. ಇಂದ್ರಯಾನ, ಇಂದ್ರವಿಮಾನಕ, ಇಂದ್ರಪ್ರಾಸಾದಕ ಎಂಬ ಭವ್ಯ ಅರಮನೆಗಳನ್ನೂ ಅನೇಕ ದೇವಾಲಯಗಳನ್ನೂ ಕಟ್ಟಿಸಿದ. ಇಂದ್ರವರ್ಮನ ಮರಣಾನಂತರ ಈತನ ಮಗನಾದ ಯಶೋವರ್ಮನ್ ಕಂಬುಜದ ರಾಜನಾದ.

**ಇಂದ್ರವರ್ಮನ್ II:** 860–95. ಚಂಪದ ಪಾಂಡುರಂಗ ರಾಜಮನೆತನದ ಆಳ್ವಿಕೆ 860ರ ಸುಮಾರಿನಲ್ಲಿ ಕೊನೆಗೊಂಡಾಗ, ಅದರ ಸ್ಥಾನದಲ್ಲಿ ಉಪಕ್ರಮವಾದ ಭೃಗು ಸಂತತಿಯ ಸ್ಥಾಪಕ. ಈತ ತನ್ನ ಶ್ರದ್ಧೋತ್ಸಾಹ ಮತ್ತು ಕಾರ್ಯತತ್ಪರತೆಯ ಗುಣಗಳಿಂದ ತನ್ನ ರಾಜಸಂತತಿಯನ್ನು ಸ್ಥಾಪಿಸಲು ಶಕ್ತನಾದನೆಂದು ಶಾಸನಗಳಲ್ಲಿ ಬಣ್ಣಿಸಲಾಗಿದೆ. ಈತನ ಮೊದಲಿನ ಹೆಸರು ಶ್ರೀಲಕ್ಷ್ಮೀಂದ್ರಭೂಮೀಶ್ವರಗ್ರಾಮಸ್ವಾಮಿನ್ ಎಂಬುದಾಗಿತ್ತೆಂದೂ ರಾಜನಾದ ಮೇಲೆ ಶ್ರೀ ಜಯಇಂದ್ರವರ್ಮನ್ ಮಹಾರಾಜಾಧಿರಾಜ ಎಂದು ಇವನು ತನ್ನನ್ನು ಕರೆದುಕೊಂಡನೆಂದೂ ತಿಳಿದುಬರುತ್ತದೆ. ಇಂದ್ರವರ್ಮ ಶೈವ ಮತೀಯನಾದರೂ ಬೌದ್ಧಮತಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟ. ಅನೇಕ ಬೌದ್ಧಮತಗಳನ್ನು ಸ್ಥಾಪಿಸಿದ. 877ರಲ್ಲಿ ಚೀನ ದೇಶಕ್ಕೆ ರಾಜಕೀಯ ನಿಯೋಗವೊಂದನ್ನು ಕಳುಹಿಸಿದ್ದ.

**ಇಂದ್ರವರ್ಮನ್ III:** 911–71 ಭದ್ರವರ್ಮನ್ ರಾಜನ ಮಗ ಮತ್ತು ಉತ್ತರಾಧಿಕಾರಿ. ಶ್ರೇಷ್ಠ ವಿದ್ವಾಂಸ. ತತ್ತ್ವಮೀಮಾಂಸೆ, ಬೌದ್ಧದರ್ಶನ, ಪಾಣಿನಿಯ ಅಷ್ಟಾಧ್ಯಾಯಿ ಹಾಗೂ ಶೈವ ಉತ್ತರಕಲ್ಪಸೂತ್ರಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದ. ಈತನ ಕಾಲದಲ್ಲಿ ಕಂಬುಜ ದ್ವೀಪದ ರಾಜನಾದ ರಾಜೇಂದ್ರವರ್ಮನ್ ಚಂಪಕ್ಕೆ ಮುತ್ತಿಗೆ ಹಾಕಿದ. ಅನೇಕ ದೇವಾಲಯಗಳು ನಾಶವಾದುವು. ಆದರೂ ಇಂದ್ರವರ್ಮನ್ ಕಾಲಕ್ರಮದಲ್ಲಿ ಮುತ್ತಿಗೆಯಿಂದಾದ ಹಾನಿಯನ್ನು ಸರಿಪಡಿಸಲು ಶಕ್ತನಾದನಲ್ಲದೆ ಚೀನ ಚಕ್ರಾಧಿಪತ್ಯದೊಡನೆ ರಾಜತಾಂತ್ರಿಕ ಸಂಬಂಧವನ್ನೂ ಮುಂದುವರಿಸಿದ. 971ರಲ್ಲಿ ಮುಮ್ಮಡಿ ಇಂದ್ರವರ್ಮನ್ ಮರಣ ಹೊಂದಿದಾಗ ಪರಮೇಶ್ವರವರ್ಮ ರಾಜನಾದ.

**ಇಂದ್ರವರ್ಮನ್ IV:** ಈತ ಇಮ್ಮಡಿ ಇಂದ್ರವರ್ಮನ ಮೊಮ್ಮಗ ಹಾಗೂ ಪರಮೇಶ್ವರವರ್ಮನ ಮಗ. ಅನ್ನಾಮ್ ಚಕ್ರವರ್ತಿ ಕಳುಹಿಸಿದ ರಾಜದೂತನನ್ನು ಪರಮೇಶ್ವರವರ್ಮನ್ ಅವಮಾನಗೊಳಿಸಿದ್ದರಿಂದ ಕುಪಿತನಾದ ಅನ್ನಾಮ್ ಚಕ್ರವರ್ತಿ ಚಂಪ ರಾಜ್ಯವನ್ನು ಮುತ್ತಿದ. ಆಗ ಪರಮೇಶ್ವರವರ್ಮನಿಗೆ ಮರಣ ಸಂಭವಿಸಿತು. ಚಂಪರಾಜ್ಯ ಅನ್ನಾಮ್ ಸಾಮ್ರಾಜ್ಯದ ವಶವಾಯಿತು. ನಾಲ್ವಡಿ ಇಂದ್ರವರ್ಮನ್ ತಲೆಮರೆಸಿಕೊಂಡು ಚಂಪ ಸಿಂಹಾಸನವನ್ನು ಪಡೆಯಲು ಚೀನಾದ ಚಕ್ರವರ್ತಿಯೊಡನೆ ವ್ಯವಹರಿಸಿದ. ಆದರೆ ಚೀನದಿಂದ ಯಾವ ಸಹಾಯವೂ ಸಿಕ್ಕಲಿಲ್ಲ. ಕೊನೆಗೆ ಚಂಪದಲ್ಲಿದ್ದ ಅನ್ನಾಮ್ ಅಧಿಕಾರಿಯನ್ನು ಸಂಚಿನಿಂದ ಕೊಲ್ಲಿಸಿ 985ರಲ್ಲಿ ಚಂಪದ ರಾಜನಾದ. ಅನಂತರ ಇವನ ಆಡಳಿತ ಬಹುಕಾಲ ಮುಂದುವರಿಯಲಿಲ್ಲ. (ಜಿ.ಆರ್.ಆರ್.)

**ಇಂದ್ರಸಿಂಗ್ ರಾಠೋರ್:** ಔರಂಗಜೇಬನಿಗೆ ಅಧೀನನಾಗಿ, ಸಾಮ್ರಾಜ್ಯದ ವಾಯವ್ಯ ಸರಹದ್ದಿನ ರಕ್ಷಣೆ ವಹಿಸಿದ್ದ ಮಾರವಾಡದ ಯಶವಂತ್‌ಸಿಂಗ್ 1678ರಲ್ಲಿ ಕಾಲವಾದ ಮೇಲೆ, ಅವನ ರಾಜ್ಯಕ್ಕೆ ದೊರೆಯಾಗಿ ಬಂದ. ಇಡೀ ದೇಶವನ್ನೇ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಬೇಕೆಂಬ ಉದ್ದೇಶದಿಂದ ಔರಂಗಜೇಬ ದೇಶದ ಅನೇಕ ಮುಖ್ಯ ಹುದ್ದೆಗಳಿಗೆ ಮುಸಲ್ಮಾನರನ್ನು ನೇಮಿಸುತ್ತಿದ್ದನಾದ ಕಾರಣ ಯಶವಂತನಿಗೆ ದೂರಸಂಬಂಧಿಯಾಗಿದ್ದ ಇವನ ಉತ್ತರಾಧಿಕಾರವನ್ನೊಪ್ಪಲು ಔರಂಗಜೇಬನಿಗೆ ಮೂವತ್ತಾರು ಲಕ್ಷ ಹಣ ಕೊಡಬೇಕಾಯಿತು. ಇಂದ್ರಸಿಂಗ್ ಮೊಗಲ್ ಸಾಮ್ರಾಟನ ಅಡಿಯಾಳಾಗಿರಬೇಕಾಯಿತು. ಈ ಪರಿಸ್ಥಿತಿ ಮಾರವಾಡದ ರಾಠೋರ್ ರಜಪೂತರನ್ನು ಕೆರಳಿಸಿತು. ದುರ್ಗಾದಾಸನ ಸ್ವಾತಂತ್ರ್ಯ ಸಮರಕ್ಕೆ ಎಡೆಮಾಡಿಕೊಟ್ಟಿತು (**ನೋಡಿ– ದುರ್ಗಾದಾಸ್–1**). *

**ಇಂದ್ರಾಣಿ:** 1 ಸಪ್ತಮಾತೃಕೆಯರಲ್ಲಿ ಒಬ್ಬಳು.

2. ದೇವತೆಗಳ ಅರಸನಾದ ಇಂದ್ರನ ರಾಣಿ. ಹೆಸರು ಶಚೀದೇವಿ. ಪ್ರಲೋಮನೆಂಬ ಅರಸನ ಮಗಳು. ಜಯಂತ ಈಕೆಯ ಮಗ. ಇಂದ್ರನು ವೃತ್ರನನ್ನು ಕೊಂದು ಬ್ರಹ್ಮಹತ್ಯಾಪಾತಕಕ್ಕೆ ಒಳಗಾಗಿ ಇಂದ್ರಪದವಿಯನ್ನು ಕಳೆದುಕೊಂಡಾಗ ನಹುಷ (**ನೋಡಿ**) ದೇವಲೋಕಾಧಿಪತ್ಯವನ್ನು ಪಡೆದು, ದುರ್ದೈವದಿಂದ ಶಚಿಯನ್ನು ಮೋಹಿಸಿ ಅಗಸ್ತ್ಯರ ಶಾಪಕ್ಕೆ ಒಳಗಾಗಿ ಇಂದ್ರಪದವಿಯನ್ನು ಕಳೆದುಕೊಂಡ. ಪತಿವ್ರತಾಸ್ತ್ರೀಯರ ಮಾಹಾತ್ಮ್ಯದ ವಿಚಾರದಲ್ಲಿ ಈಕೆ ಸೂರ್ಯನೊಂದಿಗೆ ಸಂವಾದ ಮಾಡಿದಳೆಂದು ಭಾರತದಲ್ಲಿ ಹೇಳಿದೆ. *

**ಇಂದ್ರಾಯುಧ:** ಇಂದ್ರನ ವಜ್ರಾಯುಧ. ಇದನ್ನು ಬಳಸಿರುವ ಕೆಲವು ನಿದರ್ಶನಗಳು ಇಲ್ಲಿವೆ. ಬೃಹಸ್ಪತಿಯ ತಮ್ಮನಾದ ಸಂವರ್ತನನ್ನು ಮರುತ್ತ ಕರೆದು ಯಜ್ಞ ಮಾಡುತ್ತಿದ್ದಾಗ ಆ ಯಜ್ಞಕ್ಕೆ ವಿಘ್ನ ಒಡ್ಡಲು ಇಂದ್ರ ವಜ್ರಾಯುಧದಿಂದ ಸಂವರ್ತನನ್ನು ವಧಿಸಲು ಹೋದಾಗ ಸಂವರ್ತನ ಮಂತ್ರಬಲದಿಂದ ಇಂದ್ರನ ತೋಳು ಸ್ತಂಭನಗೊಂಡಿತು. ಚ್ಯವನಮಹರ್ಷಿ ಅಶ್ವಿನೀ ದೇವತೆಗಳಿಗೆ ಹವಿರ್ಭಾಗವನ್ನು ಕೊಡಿಸಿದನೆಂದು ರೋಷದಿಂದ ಇಂದ್ರ ಚ್ಯವನನನ್ನು ಇಂದ್ರಾಯುಧದಿಂದ ಕೊಲ್ಲಲು ಹೋಗಿ ವಿಫಲನಾದ. ಒಮ್ಮೆ ದಿತಿ ಇಂದ್ರನನ್ನು ಕೊಲ್ಲತಕ್ಕ ಪರಾಕ್ರಮಿಯನ್ನು ಕಶ್ಯಪನಿಂದ ಪಡೆಯಲು ತಪೋದ್ಯುಕ್ತಳಾದಳು. ಇದನ್ನು ಅರಿತ ಇಂದ್ರ ಮೋಸದಿಂದ ಅವಳ ಸೇವೆಗೈಯ್ಯುವವನಂತೆ ನಟಿಸಿ ಹಗಲು ಹೊತ್ತಿನಲ್ಲಿ ಒಮ್ಮೆ ದಿತಿ ಶಾಸ್ತ್ರವಿರುದ್ಧವಾಗಿ ಕಾಲುಚಾಚಿಕೊಂಡು ಮಲಗಿದ್ದಾಗ ತನ್ನ ವಜ್ರಾಯುಧದಿಂದ ಅವಳ ಗರ್ಭದ ಪಿಂಡವನ್ನು ಏಳು ಸೀಳಾಗಿ ಮಾಡಿದ. ಸೀಳಾದ ಪಿಂಡಗಳು ರೋದಿಸುತ್ತಿರುವುದನ್ನು ಕಂಡು ವಜ್ರಾಯುಧದಿಂದ ಮತ್ತೆ ಒಂದೊಂದು ಪಿಂಡವನ್ನೂ ಏಳೇಳು ಭಾಗ ಮಾಡಿದ. ಎಚ್ಚೆತ್ತ ದಿತಿ ಇದನ್ನು ತಿಳಿದು ತನ್ನ ಮಕ್ಕಳನ್ನು ಕಾಪಾಡಬೇಕೆಂದು ಇಂದ್ರನನ್ನೇ ಮೊರೆಹೊಕ್ಕಳು. ಅವೇ 49 ಪ್ರಬೇಧಗಳುಳ್ಳ ಮರುತ್ತು (ವಾಯು)ಗಳೆಂದು ಪ್ರಸಿದ್ಧವಾಗಿವೆ (**ನೋಡಿ– ಇಂದ್ರ**).

2. ಬಾಣಕೃತ ಕಾದಂಬರೀ ಮಹಾಕಾವ್ಯದಲ್ಲಿ ತಾರಾಪೀಡ ತನ್ನ ಮಗನಾದ ಚಂದ್ರಾಪೀಡನಿಗೆ ಬಳುವಳಿಯಾಗಿ ಕೊಟ್ಟ ಒಂದು ದಿವ್ಯಾಶ್ವದ ಹೆಸರು. ಪುಂಡರೀಕನ ಗೆಳೆಯನಾದ ಕಪಿಂಜಲನೇ ಅಶ್ವರೂಪಿಯಾಗಿ ಬಂದು ಸ್ನೇಹಿತನ ಉದ್ಧಾರಕಾರ್ಯದಲ್ಲಿ ಸಹಾಯ ಮಾಡಿದನೆಂದು ಕಥೆ. *

**ಇಂದ್ರಿಯಗಳು:** ವಿಷಯಗಳನ್ನು ಅರಿಯುವ ಸಾಧನಗಳು. ಇಂದ್ರಿಯವೆಂಬ ಪದಕ್ಕೆ ಶಕ್ತಿಯೆಂದರ್ಥ. ಶಕ್ತಿ ಎಂದರೆ ಗ್ರಹಣ ಸಾಮರ್ಥ್ಯವೆಂದು ಇಲ್ಲಿನ ತಾತ್ಪರ್ಯ. ಉಪನಿಷತ್ತಿನಲ್ಲಿ ಇಂದ್ರಿಯಗಳನ್ನು ಸಮಷ್ಟಿಯಲ್ಲಿ ಪ್ರಾಣವೆಂದು ವ್ಯವಹರಿಸಿ ವೈಯುಕ್ತಿಕವಾಗಿ ಗ್ರಹ (ಹಿಡಿಯುವುವು) ಎಂದು ಕರೆದಿದ್ದಾರೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಜರತ್ಕಾರನಿಗೆ ಎಂಟು ಇಂದ್ರಿಯಗಳನ್ನು ಹೇಳಿದ್ದಾನೆ: ಪ್ರಾಣ, ವಾಕ್, ಜಿಹ್ವೆ, ಚಕ್ಷುಸ್ಸು, ಶ್ರೋತ್ರ, ಮನಸ್ಸು, ಹಸ್ತೌ (ಕೈಗಳು), ತ್ವಕ್ (ಚರ್ಮ). ಇನ್ನೊಬ್ಬ ಉಪನಿಷದೃಷ್ಟಿಯಾದ ಗಾರ್ಗ್ಯಾಯಣಿ ಈ ಎಂಟಕ್ಕೆ ಪಾದ, ಪಾಯೂಪಸ್ಥಗಳನ್ನು ಸೇರಿಸಿದ್ದಾನೆ. ಕಾಲಕ್ರಮದಲ್ಲಿ ಇಂದ್ರಿಯಗಳು ಹತ್ತೆಂಬ ಎಣಿಕೆ ಪ್ರಚಲಿತವಾಯಿತು. ಜ್ಞಾನೇಂದ್ರಿಯಗಳು ಐದು (ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ.), ಕರ್ಮೇಂದ್ರಿಗಳು ಐದು (ಕೈ, ಕಾಲು, ಮಾತು, ಪಾಯು, ಉಪಸ್ಥಾ) ಎಂಬ ವಿಭಾಗವೂ ಸಿದ್ಧವಾಯಿತು.

ಉಪನಿಷತ್ತಿನಲ್ಲಿ ಪ್ರಾಣಸಂವಾದವೆಂಬ ಪ್ರಸಂಗ ಬರುತ್ತದೆ. ಒಮ್ಮೆ ಇಂದ್ರಿಯಗಳಲ್ಲಿ ಯಾರು ಹೆಚ್ಚೆಂಬ ವಿವಾದ ಎದ್ದಿತು. ಅವರು ಪ್ರಜಾಪತಿಯ ಬಳಿಗೆ ಹೋಗಿ ವಿವಾದವನ್ನು ಪರಿಹರಿಸುವಂತೆ ಕೇಳಿಕೊಂಡರು. ಪ್ರಜಾಪತಿ ಯಾವ ಇಂದ್ರಿಯವಿಲ್ಲದೆ ದೇಹವು ನಿಲ್ಲಲಾರದೋ ಆ ಇಂದ್ರಿಯವೇ ಹೆಚ್ಚೆಂದು ಹೇಳಿದ. ಇದನ್ನು ಪ್ರಯೋಗದಿಂದ ನಿಶ್ಚಯಿಸಲು ಮೊದಲು ಮಾತು ದೇಹದಿಂದ ದೂರ ಹೋಗಿ ಒಂದು ಸಂವತ್ಸರದ ಅನಂತರ ಮರಳಿ ಬಂತು. ಬಂದಾಗ ದೇಹ ಉಳಿದೇ ಇತ್ತು. ಎಲ್ಲ ಕ್ರಿಯೆಗಳೂ ಎಂದಿನಂತೆ ನಡೆಯುತ್ತಿದ್ದುವು. ಆದರೆ ಮೂಗನಂತೆ, ಅನಂತರ ಕಣ್ಣು ಒಂದು ವರ್ಷಕಾಲ ದೇಹದಿಂದ ದೂರ ನಿಂತಿತು. ಆಗಲೂ ದೇಹ ಉಳಿದೇ ಇತ್ತು, ಕುರುಡನಂತೆ. ಹೀಗೆಯೇ ಕಿವಿಗಳು, ಮನಸ್ಸು, ಒಂದೊಂದು ವರ್ಷ ದೂರವಿದ್ದು ಬಂದುವು. ಪ್ರಾಣದ ಸರದಿ ಬಂದು ಪ್ರಾಣ ದೇಹದಿಂದ ದೂರ ಹೋಗಲು ಯತ್ನಿಸಲು ಬಲಶಾಲಿಯಾದ ಕುದುರೆ ಗೂಟಕಿತ್ತು ಓಡಲೆಳೆಸುವಂತೆ ಇತರ ಇಂದ್ರಿಯಗಳಿಗೆ ಆಯಿತು. ಆಗ ಅವರೆಲ್ಲ ಪ್ರಾಣವೇ ಹೆಚ್ಚೆಂದು ಒಪ್ಪಿಕೊಂಡರು. ಈ ನಿರೂಪಣೆಯಲ್ಲಿ ಮನಸ್ಸನ್ನೂ ಇಂದ್ರಿಯವೆಂದು ಹೇಳಿರುವುದು ಸ್ವಾರಸ್ಯವಾಗಿದೆ. ಮನಸ್ಸನ್ನು ಏಕಾದಶೇಂದ್ರಿಯವೆಂದೂ ನಿರೂಪಿಸುತ್ತಾರೆ.

ಮನಸ್ಸಿಗೂ ಇಂದ್ರಿಯಗಳಿಗೂ ನಿಕಟಸಂಬಂಧವುಂಟು. ವೇದಾಂತದ, ಸಾಂಖ್ಯದ ಪ್ರಕ್ರಿಯೆಯಲ್ಲಿ ಪ್ರತಿ ಇಂದ್ರಿಯಕ್ಕೂ ಸ್ಥಾನವನ್ನೂ ವೃತ್ತಿಯನ್ನೂ ನಿರ್ದೇಶಿಸುತ್ತಾರೆ. ಇಂದ್ರಿಯಸ್ಥಾನವೆಂದರೆ ಭೌತಿಕವಾದ ಇಂದ್ರಿಯ, ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ: ಇಂದ್ರಿಯವೃತ್ತಿಯೆಂದರೆ ಆಯಾ ಸ್ಥಾನಗಳಲ್ಲಿ ಪ್ರವೃತ್ತವಾಗುವ ವ್ಯಾಪಾರವಿಶೇಷ– ನೋಡುವುದು, ಕೇಳುವುದು, ಮೂಸುವುದು, ರುಚಿ ನೋಡುವುದು, ಸ್ಪರ್ಶವನ್ನು ಗ್ರಹಿಸುವುದು. ಇಂದ್ರಿಯವೃತ್ತಿಯಲ್ಲಿ ಮನಸ್ಸಿನ ಪ್ರವೇಶವಿದೆ. ಈ ಮಾನಸಿಕ ವ್ಯಾಪಾರವಿಲ್ಲದಿದ್ದರೆ ಇಂದ್ರಿಯಸಹಜ ಜ್ಞಾನ ಉಂಟಾಗದು. ಅದರಿಂದ ಉಂಟಾದ ಗ್ರಹಣ ಪ್ರತ್ಯಕ್ಷವೆನಿಸಿಕೊಳ್ಳುವುದಿಲ್ಲ. ಅದು ಬರಿಯ ಸಂವೇದನೆ. ಸಾಮಾನ್ಯವಾಗಿ ಕಣ್ಣು ನೋಡುತ್ತಿದ್ದರೂ ಮನಸ್ಸು ಅನ್ಯಾಸಕ್ತವಾಗಿದ್ದಾಗ ಮನಸ್ಸು ಎಲ್ಲಿಯೋ ಇದ್ದಿತು, ನೋಡಲಿಲ್ಲ, (ಅನ್ಯತ್ರ ಮೇ ಮನೋಽಭೂತ್, ನಾದ್ರಾಕ್ಷಂ) ಎಂದು ಹೇಳುತ್ತೇವೆ. ಇಂದ್ರಿಯಕ್ಕೆ ಗ್ರಹಣಶಕ್ತಿ ಬರುವುದು ಮನಸ್ಸಿನ ಸನ್ನಿಧಾನದಿಂದಲೇ. ಬೌದ್ಧರು ಕೂಡ ಇಂದ್ರಿಯಗಳನ್ನು ಪ್ರಸಾದವೆಂದು ಕರೆದು ಮನಸ್ಸನ್ನು (ಹೃದಯವನ್ನು) ಇಂದ್ರಿಯಗಳಿಗೆ ಸೇರಿಸಿದ್ದಾರೆ.

ಒಂದೊಂದು ಇಂದ್ರಿಯಕ್ಕೂ ವ್ರತವಿದೆ ಎಂದರೆ ಅದಕ್ಕೆ ವಿವಿಕ್ತವಾದ ಕಾರ್ಯಕ್ಷೇತ್ರವಿದೆ. ಕಣ್ಣು ರೂಪವನ್ನು ಮಾತ್ರ ಗ್ರಹಿಸಬಲ್ಲದು. ಕಿವಿ ಶಬ್ದವನ್ನು ಮಾತ್ರ ಕೇಳಬಲ್ಲದು. ಮೂಗು ವಾಸನೆಯನ್ನು ಮಾತ್ರ ಗ್ರಹಿಸಬಲ್ಲದು. ನಾಲಗೆ ರುಚಿಯನ್ನು ಮಾತ್ರ ನೋಡಬಲ್ಲುದು. ಚರ್ಮ ಮುಟ್ಟಿದುದನ್ನು ಮಾತ್ರ ಗ್ರಹಿಸಬಲ್ಲದು. ಒಂದು ಇನ್ನೊಂದರ ಕೆಲಸವನ್ನು ಮಾಡದು. ಈ ಇಂದ್ರಿಯ ವಿಷಯ ವ್ಯವಸ್ಥೆಗೆ ಬೌದ್ಧರ ಪ್ರಕ್ರಿಯೆಯಲ್ಲಿ ಗೋಚರವೆನ್ನುತ್ತಾರೆ. ಕಠೋಪನಿಷತ್ತಿನಲ್ಲೂ ಇಂದ್ರಿಯಗಳನ್ನು ಕುದುರೆಗಳೆಂದು ಕರೆದು ವಿಷಯಗಳನ್ನು ಗೋಚರವೆಂದಿದ್ದಾರೆ (ಇಂದ್ರಿಯಾಣಿ ಹಯಾನ್ಯಾಹುರ್ವಿಷಯಾನ್ ತೇಷು ಗೋಚರಾನ್). ಇಲ್ಲಿ ಮನಸ್ಸನ್ನು ಪ್ರಗ್ರಹವೆಂದು (ಕಟ್ಟಿರುವ ಹಗ್ಗ) ವ್ಯವಹರಿಸಿದ್ದಾರೆ. ಇಂದ್ರಿಯ ವ್ಯಾಪಾರದಲ್ಲಿ ಮನಸ್ಸಿನ ಪಾತ್ರವನ್ನು ವಾಚಸ್ಪತಿ ಮಿಶ್ರ ಸಂಕಲ್ಪವೆಂದು ನಿರ್ದೇಶಿಸಿದ್ದಾನೆ. ಸಂಕಲ್ಪವೆಂದರೆ ಚೆನ್ನಾಗಿ ಮಾಡುವುದೆಂದರ್ಥ. ಇಂದ್ರಿಯಗಳು ವರ್ತಮಾನಕಾಲದಲ್ಲಿ ಮಾತ್ರ ಪ್ರವೃತ್ತವಾಗುತ್ತವೆ; ಎಂದ ಮೇಲೆ ಅವುಗಳಿಂದಾಗುವ ಗ್ರಹಣ ಅಸ್ಪಷ್ಟವಾಗಿ ಅಪೂರ್ಣವಾಗಿರುತ್ತದೆ. ಅಲ್ಲದೆ ನಿರ್ದಿಷ್ಟ ವಿಷಯವನ್ನಷ್ಟೇ ಪ್ರತಿ ಇಂದ್ರಿಯವೂ ಗ್ರಹಿಸುವುದು. ಮನಸ್ಸಾದರೆ ಭೂತ ಭವಿಷ್ಯ ವರ್ತಮಾನಗಳಲ್ಲೆಲ್ಲ ಪ್ರವೃತ್ತವಾಗಬಲ್ಲದು. ಎಲ್ಲ ವಿಷಯಗಳನ್ನೂ ಗ್ರಹಿಸಬಲ್ಲದು. ಇದರ ಸಹಕಾರವಿಲ್ಲದೆ ಇಂದ್ರಿಯಜನ್ಯಜ್ಞಾನ ಅರ್ಥಕಾರಿಯಾಗದು. ಈ ದೃಷ್ಟಿಯಿಂದ ಸಾಂಖ್ಯರು ಮನಸ್ಸನ್ನು ಅಂತರಿಂದ್ರಿಯವೆಂದೂ ಉಳಿದ ಇಂದ್ರಿಯಗಳನ್ನು ಬಹಿರಿಂದ್ರಿಯಗಳೆಂದೂ ವ್ಯವಹರಿಸಿದ್ದಾರೆ.

ಜೈನರು ಮನಸ್ಸನ್ನು ಅನಿಂದ್ರಿಯವೆಂದೂ ನೋಇಂದ್ರಿಯವೆಂದೂ ನಿರ್ದೇಶಿಸುತ್ತಾರೆ. ಪ್ರತ್ಯಕ್ಷವೆಂಬುದು ವಿಷಯಗತವಾದ ಇಂದ್ರಿಯ ವ್ಯಾಪಾರ. ಸಾಮಾನ್ಯವಾದ ವಿಷಯಗ್ರಹಣ ಪ್ರವೃತ್ತಿಯನ್ನು ಅವರು ಇಂದ್ರಿಯ ಪ್ರತ್ಯಕ್ಷವೆಂದು ವ್ಯವಹರಿಸುತ್ತಾರೆ. ಪಾಣಿನಿ ಇಂದ್ರಿಯವೆಂಬ ಪದಕ್ಕೆ ಇಂದ್ರನ ಲಕ್ಷಣವೆಂದು ವ್ಯುತ್ಪತ್ತಿ ಹೇಳುತ್ತಾನೆ. ಇಂದ್ರನೆಂದರೆ ಇಲ್ಲಿ ವ್ಯಕ್ತಿಗತವಾದ ಪ್ರಾಣ. ಜೈನರು ಇಂದ್ರನೆಂದರೆ ಕರ್ಮವೆಂದು ಅರ್ಥ ಹೇಳುತ್ತಾರೆ. ಇಂದ್ರಿಯ ಪ್ರತ್ಯಕ್ಷವನ್ನು ಮಾಣಿಕ್ಯನಂದಿ ಸಂವ್ಯವಹಾರಿಕ ಪ್ರತ್ಯಕ್ಷವೆಂದಿದ್ದಾನೆ. ಜೈನಪರಿಭಾಷೆಯಲ್ಲಿ ಇಂದ್ರಿಯಕ್ಕೆ ದ್ರವ್ಯ ಮತ್ತು ಭಾವ ಎಂಬ ಎರಡು ಪ್ರಕಾರಗಳಿವೆ. ದ್ರವ್ಯವೆಂದರೆ ಭೌತಿಕವಾದ ಸ್ವರೂಪ. ಭೌತಿಕವಸ್ತುಗಳನ್ನು ಆಯ್ದುಕೊಳ್ಳುವ ವ್ಯಾಪಾರ. ವಿಷಯೇಂದ್ರಿಯ ಸಂಬಂಧ ಹೀಗೆ ಭೌತಿಕವಾದದ್ದು. ಇದನ್ನು ಆಶ್ರಯಿಸಿ ನಿಂತ ಭಾವ ಮಾನಸಿಕವಾದದ್ದೆನ್ನಬಹುದು. ಇದು ಲಬ್ಧಿ ಮತ್ತು ಉಪಯೋಗ ಎಂದು ಎರಡು ಹಂತಗಳಲ್ಲಿ ಒದಗುತ್ತದೆ. ಲಬ್ಧಿಯೆಂದರೆ ವಿಷಯಕ್ಕೆ ಅನುಗುಣವಾದ ಇಂದ್ರಿಯವ್ಯಾಪಾರವನ್ನು ಉದ್ಬೋಧಿಸುವುದು. ಉಪಯೋಗವೆಂದರೆ ಲಬ್ಧಿಯಿಂದಾಗಿ ಜೀವ ವಿಷಯದ ಆಕಾರವನ್ನು ಗ್ರಹಿಸಿ ಮಾರ್ಪಡುವುದು. ಎಂದರೆ ಇಂದ್ರಿಯಪ್ರತ್ಯಕ್ಷದಲ್ಲಿ ಮನಸ್ಸಿನ ವ್ಯಾಪಾರವಿದ್ದೇ ಇರಬೇಕು. ಆ ಇಂದ್ರಿಯಗಳು ಮನಸ್ಸಿನ ಸಹಕಾರವಿಲ್ಲದೆ ಯಾವ ಗ್ರಹಣಕ್ರಿಯೆಯಲ್ಲೂ ಪ್ರವೃತ್ತವಾಗವು, ಸಮರ್ಥವಾಗವು. ಆದರೆ ಮನಸ್ಸು ಇಂದ್ರಿಯವಲ್ಲವೆಂದು ಭಾವಿಸುವ ಜೈನರು ಅದನ್ನು ಅನಿಂದ್ರಿಯವೆನ್ನುತ್ತಾರೆ. ದೇವನಂದಿಯಾದರೂ ಮನಸ್ಸಿನಲ್ಲಿ ಇಂದ್ರಿಯದ ಸ್ವಭಾವ ಸೇರಿದೆಯೆಂದು ವಾದಿಸಿ ಅದನ್ನೂ ನೋಇಂದ್ರಿಯವೆಂದಿದ್ದಾನೆ.

ಸರ್ವಾಸ್ತಿವಾದಿ ಬೌದ್ಧರು ಐದು ಜ್ಞಾನೇಂದ್ರಿಯಗಳನ್ನೂ (ರೂಪ, ಶಬ್ದ, ಗಂಧ, ರಸ, ಸ್ಪರ್ಶ) ಒಪ್ಪಿ ವಿಶ್ಲೇಷಣೆ ಮಾಡಿದ್ದಾರೆ. ಚಕ್ಷುರಿಂದ್ರಿಯ ವರ್ಣ ಮತ್ತು ಸಂಸ್ಥಾನ (ಎಂದರೆ ರೂಪ) ಎಂದು ಎರಡು ಬಗೆ. ನೀಲ, ಪೀತ, ಲೋಹಿತ, ಅವದಾತ (ಬಿಳಿ) ಇವು ವರ್ಣ; ಉದ್ದ, ಗಿಡ್ಡ, ವರ್ತುಲ, ಚಚ್ಚೌಕ, ಎತ್ತರ, ಸರಳ, ವಕ್ರ–ಇವೆಲ್ಲ ಸಂಸ್ಥಾನ. ಶ್ರೋತ್ರೇಂದ್ರಿಯ (ಶಬ್ದವಿಷಯ) ಎಂಟು ಬಗೆ. ಘ್ರಾಣೇಂದ್ರಿಯ (ಗಂಧವಿಷಯ), ದುರ್ಗಂಧ, ಸಮಗಂಧ, ವಿಷಮಗಂಧ ಎಂದು ಮೂರು ಬಗೆ. ಜಿಹ್ವೇಂದ್ರಿಯ (ರಸವಿಷಯ) ಮಧುರ, ಆಮ್ಲ, ಲವಣ, ಕಟು, ತಿಕ್ತ, ಕಷಾಯ ಎಂದು ಆರು ವಿಧ. ಕಾಯೇಂದ್ರಿಯ (ಸ್ಪರ್ಶವಿಷಯ) ಆಪ, ತೇಜ, ವಾಯು, ಪೃಥಿವೀ ಎಂಬ ನಾಲ್ಕು ಬಗೆಗಳಲ್ಲಿ ಭೌತಿಕಸ್ಪರ್ಶವಿಷಯವೆನಿಸುತ್ತದೆ. ಶ್ಲಕ್ಷ್ಣತ್ವ , ಕರ್ಕಶತ್ವ, ಲಘುತ್ವ, ಗುರುತ್ವ, ಶೀತ, ಜಿಘತ್ಸಾ (ಹಸಿವು), ಪಿಪಾಸಾ (ನೀರಡಿಕೆ) ಎಂಬ ಏಳು ಬಗೆಗಳಲ್ಲಿ ಭೌತಿಕ ಸ್ಪರ್ಶವಿಷಯವೆನಿಸುತ್ತದೆ. ಇವರು ಪಂಚೇಂದ್ರಿಯಗಳನ್ನು ಚಿತ್ತೋತ್ಪಾದ ಸಮರ್ಥವಾದುದೆಂದು ಬಣ್ಣಿಸುತ್ತಾರೆ. ಒಂದೊಂದು ಇಂದ್ರಿಯಕ್ಕೂ ಅನುರೂಪವಾದ ವಿಜ್ಞಾನವಿದೆ; ಮನೋವಿಜ್ಞಾನವೂ ಸೇರಿದಂತೆ ಆರು ಇಂದ್ರಿಯ ವಿಜ್ಞಾನಗಳು ವಿಜ್ಞಾನಸ್ಕಂಧವೆನಿಸಿಕೊಳ್ಳುತ್ತವೆ. ಮೊದಲ ಐದು ವಿಜ್ಞಾನಗಳಿಗೆ

ಸ್ವಭಾವ ನಿರ್ದೇಶವಿದೆ. ಎಂದರೆ ಇಂದ್ರಿಯಸಹಜವಾದ ವ್ಯಾಪಾರಗಳಿಂದ ವಿಶಿಷ್ಟವಾದ ವಿಷಯವನ್ನಷ್ಟೇ ಅರಿಯುವ ಸಾಮರ್ಥ್ಯವಿದೆ. ಸಂಪೂರ್ಣವಾದ ನಿರ್ದೇಶನಶಕ್ತಿಯಿಲ್ಲದಿರುವುದರಿಂದ ಇವನ್ನು ಅನಿರ್ದೇಶನವೆನ್ನುತ್ತಾರೆ. ಆರನೆಯದಾದ ಮನೋವಿಜ್ಞಾನ ಪ್ರಯೋಗನಿರ್ದೇಶ ಮತ್ತು ಅನುಸ್ಮೃತಿನಿರ್ದೇಶಗಳಿಂದ ಸಂಪನ್ನವಾದುದು, ಆದುದರಿಂದ ಇದನ್ನು ಸನಿರ್ದೇಶವೆನ್ನುತ್ತಾರೆ.

ಪ್ರತಿಯೊಂದು ಇಂದ್ರಿಯಕ್ಕೂ ಪ್ರತ್ಯಕ್ಷ ವ್ಯಾಪಾರವನ್ನು ಉತ್ಪತ್ತಿ ಮಾಡುವುದು, ವಿಷಯಗಳಿಂದ ಉದ್ಬೋಧನೆ ಪಡೆಯುವುದು ಮತ್ತು ಜೀವಿಯನ್ನು ಸಂರಕ್ಷಿಸುವುದು– ಈ ಮೂರು ಗುಣಗಳಿವೆಯೆಂದು ಧರ್ಮತ್ರಾತ ಹೇಳುತ್ತಾನೆ. (ಎಸ್.ಕೆ.ಆರ್.)

**ಇಂಧನ:** ದಹನದಿಂದ ಉಷ್ಣೋತ್ಪಾದನೆ ಮಾಡುವ ವಸ್ತು (ಫ್ಯುಯೆಲ್). ಉರುವಲು ಪರ್ಯಾಯ ಪದ. ಉದಾ: ಕಲ್ಲಿದ್ದಲು, ಕಲ್ಲೆಣ್ಣೆ, ಪೆಟ್ರೋಲಿಯಂ ಅಥವಾ ಯುರೇನಿಯಂ. ಹೆಚ್ಚಾಗಿ ಎಲ್ಲ ಇಂಧನಗಳೂ ಇಂಗಾಲಪೂರಿತವಾದವು. ಗಾಳಿಯಲ್ಲಿ ಅಥವಾ ಗಾಳಿಯಿಂದ ಪಡೆದ ಆಕ್ಸಿಜನ್ನಿನಲ್ಲಿ ಈ ಇಂಗಾಲಾಂಶ ದಹಿಸುವಾಗ ಉಷ್ಣಶಕ್ತಿ ಉತ್ಪಾದನೆ ಆಗುತ್ತದೆ. ಈ ಸಾಮಾನ್ಯಸೂತ್ರಕ್ಕೆ ಗಮನಾರ್ಹ ಅಪವಾದಗಳು ರಾಸಾಯನಿಕ ಇಂಧನ ಮತ್ತು ಲೋಹಾಧಾರಿತ ಇಂಧನ.

**ಇಂಧನಗಳಿಗೆ ಇರಬೇಕಾದ ಪ್ರಧಾನ ಗುಣಗಳು:** 1. ಅಧಿಕ ಕ್ಯಾಲರಿ ಮೌಲ್ಯ (ಕೆಲೊರಿಫಿಕ್ ವ್ಯಾಲ್ಯೂ). ನಿರ್ದಿಷ್ಟ ಭಾರದ ಇಂಧನದಿಂದ ಎಷ್ಟು ಹೆಚ್ಚು ಉಷ್ಣ ಪಡೆಯಬಹುದು ಎಂಬುದರ ಮೇಲೆ ಅದರ ಮೌಲ್ಯಮಾಪನವಾಗುವುದು. 2. ದಹನಕ್ರಿಯಾ ವೇಗ ಸಾಧಾರಣವಾಗಿರಬೇಕು. ಯಾವುದೇ ಇಂಧನದಿಂದ ಮೌಲ್ಯ ಮತ್ತು ದಹಿಸುವ ಸ್ಥಳಾವಕಾಶಗಳನ್ನು ಅವಲಂಬಿಸಿರುತ್ತದೆ. ಇಂಗಾಲಪೂರಿತ ಇಂಧನಗಳಿಂದ 2800$^0$ ಸೆ. ಮೀರಿದ ಉಷ್ಣತೆಯನ್ನು ಪಡೆದ ದಾಖಲೆಗಳಿಲ್ಲ. ಥರ್ಮೈಟ್ ಮಿಶ್ರಣದಿಂದ ಕೆಲವೇ ಸೆಕೆಂಡುಗಳಲ್ಲಿ 3500$^0$ ಸೆ. ಉಷ್ಣತೆ ಮೂಡುವುದೆಂಬುದು ನಿಜ. ಆದರೆ ಅದರ ಉಷ್ಣದಾಯಕ ಮೌಲ್ಯ ಅಲ್ಪ. ಉಷ್ಣದ ಸರಬರಾಜು ಸತತವಾಗಿದ್ದರೆ ಮಾತ್ರ ಇಂಧನಕ್ಕೆ ಪ್ರಾಶಸ್ತ್ಯ. ಹೀಗಾಗಲು ಸಾಧಾರಣ ವೇಗದಲ್ಲಿ ಇಂಧನವನ್ನು ದಹಿಸುವುದು ಅವಶ್ಯಕ. 3. ಉತ್ಪಾದನ ವೆಚ್ಚ ಕಡಿಮೆಯಾಗಿರಬೇಕು. ಕೈಗಾರಿಕೆಯನ್ನು ಸ್ಥಾಪಿಸುವ ಮುನ್ನ ರಾಸಾಯನಿಕ ತಂತ್ರಜ್ಞ ಅಗ್ಗದ ಇಂಧನದ ತಯಾರಿಕೆಗೆ ಪ್ರಥಮ ಗಮನ ನೀಡುತ್ತಾನೆ. ಇಂಧನದ ಬೆಲೆಯಲ್ಲಿ ಸ್ವಲ್ಪ ಏರಿಕೆಯಾದರೂ ಒಟ್ಟಾರೆ ಸಹಸ್ರಾರು ರೂಪಾಯಿಗಳು ನಷ್ಟವಾಗುವ ಸಂಭವವಿದೆ. 4. ಸಾಗಾಣಿಕೆಯ ಸೌಲಭ್ಯ: ಇಂಧನದ ಮೂಲದ ಬಳಿ ಕಾರ್ಖಾನೆಯನ್ನು ಸ್ಥಾಪಿಸುವುದು ಯುಕ್ತ. ಆದರೆ ಸಾಮಾನ್ಯ ಪರಿಸ್ಥಿತಿ ತದ್ವಿರುದ್ಧ. ನಗರಗಳಲ್ಲಿ ಕಾರ್ಖಾನೆಗಳಿದ್ದು ಇಂಧನವನ್ನು ಒಳಪ್ರದೇಶಗಳಿಗೆ ಸಾಗಿಸುವ ಸಂದರ್ಭಗಳೇ ಹೆಚ್ಚು. ಇದರಿಂದ ಸಾಗಾಣಿಕೆಯ ವೆಚ್ಚವೂ ಸೇರಿ ಇಂಧನದ ಬೆಲೆ ದುಬಾರಿಯಾಗುವುದು. ಅನಿಲ ಇಂಧನಗಳನ್ನು ಹತ್ತಿರದ ಪ್ರದೇಶಗಳಿಗೆ ಸಾಗಿಸುವುದು ಸುಲಭ. ಘನ ಮತ್ತು ದ್ರವರೂಪದ ಇಂಧನಗಳನ್ನು ದೂರಕ್ಕೆ ಸಾಗಿಸುವುದು ಕಷ್ಟವಾಗಲಾರದು. 5. ಜ್ವಲನಬಿಂದು (ಇಗ್ನಿಷನ್ ಪಾಯಿಂಟ್): ಇಂಧನದ ದಾಸ್ತಾನು ಮತ್ತು ಸಾಗಾಣಿಕೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವಿದು. ಕಡಿಮೆ ಉಷ್ಣತೆಯಲ್ಲಿ ದಹನಪ್ರವೃತ್ತಿಯಿರುವ ಇಂಧನಗಳಿಂದ ಅಗ್ನಿಪ್ರಕರಣಗಳು ಹೆಚ್ಚು ಸಂಭವನೀಯ. ಜ್ವಲನಬಿಂದು ಹೆಚ್ಚಾಗಿರುವುದೂ ಅಪೇಕ್ಷಣೀಯವಲ್ಲ. ಏಕೆಂದರೆ ಅಂಥ ಇಂಧನಗಳ ದಾಸ್ತಾನು ಮತ್ತು ಸಾಗಾಣಿಕೆ ಎಷ್ಟು ಸುಲಭವೋ ಅವನ್ನು ಹೊತ್ತಿಸಿ ಉಷ್ಣ ಪಡೆಯುವುದೂ ಅಷ್ಟೇ ಪ್ರಯಾಸ. 6. ದಹ್ಯಗುಣವಿರದ ವಸ್ತುಗಳ ಅಂಶ ಆದಷ್ಟು ಕಡಿಮೆ ಇರುವುದು ಲೇಸು. ಕೆಲವು ಸಂದರ್ಭಗಳಲ್ಲಿ (ಮುಖ್ಯವಾಗಿ ಕಲ್ಲಿದ್ದಲು) ದಹನಯೋಗ್ಯವಲ್ಲದ ವಸ್ತುಗಳು ಹೆಚ್ಚಾಗಿದ್ದು ಅವು ಬೂದಿಯಾಗಿ ಉಳಿಯುವುವು. ಅಂಥ ಇಂಧನಗಳ ಉಷ್ಣದಾಯಕಮೌಲ್ಯ ಕಡಿಮೆ. 7. ಅಸಹ್ಯ ಉಪವಸ್ತುಗಳು ಬಿಡುಗಡೆಯಾಗಬಾರದು. ಕೆಲವು ಇಂಧನಗಳನ್ನು ಉರಿಸಿದಾಗ ದುರ್ವಾಸನೆಯುಳ್ಳ ಅನಿಲಗಳು ಹೊರಬೀಳುವುದರಿಂದ ಅಂಥವನ್ನು ಕೈಗಾರಿಕೆಯಲ್ಲಿ ಬಳಸುವಂತಿಲ್ಲ.

**ಇಂಧನಗಳ ವರ್ಗೀಕರಣ:** ಇಂಧನಗಳು ಸಸ್ಯಜನ್ಯವಾಗಿದ್ದರೆ ಸಾವಯವ (ಆರ್ಗ್ಯಾನಿಕ್) ವಸ್ತುಗಳಾಗಿಯೂ ಖನಿಜಸಂಬಂಧ ಹೊಂದಿದ್ದರೆ ನಿರವಯವ (ಇನಾರ್ಗ್ಯಾನಿಕ್) ವಸ್ತುಗಳಾಗಿಯೂ ಇರುತ್ತವೆ. ಅವು ಪ್ರಕೃತಿದತ್ತವಾಗಿರಬಹುದು ಅಥವಾ ಮನುಷ್ಯಕೃತವಾಗಿರಬಹುದು (ಕೃತಕ ಇಂಧನ). ಈ ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ಇಂಧನಗಳನ್ನು ಕೆಳಕಂಡಂತೆ ಸ್ಥೂಲವಾಗಿ ವಿಂಗಡಿಸಬಹುದು:

| ಭೌತಸ್ಥಿತಿ | ನೈಸರ್ಗಿಕ ಇಂಧನಗಳು | ಕೃತಕ ಇಂಧನಗಳು |
|---|---|---|
| ಘನ | ಸೌದೆ. ಪೀಟ್, ಲಿಗ್ನೈಟ್, | ಇದ್ದಲು, ಕೋಕ್ ಬ್ರಿಕೆಟ್ಟುಗಳು. |
| ದ್ರವ | ಕಲ್ಲಿದ್ದಲು, ಆಂಥ್ರಸೈಟ್. ಪೆಟ್ರೋಲಿಯಂಜನ್ಯ ವಸ್ತುಗಳು | ಆಲ್ಕೊಹಾಲ್, ಕೃತಕ ಪೆಟ್ರೋಲ್, ಕೊಲಾಯ್ಡಲ್ ಇಂಧನ. |
| ಅನಿಲ | ನೈಸರ್ಗಿಕ ಅನಿಲ | ಕಲ್ಲಿದ್ದಲು ಅನಿಲ, ಜಲಾನಿಲ,ಜ್ವಲನಾನಿಲ, ಅರೆಜಲಾನಿಲ, ತೈಲಾನಿಲ, ಗ್ರಾಮ ಸಾರಾನಿಲ, ಅಸಿಟಲೀನ್, ಬ್ಲೌ ಅನಿಲ. |

ಇಂಧನಗಳ ಉಷ್ಣದಾಯಕ ಮೌಲ್ಯವನ್ನು ಅಳೆಯಲು ಎರಡು ಮಾನಗಳಿವೆ: 1. ಬ್ರಿಟಿಷ್ ಉಷ್ಣ ಏಕಮಾನ (ಬ್ರಿಟಿಷ್ ಥರ್ಮಲ್ ಯೂನಿಟ್, BTU.). ಒಂದು ಪೌಂಡು ನೀರಿನ ಉಷ್ಣತೆಯನ್ನು 32$^0$–212$^0$ ಸೆ.ಗೆ ಏರಿಸಲು ಅಗತ್ಯವಾದ ಉಷ್ಣದ 1/180 ಭಾಗ. ಇದರ ಸಂಕ್ಷೇಪರೂಪ BTU. 2. ಕ್ಯಾಲರಿ (ಸರಾಸರಿ) (ಮೀನ್‌ಕ್ಯಾಲರಿ): ಒಂದು ಗ್ರಾಂ ನೀರಿನ ಉಷ್ಣತೆಯನ್ನು 0$^0$–100$^0$ ಸೆ.ಗೆ ಏರಿಸಲು ಅಗತ್ಯವಾದ ಉಷ್ಣದ 1/100 ಭಾಗ.

ಈ ಮಾನಗಳ ಪರಸ್ಪರ ಸಂಬಂಧವನ್ನು ಕೆಳಕಂಡ ಕೋಷ್ಟಕ ತಿಳಿಸುತ್ತದೆ:

1 ಬಿ.ಟಿ.ಯು = 252.0 ಕ್ಯಾಲರಿ.

1 ಕ್ಯಾಲರಿ/ಗ್ರಾಂ = 1.8 ಬಿ.ಟಿ.ಯು./ಪೌಂ.

ಘನ ಮತ್ತು ದ್ರವೇಂಧನಗಳ ಉಷ್ಣದಾಯಕ ಮೌಲ್ಯವನ್ನು ಮೇಲ್ಕಂಡ ಯಾವುದಾದರೊಂದು ಮಾನದಲ್ಲಿ ಸೂಚಿಸಬಹುದು. ಆದರೆ ಅನಿಲ ಇಂಧನಗಳ ಉಷ್ಣದಾಯಕ ಮೌಲ್ಯವನ್ನು ವರದಿ ಮಾಡಲು ಬ್ರಿಟಿಷ್ ಉಷ್ಣಏಕಮಾನವನ್ನು ಬಳಸುವುದು ವಾಡಿಕೆ.

**ಘನ ಇಂಧನಗಳು (ನೈಸರ್ಗಿಕ): 1. ಸೌದೆ:** ಭಾರತದಲ್ಲಿ ಹೇರಳವಾಗಿ ದೊರೆಯುವ ಮುಖ್ಯ ಘನ ಇಂಧನವಿದು. ಅನೇಕ ಅರಣ್ಯಗಳನ್ನು ಇನ್ನೂ ಉಪಯೋಗಿಸಿಕೊಂಡಿಲ್ಲ. ಇಲ್ಲದಿದ್ದರೆ ಸೌದೆ ನಮಗೆ ಶಾಶ್ವತ ಇಂಧನವಾಗುತ್ತಿತ್ತು. ಅದರಲ್ಲಿರುವುದು ಪ್ರಧಾನವಾಗಿ ಸೆಲ್ಯುಲೋಸ್. ಒಣಗಿದ ಸೌದೆಯಲ್ಲಿ ಸುಮಾರು ಶೇ.50 ಇಂಗಾಲ, ಶೇ.35 ಆಕ್ಸಿಜನ್, ಶೇ.7 ನೈಟ್ರೋಜನ್, ಶೇ.6 ಹೈಡ್ರೋಜನ್, ಶೇ.2 ಬೂದಿ ಇವೆ. ಈ ಉರುವಲಿಗೆ ಕೆಲವು ಮುಖ್ಯ ಅನುಕೂಲಗಳಿವೆ. 1. ಶೀಘ್ರ ದಹನಗುಣ–ಇತರ ಇಂಧನಗಳನ್ನು ಹೊತ್ತಿಸಲು ಇದು ಸಹಕಾರಿ. 2. ಬೂದಿ ಮತ್ತು ಮಸಿ (ಸೂಟ್) ಅಂಶ ಅಲ್ಪ. ಆದ್ದರಿಂದ ಗಾಜನ್ನು ಕರಗಿಸುವುದು, ಪಿಂಗಾಣಿ ವಸ್ತುಗಳನ್ನು ಸುಡುವುದು ಇತ್ಯಾದಿ ಉದ್ಯಮಗಳಲ್ಲಿ ಇದನ್ನು ನಿರಾತಂಕವಾಗಿ ಬಳಸಬಹುದು. 3. ನಿಡಿದಾದ ಜ್ವಾಲೆ ಕೊಡುತ್ತದೆ. ಆದರೆ ಇದರಲ್ಲಿ ನೀರಿನ ಅಂಶ ಹೆಚ್ಚು. ಜನ್ಯ ಉಷ್ಣದ ಒಂದು ಭಾಗ ಈ ತೇವಾಂಶವನ್ನು ಹಬೆಯನ್ನಾಗಿ ಮಾಡಲು ಅಪವ್ಯಯವಾಗುತ್ತದೆ. ಆದ್ದರಿಂದ ಸೌದೆಯನ್ನು 125$^0$–140$^0$ ಸೆ.ನಲ್ಲಿ ಒಣಗಿಸಿ ಉಪಯೋಗಿಸುವುದು ಕ್ಷೇಮ. ಒಣಗಿದ ಸೌದೆಯನ್ನು ಉರಿಸಿ ಪರಮಾವಧಿ 800$^0$ ಸೆ. ಉಷ್ಣತೆ ಮುಟ್ಟಬಹುದು. ಗಾಳಿಯಲ್ಲಿ ಒಣಗಿಸಿದ ಸೌದೆಯ ಉಷ್ಣದಾಯಕ ಮೌಲ್ಯ, ಕಿಲೋಗ್ರಾಮಿಗೆ 3000–4000 ಕ್ಯಾಲರಿಗಳಷ್ಟು ಇದೆ.

**2. ಸಸ್ಯಾಂಗಾರ (ಪೀಟ್):** ಜೌಗು ಪ್ರದೇಶಗಳಲ್ಲಿ ಕೊಳೆಯುವ ಸಸ್ಯಗಳು ಕ್ರಮೇಣ ಪೀಟ್ ಆಗುತ್ತವೆ. ಯುರೋಪಿನ ಕೆಲವು ಭಾಗಗಳಲ್ಲಿ ಪೀಟ್ ವಿಪುಲವಾಗಿ ದೊರೆಯುತ್ತದೆ. ಅದರ ಉಷ್ಣದಾಯಕ ಮೌಲ್ಯ ಕಿಲೋಗ್ರಾಮಿಗೆ 4000–5000 ಕ್ಯಾಲರಿಗಳು. ಇದರಲ್ಲಿ ನಿರವಯವ ವಸ್ತುಗಳ ಮತ್ತು ತೇವದ ಭಾಗ ಹೆಚ್ಚು. ದಹನಾನಂತರ ಇದು ಹುಡಿಯಾಗಿ ತನ್ನಷ್ಟಕೆ ನಂದಿಹೋಗುವ ಪ್ರವೃತ್ತಿ ಹೊಂದಿದೆ. ಆದ್ದರಿಂದ ಆಗಿಂದಾಗ್ಗೆ ಉರಿಯನ್ನು ಕೆದಕುತ್ತಿರುವುದು ಅಗತ್ಯ. ಸಸ್ಯಾಂಗಾರದ ನಿಕ್ಷೇಪಗಳು (ಮುಖ್ಯವಾಗಿ ಸಮಶೀತೋಷ್ಣ ವಾಯುಗುಣದಲ್ಲಿ) ಸಸ್ಯ ಪದಾರ್ಥಗಳು ಗಾಳಿಯ ಅಭಾವ ಪರಿಸ್ಥಿತಿಯಲ್ಲಿ ಶೇಖರವಾಗಿ ಅಂಶಭಾಗ ಕೊಳೆತು ಬ್ಯಾಕ್ಟೀರಿಯದ ಚಟುವಟಿಕೆಯಿಂದ ರೂಪುಗೊಳ್ಳುತ್ತವೆ. ಈ ನಿಕ್ಷೇಪಗಳು ಭಾವೀ ಕಲ್ಲಿದ್ದಲಿನ ನಿಕ್ಷೇಪಗಳ ಪ್ರದೇಶಗಳು. ಇವು ಉತ್ತರ ಅಮೆರಿಕ, ರಷ್ಯ, ಸ್ವೀಡನ್, ಡೆನ್ಮಾರ್ಕ್, ಜರ್ಮನಿ ಮುಂತಾದ ದೇಶಗಳಲ್ಲಿವೆ.

**3. ಕಂದು ಕಲ್ಲಿದ್ದಲು (ಲಿಗ್ನೈಟ್) :** ಭೂವಿಜ್ಞಾನದ ಪ್ರಕಾರ ಇದು ಕಲ್ಲಿದ್ದಲಿಗಿಂತ ಈಚೆಗೆ ಭೂಗರ್ಭದಲ್ಲಿ ರೂಪಿತವಾದುದು. ಪೀಟ್ ಮತ್ತು ಬಿಟೂಮಿನ್ ನಡುವಣ ಸ್ಥಿತಿ ಲಿಗ್ನೈಟ್ ಎನ್ನಬಹುದು. ಇದರ ಜ್ವಾಲೆ ಸಾಕಷ್ಟು ಉದ್ದವಾಗಿರುವುದು. ಉಷ್ಣದಾಯಕ ಮೌಲ್ಯ ಕಿಲೋಗ್ರಾಮಿಗೆ 4000–6000 ಕ್ಯಾಲರಿಗಳು. ನಿತ್ಯಬಳಕೆಯಲ್ಲಿ, ಹಬೆ ಹಂಡೆಕಾಯಿಸಲು ಮತ್ತು ಕೈಗಾರಿಕಾ ಪ್ರಮಾಣದಲ್ಲಿ ಬಾಷ್ಪೀಕರಣಕ್ಕೆ ಇದರ ಉಪಯೋಗ ವಿಶೇಷವಾಗಿದೆ. ದಕ್ಷಿಣ ಭಾರತದಲ್ಲಿರುವ ನೈವೇಲಿ ನಿಕ್ಷೇಪದಿಂದ ಪ್ರತಿವರ್ಷ 5 ದಶಲಕ್ಷ ಟನ್‌ಗಳಷ್ಟು ಲಿಗ್ನೈಟ್ ಹೊರತೆಗೆಯಲಾಗುತ್ತಿದೆ. ಇದಲ್ಲದೆ ಕಾಶ್ಮೀರ ಮತ್ತು ಅಸ್ಸಾಂಗಳಲ್ಲಿಯೂ ಕಾಣಬರುತ್ತವೆ.

**4. ಕಲ್ಲಿದ್ದಲು:** ದೃಢ ಮತ್ತು ಭಿದುರ ಕಾರ್ಬನೇಷಿಯಸ್ (ಇಂಗಾಲ ಯುಕ್ತ) ಶಿಲೆಗಳ ಸಾಮಾನ್ಯನಾಮ. ಅತಿ ಮುಖ್ಯವಾದ ಘನ ಇಂಧನ. ಭೂಪದರಗಳ ಸೇರಿಹೋದ ಪುರಾತನ ಸಸ್ಯಾವಶೇಷಗಳು ಅಲ್ಲಿನ ವಿಪರೀತ ಒತ್ತಡ ಮತ್ತು ಉಷ್ಣದ ಪರಿಣಾಮವಾಗಿ ಇಂದಿನ ಕಲ್ಲಿದ್ದಲ ಗಣಿಗಳಾಗಿವೆ. ಕಲ್ಲಿದ್ದಲಿನಲ್ಲಿ ವಿವಿಧ ಜಾತಿಗಳಿವೆ. ಬಿಟೂಮಿನ್, ಕ್ಯಾನಲ್ ಮತ್ತು ಆ್ಯಂಥ್ರಸೈಟ್ ಪ್ರಮುಖ ದರ್ಜೆಗಳು. ಇದರ ಉಷ್ಣದಾಯಕ ಮೌಲ್ಯ ಕಿಲೋಗ್ರಾಮಿಗೆ 6,000 ಕ್ಯಾಲರಿಗಳು (**ನೋಡಿ– ಕಲ್ಲಿದ್ದಲು**).

**5. ಆಂಥ್ರಸೈಟ್:** ಬಲು ಗಡುಸಾದ ಉತ್ಕೃಷ್ಟ ಕಲ್ಲಿದ್ದಲು. ಇದರಲ್ಲಿರುವ ಹೈಡ್ರೋಜನ್ ಮತ್ತು ಇತರ ಬಾಷ್ಪಶೀಲ (ವೋಲಟೈಲ್) ವಸ್ತುಗಳ ಭಾಗ ಸ್ವಲ್ಪ. ಉಷ್ಣದಾಯಕ ಮೌಲ್ಯ ಕಿಲೋಗ್ರಾಮಿಗೆ 7500–8500 ಕ್ಯಾಲರಿಗಳು. ನೀರು, ಬೂದಿ ಕ್ಲೋರಿನ್ ಸಲ್ಫರ್ ಮತ್ತು ಫಾಸ್ಫರಸ್ ಸಂಯುಕ್ತಗಳು ಮುಖ್ಯ ಕಲ್ಮಶಗಳು. ಬೂದಿಯ ಅಂಶ ಹೆಚ್ಚಾಗಿರುವುದರಿಂದ ಕೆಲವು ಕೈಗಾರಿಕೆಗಳಲ್ಲಿ ಈ ಕಲ್ಲಿದ್ದಲ ಬಳಕೆ ನಿಷಿದ್ಧ.

ಮೇಲೆ ಹೇಳಿದ ಇಂಧನಗಳ ರಾಸಾಯನಿಕ ಸಂಯೋಜನೆಯನ್ನು ಕೆಳಗಿನ ಕೋಷ್ಟಕ ಕ್ರೋಡೀಕರಿಸಿದೆ: (ಸಂಖ್ಯೆಗಳು ಶೇಕಡಾವಾರು):

| ಕಲ್ಲಿದ್ದಲಿನ ವಿಧ | ಇಂಗಾಲ | ಹೈಡ್ರೊಜನ್ | ಆಕ್ಸಿಜನ್ | ನೈಟ್ರೊಜನ್ | ಗಂಧಕ | ಬೂದಿ |
|---|---|---|---|---|---|---|
| ಸಸ್ಯಾಂಗಾರ (ಪೀಟ್) | 58.0 | 6.3 | 30.5 | 0.9 | ಛಾಯೆ | 4.3 |
| ಲಿಗ್ನೈಟ್ | 67.0 | 5.1 | 19.5 | 1.1 | 1.0 | 6.3 |
| ಬಿಟೂಮಿನಸ್ ಕಲ್ಲಿದ್ದಲು | 77.0 | 5.0 | 7.0 | 1.5 | 1.5 | 8.0 |
| ಆಂಥ್ರಸೈಟ್ | 90.0 | 2.5 | 2.5 | 0.5 | 0.5 | 4.0 |

**ಕೃತಕ ಇಂಧನಗಳು: 1. ಇದ್ದಲು:** ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದಲು ತಯಾರಿಸುವ ವಿಧಾನ–ಮೊದಲು ಸೌದೆಯನ್ನು ಗೋಪುರವಾಗಿ ಪೇರಿಸುತ್ತಾರೆ. ಗಾಳಿ ಸಂಚಾರಕ್ಕೆ ಅನುಕೂಲಿಸುವಂತೆ ರಾಶಿಯ ಮಧ್ಯ ಒಂದು ರಂಧ್ರವಿರುವುದು. ರಾಶಿಯ ಹೊರಮೈಯನ್ನು ಹುಲ್ಲಿನ ಹೆಪ್ಪಿನಿಂದ ಮುಚ್ಚಿ ತಳದಲ್ಲಿ ಬೆಂಕಿ ಹಾಕುವರು. ಆಗ ಸೌದೆ ವಿಭಜಿಸುವುದು. ಉತ್ಪತ್ತಿಯಾದ ಅನಿಲಗಳು ರಂಧ್ರದ ಮೇಲ್ಭಾಗದಲ್ಲಿ ಉಳಿಯುತ್ತವೆ. ಉರಿ ನೀಲಿ ಬಣ್ಣಕ್ಕೆ ತಿರುಗಿದಾಗ, ವಿಭಜನೆ ಪೂರ್ಣವಾಗುವುದು. ಆಗ ರಾಶಿಯನ್ನು ಮಣ್ಣಿನಿಂದ ಮುಚ್ಚಿ ಆರಲು ಬಿಡುವರು. ಬೆಂದಾಗ ಇದ್ದಲು ಸಿದ್ಧವಾಗಿರುತ್ತದೆ. ಕಾರ್ಖಾನೆಗಳಲ್ಲಾದರೆ ಮರದ ತುಂಡುಗಳನ್ನು ರಿಟಾರ್ಟುಗಳಲ್ಲಿಟ್ಟು ಗಾಳಿಯ ಸಂಪರ್ಕವಿಲ್ಲದಂತೆ ಹೊರಗಿನಿಂದ ಕಾಯಿಸುವರು. ಆಗ ಅಸಿಟಿಕ್ ಆಮ್ಲ, ಮಿಥೆನಾಲ್ ಮತ್ತು ಅಸಿಟೋನ್ ಇರುವ ಪೈರೋಲಿಗ್ನಿಯಸ್ ಆಮ್ಲ ಮುಖ್ಯವಸ್ತುವಾಗಿಯೂ ಇದ್ದಲು ಉಪವಸ್ತುವಾಗಿಯೂ ದೊರೆಯುವುವು. ಇದ್ದಲನ್ನು ಹೊತ್ತಿಸುವುದು ಸುಲಭ. ಹೆಚ್ಚು ಹೊಗೆ ಕಾರದ ಸಣ್ಣ ಜ್ವಾಲೆಯಿಂದ ಉರಿಯುವುದು. ಇದರ ಉಷ್ಣದಾಯಕ ಮೌಲ್ಯ ಕಿಲೋಗ್ರಾಮಿಗೆ 6000–8000 ಕ್ಯಾಲರಿಗಳು, ಉನ್ನತ ದರ್ಜೆಯ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಯಲ್ಲಿ ಬಳಸುವರು.

**2. ಕೋಕ್ (ಕಲ್ಲಿದ್ದಲ ಕಿಟ್ಟ):** ಕಲ್ಲಿದ್ದಲನ್ನು ವಿನಾಶಕ ಬಾಷ್ಪ ಸಾಂದ್ರೀಕರಣಕ್ಕೆ ಒಳಪಡಿಸಿದಾಗ ಹೊಳೆಯುವ ಸರಂಧ್ರ ರಚನೆಯುಳ್ಳ ಪದಾರ್ಥ ಉಂಟಾಗುತ್ತದೆ. ಹೊಡೆದರೆ ಲೋಹಧ್ವನಿ ಕೊಡುತ್ತದೆ. ಇದರಲ್ಲಿ ಸಲ್ಫರ್ ಮತ್ತು ಬಾಷ್ಪಶೀಲ ವಸ್ತುಗಳು ಇಲ್ಲವೆಂದೇ ಹೇಳಬೇಕು. ಆದರೆ ಮೂಲ ಕಲ್ಲಿದ್ದಲಿನಲ್ಲಿದ್ದ ಬೂದಿಯಾಡುವ ಅಂಶಗಳು ಹೋಗಿರುವುದಿಲ್ಲ. ಹೊಗೆ ಕಾರದೆ ಸಣ್ಣದಾಗಿ ಉರಿಯುತ್ತದೆ. ಇದರ ಉಷ್ಣದಾಯಕ ಮೌಲ್ಯ ಕಿಲೋಗ್ರಾಮಿಗೆ 7000–8000 ಕ್ಯಾಲರಿಗಳು.

**3. ಬ್ರೆಕೆಟ್ಟುಗಳು**–ಕಲ್ಲಿದ್ದಲಿನ ದೂಳನ್ನು ಡಾಂಬರಿನೊಂದಿಗೆ ಕಲಸಿ ಒತ್ತಡದಿಂದ ಗಟ್ಟಿಸಿ ಮಾಡಿದ ಇಟ್ಟಿಗೆ. ಸುಲಭವಾಗಿ ಪುಡಿಯಾಗುವ ಇಂಧನಗಳನ್ನು ಆರಿಸಲು ಇದೊಂದು ಉಪಾಯ.

**ಘನ ಇಂಧನಗಳ ಉಪಯುಕ್ತತೆ ಮತ್ತು ದೋಷ:** ದ್ರವ ಮತ್ತು ಅನಿಲ ಇಂಧನಗಳಿಗಿಂತ ಇವು ಅಗ್ಗ. ಉನ್ನತ ದಹನಬಿಂದುಗಳನ್ನು ಹೊಂದಿರುವುದರಿಂದ ಸುರಕ್ಷಿತವಾಗಿ ದಾಸ್ತಾನು ಮಾಡಬಹುದು. ಆದರೆ ಸಾಕಷ್ಟು ಮೇಲ್ಮೈ ಸಂಪರ್ಕದ ಅಭಾವದಿಂದ ಅವುಗಳಿಂದ ಪಡೆಯಬಹುದಾದ ಉಷ್ಣದ ಬಲುಭಾಗ ಸೋರಿ ಹೋಗುವುದು. ಕೆಂಡ, ಕಿಟ್ಟ ಇತ್ಯಾದಿಗಳೊಡನೆ ಇಂಧನದ ಅಧಿಕಾಂಶ ಗ್ರಹಿಸದೆ ಉಳಿದುಹೋಗುವುದು. ತತ್ಫಲವಾಗಿ ಒಟ್ಟು ಉಷ್ಣದಾಯಕ ಮೌಲ್ಯದ ಕೇವಲ ಶೇ.15 ಭಾಗ ಮಾತ್ರ ಕಾರ್ಯಯೋಗ್ಯವಾಗಿರುವುದು. ಇವು ಘನ ಇಂಧನಗಳ ಪ್ರಮುಖ ದೋಷಗಳು.

**ಘನ ಇಂಧನವನ್ನು ಸದುಪಯೋಗವಾಗುವಂತೆ ಉರಿಸುವ ಬಗೆ:** ಇಂಧನವನ್ನು ಏರಿಸಿರುವ ಎತ್ತರಕ್ಕೆ ಅನುಗುಣವಾಗಿ ಅಗತ್ಯ ಪ್ರಮಾಣ ಗಾಳಿಯನ್ನು ಹಾಯಿಸಿ ಅದರಲ್ಲಿರುವ ಆಕ್ಸಿಜನ್ನೆಲ್ಲ ಖರ್ಚಾಗುವಂತೆ ಮಾಡಬೇಕು. ವಾಸ್ತವವಾಗಿ ಗಾಳಿ ನಿಯಂತ್ರಣ ಅಷ್ಟು ಸುಲಭಸಾಧ್ಯವಾದ ಕೆಲಸವಲ್ಲ. ಹೆಚ್ಚು ಕಡಿಮೆಯಾಗುವುದೇ ಸಾಮಾನ್ಯ. ಗಾಳಿಯ ಪ್ರಮಾಣ ಕಡಿತವಾದಾಗ ವಿಷವಾಯುವಾದ ಇಂಗಾಲದ ಮಾನಾಕ್ಸೈಡು ಹುಟ್ಟುವುದು. ಎರಡರಲ್ಲಿ ಮೊದಲನೆಯದೇ ವಾಸಿ. ಆದ್ದರಿಂದ ಕೈಗಾರಿಕೆಯಲ್ಲಿ ಕುಲುಮೆಗಳನ್ನು ಕಾಯಿಸುವಾಗ ಅಗತ್ಯಪ್ರಮಾಣಕ್ಕಿಂತ ಎರಡುಪಟ್ಟು ಗಾಳಿಯನ್ನು ಉಪಯೋಗಿಸುವರು. ಯಾವುದೇ ಇಂಧನ ಉರಿದಾಗ ವಾಸನೆ ಹುಟ್ಟದಂತೆ ತಡೆಯುವುದು ಒಳಿತು. ಏಕೆಂದರೆ ಅದರಿಂದ ಸಾರ್ವಜನಿಕ ಆರೋಗ್ಯಕ್ಕೆ ಕುಂದು. ವಾತಾವರಣವನ್ನೆಲ್ಲ ಕಟುವಾಸನೆ ಮುತ್ತುತ್ತದೆ. ಬಟ್ಟೆಯೂ ಕೆಡುವುದು. ಕಲ್ಲಿನ ಕಟ್ಟಡಗಳಿಗೂ ಹಾನಿಯಿದೆಯೆಂದು ತಿಳಿದಿದೆ.

**ನೈಸರ್ಗಿಕ ದ್ರವ ಇಂಧನಗಳು:** ಕೈಗಾರಿಕಾ ಮಹತ್ತ್ವವುಳ್ಳ ದ್ರವ ಇಂಧನಗಳಲ್ಲಿ ಪೆಟ್ರೋಲಿಯಂ ಪ್ಯಾರಫಿನ್ ತೈಲ ಮತ್ತು ಷೇಲ್ ಎಣ್ಣೆಗಳನ್ನು ಹೆಸರಿಸಬಹುದು. ಹೊಗೆ ಅಥವಾ ಕಾಡಿಗೆ ಹುಟ್ಟದಂತೆ ಪೆಟ್ರೋಲಿಯಂ ಅನ್ನು ಎಡೆಬಿಡದೆ ಉರಿಸಬಹುದು. ಆಂಥ್ರಸೈಟಿನಷ್ಟು ಸ್ಥೂಲವಲ್ಲ ಮತ್ತು ಹೆಚ್ಚು ಪರಿಣಾಮಕಾರಿ. ಉಷ್ಣದಾಯಕ ಮೌಲ್ಯ ಒಂದು ಕಿಗ್ರಾಂಗೆ 11,000 ಕ್ಯಾಲರಿಗಳು. ನೀಳ ಜ್ವಾಲೆ ಮತ್ತು ಅಧಿಕ ಉಷ್ಣತೆಯ ಅಗತ್ಯವಿರುವ ಎಲ್ಲ ಸನ್ನಿವೇಶಗಳಲ್ಲೂ ದ್ರವ ಸಾಧನಗಳಿಗೆ ಪ್ರಾಧಾನ್ಯವಿದೆ. ಅವನ್ನು ತುಂತುರು ರೂಪದಲ್ಲಿ ಉರಿಸುವುದು ವಾಡಿಕೆ. ಒಂದು ತುಂತುರು ಯಂತ್ರ (ಆಟೊಮೈಸರ್) ಇಂಧನವನ್ನು ಕುಲುಮೆಯೊಳಕ್ಕೆ ಎರಚುವುದು. ಅದರೊಡನೆ ಮಿತಿಮೀರಿ ಕಾಯಿಸಿದ ಹಬೆ ಅಥವಾ ಗಾಳಿಯನ್ನು ಬೆರೆಸಿ ಉರಿಸಲಾಗುವುದು. ಉಷ್ಣನಷ್ಟವನ್ನು ಅತ್ಯಲ್ಪ ಮಟ್ಟಕ್ಕೆ ಸೀಮಿತಗೊಳಿಸಬಹುದು. ಪೆಟ್ರೋಲ್ ಬಳಸುವ ಅಂತರ್ದಹನ ಯಂತ್ರಗಳ ದಕ್ಷತೆ ಪರಮಾವಧಿ ಇರುವುದು ವ್ಯಕ್ತವಾಗಿದೆ. ದ್ರವ ಇಂಧನಗಳನ್ನು ಹೊತ್ತಿಸುವುದು ಸುಲಭ. ಬೂದಿ ಹುಟ್ಟುವ ಪ್ರಸಂಗವಿಲ್ಲ. ಯಾವ ಆಕಾರದ ಟ್ಯಾಂಕುಗಳಲ್ಲಿಯಾದರೂ ತುಂಬಿ ಸಾಗಿಸಬಹುದು. ಹಡಗಿನಲ್ಲಿ ಇತರ ಸಾಮಾನುಗಳನ್ನು ತುಂಬಲಾಗದ ಸ್ಥಳವನ್ನು ಈ ರೀತಿ ವಿನಿಯೋಗಿಸಬಹುದು. ಅಲ್ಲದೆ ಸಮಾನ ಉಷ್ಣದಾಯಕ ಮೌಲ್ಯವಿರುವ ಕಲ್ಲಿದ್ದಲಿಗಿಂತ ಶೇ.30 ರಷ್ಟು ಹಗುರವಾಗಿದ್ದು ಅರ್ಧದಷ್ಟು ಸ್ಥಳವನ್ನು ಮಾತ್ರ ಆಕ್ರಮಿಸುತ್ತದೆ. ಜ್ವಲನಬಿಂದು ಕಡಿಮೆಯಾಗಿರುವುದು ಒಂದು ಕೊರತೆ. ಇದರಿಂದ ದಾಸ್ತಾನು ಮತ್ತು ಸಾಗಾಣಿಕೆಯಲ್ಲಿ ತೊಡಕುಂಟಾಗಬಹುದು. ಆದರೆ ದ್ರವ ಇಂಧನಗಳಿಂದ ಆಗುವ ಪ್ರಯೋಜನಗಳನ್ನು ಗಮನಿಸಿದರೆ ಈ ತೊಂದರೆ ಮಹತ್ತ್ವದ್ದಲ್ಲ.

**ಪೆಟ್ರೋಲಿಯಂ ಜನ್ಯ ಇಂಧನಗಳು. 1. ಡಾಂಬರು (ಟಾರ್):** ಇದನ್ನು ದ್ರವರೂಪದಲ್ಲಿಡುವುದು ಕಷ್ಟ. ಅಗತ್ಯವೆನಿಸಿದಾಗ ಕರಗಿಸಿ, ಜರಡಿಯಾಡಿಸಿ, ಕೋಕ್ ಒಲೆಯಿಂದ ಬರುವ ಅನಿಲದೊಂದಿಗೆ ಸೇರಿಸಿ ಉಪಯೋಗಿಸುವರು. ಉಕ್ಕಿನ ತಯಾರಿಕೆಗಾಗಿ ನಿಯೋಜಿತವಾದ ತೆರೆದ ಕುಲುಮೆಗಳನ್ನು (ಓಪನ್ ಹಾರ್ತ್ ಫರ್ನೆಸ್) ಹೀಗೆ ಕಾಯಿಸುವುದುಂಟು. ಅದರ ಉಷ್ಣದಾಯಕ ಮೌಲ್ಯ ಒಂದು ಪೌಂಡಿಗೆ 15,000–16,500 ಬಿ.ಟಿ.ಯು.

**2. ಇಂಧನ ತೈಲಗಳು (ಫ್ಯುಯೆಲ್ ಆಯಿಲ್ಸ್) :** ಇವುಗಳಲ್ಲಿ ಮುಖ್ಯವಾದುವುಗಳನ್ನು ಮುಂದೆ ಪಟ್ಟಿಮಾಡಿದೆ. i. ಬಾಷ್ಪಶೀಲ (ಬಾಷ್ಪಗುಣವಿರುವ) ಅಂಶಗಳು ಕನಿಷ್ಠ ಪ್ರಮಾಣದಲ್ಲಿರುವ ಕಚ್ಚಾ ಪೆಟ್ರೋಲಿಯಂ ಎಣ್ಣೆ. ii. ಬಾಷ್ಪಶೀಲ ಅಂಶಗಳು ದಾಸ್ತಾನು ಮಾಡಿದಾಗ ಅಥವಾ ಸಾಗಾಣಿಕೆಯಲ್ಲಿ ನಷ್ಟವಾಗಿ ಉಳಿದ ಪೆಟ್ರೋಲಿಯಂ. iii. ಸೀಮೆಎಣ್ಣೆಯ ಅನಂತರ ಮತ್ತು ಕೀಲೆಣ್ಣೆಯ ಮುನ್ನ ಸಾಂದ್ರೀಕರಿಸುವ ತೈಲ. iv. ಪೆಟ್ರೋಲಿಯಂ ಶುದ್ಧೀಕರಣದಲ್ಲಿ ಉಳಿಯುವ ವಸ್ತು. v. ಮೇಲ್ಕಂಡ ಎಣ್ಣೆಗಳ ಸೂಕ್ತ ಪ್ರಮಾಣಿತ ಮಿಶ್ರಣ. ಇವುಗಳ ದಹನ, ಜಾಗ್ರತೆಯಾಗಿ ದಕ್ಷತೆಯಿಂದ ನಡೆಯಬೇಕಾದರೆ ಇವನ್ನು ತುಂತುರು ರೂಪದಲ್ಲಿ ವಿಶೇಷ ದೀವಿಗೆಗಳಲ್ಲಿ ಉರಿಸಬೇಕಾಗುತ್ತದೆ. ಈ ಇಂಧನದ ಉಷ್ಣದಾಯಕ ಮೌಲ್ಯ ಪೌಂಡಿಗೆ 1,800–19,500 ಬಿ.ಟಿ.ಯು.

**3. ಸೀಮೆಎಣ್ಣೆ:** ವಿದ್ಯುತ್ತಿನ ಬಳಕೆ ಸಾರ್ವತ್ರಿಕವಾಗುತ್ತಿರುವ ಈ ಕಾಲದಲ್ಲಿ ಇದರ ಪ್ರಾಶಸ್ತ್ಯ ತಗ್ಗಿದೆ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಬೆಳಕನ್ನು ಪಡೆಯಲು ಉರುವಲಾಗಿ ಇದನ್ನು ಉಪಯೋಗಿಸುತ್ತಾರೆ.

**4. ಪೆಟ್ರೋಲ್ ಅಥವಾ ಗ್ಯಾಸೊಲಿನ್:** ಪೆಟ್ರೋಲಿಯಂ ಅಂಶಬಾಷ್ಪೀಕರಣಕ್ಕೆ ಒಳಪಟ್ಟಾಗ ಸು.$175^0$–$240^0$ ಸೆ. ಉಷ್ಣತಾಮಿತಿಯಲ್ಲಿ ದೊರೆಯುವ ಇಂಧನ. ಆಧುನಿಕ ಗ್ಯಾಸೊಲಿನ್ ಯಂತ್ರಗಳಲ್ಲಿ (ಎಂಜಿನ್ಸ್) ಬಳಸುವ ಪೆಟ್ರೋಲಿಗೆ ಈ ವಿಶಿಷ್ಟಗುಣಗಳಿರಬೇಕು : i. ಯಂತ್ರವನ್ನು ಸುಲಭವಾಗಿ ಚಲನಗೊಳಿಸಲು ಸಹಾಯಕವಾಗುವಷ್ಟು ಬಾಷ್ಪಗುಣವಿರಬೇಕು. ಬಾಷ್ಪಶೀಲತೆ ಹೆಚ್ಚಾಗಿರಲೂ ಕೂಡದು. ಏಕೆಂದರೆ ಸಾಮಾನ್ಯ ಹವಾಗುಣದಲ್ಲಿಯೂ ಆವಿ ತೊಡರಿಕೊಂಡು ಯಂತ್ರಚಾಲನೆಗೆ ಅಡ್ಡಿಯಾಗಬಹುದು. ii. ಅಂಟುಗುಣವುಳ್ಳ ಮತ್ತು ತೀಕ್ಷ್ಣಸ್ವಭಾವದ ವಸ್ತುಗಳು ಮತ್ತು ಗಂಧಕದ ಭಾಗ ಕಡಿಮೆಯಿದ್ದಷ್ಟೂ ಉತ್ತಮ. iii. ದಾಸ್ತಾನು ಮಾಡಿಟ್ಟ ಕಾಲದಲ್ಲಿ ಹೆಚ್ಚು ನಷ್ಟವಾಗಬಾರದು. iv. ಅಧಿಕ ಸಂಕೋಚ ಮತ್ತು ಅಂತರ್ದಹನ ಎಂಜಿನ್ನುಗಳಲ್ಲಿ ಬಳಸಲು ಅನುಕೂಲಿಸುವಂತೆ ಉತ್ತಮ ಆ್ಯಂಟಿನಾಕ್ ಲಕ್ಷಣಗಳಿರಬೇಕು. ಇದರ ನಿರ್ಣಯ ಮಾಡಲು ಆಕ್ಟೇನ್ ಸಂಖ್ಯೆ ಎಂಬ ಮಾನ ರೂಢಿಯಲ್ಲಿದೆ. ಪೆಟ್ರೋಲಿನ ಉಷ್ಣದಾಯಕ ಮೌಲ್ಯ ಪೌಂಡಿಗೆ 19,000–20,500 ಬಿ.ಟಿ.ಯು. ಅದರ ಆಕ್ಟೇನ್ ದರ್ಜೆಯನ್ನು ಸುಧಾರಿಸಲು ಲೆಡ್ ಟೆಟ್ರ ಈಥೈಲ್ ಮತ್ತು ಎಥಿಲೀನ್ ಡೈ ಬ್ರೋಮೈಡ್ ಮಿಶ್ರಣವನ್ನು ಸೇರಿಸುವುದು ಪದ್ಧತಿ; ಇಂಥ ಈಥೈಲ್ ಪೆಟ್ರೋಲ್ ಉರಿದಾಗ ಉಂಟಾದ ಲೆಡ್ ಬ್ರೋಮೈಡು ಯಂತ್ರದಿಂದ ಹೊರಬೀಳುವ ಅನಿಲಗಳೊಡನೆ ಪಾರಾಗುವುದು.

**ಕೃತಕ ದ್ರವ ಇಂಧನಗಳು:** ಇದರಲ್ಲಿ ಆಲ್ಕೊಹಾಲ್ ಮುಖ್ಯವಾದುದು. ಇದನ್ನು ಹಲವಾರು ಮೂಲಗಳಿಂದ ಪಡೆಯಬಹುದು. i. ಸಿದ್ಧ ಸಕ್ಕರೆಯಿರುವ ಕಾಕಂಬಿ ಮತ್ತು ದ್ರಾಕ್ಷಾರಸ; ii. ಪಿಷ್ಟಾಂಶವಿರುವ ಧಾನ್ಯಗಳು ಮತ್ತು ಆಲೂಗೆಡ್ಡೆ; iii. ಸೆಲ್ಯುಲೋಸ್ ಇರುವ ಹುಲ್ಲು ಇತ್ಯಾದಿ; iv. ಎಥಿಲೀನ್ ಮತ್ತು ಅಸಿಟಲೀನ್ ಮುಂತಾದ ಅಪರ್ಯಾಪ್ತ ಹೈಡ್ರೋಕಾರ್ಬನ್ನುಗಳು.

ನೈಸರ್ಗಿಕ ಶರ್ಕರ ಪಿಷ್ಟಾದಿಗಳಲ್ಲಿ, ಹೆಕ್ಸೋಸ್ (ಒಂದು ಅಣುವಿನಲ್ಲಿ ಆರು ಇಂಗಾಲದ ಪರಮಾಣುಗಳಿರುವ) ಸಕ್ಕರೆಗಳು ಮಾತ್ರ ಯೀಸ್ಟ್ ಸಸ್ಯದಲ್ಲಿರುವ ಸೈಮೇಸ್ ಕಿಣ್ವದ ಸಹಾಯದಿಂದ ಆಲ್ಕೊಹಾಲಿಗೆ ಪರಿವರ್ತಿತವಾಗಬಲ್ಲವು. ಆದ್ದರಿಂದ ಆಲೂಗೆಡ್ಡೆಯಲ್ಲಿರುವ

ಪಿಷ್ಟವನ್ನು ಕಿಣ್ವಗಳ ಸಹಾಯದಿಂದ ಜಲ ವಿಶ್ಲೇಷಣೆ ಮಾಡಿ ಹೆಕ್ಸೋಸ್ ಸಕ್ಕರೆಗಳನ್ನಾಗಿ ಮಾಡಿಕೊಡುವುದು ಅಗತ್ಯ. 1912ರಲ್ಲಿಯೇ ಜರ್ಮನಿಯಲ್ಲಿ ಈ ರೀತಿ ಆಲ್ಕೊಹಾಲನ್ನು ತಯಾರಿಸುತ್ತಿದ್ದರೆಂಬುದು ಸ್ಮರಣೀಯ. ಸೆಲ್ಯುಲೋಸ್ ವಸ್ತುಗಳಲ್ಲಿ ಮರದ ಹೊಟ್ಟು ಮತ್ತು ಹಿಪ್ಪೆ ಆಲ್ಕೊಹಾಲ್ ತಯಾರಿಕೆಗೆ ಅನುವಾಗಬಲ್ಲವು. ಆದರೆ ಅವನ್ನು ಮೊದಲು ಒತ್ತಡದಿಂದ ಆಮ್ಲೀಯ ಮಾಧ್ಯಮದಲ್ಲಿ ಜಲವಿಶ್ಲೇಷಣೆಗೊಳಿಸಬೇಕಾಗುತ್ತದೆ. ಆಗ ದೊರೆತ ಹೆಕ್ಸೋಸ್ ಸಕ್ಕರೆಯನ್ನು ಯೀಸ್ಟಿನಿಂದ ಹುಳಿಸಿದರೆ ಆಲ್ಕೊಹಾಲ್ ಆಗುವುದು. ಕಾಗದದ ಪಲ್ಪ್ ತಯಾರಿಸಲು ಕ್ಯಾಲ್ಸಿಯಂ ಬೈಸಲ್ಫೈಟ್ ಬಳಸುವ ಕ್ರಮವೊಂದಿದೆ. ಆಗ ಪ್ರಾಸಂಗಿಕವಾಗಿ ಸೆಲ್ಯುಲೋಸ್ ಹೆಕ್ಸೋಸ್ ಸಕ್ಕರೆಯಾಗುತ್ತದೆ. ಆದ್ದರಿಂದ ತಯಾರಿಕೆಯ ಕ್ರಮವನ್ನು ಸೂಕ್ತವಾಗಿ ಬಳಸಿಕೊಂಡರೆ ಕಾಗದದ ಕೈಗಾರಿಕೆಯಲ್ಲೂ ಆಲ್ಕೊಹಾಲನ್ನು ಉಪವಸ್ತುವಾಗಿ ಪಡೆಯುವ ಸಾಧ್ಯತೆಯಿದೆ. ಭಾರತದಲ್ಲಿ ಆಲ್ಕೊಹಾಲಿನ ತಯಾರಿಕೆಗೆ ಕಾಕಂಬಿಯೇ ಸೂಕ್ತ ಪದಾರ್ಥ. ಬೀಟ್ ಕಾಕಂಬಿಯಲ್ಲಿ ಕಬ್ಬಿನ ಕಾಕಂಬಿಗಿಂತ ಶೇ.20ರಷ್ಟು ಹೆಚ್ಚು ಸಕ್ಕರೆಯಿದೆ. ಸಕ್ಕರೆ ಕಾರ್ಖಾನೆಯಿಂದ ಒದಗುವ ಕಾಕಂಬಿಯನ್ನು ಶೇ.10 ಜಲಮಿಶ್ರಿತ ದ್ರಾವಣದಿಂದ ಮಾಡಲಾಗುವುದು. ಇದನ್ನು ದೊಡ್ಡ ದೊಡ್ಡ ಕಡಾಯಿಗಳಲ್ಲಿಟ್ಟು ಯೀಸ್ಟ್ ಸೇರಿಸಿ ಉಷ್ಣತೆಯನ್ನು $32^0$–$38^0$ ಸೆಂ. ಮಿತಿಯಲ್ಲಿ ನಿಯಂತ್ರಿಸುವರು. ಕ್ರಿಯೆಯಲ್ಲಿ ಉಷ್ಣ ಹೊರಬರುವುದರಿಂದ ತಣಿಸುವ ಸುರುಳಿಗಳ ಸಹಾಯದಿಂದ ಉಷ್ಣತೆ ಹೆಚ್ಚದಂತೆ ಎಚ್ಚರಿಕೆ ವಹಿಸಬೇಕು. ಲಭ್ಯವಾದ ದ್ರಾವಣದಲ್ಲಿ ಶೇ.8–ಶೇ.12 ಆಲ್ಕೊಹಾಲ್ ಇರುವುದು. ಅದನ್ನು ಸಾಂದ್ರೀಕರಿಸಲು ನಾನಾ ವಿಧಾನಗಳಿವೆ. ಅಂತರ್ದಹನ ಯಂತ್ರಗಳಲ್ಲಿ ಉಪಯೋಗಿಸುವ ಆಲ್ಕೊಹಾಲ್ ಶೇ.100 ರಷ್ಟು ಗುಣಮಟ್ಟದ್ದಾಗಿರಬೇಕು. ಸಾಮಾನ್ಯವಾಗಿ ಶೇ.80 ಪೆಟ್ರೋಲಿಯಂನೊಂದಿಗೆ ಶೇ.20 ಆಲ್ಕೊಹಾಲನ್ನು ಬಳಸುವುದಾದರೆ ಯಂತ್ರರಚನೆಯಲ್ಲಿ ಅಗತ್ಯ ಮಾರ್ಪಾಡು ಮಾಡಿಕೊಳ್ಳಬೇಕಾಗುತ್ತದೆ. ಭಾರತದಲ್ಲಿ ಹೇಳಿಕೊಳ್ಳುವಂಥ ಪೆಟ್ರೋಲಿಯಂ ನಿಕ್ಷೇಪಗಳಿಲ್ಲ. ಇತರ ದೇಶಗಳ ಪೆಟ್ರೋಲಿಯಂ ಸಂಗ್ರಹ ಸಹ ಕೇವಲ 50 ವರ್ಷಗಳಿಗೆ ಸಾಕಾಗುವಷ್ಟು ಮಾತ್ರ ಇದೆಯೆಂದು ಅಂದಾಜು. ಹೀಗಿರುವಾಗ ಭಾರತದಲ್ಲಿ ಕಾಕಂಬಿಯನ್ನು ಅವಲಂಬಿಸುವುದೇ ಲೇಸು.

**ಆಲ್ಕೊಹಾಲ್ ಇಂಧನದ ಅವಗುಣಗಳು:** i. ಗಣಿಯ ಬಳಿ ಪೆಟ್ರೋಲಿಯಂ ಬೆಲೆ ಎಷ್ಟಿರುವುದೋ ಅದರ ಎರಡರಷ್ಟು ಆಲ್ಕೊಹಾಲಿನದು. ಆದ್ದರಿಂದ ಪೆಟ್ರೋಲಿಯಂ ಆಲ್ಕೊಹಾಲಿಗಿಂತ ಅಗ್ಗ. ಆದರೆ ತೆರಿಗೆಯ ಹೊಂದಾಣಿಕೆಯಿಂದ ಆಲ್ಕೊಹಾಲೇ ಅಗ್ಗವಾಗಿ ದೊರೆಯವಂತೆ ಮಾಡಲು ಸಾಧ್ಯ. ii. ಆಲ್ಕೊಹಾಲನ್ನು ಉರುವಲಾಗಿ ಬಳಸುವ ಯಂತ್ರಗಳು ಚಳಿಗಾಲದಲ್ಲಿ ಸರಾಗವಾಗಿ ಕಾರ್ಯೋನ್ಮುಖವಾಗುವುದಿಲ್ಲ. iii. ಆಲ್ಕೊಹಾಲಿನ ಉಷ್ಣದಾಯಕ ಮೌಲ್ಯ ಕಿ.ಗ್ರಾಂಗೆ 6,500 ಕ್ಯಾಲರಿಗಳಾದರೆ, ಪೆಟ್ರೋಲಿಯಂನ ಉಷ್ಣದಾಯಕ ಮೌಲ್ಯ ಕಿ.ಗ್ರಾಂ.ಗೆ 11,500 ಕ್ಯಾಲರಿಗಳು. iv. ಗಾಳಿಯೊಡನೆ ಬೆರೆತ ಆಲ್ಕೊಹಾಲಿನ ಆವಿ, ಕೆಲವು ವೇಳೆ ಆಸ್ಫೋಟಿಸುವುದುಂಟು.

ಆಲ್ಕೊಹಾಲ್ ಇಂಧನದ ಪ್ರಯೋಜನಗಳನ್ನು ಗಮನಿಸಿದರೆ ಈ ಅವಗುಣಗಳು ಅಷ್ಟೊಂದು ಗಮನಾರ್ಹವಲ್ಲ. i. ಅದರ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳಿಗೆ ಎಂದೂ ಅಭಾವವಿಲ್ಲ. ii. ಅದನ್ನು ದಾಸ್ತಾನು ಮಾಡಿ ಸಾಗಿಸುವುದು ಸುಲಭ. iii. ಅದರಿಂದ ಹುಟ್ಟುವ ಬೆಂಕಿಯನ್ನು ಬಲುಬೇಗ ಆರಿಸಬಹುದು. iv. ಅದರ ದಹನ ದಕ್ಷತೆ ಹೆಚ್ಚು. ಆದ್ದರಿಂದ ಅಧಿಕ ಸಂಮರ್ದ ಪ್ರಮಾಣ (ಕಂಪ್ರೆಶನ್ ರೇಶಿಯೊ) ಸಾಧ್ಯ. v. ಯಂತ್ರಗಳ ಸವೆತ ಕಡಿಮೆ. vi. ಸ್ವಲ್ಪ ಈಥರ್ ಮತ್ತು ಅಸಿಟೋನ್ ಸೇರಿಸುವುದರಿಂದ ಆಲ್ಕೊಹಾಲಿನ ಕೆಲವು ಲೋಪಗಳನ್ನು ತಿದ್ದಬಹುದು. ಈ ಎಲ್ಲ ಕಾರಣಗಳಿಂದ ಪೆಟ್ರೋಲ್ ಆಲ್ಕೊಹಾಲ್ ಮಿಶ್ರಣ ಜನಪ್ರಿಯತೆ ಗಳಿಸುತ್ತಿದೆ.

**ಕೃತಕ ಪೆಟ್ರೋಲಿನ ತಯಾರಿಕೆ. 1. ಬರ್ಜಿಯಸ್ ವಿಧಾನ:** ಇಲ್ಲಿ ಕಲ್ಲಿದ್ದಲು ಹೈಡ್ರೊಜನ್ನನ್ನು ಹೀರುವಂತೆ ಮಾಡಿ ಪೆಟ್ರೋಲನ್ನು ಹೋಲುವ ದ್ರವವನ್ನು ತಯಾರಿಸಲಾಗುವುದು. ಕಲ್ಲಿದ್ದಲ ಪುಡಿಯನ್ನು ಶೇ.40 ಡಾಂಬರು ಅಥವಾ ಸದೃಶ ಪದಾರ್ಥದೊಡನೆ ಕಲಸಿದರೆ ಸರಿ (ಪೇಸ್ಟ್) ಉಂಟಾಗುವುದು. ಇದನ್ನು ಒತ್ತಡ ಕಡಾಯಿಯಲ್ಲಿಟ್ಟು (ಆಟೋಕ್ಲೇವ್) ಉಷ್ಣತೆಯನ್ನು $450^0$ ಸೆಂ.ನಲ್ಲಿ ನಿಯಂತ್ರಿಸಿ 200 ವಾಯುಭಾರ (ಅಟ್‍ಮಾಸ್ಫಿಯರ್) ಸಂಮರ್ದದಲ್ಲಿ ಹೈಡ್ರೊಜನ್ನನ್ನು ಹಾಯಿಸಲಾಗುವುದು. ಉಪಯೋಗಿಸುವ ವೇಗವರ್ಧನ ಮಿಶ್ರಣದಲ್ಲಿ ಮುಖ್ಯವಾಗಿ ಜಲಯುಕ್ತ ಕಬ್ಬಿಣದ ಆಕ್ಸೈಡ್ ಇರುತ್ತದೆ. ಅದಕ್ಕೆ ಲಕ್ಸ್‌ಮಾಸ್ ಎಂದು ಹೆಸರು. ಹೈಡ್ರೊಜನ್ ಅಂಶ ಕಡಿಮೆಯಾಗಿರುವ ಆಂಥ್ರಸೈಟ್ ಅನಿಲ ಹೀರಲು ತಕರಾರು ಮಾಡುತ್ತದೆ. ಆಗ ಪೆಟ್ರೋಲಿನಂತಿರುವ ದ್ರವವಸ್ತು ದೊರೆಯುವುದು. ಉಳಿದ ಸಾಂದ್ರತೈಲವನ್ನು ಮತ್ತೆ ಬಳಸಿಕೊಂಡು ವಿಧಾನ ಅವ್ಯಾಹತವಾಗಿ ನಡೆಯುವಂತೆ ಏರ್ಪಡಿಸಬಹುದು. 3.5 ಟನ್ ಕಲ್ಲಿದ್ದಲಿನಿಂದ 1 ಟನ್ ಪೆಟ್ರೋಲು ಸಿಗುತ್ತದೆ.

**2. ಜಲಾನಿಲದಿಂದ:** ಜಲಾನಿಲದಲ್ಲಿ ಪ್ರಧಾನವಾಗಿ ಇಂಗಾಲದ ಮಾನಾಕ್ಸೈಡ್ ಮತ್ತು ಹೈಡ್ರೊಜನ್, ಅಲ್ಪ ಪ್ರಮಾಣದಲ್ಲಿ ಇಂಗಾಲದ ಡೈಆಕ್ಸೈಡ್ ಮತ್ತು ನೈಟ್ರೊಜನ್ ಇವೆ. ಜರ್ಮನಿಯಲ್ಲಿ ಜಲಾನಿಲದಿಂದ ಮಿಥೆನಾಲ್ ತಯಾರಿಸಲು ಒಂದು ವಿಧಾನ ಶೋಧಿಸಲಾಯಿತು (1925). ಅಲ್ಲಿಯವರೆಗೆ ಸೌದೆಯ ವಿನಾಶಕ ಬಾಷ್ಪ ಸಾಂದ್ರೀಕರಣದಿಂದ ಅಮೆರಿಕ ಅಗತ್ಯವಾದ ಮಿಥೆನಾಲನ್ನು ತಯಾರಿಸುತ್ತಿತ್ತು. ಜರ್ಮನಿಯ ಅಗ್ಗದ ಉತ್ಪನ್ನ ಅಮೆರಿಕದ ಮಾರುಕಟ್ಟೆಯನ್ನು ಏರುಪೇರು ಮಾಡಿತೆನ್ನಬೇಕು. ಜಲಾನಿಲದೊಡನೆ ಜಲಹೈಡ್ರೊಜನ್ನನ್ನು ಬೆರೆಸಿ ಸತು ಮತ್ತು ತಾಮ್ರದ ಆಕ್ಸೈಡುಗಳ ವೇಗವರ್ಧಕ ಮಿಶ್ರಣದ ಮೇಲೆ ನಿರ್ದಿಷ್ಟ ಸಂಮರ್ದ ಮತ್ತು ಉಷ್ಣತೆಯಲ್ಲಿ ಹಾಯಿಸಿದರೆ ಮಿಥೆನಾಲ್ ಉಂಟಾಗುವುದು. ಕೆಲವು ವರ್ಷಗಳ ಅನಂತರ ಫಿಷರ್ ಮತ್ತು ಟ್ರೋಪ್ ಜಲಾನಿಲದಿಂದ ವರಿಷ್ಠ ಆಲ್ಕೊಹಾಲ್‌ಗಳನ್ನು ಸೃಷ್ಟಿಸುವ ವಿಧಾನವನ್ನು ಏಕಕಾಲದಲ್ಲಿ ಪ್ರಚುರಪಡಿಸಿದರು. ಸಂಶೋಧನೆಯ ತರುಣದಲ್ಲಿ ಹೈಡ್ರೊಕಾರ್ಬನ್ನುಗಳು, ಆಲ್ಕೊಹಾಲುಗಳು, ಆಲ್ಡಿಹೈಡುಗಳು, ಕೀಟೋನುಗಳು, ಆಮ್ಲಗಳು ಮತ್ತು ಎಸ್ಟರುಗಳ ಮಿಶ್ರಣ ಬಂದು ತೊಂದರೆಯಾಯಿತು. ಕ್ರಮೇಣ ಮೀಥೇನ್ ಮತ್ತು ಇತರ ಅನಪೇಕ್ಷಿತ ವಸ್ತುಗಳ ಉತ್ಪತ್ತಿಯನ್ನು ತಡೆಗಟ್ಟುವ ಕ್ರಮ ಬಳಕೆಗೆ ಬಂತು. ಇದಕ್ಕಾಗಿ ಮಾಡಿದ ಸುಧಾರಣೆಗಳ ವಿವರ ಹೀಗಿದೆ :

i. ಕೋಬಾಲ್ಟ್–ತಾಮ್ರ–ಮ್ಯಾಂಗನೀಸ್ ಆಕ್ಸೈಡುಗಳ ವೇಗವರ್ಧಕ ಮಿಶ್ರಣ. ii. $400^0$–$500^0$ ಸೆ. ಮಿತಿಯಲ್ಲಿ ಉಷ್ಣತೆಯ ನಿಯಂತ್ರಣ. iii. 150 ವಾಯುಭಾರ ಸಂಮರ್ದ.

ಒಂದು ಘನ ಮೀಟರ್ ಜಲಾನಿಲದಿಂದ 100 ಗ್ರಾಂ ಹೈಡ್ರೊಕಾರ್ಬನ್ನುಗಳು ಸಿದ್ಧಿಸುತ್ತವೆ. ಅವುಗಳಲ್ಲಿ ಅರ್ಧಭಾಗ ದ್ರವರೂಪದಲ್ಲೂ ಉಳಿದರ್ಧ ಘನ ರೂಪದಲ್ಲೂ ಇರುತ್ತವೆ. ಅಂದರೆ ಶೇ. 50 ಪರಿವರ್ತನೆ ಸಾಧಿಸಿದಂತಾಯಿತು. ಈ ಕ್ರಿಯೆಯನ್ನು ಕೆಳಕಂಡ ಸಮೀಕರಣದಿಂದ ಸೂಚಿಸಬಹುದು:

$$nCO+(2n+1)H_2 \rightarrow n\,H_2O+C_nH_{2n+2}$$

**3. ಬಹ್ವಂಗೀಕರಣ (ಪಾಲಿಮರೈಸೇಷನ್):** ನೈಸರ್ಗಿಕ ಅನಿಲ ಮತ್ತು ವಿಭಜನ ವಿಧಾನಗಳಿಂದ ದೊರೆತ ಸಣ್ಣ ಹೈಡ್ರೊಕಾರ್ಬನ್ನುಗಳು ಸೂಕ್ತ ವೇಗವರ್ಧಕಗಳ ನೆರವಿನಿಂದ ಒಟ್ಟುಗೂಡಿ ಪೆಟ್ರೋಲಿಯಂ ಹೈಡ್ರೊಕಾರ್ಬನ್ನುಗಳನ್ನು ಕೊಡುತ್ತವೆ. ಬಂದ ಪೆಟ್ರೋಲಿನಲ್ಲಿ ಆಕ್ಟೇನ್ ಪ್ರಮಾಣ ಅಧಿಕ. ಅಮೆರಿಕದ ಪೆಟ್ರೋಲಿನ ಬಹ್ವಂಶ ಹೀಗೆ ಸರಬರಾಜಾಗುತ್ತಿದೆ.

**4. ವಿಭಜನ ವಿಧಾನ (ಕ್ರಾಕಿಂಗ್):** ಸಾಂದ್ರತೈಲದ ಆವಿಯನ್ನು ನಿರ್ದಿಷ್ಟ ವೇಗವರ್ಧಕಗಳ ಸಂಪರ್ಕದಲ್ಲಿ ಅಧಿಕ ಉಷ್ಣಕ್ಕೆ ಒಡ್ಡಿದರೆ ಅದರಲ್ಲಿರುವ ದೊಡ್ಡ ಹೈಡ್ರೊಕಾರ್ಬನ್ ಅಣುಗಳು ಒಡೆದು ಪೆಟ್ರೋಲಿನಲ್ಲಿರುವ ಸಣ್ಣ ಹೈಡ್ರೊಕಾರ್ಬನ್ನಿನ ಅಣುಗಳಾಗುತ್ತವೆ. ಪ್ರಪಂಚದ ಪೆಟ್ರೋಲಿನ ಬೇಡಿಕೆಯ ಬಹುಭಾಗ ಈ ರೀತಿ ಪೂರೈಕೆಯಾಗುತ್ತಿದೆ.

**5. ಕಲಾಯ್ಡಲ್ ಇಂಧನ:** ಕಲ್ಲಿದ್ದಲು, ಪೀಟ್, ಕೋಕ್ ಅಥವಾ ಮರವನ್ನು ನುಣ್ಣಗೆ ಪುಡಿಮಾಡಬೇಕು. ಶೇ.85 ಭಾಗ ಪುಡಿ 200 ಅಳತೆಯ (ಸೈಜ್) ಜರಡಿಯಲ್ಲಿ ಹಾದು ಹೋಗುವಂತಿರಬೇಕು. ಅದನ್ನು ರಾಳ ಮತ್ತು ಎಣ್ಣೆಯೊಡನೆ ಬೆರೆಸಿಮಾಡಿ ಬಾಲ್‌ಗಿರಣಿಯಲ್ಲಿ ಅರೆದರೆ ಕಲಾಯ್ಡ್ ಸ್ಥಿತಿಗೆ ಬರುವುದು. ಶೇ.30 ಕಲ್ಲಿದ್ದಲು ಇರುವ ಕಲಾಯ್ಡಲ್ ಇಂಧನದ ಉಷ್ಣದಾಯಕ ಮೌಲ್ಯ ಪೌಂಡಿಗೆ 17,000 BTU. ಎಣ್ಣೆಯಿಂದ ಉರಿಯುವ ಯಾವ ಒಲೆಯಲ್ಲಾದರೂ ಇದನ್ನು ಉಪಯೋಗಿಸಬಹುದು.

**ನೈಸರ್ಗಿಕ ಅನಿಲ ಇಂಧನಗಳು:** ಈ ವರ್ಗದ ಉರುವಲುಗಳಲ್ಲಿ ನೈಸರ್ಗಿಕ ಅನಿಲ ಮುಖ್ಯವಾದುದು. ಕಲ್ಲಿದ್ದಲು ಗಣಿಗಳ ಮತ್ತು ಪೆಟ್ರೋಲಿಯಂ ನಿಕ್ಷೇಪಗಳ ಸಮೀಪದಲ್ಲಿ ಇದು ದೊರೆಯುತ್ತದೆ. ಸ್ಥಳೀಯವಾಗಿ ಕೈಗಾರಿಕೆಗಳಲ್ಲಿ ಅಥವಾ ಗೃಹಬಳಕೆಗೆ ಇದು ವಿಲೆಯಾಗುತ್ತದೆ. ಮೀಥೇನ್, ಈಥೇನ್ ಮತ್ತು ಇತರ ಅನಿಲರೂಪದ ಹೈಡ್ರೊಕಾರ್ಬನ್ನುಗಳು ಇದರಲ್ಲಿರುವ ಮುಖ್ಯಾಂಶಗಳು. ಅದರೊಡನೆ ದ್ರವರೂಪದ ವಸ್ತುಗಳು ಸೇರಿರುತ್ತವೆ. ಇವನ್ನು ವಿಭಜಿಸಿ ನೈಸರ್ಗಿಕ ಅನಿಲಕ್ಕೆ ಬದಲಿ ವಸ್ತುಗಳು ತಯಾರಿಸುವುದು ಈಚೆಗೆ ಆರಂಭವಾಗಿದೆ. ಹತ್ತಿರದ ಸ್ಥಳಗಳಿಗೆ ಕೊಳಾಯಿ ಮೂಲಕ ಮತ್ತು ದೂರದ ನಗರಗಳಿಗೆ ದ್ರವರೂಪದಲ್ಲಿ ಸಿಲಿಂಡರುಗಳಲ್ಲಿಟ್ಟು ರವಾನಿಸುವರು.

**ಕೃತಕ ಅನಿಲ ಇಂಧನಗಳು:** ನೈಸರ್ಗಿಕ ಅನಿಲವೊಂದೇ ಪ್ರಕೃತಿದತ್ತ ಉರುವಲು. ಬಳಕೆಯಲ್ಲಿರುವ ಇತರ ಇಂಧನಗಳೆಲ್ಲ ಕೃತಕವಾಗಿ ತಯಾರಾದವು. ಅವುಗಳಲ್ಲಿ ಮುಖ್ಯವಾದುವನ್ನು ಮುಂದೆ ವಿವರಿಸಲಾಗಿದೆ.

1. ಕಲ್ಲಿದ್ದಲ ಅನಿಲ (ಕೋಲ್ ಗ್ಯಾಸ್): ಕಲ್ಲಿದ್ದಲನ್ನು ವಿನಾಶಕ ಬಾಷ್ಪ ಸಾಂದ್ರೀಕರಣಕ್ಕೆ ಒಳಪಡಿಸಿದಾಗ ಕೆಳಕಂಡ ವಸ್ತುಗಳು ದೊರೆಯುತ್ತವೆ:

**i.** ಕಲ್ಲಿದ್ದಲ ಅನಿಲ, ಇದರ ಸರಾಸರಿ ಅಂಗಾಂಶಗಳನ್ನು ಕೆಳಗೆ ಕೊಡಲಾಗಿದೆ.

| | | ಶೇಕಡ |
|---|---|---|
| ಹೈಡ್ರೊಜನ್ | ...... | 40–50 |
| ಮೀಥೇನ್ | ...... | 30–35 |
| ನೈಟ್ರೊಜನ್ | ...... | 6–8 |
| ಇಂಗಾಲದ ಮಾನಾಕ್ಸೈಡ್ | ...... | 5–10 |
| ಎಥಿಲೀನ್, ಅಸಿಟಲೀನ್, ಬೆಂಜೀನ್ ಇತ್ಯಾದಿ | ...... | 2–4 |
| ಇಂಗಾಲದ ಡೈಆಕ್ಸೈಡ್ | ...... | 1–3 |

**ii. ಡಾಂಬರು (ಕೋಲ್‌ಟಾರ್):** ದ್ರವ ಉತ್ಪನ್ನವನ್ನು ತಣಿಸಿದಾಗ ಅದು ಎರಡು ಪದರಗಳಾಗಿ ನಿಲ್ಲುವುದು. ಮೇಲಿನ ಜಲಯುಕ್ತ ದ್ರಾವಣದಲ್ಲಿ ಅಮೋನಿಯ, ಅಮೋನಿಯಂ ಕಾರ್ಬೊನೇಟ್, ಸಲ್ಫೇಟ್, ಸಯನೈಡ್ ಮತ್ತು ಸಲ್ಫೊಸಯನೈಡುಗಳಿರುವುದರಿಂದ ಅದಕ್ಕೆ ಅಮೋನಿಯಾಕಲ್ ಲಿಕ್ಕರ್ ಎಂದು ಹೆಸರು. ತಳದ ಪದರವೇ ಡಾಂಬರು. ಬೆಂಜೀನ್, ಟಾಲೀನ್, ನ್ಯಾಫ್ತಲೀನ್, ಆ್ಯಂಥ್ರಸೀನ್, ಪಿರಿಡಿನ್ ಫೀನಾಲುಗಳು ಇತ್ಯಾದಿ ಆರೋಮ್ಯಾಟಿಕ್ ಸಂಯುಕ್ತಗಳ ಸಂಕೀರ್ಣ ಮಿಶ್ರಣವಿದು.

**iii ಕೋಕ್:** ರಿಟಾರ್ಟಿನಲ್ಲಿ ಉಳಿಯುವ ಇಂಗಾಲೀಯ ಶೇಷವಸ್ತು, $1000^0$ ಸೆ.ನಲ್ಲಿ ಒಂದು ಟನ್ ಕಲ್ಲಿದ್ದಲಿನಿಂದ ಲಭಿಸುವ ವಸ್ತುಗಳ ಪ್ರಮಾಣವನ್ನು ಕೆಳಗೆ ಕೊಡಲಾಗಿದೆ.

| | | | |
|---|---|---|---|
| ಅನಿಲ | .... | 380 | ಪೌಂಡುಗಳು |
| ಡಾಂಬರು | .... | 115 | " |
| ದ್ರವ | .... | 177 | " |
| ಕೋಕ್ | .... | 1,568 | " |

ಕಲ್ಲಿದ್ದಲ ಅನಿಲವನ್ನು ಉತ್ಪಾದಿಸಲು ಉಪಯೋಗಿಸುವ ಆಧುನಿಕ ಯಂತ್ರೋಪಕರಣದ ವಿವರಗಳನ್ನು ಚಿತ್ರ 1ರಲ್ಲಿ ಕಾಣಬಹುದು. ಉಷ್ಣನಿರೋಧಕ ಮಣ್ಣಿನಿಂದ ಮಾಡಿದ ರಿಟಾರ್ಟುಗಳು (RR) ಭದ್ರವಾದ ಇಟ್ಟಿಗೆಯ ಅಡಿಪಾಯದ ಮೇಲೆ ನಿಂತಿವೆ. ಉತ್ಪನ್ನವಾದ ಕೋಕ್ ಬಳಸಿದ ಕಲ್ಲಿದ್ದಲಿಗಿಂತ ಹೆಚ್ಚು ಸ್ಥಳ ಆಕ್ರಮಿಸಿಕೊಳ್ಳುವುದರಿಂದ ರಿಟಾರ್ಟುಗಳು ಬುಡದಲ್ಲಿ ವಿಶಾಲವಾಗಿದ್ದು ಮೇಲೇರಿದಂತೆ ಕಿರಿದಾಗುವುವು. ವಾಯುಭದ್ರವಾದ (ಏರ್ ಟೈಟ್) ಬಾಯಿಯ (H) ಮೂಲಕ ಕಲ್ಲಿದ್ದಲನ್ನು ಸೇರಿಸಲಾಗುವುದು. ಉತ್ಪತ್ತಿಯಾದ ಬಿಸಿ ಕೋಕ್, ಉದ್ದ ಕವಾಟಗಳಲ್ಲಿ (VV) (ಎಕ್ಸ್‌ಟ್ರ್ಯಾಕ್ಟರ್ ವಾಲ್ವ್ಸ್) ಶೇಖರಿಸುವುದು. ಅಲ್ಲಿ ಅನಂತರ ಟ್ರಕ್ಕುಗಳಲ್ಲಿ ಸಾಗಿಸಲಾಗುವುದು. ಇಂಥ ಲಂಬ ರಿಟಾರ್ಟುಗಳ ಬಳಕೆಯಿಂದ ವಿಧಾನ ಸತತವಾಗಿ ನಡೆಯುವಂತಾಗಿದೆ.



ಚಿತ್ರ 1

ಪ್ರೊಡ್ಯೂಸರ್ ಅನಿಲ ಮತ್ತು ಗಾಳಿಯ ಮಿಶ್ರಣವನ್ನು ಉರಿಸುವುದರಿಂದ ರಿಟಾರ್ಟುಗಳನ್ನು $1000^0$ ಸೆಂ.ನಲ್ಲಿಡಬಹುದು. ಪುನಶ್ಚೇತನ ಉಷ್ಣ ಉಳಿತಾಯ ವ್ಯವಸ್ಥೆಗೆ (ರೀಜನರೇಟಿವ್ ಸಿಸ್ಟಂ ಆಫ್ ಹೀಟ್ ಎಕಾನಮಿ) ಅನುಸಾರವಾಗಿ ಇದು ನಡೆಯುವುದು. ಬಿಸಿ ಉರಿಯನ್ನು ರಿಟಾರ್ಟುಗಳ ಸುತ್ತ ಹಾಯಿಸಲು F ಗವಾಕ್ಷಿ ಸಹಾಯಕವಾಗಿದೆ. ರಿಟಾರ್ಟುಗಳ ಸುತ್ತ ಕಲ್ಲಿದ್ದಲು ಕೆಳಗಿಳಿದಂತೆ ಕ್ರಮೇಣವಾಗಿ ವಿಭಜನೆ ಹೊಂದುತ್ತ ಹೋಗುವುದು. ಬಾಷ್ಪಶೀಲ ಉತ್ಪನ್ನಗಳು, ರಿಟಾರ್ಟಿನ ಮೇಲ್ಭಾಗದಿಂದ ಹೈಡ್ರಾಲಿಕ್ ಮೇನ್ ಪ್ರವೇಶಿಸುವುವು. ಇಲ್ಲಿ ಡಾಂಬರು ಮತ್ತು ಅಮೋನಿಯಾಕಲ್ ಲಿಕ್ಕರ್ ಶೇಖರವಾಗುತ್ತವೆ. ಹೈಡ್ರಾಲಿಕ್ ಮೇನಿನ ಉಷ್ಣತೆ $60^0$ ಸೆ. ಮೀರಿರುವುದಿಲ್ಲ. ಸಾಂದ್ರೀಕರಿಸಿದ ದ್ರವದ ಮಟ್ಟ ನಿಯಂತ್ರಿತವಾಗಿರುವುದು. ಹೆಚ್ಚಾದ ದ್ರವ ಬುಡದಲ್ಲಿರುವ ಡಾಂಬರು ಗುಂಡಿಗೆ ಹರಿದುಹೋಗುವುದು. ಹೈಡ್ರಾಲಿಕ್ ಮೇನಿನಿಂದ ಅನಿಲಗಳು ಕೊಳವೆ ಸಾಂದ್ರಕಗಳನ್ನು ತಲಪುತ್ತವೆ. ಇಲ್ಲಿ ತಣಿದು ವಾಯುಮಂಡಲದ ಉಷ್ಣತೆಯನ್ನು ಹೊಂದುವುವು. ಬುಡದಲ್ಲಿ ಸಂಗ್ರಹವಾಗುವ ದ್ರವ ಯಂತ್ರೋಪಕರಣದ ವಿವಿಧ ಭಾಗಗಳ ಸಂಪರ್ಕವನ್ನು ಕಡಿದುಹಾಕುತ್ತದೆ. ಅನಿಲಗಳು ಸಾಂದ್ರಕದಲ್ಲಿ ಪದೇ ಪದೇ ಬಳಸಿ ಬರಲು ಇದು ಸಹಕಾರಿ. ಸಾಂದ್ರಕದಿಂದ ಅನಿಲಗಳು ನಿಷ್ಕಾಸಕವನ್ನು (E) (ಎಗ್ಸಾಸ್ಟರ್) ಹೋಗುತ್ತವೆ. ರಿಟಾರ್ಟುಗಳಲ್ಲಿ ಒತ್ತಡವನ್ನು ಆದಷ್ಟು ಕೆಳಮಟ್ಟದಲ್ಲಿಡಲು ಅನಿಲಗಳು ಸೋರಿ ಹೋಗದಂತೆ ನೋಡಿಕೊಳ್ಳಲು ಮತ್ತು ಮಾರ್ಜಕಶುದ್ಧೀಕರಣ ವಿಭಾಗಕ್ಕೆ ಅವುಗಳನ್ನು ಸೆಳೆಯಲು ಇದು ಸಹಾಯಕವಾಗಿದೆ. ತಮ್ಮ ಅಂಚಿನ ಮೇಲೆ ಕೂರಿಸಲಾಗಿರುವ ಹಲಗೆಗಳಿಂದ ಮಾರ್ಜಕ ಸಜ್ಜಾಗಿರುತ್ತದೆ. ಇಲ್ಲಿ ಪ್ರತಿಪ್ರವಾಹತತ್ತ್ವದ (ಕೌಂಟರ್ ಕರೆಂಟ್ ಪ್ರಿನ್ಸಿಪಲ್) ಪ್ರಕಾರ ನೀರು ಹಾಯಿಸಿ ಅಮೋನಿಯ ಅಂಶವನ್ನು ನಿವಾರಿಸಲಾಗುವುದು. ಮಾರ್ಜಕದ ಬುಡದಲ್ಲಿ ಶೇಖರಿಸುವ ದ್ರಾವಣದಲ್ಲಿ ಶೇ.2ರಷ್ಟು ಅಮೋನಿಯ ಇರುವುದು. ಇದರಿಂದ ಅಮೋನಿಯಂ ಸಲ್ಫೇಟನ್ನು ಮಾಡುವರು. ಮಾರ್ಜಕದಿಂದ ಅನಿಲಗಳು ಶುದ್ಧೀಕರಣ ವಿಭಾಗವನ್ನು ಸೇರುವುವು. ಇಲ್ಲಿ ತಟ್ಟೆಗಳಲ್ಲಿ ತೇವವಾದ ಸುಣ್ಣ ಅಥವಾ ಫೆರಿಕ್ ಹೈಡ್ರಾಕ್ಸೈಡ್ ಇಟ್ಟಿರುತ್ತಾರೆ. ಶುದ್ಧಿಗೊಂಡ ಅನಿಲ ಸಂಗ್ರಾಹಕಗಳಿಗೆ ತುಂಬಿಕೊಳ್ಳುವುದು, ಅಲ್ಲಿಂದ ಪ್ರಧಾನ ಕೊಳಾಯಿಗಳ ಮೂಲಕ ಉಪಯೋಗಿಸುವ ನಿವೇಶನಕ್ಕೆ ಒಯ್ಯಲಾಗುವುದು.

**1. ಜಲಾನಿಲ (ವಾಟರ್ ಗ್ಯಾಸ್):** ಇದರಲ್ಲಿ ಗಾತ್ರಾನುಸಾರ ಶೇ.50 ಹೈಡ್ರೋಜನ್ ಮತ್ತು ಶೇ.40 ಇಂಗಾಲದ ಮಾನಾಕ್ಸೈಡ್ ಇರುತ್ತವೆ. ಉಳಿದದ್ದು ನೈಟ್ರೋಜನ್ ಮತ್ತು ಇಂಗಾಲದ ಡೈಆಕ್ಸೈಡ್. ಕೆಂಗಾವಿಗೆ ಕಾದ ಕೋಕಿನ ಮೇಲೆ ಹಬೆಯನ್ನು ಹಾಯಿಸಿದಾಗ ಈ ಅನಿಲಮಿಶ್ರಣ ಉಂಟಾಗುವುದು.

$$C+H_2O \rightarrow CO+H_2+20 \text{ ಕಿಲೋ ಕ್ಯಾಲರಿ.} \quad (1400^0 \text{ ಸೆಂ.})$$

ಇದು ಉಷ್ಣಗ್ರಾಹಕ ಕ್ರಿಯೆಯಾದ್ದರಿಂದ ಉಷ್ಣತೆ ಬಲು ಬೇಗ $1000^0$ ಸೆಂ. ಗಿಂತ ಕೆಳಗಿಳಿಯುವುದು. ಆಗ ಹಬೆ ಇಂಗಾಲದೊಡನೆ ವರ್ತಿಸಿ ಇಂಗಾಲದ ಡೈಆಕ್ಸೈಡನ್ನು ಕೊಡುವುದು.

$$C+2H_2O \rightarrow CO_2+2H_2 \, (1000^0 \text{ ಸೆಂ.})$$

ಇದಕ್ಕೆ ಉಷ್ಣದಾಯಕ ಮೌಲ್ಯವಿಲ್ಲ. ಆದ್ದರಿಂದ ಹೀಗಾಗಕೂಡದು. ವಾಸ್ತವವಾಗಿ ಹೀಗಾಗಲು ಬಿಡುವುದಿಲ್ಲ. ಉಷ್ಣತೆ $1000^0$ ಸೆ. ತಲುಪುವ ಮುಂಚೆಯೇ ಹಬೆಯ ಸರಬರಾಜನ್ನು ನಿಲ್ಲಿಸಿ ಗಾಳಿ ಹಾಯಿಸುವರು. ಆಗ ಕೆಳಕಂಡ ಉಷ್ಣಜನಕ ಕ್ರಿಯೆ ನಡೆಯುವುದು:

$$2C+(O_{2\text{ಗಾಳಿ}}+N_2) \rightarrow (2CO+N_2)-58 \text{ ಕಿ.ಕೆ.}$$

ಆಗ ಉಷ್ಣತೆ ಪುನಃ $1400^0$ ಸೆಂ. ಗೆ ಏರುವುದು. ಈ ಕ್ರಮವನ್ನು ಪುನರಾವರ್ತಿಸಿ ಧಾರಾಕಾರವಾಗಿ ಜಲಾನಿಲವನ್ನು ಪಡೆಯಬಹುದು. ಅನಿಲ ನೀಲಿ ಜ್ವಾಲೆಯಿಂದ ಉರಿಯುತ್ತದೆ. ಇದನ್ನು ಹೈಡ್ರೋಜನ್ ಮತ್ತು ಮಿಥೆನಾಲ್ ತಯಾರಿಸಲು ಉಪಯೋಗಿಸುತ್ತಾರೆ. ಅದರ ಉಷ್ಣದಾಯಕ ಮೌಲ್ಯ ಘನ ಅಡಿಗೆ

$$2C+(O_{2\text{ಗಾಳಿ}}+N_2)$$

450–500 BTU, ಇರುವ ಕಲ್ಲಿದ್ದಲ ಅನಿಲದ ಉಷ್ಣದಾಯಕ ಮೌಲ್ಯಕ್ಕಿಂತ ಕಡಿಮೆ. ಆದ್ದರಿಂದ ಕಾರ್ಬ್ಯುರೇಟೆಡ್ ಜಲಾನಿಲವನ್ನು ತಯಾರಿಸುವುದು ರೂಢಿಯಾಗಿದೆ. ಅದರ ಬಗ್ಗೆ ವಿವರಗಳು ಚಿತ್ರ 2ರಲ್ಲಿವೆ.

ಅನಿಲ ಉತ್ಪಾದಕ 10' ವ್ಯಾಸ ಮತ್ತು 15' ಎತ್ತರವಿರುವ ಒಂದು ಉಕ್ಕಿನ ಉರುಳೆ. ಕೋಕ್ ಸೇರಿಸಲು ಕುಲುಮೆಯ ಮೇಲ್ಭಾಗದಲ್ಲಿ ರಂಧ್ರವುಂಟು. ಗಾಳಿ ಮತ್ತು ಹಬೆಯನ್ನು ಹಾಯಿಸಲು ಪ್ರತ್ಯೇಕ ವ್ಯವಸ್ಥೆ ಇದೆ. ಆವರ್ತ ಸ್ವರೂಪದ ಈ ಕ್ರಿಯಾವಿಧಾನ ಈ ಕೆಲವು ಅವಧಿಗಳನ್ನು ಒಳಗೊಂಡಿದೆ.

i ಊರ್ಧ್ವ ಪ್ರವಾಹಾವಧಿ: ಒಂದೂವರೆ ಮಿನಿಟುಗಳು. ಹಬೆಯ ಕೊಳವೆಯ ತಳಶಾಖೆಯ ಮೂಲಕ ಹಬೆಯನ್ನು ಮೇಲಕ್ಕೆ ಊದಲಾಗುವುದು. ಈಗ $V_1$ ಕವಾಟ ತೆರೆದಿರುವುದರಿಂದ ಜಲಾನಿಲ ಉತ್ಪಾದಕದಿಂದ ಕಾರ್ಬ್ಯುರೇಟರನ್ನು ಪ್ರವೇಶಿಸುವುದು.

ii ಅಧೋಪ್ರವಾಹಾವಧಿ: ಇದೂ ಒಂದೂವರೆ ಮಿನಿಟುಗಳು. ಈಗ ಹಬೆಯ ಕೊಳವೆಯ ಮೇಲಿನ ಶಾಖೆಯ ಮೂಲಕ ಹಬೆಯನ್ನು ಕೆಳಮುಖವಾಗಿ ಊದಲಾಗುವುದು. ಉತ್ಪತ್ತಿಯಾದ ಜಲಾನಿಲ $V_2$ ಕವಾಟದ ಮೂಲಕ ಕಾರ್ಬ್ಯುರೇಟರನ್ನು ಹಿಂದಿನಂತೆಯೇ ಪ್ರವೇಶಿಸುವುದು. $V_1$ ಮತ್ತು $V_2$ ಕವಾಟಗಳು ಒಂದೇ ಸಮತಲದಲ್ಲಿವೆ. ಅವನ್ನು ಬಂಧಿಸುವ ಸರಳು ಒಂದು ಕವಾಟ ತೆರೆದಿರುವಾಗ ಮತ್ತೊಂದು ಮುಚ್ಚಿಕೊಳ್ಳುವಂತೆ ನೋಡಿಕೊಳ್ಳುತ್ತದೆ.

iii ವಿರೇಚನ (ಪರ್ಜ್): ಮೂರು ಮಿನಿಟ್ ಹಬೆ ಊದಿದ ಅನಂತರ ಮತ್ತೆ ಒಂದು ಮಿನಿಟ್ ಕಾರ್ಬ್ಯುರೇಟರಿನ ಮೇಲ್ಭಾಗದಿಂದ ಹಬೆ ಹಾಯಿಸುವರು. ಇದು ಕಾರ್ಬ್ಯುರೇಟರ್ ಮತ್ತು ಅಧಿಕೋಷ್ಣಕದಲ್ಲಿರುವ ಜಲಾನಿಲವನ್ನೆಲ್ಲ ಸಂಗ್ರಾಹಕಕ್ಕೆ ದೂಡುವುದು. ಅನಂತರವೇ ಗಾಳಿಯನ್ನು ಒಳಗೆ ಬಿಡಬೇಕು. ಇಲ್ಲದಿದ್ದರೆ ಜಲಾನಿಲ ಗಾಳಿಯೊಡನೆ ಸೇರಿ ಆಸ್ಫೋಟಿಸುವುದು.

iv ಪುನಶ್ಚೇತನ ಕಾಲ (ರಿವೈವಿಫೈಯಿಂಗ್ ಪೀರಿಯಡ್): ಎರಡು ಮಿನಿಟುಗಳು. ಈಗ ಗಾಳಿ ಊದಿದರೆ ಉಷ್ಣತೆ $1400^0$ ಸೆಂ. ಗೆ ಏರುವುದು. ಹೀಗೆ ಕ್ರಿಯಾಚಕ್ರದ ಒಟ್ಟು ಅವಧಿ ಆರು ಮಿನಿಟುಗಳೆಂದಾಯಿತು.

v ಕಾರ್ಬ್ಯುರೇಟರ್ ಮತ್ತು ಅಧಿಕೋಷ್ಣಕಗಳನ್ನು (ಸೂಪರ್ ಹೀಟರ್ಸ್) ಉಕ್ಕಿನಿಂದ ಮಾಡಿರುತ್ತಾರೆ. ಅವುಗಳಲ್ಲಿ ಚದುರಂಗದ ನಮೂನೆಯ ಇಟ್ಟಿಗೆಯ ಕಟ್ಟಡವಿದೆ. ಗಾಳಿ ಊದಿದ ಕಾಲದಲ್ಲಿ ದಹನ ಉತ್ಪನ್ನಗಳು ಇವುಗಳ ಮೂಲಕ ಹಾದು ಇಟ್ಟಿಗೆಯ ಕಟ್ಟಡವನ್ನು ಕಾಯಿಸುತ್ತವೆ. ಕೆಲಸಕ್ಕೆ ಬಾರದ ಅನಿಲಗಳು ಕವಾಟದ ಮೂಲಕ ಚಿಮಣಿಯನ್ನು ಸೇರಿ ಹೊರಬೀಳುತ್ತವೆ. ಹಬೆಯನ್ನು ಹಾಯಿಸುವ ಸಮಯದಲ್ಲಿ ಜಲಾನಿಲ ಕಾರ್ಬ್ಯುರೇಟರನ್ನು ಮೇಲ್ಭಾಗದಿಂದ ಪ್ರವೇಶಿಸುವುದು ಸರಿಯಷ್ಟೆ. ಆ ಹೊತ್ತಿಗೆ ಸರಿಯಾಗಿ ತುಂತುರು ಯಂತ್ರ (ಆಟೋಮೈಸರ್) ಪ್ಯಾರಫಿನ್ ಎಣ್ಣೆಯನ್ನು ಕೆಂಗಾವಿಗೆ ಕಾದ ಇಟ್ಟಿಗೆಯ ಗೂಡಿನ ಮೇಲೆ ಚಿಮುಕಿಸುತ್ತದೆ. ಎಣ್ಣೆಯಲ್ಲಿರುವ ಭಾರವಾದ ಅಣುಗಳು ಸಣ್ಣ ಅಣುಗಳಾಗಿ ಒಡೆಯುತ್ತವೆ. ಈ ವಿಭಜನಕ್ರಿಯೆ ಅಧಿಕೋಷ್ಣಕದಲ್ಲಿ ಪೂರ್ಣಗೊಳ್ಳುವುದು. ಉತ್ಪತ್ತಿಯಾದ ಕಾರ್ಬ್ಯುರೇಟೆಡ್ ಜಲಾನಿಲ ಜಲಕೋಶದಲ್ಲಿ (ವಾಟರ್‌ಬಾಕ್ಸ್) ಡಾಂಬರಿನ ಅಂಶವನ್ನು ಕಳೆದುಕೊಳ್ಳುವುದು. ನೀರಿನಿಂದ ತಣಿದ ಕೊಳಾಯಿಗಳ ಮೂಲಕ ಹಾದು ಶುದ್ಧೀಕರಣ ವಿಭಾಗವನ್ನು ಮುಟ್ಟುವುದು. ಇದರಲ್ಲಿ ಮರದ ತುದಿಗೆ ಲೇಪನವಾದ ಸುಣ್ಣ ಮತ್ತು ಜಲಯುಕ್ತ ಫೆರಿಕ್ ಆಕ್ಸೈಡಿನ ಮಿಶ್ರಣವಿರುತ್ತದೆ. ಅನಿಲದಲ್ಲಿರುವ ಹೈಡ್ರೋಜನ್ ಸಲ್ಫೈಡನ್ನು

ಕಬ್ಬಿಣದ ಸಲ್ಫೈಡಾಗಿ ನಿವಾರಿಸುವುದು ಇದರ ಕೆಲಸ. ಎಂದಿನಂತೆ ನಿಷ್ಕಾಸಕ ಅನಿಲವನ್ನು ಇದು ಮುಂದೂಡುತ್ತಿರುತ್ತದೆ. ಹೀಗೆ ಶುದ್ಧಿಗೊಂಡ ಕಾರ್ಬ್ಯುರೇಟೆಡ್ ಜಲಾನಿಲ ಸಂಗ್ರಾಹಕದಲ್ಲಿ ಕೂಡುತ್ತದೆ.



**ಚಿತ್ರ. 2**

**3. ಜ್ವಲನಾನಿಲ (ಪ್ರೊಡ್ಯೂಸರ್ ಗ್ಯಾಸ್):** ಕೀಳುದರ್ಜೆ ಕಲ್ಲಿದ್ದಲಿನಿಂದ ಇದನ್ನು ಉತ್ಪಾದಿಸಬಹುದು. ಆದ್ದರಿಂದ ಇದೊಂದು ಅಗ್ಗದ ಇಂಧನ. ಇದರಲ್ಲಿ ಮುಖ್ಯವಾಗಿ ಇಂಗಾಲದ ಮಾನಾಕ್ಸೈಡು ಮತ್ತು ನೈಟ್ರೊಜನ್ ಇವೆ. ಅನೇಕ ಪದರ ಕಾದ ಕಲ್ಲಿದ್ದಲಿನ ಮೂಲಕ ಗಾಳಿಯನ್ನು ಒತ್ತಡದಿಂದ ದೂಡಿದರೆ, ಇದು ಉತ್ಪತ್ತಿಯಾಗುವುದು. ಇದಕ್ಕಾಗಿ ಬಳಸುವ ಕುಲುಮೆಯನ್ನು ಚಿತ್ರ 3ರಲ್ಲಿ ತೋರಿಸಲಾಗಿದೆ.



**ಚಿತ್ರ. 3**

ಮೂಲತಃ ಇದೊಂದು ಗಾಳಿ ಸೋರದ ಒಲೆ. ಇದರ ಬುಡದಲ್ಲಿ ಗಾಳಿಹಾಯಿಸುವ ಪ್ರವೇಶನಾಳವೂ ಮೇಲ್ಭಾಗದಲ್ಲಿ ನಿರ್ಗಮನ ನಾಳವೂ ಇವೆ. ಕ್ರಿಯೆಗೆ ಅಡ್ಡಿಯಾಗದಂತೆ ಬೂದಿಯನ್ನು ತೆಗೆಯಲು ಮತ್ತು ಕಲ್ಲಿದ್ದಲನ್ನು ಸೇರಿಸಲು ಸೂಕ್ತ ಏರ್ಪಾಡುಂಟು.

ಗಾಳಿಯಲ್ಲಿರುವ ಆಕ್ಸಿಜನ್ನು ಕಲ್ಲಿದ್ದಲಿನೊಡನೆ ವರ್ತಿಸಿ ಮೊದಲು ಇಂಗಾಲದ ಡೈಆಕ್ಸೈಡನ್ನು ಕೊಡುತ್ತದೆ. ಇದು ಮೇಲೇರಿದಂತೆಲ್ಲ ಇಂಗಾಲದ ಮಾನಾಕ್ಸೈಡಿಗೆ ಅಪಕರ್ಷಿತವಾಗುತ್ತಿದೆ. ಇಲ್ಲಿ ನಡೆಯುವ ಕ್ರಿಯೆಗಳನ್ನು ಕೆಳಕಂಡ ಸಮೀಕರಣಗಳು ಸೂಚಿಸುತ್ತವೆ.

$$C + O_2 \rightarrow CO_2$$

$$C + CO_2 \rightarrow 2CO$$

$$2C + O_2 \rightarrow 2CO$$

ಒಟ್ಟು ಕ್ರಿಯೆಯಲ್ಲಿ ವಿಪರೀತ ಉಷ್ಣ ಹೊರಬೀಳುತ್ತದೆ. ಆದ್ದರಿಂದ ಉಪಯೋಗಿಸಬೇಕಾದ ಸ್ಥಳದಲ್ಲೇ ಇದನ್ನು ಉತ್ಪಾದಿಸಿದರೆ ಈ ಉಷ್ಣದ ಪ್ರಯೋಜನವೂ ನಮಗೆ ಲಭಿಸುತ್ತದೆ. ಈ ಇಂಧನವನ್ನು ಗಾಜು, ಸತು ಮುಂತಾದುವನ್ನು ತಯಾರಿಸುವ ಕುಲುಮೆಗಳನ್ನು ಕಾಯಿಸಲು ವಿಶೇಷವಾಗಿ ಬಳಸುತ್ತಾರೆ. ಲಾರಿ, ಬಸ್ಸು ಇತ್ಯಾದಿಗಳನ್ನು ಓಡಿಸಲು ಪುಟ್ಟ ಪ್ರೊಡ್ಯೂಸರುಗಳನ್ನು ಅವುಗಳಿಗೆ ಜೋಡಿಸಬಹುದು. ಒಂದು ಗ್ಯಾಲನ್ ಪೆಟ್ರೋಲಿನ ಬದಲು ಸು.13 ಕಿ.ಗ್ರಾಂ. ಕಲ್ಲಿದ್ದಲು ಸಾಕು. ಭಾರತದಲ್ಲಿ ಕಲ್ಲಿದ್ದಲ ಗಣಿಗಳು ಅಷ್ಟಾಗಿಲ್ಲ. ಆದ್ದರಿಂದ ಅಲ್ಲಿ ಇದ್ದಲನ್ನು ಉಪಯೋಗಿಸಬಹುದು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಪೆಟ್ರೋಲ್ ಅಭಾವ ಉಂಟಾದಾಗ ಜ್ವಲನಾನಿಲದಿಂದ ವಾಹನಗಳನ್ನು ಓಡಿಸುತ್ತಿದ್ದರೆಂಬುದನ್ನು ನೆನೆಯಬಹುದು.

**4. ಅರೆಜಲಾನಿಲ (ಸೆಮಿ ವಾಟರ್ ಗ್ಯಾಸ್):** ಜ್ವಲನಾನಿಲದ ತಯಾರಿಕೆಯಲ್ಲಿ ಬಳಸುವ ಗಾಳಿಯೊಡನೆ ಅಗತ್ಯ ಪ್ರಮಾಣದಲ್ಲಿ ಹಬೆಯನ್ನೂ ಬೆರೆಸಿದರೆ ಇದು ಉತ್ಪತ್ತಿಯಾಗುತ್ತದೆ. ಇದರಲ್ಲಿರುವ ಮುಖ್ಯಾಂಶಗಳ ಪ್ರಮಾಣ ಕೆಳಕಂಡಂತಿದೆ.

| | | | |
|---|---|---|---|
| ನೈಟ್ರೋಜನ್ | .... | ಶೇಕಡ | 56 |
| ಇಂಗಾಲದ ಮಾನಾಕ್ಸೈಡ್ | .... | " | 27 |
| ಹೈಡ್ರೋಜನ್ | .... | " | 11 |
| ಇಂಗಾಲದ ಡೈಆಕ್ಸೈಡ್ | .... | " | 5 |
| ಮೀಥೇನ್ | .... | " | 1 |

ಈ ಇಂಧನದ ಉಷ್ಣದಾಯಕ ಮೌಲ್ಯ ಘನ ಅಡಿಗೆ 160–180 BTU. ವಿವಿಧ ಅನಿಲ ಇಂಧನಗಳ ಉಷ್ಣದಾಯಕ ಮೌಲ್ಯಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

**ಸಾವಿರ ಘನ ಅಡಿಗಳಿಗೆ**

| | | |
|---|---|---|
| ಕಲ್ಲಿದ್ದಲ ಅನಿಲ | 10,000 | ಕ್ಯಾಲರಿಗಳು |
| ಕಾರ್ಬ್ಯುರೇಟೆಡ್ ಜಲಾನಿಲ | 9,060 | " |
| ಜಲಾನಿಲ | 3,560 | " |
| ಅರೆಜಲಾನಿಲ | 1,320 | " |
| ಕಲ್ಲಿದ್ದಲಿಂದ ಪಡೆದ ಜ್ವಲನಾನಿಲ | 1,130 | " |
| ಕೋಕಿನಿಂದ ಪಡೆದ ಜ್ವಲನಾನಿಲ | 990 | " |

ಜ್ವಲನಾನಿಲದ ಉಷ್ಣದಾಯಕ ಮೌಲ್ಯ ಅತ್ಯಂತ ಕಡಿಮೆಯಾಗಿರಲು ಅದರಲ್ಲಿರುವ ದಹನಯೋಗ್ಯವಲ್ಲದ ನೈಟ್ರೋಜನ್ ಅಂಶ ಹೆಚ್ಚಾಗಿರುವುದೇ ಕಾರಣ.

**5. ತೈಲಾನಿಲ (ಆಯಿಲ್ ಗ್ಯಾಸ್):** ಪ್ರಯೋಗಶಾಲೆಗಳ ಮತ್ತು ಇತರ ಸಣ್ಣ ಉದ್ಯಮಗಳ ಉಪಯೋಗಕ್ಕೆ ಸೀಮಿತವಾಗಿರುವ ಅನಿಲ ಇಂಧನ. ಪೆಟ್ರೋಲಿಯಂ ಉಪವಸ್ತುವಾದ ಸಾಂದ್ರತೈಲವನ್ನು ಇದಕ್ಕಾಗಿ ಬಳಸುವರು. ಕೆಂಗಾವಿಗೆ ಕಾದ ಕಬ್ಬಿಣದ ರಿಟಾರ್ಟಿನೊಳಕ್ಕೆ ಸಾಂದ್ರತೈಲ ತೆಳುವಾದ ಧಾರೆಯ ರೂಪದಲ್ಲಿ ಪ್ರವೇಶಿಸುತ್ತದೆ. ಆಗ ಅದರಲ್ಲಿರುವ ಅಣುಗಳು ವಿಭಜಿಸಿ ಕೆಳಕಂಡ ಹೈಡ್ರೋಕಾರ್ಬನ್ ಅನಿಲಗಳು ಉಂಟಾಗುತ್ತವೆ.

$$C_{16}H_{34} \quad 6CH_4 + 2C_2H_4 + C_2H_2 + 4C$$

ಮೀಥೇನ್ ಅಸಿಟಲೀನ್ ಎಥಿಲೀನ್

ಹೊರಬೀಳುವ ಅನಿಲಗಳಲ್ಲಿರುವ ಡಾಂಬರಿನ ಅಂಶವನ್ನು ತೆಗೆದು ಶುದ್ಧಿಗೊಳಿಸಿ ಈ ಸಂಗ್ರಾಹಕಗಳಲ್ಲಿ ಕೂಡಿಡಲಾಗುವುದು.

**6. ಗ್ರಾಮಸಾರಾನಿಲ (ಸ್ಯೂಯೇಜ್ ಗ್ಯಾಸ್):** ಗ್ರಾಮಸಾರವನ್ನು ಸಂಗ್ರಹಿಸಿ ಅನೇಯ್ರೋಬಿಕ್ ಬ್ಯಾಕ್ಟೀರಿಯದಿಂದ (ಆಕ್ಸಿಜನ್ ಇಲ್ಲದೆಯೇ ಜೀವಿಸಬಲ್ಲ ಅಣುಜೀವಿ) ಹುಳಿಸಿದರೆ ಅದರಲ್ಲಿರುವ ನೈಟ್ರೋಜನ್ ವಸ್ತುಗಳು ನೈಟ್ರೇಟುಗಳಾಗುವುವು. ಇಂಗಾಲೀಯ ವಸ್ತುಗಳ ಒಂದು ಭಾಗ ಮೀಥೇನ್ ಮತ್ತು ಇಂಗಾಲದ ಡೈ ಆಕ್ಸೈಡ್ ಆಗುವುದು. ಈ ರೀತಿ ಸಾಕಷ್ಟು ಅನಿಲವನ್ನು ಶೇಖರಿಸಬಹುದು. ಅದರ ಉಷ್ಣದಾಯಕ ಮೌಲ್ಯ ಕಡಿಮೆ ಏನಲ್ಲ. ಭಾರತದ ಪ್ರಮುಖ ನಗರಗಳಲ್ಲೇ ಇದನ್ನು ಆಚರಣೆಗೆ ತರಬಹುದು.

**7. ಅಸಿಟಲೀನ್:** ಒತ್ತಡದಲ್ಲಿ ಉಕ್ಕಿನ ಉರುಳೆಗಳಲ್ಲಿ ಇಟ್ಟಿರುತ್ತಾರೆ. ಅಗ್ಗದ ಇಂಧನವಾದ್ದರಿಂದ ಮಧ್ಯಮದರ್ಜೆಯ ಗ್ರಾಹಕರಿಗೂ ಇದು ಎಟುಕುವಂಥದು. ಲೋಹಗಳನ್ನು ಕರಗಿಸಲು ಮತ್ತು ಬೆಸೆಯಲು ಆಕ್ಸಿ–ಅಸಿಟಲೀನ್ ಜ್ವಾಲೆಯಿಲ್ಲದೆ ನಡೆಯುವಂತಿಲ್ಲ.

**8. ಬ್ಲೌ ಅನಿಲ:** ಮೀಥೇನಿನಿಂದ ಹೆಕ್ಸೇನ್‌ವರೆಗಿನ ಹೈಡ್ರೋಕಾರ್ಬನ್ನುಗಳು ಮತ್ತು ಹೈಡ್ರೊಜನ್ನಿನ ಮಿಶ್ರಣ. ಇದು ಒಂದು ಉತ್ತಮ ಇಂಧನ.

**ಅನಿಲ ಇಂಧನಗಳ ವೈಶಿಷ್ಟ್ಯ:** ಇವನ್ನು ಉರಿಸಲು ವಿಶೇಷ ವ್ಯವಸ್ಥೆ ಬೇಕಿಲ್ಲ. ಹೊತ್ತಿಸುವುದು ಸುಲಭ. ಹೊಗೆ ಮತ್ತು ಬೂದಿಗಳ ಕಾಟವಿಲ್ಲ. ನಿಯಂತ್ರಣ ಬಹು ಸುಲಭ. ಅಂತರ್ದಹನ ಯಂತ್ರಗಳಲ್ಲಿ ನಿರಾತಂಕವಾಗಿ ಬಳಸಬಹುದು. ಉಷ್ಣಕ್ರಿಯಾ ಪರಿವರ್ತನೆಯ ದೃಷ್ಟಿಯಿಂದ ಮಿತವ್ಯಯಿಗಳು. ಉಷ್ಣ ಉಳಿತಾಯ ಕುಲುಮೆಗಳಲ್ಲಿ ತೃಪ್ತಿಕರವಾಗಿ ಉಷ್ಣ ಒದಗಿಸುತ್ತವೆ.

ಭಾರತದಲ್ಲೂ ಇಂಧನದ ಸಮಸ್ಯೆಯಿದೆ. ಅದನ್ನು ಬಗೆಹರಿಸುವ ಮಾರ್ಗಗಳನ್ನು ಮುಂದೆ ಸೂಚಿಸಲಾಗಿದೆ. i. ಇಲ್ಲಿ ಸಸ್ಯಸಂಪತ್ತು ಅಗಾಧವಾಗಿದ್ದ ಕಾಲವೊಂದಿತ್ತು. ಆದ್ದರಿಂದ ಸೌದೆ ಮತ್ತು ಇದ್ದಲನ್ನು ಧಾರಾಳವಾಗಿ ಉಪಯೋಗಿಸಬಹುದಾಗಿತ್ತು. ಇದರಿಂದ ಅರಣ್ಯ ನಾಶವಾಗುವುವೆಂದು ಶಂಕಿಸುವ ಅಗತ್ಯವಿರಲಿಲ್ಲ. ಏಕಕಾಲದಲ್ಲಿ ಗಿಡನೆಟ್ಟು ಬೆಳೆಸುವ

ವ್ಯಾಪಕಯೋಜನೆ ಕಾರ್ಯಕ್ರಮ ಇಟ್ಟುಕೊಂಡರೆ ಸಾಕು. ii. ಭಾರತದಲ್ಲಿ ಸಕ್ಕರೆಯ ಉದ್ಯಮ ಬೆಳೆಯುತ್ತಿದೆ. ಅದರೊಂದಿಗೆ ಕಾಕಂಬಿಯ ಉತ್ಪಾದನೆಯೂ ಆಗುತ್ತಿರುವುದರಿಂದ ಅದನ್ನು ಲಾಭದಾಯಕವಾಗಿ ಆಲ್ಕೊಹಾಲ್ ಇಂಧನವಾಗಿ ಪರಿವರ್ತಿಸಬಹುದು. iii. ಭಾರತದಲ್ಲಿರುವ ಪೆಟ್ರೋಲಿಯಂ ಮತ್ತು ಕಲ್ಲಿದ್ದಲಿನ ನಿಕ್ಷೇಪಗಳು ವಿರಳ. ಹೊಸ ನಿಕ್ಷೇಪಗಳ ತಪಾಸಣೆ ಮತ್ತು ಸದ್ವಿನಿಯೋಗಕ್ಕೆ ಆದ್ಯ ಗಮನ ನೀಡಬೇಕು. iv. ಸಗಣಿ ಮತ್ತು ಗ್ರಾಮಸಾರದಿಂದ ಅನಿಲ ಇಂಧನಗಳನ್ನು ಪಡೆಯಲು ಪ್ರಯತ್ನಿಸಲಾಗಿದೆ. ಸಾಗರದಾಳದಿಂದ ಪೆಟ್ರೋಲ್ ತೆಗೆಯಲಾಗುತ್ತಿದೆ.

**ಪರಮಾಣು ಶಕ್ತ ಖನಿಜಗಳು:** ಶಕ್ತಿಯ ಬಳಕೆ ಹೆಚ್ಚಿದಂತೆಲ್ಲ ಅದರ ಉತ್ಪತ್ತಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಂದ ಆಗಬೇಕು. ಆದರೆ ಇವುಗಳ ನಿಕ್ಷೇಪ ಪ್ರಪಂಚದಲ್ಲಿ ಮಿತವಾಗಿದೆ. ಇಂದಿನ ಉಪಯೋಗದ ಪ್ರಮಾಣದಂತೆ ಪ್ರಪಂಚದ ಕಲ್ಲಿದ್ದಲಿನ ನಿಕ್ಷೇಪಗಳೆಲ್ಲ ಸುಮಾರು ಸಾವಿರ ವರ್ಷಗಳಲ್ಲಿಯೂ ಪೆಟ್ರೋಲಿಯಂನ ನಿಕ್ಷೇಪಗಳೆಲ್ಲ ಕೆಲವು ದಶಕಗಳಲ್ಲಿಯೂ ಬರಿದಾಗುವುವು. ಇವುಗಳನ್ನೇ ನಂಬಿಕೊಂಡರೆ ಒಂದೆರಡು ಶತಮಾನಗಳಲ್ಲಿಯೇ ನಮ್ಮ ನಾಗರಿಕತೆಯ ಬೆಳಕು ನಂದಬೇಕಾಗುವುದು. ಅದೃಷ್ಟವಶಾತ್ ಪರಿಸ್ಥಿತಿ ಅಷ್ಟು ನಿರಾಶಾದಾಯಕವಾಗಿಲ್ಲ. ಮನುಷ್ಯನಿಗೆ ಪ್ರಕೃತಿಯಲ್ಲಿ ಹೊಸತೊಂದು ಶಕ್ತಿಯ ಮೂಲ ದೊರಕಿದೆ. ಅದು ಪರಮಾಣುಶಕ್ತಿ.

1911ರಲ್ಲಿ ರುದರ್‌ಫರ್ಡ್ ಎಂಬ ಪ್ರತಿಭಾವಂತ ವಿಜ್ಞಾನಿ ಪರಮಾಣುರಚನೆಯ ವಿವರವನ್ನು ತಿಳಿಸಿದಂದಿನಿಂದ ಹೊಸಯುಗದ ಪ್ರಾರಂಭವಾಯಿತು. ಯುರೇನಿಯಂ (ಮತ್ತು ಥೋರಿಯಂ) ಎಂಬ ವಿಕಿರಣಪಟು ಲೋಹದ ಪರಮಾಣುಗಳನ್ನು ವಿದಳಿಸುವುದರಿಂದ ಅಸಾಧಾರಣವಾದ ಶಕ್ತಿ ಉತ್ಪತ್ತಿಯಾಗುತ್ತದೆಂದು ತಿಳಿದುಬಂದಿದೆ.

ಒಂದು ಯುರೇನಿಯಂ ($U^{+235}$) ತುಂಡಿನಲ್ಲಿ ಒಂದು ಪರಮಾಣುವಿನ ಬೀಜ ಛಿದ್ರವಾದರೆ ಸಾಕು. ಅಲ್ಲಿರುವ ಪರಮಾಣುಗಳೆಲ್ಲ ಒಂದೊಂದಾಗಿ ವಿದಳಿಸಿ ಅಸಾಧಾರಣವಾದ ಶಕ್ತಿ ಹೊರಬೀಳುವುದು. ಇದಕ್ಕೆ ಸರಣಿಕ್ರಿಯೆಯ (ಚೇನ್ ರಿಆಕ್ಷನ್) ಎಂದು ಹೆಸರು. ರಿಯಾಕ್ಟರುಗಳಲ್ಲಿ ನಡೆಯುವುದು ಇದೇ ರೀತಿಯ ಪ್ರಕ್ರಿಯೆ. ಒಂದು ಪೌಂಡು ಯುರೇನಿಯಂನ ($U^{235}$) ಪರಮಾಣುಗಳ ಬೀಜ ವಿದಳನದಿಂದ ಉತ್ಪತ್ತಿಯಾಗುವ ಶಕ್ತಿ 1,500 ಟನ್ ಕಲ್ಲಿದ್ದಲಿನಿಂದ ಅಥವಾ 2,500 ಗ್ಯಾಲನ್ ಪೆಟ್ರೋಲಿನಿಂದ ಉತ್ಪತ್ತಿಯಾಗುವ ಶಕ್ತಿಗೂ ಸಮನಾಗಿರುತ್ತದೆ. ಯುರೇನಿಯಂ, ಥೋರಿಯಂನಂಥ ವಿಕಿರಣಪಟು ವಸ್ತುಗಳಲ್ಲಿರುವ ಖನಿಜಗಳನ್ನು ಗೈಗರ್ ಮುಲ್ಲರ್ ಕೌಂಟರ್ ಎಂಬ ಸಾಧನದಿಂದ ಸುಲಭವಾಗಿ ಕಂಡುಹಿಡಿಯಬಹುದು. ಪ್ರತಿ ದೇಶದಲ್ಲೂ ಈ ಖನಿಜ ನಿಕ್ಷೇಪಗಳನ್ನು ಕಂಡು ಹಿಡಿಯುವ ಪ್ರಯತ್ನ ಬಹಳ ಬಿರುಸಾಗಿ ನಡೆಯುತ್ತಿದೆ. ಈ ಖನಿಜ ನಿಕ್ಷೇಪಗಳೆಷ್ಟಿವೆಯೆಂಬ ವಿಷಯದಲ್ಲಿ ಅಂಕಿ ಅಂಶಗಳು ತಿಳಿಯದು. ಭಾರತದಲ್ಲಿ ಇಲ್ಲಿಯವರೆಗೆ ನಡೆಸಿರುವ ಪರಿಶೋಧನೆಯ ಪ್ರಕಾರ 30,000 ಟನ್ ಯುರೇನಿಯಂ ನಿಕ್ಷೇಪವೂ 5,00,000 ಟನ್ ಥೋರಿಯಂನ ನಿಕ್ಷೇಪವೂ ಇವೆಯೆಂದು ತಿಳಿದು ಬಂದಿದೆ.

ರಾಸಾಯನಿಕ ಇಂಧನಗಳು: ಇದುವರೆಗೆ ಅಭ್ಯಸಿಸಿದ ಇಂಧನಗಳ ಗುಣವನ್ನು ಸೂತ್ರೀಕರಿಸಿ

ಇಂಧನ + ಆಕ್ಸಿಜನ್ → ದಹನ

ಎಂದು ಬರೆಯಬಹುದು (ಪರಮಾಣುಶಕ್ತಿ ಇದರಲ್ಲಿ ಸೇರಿಲ್ಲ). ಇನ್ನೂ ನಿಖರವಾಗಿ ಹೇಳುವುದಾದರೆ ಇಂಧನದಲ್ಲಿರುವ ಇಂಗಾಲಾಂಶ ಗಾಳಿಯಲ್ಲಿರುವ ಆಕ್ಸಿಜನ್ ಸಹಾಯದಿಂದ ಉರಿದು ಉಷ್ಣಶಕ್ತಿ ಪೂರೈಕೆ ಆಗುತ್ತದೆ.

ಇಂಗಾಲ + ಆಕ್ಸಿಜನ್ → ಶಕ್ತಿ

ಆದ್ದರಿಂದ ಇವೆರಡರಲ್ಲಿ ಯಾವುದೂ ಒಂದು (ಅಥವಾ ಎರಡೂ) ಕೊರೆಯಾದಾಗ ಶಕ್ತಿ ಲಭಿಸದು. ಆಕಾಶಯಾನದಲ್ಲಿ ನೌಕೆಯನ್ನು ಮುನ್ನೂಕುವ (ಅಥವಾ ವೇಗ ತಗ್ಗಿಸಲು ಹಿನ್ನೂಕುವ) ಶಕ್ತಿಯನ್ನು ಚಾಲಕ ರಾಕೆಟ್ಟುಗಳು ಪೂರೈಸುತ್ತವೆ. ಇಲ್ಲೂ ದಹನಕ್ರಿಯೆಯೇ ಮೂಲಕಾರಣ. ಆದರೆ ವಾಯುಮಂಡಲದ ಮೇಲ್ಪದರ ಮತ್ತು ಮುಂದಿನ ನಿರ್ವಾತ ಪ್ರದೇಶದ ಸುದೀರ್ಘಯಾನದಲ್ಲಿ ಬಾಹ್ಯಮೂಲಗಳಿಂದ ಆಕ್ಸಿಜನ್ ದೊರೆಯದು. ಅಲ್ಲದೆ ಸಾಂಪ್ರದಾಯಿಕ ಇಂಧನವನ್ನು ರಾಕೆಟ್ ಹೊತ್ತು ಕೊಂಡೊಯ್ಯುವುದು ಭಾರದ ಮತ್ತು ಲಭ್ಯಶಕ್ತಿಯ ದೃಷ್ಟಿಯಿಂದ ಉಪಯುಕ್ತವಲ್ಲ. ಆದ್ದರಿಂದ ಆಕ್ಸಿಜನ್ನನ್ನು ಒಳಗೊಂಡಿರುವ ರಾಸಾಯನಿಕ ಇಂಧನ ಇಂಥ ಸಮಸ್ಯೆಗೆ ಪರಿಹಾರ. ದ್ರವ ಹೈಡ್ರೊಜನ್–ದ್ರವ ಆಕ್ಸಿಜನ್ ಮಿಶ್ರಣ ಇಂದು ರಾಕೆಟ್ ಯಾನದಲ್ಲಿ ಬಳಕೆಯಲ್ಲಿರುವ ಒಂದು ರಾಸಾಯನಿಕ ಇಂಧನ. ರಾಕೆಟ್ ಚಲನೆಯಲ್ಲಿ ಉಪಯೋಗಿಸುವ ರಾಸಾಯನಿಕ ಇಂಧನಗಳು ದ್ರವರೂಪದಲ್ಲಿರಬಹುದು, ಘನರೂಪದಲ್ಲಿರಬಹುದು–ಇವುಗಳ ಒಟ್ಟು ಹೆಸರು ಪ್ರೊಪೆಲ್ಲೆಂಟ್ಸ್.

ಕೆಲವು ದ್ರವ ರಾಸಾಯನಿಕ ಇಂಧನಗಳ ವಿವರ ಇಲ್ಲಿದೆ:

| ಆಕ್ಸಿಜನ್ ಪೂರಕ | ಇಂಧನ |
|---|---|
| ದ್ರವ ಆಕ್ಸಿಜನ್ | ಶೇ. 75 ಈಥೈಲ್ ಆಲ್ಕೊಹಾಲ್, |
| ದ್ರವ ಆಕ್ಸಿಜನ್ | ಶೇ. 25 ನೀರು. |
| ದ್ರವ ಆಕ್ಸಿಜನ್ | ದ್ರವ ಹೈಡ್ರೊಜನ್ |
| ಶೇ.80 ಹೈಡ್ರೊಜನ್ ಪರಾಕ್ಸೈಡ್ | ದ್ರವ ಅಮೋನಿಯ |
| ಶೇ.20 ನೀರು | ಶೇ.57 ಮೀಥೈಲ್ ಆಲ್ಕೊಹಾಲ್ |
| ರೆಡ್ ಫ್ಯೂಮಿಂಗ್ ನೈಟ್ರಿಕ್ ಆಮ್ಲ | ಶೇ.30 ಹೈಡ್ರಾಜೀನ್ ಅನಿಲಿನ್ |
| ಶೇ.90 ನೈಟ್ರಿಕ್ ಆಮ್ಲ | ವೀನೈಲ್ ಐಸೊಬ್ಯೂಟೈಲ್ |
| ಶೇ.10 ಸಲ್ಫ್ಯೂರಿಕ್ ಆಮ್ಲ | ಈಥರ್ |

ನೋಡಿ – ಲೋಹಾಧಾರಿತ ಇಂಧನ.

**ಬೈಜಿಕ ಇಂಧನಗಳು (ನ್ಯೂಕ್ಲಿಯರ್ ಫ್ಯುಯೆಲ್ಸ್):** ಯುರೇನಿಯಂ–233 ($_{92}U^{233}$), ಯುರೇನಿಯಂ–235 ($_{92}U^{235}$), ಪ್ಲುಟೋನಿಯಂ–239 ($_{94}Pu^{239}$), ಹೈಡ್ರೊಜನ್ ($_{1}H^{1}$), ಡ್ಯುಟೀರಿಯಂ ($_{1}H^{2}$), ಟ್ರೈಶಿಯಂ ($_{1}H^{3}$) ಮತ್ತು ಲಿಥಿಯಂ–6 ($_{3}Li^{6}$) ಇವು ಶಕ್ತಿಯ (ಎನರ್ಜಿ) ಬಿಡುಗಡೆಗಾಗಿ ಉಪಯೋಗಿಸಬಹುದಾದ ಬೈಜಿಕ (ನ್ಯೂಕ್ಲಿಯರ್) ಇಂಧನಗಳು. ಯುರೇನಿಯಂ–233 ಮತ್ತು ಪ್ಲುಟೋನಿಯಂ–239 ಪ್ರಕೃತಿಯಲ್ಲಿ ಧಾರಾಳವಾಗಿ ಸಿಕ್ಕುವುದಿಲ್ಲ. ಟ್ರೈಶಿಯಂನ ಅರ್ಧಾಯು (ಹಾಫ್ ಲೈಫ್) 12 ವರ್ಷ. ಆದ್ದರಿಂದ ಅದೂ ಧಾರಾಳವಾಗಿ ಸಿಕ್ಕುವುದಿಲ್ಲ.

ಸ್ವಾಭಾವಿಕವಾಗಿ ಸಿಕ್ಕುವ ಲೋಹದಲ್ಲಿ ಯುರೇನಿಯಂ–235ರ ಪ್ರಮಾಣ 0.72%. ಉಳಿದುದೆಲ್ಲ ಯುರೇನಿಯಂ–238. ಇದನ್ನು ಮಂದ (ಸ್ಲೋ) ನ್ಯೂಟ್ರಾನುಗಳಿಂದ ಪ್ಲುಟೋನಿಯಂ–239 ಆಗಿ ಪರಿವರ್ತಿಸಬಹುದು.

$_{92}U^{238} + {}_{0}n^{1}$ (ಮಂದ) $\rightarrow {}_{92}U^{239} + \tilde{a}$

$_{92}U^{239} \rightarrow \hat{a} + {}_{93}Np^{239}$

$_{93}Np^{239} \rightarrow \hat{a} + {}_{94}Pu^{239}$

ಇಲ್ಲಿ 93 NP 239 ನೆಪ್ಚೂನಿಯಂ, ಬೀಟಕಣಗಳು ($\hat{a}$) ಮತ್ತು ಗ್ಯಾಮಕಿರಣ ($\tilde{a}$)

ಹೀಗೆಯೇ ಥೋರಿಯಂ–232ನ್ನು ಯುರೇನಿಯಂ–233 ಆಗಿ ಪರಿವರ್ತಿಸಬಹುದು.

$_{90}Th^{232} + {}_{0}n^{1}$ (ಮಂದ) $\rightarrow {}_{92}Th^{233} + \tilde{a}$

$_{90}Th^{233} \rightarrow \hat{a} + {}_{91}Pa^{233}$

$_{91}Pa^{233} \rightarrow \hat{a} + {}_{92}U^{233}$

ಇಲ್ಲಿ $_{91}Pa^{23}$ ಪ್ರೋಟಾಕ್ಟಿನಿಯಂ. ಇಂಧನವನ್ನು ಉತ್ಪಾದಿಸಲು ಬೇಕಾಗಿರುವ ಸಮಸ್ಥಾನಿಗಳ (ಐಸೊಟೋಪ್ಸ್) ಹೆಸರು ಫಲೋತ್ಪಾದಕ ವಸ್ತುಗಳು. ಟ್ರೈಶಿಯಂನ್ನು ಉತ್ಪಾದಿಸಲು ಲಿಥಿಯಂ–6 ಸಮಸ್ಥಾನಿಯನ್ನು ಉಪಯೋಗಿಸುತ್ತಾರೆ.

$_{3}Li^{6} + {}_{0}n^{1} \rightarrow {}_{2}He^{4} + {}_{1}H^{3}$

ಇಲ್ಲಿ $_{2}He^{4}$ ಹೀಲಿಯಂ.

ಶಕ್ತಿಯ ಉತ್ಪಾದನೆಗೆ ಇಂಧನ ಒಂದು ಗೊತ್ತಾದ ದರದಲ್ಲಿ (ರೇಟ್) ಉರಿಯಬೇಕು. ಇಂಧನವನ್ನು ಉರಿಸಲು ವ್ಯಯ ಮಾಡಬೇಕಾದ ಶಕ್ತಿ ಅದು ಉರಿಯುವುದರಿಂದ ಉತ್ಪತ್ತಿಯಾಗುವ ಶಕ್ತಿಗಿಂತ ಹೆಚ್ಚಾದರೆ ಅಂಥ ಇಂಧನ ಪ್ರಯೋಜನಕಾರಿಯಾದುದಲ್ಲ. ಕಟ್ಟಿಗೆ, ಕಲ್ಲಿದ್ದಲು ಮತ್ತು ಎಣ್ಣೆ ಉರಿಯುವಾಗ ಉತ್ಪತ್ತಿಯಾಗುವ ಶಕ್ತಿಯಲ್ಲಿ ಒಂದಂಶ ಮಾತ್ರ ಅವು ಉರಿಯಲು ಉಪಯೋಗವಾಗುತ್ತದೆ. ಆದ್ದರಿಂದಲೇ ಅವು ಒಮ್ಮೆ ಉರಿಯಲು ಪ್ರಾರಂಭಿಸಿದರೆ ಪೂರ್ತಿ ಬೂದಿಯಾಗುವವರೆಗೆ ಆರುವುದಿಲ್ಲ.

ಭಾರವಾದ ಬೈಜಿಕ ಇಂಧನಗಳು ಉರಿಯುವ ವಿಧಾನದ ಹೆಸರು ವಿದಳನ (ಫಿಷನ್). ಇದನ್ನು ಈ ಕೆಳಗೆ ಕಂಡಂತೆ ಸಾಂಕೇತಿಕವಾಗಿ ನಿರೂಪಿಸಬಹುದು:

F+n (ಮಂದ) → X+Y+vn (ವಿದಳನ)

F ವಿದಳನದಲ್ಲಿ ಬೀಜ, n ನ್ಯೂಟ್ರಾನು, X ಮತ್ತು Y ವಿದಳನ ತುಣುಕುಗಳು v ವಿದಳನದಲ್ಲಿ ಬಿಡುಗಡೆಯಾಗುವ ನ್ಯೂಟ್ರಾನುಗಳ ಸಂಖ್ಯೆ. ಇದು 2.5–2.9ವರೆಗೆ ವ್ಯತ್ಯಾಸವಾಗುತ್ತದೆ.

ಒಂದು ಬೀಜ ವಿದಳನಗೊಂಡಾಗ ಸರಾಸರಿ 200 Mev. ಶಕ್ತಿ ಬಿಡುಗಡೆಯಾಗುತ್ತದೆ. ಈ ಶಕ್ತಿಯ ಬಹುಭಾಗ ವಿದಳನ ತುಣುಕುಗಳ ಚಲನಶಕ್ತಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಯುರೇನಿಯಂ–233, ಯುರೇನಿಯಂ–235 ಮತ್ತು ಪ್ಲುಟೋನಿಯಂ–239ನ್ನು ಶೀಘ್ರ ನ್ಯೂಟ್ರಾನುಗಳಿಂದಲೂ ವಿದಳನಗೊಳಿಸಬಹುದು. ಇವನ್ನು ಉಪಯೋಗಿಸುವ ರಿಯಾಕ್ಟರುಗಳಲ್ಲಿ ಥೋರಿಯಂ–232 ಮತ್ತು ಯುರೇನಿಯಂ–238ರ ತಾಟುಗಳನ್ನು

ನ್ಯೂಟ್ರಾನುಗಳ ಸಂಘರ್ಷಣಕ್ಕೆ ಒಡ್ಡಿ ಉರಿದುಹೋದುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇಂಧನವನ್ನು ಉತ್ಪಾದಿಸಬಹುದು. ಸಾಮಾನ್ಯವಾಗಿ ಶಕ್ತಿಯ ರಿಯಾಕ್ಟರುಗಳಲ್ಲಿ ಯುರೇನಿಯಂ –235ರ ಪ್ರಮಾಣ ಶೇ.1–ಶೇ.5ರಷ್ಟು ಹೆಚ್ಚಾಗಿರುವ ಲೋಹವನ್ನು ಉಪಯೋಗಿಸುತ್ತಾರೆ. ಲೋಹದಲ್ಲಿ ಯುರೇನಿಯಂ–235ರ ಪ್ರಮಾಣ ಹೆಚ್ಚುವಂತೆ ಮಾಡಲು ಎರಡು ವಿಧಾನಗಳನ್ನು ಅನುಸರಿಸಬಹುದು: ಗಾಳಿಯ ವಿಸರಣ ವಿಧಾನ ಮತ್ತು ಸೆಂಟ್ರಿಫ್ಯೂಗಲ್ ವಿಧಾನ. ಎರಡನೆಯ ವಿಧಾನ ಉಪಯುಕ್ತವಾಗುವ ಮಟ್ಟಕ್ಕೆ ಇನ್ನೂ ಬಂದಿಲ್ಲ.

ಗಾಳಿಯ ವಿಸರಣ ವಿಧಾನದಲ್ಲಿ ಸರಂಧ್ರ ತಡೆಯ (ಪೋರಸ್ ಬ್ಯಾರಿಯರ್) ಮೂಲಕ ಹಾಯುವ ಬೇರೆ ಬೇರೆ ತೂಕದ ಅಣುಗಳ ಗತಿಯಲ್ಲಿರುವ ವ್ಯತ್ಯಾಸ ಉಪಯೋಗಕ್ಕೆ ಬರುತ್ತದೆ. ಯುರೇನಿಯಂ–235ರ ಪ್ರಮಾಣವನ್ನು ಹೆಚ್ಚಿಸಲು ಬಳಸುವ ತಡೆಯಲ್ಲಿ ಚ.ಅಂ. ಒಂದಕ್ಕೆ ನೂರು ಮಿಲಿಯಕ್ಕಿಂತ ಹೆಚ್ಚು ರಂಧ್ರಗಳಿರುತ್ತವೆ. ಕಡಿಮೆ ತೂಕದ ಅಣುಗಳು ಅದರ ಮೂಲಕ ಬೇಗ ವಿಸರಣಗೊಳ್ಳುತ್ತವೆ (ವಿಸರಣಗೊಳ್ಳುತ್ತವೆ ಎನ್ನುವುದಕ್ಕಿಂತ ತರುತ್ತವೆ ಎಂದು ಹೇಳುವುದೇ ಹೆಚ್ಚು ಸಮಂಜಸ).

ಯುರೇನಿಯಂ ಸಮಸ್ಥಾನಿಗಳು ಬೇರ್ಪಡಿಸಲು ಅವನ್ನು ಯುರೇನಿಯಂ ಹೆಕ್ಸಫ್ಲೋರೈಡ್ ($UF_6$) ರೂಪದಲ್ಲಿ ಉಪಯೋಗಿಸುತ್ತಾರೆ. ಸಾಮಾನ್ಯ ಉಷ್ಣತೆಯಲ್ಲಿ ಘನರೂಪದಲ್ಲಿದ್ದರೂ ಇದನ್ನು ಆವಿ ಮಾಡಲು ಹೆಚ್ಚು ಕಾಯಿಸಬೇಕಾದ ಪ್ರಮೇಯವಿರುವುದಿಲ್ಲ.

ವಿಸರಣಪರಿಮಾಣ ಅಣುವಿನ ಜಡಮಾನದ ವರ್ಗಮೂಲ ಹೆಚ್ಚಿದಂತೆ ಕಡಿಮೆಯಾಗುತ್ತದೆ. ಆದ್ದರಿಂದ ಬೇರ್ಪಡಿಕೆಯ ಅಪವರ್ತನವನ್ನು (ಫ್ಯಾಕ್ಟರ್) $V>0$ ಎಂದಿಟ್ಟುಕೊಂಡು ಅದನ್ನು

$$x=\sqrt{\frac{M(\text{ಭಾರ})}{M(\text{ಹಗುರ})}}$$

ಎಂದು ತೋರಿಸಬಹುದು. ಯುರೇನಿಯಂ ಹೆಕ್ಸಫ್ಲೋರೈಡಿಗೆ ಸಂಬಂಧಿಸಿದಂತೆ
M(ಭಾರ) = [238+6X19] = 352 ಮತ್ತು
M(ಹಗುರ) = [235+6X19] =349. ಆದ್ದರಿಂದ

$$\alpha = \sqrt{\frac{352}{349}} = 1.0043$$

ಇದರಿಂದ ಒಮ್ಮೆ ವಿಸರಣಗೊಂಡ ಆವಿ ಕಡಿಮೆ ಒತ್ತಡದ ಕಡೆ (V-1) ರಷ್ಟು ಕಡಿಮೆ ತೂಕದಿಂದ ಅಣುಗಳಿಂದ ಸಮೃದ್ಧವಾಗಿರುತ್ತದೆಂದು ಗ್ರಹಿಸಬಹುದು. (V-1)ರ ಹೆಸರು ಸಮೃದ್ಧ ಅಂಶ (ಎನ್ರಿಚ್‌ಮೆಂಟ್ ಫ್ಯಾಕ್ಟರ್). ಯುರೇನಿಯಂ ಹೆಕ್ಸಫ್ಲೋರೈಡಿಗೆ ಸಂಬಂಧಿಸಿದಂತೆ ಇದು 0.0043. ಗಣನೀಯ ಪ್ರಮಾಣದಲ್ಲಿ ಯುರೇನಿಯಂ–235ನ್ನು ಹೆಚ್ಚಿಸಲು ಅನೇಕ ವಿಸರಣಹಂತಗಳನ್ನು ಉಪಯೋಗಿಸಬೇಕು.



ಚಿತ್ರ 4

ಚಿತ್ರದಲ್ಲಿ ವಿಸರಣಹಂತಗಳ ಸ್ವಲ್ಪಭಾಗವನ್ನು ತೋರಿಸಿದೆ. B ಎಂದು ನಮೂದಿಸಿರುವ ಹಂತದಲ್ಲಿ ಕೆಳಗಿನಿಂದ ಪ್ರವೇಶಿಸುವ ಆವಿಯ ಅರ್ಧ ಭಾಗ ಊರ್ಧ್ವಮುಖವಾಗಿ ವಿಸರಣಗೊಳ್ಳುತ್ತದೆಂದು ಭಾವಿಸಬಹುದು. ಇದರಲ್ಲಿ ಯುರೇನಿಯಂ–235ರ ಅಂಶ ಹೆಚ್ಚು. ಉಳಿದುದು C ಕಡೆಗೆ ಪಂಪ್ ಆಗುತ್ತದೆ. ಹೀಗೆ ಎಲ್ಲ ಹಂತಗಳಲ್ಲೂ ನಡೆಯುವುದರಿಂದ ಮೇಲೆ ಹೋದಂತೆ ಆವಿಯಲ್ಲಿ ಯುರೇನಿಯಂ–235ರ ಪ್ರಮಾಣ ಹೆಚ್ಚುತ್ತದೆ. ಹೆಚ್ಚು ಹೆಚ್ಚು ಇಂಥ ವಿಸರಣ ಹಂತಗಳಿಂದ ಕೂಡಿರುವ ಉಪಕರಣದ ನೆರವಿನಿಂದ ಬೇಕಾದ ಪ್ರಮಾಣದಲ್ಲಿ ಯುರೇನಿಯಂ –235ರ ಸಮೃದ್ಧಿಯನ್ನು ಪಡೆಯಬಹುದು.

ರಿಯಾಕ್ಟರಿನಲ್ಲಿ ಉಪಯೋಗಿಸುವ ಯಾವುದೇ ಒಂದು ಇಂಧನ ಘಟಕ (ಫ್ಯುಯಲ್ ಎಲಿಮೆಂಟ್) ಪೂರ್ಣವಾಗಿ ಉರಿಯುವುದಿಲ್ಲ. ಭಾಗಶಃ ಉರಿದ ಘಟಕಗಳನ್ನು ಹೊರಗೆ ತೆಗೆದು ಅದರಿಂದ ಉರಿಯದೆ ಉಳಿದ ಇಂಧನವನ್ನೂ ಇಂಧನವಾಗಿ ಮಾರ್ಪಟ್ಟ ಇತರ ಸಮಸ್ಥಾನಿಗಳನ್ನೂ ಬೇರ್ಪಡಿಸಬಹುದು. ಹಗುರವಾದ ಬೀಜ ಇಂಧನಗಳು ಉರಿಯುವ ವಿಧಾನದ ಹೆಸರು ಸಮ್ಮಿಳನ (ಫ್ಯೂಷನ್), ಸದಾ ಹೈಡ್ರೊಜನ್ನಿನ ಪರಮಾಣುಗಳು ಸಮ್ಮಿಳನಗೊಂಡು ಹೀಲಿಯಂ ಪರಮಾಣುಗಳಾಗಿ ಪರಿವರ್ತನೆಗೊಳ್ಳುತ್ತಿರುವುದರಿಂದಲೇ ಸೂರ್ಯ ಮತ್ತು ನಕ್ಷತ್ರಗಳು ಯಥೇಚ್ಛವಾಗಿ ಶಕ್ತಿಯನ್ನು ಹೊರಚೆಲ್ಲುತ್ತ ಬೆಳಗುತ್ತಿವೆ.

ವಿದಳನಕ್ರಿಯೆ ಸಾಮಾನ್ಯ ಉಷ್ಣತೆಯಲ್ಲೂ ನಡೆಯುತ್ತದೆ. ಆದರೆ ಸಮ್ಮಿಳನಕ್ರಿಯೆ ನಡೆಯಲು ಹತ್ತು ಲಕ್ಷ ಡಿಗ್ರಿಗೆ ಮಿಗಿಲಾದ ಉಷ್ಣತೆ ಬೇಕು. ಇಷ್ಟು ಹೆಚ್ಚಿನ ಉಷ್ಣತೆಯನ್ನು ಪ್ರಯೋಗಶಾಲೆಯಲ್ಲಿ ಪಡೆಯುವುದು ಕಷ್ಟ; ಹೈಡ್ರೊಜನ್ ಮತ್ತು ಲಿಥಿಯಂ ಪರಮಾಣುಗಳಿಂದ ಉಪಯೋಗ ಯೋಗ್ಯವಾದ ಸಮ್ಮಿಳನದ ಶಕ್ತಿಯನ್ನು ಪಡೆಯಲು ಇನ್ನೂ ಆಗಿಲ್ಲ. ಟ್ರಿಶಿಯಂ ಮತ್ತು ಡ್ಯುಟೀರಿಯಂ ಮಿಶ್ರಣ ಸಮ್ಮಿಳನಕ್ರಿಯೆಗೆ ಬಹಳ ಯೋಗ್ಯವಾದುದಾದರೂ ವೆಚ್ಚದ ದೃಷ್ಟಿಯಿಂದ ಇದರ ಬಳಕೆಯೂ ಆಗಿಲ್ಲ. ಆದ್ದರಿಂದ ಉಪಯುಕ್ತ ಸಮ್ಮಿಳನ ಶಕ್ತಿಯ ಉತ್ಪಾದನೆಗೆ ತೊಡಗಿಸಬಹುದಾದ ಹಗುರ ಬೀಜ ಇಂಧನ ಡ್ಯುಟೀರಿಯಂ ಒಂದೇ.

ಡ್ಯುಟೀರಿಯಂ ಪರಮಾಣುಗಳು ಎರಡು ರೀತಿಯಲ್ಲಿ ಸಮ್ಮಿಳನಗೊಳ್ಳುತ್ತವೆ.

$$_1H^2+{}_1H^2 \longrightarrow {}_1H^3+{}_1H^1$$
$$\longrightarrow {}_2He^3+{}_0n^1$$

ಇಲ್ಲಿ ಉತ್ಪತ್ತಿಯಾದ ಟ್ರಿಶಿಯಂ ಮತ್ತೊಂದು ಡ್ಯುಟೀರಿಯಂ ಪರಮಾಣುವಿನೊಂದಿಗೆ ಸಮ್ಮಿಳನಗೊಳ್ಳಬಹುದು. ಹೀಲಿಯಂ ($2He^3$) ಕೂಡ ನ್ಯೂಟ್ರಾನಿನೊಂದಿಗೆ ಪ್ರಕ್ರಿಯೆಗೊಂಡು ಒಂದು ಪ್ರೋಟಾನನ್ನೂ ಒಂದು ಟ್ರಿಶಿಯಂನನ್ನೂ ಒದಗಿಸಬಹುದು. ಇಷ್ಟನ್ನೂ ಸಾಂಕೇತಿಕವಾಗಿ

$$3\,{}_1H^2 \rightarrow {}_2He^4+{}_1H^1+{}_0n^1$$

ಎಂದು ಬರೆಯಬಹುದು. ಇದರಿಂದ ಒಟ್ಟು 21.6 Mev ಶಕ್ತಿ ದೊರೆಯುತ್ತದೆ.

ಭಾರವಾದ ಬೈಜಿಕ ಇಂಧನಗಳಿಂದ ಪ್ರತಿ ಬೀಜಗಳಿಗೆ 0.9 Mev ಶಕ್ತಿ ದೊರೆತರೆ ಹಗುರ ಬೈಜಿಕ ಇಂಧನಗಳಿಂದ ಪ್ರತಿ ಬೀಜಕ್ಕೆ 4.0 Mev. ಶಕ್ತಿ ದೊರೆಯುತ್ತದೆ.

ಸಾಮಾನ್ಯವಾಗಿ ಸಿಕ್ಕುವ ಅದುರಿನಲ್ಲಿ ಯುರೇನಿಯಂ ಲೋಹದ ಅಂಶ ಶೇ.0.1–ಶೇ.0.58ರಷ್ಟು ಮಾತ್ರ ಇರುತ್ತದೆ. ಇದು ಶೇ.1–ಶೇ.4ರಷ್ಟಿರುವುದು ಪಿಚ್‌ಬ್ಲೆಂಡ್ ಮತ್ತು ಯುರಾನಿಗೈಟುಗಳಲ್ಲಿ, ಮೋನಜೈಟಿನಲ್ಲಿ ಥೋರಿಯಂ ಆಕ್ಸೈಡ್ ರೂಪದಲ್ಲಿ ಶೇ.1–ಶೇ.5ರಷ್ಟು ಸಿಕ್ಕುತ್ತದೆ. ಇಷ್ಟಲ್ಲದೆ ಬ್ರೌನ್ ಮತ್ತು ಸಿಲ್ವರ್ ಅವರು ಗ್ರಾನೈಟ್ ಕಲ್ಲಿನ ಬೆಟ್ಟಗಳಲ್ಲಿ ಟನ್ ಒಂದಕ್ಕೆ 15 ಗ್ರಾಮಿನಷ್ಟು ಯುರೇನಿಯಂ ಮತ್ತು ಥೋರಿಯಂ ಲೋಹಗಳು ಸಿಕ್ಕುತ್ತವೆಂದು ತೋರಿಸಿದ್ದಾರೆ. ಆದರೆ ಇದರಲ್ಲಿ 1/5 ಭಾಗವನ್ನು ಮಾತ್ರ ಸುಲಭವಾಗಿ ಬೇರ್ಪಡಿಸಬಹುದು.

ಗಣಿಗಳಿಂದ ಮತ್ತು ಬೆಟ್ಟಗಳಿಂದ ದೊರೆಯುವ ವಿದಳನಯೋಗ್ಯವಾದ ಲೋಹ $21x10^6$ ಟನ್. ಇದರಿಂದ (ಟನ್ನಿಗೆ $75x10^{12}$ BTU) $16x10^{20}$ BTU. ಶಕ್ತಿಯನ್ನು ಉತ್ಪಾದಿಸಬಹುದು ಎಲ್ಲ ದೇಶಗಳ ಸಾಲಿಯಾನ ಶಕ್ತಿಯ ಬೇಡಿಕೆ $10^{17}$ BTUಗಳು. ಇಷ್ಟು ಶಕ್ತಿಯನ್ನು ಕಟ್ಟಿಗೆ, ಕಲ್ಲಿದ್ದಲು ಮತ್ತು ಎಣ್ಣೆಯಿಂದಲೇ ಪೂರೈಕೆ ಮಾಡಿದರೆ ಅವುಗಳೆಲ್ಲ ಸು.200 ವರ್ಷಗಳಲ್ಲಿ ಬರಿದಾಗುತ್ತವೆ. ಮುಂದಿನ ದಿನಗಳಲ್ಲಿ ಬೇಡಿಕೆ ಹೆಚ್ಚಿದರೂ ವಿದಳನಶಕ್ತಿಯ ನಿಕ್ಷೇಪಗಳು ಒಂದು ಸಾವಿರ ವರ್ಷಗಳ ಕಾಲ ಉಳಿಯಬಲ್ಲವು.

ಸಮ್ಮಿಳನಶಕ್ತಿಯ ಬಿಡುಗಡೆ ಸಾಧ್ಯವಾದರೆ ಇಂಧನದ ಪೂರೈಕೆಗಾಗಿ ಯಾವ ಕಾಲಕ್ಕೂ ಯೋಚಿಸಬೇಕಾಗಿಲ್ಲ. ಒಂದು ಘನ ಅಡಿ ಸಮುದ್ರ ನೀರಿನಲ್ಲಿರುವ ಡ್ಯುಟೀರಿಯಂ $280x10^6$ BTU. ಗಳಷ್ಟು ಶಕ್ತಿಯನ್ನು ಕೊಡಬಲ್ಲದು. ಇದು 10 ಟನ್ ಕಲ್ಲಿದ್ದಲಿಗೆ ಸಮ. ಸಮುದ್ರದ ನೀರಿನಲ್ಲಿರುವಷ್ಟು ಡ್ಯುಟೀರಿಯಂಅನ್ನು ಶಕ್ತಿಯ ಉತ್ಪಾದನೆಗೆ ತೊಡಗಿಸಿದರೆ ಜಗತ್ತಿನ ಬೇಡಿಕೆಯನ್ನು ಅದು 10 ಬಿಲಿಯನ್ ವರ್ಷಗಳವರೆಗೆ ಪೂರೈಸುತ್ತದೆ. (ಎಸ್.ಎ.ಎಚ್.)

**ಇಂಧನಕೋಶ:** ಇಂಧನದ ರಾಸಾಯನಿಕ ಶಕ್ತಿಯನ್ನು ಅವಿಚ್ಛಿನ್ನವಾಗಿ ಮತ್ತು ನೇರವಾಗಿ ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುವ ವಿದ್ಯುತ್ಕೋಶ (ಫ್ಯುಯೆಲ್ ಸೆಲ್). ಒಂದು ಶತಮಾನಕ್ಕೂ ಹಿಂದೆ ಬ್ರಿಟನ್ನಿನ ಸರ್.ಡಬ್ಲ್ಯು. ಗ್ರೌ ಎಂಬಾತ ಇಂಧನಕೋಶದಿಂದ ಶಕ್ತಿಯನ್ನು ಪಡೆಯುವ ತತ್ತ್ವವನ್ನು ಕಂಡುಹಿಡಿದ. ಸ್ಫೋಟಕವಾಗದ ಮಂದಗತಿಯ ಪ್ರತಿಕ್ರಿಯೆಯಿಂದ ನೀರಿನ ವಿಯೋಜನೆಯನ್ನು ಸಾಧಿಸುವುದು ಸಾಧ್ಯವೆಂದೂ ಈ ಪ್ರತಿಕ್ರಿಯೆ ಸ್ವಲ್ಪ ವಿದ್ಯುಚ್ಛಕ್ತಿಯ ಬಿಡುಗಡೆ ಮಾಡುವುದೆಂದೂ ಅವನು ತೋರಿಸಿದ. ಈ ಕ್ರಮದಲ್ಲಿ ಶಕ್ತಿಯ ಪರಿವರ್ತನೆಯಿಂದ ಲಭಿಸುವ ಉತ್ಪನ್ನ ಹೆಚ್ಚು. ಗದ್ದಲವಿಲ್ಲ, ಯಾವ ನಂಜೂ ಹೊರಸೂಸುವುದಿಲ್ಲ. ಇಂಥ ಕೋಶಗಳನ್ನು ಆಕಾಶಯಾನದಲ್ಲಿ ಬಳಸುವುದರ ಸಮುದ್ರದ ನೀರಿನಲ್ಲಿ ಜಲಾಂತರ್ನೌಕೆಯನ್ನು ನಡೆಸುವುದರ ಸಾಧ್ಯತೆಯ ವಿಚಾರವಾಗಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ, ಸ್ವೀಡನ್ನಿನಲ್ಲಿ ಅನೇಕ ಶೋಧನೆಗಳು ನಡೆದಿವೆ. ಎಲ್ಲ ಬ್ಯಾಟರಿಗಳಲ್ಲೂ ಆಗುವಂತೆ ಆಕ್ಸೈಡಿನ ಆಕ್ಸಿಜನ್ನನ್ನು ತೆಗೆಯುವ ಪ್ರತಿಕ್ರಿಯೆಯನ್ನು ಇಂಧನಕೋಶ ಉಂಟುಮಾಡುತ್ತದೆ. ವಾಸ್ತವವಾಗಿ ಇದು ರಾಸಾಯನಿಕ ಶಕ್ತಿಯ ಪರಿವರ್ತನೆ ಕ್ರಮ. ಇದರ ಪ್ರತಿಫಲ ಶೇ.50 ರಷ್ಟು ಹೆಚ್ಚು.

**ಅನಿಲ ಇಂಧನಕೋಶ:** ಒಂದು ವಿದ್ಯುತ್ಕಾರ್ಯದಿಂದ ವಿಘಟಿತವಾದ ದ್ರವ ಅಥವಾ ಘನಪದಾರ್ಥ ವಿದ್ಯುದ್ವಾಹಿಯಾಗಿರಬಹುದು. ಎರಡು ಎಲೆಕ್ಟ್ರೋಡುಗಳು ವಿದ್ಯುದ್ವಾಹಿಕಣದ (ಅಯೋನಿಕ್) ವಾಹಕವನ್ನು (ಕಂಡಕ್ಟರ್) ಹೊರಗಿನ ವಿದ್ಯುತ್ತಿನ ಆವರಣದೊಂದಿಗೆ ಕೂಡಿಸುತ್ತವೆ. ಒಂದು ಎಲೆಕ್ಟ್ರೋಡನ್ನು ಆಕ್ಸಿಜನ್ನನ್ನು ಸೇರಿಸುವ ಅನಿಲದಿಂದಲೂ ಇನ್ನೊಂದನ್ನು ಆಕ್ಸಿಜನ್ನನ್ನು ತೆಗೆಯುವ ಅನಿಲದಿಂದಲೂ ತುಂಬಿರುತ್ತಾರೆ. ಹೀರುವ ಮತ್ತು ವಿದ್ಯುದ್ವಾಹಿ ಕಣಗಳಾಗಿ ಮಾರ್ಪಡಿಸುವ ಪ್ರತಿಕ್ರಿಯೆಗಳು ಎಲೆಕ್ಟ್ರೋಡುಗಳಲ್ಲಿ ನಡೆಯುತ್ತವೆ.

**ಪ್ರಯೋಗಗಳು:** ಒಂದೋ ಎರಡೋ ವಾಟುಗಳಿಂದ ಕೆಲವು ಕಿಲೋವಾಟುಗಳವರೆಗಿನ ಸಾಮರ್ಥ್ಯದ ಇಂಧನದ ಕೋಶಗಳನ್ನು ಮಾಮೂಲಾದ ಕೋಶಗಳ ಅಥವಾ ವಿದ್ಯುತ್ಕೋಶಗಳ ಬದಲಾಗಿ ಬಳಸುತ್ತಾರೆ. ವಿನ್ಯಾಸದ ಮಾರ್ಪಾಡಿನಿಂದ ಕೋಶಗಳು ಹಗುರವೂ ಅಗ್ಗವೂ ಆದಾಗ ಅವನ್ನು ವಿದ್ಯುತ್ತಿನ ರೈಲ್ವೆ ದಾರಿಗಳಲ್ಲೂ ಸಾರ್ವಜನಿಕ ಸಾಗಣೆಗಳಲ್ಲೂ ಬಳಸಬಹುದು. ಮುಂದೆ ರೈಲ್ವೆಗಾಡಿ ಸಾಲುಗಳಲ್ಲೂ ಹಡಗುಗಳಲ್ಲೂ ಬಳಸುವ ಸಾಧ್ಯತೆಯಿದೆ.

(ಎಚ್.ವಿ.ಎಸ್.ಆರ್.)

ಇಂಧನಕೋಶಗಳಲ್ಲಿ ನಡೆಯುವ ರಾಸಾಯನಿಕ ಪ್ರತಿಕ್ರಿಯೆಗಳನ್ನು ಕೆಳಗಿನ ಕೋಷ್ಟಕಗಳು ತೋರಿಸುತ್ತವೆ.

ಕೋಷ್ಟಕ 1: ಬೇರೆ ಬೇರೆ ಉಷ್ಣತೆಗಳಲ್ಲಿ ಕೋಶಗಳ ಸೈದ್ಧಾಂತಿಕ ವಿಭವಗಳು (ಥಿಯೊರೆಟಿಕಲ್ ಸೆಲ್ ಪೊಟನ್ಷಿಯಲ್ಸ್).

| ಪ್ರತಿಕ್ರಿಯೆ | ವೋಲ್ಟುಗಳಲ್ಲಿ ಕೋಶ ವಿಭವ | | | | | |
|---|---|---|---|---|---|---|
| | $25^0$ ಸೆಂ.ಗ್ರೇ. | $100^0$ ಸೆಂ.ಗ್ರೇ. | $250^0$ ಸೆಂ.ಗ್ರೇ. | $500^0$ ಸೆಂ.ಗ್ರೇ. | $750^0$ ಸೆಂ.ಗ್ರೇ. | $1000^0$ ಸೆಂ.ಗ್ರೇ. |
| $C+O_2$->$CO_2$ | 1.02 | 1.02 | 1.02 | 1.02 | 1.02 | 1.01 |
| $2C+O_2$->$2CO$ | 0.71 | 0.75 | 0.82 | 0.93 | 1.04 | 1.15 |
| $2CO+O_2$->$2CO_2$ | 1.33 | 1.30 | 1.23 | 1.11 | 1.00 | 0.88 |
| $2H_2+O_2$->$2H_2O$ | 1.23 | 1.18 | 1.12 | 1.05 | 0.97 | 0.90 |

ಕೋಷ್ಟಕ 2: ವಸ್ತುವಿನ ಸೈದ್ಧಾಂತಿಕ ವ್ಯಯ (ಕನ್‌ಸಮ್‌ಷನ್)

| ಪ್ರತಿಕ್ರಿಯೆ | ಉಷ್ಣತೆ ($^0$ ಸೆಂ.ಗ್ರೇ.) | ವ್ಯಯ, ಪೌಂಡ್/ಕಿ.ವಾ.–ಗಂ. | | |
|---|---|---|---|---|
| | | ಧನಧ್ರುವ | ಋಣಧ್ರುವ | ಮೊತ್ತ |
| $C+O_2$->$CO_2$ | 750 | 0.344 | 0.918 | 1.266 |
| $2C+O_2$->$2CO$ | 750 | 0.474 | 0.632 | 1.102 |
| $2CO+O_2$->$2CO_2$ | 750 | 1.150 | 0.656 | 1.816 |
| $2H_2+O_2$->$2H_2O$ | 100 | 0.070 | 0.560 | 0.630 |
| | 750 | 0.085 | 0.680 | 0.763 |

*

**ಇಂಪಾಲ:** ಆರ್ಟಿಯೊಡ್ಯಾಕ್ಟೈಲ ವರ್ಗದ ಬೋವಿಡೀ ಕುಟುಂಬಕ್ಕೆ ಸೇರಿದ ಸ್ತನಿ. ಶಾಸ್ತ್ರೀಯ ಹೆಸರು ಈಪೈಸಿರೋಸ್ ಮೆಲಾಂಪಸ್. ಇದೊಂದು ಚೆಲುವಾದ ಪ್ರಾಣಿ. ಕೆಲವು ವೇಳೆ ದಟ್ಟವಾದ ಅಡವಿ ಪ್ರದೇಶಗಳಲ್ಲಿ ಕಂಡುಬಂದರೂ ಇದರ ವಾಸ ಮಾತ್ರ ಉಪವನಗಳಂತಿರುವ ಪ್ರದೇಶಗಳಲ್ಲಿ, ನೀರಿರುವ ಸ್ಥಳಗಳ ಸಮೀಪದಲ್ಲಿ ವನ್ಯಪ್ರದೇಶಗಳ ಬಯಲುಗಳಲ್ಲಿ ಮೇಯಲು ಬರುವುದು. ಬಿಸಿಲ ಝಳ ಹೆಚ್ಚಾದಾಗ ಇದು ಮರದ ನೆರಳಲ್ಲಿ ಮಲಗಿ ವಿಶ್ರಮಿಸಿಕೊಳ್ಳುತ್ತದೆ. ಇಂಪಾಲ ಒಳ್ಳೆ ಸಂಚಾರಿ. ಸಾಮಾನ್ಯವಾಗಿ ನದಿಗಳ ಜಾಡನ್ನೇ ಅನುಸರಿಸಿಕೊಂಡು ಅಲೆದಾಡುವ ಸ್ವಭಾವ. ಗಾಬರಿಗೊಂಡಾಗ ಈ ಪ್ರಾಣಿಗಳು ಪೊದೆಗಳು ಮತ್ತು ಬಂಡೆಗಳನ್ನು ಲೀಲಾಜಾಲವಾಗಿ ದೊಡ್ಡ ಜಿಗಿತಗಳಿಂದ ವೇಗವಾಗಿ ಕ್ರಮಿಸಿ ಯಾವ ತೊಂದರೆಯೂ ಇಲ್ಲದೆ ಕಾಡಿನ ನಿರ್ಜನ ಪ್ರದೇಶವನ್ನು ಸೇರಿಕೊಳ್ಳುತ್ತವೆ. ಅತಿ ವೇಗವಾಗಿ ಓಡುತ್ತಿರುವಾಗ, ಆಕರ್ಷಕವಾಗಿ ಓಲಾಡುತ್ತ ಗಾಳಿಯಲ್ಲಿ ತೇಲಿ ಹೋಗುತ್ತಿರುವುದೋ ಎಂದು ಭಾಸವಾಗುವಂತೆ ಜಿಗಿಯುವುದು ಇದರ ಸ್ವಭಾವ. ಆದರೆ ಇದು ಸ್ವಲ್ಪ ದೂರವನ್ನು ಮಾತ್ರ ಅತಿ ವೇಗವಾಗಿ ಓಡಬಲ್ಲುದು. ಹಾಗೆ ಮಾಡುವಾಗ ಪೊದೆ ಮತ್ತು ಬಂಡೆಗಳನ್ನು ಗಮನಿಸದೆ ಅನೇಕ ವೇಳೆ ತನ್ನ ಜೊತೆಯವುಗಳ ಮೇಲೂ ಹಾರಿ ಓಡಿಹೋಗುತ್ತದೆ. ಇದು ಒಂದು ಜಿಗಿತಕ್ಕೆ ಸು.11 ಮೀ ದೂರ ಹಾರಿದ ದಾಖಲೆ ಇದೆ. 2 ಮೀ ಎತ್ತರದ ಕಂಬಿ ಬೇಲಿಯನ್ನು ಸುಲಭವಾಗಿ ನೆಗೆಯಬಲ್ಲುದು. ಇಂಪಾಲಗಳು ಸಂಘ ಜೀವಿಗಳು ಸಾಮಾನ್ಯವಾಗಿ ಒಂದು ಹಿಂಡಿನಲ್ಲಿ 50 ಪ್ರಾಣಿಗಳಿಗಿಂತ ಹೆಚ್ಚಾಗಿರುವುದಿಲ್ಲ. ಚಳಿಗಾಲದಲ್ಲಿ ಗಂಡು ಹೆಣ್ಣುಗಳೆರಡೂ ಜೊತೆಯಾಗಿ ಜೀವಿಸುತ್ತವೆ. ಈ ಕಾಲದಲ್ಲಿ ಹಿಂಡಿನ ಪ್ರಮಾಣ ದೊಡ್ಡದಾಗಿರಬಹುದು. ಆದರೆ ಬೇಸಗೆ ಕಾಲದಲ್ಲಿ ಇವು ಹುಲ್ಲುಗಾವಲುಗಳಲ್ಲಿ ಮೇಯಲು ಹೊರಟಾಗ ಹಿಂಡುಗಳು ಸಣ್ಣವಾಗಿದ್ದು ಪ್ರತಿಯೊಂದು ಹಿಂಡಿನಲ್ಲೂ ವಯಸ್ಸಿಗೆ ಬಂದ ಒಂದು ಗಂಡು 15 ಅಥವಾ 20 ಹೆಣ್ಣುಗಳ ಜೊತೆಗೂಡಿ ಸಂಚರಿಸುವುದು ಕಂಡುಬರುತ್ತದೆ. ಆಗಾಗ್ಗೆ ಪ್ರಾಯಕ್ಕೆ ಬಂದ ಗಂಡು ಇಂಪಾಲ ತನ್ನ ಹೆಣ್ಣು ಸಂಗಾತಿಗಳಿಗೋಸ್ಕರ ಹೋರಾಡಬೇಕಾಗುತ್ತದೆ. ಹರೆಯದ ಗಂಡು ವಯಸ್ಸಾದ ಇಂಪಾಲಗಳೊಡನೆ ಸೆಣಸುವುದೂ ಜಯಶಾಲಿಯಾಗುವುದೂ ಉಂಟು.



ಇಂಪಾಲದ ಮೈಬಣ್ಣ ಮೇಲ್ಭಾಗದಲ್ಲಿ ಕಂದು ಮಿಶ್ರಿತ ಕೆಂಪು; ಕೆಳಭಾಗದಲ್ಲಿ ಬೆಳ್ಳಗೆ. ವಯಸ್ಸಿಗೆ ಬಂದ ಇಂಪಾಲಗಳಿಗೆ ಮಾತ್ರ ಸುರುಳಿ ಸುತ್ತಿದ ಉಂಗುರಗಳಿಂದಾದ ಎರಡು ಕೊಂಬುಗಳಿರುತ್ತವೆ. ಕೊಂಬುಗಳ ಉದ್ದ 35–45 ಸೆಂಮೀ. ಇಂಪಾಲದ ಎತ್ತರ ಭುಜಮಟ್ಟಕ್ಕೆ ಸು.1ಮೀ. ಭಾರ ಸುಮಾರು 72 ಕೆ.ಜಿ. ಇವುಗಳ ಮೂಲಸ್ಥಾನಗಳಾದ ಕೀನ್ಯ ಮತ್ತು ಟ್ಯಾಂಗನೀಕ ಪ್ರದೇಶಗಳಲ್ಲಿ ಇಂದಿಗೂ ಕಂಡುಬರುತ್ತವೆ. ಇಂಪಾಲ ಜಾತಿಯ ಮತ್ತೊಂದು ಪ್ರಭೇದ (*ಈಪೈಸಿರೋಸ್ ಪೆಟರ್ಸಿ*) ಆಫ್ರಿಕದ ನೈರುತ್ಯ ಪ್ರದೇಶದಲ್ಲಿ ಮತ್ತು ಅಂಗೋಲದ ವನ್ಯ ಪ್ರದೇಶಗಳಲ್ಲಿ ಇವೆ.

(ಎಸ್.ವಿ.ಎ.)

**ಇಂಪೀರಿಯಲ್ ಕಡೆಟ್ ಕೋರ್:** ಭಾರತದ ವೈಸ್‌ರಾಯಿಯಾದ ಲಾರ್ಡ್ ಕರ್ಜನ್ ಸೇನಾಸುಧಾರಣೆಗಳ ಅಂಗವಾಗಿ 1901ರಲ್ಲಿ ಸ್ಥಾಪಿಸಿದ ಸಾಮ್ರಾಜ್ಯಸೇನಾ ಛಾತ್ರದಳ. ಶ್ರೀಮಂತರ ಮತ್ತು ರಾಜರುಗಳ ವಂಶದಲ್ಲಿ ಹುಟ್ಟಿದ ತರುಣರನ್ನು ಪ್ರಾಥಮಿಕ ಸೈನ್ಯ ಶಿಕ್ಷಣ ದಳಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಇದರ ಸೇವೆಯನ್ನು ಭಾರತದ ರಕ್ಷಣೆಗೆ ಮಾತ್ರ ಮೀಸಲಾಗಿಡದೆ ಹೆಚ್ಚಿನ ಕೆಲಸಗಳಿಗೂ ಉಪಯೋಗಿಸಲಾಯಿತು. ಚೀನಾ ದೇಶದ ಬಾಕ್ಸರ್ ದಂಗೆಕೋರರನ್ನು ಅಡಗಿಸುವುದಕ್ಕೂ ಸೋಮಾಲಿಲ್ಯಾಂಡಿನ ಮುಲ್ಲಾನನ್ನು ಸದೆಬಡಿಯುವುದಕ್ಕೂ ದಕ್ಷಿಣ ಆಫ್ರಿಕದ ನೇಟಾಲನ್ನು ರಕ್ಷಿಸುವುದಕ್ಕೂ ಈ ಸೈನಿಕರನ್ನು ಉಪಯೋಗಿಸಲಾಯಿತು. ಇವರು ಪರದೇಶಗಳಲ್ಲಿ ವೀರಾವೇಶದಿಂದ ಹೋರಾಡಿ ತಮಗೂ ತಮ್ಮ ದೇಶಕ್ಕೂ ಕೀರ್ತಿ ತಂದರು. (ಬಿ.ಎಂ.)

**ಇಂಪೇಷಿಯೆನ್ಸ್:** ಬಾಲ್ಸಾಮಿನೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ ಜಾತಿ; ಇದರಲ್ಲಿ ಸು.600–700; ಇದರಲ್ಲಿ ಪ್ರಭೇದಗಳಿವೆ. ಇವು ಹೆಚ್ಚಾಗಿ ಬೆಳೆಯುವ ಸ್ಥಳಗಳು ಯುರೇಷ್ಯ, ಆಫ್ರಿಕ, ಮಡಗಾಸ್ಕರ್ ಇತ್ಯಾದಿ. ಉತ್ತರ ಮತ್ತು ಮಧ್ಯ ಅಮೆರಿಕದ ಪ್ರದೇಶಗಳಲ್ಲಿ ಸುಮಾರು 6 ಪ್ರಭೇದಗಳಿರುವುದು ಕಂಡುಬಂದಿದೆ. ಭಾರತ ಮತ್ತು ಶ್ರೀಲಂಕಗಳಲ್ಲಿ ಸುಮಾರು 150 ಪ್ರಭೇದಗಳಿವೆ. ಈ ಗಿಡಗಳ ಕಾಯಿಗಳನ್ನು ಮುಟ್ಟಿದೊಡನೆ ಅವು ಸಿಡಿಯುವುದರಿಂದ ಇಂಪೇಷನ್ಸ್ (ಅಸಹನೆ) ಎಂದು ಹೆಸರು ಬಂದಿದೆ. ಕೆಲವು ವಾರ್ಷಿಕ ಸಸ್ಯಗಳಾಗಿದ್ದರೆ ಮತ್ತೆ ಕೆಲವು ಪ್ರಭೇದಗಳು ದ್ವೈವಾರ್ಷಿಕ ಇಲ್ಲವೇ ಬಹುವಾರ್ಷಿಕ ಸಸ್ಯಗಳಾಗಿವೆ. ಕೆಲವು ಸಣ್ಣ ಸಣ್ಣ ಮೂಲಿಕೆಗಳಾಗಿದ್ದರೆ ಮತ್ತೆ ಕೆಲವು ಪೊದೆಗಳಂತೆ ದಟ್ಟವಾಗಿ ಬೆಳೆಯುತ್ತವೆ. ಕೆಲವಂತೂ ಅಪ್ಪುಗಿಡದಂತೆ ಬೆಳೆಯುತ್ತವೆ. ಉದಾಹರಣೆ– ಇಂ. ಜರ್ಡೋನಿಯೆ, ಇಂ. ಆರಿಕ್ಯುಲೇಟ, ಇಂ. ಪ್ಯಾರಸಿಟಿಕ. ಸಸ್ಯಗಳ ಎಲೆಗಳು ಸರಳವಾಗಿವೆ. ಪುಷ್ಪಗಳು ದ್ವಿಪಾರ್ಶ್ವ ಸಮರೂಪಿಗಳು; ಎಲೆಗಳ ಕಂಕುಳಲ್ಲಿ ಇಲ್ಲವೆ ರೇಸೀಮ್ ಅಥವಾ ಅಂಬೆಲ್ ಹೂ ಗೊಂಚಲುಗಳಲ್ಲಿ ಹೂಬಿಡುತ್ತವೆ; ಪುಷ್ಪಗಳಲ್ಲಿ 3–5 ಪುಷ್ಪಪತ್ರಗಳಿವೆ; ಪುಷ್ಪಪತ್ರಗಳು ಮುರಿದಾಗ ಸಾಮಾನ್ಯವಾಗಿ ಎರಡು ಹಸಿರು ಬಣ್ಣಕ್ಕಿರುತ್ತವೆ; ಒಂದರ ಬಣ್ಣ ಮಾತ್ರ ಮುಷ್ಪದಳದ್ದೇ. ಪುಷ್ಪದಳಗಳು 3–5; ಕೇಸರಗಳು 5, ಅಂಡಾಶಯದಲ್ಲಿ 5 ಭಾಗಗಳಿವೆ; ಅವುಗಳಲ್ಲಿ ಅನೇಕ ಅಂಡಕಗಳಿವೆ. ಕಾಯಿಗಳು ಕ್ಯಾಪ್ಸೂಲ್ ಜಾತಿಯವು; ಅವುಗಳಲ್ಲಿ 5 ಬೇರೆ ಬೇರೆ ಕವಾಟಗಳಿವೆ. ಇಂಪೇಷನ್ಸ್ ಜಾತಿಯ ಅನೇಕ ಏಕವಾರ್ಷಿಕ ಸಸ್ಯಗಳನ್ನು ಕೈತೋಟಗಳಲ್ಲಿ, ಉದ್ಯಾನವನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುತ್ತಾರೆ. ಇವು ಹೂಬಿಟ್ಟಾಗ ಅತ್ಯಂತ ಸುಂದರವಾಗಿ ಕಾಣುತ್ತವೆ. ಬೇಸಗೆಯಲ್ಲಿ ಹೂಬಿಡುವ ಈ ಸಸ್ಯಗಳ ಬೀಜಗಳನ್ನು ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ನೆಡುತ್ತಾರೆ. ಆದರೆ ಉತ್ತರ ಭಾರತದ ಬಯಲು ಪ್ರದೇಶಗಳಲ್ಲಿ ಜೂನ್ ಜುಲೈ ಕಾಲದಲ್ಲೇ ಇವನ್ನು ಸಾಲುಗಿಡಗಳಾಗಿ ಬೆಳೆಸುವುದು ಹೆಚ್ಚು. ಇಂ.ಬಾಲ್ಸಾಮಿನ ಗಿಡದ ಬೀಜಗಳಿಂದ ಒಂದು ಬಗೆಯ ಎಣ್ಣೆ ತೆಗೆಯುತ್ತಾರೆ. ಇದನ್ನು ಅಡುಗೆಗೆ, ದೀಪ ಉರಿಸಲಿಕ್ಕೆ ಮುಂತಾಗಿ

ಉಪಯೋಗಿಸಬಹುದು. ಮದ್ಯಸಾರದಲ್ಲಿ ತೆಗೆದ ಹೂಗಳ ರಸ ತಂಪು; ಇದು ರಕ್ತಪರಿಚಲನೆಯನ್ನು ಕ್ರಮಪಡಿಸುತ್ತದೆಂದು ಹೇಳಲಾಗಿದೆ. ಗಿಡದ ಕಷಾಯ ವಾಂತಿ ಭೇದಿ ಕಾಯಿಲೆಗೆ ಒಳ್ಳೆಯದು. ಇದೇ ಜಾತಿಗೆ ಸೇರಿದ ಇಂ.ಗ್ಲಾಂಡುಲಿಗೆರ, ಇಂ. ಟಂಜೆನ್ಸ್ ಇನ್ನೂ ಮುಂತಾದ ಅನೇಕ ಪ್ರಭೇದಗಳ ಬೀಜಗಳನ್ನು ತಿನ್ನಲು ಉಪಯೋಗಿಸುತ್ತಾರೆ. ಇಂ. ಸಲ್ಕೇಟ ಎಂಬ ಪ್ರಭೇದ ಹಿಮಾಲಯದಲ್ಲಿ ಸು.4,000ಮೀ. ಎತ್ತರದಲ್ಲಿ ಬೆಳೆಯುತ್ತದೆ. ಸು.1.5–3ಮೀ. ಎತ್ತರಕ್ಕೆ ಬೆಳೆಯುವ ಈ ಸಸ್ಯದ ಬೀಜಗಳಿಂದಲೂ ಎಣ್ಣೆಯನ್ನು ತಯಾರಿಸುತ್ತಾರೆ. ಹಿಮಾಲಯದಲ್ಲೇ ಕಾಶ್ಮೀರ, ನೇಪಾಳ ಪ್ರದೇಶಗಳಲ್ಲಿ ಬೆಳೆಯುವ ಇಂಪೇಷನ್ಸ್ ಬೀಜದಿಂದ ತೆಗೆದ ಎಣ್ಣೆಯನ್ನು ಮೆರುಗೆಣ್ಣೆಗಳನ್ನು ತಯಾರಿಸಲು ಹೇರಳವಾಗಿ ಉಪಯೋಗಿಸುತ್ತಾರೆ. ಇತ್ತೀಚೆಗೆ ಈ ಜಾತಿಯ ಚೈನೆನ್ಸಿಸ್ ಎಂಬ ಪ್ರಭೇದಕ್ಕೆ ಔಷಧೀಯ ಗುಣವಿದೆ ಎಂಬುದು ಪತ್ತೆಯಾಗಿದೆ. (ಎಸ್.ಎನ್.ಆರ್)

**ಇಂಪ್ರೆನಿಸ್ಟ್ ಕಲೆ:** ನೋಡಿ–ಐರೋಪ್ಯಕಲೆ

**ಇಂಫಾಲ್:** ಭಾರತದ ಮಣಿಪುರ ರಾಜ್ಯದ ರಾಜಧಾನಿ ಮತ್ತು ಆಡಳಿತ ಕೇಂದ್ರ: ಉ.ಅ. 24°44' ಮತ್ತು ಪೂ.ರೇ 93°.58' ಕೋಲ್ಕೊತದಲ್ಲಿದೆ. ಈಶಾನ್ಯ ದಿಕ್ಕಿಗೆ 640 ಕಿಮೀ ದೂರದಲ್ಲಿ ಮಣಿಪುರ ನದೀಕಣಿವೆ ಭಾಗದಲ್ಲಿದೆ. ಸಮುದ್ರಮಟ್ಟಕ್ಕಿಂತ 762ಮೀ ಎತ್ತರದಲ್ಲಿದೆ. ಜನಸಂಖ್ಯೆ: 2,45,967 (2001) ಇಲ್ಲಿ ಟಿಬೆಟನ್ನರು ಮತ್ತು ಬರ್ಮೀಯರನ್ನೊಳಗೊಂಡ ಮಿಶ್ರ ಜನಾಂಗವಿದೆ. ಇವರೆಲ್ಲ ವೈಷ್ಣವ ಪಂಥಕ್ಕೆ ಸೇರಿದ ಹಿಂದುಗಳು. ಇವರು ಪ್ರೌಢಪ್ರಾಚೀನ ಸಂಗೀತ ನೃತ್ಯಗಳಲ್ಲಿ ತಮ್ಮದೇ ಆದ ಸಂಸ್ಕೃತಿ ಹಾಗೂ ಶೈಲಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಇಂಫಾಲ್ ಕಾಲೇಜು, ಇಂಫಾಲ್ ಬೋಧಶಿಕ್ಷಣ ಪ್ರೌಢಶಾಲೆ, ಧನಮಂಜರಿ ಪ್ರೌಢಶಾಲೆ–ಇವೆಲ್ಲ ಅಸ್ಸಾಮಿನ ಗುವಾಹಟಿ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸೇರಿವೆ. ನೇಯ್ಗೆ, ಹಿತ್ತಾಳೆ ಮತ್ತು ಕಂಚಿನ ಪದಾರ್ಥಗಳ ತಯಾರಿಕೆ ಮುಂತಾದ ಗ್ರಾಮೋದ್ಯೋಗಗಳಿಗೆ ಇಂಫಾಲ್ ಹೆಸರು ಪಡೆದಿದೆ. *

**ಇಂಫಾಲ್ ಕದನ:** ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನೀಯರು ಏಷ್ಯದ ಆಗ್ನೇಯ ಭಾಗವನ್ನೆಲ್ಲ ವಶಪಡಿಸಿಕೊಂಡು ಮಯನ್ಮಾರ್‌ನ ಉತ್ತರಗಡಿ ದಾಟಿ ಭಾರತಕ್ಕೆ ನುಗ್ಗಲೆತ್ನಿಸಿದ್ದಾಗ 1945ರ ಮೇ ತಿಂಗಳಲ್ಲಿ ಅವರನ್ನು ತಡೆಗಟ್ಟಿದ ಕದನ. ಭಾರತೀಯರು ಮತ್ತು ಘೂರ್ಕ ಸೈನಿಕರನ್ನೊಳಗೊಂಡ 14ನೆಯ ಬ್ರಿಟಿಷ್ ಪಡೆ, ಸಮರ್ಥ ಜಪಾನೀ ದಳಪತಿ ಲೆಫ್ಟಿನೆಂಟ್ ಜನರಲ್ ಎಂ. ಕವಾಬೆಯ ಸೇನಾಧಿಪತ್ಯದಲ್ಲಿ ಮುನ್ನುಗ್ಗಿ ಬರುತ್ತಿದ್ದ ದೊಡ್ಡ ಸೈನ್ಯವನ್ನು ಹಿಮ್ಮೆಟ್ಟುವಂತೆ ಮಾಡಿದ್ದರಿಂದ ಜಪಾನೀಯರು ಭಾರತಕ್ಕೂ ನುಗ್ಗಬಹುದೆಂಬ ಭಯ ನಿವಾರಣೆಯಾಯಿತು. ಅಲ್ಲದೆ ಬ್ರಿಟಿಷ್‌ಪಡೆ ಇಂದಿನ ಮಯನ್ಮಾರ್ ದೇಶದೊಳಗೆ ನುಗ್ಗಿ ಅಲ್ಲಿದ್ದ ಜಪಾನೀಯರನ್ನು ಹೊಡೆದಟ್ಟುವುದಕ್ಕೆ ಅನುಕೂಲವಾಯಿತು. ಭೂ ಮತ್ತು ವಾಯುಪಡೆಗಳನ್ನು ಅತ್ಯಂತ ಕೌಶಲದಿಂದಲೂ ಪರಿಣಾಮಕಾರಿಯಾಗಿಯೂ ಇಲ್ಲಿ ಬಳಸಲಾಯಿತು. ಇದು ಹೆಚ್ಚು ಪ್ರತಿಭಟನೆಯೇ ಇಲ್ಲದೆ ನುಗ್ಗಿಬರುತ್ತಿದ್ದ ಜಪಾನೀಯರಿಗೆ ಆದ ಮೊದಲ ದೊಡ್ಡ ಪರಾಭವ. *

**ಇಂಹೊಟೆಪ್:** ಪ್ರ.ಶ.ಪೂ. ಸು.2980ರಲ್ಲಿ ಈಜಿಪ್ಟಿನ ಮೂರನೆಯ ರಾಜಸಂತತಿಯ ಸೋಸರ್ ದೊರೆಯ ಕಾಲದಲ್ಲಿದ್ದ ಪ್ರಖ್ಯಾತ ವಿದ್ವಾಂಸ ಮತ್ತು ವೈದ್ಯ. ಸೋಸರನ ಆಸ್ಥಾನದಲ್ಲಿ ಈತ ಪುರೋಹಿತ, ಮುಖ್ಯಮಂತ್ರಿ, ವಾಸ್ತುಶಿಲ್ಪಿ, ಲಿಪಿಕಾರ ಮತ್ತು ವೈದ್ಯನಾಗಿ ತುಂಬ ಮನ್ನಣೆ ಪಡೆದಿದ್ದ. ಆ ದೊರೆಯ ಮೆಟ್ಟಿಲು ಪಿರಮಿಡ್ಡನ್ನು ಕಟ್ಟಿಸಿದವ ಈತನೇ ಎಂದು ಹೇಳುತ್ತಾರೆ. ಇವನ ವಿದ್ಯಾಪ್ರೌಢಿಮೆ, ವೈದ್ಯಜ್ಞಾನ ಮತ್ತು ಮಾಟವಿದ್ಯೆಗಳನ್ನು ಕಂಡು ಜನ ವಿಸ್ಮಯಗೊಂಡರು; ಕೊನೆಗೆ ಈತ ದೈವಾಂಶಸಂಭೂತನೆಂದೂ ಮೆಂಫಿಸ್‌ನ ತ್ರಿಮೂರ್ತಿಗಳಲ್ಲೊಬ್ಬನಾದ ಪ್ಟಾ ಎಂಬ ದೇವನ ಮಗನೆಂದೂ ಪರಿಗಣಿಸಿದರು. ಮೊದಲು ಇವನಿಗೆ ಉಪದೇವತೆಗಳ (ಡೆಮಿಗಾಡ್ಸ್) ಪಟ್ಟವನ್ನು ಕೊಟ್ಟಿದ್ದರು; ಮುಂದೆ ಟಾಲಮಿ ದೊರೆಗಳ ಕಾಲದಲ್ಲಿ ಈತನನ್ನು ದೇವನೆಂದೇ ಭಾವಿಸಲಾಯಿತು. ಇವನಿಗಾಗಿ ಮಂದಿರಗಳು ನಿರ್ಮಿತವಾದುವು; ಆ ಮಂದಿರಗಳು ದೇವಕೃಪಾರ್ಥಿಗಳಾದ ರೋಗಿಗಳ ಯಾತ್ರಾಸ್ಥಳಗಳಾದವು. *

**ಇಕ್ಬಾಲ್ ಮುಹಮದ್:** 1877–1938. ಉರ್ದು ಮತ್ತು ಪರ್ಷಿಯನ್ ಭಾಷೆಗಳ ಶ್ರೇಷ್ಠ ಆಧುನಿಕ ಕವಿ. ಜನನ ಸಿಯಾಲ್ ಕೋಟ್‌ನಲ್ಲಿ. ಅರಬ್ಬೀ, ಪರ್ಷಿಯನ್ ಮತ್ತು ತತ್ತ್ವಶಾಸ್ತ್ರಗಳ ಪಂಡಿತನಾಗಿದ್ದ. ಈತನ ಪೂರ್ವಜರು ಕಾಶ್ಮೀರ ಬ್ರಾಹ್ಮಣರಾಗಿದ್ದರು. ಪಂಜಾಬ್ ವಿಶ್ವವಿದ್ಯಾಲಯದ ಕಲಾವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದು ಕೇಂಬ್ರಿಜ್ ಮತ್ತು ಮ್ಯೂನಿಕ್ ವಿಶ್ವವಿದ್ಯಾಲಯಗಳಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ. ಅನಂತರ ಲಂಡನ್ ಬಾರ್‌ನಲ್ಲಿ ಪ್ರವೇಶಪಡೆದ. ಕೆಲಕಾಲ ಲಂಡನ್ ವಿಶ್ವವಿದ್ಯಾಲಯದ ಅರಬ್ಬೀ ಪ್ರಾಧ್ಯಾಪಕನಾಗಿಯೂ ಪಂಜಾಬ್ ವಿಶ್ವವಿದ್ಯಾಲಯದ ತತ್ತ್ವಶಾಸ್ತ್ರದ ವರಿಷ್ಠ ಪ್ರಾಧ್ಯಾಪಕನಾಗಿಯೂ ಇದ್ದು ಅನಂತರ ಲಾಹೋರ್‌ನಲ್ಲಿ ವಕೀಲಿ ವೃತ್ತಿಯನ್ನು ಕೈಗೊಂಡ. 1923ರಲ್ಲಿ ಈತನ ಪ್ರಸಿದ್ಧ ದಾರ್ಶನಿಕ ಕೃತಿ ಅಸ್ರಾರೆ ಖುದಿಯನ್ನು (ಆತ್ಮರಹಸ್ಯ–1915) ನೋಡಿ ಬ್ರಿಟಿಷ್ ಸರ್ಕಾರ ಸರ್ ಪದವಿಯನ್ನು ಕೊಟ್ಟು ಗೌರವಿಸಿತು. 1926ರಲ್ಲಿ ಪಂಜಾಬ್ ವಿಧಾನಸಭೆಗೆ ಚುನಾಯಿತನಾದ. 1928ರಲ್ಲಿ ಮದ್ರಾಸಿನಲ್ಲಿ ಈತ ಇಸ್ಲಾಂ ದರ್ಶನದ ಮೇಲೆ ಆರು ಉಪನ್ಯಾಸಗಳನ್ನು ನೀಡಿದ. ಅವು ಆರು ಉಪನ್ಯಾಸಗಳು ಎಂಬ ಹೆಸರಿನಲ್ಲಿ ಪ್ರಕಟವಾಗಿ ಅನಂತರ ಇಸ್ಲಾಂನಲ್ಲಿ ಧಾರ್ಮಿಕ ವಿಚಾರದ ಪುನಾರಚನೆ ಎಂಬ ಹೆಸರಿನಲ್ಲಿ ಪುನರ್‌ಮುದ್ರಿತವಾದವು. 1929ರಲ್ಲಿ ಈತ ಮೈಸೂರು ಮತ್ತು ಹೈದರಾಬಾದನ್ನು ಸಂದರ್ಶಿಸಿದ. ಶ್ರೀರಂಗಪಟ್ಟಣದಲ್ಲಿ ಟಿಪ್ಪುಸುಲ್ತಾನ್ ಗೋರಿಯ ಬಳಿ ನಿಂತಾಗ ಡಾಂಟೆಯ ಡಿವೈನ್ ಕಾಮೆಡಿಗೆ ಉತ್ತರವಾದ ಈತನ ಸರ್ವಶ್ರೇಷ್ಠಕೃತಿ ಜಾವೀದ್‌ನಾಮಕ್ಕೆ ಪ್ರೇರಣೆಯುಂಟಾಯಿತು. 1931ರಲ್ಲಿ ಎರಡನೆಯ ದುಂಡು ಮೇಜಿನ ಪರಿಷತ್ತಿಗೆ ಪ್ರತಿನಿಧಿಯಾಗಿ ಲಂಡನ್ನಿಗೆ ಹೋದ. ಇಟಲಿ, ಫ್ರಾನ್ಸ್, ಸ್ಪೇನ್ ಮತ್ತು ಪ್ಯಾಲಸ್ಟೈನ್‌ಗಳಲ್ಲಿ ಸಂಚಾರ ಮಾಡಿದ. ಬರ್ಗ್‌ಸನ್ ಮತ್ತು ಮುಸೋಲಿನಿಯನ್ನು ಭೇಟಿಯಾಗಿದ್ದ. 1933ರಲ್ಲಿ ನಾದಿರ್‌ಶಹ ರಾಜನಿಂದ ಆಹ್ವಾನಿತನಾಗಿ ಶೈಕ್ಷಣಿಕ ಸುಧಾರಣೆಯ ವಿಷಯವಾಗಿ ಸಲಹೆಯನ್ನು ನೀಡಲು ಆಫ್ಘಾನಿಸ್ತಾನಕ್ಕೆ ಹೋಗಿದ್ದ. 1930ರಲ್ಲಿ ಮುಸ್ಲಿಂ ಲೀಗಿನ ಅಲಹಾಬಾದಿನ ಅಧಿವೇಶನದಲ್ಲಿ ಅಧ್ಯಕ್ಷ ಪದವಿಯಿಂದ ಮೊಟ್ಟಮೊದಲು ಸಮಗ್ರ ಭಾರತವನ್ನು ಒಡೆದು ಪಾಕಿಸ್ತಾನ ರಚನೆ ಮಾಡುವ ವಿಚಾರವನ್ನು ಮುಂದಿಟ್ಟ.

ಈತ ಕ್ರಾಂತಿಕಾರಿ ಕವಿ. ಭಾರತದಲ್ಲಿ ಉರ್ದು ಮತ್ತು ಪರ್ಷಿಯನ್ ಕವಿತೆಯ ಸ್ವರೂಪವನ್ನೇ ಪೂರ್ತಿಯಾಗಿ ಬದಲಾಯಿಸಿ ಪುನಾರಚನೆ ಮಾಡಿದ. ಸಯ್ಯದ್ ಮೀರ್ ಹಸನ್ ಎಂಬ ಮೌಲ್ವಿಯಿಂದ ಪ್ರಭಾವಿತನಾಗಿ ವಿದ್ಯಾರ್ಥಿಯಾಗಿದ್ದಾಗಲೇ ಉರ್ದು ಕವಿತೆಯನ್ನು ಬರೆಯಲಾರಂಭಿಸಿದ. ಅನಂತರ ತನ್ನ ದಾರ್ಶನಿಕ ವಿಚಾರಗಳಿಗೆ ಪರ್ಷಿಯನ್ ಭಾಷೆಯೇ ತಕ್ಕುದೆಂದು ಭಾವಿಸಿ ಅದನ್ನು ಕವಿತೆಯ ಅಭಿವ್ಯಕ್ತಿಗೆ ವಿಶೇಷವಾಗಿ ಗ್ರಹಿಸಿದ. ಆದರೂ ಶ್ರೇಷ್ಠ ಆಧುನಿಕ ಉರ್ದು ಕವಿಗಳ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ್ದಾನೆ. ಈತನ ಮುಖ್ಯವಾದ ಕೃತಿಗಳು ಪರ್ಷಿಯನ್ ಭಾಷೆಯಲ್ಲಿವೆ. ತಾನು ಪರ್ಷಿಯನ್ ಭಾಷೆಯ ರಹಸ್ಯವಾದ ಶ್ರೇಷ್ಠ ಕವಿ ಜಲಾಲುದ್ದೀನ್ ರೂಮಿಯ ಶಿಷ್ಯನೆಂದು ಹೇಳಿಕೊಂಡಿದ್ದಾನೆ. ಮನುಷ್ಯನ ಮಹತ್ತ್ವವನ್ನೂ ಅವನ ಶಾರೀರಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಶಕ್ತಿ ಸಾಮರ್ಥ್ಯಗಳನ್ನೂ ಗುರುತಿಸಿ, ಅವುಗಳ ಉಪಯೋಗವನ್ನು ಪಡೆಯಲು ಮತ್ತು ಅವನ ಹುಟ್ಟುವಿಕೆಯ ಉದ್ದೇಶವನ್ನು ಪೂರ್ತಿ ಮಾಡಿಕೊಳ್ಳಲು ಅವನ್ನು ಬಳಸಲು ಯೋಗ್ಯವಾದ ಖುದೀ (ಆತ್ಮ) ದರ್ಶನವನ್ನು ಪ್ರತಿಪಾದಿಸಿದ್ದಾನೆ. ಸೃಷ್ಟಿಯ ಸಾರವೆನಿಸಿದ ಮನುಷ್ಯನ ಜೀವನವೇ ಆತನ ಕವನಗಳು ಮತ್ತು ದರ್ಶನದ ಮುಖ್ಯ ವಿಷಯ. ನೀತಿ ಮತ್ತು ಕ್ರಿಯಾಶೀಲತೆಯನ್ನು ಒತ್ತಿ ಹೇಳಿದ್ದಾನೆ. ಭಾಗ್ಯವಾದವನ್ನು ತೀವ್ರವಾಗಿ ಖಂಡಿಸುತ್ತಾನೆ. ತನ್ನ ಸಿದ್ಧಾಂತಗಳಲ್ಲಿ ಪ್ರಗತಿ ಮನೋಭಾವವನ್ನು ವ್ಯಕ್ತಪಡಿಸಿದ್ದಾನೆ. ಇಸ್ಲಾಂ ಮತ್ತು ಅದರ ಅನುಚರರ ದರ್ಶನ ಭಾವವನ್ನೂ ಪೂರ್ವದ ಅಧ್ಯಾತ್ಮವನ್ನೂ ಬಲಪಡಿಸಿದ್ದಾನೆ. ಪಯಾಮೆ ಮಶರಿಕ್ (ಪೂರ್ವದ ಸಂದೇಶ) ಗಯಟೆಯ ದೀವಾನ್ ಮಗ್‌ರಬೀಗ (ಪಶ್ಚಿಮದ ವಿಚಾರ ಸಂಗ್ರಹ) ಕುತೂಹಲಕಾರಿಯಾದ ಉತ್ತರವಾಗಿದೆ. ತನ್ನ ಕೃತಿಗಳಲ್ಲಿ ಹಿಂದೂ, ಸಿಖ್ ಮತ್ತು ಬೌದ್ಧ ಸಂತರನ್ನು ಆದರದಿಂದ ನೋಡಿದ್ದಾನೆ. ಸಂಸ್ಕೃತ ಕವಿಗಳ ಕೃತಿಗಳಿಂದ ಉದಾಹರಿಸಿದ್ದಾನೆ. ಮುಸ್ಲಿಮರಿಗೆ ಸಮಾಜಸುಧಾರಕನಾಗಿ ಮತ್ತು ಕ್ರಾಂತಿದರ್ಶಿಯಾಗಿ ಕೋಮಿನ ಮೈತ್ರಿಯನ್ನು ಬಲಪಡಿಸಿದ್ದಾನೆ. ಭಾರತದಲ್ಲಿ ಸ್ವರಾಜ್ಯಭಾವವನ್ನು ದೃಢಪಡಿಸಿದ್ದಾನೆ. ಭಾರತದ ಜನಜೀವನದ ಮೇಲೆ ಬೀಳುತ್ತಿದ್ದ ಪಾಶ್ಚಾತ್ಯ ಪ್ರಭಾವವನ್ನು ಅಕ್ಷರಶಃ ವಿರೋಧಿಸಿದ್ದಾನೆ. ಈತನ ಲಕ್ಷ್ಯವೆಲ್ಲ ಸಮಾಜವಾದಿ ಸಿದ್ಧಾಂತದತ್ತ ಇತ್ತು.

ಉರ್ದು, ಪರ್ಷಿಯನ್, ಅರಬ್ಬೀ, ಇಂಗ್ಲಿಷ್‌ಗಳಲ್ಲಿ ಇಕ್‌ಬಾಲ್ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿನ ಪರ್ಷಿಯನ್ ಭಾಷೆಯ ಏಳು ಕೃತಿಗಳು, ಉರ್ದುವಿನ ಮೂರು ಕವನ ಸಂಕಲನಗಳು ಇಂಗ್ಲಿಷ್, ಅರಬ್ಬೀ ಮುಂತಾದ ಭಾಷೆಗಳಿಗೆ ಅನುವಾದವಾಗಿವೆ. (ಎಂ.ಎಂ.ಎಚ್.)

**ಇಕಾರಸ್:** ಕ್ಷುದ್ರಗ್ರಹಗಳಲ್ಲಿ (ಆ್ಯಸ್ಟರಾಯ್ಡ್) ಒಂದು. ಇದರ ಕಕ್ಷೆ ಬಲು ಚಿಕ್ಕದು. ಅವಧಿ ಸೂರ್ಯನನ್ನು ಒಂದು ಸಲ ಪರಿಭ್ರಮಿಸಲು ಬೇಕಾಗುವ ಕಾಲಾ ಅತಿ ಕನಿಷ್ಠ (409 ದಿವಸಗಳು). ಈ ಗ್ರಹಗಳ ಸಾಮೂಹಿಕ ವ್ಯಾಪ್ತಿ ಮಂಗಳ ಮತ್ತು ಗುರು ಕಕ್ಷೆಗಳ ನಡುವಿನ ವಲಯ.



ಆದರೆ ಹಲವಾರು ಬಿಡಿ ಗ್ರಹಗಳ ಕಕ್ಷೆಗಳು ಇದಕ್ಕೆ ಅಪವಾದವಾಗಿರುವುದುಂಟು. ಇಕಾರಸ್ ಕಕ್ಷೆ ಇಂಥ ಒಂದು ಅಪವಾದ. ಇದು ಸೂರ್ಯ ಸಮೀಪ ಗ್ರಹವಾದ ಬುಧ ಕಕ್ಷೆಯನ್ನೂ ದಾಟುವುದು–ಎಂದರೆ ನಿಯತಕಾಲಿಕ ಆಕಾಶಕಾಯಗಳಲ್ಲಿ ಸೂರ್ಯನನ್ನು ಇಕಾರಸಿಗಿಂತ ಹತ್ತಿರವಾಗಿ ಹಾದುಹೋಗುವ ಇನ್ನೊಂದು ಕಾಯವಿಲ್ಲ. ಆಗ ಸೂರ್ಯನಿಂದ ಇದರ ದೂರ ಸುಮಾರು 19 ದಶಲಕ್ಷ ಕಿಮೀಗಳು. 1949ರ ಜೂನಿನಲ್ಲಿ ಅಮೆರಿಕದ ಪಾಲೊಮಾರ್ ವೇಧಶಾಲೆಯ ಖಗೋಳವಿಜ್ಞಾನಿ

ವಾಲ್ಟರ್ ಬಾಡೇ (1893–1960) ಆಕಾಶದ ಛಾಯಾಚಿತ್ರವೊಂದನ್ನು ವಿಶ್ಲೇಷಿಸುತ್ತಿದ್ದಾಗ ಇಕಾರಸಿನ ಅಸ್ತಿತ್ವ ಗುರುತಿಸಿದ. 1968 ಜೂನ್ 14ರ ವೇಳೆಗೆ ಇಕಾರಸ್ ಭೂಮಿಯನ್ನು 68,00,000 ಕಿಮೀಗಳಷ್ಟು ಸಮೀಪವಾಗಿ ಹಾದು ಹೋಯಿತು (**ನೋಡಿ– ಕ್ಷುದ್ರಗ್ರಹಗಳು; ಬಾಡೇ, ವಾಲ್ಟರ್; ಬೋಡನ ಸೂತ್ರಗಳು**). *

**ಇಕೆಯಾಸೆಕಿ:** ಒಂದು ಧೂಮಕೇತು. ಇಕೆಯಾ ಮತ್ತು ಸೆಕಿ ಎಂಬ ಹೆಸರಿನ ಜಪಾನಿನ ತರುಣ ಖಗೋಳವೀಕ್ಷಕರು ಇದನ್ನು ಮೊದಲು ಗುರುತಿಸಿದುದರಿಂದ ಅವರ ಹೆಸರಿನಿಂದ ಪ್ರಖ್ಯಾತವಾಗಿದೆ. ಮೊದಲು ಕಂಡದ್ದು 1965 ಸೆಪ್ಟೆಂಬರ್ 18ರ ಮುಂಜಾನೆ. ಮುಂದಿನ ದಿನಗಳಲ್ಲಿ ಆಗ್ನೇಯ ಆಕಾಶದಲ್ಲಿ ಸೂರ್ಯನ ವಿರುದ್ಧ ದಿಕ್ಕಿಗೆ ಬಾಲಚಾಚಿ ಹೊಳೆಯುತ್ತಿದ್ದ ಈ ಧೂಮಕೇತುವನ್ನು ಬರಿಗಣ್ಣಿನಿಂದಲೂ ನೋಡಬಹುದಿತ್ತು. ಸೆಕೆಂಡಿಗೆ 480 ಕಿಮೀಗಿಂತಲೂ ಹೆಚ್ಚಿನ ವೇಗದಿಂದ ಇದು ಸೂರ್ಯನೆಡೆಗೆ ಧಾವಿಸುತ್ತಿತ್ತು. ಕೊಡೈಕೆನಾಲ್ ವೇಧಶಾಲೆಯ ವರದಿ ಪ್ರಕಾರ ಇದರ ಪ್ರಕಾಶ ಪ್ರೋಸಿಯಾನ್ (ಪೂವಣ್ವನ) ನಕ್ಷತ್ರದಷ್ಟು (ಅ. 16ರಂದು), ಮುಂದಿನ ದಿವಸಗಳಲ್ಲಿ ಅದು ಸೂರ್ಯನ ಮೇಲೆ ಬಡಿದಪ್ಪಳಿಸಿ ನಾಶವಾಗಿ ಹೋಗುವುದೆಂದು ನಿರೀಕ್ಷಿಸಿದ್ದರು. ಆದರೆ ಹೀಗಾಗಲಿಲ್ಲ. ಸೂರ್ಯನಿಂದ 4,99,209 ಕಿಮೀ ದೂರದಲ್ಲಿದ್ದಾಗ ಇಕೆಯಾಸೆಕಿ ಎರಡಾಗಿ ಒಡೆಯಿತು. ದೊಡ್ಡ ಭಾಗ ಸೂರ್ಯನ ಕಡೆಗೆ ಧಾವಿಸಿ ಸ್ವಲ್ಪ ಕಾಲಾನಂತರ ಮರೆಯಾಯಿತು. ಇದರ ಬಾಲವನ್ನು ಪ್ರಪಂಚದ ಅನೇಕ ವೇಧಶಾಲೆಗಳು ರೋಹಿತದರ್ಶಕ ವಿಧಾನಗಳಿಂದ ಅಧ್ಯಯನ ಮಾಡಿ ಅದರ ಉದ್ದ 32,00,000 ಕಿಮೀ ಇತ್ತೆಂದೂ ಅದರಲ್ಲಿ ಸೋಡಿಯಮ್, ಕಬ್ಬಿಣ, ನಿಕ್ಕಲ್, ತಾಮ್ರ, ಪೊಟ್ಯಾಸಿಯಮ್, ಅಯಾನೀಕೃತ ಕ್ಯಾಲ್ಸಿಯಮ್‌ಗಳು ಇದ್ದುವೆಂದೂ ತಿಳಿಸಿವೆ. ಅಕ್ಟೋಬರ್ 29ರಂದು ಮರೆಯಾದ ಈ ಧೂಮಕೇತುವನ್ನು ನವೆಂಬರ್ ಮೊದಲವಾರದಲ್ಲಿ ಪುನಃ ಸೆಕಿ ಮೊದಲಾದ ವೀಕ್ಷಕರು ನೋಡಿದರು. ಇಂಥದೇ ಒಂದು ಧೂಮಕೇತು 1822ರಲ್ಲಿ ಕಾಣಿಸಿಕೊಂಡಿತ್ತು. ಇಕೆಯಾಸೆಕಿ ಧೂಮಕೇತುವಿನ ಪರಿಭ್ರಮಣಾವಧಿ 1,000 ವರ್ಷವಿರಬಹುದೆಂದು ವಿಜ್ಞಾನಿಗಳ ಅಭಿಪ್ರಾಯ. ಈ ಧೂಮಕೇತುವಿನ ಕಕ್ಷೆಯ ಸೂರ್ಯಸಮೀಪ ಬಿಂದುವಿನ (ಪೆರಿಹೆಲಿಯನ್) ದೂರ (ಸೂರ್ಯನಿಂದ) 3,86,400 ಕಿಮೀ. ಇದನ್ನು ತಲಪಿದ ತಾರೀಕು 21 ಅಕ್ಟೋಬರ್ 1965. *


ಕೊಡೈಕೆನಾಲ್ ವೀಕ್ಷಣಾಲಯದಲ್ಲಿ ತೆಗೆದ ಚಿತ್ರ

**ಇಕ್ಕೇರಿ:** 16 ಮತ್ತು 17ನೆಯ ಶತಮಾನಗಳಲ್ಲಿ ಕೆಳದಿ ಅರಸರ ವೈಭವಾನ್ವಿತ ರಾಜಧಾನಿಯಾಗಿ ಮೆರೆದ ಇಕ್ಕೇರಿ ಈಗ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಒಂದು ಸಣ್ಣ ಹಳ್ಳಿ. ಜನಸಂಖ್ಯೆ 2425 (2001). ಸನ್ನಿವೇಶ : 14º8' ಉ. ಅ.;

ಅಘೋರೇಶ್ವರ ದೇವಾಲಯ

75º.5' ಪೂ.ರೇ. ಸಹ್ಯಾದ್ರಿಯ ವನರಾಜಿಯ ನಡುವಿನಲ್ಲಿರುವ ಈ ಹಳ್ಳಿ 1560–1639ರವರೆಗೆ ಕೆಳದಿ ಅರಸರ ರಾಜಧಾನಿಯಾಗಿತ್ತು. ವೀರಭದ್ರನಾಯಕನ ಆಡಳಿತ ಕಾಲದಲ್ಲಿ (1639) ಇಕ್ಕೇರಿ ವಿಜಯನಗರ ಅರಸರ ಅಧೀನತೆಯಿಂದ ಬೇರೆಯಾಗಿ ಸ್ವತಂತ್ರ ಸಂಸ್ಥಾನವೆನಿಸಿತು. ಅನಂತರ ತಮ್ಮ ರಾಜಧಾನಿಯನ್ನು ಇಕ್ಕೇರಿಯಿಂದ ಬಿದನೂರಿಗೆ ಬದಲಾಯಿಸಿದರು. ಆದರೂ ಇಕ್ಕೇರಿ ಕೆಳದಿ ಅರಸರ ರಾಜಧಾನಿ ಎಂಬ ಗೌರವವನ್ನು ಬಹಳ ಕಾಲ ಪಡೆದಿತ್ತು. ಇಕ್ಕೇರಿಯಿಂದ ಟಂಕಸಾಲೆಯ ವರ್ಗವಾದರೂ ಇಕ್ಕೇರಿ ಪಗೋಡ, ಇಕ್ಕೇರಿ ಪಣಗಳು ಚಲಾವಣೆಯಲ್ಲಿದ್ದವು. ನಗರದ ಸುತ್ತಲೂ ಮೂರು ಸುತ್ತುಕಟ್ಟು ಆವರಣಗಳ ವಿಶಾಲವಾದ ಕೋಟೆಗೋಡೆಗಳಿದ್ದುವು. ಕೋಟೆಯಲ್ಲಿ ಅರಮನೆ ಮತ್ತು ಭವ್ಯ ಕಟ್ಟಡಗಳಿದ್ದುವು. ಗತವೈಭವದ ಕುರುಹಾಗಿ ಈಗ ಅಲ್ಲಿ ಉಳಿದಿರುವುದು ಅಘೋರೇಶ್ವರ ದೇವಾಲಯ ಮಾತ್ರ. ಈ ದೇವಾಲಯದಲ್ಲಿನ ಮಧ್ಯದ ಕಂಬಗಳ ಪರಸ್ಪರ ದೂರವನ್ನು ಬಾಗಾಯತಿನ ಪ್ರಮಾಣಬದ್ಧ ಅಳತೆ ಎಂದು ಪರಿಗಣಿಸಲಾಗುತ್ತಿತ್ತು. ಈ ಮಾನವನ್ನು ದಾಯ ಎಂದು ಕರೆಯುತ್ತಿದ್ದರು. (ಕೆ.ಆರ್.ಆರ್.)

**ಇಕ್ಕೇರಿ ಚರಿತ್ರೆ:** 16ನೆಯ ಶತಮಾನದ ಆರಂಭದಿಂದ ಸು.150 ವರ್ಷಗಳ ಕಾಲ ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಆಳಿದ ಇಕ್ಕೇರಿ ರಾಜವಂಶದ ಚರಿತ್ರೆ ಕನ್ನಡನಾಡಿನ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಈ ವಂಶದ ರಾಜರನ್ನು ಬಿದನೂರು ಅಥವಾ ಕೆಳದಿ ಅರಸರು ಎಂದೂ ಕರೆಯುವುದುಂಟು. ಮೊದಲು ವಿಜಯನಗರದ ಸಾಮಂತರಾಗಿದ್ದ ಇವರು ಆ ಸಾಮ್ರಾಜ್ಯದ ಪತನಾನಂತರ ಸ್ವತಂತ್ರರಾದರು. ಕ್ರಮೇಣ ಸುತ್ತಮುತ್ತಲಿನ ಅನೇಕ ಪಾಳೆಯಗಾರರನ್ನು ಸೋಲಿಸಿ ರಾಜ್ಯವಿಸ್ತರಣೆ ಮಾಡಿದರು. ಒಂದು ಸಂದರ್ಭದಲ್ಲಿ ಔರಂಗಜೇಬನನ್ನೂ ಇವರು ಯುದ್ಧದಲ್ಲಿ ಎದುರಿಸಿದರೆಂದ ಮೇಲೆ ಇವರ ಪ್ರಾಬಲ್ಯ ಎಷ್ಟಿತ್ತೆಂಬುದನ್ನು ಊಹಿಸಬಹುದು. ಅಲ್ಲದೆ ಪೋರ್ಚುಗೀಸ್, ಡಚ್ ಮತ್ತು ಇಂಗ್ಲಿಷ್ ವಸಾಹತುಗಾರರೊಡನೆಯೂ ಇವರು ರಾಜತಾಂತ್ರಿಕ ಸಂಬಂಧ ಬೆಳೆಸಿದ್ದರು. ಇಕ್ಕೇರಿ ರಾಜ್ಯ ತನ್ನ ಉಚ್ಛ್ರಾಯ ಕಾಲದಲ್ಲಿ ಕರ್ನಾಟಕದ ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಬಹು ಭಾಗಗಳನ್ನಲ್ಲದೆ, ಕರಾವಳಿಯ ಉತ್ತರದಲ್ಲಿ ಗೋವದಿಂದ ಹಿಡಿದು ದಕ್ಷಿಣದಲ್ಲಿ ಕೇರಳದ ಚಂದ್ರಗಿರಿ ನದಿಯವರೆಗಿನ ಪ್ರದೇಶವನ್ನೆಲ್ಲ ಒಳಗೊಂಡಿತ್ತು. ಮೊದಲು ರಾಜಧಾನಿ ಇಕ್ಕೇರಿಯಾಗಿತ್ತು. 1639ರಲ್ಲಿ ಇದನ್ನು ಬಿದನೂರಿಗೆ ಬದಲಾಯಿಸಲಾಯಿತು.

ಇಕ್ಕೇರಿಯ ಇತಿಹಾಸದ ಬಗ್ಗೆ ಅಲ್ಲಿನ ಅನೇಕ ಶಿಲಾ ಮತ್ತು ತಾಮ್ರಶಾಸನಗಳೂ ಕೈಫಿಯತ್ತುಗಳೂ ಹೆಚ್ಚು ಮಾಹಿತಿ ಒದಗಿಸುತ್ತವೆ. ಜೊತೆಗೆ ಕೆಳದಿಯ ರಾಜವಂಶದ ಬಸವಪ್ಪನಾಯಕನಿಂದ ರಚಿತವಾದ ಸಂಸ್ಕೃತಗ್ರಂಥ ಶಿವತತ್ತ್ವರತ್ನಾಕರ ಮತ್ತು ಲಿಂಗಣ್ಣ ಕವಿಯ ಕನ್ನಡ ಕಾವ್ಯ ಕೆಳದಿನೃಪವಿಜಯ ಎಂಬ ಕೃತಿಗಳೂ ಡೆಲ್ಲವೆಲ್ಲೆ, ಪೀಟರ್ ಮಂಡಿ, ಫ್ರೆಯರ್, ಪಿಂಕರ್ಟನ್, ಅಬ್ಬೆಕೇರಿ ಮುಂತಾದ ವಿದೇಶಿ ನಿವಾಸಿಗಳ ಇತಿವೃತ್ತಗಳೂ ಬಹಳ ಸಹಾಯಕವಾಗಿವೆ. ಇವಲ್ಲದೆ ಪೋರ್ಚುಗೀಸ್ ಮತ್ತು ಡಚ್ಚರ ರಾಜಕೀಯ ದಾಖಲೆಗಳೂ ಅಮೂಲ್ಯ ವಿಷಯಗಳನ್ನು ಒದಗಿಸುತ್ತವೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಹಳ್ಳಿಬೈಲಿನ ಚೌಡಪ್ಪ, ಭದ್ರಪ್ಪ ಎಂಬ ಸಹೋದರರ ಧೈರ್ಯ ಶೌರ್ಯಗಳೇ ಈ ರಾಜ್ಯಸ್ಥಾಪನೆಗೆ ಕಾರಣ. ಈ ಸಾಹಸದ ಬಗ್ಗೆ ಅನೇಕ ಕಥೆಗಳಿವೆ. ಎಲ್ಲೋ ದೊರೆತ ಗುಪ್ತದ್ರವ್ಯದ ಬಲದಿಂದ ಅವರು ಕೆಳದಿಯ ಸುತ್ತಮುತ್ತ ಒಂದು ಪಾಳೆಯಪಟ್ಟನ್ನು ಕಟ್ಟಿ ಕ್ರಮೇಣ ತಮ್ಮ ಪ್ರಭಾವ ಬೆಳೆಸಿಕೊಂಡರೆಂಬುದು ಎಲ್ಲ ಆಧಾರಗಳಿಂದಲೂ ಖಚಿತವಾಗಿ ತಿಳಿದುಬರುತ್ತದೆ. ಚೌಡಗೌಡನ ಏಳ್ಗೆ ವಿಜಯನಗರದ ಅರಸರ ಗಮನವನ್ನು ಸೆಳೆಯಿತು. ಈತ ಅವರಿಂದ ಬಹುಮಾನಿತನಾಗಿ ಅವರೊಡನೆ ಉತ್ತಮ ಸಂಬಂಧ ಬೆಳೆಸಿಕೊಂಡಿದ್ದ. ಇವನ ಮಗ ಸದಾಶಿವನಾಯಕ ವಿಜಯನಗರದ ಕೃಷ್ಣದೇವರಾಯನ ಅತ್ಯಂತ ಧೈರ್ಯಶಾಲಿ ದಳವಾಯಿಗಳಲ್ಲಿ ಒಬ್ಬನೆಂದು ಹೆಸರು ಪಡೆದಿದ್ದ. ಇವನು ವಿಜಯನಗರದ ಅರಸರ ಪರವಾಗಿ ಅನೇಕ ದಂಗೆಕೋರರನ್ನು ಸದೆಬಡಿದು, ಕಲ್ಯಾಣಿ ಕಲ್ಬುರ್ಗಿಗಳ ಮೇಲೆ ದಂಡೆತ್ತಿ ಹೋಗಿ ಬೀದರಿನ ಬರೀದ್‌ಷಾಹಿ ಅರಸರನ್ನೂ ಎದುರಿಸಿದ. ಇವನ ಸೇವೆಯನ್ನು ಮೆಚ್ಚಿದ ವಿಜಯನಗರದ ರಾಮರಾಯ ಅರಗ, ಗುತ್ತಿ, ಬಾರಕೂರು ಮತ್ತು ಮಂಗಳೂರು ವಿದೇಶಗಳ ಅಧಿಕಾರವನ್ನು ಇವನಿಗೆ ವಹಿಸಿಕೊಟ್ಟ. ಇವನ ಮಗ ದೊಡ್ಡಸಂಕಣ್ಣನಾಯಕ (1566–70) ಕೇವಲ ನಾಲ್ಕು ವರ್ಷ ರಾಜ್ಯವಾಳಿ, ತನ್ನ ತಮ್ಮ ಚಿಕ್ಕಸಂಕಣ್ಣನಾಯಕನಿಗೆ (1570–80) ಅಧಿಕಾರ ವಹಿಸಿಕೊಟ್ಟು ತೀರ್ಥಯಾತ್ರೆಗೆ ಹೋದ. ಚಿಕ್ಕಸಂಕಣ್ಣನಾಯಕನೂ ಇವನ ಅಣ್ಣನ ಮಗ ರಾಮರಾಜಯ್ಯನೂ ಸು.1570ರ ವರೆಗೆ ಜೊತೆಯಾಗಿ ರಾಜ್ಯಭಾರ ಮಾಡುತ್ತಿದ್ದರು. ನಂತರ ರಾಮರಾಜಯ್ಯನೊಬ್ಬನೇ ಸು. 1586ರವರೆಗೆ ಆಳಿದ. ರಕ್ಕಸತಂಗಡಿ ಕಾಳಗದಲ್ಲಿ ವಿಜಯನಗರದ ಪತನಾನಂತರ ಇಕ್ಕೇರಿಯ ನಾಯಕರು ರಾಜ್ಯಾಡಳಿತದಲ್ಲಿ ಸ್ವತಂತ್ರರಾದರು. ಆದರೂ ವಿಜಯನಗರದ ವಂಶೀಕರಾದ ಸದಾಶಿವ, ತಿರುಮಲ, ಶ್ರೀರಂಗ ಇವರುಗಳನ್ನು ತಮ್ಮ ಸಾರ್ವಭೌಮರೆಂದು ಗೌರವಿಸುತ್ತಿದ್ದರು.

ರಾಮರಾಜಯ್ಯನ ಅನಂತರ ಪಟ್ಟಕ್ಕೆ ಬಂದವನು ಇವನ ತಮ್ಮ ಒಂದನೆಯ ವೆಂಕಟಪ್ಪನಾಯಕ (ಸು. 1585–1629). ಈತ ತನ್ನ ಆಳ್ವಿಕೆಯಲ್ಲಿ ಮಲಬಾರಿನವರೆಗೆ ರಾಜ್ಯ ವಿಸ್ತರಿಸಿದ. ಉತ್ತರದಲ್ಲಿ ಬಿಜಾಪುರದ ಆದಿಲ್ ಷಾಹಿ ದೊರೆಗಳ ಸಾಮಂತಳಾಗಿದ್ದ ಗೇರುಸೊಪ್ಪೆಯ ಭೈರಾದೇವಿಯನ್ನು ಸೋಲಿಸಿದ್ದಲ್ಲದೆ, ಇವನ ರಾಜ್ಯದ ಮೇಲೆ ದಾಳಿಮಾಡಿದ ಬಿಜಾಪುರದ ದಂಡನಾಯಕ ಮಂಜೂಲಖಾನನ್ನೂ ಹಿಮ್ಮೆಟ್ಟಿಸಿ ಇಕ್ಕೇರಿ ರಾಜ್ಯವನ್ನೂ ರಾಜವಂಶದ ಪ್ರಾಬಲ್ಯವನ್ನೂ ಹೆಚ್ಚಿಸಿದ. ಪೋರ್ಚುಗೀಸರು ಸಂಧಾನಕ್ಕಾಗಿ ಇವನ ಆಸ್ಥಾನಕ್ಕೆ ರಾಯಭಾರವೊಂದನ್ನು ಕಳುಹಿಸಿದ್ದರು. ಇದೇ ಕಾಲದಲ್ಲಿ ಇಕ್ಕೇರಿ ರಾಜ್ಯವನ್ನು ಸಂದರ್ಶಿಸಿದ ಇಟಲಿಯ ಪ್ರವಾಸಿ ಪಿಯೆಟ್ರೋ ಡೆಲ್ಲವೆಲ್ಲೆ, ಆ ಕಾಲದ ಪ್ರಾಮಾಣಿಕನೆಂದು

ಪರಿಗಣಿತವಾದ ವರದಿಯೊಂದನ್ನು ಬರೆದಿಟ್ಟಿದ್ದಾನೆ. ರಾಜ್ಯಾಡಳಿತದಲ್ಲಿ ವೆಂಕಟಪ್ಪನಾಯಕನೊಡನೆ ಮೊದಲಿನಿಂದಲೂ ಸಹಕರಿಸುತ್ತಿದ್ದ ಇವನ ಮೊಮ್ಮಗ ವೀರಭದ್ರನಾಯಕ 1629ರಲ್ಲಿ ಪಟ್ಟಕ್ಕೇರಿದ. 1631ರಲ್ಲಿ ಪೋರ್ಚುಗೀಸರೊಡನೆ ಒಂದು ಒಪ್ಪಂದಕ್ಕೆ ಬಂದು ಕಂಬೋಲಿ ದ್ವೀಪವನ್ನು ಅವರಿಗೆ ಒಪ್ಪಿಸಿದ್ದಲ್ಲದೆ ತನ್ನ ರಾಜ್ಯದ ಬಾರಕೂರು ಮುಂತಾದ ಊರುಗಳಲ್ಲಿ ಅವರ ವ್ಯಾಪಾರಕ್ಕಾಗಿ ವಿಶೇಷ ವಿವರಗಳನ್ನು ವಹಿಸಿಕೊಟ್ಟ. ಬಿಜಾಪುರದ ರಣದುಲ್ಲಾಖಾನ್ ಎಂಬ ಸೇನಾಪತಿಯ ಆಕ್ರಮಣದಿಂದಾಗಿ ಈತ 1638ರಲ್ಲಿ ತನ್ನ ರಾಜಧಾನಿಯನ್ನು ಇಕ್ಕೇರಿಯಿಂದ ಬಿದನೂರಿಗೆ ವರ್ಗಾಯಿಸಿದ್ದ. ವೀರಭದ್ರನಾಯಕನಿಗೆ ಮಕ್ಕಳಿಲ್ಲದ್ದರಿಂದ ತನ್ನ ದಾಯಾದಿಯಾದ ಶಿವಪ್ಪನಾಯಕ ಮತ್ತು ವೆಂಕಟಪ್ಪನಾಯಕ ಎಂಬುವವರಿಗೆ ರಾಜ್ಯಾಧಿಕಾರವನ್ನು ಒಪ್ಪಿಸಿ, ಶಿವಪ್ಪನಾಯಕನನ್ನು ಪಟ್ಟಕ್ಕೇರಿಸಿದನೆಂದು ಬಸವಪ್ಪನಾಯಕನ ಶಿವರತ್ನಾಕರ ತಿಳಿಸುತ್ತದೆ. ಆದರೆ ಚಿಕ್ಕದೇವರಾಜ ವಂಶಾವಳಿಯಲ್ಲಿ ಶಿವಪ್ಪನಾಯಕ ವೀರಭದ್ರನಾಯಕನನ್ನು ಕೊಂದು ರಾಜ್ಯವನ್ನು ವಹಿಸಿಕೊಂಡನೆಂದೂ ಆ ಕಾರಣದಿಂದಾಗಿ ಶಿವಪ್ಪನಾಯಕ ಕಳುಹಿಸಿದ ಉಡುಗೊರೆಗಳನ್ನು ಅವು ದುಷ್ಟನ ಕೊಡುಗೆಯೆಂದು ಮೈಸೂರು ದೊರೆ ತೆಗೆದುಕೊಳ್ಳಲಿಲ್ಲವೆಂದೂ ಹೇಳಿದೆ.

ಶಿವಪ್ಪನಾಯಕನ ಆಡಳಿತದ ಕಾಲ 1645–60. ಅದು ಇಕ್ಕೇರಿ ಇತಿಹಾಸದಲ್ಲಿ ಉಚ್ಛ್ರಾಯ ಕಾಲ. ಅವನು ಮೆರೆದ ಸಾಹಸ ವೈಭವಗಳಿಂದಲೂ ರಾಜ್ಯಾಡಳಿತದಲ್ಲಿ ಜಾರಿಗೆ ತಂದ ಕಟ್ಟುಪಾಡುಗಳಿಂದಲೂ ಶಿವಪ್ಪನಾಯಕನ ಹೆಸರು ಇಂದಿಗೂ ಮನೆಮಾತಾಗಿದೆ. ಇವನ ಕಾಲದಲ್ಲಿ ವೆಲ್ಲೂರಿನಿಂದ ರಾಜ್ಯವಾಳುತ್ತಿದ್ದ ವಿಜಯನಗರವಂಶದ ಅರಸು ಶ್ರೀರಂಗರಾಯ ಬಿಜಾಪುರ–ಗೋಲ್ಕೊಂಡ ಸುಲ್ತಾನರ ಸಂಯುಕ್ತ ದಾಳಿಯಿಂದ ಪದಚ್ಯುತನಾಗಿದ್ದ. ಶಿವಪ್ಪನಾಯಕ ದೊಡ್ಡ ಸೈನ್ಯದೊಡನೆ ಹೋಗಿ ವೆಲ್ಲೂರನ್ನು ಗೆದ್ದು, ನೆಲೆಯಿಲ್ಲದೆ ಅಲೆಯುತ್ತಿದ್ದ ಶ್ರೀರಂಗರಾಯನಿಗೆ ಅದನ್ನು ಪುನಃ ಒಪ್ಪಿಸಿ, ಅವನಿಂದ ಅನೇಕ ಬಿರುದುಗಳನ್ನೂ ಬಹುಮಾನಗಳನ್ನೂ ಪಡೆದ. 1653ರಲ್ಲಿ ಡಚ್ಚರ ಸಹಾಯದಿಂದ ಪೋರ್ಚುಗೀಸರನ್ನು ಹೊನ್ನಾವರದಿಂದ ಓಡಿಸಿದ್ದಲ್ಲದೆ, ಇಕ್ಕೇರಿ, ಸೊರಬ, ಉಡಗಣಿ ಮುಂತಾದ ಅನೇಕ ಹೊಸ ಕೋಟೆಗಳನ್ನು ಕಟ್ಟಿಸಿದ. ಮತ್ತೆ 1657ರಲ್ಲಿ ಪೋರ್ಚುಗೀಸರೊಡನೆ ಯುದ್ಧಮಾಡಿ ಕುಂದಾಪುರ, ಗಂಗೊಳ್ಳಿ ಮತ್ತು ಮಂಗಳೂರುಗಳನ್ನು ಸ್ವಾಧೀನಪಡಿಸಿಕೊಂಡ. ಮೈಸೂರು ಅರಸರೊಡನೆ ಇವನು ಅನೇಕ ಯುದ್ಧಗಳನ್ನು ಮಾಡಿದ್ದಲ್ಲದೆ, ಒಮ್ಮೆ ಅವರ ರಾಜಧಾನಿ ಶ್ರೀರಂಗಪಟ್ಟಣಕ್ಕೂ ಮುತ್ತಿಗೆ ಹಾಕಿದ. ಪಶ್ಚಿಮ ಸಮುದ್ರಕ್ಕೆ ಸೇರಿದಂತಿರುವ ಅರಗ, ಗುತ್ತಿ, ಬಾರಕೂರು ಮತ್ತು ಮಂಗಳೂರು ರಾಜ್ಯಗಳು ಇವನ ಅಧೀನದಲ್ಲಿದ್ದುವೆಂದು ಇವನ ಶಾಸನವೊಂದರಿಂದ ತಿಳಿಯುತ್ತದೆ. ಈ ಕಾಲದಲ್ಲಿ ಇಲ್ಲಿ ಸಂಚರಿಸಿದ ಲಿಯೊನಾರ್ಡೊ ಪಯೆಸ್‌ನ ಪ್ರಕಾರ ಇವನ ರಾಜ್ಯ ಉತ್ತರದಲ್ಲಿ ತುದ್ರಿ ನದಿಯಿಂದ ದಕ್ಷಿಣದಲ್ಲಿ ಕಾಸರಗೋಡು ಅಥವಾ ನೀಲೇಶ್ವರದವರೆಗೂ ಹಬ್ಬಿತ್ತು. ಅಲ್ಲದೆ ಈತ ಮಹಾಶ್ರೀಮಂತ, ಸಾಹಸಿ ಎಂದೂ 40–50 ಸಾವಿರ ಜನರಿದ್ದ ಸೈನ್ಯವನ್ನು ಸದಾಕಾಲದಲ್ಲೂ ಸಜ್ಜಾಗಿ ಇಟ್ಟಿರುತ್ತಿದ್ದನೆಂದೂ ಪಯೆಸ್ ತಿಳಿಸುತ್ತಾನೆ. ಇವನು ಜಾರಿಗೆ ತಂದ ಭೂ ಸುಧಾರಣೆಗಳು ಶಿವಪ್ಪನಾಯಕನ ಶಿಸ್ತು ಎಂದು ಪ್ರಸಿದ್ಧವಾಗಿ ಇತ್ತೀಚಿನವರೆಗೂ ಪ್ರಚಲಿತವಾಗಿದ್ದವು.

ಶಿವಪ್ಪನಾಯಕನ ಸಾಧನೆಗಳೆಲ್ಲವೂ ಇವನ ಮಕ್ಕಳ ಕಾಲದಲ್ಲಿ ಕರಗಲಾರಂಭಿಸಿದುವು. ಮಗ ಭದ್ರಪ್ಪನಾಯಕನ ಕಾಲದಲ್ಲಿ (1662–64) ರಾಜಧಾನಿ ಬಿದನೂರು ಮತ್ತು ಭುವನಗಿರಿಗಳನ್ನು ಬಿಜಾಪುರದ ಸುಲ್ತಾನರು ಆಕ್ರಮಿಸಿದರು. 1664ರಲ್ಲಿ ಶಿವಾಜಿ ಕುಂದಾಪುರವನ್ನು ಆಕ್ರಮಿಸಿ ರಾಜ್ಯದ ಉತ್ತರ ಭಾಗವನ್ನೆಲ್ಲ ಕೊಳ್ಳೆ ಹೊಡೆದ. ಅನಂತರ ಪಟ್ಟಕ್ಕೆ ಬಂದ ಸೋಮಶೇಖರನಾಯಕ ವಿಲಾಸಿಯೂ ಕ್ರೂರನೂ ಆಗಿದ್ದುದರಿಂದ, 1671ರಲ್ಲಿ ಜನರೇ ಇವನನ್ನು ಕೊಲೆ ಮಾಡಿದರು. ಇವನಿಗೆ ಮಕ್ಕಳು ಇಲ್ಲದ್ದರಿಂದ ರಾಜ್ಯದಲ್ಲಿ ಅನಾಯಕತ್ವ ವುಂಟಾಯಿತು.

ಈ ಕಷ್ಟ ಸಮಯದಲ್ಲಿ ಸೋಮಶೇಖರನಾಯಕನ ಹೆಂಡತಿ ಚೆನ್ನಮ್ಮಾಜಿ ರಾಜ್ಯಸೂತ್ರವನ್ನು ಸ್ವತಃ ವಹಿಸಿಕೊಂಡು ಪರಿಸ್ಥಿತಿಯನ್ನು ತಹಬಂದಿಗೆ ತಂದಳು. ಬಸವಪ್ಪನಾಯಕನೆಂಬುವನನ್ನು ದತ್ತು ತೆಗೆದುಕೊಂಡು ಆಡಳಿತದಲ್ಲಿ ತರಬೇತಿ ನೀಡಿದಳು. ರಾಜ್ಯದ ಪೂರ್ವಭಾಗದಲ್ಲಿದ್ದ ಬಸವಾಪಟ್ಟಣ ಮುಂತಾದ ಪ್ರಾಂತ್ಯಗಳನ್ನು ವಶಪಡಿಸಿಕೊಂಡು, ಅಲ್ಲಿ ತನ್ನ ಹೆಸರಿನಲ್ಲಿ ಚನ್ನಗಿರಿ ಎಂದು ಕೋಟೆ ಕಟ್ಟಿಸಿದಳು. ಮೊರೆಹೊಕ್ಕ ಶಿವಾಜಿಯ ಮಗ ರಾಜಾರಾಮನಿಗೆ ಇವಳು ಆಶ್ರಯ ನೀಡಿ, ಔರಂಗಜೇಬನನ್ನೂ ಯುದ್ಧದಲ್ಲಿ ಎದುರಿಸಿದಳು. ಬಹಳ ಕ್ಲಿಷ್ಟಪರಿಸ್ಥಿತಿಯಲ್ಲಿ ಆಡಳಿತವನ್ನು ವಹಿಸಿಕೊಂಡ ಚೆನ್ನಮ್ಮಾಜಿ ಎಲ್ಲ ಕಷ್ಟ ಕೋಟಲೆಗಳನ್ನೂ ಮೆಟ್ಟಿಕ್ಕಿ, ಹದಿನಾರು ವರ್ಷ ಕಾಲ ದಕ್ಷತೆಯಿಂದ ಆಳಿ, ವಂಶದ ಕೀರ್ತಿಯನ್ನು ಎತ್ತಿಹಿಡಿದಳು.

ಇವಳ ಮಗ ಬಸವಪ್ಪನಾಯಕ (1691–1714) ದೇಶದಲ್ಲಿ ಹಲವಾರು ಧರ್ಮಕಾರ್ಯಗಳಿಗೆ ಉತ್ತೇಜನ ಕೊಟ್ಟು ಧರ್ಮಪ್ರಭುವೆನಿಸಿದ. ಬಸವಪ್ಪನಾಯಕನ ಕುಮಾರ ಇಮ್ಮಡಿ ಸೋಮಶೇಖರನಾಯಕ (1715–39) ಶಿರಾದ ಮೇಲೆ ದಾಳಿ ಮಾಡಿ ಅಜ್ಜಂಪುರ, ಸಂತೇಬೆನ್ನೂರು ಮುಂತಾದ ಪ್ರದೇಶಗಳನ್ನು ಮೊಗಲರಿಂದ ವಶಪಡಿಸಿಕೊಂಡ. ಇವನ ಅನಂತರ ಸೋಮಶೇಖರನ ತಮ್ಮನ ಮಗ ಎರಡನೆಯ ಬಸವಪ್ಪನಾಯಕ ರಾಜ್ಯವಾಳಿದ (1739–55). 1748ರಲ್ಲಿ ಚಿತ್ರದುರ್ಗದ ಪಾಳೆಯ ಪಟ್ಟನ್ನು ನಿರ್ನಾಮ ಮಾಡಿದ್ದಲ್ಲದೆ, ಅದೇ ಸಂದರ್ಭದಲ್ಲಿ ಆರ್ಕಾಟಿನ ನವಾಬ ಚಂದಾಸಾಹೇಬನನ್ನೂ ಸೆರೆಹಿಡಿದ.

ಇವನ ಮರಣಾನಂತರ, ಇವನ ದತ್ತುಪುತ್ರ ಚನ್ನಬಸವನಾಯಕ (1755–56) ದುರ್ಮರಣಕ್ಕೀಡಾಗಲು, ಎರಡನೆಯ ಬಸವಪ್ಪನಾಯಕನ ಹೆಂಡತಿ ವೀರಮ್ಮಾಜಿ ರಾಜ್ಯಾಡಳಿತವನ್ನು ವಹಿಸಿಕೊಂಡಳು. ಸೋಮಶೇಖರನೆಂಬುವನನ್ನು ದತ್ತು ಸ್ವೀಕರಿಸಿ ಅವನಿಗೆ ಪಟ್ಟಕಟ್ಟಿದ್ದರೂ ರಾಜ್ಯದ ಕಾರುಬಾರೆಲ್ಲ ಇವಳ ವಶದಲ್ಲೇ ಇತ್ತು. ಇವಳ ನಡವಳಿಕೆ ಅಹಿತಕರವಾಗಿತ್ತು. ಈಕೆ ಸುಲಿಗೆ ಮತ್ತು ಕ್ರೂರ ಆಡಳಿತದಲ್ಲಿ ನಿರತಳಾಗಿದ್ದಳು. ಆದ್ದರಿಂದ ಇವಳು ಪ್ರಜೆಗಳಿಗೆ ಅಪ್ರಿಯಳಾದಳು. ಇಂಥ ಸಂದರ್ಭವನ್ನೇ ಕಾಯುತ್ತಿದ್ದ ಮೈಸೂರು ಅರಸರ ಸೈನ್ಯಾಧಿಕಾರಿ ಹೈದರ್ ಅಲಿ, ಕ್ಷುಲ್ಲಕ ನೆಪಮಾಡಿಕೊಂಡು 1763ರಲ್ಲಿ ಬಿದನೂರನ್ನು ವಶಪಡಿಸಿಕೊಂಡ. ಒಂದೂವರೆ ಶತಮಾನ ಕಾಲ ಪಶ್ಚಿಮ ಕರ್ನಾಟಕದಲ್ಲಿ ವಿಜಯನಗರದ ಉತ್ತರಾಧಿಕಾರಿಯಂತೆ ವೈಭವದಿಂದ ರಾಜ್ಯವಾಳಿದ ಈ ರಾಜವಂಶ ಅಳಿಯಿತು.

ಇಕ್ಕೇರಿಯ ಅರಸರು ರಾಜ್ಯಾಡಳಿತದಲ್ಲಿ ಮಾತ್ರವಲ್ಲದೆ ಇತರ ರಂಗಗಳಲ್ಲೂ ವಿಜಯನಗರದ ಉತ್ತರಾಧಿಕಾರಿಗಳು ಎನ್ನಬಹುದು. ವ್ಯಾಪಾರ, ಉದ್ಯಮಗಳಿಂದ ದೇಶದ ಸಂಪತ್ತು ಅಭಿವೃದ್ಧಿಹೊಂದಿತು. ಮಠ ದೇವಾಲಯಗಳು ಧರ್ಮದತ್ತಿಗಳಿಂದ ಪೋಷಿತವಾದವು. ವಾಸ್ತುಶಿಲ್ಪ, ನೃತ್ಯ, ಸಂಗೀತಾದಿ ಕಲೆಗಳು ಉತ್ತೇಜನ ಪಡೆದವು. ಈ ಕಾಲದಲ್ಲಿ ಅನೇಕ ಕವಿ, ವಿದ್ವಾಂಸರು ರಾಜಾಶ್ರಯ ಗಳಿಸಿದರು. ಈ ಅರಸರು ಸ್ವತಃ ವೀರಶೈವ ಪಂಥೀಯರಾದರೂ ಎಲ್ಲ ಧರ್ಮಗಳನ್ನೂ ಸಮಾನತೆಯಿಂದ ರಕ್ಷಿಸುತ್ತಿದ್ದರು. ಇವರ ಮನೆದೇವರು ಕೊಲ್ಲೂರು ಮೂಕಾಂಬಿಕೆ. ಅದ್ವೈತಪೀಠಗಳಾದ ಶೃಂಗೇರಿ, ಮುಳಬಾಗಿಲು ಮಠಗಳೂ, ಉಡುಪಿ, ಕೂಡಲಿ ಮುಂತಾದ ದ್ವೈತಮಠಗಳೂ ಬಾಳೆಹೊನ್ನೂರು ಕವಲೆದುರ್ಗ ಮುಂತಾದ ಶೈವಮಠಗಳೂ ಇವರಿಂದ ದತ್ತಿಗಳನ್ನು ಪಡೆದ ಬಗ್ಗೆ ಅನೇಕ ದಾಖಲೆಗಳು ದೊರಕುತ್ತವೆ. ರಾಷ್ಟ್ರದಲ್ಲಿ ನೆಲೆಸಿದ್ದ ಸೌಖ್ಯ ಸಮೃದ್ಧಿಗಳನ್ನು ಡೆಲ್ಲವಲ್ಲೆ, ಪಯಚ಼್ ಮೊದಲಾದ ಅನೇಕ ವಿದೇಶಿ ಪ್ರವಾಸಿಗರು ಕೊಂಡಾಡಿದ್ದಾರೆ. ಇವರ ಕಾಲದಲ್ಲಿ ಕಟ್ಟಲಾದ ಕೆಳದಿಯ ರಾಮೇಶ್ವರ ಮತ್ತು ವೀರಭದ್ರ ದೇವಾಲಯಗಳು, ಇಕ್ಕೇರಿಯ ಅಘೋರೇಶ್ವರ ದೇವಾಲಯ, ಹಳೆಯ ನಗರದಲ್ಲಿರುವ ಅರಮನೆಯ ಅವಶೇಷಗಳು, ಕವಲೆದುರ್ಗ, ಭುವನಗಿರಿ ಮುಂತಾದ ಕೋಟೆಗಳು ಆ ಕಾಲದ ವಾಸ್ತುವೈಭವವನ್ನು ಇಂದಿಗೂ ಸಾರುತ್ತಿವೆ. ಕೆಳದಿಯ ವೀರಭದ್ರ ದೇವಾಲಯದ ಭುವನೇಶ್ವರಿಯಲ್ಲಿ ಕೆತ್ತಿರುವ ಗಂಡಭೇರುಂಡವಂತೂ ಅಮೋಘ ಶಿಲ್ಪಕೃತಿಯೆಂದು ಪ್ರಸಿದ್ಧವಾಗಿದೆ.

ಕೆಳದಿಯ ಅರಸರು ಅನೇಕ ಕವಿ, ವಿದ್ವಾಂಸರಿಗೆ ಆಶ್ರಯ ನೀಡಿದ್ದುದೇ ಅಲ್ಲದೆ, ಕೆಲವರು ಸ್ವತಃ ಕವಿಗಳಾಗಿದ್ದರು. ಮೊದಲನೆಯ ವೆಂಕಟಪ್ಪನಾಯಕ ಶಿವಗೀತವೆಂಬ ಸಂಸ್ಕೃತ ಕಾವ್ಯದ ಕರ್ತೃ. ಇವನ ಕಾಲದಲ್ಲಿ ತಿರುಮಲಭಟ್ಟನೆಂಬುವನು ಶಿವಾಷ್ಟಗೀತೆ ಬರೆದ. ರಂಗನಾಥ ದೀಕ್ಷಿತನೆಂಬುವನು ಆಗಮಗ್ರಂಥ ತಂತ್ರಸಾರಕ್ಕೆ ವ್ಯಾಖ್ಯಾನ ರಚಿಸಿದ. ಅಶ್ವಪಂಡಿತ ಮಾನಪ್ರಿಯ ಎಂಬ ಅಶ್ವಶಾಸ್ತ್ರ ಬರೆದ. ವಿಶಿಷ್ಟಾದ್ವೈತ ಪಂಡಿತ ರಾಮಾನುಜಶ್ರಿಂಗಿ, ಮಾಧ್ವಗುರುಗಳಾದ ವಾದಿರಾಜತೀರ್ಥ ಮತ್ತು ವೇದ ವೇದ್ಯತೀರ್ಥ ಮೊದಲಾದವರು ಗೌರವಿತರಾದರು. ಚೆನ್ನಮ್ಮಾಜಿಯ ದತ್ತು ಮಗ 1ನೆಯ ಬಸವಪ್ಪ ಸಂಸ್ಕೃತದಲ್ಲಿ ಶಿವತತ್ತ್ವ ರತ್ನಾಕರ ಎಂಬ ಬೃಹತ್ ಗ್ರಂಥವನ್ನು ಬರೆದಿದ್ದಾನೆ. ಇವನು ಸುಭಾಷಿತ ಸುರದ್ರುಮ ಎಂಬ ಮತ್ತೊಂದು ಸಂಸ್ಕೃತ ಗ್ರಂಥವನ್ನೂ ಸೂಕ್ತಿ ಸುಧಾಕರ ಎಂಬ ಕನ್ನಡ ಗ್ರಂಥವನ್ನೂ ರಚಿಸಿದ್ದಾನೆ. ಕನ್ನಡದಲ್ಲಿ ಶಿವಪೂಜಾವಿಧಾನವನ್ನು ರಚಿಸಿರುವ ನಿರ್ವಾಣಯ್ಯ, ಅನೇಕ ಕನ್ನಡ ಹಾಡುಗಳನ್ನು ಬರೆದಿರುವ ಅಪ್ಪಯ್ಯ ಇವರೂ ಈ ಕಾಲದವರು.

(ಎಸ್.ಎನ್.;ಪಿ.ಎಸ್.ಎಸ್.)

**ಇಕ್ಕೇರಿ ವರಹಗಳು:** ಇಕ್ಕೇರಿ ಅರಸರು ಟಂಕಿಸುತ್ತಿದ್ದ ಪ್ರಸಿದ್ಧ ಚಿನ್ನದ ನಾಣ್ಯಗಳು. ಇವುಗಳಲ್ಲಿ ಸದಾಶಿವನಾಯಕನ ಕಾಲದವು ಮಾತ್ರ ದೊರಕಿವೆ. ಇಕ್ಕೇರಿ ಅರಸರ ಆಳ್ವಿಕೆಯಲ್ಲಿ ಇದೇ ನಾಣ್ಯಗಳನ್ನೇ ಪುನಃ ಪುನಃ ಟಂಕಿಸುತ್ತಿದ್ದರೆಂದೂ ಪ್ರಾಯಶಃ ಈ ಕಾರಣದಿಂದಲೇ ಆ ಅರಸುಮನೆತನದ ಇತರ ರಾಜರ ನಾಣ್ಯಗಳಾವುವೂ ದೊರೆತಿಲ್ಲವೆಂದೂ ಕೆಲವು ವಿದ್ವಾಂಸರ ಅಭಿಪ್ರಾಯ.

ಸದಾಶಿವನಾಯಕನ ನಾಣ್ಯಗಳು ವಿಜಯನಗರದ ಹರಿಹರ, ದೇವರಾಯ, ಸದಾಶಿವರಾಯ ಮೊದಲಾದವರ ನಾಣ್ಯಗಳ ಮಾದರಿಯಲ್ಲೇ ಇವೆ. ವೃತ್ತಾಕಾರದ ಈ ನಾಣ್ಯಗಳ ಮುಮ್ಮುಖದಲ್ಲಿ ಬಲಗೈಯಲ್ಲಿ ತ್ರಿಶೂಲವನ್ನು, ಎಡಗೈಯಲ್ಲಿ ಮೃಗವನ್ನು ಧರಿಸಿ, ಎಡತೊಡೆಯ ಮೇಲೆ ಪಾರ್ವತಿಯನ್ನು ಕುಳ್ಳಿರಿಸಿಕೊಂಡಿರುವ ಶಿವನ ಚಿತ್ರವೂ ಹಿಮ್ಮುಖದಲ್ಲಿ ಎರಡು ಅಥವಾ ಮೂರು ಅಡ್ಡಗೆರೆಗಳ ಮಧ್ಯೆ ಶ್ರೀ ಸದಾಶಿವ ಎಂಬ ನಾಗರಾಕ್ಷರದ ಬರವಣಿಗೆಯೂ ಇವೆ. (ಎಸ್.ಎನ್.)

**ಇಕ್ಕೇರಿ ವಾಸ್ತುಶಿಲ್ಪ:** ಇಕ್ಕೇರಿ ಅರಸರ ಆಳ್ವಿಕೆಗೆ ಸಂಬಂಧಿಸಿದ ಶಿವತತ್ತ್ವರತ್ನಾಕರ, ಕೆಳದಿ ನೃಪವಿಜಯ ಮುಂತಾದ ಸ್ಥಳೀಯ ಕೃತಿಗಳಲ್ಲೂ ಪಯಚ಼್, ಡೆಲ್ಲವಲ್ಲೆ ಮುಂತಾದ ವಿದೇಶೀಯರ ಬರಹಗಳಲ್ಲೂ ಅನೇಕ ಸಮಕಾಲೀನ ಕೋಟೆ–ಕೊತ್ತಳಗಳ, ಸುಂದರ ನಗರಗಳ, ವೈಭವಯುತ ಅರಮನೆ, ದೇವಾಲಯಗಳ ವರ್ಣನೆಗಳು ದೊರಕುತ್ತವೆ. ಆ ವಾಸ್ತುಕೃತಿಗಳಲ್ಲಿ ಹಲವು ಇಂದಿಗೂ ಉಳಿದುಬಂದಿವೆ. ಆದರೆ ಅವುಗಳಲ್ಲಿ ಬಹುಮಟ್ಟಿನವು ಈಗ ಅತ್ಯಂತ ಶಿಥಿಲಾವಸ್ಥೆಯಲ್ಲಿವೆ. ಅವುಗಳ ವಿಶೇಷ ಅಧ್ಯಯನವೇನೂ ನಡೆದಿಲ್ಲದಿರುವುದರಿಂದ ಆ ಉಚ್ಛ್ರಾಯ ಕಾಲದ ಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸುವುದು ಕಷ್ಟಸಾಧ್ಯ.

**ಕೋಟೆ–ಅರಮನೆ:** ಸಮಕಾಲೀನ ಕೋಟೆಗಳ ಪೈಕಿ, ಶಿವಮೊಗ್ಗ ಜಿಲ್ಲೆಯ ನಗರದಲ್ಲಿರುವ (ಬಿದನೂರು) ಕೋಟೆ ಇದ್ದುದರಲ್ಲಿ ಸುಮಾರು ಒಳ್ಳೆಯ ಸ್ಥಿತಿಯಲ್ಲಿ ಉಳಿದಿದೆ. ಇಕ್ಕೇರಿ ಅರಸರು ತಮ್ಮ ರಾಜಧಾನಿಯನ್ನು 1638ರ ಹೊತ್ತಿಗೆ ಅಲ್ಲಿಗೆ ಬದಲಾಯಿಸಿದ್ದರು. ಈಗ ಅಲ್ಲಿರುವ ಬಹುತೇಕ ಕಟ್ಟಡಗಳನ್ನು ಶಿವಪ್ಪನಾಯಕನ ಕಾಲದಲ್ಲಿ ಕಟ್ಟಿರಬಹುದೆಂಬ

ಕೆಳದಿ ವೀರಭದ್ರ ದೇವಾಲಯದಲ್ಲಿರುವ ಗಂಡಭೇರುಂಡದ ಶಿಲ್ಪ

ನಂಬಿಕೆ ಇದೆ. ಇಕ್ಕೇರಿ ರಾಜವಂಶದ ಪತನದ (1763) ಅನಂತರ, ಹೈದರ್ ಆಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲೂ ಈ ಕೋಟೆ ಊರ್ಜಿತಸ್ಥಿತಿಯಲ್ಲಿದ್ದು, ಅನಂತರ ಶಿಥಿಲವಾಗಲಾರಂಭಿಸಿತು. ಕೋಟೆ ಪೂರ್ಣವಾಗಿ ಕಲ್ಲುಕಟ್ಟಡ; ವಿನ್ಯಾಸದಲ್ಲಿ ಮಾವಿನಕಾಯಿಯಂತಿದ್ದು ಸುತ್ತಲೂ ಕಂದಕದಿಂದ ಆವೃತವಾಗಿದೆ. ಮೇಲೆ ಹೋದಂತೆಲ್ಲ ಕಿರಿದಾಗುವ ಅದರ ಗೋಡೆಯ ಮೇಲ್ಭಾಗದಲ್ಲಿ, ಬಂದೂಕನ್ನು ಉಪಯೋಗಿಸಲು ಅನುಕೂಲವಾಗುವಂತೆ ಮಧ್ಯೆ ಮಧ್ಯೆ ಸ್ಥಳಗಳನ್ನು ಬಿಟ್ಟು ದಂತಪಂಕ್ತಿಯಂತೆ ಎತ್ತಿರುವ ಕೈಪಿಡಿಗೋಡೆಯಿದೆ. ಕೋಟೆಗೋಡೆಯ ಹೊರ ಮೈ ಹೆಚ್ಚು ಕಡಿಮೆ ನೇರವಾಗಿದ್ದರೂ ಅಲ್ಲಲ್ಲಿ ದುಂಡನೆಯ ಒತ್ತುಗೋಡೆಗಳಿವೆ. ಕೋಟೆಯ ಉತ್ತರ ಭಾಗದಲ್ಲಿ ಅದರ ಮುಖ್ಯದ್ವಾರವಿದೆ. ಅದನ್ನು ತಲುಪಲು ಕಂದಕದ ಮೇಲೆ ಸೇತುವೆಯೊಂದಿದೆ. ದ್ವಾರದ ಎರಡು ಪಕ್ಕಗಳಲ್ಲೂ ದುಂಡನೆಯ ಬತೇರಿಗಳಿವೆ. ಅವುಗಳಲ್ಲೊಂದರಲ್ಲಿ ಒಂದು ಸಣ್ಣ ದಿಡ್ಡಿಬಾಗಿಲಿದೆ. ಕೋಟೆಯ ಒಳಭಾಗದಲ್ಲಿ ಅರಮನೆಯ ಭಾಗಗಳಷ್ಟನ್ನೇ ಆವರಿಸುವಂತೆ ಒಂದು ಒಳಕೋಟೆಯಿದೆ. ರಕ್ಷಣೆಯ ಆವಶ್ಯಕತೆಗೆ ತಕ್ಕಂತೆ ಆಯಕಟ್ಟಿನ ಸ್ಥಳಗಳಲ್ಲಿ ಕಾವಲುಗಾರರ ಕೋಟೆಗಳೂ ಬತೇರಿಗಳೂ ಬಾವಿಗಳೂ ನೀರಿನ ತೊಟ್ಟಿಗಳೂ ಮದ್ದಿನ ಮನೆಗಳೂ ಇದ್ದುವು. ಅದೇ ಜಿಲ್ಲೆಯ ಚನ್ನಗಿರಿಯಲ್ಲಿ ಎರಡು ಸುತ್ತಿನ ಕೋಟೆಯಿದೆ. ಅದು ರಾಣಿ ಚೆನ್ನಮ್ಮಾಜಿ ಕಟ್ಟಿಸಿದ್ದೆಂದು ತಿಳಿದುಬರುತ್ತದೆ. ಹಾಗೆಯೇ ಕವಲೆದುರ್ಗ, ಹೊನ್ನಾವರ, ಕುಮಟ, ಭಾರಂಗಿ ಮುಂತಾದೆಡೆಗಳಲ್ಲೂ ಆ ಕಾಲದ ಕೋಟೆಗಳ ಅವಶೇಷಗಳಿವೆ.

ನಗರದ ಒಳಕೋಟೆಯ ಒಳಭಾಗದಲ್ಲಿದ್ದ ಶಿವಪ್ಪನಾಯಕನ ಕಾಲದ ಅರಮನೆಯ ಕೆಲವು ಕಂಬಗಳು ಮತ್ತು ಅಡಿಪಾಯಗಳು ಮಾತ್ರವೇ ಉಳಿದಿದ್ದು, ಅವುಗಳಲ್ಲಿ ದರ್ಬಾರು ಹಜಾರ, ಒಳಕೋಣೆ ಮುಂತಾದುವು ಇದ್ದ ಸ್ಥಳಗಳನ್ನು ಮಾತ್ರ ಗುರುತಿಸಬಹುದು. ಇಕ್ಕೇರಿ ಮತ್ತು ಕೆಳದಿಯ ಅರಮನೆಗಳಲ್ಲಿ ಏನೂ ಉಳಿದಿಲ್ಲವೆಂದೇ ಹೇಳಬಹುದು.

**ಕೊಳಗಳು:** ಇಕ್ಕೇರಿಯ ವೈಭವದ ದ್ಯೋತಕವಾಗಿ, ಆ ಕಾಲದ ಕೆಲವು ಕೊಳಗಳು ಇನ್ನೂ ಒಳ್ಳೆಯ ಸ್ಥಿತಿಯಲ್ಲಿ ಉಳಿದಿವೆ. ಇವುಗಳಲ್ಲಿ ನಗರದ ಸಮೀಪದಲ್ಲಿರುವ ದೇವಗಂಗೆ ಒಂದು ವಿಚಿತ್ರರೀತಿಯ ಕೊಳ. ಇಲ್ಲಿ ಸು.86.86ಮೀ. ಉದ್ದ29.26ಮೀ. ಅಗಲದ ಪ್ರಾಂಗಣದ ಮಧ್ಯೆ ಅನೇಕ ಕೊಳಗಳು ನಿರ್ಮಿತವಾಗಿವೆ. ಇವುಗಳಲ್ಲಿ ಅತಿ ದೊಡ್ಡದು 12.80ಮೀ ಉದ್ದ ಮತ್ತು 10.05ಮೀ ಅಗಲವಿದೆ. ಇದರ ಮಧ್ಯಭಾಗದಲ್ಲಿ ಒಂದು ಚಿಕ್ಕ ಮಂಟಪವಿದ್ದು ಅದಕ್ಕೆ ಹೋಗಲು ಒಂದು ಸಣ್ಣ ಸೇತುವೆಯೂ ಇದೆ. ಇಲ್ಲಿನ ಇತರ ಕೆಲವು ಕೊಳಗಳ ತಳವಿನ್ಯಾಸ ಪದ್ಮ, ನಕ್ಷತ್ರ ಮುಂತಾದ ಆಕಾರಗಳಲ್ಲಿವೆ. ಇವೆಲ್ಲಕ್ಕೂ ಬೆಟ್ಟದೆಡೆಯಿಂದ ಹರಿಯುತ್ತಿದ್ದ ಚಿಕ್ಕ ಝರಿಯೊಂದನ್ನು ತಿರುಗಿಸಿ ನೀರೊದಗಿಸಲಾಗುತ್ತಿತ್ತು. ಈ ಕೊಳಗಳು ಅಂತಃಪುರದವರ ಜಲಕ್ರೀಡೆಗಾಗಿ ಕಟ್ಟಲಾಗಿತ್ತೆಂದು ಪ್ರತೀತಿ. ಚಂಪಕಾ ಸರಸ್ಸು ಎಂದು ಕರೆಯುವ ಇನ್ನೊಂದು ಸುಂದರ ಕೊಳ ಶಿವಮೊಗ್ಗ ಜಿಲ್ಲೆಯ ಆನಂದಾಪುರದಲ್ಲಿದೆ.

**ದೇವಾಲಯಗಳು:** ಇಕ್ಕೇರಿ ಅರಸರ ಆಳ್ವಿಕೆಯ ಕಾಲದಲ್ಲಿ, ಅವರು ಆಳುತ್ತಿದ್ದ ಮಲೆನಾಡಿನ ಭಾಗಗಳಲ್ಲಿ ಒಂದು ವಿಶಿಷ್ಟರೀತಿಯ ದೇವಾಲಯ ರಚನಾ ಶೈಲಿ ಬೆಳೆದು ಬಂದಿತು. ಇದೇ ಕಾಲದಲ್ಲಿ ದಕ್ಷಿಣಭಾರತದ ಇತರೆಡೆಗಳಲ್ಲಿ ಪ್ರಚಲಿತವಾಗಿದ್ದ ವಿಜಯನಗರ ರೀತಿಯ ದ್ರಾವಿಡ ವಾಸ್ತುಶೈಲಿಯ ಮತ್ತು ಹಿಂದೆ ಇದೇ ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ಮೆರೆದಿದ್ದ ಹೊಯ್ಸಳ ವಾಸ್ತುಶೈಲಿಯ ಮಿಶ್ರಣ ಇಲ್ಲಿ ಕಂಡುಬರುತ್ತದೆ. ಈ ಸಂಕರಶೈಲಿಯನ್ನು ಇಕ್ಕೇರಿ ಶೈಲಿ ಅಥವಾ ಮಲೆನಾಡು ಶೈಲಿಯೆಂದು ಕರೆಯುವ ರೂಢಿಯಿದೆ. ಸು. 1520ರಲ್ಲಿ ಕಟ್ಟಲಾಗಿರುವ ಇಕ್ಕೇರಿಯಲ್ಲಿರುವ ಅಘೋರೇಶ್ವರ ದೇವಾಲಯ ಈ ಶೈಲಿಗೆ ಒಳ್ಳೆಯ ಉದಾಹರಣೆ. ಇದು 5 ದಪ್ಪ ದಿಂಡುಗಳನ್ನೊಳಗೊಂಡ 1.82ಮೀ ಎತ್ತರದ ಜಗಲಿಯ ಮೇಲೆ ಇದ್ದು, ಅಡಿದಿಂಡಿನ ಮೇಲೆ ಒಂದರಲ್ಲಿ ಕೀರ್ತಿಮುಖಗಳ ಮತ್ತು ಇನ್ನೊಂದರಲ್ಲಿ ಮೇಲೆ ಸಿಂಹಸಾಲುಗಳ ಅಲಂಕರಣವಿದೆ. ತಳವಿನ್ಯಾಸದಲ್ಲಿ ಈ ಜಗತಿ ಚತುರಸ್ರಾಕಾರವಾಗಿದ್ದರೂ ಪರಿಘದ ಓಟವನ್ನು ಅಲ್ಲಲ್ಲಿ ಹಿಂದಕ್ಕೆ ಮುಂದಕ್ಕೆ ಜಗ್ಗಿರುವುದರಿಂದ ಅಂಚುಗಳು ದಂತ ಪಂಕ್ತಿಯಂತೆ ಕಾಣುತ್ತವೆ. ಈ ಅಂಗಗಳೆಲ್ಲಲ್ಲಾ ಹೊಯ್ಸಳ ಶೈಲಿಯ ಸ್ವರೂಪವನ್ನೇ ಅನುಕರಿಸಿದ್ದರೂ ಜಗತಿಯ ಅಗಲ ಬಹಳ ಕಿರಿದಾಗಿದ್ದು, ಅದಕ್ಕೆ ಹತ್ತಲು ಮೆಟ್ಟಿಲುಗಳೂ ಇಲ್ಲದಿರುವುದರಿಂದ, ಈ ಜಗತಿ ಹೊಯ್ಸಳ ದೇವಾಲಯಗಳಲ್ಲಿರುವಂತೆ ಪ್ರದಕ್ಷಿಣೆಗೆ ಅನುವಾಗುವಂತೆ ಕಟ್ಟಲಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಜಗತಿಯ ಮೇಲಿನ ಗುಡಿಭಾಗದಲ್ಲಿ ಒಂದು ಚತುರಸ್ರಾಕಾರದ ಗರ್ಭಗೃಹವೂ ಅದರ ಮುಂದೆ ತೆರೆದ ಸುಕನಾಸಿಯೂ ಇದ್ದು ಅದಕ್ಕೂ ಮುಂದೆ 25 ಅಂಕಣಗಳ ಮಂಟಪವಿದೆ. ಗರ್ಭಗೃಹದ ಹೊರಭಿತ್ತಿಯ ಮೇಲೆ ಪೂರ್ವ, ದಕ್ಷಿಣ ಮತ್ತು ಪಶ್ಚಿಮ ಪಾರ್ಶ್ವಗಳಲ್ಲಿ ದೇವಕೋಷ್ಠಕಗಳಿದ್ದು, ಅವುಗಳ ಮೇಲೆ ಸಿಂಹಪಟ್ಟಿಕೆ ಮತ್ತು ಗೋಪುರಗಳ ಅಲಂಕರಣವಿದೆ. ಸೂರಿನ ಭಾಗದಲ್ಲಿ s ಆಕಾರದ ಕಪೋತವಿದೆ. ಗರ್ಭಗೃಹದ ಮೇಲಿನ ಗೋಪುರ ಎರಡು ತಲಗಳಲ್ಲಿದ್ದು ಚಿಕ್ಕ ಗೋಪುರಗಳ ಮತ್ತು ನಿಂತ ಸಿಂಹಗಳ ಶಿಲ್ಪಗಳಿಂದ ಅಲಂಕೃತವಾಗಿದೆ. ಕೆಳತಲದ ಪೂರ್ವಭಾಗದಲ್ಲಿ, ಗೋಪುರದ ಒಳಗಿನ ಬರಿ ಕೋಣೆಗೆ ಹೋಗಲು ಒಂದು ದ್ವಾರವೂ ಉತ್ತರದಲ್ಲಿ ಸುಕನಾಸಿಯ ಮೇಲಿನ ಭಾಗದವರೆಗೆ ಗೋಪುರದ ಚಾಚಣಿಕೆಯೂ ಇದೆ.

ಮಂಟಪದ ಹೊರಗೋಡೆಯ ಮೇಲೂ ಅಲ್ಪ ಉಬ್ಬಿನ ಶಿಲ್ಪಗಳ ಅಲಂಕರಣವಿದೆ. ಇಲ್ಲಿ ಆರು ಪಟ್ಟಿಕೆಗಳಿದ್ದು, ಕೆಳಗಿನದರಲ್ಲಿ, ಮಧ್ಯೆ ಮಧ್ಯೆ ಸಿಂಹ, ಕೋತಿ, ಕಾಮಕೇಳಿಯ ಚಿತ್ರಗಳನ್ನೊಳಗೊಂಡಿರುವ ಹಂಸಗಳ ಸಾಲೂ ಎರಡನೆಯದರಲ್ಲಿ ಕಂಬಗಳ ಮೇಲೆ


ದೇವಾಲಯದ ದ್ವಾರ

ಎತ್ತಿರುವ ಗೋಪುರಗಳ ಸಾಲೂ ಇವೆ. ಇದರ ಮೇಲುಗಡೆ ಜಾಲಂದ್ರಗಳನ್ನುಳ್ಳ ಕಿಟಕಿಗಳ ಅಲಂಕರಣವಿದ್ದು, ಇವುಗಳ ಮಧ್ಯೆ ಕಮಾನಿನಾಕೃತಿಯ ಕೋಷ್ಠಕಗಳಿವೆ. ಕೋಷ್ಠಕಗಳಲ್ಲಿ ಯಕ್ಷರು, ದಿಕ್ಪಾಲಕರು, ವಿಷ್ಣು, ಭೈರವ ಇತ್ಯಾದಿ ಶಿಲ್ಪಗಳಿವೆ. ಇದರ ಮೇಲೆ ಕಿನ್ನರಿಯರು, ಪುರುಷಾಮೃಗ, ಹುಲಿಯನ್ನೇರಿರುವ ಯೋಗಿ ಇತ್ಯಾದಿ ಶಿಲ್ಪಗಳ ಸಾಲೂ 5ನೆಯ ಪಟ್ಟಿಕೆಯಲ್ಲಿ ಹೂಗಳೂ 6ನೆಯದರಲ್ಲಿ ಎಲೆಯಾಕಾರದ ನಕಾಶೆಯ ಸಾಲೂ ಇವೆ. ಈ ಭಿತ್ತಿಯ ಅಲಂಕರಣ ವಿನ್ಯಾಸ ಹೊಯ್ಸಳ ದೇವಾಲಯಗಳ ನೆನಪನ್ನು ತರುತ್ತದೆ; ಆದರೆ

ಹೊಯ್ಸಳ ಶಿಲ್ಪಗಳಲ್ಲಿನ ನಯ, ನಾಜೂಕು ಇಲ್ಲಿಲ್ಲ. ಇದೇ ಹೊಯ್ಸಳ ಶೈಲಿಯ ಅಂಶಗಳು. ಮಂಟಪ ನಿಂತಿರುವ ಜಗತಿಯಲ್ಲೂ ದ್ವಾರಾಲಂಕರಣದಲ್ಲೂ ಒಳಗಿನ ಕಂಬಗಳಲ್ಲಿಯೂ ಎದ್ದು ಕಾಣುತ್ತವೆ. ಸುಕನಾಸಿ ತೆರೆದಂತೆ ಇದ್ದು ಇದರ ದ್ವಾರಾಲಂಕರಣ ಸುಂದರವಾಗಿದೆ. ಸುಕನಾಸಿಯಿಂದ ಗರ್ಭಗೃಹವನ್ನು ಸುತ್ತಿ ಬರಲು ಪ್ರದಕ್ಷಿಣಾ ಪಥವಿದೆ. ಈ ದೇವಾಲಯದಲ್ಲಿ ಆಳವಾಗಿ ಕೆತ್ತಿದ ದಿಂಡುಗಳ ನರಗಳುಳ್ಳ ಜಗತಿ, ಸುಕನಾಸಿಯ ಮೇಲೆ ಚಾಚಣಿಕೆಯಿರುವ ಕಲ್ಲಿನ ಶಿಖರ, ಗುಂಡಾದ ಮತ್ತು ಷೋಡಶ ಮುಖದ ಕಂಬಗಳು ಮತ್ತು ಹೊರಗೋಡೆಯ ಅಲಂಕರಣ ವಿನ್ಯಾಸಗಳು ಹೊಯ್ಸಳಶೈಲಿಯ ಅಂಶಗಳನ್ನೂ ತಲಗಳು ಮತ್ತು ದ್ವಾರವಿರುವ ಗೋಪುರ, ಚತುರಸ್ರಾಕಾರದ ಮಂಟಪ, ಸಿಂಹ ಬೋದಿಗೆಯನ್ನುಳ್ಳ ಅನೇಕ ಕಂಬಗಳು ಮತ್ತು ಅರೆಕಂಬಗಳು ಮತ್ತು ಸುಕನಾಸಿಯಿಂದಾರಂಭವಾಗುವ ಪ್ರದಕ್ಷಿಣಾ ಪಥ, ಇವು ದ್ರಾವಿಡಶೈಲಿಯ ಅಂಶಗಳನ್ನೂ ತೋರಿಸುತ್ತವೆ.

ಅಘೋರೇಶ್ವರದ ಪಶ್ಚಿಮಕ್ಕಿರುವ ಪಾರ್ವತೀ ಗುಡಿಯೂ ಮೇಲಿನದರ ಮಾದರಿಯಲ್ಲಿಯೇ ಇದೆ. ಆದರೆ ನವರಂಗದ ಬಾಗಿಲುವಾಡ ಮತ್ತು ಕಿಟಕಿಗಳಲ್ಲಿ ಚೂಪುತಲೆಯ ಕಮಾನುಗಳನ್ನು ಉಪಯೋಗಿಸಿರುವುದು ಇಲ್ಲಿಯ ವಿಶೇಷ. ಈ ಅಂಶ ಭಾರತೀಯ ಮುಸ್ಲಿಮ್ ವಾಸ್ತುಶೈಲಿಯಿಂದ ಬಂದಿದ್ದಾಗಿದೆ.

ಅಘೋರೇಶ್ವರದ ಮುಂದಿನ ನಂದೀ ಮಂಟಪ ಎತ್ತರವಾದ ಜಗತಿಯ ಮೇಲಿದ್ದು, ಅದರ ಭಿತ್ತಿ ಏಳು ಚೂಪುತಲೆಯ ಕಮಾನುಗಳನ್ನು ಒಳಗೊಂಡಿದೆ. ಕಮಾನುಗಳ ಮಧ್ಯದಲ್ಲಿ ಶಿಲ್ಪಗಳಿವೆ. ಪಾರ್ವತೀಗುಡಿಯೂ ಮುಂದಿನ ನಂದೀ ಮಂಟಪವೂ ಅಘೋರೇಶ್ವರ ಗುಡಿಗಿಂತಲೂ ಕೆಲಕಾಲದ ಅನಂತರ ಕಟ್ಟಿರಬಹುದಾಗಿದೆ.

ಸು.1512ರಲ್ಲಿ ಕಟ್ಟಿರಬಹುದಾದ ಕೆಳದಿಯ ರಾಮೇಶ್ವರ ದೇವಾಲಯ ಇದೇ ಮಿಶ್ರ ಶೈಲಿಯಲ್ಲಿರುವ ಚಿಕ್ಕ ಕಟ್ಟಡ. ಈ ಗುಡಿಯ ಜಗತಿಯ ಹೊರಮೈಯ ಒಂದು ದಿಂಡಿನ ಮೇಲೆ ವಾದ್ಯಗಾರರ ಮತ್ತು ನರ್ತಕರ ಶಿಲ್ಪಗಳಿವೆ. ಮೇಲಿನ ಗರ್ಭಗೃಹದ ಭಿತ್ತಿಯಲ್ಲಿ ಚತುರಸ್ರಾಕಾರದ ಅರ್ಧಕಂಬಗಳ ಅಲಂಕರಣವೂ ಮಧ್ಯೆ ಮಧ್ಯೆ ಕಣ್ಣಪ್ಪ, ಹನುಮಂತ, ಗರುಡ, ಕಾಮಕೇಳಿ ಮುಂತಾದ ಅನೇಕ ಶಿಲ್ಪಗಳೂ ಇವೆ. ಮೇಲಿನ ಗೋಪುರ ಚತುರಸ್ರಾಕಾರದಲ್ಲಿದೆ. ವಿನ್ಯಾಸದಲ್ಲಿ ಗರ್ಭಗೃಹ ಪ್ರದಕ್ಷಿಣ ಪಥಕ್ಕೆದೆಯಿರುವ ಸುಕನಾಸಿ, ಚಿಕ್ಕ ನವರಂಗ ಮತ್ತು ಮುಖಮಂಟಪವಿರುವ ಈ ಗುಡಿಯ ಮುಂದಿನ ಮಂಟಪದಲ್ಲಿ ಸುತ್ತಲೂ ಒರಗು ಬೆಂಚುಗಳಿರುವುದು ವಿಶೇಷ. ಇದಕ್ಕೆ ಸೇರಿದಂತೆಯೇ ಇರುವ ವೀರಭದ್ರ ದೇವಾಲಯದ (ಸು.1530–40) ವಾಸ್ತುರಚನೆಯಲ್ಲಿ ಹೆಚ್ಚಿನ ಅಂಶಗಳೇನಿಲ್ಲದಿದ್ದರೂ ಇಲ್ಲಿಯ ಕೆತ್ತನೆ ಕೆಲಸ ಬಹು ಉತ್ತಮಮಟ್ಟದ್ದು. ನಗರದ ನೀಲಕಂಠೇಶ್ವರ ಮತ್ತು ಆಂಜನೇಯ ದೇವಾಲಯಗಳೂ ಹಂಪನೂರ ರಂಗನಾಥಸ್ವಾಮಿ ದೇವಸ್ಥಾನವೂ ಮಳಿಗೆಯ ಜೈನ ಬಸದಿಯೂ ಇದೇ ಕಾಲದ ಕಟ್ಟಡಗಳು.

**ಶಿಲ್ಪ:** ಇಕ್ಕೇರಿ ಶೈಲಿಯ ಶಿಲ್ಪಗಳು ಸಮಕಾಲೀನ ವಿಜಯನಗರ ಮತ್ತು ಅನಂತರದ ಶಿಲ್ಪ ಸಂಪ್ರದಾಯದಲ್ಲೇ ಇವೆ. ವಾಸ್ತುರಚನೆಯಲ್ಲಿ ಹಲವು ಹೊಯ್ಸಳ ಅಂಶಗಳು ಈ ಕಾಲದ ಕಟ್ಟಡಗಳಲ್ಲಿ ಕಂಡುಬಂದರೂ ಅವುಗಳ ರಚನೆಗೆ ಒರಟು ಕಲ್ಲುಗಳನ್ನು ಉಪಯೋಗಿಸಿರುವುದರಿಂದ, ಹೊಯ್ಸಳ ಕಾಲದ ಶಿಲ್ಪಗಳ ನಯ, ನಾಜೂಕು, ಸೂಕ್ಷ್ಮ ಅಲಂಕರಣಗಳು ಇವುಗಳಲ್ಲಿ ಮೂಡಿಬಂದಿಲ್ಲ. ಇಕ್ಕೇರಿ ಶೈಲಿಯ ದೇವಾಲಯಗಳ ಹೊರಗೋಡೆಗಳ ಶಿಲ್ಪಗಳು ವಾಸ್ತುವಿನ್ಯಾಸದಲ್ಲಿ ಹೊಯ್ಸಳ ಶೈಲಿಯ ಸ್ಥಾನವನ್ನೇ ಅಲಂಕರಿಸಿದ್ದರೂ ಒಂದೊಂದೇ ಶಿಲ್ಪಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿದರೆ ಇವು ಹೊಯ್ಸಳ ಶಿಲ್ಪಗಳ ಅತಿ ಅಸಮರ್ಪಕ ಅನುಕರಣೆಗಳಂತೆ ಕಾಣುತ್ತವೆ. ಆದರೆ ಇಕ್ಕೇರಿ ದೇವಾಲಯದ ನಂದಿ, ಕೆಳದಿಯ ವೀರಭದ್ರ ದೇವಾಲಯದ ಭುವನೇಶ್ವರಿ ಇವು ಈ ಕಾಲದ ಉತ್ತಮಮಟ್ಟದ ಶಿಲ್ಪಗಳೆನ್ನಬಹುದು. ವೀರಭದ್ರ ದೇವಾಲಯದ ಗಂಡಭೇರುಂಡವಿರುವ ಭುವನೇಶ್ವರಿ ಒಂದು ಅಸದೃಶ ಕಲಾಕೃತಿ. ಈ ಕಾಲದ ದೇವಾಲಯಗಳ ಮೇಲಿರುವ ನರ್ತಕರು, ವಾದ್ಯಗಾರರು ಮುಂತಾದ ಶಿಲ್ಪಗಳೂ ಅನೇಕ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳೂ ಸಮಕಾಲೀನ ಸಾಮಾಜಿಕ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತವೆ. (ಎಸ್.ಎನ್.)

**ಇಕ್ಕೈಬಳಕೆ:** ಎರಡು ಕೈಗಳನ್ನೂ ಸಮಾನ ಕೌಶಲದಿಂದ ಬಳಸುವ ಸಾಮರ್ಥ್ಯ (ಆ್ಯಂಬಿಡೆಕ್ಸ್ಟರಿಟಿ). ಇದು ಹುಟ್ಟಿನಿಂದಲೇ ಬಂದಿರಬಹುದು ಅಥವಾ ಅಭ್ಯಾಸದಿಂದ ಲಭಿಸಿರಬಹುದು. ಮಹಾತ್ಮ ಗಾಂಧೀಜಿ ಇಕ್ಕೈಬಳಕೆಯನ್ನು ಅಭ್ಯಾಸದಿಂದ ಸಾಧಿಸಿದವರು. (ಡಿ.ಎಸ್.ಎಸ್.)

ಮಿದುಳಿನ ಒಂದು ಪಾರ್ಶ್ವ (ಸಾಮಾನ್ಯವಾಗಿ ಎಡ) ಎದುರು ಪಾರ್ಶ್ವದ ಮಾತಿನ ಮತ್ತು ಚಲನದ ಶಕ್ತಿಗಳೆರಡನ್ನೂ ನಿಯಂತ್ರಿಸುತ್ತದೆ ಎಂದು ಹೇಳಲಾಗಿದೆ. ಪರಿಣಾಮವಾಗಿ ಒಂದು ಕೈಯ ಸಾಮರ್ಥ್ಯ ಅಧಿಕವಾಗುವುದು ಮತ್ತು ಬಲಚ ಅಥವಾ ಎಡಚ ಎಂಬ ಭಿನ್ನತೆ ಉಂಟಾಗುವುದು. ಮಿದುಳಿನ ಈ ದ್ವಿನಿಯಂತ್ರಣದ ಕಾರಣದಿಂದ ಎಡಚತನ ಬಲಚತನ ಎಂಬ ಭಿನ್ನತೆ ತೀವ್ರಗೊಂಡು ಮಾತಿನಲ್ಲಿ ಕುಂದು ತಲೆದೋರುವ ಸಂಭವವಿದೆ ಎಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಕೆಲವು ಶಿಕ್ಷಣವೇತ್ತರು ಇಕ್ಕೈಬಳಕೆಯನ್ನು ಮಕ್ಕಳಲ್ಲಿ ಬೆಳೆಸುವುದರ ಮೂಲಕ ಚಲನೆಯನ್ನು ನಿಯಂತ್ರಿಸುವ ಮಿದುಳಿನ ಕೇಂದ್ರಗಳ ಅಭಿವೃದ್ಧಿ ಮಾಡಬಹುದೆಂದು ವಾದಿಸುತ್ತಾರೆ (**ನೋಡಿ– ಕೈಬಳಕೆ**). *

**ಇಕ್ಕೋಡು:** ಸಂಯುಕ್ತ ಸೋಪಾಧಿಕ ಪಕ್ಷಾಂತರ ನ್ಯಾಯಕ್ಕೆ ತರ್ಕಶಾಸ್ತ್ರದಲ್ಲಿ ಈ ಹೆಸರಿದೆ (ಡೈಲೆಮ). ಇಕ್ಕೋಡಿನಲ್ಲಿ ಸಾಧ್ಯಪ್ರತಿಜ್ಞೆ ಯಾವಾಗಲೂ ಸೋಪಾಧಿಕ (ಹೈಪೊತೆಟಿಕಲ್), ಪಕ್ಷಪ್ರತಿಜ್ಞೆ ಸಾಮಾನ್ಯವಾಗಿ ಪಕ್ಷಾಂತರ (ಡಿಸ್‌ಜಂಕ್ಟಿವ್). ನಿತ್ಯಜೀವನದಲ್ಲಿ ಕೆಲವುವೇಳೆ ನಮ್ಮ ಮುಂದೆ ಎರಡುಪಕ್ಷಗಳಿದ್ದು ಯಾವ ಒಂದು ಪಕ್ಷವನ್ನು ಹಿಡಿದರೂ ಪರಿಣಾಮ ಏಕರೀತಿಯಲ್ಲಿ ಪ್ರತಿಕೂಲವಾಗಿರುತ್ತದೆ. ವಾದದಲ್ಲೂ ಹೀಗೆಯೇ. ಎರಡು ಪಕ್ಷದಲ್ಲಿ ಯಾವುದನ್ನು ಒಪ್ಪಿದರೂ ಪ್ರತಿಕೂಲವೇ ಆಗುತ್ತದೆ. ವಾದ ಮಾಡುವಾಗ ಎರಡು ಪ್ರತಿಕೂಲ ಪರಿಣಾಮಗಳ ಮಧ್ಯೆ ಸಿಕ್ಕಿಕೊಂಡರೆ ನಾವು ಇರುಕಿನಲ್ಲಿದ್ದೇವೆ ಎಂದು ಹೇಳುವುದು ವಾಡಿಕೆ. ಉಭಯಸಂಕಟಕ್ಕೆ ಈಡುಮಾಡುವ ಇಂಥ ಪರಿಸ್ಥಿತಿಗೆ ಇಕ್ಕೋಡು ಎಂದು ಹೆಸರು. ಪ್ರತಿಕೂಲ ಪರಿಣಾಮಗಳನ್ನುಳ್ಳ ಎರಡು ಪಕ್ಷಗಳನ್ನು ಇಕ್ಕೋಡಿನ ಎರಡು ಕೋಡುಗಳು ಎನ್ನುತ್ತೇವೆ. ಜಟ್ಟಿ ಗೂಳಿಯೊಡನೆ ಗುದ್ದಾಡುವಾಗ ಒಂದು ಕೊಂಬಿನಿಂದ ತಪ್ಪಿಸಿಕೊಂಡರೂ ಇನ್ನೊಂದು ಕೊಂಬು ಜಟ್ಟಿಯನ್ನು ಇರಿಯಲು ಸಿದ್ಧವಾಗಿರುತ್ತದೆ. ಡೈಲೆಮ ಎಂಬ ಪದವನ್ನು ಗ್ರೀಕ್ ತಾರ್ಕಿಕರು ಗೂಳಿಕಾಳಗದ ಪರಿಭಾಷೆಯಿಂದ ತೆಗೆದುಕೊಂಡಿದ್ದಾರೆ. ಅದು ಈಗಲೂ ಬಳಕೆಯಲ್ಲಿದೆ.

ಇಕ್ಕೋಡಿನ ವಾದ ನಾಲ್ಕು ರೂಪಗಳನ್ನು ಪಡೆಯಬಹುದು: 1. ಸರಳ ವಿಧಿರೂಪ. 2. ಸರಳ ಪ್ರತಿಷೇಧ ರೂಪ. 3. ಸಂಕೀರ್ಣ ವಿಧಿರೂಪ. 4. ಸಂಕೀರ್ಣ ಪ್ರತಿಷೇಧ ರೂಪ: ಈ ನಾಲ್ಕಕ್ಕೂ ಇವು ಸಕ್ರಮ ಉದಾಹರಣೆಗಳು. 1. ಸ್ವಬುದ್ಧಿಯಿಂದ ಬಾಳಿದರೆ ಸ್ವಪ್ರತಿಷ್ಠೆಯವನೆಂದು ಜನ ಜರೆಯುತ್ತಾರೆ; ಇತರರ ಮಾತಿನಂತೆ ಬಾಳಿದರೆ ಬೆನ್ನೆಲುಬಿಲ್ಲದವನೆಂದು ಜರೆಯುತ್ತಾರೆ. ಒಬ್ಬ ಸ್ವಬುದ್ಧಿಯಿಂದ ಬಾಳಬೇಕು ಅಥವಾ ಇತರರ ಮಾತಿನಂತೆ ನಡೆಯಬೇಕು. ಹೇಗಾದರೂ ಜನ ಜರೆಯುತ್ತಾರೆ. 2. ಒಂದು ಪದಾರ್ಥ ಚಲಿಸಬೇಕಾದರೆ ಅದು ತಾನಿರುವ ಸ್ಥಳದಲ್ಲಿರಬೇಕು ಅಥವಾ ತಾನಿಲ್ಲದ ಸ್ಥಳದಲ್ಲಿರಬೇಕು. ಅದು ತಾನಿರುವ ಸ್ಥಳದಲ್ಲಿ ಚಲಿಸಲಾರದು. ತಾನಿಲ್ಲದಿರುವ ಸ್ಥಳದಲ್ಲೂ ಚಲಿಸಲಾರದು. ಆದ್ದರಿಂದ ಅದು ಚಲಿಸಲಾರದು. 3. ಪುಸ್ತಕಾಲಯದಲ್ಲಿರುವ ಪುಸ್ತಕಗಳು ಕುರಾನಿನ ತತ್ತ್ವಗಳನ್ನೇ ಒಳಗೊಂಡಿದ್ದರೆ ಅವು ಅನಾವಶ್ಯಕವಾದುವು; ಅವು ಕುರಾನಿಗೆ ವಿರುದ್ಧವಾಗಿದ್ದರೆ ದುಷ್ಟವಾದವು. ಅವು ಕುರಾನಿನಲ್ಲಿರುವ ತತ್ತ್ವಗಳನ್ನು ಒಳಗೊಂಡಿರಬೇಕು ಅಥವಾ ಅದಕ್ಕೆ ವಿರುದ್ಧವಾಗಿರಬೇಕು. ಆದ್ದರಿಂದ ಈ ಪುಸ್ತಕಗಳು ಅನಾವಶ್ಯಕವಾದವು ಅಥವಾ ದುಷ್ಟವಾದವು. 4. ಈ ಅಧಿಕಾರಿ ತನ್ನ ಕರ್ತವ್ಯವನ್ನು ಮಾಡಿದರೆ ನಿಬಂಧನೆಗಳಿಗೆ ವಿಧೇಯನಾಗಿರುತ್ತಾನೆ. ಬುದ್ಧಿವಂತನಾದರೆ ನಿಬಂಧನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಾನೆ. ಈತ ನಿಬಂಧನೆಗಳಿಗೆ ವಿಧೇಯನಾಗಿಲ್ಲ ಅಥವಾ ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಆದ್ದರಿಂದ ಈತ ತನ್ನ ಕರ್ತವ್ಯವನ್ನು ಮಾಡಿಲ್ಲ ಅಥವಾ ಈತ ಬುದ್ಧಿವಂತನಲ್ಲ.

ಇಕ್ಕೋಡಿನ ವಾದವನ್ನು ಪ್ರತಿವಾದಿಗೆ ದಿಗ್ಭ್ರಮೆ ಹುಟ್ಟಿಸಲು ಅಥವಾ ಅವನ ಕಣ್ಣಿಗೆ ಮಣ್ಣೆರಚಲು ಉಪಯೋಗಿಸುವುದೇ ಸಾಧಾರಣ. ಹಾಗೆ ಉಪಯೋಗಿಸಿದಾಗ ಈ ಮೂರರಲ್ಲಿ ಯಾವುದಾದರೂ ಲೋಪವಿರುತ್ತದೆ. (i) ಸಾಧ್ಯ ವಾಕ್ಯದಲ್ಲಿ ಎಲ್ಲ ಪಕ್ಷಗಳೂ ಪೂರ್ತಿಯಾಗಿ ಸೇರಿರುವುದಿಲ್ಲ; ಅಥವಾ (ii) ಎರಡು ಪಕ್ಷಗಳು ಒಂದನ್ನೊಂದು ಬಹಿಷ್ಕರಿಸುವುದಿಲ್ಲ; ಅಥವಾ (iii) ಪದಗಳು ಸಾಧ್ಯವಾಕ್ಯದಲ್ಲಿ ಒಂದು ಅರ್ಥದಲ್ಲೂ ಪಕ್ಷವಾಕ್ಯದಲ್ಲಿ ಬೇರೊಂದು ಅರ್ಥದಲ್ಲೂ ಉಪಯೋಗವಾಗಿರುತ್ತವೆ. ಇಂಥ ಸಂದರ್ಭಗಳಲ್ಲಿ ಪ್ರತಿವಾದಿಗೆ ಮೂರು ಮಾರ್ಗಗಳಿವೆ. ಮೊದಲನೆಯದಾಗಿ, ಈ ಎರಡನ್ನು ಬಿಟ್ಟು ಬೇರೆ ಪಕ್ಷಗಳಿವೆ ಎಂದು ತೋರಿಸಿ ಇಕ್ಕೋಡಿನ ಮಧ್ಯೆ ನುಸುಳಿಕೊಳ್ಳಬಹುದು. ಎರಡನೆಯದಾಗಿ, ಪಕ್ಷದ ಮೊದಲಿನ ಭಾಗಕ್ಕೂ ಎರಡನೆಯ ಭಾಗಕ್ಕೂ ನಿಕಟಸಂಬಂಧವಿಲ್ಲವೆಂದು ತೋರಿಸಿ ಕೊಂಬನ್ನು ಜಗ್ಗಿಸಿ ಊನಪಡಿಸಬಹುದು. ಮೂರನೆಯದಾಗಿ, ವಾದಿಯ ಕುತಂತ್ರವನ್ನೇ ತಿರುಮಂತ್ರವಾಗಿ ಉಪಯೋಗಿಸಿಕೊಂಡು ಅವನಿಗೆ ಅನಾನುಕೂಲವಾದ ಪ್ರತಿಸವಾಲು ಹಾಕಬಹುದು.

ಎಲ್ಲ ಇಕ್ಕೋಡಿನ ವಾದಗಳೂ ದೋಷಯುತವಾಗಿರಬೇಕಾದ್ದಿಲ್ಲ. ಮೇಲೆ ಹೇಳಿದ ದೋಷವಿಲ್ಲದ ಇಕ್ಕೋಡಿನ ವಾದವನ್ನು ರಚಿಸಬಹುದು. ದುಷ್ಟವಾದವನ್ನು ಮೂರು ಬಗೆಯಾಗಿ ಖಂಡಿಸಬಹುದು: (i) ಕೋಡುಗಳ ಮಧ್ಯೆ ನುಸುಳಿ ತಪ್ಪಿಸಿಕೊಳ್ಳುವುದು. ಇರುವ ಎರಡಲ್ಲದೆ ಮೂರನೆಯ ಪಕ್ಷ ಒಂದಿದೆ ಎಂದು ಸಾಧಿಸಿದಲ್ಲಿ ಈ ಕೆಲಸ ಸುಗಮವಾಗುತ್ತದೆ. (ii) ಕೋಡುಗಳನ್ನು ಜಗ್ಗಿಸಿ ಕಿತ್ತುಹಾಕುವುದು. ಎರಡು ಕೋಡುಗಳಿಗೂ ಪರಸ್ಪರ ಸಂಬಂಧವಿಲ್ಲವೆಂಬುದನ್ನು ಸಾಧಿಸಿದರೆ ಈ ಕೆಲಸ ಸುಲಭವಾಗುತ್ತದೆ. (iii) ಇರುವ ಇಕ್ಕೋಡನ್ನು ಹುಸಿಯೆನಿಸಲು ಬೇರೊಂದು ಇಕ್ಕೋಡನ್ನು ರಚಿಸುವುದು. (ಜಿ.ಎಚ್.)

**ಇಕ್ಟೈನಸ್:** ಪ್ರಾಚೀನ ಗ್ರೀಸಿನ ಒಬ್ಬ ಶಿಲ್ಪಿ. ಪ್ರ.ಶ.ಪೂ. 5ನೆಯ ಶತಮಾನದಲ್ಲಿದ್ದ. ಫಿಡಿಯಾಸ್ ಮತ್ತು ಪೆರಿಕ್ಲೀಸರ ಸಮಕಾಲೀನ (ನೋಡಿ– ಫಿಡಿಯಾಸ್; ಪೆರಿಕ್ಲೀಸ್) ಅಥೆನ್ಸ್ ನಗರದ ಅಕ್ರೊಪೊಲಿಸ್ ಮೇಲಿದ್ದ ಪಾರ್ಥೆನಾನ್ ಮಂದಿರ ಇವನ ಮತ್ತು ಕ್ಯಾಲಿಕ್ರೆಟೀಸ್‌ನ ಕಲ್ಪನೆ ಮತ್ತು ರಚನೆ. ಆರ್ಕೇಡಿಯಾದ ಬಸ್ಸೇ ಎಂಬಲ್ಲಿರುವ ಭವ್ಯ ಅಪೊಲೊ ಮಂದಿರವೂ ಈತನ ರಚನೆ. ಎಲ್ಯೂಸಿಸ್‌ನಲ್ಲಿ ಆಗಿನ ಪವಾಡನಾಟಕಗಳ ಪ್ರದರ್ಶನ ನಡೆಯುತ್ತಿದ್ದ ಡಿಮೀಟರ್ ಮತ್ತು ಪರ್ಸಿಫೊನೆ ಮಂದಿರವೂ ಇವನ ಕೃತಿಗಳು.

ಆಗ ಪ್ರಾಕಾರದಲ್ಲಿದ್ದ ಡೋರಿಕ್ ಶಿಲ್ಪಕಲಾ ವೈಭವಕ್ಕೆ ಸಾಕ್ಷಿಯಾಗಿ ಈಗಲೂ ಈ ಮಂದಿರಗಳ ಅವಶೇಷಗಳಿವೆ. ಕರ್ನಾಟಕದ ಜಕಣಾಚಾರಿಯಂತೆ ಈತನ ವಿಷಯವಾಗಿಯೂ ಜನಜನಿತವಾದ ಅನೇಕ ವದಂತಿಗಳಿವೆ. *

**ಇಕ್ತಿಯಾಲಜಿ: ನೋಡಿ–ಮತ್ಸ್ಯವಿಜ್ಞಾನ**

**ಇಕ್ತಿಯೊಪ್ಟೆರಿಜಿಯ:** ಮೀಸೋಜ಼ೋಯಿಕ್ ಯುಗದಲ್ಲಿ (65–225 ದಶಲಕ್ಷ ವರ್ಷ ಪ್ರಾಚೀನ ಕಾಲದಲ್ಲಿ) ಇದ್ದ ಗತವಂಶೀ ಸರೀಸೃಪಗಳ ಒಂದು ಉಪವರ್ಗ (ಸಬ್‌ಕ್ಲಾಸ್). ಈ ಉಪವರ್ಗದ ಪ್ರಾಣಿಗಳು ನೀರಿನಲ್ಲಿ ವಾಸಿಸುತ್ತಿದ್ದವು. ದೊರೆತಿರುವ ಪಳೆಯುಳಿಕೆಗಳ ಸಹಾಯದಿಂದ ಅವನ್ನು ಅಭ್ಯಸಿಸಲಾಗಿದೆ. ಇದರಲ್ಲಿ ಎರಡು ಗಣಗಳಿವೆ: 1. ಮೀಸೊಸಾರಿಯ. 2. ಇಕ್ತಿಯೋಸಾರಿಯ.

**ಮೀಸೊಸಾರಿಯ:** ಸರೀಸೃಪಗಳ ಗುಂಪಿನಲ್ಲಿ ಇವುಗಳ ಸ್ಥಾನ ಎಲ್ಲಿ ಏನು ಎಂದು ಖಚಿತವಾಗಿ ಇನ್ನೂ ಹೇಳಲಾಗುವುದಿಲ್ಲ. ಇವು ಕಾರ್ಬಾನಿಫೆರಸ್ ಕಾಲದ ಉತ್ತರಾರ್ಧದಲ್ಲಿ (280 ದಶಲಕ್ಷ ವರ್ಷಗಳ ಹಿಂದೆ) ಅಥವಾ ಪರ್ಮಿಯನ್ ಕಾಲದ ಆದಿಯಲ್ಲಿದ್ದವು ಎಂಬುದಕ್ಕೆ ಪಳೆಯುಳಿಕೆಗಳ ದಾಖಲೆ ಇದೆ. ಇವು ಸಿಹಿನೀರಿನ ಸರೋವರ ವಾಸಿಗಳು. ದೇಹ ತೆಳ್ಳಗಿದ್ದು ಸು.3 ಮೀ. ಉದ್ದವಾಗಿತ್ತು. ಹಿಂದಿನ ಕಾಲುಗಳು ಪ್ರಬಲವಾಗಿದ್ದವು. ಪಕ್ಕೆಗಳು ತೀರ ಉದ್ದವಾಗಿದ್ದುದರಿಂದ ಬಾಲ ಮೊಟಕಾಗಿತ್ತು.

**ಇಕ್ತಿಯೋಸಾರಿಯ:** ಟ್ರಯಾಸಿಕ್ ಕಾಲದಲ್ಲಿ ಕಾಣಿಸಿಕೊಂಡು ಜುರಾಸಿಕ್ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿದ್ದು (ಎಂದರೆ 225–175 ದಶಲಕ್ಷ ವರ್ಷಗಳ ಹಿಂದಿನ ಕಾಲ) ಕ್ರಿಟೇಷಿಯಸ್ ಕಾಲದ ಉತ್ತರಾರ್ಧದಲ್ಲಿ (65 ದಶಲಕ್ಷ ವರ್ಷಗಳ ಹಿಂದೆ) ಕಾಣೆಯಾದವು. ಇವು ಮೀನಿನಂತಿರುವ ಸಮುದ್ರ ಸರೀಸೃಪಗಳು. ಇವುಗಳ ತಲೆಬುರುಡೆಯ ನೆತ್ತಿ ಪ್ರದೇಶದ ಪಕ್ಕಗಳಲ್ಲಿ ಒಂದೊಂದು ಶೂನ್ಯ ಪ್ರದೇಶವಿತ್ತು. ಈ ಪ್ರಾಣಿಗಳು ಸು.10–12 ಮೀ ಉದ್ದವಾಗಿದ್ದವು. ತಲೆ ದಪ್ಪ, ಮುಸುಡಿ ಉದ್ದವಾಗಿ ಕೊಕ್ಕಿನ ರೀತಿಯಲ್ಲಿತ್ತು. ತಲೆ ಮತ್ತು ಮುಂಡಗಳ ನಡುವೆ ಕತ್ತು ಇರಲಿಲ್ಲ. ಇವುಗಳಿಗೆ ಉದ್ದವಾದ ಬಾಲವೂ ಮೇಲುರೆಕ್ಕೆಯೂ ಇದ್ದವು. ಕೈಕಾಲುಗಳು ಹುಟ್ಟುಗಳ ರೀತಿ. ಹಲ್ಲುಗಳು ಚೂಪು. ಕಣ್ಣುಗಳಲ್ಲಿ ಬಿಳಿಯ ಕಣ್ಣು ಪೊರೆಗಳಿದ್ದವು. ಇವು ಮೀನಿನಂತಿದ್ದುದರಿಂದ ದಡಕ್ಕೆ ಬಂದು ಮೊಟ್ಟೆಗಳನ್ನಿಡಲು ಆಗುತ್ತಿರಲಿಲ್ಲವೆಂದು ತೋರುತ್ತದೆ. ಭ್ರೂಣಗಳು ದೇಹದಲ್ಲಿ ಪಕ್ಕೆಲುಬುಗಳ ಮಧ್ಯೆ ಇದ್ದುದು ಪಳೆಯುಳಿಕೆಯಿಂದ ಗೊತ್ತಾಗಿದ್ದರೂ ಅವು ಮರಿಗಳನ್ನು ಹಾಕುತ್ತಿದ್ದುವೆಂಬುದಕ್ಕೆ ಖಚಿತವಾದ ಆಧಾರಗಳಿಲ್ಲ. ಈ ಪ್ರಾಣಿಗಳ ಪಿತೃಶ್ರೇಣಿಯ ಪ್ರಾಣಿಗಳು ಯಾವುವೆಂಬುದು ಖಚಿತವಾಗಿಲ್ಲ **(ನೋಡಿ– ಇಕ್ತಿಯೋಸಾರ್)**. (ಎನ್.ಬಿ.ಕೆ.)

**ಇಕ್ತಿಯೋಫಿಸ್: ನೋಡಿ– ಇತ್ತಲ–ಮಂಡಲ**

**ಇಕ್ತಿಯೋಸಾರ್:** ಮೀಸೊಜ಼ೋಯಿಕ್ ಕಲ್ಪದಲ್ಲಿ (65–225 ದಶಲಕ್ಷ ವರ್ಷಗಳ ಹಿಂದಿನ ಕಾಲ) ಇದ್ದ ಇಕ್ತಿಯೋಸಾರಿಯ ವರ್ಗಕ್ಕೆ ಸೇರಿದ, ಜಲವಾಸಿ ಸರೀಸೃಪ. ಇದರ ಜೀವಾವಶೇಷ ಮಾತ್ರ ಲಭ್ಯವಾಗಿದೆ. ಮೀಸೊಜ಼ೋಯಿಕ್ ಕಲ್ಪಕ್ಕೆ ಸರೀಸೃಪಗಳ ಕಾಲವೆಂದೂ ಹೆಸರಿದೆ. ಅಂದು ಈ ಪ್ರಾಣಿಗಳು ನೆಲದ ಒಡೆತನವನ್ನು ಹೊಂದಿದ್ದವು. ಅವುಗಳಿಗೆ ಸಮನಾಗಬಲ್ಲ ಬೇರೆ ಪ್ರಾಣಿಗಳೇ ಇರಲಿಲ್ಲ. ಕೆಲವು ಸರೀಸೃಪಗಳು ಜಲವಾಸಿಗಳಾದವು. ಅಂಥವುಗಳಲ್ಲಿ ಇಕ್ತಿಯೋಸಾರ್ ಒಂದು. ಆದರೆ ಇದಕ್ಕೆ ಮತ್ಸ್ಯ ಅಥವಾ ದ್ವಿಚರ ಪ್ರಾಣಿಗಳಿಗಿರುವಂಥ ಜಲವಾಸಕ್ಕೆ ಅನುಕೂಲವಾದ ಅಂಗಗಳು ಇರಲಿಲ್ಲ. ಆದ್ದರಿಂದ



ಇಕ್ತಿಯೋಸಾರ್

ಜಲವಾಸಕ್ಕೆ ತೆರಳಿದ ಸರೀಸೃಪಗಳು ಹೊಸ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಯಿತು. ಕೆಲವು ಸರೀಸೃಪಗಳು ತಮ್ಮ ದೇಹಗಳನ್ನು ಮತ್ಸ್ಯರೂಪಕ್ಕೆ ಅಳವಡಿಸಿಕೊಂಡವು. ಅವೇ ಇಕ್ತಿಯೋಸಾರ್ ಸರೀಸೃಪಗಳು.

ಇಕ್ತಿಯೋಸಾರಿನ ದೇಹ ಕದರಿ(ಸ್ಪಿಂಡಲ್)ನಾಕಾರದಲ್ಲಿತ್ತು. ಉದ್ದ 0.75ಮೀ. – 2ಮೀ.ವರೆಗೆ. ಅದು ತಲೆಯಿಂದ ಭುಜದವರೆಗೆ ಕ್ರಮೇಣ ದಪ್ಪವಾಗುತ್ತ ಅನಂತರ ಬಾಲದ ಕಡೆಗೆ ಕ್ರಮೇಣ ತೆಳುವಾಗುತ್ತ ಬಂದಿದೆ. ಅದರ ಉದ್ದವಾದ ದವಡೆಗಳಲ್ಲಿ ಅನೇಕ ಹಲ್ಲುಗಳಿದ್ದವು. ಹಲ್ಲಿನ ಮೇಲ್ಭಾಗ ಕ್ಲಿಷ್ಟರೀತಿಯ ಸುಕ್ಕುಗಳಿಂದ ಕೂಡಿತ್ತು. ಈ ಲಕ್ಷಣ ಕಾಟಿಲೋಸಾರ್ ಸರೀಸೃಪಗಳ ಸಂಬಂಧವನ್ನು ಸೂಚಿಸುತ್ತದೆ. ತಲೆ ಮತ್ತು ಮುಂಡಗಳ ಮಧ್ಯೆ ಸ್ಪಷ್ಟವಾಗಿ ಕುತ್ತಿಗೆಯೇನೂ ಇರಲಿಲ್ಲ. ಕಾಲುಗಳು ಹಲಗೆಯಾಕಾರದ ಈಜುರೆಕ್ಕೆಗಳಾಗಿ ಮಾರ್ಪಟ್ಟಿದ್ದವು. ಮುಂಡದ ಮೇಲ್ಭಾಗದಲ್ಲಿ ದೊಡ್ಡ ಮಾಂಸದಿಂದ ಕೂಡಿದ, ಆದರೆ ಎಲುಬುಗಳಿಲ್ಲದ ಈಜುರೆಕ್ಕೆ ಇತ್ತು. ಬಾಲದ ಈಜುರೆಕ್ಕೆ ಎರಡು ವಿಷಮಭಾಗಗಳಿಂದ ಕೂಡಿತ್ತು. ತಲೆಬುರುಡೆಯಲ್ಲಿ ಒಂದೇ ಒಂದು ಕಪೋಲರಂಧ್ರವಿತ್ತು. ಇದರ ಕೆಳಭಾಗದಲ್ಲಿ ಪೋಸ್ಟ್ ಫ್ರಾಂಟಲ್ ಮತ್ತು ಸುಪ್ರಟೆಂಪೊರಲ್ ಎಲುಬುಗಳಿದ್ದವು. ಬೆನ್ನೆಲುಬು ಅನೇಕ ಚಪ್ಪಟೆಯಾದ ಪರಸ್ಪರ ತಾಕು ಹಾಕಲ್ಪಟ್ಟ ಎಲುಬುಗಳಿಂದ ಕೂಡಿತ್ತು. ಈ ಎಲುಬುಗಳ ಮೇಲ್ಗಡೆ ನರಮುಳ್ಳುಗಳನ್ನು (ನ್ಯೂರಲ್ ಸ್ಪೈನ್ಸ್) ಹೊಂದಿದ್ದವು. ಬೆನ್ನೆಲುಬಿನ ಹಿಂಭಾಗದಲ್ಲಿ ತೀವ್ರವಾಗಿ ಬಗ್ಗಿ ಬಾಲದ ಈಜುರೆಕ್ಕೆಯೊಳಕ್ಕೆ ಮುಂದುವರಿದಿತ್ತು. ಇಕ್ತಿಯೋಸಾರಿನ ಅವಶೇಷ ಮೊದಲಬಾರಿಗೆ ಟ್ರೈಯಾಸಿಕ್ ಸ್ತರದ ಮಧ್ಯಭಾಗದಲ್ಲಿ ಸಿಕ್ಕಿದೆ. (190–225 ದಶಲಕ್ಷ ವರ್ಷಗಳ ಹಿಂದಿನ ಕಾಲ). ಟ್ರೈಯಾಸಿಕ್ ಕಾಲದ ಇಕ್ತಿಯೋಸಾರುಗಳು ಸರಳ ಮತ್ತು ಮೂಲರೂಪಪ್ರಕಾರಗಳು. ಅವುಗಳ ತಲೆಬುರುಡೆ ಉದ್ದವಾಗಿರಲಿಲ್ಲ; ಹಲಗೆಯಾಕಾರದ ಈಜುರೆಕ್ಕೆಗಳು ಅಗಲವಾಗಿರಲಿಲ್ಲ ಮತ್ತು ಬಾಲದ ರೆಕ್ಕೆಯೂ ದೊಡ್ಡದಾಗಿರಲಿಲ್ಲ. ಕ್ರಿಟೇಷಸ್ ಮತ್ತು ಜುರಾಸಿಕ್ ಯುಗಗಳಲ್ಲಿ (65–190 ದಶಲಕ್ಷ ವರ್ಷಗಳ ಹಿಂದಿನ ಕಾಲ) ಇವು ಹೆಚ್ಚು ಸಂಖ್ಯೆಯಲ್ಲಿದ್ದವು. ಇಕ್ತಿಯೋಸಾರುಗಳು ಕ್ಷಣಮಾತ್ರವೂ ನೆಲದ ಮೇಲೆ ಇರಲಾರದಷ್ಟು ಜಲವಾಸಕ್ಕೆ ಹೊಂದಿಕೊಂಡಿದ್ದವು. ಆದ್ದರಿಂದ ಮೊಟ್ಟೆಗಳನ್ನು ಮರಿಯಾಗುವವರೆಗೆ ಶರೀರದಲ್ಲೇ ಇಟ್ಟುಕೊಳ್ಳುವ ಸಾಧನಗಳನ್ನು ಹೊಂದಿದ್ದವು. ಅವುಗಳ ಅವಶೇಷಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸಿವೆ **(ನೋಡಿ– ಇಕ್ತಿಯೋಪ್ಟೆರಿಜಿಯ )**. (ಡಿ.ಆರ್.)

**ಇಕ್ನಾಟನ್: ನೋಡಿ–ಅಕ್ನಾಟನ್**

**ಇಕ್ನೂಮಾನ್ ನೊಣ:** ಹೈಮನಾಪ್ಟರ ಉಪವರ್ಗದ ಇಕ್ನೂಮಾನಿಡೀ ಕುಟುಂಬಕ್ಕೆ ಸೇರಿದ ಕೀಟಗಳು. ಪ್ರಪಂಚದ ಎಲ್ಲೆಡೆಯೂ ಇವೆ. ಲೆಪಿಡಾಪ್ಟರ ಅಥವಾ ಇತರ ಉಪವರ್ಗದ ಕೀಟಗಳ ದೇಹಗಳೊಳಗೆ ಉಪಜೀವಿಗಳಾಗಿ ಡಿಂಭಾವಸ್ಥೆಯನ್ನು ಕಳೆಯುತ್ತವೆ. ಡಿಂಭಗಳು ಲೆಕ್ಕವಿಲ್ಲದಷ್ಟು ಕಂಬಳಿಹುಳುಗಳನ್ನು ನಾಶಮಾಡಬಲ್ಲವು. ಅಲ್ಲದೆ ಅನೇಕ ವೇಳೆ ಜೇಡಗಳನ್ನೂ



ಇಕ್ನೂಮಾನ್ ನೊಣ

ತಿಂದುಹಾಕುತ್ತವೆ. ಸದಾ ಅದುರುತ್ತಿರುವ ತಂತುರೂಪದ ಕುಡಿ ಮೀಸೆಗಳು ಈ ನೊಣದ ವೈಶಿಷ್ಟ್ಯ. ಮೆಗಾರಿಸ ಮತ್ತು ತಾಲೆಸ ಜಾತಿಯ ಹೆಣ್ಣು ಇಕ್ನೂಮಾನ್ ನೊಣಗಳಿಗೆ 7-10ಸೆಂಮೀ ಅಥವಾ ಉದ್ದದ ಮೊಟ್ಟೆಗಳನ್ನು ಸಾಗಿಸುವ ಚೂಪು ನಾಳಾಂಗವಿದೆ (ಓವಿಪಾಸಿಟರ್). ಪೋಷಕ ಜೀವಿಯ ದೇಹವನ್ನು ನಾಳಾಂಗದ ಸಹಾಯದಿಂದ ಕೊರೆದು ನೊಣ ಮೊಟ್ಟೆಗಳನ್ನಿಡುವುದು. ಬ್ರಿಟನ್ನಿನ ಪೀಜ಼ೋಮೇಕಸ್ ಎಂಬುದು ರೆಕ್ಕೆಗಳಿಲ್ಲದ ಇರುವೆಯನ್ನು ಹೋಲುತ್ತದೆ. ಆರ್ಜಿಯೊಟೈಪಸ್ ಆರ್ಮೇಟಸ್ ಎಂಬ ಇಕ್ನೂಮಾನ್ ನೊಣಗಳು ನೀರಿನಲ್ಲಿ ಮುಳುಗಿ ಟ್ರೈಕಾಪ್ಟರ ಕೀಟದ ಡಿಂಭಗಳಲ್ಲಿ ಮೊಟ್ಟೆಯಿಡುತ್ತವೆ.(ಟಿ.ಎ.ಆರ್.)

**ಇಕ್ಷ್ವಾಕು ರಾಜರು:** ಉತ್ತರಭಾರತದಿಂದ ದಕ್ಷಿಣದೇಶಕ್ಕೆ ವಲಸೆ ಬಂದು ಇಲ್ಲಿ ರಾಜ್ಯಗಳನ್ನು ಕಟ್ಟಿದ ಮತ್ಸ್ಯ, ಕೇಕಯ ಮುಂತಾದ ಅರಸುಮನೆತನಗಳಲ್ಲಿ ಒಂದು. ಮನುವಿನ ಮಗ ಇಕ್ಷ್ವಾಕು ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯ ಕಟ್ಟಿದ. ಪುರಾಣಗಳಲ್ಲಿ ಮಾತ್ರವಲ್ಲದೆ ಪಾಳಿವಾಙ್ಮಯದಲ್ಲಿ ಮತ್ತು ಜಾತಕ ಕಥೆಗಳಲ್ಲಿ, ಇಕ್ಷ್ವಾಕುವಿನ (ಒಕ್ಕಾಕ) ಉಲ್ಲೇಖ ಬರುತ್ತದೆ. ಈತ ಐತಿಹಾಸಿಕ ವ್ಯಕ್ತಿಯೆಂಬುದು ನಿಜ. ಆದರೆ ಇವನಿಗೆ ನೂರು ಮಕ್ಕಳಿದ್ದರೆಂದೂ ವಿಕುಕ್ಷಿಯೆಂಬ ಔರಸಪುತ್ರ ತಂದೆಯ ಅನಂತರ ಅಯೋಧ್ಯಾಪತಿಯಾದನೆಂದೂ ಉಳಿದವರು ನೆರೆಪ್ರಾಂತ್ಯಗಳಿಗೆ ತೆರಳಿ ಅಲ್ಲಲ್ಲಿ ಸಣ್ಣ ರಾಜ್ಯಗಳನ್ನು ಸ್ಥಾಪಿಸಿದರೆಂದೂ ಉಲ್ಲೇಖವಿದೆ. ಅದರಲ್ಲಿ ಹಲವರು ದಕ್ಷಿಣಾಪಥಕ್ಕೂ ಬಂದರಂತೆ. ಕುಶನೆಂಬ ಇಕ್ಷ್ವಾಕುಪುತ್ರ ದಕ್ಷಿಣ ಕೋಸಲವೆಂಬ ಹೆಸರಿನ ರಾಜ್ಯವೊಂದನ್ನು ಕಟ್ಟಿದನೆಂದೂ ಅದಕ್ಕೆ ಕುಶಸ್ಥಲಿಯೆಂಬ ಹೆಸರು ಬಂತೆಂದೂ ವಿಷ್ಣುಪುರಾಣ ಹೇಳುತ್ತದೆ. ಇವರಲ್ಲಿ ಹಲವಾರು ಮಂದಿ ದಕ್ಷಿಣಪ್ರಾಂತ್ಯಗಳಲ್ಲಿ ನೆಲೆಯೂರಿ ಪ್ರಸಿದ್ಧರಾಗಿದ್ದಾರೆ. ಗೋದಾವರೀ ತೀರದಲ್ಲಿ ರಾಜ್ಯಗಳನ್ನು ಕಟ್ಟಿದ ಅಶ್ಮಕ, ಮುಲಕ ಮುಂತಾದವರೆಲ್ಲ ಈ ವಂಶದವರು. ಅಂಗದೇಶದ ಕಡೆಯಿಂದ ವೆಂಗಿನಾಡಿಗೆ ಬಂದು ನೆಲೆಸಿದ ಯಶೋಧರನೂ ಈ ವಂಶದವ. ಈತ ಜೈನತೀರ್ಥಂಕರ ವಾಸುಪೂಜ್ಯನ ಕಾಲದಲ್ಲಿದ್ದವನೆಂದು ಪ್ರತೀತಿ.

ಈತ ಅಲ್ಲಿ ಕಟ್ಟಿದ ಪ್ರತಿಪಾಲಪುರವೆಂಬುದು ಈಗ ಭಟ್ಟಿಪ್ರೋಲು ಎಂಬ ಆಂಧ್ರನಗರಿಯಾಗಿದೆ. ಇವನ ವಿಚಾರ ನಯಸೇನನ ಧರ್ಮಾಮೃತದಲ್ಲಿ ಬರುತ್ತದೆ. ಅಂತೂ ಇಕ್ಷ್ವಾಕುಗಳಿಗೂ ದಕ್ಷಿಣ ದೇಶಕ್ಕೂ ತುಂಬ ಪ್ರಾಚೀನ ಸಂಬಂಧವಿರುವುದು ವ್ಯಕ್ತವಾಗುತ್ತದೆ.

ಈಗಿನ ನಾಗಾರ್ಜುನಕೊಂಡವನ್ನೊಳಗೊಂಡು ಕೃಷ್ಣಾನದೀತೀರದಲ್ಲಿ ಕರ್ನೂಲು ಜಿಲ್ಲೆಯವರೆಗೆ ವ್ಯಾಪಿಸಿರುವ ಶ್ರೀಪರ್ವತ ಇವರ ಕೇಂದ್ರ ಸ್ಥಳ. ಇದರಿಂದಾಗಿ ಈ ರಾಜರಿಗೆ ಶ್ರೀಪರ್ವತೀಯಾಂಧ್ರರೆಂಬ ಹೆಸರೂ ಇತ್ತು. ಚಾರಿತ್ರಿಕವಾಗಿ ಇವರು ಪ್ರಬಲರಾಗುವ ಮುಂಚೆ ಸಾತವಾಹನರು ಈ ಪ್ರದೇಶದ ಅಧಿಪತಿಗಳಾಗಿದ್ದರು. ರಾಯಸೀಮುಕ (ಸಿಂಧುಕ) ಸಾತವಾಹನನ ಕಾಲದಿಂದ ನಾಲ್ಕನೆಯ ಪುಲೋಮಾವಿಯವರೆಗೆ ಈ ವಂಶದಲ್ಲಿ ಬಂದ ಅರಸರ ಉಲ್ಲೇಖ ವಾಯುಪುರಾಣ, ಮತ್ಸ್ಯಪುರಾಣಗಳಲ್ಲಿ ಬರುತ್ತದೆ. 128ರ ಸುಮಾರಿಗೆ ಪ್ರಸಿದ್ಧನಾಗಿದ್ದ ಗೌತಮೀಪುತ್ರ–ಯಜ್ಞಶ್ರೀ–ಶಾತಕರ್ಣಿಯ ಅನಂತರ ಸಾತವಾಹನರ ಬಲ ಕುಗ್ಗಿತು. ಅವರ ಸಾಮಂತರಾಗಿದ್ದ ಅಭೀರರೂ ಇಕ್ಷ್ವಾಕುಗಳೂ ಪ್ರಬಲರಾದರು. ಸಾತವಾಹನ ಸಾಮ್ರಾಜ್ಯ ಶಿಥಿಲವಾಯಿತು. ಇಕ್ಷ್ವಾಕುಗಳು ಅವರ ಸಾಮಂತರಾಗಿದ್ದರೆಂದೂ ದಂಡನಾಯಕರಾಗಿದ್ದರೆಂದೂ ಮತಭೇದವಿದೆ. ಸಾತವಾಹನರಾಜರು ದುರ್ಬಲರೆಂದು ತೋರಿದೊಡನೆ ಇವರು ಧಾನ್ಯಕಟಕವೆಂಬ ಪ್ರದೇಶವನ್ನು ಆಕ್ರಮಿಸಿಕೊಂಡು ತಮ್ಮದೇ ರಾಜ್ಯವನ್ನು ಕಟ್ಟಿದರು. ಇದು 2ನೆಯ ಶತಮಾನದ ಪರಾರ್ಧದ ಮಾತು.

ಇವರ ವಿಚಾರ ಜಗ್ಗಯ್ಯಪೇಟೆಯಲ್ಲಿ ದೊರೆತಿರುವ ಶಾಸನವೊಂದರಿಂದ ತಿಳಿಯುತ್ತದೆ. ಇದರ ಭಾಷೆ ಪ್ರಾಕೃತ, ಲಿಪಿ ಬ್ರಾಹ್ಮೀ. ಈ ಶಾಸನದಲ್ಲಿ ಮೂವರು ರಾಜರ ಉಲ್ಲೇಖವಿದೆ; ಕ್ಷಾಂತಮೂಲ (ಚಾಂತಮೂಲ), ವೀರಪುರುಷದತ್ತ (ವೀರಪುರಿಸದತ) ಮತ್ತು ಎಹುವಲ ಕ್ಷಾಂತಮೂಲ. ಕ್ಷಾಂತಮೂಲ ಎನ್ನುವುದು ಪ್ರಾಕೃತದಲ್ಲಿ ಚಾಂತಮೂಲವಾಗುತ್ತದೆ. ಇವರ ರಾಜಧಾನಿಯಾಗಿದ್ದ ವಿಜಯಪುರಿ ಶ್ರೀಪರ್ವತಪ್ರದೇಶದಲ್ಲೇ ಇತ್ತು. ಸಾತವಾಹನರಂತೆ ಇವರೂ ಅಶ್ವಮೇಧಯಾಗ ಮಾಡಿ ವಿಖ್ಯಾತರಾದರು. ಕ್ಷಾಂತಮೂಲನೇ ಶ್ರೀಪರ್ವತದಲ್ಲಿ ಇಕ್ಷ್ವಾಕುವಂಶದ ರಾಜ್ಯ ಕಟ್ಟಿದವ. ಈತ ಮೊದಲಿಗೆ ಆಂಧ್ರ ಸಾತವಾಹನರ ಬಳಿ ಊಳಿಗದಲ್ಲಿದ್ದುದರಿಂದ ಈ ಮನೆತನದವರಿಗೆ ಆಂಧ್ರಭೃತ್ಯರೆಂಬ (ಆಂಧ್ರಸಾತವಾಹನಭೃತ್ಯ) ಹೆಸರು ಕೂಡ ಬಳಕೆಯಲ್ಲಿತ್ತು. ಕ್ಷಾಂತಮೂಲ ಸ್ವತಂತ್ರನಾಗಿ ರಾಜ್ಯವಾಳಲು ಮೊದಲಿಟ್ಟ ಅನಂತರ ವಾಸಿಷ್ಠೀಪುತ್ರ ಶ್ರೀಕ್ಷಾಂತಮೂಲನೆಂದು ತನ್ನನ್ನು ಕರೆದುಕೊಂಡ. ಮೇಲಿನ ಶಾಸನದಲ್ಲಿ ವಾಸಿಷ್ಠೀಸುತ ಸಿರಿ ಚಾಂತಮೂಲನೆಂದು ಪ್ರಸ್ತಾಪವಿದೆ. ಆತನ ತಾಯಿ ವಾಸಿಷ್ಠಿ. ತಾಯಿಯ ಮಗನೆಂದು ವ್ಯವಹರಿಸಿಕೊಳ್ಳುವ ಪದ್ಧತಿ ಆ ಕಾಲಕ್ಕೆ ಪ್ರಚುರವಾಗಿತ್ತು. ತಂದೆಯ ಹೆಸರು ಉಪಲಬ್ಧವಿಲ್ಲ.

ಇವನ ಮನೆದೇವರು ಸ್ಕಂದ (ಮಹಾಸೇನ). ಈತ ವೈದಿಕ ಸಂಪ್ರದಾಯದಲ್ಲಿ ಶ್ರದ್ಧೆಯಿದ್ದವ. ಆದ್ದರಿಂದಲೇ ಅಶ್ವಮೇಧ, ವಾಜಪೇಯ, ಅಗ್ನಿಷ್ಟೋಮ ಯಾಗಗಳನ್ನು ಮಾಡಿದ. ಈ ಯಾಗಗಳನ್ನು ಮಾಡಿದುದು ಈತ ಮಹಾಬಲಿಷ್ಠನಾಗಿದ್ದನೆಂದೂ ರಾಜ್ಯ ವೈಭವಸಂಪನ್ನವಾಗಿದ್ದಿತೆಂದೂ ಸೂಚಿಸುತ್ತದೆ. ಅಧಿಕವಾದ ಸಂಪತ್ತನ್ನು ಮುಕ್ತಹಸ್ತದಿಂದ ದಾನ ಮಾಡಿದನೆಂದು ಪ್ರತೀತಿ.

ಇವನಿಗೆ ಮಾಢರಿಯೆಂಬ ಹೆಂಡತಿ ಇದ್ದಳು. ಮಗ ವೀರಪುರುಷದತ್ತ (ವೀರಪುಸದತ–ಮಾಡರೀಪುತ್ರ) ಮುಂದೆ ಉತ್ತರಾಧಿಕಾರಿಯಾದ. ಮಗಳು ಅಟವಿ ಶಾಂತಿಶ್ರೀ; ಆಕೆಯ ಗಂಡ ಸ್ಕಂದವಿಶಾಖ (ಖಂಡವಿಸಾಖಣಕ) ಕ್ಷಾಂತಮೂಲನ ದಂಡನಾಯಕನಾಗಿದ್ದ. ಕ್ಷಾಂತಮೂಲನ ತಂಗಿ ಹರ್ಮ್ಯಶ್ರೀಯ (ಹಮ್ಮಸಿರಿ) ಇಬ್ಬರು ಮಕ್ಕಳನ್ನೂ (ವಾಪಿಶ್ರೀ–ಬಾವಿಸಿರಿ, ಷಷ್ಠಿಶ್ರೀ–ಚಡಿಸಿರಿ) ಮಗ ವೀರ ಪುರುಷನಿಗೇ ತಂದುಕೊಂಡು ವಿವಾಹಮಾಡಿದ. ಸೋದರಿಕೆಯಲ್ಲಿ ವಿವಾಹ ಮಾಡಿಕೊಳ್ಳುವ ಸಂಪ್ರದಾಯ ಆಗಲೇ ಪ್ರಚಲಿತವಾಗಿದ್ದಂತೆ ತೋರುತ್ತದೆ. ಸೋದರಮಾವನ ಮಗಳನ್ನು ಮದುವೆಯಾಗುವುದು ಕನ್ನಡನಾಡಿನಲ್ಲೂ ತೆಲುಗು ದೇಶದಲ್ಲೂ ಪ್ರಚಲಿತವಾಗಿದೆ. ಇವನ ಇನ್ನೊಬ್ಬ ತಂಗಿ ಶಾಂತಿಶ್ರೀಯ (ಚಾಂತಿಸಿರಿ) ಗಂಡ ವಾಸಿಷ್ಠೀಪುತ್ರಸ್ಕಂದಶ್ರೀ ಈವಾಸಿರೀಪುತಖಂದಸಿರಿ) ಅದೇ ರಾಜ್ಯದ ಮಹಾ ಸಾಮಂತನಾಗಿದ್ದ.

ಎರಡನೆಯ ಇಕ್ಷ್ವಾಕುರಾಜನಾದ ವೀರಪುರುಷದತ್ತ ಏನಿಲ್ಲವೆಂದರೂ 20 ವರ್ಷಗಳ ಕಾಲ ರಾಜ್ಯವಾಳಿದ. ಈ ಅವಧಿಯಲ್ಲಿ ಸಿದ್ಧವಾದ ಪ್ರಾಕೃತ ಶಾಸನಗಳು ದೊರೆತಿವೆ. ವೀರಪುರುಷದತ್ತ ನೆರೆರಾಜ್ಯಗಳ ಸ್ನೇಹಗಳಿಸಿ ಉಳಿಸಿಕೊಳ್ಳಲು ಆ ರಾಜ್ಯಗಳ ರಾಜಪುತ್ರಿಯ ರನ್ನು ಮದುವೆಯಾದ. ಅವನ ರಾಣಿಯರಲ್ಲಿ ಒಬ್ಬಳಾದ ರುದ್ರಧರ ಭಟ್ಟಾರಿಕೆ ಉಜ್ಜಯಿನಿಯ ಅರಸುಕುವರಿ, ಚಷ್ಟನನೆಂಬ ಶಕರಾಜನ ಮಗಳು. ಈ ಚಷ್ಟನವಂಶದವರೇ ಆದ ಶಕಕ್ಷತ್ರಪರು ಪಶ್ಚಿಮ ಭಾರತದ ಅರಸರಾಗಿದ್ದರು. ಇವರೂ ಮೊದಲು ಸಾತವಾಹನರಾಜರ ಸಾಮಂತರಾಗಿ ದ್ದರು. ಅವರ ಅನಂತರ ಸ್ವತಂತ್ರರಾದರು.

ವೀರಪುರುಷದತ್ತನ ಮಗ ಎಹುವುಲ ಕ್ಷಾಂತಮೂಲ, ಮಗಳು ಕೊಡಬಲಿಸಿರಿ. ಎಹುವುಲ ಸು.11 ವರ್ಷಗಳ ಕಾಲ ರಾಜ್ಯವಾಳಿದಂತೆ ತೋರುತ್ತದೆ. ಅವನ ತಂಗಿ ಕೊಡಬಲಿಸಿರಿಯನ್ನು ಕನ್ನಡದ ಬನವಾಸಿಯ (ವೈಜಯಂತಿ) ರಾಜ ಕೈಹಿಡಿದ. ಬನವಾಸಿಯ ರಾಜರೂ ಚಷ್ಟನರಂತೆ ಇಕ್ಷ್ವಾಕುಗಳಂತೆ ಸಾತವಾಹನರಾಜರ ಸಾಮಂತರಾಗಿದ್ದು ಸಾತವಾಹನರ ಸಾಮ್ರಾಜ್ಯ ಶಿಥಿಲವಾದ ಅನಂತರ ಸ್ವತಂತ್ರರಾಜ್ಯ ಕಟ್ಟಿದರು. ಆಂಧ್ರದ ಇಕ್ಷ್ವಾಕುರಾಜರಿಗೂ ಕನ್ನಡನಾಡಿನ ಬನವಾಸಿರಾಜರಿಗೂ ಬಾಂಧವ್ಯವಿತ್ತು.

ಎಹುವುಲ ಕ್ಷಾಂತಮೂಲನ ಮಗ ಪುರುಷದತ್ತ. ಇವನ ಕಾಲದ ಶಾಸನ ಗುಂಟೂರು ಜಿಲ್ಲೆಯ ಗುರುಜಾಲದಲ್ಲಿ ದೊರಕಿದೆ. ಇದರಲ್ಲಿ ರಾಜನನ್ನು ಪ್ರಾಕೃತದ ರುಖುಪುರಿಸದ–ಎಂಬ ಹೆಸರಿನಿಂದ ಸಂಬೋಧಿಸಿದ್ದಾರೆ. ಇವನಿಗೆ ರುದ್ರಪುರುಷದತ್ತನೆಂಬ ಹೆಸರು ಇದ್ದಿತೆಂದು ತಿಳಿದುಬರುತ್ತದೆ. ಬಹುಶಃ ಉಜ್ಜಯಿನಿಯ ರುದ್ರಧರಭಟ್ಟಾರಿಕೆಯ ಮಗನಿದ್ದಿರಬಹುದು. ಇವನಿಗೆ ಬೌದ್ಧಧರ್ಮದಲ್ಲಿ ಅನುರಕ್ತಿಯಿದ್ದಿತೆಂದು ತಿಳಿದುಬರುತ್ತದೆ. ಹಲಂಪುರದ ನೊದುಕಸಿರಿಯೆಂಬ ದೇವರಿಗೆ ಭೂಮಿಯನ್ನು ಉಂಬಳಿಯಾಗಿ ಕೊಟ್ಟಿದ್ದ. ಹಲಂಪುರ ವೆಂಬುದು ಈಗ ರಾಯಚೂರು ಜಿಲ್ಲೆಯಲ್ಲಿರುವ ಅಲಂಪೂರವೆಂಬ ಊರೆಂದೂ ನಾಗಾರ್ಜುನಕೊಂಡದ ಬಳಿಯಿರುವ ನಾಗುಲವರವೇ ಇದೆಂದೂ ಎರಡು ಮತಗಳಿವೆ (ಹಲ ಎಂದರೆ ನೇಗಿಲು, ತೆಲುಗಿನಲ್ಲಿ ನಾಗುಲ). ಇವನ ಆಸಕ್ತಿಯಿಂದಲೇ ನಾಗಾರ್ಜುನ ಕೊಂಡದ ಸ್ತೂಪ ವಿಸ್ತರಿಸಿ ಇಡೀ ದೇಶದಲ್ಲಿ ಪ್ರಸಿದ್ಧವಾಯಿತು. ಈ ವಂಶದ ರಾಜರು ವೈದಿಕ ಸಂಪ್ರದಾಯದವರಾದರೂ ಬೌದ್ಧಧರ್ಮವನ್ನು ಪುರಸ್ಕರಿಸಿದ್ದರು. ಇವರ ಆಡಳಿತದ ಅವಧಿಯಲ್ಲೇ ಧಾನ್ಯಕಟಕ ಮತ್ತು ನಾಗಾರ್ಜುನಕೊಂಡ ವಿದ್ಯಾಪೀಠಗಳು ಪ್ರಸಿದ್ಧ ಬೌದ್ಧಕ್ಷೇತ್ರಗಳಾದವು. ಇಲ್ಲಿಂದ ವಿದ್ಯಾರ್ಥಿಗಳು ನಾಡಿನಾದ್ಯಂತ ಹರಡಿದರು. ಇಲ್ಲಿಂದಲೇ ಬೌದ್ಧಧರ್ಮ ಬನವಾಸಿಗೆ ಹರಡಿತು; ಕನ್ನಡನಾಡಿನಲ್ಲಿ ಬೌದ್ಧಮತದ ಏಳಿಗೆಗೆ ಈ ಮನೆತನದ ಅರಸರ, ಅದೂ ಪುರುಷದತ್ತನ ಬೆಂಬಲವೇ ಕಾರಣ. ನಾಗಾರ್ಜುನಕೊಂಡದ ಸ್ತೂಪ–ವಿಹಾರಗಳನ್ನು ಬಿಟ್ಟು ಈ ಪ್ರದೇಶದಲ್ಲಿರುವ ಉಳಿದ ಹಲವಾರು ಬೌದ್ಧವಾಸ್ತುಶಿಲ್ಪಗಳೂ ಇವರ ಕಾಲದ್ದೇ. ಈ ಕಾಲದ ಶಾಸನವೆಲ್ಲ ಬೌದ್ಧವಿಹಾರಸ್ತೂಪಗಳ ನಿರ್ಮಾಣ, ದಾನಗಳಿಗೇ ಸಂಬಂಧಿಸಿದ್ದು.

ಪುರುಷದತ್ತನ ಅನಂತರ ಬಂದ ರಾಜರು ಯಾರೋ ತಿಳಿಯದು. ಪ್ರಾಯಶಃ ಇವನೇ ಕಡೆಯವನಿರಬಹುದು. 3–4ನೆಯ ಶತಮಾನದ ಸುಮಾರಿಗೆ ಇವರ ವಂಶ ಕೊನೆಗೊಂಡಂತೆ ತೋರುತ್ತದೆ. ಆಗಲೇ ಪಲ್ಲವರು ಬಲವಾಗುತ್ತಿದ್ದರು. ಅವರ ಪ್ರಾಬಲ್ಯವೂ ಇಕ್ಷ್ವಾಕುಗಳ ಅವನತಿಗೆ ಕಾರಣವಿದ್ದಿರಬಹುದು. ಪಲ್ಲವಸಿಂಹವರ್ಮನ ಅನಂತರ ಆಳಿದ ಯುವಮಹಾರಾಜ ಸ್ಕಂದವರ್ಮನ ಕಾಲಕ್ಕೆ ಇಕ್ಷ್ವಾಕು ಅರಸರ ಕೇಂದ್ರವಾಗಿದ್ದ ಗುಂಟೂರು ಜಿಲ್ಲೆ ಪಲ್ಲವರ ಅಧೀನದಲ್ಲಿತ್ತೆಂದು ಮೈದವೋಲುಶಾಸನ ತಿಳಿಸುತ್ತದೆ. ಕೃಷ್ಣಾನದಿಯ ಉತ್ತರದಲ್ಲಿ ಇಕ್ಷ್ವಾಕುಗಳ ಅನಂತರ ಬೃಹತ್ಫಲಾಯನಸ ಗೋತ್ರದ ಅರಸರು ತಲೆಯೆತ್ತಿ ನಿಂತರು. ಇಕ್ಷ್ವಾಕುಗಳ ಸಾಮಂತರಾಗಿದ್ದ ಪೂಗಿಯರು, ಧನಕರು, ಕುಲಹಕರು ಹಿರಣ್ಯಕರು ಎಲ್ಲರೂ ತಮ್ಮ ತಮ್ಮ ಪ್ರದೇಶಗಳಲ್ಲಿ ಸ್ವತಂತ್ರ ರಾಜ್ಯಗಳನ್ನು ಕಟ್ಟಿದರು. (ಎಸ್.ಕೆ.ಆರ್.)

**ಇಕ್ಸಿಯ:** ಇರಿಡೇಯೇಸೀ ಕುಟುಂಬದ ಒಂದು ಜಾತಿಯ ಹೂ ಬಿಡುವ ಲಶುನ ಸಸ್ಯ. ಕಾರನ್ ಲಿಲ್ಲಿ ಎಂಬುದು ಇದರ ಸಾಮಾನ್ಯ ಇಂಗ್ಲಿಷ್ ಹೆಸರು. ಸಸ್ಯದ ತುದಿಯಲ್ಲಿ ಬಿಟ್ಟಿರುವ ಗಾಜಿನಂಥ ಎಲೆಗಳು ಸಸ್ಯಕ್ಕೆ ಅಂದವನ್ನು ಕೊಟ್ಟು ಆಕರ್ಷಕವನ್ನಾಗಿ ಮಾಡುತ್ತವೆ.

ಕುಂಡ ಸಸ್ಯ ಮತ್ತು ಮಡಿಸಸ್ಯವಾಗಿ ಇದನ್ನು ಬೆಳೆಸುತ್ತಾರೆ. ಇಕ್ಸಿಯ ಹೂಗಳನ್ನು ಹೂದಾನಿಯ ಅಲಂಕಾರಕ್ಕಾಗಿ ಉಪಯೋಗಿಸುವುದುಂಟು. ಇಕ್ಸಿಯ ಜಾತಿಯಲ್ಲಿ ಆಫ್ರಿಕ ಮೂಲನಿವಾಸಿಗ ಳಾದ ಸುಮಾರು 25 ಪ್ರಭೇದಗಳಿವೆ. ಈ ಸಸ್ಯದ ಕುಬ್ಜಕಾಂಡ ಆಕಾರದಲ್ಲಿ ಗುಂಡು; ಪದರ ಪದರವಾಗಿದ್ದು ಮೇಲುಭಾಗ ನಾರಿನಿಂದ ಕೂಡಿದೆ. ಎಲೆ ಸರಳ. ನೀಳಾಕಾರ; ನಯವಾದ ಅಂಚು. ಮೊನಚು ತುದಿ; ಗಾಜಿನಂತೆ ಹೊಳೆಯುತ್ತದೆ. ನೇರವಾಗಿ ನಿಂತಿರುವ ಹೂಗೊಂಚಲು ಅಂತ್ಯಾರಂಭಿ ಅಥವಾ ಸ್ಪೈಕ್ ಮಾದರಿ ಯದು. ಆದರೆ ಕೆಲವು ಪ್ರಭೇದದ ಸಸ್ಯಗಳಲ್ಲಿ ಹೂಗೊಂ ಚಲು ಕವಲೊಡೆದಿರುತ್ತದೆ. ಹೂವು ಆಲಿಕೆಯಾಕಾರ, ಕೂಡುದಳದ ಹೊರಭಾಗ 6; ಹೂವಿನ ಬಣ್ಣಪ್ರಭೇದಕ್ಕೆ ಅನುಗುಣವಾಗಿ ಬಿಳುಪು, ಹಳದಿ, ಕಿತ್ತಲೆ, ಊದಾ, ನಸುಗೆಂಪು, ಕೆಂಪು, ವಿರಳವಾಗಿ ಹಸಿರು, ಕೇಸರಗಳು 3; ಇವುಗಳ ಬುಡಗಳು ಹೂಗಂಟಲಿಗೆ ಅಂಟಿಕೊಂಡಿವೆ; ಕೇಸರ ಶಲಾಕೆ ಬಿಡಿಯಾಗಿದೆ. ಅಂಡಾಶಯ ಆಯತಾಕಾರ, ಮೂರು ಕೋಶದ್ದಾಗಿದ್ದು ಬಹುಬೀಜಗಳಿಂದ ಕೂಡಿದೆ. ಕ್ಯಾಪ್‌ಸೂಲ್ ಮಾದರಿಯ ಹಣ್ಣು; ಇದು ಮೂರು ಭಾಗವಾಗಿದೆ; ಇದಕ್ಕೆ ರೆಕ್ಕೆ ಇದೆ.

ಇಕ್ಸಿಯದ ಮೂರು ಪ್ರಭೇದಗಳು ಉದ್ಯಾನಗಾರಿಕೆ ದೃಷ್ಟಿಯಿಂದ ಮುಖ್ಯವಾದುವು. ಈ ಮೂರು ಪ್ರಭೇದಗಳಲ್ಲಿ ಅನೇಕ ವಿಧವಾದ ಬಣ್ಣಗಳಲ್ಲಿ ಹೂ ಬಿಡುವ ತಳಿಗಳು ಬೇಸಾಯದಲ್ಲಿವೆ. (ಡಿ.ಎಂ.)

**ಇಕ್ಸೋರ:** ರೂಬಿಯೇಸಿ ಕುಟುಂಬದ 150 ಜಾತಿಗಳಲ್ಲಿ ಒಂದು. ಹೂ ಬಿಡುವ ಪೊದೆ ಸಸ್ಯ. ಅಗಲವಾದ ಮತ್ತು ಉದ್ದವಾದ ಎಲೆಗಳ ಮಧ್ಯೆ ಚೆಂಡಿನಂತೆ, ಪ್ರಭೇದಗಳಿಗೆ ಅನುಸಾರವಾಗಿ ವಿವಿಧ ಬಣ್ಣಗಳಲ್ಲಿ ಬಿಟ್ಟಿರುವ ಚೆಲುವಾದ ಹೂಗೊಂಚಲುಗಳನ್ನು ಹೊಂದಿದ್ದು

ಪೊದೆಯಾಗಿಯೂ ಚಿಕ್ಕಮರವಾಗಿಯೂ ಬೆಳೆಯುತ್ತದೆ. ಸದಾ ಹಸಿರಾಗಿರುವ ಬಹುವಾರ್ಷಿಕ ಸಸ್ಯವಾಗಿ ಬೆಳೆಯುವ ಪ್ರಭೇದಗಳೂ ಇವೆ. ಎಲೆ ಅಭಿಮುಖ ಅಥವಾ ವೃತ್ತ ಜೋಡಣೆಯುಳ್ಳದ್ದು. ಕೊರಿಂಬ್ ಮಾದರಿಯ ಹೂಗೊಂಚಲು ತುದಿ ಅಥವಾ ಕಂಕುಳಲ್ಲಿ ಕಾಣಿಸಿಕೊಳ್ಳುತ್ತದೆ. ಹೂಗಳ ಬಣ್ಣ ಪ್ರಭೇದಗಳಿಗೆ ಅನುಸಾರವಾಗಿ ಬಿಳುಪು, ಗುಲಾಬಿ, ಕೇಸರಿ, ಹೀಗೆ ನಾನಾ ಬಗೆ, ಹೂಗಳಿಗೆ ತೊಟ್ಟು, ಉಪದಳ, ಗಂಟಲಲ್ಲಿ ರೋಮಗಳು ಕೂಡು ದಳದ ಹೊರಭಾಗ 4–5 ಭಾಗವಾಗಿ ಅಗಲವಾಗಿರುತ್ತದೆ. ಕೇಸರಗಳು ಹೂಗಂಟಲಿನ ಮೇಲೆ ಅಂಟಿಕೊಂಡಿರುತ್ತವೆ. ಕೆಳ ಅಂಡಾಶಯ ಮೇಲ್ಭಾಗವಾಗಿದೆ. ಹಣ್ಣು ಗಟ್ಟಿಯಾದ ಅಥವಾ ಮೆದುವಾದ ಬೆರ್ರಿ ಮಾದರಿಯದು. ಇವನ್ನು ಉದ್ಯಾನವನ ಲಾನುಗಳಲ್ಲಿ ಮತ್ತು ದಾರಿಗಳ ಪಕ್ಕದಲ್ಲಿ ಬೆಳೆಸುತ್ತಾರೆ. ಹೂವಿನ ಬಣ್ಣಗಳಿಗೆ ಅನುಸಾರವಾಗಿ ಇಕ್ಸೋರವನ್ನು ಹೀಗೆ ವಿಂಗಡಿಸಬಹುದು. ಹಳದಿ ಮತ್ತು ಕಿತ್ತಲೆ ಬಣ್ಣದ ಹೂಗಳವು. 2 ಕಡುಗೆಂಪು ಹೂಗಳವು. 3. ಕರಿಬಣ್ಣದ ಹೂಗಳವು. 4. ಬಿಳಿಬಣ್ಣದ ಹೂಗಳವು. 5. ಕಿತ್ತಲೆ ಮಿಶ್ರಿತ ಕರಿ ಬಣ್ಣದ ಹೂಗಳವು.

*

**ಇಖ್ತಾಪದ್ಧತಿ:** ದೆಹಲಿ ಸಾಮ್ರಾಜ್ಯದ ಗುಲಾಮಿ ಅರಸ ಇಲ್ತಮಷ್‌ನ ಕಾಲದಲ್ಲಿ ಜಾರಿಗೆ ತಂದ ಆಡಳಿತಕ್ರಮ. ತನ್ನ ರಾಜ್ಯವನ್ನು ಅನೇಕ ಇಖ್ತಾ (ಪ್ರಾಂತ)ಗಳಾಗಿ ವಿಭಜಿಸಿ, ಪ್ರತಿ ಇಖ್ತಾವನ್ನು ಒಬ್ಬ ತುರ್ಕಿ ಸೇನಾಧಿಕಾರಿಯ ಇಖ್ತಾದಾರ ಆಡಳಿತಕ್ಕೆ ಒಳಪಡಿಸಿದ. ಈ ಇಖ್ತಾದಾರರು ತಮ್ಮ ಅಧಿಕಾರವ್ಯಾಪ್ತಿಯ ಪ್ರದೇಶದಲ್ಲಿ ಶಾಂತಿಸುವ್ಯವಸ್ಥೆ, ಕಾನೂನು ಪರಿಪಾಲನೆ, ಸೈನ್ಯ ಸಂಘಟನೆ ಮತ್ತು ಕಂದಾಯವನ್ನು ಸಂಗ್ರಹಿಸುವುದು ಮುಖ್ಯ ಕರ್ತವ್ಯಗಳಾಗಿದ್ದವು. ಇಖ್ತಾದಾರರು ತಾವು ಸಂಗ್ರಹಿಸಿದ ಕಂದಾಯದ ಹಣದಲ್ಲಿ ತಮ್ಮ ಮತ್ತು ಸೈನ್ಯ ಹಾಗೂ ಆಡಳಿತ ನಿರ್ವಹಣೆಯ ವೆಚ್ಚಕ್ಕೆ ಬೇಕಾಗುವ ಹಣವನ್ನು ಇಟ್ಟುಕೊಂಡು ಉಳಿದ ಹಣವನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿ ಕೊಡುತ್ತಿದ್ದರು. ದೆಹಲಿ ಸುಲ್ತಾನರು ಈ ಇಖ್ತಾದಾರರನ್ನು ಕಾಲಕಾಲಕ್ಕೆ ಬೇರೆ ಬೇರೆ ಪ್ರಾಂತಗಳಿಗೆ ವರ್ಗಾವಣೆ ಮಾಡುವುದರ ಮೂಲಕ ಅವರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುತ್ತಿದ್ದರು. ಕಾರಣ ಇಖ್ತಾದಾರರು ದುರ್ಬಲ ಸುಲ್ತಾನರ ಕಾಲದಲ್ಲಿ ಬಂಡಾಯವೆದ್ದು ಸ್ವತಂತ್ರ ಆಡಳಿತಗಾರರಾಗಲು ಹವಣಿಸುತ್ತಿದ್ದರು. ಸುಲ್ತಾನರ ವಿಶ್ವಾಸವನ್ನು ಕಳೆದುಕೊಂಡವರು ಇಖ್ತಾದಾರಿಕೆಯನ್ನು ಕಳೆದುಕೊಳ್ಳುತ್ತಿದ್ದರು.

ಇಖ್ತಾಗಳನ್ನು ಕೆಲವು ಸಂದರ್ಭದಲ್ಲಿ ತರಫ್‌ಗಳೆಂದೂ ತರಫ್‌ಗಳ ಮುಖ್ಯಸ್ಥರನ್ನು ತರಫ್‌ದಾರರೆಂದೂ ಕರೆಯುವ ಪದ್ಧತಿ ರೂಢಿಯಲ್ಲಿತ್ತು. ದೆಹಲಿ ಸುಲ್ತಾನರ ರಾಜ್ಯವಿಸ್ತರಣೆ, ಸಂರಕ್ಷಣೆ, ಸುಗಮ ಆಡಳಿತ, ತೆರಿಗೆ ಸಂಗ್ರಹಣೆ ಮುಂತಾದ ಕಾರ್ಯಗಳಲ್ಲಿ ಈ ಇಖ್ತಾಪದ್ಧತಿ ಬಹಳ ಸಹಕಾರಿಯಾಗಿತ್ತು. ಆದರೆ ಮುಂದೆ ಇಖ್ತಾದಾರರ ಸ್ವತಂತ್ರ ಪ್ರವೃತ್ತಿ, ಬಂಡಾಯ, ಅವಿಧೇಯತೆ, ಆಂತರಿಕ ಗಲಭೆ, ಅಧಿಕಾರ ವ್ಯಾಮೋಹ ದೆಹಲಿ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು. (ಎನ್‌ಆರ್.)

**ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ:** ಕನ್ಯಾವಿಕ್ರಯದ ಪರಿಣಾಮವು ಎಂಬ ಇನ್ನೊಂದು ಹೆಸರನ್ನೂ ಉಳ್ಳ ಈ ಪುಟ್ಟ ಪುಸ್ತಕ ಹೊಸಗನ್ನಡದ ಮೊತ್ತಮೊದಲ ಗ್ರಂಥಗಳಲ್ಲಿ ಒಂದು; ಕನ್ನಡದಲ್ಲಿ ಮುದ್ರಣ ಕಂಡ ಮೊದಮೊದಲ ಕೃತಿಗಳಲ್ಲಿ ಕೂಡ ಒಂದು. ಮುಖಪುಟದಲ್ಲಿ ಉಲ್ಲೇಖವಾಗಿರುವಂತೆ ಹವ್ಯಕಹಿತೇಚ್ಛುವಾದ ಒಬ್ಬ ವಿದ್ವಾಂಸರಿಂದ ರಚಿಸಲ್ಪಟ್ಟದ್ದನ್ನು (1887) ಮುಂಬಯಿಯ ಭಾರತೀ ಛಾಪಖಾನೆಯ ಅಧ್ಯಕ್ಷರು ತಮ್ಮ ಮುದ್ರಾಲಯದಲ್ಲಿ ಛಾಪಿಸಿದರು. ಇದೊಂದು ಚಿಕ್ಕ ನಾಟಕ; 14 ಪುಟ್ಟ ಪುಟ್ಟ ದೃಶ್ಯಗಳುಳ್ಳದ್ದು, ಕ್ರೌನ್ ಅಷ್ಟಪತ್ರದ ಮುದ್ರಣದಲ್ಲಿ 47 ಪುಟ; ಸುಮಾರು ಮುಕ್ಕಾಲು ಗಂಟೆಯ ಅವಧಿಯಲ್ಲಿ ಆಡಬಹುದಾದದ್ದು.

ಉತ್ತರ ಕನ್ನಡದ ಕರ್ಕಿಯ ವೆಂಕಟರಮಣಶಾಸ್ತ್ರಿಸೂರಿ ಎಂಬ ಸಾಹಸಿ ವಿದ್ವಾಂಸ ಮುಂಬಯಿಯಲ್ಲಿ ಭಾರತೀ ಛಾಪಖಾನೆಯನ್ನು ಸ್ಥಾಪಿಸಿದ್ದರು. ಅಲ್ಲಿ ಮಂಗಳೂರಿನ ಅಕ್ಕಸಾಲಿಗರಿಂದ ಕನ್ನಡ ಅಕ್ಷರ ಕೆತ್ತಿಸಿ ಕನ್ನಡದ ಹಳೆಯ ಕಾವ್ಯಪ್ರಸಂಗಗಳನ್ನು ಮುದ್ರಿಸಿದ್ದರಲ್ಲದೆ ನಿಯತಕಾಲಿಕಗಳನ್ನು ಪ್ರಕಟಿಸುತ್ತಿದ್ದರು. ಅವರೇ ಈ ಪುಸ್ತಕದ ಕರ್ತೃ ಎಂಬುದು ಈ ಪುಸ್ತಕವನ್ನು ಎರಡನೆಯ ಬಾರಿಗೆ ಪರಿಚಯ ಸಮೇತ ಪ್ರಕಟಿಸಿದ (ಕುಮಟ 1953) ಲಿಂಗೇಶಶರ್ಮರ ಹೇಳಿಕೆ. ಇದು ಸಂಭವ.

ಆಗಲೇ ಇಬ್ಬರು ಹೆಂಡಿರನ್ನು ಕಳೆದುಕೊಂಡು 60 ವರ್ಷ ಮೀರಿದ್ದ ಮುದುಕ ಇಗ್ಗಪ್ಪ ಹೆಗಡೆ ಸಾಲ ಮಾಡಿ ತೆರ (ವಧು ದಕ್ಷಿಣೆ) ಕೊಟ್ಟು ಎಳೆಯ ಹುಡುಗಿಯನ್ನು ಮದುವೆಯಾದ. ದಾಂಪತ್ಯ ವಿರಸಗೊಳ್ಳುತ್ತಿರುವಾಗಲೇ ರೋಗದಿಂದ ಸತ್ತ. ಹಣಕ್ಕೆ ಮಗಳನ್ನು ಮಾರಿದ ಶಿವಭಟ್ಟ ಮನೆಯೂ ಸುಟ್ಟು ಇದ್ದ ಒಬ್ಬನೇ ಮಗನೂ ಸತ್ತು ಹಾಳಾದ. ವಿಧವೆಯಾದ ಹುಡುಗಿ ಕೆಟ್ಟಳು; ಗರ್ಭ ಖೂನಿ ಮಾಡಿ ಅಪರಾಧಿಯಾದಳು. ಈ ಅಪರಾಧದಲ್ಲಿ ಸಾಮಾಜಿಕ ದೋಷವೇ ಹೆಚ್ಚೆಂಬುದನ್ನು ಕಂಡ ನ್ಯಾಯಾಧೀಶರು ಅಲ್ಪ ಶಿಕ್ಷೆ ವಿಧಿಸಿ ಮುಗಿಸಿದರು. ಇದು ಸ್ಥೂಲವಾಗಿ ನಾಟಕದ ಕಥೆ.

ಆಡುಭಾಷೆಯನ್ನೇ ತದ್ವತ್ ಲಿಪಿಗೊಳಿಸಿ ಸಂಭಾಷಣೆ ರಚಿಸಿದ್ದು ಈ ನಾಟಕದ ಮುಖ್ಯ ವೈಶಿಷ್ಟ್ಯ. ಇಲ್ಲಿನ ಮುಖ್ಯ ಪಾತ್ರಗಳು ಹೆಚ್ಚಾಗಿ ಅಡಕೆ ತೋಟವನ್ನೇ ಅವಲಂಬಿಸಿದ ಬ್ರಾಹ್ಮಣವರ್ಗದವರು, ಹವ್ಯಕರು. ಹವ್ಯಕರು ಇವತ್ತಿಗೂ ಬಳಸುವ ಹಳಗನ್ನಡ ಪ್ರಚುರವಾದ ವಿಶಿಷ್ಟ ದೇಸಿಯನ್ನೇ ಅಪ್ಪಟವಾಗಿ ಇಲ್ಲಿನ ಸಂಭಾಷಣೆಗಳಲ್ಲಿ ಬಳಸಿದೆ. ಹಾಗೇ, ನಾಟಕದಲ್ಲಿ ಬರುವ ಕೊಂಕಣಸ್ಥರು ಕೊಂಕಣಿಯಲ್ಲಿ ಅಥವಾ ಕೊಂಕಣಸ್ಥ ಕನ್ನಡದಲ್ಲಿ ಮಾತಾಡುತ್ತಾರೆ. ಆಳು ತನ್ನ ಸಮಾಜದ ದೇಸಿಯಲ್ಲೇ ಮಾತಾಡುತ್ತಾನೆ.

ಕನ್ನಡ ಸಾಹಿತ್ಯ ಚರಿತ್ರೆಯ ಒಂದು ತಿರುವಿನಲ್ಲಿ ಅನೇಕ ಹೊಸತನಗಳಿಗೆ ಧೈರ್ಯ ಮಾಡಿದ ಈ ಚಿಕ್ಕ ಗ್ರಂಥದ ವೈಶಿಷ್ಟ್ಯಗಳು ಇವು : 1. ಕನ್ನಡದಲ್ಲಿ ಮುದ್ರಿತವಾದ ಮೊದಲ ಹತ್ತೆಂಟರಲ್ಲಿ ಇದೂ ಒಂದು. 2. ಕನ್ನಡದ ಮೊತ್ತ ಮೊದಲ ಸ್ವತಂತ್ರ ನಾಟಕ; ಅಷ್ಟೇ ಅಲ್ಲ ಹೊಸಗನ್ನಡವನ್ನು ಆರಂಭಿಸಿದ ಮೊದಲ ಸ್ವತಂತ್ರ ಕೃತಿ. 3. ಸಂಸ್ಕೃತದ ರೂಪಾಂತರವಾದ ಮಿತ್ರವಿಂದಾ ಗೋವಿಂದ ಕನ್ನಡದ ಮೊದಲ ನಾಟಕವಾದರೆ ಇದೇ ಎರಡನೆಯದು. 4. ವಸ್ತು ಯಾವುದೇ ಗ್ರಂಥವನ್ನು ಆಧರಿಸದೆ ಜೀವನದಿಂದ ನೇರ ಎತ್ತಿಕೊಂಡದ್ದು; ವಿಷಯ ಸಾಮಾಜಿಕ. 5. ಆದ್ಯಂತ ಆಡುಮಾತನ್ನೇ ಅಪ್ಪಟವಾಗಿ ಬಳಸಿಕೊಂಡಿರುವುದು.

ಕರ್ತೃವಿಗೆ ಕೃತಿನಿರ್ಮಾಣ ಶ್ರದ್ಧೆಗಿಂತ ಸಮಾಜೋದ್ಧಾರ ಶ್ರದ್ಧೆ ಹೆಚ್ಚಿದ್ದ ಕಾರಣ ಇದು ಶ್ರೇಷ್ಠ ಸಾಹಿತ್ಯ ಕೃತಿಯಾಗದೆ ಉಳಿದಿದೆ. (ಎಸ್.ಯು.ಕೆ.ವಿ.)

**ಇಗ್ಗುತಪ್ಪದೇವರಶಿಖರ:** ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟದ ಬೆಟ್ಟಸಾಲಿನ ಶಿಖರಗಳಲ್ಲಿ ಎರಡನೆಯ ದೊಡ್ಡ ಶಿಖರ (ಮೊದಲನೆಯದು ತಡಿಯಂಡಮೋಳು). ವಿರಾಜಪೇಟೆಯಿಂದ ಸುಮಾರು 18ಕಿಮೀ ಪಶ್ಚಿಮಕ್ಕಿದೆ. ಎತ್ತರ ಸು.1220ಮೀ. ಈ ಶಿಖರಕ್ಕೆ ಮಲ್ಮ ಎಂಬ ಹೆಸರೂ ಇದೆ. ಶಿಖರದ ಬುಡದಲ್ಲಿ ಕುಂಜು (ಅಮ್ಮಂಗೇರಿ) ಎಂಬ ಗ್ರಾಮದಲ್ಲಿ ಇಗ್ಗುತಪ್ಪದೇವರ (ಪಾಡಿಸುಬ್ರಹ್ಮಣ್ಯ) ದೇವಾಲಯವಿದೆ. ಇದು ಕೊಡಗಿನ ಪ್ರಸಿದ್ಧ ಪುಣ್ಯಕ್ಷೇತ್ರ. ಕೊಡಗಿನ ಎಲ್ಲ ಭಾಗಗಳಿಂದಲೂ ಹಿಂದು ಯಾತ್ರಾರ್ಥಿಗಳು ಇಲ್ಲಿಗೆ ಬಂದು ತುಲಾಭಾರ ಇತ್ಯಾದಿ ಹರಕೆಗಳನ್ನೊಪ್ಪಿಸುವರು.

ಇಗ್ಗುತಪ್ಪ ದೇವಾಲಯ

ಮಲ್ಮ ಇಗ್ಗುತಪ್ಪ ದೇವರು ನೆಲೆಸಿದ ಸ್ಥಳ ಎಂದು ಪ್ರತೀತಿ. ಶಿಖರದ ಮೇಲೆ ಸು. ಅರ್ಧ ಎಕರೆ ಸಮಭೂಮಿ ಇದೆ. ಇದರ ಮಧ್ಯೆ ಇಗ್ಗುತಪ್ಪನ ಕಲ್ಲಿನ ವಿಗ್ರಹವಿದೆ. ಹತ್ತಿರದಲ್ಲೇ ವರ್ಷ ಪೂರ್ತಿ ನೀರಿರುವ ಒಂದು ಕೊಳವಿದೆ. ಮಲ್ಮದಲ್ಲಿ ವರ್ಷಕ್ಕೆ ನಾಲ್ಕು ಸಲ ಊರಿನವರು ನಾಡಿನವರು ಸೇರಿ ಹಬ್ಬವನ್ನು ಆಚರಿಸುತ್ತಾರೆ. ದೊಡ್ಡ ಹಬ್ಬಗಳು ಸಾಮಾನ್ಯವಾಗಿ ಡಿಸೆಂಬರ್ ಮತ್ತು ಮಾರ್ಚ್ ತಿಂಗಳಲ್ಲಿ ಬರುತ್ತವೆ. ಈ ಸಮಯದಲ್ಲಿ ದೇವರಿಗೆ ಪೂಜೆ ಒಪ್ಪಿಸುವುದು, ಅನೇಕ ವಿನೋದಗಳಲ್ಲಿ ನಿರತವಾಗುವುದು ವಾಡಿಕೆ. ಕೊಡಗರ ಆಚಾರ ಪದ್ಧತಿ ಹಬ್ಬ ಹುಣ್ಣಿಮೆಗಳೆಲ್ಲ ಈ ದೇವರ ಕಟ್ಟಳೆ ಪ್ರಕಾರ ನಡೆಯಬೇಕು. ಆದ್ದರಿಂದ ಈ ಸ್ಥಳದಲ್ಲಿ ನಾಡಿನವರು ಕೂಡಿದಾಗ ಕೊಡಗರ ಹಬ್ಬಗಳಾದ ಹುತ್ತರಿ, ಕೈಲ್ ಮುಹೂರ್ತ ಮೊದಲಾದವು ನಡೆಯಬೇಕಾದ ದಿನ, ನಕ್ಷತ್ರ ಇತ್ಯಾದಿಗಳನ್ನು ಇಲ್ಲೇ ತೀರ್ಮಾನ ಮಾಡುತ್ತಾರೆ.

ಕೇರಳ ಪ್ರಾಂತ್ಯದ ಕಣ್ಣಾನೂರು ನಗರದ ಪಶ್ಚಿಮಕ್ಕಿರುವ ಪಾಕಡ ಎಂಬ ದ್ವೀಪದಲ್ಲಿ ಹುಟ್ಟಿ ಬೆಳೆದ ಏಳುಜನ ದೇವತೆಗಳು – ಆರು ಜನ ಅಣ್ಣತಮ್ಮಂದಿರು ಒಬ್ಬ ತಂಗಿ – ಇತ್ತ ಕಡೆಗೆ ವಲಸೆ ಬರುತ್ತ ಒಬ್ಬೊಬ್ಬರು ಒಂದೊಂದೆಡೆ ನೆಲೆಸಿದರೆಂದೂ ಅವರಲ್ಲಿ 3 ಜನ ಅಣ್ಣಂದಿರು ಮತ್ತು ತಂಗಿ ಮಲಬಾರು ಕಡೆಯಿಂದ ಕೊಡಗಿನ ಗಡಿ ದಾಟಿ ಬಂದು ಮಲ್ಮದಿಂದ ಹುಟ್ಟಿಬರುವ ಅಂಬುಲಪೊಳೆಯ ದಡದಲ್ಲಿ ಪಾಡಿತ್ತೋರ ಕಂಡಿ ಎಂಬ ಸ್ಥಳದಲ್ಲಿ ತಂಗಿದ್ದರೆಂದೂ ಅನಂತರ ಕಾರಣಾಂತರದಿಂದ ಬೇರೆಯಾಗಿ, ತಂಗಿ ಅಲ್ಲಿಂದ 3ಕಿಮೀ

ದೂರದಲ್ಲಿರುವ ಪನ್ನಂಗಾಲವೆಂಬ ಸ್ಥಳದಲ್ಲಿ, ಹಿರಿಯನಾದ ಇಗ್ಗುತಪ್ಪ ಮಲ್ಮದಲ್ಲಿ, ಒಬ್ಬ ತಮ್ಮ (ಪಾಲೂರಪ್ಪ) ನಾಪೋಕ್ಲುವಿನಿಂದ ಐದು ಕಿಮೀ ದೂರದಲ್ಲಿರುವ ಪಾಲೂರಿನಲ್ಲಿ, ಮತ್ತೊಬ್ಬ ತಮ್ಮ (ಕಿರುನೆಲ್ಲಿ ಪೆಮ್ಮಯ್ಯ) ಕೊಡಗು ವೈನಾಡು ಗಡಿಯ ತಿರುನೆಲ್ಲಿ ಎಂಬಲ್ಲಿ ನೆಲಸಿದರೆಂದು ಐತಿಹ್ಯವಿದೆ. (ಟಿ.ಪಿ.ಎಸ್.ಆರ್.;ಕೆ.ಬಿ.ಎಸ್.)

**ಇಗ್ಗೊರಸಿಗಳು: ನೋಡಿ– ಆರ್ಟಿಯೊಡ್ಯಾಕ್ಟೈಲ**

**ಇಗ್ನೇಷಿಯಸ್, ಲಯೋಲದ:** 1491–1556. ಕ್ರೈಸ್ತಧರ್ಮದ ಪ್ರಮುಖ ಕ್ಯಾಥೊಲಿಕ್ ಸಂಸ್ಥೆಯಾದ ಸೊಸೈಟಿ ಆಫ್ ಜೀಸಸ್‌ನ ಸ್ಥಾಪಕ. 1491ರಲ್ಲಿ ಸ್ಪೇನಿನ ಲಯೋಲದಲ್ಲಿ ಸರದಾರ ಮನೆತನದಲ್ಲಿ ಹುಟ್ಟಿದ. ಮುಂದೆ ಸೈನ್ಯಕ್ಕೆ ಸೇರಿದ. 1521ರಲ್ಲಿ ಫ್ರೆಂಚರು ಪ್ಯಾಂಪಲೂನ ಆಕ್ರಮಿಸಿದಾಗ ನಡೆದ ಯುದ್ಧದಲ್ಲಿ ಈತನ ಕಾಲಿಗೆ ಗುಂಡು ಬಡಿದು ದೊಡ್ಡ ಗಾಯವಾಯಿತು. ಅದರಿಂದಾಗಿ ಆಜನ್ಮ ಕುಂಟನಾಗಿ ಉಳಿದ. ಗಾಯಗೊಂಡು ಹಾಸಿಗೆ ಹಿಡಿದಾಗ ಅವನಿಗೆ ಯೇಸುವಿನ ತಾಯಿ ಮೇರಿಯ ಸಾಕ್ಷಾತ್ಕಾರವಾಯಿತೆಂದು ಹೇಳುತ್ತಾರೆ. ಈ ಘಟನೆಯಿಂದ ಅವನ ಜೀವನದ ಗತಿಯೇ ಬದಲಾಯಿಸಿತು. ವಿಷಯಾಸಕ್ತನಾಗಿದ್ದವ ವಿರಕ್ತನಾದ. ಸಾದಾ ಸೈನಿಕ ಮಹಾಸಾಧಕನಾಗಿ ಪರಿಣಮಿಸಿದ. ಹಾಸಿಗೆ ಬಿಟ್ಟೆದ್ದ ಮೇಲೆ ಜೆರುಸಲೆಂನ ಯಾತ್ರೆ ಕೈಗೊಂಡ. ಈ ಯಾತ್ರೆಯಲ್ಲಿ ಅವನಿಗೆ ಹೆಚ್ಚಿನ ವಿದ್ಯೆ ಮತ್ತು ಸಂಗಡಿಗರ ಆವಶ್ಯಕತೆಯ ಅರಿವಾಯಿತು. ಹಿಂತಿರುಗಿ ಬಂದ ಮೇಲೆ 11 ವರ್ಷಗಳಕಾಲ ಬಾರ್ಸಿಲೋನ, ಪ್ಯಾರಿಸ್ ನಗರಗಳಲ್ಲಿ ಆಳವಾದ ಅಧ್ಯಯನ ನಡೆಸಿದ.

ಧಾರ್ಮಿಕ ಒಳಭೇದಗಳು ಹೆಚ್ಚಾಗಿದ್ದ ಆ ಕಾಲದ ಅಗತ್ಯ ಏನೆಂಬುದನ್ನು ಲಯೋಲ ಚೆನ್ನಾಗಿ ಅರಿತಿದ್ದ. ರಾಜಕಾರಣ, ಆಡಳಿತ ಇವುಗಳ ಗೊಡವೆಯಿಲ್ಲದ ಸೇವಾಪಂಥವೊಂದನ್ನು ನಿರ್ಮಿಸಬೇಕೆಂಬುದು ಅವನ ಆಸೆಯಾಗಿತ್ತು. ಸ್ವತಃ ಅನೇಕ ಕಠಿಣ ಉಪವಾಸವೇ ಮೊದಲಾದ ವ್ರತಗಳನ್ನು ಕೈಗೊಂಡು, ಧಾರ್ಮಿಕಜೀವನ, ದೈವಭಕ್ತಿ, ಬಡತನ, ಶಿಸ್ತುಗಳ ಪ್ರಾಧಾನ್ಯವನ್ನು ಸಾರಿದ. ಈ ಸಮಯದಲ್ಲಿ ಅವನಿಗೆ ದೊರೆತ ಆರುಜನ ಶಿಷ್ಯರು ಜಗತ್ಪ್ರಸಿದ್ಧರಾಗಿದ್ದಾರೆ. ಜಗತ್ತಿನಲ್ಲಿ ಕ್ರೈಸ್ತಧರ್ಮ ಆಗತಾನೇ ಹಬ್ಬುತ್ತಿದ್ದ ದೇಶಗಳಿಗೆ ಇವರು ಪ್ರಚಾರಕರಾಗಿ ಹೋದರು. ಇವರಲ್ಲಿ ಫ್ರಾನ್ಸಿಸ್ ಜ಼ೇವಿಯರ್ ಭಾರತ ಮತ್ತು ಪ್ರಾಚ್ಯದೇಶಗಳಿಗೆ ಬಂದದ್ದು ಇತಿಹಾಸಪ್ರಸಿದ್ಧವಿದೆ. 1540ರಲ್ಲಿ ಕ್ರಿಸ್ತ ಸಮಾಜದ ಸ್ಥಾಪನೆಯಾಗಿ ಅದರ ಮರುವರ್ಷ ಲಯೋಲನನ್ನು ಅದರ ಅಧಿಪತಿಯಾಗಿ (ಜನರಲ್) ನೇಮಿಸಲಾಯಿತು. ಲಯೋಲನ ಸೈನಿಕ ಬದುಕಿನ ಹಿನ್ನೆಲೆ ಅವನ ಸಂಸ್ಥೆಗೂ ತಳಹದಿಯಾಯಿತು. ಜೀವನ ಎಂದರೆ ಸೈತಾನನೊಂದಿಗೆ ನಡೆಸುವ ಧರ್ಮಯುದ್ಧ (ಕ್ರೂಸೇಡ್), ಕ್ರಿಸ್ತ ಮುಖ್ಯ ಸೇನಾಪತಿ. ಕ್ರಿಸ್ತನ ಅನುಯಾಯಿಗಳಾಗಬಯಸುವವರು ಸೈನಿಕರಂತೆ ಕಠಿಣ ಶಿಕ್ಷೆಗೆ ಒಳಪಡಬೇಕು ಎಂಬುದು ಅವನ ನಿಶ್ಚಿತ ಅಭಿಪ್ರಾಯವಾಗಿತ್ತು. ಆತ ಬರೆದ ಗ್ರಂಥಗಳಲ್ಲಿ ಸ್ಪಿರಿಚುಯಲ್ ಎಕ್ಸರ್ಸೈಸಸ್ ಮುಖ್ಯವಾದದ್ದು.

1540ರಲ್ಲಿ ಪೋಪರ ಅಧಿಕೃತ ಒಪ್ಪಿಗೆ ದೊರೆತ ಅನಂತರ ಕ್ರಿಸ್ತಸಮಾಜ ಭರದಿಂದ ಬೆಳೆಯಿತು. ಲಯೋಲ ಕೆಲಮಟ್ಟಿಗೆ ಸಂಪ್ರದಾಯಸ್ಥನಾಗಿದ್ದ. ಶಿಕ್ಷಣದ ಪುನರುಜ್ಜೀವನ ಅನೇಕರನ್ನು ಕ್ರಿಸ್ತನಿಂದ ದೂರ ಒಯ್ಯುತ್ತದೆಂದು ಹೇಳಿದ. ಹೀಗಾಗಿ ತನ್ನ ಘಟಕದಲ್ಲಿ ವಿಸ್ತರಣೆಗೆ ಆತ ಹೆಚ್ಚು ಅವಕಾಶ ಕಲ್ಪಿಸಿಲ್ಲ. ಧರ್ಮಉಪದೇಶ, ಕ್ರಿಸ್ತಸಂದೇಶ, ಪ್ರಚಾರ, ವಿದ್ಯಾದಾನ, ಸೇವೆ ಮುಂತಾದವುಗಳು ಜೆಸೂಟರ ಅಥವಾ ಕ್ರೈಸ್ತಸಮಾಜದವರ ಕೆಲಸವೆಂದು ಸಾರಿದ. ಲಯೋಲನ ಅಂತ್ಯದ ಹೊತ್ತಿಗೆ 1,000 ಸದಸ್ಯರಿದ್ದ ಅವನ ಸಂಸ್ಥೆ ಈಗ ಲಕ್ಷಗಟ್ಟಳೆ ಸದಸ್ಯರುಳ್ಳ ಸಹಸ್ರಾರು ಶಾಖೆಗಳಿಂದ ಜಗತ್ತಿನಲ್ಲೆಲ್ಲ ಹಬ್ಬಿದೆ. (ಜಿ.ಎಸ್.ಡಿ.; ಎ.ಪಿ.ಆರ್.)

**ಇಗ್ವಾನ (ಕಡಲಗೌಳಿ):** ಇಗ್ವಾನಿಡೀ ಹೆಸರಿನ ಕುಟುಂಬಕ್ಕೆ ಸೇರಿದ ದೊಡ್ಡ ಜಾತಿಯ ಹಲ್ಲಿ. ಗ್ಯಾಲಪಗಾಸ್ ದ್ವೀಪಗಳ ಕಡಲ ತೀರದಲ್ಲಿ ಬಂಡೆಗಳ ಮೇಲೆ ವಾಸಿಸುತ್ತವೆ. ಹಲ್ಲಿಗಳಲ್ಲಿ ಇದೊಂದೇ ಕಡಲವಾಸಿ ಪ್ರಭೇದ. ಅಪಾಯ ಎದುರಾದಾಗ ಕಡಲಿಗೆ ನೆಗೆದು ರಕ್ಷಿಸಿಕೊಳ್ಳುವುವು. ನೀರಿನಲ್ಲಿ ಮುಳುಗಬಲ್ಲವು ಹಾಗೂ ಈಜಬಲ್ಲವು. ಹಲ್ಲುಗಳು ಹರಿತವಾದ ಅಲಗುಗಳಂತೆಯೂ ಮೇಲುತುದಿ ಗರಗಸ ದಂತೆಯೂ ಇವೆ. ದೇಹದ ಮೇಲೆ ಸಣ್ಣ



ಸಣ್ಣ ಹುರುಪೆಗಳು, ಬೆನ್ನಿನ ಮೇಲೆ ಏಣು, ಹ್ರಸ್ವ ನಾಲಗೆ, ಕತ್ತಿನ ತಳಭಾಗದಲ್ಲಿ ನೆರಿಗೆಯಾಗಿರುವ ಚರ್ಮದ ಚೀಲವಿದೆ. ಇದನ್ನು ರತಿಕ್ರೀಡೆಗೆ ಹಾಗೂ ಶತ್ರುಗಳನ್ನು ಬೆದರಿಸಲು ಬಳಸುತ್ತದೆ. ಇವು ಈ ಪ್ರಾಣಿಯ ಲಕ್ಷಣಗಳು. ಈ ಹಲ್ಲಿ ಸು. 2ಮೀ ಉದ್ದ ಬೆಳೆಯಬಲ್ಲದು. ಬಣ್ಣ ಹಸಿರು. ಮೈಮೇಲೆ ಕಂದುಬಣ್ಣದ ಅಡ್ಡಪಟ್ಟಿಗಳಿವೆ. ಸಸ್ಯಾಹಾರಿ ಅಂಡಜ. ಆದರೆ ಕೆಲವು ಅಂಡಜರಾಯುಗಳು. ಈ ಹಲ್ಲಿಗೂ ಗತಕಾಲದ ಇಗ್ವಾನೊಡಾನ್ (**ನೋಡಿ**) ಹಲ್ಲಿಗೂ ಬಲುಮಟ್ಟಿನ ಹೋಲಿಕೆ ಇರುವುದನ್ನು ಗುರುತಿಸಲಾಗಿದೆ. (ಎಂ.ಡಿ.ಪಿ.)

**ಇಗ್ವಾನೊಡಾನ್:** ಜುರಾಸಿಕ್ ಮತ್ತು ಕ್ರಿಟೇಷಸ್ ಯುಗದಲ್ಲಿ (65–135 ದಶಲಕ್ಷ ವರ್ಷಗಳಷ್ಟು ಹಿಂದಿನ ಕಾಲ) ಬದುಕಿದ್ದ ಒಂದು ಹಲ್ಲಿ. ಇದು ಈಗ ಜೀವಿಸಿರುವ ಇಗ್ವಾನ (**ನೋಡಿ**) ಹಲ್ಲಿಯನ್ನು ಬಲುಮಟ್ಟಿಗೆ ಹೋಲುತ್ತಿತ್ತು. ಡೈನೋಸಾರ್‌ಗಳ ಜಾತಿಯಲ್ಲಿ ಇಗ್ವಾನೊಡಾನ್ ಒಂದು. ಎತ್ತರ ಸು. 4.5 ಮೀ. ಬಲಯುತವಾದ ಬಾಲವಿದ್ದು



ಇಗ್ವಾನೊಡಾನಿನ ಎಲುಗಟ್ಟು

ಹಿಂಗಾಲುಗಳನ್ನು ಹೊಂದಿದ್ದ ಈ ಪ್ರಾಣಿಯ ನಿಲುವು ಒಂದು ದೊಡ್ಡ ಕಾಂಗರೂವಿನ ಹಾಗೆ. ತನ್ನ ಮುಂಗಾಲುಗಳನ್ನು ಆಗಾಗ ಮಾತ್ರ ನೆಲಕ್ಕೆ ಮುಟ್ಟಿಸುತ್ತಿತ್ತು. ಇದು ಸ್ವಭಾವತಃ ಸಸ್ಯಾಹಾರಿ. ಇದರ ಮುಂಗಾಲಿನಲ್ಲಿ 5 ಬೆರಳುಗಳು. ಹೆಬ್ಬೆಟ್ಟಿನಲ್ಲಿ 2.5ಸೆಂಮೀ ಉದ್ದದ ಉಗುರು. ಹಿಂಗಾಲಿನಲ್ಲಿ 4 ಬೆರಳುಗಳು. ಪ್ರಾಣಿಯ ಉದ್ದ ಸು. 24 ಮೀ. ಇಗ್ವಾನೊಡಾನ್ ಪ್ರಾಣಿಗಳಂಥ ಡೈನೋಸಾರ್‌ಗಳು ವಿಕಾಸಗೊಂಡು ಮುಂದೆ ಪಕ್ಷಿಗಳ ಉಗಮಕ್ಕೆ ಹಾದಿ ಮಾಡಿಕೊಟ್ಟಿರಬಹುದು. ಸೊಂಟದ ಮೂಳೆ ನಾಲ್ಕು ಚಾಚುಗಳನ್ನು ಹೊಂದಿದ್ದು ಸಮತೋಲನಕ್ಕೂ, ಕೂಡುವುದಕ್ಕೂ ಬಹಳ ಸಹಾಯಕವಾಗಿತ್ತು. ಈ ಪ್ರಾಣಿಯ 29 ಸಂಪೂರ್ಣ ಜೀವಾವಶೇಷಗಳು ಬ್ರಸೆಲ್ಸ್‌ನ ಒಂದು ಕಲ್ಲಿದ್ದಲು ಗಣಿಯಲ್ಲಿ ಸಿಕ್ಕಿವೆ. ಪ್ರಾಯಶಃ ಗತಕಾಲದಲ್ಲಿ ಪ್ರಚಂಡ ನೀರಿನ ಸುಳಿಗೆ ಸಿಕ್ಕಿ ಇವು ಸಾಮೂಹಿಕವಾಗಿ ಸತ್ತಿರಬಹುದು. *

**ಇಚ್ಚಿತ್ತ:** ಯೋಚನೆಗಳಿಗೂ ಮನೋದ್ವೇಗಕ್ಕೂ ಹೊರಗಣ ಪರಿಸರಕ್ಕೂ ಇನಿತೂ ಹೊಂದಾಣಿಕೆ ಇಲ್ಲದೆ, ಒಬ್ಬನ ವ್ಯಕ್ತಿತ್ವವೇ ಎರಡಾಗಿ ತೋರುವ ಮನೋರೋಗವಿದು (ಸ್ಕಿಜ಼ೊಫ್ರೆನಿಯ). ಕಳೆದ ಶತಮಾನದ ಕೊನೆಯಲ್ಲಿ ಮಾನಸಿಕ ಆಸ್ಪತ್ರೆಗಳಲ್ಲಿ ಬಹಳ ಮಂದಿ ರೋಗಿಗಳಲ್ಲಿ 30ನೆಯ ವಯಸ್ಸಿಗೆ ಮೊದಲೇ ಬೇನೆಬಿದ್ದು ಬರುಬರುತ್ತ ಚಿತ್ತಗೆಟ್ಟು ಹೋಗುತ್ತಿದ್ದವರನ್ನು ಮೊಗರು ಚಿತ್ತಗೇಡಿಕೆ (ಡಿಮೆನ್ಷಿಯ ಪ್ರೇಕಾಕ್ಸ್) ರೋಗಿಗಳೆಂದು ಹೆಸರಿಟ್ಟರು. ಆದರೆ ವಯಸ್ಸಾದವರಲ್ಲೂ ಇದು ಕಂಡುಬಂದಾಗ, ಇನ್ನೂ ಹೆಚ್ಚಿನ ಅರ್ಥವಿರುವ ಇಚ್ಚಿತ್ತವೆಂಬ ಹೆಸರು ಕೊಡಲಾಗಿದೆ. ಈ ಹೆಸರಿನ ಮನೋರೋಗಿಗಳಲ್ಲಿ ಮುಖ್ಯವಾಗಿ ಹೊರಪ್ರಪಂಚದ ಸಂಬಂಧ ಕಿತ್ತುಕೊಳ್ಳುವುದರ ಜೊತೆಗೆ ತನ್ನೊಳಗೂ ಮನಸ್ಸು ಏರುಪೇರಾಗಿ ರುವುದು. ಯೋಚನೆ, ಭಾವನೆ, ನಡವಳಿಕೆಗಳು ಕೆಟ್ಟು ವಿಕಾರವಾಗುತ್ತವೆ. ಇಷ್ಟಾದರೂ ಬುದ್ಧಿಶಕ್ತಿ ಏನೇನೂ ಕುಂದದೆ, ಮೈ ಆರೋಗ್ಯವಾಗಿ ಚೆನ್ನಾಗೇ ಇರುತ್ತದೆ.

ಇಚ್ಚಿತ್ತವೆಂದು (ಕವಲುಮನ, ಸೀಳುಮನ) ಹೆಸರಿದ್ದರೂ ಇದರಲ್ಲಿ ಯಾವ ಮನೋರೋಗಗಳನ್ನು ಸೇರಿಸಬೇಕು ಯಾವುದನ್ನು ಬಿಡಬೇಕು ಎನ್ನುವುದರಲ್ಲಿ ಮನೋರೋಗ ಪರಿಣತರಲ್ಲೇ ಬೇರೆಬೇರೆ ಅಭಿಪ್ರಾಯಗಳು ಏಳಬಹುದು. ಆದರೆ ರೋಗದ ನಿಧಾನ, ಮುಂತಿಳಿವುಗಳಲ್ಲಂತೂ (ಪ್ರೋಗ್ನೋಸಿಸ್) ವ್ಯತ್ಯಾಸವಿರದು.

**ಕಾರಣಗಳು:** ಬಹುಪಾಲು ಈ ಮನೋರೋಗ ವಂಶಪರಂಪರೆಯಾಗಿ ಬರುವು ದುಂಟು. ಅವಳಿ ಮಕ್ಕಳಲ್ಲಿ ಒಬ್ಬನಲ್ಲಿ ಕಾಣಿಸಿಕೊಂಡರೆ ಶೇ.90 ಪಾಲು ಇನ್ನೊಬ್ಬನಿಗೂ ಬರಬಹುದು. ಈ ಬೇನೆಗೆ ಈಡಾಗಲು ಮೈಗಿಂತಲೂ ಮನೋಧರ್ಮವೇ ಬಹುಮಟ್ಟಿಗೆ ಕಾರಣ. ಆದರೆ, ಇಚ್ಚಿತ್ತರೋಗಿಗಳಲ್ಲಿ ಧಡೂತಿ (ಪಿಕ್ನಿಕ್) ಮೈಯವರೇ ಹೆಚ್ಚು. ಎಳೆತನ ದಿಂದಲೇ ರೋಗಿ ವಿಚಿತ್ರವಾಗಿ ವರ್ತಿಸುವುದು ಕಂಡುಬರುತ್ತದೆ. ಗಲಾಟೆ ಗಲಭೆಗಳಿಂದ ದೂರವಿದ್ದು, ಸಂಕೋಚದಿಂದ ಒಂಟಿಯಾಗಿ ತಂಟೆಮಾಡದೆ ಒಳ್ಳೆಯ ಕೂಸಾಗಿರುವುದು, ಎಂದಿನ ಆಸಕ್ತಿ ಚಟುವಟಿಕೆಗಳಿಗಿಂತಲೂ ಹಗಲುಗನಸುಗಳು, ಬರೀ ಚಿಂತನೆಗಳಲ್ಲಿ ಮಗ್ನನಾಗಿರುವುದು, ಕೆಲವೇಳೆ ಹೇಗೆಂದರೆ ಹಾಗೆ ಕೇಳುವಂತಿದ್ದರೆ, ಅಂಜುಬುರುಕನಾಗಿದ್ದರೆ, ಇನ್ನೂ ಕೆಲವು ಬಾರಿ ಎದುರುಬಿದ್ದು ಮೊಂಡುಹಿಡಿಯುವುದು ಸಾಮಾನ್ಯ. ಒಟ್ಟಿನಲ್ಲಿ

ಇಚ್ಚಿತ್ತ ರೋಗಿ ಹೀಗೇ ಇರುವನೆಂದು ಖಚಿತವಲ್ಲ. ಮುಖ್ಯವಾಗಿ, ಒಂದು ಸಂದರ್ಭದಲ್ಲಿ ರೋಗಿ ಹೇಗೆ ನಡೆದುಕೊಳ್ಳುವನೆಂದು ನೋಡಬೇಕೇ ಹೊರತು, ರೋಗಿಯಲ್ಲಿ ಇಂತಿಂಥ ಗುಣ, ಲಕ್ಷಣಗಳೇ ಇರಬೇಕು ಎನ್ನುವಂತಿಲ್ಲ. ರೋಗಿಯ ಕೆಟ್ಟ ಅಲ್ಲದೆ ಒಳ್ಳೆಯ ಅಭ್ಯಾಸಗಳು, ಬೆಳೆವ ರೀತಿಗಳ ಪರಿಶೀಲನೆಯಿಂದ ರೋಗವನ್ನು ವೈದ್ಯ ಗುರುತಿಸಬಹುದು.

ತಲೆಗೆ ಪೆಟ್ಟು, ಆಕಸ್ಮಿಕ ಗಾಯಗಳು ಆದ ಮೇಲೋ ಹೆರಿಗೆಯಾದ ಮೇಲೆ ಬಾಣಂತಿ ಯಲ್ಲೋ ವಿಷಮಜ್ವರ ತೆರನ ಯಾವುದಾದರೂ ಕಾಯಿಲೆ ಬಿದ್ದೆದ್ದ ಮೇಲೋ ಇಚ್ಚಿತ್ತ ಕಾಣಿಸಿಕೊಳ್ಳಬಹುದಾದರೂ ಯಾವೊಂದು ರೋಗವನ್ನೂ ಕಾರಣವೆಂದೂ ಖಚಿತವಾಗಿ ದೂರುವಂತಿಲ್ಲ. ಹೀಗೇ ಯಾವ ಕಾರಣದಿಂದಲೇ ಆಗಲಿ ಮೈಯೆಲ್ಲ ರಕ್ತವಿಷವೇರಿದ್ದರಿಂದ (ಟಾಕ್ಸೀಮಿಯ) ಎನ್ನುವಂತಿಲ್ಲ. ಅಲ್ಲದೆ, ಮೆಸ್ಕಲೀನ್, ಲೈಸರ್ಜಿಕಾಮ್ಲ ಮದ್ದುಗಳನ್ನು ನುಂಗಿದರೂ ಹಲವಾರು ರೀತಿಯಲ್ಲಿ ಇಚ್ಚಿತ್ತದಂತೆ ಬಹುಮಟ್ಟಿಗಿರುವ ಮನೋವಿಕಲತೆ ತೋರುವುದೆಂಬುದು ಸೋಜಿಗದ ವಿಚಾರ. ಆದರೆ ಈ ರೋಗಕ್ಕೂ ಈ ರಾಸಾಯನಿ ಕಗಳಿಗೂ ಯಾವ ಸಂಬಂಧವನ್ನೂ ಕಲ್ಪಿಸುವಂತಿಲ್ಲ. ಇದೇ ತೆರನಾಗಿ ಒಳಸುರಿಕ ಗ್ರಂಥಿಗಳಿಗೂ ಈ ಚಿತ್ತಗೆಡಿಕೆಗೂ ಇರಬಹುದಾದ ಖಚಿತ ಸಂಬಂಧ ಸರಿಯಾಗಿ ಗೊತ್ತಿಲ್ಲ.

ವ್ಯವಹಾರದಲ್ಲಿ ಸೋಲು, ಲೈಂಗಿಕ ನಿರಾಸೆ, ಭಯಂಕರ ಅನುಭವಗಳೇ ಮುಂತಾದವುಗ ಳಿಂದ ಇತ್ತೀಚೆಗೆ ಮನಸ್ಸು ಕೆಟ್ಟಿದ್ದರಿಂದ ಇಚ್ಚಿತ್ತ ಆಗಿರಬಹುದಾದರೂ ಮೊದಲೇ ಅದರ ಲಕ್ಷಣಗಳು ರೋಗಿಯಲ್ಲಿದ್ದಿರಬೇಕು. ಎಂದಿನದೋ ಅನುಭವದಿಂದಲೂ ಹೀಗಾಗದು. ರೋಗಿಯ ಮನಸ್ಸನ್ನು ಎಷ್ಟೇ ಆಳವಾಗಿ ವಿವರವಾಗಿ ಪರಿಶೀಲಿಸಿದರೂ ಮೊದಲಿನಿಂದಲೂ ಇದರ ಲಕ್ಷಣಗಳಿಲ್ಲದೆ ದಿನದ ನಡೆವಳಿಕೆಯಲ್ಲಿ ಇಚ್ಚಿತ್ತ ಮನೋಭಾವ ತೋರಲು ಕೇವಲ ಇತ್ತೀಚಿನ ಅನುಭವಗಳು ಸಾಕಾಗುವಂತೆ ಕಾಣವು. ಏನಿದ್ದರೂ ಇವು ಬೆಂಬಲವಾಗಿ ಇರಬಹುದಷ್ಟೆ.

ಜನಸಾಮಾನ್ಯರಲ್ಲಿ ನೂರಕ್ಕೊಬ್ಬ ಇಚ್ಚಿತ್ತರೋಗಿ ಇರುವನೆಂದು ಲೆಕ್ಕವಿದೆ. ಮಾನಸಿಕ ಆಸ್ಪತ್ರೆಗಳ ರೋಗಿಗಳಲ್ಲಿ ಇವರೇ ಸುಮಾರು ಅರೆಪಾಲಿನಷ್ಟು ಇರುವರು. ಮುಕ್ಕಾಲುಪಾಲು 15–25 ವರ್ಷಗಳವರಲ್ಲೇ ಬಲು ಸಾಮಾನ್ಯ. ಮಕ್ಕಳು ವಯಸ್ಸಿಗೆ ಬರುವ ಮುಂಚೆ ಈ ರೋಗ ತೋರುವುದು. 40 ವರ್ಷ ದಾಟಿದವರಲ್ಲಿ ಇದು ಮೊಟ್ಟ ಮೊದಲು ಕಾಣಿಸಿಕೊಳ್ಳುವು ದಿಲ್ಲ. ವಿಚಿತ್ರ ನಡೆವಳಿಕೆಯ ಎಳೆಯ ಕೂಸುಗಳಲ್ಲೂ ಇತ್ತೀಚೆಗೆ ಇದನ್ನು ಗುರುತಿಸುತ್ತಿರುವರು. ಬುದ್ಧಿಶಕ್ತಿಗೂ ಇದಕ್ಕೂ ಸಂಬಂಧವಿಲ್ಲ. ಹೆಣ್ಣಿಗಿಂತ ಗಂಡಿನಲ್ಲಿ ಹೆಚ್ಚಿರಬಹುದು.

**ರೋಗಲಕ್ಷಣಗಳು:** ಈ ರೋಗಿಯಲ್ಲಿ ಮಿದುಳಿನ ರಚನೆ, ರಾಸಾಯನಿಕ ಅಂಗಕ್ರಿಯೆ ಗಳು, ಮೂತ್ರ ರಕ್ತಗಳ ವ್ಯತ್ಯಾಸಗಳನ್ನು ವಿವರಿಸಿದ್ದರೂ ಇವಾವವೂ ಇದೊಂದೇ ರೋಗದಲ್ಲಿ ವಿಶಿಷ್ಟವಾಗಿ ಕಾಣುವವಲ್ಲ. ಆದರೆ ಒಮ್ಮೊಮ್ಮೆ ಸರದಿಯಾಗಿ ಬರುವ ಬಿಗುವೇರಿಳಿತದ (ಕೆಟಟೋನಿಕ್) ರೋಗಿಗಳ ಮೈಯಲ್ಲಿ ಸಾರಜನಕದ ಸಮತೋಲ ಏರುಪೇರು ಆಗಿರುವುದನ್ನು ಗಮನಿಸಬೇಕಾದ್ದೆ. ಮೈಯಲ್ಲಿ ಸಾರಜನಕ ಹೆಚ್ಚಿದಾಗ ರೋಗಿ ಚಟುವಟಿಕೆಯಿಂದಿದ್ದು, ಇಳಿದಾಗ ಜಡವಾಗಿ ಬಿದ್ದಿರುವನು. ಥೈರಾಕ್ಸೀನ್ ಮದ್ದನ್ನು ಕೊಟ್ಟು ಸಾರಜನಕದ ಮಟ್ಟವನ್ನು ಇಳಿಸಿಬಿಟ್ಟು, ಸಾರಜನಕ ಇನ್ನಷ್ಟು ಮೈಸೇರದಂತೆ ನೋಡಿಕೊಂಡರೆ ರೋಗದ ಲಕ್ಷಣಗಳು ಕಳೆಯುತ್ತವೆ.

ಮನಶ್ಶಾಸ್ತ್ರದ ರೀತ್ಯಾ, ರೋಗಿಯ ಭಾವನೆಗಳು, ಮನೋಚಾಲಕ (ಸೈಕೊಮೋಟಾರ್) ವರ್ತನೆಗಳು, ಒಳಗಿನ ಉಡುಗಣೆಗಳಲ್ಲಿ (ಇನ್‌ಹಿಬಿಷನ್ಸ್) ವ್ಯತ್ಯಾಸಗಳು ತೋರಿದರೂ ಇವಾವುವೂ ಇಚ್ಚಿತ್ತದಲ್ಲಿ ಮಾತ್ರವೇ ತೋರುವವಲ್ಲ. ಒಟ್ಟಿನಲ್ಲಿ ಇಷ್ಟು ಹೇಳಬಹುದು: ರೋಗಿಯ ಮನಸ್ಸಿನ ಏರುಪೇರುಗಳು ಅವನ ಪಾಲನೆ, ವಿದ್ಯೆ, ಪರಿಸರಗಳಂತೆ ಹೊರಗಾಣು ತ್ತವೆ. ಮುಖ್ಯವಾಗಿ ಮನಸ್ಸು ಎರಡಾಗಿ ಒಡೆದಿರುತ್ತದೆ. ಒಂದು ಭಾಗಕ್ಕೂ ಇನ್ನೊಂದಕ್ಕೂ ಹೊಂದಾಣಿಕೆ ತಪ್ಪಿ, ಇಲ್ಲವೇ ವಿಚಿತ್ರವಾಗಿ, ಎರಡು ಚಿತ್ತಗಳಂತೆ ತೋರುವುದು. ದಿನದ ಸಂಪರ್ಕಗಳು, ನಿಜಸಂಗತಿಗಳ ಅನುಭವಕ್ಕೂ ಒಳಗಿನ ಮನಸ್ಸಿಗೂ ಏನೇನೂ ಸಂಬಂಧ ಇಲ್ಲದಂತೆ ರೋಗಿ ವರ್ತಿಸುತ್ತಾನೆ.

ಇಚ್ಚಿತ್ತ ರೋಗ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವುದಿಲ್ಲ. ಎಷ್ಟೋ ಬಾರಿ, ಕೇವಲ ವ್ಯಕ್ತಿತ್ವದ ವಿಚಿತ್ರ ಎನಿಸಿಕೊಂಡಿದ್ದುದು ಯಾವೊತ್ತಿನಿಂದ ರೋಗ ಮೊದಲಾಯಿತೆಂದು ಖಚಿತವಾಗಿ ಹೇಳಬರದು. ಒರಟು ನಡತೆ, ಪರಿವೆ ಇಲ್ಲದಿರುವಿಕೆ, ಅನಿರ್ಧಾರಗಳೊಂದಿಗೆ ತಲೆನೋವು, ಸುಸ್ತು, ಕಳವಳ, ಹಸಿವುನಾಶ, ನೋವುಮುಟ್ಟು ಆಗಿದ್ದಿರಬಹುದು. ಯೋಚನೆ, ತಿಳಿವಳಿಕೆಗಳಲ್ಲಿ ತನ್ನಲ್ಲೇ ಅಪಾರ ವ್ಯತ್ಯಾಸಗಳನ್ನು ರೋಗಿ ಅರಿಯಬಹುದು. ತನ್ನ ನಡೆವಳಿಕೆ ತನಗೇ ವಿಚಿತ್ರ ಎನಿಸಬಹುದು. ಮೊದಲ ದಿನಗಳಲ್ಲಿ. ಬಹುಮಟ್ಟಿಗೆ ಆಗುವಂತೆ, ಕೆಲವು ವರ್ಷಗಳಲ್ಲಿ ನಿಧಾನವಾಗಿ ಕಾಲಿಡುವುದರಿಂದ, ರೋಗವನ್ನು ಗುರುತಿಸುವುದು ಕಷ್ಟವಾಗಬಹುದು.

**ಯೋಚನೆಯಲ್ಲಿ ತಾರುಮಾರು:** ಯೋಚನೆಗಳೇನೋ ಚೆನ್ನಾಗಿದ್ದರೂ ಒಂದಕ್ಕೊಂದು ಸಂಬಂಧವೇ ಇರದೆ, ಎತ್ತೆತ್ತಲೋ ಹರಿದು ಕಲಬೆರಕೆ ಆಗಿರುತ್ತದೆ. ಕಾರಣ ಕಾರಕಗಳ ಸಂಬಂಧ ತಲೆಕೆಳಗಾಗುತ್ತದೆ. ಮಾತಾಡುವಾಗ ತುಂಡು ತುಂಡಾಗಿ ನಿಂತು ತಡೆಯಬಹುದು (ಬ್ಲಾಕಿಂಗ್). ಎಷ್ಟೋ ವೇಳೆ ತನ್ನ ಯೋಚನೆ ಸರಿಯಲ್ಲವೆಂದು ರೋಗಿ ಗಮನಿಸಿ ವಿವರ ಹೇಳುತ್ತಾನೆ. ತನ್ನ ಯೋಚನೆಗಳನ್ನು ತೆಗೆದುಹಾಕಿ ತನ್ನವಲ್ಲದ ಇನ್ನಾವುದೂ ಹೊರಗಿನವು ಬಂದು ತನ್ನ ಯೋಚನೆ ಸರಕ್ಕನೆ ಕಡಿದುವೆಂದೂ ಯಾವುದೋ ಹೊರಗಿನ ಶಕ್ತಿ ಹತೋಟಿಗೊಳಿಸುವುದೆಂದೂ ಭಾವಿಸುತ್ತಾನೆ. ಯೋಚನೆಯ ತಾರುಮಾರಿಗೆ ರೋಗಿಗಳ ಕೆಲವು ಹೇಳಿಕೆಗಳನ್ನು ಉದಾಹರಿಸಬಹುದು : 'ಕಿಟಕಿಯಿಂದ ಬಾವಲಿಗಳೂ ಜೇನ್ನೊಣಗಳೂ ಬರುತ್ತಿದ್ದುವು. ನನ್ನ ಭಾವಮೈದುನ ನನ್ನನ್ನು ಕೀಟಲೆ ಮಾಡುತ್ತಿದ್ದುದೇ ಕಾರಣ. ನನ್ನ ಎದೆಯಲ್ಲಿ ಜೇನ್ನೊಣಗಳಿವೆ ಎಂದ ನನ್ನ ಭಾವಮೈದುನ'. 'ನಾನು ಇಲ್ಲಿ ಇಲ್ಲದಿರುವಾಗ ನಾನೇನಾದರೂ ಬಂದರೆ, ನಾನು ಬರುವ ತನಕ ನನ್ನನ್ನು ಇಲ್ಲೇ ಇರಿಸಿಕೊಂಡಿರು.' 'ನಾನು ಎಲ್ಲರಂತೆ ಇರಬೇಕಾದರೆ, ಕಾರುಗಳನ್ನೆಲ್ಲ ಹಡಗುಗಳಾಗಿ ಬದಲಾಯಿಸಬೇಕು, ಅನ್ನಿಸುತ್ತದೆ. ಅವಕ್ಕಿಂತ ನಾನೇ ಜೋರಾಗಿರುವೆ.' ಈ ತಾರುಮಾರು ಬಯಲಾಗಬೇಕಾದರೆ ರೋಗಿಯ ಕಣ್ಣು ಮರಳುಗಳ (ಡೆಲ್ಯೂಷನ್ಸ್) ವಿಚಾರ ಎತ್ತಿದರೆ ಮಾತ್ರ ಸಾಧ್ಯ. ಉಳಿದ ವಿಚಾರಗಳಲ್ಲಿ ರೋಗಿ ಎಲ್ಲರಂತೆ ಇರುವ. ಈ ವಿಚಿತ್ರವನ್ನು ಆರೋಗ್ಯವಂತರು ಕೂಡ ತಮ್ಮ ಕನಸುಗಳಲ್ಲೂ ನಿದ್ದೆ ಹತ್ತುವಾಗಲೂ ಕಾಣುತ್ತಾರೆ. ಆದರೆ ಇಚ್ಚಿತ್ತರೋಗಿ ಇವನ್ನು ಹಗಲಿನ ಎಚ್ಚರದ ಜೀವನದಲ್ಲೂ ಅನುಭವಿಸುವನು. ಇದರಿಂದಲೇ, ರೋಗಿಯೊಂದಿಗೆ ಮಾತಾಡುವವರು ಹಾಗೆ ಹುಚ್ಚುಹುಚ್ಚಾಗಿ ವಿಚಾರಗಳನ್ನು ಚೆನ್ನಾಗಿ ಹೇಳಿ ತಮ್ಮನ್ನೇ ಅಣಕಿಸುವ ನೆಂದು ಭಾವಿಸುವರು. ಹೀಗೇ ಬೇರೂರಿದ (ಕ್ರಾನಿಕ್) ಇಚ್ಚಿತ್ತ ರೋಗಿಯೊಬ್ಬ ತಮಾಷೆಗಾರ ಎನಿಸಿಕೊಂಡು ಹೊಟ್ಟೆ ಹೊರೆದುಕೊಳ್ಳುತ್ತಿದ್ದನಂತೆ. ತನ್ನಲ್ಲಿ ತಾನು ಮುಳುಗಿರುವುದರಿಂದ ಈ ವಿಚಿತ್ರ ಪ್ರದರ್ಶನಗಳು ಸಾಧ್ಯ. ಅಲ್ಲದೆ ತನ್ನ ಹಗಲುಗನಸುಗಳಿಗೆ ಅಡ್ಡಿ ಬರುವುದನ್ನು ಸಹಿಸದೆ ರೋಗಿ ಗೊಣಗುತ್ತಿರುವನು.

ಬಹುಮಟ್ಟಿಗೆ ಯೋಚನೆ ಕೆಟ್ಟಿದ್ದರಿಂದ ಭ್ರಮೆಗಳು ಏಳುತ್ತವೆ. ಇವು ವಿಚಿತ್ರವಾಗಿರ ಬಹುದು. ಇದ್ದಕ್ಕಿದ್ದ ಹಾಗೆ ಮನಸ್ಸಿಗೆ ನಾಟುವುದರಿಂದ, ಇವನ್ನು ರೋಗಿ ಪೂರಾ ನಂಬಿ ವಾದಿಸುವನು. ಇದರಲ್ಲೂ ಇಚ್ಚಿತ್ತ ರೂಪ ತೋರಬಹುದು. ತನ್ನ ಹೆಂಡತಿ ತನಗೆ ವಿಷ ಹಾಕಿದಳೆಂದು ರೋಗಿ ಹೇಳಿದ್ದನ್ನು ವಿಚಾರಿಸಿಕೊಂಡ ಮೇಲೆ, ತಾನು ಅರಗಿಸಿಕೊಳ್ಳಲಾಗದ ಊಟ ಹಾಕುವಳೆಂದು ತೇಲಿಸಿ ಹೇಳುತ್ತಾನೆ.

ಎಲ್ಲದರಲ್ಲೂ ಏನೋ ಅರ್ಥವಿದೆ, ಒಳಗೊಳಗೇ ಏನೋ ನಡೆಯುತ್ತಿದೆ. ಇದರಿಂದ ತನಗೇನೋ ಕೆಟ್ಟದ್ದು ಕಾದಿದೆ ಎಂದು ಭ್ರಮಿಸುತ್ತಾನೆ. ಕೆಲವೇಳೆ ಇದನ್ನೆಲ್ಲ ಪತ್ತೆ ಹಚ್ಚಿ, ಇದಕ್ಕೆ ಮತದ ಇಲ್ಲವೇ ಜಾತಿಯ ಬಣ್ಣ ಹಚ್ಚುತ್ತಾನೆ. ಕೆಲವು ವೇಳೆ ತನಗೆ ಯಾರೋ ಮಾಯ ಮಾಟ ತಂತ್ರ ಮಾಡಿಸಿಬಿಟ್ಟಿರುವರು ಎಂದುಕೊಳ್ಳುವನು. ರೋಗಿಯ ವಿದ್ಯೆ, ಅಂತಸ್ತುಗಳಿಗೆ ತಕ್ಕ ಭ್ರಾಂತಿಗಳು ಹುಟ್ಟುತ್ತವೆ. ಇಲ್ಲಿ ರೋಗಿಯ ಲಕ್ಷಣಗಳಲ್ಲಿ, ಚೆನ್ನಾಗಿರುವ ಬುದ್ಧಿಯೊಂದಿಗೆ ವಿಚಿತ್ರ ಭ್ರಮೆಗಳೂ ಸೇರಿಕೊಂಡಿರುತ್ತವೆ. ಕೆಲವೇಳೆ ಭ್ರಮೆಯ ನಂಬುಗೆಯಂತೆ ರೋಗಿ ವರ್ತಿಸುವುದಿಲ್ಲ.

ಬುದ್ಧಿ ಚೆನ್ನಾಗೇ ಇರುವುದು. ಎಚ್ಚರವಂತು ಎಂದಿಗೂ ತಪ್ಪದು. ನೆನಪು ಚೆನ್ನಾಗಿದ್ದರೂ ನಿರಾಸಕ್ತಿ, ಭ್ರಮೆ, ಭ್ರಾಂತಿಗಳು ಅಡ್ಡಿಯಾಗಬಹುದು. ಎಷ್ಟೋ ದಿನಗಳಿಂದ ಮತಿಗೆಟ್ಟವನಂತೆ ಇದ್ದವನಿಗೆ ಅಮೈಲೊಬಾರ್ಬಿಟೋನ್, ಇನ್ಸುಲಿನ್ ತೆರನ ಮದ್ದು ಕೊಟ್ಟರೆ, ಬಲವಾದ ಬೇರೆ ಸಖತ್‌ಕಾಯಿಲೆಯೋ ಆಘಾತವೋ ತಾಕಿದರೆ, ಮನಸ್ಸು ಕೆಟ್ಟೇ ಇಲ್ಲ ಎನ್ನುವಂತೆ ವರ್ತಿಸುತ್ತಾನೆ. ಕೆಲವು ಬಾರಿ ಯಾರೂ ನಿರೀಕ್ಷಿಸದ ಕೆಲಸಗಳನ್ನು ಮಾಡುತ್ತಾನೆ. ಅವನ ಮಾತು ಬರವಣಿಗೆಗಳಲ್ಲಿ ಯೋಚನೆಯ ತಾರುಮಾರನ್ನು ಚೆನ್ನಾಗಿ ಕಾಣಬಹುದು : ತನ್ನವೇ ಬೇರೆಯಾದ ಪದ, ಸಂಕೇತ, ವ್ಯಾಕರಣ, ಹೇಳಿದ್ದೇ ಹೇಳುವುದು, ತೊದಲು ನುಡಿಯಲ್ಲಿ ಮತ್ತೊಬ್ಬರು ಹೇಳುವಂತೆ ಮಾತು. ಆದರೂ ಮಾತು, ಬರಹಗಳಲ್ಲಿ ಹೊರಗೇನೂ ವಿಚಿತ್ರ ತೋರದಿರಲೂಬಹುದು. ರೋಗ ಬೇರೂರಿದ ರೋಗಿ ಬೇರೆ ಗಂಟಲಿನ ದನಿಯಲ್ಲಿ ಮಾತಾಡಬಹುದು. ಬರವಣಿಗೆ ಚಿತ್ತಾರವಾಗಿರಬಹುದು.

**ಮನೋಭಾವದ ಅಸಹಜತೆ:** ಎಂದಿನಿಂದಲೂ ತಾನು ಪ್ರೀತಿಸುತ್ತಿದ್ದವರಲ್ಲಿ ಒಲವು ಕುಗ್ಗಿರುವುದೂ ಹಲವು ವೇಳೆ ಅವರನ್ನು ಕಂಡರೆ ಆಗದಿರುವುದೂ ಮೊದಮೊದಲು ರೋಗಿಗೇ ಅರಿವಾಗುತ್ತದೆ. ಒಮ್ಮೊಮ್ಮೆ ಆನಂದ, ನಿರಾಸೆ, ದಿಗಿಲು, ಸಾವಿನ ನರಳಿಕೆ, ಪೂರಾ ಜಡತೆ, ಧ್ಯಾನ ಹೀಗೆಲ್ಲ ಮಿತಿಮೀರಿದ ಉದ್ವೇಗಗಳು ಇಚ್ಚಿತ್ತ ರೋಗಿಯಲ್ಲಿ ಕಾಣುವುದು ಹೆಚ್ಚೇನಲ್ಲ. ಇನ್ನೂ ಹೆಚ್ಚಿನದಾಗಿ, ಕರುಣಾಜನಕ ಸುದ್ದಿಯನ್ನು ತನಗಿನಿತೂ ತಟ್ಟದವನಂತೆ ಕೇಳುತ್ತಾನೆ, ನಿರಾಸಕ್ತನಾಗಿರುತ್ತಾನೆ. ತನ್ನವರಿಗೇ ಆದ ಅನಾಹುತಗಳನ್ನು ಕೇಳಿ ನಗುತ್ತಾನೆ. ಇಲ್ಲವೇ ಬೇಜಾರು ಪಡುತ್ತಾನೆ. ಆದರೆ, ರೋಗಿಗೆ ಇವುಗಳಿಂದ ಆಗುವ ಅರ್ಥಗಳೇ ಬೇರೆ. ರೋಗಿ ಆಡುವ ಮಾತುಗಳಿಂದಲೂ ಅವನ ನಿಜವಾದ ಯೋಚನೆಗಳು ನಮಗೆ ತಿಳಿಯವು. ಏಕೆಂದರೆ, ಮಾತುಗಳಿಗೆ ಆತ ಕೊಡುವ ಅರ್ಥಗಳೇ ಬೇರೆ. ಹೀಗೆ, ಏನೇನೂ ತಿಳಿಯದಂತೆ ಕುಳಿತಿದ್ದಾತ ಇದ್ದಕ್ಕಿದ್ದ ಹಾಗೆ ರೇಗು, ಕಳವಳ, ಅಳು, ಉದ್ರೇಕ, ಪ್ರೀತಿ ತೋರಬಹುದು. ಅವನಾಡುವ ಮಾತುಗಳಿಗೂ ಮೊಗಚರ್ಯೆಗೂ ಸಂಬಂಧ ಇರದಂತೆ ಕಾಣುತ್ತಾನೆ. ಆಗ ತಾನೇ ಕಂಡು ಚೆನ್ನಾಗಿ ಮಾತನಾಡಿಸಿದ ಒಬ್ಬನನ್ನು ಇನ್ನೊಂದು ಗಳಿಗೆಯಲ್ಲಿ ಸಿಕ್ಕಾಪಟ್ಟೆ ಬಯ್ಯಬಹುದು. ಆ ಗಳಿಗೆಯಲ್ಲಿ ತನ್ನ ಚಿತ್ತ ಹೇಗಿರುವುದೋ ಹಾಗೆ ವರ್ತಿಸುತ್ತಾನೆ.

**ಭ್ರಮೆಗಳು:** ಏನೇನೋ ಕಂಡೆ, ಕೇಳಿದೆ ಎಂದು ರೋಗಿ ವಿವರಿಸಲು ಭ್ರಮೆ, ಭ್ರಾಂತಿಗಳೇ ಕಾರಣ. ಎಲ್ಲರೂ ತನ್ನನ್ನು ಕೊಲ್ಲಲು ಹವಣಿಸುತ್ತಿರುವರು ಎನ್ನುತ್ತಾನೆ. ತಾನೊಬ್ಬ ಮಹಾ ಪಂಡಿತ, ನಟ, ಕವಿ, ಚಕ್ರವರ್ತಿಯೆಂದೇ ವರ್ತಿಸುತ್ತಾನೆ. ಈ ರೋಗಿಯಲ್ಲಿ ಇವು ಬಲು

ಸಾಮಾನ್ಯ ಮತ್ತೂ ಹಾಗೇ ಉಳಿದು ಬಿಡುತ್ತವೆ. ವಾಸನೆ, ರುಚಿ, ನೋಟಗಳ ಭ್ರಮೆಗಳೂ ಸಾಮಾನ್ಯವೇ. ಕೆಲವೇಳೆ ತಾನು ಯೋಚಿಸಿದ್ದನ್ನೇ ಹೇಳುತ್ತಿರುವನೋ ಕಿವಿಗೆ ಕೇಳಿದ್ದನ್ನೇ ಹೇಳುತ್ತಿರುವನೋ ಗೊತ್ತೇ ಆಗದು. ಕೋಣೆಯಲ್ಲಿ ತಾನೊಬ್ಬನೇ ಇದ್ದರೂ ತನ್ನನ್ನು ಎಲ್ಲರೂ ಅಣಕಿಸುತ್ತಿರುವಂತೆ ಭಾವಿಸುತ್ತಾನೆ. ಮನಸ್ಸಿನಲ್ಲಿ ಇರುವುದೆಲ್ಲ ಕಿವಿಯಲ್ಲಿ ಕೇಳಿದಂತಾಗಿ, ಕೊಲ್ಲು, ಹೊಡೆ, ಚಚ್ಚು ಎಂದು ಕೇಳಿದಾಗ ಹಾಗೇ ಮಾಡಿಬಿಡಬಹುದು. ತಾನೊಬ್ಬನೇ ಹಾಗೆಲ್ಲ ಮಾತಾಡಿಕೊಳ್ಳುತ್ತಿರಬಹುದು. ಮೈಯಲ್ಲಿ ಏನೇನೋ ಆಗುತ್ತಿದೆ. ಏನೋ ಬೆಳೆಯುತ್ತಿದೆ ಎನ್ನಬಹುದು. ಮುಖ ದೊಡ್ಡದಾಗಿ ಹಿಗ್ಗಿದಂತೆ, ಕೈಯಲ್ಲಿ ಮಾತ್ರ ರಕ್ತದ ಹರಿವು ನಿಂತಹಾಗೆ. ಹೊಟ್ಟೆಯಲ್ಲಿ ದಪ್ಪ ಗಡ್ಡೆ ಎದ್ದಂತೆ, ಮೈ ಬಣ್ಣವೆಲ್ಲ ಬದಲಾದಂತೆ, ಮಿದುಳಿಗೆ ಮಾತ್ರ ರಕ್ತ ಹರಿದಂತೆ ರೋಗಿಗೆ ಭ್ರಮೆ ಆಗಬಹುದು. ತನ್ನ ತಲೆಯಲ್ಲಿ ಬಂದು ಹೋಗುವುದನ್ನೆಲ್ಲ ಬಾಯಲ್ಲಿ ಆಡುತ್ತಿರಬಹುದು.

**ನಡೆವಳಿಕೆ, ನಡತೆ:** ದುಡುಕುತನ, ಅಡ್ಡಾದಿಡ್ಡಿ ಓಡಾಟಗಳು ಇಚ್ಚಿತ್ತ ರೋಗಿಯಲ್ಲಿ ಬೇಗನೆ ತೋರುತ್ತವೆ. ಕನ್ನಡಿ ನೋಡಿಕೊಂಡು ಕಪಿಮುಖ ಮಾಡಿಕೊಂಡು ಅಣಕಿಸುತ್ತ ಆಮೇಲೂ ಹಾಗೇ ಇದ್ದುಬಿಡಬಹುದು. ಅಲ್ಲದೆ, ಕೈ, ಕಾಲು, ಮೋರೆ, ಕೆನ್ನೆ, ಮೂತಿ, ಕಣ್ಣು, ಮೈ ಹುಚ್ಚುಚ್ಚಾಗಿ ಆಡಿಸುತ್ತಿರಬಹುದು. ಬರುಬರುತ್ತ ಇವು ತಗ್ಗುತ್ತವೆ. ಮೇಣತೆರನ ಅಂಗದಿರವಿನಲ್ಲಿ (ಫ್ಲೆಕ್ಸಿಬಿಲಿಟಾಸ್ ಸೀರಿಯ) ಅಲುಗಾಡದೆ ಬೊಂಬೆಯಂತೆ, ಹೇಗಿರಿಸಿದ್ದರೆ ಅದೇ ಭಂಗಿಯಲ್ಲಿ ಎಷ್ಟೋ ಹೊತ್ತು ಉಳಿದಿದ್ದು, ಇದ್ದಕ್ಕಿದ್ದ ಹಾಗೇ ಚೂಟಿಯಾಗಿ ಕುಣಿದು ಕುಪ್ಪಳಿಸಬಹುದು. ಕೊಳಕು, ಹೇಸಿಗೆ ಗೊತ್ತಾಗದಿರಬಹುದು. ಬಹುಮಟ್ಟಿಗೆ ರೋಗಿಯನ್ನು ಹೇಗಿರಿಸಿದ್ದರೆ ಹಾಗೇ ಬಿದ್ದಿರುತ್ತಾನೆ. ಇಚ್ಚಿತ್ತ ರೋಗಿಯ ನಡೆವಳಿಕೆ ಕೇಂದ್ರದ ನರ ಮಂಡಲದ ಅನೇಕ ರೋಗಗಳನ್ನು ಹೋಲುತ್ತದೆ. ಇವನ್ನು ಬಿಡಿಸಿ ತಿಳಿಯುವುದು ಪರಿಣತ ವೈದ್ಯನಿಗೆ ಮಾತ್ರ ಸಾಧ್ಯ.

**ವ್ಯಕ್ತಿತ್ವ:** ಕೆಲವು ವರ್ಷಗಳು ಕಳೆದ ಮೇಲೆ, ಇಚ್ಚಿತ್ತದ ಯಾವ ಖಚಿತ ಲಕ್ಷಣಗಳೂ ಹೊರಗಾಣದಿರುವಾಗ, ರೋಗಿಯ ವ್ಯಕ್ತಿತ್ವ ಬದಲಾಗಿರುವುದನ್ನು ರೋಗಿಯ ಹತ್ತಿರದವರಿಂದ ತಿಳಿಯಬೇಕು. ವಿಚಿತ್ರವಾಗಿ ಏನು ಮಾಡುವನೆಂಬುದೇ ಗೊತ್ತಾಗದೆಂದೂ ಯಾರಲ್ಲೂ ಸೇರದೆ ತನ್ನಷ್ಟಕ್ಕೆ ತಾನು ಇರುವನೆಂದೂ ಹೇಳುವರು. ತಮ್ಮಲ್ಲಿ ಆಗುತ್ತಿರುವ ಬದಲಾವಣೆಗಳು ಕೆಲವು ರೋಗಿಗಳಿಗೆ ಗೊತ್ತಾಗುತ್ತಿದ್ದರೆ, ಇನ್ನು ಹಲವರಿಗೆ ಅವುಗಳ ಅರಿವೇ ಅಷ್ಟಾಗಿರದು. ಒಂದೇ ಬಾರಿ ವಿರುದ್ಧ ವಿಚಾರಗಳು, ಭಾವನೆಗಳು, ಯೋಚನೆಗಳು ಮನದಲ್ಲಿ ಏಳುವುದರಿಂದ ಇಬ್ಬಂದಿಯಾಗಿ ವರ್ತಿಸುತ್ತಾನೆ. ಇದರಿಂದ ಕೆಲಸ ಅಡ್ಡಾದಿಡ್ಡಿ ಆಗುತ್ತದೆ.

**ಮೈ ಲಕ್ಷಣಗಳು:** ಮೈಯಲ್ಲಿ ಏನೇನೋ ಆಗುವುದೆಂದು ಹೇಳುವುದರ ಜೊತೆಗೆ, ಎಳೆಯರಲ್ಲಿ ಕೈಕಾಲು ನೀಲಿಗಟ್ಟಿ ತಣ್ಣಗಿರುವುದು, ಮೈಮೇಲೆ ಅರಳು ದದ್ದುಗಳು (ಎಗ್ಜಾಂತೆಂಸ್) ಊತ ಕಾಣಬಹುದು. ಮೈಜಿಡ್ಡುಸುರಿತ (ಸೆಬೋರಿಯ) ಸಾಮಾನ್ಯ. ಕೆಲವೇಳೆ ಹೆಂಗಸರಲ್ಲಿ ಅಸಹಜವಾಗಿ ಕೂದಲು ಬೆಳೆಯಬಹುದು. ಮೊದಮೊದಲು ಮೈತೂಕ ಇಳಿದು ಆಮೇಲೆ ಬೊಜ್ಜಾಗಬಹುದು. ಮುಟ್ಟು ಕ್ರಮಗೆಡಬಹುದು. ಮೈಕಾವೂ ಏರುಪೇರಾಗಬಹುದು. ಸೊಕ್ಕು (ಸ್ಟೂಪರ್) ಬಲು ಸಾಮಾನ್ಯ.

ಬಗೆಗಳು ಮುಖ್ಯವಾಗಿ ಮೂರು ತೆರನಿವೆ : 1. ಇದ್ದಕ್ಕಿದ್ದಂತೆ ಏಳುವ ಬಿಗುವೇರಿಳಿತದ (ಕೆಟಟೋನಿಕ್) ರೂಪ; 2. ಎಳೆತನದಲ್ಲೇ ಬಂದು ಬೇರೂರುವ ಸರಳ ಹರಯಮನದ (ಹೆಬಿಫ್ರೇನಿಕ್) ರೂಪ; 3. ನಿಧಾನವಾಗಿ ಬಂದು ಭ್ರಮೆಗಳಿರುವ ಪರಚಿತ್ತ ಈ (ಪ್ಯಾರನೋಯಿಕ್) ರೂಪ; ಇವೆಲ್ಲ ಬೇರೆ ಬೇರೆಯಾಗಿ ಕಾಣವು. ಆದ್ದರಿಂದಲೇ, ಯಾವೊಬ್ಬ ರೋಗಿಯ ರೋಗದ ಬಗೆಯ ನಿರ್ಧಾರಕ್ಕಾಗಿ ಯತ್ನಿಸಬೇಕಿಲ್ಲ. ಚಿಕಿತ್ಸೆಯ ಪರಿಣಾಮಕ್ಕೂ ರೋಗದ ಮುನ್‌ತಿಳಿವಿಗೂ ಈ ಬಗೆಗಳಿಗೂ ಸಂಬಂಧವಿಲ್ಲ.

**ಚಿಕಿತ್ಸೆ:** ರೋಗಕಾರಣ ಗೊತ್ತಿಲ್ಲದ್ದರಿಂದ ಯಾವೊಂದು ಚಿಕಿತ್ಸೆಯೂ ಖಚಿತವಲ್ಲ. ಪರಿಣತರಿಂದಾದ ತಕ್ಕ ಮನೋರೋಗ ಚಿಕಿತ್ಸೆ, ಒಪ್ಪುವ ವೃತ್ತಿ, ಬಾಳಿನಲ್ಲಿ ಆಸಕ್ತಿ ಹುಟ್ಟಿಸುವುದೇ ಮುಂತಾದವಿಂದ ರೋಗಿಯ ಭಾವನೆ, ನಡೆವಳಿಕೆಗಳನ್ನು ಒಲಿಸಿಕೊಳ್ಳುವಂತೆ ಇರಿಸಲು ನಿಜವಾಗಿ ಯತ್ನಿಸುವುದು ಮುಖ್ಯ. ರೋಗಿಯೂ ಮನಸಾರೆ ಒಪ್ಪಿಕೊಂಡು ನೆರವಾಗಬೇಕು. ರೋಗಿಯ ಮನೋಭಾವಕ್ಕೆ ತಕ್ಕನಾಗಿ ಅವನ ಪರಿಸರದ ಏರ್ಪಾಡು, ಬದಲಾವಣೆಗಳಿಗೂ ಮನವೊಪ್ಪುವ ಕೆಲಸದಲ್ಲಿ ಇರಿಸಲೂ ಅವನ ಒಂದಿಗರು ಅವನನ್ನು ಸರಿಯಾಗಿ ನೋಡಿಕೊಳ್ಳುವಂತೆ ತಿಳಿಸಿಕೊಡಲೂ ಸಮಾಜ ಕಾರ್ಯಕರ್ತನ (ಸೋಷಿಯಲ್ ವರ್ಕರ್) ನೆರವೂ ಬೇಕಾಗಬಹುದು. ಇದ್ದಕ್ಕಿದ್ದಂತೆ ಕೆರಳಿರುವ ರೋಗಿಗೆ ಇವನು ನೆರವಾಗದಿದ್ದರೂ ಬೇರೂರಿದ (ಕ್ರಾನಿಕ್) ರೋಗಿಯನ್ನೂ ಆಸ್ಪತ್ರೆಯಿಂದ ಹಿಂದಿರುಗಿದವನನ್ನೂ ನೋಡಿಕೊಳ್ಳುವಾಗ ನೆರವಾಗುವನು. ಅದಕ್ಕಾಗೇ ಇಚ್ಚಿತ್ತ ರೋಗಿಯನ್ನು ಪೂರ್ತಿ ವಾಸಿಯಾಗಲೆಂದು ಆಸ್ಪತ್ರೆಯಲ್ಲೇ ಹೆಚ್ಚು ಕಾಲ ಇರಿಸಿಕೊಳ್ಳದೆ ಸಾಧ್ಯವಾದಷ್ಟು ಬೇಗನೇ ಕಳುಹಿಸುವುದು ಒಳ್ಳೆಯದು. ಆದರೆ ಮನೆಯಲ್ಲಿನ ಸ್ಥಿತಿ ಚೆನ್ನಾಗಿರಬೇಕು.

ಬೇನೆಯ ತೀವ್ರತೆ, ಸಾಮಾಜಿಕ ತೊಂದರೆಗಳ ಸಂಭವಕ್ಕೆ ತಕ್ಕಂತೆ, ಅಂತೂ ಒಂದು ಮಾನಸಿಕ ಆಸ್ಪತ್ರೆಗೋ ಚಿಕಿತ್ಸಾಲಯಕ್ಕೋ ರೋಗಿಯನ್ನು ಯಾವುದಾದರೂ ಒಂದು ಹಂತದಲ್ಲಿ ಸೇರಿಸಲೇಬೇಕಾಗುತ್ತದೆ. ಆಸ್ಪತ್ರೆಯಲ್ಲಿ ಬಹುಕಾಲ ಇರಬೇಕಿರುವವರ ಆರೋಗ್ಯವನ್ನು ಜೋಪಾನಿಸಲು ಈಗ ಉದ್ಯೋಗದ ರೋಗಚಿಕಿತ್ಸೆ (ಆಕ್ಯುಪೇಷನಲ್ ತೆರಪಿ), ಆರಾಮ–ಇವಿವೆ. ಇದರಿಂದ ಜನರೊಂದಿಗೆ ರೋಗಿ ಹೊಂದಿಕೊಳ್ಳಲು ನೆರವಾಗುವುದು.

ಒಬ್ಬನ ಮನಸ್ಸನ್ನು ಬದಲಿಸಲು ಯೋಚಿಸಬಹುದಾದ ಎಲ್ಲ ವಿಧಾನಗಳನ್ನೂ ಈ ರೋಗದ ಚಿಕಿತ್ಸೆಯಲ್ಲಿ ಮಾಡಿನೋಡಿದ್ದಾಗಿದೆ. ಕೆಲವಂತೂ ಬೇರೆ ಮನೋರೋಗಗಳಲ್ಲಿ ಕೈಗೂಡಿದಂಥವು. ಹೆಚ್ಚು ಪ್ರಮಾಣಗಳಲ್ಲಿ ಗುರಾಣಿಕ (ತೈರಾಯ್ಡ್) ಮತ್ತಿತರ ಒಳಸುರಿಕ ಮದ್ದು ತಯಾರಿಕೆಗಳು, ಜನನಾಂಗಗಳ ನಾಟಿಹಾಕಣೆ, ಮೈಯಲ್ಲಿ ಎಲ್ಲಾದರೂ ಕೀವಿನ ನೆಲೆಗಳನ್ನು ಕಿತ್ತುಹಾಕುವಿಕೆ, ಮಲೇರಿಯ ಅಂಟಿಸಿ ಜ್ವರವೇರಿಕೆ, ಮಾನವ ರಸಿಕೆ (ಸೀರಂ), ಮ್ಯಾಂಗನೀಸ್ ಲವಣಗಳು, ಮೈತಣ್ಣಗಾಗಿಸಿಕೆ (ಹೈಪೊತರ್ಮಿಯ), ಎಡಬಿಡದೆ ಮಂಪರಗೊಳಿಕೆ (ನಾರ್ಕೋಸಿಸ್)–ಇವನ್ನೆಲ್ಲ ಕೊಟ್ಟು ಮಾಡಿನೋಡಿದೆ. ಕೆಲವರಿಗಂತೂ ದಿಢೀರನೆ ಸೊಕ್ಕೆ ಬರಿಸಿ ನೋಡಿದೆ. ಇಂಥ ಸೊಕ್ಕೆಗೊಳಿಕ ವಿಧಾನಗಳು ಹಿಂದಿನ ಕಾಲದಲ್ಲಿ ಬೇಕಾದಷ್ಟಿದ್ದವು: ಗಿರ್ರನೆ ಸುತ್ತಿ ತಿರುಗುವ ಕುರ್ಚಿಯಲ್ಲಿ ಕೂರಿಸುವುದು, ಎತ್ತರದಿಂದ ಸರಕ್ಕನೆ ತಳ್ಳುವಿಕೆ, ತಣ್ಣಗೆ ಕೊರೆವ ನೀರಿನಲ್ಲಿ ಅದ್ದುವುದು–ಇತ್ಯಾದಿ. ಇನ್ಸುಲಿನ್ ಇಲ್ಲವೇ ಒಂದು ಸೆಳವು ಬರಿಸುವ ಮದ್ದನ್ನು ಚುಚ್ಚುವುದೇ ಇವಕ್ಕೂ ಹೆಚ್ಚಿಗೆ ಮೈಯಲ್ಲೆಲ್ಲ ಪರಿಣಾಮಕರವಾಗುವ ಈಚಿನ ವಿಧಾನ. ಕೆಲವು ಕೂರಾದ (ಅಕ್ಯೂಟ್) ಸೊಕ್ಕುಗಳಲ್ಲೂ (ಸ್ಟೂಪರ್ಸ್), ಒಂದಿಷ್ಟು ಮನೋದ್ವೇಗ ಇರುವ ರೋಗಗಳಿಗೆ ಇದರಿಂದ ಒಳ್ಳೆಯದು. ವಿದ್ಯುತ್‌ಸೆಳವಿನ ರೋಗಚಿಕಿತ್ಸೆ (ಎಲೆಕ್ಟ್ರೋಕನ್ವಲ್ಸಿವ್ ತೆರಪಿ) ಇಚ್ಚಿತ್ತ ರೋಗಿಯ ಚಿಕಿತ್ಸೆಯಾಗಿ ಜಾರಿಗೆ ಬಂದರೂ ಈಗ ಸೊಕ್ಕು ಬಿದ್ದಿರುವ, ಕುಂದಿದ ಮನದ ರೋಗಿಗೆ ಮಾತ್ರ ಹಿಡಿಸುತ್ತದೆ.

ಈಚೀಚೆಗೆ ಬಹುಮಟ್ಟಿಗೆ ರೂಢಿ ತಪ್ಪುತ್ತಿರುವ, ಇನ್ಸುಲಿನ್ ಚಿಕಿತ್ಸೆಯನ್ನು ಮನೋವಿಜ್ಞಾನಿಗಳು ಬಹಳ ಒಳ್ಳೆಯ ಚಿಕಿತ್ಸೆ ಎಂದೂ ಇಚ್ಚಿತ್ತ ಬೇನೆಯನ್ನು ತಡೆದು ಎಷ್ಟೋ ಮಂದಿಗೆ ಗುಣ ತೋರಿದೆಯೆಂದೂ ನಂಬಿದ್ದರು. ಇಷ್ಟೇ ಹುಮ್ಮಸ್ಸು ಆಸಕ್ತಿಗಳಿಂದ ಇತರ ಚಿಕಿತ್ಸೆಗಳನ್ನು ಮಾಡಿದರೂ ಇದರಷ್ಟೇ ಗುಣ ತೋರುವುದೆಂದೂ ಇತರರ ಅಭಿಪ್ರಾಯ. ಎಷ್ಟೋ ಬಾರಿ ಎಳೆಯದರಲ್ಲಿ ಈ ರೋಗವನ್ನು ಕಂಡುಹಿಡಿವ ಕಷ್ಟ, ಇದರೊಂದಿಗೆ ಅಷ್ಟೇನೂ ಕೆಡುಕುಮಾಡದ ಮನೋರೋಗ ಅನೇಕವೇಳೆ ಜೊತೆಗಿರುವುದೂ ಇಚ್ಚಿತ್ತರೋಗ ಎಲ್ಲರಲ್ಲೂ ಒಂದೇ ತೆರನಾಗಿ ಹೆಚ್ಚದಿರುವುದೂ ಚಿಕಿತ್ಸೆಯ ಫಲದ ವಿಚಾರವಾಗಿ ಹಾಗೆ ಬೇರೆಬೇರೆ ಅಭಿಪ್ರಾಯಗಳು ಬರಲು ಕಾರಣಗಳು. ಇದೂ ಅಲ್ಲದೆ, ಇನ್ಸುಲಿನ್ ಚಿಕಿತ್ಸೆ ಬರುವ ಮುಂಚೆ, ವೈದ್ಯರು ಇನ್ನೇನೂ ಮಾಡದೆ ಇದನ್ನು ವಾಸಿಯಾಗದ ಕಾಯಿಲೆಯೆಂದು ಕೈಬಿಟ್ಟಿದ್ದರು.

ಹತೋಟಿಗೆ ಬರದ ಮೊದಮೊದಲ ಹಂತಗಳಲ್ಲಿ ಕೆಲವುವೇಳೆ ಕೆಲವು ನೆಮ್ಮದಿಕಾರಕ (ಟ್ರಾನ್‌ಕ್ವಿಲೈಸರ್) ಮದ್ದುಗಳನ್ನು ಹೆಚ್ಚುಕಾಲ ಕೊಡಬೇಕಾಗುವುದಾದರೂ ಕೇವಲ ಮದ್ದುಗಳಿಂದಲೇ ವಾಸಿಯಾಗುವಂತಿಲ್ಲ. ಆದರೆ ಚಿಕಿತ್ಸೆಗಾಗಿ ಈ ರೋಗಿಗಳನ್ನು ಇನ್ನೂ ಚೆನ್ನಾಗಿ ನೋಡಿಕೊಳ್ಳಲು ಅನುವಾಗುತ್ತವೆ ಅಷ್ಟೆ.

ಯಾವಾಗಲೂ ಹತೋಟಿಗೆ ಬರದಷ್ಟು ಕೆರಳಿರುವ ರೋಗಿಗಳಿಗೆ ನೊಸಲ ಮುಂದಿನ ಬೆಳ್ಮಿದುಳ ಕೊಯ್ಸೀಳಿಕೆ (ಪ್ರಿಫ್ರಾಂಟಲ್ ಲೂಕಾಟಮಿ) ಶಸ್ತ್ರಕ್ರಿಯೆಯಾದರೆ ತೆಪ್ಪಗಾಗುವರು. ಇದು ತೀರ ಕೊನೆಯ ಉಗ್ರಕ್ರಮ. ಇದರಲ್ಲಿ ಮಿದುಳಿನ ಕೆಲವು ನರಸಂಬಂಧಗಳನ್ನು ಕೊಯ್ದುಹಾಕುವರು.

ಹೊರಗಣ ಪರಿಸರಕ್ಕೆ ಹೊಂದಿಕೊಳ್ಳದೆ ತನ್ನೊಳಗೆ ತಾನೇ ಮಗ್ನನಾಗಿರಲು ಬಿಟ್ಟರೆ, ರೋಗಿ ಇನ್ನಷ್ಟು ಬೀಳಾಗುವನು. ಜನರಲ್ಲಿ ಚೆನ್ನಾಗಿ ಬೆರೆತು ಹೊಂದಿಕೊಳ್ಳಲು ರೋಗಿಗೆ ಆಸ್ಪತ್ರೆ ವೈದ್ಯರೂ ದಾದಿಯರೂ ನೆರವಾಗಬೇಕು. ಉದ್ಯೋಗದ ರೋಗಚಿಕಿತ್ಸೆ ಈ ದಿಸೆಯಲ್ಲಿ ಹೆಚ್ಚಿನ ಸಹಾಯ ನೀಡುತ್ತದೆ. ರೋಗಿ ನಂಬುವ ಯಾರಾದರೂ ಒಬ್ಬರ ಉಸ್ತುವಾರಿ ಇದ್ದಷ್ಟೂ ಒಳ್ಳೆಯದು.

ರೋಗಿಯ ಮಾನಸಿಕ ರೋಗಚಿಕಿತ್ಸೆಗೆ ಅವನು ಹೇಳಿದ್ದನ್ನು ಸಾವಧಾನವಾಗಿ ಕೇಳುವವರು ಬೇಕು. ರೋಗಿಯ ಕಷ್ಟ ಕಾರ್ಪಣ್ಯಗಳ ಕಡೆಗೆ ಗಮನ ಕೊಟ್ಟಷ್ಟೂ ಹಿತಕರ.

**ಮುನ್‌ತಿಳಿವು:** ಇಚ್ಚಿತ್ತ ಎಂದೆಂದಿಗೂ ತೀವ್ರತರ ಕಾಯಿಲೆ. ಕೆಲವರಿಗೆ ಗುಣವಾಗುವುದಾದರೂ ರೋಗಿಯ ಮನಸ್ಸೇ ತೀರ ಕೆಟ್ಟುಹೋಗುತ್ತದೆ. ಆದರೆ ಮೊದಮೊದಲಲ್ಲೇ ಗುಣವಾಗದೆಂದು ಹೇಳಬರದು. ಇದ್ದಕ್ಕಿದ್ದಂತೆ ದಿಢೀರನೆ ಈ ರೋಗ ಬಂದಷ್ಟೂ ವಾಸಿಯಾಗುವ ಸಂಭವವೇ ಹೆಚ್ಚು. ಬೇಗನೆ ಚಿಕಿತ್ಸೆ ದೊರೆತಷ್ಟೂ ಅನಾಹುತ ಆಗುವುದನ್ನು ತಪ್ಪಿಸಬಹುದು.
(ಇ.ಎಸ್.ಜಿ.)

**ಇಚ್ಚಿಪ್ಪು ಮೀನು:** ಇಚ್ಚಿಪ್ಪು (ಲ್ಯಾಮೆಲ್ಲಿ ಬ್ರಾಂಕಿಯ) ಗುಂಪಿನ ಒಂದು ಬಗೆಯ ಕಡಲ ಮೃದ್ವಂಗಿ (ಸ್ಕ್ಯಾಲಪ್). ಇದು ಪೆಕ್ಟಿನ್ ಜಾತಿಗೆ ಸೇರಿದೆ. ಇದರಲ್ಲಿ ಜೀವಂತವಾಗಿರುವ ಪ್ರಭೇದಗಳು ಸು.300. ಎಲ್ಲ ಸಾಗರಗಳಲ್ಲೂ ಇವೆ. ಇವುಗಳಲ್ಲಿ ಕೆಲವು ಮಾನವನ ಆಹಾರ. ಮಧ್ಯ ಯುಗದ ಯಾತ್ರಿಕರು ಇವುಗಳ ಕವಡೆಗಳನ್ನು ಸಂಕೇತಮುದ್ರೆಗಳಿಗಾಗಿ ಧರಿಸುತ್ತಿದ್ದರು. ಪೆಕ್ಟಿನ್ ಜಾತಿಯ ಲ್ಯಾಮೆಲ್ಲಿಬ್ರಾಂಕಿಯದ ಉಪವರ್ಗವಾದ ಫಿಲಿಬ್ರಾಂಕಿಯಕ್ಕೆ ಸೇರಿದೆ. ಈ ಗುಂಪಿನ ಪ್ರಾಣಿಗಳ ಪ್ರಮುಖ ಲಕ್ಷಣಗಳು–ಕಿವಿರುಗಳಿಗೆ ದ್ವಂದ್ವ ತಂತುಗಳಿದ್ದು ಅವುಗಳ ಮೇಲೆ ಹೊಳೆಯುವ ಪದರಗಳಿವೆ; ಕಿವಿರುಗಳು ಲೋಮನಾಳಗಳ ತಟ್ಟೆಗಳಿಂದಲೂ

ಚೆನ್ನಾಗಿ ಬೆಳೆದ ನವಿರು ಪುಂಜದಿಂದಲೂ ಭದ್ರವಾಗಿ ಸೇರಿಕೊಂಡಿವೆ; ದೇಹದ ಮುಂಭಾಗ ಅಪೂರ್ಣ ಬೆಳೆವಣಿಗೆ ಪಡೆದಿದೆ. ಇದು ಒಂದೇ ಕಡೆ ನೆಲೆಸಿರುವ ಪ್ರಾಣಿಯಾದ್ದರಿಂದ ನವಿರು ಪುಂಜ ಸಮುದ್ರದ ತಳವನ್ನು ಬಲವಾಗಿ ಹಿಡಿದುಕೊಳ್ಳಲು ಸಹಾಯ ಮಾಡುತ್ತದೆ. ಚೆನ್ನಾಗಿ ಈಜಬಲ್ಲವು. ಚರ್ಮದ ಹೊರಮಡಿಕೆಯ ಅಂಚುಗಳಲ್ಲಿ ರೂಪಿತವಾದ ಕಣ್ಣುಗಳಿವೆ.



ಪೆಕ್ಟಿನ್ ಓಪರ್‌ಕ್ಯುಲಾರಿಸ್ ಸಾಮಾನ್ಯವಾಗಿ ಬ್ರಿಟಿಷ್ ದ್ವೀಪಗಳ ದಂಡೆಯ ತಳಭಾಗದಲ್ಲಿ, ಚಿಪ್ಪುಗಳ ರಾಶಿಯ ಮಧ್ಯೆ ಸ್ವಲ್ಪ ಮಣ್ಣಿನೊಡನೆ ಬೆರೆತುಕೊಂಡಿರುತ್ತದೆ. ಪೆಕ್ಟಿನ್ ಉಪಜಾತಿಗಳ ಪ್ರತಿನಿಧಿಗಳಾದ ಸೂಡೊಮುಸ್ಸಿಯಂ ಸಮುದ್ರದ ಬಹಳ ಆಳದಲ್ಲಿ ಕಂಡುಬರುತ್ತವೆ. ಉದಾ. ಪೆಕ್ಟಿನ್ ನಿಯೊಸಿಯಾನಿಕಸ್ ಪೆಸಿಫಿಕ್ ಸಾಗರದಲ್ಲಿ ಸುಮಾರು 635 ಮೀ ಆಳದಲ್ಲಿ ವಾಸಿಸುತ್ತದೆ. (ಕೆ.ಎಂ.ವಿ.)

**ಇಚ್ಛೆ[1]:** ಬುದ್ಧಿಪೂರ್ವಕವಾಗಿ ತನಗೆ ಹಿತವೆಂದು ಕಂಡುಬಂದ ವಸ್ತುವಿಗೆ ಮಾನವ ತೋರುವ ಮಾನಸಿಕ ಅಪೇಕ್ಷೆ ಎಂದು ತತ್ತ್ವಶಾಸ್ತ್ರದಲ್ಲಿ ಹೇಳಿದೆ. ಪ್ರಾಣಿಸಹಜವಾದ ಬಯಕೆಯಲ್ಲ, ಇಚ್ಛೆಯಲ್ಲಿ ವಿಚಾರಶಕ್ತಿ ಅಡಗಿದೆ. ಆದ್ದರಿಂದ ನೈತಿಕದೃಷ್ಟಿಯಿಂದ ಮತ್ತು ವ್ಯಕ್ತಿತ್ವದ ದೃಷ್ಟಿಯಿಂದ ಇಚ್ಛೆಗೆ ಪ್ರಾಮುಖ್ಯ ಬಂದಿದೆ. ಇಚ್ಛೆಯಲ್ಲಿ ಮಾನವನ ಸ್ವಭಾವದ ಸತ್ತ್ವವಿದೆ. ಹಸಿವಾದಾಗ ಆಹಾರವನ್ನು ಬಯಸುವುದು ಪ್ರಾಣಿಸಹಜವಾದ ಬಯಕೆ. ಆದರೆ ಮಾನವನ ಧ್ಯೇಯಸಾಧನೆಗೆ ಅಡ್ಡಿಬಂದಾಗ ಮಾನವ ಆಹಾರವನ್ನು ಬಯಸಿದರೂ ಇಚ್ಛಿಸುವುದಿಲ್ಲ.

ಇಚ್ಛೆ ಮಾನವನ ಶೀಲಕ್ಕನುಗುಣವಾಗಿರುತ್ತದೆ. ಅದು ಶೀಲವೆಂಬ ವೃತ್ತದಲ್ಲಿ ಒಂದು ರೇಖೆ. ಆ ವೃತ್ತದ ಆಚೆ ಅದಕ್ಕೆ ಯಾವ ಅರ್ಥವೂ ಇಲ್ಲ. ಒಬ್ಬನ ಇಚ್ಛೆಯಿಂದ ಅವನ ಶೀಲವನ್ನು ತಿಳಿಯಬಹುದು. ಇಚ್ಛೆ ಅವನ ಧ್ಯೇಯವನ್ನು, ದೃಷ್ಟಿಕೋನವನ್ನು ಸೂಚಿಸುತ್ತದೆ. ಆದ್ದರಿಂದ ಇಚ್ಛೆ ಕ್ಷಣಿಕವಾದ ಮಾನಸಿಕ ಕ್ರಿಯೆಯಲ್ಲ. ಸಾಮಾನ್ಯ ಬಯಕೆಗಳಿಗಿಂತ ಅದು ತೀವ್ರವಾದುದು ಮತ್ತು ಅದರ ವ್ಯಾಪ್ತಿ ವಿಶಾಲವಾದುದು. ಮಾನವನ ಧ್ಯೇಯ ಬದಲಾದಾಗ ಅವನ ಇಚ್ಛೆಯ ಸ್ವರೂಪವೂ ಬದಲಾಗುತ್ತದೆ. ಅದಲ್ಲದೆ ಒಬ್ಬನೇ ವ್ಯಕ್ತಿಯಲ್ಲಿ ಅವನ ಸ್ವಭಾವ ವ್ಯತ್ಯಾಸವಾದಂತೆ ಇಚ್ಛೆಯೂ ವ್ಯತ್ಯಾಸವಾಗುತ್ತದೆ. ಬಾಲ್ಯದಲ್ಲಿ, ಯೌವನದಲ್ಲಿ, ಮುಪ್ಪಿನಲ್ಲಿ ಇಚ್ಛೆ ಬೇರೆ ಬೇರೆ ರೀತಿಯಾಗಿರುತ್ತದೆ.

ಇಚ್ಛೆಗಳು ಪರಸ್ಪರ ವಿರೋಧಿಗಳಾಗಿ ಒಂದು ವ್ಯಕ್ತಿಯನ್ನು ಧರ್ಮಸಂಕಟಕ್ಕೀಡು ಮಾಡಬಹುದು. ಒಬ್ಬ ದೇಶಪ್ರೇಮಿ ಒಂದು ದೃಷ್ಟಿಯಿಂದ ಶಾಂತಿಯನ್ನೂ ಮತ್ತೊಂದು ದೃಷ್ಟಿಯಿಂದ ಯುದ್ಧವನ್ನೂ ಇಚ್ಛಿಸಬಹುದು. ಇಂಥ ಸಂದರ್ಭದಲ್ಲಿ ಆತ ಯುಕ್ತಾಯುಕ್ತ ಪರಿಜ್ಞಾನದಿಂದ ಒಂದು ಇಚ್ಛೆಗೆ ಮನಸ್ಸುಕೊಟ್ಟು ಮತ್ತೊಂದನ್ನು ತಳ್ಳಿಹಾಕುತ್ತಾನೆ. ಅವನ ಶೀಲದ ಪ್ರಬಲವಾದ ಪ್ರವೃತ್ತಿಯಂತೆ ಅವನ ಒಂದು ಇಚ್ಛೆ ಗೆಲ್ಲುತ್ತದೆ. ಪ್ರಬಲವಾದ ಇಚ್ಛೆ ಆಕಾಂಕ್ಷೆಯ ರೂಪವನ್ನು ತಾಳುತ್ತದೆ. ಹೀಗೆ ನೈತಿಕ ಜೀವನದಲ್ಲಿ ಇಚ್ಛೆ ಒಂದು ಮುಖ್ಯ ಅಂಗವಾಗಿದೆ. (ಎಸ್.ಎಸ್.ಆರ್.)

**ಇಚ್ಛೆ[2]:** ಮನಶ್ಶಾಸ್ತ್ರದ ರೀತ್ಯಾ ಇಚ್ಛೆಯ (ಡಿಸೈರ್) ವಿಷಯವನ್ನಿಲ್ಲಿ ಪ್ರತಿಪಾದಿಸಲಾಗಿದೆ. ಗುರಿಯ ಸ್ಪಷ್ಟ ತಿಳಿವಳಿಕೆ ಇದ್ದು ಅದನ್ನು ಸಾಧಿಸಲು ಪ್ರಯತ್ನಿಸುತ್ತಿರುವ ವ್ಯಕ್ತಿಯ ಮನಃಸ್ಥಿತಿಯನ್ನು ಇಚ್ಛೆ ಎಂದು ಕರೆಯಬಹುದು. ಇಚ್ಛೆಯ ವ್ಯಾಖ್ಯೆಯನ್ನು ಮಾಡುವವರಲ್ಲಿ ಎರಡು ಮುಖ್ಯ ಪಂಗಡಗಳನ್ನು ಗುರುತಿಸಬಹುದು. ಸುಖತತ್ತ್ವವಾದಿಗಳದ್ದು ಒಂದು ಗುಂಪು. ಇತರರದ್ದು ಇನ್ನೊಂದು ಗುಂಪು.

ಸುಖತತ್ತ್ವವಾದಿಗಳ ಪ್ರಕಾರ, ಇಚ್ಛೆಯ ಸಮಸ್ತ ಗುರಿ ಸುಖ. ಅಂದರೆ ಹಿತಕರವಾದ ಅನುಭವಗಳನ್ನು ಅರಸುವುದೂ ಮತ್ತು ಅಹಿತಕರವಾದ ಅನುಭವಗಳಿಂದ ತಪ್ಪಿಸಿಕೊಳ್ಳುವುದೂ ಮನುಷ್ಯನ ಎಲ್ಲ ಇಚ್ಛಾಕ್ರಿಯೆಗಳ ಪರಮ ಉದ್ದೇಶ (ಜೆ.ಎಸ್.ಮಿಲ್). ತಮ್ಮ ಈ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು, ಸುಖತತ್ತ್ವವಾದಿಗಳು, ಪರಿಣಾಮವಾದಿಗಳ ನೆರವನ್ನು ಪಡೆಯುತ್ತಾರೆ. ಜೀವಿಯ ಪ್ರತಿಯೊಂದು ಸುಖಾನುಭವವೂ ಜೀವಸತ್ತ್ವವನ್ನು ಅಧಿಕಗೊಳಿಸಿದರೆ ಅದರ ಪ್ರತಿಯೊಂದು ದುಃಖಾನುಭವವೂ ಜೀವಸತ್ತ್ವವನ್ನು ಕ್ಷೀಣಿಸುತ್ತದೆ (ಹರ್ಬರ್ಟ್ ಸ್ಪೆನ್ಸರ್). ಸುಖಾನುಭವ ಜೀವನದ ಅಲೆಯನ್ನು ಉಬ್ಬಿಸಿದರೆ ದುಃಖಾನುಭವ ಅದನ್ನು ಇಳಿಸುತ್ತದೆ. ಜೀವಪ್ರಪಂಚದ ವ್ಯಾಪಾರದಲ್ಲಿ ಈ ನಿಯಮ ಪ್ರಮುಖವಾಗಿರುವುದರಿಂದ, ಪ್ರತಿಯೊಂದು ಜೀವಿಯೂ ದುಃಖವನ್ನು ತಪ್ಪಿಸಿಕೊಂಡು, ಸುಖವನ್ನು ಪಡೆಯಬೇಕೆಂಬ ಇಚ್ಛೆಯಿಂದ ಪ್ರವರ್ತಿಸುತ್ತದೆ. ಹೀಗಿರುವಲ್ಲಿ, ಜೀವಿಯ ಇಚ್ಛೆಯ ಪರಮಧ್ಯೇಯ ಸುಖವಲ್ಲದೆ ಮತ್ತಾವುದೂ ಅಲ್ಲ ಎಂದು ವಾದಿಸುತ್ತಾರೆ, ಸುಖತತ್ತ್ವವಾದಿಗಳು.

ಮೇಲಿನ ಅಭಿಮತವನ್ನು, ಸುಖತತ್ತ್ವವಾದಿಗಳ ವಿರೋಧಿಗಳು ತೀವ್ರವಾಗಿ ಖಂಡಿಸಿದ್ದಾರೆ. ಸೌಖ್ಯವೇ ಇಚ್ಛೆಯ ಪರಮಗುರಿ ಎಂಬುದನ್ನು ಅವರು ಎಂದೂ ಒಪ್ಪುವುದಿಲ್ಲ. ತಮ್ಮ ವಿರೋಧವನ್ನು ಈ ಕಾರಣಗಳಿಂದ ಅವರು ಸಮರ್ಥಿಸಿಕೊಳ್ಳುತ್ತಾರೆ : 1. ಸಾಮಾನ್ಯವಾಗಿ ನಾವು ಏನನ್ನು ಇಚ್ಛಿಸುತ್ತೇವೋ ಅದು ಸುಖವಲ್ಲ, ಉದಾ: ಸಾಮಾನ್ಯವಾಗಿ ನಾವು ಆಹಾರ ಮತ್ತು ಪಾನೀಯಗಳನ್ನು ಇಚ್ಛಿಸುತ್ತೇವೆ. ಆದರೆ, ಹೊಟ್ಟೆಬಾಕ ಮಾತ್ರ ತಿನ್ನುವ ಮತ್ತು ಕುಡಿಯುವುದರಿಂದುಂಟಾಗುವ ಸುಖವನ್ನು ಇಚ್ಛಿಸುತ್ತಾನೆ. 2. ಕೇವಲ ಸುಖವನ್ನೇ ಪ್ರಮುಖ ಗುರಿಯನ್ನಾಗಿ ಉಳ್ಳ ಇಚ್ಛೆ, ಮನಸ್ಸಿನ ಒಂದು ವಿಕಾರ ಭಾವ; ಅದು ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತದೆ. ಸದಾ ಸುಖವನ್ನು ಅರಸುವವನಿಗೆ, ಸುಖ ಬಿಸಿಲುಗುದುರೆಯಾಗುತ್ತದೆ. ಸುಖವನ್ನು ಹಂಬಲಿಸಿದಷ್ಟೂ ಆತ ಅದರಿಂದ ದೂರವಾಗುತ್ತಾನೆ. ಸುಖಾನ್ವೇಷಿಗಳು ಒಂದು ಅತೃಪ್ತ ತಂಡ ಎಂದು ಹೇಳುವುದುಂಟು. ಇದನ್ನೇ ಸುಖತತ್ತ್ವವಾದ ವಿರೋಧಾಭಾಸ ಎಂಬುದಾಗಿ ಕರೆಯುತ್ತಾರೆ. 3. ಜೀವಶ್ರೇಣಿಯ ಅತ್ಯಂತ ಉನ್ನತಮಟ್ಟದಲ್ಲಿರುವ ಮಾನವ ತನಗೆ ಯೋಗ್ಯವೆನಿಸಿದ ವಸ್ತು, ಅದು ದುಃಖವನ್ನುಂಟು ಮಾಡುವುದಾದರೂ ಅದನ್ನು ಪಡೆಯುವ ಇಚ್ಛೆಯನ್ನು ಹೊಂದಿರಬಹುದು. ಉದಾ: ನೈತಿಕ, ಆಧ್ಯಾತ್ಮಿಕ ಮತ್ತು ಸೌಂದರ್ಯಾತ್ಮಕ ಆದರ್ಶಗಳನ್ನು ಸಾಧಿಸುವ ಇಚ್ಛೆ, ವ್ಯಕ್ತಿಗೆ ಅನೇಕ ವೇಳೆ ದುಃಖದಾಯಕವಾಗಿದ್ದರೂ ಅವನ್ನು ಪರಮಧ್ಯೇಯಗಳನ್ನಾಗಿ ಪಡೆದಿರುವುದುಂಟು. ತಪಸ್ಸಿನ ಇಚ್ಛೆ ಪ್ರತ್ಯಕ್ಷ ದುಃಖಕ್ಕೆ ಕಾರಣವಾಗುವುದಾದರೂ ಸಾಧಕ ಅದನ್ನು ಬಿಡಲಾರ.

ಆದುದರಿಂದ, ಜೈವಿಕತತ್ತ್ವದ ಬಂಧನದಿಂದ ಹೆಚ್ಚು ಕಡಿಮೆ ಮುಕ್ತನಾದ ಮಾನವ ತನ್ನ ಸಂಕಲ್ಪಕ್ಕೆ ಯೋಗ್ಯವೆನಿಸಿದ ಗುರಿಯನ್ನು, ಅದು ಸುಖಕಾರಕವಾಗಲಿ, ದುಃಖಕಾರಕವಾಗಲಿ, ಬುದ್ಧಿಪೂರ್ವಕವಾಗಲಿ ಆರಿಸಿಕೊಳ್ಳುತ್ತಾನೆ. ಅಂದ ಮೇಲೆ ಮಾನವನ ಇಚ್ಛೆಯಲ್ಲಿ ಗುರಿಯ ಜ್ಞಾನ ಅಂತರ್ಗತವಾಗಿದೆ ಎಂದು ಹೇಳಿದ ಹಾಗಾಯಿತು. ಎಲ್ಲಿ ಜ್ಞಾನವಿರುವುದಿಲ್ಲವೋ ಅಲ್ಲಿ ಇಚ್ಛೆಯಿರುವುದಿಲ್ಲ (ಸುಲ್ಲೆ). ಅಂಥ ಜ್ಞಾನ ಗತಿಸಿದ ಹಾಗೂ ನಾವು ಮತ್ತೆ ಮತ್ತೆ ಅನುಭವಿಸಬಹುದಾದ ತೃಪ್ತಿಯ ಅನುಭವದ ನೆನಪಿನಿಂದ ಕೂಡಿರುತ್ತದೆಯಲ್ಲದೆ, ಭವಿಷ್ಯದಲ್ಲಿ ನಾವು ಪಡೆಯಬಹುದಾದ ಅಂಥ ಅನುಭವಗಳ ಕಲ್ಪನೆಯನ್ನೂ ಒಳಗೊಂಡಿರುತ್ತದೆ.

ಕೇವಲ ಸುಖಾನುಭವದಿಂದ ಸಮಸ್ತ ಇಚ್ಛೆಯೂ ತೃಪ್ತಿಹೊಂದುವುದಿಲ್ಲ. ಸುಖ ತಾತ್ಕಾಲಿಕವಾದುದಾದರೆ, ಇಚ್ಛೆ ನಿರೀಕ್ಷಾಪ್ರದವಾಗಿರುತ್ತದೆ. ಅಂದರೆ, ಬುದ್ಧಿ ತಾತ್ಕಾಲಿಕ ಇಚ್ಛೆಗಳನ್ನು ಮೀರಿ ನಿಲ್ಲುತ್ತದೆ. ಉದಾ : ದುರಂತವನ್ನು ಪ್ರತಿಪಾದಿಸುವ ಕಲೆಯೊಂದರಲ್ಲಿ, ಸತತವಾಗಿ ಬರುವ ದುಃಖದ ನಿರೂಪಣೆಯಿದ್ದರೂ ಆ ಕಲೆಯ ಆಸ್ವಾದನೆಯಿಂದ ನಮಗೆ ತೃಪ್ತಿಯುಂಟಾಗುವುದು ನಿಜ. ಅನೇಕ ವೇಳೆ, ಬೌದ್ಧಿಕ ಪ್ರೇರಣೆಯಿಂದಾಗಿ, ತನ್ನ ಇಚ್ಛೆಯನ್ನು ತೃಪ್ತಿಪಡಿಸಿಕೊಳ್ಳಲೂ ಮಾನವ ಸುಖ ದುಃಖಾನುಭವಗಳನ್ನು ಮೀರಿ ನಿಲ್ಲುತ್ತಾನೆ.

ಮನೋವಿಜ್ಞಾನಿಗಳು ಇಚ್ಛೆಗೆ ಒಂದು ನಿರ್ದಿಷ್ಟ ಅರ್ಥವನ್ನು ಕೊಡಲು ಯತ್ನಿಸಿದ್ದಾರೆ. ಗುರಿಯ ಸ್ಪಷ್ಟ ಅರಿವಿರುವ ಮನಃಸ್ಥಿತಿಯೇ ಇಚ್ಛೆ (ಜೇಮ್ಸ್ ಡ್ರೆವರ್). ಇಚ್ಛೆ ಒಂದು ಅಭಿಪ್ರೇರಣೆ (ಮೋಟಿವ್). ಅದು ಗುರಿಯೊಂದರತ್ತ ನಿರ್ದೇಶಿತವಾಗಿರುವ ಮನಃಸ್ಥಿತಿ. ಈ ಸ್ಥಿತಿಯಲ್ಲಿ, ಪ್ರಬಲವಾದ ವೇದನಾನುಭವವಿರುವುದರ ಜೊತೆಗೆ, ಗುರಿಗೆ ಸಂಬಂಧಿಸಿದ ಜ್ಞಾನವೂ ಇರುತ್ತದೆ (ಆರ್.ಎಸ್. ವುಡ್‌ವರ್ತ್) : ಯಾವುದಾದರೂ ಗುರಿಯತ್ತ ವ್ಯಕ್ತಿಯ ಪ್ರವರ್ತನೆಯನ್ನು ನಿರ್ದೇಶಿಸುವ ಮತ್ತು ಅತೃಪ್ತಿಯಿಂದ ಕೂಡಿರುವ ಭಾವನಾಸ್ಥಿತಿಯೇ ಇಚ್ಛೆ. ಈ ಇಚ್ಛೆಯ ದೃಷ್ಟಿ ಭಾವೀರೂಪವಾಗಿದ್ದು, ತತ್ಕಾಲದ ಸನ್ನಿವೇಶಕ್ಕೆ ಸಂಬಂಧಿಸಿರುವುದಿಲ್ಲ (ಥೌಲೆಸ್). ಒಟ್ಟಿನಲ್ಲಿ, ಇಚ್ಛೆ, ಒಂದು ಜಟಿಲವಾದ ಮತ್ತು ಚಲಾತ್ಮಕವಾದ ಸಮ್ಮಿಶ್ರ ಮನಃಸ್ಥಿತಿ. ಅದು ಮೂರು ವಿಧವಾದ ಚಿತ್ತಾಂಶಗಳನ್ನೂ ಒಳಗೊಂಡಿರುತ್ತದೆ : ಜ್ಞಾನ (ಕಾಗ್ನಿಷನ್), ಭಾವನೆ (ಅಫೆಕ್ಷನ್) ಮತ್ತು ಪ್ರವರ್ತನೆ. ಇಚ್ಛೆಯಲ್ಲಿ, ಇಚ್ಛಿತ ವಸ್ತುವಿನ ಜ್ಞಾನ ಅಡಕವಾಗಿರುತ್ತದೆ. ಇಚ್ಛಿತ ವಸ್ತು ನಮಗೆ ಚಿರಪರಿಚಿತವಾದುದಾಗಿರಬಹುದು ಅಥವಾ ನೂತನವಾದುದಾಗಿರಬಹುದು. ಎರಡನೆಯದಾಗಿ, ಇಚ್ಛೆಯಲ್ಲಿ, ಸುಖದುಃಖಾನುಭವಗಳ ಅಥವಾ ನಲಿವು ಮತ್ತು ನೋವುಗಳ ನಿರೀಕ್ಷಣೆಯ ಮಿಶ್ರಭಾವವಿರುತ್ತದೆ. ಭವಿಷ್ಯದಲ್ಲಿ, ಹಿತಕರವಾದ ವಸ್ತುಗಳ ಸಂಯೋಗವಾಗುವಾಗ ದೊರೆಯಬಹುದಾದ ತೃಪ್ತಿಯ ನಿರೀಕ್ಷಣೆಯಿಂದ ಸುಖಾನುಭವವೂ ನಿಜಸ್ಥಿತಿ ಮತ್ತು ನಿರೀಕ್ಷಿತ ತೃಪ್ತಿ ಇವುಗಳ ನಡುವೆ ಇರುವ ಅಂತರದ ಪ್ರಜ್ಞೆಯಿಂದ ಉಂಟಾಗುವ ದುಃಖಾನುಭವವೂ ಅಂತರ್ಮಿಳಿತವಾಗಿರುತ್ತವೆ. ಅಂದರೆ ಇಚ್ಛೆಯಲ್ಲಿ, ನಿರೀಕ್ಷಣಾ ಸುಖ ಮತ್ತು ತತ್ಕಾಲದ ಅತೃಪ್ತಿಯ ನೋವು ಇವೆರಡೂ ಬೆರೆತಿರುತ್ತವೆ. ಸುಖಾನುಭವ, ಗುರಿಯ ಸಾಧ್ಯತೆಗೆ ಅನುಗುಣವಾಗಿದ್ದರೆ, ದುಃಖಾನುಭವ ಆ ಗುರಿಯ ಸಾಧನೆಯಲ್ಲಿ ಆಗಬಹುದಾದ ವಿಳಂಬ ಮತ್ತು ಉಂಟಾಗಬಹುದಾದ ಅಡೆತಡೆಗಳಿಗೆ ಅನುಗುಣವಾಗಿರುತ್ತದೆ. ಕೊನೆಯದಾಗಿ, ಇಚ್ಛಿತ ವಸ್ತುವನ್ನು ಪಡೆಯುವುದರತ್ತ ಇರುವ ಪ್ರವರ್ತನೆ ಇಚ್ಛೆಯಲ್ಲಿ ಅಡಕವಾಗಿರುವ ಅತ್ಯಂತ ಪ್ರಬಲವಾದ ಚಿತ್ತಪ್ರವೃತ್ತಿ, ವಸ್ತುವಿನತ್ತ ಇರುವ ಆಸಕ್ತಿ ಮತ್ತು ಅದನ್ನು ಸಾಧಿಸುವುದಕ್ಕಾಗಿ ಪಡುವ ಪರಿಶ್ರಮಗಳು ಅದರ ಪ್ರಮುಖ ಅಂಶಗಳು.

ಕೆಲವು ಸ್ವಭಾವ ಸದೃಶ ಚಿತ್ತಪ್ರಕೃತಿಗಳಿಂದ, ಇಚ್ಛೆಯನ್ನು ಬೇರ್ಪಡಿಸುವುದು ಆವಶ್ಯಕ. ಅವುಗಳಲ್ಲಿ ಆಸೆ (ಅಪೆಟೈಟ್). ಆವೇಗ (ಇಂಪಲ್ಸ್) ಮತ್ತು ಅಪೇಕ್ಷೆ (ವಿಷ್)–ಇವು ಪ್ರಮುಖವಾಗಿವೆ. ಶರೀರದ ಯಾವುದಾದರೂ ಬೇಡಿಕೆಯನ್ನು ಈಡೇರಿಸಬೇಕೆಂದಿರುವ ಅಸ್ಪಷ್ಟ ಪ್ರಜ್ಞೆಯೇ ಆಸೆ. ಉದಾ: ಹಸಿವನ್ನು ಅಥವಾ ಕಾಮವನ್ನು ತೀರಿಸಿಕೊಳ್ಳಲು ಪ್ರಾಣಿಯೊಂದರಲ್ಲಿ ಮೂಡಬಹುದಾದ ಅಸ್ಪಷ್ಟ ಪ್ರಜ್ಞೆ. ನಮ್ಮನ್ನು ಗುರಿಯತ್ತ ತಳ್ಳುವ ಚಿತ್ತಪ್ರವೃತ್ತಿಯೇ ಆವೇಗ. ಇದರಲ್ಲಿ ತಾನು ಕಾರ್ಯಪ್ರವೃತ್ತನಾಗುವ ಪ್ರಜ್ಞೆ ವ್ಯಕ್ತಿಗೆ ಇರುವುದಾದರೂ ಅದರ ಆಗುಹೋಗುಗಳ ಅರಿವು ಇರುವುದಿಲ್ಲ. ಆತ ಕಾರ್ಯಾಂಧನಾಗುತ್ತಾನೆ.

ಉದಾ: ಮುಳುಗುತ್ತಿರುವವನನ್ನು ಬದುಕಿಸಲು ಹೊಳೆಗೆ ಹಾರುವವನಲ್ಲಿ, ಪ್ರಮುಖವಾಗಿ, ಒಬ್ಬನ ಪ್ರಾಣವನ್ನು ಉಳಿಸುವ ಆವೇಗವಿರುತ್ತದೆಯಲ್ಲದೆ, ತನ್ನ ಮತ್ತು ತನ್ನ ಕುಟುಂಬವರ್ಗದವರ ರಕ್ಷಣೆಯ ಬಗ್ಗೆ ಆತ ಅಂಧನಾಗಿರುತ್ತಾನೆ. ಕೊನೆಯದಾಗಿ ಅಪೇಕ್ಷೆ. ಇದು ಒಂದು ಜಡವಾದ ಹಾಗೂ ಸತ್ತ್ವಹೀನವಾದ ಇಚ್ಛೆ ಎಂಬುದು ಹಲವರ ಅಭಿಮತ. ಅದು ತಿರುಕನ ಕನಸಿನಂತೆ ಮಿಂಚಿ ಮಾಯವಾಗುತ್ತದೆ. ಆದರೆ ಮನೋವಿಶ್ಲೇಷಣಾ ತಜ್ಞರು, ಅದರಲ್ಲೂ ಮನೋವಿಶ್ಲೇಷಣೆಯ ಪಿತನೆಂದೆನಿಸಿರುವ ಫ್ರಾಯ್ಡ್, ಅಪೇಕ್ಷೆಗೆ ಬದಲಾಗಿ ವಾಂಛೆ ಎಂಬ ಕಲ್ಪಿತ ಭಾವವನ್ನು ಉಪಯೋಗಿಸುತ್ತಾನೆ. ಅವನ ಪ್ರಕಾರ, ವಾಂಛೆ ಕೇವಲ ಸತ್ತ್ವಹೀನವಾದ ಇಚ್ಛೆಯಾಗಿರದೆ, ಅತ್ಯಂತ ಪ್ರಬಲವಾದ ಪ್ರಭಾವಕಾರಿಯಾದ ಸುಪ್ತ ಇಚ್ಛೆಯಾಗಿರುತ್ತದೆ. ಅದು ಪರೋಕ್ಷವಾಗಿ, ಆದರೂ ಪರಿಣಾಮಕಾರಿಯಾಗಿ ವ್ಯಕ್ತಿಯ ಮಾನಸಿಕ ಜೀವನದಲ್ಲಿ ತನ್ನ ಪ್ರಭುತ್ವವನ್ನು ನಡೆಸುತ್ತದೆ. ಇದರಲ್ಲಿ ಕಾಮವಾಂಛೆಯೇ (ಲಿಬಿಡೊ) ಮೂಲಭೂತವಾದುದು.

ಇಚ್ಛೆಗಳ ಗುಣ ಮತ್ತು ಪರಿಣಾಮಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಸಾಧ್ಯ. ಇಂಥ ಅಧ್ಯಯನದಲ್ಲಿ ತೊಡಗುವಾಗ, ಇಚ್ಛೆಯಲ್ಲಿ ಅಂತರ್ಗತವಾಗಿರುವ ಎರಡು ಪ್ರಮುಖ ಅಂಶಗಳನ್ನು ಪರಿಗಣಿಸುವುದು ಅತ್ಯಾವಶ್ಯಕ. ವ್ಯಕ್ತಿ ಏನು ಮಾಡಲು ಪ್ರಯತ್ನಿಸುತ್ತಿದ್ದಾನೆ ಎಂಬುದು ಅಭಿಪ್ರೇರಣೆ. ಆತನ ಅಂತರಂಗದ ಭಾವನಾನುಭವವೇನು ಎಂಬುದು ವೇದನೆ ಮತ್ತು ಸಂವೇಗ (ಆರ್.ಎಸ್.ವುಡ್‌ವರ್ತ್). ಅಭಿಪ್ರೇರಣೆಗಳಿಗೂ ವೇದನೆ ಮತ್ತು ಸಂವೇಗಗಳಿಗೂ ನಿಕಟ ಸಂಬಂಧವಿದೆ. ಈ ಅಧ್ಯಯನಗಳಲ್ಲಿ, ಅಂತರವಲೋಕನ ಮತ್ತು ವಸ್ತುನಿಷ್ಠ ಅವಲೋಕನ ವಿಧಾನಗಳನ್ನು ಪರಿಪೋಷಕವಾಗಿ ಉಪಯೋಗಿಸಬಹುದು.

ಒಬ್ಬ ವ್ಯಕ್ತಿಯಲ್ಲಿರುವ ಇಚ್ಛೆಯ ಅಥವಾ ಇಚ್ಛೆಗಳ ಗುಣ ಮತ್ತು ಪರಿಮಾಣಗಳನ್ನು ಸಾಪೇಕ್ಷವಾಗಿ ಅಳೆಯಬಹುದು. ಅವನ್ನು ವಿವರಿಸಲು ನಾವು ಸಾಮಾನ್ಯವಾಗಿ ಪ್ರಬಲ ಮತ್ತು ದುರ್ಬಲ ಹಾಗೂ ಹೆಚ್ಚು ಮತ್ತು ಕಡಿಮೆ ಎಂಬ ಪದಗಳನ್ನು ಬಳಸುತ್ತೇವೆ. ಇವುಗಳನ್ನೇ ಆಧಾರವಾಗಿ ಇಟ್ಟುಕೊಂಡು ನಿರ್ಧಾರಣಾ ಮಾಪಿಗಳನ್ನು (ರೇಟಿಂಗ್ ಸ್ಕೇಲ್) ಸಿದ್ಧಪಡಿಸಿ, ಅಂತರವಲೋಕನ ಹಾಗೂ ವಸ್ತುನಿಷ್ಠ ಅವಲೋಕನ ಇವೆರಡರಲ್ಲೂ ಪರಿಣಾಮಕಾರಿಯಾಗಿ ಉಪಯೋಗಿಸಬಹುದು.

ಪರೀಕ್ಷಾರ್ಥಿಯೊಬ್ಬ ಅಂತರವಲೋಕನ ವಿಧಾನದಿಂದ ಒಂದು ನಿರ್ದಿಷ್ಟ ಸಮಯದಲ್ಲಿ ತನ್ನಲ್ಲಿರಬಹುದಾದ ಇಚ್ಛೆಯ ಗುಣ ಮತ್ತು ಪರಿಮಾಣಗಳನ್ನು ನಿರ್ಧಾರಣಾ ಮಾಪಿಯ ನೆರವಿನಿಂದ ನಿರ್ಧರಿಸಬಹುದು. ಅದರಂತೆಯೇ ಒಂದು ನಿರ್ದಿಷ್ಟ ಸಮಯದಲ್ಲಿ, ಯಾವುದಾದರೂ ಒಂದು ನಿರ್ದಿಷ್ಟ ಗುರಿಯನ್ನು ಸಾಧಿಸಲು ವ್ಯಕ್ತಿಯೊಬ್ಬನು ಎಷ್ಟು ಶ್ರಮವಹಿಸುತ್ತಾನೆ ಎಂಬುದನ್ನೂ ಮತ್ತು ಆತನ ಆಯ್ಕೆಗಳನ್ನೂ ವಸ್ತುನಿಷ್ಠ ಅವಲೋಕನದಿಂದ ಅಧ್ಯಯನ ಮಾಡಿ, ಆತನ ಇಚ್ಛೆಯ ಅಥವಾ ಇಚ್ಛೆಗಳ ಪರಿಮಾಣವೇನು ಎಂಬುದನ್ನು ನಿರ್ಧರಿಸಬಹುದು (ಥೌಲೆಸ್). ಈ ಅಧ್ಯಯನಕ್ಕೆ, ಇಚ್ಛಿತ ವಸ್ತುವೊಂದನ್ನು ಪಡೆಯಲು ವ್ಯಕ್ತಿ ಹಣದ ರೂಪದಲ್ಲಿ ತೆರಬಹುದಾದ ಬೆಲೆಯೂ ನೆರವಾಗಬಲ್ಲದು. ಉದಾ: ಒಬ್ಬ ವ್ಯಕ್ತಿ ಒಂದು ಸಮಯದಲ್ಲಿ ಒಂದು ರೂಪಾಯಿ ಕೊಟ್ಟು, ಸ್ವಲ್ಪ ಆಹಾರವನ್ನು ಕೊಳ್ಳುವುದಕ್ಕೆ ಬದಲಾಗಿ, ಐದು ರೂಪಾಯಿ ಬೆಲೆಬಾಳುವ ಪುಸ್ತಕವೊಂದನ್ನು ಕೊಂಡುಕೊಂಡಾಗ, ಆಹಾರಕ್ಕಿಂತ, ಪುಸ್ತಕದ ಮೇಲಿನ ಅವನ ಇಚ್ಛೆ ಹೆಚ್ಚು ಪ್ರಬಲವಾಗಿದೆ ಎಂದು ಹೇಳಬಹುದು. ಆದರೆ, ಕೊಡಲಾದ ಬೆಲೆಯನ್ನೇ ಆಧಾರವಾಗಿ ಇಟ್ಟುಕೊಂಡು ಆತನಲ್ಲಿರುವ ಪುಸ್ತಕದ ಮೇಲಿನ ಇಚ್ಛೆ, ಆಹಾರದ ಮೇಲಿನ ಇಚ್ಛೆಗಿಂತ ಐದು ಪಟ್ಟು ಅಧಿಕವಾಗಿದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಕಾರಣವೇನೆಂದರೆ ಆ ವ್ಯಕ್ತಿ ಕೊಡುವ ಬೆಲೆ, ಇಚ್ಛೆಯ ತೀವ್ರತೆಯನ್ನು ಅವಲಂಬಿಸಿರುವುದಾದರೂ ಸಂಪೂರ್ಣವಾಗಿ ಅದರಿಂದಲೇ ನಿರ್ಧರಿತವಾಗಲಾರದು. ಇತರ ಕಾರಣಾಂಶಗಳು (ಮಾರಾಟಗಾರ ಕೊಡುವ ಭಾವಪ್ರೇರಣೆ, ಇತರ ವಸ್ತುಗಳ ವಿಷಯದಲ್ಲಿ ದೊರಕಿರುವ ತೃಪ್ತಿ ಇತ್ಯಾದಿ) ತಮ್ಮ ಪ್ರಭಾವವನ್ನು ಬೀರಬಹುದು. ಇಚ್ಛೆಗೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನಗಳು ಮನೋವಿಜ್ಞಾನ ಕ್ಷೇತ್ರದಲ್ಲಿ ನಡೆದಿಲ್ಲ. ಬಹುಶಃ ಈ ಸಮ್ಮಿಶ್ರ ಮನಃಸ್ಥಿತಿಯ ಜಟಿಲತೆಯೇ ಅದಕ್ಕೆ ಕಾರಣವಿರಬಹುದು. ಆದರೆ ನುರಿತ ಹಾಗೂ ವಿವೇಕಶಾಲಿಗಳಾದ ಸಂಶೋಧಕರು ಈ ದಿಶೆಯಲ್ಲಿ ಪ್ರಯತ್ನ ನಡೆಸಿದರೆ ವಿಜಯಿಗಳಾಗುವುದರಲ್ಲಿ ಸಂಶಯವಿಲ್ಲ. ಇಚ್ಛೆಗೂ ಸಂಕಲ್ಪಕ್ಕೂ (ವಿಲ್) ಇರುವ ಸಂಬಂಧದ ಬಗೆಗೆ (**ನೋಡಿ – ಸಂಕಲ್ಪ**). (ಡಿ.)

**ಇಜ್ಜತ್ ನಗರ:** ಉತ್ತರ ಪ್ರದೇಶದ ಬರೇಲಿ ಜಿಲ್ಲೆಯ ಉತ್ತರ ಭಾಗದಲ್ಲಿರುವ ಪ್ರದೇಶ. ಹಿಂದೆ ಇದನ್ನು ಇಜ್ಜತ್ ನಗರವೆಂದು ಕರೆಯಲಾಗುತ್ತಿತ್ತು. ಈ ಊರು ತಾರ್ ಮರವನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳುತ್ತದೆ. ಸ್ವಯಂಚಾಲಿತ ಯಂತ್ರಗಳ ನಿಪುಣ ಇಜ್ಜತ್ ಬ್ರೌನ್ ಎಂಬುವನಿಂದ 130 ವರ್ಷಗಳ ಹಿಂದೆ ಈ ಊರು ನಿರ್ಮಾಣವಾಯಿತು. ಇಲ್ಲಿನ ರೈಲ್ವೆ ಹಳಿಗಳ ನಡುವೆ ನಗರ ನಿರ್ಮಾತೃವಿನ ಗೋರಿಯಿದೆ.

50 ವರ್ಷಗಳ ಹಿಂದೆ ಇದೊಂದು ನಿರ್ಜನ ಪ್ರದೇಶವಾಗಿತ್ತು. ಈಗ ವಾಣಿಜ್ಯ ಹಾಗೂ ಸಂಪರ್ಕವಿಭಾಗಗಳ ಜೊತೆಗೆ ಏಷ್ಯದಲ್ಲೇ ಬಹು ದೊಡ್ಡದಾದ ಪಶುವೈದ್ಯ ಸಂಶೋಧನಾಲಯವನ್ನು ಪಡೆದಿದೆ. ಈ ಸಂಸ್ಥೆಯಲ್ಲಿ ಸು.2000 ಜನ ಕೆಲಸ ಮಾಡುತ್ತಿದ್ದಾರೆ. ಲೋಕೊ ವರ್ಕ್‌ಷಾಪ್, ರೈಲ್ವೆ ಆಸ್ಪತ್ರೆ, ಶಾಲೆಗಳು ಈ ನಗರದ ಜನಸಂಖ್ಯೆಯನ್ನು ಬೆಳೆಸುವುದರಲ್ಲಿ ಸಹಕಾರಿಯಾಗಿವೆ. ನಗರ ಅಭಿವೃದ್ಧಿಪಥದಲ್ಲಿದೆ. (ಎಸ್.ಡಿ.ಎಂ.)

**ಇಜ್ಮೆರ್:** ತುರ್ಕಿಯ ಒಂದು ಪ್ರಮುಖ ರೇವು ಪಟ್ಟಣ. ಸನ್ನಿವೇಶ ಉ.ಅ. 38º.24' ಮತ್ತು ಅ.ಪೂ.ರೇ. 27º.06' ಸ್ಮರ್ನ ಎಂಬ ಹೆಸರೂ ಇದೆ. 24 ಕಿಮೀ ಉದ್ದವಿರುವ ಇಜ್ಮೆರ್ ಖಾರಿಯ ಕೊನೆಯಲ್ಲಿ, ಈಜಿಯನ್ ಸಮುದ್ರ ತೀರದ ಪಶ್ಚಿಮ ಭಾಗದ ಮಧ್ಯದಲ್ಲಿ ಇದೆ. ಈ ಖಾರಿ ಹಾಗೂ ಪಟ್ಟಣ ದೊಡ್ಡ ದೊಡ್ಡ ಬೆಟ್ಟಗಳ ಸಾಲುಗಳಿಂದ ಆವೃತವಾಗಿವೆ. ಪೂರ್ವದಿಂದ ಹರಿದು ಬರುವ ಮೂರು ಪ್ರವಾಹಗಳು ಈ ಖಾರಿಗೆ ಬೀಳುತ್ತವೆ. ಇಲ್ಲಿ ಸ್ವಾಭಾವಿಕ ಮೆಡಿಟರೇನಿಯನ್ ಸಸ್ಯವರ್ಗವಿದೆ. ಜನಸಂಖ್ಯೆ ಸು. 7.57,854 (2002). (ಎಂ.ಎಸ್.)

ಹೋಮರ್ ಮಹಾಕವಿಯ ಜನ್ಮಸ್ಥಳವೆಂದು ಹೇಳುವ ಪಟ್ಟಣಗಳಲ್ಲಿ ಇದೂ ಒಂದಾಗಿದೆ. ಅಯೋನಿಯನ್ ವಸಾಹತುಗಳಲ್ಲಿ ಒಂದಾದ ಇಜ್ಮೆರ್ ಪ್ರ.ಶ.ಪೂ. 688ರಲ್ಲಿ ಅಯೋನಿಯನ್ ಒಕ್ಕೂಟಕ್ಕೆ ಸೇರಿತು. ಅನಂತರ ಇದು ಲಿಡಿಯದ ದೊರೆಯ ವಶಕ್ಕೆ ಬಂದಮೇಲೆ ಏಷ್ಯದ ಏಳು ಅತ್ಯುತ್ತಮ ನಗರಗಳಲ್ಲಿ ಒಂದು ಎನ್ನಿಸಿಕೊಂಡಿತು. ಇಜ್ಮೆರ್ 178ರಲ್ಲಿ ಭೂಕಂಪಕ್ಕೆ ಒಳಗಾಗಿ ನಾಶವಾಯಿತು. ಆದರೆ ಮಾರ್ಕಸ್ ಆರೇಲಿಯಸ್‌ನ ಕಾಲದಲ್ಲಿ ಮತ್ತೆ ಈ ನಗರವನ್ನು ಕಟ್ಟಲಾಯಿತು. 1402 ರಿಂದ ಇತ್ತೀಚಿನವರೆಗೂ ಇದು ತುರುಕರ ವಶದಲ್ಲಿತ್ತು. 1923ರಲ್ಲಿ ಇದು ಸಂಪೂರ್ಣವಾಗಿ ತುರುಕರ ಆಧಿಪತ್ಯಕ್ಕೆ ಒಳಗಾದ ಮೇಲೆ ತುರ್ಕಿಯಲ್ಲಿದ್ದ ಗ್ರೀಕರು ಗ್ರೀಸಿಗೂ ಗ್ರೀಸ್‌ನಲ್ಲಿದ್ದ ತುರುಕರು ತುರ್ಕಿಗೂ ವರ್ಗಾವಣೆಯಾದರು. ಆದರೆ ಕುಶಲ ಶಿಲ್ಪಿಗಳು, ನೇಕಾರರು, ಕಾರ್ಖಾನೆಗಳ ಒಡೆಯರು–ಇವರುಗಳಲ್ಲಿ ಬಹುಪಾಲು ಗ್ರೀಕರೇ ಆಗಿದ್ದುದರಿಂದ ಇಜ್ಮೆರ್ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು; ಮತ್ತೆ ಎರಡನೆಯ ಮಹಾಯುದ್ಧದ ಹೊತ್ತಿಗೆ ಜಾಗತಿಕ ಪ್ರಶಸ್ತಿ ಗಳಿಸಿತು.

ಇಜ್ಮೆರ್ ಜಿಲ್ಲೆ ವ್ಯವಸಾಯ, ಗಣಿಕೆಲಸ, ಕೈಗಾರಿಕೆಗಳು, ಹಡಗಿನ ಉದ್ಯಮಗಳಿಗೆ ಪ್ರಸಿದ್ಧಿ ಪಡೆದಿದೆ. ಆಲಿವ್ ಮರಗಳು, ದ್ರಾಕ್ಷಿ, ಖರ್ಜೂರ, ಬಾದಾಮಿ, ಹೊಗೆಸೊಪ್ಪು, ಗೋಧಿ, ಬಾರ್ಲಿ, ಹತ್ತಿ ಮುಂತಾದವು ಪ್ರಮುಖ ಬೆಳೆಗಳು. ಜೇನುಸಾಕಣೆಗೂ ಇದು ಪ್ರಸಿದ್ಧ. ಹಂದಿ ಮಾಂಸದ ರಫ್ತಿಗೂ ಹಡಗು ನಿರ್ಮಾಣಕಾರ್ಯಕ್ಕೂ ಹೆಸರು ಪಡೆದಿದೆ. ಇಜ್ಮೆರ್‌ನ ಜಮಖಾನೆಗಳಿಗೆ ವಿಶ್ವ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. ಇಸ್ತಾಂಬುಲ್ ಅನಂತರ 2ನೆಯ ಮುಖ್ಯ ಕೈಗಾರಿಕಾ ವಲಯ. ಸಿಮೆಂಟ್, ಹತ್ತಿ ಮತ್ತು ಉಣ್ಣೆ ಜವಳಿ, ಪೆಟ್ರೊ ಕೆಮಿಕಲ್ಸ್, ಎಂಜಿನಿಯರಿಂಗ್ ಹಾಗೂ ಆಹಾರ ಪದಾರ್ಥ ಸಂಸ್ಕರಣೆ ಮುಖ್ಯ ಉದ್ದಿಮೆಗಳು.

ನ್ಯಾಟೋ ಒಪ್ಪಂದದಂತೆ ಆಗ್ನೇಯ ಯುರೋಪಿನ ಸೈನಿಕ ಠಾಣೆ ಇಲ್ಲಿದೆ. ಅನೇಕ ವಿಮಾನಮಾರ್ಗ ಕೇಂದ್ರಗಳಿದ್ದು, ಉತ್ತಮವಾದ ರೈಲ್ವೆ ಸಂಪರ್ಕವಿದೆ. ಈ ಪಟ್ಟಣಕ್ಕೆ ಸ್ವಾಭಾವಿಕ ಬಂದರಿನ ಉತ್ತಮ ಅನುಕೂಲತೆಯಿದ್ದರೂ ಇಸ್ತಾಂಬುಲ್‌ನಂಥ ರೇವು ಸೌಲಭ್ಯಗಳಿಲ್ಲ. (ಎಂ.ಎಸ್.)

**ಇಜ್ವೆಸ್ತಿಯ:** ಸೋವಿಯತ್ ರಷ್ಯದ ಪ್ರಮುಖ ದಿನಪತ್ರಿಕೆ. ವಾರ್ತೆ ಎಂಬುದೇ ಈ ಪತ್ರಿಕೆಯ ಹೆಸರಿನ ಅರ್ಥ. ಸೋವಿಯತ್‌ನ ಪ್ರಗತಿಗಾಮಿ ಜನತೆ 1917ರ ಫೆಬ್ರವರಿಯಲ್ಲಿ ನಡೆಸಿದ ಕ್ರಾಂತಿಯ ಅನಂತರ ಇದು ಪೆತ್ರೊಗ್ರಾಡ್ ಸೋವಿಯತ್‌ನ ಮುಖಪತ್ರಿಕೆಯಾಗಿ ರೂಪುಗೊಂಡಿತು. ಮುಂದೆ ಆಗಸ್ಟ್ ತಿಂಗಳಿನಿಂದ ಪೆತ್ರೊಗ್ರಾಡ್ ಸೋವಿಯತ್ ಮತ್ತು ಸೆಂಟ್ರಲ್ ಎಕ್ಸಿಕ್ಯುಟಿವ್ ಕಮಿಟಿ ಆಫ್ ಸೋವಿಯತ್–ಇವುಗಳ ಸಂಯುಕ್ತ ಆಶ್ರಯದಲ್ಲಿ ಈ ಪತ್ರಿಕೆ ಪ್ರಕಟವಾಗತೊಡಗಿತು. ಬೋಲ್ಷೆವಿಕ್ ಕ್ರಾಂತಿಯ ಪರಿಣಾಮವಾಗಿ ಬೋಲ್ಷೆವಿಕ್ಕರ ಕೈಗೆ ಆಡಳಿತ ಸೂತ್ರಸಿಕ್ಕಿದ ಕಾರಣ (ಅಕ್ಟೋಬರ್ 1917ರ ಕ್ರಾಂತಿಯ ಅನಂತರ) ಇದು ಪ್ರಾವ್ಡ ಪತ್ರಿಕೆಯ ಸಂಪಾದನದ ಪಡೆನೆಳಲಾಯಿತು. 1918ರಿಂದೀಚೆಗೆ ಮಾಸ್ಕೋದಲ್ಲಿರುವ ಸುಪ್ರೀಂ ಸೋವಿಯತ್ ಪ್ರೆಸಿಡಿಯಂನ ವತಿಯಿಂದ ಪ್ರಕಟವಾಗುತ್ತಿದೆ. (ಕೆ.ಎಸ್.)

**ಇಟಕೋನಿಕ್ ಆಮ್ಲ:** ಇದೊಂದು ಅಪರ್ಯಾಪ್ತ ಸಾವಯವ ಆಮ್ಲ. ಅಣುಸೂತ್ರ $C_5H_6O_4$. ರಚನಾಸೂತ್ರ ಕೆಳಕಂಡಂತಿದೆ:

$$
\begin{array}{l}
H_2C{=}C{-}COOH \\
\quad\quad\;\; | \\
\quad\quad\;\; CH_2{-}COOH
\end{array}
$$

ರಾಸಾಯನಿಕವಾಗಿ ಮೆಥಿಲೀನ್ ಸಕ್ಸಿನಿಕ್ ಆಮ್ಲವೆನ್ನಬಹುದು. ಹರಳುರೂಪದ ಬಿಳಿಯ ಘನವಸ್ತು. ದ್ರವೀಕರಣ ಬಿಂದು 162º–164º ಸೆ. 100 ಮಿ.ಲೀ. ನೀರಿನಲ್ಲಿ 20º ಸೆ. ನಲ್ಲಿ. 8 ಗ್ರಾಂಗಳಷ್ಟೂ 80º ಸೆ. ನಲ್ಲಿ 73 ಗ್ರಾಂಗಳಷ್ಟೂ ದ್ರಾವ್ಯ. ಈಥರ್ ಬೆಂಜೀನು ಕ್ಲೋರೋಫಾರಂ ಇತ್ಯಾದಿ ಸಾವಯವ ಲೀನಕಾರಿಗಳಲ್ಲಿ ಅಲ್ಪದ್ರಾವ್ಯ. ಸಿಟ್ರಕೋನಿಕ್ ಆಮ್ಲದ ಅನ್‌ಹೈಡ್ರೈಡನ್ನು ನೀರಿನೊಂದಿಗೆ 150º ಸೆ. ಉಷ್ಣತೆಗೆ ಕಾಯಿಸಿದರೆ ಇಟಕೋನಿಕ್ ಆಮ್ಲ ಉತ್ಪತ್ತಿಯಾಗುವುದು. ಆದರೆ ಕೈಗಾರಿಕಾ ಪ್ರಮಾಣದಲ್ಲಿ ತಯಾರಿಸಲು ಫರ್ಮೆಂಟೇಷನ್ ವಿಧಾನ ಅನುಕೂಲ. ಶೇ.15–20 ಗ್ಲೂಕೋಸ್ ಕೆಲವು ನಿರವಯವ ಲವಣಗಳು ಮತ್ತು ಹೈಡ್ರೊಕ್ಲೋರಿಕ್ ಆಮ್ಲದ ಮಿಶ್ರಣವನ್ನು ವ್ಯತ್ಯಾಸ ಮಾಡುವುದರಿಂದ ಕ್ರಿಯಾಮಾಧ್ಯಮದ ಪಿಎಚ್ ಮೌಲ್ಯವನ್ನು 1.8–2.0 ಮಿತಿಯಲ್ಲಿ ನಿಯಂತ್ರಿಸುವರು. ಇದು ಬಹುಮುಖ್ಯ. ಈಗ ಆಸ್ಪರ್ಜಿಲಸ್ ಟೆರಿಯಸ್ ಎಂಬ ಬೂಷ್ಟಿನ ಆಯ್ದ ತಳಿಯನ್ನು ಕೂಡಿಸಿ ಗಾಳಿ

ಹಾಯಿಸಲಾಗುವುದು. 28°–35° ಸೆ. ಉಷ್ಣತಾ ಮಿತಿಯಲ್ಲಿ 2–5 ದಿವಸಗಳ ಕಾಲ ಬಿಟ್ಟರೆ ಇಟಕೋನಿಕ್ ಆಮ್ಲ ಉತ್ಪತ್ತಿಯಾಗಿರುತ್ತದೆ. ಹುಳಿಬಂದ ದ್ರವವನ್ನು ಶೋಧಿಸಿ ನಿರ್ವಾತ ಸ್ಥಿತಿಯಲ್ಲಿ ಸಾಂದ್ರೀಕರಿಸಿ ತಣಿಸಿದರೆ ಆಮ್ಲ ಸ್ಫಟಿಕೀಕರಿಸುವುದು. ಇದರ ಎಸ್ಟರುಗಳು ಬಹ್ವಂಗೀಕರಿಸಿ (ಪಾಲಿಮರೈಸ್) ವಿಶಿಷ್ಟ ಗುಣಗಳಿರುವ ಪ್ಲಾಸ್ಟಿಕ್ಕುಗಳನ್ನು ಕೊಡುವುವು. (ಎಚ್.ಜಿ.ಎಸ್.)

**ಇಟಗಿ:** ರಾಯಚೂರು ಜಿಲ್ಲೆಯ ಯಲ್ಬುರ್ಗ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಚಾಲುಕ್ಯ ವಾಸ್ತುಶೈಲಿಯಲ್ಲಿ ನಿರ್ಮಿತವಾಗಿರುವ ಇಲ್ಲಿಯ ಮಹಾದೇವ ದೇವಾಲಯ ಪ್ರಸಿದ್ಧವಾದುದು. 1112ರಲ್ಲಿ ಚಾಲುಕ್ಯ ಅರಸರ ಆರನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವ ಎಂಬಾತ ಇದನ್ನು ಕಟ್ಟಿಸಿದನೆಂದು ಅಲ್ಲಿಯ ಶಾಸನವೊಂದರಿಂದ ತಿಳಿದು ಬರುತ್ತದೆ. ಅದೇ ಶಾಸನದಲ್ಲಿ ಆ ಮಂದಿರವನ್ನು ದೇವಾಲಯಚಕ್ರವರ್ತಿ ಎಂದು ಕರೆಯಲಾಗಿದೆ. ಚಾಲುಕ್ಯ ಶೈಲಿಯ ದೇವಾಲಯಗಳ ಮೇಲೆ ವಿಶೇಷ ಅಧ್ಯಯನ ನಡೆಸಿರುವ ಡಾ. ಕಸಿನ್ಸ್‌ರವರು, ಹಳೇಬೀಡಿನ ದೇವಾಲಯಗಳನ್ನು ಬಿಟ್ಟರೆ, ಇದು ಕರ್ಣಾಟಕದಲ್ಲೇ ಅತ್ಯಂತ ಸುಂದರ ದೇವಾಲಯವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಚಾಲುಕ್ಯ ಶೈಲಿಯ ಸೂಕ್ಷ್ಮ ವೈಖರಿಗಳಿಂದ ಕೂಡಿರುವ ಈ ದೇವಾಲಯ ಬಹು ಸುಂದರವಾಗಿದೆ. ಗರ್ಭಗೃಹ, ಮುಖಮಂಟಪ, ಮೊಗಸಾಲೆಗಳು–ಇವೆಲ್ಲವೂ ಚೌಕಾಕೃತಿಯಲ್ಲಿವೆ. ಸುತ್ತಲೂ ಗೋಡೆ ಇದೆ. ಗೋಡೆಗಳಲ್ಲೂ ಕಂಬಗಳಲ್ಲೂ ಚೆಲುವಿನ ಅನೇಕ ಕೆತ್ತನೆಗಳಿವೆ. ನಕ್ಷತ್ರಾಕಾರದ ತೆರೆದ ಮಂಟಪ ವಿಶಾಲವಾಗಿ ವಿವಿಧ ಕೆತ್ತನೆಯ ಕಂಬಗಳಿಂದ ರಂಜಿಸುತ್ತಿದೆ. ಇಲ್ಲಿನ ಕೆತ್ತನೆ ಸರಳವಲ್ಲ, ಬಲು ಜಟಿಲ. ಆದರೂ ಲಾಲಿತ್ಯವಿಲ್ಲದಿಲ್ಲ.(ಎಸ್.ಎಸ್.)

**ಇಟಲಿ:** ಖ್ಯಾತ ರೋಮನ್ ಸಾಮ್ರಾಜ್ಯದ ಮಾತೃಸ್ಥಾನವಾದ ಇಟಲಿ ಮೆಡಿಟರೇನಿಯನ್ ಸಮುದ್ರದಲ್ಲಿ ಚಾಚಿ ನಿಂತಿರುವ ಬಹು ಸಣ್ಣ ಪರ್ಯಾಯದ್ವೀಪ. ಗಾತ್ರದಲ್ಲಿ ಚಿಕ್ಕದಾದರೂ ಹಿಂದಿನ ಕಾಲದಲ್ಲಿ ಇದು ಹೊಂದಿದ್ದ ವ್ಯಾಪ್ತಿ ಅಚ್ಚರಿಗೊಳಿಸುವಂಥದು. ರೋಮನ್ ಸಾಮ್ರಾಜ್ಯಕ್ಕಿದ್ದ ವಿಸ್ತಾರ ಮತ್ತು ಅಚ್ಚುಗಟ್ಟು ಬೇರಾವ ಸಾಮ್ರಾಜ್ಯಕ್ಕೂ ಬರಲಾರದು.

ರೋಮ್ ತನ್ನ ಉಚ್ಛ್ರಾಯಸ್ಥಿತಿಯಲ್ಲಿ ಅಂದಿನ ನಾಗರಿಕ ಪ್ರಪಂಚವನ್ನೆಲ್ಲ ಏಕಚ್ಛತ್ರದಡಿ ಸಂವರಿಸಿ ಆಳಿತು. ಅದರ ವೈಭವ ಅನನ್ಯವಾದುದು; ಶಕ್ತಿ ಅದಮ್ಯವಾದುದು. ವಿಸ್ತಾರವಾದ ತನ್ನ ಸಾಮ್ರಾಜ್ಯದಲ್ಲಿ ಅದು ಏರ್ಪಡಿಸಿದ ಆಡಳಿತ ವ್ಯವಸ್ಥೆ, ನ್ಯಾಯ, ಜೀವನಕ್ರಮ–ಇವು ಇಡೀ ಸಾಮ್ರಾಜ್ಯದ ಐಕ್ಯಕ್ಕೆ ಸಹಾಯಕವಾದುವು. ರೋಮಿನಿಂದ ನಡೆದ ಈ ಬೃಹತ್ ವ್ಯವಹಾರಕ್ಕೆ ಇಟಲಿಯ ಭೂಮಿ ಆಶ್ರಯ ಕೊಟ್ಟಿತು. ರೋಮನ್ನರ ಚರಿತ್ರೆ, ನಾಗರಿಕತೆ, ಸಂಸ್ಕೃತಿ, ಕಲೆ ಮುಂತಾದ ವಿಷಯಗಳು ಅಲ್ಲಲ್ಲಿ ಪ್ರತ್ಯೇಕವಾಗಿ ಬಂದಿವೆ. ಇಲ್ಲಿ ಇಟಲಿಯ ಬಗ್ಗೆ ಬಂದಿರುವ ಲೇಖನಗಳಲ್ಲೂ ಆ ವಿಷಯಗಳ ಸಂಗ್ರಹ ನಿರೂಪಣೆ ಇದೆ. ಇಲ್ಲಿನ ಲೇಖನಗಳ ವ್ಯವಸ್ಥೆ ಹೀಗಿದೆ. ಇಟಲಿ ಎಂಬ ಲೇಖನದಲ್ಲಿ ಅದರ ಭೌಗೋಳಿಕ, ವಾಣಿಜ್ಯ ವಿಷಯಗಳ ವಿವರಗಳಿವೆ. ಇಟಲಿಯ ಇತಿಹಾಸ, ಕಲೆ, ಛಂದಸ್ಸು, ಭಾಷೆ, ಸಂಗೀತ, ಸಾಹಿತ್ಯ, ಸಾಹಿತ್ಯ ವಿಮರ್ಶೆಗಳ ಬಗ್ಗೆ ಪ್ರತ್ಯೇಕ ಶೀರ್ಷಿಕೆಗಳಿವೆ. ಇಟಲಿಯ ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ಪ್ರಾಸ್ತಾವಿಕವಾಗಿ ಕೆಲ ವಿಷಯಗಳು ಈ ಹರಹಿನಲ್ಲಿ ಬಂದಿವೆಯಾದರೂ ಅವರ ಜೀವನ ಮತ್ತು ಸಾಧನೆಗಳ ಬಗ್ಗೆ ವಿವರಗಳನ್ನು ಆಯಾ ವ್ಯಕ್ತಿಗಳನ್ನು ಕುರಿತ ಲೇಖನಗಳಲ್ಲಿ ಕೊಟ್ಟಿದೆ.

ಇಟಲಿ ದಕ್ಷಿಣ ಯುರೋಪಿನ ಒಂದು ಗಣರಾಜ್ಯ (ರಿಪಬ್ಲಿಕಾ ಇಟಾಲಿಯಾನ ಅಥವಾ ಇಟಾಲಿಯ). ಯುರೋಪಿನಿಂದ ದಕ್ಷಿಣಾಭಿಮುಖವಾಗಿ ಮೆಡಿಟರೇನಿಯನ್ ಸಮುದ್ರದೊಳಕ್ಕೆ ಚಾಚಿರುವ ಮೂರು ಪರ್ಯಾಯದ್ವೀಪಗಳಲ್ಲಿ ಮಧ್ಯದ್ದು; ಸಾನ್ ಮರೀನೊ ಮತ್ತು ವ್ಯಾಟಿಕನ್ ನಗರಸೀಮೆಗಳನ್ನು ಬಿಟ್ಟು ಉಳಿದ ಭಾಗವೂ ಈ ಭೂಶಿರದ ಮುಂದಿನ ಭಾಗದಂತಿರುವ ಸಿಸಿಲಿ ದ್ವೀಪವೂ ಸಾರ್ಡಿನಿಯ, ಎಲ್ಬ ಮತ್ತು ಸು.70 ಸಣ್ಣ ದ್ವೀಪಗಳೂ ಸೇರಿರುವ ಪ್ರದೇಶ. ಎತ್ತರವಾದ ಹಿಮ್ಮಡಿಯ ಬೂಟಿನಾಕಾರದ ಈ ಪರ್ಯಾಯದ್ವೀಪ ವಾಯವ್ಯ ದಿಕ್ಕಿನಿಂದ ಆಗ್ನೇಯಕ್ಕೆ ರೈಲುದಾರಿಯ ಕೈಮರದಂತೆ ಚಾಚಿಕೊಂಡಿದೆ. ಉತ್ತರ ಅಕ್ಷಾಂಶ $47^0$ 5' ನಿಂದ $35^0$ 39' ರವರೆಗೆ 1168 ಕಿಮೀ ಉದ್ದವಿರುವ ಈ ದೇಶ ಎಲ್ಲೂ 240 ಕಿಮೀಗಿಂತ ಅಗಲವಾಗಿಲ್ಲ. ಇದು ಪೂರ್ವಾರ್ಧಗೋಳದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ರೇಖಾಂಶ $6^0$ 55' ನಿಂದ $18^0$ 30' ವರೆಗೆ ಹಬ್ಬಿದೆ. ಇಟಲಿಗೆ ಉತ್ತರದಲ್ಲಿ ಬಿಲ್ಲಿನಂತೆ ಬಾಗಿ ಹಬ್ಬಿರುವ ಆಲ್ಪ್ಸ್ ಪರ್ವತಶ್ರೇಣಿಯಿಂದ ಫ್ರಾನ್ಸ್ ಸ್ವಿಟ್ಜರ್ಲೆಂಡ್ ಆಸ್ಟ್ರಿಯ ಪ್ರತ್ಯೇಕಗೊಂಡಿವೆ. ಆಲ್ಪ್ಸ್ ಪರ್ವತಶ್ರೇಣಿಯ ನೆತ್ತಿಯ ಗೆರೆಯೇ ಬಹಳಮಟ್ಟಿಗೆ ಇಟಲಿಗೂ ಈ ದೇಶಗಳಿಗೂ ನಡುವಣ ಗಡಿರೇಖೆ. ಇಟಲಿ ಪರ್ಯಾಯದ್ವೀಪದ ವಾಯವ್ಯದಲ್ಲಿ ಲುಗುರಿಯನ್ ಸಮುದ್ರವೂ ಪಶ್ಚಿಮದಲ್ಲಿ ಟೆರ್ಹೇನಿಯನ್ ಸಮುದ್ರವೂ ಆಗ್ನೇಯದಲ್ಲಿ ಐಯೋನಿಯನ್ ಸಮುದ್ರವೂ ಪೂರ್ವದಲ್ಲಿ ಏಡ್ರಿಯಾಟಿಕ್ ಸಮುದ್ರವೂ ಇವೆ. ಸಿಸಿಲಿ ದ್ವೀಪಕ್ಕೂ ಆಫ್ರಿಕಕ್ಕೂ ನಡುವೆ ಇರುವ ಸಿಸಿಲಿಯನ್ ಜಲಸಂಧಿಯ ಅಗಲ ಕೇವಲ 144 ಕಿಮೀ. ಹೀಗಾಗಿ ಇಟಲಿಯೂ ಸಿಸಿಲಿಯೂ ಮೆಡಿಟರೇನಿಯನ್ ಸಮುದ್ರವನ್ನೇ ಸ್ಥೂಲವಾಗಿ ಇಬ್ಭಾಗಿಸಿವೆ. ಸಿಸಿಲಿ ಸಾರ್ಡಿನಿಯಗಳು ಕೂಡಿದ ಇಟಲಿಯ ಒಟ್ಟು ವಿಸ್ತೀರ್ಣ 3,01,338 ಚಕಿಮೀ. ಆಡಳಿತ ಸೌಕರ್ಯಕ್ಕಾಗಿ ಇದನ್ನು 19 ಭಾಗಗಳಾಗಿ ವಿಂಗಡಿಸಲಾಗಿದೆ.

ಇಟಲಿಯ ರಾಜಧಾನಿ ರೋಮ್. ಈ ದೇಶದ ಜನಸಂಖ್ಯೆ 56,995,744 (2001). ಎರಡನೆಯ ಯುದ್ಧಾನಂತರದಲ್ಲಿ 1947ರ ಶಾಂತಿ ಕೌಲಿಗೆ ಅನುಗುಣವಾಗಿ ಈ ದೇಶದ ಗಡಿ ನಿಷ್ಕರ್ಷೆಯಾಗಿದೆ. ಯುದ್ಧಪೂರ್ವದಲ್ಲಿ ಇದು ಹೊಂದಿದ್ದ ವಸಾಹತುಗಳ ಮೇಲಣ ಹಕ್ಕುಗಳನ್ನೆಲ್ಲ ಬಿಟ್ಟುಕೊಟ್ಟಿದೆ. ಇದರ ಆಕ್ರಮಣಕ್ಕೆ ಒಳಪಟ್ಟಿದ್ದ ಇಥಿಯೋಪಿಯ (**ನೋಡಿ– ಅಬಿಸೀನಿಯ**) 1942ರಲ್ಲಿ ತನ್ನ ಸ್ವಾತಂತ್ರ್ಯವನ್ನು ಮತ್ತೆ ಗಳಿಸಿಕೊಂಡಿತು. ಡೊಡೆಕನೀಸನ್ನು 1947ರಲ್ಲಿ ಗ್ರೀಸಿಗೆ ಸೇರಿಸಲಾಯಿತು. (**ನೋಡಿ– ಗ್ರೀಸಿನ–ಚರಿತ್ರೆ**) ಲಿಬಿಯ 1951ರಲ್ಲಿ

ರಾಜಕೀಯ ಭೂಪಟ

ಸ್ವತಂತ್ರವಾಯಿತು. ಎರಿಟ್ರಿಯ ಪ್ರದೇಶ 1952ರಲ್ಲಿ ಇಥಿಯೋಪಿಯ ಒಕ್ಕೂಟದಲ್ಲಿ ಸೇರ್ಪಡೆಗೊಂಡಿತು. ಸೋಮಾಲಿಯ 1950ರಲ್ಲಿ ಇಟಲಿಯ ನ್ಯಾಸಾಧಿಕಾರಕ್ಕೊಳಪಟ್ಟಿದ್ದು, 1960ರ ಜುಲೈ ತಿಂಗಳಲ್ಲಿ ಸ್ವತಂತ್ರ ಗಣರಾಜ್ಯವಾಯಿತು.

**ಮೇಲ್ಮೈಲಕ್ಷಣ:** ಇಟಲಿಯ ಮುಖ್ಯ ಭೂಭಾಗವನ್ನು ಖಂಡಾಂತರ ಪ್ರದೇಶವೆಂದೂ ಪರ್ಯಾಯದ್ವೀಪಪ್ರದೇಶವೆಂದೂ ಎರಡು ಭಾಗಗಳಾಗಿ ವಿಂಗಡಿಸಬಹುದು. ಉತ್ತರದಲ್ಲಿ ಆಲ್ಪ್ಸ್ ಪರ್ವತದ ದಕ್ಷಿಣದ ಇಳುಕಲೂ ದಕ್ಷಿಣಭಾಗದಲ್ಲಿ ಅಪೆನೈನ್ ಪರ್ವತಗಳ ಉತ್ತರದ ಇಳಿಜಾರು ಇಟಲಿಯ ಖಂಡಾಂತರ ಪ್ರದೇಶವನ್ನು ಅಡಕತ್ತರಿಯಂತೆ ಹಿಡಿದುಕೊಂಡಿವೆ. ಪರ್ಯಾಯದ್ವೀಪಪ್ರದೇಶದಲ್ಲಿ ಅಪೆಮಾಂಟಿರೋಸದ ಎತ್ತರ 4,640 ಮೀ. ಇಟಲಿಯ ಪ್ರದೇಶದಲ್ಲಿ ಇರುವ ಶಿಖರಗಳ ಪೈಕಿ ಗ್ರಾನ್ ಪಾರಾಡಿಸೊ (4,162 ಮೀ) ಅತ್ಯಂತ ಉನ್ನತವಾದದ್ದು. ಮಧ್ಯ ಆಲ್ಪ್ಸ್ ಪಶ್ಚಿಮ ಭಾಗದಷ್ಟು ಎತ್ತರವಾಗಿಲ್ಲ. ಪೂರ್ವಭಾಗ ಇನ್ನೂ ತಗ್ಗು; ಆದರೆ ಸುಂದರ. ತೀರ ಪೂರ್ವದಲ್ಲಿ ಪೂರ್ವ–ಪಶ್ಚಿಮವಾಗಿ ಹಬ್ಬಿರುವ ಕಣಿವೆಗಳಲ್ಲಿ ಹರಿಯುವ ಹೊಳೆಗಳ ನೀರು ನಿಂತು ಸರೋವರವಾಗಿ ಪರಿಣಮಿಸಿ, ನೋಡಲು ರಮಣೀಯ. ಪಶ್ಚಿಮದಲ್ಲಿ 300 ಮೀ–520 ಮೀಗಳವರೆಗೆ ಮೇಲೆದ್ದು ಪೂರ್ವದಲ್ಲಿ 90 ರಿಂದ 18 ಮೀಗಳವರೆಗೆ ತಗ್ಗಿ ಹಬ್ಬಿರುವ ಉತ್ತರದ ಬಯಲಿನ ಪಶ್ಚಿಮ ಭಾಗದಲ್ಲಿ ಪೋ ನದಿಯೂ ಅದರ ಉಪನದಿಗಳೂ ಪೂರ್ವಾಭಿಮುಖವಾಗಿ ಹರಿಯುತ್ತವೆ. ಪೂರ್ವದಲ್ಲಿ ಪೋ ಜೊತೆಗೆ ಅನೇಕ ಸ್ವತಂತ್ರ ನದಿಗಳಿವೆ.

ಇಟಲಿಯ ಪರ್ಯಾಯದ್ವೀಪ ಭಾಗವನ್ನು ಕಬ್ಬಿನ ಗಿಣ್ಣುಗಳಂತೆ ಮೂರು ಭಾಗಗಳಾಗಿ ವಿಂಗಡಿಸಬಹುದು. ಈ ಪ್ರದೇಶದ ಪಶ್ಚಿಮಭಾಗವನ್ನು ಅನೇಕ ಸ್ವಾಭಾವಿಕ ವಿಭಾಗಗಳಾಗಿ ವಿಂಗಡಿಸಬಹುದಾಗಿದೆ. ಕಂಪ ನದಿಯ ಮೈದಾನದಲ್ಲಿ ಫ್ಲೆಗ್ರೀನ್ ಫೀಲ್ಡ್ಸ್ ಮತ್ತು ವಿಸೂವಿಯಸ್ ಅಗ್ನಿಪರ್ವತಗಳಿವೆ. ಇವು ಇನ್ನೂ ಜೀವಂತವಾಗಿವೆ; ನೇಪಲ್ಸ್ ಪಟ್ಟಣಕ್ಕೆ ಹತ್ತಿರದಲ್ಲೇ ಇವೆ. ಅಪೆನೈನ್ ಪರ್ವತಶ್ರೇಣಿಯಲ್ಲಿ ಅನೇಕ ಬಗೆಯ ಬಂಡೆಗಳಿವೆ. ಅಪೆನೈನ್ ಶ್ರೇಣಿಗಳು ಉತ್ತರದಲ್ಲಿ ಕಿರಿದಾಗಿಯೂ ಮಧ್ಯದಲ್ಲಿ ದಪ್ಪಗೂ ಎತ್ತರವಾಗಿಯೂ ಮುಂದೆ ತಗ್ಗಿಯೂ ಇವೆ. ಇಟಲಿಯ ನದಿಗಳ ಪ್ರವಾಹಗಳು ವರ್ಷಾದ್ಯಂತ ಒಂದೇ ಸಮನಾಗಿರುವುದಿಲ್ಲ. ಉತ್ತರದ ನದಿಗಳಲ್ಲಿ ಈ ಏರುಪೇರು ದಕ್ಷಿಣದ ನದಿಗಳಷ್ಟು ಅಧಿಕವಲ್ಲ. ಆಲ್ಪ್ಸ್ ಮೇಲ್ಭಾಗದಲ್ಲಿ

ಹುಟ್ಟಿ ಹರಿಯುವ ನದಿಗಳು ಮುಂಬೇಸಗೆಯಲ್ಲಿ ಕರಗಿದ ಹಿಮನೀರಿನಿಂದ ಕೂಡಿ ಉಬ್ಬಿ ಹರಿಯುತ್ತವೆ. ಆಲ್ಪ್ಸ್ ಪರ್ವತಗಳ ಕೆಳಪ್ರದೇಶದಲ್ಲಿ ಹುಟ್ಟುವ ನದಿಗಳಲ್ಲಿ ವರ್ಷಕ್ಕೆ ಎರಡು ಬಾರಿ ಪ್ರವಾಹ. ಮುಂಬೇಸಗೆಯಲ್ಲಿ ಹಿಮ ಕರಗಿ ನೀರು ಹರಿದರೆ ಬೇಸಗೆಯ



ಮೇಲ್ಮೈಲಕ್ಷಣ

ಕೊನೆಭಾಗದಲ್ಲೂ ಶರತ್ಕಾಲದ ಆದಿಭಾಗದಲ್ಲೂ ಬೀಳುವ ಮಳೆಯಿಂದ ತುಂಬು ಹರಿವಿರುತ್ತದೆ. ಉತ್ತರದ ಮೈದಾನದ ದಕ್ಷಿಣದಲ್ಲಿ ಹುಟ್ಟಿ ಪೋ ನದಿಯಲ್ಲಿ ಸಂಗಮವಾಗುವ ನದಿಗಳಲ್ಲಿ ಮಾರ್ಚಿಯಲ್ಲೂ ಸೆಪ್ಟೆಂಬರಿನಲ್ಲೂ ಪ್ರವಾಹ. ಜುಲೈ-ಸೆಪ್ಟೆಂಬರ್‍ವರೆಗೆ ಅವುಗಳ ನೀರಿನ ಮಟ್ಟ ಕಡಿಮೆ. ಮಧ್ಯ ಇಟಲಿಯ ನದಿಗಳಿಗೆ ವಸಂತಋತುವೇ ಪ್ರವಾಹಕಾಲ. ಜುಲೈಯಿಂದ ಸೆಪ್ಟೆಂಬರ್‍ವರೆಗೆ ತಗ್ಗಿದ ಮಟ್ಟ, ನವೆಂಬರಿನಲ್ಲಿ ಸ್ವಲ್ಪ ಪ್ರವಾಹ. ದಕ್ಷಿಣ ಇಟಲಿಯ ನದಿಗಳಲ್ಲಿ ಫೆಬ್ರವರಿ ತಿಂಗಳಲ್ಲಿ ಪ್ರವಾಹದ ಭೋರ್ಗರೆತ. ಬೇಸಗೆಯಲ್ಲಿ ಇವು ಬಹುತೇಕ ಶುಷ್ಕ. ಸ್ಥೂಲವಾಗಿ ಇದು ಇಟಲಿಯ ನದಿಗಳ ಪ್ರವಾಹದ ಚಿತ್ರ.

**ವಾಯುಗುಣ:** ಉತ್ತರದಿಂದ ದಕ್ಷಿಣಕ್ಕೆ ಅಕ್ಷಾಂಶದಲ್ಲಿ ಸು.$10^0$ಗಳ ಅಂತರವಿರುವುದರಿಂದಲೂ ಮೈಮೇಲೆ ಬಹು ತೀವ್ರ ಉಬ್ಬು ತಗ್ಗುಗಳಿರುವುದರಿಂದಲೂ ಇಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ವಾಯುಗುಣದಲ್ಲಿ ಬಹಳ ವ್ಯತ್ಯಾಸಗಳಿವೆ. ಸಮುದ್ರಕ್ಕಿರುವ ದೂರವೂ ಈ ವ್ಯತ್ಯಾಸಗಳಿಗೆ ಒಂದು ಕಾರಣ. ಸಮುದ್ರಪ್ರಭಾವಕ್ಕೆ ಒಳಗಾದ ಪ್ರದೇಶದಲ್ಲಿ ಮಳೆ ಹೆಚ್ಚು; ಹವೆ ಹಿತಕರ. ಎತ್ತರ ಪ್ರದೇಶ ಹೆಚ್ಚು ತಂಪು; ಅಲ್ಲಿ ಮಳೆಯೂ ಹೆಚ್ಚು. ಪರ್ವತಗಳ ಪೂರ್ವ ಬದಿಯಲ್ಲಿ ಮಳೆ ಕಡಿಮೆ. ಇದು ಮಳೆನೆರಳು ಪ್ರದೇಶ. ಉತ್ತರ ಮೈದಾನದ ಪಶ್ಚಿಮಭಾಗದಲ್ಲಿರುವ ಟುರಿನ್ನಿನಲ್ಲಿ ವರ್ಷದ ಕನಿಷ್ಠ ಮಧ್ಯಮ ಉಷ್ಣತೆ $17^0$ ಫ್ಯಾ. ನಷ್ಟು ಕೆಳಗಿರುತ್ತದೆ. ದಕ್ಷಿಣದ ಮೆಸ್ಸಿನ ಜಲಸಂಧಿಯ ಆಚೀಚೆ ಪ್ರದೇಶದಲ್ಲಿ ಚಳಿಗಾಲದಲ್ಲಿ $53^0$ ಫ್ಯಾ. ನಷ್ಟು ಹೆಚ್ಚು ಉಷ್ಣತೆಯಿರುತ್ತದೆ. ಬೇಸಗೆಯಲ್ಲಿ ಟರಾಂಟೊ ಖಾರಿಯ ಸುತ್ತಣ ಪ್ರದೇಶದಲ್ಲಿ ಅತಿ ಹೆಚ್ಚು ಉಷ್ಣತೆಯೂ (77.5 ಫ್ಯಾ.) ಆಲ್ಪ್ಸ್ ತಲೆಗಳ ಮೇಲೆ ಅತ್ಯಂತ ತಂಪೂ ಇರುತ್ತದೆ. ಕರಾವಳಿ ಪ್ರದೇಶ ತಗ್ಗಾಗಿರುವುದರಿಂದ ಅಲ್ಲಿ ಬೇಸಗೆಯಲ್ಲಿ ಉಷ್ಣತೆ ಹೆಚ್ಚು. ಇಟಲಿಯ ಎಲ್ಲ ಕಡೆಗೂ ಹಿಮಬೀಳುವುದಾದರೂ ದಕ್ಷಿಣದಲ್ಲಿ ಇದು ವಿರಳ.

ಉತ್ತರದ ಆಲ್ಪ್ಸ್ ಪ್ರದೇಶದಲ್ಲಿ ಪರಮಾವಧಿ ಮಳೆ (304 ಸೆಂಮೀ); ತಗ್ಗು ಪ್ರದೇಶದಲ್ಲಿ ತೀರಕಡಿಮೆ (28 ಸೆಂಮೀ). ಪಶ್ಚಿಮ ಮಾರುತಗಳೇ ಮೋಡ ವಾಹಕಗಳಾಗಿದ್ದರಿಂದ ಪಶ್ಚಿಮದಲ್ಲಿ ಮಳೆ ಹೆಚ್ಚು. ಪೂರ್ವಭಾಗ ಶುಷ್ಕ. ಇಟಲಿಯ ದಕ್ಷಿಣಾರ್ಧದಲ್ಲಿ ಮೆಡಿಟರೇನಿಯನ್ ವಾಯುಗುಣಕ್ಕೆ ಅನುಗುಣವಾಗಿ ಮಳೆ ಬೀಳುತ್ತದೆ. ಎಂದರೆ ಚಳಿಗಾಲದಲ್ಲಿ ಮಳೆ; ಬೇಸಗೆಯಲ್ಲಿ ತೇವವಿರುವುದಿಲ್ಲ. ಉತ್ತರಕ್ಕೆ ಹೋದಂತೆಲ್ಲ ವರ್ಷಕ್ಕೆ ಎರಡು ಮಳೆಗಾಲ; ಶರತ್ ಹಾಗೂ ವಸಂತಋತುಗಳಲ್ಲಿ ಮಳೆ ಅಧಿಕ. ಆದಾಗ್ಯೂ ಚಳಿಗಾಲದಲ್ಲೇ ಮಳೆಯ ಪ್ರಮಾಣ ಹೆಚ್ಚು. ಆದರೆ ಬೇಸಗೆಯ ಒಣಹವೆಯ ಅವಧಿ ಉತ್ತರಕ್ಕೆ ಹೋದಂತೆಲ್ಲ ಕಿರಿದಾಗುತ್ತದೆ. ಪೋ ನದಿಯ ಉತ್ತರಕ್ಕೆ ಚಳಿಗಾಲದಲ್ಲೇ ಮಳೆಯ ಕನಿಷ್ಠ ಪ್ರಮಾಣ. ಈ ಮೈದಾನದಲ್ಲಿ ಚಳಿಗಾಲ, ಬೇಸಗೆಕಾಲಗಳೆರಡರಲ್ಲೂ ಸಾಮಾನ್ಯವಾಗಿ ಒಣ ಹವೆ ಇರುವುದು ಸ್ವಾರಸ್ಯದ ಸಂಗತಿಯಾಗಿದೆ. ಆಲ್ಪ್ಸ್ ಪರ್ವತದ ಶೃಂಗ ಪ್ರದೇಶಗಳಾದರೂ ಸದಾ ದಟ್ಟವಾದ ಹಿಮಕವಚವನ್ನು ಹೊದ್ದಿರುತ್ತವೆ. ಅಷ್ಟು ಎತ್ತರವಲ್ಲದ ಅಪೆನೈನ್ ಪರ್ವತ ಶ್ರೇಣಿಗಳ ವಿಶಾಲ ಪ್ರದೇಶಗಳಲ್ಲಿ ವರ್ಷದಲ್ಲಿ ಮೂರು ನಾಲ್ಕು ತಿಂಗಳುಗಳ ಕಾಲ ಹಿಮ ಇರುತ್ತದೆ. ಅದೇ ಉತ್ತರ ಭಾಗದ ಬಯಲು ಭೂಮಿಯಲ್ಲಿ ವರ್ಷದ ಕೇವಲ ಹತ್ತುದಿನ ಹಿಮ ಕಂಡರೆ ಹೆಚ್ಚು. ವಾಯುಗುಣದ ಹಿತಾಹಿತಗಳನ್ನೂ ಜೀವನ ಸೌಲಭ್ಯಗಳನ್ನೂ ವ್ಯವಸಾಯ, ಕೈಗಾರಿಕೆಗಳ ಸೌಕರ್ಯಗಳನ್ನೂ ಗಮನಿಸಿ ಜನ ನೆಲೆನಿಲ್ಲುತ್ತ ಹೋಗಿರುವುದನ್ನು ಇಲ್ಲಿ ಕಾಣಬಹುದು.

**ಸ್ವಾಭಾವಿಕ ಸಸ್ಯವರ್ಗ:** ಮಧ್ಯ ಐರೋಪ್ಯ ಹಾಗೂ ಮೆಡಿಟರೇನಿಯನ್ ಪ್ರದೇಶಗಳೆರಡೂ ಇಟಲಿಯಲ್ಲಿ ಒಂದರ ಮೇಲೊಂದು ಪ್ರಸರಿಸಿವೆ. ಶಂಕುವಿನಾಕಾರದ (ಕೋನಿಫರಸ್) ಮರಗಳಿಂದಲೂ ಅಗಲೆಲೆಯ ಪರ್ಣಪಾತೀ ವೃಕ್ಷಗಳಿಂದಲೂ ಕೂಡಿದ ಕಾಡುಗಳು, ಕುರುಚಲು ಕಾಡುಗಳು, ಹಸಿರು ಹುಲ್ಲುಗಾವಲುಗಳು ಮಧ್ಯ ಐರೋಪ್ಯ ಪ್ರದೇಶದ ಲಕ್ಷಣ. ಶರತ್ಕಾಲದಲ್ಲಿ ಬುಡದವರೆಗೂ ಸತ್ತು ಮತ್ತೆ ಬೆಳೆಯುವ ಸಸ್ಯಗಳು ಇಲ್ಲಿ ಅಧಿಕ. ಶಂಕುವಿನಾಕಾರದ ಮರಗಳೂ ದಪ್ಪನಾದ ಅಗಲೆಲೆಯ ನಿತ್ಯ ಹಸಿರು ವೃಕ್ಷಗಳೂ ವಾರ್ಷಿಕ ಸಸ್ಯಗಳೂ ಗೆಡ್ಡೆಯಿಂದ ಬೆಳೆಯುವ ಗಿಡಗಳೂ ಬೇಸಗೆಯಲ್ಲಿ ಒಣಗುವ ಹುಲ್ಲುಗಾವಲುಗಳೂ ಮೆಡಿಟರೇನಿಯನ್ ಪ್ರದೇಶದಲ್ಲಿ ಸಾಮಾನ್ಯ. ಇವೆರಡು ಸ್ವಾಭಾವಿಕ ವಿಭಾಗಗಳನ್ನೂ ಪ್ರತ್ಯೇಕಿಸುವ ಖಚಿತ ಗೆರೆ ಎಳೆಯುವುದು ಅಸಾಧ್ಯವಾದರೂ ಇಟಲಿಯ ಆಲ್ಪ್ಸ್ ಪ್ರದೇಶವನ್ನೂ ಉತ್ತರ ಮೈದಾನದ ಹೆಚ್ಚಿನ ಭಾಗವನ್ನೂ ಮಧ್ಯ ಐರೋಪ್ಯ ಪ್ರದೇಶಕ್ಕೂ ಪರ್ಯಾಯದ್ವೀಪ ಭಾಗವನ್ನು ಮೆಡಿಟರೇನಿಯನ್ ಪ್ರದೇಶಕ್ಕೂ ಸೇರಿಸಬಹುದು. ಇಟಲಿಯ ಪೂರ್ವ ಕರಾವಳಿ ಭಾಗವನ್ನು ಮೆಡಿಟರೇನಿಯನ್ ಪ್ರದೇಶದಲ್ಲೇ ವಿಶಿಷ್ಟವಾದದ್ದೆಂದು ಪರಿಗಣಿಸಬೇಕು. ಅಪೆನೈನ್ ಪರ್ವತಶ್ರೇಣಿಗಳ ಮೇಲೂ ಸಿಸಿಲಿಯ ಎಟ್ನ ಪರ್ವತದ ಮೇಲೂ ಪರ್ಣಪಾತೀ ವೃಕ್ಷಗಳ ಕಾಡುಗಳು ಅಧಿಕ. ಇಟಲಿಯ ಅನೇಕ ಭಾಗಗಳಲ್ಲಿ ಕುರುಚಲು ಗಿಡಗಳು ಸಾಮಾನ್ಯ.

**ಪ್ರಾಣಿವರ್ಗ:** ಇಟಲಿಯ ಪ್ರಾಣಿಗಳಿಗೂ ಮಧ್ಯ ಯುರೋಪ್ ಬಾಲ್ಕನ್ ಹಾಗೂ ಆಫ್ರಿಕ ಪ್ರದೇಶಗಳ ಪ್ರಾಣಿಗಳಿಗೂ ರೂಪಸಾಮ್ಯವುಂಟು. ಆದರೆ ಪ್ರಾಣಿಗಳಿಗೆ ಆತ್ಮವಿಲ್ಲವೆಂದೂ ಆದ್ದರಿಂದ ಅವು ಮಾನವಾನುಕಂಪಕ್ಕೆ ಅನರ್ಹವೆಂದೂ ಅವುಗಳ ಬಗ್ಗೆ ಉಪಯುಕ್ತತೆಯ ದೃಷ್ಟಿಯಿಂದ ಮಾತ್ರ ವರ್ತಿಸಬೇಕೆಂದೂ ಇಟಾಲಿಯನ್ನರು ಭಾವಿಸಿರುವುದರಿಂದ ಇಲ್ಲಿ ಅವು ವಿರಳ. ಜಮೀನಿನ ಒಡೆಯನಿಗೆ ತನ್ನ ನೆಲದ ಮೇಲಿನ ಪ್ರಾಣಿಗಳ ಮೇಲೆ ಯಾವ ಸ್ವಾಮ್ಯವೂ ಇಲ್ಲ. ಆಹಾರದ ಕೊರತೆಯನ್ನು ತುಂಬಿಕೊಳ್ಳುವ ಸಲುವಾಗಿ ಪ್ರಾಣಿಗಳನ್ನು ಬೇಟೆಯಾಡುವುದು ಸಾಮಾನ್ಯ. ಹೀಗಾಗಿ ಎಲ್ಲೋ ಕೆಲವೆಡೆಗಳಲ್ಲಿ ಮಾತ್ರ ಪ್ರಾಣಿಗಳು ಇನ್ನೂ ಉಳಿದುಕೊಂಡಿವೆ. ಕರಡಿಗಳು ಅಬ್ರುಜಿ ಎಂಬಲ್ಲಿ ಇನ್ನೂ ಕಾಣಸಿಗುತ್ತವೆ. ತೋಳಗಳು ಅಪೆನೈನ್ ಶ್ರೇಣಿಗಳಲ್ಲಿ ಹೆಚ್ಚಾಗಿವೆ. ಸಣ್ಣಜಾತಿಯ ಜಿಂಕೆಗಳು (ರೋ) ಕಾಡುಗಳಲ್ಲಿ ಉಳಿದುಬಂದಿವೆ. ವೆನಿಸ್ ಬಳಿಯ ಆಲ್ಪ್ಸ್ ಪ್ರದೇಶದಲ್ಲಿ ಸಾರಂಗಗಳೂ ಆಲ್ಪ್ಸ್ ಪ್ರದೇಶದ ಎಲ್ಲೆಡೆಗಳಲ್ಲೂ ಪಾಮಾಯ್ ಮೃಗಗಳೂ ಅಲ್ಲಲ್ಲಿ ಕಾಡುಹಂದಿಗಳೂ ಇವೆ. ಹಲ್ಲಿಗಳು ಅಸಂಖ್ಯಾತ. ಬೆಟ್ಟಗಾಡುಗಳಲ್ಲಿ ಹಾವುಗಳು ಧಾರಾಳ. ಸಾವಿರಕಾಲುಗಳೂ (ಸ್ಕಾಲೊಪೆಂಡ್ರ) ಸಣ್ಣ ಚೇಳುಗಳೂ ಹೆಜ್ಜೇಡಗಳೂ (ಟ್ಯಾರಂಟುಲ) ಹಾರುಜೇಡಗಳೂ ಇಲ್ಲಿನ ವಿಷಜಂತುಗಳು, ನಾನಾ ಬಗೆಯ ಸೊಳ್ಳೆಗಳೂ ಇಲ್ಲುಂಟು. ಆದರೆ ಮಲೇರಿಯ ಮೂಲೋತ್ಪಾಟನವಾಗಿರುವುದರಿಂದ ಭಯವಿಲ್ಲ.

**ವ್ಯವಸಾಯ, ಖನಿಜ, ಕೈಗಾರಿಕೆ:** ಇಟಲಿ ಕೃಷಿಪ್ರಧಾನ ರಾಷ್ಟ್ರ. ಇಲ್ಲಿಯ ಆರ್ಥಿಕ ವ್ಯವಸ್ಥೆಗೆ ವ್ಯವಸಾಯವೇ ತಳಹದಿ. ದೇಶದ ಶೇ. 90ರಷ್ಟು ಭಾಗ ಬೇಸಾಯದ ನೆಲದಿಂದಲೂ ಅರಣ್ಯಗಳಿಂದಲೂ ಕೂಡಿದೆ. ದೇಶದ ದುಡಿಯುವ ಜನರಲ್ಲಿ 2/5 ಭಾಗ ವ್ಯವಸಾಯದಲ್ಲೂ ಅರಣ್ಯೋದ್ಯಮದಲ್ಲೂ ನಿರತರಾಗಿದ್ದಾರೆ. 1953ರ ಭೂಸುಧಾರಣಾಕಾಯಿದೆಯ ಪ್ರಕಾರ ಜಮೀನನ್ನು ವಶಪಡಿಸಿಕೊಂಡು 1963ರಲ್ಲಿ ಸು.18,00,000 ಎಕರೆ ಜಮೀನನ್ನು ಪುನರ್ವಿಂಗಡಿಸಿಯೂ 16,00,000 ಎಕರೆ ಜಮೀನನ್ನು ಹೊಸದಾಗಿಯೂ ರೈತರಿಗೆ ನೀಡಲಾಯಿತು. ವ್ಯವಸಾಯ ಭೂಮಿ ಈಗ ಇನ್ನಷ್ಟು ವಿಸ್ತರಿಸಿದೆ. ದೇಶದ ನಾನಾ ಕಡೆಗಳಲ್ಲಿ ದ್ರಾಕ್ಷಿ ಬೆಳೆಯುತ್ತಾರೆ. ಆಲ್ಪೈನ್ ಜಿಲ್ಲೆಗಳು ಅರಣ್ಯ, ಹಣ್ಣಿನ ತೋಟ ಹಾಗೂ ಗೋಮಾಳಗಳಿಗೆ ಪ್ರಸಿದ್ಧ. ಪೋ ಕಣಿವೆ ಪ್ರದೇಶಗಳಲ್ಲಿ ಧಾನ್ಯ ಹಾಗೂ ಹುಲ್ಲು ಬೆಳೆಯುತ್ತಾರೆ. ಬೆಟ್ಟಗಳ ಮಧ್ಯ ಹಾಗೂ ದಕ್ಷಿಣ ಭಾಗದಲ್ಲಿ ದವಸ ಧಾನ್ಯಗಳನ್ನು, ಆಲಿವ್ ಮತ್ತು ಹಣ್ಣುಗಳನ್ನು ಬೆಳೆಯುತ್ತಾರೆ. ಕಾಲುವೆ ವ್ಯವಸ್ಥೆ, ನೀರಾವರಿ ವ್ಯವಸ್ಥೆ, ತುಂಬ ಸಮರ್ಪಕವಾಗಿದೆ. ಪರಿಮಾಣದ ದೃಷ್ಟಿಯಿಂದ ಗೋಧಿ, ಬೀಟ್‍ರೂಟ್, ಆಲೂಗೆಡ್ಡೆ, ಜೋಳ, ಟೊಮ್ಯಾಟೊ, ಅಕ್ಕಿ, ಓಟ್ಸ್, ಬಾರ್ಲಿ, ಸಣ್ಣಗೋದಿ, ಹೊಗೆಸೊಪ್ಪು, ಸೆಣಬು-ಇವು ಮುಖ್ಯವಾದ ಬೆಳೆಗಳು.

ಅಲ್ಲದೆ ಕಿತ್ತಲೆ ಹಾಗೂ ನಿಂಬೆಹಣ್ಣುಗಳನ್ನು ಹೇರಳವಾಗಿ ಬೆಳೆಯುತ್ತಾರೆ. ದ್ರಾಕ್ಷಾರಸ ಹಾಗೂ ಆಲಿವ್ ಎಣ್ಣೆಗಳ ಉತ್ಪಾದನೆಯಲ್ಲಿ ಪ್ರಸಿದ್ಧವಾದ ರಾಷ್ಟ್ರಗಳ ಪೈಕಿ ಇಟಲಿಗೆ ಎರಡನೆಯ ಸ್ಥಾನ. ದೇಶದ ಎಲ್ಲ ಭಾಗಗಳಲ್ಲೂ ದನಕರುಗಳನ್ನೂ ಕುರಿ, ಮೇಕೆ, ಹಂದಿಗಳನ್ನೂ ನೋಡಬಹುದಾಗಿದೆ. ಉಳಿದ ಪ್ರಾಣಿ ಸಂಪತ್ತೆಂದರೆ ಕತ್ತೆ, ಕುದುರೆ ಹಾಗೂ ಹೇಸರಗತ್ತೆ.

ವ್ಯವಸಾಯ

ಇಟಲಿಯಲ್ಲಿ ದೊರಕುವ ಖನಿಜಸಂಪತ್ತು ಅಷ್ಟೇನೂ ಆಶಾದಾಯಕವಾದುದಲ್ಲ. ಗಂಧಕ ಹಾಗೂ ಪಾದರಸ ಹೇರಳವಾಗಿ ದೊರಕುತ್ತದೆ. ಇಟಲಿ ಇದನ್ನು ಹೇರಳವಾಗಿ ರಫ್ತುಮಾಡುತ್ತದೆ. ಪ್ರಪಂಚದ 1/3 ಭಾಗದಷ್ಟು ಪಾದರಸ ಇಟಲಿಯಲ್ಲಿ ಉತ್ಪಾದನೆಯಾಗುತ್ತದೆ. ಕಬ್ಬಿಣ, ಸತು, ಸೀಸ, ಮ್ಯಾಂಗನೀಸ್ ಮತ್ತು ಅಲ್ಯೂಮಿನಿಯಂ ಅದಿರುಗಳ ಉತ್ಪಾದನೆಯೂ ಇದೆ. ಆದರೆ ಕೈಗಾರಿಕೆಗೆ ಬೇಕಾದ ಕಬ್ಬಿಣದ ಅದಿರು ಹಾಗೂ ಕಲ್ಲಿದ್ದಲು ಸಾಕಷ್ಟು ದೊರಕದಿರುವುದು ದೇಶದ ಕೈಗಾರಿಕೋದ್ಯಮಕ್ಕೆ ಭಾರಿ ಪೆಟ್ಟು. ಕೆಲವು ಮುಖ್ಯ ಗಣಿಗಳು ಸಿಸಿಲಿ, ಸಾರ್ಡಿನಿಯ, ಟಸ್ಕನಿ, ಲೊಂಬಾರ್ಡಿಗಳಲ್ಲಿವೆ. ಸಿಸಿಲಿಯಲ್ಲಿ ಅನೇಕ ಸಮೃದ್ಧ ಎಣ್ಣೆ ಬಾವಿಗಳು ದೊರಕಿವೆ. ಆ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಯುರೋಪಿನಲ್ಲೇ ಅತಿ ಪ್ರಮುಖವಾದ ಎಣ್ಣೆ ದೊರಕುವ ಪ್ರದೇಶಗಳನ್ನಾಗಿ ಮಾಡುವ ಯೋಜನೆ ಹಾಕಿಕೊಂಡು ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಜಲವಿದ್ಯುಚ್ಛಕ್ತಿಯನ್ನು ಅಧಿಕವಾಗಿ ಉತ್ಪಾದಿಸಲಾಗುತ್ತಿದೆ.

ದೇಶದ ಕೈಗಾರಿಕೋದ್ಯಮಗಳು ಇಟಲಿಯ ಉತ್ತರಭಾಗದಲ್ಲಿ ಹೆಚ್ಚಾಗಿವೆ. ಆದರೆ ಇತ್ತೀಚೆಗೆ ದಕ್ಷಿಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಉತ್ಪಾದನೆ ಹೆಚ್ಚಿಸಬೇಕೆಂದು ನಿಯೋಜಿತ ಯೋಜನೆಯನ್ನು ಹಾಕಿಕೊಂಡು ದೇಶ ಮುಂದುವರಿಯುತ್ತಿದೆ. ಇಟಲಿಯ ಕೈಗಾರಿಕಾ ಕ್ಷೇತ್ರದಲ್ಲಿ ಪ್ರಮುಖವಾದದ್ದು ಎಂದರೆ ಬಟ್ಟೆ ಕೈಗಾರಿಕೆ. ಈ ಕೈಗಾರಿಕೆ ದೇಶದಲ್ಲಿ ಬಹುತೇಕ ಜನರಿಗೆ ಉದ್ಯೋಗ ನೀಡಿದೆ. ಕೈಗಾರಿಕೋದ್ಯಮದಲ್ಲಿ ಮುಖ್ಯವಾಗಿ ಸಿಲ್ಕ್, ಉಣ್ಣೆ ಮತ್ತು ಹತ್ತಿ ಹಾಗೂ ಕೃತಕನೂಲಿನ ಬಟ್ಟೆಗಳ ಉತ್ಪಾದನೆ ಹೆಚ್ಚಾಗಿದೆ. ರಾಸಾಯನಿಕ ವಸ್ತು, ಸಕ್ಕರೆ ಹಾಗೂ ಮೋಟರ್ ಕಾರು, ಕೈಗಾರಿಕೆಗಳು ಪ್ರಮುಖವಾದ ಉದ್ಯಮಗಳಾಗಿವೆ. ವೈರ್‌ಲೆಸ್ ಮತ್ತು ಬೆರಳಚ್ಚು ಯಂತ್ರ, ವ್ಯವಸಾಯಕ್ಕೆ ಬೇಕಾದ ಉಪಕರಣ ಬೈಸಿಕಲ್ಲು, ಮೋಟರ್ ಸೈಕಲ್ಲು–ಇವು ಕೈಗಾರಿಕೋದ್ಯಮದ ಇತರ ಉತ್ಪಾದಿತ ವಸ್ತುಗಳು.

**ಜನಜೀವನ:** ಬಹುಪುರಾತನ ಕಾಲದಿಂದ ಇಟಲಿಗೆ ಅನೇಕ ಜನಾಂಗಗಳು ಬಂದು ಸೇರಿವೆ. ಆರ್ಯರು, ಕೆಲ್ಟರು, ಗೋಥರು, ಇಟ್ರಸ್ಕನರು ಮುಂತಾದ ಜನಾಂಗಗಳ ಜನರು ಇಟಲಿಯ ಮೇಲೆ ಧಾಳಿ ನಡೆಸಿದರು. ಪ್ರತಿಯೊಂದು ಧಾಳಿಯ ಅನಂತರವೂ ಅವರಲ್ಲಿ ಸ್ವಲ್ಪಜನ ಅಲ್ಲೇ ನೆಲೆಯೂರಿದರು. ಹೀಗೆ ಇಟಲಿಯಲ್ಲಿ ಅನೇಕ ಜನಾಂಗಗಳ ಮಿಶ್ರಣವಾಗುತ್ತ ಬಂದಿದೆ. ಈಗ ಅದು ತನ್ನದೇ ಆದ ಕೆಲವು ವಿಶಿಷ್ಟ ಲಕ್ಷಣಗಳಿಂದ ಕೂಡಿದೆ. ಇಂದಿಗೂ ಇಟಲಿಯ ಜನರಲ್ಲಿ ವೈವಿಧ್ಯವನ್ನು ಕಾಣಬಹುದು.

ದೇಶದ ಒಟ್ಟು ವಿಸ್ತೀರ್ಣದ ದೃಷ್ಟಿಯಿಂದ ಇಟಲಿಯಲ್ಲಿ ಇತರ ರಾಷ್ಟ್ರಗಳಿಗಿಂತ ಹೆಚ್ಚಿನ ಜನಸಾಂದ್ರತೆ ಇಲ್ಲದಿದ್ದರೂ ಪರ್ವತಮಯ ಪ್ರದೇಶದಿಂದಾಗಿ ಜನವಸತಿ ಕೆಲವೇ ಕಡೆ ಅತಿ ಹೆಚ್ಚಾಗಿದೆ. ಈಗಂತೂ ಇದೊಂದು ಸಮಸ್ಯೆಯೇ ಆಗಿ ಪರಿಣಮಿಸಿದೆ. ಜನಸಂಖ್ಯೆಯ ಏರಿಕೆಯ ಪ್ರಮಾಣ ಅಷ್ಟಾಗಿಲ್ಲ. 1938–61ರ ವರೆಗೆ ಜನನ ಪ್ರಮಾಣ ಸಾಕಷ್ಟು ಇಳಿಯಿತು. ಆದರೆ ಸುಧಾರಿತ ವೈದ್ಯಕೀಯ ಸೌಲಭ್ಯದಿಂದಾಗಿ ನೈಸರ್ಗಿಕ ಮರಣಗಳ ಸಂಖ್ಯೆಯೂ ಇಳಿಯಿತು. ಹೀಗಾಗಿ ಒಟ್ಟಿನಲ್ಲಿ ಜನಸಂಖ್ಯೆಯ ಏರಿಕೆಯ ಪ್ರಮಾಣ ತಕ್ಕಮಟ್ಟಿಗೆ ಇತ್ತು. ಇಲ್ಲಿನ ಜನ ಮೊದಲಿನಿಂದಲೂ ಅಧಿಕಸಂಖ್ಯೆಯಲ್ಲಿ ಹೊರಕ್ಕೆ ವಲಸೆ ಹೋಗುತ್ತಿದ್ದುದರಿಂದ ಜನಸಂಖ್ಯೆಯ ಏರಿಕೆ ಅತಿಯಾಗಿ ಪರಿಣಮಿಸಿಲ್ಲವೆನ್ನಬಹುದು. ಇಟಲಿಯ ಬಹುಸಂಖ್ಯಾತ ಪ್ರಜೆಗಳು ಅಮೆರಿಕಕ್ಕೂ ಯುರೋಪಿನ ಇತರ ರಾಷ್ಟ್ರಗಳಿಗೂ ವಲಸೆ ಹೋಗುವುದು ಸಾಮಾನ್ಯವಾಗಿತ್ತು. ಈಗ ಈ ರೀತಿ ವಲಸೆ ಹೋಗುವವರ ಸಂಖ್ಯೆ ತಗ್ಗಿದ್ದರೂ ಸಂಪೂರ್ಣವಾಗಿ ನಿಂತಿಲ್ಲ.

**ಧರ್ಮ:** ಇಟಲಿಯನ್ನು ರೋಮನ್ ಕೆಥೊಲಿಕ್ ರಾಷ್ಟ್ರವೆಂದೇ ಹೇಳಬಹುದು. ಇಲ್ಲಿಯ ಜನರಲ್ಲಿ ಶೇ.95ಕ್ಕೂ ಹೆಚ್ಚು ಜನ ಕೆಥೊಲಿಕರು. ಪ್ರಾಟೆಸ್ಟಂಟರೂ ಜ್ಯೂಗಳೂ ಇತರ ಮತಾವಲಂಬಿಗಳೂ ಅಲ್ಪಸಂಖ್ಯೆಯಲ್ಲಿದ್ದಾರೆ. ಕೆಥೊಲಿಕ್ ಮತವನ್ನು ರಾಷ್ಟ್ರೀಯಮತವೆಂದು ಪರಿಗಣಿಸಲಾಗಿದೆ. ಆದರೆ ಇತರ ಮತಗಳನ್ನೂ ಇದಕ್ಕೆ ಸರಿಸಮನಾಗಿಯೇ ಕಾಣಲಾಗುತ್ತದೆ.

ಇಲ್ಲಿನ ಶಾಖೆಗಳಲ್ಲಿ ಕೆಥೊಲಿಕ್ ಧಾರ್ಮಿಕ ಶಿಕ್ಷಣ ಕಡ್ಡಾಯವಾಗಿದೆ. ಈ ಶಿಕ್ಷಣದ ಹೊಣೆಯನ್ನು ಚರ್ಚ್‌ಗಳು ನಿರ್ವಹಿಸುತ್ತವೆ. ಧರ್ಮಾಧಿಕಾರಿಗಳಿಗೆ ರಾಜ್ಯದ ಬೊಕ್ಕಸದಿಂದಲೇ ವೇತನ ಕೊಡಲಾಗುವುದು. ಧರ್ಮಾಧಿಕಾರಿಗಳನ್ನು (ಪ್ರೀಸ್ಟ್, ಬಿಷಪ್, ಆರ್ಚ್‌ಬಿಷಪ್ ಮುಂತಾದವರು) ಪೋಪರೇ ನಿಯಮಿಸುತ್ತಾರೆ. ಆದರೆ ನೇಮಕದ ಮೊದಲು ಅಭ್ಯರ್ಥಿಗಳ ಪಟ್ಟಿಯನ್ನು ಸರ್ಕಾರದ ಅಂಗೀಕಾರಕ್ಕಾಗಿ ಕಳುಹಿಸಲಾಗುವುದು. ಕೆಥೊಲಿಕ್ ಧಾರ್ಮಿಕ ಕಾರ್ಯಗಳಿಗೆ ಅಡ್ಡಿಬರದ ಇನ್ನಾವುದೇ ಧರ್ಮದ ಧಾರ್ಮಿಕ ಕಾರ್ಯಗಳಿಗೆ ಇಲ್ಲಿ ಮಾನ್ಯತೆ ಇದೆ.

ಮೊದಲು ದಕ್ಷಿಣದ ಕೆಲವೇ ನಗರಗಳಲ್ಲಿ ದಟ್ಟೈಸಿದ್ದ ಜನ ಈಗ ಉತ್ತರದ ಬಯಲುಗಳಲ್ಲಿ ಸ್ಥಾಪಿಸಲಾಗುತ್ತಿರುವ ಕೈಗಾರಿಕಾ ಕೇಂದ್ರಗಳಿಗೆ ಹೋಗುತ್ತಿದ್ದಾರೆ. ಉತ್ತರದ ಕೆಲವೇ ಕಡೆ ಹೆಚ್ಚಾಗಿದ್ದ ಜನಸಂಖ್ಯೆ ಈಗ ಎಲ್ಲ ಕಡೆಗೆ ಹರಡಿ ಒಂದು ರೀತಿಯ ಸಮತೋಲ ಏರ್ಪಟ್ಟಿದೆ. ರೋಮ್, ಮಿಲಾನ್, ನೇಪಲ್ಸ್, ಟ್ಯೂರಿನ್, ಜಿನೋವ, ಫ್ಲಾರೆನ್ಸ್, ವೆನಿಸ್ ಮುಂತಾದವು ಹೆಚ್ಚು ಜನಸಂಖ್ಯೆ ಇರುವ ಮುಖ್ಯ ನಗರಗಳು (ವಿವರಗಳಿಗೆ ಆಯಾ ನಗರಗಳನ್ನು ಕುರಿತ ಶೀರ್ಷಿಕೆಗಳನ್ನು ನೋಡಿ).

**ಆಡಳಿತ ವ್ಯವಸ್ಥೆ:** 1946ರ ಜೂನ್ 10ರಿಂದ ಇಟಲಿ ಗಣರಾಜ್ಯವಾಗಿದೆ. ದ್ವಿತೀಯ ಮಹಾ ಯುದ್ಧದಲ್ಲಿ ಪರಾಜಯಗೊಂಡ ಮೇಲೆ 1946 ಜೂನ್ 2ರಂದು ಇಟಲಿಯಲ್ಲಿ ನಡೆಸಿದ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಶೇ.54.3 ಜನ ಗಣರಾಜ್ಯದ ಪರವಾಗಿಯೂ ಶೇ.45.7 ಜನ ಅರಸೊತ್ತಿಗೆ ಉಳಿಸಿಕೊಳ್ಳಬೇಕೆಂದೂ ಅಭಿಪ್ರಾಯಪಟ್ಟರು. ಸಂವಿಧಾನ ಸಭೆಗೆ ಪ್ರಥಮ ಬಾರಿಗೆ ಚುನಾವಣೆ ನಡೆಯಿತು (1946). 556 ಸದಸ್ಯರುಳ್ಳ ಸಭೆ ಸಿನಾಲರ ಎನ್ರಿಕೋ ಡಿ. ನೀಕೋಲಾನನ್ನು ಅಧ್ಯಕ್ಷನನ್ನಾಗಿ ಆರಿಸಿತು. ಹೊಸ ಸಂವಿಧಾನ ರೂಪಿಸಿ ಶಾಂತಿ ಒಡಂಬಡಿಕೆಯನ್ನು ಕ್ರಮಬದ್ಧಗೊಳಿಸಿದ್ದು ಇದರ ಮುಖ್ಯ ಕೆಲಸ. 1947 ಡಿಸೆಂಬರ್ 27ರಂದು ನೂತನ ಸಂವಿಧಾನ ಅಂಗೀಕೃತವಾಯಿತು. 1948 ಜನವರಿ 1ರಿಂದ ಅದು ಜಾರಿಗೆ ಬಂತು. ಗ್ರೇಟ್ ಬ್ರಿಟನ್, ಫ್ರಾನ್ಸ್, ಅಮೆರಿಕ ಸಂಯುಕ್ತ ಸಂಸ್ಥಾನಗಳ ಅನುಭವವನ್ನೂ ಉದಾಹರಣೆಗಳನ್ನೂ ಇಟಲಿಯ ಸಂವಿಧಾನ ಪ್ರತಿಬಿಂಬಿಸುತ್ತದೆ. ಇಟಲಿ ಈ ಸಂವಿಧಾನಕ್ಕನುಗುಣವಾಗಿ ರೂಪಿತವಾದ ಪ್ರಜಾಸತ್ತಾತ್ಮಕ ಗಣರಾಜ್ಯ. ಪರಮಾಧಿಕಾರ ಜನತೆಗೆ ಸೇರಿದ್ದಾದರೂ ಅವರು ಸಂವಿಧಾನಕ್ಕೆ ಬದ್ಧರಾಗಿ ತಮ್ಮ ಹಕ್ಕು ಚಲಾಯಿಸುತ್ತಾರೆ. ಇಟಲಿಯಲ್ಲಿ ದ್ವಿಸದನ ಪದ್ಧತಿಯ ರಾಷ್ಟ್ರೀಯ ಪಾರ್ಲಿಮೆಂಟ್ ಇದೆ. ಮೊದಲನೆಯದು ಚೇಂಬರ್ ಆಫ್ ಡೆಪ್ಯುಟೀಸ್, ಎರಡನೆಯದು ಸೆನೆಟ್. ಚೇಂಬರಿಗೆ ಪ್ರತಿ 5ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. 21 ವರ್ಷಕ್ಕೆ ಕಡಿಮೆಯಿಲ್ಲದ ಸ್ತ್ರೀ–ಪುರುಷರೆಲ್ಲ ಮತದಾನಕ್ಕೆ ಅರ್ಹರು. ಚೇಂಬರ್ ಆಫ್ ಡೆಪ್ಯುಟೀಸ್‌ಗೆ ಸದಸ್ಯರಾಗುವವರ ಕನಿಷ್ಠ ವಯೋಮಿತಿ 25 ವರ್ಷ. 80,000 ಜನರಿಗೆ ಒಬ್ಬ ಪ್ರತಿನಿಧಿಯಿದ್ದಾನೆ (ಡೆಪ್ಯುಟಿ). ಸೆನೆಟ್ಟಿಗೆ 6 ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. 2,00,000 ಜನರಿಗೆ ಒಬ್ಬ ಪ್ರತಿನಿಧಿಯಿರುತ್ತಾನೆ. ಅಧ್ಯಕ್ಷನ ಕನಿಷ್ಠ ವಯೋಮಿತಿ 55 ವರ್ಷ, ಎರಡೂ ಸದನಗಳ ಸದಸ್ಯರೂ ಪ್ರಾದೇಶಿಕ ಕೌನ್ಸಿಲ್‌ನ ಸದಸ್ಯರೂ ಸೇರಿ ಸಂಯುಕ್ತಾಧಿವೇಶನದಲ್ಲಿ ಗಣರಾಜ್ಯದ ಅಧ್ಯಕ್ಷನನ್ನು ಆರಿಸುತ್ತಾರೆ. ಈ

ರೀತಿ ಆಯ್ಕೆಗೊಂಡ ಅಧ್ಯಕ್ಷನ ಅಧಿಕಾರಾವಧಿ 7 ವರ್ಷ. ಆತನಿಗೆ ಪಾರ್ಲಿಮೆಂಟನ್ನು ವಿಸರ್ಜಿಸುವ ಅಧಿಕಾರವಿದೆ. ಆದರೆ ತನ್ನ ಅಧಿಕಾರಾವಧಿಯ ಕೊನೆಯ ಆರು ತಿಂಗಳಲ್ಲಿ ಆತ ಈ ಅಧಿಕಾರ ಚಲಾಯಿಸಲಾರ. ತನ್ನ ಅಧ್ಯಕ್ಷಾಧಿಕಾರದ ಕಾರಣದಿಂದ ಆತ ಸೆನೆಟ್ಟಿನ ಜೀವಾವಧಿ ಸದಸ್ಯ. ವಿಜ್ಞಾನ, ಸಾಹಿತ್ಯ ಹಾಗೂ ಸಮಾಜ ಸೇವೆಯಲ್ಲಿ ಗಣ್ಯರಾದ ನಾಗರಿಕರನ್ನು ಆತ ಸೆನೆಟ್ಟಿನ ಅಜೀವ ಸದಸ್ಯರನ್ನಾಗಿ ನಾಮಕರಣ ಮಾಡಬಹುದು. ಇಟಲಿಯ ಅಧ್ಯಕ್ಷ ರಾಷ್ಟ್ರೈಕ್ಯದ ಪ್ರತೀಕ. ಆತನೇ ರಾಷ್ಟ್ರಸೇನೆಗಳ ಮಹಾ ದಂಡನಾಯಕ. ಅಪರಾಧಿಗಳಿಗೆ ವಿಧಿಸಿದ ಶಿಕ್ಷೆಯನ್ನು ಕಡಿಮೆ ಮಾಡುವುದು, ಅವರಿಗೆ ಕ್ಷಮಾದಾನ ಮಾಡುವುದು ಮೊದಲಾದುವು ಆತನ ಅಧಿಕಾರವ್ಯಾಪ್ತಿಗೊಳಪಡುತ್ತವೆ.

ಇಟಲಿಯ ಪ್ರಧಾನ ಮಂತ್ರಿಗೆ ಮಂತ್ರಿಮಂಡಲದ ಅಧ್ಯಕ್ಷನೆಂದು ಹೆಸರಿದೆ. ಆತನ ಸಲಹೆಯ ಮೇರೆಗೆ ಮಂತ್ರಿಮಂಡಲದ ಇತರ ಸದಸ್ಯರನ್ನು ನೇಮಿಸುವುದು ಅಧ್ಯಕ್ಷನ ಕರ್ತವ್ಯ. ಇಟಲಿಯ ಮಂಡಲಿ ಎರಡೂ ಶಾಸಕಾಂಗಗಳ ವಿಶ್ವಾಸ ಗಳಿಸಿರಬೇಕು. ಮಂತ್ರಿಮಂಡಲದ ಅಧ್ಯಕ್ಷ ಸಂವಿಧಾನಕ್ಕನುಗುಣವಾಗಿ ಸರ್ಕಾರದ ನೀತಿ ರೂಪಿಸುತ್ತಾನೆ. ಪ್ರತಿಯೊಬ್ಬ ಮಂತ್ರಿಗೂ ವೈಯಕ್ತಿಕ ಹೊಣೆಗಾರಿಕೆಯೊಂದಿಗೆ ಸಂಯುಕ್ತ ಹೊಣೆಗಾರಿಕೆಯೂ ಇರುತ್ತದೆ.

ಸಂವಿಧಾನದಲ್ಲಿ ಉಲ್ಲೇಖಿಸಿದಂತೆ ಜನತೆಯ ಹೆಸರಿನಲ್ಲಿ ನ್ಯಾಯ ನೀಡಲಾಗುವುದು. ನ್ಯಾಯಾಧೀಶ ಕಾಯಿದೆಯ ಪರಿಮಿತಿಗೆ ಒಳಗಾಗಿರುತ್ತಾನೆ. ನ್ಯಾಯಾಲಯ ಕಾರ್ಯಾಂಗ ದಿಂದ ಸ್ವತಂತ್ರವಾಗಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಸಂವಿಧಾನ ಸಂಬಂಧವಾದ ಬಿಕ್ಕಟ್ಟು ಉಂಟಾದಾಗ, ಅದನ್ನು 15 ಜನರ ಸಂವಿಧಾನ ನ್ಯಾಯಾಲಯ ಪರಿಹರಿಸುತ್ತದೆ. ಇದರಲ್ಲಿ 1/3 ಸದಸ್ಯರನ್ನು ಅಧ್ಯಕ್ಷ ನಾಮಕರಣ ಮಾಡಿರುತ್ತಾನೆ. 1/3 ಸದಸ್ಯರನ್ನು ಶಾಸಕಾಂಗದ ಎರಡು ಮನೆಗಳು ಆರಿಸುತ್ತವೆ. ಉಳಿದ 1/3 ಸದಸ್ಯರನ್ನು ಸರ್ವೋನ್ನತ ನ್ಯಾಯಾಂಗ ಸಮಿತಿ ಆರಿಸುತ್ತದೆ. ಈ ಸದಸ್ಯರ ಅಧಿಕಾರಾವಧಿ 12 ವರ್ಷ. ಅಧಿಕಾರಾವಧಿ ಮುಗಿದ ತಕ್ಷಣವೇ ಅವರನ್ನು ಪುನರ್ನೇಮಕ ಮಾಡಲಾಗುವುದಿಲ್ಲ.

ಅಧಿಕಾರದ ವಿಕೇಂದ್ರೀಕರಣಕ್ಕೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ತಮ್ಮ ಕಕ್ಷೆಯಲ್ಲಿ ಸ್ವತಂತ್ರವಾಗಿ ಕೆಲಸ ನಿರ್ವಹಿಸಲು ಪ್ರಾದೇಶಿಕ ಸಮಿತಿಗಳಿಗೆ ಅವಕಾಶವಿದೆ. ಇಟಲಿಯನ್ನು 5 ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಸಂವಿಧಾನದಲ್ಲಿ 19 ವಿಭಾಗಗಳಿಗೆ ಅವಕಾಶವಿದ್ದರೂ ಮಹಾಯುದ್ಧದ ಅನಂತರ ಇದು ಪ್ರತ್ಯೇಕತೆಗೆ ಅವಕಾಶ ನೀಡಬಹುದೆಂದು ಈ ವಿಂಗಡಣೆಯನ್ನು ಸೀಮಿತಗೊಳಿಸಲಾಗಿದೆ. ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷ ಮೊದಲು ಸ್ವತಂತ್ರ ರಾಜ್ಯ ರಚನೆಗೆ ಸಲಹೆ ನೀಡಿತ್ತು. ಅನಂತರ ಅದೇ ಪಕ್ಷ ಇದನ್ನು ವಿರೋಧಿಸಿತು. ರಾಜ್ಯಗಳ ಅಧಿಕಾರ ಕಕ್ಷೆಯಲ್ಲಿ ಸ್ಥಳೀಯ ಆಡಳಿತ, ಪೋಲೀಸ್, ಮಾರುಕಟ್ಟೆ, ಸಾರ್ವಜನಿಕ ಕಲ್ಯಾಣ, ನಗರ, ಶಿಕ್ಷಣ, ಸಾರಿಗೆಸಂಪರ್ಕ, ವ್ಯವಸಾಯ, ಅರಣ್ಯ–ಇವು ಬರುತ್ತವೆ. ಆಡಳಿತದ ಕಾರ್ಯನಿರ್ವಹಣೆಗೆ ಕೆಲವೊಂದು ತೆರಿಗೆಯನ್ನು ವಿಧಿಸಬಹುದು. ಕೇಂದ್ರಕ್ಕೆ ಬರುವ ಕಂದಾಯದಲ್ಲಿ ಕೆಲವೊಂದು ಭಾಗಗಳನ್ನು ರಾಜ್ಯಗಳಿಗೆ ನೀಡಲಾಗುತ್ತದೆ.

ಪ್ರತಿಯೊಂದು ಪ್ರದೇಶಕ್ಕೂ ಒಂದು ಪ್ರಾದೇಶಿಕ ಕೌನ್ಸಿಲ್ ಇದೆ. ಅದಕ್ಕೊಂದು ಕಾರ್ಯನಿರ್ವಾಹಕ ಸಮಿತಿ ಮತ್ತು ಅಧ್ಯಕ್ಷ ಇರುತ್ತಾನೆ. ಪ್ರಾದೇಶಿಕ ಕೌನ್ಸಿಲ್ ಚೇಂಬರಿಗೆ ಮಸೂದೆಗಳನ್ನು ಕಳಿಸಬಹುದು. ಕೇಂದ್ರದ ಅಧ್ಯಕ್ಷ ಪ್ರಾದೇಶಿಕ ಮಂಡಲಿಯನ್ನು ಯಾವಾಗ ಬೇಕಾದರೂ ವಿಸರ್ಜಿಸಬಹುದಾಗಿದೆ. ಪ್ರತಿಯೊಂದು ಪ್ರದೇಶಕ್ಕೂ ಒಬ್ಬ ಆಯುಕ್ತನನ್ನು (ಕಮೀಷನರ್) ನೇಮಿಸಿದೆ. ನ್ಯಾಯಾಂಗ, ಆಡಳಿತ ಮತ್ತು ಲೆಕ್ಕಪತ್ರ, ಮುಂಗಡಪತ್ರಗಳ ತಪಾಸಣೆ–ಇವಕ್ಕೆ ಒಂದೊಂದು ಸಮಿತಿಯಿದೆ.

ಸುಗ್ರೀವಾಜ್ಞೆಗಳನ್ನು ಹೊರಡಿಸಿದಾಗ ತಕ್ಷಣ ಸಂಸತ್ತಿನ ಅನುಮತಿ ಪಡೆಯಬೇಕೆಂಬ ವಿಧಿಯಿದೆ. ಆಗ ಸಂಸತ್ತಿನ ಅಧಿವೇಶನ ನಡೆಯುತ್ತಿಲ್ಲವಾದರೆ ಅದು 5 ದಿನಗಳಲ್ಲಿ ಸೇರುವಂತೆ ಏರ್ಪಾಡಾಗಬೇಕು. 60 ದಿನಗಳೊಳಗೆ ಸುಗ್ರೀವಾಜ್ಞೆ ಕಾಯಿದೆಯಾಗದಿದ್ದಲ್ಲಿ ಅದು ಜಾರಿಯಲ್ಲಿರುವುದಿಲ್ಲ.

ಪ್ರಾಪ್ತವಯಸ್ಕರಿಗೆಲ್ಲ ಮತದಾನದ ಹಕ್ಕಿದೆ. ರಹಸ್ಯ ಮತದಾನ ಪದ್ಧತಿಯಿದೆ. ಮತ ಚಲಾಯಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೆಂದು ಪರಿಗಣಿಸಲಾಗಿದೆ. ಭಾಷೆ, ಧರ್ಮ, ರಾಜಕೀಯ, ಸಾಮಾಜಿಕ ಭೇದಗಳಿಲ್ಲದೆ ಎಲ್ಲ ಪ್ರಜೆಗಳಿಗೂ ಸಮಾನ ಸಂಬಳ ನೀಡಬೇಕೆಂಬ ತತ್ತ್ವವೂ ಅಂಗೀಕೃತವಾಗಿದೆ. ಯಾರಿಗೂ ಶ್ರೀಮಂತಿಕೆಯ ಬಿರುದುಗಳನ್ನು ನೀಡಲಾಗುವುದಿಲ್ಲ. ಮಾನವನ ವ್ಯಕ್ತಿತ್ವದ ಬೆಳವಣಿಗೆಗೆ ಅಡ್ಡಿ ಆತಂಕಗಳನ್ನೊಡ್ಡುವ ಆರ್ಥಿಕ, ಸಾಮಾಜಿಕ ಅಸಮತೆಗಳನ್ನು ತೊಡೆದು ಹಾಕುವುದು ಕರ್ತವ್ಯವೆಂದು ಸಂವಿಧಾನದಲ್ಲಿ ಘೋಷಿಸಲಾಗಿದೆ. ಜನತೆಗೆ ಉದ್ಯೋಗದ ಹಕ್ಕನ್ನು ಅಂಗೀಕರಿಸಲಾಗಿದೆ. ಸಮಾಜದ ನೈತಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಲು ಧಾರ್ಮಿಕ ಸ್ವಾತಂತ್ರ್ಯ ನೀಡಲಾಗಿದೆಯಾದರೂ ರೋಮನ್ ಕೆಥೊಲಿಕ್ ಪಂಥವನ್ನು ದೇಶದ ಅಧಿಕೃತ ಧರ್ಮವೆಂದು ಪರಿಗಣಿಸಲಾಗಿದೆ. ವಾಕ್ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯ ಉಂಟು. ಗುಪ್ತ ಸಂಘಗಳನ್ನೂ ಸೈನ್ಯ ಮಾದರಿಯ ಕೂಟಗಳನ್ನೂ ನಿಷೇಧಿಸಲಾಗಿದೆ. ಫ್ಯಾಸಿಸ್ಟ್ ಪಕ್ಷವನ್ನು ಪುನಃ ಸಂಘಟಿಸಲು ಅವಕಾಶವಿಲ್ಲ. ರಾಜಮನೆತನದವರು ದೇಶ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. ಪ್ರಜೆಗಳು ಸೈನ್ಯದಲ್ಲಿ ಸೇವೆ ಸಲ್ಲಿಸುವುದು ಕಡ್ಡಾಯವಲ್ಲ. ಪಾಲಕರು ತಮ್ಮ ಮಕ್ಕಳ ಪಾಲನೆ ಪೋಷಣೆ ಮಾಡುವುದರೊಂದಿಗೆ ಅವರಿಗೆ ಶಿಕ್ಷಣ ನೀಡಬೇಕು. ಕಾರ್ಮಿಕ ಸಂಘಟನೆ ಮತ್ತು ಮುಷ್ಕರದ ಹಕ್ಕು ಅಂಗೀಕೃತ. ವೈಯಕ್ತಿಕ ಆಸ್ತಿ ಹೊಂದಲು ಅಭ್ಯಂತರವಿಲ್ಲ. ವ್ಯಕ್ತಿಯ ಶಕ್ತಿಗೆ ಅನುಸಾರವಾಗಿ ತೆರಿಗೆ ವಿಧಿಸಲಾಗುತ್ತದೆ. ಸಂವಿಧಾನದ ತಿದ್ದುಪಡಿಗೆ ಅವಕಾಶ ಕಲ್ಪಿಸಿದೆ. ಶಾಸಕಾಂಗದ ಎರಡು ಸಭೆಗಳೂ ಸಂಯುಕ್ತಾಧಿವೇಶನದಲ್ಲಿ ಸೇರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬಹುದು. ಎರಡನೆಯ ಬಾರಿ ಮತಕ್ಕೆ ಹಾಕಿದಾಗ ಎರಡೂ ಸಭೆಗಳು ಬಹುಮತದಿಂದ ಅದನ್ನು ಒಪ್ಪಬೇಕು.

ಸಂವಿಧಾನ ನ್ಯಾಯಾಲಯವೊಂದರ ನಿರ್ಮಾಣಕ್ಕೂ ಸಂವಿಧಾನದಲ್ಲಿ ಅವಕಾಶ ಕಲ್ಪಿಸಿದೆ. ಶಾಸನಗಳ ಕ್ರಮಬದ್ಧತೆಯನ್ನು ಆ ನ್ಯಾಯಾಲಯ ಪರಿಶೀಲಿಸುತ್ತದೆ. ಆಡಳಿತಾನುಕೂಲಕ್ಕಾಗಿ ಜಿಲ್ಲಾ ನ್ಯಾಯಾಲಯಗಳೂ ಇವೆ.

1947ರ ಸಂವಿಧಾನಕ್ಕನುಗುಣವಾಗಿ ಸೈನ್ಯದ ಗಾತ್ರವನ್ನು ಕಡಿಮೆ ಮಾಡಲಾಗಿದೆ. ಅಲ್ಲದೆ ಪರಮಾಣು ಅಸ್ತ್ರಗಳ ತಯಾರಿಕೆಯನ್ನು ಪ್ರತಿಬಂಧಿಸಲಾಗಿದೆ. ಮಧ್ಯಮ ಮತ್ತು ದೊಡ್ಡ ಪ್ರಮಾಣದ ಟ್ಯಾಂಕುಗಳ ಸಂಖ್ಯೆಯನ್ನು ಮಿತಿಗೊಳಿಸಿದ್ದು, ನೌಕೆಗಳ ಸಾಮರ್ಥ್ಯವನ್ನೂ ಮೊಟಕು ಮಾಡಲಾಗಿದೆ. ವಿಶ್ವಸಂಸ್ಥೆಯ ಪೂರ್ವಾನುಮತಿಯಿಲ್ಲದೆ ಈ ಸಂಖ್ಯೆಯನ್ನು ಏರಿಸಲಾಗದು.

1947ರಿಂದೀಚೆಗೆ ಇಲ್ಲಿಯ ಸರ್ಕಾರ ಪ್ರಬಲವಾಗಿದೆ. ಎರಡು ಮಹಾಯುದ್ಧಗಳ ಅನಂತರ ಇಟಲಿ ಇದೀಗ ಆರ್ಥಿಕರಂಗದಲ್ಲಿ ಚೇತರಿಸಿಕೊಳ್ಳುತ್ತಿದೆ. ಇಟಲಿಯ ಮೇಲೆ ಹೇರಿದ್ದ ಅನೇಕ ನಿರ್ಬಂಧಗಳನ್ನೀಗ ಸಡಿಲಿಸಲಾಗಿದೆ. ಈಗ ಇದು ಉತ್ತರ ಅಟ್ಲಾಂಟಿಕ್ ಕೌಲು ವ್ಯವಸ್ಥೆ (ನ್ಯಾಟೋ) ಮತ್ತು ಐರೋಪ್ಯ ಆರ್ಥಿಕ ಸಹಕಾರ ಸಂಘಗಳ (ಇ.ಇ.ಸಿ) ಸದಸ್ಯ ರಾಷ್ಟ್ರ.

*

**ಕೈಗಾರಿಕೆ:** ಎರಡನೆಯ ಮಹಾಯುದ್ಧದ ಸಮಯದಲ್ಲಿ ಇಟಲಿಯ ಕೈಗಾರಿಕೆಗಳು ಭಾರಿ ನಷ್ಟಕ್ಕೆ ಗುರಿಯಾಗಬೇಕಾಯಿತಾದರೂ ಅವು ಶೀಘ್ರವಾಗಿ ಚೇತರಿಸಿಕೊಂಡವು. 1949ರ ವೇಳೆಗೆ ಯುದ್ಧಪೂರ್ವದ ಉತ್ಪಾದನೆಯ ಮಟ್ಟ ಸಾಧ್ಯವಾಯಿತು. ವಿದ್ಯುದುತ್ಪಾದನೆ, ತೈಲಶುದ್ಧೀಕರಣ ಹಾಗೂ ಸಹಜ ಅನಿಲ ಉತ್ಪಾದನೆ–ಈ ಮೂರು ಉದ್ಯಮಗಳಿಂದ ಈ ಪ್ರಗತಿ ಬಹುಮಟ್ಟಿಗೆ ಸಾಧ್ಯವಾಯಿತು. ಇವುಗಳ ಜೊತೆಗೆ ಕಬ್ಬಿಣ ಮತ್ತು ಉಕ್ಕು, ರಾಸಾಯನಿಕ ಉದ್ಯಮ ಇವೂ ಅದ್ಭುತ ಪ್ರಗತಿ ಸಾಧಿಸಿದುವು.

ಕಟ್ಟಡದ ಉದ್ಯಮವಂತೂ ಯುದ್ಧಾನಂತರ ತೀವ್ರಗತಿಯಲ್ಲಿ ಸಾಗಿತ್ತು. ಆದರೆ ಇಟಲಿಯಲ್ಲಿ ಜನಸಂಖ್ಯೆಯೂ ವೇಗವಾಗಿ ಬೆಳೆದದ್ದರಿಂದ ವಸತಿ ಸಮಸ್ಯೆ ಈ ರಾಷ್ಟ್ರವನ್ನು ಕಾಡಿಸುತ್ತಲೇ ಬಂತು. ಇಳಿಮುಖವಾಗಿರುವ ಉದ್ಯಮವೆಂದರೆ ಜವಳಿ ಕೈಗಾರಿಕೆ. ಪ್ರಾರಂಭದಲ್ಲಿ ಇಟಲಿಯ ಉತ್ಪಾದನೆ ಶೇ.40ರಷ್ಟು ಪಾಲು ಹೊಂದಿದ್ದ ಈ ಉದ್ಯಮದ ಉತ್ಪಾದನೆ 1951ರ ವೇಳೆಗೆ ಈ ದೇಶದ ಒಟ್ಟು ಉತ್ಪಾದನೆಯ ಶೇ. 10ಕ್ಕೆ ಇಳಿಯಿತು.

**ವಾಣಿಜ್ಯ:** ಇಟಲಿಯಲ್ಲಿ ಸಾಮಾನ್ಯವಾಗಿ ವಿದೇಶೀ ವ್ಯಾಪಾರದಲ್ಲಿ ನಿರ್ಯಾತಕ್ಕಿಂತ ಆಯಾತ ಯಾವಾಗಲೂ ಹೆಚ್ಚು. ಎರಡನೆಯ ಮಹಾಯುದ್ಧ ಪೂರ್ವದಲ್ಲಿ ಆಯಾತದ ಶೇ. 80–85ರಷ್ಟು ನಿರ್ಯಾತವಿತ್ತು. ಯುದ್ಧಾನಂತರ ಇಟಲಿಯ ಕೈಗಾರಿಕೆಗಳು ಅಸ್ತವ್ಯಸ್ತವಾದದ್ದರಿಂದ ನಿರ್ಯಾತ ಬಹಳ ಕಡಿಮೆಯಾಯಿತು. ಈ ಸಮಯದಲ್ಲಿ ಇಟಲಿಗೆ ಅಮೆರಿಕ ಬಹಳ ಧನಸಹಾಯ ಮಾಡಿದ್ದರಿಂದ, ತನಗೆ ಅಗತ್ಯವಿರುವ ಆಹಾರ, ಕಚ್ಚಾಪದಾರ್ಥ ಇತ್ಯಾದಿ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಇಟಲಿಗೆ ಸಾಧ್ಯವಾಯಿತು. ಈಚಿನ ವರ್ಷಗಳಲ್ಲೂ ಅಮೆರಿಕದ ಉದಾರ ಸಹಾಯ ಇಟಲಿಯ ಆಯ–ವ್ಯಯ ತಖ್ತೆಯ ಕೊರತೆಯನ್ನು ತುಂಬಲು ಸಹಾಯಕವಾಗಿದೆ. ಈ ದೇಶದ ಮುಖ್ಯ ನಿರ್ಯಾತವೆಂದರೆ, ಕೃಷಿ ಹಾಗೂ ಆಹಾರ ವಸ್ತು, ಜವಳಿವಸ್ತು, ಶುದ್ಧೀಕೃತ ತೈಲ ವಸ್ತು, ರಾಸಾಯನಿಕ ವಸ್ತು, ಉಕ್ಕು ಮತ್ತು ಕಬ್ಬಿಣ ಪದಾರ್ಥ, ಆಹಾರ ಪದಾರ್ಥ, ಯಂತ್ರೋಪಕರಣ ಹತ್ತಿ ಮತ್ತು ಇತರ ಕಚ್ಚಾ ಪದಾರ್ಥ, ಲೋಹ, ಅಪರಿಷ್ಕೃತ ತೈಲ–ಇವು ಇದರ ಆಯಾತಗಳು. ಕೈಗಾರಿಕೆಗೆ ಬೇಕಾದ ಪದಾರ್ಥಗಳನ್ನು ಆಯಾತ ಮಾಡಿಕೊಳ್ಳುವುದು ಅನಿವಾರ್ಯವಾದ್ದರಿಂದ, ಯಾವಾಗಲೂ ಈ ರಾಷ್ಟ್ರದ ಆಮದು ರಫ್ತಿಗಿಂತ ಅಧಿಕವಾಗಿಯೇ ಇದೆ.

**ಕಾರ್ಮಿಕ ಸಂಘ ಚಳವಳಿ:** ಇಟಲಿಯಲ್ಲಿ ಈ ಚಳವಳಿ ಬಹಳ ತಡವಾಗಿ ಪ್ರಾರಂಭವಾಯಿತು. 19ನೆಯ ಶತಮಾನದಲ್ಲಿ ವ್ಯವಸ್ಥಿತ ಕಾರ್ಮಿಕ ಸಂಘಗಳ ಪಾತ್ರ ಗೌಣವಾಗಿತ್ತು. ಕೈಗಾರಿಕೆ ಅಷ್ಟೇನೂ ಪ್ರಗತಿ ಸಾಧಿಸದಿದ್ದುದರಿಂದ, ಅನೇಕ ಸಣ್ಣಪುಟ್ಟ ಉದ್ಯಮಗಳೇ ಪ್ರಧಾನವಾಗಿದ್ದುದರಿಂದ ಕಾರ್ಮಿಕ ಚಳವಳಿ ಸಹಜವಾಗಿಯೇ ಅಸ್ತಿತ್ವಕ್ಕೆ ಬರಲು ಸಾಧ್ಯವಾಗಲಿಲ್ಲ.

1882ರಲ್ಲಿ ಕಾರ್ಮಿಕ ಪಕ್ಷವನ್ನು ರಚಿಸಲಾಯಿತು. ಇದು ಇಟಲಿ ಸಮಾಜವಾದಿ ಪಕ್ಷಕ್ಕೆ ನಾಂದಿಯಾಯಿತು. ಈ ಪಕ್ಷ 1893 ರಲ್ಲಿ ಅಸ್ತಿತ್ವಕ್ಕೆ ಬಂತು. 1905ರಲ್ಲಿ ಇದು ಒಡೆದು ಎಡ ಹಾಗೂ ಬಲ ಪಕ್ಷಗಳಾದುವು. ಬಲ ಪಕ್ಷದವರು ಇತರ ಪಾರ್ಲಿಮೆಂಟರಿ ಪಕ್ಷಗಳ ಸಹಕಾರದೊಡನೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಎಡ ಪಕ್ಷದವರು ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ರೂಪಿಸಬೇಕೆಂದೂ ವಾದಿಸಿದರು. ರಾಜಕೀಯದಿಂದ ಹೊರಗೆ ನಿಂತ ಸಿಂಡಿಕಲಿಸ್ಟರು (ಕಾರ್ಖಾನೆಗಳು ಕಾರ್ಮಿಕ ಸಂಘಗಳ ಯಾಜಮಾನ್ಯಕ್ಕೆ ಒಳಪಡಬೇಕೆಂದು ವಾದಿಸುವವರು) ಮುಷ್ಕರ ಇತ್ಯಾದಿಗಳ ಮೂಲಕ ಕಾರ್ಮಿಕ

ಸುಧಾರಣೆಯಾಗಬೇಕೆಂದು ವಾದಿಸಿದರು. ಕಾರ್ಮಿಕರು ರಾಜಕೀಯ ರಂಗವನ್ನು ಪ್ರವೇಶಿಸುವುದನ್ನು ಅವರು ಬಲವಾಗಿ ವಿರೋಧಿಸಿದರು. 1906ರಲ್ಲಿ ಈ ಕಾರ್ಮಿಕ ಯಾಜಮಾನ್ಯವಾದಿಗಳೂ ಬಲಸಮಾಜವಾದಿಗಳೂ ಕೂಡಿ ಕಾರ್ಮಿಕರ ಸಾಮಾನ್ಯ ಸಂಯುಕ್ತ ಸಂಸ್ಥೆಯನ್ನು (ಜನರಲ್ ಕಾನ್ಫೆಡರೇಷನ್ ಆಫ್ ಲೇಬರ್) ಸ್ಥಾಪಿಸಿದರು. ಇದು ಇಟಲಿಯ ಕಾರ್ಮಿಕ ಚಳವಳಿಯ ಕೇಂದ್ರವಾಯಿತೆಂದು ಹೇಳಬಹುದು.

1918ರಲ್ಲಿ ಕೆಥೊಲಿಕ್ ಪಾಪ್ಯುಲರ್ ಪಕ್ಷ ಲ್ಯೊಗಿಸ್ಟುರ್ಜೋ ಎಂಬ ಪಾದ್ರಿಯ ನಾಯಕತ್ವದಲ್ಲಿ ಇಟಲಿಯ ಕಾರ್ಮಿಕ ಸಂಯುಕ್ತ ಸಂಸ್ಥೆಯನ್ನು (ಇಟಾಲಿಯನ್ ಕಾನ್ಫೆಡರೇಷನ್ ಆಫ್ ಲೇಬರರ್ಸ್) ಸ್ಥಾಪಿಸಿತು. ಇದು ಬಹಳ ಬೇಗ ಪ್ರವರ್ಧಮಾನಕ್ಕೆ ಬಂತು.

ಫ್ಯಾಸಿಸಂ ಕಾಲದಲ್ಲಿ ಕಾರ್ಮಿಕ ಚಟುವಟಿಕೆಗಳು ನಿರ್ಮೂಲವಾದುವು. 1944ರಲ್ಲಿ ಮೂರು ಮುಖ್ಯ ಫ್ಯಾಸಿಸಂ ವಿರೋಧಿ ಪಕ್ಷಗಳ ಕಾರ್ಮಿಕ ಪ್ರತಿನಿಧಿಗಳ ಪ್ರಯತ್ನದಿಂದ ಹೊಸದಾಗಿ ಕಾರ್ಮಿಕರ ಸಾಮಾನ್ಯ ಸಂಯುಕ್ತ ಸಂಸ್ಥೆಯೊಂದು (ಜನರಲ್ ಕಾನ್ಫೆಡರೇಷನ್ ಆಫ್ ಲೇಬರ್) ಸ್ಥಾಪಿತವಾಯಿತು. ಈ ಕಾರ್ಮಿಕ ಮುಖಂಡರ ಕ್ರೈಸ್ತ ಪ್ರಜಾಪ್ರಭುತ್ವ ಹಾಗೂ ಸಮಾಜವಾದಿ ಪಕ್ಷದ ಪ್ರತಿನಿಧಿಗಳು ಮರಣಕ್ಕೀಡಾದುದರಿಂದ ಡಿ ವಿಟ್ಟೋರಿಯೊ ಎಂಬ ಕಮ್ಯೂನಿಸ್ಟ್ ಪ್ರತಿನಿಧಿಯೇ ಈ ಸಂಸ್ಥೆಯನ್ನು ನಡೆಸಿಕೊಂಡು ಬಂದ. 1947ರಲ್ಲಿ ಇದರಲ್ಲಿ 60 ಲಕ್ಷ ಸದಸ್ಯರಿದ್ದರು. ಕ್ರಮ ಕ್ರಮವಾಗಿ ಈ ಸಂಸ್ಥೆ ಕಮ್ಯೂನಿಸ್ಟರ ಮತ್ತು ಸಮಾಜವಾದಿಗಳ ಹತೋಟಿಗೊಳಪಟ್ಟಿದ್ದರಿಂದ ಕಮ್ಯೂನಿಸಂ ವಿರೋಧಿಗಳು ಪ್ರತಿಸಂಸ್ಥೆಯೊಂದನ್ನು ರಚಿಸುವ ವಿಚಾರ ನಡೆಸಿದರು. ಆದರೆ ಪ್ರಜಾಪ್ರಭುತ್ವವಾದಿ ಕಾರ್ಮಿಕ ಶಕ್ತಿಗಳು ಒಂದುಗೂಡದೆ ಹೋದದ್ದರಿಂದ ಯಾವ ಪ್ರಬಲ ಸಂಸ್ಥೆಯೂ ಅಸ್ತಿತ್ವಕ್ಕೆ ಬರಲು ಸಾಧ್ಯವಾಗಲಿಲ್ಲ. 1950ರಲ್ಲಿ ರಿಪಬ್ಲಿಕನ್ನರೂ ಬಲಸಮಾಜವಾದಿಗಳೂ ಕ್ರೈಸ್ತ ಪ್ರಜಾಪ್ರಭುತ್ವವಾದಿಗಳೊಡನೆ ಕೂಡಿ ಸಿ.ಐ.ಎಸ್.ಎಲ್. (ಕಾನ್ಫೆಡೆರೇಷಿಯೋನೆ ಇಟಾಲಿಯಾನ ಸಿಂಡಿಕೆಟಿ ಲೇಬೊರೇಟರಿ) ಎಂಬ ಸಂಸ್ಥೆಯನ್ನೂ ಇತರ ಪಕ್ಷದವರು ಯು.ಐ.ಎಲ್. (ಯೂನಿಯನ್ ಇಟಾಲಿಯಾನ ಡು ಲೇಬೊರೊ) ಎಂಬ ಸಂಸ್ಥೆಯನ್ನೂ ರಚಿಸಿದರು. ಆದರೆ ಇವುಗಳಿಂದ ಸಿ.ಜಿ.ಐ.ಎಲ್.ನ ಪ್ರಭಾವ ಕಡಿಮೆಯಾಗಲಿಲ್ಲ. ತನ್ನ ಮಾತಿಗೆ ಸರಕಾರವೂ ಕಟ್ಟು ಬೀಳುವಷ್ಟು ಶಕ್ತಿಯುತವಾಗಿ ಇದು ಬೆಳೆಯಿತು. ಆದರೆ 1954ರ ವೇಳೆಗೆ, ಸರಕಾರದ ಬೆಂಬಲದಿಂದ ಹಾಗೂ ಸ್ವಪ್ರಯತ್ನದಿಂದ ಪ್ರಜಾಪ್ರಭುತ್ವವಾದಿ ಸಂಸ್ಥೆಗಳು ಪ್ರಾಬಲ್ಯ ಹೊಂದಿದುವು. ಅವು ರಾಷ್ಟ್ರೀಯ ಕೈಗಾರಿಕಾ ಸಂಸ್ಥೆಗಳೊಡನೆ ಚರ್ಚೆ ನಡೆಸಿ ಸು.40 ಲಕ್ಷ ಕಾರ್ಮಿಕರಿಗೆ ಅನುಕೂಲವಾಗುವಂತೆ ಕೂಲಿ ಇತ್ಯಾದಿ ಲಾಭಗಳನ್ನು ಪಡೆದುಕೊಟ್ಟುವು. ಇದರ ಪರಿಣಾಮ ಬಹಳ ತೀವ್ರವಾಯಿತು. ಕಮ್ಯೂನಿಸ್ಟೇತರ ಸಂಸ್ಥೆಗಳಿಗೆ ಬೆಂಬಲ ದೊರೆತು ಅವುಗಳ ಪ್ರಭಾವ ಹೆಚ್ಚಾಯಿತು. (ಸಿ.ಕೆ.ಆರ್.)

**ಇಟಲಿಯ ಇತಿಹಾಸ : ಪ್ರಾಕ್ತನ:** ರೋಮ್ ಸಾಮ್ರಾಜ್ಯದ ಹಲವಾರು ಅವಶೇಷಗಳು ಇಟಲಿಯಲ್ಲಿ ವಿಪುಲವಾಗಿ ಸಿಕ್ಕುತ್ತವೆ. 14ನೆಯ ಶತಮಾನದಿಂದಲೇ ಅಲ್ಲಿನ ಕಲಾವಿದರು ಮತ್ತು ಕಲಾವಸ್ತು ಸಂಗ್ರಾಹಕರು ಅಲ್ಲಲ್ಲಿ ಕಂಡುಬರುತ್ತಿದ್ದ ರೋಮನ್ನರ ಕಾಲದ ಕಂಚಿನ ಮತ್ತು ಅಮೃತಶಿಲೆಯ ವಿಗ್ರಹಗಳನ್ನು ಸಂಗ್ರಹಿಸುತ್ತಿದ್ದರು. 17–18ನೆಯ ಶತಮಾನದಲ್ಲಿ ಹಲವು ಕಲಾವಸ್ತು ಸಂಗ್ರಾಹಕರು ಇವುಗಳಿಗಾಗಿ ಪುರಾತನ ಪಟ್ಟಣಗಳಲ್ಲಿ ಉತ್ಖನನಗಳನ್ನು ನಡೆಸಿದರು. ಇಲ್ಲಿ ಹಲವಾರು ಲ್ಯಾಟಿನ್ ಶಾಸನಗಳು ಸಿಕ್ಕಿದುವು. ಪುರಾತನ ಕಾಲದ ನಾಗರಿಕತೆಗಳ ಬಗ್ಗೆ ಜನರ ಆಸಕ್ತಿ ಬೆಳೆಯಿತು. ಈ ರೀತಿಯಲ್ಲಿ ಇಟಲಿಯ ಕಲಾವಸ್ತು ಸಂಗ್ರಾಹಕರ ನಿಮಿತ್ತದಿಂದ ಪ್ರಾಚೀನ ಸಂಸ್ಕೃತಿಗಳ ಬಗ್ಗೆ ಆರಂಭವಾದ ಕುತೂಹಲ ಇಂದಿನ ಪುರಾತತ್ತ್ವ ಶಾಸ್ತ್ರದ ಬೆಳವಣಿಗೆಗೆ ನಾಂದಿಯಾಯಿತು. 18ನೆಯ ಶತಮಾನದ ಕೊನೆಯ ಹೊತ್ತಿಗೆ ಇಲ್ಲಿನ ಪುರಾತನ ಸಂಸ್ಕೃತಿಗಳ ಅಧ್ಯಯನಕ್ಕಾಗಿ ಸರ್ಕಾರವೂ ಕ್ರೈಸ್ತಪಂಥದ ಗುರುಪೀಠವೂ ಹಲವಾರು ಪ್ರಾಚೀನ ನಿವೇಶನಗಳ ಉತ್ಖನನ ಹಾಗೂ ಸಂರಕ್ಷಣೆಗೆ ಸಹಾಯಮಾಡಿದುವು. ಸರ್ಕಾರವೂ ಹಲವು ದೇಶಗಳ ವಿದ್ಯಾಸಂಸ್ಥೆಗಳೂ ಇಟಲಿಯ ಪುರಾತತ್ತ್ವ ಅಧ್ಯಯನದಲ್ಲಿ ಇಂದಿಗೂ ನಿರತವಾಗಿವೆ.

ಯುರೋಪಿನ ಪ್ರಾಚೀನ ಶಿಲಾಯುಗದ ಪೂರ್ವ ಮತ್ತು ಮಧ್ಯಕಾಲದ ಕುರುಹುಗಳು ಇಟಲಿ ಪರ್ಯಾಯದ್ವೀಪದ ಕೆಲವು ಸ್ಥಳಗಳಲ್ಲಿ ಕಂಡುಬಂದಿವೆ. ಉತ್ತರ ಪ್ರಾಚೀನ ಶಿಲಾಯುಗದ (ಅಪ್ಪರ್ ಪೇಲಿಯೊಲಿಥಿಕ್) ಅವಶೇಷಗಳೂ ಇವುಗಳ ಕರ್ತೃಗಳಾದ ಕ್ರೊಮ್ಯಾಗ್ನನ್, ಗ್ರಿಮಾಲ್ಡಿ ರೀತಿಯ ಜನರ ದೈಹಿಕ ಉಳಿಕೆಗಳೂ ಇಟಲಿಯ ಪರ್ಯಾಯದ್ವೀಪದಲ್ಲಲ್ಲದೆ ಸಾರ್ಡೀನಿಯ ಮತ್ತು ಸಿಸಿಲಿ ದ್ವೀಪಗಳಲ್ಲೂ ಇದ್ದದ್ದು ಕಂಡುಬಂದಿದೆ.

ಇಲ್ಲಿನ ನೂತನ ಶಿಲಾಯುಗದ ಕಾಲದಲ್ಲಿ ಮಡಕೆಗಳೂ ಹಲವು ಬಗೆಯ ಕಲೆಗಳೂ ಪ್ರಚಲಿತವಾಗಿದ್ದುವು. ಈ ಕಾಲದಲ್ಲಿ ಮೆಡಿಟರೇನಿಯನ್ ಗುಂಪಿಗೆ ಸೇರಿದ ಲಿಗೂರಿಯನ್ ಜನ ಇಲ್ಲಿ ಪಸರಿಸಿದ್ದರು. ಸ್ವಲ್ಪಕಾಲದ ಅನಂತರ ತಾಮ್ರ ಲೋಹ ಬಳಕೆಗೆ ಬಂತು. ಈ ಕಾಲದಲ್ಲಿ ಕಲ್ಲು, ತಾಮ್ರ ಮತ್ತು ಎಲುಬಿನಿಂದ ತಯಾರಿಸಿದ ವಸ್ತುಗಳಲ್ಲದೆ ಉತ್ತಮರೀತಿಯ ಚಿತ್ರಿತ ಮಡಕೆಗಳೂ ಬಳಕೆಯಲ್ಲಿದ್ದುವು. ಸರೋವರಗಳಲ್ಲಿ ಕಂಬಗಳನ್ನು ನೆಟ್ಟು ಮೇಲೆ ಮನೆ ಕಟ್ಟುವ ಪದ್ಧತಿ ಅನೇಕ ಕಡೆ ರೂಢಿಯಲ್ಲಿತ್ತು. ಜೌಗುನೆಲದಲ್ಲೂ ಈ ಜನ ಸುಮಾರು ಇದೇ ರೀತಿಯಲ್ಲಿ ಗ್ರಾಮ ನಿರ್ಮಾಣಮಾಡಿದ್ದರು. ವ್ಯವಸಾಯ ಈ ಕಾಲದ ಮುಖ್ಯ ಕಸುಬು. ವ್ಯಾಪಾರ ಮತ್ತು ಗಣಿ ಕೆಲಸವೂ ವ್ಯವಸ್ಥಿತವಾಗಿತ್ತು. ಈ ಜನ ಮೃತರನ್ನು ಸುಡುತ್ತಿದ್ದರು. ಇವರು ನೂತನ ಶಿಲಾಯುಗದ ಜನಾಂಗಕ್ಕೇ ಸೇರಿದವರೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರಾದರೂ ಇವರು ಹೊಸದಾಗಿ ಇಲ್ಲಿಗೆ ವಲಸೆ ಬಂದು ಆರ್ಯಭಾಷೆಯನ್ನಾಡುತ್ತಿದ್ದ ಜನರೆಂದು ಇನ್ನು ಕೆಲವು ವಿದ್ವಾಂಸರು ಊಹಿಸುತ್ತಾರೆ.

ಪ್ರ.ಶ.ಪೂ. ಸು. 1000–600ರ ವರೆಗೆ ವಿಲ್ಲನೋವ ಎಂಬ ಕಬ್ಬಿಣಯುಗದ ಸಂಸ್ಕೃತಿ ಇಲ್ಲಿ ಪ್ರಚಲಿತವಾಗಿತ್ತು. ಈ ಕಾಲದ ಕುರುಹುಗಳು ಎಮಿಲಿಯ, ಟಸ್ಕನಿ ಮತ್ತು ಉಂಬ್ರಿಯ ಪ್ರದೇಶಗಳಲ್ಲಿ ವಿಶೇಷವಾಗಿ ಕಂಡುಬಂದಿವೆ. ವಿಲ್ಲನೋವ ಸಂಸ್ಕೃತಿಯ ಜನ ಆಲ್ಪ್ಸ್ ಪರ್ವತ ಪ್ರದೇಶದಿಂದ ವಲಸೆಬಂದವರಿರಬಹುದೆಂದೂ ಪ್ರಾಯಶಃ ಇಟಾಲಿಕ್ ಭಾಷೆಗಳನ್ನಾಡುತ್ತಿದ್ದರೆಂದೂ ಹಲವು ವಿದ್ವಾಂಸರ ಅಭಿಪ್ರಾಯ.

ಪ್ರ.ಶ.ಪೂ. 10–8ನೆಯ ಶತಮಾನದವರೆಗಿನ ಕಾಲದಲ್ಲಿ ಏಷ್ಯ ಮೈನರ್ ಪ್ರದೇಶದಿಂದ ಇಟಲಿಯ ತೀರಪ್ರದೇಶಗಳಿಗೆ ಇಟ್ರಸ್ಕನ್ ಜನ ವಲಸೆ ಬಂದು ಕ್ರಮೇಣ ದೇಶದ ಇತರ ಭಾಗಗಳಲ್ಲಿ ಹರಡಿ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯೊಂದನ್ನು ಬೆಳೆಸಿದರು. ಪ್ರಶ.ಪೂ. 9–8ನೆಯ ಶತಮಾನಗಳ ಹೊತ್ತಿಗೆ ಫೋನೀಷಿಯನ್ ಮತ್ತು ಗ್ರೀಕ್ ವಸಾಹತುಗಳೂ ಇಟಲಿಯ ಕರಾವಳಿಯಲ್ಲಿ ಸ್ಥಾಪಿತವಾಗಿದ್ದುವು. ಇದರಿಂದ ಪ್ರ.ಶ.ಪೂ. 7ನೆಯ ಶತಮಾನದ ಹೊತ್ತಿಗೆ ಇಟಲಿಯ ಬಹುಭಾಗದಲ್ಲಿ ಗ್ರೀಕ್–ಇಟ್ರಸ್ಕನ್ ಸಂಸ್ಕೃತಿ ಪ್ರಚಲಿತವಾಗಿದ್ದಿತು. ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಆಲ್ಪ್ಸ್ ಪರ್ವತ ಪ್ರದೇಶದಿಂದ ದಾಳಿ ಮಾಡಿದ ಗಾಲ್ ಜನ ಕ್ರಮೇಣ ದೇಶದ ಇತರೆಡೆಗಳಲ್ಲೂ ಹರಡಿದರು. ಪ್ರ.ಶ.ಪೂ. 5–4ನೆಯ ಶತಮಾನಗಳಲ್ಲಿ ರೋಮ್ ಪಟ್ಟಣದ ಪ್ರಾಧಾನ್ಯ ಬೆಳೆಯಿತು. ಮುಂದೆ ಇಟಲಿಯ ರಾಜಕೀಯ ಏಕೀಕರಣ (ಪೊಲಿಟಿಕಲ್ ಯೂನಿಫಿಕೇಷನ್) ಆಯಿತು. ವಿಶಿಷ್ಟ ರೋಮನ್ ಸಂಸ್ಕೃತಿ ಬೆಳೆಯಿತು. (ಎಸ್.ಎನ್.)

**ಮಧ್ಯಯುಗದಲ್ಲಿ:** ರೋಮ್ ಚಕ್ರಾಧಿಪತ್ಯದ ಪತನಾನಂತರ ಇಟಲಿಯ ಇತಿಹಾಸ ಉತ್ತರದಿಂದ ದೇಶವನ್ನು ಆಕ್ರಮಿಸಿಕೊಂಡು ಬಂದ ಅನಾಗರಿಕ ಜನಾಂಗಗಳ ಚರಿತ್ರೆಯನ್ನು ಅನುಸರಿಸಿದೆ. ಷಾರ್ಲ್‌ಮನ್ನನ ಲಂಬಾರ್ಡಿಯ ದಾಳಿಯಿಂದ (775) ಉತ್ತರ ಇಟಲಿ ಕ್ಯಾರೊಲಿಂಗಿಯನರ ಸಾಮ್ರಾಜ್ಯದ ಭಾಗವಾಯಿತು. ದಕ್ಷಿಣ ಭಾಗ ಸಿಸಿಲಿಯ ಅರಬ್ಬೀ ದಾಳಿಕಾರರು ಹಾಗೂ ಬೈಜ಼ಾಂಟಿಯನ್ ಚಕ್ರಾಧಿಪತ್ಯದವರೊಡನೆ ವಿವಾದಕ್ಕೊಳಗಾದ ಪ್ರದೇಶವಾಗಿತ್ತು.

ಪಶ್ಚಿಮ ಸಾಮ್ರಾಜ್ಯದ ಪುನಶ್ಚೇತನ: 9ನೆಯ ಶತಮಾನದ ಅಂತ್ಯದ ವೇಳೆಗೆ ಇಟಲಿ ವಿಘಟನ ಸ್ಥಿತಿಯಲ್ಲಿತ್ತು. ರಾಷ್ಟ್ರೀಯ ಏಕತೆಯ ಧ್ಯೇಯ ಎರಡನೆಯ ಲೂಯಿಯ ಮರಣದಿಂದ ಕುಸಿದುಬಿತ್ತು (875). ಉತ್ತರ ಹಾಗೂ ಮಧ್ಯ ಇಟಲಿಯ ಆಳ್ವಿಕೆ ಸ್ಥಳೀಯ ರಾಜರುಗಳ ಕೈವಶವಾಯಿತು. ಗಿಡೋ ಮತ್ತು ಸ್ಪಾಲೆಟೋದ ಲ್ಯಾಂಬರ್ಟೋ ಹಾಗೂ ಐವಾರಾದ ಬೆರೆಂಗಲ್ ಮುಂತಾದ ಮುಖ್ಯರು ಕೆಲವು ಕಾಲ ರಾಜ ಅಥವಾ ಸಾಮ್ರಾಟ್ ಎಂಬ ಬಿರುದು ಪಡೆದಿದ್ದರೂ ಅದರ ವಿಜಯ ಅಲ್ಪಾಯುವಾಗಿತ್ತು. ರೋಮ್‌ನಲ್ಲಿ ಪೋಪರು ಭೂ ಮಾಲೀಕ ಶ್ರೀಮಂತರ ಸೃಷ್ಟಿಕರ್ತರಾಗಿದ್ದರು. ಬೈಜ಼ಾಂಟೈನ್ ಸಾಮ್ರಾಜ್ಯ ದಕ್ಷಿಣ ಇಟಲಿಯಲ್ಲಿ ಮುಖ್ಯವಾದ ಅಧಿಕಾರ ಹೊಂದಿತ್ತಾದರೂ ಲಂಬಾರ್ಡಿ ರಾಜರೂ ಇಟಲಿಯ ಸಾಗರೋತ್ತರ ವ್ಯಾಪಾರಿ ನಗರಗಳೂ ಇವರ ಅಧಿಕಾರಕ್ಕೊಳಗಾಗಿರಲಿಲ್ಲ. ಇದರ ಮಧ್ಯದಲ್ಲಿ ಹಂಗರಿಯವರು ಲಂಬಾರ್ಡಿಯ ಮೇಲೆ ಯುದ್ಧಕ್ಕೆ ಬಂದರು. ಆಫ್ರಿಕ ಸಿಸಿಲಿಗಳಿಂದ ಸಾರಸಿನರು ಬಂದು ಸಮುದ್ರತೀರಗಳ ಮೇಲೆ ದಾಳಿ ಮಾಡಿದರು. ಆಟೊ 1 ಎಂಬುವನು ಸಾಮ್ರಾಜ್ಯವನ್ನು ಪುನಶ್ಚೇತನಗೊಳಿಸಿದಾಗ ಇಟಲಿಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ತೆರೆಯಿತು. ಪ್ರಾವೆನ್ಸ್‌ನ ಲೊಥೈರ್ ದೊರೆ ಸತ್ತಿದ್ದ. ಉತ್ತರಾಧಿಕಾರಿಯಾಗಿ ಬಂದ ಪ್ರತಿಸ್ಪರ್ಧಿಗಳನ್ನು ಹತ್ತಿಕ್ಕಬೇಕೆಂದು ದಿವಂಗತ ದೊರೆಯ ವಿಧವೆಯಾದ ಅಡಿಲೇಡ್ ಪ್ರಾರ್ಥಿಸಿಕೊಂಡಿದ್ದರಿಂದ ಇಲ್ಲಿಗೆ ಬರಲು ಆಟೋಗೆ ಅನುಕೂಲವಾಯಿತು. ಆತ ಬ್ರೆನ್ನರ್ ಕಣಿವೆಯನ್ನು 951ರಲ್ಲಿ ದಾಟಿ, ವಿರೋಧಿಗಳನ್ನು ಸೋಲಿಸಿ, ಅಡಿಲೇಡಳನ್ನು ವಿವಾಹವಾಗಿ ತಾನೇ ಇಟಲಿಯ ರಾಜನಾದ. ಆತ ಉತ್ತರ ಇಟಲಿಗೆ ನೀಡಿದ ಮಹಾ ಕೊಡುಗೆಯೆಂದರೆ ಶಾಂತಿ. ಲೀಚ್‌ಫೀಲ್ಡಿನಲ್ಲಿ (955) ಹಂಗರಿಯವರನ್ನು ಪರಾಭವಗೊಳಿಸಿ ಅವರ ಅತ್ಯಾಚಾರವನ್ನು ಆತ ಅಂತ್ಯಗೊಳಿಸಿದ. ಆತನ ಸ್ಥೈರ್ಯ ಸಮಚಿತ್ತಗಳ ಪರಿಣಾಮವಾಗಿ ಅನೇಕ ಶ್ರೀಮಂತರು ಆತನಿಗೆ ವಿಧೇಯರಾದರು. ಇವರು ಅತಿಯಾಗಿ ಹೆಚ್ಚಿಕೊಳ್ಳದಂತೆ ಮಾಡಲು ಇವರ ಅಧಿಕಾರಕ್ಕೆ ಪ್ರತಿಯಾಗಿ ಬಿಷಪ್‌ಗಳ ಅಧಿಕಾರವನ್ನೂ ಆತ ಹೆಚ್ಚಿಸಿದ. ರೋಮನ್ನರ ಕಾಲದಿಂದಲೂ ತಂತಮ್ಮ ದೇವಾಲಯನಗರಗಳನ್ನಾಳುತ್ತ ರಾಜರೊಂದಿಗೆ ಸಹವರ್ತಿಸುತ್ತಿದ್ದ. ಇದರಿಂದ ನಗರಗಳು ಬೆಳೆದಿದ್ದುವು. ಆಟೋ 1 ರೋಮನ್ ಸಾಮ್ರಾಟನಾದ; ಉತ್ತರ ಇಟಲಿಯನ್ನೂ ಜರ್ಮನಿಯನ್ನೂ ಒಂದೇ ಆಡಳಿತದ ಅಡಿಗೆ ತಂದ. ಅಲ್ಲಿಂದ ಮುಂದೆ ಜರ್ಮನಿಯ ಪ್ರಭುಗಳಿಂದ ದೊರೆಯಾಗಿ ಆಯ್ಕೆಯಾದವನೇ ಇಟಲಿಯ ಚಕ್ರವರ್ತಿಯೂ ಆಗುತ್ತಿದ್ದ. ಆಟೊ ಇಟಲಿಯನ್ನು ಒಟ್ಟುಗೂಡಿಸಲಿಲ್ಲ. ಏಕೆಂದರೆ ಆತನೂ ತನ್ನ ಉತ್ತರಾಧಿಕಾರಿಗಳೂ ದಕ್ಷಿಣದಲ್ಲಿ ತಮ್ಮ ಅಧಿಕಾರವನ್ನು ಸರಿಯಾಗಿ ಸ್ಥಾಪಿಸಲಿಲ್ಲ. ಉತ್ತರ ಹಾಗೂ ದಕ್ಷಿಣ ಇಟಲಿಗಳ ನಡುವೆ ಸಂಬಂಧ ಕಲ್ಪಿಸುವುದೂ ಉತ್ತರದವರ ಮೇಲೆ ಪರಕೀಯರ ಆಡಳಿತ ತರುವುದೂ ಅವರ ಉದ್ದೇಶವಾಗಿತ್ತು. ಅವರು ತಮ್ಮ ಹಿತಗಳ ದೃಷ್ಟಿಯಿಂದಲೇ

ಇಟಲಿಯನ್ನಾಳುತ್ತಿದ್ದರು. ಮೂರನೆಯ ಆಟೊ ಕಾಲದಲ್ಲಿ ರೋಮ್ ಈ ರಾಜ್ಯದ ಕೇಂದ್ರವಾಗಬಹುದಾಗಿತ್ತು. ಆದರೆ ರೋಮನರು ಆತನನ್ನು ಅಲ್ಲಿಂದ ಓಡಿಸಿದರು. ಆತ ಸತ್ತಾಗ (1002) ರೋಮಿನಲ್ಲಿದ್ದ ಸ್ಥಳೀಯ ಅರಸುಮನೆತನದವನೊಬ್ಬ ಬಲಿಷ್ಠನಾದ. ವಿದೇಶೀಯರ ವಿರುದ್ಧವಾಗಿದ್ದ ಜನಾಭಿಪ್ರಾಯದ ಉಪಯೋಗ ಪಡೆದುಕೊಂಡು ಆತನೇ ಕಿರೀಟ ಧರಿಸಿಕೊಂಡ.

ಆಟೊ ಸಾಮ್ರಾಜ್ಯದ ಕಾಲದಲ್ಲಿ ಪೋಪ್ ವ್ಯವಸ್ಥೆಗೆ ಅಂತಾರಾಷ್ಟ್ರೀಯತೆಯ ಲಕ್ಷಣ ಬಂತು. ಮೊದಲನೆಯ ಆಟೊ ತನ್ನ ಕಾಲದಲ್ಲಿ ಒಂದು ಕ್ರೈಸ್ತಧರ್ಮಸಭೆ ನಡೆಸಿದ. ಚಕ್ರವರ್ತಿಯಿಂದ ನೇಮಕವಾದವನೇ ಪೋಪ್ ಆಗಬೇಕೆಂಬ ತತ್ತ್ವಕ್ಕೆ ರೋಮನ್ನರಿಂದ ಅಸ್ತು ಎನಿಸಿದ. 3ನೆಯ ಆಟೊ ನೇಮಿಸಿದ 5ನೆಯ ಗ್ರಿಗರಿ ಪ್ರಥಮ ಜರ್ಮನ್ ಪೋಪ್ ಆದ. ಈತನ ಕಾಲಾನಂತರ ಬಂದ ಆರಿಲಾಕ್‌ನ ಗಿರ್ಬರ್ಟ್ ಎಂಬುವನು ಇಮ್ಮಡಿ ಸಿಲ್ವೆಸ್ಟರ್ ಆದ. ಮುಮ್ಮಡಿ ಆಟೋನೊಂದಿಗೆ ಸಹಕರಿಸಿದ. ಪ್ರಪಂಚವ್ಯಾಪಿ ಕ್ರೈಸ್ತ ಪ್ರಭುತ್ವದ ರಚನೆಗೆ ನೆರವಾದ. ಚಕ್ರಾಧಿಪತಿಗಳಿಂದ ಚರ್ಚುಸುಧಾರಣಾ ಚಳವಳಿಗೆ ಉತ್ತೇಜನ ದೊರಕಿತು. ಇದು 11ನೆಯ ಶತಮಾನದ ಇತಿಹಾಸದ ಒಂದು ಪ್ರಮುಖ ಘಟನೆ. ಪೋಪ್ ತುರ್ತುರಕ್ಷಣೆಯಲ್ಲಿ ಅವರಿಗೂ ಅವರ ಅಧಿಕಾರಕ್ಕೂ ಅನೇಕ ವೈರಿಗಳುಂಟಾದರು. ಧರ್ಮವಿಕ್ರಯ, ಪೋಪ್‌ವಿವಾಹ ಮುಂತಾದುವನ್ನು ಸುಧಾರಕರು ವಿರೋಧಿಸಿದರು. ಈ ರೀತಿಯಲ್ಲಿ ಸುಧಾರಕರು ಚಕ್ರವರ್ತಿಗಳೊಡನೆ ಹೋರಾಡುವುದು ಅನಿವಾರ್ಯವಾಯಿತು. ಈ ಹೋರಾಟ ಬಹುಕಾಲ ಮುಂದುವರಿಯಿತು. ಇಟಲಿಯಲ್ಲಿ ಈ ಹೋರಾಟದ ಪರಿಣಾಮವಾಗಿ ಚಕ್ರವರ್ತಿಯ ಶಕ್ತಿ ಕುಂಠಿತವಾಯಿತು. ಪೋಪ್ ವ್ಯವಸ್ಥೆಯಲ್ಲಿ ಗೌರವ ಹೆಚ್ಚಿತು. ನಗರಗಳು ಸ್ವತಂತ್ರವಾದವು. 11ನೆಯ ಶತಮಾನದ ಕೊನೆಯ ವೇಳೆಗೆ ಇಟಲಿಯ ನಗರವಾಸಿಗಳು ಶಿಷ್ಟಾಚಾರಗಳನ್ನು ಕಲಿತಿದ್ದರು. ತಾವು ಆರಿಸಿದವರನ್ನು ಪ್ರತಿನಿಧಿಗಳೆಂದು ಕರೆಯುವ ಹಾಗೂ ರೋಮ್ ಜನರ ಹಕ್ಕುದಾರರಾಗಿ ಸ್ವಸರ್ಕಾರವನ್ನು ರಚಿಸಿಕೊಳ್ಳುವ ನ್ಯಾಯಾಂಗ ತರಬೇತಿ ಹೊಂದಿದ್ದರು. ಕೆಲವೊಮ್ಮೆ ನಗರವೊಂದಕ್ಕೆ ಸನ್ನದನ್ನು ನೀಡುವುದರ ಮೂಲಕ ನಗರವೊಂದರ ಬೆಂಬಲವನ್ನು ರಾಜ ಪಡೆಯುತ್ತಿದ್ದ. ಕೆಲವೊಮ್ಮೆ ಬಿಷಪ್ ಮಾಡುತ್ತಿದ್ದ ಧಾರ್ಮಿಕ ಕಟ್ಟಳೆಗಳು ಪ್ರಿಯವಾಗದಿದ್ದರೆ ಜನ ಅವನ ವಿರುದ್ಧ ದಂಗೆಯೇಳುತ್ತಿದ್ದರು. ಈ ರೀತಿಯಲ್ಲಿ 12ನೆಯ ಶತಮಾನದಲ್ಲಿ ಉತ್ತರ ಹಾಗೂ ಮಧ್ಯ ಇಟಲಿಯ ನಗರರಾಜ್ಯಗಳೆಲ್ಲವೂ ತಮ್ಮ ತಮ್ಮಲ್ಲೇ ಬಲಿಷ್ಠವಾಗಿದ್ದುವಲ್ಲದೆ. ಹೊರಗಡೆ ಭೂಭಾಗಗಳನ್ನು ಹೊಂದಿದ್ದವರು ತಮ್ಮ ಅಧಿಕಾರವನ್ನು ಒಪ್ಪುವಂತೆ ಮಾಡಿದ್ದುವು.

**ಸಾಮ್ರಾಜ್ಯ ಹಾಗೂ ಪೋಪಧಿಕಾರ:** 11ನೆಯ ಶತಮಾನದಲ್ಲಿ ನಾರ್ಮನ್ನರು ದಕ್ಷಿಣ ಇಟಲಿಯನ್ನು ವಶಮಾಡಿಕೊಂಡರು. 12ನೆಯ ಶತಮಾನದಲ್ಲಿ ಸಿಸಿಲಿಯನ್ನು ವಶಪಡಿಸಿಕೊಂಡು ತಮ್ಮ ಆದಾಯವನ್ನು ಅಧಿಕಗೊಳಿಸಿಕೊಂಡರು. ಅವರು ಚರ್ಚ್ ಹಾಗೂ ಸುಧಾರಣೆಗಳ ಬೆಂಬಲಿಗರಾಗಿದ್ದರು. ಪೋಪರು ಮೊದಮೊದಲು ಇವರ ಮುಂಬರವನ್ನು ತಡೆಗಟ್ಟಿದರೂ ಸಿಸಿಲಿಯನ್ ರಾಜ್ಯದಲ್ಲಿ ಚಕ್ರಾಧಿಪತ್ಯವಿರೋಧಿ ರಕ್ಷಣಾ ವ್ಯವಸ್ಥೆಯನ್ನು ಗಮನಿಸಿದರು. 1154ರಲ್ಲಿ ಫ್ರೆಡರಿಕ್ ಬಾರ್ಬರೋಸ್ ಇಟಲಿಯಲ್ಲಿ ಪುನಃ ಸಾಮ್ರಾಜ್ಯಶಕ್ತಿ ಸ್ಥಾಪಿಸಲು ಆಲ್ಪ್ಸನ್ನು ದಾಟಿದಾಗ, ತನ್ನ ಯಾವುದೇ ರಾಜತ್ವದ ಹಕ್ಕುಗಳನ್ನು ಅವರ ಮೇಲೆ ಹೇರಿದಲ್ಲಿ ವಿರೋಧಿಸಲಿದ್ದ ಮೂರು ರಾಜಕೀಯ ಕೇಂದ್ರಗಳನ್ನು ಗಮನಿಸಿದ; ಅವುಗಳ ಅಭಿವೃದ್ಧಿಯನ್ನು ಕುಂಠಿತಗೊಳಿಸಲು ಇಚ್ಛಿಸಿದ. ಸಾಮ್ರಾಜ್ಯ ಹಾಗೂ ಪೋಪನ ಅಧಿಕಾರಗಳ ವಿರುದ್ಧ ಹೊಸ ಹೋರಾಟ ಆರಂಭವಾಯಿತು. ಈ ಘರ್ಷಣೆಗಳು ಬಹುಕಾಲ ನಡೆದವು. 13ನೆಯ ಶತಮಾನದ ಉತ್ತರಾರ್ಧದ ವೇಳೆಗೆ ಚಕ್ರವರ್ತಿಗಳ ಕೈವಾಡ ಕೊನೆಗೊಂಡಿತು. ನಗರರಾಜ್ಯಗಳು ತಮ್ಮ ಅಭ್ಯುದಯದ ಶಿಖರವನ್ನೇರಿದ್ದವು; ಯಾವುದೇ ಅಧಿಪತಿಯ ಆಡಳಿತಕ್ಕೊಳಗಾಗಬಾರದೆಂದು ನಿರ್ಧರಿಸಿದ್ದವು. ತನ್ನ ಶಕ್ತಿಯ ಅರಿವನ್ನು ಹೊಂದಿದ್ದ, ಗಣರಾಜ್ಯ ಪರಂಪರೆಯಲ್ಲಿ ಭವ್ಯತೆಯಿಂದ ಮೆರೆಯುತ್ತಿದ್ದ, ಕಲೆಯಲ್ಲಿ ಪ್ರಖ್ಯಾತವಾಗಿದ್ದ ಫ್ಲಾರೆನ್ಸ್ ನಾಗರಿಕ ಸ್ವಾತಂತ್ರ್ಯಕ್ಕೆ ಉತ್ತಮ ಉದಾಹರಣೆಯಾಗಿತ್ತು. 8ನೆಯ ಬೋನಿಫೇಸನ (1204–1303) ಕಾಲದಲ್ಲಿ ಇಟಲಿಯ ಮೇಲೆ ಪೋಪಧಿಕಾರ ಹೇರಲು ಪ್ರಯತ್ನಗಳು ನಡೆದುವು. ಆದರೆ ಇವು ಯಶಸ್ವಿಯಾಗಲಿಲ್ಲ. ಮಧ್ಯಯುಗದ ಪೋಪಧಿಕಾರ ಕ್ಷೀಣಿಸಿಹೋಯಿತು.

ಸ್ಥಳೀಯ ನಿರಂಕುಶ ಪ್ರಭುತ್ವದ ಪ್ರಾಬಲ್ಯ : 14ನೆಯ ಶತಮಾನದಲ್ಲಿ ಇಟಲಿಯಲ್ಲಿ ವಾಣಿಜ್ಯ ಕ್ರಿಯೆ ಹೆಚ್ಚಿತು: ಕಲೆಯ ಅಭಿವೃದ್ಧಿಯಾಯಿತು. ಅಂತೆಯೇ ವಿಪರೀತವಾದ ರಾಜಕೀಯ ಗೊಂದಲವೂ ಉಂಟಾಯಿತು. ಊರಿಂದೂರಿಗೆ ಅಲೆದಾಡುತ್ತಿದ್ದ ಡಾಂಟೆ ಮಹಾಕವಿಗೆ ಎಲ್ಲೆಲ್ಲೂ ಕ್ಷೋಭೆಯೇ ಕಾಣಿಸಿತು. ಪ್ರತಿಯೊಂದು ನಗರದಲ್ಲೂ ಇದ್ದ ಪರದೇಶಿಗಳು ಬಾಹ್ಯಶತ್ರುಗಳೊಡನೆ ಕೂಡಿ ಅಧಿಕಾರ ಪಕ್ಷದವರನ್ನುರುಳಿಸುವ ಯತ್ನದಲ್ಲಿ ತೊಡಗಿದ್ದರು. ನಗರವಾಸಿಗಳು ಸರ್ವದಾ ಧಾಳಿಯ ಭೀತಿಗೆ ತುತ್ತಾಗಿದ್ದರು. ಇಟಲಿಯವರ ಸೃಷ್ಟ್ಯಾತ್ಮಕ ಶಕ್ತಿಯನ್ನುತ್ತೇಜಿಸಬಲ್ಲ ಸುಭದ್ರ ಆಳ್ವಿಕೆಯ ಆವಶ್ಯಕತೆಯಿತ್ತು. ರೋಮನ್ ಜನತೆಯನ್ನು ಪ್ರತಿನಿಧಿಸಬಲ್ಲ ರಾಜನ ಆಗಮನದಿಂದ ಮಾತ್ರವೇ ಇಟಲಿಯ ರಾಜಕೀಯ ಏಕತೆಯನ್ನು ಸಾಧಿಸಬಹುದೆಂಬುದು ಡಾಂಟೆಯ ಅಭಿಪ್ರಾಯವಾಗಿತ್ತು. ಆಲ್ಪ್ಸ್ ಪರ್ವತದಾಚೆಯ ಚಕ್ರವರ್ತಿಯಿಂದ ಇಟಲಿಯವರನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ ವೆಂಬುದು 7ನೆಯ ಹೆನ್ರಿಯ (1308–13) ಆಳ್ವಿಕೆಯಿಂದ ಸ್ಪಷ್ಟವಾಗಿತ್ತು. ಈತನಿಗೆ ರೋಮ್‌ನಲ್ಲಿ ರಾಜ್ಯಾಭಿಷೇಕವಾಯಿತು. ಫ್ಲಾರೆನ್ಸನ್ನು ವಶಪಡಿಸಿಕೊಂಡ ಅನಂತರ ಈತ ಪೀಸಾದಲ್ಲಿ ಕಾಲವಾದ. ಇಟಲಿಯ ಏಕೀಕರಣಕ್ಕೆ ಅನೇಕ ಮಾರ್ಗಗಳನ್ನು ಅನುಸರಿಸಲಾಯಿತು. 1313–43ರ ವರೆವಿಗೆ ನೇಪಲ್ಸ್‌ನ ದೊರೆಯಾಗಿದ್ದ ಅಂಜೌನ ಆಳ್ವಿಕೆಯಲ್ಲಿ ಗೈಲ್ಫ್ ಜನರು ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದ್ದರು. ಇವನಿಗೆ ಫ್ಲಾರೆನ್ಸಿನ ಆಧಿಪತ್ಯವನ್ನು 5 ವರ್ಷಗಳ ಕಾಲ ನೀಡಲಾಗಿತ್ತು. ಈತ ಇಟಲಿಯ ಪೋಪ್ ಹಾಗೂ ಫ್ರಾನ್ಸುಗಳೆರಡನ್ನೂ ಪ್ರತಿನಿಧಿಸುತ್ತಿದ್ದ. 1347–54ರ ವರೆಗೆ ರೀಂಜಿ ಎಂಬುವನು ಇಟಲಿಯ ಒಗ್ಗಟ್ಟಿಗಾಗಿಯೂ ಅಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗಾಗಿಯೂ ಶ್ರಮಿಸಿದ. ಇದಾದ ಅನಂತರ ಪೋಪಧಿಕಾರವನ್ನು ಮತ್ತೆ ಸ್ಥಾಪಿಸುವ ಪ್ರಯತ್ನ ನಡೆಯಿತು. 1367ರಲ್ಲಿ ರೋಮಿಗೆ ಹಿಂದಿರುಗಿದ 5ನೆಯ ಅರ್ಬನ್ ಎಂಬುವನು ಅಲ್ಲಿ ಕೇವಲ 3 ವರ್ಷಗಳ ಕಾಲ ಇದ್ದ. ಪೋಪನ ಸಾನ್ನಿಧ್ಯದಿಂದ ಶಾಂತಿಯೇನೂ ಇರಲಿಲ್ಲ. ಪ್ರತಿಯಾಗಿ ಕಲಹವೇ ತೀವ್ರವಾಯಿತು. ವಿದೇಶಿ ವ್ಯಾಪಾರಿಕೂಟಗಳು ದೇಶದಲ್ಲೆಲ್ಲ ಸುಲಿಗೆ ಹಾಗೂ ಕೊಲೆಮಾಡುತ್ತ ಸುತ್ತಾಡಿದುವು. ನಗರ ರಾಜ್ಯಗಳಲ್ಲಿ ನಿರಂಕುಶಪ್ರಭುಗಳ ಅಭ್ಯುದಯದಿಂದ ಹೊಸರೀತಿಯ ರಾಜಕೀಯ ವ್ಯವಸ್ಥೆಯೊಂದು ಉದ್ಭವಿಸಿತು. ಹೋರಾಟಗಳನ್ನು ಹತ್ತಿಕ್ಕಿ ದೇಶದಲ್ಲಿ ಶಾಂತಿ ನೆಲಸುವಂತೆ ಮಾಡಿ ಬಾಹ್ಯಶತ್ರುಗಳಿಂದ ದೇಶವನ್ನು ರಕ್ಷಿಸುವುದೂ ಎಲ್ಲ ವರ್ಗಗಳ ಹಿತಾಸಕ್ತಿಯ ದೃಷ್ಟಿಯಿಂದ ಆಳ್ವಿಕೆ ನಡೆಸುವುದೂ ಇದರ ಉದ್ದೇಶವಾಗಿತ್ತು.

**ಹೊಸಹುಟ್ಟು ಹಾಗೂ ಅನಂತರ:** 15ನೆಯ ಶತಮಾನದ ಆರಂಭದಲ್ಲಿ ನೇಪಲ್ಸ್, ಪೋಪಾಡಳಿತ, ಫ್ಲಾರೆನ್ಸ್, ಮಿಲಾನ್ ಹಾಗೂ ವೆನಿಸ್‌ಗಳಲ್ಲಿ ಇಟಲಿ ಹಂಚಿಹೋಗಿತ್ತು. ಈ ಶತಮಾನದ ಮೊದಲರ್ಧ ಭಾಗದಲ್ಲಿ ಪ್ರತಿರಾಜ್ಯವೂ ತನ್ನ ಎಲ್ಲೆಗಳನ್ನು ವಿಸ್ತರಿಸುವುದರಲ್ಲಿ ಅಥವಾ ಶಕ್ತಿಯನ್ನು ಪ್ರಬಲಗೊಳಿಸಿಕೊಳ್ಳುವುದರಲ್ಲಿ ನಿರತವಾಗಿತ್ತು. ಈ ನಗರಗಳ ನಡುವೆ ನಡೆಯುತ್ತಿದ್ದ ದೀರ್ಘಯುದ್ಧ 1454ರಲ್ಲಿ ನಿಂತಿತು. ಅಲ್ಲಿ ಪ್ರಬಲವಾಗಿದ್ದ ಮೂರು ರಾಷ್ಟ್ರಗಳು ಸೇರಿ ಒಂದು ರಕ್ಷಣಾಕೂಟ ಸ್ಥಾಪಿಸಿಕೊಂಡುವು. ಇದು ರಾಷ್ಟ್ರೀಯ ಏಕತೆಯ ಅಸ್ತಿಭಾರವಾಗುವಂತೆ ಕಂಡಿತು. ವಿದೇಶೀಯರ ಧಾಳಿಯನ್ನು ತಡೆಯುವುದರಲ್ಲಂತೂ ರಕ್ಷಣಾ ಕವಚವಾಯಿತು. ಇಟಲಿಯ ರಾಜರು ತಮ್ಮ ಸಾಮಾನ್ಯ ಆದರ್ಶಗಳು, ಆಸಕ್ತಿಗಳು ಹಾಗೂ ಹೆದರಿಕೆಗಳನ್ನು ಅಭಿವ್ಯಕ್ತಿಗೊಳಿಸಿದರು. ಎರಡು ಸಣ್ಣ ರಾಜ್ಯಗಳನ್ನು ಬಿಟ್ಟು ಮಿಕ್ಕೆಲ್ಲವೂ ಈ ಕೂಟದಲ್ಲಿ ಸೇರಿದ್ದುವು. ಆಗಲಿದ್ದ ಸಣ್ಣಪುಟ್ಟ ಯುದ್ಧಗಳು ಇದರಿಂದ ನಿಂತುವು. ಇದು 1480ರಲ್ಲಿ ಮತ್ತೆ 25 ವರ್ಷಗಳ ಜೀವದಾನ ಪಡೆಯಿತು. 40ವರ್ಷಗಳ ಕಾಲ ಯಾವುದೇ ಯುದ್ಧದ ಭಯವಿಲ್ಲದಂತಾಯಿತು. ಆಗ ಇಟಲಿ ತನ್ನೆಲ್ಲ ಶಕ್ತಿಯನ್ನೂ ಕಲೆಯ ಅಭಿವೃದ್ಧಿಗೆ ಉಪಯೋಗಿಸಿಕೊಂಡಿತು. ಹೊಸ ಹುಟ್ಟಿನ ನಾಗರಿಕತೆಗೆ ಪ್ರತಿಯೊಂದು ನಗರವೂ ತನ್ನದೇ ಆದ ಮಹತ್ಕಾಣಿಕೆ ನೀಡಿತು. ಕಟ್ಟಡಗಳ ರಚನೆ ಹಾಗೂ ಉತ್ಸವಗಳಲ್ಲಿ ಒಂದರೊಡನೊಂದು ಪೈಪೋಟಿಯಿಂದ ಸ್ಪರ್ಧಿಸಿದುವು. ನಾಗರಿಕತೆಯ ಪ್ರಭಾವದಿಂದ ಇಟಲಿಯನ್ನು ಆಳುತ್ತಿದ್ದವರು ಯುದ್ಧಭಯವನ್ನೇ ಮರೆತಿದ್ದರು. ಶಾಂತಿ ಕಾಲದಲ್ಲಿ ಪ್ರೋತ್ಸಾಹ ಹೊಂದಿ ಅಭಿವೃದ್ಧಿಗೊಂಡಿದ್ದ ಕಲೆ ಪ್ರಥಮ ಫ್ರೆಂಚ್ ಧಾಳಿಯ ಕಾಲದಲ್ಲಿ (1494) ಮತ್ತೆ ಅಸ್ತವ್ಯಸ್ತಗೊಂಡಿತು.

ಲೊರೆಂಜೊ ಡಿ ಮೆಡಿಚಿ ತನ್ನೆಲ್ಲ ಶಕ್ತಿಗಳನ್ನು ಇಟಲಿಯ ದೇಶಗಳ ನಡುವೆ ಶಾಂತಿ ಸೌಹಾರ್ದಗಳನ್ನು ಬೆಳೆಯಿಸಲು ವ್ಯಯಿಸಿದ್ದ. ಇವನು 1492ರಲ್ಲಿ ಮೃತನಾದ. ಫ್ರಾನ್ಸಿನ ದೊರೆ ಮಿಲಾನ್, ನೇಪಲ್ಸ್ ಹಾಗೂ ಇಟಲಿಯ ಸಾಧನೆಗಳ ಮೇಲೆ ತನ್ನ ದೃಷ್ಟಿ ಬೀರಿದ. ಇಟಲಿಯ ರಾಜ್ಯಗಳ ಸಾಮೂಹಿಕ ವಿರೋಧ ಎಂಟನೆಯ ಚಾರ್ಲ್ಸ್‌ನ ಯತ್ನವನ್ನು ವಿಫಲಗೊಳಿಸಬಹುದಿತ್ತು. ಆದರೆ ಫ್ಲಾರೆನ್ಸ್ ಮೆಡಿಚಿಯನ್ನು ಮಿತ್ರನಂತೆ ಆಹ್ವಾನಿಸಿತು. ಇವನು ನೇಪಲ್ಸ್‌ವರೆಗೆ ತಡೆಯಿಲ್ಲದೆ ತನ್ನ ವಿಜಯಯಾತ್ರೆ ಮುಂದುವರಿಸಿದ. ಚಾರ್ಲ್ಸ್ ಮುನ್ನುಗ್ಗುವುದರಲ್ಲಿ ಯಶಸ್ವಿಯಾದರೂ ಇಟಲಿಗೆ ಬಂದ ಒಂದು ವರ್ಷದಲ್ಲೇ ನೇಪಲ್ಸನ್ನು ತನ್ನ ಕೈಯಿಂದ ಕಳೆದುಕೊಂಡ. ಸ್ಪೇನಿನ ಫರ್ಡಿನೆಂಡ್ ಮತ್ತು ಮ್ಯಾಕ್ಸಿಮಿಲಿಯನ್ ಸಮ್ರಾಟರು ವೆನಿಸ್‌ನ ಲೀಗ್ ಸೇರಿದರು. ಸ್ಪ್ಯಾನಿಷ್ ಸೈನ್ಯ ನೇಪಲ್ಸನ್ನು ವಶಪಡಿಸಿಕೊಂಡಿತು. ಕ್ರಮೇಣ ಇಟಲಿ ಸ್ಪೇನಿಗೆ ಅಧೀನವಾಯಿತು. 1530ರಲ್ಲಿ ಬೊಲೊನಾದಲ್ಲಿ 5ನೆಯ ಚಾರ್ಲ್ಸ್‌ನ ರಾಜ್ಯಾಭಿಷೇಕವಾದ ಮೇಲೆ ಮುಂದಿನ 30 ವರ್ಷಗಳಲ್ಲಿ ಸ್ಪ್ಯಾನಿಷ್ ಪ್ರಾಬಲ್ಯ ಮತ್ತಷ್ಟು ಅಧಿಕಗೊಂಡಿತು. ಈತ ಇಟಲಿಯ ಸಾಮ್ರಾಜ್ಯದ ಅಧಿಕಾರವನ್ನು ಸ್ಪೇನಿಗೆ ಬದಲಾಯಿಸಿದ. ಸ್ಪೇನಿನ ನಡೆ ನುಡಿಗಳನ್ನು ಇಟಲಿಯ ಜನರು ವ್ಯಾಪಕವಾಗಿ ಅನುಸರಿಸಲಾರಂಭಿಸಿದರು. ಆದರೆ ಅದಕ್ಕೆ ಮುಂಚಿನ ಯುದ್ಧವರ್ಷಗಳಲ್ಲಿ, ಲಿಯೊನಾರ್ಡೊ, ರ್‍ಯಾಫೆಲ್, ಮೈಕಲೇಂಜಲೊ ಅರಿಸೋಟೊ ಹಾಗೂ ಮ್ಯಾಕಿಯವೆಲಿ ಮೊದಲಾದವರಿಂದ ಕಲಾಕ್ಷೇತ್ರ ರಾರಾಜಿಸಿತು (ಅವರ ವ್ಯಕ್ತಿತ್ವ ಮತ್ತು ಸಾಧನೆಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ). ಫ್ರೆಂಚರು ಈ ಹೊಸ ಹುಟ್ಟನ್ನು ತಮ್ಮೊಡನೆ ತಮ್ಮ ನಾಡಿಗೂ ಕೊಂಡೊಯ್ದರು. ವಿದೇಶೀಯರ ಆಳ್ವಿಕೆಗೆ ಇಟಲಿ ಒಳಗಾದರೂ ಇಟಲಿಯ ನಾಗರಿಕತೆ ಯುರೋಪನ್ನು ಸೆರೆಹಿಡಿದಿತ್ತು.

**ವಿದೇಶೀಯರ ಪ್ರಭುತ್ವ:** ಇಟಲಿಯ ರಾಜ್ಯಗಳಲ್ಲೆಲ್ಲ ವೆನಿಸ್ ಅತ್ಯುತ್ತಮ ಆಡಳಿತವುಳ್ಳ ಅತಿ ವೈಭವಯುತವಾದ ಮತ್ತು ಉದಾರನೀತಿ ಹೊಂದಿದ್ದ ರಾಜ್ಯ. ಸ್ಪ್ಯಾನಿಷರು ಇಟಲಿಯನ್ನು ಆಕ್ರಮಿಸಿದ್ದ ಕಾಲ ಅದರ ಇತಿಹಾಸದಲ್ಲಿ (1559–1700) ಅತ್ಯಂತ ಕಳಾಹೀನವಾದ

ಕಾಲ. ಹೆಚ್ಚಿನ ಸಂಖ್ಯೆಯ ಯುದ್ಧಗಳಿಂದಲೂ ಹೆಚ್ಚಿನ ತೆರಿಗೆಗಳಿಂದಲೂ ದೇಶದ ಜನ ಕಂಗೆಟ್ಟಿದ್ದರು. ಭ್ರಷ್ಟಾಚಾರಿ ಅಧಿಕಾರಿಗಳಿಂದ ಕೂಡಿದ್ದ ನೇಪಲ್ಸ್ ಹಾಗೂ ಸಿಸಿಲಿಗಳು ಉಪವಾಸದಿಂದ ಕಂಗೆಟ್ಟಿದ್ದುವು. ಸ್ಪ್ಯಾನಿಷ್ ಉತ್ತರಾಧಿಕಾರದ ಕಾಲದಲ್ಲಿ ಇಟಲಿ ಮತ್ತೊಮ್ಮೆ ಯುರೋಪ್ ರಾಷ್ಟ್ರಗಳ ಯುದ್ಧಕ್ಷೇತ್ರವಾಯಿತು. ಇಟಲಿಯ ಪ್ರದೇಶಗಳು ಹಲವಾರು ರಾಷ್ಟ್ರಗಳ ನಡುವೆ ಹರಿದು ಹಂಚಿಹೋಗಿದ್ದುವು. ಆದರೆ ಯಾವುದೇ ರಾಷ್ಟ್ರಕ್ಕೆ ಪ್ರಾಬಲ್ಯ ದೊರೆತಿರಲಿಲ್ಲ. 18ನೆಯ ಶತಮಾನದ ಮೊದಲಭಾಗದಲ್ಲಿ ಇಟಲಿಯ ನಕ್ಷೆಯಲ್ಲಿ ಸಾಕಷ್ಟು ಬದಲಾವಣೆಗಳಾದುವು. ಈ ಬದಲಾವಣೆಗಳಿಗೆ ಸ್ಪೇನಿನ 5ನೆಯ ಫಿಲಿಪ್‌ನ ಎರಡನೆಯ ಪತ್ನಿ ಫಾರ್ನೆಸ್ ಮತ್ತು ಮಂತ್ರಿ ಆಲ್ಬೆರೊನಿ ಮುಖ್ಯರಾಗಿದ್ದರು. ಸ್ಪೇನ್ ಕಳೆದುಕೊಂಡಿದ್ದ ಪ್ರದೇಶಗಳನ್ನು ಮತ್ತೆ ಪಡೆಯುವುದೇ ಅವರ ಉದ್ದೇಶವಾಗಿತ್ತು. ಸಿಸಿಲಿ ಮತ್ತು ಸಾರ್ಡಿನಿಯಗಳನ್ನು ಸ್ಪ್ಯಾನಿಷ್ ಸೈನ್ಯಗಳು ವಶಪಡಿಸಿಕೊಂಡುವು. ಆದರೆ 1720ರಲ್ಲಿ ಅವರು ಗೆದ್ದಿದ್ದ ಪ್ರದೇಶಗಳನ್ನು ಮತ್ತೆ ಹಿಂತೆಗೆದುಕೊಂಡು, ಸಿಸಿಲಿಯನ್ನು ಆಸ್ಟ್ರಿಯಕ್ಕೆ ನೀಡಲಾಯಿತು. ಇದಕ್ಕೆ ಮೊದಲು ಚಾರಲ್ಸ್ ಇಮ್ಯಾನುಯಲ್ ಮಿಲಾನನ್ನು ವಶಪಡಿಸಿಕೊಂಡಿದ್ದ. ಆಸ್ಟ್ರಿಯ ತನ್ನೆಲ್ಲ ಶಕ್ತಿಯನ್ನೂ ಕಳೆದುಕೊಂಡಿದ್ದಂತೆ ಕಂಡುಬಂತು. ಸ್ಪೇನ್ ಮತ್ತು ಸವಾಯ್‌ಗಳೆರಡೂ ಒಂದನ್ನೊಂದು ನಂಬಲಿಲ್ಲ. ಎರಡೂ ಮಿಲಾನಿಗಾಗಿ ದುರಾಸೆಪಟ್ಟವು. ಇವುಗಳ ನಡುವೆ ಸಹಕಾರವಿಲ್ಲದ್ದು ಆಸ್ಟ್ರಿಯದ ಪ್ರಾಬಲ್ಯ ಬೆಳೆಯಲು ಅವಕಾಶವಾಯಿತು. ಆಸ್ಟ್ರಿಯನ್ ಉತ್ತರಾಧಿಕಾರಕ್ಕೆ ಸವಾಯ್ ಮತ್ತು ಸ್ಪೇನ್‌ಗಳು ಪರಸ್ಪರ ವಿರುದ್ಧ ಗುಂಪುಗಳಲ್ಲಿ ಹೋರಾಡಿದುವು. ಇದರ ಅಂತ್ಯದಲ್ಲಿ ಎಕ್ಸ್–ಲಾ–ಷಾಪೆಲ್ ಕರಾರಿನಿಂದ (1748). ಎಲಿಜಬೆತ್‌ಳ 2ನೆಯ ಪುತ್ರನಿಗೆ ಪರ್ಮ ಮತ್ತು ಪಿಯಾಸೆಂಜಗಳು ದತ್ತವಾದುವು. ಹ್ಯಾಪ್ಸ್ ಬರ್ಗ್ ವಂಶದ ವ್ಯವಸ್ಥೆಯಿಂದ ಇಟಲಿ 50 ವರ್ಷಗಳ ಕಾಲ ಶಾಂತಿಯನ್ನನುಭವಿಸಿತು. 18ನೆಯ ಶತಮಾನದ ಸುಧಾರಣೆಯಿಂದ ಇಟಲಿಯ ಎಲ್ಲ ರಾಜ್ಯಗಳೂ ಪ್ರಭಾವಿತಗೊಂಡುವು. ಆರ್ಥಿಕ ಮತ್ತು ಹಣಕಾಸಿನ ಪರಿಸ್ಥಿತಿಗಳ ಪುನಾರಚನೆಗೆ ಪ್ರಯತ್ನಗಳು ನಡೆದುವು. ಟಸ್ಕನಿಯಲ್ಲಿ ಗ್ರಾಂಡ್ ಡ್ಯೂಕ್ ಲಿಯೊಪಾಲ್ಸ್ ನೆರಿ ಮತ್ತು ಟಾವಂಟಿ, ಪರ್ಮಾದಲ್ಲಿ ಟಿಲ್ಲಾಟ್ ಮತ್ತು ಸವಾಯ್‌ನಲ್ಲಿ ಹಾಗೂ ಸಾರ್ಡಿನಿಯಗಳಲ್ಲಿ 3ನೆಯ ಚಾರ್ಲ್ಸ್ ಇಮ್ಯಾನ್ಯುಯಲ್ ಮತ್ತು ಸವಾಯನಲ್ಲಿ ಒರ್ಮಿಯಾ–ಇವರು ತಮ್ಮ ತಮ್ಮ ರಾಜ್ಯಗಳಲ್ಲಿ ಸುಧಾರಣಾಕಾರ್ಯಗಳನ್ನು ಉತ್ತಮವಾಗಿ ನಡೆಸಿದರು. ಇಟಲಿ ಬಹುದೀರ್ಘಕಾಲದ ಸುಪ್ತಾವಸ್ಥೆಯಿಂದ ಚೇತನಗೊಂಡಿತು. ಹಳೆಯ ರೀತಿಗಳ ಮೇಲೆ ಹೊಸರೀತಿಯ ಜೀವನ ಆಕ್ರಮಣ ನಡೆಸಿತು. ರಾಷ್ಟ್ರೀಯ ಪುನರುಜ್ಜೀವನದ ಮಾರ್ಗ ತೆರೆಯಬೇಕಾದಲ್ಲಿ ಈ ಪುರಾತನ ಮಾರ್ಗಗಳು ನಾಶವಾದುವು.

**ಇಟಲಿಯ ಏಕೀಕರಣ :** ಫ್ರಾನ್ಸಿನ ನೆಪೋಲಿಯನ್ ಬೋನಪಾರ್ಟ್ ಆಲ್ಪ್ಸ್‌ನ ದಕ್ಷಿಣಕ್ಕೆ ತಿರುಗಿ ಇಟಲಿಯ ಪರ್ಯಾಯದ್ವೀಪವನ್ನು ಪ್ರವೇಶಿಸಿದಾಗ ದೇಶದ ಹಳೆಯ ವ್ಯವಸ್ಥೆಗಳೆಲ್ಲ ಬುಡಮೇಲಾದುವು. ಮುಂದೆ ಅವನು ಫ್ರೆಂಚ್ ಧಾಳಿಗಳನ್ನು ಈಜಿಪ್ಟಿನಲ್ಲಿ ಮುಂದುವರಿಸಿದ ಸಲುವಾಗಿ ಸ್ವದೇಶಕ್ಕೆ ಹೋದ. ಆದರೆ ಅನಂತರವೂ ಫ್ರೆಂಚರ ಆಕ್ರಮಣ ಇಟಲಿಯಲ್ಲಿ ಮುಂದುವರಿಯಿತು. ಎಲ್ಲೆಲ್ಲೂ ಫ್ರೆಂಚರಿಂದ ಬಂದ ಸ್ವಾತಂತ್ರ್ಯ ಸಮಾನತೆ ಸೋದರತೆಗಳ ಮಾತು ಹರಿದಾಡಿತು. ಇಟ್ಯಾಲಿಯನ್ನರು ಮೊದಲು ಫ್ರೆಂಚರ ವಿಚಾರದಲ್ಲಿ ಆಶಾಭಾವನೆ ತಳೆದಿದ್ದರು. ಆಮೇಲೆ ಅವರ ಬಗ್ಗೆ ಕ್ರೋಧಭಾವ ತಳೆದರು. ಬೋನಪಾರ್ಟ್ 1894ರಲ್ಲಿ ಸಾಮ್ರಾಟನಾದಾಗ, ಸಿಸಾಲ್ಪೈನ್ ಗಣರಾಜ್ಯವೇ ಇಟಲಿ ಗಣರಾಜ್ಯ ವಾಯಿತು. 1806ರಲ್ಲಿ ವೆನಿಸ್ ಹೊಸ ಸಾಮ್ರಾಜ್ಯಕ್ಕೆ ಸೇರಿತು. ಪೀಡಿಮಾಂಟ್, ಟಸ್ಕನಿ ಮತ್ತು ಅಪೆನೈನ್‌ಗಳ ಪಶ್ಚಿಮಕ್ಕಿದ್ದ ಪೋಪ್ ರಾಜ್ಯಗಳು ಫ್ರೆಂಚ್ ಸಾಮ್ರಾಜ್ಯ ಸೇರಿದುವು. ನೇಪಲ್ಸ್ ಸ್ವತಂತ್ರ ರಾಜ್ಯವಾಯಿತು. ಸಿಸಿಲಿ ಫ್ರೆಂಚ್ ಹತೋಟಿಗೊಳಗಾಗದೆ ಸ್ವತಂತ್ರ ರಾಜ್ಯವಾಗಿ ಉಳಿಯಿತು. ಬಹು ಹಿಂದಿನ ಕಾಲದಿಂದ ಇದ್ದ ಅನೇಕ ಪದ್ಧತಿಗಳು ಫ್ರೆಂಚರ ಆಳ್ವಿಕೆಯ ಕಾಲದಲ್ಲಿ ಕಣ್ಮರೆಯಾದುವು. ಆದರೆ ಕೆಲವು ಅಭಿವೃದ್ಧಿಯ ಕ್ರಮಗಳನ್ನು ಕೈಗೊಳ್ಳಲಾಯಿತು. ಇಟಲಿಯ ಮೇಲೆ ಕೆಂಪು, ಬಿಳಿ ಮತ್ತು ಹಸಿರುವರ್ಣದ ಧ್ವಜ ಹಾರಾಡಲಾರಂಭಿಸಿತು. ಇದೇ ಮುಂದೆ ಇಟಲಿಯ ಏಕೀಕರಣಕ್ಕೆ ಸ್ಫೂರ್ತಿ ನೀಡಿತು. 1815ರ ವಿಯೆನ್ನದ ಕಾಂಗ್ರೆಸಿನಿಂದ ಹಳೆಯ ಇಟಲಿ ರಾಜ್ಯ ಸ್ಥಾಪಿತವಾಯಿತು. ಆಸ್ಟ್ರಿಯನ್ ಚಾನ್ಸಲರ್ ಆದ ಮೆಟ್ಟರ್ನಿಕ್ ವಿಯೆನ್ನದ ಪ್ರಮುಖ ರಾಜಕಾರಣಿಯಾಗಿದ್ದ. ನೆಪೋಲಿಯನ್ನನ ಅಪಜಯದ ಅನಂತರ ಯುರೋಪಿನ ವ್ಯವಹಾರಗಳನ್ನು ಸರಿಪಡಿಸುವುದರಲ್ಲಿ ಮುಖ್ಯ ಪಾತ್ರವಹಿಸಿದ್ದ. ಇಟಲಿ ಹಾಗೂ ಜರ್ಮನಿಗಳ ಸಮಸ್ಯೆಗಳ ಬಗ್ಗೆಯೂ ಇವನು ಆಸಕ್ತಿ ವಹಿಸಿದ್ದ. ಪೋಪ್‌ರಾಜ್ಯವಾದ ಮ್ಯಾಸಿರಾಟಾದಲ್ಲಿ 1817ರಲ್ಲಿ ಸಂಭವಿಸಿದ ಪ್ರಥಮ ಕ್ರಾಂತಿ ನಗೆಪಾಟಲಿಗೀಡಾಯಿತು. 1820ರಲ್ಲಿ ಮತ್ತೊಂದು ಕ್ರಾಂತಿ ನಡೆಯಿತು. ದಂಗೆಗಳನ್ನಡಗಿಸುವುದರಲ್ಲಿ ಮೆಟ್ಟರ್ನಿಕ್ ಯಶಸ್ವಿಯಾದ. ಇವನ ಆಳ್ವಿಕೆಯ ಮುಂದಿನ ಹತ್ತು ವರ್ಷಗಳ ಕಾಲದಲ್ಲಿ ಯಾವ ರೀತಿಯ ದಂಗೆಗಳೂ ಸಂಭವಿಸಲಿಲ್ಲ. ಜರ್ಮನ್ ರಾಜ್ಯಗಳಂತೆಯೇ ಇಟಲಿಯ ಪ್ರಮುಖ ಕ್ರಾಂತಿಕಾರಿಗಳು ದೇಶಭ್ರಷ್ಟರಾಗಿ ಪ್ಯಾರಿಸ್ಸಿನಲ್ಲಿ ತಮ್ಮ ಚಟುವಟಿಕೆಗಳನ್ನು ಮುಂದು ವರಿಸಿದರು.

ಮ್ಯಾಟ್ಸಿನಿಯ ಕನಸು: 1830ರ ಫ್ರೆಂಚ್ ಕ್ರಾಂತಿ ಇಟಲಿಗೂ ಸ್ಫೂರ್ತಿನೀಡಿತು. ಪ್ಯಾರಿಸಿನಿಂದ ದೊಡ್ಡಪ್ರಮಾಣದಲ್ಲಿ ಕ್ರಾಂತಿಯನ್ನು ನಿಯೋಜಿಸಲಾಯಿತು; ಮತ್ತು ಪೋಪ್ ಅಧಿಕಾರಿಗಳನ್ನು ಹೊರಹಾಕಿದ್ದ ರಿಮಿನಿ, ಬೊಲೊನಾ ಮತ್ತು ಪೆರುಗಿಯಗಳಲ್ಲಿ 1831ರಲ್ಲಿ ದಂಗೆಯ ಸಂಚು ನಡೆದಿತ್ತು. ಈ ಆಂತರಿಕ ಕ್ಷೋಭೆಯ ನಡುವೆ ಆಸ್ಟ್ರಿಯನ್ ಆಕ್ರಮಣ ನಡೆಯಿತು.

ಝೂಸೆಪ್ಪ ಮ್ಯಾಟ್ಸಿನಿ ಹೊಸ ಚಳವಳಿಯನ್ನಾರಂಭಿಸಿದ (**ನೋಡಿ–ಮ್ಯಾಟ್ಸಿನಿ, ಝೂಸೆಪ್ಪ**). ಇಟಲಿಯ ಐಕ್ಯ ಸಾಧಿಸಿ ಅದನ್ನು ಸಂಪೂರ್ಣವಾಗಿ ಸ್ವತಂತ್ರಗೊಳಿಸಲು ಸರಳ ಮಾರ್ಗಗಳನ್ನು ಸೂಚಿಸಿದ. 1831ರಲ್ಲಿ ಸಾರ್ಡಿನಿಯದ ಹೊಸ ದೊರೆ ಚಾರ್ಲ್ಸ್ ಆಲ್ಬರ್ಟ್‌ನನ್ನು ಐಕ್ಯ ಚಳವಳಿಯ ನಾಯಕತ್ವ ವಹಿಸಲು ಕೇಳಿಕೊಂಡ. ಆದರೆ ಅನಂತರ ಇಡೀ ಪರ್ಯಾಯ ದ್ವೀಪವನ್ನು ಸ್ವತಂತ್ರಗೊಳಿಸಿ, ಏಕೀಕರಣಗೊಳಿಸಿ, ಗಣರಾಜ್ಯವನ್ನು ಸ್ಥಾಪಿಸಲು ಮೀಸಲಾಗಿದ್ದ ಯಂಗ್ ಇಟಲಿ ಸಂಸ್ಥೆಯನ್ನು ಸ್ಥಾಪಿಸಿದ. ಯಾವ ರಾಜನನ್ನೂ ನಂಬಕೂಡದು; ಯಾವ ಸಣ್ಣ ರಾಜ್ಯವನ್ನೂ ಬಿಡಕೂಡದು; ಕರ್ತವ್ಯನಿಷ್ಠೆ, ತ್ಯಾಗ, ಜನತೆಯ ಪುನಶ್ಚೇತನ, ಇವೇ ಸೂಕ್ತ ಮಾರ್ಗಗಳು–ಎಂದು ಈತ ಸಾರಿದ. ಮ್ಯಾಟ್ಸಿನಿಯ ತತ್ತ್ವಗಳನ್ನು ಸಾವಿರಾರು ವೈಯಕ್ತಿಕ ಪತ್ರಗಳ ಮೂಲಕ ಹಾಗೂ ಯಂಗ್ ಇಟಲಿಯ ಗುಪ್ತ ಪತ್ರಿಕೆಗಳ ಮೂಲಕ ಪ್ರಸಾರ ಮಾಡಲಾಗುತ್ತಿತ್ತು.

ರಾಷ್ಟ್ರೀಯ ಚಳವಳಿಯಲ್ಲಿ ಮ್ಯಾಟ್ಸಿನಿಯ ಯಂಗ್ ಇಟಲಿಯ ಆಕಾಂಕ್ಷೆಯ ಪರಿಣಾಮವನ್ನೂ ಅದರ ಅಗಾಧವಾದ ಪ್ರಚಾರಕಾರ್ಯವನ್ನೂ ವಿವರಿಸುವುದು ಅಸಾಧ್ಯ. ಮ್ಯಾಟ್ಸಿನಿ ಬೋಧಕ ಹಾಗೂ ಪ್ರವಾದಿಯ ಕಾರ್ಯ ನಡೆಸಿದ. 1848, 1860 ಮತ್ತು 1870ರಲ್ಲಿ ರಾಜರುಗಳನ್ನು ಸೈನಿಕ ಹಾಗೂ ರಾಯಭಾರ ಘಟನೆಗಳ ಮೂಲಕ ಪದಚ್ಯುತಗೊಳಿಸಿದಾಗ ಮ್ಯಾಟ್ಸಿನಿಯ ಅನುಯಾಯಿಗಳಾಗಿ ಏಕತೆಯನ್ನು ಬೋಧಿಸುತ್ತಿದ್ದ ಉತ್ಸಾಹಿಗಳನೇಕರಿದ್ದರು.

ಈ ಕಾಲದಲ್ಲಿಯೇ ಸ್ವಾತಂತ್ರ್ಯ ಹಾಗೂ ಏಕೀಕರಣಕ್ಕಾಗಿ ಪ್ರೇರೇಪಿಸುತ್ತಿದ್ದ ಅಪ್ರತ್ಯಕ್ಷ ಶಕ್ತಿಗಳೂ ಇದ್ದುವು. ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯ ಹೊಂದಿದ್ದ ಪೀಡ್ ಮಾಂಟ್ ಮತ್ತು ಟಸ್ಕನಿಯ ಪತ್ರಿಕೆಗಳಲ್ಲಿ ಕೈಗಾರಿಕೆ, ವ್ಯವಸಾಯ ಮತ್ತು ವಾಣಿಜ್ಯಾಭಿವೃದ್ಧಿಯ ಬಗ್ಗೆ ಅನೇಕ ವಿಚಾರಗಳೂ ಪ್ರಕಟಗೊಳ್ಳುತ್ತಿದ್ದುವು. ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುತ್ತಿದ್ದ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಸ್ಟ್ರಿಯನ್ನರನ್ನು ಹೊಡೆದೋಡಿಸಲು ಒಂದು ಸೈನ್ಯ ಶಕ್ತಿಯ ಆವಶ್ಯಕತೆಯಿತ್ತು. ಅವರನ್ನು ಹೊರಗೋಡಿಸಿದ್ದಲ್ಲದೆ ಇಟಲಿಯ ಪುನರುದ್ಧಾರ ಸಾಧ್ಯವಿರಲಿಲ್ಲ.

1848ರ ಚಳವಳಿಯ ಪ್ರತಿಧ್ವನಿ ರೋಮಿನಲ್ಲಿ ಕೇಳಿಬರುತ್ತಿತ್ತು. 1846ರ ಜೂನ್ 16ನೆಯ ದಿನದಂದು ಗ್ರಿಗರಿಯ ಉತ್ತರಾಧಿಕಾರಿಯಾಗಿ 9ನೆಯ ಪಯಸ್ ಪೋಪ್ ಬಂದ. 1848ರ ಆರಂಭದ ವೇಳೆಗೆ, 1830ರ ಫ್ರೆಂಚ್ ಸಂವಿಧಾನದ ಮಾದರಿಯ ಸಂವಿಧಾನಕ್ಕೆ ಬೇಡಿಕೆ ಸಾಮಾನ್ಯವಾಗಿದ್ದು, ಟ್ಯುರಿನ್, ಫ್ಲಾರೆನ್ಸ್, ರೋಮ್ ಮತ್ತು ನೇಪಲ್ಸ್‌ಗಳಲ್ಲಿ ಆ ವರ್ಷದ ಮಾರ್ಚ್ ವೇಳೆಗೆ ಆ ರೀತಿಯ ಸಂವಿಧಾನ ಆಚರಣೆಯಲ್ಲಿತ್ತು. ಆದರೆ ಯುರೋಪಿನಲ್ಲಿ ಘಟನೆಗಳು ಬಹು ತ್ವರಿತಗತಿಯಲ್ಲಿ ಸಾಗುತ್ತಿದ್ದುವು. ಲೂಯಿ ಫಿಲಿಪ್ ಪದಚ್ಯುತನಾಗಿದ್ದ. ಫೆಬ್ರವರಿಯಲ್ಲಿ 2ನೆಯ ಫ್ರೆಂಚ್ ಗಣರಾಜ್ಯದ ಸ್ಥಾಪನೆಯಾಗಿತ್ತು. ಮಾರ್ಚ್ ತಿಂಗಳಲ್ಲಿ ವಿಯೆನ್ನದಲ್ಲಿನ ಕ್ರಾಂತಿಯಿಂದ ಮೆಟರ್ನಿಕನನ್ನು ಹೊರಗೋಡಿಸಿದ್ದು ಇವೆಲ್ಲಕ್ಕಿಂತ ಮುಖ್ಯವಾದದ್ದು. ಇದರ ಪರಿಣಾಮ ಇಟಲಿಯ ಮೇಲೂ ಉಂಟಾಗಿತ್ತು. ಮಿಲಾನ್‌ನಲ್ಲಿ ಜನ ಎಚ್ಚೆತ್ತುಕೊಂಡಿದ್ದರು. 5 ದಿನಗಳ ಹೋರಾಟದಲ್ಲಿ ಅವರು ಆಸ್ಟ್ರಿಯನ್ನರನ್ನು ಪದಚ್ಯುತರನ್ನಾಗಿ ಮಾಡಿದರು. ವೆನಿಸ್ ಮಿಲಾನನ್ನು ಅನುಸರಿಸಿತು. ಎಲ್ಲೆಲ್ಲಿಯೂ ಆಸ್ಟ್ರಿಯನ್ನರ ವಿರುದ್ಧ ಧರ್ಮಯುದ್ಧ ನಡೆಯಿತು.

ದಂಗೆಗಳನ್ನಡಗಿಸುವುದರಲ್ಲಿ ಮೆಟ್ಟರ್ನಿಕ್ ಯಶಸ್ವಿಯಾದ. ಇವನ ಆಳ್ವಿಕೆಯ ಮುಂದಿನ ಹತ್ತು ವರ್ಷಗಳ ಕಾಲದಲ್ಲಿ ಯಾವ ರೀತಿಯ ದಂಗೆಗಳೂ ಸಂಭವಿಸಲಿಲ್ಲ. ಜರ್ಮನ್ ರಾಜ್ಯಗಳಂತೆಯೇ ಇಟಲಿಯ ಪ್ರಮುಖ ಕ್ರಾಂತಿಕಾರಿಗಳು ದೇಶಭ್ರಷ್ಟರಾಗಿ ಪ್ಯಾರಿಸ್ಸಿನಲ್ಲಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು.

**ಮ್ಯಾಟ್ಸಿನಿಯ ಕನಸು:** 1830ರ ಫ್ರೆಂಚ್ ಕ್ರಾಂತಿ ಇಟಲಿಗೂ ಸ್ಫೂರ್ತಿನೀಡಿತು. ಪ್ಯಾರಿಸಿನಿಂದ ದೊಡ್ಡಪ್ರಮಾಣದಲ್ಲಿ ಕ್ರಾಂತಿಯನ್ನು ನಿಯೋಜಿಸಲಾಯಿತು; ಮತ್ತು ಪೋಪ್ ಅಧಿಕಾರಿಗಳನ್ನು ಹೊರಹಾಕಿದ್ದ ರಿಮಿನಿ, ಬೊಲೊನಾ ಮತ್ತು ಪೆರುಗಿಯಗಳಲ್ಲಿ 1831ರಲ್ಲಿ

ದಂಗೆಯ ಸಂಚು ನಡೆದಿತ್ತು. ಈ ಆಂತರಿಕ ಕ್ಷೋಭೆಯ ನಡುವೆ ಆಸ್ಟ್ರಿಯನ್ ಆಕ್ರಮಣ ನಡೆಯಿತು. ಉತ್ತರದಲ್ಲಿ ಆಸ್ಟ್ರಿಯನ್ನರು ಹಾಗೂ ಪೀಡ್‌ಮಾಂಟೀಸ್‌ಗಳ ನಡುವೆ ಯುದ್ಧ ಮುಂದುವರಿಯುತ್ತಿದ್ದಾಗ ತೀವ್ರವಾದಿಗಳು ರೋಮ್ ಮತ್ತು ಫ್ಲಾರೆನ್ಸ್‌ಗಳನ್ನು ವಶಮಾಡಿಕೊಂಡರು. ಕ್ರೈಸ್ತ ರಾಷ್ಟ್ರವೊಂದರ ಮೇಲೆ ಯುದ್ಧ ಘೋಷಿಸಲು 9ನೆಯ ಪೋಪ್ ಪಯಸ್ ನಿರಾಕರಿಸಿದ್ದರಿಂದ ಜನಪ್ರಿಯತೆಯನ್ನು ಕಳೆದುಕೊಂಡ. ಯಂಗ್ ಇಟಲಿಯಿಂದ ಸ್ಫೂರ್ತಿಗೊಂಡ ಮ್ಯಾಟ್ಸಿನಿಯನ್ನರು ಪ್ರಭಾವ ಗಳಿಸಿಕೊಂಡರಲ್ಲದೆ ರೋಮ್‌ನಲ್ಲಿ ಒಂದು ಗಣರಾಜ್ಯ ಸ್ಥಾಪನೆ ಮಾಡಿ ಏಕೀಕರಣ ಸಾಧಿಸಬಯಸಿದರು. ಪೋಪ್ ಪಯಸ್ ನಗರತ್ಯಾಗ ಮಾಡಿದ.

ಈ ರೀತಿಯಲ್ಲಿ 1849ರಲ್ಲಿ ರೋಮ್, ಫ್ಲಾರೆನ್ಸ್ ಮತ್ತು ವೆನಿಸ್ ನಗರಗಳಲ್ಲಿ ಗಣರಾಜ್ಯಗಳ ಸ್ಥಾಪನೆಯಾಯಿತು. ಟಸ್ಕನಿ ಆಸ್ಟ್ರಿಯನ್ನರಿಗೆ ಸೋತು ಗ್ರಾಂಡ್ ಡ್ಯೂಕ್ ಲಿಯೊಪಾಲ್ಡನನ್ನು ಮತ್ತೆ ಸೇರಿಸಿಕೊಳ್ಳಬೇಕಾಯಿತು. ಆದರೆ 1849ರ ಜುಲೈವರೆಗೆ ರೋಮನ್ ಗಣರಾಜ್ಯ ಪ್ರತಿಬಂಧಕವನ್ನೊಡ್ಡಿತು. ಮ್ಯಾಟ್ಸಿನಿಯ ರೋಮ್ ಗಣರಾಜ್ಯ ಕೆಥೊಲಿಕ್ ರಾಷ್ಟ್ರಗಳ ಒತ್ತಡವನ್ನು ತಡೆದುಕೊಂಡಿತ್ತು. ಮುನ್ನುಗ್ಗುತ್ತಿದ್ದ ಆಸ್ಟ್ರಿಯ, ಫ್ರಾನ್ಸ್, ನೇಪಲ್ಸ್ ಮತ್ತು ಸ್ಪೇನ್‌ಗಳ ಸೈನ್ಯಗಳನ್ನು ಧೈರ್ಯದಿಂದ ಎದುರಿಸಿತು. ಈ ರಾಜ್ಯಗಳೆಲ್ಲವೂ ಪೋಪನನ್ನು ಮತ್ತೆ ಅಧಿಕಾರಕ್ಕೆ ತರಲು ಬಯಸುತ್ತಿದ್ದವು. ಫ್ರೆಂಚರು ಮೊದಲು ಆಗಮಿಸಿದರೂ ಗಾರಿಬಾಲ್ಡಿ ಅವರನ್ನು ಒಂದು ತಿಂಗಳ ಕಾಲ ತಡೆದಿದ್ದ. ಆದರೆ ಮುಂದಿನ ಒಂದು ತಿಂಗಳಲ್ಲಿ ವೆನಿಸ್ ಶರಣಾಗತವಾಯಿತು.



1834ರಲ್ಲಿ ಕ್ರಾಂತಿಯ ಪ್ರಮುಖ ನಾಯಕರು ದೇಶದ ಗಡಿಯಾಚೆ ಹೊರಟುಹೋದರು. ಗಾರಿಬಾಲ್ಡಿ ಅಮೆರಿಕಕ್ಕೆ ಮತ್ತು ಮ್ಯಾಟ್ಸಿನಿ ಲಂಡನ್ನಿಗೆ ಹೋದರು. 1848 ಮತ್ತು 1849ರ ಘಟನೆಗಳಿಂದ, ರಿಸಾರ್ಜಿಮೆಂಟೊವಿನ ಬೆನ್ನೆಲುಬಾಗಿದ್ದ ಮಧ್ಯಮ ವರ್ಗದ ಜನರ ಮೇಲೆ ಮಹತ್ತರವಾದ ಪರಿಣಾಮವುಂಟಾಗಿತ್ತು. ಆಸ್ಟ್ರಿಯ ತೊಲಗಬೇಕಿತ್ತು. ಪೋಪನ ಲೌಕಿಕ ಆಡಳಿತವೂ ರಾಜರುಗಳೂ ಹೋಗಬೇಕಿತ್ತು.

ಇಟಲಿಯ ಸ್ವಾತಂತ್ರ್ಯ ಹೋರಾಟ ನಡೆಸುವ ಅವಕಾಶವನ್ನು ಸಾರ್ಡಿನಿಯದ ದೊರೆ ಸದುಪಯೋಗಪಡಿಸಿಕೊಂಡ. ಮೊದಲು ಡಿ ಅಜೆಗ್ಲಿಯೊನಿಂದಲೂ ಆಮೇಲೆ (1852ರ ಅನಂತರ) ತನ್ನ ಹೊಸ ಪ್ರಧಾನಿ ಕೌಂಟ್ ಕ್ಯಾಮಿಲ್ಲೊ ಕ್ಯಾವರ್‌ನಿಂದಲೂ ಮಾರ್ಗದರ್ಶನ ಪಡೆದ. ಈ ಸಣ್ಣ ರಾಜ್ಯದ ಸೈನಿಕ ದುರ್ಬಲತೆಯಿಂದ ಸರ್ಕಾರ ಬಹು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಿತ್ತು. ಮತ್ತು ಇಟಲಿಯ ಗಣ್ಯರಲ್ಲನೇಕರು ಲಂಬಾರ್ಡಿಯಲ್ಲಿ 1853ರಲ್ಲಿ ಮತ್ತು ಜಿನೋವಾದಲ್ಲಿ 1857ರಲ್ಲಿ ಮ್ಯಾಟ್ಸಿನಿಯನ್ ಬಂಡಾಯ ವಿಫಲವಾಯಿತೆಂಬುದನ್ನು ಮನಗಂಡಿದ್ದರು.

ಕ್ಯಾವರ್ ಆ ಕಾಲದ ಐರೋಪ್ಯ ರಾಜಕಾರಣಿಗಳಲ್ಲಿ ಅತ್ಯಂತ ಸಮರ್ಥನಾಗಿದ್ದ. ಫ್ರಾನ್ಸಿನ ಪ್ರಾಯೋಗಿಕ ಬೆಂಬಲವೂ ಬ್ರಿಟನ್ನಿನ ನೈತಿಕ ಬೆಂಬಲವೂ ಇವನಿಗೆ ಅವಶ್ಯಕವಾಗಿತ್ತು. ಅವೆರಡನ್ನೂ ತಾನು ಪಡೆಯುವುದು ಮಹತ್ಸಾಧನೆಯೆಂದು ಇವನು ತಿಳಿದಿದ್ದ. ಇವನಿಗೆ ಫ್ರಾನ್ಸಿಗಿಂತ ಇಂಗ್ಲೆಂಡಿನ ಬಗ್ಗೆ ಹೆಚ್ಚಿನ ನಂಬಿಕೆಯಿತ್ತು. ಪೀಡ್‌ಮಾಂಟ್ ಅನುಸರಿಸಿದ್ದ ಇಂಗ್ಲಿಷ್ ಪಾರ್ಲಿಮೆಂಟರಿ ವಿಧಾನದ ಬಗ್ಗೆ ಇವನಿಗೆ ನಂಬಿಕೆಯಿತ್ತು. ಆದರೆ ಇಂಗ್ಲೆಂಡಿಗಿಂತ ಫ್ರಾನ್ಸಿನ ಬೆಂಬಲದ ಆವಶ್ಯಕತೆ ಹೆಚ್ಚಿನದಿತ್ತು ಎಂಬುದನ್ನು ಅರಿತ್ತಿದ್ದ. ಏಕೆಂದರೆ ಆಸ್ಟ್ರಿಯನ್ನರನ್ನು ಸೋಲಿಸುವ ಸೈನಿಕ ಶಕ್ತಿ ಫ್ರಾನ್ಸಿನವರಲ್ಲಿ ಮಾತ್ರವಿದೆ ಎಂಬುದನ್ನೂ ಅರಿತ್ತಿದ್ದ. ಗಾರಿಬಾಲ್ಡಿಯಿಂದ ಅಪನಂಬಿಕೆಗೆ ಗುರಿಯಾಗಿದ್ದ ಮತ್ತು ಮ್ಯಾಟ್ಸಿನಿಯಿಂದ ತಿರಸ್ಕೃತನಾಗಿದ್ದ ಆತ ಎಂಟುವರ್ಷಗಳ ವಿಶೇಷ ರಾಯಭಾರ ಪ್ರಯತ್ನದಿಂದ ಕೊನೆಗೂ ಯಶಸ್ಸು ಗಳಿಸಿದ.

ಕ್ಯಾವರ್ ಪಶ್ಚಿಮ ರಾಷ್ಟ್ರಗಳ ವಿಶ್ವಾಸ ಪಡೆಯುವುದರಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟ. 1854ರ ಡಿಸೆಂಬರಿನಲ್ಲಿ ಕ್ರಿಮಿಯನ್ ಯುದ್ಧದಲ್ಲಿ ಫ್ರಾನ್ಸ್ ಹಾಗೂ ಇಂಗ್ಲೆಂಡ್‌ಗಳೊಡನೆ ಸಾಧಿಸಿದ ಮಿತ್ರತ್ವ ಮುಖ್ಯವಾದದ್ದು. ಇಟಲಿಯವರಿಗೆ ಕ್ರಿಮಿಯದಲ್ಲಿ ಆಸಕ್ತಿಯಿರಲಿಲ್ಲ. ಆದರೂ ಆತನ ಸೇನೆ ಸ್ತುತ್ಯಾರ್ಹಸೇವೆ ಸಲ್ಲಿಸಿತು. 1856ರ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಇಟಲಿಯ ದುಸ್ಥಿತಿಯನ್ನು ಕ್ಯಾವರ್ ವರ್ಣಿಸಿದಾಗ, ಇವನಿಗೆ ಪಶ್ಚಿಮದ ರಾಷ್ಟ್ರಗಳ ನೈತಿಕ ಬೆಂಬಲ ದೊರಕಿತು. 1858ರ ಜುಲೈನಲ್ಲಿ 3ನೆಯ ನೆಪೋಲಿಯನ್ನನನ್ನು ಕ್ಯಾವರ್ ಸಂಧಿಸಿ, ಆಸ್ಟ್ರಿಯದ ವಿರುದ್ಧ ಹೋರಾಡಲು ಅವನ ಬೆಂಬಲ ಪಡೆದ. ಸ್ವಯಂಸೇವಕ ರಾಷ್ಟ್ರಪ್ರೇಮಿಗಳು ಗಾರಿಬಾಲ್ಡಿಯ ನಾಯಕತ್ವದಲ್ಲಿ, ಆಸ್ಟ್ರಿಯವನ್ನು ಯುದ್ಧಕ್ಕೆ ಪ್ರೇರೇಪಿಸಿ, ನೆಪೋಲಿಯನ್ ತನ್ನ ಮಾತನ್ನುಳಿಸಿಕೊಳ್ಳುವಂತೆ ಮಾಡಬೇಕಿತ್ತು. ಇಂಗ್ಲೆಂಡ್ ಯುರೋಪಿನಲ್ಲಿ ನೆಪೋಲಿಯನ್ನನ ಉತ್ಕಟಾಕಾಂಕ್ಷೆಗಳು ನೆರವೇರದಿರಲು ಪ್ರಯತ್ನಿಸಿ, ಯುದ್ಧವನ್ನು ತಡೆಗಟ್ಟಲು ಪ್ರಯತ್ನಿಸುತ್ತಿತ್ತು. ಕ್ಯಾವರನ ಕಾತರ ಹೆಚ್ಚಿತ್ತು. ಪ್ರಷ್ಯ ರಷ್ಯಗಳೆರಡೂ ಹೊಸ ರಾಜನ ಬಗ್ಗೆ ಸಂಶಯ ಭಾವನೆ ಹೊಂದಿದ್ದುವು. ಈ ಸಂಚಿನ ವಿರುದ್ಧ ಫ್ರಾನ್ಸಿನ ಕೆಥೊಲಿಕರ ಒಪ್ಪಿಗೆಯಿರಲಿಲ್ಲ. 1859ರ ಏಪ್ರಿಲಿನಲ್ಲಿ ಆಸ್ಟ್ರಿಯ ಪೀಡ್‌ಮಾಂಟ್‌ಗೆ ಕೊನೆಯೆಚ್ಚರಿಕೆ ನೀಡಿತು. ಉತ್ತರ ಇಟಲಿಯಲ್ಲಿ ಮತ್ತೊಮ್ಮೆ ಫ್ರೆಂಚ್ ಸೇನೆ ಆಗಮಿಸಿ ಆಸ್ಟ್ರಿಯವನ್ನು ಸೋಲಿಸಿತು. ಯುದ್ಧ ಕಳೆದ ಎರಡು ವಾರಗಳ ಅನಂತರ ಯುದ್ಧವಿರಾಮಕ್ಕೆ ಸಹಿ ಬಿತ್ತು. ಕ್ಯಾವರ್ ರಾಜೀನಾಮೆ ನೀಡಿದನಾದರೂ ಟ್ಯುರಿನ್‌ನಲ್ಲಿ ಮತ್ತೆ ಅಧಿಕಾರಕ್ಕೆ ಬಂದ. 1860ರ ಮೊದಲ ಭಾಗದ ವೇಳೆಗೆ ಇಟಲಿಯ ಸಾಮ್ರಾಜ್ಯವೊಂದು ಉತ್ತರದಲ್ಲಿ ಸ್ಥಾಪಿತವಾಗಿತ್ತು. ಆದರೆ ಆಸ್ಟ್ರಿಯದ ವಶದಲ್ಲಿ ವೆನಿಷಿಯ ಇತ್ತು. ಉತ್ತರ ಮತ್ತು ಪೂರ್ವದಲ್ಲಿ ಪೋಪಧಿಕಾರದ ರಾಜ್ಯಗಳಿದ್ದುವು. ಈ ಪರ್ಯಾಯದ್ವೀಪದ ಏಕತೆಯನ್ನು ಸಾಧಿಸಲು ಗಾರಿಬಾಲ್ಡಿಯೂ ನೆರವಾದ. 1860ರ ಮೇನಲ್ಲಿ ಸಾವಿರ ಜನ ಕೆಂಪು ಅಂಗಿಯವರು ಜಿನೋವದ ಬಳಿ ಇರುವ ಕ್ವಾರ್ಟೊದಿಂದ ಸಿಸಿಲಿಗೆ ಯಾನ ಮಾಡಿದಾಗ ಈ ಕಾರ್ಯ ಪೂರೈಸಿತು. ಈ ಬಾರಿ ಮೆಡಿಟರೇನಿಯನ್ನನ್ನು ಹತೋಟಿಯಲ್ಲಿಟ್ಟುಕೊಂಡಿದ್ದ ಇಂಗ್ಲೆಂಡಿನ ಬೆಂಬಲ ಅತ್ಯಾವಶ್ಯಕವಾಗಿತ್ತು. ಫ್ರಾನ್ಸಿನ ಮೇಲೆ ಹೆಚ್ಚು ಅವಲಂಬಿತವಾಗದೆ ಇಟಲಿ ಏಕೀಕರಣಗೊಂಡದ್ದು ಇಂಗ್ಲಿಷ್ ರಾಯಭಾರಿಗೆ ಒಪ್ಪಿಗೆಯಾಗಿದ್ದದ್ದರಿಂದ ಮತ್ತು ಬ್ರೌನಿಂಗ್ ಹಾಗೂ ಇತರ ಲೇಖಕರ ಪ್ರಭಾವದಿಂದ ಇಟಲಿಯ ಪರವಾಗಿ ಇಂಗ್ಲೆಂಡ್ ಮುಂದೆ ಬಂತು.

ಸಿಸಿಲಿಯ ಮೂಲಕ ಗಾರಿಬಾಲ್ಡಿ ಬಹು ತ್ವರಿತಗತಿಯಿಂದ ಮುನ್ನುಗ್ಗಿದ. ಆಗಸ್ಟ್‌ನಲ್ಲಿ ಮುಖ್ಯ ಭೂಪ್ರದೇಶಕ್ಕೆ ಬಂದ. ಬ್ರಿಟಿಷ್ ಬೆಂಬಲದಿಂದ ವೆನಿಸ್ ಮತ್ತು ರೋಮ್‌ಗಳೆರಡನ್ನು ಬಿಟ್ಟು, ಕೊನೆಗೆ ಇಟಲಿಯ ಏಕೀಕರಣವಾಯಿತು. 1861ರ ಜೂನ್‌ನಲ್ಲಿ ಹಠಾತ್ತನೆ ಕ್ಯಾವರ್ ಕಾಲವಾದಾಗ ಹೆಚ್ಚಿನ ಕಾರ್ಯ ಮುಗಿದಿತ್ತು. ಆದರೆ ಇಟಲಿ ಎದುರಿಸಬೇಕಾದ ಸಮಸ್ಯೆಗಳು ಅನೇಕವಿದ್ದುವು. ಇಟಲಿಯ ಏಕೀಕರಣ ಹಾಗೂ ಸ್ವಾತಂತ್ರ್ಯ ಚಳವಳಿಯ ಫಲವಾದ ಅಂಥ ವ್ಯಕ್ತಿಯನ್ನು ಇಟಲಿ ಮತ್ತೆ ಪಡೆಯಲಿಲ್ಲ.

ಹೊಸ ರಾಜ್ಯದ ಆರಂಭದ ತೊಂದರೆಗಳು ಕೇವಲ ಏಕೀಕರಣದಿಂದುದ್ಭವಿಸಿದ ತೊಂದರೆಗಳಾಗಿದ್ದುವು. ಆರಂಭದಿಂದಲೂ ಇದು ಅಪಾರವಾದ ಸಾಲದ ಹೊರೆ ಹೊತ್ತಿತ್ತು. ಶಕ್ತಿಯುತ ಭೂಬಲ ಹಾಗೂ ನೌಕಾಬಲದ ಆವಶ್ಯಕತೆಯಿತ್ತು.

ಮುಂದಿನ ದಶಕದಲ್ಲಿನ ಘಟನೆಗಳು ಇಟಲಿಗೆ ಅಗೌರವ ತರುವಂಥವು. 1862ರ ಬೇಸಗೆಯಲ್ಲಿ ಬಂಡಾಯವೊಂದರ ಮೂಲಕ ರೋಮನ್ನು ವಶಪಡಿಸಿಕೊಳ್ಳಲು ಗಾರಿಬಾಲ್ಡಿ ಪ್ರಯತ್ನಿಸಿದ. ಆದರೆ ಪೋಪ್‌ಗೆ ಫ್ರೆಂಚ್ ಗ್ಯಾರಿಸನ್ನಿನ ಬೆಂಬಲವಿತ್ತು. ಈ ದಂಗೆಯನ್ನು ಇಟಲಿಯ ಸರ್ಕಾರ ಅಡಗಿಸಿತು. 1866ರಲ್ಲಿ ಪ್ರಷ್ಯ ಹಾಗೂ ಆಸ್ಟ್ರಿಯಗಳ ನಡುವೆ ಯುದ್ಧ ಆರಂಭವಾದಾಗ, ವೆನಿಸ್‌ನ್ನು ವಶಪಡಿಸಿಕೊಳ್ಳಲು ಒಂದು ಅವಕಾಶ ದೊರಕಿಸಿಕೊಟ್ಟಂತಾಯಿತು. ಆದರೆ ಇಟಲಿಯ ಸೇನೆಯ ಕಾರ್ಯಾಚರಣೆ ಯಶಸ್ವಿಯಾಯಿತು. ಕಸ್ಟೋಜಾದಲ್ಲಿ ಇಟಲಿಯ ಭೂಸೇನೆ 1866ರ ಜೂನ್‌ನಲ್ಲಿ ಸೋತುಹೋಯಿತಲ್ಲದೆ ನೌಕಾಸೇನೆ ಏಡ್ರಿಯಾಟಿಕ್‌ನ ಲಿಸ್ಸ್‌ದಲ್ಲಿ ಆಸ್ಟ್ರಿಯನ್ ನೌಕಾಸೇನೆಯಿಂದ ಸೋತಿತು. ಆಸ್ಟ್ರಿಯನ್ನರನ್ನು ಸೋಲಿಸಿದ್ದರಿಂದ ವೆನಿಸ್ ಇಟಲಿಯ ವಶವಾಯಿತು. ರೋಮಿನ ಕಥೆಯೂ ಇದೇ ರೀತಿಯಾಗಿದೆ. ಇಟಲಿ ಸರ್ಕಾರದ ಆಜ್ಞೆಗಳ ವಿರುದ್ಧ 1867ರ ಅಕ್ಟೋಬರ್‌ನಲ್ಲಿ ರೋಮನ್ನು ವಶಪಡಿಸಿಕೊಳ್ಳಲು ಗಾರಿಬಾಲ್ಡಿ ಎರಡನೆಯ ಪ್ರಯತ್ನ ಮಾಡಿದ. ಮತ್ತೊಮ್ಮೆ ಫ್ರೆಂಚ್ ಸೈನ್ಯದ ಬೆಂಬಲ ಹೊಂದಿದ್ದ ಪೋಪ್ ಸೈನ್ಯಗಳು ಅವನನ್ನು ಮಂಟಾನಾದಲ್ಲಿ ಸೋಲಿಸಿದುವು. ಆದಾಗ್ಯೂ ಮೂರೇ ವರ್ಷಗಳ ಅನಂತರ 1870ರಲ್ಲಿ ಫ್ರಾಂಕೊ-ಜರ್ಮನ್ ಯುದ್ಧ ಆರಂಭವಾದಾಗ ಇಟಲಿ ರೋಮನ್ನು ಆಕ್ರಮಿಸಿಕೊಳ್ಳಲು ಸಾಧ್ಯವಾಯಿತು. ರಾಜಕೀಯ ಏಕತೆ ಈಗ ಸಂಪೂರ್ಣಗೊಂಡಿದ್ದು, ಸರ್ಕಾರ 1871ರ ಜೂನ್‌ನಲ್ಲಿ ಫ್ಲಾರೆನ್ಸ್‌ನಿಂದ ರೋಮ್‌ಗೆ ಬಂತು.

**ಸಂವಿಧಾನಬದ್ಧ ರಾಜ್ಯವ್ಯವಸ್ಥೆ:** ನಾವು ಇಟಲಿಯನ್ನು ರಚಿಸಿದೆವು. ಈಗ ನಾವು ಇಟಲಿಯ ಜನತೆಯನ್ನು ಸೃಷ್ಟಿಸಬೇಕು. ಎಂದು ಡಿ ಅಜೆಗ್ಲಿಯೊ ಸಾರಿದ. ರಾಜಕೀಯ ಏಕೀಕರಣದ ಅನಂತರ ಹೊಸ ದೇಶ ಎದುರಿಸಬೇಕಾಗಿದ್ದ ಸಮಸ್ಯೆಗಳಲ್ಲಿ ಇದೂ ಒಂದು. ರಾಷ್ಟ್ರೀಯ ಬಂಡಾಯದಲ್ಲಿ ಪಾಲ್ಗೊಂಡಿದ್ದವರು ಬಹು ಕಡಿಮೆ ಜನ. ಗಾರಿಬಾಲ್ಡಿಯ

ಸ್ವಯಂಸೇವಕರು ಬಹು ಕಡಿಮೆಯಾಗಿದ್ದರೂ ನೆಪೊಲಿಟನ್ ದೊರೆಗಳ ರಾಜ್ಯಗಳನ್ನು ಪದಚ್ಯುತಿಗೊಳಿಸುವಷ್ಟು ಬಲಿಷ್ಠರಾಗಿದ್ದರೂ ಆಸ್ಟ್ರಿಯನ್ನರ ವಿರುದ್ಧ ಅಷ್ಟು ಪರಿಣಾಮ ಕಾರಿಯಾಗಿರಲಿಲ್ಲ. ಪೀಡ್ ಮಾಂಟಿನ ಸೇನೆ ಮುಖ್ಯಪಾತ್ರ ವಹಿಸಿತ್ತು. ಫ್ರೆಂಚರು ಹೆಚ್ಚು ಹೋರಾಡಿದ್ದರು. ಆದರೆ ಬ್ರಿಟನ್ನಿನ ಅಪ್ರತ್ಯಕ್ಷ ನೆರವೂ ಮುಖ್ಯವಾಗಿತ್ತು.

ಮ್ಯಾಟ್ಸಿನಿಯ ಬೋಧನೆಗಳನ್ನು ಅರ್ಥ ಮಾಡಿಕೊಂಡಿದ್ದವರ ಸಂಖ್ಯೆ ಬಹು ಕಡಿಮೆ. ಆದರೆ ಆತನ ಬಗ್ಗೆ ಅಭಿಮಾನ ಹೊಂದಿದ್ದವರನೇಕ. ಏಕೀಕರಣಕ್ಕಾಗಿ ಇಟಲಿಯ ಜನ ಮತ ನೀಡಿದ್ದರು. ಆದರೆ ಹೊಸತರಲ್ಲಿ ಪ್ರೋತ್ಸಾಹಿಸಿ ಅನಂತರ ತಿರಸ್ಕಾರಭಾವದಿಂದ ನೋಡುವುದು ಇಟಲಿಯ ಪರಂಪರೆಯ ವಿಶೇಷ. ಇಟಲಿಯನ್ನು ಅರಿತಿದ್ದ, ಪ್ರೀತಿಸುತ್ತಿದ್ದ ಕ್ಯಾವರ್ ಕೇವಲ ಇಟಲಿಯ ಸ್ವಾತಂತ್ರ್ಯವನ್ನು ಅಪೇಕ್ಷಿಸಿ ಹೋರಾಡಿದವನೇ ವಿನಾ ಪರ್ಯಾಯದ್ವೀಪದ ಉತ್ತರ ದಕ್ಷಿಣಗಳನ್ನು ಒಟ್ಟುಗೂಡಿಸಲು ಪ್ರಯತ್ನಿಸಲಿಲ್ಲ. ಗಾರಿಬಾಲ್ಡಿ ಕಾರ್ಯತಃ 1860ರಲ್ಲಿ ಉತ್ತರ ದಕ್ಷಿಣ ಇಟಲಿಗಳ ಏಕೀಕರಣಕ್ಕಾಗಿ ಯತ್ನಿಸಿದ. ಕಡುಬಡತನ ಹಾಗೂ ದರೋಡೆಕಾರ ಪರಂಪರೆಯ ಜೊತೆಗೆ ದಾಸ್ಯದಿಂದ ಹೊರಹೊಮ್ಮುತ್ತಿದ್ದ ದಕ್ಷಿಣ ಇಟಲಿ, ಬಹು ಶೀಘ್ರವಾಗಿ ಕೈಗಾರಿಕೆಗಳಿಂದ ಮುಂದುವರಿಯುತ್ತಿದ್ದ ಪ್ರಗತಿಪೂರ್ಣ ಉತ್ತರ ಇಟಲಿಯಿಂದ ಭಿನ್ನವಾಗಿದೆ ಎಂಬುದನ್ನು ಕ್ಯಾವರ್ ಅರಿತಿದ್ದ. 1860ರ ಅನಂತರ ದಕ್ಷಿಣ ಇಟಲಿಯನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಹಣ ವ್ಯಯಿಸುತ್ತಿದ್ದುದನ್ನು ಉತ್ತರ ಇಟಲಿ ವಿರೋಧಿಸಿತು. ದಕ್ಷಿಣದವರು ನೌಕರಶಾಹಿ ವ್ಯವಸ್ಥೆಯನ್ನು ವಿರೋಧಿಸಿದರು.

ಇಟಲಿಯ ಹೊಸ ಸರ್ಕಾರ ಆರ್ಥಿಕಾಭಿವೃದ್ಧಿಯ ಪ್ರಯತ್ನಗಳನ್ನು ನಡೆಸಿತು. ಟಸ್ಕನ್ ದೇಶಭಕ್ತ ರಿಕಾಸೊಲಿ, ಕ್ಯಾವರ್‌ನ ಶಿಷ್ಯ ಮಿಂಗೆಟ್ಟಿ ಹಾಗೂ ರೋಮನ್ನು ವಶಪಡಿಸಿಕೊಳ್ಳುವುದರಲ್ಲಿ ವಿಜಯಿಯಾದ ಲಾಂಜಾ ಇವರೆಲ್ಲರೂ ನೀತಿವಂತರಾಗಿದ್ದರು. ಈ ಕಾಲದಲ್ಲಿ ಇಟಲಿಯ ಸಂಸತ್ತು ಭ್ರಷ್ಟಾಚಾರಕ್ಕೆ ಹೆಸರಾಗಿತ್ತು. ಮುಸ್ಸೊಲಿನಿ ಹೊಸರೀತಿಯ ರಾಜ್ಯ ಸ್ಥಾಪಿಸುವವರೆಗೆ ಈ ಸ್ಥಿತಿ ಮುಂದುವರಿಯಿತು.

**ವಿದೇಶ ಹಾಗೂ ವಸಾಹತು ನೀತಿ:** ಇಟಲಿಯ ಏಕೀಕರಣವನ್ನೂ ಸ್ವಾತಂತ್ರ್ಯವನ್ನೂ ಬಯಸಿದ್ದ ಫ್ರಾನ್ಸ್ ಇಟಲಿಯತ್ತ ಯಾವಾಗಲೂ ಸಂಶಯ ಹಾಗೂ ವೈರಭಾವ ತಳೆದಿತ್ತು. 1878ರ ಬರ್ಲಿನ್ ಕಾಂಗ್ರೆಸ್‌ನಲ್ಲಿ ಇಟಲಿಗೆ ಯಾವ ಮಿತ್ರರಾಷ್ಟ್ರವೂ ಇರಲಿಲ್ಲ. ಈ ಸಮ್ಮೇಳನದ ತೀರ್ಮಾನದನ್ವಯ 1881ರಲ್ಲಿ ಫ್ರಾನ್ಸ್ ಟ್ಯೂನಿಸ್‌ನ ರಕ್ಷಣೆಗೆ ಬಂತು. ಈ ತಿರಸ್ಕಾರದಿಂದ ಇಟಲಿ ಸರ್ಕಾರ ಬಿಸ್ಮಾರ್ಕನ ಬಂಧನಕ್ಕೊಳಗಾಯಿತಲ್ಲದೆ 1882ರಲ್ಲಿ ಆಸ್ಟ್ರಿಯ, ಜರ್ಮನಿ ಮತ್ತು ಇಟಲಿಗಳು ಪರಸ್ಪರ ಸ್ನೇಹದ ಒಪ್ಪಂದ ಮಾಡಿಕೊಂಡುವು. ಇಟಲಿಗೆ ಈ ಮಿತ್ರತ್ವ ಅಷ್ಟು ಸುಲಭವೂ ಆಗಿರಲಿಲ್ಲ, ಪ್ರಿಯವೂ ಆಗಿರಲಿಲ್ಲ. 1914ರ ವರೆಗೆ ಅದು ಕೇವಲ ಕಾಗದದ ಮೇಲಿದ್ದಿತೇ ವಿನಾ ಪರಿಣಾಮಕಾರಿಯಾಗಿರಲಿಲ್ಲ. ಐತಿಹಾಸಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ವಾಣಿಜ್ಯ ದೃಷ್ಟಿಯಿಂದ ಇಟಲಿ ಮಧ್ಯರಾಷ್ಟ್ರಗಳಿಗಿಂತ ಫ್ರಾನ್ಸಿನೊಡನೆ ಹೆಚ್ಚು ಸಂಬಂಧ ಹೊಂದಿತ್ತು. 1887ರಲ್ಲಿ ಫ್ರಾನ್ಸಿಸ್ಕೊ ಕ್ರಿಸ್ಪಿ ಕೌನ್ಸಿಲ್‌ನ ಅಧ್ಯಕ್ಷನಾದ. ಇವನು ಇಟಲಿಗೆ ವಸಾಹತು ವಿಸ್ತರಣ ತತ್ತ್ವವನ್ನು ನೀಡಿದ. ಕ್ರಿಸ್ಪಿಯೂ ಸಿಸಿಲಿಯವನಾಗಿದ್ದ, ಮ್ಯಾಟ್ಸಿನಿಯ ಶಿಷ್ಯನಾಗಿದ್ದ, ಗಾರಿಬಾಲ್ಡಿಯ ಆಪ್ತನಾಗಿದ್ದ. ಇವನು ಬಲಪಕ್ಷಕ್ಕೆ ಬಂದ. ಅಂದರೆ ರಾಜವ್ಯವಸ್ಥೆಯನ್ನು ಒಪ್ಪಿಕೊಂಡಿದ್ದ ನೆಂದಾಯಿತು.

ಆಫ್ರಿಕದ ಉತ್ತರ ತೀರದಲ್ಲಿ ನೆಲೆಸಿದ್ದ ಐರೋಪ್ಯ ವ್ಯಾಪಾರಗಾರರ ಪೈಕಿ ಇಟಲಿಯವರೇ ಹೆಚ್ಚು. ಇವರಿಗೆ ಕೆಂಪುಸಮುದ್ರದ ಮೇಲೆ ಮಸ್ಸಾವದಲ್ಲಿ 1882ರಲ್ಲಿ ಹತೋಟಿ ದೊರಕಿತು. ಕ್ರಿಸ್ಪಿಯಿಂದ 1890ರಲ್ಲಿ ಎರಿಟ್ರಿಯ ವಸಾಹತು ಸ್ಥಾಪನೆಯಾಯಿತು. ಇವನು ಬ್ರಿಟಿಷ್ ಸಮ್ಮತಿ ಪಡೆದು ಇಲ್ಲಿಂದ ಸೋಮಾಲಿ ಲ್ಯಾಂಡ್ ತೀರದವರೆಗೆ ಮುನ್ನುಗ್ಗಿದ. ಕ್ರಿಸ್ಪಿ ದೊಡ್ಡ ಸಾಮ್ರಾಜ್ಯ ಸ್ಥಾಪಿಸುವ ಆಕಾಂಕ್ಷೆಯುಳ್ಳವನಾದ. ಅಬಿಸೀನಿಯದಲ್ಲಿ ಸಾಮ್ರಾಟನ ಬಗ್ಗೆ ಜನರಲ್ಲಿದ್ದ ಅಸಮಾಧಾನದ ಉಪಯೋಗ ಪಡೆದುಕೊಂಡು 1895ರಲ್ಲಿ ಟೈಗರ್ ಪ್ರಾಂತ್ಯವನ್ನು ಎರಿಟ್ರಿಯ ವಸಾಹತಿಗೆ ಸೇರಿಸಿರುವುದಾಗಿ ಕ್ರಿಸ್ಪಿ ಘೋಷಿಸಿದ. ಆದರೆ 1895 ಡಿಸೆಂಬರಿನಲ್ಲಿ ದೊಡ್ಡ ಸೇನೆಯೊಡನೆ ಅಬಿಸೀನಿಯದ ದೊರೆ ಮೆನೆಲಿಕ್ ಅಂಬಾ ಅಲಗಿನಲ್ಲಿ ಮುಂಬರುತ್ತಿದ್ದ ಸೈನ್ಯವನ್ನೂ ಸೋಲಿಸಿದ. 1896 ಮಾರ್ಚಿಯಲ್ಲಿ ಟೈಗರಿನಲ್ಲಿನ ಅಡೊವದಲ್ಲಿ ಇಟಲಿಯ ಮುಖ್ಯ ಸೈನ್ಯವನ್ನು ನಾಶಮಾಡಿದ.

ಅಡೂವ ಪರಾಭವ ಇಟಲಿಗೆ ಬಹು ದೊಡ್ಡ ಅಘಾತವನ್ನುಂಟುಮಾಡಿತು. ಸಂಪೂರ್ಣ ತಪ್ಪು ಕ್ರಿಸ್ಪಿಯದಾಗಿತ್ತು. ಸ್ವಲ್ಪ ಕಾಲಾನಂತರ ಕ್ರಿಸ್ಪಿ ಅವಮಾನದಿಂದ ಮೃತನಾದ. ಉತ್ತರ ಆಫ್ರಿಕದಲ್ಲಿ ಅವನ ತತ್ತ್ವ ತಿರುವು ಮುರುವಾಗಿ, ಎರಿಟ್ರಿಯ ಮತ್ತು ಸೋಮಾಲಿ ಲ್ಯಾಂಡ್‌ಗಳು ಮಾತ್ರ ಉಳಿದುಕೊಂಡುವು. ಹಾಗೂ ಸಾಮ್ರಾಜ್ಯ ಕ್ಷೀಣಿಸಿತು. ಸ್ವಲ್ಪ ಕಾಲದ ಅನಂತರ ರಾಜಕೀಯ ಹತೋಟಿ ಗಿಯೊಲಿಟಿಯ ವಶಕ್ಕೊಳಗಾಯಿತು.

**ಕೈಗಾರಿಕಾವಾದ ಮತ್ತು ಸಾಮ್ರಾಜ್ಯವಾದ:** ದಕ್ಷಿಣದ ಕೆಲವು ಭಾಗಗಳ ಹೊರತು, ಮಿಕ್ಕ ಭಾಗಗಳಲ್ಲಿನ ದೇಶದ ಆರ್ಥಿಕ ಅಭ್ಯುದಯ ಭರದಿಂದ ಸಾಗುತ್ತಿತ್ತು. 1880ರ ವೇಳೆಗೆ ಇಡೀ ಪರ್ಯಾಯದ್ವೀಪದಲ್ಲಿ ಸಂಪರ್ಕಸಾಧನವಾದ ರಾಷ್ಟ್ರೀಯ ರೈಲ್ವೆ ವ್ಯವಸ್ಥೆ ಏರ್ಪಟ್ಟಿತ್ತು. ಕಲ್ಲಿದ್ದಲಿನ ಹಾಗೂ ಕಬ್ಬಿಣದ ಅಭಾವದಿಂದ ಉತ್ತರದ ಭಾರಿ ಪ್ರಮಾಣದ ಕೈಗಾರಿಕೆಗಳು ಜರ್ಮನಿ ಮತ್ತು ಇಂಗ್ಲೆಂಡ್‌ಗಳಿಂದ ಆಮದು ಮಾಡಿಕೊಂಡ ಕಚ್ಚಾಪದಾರ್ಥಗಳ ಸಹಾಯದಿಂದ ಅಭಿವೃದ್ಧಿ ಹೊಂದುತ್ತಿದ್ದುವು. 1828ರ ವೇಳೆಗೆ ಪರ್ವತಗಳಿಂದ ಹರಿದುಬರುತ್ತಿದ್ದ ಜಲಶಕ್ತಿಯಿಂದ ಜಲವಿದ್ಯುತ್ತಿನ ಉತ್ಪಾದನೆ ಆರಂಭವಾಯಿತು. ಇದು ಮುಂದೆ ದೇಶದ ಪ್ರಗತಿಗೆ ಮುಖ್ಯವಾಗಿತ್ತು. ಇಟಲಿಯ ಜನಸಂಖ್ಯೆ 1860–1911ರ ವೇಳೆಗೆ ಶೇ.25ರಷ್ಟು ಹೆಚ್ಚಿತು. ಇಟಲಿಯ ಪ್ರಮುಖ ಕಾರ್ಯಗಳಲ್ಲಿ ಒಂದಾದ ವ್ಯವಸಾಯ ಕ್ಷೇತ್ರದಲ್ಲಿ ವೈಜ್ಞಾನಿಕ ಅಭಿವೃದ್ಧಿ ಉಂಟಾಗಿ, ಹೆಚ್ಚುತ್ತಿದ್ದ ಜನಸಂಖ್ಯೆಗೆ ಆಹಾರ ಪೂರೈಸುವುದರಲ್ಲಿ ಸಹಾಯ ಮಾಡಿತು. ಆದರೆ ಜನಸಂಖ್ಯೆಯ ಹೆಚ್ಚಳ ಆಹಾರದ ಉತ್ಪಾದನೆಯನ್ನೂ ಮೀರಿಸಿತ್ತು. ರೈತರ ಅತಿಶ್ರಮದ ದುಡಿಮೆಯಿದ್ದರೂ ದೇಶದ ಅನೇಕ ಭಾಗಗಳಲ್ಲಿ ನೆಲ ಫಲವತ್ತಾಗಿಲ್ಲದ್ದರಿಂದ ಜಮೀನಿನಿಂದ ದೊರೆಯುತ್ತಿದ್ದ ಉತ್ಪನ್ನ ಹೆಚ್ಚಾಗುವುದು ಸಾಧ್ಯವಿರಲಿಲ್ಲ. ದಕ್ಷಿಣದಲ್ಲಿನ ರೈತರು, ಅದರಲ್ಲೂ ವಿಶೇಷವಾಗಿ ಸಿಸಿಲಿಯ ರೈತರು, ಕಡುಬಡವರಾಗಿದ್ದರು, ಅವರಲ್ಲಿ ವ್ಯಾಪಕವಾಗಿ ಹರಡಿದ್ದ ರೋಗರುಜಿನಗಳ ಪರಿಹಾರಕ್ಕೆ ಯಾವುದೇ ಸೂಕ್ತ ಕ್ರಮ ಕೈಗೊಂಡಿರಲಿಲ್ಲ. ಉತ್ತರದವರ ಬೇಡಿಕೆಗಳನ್ನು ಪಾರ್ಲಿಮೆಂಟ್ ಬಹುಬೇಗ ಗಮನಿಸುತ್ತಿತ್ತು. ಏಕೆಂದರೆ, ಟ್ಯುರಿನ್ ಮತ್ತು ಮಿಲಾನ್‌ಗಳಲ್ಲಿ ಅಭ್ಯುದಯಗೊಳ್ಳುತ್ತಿದ್ದ ಕೈಗಾರಿಕೆಗಳಿಗೆ ಯಾವ ರೀತಿ ರೋಮ್‌ನಿಂದ ಸಹಾಯ ಪಡೆಯಬೇಕೆಂಬುದನ್ನು ಅಲ್ಲಿನ ಪ್ರಭಾವಿತ ಸದಸ್ಯರು ಅರಿತಿದ್ದರು. ಬೆಲೆಗಳು ಏರಿದುವು ಹಾಗೂ ರೈತರ ಪರಿಸ್ಥಿತಿ ಏಕೀಕರಣಕ್ಕೆ ಮುಂಚೆ ಇದ್ದ ಪರಿಸ್ಥಿತಿಗಿಂತಲೂ ಹದಗೆಟ್ಟಿತು. 1893–94ರಲ್ಲಿ ಸಿಸಿಲಿಯಲ್ಲಿ ಭೂಕಾರ್ಮಿಕರು ತಮ್ಮ ತಮ್ಮಲ್ಲೇ ಸಂಘಟನೆಯ ವ್ಯವಸ್ಥೆ ಮಾಡಿಕೊಂಡು ದಂಗೆಯೆದ್ದರು. ಕ್ರಿಸ್ಪಿ ಅತಿಕ್ರೌರ್ಯ ದಿಂದ ದಂಗೆಯನ್ನಡಗಿಸಿದ. ಆದರೆ ಈ ಬಾರಿ ಜನ ವಲಸೆ ಹೋಗಲಾರಂಭಿಸಿದ್ದು ದಕ್ಷಿಣದಿಂದ; ಉತ್ತರದಿಂದಲ್ಲ. ಈ ಸುರಕ್ಷಾಮಾರ್ಗಕ್ಕಾಗಿ ಸರ್ಕಾರ ಕೃತಜ್ಞವಾಗಿತ್ತು. ವರ್ಷೇ ವರ್ಷೇ ಲಕ್ಷಾಂತರ ಜನ ಇಟ್ಯಾಲಿಯನ್ನರು ಅಮೆರಿಕ ಅಥವಾ ಟ್ಯುನಿಸ್‌ನಂಥ ದೇಶಗಳಲ್ಲಿ ಕೆಲಸಮಾಡಲು ವಲಸೆ ಹೋದಾಗ ಉಂಟಾದ ನಷ್ಟ ರಾಷ್ಟ್ರೀಯತಾವಾದಿಗಳಿಗೆ ಅರ್ಥವಾಯಿತು. ಇಟಲಿಯ ರಾಷ್ಟ್ರಧ್ವಜದಡಿಯಲ್ಲಿ ನೆಲೆಸುತ್ತಿದ್ದ ಇಟಲಿಯ ವಸಾಹತುಗಳಿಗೆ ಬೇಡಿಕೆ ಹೆಚ್ಚಾಯಿತು.

ಕೈಗಾರಿಕೆಯೂ ವ್ಯವಸಾಯ ಕ್ಷೇತ್ರದಲ್ಲಿ ವೈಜ್ಞಾನಿಕ ವಿಧಾನಗಳ ಬಳಕೆಯೂ ಉತ್ತರ ಇಟಲಿಯ ಆರ್ಥಿಕ ವಿಸ್ತರಣೆಗೆ ಕಾರಣವಾದುವು. ಪಶ್ಚಿಮ ಯುರೋಪ್ ಹಾಗೂ ಇತರ ಪ್ರದೇಶಗಳಲ್ಲಿಯಂತೆಯೇ ಇಟಲಿಯಲ್ಲೂ ವರ್ಗಚೇತನವುಂಟಾಯಿತು. ಕಾರ್ಮಿಕವರ್ಗಗಳಲ್ಲಿ ಸಾಮಾಜಿಕ ಚಳವಳಿ ಉದ್ಭವಿಸಿತು. ಸಮಾಜವಾದ ಇಟಲಿಗೆ 1860ರಲ್ಲಿ ಬಂತು. ದಕ್ಷಿಣ ಹಾಗೂ ಉತ್ತರ ಇಟಲಿಗಳೆರಡರಲ್ಲೂ ತೀವ್ರವಾಗಿ ಮಾರ್ಕ್ಸ್‌ವಾದ ಪ್ರಗತಿಹೊಂದಿತು. ಉತ್ತರ ಇಟಲಿಯ ನಗರಗಳು ಮತ್ತು ಬೊಲೊನಿನ ಸುತ್ತಲಿನ ಪ್ರದೇಶಗಳಲ್ಲಿ ವಿಶೇಷವಾಗಿ ಸಾಮಾಜಿಕ ಗುಂಪುಗಳಿಗೆ 1871ರ ಪ್ಯಾರಿಸ್ ಕಮ್ಯೂನ್ ಸ್ಫೂರ್ತಿದಾಯಕವಾಯಿತು. ಯಾವುದೇ ಕ್ರಾಂತಿ ಐಹಿಕಧ್ಯೇಯಸಾಧನೆಗಾಗಿ ಮಾತ್ರವೇ ಆಗಬಾರದು; ಹಾಗೂ ಇಟಲಿಯ ಅಭ್ಯುದಯಕ್ಕೆ ಎಲ್ಲ ವರ್ಗಗಳೂ ನಿರಂತರವಾಗಿ ದುಡಿಯಬೇಕು–ಎಂಬ ಮ್ಯಾಟ್ಸಿನಿಯ ಬೋಧನೆಯನ್ನು ನಿಷೇಧಿಸಲಾಯಿತು.

1890ರಲ್ಲಿ ಇಟಲಿಯ ಸಮಾಜವಾದಿ ಪಕ್ಷ ಸ್ಥಾಪನೆಗೊಂಡಿತು. ಕೆಲವು ಗುಂಪುಗಳು ತೀವ್ರಗಾಮಿಗಳಂತೆ ವರ್ತಿಸುತ್ತಿದ್ದರೂ ರಾಷ್ಟ್ರಪಕ್ಷ ಮಾತ್ರ ಮಿತವಾದಿಗಳ ಪರವಾಗಿತ್ತು. ಅನಂತರದ ವರ್ಷಗಳಲ್ಲಿ ಅದು ವಾಮಪಕ್ಷಗಳಿಗೆ ಬೆಂಬಲ ನೀಡಿತು. ಇದರ ಮುಖ್ಯ ನಾಯಕರಾದ ಬೆಸ್ಸೊಲಿಟ ಮತ್ತು ಟುರಾಟ ಕ್ರಮೇಣ ಗಿಯೊಲಿಟಿಯೊಡನೆ ಮಿತ್ರತ್ವ ಬೆಳೆಸಿದರು. ಕಾರ್ಮಿಕ ಹಿತರಕ್ಷಣಾ ಕಾಯಿದೆಗಳು ಜಾರಿಗೆ ಬಂದವು. ಆದರೆ ಕೆಲವು ಪಾರ್ಲಿಮೆಂಟ್ ಸದಸ್ಯರು ಮತದಾನ ಪದ್ಧತಿಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಒತ್ತಾಯ ಮಾಡದಾದರು. 1882ರಲ್ಲಿ ಮತ ನೀಡಿಕೆಯ ನಿಯಮವನ್ನು ವಿಸ್ತರಿಸಿದ್ದಾಗ್ಯೂ ಜನಸಂಖ್ಯೆಯ ಕೇವಲ ಶೇ.6ರಷ್ಟು ಜನ ಮಾತ್ರ ಮತ ನೀಡಬಹುದಾಗಿತ್ತು. ಈ ಆವಶ್ಯಕ ಬೇಡಿಕೆಗೆ 1913ರವರೆಗೆ ಪುರಸ್ಕಾರ ದೊರಕಲಿಲ್ಲ. ಸಿಂಡಿಕಲಿಸ್ಟರ ನೇರ ಕಾರ್ಯಕ್ರಮಗಳೂ ಮುಷ್ಕರಗಳೂ ಹೆಚ್ಚಿದವು. ಪಾರ್ಲಿಮೆಂಟರಿ ವಿಧಾನವನ್ನು ಕಿತ್ತೊಗೆಯಲು ಬೋಧನೆ ನಡೆಯಿತು. ಗಾರಿಬಾಲ್ಡಿ ಹಾಗೂ ಅವನ ಕೆಂಪು ಅಂಗಿಯವರ ಗುಪ್ತ ಸಮಾಜಗಳ ಅನಾಯಕತೆಯ ಪರಂಪರೆ ಪುನಃ ಜನಿಸಿತು. ಇದರ ಪರಿಣಾಮವಾಗಿ ಫ್ಯಾಸಿಸಂ ವಿಜಯ ಗಳಿಸಿತು. ಮುಸ್ಸೊಲಿನಿ ಸಮಾಜವಾದಿಗಳ ಸಿಂಡಿಕಲಿಸ್ಟ್ ಗುಂಪಿಗೆ ಸೇರಿದವನಾಗಿದ್ದು ಸೊರೆಲ್‌ನ ಶಿಷ್ಯನಾಗಿದ್ದ. 1912ರ ವೇಳೆಗೆ ಅವಂತಿ ಪತ್ರಿಕೆಯ ಸಂಪಾದಕನಾಗಿ, ಪಾರ್ಲಿಮೆಂಟರಿ ರಾಜ್ಯವನ್ನು ಬಹಿರಂಗವಾಗಿ ಖಂಡಿಸುತ್ತಿದ್ದ; ಟ್ಯುರಾಟಿ ಹಾಗೂ ಅವನ ಪಾರ್ಲಿಮೆಂಟರಿ ಪಕ್ಷವನ್ನು ವಿರೋಧಿಸಿದ್ದ.

20ನೆಯ ಶತಮಾನದ ಆರಂಭದಲ್ಲಿ ಇಟಲಿಯಲ್ಲಿ ಮುಖ್ಯವಾಗಿದ್ದ ಮತ್ತೊಂದು ಚಳವಳಿಯೆಂದರೆ ರಾಷ್ಟ್ರೀಯತಾವಾದಿಗಳದು. ಇವರು ಸಹ ಸಿಂಡಿಕಲಿಸ್ಟ್‌ಗಳಂತೆ ತೀವ್ರಗಾಮಿ ದೃಷ್ಟಿ ಹೊಂದಿದ್ದರು. ಸಿಂಡಿಕಲಿಸ್ಟ್ ಮತ್ತು ಪಾರ್ಲಿಮೆಂಟರಿ ಸಮಾಜವಾದಿಗಳ ಪಂಗಡದಿಂದ ಬೇರಾದ ರಾಷ್ಟ್ರೀಯತಾವಾದಿಗಳ ಸಂಘ 1908ರಲ್ಲೇ ಸ್ಥಾಪಿತವಾಯಿತು. ರಾಷ್ಟ್ರೀಯತಾ ವಾದಿಗಳ ಸಿದ್ಧಾಂತಗಳು ಮುಖ್ಯವಾಗಿರಲಿಲ್ಲ ಅಥವಾ ಸ್ವಂತದ್ದೂ ಆಗಿರಲಿಲ್ಲ. 1914ರ ಯುದ್ಧದವರೆಗೆ ಯುರೋಪಿನಲ್ಲಿ ಪ್ರಚಲಿತವಾಗಿದ್ದ ಉದ್ಧಟತನದ ರಾಷ್ಟ್ರವಾದದ ಸಿದ್ಧಾಂತಗಳಂತೆಯೇ ಇದ್ದುವು. ಆದರೆ ರಾಷ್ಟ್ರೀಯತಾವಾದಿಗಳು ಸಿಂಡಿಕಲಿಸ್ಟರು ಮತ್ತು

ಮುಸ್ಸೋಲಿನಿಯ ತತ್ತ್ವಗಳ ನಡುವೆ ಪರಸ್ಪರ ಸಹಾನುಭೂತಿಯ ಬಂಧನವೊಂದಿದ್ದಿತು ಎಂಬುದನ್ನರಿಯುವುದು ಅತಿಮುಖ್ಯ. ಮೊದಲಿನ ಎರಡೂ ಅನಂತರದ ಫ್ಯಾಸಿಸ್ಟ್ ಚಳವಳಿಯಲ್ಲಿ ಒಂದಾದುವು. ಬಡತನ, ಶಕ್ತಿಯುತ ರಾಷ್ಟ್ರಗಳ ಮೇಲೆ ಅನಿವಾರ್ಯ ಅವಲಂಬನ, ಶಕ್ತಿಯುತ ಹಾಗೂ ಸಂಪದ್ಯುಕ್ತ ರಾಷ್ಟ್ರಗಳಿಂದ ಶೋಷಣೆ–ಇವುಗಳಿಗೆ ಒಳಗಾಗಿದ್ದ ಇಟಲಿಯೂ ಶ್ರಮಜೀವಿ ರಾಷ್ಟ್ರವಾಗಿತ್ತು.

ಗಿಯೊಲಿಟಿ 1911ರಲ್ಲಿ, ಟ್ರಿಪೊಲಿ ಹಾಗೂ ಸಿರೆನೈಕಗಳನ್ನು ವಶಮಾಡಿಕೊಳ್ಳಲು ತುರ್ಕಿಯ ವಿರುದ್ಧವಾಗಿ ಯುದ್ಧಕ್ಕೆ ಹೋದ. ಈ ಎರಡರ ಜೊತೆಗೆ ಡೊಡೆಕನೀಸ್ ದ್ವೀಪ ಆಕ್ರಮಿಸಿದ. ಆ ಕಾರ್ಯದಲ್ಲಿ ಆತನಿಗೆ ಸರ್ಕಾರದ ಬೆಂಬಲವಿತ್ತು. ಮುಸ್ಸೋಲಿನಿಯೂ ಸೇರಿ ಅನೇಕ ಸಮಾಜವಾದಿಗಳು ಈ ಯುದ್ಧವನ್ನು ಸಾಮ್ರಾಜ್ಯಶಾಹಿಯೆಂದು ತಿರಸ್ಕರಿಸಿದರೂ ಫ್ರಾನ್ಸ್ ಹಾಗೂ ಬ್ರಿಟನ್‌ಗಳೊಡನೆ ಉತ್ತರ ಆಫ್ರಿಕದಲ್ಲಿ ತನ್ನ ಶಕ್ತಿ ಸ್ಥಾಪಿಸಲು ಸಾಧ್ಯವಾಗಿದ್ದುದರಿಂದ ಹಾಗೂ ತಮ್ಮ ತಾಯ್ನಾಡಿನ ತೀರಕ್ಕೆ ಎದುರಾಗಿದ್ದ ಕರಾವಳಿ ಪ್ರದೇಶ ವಿದೇಶೀಯರಿಗೆ ಹೋಗದಂತೆ ತಡೆಗಟ್ಟಿದ್ದರಿಂದ ಜನರಲ್ಲಿ ಸಾಮಾನ್ಯವಾಗಿ ತೃಪ್ತಿಯಿತ್ತು. ಈ ಯುದ್ಧದಲ್ಲಿ ಇಟಲಿಯ ಸೈನಿಕರ ಸಾಧನೆಯೇನೂ ಗಮನಾರ್ಹವಾದದ್ದಲ್ಲ. ಏಕೆಂದರೆ ತುರ್ಕಿಯವರು ತಾಯ್ನಾಡಿನ ಸಮೀಪದಲ್ಲಿದ್ದ ಬಾಲ್ಕನ್ ರಾಜ್ಯಗಳವರೊಡನೆ ಯುದ್ಧಮಾಡುವುದರಲ್ಲಿ ನಿರತರಾಗಿದ್ದರು. ಆದಾಗ್ಯೂ ಕೊನೆಗೆ ಇಟಲಿಯವರು ವಿಜಯಶಾಲಿಗಳಾದರು.

ಈ ವಿಜಯ ಬಹಳ ಅಲ್ಪ ಆರ್ಥಿಕ ಫಲ ನೀಡಿತು. ಅದು ರಾಷ್ಟ್ರೀಯತಾವಾದಿಗಳ ದಾಹವನ್ನಡಗಿಸಲಿಲ್ಲ. ರಾಷ್ಟ್ರೀಯತಾವಾದಿಗಳು ನಿಜವಾಗಿ ಆಸಕ್ತಿಹೊಂದಿದ್ದದ್ದು ಇಟಾಲಿಯಾ ಇರ್ರೆಡೆಂಟದಲ್ಲಿ. ಇದು ಮಾತೃಭೂಮಿಯ ಭಾಗವಾಗಿ ಇನ್ನೂ ವಿದೇಶೀಯರ ಆಳ್ವಿಕೆಯಲ್ಲೇ ಇತ್ತು. ಇಟಲಿಯ ಜನರೇ ಹೆಚ್ಚಾಗಿದ್ದ ಟ್ರೆಂಟಿನೋ ಕಣಿವೆ, ಟ್ರಿಯಸ್ಟೆ ನಗರ ಹಾಗೂ ಫ್ರಿಯುಲಿ, ಇಸ್ಟ್ರಿಯ ಹಾಗೂ ಡಾಲ್ಮೇಷಿಯನ್ ನಗರಗಳ ಕೆಲವು ಭಾಗಗಳನ್ನು ವಶಪಡಿಸಿಕೊಳ್ಳಬೇಕೆಂಬುದು ಅವರ ಬಯಕೆಯಾಗಿತ್ತು. ಈ ಎಲ್ಲ ಪ್ರಾಂತ್ಯಗಳೂ ಆಸ್ಟ್ರಿಯನ್ನರ ಆಳ್ವಿಕೆಯಲ್ಲೇ ಇದ್ದು, ಅಲ್ಲಿನ ಸರ್ಕಾರ ಇಟಲಿಯ ಜನರ ಮೇಲೆ ಅದರಲ್ಲೂ ವಿಶೇಷವಾಗಿ ಟ್ರಿಯಸ್ಟೆಯ ಜನರ ಮೇಲೆ, ಪಕ್ಷಪಾತ ತೋರಿಸುತ್ತಿತ್ತು. 1908ರಲ್ಲಿ ಇಟಲಿಯ ಒಪ್ಪಿಗೆಯಿಲ್ಲದೆ ಆಸ್ಟ್ರಿಯ, ಬಾಸ್ನಿಯ ಹಾಗೂ ಹರ್ಸೆಗೋವಿನಗಳನ್ನು ವಶಮಾಡಿಕೊಂಡಿತ್ತು. ಯುರೋಪಿನಲ್ಲಿ ಈ ವೇಳೆಗಾಗಲೇ ಎರಡು ಪಂಗಡಗಳಾಗಿದ್ದು, ಇಟಲಿ ಅನೇಕ ತೊಂದರೆಗಳಿದ್ದಾಗ್ಯೂ ತನ್ನ ಬದ್ಧದ್ವೇಷಿಯಾದ ವಿಯನ್ನದ ಕಡೆ ತಿರುಗದೆ ಬರ್ಲಿನಿನ ಬೆಂಬಲದಿಂದ ಫ್ರಾನ್ಸಿನತ್ತ ತಿರುಗಿತು. ಗಿಯೊಲಿಟಿ 1912ರಲ್ಲಿ ಜರ್ಮನಿ ಹಾಗೂ ಆಸ್ಟ್ರಿಯಗಳೊಡನೆ ತ್ರಿವಳಿ ಮಿತ್ರತ್ವವನ್ನು ಸಾಕಷ್ಟು ವಿರೋಧಗಳ ನಡುವೆ ಬೆಳೆಸಿದ. ಗಿಯೊಲಿಟಿ ಕೆಲವು ಕಾಲ ಜರ್ಮನಿಯವರತ್ತ ಮತ್ತೆ ಕೆಲವು ಕಾಲ ಫ್ರಾನ್ಸ್‌ನವರತ್ತ ತಿರುಗುತ್ತ ಶಾಂತಿ ಕಾಪಾಡಲು ಪ್ರಯತ್ನಿಸಿದ. ಆದರೆ ಜರ್ಮನಿಯವರು ಮೋಸ ಹೋಗಲಿಲ್ಲ.

**ಒಂದನೆಯ ಮಹಾಯುದ್ಧ ಹಾಗೂ ಅದರ ಪರಿಣಾಮ:** 1914 ಆಗಸ್ಟ್‌ನಲ್ಲಿ ಒಂದನೆಯ ಮಹಾಯುದ್ಧ ಆರಂಭವಾದಾಗ, ಕೇಂದ್ರೀಯ ಶಕ್ತಿಗಳು ಗೆಲ್ಲುವುವೆಂದೂ ಇಟಲಿ ಸಾಧಿಸಿದ್ದ ಐಕ್ಯವನ್ನು ವಿಜಯೀ ರಾಷ್ಟ್ರವಾದ ಆಸ್ಟ್ರಿಯ ನಾಶಗೊಳಿಸುವುದೆಂದೂ ಇಟ್ಯಾಲಿಯನ್ನರ ಮನಸ್ಸಿನಲ್ಲಿ ಭಯವಿತ್ತು. ತ್ರಿವಳಿ ಸಂಬಂಧದ ಒಪ್ಪಂದದ ಪ್ರಕಾರ ಜರ್ಮನಿ, ಆಸ್ಟ್ರಿಯನ್ನರ ಮೇಲೆ ಧಾಳಿಯಾದರೆ ಮಾತ್ರ ಇಟಲಿ ಅವುಗಳಿಗೆ ನೆರವು ನೀಡಬೇಕಾಗಿತ್ತು. ಇಟಲಿ ಆ ರಾಷ್ಟ್ರಗಳ ಮೇಲೆ ಧಾಳಿ ಮಾಡಲಾಗದೆಂದು ಸಾಮಾನ್ಯವಾದ ಸಹಜಾಭಿಪ್ರಾಯವಾಗಿತ್ತು. ಮತ್ತೊಂದು ಕಡೆ, ಟ್ರಿಪೋಲಿ ಯುದ್ಧದ ಬಗ್ಗೆ ಫ್ರಾನ್ಸ್, ಬ್ರಿಟನ್‌ಗಳೆರಡೂ ಆಕ್ಷೇಪಣೆಯ ದೃಷ್ಟಿ ಹೊಂದಿದ್ದುವು. ಇಟಲಿ ಒಂದು ಪಕ್ಷ ಮಿಲಿಟರಿ ಹಾಗೂ ಆರ್ಥಿಕ ನೆರವು ನೀಡುವ ಸಾಮರ್ಥ್ಯಹೊಂದಿದ್ದರೂ ಅದು ಯಾವುದೇ ರೀತಿಯ ನೆರವು ನೀಡುವ ಉತ್ಸಾಹವನ್ನೂ ವ್ಯಕ್ತಪಡಿಸಲಿಲ್ಲ. ಗಿಯೊಲಿಟಿಯ ಅನಂತರದ ಸಾಲಾಂಡ್ರನ ಹೊಸ ಸರ್ಕಾರ ಪವಿತ್ರ ಅಹಂಭಾವದ ತತ್ತ್ವವನ್ನು ಮುಂದುವರಿಸಿತ್ತು ಹಾಗೂ ತನ್ನ ಸೈನಿಕ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವುದರತ್ತ ಗಮನ ಹರಿಸಿತ್ತು.

ಡಿ. ಅನುಂಜಿನೋ, ಮುಸ್ಸೋಲಿನಿ ಹಾಗೂ ಇತರರ ಚಳವಳಿ ಹಾಗೂ ಪ್ರದರ್ಶನಗಳ ಫಲವಾಗಿ, ಇಟಲಿ 1915 ಮೇ 24ರಂದು ಮಿತ್ರರಾಷ್ಟ್ರಗಳ ಪರವಾಗಿ ಯುದ್ಧಕ್ಕಿಳಿಯಿತು. ಈ ವೇಳೆಗೆ ಮುಸ್ಸೋಲಿನಿ ಮಿಲಾನಿನಿಂದ ಸಮಾಜವಾದಿಗಳಿಂದ ಬೇರಾಗಿದ್ದ ಇಲ್ ಪೊಪೊಲೊ ಡಿ ಇಟಾಲಿಯ ಎಂಬ ಪತ್ರಿಕೆಯೊಂದನ್ನು ಹೊರಡಿಸುತ್ತಿದ್ದ. ಡಿ. ಅನುಂಜಿನೊ ಜೊತೆಯಲ್ಲಿ ಫ್ಯಾಸಿಡೆ ಅಜಿಯೊನ್ ರೆವಲ್ಯೊಷನೇರಿಯಾ ಚಳವಳಿಯನ್ನು ದೇಶದಲ್ಲೆಲ್ಲಾ ವ್ಯವಸ್ಥೆ ಮಾಡಿದ್ದ. ಕ್ರಾಂತಿಕಾರಿ ಸಮಾಜವಾದಿಗಳೂ ಸಿಂಡಿಕಲಿಸ್ಟರೂ ಯುದ್ಧದ ಪರವಾಗಿದ್ದರೆ, ಗಿಯಾಲಿಟಿ ಹಾಗೂ ಪಾರ್ಲಿಮೆಂಟರಿ ಸಮಾಜವಾದಿಗಳು ಶಾಂತಿಯ ಪರವಾಗಿದ್ದರು. ಯುದ್ಧವನ್ನು ಬಯಸುತ್ತಿದ್ದ ಪಕ್ಷ ಗೆದ್ದಿತು. ಏಕೆಂದರೆ 1900ರಲ್ಲಿ ಸಿಂಹಾಸನಾರೋಹಣ ಮಾಡಿದ್ದ ದೊರೆ 3ನೆಯ ವಿಕ್ಟರ್ ಇಮಾನ್ಯುಯಲ್ ಹಾಗೂ ಶಾಸನಸಭಾ ಅಧ್ಯಕ್ಷ ಸಲಾಂಡ್ರ, ಇಬ್ಬರೂ ಯುದ್ಧ ಬಯಸಿದ್ದರು.

ಆಸ್ಟ್ರಿಯದ ವಿಶಾಲ ಪ್ರದೇಶದ ಮೇಲೆ ಇಟಲಿ 1917ರ ವರೆಗೆ ಧಾಳಿಯಲ್ಲಿ ನಿರತವಾಗಿದ್ದಿತಾದರೂ ಅದಕ್ಕೆ ಜಯ ದೊರೆಯಲಿಲ್ಲ. ಇಟಲಿಯವರ ಈ ಪ್ರಯತ್ನ ಬಹು ದುಬಾರಿಯದಾಗಿತ್ತು. ಅಲ್ಲದೆ ಅವರ ಬಳಿ ಅರಿಲರಿ ಹಾಗೂ ಷೆಲ್‌ಗಳ ಕೊರತೆಯಿತ್ತು. (ಈ ಕೊರತೆಯನ್ನು ಫ್ರಾನ್ಸ್ ಹಾಗೂ ಬ್ರಿಟನ್‌ಗಳ ನೆರವಿನಿಂದ ಭಾಗಶಃ ನಿವಾರಿಸಲಾಗಿತ್ತು) ಗಾಯಾಳುಗಳ ಸಂಖ್ಯೆ ಏರುತ್ತಲಿತ್ತು. 1917ರ ಬೇಸಗೆಯ ಘಟನೆಗಳ ಅನಂತರ ಸೈನಿಕರ ಧೈರ್ಯಸ್ಥೈರ್ಯಗಳು ಕುಗ್ಗಿದ್ದವು. 1917 ಅಕ್ಟೋಬರ್‌ನಲ್ಲಿ, ಏಳು ಜರ್ಮನ್ ಡಿವಿಷನ್‌ಗಳಿಂದ ಕೂಡಿದ್ದ ಆಸ್ಟ್ರಿಯದ ಸೈನ್ಯ ಕ್ಯಾಪೊರೆಟ್ಟೊದ ಸುತ್ತ ಐಸೊಂಜೊವನ್ನು ವಶಪಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಯಿತು. ಇಟಲಿಯವರನ್ನು ಪಿಯಾವೆ ನದಿಯವರೆಗೆ ಹಿಂದಕ್ಕಟ್ಟಲಾಯಿತು. ಈ ಸ್ಥಳದಲ್ಲಿದ್ದಾಗ ಐದು ಬ್ರಿಟಿಷ್ ಹಾಗೂ ಆರು ಫ್ರೆಂಚ್ ಡಿವಿಷನ್‌ಗಳ ಸಮಯೋಚಿತವಾದ ನೆರವು ದೊರೆಯಿತು. ಹೀಗಾಗಿ ಆಸ್ಟ್ರಿಯದವರು ಮುಂದೆ ನುಗ್ಗಲಾರದೆ ಹೋದರು. ಮುಂದೆ ಜನರಲ್ ಡಿಯಾಜ್, ಐಸೊಂಜೊ ಹಾಗೂ ಟ್ರಿಯೆಸ್ಟೆಯವರೆಗೂ ಸೈನ್ಯ ನುಗ್ಗಿಸಿದ. 1918ರ ನವೆಂಬರ್ 4ರಂದು ಆಸ್ಟ್ರಿಯನ್ನರು ಯುದ್ಧವಿಶ್ರಾಂತಿಗೆ ಸಹಿ ಹಾಕಿದರು.

ಫ್ರಾನ್ಸ್ ಹಾಗೂ ಬ್ರಿಟನ್‌ಗಳಂತೆ ತಾವೂ ಶೌರ್ಯದಿಂದ ಕಾದಿದ್ದುದಾಗಿ ಇಟ್ಯಾಲಿಯನ್ನರು ಭಾವಿಸಿದ್ದರು. ಆದರೆ ತಮ್ಮನ್ನು ಪ್ಯಾರಿಸ್ ಶಾಂತಿಸಮ್ಮೇಳನದಲ್ಲಿ ಕಡೆಗಣಿಸಿದರೆಂದು ನಿರಾಶೆ ಹೊಂದಿದ್ದರು. ಅವರ ಪ್ರತಿನಿಧಿಗಳಾಗಿದ್ದ ಪ್ರಧಾನಿ ಆರ್ಲ್ಯಾಂಡೊ ಹಾಗೂ ವಿದೇಶಮಂತ್ರಿ ಸೊನ್ನಿನೊ ಬಹು ಪೇಚಿನ ಸ್ಥಿತಿಯಲ್ಲಿ ಸಿಲುಕಿದ್ದರು. ಅವರು ಡಿ ಅನುಂಜಿನೊ ಹಾಗೂ ಮುಸ್ಸೋಲಿನಿಯಂಥ ರಾಷ್ಟ್ರೀಯತಾವಾದಿಗಳನ್ನೂ ಸಿಂಡಿಕಲಿಸ್ಟ್‌ಗಳನ್ನೂ ಮೆಚ್ಚಿಸಬೇಕಾಗಿತ್ತು. ಸಮಾಜವಾದಿಗಳ ನಂಬಿಕೆಯನ್ನೂ ಗಳಿಸಬೇಕಾಗಿತ್ತು. ಅವರು ಜರ್ಮನಿಯ ದಕ್ಷಿಣ ಟಿರೋಲ್ ಸೇರಿದಂತೆ ಟ್ರೆಂಟಿನೋ ಹಾಗೂ ಟ್ರಿಯೆಸ್ಟೆಗಳನ್ನು ಪಡೆದರಾದರೂ ಲಂಡನ್ನಿನ ಕರಾರಿನಲ್ಲಿ ಕೊಡಲೊಪ್ಪಲಾಗಿದ್ದ ಕಡಲತೀರವನ್ನಾಗಲೀ ಜರ್ಮನಿಯ ವಸಾಹತುಗಳನ್ನಾಗಲೀ ತುರ್ಕಿ ಸಾಮ್ರಾಜ್ಯದ ಗಮನಾರ್ಹ ಭಾಗವನ್ನಾಗಲೀ ಪಡೆಯಲಿಲ್ಲ. ಲಂಡನ್ನಿನ ಕರಾರಿನಲ್ಲಿ ವಿವರಿಸಲಾಗದಿದ್ದು ರಾಷ್ಟ್ರೀಯತಾವಾದದ ತತ್ತ್ವಕ್ಕನುಗುಣವಾಗದ ಇಸ್ಟ್ರಿಯದ ಪೂರ್ವತೀರದ ಫಿಯುಮ್ ಬಂದರಿನ ಬಗ್ಗೆ ಭಾರೀ ಚಳವಳಿ ಇಟಲಿಯಲ್ಲಿ ಆರಂಭವಾಯಿತು. ಏಡ್ರಿಯಾಟಿಕ್‌ನ ತೀರದ ಎದುರಿಗೆ, ಕೌಲಿಗೆ ಅನುಗುಣವಾಗಿ ಯುಗೋಸ್ಲಾವಿಯದ ರಾಜ್ಯ ರಚನೆಯಾಯಿತು. ಇಟಲಿಯವರು ಫಿಯುಮ್ ಬಗ್ಗೆ ಒತ್ತಾಯ ಮಾಡಲಾರಂಭಿಸಿದರು. ಏಕೆಂದರೆ ಯುಗೋಸ್ಲಾವಿಯದವರು ಟ್ರಿಯೆಸ್ಟೆಯನ್ನು ನಾಶಪಡಿಸಲು ಫಿಯುಮ್ ಉಪಯೋಗಿಸಬಹುದೆಂಬ ಭಯವಿತ್ತು. ವರ್ಸೇಲ್ಸ್ ಒಪ್ಪಂದದಿಂದಲೂ ಈ ಸಮಸ್ಯೆ ಬಗೆಹರಿಯಲಿಲ್ಲ. 1919ರಲ್ಲಿ ಧೈರ್ಯವಂತನಾದ ಅನುಂಜಿನೊ ಕೆಲವು ಅನುಯಾಯಿಗಳೊಡನೆ, ತನ್ನ ಸರ್ಕಾರದ ಇಚ್ಛೆಯ ವಿರುದ್ಧ, ಫಿಯುಮ್ಮನ್ನು ವಶಪಡಿಸಿಕೊಂಡ. ಇಟಲಿ ಹಾಗೂ ಯುಗೋಸ್ಲಾವಿಯಗಳ ನಡುವಣ ಸಮಸ್ಯೆಗಳು 1920 ನವೆಂಬರಿನ ರಾಪಲೊ ಕರಾರಿನಿಂದ ಅಂತ್ಯಗೊಂಡುವು. ಇಟಲಿ ಟ್ರಿಯೆಸ್ಟೆಯ ಹಿನ್ನೆಲೆಪ್ರದೇಶವನ್ನೂ ಸಂಪೂರ್ಣ ಇಸ್ಟ್ರಿಯನ್ ಪರ್ಯಾಯದ್ವೀಪವನ್ನೂ ಪಡೆಯಿತು. ಫಿಯುಮ್ ಸ್ವತಂತ್ರ ನಗರವಾಯಿತು. ಮೂರು ವರ್ಷಗಳ ಅನಂತರ ಅದು ಇಟಲಿಗೆ ಸೇರಿತು. ಚೆರ್ಸೊದ್ವೀಪ ಹಾಗೂ ಜಾರಾ ಬಂದರನ್ನು ಪಡೆದರೂ ಡಾಲ್ಮೇಷಿಯದ ಬಗ್ಗೆ ಬೇಡಿಕೆಯನ್ನು ಇಟಲಿ ಬಿಟ್ಟಿತು.

**ಫ್ಯಾಸಿಸ್ಟ್ ನಿರಂಕುಶಾಧಿಕಾರ:** ವರ್ಸೇಲ್ಸ್‌ನಲ್ಲಿ ಸಂಭವಿಸಿದ ಪರಾಭವದಿಂದಾಗಿ, ಆರ್ಲ್ಯಾಂಡೊ ಪದಚ್ಯುತನಾದ. 1920 ಜೂನ್ ವೇಳೆಗೆ ಗಿಯೊಲಿಟಿ ಮತ್ತೆ ಅಧಿಕಾರಕ್ಕೆ ಬಂದ. ನಿರಸನ ಮತ್ತು ಅವ್ಯವಸ್ಥೆ ಎಲ್ಲೆಲ್ಲೂ ಹಬ್ಬಿದ್ದವು. ಪ್ರಜೆಗಳೆಲ್ಲ ತಮ್ಮ ದೃಷ್ಟಿಯನ್ನು ಸರ್ಕಾರದ ಕಡೆಗಲ್ಲದೆ ಮತ್ತೆಲ್ಲಿಯೋ ಬೀರಿದ್ದರು. ಅಂದರೆ ಒಂದು ಕಡೆ, ಆ ರಾಷ್ಟ್ರೀಯ ಭಾವನೆಗಳನ್ನು ಪ್ರತಿಪಾದಿಸುತ್ತಿದ್ದ ಸಿಂಡಿಕಲಿಸ್ಟರತ್ತ ಬಂಡಾಯಗಾರರತ್ತ ಮತ್ತು ಕಮ್ಯೂನಿಸ್ಟರತ್ತ ದೃಷ್ಟಿ ಬೀರಿದ್ದರೆ, ಮತ್ತೊಂದು ಕಡೆ ರಾಷ್ಟ್ರಸರ್ಕಾರವನ್ನು ವಶಪಡಿಸಿಕೊಂಡು ಹೊಸ ರಾಷ್ಟ್ರೀಯತಾವಾದದ ಭಾವನೆಗಳನ್ನು ಸ್ಥಾಪಿಸಬೇಕೆಂದಿದ್ದ ರಾಷ್ಟ್ರೀಯ ಸೆನೇಟಿನವರತ್ತಲೂ ಉಗ್ರ ರಾಷ್ಟ್ರೀಯವಾದಿಗಳತ್ತಲೂ ದೃಷ್ಟಿ ಬೀರಿದ್ದರು. ಈ ಎರಡನೆಯ ಗುಂಪಿನವರಲ್ಲಿ ಪ್ರಮುಖರಾಗಿದ್ದವರು ಡಿ ಅನುಂಜಿನೊ ಮತ್ತು ರಾಷ್ಟ್ರೀಯ ಸೆನೇಟಿನ ನಾಯಕ ರಸ್ಸೊನಿ. ಆದರೆ ಕ್ರಮೇಣ ತನ್ನದೇ ಆದ ಪಕ್ಷವನ್ನು ಸ್ಥಾಪಿಸಿದ್ದ ಮುಸ್ಸೋಲಿನಿ 1919 ಮಾರ್ಚ್‌ನಲ್ಲಿ ಅಧಿಕಾರ ಗಳಿಸಿಕೊಂಡ. ಇವನ ಪಕ್ಷಕ್ಕೆ ಕಮ್ಯೂನಿಸ್ಟ್ ಹಾಗೂ ಅವರ ಸೋದರ ಪಂಗಡಗಳಷ್ಟು ಸಂಖ್ಯಾಬಲವಿರಲಿಲ್ಲ (**ನೋಡಿ–ಮುಸ್ಸೋಲಿನಿ, ಬೆನಿಟೊ**).

ಮುಸ್ಸೋಲಿನಿ 1922ರ ಜನವರಿಯಲ್ಲಿ, ರಸ್ಸೊನಿ ಮತ್ತು ಅವನ ರಾಷ್ಟ್ರೀಯ ಸೆನೇಟಿನವರುಗಳನ್ನು ತನ್ನ ಫ್ಯಾಸಿಸ್ಟ್ ಪಂಗಡದವರೊಡನೆ ಸೇರಿಸಿಕೊಂಡಾಗ, ಆತ ಕಮ್ಯೂನಿಸ್ಟ್ ವಿರೋಧಿ ಹಾಗೂ ಪಾರ್ಲಿಮೆಂಟ್ ವಿರೋಧಿ ಚಳವಳಿಯ ಮೇಲೆ ಸಂಪೂರ್ಣವಾಗಿ ಹತೋಟಿ ಹೊಂದಿದ್ದ. ಏಕೆಂದರೆ ಯುಗೋಸ್ಲಾವಿಯದೊಡನೆ ರಾಪಲ್ಲೊ ಒಪ್ಪಂದದ ಮುಕ್ತಾಯದ ಅನಂತರ ಡಿ ಅನುಂಜಿನೊವನ್ನು ಗಿಯೊಲಿಟಿ ಫಿಯುಮ್‌ನಿಂದ ಹೊರಹಾಕಿದ್ದರಿಂದ, ಅನುಂಜಿನೊ ಗೌರವ ಕಡಿಮೆಯಾಗಿತ್ತು. ಮುಸ್ಸೋಲಿನಿಯ ತಂಡ ತಮ್ಮ ಲಾಠಿ ಹಾಗೂ ವ್ಯವಸ್ಥಿತ ಸಂಸ್ಥೆಗಳಿಂದಾಗಿ, ಪೊಲೀಸರ ಮಧ್ಯಪ್ರವೇಶವಿಲ್ಲದೆ ಎಡಪಂಗಡಗಳನ್ನು ಸೋಲಿಸಿದುವು. 1922 ಅಕ್ಟೋಬರಿನಲ್ಲಿ ರೋಮ್‌ನಗರದ ಸುತ್ತಲೂ ಬೀಡುಬಿಟ್ಟಾಗ ಅಲ್ಲಿನ ದೊರೆ ವಿಕ್ಟರ್ ಇಮಾನ್ಯುಯಲ್ ಈ ಫ್ಯಾಸಿಸ್ಟ್ ನಾಯಕನಿಗೆ ತನ್ನ ಸರ್ಕಾರದ ವ್ಯವಸ್ಥೆಯನ್ನು ಒಪ್ಪಿಸಲು ಸಮ್ಮತಿಸಿದ್ದ. ಆಗಿನ ಡೆಪ್ಯುಟಿಗಳ ಸಭೆಯಲ್ಲಿ ಆತನಿಗೆ 35 ಮಂದಿ ಫ್ಯಾಸಿಸ್ಟರ ಹಾಗೂ 10 ಮಂದಿ ರಾಷ್ಟ್ರೀಯತಾವಾದಿಗಳ ಬೆಂಬಲ ಮಾತ್ರ ದೊರಕಿತು.

1922–1925ರ ವರೆಗಿನ ಕಾಲದಲ್ಲಿ ಅನೇಕ ರಾಜಾಜ್ಞೆಗಳನ್ನು ಹೊರಡಿಸಿ ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಮುಸ್ಸೋಲಿನಿ ಸ್ಥಾಪಿಸಿದ. ಕಾರ್ಯಾಂಗ ರಾಜನಿಗೆ ಮಾತ್ರ ಜವಾಬ್ದಾರಿಯಾಗಿರಬೇಕೆಂದೂ ಪಾರ್ಲಿಮೆಂಟಿಗಲ್ಲವೆಂದೂ ನಿಬಂಧನೆಯಾಯಿತು. ಮೊದಮೊದಲು ಹೆದರಿಕೆಯಿಂದಲೂ ಬೇರೆ ಯಾವ ಮಾರ್ಗವೂ ತೋರದ್ದರಿಂದಲೂ ಸೆನೆಟ್ ಮತ್ತು ಡೆಪ್ಯುಟಿಗಳ ಚೇಂಬರ್‌ಗಳು ಈ ತೀರ್ಮಾನಕ್ಕೆ ಒಪ್ಪಿಗೆ ನೀಡಿದುವು. 1924ರ ಅನಂತರ, ಚುನಾವಣೆಯ ವಿಧಾನಗಳಲ್ಲಿ ಮಾಡಿದ ಕೆಲವೊಂದು ಮಾರ್ಪಾಡುಗಳಿಂದಾಗಿ ಪಾರ್ಲಿಮೆಂಟ್ ಫ್ಯಾಸಿಸ್ಟರಿಂದ ತುಂಬಿತು. 1924 ಜೂನಿನಲ್ಲಿ ಕೊಲೆಯಾದ ಮಾಟ್ಟಿಯೊಟ್ಟಿ ಮತ್ತು ಇತರ ಹಲವು ರಾಜಕಾರಣಿಗಳು ಮುಸ್ಸೋಲಿನಿಯನ್ನು ಬಹಿರಂಗವಾಗಿ ವಿರೋಧಿಸಿದರು. ಆದರೆ ಪಾರ್ಲಿಮೆಂಟ್ ಸಂಪೂರ್ಣವಾಗಿ ಅವನ ಅಧೀನದಲ್ಲಿತ್ತು. ಈ ರೀತಿಯಲ್ಲಿ ಮುಸ್ಸೋಲಿನಿ ಯಾರನ್ನೂ ಹತ್ತಿಕ್ಕದೆ, ಭಾಗಶಃ ಪಾರ್ಲಿಮೆಂಟ್‌ನ ಸಹಕಾರದಿಂದಲೂ ಭಾಗಶಃ ರಾಜನ ಮೈತ್ರಿಯ ಒಪ್ಪಿಗೆಯ ಆಧಾರದಿಂದಲೂ ತನ್ನ ಅಧಿಕಾರ ಸ್ಥಾಪಿಸಿದ. ಇವೆರಡರ ಮೇಲೂ ಆತನ ಹಿಡಿತ ಬಲವಾಗಿತ್ತು. ಮುಸ್ಸೋಲಿನಿಯ ನಾಯಕತ್ವದಲ್ಲಿ ಆತನ ಪಕ್ಷ ರಾಜ್ಯದ ನಿಜವಾದ ಆಳುವ ಪಕ್ಷವಾಯಿತು.

ಮುಸ್ಸೋಲಿನಿಯ ತಂತ್ರದಿಂದ ಇಡೀ ಇಟಲಿಯೇ ಸೈನಿಕ ಉಡುಪು ಧರಿಸಿದ ರಾಷ್ಟ್ರವಾಗಿ ಪರಿಣಮಿಸಿತು. ಆತ ಸ್ವತಂತ್ರ ಕಾರ್ಮಿಕ ಸಂಘಗಳನ್ನು ಮಟ್ಟ ಹಾಕಿದ. ಫ್ಯಾಸಿಸ್ಟ್ ಕೈಗಾರಿಕೋದ್ಯಮಿಗಳ ಸಿಂಡಿಕೇಟಿನವರು ಮಾತ್ರ ಕಾರ್ಮಿಕರ ನಿಜವಾದ ಪ್ರತಿನಿಧಿಗಳೆಂದು ಮನ್ನಣೆ ನೀಡಲಾಯಿತು. ಕೆಲವು ವಿರೋಧಿಗಳಿಗೆ ಕಿರುಕುಳ ಕೊಡಲಾಯಿತು. ಮತ್ತೆ ಕೆಲವರನ್ನು ಗಡಿಪಾರು ಮಾಡಲಾಯಿತು. ಇನ್ನೂ ಕೆಲವರ ಬಾಯಿ ಮುಚ್ಚಿಸಲಾಯಿತು. ಮುಸ್ಸೋಲಿನಿಯ ಆಡಳಿತಕ್ಕೆ ಹೆಚ್ಚು ಹೆಚ್ಚು ಬೆಂಬಲ ದೊರಕಿತು. ಬಹು ಹಿಂದಿನ ಕಾಲದಿಂದ ಜನರಿಗೆ ಯಾವ ಯಾವ ಸೌಲಭ್ಯಗಳು ದೊರಕಿರಲಿಲ್ಲವೋ ಅವನ್ನು ಆತ ಸಮಯೋಚಿತವಾಗಿ ನೀಡಿ ಹಲವರ ಮನಸ್ಸು ಗೆದ್ದ. 1929ರಲ್ಲಿ ಚರ್ಚಿನೊಡನೆ ಈತ ಮಾಡಿಕೊಂಡ ಒಪ್ಪಂದ ಮುಖ್ಯವಾದದ್ದು. ಇದರ ಪ್ರಕಾರ ವ್ಯಾಟಿಕನ್ ನಗರದ ಸಂಪೂರ್ಣ ಸಾರ್ವಭೌಮತ್ವವನ್ನು ಪೋಪ್‌ಗೆ ನೀಡಲಾಯಿತು. ಚರ್ಚಿನ ಆಸ್ತಿಗೆ ಸಾಕಷ್ಟು ರಕ್ಷಣೆ ನೀಡಲಾಗಿತ್ತಾದರೂ ವಿದ್ಯಾಭ್ಯಾಸದ ಮೇಲೆ ಸರ್ಕಾರವೇ ಹತೋಟಿ ಹೊಂದಿತ್ತು. ಈ ರೀತಿಯಲ್ಲಿ ಇಟಲಿಯವರಿಗೆ ಅಸ್ವಾಭಾವಿಕವಾಗಿದ್ದ ಹಾಗೂ ರಾಜ್ಯವನ್ನು ದುರ್ಬಲಗೊಳಿಸುವ ಕಲಹವೊಂದು ಅಂತ್ಯಗೊಂಡಿತು. ಆದರೆ ಇವೆಲ್ಲಕ್ಕೂ ಮಿಗಿಲಾಗಿ, ಮುಸ್ಸೋಲಿನಿ ಇಟಲಿಯ ಜನಕ್ಕೆ ಪ್ರ ಪ್ರಥಮ ಬಾರಿಗೆ ರಾಷ್ಟ್ರೀಯ ಹೆಮ್ಮೆಯೇನೆಂಬುದನ್ನು ಮನವರಿಕೆ ಮಾಡಿಸಿಕೊಟ್ಟ. ಯಾವ ಜನಾಂಗದವರ ಇತಿಹಾಸ ರಾಜಕೀಯ ತೇಜೋವಧೆಯಿಂದ ಕೂಡಿತ್ತೋ ಆ ಜನರಿಗೆ ಒಂದು ರೀತಿಯ ಆಶ್ವಾಸನೆ ದೊರಕಿತು. ಈತನ ಬಡಾಯಿ ನಾಯಕತ್ವವೂ ಧೈರ್ಯ ಸ್ಥೈರ್ಯಗಳ ಯೋಜನೆಗಳೂ ರೈಲ್ವೆಗಳ ವಿದ್ಯುತ್ಕರಣವೂ ಪರಿಣಾಮಕಾರಿಯಾಗಿದ್ದವು. ಈ ಉಕ್ಕಿನ ಚೌಕಟ್ಟಿನ ವ್ಯವಸ್ಥೆಗೆ ಇಟಲಿಯ ಪ್ರಜಾಸ್ವಾತಂತ್ರ್ಯವೇ ಪಣವಾಯಿತು. ಈ ಆಡಳಿತ ಪಾಶ್ಚಾತ್ಯ ಧನಿಕವರ್ಗದ ಆಡಳಿತದತ್ತ ತಿರಸ್ಕಾರ ಭಾವದಿಂದ ನೋಡಿತು.

**ಫ್ಯಾಸಿಸ್ಟರ ವಿದೇಶಾಂಗ ನೀತಿ:** ಗೌರವ ಹಾಗೂ ನೀತಿಗಳ ಮುಂದಾಲೋಚನೆಯಿಂದ ಕೂಡಿದ್ದ ಮುಸ್ಸೋಲಿನಿಯ ಸರ್ಕಾರ ಆರಂಭದಿಂದಲೂ ಕ್ರಿಯಾತ್ಮಕ ವಿದೇಶಾಂಗ ನೀತಿಯನ್ನು ಅನುಸರಿಸಿತು. ಗ್ರೀಕೊ–ಆಲ್ಬೇನಿಯನ್ ಗಡಿಯಲ್ಲಿ ಇಟಲಿಯ ಸೇನಾನಿಯೊಬ್ಬನ ಕೊಲೆಯಾದಾಗ, ಇಟಲಿಯವರು ಧಾಳಿ ಮಾಡಿದರು; ಮತ್ತು ರಾಷ್ಟ್ರಕೂಟದ (ಲೀಗ್ ಆಫ್ ನೇಷನ್ಸ್) ಒಪ್ಪಿಗೆಯಿಲ್ಲದಿದ್ದರೂ ಒಂದು ಗ್ರೀಕ್ ದ್ವೀಪವನ್ನೂ ವಶಮಾಡಿಕೊಂಡರು. ಮುಂದಿನ ಕೆಲವು ವರ್ಷಗಳಲ್ಲಿ ಈ ರೀತಿಯ ಅನೇಕ ಘಟನೆಗಳು ನಡೆದುವು. ಸಣ್ಣ ರಾಷ್ಟ್ರಗಳ ಗುಂಪಿನ ಯಾಜಮಾನ್ಯ ವಹಿಸಲು ಇಟಲಿ ಮುಂದಾಯಿತು; ಫ್ರೆಂಚರೊಡನೆ ಪೈಪೋಟಿ ಹೂಡಿತು. ಈ ಸಣ್ಣ ಸ್ನೇಹ ರಾಜ್ಯಗಳಲ್ಲಿ ಹಂಗೆರಿ, ಬಲ್ಗೇರಿಯ, ಆಸ್ಟ್ರಿಯ– ಇವು ಸೇರಿದ್ದುವು. ಈ ರಾಷ್ಟ್ರಗಳು ಇಟಲಿಯಂತೆಯೇ ವರ್ಸೇಲ್ಸ್ ಒಪ್ಪಂದವನ್ನು ಮಾರ್ಪಡಿಸಲು ಇಚ್ಛೆಪಟ್ಟಿದ್ದುವು. ನಿಶ್ಶಸ್ತ್ರೀಕರಣ ಚಳವಳಿಗೆ ಬೆಂಬಲ ನೀಡುತ್ತ, ಇಟಲಿ ಈ ರಾಷ್ಟ್ರಗಳಿಗೂ ಜರ್ಮನಿಯ ನಾಜಿಗಳಿಗೂ ಶಸ್ತ್ರಗಳನ್ನು ಸರಬರಾಜು ಮಾಡಿತು. 1933 ಜನವರಿಯಲ್ಲಿ ಹಿಟ್ಲರ್ ಅಧಿಕಾರ ಪಡೆದಾಗ, ಮುಸ್ಸೋಲಿನಿಯ ಶಕ್ತಿ ಮತ್ತಷ್ಟು ಅಧಿಕವಾಯಿತು. ರಾಷ್ಟ್ರಕೂಟದ ಸಹಸದಸ್ಯ ರಾಷ್ಟ್ರವೊಂದಾದ ಅಬಿಸೀನಿಯದ ಮೇಲೆ ಇಟಲಿ ಧಾಳಿಮಾಡಿತು. ತತ್ಪರಿಣಾಮವಾಗಿ, ಗ್ರೇಟ್‌ಬ್ರಿಟನ್‌ನ ನಾಯಕತ್ವದಲ್ಲಿ ರಾಷ್ಟ್ರಕೂಟದ 45 ರಾಷ್ಟ್ರಗಳು ನವೆಂಬರ್ 18 ರಂದು ಇಟಲಿಯ ಮೇಲೆ ಆರ್ಥಿಕ ಕ್ರಮ ಕೈಕೊಳ್ಳಲು ಮತ ನೀಡಿದುವಾದರೂ ತೈಲಸರಬರಾಜನ್ನು ನಿಲ್ಲಿಸುವ ಹಾಗೂ ಯಾವುದೇ ರೀತಿಯ ಸೈನಿಕ ದಂಡನೆಯ ಕ್ರಮ ಕೈಗೊಳ್ಳಲಿಲ್ಲ. ಧಾಳಿಯ ನಾಯಕತ್ವ ವಹಿಸಿದ್ದ ಮಾರ್ಷಲ್ ಬಡೋಗ್ಲಿಯಾ ನೇತೃತ್ವದಲ್ಲಿ 1936 ಮೇ 5 ರಂದು ಇಟಲಿಯ ಸೈನ್ಯ ಅಬಿಸೀನಿಯದ ಆಡಿಸ್‌ಅಬಾಬ ಪ್ರವೇಶಿಸಿತು. ಮೇ 9ರಂದು ಅಮಿತೋತ್ಸಾಹಗಳ ನಡುವೆ ಮುಸ್ಸೋಲಿನಿ ಹೊಸ ಸಾಮ್ರಾಜ್ಯದ ಘೋಷಣೆ ಹೊರಡಿಸಿದ. ಮುಂದಿನ ಕೆಲವು ತಿಂಗಳುಗಳಲ್ಲಿ ರಾಷ್ಟ್ರಕೂಟ ಅನುಮೋದನೆ ನೀಡಿತು.

ಇದೇ ವರ್ಷ ಆಗಸ್ಟ್ ತಿಂಗಳಿನಲ್ಲಿ ಇಟಲಿಯ ಫ್ಯಾಸಿಸ್ಟ್ ಸರ್ಕಾರ ಸ್ಪೇನಿನ ಅಂತರ್ಯುದ್ಧದಲ್ಲಿ ಜನರಲ್ ಫ್ರಾಂಕೊ ಪರವಾಗಿ ಪ್ರವೇಶಿಸಿತು. ಈ ವೇಳೆಗೆ, ಪಾಶ್ಚಾತ್ಯ ರಾಷ್ಟ್ರಗಳ ಹಾಗೂ ಲೀಗಿನ ವಿರುದ್ಧ ಮುಸ್ಸೋಲಿನಿಯ ವಿಜಯದಿಂದ ಪ್ರೇರಿತನಾಗಿದ್ದ ಹಿಟ್ಲರ್ ರೈನ್ ಲ್ಯಾಂಡ್ ವಶಮಾಡಿಕೊಂಡ. ಬರ್ಲಿನ್–ರೋಮ್‌ಗಳ ನಡುವಣ ಅಕ್ಷರೇಖೆ ವಾಸ್ತವವಾಯಿತಲ್ಲದೆ ಎರಡೂ ರಾಷ್ಟ್ರಗಳ ನಿರಂಕುಶಾಧಿಕಾರಿಗಳ ಹಾಗೂ ಅವರ ವಿದೇಶಾಂಗ ಮಂತ್ರಿಗಳ ಪರಸ್ಪರ ಭೇಟಿ ಸಂಧಾನಗಳು ಯುರೋಪಿನಲ್ಲಿ ಆರಂಭವಾದವು. ಸ್ಪೇನ್ ಯುದ್ಧ ಮುಂದುವರಿಯಿತು. ಇಟಲಿ ತನ್ನ ಸರ್ಕಾರ ಎಷ್ಟು ವೆಚ್ಚ ಮಾಡಲೆಂದಿತ್ತೋ ಮತ್ತು ಸಾಮರ್ಥ್ಯವೆಷ್ಟಿತ್ತೋ ಅದಕ್ಕೂ ಮೀರಿ ಖರ್ಚು ಮಾಡುತ್ತಿತ್ತು. ಅಲ್ಲದೆ ಇದರ ರಾಯಭಾರ ಸಂಬಂಧ ಅಪಾಯಕರ ಪರಿಸ್ಥಿತಿಯಲ್ಲಿತ್ತು.

ಮಹಾಯುದ್ಧವೊಂದು ಸನ್ನಿಹಿತವಾಗಿತ್ತು. ತನ್ನ ದೇಶದ ದೌರ್ಬಲ್ಯವನ್ನರಿತಿದ್ದ ಮುಸ್ಸೋಲಿನಿ, 1938ರ ಅಕ್ಟೋಬರಿನಲ್ಲಿ ಹಾಗೂ ಅನಂತರ ಹಿಟ್ಲರನ ಕೈ ತಡೆಯಲು ಪ್ರಯತ್ನಿಸಿದ್ದ. 1939ರ ಸೆಪ್ಟೆಂಬರಿನಲ್ಲಿ ದ್ವಿತೀಯ ಮಹಾಯುದ್ಧ ಆರಂಭವಾದಾಗ, ಇಟಲಿ ಜರ್ಮನಿಗೆ ಸೈನಿಕ ರೀತಿಯದಲ್ಲದ ನೆರವಿನ ಬಗ್ಗೆ ಆಶ್ವಾಸನೆ ನೀಡಿದರೂ ತಾನು ಯುದ್ಧನಿರತವಲ್ಲದ ರಾಷ್ಟ್ರವೆಂದು ಸಾರಿಕೊಂಡಿತು. ಜರ್ಮನರ ಆಕ್ರಮಣ ತಕ್ಕಮಟ್ಟಿಗೆ ಮುಂದುವರಿಯುವವರೆಗೂ ಮುಸ್ಸೋಲಿನಿ ಇದೇ ಧೋರಣೆಯನ್ನೇ ಕಾಪಾಡಿಕೊಂಡು ಬಂದ. 1940 ಜೂನ್‌ವರೆಗೂ ಆತ ಯುದ್ಧ ಘೋಷಿಸಲಿಲ್ಲ. ಜೂನ್ 24ರಂದು ಫ್ರಾನ್ಸ್ ಇಟಲಿಗಳ ನಡುವೆ ಒಂದು ತಾತ್ಕಾಲಿಕ ಸಂಧಿಗೆ ಸಹಿ ಹಾಕಲಾಯಿತು. ಇದರಿಂದ ಇಟಲಿಗೆ ಬಹಳ ಹಿಂದಿನಿಂದಲೂ ವಾದಗ್ರಸ್ತವಾಗಿದ್ದ ಸವಾಯ್‌ನ ಭಾಗಗಳು ದೊರೆತವು. ಆದರೆ ಈ ರಕ್ತರಹಿತ ಸ್ಥಿತಿ ಬಹಳ ಸ್ವಲ್ಪ ಕಾಲವಷ್ಟೇ ಮುಂದುವರಿಯಿತು. ಏಕೆಂದರೆ, ಮುಂದಿನ ಮೂರು ವರ್ಷಗಳಲ್ಲಿ, ಇದಕ್ಕೆ ಅಭೂತಪೂರ್ವವಾದ ಪರಾಭವವಾಯಿತು. 1940 ನವೆಂಬರಿನಲ್ಲಿ ಅದರ ಯುದ್ಧನೌಕೆಗಳು ಟೊರಂಟೊದಲ್ಲಿ ನಷ್ಟವನ್ನನುಭವಿಸಿದುವು. ಧಾಳಿ ಮಾಡುತ್ತಿದ್ದ ಸೈನ್ಯಗಳು ಡಿಸೆಂಬರಿನಲ್ಲಿ ಈಜಿಪ್ಟಿನಿಂದ ಹಿಂದಿರುಗಿದವು. ಗ್ರೀಸಿನಲ್ಲಿ ಧಾಳಿಕಾರ ಸೈನ್ಯವನ್ನು ಮಿತ್ರರಾಷ್ಟ್ರಗಳವರು ತಡೆದು ಆಲ್ಬೇನಿಯಕ್ಕೆ ಹಿಂದಿರುಗುವಂತೆ ಮಾಡಿದರು. ಅಲ್ಲಿಂದ ಮುಂದೆ ಇಟಲಿಯವರು ಆಫ್ರಿಕದಲ್ಲೂ ಗ್ರೀಸ್, ರಷ್ಯಗಳಲ್ಲೂ ಜರ್ಮನ್ ನಾಯಕತ್ವದಲ್ಲಿ ಹೋರಾಡಿದರು. ಕೆಲವು ವಿಜಯಗಳನ್ನೇನೋ ಸಾಧಿಸಿದರು. ಆದರೆ 1943ರ ಬೇಸಗೆಯ ವೇಳೆಗೆ ಬ್ರಿಟಿಷ್ ಮತ್ತು ಅಮೆರಿಕನ್ ಸೇನೆಗಳು ಉತ್ತರ ಆಫ್ರಿಕವನ್ನು ವಶಪಡಿಸಿಕೊಂಡಿದ್ದವು. ಜುಲೈನಲ್ಲಿ ಸಿಸಿಲಿ ಅವುಗಳ ವಶವಾಯಿತು. ಈ ಸೋಲಿನಿಂದ ಮುಸ್ಸೋಲಿನಿ ರಾಜೀನಾಮೆ ಸಲ್ಲಿಸಿದ. ರಾಜನ ನೇತೃತ್ವದಲ್ಲಿ ಮಾರ್ಷಲ್ ಬಡೋಗ್ಲಿಯೊಗೆ ಆಡಳಿತದ ವರ್ಗಾವಣೆಯಾಯಿತು. ಸೆಪ್ಟೆಂಬರ್ 3 ರಂದು ಕದನ ವಿರಾಮಕ್ಕೆ ಸಹಿ ಹಾಕಲಾಯಿತು. ಇಟಲಿಯವರು ಮಿತ್ರರಾಷ್ಟ್ರಗಳೊಡನೆ ಜರ್ಮನಿಯ ವಿರುದ್ಧವಾಗಿ ಕಾದಾಡಲಾರಂಭಿಸಿದರು. ಉತ್ತರದಲ್ಲಿ ಆ್ಯಂಗ್ಲೊ–ಅಮೆರಿಕನ್ ಸೇನೆಗಳೊಂದಿಗೆ ಸೇರಿ ಜರ್ಮನರನ್ನೆದುರಿಸಿ ಭಯಂಕರವಾಗಿ ಹೋರಾಡಿದರು. ಜರ್ಮನಿಯ ವಿರುದ್ಧ ಶತ್ರುತ್ವ ಕಟ್ಟಿಕೊಂಡಿದ್ದಕ್ಕೆ ಸರಿಯಾಗಿ ಒಂದು ವರ್ಷದ ಅನಂತರ, ಜನಮತಾಭಿಪ್ರಾಯದ ಫಲಿತಾಂಶದ ಪ್ರಕಾರ ದಕ್ಷಿಣದಲ್ಲಿ ಬಲವಾದ ಬೆಂಬಲವಿದ್ದರೂ ರಾಜಪ್ರಭುತ್ವ ನಿಷೇಧಿಸಲ್ಪಟ್ಟಿತು. ಹೊಸ ಗಣರಾಜ್ಯದ ಸಂವಿಧಾನ. 1947 ಡಿಸೆಂಬರಿನಲ್ಲಿ ರಾಷ್ಟ್ರಪ್ರತಿನಿಧಿಗಳ ಅಂಗೀಕಾರಪಡೆದು 1948 ಜನವರಿ 1ರಿಂದ ಜಾರಿಗೆ ಬಂತು. ಇಟಲಿ ಗಣರಾಜ್ಯವಾಯಿತು.

ಕ್ರಿಶ್ಚಿಯನ್ ಡೆಮೋಕ್ರ್ಯಾಟ್ ಆದ ಡಿ ಗಾಸ್ಪೆರಿಯ ನೇತೃತ್ವದಲ್ಲಿ, 1947 ಮೇ ತಿಂಗಳಿನಲ್ಲಿ ಕಮ್ಯೂನಿಸ್ಟ್ ಹಾಗೂ ವಾಮವಾದಿ ಸಮಾಜವಾದಿಗಳನ್ನು ಸಂಯುಕ್ತ ಸರ್ಕಾರದಿಂದ ಹೊರಹಾಕಲಾಯಿತು. 1948ರ ಚುನಾವಣೆಗಳಲ್ಲಿ ಕ್ರಿಶ್ಚಿಯನ್ ಡೆಮೋಕ್ರ್ಯಾಟರು ಮತ್ತಷ್ಟು ಪ್ರಬಲರಾದರು. ಆದರೆ 1953ರ ಚುನಾವಣೆಗಳಲ್ಲಿ ನಿಚ್ಚಳ ಬಹುಮತ ಪಡೆಯದಿದ್ದುದರಿಂದ ಡಿ ಗಾಸ್ಪೆರಿ ರಾಜೀನಾಮೆ ನೀಡಿದ. ಭದ್ರ ಸರ್ಕಾರ ರಚಿಸುವುದೊಂದು ದೊಡ್ಡ ಸಮಸ್ಯೆಯಾಯಿತು.

1947 ಫೆಬ್ರವರಿ 10ರಂದು ಸಹಿ ಹಾಕಲಾದ ಒಪ್ಪಂದದ ಪ್ರಕಾರ, ಫ್ರಾನ್ಸ್ ಪರವಾಗಿ ಕೆಲವು ಸಣ್ಣಪುಟ್ಟ ಬದಲಾವಣೆಗಳಾದವು. ಟ್ರಿಯೆಸ್ಟೆ ಹಾಗೂ ಅದರ ಹಿಂದಿನ ಭೂಮಿಯನ್ನು ಸ್ವತಂತ್ರ ಪ್ರಾಂತ್ಯವಾಗಿ ಸ್ಥಾಪಿಸುವುದು, ಎಲ್ಲ ವಸಾಹತುಗಳ ವಿಸರ್ಜನೆ, ಸೋವಿಯತ್ ರಷ್ಯ, ಯುಗೋಸ್ಲಾವಿಯ, ಗ್ರೀಸ್, ಆಲ್ಬೇನಿಯ, ಇಥಿಯೋಪಿಯಗಳಿಗೆ ಯುದ್ಧ ಪರಿಹಾರ ನೀಡಿಕೆ–ಇವುಗಳ ಬಗ್ಗೆ ಒಪ್ಪಂದವಾಯಿತು. 1950 ಡಿಸೆಂಬರಿನಲ್ಲಿ ವಿಶ್ವಸಂಸ್ಥೆಯ ನ್ಯಾಸಾಧಿಕಾರ ಒಪ್ಪಂದದ ಪ್ರಕಾರ ಇಟಲಿ ಹತ್ತು ವರ್ಷಗಳ ಅವಧಿಯವರೆಗೆ ಸೋಮಾಲಿಯದ ಮೇಲೆ ನ್ಯಾಸಾಧಿಕಾರ ಹೊಂದಿತು. ಈ ಅವಧಿ ಪೂರೈಸಿದಾಗ ಅದೂ ಸಂಪೂರ್ಣ ಸ್ವತಂತ್ರವಾಯಿತು.

1947 ಡಿಸೆಂಬರಿನಲ್ಲಿ ಬ್ರಿಟಿಷ್ ಅಮೆರಿಕಗಳ ಕೊನೆಯ ಸೇನಾ ತುಕಡಿಗಳು ಇಟಲಿಯಿಂದ ನಿರ್ಗಮಿಸಿದವು. 1949ರಲ್ಲಿ ಇಟಲಿ ನ್ಯಾಟೋದ ಸದಸ್ಯರಾಷ್ಟ್ರವಾಯಿತಲ್ಲದೆ ಯುರೋಪ್ ಸಭೆ ಸೇರಿತು. ಅನಂತರದ ವರ್ಷಗಳಲ್ಲಿ ಪಶ್ಚಿಮ ಯುರೋಪಿನ ಆರ್ಥಿಕ ಹಾಗೂ ಸೇನಾ ಏಕೀಕರಣಕ್ಕಾಗಿ ನೇಮಿಸಲಾದ ಅನೇಕ ಸಂಸ್ಥೆಗಳಲ್ಲಿ ಇಟಲಿ ಭಾಗವಹಿಸಿತಾದರೂ ಸೋವಿಯತ್ ರಾಜ್ಯದ ಅಭಿಷೇಧದಿಂದಾಗಿ (ವಿಟೊ) ಇದಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವ ದೊರಕಲಿಲ್ಲ. (ಬಿ.ಎಸ್.ಆರ್.ಆರ್.;ಎನ್.ಎಸ್.ಎಸ್.ಪಿ.)

**ಇಟಾಲಿಯನ್ ಕಲೆ:** ಇಟಲಿಯ ಜನ ಸು.3000 ವರ್ಷಗಳಿಂದಲೂ ಅವಿಚ್ಛಿನ್ನವಾದ ಸಂಸ್ಕೃತಿ ಪರಂಪರೆ ಬೆಳೆಸಿಕೊಂಡು ಬಂದಿದ್ದಾರೆ. ಸಾಹಿತ್ಯ, ಸಂಗೀತ, ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ ಮುಂತಾದ ಹಲವು ಪ್ರಭೇದಗಳಲ್ಲಿ ಜಗತ್ತಿನ ಕಣ್ಣು ಸೆಳೆಯುವಂಥ

ಅತ್ಯುತ್ಕೃಷ್ಟ ಮಟ್ಟವನ್ನು ಮುಟ್ಟಿದ್ದಾರೆ. ಯುರೋಪಿನ ನಾಗರಿಕತೆಯ ತವರು ಇಟಲಿ ದೇಶ ಎಂದು ಹೇಳಬಹುದು. 4ನೆಯ ಶತಮಾನದ ರೋಮನ್ ಚಕ್ರಾಧಿಪತ್ಯದಲ್ಲಿ ಕ್ರೈಸ್ತಧರ್ಮ ಸ್ಥಾಪನೆಯಾದ ಅನಂತರ ಕ್ರೈಸ್ತಧರ್ಮದ ಅನುಯಾಯಿಗಳು, ಅದರ ಪ್ರವರ್ತಕರು, ಆ ದೇಶದಲ್ಲಿ ಅಳಿದುಳಿದ ಪ್ರಾಚೀನ ಗ್ರೀಕ್ ಹಾಗೂ ರೋಮನ್ ಕಲಾವಶೇಷಗಳನ್ನು ತಮ್ಮದೇ ಆದ ಉದ್ದೇಶಕ್ಕೆ ಬಳಸಿಕೊಂಡರು. ವಿಭಿನ್ನ ಕಲಾಪದ್ಧತಿ ಹಾಗೂ ಸಂಪ್ರದಾಯಗಳನ್ನು ಧರ್ಮಪ್ರಸಾರಕ್ಕೆ ಅಳವಡಿಸಿಕೊಂಡರು. ಆ ಕಾಲದಲ್ಲಿ ಮೊಟ್ಟಮೊದಲು ಅಸ್ತಿತ್ವಕ್ಕೆ ಬಂದುದು ವಾಸ್ತುಶಿಲ್ಪ. ಪ್ರಾಚೀನ ಗ್ರೀಕ್, ರೋಮನ್ ಕಟ್ಟಡಗಳಿಂದ ಪ್ರೇರಿತವಾಗಿ ನಾನಾ ಭಾಗಗಳಲ್ಲಿ ಹಲವಾರು ಚರ್ಚುಗಳು ನಿರ್ಮಿತವಾದವು. ಚಿತ್ರ ಹಾಗೂ ಶಿಲ್ಪಕಲೆಯನ್ನು ಈ ಚರ್ಚುಗಳ ಒಳ ಹೊರಗಣ ಅಲಂಕರಣಕ್ಕೆ ಉಪಯೋಗಿಸಿದರು. ರೋಮನ್ ಚಕ್ರಾಧಿಪತ್ಯಕ್ಕೂ ಬೈಜ಼ಾಂಟೈನ್ ಮುಂತಾದ ಪೂರ್ವ ದೇಶಗಳಿಗೂ ನಿಕಟ ವಾಣಿಜ್ಯ ಸಂಬಂಧವಿದ್ದುದರಿಂದ ಇಟಲಿಯ ಬುನಾದಿಕಾಲದ ಕ್ರೈಸ್ತಕಲೆಯ ಮೇಲೆ ಪ್ರಸಕ್ತಶಕ'ಪೂರ್ವ ಕಾಲದ ಗ್ರೀಕ್, ರೋಮನ್ ಕಲೆ ಎಷ್ಟು ವ್ಯಾಪಕವಾದ ಪ್ರಭಾವ ಬೀರಿತೋ ಪೂರ್ವದೇಶಗಳ ಕಲಾ ಪರಂಪರೆಯೂ ಅಷ್ಟೇ ಪ್ರಭಾವ ಬೀರಿತು.

ಕ್ರೈಸ್ತಯುಗದ ಪ್ರಾರಂಭದಲ್ಲಿ ಚರ್ಚುಗಳನ್ನು ಕಟ್ಟಲು, ಪುರಾತನ ರೋಮಿನಲ್ಲಿ ಅರಮನೆ, ನ್ಯಾಯಾಲಯ ಕಟ್ಟಡಗಳನ್ನು ಕಟ್ಟಲು ಉಪಯೋಗಿಸಿದ ಬ್ಯಾಸಿಲಿಕನ್ ಪದ್ಧತಿಯನ್ನೇ ಇಲ್ಲೂ ಅನುಸರಿಸಲಾಯಿತು. ಆ ಕಾಲದ ಚರ್ಚುಗಳ ಹೊರಗಿನ ಗೋಡೆಗಳು ಬರಿದಾಗಿದ್ದು, ಕಟ್ಟಡದ ಒಳಭಾಗ ಹಾಗೂ ಮರದ ಮೇಲ್ಛಾವಣಿ ಬಣ್ಣದಿಂದ

ಗಿಡೊ ರೇನಿಯ ಭಿತ್ತಿ (ಫ್ರೆಸ್ಕೊ) ಚಿತ್ರ – ಅರೋರ 1613. ರೋಮ್

ಅಲಂಕೃತವಾಗಿರುತ್ತಿದ್ದವು. ಗೋಡೆಯನ್ನು ಅಮೃತಶಿಲೆಯಿಂದ ಅಲಂಕರಿಸುತ್ತಿದ್ದರು. ಬೈಜ಼ಾಂಟೈನ್ ಶೈಲಿಯಲ್ಲಿ ಕಟ್ಟಲಾದ ಕಟ್ಟಡಗಳಲ್ಲಿ ಬಣ್ಣದ ಕಲ್ಲು ಹಾಗೂ ಗಾಜಿನ ಚೂರುಗಳನ್ನು ಸಿಮೆಂಟಿನ ಮೇಲೆ ಜೋಡಿಸಿ, ಚಿತ್ರಗಳನ್ನು ಬಿಡಿಸಿ ಮೊಸಾಯಿಕ್ ಎಂಬ ಕಲಾವಿಧಾನದ ಪ್ರಕಾರ ಅಲಂಕರಿಸುತ್ತಿದ್ದರು. ಚರ್ಚಿನ ಮುಖ್ಯ ಭಾಗಗಳನ್ನು ಸಿಂಗರಿಸಲು ರೇಷ್ಮೆ ಬಟ್ಟೆ, ದಂತದ ಕೆತ್ತನೆ, ಎನಾಮಲ್‍ಗಳನ್ನು ಬಳಸುತ್ತಿದ್ದರು. ಚಿತ್ರಯುಕ್ತ ಹಸ್ತಪ್ರತಿಗಳನ್ನು (ಇಲ್ಯೂಮಿನೇಟೆಡ್ ಮ್ಯಾನುಸ್ಕ್ರಿಪ್ಟ್ಸ್) ಅಲಂಕಾರಕ್ಕಾಗಿ ಉಪಯೋಗಿಸುತ್ತಿದ್ದರು. ಇಟಲಿಯ ಕಲೆಯಲ್ಲಿ ಫ್ರೆಸ್ಕೋ ಎಂದು ಈಗ ಲೋಕವಿಖ್ಯಾತವಾಗಿರುವ ಭಿತ್ತಿಚಿತ್ರಕಲೆ ರೂಪಪಡೆದುದು ಆ ಕಾಲದಲ್ಲೇ. ಮೊಸಾಯಿಕ್ ಹಾಗೂ ಅಮೃತಶಿಲೆಯ ಬಳಕೆಗೆ ಹೆಚ್ಚು ಹಣ ಬೇಕಾಗುತ್ತಿದ್ದುದರಿಂದ, ಗಾರೆಯ ಗೋಡೆಯ ಮೇಲೆ ಚಿತ್ರಗಳನ್ನು ರಚಿಸುವ ಹೊಸಪದ್ಧತಿಯನ್ನು ಹೆಚ್ಚಾಗಿ ಬಳಸಲು ಪ್ರಾರಂಭಿಸಿದರು. ಕ್ರೈಸ್ತಯುಗದ ಪ್ರಾರಂಭದಲ್ಲಿನ ಕಲೆಯಲ್ಲಿ ಗ್ರೀಕ್ ರೋಮನ್ ಆಕೃತಿಗಳನ್ನೇ ಅನುಕರಿಸಿದರೂ ಅವುಗಳಷ್ಟು ಕ್ರೈಸ್ತ ಆಕೃತಿ ರೂಪಗಳು ವಾಸ್ತವಿಕವಾಗಿರುತ್ತಿರಲಿಲ್ಲ. ವಾಸ್ತವಿಕ ಮಾನವಾಕೃತಿಗಳನ್ನು ಹೋಲುವಂಥ ಚಿತ್ರಣ ಮೂಡಿಬರಲು ಸುಮಾರು ಸಾವಿರ ವರ್ಷಗಳು ಬೇಕಾದವು. ಆ ಯುಗದಲ್ಲಿ ಕಟ್ಟುತ್ತಿದ್ದ ಗೋರಿಗಳ ಮೇಲೆ ಬೈಬಲ್ಲಿನಿಂದ ಆರಿಸಿದ ದೃಶ್ಯಗಳನ್ನು ದಟ್ಟವಾಗಿ ಕೊರೆಯುತ್ತಿದ್ದರು. ನವಿಲು ಮುಂತಾದ ಪಕ್ಷಿಗಳನ್ನೂ ದ್ರಾಕ್ಷಿಬಳ್ಳಿಯ ಚಿತ್ರಗಳನ್ನೂ ಬಿಡಿಸುತ್ತಿದ್ದರು.

**ಮಧ್ಯಯುಗ:** ಮಧ್ಯಯುಗದಲ್ಲಿ ಇಟಲಿಯ ಪರ್ಯಾಯದ್ವೀಪವನ್ನು ಆಕ್ರಮಿಸಿಕೊಳ್ಳಲು ಅನಾಗರಿಕ ಜನಾಂಗಗಳು ಕ್ರೈಸ್ತರ ವಿರುದ್ಧ ಹೋರಾಡುತ್ತಿದ್ದವು. ರೋಮನ್ನರಿಂದ ಪ್ರೇರಿತವಾದ ಕಲಾ ಸಂಪ್ರದಾಯ, ಹಾಗೂ ಬೈಜ಼ಾಂಟೈನ್ ಕಲೆಗಳ ಜೊತೆಗೆ ಅನಾಗರಿಕ ಜನಾಂಗದ ಕಲಾರೀತಿಯೂ ಸೇರಿ ಮಧ್ಯಯುಗದ ಇಟಲಿಕಲೆ ರೂಪಿತವಾಯಿತು. ಸುಮಾರು 10ನೆಯ ಶತಮಾನದಿಂದ ಹಿಡಿದು 12ನೆಯ ಶತಮಾನದವರೆಗೆ ರೋಮನೆಸ್ಕ್ ಎಂಬ ವಾಸ್ತುಶಿಲ್ಪ ಶೈಲಿ ಅನುಷ್ಠಾನಕ್ಕೆ ಬಂತು. ಮರದ ಚಾವಣಿಯ ಬದಲು ದುಂಡುಕಲ್ಲಿನ ಕಮಾನು ಎಬ್ಬಿಸುವ ಹಾಗೂ ಅದನ್ನು ಏರಿಸಿ ನಿಲ್ಲಿಸಲು ದಪ್ಪಗೋಡೆಗಳನ್ನು ಕಟ್ಟುವ ಪದ್ಧತಿ ಜಾರಿಗೆ ಬಂತು. ಬಿಡುಬೀಸಾದ ಒಳಹಜಾರ ಹಾಗೂ ಭವ್ಯವಾದ ಕಂಬಗಳನ್ನುಳ್ಳ ಆ ಕಟ್ಟಡಗಳು ಅನನ್ಯಗಾಂಭೀರ್ಯದಿಂದ ತುಂಬಿ ಮೆರೆಯುವಂತಿದ್ದವು. ರೋಮನೆಸ್ಕ್ ಶೈಲಿಯ ಕಟ್ಟಡಗಳಿಗೆ ಇಟಲಿಯ ವಿಶಿಷ್ಟ ಕೊಡುಗೆಯೆಂದರೆ, ಚರ್ಚಿನ ಪಕ್ಕದಲ್ಲಿ ಗಂಟೆಗೋಪುರ ಕಟ್ಟುವ ಪದ್ಧತಿ. ಒಂಬತ್ತನೆಯ ಶತಮಾನದಿಂದ 12ನೆಯ ಶತಮಾನದವರೆಗಿನ ವೆನಿಸ್, ರಾವೆನಾಗಳಲ್ಲಿ ಕಟ್ಟಲಾದ ಚರ್ಚುಗಳ ಒಳಭಾಗದಲ್ಲಿ ಚಿತ್ರಗಳನ್ನು ಕೆತ್ತುತ್ತಿದ್ದರು.

12ನೆಯ ಶತಮಾನದ ಅನಂತರ ಫ್ರಾನ್ಸ್ ದೇಶದಲ್ಲಿ ಬಳಕೆಗೆ ಬಂದ ಗಾಥಿಕ್ ಶಿಲ್ಪಶೈಲಿ ಇಟಲಿಯಲ್ಲೂ ಹರಡಿತು. ಉದ್ದುದ್ದ ತ್ರಿಕೋಣಾಕಾರದ ಚೂಪುಗೋಪುರಗಳು ಮತ್ತು ಕಮಾನುಗಳನ್ನು ಹೊಂದಿದ್ದು ಆಕಾಶದುದ್ದಕ್ಕೂ ಭವ್ಯವಾಗಿ ನಿಂತಂತೆ ತೋರುವ ಗಾಥಿಕ್ ಶೈಲಿಯ ಕಟ್ಟಡಗಳು, ಪ್ರಾರ್ಥನೆ ಮಾಡುವ ಮಂದಿಯ ಕಣ್ಣು ಸ್ವರ್ಗದತ್ತ ಹೊರಳುವಂತೆ ಮಾಡಿದವು. ಆದರೆ ಗಾಥಿಕ್ ಶೈಲಿ ಇಟಲಿಯಲ್ಲಿ ಅಷ್ಟೇನೂ ಹೆಚ್ಚಾಗಿ ಜನಪ್ರಿಯವಾದಂತೆ ತೋರುವುದಿಲ್ಲ. ಫ್ಲಾರೆನ್ಸ್‌ನಲ್ಲಿನ ಕೆಥೆಡ್ರಲ್ ಕಟ್ಟಿದ ಅರ್ನಾಲ್ಫೊಡಿ ಕ್ಯಾಂಬಿಯ (1232–1300) ಆ ಕಾಲದ ಮಹಾಶಿಲ್ಪಿಗಳಲ್ಲೊಬ್ಬ. ಆತ ಕಟ್ಟಿದ ಕೆಲವು ಕಟ್ಟಡಗಳಲ್ಲಿ ಗಾಥಿಕ್ ಶೈಲಿಯನ್ನು ಅನುಸರಿಸಿದರೂ ಅವು ಫ್ರೆಂಚ್ ಗಾಥಿಕ್ ಶೈಲಿಯಿಂದ ತೀರಾ ವಿಭಿನ್ನವಾದ ಮಾರ್ಗ ಹಿಡಿದವು.

ಇಟಲಿಯ ಗಾಥಿಕ್ ಕಟ್ಟಡಗಳಲ್ಲಿ ಬಿಡಿಸಿದ ಕೆತ್ತನೆಯ ಚಿತ್ರಗಳಲ್ಲಿ ಪ್ರಕೃತಿ ಹಾಗೂ ಮಾನವಜೀವನವನ್ನು ಕುರಿತ ಹೊಸಪ್ರವೃತ್ತಿ ಮೂಡಿಬಂದಿರುವುದು ಗಮನಾರ್ಹ. ಮಧ್ಯಯುಗದಲ್ಲಿ ಕ್ರೈಸ್ತಮಠಗಳು ಮನುಷ್ಯನ ಜೀವನ ಹೇಯ, ಕ್ಷಣಿಕ ಹಾಗೂ ಪಾಪಕರವೆಂದು ಒತ್ತಿಹೇಳಿದವು. ನಿಜವಾದ ಮೋಕ್ಷಸುಖ ಸತ್ತ ಅನಂತರವೇ ದೊರೆಯುವಂಥದು ಎಂದು ಮುಂತಾಗಿ ಬೋಧಿಸಿದವು. ಆದರೆ 12ನೆಯ ಶತಮಾನದ ಅನಂತರ ಈ ದೃಷ್ಟಿಯಲ್ಲಿ ಬದಲಾವಣೆಯಾದಂತೆ ಕಾಣುತ್ತದೆ. ಅನಾಮಧೇಯರಾಗಿ ಉಳಿಯುತ್ತಿದ್ದ ಶಿಲ್ಪಿಗಳು, ಕಲಾವಿದರು, ತಮ್ಮ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದ್ದು ಕಂಡುಬರುತ್ತದೆ. ಸಿಯಾನೋ ಚರ್ಚಿನಲ್ಲಿ ಜೋವನಿ ಪಿಸಾನೋ ಕೆತ್ತಿದ ಶಿಲ್ಪಕೃತಿಗಳಲ್ಲಿ ಗಿಡಮರಗಳು, ಪ್ರವಾದಿಗಳು, ಕುದುರೆ ಮುಂತಾದ ಪ್ರಾಣಿಗಳು ಮೂಡಿಬಂದಿವೆ. ಮಾನವಾಕೃತಿಗಳು ನಿಚ್ಚಳವಾಗಿ ಅರಳಿ, ಮುಖದಲ್ಲಿ ಎಳೆನಗೆ ಸೂಸುವಂತೆ ಕಾಣುತ್ತವೆ. ಆರ್ವಿಟೋ ಎಂಬಲ್ಲಿನ ಚರ್ಚಿನಲ್ಲಿರುವ ಸೃಷ್ಟಿ ಹಾಗೂ ಪ್ರಳಯದ ಚಿತ್ರಗಳಲ್ಲಿ ಮಾನವಜೀವನದ ನೋವಿನ ಪ್ರಜ್ಞೆ ಇದೆ. ಸಪುರವಾದ ಮಾನವಾಕೃತಿಗಳ ಅಂಗಸೌಷ್ಠವದಲ್ಲಿ ಗಾಥಿಕ್ ರೂಪವಿದ್ದರೂ ಮಾನವೀಯತೆ ಎದ್ದು ಕಾಣುತ್ತದೆ. ಆ ಯುಗದಲ್ಲಿ ಹರಡುತ್ತಿದ್ದ ಮಾನವತಾವಾದವನ್ನು ಈ ಶಿಲ್ಪಕೃತಿಗಳು ತುಂಬಿತೋರಿಸುತ್ತವೆ. ಆ ಕಾಲದ ನಿಕೋಲೋ ಪಿಸಾನೋ, ಅವನ ಮಗ ಜೋವನಿ ಪಿಸಾನೋ ಇಬ್ಬರೂ ಟಸ್ಕನ್ ಪ್ರದೇಶದಲ್ಲಿನ ಹಲವಾರು ಚರ್ಚುಗಳಲ್ಲಿ ತಮ್ಮ ಶಿಲ್ಪಕಲಾವೈಭವವನ್ನು ಬೆಳಗಿಸಿದರು. ಪ್ರಾಚೀನ ರೋಮನ್ ಕಲೆಯ ರೀತಿ ಸೂತ್ರಗಳೆಲ್ಲ ಇವರ ಕೈಲಿ ಹೊಸ ಜೀವ ಪಡೆದಂತೆ ಕಾಣುತ್ತವೆ. ನಿಕೋಲೋ ಕೊರೆದ ವರ್ಜಿನ್ ಮೇರಿ ಮೂವರು ದೊರೆಗಳನ್ನು ಸ್ವಾಗತಿಸುವ ಚಿತ್ರದಲ್ಲಿ ಮೇರಿ, ರೋಮನ್ ಚಕ್ರವರ್ತಿನಿಯಂತೆ ತೋರುತ್ತಾಳೆ.

ಮಾನವತಾವಾದದ ಪ್ರಭಾವವನ್ನು ಅಂದಿನ ಚಿತ್ರಕಲೆಯಲ್ಲೂ ಕಾಣಬಹುದು. 11–13ನೆಯ ಶತಮಾನದ ಪ್ರಮುಖ ಕಲಾವಿದರೆಲ್ಲ ಸಿಯಾನಾ ಪ್ರದೇಶಕ್ಕೆ ಸೇರಿದವರಾಗಿದ್ದು, ಬೈಜ಼ಾಂಟೈನ್ ಶೈಲಿಯ ಪ್ರಭಾವಕ್ಕೆ ಒಳಗಾದಂತೆ ಕಾಣುತ್ತದೆ. ಫ್ರೆಂಚ್‍ಗಾಥಿಕ್ ಶೈಲಿ ಹಾಗೂ ಬೈಜ಼ಾಂಟೈನ್ ಸಂಪ್ರದಾಯದ ಸಮನ್ವಯವನ್ನು ಸಿಮೊನಿ ಮಾರ್ಟಿನಿಯ (1283–1344) ಕೃತಿಗಳಲ್ಲಿ ಮಾತ್ರ ಗುರುತಿಸಬಹುದು. ಆದರೆ ನಿಜವಾಗಿ ಮಾನವತಾವಾದದ ಸಾರಸರ್ವಸ್ವವನ್ನು ಸಮಗ್ರವಾಗಿ ಪ್ರತಿರೂಪಿಸಿದ ಕಲಾವಿದನೆಂದರೆ ಗಿಯಾಟೋ (1267–1337). ಅರಿನಾ ಪ್ರಾರ್ಥನಾ ಮಂದಿರದಲ್ಲಿ ಈತ ಚಿತ್ರಿಸಿರುವ ದೃಶ್ಯಗಳು ವಾಸ್ತವಿಕತೆಯ ಪ್ರತೀಕದಂತಿವೆ. ಶಿಶುಕ್ರಿಸ್ತನನ್ನು ದುಕೂಲದಲ್ಲಿ ಮರೆಮಾಡಿ ಎತ್ತಿಕೊಂಡು ಪ್ರಯಾಣ ಮಾಡುವ ವರ್ಜಿನ್ ಮೇರಿಯ ಮುಖದಲ್ಲಿ ತಾಯ್ತನದ ಮಾರ್ದವ, ಆತಂಕಗಳನ್ನು ಕಾಣಬಹುದು. ಅವರ ಕಡೆ ತಿರುಗಿನೋಡುವ ಜೋಸೆಫನ ಮುಖದಲ್ಲಿ ಮಾನವಸಹಜವಾದ ಕಾತರ ಸೂಸಿರುವುದು ಅಷ್ಟೇ ಸುಸ್ಪಷ್ಟವಾಗಿದೆ. ಗಿಯಾಟೋ ಚಿತ್ರಿಸಿರುವ ಬೈಬಲ್ ಕಥೆಯ ದೃಶ್ಯಗಳೆಲ್ಲದರಲ್ಲೂ ಸರಳವಾದ ನಿರೂಪಣಾ ಶೈಲಿಯಿದೆ. ಬೈಬಲ್ಲಿನ ಕಥೆಯನ್ನು ಶ್ರೀಸಾಮಾನ್ಯರಿಗೆ ತಿಳಿಸಲು ಉದ್ದೇಶಿಸಿದ ಈ ಚಿತ್ರಗಳು ತಮ್ಮ ಗುರಿ ಮುಟ್ಟಿದಂತೆ ಕಾಣುತ್ತವೆ.

**ಹೊಸಹುಟ್ಟಿನ ಕಾಲದ ಕಲಾಪರಂಪರೆ:** ಶಿಲ್ಪಿಗಳಾದ ಪಿಸಾನೋದ್ವಯರು, ಚಿತ್ರಕಾರ ಗಿಯಾಟೋ ಹಾಕಿಕೊಟ್ಟ ಮಾರ್ಗವನ್ನೇ ಹೊಸಹುಟ್ಟಿನ (ರಿನೇಸಸ್) ಕಾಲದ ಕಲಾವಿದರು ಅನುಸರಿಸಿದಂತೆ ತೋರುತ್ತದೆ. ಗ್ರೀಕ್, ರೋಮನ್ ಸಂಸ್ಕೃತಿ ಇಟಲಿಯಲ್ಲಿ ಅತ್ಯಂತ ಗಾಢಪ್ರಭಾವ ಬೀರಿದ ಕಾಲ ಅದು. ಕ್ರೈಸ್ತಮತ ಮತ್ತು ಅದಕ್ಕೆ ಸೇರಿದ ಜೀವನಕ್ಷೇತ್ರ ಎಷ್ಟು ಮುಖ್ಯವೋ ಮನುಷ್ಯ ಜೀವನ ಮತ್ತು ಅದರ ಪರಿಸರ ಅಷ್ಟೇ ಮುಖ್ಯವೆಂದು ತೋರಿಸಿದ ಕಾಲ ಅದು. ಅದ್ಭುತ ವೈಜ್ಞಾನಿಕ ಸಂಶೋಧನೆ, ಹೊಸ ಕ್ಷಿತಿಜಗಳ ಶೋಧನೆ ನಡೆದ ಆ ಯುಗದಲ್ಲಿ, ಇಟಲಿ ಕಲೆ ಫ್ಲಾರೆನ್ಸ್, ರೋಮ್, ವೆನಿಸ್‍ಗಳಲ್ಲಿ ವ್ಯಾಪಕವಾಗಿ ಬೆಳೆಯಿತು.

ಫ್ಲಾರೆನ್ಸ್ ಹಲವು ವಿರೋಧ, ವಿಚಿತ್ರಗಳಿಂದ ತುಂಬಿದ್ದ ಪಟ್ಟಣ. ಇಡೀ ಊರೇ ಕೋಟೆ ಕೊತ್ತಲಗಳಿಂದ ಆವೃತವಾಗಿದ್ದು, ಸಣ್ಣ ರಸ್ತೆಗಳು, ಉದ್ದುದ್ದ ಗೋಪುರಗಳು ಎಲ್ಲೆಲ್ಲೂ ಹರಡಿದ್ದವು. ನಗರದ ತುಂಬ ಚಿತ್ತಾರದಂಥ ಅರಮನೆಗಳು, ಮೆಡಿಚಿಯಂಥ ಶ್ರೀಮಂತರು ತುಂಬಿದ ಈ ನಗರದಲ್ಲಿ ವಾಣಿಜ್ಯ, ಕಲೆಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಕ್ರೌರ್ಯ, ಹಿಂಸೆಗಳಿಗೆ ಹೆಸರುವಾಸಿಯಾದ ಆ ಊರಿನಲ್ಲಿ ಯುದ್ಧಗಳು ಆಗಾಗ ಹೊತ್ತಿ ಉರಿಯುತ್ತಿದ್ದವು. ಮಠಾಧಿಕಾರಿಗಳ, ಶ್ರೀಮಂತರ ನಡುವೆ ದಿನಬೆಳಗಾದರೆ ಪರಸ್ಪರ ಕಲಹಗಳುಂಟಾಗುತ್ತಿದ್ದವು. ಈ ಪರಸ್ಪರ ವೈಷಮ್ಯ ಕಲೆಯ ಮೇಲೂ ಪ್ರಭಾವ ಬೀರಿತು.

ಪ್ರತಿಯೊಂದು ಶ್ರೀಮಂತ ಕುಟುಂಬವೂ ಅತ್ಯಂತ ಶ್ರೇಷ್ಠ ಕಲಾವಿದನ ಸೇವೆ ಪಡೆಯಲು ಪೈಪೋಟಿ ನಡೆಸುತ್ತಿದ್ದು, ಅತ್ಯುತ್ಕೃಷ್ಟ ಕಲಾಕೃತಿಗಳನ್ನು ಸಂಗ್ರಹಿಸಲು ಕಾತರವಾಗಿರುತ್ತಿತ್ತು. ಆದ್ದರಿಂದ ಆಗಿನ ಕಾಲದ ಯಾವ ನಗರದಲ್ಲೂ ಕಾಣದಷ್ಟು ಅಸಂಖ್ಯಾತ ಮಂದಿ ಕಲಾವಿದರಿಗೆ ಫ್ಲಾರೆನ್ಸ್ ನಗರ ತವರೂರಾಯಿತು.

ಸ್ಟೆಫಾನೊ ಮಡೆರ್ನೊ ಕೃತಿ– ಹರ್ಕ್ಯುಲಿಸ್ ಮತ್ತು ಕ್ಯಾಕಸ್ 1610. ಡ್ರೆಸ್‌ಡನ್, ಆಲ್ಬರ್ಟಿನಂ

ಫ್ಲಾರೆನ್ಸ್ ಹಾಗೂ ರೋಮ್‌ನಲ್ಲಿ ವಾಸ್ತುಶಿಲ್ಪವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ನಡೆದವು. ಪ್ರಾಚೀನ ಗ್ರೀಕ್, ರೋಮನ್ ವಾಸ್ತುಶಿಲ್ಪ ಕೃತಿಗಳನ್ನು ಅಭ್ಯಸಿಸಬೇಕೆಂಬ ಪ್ರೇರಣೆ, ಧೋರಣೆ ಬೆಳೆಯಿತು. ಆ ಕಾಲದ ಶ್ರೇಷ್ಠ ವಾಸ್ತುಶಿಲ್ಪಿಗಳಲ್ಲಿ ಫಿಲಿಪೋ ಬ್ರುನಲೆಷ್ಕಿ (1377–1446) ಅತ್ಯಂತ ಹೆಸರಾದವ. ಆತ ಹಲವು ವರ್ಷ ರೋಮ್‌ನಲ್ಲಿದ್ದು ಅಲ್ಲಿನ ಶಿಲ್ಪದ ಭಗ್ನಾವಶೇಷವನ್ನೆಲ್ಲ ಸತತವಾಗಿ ಅಧ್ಯಯನ ಮಾಡಿದ. ಫ್ಲಾರೆನ್ಸ್‌ಗೆ ಹಿಂತಿರುಗಿ ಹೊಸ ಶೈಲಿಯನ್ನನುಸರಿಸಿ ಕಟ್ಟಡಗಳನ್ನು ನಿರ್ಮಿಸಲುಕ್ರಮಿಸಿದ. ಗಾಥಿಕ್ ಮಾದರಿಯ ಚೂಪು ಕಮಾನಿನ ಬದಲು ಉರುಟು ರೋಮನ್ ಕಮಾನು ತೋರಣಗಳನ್ನು ನಿರ್ಮಿಸಿದ. ಹೆಚ್ಚಾಗಿ ಕೆತ್ತನೆ ಬಳಸದಿದ್ದರೂ ಕಂಬ, ಬೋದಿಗೆಗೆ ಪಾದಕಲ್ಲುಗಳನ್ನು ಜೋಡಿಸುವುದರಲ್ಲಿ ರೋಮನ್ ಪದ್ಧತಿಯನ್ನೇ ಅನುಕರಿಸಿದ. ಫ್ಲಾರೆನ್ಸ್ ಕೆಥೆಡ್ರಲ್ ಕಟ್ಟಡದ ಗೋಳಕಗೋಪುರ ಅವನ ಕಲಾಪ್ರೌಢಿಮೆಗೆ ಚಿರಂತನ ಸಾಕ್ಷಿಯಾಗಿದೆ. ಸ್ವಲ್ಪ ಕಾಲದ ಅನಂತರ ಈ ಶಿಲ್ಪ ಶೈಲಿಯನ್ನೇ ಉಪಯೋಗಿಸಿ ಅರಮನೆ ಮತ್ತು ಸಾರ್ವಜನಿಕ ಸೌಧಗಳನ್ನು ಕಟ್ಟುವುದಕ್ಕೆ ಪ್ರಾರಂಭಿಸಿದರು. ಫ್ಲಾರೆನ್ಸ್‌ನ ಸಂದಿಗೊಂದಿಯ ರಸ್ತೆಗಳಲ್ಲಿ, ದಪ್ಪಕಲ್ಲುಗಟ್ಟಿಗಳಿಂದ ಕಟ್ಟಲಾದ ಅರಮನೆಗಳು ಕೋಟೆಗಳಂತೆ ಭವ್ಯವಾಗಿದ್ದವು. ಹೊರಗೆ ನೋಡಲು ದೈತ್ಯಾಕಾರ ತಳೆದಿದ್ದರೂ ಒಳಭಾಗವನ್ನು ಹಿತಮಿತವಾಗಿ ಸಿಂಗರಿಸಲಾಗುತ್ತಿತ್ತು. ಅವುಗಳಲ್ಲಿ ಶಿಲ್ಪಾಕೃತಿಗಳಿಂದ ರಚಿತವಾದ ನೀರಿನ ಕಾರಂಜಿಗಳು, ವಿಸ್ತಾರವಾದ ಕೊಠಡಿಗಳು, ಎತ್ತರದ ಗೋಡೆಗಳಿಂದಾವೃತವಾದ ತೋಟಗಳು, ಲತಾಕುಂಜಗಳು ತುಂಬಿರುತ್ತಿದ್ದವು.

ಮೈಕೆಲೇಂಜಲೊ ಕಟ್ಟಿದ ಮೆಡಿಚಿಯ ಅರಮನೆ ಇಂಥ ಭವ್ಯಕಟ್ಟಡಗಳಲ್ಲಿ ಒಂದು. ಆ ಕಾಲದ ಇನ್ನೊಬ್ಬ ಸುಸಂಸ್ಕೃತ ವಿದ್ವಾಂಸಶಿಲ್ಪಿ ಲಿಯಾನ್ ಬ್ಯಾಟಿಸ್ಟ ಆಲ್‌ಬರ್ಟಿ ಮುಂದಿನ ವಾಸ್ತುಶಿಲ್ಪ ಪರಂಪರೆಯ ಮೇಲೆ ಹೆಚ್ಚಿನ ಪ್ರಭಾವ ಬೀರಿದ. ಆಡಂಬರ ವೈಭವಗಳಿಂದ ತುಂಬಿದ ರೋಮ್ ನಗರದ ತುಂಬಾ ಫಾರ್‌ನೀಸ್ ಅರಮನೆಯಂಥ ಭವ್ಯಕಟ್ಟಡಗಳೂ ಶ್ರೀಮಂತರ ಸೌಧಗಳೂ ಚರ್ಚುಗಳೂ ತುಂಬಿದ್ದವು. ಹಲವು ಅಂತಸ್ತಿನ ಕಟ್ಟಡಗಳನ್ನು ಕಟ್ಟುವುದಕ್ಕೆ ಸುಣ್ಣಕಲ್ಲು ಉಪಯೋಗಿಸುವುದನ್ನು ಪ್ರಾರಂಭಿಸಿದವನೆಂದರೆ ಆಂಟೊನಿಯಾ ಸ್ಯಾಂಗೆಲೊ. ಫಾರ್‌ನೆಸ್ ಅರಮನೆಯನ್ನು ಇವನೇ ಪ್ರಾರಂಭಿಸಿದನೆಂದರೆ ಅದರ ಮೇಲುಗಡೆಯ ಅಂತಸ್ತನ್ನು ರಚಿಸಿದವ ಮೈಕೆಲೇಂಜಲೊ. ಆಗಿನ ಕಾಲದ ಮತ್ತೊಬ್ಬ ಮಾಹಾಶಿಲ್ಪಿ ಮಿಲಾನಿನ ಡೊನಾಟೊ ಬ್ರಮಾಂಟೆ (1444–1514). ಈತ ಮಿಲಾನಿನಿಂದ ದೇಶಭ್ರಷ್ಟನಾಗಿ ರೋಮ್‌ಗೆ ಓಡಿಹೋದ. ಅಲ್ಲಿ ಪಡೆದ ಸ್ಫೂರ್ತಿಯಿಂದ ಮೊಂಟಾರಿಯೋದಲ್ಲಿನ ಚರ್ಚಿನ ನಡುವೆ ಕಟ್ಟಿದ ಅನರ್ಘ್ಯರತ್ನದಂಥ ಪುಟಾಣಿ ಮಂದಿರ (ಟೆಂಪಿಯೆಟ್ಟೊ) ಇಟಲಿ ವಾಸ್ತುಶಿಲ್ಪದ ಮಹತ್ ಸಾಧನೆಗೊಂದು ಉದಾಹರಣೆ. ಪೋಪ್ ಎರಡನೆಯ ಜೂಲಿಯಸ್ ಸೇಂಟ್ ಪೀಟರ್ ಮಂದಿರವನ್ನು ಪುನರುಜ್ಜೀವಗೊಳಿಸಲು ಯೋಚಿಸಿ ನಡೆಸಿದ ಶಿಲ್ಪಸ್ಪರ್ಧೆಯಲ್ಲಿ ಬ್ರಮಾಂಟೆ ಯಶಸ್ವಿಯಾದ. ಆತನಿಂದ ಪ್ರಾರಂಭವಾಗಿ ಅನಂತರ 120 ವರ್ಷಗಳಾದರೂ ಮುಗಿಯದೆ ಹಾಗೇ ಉಳಿದ ಈ ದೈತ್ಯ ಕಟ್ಟಡವನ್ನು ಮುಗಿಸುವ ಉದ್ದೇಶದಿಂದ ಮೈಕೆಲೇಂಜಲೊ ಸಹ ತನ್ನ ಬಾಳಿನ ಕೊನೆಯ ವರ್ಷಗಳನ್ನು ಆ ಕೆಲಸಕ್ಕೆ ವಿನಿಯೋಗಿಸಿದ. ವೆನಿಸ್ ಅತ್ಯಂತ ಸುಂದರವಾದ ದ್ವೀಪನಗರ, ಪ್ರಶಾಂತ ಪಟ್ಟಣ. ಅಲ್ಲಿ ಸುಂದರ ಗ್ರಂಥಾಲಯವನ್ನು ಕಟ್ಟಿ ಊರಿನ ಮಧ್ಯದಲ್ಲಿರುವ ಚೌಕವನ್ನು ಅತ್ಯಂತ ಮನೋಹರವಾಗಿ ನಿರ್ಮಿಸಿದ ಕೀರ್ತಿ ಶಿಲ್ಪಿ ಜಕೋಪೊ ಸಾನ್‌ಸೊವಿನೊಗೆ ಸಲ್ಲಬೇಕು. ಗ್ರಾಂಡ್ ಕಾಲುವೆಯ ಮೇಲೆ ಕಟ್ಟಿದ ಅರಮನೆಯಲ್ಲಿ ಸದಾಕಾಲವೂ ನೀರು ಸರಬರಾಜು ನಡೆಯುವಂತೆ ನಿರ್ಮಿಸಿದ ವ್ಯವಸ್ಥೆ ಅಂದಿಗೆ ಅಚ್ಚರಿ ಉಂಟುಮಾಡುವಂಥದು. ಸುಂದರವಾದ ಉದ್ಯಾನಗೃಹ (ವಿಲ)ಗಳನ್ನು ನಿರ್ಮಿಸಿದ ಆಂಡ್ರಿಯ ಪೆಲ್ಲೇಡಿಯಾ (1518–80) ಎಂಬಾತ ರೊಟಂಡೋ ಎಂಬ ಅತ್ಯಂತ ಚೆಲುವಾದ ಗೃಹವನ್ನು ಕಟ್ಟಿದ. ಇವನ ಶಿಲ್ಪಶೈಲಿ ಸುಮಾರು 300 ವರ್ಷ ಇಟಲಿಯ ಶಿಲ್ಪಿಗಳಿಗೆ ಸ್ಫೂರ್ತಿಯಾಗಿ ಉಳಿಯಿತು.

ಎಲ್ಲಕ್ಕಿಂತ ಮಿಗಿಲಾಗಿ ಇಟಲಿಯ ಶಿಲ್ಪಕಲೆ ಲೋಕಕ್ಕೆ ಚಿರನೂತನ ಮಾದರಿಗಳನ್ನು ಒದಗಿಸಿತು. ಫ್ಲಾರೆನ್ಸ್‌ನ ಕೆಥೆಡ್ರಲ್‌ಗಾಗಿ ಎರಡು ಭೀಮಾಕಾರದ ಕಂಚಿನ ದ್ವಾರಗಳನ್ನು ಕೆತ್ತಲು ಪ್ರಾರಂಭಿಸಿದ ಲೊರೆನ್ಸೋ ಘಿಬರ್ಟಿ ಅದನ್ನು ಮುಗಿಸಿದ್ದು 20 ವರ್ಷಗಳ ಅನಂತರ. ಅದಾದಮೇಲೆ ಪ್ರಾರಂಭಿಸಿದ ಇನ್ನೊಂದು ಜೊತೆ ಬಾಗಿಲುಗಳನ್ನು ಮುಗಿಸಲು ಅವನಿಗೆ 22 ವರ್ಷ ಹಿಡಿಯಿತು. ಬೈಬಲ್ ಕಥೆಯನ್ನು ನಿರೂಪಿಸುವ ಪ್ರತ್ಯೇಕವಾದ ಶಿಲ್ಪಾಕೃತಿಗಳಿಂದ ತುಂಬಿದ ಈ ಮಹಾದ್ವಾರಗಳು ಲೋಕವಿಖ್ಯಾತ ಕೃತಿಗಳು.

ಇಟಲಿಯ ಶಿಲ್ಪಿಗಳಲ್ಲಿ ಅನನ್ಯ ಸೋಪಜ್ಞತೆಗೆ ಹೆಸರಾದವನೆಂದರೆ ಡೋನಟೆಲ್ಲೊ, ಪರ್‌ಸ್ಪೆಕ್ಟಿವ್ ಕಲೆ ಎಂದು ಕರೆಯುವ ಹೊಸ ಶಿಲ್ಪಶೈಲಿಯನ್ನು ಕಂಡುಹಿಡಿದವ ಈತನೇ. ಎಲ್ಲಿಂದ ನೋಡಿದರೂ ಎದ್ದುಕಾಣುವ ಉದ್ದಗಲ, ಘನಾಕೃತಿ ಪಡೆದ ಪ್ರತಿಮೆಗಳನ್ನು ಮೊಟ್ಟಮೊದಲು ಕಡೆದವ ಡೊನಟೆಲ್ಲೊ. ಮಾನವ ಅವಯವಗಳ ಚಲನವಲನಗಳನ್ನು ಅತ್ಯಂತ ಸೂಕ್ಷ್ಮವಾಗಿ ಅಭ್ಯಸಿಸಿ, ಕಲಾತ್ಮಕವಾಗಿ, ಜೀವಂತವಾಗಿ ರೂಪಿಸಿದ ಅಗ್ಗಳಿಕೆ ಇವನದು. ಕಂಚಿನಲ್ಲಿ ಕೆತ್ತಿದ ಡೇವಿಡ್, ಅಮೃತಶಿಲೆಯಲ್ಲಿ ರೂಪಿಸಿದ ಪ್ರವಾದಿಗಳು, ಕುದುರೆಸವಾರ ಗಟಾಮೆಲಾಟೊನ ಚಿತ್ರಪ್ರತಿಮೆ–ಇವು ಜಗತ್‌ಪ್ರಸಿದ್ಧ ಕೃತಿಗಳು.

ಪರಿಷ್ಕಾರವಾದ ಜೇಡಿಮಣ್ಣಿನಲ್ಲಿ (ಟೆರ್ರಕೋಟ) ಸುಲಭಸಾಧ್ಯವಾದ, ಕಡಿಮೆ ವೆಚ್ಚ ತಗಲುವ, ಶಿಲ್ಪಾಕೃತಿಗಳನ್ನು ಕಡೆದು ಬಣ್ಣ ಬಣ್ಣಗಳಿಂದ ಸಿಂಗರಿಸಿ, ನಯನಮನೋಹರ ಪ್ರತಿಮೆಗಳನ್ನು ನಿರ್ಮಿಸಿದವ ಲ್ಯೂಕಡೆಲ್ಲಾ ರೊಬ್ಬಿಯೊ.

ಜಗತ್ತಿನಲ್ಲೆಲ್ಲ ಚಿರಂತನ ವಿಖ್ಯಾತಿಗಳಿಸಿದ, ಚಿತ್ರಕಾರ, ಶಿಲ್ಪಿ ಎಂದರೆ ಮೈಕೆಲೇಂಜಲೊ (1475–1564). ಅಮೃತಶಿಲೆಯಲ್ಲಿ ಕೆತ್ತಿದ ಹದಿನೆಂಟು ಅಡಿ ಎತ್ತರದ ಇವನ ಡೇವಿಡ್ ಜಗತ್ತನ್ನೇ ಮೋಹಿಸುವಂಥ ಕೃತಿ.

**ಚಿತ್ರಕಲೆ:** ಸುಪ್ರಸಿದ್ಧ ಚಿತ್ರಕಾರ ಮಸಾಚಿಯೊ ಮಧ್ಯಯುಗದ ಸಂಪ್ರದಾಯವನ್ನು ಕಿತ್ತೊಗೆದು, ಸುಮಾರು 200 ವರ್ಷಗಳವರೆಗೂ ಅಚ್ಚಳಿಯದೆ ನಿಲ್ಲುವಂಥ ಹೊಸ ಸಂಪ್ರದಾಯ ಸ್ಥಾಪಿಸಿದ. ಫ್ಲಾರೆನ್ಸ್‌ನ ಬ್ರಾಂಕಾಚಿ ಮಂದಿರದಲ್ಲಿ ಈತ ರಚಿಸಿರುವ ಅಮೋಘವಾದ ಭಿತ್ತಿಚಿತ್ರಗಳಲ್ಲಿ ಬೈಬಲ್ ಕಥೆಯ ಪಾತ್ರಗಳು ಜೀವಂತವಾಗಿವೆ. ಈತ ಚಿತ್ರಕಲೆಯಲ್ಲಿ ಪರ್‌ಸ್ಪೆಕ್ಟಿವ್ (ಈಗ ತ್ರೀ ಡೈಮೆನ್ಷನ್ ಚಿತ್ರ ಎನ್ನುವ) ತಂತ್ರವನ್ನಳವಡಿಸಿಕೊಂಡ. ಇವನ ಶೈಲಿಯನ್ನು ಅನುಸರಿಸಿದರೂ ರೇಖಾಗಣಿತದ ಜ್ಞಾನವನ್ನು ಉಪಯೋಗಿಸಿ ಸಿಲೆಂಡರ್ ಆಕೃತಿಯ ಚಿತ್ರಗಳನ್ನು ರಚಿಸಿದವನೆಂದರೆ ಫ್ರಾನ್ಸೆಸ್ಕಾ ಎಂಬ ಗಣಿತಶಾಸ್ತ್ರಜ್ಞ, ಕಲಾವಿದ.

ಹೊಸ ಹುಟ್ಟಿನ ಕಾಲದ ಚಿತ್ರಕಲೆಯಲ್ಲಿ ಅತ್ಯಂತ ನವಿರಾದ ರಮ್ಯಕಾವ್ಯಮಯ ಅಂಶಗಳನ್ನು ರೂಪಿಸಿದವ ಸಾಂಡ್ರೊ ಬೊಟಿಚೆಲ್ಲಿ (1444–1510). ಲಿಯೊನಾರ್ಡೊ ಡ ವಿಂಚಿ ಹೊಸಹುಟ್ಟಿನ ಕಾಲದ ಸರ್ವತೋಮುಖ ಪ್ರತಿಭೆಯ ಪ್ರತಿನಿಧಿ. ಮಾನವನ ಅಂತರಂಗದ ಗಾಢಭಾವನೆಗಳನ್ನು ಮುಖದ ಭಾವಭಂಗಿಗಳಲ್ಲಿ ಅತ್ಯಂತ ಸೂಕ್ಷ್ಮವೇದಿಯಾಗಿ ಚಿತ್ರಿಸುವುದರಲ್ಲಿ ಅವನಿಗೆ ಸಾಟಿಯಾದ ಕಲಾವಿದರು ಈವರೆಗೆ ಹುಟ್ಟಿಲ್ಲವೆನ್ನುತ್ತಾರೆ. ಅವನ ಕಲಾಭಿಜ್ಞತೆಗೆ ಸಾಕ್ಷಿ ದಿ ಲಾಸ್ಟ್ ಸಪ್ಪರ್ (ಕೊನೆಯ ಔತಣ) ಒಂದೇ ಸಾಕು. ಅವನಂತೆಯೇ ಹೆಸರಾಂತ ವಿಖ್ಯಾತ ಚಿತ್ರಕಾರ ರ್‍ಯಾಫೆಲ್ ಸ್ಯಾನ್‌ಜಿಯೊ (1483–1520), ಲಿಯೊನಾರ್ಡೊನಿಂದ ಪ್ರೇರಣೆ ಪಡೆದವ. ರೋಮಿನ ವ್ಯಾಟಿಕನ್ ಮಂದಿರದಲ್ಲಿ ಈತ

ಚಿತ್ರಿಸಿರುವ ಹಲವಾರು ಅನ್ಯಾದೃಶ ಚಿತ್ರಗಳಿವೆ. ತಾಯಿಮಗುವನ್ನು ಕುರಿತು ಈತ ಸೃಜಿಸಿದ ನೂರಾರು ಭಂಗಿಯಲ್ಲಿರುವ, ಭಿನ್ನ ಭಿನ್ನ ಚಿತ್ರಗಳು ಲೋಕವಿಖ್ಯಾತ ಕೃತಿಗಳು. ಚಿತ್ರಕಲೆಯನ್ನು ಶಿಲ್ಪಕಲೆಯ ಹತ್ತಿರಕ್ಕೆ ತಂದವ ಮೈಕೆಲೇಂಜಲೊ. ಸಿಸ್ಟೈನ್ ಮಂದಿರದಲ್ಲಿ ಈತ ಸೃಷ್ಟಿಸಿರುವ ಭಿತ್ತಿಚಿತ್ರಗಳು ಇವನ ಶಿಲ್ಪಕೃತಿಗಳಂತೆ ಲೋಕೋತ್ತರ ದಿವ್ಯಕೃತಿಗಳು. ಬೈಬಲ್ ಕಥೆಗೆ ಸಂಬಂಧಿಸಿದ ಈ ಚಿತ್ರಗಳಲ್ಲಿ ಕಾಣುವ ಸಾವು, ನೋವುಗಳ ಭವ್ಯಕಲ್ಪನೆ, ಮಾನವ ಹಾಗೂ ದಿವ್ಯಾಕೃತಿಗಳ ಭೀಮಸೃಷ್ಟಿ ಲೋಕವನ್ನು ಇಂದಿಗೂ ಬೆಕ್ಕಸಬೆರಗುಗೊಳಿಸುತ್ತವೆ.

ಸಂತ ಪೀಟರನ ಚರ್ಚಿನ ಮುಖಭಾಗ, ರೋಮ್

ಆ ಕಾಲದ ವೆನಿಸ್ ಚಿತ್ರಕಾರರು ತಮ್ಮದೇ ಆದ ಶೈಲಿಯನ್ನು ಬೆಳೆಸಿಕೊಂಡು ಲೋಕದ ಕಣ್ಣನ್ನು ಸೆಳೆದರು. ಅವರು ಮೃದುವಾದ, ಸುಂದರವಾದ ಭೂದೃಶ್ಯ (ಲ್ಯಾಂಡ್‌ಸ್ಕೇಪ್)ಗಳನ್ನು ಚಿತ್ರಿಸಿದರು. ಹದಿನಾರನೆಯ ಶತಮಾನದ ಹೊತ್ತಿಗೆ ವೆನಿಸ್ ಚಿತ್ರಕಲೆ ಫ್ಲಾರೆನ್ಸ್ ಕಲೆಯಿಂದ ತೀರಾ ವಿಭಿನ್ನವಾದ ಸ್ವರೂಪ ತಳೆಯಿತು. ವೆನಿಸ್‌ಕಲೆಗೆ ಪ್ರತ್ಯೇಕವಾದ ಅಸ್ತಿತ್ವ ಗಳಿಸಿಕೊಟ್ಟವರೆಂದರೆ ಜಾರ್ಜಿಯೊನೆ, ಟಿಷಿಯನ್, ಟಿಂಟೊರೆಟ್ಟೊ ಹಾಗೂ ವೆರೋನೀಸ್. ಇವರು ಸಹ ಚರ್ಚು ಹಾಗೂ ಸಾರ್ವಜನಿಕ ಕಟ್ಟಡಗಳ ಒಳಾಂಗಣವನ್ನು ಸಿಂಗರಿಸಲು ತಮ್ಮ ಚಿತ್ರಕಲಾನೈಪುಣ್ಯವನ್ನು ಪ್ರಯೋಗಿಸಿದರೂ ಹಲವಾರು ಖಾಸಗಿ ವ್ಯಕ್ತಿಗಳಿಗಾಗಿ ಚಿತ್ರಗಳನ್ನು, ದೃಶ್ಯಗಳನ್ನು ಬರೆದುಕೊಟ್ಟರು. ತೈಲವರ್ಣವನ್ನು ತುಂಬ ಸೊಗಸಾಗಿ ಬಳಸಿದವ ಜಾರ್ಜಿಯೊನೆ. ಈತ ಚಿಕ್ಕವಯಸ್ಸಿನಲ್ಲಿ ತೀರಿಕೊಂಡ. ಇವನ ಶೈಲಿಯ ಪರಂಪರೆಯನ್ನು ಚಿರಸ್ಥಾಯಿಗೊಳಿಸಿದವ ಟಿಷಿಯನ್. ಸುಮಾರು ಅರುವತ್ತು ವರ್ಷಗಳ ಕಾಲ ಟಿಷಿಯನ್, ತೈಲವರ್ಣಮಾಧ್ಯಮದಲ್ಲಿ ಹಲವು ತೆರನಾದ ಪ್ರಯೋಗ ನಡೆಸಿದ. ತಮ್ಮ ಚಿತ್ರಗಳನ್ನು ಬರೆಸಿಕೊಂಡ ಶ್ರೀಮಂತರ ಇಂಗಿತವನ್ನನುಸರಿಸಿ ನಡೆದುದರಿಂದ ಇವನಿಗೆ ಅಪಾರಜನಪ್ರಿಯತೆ, ಗೌರವ ದೊರೆಯಿತು.

ಹೊಸಹುಟ್ಟಿನ ಯುಗದಲ್ಲಿ ಸಾಹಿತ್ಯ ಹಾಗೂ ಕಲೆಗಳನ್ನು ಸೃಷ್ಟಿಸಿದವರು ಮನುಷ್ಯ ವ್ಯಕ್ತಿತ್ವದ ಸಂಪೂರ್ಣತೆಯಲ್ಲಿ ಅಚಲಶ್ರದ್ಧೆ, ನಂಬಿಕೆ ವ್ಯಕ್ತಪಡಿಸಿದರು. ಆದರೆ ಆ ಕಾಲದಲ್ಲಿ ಪ್ರಾರಂಭವಾದ ಧಾರ್ಮಿಕ ಘರ್ಷಣೆಗಳ ಕಾರಣದಿಂದಾಗಿ ಕೆಥೊಲಿಕ್ ಮತಾಧಿಕಾರಿಗಳು ಕಲಾವಿದರ ಮೇಲೆ ಸಲ್ಲದ ಕಟ್ಟುಪಾಡುಗಳನ್ನು, ನೀತಿನೇಮಗಳನ್ನು ಹೇರಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಫ್ಲಾರೆನ್ಸಿನ ಕೆಲವು ಕಲಾವಿದರು ಶಿಲ್ಪ ಅಥವಾ ಚಿತ್ರಕಲೆಯ ವಸ್ತುವಿನತ್ತ ಗಮನ ಹರಿಸದೆ ಶೈಲಿಯೇ ಮುಖ್ಯವೆಂದು ಹೊಸ ಚಳವಳಿ ಪ್ರಾರಂಭಿಸಿದರು. ಇವರನ್ನು ಮ್ಯಾನರಿಸ್ಟ್ ಪಂಥದವರೆನ್ನುವ ವಾಡಿಕೆ. ಚಿತ್ರವಿಚಿತ್ರವಾದ ಆಕೃತಿಯುಳ್ಳ ಬಾಗಿಲುಗಳು, ಆಯತಪ್ಪಿದಂತೆ ತೋರುವ ಅಸಂಪೂರ್ಣ ಕಟ್ಟಡಗಳು ನಿರ್ಮಿತವಾದವು. ಈ ಪಂಥದ ಕಲೆಗಾರರಲ್ಲಿ ಬೆನ್‌ವೆಂಚುಯೊ ಚೆಲ್ಲಿನಿ, ಕೊರೆಜ್ಜಿಯೊ–ಇವರು ಖ್ಯಾತಿವೆತ್ತ ವ್ಯಕ್ತಿಗಳು. ಗಿರ್ರನೆ ತಿರುಗುತ್ತ ಆಕಾಶದತ್ತ ಹಾರುವಂತೆ ಕಾಣುವ ದೇವಕಿನ್ನರರೇ ಮುಂತಾದ ವಿಚಿತ್ರ ಭಂಗಿಯ ಶಿಲ್ಪಾಕೃತಿಗಳನ್ನು ರಚಿಸಿದ ಈ ಪಂಥದ ಶಿಲ್ಪ ಚಿತ್ರಕಾರರು ಮುಂದಿನ ಯುಗದ ಫ್ರೆಂಚ್ ಕಲಾವಿದರಿಗೆ ಹೆಚ್ಚು ಸ್ಫೂರ್ತಿ ನೀಡಿದರು.

17ನೆಯ ಶತಮಾನದ ಇಟಲಿ ಕಲೆಯನ್ನು ಬ್ಯಾರೋಕ್ ಕಲೆ ಎನ್ನುತ್ತಾರೆ. ಹಲವಾರು ಹೊಸರೀತಿಯ ಚರ್ಚುಗಳನ್ನು ನಿರ್ಮಿಸಿದ ಬರ್ನಿನಿ ಈ ಶೈಲಿ ಅನುಸರಿಸಿದ ಹೆಸರಾಂತ ಶಿಲ್ಪಿ. ಆತ ಅಂಡಾಕಾರದ, ರೇಖಾಗಣಿತದ ಆಕೃತಿಗಳನ್ನು ಹೆಚ್ಚಾಗಿ ನಿರ್ಮಿಸಿದ. ಚಿತ್ರವಿಚಿತ್ರವಾದ ನೀರಿನ ಚಿಲುಮೆಗಳು, ನೀರಿನ ಕೊಳವೆಗಳು, ಗೋಡೆಯೊಳಗೆ ನಿರ್ಮಿಸಿದ ಪ್ರತಿಮೆಗಳನ್ನಿಡುವ ಕಪಾಟುಗಳು, ಮುಂತಾದ ಉಪಯುಕ್ತವೆನ್ನಬಹುದಾದ ಕಲಾಸ್ವರೂಪಗಳನ್ನು ರಚಿಸಿದ. ದೇವದಾನವರ, ರಾಜ ಶ್ರೀಮಂತರ ಆಕೃತಿಗಳನ್ನೇ ಮಾದರಿಯಾಗಿ ಬಳಸುವ ಹೊಸಹುಟ್ಟಿನ ಸಂಪ್ರದಾಯ ತ್ಯಜಿಸಿ, ಕೂಲಿಗಾರರು, ಭಿಕ್ಷುಕರಂಥ ಶ್ರೀಸಾಮಾನ್ಯರ ಮಾದರಿಗಳನ್ನು ಚಿತ್ರಿಸಿ ಕೊರೆಜ್ಜಿಯೊ ವಾಸ್ತವಿಕತೆಯ ಕ್ರಾಂತಿಯನ್ನೇ ಎಬ್ಬಿಸಿದ. ಈತ ಚಿತ್ರಿಸಿದ ವರ್ಜಿನ್ ಮೇರಿ ಹಾಗೂ ಏಸುವಿನ ಚಿತ್ರಗಳು ನಿತ್ಯಜೀವನದೊಂದಿಗೆ ನಿಕಟಸಂಬಂಧ ಕಲ್ಪಿಸಿ ನೈಜಚಿತ್ರಣಗಳಾದವು. ಹದಿನೆಂಟನೆಯ ಶತಮಾನದಲ್ಲಿ ಟೈಪೊಲೊ (1696–1770) ಎಂಬ ಇಟಲಿಯ ಚಿತ್ರಕಾರ ಭಿತ್ತಿಚಿತ್ರದ ರೂಢಿಗೆ ಹೊಸಜೀವ ತುಂಬಿದ. ಉದ್ಯಾನಗೃಹಗಳ (ವಿಲ) ಮೇಲ್ಛಾವಣಿಯ ಒಳಭಾಗವನ್ನು ಗ್ರೀಕ್ ದೇವತೆಗಳಿಂದ ತುಂಬಿಸಿದ. ಗೋಡೆಗಳನ್ನು ಬರಿದಾಗಿ ಬಿಡುವುದರ ಬದಲು ಅವುಗಳ ಮೇಲೆ ಕಂಬಸಾಲುಗಳನ್ನು ಚಿತ್ರಿಸಿ ಅವುಗಳ ಹಿಂದೆ ಕುಳಿತಂತೆ ಕಾಣುವ ಪುರಾಣೇತಿಹಾಸಗಳ ವ್ಯಕ್ತಿಗಳನ್ನೂ ಕಥನ ದೃಶ್ಯಗಳನ್ನೂ ಚಿತ್ರಿಸಿದ. ಟಿಷಿಯನ್‌ನಂತೆ ಇವನೂ ಕಣ್ಣುಕೋರೈಸುವಂಥ ಬಣ್ಣಗಳನ್ನು ವಿಸ್ತಾರವಾದ ಹಿನ್ನೆಲೆಯಲ್ಲಿ ಅಳವಡಿಸಿ ಪುರಾಣ ಕಾವ್ಯ, ಇತಿಹಾಸಗಳ ವ್ಯಕ್ತಿಗಳನ್ನು ಚಿತ್ರಿಸಿದ. ಈ ಅತಿರಂಜಕ ಶೈಲಿಯನ್ನು ರೊಕೊಕೊ ಶೈಲಿಯೆನ್ನುತ್ತಾರೆ.

ನಿಯೋಕ್ಲಾಸಿಕಲ್ ಯುಗವಾದ ಹದಿನೆಂಟನೆಯ ಶತಮಾನದಲ್ಲಿ ಗ್ರೀಕ್ ರೋಮನ್ ಅಭಿಜಾತ ಪರಂಪರೆಯನ್ನು ಅನುಸರಿಸಿದವ ಶಿಲ್ಪಿ ಕ್ಯಾನೊವ. ಗ್ರೀಕ್ ರೋಮನ್ ಶಿಲ್ಪಾಕೃತಿಗಳ ಸುಂದರ ಅನುಕರಣೆಯನ್ನು ಇವನ ಕೃತಿಗಳಲ್ಲಿ ಕಾಣಬಹುದು.

ಹತ್ತೊಂಬತ್ತನೆಯ ಶತಮಾನದ ಫ್ಲಾರೆನ್ಸ್ ಚಿತ್ರಕಾರರಲ್ಲಿ ಕೆಲವರು, ಫ್ರೆಂಚ್ ಕಲಾವಿದರ ಪ್ರಭಾವಕ್ಕೆ ಒಳಗಾಗಿ ಪರಿಣಾಮವಿಧಾನ (ಇಂಪ್ರೆಷನಿಸಂ) ತತ್ತ್ವವನ್ನು ಪ್ರತಿಪಾದಿಸಿದರು.

ಈ ಶತಮಾನದ ಪ್ರಾರಂಭದಲ್ಲಿ ಇಟಲಿಯ ಕೆಲವು ಚಿತ್ರಕಾರರು ತಮ್ಮನ್ನು ಸ್ವೇಚ್ಛಾಸಂಕೇತ ವಿಧಾನದವರು (ಫ್ಯೂಚರಿಸ್ಟ್ಸ್) ಎಂದು ವರ್ಣಿಸಿಕೊಂಡು ಹೊಸ ಕಾಲದ ಮಾನಸಿಕ ತುಡಿತ, ಬಡಿತ, ಕಲ್ಪನೆಯ ವೈಚಿತ್ರ್ಯಗಳನ್ನು ತಮ್ಮ ಚಿತ್ರಗಳಲ್ಲಿ ಅಭಿವ್ಯಕ್ತಗೊಳಿಸಲು ಪ್ರಾರಂಭಿಸಿದರು. ಹೊಸಕಾಲದ ಕಲಾವಿದರುಗಳಲ್ಲಿ ಸರಿಯಲಿಸಂ ಪಂಥವನ್ನು ಸಮರ್ಥಿಸಿದ ಚಿತ್ರಕಾರ ಚಿರಿಕೊ, ಪ್ರತಿಭಾನ್ವಿತ ಶಿಲ್ಪಿ ಮೆರಿನೊ ಇವರುಗಳು ಸೇರಿದ್ದಾರೆ. ನೆರ್ವಿ, ಪೋಂಟಿ ಮುಂತಾದ ಸಮಕಾಲೀನ ವಾಸ್ತುಶಿಲ್ಪಿಗಳು ಸಿಮೆಂಟ್ ಕಾಂಕ್ರೀಟ್ ಬಳಸಿ ಹೊಸ ಶೈಲಿಯ ವಾಸ್ತುಶಿಲ್ಪ ರಚಿಸಿ ಹೊಸ ಅಭಿವ್ಯಕ್ತಿಯಲ್ಲೂ ಇಟಲಿಯ ಅವಿಚ್ಛಿನ್ನ ಕಲಾ ಪರಂಪರೆ ಮಸಕಾಗಿಲ್ಲವೆಂದು ತೋರಿಸಿದ್ದಾರೆ.

ಕಾರವಗ್ಗಿಯೊ : ಬ್ಯಾಕಸ್. ಸು. 1595, ಫ್ಲಾರೆನ್ಸ್

**ಸಂಗೀತ ಕಲೆ:** ಉಳಿದೆಲ್ಲ ಲಲಿತಕಲೆಗಳಂತೆ, ಸಂಗೀತವೂ ಇಟಲಿಯಲ್ಲಿ ಮೊದಲು ಧರ್ಮಪ್ರಸಾರಕ್ಕೆ ಪೂರಕವಾದ ಅಭಿವ್ಯಕ್ತಿಯ ಸ್ವರೂಪದ್ದಾಗಿದ್ದು, ಕಾಲಾನುಗತಿಯಲ್ಲಿ ಲೌಕಿಕರೂಪ ತಳೆಯಿತು.

ಸ್ವಚ್ಛಂದವಾಗಿ ಹಾಡಬೇಕೆನ್ನುವ ಅಭಿವ್ಯಕ್ತಿಯ ಒತ್ತಡದಿಂದಲೋ ಏನೋ ಕಾಲಕ್ರಮೇಣ ಒಟ್ಟಿಗೆ ಹೆಚ್ಚು ಧ್ವನಿಗಳು ಸೇರಿ ವಿಭಿನ್ನ ಕೃತಿಯಲ್ಲಿ ಹಾಡುವ ಪಾಲಿಫೋನಿಕ್ ಪದ್ಧತಿ ಜನಪ್ರಿಯವಾಯಿತು. ಶತಮಾನಗಳ ಅನಂತರ ಮೂರು ನಾಲ್ಕು ಮಂದಿ ಕೂಡಿ ಹಾಡುವ

ಸಂಪ್ರದಾಯ ಬೆಳೆಯಿತು. ಇದರಿಂದ ಹಾಡಿನ ಸಾಹಿತ್ಯ ಅಸ್ಪಷ್ಟವಾಯಿತು. ಧರ್ಮಗೀತೆಗಳು ಅರ್ಥವಾಗದೆ ಗೊಂದಲವುಂಟಾಗಿ ಚರ್ಚಿನ ಅಧಿಕಾರಿಗಳು ಈ ರೀತಿ ಹಾಡುವುದನ್ನು ಪ್ರತಿಬಂಧಿಸಿದರು. ಆದರೆ ಈ ತೆರನ ಹಾಡುಗಾರಿಕೆಯನ್ನು ಜನ ಮೆಚ್ಚಿಕೊಂಡಿದ್ದರಿಂದ, ಅದು ಚರ್ಚಿನಿಂದಾಚೆ ಹೊರಳಿ, ಜನಮನದಲ್ಲಿ ಅರಳಲು ಪ್ರಾರಂಭಿಸಿತು. ಅನಂತರ ಹಾಡಿನೊಂದಿಗೆ ವಾದ್ಯಗಳನ್ನು ಬಳಸಿದರು.

ಮಧ್ಯಯುಗದಲ್ಲಿ ಇಟಲಿ ಸಂಗೀತ ಯುರೋಪಿನ ಹಲವೆಡೆಗಳಲ್ಲಿ ಹರಡಿತು. ಸಂಪೂರ್ಣವಾಗಿ ಕ್ರೈಸ್ತಮತಗಳು ಈ ತೆರನ ಸಂಗೀತವನ್ನು ಬಹಿಷ್ಕರಿಸಿದ ಮೇಲೆ ಅದರ ಆಕರ್ಷಣೆ ಹೆಚ್ಚಾಯಿತು. ತಂತಿವಾದ್ಯಗಳನ್ನು ನುಡಿಸುವುದರಲ್ಲಿ ನಿಪುಣನಾದ ಕುರುಡ ಫ್ರಾನ್ಸೆಸ್ಕೊ ಲ್ಯಾಂಡಿನಿ (1325–97) ಆ ಕಾಲದ ಶ್ರೇಷ್ಠ ಗಾಯಕ.

ಹೊಸಹುಟ್ಟಿನ ಕಾಲದಲ್ಲಿ ಮೇಳಗೂಡಿ ನಡೆಸುವ ಹಾಡುಗಾರಿಕೆ ಹೆಚ್ಚು ಸಂಕೀರ್ಣವಾಯಿತು. ಕ್ಲಿಷ್ಟವಾಯಿತು. ಕಾಲಕ್ರಮೇಣ ಮರೆಂಜಿಯೊ, ಜೆಸುಲ್ಡ ಮುಂತಾದ ಗಾಯಕರು ವಾದ್ಯಸಂಗೀತವನ್ನು ಜನಪ್ರಿಯಗೊಳಿಸಿದರು. ಮ್ಯಾಡ್ರಿಗಲ್ ಎಂಬ ಲಘುಸಂಗೀತ ರಚನೆಗಳು ಜನರನ್ನು ಆಕರ್ಷಿಸಿದವು. ಗ್ಯಾಬ್ರಿಯಲಿ ಮತ್ತು ಜೋವನಿ ಎಂಬುವರು ಮೊಟ್ಟಮೊದಲು ಹಿತ್ತಾಳೆ ವಾದ್ಯಗಳಲ್ಲಿ ನುಡಿಸುವ ಗೋಷ್ಠಿಗಾನಕ್ಕಾಗಿ ಕೃತಿಗಳನ್ನು ರಚಿಸಿದರು. ವಯಲ್ಸ್ ಎಂಬ ದೊಡ್ಡ ವಾದ್ಯಗಳ ಬದಲು, ನಾವು ಪಿಟೀಲು ಎನ್ನುವ ವಯಲಿನ್ ಪ್ರಚಂಡ ಜನಪ್ರಿಯತೆ ಗಳಿಸಿತು. ಇಟಲಿಯಲ್ಲಿ ಎಲ್ಲೆಲ್ಲೂ ಪಿಟೀಲು ತಯಾರಿಸುವವರೂ ನುಡಿಸುವವರೂ ಹುಟ್ಟಿಕೊಂಡರು.

18ನೆಯ ಶತಮಾನದಲ್ಲಿ ಉದಯವಾದ ಹೊಸ ಸಂಗೀತನಾಟಕ ಪ್ರಭೇದವೆಂದರೆ ಅಪೆರ. ರಾಗವಿನ್ಯಾಸ ಹಾಗೂ ವಾದ್ಯಗಳ ಬಳಕೆಗೆ ಅಪೆರದಲ್ಲಿ ಹೆಚ್ಚಿನ ಪ್ರಾಮುಖ್ಯ ದೊರೆಯಿತು. ಬರಬರುತ್ತ ಯುರೋಪಿನ ಎಲ್ಲ ದೇಶಗಳಲ್ಲೂ ಇಟಲಿಯ ಅಪೆರ ಹರಡಿತು. ಇಟಾಲಿಯನ್ ಸಂಗೀತಶಬ್ದಗಳು ಯುರೋಪಿಯನ್ ಭಾಷೆಗಳಲ್ಲಿ ಹೆಚ್ಚು ಬಳಕೆಗೆ ಬಂದವು.

ಪಿಯಾನೋ ವಾದ್ಯ ನುಡಿಸುವ ಪದ್ಧತಿ ಪ್ರಾರಂಭವಾದುದು ಕೇವಲ ಇಟಲಿಯಲ್ಲಿ ಮಾತ್ರವಲ್ಲದಿದ್ದರೂ ಅದು ಜನಪ್ರಿಯವಾಗುವಂತೆ ಮಾಡಿದವರು ಇಟಲಿಯ ಸಂಗೀತಗಾರರು. ಹೆಚ್ಚು ಸ್ವರ ವೈವಿಧ್ಯ ಸೃಜಿಸುವುದು ಸಾಧ್ಯವಾಯಿತಾದ್ದರಿಂದ ಇದು ಹೆಚ್ಚು ಬಳಕೆಗೆ ಬಂತು. ಇಟಲಿಯಲ್ಲಿ ಸಂಗೀತ ಕಲೆ ಹುಟ್ಟಿತಾದರೂ ಲೋಕವಿಖ್ಯಾತಿ ಪಡೆದ ರಚನಕಾರರ ಪರಂಪರೆ ಬೇರೆ ದೇಶಗಳಲ್ಲೂ ಸೃಷ್ಟಿಯಾಯಿತು. ಇಟಲಿಯ ರಚನಕಾರರಲ್ಲಿ ಯಾರೊಬ್ಬರೂ ಮೊಜಾರ್ಟ್, ಬೀತೋವೆನ್‌ರನ್ನು ಮೀರಿಸದಿದ್ದರೂ ಹದಿನೆಂಟನೆಯ ಶತಮಾನದ ವರ್ದಿ ಎಂಬಾತ 53 ಅಪೆರಗಳನ್ನು ಬರೆದು ಇಟಾಲಿಯನ್ ಅಪೆರದ ಶ್ರೀಮಂತಿಕೆ ಹೆಚ್ಚಿಸಿದ. ಕಳೆದ ಶತಮಾನದಲ್ಲಿ ಪೂಚಿನಿ ಹೆಚ್ಚು ಖ್ಯಾತಿ ಗಳಿಸಿದ.

ಆಧುನಿಕ ಯುಗದಲ್ಲಿ ಜಾನಪದ ಸಂಗೀತ ಇಟಲಿಯ ಸಂಗೀತದ ಮೇಲೆ ಪ್ರಭಾವ ಬೀರಿದೆ. ನಿಯೋಪಾಲಿಟನ್ ಗೀತೆಗಳೆಂದು ಹೇಳುವ ಪ್ರಣಯಾನುರಾಗದ ಹಾಡುಗಳು ಮೆಚ್ಚುಗೆ ಗಳಿಸಿವೆ. ಅಮೆರಿಕದ ಜಾಸ್ ಹಾಗೂ ಲ್ಯಾಟಿನ್ ಅಮೆರಿಕದ ಜಾನಪದ ನೃತ್ಯಗಳು ಇಟಲಿಯ ಸಂಗೀತದ ಮೇಲೆ ತಮ್ಮ ಮುದ್ರೆ ಒತ್ತಿವೆ. ಸಂಗೀತ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳು ನಡೆಯುತ್ತಿದ್ದು ಇಟಲಿಯ ಸಂಗೀತ ವಿಮರ್ಶಕರು ಇಂದಿಗೂ ವಿಪುಲವಾದ, ಸ್ವಾರಸ್ಯವಾದ ಚರ್ಚೆ ನಡೆಸುತ್ತಿದ್ದಾರೆ **(ನೋಡಿ- ಇಟಾಲಿಯನ್-ಸಂಗೀತ)**. (ಎಚ್.ಕೆ.ಆರ್.)

**ಇಟಾಲಿಯನ್ ಛಂದಸ್ಸು:** ಪ್ರಾಚೀನ ರೋಮನ್ನರು ಗೆದ್ದು ತಮ್ಮ ಚಕ್ರಾಧಿಪತ್ಯದೊಳಗೆ ಅಳವಡಿಸಿಕೊಂಡ ಪ್ರಾಂತ್ಯದಲ್ಲಿ ಜನರ ಆಡುನುಡಿಯೊಡನೆ ಲ್ಯಾಟಿನ್ ಪದಗಳೂ ಪದಪ್ರಯೋಗಗಳೂ ಬೆರೆಯುತ್ತ ಹೋಗಿ ಕ್ರಮೇಣ ಹೊಸ ಪ್ರಾಂತ್ಯ ಭಾಷೆಗಳು ಉತ್ಪತ್ತಿಯಾದವು. ಅವೇ ಮುಂದೆ ಪುಷ್ಟಿಗೊಂಡು ಸಾಹಿತ್ಯ ಮಾಧ್ಯಮವಾದವು. ಅವೆಲ್ಲ ಲ್ಯಾಟಿನ್ ಪ್ರಭಾವಕ್ಕೆ ಒಳಗಾದ ಲ್ಯಾಟಿನ್ ಮಿಶ್ರಿತ ದೇಶಭಾಷೆಗಳು. ಹೀಗೆ ಎದ್ದುಬಂದ ಫ್ರೆಂಚ್, ಸ್ಪ್ಯಾನಿಷ್, ಇಟಾಲಿಯನ್ ಇತ್ಯಾದಿ ಭಾಷೆಗಳಲ್ಲಿ ಲ್ಯಾಟಿನ್ನಿಗೆ ಅತಿ ಹತ್ತಿರವಾದದ್ದು ಇಟಾಲಿಯನ್. ವ್ಯಾಕರಣ ನಿಯಮದಲ್ಲಿ ಇಟಾಲಿಯನ್ ಲ್ಯಾಟಿನ್ನಿನಿಂದ ಸ್ಪಷ್ಟವಾಗಿ ಬೇರೆ; ಛಂದೋಮರ್ಯಾದೆಯಲ್ಲಾದರೂ ಒಂದೆರಡು ದೊಡ್ಡ ವ್ಯತ್ಯಾಸವನ್ನು ಬಿಟ್ಟರೆ ಒಟ್ಟಿನ ರಚನಾಧೋರಣೆ ಸರಿಸುಮಾರಾಗಿ ಲ್ಯಾಟಿನ್ ಕ್ರಮದ ಅನುಸರಣೆ. ರೋಮನರ ಪುರಾಣಕವಿ ವರ್ಜಿಲ್ ಪುರಾತನ ಗ್ರೀಕರ ಕಾವ್ಯಪದ್ಧತಿಯನ್ನೂ ಛಂದೋರೀತಿಯನ್ನೂ ತನ್ನ ದೇಶಭಾಷೆಯಾದ ಲ್ಯಾಟಿನ್ನಿನ ಮೇಲೆ ಸಾಹಿತ್ಯ ಸರ್ವಾಧಿಕಾರಿಯಂತೆ ಹೊರಿಸಿ, ಅತ್ಯುತ್ತಮ ಕಾವ್ಯಕ್ಕೆ ಅದು ಯೋಗ್ಯವಾಗುವಂತೆ ಮಾಡಿ, ಕೃತಕೃತ್ಯನಾದ. ಹಾಗೆಯೇ 13ನೆಯ ಶತಮಾನದ ಡಾಂಟೆ ತನ್ನ ದೇಶಭಾಷೆಯಾದ ಇಟಾಲಿಯನ್ನಿಗೆ ಲ್ಯಾಟಿನ್ ಕಾವ್ಯಪದ್ಧತಿಯನ್ನೂ ಛಂದೋರೀತಿಯನ್ನೂ ಕಲಾರಮ್ಯವಾಗಿ ಹೊಂದಿಸಿ ಗೆದ್ದ.

ಆದರೆ ಇಟಾಲಿಯನ್ ಜಾಯಮಾನಕ್ಕೆ ಯಾವ ಲಕ್ಷಣ ಸುಂದರವೂ ಸತ್ತ್ವಯುಕ್ತವೂ ಆಗಿದ್ದುವೋ ಅವನ್ನು ಡಾಂಟೆ ಕೈಬಿಡಲಿಲ್ಲ; ಉದಾಹರಣೆ : ಪ್ರಾಸ, ಪಂಕ್ತಿಪುಂಜ (ಸ್ಟ್ಯಾಂಜ). ಪದ್ಯಪಂಕ್ತಿಯನ್ನು ಲಯಬದ್ಧವಾಗಿಸುವ ಮಾತ್ರೆ ಮತ್ತು ಅವಧಾರಣೆಗಳಲ್ಲಿ (ಆ್ಯಕ್ಸೆಂಟ್) ಇಟಾಲಿಯನ್ ಮಾತ್ರಾನಿಯಮವನ್ನು ಆಧಾರ ಮಾಡಿಕೊಳ್ಳಲಾಗಿದೆ. ಆದರೆ ಲ್ಯಾಟಿನ್ನಿನ ದೀರ್ಘ ಹ್ರಸ್ವ ಕ್ರಮವನ್ನು ಸ್ವಲ್ಪಮಟ್ಟಿಗೆ ಸಡಿಲಗೊಳಿಸಿಕೊಂಡಿದೆ. ಒಂದು ಸಾಲಿನಲ್ಲಿ ಇಷ್ಟೇ ದೀರ್ಘ ಉಚ್ಚಾರಾಂಶ ಇಂಥದೇ ಸರಣಿಯಲ್ಲಿ ಬರಬೇಕು ಎಂಬ ಸೂತ್ರ ಲ್ಯಾಟಿನ್ನಿನಲ್ಲಿ ಕಡ್ಡಾಯ. ಇಟಾಲಿಯನ್ನಿನಲ್ಲಿ ಕವಿಗೆ ಸ್ವಾತಂತ್ರ್ಯ ಹೆಚ್ಚಿ ಗಣಗಳನ್ನು ಆತ ಅಗತ್ಯ ಬಿದ್ದಂತೆ ಬದಲಿಸಬಹುದು, ಮುಖ್ಯ ಘಾಟಿಗೆ ಭಂಗ ತರದಂತೆ. ಅದೂ ಅಲ್ಲದೆ ಹ್ರಸ್ವ ಉಚ್ಚಾರಾಂಶ ಎರಡೂ ಮೂರೂ ನಾಲ್ಕೂ ಅಧಿಕವಾಗಿ ಬಂದರೂ ಬರಬಹುದು; ಛಂದೋಗಣತಿಯಂತೆ ಆ ಆಧಿಕ್ಯದಿಂದ ಸಾಲಿಗೆ ದೋಷ ತಟ್ಟುವುದಿಲ್ಲ. ಹನ್ನೆರಡು ಉಚ್ಚಾರಾಂಶಗಳ ಹೆಕ್ಸಮೀಟರ್ ಗ್ರೀಕಿಗೂ ಲ್ಯಾಟಿನ್ನಿಗೂ ಚೆನ್ನಾಗಿ ಹೊಂದಿಕೊಂಡ ಪದ್ಯಪಂಕ್ತಿ; ಒಂದೊ ಎರಡೊ ಉಚ್ಚಾರಾಂಶ ಆಗೊಮ್ಮೆ ಈಗೊಮ್ಮೆ ಅವಶ್ಯವಾಗಿ ಬಂದರೂ ಪಂಕ್ತಿ ಹೆಕ್ಸಮೀಟರೇ. ಡಾಂಟೆ ತನ್ನ ಪುರಾಣ ಕಾವ್ಯಕ್ಕೆ ಹನ್ನೊಂದು ಉಚ್ಚಾರಾಂಶಗಳ ಸಾಲನ್ನು ರೂಢಿಸಿಕೊಂಡ; ಅದೇ ಹೆನ್‌ಡೆಕಸಿಲಬಲ್. ಆಗಾಗ ಹೆಚ್ಚುವರಿ ಉಚ್ಚಾರಾಂಶ ಇಟಾಲಿಯನ್ ನುಡಿಗಟ್ಟಿಗೂ ಡಾಂಟೆಯ ಪ್ರತಿಭೆಗೂ ಅನಿವಾರ್ಯವಾಯ್ತು. ಆದರೂ ಹೆನ್‌ಡೆಕಸಿಲಬಲ್ ಲಯಕ್ಕೂ ಓಟಕ್ಕೂ ಎಲ್ಲೂ ಚ್ಯುತಿಯಿಲ್ಲ. ಅವಧಾರಣೆ ಗೌಣಸಾಧನವಾದರೂ ಅದರ ಬಳಕೆ ಕಿವಿಗೆ ಇಂಪಾಗುವಂತೆ ಇಟಾಲಿಯನ್ ಕವಿವರ್ಗ ಮಾಡಬಲ್ಲುದು. ನಿಯತ ಮೊತ್ತಕ್ಕೆ ಎಣಿಕೆಯಲ್ಲಿ ಹೆಚ್ಚೆಂದು ತೋರುವ ಉಚ್ಚಾರಾಂಶಗಳು ಸಾಮಾನ್ಯವಾಗಿ ಇ (i) ಎ (e) ಅ (a) ಇತ್ಯಾದಿ ಹ್ರಸ್ವಸ್ವರ, ಅಥವಾ ಲ (le) ಎಡ್ (ed) ಚಿ (chi) ಇತ್ಯಾದಿ ಚಿಕ್ಕ ಸಂಯೋಜಕಗಳು; ಅವು ಮುಂದೆ ಬರುವ ದೊಡ್ಡ ಪದದೊಂದಿಗೆ ಕೂಡಿಕೊಂಡು ಅಧ್ಯಾಹಾರವಾಗುತ್ತವೆ. ಉದಾಹರಣೆ, ಲುಸೊ (l'uso) .

ಎ ಕ್ವಾನ್ಟ್ ಇಒ ಲ'ಬ್ಬಿಯ ಇನ್ ಗ್ರಾಡೊ ಮೆಂಟ್ರೈ ಇಒ ವಿವೊ
(E quant io l'abbia in grado mentre io vivo)
ಎಡ್ ಇಒ ಅ ಲುಇ; ಲಿ ಡೋಲ್ಸಿ ಡೆಟಿ ವೋಸ್ತ್ರಿ
( Ed io a lui; li dolci detti vostri ).

ಸ್ವರಾಧಿಕ್ಯದಿಂದಲೂ ಸ್ವರಪುನರುಕ್ತಿಯಿಂದಲೂ (ಅಸೊನೆನ್ಸ್) ಇಟಾಲಿಯನ್ ಪದ್ಯ ಕೋಮಲವಾಗುತ್ತದೆ, ಕಿವಿಗೆ ಮಧುರವಾಗುತ್ತದೆ.

ಅಂತ್ಯಪ್ರಾಸ ಇಟಾಲಿಯನ್ ಪದ್ಯದ ಹೆಗ್ಗುರುತು. ಪದ್ಯದ ಪಾದ ಕೊನೆ ಮುಟ್ಟಿತೆಂದು ತಿಳಿಸುವುದಕ್ಕೆ ಅದರಿಂದ ಬಹು ಸಹಾಯ ಎಂಬುದನ್ನು ಹೇಳಬೇಕಾಗಿಲ್ಲ. ಒಂದು ಪಾದದ ಕೊನೆಯೂ ಮುಂದಣ ಪಾದದ ಆದಿಯೂ ವಿರಾಮ ಬಯಸದೆ ಜೊತೆಗೊಂಡು ನಡೆಯಬೇಕಾದ ಸಂದರ್ಭದಲ್ಲಿ ಅಂತ್ಯಪ್ರಾಸ ಗಡಿಕಲ್ಲಾಗಿ ನಿಲ್ಲದೆ, ಪಾದದ ಓಟದೊಳಗೆ ಸೇರಿಕೊಂಡು, ಪದ್ಯದ ಮುನ್ನಡೆಗೆ ಸಹಾಯ ಮಾಡುತ್ತದೆ. ಅಂದರೆ ಪ್ರಾಸ ಪಾದದ ಅಂಚೂ ಆಗುತ್ತದೆ, ಒಡಲೂ ಆಗುತ್ತದೆ. ಇಂಥ ಮುಂದೋಟ (ಎಂಜಂಬ್ಮೆಂಟ್, ಓವರ್‌ಫ್ಲೊ) ಇಟಾಲಿಯನ್‌ನಲ್ಲಿ ಬಲು ಹೆಚ್ಚು; ಭಾಷೆ ಅದಕ್ಕೆ ಇಂಬಾಗಿದೆ, ಅಚ್ಚುಕಟ್ಟಾಗಿ. ಕವಿ ಎಷ್ಟರಮಟ್ಟಿಗೆ ಮುಂದೋಟ ಸಾಧಿಸಬಹುದೆಂದರೆ, ಒಂದು ಪಾದಾಂತ್ಯದಲ್ಲಿ ವಿಶೇಷಣವನ್ನಿಟ್ಟು ಮುಂದಿನ ಪಾದದ ಆದಿಯಲ್ಲಿ ನಾಮಪದವನ್ನು ಇಡಬಹುದು; ಹಾಗೆಯೇ ಸಂಖ್ಯಾವಾಚಕ ನಿರ್ದೇಶನವಾಚಕ ಸಂಯೋಜಕ ಮುಂತಾದುವನ್ನು ಅವುಗಳಿಗೆ ಅಂಟಿಕೊಳ್ಳುವ ಮೂಲ ಪದಗಳಿಂದ ಪ್ರತ್ಯೇಕಿಸಬಹುದು.

ಅವಧಾರಣೆ ಮುಖ್ಯವಾಗಿರುವ ಭಾಷೆಗಳಲ್ಲಿ ಏರಿಕೆ ಲಯ (ಅಸೆಂಡಿಂಗ್ ರಿದಮ್) ಇಳಿತ ಲಯಗಳನ್ನು (ಡಿಸೆಂಡಿಂಗ್ ರಿದಮ್) ಸ್ಪಷ್ಟವಾಗಿ ಬೇರ್ಪಡಿಸುವುದು ಸಾಧ್ಯ. ಈ ಎರಡು ಸಾಲನ್ನು ಲಕ್ಷಿಸಿ:

ಅಂಡ್ ಫೈವ್ ಅಂಡ್ ಡ್ರಮ್ ಅಂಡ್ ಸಿಗ್ನಲ್ ಫ್ಲೇರ್ಸ್ ಅ-ಬ್ರಾಂಡಿಷ್
ಥೌಸಂಡ್ ಅಂಡ್ ಮೋರ್, ಥ್ರಾಗಿಂಗ್ ದಿ ಬಾರ್ಬಿಕನ್

ಇವು ಇಟಾಲಿಯನ್ ಸಾಲುಗಳ ತರ್ಜುಮೆ, ಮೂಲದಲ್ಲಿ ಎರಡು ಸಾಲಿನ ಲಯವೂ ಹತ್ತಿರ ಹತ್ತಿರ; ಏತಕ್ಕೆಂದರೆ ಛಂದೋಗಣತಿಗೆ ಅವಧಾರಣೆಯ ಘಾತ ಪ್ರಧಾನ, ಉಚ್ಚಾರಾಂಶಗಳ ಸಂಖ್ಯೆ ಪ್ರಧಾನ.

ಇಟಲಿಯ ಛಂದಸ್ಸಿನ ಇನ್ನೊಂದು ವಿಶೇಷ ಲಕ್ಷಣ ಅದರ ಪಂಕ್ತಿ ಪುಂಜಗಳ ವೈವಿಧ್ಯ, ಕ್ರಮ, ಸೊಗಸು. ಯುರೋಪಿನ ಇತರ ಭಾಷೆಗಳೆಲ್ಲ ಇಟಾಲಿಯನ್ ಪಂಕ್ತಿಪುಂಜಗಳನ್ನು ಎರವಲು ಪಡೆದು ತಮ್ಮ ತಮ್ಮದನ್ನಾಗಿಸಿಕೊಂಡಿವೆ. ಡಾಂಟೆಯ ತ್ರಿಪದಿಗೆ ಟರ್ಜ಼ ರೀಮಾ (Terza Rima) ಎಂದು ಹೆಸರು. ಒಂದು ತ್ರಿಪದಿಯ ಪ್ರಾಸ ಎ ಬಿ ಎ ಆದರೆ ಮುಂದಣ ತ್ರಿಪದಿಯ ಪ್ರಾಸ ಬಿ ಸಿ ಬಿ. ಅದರ ಮುಂದಣದು ಸಿ ಡಿ ಸಿ; ಹಾಗೆಯೇ ಮುಂದುವರಿಕೆ. ಚೌಪದಿಗೆ ಎರಡು ವಿಧ: ಎ ಬಿ ಎ ಬಿ, ಎ ಬಿ ಬಿ ಎ. ಪಂಚಪದಿಗಿಂತಲೂ ಷಟ್ಪದಿಯ ಬಳಕೆ ಹೆಚ್ಚು. ಅದಕ್ಕಿಂತಲೂ ಹೆಚ್ಚು ಬಳಕೆ ಸಪ್ತಪದಿಗೆ, ಅಷ್ಟಪದಿಗೆ. ಮೂರೂ ಪ್ರಾಸ ಅವುಗಳಲ್ಲಿ ಬೇರೆ ಬೇರೆ ಕ್ರಮದಲ್ಲಿ. ಅಟ್ಟಾವರೀಮಾ ಎಂಬ ಅಷ್ಟಪದಿಗೆ ಬಹು ಪ್ರಸಿದ್ಧಿ. ಈ ಪ್ರಕಾರಗಳಿಗಿಂತ ಮಿಗಿಲಾಗಿ ಇಡೀ ಯುರೋಪನ್ನೇ ಆವರಿಸಿಕೊಂಡ ಪಂಕ್ತಿಪುಂಜ ಪೆಟ್ರಾರ್ಕ್ ಕಂಡುಹಿಡಿದ ಹದಿನಾಲ್ಕು ಪಂಕ್ತಿಗಳ ಸಾನೆಟ್. ಅದಕ್ಕೆ ಎರಡು ಅಂಗ: ಮೊದಲಣ ಎಂಟು ಪಂಕ್ತಿಗಳ ಆಕ್ಟೇವ್, ಆಮೇಲಣ ಆರು ಪಂಕ್ತಿಗಳ ಸೆಸ್ಟೆಟ್. ಆಕ್ಟೇವಿನ ಪ್ರಾಸ ಎ ಬಿ ಬಿ ಎ, ಎ ಬಿ ಬಿ ಎ; ಸೆಸ್ಟೆಟ್ಟಿನ ಪ್ರಾಸ ಸಿ ಡಿ ಇ ಯನ್ನು ಎರಡು ಮೂರು ಬಗೆಯಲ್ಲಿ ಇರಿಸುತ್ತದೆ.

ಸಾಂಪ್ರದಾಯಿಕತೆ ಇಟಲಿಯಲ್ಲಿ ಹೆಚ್ಚು. ಆದ್ದರಿಂದ ಪ್ರಾಸ ಬಿಡುವಿಕೆ, ಉದ್ದ ಮೊಟಕು ಸಾಲುಗಳ ಕೂಟ, ಮುಂತಾದ ಆಧುನಿಕ ವ್ಯಾಪಾರ ಇಟಲಿಯ ಸಾಹಿತ್ಯದಲ್ಲಿ ವಿರಳ.

(ಎಸ್.ವಿ.ಆರ್.)

**ಇಟಾಲಿಯನ್ ಭಾಷೆ:** ಇಟಲಿ ದೇಶದ ಶಿಷ್ಟ ಭಾಷೆ. ಸ್ವಿಟ್ಜರ್‌ಲೆಂಡ್ ಅಧಿಕೃತವಾಗಿ ಮನ್ನಣೆ ನೀಡಿರುವ ನಾಲ್ಕು ಭಾಷೆಗಳಲ್ಲಿ ಇದೂ ಒಂದು. ಅನೇಕ ಮಂದಿ ಇಟ್ಯಾಲಿಯನ್ನರು ಸ್ಥಳೀಯ ಉಪಭಾಷೆಗಳನ್ನು ಬಳಸುವುದರಿಂದಲೂ ಈ ಅಧಿಕೃತ ಭಾಷೆಯ ಮೇಲೆ ಸಂಪೂರ್ಣ ಪ್ರಭುತ್ವವನ್ನು ಹೊಂದಿಲ್ಲದೆ ಇರುವುದರಿಂದಲೂ ಇಟ್ಯಾಲಿಯನ್ ಭಾಷೆಯನ್ನು ಬಳಸುವವರ ಸಂಖ್ಯೆ ಎಷ್ಟೆಂಬುದನ್ನು ಅಂದಾಜುಮಾಡುವುದು ಕಷ್ಟ ಅಲ್ಲದೆ, ಇಟಲಿಯಿಂದ ಉತ್ತರ ಮತ್ತು ದಕ್ಷಿಣ ಅಮೆರಿಕ ದೇಶಗಳಿಗೆ ವಲಸೆ ಹೋಗಿರುವ ವ್ಯಕ್ತಿಗಳು ಇಟ್ಯಾಲಿಯನ್ ಭಾಷೆಯನ್ನು ಬಳಸುತ್ತಿದ್ದಾರೆ. ಪೂರ್ವ ಮೆಡಿಟರೇನಿಯನ್ ವಲಯದಲ್ಲೂ ಈ ಮೊದಲು ಇಟಲಿಯ ವಸಾಹತುಗಳಾಗಿದ್ದ ಆಫ್ರಿಕ ದೇಶದ ಭಾಗಗಳಲ್ಲೂ ಸಂಪರ್ಕ ಮಾಧ್ಯಮವೆಂಬಂತೆ ಇಟ್ಯಾಲಿಯನ್ ಭಾಷೆಯನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

ಇತರ ರೊಮಾನ್ಸ್ ಭಾಷೆಗಳಂತೆ, ಇಟ್ಯಾಲಿಯನ್ ಭಾಷೆ ಪ್ರಾಚೀನ ರೋಮನ್ ಗಣರಾಜ್ಯ ಮತ್ತು ಮುಂದಿನ ಸಾಮ್ರಾಜ್ಯದಲ್ಲಿ ಬಳಕೆಯಲ್ಲಿದ್ದ ಲ್ಯಾಟಿನ್ ಭಾಷೆಯ ದಿನನಿತ್ಯದ ಆಡುಮಾತಿನಿಂದ ರೂಪುಗೊಂಡದ್ದು. ಆಧುನಿಕ ಸಾಹಿತ್ಯಕ ಇಟ್ಯಾಲಿಯನ್ ಭಾಷೆಗೆ ಮೂಲಾಧಾರವಾಗಿರುವ 14ನೆಯ ಶತಮಾನದ ಟಸ್ಕನ್ ಭಾಷೆಗೂ 4ನೆಯ ಶತಮಾನದ ಲ್ಯಾಟಿನ್ ಭಾಷೆಗೂ ಅತ್ಯಂತ ನಿಕಟವಾದ ಸಂಬಂಧವಿತ್ತು. ಮಧ್ಯಯುಗದ ಅನಂತರ ಈ ಭಾಷೆಯ ರಚನೆಯ ಸ್ವರೂಪದಲ್ಲಿ ಯಾವ ಹೆಚ್ಚಿನ ಬದಲಾವಣೆಯೂ ಆಗಿಲ್ಲ. ಶಿಷ್ಟ ಇಟ್ಯಾಲಿಯನ್ ಭಾಷೆಯಲ್ಲಿ ಏಳು ಸ್ವರಧ್ವನಿಮಾಗಳೂ 19 ವ್ಯಂಜನಗಳೂ ಇವೆ. ಕಾಗುಣಿತ ಅದರ ಧ್ವನಿಮಾರಚನೆಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದೆ. ಲ್ಯಾಟಿನ್‌ನಲ್ಲಿರುವಂತೆಯೇ ಇಟ್ಯಾಲಿಯನ್ ಭಾಷೆಯಲ್ಲೂ ಎರಡು ಲಿಂಗಗಳು, ಎರಡು ವಚನಗಳು, ಮೂರು ವಿಭಕ್ತಿಗಳು (ಸರ್ವನಾಮಗಳಲ್ಲಿ ಮಾತ್ರ) ಮತ್ತು ಎಂಟು ಕಾಲಗಳು ಕಂಡುಬರುತ್ತವೆ. ಉದಾ : ಮೊಂಡೊ–ಪ್ರಪಂಚ, ಮೊಂಡಿ–ಪ್ರಪಂಚಗಳು (ಪುಲ್ಲಿಂಗ). ಪೋರ್ತ–ಬಾಗಿಲು, ಪೋರ್ತೆ–ಬಾಗಿಲುಗಳು (ಸ್ತ್ರೀಲಿಂಗ), ಎಗ್ಲಿ–ಅವನು, ಗ್ಲಿ–ಅವನಿಗೆ, ಲೊ–ಅವನನ್ನು, ವೆದೆರೆ–ನೋಡಲು, ವೆದೊ–ನಾನು ನೋಡುತ್ತೇನೆ. ವೆದವೂ–ನಾನು ನೋಡುತ್ತಿದ್ದೆ–ಇತ್ಯಾದಿ. ಇಟ್ಯಾಲಿಯನ್ ಭಾಷೆಯ ವಾಕ್ಯರಚನೆಯೂ ರುಮೇನಿಯನ್ ಅಥವಾ ಸ್ಪ್ಯಾನಿಷ್‌ನಂಥ ಸಂಪ್ರದಾಯನಿಷ್ಠ ರೋಮಾನ್ಸ್ ಭಾಷೆಗಳಲ್ಲಿರುವಂತೆಯೇ ಇದೆ. ಕ್ರಿಯಾಪದದ ಧಾತುರೂಪದೊಡನೆ ಒಂದು ಅಥವಾ ಎರಡು ಸರ್ವನಾಮ ಶಬ್ದಗಳನ್ನು (ಸಂಯುಕ್ತವಾಗಿ) ಬಳಸಬಹುದು. ಉದಾ: ಲೊ ವೆದೊ–ನಾನು ಅವನನ್ನು ನೋಡುತ್ತೇನೆ. ಮೇ ಲೊ ದ–ಅವನು ಅದನ್ನು ನನಗೆ ಕೊಡುತ್ತಾನೆ. ವಾಕ್ಯರಚನೆಯ ತಿರುಳು ಕ್ರಿಯಾಪದ. ಉದಾ : ವೆದೊ–ನಾನು ನೋಡುತ್ತೇನೆ. ಕರ್ತೃಪದ ಗೌಣ ಅಂಶವಾಗಿದ್ದು ಕಾರ್ಯನಿರತನಾಗುವ ವ್ಯಕ್ತಿಯ ಅಸ್ತಿತ್ವವನ್ನು ವಿವರಿಸುತ್ತದೆ ಅಥವಾ ಒತ್ತಿ ಹೇಳುತ್ತದೆ. ಉದಾ: ಲೊ ವೆದೊ–ನಾನು ನೋಡುತ್ತೇನೆ.

ಪ್ರಾಚೀನ ಇಟ್ಯಾಲಿಯನ್ ಭಾಷೆಯಲ್ಲಿನ ಶಬ್ದಕೋಶ ಬಹುವಾಗಿ ಲ್ಯಾಟಿನ್ ಭಾಷೆಯಿಂದಲೇ ನೇರವಾಗಿ ನಿಷ್ಪನ್ನವಾಗಿದೆ. ಉದಾ : ಹೋಮೊ ಎಂಬುದರಿಂದ ಉಒಮೋ (ಮನುಷ್ಯ), ಆರಮ್ ಎಂಬುವುದರಿಂದ ಓರೋ(ಚಿನ್ನ). ಪ್ರಾವೆನ್ಸಾಲ್ ಅಥವಾ ಫ್ರೆಂಚ್ ಭಾಷೆಯಿಂದ ಅನೇಕ ಶಬ್ದಗಳನ್ನು ಸ್ವೀಕರಿಸಲಾಗಿದೆ. ಉದಾ : ಪ್ರಾವೆನ್ಸಾಲ್ ಭಾಷೆಯ ವೆಂಜಾರ್ ಎಂಬುದರಿಂದ ವೆಂಜಿಯೇರ್ (ಸೇಡು ತೀರಿಸಿಕೊಳ್ಳುವುದು); ಅಥವಾ ಪ್ರಾಚೀನ ಫ್ರೆಂಚ್ ಭಾಷೆಯ ವಿಯೇಜ್ ಎಂಬುದರಿಂದ ವಿಯಾಜ್ಜಿಯೋ (ಪ್ರಯಾಣ). ಹೊಸಹುಟ್ಟಿನ ಕಾಲದಲ್ಲಿ ಲ್ಯಾಟಿನ್ ಭಾಷೆಯಿಂದಲೇ ನೇರವಾಗಿ ಶಬ್ದಗಳನ್ನು ಸ್ವೀಕರಿಸುವ ಪ್ರವೃತ್ತಿ ಹೆಚ್ಚಾಯಿತು. ಉದಾ: ಎತಿಯಾಮ್ (ಕೂಡ) ಎಂಬುದರಿಂದ ಎಜ್ಜಿಯಾಂದಿಯೋ (ಕೂಡ). ಈವನ್ (ಕೂಡ), ಮತ್ತು ದ್ಯೂಸ್–(ಇಂದ) ದೇವರು. ಬ್ಯಾರೋಕ್ ಅವಧಿಯಲ್ಲಿ ಸ್ಪ್ಯಾನಿಷ್ ಸ್ವೀಕರಣ ಕಾಣಬಂತು. ಉದಾ: ಅಟ್ರೆವಿಮಿಯೆಂಟೊ ಎಂಬುದರಿಂದ ಅಟ್ರೆವಿಮೆಂಟೋ (ಧೈರ್ಯ). ಆಧುನಿಕ ಯುರೋಪಿಯನ್ ಭಾಷೆಗಳಿಂದ ಇಟ್ಯಾಲಿಯನ್ ಭಾಷೆ ಶಬ್ದಗಳನ್ನು ಸ್ವೀಕರಿಸುತ್ತಿದೆ ಎಂಬುದಕ್ಕೆ ಈ ಕೆಳಕಂಡ ಉದಾಹರಣೆಗಳೇ ಸಾಕು. ಆಧುನಿಕ ಇಟ್ಯಾಲಿಯನ್ನಿನ ನೆಯ್‌ಲಾನ್ (ಇಂಗ್ಲಿಷಿನ ನೈಲಾನ್). ಸಬ್‌ಕಾನ್ಸಿಯೋ–ಸಬ್‌ಕಾನ್ಷಸ್–(ಫ್ರೆಂಚಿನ ಸಬ್‌ಕಾನ್ಸಿಯೆಂಟ್) ಮತ್ತು ಬೋಲ್‌ಸೆವಿಕೋ (ರಷ್ಯನ್ ಭಾಷೆಯ ಬೋಲ್‌ಷೆವಿಕ್).

(ಆರ್.ಎ.ಎಚ್.)

**ಇಟಾಲಿಯನ್ ಸಂಗೀತ:** ಇದು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡುದು 13ನೆಯ ಶತಮಾನದ ಸುಮಾರಿನಲ್ಲಿ. ಅಲ್ಲಿಯವರೆಗೆ ಗ್ರೀಕ್ ಮತ್ತು ರೋಮನ್ ಸಂಗೀತಗಳ ಪ್ರಾಚೀನ ಛಾಯೆಯಲ್ಲಿಯೇ ಅಜ್ಞಾತವಾಸವನ್ನು ಅನುಭವಿಸುತ್ತಿತ್ತು. ಈ ಸಂಗೀತದ ಪ್ರಾಚೀನತೆಯ ಹಾಡುಗಳು ಫ್ಲಾರೆನ್ಸಿನ ಮ್ಯಾಗ್ಲಿಯಾ ಬೆಕಿಯಾನ ಪುಸ್ತಕಭಂಡಾರದ ಹಸ್ತಪ್ರತಿಯಲ್ಲಿ ದೊರೆಯುತ್ತವೆ. ಇವು 13–14ನೆಯ ಶತಮಾನದಲ್ಲಿ ಕ್ರೈಸ್ತ ಸನ್ಯಾಸಿಗಳು ಪಶ್ಚಾತ್ತಾಪಪೂರ್ವಕವಾಗಿ ಪ್ರಾಯಶ್ಚಿತ್ತ ರೂಪದಲ್ಲಿ ಹಾಡುತ್ತಿದ್ದ ಲಾಉಡಿಸ್ಪಿರಿಚ್ಯು ಅಲಿ ಎಂಬ ಸ್ತುತಿಗೀತೆಗಳು. ಇವುಗಳ ರಚನಕಾರರಲ್ಲಿ ಜಾಕೊಪೊ ಡ ಟೋಡಿ (ಸು.1230–1306) ಪ್ರಮುಖನಾದವ. ಈ ಬಗೆಯ ಹಾಡುಗಳು ಜರ್ಮನಿಗೂ ಹರಡಿ ಅನಂತರ ಯುರೋಪಿನಲ್ಲೆಲ್ಲ ಪಸರಿಸಿ ನಿಂತವು. ದೇವಭಾಷೆಯಲ್ಲಿ ಅಲ್ಲದೆ ದೇಶೀಭಾಷೆಯಲ್ಲಿ ಸಹ ಮತಧರ್ಮದ ಕರ್ಮಾಚರಣೆಯ ಹಾಡುಗಳನ್ನು ರೂಪಿಸುವ ದೇಶೀಪ್ರವೃತ್ತಿಗೆ ಯುರೋಪಿನಲ್ಲಿ ಇದೇ ನಾಂದಿಯಾಯಿತು. ಸುಮಾರು ಇದೇ ಸಮಯದಲ್ಲಿ ಕರ್ಣಾಟಕದಲ್ಲಿ ಶಿವಶರಣರೂ ಹರಿದಾಸರೂ ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರನೂ, ತಮಿಳುನಾಡಿನಲ್ಲಿ ಪ್ರಾಚೀನ ಆಳ್ವಾರುಗಳೂ, ವ್ರಜಭಾಷೆಯಲ್ಲಿ ತುಲಸೀದಾಸರೂ ಸೂರದಾಸರೂ ಭಾರತೀಯ ಸಂಗೀತದಲ್ಲಿ ದೇಶಿಪದ್ಧತಿಯನ್ನು ಪ್ರಾರಂಭಿಸಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಇಟಲಿಯ ಲೌಕಿಕ ಸಂಗೀತದ ಉಗಮ 14ನೆಯ ಶತಮಾನದಲ್ಲಿ ಮಾಡ್ರಿಗಾಲೆ ಎಂಬ ಪುಟ್ಟ ಪ್ರೇಮಭಾವಗೀತೆಯಲ್ಲಿ ಕಾಣಬರುತ್ತದೆ. ಸಂವಾದರೂಪದ ಈ ಹಾಡು ಅನೇಕ ಚರಣಗಳಲ್ಲಿ ಇರುತ್ತಿದ್ದು, ಏಕಧಾತುಕವಾದ ಮಟ್ಟಿನಲ್ಲಿ, ಬೇಟೆಯ ಶೈಲಿಯಲ್ಲಿ, ವಾದ್ಯಸಂಗೀತದ ಪಕ್ಕವಾದ್ಯದೊಡನೆ ಇಬ್ಬರು ಸಂಭಾಷಣೆಯಲ್ಲಿ ಹಾಡುತ್ತಿದ್ದ ಕಾಚ್ಚಿಯ, ಪ್ರತಿ ಚರಣವೂ ಪುನಃ ಪಲ್ಲವಿಯ ಹಾಡಿಕೆಯಿಂದ ಮುಗಿಯುತ್ತಿದ್ದ, ನೃತ್ಯ ಛಂದಸ್ಸುಗಳಲ್ಲಿ ಹಾಡಲಾಗುತ್ತಿದ್ದ ಬಲ್ಲಾಟ ಹಾಗೂ ಕಡೆಯಲ್ಲಿ ಪುನರುಕ್ತವಾಗುತ್ತಿದ್ದ ರಿಟೊರ್ನೆಲ್ಲೊ ಎಂಬ ವಾದ್ಯಸಂಗೀತದ ಅಂಶ–ಇವನ್ನು ಒಳಗೊಳ್ಳುತ್ತಿತ್ತು. ಈ ಶತಮಾನದಲ್ಲಿ ನೃತ್ಯಗೀತೆಗಳೂ ಸ್ವಲ್ಪವಾಗಿ ಚರ್ಚ್ ಸಂಗೀತವೂ ಉಪಲಬ್ಧವಿವೆ. ಫ್ಲಾರೆನ್ಸಿನ ಸ್ಕ್ವೇಸಿಯಾ ಲೂಪಿಯಂಥ ಪ್ರಸಿದ್ಧ ಸಂಗೀತಗಾರರು ಈ ಕಾಲದಲ್ಲಿ ಕಂಡುಬರುತ್ತಾರೆ. ಆದರೆ ಮುಖ್ಯ ವಾಗ್ಗೇಯಕಾರರೆಲ್ಲರೂ ಡ್ಯೂಫೆ ಮತ್ತು ಜೋಸ್ಕ್ವಿನ್ ಡೆಸ್ ಪ್ರೆಸ್‌ನಂತೆ, ಔತ್ತರೇಯ ಯುರೋಪಿಯನ್ನರೇ.

**ಹದಿನಾರನೆಯ ಶತಮಾನ:** 16ನೆಯ ಶತಮಾನದ ವೇಳೆಗೆ ಹಾಲೆಂಡ್, ಡೆನ್ಮಾರ್ಕ್‌ಗಳಿಂದ ಬಹುಮಂದಿ ವಾಗ್ಗೇಯಕಾರರು ಇಟಲಿಗೆ ಬಂದು ನೆಲಸಿದರು. ಆದರೆ ಈ ವೇಳೆಗೆ ಫ್ರೊಟೋಲ ಎಂಬ ಸರಳವಾದ ಅನೇಕ ಚರಣಗಳುಳ್ಳ, ಅನೇಕರು ವಾದ್ಯದೊಡನೆ ಕೂಡಿ ಹಾಡುವ, ಒಬ್ಬರು ಅಥವಾ ನಾಲ್ವರು ಗಾಯಕರಿರುವ ಪ್ರಬಂಧಜಾತಿಯನ್ನು ಇಟಾಲಿಯನ್ನರೇ ನಿರ್ಮಿಸಿಕೊಂಡಿದ್ದರು. ಇದು ಅತಿಯಾಗಿ ಪ್ರಚಾರವಾಗಿ ಹಳಸಲು ಪ್ರಾರಂಭವಾದುದರಿಂದ ಇದಕ್ಕೆ ಉತ್ತರವಾಗಿ ಮ್ಯಾಡ್ರಿಗಲ್‌ನ ಹೊಸ ರೂಪಾಂತರವೊಂದನ್ನು (14ನೆಯ ಶತಮಾನದ ಮ್ಯಾಡ್ರಿಗಾಲೆ ಅಲ್ಲ) ಸೃಷ್ಟಿಸಿಕೊಳ್ಳಲಾಯಿತು. ಇದರಲ್ಲಿ ಸಮಷ್ಟಿರೂಪವಿದ್ದು ನುಡಿಗಳನ್ನು ಬೇರ್ಪಡಿಸಿರಲಿಲ್ಲ. ಮೆನೆಂಜಿಯೋ, ಗುಸುವಾಲ್ಡೋ ಮತ್ತು ಮಾಂಟವರ್ಡಿಗಳು 1530ರ ಸುಮಾರಿನಲ್ಲಿ ಅತಿಸರಳವಾಗಿದ್ದ ಇದನ್ನು ಪ್ರೌಢ ಸುಂದರ ಪ್ರಬಂಧವನ್ನಾಗಿಸಿದರು. 16ನೆಯ ಶತಮಾನ ಇನ್ನೂ ಹಲವು ವಿಧಗಳಲ್ಲಿ ಹೊಸತನ್ನು ಮೂಡಿಸಿತು. ಸುಗಮಗೇಯ ರೀತಿಯಾಗಿದ್ದ ಬ್ಯಾಲೆಟ್ಟೊ ಮುಂತಾದ ಹಾಡುಗಳು ಹುಟ್ಟಿ ಗಸ್ಟೋಲ್ಡಿ ಮುಂತಾದ ವಾಗ್ಗೇಯಕಾರರಿಂದ ಪುಷ್ಟವಾಗಿ ಬೆಳೆದುವು. ಕೌನ್ಸಿಲ್ ಆಫ್ ಟ್ರೆಂಟ್‌ನ (1562) ಸಲಹೆಯಂತೆ ಚರ್ಚ್ ಸಂಗೀತ ಸರಳವೂ ಸಾಮಾನ್ಯರಿಗೆ ಹೆಚ್ಚು ಸಾಧ್ಯವೂ ಆಯಿತು. ಈ ನಿಟ್ಟಿನಲ್ಲಿ ಪ್ಯಾಲೆಸ್ಟ್ರಿನ ಸಲ್ಲಿಸಿದ ಸೇವೆ ಸ್ಮರಣೀಯವಾದುದು. ಚಿಕ್ಕವರೂ ಧಾರ್ಮಿಕಗೋಷ್ಠಿಗಳಲ್ಲಿ ಹಾಡಬಹುದಾದ ಸರಳಧಾರ್ಮಿಕ ಗೋಷ್ಠಿಗಾನವನ್ನು ಈ ಕಾಲದಲ್ಲಿ ರಚಿಸಿ, ಇಂಥ ಪ್ರಥಮಗೋಷ್ಠಿಯನ್ನು ಎಮಿಲಿಯೊ ಡಿ ಕೆವೆಲಿಯರಿ ರೆಪ್ರೆಜೆಂಟೇಜಿಯೋನ್ ಡಿ ಅನಿಮ ಎ ಡಿಕಾರ್ಪೊ ಎಂಬ ರೂಪಕವನ್ನು ರಚಿಸಿ 1660ರಲ್ಲಿ ಹಾಡಿದ.

**ಆಪೆರದ ಹುಟ್ಟು:** ಪಾಶ್ಚಾತ್ಯ ಸಂಗೀತದಲ್ಲಿ ಇಂದು ಆಪೆರ ಎಂಬ ಪ್ರಸಿದ್ಧ ಗೇಯ ನಾಟಕ ಅಥವಾ ಗೇಯ ರೂಪಕದ ರೀತಿ ಇಟಲಿಯ ಫ್ಲಾರೆನ್ಸಿನಲ್ಲಿ, ಅಲ್ಲಿಯ ಬಾರ್ಡಿ ಮತ್ತು ಕಾರ್ಸಿ ಎಂಬ ಶ್ರೀಮಂತ ಪಾಳೆಯಗಾರರ ಆಶ್ರಯದಲ್ಲಿ ಹುಟ್ಟಿತು. ಈ ನಿಟ್ಟಿನಲ್ಲಿ ಮೊದಲು ಶ್ರಮಿಸಿದವರು ಗೆಲಿಲಿ, ಕಾಚ್ಚಿನಿ, ಕೆವಲಿಯರಿ ಮತ್ತು ಪೆರಿ. ಇದೇ ಆಶ್ರಯದಾತರಲ್ಲಿ ಕವಿಯಾಗಿದ್ದ ರಿನುಚ್ಚಿನಿಯ ಯೂರಿಡಿಸ್ ಎಂಬ ನಾಟಕಕ್ಕೆ ಸಂಗೀತವನ್ನು ಪೆರಿ ಮತ್ತು ಕಾಚ್ಚಿನಿ ಅಳವಡಿಸಿದರು. ಪ್ರಾಚೀನ ಗ್ರೀಕ್‌ನಾಟಕಗಳ ಸಂಗೀತಕ್ರಮವನ್ನು ಪುನರುಜ್ಜೀವನಗೊಳಿಸಲು ಆಪೆರ ಯತ್ನಿಸಿತು. ಇದು ಪ್ರಾರಂಭವಾದುದು ಒಬ್ಬರೇ ಹಾಡುವ ಅಥವಾ ಏಕಕಂಠಪ್ರಧಾನವಾದ, ನಿಷ್ಕೃಷ್ಟ ಪದೋಚ್ಚಾರಣೆಯ, ಮ್ಯಾಡ್ರಿಗಲ್‌ನ ಹೊಸರೂಪವೊಂದರಲ್ಲಿ. ಪಕ್ಕವಾದ್ಯ ಅತ್ಯಂತ ಸರಳವೂ ಸುಲಭವೂ ಆಗಿದ್ದರಿಂದ ಗಾಯಕ ಛಂದೋಲಯ ಕಾಲಗಳಲ್ಲಿ ರಸಾಭಿವ್ಯಕ್ತಿಗೆ ಅನುಸಾರವಾಗಿ ಸ್ವಂತಮನೋಧರ್ಮಕ್ಕೆ ಅನುಗುಣವಾಗಿ ಹಾಡಬಹುದಾಗಿತ್ತು. ಇದು ಸ್ವತಂತ್ರವೂ ಸಂಕೀರ್ಣವೂ ಬಹು ಜನಪ್ರಿಯವೂ ಆದ ಪ್ರಬಂಧ ಪ್ರಕಾರವಾದುದು ಮಾಂಟೆವರ್ಡಿಯ ಪ್ರತಿಭೆಯಿಂದ; 1607ರಲ್ಲಿ ಮಾಂಟುವದ ರಾಜಾಸ್ಥಾನದಲ್ಲಿ ಆತ ರಚಿಸಿದ ಫೆವೂಲಾ ಡಿ ಓರ್ಫಿಯೋ ಆಪೆರ ಚಳವಳಿಗೆ ನಾಂದಿಯಾಯಿತು. ಪ್ಯಾಲೆಸ್ಟ್ರಿನನಂತೆ ಆತ ಚರ್ಚ್‌ಸಂಗೀತವನ್ನೂ ಮ್ಯಾಡ್ರಿಗಲ್‌ಗಳನ್ನೂ ಗಮನಾರ್ಹವಾಗಿ ರಚಿಸಿದ್ದಾನೆ **(ವಿವರಗಳಿಗೆ–ನೋಡಿ–ಗೇಯರೂಪಕ)**.

**ವಾದ್ಯಸಂಗೀತ, ಸಂಗೀತ ಲಿಪಿ:** ವೆನಿಸ್ 16ನೆಯ ಶತಮಾನದಲ್ಲಿ ಆಪೆರಕ್ಕೆ ಪ್ರಸಿದ್ಧಿ ಪಡೆದಂತೆಯೇ ವಾದ್ಯಸಂಗೀತಕ್ಕೂ ಸಂಗೀತಲಿಪಿಗೂ ಕೇಂದ್ರವಾಯಿತು. ಬಹುಸ್ವರ ಶ್ರೇಣಿಯನ್ನು ಒಮ್ಮೆಗೇ ಹಾಡುವ, ವಾದನರಹಿತವಾದ, ಬೈಬಲ್‌ನಿಂದ ಉದ್ಧರಿಸಿಕೊಂಡ ಮಾತುಗಳಿಗೆ ಧಾತುರಚನೆ ಮಾಡಿದ ಮೋಟೆಟ್ ಎಂಬ ಪ್ರಬಂಧಜಾತಿಯ ಫ್ಲೆಮಿಷ್ ಪ್ರಭೇದಗಳನ್ನು ಆಂಡ್ರಿಯಾಗೇರಿಯಲಿ ಮತ್ತು ಕ್ಲಾಡಿಯ ಮೇರುಲೋಗಳು ಸ್ವತಂತ್ರವಾದ ವಾದ್ಯಪ್ರಬಂಧಗಳನ್ನಾಗಿ ಪರಿವರ್ತಿಸಿದರು. ಇವನ್ನು ಜೋವಾನಿ ಗೇಬ್ರಿಯಲಿ ಆರ್ಗನ್ ವಾದ್ಯದಲ್ಲಿ ವಿಶೇಷವಾಗಿ ಸಂವರ್ಧಿಸಿದ. ನೃತ್ಯಗೀತೆಗಳನ್ನೂ ಲಘುಗೀತೆಗಳನ್ನೂ ಈ ಕಾಲದಲ್ಲಿ ವಾದ್ಯಗಳಿಗೆ ಅಳವಡಿಸಲಾಯಿತು. ಟಾಕಟಾ ಎಂಬ ಒಂದು ಹೊಸ ವಾದನ ತಂತ್ರವನ್ನು ಪಾಂಡಿತ್ಯ ಪ್ರದರ್ಶನ ಹಾಗೂ ವಾದ್ಯದ ಸಕಲ ಸಾಧ್ಯತೆಗಳ ಸಾಕ್ಷಾತ್ಕಾರಗಳಿಗೆಂದೇ

ನಿರ್ಮಿಸಲಾಯಿತು. ಮತ್ತೊಂದು ಹಾಡಿನಿಂದ ಅನುಕರಿಸಿಕೊಳ್ಳುವ ಧಾತುವುಳ್ಳ, ಎರಡು ಅಥವಾ ಮೂರು ಭಾಗಗಳಲ್ಲಿ ರಚಿತವಾದ ಕನ್‌ಜೋನ ಎಂಬ ವಾದ್ಯಪ್ರಬಂಧವೂ ಬಹುಸ್ವರಶ್ರೇಣಿಯಲ್ಲಿ ಪ್ರಾರಂಭವಾಗಿ, ಪಾಂಡಿತ್ಯಪೂರ್ಣವಾಗಿ, ಆಧುನಿಕ ಫ್ಯೂಗ್ ಪ್ರಬಂಧಕ್ಕೆ ಮಾತೃಕೆಯಾಗಿದ್ದ ರಿಚರ್ಕಾರ್ ಎಂಬ ವಾದ್ಯ ಪ್ರಬಂಧವೂ ಈ ಯುಗದಲ್ಲಿ ಬೆಳೆದುವು. ಫ್ರೆಸ್ಕೋಬಾಲ್ಡಿ ರಿಚರ್ಕಾರನ್ನು ಪರಿಪುಷ್ಟಗೊಳಿಸಿದ. ಗೇಬ್ರೆಯಲಿ ಮನೆತನದವರು ಚರ್ಚ್ ಸಂಗೀತವನ್ನು ವಾದ್ಯಕ್ಕೆ ಬರೆದು ಹರಡಿದರು. ವೆನಿಸ್ಸಿನಲ್ಲಿ ಚರ್ಚ್ ಸಂಗೀತ ವಾದ್ಯಪ್ರಧಾನವಾಗಿಬಿಟ್ಟುದರ ಪ್ರತಿಕ್ರಿಯೆಯಾಗಿ ಆನೆರಿಯೋ ಸೋದರ ನಾನಿನಿ ಸೋದರರು ವಾದ್ಯಗಳೇ ಇಲ್ಲದೆ ಮಾಡುವ ಆ ಕಾಪೆಲ್ಲ ಶೈಲಿಯನ್ನು ರೋಂನಲ್ಲಿ ಬೆಳೆಸಿದರು. ಬಹು ಸಂಖ್ಯೆಯಲ್ಲಿ ವಾದ್ಯವೈವಿಧ್ಯವನ್ನು ಬಳಸುವ ಆರ್ಕೆಸ್ಟ್ರಾಗಳ ಮೂಲಕ ಮಾಂಟೆವರ್ಡಿ ತನ್ನ ಆಪೆರಗಳನ್ನು ರಚಿಸಿದ.

**ವಾದ್ಯಸಂಗೀತದ ಉತ್ಕರ್ಷ:** 17–18ನೆಯ ಶತಮಾನಗಳು ಮತ್ತೆ ಕೆಲವು ನವ್ಯಸಾಧನೆಗಳನ್ನು ಇಟಲಿಗೆ ತಂದುಕೊಟ್ಟವು. ವಾದ್ಯಸಂಗೀತ ಈ ಯುಗದಲ್ಲಿ ಹೆಚ್ಚಿನ ಉತ್ಕರ್ಷವನ್ನು ಸಾಧಿಸಿತು; ಆಂಡ್ರಿಯ ಆಮಾಟಿ, ಬರ್ಟೊಲಾಟಿ (ಗ್ಯಾಸ್ಪಾರೋ ಡ ಸಾಲೋ) ಮತ್ತು ಆಂಟೋನಿಯೋ ಸ್ಟ್ರ್ಯಾಡಿವೆರಿಗಳು ನಾದಶಾಸ್ತ್ರದಲ್ಲಿ ಅದ್ಭುತ ಸಂಶೋಧನೆಯಿಂದ ಪಿಟೀಲನ್ನು ಉತ್ತಮಗೊಳಿಸಿದರು. ಪಿಟೀಲಿನ ಸ್ವರದ ಬಲವನ್ನು ಕ್ರಮೋನದ ಗ್ವಾರ್ನಿಯರಿ ಅಭಿವೃದ್ಧಿಗೊಳಿಸಿದ. ಗಾರ್ತೋಲೋಮಿಯೋ ಕ್ರಿಸ್ಟೋಫರಿ ಆಧುನಿಕ ಪಿಯಾನೋ ವಾದ್ಯಕ್ಕೆ ಜನಕನಾದ. ವಾದ್ಯಸಂಗೀತಕ್ಕೆ ಸ್ವರಲಿಪಿಯನ್ನು ಅಳವಡಿಸುವ ಪ್ರಯತ್ನ ಮೊದಲಾದದ್ದೂ ಈ ಕಾಲದಲ್ಲಿಯೇ. ಮಂದ್ರತಮಸ್ಥಾಯಿಯಲ್ಲೆ ಬರುವ ಸ್ವರವಿರಾಮಗಳನ್ನು ಮಾತ್ರ ಗುರುತುಹಾಕಿ ಊರ್ಧ್ವಸ್ವರಶ್ರೇಣಿಗಳನ್ನು (ಕಾರ್ಡ್) 1, 2 ಮುಂತಾದ ಅಂಕಗಳಿಂದ ಸೂಚಿಸುವ ಫಿಗರ್ಡ್ ಬಾಸ್ ಎಂಬ ಶೀಘ್ರಲಿಪಿ ಪದ್ಧತಿಯೂ ನೀಚತಮ ಸ್ವರಗಳನ್ನು ಮಾತ್ರ ಗುರುತುಹಾಕಿ ಕಾರ್ಡ್‌ಗಳನ್ನು ಅರಬ್ಬೀ ಅಂಕಗಳಿಂದ ಸೂಚಿಸುವ ಥರೋ ಬಾಸ್ ಎಂಬ ಶೀಘ್ರಲಿಪಿ ಪದ್ಧತಿಯೂ ರೂಢಿಗೆ ಬಂದವು. ಈ ಶತಮಾನಗಳಲ್ಲಿಯೇ ಆಪೆರದಂತೆ ಮೇಳವನ್ನು ಪ್ರಮುಖವಾಗಿ ಉಳಿಸಿಕೊಂಡು ಆಪೆರವನ್ನು ಹೋಲುವ, ಆದರೆ ಅಭಿನಯ, ನೇಪಥ್ಯ ರಂಗಸಜ್ಜಿಕೆಗಳಿಲ್ಲದ ಓರಟೋರಿಯೋ ಉದ್ಭವಿಸಿತು. ಕ್ಯಾರಿಸ್ಸಿಮಿ ಇದರ ಪ್ರಸಿದ್ಧ ಪ್ರವರ್ತಕನಾದ. ಆದರೆ ದೃಶ್ಯಪ್ರಧಾನವಾದ ಬ್ಯಾರೋಕ್ ರೀತಿಯ ಆಪೆರಗಳಲ್ಲೆ ಕ್ಯವಿಲೆ, ಚೇಸ್ಟಿ ಮುಂತಾದವರು ವೆನಿಸ್ಸಿನಲ್ಲೂ ಪ್ರತಿಭಾಸಂಪನ್ನ ವಾಗ್ಗೇಯಕಾರನಾದ ಅಲೆಗ್ಸ್ಯಾಂಡ್ರೋ ಸ್ಕಾರ್ಲಟ್ಟಿ ರೋಂ ಮತ್ತು ನೇಪಲ್ಸ್‌ಗಳಲ್ಲೂ ಓರಟೋರಿಯೋದಿಂದ ಮೇಳವನ್ನು ಕಿತ್ತುಹಾಕಿದರು. ಆಪೆರದಲ್ಲಿ ಪೀಠಿಕಾರೂಪದ ಸಂಗೀತವಾದ ವರ್ಚರ್‌ನಲ್ಲಿ ಡ ಕಾಪೋ ಎಂಬ ರೀತಿ, ಸೆಕೋ ಎಂಬ ವಾದ್ಯರಹಿತವಾದ, ಸ್ಟ್ರುಮೆಂಟೀಟೋ ಎಂಬ ವಾದ್ಯಸಹಿತವಾದ ಪಾಠ್ಯರೀತಿಗಳು ಉಚ್ಛ್ರಾಯಗೊಂಡುದೂ ಆ ಕಾಲದಲ್ಲೇ. ಇದೇ ಸುಮಾರಿನಲ್ಲಿ ಪಿಟೀಲಿಗಾಗಿಯೇ ಸಂಗೀತ ರಚನೆ ಮಾಡಿದ ಗಾರೆಲ್ಲಿ, ವೀಟಾಲಿ, ಜೆಮಿನಿಯಾನಿ, ವೆರಾಚಿನಿ, ಟಾರ್ಟಿನಿ ಮುಂತಾದವರು ಮೆರೆದರು. ಬಿರ್ಡಿನಿ, ನಾರ್ಡಿನಿ. ಪೂನ್ಯಾನಿ ಹಾಗೂ ಮಹಾಪ್ರತಿಭಾವಂತನಾದ ವಿವಾಲ್ಡಿ–ಇವರು ಪಿಟೀಲಿನ ಸಂಗೀತವನ್ನು ಇಟಲಿಯಲ್ಲಿ ಮೆರೆಸಿದ ಧೀಮಂತ ವಾಗ್ಗೇಯಕಾರರು. ಹಾರ್ಪ್ಸಿಕಾರ್ಡ್ ವಾದ್ಯದ ಸಂಗೀತವನ್ನು ವಿಶೇಷವಾಗಿ ಡೊಮಿನ್ನಿಯೋ ಸ್ಕಾರ್ಲಟ್ಟಿ ರಚಿಸಿ ಸೊನ್ಯಾಟಾ ಎಂಬ ವಾದ್ಯಸಂಗೀತ ಪ್ರಬಂಧಕ್ಕೆ ಆದಿಪುರುಷನಾದ. ಪೂರ್ಣವಾದ, ವಾದ್ಯಬಾಹುಳ್ಯವುಳ್ಳ ವೃಂದಗಳಿಗಾಗಿ ರಚಿಸಿದ ಕನ್ಸರ್ಟೋ ಗ್ರಾಸೋ ಮತ್ತು ತಂತೀವಾದ್ಯ ಬೃಂದವೂ ಈಗಲೇ ರೂಢಿಪಡೆದವು. ಸಿಂಫೊನಿ ಎಂದು ಈಗ ಬಹು ಪರಿಚಿತವಾಗಿರುವ ಮಹಾಪ್ರಬಂಧದ ಮೂಲಪುರುಷನಾದ ಸಮ್ಮಾರ್ಟಿನಿ ಈ ಯುಗದವ. ಬೊಕ್ಕೆರಿನಿ ಅಲ್ಪಶ್ರೋತೃಸಮುದಾಯಕ್ಕಾಗಿ ಪ್ರತ್ಯೇಕವಾಗಿ ಸಂಗೀತವನ್ನು (ಚೇಂಬರ್ ಮ್ಯೂಸಿಕ್) ರಚಿಸಿದ.

ಕವಲೊಡೆದ ಆಪೆರ: 18ನೆಯ ಶತಮಾನದ ಪೂರ್ವಾರ್ಧದಲ್ಲಿಯೇ ಆಪೆರ ಕವಲೊಡೆದು ಎರಡಾಯಿತು; ನೇಪಲ್ಸ್‌ನಲ್ಲಿ ಲಿಯೊನಾರ್ಡೊ ಲಿಯೊ ಲೋಗ್ರೊಸಿನೋ, ಗುಗ್ಲೆಲ್ಮಿ, ಪಿಚ್ಚಿನಿ ಮುಂತಾದ ವಾಗ್ಗೇಯಕಾರರ ನೇತೃತ್ವದಲ್ಲಿ ಜನಸಾಮಾನ್ಯರೇ ಪಾತ್ರಗಳಾದ ಪ್ರಹಸನರೂಪದ ಆಪೆರ ಬೂಫಾ ಬೆಳೆದು ಬಲಿಯಿತು; ಇದರಲ್ಲಿ ಸಾಮೂಹಿಕ ಗಾನ, ದ್ವಂದ್ವಗಾನ, ತನಿಯಾದ ಆರಿಯಾಗಳು ಕೂಡಿಕೊಂಡವು; ಹೀಗೆ ಉಳಿದುಬಂದಿರುವ ಏಕಾಂಕ ಗೇಯಪ್ರಹಸನಗಳಲ್ಲಿ ಮತ್ತು ಅಂಕಗಳ ಮಧ್ಯದಲ್ಲಿರುವ ಧ್ರುವಾಸಂಗೀತದಲ್ಲಿ ಪೆರ್ಗೋಲೆಸಿ ರಚಿಸಿದ ಲಾ ಸೆರ್ವವೇ ಅತ್ಯಂತ ಮುಖ್ಯವಾದುದು. ಇದೇ ಕಾಲದಲ್ಲಿ ಮಾತೆಲ್ಲವೂ ಪಾಠ್ಯರೂಪದ ವಾಚನದಲ್ಲಿಯೇ ಇದ್ದ ಸಾಮೂಹಿಕಗಾನ ವಾದನಗಳು ಪ್ರಧಾನವಾಗಿದ್ದ ಆಪೆರ ಸೀರಿಯ ನೇಪಲ್ಸ್‌ನಲ್ಲಿಯೇ ಜ಼ೀನೋ ಮತ್ತು ಮೆಟಸ್ಟೇಸಿಯರಿಂದಲೂ ಇತರ ಇಟ್ಯಾಲಿಯನ್ ವಾಗ್ಗೇಯಕಾರರಾದ ಬೊಮ್ಮೆಲ್ಲಿ, ಟ್ರಾಎಟ್ಟ, ಮಾಇಒ–ಇವರಿಂದಲೂ ಬೆಳೆಯಿತು. ಕೇವಲ ವಿನೋದಕ್ಕಾಗಿ ಬರೆದ ಗೇಯಪ್ರಹಸನಗಳನ್ನು ಸಾರ್ಟಿ, ಪೈಸಿಯಲ್ಲೊ, ಗಜ್ಜಾನಿಗ, ಚಿಮರೋಸಗಳು ಮುಂದಕ್ಕೆ ತಂದರು.

19ನೆಯ ಶತಮಾನದಿಂದ ಪ್ರಥಮ ಪಾದದವರೆಗೂ ಇಟಾಲಿಯನ್ ಸಂಗೀತದಲ್ಲಿ ಆಪೆರದ ಪ್ರಾಧಾನ್ಯ ಬೃಹತ್ತಾಗಿ ಮೂಡಿತು. ಮರ್ಕಡ್ಯಾಂಟಿ ಮತ್ತು ಪಾಚಿನಿಯರಂಥ ವಾಗ್ಗೇಯಕಾರರೂ ದೊಡ್ಡ ಆಪೆರಗಳನ್ನು ನಿರ್ಮಿಸಿದರು. ಮಹಾಪ್ರಭಾವಶಾಲಿಗಳಾದ ರೋಸ್ಸಿನಿ ಮತ್ತು ಡೊನಿಜೆಟ್ಟಿ, ಬೆಲ್ಲಿನಿಗಳೂ ಅದರ ಗುಣಗಾತ್ರಗಳನ್ನು ಸಂವರ್ಧಿಸಿದರು. ಈ ಯುಗದಲ್ಲಿ ವರ್ಡಿಯೇ ಇವರೆಲ್ಲರಿಗಿಂತ ಮಹತ್ತು ಬೃಹತ್ತುಗಳಲ್ಲಿ ಸಮಾನನಾದ ವಿಭೂತಿ ವಾಗ್ಗೇಯಕಾರನೆಂಬುದು ನಿಸ್ಸಂದೇಹ. ಈತ ಆಪೆರಗಳನ್ನೇ ಅಲ್ಲದೆ ಇತರ ಪ್ರಬಂಧರೀತಿಗಳನ್ನೂ ರಚಿಸಿದ್ದಾನೆ. ಇದೇ ಕಾಲದಲ್ಲಿ ಸ್ಗಂಬಟಿ ಮತ್ತು ಮಾರ್ಟೊಚ್ಚಿಯಂಥ ಪ್ರಮುಖರು ಏಕಾಂಗ ವೀರರಾಗಿ ಶುದ್ಧ (ಮಾತುಗಳಿಲ್ಲದ) ಸಂಗೀತವನ್ನು ಬೆಳೆಸಿದರು; ಪೊಂಚಿಯಲ್ಲಿಯೂ ರಿಚ್ಚಿ ಸೋದರರೂ ನವರಸಪ್ರಧಾನವಾದ ವೆರಿಸ್ಮೋ ಎಂಬ ಶೈಲಿಯನ್ನು ಆಪೆರದಲ್ಲಿ ಪ್ರಸಿದ್ಧಿಗೆ ತಂದರು. ಇದರ ಅತಿರೇಕ ಮ್ಯಾಸ್ಕಾನ್ಯಿ ಮತ್ತು ಜಾರ್ಡನೋಗಳ ರಚನೆಗಳಲ್ಲಿ ಕಾಣುತ್ತದೆ. ಆಧುನಿಕ ತಂತ್ರ, ಸಾಮಗ್ರಿ, ಸಾಧನಗಳನ್ನು ಬಳಸಿ ಆಪೆರಗಳನ್ನು ರಚಿಸಿದ ಲುಚ್ಚ ಜಾಕೋಮೊ ಪೂಚ್ಚಿನಿ ಆಧುನಿಕ ಪಾಶ್ಚಾತ್ಯ ಸಂಗೀತ ಕಚೇರಿಗಳಲ್ಲಿ ಆಪೆರಕ್ಕೆ ಹಿರಿಯಸ್ಥಾನವನ್ನು ಕಲ್ಪಿಸಿಕೊಟ್ಟ ಮಹಾ ಪ್ರತಿಭಾಸಂಪನ್ನ; ರಂಗಸಜ್ಜಿಕೆಯ ತಂತ್ರಗಳನ್ನು ಉಪಯೋಗಿಸಿಕೊಂಡು ಸಂಗೀತದ ಮೂಲಕ ವಾತಾವರಣ, ರಸಾನುಭೂತಿ ಮತ್ತು ಸಂವೇದನೆಗಳನ್ನು ಉಂಟುಮಾಡುವುದರಲ್ಲಿ ಈತ ಅದ್ವಿತೀಯ. ಇವನ ಅನಂತರ ಪಿಜೆಟ್ಟಿ ಗಾಂಭೀರ್ಯಪ್ರಧಾನವಾದ ಆಪೆರಗಳನ್ನೂ ಒಟ್ಟೊರಿನೋರೆಸ್ಪಿಘಿ ಆಪೆರ, ಆರ್ಕೆಸ್ಟ್ರ ಮತ್ತು ಚೇಂಬರ್ ಮ್ಯೂಸಿಕ್‌ಗಳನ್ನೂ ರಚಿಸಿದ್ದಾರೆ. ಮಲಿಪಿಯರೋ ಮತ್ತು ಕೆಸೆಲ್ಲಗಳು ಈ ಯುಗದ ಸಂಗೀತ ರಚನಾಪ್ರಯೋಗ ಪಟುಗಳು. ಫೇಡಿನಿ ತನ್ನ ಸಂಗೀತದಲ್ಲಿ ಆಧುನಿಕ ಸಂಪ್ರದಾಯದ ಮುನ್ಸೂಚನೆಗಳನ್ನು ತೋರಿಸಿದ್ದಾನೆ. ಆಧುನಿಕ ಇಟಾಲಿಯನ್ ವಾಗ್ಗೇಯಕಾರರಲ್ಲಿ ಡಲ್ಲಾ ಪಿಚ್ಚೋಲನನ್ನು ಹೆಸರಿಸಬಹುದು.

**ಪರದೇಶಗಳಲ್ಲಿ ಇಟಾಲಿಯನ್ ಸಂಗೀತ:** 19ನೆಯ ಶತಮಾನದಿಂದಲೂ ಹಲವು ಇಟಾಲಿಯನ್ ಸಂಗೀತಗಾರರು ಪರದೇಶಗಳಿಗೆ ವಲಸೆಹೋಗಿ ಅಲ್ಲಿ ತಮ್ಮ ಸಂಗೀತ ಪ್ರತಿಭೆಯನ್ನು ಪ್ರದರ್ಶಿಸಿದರು. ಹೀಗೆ ಇಂಗ್ಲೆಂಡಿನಲ್ಲಿ ಕ್ಲೆಮೆಂಟಿ ಮತ್ತು ರಾಉಜ್ಜಿನಿ, ಪ್ಯಾರಿಸ್ಸಿನಲ್ಲಿ ಪಾಎರ್, ಸ್ಪೊಂಟಿನಿ, ಚೆರುಬಿನಿ, ವಯೊಲಾಟ್ಟಿ ಮುಂತಾದವರು ಖ್ಯಾತಿವೆತ್ತವರು. ಪೆಗಾನಿನಿ ಪಿಟೀಲಿನಲ್ಲೂ ಕ್ಲೆಮೆಂಟಿ ಪಿಯಾನೋದಲ್ಲೂ ಡೊಮೆಸ್ಸಿಯೋ ಸ್ಕಾರ್ಲಟ್ಟಿ ಹಾರ್ಪ್ಸಿಕಾರ್ಡ್‌ನಲ್ಲೂ ಅದ್ಭುತ ಸಾಧನೆಗಳಿಂದ ಜಗದ್ವಂದ್ಯರಾದರು. ಅಮೆರಿಕದ ಸಂಯುಕ್ತ ಸಂಸ್ಥಾನಕ್ಕೆ ವಲಸೆಹೋಗಿ ನೆಲೆಸಿದ ಇಟಾಲಿಯನ್ ವಾಗ್ಗೇಯಕಾರ–ಸಂಗೀತಕಾರರಲ್ಲಿ ಜಾನ್ ಕಾರ್ಲೊಮೆನಾಟ್ಟಿ, ವಾಲ್ಟರ್ ಪಿಸ್ಟನ್ ಮತ್ತು ಪಾಲ್ ಕ್ರೆಸ್ಟನ್ನರು ಬಹುಶ್ರುತರು.

**ಆಧುನಿಕ ಇಟಾಲಿಯನ್ ಸಂಗೀತ:** ಆಧುನಿಕ ಇಟಲಿಯಲ್ಲಿ ಗಿಡೋ ಎಂ. ಗಾಟ್ಟಿ, ಫೋಸ್ಟೋ ಅಕಾನ್‌ಫೊರ ಡಿ ಟಾರ್ರೆಫ್ರಾಂಕಾ, ಫರ್ನಾಂಡೋ ಲೂಇಜ್ಜಿ, ಆಂಡ್ರಿಯ ಡೆಲಾಕಾರ್ಟ್, ಗಿಡೋ ಪೆನ್ನೈನ್–ಇವರು ಸಂಗೀತಶಾಸ್ತ್ರಕೋವಿದರಾಗಿ ಬಹುಸೇವೆ ಸಲ್ಲಿಸಿದ್ದಾರೆ. ಇಟಲಿಯಲ್ಲಿ ಇಂದು ಐನೂರಕ್ಕೂ ಮೀರಿದ ಸಂಗೀತಸಭೆ, ಸಂಗೀತಸಮಾಜಗಳಿವೆ. ಗ್ರೂಪ್ಪಿ ಯೂನಿವರ್ಸಿಟಾರಿ ಮ್ಯೂಸಿಕಾಲಿ ಎಂಬ ಸಂಸ್ಥೆ ಹದಿನೆಂಟು ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಸಂಗೀತವಿದ್ಯಾರ್ಥಿಗಳನ್ನೊಳಗೊಂಡು ರೋಂ, ಮಿಲಾನ್ ಮತ್ತು ಪಾಲೆರ್ಮೋಗಳಲ್ಲಿರುವ ತನ್ನ ಶಾಖೆಗಳಲ್ಲಿ ಪ್ರಾಚೀನ ಹಾಗೂ ಆಧುನಿಕ ಸಂಗೀತಗಳ ಅಧ್ಯಯನವನ್ನು ನಡೆಸುತ್ತಿದೆ. ಸಂಗೀತಕಚೇರಿ, ಸಂಗೀತರಚನೆಗಳು ಸಂಗೀತ ಶಾಸ್ತ್ರಗ್ರಂಥಗಳು ಮೊದಲಾದವನ್ನು ಪ್ರಕಟಿಸುವ ಸಂಸ್ಥೆಗಳು ನಲವತ್ತಕ್ಕೂ ಹೆಚ್ಚಿವೆ. ಹಲವು ಸಂಗೀತಸಂಸ್ಥೆಗಳು ಪ್ರಪಂಚ ಪರ್ಯಟನೆಮಾಡಿ ಸಂಗೀತ ಕಚೇರಿಗಳನ್ನು ಮಾಡಿವೆ. ಆಧುನಿಕ ಇಟಾಲಿಯನ್ ಸಂಗೀತದಲ್ಲಿ ಸ್ವದೇಶಾಭಿಮಾನ, ಸ್ವದೇಶೀಯ ಪ್ರವೃತ್ತಿಗಳು ಹೆಚ್ಚಾಗಿ ಗಾಂಭೀರ್ಯ, ಸಂಯಮ, ದೃಢತೆ, ಸಂಕ್ಷಿಪ್ತತೆ ಮುಂತಾದ ಗುಣಗಳ ಸಂವರ್ಧನೆ ನಡೆಯುತ್ತಿದೆ. ಅನ್ಯಸಂಗೀತಗಳ ಪ್ರಭಾವ ಅಲ್ಲಲ್ಲಿ ಕಂಡುಬಂದರೂ ಒಟ್ಟಿನಲ್ಲಿ ಭಾವಕ್ಕೆ ಪ್ರಾಧಾನ್ಯ ನೀಡಲಾಗುತ್ತಿದೆ. ಇಟಲಿಯ ವಿವಿಧ ಭಾಗಗಳ ಸಂಗೀತದಲ್ಲಿರುವ ವೈಪರೀತ್ಯ, ವೈಲಕ್ಷಣ್ಯಗಳನ್ನು ಕಳೆದು ಸಮರೂಪತೆಯನ್ನು ತಂದುಕೊಡುವ ಮುಖ್ಯವೂ ಅಗತ್ಯವೂ ಆಗಿರುವ ಚಳವಳಿ ಆಧುನಿಕ ಇಟಾಲಿಯನ್ ಸಂಗೀತದ ಶುಭಲಕ್ಷಣಗಳಲ್ಲಿ ಒಂದು. (ಆರ್.ಎಸ್.ಎನ್.)

**ಇಟಾಲಿಯನ್ ಸಾಹಿತ್ಯ:** ಇಟಾಲಿಯನ್ ಭಾಷೆಯಲ್ಲಿ ರಚಿತವಾಗಿರುವ ಸಾಹಿತ್ಯ. ಪ್ರಾಚೀನ ರೋಮಿನ ಲ್ಯಾಟಿನ್ ಸಾಹಿತ್ಯವೂ ಒಂದು ರೀತಿಯಲ್ಲಿ ಇಟಲಿಯದೇ. ಆದರೆ ಅದನ್ನು ಇಟಲಿಯ ಸಾಹಿತ್ಯವೆಂದು ಪರಿಗಣಿಸುವುದು ವಾಡಿಕೆಯಾಗಿಲ್ಲ. ಲ್ಯಾಟಿನ್ ಸಾಹಿತ್ಯ ರೋಮನ್ ಸಾಮ್ರಾಜ್ಯದ ಪತನದೊಂದಿಗೆ ಕೊನೆಗೊಂಡಿತು. ಲ್ಯಾಟಿನ್ ಸಾಹಿತ್ಯ ಮಾತ್ರವೇ ಅಲ್ಲದೆ ಲ್ಯಾಟಿನ್ ಭಾಷೆಯ ಪ್ರಾಧಾನ್ಯವೂ ಕಡಿಮೆಯಾಗಿ ಆ ಭಾಷೆ–ನಮ್ಮ ದೇಶದಲ್ಲಿ ಪ್ರಾಕೃತ ಭಾಷೆಯಾದಂತೆ–ಬೇರೆ ಬೇರೆ ಉಪ ಭಾಷೆಗಳಾಗಿ ಒಡೆಯಿತು. ಲ್ಯಾಟಿನ್ ನಾಗರಿಕತೆಗೆ ಧಕ್ಕೆಯುಂಟುಮಾಡಿದ ಹೂಣರ ಆಕ್ರಮಣ ನಡೆದುದು ಪ್ರ.ಶ. 5ನೆಯ ಶತಮಾನದ ಆದಿಭಾಗದಲ್ಲಿ. ಅಲ್ಲಿಂದ ಆರೇಳು ಶತಮಾನಗಳ ಕಾಲ ಇಟಾಲಿಯನ್ ಸಾಹಿತ್ಯದಲ್ಲಿ ಗಮನಾರ್ಹವಾದುದೇನೂ ಇರಲಿಲ್ಲ. ಆಗ ಸೃಷ್ಟಿಯಾದ ಸಾಹಿತ್ಯವೆನ್ನಬಹುದಾದ ಕೃತಿಗಳು ಕೆಲವು ಲ್ಯಾಟಿನ್ನಿನಲ್ಲೇ ಬಂದವು. ಇವುಗಳ ಮಧ್ಯೆ ಅಲ್ಲಲ್ಲಿ ಇಣಕಿ ನೋಡುವ ಇಟಾಲಿಯನ್ ಕೃತಿಗಳು ತೀರ ಕೆಳಮಟ್ಟದವು.

ಪ್ರ.ಶ. ಹದಿಮೂರನೇ ಶತಮಾನದಲ್ಲಿ ಫ್ರಾನ್ಸಿನ ಆಗ್ನೇಯ ಭಾಗದ ಪ್ರವೆನ್ಸ್ ಪ್ರಾಂತ್ಯದ ಕವಿಗಳನೇಕರು ಅಲ್ಲಿನ ಕ್ಷುಬ್ಧ ವಾತಾವರಣದ ಪರಿಣಾಮವಾಗಿ ದೇಶತ್ಯಾಗಮಾಡಿ ಇಟಲಿಯ ದಕ್ಷಿಣಕ್ಕಿರುವ ಸಿಸಿಲಿ ದ್ವೀಪಕ್ಕೂ ಆ ದೇಶದ ಉತ್ತರದ ಕೆಲವು ಪ್ರದೇಶಗಳಿಗೂ ಬಂದು

ನೆಲಸಿದರು. ಪ್ರಣಯ, ಯುದ್ಧ ಮತ್ತು ಸಾಹಸಕಾರ್ಯಗಳನ್ನು ಕುರಿತು ಕೃತಿರಚನೆ ಮಾಡುತ್ತಿದ್ದ ಈ ಕವಿಗಳು ಇಟಲಿಯವರಿಗೆ ಮಾದರಿಗಳಾದರು. ಮೊದಮೊದಲು ಪ್ರೊವೆಂಕಲ್ ಭಾಷೆಯಲ್ಲೂ ಇಟಾಲಿಯನ್ ಭಾಷೆಯಲ್ಲೂ ಅನುಕರಣಕಾರ್ಯ ನಡೆಯಿತು. ಸಿಸಿಲಿಯ ಎರಡನೆಯ ಫ್ರೆಡರಿಕ್‌ನ (1225–50) ಆಸ್ಥಾನದ ಕವಿಗಳು ಮೊಟ್ಟಮೊದಲು ಪ್ರೊವೆಂಕಲ್ ಮಾದರಿಯನ್ನು ಅನುಸರಿಸಿ ಇಟಾಲಿಯನ್ ಭಾಷೆಯಲ್ಲಿ ಕಾವ್ಯರಚನೆ ಮಾಡಿದರು. ಆಸ್ಥಾನಸಹಜವಾದ ಪ್ರಣಯ ಪ್ರಸಂಗಗಳೂ ಧರ್ಮಯುದ್ಧಗಳಿಗೆ (ಕ್ರೂಸೇಡ್ಸ್) ಸಂಬಂಧಪಟ್ಟ ಸಮರ ಪ್ರಸಂಗಗಳೂ ಇವರು ವರ್ಣಿಸಿದ ವಿಷಯಗಳು. ಸಿಸಿಲಿ ಗುಂಪು ಎಂದೇ ಇವರಿಗೆ ಹೆಸರು ಬಂದಿದೆ. ಜಕೊಪೊ ಡಲೆಂಟಿನೊ, ಅಪೂಲಿಯದ ಗಿಯೊಕೋಮಿನೊ, ರೈನಾಲ್ಡೊ ಡ ಅಕ್ವಿನೊ ಮತ್ತು ಎರಡನೆಯ ಫ್ರೆಡರಿಕ್–ಇವರು ಈ ಗುಂಪಿಗೆ ಸೇರಿದ ಪ್ರಮುಖರು. ಇವರ ಬರಹಗಳಲ್ಲಿ ಲ್ಯಾಟಿನ್ ಪದಪ್ರಯೋಗಗಳೂ ಪ್ರೊವೆಂಕಲ್ ಕಾವ್ಯದಿಂದ ತೆಗೆದುಕೊಂಡಿದ್ದ ಅಂಶಗಳೂ ಯಥೇಚ್ಛವಾಗಿದ್ದವು. ಆದರೂ ಒಟ್ಟಿನಮೇಲೆ ಅವು ಅಂದಿನ ಸಿಸಿಲಿ ಉಪಭಾಷೆಯಲ್ಲಿ ರಚಿತವಾದ ಕೃತಿಗಳು. ಇದೇ ಕಾಲದ ಉತ್ತರ ಇಟಲಿಯ ಕವಿಗಳು ಪ್ರೊವೆಂಕಲ್ ಕಾವ್ಯದ ವಸ್ತುಗಳನ್ನು ಅಷ್ಟಾಗಿ ಬಳಸದೆ, ನೀತಿಬೋಧನೆಗೇ ಪ್ರಾಶಸ್ತ್ಯ ಕೊಟ್ಟಿದ್ದರು. ಆದರೆ ಹದಿಮೂರನೆಯ ಶತಮಾನದಲ್ಲಿ ಫ್ರೆಂಚ್ ಮಹಾಕಾವ್ಯಗಳನ್ನು ಬಹಳವಾಗಿ ಅನುಕರಣೆಮಾಡಿ ಈ ಉತ್ತರ ಇಟಲಿಯ ಕವಿಗಳು ಆ ಜಾತಿಯ ಕೆಲವು ಕಾವ್ಯಗಳನ್ನು ರಚಿಸಿದರು. ಅವುಗಳ ಕಥೆಗಳು ಗದ್ಯದಲ್ಲೂ ನಿರೂಪಿತವಾದವು. ಇಂಥ ಕಥೆಗಳ ಬೃಹತ್ ಸಂಗ್ರಹವಾದ ರಿಯಲಿ ದ ಫ್ರಾನ್ಸಿಯ ಇಂದಿಗೂ ಇಟಲಿಯ ಜನಸಾಮಾನ್ಯರಿಗೆ ಪ್ರಿಯವಾಗಿದೆಯಂತೆ. ಮಧ್ಯ ಇಟಲಿಯಲ್ಲಿ ಅನುಕರಣಶೀಲವಲ್ಲದ ಸ್ವತಂತ್ರ ಸಾಹಿತ್ಯಪಂಥವೊಂದು ಆಸಾಸಿಯ ಸಂತ ಫ್ರಾನ್ಸಿಸನ ಪ್ರಭಾವದಿಂದ ಆರಂಭವಾಯಿತು. ಫ್ರಾನ್ಸಿಸನೇ ತನ್ನ ತಾಯ್ನುಡಿಯಾದ ಅಂಬ್ರಿಯಾ ಪ್ರಾಂತಭಾಷೆಯಲ್ಲಿ ಲಾಡಿಸ್ ಕ್ರೀಚುರೇರಮ್ ಎಂಬ ಗದ್ಯಕಾವ್ಯ ರೂಪದ ಕೃತಿಯನ್ನು ರಚಿಸಿದ. ದೇವರು ಸೃಷ್ಟಿಸಿರುವ ಎಲ್ಲ ಜೀವಿಗಳ ವಿಚಾರದಲ್ಲೂ ಅವನ ಹೃದಯದಲ್ಲಿ ಉಕ್ಕುತ್ತಿದ್ದ ಒಲವಿನ ನಿರರ್ಗಳ ಅಭಿವ್ಯಕ್ತಿ ಈ ಕೃತಿಗಳಲ್ಲಿದೆ. ಫ್ರಾನ್ಸಿನ ಆದರ್ಶವನ್ನು ಅನುಸರಿಸಿ ಅನೇಕರು ಮತಧರ್ಮಕ್ಕೆ ಸಂಬಂಧಪಟ್ಟ ಕಾವ್ಯ ಲೇಖನಗೈದರು. ಜಕಪೋನೆ ಡ ತೋಡಿ ಅವರಲ್ಲಿ ಹೆಸರಿಸಬೇಕಾದವ. ಆದರೆ ಸಂಪ್ರದಾಯಬದ್ಧ ಚರ್ಚಿನ ವಲಯಗಳಲ್ಲಿ ಈ ಕೃತಿಗಳಿಗೆ ಪ್ರೋತ್ಸಾಹ ಹಾಗಿರಲಿ, ಪ್ರವೇಶವೇ ದೊರೆಯಲಿಲ್ಲ.

ಹದಿಮೂರನೆಯ ಶತಮಾನದ ಮಧ್ಯಭಾಗದ ಅನಂತರ ಟಸ್ಕನಿ ಪ್ರಾಂತ್ಯದಲ್ಲಿ ತಲೆದೋರಿದ್ದ ಸಾಹಿತ್ಯ ಚಟುವಟಿಕೆಯೊಂದು ಪ್ರಭಾವಶಾಲಿಯಾಯಿತು. ಪ್ರೊವೆಂಕಲ್ ಸಾಹಿತ್ಯದಿಂದ ತೆಗೆದುಕೊಂಡಿದ್ದ ಸ್ತ್ರೀಗೌರವಮಯವಾದ ಪ್ರಣಯ ಸಂಪ್ರದಾಯದ ಜೊತೆಗೆ ಏಸು ಕ್ರಿಸ್ತನ ತಾಯಿ ಕನ್ಯೆ ಮೇರಿಯನ್ನು ದೇವಿಯೆಂದು ಆರಾಧಿಸುವ ಪದ್ಧತಿಯೂ ಸೇರಿ ಈ ಹೊಸಕಾವ್ಯ ಪಂಥ ಮೂಡಿತು. ಹೆಣ್ಣಿನ ಒಲುಮೆಗಾಗಿ ಹೃದಯ ಹಾತೊರೆದಾಗ ಅದರಿಂದುಂಟಾಗುವ ನೋವು ನಲಿವುಗಳ ಅನುಭವದೊಡನೆ ಮಾನವ ದೇವರ ಪ್ರೇಮಕ್ಕೆ ಆಸೆಪಡುವುದೂ ಸೇರಿ ಹೊಸಬಗೆಯ ಮನೋಧರ್ಮ ಬೆಳೆಯುತ್ತದೆ. ಗಂಡು ಹೆಣ್ಣುಗಳ ಸಂಬಂಧ ಮನುಷ್ಯ–ದೇವರ ಸಂಬಂಧವಾಗಿ ಪರಿವರ್ತಿತವಾಗುತ್ತದೆ (ಭಾರತೀಯ ಭಕ್ತಿಪಂಥದವರ ಅನುಭಾವೀ ಕವಿತೆಗಳಲ್ಲಿರುವಂತೆ). ಈ ವಸ್ತುವಿಗೆ ಅನುಗುಣವಾದ ಸುಮಧುರ ಶೈಲಿಯೂ ಕವನಗಳಲ್ಲುಂಟು. ಈ ಶೈಲಿಗೆ ಮಧುರನವಶೈಲಿ (ಡಲ್ಸಿಸ್ಟಿಲ್ ನ್ಯೂವೊ) ಎಂದೇ ಹೆಸರು ಬಂದಿದೆ. ಈ ಶೈಲಿಯನ್ನು ಬಳಸಿದವರಲ್ಲಿ ಮೊದಲು ಪ್ರಸಿದ್ಧಿಗೆ ಬಂದವ ಬೊಲೋನಾ ನಗರದ ಗೀಡೊ ಗಿನಿಜೆಲ್ಲಿ ಈ1240–46). ಅದುವರೆಗೂ ಇಟಾಲಿಯನ್ ಭಾಷೆಯಲ್ಲಿ ಕಾವ್ಯರಚನೆ ಮಾಡಿದ್ದವರಲ್ಲೆ ಅವನೇ ಅತ್ಯಂತ ಗಣ್ಯನಾದವ. ತತ್ಕಾರಣ ಅವನ್ನ ಲೇಖನ ರೀತಿಯನ್ನು ಅನುಸರಿಸಿದ ಅಲಿಘೀರಿ ಡ್ಯಾಂಟೆ, ಗೀಡೊ ಕಾವ್ವಲ್ಕಂಟಿ, ಡಿನೊ ಕ್ರಿಸ್ಕೊ ಬಾಲ್ಡಿ, ಸಿನೋ ಡ ಪಿಸ್ಟೋಯಿಯ ಮತ್ತು ಲ್ಯಾಪೊ ಗಿಯಾನಿ–ಇವರು ಈ ಫ್ಲಾರೆನ್ಸ್ ಗುಂಪಿನ ಪ್ರಮುಖರಾದರು. ಇವರೆಲ್ಲರ ಕವನಗಳಲ್ಲೂ ಪ್ರಣಯ ಮತ್ತು ಮತನಿಷ್ಠೆಗಳ ಸಂಯೋಗ ಕಂಡುಬರುತ್ತದೆ. ಡಾಂಟೆಯ ಡಿವೈನ್ ಕಾಮೆಡಿ ಎಂಬ ಮಹಾ ಕಾವ್ಯವಂತೂ ಈ ಕಾವ್ಯವರ್ಗಕ್ಕೆ ಕಲಶದಂತಿದೆ. ಅದೊಂದು ಅನುಪಮ ರೂಪಕ ಕಾವ್ಯವೂ ಆಗಿದೆ.

ಹದಿಮೂರನೆಯ ಶತಮಾನದ ಇಟಾಲಿಯನ್ ಗದ್ಯಸಾಹಿತ್ಯ ಮುಖ್ಯವಾಗಿ ಐತಿಹ್ಯಗಳು ಸೇರಿದಂತೆ ಮೊದಲಾದ ಕಥೆಗಳ ಸಂಗ್ರಹಗಳಿಂದ ಕೂಡಿತ್ತು. ಇವುಗಳಲ್ಲಿ ನಾವೆಲಿನೂ ಮತ್ತು ಲಿಬ್ರೊಡಿಸೇವಿ (ಸತ್ತ ಸಂತರ ಪುಸ್ತಕ) ಹೆಸರಿಸಬೇಕಾದವು. ಇವಲ್ಲದೆ, ಲ್ಯಾಟಿನ್ ಮತ್ತು ಫ್ರೆಂಚ್ ಗ್ರಂಥಗಳ ಭಾಷಾಂತರಗಳೂ ಹಲವು ಬಂದವು. ಡಿನೊ ಕ್ಯಾಂಪಾನಿ ಎಂಬುವನ ಕ್ರೋನಾಕ ಎಂಬುದು ಚರಿತ್ರೆಯ ಗ್ರಂಥ. ಪ್ರವಾಸಿ ಮಾರ್ಕೊ ಪೋಲೋನ ವಿಯಾಗಿ ಎಂಬ ಅವನ ದೇಶಸಂಚಾರದ ವರ್ಣನೆಗಳ ಗ್ರಂಥ ಇಂದೂ ಖ್ಯಾತಿ ಪಡೆದಿದೆ.

ಹದಿನಾಲ್ಕನೆಯ ಶತಮಾನದಲ್ಲಿ ಟಸ್ಕನಿ ಪ್ರಾಂತ್ಯ ಇಟಾಲಿಯನ್ ಸಾಹಿತ್ಯ ಕೇಂದ್ರವಾಯಿತು. ತತ್ಫಲವಾಗಿ ಆ ಪ್ರಾಂತ್ಯದ ಭಾಷೆ ಮುಖ್ಯವೂ ಎಲ್ಲೆಡೆ ಪುರಸ್ಕೃತವೂ ಆದ ಸಾಹಿತ್ಯ ಮಾಧ್ಯಮವಾಯಿತು. ಗದ್ಯ ಪದ್ಯಗಳೆರಡರಲ್ಲೂ ಟಸ್ಕನಿ ಭಾಷೆ ಇತರ ಪ್ರಾಂತ್ಯಭಾಷೆಗಳನ್ನು ಮೀರಿಸಿತು. ಆ ಭಾಷೆ ಪ್ರಾಮುಖ್ಯಕ್ಕೆ ಬಂದ ಕಾರಣಗಳಲ್ಲಿ ಫ್ಲಾರೆನ್ಸ್ ನಗರ ವ್ಯಾಪಾರಕೇಂದ್ರವಾದುದೂ ಒಂದು. ಮಧ್ಯಯುಗದ ಇಟಾಲಿಯನ್ ಸಾಹಿತ್ಯದ ರತ್ನತ್ರಯರಾದ ಡಾಂಟೆ, ಪೆಟ್ರಾರ್ಕ್, ಬೊಕ್ಯಾಚಿಯೊಗಳು ಆ ಭಾಷೆಯಲ್ಲಿ ಕೃತಿರಚನೆ ಮಾಡಿದ್ದು ಇವೆಲ್ಲಕ್ಕಿಂತಲೂ ದೊಡ್ಡ ಕಾರಣ.

ಪೆಟ್ರಾರ್ಕ್ ಅದುವರೆಗೂ ಕವಿಜನಪ್ರಿಯವಾಗಿದ್ದ ಅನುಭಾವೀ ಶೈಲಿಯ ಕಾವ್ಯವನ್ನು ಬಿಟ್ಟು ವಾಸ್ತವತೆಗೂ ಹೆಂಗಸಿನ ಶಾರೀರಿಕ ರೂಪ ಲಕ್ಷಣಗಳಿಗೂ ಹೆಚ್ಚಿನ ಗಮನ ಕೊಟ್ಟ, ಹಾಗೆಯೇ ಪ್ರಣಯಿಗಳ ಮನೋವಿಶ್ಲೇಷಣೆಯೂ ಅವನ ಪ್ರಣಯ ಕವನಗಳ ವೈಶಿಷ್ಟ್ಯವಾಯಿತು. ಈ ಬದಲಾವಣೆಯ ಪರಿಣಾಮವಾಗಿ ಅದುವರೆಗೂ ಇಟಲಿಯ ಕವಿಗಳಿಗೆ ಮಾರ್ಗದರ್ಶಕನಾಗಿದ್ದ ಡಾಂಟೆಯ ಸ್ಥಾನ ಪೆಟ್ರಾರ್ಕನಿಗೆ ಲಭಿಸಿತು. ಬೊಕ್ಯಾಚಿಯೊ ಈ ಯುಗದ ಅತ್ಯಂತ ಗಣನೀಯನಾದ ಗದ್ಯಲೇಖಕ. ಅವನ ಗದ್ಯ ಉದ್ದುದ್ದನೆಯ ವಾಕ್ಯಗಳಿಂದ ತುಂಬಿ ನಮಗೆ ಇಂದು ಭಾರವಾಗಿ ಕಂಡರೂ ಅವನ ಕಾಲದಲ್ಲಿ ಅದಕ್ಕೆ ಗೌರವವಿತ್ತು. ಅಂತೆಯೇ ಅನೇಕರು ಬೊಕ್ಯಾಚಿಯೊನ ಅನುಯಾಯಿಗಳಾದರು. ಅವನ ಕೃತಿ ಡೆಕಮೆರಾನ್ ಒಂದುನೂರು ಕಥೆಗಳ ಸಂಕಲನ.

ಹದಿನೈದನೆಯ ಶತಮಾನದ ಪೂರ್ವಾರ್ಧದಲ್ಲಿ ಇಟಾಲಿಯನ್ ಭಾಷೆಯಲ್ಲಿ ದೊಡ್ಡ ಕೃತಿಗಳೇನೂ ಬರಲಿಲ್ಲ. ಪ್ರತಿಭಾವಂತರು ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥವ್ಯಾಸಂಗದಲ್ಲಿ ತೊಡಗಿ ಹಿಂದಿನ ಸಂಸ್ಕೃತಿಯನ್ನು ಆಧುನಿಕ ವಾತಾವರಣಕ್ಕೆ ಹೊಂದಿಸಿ ಬೆಳೆಸುತ್ತಿದ್ದುದೇ ಇದಕ್ಕೆ ಕಾರಣ. ಸಾಂಸ್ಕೃತಿಕ ನವೋದಯವೂ (ರಿನೇಸನ್ಸ್) ಈ ಪ್ರವೃತ್ತಿಗೊಂದು ಪ್ರೋತ್ಸಾಹ ಕೊಟ್ಟಿತು. ಬರೆಯಬಲ್ಲವರಾಗಿದ್ದವರು ದೇಶಭಾಷೆ ಇಟಾಲಿಯನ್ನನ್ನು ಬಿಟ್ಟು ಲ್ಯಾಟಿನ್ನಿಗೆ ಮಾರುಹೋಗಿದ್ದರು. ಅವರು ಜ್ಞಾನಸಂಪಾದನೆ, ಶಾಸ್ತ್ರಾಭ್ಯಾಸಂಗ ಮೊದಲಾದ ಚಟುವಟಿಕೆಗಳಲ್ಲಿ ಕಾಲಕಳೆಯುತ್ತಿದ್ದುದರಿಂದ ಕಾವ್ಯರಚನೆ ನಿರ್ಲಕ್ಷ್ಯಕ್ಕೆ ಗುರಿಯಾಯಿತೆನ್ನಬಹುದು. ಫ್ಲಾರೆನ್ಸಿನ ಮೆಡಿಚಿ ವಂಶದವರ–ಅದರಲ್ಲೂ ಲೊರೆಂಜೋನ–ಪ್ರಭಾವ ಮತ್ತು ಪ್ರೋತ್ಸಾಹಗಳ ಪರಿಣಾಮವಾಗಿ ಇಟಲಿಯಲ್ಲಿ ಹೊಸ ಸಾಹಿತ್ಯವೇ ಸೃಷ್ಟಿಯಾಗತೊಡಗಿತು. ಅವನ ಆಶ್ರಯ ಪಡೆದ ಕವಿಗಳೂ ಇತರ ಲೇಖಕರೂ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯದಲ್ಲೂ ತತ್ತ್ವಶಾಸ್ತ್ರದಲ್ಲೂ ಇತರ ಜ್ಞಾನಕ್ಷೇತ್ರಗಳಲ್ಲೂ ತಾವು ಕಂಡು ಮೆಚ್ಚಿಕೊಂಡಿದ್ದ ಶ್ರೇಷ್ಠ ಲಕ್ಷಣಗಳನ್ನು ಸದುಪಯೋಗಪಡಿಸಿಕೊಂಡು ಹೊಸ ಸಾಹಿತ್ಯವನ್ನು ರಚಿಸಿದರು. ಇಟಾಲಿಯನ್ ಭಾಷೆಯನ್ನು ಈ ಸಾಹಿತ್ಯಕ್ಕೆ ಯೋಗ್ಯ ಮಾಧ್ಯಮವಾಗಿ ರೂಪಿಸುವ ಕಾರ್ಯವನ್ನು ಅವರು ಯಶಸ್ವಿಯಾಗಿ ನೆರವೇರಿಸಿದರು. ಫ್ಲಾರೆನ್ಸ್ ನಗರದ ಜೊತೆಗೆ ಅರ್ಬಿನೊಫೆರಾರ, ಮಾಂಟುವಾ ಮೊದಲಾದ ಇತರ ಪ್ರಮುಖ ಇಟಾಲಿಯನ್ ನಗರಗಳ ನಾಗರಿಕ ಜೀವನವೂ ಶ್ರೀಮಂತರ ಪ್ರೋತ್ಸಾಹವೂ ಈ ನೂತನ ಸಾಹಿತ್ಯಮಾರ್ಗದ ಬೆಳವಣಿಗೆಗೆ ಅಗತ್ಯವಾಗಿದ್ದ ಪೋಷಣೆಯನ್ನೂ ಮನ್ನಣೆಯನ್ನೂ ಒದಗಿಸಿದವು.

ಹೀಗೆ ರಚಿತವಾದ ಹೊಸ ಸಾಹಿತ್ಯಕ್ಕೆ ದೀವಿಗೆಗಳಂತಿರುವ ಎರಡು ಕೃತಿಗಳು ಮ್ಯಾಟಿಯೋ ಮೋರಿಯಾ ಬಯಾರ್ಡೊನ ಆರ್ಲಾಂಡೋ ಇನ್ನಾಮೊರ್‍ಯಾಟೊ (ಪ್ರಣಯಿ ಆರ್ಲಾಂಡೊ) ಮತ್ತು ಆರಿಯೋಸ್ಟೊ ಲುಡೋವಿಕೊನ ಆರ್ಲಾಂಡೊ ಫ್ಯೂರಿಯೋಸೊ (ಉನ್ಮತ್ತ ಆರ್ಲಾಂಡೊ) ಇವೆರಡೂ ಮಹಾಕಾವ್ಯಗಳ ವರ್ಗಕ್ಕೆ ಸೇರಿದ ಮೇಲ್ಮಟ್ಟದ ಕೃತಿಗಳು. (ಮೊದಲನೆಯದು ಅಸಂಪೂರ್ಣವಾಗಿದ್ದರೂ ಈ ಪ್ರಶಂಸೆಗೆ ತಕ್ಕುದಾಗಿದೆ.) ಆರ್ಲಾಂಡೊ ಫ್ರೆಂಚ್ ವೀರ ಚಾರ್ಲ್‌ಮೇನನ ಅನುಚರರಲ್ಲಿ ಪ್ರಸಿದ್ಧನಾಗಿದ್ದು ಎಷ್ಟೋ ಕಥೆ ಕವನಗಳ ನಾಯಕನಾಗಿ ಜನಪ್ರಿಯನಾಗಿದ್ದವ. ಫ್ರಾನ್ಸಿನ ಚಾರ್ಲ್‌ಮೇನ್ ಮತ್ತು ಆರ್ಲಾಂಡೊ, ಇಂಗ್ಲೆಂಡಿನ ಆರ್ಥರ್ ಇವರಿಗೆ ಸಂಬಂಧಿಸಿದ ಕಥೆಗಳ ಆಧಾರದ ಮೇಲೆ ರಚಿತವಾದ ಈ ಕಾವ್ಯಗಳು ಇಂಥ ಇತರ ಕಾವ್ಯಗಳಿಗೆ ಮಾದರಿಗಳಾದವು. ಶೃಂಗಾರರಸ, ವೀರರಸಗಳ ಮಿಶ್ರಣ ಇವುಗಳಲ್ಲಿ ಕಂಡುಬರುತ್ತದೆ. ನಿರೂಪಣೆ, ಆಕರ್ಷಕ ಶೈಲಿ ಮತ್ತು ಭಾಷಾಪ್ರಯೋಗಗಳಿಂದ ಇವು ಶೋಭಿಸುತ್ತಿವೆ. ಈ ಯುಗದ ಕಾವ್ಯಗಳಲ್ಲಿ ಬೇರೆ ವಿಷಯಗಳಿರಲೇ ಇಲ್ಲವೆಂದಲ್ಲ. ಧಾರ್ಮಿಕ ವಿಷಯಗಳನ್ನು ಕಾವ್ಯದಲ್ಲೇ ನಿರೂಪಿಸುವ ಪದ್ಧತಿ ಮುಂದುವರಿಯಿತು. ಕ್ರಿಸ್ತನ ಜೀವನವನ್ನೂ ಇತರ ಬೈಬಲ್ ಕಥೆಗಳನ್ನೂ ತೋರಿಸುವ ನಾಟಕಗಳು ಬಂದವು. ಬಾಲ್ಡಸರ್ ಕ್ಯಾಸ್ಟಿಲಿಯೋನಿ ಎಂಬ ಲೇಖಕ ಈ ತರದ ಕೃತಿಗಳಿಗೆ ಹೆಸರಾದವ.

ಹದಿನಾರನೆಯ ಶತಮಾನದ ಆದಿಭಾಗದಲ್ಲಿ ಇಟಲಿ ಫ್ರಾನ್ಸಿನ ಆಕ್ರಮಣಕ್ಕೆ ಗುರಿಯಾಯಿತು. ತತ್ಫಲವಾಗಿ ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಶಾಂತ ವಾತಾವರಣ ಕಲಕಿಹೋಯಿತು. ಕ್ಷೋಭೆ ಇಟಲಿಯನ್ನು ಆವರಿಸಿ ಭದ್ರತೆ ಶಾಂತಿಗಳಿಲ್ಲವಾದವು. ರಾಜಕೀಯ ಜೀವನ ಕಷ್ಟಕರವೂ ಅತಿ ಸೂಕ್ಷ್ಮವೂ ಆಯಿತು. ಈ ಪರಿಸ್ಥಿತಿಯಲ್ಲಿ ಮೂಡಿಬಂದ ಕೃತಿ ಕ್ಯಾಸ್ಟಿಲಿಯೋನನ ಕಾರ್ಟಜಿಯೋನಿ (ಆಸ್ಥಾನಿಕನ ಪುಸ್ತಕ; 1506) ಎಂಬ ಗ್ರಂಥ. ಶ್ರೀಮಂತ ಜೀವನ ಹೇಗಿರಬೇಕು ಎಂದು ತಿಳಿಸುವುದೇ ಈ ಲೇಖಕನ ಉದ್ದೇಶ. ಮ್ಯಾಕಿಯವೆಲಿಯ ಇಲ್‌ಪ್ರಿನ್ಸಿಪೆಸ್ (ರಾಜಕುಮಾರ) ಎಂಬ ರಾಜನೀತಿಬೋಧಕ ಗ್ರಂಥವೂ ಹೆಚ್ಚು ಕಡಿಮೆ ಈ ಕಾಲದ್ದೇ. ಈ ಪುಸ್ತಕಗಳು ಅಂದಿನ ಇಟಲಿಯ ರಾಜಕೀಯ ಪರಿಸ್ಥಿತಿಯ ಅನಿಶ್ಚಿತತೆಯನ್ನೂ ಎಲ್ಲೆಲ್ಲೂ ತಾಂಡವವಾಡುತ್ತಿದ್ದ ಅಭದ್ರತೆಯನ್ನೂ ನಿರಂತರ ಜಾಗೃತಿಯ ಅಗತ್ಯವನ್ನೂ ಎತ್ತಿತೋರಿಸುತ್ತವೆ. ಅವುಗಳ ಶೈಲಿ ಇಟಾಲಿಯನ್ ಭಾಷೆಯಲ್ಲಿ ಗದ್ಯ ಗ್ರಂಥಗಳ ಮತ್ತು ರಾಜನೀತಿ, ಇತಿಹಾಸ ಮೊದಲಾದ ವಿಷಯಗಳನ್ನು ಕುರಿತು ರಚಿತವಾದ ಗ್ರಂಥಗಳ ಬರಹಕ್ಕೆ ಮಾರ್ಗದರ್ಶಕವಾಯಿತು.

ಇದೇ ಕಾಲದಲ್ಲಿ ಶ್ರೀಮಂತವರ್ಗಕ್ಕೂ ಜನಸಾಮಾನ್ಯರಿಗೂ ಇದ್ದ ಸಂಪರ್ಕ ಕಡಿಮೆಯಾಗಿ ಅದಕ್ಕೆ ತಕ್ಕಂತೆ ಸಾಹಿತ್ಯದಲ್ಲೂ ಎರಡು ಬಗೆಯ ಭಾಷಾಶೈಲಿಗಳು ಬರಲಾರಂಭಿಸಿದವು. ಒಂದು–ಲ್ಯಾಟಿನ್ ಶೈಲಿಯ ಧಾಟಿ ಮತ್ತು ಪದಪ್ರಯೋಗದಿಂದ ಕೂಡಿದ್ದು, ಇನ್ನೊಂದು–ಸರಳವಾದ ಇಟಾಲಿಯನ್ ಪದಗಳಿಂದ ಕೂಡಿದ್ದು. ಎರಡನೆಯ ಪಂಥ ಕ್ರಮೇಣ ಪ್ರಬಲವಾಗಿ ಭಾಷಾಪ್ರಶ್ನೆ (ಕ್ವೆಶ್ಚನ್ ಡೆಲ್ಲಲಿಂಗ್ವ) ಎಂಬ ಸಮಸ್ಯೆಯೇ ಎದ್ದಿತು. ಬರವಣಿಗೆಯಲ್ಲಿ ಇಟಾಲಿಯನ್ ಪದಗಳನ್ನೇ ಬಳಸಬೇಕೆಂದೂ ಲ್ಯಾಟಿನ್ ಶೈಲಿಯ ಅಥವಾ ಪದಗಳ ಪ್ರಾಬಲ್ಯವನ್ನು ಕಡಿಮೆ ಮಾಡಬೇಕೆಂದೂ ಹೇಳುವ ವೀರದೇಶೀ ಪಂಗಡವೊಂದು ಎದ್ದಿತು. ಈ ವಾಗ್ವಾದದ ಪರಿಣಾಮವಾಗಿ ಭಾಷಾಪ್ರಯೋಗ ಪದಪ್ರಯೋಗ, ಶೈಲಿ, ಮೊದಲಾದ ಪ್ರಶ್ನೆಗಳನ್ನು ಕುರಿತು ಹಲವು ಚರ್ಚಾತ್ಮಕ ಲೇಖನಗಳು ಹೊರಬಿದ್ದವು. ಅವುಗಳಲ್ಲಿ ಇಂದಿಗೂ ವಿಮರ್ಶಕರ ಗಮನಕ್ಕೆ ಅರ್ಹವಾಗಿರುವುದು ಡಾಂಟೆಯ ಡಿ ವಲ್ಗರೈ ಎಲೋಕ್ವೆಂಷಿಯಾ ಎಂಬ ಪ್ರಬಂಧ. ಲ್ಯಾಟಿನ್ ಪದಗಳಿಗೆ ಬದಲಾಗಿ ಇಟಾಲಿಯನ್ ಭಾಷೆಯ ಹಳೆಯ ಪದಗಳನ್ನೇ ಬಳಸಬೇಕೆಂಬ ಅಭಿಪ್ರಾಯವನ್ನು ಎತ್ತಿ ಹಿಡಿದ ಅಕೆಡಮಿಯ ಡೆಲ್ಲಕ್ರಸ್ಕ ಎಂಬ ಒಂದು ಸಂಸ್ಥೆಯೇ ಹೆಸರುವಾಸಿಯಾಗಿದೆ. ಆದರೆ ಇದಕ್ಕೆ ವಿರುದ್ಧವಾದ ಮತವುಳ್ಳವರೂ ಇದ್ದರು. ಅತಿಯನ್ನು ವರ್ಜಿಸಿ ಎರಡರ ಮಿಶ್ರಣವಾದ ಭಾಷೆಯನ್ನು ಬಳಸಬೇಕೆನ್ನುವವರಿಗೂ ಕೊರತೆಯಿರಲಿಲ್ಲ. ಡಾಂಟೆ ಇವರಲ್ಲೊಬ್ಬ. ಈ ಎರಡು ಬಗೆಯ ಶೈಲಿಗಳಲ್ಲೂ ಗದ್ಯಪದ್ಯಗಳೆರಡೂ ರಚಿತವಾದವು. ಪದ್ಯ ಬಹುಮಟ್ಟಿಗೆ ಭಾವಗೀತೆಗಳ ರೂಪವನ್ನು ತಳೆಯಿತು. ಭಾವಗೀತೆಗಳ ಲೇಖಕರಲ್ಲಿ ಫ್ಲಾರೆನ್ಸ್ ಮೇರೀಯ ಮೋಲ್ಸಾ, ಬರ್ನಾರ್ಡೊ ರೋಟಾ, ವಾರೊನಿಕೊ ಗಾಂಬಾರ, ಗಿಯೊದಾನಿ ಡೆಲ್ಲ ಕ್ಯಾಸ ಮೊದಲಾದವರೂ ಗದ್ಯಲೇಖಕರಲ್ಲಿ ಬೇಯೊ, ಘ್ಯೋಯೋ, ಮ್ಯಾಕಿಯವೆಲಿ ಮೊದಲಾದ ಚರಿತ್ರೆಕಾರರೂ ಜಾರ್ಜಯಾ ವಸರಿ ಮೊದಲಾದ ಜೀವನ ಚರಿತ್ರೆಗಳ ಲೇಖಕರೂ ಬಂಡೆಲೊ ಗ್ರಾಜಿನಿ, ಸ್ಟ್ರಪರೋಲ, ಸಿಂಜಿಯೊ ಲಿಗಿಡ ಪೋರ್ರ್ನೊ, ಮೊದಲಾದ ನಾವೆಲಾ ಕರ್ತೃಗಳೂ ಇದ್ದರು. ಈ ನಾವೆಲಾಗಳ ಕಥೆಗಳಲ್ಲಿ ಕೆಲವು ಷೇಕ್ಸ್‌ಪಿಯರನ ನಾಟಕಗಳಿಗೆ ವಸ್ತುಗಳನ್ನು ಒದಗಿಸಿದವು.

ನಾಟಕದ ಅಂದಿನ ಸಾಹಿತ್ಯವಿಮರ್ಶೆಯ ತತ್ತ್ವಕ್ಕೆ ಅನುಸಾರವಾಗಿ ದುರಂತ ನಾಟಕ, ಹಾಸ್ಯ ನಾಟಕಗಳೆಂದು ಎರಡು ನಿರ್ದಿಷ್ಟ ವರ್ಗಗಳು ತಲೆದೋರಿದವು. ರಿನೇಸನ್ಸ್ ಕಾಲದಲ್ಲಿ ಗ್ರೀಕ್ ಮತ್ತು ರೋಮನ್ ನಾಟಕಗಳ ಪ್ರಭಾವದ ಜೊತೆಗೆ ಅರಿಸ್ಟಾಟಲ್ ಮತ್ತು ಹೊರೇಸರ ವಿಮರ್ಶೆಯ ಪ್ರಭಾವವೂ ಇದಕ್ಕೆ ಕಾರಣವಾಗಿತ್ತು. ಕ್ರಿಯೈಕ್ಯ, ಕಾಲೈಕ್ಯ, ಸ್ಥಳೈಕ್ಯಗಳು ಮೊದಲಾದವುಗಳ ಬಗ್ಗೆ ಅರಿಸ್ಟಾಟಲನ ಅಭಿಪ್ರಾಯಗಳನ್ನು ಕಲೆಗಾರರು ಒಪ್ಪಿಕೊಂಡು ಅವುಗಳ ಪ್ರಕಾರ ಕೃತಿ ರಚನೆ ಮಾಡಿದರು. ಆದರೆ ಅವರು ಅರಿಸ್ಟಾಟಲನ ಭಾವವಿರೇಚನಕ್ಕೆ ಬದಲಾಗಿ ಮೆಚ್ಚಿಕೆಯ ಗುರಿಯನ್ನು ಎತ್ತಿಹಿಡಿದರು. ಕಥಾನಾಯಕನ ಕಷ್ಟಸಹಿಷ್ಣುತೆಯನ್ನು ಕಂಡು ಪ್ರೇಕ್ಷಕರು ಅಯ್ಯೋ ಎನ್ನಬೇಕಾದುದಿಲ್ಲ, ಮೆಚ್ಚಬೇಕು ಎಂಬುದೇ ಈ ತತ್ತ್ವ. ಮಹಾಕಾವ್ಯದ ನಾಯಕರ ವಿಚಾರದಲ್ಲಿ ನಮ್ಮಲ್ಲಿ ಉಂಟಾಗುವ ಪ್ರತಿಕ್ರಿಯೆಯೇ ದುರಂತನಾಟಕಗಳ ನಾಯಕರ ವಿಚಾರದಲ್ಲೂ ಆಗಬೇಕೆಂಬುದು ಅವರ ಆಶಯವಾಗಿತ್ತು. ಹದಿನಾರನೆಯ ಶತಮಾನದ ಹಾಸ್ಯ ನಾಟಕಗಳು ಕ್ಲಾಸಿಕಲ್ (ಎಂದರೆ ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್) ನಾಟಕಗಳ ಮಾದರಿಗಳನ್ನು ಅನುಸರಿಸಿದವು. ದುರಂತ ನಾಟಕಕಾರರಲ್ಲಿ ಟ್ರಿಸಿನೊ, ರೂಸೆಲೆ, ಅರೇಟೀನೋ ಮೊದಲಾದವರೂ ಇದ್ದರು. ಈ ಎರಡು ವರ್ಗಗಳಲ್ಲೂ ಕ್ಲಾಸಿಕಲ್ ಮಾದರಿಗಳ ಅನುಕರಣೆ ಬಹಳವಾಗಿತ್ತು. ಕ್ಲಾಸಿಕಲ್ ಪಂಥಕ್ಕೆ ಸೇರದ ನಾಟಕಗಳೂ ಹೆಚ್ಚಿನ ಸೃಜನಶಕ್ತಿಯನ್ನೂ ವಾಕ್‌ಕೌಶಲವನ್ನೂ ವಿಷಯವೈವಿಧ್ಯ, ರಚನಾವೈವಿಧ್ಯಗಳನ್ನೂ ತೋರಿಸುತ್ತವೆ. ಗೊಲ್ಲಜೀವನವನ್ನು ಚಿತ್ರಿಸುವ ನಾಟಕಗಳೂ ರಚಿತವಾದವು. ಅಗೊಸ್ಟಿನೊ ಬೆಕಾರಿ, ಟಾಕ್ವಾಟೊ ಟ್ಯಾಸೊ, ಗ್ವರನಿ ಮೊದಲಾದವರು ಈ ಕ್ಷೇತ್ರದಲ್ಲಿ ಪ್ರಮುಖರು. ಇವುಗಳ ಜೊತೆಗೆ ಪ್ರಹಸನಗಳು ರಚಿತವಾದವು. ಸನಜಾರೊ, ಗಿಯೋವಾನಿ ಗಿಯಾರ್ಜಿಯೊ, ಏಂಜೆಲೊ ಬಿಯೋಲ್ಕೊ, ಆಂಡ್ರಿಯಾ ಕಾಲ್ಮೊ ಈ ತೆರದ ನಾಟಕಗಳ ರಚನೆಯಲ್ಲಿ ಹೆಸರು ಪಡೆದರು. ಆಧುನಿಕ ಯುರೋಪಿನ ಸಾಹಿತ್ಯದಲ್ಲಿ ಈ ಪ್ರಾಚೀನ ಕಲಾಪ್ರಭೇದಗಳ ರಚನೆಯಲ್ಲಿ ಮೊದಲು ಪ್ರಯೋಗ ನಡೆದುದು ಇಟಲಿಯನ್ ಭಾಷೆಯಲ್ಲೇ.

ಈ ಕಾಲದಲ್ಲೇ ಕಥನಕಾವ್ಯಗಳೂ ಹೊರಬಿದ್ದವು. ಅರಿಯೋಸ್ಟೊನ ಆರ್ಲಾಂಡೊ ಫ್ಯೂರಿಯೋಸೂ ಕಾವ್ಯವನ್ನು ಮಾದರಿಯಾಗಿಟ್ಟುಕೊಂಡು ಬರ್ನಾರ್ಡೊ ಟ್ಯಾಸೂ (1493–1568) ಜೆರೂಸಲೆಮ್ ಲಿಬರೇಟಾ ಕಾವ್ಯವನ್ನು ರಚಿಸಿದ. ಅರಿಯೋಸ್ಟೊನ ಕಾವ್ಯದಂತೆಯೇ ಇದೂ ಒಂದು ಅದ್ಭುತ ಕಥೆಯ ನಿರೂಪಣೆಯಾದರೂ ಹದಿನಾರನೇ ಶತಮಾನದಲ್ಲಿ ಕ್ರೈಸ್ತಮತದಲ್ಲಿ ನಡೆದ ಪ್ರಾಟೆಸ್ಟಂಟ್ ಸುಧಾರಣೆಯ ಪ್ರಭಾವಗಳನ್ನೂ ಒಳಗೊಂಡಿದೆ. ಇಂಥ ಅದ್ಭುತ ಭವ್ಯ ಕಾವ್ಯಗಳನ್ನೂ ಅಣಕವಾಡುವ ಪಿಯತ್ರೊ ಅರೇಟೀನೋನ ಆರ್ಲಾಂಡಿನೊ (ಪುಟ್ಟ ಆರ್ಲಾಂಡೊ) ಎಂಬ ಕವನವೂ ಈಗಲೆ ರಚಿತವಾದುದು ಗಮನಾರ್ಹ. ಈ ಎಲ್ಲ ಕ್ಷೇತ್ರಗಳಲ್ಲೂ ಇಟಾಲಿಯನ್ ಸಾಹಿತ್ಯ ಯುರೋಪಿನ ಇತರ ಭಾಷೆಗಳಲ್ಲಿ ಹುಟ್ಟಿಕೊಳ್ಳುತ್ತಿದ್ದ ಹೊಸ ಸಾಹಿತ್ಯಗಳಿಗೆ ಮಾದರಿಯೂ ಪ್ರೇರಕ ಶಕ್ತಿಯೂ ಆಯಿತು. ಉದಾಹರಣೆಗೆ, ಇಂಗ್ಲಿಷ್ ಕವಿಶ್ರೇಷ್ಠ ಎಡ್ಮಂಡ್ ಸ್ಪೆನ್ಸರ್‌ನ ಷೆಪರ್ಡ್ಸ್ ಕ್ಯಾಲೆಂಡರ್ ಮತ್ತು ಫೇರಿ ಕ್ವೀನ್ ಕೃತಿಗಳಲ್ಲಿ ಇಟಲಿಯ ಈ ನೂತನ ಕಾವ್ಯ ವಿಧಾನಗಳ ಪ್ರಭಾವವನ್ನು ಕಾಣಬಹುದು. ಭಾರತದಲ್ಲಿ ಪಾಶ್ಚಾತ್ಯ ಸಾಹಿತ್ಯ, ಸಂಸ್ಕೃತಿಗಳ ಪ್ರಭಾವದಿಂದ ಉಂಟಾದ ನವೋದಯ ಮೊದಮೊದಲು ಬಂಗಾಳದಲ್ಲಿ ಕಾಣಿಸಿಕೊಂಡು ಅನಂತರ ಇತರ ಪ್ರಾಂತ್ಯಗಳಿಗೂ ಬಂದಂತೆ ನವೋದಯ ಮೊದಲು ಇಟಲಿಯಲ್ಲಿ ತಲೆದೋರಿ ಆಮೇಲೆ ಬೇರೆ ಕಡೆಗೆ ಹಬ್ಬಿತು.

ಹದಿನಾರನೇ ಶತಮಾನದಲ್ಲಿ ಹೀಗೆ ಬೇರೆ ದೇಶಗಳಿಗೆ ಮಾರ್ಗದರ್ಶಿಯಾಗಿದ್ದ ಇಟಲಿ ಮುಂದಿನ ಶತಮಾನದಲ್ಲಿ ಆ ಸ್ಥಾನವನ್ನು ಕಳೆದುಕೊಂಡಿತು. ಸಂಗೀತ, ಚಿತ್ರಕಲೆ, ಶಿಲ್ಪಕಲೆಗಳಲ್ಲಿ ಅದು ತನ್ನ ಹಿಂದಿನ ಹಿರಿಮೆಯನ್ನು ಉಳಿಸಿಕೊಂಡರೂ ಸಾಹಿತ್ಯದಲ್ಲಿ ಹಿಂದುಳಿಯಿತು. ಕಾವ್ಯದಲ್ಲಾಗಲಿ, ಗದ್ಯದಲ್ಲಾಗಲಿ ಹೇಳಬಹುದಾದಂಥ ಕೃತಿಗಳಾವುವೂ ಹದಿನೇಳನೆಯ ಶತಮಾನದಲ್ಲಿ ಬರಲಿಲ್ಲ. ಆ ಶತಮಾನದ ಅತ್ಯಂತ ಗಣನೀಯವಾದ ಕೃತಿಗಳೆಂದರೆ ವೈಚಾರಿಕತೆಯ ಕ್ಷೇತ್ರಕ್ಕೆ ಸೇರಿದ ಗದ್ಯದಲ್ಲಿ ಕಂಡುಬರುವಂಥವು. ಇಂಥ ಗ್ರಂಥಗಳ ಲೇಖಕರಲ್ಲಿ ಖಗೋಳಶಾಸ್ತ್ರಜ್ಞನಾದ ಗೆಲಿಲಿಯೋನ ಹೆಸರು ಲೋಕಪ್ರಸಿದ್ಧವಾಗಿದೆ. ನಾಟಕಪ್ರಪಂಚದಲ್ಲಿ ಒಂದು ಕಡೆ ಕ್ಲಾಸಿಕಲ್ ನಾಟಕದ ಅನುಕರಣವೂ ಇನ್ನೊಂದು ಕಡೆ ಕಮೇಡಿಯಾ ಡೆಲ್ ಆರ್ಟೆ ಎಂಬ ಹಾಸ್ಯನಾಟಕಗಳೂ ರಚಿತವಾದವು. ವೃತ್ತಿನಾಟಕಸಂಸ್ಥೆಗಳವರಿಂದ ರೂಪಿತವಾಗುತ್ತಿದ್ದ ಈ ಹಾಸ್ಯನಾಟಕಗಳು ವಿಶೇಷ ಜನಪ್ರಿಯತೆಯನ್ನು ಗಳಿಸಿದವು. ಇಟಾಲಿಯನ್ ನಾಟಕಗಳಲ್ಲಿ ಪ್ರಸಿದ್ಧವಾಗಿರುವ ಪ್ಯಾಂಟಲೂನ್, ಹಾರ್ಲೆಕಿನ್, ಪಂಚ್ ಮೊದಲಾದ ಪಾತ್ರಗಳು ಇವುಗಳಲ್ಲಿ ಮೊದಲಿಗೆ ಕಾಣಿಸಿಕೊಂಡವು. ನಟರು ಸಂದರ್ಭಾನುಸಾರ ತಾವೇ ಹಾಸ್ಯೋಕ್ತಿಗಳನ್ನು ಸೇರಿಸಿ ನಾಟಕಕ್ಕೆ ಕಳೆಕೊಡುತ್ತಿದ್ದುದಲ್ಲದೆ ಅದರ ವಾಸ್ತವಿಕತೆಯನ್ನು ಹೆಚ್ಚಿಸುತ್ತಿದ್ದರು. ಕ್ರಮೇಣ ಈ ಬಗೆಯ ನಾಟಕದ ಪಾತ್ರಗಳು ಒಂದೇ ಮಾದರಿಯ ವ್ಯಕ್ತಿಗಳಾಗಿ ನಾಟಕದ ಸ್ವಾರಸ್ಯಕ್ಕೆ ಚ್ಯುತಿ ಬಂದಿತು. ಆದರೆ ಅವು ಆರಂಭವಾದಾಗ ಜನಪ್ರಿಯವಾಗಿದ್ದುದನ್ನು ಅಲ್ಲಗಳೆಯುವಂತಿಲ್ಲ. ಈ ಹಾಸ್ಯನಾಟಕಗಳನ್ನೂ ಸಂಗೀತಪ್ರಧಾನವಾದ ಗೀತನಾಟಕಗಳನ್ನೂ ಇಟಲಿಯ ಸಂಚಾರೀ ನಾಟಕ ತಂಡಗಳು ತಮ್ಮ ದೇಶದಲ್ಲಿ ಮಾತ್ರವಲ್ಲದೆ ನೆರೆಹೊರೆಯ ನಾಡುಗಳಲ್ಲೂ ಪ್ರದರ್ಶಿಸಿದವು.

ಹದಿನೆಂಟನೇ ಶತಮಾನದ ದ್ವಿತೀಯಾರ್ಧದಲ್ಲಿ ಇಟಲಿಯ ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದ ಪುನರುತ್ಥಾನವಾಯಿತು. ಆ ದೇಶದ ರಾಜ್ಯಗಳನೇಕರು ಪಾರತಂತ್ರ್ಯದಿಂದ ಬಿಡುಗಡೆಹೊಂದಿ ಹೊಸಚೈತನ್ಯವನ್ನು ಪಡೆದವು. ಫ್ರಾನ್ಸಿನಲ್ಲಿ ಎನ್‌ಸೈಕ್ಲೊಪೀಡೀ ಎಂಬ ವಿಶ್ವಕೋಶದ ಮೂಲಕ ಹರಡುತ್ತಿದ್ದ ಬಹುಮುಖ ಜ್ಞಾನಪ್ರಸಾರದ ಫಲ ಇಟಲಿಗೂ ಸಂದಿತು. ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಚಾರಗಳಲ್ಲಿ ಹೊಸದೃಷ್ಟಿ ಬೆಳೆಯಿತು. ಎನ್‌ಸೈಕ್ಲೋಪೀಡೀ ಗ್ರಂಥವೇ ಇಟಾಲಿಯನ್ ಭಾಷೆಗೆ ಪರಿವರ್ತಿತವಾಗಿ ಪ್ರಭಾವ ಬೀರಿತು. ವಿಜ್ಞಾನ ಮತ್ತು ಇತರ ಕ್ಷೇತ್ರಗಳಲ್ಲೇ ಮಾನ್ಯತೆ ಪಡೆಯುತ್ತಿದ್ದ ಹೊಸ ಹೊಸ ವಿಷಯಗಳನ್ನೂ ಅನ್ವೇಷಣೆಗಳನ್ನೂ ಫ್ರಾನ್ಸಿಸ್ಕೋ ಆಲ್ಗರೋಟಿ ಮೊದಲಾದವರು ಇಟಾಲಿಯನ್ ಭಾಷೆಯಲ್ಲಿ ವಿವರಿಸಿದರು. ಸಮಾಜ ಸುಧಾರಣೆ, ರಾಜಕೀಯ ಜಾಗೃತಿಯ ಪ್ರಸಾರ, ಸ್ವತಂತ್ರವಾದ ಆಲೋಚನಾಪ್ರಚೋದನೆ ಇತ್ಯಾದಿಯಾದ ಧ್ಯೇಯಗಳನ್ನು ಹೊಂದಿದ್ದ ಪುಸ್ತಕಗಳೂ ಪತ್ರಿಕೆಗಳೂ ಅವತರಿಸಿದವು. ಈ ಹೊಸ ವಿಚಾರಸರಣಿಗೆ ಅನುಗುಣವಾಗಿ ಸಾಹಿತ್ಯದ ಭಾಷಾಶೈಲಿಯೂ ಬದಲಾವಣೆ ಹೊಂದಿತು. ಶಬ್ದಾಡಂಬರ, ಉದ್ದುದ್ದನೆಯ ವಾಕ್ಯಗಳು, ಪ್ರಾಚೀನ ಲೇಖಕರ ಅನುಕರಣೆಯಿಂದ ಉತ್ಪನ್ನವಾಗುತ್ತಿದ್ದ ಕೃತಕತೆ, ಸಂಪ್ರದಾಯಶರಣತೆಯಿಂದ ಬಂದ ಸಂಕುಚಿತ ಮನೋಭಾವ ಇವೆಲ್ಲ ಕ್ರಮೇಣ ಕೊನೆಗೊಂಡು ಸರಳವಾದ ನೇರವಾದ ಅಭಿವ್ಯಕ್ತಿ ಮತ್ತು ಜನಜೀವನದ ನೈಜಚಿತ್ರಣಗಳು ಸಾಹಿತ್ಯದಲ್ಲಿ ಕಾಣಿಸಿಕೊಂಡವು. ಹೊಸ ಬಗೆಯ ಮಾನವೀಯತೆಯೊಂದು ಇಟಲಿಯ ಸಾಹಿತ್ಯದಲ್ಲಿ ತಲೆದೋರಿತು. ಗೋಲ್ಡೋನಿ (1707–1793) ತನ್ನ ನಾಟಕಗಳಲ್ಲಿ ಕಮೇಡಿಯ ಡೆಲ್ ಆರ್ಟೆ ವರ್ಗದ ಹಾಸ್ಯನಾಟಕಗಳಲ್ಲಿ ಎದ್ದು ಕಾಣುತ್ತಿದ್ದ ಕೃತಕತೆಯನ್ನು ಬಿಟ್ಟು ನೈಜತೆಯನ್ನು ಬೆಳೆಸಿದ. ಇನ್ನೊಬ್ಬ ನಾಟಕಕಾರ ಆಲ್‌ಫಿಯೆರಿ, ಕೌಂಟ್ ವಿಟ್ಟೋರಿಯೊ (1749–1803) ಕ್ಲಾಸಿಕಲ್ ಮಾದರಿಯ ನಾಟಕಗಳನ್ನು ಬರೆದ. ಅವನ ಕೃತಿಗಳು ಪ್ರೇಕ್ಷಕರಲ್ಲೂ ವಾಚಕರಲ್ಲೂ ದೇಶಭಕ್ತಿಯನ್ನೂ ಸ್ವತಂತ್ರ ಮನೋಭಾವವನ್ನೂ ಪ್ರಚೋದಿಸಿ ಪ್ರಖ್ಯಾತವಾದವು. ಹದಿನೆಂಟನೇ ಶತಮಾನದ ಇಟಲಿಯ ಕವಿಗಳಲ್ಲಿ ಆತ ಮುಖ್ಯನಾದವ. ಜೀಸ್ಯುಪ್ ಪರಿನಿಯೂ ಇದೇ ರೀತಿ ಇಟಲಿಯ ಜನರಲ್ಲಿ ದೇಶಪ್ರೇಮ ಆತ್ಮಗೌರವಗಳನ್ನೂ ಹೊಡೆದೆಬ್ಬಿಸುವಂಥ ಕಾವ್ಯರಚನೆ ಮಾಡಿದ. ಇಂಥವನೇ ಆದ ಇನ್ನೊಬ್ಬ ಕವಿ ಪೋಸ್ಕೊಲೊ. ಇವರೆಲ್ಲರೂ ಇಟಲಿಯ ರೊಮ್ಯಾಂಟಿಕ್ ಸಾಹಿತ್ಯದ ಬೆಳೆವಣಿಗೆಗೆ ಹಾದಿ ಮಾಡಿಕೊಟ್ಟರು.

ಇಟಲಿಯ ರೊಮ್ಯಾಂಟಿಕ್ ಸಾಹಿತ್ಯ ಜರ್ಮನ್ ಮತ್ತು ಇಂಗ್ಲಿಷ್ ರೊಮ್ಯಾಂಟಿಕ್ ಸಾಹಿತ್ಯಗಳಿಂದ ಪ್ರೇರಣೆ ಪಡೆಯಿತು. ರೊಮ್ಯಾಂಟಿಕ್ ಸಾಹಿತ್ಯದ ಮುಖ್ಯಾಂಶಗಳನೇಕವು ಇಂಗ್ಲೆಂಡ್, ಜರ್ಮನಿಗಳಿಂದ ಇಟಲಿಗೆ ಬಂದವು. ಆದರೆ ಇಂಗ್ಲಿಷ್ ಕವಿಗಳಾದ ವರ್ಡ್ಸ್‌ವರ್ತ್, ಕೋಲ್‌ರಿಜ್, ಬೈರನ್, ಷೆಲ್ಲಿ, ಕೀಟ್ಸ್‌ರಂಥ ಉದ್ದಾಮ ಕವಿಗಳು ಇಟಲಿಯಲ್ಲಿ ಬರಲಿಲ್ಲ. ವಿಪರೀತ ಭಾವೋದ್ರೇಕಕ್ಕೆ ಎಡೆಗೊಡುವ ಲಿಯೊಪರ್ದಿಯನ (1798–1837) ಕಾವ್ಯವೇ ಇಟಲಿಯ ರೊಮ್ಯಾಂಟಿಕ್ ಸಾಹಿತ್ಯದ ಶಿಖರ. ಗದ್ಯಕ್ಷೇತ್ರದಲ್ಲಿ ರೊಮ್ಯಾಂಟಿಕ್ ಪಂಥದ ಅಭಿವ್ಯಕ್ತಿ ಮುಖ್ಯವಾಗಿ ಚಾರಿತ್ರಿಕ ಕಾದಂಬರಿಗಳಲ್ಲಿ ನಡೆಯಿತು. ಈ ವರ್ಗಕ್ಕೆ ಸೇರಿದ ಅಲೆಸ್ಸಾಂಡ್ರೊ ಮ್ಯಾನ್‌ಜೋನಿಯ (1785–1873) ಇಪ್ರಾಮೆಸ್ಸಿ ಸ್ಪೋಸಿ ಇಟಾಲಿಯನ್ ಭಾಷೆಯ ಅತ್ಯಂತ ಜನಪ್ರಿಯವಾದ ಕಾದಂಬರಿಯೆಂಬ ಪ್ರಶಂಸೆಗೆ ಪಾತ್ರವಾಗಿದೆ. ಮ್ಯಾನ್

ಜೋನಿ ಇಟಲಿಯ ರೊಮ್ಯಾಂಟಿಕ್ ಸಾಹಿತ್ಯದ ಮುಂದಾಳೆಂದು ಪರಿಗಣಿತನಾಗಿದ್ದಾನೆ. ಅವನ ಇನ್ನಿಸ್ಸಾಕ್ರಿ (ಪವಿತ್ರ ಗೀತಗಳು) ಎಂಬ ಕವನಸಂಗ್ರಹ ವಿಶೇಷ ಮನ್ನಣೆ ಗಳಿಸಿದೆ. ಇವನಲ್ಲದೆ, ಇವನಷ್ಟು ಪ್ರಖ್ಯಾತರಲ್ಲದ ಕವಿಗಳನೇಕರು ವ್ಯಂಗ್ಯ, ವಿಡಂಬನೆ, ಸ್ವಾತಂತ್ರ್ಯಪ್ರಿಯತೆ, ಮೊದಲಾದ ಬಗೆ ಬಗೆಯ ಅಂಶಗಳನ್ನು ಒಳಗೊಂಡ ಕವಿತೆಗಳನ್ನು ಬರೆದರು. ರಾಜಕೀಯ ವಿಚಾರಾತ್ಮಕವಾದ ಗದ್ಯಸಾಹಿತ್ಯವೂ ಶತಮಾನದ ಮಧ್ಯಭಾಗದ ಹೊತ್ತಿಗೆ ಬೇಕಾದಷ್ಟು ಬಂತು. ಜ್ಯೊಸೆಪ್ಪ ಮ್ಯಾಟ್ಸಿನಿ (1803–72) ಈ ವರ್ಗದ ಲೇಖಕರಿಗೆ ಉದಾಹರಣೆಯೆನ್ನ ಬಹುದು. ನಾರ್ವೆಯ ನಾಟಕಕಾರ ಇಬ್ಸೆನ್ನನ ವಾಸ್ತವಿಕ ನಾಟಕಗಳ ಮಾದರಿಯನ್ನು ಅನುಸರಿಸಿ ಸಮಸ್ಯಾತ್ಮಕ ನಾಟಕಗಳನ್ನೂ ಅನೇಕರು ರಚಿಸಿದರು. ಪವಲೂ ಫೆರ್ರಾರಿ, ಜೆಸ್ಸೊಪ್ ಜಿಯಕೋಸ್, ರಾಬರ್ಟ್ ಬ್ರ್ಯಾಕೊ ಮೊದಲಾದವರು ಇಂಥ ನಾಟಕಕಾರರು. ಈ ನಾಟಕಕಾರರು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಇಟಲಿಯ ಸಾಹಿತ್ಯದಲ್ಲಿ ತಲೆದೋರಿದ ಒಂದು ಪ್ರವೃತ್ತಿಯನ್ನು ಪ್ರತಿಬಿಂಬಿಸುತ್ತಾರೆ. ರೊಮ್ಯಾಂಟಿಕ್ ಸಾಹಿತ್ಯ (ಇಂಗ್ಲಿಷಿನಲ್ಲಾದಂತೆಯೇ) ಬರುಬರುತ್ತ ಭಾವವೈಪರೀತ್ಯ, ವಿಪರೀತ ರಾಗೋದ್ರಿಕ್ತತೆ, ವಿಚಾರಹೀನತೆ ಮೊದಲಾದ ದೌರ್ಬಲ್ಯಗಳಿಗೆ ಅತಿಯಾಗಿ ಎಡೆಕೊಟ್ಟ ಕಾರಣದಿಂದ ಅದಕ್ಕೆ ವಿರೋಧವಾಗಿ ವಾಸ್ತವಿಕತೆ, ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಪ್ರತಿಪಾದನೆ, ಮನೋವಿಶ್ಲೇಷಣೆಗಳು ಸಾಹಿತ್ಯಕ್ಕೆ ಬಂದುದನ್ನು ಅವರ ಕೃತಿಗಳಲ್ಲಿ ಕಾಣಬಹುದು. ಕಾವ್ಯಕ್ಷೇತ್ರದಲ್ಲಿ ಈ ಪರಿವರ್ತನೆಯನ್ನು ಪ್ರತಿನಿಧಿಸುವವ ಜಿಯೊಸ್ಯೊ ಕಾರ್ಡ್ಯೂಚಿ (1835–1907). ಕಾರ್ಡ್ಯೂಚಿಯ ಕವನಗಳಲ್ಲೂ ಜೋವಾನಿವೆರ್ಗನ ಕಥೆ ಕಾದಂಬರಿಗಳಲ್ಲೂ ನಾವು ಈ ಬದಲಾವಣೆಯನ್ನು ಕಾಣುತ್ತೇವೆ.

ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಇಟಾಲಿಯನ್ ಸಾಹಿತ್ಯದಲ್ಲಿ ಅತ್ಯಂತ ಗಣ್ಯನಾಗಿದ್ದವ ಗೇಬ್ರಿಯಲ್ ಡಾನಂಜಿಯೊ (1863–1938) ಕಾರ್ಡ್ಯೂಚಿಯ ಅನುಯಾಯಿಯಾಗಿ ಬರೆಯತೊಡಗಿದ ಈತ ಕ್ರಮೇಣ ಕ್ಲಾಸಿಕಲ್ ಪಂಥದ ವೀರಾನುಗಾಮಿಯಾಗಿ ಇತರರ ಮೇಲೆ ತನ್ನ ಪ್ರಭಾವವನ್ನು ಬೀರಿದ. ಇವನ ಬರೆಹಗಳು ಫ್ಯಾಸಿಸ್ಟ್ ಪಂಥದ ತತ್ತ್ವಗಳನ್ನೂ ಒಳಗೊಂಡಿದ್ದವು. ಇವನ ಅತ್ಯಂತ ಪ್ರಭಾವಶಾಲಿ ಕೃತಿಗಳು ರಚಿತವಾದುದು 1885 ರಿಂದ 1910ರವರೆಗೆ.

ಡಾನಂಜಿಯೋನ ಅನಂತರ ಬಂದ ಇಟಲಿಯ ಸಾಹಿತಿಗಳಲ್ಲಿ ದೇಶ ವಿದೇಶಗಳೆರಡ ರಲ್ಲೂ ಪ್ರಸಿದ್ಧನಾದವನೆಂದರೆ ನಾಟಕಕಾರ ಲ್ಯೂಗಿ ಪಿರ್‍ಯಾಂಡೆಲ್ಲೊ (1867–1936). ಈತ ಕಾದಂಬರಿಗಳನ್ನು ಬರೆದು ತನ್ನ ಸಾಹಿತ್ಯಕೃಷಿಯನ್ನು ಆರಂಭಿಸಿದ. ಪಿರ್‍ಯಾಂಡೆಲ್ಲೊನ ಅನಂತರ ನಾಟಕಕಾರನಾಗಿ ವಿಚಾರಾತ್ಮಕವಾದ ವ್ಯಕ್ತಿತ್ವದ ವಿಶ್ಲೇಷಣೆಯನ್ನು ಗುರಿಯಾಗಿ ಉಳ್ಳ, ವೈಶಿಷ್ಟ್ಯಮಯವಾದ ನಾಟಕಗಳನ್ನು ರಚಿಸಿ ವಿಖ್ಯಾತನಾಗಿ 1934ರಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದ. ಇವನಲ್ಲದೆ, ಈ ಶತಮಾನದ ಇನ್ನೊಬ್ಬ ಪ್ರಭಾವಶಾಲಿ ಇಟಾಲಿಯನ್ ಬರಹಗಾರನೆಂದರೆ ಬೆನೆಡಿಟೊ ಕ್ರೋಚೆ (1906–1952) : ಆಧುನಿಕ ಸೌಂದರ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳ ಕ್ಷೇತ್ರದಲ್ಲಿ ಕ್ರೋಚೆ ದೊಡ್ಡ ಹೆಸರನ್ನು ಗಳಿಸಿದ್ದಾನೆ.

ಬೇರೆ ಸಾಹಿತ್ಯಗಳಿಗೆ ಹೋಲಿಸಿದರೆ ಇಟಾಲಿಯನ್ ಸಾಹಿತ್ಯ ತಡವಾಗಿಯೇ (13ನೇ ಶತಮಾನದಲ್ಲಿ) ಆರಂಭವಾಯಿತೆನ್ನಬೇಕು. ಅದರ ಚರಿತ್ರೆಯಲ್ಲಿ ಕೆಲವು ಯುಗಗಳು ಉತ್ತಮ ಪೈರನ್ನು ಕಂಡರೆ ಇನ್ನು ಕೆಲವು ಬೀಳಾಗಿದ್ದವು. ದೇಶದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳಿಗೂ ಸಾಹಿತ್ಯದಲ್ಲಿ ತಲೆದೋರಿದ ಏರುಪೇರುಗಳಿಗೂ ಒಂದು ರೀತಿಯ ಸಮೀಪಸಂಬಂಧವಿದ್ದುದನ್ನು ಗುರುತಿಸಬಹುದು. ಪ್ರಾಚೀನ ಯುರೋಪಿನ ಸಂಸ್ಕೃತಿಯ ಕೇಂದ್ರವಾಗಿದ್ದ ಇಟಲಿ ಬೇರೆ ಸಂಸ್ಕೃತಿಗಳ ಸಂಪರ್ಕವನ್ನು ಪಡೆದಾಗಲೇ ಅದರ ಸಾಹಿತ್ಯ ಉಚ್ಛ್ರಾಯಸ್ಥಿತಿಗೈದಿತು. ಆದರೆ ಹೀಗೆ ರೂಪಿತವಾದ ಇಟಲಿಯ ಸಾಹಿತ್ಯ ಇತರ ಐರೋಪ್ಯ ಸಾಹಿತ್ಯಗಳ ಮೇಲೂ ತನ್ನ ಪ್ರಭಾವವನ್ನು ಬೀರಿತೆಂಬುದು ಇನ್ನೂ ಗಮನಾರ್ಹವಾದ ಅಂಶ. (ಎಚ್.ಕೆ.ಆರ್.;ಎಂ.ಆರ್.)

ಪ್ರಾರಂಭದ ಇಟಾಲಿಯನ್ ಕವಿಗಳು ಕವನ ರೂಪಗಳನ್ನೂ ವಸ್ತುಗಳನ್ನೂ ಹೊರದೇಶಗಳಿಂದ ತೆಗೆದುಕೊಂಡರು. ಪ್ರಾಚೀನ ವೀರರ, ಅರಸ ಆರ್ಥರನ ಮತ್ತು ಅವನ 'ನೈಟ್ಸ್' ಅಥವಾ ಸರದಾರರ ಮತ್ತು ಅರಸ ಚಾರ್ಲ್‌ಮೆನ್ ಮತ್ತು ಅವನ ವೀರರ ಸಾಹಸಗಳು ಇವರ ಕವನಗಳ ವಸ್ತುಗಳು. ಈ ಕವನಗಳು ಜನಪ್ರಿಯವಾದುದಷ್ಟೇ ಅಲ್ಲ, ಮುಂದಿನ ಕವಿಗಳಿಗೂ ಆದರ್ಶ ವಿರೋಚಿತ ಬದುಕಿನ ವಸ್ತುವನ್ನು ಕೊಟ್ಟವು.

ದಾಂತೆ ವಿಶ್ವಕವಿಗಳ ಪಂಕ್ತಿಯಲ್ಲಿ ನಿಲ್ಲುವವನು. ಇವನ ಚಿಂತನೆಯ ಔನ್ನತ್ಯ, ಕಣ್ಣಿಗೆ ಕಟ್ಟುವ ಮತ್ತು ಕಾವ್ಯದ ಸಲಿಲ ಶೈಲಿ ಇವು ವಿಶಿಷ್ಟವಾದವು. ತನ್ನ ಮಹಾನ್ ಕೃತಿಗಳಿಗೆ ಲ್ಯಾಟಿನ್ ಬಳಸದೆ ಇಟಾಲಿಯನ್ ಭಾಷೆಯನ್ನೇ ಬಳಸಿ ಇಟಾಲಿಯನ್ ಸಾಹಿತ್ಯದ ಬುನಾದಿಯನ್ನು ಸ್ಥಾಪಿಸಿದವರಲ್ಲಿ ಇವನೂ ಒಬ್ಬ. ಮಧ್ಯಯುಗದ ಯುರೋಪಿನ ಆದರ್ಶಗಳ ವ್ಯಾಖ್ಯಾನಕಾರ ಇವನು. ಇವನ ಮಹಾಕಾವ್ಯ, 'ದಿ ಡಿವೈನ್ ಕಾಮಿಡಿ'ಯು ನರಕ, ಪ್ರಾಯಶ್ಚಿತ್ತ ಲೋಕ ಮತ್ತು ಸ್ವರ್ಗಗಳ ಸಂದರ್ಶನವನ್ನು ನಿರೂಪಿಸುತ್ತದೆ. ಈ ಅಸಾಧಾರಣ ಪಯಣದಲ್ಲಿ ಮಾರ್ಗದರ್ಶಕರು ದಾಂತೆಯ ಪರಿಶುದ್ಧ ಪ್ರೇಮವನ್ನು ಗೆದ್ದ ಬಯಾಟಿಸ್ ಮತ್ತು ಮಹಾಕವಿ ವರ್ಜಿಲ್.

ಪ್ರತ್ಯೇಕ ವ್ಯಕ್ತಿತ್ವದಲ್ಲಿ ಆಸಕ್ತಿಯನ್ನು ತೋರಿದ ಪೆಟ್ರಾರ್ಕನನ್ನು 'ಆಧುನಿಕ ಮಾನವ' ಎಂದು ಕರೆಯುವುದುಂಟು. ಹಾಗೆಯೇ, ತನ್ನ ತಾಯ್ನಾಡು ಇಟಲಿಯನ್ನು ಹಾಡಿ ಹೊಗಳಿದ ಇವನನ್ನು ಇಟಲಿಯ ಮೊದಲನೆಯ ರಾಷ್ಟ್ರೀಯತಾವಾದಿ (ನ್ಯಾಷನಲಿಸ್ಟ್) ಎಂದು ಕರೆಯುತ್ತಾರೆ.

ಬೊಕಾಚಿಯೋ ತನ್ನ ಕಥೆಗಳ ಸಾಮಗ್ರಿಯನ್ನು ತನ್ನ ಮುಂದಿದ್ದ ಸಾಹಿತ್ಯ ಕೃತಿಗಳಿಂದ ತೆಗೆದುಕೊಳ್ಳಲಿಲ್ಲ, ನೇರವಾಗಿ ಬದುಕಿನಿಂದ ಆರಿಸಿಕೊಂಡ.

ದಾಂತೆ ಮತ್ತು ಬೊಕಾಚಿಯೊ, ಇಡೀ ಯುರೋಪಿನ್ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ದೈತ್ಯರು.

ಹದಿನೈದನೆಯ ಶತಮಾನದ ಮಹತ್ವದ ಕವಿಗಳಲ್ಲಿ ಒಬ್ಬ ಆ್ಯಂಜಿಲೊ ಪಾಲಿಜಿಆನೊ (ಇವನನ್ನು ಪಾಲಿಷಿಯನ್ ಎಂದೂ ಕರೆಯುವುದುಂಟು) ಪದ್ಯ ಮಾಧ್ಯಮವನ್ನು ಬಳಸಿ ಇವನು ಬರೆದ 'ಆರ್ಫಿಯೊ' (1480 ?) ಇಟಾಲಿಯನ್ ಭಾಷೆಯಲ್ಲಿ ಮೊದಲನೆಯ ಗಮನಾರ್ಹ ನಾಟಕ.

ಮ್ಯಾಕಿಯ ತೆಲಯ 'ದಿ ಪ್ರಿನ್ಸ್' (1532) ಇಡೀ ಯುರೋಪಿನ ಚಿಂತನೆಯ ಮೇಲೆ ಪ್ರಭಾವ ಬೀರಿದ ಕೃತಿ (ಆದರೆ ಇದರ ಚಿಂತನೆಯನ್ನು ಹಲವೊಮ್ಮೆ ತಪ್ಪಾಗಿ ವ್ಯಾಖ್ಯಾನ ಮಾಡಿರುವುದುಂಟು). ಇದರ ಚಿಂತನೆಯ ಆಸ್ತಿಭಾರ, "ರಾಜ್ಯವನ್ನು ಸುರಕ್ಷಿತವಾಗಿ ಉಳಿಸುವುದೇ ರಾಜನ ಪರಮ ಕರ್ತವ್ಯ" ಎನ್ನುವ ಅನಿಸಿಕೆ. ಇವನ ಪ್ರಸಿದ್ಧ ನಾಟಕ 'ದಿ ಮ್ಯಾನ್‌ಡ್ರೇಕ್' (1524). ಇದು ಮನುಷ್ಯನ ಪ್ರವೃತ್ತಿಗಳ ಬಹು ಕಹಿಯಾದ ವಿಶ್ಲೇಷಣೆ.

ನವೋದಯ ಯುಗದ ಮಹಾನ್ ಕಲಾವಿದರೂ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದರು, ಮೈಕೆಲ್ ಏಂಜೆಲೋನ ಸುನೀತಗಳಲ್ಲಿ ಗಾಢ ಅನುರಾಗವು ಅಭಿವ್ಯಕ್ತಿಯನ್ನು ಪಡೆಯುತ್ತದೆ. ಕಲೆ ಮತ್ತು ವಿಜ್ಞಾನಗಳನ್ನು ಕುರಿತು ಲಿಯನಾರ್ಡೊ ದ ವಿಂಚಿಯ ಬರೆದ ವಿದ್ವತ್ಪ್ರಬಂಧಗಳು ಆಧುನಿಕ ಚಿಂತಕರ ಮೇಲೆಯೂ ಪ್ರಭಾವ ಬೀರಿವೆ. ಚಿತ್ರ ಕಲಾವಿದ ವಾಸ್ತು ಶಿಲ್ಪಿ ಜಿಯಾರ್ಜಿಯೊ ವಸಾರಿ ಖ್ಯಾತ ಚಿತ್ರ ಕಲಾವಿದರ, ಶಿಲ್ಪಿಗಳ ಮತ್ತು ವಾಸ್ತುಶಿಲ್ಪಿಗಳ ಜೀವನ ಚರಿತ್ರೆಗಳನ್ನು ಬರೆದ. ಇಂದು ಇವು ಅಮೂಲ್ಯ ಆಕರವಾಗಿವೆ; ಮತಿಯೊ ಬಾಂದೆಲೊ 'ಕಿರು ಕಾದಂಬರಿಗಳು' (4 ಸಂಪುಟಗಳು, 1554–73) ಎನ್ನುವ ಕೃತಿಯನ್ನು ಪ್ರಕಟಿಸಿದ. ಇಲ್ಲಿನ ಕಥೆಗಳು ಯುರೋಪಿನ ಹಲವು ಸಾಹಿತ್ಯ ಕೃತಿಗಳಿಗೆ ಸಾಮಗ್ರಿಯನ್ನು ಒದಗಿಸಿವೆ. ಅವನೇ ಪ್ರಾಯಶಃ ಷೇಕ್ಸ್‌ಪಿಯರ್ ತನ್ನ 'ರೋಮಿಯೊ ಅಂಡ್ ಜೂಲಿಯೆಟ್' ನಾಟಕದ ಕಥೆಯನ್ನು ಈ ಕೃತಿಯಿಂದ ತೆಗೆದುಕೊಂಡ.

16ನೆಯ ಶತಮಾನದಲ್ಲಿ ಸ್ವತಂತ್ರವಾಗಿ, ದಿಟ್ಟವಾಗಿ ಚಿಂತಿಸಬಲ್ಲ ತತ್ತ್ವಶಾಸ್ತ್ರಜ್ಞನೊಬ್ಬ ಕಾಣಿಸಿಕೊಂಡ. ಅವನೇ ಜಿಯೊರ್‌ಡಾನೊ ಬ್ರೂನೊ. ಇವನ ಸ್ವತಂತ್ರ ಚಿಂತನೆಗಾಗಿ ಇವನನ್ನು ರೋಮ್ ನಗರದಲ್ಲಿ 1600ರಲ್ಲಿ ಜೀವಂತ ಸುಟ್ಟರು.

17ನೆಯ ಶತಮಾನವು ಶ್ರೇಷ್ಠ ಸಾಹಿತ್ಯವನ್ನು ಕಾಣಲಿಲ್ಲ, ಶ್ರೇಷ್ಠ ಕಲೆಯನ್ನೂ ಕಾಣಲಿಲ್ಲ. ಇದು 'ಬರೋಕ್' ಶೈಲಿಯ ಕಾಲ. ಕವಿಯ ಕಲ್ಪನೆಗೆ ನಿಯಂತ್ರಣವಿಲ್ಲದಿದ್ದ ಕಾಲ. ಅಭಿವ್ಯಕ್ತಿಯಲ್ಲಿ ಕೃತಕ, ಡಾಂಭಿಕ ಶೈಲಿ. ಟ್ರ್ಯಾಜಿಡಿಗಳಲ್ಲಿ ಅಸ್ಪಷ್ಟ ಭಾವಗಳು. ಈ ಕಾಲದ ಗಣನೀಯ ಕವಿ, ವಿಜ್ಞಾನಿ ಮತ್ತು ತತ್ತ್ವಶಾಸ್ತ್ರಜ್ಞ ತೊಮಾಸೊ ಕಂಪನೆಲನ ಬರಹಗಳಲ್ಲಿ ತನ್ನ ಕಾಲದ ಸಾಮಾಜಿಕ ಬದುಕಿನ ವಿಷಯದಲ್ಲಿ ತೀವ್ರ ಅಸಮಾಧಾನ ಕಾಣುತ್ತದೆ. ಸಾಮಾಜಿಕ ಜೀವನವನ್ನು ಉತ್ತಮಗೊಳಿಸಲು ಇವನು ಮಾಡಿದ ಸಲಹೆಗಳು ಇವನನ್ನು ಸೆರೆಮನೆಗೆ ಒಯ್ದವು.

18ನೆಯ ಶತಮಾನದ ಪ್ರಾರಂಭದಲ್ಲಿ ಬರೋಕ್ ಶೈಲಿಗೆ ವಿರೋಧ ವ್ಯಕ್ತವಾಯಿತು. 'ಆರ್ಕೇಡಿಯ' ಎನ್ನುವ ಸಂಸ್ಥೆಯ ಸದಸ್ಯರು ಸಾಹಿತ್ಯದಲ್ಲಿ ಪ್ರಜ್ಞಾಪೂರ್ವಕ ಅಕೃತ್ರಿಮತೆಯನ್ನು, ಸರಳತೆಯನ್ನು ಬೆಳೆಸಿಕೊಳ್ಳಬೇಕೆಂದು ವಾದಿಸಿದರು. ಈ ಹೊಸ ದೃಷ್ಟಿಯಿಂದ ಬರೆದವರಲ್ಲಿ ಗಣ್ಯ ಕವಿ (ಇವನು ನಾಟಕಗಳನ್ನು ಬರೆದ) ಪಿವಿತ್ರೊ ಮೆತಸ್ತಾಸಿಯೊ. ಇಟಲಿಯ ಶ್ರೇಷ್ಠ ನಾಟಕಕಾರಲ್ಲಿ ಒಬ್ಬನಾದ ಕಾರ್ಲೊ ಗೋಲೋನಿಯ ವಿನೋದ ನಾಟಕಗಳಲ್ಲಿಯೂ ಈ ಪಂಥದ ಪ್ರಭಾವವಿದೆ.

18ನೆಯ ಶತಮಾನದ ಇಟಲಿಯ ಸಾಹಿತ್ಯದ ಮೇಲೆ ಫ್ರಾನ್ಸಿನ ಚಿಂತಕ ರೆನೆ ಡೆಕಾರ್ತ್ ಮತ್ತು ಫ್ರಾನ್ಸಿನ 'ಎನ್‌ಲೈಟನ್ ಮೆಂಟ್' ಚಳವಳಿಯ ಬರಹಗಾರರ ಪ್ರಭಾವ ಅಧಿಕವಾಗಿತ್ತು. (ಇದರಿಂದಾಗಿ ಫ್ರೆಂಚ್ ಪದಗಳು ತಂಡ ತಂಡವಾಗಿ ಇಟಾಲಿಯನ್ ಭಾಷೆಯಲ್ಲಿ ಸೇರಿಕೊಂಡವು!) ಜೀಸ್ಸಪ್ ಪರಿನಿಯ ಕಾವ್ಯದಲ್ಲಿ ಸಾಮಾಜಿಕ ವಿಡಂಬನೆಯೂ ಪ್ರಖರವಾಗಿದೆ. ಶ್ರೀಮಂತ ವರ್ಗದ ಹುಡುಗಾಟಿಕೆ, ಭೋಗ ಜೀವನ, ಟೊಳ್ಳು ಬದುಕುಗಳನ್ನು ಇವನು ಉಗ್ರವಾಗಿ ಹಾಸ್ಯಮಾಡಿದ.

1789ರಲ್ಲಿ ನಡೆದ ಫ್ರಾನ್ಸಿನ ಮಹಾಕ್ರಾಂತಿಯ ಇಟಲಿಯಲ್ಲಿಯೂ ರಾಷ್ಟ್ರಪ್ರೇಮಕ್ಕೂ ಸ್ವಾತಂತ್ರ್ಯದ ಹಂಬಲಕ್ಕೂ ಹೊಸ ಚೈತನ್ಯವನ್ನು ತಂದುಕೊಟ್ಟಿತು. 1870ರಲ್ಲಿ ಫ್ರೆಂಚ್ ಸೈನ್ಯಗಳು ಇಟಲಿಯಿಂದ ಸಂಪೂರ್ಣವಾಗಿ ಕಾಲುತೆಗೆದವು. 19ನೆಯ ಶತಮಾನದ ಪ್ರಾರಂಭ ದಿಂದ 1870ರವರೆಗೆ ಇಟಲಿಯ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಬಯಕೆ ಉಜ್ವಲವಾಗಿ ಕಾಣುತ್ತದೆ. 19ನೆಯ ಶತಮಾನದ ಪ್ರಾರಂಭದ ಸಾಹಿತ್ಯದಲ್ಲಿ ಮೂರು ಎಳೆಗಳನ್ನು ಕಾಣಬಹುದು. ರಾಷ್ಟ್ರಪ್ರೇಮ ಇನ್ನೂ ಉಳಿದಿದ್ದ ಅಭಿಜಾತ ಸಾಹಿತ್ಯ ಮನೋಧರ್ಮ, ಮತ್ತು ಹೊಸ ಬಗೆಯ ರೊಮ್ಯಾಂಟಿಸಿಸಂ. ಫ್ರಾನ್ಸಿನ ಕ್ರಾಂತಿಯ ಪ್ರಭಾವವು ಎನ್‌ಸೆನ್‌ಜೊ ಮಾಂಟಿ ಉಗೊ ಫಾಸ್ಕೊಲೊ ಮತ್ತು ಕಾರ್ಲೊ ಪೋರ್ಟರವರ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ.

ಜಿಯಕೋಮೊ ಲಿಯೊಪಾರ್ದಿ ಇಟಲಿಯ ಭಾವಗೀತೆಗಳ ಕವಿಗಳ ಮೊದಲ ಪಂಕ್ತಿಯಲ್ಲಿರುವವನು. ಗ್ರೀಕ್ ಮತ್ತು ಲ್ಯಾಟಿನ್ ಕವನಗಳ ಅನುವಾದವು ಇವನಿಗೆ ಒಂದು ಬಗೆಯ ಶಿಕ್ಷಣವಾಯಿತು. ಪ್ರಾರಂಭದಲ್ಲಿ ದೇಶಭಕ್ತಿಯ ಉತ್ಸಾಹವು ಕಾಣುತ್ತಿತ್ತು. ಅನಂತರ ಗಾಢವಾದ ನಿರಾಸೆ ಮುಸುಕಿತು. ಆತ್ಮ ವಿಮರ್ಶೆ, ಒಂಟಿತನ ಮತ್ತು ಕೈಗೆ ಎಟುಕದಿರುವುದನ್ನು ಎಟುಕಿಸಿಕೊಳ್ಳುವ ಹಂಬಲ ಇವನ ಕಾವ್ಯದ ಲಕ್ಷಣಗಳು.

ಮ್ಯಾನ್‌ಝೋನಿಯ 'ಇ ಪ್ರಾತೊಸಿ ಸ್ಪೋಸಿ' (ಮದುವೆ ನಿಶ್ಚಿತಳಾದವಳು) ದಬ್ಬಾಳಿಕೆ ಮತ್ತು ವಿಧಿಯ ಕ್ರೌರ್ಯಕ್ಕೆ ತುತ್ತಾಗಿ ಹೋರಾಡುವ ಇಬ್ಬರು ಬಡ ಪ್ರಣಯಿಗಳ ಕಥೆ. ಈತನ 'ಇನಿ ಸೇಕ್ರಿ'ಯಲ್ಲಿ ಧಾರ್ಮಿಕ ಚಿಂತನೆ ಹರಳುಗಟ್ಟಿದೆ. ಇವನ ನಿರಾಭರಣ ಗದ್ಯ ಸ್ಪಷ್ಟವಾಗಿದ್ದು ಪರಿಣಾಮಕಾರಿಯಾಗಿದೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅಭಿಜಾತ ಸಾಹಿತ್ಯ ಮನೋಧರ್ಮ, ರೊಮ್ಯಾಂಟಿಸಿಸಂ ಎರಡರ ವಿರುದ್ಧವೂ ಬಂಡಾಯ ಮೂಡಿತು. ಭಾವಗೀತಾತ್ಮಕತೆ ಮತ್ತು ಕೃತಕ ಡಾಂಭಿಕ ಭಾಷೆ ಎರಡನ್ನೂ ತಿರಸ್ಕರಿಸಿದ ಈ ಸಾಹಿತಿಗಳು ತಮ್ಮ ಚಳವಳಿಯನ್ನು 'ವೆರಿಸ್ಮೊ' ಎಂದರೆ 'ವಾಸ್ತವತೆ' ಎಂದು ಕರೆದರು.

ಗೇಬ್ರಿಯಲ್ ಡಾನಂಜಿಯೊ ರೊಮ್ಯಾಂಟಿಸಿಸಂ, ವಾಸ್ತವತೆ ಮತ್ತು ಅಭಿಜಾತ ಸಾಹಿತ್ಯ ಮನೋಧರ್ಮ ಮೂರನ್ನೂ ನಿರಾಕರಿಸಿ ನವೋದಯ ಯುಗದ 'ವಿಶ್ವ ಮಾನತೆ' ಆದರ್ಶವನ್ನು ತನ್ನ ಮುಂದಿರಿಸಿಕೊಂಡ ಇಟಲೊ ಸ್ವವೊನ ಕಾದಂಬರಿಗಳಲ್ಲಿ ಮಾನಸಿಕ ಪ್ರೇರಣೆಗಳ ವಿಶ್ಲೇಷಣೆ ಕಾಣುತ್ತದೆ.

ಸಮಾಜಶಾಸ್ತ್ರ ದೃಷ್ಟಿಯ ಇತಿಹಾಸಕಾರ ಗುಗ್ಲಿ ಎಲೊ ಫೊರಲೊ ಇವನು ಮುಸೊಲಿನಿಯ ಫ್ಯಾಸಿಸಂ ಅನ್ನು ವಿರೋಧಿಸಿದ. ಆದರೆ ತತ್ತ್ವಶಾಸ್ತ್ರಜ್ಞ ಜಿಯೊವನಿ ಜಂಟೈಲ್ ಫ್ಯಾಸಿಸಂ ಅನ್ನು ಬೆಂಬಲಿಸಿದ. ಮೆಟಿಲ್ಡ ಸೆರಾಬ ಮನೋವಿಶ್ಲೇಷಾತ್ಮಕ ಕಾದಂಬರಿಗಳನ್ನು ಬರೆದಳು. ಗ್ರೇಜ಼ಿಯ ಡೆಲೆಡ್ಡ ಸಾರ್ಡಿನಿಯದ ರೈತರನ್ನು ಕುರಿತು 'ನ್ಯಾಚುರಲಿಸ್ಟಿಕ್' ಕಾದಂಬರಿಗಳನ್ನು ಬರೆದಳು. 1926ರಲ್ಲಿ ಇವಳಿಗೆ ನೊಬೆಲ್ ಪ್ರಶಸ್ತಿ ದೊರಕಿತು.

ಕ್ರೋಚೆ ಇಟಲಿಯಾಚೆ ಹಲವಾರು ದೇಶಗಳ ಚಿಂತಕರ ಮೇಲೆ ಪ್ರಭಾವ ಬೀರಿದ. 'ಲ ಕ್ರಿಟಿಕ' ಎನ್ನುವ ಅವನ ಸಾಹಿತ್ಯಕ ಪತ್ರಿಕೆ ಅವನ ವಿಚಾರಧಾರೆಯನ್ನು ಹರಡಿತು. ಬುದ್ಧಿಜೀವಿಯು ಸಾರ್ವಜನಿಕ ಜೀವನದಲ್ಲಿ ಭಾಗವಹಿಸಬೇಕು ಎಂದು ಇವನ ನಿಲುವು. ಇವನು ಫ್ಯಾಸಿಸಂನ ವಿರೋಧಿ.

ಪಿರ್ಯಾಂಡೆಲೊ ತನ್ನ ನಾಟಕಗಳಲ್ಲಿ ಮಾನಸಿಕ ಸ್ಥಿತಿಗಳ ಸೂಕ್ಷ್ಮ ವಿಶ್ಲೇಷಣೆಯನ್ನು ಮಾಡಿದ. ರಂಗಮಂದಿರದಲ್ಲಿ ಇವನು ಮಾಡಿದ ಪ್ರಯೋಗಗಳು ನಟರನ್ನು, ಪ್ರೇಕ್ಷಕರನ್ನು ಹತ್ತಿರಕ್ಕೆ ತಂದವು. ತತ್ತ್ವಜ್ಞಾನದ ಸಮಸ್ಯೆಗಳನ್ನು ಇವನು ತನ್ನ ಕೃತಿಗಳಲ್ಲಿ ಪೃಥಕ್ಕರಿಸಿದ.

ಮುಸೊಲೋನಿಯ ಫ್ಯಾಸಿಸಂ ಸಾಹಿತ್ಯದ ಕುತ್ತಿಗೆ ಹಿಸುಕುವ ಶಕ್ತಿಯಾಯಿತು. ಗೈಸೆಪ ಆಂಟೊನಿಯೊ ಬರ್ಜೀಸ್‌ನಂಥ ಬರಹಗಾರರು ಈ ಸಿದ್ಧಾಂತವನ್ನು ತಿರಸ್ಕರಿಸಿದರು. ಮೊದಲು ಫ್ಯಾಸಿಸಂ ಅನ್ನು ಬೆಂಬಲಿಸಿದ ಕರ್ಸಿಯೊ ಸಕರ್ಟ್ ಅನಂತರ ತನ್ನ 'ಕಾಪಟ್' ಎನ್ನುವ ಕೃತಿಯಲ್ಲಿ ಫ್ಯಾಸಿಸಂನಿಂದ ಯುರೋಪಿನಲ್ಲಿ ಆದ ನೈತಿಕ ಮತ್ತು ಸಾಂಸ್ಕೃತಿಕ ಅವನತಿಯನ್ನು ಚಿತ್ರಿಸಿದ.

ಗೈಸೆಪೆ ಅಂಗಡೆಟಿ ಯುರೋಪಿನ ಶ್ರೇಷ್ಠ ಕವಿಗಳಲ್ಲಿ ಒಬ್ಬ. ಇವನ 'ದ ಬರೀಡ್ ಹಾರ್ಬರ್' (1916) ಕವನ ಸಂಗ್ರಹವು ಇಟಾಲಿಯನ್ ಕಾವ್ಯಕ್ಕೆ ಪುನಶ್ಚೇತನ ಬಂದುದನ್ನು ಸಾರಿತು. ಯುಜಿನಿಯೊ ಮಂಟಾಲೆಯೊ ಯುರೋಪಿನ ಶ್ರೇಷ್ಠ ಕವಿಗಳಲ್ಲಿ ಒಬ್ಬ. ಇವನಿಗೆ 1975ರಲ್ಲಿ ನೊಬೆಲ್ ಪಾರಿತೋಷಕ ಲಭ್ಯವಾಯಿತು. ಬದುಕನ್ನು ಕಟುವಾಗಿ ಟೀಕಿಸುವ ಇವನ ಕಾವ್ಯದಲ್ಲಿ ಗಾಢವಾದ ನಿರಾಸೆಯು ಆಗಾಗ ವ್ಯಕ್ತವಾಗುತ್ತದೆ. ಇವನು ಆಧುನಿಕ ಬದುಕಿನ ದುರಂತವನ್ನು ಎತ್ತಿ ತೋರಿಸುವ ಮತ್ತೊಬ್ಬ ಕವಿ ಸಾಲ್ವಟೋರ್ ಕ್ವಸಿಮೊಡೊ. ಇವನು ಆಧುನಿಕ ಬದುಕಿನ ಟ್ರ್ಯಾಜೆಡಿಯನ್ನು ಗಾಢವಾದ ಭಾವಗೀತಾತ್ಮಕತೆಯಲ್ಲಿ ವ್ಯಕ್ತಪಡಿಸುತ್ತಾನೆ. 1959ರಲ್ಲಿ ಇವನಿಗೆ ನೊಬೆಲ್ ಪ್ರಶಸ್ತಿ ಲಭ್ಯವಾಯಿತು.

ಎರಡನೆಯ ಮಹಾಯುದ್ಧದ ಅನಂತರ ಇಟಲಿಯಲ್ಲಿ ಕಥಾಸಾಹಿತ್ಯದಲ್ಲಿಯೂ ಚಲನಚಿತ್ರದಲ್ಲಿಯೂ ಒಂದು ಹೊಸ ವಾಸ್ತವತೆಯು ಮೂಡಿತು. ಕಾರ್ಲೊ ಲೆವಿ ತನ್ನ ಕಾದಂಬರಿಗಳಲ್ಲಿ ರೈತರ ಕಷ್ಟಗಳನ್ನು ನಿರೂಪಿಸಿದ. ಎಲಿಯೊ ವಿಟ್ಟೊರಿನಿ, ವಾಸ್ಕೊ ಪ್ರಟೊಲಿನಿ, ಸಿಸರ್ ಪವೀಸ್ ಮೊದಲಾದವರು ಈ ಪಂಥದ ಕೆಲವರು ಗಣ್ಯ ಕಾದಂಬರಿಕಾರರು.

ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಮತ್ತೊಬ್ಬ ಕಾದಂಬರಿಕಾರ ಆಲ್‌ಬರ್ಟೊ ಮೊಡೇವಿಲಿಮ. ಇಂದಿನ ಸಮಾಜದಲ್ಲಿ ನೈತಿಕ ಸಂದಿಗ್ಧತೆಯಲ್ಲಿ ಸಿಲುಕಿದವರ ಪರಿಸ್ಥಿತಿಯನ್ನು ಇವನು ವಿಶ್ಲೇಷಿಸುತ್ತಾನೆ. ಇವನ ಲ ಸಿಯೊಸಿಅರ (ಇಬ್ಬರು ಸ್ತ್ರೀಯರು, 1959) ಯುದ್ಧದಿಂದ ಜರ್ಝರಿತವಾದ ಇಟಲಿಯಲ್ಲಿ ಇಬ್ಬರು ಮಹಿಳೆಯರ ಬವಣೆಗಳ ಕಥೆಯನ್ನು ಹೇಳುತ್ತದೆ. ಇದು ಒಳ್ಳೆಯ ಚಲನಚಿತ್ರವೂ ಆಯಿತು. ಜಿಯಾರ್‌ಜಿಬನ 'ಫಿನ್ಜಿ – ಕಾಂಟಿನಿಸ್' (1965) ಫ್ಯಾಸಿಸ್ಟ್ ಇಟಲಿಯಲ್ಲಿ ಒಂದು ಯೆಹೂದ್ಯ ಕುಟುಂಬದ ಯಾತನೆಯ ಕಥೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಇತರ ಗಣನೀಯ ಕಾದಂಬರಿಕಾರರಲ್ಲಿ ಕೆಲವರು ದಿನೊ ಬುಜ಼ಾಟಿ, ಎಲ್ಸಿ ಮೊರಾಂಟೆ, ನಟಾಲಿಯ ಗಿನ್ಸ್‌ಬರ್ಗ್, ಪ್ರಿಮೊ ಲೆವಿ ಮೊದಲಾದವರು. ಆ ಶತಮಾನದ ಕಡೆಯ ವರ್ಷಗಳಲ್ಲಿ ಪ್ರೊ. ಉಂಬರ್ಟೊ ಎಕೊ, ಫ್ಯಾಂಟಸಿ ಮತ್ತು ಆಧ್ಯಾತ್ಮಿಕ ಊಹೆಗಳನ್ನು ಸಂಗಮಗೊಳಿಸಿದ ಕಾದಂಬರಿಗಳಿಂದ ಗಮನ ಸೆಳೆದ. ಆಂಟೊನಿಯೊ ಟಬುಚಿ, ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳನ್ನು ಎತ್ತುವ ಪತ್ತೇದಾರಿ ಕಾದಂಬರಿಗಳನ್ನು ಬರೆದ. (ಎಲ್.ಎಸ್.ಎಸ್.)

**ಇಟಾಲಿಯನ್ ಸಾಹಿತ್ಯವಿಮರ್ಶೆ:** ಇದರ ಪರಂಪರೆಯ ಮೂಲವನ್ನು ಮಧ್ಯಯುಗದ ಮಹಾಕವಿಯೂ ಇಟಲಿ ಸಾಹಿತ್ಯದ ಕಾರಣಪುರುಷನೂ ಆದ ಡಾಂಟೆ ಬರೆದ ಎರಡು ಅಪೂರ್ಣ, ಆದರೆ ಅಪೂರ್ವವಾದ ಗದ್ಯಗ್ರಂಥಗಳಲ್ಲಿ ಗುರುತಿಸಬಹುದು. ಡಾಂಟೆಗಿಂತ ಮುಂಚೆ ಇಟಲಿ ಸಾಹಿತ್ಯ ಇತಿಹಾಸದಲ್ಲಿ ವಿಮರ್ಶಾಸೂತ್ರಗಳನ್ನು ಕುರಿತು ಚಿಂತಿಸಿದವರು, ವಿವೇಚಿಸಿದವರು ತೀರಾ ವಿರಳ. ಮತ ಧರ್ಮಗಳು ಜನಜೀವನದ ಮೇಲೆ ವಿಶೇಷ ಅಧಿಕಾರ, ಪ್ರಭಾವ ಬೀರಿದ ಮಧ್ಯಯುಗದ ಕಾಲದಲ್ಲಿ ಕ್ರೈಸ್ತಮತಗಳ ಸನ್ಯಾಸಿಗಳೇ ಸಾಹಿತ್ಯದ ತಪ್ಪು ಒಪ್ಪುಗಳನ್ನು ನಿರ್ಣಯಿಸುತ್ತಿದ್ದರು. ಕ್ರೈಸ್ತಲೋಕದಲ್ಲಿ ಪುರಾತನ ಗ್ರೀಕ್, ಲ್ಯಾಟಿನ್ ಲೌಕಿಕ ಸಾಹಿತ್ಯದ ಎಷ್ಟು ಭಾಗವನ್ನುಳಿಸಿಕೊಳ್ಳಬೇಕೆಂದು ನಿರ್ಧರಿಸಿದವರೂ ಮಠಾಧಿಪತಿಗಳೇ. ಇವರಲ್ಲಿ ಮಾನವೀಯ ಮೌಲ್ಯಗಳನ್ನರಿತು ವ್ಯಕ್ತಿಸ್ವಾತಂತ್ರ್ಯವನ್ನು ಗುರುತಿಸಿದವರೂ ಟರ್‌ಷುಲಿಯನ್‌ರಂಥ ಮತಾಂಧರೂ ಸೇರಿರುತ್ತಿದ್ದರು. ಆ ಕಾಲದಲ್ಲಿ ಸಾಹಿತ್ಯಸೂತ್ರಗಳನ್ನು ಲೌಕಿಕದೃಷ್ಟಿಯಿಂದ ನೋಡಿದವರಲ್ಲಿ ಡಾಂಟೆಯೇ ಮೊದಲಿಗ. ಇಟಾಲಿಯನ್ ಗದ್ಯದಲ್ಲಿ ಬರೆದ ಡಾಂಟೆಯ ಇಲ್ ಕನ್‌ವೀವಿಯ ಅಥವಾ ಔತಣಕೂಟ ಮುಖ್ಯವಾಗಿ ರಾಜ್ಯಶಾಸ್ತ್ರ, ದರ್ಶನ, ಬೈಬಲ್ ಹಾಗೂ ಆತ್ಮಕಥೆಯ ಪ್ರಸ್ತಾಪಗಳನ್ನೊಳಗೊಂಡ ಗಹನ ವಿದಗ್ಧ ಗ್ರಂಥ. ಎರಡನೆಯ ಗ್ರಂಥವಾದ ಡಿ ವಲ್ಗರಿ ಎಲಕ್ವೆಂಷಿಯ ಅಥವಾ ದೇಶಭಾಷೆಯ ಬಳಕೆ ಯುರೋಪಿನ ಸಾಹಿತ್ಯ ವಿಮರ್ಶೆಯ ಆಕರ ಗ್ರಂಥ. ಡಾಂಟೆ, ತಾನು ಕಾವ್ಯಮಾಧ್ಯಮವಾಗಿ ಬಳಸಲು ನಿರ್ಧರಿಸಿದ, ಆಮೇಲೆ ಕೈಬಿಟ್ಟ, ಇಟಲಿಯ ದೇಶಭಾಷೆಯ ವೈವಿಧ್ಯ, ಔಚಿತ್ಯಗಳನ್ನು ಸ್ವಾರಸ್ಯವಾಗಿ ವಿವೇಚಿಸಿದ್ದಾನೆ. ಹೊಸದಾಗಿ ಕಾವ್ಯ ನಿರ್ಮಿಸಲು ಹೊರಟ ಯಾವ ಕವಿಯೂ ಎದುರಿಸಬೇಕಾದ ಅಭಿವ್ಯಕ್ತಿಯ ಸಮಸ್ಯೆಯನ್ನು ಇಲ್ಲಿ ಚರ್ಚಿಸಿದ್ದಾನೆ.

ಹೊಸ ಹುಟ್ಟಿನ ಕಾಲದಲ್ಲಿ ಪಂಡಿತರು ಅನುಸರಿಸಿದ ವಿಮರ್ಶೆಯ ಸೂತ್ರಗಳಲ್ಲಿ ಯಾವ ತೆರನಾದ ಸಂಕೀರ್ಣತೆಯೂ ಇರಲಿಲ್ಲ. ಹೋಮರ್, ವರ್ಜಿಲ್, ಅರಿಸ್ಟಾಟಲರಂಥ ಪುರಾತನ ಸಾಹಿತಿಗಳನ್ನು ಚಾಚೂ ತಪ್ಪದೆ ಅನುಸರಿಸಬೇಕು. ಅವರ ಕೃತಿಗಳ ಮಾದರಿಯನ್ನನುಸರಿಸದೆ ಬರೆದುದೆಲ್ಲ ದೋಷಪೂರ್ಣ ಸಾಹಿತ್ಯ. ಇದು ಅಂದಿನ ಸಾಹಿತಿಗಳ ಧೋರಣೆ. ಕೇವಲ ಪುರಾತನರ ಸಾಹಿತ್ಯಪ್ರಕಾರಗಳನ್ನಲ್ಲದೆ ಅವರು ಉಪಯೋಗಿಸಿದ ಭಾಷೆಯನ್ನೂ ಮಾದರಿಯಾಗಿ ಅನುಸರಿಸಬೇಕೆಂದು 1527ರಲ್ಲಿ ಮಾರ್ಕೊ ಜಿರೊಲಾಮೋ ವಿಡ ವಾದಿಸಿದ. ವಿಮರ್ಶಾಸೂತ್ರಗಳನ್ನು ಪದ್ಯರೂಪದಲ್ಲಿ ಹೆಣೆಯುವ ಸಂಪ್ರದಾಯ ಪ್ರಾರಂಭವಾದುದೂ ಆಗಲೇ. ವಿಡ ಲ್ಯಾಟಿನ್‌ನಲ್ಲಿ ಬರೆದ ಕಾವ್ಯಕಲೆ ನೂರಾರು ವರ್ಷಗಳ ಅನಂತರ ಫ್ರಾನ್ಸಿನ ಬೋಲೊ ಆಮೇಲೆ ಇಂಗ್ಲೆಂಡಿನ ಅಲೆಕ್ಸಾಂಡರ್ ಪೋಪ್ ಮುಂತಾದವರ ಮೇಲೆ ಪ್ರಭಾವ ಬೀರಿತು.

ಆ ಕಾಲದಲ್ಲಿ ಹೋಮರ್, ಪ್ಲೇಟೊ, ಅರಿಸ್ಟಾಟಲ್‌ರ ಲೋಕೋತ್ತರ ಗ್ರಂಥಗಳನ್ನು ಭಾಷಾಂತರ ಮಾಡಿ ಅಡಕವಾಗಿ ಸಂಗ್ರಹಿಸಿ, ಸಂಪಾದಿಸಿ ಅವುಗಳನ್ನು ಜನಪ್ರಿಯಗೊಳಿಸಿದರೂ ಪುರಾತನ ವಿಮರ್ಶಾಸೂತ್ರಗಳನ್ನು ಕುರಿತ ಸಮಂಜಸ ತಿಳಿವಳಿಕೆ ಪಂಡಿತರಲ್ಲಿ ಮೂಡಲು ಬಹುಕಾಲ ಹಿಡಿಯಿತು. ಆ ಕಾಲದಲ್ಲೂ ಎಲ್ಲರೂ ಪುರಾತನ ಸೂತ್ರಗಳನ್ನು ಕುರುಡು ಕುರುಡಾಗಿ ಅನುಕರಿಸಲಿಲ್ಲ. ಪುರಾತನ ಅಭಿಜಾತ ಸಂಪ್ರದಾಯವನ್ನು ವಿರೋಧಿಸುವ ಅಭಿಪ್ರಾಯ ವ್ಯಕ್ತಪಡಿಸಿದವರಲ್ಲಿ ಸಿಂಥಿಯೋ, ಟ್ಯಾಸೋ, ಮ್ಯಾಟ್ಸಿನಿ, ಗುಆರಿನಿ, ಕ್ಯಾಸಲ್‌ವೆಟ್ರೋ ಮುಂತಾದವರ ಹೆಸರು ಹೇಳಬಹುದು. ತಾವು ರಚಿಸಿದ ರಮ್ಯ ಕಲ್ಪನೆಯ ಕೃತಿಗಳಲ್ಲಿ ಅನುಸರಿಸಿದ ವಿಭಿನ್ನ ಮಾರ್ಗ, ನೂತನ ಶೈಲಿ ಅಳವಡಿಸಿಕೊಂಡು ಹೊಸ ಪ್ರಕಾರಗಳನ್ನವರು ಸಮರ್ಥಿಸಿಕೊಂಡರು. ಕ್ಲಾಸಿಕಲ್ ಸಂಪ್ರದಾಯದೊಳಗೇ ತದ್ವಿರುದ್ಧವಾದ ನವ್ಯ, ರಮ್ಯ ಸಂಪ್ರದಾಯವೂ ಹುಟ್ಟಿ ಬಂದುದು ಸರ್ವವಿದಿತ. ಛಂದಶ್ಶಾಸ್ತ್ರ, ಪ್ರಾಸ ಮುಂತಾದ ವಿಷಯಗಳಲ್ಲಿ ಜಿಜ್ಞಾಸೆ ಪ್ರಾರಂಭವಾದುದೂ ಈ ಕಾಲದಲ್ಲೇ. ಪುರಾತನರ ಸಾಹಿತ್ಯಮಾರ್ಗವನ್ನೂ ವಿಮರ್ಶಾಸೂತ್ರಗಳನ್ನೂ ಸ್ವಂತವಾಗಿ ಗ್ರಹಿಸಿ ತಮ್ಮ ಕಾಲದ ರೀತಿನೀತಿ, ಅಭಿರುಚಿಗಳಿಗೆ ಒಪ್ಪವಾಗುವಂತೆ ಅಳವಡಿಸಿಕೊಂಡು ಪೆಟ್ರಾರ್ಕ್, ಬೊಕ್ಯಾಚಿಯೊ ಮುಂತಾದ ಶ್ರೇಷ್ಠ ಸಾಹಿತಿಗಳು ತಮ್ಮ ಸೋಪಜ್ಞತೆಯನ್ನು ಮೆರೆದರು. ವಾದವಿವಾದಗಳಲ್ಲಿ ಸೇರಿದ ಪಂಡಿತರ ಒಂದು ಪಂಗಡ ವಿವೇಚನೆ ಮರೆತು ದುರಭಿಮಾನ ತಳೆದು ಗ್ರೀಸಿನ ಹೋಮರನಿಗಿಂತ ತಮ್ಮ ದೇಶದ ವರ್ಜಿಲನೇ ಉತ್ತಮೋತ್ತಮ ಕವಿಯೆಂದು ವಾದಿಸಿ ವರ್ಜಿಲ್ ಪೂಜೆಯ ಹೊಸ ಪಂಥವನ್ನೇ ಕಟ್ಟಲೆತ್ನಿಸಿದರು. ಹದಿನಾರನೆಯ ಶತಮಾನದ ಇಟಲಿ ವಿಮರ್ಶೆಯಲ್ಲಿ ಹೊರಹೊಮ್ಮಿದ ಒಂದು ಪ್ರವೃತ್ತಿಯಂತೂ ಗಮನಾರ್ಹ. ಕಾವ್ಯವನ್ನು ಕುರಿತ ಉತ್ಕರ್ಷ, ಕಾವ್ಯದ ಹಿರಿಮೆಯನ್ನು ಕುರಿತ ಕಳಕಳಿ ಹೊಸ ಹುಟ್ಟಿನ ಕಾಲದ ಮಾನವತಾವಾದಿಗಳ ಗ್ರಂಥಗಳಲ್ಲಿ ನಿಚ್ಚಳವಾಗಿ ಪಡಿಮೂಡಿದ ಗುಣಾಂಶ.

17–18ನೆಯ ಶತಮಾನದ ಉದ್ದಕ್ಕೂ ಪ್ರಭಾವ ಬೀರಿದ ನಿಯೋಕ್ಲಾಸಿಕಲ್ ಸಂಪ್ರದಾಯ ಗ್ರಾವಿನ, ಮುರತೋರಿ ಹಾಗೂ ವಿಕೋ ಮುಂತಾದ ವಿಮರ್ಶಕರನ್ನು ಸೃಜಿಸಿತು. ವಿಕೋ ಪ್ರತಿಪಾದಿಸಿದ ಇತಿಹಾಸವಾದ ಪ್ರಪಂಚ ಸಾಹಿತ್ಯ ಚರಿತ್ರೆಯಲ್ಲೇ ತೀರಾ ವಿನೂತನ

ಕಲ್ಪನೆ. ಬಹುಕಾಲ ಅಜ್ಞಾತವಾಗಿದ್ದ ವಿಕೋವಿನ ಸೋಪಜ್ಞತೆಯನ್ನು ಯುರೋಪಿಗೆ ಪರಿಚಯ ಮಾಡಿಸಿದವರು ಇಂಗ್ಲೆಂಡಿನ ಕೋಲ್‌ರಿಜ್ ಹಾಗೂ ಇಟಲಿಯ ಪ್ರತಿಭಾವಂತ ವಿಮರ್ಶಕ ಕ್ರೋಚೆ.

18ನೆಯ ಶತಮಾನದ ಇಟಲಿಯ ವಿಮರ್ಶಕರಲ್ಲಿ ಪ್ರಸಿದ್ಧರಾದ ಇಬ್ಬರ ಹೆಸರು ಉಲ್ಲೇಖನಾರ್ಹ. ಸೀಸರಟ್ಟಿ ಇಂಗ್ಲಿಷ್ ಕವಿ ಮ್ಯಾಕ್‌ಫರ್‌ಸನ್ನನ ಓಸಿಯನ್ ಕಾವ್ಯವನ್ನೂ ಅರಿಸ್ಟಾಟಲ್‌ನ ರುದ್ರನಾಟಕ ಸೂತ್ರಗಳನ್ನೂ ಕುರಿತ ವಿಶ್ಲೇಷಣಾ ಪ್ರಬಂಧಗಳನ್ನು ಬರೆದ. ಇಂಗ್ಲಿಷ್ ಸಾಹಿತ್ಯಾಭ್ಯಾಸಿಗಳಿಗೆಲ್ಲ ಪರಿಚಿತನಾದ ಇನ್ನೊಬ್ಬ ವಿಮರ್ಶಕ–ಬ್ಯಾರಟ್ಟಿ. ಡಾ.ಜಾನ್‌ಸನ್ನನ ಆಪ್ತ ಒಡನಾಡಿಯೆಂದು ಪ್ರಸಿದ್ಧನಾದ ಬ್ಯಾರಟ್ಟಿಗೆ ಆತ ಮೂರು ವರ್ಷ ನಡೆಸಿದ ನಿಯತಕಾಲಿಕ ಪತ್ರಿಕೆಯೇ ಕುಂದಿಲ್ಲದ ಕೀರ್ತಿ ಗೌರವಗಳನ್ನು ದೊರಕಿಸಿದೆ. ಇಂಗ್ಲೆಂಡಿನ ಸ್ಟೀಲ್, ಅಡಿಸನ್ ಗೋಲ್ಡ್ ಸ್ಮಿತ್ ಮುಂತಾದವರ ಪ್ರಭಾವಗಳನ್ನು ಬ್ಯಾರಟ್ಟಿಯ ಲೇಖನಗಳಲ್ಲಿ ಗುರುತಿಸಬಹುದು. ಅವನ ಹರಿತವಾದ ಶೈಲಿ, ಚಾಟಿಯಿಂದ ಹೊಡೆದೆಬ್ಬಿಸುವಂಥ ವಿಚಾರಧಾರೆ, ದಿಟ್ಟತನ, ಸೂಕ್ಷ್ಮ ಸಂವೇದನೆ–ಈ ಶತಮಾನದ ಓದುಗರ ಅಭಿರುಚಿಯನ್ನೂ ಕೆರಳಿಸುವಂಥದು. ತನ್ನ ಕಾಲದ ಇಟಲಿ ಸಾಹಿತ್ಯವನ್ನು ಕುರಿತು ಅವನ ನಂಜುನುಡಿಗಳು ಒಮ್ಮೊಮ್ಮೆ ಔಚಿತ್ಯರಹಿತವೆನಿಸಿದರೂ ಅವು ಅವನ ವಸ್ತುನಿಷ್ಠೆಯನ್ನೂ ಆದರ್ಶಪ್ರಿಯತೆಯನ್ನೂ ಪ್ರತಿರೂಪಿಸುತ್ತವೆ.

19ನೆಯ ಶತಮಾನದಲ್ಲಿ ಯುರೋಪಿನಲ್ಲಿ ಬೀಸಿ ಬಂದ ಹೊಸ ಹುಟ್ಟಿನ ಬಿರುಗಾಳಿ ಇಟಲಿಯನ್ನೂ ತಟ್ಟಿತಷ್ಟೆ. ಅಲ್ಲಿ ಅದರ ಪ್ರವರ್ತಕರಲ್ಲಿ ಬ್ರೀಮೆ, ಪೆಲ್ಲಿಕೊ, ವೈಕಾಂಟಿ, ಮ್ಯನ್‌ಜೋನಿ ಅತ್ಯಂತ ಪ್ರಭಾವಶಾಲಿ ವಿಮರ್ಶಕರು. ಇಟಲಿಯಲ್ಲಿ ಹೊಸಹುಟ್ಟಿನ ಪಂಥ ಎತ್ತಿಹಿಡಿಯುವುದರಲ್ಲಿ ಮ್ಯನ್‌ಜೋನಿ ಉಜ್ಜ್ವಲ ಪಾತ್ರವಹಿಸಿದ. ತಾನು ರಚಿಸಿದ ಐತಿಹಾಸಿಕ ವಸ್ತುವುಳ್ಳ ದುರಂತನಾಟಕ ಮತ್ತು ಕಾದಂಬರಿಗಳಲ್ಲಿ ಪುರಾತನ ಸಾಹಿತ್ಯವಸ್ತುವನ್ನು ತ್ಯಜಿಸಿ, ಅರಿಸ್ಟಾಟಲ್ ಹೇಳಿದ ಮೂರು ಏಕತೆಗಳನ್ನುಲ್ಲಂಘಿಸಿ, ದೀರ್ಘ ವಿವಾದವೆಬ್ಬಿಸಿದ ಹೊಸಹುಟ್ಟಿನ ಸಾಹಿತ್ಯವೆಂದರೆ ಮಾಯ ಮಾಟದ ದೆವ್ವಪಿಶಾಚಿಗಳ ರೋಮಾಂಚಕ ಕಥೆಯಲ್ಲವೆಂದು ಸಾಧಿಸಲು ಚರಿತ್ರೆಯ ಘಟನೆ ಪಾತ್ರಗಳನ್ನೇ ತನ್ನ ಕೃತಿಗಳಲ್ಲಿ ಅಳವಡಿಸಿಕೊಂಡ. ಚರಿತ್ರೆಯನ್ನು ಕುರಿತ ಕಟ್ಟುಕಥೆ, ಕಾಲ್ಪನಿಕ ಪಾತ್ರಸೃಷ್ಟಿ ಅಸಾಧ್ಯವೆಂದು ವಾದಿಸುವ ಇವನ ಅಭಿಪ್ರಾಯಗಳನ್ನು ಗಯಟೆ ಎದುರಿಸಿ, ಸಮಂಜಸ ವ್ಯಾಖ್ಯಾನ ನೀಡಿದ್ದಾನೆ. ಮ್ಯನ್‌ಜೋನಿಯ ತತ್ತ್ವಗಳು ಪರೋಕ್ಷವಾಗಿ ಇಟಲಿಯ ಹೊಸಹುಟ್ಟಿನ ಪಂಥವನ್ನೇ ನಿರಾಕರಿಸುವುದೇನೊ ಎಂದು ತೋರುತ್ತದೆ. ಆ ತತ್ತ್ವಗಳನ್ನು ವಿರೋಧಿಸಿದರೂ ಉಗೋ ಫೊಸ್ಕೋಲ ಹಾಗೂ ಲಿಯೋಪಾರ್ದಿ ತಮಗರಿಯದಂತೆ ಇಟಲಿಯ ರೊಮ್ಯಾಂಟಿಕ್ ಪಂಥದ ನೇತಾರರೂ ಆದುದೊಂದು ವಿರೋಧಾಭಾಸ. ಅಸಾಧಾರಣ ಪಂಡಿತನಾದರೂ ಸಹೃದಯನಿಗಿರಬೇಕಾದ ತಾಳ್ಮೆ, ಕುತೂಹಲ, ಉತ್ಸಾಹ ಗಳಿಲ್ಲದಿರುವುದರಿಂದ ಲಿಯೋಪಾರ್ದಿಯ ಟೀಕೆ ಟಿಪ್ಪಣಿಗಳು ತಮ್ಮ ಅರ್ಥ–ಮೌಲ್ಯಗಳನ್ನು ಕಳೆದುಕೊಂಡಿವೆ. ಒಟ್ಟಿನಲ್ಲಿ ನಾಲ್ಕು ಕಾಲ ನಿಲ್ಲಬಲ್ಲ ಸತ್ತ್ವಶಾಲಿ ವಿಮರ್ಶಾಪಂಥ ಇಟಲಿಯಲ್ಲಿ ನಿರ್ಮಾಣವಾಗಲು ಬಹುಕಾಲ ಬೇಕಾಯಿತು.

ಇಂಥ ಹೊಸ ನಿರ್ಮಿತಿಯನ್ನು ಸಾಧಿಸಹೊರಟವರಲ್ಲಿ ಡಿ ಸಾಂಕ್ಟಿಸ್ ಅಗ್ರಗಣ್ಯ; ಈತ ಹತ್ತೊಂಬತ್ತನೆಯ ಶತಮಾನದ ಪ್ರಭಾವಶಾಲಿ ವಿಮರ್ಶಕ. ಈತ ಬರೆದ ಇಟಲಿ ಸಾಹಿತ್ಯದ ಕಥೆ ಹೊಸತೊಂದು ಸೌಂದರ್ಯಪಂಥವನ್ನೇ ನಿರ್ಮಿಸಿತೆನ್ನುತ್ತಾರೆ.

ಆದರೆ ಇಟಲಿಯ ಹೆಸರನ್ನು ಪ್ರಪಂಚದ ಸಾಹಿತ್ಯ ಇತಿಹಾಸದಲ್ಲಿ ಚಿರಸ್ಥಾಯಿಗೊಳಿಸಿದವನು ಈ ಶತಮಾನದ ಬೆನೆಡೆಟೊ ಕ್ರೋಚೆ. ಈತ ಸುಮಾರು 600 ವರ್ಷಗಳ, ಇಟಲಿ ವಿಮರ್ಶಾ ಪರಂಪರೆಯ ಸಾರಸರ್ವಸ್ವವನ್ನು ಮೈಗೂಡಿಸಿಕೊಂಡ ಮೇಧಾವಿ. ಸಾಹಿತ್ಯದ ಹೊರ ರೂಪು, ಅಂತರಂಗಗಳು ವಿಭಿನ್ನವಲ್ಲವೆನ್ನುವುದು ಕ್ರೋಚೆಯ ವಾದ (**ನೋಡಿ–ಕ್ರೋಚೆ,–ಬೆನೆಡೆಟೋ**). ಈ ಯುಗದ ಪ್ರಸಿದ್ಧ ವಿಮರ್ಶಕರೂ ಸೌಂದರ್ಯಶಾಸ್ತ್ರಜ್ಞರೂ ಎನಿಸಿಕೊಂಡು ಜೆಂಟೈಲ್ ಮುಂತಾದವರು ಯಾರೊಬ್ಬರೂ ಕ್ರೋಚೆಯ ಪ್ರಭಾವವನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲವೆನ್ನುವುದೇ ಅವನ ಅನನ್ಯ ಪ್ರತಿಭೆಗೆ ಸಾಕ್ಷಿ. ಇಟಲಿಯ ವಿಮರ್ಶಾ ಸಂಪ್ರದಾಯಕ್ಕೆ ಮೂರ್ತಸ್ವರೂಪವಿತ್ತ ಕೀರ್ತಿ ಕ್ರೋಚೆಗೇ ಸಲ್ಲಬೇಕು.

ಇತ್ತೀಚಿನ ವಿಮರ್ಶೆ ಪತ್ರಿಕೆ, ನಿಯತಕಾಲಿಕೆಗಳಲ್ಲಿನ ಚರ್ಚೆಗಳಿಂದ ಪುಷ್ಟಿಗೊಂಡಿದೆ. ಕ್ರೋಚೆ ಹೇಳಿದಂತೆ “ಚರಿತ್ರೆ, ಹಿಂದೆ ನಡೆದ ಕೆಲವು ಪ್ರಕರಣಗಳಲ್ಲ; ಈಗಿನ ನಮ್ಮ ಪ್ರಜ್ಞೆಯಲ್ಲಿ ಆ ಆಗುಹೋಗುಗಳ ಪುನರುತ್ಥಾನವೇ ಚರಿತ್ರೆ’. ಈ ಆದರ್ಶದಿಂದ ಸಾಹಿತ್ಯದ ಅಧ್ಯಯನ ಅದರ ಕಲಾರೂಪದಲ್ಲಿ ಹೆಚ್ಚು ತೀವ್ರವಾಗಿ ನಡೆಯಿತು. (ಎಚ್.ಕೆ.ಆರ್.)

**ಇಟಾನಗರ:** ಭಾರತದ ಈಶಾನ್ಯ ರಾಜ್ಯಗಳಲ್ಲೊಂದಾದ ಅರುಣಾಚಲ ಪ್ರದೇಶದ ರಾಜಧಾನಿ ಮತ್ತು ಮುಖ್ಯನಗರ. ಇದು 27º.08' ಉ.ಅ. ಮತ್ತು 93º.40' ಪೂ.ರೇ.ಗಳಲ್ಲಿದೆ. ಜನಸಂಖ್ಯೆ: 34,970 (2001). ಇದರಿಂದ 10ಕಿಮೀ ದೂರದಲ್ಲಿರುವ ನಾಹಾರ್ಲಗನ್ ಪಟ್ಟಣವೂ ಈ ಆಡಳಿತ ಕೇಂದ್ರಕ್ಕೆ ಸೇರಿರುತ್ತದೆ. ಇದು 11ನೆಯ ಶತಮಾನದಲ್ಲಿ ಜಿತ್ರಿ ರಾಜವಂಶವು ರಾಜಧಾನಿಯಾಗಿ ಮಾಡಿಕೊಂಡಿದ್ದ ಮಾಯಾಪುರವೆಂದು ಗುರುತಿಸಲಾಗಿದೆ. ಇತ್ತೀಚೆಗೆ ಇಲ್ಲಿ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿವೆ. ಸರ್ಕಾರದ ನೆರವೂ ಇದೆ. ಭಾರತದ ಸೂರ್ಯೋದಯ ನಗರವೆಂದು ಕರೆಯಲಾಗಿದೆ. (ಪಿ.ಎಂ.)

**ಇಟಾವಾ:** ಉತ್ತರಪ್ರದೇಶದ ಒಂದು ಜಿಲ್ಲೆ ಮತ್ತು ಅದರ ಮುಖ್ಯ ನಗರ. ಜಿಲ್ಲೆ ಉತ್ತರಪ್ರದೇಶದ ದಕ್ಷಿಣದ ಅಂಚಿನಲ್ಲಿದೆ; ನೈಋತ್ಯಕ್ಕೆ ಮಧ್ಯಪ್ರದೇಶದ ಭಿಂಡ್ ಜಿಲ್ಲೆಯಿದೆ. ಮಿಕ್ಕ ಕಡೆಗಳಲ್ಲಿ ಆಗ್ರಾ, ಮಣಿಪುರಿ, ಫರೂಕಾಬಾದ್, ಕಾನ್ಪುರ ಮತ್ತು ಜಲೌನ ಜಿಲ್ಲೆಗಳಿವೆ. ವಿಸ್ತೀರ್ಣ 4,446 ಚ.ಕಿಮೀ ಜನಸಂಖ್ಯೆ: 27,90,410. ಇದರ ಮಧ್ಯದಲ್ಲಿ ಯಮುನಾನದಿಯೂ ಸಂಗರ್ ಮುಂತಾದ ಉಪನದಿಗಳೂ ಹರಿಯುತ್ತವೆ. ಇಡೀ ಜಿಲ್ಲೆ ಏರುತಗ್ಗುಗಳ ಪ್ರದೇಶ; ಭೂಮಿ ಫಲವತ್ತಾದ ಎರೆಮಣ್ಣಿನಿಂದ ಕೂಡಿದೆ. ಎಲ್ಲೆಡೆಯೂ ತೀವ್ರಬೇಸಾಯ ನಡೆದಿದೆ. ಬೇಸಿಗೆಯ ಕ್ಲುಪ್ತಮಾರುತಗಳಿಂದ ಸರಾಸರಿ 10 ಸೆಂಮೀ ವಾರ್ಷಿಕ ಮಳೆ ಬೀಳುತ್ತದೆ. ಗೋದಿ, ದ್ವಿದಳ ಧಾನ್ಯಗಳು, ಬತ್ತ, ಮಿಲೆಟ್ ಮುಂತಾದವು ಕೃಷಿ ಉತ್ಪನ್ನಗಳೂ ಕೆಲವು ಕಡೆ ಕಬ್ಬು, ಸಾಸಿವೆ ಬೆಳೆಯುತ್ತಾರೆ. ದಕ್ಷಿಣಕ್ಕೆ ಹೋದಂತೆ ನೆಲ ಕೊಂಚ ಎತ್ತರವಾಗುವುದರಿಂದ ನದಿಯಿಂದಾದ ಕಮರಿಗಳೂ ಕೊರಕಲುಗಳೂ ಹೆಚ್ಚು. ಸಾರಿಗೆ ಸಂಪರ್ಕಗಳಿಗೆ ಇಂಥ ಅಡಚಣೆ ಇರುವುದರಿಂದ ಈ ಭಾಗ ಮಾತ್ರ ಹೆಚ್ಚಾಗಿ ಮುಂದುವರಿದಿಲ್ಲ.

ಇಟಾವಾ ನಗರ ಆಡಳಿತ ಮತ್ತು ವ್ಯಾಪಾರ ಕೇಂದ್ರ. ಸನ್ನಿವೇಶ: ಉ.ಅ. 27º.20' ಮತ್ತು ಪೂ.ರೇ. 82º.42' ಜನಸಂಖ್ಯೆ : 340,031 (2001). ಆಗ್ರಾಕ್ಕೆ 112 ಕಿಮೀ ದೂರದಲ್ಲಿ ಯಮುನಾನದಿಯ ಉತ್ತರದಂಡೆಯ ಮೇಲಿದೆ ; ಆಗ್ರಾದಿಂದ ಕಾನ್ಪುರಕ್ಕೆ ಹೋಗುವ ರೈಲುಮಾರ್ಗ ಈ ಊರಿನ ಮೂಲಕ ಹೋಗುತ್ತದೆ. ಹತ್ತಿ, ರೇಷ್ಮೆಗಳ ಕೈಗಾರಿಕೆ ಬೆಳೆದಿದೆ. 15ನೆಯ ಶತಮಾನದಲ್ಲಿ ಕಟ್ಟಿದ ಒಂದು ಕೋಟೆಯ ಅವಶೇಷಗಳು, ಹಿಂದೂ ದೇವಾಲಯಗಳು, ಹಿಂದೆ ಹಿಂದೂ ದೇವ ಮಂದಿರವಾಗಿದ್ದ ಒಂದು ಮಸೀದಿ–ಇವು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಜಿಲ್ಲೆಯಂತೆ ನಗರವೂ ಹಳ್ಳತಿಟ್ಟುಗಳನ್ನು ಹೊಂದಿರುವುದರಿಂದ 12ನೆಯ ಶತಮಾನ ಕಳೆಯುವವರೆಗೂ ಜನವಸತಿ ಕಡಿಮೆಯಿತ್ತು. ಜನ ಬಹುಪಾಲು ಹಿಂದುಗಳೇ ಆಗಿದ್ದರು. 1526ರಲ್ಲಿ ಬಾಬರ್‌ನ ಸೈನ್ಯವೊಂದು ಇದನ್ನು ವಶಪಡಿಸಿಕೊಂಡಿತು. ಮೊಗಲ್ ಸಾಮ್ರಾಜ್ಯ ಶಿಥಿಲಗೊಂಡಮೇಲೆ ಅನೇಕರ ಆಕ್ರಮಣಕ್ಕೆ ಸಿಕ್ಕಿ ಈ ಭಾಗ ಅನೇಕ ಯುದ್ಧಗಳ ರಣರಂಗವಾಯಿತು. ಅರಾಜಕತೆ ಹೋಗಿ ವ್ಯವಸ್ಥಿತ ಆಡಳಿತ ಬಂದದ್ದು 1801ರಲ್ಲಿ, ಬ್ರಿಟಿಷರ ಆಧಿಪತ್ಯಕ್ಕೆ ಬಂದಮೇಲೆ. *

**ಇಟಾರ್ಸಿ:** ಮಧ್ಯಪ್ರದೇಶದ ಹೊಷಂಗಾಬಾದ್ ತಾಲ್ಲೂಕಿನ ಮುಖ್ಯ ಪಟ್ಟಣ. ಸನ್ನಿವೇಶ: ಜನಸಂಖ್ಯೆ 93.783, 22º.39' ಉ.ಅ. ಮತ್ತು 77º.48' ಪೂ.ರೇ. ಮುಂಬಯಿಯಿಂದ 1742 ಕಿಮೀ ಕೊಲ್ಕತ್ತಾದಿಂದ 1498 ಕಿಮೀ ದೂರದಲ್ಲಿ, ಮುಂಬಯಿ ರೈಲುಮಾರ್ಗದಲ್ಲಿದೆ. ಕಾನ್ಪುರ, ಆಗ್ರಾ ನಗರಗಳೊಂದಿಗೂ ರೈಲುಸಂಪರ್ಕ ಹೊಂದಿದೆ. ರೈಲುಗಳು ಸಂಧಿಸುವ ಸ್ಥಳವಾದ್ದರಿಂದ ಊರಿನ ಪ್ರಾಮುಖ್ಯ ಹೆಚ್ಚುತ್ತಿದೆ. ಹೊಷಂಗಾಬಾದ್ ಜಿಲ್ಲೆಯ ರಫ್ತು ವ್ಯಾಪಾರದ ಬಹುಭಾಗ ಈ ಊರಿನ ಮೂಲಕ ನಡೆಯುತ್ತದೆ. ಪ್ರತಿವಾರವೂ ದನಗಳ ಭಾರಿ ಪರಿಸೆ ನಡೆಯುತ್ತದೆ. ಇಲ್ಲಿ ಫ್ರೆಂಡ್ಸ್ ಫಾರಿನ್ ಮಿಷನ್ ಎಂಬ ಕ್ರೈಸ್ತ ಸಂಸ್ಥೆ ನಡೆಸುತ್ತಿರುವ ಒಂದು ದೊಡ್ಡ ಪಾಠಶಾಲೆಯಿದೆ. *

**ಇಟ್ಟಗಿ:** ಕೊಪ್ಪಳ ಜಿಲ್ಲೆಯ ಯಲ್ಬುರ್ಗ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಜನಸಂಖ್ಯೆ 8331 (2001). ಚಾಲುಕ್ಯ ವಾಸ್ತುಶೈಲಿಯಲ್ಲಿ ನಿರ್ಮಿತವಾಗಿರುವ ಇಲ್ಲಿಯ ಮಹಾದೇವ ದೇವಾಲಯ ಪ್ರಸಿದ್ಧವಾದುದು. ಪ್ರ.ಶ. 1112ರಲ್ಲಿ ಚಾಲುಕ್ಯ ಅರಸರ ಆರನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವ ಎಂಬಾತ ಇದನ್ನು ಕಟ್ಟಿಸಿದನೆಂದು ಅಲ್ಲಿಯ ಶಾಸನವೊಂದರಿಂದ ತಿಳಿದುಬರುತ್ತದೆ. ಅದೇ ಶಾಸನದಲ್ಲಿ ಆ ಮಂದಿರವನ್ನು ದೇವಾಲಯಚಕ್ರವರ್ತಿ ಎಂದು ಕರೆಯಲಾಗಿದೆ. ಚಾಲುಕ್ಯ ಶೈಲಿಯ ದೇವಾಲಯಗಳ ಮೇಲೆ ವಿಶೇಷ ಅಧ್ಯಯನ ನಡೆಸಿರುವ ಡಾ. ಕಸಿನ್ಸ್‌ರವರು, ಹಳೇಬೀಡಿನ ದೇವಾಲಯಗಳನ್ನು ಬಿಟ್ಟರೆ, ಇದು ಕರ್ಣಾಟಕದಲ್ಲೇ ಅತ್ಯಂತ ಸುಂದರ ದೇವಾಲಯವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಚಾಲುಕ್ಯ ಶೈಲಿಯ ಸೂಕ್ಷ್ಮ ವೈಖರಿಗಳಿಂದ ಕೂಡಿರುವ ಈ ದೇವಾಲಯ ಬಹು ಸುಂದರವಾಗಿದೆ. ಗರ್ಭಗೃಹ, ಮುಖಮಂಟಪ, ಮೊಗಸಾಲೆಗಳು–ಇವೆಲ್ಲವೂ ಚೌಕಾಕೃತಿಯಲ್ಲಿವೆ. ಸುತ್ತಲೂ ಗೋಡೆ ಇದೆ. ಗೋಡೆಗಳಲ್ಲೂ ಕಂಬಗಳಲ್ಲೂ ಚೆಲುವಿನ ಅನೇಕ ಕೆತ್ತನೆಗಳಿವೆ. ನಕ್ಷತ್ರಾಕಾರದ ತೆರೆದ ಮಂಟಪ ವಿಶಾಲವಾಗಿ ವಿವಿಧ ಕೆತ್ತನೆಯ ಕಂಬಗಳಿಂದ ರಂಜಿಸುತ್ತಿದೆ. ಇಲ್ಲಿನ ಕೆತ್ತನೆ ಸರಳವಲ್ಲ, ಬಲು ಜಟಿಲ. ಆದರೂ ಲಾಲಿತ್ಯವಿಲ್ಲದಿಲ್ಲ.(ಎಸ್.ಎನ್.)

**ಇಟ್ಟಿಗೆ:** ಸಾಮಾನ್ಯವಾಗಿ ಮಣ್ಣಿನಿಂದ ತಯಾರಿಸಿದ ಆಯತಾಕಾರದ ಘನ; ಕಟ್ಟಡ ರಚನೆಯಲ್ಲಿ ಬಳಸಲಾಗುವ ವಸ್ತು (ಬ್ರಿಕ್), ನೀರಿನಲ್ಲಿ ಕಲಸಿದ ಮಣ್ಣನ್ನು ಮರದ ಅಚ್ಚುಗಳಿಗೆ ತುಂಬಿ ಇಟ್ಟಿಗೆಗಳನ್ನು ಬಿಸಿಲಿನಲ್ಲಿ ಒಣಗಿಸಿ ತಯಾರಿಸುವುದು ಪ್ರಾಚೀನ ಈಜಿಪ್ಟಿನಲ್ಲಿ ಪ್ರಶ. ಪೂ. 4000ದಲ್ಲಿಯೇ ಬಳಕೆಯಲ್ಲಿತ್ತು. ಇವು ನೀರು ಬಿದ್ದಾಗ ಕರಗುತ್ತವೆ. ಇವನ್ನು ಬೆಂಕಿಯಲ್ಲಿ ಸುಟ್ಟು ಗಟ್ಟಿಯಾಗಿ ಮಾಡಿದ್ದು ನಾಗರಿಕತೆಯ ಇತಿಹಾಸದಲ್ಲಿಯೇ ಒಂದು ದೊಡ್ಡ ಹೆಜ್ಜೆ. ಮೆಸೊಪೊಟೇಮಿಯದ ಅರಮನೆಯನ್ನು ಪ್ರ.ಶ ಪೂ. 3500ರಲ್ಲಿ ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ್ದರು. ಬ್ಯಾಬಿಲಾನಿನ ಮನೆಗಳ ಗೋಡೆಗಳಲ್ಲಿ ಸುಟ್ಟ ಮತ್ತು ಸುಡದೆ ಇದ್ದ ಇಟ್ಟಿಗೆಗಳನ್ನು ಉಪಯೋಗಿಸಿದ್ದಾರೆ. ಆದರೆ ಪ್ರ.ಶ ಪೂ. 6ನೆಯ ಶತಮಾನದಲ್ಲಿ ಕಟ್ಟಿದ ಹೊಸ ಅರಮನೆ, ತೂಗಾಡುವ ತೋಟ ಬೆಲ್ ದೇವತೆ ದೇವಾಲಯ ಇವುಗಳಲ್ಲಿ ಬಣ್ಣದ, ಸುಟ್ಟ ಇಟ್ಟಿಗೆಗಳನ್ನು ಉಪಯೋಗಿಸಿದ್ದಾರೆ. ಈ ಇಟ್ಟಿಗೆಗಳ ಅಳತೆ 304 ಮಿ.ಮೀ.

ಚೌಕ, 76–101 ಮಿ.ಮೀ. ದಪ್ಪ. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಚೀನಿಯರು ತಮ್ಮ ದೇಶದ ರಕ್ಷಣೆಗಾಗಿ ಕಟ್ಟಿದ ಭಾರೀ ಗೋಡೆಯಲ್ಲಿ ಇಟ್ಟಿಗೆಗಳನ್ನು ಉಪಯೋಗಿಸಿದ್ದಾರೆ. ಪ್ರಾಚೀನರಲ್ಲಿ ಶ್ರೇಷ್ಠ ಶಿಲ್ಪಿಗಳಾದ ರೋಮನರು ತಮ್ಮ ಕಟ್ಟಡಗಳಲ್ಲಿಯೂ ಮೇಲುಗಾಲುವೆಗಳಲ್ಲಿಯೂ ಸುಟ್ಟ ಇಟ್ಟಿಗೆಗಳನ್ನು ಧಾರಾಳವಾಗಿ ಬಳಸುತ್ತಿದ್ದರು. ಇವರು ಸುಟ್ಟ ಇಟ್ಟಿಗೆ ಹೊರಭಾಗಕ್ಕೆ ಅಂದವಾದ ಬಣ್ಣವನ್ನು ಹಾಕುತ್ತಿದ್ದರು. ಪ್ರ.ಶ. 8ನೆಯ ಶತಮಾನದಲ್ಲಿ ಪೂರ್ವ ಬಂಗಾಲದ ಷರಹ್‍ಪುರದ ದೇವಸ್ಥಾನವನ್ನು ಸಣ್ಣ ಇಟ್ಟಿಗೆಗಳು ಮತ್ತು ಗಾರೆ ಉಪಯೋಗಿಸಿ ಕಟ್ಟಿ ಬಣ್ಣ ಬಣ್ಣದ ಮಣ್ಣಿನ ಪ್ರತಿಮೆಗಳಿಂದ ಅಲಂಕರಿಸಿದ್ದಾರೆ.

ಇಟ್ಟಿಗೆಗಳನ್ನು ಜೇಡಿ ಅಥವಾ ಕೊಜೆ ಮಣ್ಣಿನಿಂದ ಮಾಡುತ್ತಾರೆ. ಮರಳಿನ ಅಂಶ ಕಡಿಮೆಯಾಗಿರಬೇಕಾದದ್ದು ಇಟ್ಟಿಗೆ ಮಣ್ಣಿನ ಮುಖ್ಯ ಗುಣ. ಕೆಲವು ಕಡೆ ಉತ್ಕೃಷ್ಟವಾದ ಮಣ್ಣು ದೊರಕುತ್ತದೆ. ದೊರಕದಿದ್ದಲ್ಲಿ ಮಣ್ಣನ್ನು ಬೇಕಾದ ಮಟ್ಟಕ್ಕೆ ಶುದ್ಧಪಡಿಸುತ್ತಾರೆ. ನೀರಿನಲ್ಲಿ ಕಲಸಿ ಕಾಲುಗಳಿಂದ ತುಳಿದು ಕೊಂಚ ಕಾಲ ಕೊಳೆಯುವುದಕ್ಕೆ ಬಿಟ್ಟು ಹದಮಾಡಿದ ಮಣ್ಣನ್ನು ಮರದ ಅಚ್ಚುಗಳಿಗೆ ತುಂಬಿ ಕೈಯಿಂದ ಇಟ್ಟಿಗೆಗಳನ್ನು ಕೊಯ್ಯುವುದೇ ರೂಢಿ. ಪಾಶ್ಚಾತ್ಯ ದೇಶಗಳಲ್ಲಿ ಯಂತ್ರಗಳಿಂದ ಇಟ್ಟಿಗೆಗಳನ್ನು ಮಾಡುತ್ತಾರೆ. ಭಾರತದ ನಗರಗಳಲ್ಲಿ ನಯವಾಗಿ ಉಕ್ಕಿನ ತಂತಿಯಿಂದ ಕತ್ತರಿಸಿ ಕುಲುಮೆಗಳಲ್ಲಿ ಸುಟ್ಟ ಬಲಿಷ್ಠವಾದ ಇಟ್ಟಿಗೆಗಳ ತಯಾರಿಕೆಯೂ ಇದೆ. ಈಗ ಮಣ್ಣಿನ ವಿಜ್ಞಾನಶಾಸ್ತ್ರವೇ ಅಪಾರವಾಗಿ ಬೆಳೆದಿದೆ. ಸಂಶೋಧನೆಗಳನ್ನು ನಡೆಸಿ ಎಲ್ಲೆಲ್ಲೂ ಸಿಕ್ಕುವ ಮಣ್ಣನ್ನು ಸಂಸ್ಕರಿಸಿ ನೂತನ ಕ್ರಮಗಳಿಂದ ಸಾಕಷ್ಟು ಬಲಿಷ್ಠವೂ ಅಂದವೂ ಆದ ಇಟ್ಟಿಗೆಗಳನ್ನು ತಯಾರಿಸಿದರೆ ರಾಷ್ಟ್ರದ ಉದ್ಯಮಗಳಲ್ಲಿ ಉಳಿತಾಯವಾಗುತ್ತದೆ.

ಮರದ ಅಚ್ಚುಗಳಿಂದ ತಯಾರಿಸಿದ ಇಟ್ಟಿಗೆಗಳನ್ನು ಬಟ್ಟಿಗಳಲ್ಲಿ ಸುಡುವುದಕ್ಕೆ ಮುಂಚೆ ತಯಾರಿಸಿದಲ್ಲಿಯೇ ಬಿಟ್ಟು ಬಿಸಿಲಿನಲ್ಲೂ ಗಾಳಿಯಲ್ಲೂ ಒಣಗಿಸುತ್ತಾರೆ. ಆದರೆ ಈ ಕ್ರಮದಲ್ಲಿ ಹೆಚ್ಚು ಜಾಗ ಬೇಕಾಗುತ್ತದೆ. ಅದಕ್ಕಾಗಿ ಇಟ್ಟಿಗೆಗಳನ್ನು ಸಾಲಾಗಿ ಮಧ್ಯೆ ಜಾಗವನ್ನು ಬಿಟ್ಟು ಒಂದರ ಮೇಲೊಂದರಂತೆ ಹತ್ತು ಹನ್ನೆರಡು ಇಟ್ಟಿಗೆಗಳನ್ನು ಎತ್ತರವಾಗಿ ಪೇರಿಸಿ ಮೇಲುಗಡೆ ಚಪ್ಪರಗಳನ್ನು ಕಟ್ಟಿ ಮಳೆಯಿಂದ ಕಾಪಾಡುತ್ತಾರೆ. ಆದರೆ ಈ ಕ್ರಮದಲ್ಲಿ ಹಸಿ ಇಟ್ಟಿಗೆಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದರಲ್ಲಿ ನಷ್ಟವೂ ವೆಚ್ಚವೂ ಹೆಚ್ಚಾಗುತ್ತವೆ.

ರೋಮನರ ಕಾಲದಿಂದಲೂ ಕೆಳಗಡೆ ಇಟ್ಟಿಗೆಗಳಿಂದಲೇ ಒಲೆಗಳನ್ನು ಕಟ್ಟಿ ಮೇಲುಗಡೆ ಹಸಿ ಇಟ್ಟಿಗೆಗಳನ್ನು 3–4 ಮೀ. ವರೆಗೂ ಗೋಡೆಯಾಗಿ ಪೇರಿಸಿದ ಬಟ್ಟಿಗಳಲ್ಲಿ ಇಟ್ಟಿಗೆ ಸುಡುತ್ತಿದ್ದಾರೆ. ಹದವಾಗಿ ಬೆಂದ ಇಟ್ಟಿಗೆಗಳು ಕಟ್ಟಡಗಳಿಗಾಗಿ ಬೇಕಾದಾಗ ಮಧ್ಯದಲ್ಲಿ ಇನ್ನೊಂದು ಒಲೆಗಳ ಸಾಲನ್ನು ಕಟ್ಟುತ್ತಾರೆ. ಬಟ್ಟಿಯ ಅಳತೆ ಸುಡಬೇಕಾದ ಇಟ್ಟಿಗೆಗಳ ಸಂಖ್ಯೆಗೆ ಅನುಗುಣವಾಗಿರುತ್ತದೆ. ಒಲೆಯ ಗೂಡುಗಳ ದಿಕ್ಕನ್ನು ಆ ಕಾಲದಲ್ಲಿ ಬೀಸುವ ಗಾಳಿಯ ದಿಕ್ಕಿನಲ್ಲಿ ಇಡಬೇಕು. ದೊಡ್ಡ ಮರದ ದಿಮ್ಮಿಗಳನ್ನು ಒಲೆಗಳಲ್ಲಿಟ್ಟು ಹೊತ್ತಿಸಿ ರಾತ್ರಿಯೆಲ್ಲ ಆ ಕೆಲಸದಲ್ಲಿ ಪಳಗಿದ ಆಳುಗಳು ಬೆಂಕಿ ಒಲೆಗಳಲ್ಲಿ ಸರಿಯಾಗಿ ಉರಿಯುವಂತೆ ನೋಡಿಕೊಂಡರೆ ಒಂದು ವಾರದಲ್ಲಿ ಸುಟ್ಟ ಇಟ್ಟಿಗೆಗಳು ಸಿದ್ಧವಾಗುತ್ತವೆ. ಕಾವು ಆರಿದ ಮೇಲೆ ಗೂಡಿನಿಂದ ಇಟ್ಟಿಗೆಗಳನ್ನು ಬೇಕು ಬೇಕಾದಾಗ ಕೆಳಕ್ಕೆ ಇಳಿಸಿಕೊಳ್ಳಬಹುದು.

ಒಳ್ಳೆಯ ಇಟ್ಟಿಗೆಯ ಮಣ್ಣಿನ ರಾಸಾಯನಿಕ ರಚನೆಯನ್ನು ಸ್ಥೂಲವಾಗಿ ಮುಂದೆ ವಿವರಿಸಿದೆ. ಹತ್ತರಲ್ಲಿ ಆರು ಸಿಲಿಕನ್ ಡೈಆಕ್ಸೈಡ್, ಎರಡು ಅಲ್ಯುಮಿನಿಯಂ ಆಕ್ಸೈಡ್ ಮತ್ತು ಉಳಿದ ಎರಡರಲ್ಲಿ ವಿವಿಧ ಪ್ರಮಾಣಗಳಲ್ಲಿ ಕ್ಯಾಲ್ಸಿಯಂ, ಕಬ್ಬಿಣ, ಮೆಗ್ನೀಸಿಯಂ, ಸೋಡಿಯಂ ಮತ್ತು ಪೊಟ್ಯಾಸಿಯಮ್ಮಿನ ರಾಸಾಯನಿಕಗಳೂ ಸೇರಿರುತ್ತವೆ. ಸಿಲಿಕ ಅಥವಾ ಸಿಲಿಕಾನ್ ಡೈ ಆಕ್ಸೈಡ್ ಮರಳಿನ ರೂಪದಲ್ಲಿಯಾದರೂ ಇರಬಹುದು, ಇಲ್ಲವೆ ಅಲ್ಯುಮಿನಿಯಂ ಮತ್ತು ನೀರಿನೊಂದಿಗೆ ರಾಸಾಯನಿಕವಾಗಿಯಾದರೂ ಸೇರಿರಬಹುದು. ಇದು ಒಂದು ಪ್ರಮಾಣದವರೆಗೂ ಮಣ್ಣನ್ನು ಗಟ್ಟಿಯಾಗಿ ಮಾಡುತ್ತದೆ. ಹೆಚ್ಚಾಗಿದ್ದರೆ ಸುಟ್ಟ ಇಟ್ಟಿಗೆ ಒಡೆದುಹೋಗುತ್ತದೆ. ಸುಣ್ಣಕಲ್ಲು ಇಟ್ಟಿಗೆಯನ್ನು ಬಲಿಷ್ಠವಾಗಿ ಮಾಡುತ್ತದೆ. ಕಬ್ಬಿಣ ಹೆಚ್ಚಾಗಿದ್ದರೆ ಆ ಮಣ್ಣಿನಿಂದ ಮಾಡಿದ ಇಟ್ಟಿಗೆ ಸೀಳಿಹೋಗುತ್ತದೆ.

ಸುಣ್ಣ ಮತ್ತು ಕೊಂಚವೇ ಕಬ್ಬಿಣವಿರುವ ಮಣ್ಣಿನಿಂದ ದಂತದ ಬಣ್ಣದ ಇಟ್ಟಿಗೆಗಳನ್ನು ಮಾಡಬಹುದು. ಕಬ್ಬಿಣದ ಆಕ್ಸೈಡ್ ಹೆಚ್ಚಾಗಿದ್ದರೆ ಇಟ್ಟಿಗೆಗಳಿಗೆ ನೀಲಿಬಣ್ಣ ಬರುತ್ತದೆ. ಜೊತೆಗೆ ಮ್ಯಾಂಗನೀಸ್ ಸೇರಿದ್ದರೆ ಇಟ್ಟಿಗೆಗಳಿಗೆ ಕಪ್ಪುಬಣ್ಣ ಬರುತ್ತದೆ. ಬೇರೆ ಅಶುದ್ಧತೆಗಳಿಲ್ಲದೆ ಕಬ್ಬಿಣದ ಆಕ್ಸೈಡ್ ಹೆಚ್ಚಾಗಿದ್ದರೆ ಬೆಂಕಿಯಲ್ಲಿ ಅದು ಕೆಂಪು ಆಕ್ಸೈಡ್ ಆಗಿ ಪರಿವರ್ತನೆಯಾಗುತ್ತದೆ. ಇಂಥ ಇಟ್ಟಿಗೆಗಳನ್ನು ಕಟ್ಟಡದ ಮುಖದಲ್ಲಿ ಗಿಲಾವು ಮಾಡದೆ ಇರುವ ಕಡೆ ವಿಶೇಷವಾಗಿ ಉಪಯೋಗಿಸುತ್ತಾರೆ.

ಈಗ ನಗರಗಳಲ್ಲಿ ಇಟ್ಟಿಗೆಗಳನ್ನು ಆವಿಗೆಗಳಲ್ಲಿ (ಕಿಲ್ನ್ಸ್) ಸುಡುವುದೇ ಹೆಚ್ಚು. ಸತತವಾಗಿ ಉರಿಯುವ ಈ ಒಲೆಗಳಲ್ಲಿ ಎರಡು ವಿಧಗಳಿವೆ: 1. ಹಾಫ್‍ಮನ್ ಒಲೆ, 2. ಸುರಂಗದ ಒಲೆ.

ಹಾಫ್‍ಮನ್ ಒಲೆಯನ್ನು ಅದರ ನಿರ್ಮಾತೃವಿನ ಹೆಸರಿನಿಂದ ಕರೆಯುತ್ತಾರೆ. ಇದರಲ್ಲಿ ಹಸಿ ಇಟ್ಟಿಗೆಗಳನ್ನು ಇಟ್ಟಿಗೆಗಳಿಂದಲೇ ಭದ್ರವಾಗಿ ಕಟ್ಟಿದ ಗೂಡುಗಳಲ್ಲಿ (ಚೇಂಬರ್ಸ್) ಪೇರಿಸುತ್ತಾರೆ. ಒಂದೊಂದು ಆವಿಗೆಯಲ್ಲೂ 16–24 ರವರೆಗೆ ಇಂಥ ಗೂಡುಗಳು ಪಕ್ಕಪಕ್ಕದಲ್ಲಿ ಎರಡು ಸಾಲುಗಳಲ್ಲಿರುತ್ತವೆ. ಗೂಡುಗಳ ಕೊನೆಗಳೂ ಅರ್ಧವರ್ತುಲಾಕಾರವಾಗಿ ಇಲ್ಲವೇ ದೀರ್ಘ ಚತುರಸ್ರಾಕಾರವಾಗಿರುತ್ತವೆ. ಪ್ರತಿ ದಿನವೂ ಬೆಂಕಿಯನ್ನು ಒಂದು ಗೂಡಿನಿಂದ ಇನ್ನೊಂದಕ್ಕೆ ಬದಲಿಸುತ್ತಾರೆ. ಒಂದು ಕಡೆ ಹಸಿ ಇಟ್ಟಿಗೆಗಳನ್ನು ಒಳಕ್ಕೆ ತುಂಬುತ್ತಾರೆ. ಇನ್ನೊಂದು ಕಡೆ ಬೆಂದ ಇಟ್ಟಿಗೆಗಳನ್ನು ಹೊರಕ್ಕೆ ತೆಗೆಯುತ್ತಾರೆ. ಒಂದೊಂದು ದಿವಸವೂ ಉರಿಯುತ್ತಿರುವ ಗೂಡಿನ ಸ್ಥಾನ, ಹಸಿ ಇಟ್ಟಿಗೆಗಳನ್ನು ತುಂಬಿರುವ ಗೂಡಿನಿಂದ ನಾಲ್ಕೈದು ಗೂಡುಗಳ ಆಚೆಗೂ ಬೆಂದ ಇಟ್ಟಿಗೆಗಳನ್ನು ಇಳಿಸುತ್ತಿರುವ ಗೂಡಿನಿಂದ ಏಳೆಂಟು ಗೂಡುಗಳ ಆಚೆಗೂ ಇರುವುದು. ಇಟ್ಟಿಗೆಗಳನ್ನು ಸುಡುವ ಕ್ರಮ ಹೀಗಿದೆ: ಬೆಂದ ಇಟ್ಟಿಗೆಗಳನ್ನು ಹೊರಕ್ಕೆ ತೆಗೆಯುವ ಗೂಡಿನ ಹಿಂಭಾಗದಿಂದ ತಣ್ಣನೆಯ ಗಾಳಿ ಒಳಕ್ಕೆ ಬಂದು ಆಗ ತಾನೇ ಬೆಂದು ತಣ್ಣಗಾಗುತ್ತಿರುವ ಇಟ್ಟಿಗೆಗಳ ಏಳೆಂಟು ಗೂಡುಗಳ ಮೂಲಕ ಹೋಗಿ ಬಿಸಿಯಾಗುತ್ತದೆ. ಅಲ್ಲಿಂದ ಕಲ್ಲಿದ್ದಲನ್ನೂ ಕಟ್ಟಿಗೆಯನ್ನೂ ತುಂಬಿ ಉರಿಯುತ್ತಿರುವ ಗೂಡುಗಳನ್ನು ನುಗ್ಗಿ ಮತ್ತು ಬಿಸಿಯಾಗಿ ಆ ಕಡೆ ಹಸಿ ಇಟ್ಟಿಗೆಗಳಿರುವ ಗೂಡುಗಳನ್ನು ಪೂರ್ವಭಾವಿಯಾಗಿ ಕಾಯಿಸುತ್ತದೆ. ಈ ಬಲೆಗಳನ್ನು ಕಟ್ಟುವುದಕ್ಕೆ ಹಣ ಹೆಚ್ಚಾದರೂ ಕಟ್ಟಿಗೆ ಉಪಯೋಗದಲ್ಲಿ ಉಳಿತಾಯವಾಗುವುದರಿಂದಲೂ ಒಂದೇ ಸಮನಾಗಿ ಬೆಂದ ಇಟ್ಟಿಗೆಗಳು ಬರುವುದರಿಂದಲೂ ಅನುಕೂಲವೇ ಹೆಚ್ಚು.

**ಸುರಂಗದ ಒಲೆ:** ಇದರಲ್ಲಿ ಬೆಂಕಿ ಒಂದೇ ಕಡೆ ಇರುತ್ತದೆ. ಆದರೆ ಇಟ್ಟಿಗೆಗಳು ಸತತವಾಗಿ ದೀರ್ಘ ಚತುರಸ್ರಾಕಾರವಾದ ಸುರಂಗದಲ್ಲಿ ಸಂಚರಿಸುವಂಥ ಏರ್ಪಾಡಿದೆ. ಈ ಸುರಂಗ 121 ಮೀ. ಗಳಿಗಿಂತಲೂ ಉದ್ದವಾಗಿದ್ದು ನೆಲಮಟ್ಟದಲ್ಲಿ ಕಂಬಿಗಳಿವೆ. ಕಂಬಿಗಳ ಮೇಲೆ ಸುಡಬೇಕಾದ ಇಟ್ಟಿಗೆಗಳನ್ನು ಹೊತ್ತ ಗಾಡಿಗಳು ಓಡಾಡುತ್ತವೆ. ಹಾಫ್ಮನ್ ಆವಿಗೆ 6' ಚದರವಾಗಿದೆ. ಗಾಡಿಗಳು 61/2' ಉದ್ದವಾಗಿದ್ದು ಒಂದೊಂದೂ 1200 ಇಟ್ಟಿಗೆಗಳನ್ನು ಸಾಗಿಸುತ್ತದೆ. ಎರಡು ಗಂಟೆಗೆ ಒಂದು ಗಾಡಿ ಒಳಕ್ಕೆ ಬರುತ್ತದೆ. ಹೊರಕ್ಕೆ ಹೋಗುವುದಕ್ಕೆ 36–72 ಗಂಟೆಗಳ ಕಾಲ ಬೇಕು. ಇದನ್ನು ಹಾಫ್‍ಮನ್ ಆವಿಗೆಗಿಂತ ಮುಂದೆ ಸಂವಿಧಾನ ಮಾಡಿತ್ತು. ಮೊದಲನೆಯ ಮಹಾಯುದ್ಧದ ಅನಂತರ ಲಾಭದಾಯಕವಾಗಿ ಎಲ್ಲ ಕಡೆಗಳಲ್ಲೂ ಉಪಯೋಗವಾಗುತ್ತಿದೆ. ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಇದರ ಬಳಕೆ ಹೆಚ್ಚು. ಕಲ್ಲಿದ್ದಲು, ಖನಿಜ ಎಣ್ಣೆ, ಇಲ್ಲವೆ ಪ್ರೊಡ್ಯೂಸರ್ ಅನಿಲದಿಂದ ಬೆಂಕಿಯನ್ನು ಉರಿಸುತ್ತಾರೆ. ಇದರಲ್ಲೂ ಹಾಫ್‍ಮನ್ ಆವಿಗೆಯಲ್ಲಿ ಎಷ್ಟೋ ಅಷ್ಟೇ ಇಂಧನ ಖರ್ಚಾಗುತ್ತದೆ.

ಇಟ್ಟಿಗೆಗಳನ್ನು ಸ್ಥೂಲವಾಗಿ ಮೂರು ಬಗೆಯಾಗಿ ವರ್ಗೀಕರಿಸಬಹುದು : 1. ಸಾಮಾನ್ಯ ಇಟ್ಟಿಗೆ, 2. ಮುಖದ ಇಟ್ಟಿಗೆ, ಯಂತ್ರ ಶಿಲ್ಪದ ಇಟ್ಟಿಗೆ, ಮುಕ್ಕಾಲು ಪಾಲು ಸಾಮಾನ್ಯವಾದ ಇಟ್ಟಿಗೆಗಳನ್ನೇ ತಯಾರಿಸುತ್ತಾರೆ. ಮುಖದ ಇಟ್ಟಿಗೆಗಳನ್ನು ಅಲಂಕಾರಕ್ಕಾಗಿ ಪ್ರತ್ಯೇಕವಾಗಿ ತಯಾರಿಸುತ್ತಾರೆ. ಯಂತ್ರಶಿಲ್ಪದ ಇಟ್ಟಿಗೆ ನೀರಿನಲ್ಲಿ ಕರಗುವುದಿಲ್ಲ. ಈ ಇಟ್ಟಿಗೆ ಚದರ ಅಂಗುಲಕ್ಕೆ 3150–4500 ಕೆ.ಜಿ.ಗಳ ತ್ರಾಸದಲ್ಲಿ ಪುಡಿಯಾಗುತ್ತದೆ. ಒಳ್ಳೆಯ ಮುಖದ ಇಟ್ಟಿಗೆ 1350–2250 ಕೆ.ಜಿ.ಗಳ ತ್ರಾಸದಲ್ಲಿ ಪುಡಿಯಾಗುತ್ತದೆ.

ಇಟ್ಟಿಗೆಯ ಅಳತೆ ಇಂಗ್ಲೆಂಡಿನಲ್ಲಿ 152 ಮಿ.ಮೀ. x 76 ಮಿ.ಮೀ. x 32 ಮಿ.ಮೀ. ಪ್ರಮಾಣದಲ್ಲೂ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ 230 ಮಿ.ಮೀ. x 57 ಮಿ.ಮೀ. x 13 ಮಿ.ಮೀ. ಪ್ರಮಾಣದಲ್ಲೂ ಸ್ಥಿರವಾಗಿದೆ. ಭಾರತದಲ್ಲಿ ಇಂಗ್ಲೆಂಡಿನ ಅಳತೆಯನ್ನೇ ಉಪಯೋಗಿಸುತ್ತಿದ್ದಾರೆ. ಇಟ್ಟಿಗೆಯ ಉದ್ದ ಎರಡು ಅಗಲಗಳಿಗಿಂತ ಒಂದು ಗೆರೆಯಷ್ಟು ಹೆಚ್ಚಾಗಿರಬೇಕು. ಎತ್ತರ ಅಗಲಕ್ಕಿಂತ ಕಡಿಮೆಯಾಗಿರಬೇಕು. ಇಟ್ಟಿಗೆಗಳು ಚೆನ್ನಾಗಿ ಬೆಂದಿರಬೇಕು. 20% ಕ್ಕಿಂತ ಹೆಚ್ಚು ನೀರನ್ನು ಯಾವ ಸಂದರ್ಭದಲ್ಲೂ ಹೀರಬಾರದು. ಒಂದು ಇಟ್ಟಿಗೆಯನ್ನು ಇನ್ನೊಂದರಿಂದ ಹೊಡೆದರೆ ಲೋಹದ ಧ್ವನಿ ಬರಬೇಕು. ಕರಣೆಯಿಂದ ಮೂರು ನಾಲ್ಕು ಏಟುಗಳು ಬೀಳುವವರೆಗೂ ಭಾಗವಾಗಬಾರದು. **(ಎಚ್.ಸಿ.ಕೆ.)**

**ಇಟ್ಟಿಗೆ ಗೂಡು:** ಹಸಿ ಇಟ್ಟಿಗೆಗಳನ್ನು ಸುಟ್ಟು ಗಟ್ಟಿ ಮಾಡಲು ಬಳಸುವ ಕಟ್ಟಡ. ಎರಡು ವಿಧದ ಗೂಡುಗಳಿವೆ. ಮೊದಲನೆಯದರಲ್ಲಿ ಸುತ್ತುಗೋಡೆ ಮೇಲ್ಚಾವಣಿಯನ್ನು ಹೊಂದಿದ್ದು ಒಳಗಡೆ ಇಟ್ಟಿಗೆಗಳನ್ನು ಪೇರಿಸಿ ಸುಡಲು ಅನುಕೂಲವಾಗುವಂತೆ ಖಾಯಂ ಕಟ್ಟಡವಿರುವುವು. ಎರಡನೆಯದರಲ್ಲಿ ಇವು ಯಾವುವೂ ಇಲ್ಲದಂತೆ ಕಚ್ಚಾ ಇಟ್ಟಿಗೆಗಳನ್ನೇ ಬಯಲು ಪ್ರದೇಶದಲ್ಲಿ ಪೇರಿಸಿ ಸುಡಲು ಅನುಕೂಲವಾಗುವಂತೆ ಕಟ್ಟಲಾಗುವ ಹಂಗಾಮಿ ಗೂಡುಗಳಿವೆ. ಈ ಎರಡನೆಯ ತರಹೆಯ ಗೂಡುಗಳ ಹೊರವಲಯದಲ್ಲಿ ಇಟ್ಟಿಗೆಗಳು ಸಮರ್ಪಕವಾಗಿ ಸುಡುವುದಿಲ್ಲ. ಅಲ್ಲದೆ ಗಾಳಿ ಮಳೆಗಳ ಹೊಡೆತಗಳಿಂದ ನಷ್ಟವಾಗುವ ಸಂಭವವೂ ಉಂಟು. ಇಂಥ ಗೂಡುಗಳಿಗೆ ಗ್ರಾಮ್ಯಗೂಡುಗಳು (ಕ್ಲ್ಯಾಂಪ್ಸ್) ಎಂದು ಹೆಸರು. ಅಧಿಕ ಬೆಲೆಯ ಉತ್ತಮ ತರಹೆ ಇಟ್ಟಿಗೆಗಳ ತಯಾರಿಕೆಯಲ್ಲಿ ಮೊದಲ ತರಹೆಯ ಕಾಯಂ ಗೂಡುಗಳನ್ನು ಬಳಸಲಾಗುತ್ತದೆ. ಇವುಗಳಲ್ಲೂ ಬಿಡುವು ಗೂಡುಗಳಲ್ಲಿ ಸುಟ್ಟ ಇಟ್ಟಿಗೆಗಳು ಆರುವವರೆಗೆ ಅವನ್ನು ಹೊರತೆಗೆಯುವುದಾಗಲಿ ಅಥವಾ ಸುಡಬೇಕಾದ ಕಚ್ಚಾ ಇಟ್ಟಿಗೆಗಳನ್ನು ಒಳಕ್ಕೆ ತರುವುದಾಗಲಿ ಆಗದೆ ಕಾಲ ವ್ಯರ್ಥವಾಗುತ್ತದೆ. ಆದರೆ ಅವಿಶ್ರಾಂತ ಗೂಡುಗಳಲ್ಲಿ ಹೀಗಿರದೆ ನಿರಂತರವಾಗಿ ಇಟ್ಟಿಗೆಗಳನ್ನು ತಯಾರಿಸಲು ಅನುಕೂಲವಿದೆ. ಇಂಥ ಅವಿಶ್ರಾಂತ ಗೂಡುಗಳಲ್ಲಿ ಅತಿ ಮುಖ್ಯವಾದುವಕ್ಕೆ ವಾರನ್‍ಟೈಪ್ ಎನ್ನುತ್ತಾರೆ.

ಗ್ರಾಮ್ಯ ಗೂಡುಗಳಲ್ಲಿ ಒಣಗಿದ ಇಟ್ಟಿಗೆಗಳನ್ನು ಮಟ್ಟವರಿಗಳಾಗಿ (ಹಾರಿಜಾಂಟಲ್ ಕೋರ್ಸಸ್) ಪೇರಿಸಿ ಬೆಲ್ಲದ ಅಚ್ಚಿನ ರೂಪದಲ್ಲಿ ಜೋಡಿಸಿರುತ್ತಾರೆ. ಅಲ್ಲದೆ ಮಧ್ಯೆ ಮಧ್ಯೆ ಉರುವಲು ತುಂಬಲು ಅನುಕೂಲವಾಗುವಂತೆ ಉದ್ದನೆಯ ಕಣ್ಣುಗಳನ್ನು ಅಳವಡಿಸಿದೆ. ಇಂಥ ಗೂಡು ಉರುವಲು ತುಂಬಿ ಸಿದ್ಧವಾದ ಅನಂತರ ಗೂಡಿನ ಹೊರಭಾಗದ ತಲವನ್ನು ಕೆಸರಿನಿಂದ ದಟ್ಟವಾಗಿ ಲೇಪಿಸಿ ಉರುವಲನ್ನು ಹೊತ್ತಿಸುತ್ತಾರೆ. ಬೆಂಕಿ ಒಳಗೊಳಗೇ




ಚಿತ್ರ 1. ಹಾಫ್‌ಮನ್ ಒಲೆ :

A. ಅಡ್ಡನೋಟ. 1 ತುಂಬುವ ಬಾಗಿಲು, 2 ಬೆಂಕಿ ಕಂಡಿಗಳು, 3 ಕಾವನ್ನು ಕ್ರಮೀಕರಿಸುವ ಕೆಳಕೊಳವೆ, 4 ಕ್ರಮಕಾರಕ ಬಾಗಿಲು, 5 ಚಿಮ್ನಿಗೆ.
B. ಮೇಲುನೋಟ 1 ತುಂಬುವ ಬಾಗಿಲುಗಳು, 2 ಕ್ರಮಕಾರಕ, 3 ಹೊಗೆಕಂಡಿಗಳು, 4 ತಡೆಗೋಡೆಗಳು, 5. ಇಂಧನ ಕಂಡಿಗಳು, 6 ಚಿಮ್ನಿಗೆ.



ಚಿತ್ರ 2. ಇಟ್ಟಿಗೆಗಳ ವಿವಿಧ ರೂಪಗಳು

ಕ್ರಮೇಣ ಹರಡಿ ಇಟ್ಟಿಗೆಗಳೆಲ್ಲವನ್ನೂ ಐದು ಅಥವಾ ಆರು ದಿವಸಗಳಲ್ಲಿ ಸಾಕಷ್ಟು ಸುಡುತ್ತದೆ. ಆರಿದ ಅನಂತರ ಗೂಡನ್ನು ಬಿಚ್ಚಿ ಇಟ್ಟಿಗೆಗಳನ್ನು ಹೊರತೆಗೆಯಬಹುದು. ವಾರನ್ ತರಹೆ ಗೂಡುಗಳಲ್ಲಿ ಅನೇಕ ಕೋಣೆಗಳಿವೆ. ಇವುಗಳಲ್ಲಿ ಒಂದಕ್ಕೊಂದಕ್ಕೆ ಸಂಪರ್ಕವಿರುವುದು. ಇವುಗಳಿಂದ ಹೊರಬರುವ ಹೊಗೆ ಮುಂತಾದ ಅನಿಲಗಳೂ ಪಾರಾಗುವುದಕ್ಕೋಸ್ಕರ




ಚಿತ್ರ 3. A. ಗ್ರಾಮ್ಯಗೂಡು. B. ವಾರನ್ ತರಹೆಗೂಡು
a. ಪ್ರತಿಕೊಠಡಿಗೂ ಕಾದವಾಯುವನ್ನು ಒದಗಿಸುವ ಕರೆ ಅಡಿನಾಳ

ಕೇಂದ್ರದಲ್ಲಿ ಸಾಲು ಸಾಲಾದ ಎತ್ತರದ ಹೊಗೆ ಕೊಳವೆಗಳಿವೆ. ಈ ಗೂಡಿನಲ್ಲಿ 1, 2, 3 ಕೋಣೆಗಳಲ್ಲಿ ಪೇರಿಸಿರುವ ಇಟ್ಟಿಗೆಗಳು ಸುಡುತ್ತಿರುವಾಗ (ಚಿತ್ರ 3), ಹೊರಟ ಉಷ್ಣವಾಯು 4, 5, 6 ಕೋಣೆಗಳನ್ನು ಪ್ರವೇಶಿಸಿ ಅಲ್ಲಿ ಪೇರಿಸಿರುವ ಹಸಿ ಇಟ್ಟಿಗೆಗಳನ್ನು ಒಣಗಿಸಿ ಅಥವಾ ಅರ್ಧ ಬೇಯಿಸಿ ಅಲ್ಲಿಂದ ಮುಂದೆ ಕೇಂದ್ರ ಕೊಳವೆಯ ಮೂಲಕ ಹೊರವಾಯುವಿಗೆ ಸೇರುತ್ತದೆ. 7, 8, 9 ಮತ್ತು 10, 11, 12 ಕೋಣೆಗಳಲ್ಲಿ ಕ್ರಮೇಣ ಆರಿದ ಇಟ್ಟಿಗೆಗಳನ್ನು ಹೊರತೆಗೆಯುವ ಮತ್ತು ಹಸಿ ಇಟ್ಟಿಗೆಗಳನ್ನು ಪೇರಿಸುವ ಕಾರ್ಯ ನಡೆದಿರುವುದು. ಹೀಗೆ ಇಟ್ಟಿಗೆ ಸುಡುವ, ಒಣಗಿಸುವ, ತುಂಬುವ ಮತ್ತು ಹೊರತೆಗೆಯುವ ಕೆಲಸ ಸತತವಾಗಿ ನಡೆದು ಉರುವಲಿನಿಂದ ಬಂದ ಉಷ್ಣದ ಯಾವ ಭಾಗವೂ ವ್ಯರ್ಥವಾಗದಂತೆ ಪೂರ್ತಿಯಾಗಿ ಉಪಯೋಗಿಸಲಾಗುತ್ತದೆ. (ಕೆ.ಎಸ್.ಕೆ.)

**ಇಟ್ಟಿಗೆ ಒಲೆ:** ದೊಡ್ಡ ಒಲೆಯ ಪಕ್ಕದಲ್ಲಿ ಹಿಂದಿನ ಕಾಲದಲ್ಲಿ (ವಿಶೇಷವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ) ಕಟ್ಟುತ್ತಿದ್ದ ರಚನೆ. ಒಲೆಯ ಉಷ್ಣ ಅಪವ್ಯಯವಾಗದಂತೆ ಬೇರೆ ವಿಧದ ಉಪಯೋಗಕ್ಕೆ (ಉದಾಹರಣೆಗೆ, ರೊಟ್ಟಿ ಸುಡಲು) ಬರುವಂತೆ ಅಳವಡಿಸುವುದು ಇದರ ಉದ್ದೇಶ. ಇಟ್ಟಿಗೆಯ ಒಲೆಗೆ ಒಂದು ಕಬ್ಬಿಣದ ಬಾಗಿಲಿದೆ. ಒಲೆಯ ಒಳಗಡೆ ಜಾಲರದ ಮೇಲೆ ಸೌದೆ ಅಥವಾ ಇದ್ದಲಿನ ಬೆಂಕಿಯನ್ನು ಮಾಡಿ ಸಹಾಯಕವಾಗಿ ಗಾಳಿ ಕಂಡಿಯನ್ನು ತೆರೆದು ಇಡುವರು. ಸೌದೆ ಅಥವಾ ಇದ್ದಲು ಪೂರ್ತಿ ಉರಿದ ಮೇಲೆ ಗಾಳಿಕಂಡಿಯನ್ನು ಮುಚ್ಚಿ ಜಾಲರದ ಮೇಲಿನ ಬೂದಿಯನ್ನು ಕೆಳಗೆ ತಳ್ಳಿ ಅದರ ಮೇಲೆ ತಿಂಡಿಯನ್ನು ಬೇಯಲು ಇಟ್ಟು ಒಲೆಯ ಬಾಗಿಲನ್ನು ಮುಚ್ಚುತ್ತಾರೆ. ಬಾಗಿಲು ತೆರೆಯಲು, ತಿಂಡಿಯನ್ನು ಒಲೆಯ ಒಳಗಡೆ ಇಡಲು ಒಂದು ತರಹೆ ಉದ್ದವಾದ ಕಬ್ಬಿಣದ ಚಪ್ಪಟೆ ಕೈಯನ್ನು ಉಪಯೋಗಿಸುತ್ತಾರೆ. ಈಗಲೂ ಕೆಲವು ಹಳೆಯಕಾಲದ ದೊಡ್ಡ ಮನೆಗಳಲ್ಲಿ ಇಟ್ಟಿಗೆ ಒಲೆಯನ್ನು ಉಪಯೋಗಿಸುತ್ತಾರೆ. ಆದರೆ ಹೆಚ್ಚಿನ ಉಪಯೋಗ ರೊಟ್ಟಿ ತಯಾರು ಮಾಡುವವರಿಗೆ. (ಬಿ.ಎಲ್.ಸಿ.ಆರ್.)

**ನಾಗರಿಕತೆಯ ಸಂಕೇತ:** ಇಟ್ಟಿಗೆ ಬೆಳೆದು ಬಂದ ಬಗೆ ನಾಗರಿಕತೆಯ ವಿಕಾಸವನ್ನು ಸೂಚಿಸುತ್ತದೆ. ನೈಸರ್ಗಿಕ ಆವರಣಗಳಾದ ಗುಹೆ, ಪೊಟರೆ ಮುಂತಾದವುಗಳಿಂದ ತಾನೇ ರಚಿಸಿದ ಗುಡಿಸಲುಗಳಿಗೆ ಮಾನವ ಪ್ರವೇಶಿಸಿದ್ದು ಮೊದಲ ಹೆಜ್ಜೆ. ಸುಲಭವಾಗಿ ದೊರೆಯುವ ಹಸಿ ಮಣ್ಣುಕಲ್ಲುಗಳಿಂದ ಇಂಥ ಕಟ್ಟಡ ರಚಿತವಾದುದಾಗಿರಬಹುದು. ಮುಂದೆ ಕಲ್ಲುಗಳ ಕೊರತೆಯಾದಾಗಲೊ ಮಣ್ಣುಗೋಡೆ ವಿಕಾರವಾಗಿ ಕಂಡುದರಿಂದಲೊ ಹಸಿಮಣ್ಣನ್ನು ಒಂದು ನಿಯತಾಕಾರಕ್ಕೆ ಕೊಯ್ದು ಪೇರಿಸಿ ಗೋಡೆ ಕಟ್ಟುವ ಕ್ರಮ ಬಳಕೆಗೆ ಬಂದಿರಬಹುದು. ಹೀಗೆ ಒಣಗಿಸಿದ ಗಟ್ಟಿ ಉಂಡೆಗಳೇ ಅತ್ಯಂತ ಪ್ರಾಚೀನ ಇಟ್ಟಿಗೆಗಳು. ಇಂಥ ಇಟ್ಟಿಗೆಗಳನ್ನು ಇಸ್ರೇಲಿನ ಜೆರಿಕೋ ಎಂಬಲ್ಲಿ ನವಶಿಲಾಯುಗದ ಕಾಲದಲ್ಲೇ (ಪ್ರ.ಪೂ.ಸು. 7000) ಉಪಯೋಗಿಸುತ್ತಿದ್ದುದು ಕಂಡುಬಂದಿದೆ. ಕಲಸಿದ ಮಣ್ಣನ್ನು ಬುಟ್ಟಿಗಳ ಬದಲಾಗಿ ಮರದ ಹಲಗೆಗಳಿಂದ ಮಾಡಿದ ಅಚ್ಚುಗಳಿಗೆ ತುಂಬಿ ಬಿಸಿಲಿನಲ್ಲಿ ಒಣಗಿಸಿ ಉಪಯೋಗಿಸುವ ಪದ್ಧತಿ ಕ್ರಮೇಣ ಬೆಳೆಯಿತು. ಈ ಕಾಲದ ಅಚ್ಚುಗಳು ಮಟ್ಟದ ಮರದ ಹಲಗೆಗಳಿಂದಾಗಿ

ಇಟ್ಟಿಗೆಗಳು ಚೌಕ ಅಥವಾ ಆಯಾಕಾರವನ್ನು ತಳೆದುವು. ಇಂಥ ಅಚ್ಚುಗಳಲ್ಲಿ ತಯಾರಿಸಿದ ಇಟ್ಟಿಗೆಗಳು ಮೊದಲು ಮೆಸೊಪೊಟೇಮಿಯದಲ್ಲಿ ಪ್ರಶ. ಪೂ. 3500ರ ಸುಮಾರಿನಲ್ಲಿ ಬಳಕೆಗೆ ಬಂದುವು. ಅನತಿಕಾಲದಲ್ಲಿ ಒಣಗಿಸಿದ ಇಟ್ಟಿಗೆಗಳ ಜೊತೆಯಲ್ಲೇ ಆವಿಗೆಯಲ್ಲಿ ಸುಟ್ಟ ಇಟ್ಟಿಗೆಗಳ ಬಳಕೆಯೂ ಬೆಳೆಯಿತು. ಮೆಸೊಪೊಟೋಮಿಯದಲ್ಲಿ ಮೊದಲು ಆವಿಷ್ಕರಿಸಲ್ಪಟ್ಟ ಈ ಹೊಸ ವಿಧಾನ ಕ್ರಮೇಣ ಈಜಿಪ್ಟ್, ಭಾರತ, ಚೀನ ಮುಂತಾದೆಡೆಗಳಲ್ಲೆಲ್ಲ ಹರಡಿತು. ಮೆಸೊಪೊಟೋಮಿಯ ಬಯಲು ಪ್ರದೇಶದಲ್ಲಿ ಕಲ್ಲು ದೊರಕದಿರುವುದರಿಂದ ಅಲ್ಲಿನ ಪ್ರಾಚೀನ ನಾಗರಿಕತೆಗೆ ಸಂಬಂಧಿಸಿದ ಕಟ್ಟಡಗಳು ಇಟ್ಟಿಗೆಯವೇ ಆಗಿವೆ. ಅಲ್ಲದೆ ಗೋಡೆಗಳ ಹೊರಭಾಗದಲ್ಲಿ ಸುಂದರ ನಮೂನೆಗಳು ಮೂಡಿಸಲು ಅನುಕೂಲವಾಗುವಂತೆ ಒಂದು ಮುಖದಲ್ಲಿ ಅಚ್ಚುಗಳಿಂದ ಒತ್ತಿದ ನಕಾಶೆಗಳನ್ನುಳ್ಳ ಇಟ್ಟಿಗೆಗಳೂ (ಸ್ಟ್ಯಾಂಪ್ಡ್ ಬ್ರಿಕ್) ಗಾಜಿನಂಥ ವಸ್ತುವಿನಿಂದ ಬಣ್ಣ ಬಣ್ಣದ ಮೆರುಗನ್ನು ಕೊಟ್ಟಿರುವ ಇಟ್ಟಿಗೆಗಳೂ (ಗ್ಲೇಸ್ಡ್ ಬ್ರಿಕ್ಸ್) ಇಲ್ಲಿ ಪ್ರಶ. ಪೂ. 1500ರ ಸುಮಾರಿನಲ್ಲಿಯೇ ಬಳಕೆಗೆ ಬಂದವು. ಇಂತಹ ಇಟ್ಟಿಗೆಗಳಿಂದ ಕಟ್ಟಿದ ಉತ್ತಮ ರಚನೆಗಳು ಬ್ಯಾಬಿಲಾನಿನ ಹೊಸ ಅರಮನೆಯ (ಪ್ರಶ. ಪೂ. 6ನೆಯ ಶತಮಾನ) ಅವಶೇಷಗಳಲ್ಲಿವೆ. ಯುರೋಪಿನ ಬಹುಭಾಗಗಳಲ್ಲಿ ಇಟ್ಟಿಗೆ ಉಪಯೋಗ ರೋಮನ್ನರ ಕಾಲದಲ್ಲಿ ಪ್ರಚಾರವಾಯಿತು. ಆ ಕಾಲದ ಸುಟ್ಟ ಇಟ್ಟಿಗೆಗಳಲ್ಲಿ ಕಟ್ಟಿದ ಅನೇಕ ಕಟ್ಟಡಗಳು ಇಂದಿಗೂ ಗಟ್ಟಿಮುಟ್ಟಾಗಿ ಉಳಿದು ಬಂದಿದೆ.

ಭಾರತದಲ್ಲಿ ಇಟ್ಟಿಗೆಯ ಅತ್ಯಂತ ಪ್ರಾಚೀನ ಬಳಕೆ ಕಾಲಿಬಂಗನ್, ಕೊಟ್‌ದೀಜಿ ಮುಂತಾದೆಡೆಗಳಲ್ಲಿ ಹರಪ್ಪ ಸಂಸ್ಕೃತಿಗೂ ಹಳೆಯದಾದ ಅವಶೇಷಗಳಲ್ಲಿ (ಪ್ರಶ. ಪೂ.ಸು. 2700)ಯೂ ಕಂಡುಬಂದಿದೆ. ಹರಪ್ಪ ಸಂಸ್ಕೃತಿಯ ಕಾಲದಲ್ಲಿ (ಪ್ರಶ. ಪೂ.ಸು. 2500–1500) ಒಣಗಿಸಿದ ಮತ್ತು ಸುಟ್ಟ ಇಟ್ಟಿಗೆಗಳು ವಿಶೇಷವಾಗಿ ಬಳಕೆಯಲ್ಲಿದ್ದುವು. ವೇದಕಾಲದಲ್ಲಿ ಸಹ ಇಟ್ಟಿಗೆ ಉಪಯೋಗದಲ್ಲಿತ್ತೆಂಬುದು ಐತರೇಯ, ಶತಪಥ ಮುಂತಾದ ಬ್ರಾಹ್ಮಣಗಳಿಂದ ತಿಳಿದುಬರುತ್ತದೆ. ಆದರೆ ಸಮಕಾಲೀನ ಇಟ್ಟಿಗೆಗಳಾವುವೂ ಈವರೆಗೆ ಸಿಕ್ಕಿಲ್ಲ. ಪುನಃ ಇಟ್ಟಿಗೆಯ ಉಪಯೋಗದ ಬಗ್ಗೆ ಮಾಹಿತಿ ದೊರಕುವುದು ಪ್ರಶ. ಪೂ. 7ನೆಯ ಶತಮಾನದಲ್ಲಿ. ಈ ಕಾಲದ ಒಂದು ಇಟ್ಟಿಗೆಯ ಕೋಟೆ ಕೌಶಾಂಬಿಯಲ್ಲಿದೆ. ಅಲ್ಲಿಂದ ಮುಂದೆ ಇತ್ತೀಚಿನವರೆಗೂ ಇದರ ಉಪಯೋಗ ಅವ್ಯಾಹತವಾಗಿ ಸಾಗಿ ಬಂದಿದೆ. ಆದರೆ ಈ ಇಟ್ಟಿಗೆಗಳ ಗಾತ್ರ ಮತ್ತು ಆಕಾರ ಕಾಲಕಾಲಕ್ಕೆ ಬದಲಾಯಿಸಿವೆ.

ಕರ್ನಾಟಕದಲ್ಲಿ ಪ್ರಶ.ಪೂ. ಸುಮಾರು 2–1ನೆಯ ಶತಮಾನಗಳಲ್ಲಿ ಇಟ್ಟಿಗೆಯ ಬಳಕೆ ಆರಂಭವಾಯಿತು. ಈಗ ಉಪಲಬ್ಧವಿರುವ ಅತ್ಯಂತ ಪ್ರಾಚೀನ ಇಟ್ಟಿಗೆ ಕಟ್ಟಡವೆಂದರೆ ಚಿತ್ರದುರ್ಗ ಜಿಲ್ಲೆ ಬ್ರಹ್ಮಗಿರಿಯ ಉತ್ಖನನದಲ್ಲಿ ಬೆಳಕಿಗೆ ಬಂದಿರುವ ಒಂದು ಚೈತ್ಯಾಲಯದ ಅಡಿಪಾಯ. ಈ ಪ್ರದೇಶಗಳಲ್ಲಿ ಸಹ ಇಟ್ಟಿಗೆ ಉಪಯೋಗ ಅವಿಚ್ಛಿನ್ನವಾಗಿ ಅಂದಿನಿಂದ ಮುಂದುವರಿದು ಬಂದಿದೆ. ಬೀದರಿನಲ್ಲಿರುವ ಬಹಮನಿ ಅರಸರ ಕಾಲಕ್ಕೆ ಸೇರಿದ ರಂಗೀನ್ ಮಹಲ್ ಎಂಬ ಕಟ್ಟಡದಲ್ಲಿ ಬಣ್ಣ ಬಣ್ಣದ ಮೆರುಗು ಕೊಟ್ಟ ಇಟ್ಟಿಗೆಗಳನ್ನು ಬಳಸಲಾಗಿದೆ.

**ಆಧುನಿಕ ಇಟ್ಟಿಗೆಗಳು:** ಸಾಂಪ್ರದಾಯಿಕ ಅಳತೆಯ ಇಟ್ಟಿಗೆಗಳು ಭಾರತೀಯ ಮಾನದ ಪ್ರಕಾರ 230 ಮಿ.ಮೀ. ಉದ್ದ, 110 ಮಿ.ಮೀ. ಅಗಲ, 70 ಮಿ.ಮೀ. ದಪ್ಪವಿರಬೇಕು. ಇವುಗಳ ಅಳತೆಗಳ ಪರಿಮಿತಿಗಳು ಭಾರತೀಯ ಮಾನಕ್ಕನುಗುಣವಾಗಿರಬೇಕು.

ಭಾರತೀಯ ಮಾನವು ಮಾಡ್ಯುಲರ್ ಇಟ್ಟಿಗೆಗಳನ್ನು ಬಳಸಲು ನಿರ್ದೇಶಿಸಿದೆ. ಇದರ ಅಳತೆ 190 ಮಿಮೀ ಉದ್ದ, 90 ಮಿ.ಮೀ. ಅಗಲ ಮತ್ತು 90 ಮಿ.ಮೀ. ದಪ್ಪ ಇವು ಮೆಟ್ರಿಕ್ ಅಳತೆಗಳಿಗೆ ಸರಿಯಾಗಿ ಹೊಂದಿಕೊಳ್ಳುತ್ತವೆ.

**ತೂರುಬೂದಿಯ ಇಟ್ಟಿಗೆಗಳು:** ಶಾಖೋತ್ಪನ್ನ ವಿದ್ಯುದಾಗಾರಗಳಲ್ಲಿ ತೂರುಬೂದಿ (fly ash) ಅಪಾರವಾಗಿ ತ್ಯಾಜ್ಯವಾಗಿ ಹೊರಬರುತ್ತದೆ. ಇದನ್ನು ಬಳಸಿ ಇಟ್ಟಿಗೆಗಳನ್ನು ತಯಾರಿಸಲು ಪ್ರಯತ್ನಗಳು ನಡೆದಿವೆ. ತೂರುಬೂದಿಯ ಬಳಕೆಯಿಂದ ಕೃಷಿ ಭೂಮಿಯ ದುರುಪಯೋಗವನ್ನು ನಿವಾರಿಸಬಹುದಾಗಿದೆ. (ಎಸ್.ಎನ್.)

**ಇಟ್ಟಿಗೆ ಕಟ್ಟಡ:** ಫಲವತ್ತಾದ ಯೂಫ್ರೆಟಿಸ್–ಟೈಗ್ರಿಸ್ ಕಣಿವೆಯಲ್ಲಿ ಪ್ರಶ.ಪೂ. 4000ದಲ್ಲಿಯೇ ಪ್ರಾಚೀನ ಉರುಕ್ ಮತ್ತು ಅರ್ ಪಟ್ಟಣಗಳಲ್ಲಿ ಇಟ್ಟಿಗೆಯಿಂದ ಕಟ್ಟಿದ ಲಕ್ಷಣವಾದ ಮನೆಗಳಿದ್ದುವು. ಇದೇ ಕಣಿವೆಯಲ್ಲಿ ಪ್ರಶ. ಪೂ. 3200ರಲ್ಲಿ ಕಟ್ಟಿದ ಇಟ್ಟಿಗೆಯ ಕಟ್ಟಡ ಪ್ರಾಕ್ತನ ಸಂಶೋಧಕರ ಸಾಹಸದಿಂದ ಈಚೆಗೆ ಕಣ್ಣಿಗೆ ಬಿದ್ದಿದೆ. ಸಾಧಾರಣವಾಗಿ ಅವರು ಎಸೆಗಳಲ್ಲಿ ಮಣ್ಣನ್ನೇ ಉಪಯೋಗಿಸಿದರೂ ಅರಮನೆಗಳಲ್ಲಿ ಗಾರೆಯನ್ನು ಬಳಸುತ್ತಿದ್ದರು. ಆ ಪ್ರದೇಶದಲ್ಲಿ ಕಲ್ಲೇ ಸಿಕ್ಕುತ್ತಿರಲಿಲ್ಲ. ಇಟ್ಟಿಗೆಯ ಗೋಡೆಗಳು 3.03 ಮೀಗಳವರೆಗೂ ದಪ್ಪವಾಗಿರುತ್ತಿದ್ದುವು. ಪ್ರಶ. ಪೂ. 8ನೆಯ ಶತಮಾನದಲ್ಲಿ ಬ್ಯಾಬಿಲೋನಿಯದವರು ಚರಂಡಿಗಳ ಮೇಲೆ ಇಟ್ಟಿಗೆಯ ಕಮಾನುಗಳನ್ನು ಕಟ್ಟುತ್ತಿದ್ದರು. ಈಜಿಪ್ಟಿನಲ್ಲಿ ನೈಲ್ ನದಿಯ ಮಣ್ಣಿಗೆ ಮರಳನ್ನೂ ಹುಲ್ಲನ್ನೂ ಬೆರೆಸಿ ಇಟ್ಟಿಗೆಗಳನ್ನು ಮಾಡಿ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಇವರು ಕಟ್ಟಡದಲ್ಲಿ ಬಂಧವನ್ನು (ಬಾಂಡ್) ಉಪಯೋಗಿಸುತ್ತಿದ್ದರು.

ಸಿಂಧೂ ದೇಶದ ಹರಪ್ಪ ಮತ್ತು ಮೊಹೆಂಜೊದಾರೊ ನಗರಗಳಲ್ಲಿ ಬೆಳಕಿಗೆ ಬಂದ ಸಿಂಧೂ ಕಣಿವೆಯ ನಾಗರಿಕತೆಯಲ್ಲಿ ಸುಟ್ಟ ಇಟ್ಟಿಗೆಗಳಿಂದ ಸಾರ್ವಜನಿಕ ಕಟ್ಟಡಗಳನ್ನೂ ಕೆಲಸಗಾರರ ಮನೆಗಳನ್ನೂ ಕಟ್ಟಿದ್ದಾರೆ. ಅನಂತರ ಬಂದ ವಿಖ್ಯಾತ ಇಂಜಿನಿಯರುಗಳಾದ ರೋಮನ್ನರು ಇಟ್ಟಿಗೆಗಳಿಂದ ಕಟ್ಟಿ ಒಳಗಡೆ ಕಾಂಕ್ರೀಟನ್ನು ತುಂಬುತ್ತಿದ್ದರು. ಜ್ವಾಲಾಮುಖಿಗಳಿಂದ ಬಂದ ಪಸೊಲಾಲೆನಾ ಸಿಮೆಂಟನ್ನು ಮರಳಿಗೆ ಬೆರೆಸಿ ಬಲಿಷ್ಠವಾದ ಗಾರೆಯನ್ನು ತಯಾರಿಸುತ್ತಿದ್ದರು. ಇವರು ಇಟ್ಟಿಗೆಯಿಂದಲೇ ಕಮಾನುಗಳ ಶ್ರೇಣಿ (ವಾಲ್ಟ್) ಮತ್ತು ಗುಮ್ಮಟಗಳನ್ನು (ಡೋಮ್) ಕಟ್ಟುವುದರಲ್ಲಿ ನಿಪುಣರು. ಇಟ್ಟಿಗೆ ಬೆನ್ನುಪಟ್ಟಿಗಳಿಂದಲೂ ಕಾಂಕ್ರೀಟಿನಿಂದಲೂ ಕಟ್ಟಿದ 43.2ಮೀ ವ್ಯಾಸದ ಪ್ಯಾಂಥಿಯನ್, ಪುರಾತನ ಗುಮ್ಮಟಗಳಲ್ಲೆಲ್ಲ ಅತ್ಯಂತ ಅಗಲವಾದದ್ದು. ಪ್ರ.ಶ. 6ನೆಯ ಶತಮಾನದಲ್ಲಿ ಕಾನ್‌ಸ್ಟಾನ್‌ಟಿನೋಪಲಿನಲ್ಲಿ ಕಟ್ಟಿದ ಹಾಜಿ ಸೋಫಿಯ ಗುಮ್ಮಟದ ವ್ಯಾಸ 32.46 ಮೀ ನೆಲದಿಂದ ಅದರ ನೆತ್ತಿಯ ಎತ್ತರ 54 ಮೀ. 11ನೆಯ ಶತಮಾನದಲ್ಲಿ ಸ್ಪೇನಿನಲ್ಲಿ ಮೂರರು ರೋಮನರ ಕಲೆಯನ್ನು ರೂಢಿಗೆ ತಂದರು. 12ನೆಯ ಶತಮಾನದಿಂದ ಈಚೆಗೆ ಯುರೋಪಿನಲ್ಲೆಲ್ಲ ಅನೇಕ ಕೋಟೆಗಳನ್ನೂ ಭವ್ಯವಾದ ಚರ್ಚುಗಳನ್ನೂ ಇಟ್ಟಿಗೆಯಿಂದ ಕಟ್ಟಿದ್ದಾರೆ.

**ಕಟ್ಟುವ ಕ್ರಮ:** ಇಟ್ಟಿಗೆಗಳನ್ನು ಒಂದರ ಮೇಲೊಂದು ವ್ಯಾಪಿಸುವ ಹಾಗೂ ಒಂದ ಕ್ಕೊಂದು ತೊಡರಿ ಬಂಧನವನ್ನು ಕಲ್ಪಿಸುವ ಹಾಗೂ ಗಾರೆಯನ್ನು ಸೇರಿಸಿ ಕಟ್ಟಡಗಳನ್ನು ಕಟ್ಟುತ್ತಾರೆ. ಎಲ್ಲ ಸಾಂಪ್ರದಾಯಿಕ ಕೆಲಸಗಳ ಹಾಗೆ ಈ ಕೆಲಸವೂ ಕೈಯಿಂದಲೇ ನಡೆಯುತ್ತದೆ. ಇಟ್ಟಿಗೆ, ಗಾರೆ ಮೊದಲಾದ ಸಾಮಗ್ರಿಗಳನ್ನು ಯಂತ್ರಗಳ ಮೂಲಕ ಕೈಯ ಹತ್ತಿರಕ್ಕೆ ತರಬಹುದು. ಆದರೆ ಇಟ್ಟಿಗೆಗಳನ್ನು ಕೂರಿಸುವುದು ಮಾತ್ರ ಕೈಯಿಂದಲೇ. ಸುಣ್ಣದ ಗಾರೆಯಿಂದ ಕಟ್ಟಿದ ಇಟ್ಟಿಗೆಯ ಗೋಡೆ ಚದರಡಿಗೆ 4 ಟನ್ನುಗಳ ಭಾರವನ್ನೂ ಭಾರವಾದ ಇಟ್ಟಿಗೆಯಿಂದ ಸಿಮೆಂಟಿನ ಗಾರೆಯಲ್ಲಿ ಕಟ್ಟಿದ ಕಟ್ಟಡ 15–20 ಟನ್ನುಗಳ ಭಾರವನ್ನೂ ಹೊರಬಲ್ಲುದು. ಇಟ್ಟಿಗೆ ಕಟ್ಟಡವನ್ನು ತುಯ್ತದ ತ್ರಾಸಕ್ಕೆ (ಟೆನ್‌ಸೈಲ್ ಸ್ಟ್ರೆಸ್) ಗುರಿಪಡಿಸುವುದಿಲ್ಲ. ಭಾರವನ್ನು ಹೊರುವ ಸಾಮರ್ಥ್ಯ ಇಟ್ಟಿಗೆಯ ದಾರ್ಢ್ಯವನ್ನು ಅವಲಂಬಿಸಿರುವುದರಿಂದ ಅದಕ್ಕಿಂತ ಬಲವಾದ ಗಾರೆಯನ್ನು ಉಪಯೋಗಿಸುವುದರಿಂದ ಅನುಕೂಲವೇನೂ ಇಲ್ಲ. ಆದರೆ ಗಾರೆ ಇಟ್ಟಿಗೆಗೆ ಗಟ್ಟಿಯಾಗಿ ಅಂಟಿಕೊಳ್ಳುವಂತಿರಬೇಕು. ಕರಣೆಯಿಂದ ಹರಡುವ ಹಾಗಿರಬೇಕು, ಬೇಗ ಗಟ್ಟಿಯಾಗಬೇಕು.

ಮಣ್ಣಿನ ಗುಣಕ್ಕೂ ತಯಾರಿಕಾ ಕ್ರಮಕ್ಕೂ ಅನುಸಾರವಾಗಿ ಇಟ್ಟಿಗೆಗಳು ಹೆಚ್ಚೋ ಕಡಿಮೆಯೋ ನೀರನ್ನು ಹೀರುತ್ತವೆ. ಇಟ್ಟಿಗೆಯ ಈ ಗುಣ ಗಾರೆಗೆ ಹೊಂದಿಕೊಂಡಿರಬೇಕು. ಜಿಗುಟಾದ ಗಾರೆಯನ್ನು ಉಪಯೋಗಿಸುವಾಗ ನೀರನ್ನು ಹೀರುವಂಥ ಗಾರೆಯಿದ್ದರೆ ಅನುಕೂಲ. ಇಟ್ಟಿಗೆಯ ಕಟ್ಟಡದ ಮೇಲೆ ಬೀಳುವ ಭಾರ ಹೆಚ್ಚಾಗಿದ್ದರೆ ದಾರ್ಢ್ಯವಿರುವ ಮತ್ತು ಭಾರವಾದ ಇಟ್ಟಿಗೆಯನ್ನು ಆಯ್ಕೆಮಾಡಿ ಬಲಿಷ್ಠವಾದ ಗಾರೆಯನ್ನು ಸೇರಿಸಬೇಕು. ಮನೆಗಳನ್ನು ಕಟ್ಟುವಾಗ ತೇವ ಒಳಗೆ ಇಳಿಯದ ಹಾಗೆ ಸಾಮಾನ್ಯವಾಗಿ ತಡೆಯಿರಬೇಕು. ಸಾಧಾರಣವಾದ ತೂಕ ಮತ್ತು ಬಲವುಳ್ಳ ಇಟ್ಟಿಗೆಯ ಜೊತೆಗೆ ಅದು ಹೊರಬೇಕಾದ ಭಾರಕ್ಕೆ ಅನುಗುಣವಾಗಿ ಸುಣ್ಣದ ಗಾರೆಯನ್ನೋ ಸಿಮೆಂಟಿನ ಗಾರೆಯನ್ನೋ ಉಪಯೋಗಿಸ ಬಹುದು.

**ಇಟ್ಟಿಗೆ ಕೆಲಸದಲ್ಲಿ ಬಂಧಗಳು (ಬಾಂಡ್):** ಗೋಡೆಗೆ ಗಿಲಾವು ಮಾಡದೆ ಇದ್ದಾಗ ಕಟ್ಟಡದ ಅಂದವನ್ನೂ ಬಲವನ್ನೂ ಹೆಚ್ಚಿಸುವುದಕ್ಕಾಗಿ ಇಟ್ಟಿಗೆಗಳನ್ನು ಮುಖ್ಯವಾಗಿ ಮೂರು ಬಂಧಗಳಲ್ಲಿ ಜೋಡಿಸುತ್ತಾರೆ; 1. ಇಂಗ್ಲಿಷ್ ಬಂಧ, 2. ಫ್ಲೆಮಿಷ್ ಬಂಧ, 3. ಡಚ್ ಬಂಧ.

ಗೋಡೆಯ ಉದ್ದದಲ್ಲಿ ಇಟ್ಟಿಗೆಯ ಉದ್ದ ಬರುವ ಹಾಗೆ ಇಟ್ಟರೆ ಅದಕ್ಕೆ ಸ್ಟ್ರೆಚರ್ ಎಂದೂ ಅಗಲದಲ್ಲಿ ಇಟ್ಟಿಗೆಯ ಉದ್ದ ಬರುವ ಹಾಗೆ ಇಟ್ಟರೆ ಅದಕ್ಕೆ ಹೆಡರ್ ಎಂದೂ ಹೆಸರು. ಬಂಧದಲ್ಲಿ ಒಂದು ವರಸೆಯಲ್ಲಿ ಬರೀ ಹೆಡರುಗಳನ್ನು ಮೇಲಿನ ವರಸೆಯಲ್ಲಿ ಬರೀ ಸ್ಟ್ರೆಚರುಗಳನ್ನು, ಮೂರನೆಯದರಲ್ಲಿ ಮತ್ತೆ ಹೆಡರುಗಳನ್ನು, ನಾಲ್ಕನೆಯದರಲ್ಲಿ ತಿರುಗಿ ಸ್ಟ್ರೆಚರುಗಳನ್ನು ಉಪಯೋಗಿಸುತ್ತ ಹೋಗುತ್ತಾರೆ. ಒಂದು ವರಸೆಯ ಹೆಡರುಗಳು ಮೇಲಿನ ಮತ್ತು ಕೆಳಗಿನ ವರಸೆಗಳ ಸ್ಟ್ರೆಚರುಗಳ ಮಧ್ಯದಲ್ಲಿ ಬರುತ್ತವೆ. ಡಚ್ ಬಂದ, ಇಂಗ್ಲಿಷ್ ಬಂಧಗಳಲ್ಲಿ ಒಂದೇ ವರಸೆಯಲ್ಲಿ ಒಂದು ಹೆಡರ್, ಒಂದು ಸ್ಟ್ರೆಚರ್–ಹೀಗೆ ಪರ್ಯಾಯವಾಗಿ ಇಡುತ್ತ ಹೋಗುತ್ತಾರೆ. ಒಂದು ವರಸೆಯ ಹೆಡರುಗಳು ಮೇಲಿನ ಮತ್ತು ಕೆಳಗಿನ ವರಸೆಗಳ ಸ್ಟ್ರೆಚರುಗಳ ಮಧ್ಯದಲ್ಲಿ ಬರುತ್ತವೆ. ಡಚ್ ಬಂಧ ಇಂಗ್ಲಿಷ್ ಬಂಧದಂತೆಯೇ ಇದೆ. ಆದರೆ ಒಂದು ಬಿಟ್ಟು ಒಂದು ವರಸೆಯಲ್ಲಿ ಸ್ಟ್ರೆಚರುಗಳನ್ನು 113 ಮಿ.ಮೀ. ನಷ್ಟು ಮುಂದಕ್ಕೆ ತಳ್ಳಿರುತ್ತಾರೆ.

ಉಳಿದ ಬಂಧಗಳು ಈ ನಮೂನೆಗಳ ರೂಪಾಂತರಗಳು. ಇಂಗ್ಲಿಷ್ ಬಂಧದಲ್ಲಿ 1. ಹೆಡರ್ ವರಸೆ, 2. ಮೇಲೆ ಮೂರು ಸ್ಟ್ರೆಚರ್ ವರಸೆಗಳು, 3. ಮತ್ತೆ ಒಂದು ಹೆಡರ್ ವರಸೆ – ಹೀಗೆ ಪರ್ಯಾಯವಾಗಿ ಇಡುವುದುಂಟು. ಫ್ಲೆಮಿಷ್ ಬಂಧದಲ್ಲೂ ಇದೇ ಕ್ರಮವನ್ನನುಸರಿಸಿ ಹೊಸದೊಂದು ರೀತಿಯನ್ನು ಕಲ್ಪಿಸುತ್ತಾರೆ. ಎಲ್ಲ ವರಸೆಗಳಲ್ಲೂ ಸ್ಟ್ರೆಚರುಗಳನ್ನಿಡುವುದು ಇನ್ನೊಂದು ರೀತಿ. ಹಾಗೆಯೇ ಎಲ್ಲ ವರಸೆಗಳಲ್ಲೂ ಹೆಡರುಗಳನ್ನೇ ಇಟ್ಟು ಎಸೆಗಳು ಒಟ್ಟಿಗೆ ಬಂದ ಹಾಗೆ ಕೊನೆಗಳಲ್ಲಿ ಕ್ರಮಪಡಿಸುತ್ತಾರೆ. ಮತ್ತೊಂದು ರೀತಿಯಲ್ಲಿ ಎಲ್ಲ ಹೆಸರುಗಳನ್ನು ಗೋಡೆಯ ಮೇಲೆ (ಆನ್ ಎಡ್ಜ್) ಇಡುತ್ತಾರೆ.

**ಹತ್ಯಾರುಗಳು:** ಗಾರೆಯನ್ನು ಬಾಣಲೆಯಿಂದ ತೆಗೆದುಕೊಂಡು ಕಟ್ಟಿದ ಇಟ್ಟಿಗೆಯ ಮೇಲೆ ಹರಡುವುದಕ್ಕೂ ಅರ್ಧ ಇಟ್ಟಿಗೆಯನ್ನು ಕತ್ತರಿಸಿ ಮೇಲಿನ ಇಟ್ಟಿಗೆಯನ್ನು ಅದರ ಜಾಗದಲ್ಲಿಟ್ಟು ಕಟ್ಟುವುದಕ್ಕೂ ಹೆಚ್ಚಾದ ಗಾರೆಯನ್ನು ಪಕ್ಕಗಳಿಂದ ತೆಗೆಯುವುದಕ್ಕೂ

ಕರಣೆಯನ್ನು ಉಪಯೋಗಿಸುತ್ತಾರೆ. ತೂಗು ಗುಂಡನ್ನು ಉಪಯೋಗಿಸಿ ಗೋಡೆ ಲಂಬವಾಗಿರುವ ಹಾಗೆ ಕಟ್ಟುತ್ತಾರೆ. 1ಮೀ. ಉದ್ದದ ಮರದ ತುಂಡಿನಿಂದ ಇಟ್ಟಿಗೆಗಳ ಮುಖಗಳು ಲಂಬವಾದ ಮೇಲ್ಮೈಯ ಮೇಲಿವೆಯೇ ಎಂದು ನೋಡುತ್ತಾರೆ. ಜಲಮಟ್ಟದಿಂದ ಮೇಲಿನ ಮಟ್ಟವನ್ನು ಪರೀಕ್ಷಿಸುತ್ತಾರೆ. ನಾಲ್ಕು ಮಡಿಕೆಗಳುಳ್ಳ 0.22 ಮೀ. ಉದ್ದ ಅಳತೆಪಟ್ಟಿ ಮತ್ತು ಸಣ್ಣ ಉಕ್ಕಿನ ಮೂಲೆಕೋಲು–ಇವು ಯಾವಾಗಲೂ ಇಟ್ಟಿಗೆಯ ಕೆಲಸಗಾರನ ಬಳಿ ಇರಬೇಕಾದ ಇತರ ಹತ್ಯಾರುಗಳು. ಮೂಲೆಕೋಲಿನ ಉದ್ದವಾದ ಅಂಚನ್ನು ಮಟ್ಟವಾದ ವರಸೆಯ ಮೇಲೆ ಉದ್ದವಾಗಿ ಇಟ್ಟು ಗೋಡೆಯ ಮೇಲೆ ಅದನ್ನು ಎತ್ತಿದರೆ ಲಂಬವಾದ ಅಂಚಿನಿಂದ ವರಸೆಗಳು ಸರಿಯಾಗಿವೆಯೇ ಎಂದು ನೋಡಬಹುದು.

ಕಟ್ಟಡದ ಇಟ್ಟಿಗೆಗಳನ್ನು ಉಪಯೋಗಿಸುವುದಕ್ಕೆ ಅವನ್ನು ಮುಂಚೆ ಚೆನ್ನಾಗಿ ನೀರಿನಲ್ಲಿ ನೆನೆಸಿರಬೇಕು. ಆಗ ಅರೆಕಾವಿನ ಇಟ್ಟಿಗೆಗಳು ಕರಗಿಹೋಗುತ್ತವೆ. ಗೋಡೆಯನ್ನು ಕಟ್ಟುವಾಗ ಮೊದಲು ಅದರ ಎರಡು ಕೊನೆಗಳಿಂದ ಪ್ರಾರಂಭಮಾಡುತ್ತಾರೆ. ಈ ಎರಡು ಕೊನೆಗಳು ಮಧ್ಯದ ಗೋಡೆಯೊಂದಿಗೆ ಹೊಂದಿಕೊಳ್ಳುವ ಹಾಗೆ ಒಂದು ಬಿಟ್ಟು ಒಂದು ವರಸೆಯಲ್ಲಿ ಸ್ಟ್ರೆಚರುಗಳನ್ನು 57 ಮಿ.ಮೀ. ಮುಂದಕ್ಕೆ ಚಾಚಿ ಹಲ್ಲುಗಳನ್ನು ಬಿಡುತ್ತಾರೆ. ಇನ್ನೊಂದು ಕ್ರಮದಲ್ಲಿ ಒಂದೊಂದು ವರಸೆಯನ್ನು ಮೆಟ್ಟಿಲಾಗಿ ಬಿಡುತ್ತಾರೆ. ಈ ಕ್ರಮದಲ್ಲಿ ನಡುವಿನ ಗೋಡೆ ಕೊನೆಗಳೊಂದಿಗೆ ಬೆರೆದು ಎಸೆಗಳಲ್ಲಿ ಗಾರೆ ಪೂರ್ತಿಯಾಗಿ ತುಂಬುತ್ತದೆ. ಕೆಲವು ವೇಳೆ ದೊಡ್ಡ ಗೋಡೆಗಳಲ್ಲಿ ಒಂದು ಮಟ್ಟದಲ್ಲಿ ಒಂದು ಕ್ರಮವನ್ನು ಇನ್ನೊಂದು ಮಟ್ಟದಲ್ಲಿ ಇನ್ನೊಂದನ್ನು ಉಪಯೋಗಿಸುವುದುಂಟು. ಗೋಡೆಯ ಕೊನೆಗಳು ಕೊಂಚ ಎತ್ತರಕ್ಕೆ ಎದ್ದಮೇಲೆ ನಡುವಿನ ಗೋಡೆಯನ್ನು ಒಂದೊಂದು ವರಸೆಯಾಗಿ ಎತ್ತುತ್ತಾರೆ. ಇಟ್ಟಿಗೆಯ ಮಟ್ಟಕ್ಕೆ ಒಂದು ನೂಲಿನ ದಾರವನ್ನು ಬಿಗಿಯಾಗಿ ಎಳೆದು ದಾರದ ಸಾಲಿನಲ್ಲಿ ಇಟ್ಟಿಗೆಗಳನ್ನು ಒಂದೊಂದಾಗಿ ಜೋಡಿಸುತ್ತಾರೆ.

ಇಟ್ಟಿಗೆಯ ಗೋಡೆಯ ಎಡೆಗಳಲ್ಲಿ ಗಾರೆಯನ್ನು ಕೆರೆದು ಹೊಸಗಾರೆಯನ್ನು ಸರಿಯಾಗಿ ತುಂಬುವುದಕ್ಕೆ (ಪಾಯಿಂಟಿಂಗ್) ಪ್ರತ್ಯೇಕವಾದ ಕರಣೆಯನ್ನು ಉಪಯೋಗಿಸುತ್ತಾರೆ. ಗೋಡೆಗೆ ಗಿಲಾವು (ಪ್ಲಾಸ್ಟರಿಂಗ್) ಮಾಡದೆ ಇರುವ ಕಡೆಗಳಲ್ಲಿ ಮಳೆಯ ನೀರು ಒಳಕ್ಕೆ ಬರದ ಹಾಗೆ ಸಿಮೆಂಟುಗಾರೆಯನ್ನು ಎಸೆಗಳಲ್ಲಿ ಕೂರಿ ತುಂಬುತ್ತಾರೆ.

ಭಾರತದಲ್ಲಿ ಇಟ್ಟಿಗೆಯ ಗೋಡೆಗಳಿಗೆ ಹೊರಗೂ ಒಳಗೂ ನಯಗಾರೆಯಿಂದ ಗಿಲಾವು ಮಾಡುವುದೇ ರೂಢಿ. ಮರಳಿನ ಗಾರೆಯನ್ನು ಅರೆದ ಮೇಲೆ ರಾಶಿಹಾಕಿ ಮೇಲುಗಡೆ ನೀರನ್ನು ನಿಲ್ಲಿಸಿ ಮಾಗುವಂತೆ ಮಾಡುತ್ತಾರೆ. ಈ ಗಾರೆಯನ್ನು ಕರಣೆಯಿಂದ ಇಟ್ಟಿಗೆಯ ಗೋಡೆಗಳಿಗೆ ಗಿಲಾವು ಮಾಡುವುದಕ್ಕೆ ಉಪಯೋಗಿಸುತ್ತಾರೆ. ಹೊರಭಾಗದಲ್ಲಿ ಸಿಮೆಂಟ್ ಗಾರೆಯನ್ನು ಗಿಲಾವಿಗೆ ಉಪಯೋಗಿಸುವುದು ರೂಢಿ.

ಗೋಡೆಗಳಿಗೆ ಹೊರಗಡೆ ಗಿಲಾವು ಮಾಡದೆ ಇದ್ದಾಗ ಒಂದೇ ಬಣ್ಣದ ಇಟ್ಟಿಗೆಗಳನ್ನು ಆರಿಸಿ ಹೊರಮುಖದಲ್ಲಿ ಉಪಯೋಗಿಸಬೇಕು. ಕೆಲವು ಗೋಡೆಗಳ ಮುಖದಲ್ಲಿ ವಿಶಿಷ್ಟವಾದ 51 ಮಿ.ಮೀ ದಪ್ಪದ ಒಳ್ಳೆಯ ಇಟ್ಟಿಗೆಗಳನ್ನು ಉಪಯೋಗಿಸಿ 5 ವರಸೆಗಳ ಎತ್ತರ ಎಸೆಗಳೂ ಸೇರಿ ಸುಮಾರು 330 ಮಿ.ಮೀ. ಬರುವಂತೆ ಕಟ್ಟಿ ಹಿಂದುಗಡೆ ಮೂರು ಅಂಗುಲದ ಇಟ್ಟಿಗೆಗಳನ್ನು ಜೋಡಿಸಿ ಕಟ್ಟಿ ಹೊರಗಡೆ ಅಂದವಾಗಿ ಕಾಣುವಂತೆ ಮಾಡುತ್ತಾರೆ. ಕೆಲವು ಮನೆಗಳ ಹೊರಭಾಗದಲ್ಲಿ ಬೇರೆ ಬೇರೆ ಆಕಾರದ ಟೆರಕೋಟ ಇಟ್ಟಿಗೆಗಳನ್ನು ಅಲಂಕಾರಕ್ಕಾಗಿ ಉಪಯೋಗಿಸುವುದು ಉಂಟು.

ಸೇತುವೆಗಳ ಕಂಬಗಳನ್ನು ಬಲಿಷ್ಠವಾದ ಇಟ್ಟಿಗೆಗಳನ್ನು ಆರಿಸಿಕೊಂಡು ಯಾವುದಾದರೂ ಬಂಧಕ್ಕೆ ಅನುಸಾರವಾಗಿ ಸಿಮೆಂಟ್ ಗಾರೆಯಿಂದ ಕಟ್ಟಬೇಕು. ಸೇತುವೆಗಳ ಕಮಾನುಗಳನ್ನು ಇಟ್ಟಿಗೆಗಳಿಂದ ಕಟ್ಟುವಾಗಲೂ ಗೋಲು ಕೆಲಸದಲ್ಲೂ (ಮೌಲ್ಡಿಂಗ್) ಸರಿಯಾದ ಆಕಾರ ಬರುವ ಹಾಗೆ ಜಾಗರೂಕತೆಯಿಂದ ಕಟ್ಟಬೇಕು. ಕಾರ್ಖಾನೆಗಳಲ್ಲಿ ಹೊಗೆಗೂಡುಗಳನ್ನು ಕಟ್ಟುವಾಗ ಬೇಕಾದ ಆಕಾರಕ್ಕೆ ಅಚ್ಚು ಹೊಯ್ದ ಇಟ್ಟಿಗೆಗಳನ್ನು ಉಪಯೋಗಿಸುತ್ತಾರೆ.

ಬೆಂಕಿಯ ಕಾವನ್ನು ತಡೆಯುವ ವಿಶಿಷ್ಟವಾದ ಇಟ್ಟಿಗೆಗಳಿಂದ ಕುಲುಮೆಗಳನ್ನು ಕಟ್ಟಬೇಕು. ಇಂಥವುಗಳಲ್ಲಿ ಹಲವು ನಮೂನೆಗಳಿವೆ. ಅವನ್ನು ಸಿಮೆಂಟ್ ಗಾರೆಯಲ್ಲಿ ಇಲ್ಲವೆ ಬೆಂಕಿಯನ್ನು ತಡೆಯುವ ಮಣ್ಣಿನಲ್ಲಿ ಕೂರಿಸಬೇಕು. ಈ ಮಣ್ಣನ್ನು ಗೋಡೆಯ ಮುಖಕ್ಕೂ ಬಳಿಯುತ್ತಾರೆ.

ಮರದ ಚೌಕಟ್ಟಿನಲ್ಲಿ ಇಟ್ಟಿಗೆಗಳನ್ನು ತುಂಬಿ ಗೋಡೆಗಳನ್ನು ಕಟ್ಟಿ ಗಿಲಾವು ಮಾಡದೆ ಬಿಡುತ್ತಾರೆ. ಲಂಬವಾಗಿ ಸ್ನಾನದ ಮನೆಗಳಲ್ಲಿ ಕೂರಿಸುವ ಸ್ಯಾನಿಟರಿ ಹಂಚುಗಳ ಹಿಂದೆಯೂ ಹೀಗೆ ಇಟ್ಟಿಗೆಗಳನ್ನು ತುಂಬುತ್ತಾರೆ. ಎರಡು ಕೊಠಡಿಗಳ ಮಧ್ಯೆ ಕಟ್ಟುವ ತಡಿಕೆಗಳಿಗೂ ಈ ನಮೂನೆಯನ್ನು (ಬ್ರಿಕ್ ನಾಗಿಂಗ್) ಉಪಯೋಗಿಸಬಹುದು.

ಚಾವಣಿಗಳಲ್ಲಿ ಪ್ರಬಲಿತ ಕಾಂಕ್ರೀಟಿನ ತೊಲೆಗಳ ನಡುವೆ ವಿಷಮ ಚತುರಸ್ರಾಕಾರವಾಗಿ ತಯಾರಿಸಿದ ಇಟ್ಟಿಗೆಗಳನ್ನು ತುಂಬಿ (ಬ್ರಿಕ್ ನಾಗಿಂಗ್ ಟೆರೆಸ್)ಮಿತವ್ಯಯವನ್ನು ಸಾಧಿಸಿ ತಳದಲ್ಲಿ ಮಟ್ಟವಾದ ಚಾವಣಿಯನ್ನು ಕಟ್ಟಬಹುದು. ಈ ನಮೂನೆಯನ್ನು 2.43–3.34 ಮೀ. ಅಂಕಣಗಳಲ್ಲಿ ಉಪಯೋಗಿಸಬಹುದು. ಹಜಾರದ ಅಗಲ ಹೆಚ್ಚಾಗಿದ್ದರೆ ಸೂಕ್ತವಾಗಿ ಪ್ರಬಲಿತ ಕಾಂಕ್ರೀಟಿನ ತೊಲೆಗಳನ್ನು ಕಟ್ಟಿ ಅಂಕಣಗಳನ್ನು ಈ ಅವಧಿಗೆ ತರಬೇಕು. ಗೋಡೆಗಳ ಮೇಲೆ ಹೊತ್ತುಕೊಳ್ಳುವ ಭಾಗವನ್ನು ಸೇರಿಸಿ ಆಯಾ ಅಂಕಣದಲ್ಲಿ ಬರುವ ಪ್ರಬಲಿತ ಕಾಂಕ್ರೀಟಿನ ತೊಲೆಗಳನ್ನು ತಕ್ಕಷ್ಟು ಉಕ್ಕನ್ನು ಹುದುಗಿಸಿ ಪೂರ್ವಭಾವಿಯಾಗಿ ತಯಾರಿಸಿ ನೀರಿನಲ್ಲಿ ಮುಳುಗಿಸಿಟ್ಟು ಮುಗಿಸಬಹುದು. ಈ ತೊಲೆಗಳನ್ನು ಮಾಡಲು ಚಾವಣಿಯ ಮೇಲೆ ಸರಿಯಾದ ಅಂತರದಲ್ಲಿಟ್ಟು ನಡುವೆ ವಿಷಮ ಚತುರಸ್ರಾಕಾರವಾಗಿ ತಯಾರಿಸಿದ ವಿಶಿಷ್ಟ ಇಟ್ಟಿಗೆಗಳನ್ನು ಜೋಡಿಸಿ ತಳದಲ್ಲಿ ಚಪ್ಪಟೆಯಾದ ಮಾಡನ್ನು ತಯಾರಿಸಬಹುದು. ಉಕ್ಕಿಗೆ ಅಭಾವವಿರುವ ಸಮಯಗಳಲ್ಲಿ ಪ್ರಬಲಿತ ಕಾಂಕ್ರೀಟಿಗೆ ಬದಲಾಗಿ ಅರೆವಾಸಿ ಇಟ್ಟಿಗೆಯನ್ನು ಉಪಯೋಗಿಸುವುದು ಉಚಿತ. ಇದರಿಂದ ಕೊಂಚ ಉಳಿತಾಯವೂ ಆಗುತ್ತದೆ.

ಕೆಲವು ವೇಳೆ ಗೋಡೆಗಳಲ್ಲಿ 203.2 ಮಿ.ಮೀ. ಇಲ್ಲವೆ 304.8 ಮಿ.ಮೀ ದಪ್ಪದ ಒರಟು ಇಟ್ಟಿಗೆಯ ಕಟ್ಟಡಕ್ಕೆ 101.6 ಮಿ.ಮೀ. ನಯವಾದ ಇಟ್ಟಿಗೆಯ ಹೊದಿಕೆಯನ್ನು ಕೊಡುವುದುಂಟು. ಖರ್ಚಿನಲ್ಲಿ ಉಳಿತಾಯ ಮಾಡುವುದಕ್ಕಾಗಿ ಈ ತೆಳು ಹೊದಿಕೆಯನ್ನು ಹಿಂದೆ ಇಟ್ಟಿಗೆಯ ಕಟ್ಟಡವೇ ಇಲ್ಲದೆ ಮರದ ಚೌಕಟ್ಟಿಗೆ ಲೋಹದ ಕ್ಲಿಪ್ಪುಗಳಿಂದ ಪ್ರಬಲಿತ ಮಾಡುತ್ತಾರೆ. ಈ ಕಟ್ಟಡದಲ್ಲಿ ಭಾರವೆಲ್ಲ ಮರದ ಚೌಕಟ್ಟಿನ ಮೇಲೆ ಬೀಳುತ್ತದೆ. ಮರದ ಬೆಲೆ ಹೆಚ್ಚಾದ ಮೇಲೆ ಈ ನಮೂನೆಯನ್ನು ಅಷ್ಟಾಗಿ ಉಪಯೋಗಿಸುತ್ತಿಲ್ಲ.

**ಪ್ರಬಲಿತ ಇಟ್ಟಿಗೆಯ ಕಟ್ಟಡ (ರೀ ಇನ್‌ಫೋರ್ಸ್ಡ್ ಬ್ರಿಕ್‌ವರ್ಕ್):** ಈ ಕ್ರಮವನ್ನು 1813ರಲ್ಲಿ ಸುರಂಗದ ಇಂಜಿನಿಯರ್ ಬ್ರುಸೆಲ್ ಹೊಗೆಗೂಡುಗಳನ್ನು ಬಲಪಡಿಸುವುದಕ್ಕಾಗಿ ಉಪಯೋಗಿಸಿದ್ದ. ಆಮೇಲೆ 1825ರಲ್ಲಿ ಥೇಮ್ಸ್ ನದಿಯ ಕೆಳಗೆ ಸುರಂಗವನ್ನು ಕೊರೆಯುತ್ತಿದ್ದಾಗಲೂ ವಿಶೇಷವಾಗಿ ಬಳಸಿದ. ಈ ಕ್ರಮದಲ್ಲಿ ಇಟ್ಟಿಗೆಯ ಎಸೆಗಳಲ್ಲಿ ಉಕ್ಕಿನ ಕಂಬಿಗಳನ್ನು ಇಟ್ಟು ಬಲಪಡಿಸುತ್ತಾರೆ. ಪ್ರಬಲಿತ ಕಾಂಕ್ರೀಟಿನಲ್ಲೂ ಇದೇ ತತ್ತ್ವವನ್ನು ಉಪಯೋಗಿಸಿದ್ದಾರೆ. ಇಟ್ಟಿಗೆಯ ಕಟ್ಟಡದ ಒತ್ತುಬಲ ಹೆಚ್ಚು. ತುಯ್ತ ಉಪಯೋಗವಿಲ್ಲ. ಗಾರೆಯಲ್ಲಿ ಉಕ್ಕಿನ ಕಂಬಿಗಳು ಚಪ್ಪಡಿ, ತೊಲೆ ಇಲ್ಲವೆ ಕಂಬದ ಹಾಗೆ, ಕಟ್ಟಡ ಕೆಲಸಮಾಡುವ ಹಾಗೆ ತುಯ್ತತದ ಬಲವನ್ನು, ಒದಗಿಸುತ್ತವೆ. ಸಾದಾ ಇಟ್ಟಿಗೆಗಳನ್ನು ಗೋಡೆಯ ಮೇಲೆ (ಆನ್ ಎಡ್ಜ್) ಜೋಡಿಸಿ ಒಂದೊಂದೂ ಎಸೆಯಲ್ಲಿಯೂ 6.35 ಮಿ.ಮೀ ಉಕ್ಕಿನ ಕಂಬಿಗಳನ್ನಿಟ್ಟರೆ 2.43ಮೀ. ಅಗಲದ ಕಣ್ಣಿನ ಮೇಲೆ ಬರುವ ತ್ರಾಸವನ್ನು ತೊಲೆಯ ಹಾಗೆ ತಡೆದು ಮೇಲುಗಡೆ ಚದರ ಅಡಿಗೆ 30 ಕೆ.ಜಿ.ಗಳ ತೂಕವನ್ನು ಹೊರುತ್ತದೆ. 203.2 ಮಿ.ಮೀ. ಅಗಲವೂ 482.6 ಮಿ.ಮೀ. ಆಳವೂ ಆದ ಇಟ್ಟಿಗೆಯ ಕಟ್ಟಡದ ತೊಲೆಯಲ್ಲಿ ಕೆಳಗಡೆಯ ಗಾರೆಯ ಎಸೆಯಲ್ಲಿ ಐದು 12 ಮಿ.ಮೀ ಗುಂಡು ಕಂಬಿಗಳನ್ನು ಕೂರಿಸಿದರೆ ಆ ತೊಲೆ 3.64 ಮೀ. ಅಗಲದ ಕಟ್ಟೆಯ ಮೇಲೆ 5 ಟನ್ನುಗಳ ಭಾರವನ್ನು ಹೊರಬಲ್ಲದು.

ಈ ಕೆಲಸದಲ್ಲಿ ಪ್ರಬಲಿತ ಕಾಂಕ್ರೀಟಿನ ಕಂಬಿಗಳಿಗೆ ಬೇಕಾಗುವ ಹಾಗೆ ಊರೆಕಟ್ಟು (ಸೆಂಟರಿಂಗ್) ಬೇಕಾಗುವುದಿಲ್ಲ. ಚಪ್ಪಡಿಗಳಿಗೆ ಬೇಕಾಗುವ ಸಾರವೆ ನೀರು ಸೋರದಷ್ಟು ಭದ್ರವಾಗಿರಬೇಕಾಗಿಲ್ಲ. ತೊಲೆಗಳಿಗೆ ತಳದಲ್ಲಿ ಒಂದು ಹಲಗೆಯೂ ಅದನ್ನು ಹಿಡಿದಿರುವುದಕ್ಕೆ ಕೆಲವು ಕಂಬಿಗಳೂ ಸಾಕು. ಇಟ್ಟಿಗೆಗಳನ್ನು ಮರದ ಹಲಗೆಯ ಮೇಲೆ ಇಡುತ್ತ ಹೋಗಬಹುದು. ಎಸೆಗಳಲ್ಲಿ ಗಾರೆಯನ್ನು ತುಂಬಿ ಅದರಲ್ಲಿ ಉಕ್ಕಿನ ಕಂಬಿಗಳನ್ನು ಹೂಳಿ ಗಾರೆ ಗಟ್ಟಿಯಾಗುವ ವರೆಗೂ ಬಿಟ್ಟು ಆಮೇಲೆ ಸಾರವೆಯನ್ನು ತೆಗೆಯಬಹುದು. ಗಾರೆಯನ್ನು ಮೂರುಪಾಲು ಮರಳಿನೊಂದಿಗೆ ಒಂದು ಪಾಲು ಸಿಮೆಂಟನ್ನು ನೀರಿನೊಂದಿಗೆ ಬೆರೆಸಿ ತಯಾರಿಸುತ್ತಾರೆ.

ಇಟ್ಟಿಗೆಯ ಗೋಡೆಗಳನ್ನು ಕೆಲವು ವರಸೆಗಳ ಅಂತರದಲ್ಲಿ ಮಧ್ಯೆ ಉಕ್ಕಿನ ತೆಳುಪಟ್ಟಿ, ಹಿಗ್ಗಿಸಿದ ತಂತಿಬಲೆ (ಎಕ್ಸ್‌ಪ್ಯಾಂಡೆಡ್ ಮೆಟಲ್, ವೈರ್ ಮೆಷ್) ಇಲ್ಲವೆ ಬಿ.ಆರ್.ಸಿ. ಫೇಬ್ರಿಕ್ಕುಗಳನ್ನು ಮಟ್ಟವಾಗಿ ಇಟ್ಟು ಗೋಡೆಯ ದಪ್ಪವನ್ನು ಕಡಿಮೆ ಮಾಡಿ ಹೆಚ್ಚು ಭಾರವನ್ನು ಹೊರುವಂತೆ ಮಾಡುತ್ತಾರೆ.

ಉದ್ದದಲ್ಲೂ ಅಗಲದಲ್ಲೂ ಉಕ್ಕಿನ ಕಂಬಿಗಳನ್ನು ಎಸೆಗಳಲ್ಲಿಟ್ಟು ಭದ್ರೀಕರಿಸಿದ ಇಟ್ಟಿಗೆಯ ಕಟ್ಟಡದಿಂದಲೇ 3.64 ಮೀ ಉದ್ದ 1.82 ಮೀ. ಅಗಲದ ಕ್ಯಾಂಟಿಲಿವರ್ ಕ್ಯಾನೊಪಿಯನ್ನು ಪೋರ್ಟಿಕೋವಿನ ಹಾಗೆ ಕಟ್ಟಿದ್ದಾರೆ.

ಲಂಬವಾಗಿ ಉಕ್ಕಿನ ಕಂಬಿಗಳನ್ನು ನಿಲ್ಲಿಸಿ ಅಲ್ಲಲ್ಲಿ ಅವನ್ನು ಮಟ್ಟವಾದ ಸುತ್ತು ಕಂಬಿಗಳಿಂದ ಬಿಗಿದು ಸುತ್ತಲೂ ಒಳ್ಳೆಯ ಇಟ್ಟಿಗೆಯಿಂದ ತೆಳುವಾಗಿ ಕಂಬಗಳನ್ನು ಕಟ್ಟುವುದು ಸಾಮಾನ್ಯವಾಗಿದೆ. ಕೇವಲ ಇಟ್ಟಿಗೆಯಿಂದಲೇ ಕಟ್ಟಿದ ಕಂಬಗಳ ಮೇಲೆ ಮಹಡಿಗಳನ್ನು ಕಟ್ಟುವುದು ಸಾಧ್ಯವಾಗಲಾರದು. ಪೊಳ್ಳಾದ ಗೋಡೆಗಳು (ಕ್ಯಾವಿಟಿ ವಾಲ್ಸ್) : ವಾಸ್ತವವಾಗಿ ಇವು 50.8–101 ಮಿ.ಮೀ. ಅಂತರವುಳ್ಳ ಎರಡು ಗೋಡೆಗಳು. ಈ ಖಾಲಿ ಜಾಗ ಹೊರಗಿನಿಂದ ತೇವವಾಗಲಿ ಶಾಖವಾಗಲಿ ಒಳಗೆ ಬರುವುದನ್ನೂ ಒಳಗಿನಿಂದ ಹೊರಗೆ ಹೋಗುವುದನ್ನೂ ತಡೆಯುತ್ತದೆ. ಸಾಮಾನ್ಯವಾಗಿ ಮಧ್ಯೆ ಎರಡು ಕಡೆಗಳಲ್ಲೂ ಒಂದು ಇಟ್ಟಿಗೆಯ ಅಗಲದ ಗೋಡೆಗಳನ್ನು ಕಟ್ಟುತ್ತಾರೆ. ನಡುವಣ ಅಂತರದಲ್ಲಿ ಶಾಖದ ಅವಾಹಕವಾದ (ನಾನ್‌ಕಂಡಕ್ಟರ್) ಗಾಜಿನ ನೂಲನ್ನೋ ತೆಳುವಾದ ಹಲಗೆಯನ್ನೋ ತುಂಬುತ್ತಾರೆ. ಮನೆಗಳ ಹೊರಗಿನ ಗೋಡೆಗಳನ್ನು ಮಾತ್ರ ಹೀಗೆ ಕಟ್ಟುತ್ತಾರೆ. ಶೀತ ದೇಶಗಳಲ್ಲಿ ಮನೆಯೊಳಗಿನ ತೇವ ಈ ಖಾಲಿ ಜಾಗದಲ್ಲಿ ನೀರಿನ ರೂಪಕ್ಕೆ ಬರದ ಹಾಗೆ ಒಳಭಾಗದಲ್ಲಿ ಒಂದು ನೂಲು ದಪ್ಪದ ಆಸ್ಫಾಲ್ಟಿನ ಹಾಳೆಗಳನ್ನಿಡಬೇಕು. ಮಳೆಯ ನೀರು ಒಳಕ್ಕೆ ಬರದ ಹಾಗೆ ಹೊರಗಡೆಯಿಂದ ಅದನ್ನು ಸಾಗಿಸಬೇಕು. ಗೋಡೆಯ ಎರಡು ಭಾಗಗಳನ್ನು ಬಿಗಿದು ಕಟ್ಟುವ ಹಾಗೆ 0.45 ಮೀ. ಅಂತರದಲ್ಲಿ ಒಂದೂವರೆ ನೂಲಿನ

ತುಕ್ಕು ಹಿಡಿಯದ ಕಂಬಿಗಳನ್ನು ಇಡಬೇಕು. ಇಂಥ ಗೋಡೆಗಳ ಮೇಲೆ ಅಮೆರಿಕದಲ್ಲಿ ಒಂದು ಮಹಡಿಯನ್ನು ಕಟ್ಟುತ್ತಾರೆ. ಆದರೆ ವಿಶೇಷವಾಗಿ ಅನೇಕ ಮಹಡಿಗಳಿರುವ ಸೌಧಗಳಲ್ಲಿ ಭಾರವನ್ನು ಹೊರುವ ಉಕ್ಕಿನ ಚೌಕಟ್ಟಿನ ಮುಂದುಗಡೆ ಯಾವ ಭಾರವನ್ನೂ ಹೊರದ ಹಾಗೆ ಈ ಪೊಳ್ಳುಗೋಡೆಗಳನ್ನು ಕಟ್ಟುವುದೇ ಹೆಚ್ಚು. ಇಂಥ ಗೋಡೆಗಳನ್ನು ಕೈಗಾರಿಕೆಯ ಮತ್ತು ವಾಣಿಜ್ಯದ ಕಟ್ಟಡಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ.

**ಆಧುನಿಕ ಕಟ್ಟಡಗಳಲ್ಲಿ ಇಟ್ಟಿಗೆಯ ಸ್ಥಾನ:** ಈ ಶತಮಾನದಲ್ಲಿ ಉಕ್ಕು, ಪ್ರಬಲಿತ ಕಾಂಕ್ರೀಟು ಬಂದ ಮೇಲೆ ಇಂಜಿನಿಯರಿಂಗ್‌ನಲ್ಲಿ ಇಟ್ಟಿಗೆಯ ಪ್ರಾಮುಖ್ಯ ಕಡಿಮೆಯಾಗುತ್ತಿದೆ. ದೊಡ್ಡ ಸೇತುವೆಗಳಲ್ಲಿ ಇಟ್ಟಿಗೆಯ ಕಮಾನುಗಳನ್ನು ಕಟ್ಟುವುದನ್ನು ಬಿಟ್ಟು 60 ವರ್ಷಗಳಿಗಿಂತಲೂ ಹೆಚ್ಚು ಕಾಲವಾಗಿದೆ. ಮನೆಗಳಲ್ಲಿ ಕಂಬಗಳನ್ನು ಬಳಸುವುದೂ ಇತ್ತೀಚೆಗೆ ನಿಂತುಹೋಗಿದೆ. ಗೋಡೆಗಳಿಗೆ ಮಾತ್ರ ಇನ್ನೂ ಬಳಸುತ್ತಿದ್ದಾರೆ. ಆದರೆ ಹೊರಗೋಡೆಗಳನ್ನು ಕಲ್ಲಿನಿಂದ ಕಟ್ಟುವುದು ಸಾಮಾನ್ಯವಾಗುತ್ತಿದೆ. ತಾರಸಿಗಳನ್ನಂತೂ ಇಟ್ಟಿಗೆಯಿಂದ ಕಟ್ಟುತ್ತಲೇ ಇಲ್ಲ.

1891ರಲ್ಲಿ ಚಿಕಾಗೋ ನಗರದಲ್ಲಿ ಕಟ್ಟಿದ 16 ಅಂತಸ್ತಿನ ಮೊನಾಡ್‌ನಾಕ್ ಕಟ್ಟಡವೇ ಭಾರವನ್ನು ಹೊರುವ ಇಟ್ಟಿಗೆಯ ಕೊನೆಯ ಗಗನ ಚುಂಬಿ. ಎತ್ತರವಾದ ಕಟ್ಟಡಗಳನ್ನು ಕಟ್ಟಬೇಕಾದರೆ ಗೋಡೆಯ ದಪ್ಪ ಹೆಚ್ಚಾಗುತ್ತದೆ. ಎರಡು ಕಿಟಕಿಗಳ ನಡುವೆ ದಪ್ಪವಾದ ಇಟ್ಟಿಗೆಯ ಕಟ್ಟಡ ಬೇಕಾಗುವುದರಿಂದ ಕಿಟಕಿಗಳನ್ನು ಚಿಕ್ಕದಾಗಿ ಮಾಡಬೇಕಾಗುತ್ತದೆ. ಈ ಕಾರಣಗಳಿಂದ ಮಹಾಸೌಧಗಳಲ್ಲಿ ಭಾರವನ್ನು ಹೊರುವ ಭಾಗವನ್ನು ಉಕ್ಕಿನಿಂದಲೋ ಪ್ರಬಲಿತ ಕಾಂಕ್ರೀಟಿನಿಂದಲೋ ಕಟ್ಟುವುದು ಅನಿವಾರ್ಯವಾಯಿತು. ಆಗ ಕಂಬಗಳು ತೆಳುವಾದುವು. ಕಿಟಕಿಯನ್ನು ಈ ಕಂಬದಿಂದ ಆ ಕಂಬದವರೆಗೂ ಹರಡಿದ್ದಾಯಿತು. ಆದರೂ ಕಿಟಕಿಗಳ ಎತ್ತರವನ್ನು ಎಷ್ಟಕ್ಕೆ ಬೇಕೋ ಅಷ್ಟಕ್ಕೆ ಇಳಿಸಿದರು. ಈ ನಮೂನೆಯಲ್ಲಿ ಇಟ್ಟಿಗೆಯ ಗೋಡೆ ಭಾರವನ್ನು ಹೊರುವುದಿಲ್ಲ. ಅಲ್ಲದೆ ಭಾರವನ್ನು ಹೊರುವ ಚಪ್ಪನ್ನು ಮುಚ್ಚಿ ಹೊರಗಡೆಗೆ ಲಕ್ಷಣವಾಗಿ ಕಾಣಿಸುತ್ತದೆ. ಹೀಗೆ ಈಗಲೂ ಇಟ್ಟಿಗೆ ದೊಡ್ಡ ಕಟ್ಟಡಗಳಲ್ಲಿ ಹೊಸ ರೀತಿಯಲ್ಲಿ ಉಪಯೋಗವಾಗುತ್ತಿದೆ. ಸಣ್ಣ ಕಟ್ಟಡಗಳಲ್ಲಿ ಗೋಡೆಗಳನ್ನು ಕಟ್ಟುವುದಕ್ಕೆ ವಿಶೇಷವಾಗಿ ಬಳಕೆಯಲ್ಲಿದೆ. (ಎಚ್.ಸಿ.ಕೆ.)

**ಇಟ್ಟಿಮರ:** ಲೊಗಾನಿಯೇಸೀ ಕುಟುಂಬಕ್ಕೆ ಸೇರಿದ ಒಂದು ವೃಕ್ಷ; ಕೆಲವು ಪ್ರಭೇದಗಳು ಬಳ್ಳಿಗಳಂತೆ ಬೇರೆ ಮರಗಳ ಮೇಲೆ ಹಬ್ಬುವುದೂ ಉಂಟು. ಹೆಮ್ಮುಷ್ಟಿ, ಕಾಸರಕ, ಕಂಜೀರ, ನಂಜಿನ ಕೊರಡು ಇತ್ಯಾದಿಗಳು ಈ ವೃಕ್ಷ ಜಾತಿಯ ಕೆಲವು ಪ್ರಭೇದಗಳು. ಇಟ್ಟಿಮರಗಳು 30 ಮೀಟರಿನಷ್ಟು ಎತ್ತರ ಬೆಳೆಯುತ್ತವೆ. ಚಳಿಗಾಲದಲ್ಲಿ ಎಲೆಗಳು ಉದುರುತ್ತವೆ. ವಸಂತ ಕಾಲದಲ್ಲಿ ಹೂಗಳು ಅರಳುತ್ತವೆ. ಹೂಗಳ ಬಣ್ಣ ಹಸಿರು ಬಿಳುಪು. ಒಂದೊಂದು ಹೂಗೊಂಚಲಿನಲ್ಲೂ ಅನೇಕ ಹೂಗಳಿರುತ್ತವೆ. ಮಾಗಿದ ಹಣ್ಣಿನ ಬಣ್ಣ ಕೆಂಪು. ಇದರ ದಪ್ಪ ಸುಮಾರು 2.5 ಸೆಂ.ಮೀ. ಒಳಗಡೆ ಅನೇಕ ಬೀಜಗಳು. ಬೀಜ ಚಪ್ಪಟೆಯಾಗಿ ಒಂದೆಡೆ ಉಬ್ಬಿಕೊಂಡು, ಮತ್ತೊಂದೆಡೆ ತಗ್ಗಾಗಿದೆ. ಇಕ್ಕಡೆಗಳಲ್ಲೂ ಅದಕ್ಕೆ ಮೃದುವಾದ ರೋಮಗಳಿವೆ. ಕಂಕುಳು ಮೊಗ್ಗುಗಳು ಗಟ್ಟಿಯಾದ ಮುಳ್ಳಾಗಿ ರೂಪಾಂತರವಾಗಿರುತ್ತವೆ. ಪಾಶ್ಚಾತ್ಯ ದೇಶಗಳ ಔಷಧ ಪದ್ಧತಿಯಲ್ಲಿ ಈ ಮರದ ಉಪಯೋಗ 19ನೆಯ ಶತಮಾನದಲ್ಲಿ ಬಳಕೆಗೆ ಬಂತು. ಮರದ ಬೀಜದಲ್ಲಿ ಸ್ಟ್ರಿಕ್ನೀನ್ ಮತ್ತು ಬ್ರೂಸಿನ್ ಎಂಬ ನೈಟ್ರೋಜನ್ ಕ್ಷಾರ ದ್ರವ್ಯಗಳು ಇವೆ. ಸ್ಟ್ರಿಕ್ನೀನನ್ನು ನರಗಳ ಬೇನೆಯಲ್ಲಿ ಬಲವರ್ಧಕವಾಗಿಯೂ ಶ್ವಾಸರೋಗಗಳಲ್ಲಿ ಉತ್ತೇಜಕವಾಗಿಯೂ ತೀವ್ರ ಮಲಬದ್ಧತೆಯ ನಿವಾರಣೆಗೂ ಕೊಡುವುದುಂಟು. ಆಯುರ್ವೇದ ವೈದ್ಯಪದ್ಧತಿಯಲ್ಲಿ ಬಹುಕಾಲದಿಂದ ಈ ಮರದ ಹಣ್ಣು ಮತ್ತು ಬೀಜಗಳ ಉಪಯೋಗ ಪ್ರಚಲಿತವಿದೆ. ವಾತ, ಕಫ, ರಕ್ತಸಂಬಂಧರೋಗ, ಕಜ್ಜಿ, ಮೂಲವ್ಯಾಧಿ, ಕಾಮಾಲೆ ಇತ್ಯಾದಿ ರೋಗಗಳಲ್ಲಿ ಹಣ್ಣು ಮತ್ತು ಬೀಜವನ್ನು ಉಪಯೋಗಿಸುತ್ತಾರೆ. ಯುನಾನಿ ಔಷದ ಪದ್ಧತಿಯ ಪ್ರಕಾರ ಹಣ್ಣು ಮತ್ತು ಬೀಜವನ್ನು ಹುಳುಕಡ್ಡಿ, ಮೂತ್ರಬಂಧನ, ಸೊಂಟದ ರೋಗಗಳು ಇತ್ಯಾದಿಗಳಿಗೆ ಬಳಸುವರು. ಕಾಮೋತ್ತೇಜಕವಾಗಿಯೂ ಉಪಯೋಗಿಸುವುದುಂಟು. ಎಲೆಯನ್ನು ಅರೆದು ಬೆಚ್ಚಾರ (ಪೋಲ್ಟೀಸ್) ಮಾಡಿ ಹುಳು ಬಿದ್ದಿರುವ ಗಾಯಗಳಿಗೆ ಕಟ್ಟಿದರೆ ಹುಳುಗಳು ಸಾಯುತ್ತವೆ. ಬೇರಿನ ತೊಗಟೆಯನ್ನು ನಿಂಬೆಹಣ್ಣಿನ ರಸದಲ್ಲಿ ತೇದು ಗುಳಿಗೆಮಾಡಿ ಕಾಲರಾ ಬೇನೆಯಲ್ಲಿ ಕೊಟ್ಟರೆ ಗುಣ ಕಂಡುಬರುತ್ತದೆ. ಕೊಂಕಣದಲ್ಲಿ ಚಿಟಿಕೆಯಷ್ಟು ಬೀಜದ ಪುಡಿಯನ್ನು ರುಚಿ ಪದಾರ್ಥದೊಡನೆ ಸೇರಿಸಿ ಹೊಟ್ಟೆ ನುಲಿತಕ್ಕೆ ಕೊಡುತ್ತಾರೆ. ಉದ್ದವಾದ ರೆಂಬೆಯ ಮಧ್ಯಭಾಗವನ್ನು ಕಾಯಿಸಿ ಕತ್ತರಿಸಿದಾಗ ಇಕ್ಕೆಡೆಗಳಲ್ಲೂ ಸ್ರವಿಸುವ ರಸವನ್ನು ಬಟ್ಟಲಿನಲ್ಲಿ ಸಂಗ್ರಹಿಸಿ ಕಾಲರಾ ಬಂದಾಗ ಕೆಲವುತೊಟ್ಟುಗಳನ್ನು ಕೊಟ್ಟರೆ ಪರಿಣಾಮಕಾರಿಯಾಗಿ ಕೆಲಸಮಾಡುತ್ತದೆ. ಬೀಜಗಳನ್ನು ಬೆಕ್ಕು, ನಾಯಿ ಮುಂತಾದವನ್ನು ಕೊಲ್ಲಲು ಉಪಯೋಗಿಸುತ್ತಾರೆ. ಬೇರಿನ ಕೊರಡನ್ನು ಹಂಚಿನ ಮೇಲೆ ನೀರುಹಾಕಿ ತೇದು ಜ್ವರದಲ್ಲಿ ದೇಹಕ್ಕೆ ಲೇಪಿಸುತ್ತಾರೆ. ಹೀಗೆ ಮಾಡುವುದರಿಂದ ಜ್ವರದ ತಾಪ ಇಳಿಯುತ್ತದೆ. (ಎಚ್.ಎನ್.ಸಿ.)

**ಇಟ್ರಸ್ಕನ್ ಸಂಸ್ಕೃತಿ:** ರೋಮ್ ಸಂಸ್ಕೃತಿಗಿಂತ ಮೊದಲು ಇಟಲಿಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂಸ್ಕೃತಿ. ಇಟ್ರಸ್ಕನರ ರಾಜ್ಯಕ್ಕೆ ಇಟ್ರೂರಿಯವೆಂದು ಹೆಸರು. ಈ ಜನ ಸುಮಾರು ಪ್ರಶ.ಪೂ. 800ರಲ್ಲಿ ಏಷ್ಯ ಮೈನರ್ ಪ್ರದೇಶದಿಂದ ಬಹುತೇಕ ಲಿಡಿಯದಿಂದ ಇಟಲಿಯ ಖನಿಜ ಸಂಪತ್ತಿನಿಂದ ಆಕರ್ಷಿತರಾಗಿ ಬಂದವರು–ಎಂದು ಹಿರಡಟಸ್ ಹೇಳಿರುವ ಅಭಿಪ್ರಾಯವನ್ನು ಈಚಿನ ಸಂಶೋಧಕರು ಒಪ್ಪಿದ್ದಾರೆ. ಇವರ ಭಾಷೆ ಇಂಡೋ–ಯುರೋಪಿಯನ್ ಭಾಷೆಗಿಂತ ಭಿನ್ನವಾದದು. ಇಟಲಿಯ ಈಗಿನ ಟಸ್ಕನಿ ಪ್ರದೇಶದಲ್ಲಿ ಬಾಳಿದ ಇವರ ಪ್ರಾಚೀನ ನಗರರಾಜ್ಯಗಳು ಪ್ರಶ.ಪೂ. 600ರ ಹೊತ್ತಿಗೆ ಉನ್ನತ ನಾಗರಿಕತೆಯನ್ನು ಹೊಂದಿದ್ದುವು. ಇವರು ಚತುರ ನಾವಿಕರಾಗಿದ್ದರು. ಕಡಲುಗಳ್ಳತನ, ವ್ಯಾಪಾರ ಮತ್ತು ಯುದ್ಧಗಳಿಂದಾಗಿ ಉನ್ನತ ಐಶ್ವರ್ಯವನ್ನು ಸಂಪಾದಿಸಿ ದುಂದು ಮತ್ತು ವಿಲಾಸಪೂರ್ಣ ಜೀವನವನ್ನು ನಡೆಸುತ್ತಿದ್ದರು. ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿತ್ತು. ಯುದ್ಧಬಂದಿಗಳ ಕೊಲೆ, ಮತ್ತು ಗ್ಲೇಡಿಯೇಟರ್ ಕಾಳಗಗಳನ್ನು ಏರ್ಪಡಿಸುವುದು ರೂಢಿಯಲ್ಲಿತ್ತು. ಮತೀಯ ಸಂಬಂಧವಾದ ಆಚಾರಗಳು, ಹೆಚ್ಚಾಗಿ ಮರಣೋತ್ತರ ಕ್ರಿಯೆಗಳಿಗೆ ಸಂಬಂಧಪಟ್ಟವಾಗಿದ್ದುವು. ಮತೀಯ ಗುರುಗಳು ಭವಿಷ್ಯ ನಿರೂಪಣೆಯಲ್ಲಿ ನಿರತರಾಗಿರುತ್ತಿದ್ದರು. ಅವರ ಇಹಜೀವನ ಎಷ್ಟು ಭೋಗಮಯವೋ ಅದಕ್ಕೆ ವ್ಯತಿರಿಕ್ತವಾಗಿ ಅವರ ಮರಣೋತ್ತರ ಜೀವನ ಭೂತಪ್ರೇತಗಳಿಂದ ಕೂಡಿದ್ದು ಭಯೋತ್ಪಾದಕವಾಗಿತ್ತು. ಕುದುರೆ ಮತ್ತು ರಥಗಳ ಬಳಕೆ ಇತ್ತು. ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿದ್ದರು. ಲೋಹದ ಕೆಲಸದಲ್ಲಿ ಔನ್ನತ್ಯ ಸಂಪಾದಿಸಿದ್ದರು. ವಾಸ್ತುಶಿಲ್ಪ ಮತ್ತು ಯಂತ್ರೋದ್ಯೋಗಗಳಲ್ಲಿ ಪ್ರಾವೀಣ್ಯ ಪಡೆದು ವ್ಯವಸಾಯವನ್ನು ಪ್ರೋತ್ಸಾಹಿಸುತ್ತಿದ್ದರು. ಇವರು ಕಾರ್ತೇಜಿನ ಸ್ನೇಹಿತರಾಗಿದ್ದರೆಂದೂ ಪ್ರ.ಶ.ಪೂ. 474ರಲ್ಲಿ ಇವರ ನೌಕಾಪಡೆ ಸೈರಕ್ಯೂಸ್ ರಾಷ್ಟ್ರದ ನೌಕಾಪಡೆಯಿಂದ ನಾಶಹೊಂದಿತೆಂದೂ ತಿಳಿದುಬರುತ್ತದೆ. ಪ್ರ.ಶ.ಪೂ. 423ರಿಂದ ಮೊದಲುಗೊಂಡು ರೋಮನರ ಹಾಗೂ ಇತರ ಪಂಗಡಗಳ ದಾಳಿಯಿಂದ ಇವರ ಸಂಸ್ಕೃತಿ ನಶಿಸಲಾರಂಭಿಸಿ ಪ್ರ.ಶ.ಪೂ. 396ರಲ್ಲಿ ಇವರ ನಗರರಾಜ್ಯಗಳು ಕ್ರಮೇಣ ರೋಮನರ ಅಧೀನವಾದುವು. ಪ್ರ.ಶ.ಪೂ. 309ರಲ್ಲಿ ನಡೆದ ವಡಿಮೋನಿಯ ಸರೋವರದ ಯುದ್ಧದಲ್ಲಿ ರೋಮನರು ಇವರನ್ನು ಸೋಲಿಸಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ ಮೇಲೆ ಇವರ ಸಂಸ್ಕೃತಿ ಅಧಃಪತನ ಹೊಂದಿತು. (ಬಿ.ಕೆ.ಜಿ.)

**ಇಟ್ರಸ್ಕನ್ ಕಲೆ:** ಇಟಲಿಯಲ್ಲಿ ರೋಮನ್ ಜನಾಂಗ ಪ್ರಬಲಿಸುವುದಕ್ಕಿಂತ ಐದು ಶತಮಾನಗಳಿಗಿಂತ ಮುಂಚೆಯೇ ಇಟ್ರಸ್ಕನರ ಕಲೆ ಶ್ರೇಷ್ಠ ಹಾಗೂ ಸತ್ವಪೂರ್ಣವಾಗಿದ್ದು ಪರಿಪೂರ್ಣತೆಯನ್ನು ಪಡೆದಿತ್ತು. ಅನಂತರ ಬಂದ ರೋಮನ್ ಸಂಸ್ಕೃತಿಗೂ ಕಲೆಗೂ ಇದು ಪ್ರಚೋದಕವಾಯಿತು.

**ನೌಕಾಯುದ್ಧವನ್ನು ಚಿತ್ರಿಸಿರುವ ಜಾಡಿ**

ನೆಲದಡಿಯಲ್ಲಿರುವ ಇದರ ಶವಾಗಾರಗಳಲ್ಲಿ ಇವರ ನಾಗರಿಕತೆಯನ್ನು ಪ್ರತಿಬಿಂಬಿಸುವ ಸುಂದರ ವರ್ಣಚಿತ್ರಗಳು, ಮನೆಗಳ ಆಕಾರದ ಚಿತಾಭಸ್ಮ ಪೆಟ್ಟಿಗೆಗಳು, ಚಿತ್ತಾರದ ಕೆಲಸವಿರುವ ಕಂಚಿನ ಕಲಶಪಾತ್ರೆಗಳು, ಕಂಚಿನ ರಥ, ಯುದ್ಧ ಕವಚಗಳು, ಯೋಧರ, ದೇವತೆಗಳ, ಭವಿಷ್ಯವಾದಿಗಳು ಚಿಕ್ಕ ಪ್ರತಿಮೆಗಳು ಮಣ್ಣಿನ ಪ್ರತಿಮೆಗಳ ಚಿತ್ರಗಳಿಂದ ಅಲಂಕರಣಗೊಂಡ ಮಣ್ಣಿನ ಕಲಶ ಪಾತ್ರೆಗಳ ಚಂದ್ರಕಾಂತಶಿಲೆ, ಬೆಳ್ಳಿ ಮತ್ತು ಕಂಚಿನ ಪಾತ್ರೆಗಳು, ನಾಜೂಕು ಕೆತ್ತನೆ ಕೆಲಸದ ಚಿನ್ನದ ಒಡವೆಗಳು, ಮುಖ ಕನ್ನಡಿಗಳು, ಪಾತ್ರ ಬಟ್ಟಲುಗಳು ಸಿಕ್ಕಿವೆ. ಚಿತ್ರಗಳಲ್ಲಿ ಹೆಂಗಸರನ್ನು ಗಂಡಸರಿಗಿಂತ ಬಿಳುಪಾಗಿಯೂ ಎಲ್ಲರನ್ನೂ ಪಾರ್ಶ್ವಮುಖ

ವಾಗಿಯೂ ಚಿತ್ರಿಸಲಾಗಿದೆ. ತಮಗೆ ಪ್ರಿಯವಾದ ಔತಣ, ಭೋಜನಗಳಲ್ಲಿ, ಆಟೋಟ ಸ್ಪರ್ಧೆಗಳಲ್ಲಿ, ಕುದುರೆಯ ಓಟ, ಮೂರು ಕುದುರೆಗಳನ್ನು ಹೂಡಿದ ರಥಗಳ ಓಟ ಮೊದಲಾದವಲ್ಲಿ ಜನ ನಿರತರಾಗಿರುವಂತೆಯೂ ವಿವಿಧ ವಾದ್ಯಗಳನ್ನು ಹಿಡಿದ ಸಂಗೀತಗಾರ ರಿಂದಲೂ ತಟ್ಟೆ ಬಟ್ಟಲುಗಳನ್ನು ತರುತ್ತಿರುವ ದಾಸ ದಾಸಿಯರಿಂದಲೂ ಆವೃತವಾಗಿರು

ಪೌರಾಣಿಕ ದೃಶ್ಯವೊಂದನ್ನು ರೂಪಿಸುವ ವರ್ಣಚಿತ್ರ

ವಂತೆಯೂ ಇಲ್ಲಿನ ಅನೇಕ ಚಿತ್ರಗಳಲ್ಲಿ ತೋರಿಸಲಾಗಿದೆ. ಟಾರ್ಕ್ವಿನಿಯದ ಚಿರತೆಗಳ, ಶವಾಗಾರದ, ಔತಣದ, ಓಟದ, ಮಲ್ಲಯುದ್ಧದ ಚಿತ್ರಗಳು, ಕಂಚಿನ ಎರಕದಲ್ಲಿ ನೇಗಿಲಿಗೆ ಎತ್ತುಗಳನ್ನು ಹೂಡಿದ ರೈತ (ಪ್ರಶ. ಪೂ. 4ನೆಯ ಶತಮಾನ); ಈಟಿಯನ್ನು ಹಿಡಿದು ನಿಂತಿರುವ ಯೋಧ (ಪ್ರಶ. ಪೂ. 5ನೆಯ ಶತಮಾನ); ಪೆರೂಗಿಯದಲ್ಲಿ ಸಿಕ್ಕಿದ ಮುಳುಗುಗಾರ ಚಿತ್ತಾರದ ಕೆಲಸವಿರುವ ಕಂಚಿನ ರಥ, ಭವಿಷ್ಯವಾದಿಗಳ ಪ್ರತಿಮೆಗಳು, ಮಣ್ಣಿನಲ್ಲಿ ಚಿತ್ರಿಸಿರುವ ಯೋಧನ ತಲೆ, ಭರಣಿಗಳ ಮುಚ್ಚಳಗಳ ಮೇಲೆ ಚಿತ್ರಿಸಿರುವ ದಂಪತಿಗಳ ಕೆತ್ತನೆಗಳು; ಬಣ್ಣ ಬಳಿಯಲ್ಪಟ್ಟ ಮಣ್ಣಿನ ಅಪೊಲೊ ಪ್ರತಿಮೆಗಳು; ಸೂಕ್ಷ್ಮವಾದ ಕೆತ್ತನೆಯ, ವಿಚಿತ್ರ ಮೃಗಗಳ ಚಿತ್ರವುಳ್ಳ ಚಿನ್ನದ ಒಡವೆಗಳು–ಇವೇ ಮೊದಲಾದವು ಅವರ ಕಲೆಯ ಉತ್ತಮ ನಿದರ್ಶನಗಳಾಗಿವೆ. ಪಿಟಿಲೋನಿಯದ ಮಂಡುಗೋರಿಯಲ್ಲಿ ದೊರೆತ ಮಣ್ಣಿನ ಪಾತ್ರೆಗಳಲ್ಲಿ ಜ್ಯಾಮಿತೀಯ ಆಕೃತಿಗಳಿದ್ದು 46 ಅಕ್ಷರಗಳನ್ನು ಬಿಡಿಸಲಾಗಿದೆ. ಚಿತ್ರಗಾರಿಕೆಯುಳ್ಳ ಮಣ್ಣಿನ ಕಲಶಗಳಲ್ಲಿ ಗ್ರೀಕ್ ಪ್ರಭಾವ ಕಂಡುಬರುತ್ತದೆ. (ಎಂ.ಎಂ.ಪಿ.)

**ಇಡಗುಂಜಿ:** ಉತ್ತರ ಕರ್ನಾಟಕದ ಯಾತ್ರಾಕ್ಷೇತ್ರಗಳಲ್ಲೆಲ್ಲ ವಿಶಿಷ್ಟವಾದುದು. ಭರತ ಖಂಡದ ಸಿದ್ಧಿಪ್ರದ ಅಷ್ಟಕ್ಷೇತ್ರಗಳಲ್ಲಿ ಒಂದು. ದ್ವಿಭುಜ ಗಣಪತಿಯ ಸುಂದರ ಶಿಲಾವಿಗ್ರಹವಿಲ್ಲಿದೆ. ಇಂಥ ವಿಗ್ರಹ ಕೇವಲ ಎರಡೇ ಸ್ಥಳಗಳಲ್ಲಿವೆ : ಒಂದು ಇಡಗುಂಜಿಯಲ್ಲಿ, ಇನ್ನೊಂದು ಗೋಕರ್ಣದಲ್ಲಿ.

ಶರಾವತಿಯ ಮುಖ್ಯಪ್ರದೇಶದ ಎಡಭಾಗದಲ್ಲಿ ಇಡಗುಂಜಿಯಿದೆ. ಹೊನ್ನಾವರದಿಂದ ಇಲ್ಲಿಗೆ 13 ಕಿಮೀ. ಇಡಾ ಎಂದರೆ ಎಡ, ಕುಂಜ ಎಂದರೆ ಗಿಡಗಂಟೆಗಳಿಂದ ತುಂಬಿರುವ ಅರಣ್ಯಪ್ರದೇಶ. ಇಡಗುಂಜಿ ಎಂಬ ಹೆಸರು ಇಡಾಕುಂಜ ಎಂಬುದರಿಂದ ಬಂದುದು. ಮೊದಲು ಈ ಪ್ರದೇಶಕ್ಕೆ ಗುಂಜಾರಣ್ಯ ಎಂಬ ಹೆಸರು ಇತ್ತು. ಈಗ ಸು. 2500 ಜನಸಂಖ್ಯೆ ಇರುವ ಫಲಭರಿತ ಪ್ರದೇಶವಿದು.

ಇಡಗುಂಜಿ ವಿಶೇಷತಃ ಹವ್ಯಕ ಜನಾಂಗದ ಯಾತ್ರಾಕ್ಷೇತ್ರ. ವಿಘ್ನೇಶ್ವರ ಅವರ ಕುಲದೈವ. ಇಲ್ಲಿ ಅವನಿಗೆ ಕೊಳಯಡಿಕೆ ಗಣಪತಿ ಎಂಬ ಹೆಸರೂ ಇದೆ. ಅಡಕೆ ತೋಟಗಳಿಗೆ ಕೊಳೆರೋಗ ಬಂದಾಗ ಹರಕೆ ಹೊರುವುದು ಸಾಮಾನ್ಯ. ಉತ್ತರ ಕನ್ನಡದ ಯಕ್ಷಗಾನ ಪರಂಪರೆಗೆ ಇಡಗುಂಜಿಯ ಗಣಪತಿ ಮತ್ತು ಅಲ್ಲಿಂದ ಸು. 16 ಕಿಮೀ ದೂರದಲ್ಲಿರುವ ಗುಂಡಬಾಳದ ಹನುಮಂತದೇವರು ಸ್ಫೂರ್ತಿ ಸ್ವರೂಪರು. ಶ್ರೀ ಇಡಗುಂಜಿ ಯಕ್ಷಗಾನ

ಮಂಡಳಿ ದೇಶಕ್ಕೆ ಪ್ರಸಿದ್ಧ ನಟರನ್ನು ನೀಡಿದೆ. ಇವರು ಇಲ್ಲಿಂದ ಕಾಶ್ಮೀರದ ವರೆಗೂ ಪರ್ಯಟನೆ ಮಾಡಿ ಜನಮನ ಸೂರೆಗೊಂಡಿದ್ದಾರೆ. ಇಡಗುಂಜಿ ಉತ್ತಮ ಶಿಕ್ಷಣ ಕೇಂದ್ರವೂ ಹೌದು. ಇಲ್ಲಿ ಗುರುಕುಲ ಪದ್ಧತಿಯ ಸಂಸ್ಕೃತ ಪಾಠಶಾಲೆಯಿದ್ದು 5 ವರ್ಷಕಾಲ ವಿದ್ಯಾರ್ಥಿ ಗಳಿಗೆ ಉಚಿತ ಊಟವಸತಿ ಗಳ ಸೌಲಭ್ಯವಿದೆ. ಇಲ್ಲಿಯ ಸಂಸ್ಕೃತಾ ಭ್ಯಾಸಕ್ಕೆ ಸರ್ಕಾರದ ಮನ್ನಣೆಯಿದೆ. ದೇವಸ್ಥಾನದ ಪರಿಸರ 17 ಗುಂಟೆ ಕ್ಷೇತ್ರವನ್ನಾವರಿಸಿದ್ದು, ದೇವಾಲಯ 3 ಲಕ್ಷ ರೂ.ಗಳ ವೆಚ್ಚದಲ್ಲಿ ಕಾಂಕ್ರೀಟಿ ನಿಂದ ನಿರ್ಮಿತವಾಗಿದೆ. ಇದರ ಮೇಲೆ 22 ತೊಲ ಚಿನ್ನದ ಲೇಪವುಳ್ಳ 78 ಕಿ.ಗ್ರಾಂ. ತೂಕದ ಪಂಚಲೋಹದ ಕಳಶವಿದೆ. ಇಲ್ಲಿ ಪ್ರತಿವರ್ಷವೂ ರಥಸಪ್ತಮಿಯ ದಿನ ರಥೋತ್ಸವವೂ ಗಣೇಶ ಚತುರ್ಥಿಯ ದಿವಸ ವೈಭವೋಪೇತ ಉತ್ಸವವೂ ನಡೆಯುತ್ತವೆ. ಈ ದೇವಸ್ಥಾನದ ಆಡಳಿತವನ್ನು ವಿಶ್ವಸ್ಥ ಮಂಡಳಿಯೊಂದು ನೋಡಿಕೊಳ್ಳುತ್ತಿದೆ.

ಲೋಕ ಕಲ್ಯಾಣಾರ್ಥ ವಾಲಖಿಲ್ಯಾದಿ ಋಷಿಗಳೂ ಕುಟಜಾದ್ರಿಯಲ್ಲಿ ತಪಸ್ಸನ್ನಾಚರಿಸು ತ್ತಿದ್ದಾಗ ಅನೇಕ ವಿಘ್ನಗಳು ಉಂಟಾದುವು. ತ್ರಿಲೋಕ ಸಂಚಾರಿ ನಾರದ ಇದನ್ನರಿತು ಪರಿಹಾರಕ್ಕೆ ಮಹಾಗಣಪತಿಯ ಪೂಜೆಗೈಯಬೇಕೆಂದು ಆದೇಶವಿತ್ತ. ಗಣನಾಥನನ್ನು



ಇಡಗುಂಜಿ ವಿಘ್ನೇಶ್ವರ ದೇವಾಲಯದ ಸ್ವರ್ಣಾಲಂಕೃತ ಗೋಪುರ

ಭೂಲೋಕಕ್ಕೆ ಕರೆತರುವ ಹೊರೆ ಹೊತ್ತ ನಾರದ ಆ ಮುನಿಗಡಣ ದೊಂದಿಗೆ ಪಡುವಣಕ್ಕೆ ಅಭಿಮುಖ ವಾಗಿ ಬಂದು ವಟಿಕಾ ಘಟ್ಟದಿಂದಿಳಿದು ಗೋವರ್ಧನ ಗಿರಿಯಲ್ಲಿ (ಗೇರು ಸೊಪ್ಪೆ) ನಿಂತು ಸುತ್ತಲ ಪ್ರದೇಶವನ್ನು ನೋಡಿದ. ಶರಾವತಿಯ ಮುಖಜ ಪ್ರದೇಶ ಅವರೆಲ್ಲರ ಮನಸೆಳೆಯಿತು. ಅಲ್ಲಿ ಪೂರ್ವ–ಪಶ್ಚಿಮಗಳಲ್ಲಿ ಔಷಧಿ, ವನೌಷಧಿ ಪರ್ವತಗಳಿರುವ ಪ್ರದೇಶ ವನ್ನು ಆರಿಸಿ, ಶರಾವತಿಯ ಎಡಪ್ರದೇಶ ದಲ್ಲಿರುವ ಅರಣ್ಯ ಪ್ರದೇಶಕ್ಕೆ ನಾರದ ಇಡಾಕುಂಜ ಎಂದು ಹೆಸರಿಟ್ಟು ಅದೇ ನಾಮದಿಂದ ಪ್ರಸಿದ್ಧಿ ಹೊಂದಲೆಂದು ವೀಣೆ ನುಡಿಸಿ ಹರಸಿದ.

ಪ್ರತಿದಿನ ಪಂಚಕಜ್ಜಾಯ ತಿನ್ನಲು ಕೊಡುವುದಾಗಿ ಹೇಳಿ ಕೈಲಾಸದಿಂದ ಗಜಾನನನನ್ನು ನಾರದ ಅಲ್ಲಿಗೆ ಕರೆತಂದ. ಭಕ್ತರ ಪಾಲನೆಯಲ್ಲಿ ತನಗೆ ನೆರವಾಗಬೇಕೆಂದು ಗಣನಾಥ ಇಚ್ಛಿಸಲು ಹರಿಹರ ಬ್ರಹ್ಮಾದಿಗಳೂ ದೇವತೆಗಳೂ ಋಷಿಗಳೂ ಅವನೊಂದಿಗೆ ಬಂದರು. ಗಣಪತಿಯ ವಾಸಕ್ಕೆಂದು ವಿಶ್ವಕರ್ಮ ಸುಂದರವಾದ ವಿಗ್ರಹವನ್ನು ಏಕಶಿಲೆಯಲ್ಲಿ ನಿರ್ಮಿಸಿದ. ಈ ಲಂಬೋದರಮೂರ್ತಿ ತನ್ನ ದ್ವಿಭುಜಗಳಲ್ಲಿ ಪದ್ಮ, ಮೋದಕಧಾರಿಯಾಗಿದೆ. ಲಕ್ಷ್ಮಿ, ಸರಸ್ವತಿ, ಪಾರ್ವತಿಯರನ್ನೂ ದೇವ ದೇವತೆಗಳನ್ನೂ ಒಳಗೊಂಡು ಬಂದ ಮಹಾಗಣಪತಿ ಯನ್ನು ಪೂರ್ವತ್ರೇತಾಯುಗದ ನೃಪವರ ಚಂಡವಿದ್ಯಾಶಕಾಬ್ದ 813ನೆಯ ವಿಭವ ಸಂವತ್ಸರದ ಉತ್ತರಾಯಣ, ಶಿಶಿರಋತು, ಮಾಘಮಾಸ, ಶುಕ್ಲಪಕ್ಷ, ದ್ವಿತೀಯ ಸೌಮ್ಯವಾಸರದ, ಉತ್ತರಾಭಾದ್ರನಕ್ಷತ್ರದ ಶುಭ ಮುಹೂರ್ತದಲ್ಲಿ ನಾರದಮಹರ್ಷಿ ಪ್ರತಿಷ್ಠಾಪಿಸಿದ. ಗಣಪತಿ ತನ್ನ ಸಮ್ಮುಖದಲ್ಲಿ ಗಣೇಶ ತೀರ್ಥವನ್ನು ಸ್ಥಾಪಿಸಿದ. ಹಾಗೆ ಪೂರ್ವ ದಿಕ್ಕಿನಲ್ಲಿ ವಿಷ್ಣು ತನ್ನ ಚಕ್ರದಿಂದ ಚಕ್ರತೀರ್ಥವನ್ನೂ ಶಿವ ತನ್ನ ಶೂಲದಿಂದ ಪಶ್ಚಿಮದಲ್ಲಿ ಶೂಲ ತೀರ್ಥವನ್ನೂ

ತನ್ನ ಕಮಂಡಲೋದಕದಿಂದ ಬ್ರಹ್ಮ ದಕ್ಷಿಣದಲ್ಲಿ ಕಮಂಡಲ ತೀರ್ಥವನ್ನೂ ಸ್ಥಾಪಿಸಿದರು. ನಾರದನೂ ತನ್ನ ದೇವತೀರ್ಥವನ್ನು ವಾಯವ್ಯದಲ್ಲಿ ನಿರ್ಮಿಸಿದ. ಈ ತೀರ್ಥಗಳಲ್ಲಿ ತ್ರಿಮೂರ್ತಿಗಳೂ ತಮ್ಮ ರಾಕ್ಷಸ ಸಂಹಾರದ ದೋಷವನ್ನು ತೊಳೆದುಕೊಂಡರು. ಮಹಾಗಣಪತಿ ಭಕ್ತಾಭೀಷ್ಟಪ್ರದನೂ ನಿರ್ವಿಘ್ನಕಾರಕನೂ ಆದ. ಈ ವಿಷಯ ಸ್ಕಂದಪುರಾಣೋಕ್ತವಾದುದು. (ಜಿ.ಐ.ಎಚ್.)

**ಇಡಾ:** ನೋಡಿ– ನಾಡಿಗಳು; ಯೋಗ

**ಇಡಾಹೊ:** ಅಮೆರಿಕ ಸಂಯುಕ್ತ ಸಂಸ್ಥಾನದ ಪರ್ವತಮಯ ರಾಜ್ಯ. ಅಮೆರಿಕದ ಇಂಡಿಯನರ ರೀತ್ಯಾ ಇದಾಹೊ ಎಂದರೆ ಪರ್ವತವಜ್ರ. ವಜ್ರರಾಜ್ಯವೆಂದು ಇದನ್ನು ಕರೆಯುವುದು ಸಾಮಾನ್ಯರ ರೂಢಿ. ಹೆಚ್ಚಾಗಿ ಕೊಲಂಬಿಯ ನದಿಯ ಜಲಾನಯನ ಭೂಪ್ರದೇಶದಿಂದಲೇ ಕೂಡಿರುವ ಈ ರಾಜ್ಯದ ಉತ್ತರಕ್ಕೆ ಬ್ರಿಟಿಷ್ ಕೊಲಂಬಿಯ, ಪೂರ್ವಕ್ಕೆ ಮಾಂಟಾನ ಮತ್ತು ವ್ಯೋಮಿಂಗ್, ದಕ್ಷಿಣಕ್ಕೆ ಯೂಟಾ ಮತ್ತು ನೆವಾಡ, ಪಶ್ಚಿಮಕ್ಕೆ ಒರೆಗಾನ್ ಮತ್ತು ವಾಷಿಂಗ್ಟನ್ ಇವೆ. ಇದರ ವಿಸ್ತೀರ್ಣ 216,632 ಚ.ಕಿಮೀ.



ಜನಸಂಖ್ಯೆ 1,567,582 (2010). ಈ ರಾಜ್ಯದ ದಕ್ಷಿಣದಲ್ಲಿರುವ ಸ್ನೇಕ್ ನದಿಯ ಕಣಿವೆಯಲ್ಲಿ ಆಳವಾದ ಕಮ್ಮರಿಗಳೂ ಅಬ್ಬಿಗಳೂ ಹೇರಳ. ಉತ್ತರದಲ್ಲಿ ಸೆಲ್‌ಕರ್ಕ್ ಪರ್ವತವೂ ಕೋರ್ ಡಿ'ಅಲಿನ್ ಪರ್ವತವೂ ಇದೇ ಹೆಸರಿನ ಸರೋವರವೂ ಇವೆ. ಉತ್ತರ ದಕ್ಷಿಣ ಪ್ರದೇಶಗಳನ್ನು ಪ್ರತ್ಯೇಕಿಸುವಂತೆ ಮಧ್ಯದಲ್ಲಿ ಕ್ಲಿಯರ್‌ವಾಟರ್ ಪರ್ವತ. ಪಶ್ಚಿಮದಲ್ಲಿ ಸೆವೆನ್ ಡೆವಿಲ್ಸ್ ಪರ್ವತವೂ ಪೂರ್ವದ ಎಲ್ಲೆಯ ಬಳಿಯಲ್ಲಿ ಬಿಟ್ಟರ್‌ರೂಟ್ ಪರ್ವತಶ್ರೇಣಿ. ಇದು ಮರುಭೂಮಿಗಳಿಂದಲೂ ಮೈದಾನಗಳಿಂದಲೂ ಅಗ್ನಿಶಿಲೆಯ ನೆಲದಿಂದಲೂ ಕೂಡಿದ ಪ್ರದೇಶ. ಸೈಲೂರಿಯನ್‌ನಿಂದ ಪ್ಲಿಯೊಸೀನ್‌ವರೆಗೆ ಭೂ ಇತಿಹಾಸದ ಎಲ್ಲ ಯುಗಗಳಿಗೆ ಸಂಬಂಧಿಸಿದ ಭೂರಚನೆಯನ್ನೂ ಇಲ್ಲಿ ಕಾಣಬಹುದು.

**ವಾಯುಗುಣ, ಸಸ್ಯವರ್ಗ:** ಬೇಸಗೆಯಲ್ಲಿ ಆಗ್ನೇಯ ಭಾಗದ ಸ್ನೇಕ್ ಕಣಿವೆ ಪ್ರದೇಶದಲ್ಲಿ ಅತಿ ಹೆಚ್ಚಿನ ಸರಾಸರಿ ಉಷ್ಣತೆಯಿರುತ್ತದೆ. ಇದು 70$^{o}$ಫ್ಯಾ. ಗಿಂತಲೂ ಅಧಿಕ. ಇತರ ತಗ್ಗು ಪ್ರದೇಶಗಳಲ್ಲಿ 60$^{o}$ ಫ್ಯಾ. ಗಿಂತ ಹೆಚ್ಚಿನ ಸರಾಸರಿ. ಪರ್ವತ ಪ್ರದೇಶದ ಸರಾಸರಿ ಉಷ್ಣತೆ 55$^{o}$ಫ್ಯಾ. ಗಿಂತ ಕಡಿಮೆ. ಚಳಿಗಾಲದಲ್ಲಿ ಪರ್ವತಪ್ರದೇಶದ ಉಷ್ಣತೆ 20$^{o}$ಫ್ಯಾ. ಗಿಂತ ಕಡಿಮೆ. ತಗ್ಗಿನ ನೆಲದಲ್ಲಿ 20$^{o}$ಯಿಂದ 30$^{o}$ಫ್ಯಾ. ಕೊರೆಯುವ ಹಿಮ ಬೀಳದಿರುವ ದಿನಗಳ ಸಂಖ್ಯೆ ವರ್ಷಕ್ಕೆ ಸರಾಸರಿಯಲ್ಲಿ 150ಕ್ಕಿಂತ ಕಡಿಮೆ. ಪರ್ವತಪ್ರದೇಶದಲ್ಲಿ ಇದು ತೊಂಬತ್ತಕ್ಕಿಂತ ಕಡಿಮೆ. ರಾಕಿ ಪರ್ವತಶ್ರೇಣಿಯ ಪ್ರದೇಶದ ಬಹುಭಾಗದಲ್ಲಿ 761,98 ಮಿಮೀ.ಕ್ಕಿಂತ ಹೆಚ್ಚು ಮಳೆ. ಕೆಲವು ಪ್ರದೇಶದಲ್ಲಿ 915,98 ಮಿಮೀ.ಕ್ಕೂ ಹೆಚ್ಚು. ಪಶ್ಚಿಮಕ್ಕೂ ದಕ್ಷಿಣಕ್ಕೂ ಹೋದಂತೆಲ್ಲ ಮಳೆ ಕಡಿಮೆಯಾಗುತ್ತದೆ. ತೀರ ಪಶ್ಚಿಮದಲ್ಲಿ ಕನಿಷ್ಠ ಮಳೆಯ ಪ್ರಮಾಣ 507 ಮಿಮೀ. ತೀರ ದಕ್ಷಿಣದಲ್ಲಿ 253 ಮಿಮೀ. ಹಿಮಾವೃತ ದಿನಗಳ ಸಂಖ್ಯೆ ವರ್ಷಕ್ಕೆ 90 ರಿಂದ 30ರ ವರೆಗೆ ಪ್ರದೇಶಾನುಗುಣವಾಗಿ ವ್ಯತ್ಯಾಸವಾಗುತ್ತ ಹೋಗುತ್ತದೆ. ವರ್ಷದ ಎಲ್ಲ ಋತುಗಳಲ್ಲೂ ಮಳೆಯಾಗುತ್ತದೆ. ಆದರೆ ಪಶ್ಚಿಮ ಭಾಗದಲ್ಲಿ ಬೇಸಗೆಯಲ್ಲಿ ಕನಿಷ್ಠ ಪರಿಮಾಣ.

ಉಷ್ಣತೆ ಹಾಗೂ ನೆಲದೆತ್ತರಕ್ಕೆ ಅನುಗುಣವಾಗಿ ಇದಾಹೊ ರಾಜ್ಯದ ಸ್ವಾಭಾವಿಕ ಸಸ್ಯವರ್ಗ ವ್ಯತ್ಯಾಸವಾಗುತ್ತದೆ. ಸ್ನೇಕ್ ನದಿಯ ಮೈದಾನದಲ್ಲೂ ಅದರ ದಕ್ಷಿಣಕ್ಕೂ ಮರುಭೂಮಿಯ ಕುರುಚಲು ಗಿಡಗಳು ಸಾಮಾನ್ಯ, ಉತ್ತರದ ಪರ್ವತ ಪ್ರದೇಶದ ಮೇಲೆ ಗುತ್ತಿಹುಲ್ಲಿನ ಪಶ್ಚಿಮ ಸೆರಗೂ ದಾರುವೃಕ್ಷಗಳ ಒಡಲೂ ಲಾರ್ಜ್, ಫರ್, ಸ್ಪ್ರೂಸ್ ಮರಗಳ ಬೊಟ್ಟುಗಳೂ ಇವೆ. ಕೆಲವು ಕಾಡುಗಳು ವಾಣಿಜ್ಯದೃಷ್ಟಿಯಿಂದ ಮುಖ್ಯ.

**ವ್ಯವಸಾಯ, ಖನಿಜ, ಕೈಗಾರಿಕೆ:** ದನ ಕುರಿಗಳ ಮೇವು ದೊರಕುವ ಜಮೀನು ಇದಾಹೋದಲ್ಲಿ ಧಾರಾಳವಾಗಿದೆ. ಸಾಂದ್ರಬೇಸಾಯ ನಡೆಯುವಲ್ಲಿ ಜನರು ಬೆಳೆಯ ಜೊತೆಗೆ ದನ ಕುರಿ ಹಂದಿಗಳನ್ನೂ ಸಾಕುತ್ತಾರೆ. ಸ್ನೇಕ್ ನದಿಯ ಕಣಿವೆಯಲ್ಲಿ, ಮುಖ್ಯವಾಗಿ ರಾಜ್ಯದ ಆಗ್ನೇಯ ದಕ್ಷಿಣ–ಮಧ್ಯ ಹಾಗೂ ಪಶ್ಚಿಮ ಕಣಿವೆಯಲ್ಲಿ, ಹಾಗೂ ಉತ್ತರದ ಪಶ್ಚಿಮ ಬದಿಯ ಪ್ರದೇಶದಲ್ಲಿ ಬೇಸಾಯದ ಜಮೀನುಗಳು ಅಧಿಕ. ರಾಜ್ಯದ ದಕ್ಷಿಣದಲ್ಲಿ ನೀರಾವಿಯೂ ಸಾಮಾನ್ಯ. ನೀರಾವರಿ ವ್ಯವಸ್ಥೆಗೆ ಒಳಪಡದ ಜಮೀನುಗಳಲ್ಲಿ ಗೋಧಿಯ ಬೆಳೆಯೇ ಹೆಚ್ಚು; ಓಟ್ಸ್, ಬಾರ್ಲಿಗಳೂ ಬೆಳೆಯುತ್ತವೆ. ನೀರಾವರಿಯ ನೆಲಗಳಲ್ಲಿ ಕುದುರೆ ಮಸಾಲೆಯ ಸೊಪ್ಪಿನ (ಆಲ್ಫಾಲ್ಫ) ಬೆಳೆ ಅಧಿಕ. ದಕ್ಷಿಣ–ಮಧ್ಯ ಹಾಗೂ ದಕ್ಷಿಣ–ಪೂರ್ವ ಜಿಲ್ಲೆಗಳಲ್ಲಿ ಸಕ್ಕರೆಯ ಬೀಟ್ ಹಾಗೂ ಆಲೂಗೆಡ್ಡೆಯ ಬೆಳೆ ಹೆಚ್ಚು. ಅಲ್ಲಲ್ಲಿ ಸೇಬನ್ನೂ ಬೆಳೆಯುವುದುಂಟು. ಗೋಧಿ, ಬೆಣ್ಣೆ, ಚೀಸ್, ಉಣ್ಣೆ–ಇವು ಮುಖ್ಯ ಉತ್ಪನ್ನಗಳು.

ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಗಣಿಗಾರಿಕೆ ಪ್ರಧಾನವಾಗಿದೆ. ಕೋರ್ ಡಿ'ಅಲಿನ್‌ನಲ್ಲಿ ಸೀಸ ಬೆಳ್ಳಿಗಳೂ ಸ್ವಲ್ಪಮಟ್ಟಿಗೆ ಸತುವೂ ಸಿಗುತ್ತವೆ. ಚಿನ್ನ ತಾಮ್ರಗಳೂ ತಕ್ಕಮಟ್ಟಿಗೆ ಮುಖ್ಯ.

**ಜನ, ಸರ್ಕಾರ, ಇತಿಹಾಸ:** ಇದಾಹೊ ರಾಜ್ಯದ ಜನಸಂಖ್ಯೆ ಈಗ 1,567,582 (2010) ಇದೆ. ಇಲ್ಲಿನ ಜನರಲ್ಲಿ ಬಿಳಿಯರಲ್ಲದವರು ಬಹು ಕಡಿಮೆ. ಬೊಯಿಸ್, ಪೊಕಟೆಲ್ಲೊ, ಇಡಾಹೊ ಫಾಲ್ಸ್ ಇವು ಮುಖ್ಯವಾದ ಪಟ್ಟಣಗಳು. ರಾಜ್ಯದಲ್ಲಿ ಮಾರ್ಮನ್ ಚರ್ಚು ಪ್ರಧಾನ.

ಇದಾಹೊ ರಾಜಧಾನಿ ಬೊಯಿಸ್. ಗೌರ್ನರು ಇದರ ಅಧಿಪತಿ. ರಾಜ್ಯದ ವಿಧಾನಮಂಡಲದ ಮೇಲ್ಮನೆಯಾದ ಸೆನೆಟಿಗೆ 44 ಮಂದಿ ಸದಸ್ಯರೂ ಕೆಳಮನೆಯಾದ ಪ್ರತಿನಿಧಿ ಸಭೆಗೆ (ಹೌಸ್ ಆಫ್ ರಪ್ರೆಸೆಂಟೆಟಿವ್ಸ್) 50 ಸದಸ್ಯರೂ ಚುನಾಯಿತರಾಗುತ್ತಾರೆ. ಇವರ ಅಧಿಕಾರಾವಧಿ ಎರಡು ವರ್ಷ. ಅಮೆರಿಕ ಸಂಯುಕ್ತ ಸಂಸ್ಥಾನದ ಕೇಂದ್ರ ವಿಧಾನ ಮಂಡಲವಾದ ಕಾಂಗ್ರೆಸ್ಸಿನಲ್ಲಿ ಮೇಲ್ಮನೆಗೆ ಇಬ್ಬರೂ ಕೆಳಮನೆಗೆ ಇಬ್ಬರೂ ಪ್ರತಿನಿಧಿಗಳು ಆಯ್ಕೆಯಾಗುತ್ತಾರೆ.

ಇದಾಹೊ ಮೊದಲಿಗೆ ಒರೆಗಾನಿನ ಭಾಗವಾಗಿತ್ತು. 1863ರಲ್ಲಿ ರಾಜಕೀಯವಾಗಿ ಇದಾಹೊ ಪ್ರದೇಶ ಖಚಿತವಾಗಿ ರೂಪುಗೊಂಡಿತು. ಇದರ ಈಗಿನ ಎಲ್ಲೆಗಳು 1868ರ ವರೆಗೂ ನಿಷ್ಕರ್ಷೆಯಾಗಿರಲಿಲ್ಲ. 1860ರಲ್ಲಿ ಇಲ್ಲಿ ಚಿನ್ನ ಪತ್ತೆಯಾದಾಗಿನಿಂದ ಇದರ ಇತಿಹಾಸ ಪ್ರಾರಂಭ. 1890ರಲ್ಲಿ ಇದು ಪ್ರತ್ಯೇಕ ರಾಜ್ಯಘಟಕವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದ ಒಕ್ಕೂಟದಲ್ಲಿ ಸೇರ್ಪಡೆಯಾಯಿತು. *

**ಇಡುಕುಂಗಬ್ಬ:** ಇಮ್ಮಡಿ ನಾಗವರ್ಮನ (ಸು. 1150) ಕಾವ್ಯಾವಲೋಕನದಲ್ಲಿ ಉಕ್ತವಾಗಿರುವ ಒಂದು ಕಾವ್ಯಜಾತಿ. ಇಡುಕುಂಗಬ್ಬಂ ಮುಕ್ತಕ ಮೊಡಂಬಡಲ್ ನೆಗೞ್ದ– ಎಂದು 240ನೆಯ ಸೂತ್ರದಲ್ಲಿ ನಾಗವರ್ಮ ಪ್ರಸ್ತಾಪಿಸಿದ್ದಾನೆ. ಸಂಸ್ಕೃತದ ಮುಕ್ತಕಕ್ಕೆ ಸಂವಾದಿಯಾದದ್ದು ಕನ್ನಡದ ಇಡುಕುಂಗಬ್ಬ. ಇಡುಕು ಎಂದರೆ ಸ್ವತಂತ್ರ, ವಿಮುಕ್ತ ಎಂದರ್ಥ. ಆದ್ದರಿಂದ ಇಡುಕುಂಗಬ್ಬವೆಂಬುದು ಬಿಡಿಯಾದ, ಸ್ವಯಂಪೂರ್ಣ ಪದ್ಯ. (ಸಿ.ಪಿ.ಕೆ.)

**ಇಡುಗೂರು ರುದ್ರಕವಿ:** ?–1887. ಜನನ ಗೌರೀಬಿದನೂರು ತಾಲ್ಲೂಕು ಇಡುಗೂರು. ರಾಚಮ್ಮ ಮತ್ತು ಪುಷ್ಪದಾರ್ಯರೆಂಬುವರು ತಾಯಿ ತಂದೆಯರು. ಗುರುವಿನ ಹೆಸರು ಗೊತ್ತಿಲ್ಲ. ಗುಬ್ಬಿಯಲ್ಲಿ ಗುರುಗಳೊಬ್ಬರ ಆಶ್ರಯದಲ್ಲಿ ಕಾವ್ಯ, ನಾಟಕ, ಅಲಂಕಾರ, ವ್ಯಾಕರಣ, ಛಂದಸ್ಸು ಮುಂತಾದ ಶಾಸ್ತ್ರಗಳಲ್ಲಿ ಶಿಕ್ಷಣ ಪಡೆದುದಲ್ಲದೆ ವೀರಶೈವಾಮೃತ ಮಹಾಪುರಾಣವನ್ನು ಗಮಕರೀತಿಯಲ್ಲಿ ಓದಿ ವ್ಯಾಖ್ಯಾನ ಮಾಡುವ ಸಾಮರ್ಥ್ಯವನ್ನು ಸಹ ಪಡೆದ. ತರುವಾಯ ಶ್ರೀ ಭಟ್ಟುಮೂರ್ತಿ ಎಂಬವರಲ್ಲಿ ಆಂಧ್ರ ಸಾಹಿತ್ಯವನ್ನು ಅಭ್ಯಾಸಮಾಡಿ ಕರ್ನಾಟಕ ಮತ್ತು ಆಂಧ್ರ ಭಾಷೆಗಳಲ್ಲಿ ಕವಿತಾಸಾಮರ್ಥ್ಯವನ್ನು ಪಡೆದ. ಒಂದು ಬಯಲಾಟದ ನಾಟಕಮಂಡಲಿಯನ್ನು ಸಹ ಸ್ಥಾಪಿಸಿ ಆಂಧ್ರ, ಕರ್ನಾಟಕ ಪ್ರಾಂತ್ಯಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದ. ಈತ ಶಿವನ ಪಾತ್ರವನ್ನು ಅಭಿನಯಿಸುತ್ತಿದ್ದ ಶಿವನಾಟಕ ಪ್ರಖ್ಯಾತಿ ಪಡೆದಿತ್ತು. ಸು. 1841ರಲ್ಲಿ ಆರಂಭವಾದ ಈ ನಾಟಕ ಮಂಡಲಿ

1867ರವರೆಗೆ ಅವ್ಯಾಹತವಾಗಿ ನಡೆಯಿತು. 1856ರ ಸುಮಾರಿನಲ್ಲಿ ಮೈಸೂರು ಅರಮನೆಯಲ್ಲಿ ಅಭಿನಯಿಸಲ್ಪಟ್ಟ ಶಿವನಾಟಕವನ್ನು ನೋಡಿ ಹರ್ಷಿತರಾದ ಆಳಿದ ಮುಮ್ಮಡಿ ಕೃಷ್ಣರಾಜ ಮಹಾಪ್ರಭುಗಳು ಇವನಿಗೆ ಕರ್ಣಾಟಕಾಂಧ್ರೋಭಯಭಾಷಾಕವಿತಾವಿಶಾರದ ಎಂಬ ಪ್ರಶಸ್ತಿ ನೀಡಿದಂತೆ ತಿಳಿದುಬರುತ್ತದೆ. ಈತ ಬರೆದ ಕನ್ನಡ ಯಕ್ಷಗಾನ ಶಿವನಾಟಕ (ಪೂರ್ವಾರ್ಧ–ಉತ್ತರಾರ್ಧ), ಕನ್ನಡ ಮಾರ್ಕಂಡೇಯ ಚರಿತ್ರೆ, ಆಂಧ್ರ ಯಕ್ಷಗಾನ ಮಾರ್ಕಂಡೇಯ ಚರಿತ್ರಮು, ವೆಂಕಟೇಶ ಮಹಾತ್ಮ್ಯಮು (ಮೀನಾಕ್ಷೀ ಕಲ್ಯಾಣ), ವಿರೂಪಾಕ್ಷ ಮಹಾತ್ಮ್ಯಮು, ಮುಮ್ಮಡಿ ಕೃಷ್ಣರಾಜೇಂದ್ರ ಪ್ರಶಂಸಾ, ಅಕ್ಷರಾಂಕನ ಗದ್ಯಟೀಕೆ (ಪಾಲ್ಕುರಿಕೆ ಸೋಮನಾಥ ಕೃತಿಯ ಟೀಕೆ), ಕವಿರುದ್ರಪಶತಕಮು, ಮುರುಡಪ್ಪ ಶತಕಮು, ಮುಂತಾದ ಸುಮಾರು 13 ಗ್ರಂಥಗಳು ಉಪಲಬ್ಧವಾಗಿವೆ. (ಎಂ.ಜಿ.ಎನ್.)

**ಇಡ್ರಿಯ:** ಯುಗೋಸ್ಲಾವಿಯದ ವಾಯವ್ಯ ಮೂಲೆಯಲ್ಲಿ ಇದೇ ಹೆಸರಿನ ನದೀ ತೀರದಲ್ಲಿರುವ ಗಣಿ ಮತ್ತು ಇತರ ಕೈಗಾರಿಕೆಗಳನ್ನುಳ್ಳ ಚಿಕ್ಕ ಪಟ್ಟಣ. ಟ್ರೀಸ್ಟ್ ಪಟ್ಟಣಕ್ಕೆ ಸು. 50 ಕಿಮೀ. ದೂರದಲ್ಲಿದೆ. ಜನಸಂಖ್ಯೆ 11,990. ಇಲ್ಲಿರುವ ಪಾದರಸದ ಅದಿರಿನ ಸಿನ್ನಬಾರ್‌ನ ಗಣಿ ಜಗತ್ ಪ್ರಸಿದ್ಧವಾದವುಗಳಲ್ಲೊಂದು. ಹದಿನೈದನೆಯ ಶತಮಾನದಿಂದಲೂ ಈ ಅದಿರನ್ನು ಉತ್ಖನನ ಮಾಡುತ್ತಿದ್ದಾರೆ. ಹದಿನಾರನೆಯ ಶತಮಾನದಿಂದೀಚೆಗೆ (2000) ಉತ್ಪನ್ನವನ್ನು ಸರ್ಕಾರ ನಿಯಂತ್ರಿಸಿದೆ. ಚಾರಿತ್ರಿಕವಾಗಿ ಇಡ್ರಿಯ ಮೊದಲು ಇಟಲಿಗೆ ಸೇರಿದ್ದು ಎರಡನೆಯ ಮಹಾಯುದ್ಧಾನಂತರ ಯುಗೋಸ್ಲಾವಿಯಕ್ಕೆ ಸೇರಿದ್ದು ಈಗ ಸ್ಲೋವೇನಿಯ ರಾಜ್ಯದ ಭಾಗವಾಗಿದೆ. *

**ಇಣಚಿ: ನೋಡಿ– ಅಳಿಲು**

**ಇತಿಹಾಸ:** ಗತಕಾಲದ ಘಟನೆಗಳ ಸುವ್ಯವಸ್ಥಿತ ದಾಖಲೆಗಳ ಆಧಾರದ ಮೇಲೆ ಮಾಡಿದ ಸುಸಂಬದ್ಧ ನಿರೂಪಣೆ; ಹಿಂದಿನ ಕಾಲದ ಜನಜೀವನಕ್ಕೆ ಸಂಬಂಧಿಸಿದ ಸಂಗತಿಗಳ ಹಾಗೂ ಅವುಗಳಿಗೆ ಪ್ರೇರಕವಾದ ಶಕ್ತಿ ಪ್ರವೃತ್ತಿಗಳ ಕ್ರಮವಾದ ಹಾಗೂ ವಸ್ತುನಿಷ್ಠವಾದ ವಿವೇಚನೆ.

ಗತಕಾಲದ ಕಥೆಯೆನ್ನುವುದು ಇತಿಹಾಸವೆಂಬ ಪದದ ಸರಳ ವ್ಯಾಖ್ಯೆ. ಶೋಧನೆಯ ಫಲವಾಗಿ ತಿಳಿದುಬರುವುದೇ ಇತಿಹಾಸ. ಇದು ಈ ಪದದ ಮೂಲ ಅರ್ಥ. ಆದರೆ ಹಿಂದೆ ಏನು ಸಂಭವಿಸಿತೆಂಬುದರ ಅಥವಾ ಸಂಭವಿಸಿರಬಹುದೆಂಬುದರ ಸರಳ ನಿರೂಪಣೆಯಷ್ಟೇ ಇತಿಹಾಸವಲ್ಲ. ಹಿಂದಿನ ಘಟನೆಗಳ ಪರೀಕ್ಷಣ, ವಿಶ್ಲೇಷಣ, ವ್ಯಾಖ್ಯಾನಗಳು ಇತಿಹಾಸದ ಉದ್ದೇಶ. ಮಾನವನೇ ಇದರ ಕೇಂದ್ರ ಬಿಂದು. ಮಾನವನೇನು ಮಾಡಿದನೆಂಬುದನ್ನು ತಿಳಿಸಿ, ತನ್ಮೂಲಕ ಮಾನವನೇನಾಗಿದ್ದಾನೆಂಬುದನ್ನು ತೋರಿಸಿಕೊಡುವುದು ಇತಿಹಾಸದ ಕರ್ತವ್ಯವೆಂಬುದು ಒಬ್ಬ ವ್ಯಾಖ್ಯಾನಕಾರನ ಮತ.

ಗತಾನುಗತಿಕವಾಗಿ ಆದಿವಾಸಿಗಳು ಅನುಸರಿಸಿಕೊಂಡು ಬಂದ ಪರಂಪರೆಗಳೂ ದಂತಕತೆಗಳೂ ಇತಿಹಾಸದ ಆಕರಗಳಾಗಬಹುದೇ ವಿನಾ ಅವುಗಳೇ ಇತಿಹಾಸವಾಗುವುದಿಲ್ಲ. ಮುಂದುವರಿದ ಜನಾಂಗಗಳ ದಾಖಲೆಗಳಾದರೂ ಇತಿಹಾಸದ ವಸ್ತುಗಳೇ ಹೊರತು ಅವೇ ಇತಿಹಾಸವಲ್ಲ. ಪುರಾತನ ಈಜಿಪ್ಷಿಯನ್ನರೂ ಅಸ್ಸಿರಿಯನ್ನರೂ ಚೀನೀಯರೂ ಹೊಂದಿದ್ದ ಲಿಖಿತ ಸಾಮಗ್ರಿಯನ್ನೆಲ್ಲ ಇತಿಹಾಸದ ದೃಷ್ಟಿಯಿಂದ ಸುಸಂಬದ್ಧವೆಂದು ಹೇಳುವುದು ಸಾಧ್ಯವಿಲ್ಲ.

ಇತಿಹಾಸ ಎಂಬ ಶಬ್ದವನ್ನು ಭಾರತದ ಸಂಸ್ಕೃತ ಗ್ರಂಥಗಳಲ್ಲಿ ಒಂದು ವಿಶಿಷ್ಟಾರ್ಥದಲ್ಲಿ ಬಳಸಲಾಗಿದೆ. ಪುರಾಣ, ಇತಿಹಾಸ, ಚರಿತ್ರೆ, ಈ ಮೂರರಲ್ಲಿ ಪುರಾಣವೆಂದರೆ ಹಳೆಯದು. ಇದು ಚರಿತ್ರೆಗಿಂತಲೂ ಹಿಂದಿನದು. ಇದು ಕಂಡದ್ದಲ್ಲ, ಕೇಳಿದ್ದು. ಪ್ರಪಂಚದ ಸೃಷ್ಟಿ, ಸಮುದ್ರಮಂಥನ, ದೇವಾಸುರ ಯುದ್ಧ ಮುಂತಾದ ಕಥೆಗಳು ಪುರಾಣದ ಜಾತಿಗೆ ಸೇರಿದುವು. ಆದರೆ ಇತಿಹಾಸ ಅಷ್ಟು ಹಳೆಯದಲ್ಲ. ಇತಿ+ಹ+ಆಸ : ಹೀಗೆ ಇತ್ತಂತೆ. ಹೀಗೆ ನಡೆಯಿತಂತೆ ಎನ್ನುವುದು ಇತಿಹಾಸ. ಇದು ಹಿಂದಿನ ಚರಿತ್ರೆ. ಇತಿಹಾಸದಲ್ಲಿ ಪುರಾಣ, ಚರಿತ್ರೆ, ಕಥೆ, ಉದಾಹರಣೆ, ಧರ್ಮಶಾಸ್ತ್ರ, ಅರ್ಥಶಾಸ್ತ್ರಗಳೆಲ್ಲವೂ ಸೇರಿರುತ್ತವೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಿಸಿದೆ. ಈ ದೃಷ್ಟಿಯಲ್ಲಿ ಮಹಾಭಾರತ ಒಂದು ಇತಿಹಾಸ. ಇದು ವೀರರ ಕಥನ. ಪುರಾಣಿಕರಿಗೆ ಆಧಾರವಾದ ಸಾಮಗ್ರಿಯೆಂದಾಗಲಿ ಸಂಪ್ರದಾಯಗಳೆಂದಾಗಲಿ, ವೀರಕಥನವೆಂಬ ಅರ್ಥದಲ್ಲಿಯಾಗಲಿ ಇತಿಹಾಸವೆಂಬ ಶಬ್ದವನ್ನು ಈ ಲೇಖನದಲ್ಲಿ ಬಳಸಿಲ್ಲ. ಇತಿಹಾಸ ಚರಿತ್ರೆಗಳೆರಡೂ ಪರ್ಯಾಯ ಪದಗಳಾಗಿ ಕನ್ನಡದಲ್ಲಿ ಬಳಕೆಯಲ್ಲಿದ್ದು ಹಾಗೆಯೇ ಇದನ್ನು ಬಳಸಲಾಗಿದೆ.

ಗತಕಾಲದ ಘಟನೆಗಳ ನಿರೂಪಣೆ ಮಾತ್ರವಲ್ಲದೆ ಗತಕಾಲದ ಘಟನೆಗಳನ್ನೇ ಇತಿಹಾಸವೆನ್ನಲೂಬಹುದು. ಘಟನೆಗಳ ಶೋಧನೆ ಹಾಗೂ ನಿರೂಪಣೆಗಳಷ್ಟಕ್ಕೆ ಮಿತಿಗೊಂಡಿದ್ದ ಈ ಶಬ್ದದ ವ್ಯಾಖ್ಯೆ ಈಚೆಗೆ ವಿಸ್ತಾರವಾಗಿದೆ. ಶೋಧನೆ ನಿರೂಪಣೆಗಳಿಗೆ ವಿಷಯವಾಗಬಹುದಾದ ಘಟನೆಗಳೆಲ್ಲ ಇತಿಹಾಸವೆನಿಸಿಕೊಂಡಿವೆ. ಒಂದು ದೇಶದ ಇತಿಹಾಸದ ಮಾತು ಆಡುವಾಗ ಅದರ ನಿರೂಪಣೆಯೆನ್ನುವ ಅರ್ಥದಲ್ಲೇ ಈ ಮಾತನ್ನು ಬಳಸುವುದಿಲ್ಲ. ರಾಜರುಗಳೂ ರಾಜಕಾರಣಿಗಳೂ ಮಹಾವ್ಯಕ್ತಿಗಳೂ ಇತಿಹಾಸ ನಿರ್ಮಾಪಕರೆಂದು ಹೇಳುವುದುಂಟು. ಇವರು ನಿರ್ಮಿಸಿದ ಇತಿಹಾಸವನ್ನು ಬರೆಯುವುದಷ್ಟೆ ಇತಿಹಾಸಕಾರನ ಕೆಲಸವೆಂಬ ಭಾವನೆಯುಂಟು. ಈ ಅರ್ಥದಲ್ಲಿ ಪರಿಭಾವಿಸುವುದಾದರೆ ಇತಿಹಾಸವೆಂದರೆ ಘಟನೆಗಳ ನಿರೂಪಣೆಯಿಲ್ಲ. ಈ ನಿರೂಪಣೆಗೆ ಒಳಪಡುವ ವಸ್ತು. ಇನ್ನೂ ವಿಶಾಲವಾದ ದೃಷ್ಟಿಯಿಂದ ಅವಲೋಕಿಸುವುದಾದರೆ ಮಾನವ ಜೀವನಕ್ಕೆ ಸಂಬಂಧಿಸಿದ ಘಟನೆಗಳು ಮಾತ್ರವಲ್ಲದೆ ಭೌತಜಗತ್ತಿನ ಸಮಸ್ತವೂ ಇತಿಹಾಸದ ವ್ಯಾಪ್ತಿಗೊಳಪಟ್ಟಿವೆ. ಬದಲಾವಣೆಗೊಳ್ಳುವುದೆಲ್ಲವೂ ಇತಿಹಾಸದ ವಸ್ತು. ಬದಲಾವಣೆ ಹೊಂದದ್ದು ಈ ಜಗತ್ತಿನಲ್ಲಿ ಯಾವುದೂ ಇಲ್ಲವೆಂಬುದು ವಿಜ್ಞಾನಸಿದ್ಧ ಸತ್ಯವಾದ್ದರಿಂದ ಈ ವಿಶ್ವದಲ್ಲಿರುವ ಪ್ರತಿಯೊಂದಕ್ಕೂ ಒಂದು ಇತಿಹಾಸವಿದ್ದೇ ಇದೆ. ಈ ದೃಷ್ಟಿಯಿಂದ ಎಲ್ಲ ವಿಜ್ಞಾನಗಳೂ ಇತಿಹಾಸದ ಅಂಗಗಳೇ.

ಇತಿಹಾಸ ದೃಷ್ಟಿಯೆಂದರೆ ಬದಲಾವಣೆಯನ್ನು ಗುರುತಿಸುವ ದೃಷ್ಟಿ. ಈ ದೃಷ್ಟಿಯಲ್ಲಿ ಇಂದಿನವರಿಗೂ ಹಿಂದಿನವರಿಗೂ ಬಹಳ ವ್ಯತ್ಯಾಸವಿದೆ. ಮಾನವನ ಸಮಾಜ ವ್ಯವಸ್ಥೆಯೇ ಅಸ್ಥಿರವಾದದ್ದರಿಂದ ಇದನ್ನು ಹೆಚ್ಚು ಹೆಚ್ಚಾಗಿ ಪರಿವರ್ತಿಸುವುದು ಸಾಧ್ಯವೆಂಬುದೂ ಇಂದು ಅರಿವಾಗಿದೆ. ಈ ಇತಿಹಾಸ ದೃಷ್ಟಿಯೇ ಎಲ್ಲ ಜ್ಞಾನಗಳ ಬೆಳವಣಿಗೆಯ ಮೂಲ. ಮಾನವನ ಜ್ಞಾನರಾಶಿ ಬೆಳೆದಷ್ಟೂ ವಿಜ್ಞಾನಿಯ ಕುತೂಹಲ ಬೆಳೆಯುತ್ತಲೇ ಇರುವುದೂ ಹಿಂದೆ ಕಿರಿದಾಗಿದ್ದ ಜ್ಞಾನಕ್ಷೇತ್ರಗಳ ಎಲ್ಲೆಗಳೆಲ್ಲ ವಿಸ್ತರಿಸುತ್ತಿರುವುದೂ ಈ ದೃಷ್ಟಿಯ ಫಲ. ಈ ದೃಷ್ಟಿಯಿಂದ ವೀಕ್ಷಿಸುವುದಾದರೆ ಈ ವಿಶ್ವಕೋಶವೇ ಒಂದು ಇತಿಹಾಸ. ವ್ಯತ್ಯಾಸಗೊಳ್ಳುತ್ತಿರುವ ವಿಶ್ವವ್ಯವಸ್ಥೆಯ ನಿರೀಕ್ಷಣ ಹಾಗೂ ನಿರೂಪಣವೆಂಬ ಖಚಿತ ಅರ್ಥದಲ್ಲಿ ಇತಿಹಾಸವೆಂಬ ಪದವನ್ನು ಇಲ್ಲಿ ಬಳಸಲಾಗಿದೆ. ಇತಿಹಾಸದ ದರ್ಶನ, ಲೇಖನ, ಮತ್ತು ಸಾಹಿತ್ಯಗಳನ್ನು ಆಯಾ ಲೇಖನದಲ್ಲಿ ವಿವರಿಸಲಾಗಿದೆ. *

**ಇತಿಹಾಸ ದರ್ಶನ:** ಇತಿಹಾಸ ದರ್ಶನವೆಂಬ ಮಾತನ್ನು 18ನೆಯ ಶತಮಾನದಲ್ಲಿ ಫ್ರೆಂಚ್ ಲೇಖಕನಾದ ವಾಲ್ಟೇರ್ ಬಳಕೆಗೆ ತಂದ. ವಿಮರ್ಶಾತ್ಮಕವಾದ ಇತಿಹಾಸ ವಿವರಣೆಯೇ ಇತಿಹಾಸ ದರ್ಶನ ಎಂಬುದಾಗಿ ಆತ ಭಾವಿಸಿದ್ದ. ಬರೀ ಘಟನೆಗಳ ವಿವರಣೆಯೇ ಇತಿಹಾಸವಾಗಲಾರದು. ಇತಿಹಾಸದ ಘಟನೆಗಳನ್ನು ವಿಮರ್ಶಾತ್ಮಕವಾಗಿ ತುಲನೆ ಮಾಡುವ, ಕಾರಣಗಳನ್ನು ಗುರುತಿಸುವ ದೃಷ್ಟಿಯೇ ಇತಿಹಾಸ ದರ್ಶನ ಎಂಬುದಾಗಿ ವಾಲ್ಟೇರ್ ಹೇಳಿದ. ಬಹಳ ಕಾಲದವರೆಗೆ ಇತಿಹಾಸಕಾರರು ಘಟನೆಗಳನ್ನು ವಿವರಿಸುವುದರಲ್ಲೇ ತೃಪ್ತರಾಗಿ, ಅವುಗಳಿಗೆ ಕಾರಣಗಳನ್ನು ಹುಡುಕುವುದರಲ್ಲಿ ನಿರಾಸಕ್ತರಾಗಿದ್ದರು. ಹೆಗೆಲನ ಪ್ರಕಾರ ಪ್ರಪಂಚದ ಅಥವಾ ಸಮಗ್ರ ಮಾನವಕುಲದ ಇತಿಹಾಸವೇ ಇತಿಹಾಸ ದರ್ಶನ. 19ನೆಯ ಶತಮಾನದ ದೃಷ್ಟ ಪ್ರಮಾಣವಾದಿಗಳು (ಪಾಸಿಟಿವಿಸ್ಟ್) ಇದಕ್ಕೆ ಬೇರೊಂದು ಅರ್ಥ ಕೊಟ್ಟರು. ಅವರ ಪ್ರಕಾರ ಘಟನೆಗಳ ಹಿಂದೆ ತೋರುವ ನಿಯಮಗಳನ್ನು ಕಂಡುಹಿಡಿಯುವುದೇ ಇತಿಹಾಸ ದರ್ಶನ. ದೃಷ್ಟ ಪ್ರಮಾಣವಾದಿಗಳಿಗೆ ಇತಿಹಾಸ ಎಂಬುದು ಒಂದು ಸ್ವಯಂದರ್ಶನಶಾಸ್ತ್ರವಾಗಿ, ಅವರು ಸಮಗ್ರ ಇತಿಹಾಸದಲ್ಲಿ ಸಾಮಾನ್ಯವಾದ ನಿಯಮಗಳನ್ನು ಗುರುತಿಸುವುದರಲ್ಲಿ ನಿರತರಾದರು. ಇಂಥ ಇತಿಹಾಸದ ಅಭ್ಯಾಸವನ್ನು ಸಾಮಾಜಿಕ ಭೌತಶಾಸ್ತ್ರವೆಂದು ಕರೆದರು. 19ನೆಯ ಶತಮಾನದ ರಮ್ಯತಾವಾದಿಗಳು (ರೊಮಾಂಟಿಸಿಸ್ಟ್) ಇತಿಹಾಸದಲ್ಲಿ ವ್ಯಕ್ತಿಗಳ ಪ್ರಭಾವವೇ ಮುಖ್ಯವೆಂಬ ಅಂಶವನ್ನು ಒತ್ತಿ ಹೇಳಿದರು. ಕಾರ್ಲೈಲ್ ಪ್ರತಿಪಾದಿಸಿದ ಮಹಾಪುರುಷ ಸಿದ್ಧಾಂತದ ಪ್ರಕಾರ ಪ್ರಸಿದ್ಧ ವ್ಯಕ್ತಿಗಳು ಇತಿಹಾಸದ ವಿವರಣೆಯಲ್ಲಿ ಕೇಂದ್ರಪ್ರಾಯರು. ಇದೇ ಇತಿಹಾಸ ದರ್ಶನವೆಂದು ಪ್ರಣೀತವಾಯಿತು. ಆದರೆ ಈ ಸಿದ್ಧಾಂತದಿಂದ ಇತಿಹಾಸವನ್ನು ಸಮಗ್ರವಾಗಿ ವಿವರಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಗತಕಾಲದ ಘಟನೆಗಳು ಒಂದು ಸಮಗ್ರ ಜನತೆಯ ಪ್ರಭಾವದಿಂದ ಉತ್ಪನ್ನವಾದ ಕಾರಣ, ಒಬ್ಬ ವ್ಯಕ್ತಿಯನ್ನು ಕೇಂದ್ರವನ್ನಾಗಿ ಮಾಡುವುದು ಅಷ್ಟಾಗಿ ಸರಿಯಾಗಲಾರದು. ಅದೇ ರೀತಿ, ಆದರ್ಶಗಳೂ ಭಾವನೆಗಳೂ ಇತಿಹಾಸದ ಘಟನೆಗಳಿಗೆ ಕಾರಣವೆಂಬ ಹೆಗೆಲನ ವಾದವೂ ಸಹಜತೆಗೆ ದೂರವಾದದ್ದು. ಏಕೆಂದರೆ ಆದರ್ಶಗಳು ಸಾಧಿಸಬೇಕಾದ ಗುರಿಯನ್ನು ಸೂಚಿಸುತ್ತವೆ ಮಾತ್ರ. ಮಾನವ ಈ ಬಗ್ಗೆ ಅಷ್ಟಾಗಿ ಚಿಂತಿಸಿ, ವಿವೇಚಿಸಿ ಮುಂದುವರಿದಿದ್ದಾನೆ ಎಂದು ಹೇಳಲಾಗದು. ಮತೀಯ ಭಾವನೆಗಳು ಮಾನವನ ಉನ್ನತಿಯನ್ನು ಸೂಚಿಸುವ ಹೆಗ್ಗುರುತುಗಳಾಗಿವೆ ಮತ್ತು ಒಂದೊಂದು ಮತದ ಆದರ್ಶಗಳೇ ಆಯಾ ಗುಂಪಿನ ಇತಿಹಾಸವನ್ನು ವಿವರಿಸುವುದರಲ್ಲಿ ಸಹಾಯಕವಾಗುತ್ತವೆ ಎಂದು ಹೆಗೆಲ್ ವಾದಿಸಿದ. ಉದಾಹರಣೆಗೆ, ಚೀನಿಯರ ಇತಿಹಾಸ ಕನ್‌ಫ್ಯೂಷಿಯಸ್ಸನ ಆದರ್ಶಗಳ ಪ್ರಭಾವಗಳಿಂದ ಉಂಟಾಯಿತು; ಪ್ರೇಮ, ಅನುಕಂಪಗಳುಳ್ಳ ಬೌದ್ಧಮತ, ಪರಮತ ಸಹಿಷ್ಣುತೆ ಮತ್ತು ಉದಾರತ್ವಗಳನ್ನು ಕೇಂದ್ರವಾಗಿ ಉಳ್ಳ ಹಿಂದೂಮತ, ನ್ಯಾಯ ಮತ್ತು ಸಮಾನತೆಗಳನ್ನು ಆದರ್ಶಗಳಾಗಿ ಉಳ್ಳ ಇಸ್ಲಾಂ ಧರ್ಮ–ಇವುಗಳ ಆದರ್ಶಗಳು ಆಯಾ ಪಂಗಡದವರ ಇತಿಹಾಸವನ್ನು ರೂಪಿಸುವ ಶಕ್ತಿಗಳಾದವು ಎಂದು ಹೆಗೆಲ್ ಅಭಿಪ್ರಾಯಪಟ್ಟ. ಎಲ್ಲಿಯವರೆಗೆ ಈ ಮತೀಯ ಆದರ್ಶಗಳು ಸದ್ಭಾವನೆಗಳನ್ನು ಬೆಳೆಸುವುದಕ್ಕೂ ಮಾನವನ ಪ್ರಗತಿಯನ್ನು ಬೆಳೆಸುವುದಕ್ಕೂ ಸಹಕಾರಿಯಾಗಿದ್ದುವೋ ಅಲ್ಲಿಯವರೆಗೆ ಅವುಗಳ ಪಾತ್ರ ಹಿರಿದಾಗಿದ್ದುದೇನೋ ಸರಿ. ಆದರೆ ಎಂದು ಅಂಥ ಆದರ್ಶಗಳಿಂದ ಮಾನವ ದೂರನಾದನೋ ಅಂದಿನಿಂದ ಅವುಗಳ ಪ್ರಭಾವ ಇತಿಹಾಸದ ಘಟನೆಗಳ ಮೇಲೆ ಅಷ್ಟಾಗಿ ಆಗಲಿಲ್ಲವೆನ್ನಬಹುದು. ಹೆಗೆಲನ ಅನುಯಾಯಿಯಾದ ರಾಂಕನು ಪರಮಾತ್ಮನನ್ನೇ ಇತಿಹಾಸ ಘಟನಾವಳಿಗಳ ಸೂತ್ರಧಾರನೆಂದು ನಂಬಿದ್ದ. ಇತಿಹಾಸದ ಘಟನೆಗಳಿಗೆ ಕಾರಣಗಳಾದ ಭಾವನೆಗಳು ಆ ಪರಮಾತ್ಮನಿಂದ ನಿರ್ದೇಶಿಸಲ್ಪಟ್ಟವೆಂಬುದು ರಾಂಕನ

ಮತವಾಗಿತ್ತು. ಒಟ್ಟಿನಲ್ಲಿ ಹೆಗೆಲ್ ಮತ್ತು ರಾಂಕ ಆಧ್ಯಾತ್ಮಿಕ ಭಾವನೆಗಳಿಗೆ ಪ್ರಾಮುಖ್ಯ ಕೊಟ್ಟರು. ಥಾಮಸ್ ಬಕಲ್ ಮತ್ತು ಕಾರ್ಲ್‌ಮಾರ್ಕ್ಸ್ ಇದಕ್ಕೆ ವಿರುದ್ಧವಾಗಿ ಭೌತಿಕ ಅಂಶಗಳು ಇತಿಹಾಸ ಘಟನೆಗಳ ಮೇಲೆ ಬೀರುವ ಪ್ರಭಾವವನ್ನು ಒತ್ತಿ ಹೇಳಿದರು. ಭೌತ ಪ್ರಪಂಚದ ಪ್ರಭಾವ, ಒಂದು ದೇಶದ ವಾಯುಗುಣ, ಭೂಗುಣ, ಅಲ್ಲಿಯ ಆಹಾರಪದ್ಧತಿ, ವಸತಿ ಮತ್ತು ಉಡುಪುಗಳು ಅಲ್ಲಿಯ ಸಮಾಜದ ಮೇಲೆ ಬೀರುವ ಪ್ರಭಾವವನ್ನು ಮೊತ್ತಮೊದಲ ಬಾರಿಗೆ ತೋರಿಸಿಕೊಟ್ಟವ ಥಾಮಸ್ ಬಕಲ್. ಕಾರ್ಲ್‌ಮಾರ್ಕ್ಸ ಇನ್ನೂ ಮುಂದೆ ಹೋದ. ಆತ ಸಮಗ್ರ ಇತಿಹಾಸವನ್ನು ಭೌತಿಕತತ್ತ್ವಗಳ ಮೂಲಕ ವಿಮರ್ಶಿಸಿದ. ಸಮಾಜದಲ್ಲಿ ಶ್ರೀಮಂತರಿಗೂ ಬಡವರಿಗೂ ಮಧ್ಯೆ ಸತತವಾದ ವರ್ಗಕಲಹ ನಡೆಯುತ್ತಿದೆಯೆಂಬುದು ಆತನ ಮೊದಲನೆಯ ಸೂತ್ರ. ಭೌತ ಪ್ರಪಂಚವನ್ನು ಗೆಲ್ಲಲು ಮಾನವ ನಡೆಸುತ್ತಿರುವ ಹೋರಾಟವೇ ನಿಜವಾದ ಇತಿಹಾಸ ದರ್ಶನವೆಂಬುದು ಎರಡನೆಯದು. ಮೂರನೆಯದಾಗಿ, ಮೌಲ್ಯವೆಂದರೆ ಶ್ರಮವಲ್ಲದೆ ಮತ್ತೇನೂ ಅಲ್ಲ. ಕೊನೆಯದಾಗಿ, ಈಗಿನ ಸರ್ಕಾರರಚನೆಯನ್ನು ಉರುಳಿಸಿ, ಸಮತಾವಾದದ ಆದರ್ಶಗಳೇ ಪ್ರಮುಖವಾಗಿ ಉಳ್ಳ ಸಮಾಜ ರಚಿಸುವ ದಿಶೆಯಲ್ಲಿ ಮಾನವ ಸಾಗುತ್ತಿದ್ದಾನೆ. ಒಟ್ಟಿನಲ್ಲಿ ಸಮಾಜವಿಕಾಸದಲ್ಲಿ ಆರ್ಥಿಕ ಅಂಶಗಳ ಪ್ರಭಾವವನ್ನು ಗುರುತಿಸಲು ಮಾರ್ಕ್ಸ್ ಪ್ರಯತ್ನಿಸಿದ್ದಾನೆ. ಮಾನವನ ಇರವೆಲ್ಲ ಬರೀ ಐಹಿಕವಸ್ತು ಸಂಗ್ರಹವನ್ನೇ ಅವಲಂಬಿಸಿದೆಯೆಂಬುದೇ ಈ ವಾದದ ಅತಿಶಯೋಕ್ತಿಯೆನ್ನಬಹುದು.

ಈ ತತ್ತ್ವಜ್ಞಾನಿಗಳು ತಮ್ಮ ತಮ್ಮ ಭಾವನೆಗಳ ಮೂಲಕ, ದರ್ಶನಗಳ ಮೂಲಕ ಇತಿಹಾಸ ಘಟನಾವಳಿಗಳನ್ನು ಅಭ್ಯಾಸ ನಡೆಸುವುದರಲ್ಲಿ ನಿರತರಾಗಿ, ಅಂಥ ಘಟನೆಗಳಿಗೆ ಇದ್ದಿರಬಹುದಾದ ಕಾರಣಗಳನ್ನೂ ಪ್ರೇರಕಶಕ್ತಿಗಳನ್ನೂ ಹೊರತೆಗೆಯಲು ಪ್ರಯತ್ನಿಸಿದರು. ಇಂಥ ಜ್ಞಾನಿಗಳು ಹುಟ್ಟುವುದಕ್ಕೆ ಬಹಳ ಮುಂಚೆ ಗ್ರೀಕರು ಇತಿಹಾಸವನ್ನು ವಿಮರ್ಶಾತ್ಮಕವಾಗಿ ಅಭ್ಯಾಸ ಮಾಡುವ ಪ್ರಯತ್ನದ ಬಗ್ಗೆ ನಂಬಿಕೆ ಇರಿಸಿಕೊಂಡಿದ್ದ, ನ್ಯಾಯವೇ ಉಪಯುಕ್ತತೆಗಿಂತ ಉತ್ತಮ; ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾದ ಮೇಲೆ ಒಳ್ಳೆಯದಾಗುವುದು ಖಂಡಿತ; ಭಗವಂತ ಸತ್ಯವನ್ನು ಕಾಪಾಡುತ್ತಾನೆ; ಕೀರ್ತಿಯ ವ್ಯಾಮೋಹ ಅನೇಕ ವೇಳೆ ನಾಶಕ್ಕೆ ಕಾರಣವಾಗುತ್ತದೆ; ರಾಜಕೀಯ ಅನ್ಯಾಯ ಹಿಂಸೆಗಿಂತ ಕ್ರೂರವಾದದ್ದು; ಗುಪ್ತಮಾರ್ಗದಿಂದ ದ್ವೇಷ ಸಾಧಿಸಲು ಹೋದರೆ ಅದು ಫಲಿಸುವುದಿಲ್ಲ–ಇವೇ ಮುಂತಾದ ಪಾಂಡಿತ್ಯಪೂರ್ಣ ಅಭಿಪ್ರಾಯಗಳನ್ನು ಇತಿಹಾಸಾಭ್ಯಾಸದಿಂದ ಥ್ಯೂಸಿಡಿಡಿಸ್ ಸೂಚಿಸಿದ. ಕ್ರೈಸ್ತಮತೀಯ ಇತಿಹಾಸಕಾರನಾದ ಅಗಸ್ಟೈನ್ (354–430) ಇತಿಹಾಸವನ್ನು ರೂಪಿಸುವ ಶಕ್ತಿ ಮಾನವನ ಕೈಯಲ್ಲಿ ಇಲ್ಲವೆಂದೂ ಭಗವಂತನೇ ಸೂತ್ರಧಾರಿಯಾಗಿ ಮಾನವರನ್ನು ತನ್ನ ಕೈಗೊಂಬೆಗಳಂತೆ ಆಡಿಸುತ್ತಾನೆಂದೂ ಮತ್ತು ಆ ಪರಮಾತ್ಮ ರೂಪಿಸುವ ಮಾರ್ಗಗಳು ಆಶ್ಚರ್ಯದಾಯಕವಾಗಿಯೂ ಶಕ್ತಿಯುತವಾಗಿಯೂ ಇರುವುದೆಂದೂ ಅಭಿಪ್ರಾಯಪಟ್ಟ. ಪರಮಾತ್ಮನ ಪಟ್ಟಣವೆಂಬ ಭಾವನೆಯನ್ನು ಈತ ನಮಗೆ ತೋರಿಸಿಕೊಟ್ಟಿದಲ್ಲದೆ, ಮಾನವನ ಕಾರ್ಯಗಳನ್ನು ಲಘುವಾಗಿ ನೋಡುವುದಾಗಲಿ, ದುಃಖಿಸುವುದಾಗಲಿ ಸರಿಯಾದ ಮಾರ್ಗವಲ್ಲವೆಂದೂ ಅವುಗಳನ್ನು ಅರಿತುಕೊಳ್ಳುವುದೇ ಮುಖ್ಯವೆಂದೂ ನಂಬಿದ್ದ. ಪರಮಾತ್ಮ ಮಾನವನನ್ನು ಆಳುತ್ತಾನೆ; ಸರ್ಕಾರ ಮಾನವರಚಿತವಾದ್ದರಿಂದ ಪರಿಪೂರ್ಣವಾಗಿಲ್ಲ; ಅದರಿಂದ ಕೆಡುಕೇ ಹೆಚ್ಚು. ಆದರೆ ಪರಮಾತ್ಮನ ಪಟ್ಟಣ ಕ್ರೈಸ್ತಮತದ ಸಾಮ್ರಾಜ್ಯ ಮತ್ತು ಅದು ಭೂಮಿಯ ಮೇಲೆ ದೈವೀರಾಜ್ಯದ ಪ್ರತಿಬಿಂಬ–ಎಂಬುದು ಆತನ ಅಭಿಪ್ರಾಯ.

ಆದ್ದರಿಂದ ಇತಿಹಾಸದರ್ಶನವೆಂದರೆ ಮಾನವನ ಗತಕಾಲದ ಚಟುವಟಿಕೆಗಳನ್ನು ಸಮಗ್ರವಾಗಿ ನೋಡಿ ಅವುಗಳನ್ನು ಸಕಾರಣವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನವೇ ಆಗಿದೆ. ಕಾರ್ಯ–ಕಾರಣಗಳನ್ನು ಹೊಂದಿಸುವುದು ಇತಿಹಾಸದಲ್ಲಿ ಅತ್ಯಂತ ಕಠಿಣದ ಕೆಲಸವೇ ಸರಿ. ಇಂಥ ದರ್ಶನ ಲಭ್ಯವಾಗಬೇಕಾದರೆ ಇತಿಹಾಸವನ್ನು ಅಭ್ಯಾಸ ಮಾಡುವವನಿಗೆ ವೈಜ್ಞಾನಿಕ ದೃಷ್ಟಿ ಅತ್ಯಗತ್ಯ. ಇತಿಹಾಸದಲ್ಲಿ ಕಾರಣತ್ವ ಮೂರು ಅಂಶಗಳನ್ನೊಳಗೊಂಡಿದೆ. 1 ಆಕಸ್ಮಿಕ, 2 ದಾಖಲೆಯ ಆವಶ್ಯಕತೆ. 3. ತರ್ಕ. ಆಕಸ್ಮಿಕವಾಗಿ ಸಂಭವಿಸುವ ಘಟನೆಗಳನ್ನು ಮನುಷ್ಯನ ದೃಷ್ಟಿಕೋನದಿಂದ ಮೊದಲೇ ಊಹಿಸುವುದು ಸಾಧ್ಯವಿಲ್ಲ. ಇವು ವ್ಯಕ್ತಿಯ ಸಹಜವಲ್ಲದ ನಡೆವಳಿಕೆಗಳಿಂದ ಸಂಭವಿಸಿ ಇತಿಹಾಸದ ಮೇಲೆ ಪ್ರಭಾವ ಬೀರಬಹುದು. ಇಂಥವುಗಳನ್ನು ಯಾವ ತತ್ತ್ವದ ಆಧಾರದ ಮೇಲೂ ಟೀಕಿಸಲು ಕಷ್ಟವಾದೀತು. ಆದಾಗ್ಯೂ ಆಕಸ್ಮಿಕಗಳು ಇತಿಹಾಸದಲ್ಲಿ ಪ್ರಮುಖಪಾತ್ರ ವಹಿಸುತ್ತವೆ ಎಂಬ ಅಂಶವನ್ನು ಒಪ್ಪಿಕೊಳ್ಳಲೇಬೇಕು. ಉದಾಹರಣೆಗೆ, ಇಂಗ್ಲೆಂಡಿನ ರಾಣಿ ಮೊದಲನೆಯ ಎಲಿಜ಼ಬೆತ್ ಲಂಡನ್ನಿನ ಕೆಲವೇ ವ್ಯಾಪಾರಿಗಳಿಗೆ ಈಸ್ಟ್ ಇಂಡಿಯ ಕಂಪನಿ ಸ್ಥಾಪಿಸಿ ವ್ಯಾಪಾರ ಮಾಡಲು ಅನುಮತಿ ಕೊಟ್ಟದ್ದು ಕಾಲಕ್ರಮೇಣ ಆ ಕಂಪನಿ ಒಂದು ದೊಡ್ಡ ಸಾಮ್ರಾಜ್ಯವನ್ನೇ ಸ್ಥಾಪಿಸಲು ಸಹಾಯವಾಯಿತೆಂಬ ಅಂಶವನ್ನು ಇತಿಹಾಸದ ಇಂಥ ಆಕಸ್ಮಿಕಗಳಲ್ಲಿ ಒಂದಾಗಿ ಸೇರಿಸಬಹುದು. ಕಾರ್ಯಕಾರಣಗಳ ಮೇಲೆ ಆಕಸ್ಮಿಕಗಳಿಂದ ಉಂಟಾಗುವ ಪ್ರಭಾವವನ್ನು ಟೀಕಿಸಲು ಕೆಲವು ತತ್ತ್ವಜ್ಞಾನಿಗಳು ವೇದಾಂತದ ಮೊರೆಹೊಕ್ಕರು. ಅವರ ಪ್ರಕಾರ ಘಟನೆಗಳನ್ನು ರೂಪಿಸುವ ದಿಶೆಯಲ್ಲಿ ಮಾನವನ ಕೈವಾಡವೇನೂ ಇಲ್ಲ; ಎಲ್ಲ ಘಟನೆಗಳು ಮತ್ತು ಅವುಗಳ ಉತ್ಪತ್ತಿ ಭಗವಂತ ಪ್ರೇರಣೆಯಿಂದಾದ್ದು ಎಂಬ ಅಭಿಪ್ರಾಯವೇ ಆಗಿ ಇದೇ ಕ್ರೈಸ್ತಮತಾಧಿಪತಿಗಳು ನಂಬಿದ್ದ, ಆಗಸ್ಟೀನ್ ಪ್ರತಿಪಾದಿಸಿದ ಇತಿಹಾಸದರ್ಶನವಾಗಿದೆ. ಇತಿಹಾಸವನ್ನು ನೋಡುವ ಈ ದೃಷ್ಟಿಕೋನದಲ್ಲಿ ಭಗವಂತನ ಪ್ರೇರಣೆಯೇ ಪ್ರಮುಖವಾಗಿ ಮತೀಯ ನಂಬಿಕೆಗಳೇ ಆಧಾರವಾದುವು. ಅದೃಷ್ಟವಾದವೂ (ಫೇಟಲಿಸಂ) ಇಂಥ ಭಾವನೆಗಳಿಂದ ಬೆಳೆಯಿತು. ಅದೃಷ್ಟವಾದದ ಪ್ರಕಾರ ಮಾನವ ದೈವಶಕ್ತಿಗೆ ತಲೆಬಾಗಿ, ತನ್ನ ಪಾಲಿಗೆ ಬಂದ ಬಡತನವೊ, ಸಿರಿತನವೊ, ಜ್ಞಾನವೊ, ಅಜ್ಞಾನವೊ, ಆರೋಗ್ಯವೊ, ಅನಾರೋಗ್ಯವೊ, ದೈವದತ್ತವಾದದ್ದೆಂದು ನಂಬಿ, ಅವುಗಳು ತನ್ನ ಕಾರ್ಯಗಳಿಂದಾಗಿಲ್ಲವೆಂದು ತಿಳಿದು ಜೀವಿಸಬೇಕೆಂಬುದೇ ಆಗಿದೆ. ಇತಿಹಾಸದ ಘಟನೆಗಳ ಹಿಂದೆ ಯಾವುದೋ ಶಕ್ತಿಯ ಕೈವಾಡವಿದೆ ಎಂದು ಟೋಕವಿಲ್ ಹೇಳುತ್ತಾನೆ. ಪ್ರಜಾಪ್ರಭುತ್ವದ ವಿಕಾಸ ಪರಮಾತ್ಮನ ಇಚ್ಛೆಯಿಂದಾದದ್ದು ಎಂದು ಅಭಿಪ್ರಾಯ ಪಡುತ್ತಾನೆ. ಆದರೆ ಪ್ರೂಧಾನಂಥ ತತ್ತ್ವಜ್ಞಾನಿಗಳು ಈ ರೀತಿಯ ವಾದ ಮನುಷ್ಯರಲ್ಲಿರುವ ಕ್ರಿಯಾತ್ಮಕ ಶಕ್ತಿಯನ್ನು ಅಲ್ಲಗಳೆಯುತ್ತದೆಂದು ಭಾವಿಸುತ್ತಾರೆ. ವಿಜ್ಞಾನದ ಪ್ರಗತಿ ಸಮಾಜ ವಿಕಾಸ ಇವೆಲ್ಲ ದೇವರಿಲ್ಲದೆ ನಡೆಯುತ್ತದೆ; ಮನುಷ್ಯನಲ್ಲಿ ಅಡಗಿರುವ ಸುಪ್ತಶಕ್ತಿಯಿಂದ ಅವನು ಸೃಷ್ಟಿಯ ಯಜಮಾನನಾಗಲು ಸಾಧ್ಯ ಮತ್ತು ಇದರಿಂದ ದೇವರ ಸರಿಸಮಾನ ಅಂತಸ್ತಿಗೇರಲು ಸಾಧ್ಯ ಎಂಬುದಾಗಿ ಪ್ರೂಧಾ ಭಾವಿಸುತ್ತಾನೆ (**ನೋಡಿ – ಪ್ರೂಧಾ**).

ಎರಡನೆಯ ಹೇಳಿಕೆ ಆವಶ್ಯಕತೆ ಮತ್ತು ಅದರ ಪಾತ್ರಕ್ಕೆ ಸಂಬಂಧಿಸಿದ್ದೇ ಆಗಿದೆ. ಇದೂ ವಿಜ್ಞಾನದ ಕ್ಷೇತ್ರಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಸಂಘಸಂಸ್ಥೆಗಳಿಗೆ ಸಂಬಂಧಪಟ್ಟ ಈ ಅಂಶಗಳು ಮನುಷ್ಯ ಸಮಾಜವನ್ನು ರೂಪಿಸಿಕೊಳ್ಳುವುದಕ್ಕೆ ಸಹಾಯಕವಾಗಿವೆ. ಆವಶ್ಯಕತೆಗಳೆಂದರೆ ಅನೇಕ ವಸ್ತುಗಳ ನಡುವೆ ಇರುವ ಪರಸ್ಪರ ಸಂಬಂಧ. ಇವು ಪ್ರಕೃತಿದತ್ತವಾಗಿ ಬಂದವು. ಸಂಘ ಸಂಸ್ಥೆಗಳು ಇತಿಹಾಸದಲ್ಲಿ ಬಹು ಮುಖ್ಯ. ಅವು ಸಾಮಾಜಿಕ ಸಂಬಂಧಗಳನ್ನು ನಿಯಮಬದ್ಧವಾಗಿ ಅಭ್ಯಾಸ ಮಾಡಲು ಸಹಾಯ ಮಾಡುತ್ತವೆ. ಈ ವಿಷಯಗಳನ್ನು ತಳಹದಿಯನ್ನಾಗಿಟ್ಟುಕೊಂಡು ಫ್ರೆಂಚ್ ತತ್ತ್ವಜ್ಞಾನಿ ಆಗಸ್ಟ ಕಾಂಟ್ ಒಂದು ಇತಿಹಾಸದ ದರ್ಶನವನ್ನು ನಮ್ಮ ಮುಂದೆ ಇಟ್ಟಿದ್ದಾನೆ. ಅಂಥ ದರ್ಶನವನ್ನು ದೃಷ್ಟಪ್ರಮಾಣವಾದ (ಪಾಸಿಟಿವಿಸಮ್) ಎಂದು ಕರೆಯುತ್ತಾರೆ. ಕಾಂಟ್ ಇತಿಹಾಸವನ್ನು ಸಾಮಾಜಿಕ ಭೌತಶಾಸ್ತ್ರ (ಸೋಷಿಯಲ್ ಫಿಸಿಕ್ಸ್) ಎಂದು ಕರೆಯುತ್ತಾನೆ. ಘಟನೆಗಳು ಒಂದು ಕ್ರಮಬದ್ಧವಾದ, ಬೌದ್ಧಿಕವಾದ ರಚನೆಗೆ ಒಳಪಟ್ಟಿರುವುದರಿಂದ ಮಾನವನ ಆಲೋಚನೆಗಳನ್ನು ಗುರುತಿಸಲು ಸಾಧ್ಯ. ಈ ರೀತಿಯಾಗಿ ಮಾಡಿದಲ್ಲಿ ನಮಗೆ ಒಂದು ದೇಶದ ವಿವಿಧ ಕಾಲಗಳಲ್ಲಿದ್ದ ಆಲೋಚನಾ ಪರಂಪರೆಯ ಪಥವೇ ಸಿಕ್ಕಂತಾಗುತ್ತದೆ. ಬೀಜಗಣಿತದ ಸೂತ್ರದಿಂದ ಒಂದು ವಕ್ರರೇಖೆಯನ್ನು ಗುರುತಿಸುವಂತೆ, ಮಾನವನ ಇತಿಹಾಸದ ಹಿಂದೆ ಅಡಕವಾಗಿರುವ ನಿಯಮಗಳನ್ನು ಅವು ಹೇಗೆ ಅವನ ಕಾರ್ಯಚಟುವಟಿಕೆಗಳ ಮೇಲೆ ಪ್ರಭಾವ ಬೀರಬಲ್ಲವೆಂಬ ಅಂಶವನ್ನು ಪತ್ತೆಹಚ್ಚಬಹುದು ಎಂದು ದೃಷ್ಟಪ್ರಮಾಣವಾದಿಗಳು ಅಭಿಪ್ರಾಯಪಟ್ಟರು. ಒಂದೊಂದೇ ಘಟನೆಗಳನ್ನು ಅಭ್ಯಾಸಮಾಡದೆ, ಒಟ್ಟು ಸಾಮಾನ್ಯವಾದ ಸರಾಸರಿ ಗುಣಾವಗುಣಗಳನ್ನು ತೆಗೆದುಕೊಂಡು, ಒಟ್ಟು ಸಮಾಜ ಮತ್ತು ಆಯಾ ಕಾಲದ ಪರಿಸ್ಥಿತಿಯನ್ನೇ ಪ್ರಧಾನವಾಗಿಟ್ಟುಕೊಂಡು ಅಭ್ಯಾಸ ಮಾಡಿದಲ್ಲಿ ನಾವು ಘಟನೆಗಳ ಹಿಂದಿರುವ ಸಾಮಾನ್ಯ ನಿಯಮಗಳನ್ನು ಗುರುತಿಸಲು ಸಾಧ್ಯ ಎಂಬುದಾಗಿ ದೃಷ್ಟಪ್ರಮಾಣವಾದಿಗಳು ಅಭಿಪ್ರಾಯಪಟ್ಟರು. ಇತಿಹಾಸವನ್ನು ವಿಜ್ಞಾನದ ಮಟ್ಟಕ್ಕೆ ತೆಗೆದುಕೊಂಡುಹೋಗುವ ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಏಕೆಂದರೆ ವಿಜ್ಞಾನದ ಮುಖ್ಯ ವೈಶಿಷ್ಟ್ಯವಾದ ಭವಿಷ್ಯವನ್ನು ನುಡಿಯುವ ಅಥವಾ ತೋರಿಸುವ ಗುಣ ಇತಿಹಾಸಕ್ಕೆ ಇಲ್ಲದಿದ್ದುದೇ ಅಂಥ ಪ್ರಯತ್ನ ವಿಫಲವಾಗಲು ಕಾರಣವಾಯಿತು. ನಾಳೆ ಸಂಭವಿಸುವ ಘಟನೆಗಳನ್ನು ನಮ್ಮ ಈ ದಿನದ ಜ್ಞಾನದ ತಳಹದಿಯ ಮೇಲೆ ಖಚಿತವಾಗಿ ಹೇಳಲು ಇತಿಹಾಸಕ್ಕೆ ಸಾಧ್ಯವಿಲ್ಲ.

ಇತಿಹಾಸ ದರ್ಶನದ ಮೂರನೆಯ ಅಂಶವೆಂದರೆ ತರ್ಕ. ತರ್ಕ ಖಚಿತವಾದ ಯೋಚನೆಗೆ ಮತ್ತು ನಿಯಮಕ್ಕೆ ಪ್ರಾಧಾನ್ಯ ಕೊಡುತ್ತದೆ. ಸಮಾಜಗಳ ವ್ಯವಸ್ಥೆಯ ಬೇರು ವ್ಯಕ್ತಿಗಳು, ಗುಂಪಿನ ಭಾವನೆಗಳಲ್ಲಿದೆ. ಈ ಭಾವನೆಗಳು ಆಯಾ ಸಮಾಜದ ಇತಿಹಾಸದಲ್ಲಿ ಸತತವಾಗಿ ಹೊಂದಿಕೊಂಡು ನಡೆದುಬರುತ್ತಿವೆ. ಈ ಭಾವನೆಗಳ ಆಧಾರದ ಮೇಲೆ ಹ್ಯೂಮ್, ಹೆಗೆಲ್, ರಾಂಕ ಮತ್ತಿತರರು ತಮ್ಮ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಹೆಗೆಲನ ಅನುಯಾಯಿಗಳಾದ ರಾಂಕ, ಮಾಮ್‌ಸೇನ್, ಕೌಜಿನ್, ಟೇನೆ, ಡ್ರೈಸೆನ್ ಮತ್ತು ಮಿಷಿಲೆ ಅವರುಗಳು ಇತಿಹಾಸದ ಘಟನೆಗಳು ಬೌದ್ಧಿಕವಾಗಿದ್ದು ಒಂದು ಕ್ರಮಬದ್ಧವಾದ ಸಮಗ್ರವಾದ ಯೋಜನೆಗೆ ಸಂಬಂಧಿಸಿರುತ್ತವೆಯೆಂಬುದನ್ನು ನಂಬಿದ್ದರು. ಇತಿಹಾಸದ ಅಧ್ಯಯನಕ್ಕೆ ಮಾನವೀಯತೆಯ ಮೆರಗು ಕೊಟ್ಟು ಅದನ್ನು ಸಹಜವಾದ ಭಾವನೆಗಳ ಕೇಂದ್ರವಾಗಿ ಉಳ್ಳ ಶಾಸ್ತ್ರವನ್ನಾಗಿ ಮಾಡಿದ ಕೀರ್ತಿ ಈ ತತ್ತ್ವಜ್ಞಾನಿಗಳಿಗೆ ಸಲ್ಲಬೇಕು.

ಹತ್ತೊಂಬತ್ತನೆಯ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್‌ನು ಭೌತ ಸಿದ್ಧಾಂತದ ಆಧಾರದ ಮೇಲೆ ಇತಿಹಾಸವನ್ನು ಅಧ್ಯಯನ ಮಾಡಿ, ಆರ್ಥಿಕ ಕಾರಣಗಳೇ ಸಮಾಜ ರಚನೆಗೆ, ಏಳಿಗೆಗೆ ಮತ್ತು ಅವನತಿಗಳಿಗೆ ಕಾರಣವೆಂಬ ಅಭಿಪ್ರಾಯವನ್ನು ಪ್ರಚಾರಗೊಳಿಸಿದ. ಅವನ ಪ್ರಕಾರ ಸಮಾಜದಲ್ಲಿರುವ ಪರಸ್ಪರ ಸಂಬಂಧಗಳು ಸಂಪತ್ತನ್ನು ಉತ್ಪನ್ನ ಮಾಡತಕ್ಕ ಸಾಧನಗಳನ್ನೇ ಅವಲಂಬಿಸಿವೆ. ಹೆಗೆಲ್‌ಗೆ ಪ್ರಪಂಚ ಆತ್ಮದ ಪ್ರತಿಬಿಂಬವಾದರೆ ಮಾರ್ಕ್ಸ್‌ನಿಗೆ ಅದು ಲೌಕಿಕ ವ್ಯವಹಾರದ ಪ್ರತಿಬಿಂಬವಾಯಿತು. ಮಾರ್ಕ್ಸ್ ಸಮಗ್ರ ಇತಿಹಾಸವನ್ನು ವಿವಿಧ ಪಂಗಡಗಳ, ಗುಂಪುಗಳ ಘರ್ಷಣೆ ಎಂದು ಕರೆದ.

**ಇಪ್ಪತ್ತನೆಯ ಶತಮಾನ :** ಇಪ್ಪತ್ತನೆಯ ಶತಮಾನದಲ್ಲಿ ಟಾಯನ್‌ಬಿ ಮತ್ತು ಸ್ಪೆಂಗ್ಲರ್ ತಮ್ಮವೇ ಆದ ಇತಿಹಾಸ ದರ್ಶನಗಳನ್ನು ಮಂಡಿಸಿದ್ದಾರೆ. ಜರ್ಮನಿಯ ಸ್ಪೆಂಗ್ಲರ್ ತನ್ನ ಶ್ರೇಷ್ಠ ಗ್ರಂಥವಾದ ಡಿಕ್ಲೈನ್ ಆಫ್ ದಿ ವೆಸ್ಟ್ ಎಂಬುದರಲ್ಲಿ ಸತ್ಯ ಅಥವಾ ಬ್ರಹ್ಮಶಕ್ತಿಯಲ್ಲಿ (ಕಾಸ್ಮಿಕ್ ಎನರ್ಜಿ) ಪ್ರಾಕೃತಿಕ ಪ್ರಪಂಚ (ವರ್ಲ್ಡ್ ಆಫ್ ನೇಚರ್) ಮತ್ತು ಇತಿಹಾಸ ಪ್ರಪಂಚ ಎಂಬ ಎರಡು ಭಾವನೆಗಳು ಅಡಕವಾಗಿವೆಯೆಂದು ಅಭಿಪ್ರಾಯಪಟ್ಟ. ಪ್ರಪಂಚರಚನೆಯನ್ನು ಸ್ವಲ್ಪವೂ ಭಂಗಪಡಿಸದೆ ಅದನ್ನು ಅರಿತುಕೊಳ್ಳುವ ಮಾನವ ಪ್ರಯತ್ನವೇ ಇತಿಹಾಸ ಎಂದು ಕರೆಯಬಹುದು. ಒಂದು ಗಿಡ, ಒಂದು ಹುಳು, ಒಂದು ತಾರೆ, ಒಂದು ತುಂಡು ಹುಲ್ಲು, ಒಂದು ಹೂವು, ಒಂದು ಹನಿ ನೀರು–ಇವೆಲ್ಲ ನೀರಿನ ಅಂಶವೇ ಆಗಿ ಪ್ರಕೃತಿಯಲ್ಲಿ ಕೂಡಿಕೊಂಡಿವೆ. ಮಾನವ ಅವು ಏನು ಎಂಬುದನ್ನು ಅರಿತುಕೊಳ್ಳಬಲ್ಲನೇ ವಿನಾ ಅವುಗಳನ್ನೇ ಸೃಷ್ಟಿಸಲು ಸಾಧ್ಯವಿಲ್ಲ. ಈ ರೀತಿಯ ತಿಳಿವಳಿಕೆ ಸಾಮಾನ್ಯ ಮನುಷ್ಯನಿಗೆ ಸಾಧ್ಯವೆಂದು ಹೇಳಲಾಗುವುದಿಲ್ಲ. ಉನ್ನತಮಟ್ಟದ ಸಂಸ್ಕೃತಿಯುಳ್ಳ ಮಾನವನಿಗೆ ಮಾತ್ರ ಈ ಜ್ಞಾನ ಲಭ್ಯವಾದೀತು. ಅವನು ಈ ಕ್ಷೇತ್ರದಲ್ಲಿ ಪಂಡಿತನಾಗಿರಬೇಕು. ಹಾಗಿದ್ದಲ್ಲಿ ಮಾತ್ರ ಆತ ಜೀವನ ವೈಚಿತ್ರ್ಯಗಳ ಮೇಲೆ ಸಾಕಷ್ಟು ಬೆಳಕು ಬೀರಲು ಸಾಧ್ಯ. ಆದರೆ ಇತಿಹಾಸ ಮಾನವನಿರ್ಮಿತವಾದದ್ದು, ಇತಿಹಾಸ ಅವನ ಸೃಷ್ಟಿಯ ಪ್ರತಿಬಿಂಬ. ತನ್ನ ಸುತ್ತಲಿನ ಪ್ರಪಂಚವನ್ನು ಅರಿತುಕೊಳ್ಳಲು ಆತ ಇಂಥ ಪ್ರತಿಬಿಂಬವನ್ನು ಸೃಷ್ಟಿಸುತ್ತಾನೆ. ಮಾನವ ಹರಿಯುತ್ತಿರುವ ನದಿಯ ನೀರನ್ನು ಕಟ್ಟೆ ಕಟ್ಟಿ ಕಾಲುವೆಯ ಮುಖಾಂತರ ವ್ಯವಸಾಯಕ್ಕೆ ಉಪಯೋಗಿಸುತ್ತಾನೆ. ಮಾನವರು ಸಮಾಜ ರಚಿಸಿ ಒಂದಾಗಿ ಬಾಳಿ ತಮ್ಮ ತಮ್ಮ ಕುಟುಂಬ ರಕ್ಷಣೆ ಮಾಡುತ್ತಿದ್ದಾರೆ. ಹಾಗೆಯೇ ಅಭಿವೃದ್ಧಿಗೋಸ್ಕರ, ನಗರ, ರಾಜ್ಯ, ಮತ್ತು ರಾಷ್ಟ್ರಗಳನ್ನು ಕಟ್ಟುತ್ತಿದ್ದಾರೆ. ಈ ಎಲ್ಲ ಚಟುವಟಿಕೆಗಳೂ ಇತಿಹಾಸವೇ. ರಾಜಕೀಯದಲ್ಲಿ, ಯುದ್ಧದಲ್ಲಿ, ಶಾಂತಿಯಲ್ಲಿ, ಕಲೆ ವಿದ್ಯಾಭ್ಯಾಸಗಳ ಕ್ಷೇತ್ರಗಳಲ್ಲಿ ಮಾನವ ಹೊಸ ಹೊಸದಾಗಿ, ಆ ಮೊದಲು ಇಲ್ಲದೇ ಇದ್ದದ್ದನ್ನು ಸೃಷ್ಟಿಸುತ್ತ ಇರುತ್ತಾನೆ. ಇವೆಲ್ಲವೂ ಇತಿಹಾಸದ ಭಾಗವೇ ಆಗಿದೆ. ಶಿಲಾಯುಗದಿಂದ ಅಣುಯುಗದವರೆಗೆ ಮಾನವ ಪ್ರಕೃತಿಯನ್ನು ಗೆಲ್ಲುವ ತನ್ನ ಶಕ್ತಿಯಲ್ಲಿ ಅಭಿವೃದ್ಧಿಯನ್ನು ತೋರಿಸಿದ್ದಾನೆ. ಇದೂ ಇತಿಹಾಸದ ಒಂದು ಭಾಗವೇ ಆಗಿದೆ. ಸಂಗ್ರಹವಾಗಿ ಹೇಳುವುದಾದರೆ, ಅದು ಏನು ಎಂದು ತಿಳಿಯಲು ಪ್ರಕೃತಿಯನ್ನು ಕುರಿತು ಮಾನವ ನಡೆಸುವ ಅಭ್ಯಾಸ ವಿಜ್ಞಾನ; ಪ್ರಕೃತಿಯನ್ನು ತನ್ನ ಹತೋಟಿಗೆ ತಂದುಕೊಳ್ಳುವ ಪ್ರಯತ್ನದಲ್ಲಿ ಹೊಸ ಹೊಸದಾಗಿ ಏನನ್ನು ಸೃಷ್ಟಿಸುತ್ತಾನೋ ಅದೇ ಇತಿಹಾಸ; ದೇವರು ಸೃಷ್ಟಿಸಿದ್ದು ಪ್ರಕೃತಿ, ಮಾನವ ನಿರ್ಮಿಸಿದ್ದು ಇತಿಹಾಸ.

ಪ್ರಕೃತಿಗೂ ಇತಿಹಾಸಕ್ಕೂ ಇನ್ನೂ ಬೇರೆ ಬೇರೆ ವ್ಯತ್ಯಾಸಗಳಿವೆ. ಇತಿಹಾಸ ಮಾರ್ಪಾಡು ಹೊಂದುತ್ತಿರುವ, ಜೀವಂತವಿರುವ ಒಂದು ಶಕ್ತಿ. ಆದರೆ ಪ್ರಕೃತಿ ಆಗಲೇ ಮಾರ್ಪಾಟು ಹೊಂದಿ, ತನ್ನದೇ ಆದ ಗುರಿಯಿಲ್ಲದ, ಕಾಲಮಾನಗಳ ಹತೋಟಿಗೆ ಒಳಪಡದೆ ಇರುವ ಒಂದು ಸಿದ್ಧವಸ್ತು ಎನ್ನಬಹುದು. ಇತಿಹಾಸ ಪದೇ ಪದೇ ಬದಲಾಗುತ್ತಿರುವ ಬೆಳೆಯುತ್ತಲೇ ಇರುವ, ಯಾವಾಗಲೂ ಭೂತದಿಂದ ವರ್ತಮಾನಕ್ಕೆ, ವರ್ತಮಾನದಿಂದ ಭವಿಷ್ಯಕ್ಕೆ ಸಾಗಿಹೋಗುತ್ತಿರುವ ಒಂದು ಶಕ್ತಿ. ಆದರೆ ಪ್ರಕೃತಿಯಾದರೋ ನಿನ್ನೆಗೂ ಇಂದಿಗೂ ಮತ್ತು ನಾಳೆಗೂ ಒಂದೇ ರೀತಿಯಿಂದಿರುವ ಒಂದು ಶಕ್ತಿ.

ಸ್ಪೆಂಗ್ಲರ್‌ನ ಮತ್ತೊಂದು ಭಾವನೆ ಸಂಸ್ಕೃತಿಯ ಅಧ್ಯಯನಕ್ಕೆ ಸಂಬಂಧಿಸಿದ್ದಾಗಿದೆ. ಈತನ ಪ್ರಕಾರ ಸಂಸ್ಕೃತಿಗಳು ಜೀವಂತವಸ್ತುಗಳು; ಪ್ರಪಂಚದ ಇತಿಹಾಸವೆಂದರೆ ಅವುಗಳ ಒಟ್ಟು ಜೀವನಚರಿತ್ರೆ. ಸಂಸ್ಕೃತಿಗಳಿಗೂ ಹುಟ್ಟು ಬೆಳವಣಿಗೆ ಸಾವುಗಳು ಇವೆ; ಕೌಮಾರ್ಯ, ಯೌವನ, ಮುಪ್ಪು, ಮತ್ತು ಸಾವು ಎಂಬ ಚಕ್ರದಲ್ಲಿ ಅವು ಸುತ್ತುತ್ತ ಇರುತ್ತವೆ. ಕೌಮಾರ್ಯದಲ್ಲಿ ಒಂದು ಸಂಸ್ಕೃತಿ ಬೆಳೆಯುತ್ತಿರುವ ಆತ್ಮವನ್ನೂ ತೇಜಸ್ಸನ್ನೂ ಹೊಂದಿರುತ್ತದೆ. ಆದರೆ ಯೌವನದಲ್ಲಿ ಅದು ಮಾಗಿದ, ಪಕ್ವವಾದ, ಸುಂದರವಾದ, ಅಚ್ಚುಕಟ್ಟಾದ ಶಕ್ತಿ ಸಂಗ್ರಹಮಾಡುತ್ತದೆ. ಸಂಸ್ಕೃತಿಯ ಮುಪ್ಪು ಎಂದರೆ ಅದರ ನಾಗರಿಕತೆಯೇ ಎಂದು ಹೇಳಬಹುದು. ವೈವಿಧ್ಯ, ವೈಜ್ಞಾನಿಕ ರೀತಿಯ ಮತೀಯ ನಡೆವಳಿಕೆ ಮತ್ತು ನಂಬಿಕೆಗಳು, ಅಂಕಿ ಅಂಶಗಳ ಪ್ರಾಧ್ಯಾನ್ಯ, ಸ್ಥಾನಮಾನಗಳಿಗೋಸ್ಕರ ದಾಹ, ಬಹುಶ್ರುತ ಮೌಲ್ಯಗಳು ಮತ್ತು ವಸಾಹತು ನೀತಿಯ ಧೋರಣೆ ಇವೆಲ್ಲ ಅಳಿದುಹೋಗುತ್ತಿರುವ, ನಾಗರಿಕತೆಯ ಘಟ್ಟದ ಸಂಸ್ಕೃತಿಯ (ಸಿವಿಲಿಸೇಷನ್ ಫೇಸ್ ಆಫ್ ಕಲ್ಚರ್) ಗುರುತುಗಳಾಗಿವೆ. ಸಂಸ್ಕೃತಿಯ ಘಟ್ಟದಲ್ಲಿ ಎಲ್ಲ ರೀತಿಯ ಹೋರಾಟಗಳೂ (ರಕ್ತಪಾತಗಳೂ ಸೇರಿದಂತೆ) ಒಂದು ಭಾವನೆಗೆ, ಆದರ್ಶಕ್ಕೆ ಮಾತ್ರ ನಡೆಸುವ ಹೋರಾಟಗಳಾಗುತ್ತವೆ. ಆದರೆ ನಾಗರಿಕತೆಯ ಘಟ್ಟದಲ್ಲಿ ಅಂಥ ಹೋರಾಟಗಳು ಸ್ವಾರ್ಥ ಸಾಧನೆಗಳಿಗಾಗಿ ನಡೆಸುವ ಹೋರಾಟಗಳಾಗುತ್ತವೆ ಎಂದು ಸ್ಪೆಂಗ್ಲರ್ ಅಭಿಪ್ರಾಯ ಪಡುತ್ತಾನೆ.

ಇಂದಿನ ವಿಶ್ವದ ಹೆಸರಾಂತ ಇತಿಹಾಸಕಾರರಾದ ಟಾಯ್ನ್‌ಬಿಯವರು ತಮ್ಮ ಇತಿಹಾಸ ದರ್ಶನದ ಮೂಲಕ ಒಂದು ಸಂಸ್ಕೃತಿಯ ಹುಟ್ಟು ಬೆಳವಣಿಗೆ ಮತ್ತು ನಾಶದ ಬಗ್ಗೆ ಅಭ್ಯಾಸ ನಡೆಸಿದ್ದಾರೆ. ಅವರ ಸಿದ್ಧಾಂತವನ್ನು ಸವಾಲು ಮತ್ತು ಜವಾಬು (ಚಾಲೆಂಜ್ ಮತ್ತು ರೆಸ್ಪಾನ್ಸ್) ಎಂದು ಕರೆಯುತ್ತಾರೆ. ಅವರ ಪ್ರಕಾರ ವಿವಿಧ ಸಮಾಜಗಳೇ ಇತಿಹಾಸದ ಮೂಲವಸ್ತುಗಳು. ಸಂಸ್ಕೃತಿಗಳೇ ಇತಿಹಾಸದ ಪ್ರಮುಖ ಅಧ್ಯಯನದ ವಿಷಯ. ಒಂದು ಸಂಸ್ಕೃತಿ ಹುಟ್ಟಬೇಕಾದರೆ ಒಂದು ವರ್ಣವೇ ಆಗಲಿ, ಒಂದು ಜನಾಂಗವೇ ಆಗಲಿ ಅಥವಾ ಒಂದು ವಿಶಿಷ್ಟ ವಾತಾವರಣವೇ ಆಗಲಿ ಪ್ರಮುಖವಲ್ಲ. ಸಂಸ್ಕೃತಿಯ ಬೆಳವಣಿಗೆಗೆ ಎರಡು ಪ್ರಮುಖ ಅಂಶಗಳೆಂದರೆ : 1 ಹೆಚ್ಚಿನ ಅನುಕೂಲವೂ ಇಲ್ಲದ, ಅನಾನುಕೂಲವೂ ಇಲ್ಲದ ವಾತಾವರಣ; 2 ರಚನಾತ್ಮಕ ದೃಷ್ಟಿಯುಳ್ಳ ಒಂದು ಪಂಗಡ ಆ ಸಮಾಜದಲ್ಲಿ ಮಾನವನ ಮಿದುಳಿನಂತೆ. ಈ ಪಂಗಡ ಸಮಾಜದ ಎಲ್ಲ ಚಟುವಟಿಕೆಗಳನ್ನೂ ನಿಯಂತ್ರಿಸುವ ಮತ್ತು ಹಿಡಿತದಲ್ಲಿಟ್ಟಿರುವ ಕೆಲಸ ಮಾಡುತ್ತದೆ. ಯಾವಾಗ ಈ ಎರಡು ಮೂಲಭೂತ ಅಂಶಗಳು ಇರುತ್ತವೆಯೋ ಆಗ ಸವಾಲು–ಜವಾಬುಗಳ ಘರ್ಷಣೆಯಿಂದಾಗುವ ಕ್ರಿಯೆ ಪ್ರಾರಂಭವಾಗುತ್ತದೆ. ಸುತ್ತಲಿನ ವಾತಾವರಣ ಸಮಾಜಕ್ಕೆ ಸವಾಲನ್ನಿತ್ತಾಗ ಆ ಸವಾಲುಗಳಿಗೆ ಸಮಾಜದ ಕ್ರಿಯಾತ್ಮಕ ಪಂಗಡ ಸಫಲವಾಗಿ ಉತ್ತರಗಳನ್ನೀಯುತ್ತದೆ. ಈ ರೀತಿಯ ಕ್ರಿಯೆ–ಪ್ರತಿಕ್ರಿಯೆಗಳಿಂದ ಸಮಾಜದ ಆವಶ್ಯಕತೆಗಳು ಪೂರೈಸುತ್ತವೆ ಮತ್ತು ಹೊಸ ಹೊಸ ಸವಾಲುಗಳು ಹುಟ್ಟುತ್ತವೆ. ಇದಕ್ಕೆ ಕೊನೆ ಮೊದಲೇ ಇಲ್ಲವೆನ್ನಬಹುದು. ಇಂಥ ಕ್ರಿಯೆ ಒಂದು ಸಮಾಜ ನಾಗರಿಕತೆಯ ಘಟ್ಟವನ್ನು ಮುಟ್ಟುವವರೆಗೂ ನಡೆಯುತ್ತಲೇ ಇರುತ್ತದೆ. ಉನ್ನತವಾದ ಮತ್ತು ಸಮಗ್ರವಾದ ಅಂತರಾತ್ಮ ನಿರ್ದೇಶತ್ವದಿಂದ ಒಂದು ನಾಗರಿಕತೆಯ ಅಭಿವೃದ್ಧಿ ಉಂಟಾಗುತ್ತದೆ. ಅಂದರೆ ಅಭಿವೃದ್ಧಿಯೆಂಬುದು ಸಮಾಜದ ಹೊರಗಡೆಯ ಕೃತಿಯಿಂದ ಆಗದೆ, ಸಮಾಜದ ಆಂತರಿಕ ಶಕ್ತಿಯಿಂದಾಗುತ್ತದೆ. ಭೌಗೋಳಿಕ ಹರಡುವಿಕೆಯಿಂದಾಗಲಿ, ಅಥವಾ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಯಿಂದಾಗಲಿ ಒಂದು ಸಂಸ್ಕೃತಿ ಬೆಳೆಯಲು ಸಾಧ್ಯವಿಲ್ಲ. ಮಾನವನಲ್ಲಿರುವ ಆಂತರಿಕ ಶಕ್ತಿ ಮತ್ತು ನಿಜವಾದ ಯೋಗ್ಯತೆಗಳಿಂದ ಮಾತ್ರ ಸಂಸ್ಕೃತಿಯ ಅಭಿವೃದ್ಧಿ ಆದೀತು. ಕ್ರಿಯಾತ್ಮಕ ಅಲ್ಪ ಸಂಖ್ಯಾತ ಪಂಗಡವೂ ಸಫಲವಾದ ಉತ್ತರಗಳನ್ನು ಸವಾಲುಗಳಿಗೆ ಕೊಡಲು ನಿಲ್ಲಿಸಿದಾಗ ನಾಗರಿಕತೆ ಅವನತಿಯ ಹಾದಿ ಹಿಡಿಯುತ್ತದೆ. ಆದ್ದರಿಂದ ನಾಗರಿಕತೆಗಳು ಆತ್ಮಹತ್ಯದಿಂದ ನಾಶವಾಗುವುವೇ ಹೊರತು ಅವುಗಳನ್ನು ಯಾರೂ ನಾಶ ಮಾಡಲು ಸಾಧ್ಯವಿಲ್ಲ. ಸಮಾಜಕ್ಕೆ ತಲೆದೋರಿದ ಸವಾಲುಗಳಿಗೆ ಕ್ರಿಯಾತ್ಮಕ ಪಂಗಡ ಸರಿಯಾದ ಉತ್ತರವನ್ನು ನೀಡದೆ ಇದ್ದಾಗ ಅಂಥ ಸಮಾಜದಲ್ಲಿ ಒಡಕುಂಟಾದೀತು **ನೋಡಿ– ಟಾಯ್ನ್‌ಬಿ, ಅರ್ನಾಲ್ಡ್**. ಒಟ್ಟಿನಲ್ಲಿ ಹೇಳುವುದಾದರೆ ಇತಿಹಾಸ ದರ್ಶನವೂ ಅನೇಕ ಟೀಕೆಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತದೆ. ಇಂಥ ಟೀಕೆಗಳು ಒಂದು ತತ್ತ್ವಕ್ಕೂ ಒಂದು ಸಾಮಾನ್ಯ ನಿಯಮಕ್ಕೂ ಒಳಪಟ್ಟಿರುತ್ತವೆ. ಇದೇ ಇತಿಹಾಸ ದರ್ಶನದ ಉದ್ದೇಶ. ಇತಿಹಾಸ ದರ್ಶನ ಘಟನೆಗಳನ್ನು ತರ್ಕಬದ್ಧವಾದ ರೀತಿಯಲ್ಲಿ ಅರಿಯಲು ಪ್ರಯತ್ನಿಸುತ್ತದೆ. ಇಂಥ ಅರಿವುಗಳು ಅನೇಕ ತಾತ್ತ್ವಿಕ ಪಂಗಡಗಳಾದ ಆದರ್ಶವಾದಿಗಳು (ಐಡಿಯಲಿಸ್ಟ್ಸ್), ರಮ್ಯತಾವಾದಿಗಳು (ರೊಮಾಂಟಿಸಿಸ್ಟ್ಸ್), ದೃಷ್ಟಪ್ರಮಾಣ ವಾದಿಗಳು (ಪಾಸಿಟಿವಿಸ್ಟ್ಸ್), ಭೌತವಾದಿಗಳು (ಮೆಟೀರಿಯಲಿಸ್ಟ್ಸ್), ಆಧುನಿಕರು (ಮಾಡರ್ನಿಸ್ಟ್ಸ್) ಮೊದಲಾದವರಿಂದ ನಮಗೆ ಲಭ್ಯವಾಗಿವೆ. (ಬಿ.ಎಸ್.ಎ.)

**ಇತಿಹಾಸ ದೃಷ್ಟಿ:** ಪ್ರಾಚೀನ ಗ್ರೀಕರ ದೃಷ್ಟಿಯಲ್ಲಿ ಇತಿಹಾಸ ಅಂದರೆ ಸಂಶೋಧನೆ ಮತ್ತು ವರ್ತಮಾನ ಸಂಗ್ರಹಣೆ. ಇದನ್ನು ಇತಿಹಾಸ ಸಾಹಿತ್ಯವೆಂಬ ಲೇಖನದಲ್ಲಿ ಹೇಳಿದೆ. ಗ್ರೀಕರ ತರುವಾಯ ಲ್ಯಾಟಿನ್ ಮತ್ತು ರೋಂ ಜನರು ಇತಿಹಾಸವೆಂಬ ಅರ್ಥದಲ್ಲಿ ಹಿಸ್ಟೋರಿಯ ಎಂಬ ಪದವನ್ನು ಬಳಸಿ, ಗ್ರೀಕರು ಕಟ್ಟಿದ ಅರ್ಥವನ್ನೇ ಒಪ್ಪಿದರು. ಕೆಲವು ಶತಮಾನಗಳ ತರುವಾಯ ಜರ್ಮನ್ನರಲ್ಲಿ ಗೆಷಿಷ್ಟೆ ಎನ್ನುವ ಪದ ರೂಢಿಗೆ ಬಂತು; ಗೆಷಿಷ್ಟೆ ಎಂದರೆ ನಡೆದ ಸಂಗತಿಗಳು ಎಂದು ಜರ್ಮನ್ನರು ಅರ್ಥ ಕಟ್ಟಿದರು. ಆ ಪದದ ಅರ್ಥ ವಿಕಾಸಗೊಂಡಿತು. ಮಾನವನ ಸುಖದುಃಖಗಳು ಅನುಭವಗಳು ಜೀವನದ ಘಟನೆಗಳು ಮುಂತಾದವುಗಳ ಸಂಗ್ರಹಣೆಯೂ ಗತಕಾಲದಲ್ಲಿ ಇವುಗಳು ಬೀರಿದ ಪ್ರಭಾವದ ಪರಿಶೋಧನೆಯೂ ಕ್ರಮೇಣ ಇತಿಹಾಸದ ಸಾಮಗ್ರಿಗಳಾದವು. ಇತಿಹಾಸ ಮತ್ತು ಗೆಷಿಷ್ಟೆ ಪದಗಳು ಬೇರೆ ಬೇರೆ ಅರ್ಥ ಪಡೆದವು: ಗೆಷಿಷ್ಟೆ ಎಂದರೆ ನಡೆದ ಸಂಗತಿಯ ವಾಸ್ತವಿಕ ವಿವರಣೆಯೆಂದೂ ಇತಿಹಾಸವೆಂದರೆ ಆ ಸಂಗತಿಗಳಿಂದ ಉಂಟಾದ ಮಾನವನ ಅನುಭವವೆಂದೂ ಭಾವನೆ ಬೆಳೆಯಿತು. ಮಾನವನ ಹಿನ್ನೆಲೆಯ ನೋಟದಿಂದ ಉಂಟಾದ ಅನುಭವಗಳ ವಿವರಣೆಯೇ ಇತಿಹಾಸವೆಂಬ ದರ್ಶನ ಮೂಡಿದಾಗ ಇತಿಹಾಸವನ್ನೂ ಪುರಾಣ ಮತ್ತು ಕಟ್ಟುಕಥೆಗಳ ಗುಂಪಿಗೆ ಒಯ್ದಂತಾಯಿತು. ಸಂಗತಿ ಮತ್ತು ಘಟನೆಗಳ ವೈಜ್ಞಾನಿಕ ವಿವರಣೆ ಕೊಡತಕ್ಕ ಸಂಪ್ರದಾಯ ಹಿಂದೆ ಬಿತ್ತು.

ಹತ್ತೊಂಬತ್ತನೆಯ ಶತಮಾನದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಸಾಹಿತ್ಯ, ಸಮಾಜಶಾಸ್ತ್ರಗಳು ಅಗಾಧವಾಗಿ ಪರಿವರ್ತನೆ ಹೊಂದಿದವು. ಇತಿಹಾಸದ ಗತಿಯೇ ಬದಲಾಯಿಸಿತು. ವೈಜ್ಞಾನಿಕವಾಗಿ ಇತಿಹಾಸದ ಅಭ್ಯಾಸ ಆರಂಭವಾಯಿತು. ಪ್ರಾಚೀನ ವಸ್ತುಗಳ ಸಂಗ್ರಹಣೆ, ಪ್ರಾಚೀನ ಅವಶೇಷಗಳ ಸಂಕಲನ, ಅವುಗಳ ರೂಪರೇಖೆಗಳ ಸಂಶೋಧನೆ ಮತ್ತು ವಿಮರ್ಶೆ, ಆಧಾರಭೂತವಾದ ನಿಯಮಗಳ ನಿರ್ಧಾರ, ಪರೀಕ್ಷಕ ಬುದ್ಧಿಗೆ ನಿಲುಕದ ವಿಚಾರಗಳನ್ನು ಪುರಾಣ ಮತ್ತು ಸಾಹಿತ್ಯ ಪ್ರಪಂಚದಿಂದ ಹೆಕ್ಕಿ ತೆಗೆದು ಜೋಡಿಸುವ ಹದ–ಇವು ಇತಿಹಾಸದ ವಿಮರ್ಶೆಯ ಹೆದ್ದಾರಿಯಾದುವು. ಇತಿಹಾಸದಿಂದ ಮಾನವನ ಪ್ರಗತಿಗೂ ಆತ್ಮವಿಕಾಸಕ್ಕೂ ಏನು ಉಪಕಾರವಾಗಿದೆಯೆಂಬ ವಿಚಾರವಾಗಿಯೂ, ಮಾನವ ಸಂಘಜೀವನಕ್ಕೂ ಏಕತೆಯ ಭಾವನೆಗೂ ಇದು ಯಾವ ರೀತಿಯ ಕಾಣಿಕೆ ಸಲ್ಲಿಸಿದೆಯೆಂಬ ವಿಚಾರವಾಗಿಯೂ ವಾದವಿವಾದಗಳು ನಡೆದುವು.

ಈ ವಿಚಾರವಾಗಿ ವಿಜ್ಞಾನಿಗಳೂ, ಸಾಹಿತಿಗಳೂ, ಕಲಾವಿದರೂ ಯಾವ ನಿರ್ಧಾರಕ್ಕೂ ಬರಲಾರದೇ ಹೋದರು. ಪ್ರಕೃತಿ, ಮಾನವ, ಪ್ರತಿಭೆ, ಬುದ್ಧಿ ಈ ಗಹನ ವಿಚಾರಗಳನ್ನು ಕುರಿತು ರೂಷ್ವಾ ಎಂಬುವನು ಪ್ರಪಂಚದ ಕ್ರಾಂತಿಗಳನ್ನು ಕುರಿತ ತನ್ನ ಗ್ರಂಥದಲ್ಲಿ ವಿವೇಚಿಸಿದ್ದಾನೆ. ಈ ಗ್ರಂಥವೂ ಡಾರ್ವಿನ್ನನ ಆರಿಜಿನ್ ಆಫ್ ಸ್ಪೀಷೀಸ್ ಎಂಬುದೂ ಇತಿಹಾಸ ದರ್ಶನಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದವು.

ಇದರ ಪರಿಣಾಮವಾಗಿ ಇತಿಹಾಸ ವಾದಗ್ರಸ್ತವಾಯಿತು. ಆಕಸ್ಮಿಕ ಘಟನೆಗಳಿಗೂ, ಕ್ರಾಂತಿ ವಿಪ್ಲವಗಳಿಗೂ, ಮಾನವನ ವ್ಯಾಪಾರಗಳಿಗೂ ಪರಿಸ್ಥಿತಿ ಅಥವಾ ಸನ್ನಿವೇಶವೇ ಮುಖ್ಯವೆಂಬುದು ಒಂದು ವಾದ. ಇದರಲ್ಲಿ ಮಾನವನ ಪಾತ್ರ ಅಲ್ಪವೆನ್ನುವ ವಿಚಾರ ಕೈಗಾರಿಕಾ ಕ್ರಾಂತಿಗೂ ವಿಜ್ಞಾನ ಪ್ರಪಂಚದ ನೂತನ ದರ್ಶನಕ್ಕೂ ಪ್ರಬಲ ಕಾರಣವಾದವು. ಮಾನವನ ಪ್ರತಿಭೆ, ಬುದ್ಧಿಶಕ್ತಿ, ನಿರಂತರ ಸಾಧನೆ–ಇವುಗಳಿಂದ ರಚನಾತ್ಮಕ ಕಾರ್ಯಗಳು ಜರುಗಿದರೂ ಪರಿಸ್ಥಿತಿಯ ಸಹಕಾರವಿಲ್ಲದಿದ್ದಲ್ಲಿ ಅವು ಫಲಕಾರಿಯಾಗಲಾರವು–ಎಂಬ ವಾದ ಪುಷ್ಟಿಗೊಳ್ಳುತ್ತ ಬಂತು.

ಇಪ್ಪತ್ತನೆಯ ಶತಮಾನದಲ್ಲಿ ಕೂಡ ಇತಿಹಾಸದ ದೃಷ್ಟಿ ಯಾವುದು ಎಂಬ ವಿಚಾರದಲ್ಲಿ ಮಾನವನ ಮನಸ್ಸು ಮಸಕುಮಸಕಾಗಿದೆ. ಇಲ್ಲಿ ವ್ಯಕ್ತಿಯೇ ಪ್ರಧಾನವೇ ಅಥವಾ ಸನ್ನಿವೇಶಗಳೇ? ಈ ವಿಚಾರವಾಗಿ ವಾದವಿವಾದಗಳು ಮುಂದುವರಿದಿವೆ. ವ್ಯಕ್ತಿಯೇ ಇತಿಹಾಸಕ್ಕೆ ಆಧಾರ, ಅವನು ಪರಿಸ್ಥಿತಿಯ ಸೃಷ್ಟಿಕರ್ತ, ಎಲ್ಲ ಚಲನ ವಲನಗಳಿಗೂ ಮೂಲ ಎಂಬುದಾಗಿ ಕಾರ್ಲೈಲ್, ಫ್ರಾಯ್ಡ್ ಮೊದಲಾದ ಸುಪ್ರಸಿದ್ಧ ಸಾಹಿತಿಗಳು ವಾದಿಸುತ್ತ ಬಂದಿದ್ದಾರೆ. ಬಕಲ್ ಎಂಬ ತತ್ತ್ವಜ್ಞನದು ಇದಕ್ಕೆ ವಿರುದ್ಧವಾದ ದೃಷ್ಟಿ. ಪರಿಸ್ಥಿತಿಯ ನಿರಂತರ ಪರಿವರ್ತನೆಯೇ ವ್ಯಕ್ತಿವಿಕಾಸಕ್ಕೂ ಸಮಾಜ ರಾಷ್ಟ್ರ, ಹಾಗೂ ಪ್ರಪಂಚದ ಏಳುಬೀಳುಗಳಿಗೂ ಪ್ರಬಲ ಕಾರಣ ವೆಂದೂ ವ್ಯಕ್ತಿಗೆ ಸ್ವಾತಂತ್ರ್ಯವಿಲ್ಲವೆಂದೂ ಅವನು ಪರಿಸ್ಥಿತಿಯ ಕೂಸೆಂದೂ ಆತ ಹೇಳುತ್ತಾನೆ. ಆತನ ದೃಷ್ಟಿಯಲ್ಲಿ ಇತಿಹಾಸವೆಂಬುದು ವ್ಯಕ್ತಿಯ ಸ್ವಯಂಪ್ರೇರಣೆಯಿಂದ ಉತ್ಪನ್ನವಾದದ್ದಲ್ಲ. ಕಾರ್ಲೈಲ್ ಮತ್ತು ಬಕಲ್‍ರವಾದ ಅರ್ಧ ಶತಮಾನಕ್ಕೂ ಮೀರಿ ವಿದ್ವತ್ ಪ್ರಪಂಚದ ಮನಸ್ಸು ಕಲಕಿದೆ.

ಸಂಶೋಧನೆಗೆ ಅನುಕೂಲವಾದ ವಸ್ತು ಸಾಮಗ್ರಿಗಳ ವಿನಿಮಯ ಮತ್ತು ವಿಶ್ಲೇಷಣೆಯ ಪ್ರಯತ್ನ ಹಲವಾರು ವರ್ಷಗಳು ಜರುಗಿದರೆ ಒಂದೇ ದಿನದಲ್ಲಿ ಅವುಗಳ ಸಮನ್ವಯ ಸಾಧ್ಯವಾಗುವುದೆಂಬುದು ಅನೇಕ ಇತಿಹಾಸಜ್ಞರ ಮತ. ಬಹುಮುಖವಾದ ವಿಮರ್ಶೆ ನಡೆದಷ್ಟೂ ವಸ್ತು ಮತ್ತು ಮಾನವ ವ್ಯಾಪಾರಗಳ ಅರಿವು ಹೆಚ್ಚು ದೃಢವಾಗುತ್ತದೆ. ಅಂತರ್ಗತವಾದ ನಿಗೂಢ ತತ್ತ್ವಗಳೂ ಭಾವನೆಗಳೂ ಹೊಸ ಹೊಸ ಅರ್ಥ ತಳೆಯುತ್ತವೆ. ವಿಮರ್ಶೆಯ ಮತ್ತು ನಿರಂತರ ಸಾಧನೆಯ ಫಲವಾಗಿ ಅನೇಕ ಇತಿಹಾಸಗಳು ತಲೆದೋರಿವೆ: ಈಗಾಗಲೇ ಮಾನವೀಯ ಇತಿಹಾಸ, ಪ್ರಪಂಚದ ಇತಿಹಾಸ, ವರ್ಗಗಳ ಇತಿಹಾಸ, ಧರ್ಮ ಮತ್ತು ಧರ್ಮಸಂಸ್ಥೆಗಳ ಇತಿಹಾಸ ಎಂಬುದಾಗಿ ಅವು ಬೆಳೆದು ಬಂದಿವೆ. ಇತಿಹಾಸಜ್ಞರಲ್ಲಿ ಎರಡು ಅಭಿಪ್ರಾಯಗಳು ಪ್ರಬಲವಾಗಿವೆ. ರಾಜಕೀಯ ಪ್ರಪಂಚದ ಜೀವಾಳವೇ ಇತಿಹಾಸದ ಮರ್ಮ ಎನ್ನುವುದು ಒಂದು ವಾದ. ಮಾನವನ ಸಾಹಿತ್ಯ, ಸಮಾಜ, ಜೀವನ, ಕಲೆ ಮುಂತಾದುವೇ ಇತಿಹಾಸದ ತಿರುಳು ಎಂಬುದು ಇನ್ನೊಂದು ವಾದ. ರಾಜಕೀಯ ಜೀವನದಲ್ಲಿ ರಾಷ್ಟ್ರ, ಸರ್ಕಾರ, ಪಕ್ಷಗಳು ಇವುಗಳ ವರ್ತನೆಯೂ ಇತಿಹಾಸದಲ್ಲಿ ಪ್ರಧಾನವಸ್ತುವಾಗುತ್ತಾ ಬಂದಿದೆ. ಎಲ್ಲಿ ರಾಜಕೀಯಕ್ಕೆ ಮಾನ್ಯತೆಯಿದೆಯೋ ಅಲ್ಲಿ ಸಾಂಸ್ಕೃತಿಕ ಜೀವನ ಗೌಣ. ಅದರ ಪಾತ್ರ ಜೀವನವಿಕಾಸದಲ್ಲಿ ಅಲ್ಪ.

ಇತಿಹಾಸ ಪ್ರಗತಿಪರವಾಗಬೇಕಾದರೆ, ಮಾನವನ ಜೀವನ ಉತ್ತಮವಾಗಬೇಕಾದರೆ, ಸಂಸ್ಕೃತಿ, ಕಲೆ, ಸಾಹಿತ್ಯ ಎಷ್ಟು ಪರಿಣಾಮಕಾರಿ ಎಂಬ ಅರಿವು ಪ್ರಬಲವಾಗುತ್ತಾ ಬರಬೇಕು. ಕಾರ್ಯಕಾರಣ ಜಗತ್ತಿನಲ್ಲಿ ಜರುಗುವ ಅಂಶಗಳ ತಿಳಿವಳಿಕೆ ಉಂಟಾದರೆ, ಮೆಟ್ಟಲು ಮೆಟ್ಟಲಾಗಿ ವಿಕಸನಗೊಂಡು ಬಂದ ಮಾನವನ ನಾಗರಿಕತೆಯ ಸತ್ಯದರ್ಶನವಾಗುತ್ತದೆ. ಘಟನಾವಳಿಗಳು ಬಿಡಿಬಿಡಿಯಾಗಿ ಆಕಸ್ಮಿಕವಾಗಿ ಸಂಭವಿಸುವುದಿಲ್ಲ. ಪ್ರತಿಯೊಂದು ಘಟನೆಗೂ ಕಾರಣಗಳಿವೆ. ಕಾರ್ಯಕಾರಣ ಸಮಂಜಸವಾದ ಅಂಶಗಳು ಭಾವೀ ಜಗತ್ತಿನಲ್ಲಿ ಜರುಗುವ ವಿಷಯಗಳ ರೀತಿನೀತಿ ರೂಪರೇಖೆಗಳನ್ನು ಸೂಚಿಸುತ್ತವೆ. ಇದು ವೈಜ್ಞಾನಿಕವಾಗಿಯೇ ಇದೆ. ನಿರ್ಜೀವ ವಸ್ತುಗಳ ವಿಮರ್ಶೆಯಲ್ಲಿ ಫಲಿತಾಂಶಗಳು ಏಕರೀತಿಯಾಗಿ ಸಂಶಯಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಜರಗುವುವು ಎಂದು ಘಂಟಾಘೋಷವಾಗಿ ಹೇಳಬಹುದು. ಆದರೆ ಮಾನವನ ನಡೆವಳಿಕೆ ಹಾಗಲ್ಲ. ನಭೋಮಂಡಲವನ್ನು ಭೇದಿಸಿ ಅದರಲ್ಲಿ ಅಡಗಿದ ಮೂಲಭೂತ ತತ್ತ್ವವನ್ನು ನಿರ್ದಿಷ್ಟವಾಗಿ ವಿವರಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆ ಮಾನವನ ಸ್ವಭಾವವನ್ನೂ ನಡೆನುಡಿಗಳನ್ನೂ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಗೊಂದಲಮಯ ಜಗತ್ತಿನಲ್ಲಿ ದಾರುಣಕರ ಸನ್ನಿವೇಶದಲ್ಲಿ ಸ್ವಯಂಪ್ರೇರಣೆಯಿಂದ ವರ್ತಿಸುವ ಮಾನವ ಹೇಗೆ ನಡೆದುಕೊಳ್ಳುತ್ತಾನೆಂಬುದು ಕುತೂಹಲಕರ. ಯುದ್ಧ, ಶಾಂತಿ, ಆಂದೋಲನ, ವಿಪ್ಲವ ಇಂಥ ನಾನಾ ಸನ್ನಿವೇಶಗಳಲ್ಲಿ ಮಾನವನ ಚಂಚಲ ಮನಸ್ಸು ನಡೆದುಕೊಳ್ಳುವ ರೀತಿಯಿಂದ ಇತಿಹಾಸ ವಿಸ್ಮಯಕಾರಿಯಾಗಿದೆ. ಆದ್ದರಿಂದಲೇ ಕಾರ್ಯಕಾರಣ ಸಮಂಜಸವಾಗಿ ವ್ಯಕ್ತಿಯ ಮತ್ತು ಮಾನವಸಮಾಜದ ವಿಮರ್ಶೆಯೂ, ನಿರ್ಧಾರಗಳೂ ಮಸಕುಮಸಕಾಗಿವೆ. ದೈವ ಮತ್ತು ಆಸುರೀ ಪ್ರವೃತ್ತಿಗಳ ನಡುವೆ ಹೊಯ್ದಾಡುವ ಮಾನವನ ಮನಸ್ಸು ಇದಕ್ಕೆ ಕಾರಣ. ಮನಶ್ಶಾಸ್ತ್ರ ಭೌತಶಾಸ್ತ್ರ ಮತ್ತು ಇತರ ಶಾಸ್ತ್ರಗಳನ್ನು ಅಭ್ಯಾಸ ಮಾಡಿದವರು, ಆ ಚರಾಚರ ವಸ್ತುಗಳಂತೆಯೇ ಮಾನವನ ವರ್ತನೆಯೂ ಇಲ್ಲವೆಂಬುದನ್ನು ಅರಿಯಬಲ್ಲರು. ಬಾಹ್ಯ ಪ್ರಪಂಚದಲ್ಲಿ ಜರುಗುವ ವಿಚಿತ್ರ ವ್ಯಾಪಾರಗಳನ್ನು ನಿಯಂತ್ರಿಸಲು ಮಾನವನಿಗೆ ಸಂಪೂರ್ಣ ಶಕ್ತಿಯಿಲ್ಲ. ಸಮುದ್ರದಲ್ಲಿ ಅಲೆಗಳ ಮೇಲೆ ಅಲೆಗಳು ಬಂದು ಬಡಿಯುವಂತೆ, ಅಗೋಚರವಾದ ಅದಮ್ಯವಾದ ಅಂಶಗಳು ಮಾನವನ ಇತಿಹಾಸವನ್ನು ತಿದ್ದುತ್ತಿರುತ್ತವೆ.

ಮಾನವನಿಗೆ ತನ್ನ ಮನಸ್ಸನ್ನು ಮತ್ತು ಹೊರಗಿನ ವಸ್ತುಗಳ ಚಲನವಲನಗಳನ್ನು ತಕ್ಕಮಟ್ಟಿಗೆ ನಿಯಂತ್ರಿಸಿ, ತಾನು ಸೂಚಿಸುವ ದಾರಿಯಲ್ಲಿ ಅವು ವರ್ತಿಸುವಂತೆ ಪ್ರಚೋದಿಸಲು ಸಾಧ್ಯವೆಂಬುದೂ ನಿಜ. ಇತಿಹಾಸವೆಂದರೆ ವ್ಯಕ್ತಿ ತನ್ನ ಸ್ವಯಂಪ್ರೇರಣೆಯಿಂದ ನಿಶ್ಚಯಿಸಿ ನಡೆಸಿದ ವ್ಯಾಪಾರ. ಅವನು ಸೃಷ್ಟಿಸಿದ ಸಂಸ್ಥೆಗಳು, ಅವುಗಳ ನಿಕಟ ಸಂಬಂಧ ವೈಪರೀತ್ಯಗಳು, ಅವುಗಳಿಂದ ಉತ್ಪನ್ನವಾದ ಭಾವನೆಗಳು–ಇವುಗಳೆಲ್ಲ ಕೂಡಿ ಇತಿಹಾಸದ ಸೃಷ್ಟಿಯಾಗುತ್ತಿರುತ್ತದೆ. ಪರಿಸ್ಥಿತಿಯನ್ನು ತನ್ನ ಮನೋಬಲದಿಂದ ಜಯಿಸಿ ಬಹುಮಟ್ಟಿಗೆ ಪ್ರಕೃತಿಯ ವ್ಯಾಪಾರವನ್ನು ತಡೆಗಟ್ಟುವ ಶಕ್ತಿ ಅವನಲ್ಲಿ ಅಂತರ್ಗತವಾಗಿದೆ ಎಂಬ ಭಾವನೆಯೂ ಕೂಡ ಬೇರೂರುತ್ತದೆ. ಸಂಸ್ಥೆಗಳ ರಚನೆ ಮತ್ತು ಅವುಗಳ ವ್ಯಾಪಾರದ ನಿಯಂತ್ರಣ ಶಕ್ತಿ ಮಾನವನಲ್ಲಿ ಸಹಜವಾಗಿದೆ ಯೆಂಬುದೇ ಈ ಭಾವನೆಗೆ ಕಾರಣ. ಮಾನವ ತನ್ನ ರಾಗದ್ವೇಷಾದಿಗಳನ್ನು ಸಂಸ್ಥೆಗಳ ಮೂಲಕ ಹರಿಸಿ ಅವುಗಳನ್ನು ರಚನಾತ್ಮಕ ಮಾರ್ಗಗಳಲ್ಲಿ ತೊಡಗಿಸುವ ಕೆಲಸದಲ್ಲಿ ಸಾಕಷ್ಟು ಯಶಸ್ಸು ಸಾಧಿಸಿದ್ದಾನೆ. ಸಂಯಮ, ಸಂಧಾನ ಮತ್ತು ಸಮನ್ವಯ ರೀತಿಗಳಲ್ಲಿ ಅನಿಶ್ಚಿತ ಮತ್ತು ಅದಮ್ಯ ಅಂಶಗಳನ್ನು ನಿಯಂತ್ರಿಸಿದ್ದಾನೆ.

ಅಕಾರಣವಾಗಿ ಮತ್ತು ಆಕಸ್ಮಿಕವಾಗಿ ಆದ ಘಟನೆಗಳು, ವ್ಯಕ್ತಿಪ್ರಧಾನವಾಗಿ ಸ್ವಯಂಪ್ರೇರಣೆ ಯಿಂದ ಮಾನವ ಸೃಷ್ಟಿಸಿದ ಜಗತ್ತು; ಅದರ ವ್ಯಾಪಾರ; ಸಾಮಾಜಿಕ ನಿಯಮಗಳಿಗೆ ಅನುಗುಣವಾಗಿ ಉತ್ಪನ್ನವಾದ ಅಂಶಗಳು; ಕಾರ್ಯಕಾರಣ ವಿವೇಚನೆಯ ಫಲವಾದ ಸಮಂಜಸ ನಿರ್ಧಾರ; ಇವೇ ಮಾನವನ ಇತಿಹಾಸದ ಅಂತಃಸತ್ತ್ವ. (ಎಂ.ವಿ.ಕೆ.)

**ಇತಿಹಾಸಪೂರ್ವಕಲೆ: ನೋಡಿ–ಆದಿಮಜನರ ಕಲೆ**

**ಇತಿಹಾಸ ಲೇಖನ:** ಲೇಖಕರು ತಮ್ಮ ಸಮಕಾಲೀನರ ಮತ್ತು ಭವಿಷ್ಯಕಾಲೀನರ ತಿಳಿವಳಿಕೆ ಮತ್ತು ಆತ್ಮೋನ್ನತಿಗಳಿಗಾಗಿ ಒಕ್ಕಣಿಸಿದ ಐತಿಹಾಸಿಕ ಘಟನೆಗಳ ಸಾಹಿತ್ಯಾತ್ಮಕ ರಚನೆ. ಇದು ಸಾಹಿತ್ಯಚರಿತ್ರೆಯಲ್ಲ; ಅಥವಾ ಸಾಮಾಜಿಕ, ರಾಜಕೀಯ, ನೈತಿಕ ಅಥವಾ ಸಾಂಸ್ಕೃತಿಕ ಕೃತ್ಯಗಳ ಚರಿತ್ರೆಯೂ ಅಲ್ಲ; ಅವೆಲ್ಲವೂ ಇದರಲ್ಲಿ ಕೂಡಿವೆ ಎಂಬುದೇನೋ ನಿಜ. ಇದು ಇತಿಹಾಸದ ತತ್ತ್ವ; ಆಲೋಚನೆ ಹಾಗೂ ಘಟನೆ ಇವೆರಡರ ಮೊತ್ತ. ತತ್ತ್ವಶಾಸ್ತ್ರದಂತೆ ಇತಿಹಾಸಕ್ಕೂ ಆದಿಯಿಲ್ಲ. ಆದರೆ ಮಾನವನ ಇತಿಹಾಸ ಲೇಖನಕಾರ್ಯ ಗ್ರೀಕರ ಕಾಲದಿಂದ ಪ್ರಾರಂಭವಾಯಿತೆಂದು ಹೇಳಬಹುದು. ಅವರು ಇತಿಹಾಸದ ಮೂಲಪುರುಷರು; ಇತಿಹಾಸ ಲೇಖನವನ್ನು ಒಂದು ಪ್ರಜ್ಞಾಪೂರ್ವಕ ಕಲೆಯಾಗಿ ಮಾಡಿದವರು. ಅದು ಅಲ್ಲಿ ಕಾರ್ಯ ಮತ್ತು ವಾಗ್ಮಿತೆಗಳ ಇಮ್ಮಡಿ ಸ್ಫೂರ್ತಿಯಿಂದ ಅರಳಿತು. ಗ್ರೀಸಿನಲ್ಲಿ ಅಯೋನಿಯದ ವಿಮರ್ಶಾತ್ಮಕ ಮತ್ತು ವಿವೇಚನಾಯುಕ್ತ ಸತ್ಯದಿಂದ ಕೂಡಿದ ಸ್ಥಳೀಯ ಕಾವ್ಯದಿಂದ ಇತಿಹಾಸ ರೂಪಿತವಾಯಿತು. ಈ ನಿಟ್ಟಿನ ಪ್ರಥಮ ಬರಹಗಾರರನ್ನು ಲಗಾಗ್ರಫರ್ ಅಥವಾ ಗದ್ಯಾತ್ಮಕ ಚರಿತ್ರಲೇಖಕರೆಂದು ಕರೆಯಲಾಗುತ್ತಿತ್ತು. ನಗರಗಳ, ಜನಾಂಗಗಳ, ಕಾರ್ತೇಜಿಯನರ, ದೇವಾಲಯಗಳ ಉಗಮಗಳನ್ನು ಕುರಿತ ಸಾಂಪ್ರದಾಯಿಕ ನಂಬಿಕೆಗಳನ್ನೂ ಪುರಾಣಗಳನ್ನೂ ಅವರು ಸರಳ ಗದ್ಯದಲ್ಲಿ ನಿರೂಪಿಸಿದರು. ಕ್ರಮೇಣ ಸ್ಥಳೀಯ ಘಟನೆಗಳು ಪುರಾಣಗಳ ಮತ್ತು ದಂತಕಥೆಗಳ ಸ್ಥಾನದಲ್ಲಿ ಲೇಖನದ ಮುಖ್ಯವಸ್ತು ಗಳಾದುವು. ಪಾತ್ರಗಳನ್ನೂ ವ್ಯಕ್ತಿತ್ವಗಳನ್ನೂ ಚಿತ್ರಿಸುವ ಕಾರ್ಯ ಶೀಘ್ರವಾಗಿ ಆರಂಭವಾಯಿತು. ಜನರ, ವಸ್ತುಗಳ ಚರಿತ್ರೆ; ಮಹಾ ರಾಷ್ಟ್ರಗಳ, ಚಿಕ್ಕ ನಗರಗಳ ಚರಿತ್ರೆ; ರಾಜಕೀಯ, ಸಾಹಿತ್ಯ ಮತ್ತು ಸೈನಿಕ ದಾಖಲೆಗಳು–ಇವೆಲ್ಲವನ್ನೂ ನಿರೂಪಿಸತೊಡಗಿದರು. ಗ್ರೀಕರು ಏನನ್ನೂ ತೊರೆಯಲಿಲ್ಲ, ಅಲಕ್ಷಿಸಲಿಲ್ಲ, ವಿಷಯ ನಿರೂಪಣೆಯೆ ಅವರ ಮುಖ್ಯೋದ್ದೇಶ.

ಇತಿಹಾಸದ ಪಿತಾಮಹ ಹೀರಡಟಸನಿಂದ ಮುಂದಕ್ಕೆ ಲಗಾಗ್ರಫರ್ ಮತ್ತು ಇತಿಹಾಸಕಾರರ ನಡುವಣ ವ್ಯತ್ಯಾಸ ಅಳಿಸಿಹೋಯಿತು. ಗ್ರೀಕರಿಗೂ ಪರ್ಷಿಯನ್ನರಿಗೂ ನಡುವೆ ನಡೆದ ಘರ್ಷಣೆಗಳೇ ಹೀರಡಟಸನ ಬರಹದ ವಸ್ತು. ಕಥೆಗಾರನಾಗಿ ಹೀರಡಟಸನನ್ನು ಇದುವರೆಗೂ ಯಾರೂ ಮೀರಿಸಿಲ್ಲ. ಪುರಾಣಯುಗಕ್ಕೆ ಬಹಳ ಹತ್ತಿರದವನಾಗಿದ್ದು ಅದರ ಸರಳತೆ ಸಹಜತೆಗಳನ್ನೂ ಕಾವ್ಯದ ಚೆಲುವನ್ನೂ ಆತ ಉಳಿಸಿಕೊಂಡಿದ್ದಾನೆ. ಹೀರಡಟಸ್ ಚರಿತ್ರೆಯ ಜನಕ ಮಾತ್ರವೇ ಅಲ್ಲ; ಗದ್ಯಲೇಖಕ. ಆತನೊಬ್ಬ ನೀತಿವಾದಿಯೂ ಆಗಿದ್ದ. ಚರಿತ್ರೆಯನ್ನು ನಿದರ್ಶನಗಳ ಮೂಲಕ ಬೋಧಿಸುವುದರಲ್ಲಿ ಆತನಿಗೆ ನಂಬಿಕೆ. ಹೀರಡಟಸ್ ಒಂಬತ್ತು ಪುಸ್ತಕಗಳನ್ನು ರಚಿಸಿದ. ಇವುಗಳಲ್ಲಿ ಒಂದೊಂದಕ್ಕೂ ಒಬ್ಬೊಬ್ಬ ಕಲಾಭಿಮಾನಿ ದೇವತೆಯ ಹೆಸರು. ಅವನ ಬರವಣಿಗೆಯಲ್ಲಿ ಒಂದು ಹೊಂದಾಣಿಕೆ ಯುಂಟು. ಇತಿಹಾಸ ಬರಹಗಾರರಲ್ಲೆಲ್ಲ ಅಮರತ್ವದ ಹತ್ತಿರ ಹತ್ತಿರ ಹೋದವನೆಂದರೆ ಹೀರಡಟಸ್.

ಗ್ರೀಕ್ ಚರಿತ್ರೆಯಲ್ಲಿ ಮುಂದಿನ ಹಿರಿಯ ಹೆಸರು ಥ್ಯೂಸಿಡಿಡಿಸ್. ಈತನದು ಚಿಂತನಪರ ಚೇತನ. ಘಟನೆಗಳು ಹೇಗೆ ಸಂಭವಿಸಿದುವು, ಏಕೆ ಸಂಭವಿಸಿದುವು ಎಂಬುದನ್ನು ಮನಗಾಣುವುದರಲ್ಲಿ ಇವನ ಆಸಕ್ತಿ. ಹೀರಡಟಸ್ಸನ ಅನಂತರ 13 ವರ್ಷಗಳ ಮೇಲೆ ಈತ ಬಂದರೂ ಇವರಿಬ್ಬರ ಮನೋಧರ್ಮಗಳು ಬಹಳ ಭಿನ್ನ. ಥ್ಯೂಸಿಡಿಡಿಸ್ ಘಟನೆಗಳನ್ನು ನಿರೂಪಿಸುವಾಗ ಅವುಗಳ ಹಿಂದಿನ ಕಾರಣಗಳನ್ನರಿಯುವುದಕ್ಕೂ ಉದ್ದೇಶಗಳನ್ನು ಕಂಡುಹಿಡಿಯುವುದಕ್ಕೂ ಪ್ರಕ್ರಿಯೆಗಳನ್ನು ವಿವರಿಸುವುದಕ್ಕೂ ಅಷ್ಟೇ ಆಸಕ್ತಿಯನ್ನು ತೋರಿಸುತ್ತಿದ್ದ. ಈತನ ದೃಷ್ಟಿಯಲ್ಲಿ ಘಟನೆಗಳು ಬಿಡಿ ಬಿಡಿಯಲ್ಲ. ತರ್ಕಬದ್ಧವಾಗಿ ಶಾಶ್ವತವಾಗಿ ಪರಸ್ಪರ ಸಂಬಂಧವುಳ್ಳ ವಾಸ್ತವಾಂಶಗಳೆಂದು ಇವನ್ನು ಅಭ್ಯಾಸಮಾಡುವುದರಲ್ಲಿಯೇ ಇವನಿಗೆ ನಂಬಿಕೆ. ವಿಷಯಗಳ ಪ್ರತ್ಯಕ್ಷ ಮೂಲಗಳು ಪತ್ತೆಯಾಗದಾಗ ಈತ ಅನ್ಯಾಕ್ಸಗೊರಾಸ್ಸನ ಅನುಪಾತ ತರ್ಕಕ್ರಮವನ್ನನ್ವಯಿಸುತ್ತಿದ್ದ; ಘಟನೆಯ ಹಿಂದಿರಬಹುದಾದ ಕಾರಣಾನ್ವೇಷಣೆ ಮಾಡುತ್ತಿದ್ದ. ಒಟ್ಟಿನಲ್ಲಿ ಗ್ರೀಕ್ ವಿಮರ್ಶೆಯ ತತ್ತ್ವವನ್ನು ಚರಿತ್ರೆಗೆ ಅನ್ವಯಿಸಿದ. ಇದೇ ಅವನ ಹಿರಿಮೆ. ಅವಿಚಾರದ ನಂಬಿಕೆಗಳನ್ನಾಧರಿಸಿದ ಹೇಳಿಕೆಗಳನ್ನೆಲ್ಲ ತಳ್ಳಿ ಹಾಕಿದ. ಹದಿನೆಂಟನೆಯ ಶತಮಾನದ ವಿಚಾರಶೀಲನ ತೆರದಲ್ಲಿ ಆಗಿನ ದಿವ್ಯವಾಣಿಗಳಿಗೆ ಸಂದೇಹದ ಚಿಕಿತ್ಸೆ ಮಾಡಿದ. ಅವನ ನೀತಿಬೋಧೆ ಉನ್ನತವೂ ಮನಮುಟ್ಟುವಂಥದೂ ಆದದ್ದು. ರೋಮನ್ ಇತಿಹಾಸ ಲೇಖನದ ಉಪಯುಕ್ತತಾವಾದದಿಂದಾಗಲಿ. ಕ್ರೈಸ್ತ ಇತಿಹಾಸ ಲೇಖನದ ಆತ್ಮೋನ್ನತಿಕಾರಕ ಗುಣದಿಂದಾಗಲಿ ಬೇರೆಯಾದಂಥದು. ಯುದ್ಧ ತಮ್ಮಟೆ ಬಾರಿಸಿ ಕಹಳೆಯೂದುವುದೇ ಚರಿತ್ರೆಯ ಉದ್ದೇಶವೆಂಬ ವಾದವನ್ನು ಅವನು ಪ್ರತಿಪಾದಿಸಿದವನಲ್ಲ. ಯುದ್ಧತಂತ್ರವನ್ನು ಇತಿಹಾಸದ ಒಂದು ವೈಶಿಷ್ಟ್ಯವೆಂದು ಪರಿಗಣಿಸಿದ ಗ್ರೀಕ್ ಚರಿತ್ರಕಾರರಲ್ಲಿ ಇವನೇ ಮೊದಲಿಗ. ಇತಿಹಾಸದ ಆರ್ಥಿಕ ಅಂಶಗಳನ್ನು ಗಮನಕ್ಕೆ ತಂದುಕೊಂಡ ನೀತಿಜ್ಞನಾಗಿ ಇಡೀ ಪ್ರಪಂಚದ ಬರಹಗಾರರಲ್ಲಿ ಅತ್ಯಂತ ಶ್ರೇಷ್ಠರ ಪಂಕ್ತಿಗೆ ಸೇರದವನೀತ. ಜನಪ್ರಿಯ ಸರ್ಕಾರದಲ್ಲಿ ಈತನಿಗೆ ನಂಬಿಕೆ. ನಿರಂಕುಶ ಅಧಿಕಾರ ಹಾಗೂ ಸ್ವಲ್ಪ ಜನಾಧಿಪತ್ಯಗಳಲ್ಲಿ ದ್ವೇಷ. ಆದರೆ ಪ್ರಜಾಸತ್ತಾತ್ಮಕ ಸರ್ಕಾರದ ಸ್ವರೂಪ ದೌರ್ಬಲ್ಯಗಳ ಬಗ್ಗೆ ಇವನೆಂದೂ ಮೋಸಹೋಗಲಿಲ್ಲ. ಭಾವೋತ್ಕರ್ಷಭರಿತ ಉಕ್ತಿ ವೈಭವದಲ್ಲಿ ಪೆರಿಕ್ಲೀಸ್ ಮಾಡಿದ ಮೃತಸಮ್ಮುಖ ಭಾಷಣವನ್ನು ಮೀರಿಸುವಂಥದು ಬಲು ವಿರಳ. ಇಡೀ ಪೃಥ್ವಿಯೇ ಪ್ರಸಿದ್ಧ ವ್ಯಕ್ತಿಗಳ ಗೋರಿ ಎಂಬುದು ಆತನ ಹೇಳಿಕೆ. ಅವನು ಚರಿತ್ರೆಯ ಮೇಲೆ ಮಾತ್ರವಲ್ಲದೆ ಭಾಷಣಕಲೆಯ ಮೇಲೂ ಅಗಾಧವೂ ಶಾಶ್ವತವೂ ಆದ ಪ್ರಭಾವ ಬೀರಿದ. ಇಲ್ಲಿ ಹೆಸರಿಸಬೇಕಾದ ಮತ್ತೊಬ್ಬ ಗ್ರೀಕ್ ಇತಿಹಾಸಕಾರ ಸ಼ೆನಫನ್. ಈತ ಥ್ಯೂಸಿಡಿಡಿಸನಷ್ಟು ಆಳವಾದ ಚಿಂತನಶಕ್ತಿಯುಳ್ಳವನಾಗಲಿ ಹೀರಡಟಸನಷ್ಟು ಮೋಹಕಗುಣವುಳ್ಳವನಾಗಲಿ ಆಗಿರಲಿಲ್ಲ. ಇದು ಹಾಗಿರಲಿ; ಪ್ರಾಮಾಣಿಕತೆ, ಸ್ಪಷ್ಟತೆ ಹಾಗೂ ಬುದ್ಧಿವಂತಿಕೆಗಳು ಸ಼ೆನಫನ್ನನ ನಿರೂಪಣೆಯ ಲಕ್ಷಣ.

**ರೋಮನ್ ಇತಿಹಾಸ ಲೇಖನ:** ಎರಡನೆಯ ಪ್ಯೂನಿಕ್ ಕದನದ ಅಂತ್ಯದವರೆಗೂ ರೋಮ್ ಇತಿಹಾಸ ನಿರ್ಮಾಣ ಮಾಡುತ್ತಿತ್ತೇ ಹೊರತು ಅದನ್ನು ಬರೆಯುತ್ತಿರಲಿಲ್ಲ. ಸುಮಾರು 500 ವರ್ಷಗಳವರೆಗೆ ರೋಮಿನಲ್ಲಿ ಒಬ್ಬ ಚರಿತ್ರಕಾರನೂ ಇರಲಿಲ್ಲ. ಆಮೇಲೆ ಇದ್ದಕ್ಕಿದ್ದಂತೆ ಇತಿಹಾಸಮನೋಭಾವ ಮೂಡಿತು. ಈ ಸಾಹಿತ್ಯದ ಘಟನೆಗೆ ದೇಶಭಕ್ತಿಯ ಭಾವನೆಗಿಂತ ಮಿಗಿಲಾಗಿ ಗ್ರೀಕ್ ಸಾಹಿತ್ಯ ಪ್ರಭಾವವೇ ಕಾರಣ. ಮೊದಮೊದಲ ರೋಮನ್ ಇತಿಹಾಸಕಾರರು ಲ್ಯಾಟಿನ್ನಿಗೆ ಬದಲು ಗ್ರೀಕಿನಲ್ಲೇ ಬರೆದರು. ಅತ್ಯಂತ ಪ್ರಾಚೀನ ರೋಮನ್ ಇತಿಹಾಸಕಾರ ಫೇಬಿಯಸ್ ಪಿಕ್ಟರ್. ಆದರೆ ಹಿರಿಯ ಕೇಟೋನಿಂದ (ಪ್ರ.ಶ.ಪೂ. 234–149) ಮಾತ್ರವೇ ರೋಮನ್ ಇತಿಹಾಸ ಲೇಖನದ ವಸ್ತು, ವಿಧಾನ ಮತ್ತು ಭಾಷೆಗಳಲ್ಲಿ ಮಾರ್ಪಾಡಾಯಿತು. ಆತ ರೋಮನ್ ಚರಿತ್ರೆಯ ಸ್ಥಾಪಕ. ರೋಮನ್ ಇತಿಹಾಸ ಲೇಖನಶಾಸ್ತ್ರದಲ್ಲಿಯೇ ಒಂದು ಕ್ರಾಂತಿಯನ್ನುಂಟುಮಾಡಿದ ಸಮರ್ಥ ಲೇಖಕ. ಕೃತಿಯ ಉದ್ದಕ್ಕೂ ಯಾವ ವ್ಯಕ್ತಿಯನ್ನೂ ಹೆಸರಿಸದೆ, ಜನರಲ್, ಅನ್ವೇಷಕ, ಪೌರಸಂಸ್ಥಾನಾಧಿಕಾರಿ, ದಂಡಾಧಿಕಾರಿ, ರಾಯಭಾರಿ ಇತ್ಯಾದಿಯಾಗಿ ಅಧಿಕಾರನಾಮಗಳನ್ನು ಬಳಸಿರುವುದೇ ಆತನ ಬರೆವಣಿಗೆಯ ವೈಶಿಷ್ಟ್ಯ. ಹ್ಯಾನಿಬಾಲನನ್ನು ಕಾರ್ತೇಜಿನ ದಂಡನಾಯಕ ಎಂದು ಕರೆದಿದ್ದಾನೆ. ಅವನ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವ ಒಂದೇ ಒಂದು ಹೆಸರೆಂದರೆ ಆರಿಜಿನಿಸ್. ಇದು ಸೂರುಸ್ ಎಂಬ ರೋಮನ್ ಸೈನ್ಯದಲ್ಲಿದ್ದ ಒಂದು ಆನೆ. ಆತ ಹೆಸರುಗಳನ್ನು ಕೊಡದಿರಲು ಕಾರಣವೂ ಇತ್ತು. ನಿಜವಾಗಿ ಕಷ್ಟಪಡುವ ಕೃಷಿಕರು, ಸೈನಿಕರು ಮುಂತಾದವರನ್ನು ಬಿಟ್ಟು ಕೇವಲ ಕೆಲವು ಪ್ರಸಿದ್ಧರಾದ ವ್ಯಕ್ತಿಗಳನ್ನೇ ದೊಡ್ಡದು ಮಾಡಿ ಹೇಳುವುದು ತಪ್ಪು ಎಂದು ಆತನ ಭಾವನೆ. ರೋಮನ್ ಇತಿಹಾಸದಲ್ಲಿ ಮುಂದಿನ ಪ್ರಖ್ಯಾತ ಹೆಸರು ಜೂಲಿಯಸ್ ಸೀಸ಼ರ್ (ಮರಣ ಪ್ರ.ಶ.ಪೂ.44). ಆತನೊಬ್ಬ ರಾಜನೀತಿಜ್ಞ, ಯೋಧ, ಭಾಷಣಕಾರ, ಕವಿ, ವೈಯಾಕರಣಿ, ಚರಿತ್ರಕಾರ. ಗಾಲಿಕ್ ಯುದ್ಧವನ್ನು ಕುರಿತ ಅವನ ನಿರೂಪಣೆ ಕೇವಲ ಸೈನಿಕ ವರದಿಯಲ್ಲ. ಆ ಜನತೆಯ ಎಲ್ಲ ಮುಖಗಳ ಇತಿಹಾಸ. ಚರಿತ್ರೆಯಲ್ಲಿ ಸೀಸ಼ರನ ಅನಂತರದ ಕಾಲ ಬಹಳ ಮುಖ್ಯವಾದದ್ದು. ಆಗ ಲೈವೀ ಟ್ಯಾಸಿಟಸ್ ಎಂಬ ಎರಡು ಹೆಸರುಗಳು ಉಜ್ಜ್ವಲವಾಗಿ ಬೆಳಗಿದುವು. ಲೈವೀ ತನ್ನ ಮೊದಲನೆಯ ಇತಿಹಾಸ ಕೃತಿಯನ್ನು ಪ್ರ.ಶ.ಪೂ. 27ರಲ್ಲಿ ರಚಿಸಿದ. ಆತ ಬರೆದದ್ದಾರೂ ರೋಮಿನ ಹೆಗ್ಗಳಿಕೆಯಲ್ಲಿ ನಂಬುಗೆ ಮತ್ತು ನೂತನ ಸುವರ್ಣಯುಗವೊಂದರ ನಿರೀಕ್ಷೆಗಳಿಂದ. ಅವನು ಹುಟ್ಟಿದ್ದು ಪ್ರ.ಶ.ಪೂ. 59ರಲ್ಲಿ–ಪಡ್ವಾದಲ್ಲಿ. ಸತ್ತದ್ದು ಪ್ರ.ಶ. 17ರಲ್ಲಿ–ರೋಮನ್ ಗಣರಾಜ್ಯದ ಪತನವನ್ನೂ ಸಾಮ್ರಾಜ್ಯದ ಉಗಮವನ್ನೂ ಕಂಡಾಗ. ಆಗಸ್ಟಸ್‌ನ ಆಳ್ವಿಕೆಯಿಡೀ ಲೈವೀ ಜೀವಿಸಿದ್ದ. ಅದನ್ನು ಚಕ್ರಾಧಿಪತ್ಯದ ಸುವರ್ಣಯುಗವೆಂದು ಯಥಾರ್ಥವಾಗಿ ಕರೆಯಲಾಗಿದೆ. ರೋಮನ್ ಇತಿಹಾಸವನ್ನು ಲೈವೀ ಮೂರು ಘಟ್ಟಗಳಾಗಿ ವಿಭಾಗಿಸುತ್ತಾನೆ. ಭವ್ಯಯುಗ, ಪ್ರಾಚೀನ ಯುಗ ಮತ್ತು ಆಧುನಿಕ ಯುಗ. ತಾನು ಏನನ್ನು ಬರೆಯಬೇಕು ಎಂಬುದರ ಸ್ಪಷ್ಟಚಿತ್ರ ಅವನಿಗಿತ್ತು. ಯುದ್ಧಗಳ ವರ್ಣನೆಯಲ್ಲಿ ಮಿತ. ಆದರೆ ಆ ಯುದ್ಧವನ್ನುಂಟುಮಾಡಿದ ಕಾರಣಗಳು, ಪರಿಸ್ಥಿತಿಗಳು ಮತ್ತು ಪ್ರಕ್ರಿಯೆಗಳನ್ನು ನಿರೂಪಿಸುವಲ್ಲಿ ವಿಸ್ತಾರ–ಇದು ಅವನ ಬರೆವಣಿಗೆಯ ಲಕ್ಷಣ. ಲೈವೀಯ ದೃಷ್ಟಿಯಲ್ಲಿ ಚರಿತ್ರೆ ಕಾವ್ಯಾತ್ಮಕ ಅಭಿವ್ಯಕ್ತಿಯ ಒಂದು ಮಾದರಿ. ನೀತಿಯನ್ನೂ ಪೌರಲಕ್ಷಣಗಳನ್ನೂ ಬೋಧಿಸಿ ರಾಷ್ಟ್ರಪ್ರೇಮವನ್ನು ಉಕ್ಕಿಸುವುದೇ ಉದ್ದೇಶ. ಚರಿತ್ರೆ ಒಂದು ಕಲೆ, ವಿಮರ್ಶಾತ್ಮಕ ವಿಜ್ಞಾನವಲ್ಲ. ಹಾಗಾಗಿ ಅವನ ಕೃತಿಯಲ್ಲಿ ವಿರೋಧಗಳೂ ಕಾಲ ನಿರ್ಣಯದ ದೋಷಗಳೂ ಬಹಳ ಇವೆ. ವರ್ಣನಾಶಕ್ತಿ ಹಾಗೂ ಶಬ್ದಮಾಧ್ಯಮದಿಂದ ವ್ಯಕ್ತಿಚಿತ್ರ ನಿರ್ಮಾಣ–ಇವು ಆತನ ಲೇಖನದ ಸಲ್ಲಕ್ಷಣಗಳು. ಆತ ಬರೆದ ಜೀವನಚರಿತ್ರೆಗಳಂತೂ ಅತ್ಯಂತ ಸುಂದರ.

ಲೈವೀಯ ಅನಂತರ ಮುಖ್ಯನಾದವನೆಂದರೆ ಸಿ. ಕಾರ್ನೀಲಿಯಸ್ ಟ್ಯಾಸಿಟಸ್; ರೋಮನ್ ಇತಿಹಾಸಲೇಖಕರಲ್ಲಿ ಇವನದು ಅತ್ಯಂತ ಶ್ರೇಷ್ಠನಾಮ. ಗ್ರೀಕ್ ಇತಿಹಾಸ ಲೇಖಕರಲ್ಲಿ ಥ್ಯೂಸಿಡಿಡಿಸನ ಹಾಗೆ ಈತ ವಿಪುಲವಾಗಿ ಬರೆದಿದ್ದಾನೆ. ಪ್ರ.ಶ. 55ರಲ್ಲಿ ಹುಟ್ಟಿದ ಈತ ಸತ್ತದ್ದು ಸುಮಾರು 120ರಲ್ಲಿ. ಇವನದು ಶ್ರೀಮಂತ ಮನೆತನ. ಪತ್ರಾಗಾರದಲ್ಲಿ ಕುಳಿತು ಬೇಕಾದಷ್ಟು ಸಂಶೋಧನೆಗಳನ್ನು ಮಾಡಿದನಾದರೂ ಈತ ಅನುಸರಿಸಿದ ವಿಧಾನ ಮಾತ್ರ ಒಬ್ಬ ಭಾಷಣಕಾರನದು. ಇವನಿಗೆ ವಿಷಯಗಳನ್ನು ಖಚಿತವಾಗಿ ತಿಳಿದುಕೊಂಡು ಅವನ್ನು ವಾಸ್ತವವಾಗಿ ನಿರೂಪಿಸುವುದರಲ್ಲಿ ಆಸಕ್ತಿ ಕಡಿಮೆ; ಆದರೆ ಚಕ್ರವರ್ತಿಗಳನ್ನು, ಆ ಮೂಲಕ ಸಾರ್ವಭೌಮ ಅಧಿಕಾರವನ್ನು ಆಕ್ಷೇಪಿಸುವುದರಲ್ಲಿ ಹೆಚ್ಚು ಇಷ್ಟ; ಅತ್ಯುನ್ನತ ವಿಶ್ಲೇಷಣ ಶಕ್ತಿ, ಮನಶ್ಶಾಸ್ತ್ರೀಯ ಹಾಗೂ ಶೀಲಗುಣ ವಿಶ್ಲೇಷಣೆಯಲ್ಲಿ ಇವನದು ಎತ್ತಿದ ಕೈ. ಇದರೊಂದಿಗೆ ಮಹತ್ತಮ ವಿಡಂಬನಯುಕ್ತಿಯೂ ಇದೆ. ಆದರೆ ಚಾರಿತ್ರಿಕ ಸತ್ಯ ದೃಷ್ಟಿಯಿಂದ ಹೇಳುವುದಾದರೆ ಅವನ್ನು ಓದುವಾಗ ಸ್ವಲ್ಪ ಎಚ್ಚರಿಕೆ ಅಗತ್ಯ. ಏಕೆಂದರೆ ಅವನು ಮಕಾಲೆಯ ಹಾಗೆ. ವಿಷಯಗಳ ಖಚಿತತೆಗಿಂತ ಸಾಹಿತ್ಯಕ ಪ್ರತಿಭೆಗೆ ಹೆಸರಾದವ. ಪ್ರಥಮತಃ ನೀತಿಬೋಧಕನಾದ ಟ್ಯಾಸಿಟಸ್ಸನಿಗೆ ಚರಿತ್ರೆಯೂ ಒಂದು ನೀತಿಪಾಠ. ಅವನ ಶೈಲಿ ಸ್ವಲ್ಪ ಪೆಡಸಾದರೂ ಭಾವಗರ್ಭಿತ. ಕೆಲವೊಮ್ಮೆ ಅವನ ಆಲೋಚನೆಗಳು ಬಲು ಸಂಕ್ಷಿಪ್ತ, ಸಾಂದ್ರ, ಭಾರ. ಅವುಗಳ ಅಡಿಯಲ್ಲಿ ಭಾಷೆ ಮುಚ್ಚಿಹೋದಂತೆ ಕಾಣುತ್ತದೆ. ಆತ ಪ್ರಮುಖವಾಗಿ ತಾತ್ತ್ವಿಕ ಚರಿತ್ರಕಾರ. ಹಾಗೆಯೇ ಮಹಾನ್ ರೋಮನ್ ಇತಿಹಾಸಕಾರರಲ್ಲಿ ಬಹುತೇಕ ಕೊನೆಯವ.

**ಚರ್ಚ್ ಇತಿಹಾಸ ಲೇಖನ:** ಪ್ರ.ಶ. 5ನೆಯ ಶತಮಾನದಿಂದ 13ನೆಯ ಶತಮಾನದವರೆಗೆ–ಹತ್ತಿರ ಹತ್ತಿರ 800 ವರ್ಷಗಳ ಕಾಲ–ಕ್ರೈಸ್ತ ಲೇಖಕರು ಈ ಕ್ಷೇತ್ರವನ್ನಾಳಿದರು. ಅವರೆಲ್ಲರೂ ಧರ್ಮಾಧಿಕಾರಿಗಳು. ಅವರು ಬರೆದ ಸುವಾರ್ತೆಗಳಲ್ಲಿ ಚಾರಿತ್ರಿಕ ಮೌಲ್ಯ ಬಲು ಕಡಿಮೆ. ಏಕೆಂದರೆ ಧಾರ್ಮಿಕ ಕೃತಿಗಳೆಂದೇ ಅವುಗಳ ರಚನೆ, ಚರಿತ್ರೆಗಳೆಂದಲ್ಲ. ಅಲ್ಲದೆ ಅವು ಸಾಮಾನ್ಯವಾಗಿ ಭಾವಿಸಿರುವುದಕ್ಕಿಂತ ಈಚಿನ ಕಾಲದವು. ಮೊದಲಿನಿಂದಲೂ ಚರ್ಚ್ ಇತಿಹಾಸಲೇಖನ ವಿಕ್ಷಿಪ್ತವಾದದ್ದು. ಇದಕ್ಕೆ ನಾನಾ ಕಾರಣಗಳುಂಟು. ಅದು ಯಹೂದ್ಯರ ಇತಿಹಾಸವನ್ನೇ ಪ್ರಶ.ಪೂ. ಇತಿಹಾಸವೆಂದು ಬಗೆದು, ಅದರಲ್ಲಿ ಸತ್ಯಾಂಶವಿಷ್ಟು, ನಂಬಿಕೆಯ ಅಂಶವಿಷ್ಟು ಎಂದು ವಿವೇಚಿಸದೆಯೇ ಒಪ್ಪಿಕೊಂಡದ್ದು ಮೊದಲನೆಯ ಕಾರಣ. ದಿವ್ಯದರ್ಶನವೂ ಜ್ಞಾನಸಂಪಾದನೆಗೊಂದು ಮುಖ್ಯ ಮೂಲವೆಂದು ಅವರು ತಿಳಿದದ್ದು ಎರಡನೆಯ ಕಾರಣ. ಇದು ಧರ್ಮದಲ್ಲಿ ಸ್ವೀಕೃತವಾದರೂ ಚಾರಿತ್ರಿಕ ತತ್ತ್ವಗಳಿಗೆ ವಿರುದ್ಧ. ಮೂರನೆಯದಾಗಿ ಪವಿತ್ರ ಅಥವಾ ಧಾರ್ಮಿಕ ಇತಿಹಾಸವನ್ನು ಏಕೈಕ ಸತ್ಯ ಇತಿಹಾಸವೆಂದು ಪರಿಗಣಿಸಿ, ಲೌಕಿಕ ಇತಿಹಾಸವನ್ನು ತೀವ್ರದೋಷಗಳು ತುಂಬಿದುವು. ಶಾಸ್ತ್ರೀಯವೆಂದು ಅದನ್ನು ಪರಿಗಣಿಸಲು ಸಾಧ್ಯವಾಗಲಿಲ್ಲ. ವಿಷಯಗಳ ಪ್ರಾಮಾಣಿಕ ವ್ಯಾಖ್ಯಾನದ ಮೇಲೆ ಅವಲಂಬನಗೊಂಡ ಕ್ರೈಸ್ಥ ಧರ್ಮದ ಚರಿತ್ರೆಯೊಂದು ಇಲ್ಲದ್ದಕ್ಕಾಗಿ ಗಯಟೆ ಮರುಗಿದ.

ಚರ್ಚ್ ನಿಜವಾಗಿ ಐತಿಹಾಸಿಕ ಪ್ರವೃತ್ತಿ ಪಡೆಯುವುದಕ್ಕೆ ಮೂರು ಶತಮಾನಗಳು ಬೇಕಾದವು. ಗ್ರೀಕ್ ಮತ್ತು ರೋಮನ್ ಸಮಾಜಗಳು ವ್ಯಕ್ತಿಯನ್ನು ರಾಜ್ಯಕ್ಕೆ ಅಧೀನವಾಗಿ ಮಾಡಿದ್ದವು. ಆದರೆ ಕ್ರೈಸ್ತಧರ್ಮ ಗುರುತ್ವಕೇಂದ್ರವನ್ನು ರಾಜ್ಯದಿಂದ ವ್ಯಕ್ತಿಗೆ ವರ್ಗಾಯಿಸಿತು. ಹಾಗೆಯೇ ಅದು ವರ್ತಮಾನದಿಂದ ಭವಿಷ್ಯತ್ತಿಗೆ ಬದಲಾಯಿಸಿತು. ಪ್ರಾಚೀನ ಕ್ರೈಸ್ತರಿಗೆ ಗತಕಾಲದಲ್ಲಿ ಆಸಕ್ತಿಯಿರಲಿಲ್ಲ. ಆದರೆ ಕಾಲಕ್ರಮೇಣ ಚರಿತ್ರೆಯ ಅಗತ್ಯ ವ್ಯಕ್ತವಾಯಿತು. ಚರ್ಚಿನ ನಿಷ್ಠಾವಂತರ ನಂಬಿಕೆಯನ್ನು ಬಲಪಡಿಸುವುದಕ್ಕೂ ಆತ್ಮೋನ್ನತಿಗೂ ಚರಿತ್ರೆಯ ಬೆಂಬಲ ಬೇಕಾಯಿತು.

ಮೊದಲನೆಯ ಮುಖ್ಯ ಕ್ರೈಸ್ತ ಚರಿತ್ರಕಾರ ಸೆಕ್ಸ್‌ಟಸ್ ಜೂಲಿಯಸ್ ಆಫ್ರಿಕಾನಸ್. ಆದರೆ ಮತೀಯ ಇತಿಹಾಸದ ಪಿತಾಮಹ ಯೂಸಿಬಿಯಸ್ (260–340). ಈತ ರೋಮನ್ ಸಾಮ್ರಾಜ್ಯದ ಅತ್ಯಂತ ಶ್ರೀಮಂತ ಗ್ರಂಥಭಂಡಾರವಿದ್ದ ಪ್ಯಾಲೆಸ್ಟೈನಿನಲ್ಲಿದ್ದು

ಕೆಲಸಮಾಡಿದ. ಏಬ್ರಹಮನ ಜನನದಿಂದ ಈತನ ಚರಿತ್ರೆ ಪ್ರಾರಂಭ. ಯೂಸಿಬಿಯಸನ ಕೃತಿಗಳಿಂದಾಗಿ ಚರಿತ್ರ ಲೇಖನಗಳ ಒಂದು ಸಮೂಹವೇ ಸೃಷ್ಟಿಯಾಯಿತು. ಸಂತರನ್ನು ಮೇಲೇರಿಸಿರುವುದೇ ಚರ್ಚ್ ಇತಿಹಾಸದ ವೈಶಿಷ್ಟ್ಯ–ಪೇಗನರಲ್ಲಿ ಪ್ರಚಲಿತವಿದ್ದ ನಾಯಕ ಪೂಜೆಯ ತೆರ. ಮತ್ತೊಬ್ಬ ಪ್ರಸಿದ್ಧ ಇತಿಹಾಸಕಾರ 5ನೆಯ ಶತಮಾನದ ಸಲ್ಪಿಸಿಯಸ್ ಸೆವೆರಸ್. ವಿವೇಚನೆ ಹಾಗೂ ರಚನಾತ್ಮಕ ಚಿಂತನೆಯೇ ಇವನ ಬರೆಹದ ಗುಣ. ಹಿಂದಿನವರಲ್ಲಿ ಯಾರೂ ಇವನು ಹೊಂದಿದ್ದ ಮಟ್ಟದಲ್ಲಿ ಇತಿಹಾಸದ ನಿರಂತರತೆಯ ಕಲ್ಪನೆ ಹೊಂದಿರಲಿಲ್ಲ. ಚರ್ಚಿನ ಅತ್ಯಂತ ಶ್ರೇಷ್ಠ ಇತಿಹಾಸಕಾರ ಸೇಂಟ್ ಆಗಸ್ಟೀನ್ (354–430). ಇವನೊಬ್ಬ ದೇವತಾ ಶಾಸ್ತ್ರಜ್ಞ, ಉಪದೇಶಕ, ಉಪಾಧ್ಯಾಯ, ಕವಿ, ಚಿಂತಕ. ದೇವರ ನಗರವೆಂಬುದು ಈತನ ಹಿರಿಯ ಕೃತಿ. ಇದನ್ನು 22 ಸಂಪುಟಗಳಲ್ಲಿ ಬರೆದ. ಇದು ವಿಶ್ವದ ಅತಿ ಶ್ರೇಷ್ಠ ಗ್ರಂಥಗಳಲ್ಲೊಂದು. ರಾಜ್ಯ ಮನುಷ್ಯನಿರ್ಮಿತ. ಆದ್ದರಿಂದ ಇದರಲ್ಲಿ ಕೆಡುಕು ಧಾರಾಳ. ಆದರೆ ಭಗವಂತನ ಸಾಮ್ರಾಜ್ಯವಾದರೋ ಸ್ವರ್ಗ. ಚರ್ಚಿಗೆ ದೈವೀ ತಳಹದಿಯಿದೆ. ಭೂಮಿಯ ಮೇಲೆ ಆ ಸ್ವರ್ಗೀಯ ದರ್ಶನವನ್ನು ಎಷ್ಟರಮಟ್ಟಿಗೆ ಅರಿತುಕೊಳ್ಳಲು ಸಾಧ್ಯವೋ ಅಷ್ಟು ಅದರ ಅಧಿಕಾರ. ಚರ್ಚಿನ ರಾಜ್ಯ, ಸ್ವರ್ಗ ರಾಜ್ಯದ ಪ್ರತಿಬಿಂಬ. ಶಾಶ್ವತವಾದ ದೇವರ ರಾಜ್ಯದೆದುರು ಭೂಮಿಯ ಸಾಮ್ರಾಜ್ಯದ ವೈಭವಗಳೆಲ್ಲ ಕಳಾಹೀನ. ಮಾನವನ ಆಗುಹೋಗುಗಳನ್ನು ಕುರಿತು ನಗಬೇಕಾಗಿಲ್ಲ. ದುಃಖಪಡಬೇಕಾದದ್ದೂ ಇಲ್ಲ. ಅವುಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕು. ಇದು ಈ ಕೃತಿ ಸಾರುವ ಸಂದೇಶ. ಇದು ಮಧ್ಯಯುಗದ ಅತ್ಯಂತ ಪ್ರಭಾವಯುತವಾದ ರಾಜಕೀಯ ತತ್ತ್ವದ ನಿರೂಪಣೆಯಿದು. ಮಾನವನ ಆಗುಹೋಗುಗಳು ಭಗವಂತನಿಂದ ನಿಯಂತ್ರಿತ. ಅವನ ಕೈಯಲ್ಲಿನ ಕೇವಲ ಕುರುಡು ಉಪಕರಣಗಳೇ ಮಾನವರು. ಇವನನ್ನು ನಡೆಸುವ ದಾರಿ, ವಿಧಾನಗಳು ಅವನೊಬ್ಬನಿಗೇ ಗೊತ್ತು. ಆದರೆ ಅವು ಅತ್ಯಂತ ಅರ್ಥಪೂರ್ಣವಾದ ದಾರಿಗಳು. ರಾಜ್ಯ ಮತ್ತು ಚರ್ಚು ಇವುಗಳ ನಡುವಣ ಸಂಬಂಧವನ್ನು ಕುರಿತು ವಿವೇಚನೆ ನಡೆಸುವ ಯತ್ನವಾದದ್ದು ಅದೇ ಮೊದಲು. ಮುಂದೆ ಬಂದ ಎಲ್ಲ ಪೋಪರೂ ಆಗಸ್ಟೀನನ ವಿಚಾರವನ್ನೇ ಆಧಾರವಾಗಿಟ್ಟು ಕೊಂಡು ಸಾಮ್ರಾಜ್ಯದ ಮೇಲೆ ಪೋಪರ ಮೇಲ್ಮೆಯನ್ನು ಪ್ರತಿಪಾದಿಸಿದರು. ಉತ್ತಮ ಕಾನೂನುಗಳನ್ನೂ ಮಾನವನ ವ್ಯವಹಾರಗಳಿಗೆ ಉನ್ನತ ಸಿದ್ಧಾಂತವನ್ನೂ ನೀಡುವುದೇ ಅದರ ಗುರಿ. ಹೀಗಾಗಿ, ಪ್ಲೇಟೋವಿನ ರಿಪಬ್ಲಿಕ್, ಸರ್ ಥಾಮಸ್ ಮೋರನ ಯುಟೋಪಿಯ, ಫ್ರಾನ್ಸಿಸ್ ಬೇಕನನ ಅಟ್ಲಾಂಟಿಸ್ ಮತ್ತು ಕ್ಲಾಂಪನೆಲ್ಲಾನ ಸಿಟಿ ಆಫ್ ದಿ ಸನ್‌ಗಾಡ್‌ಗಳ ಶ್ರೇಣಿಯಲ್ಲಿ ಅವರ ಕೃತಿಗಳು ನಿಲ್ಲುತ್ತವೆ.

**ಅರಬ್ಬೀ ಇತಿಹಾಸ ಲೇಖನ:** ಇಸ್ಲಾಮ್‌ಪೂರ್ವ ಇತಿಹಾಸಲೇಖನವೇನಿದ್ದರೂ ಅರ್ಧ ಪುರಾಣ, ಅರ್ಧ ಚರಿತ್ರೆ. ಕಾವ್ಯವೇ ಚರಿತ್ರೆಯ ವಾಹಕ. ಮಹಮದ್ ಬಿನ್ ಇಷ್ಕಾಲ್ (ಮರಣ 767) ಪ್ರವಾದಿ ಮಹಮ್ಮದನ ಜೀವನವನ್ನು ಕುರಿತು ಬರೆದ ಮೊಟ್ಟಮೊದಲ ಚರಿತ್ರಕಾರ. ಎಲ್ಲ ಸಿಮೆಟಿಕ್ ಜನರಂತೆಯೇ ಅರಬ್ಬರು ಪೀಳಿಗೆಯ ಬಗ್ಗೆ ನಿಷ್ಠೆಯುಳ್ಳವರು. ಚರಿತ್ರೆಗೆ ಅರಬ್ಬರ ಅತ್ಯಮೂಲ್ಯವಾದ ಕೊಡುಗೆಯೆಂದರೆ ಇಸ್‌ನಾದ್. ಘಟನೆಯಲ್ಲಿ ಭಾಗವಹಿಸಿದವರ ಅಥವಾ ಅದನ್ನು ಕಣ್ಣಾರೆ ಕಂಡ ಮೂಲ ವ್ಯಕ್ತಿಗಳ ಅಧಿಕೃತ ಸಾಕ್ಷ್ಯ ಸರಣಿಯ ಮೇಲೆ ಕಟ್ಟಿದ ನಿರೂಪಣೆಯೆಂದು ಇದರ ಅರ್ಥ. ಎಚ್ಚರಿಕೆಯಿಂದ ಕಾಲನಿರ್ಣಯ ಮಾಡುವ ಕ್ರಮ ಇದರಲ್ಲಿ ಅಡಕವಾಗಿತ್ತು. ಮುಸ್ಲಿಂ ಕಾಲಗಣನೆ ಹಿಜಿರದಿಂದ, ಅಂದರೆ ಮಹಮದ್ ಮೆಕ್ಕದಿಂದ ಓಡಿಹೋದಾಗಿನಿಂದ (ಪ್ರ.ಶ.622) ಪ್ರಾರಂಭವಾಗುತ್ತದೆ. ಇದು ಕಾಲಾನುಕ್ರಮಣಿಕೆಯ ಏಕರೂಪತೆ ಸರಳತೆಗಳನ್ನು ಆಗಮಾಡಿತು.

ಅರಬ್ಬೀ ಸಾಹಿತ್ಯದ ಅಭಿಜಾತಯುಗ ಪ್ರ.ಶ. 750ರಿಂದ 1000ರ ವರೆಗೆ ವ್ಯಾಪಿಸುತ್ತದೆ. ಮೊದಲಿಗೆ ಮದೀನವೇ ಜ್ಞಾನ ಕೇಂದ್ರವಾಗಿದ್ದು, ಬೇಗನೆ ಅದು ದಮಾಸ್ಕಸಿಗೂ ಆಮೇಲೆ ಬಾಗ್ದಾದಿಗೂ ವರ್ಗಾವಣೆ ಹೊಂದಿತು. ಮುಸ್ಲಿಂ ಇತಿಹಾಸ ಲೇಖನ ಅಚ್ಚರಿಗೊಳಿಸುವಷ್ಟು ಮಟ್ಟಿಗೆ ಹಿಂದಿನ ಸಂಪ್ರದಾಯದಿಂದ ವಿಮುಕ್ತವಾಗಿತ್ತು. ಯಾವುದೇ ಬಗೆಯಾದ ಗ್ರೀಕ್ ಅಥವಾ ರೋಮನ್ ಪ್ರಭಾವ ಅದರ ಮೇಲೆ ಬಿದ್ದಿರಲಿಲ್ಲ. ಇಸ್ಲಾಮೀ ಸಾಮ್ರಾಜ್ಯದ ವಿಸ್ತರಣದಿಂದ ದೇವತಾಶಾಸ್ತ್ರ, ನ್ಯಾಯಶಾಸ್ತ್ರ ಮತ್ತು ಭಾಷಾಶಾಸ್ತ್ರಗಳನ್ನು ಬೆಳೆಸಲಾಯಿತು. ಅವುಗಳಿಂದ ಚರಿತ್ರೆ ಹೊರಚಿಮ್ಮಿತು. ಅಬ್ಬಾಸಿದ್ ಯುಗದ ಪ್ರಾರಂಭದಿಂದ (750) ಮುಂದಣ ಇತಿಹಾಸ ಹೊಸಬಗೆಯ ಭವ್ಯತೆ, ಗಾಂಭೀರ್ಯಗಳನ್ನು ಪ್ರದರ್ಶಿಸತೊಡಗಿದಾಗ ವಿಶ್ವಕೋಶ ಸದೃಶ ಪಂಡಿತ ಭಾಷೆಗೆ ಅನುವಾದವಾದವು. ಇದರಿಂದ ಚರಿತ್ರ ಲೇಖನಕ್ಕೆ ಹೊಸದೊಂದು ಪ್ರಚೋದನೆ ಲಭಿಸಿತು. ಇಬ್ನ್ ಯಾಹ್ಯ (ಮರಣ 774) ಎಂಬುವನು ಬೇರೆ ಬೇರೆ ವ್ಯಕ್ತಿಗಳನ್ನು ಕುರಿತ 33 ಪ್ರಬಂಧಗಳನ್ನು ಬರೆದ. ಆದರೆ ಅವನ ಮಹತ್ವದ ಕೃತಿ ಇರಾಕ್ ವಿಜಯ ಕುರಿತ ಚರಿತ್ರೆ. ವಾಕಿದಿ (760–837) ಎಂಬುವನು ಕಿತಾಬ್–ಅಲ್–ಮಗಾಜಿಯನ್ನು ಬರೆದ. ಅದು ಇಸ್ಲಾಮಿನ ಸೈನ್ಯ ವಿಸ್ತರಣವನ್ನು ಕುರಿತ ಬರಹ. ಅವನು ಪ್ರವಾಸದಲ್ಲಿ ಯಾವಾಗಲೂ ತನ್ನ ಇಡೀ ಗ್ರಂಥಭಂಡಾರವನ್ನು 120 ಒಂಟೆಗಳ ಮೇಲೆ ಹೇರಿ ಒಯ್ಯುತ್ತಿದ್ದ. ಅಲ್‌ಮದೈನಿ (830–845) ಇನ್ನೊಬ್ಬ ಚರಿತ್ರಕಾರ. ಉತ್ತರ ಆಫ್ರಿಕ, ಸ್ಪೇನ್‌ಗಳಲ್ಲಿ ಇಸ್ಲಾಂ ಪ್ರಸಾರವೇ ಇವನ ಕೃತಿವಸ್ತು. ಸಿರಿಯ, ಮೆಸೊಪೊಟೇಮಿಯ, ಆರ್ಮೀನಿಯ, ಈಜಿಪ್ಟ್, ಸೈಪ್ರಸ್, ಆಫ್ರಿಕ ಮತ್ತು ನ್ಯೂಬಿಯಗಳ ವಿಜಯವನ್ನು ಕುರಿತದ್ದು, ಅಲ್‌ಬಲಾಧುರಿಯ ಕೃತಿ. ಆತನ ಎಲ್ಲ ಕೃತಿಗಳ ಹೆಸರುಗಳನ್ನು ಪಟ್ಟಿ ಮಾಡಲು ಅಚ್ಚಿನ 5 ಪುಟ ಬೇಕು. ಅಲ್–ಫಖ್ರಿ ಆ ಯುಗದಲ್ಲಿ ಬಂದ ಮತ್ತೊಬ್ಬ ಚರಿತ್ರಕಾರ. ಅವನ ಬರೆವಣಿಗೆ ಚಿತ್ರಪೂರ್ಣ. ಆಲ್ಬೆರೂನಿ (1048) ಹಿಂದಿನ ತಲೆಮಾರಿನ ಉಳಿದಿರುವ ಸ್ಮಾರಕದ ಕರ್ತೃ. ಆತನ ಭಾರತಚರಿತ್ರೆ ವಿಷಯದಲ್ಲೂ ವೈಜ್ಞಾನಿಕ ವಿಧಾನದಲ್ಲೂ ಅರಬ್ಬೀ ಸಾಹಿತ್ಯದಲ್ಲೇ ಅಪೂರ್ವ, ಐತಿಹಾಸಿಕ ವಿಮರ್ಶೆಯ ನಿಜ ಮನೋಭಾವ ಪ್ರದರ್ಶಕ. ಹಲವು ಹಿಂದೂ ಕೃತಿಗಳನ್ನು ಆತ ಅರಬ್ಬೀ ಭಾಷೆಗೂ ಗ್ರೀಕ್ ಕೃತಿಗಳನ್ನು ಸಂಸ್ಕೃತಕ್ಕೂ ಅನುವಾದಿಸಿದ.

ಅರಬ್ಬರು ರಚಿಸಿದ ಅಸಾಧಾರಣ ಕೃತಿಗಳೆಂದರೆ ಪ್ರವಾಸ ಸಾಹಿತ್ಯ. ಇಸ್ಲಾಮಿ ಸಾಮ್ರಾಜ್ಯದ ವ್ಯಾಪಕ ಸ್ವರೂಪ, ಹಾಜ್ ಯಾತ್ರಿಕರು ಮೆಕ್ಕಕ್ಕೆ ಹೋಗುವ ಸಾರ್ವತ್ರಿಕ ಪರಿಪಾಟಿ, ಆಡಳಿತದ ಅಗತ್ಯ–ಈ ಎಲ್ಲ ಕಾರಣಗಳಿಂದ ಭೌಗೋಳಿಕ ಕೃತಿರಚನೆಗೆ ಇವರಲ್ಲಿ ಪ್ರಚೋದನೆ ದೊರಕಿತು. ಮಧ್ಯ ಆಫ್ರಿಕ, ಮಧ್ಯ ಏಷ್ಯಗಳಿಗೆ ಇಸ್ಲಾಂ ಪ್ರವೇಶಿಸಿದ್ದೂ ನೀಗ್ರೊ ಪ್ರದೇಶಗಳ ಚರಿತ್ರೆಯನ್ನು ಬರೆದದ್ದೂ ಅರಬ್ಬರ ಸಾಧನೆ. ಪ್ರವಾಸಮಾಲಿಕೆಗಳನ್ನು ಬರೆದ ಮುಖ್ಯ ಮುಸ್ಲಿಂ ಬರೆಹಗಾರರೆಂದರೆ ಮಸೂದಿ, ಇಬ್ನ್‌ಹಕಲ್, ಇಬ್ನ್–ಬತೂತ ಮತ್ತು ಇಬ್ನ್–ಖಾಲ್ದೂನ್ (1322–1406). ಮಾನವನ ಜೀವನದ ಸಮಸ್ತ ಸಾಮಾಜಿಕ ಅಂಶಗಳೂ ಚರಿತ್ರೆಯ ವಸ್ತುವೆಂಬುದನ್ನು ಮೊತ್ತಮೊದಲು ಪ್ರತಿಪಾದಿಸಿದವನು. ಆದರೂ ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೂ ಇಬ್ನ್ ಖಾಲ್ದೂನನ ಹೆಸರು ಐರೋಪ್ಯ ವಿದ್ವತ್ ಪ್ರಪಂಚಕ್ಕೆ ತಿಳಿದಿರಲಿಲ್ಲ.

**ಜ್ಞಾನಯುಗದ ಇತಿಹಾಸ ಲೇಖನ:** ಪ್ರಾಚೀನ ಜನರೆಲ್ಲ ಅತ್ಯಂತ ಬುದ್ಧಿವಂತರೇನೂ ಆಗಿರಲಿಲ್ಲವೆಂಬುದೂ ಆಧುನಿಕ ಪ್ರಪಂಚದ ಜನರಲ್ಲಿ ಕನಿಷ್ಠ ಪರಿಣತ, ಗರಿಷ್ಠ ಪರಿಣತ ಹಾಗೂ ಪಕ್ವಮನಸ್ಕರಾದವರು ಇದ್ದಾರೆಂಬ ಭಾವನೆ ಮೂಡಿದ್ದೂ ಪುನರುಜ್ಜೀವನಕಾಲದಲ್ಲಿ. ಗ್ರೀಕ್, ರೋಮನ್ ಪ್ರಪಂಚದಲ್ಲಿದ್ದಂತೆ ಅಧಿಕಾರದ ಆಡಳಿತದ ಬದಲು ಶುದ್ಧ ವಿಚಾರಶಕ್ತಿಗೆ ಪ್ರಾಮುಖ್ಯ ಬಂತು. ರಾಷ್ಟ್ರೀಯ ಭಾಷೆಗಳ ಬಗ್ಗೆ ಪಕ್ಷಪಾತ ತೋರಿಸಿ ಲ್ಯಾಟಿನ್ನನ್ನು ತಿರಸ್ಕರಿಸಲಾಯಿತು. ಕತೆಗಳಿಗೆ ಹಾಗೂ ಪ್ರಾಚೀನ ಇತಿಹಾಸಕಾರರ ಬರವಣಿಗೆಗಳಿಗೆ ವಿಮರ್ಶೆಯನ್ನು ಅನ್ವಯಿಸಲಾಯಿತು. ಹಾಗಿದ್ದರೂ ಪ್ರಾಚೀನರನ್ನು ಅನುಕಂಪೆಯ ದೃಷ್ಟಿಯಿಂದಲೂ ಮಧ್ಯಯುಗದವರನ್ನು ತಿರಸ್ಕಾರದಿಂದಲೂ ಕಾಣಲಾಯಿತು. ಬೆಳಕು, ಪ್ರಭೆ ಮುಂತಾದ ಪದಗಳ ನಿರ್ಮಾಣವಾಯಿತು. ಪ್ರಾಚೀನರ ನಸುಬೆಳಕಿನ ಮುಂದಣ ಮಧ್ಯಯುಗದ ಕತ್ತಲಿನಿಂದ ಹೊರಬಂದ ಯುಗವೆಂದು ಇದನ್ನು ಕರೆಯಲಾಯಿತು. ಪ್ರಗತಿ ಎಂಬ ಪದವೂ ಪ್ರಚಲಿತವಾಯಿತು. ಚೇತನದ ಗತಿ, ಚರಿತ್ರೆಯ ನಿರ್ಮಾಣ, ಮಾನವ ಚೇತನದ ಪ್ರಗತಿಯ ಚರಿತ್ರೆ ಇವನ್ನೆಲ್ಲ ಸೂಚಿಸುವುದಕ್ಕೂ ವಸ್ತುವಿವರಗಳನ್ನು ಪರೀಕ್ಷಿಸಲಿಕ್ಕೂ ಆಧಾರವಾಗಿ ಇದು ಬಳಕೆಗೆ ಬಂತು.

ಆದರೆ ಚರಿತ್ರೆಯ ದೃಷ್ಟಿಯಲ್ಲಿ ಪ್ರಗತಿಯೆನಿಸುವ ಯಾವ ಬೆಳೆವಣಿಗೆಯೂ ಈ ಯುಗದಲ್ಲಾಗಲಿಲ್ಲ. ವಿಚಾರದ ಆದರ್ಶವಿನ್ನೂ ಬಲು ದೂರವಿತ್ತು. ರೂಸೋನ ಸಾಮಾಜಿಕ ಕರಾರಿನಂಥ ಒಂದು ತತ್ತ್ವದಿಂದ ಸಾಮಾನ್ಯ ದೃಷ್ಟಿಕೋನವೇ ತಲೆಕೆಳಗಾಯಿತು. ಇತಿಹಾಸ ಪೂರ್ವಕಾಲದಲ್ಲಿತ್ತೆಂದು ಭಾವಿಸಲಾಗಿದ್ದ, ಆದರೆ ಆಗಲೂ ಬರಿಯ ಆದರ್ಶವೆನಿಸಿದ್ದ, ವೈಚಾರಿಕ ಮನೋಧರ್ಮದಲ್ಲಿ ದೃಷ್ಟಿ ನೆಟ್ಟಿತು. ಇತಿಹಾಸದ ಧಾರ್ಮಿಕ ದೃಷ್ಟಿ ಬೇಡವಾಯಿತು. ಈ ಧಾರ್ಮಿಕ ದೃಷ್ಟಿಯಿಂದ ಸಂಭವಿಸಿದ ಭೀಕರ ಬಡಿದಾಟಗಳೂ ಧರ್ಮಾಂಧತೆಯ ಯುದ್ಧಗಳೂ ಇಂಥ ಪ್ರತಿಕ್ರಿಯೆಗೆ ಮುಖ್ಯ ಕಾರಣ. ಅಮೂರ್ತವಾದ ವ್ಯಕ್ತಧರ್ಮದ ಅಥವಾ ವಾಸ್ತವ ಪ್ರಯೋಜನ ಪ್ರಮಾಣವಾದದ ಕಲ್ಪನೆ ಕೂಡ ಈ ಯುಗದಲ್ಲಿ ಬೆಳೆಯಿತು. ಈ ಮನೋಭಾವವೇ ಧರ್ಮಗಳಿಗೂ ಚರ್ಚಿಗೂ ಹರಡಿತು. ಪುರೋಹಿತರು ವಂಚಿಸುತ್ತಾರೆ, ಆಸ್ಥಾನಿಕರು ಒಳಸಂಚು ನಡೆಸುತ್ತಾರೆ, ವಿವೇಕಿಗಳಾದ ಅರಸರು ಒಳ್ಳೆಯ ವ್ಯವಸ್ಥೆಗಳ ಕಾಣ್ಕೆಯನ್ನು ಕಾಣುತ್ತಾರೆ–ಎಂಬುದೂ ಈ ಯುಗದ ಇತಿಹಾಸದ ಮಥಿತಾರ್ಥ. ಪ್ರಯೋಜನ ಪ್ರಮಾಣವಾದದ ಜೊತೆಗೆ ಒಂದು ಉನ್ನತ ಮಟ್ಟದ ಆಧ್ಯಾತ್ಮಿಕತೆಯೂ ವಿಕಾಸಗೊಂಡಿತು. ಚರಿತ್ರೆಯನ್ನು ಬಹಿರಂಗ ಘಟನೆಗಳ ನಿರೂಪಣೆಯಿಂದ ಮತ್ತೆ ಆಂತರಿಕ ವಿಚಾರಗಳ ನಿರೂಪಣೆಗೆ ತಂದ ಮೊದಲನೆಯ ಇತಿಹಾಸಕಾರ ವಾಲ್ಟೇರ್. ಯುದ್ಧಗಳ ವಿವರಗಳನ್ನೊಳಗೊಂಡ ಪುಸ್ತಕಗಳೂ ನಿಬಂಧಗಳೂ ಅರ್ಥವ್ಯವಸ್ಥೆಗಳೂ ಧಾರ್ಮಿಕಾಂಶಗಳೂ ಅವನ ದೃಷ್ಟಿಯಲ್ಲಿ ಕೇವಲ ಕಾಗದಗಳ ಕಟ್ಟು, ಚಾರಿತ್ರಿಕ ನಿಘಂಟು, ಅಗತ್ಯಬಿದ್ದಾಗ ತೆರೆದು ನೋಡಲು ತಕ್ಕ ಕೃತಿಗಳ ಗಂಟು. ನಿಜವಾದ ಇತಿಹಾಸವೇ ಬೇರೆ. ಅದು ಗತಕಾಲದ ಇತಿ–ಹ–ಆಸಗಳ ಪುನರ್ದರ್ಶನ; ಆ ಕಾಲದ ರೀತಿನೀತಿಗಳ ಚಿತ್ರೀಕರಣ, ಪ್ರಮುಖಾಂಶ ಸಂಕಲನ; ಮಾನವನ ಪರಮಸಾಧನೆಯನ್ನು ಇದಮಿತ್ಥಂ ಎಂದು ಬೆರಳಿಟ್ಟು ತೋರಿಸುವ ಪ್ರಯತ್ನ. ಕಿಕ್ಕಿರಿತುಂಬಿದ ಅತಿಮುಖ್ಯ ವಿವರಗಳ ಸಂತೆಯಲ್ಲಿ ಸಿಲುಕಿ ತೊಳಲಾಡುವುದಾಗಲಿ, ಮಾನವನ ವೈಭವ ಸಂಕಟಗಳ ಚಿತ್ರೀಕರಣವಾಗಲಿ ಚರಿತ್ರೆಯ ಕೆಲಸವಲ್ಲ. ಮಾನವನ ಸ್ವಭಾವ, ಕಲೆ, ಕ್ರಿಯಾತ್ಮಕ ಸಾಧನೆಗಳು ಇವನ್ನು ವಿವರಿಸುವುದೇ ಇತಿಹಾಸದ ಕಾರ್ಯಭಾರ. ಈ ಯುಗದ ಇತಿಹಾಸದ ತತ್ತ್ವವೆಂಬುದು ಐತಿಹಾಸಿಕ ಘಟನೆಗಳ ಜೋಮಾಲೆಯಾಗಲಿ, ದಾರ್ಶನಿಕರ ಉಕ್ತಿಸರಗಳಾಗಲಿ ಅಲ್ಲ; ಪ್ರತಿಯಾಗಿ ಅದು ವ್ಯವಸ್ಥೆಗಳ ಇತಿಹಾಸವಾಯಿತು.

ಇದರಿಂದ ಇತಿಹಾಸ ಹೆಚ್ಚು ಆಳವಾಯಿತು ಮಾತ್ರವಲ್ಲ, ದೇಶಕಾಲಾತ್ಮಕವಾಗಿ ಅದು ವಿಸ್ತರಿಸಿತು. ಇಲ್ಲೂ ವಾಲ್ಟೇರ್ ಬಹು ಸಮರ್ಥವಾಗಿ ತನ್ನ ಯುಗದ ತುಡಿತವನ್ನು ಸೆರೆಹಿಡಿದಿದ್ದಾನೆ. ಅದರೊಂದಿಗೆ ವಿಶ್ವೇತಿಹಾಸದ ಸತ್‌ಸಂಪ್ರದಾಯದ ಚಿತ್ರ ಎಷ್ಟು ಸಂಕುಚಿತವೆಂಬು

ದನ್ನೂ ತೋರಿಸಿದ್ದಾನೆ. ಭಾರತ ಚೀನಗಳು ತಮ್ಮ ಪ್ರಾಚೀನತೆಯಿಂದಲೂ ಉನ್ನತ ನಾಗರಿಕತೆಗಳಿಂದಲೂ ಎಲ್ಲರ ಗಮನ ಸೆಳೆದವು. ಪ್ರಾಚ್ಯಗ್ರಂಥಗಳೂ ಭಾಷಾಂತರಗಳೂ ಇತಿಹಾಸ ಲೇಖನಗಳ ರಾಶಿಯಲ್ಲಿ ಸೇರಿಕೊಂಡುವು. ಪ್ರಾಚ್ಯದ ಬಗೆಗೆ ತಿಳಿವಳಿಕೆಯೂ ಮಧ್ಯಯುಗದ ಪರಿಜ್ಞಾನವೂ ವಿಸ್ತೃತವಾದವು. ಸಾಮಗ್ರಿಯ ಸೂಕ್ಷ್ಮ ಪರೀಕ್ಷಣವೂ ದಾಖಲೆಗಳ ಅಧಿಕೃತತೆಯ ನಿಷ್ಕರ್ಷೆಯೂ ಸಾಧ್ಯವಾದವು. ಆಗಿನ ಕಾಲದ ವಾತಾವರಣ, ಸರ್ಕಾರ, ಧರ್ಮ, ಜನರ ಪ್ರತಿಭೆ ಇವುಗಳೆಲ್ಲವೂ ಇತಿಹಾಸದ ಕಾರ್ಯಕಾರಣಸಂಬಂಧಸೃಷ್ಟಿಯಲ್ಲಿ ಸಹಾಯಕವಾದವು.

**ರಮ್ಯತೆ ಮತ್ತು ಇತಿಹಾಸ ಲೇಖನ:** ಫ್ರಾನ್ಸಿನ ಮಹಾಕ್ರಾಂತಿಯಾದ ಅನಂತರ ಎರಡು ಬಗೆಯ ಇತಿಹಾಸ ಲೇಖನ ಕಂಡುಬರುತ್ತದೆ. ಪುರಾತನ ವೈಭವದ ಪುನರಾವರ್ತನೆಯ ಹಂಬಲವೊಂದು ಕವಲಾದರೆ, ವೈಚಾರಿಕ ಪಂಥದ ಪುನರುಜ್ಜೀವನ ಇನ್ನೊಂದು ಕವಲು. ಎರಡು ಬಗೆಯ ಇತಿಹಾಸಗಳೂ ಮಧ್ಯಯುಗೀಯ ಲಕ್ಷಣ ತಳೆದುವು. ರಾಷ್ಟ್ರೀಯ ಸಂಪ್ರದಾಯ, ಹಳೆಯ ಮನೆ, ಹಳೆಯ ಕೊತ್ತಲ, ಹಳೆಯ ಆರಾಧನಮಂದಿರ–ಎಲ್ಲವೂ ಆದರ್ಶಪ್ರಾಯವೇ. ಚರಿತ್ರಕಾರರು ಮತ್ತೆ ಹಳೆಯ ಹಾಡನ್ನೇ ಹಾಡಿದರು. ಹಳೆಯ ಕಥೆಗಳ ಕನಸು ಕಂಡರು. ಪುರಾತನಪ್ರಿಯತೆಯ ಇತಿಹಾಸಲೇಖನ ವಿಧಾನ ಹೆಚ್ಚುಕಡಿಮೆ ಆ ಕಾಲದ ಎಲ್ಲ ಚಿಕ್ಕದೊಡ್ಡ ಬರೆವಣಿಗೆಗಳನ್ನೂ ಹೊಕ್ಕಿತು. ಶುದ್ಧಾಂಗವಾಗಿ ವೈಜ್ಞಾನಿಕ ಚಿಂತನೆಯನ್ನು ಪ್ರತಿನಿಧಿಸಿದ ನೀಬೂರ್‌ನಂಥ ಚರಿತ್ರಕಾರರಲ್ಲೂ ಇದು ಕಂಡಿತು. ಸ್ಪೇನಿನ ಕ್ರೈಸ್ತ ರಾಜರ ಯುದ್ಧ ಮತ್ತು ಗಾಥಿಕ್ ವಾಸ್ತುಶಿಲ್ಪ–ಇವು ಏಕಪ್ರಕಾರವಾದ ಸಾರ್ವತ್ರಿಕ ಹಾಗೂ ರಾಷ್ಟ್ರೀಯ ಅನುಕಂಪೆಯ ವಸ್ತುಗಳಾದುವು. ಮಧ್ಯಯುಗದ ಇತಿವೃತ್ತಗಳ ಅನುವಾದಗಳನ್ನು ಪುನರ್‌ಮುದ್ರಿಸಲಾಯಿತು. ಚಾರಿತ್ರಿಕ ರಮ್ಯಕಾವ್ಯವೆಂಬ ಹೊಸತೊಂದು ಸಾಹಿತ್ಯ ಪ್ರಚಲಿತವಾಯಿತು. ಸರ್‌ವ್ವಾಲ್ಟರ್ ಸ್ಕಾಟ್ ಅದರ ಪ್ರಮುಖ ಪ್ರತಿಪಾದಕ. ಅಮೂರ್ತ ವಿಚಾರವೊಂದೇ ಸಾಲದೆಂಬುದು ಈ ಚರಿತ್ರಲೇಖನದ ವೈಶಿಷ್ಟ್ಯ. ಇದರ ಅತಿರೇಕದ ಮಾದರಿ ಕಾರ್ಲ್ ಮಾರ್ಕ್ಸನಲ್ಲಿ ಕಂಡುಬಂತು; ಸಮಾಜವಾದಿ ಪಂಥಕ್ಕೆ ರಮ್ಯಪಂಥದ ರೂಪು ಬಂತು. ಇನ್ನೂ ಒಂದು ಉದಾಹರಣೆ ಹೆಗೆಲ್. ಚರಿತ್ರೆಗೆ ವೈಜ್ಞಾನಿಕ ಕಲ್ಪನೆಯನ್ನು ಆಧಾರ ಮಾಡದೆ ತನ್ನ ಆದರ್ಶ ತತ್ತ್ವಗಳನ್ನೇ ಆತ ರೂಪಿಸಿದ. ಚರಿತ್ರೆಯನ್ನು ಒಂದು ವಿಕಾಸವೆಂದು ಕಲ್ಪಿಸಿಕೊಳ್ಳುವುದೂ ಅದನ್ನು ಆದರ್ಶಮೌಲ್ಯಗಳ ಚರಿತ್ರೆಯೆಂದು ಭಾವಿಸುವುದೂ ಹೆಗೆಲಿಯನ್ ದೃಷ್ಟಿಕೋನ. ಕ್ಯಾಂಟನ ಅನುಯಾಯಿಗಳ ವ್ಯಕ್ತಿನಿಷ್ಠೆಯಿಂದ ಈತ ಚರಿತ್ರೆಯನ್ನು ಚಿಂತನೆಯ ವಸ್ತುನಿಷ್ಠೆಯತ್ತ ಹೊರಡಿಸಿದ. ಈ ಯುಗದಲ್ಲಿ ಇತಿಹಾಸವನ್ನು ಒಮ್ಮೊಮ್ಮೆ ಚಿಂತನೆಯ ಹಂತದಿಂದ ಎತ್ತಿ ಗತಕಾಲದ ಕಾಲ್ಪನಿಕ ಜೀವನಪೀಠದ ಮೇಲೆ ಕೂರಿಸುತ್ತಿದ್ದದ್ದೂ ಉಂಟು.

**ಇತ್ಯಾತ್ಮಕ ಧೋರಣೆಯ ಇತಿಹಾಸ ಲೇಖನ:** 19ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಒಂದು ವೈಚಾರಿಕ ಪಂಥ ಹುಟ್ಟಿಕೊಂಡಿತು. ಚರಿತ್ರೆಯ ತತ್ತ್ವದಲ್ಲಿ ಮೂರು ಮುಖ್ಯಾಂಶಗಳಿವೆ ಯೆಂದು ಅದು ವಿಶ್ಲೇಷಿಸಿತು; ಚಾರಿತ್ರಿಕ ಘಟನೆಗಳ ಸತ್ಯತೆ, ನಿರೂಪಣೆಗೂ ದಾಖಲೆಗೂ ಹೊಂದಾಣಿಕೆ, ಬೆಳವಣಿಗೆಯ ವ್ಯಾಪನೆ. ಚಾರಿತ್ರಿಕ ಘಟನೆಗಳ ಸತ್ಯತೆಯನ್ನೆತ್ತಿ ಹಿಡಿದವರು ತಮ್ಮನ್ನು ಚರಿತ್ರಕಾರರೆಂದು ಕರೆದುಕೊಂಡರು. ಮೂಲದೊಂದಿಗೆ ಹೇಳಿಕೆಯ ಯಥಾರ್ಥತೆ ಯನ್ನು ಸ್ಥಾಪಿಸಲು ಹೊರಟವರು ತಮ್ಮನ್ನು ಭಾಷಾಶಾಸ್ತ್ರಜ್ಞರೆಂದು ಕರೆದುಕೊಂಡರು. ಪ್ರಕೃತಿಯನ್ನು ವಿವರಿಸಿದವರು ತತ್ತ್ವಶಾಸ್ತ್ರಜ್ಞರೆಂದು ಹೆಸರಾದರು. ಚರಿತ್ರಕಾರರು ವಿಶಿಷ್ಟ ವಿಷಯಗಳನ್ನು ಪರಿಶೀಲಿಸಿದರೇ ವಿನಾ ತತ್ತ್ವ ವಿಚಾರದಲ್ಲಿ ತೊಡಗಲಿಲ್ಲ. ಅವರಿಗೆ ಪ್ರಾಪಂಚಿಕ ವಿಷಯದ ಮೌಲ್ಯಕ್ಕಿಂತ ಯಥಾರ್ಥತೆಯೇ ಮುಖ್ಯವೆನಿಸಿತು. ಜರ್ಮನ್, ಫ್ರೆಂಚ್, ಕೆಥೊಲಿಕ್ ಅಥವಾ ಪ್ರಾಟೆಸ್ಟಂಟ್ ಎಂಬುದಾಗಿ ಚರಿತ್ರೆಗೆ ಬಣ್ಣ ಹಚ್ಚುವುದು ತಪ್ಪು. ಯಾರ ಭಾವನೆಗಳನ್ನೂ ಗಾಸಿಗೊಳಿಸದ ಮಟ್ಟಿಗೆ ಅದು ವಸ್ತುನಿಷ್ಠವಾಗಿರಬೇಕು. ಈ ಪಂಥದ ಚರಿತ್ರಕಾರರಲ್ಲೆಲ್ಲ ಅತ್ಯಂತ ಶ್ರೇಷ್ಠನಾದವನೆಂದರೆ ಲಿಯೊಪೋಲ್ಡ್ ರಾಂಕ. ಅವನು ತತ್ತ್ವಶಾಸ್ತ್ರವನ್ನು, ಅದರಲ್ಲೂ ಹೆಗೆಲಿಯನ್ ಸಿದ್ಧಾಂತವನ್ನು, ಎದುರಿಸಿದ. ಘಟನೆಗಳು ವಾಸ್ತವವಾಗಿ ಹೇಗೆ ಸಂಭವಿಸಿದುವುವೆಂಬುದನ್ನು ತೆರೆದು ತೋರುವುದೇ ಆತನ ಕೆಲಸ; ಹೇಗೆ ಸಂಭವಿಸಬಹುದಾಗಿತ್ತು ಎಂಬುದನ್ನಲ್ಲ. ಫ್ರೆಂಚ್ ಇತಿಹಾಸವನ್ನು ಫ್ರೆಂಚರ ಮನಸ್ಸಿಗೆ ಅಸಂತುಷ್ಟಿಯಾಗದಂತೆ ರಚಿಸಿದ್ದು ಆತನ ಅತ್ಯುನ್ನತ ಸಾಧನೆ. ಎರಡನೆಯ ವಿಚಾರಪಂಥ ಭಾಷಾಶಾಸ್ತ್ರಜ್ಞರದು. ಪಾಂಡಿತ್ಯದ ಇತಿಹಾಸದ ಮೇಲೆ ಇವರು ಗಮನ ಹರಿಸಿದರು. ಆಕರಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಅದನ್ನು ವಸ್ತುವಾಗಿ ಉಪಯೋಗಿಸಿಕೊಳ್ಳುವಂತೆ ಚರಿತ್ರಕಾರರಿಗೆ ಒದಗಿಸುವುದು ಅವರ ಕೆಲಸ. ಮೂರನೆಯ ಪಂಥದವರು ತತ್ತ್ವಶಾಸ್ತ್ರಜ್ಞರು ಕರ್ತವ್ಯ ನಿರ್ವಹಿಸಿದರು. ಆದರೆ ಹಾಗೆ ಕರೆಯಿಸಿಕೊಳ್ಳಲು ಇಷ್ಟಪಡದವರು ಇತ್ಯಾತ್ಮಕವಾದಿಗ ಳೆಂದೋ ನೈಜಸಿದ್ಧಾಂತಿಗಳೆಂದೋ ಸಮಾಜಶಾಸ್ತ್ರಜ್ಞರೆಂದೋ ಪ್ರಯೋಗಶೀಲರೆಂದೋ ಶೋಧಕರೆಂದೋ ತಮ್ಮನ್ನು ತಾವು ವಿನಯದಿಂದ ಕರೆದುಕೊಂಡರು. ಚಾರಿತ್ರಿಕ ತತ್ತ್ವಶಾಸ್ತ್ರಜ್ಞರದಕ್ಕಿಂತ ಇವರ ಕೆಲಸ ಭಿನ್ನ. ಇತಿಹಾಸ ದರ್ಶನಶಾಸ್ತ್ರಜ್ಞರಿಗೆ ಗುರಿಯ ಕಲ್ಪನೆಯೇ ಮೂಲ. ಇವರಿಗೆ ಕಾರಣದ ಕಲ್ಪನೆಯೇ ಆಧಾರ. ಪ್ರತಿಯೊಂದು ಘಟನೆಯ ಕಾರಣವನ್ನೂ ಹುಡುಕುವುದು, ಆ ಕಾರಣಸೂತ್ರವನ್ನು ಚರಿತ್ರೆಯ ಗತಿಯ ಮೇಲೆ ಪ್ರಯೋಗಿಸುವುದು–ಇದು ಅವರ ಕೆಲಸ. ಇತರರು ಇತಿಹಾಸ ಚೇತನದ ಮೂಲಾನ್ವೇಷಣೆ ಮಾಡಿದರು. ಆದರೆ ಅವರು ಇತಿಹಾಸದ ಚಲನಸೂತ್ರವನ್ನು, ಸಾಮಾಜಿಕ ಭೌತಶಾಸ್ತ್ರವನ್ನು ಸೃಷ್ಟಿಸಲೆತ್ನಿಸಿದರು. ಇಡೀ ವಿಜ್ಞಾನವೇ ಸಂಗ್ರಹ ಕಾರ್ಯಾಗಾರದ ತತ್ತ್ವದಮೇಲೆ ರೂಪಿತವಾಗಿದ್ದರಿಂದ ಇತಿಹಾಸದ ಸಮರಸ ಚೌಕಟ್ಟಿನಲ್ಲಿ ಕಾರಣಗಳನ್ನೂ ಅವುಗಳಿಂದ ಉದ್ಭವಿಸಿದ ವಿಷಯಪ್ರವಾಹವನ್ನೂ ತೋರಿಸುವ ಯತ್ನ ನಡೆಯಿತು. ಇತಿಹಾಸದ ಕಾರಣಪರಂಪರೆಯನ್ನು ನಿರ್ಧರಿಸುವುದರಲ್ಲಿ ಜನಾಂಗ, ವಂಶ, ಅವನತಿ, ಅನುಕರಣೆ, ಪ್ರಭಾವ, ವಾತಾವರಣ ಮುಂತಾದ ಪ್ರಾಕೃತಿಕ ವಿಚಾರಗಳನ್ನೂ ಇತರ ಅಂಶಗಳನ್ನೂ ಪರೀಶೀಲನೆಗೆ ತೆಗೆದುಕೊಳ್ಳಬೇಕು–ಎಂಬುದು ಇವರ ವಿಚಾರ. ಹೀಗೆ ಇತ್ಯಾತ್ಮಕವಾದಿಗಳು ಚರಿತ್ರೆಯನ್ನು ಕಡಿಮೆ ಅಮೂರ್ತವೂ ಸತ್ಯವಿಷಯಭೂಯಿಷ್ಠವೂ ಆಗುವಂತೆ ಮಾಡಿದರು. ಭೌತಿಕವೆನ್ನಬಹುದಾದ ಆಸಕ್ತಿಗಳನ್ನೂ ಕ್ರತುಶಕ್ತಿಯೆನಿಸಬಹುದಾದ ಹಿಂಸೆ ಬಲಗಳನ್ನೂ ಸ್ವಾಭಾವಿಕವೆನ್ನಬಹುದಾದ ವಿನ್ಯಾಸಗಳನ್ನೂ ರೋಗನಿದಾನಗಳೆನಿಸಬಹುದಾದ ಪ್ರಕ್ರಿಯೆಗಳನ್ನೂ ಮಾನಸಿಕ ಶ್ರಮಗಳೆನ್ನಬಹುದಾದ ಆಧ್ಯಾತ್ಮಿಕ ಸಂಕೀರ್ಣತೆಗಳನ್ನೂ ಒಳಗೊಳ್ಳುವಂತೆ ಮಾಡಿದರು. ಭಿನ್ನತೆಯೂ ಐತಿಹಾಸಿಕ ವಿವಿಧತೆಯೂ ಅಸ್ತಿತ್ವಕ್ಕೆ ಬಂದದ್ದು ಹೇಗೆಂಬುದನ್ನು ಕಂಡುಹಿಡಿಯಲು ಈ ಇತ್ಯಾತ್ಮಕವಾದಿಗಳು ಪ್ರಯತ್ನಿಸಿದರು.

**ಭಾರತೀಯ ಇತಿಹಾಸ ಲೇಖನ:** ಪ್ರಶ. 1000ದ ವರೆಗೆ ಭಾರತದಲ್ಲಿ ಇತಿಹಾಸಲೇಖನದ ಅಭಾವ ಕಂಡುಬರುತ್ತದೆ. ಇದು ಆಶ್ಚರ್ಯವೇ ಸರಿ. ಇತಿಹಾಸ ಲೇಖನವೆಂದು ಹೇಳಬಹುದಾದ ಕೃತಿಗಳು ದೊರೆತಿರುವುದು ಎರಡೇ ಎರಡು. ಒಂದು, ರಾಜ ತರಂಗಿಣಿ. ಕಲ್ಹಣ ವಿರಚಿತ ಕಾಶ್ಮೀರ ರಾಜವಂಶಾವಳಿ. ಇನ್ನೊಂದು ಮಹಾವಂಶ ಎಂಬ ಹೆಸರಿನ ಸಿಲೋನಿನ ರಾಜವಂಶಾವಳಿಯ ಕೃತಿ. ಇತಿಹಾಸಕೃತಿಗಳು ನಾಶವಾಗಿವೆ ಎಂದು ಭಾವಿಸಲು ಕಾರಣಗಳು ಏನೂ ಇಲ್ಲ. ಚಾರಿತ್ರಿಕವಾದ, ಚಾರಿತ್ರಿಕ ಸಾಹಿತ್ಯ ಇಲ್ಲದೆ ಹೋದರೂ ನಾವು ಪ್ರಾಚೀನ ಭಾರತದ ಚರಿತ್ರೆಯನ್ನು ಪುನರ್ ನಿರ್ಮಿಸಬಹುದು. ಪುರಾಣ ಎಂದು ಕರೆಯುವ ಸಾಹಿತ್ಯ, ಇತಿಹಾಸವೆಂಬ ಭಾಗವನ್ನು ಒಳಗೊಂಡಿದೆ. ರಾಜರ ಪಟ್ಟಿಗಳನ್ನೂ ಸಂಪ್ರದಾಯಗಳನ್ನೂ ಸಂಸ್ಥೆಗಳನ್ನೂ ಕುರಿತ ಸಮಗ್ರ ಉಲ್ಲೇಖಗಳನ್ನೊದಗಿಸುವುದೇ ಇದರ ಮುಖ್ಯ ಉದ್ದೇಶ. ಈ ಆಧಾರದಿಂದ ನಾವು ಆ ಕಾಲದ ಇತಿಹಾಸವನ್ನು ರಚಿಸಬಹುದು. ಕಾಲಚಕ್ರದೊಂದಿಗೆ ವಿಶ್ವವೂ ಪರಿವರ್ತನೆ ಹೊಂದುತ್ತದೆ ಎಂಬ ಮೂಲಭೂತವಾದ ಕಲ್ಪನೆಯೇ ಈ ಬರವಣಿಗೆ ಗಳಿಗೆ ಆಧಾರ. ಈ ಹಿನ್ನೆಲೆಯಲ್ಲಿ ಮನುಷ್ಯನಿಗೆ ಇತಿಹಾಸದ ಅತ್ಯುನ್ನತ ಪಾಠವಾಗುತ್ತದೆ. ಶಾಂತರಸವನ್ನು ಇವು ಬೋಧಿಸುತ್ತವೆ. ಹೀಗೆ ಯಹೂದ್ಯರ, ಕ್ರೈಸ್ತರ ಮತ್ತು ಮುಸ್ಲಿಮರ ಧರ್ಮಗಳಲ್ಲಿ ಇಲ್ಲದ ಬೇರೆ ಬಗೆಯ ಚಾರಿತ್ರಿಕ ಪ್ರಜ್ಞೆಯನ್ನು ಭಾರತೀಯ ಚಿಂತನೆ ಬೋಧಿಸುತ್ತದೆ. ಬೌದ್ಧ ಪರಂಪರೆಯ ಸಾಹಿತ್ಯ ಪುರಾಣಸಾಹಿತ್ಯಕ್ಕಿಂತಲೂ ಹೆಚ್ಚು ನಂಬಿಕೆಗೆ ಅರ್ಹ. ಕ್ರಿಸ್ತಶಕದ ಆರಂಭದ ವೇಳೆಗೆ ಚಾರಿತ್ರಿಕ ಪ್ರಜ್ಞೆಯಲ್ಲಿ ಒಂದು ಮಹತ್ತ್ವಪೂರ್ಣ ಬದಲಾವಣೆ ಕಂಡುಬರುತ್ತದೆ. ಅದು ಕಾವ್ಯರಚನೆ. ಪ್ರಾಚೀನ ಇತಿಹಾಸ ಪರಂಪರೆಯನ್ನು ಇಲ್ಲಿ ಮತ್ತೆ ರಚಿಸಿ ವ್ಯಾಖ್ಯಾನಿಸಲಾಯಿತು. ಈ ಕ್ರಿಯೆಯಲ್ಲಿ ಚಾರಿತ್ರಿಕ ಸತ್ಯ ನಿಧಾನವಾಗಿ ಸೌಂದರ್ಯಶಾಸ್ತ್ರದಲ್ಲಿ ಕರಗಿಹೋಗುತ್ತದೆ. ಈ ಕಾಲದಲ್ಲಿ ಚರಿತ್ರೆಯೂ ಕಥೆಯಾಗುತ್ತದೆ. ಈ ಪ್ರಕ್ರಿಯೆ ಕ್ರಿಸ್ತಶಕ ಮೊದಲನೆಯ ಸಹಸ್ರಮಾನದುದ್ದಕ್ಕೂ ಮುಂದುವರಿಯಿತು. ಪರಿಣಾಮವಾಗಿ ಪ್ರಶ. 2ನೆಯ ಶತಮಾನಕ್ಕಿಂತ ಹಿಂದಿನ ಪ್ರಾಕೃತ ಶಾಸನಗಳಲ್ಲಿ ಕಂಡುಬರುವ ಚಾರಿತ್ರಿಕ ವಿವರಗಳು ಮುಂದಿನ ಸಂಸ್ಕೃತ ಶಾಸನಗಳಿಗಿಂತಲೂ ಹೆಚ್ಚು ಕರಾರುವಾಕ್ಕಾದವು. ಒಂದೇ ಘಟನೆಯ ಮೊದಲಿನ ಹಾಗೂ ಅನಂತರದ ನಿರೂಪಣೆಗಳೆರಡೂ ಇರುವ ಪಾಲಿ ಸಾಹಿತ್ಯದಲ್ಲಾದರೋ, ಮೊದಲಿನದು ಹೆಚ್ಚು ಖಚಿತ. ಸಮಕಾಲೀನ ದಾಖಲೆಗಳನ್ನು ಕಲಾತ್ಮಕವಾಗಿ ಪರಿವರ್ತಿಸಿದುದರಿಂದ ಚರಿತ್ರೆ ಕಥೆಯಾಗಿ ಮಾರ್ಪಟ್ಟಿತು. ಸಂಪ್ರದಾಯವನ್ನು ಮುರಿದು ಶುದ್ಧ ಚಾರಿತ್ರಿಕ ತತ್ತ್ವಗಳ ಮೇಲೆ ಬರೆದ ಕೀರ್ತಿ ಕಲ್ಹಣನಿಗೆ ಸಲ್ಲಬೇಕು. ಅವನು ಹನ್ನೆರಡನೆಯ ಶತಮಾನದ ಚರಿತ್ರಕವಿಯಾಗಿ ತನ್ನ ತಂದೆ ಮತ್ತು ಸಹ ಆಸ್ಥಾನಿಕರಿಂದ ಏನೆಲ್ಲವನ್ನು ಪಡೆಯಬಹುದೋ ಅದೆಲ್ಲವನ್ನೂ ಇಟ್ಟುಕೊಂಡು ಸಮಗ್ರವಾಗಿ ತನ್ನ ಕೃತಿಯನ್ನು ನಿರೂಪಿಸಿದ. ಭಾರತದಲ್ಲಿ ನಿಜವಾಗಿಯೂ ಬಹಳ ಅಪರೂಪವಾದ ವಿಮರ್ಶನ ಪ್ರಜ್ಞೆಯಿಂದ ಅವನು ತನ್ನ ವಿಸ್ತಾರವಾದ ರಾಜಕೀಯ ಕೃತಿಯನ್ನು ರಚನೆ ಮಾಡಿದ್ದಾನೆ. ಅವನ ನಿರೂಪಣೆ ಧರ್ಮಶೀಲ ನಿರಂಕುಶತೆಯ ಗುಣಗಳನ್ನು ಎತ್ತಿ ಹಿಡಿಯುತ್ತದೆ. ಊಳಿಗಮಾನ್ಯ ಮನೆತನಗಳ ತಿಕ್ಕಾಟದ ದುಷ್ಫಲಗಳಿಗೆ ಪರಿಹಾರವಾದ ಧರ್ಮಾತ್ಮನ ದೊರೆತನದ ಹಿರಿಮೆಯ ಬಣ್ಣನೆಯನ್ನು ಆತನ ಕೃತಿಯಲ್ಲಿ ಕಾಣಬಹುದು. ಈ ಪ್ರಪಂಚಕ್ಕೆ ಬಲು ಮುಪ್ಪು; ಇದಕ್ಕೀಗ ಅವನತಿಯ ದಶೆ. ಈ ಪ್ರಪಂಚದಲ್ಲಿ ಎಲ್ಲವೂ ನಶ್ವರ, ಮಾನವನನ್ನು ರೂಪಿಸುವಲ್ಲಿ ದೈವೀಶಕ್ತಿಗಳ ಪ್ರಭಾವ ಬಹಳ, ವೈರಾಗ್ಯಭಾವವನ್ನೊಪ್ಪಿ ಅದನ್ನು ಪೋಷಿಸಿಕೊಳ್ಳುವುದೇ ಮಾನವನಿಗೆ ವಿಹಿತಮಾರ್ಗ. ಇದು ಈ ಸನಾತನಿ ಸಂಪ್ರದಾಯವಂತ ಬ್ರಾಹ್ಮಣ ಲೇಖಕನ ಕೃತಿಯ ಅಂತಃಸೂತ್ರ. ಇತಿಹಾಸ ವಿಚಾರದಲ್ಲಿ ಕಲ್ಹಣನ ದೃಷ್ಟಿ ಮಧ್ಯಯುಗದ ಹಿಂದೂಭಾರತದಲ್ಲಿ ಅನೇಕರು ಬಹುಶಃ ಒಪ್ಪುವಂಥದಾಗಿತ್ತು.

ಭಾರತಕ್ಕೆ ಮುಸ್ಲಿಮರು ಬಂದಾಗ ಅವರು ತೀವ್ರತರ ಚಾರಿತ್ರಿಕ ಪ್ರಜ್ಞೆಯನ್ನು ತಮ್ಮೊಂದಿಗೆ ತಂದರು. ಅರಬ್ಬೀ, ತುರ್ಕಿ ಹಾಗೂ ಪಾರಸೀ ಮೂಲಗಳಿಂದ ನವೋನವವಾಗುತ್ತಿದ್ದ ಸೂಕ್ಷ್ಮ ಇತಿಹಾಸಪ್ರಜ್ಞೆ ಅವರಲ್ಲಿತ್ತು. ಭಾರತದಲ್ಲಿ ಸುಲ್ತಾನರ ಯುಗದ ಮುಸಲ್ಮಾನ ಚರಿತ್ರಕಾರರು ದೈವೀಸ್ಫೂರ್ತವಾದ ಕುರಾನಿನಲ್ಲಿ ಮಾತ್ರವೇ ನಿಜವಾದ ಧರ್ಮವನ್ನು

ಕಾಣಲು ಸಾಧ್ಯವೆಂಬ ನಂಬಿಕೆಯಿಂದ ಬರೆದರು. ಮುಸ್ಲಿಮರ ಆದರ್ಶ ಇತಿಹಾಸವನ್ನು ಸ್ವರ್ಗದಲ್ಲಿಡಲಾಗಿದೆಯೆಂದೂ, ಇದಕ್ಕೆ ದೃಷ್ಟಾಂತಗಳನ್ನು ಜೋಡಿಸುವುದೇ ತಮ್ಮ ಮೂಲಭೂತ ಕರ್ತವ್ಯವೆಂದೂ ಈ ಕಾರ್ಯ ಮಾಡುವಲ್ಲಿ ತಮ್ಮ ಆಕರಗಳನ್ನು ಉದ್ಧರಿಸಬಹುದಲ್ಲದೆ ಅದನ್ನು ಪ್ರಶ್ನಿಸುವುದಾಗಲಿ ವ್ಯಾಖ್ಯಾನಿಸುವುದಾಗಲಿ ಉಚಿತವಲ್ಲವೆಂದೂ ಅದೊಂದು ಘಟನೆಗಳ ಸರಣಿಯೆಂಬಂತೆ, ಅನೇಕ ವೇಳೆ ಬಿಡಿಬಿಡಿಯಾಗಿ ಒಂದೊಂದಕ್ಕೆ ಸ್ಪಷ್ಟವಾಗಿ ಸಂಬಂಧವಿಲ್ಲವೆಂಬಂತೆ ಕಲ್ಪಿಸಿಕೊಂಡರು. ಇವಕ್ಕೆ ದೇವರೇ ಅರ್ಥ ಕೊಟ್ಟಿದ್ದಾನೆ. ಅವರ ಇತಿಹಾಸದೃಷ್ಟಿ ನಿಯತವೂ ಖಚಿತವೂ ಆದದ್ದು. ಕಾಲಾನುಕ್ರಮಣಿಕೆಯ ಪ್ರಜ್ಞೆಯಂತೂ ತುಂಬ ಕರಾರುವಾಕ್ಕಾದದ್ದು. ಭಾರತದ ಮುಸ್ಲಿಂ ಇತಿಹಾಸ ಲೇಖನದಲ್ಲಿ ಹಿಂದೂಗಳು ಮತ್ತು ಬೌದ್ಧರಲ್ಲಿ ಕಾಣುವಂಥ ಇತಿಹಾಸದ ಪರಿವರ್ತನೆಯ ದೃಷ್ಟಿಯನ್ನು ಮಾತ್ರವಲ್ಲದೆ ಅನೇಕ ಮುಖ್ಯ ಬರಹಗಾರರ ವೈಯಕ್ತಿಕ ಕಾಣಿಕೆಗಳನ್ನೂ ಕಾಣಬಹುದು.

ಭಾರತದ ಅನೇಕ ಮುಸ್ಲಿಂ ಚರಿತ್ರಕಾರರು ಆಸ್ಥಾನಿಕರಾಗಿದ್ದರು ಅಥವಾ ತಮ್ಮ ಅರಸನ ಆಜ್ಞಾನುಸಾರವಾಗಿಯೋ ಅವರ ಆಶ್ರಯವನ್ನು ಗಳಿಸಲೆಂದೋ ಲೇಖನಕಾರ್ಯದಲ್ಲಿ ತೊಡಗುತ್ತಿದ್ದ ಅಧಿಕಾರಿಗಳಾಗಿದ್ದರು. ಒಳ್ಳೆಯ ಮುಸ್ಲಿಮರಿಗೆ ತಕ್ಕದಾದ ರೀತಿಯಲ್ಲಿ ನಡೆಯಬೇಕೆಂಬುದು ಅವರ ಬೋಧನೆಯ ಉದ್ದೇಶ. ತಮ್ಮ ಅರಸರು ದೈವೀ ಉದ್ದೇಶದ ವಾಹಕರೆಂದೂ ಸಂಕೇತಗಳೆಂದೂ ಅವರು ಚಿತ್ರಿಸಿದರು. ಅರಸರ ಸತ್ಕಾರ್ಯಗಳನ್ನೂ ದುಷ್ಕಾರ್ಯಗಳನ್ನೂ ನಮೂದಿಸಿ ಒಳ್ಳೆಯದನ್ನು ಪ್ರೋತ್ಸಾಹಿಸಿ, ಕೆಟ್ಟದ್ದಕ್ಕೆ ಎಚ್ಚರಿಕೆ ನೀಡುವುದು ಅವರ ಉದ್ದೇಶ. ನಿಜಾಂ ಉದ್ದೀನ್ ಅಹಮದ್, ಅಬ್ದುಲ್ ಖಾದಿರ್ ಬಡೋನಿ, ಫೆರಿಷ್ಟ ಮುಂತಾದವರು ಸಾಮಾನ್ಯ ಚರಿತ್ರೆಗಳನ್ನು ರಚಿಸಿದರು. ಕಾಲಕ್ರಮದಲ್ಲಿ ಪ್ರಾದೇಶಿಕ ಹಾಗೂ ಸ್ಥಳೀಯ ಚರಿತ್ರೆಗಳೂ ಕಾಣಿಸಿಕೊಂಡುವು. ಹೊರಗಿನ ಮುಸ್ಲಿಂ ಪ್ರದೇಶಗಳೊಂದಿಗೆ ಸಂಪರ್ಕ ಕಡಿದುಕೊಂಡ ಅಕ್ಬರನ ಉದ್ದೇಶಪೂರ್ವ ನೀತಿಯಿಂದ ಇದಕ್ಕೆ ಪ್ರೋತ್ಸಾಹ ದೊರಕಿತು. ಭಾರತದಲ್ಲಿ ಮೊಗಲ್ ಯುಗವನ್ನು ಅಧಿಕೃತ ಚರಿತ್ರೆಗಳ ಯುಗವೆನ್ನಬಹುದು. ಆಡಳಿತ, ಸೈನ್ಯ ಹಾಗೂ ಭೌಗೋಳಿಕ ಅಂಶಗಳ ಮೇಲೆ ಬೆಳಕು ಬೀರಲು ಮೊಗಲ್ ಅಧಿಕಾರಿಗಳು ಅಸಂಖ್ಯಾತ ದಾಖಲೆಗಳನ್ನು ಉಪಯೋಗಿಸಿಕೊಂಡರು. ಮೊಗಲ್ ಚರಿತ್ರಕಾರರು ವ್ಯಕ್ತಿಗಳ ಬಗ್ಗೆ ಹೆಚ್ಚುಹೆಚ್ಚು ಆಸಕ್ತಿ ತೋರಿಸಲಾರಂಭಿಸಿದರು. ಜೀವನಚರಿತ್ರೆಗಳೂ ಅಧಿಕೃತ ಪತ್ರವ್ಯವಹಾರಗಳ ಸಂಗ್ರಹಗಳೂ ಕಾಣಿಸಿಕೊಂಡುವು. ಇವು ಮೊಗಲ್ ಆಸ್ಥಾನಗಳಲ್ಲಿನ ಧಾರಾಳ ದೃಷ್ಟಿಯನ್ನು ವ್ಯಕ್ತಪಡಿಸುತ್ತವೆ. ಐನ್–ಎ–ಅಕ್ಬರಿಯಂಥ ಕೃತಿಗಳು ಆ ಕಾಲಕ್ಕೆ ಸಂಬಂಧಿಸಿದ ವಿಷಯದ ಗಣಿ.

ಭಾರತಕ್ಕೆ ಐರೋಪ್ಯರು ಬಂದಾಗ ಮೊದಲು ಅವರು ಚರಿತ್ರೆಯನ್ನು ಮತಧರ್ಮಶಾಸ್ತ್ರದ ಒಂದು ಮುಖವೆಂದೇ ಪರಿಗಣಿಸಿದ್ದರು. ಕಡಲ ಬಳಿಯ ಏಷ್ಯ ಪ್ರದೇಶದ ಆವಿಷ್ಕಾರ, ಪರಿಶೋಧನೆ ಹಾಗೂ ಆಕ್ರಮಣಗಳಿಂದ ಅವರ ಬರೆಹಗಳ ಸ್ವರೂಪವೇ ಪರಿವರ್ತನೆ ಹೊಂದಿತು. ಮತದ ಧರ್ಮಶಾಸ್ತ್ರದ ಅಂಶ ಹೋಗಿ ರಾಜಕೀಯ ಉದ್ದೇಶ ಪ್ರಬಲವಾಯಿತು. ಸ್ಥಳಗಳ ಮತ್ತು ಜನರ ವರ್ಣನೆಯಿಂದ ಅವರು ತೃಪ್ತರಾಗಲಿಲ್ಲ. ರಾಜಕೀಯವಾಗಿ ಮಹತ್ತ್ವವುಳ್ಳ ಕೃತಿಗಳನ್ನು ಪ್ರಕಟಿಸಿ ಸರ್ಕಾರದ ಧ್ಯೇಯಧೋರಣೆಗಳ ಮೇಲೆ ಪ್ರಭಾವ ಬೀರತೊಡಗಿದರು. ಇದು ಚಿಂತನೆಯ ಅನೇಕ ಪಂಥಗಳ ಉಗಮಕ್ಕೆ ಕಾರಣವಾಯಿತು. ಅವುಗಳಲ್ಲಿ ಜೇಮ್ಸ್ ಮಿಲ್ಲನದೊಂದು ಪಂಥ. ಆತ ಭಾರತಕ್ಕೆ ಒಂದು ಫಲವಾದಿ ಸಿದ್ಧಾಂತವನ್ನು ಅನ್ವಯಿಸಲು ಪ್ರಯತ್ನಿಸಿದ. ಜಾತೀಯತೆ, ಹಕ್ಕು, ಅವಿಚಾರಾಭಿಪ್ರಾಯ ಮುಂತಾದವುಗಳು ಭಾರತವನ್ನಾವರಿಸಿವೆ. ಪ್ರಬುದ್ಧ ನಿರಂಕುಶಾಡಳಿತದಿಂದ ಮಾತ್ರವೇ ಅದನ್ನು ಸುಧಾರಿಸಬಹುದು ಎಂಬುದು ಅವನ ದೃಷ್ಟಿ. ಕಾನೂನು ಮತ್ತು ಸರ್ಕಾರಗಳ ಪ್ರಾಮುಖ್ಯವನ್ನು ಕುರಿತು ಅವನು ಬರೆದ. ಸರ್ ವಿಲಿಯಂ ಜೋನ್ಸ್, ಕನಿಂಗ್‍ಹ್ಯಾಂ, ವಿಲ್ಕಿನ್ಸ್, ಮನ್ರೊ, ಮ್ಯಾಲ್ಕೋಂ ಮತ್ತು ಎಲ್ಫಿನ್‍ಸ್ಟೈನ್ ಎಂಬುವರದು ಇನ್ನೊಂದು ಪಂಥ. ಭಾರತೀಯ ಸಮಾಜದ ಬಗ್ಗೆ ಇವರ ಧೋರಣೆ ಸ್ವಲ್ಪ ವಾಸಿ. ಭಾರತೀಯ ಸಂಸ್ಥೆಗಳನ್ನು ಚೆನ್ನಾಗಿ ಅರಿತು ಅದರ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಗಳನ್ನು ಸಹಾನುಭೂತಿಯಿಂದ ಚಿತ್ರಿಸಲು ಇವರು ಯತ್ನಿಸಿದರು. ಷೋರ್, ಗ್ರಾಂಟ್ ಮುಂತಾದ ಕ್ರೈಸ್ತ ಭಕ್ತಿವಾದಿಗಳದು ಇನ್ನೊಂದು ಪಂಥ. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ದೈವನಿಯೋಜಿತ. ಇದು ಪತಿತ ಜನಾಂಗವೊಂದರ ಉದ್ಧಾರಕ್ಕಾಗಿ ಮೊದಲೇ ನಿಯುಕ್ತವಾದ ಯೋಜನೆ ಎಂಬುದನ್ನು ಇವರು ಪಾದ್ರಿಗಳ ನೆರವಿನಿಂದ ವಾದಿಸಿದರು. ಕ್ರೈಸ್ತಧರ್ಮಪ್ರಸಾರದಿಂದಲೂ ಬೋಧನೆಯಿಂದಲೂ ತಮ್ಮ ಉದ್ದೇಶ ಸಾಧಿಸತೊಡಗಿದರು. ಆಲ್‍ಫ್ರೆಡ್ ಲೈಯಾಲ್, ಹೆನ್ರಿ ಮೇನ್, ವಿಲಿಯಂ ಹಂಟರ್ ಮುಂತಾದ ವಿದ್ವಾಂಸರದು ನಾಲ್ಕನೆಯ ಪಂಥ, ಪಾಶ್ಚಾತ್ಯ ಹಾಗೂ ಪ್ರಾಚ್ಯ ಶಕ್ತಿಗಳು ಪರಸ್ಪರ ಸಂಧಿಸಿದ್ದರ ಫಲವೇ ಬ್ರಿಟಿಷ್ ಆಡಳಿತವೆಂದು ಇವರ ಭಾವನೆ. ಭಾರತೀಯ ಆಡಳಿತ ಮತ್ತು ಸಮಾಜದ ವಿಷಯದಲ್ಲಿ ಇವರಿಗೆ ತೀವ್ರ ಆಸಕ್ತಿ. ಪಿ.ಇ. ರಾಬರ್ಟ್ಸ್, ಟಿ.ಜಿ.ಪಿ. ಸ್ಪಿಯರ್, ಸಿ.ಎಚ್. ಫಿಲಿಪ್ಸ್, ಹಾಲ್ಡನ್ ಫರ್ಬರ್ ಮತ್ತು ಬಾಲ್ ಹ್ಯಾಚೆಟ್ ಮುಂತಾದ ಆಧುನಿಕ ವಿದ್ವಾಂಸರದು ಐದನೆಯ ಪಂಥ. ಆಧುನಿಕ ವಿಮರ್ಶಜ್ಞಾನದ ನೆರವಿನಿಂದ ಇತಿಹಾಸದ ರಚನೆ ಮಾಡಲು ಇವರು ಯತ್ನಿಸಿದರು. ಈ ದೃಷ್ಟಿಗಳು ಆಧುನಿಕ ಭಾರತೀಯ ವಿದ್ವಾಂಸರನ್ನು ಬೆರಗುಗೊಳಿಸುತ್ತವೆ. ಏಕೆಂದರೆ ಮೊದಮೊದಲು ಅವರಿಗೆ ಚರಿತ್ರೆಯ ಸಂಪ್ರದಾಯ ಯಾವುದೂ ಇಲ್ಲದಿದ್ದ ಫಲವಾಗಿ ಬ್ರಿಟಿಷರ ಹೆಜ್ಜೆಯನ್ನೇ ಅನುಸರಿಸಿ ನಡೆದರು. ಆದರೆ ಈಸ್ಟ್ ಇಂಡಿಯ ಕಂಪನಿಯ ಅಥವಾ ಅದರ ಉತ್ತರಾಧಿಕಾರಿಯಾದ ಬ್ರಿಟಿಷ್ ಚಕ್ರಾಧಿಪತ್ಯದ ಚಟುವಟಿಕೆಗಳೇ ಬ್ರಿಟಿಷರ ಕಾಲದ ಭಾರತದ ನಿಜವಾದ ಚರಿತ್ರೆಯಲ್ಲವೆಂಬುದನ್ನು ಅವರು ಬಲು ಬೇಗ ಕಂಡುಕೊಂಡರು. ಪರಿಸ್ಥಿತಿಯ ಕರೆಗೆ ಓಗೊಟ್ಟು, ಸುಸಂಘಟಿತರಾಗಿ ಆಡಳಿತದಲ್ಲಿ ಸಮಪಾಲು ಬೇಕೆಂದು ಕೇಳಿ, ತಲೆತಲಾಂತರದಿಂದ ಬಂದ ದುಷ್ಟ ಪದ್ಧತಿಗಳನ್ನೆಲ್ಲ ತೊರೆದು, ಬ್ರಿಟಿಷ್ ಸಾಮ್ರಾಜ್ಯವಾದಿಗಳು ಯುದ್ಧದಲ್ಲಿ ವಿಜಯಿಗಳಾಗಿದ್ದಾಗಲೇ ಸೋಲೊಪ್ಪಿ ಭಾರತೀಯರ ಕೈಗೆ ಅಧಿಕಾರ ಕೊಡುವಂತೆ ಮಾಡುವ ಕಲೆಯನ್ನು ಕಲಿತ ಭಾರತೀಯರ ಚಟುವಟಿಕೆಗಳೇ ಚರಿತ್ರೆಯೆಂಬುದನ್ನು ಇವರು ಅರಿತರು. ಭಾರತೀಯರ ಸ್ವಪ್ರಯತ್ನದಿಂದಲೇ ಸಂಭವಿಸುತ್ತಿರುವ ಭಾರತೀಯ ಸಮಾಜದ ಪರಿವರ್ತನೆಯೇ ಭಾರತದ ಇತಿಹಾಸದ ಸತ್ತ್ವವೆಂಬ ಈ ದೃಷ್ಟಿಯ ಪ್ರತಿಪಾದಕರೆಂದರೆ ಸರ್ದಾರ್ ಕೆ.ಎಂ. ಪಣಿಕ್ಕರ್ ಮುಂತಾದ ಈಚಿನ ರಾಷ್ಟ್ರೀಯ ಇತಿಹಾಸಕಾರರು. ಆದರೆ ಅದಕ್ಕೆ ಮೊದಲು ಭಾರತೀಯ ವಿದ್ವಾಂಸರು ಈ ಸಮಸ್ಯೆಗೆ ಬೇರೆ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಿದರು. ನಾರಾಯಣ ಬೋಸ್, ಚಂದ್ರನಾಥ ಬಸು, ಬಂಕಿಮ ಚಂದ್ರನಾಥ ಚಟರ್ಜಿ, ಎ.ಸಿ. ದಾಸ್, ಕೆ. ಪಿ. ಜಯಸ್ವಾಲ್, ಬಾಲಗಂಗಾಧರ ತಿಲಕ್, ವಿ.ಡಿ. ಸಾವರಕರ್ ಮತ್ತಿತರರು ಪಾಶ್ಚಾತ್ಯ ಸಂಸ್ಕೃತಿಗಿಂತ ಹಿಂದೂ ಸಂಸ್ಕೃತಿ ಹಿರಿದಾದದ್ದೆಂದು ವಾದಿಸಿದರು. ಇವರದೊಂದು ವಿಚಾರಶೀಲ ಪಂಥ, ರಾಜೇಂದ್ರಲಾಲ್ ಮಿತ್ರ, ಆರ್.ಸಿ. ದತ್ ಮತ್ತು ಆರ್.ಜಿ. ಭಂಡಾರಕರ್ ಇವರು ರಾಷ್ಟ್ರೀಯ ಭಾವನೆಯಲ್ಲಿ ತನ್ಮಯರಾಗದೆ ಘಟನೆಗಳನ್ನು ವಸ್ತುನಿಷ್ಠೆಯಿಂದ ನೋಡಿ ಭಾರತೀಯ ಇತಿಹಾಸಕ್ಕೆ ಐರೋಪ್ಯರಿಂದ ಸಂಭವಿಸಿದ ನಿರೂಪಣೆಗಳನ್ನು ಸರಿಪಡಿಸಲೆತ್ನಿಸಿದರು. ಮೂರನೆಯ ಪಂಥಕ್ಕೆ ಸೇರಿದವರು ಮೇಜರ್ ಡಿ. ಬಸು, ಎಸ್. ಮಜುಂದಾರ್, ಸಿ.ವೈ. ಚಿಂತಾಮಣಿ ಮತ್ತು ಸತೀಂದ್ರನಾಥ ಬ್ಯಾನರ್ಜಿ. ಬ್ರಿಟಿಷರು ಭಾರತದಲ್ಲಿ ಮಾಡಿದ ಆರ್ಥಿಕ ಸುಲಿಗೆಯನ್ನಿವರು ಬಯಲಿಗೆಳೆದರು. ಬ್ರಿಟಿಷರು ಆಳ್ವಿಕೆಯನ್ನು ಆದಷ್ಟು ಬೇಗ ಕೊನೆಗೊಳಿಸುವುದು ಸಾಧ್ಯವಾಗುವಂತೆ ಸ್ವಾತಂತ್ರ್ಯ ಹೋರಾಟಗಾರರಿಗೆ ಶಕ್ತಿನೀಡುವುದು ಇವರ ಉದ್ದೇಶ. ಹಿರೇನ್ ಮುಖರ್ಜಿ, ಆರ್. ಪಾಮ್ಮೆದತ್, ಕೋಸಾಂಬಿ ಮುಂತಾದವರದು ನಾಲ್ಕನೆಯ ಪಂಥ. ಮಾರ್ಕ್ಸನ ಚಿಂತನೆಯಿಂದ ಪ್ರಭಾವಿತರಾಗಿದ್ದ ಇವರು ಆ ವಿಶಿಷ್ಟ ನಿಲುವಿನಿಂದ ವಿಶ್ಲೇಷಣೆ ಮಾಡಲು ಯತ್ನಿಸಿದರು. ಚಂದ್ರನಾಥ ಸರ್ಕಾರ್, ಎಸ್.ಎನ್. ಸೇನ್, ಷಫತ್ ಅಹಮದ್‍ಖಾನ್, ಡಾ. ಎಸ್. ಕೃಷ್ಣಸ್ವಾಮಯ್ಯಂಗಾರ್, ಶ್ರೀನಿವಾಸಾಚಾರಿಯರ್ ಮುಂತಾದವರು ಯಾವ ಪಂಥದಿಂದಲೂ ಆಕರ್ಷಿತರಾಗಲಿಲ್ಲ. ಭೂತಕಾಲವನ್ನು ವಾಸ್ತವಿಕವಾಗಿ ಪುನಾರಚಿಸುವುದು ಇವರ ಪ್ರಯತ್ನ.

ಕಳೆದ ಅರ್ಧ ಶತಮಾನದಲ್ಲಿ ಅನೇಕ ಚರಿತ್ರಕಾರರು ಭಾರತದ ಚರಿತ್ರೆಯನ್ನು ತಮ್ಮ ತಾಯಿನುಡಿಗಳಲ್ಲೂ ಇಂಗ್ಲಿಷಿನಲ್ಲೂ ಬರೆದಿದ್ದಾರೆ. ಪ್ರೊಫೆಸರ್ ಆರ್.ಸಿ. ಮಜುಂದಾರ್, ಎಸ್.ಎನ್.ಸೇನ್ ಮುಂತಾದ ಸುಪ್ರಸಿದ್ಧ ವಿದ್ವಾಂಸರು ಎರಡು ಭಾಷೆಗಳಲ್ಲೂ ಧಾರಾಳವಾಗಿ ಬರೆದಿದ್ದಾರೆ. ಅಥವಾ ಮೊದಲು ಇಂಗ್ಲಿಷಿನಲ್ಲಿ ಬರೆದು ಆಮೇಲೆ ಅವು ತಮ್ಮ ತಾಯಿನುಡಿಗೆ ಅನುವಾದವಾಗುವಂತೆ ಮಾಡಿದ್ದಾರೆ. ಆಧುನಿಕವೂ ಸ್ವೀಕೃತವೂ ಆದ ಚಾರಿತ್ರಿಕ ಭಾವನೆಗಳನ್ನೂ ತಂತ್ರಗಳನ್ನೂ ಅವರು ಬಳಸಿದ್ದಾರೆ. ಆದ್ದರಿಂದ ಅವರ ಇಂಗ್ಲಿಷ್ ಕೃತಿಗಳಿಗೂ ಮಾತೃಭಾಷೆಯ ಕೃತಿಗಳಿಗೂ ಹೆಚ್ಚಿನ ವ್ಯತ್ಯಾಸ ಇಲ್ಲ.

ದೇಶೀಯ ಭಾಷೆಗಳಲ್ಲಿ ಬಂದಿರುವ ಚಾರಿತ್ರಿಕ ಬರೆವಣಿಗೆಗಳಲ್ಲಿ, ನಾವು ಇನ್ನೂ ರಾಜಕೀಯ ಹಾಗೂ ಚಾರಿತ್ರಿಕ ಪ್ರಜ್ಞೆಯುಳ್ಳ ವಿವಿಧ ಪಂಥಗಳ ಬೆಳವಣಿಗೆಯನ್ನು ಕಾಣುತ್ತಿಲ್ಲ. ದೇಶಭಾಷೆಗಳಲ್ಲಿ ಮರಾಠಿಯೊಂದೇ 17ನೆಯ ಶತಮಾನದ ಬಖೈರು ದಾಖಲೆಗಳನ್ನು ಮುಂದುವರಿಸಿ ತಕ್ಕಮಟ್ಟಿಗೆ ಬಲವಾದ ಒಂದು ಸಂಪ್ರದಾಯ ಹೊಂದಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಜನರಿಗೆ ತಾಯ್ನುಡಿಗಳ ಸಾಂಸ್ಕೃತಿಕ ಮಹತ್ವದ ಅರಿವು ಬಂದಿದೆ. ಆಗಲೇ ಸಾಧಿತವಾಗಿದ್ದ ಪಕ್ವತೆಗೆ ದೆಹಲಿಯ ಸಾಹಿತ್ಯ ಅಕಾಡೆಮಿ ಮುಂತಾದ ಸಂಸ್ಥೆಗಳು ಪ್ರಜ್ಞಾಪೂರ್ಣ ರಾಷ್ಟ್ರೀಯ ನೀತಿಯಿಂದ ಬೆಂಬಲ ದೊರಕುತ್ತಿದೆ. ಅದು ಈ ಗತಿಯನ್ನು ಹೆಚ್ಚಿಸಿ ಮಾತೃಭಾಷೆಗಳಲ್ಲಿ ಚಾರಿತ್ರಿಕ ಬರೆವಣಿಗೆಗಳ ಬೌದ್ಧಿಕಾಂಶವನ್ನು ಹೆಚ್ಚು ಹೆಚ್ಚು ನಿಶ್ಚಿತಗೊಳಿಸುತ್ತಿದೆ. ಭಾರತದ ಕಿರಿಯ ಇತಿಹಾಸಕಾರರು ಪ್ರಾದೇಶಿಕ ಭಾಷೆಗಳಲ್ಲಿಯೇ ತಮ್ಮ ಕೃತಿಗಳನ್ನು ಬರೆದು ಪ್ರಕಟಿಸಲು ಹೆಚ್ಚು ಹೆಚ್ಚಾಗಿ ಬಯಸುತ್ತಿದ್ದಾರೆ.

(ಬಿ.ಎಸ್.ಎ.)

**ಇತಿಹಾಸ ಸಾಹಿತ್ಯ:** ಪ್ರಶ.ಪೂ. 5ನೆಯ ಶತಮಾನದಲ್ಲಿದ್ದ ಗ್ರೀಕರಿಂದಲೇ ನಿಜವಾದ ಇತಿಹಾಸದ ಚರಿತ್ರೆ ಆರಂಭವಾಗುತ್ತದೆ. ಇತಿಹಾಸಕ್ಕೆ ಇಂಗ್ಲಿಷಿನಲ್ಲಿ ಸಮಾನಪದವಾದ ಹಿಸ್ಟರಿ ಎಂಬುದು ಹಿಸ್ಟೋರಿಯ ಎಂಬ ಗ್ರೀಕ್ ಪದದಿಂದ ಬಂದದ್ದು. ಪೊರೆಯನ್ನು ಅಥವಾ ಬಲೆಯನ್ನು ನೇಯುವುದು, ಅರಳಿಸುವುದು ಎಂದು ಅದರ ಅರ್ಥ. ಗ್ರೀಕರೇ ಮೊಟ್ಟಮೊದಲಿಗೆ ಗತಕಾಲದ ಕಡೆಗೆ ತರ್ಕಬದ್ಧವಾಗಿ ವಿಚಾರ ಹರಿಸಿದವರು. ಅವರು ಕಾರ್ಯಕಾರಣ ಸಂಬಂಧಗಳನ್ನು ಪರಿಶೀಲಿಸಿ ಅವುಗಳ ದೃಷ್ಟಿಯಲ್ಲಿ ಗತಕಾಲದ ಘಟನೆಗಳನ್ನು ಸುಸಂಬದ್ಧವಾಗಿ ನಿರೂಪಿಸಲು ಯತ್ನಿಸಿದರು. ಹೀರಡಟಸ್ ತನ್ನ ಕೃತಿಯನ್ನು ಒಂದು ಇತಿಹಾಸವೆಂದು ಕರೆದ. ಇತಿಹಾಸಕಾರ ತನಗೆ ತೋಚಿದ ರೀತಿಯಲ್ಲಿ ವಸ್ತುವನ್ನು ಮಾರ್ಪಡಿಸಬಾರದು ಎಂಬುದು ಅವನ ಮತ.

ಆದರೆ ಇತಿಹಾಸದ ಘಟನೆಗಳೆಷ್ಟು ಮುಖ್ಯವೋ ಅದರಲ್ಲಿ ಪಾತ್ರವಹಿಸಿದ ವ್ಯಕ್ತಿಗಳೂ ಅಷ್ಟೇ ಮುಖ್ಯವೆಂದು ತಿಳಿದ ಹಲವರು ಚರಿತ್ರೆಯ ಮಹಾಪುರುಷರ ಜೀವನಚರಿತ್ರೆಗಳನ್ನು ರಚಿಸಿ ಆ ಮೂಲಕ ಆಯಾ ದೇಶಗಳ ಚರಿತ್ರೆಯನ್ನು ತಿಳಿಯುವುದಕ್ಕೂ ಬರೆಯುವುದಕ್ಕೂ ದಾರಿ ತೋರಿಸಿದರು. ಇವರಲ್ಲಿ ಗ್ರೀಸಿನ ಪ್ಲೂಟಾರ್ಕ್ ಮುಖ್ಯನಾದವ (**ನೋಡಿ– ಪ್ಲೂಟಾರ್ಕ್**). ಪ್ರಾಚೀನ ಗ್ರೀಕ್ ಹಾಗೂ ರೋಮನ್ ದೇಶಗಳ ಸುಪ್ರಸಿದ್ಧ ವ್ಯಕ್ತಿಗಳ ಜೀವನಚರಿತ್ರೆಗಳನ್ನು ಬರೆದು ಅಲೆಕ್ಸಾಂಡರನ ಕಾಲದ ಇತಿಹಾಸದ ಮೇಲೆ ಆತ ಬೆಳಕು ಚೆಲ್ಲಿದ. ವ್ಯಕ್ತಿಗಳ ಜೀವನದ ಪ್ರಮುಖ ವಿದ್ಯಮಾನಗಳನ್ನೆಲ್ಲ ಮೊದಲು ನಿರೂಪಿಸಿ, ಕೊನೆಯಲ್ಲಿ ಪಾತ್ರಗಳ ಗುಣಲಕ್ಷಣಗಳನ್ನು ವರ್ಣಿಸಿ ಪರಸ್ಪರ ಹೋಲಿಸುವ ಪ್ಲೂಟಾರ್ಕ್ ಪದ್ಧತಿಯನ್ನು ಡಾ. ಜಾನ್‌ಸನ್ನಿನಿಂದ ಹಿಡಿದು 19ನೆಯ ಶತಮಾನದ ಕೊನೆಯವರೆಗೂ ಜೀವನಚರಿತ್ರೆಯ ಲೇಖಕರೆಲ್ಲ ಅನುಸರಿಸಿದರು.

ಮೂಲತಃ ಗತಕಾಲದ ಚರಿತ್ರೆಯ ಕಲಾತ್ಮಕ ನಿರೂಪಣೆ ಇತಿಹಾಸವಾದರೂ ಗತಕಾಲಕ್ಕೆ ಸಂಬಂಧಿಸಿದ ಘಟನೆಗಳ ವಾಸ್ತವ ಹಾಗೂ ಉಪಯುಕ್ತ ವರದಿಯೇ ಇತಿಹಾಸವೆನಿಸಿ ಕೊಳ್ಳುವುದಿಲ್ಲ. ಒಂದು ದೃಷ್ಟಿಯಿಂದ ಇತಿಹಾಸ ಶಾಸ್ತ್ರಗ್ರಂಥ. ಗತಕಾಲದ ಗುರುತುಗಳನ್ನೂ ದಾಖಲೆಗಳನ್ನೂ ಹುಡುಕುವಾಗ ಅವುಗಳಿಗೆ ಸಂಬಂಧಿಸಿದ ಪುರಾವೆಗಳನ್ನೂ ಪ್ರಮಾಣ ಗಳನ್ನೂ ಸಂಗ್ರಹಿಸುವಾಗ ವಿಜ್ಞಾನಿಗಿರಬೇಕಾದ ಕುತೂಹಲ, ಸೂಕ್ಷ್ಮದೃಷ್ಟಿ, ನಿಸ್ಸಂಗ ಮನೋಭಾವ, ಸತ್ಯನಿಷ್ಠೆ, ತಾಳ್ಮೆ, ವಿವೇಚನೆ–ಎಲ್ಲವೂ ಇತಿಹಾಸಕಾರನಲ್ಲಿರಬೇಕು. ನಾನು ಗತಕಾಲಕ್ಕೆ ಸಂಬಂಧಿಸಿದ ಸತ್ಯಾಂಶಗಳನ್ನು ತಿಳಿದುಕೊಳ್ಳಲು ಕುತೂಹಲದಿಂದ ಅಲ್ಲಲ್ಲಿ ಹೋಗಿ ಈ ಅನ್ವೇಷಣೆಯಲ್ಲಿ ತೊಡಗಿದೆ–ಎಂದು ಪ್ರಾಚೀನ ಇತಿಹಾಸಕಾರ ಹೀರಡಟಸ್ ಹೇಳುತ್ತಾನೆ. ಕೇವಲ ವಾಸ್ತವಾಂಶಗಳ ಶೇಖರಣೆ, ಸಂಗ್ರಹಣೆ ಇಷ್ಟೇ ಸಾಲದು. ಅವುಗಳನ್ನು ಯುಕ್ತ ಗಣತಿಯ ಸಂವಿಧಾನಕ್ಕೆ ಒಳಪಡಿಸಬೇಕು. ಹೃದಯಂಗಮವಾಗಿ ಬರೆಯಬೇಕು, ಇತಿಹಾಸ ಕಲೆಯೂ ಹೌದು, ಶಾಸ್ತ್ರವೂ ಹೌದು.

13ನೆಯ ಶತಮಾನದ ಫ್ರಾನ್ಸಿನ ಗಯಾರ್ಟ್ (ನೋಡಿ) ಪ್ರಸಿದ್ಧ ಇತಿಹಾಸಕಾರರಲ್ಲಿ ಒಬ್ಬ. ಅವನ ಗ್ರಂಥದಲ್ಲಿ ಪ್ರ.ಶ. 1180 ರಿಂದ 1304ರ ವರೆಗಿನ ಫ್ರೆಂಚ್ ದೇಶದ ಇತಿಹಾಸದ ಚಿತ್ರಮಯ ನಿರೂಪಣೆ ನಮಗೆ ದೊರೆಯುತ್ತದೆ. ಇಂಗ್ಲಿಷ್ ಸಾಹಿತ್ಯದಲ್ಲಿ ಈ ಬಗೆಯ ಕೃತಿಗಳು ರಚಿತವಾಗಲು ಪ್ರಾರಂಭವಾದದ್ದು, ವಿವೇಚನಾಯುಗವಾದ ಹದಿನೆಂಟನೆಯ ಶತಮಾನದಲ್ಲಿ. ಕಲಾತ್ಮಕವಾದ ಇತಿಹಾಸ ಕೃತಿಗಳನ್ನು ರಚಿಸಿದವರಲ್ಲಿ ಡೇವಿಡ್ ಹ್ಯೂಮ್ ಮತ್ತು ರಾಬರ್ಟ್‌ಸನ್ ಇಬ್ಬರೂ ಅಗ್ರಗಣ್ಯರು. ಫ್ರಾನ್ಸಿನ ವಾಲ್ಟೇರ್ ಮುಂತಾದವರ ಪ್ರಭಾವದಿಂದ ಸ್ಫೂರ್ತಿ ಪಡೆದು ಇಬ್ಬರೂ ಇಂಗ್ಲೆಂಡು ಹಾಗೂ ಸ್ಕಾಟ್ಲೆಂಡಿನ ಇತಿಹಾಸ ಬರೆದರು. 19ನೆಯ ಶತಮಾನದ ಮಧ್ಯದಲ್ಲಿ ರೊಮ್ಯಾಂಟಿಕ್ ಸಾಹಿತ್ಯದ ಪ್ರಭಾವದಿಂದ ಇತಿಹಾಸದಲ್ಲಿ ಸತ್ಯಕ್ಕಿಂತಲೂ ಕಲ್ಪನೆಗೇ ಹೆಚ್ಚು ಪ್ರಾಧಾನ್ಯ ದೊರೆಯತೊಡಗಿತು. ಕಾವ್ಯದಲ್ಲಿ ಇತಿಹಾಸ ಮುಳುಗತೊಡಗಿತು. ಆಗ ಜರ್ಮನಿಯ ಸುಪ್ರಸಿದ್ಧ ಇತಿಹಾಸ ವಿದ್ವಾಂಸರುಗಳಾದ ಥಿಯೋಡರ್ ಮಾಮ್‌ಸೆನ್ ಮತ್ತು ಲಿಯೋ ಪಾಲ್ಡ್ ವಾನ್ ರಾಂಕ ಎಂಬುವರು ಚರಿತ್ರೆಯ ರಚನೆಯಲ್ಲಿ ಹೊಸದಾದ ವೈಜ್ಞಾನಿಕ ದೃಷ್ಟಿಯ ಆವಶ್ಯಕತೆಯನ್ನು ಎತ್ತಿ ಹಿಡಿದರು. ವಿಷಯಗಳ ಸಮರ್ಪಕ ಜೋಡಣೆ, ಶೈಲಿಯ ಗಾಂಭೀರ್ಯ, ಸ್ಫುಟವಾದ ನಿರೂಪಣೆ ಇವನ್ನು ನಾವು ಅವರ ಗ್ರಂಥಗಳಲ್ಲಿ ಕಾಣಬಹುದು.

ಇತಿಹಾಸವನ್ನು ಸಾಹಿತ್ಯದ ಶಿಖರಕ್ಕೇರಿಸಿದವರಲ್ಲಿ ಇಂಗ್ಲೆಂಡಿನ ಎಡ್ವರ್ಡ್ ಗಿಬ್ಬನ್ ಪ್ರಧಾನ ಪುರುಷ. ಡಿಕ್ಲೈನ್ ಅಂಡ್ ಫಾಲ್ ಆಫ್ ದಿ ರೋಮನ್ ಎಂಪೈರ್ ಇವನ ಮೇರುಕೃತಿ (**ನೋಡಿ– ಗಿಬ್ಬನ್,ಎಡ್ವರ್ಡ್**).

ಕಲಾಮಯವಾದ ಇತಿಹಾಸ ಗ್ರಂಥಗಳನ್ನು ರಚಿಸಿದವರಲ್ಲಿ ಮುಖ್ಯನಾದವ ಕಾರ್ಲೈಲ್. ಈತ ಫ್ರಾನ್ಸಿನ ಮಹಾಕ್ರಾಂತಿಯನ್ನು ಕುರಿತು ಬರೆದ ಫ್ರೆಂಚ್ ರೆವಲ್ಯೂಷನ್ ಎಂಬುದು ಭವ್ಯವಾದ ಸಾಹಿತ್ಯಕೃತಿ. ಪ್ಲೂಟಾರ್ಕ್ ಹಾಕಿಕೊಟ್ಟ ಪುರಾತನ ದಾರಿಯನ್ನು ಸ್ವಲ್ಪಮಟ್ಟಿಗೆ ಕಾರ್ಲೈಲ್ ಅನುಸರಿಸುತ್ತಾನೆ. ಜರ್ಮನಿಯ ದಾರ್ಶನಿಕರ ತೀವ್ರ ಪ್ರಭಾವಕ್ಕೆ ಒಳಗಾಗಿದ್ದ ಕಾರ್ಲೈಲ್ 1825ರಲ್ಲಿ ಷಿಲ್ಲರ್ ಕವಿಯ ಜೀವನಚರಿತ್ರೆ ಬರೆದು ಸುಪ್ರಸಿದ್ಧನಾಗಿದ್ದ. ಒಬ್ಬ ವ್ಯಕ್ತಿಯ ಜೀವನಚರಿತ್ರೆಗೂ ಒಂದು ದೇಶದ ಚರಿತ್ರೆಗೂ ಯಾವ ವ್ಯತ್ಯಾಸವೂ ಇಲ್ಲವೆಂಬುದು ಕಾರ್ಲೈಲನ ವಾದ. ಪ್ರತಿಯೊಂದು ರಾಷ್ಟ್ರದ ವೀರರ ಜೀವನಚರಿತ್ರೆಯಲ್ಲೂ ಆ ದೇಶದ ಇತಿಹಾಸ ಅಡಕವಾಗಿದೆಯೆಂದು ಆತ ಹೇಳುತ್ತಾನೆ. ಈ ದೃಷ್ಟಿಯನ್ನು ಆತನ ಇತಿಹಾಸಗ್ರಂಥಗಳಲ್ಲೂ ಕಾಣಬಹುದು. ಗಿಬ್ಬನ್ನಿನಲ್ಲಿರುವ ವಸ್ತುನಿಷ್ಠೆ ಕಾರ್ಲೈಲನಲ್ಲಿಲ್ಲ. ಇತಿಹಾಸವನ್ನು ನಾಟಕದ ಸನ್ನಿವೇಶಗಳಂತೆ ನಿರೂಪಿಸುವುದರಲ್ಲಿ ಕಾರ್ಲೈಲನನ್ನು ಮೀರಿಸಿದವರು ವಿರಳ. ಆದರೆ ಇತಿಹಾಸವನ್ನು ನಾಟಕೀಯವನ್ನಾಗಿ ಮಾಡಿ, ಆಯಾ ಕಾಲದ ಪ್ರಮುಖ ರಾಷ್ಟ್ರನಾಯಕರ ಜೀವನದ ಸುತ್ತಲಿನ ಸನ್ನಿವೇಶವನ್ನೂ ಘಟನೆಗಳನ್ನೂ ರಚಿಸುವಾಗ ಅವುಗಳ ಹಿಂದಿರಬಹುದಾದ ಪ್ರೇರಕಶಕ್ತಿಯನ್ನು ವಿವರಿಸುವ ಗೋಜಿಗೇ ಅವನು ಹೋಗುವುದಿಲ್ಲ (**ನೋಡಿ– ಕಾರ್ಲೈಲ್, ಥಾಮಸ್**).

ಇತಿಹಾಸಕಾರ ಎಸಗಬಹುದಾದ ಲೋಪದೋಷಗಳನ್ನು ನಾವು ಮತ್ತೊಬ್ಬ ಸುಪ್ರಸಿದ್ಧ ಚರಿತ್ರಕಾರನಾದ ಮಕಾಲೆಯಲ್ಲೂ ಕಾಣಬಹುದು. ಸತ್ಯಾನ್ವೇಷಣೆಗಿಂತಲೂ ನಾಟಕೀಯ ನಿರೂಪಣೆಗೇ ಮಕಾಲೆ ಹೆಚ್ಚು ಗಮನವೀಯುತ್ತಾನೆ. ಅಲ್ಲಲ್ಲಿ ಸತ್ಯಾಂಶಗಳಿಂದ ದೂರವಾದ ವಿವರಗಳೂ ವ್ಯಕ್ತಿಗಳನ್ನು ಚಿತ್ರಿಸುವಾಗ ತನ್ನ ಸ್ವಂತ ರಾಜಕೀಯ ಅಭಿಪ್ರಾಯಗಳಿಗೇ ಹೆಚ್ಚು ಗಮನ ಕೊಟ್ಟಿರುವ ಸನ್ನಿವೇಶಗಳೂ ಬರುತ್ತವೆ. ಭಾವೋದ್ರೇಕದ ಕಾವಿನಲ್ಲಿ ಮಕಾಲೆಯ ಅನ್ಯಾದೃಶವಾದ ಶೈಲಿ ಇತಿಹಾಸದ ವಾಸ್ತವಾಂಶಗಳನ್ನು ಮರೆಮಾಡುತ್ತದೆ. ಅವನ ಕಥನಶಕ್ತಿ ಅವನ ಇತಿಹಾಸದೃಷ್ಟಿಯನ್ನು ಮಸಕುಮಾಡುತ್ತದೆ.

ಇತಿಹಾಸವನ್ನು ಕಾವ್ಯವಸ್ತುವನ್ನಾಗಿ ಅಳವಡಿಸಿಕೊಂಡ ಐತಿಹಾಸಿಕ ಮಹಾಕವಿಗಳಲ್ಲಿ ಶ್ರೇಷ್ಠನಾದವ ಕಾಶ್ಮೀರದ ಸಂಸ್ಕೃತ ಕವಿ ಕಲ್ಹಣ. ಇವನ ರಾಜತರಂಗಿಣಿ ಶ್ರೇಷ್ಠಗ್ರಂಥ. ಸಂಸ್ಕೃತ ಸಾಹಿತ್ಯದಲ್ಲಿ ಚರಿತ್ರೆಯ ಘಟನೆಗಳ ಕ್ರಮಬದ್ಧ ಇತಿಹಾಸದ ನಿರೂಪಣೆಗೆಂದು ಮೀಸಲಾದ ಒಂದೇ ಒಂದು ಗ್ರಂಥ ರಾಜತರಂಗಿಣಿ. ಆದಿಕಾಲದಿಂದ ತನ್ನ ಕಾಲದವರೆಗೆ ಕಾಶ್ಮೀರದ ಸಂಪೂರ್ಣ ಚರಿತ್ರೆಯನ್ನು ಕಲ್ಹಣ ಬರೆದಿದ್ದಾನೆ. ಪ್ರತಿಯೊಬ್ಬ ರಾಜನ ಆಳ್ವಿಕೆಯನ್ನೂ ವಿವರವಾಗಿ ಚಿತ್ರಿಸಿದ್ದಾನೆ. ಪುರಾತನ ರಾಜಾವಳಿ ಕಥೆಗಳು, ದಾನಪತ್ರಗಳು, ಶಿಲಾಲೇಖನಗಳು. ಶಾಸನಗಳು ಮತ್ತು ಆಧಾರಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ತನ್ನ ಸಂಶೋಧಕ ದೃಷ್ಟಿಯನ್ನು ತೋರಿಸಿದ್ದಾನೆ. ಅದರಲ್ಲಿ ಜನಜೀವನವೂ ಹಾಸುಹೊಕ್ಕಾಗಿದ್ದು ಇದೊಂದು ಸುಂದರ ಕಾವ್ಯ ಮಾತ್ರವಲ್ಲದೆ ಇತಿಹಾಸವೂ ಆಗಿದೆ. ಚರಿತ್ರಕಾರನಿಗೆ ಕವಿಯ, ನಾಟಕಕಾರನ ಹಾಗೂ ವಿಜ್ಞಾನಿಯ ದೃಷ್ಟಿ ಮತ್ತು ನಿಷ್ಠೆ ಅತ್ಯಗತ್ಯವೆಂದು ಈ ಎಲ್ಲ ಲೇಖಕರೂ ತೋರಿಸಿಕೊಟ್ಟಿದ್ದಾರೆ. (ಎಚ್.ಕೆ.ಆರ್.)

**ಇತ್ತಲೆಗ:** ಮೊಣಕೈಕೀಲಿಯನ್ನು ಮುಂಗೈಯಿಂದ ಬಲವಾಗಿ ಮಡಿಸಿದಾಗ ಎದ್ದು ಕಾಣುವ ರಟ್ಟೆಯ ಸ್ನಾಯುಗಳಲ್ಲಿ ಒಂದು (ಬೈಸೆಪ್ಸ್). ಇದರ ಮೂಲವಾಗಿ ಎರಡು ತಲೆಗಳಿವೆ: ಮೋಟಾಗಿರುವ ಮೋಟುದಲೆ (ಷಾರ್ಟ್‌ಹೆಡ್); ನೀಳದಲೆ (ಲಾಂಗ್ ಹೆಡ್). ಮೊದಲಿನದು ಹೆಗಲ್ಮೂಳೆಯ (ಸ್ಕ್ಯಾಪುಲ) ಕಾಕೊಕ್ಕಿ ಚಾಚುವಿಗೂ (ಕೊರಕಾಯ್ಡ್ ಪ್ರೋಸೆಸ್) ಎರಡನೆಯದು ಹೆಗಲ ಕೀಲೊಳಗಿನ ಕುಳಿಯಿಂದ ಗುಳಿಯ (ಗ್ಲೀನಾಯ್ಡ್ ಕ್ಯಾವಿಟಿ) ಅಂಚಿಗೂ ತಗುಲಿಕೊಂಡಿದೆ. ಹೆಗಲಿನ ಕೀಲು ಎಲ್ಲ ದಿಕ್ಕುಗಳಲ್ಲೂ ಆಡುವಾಗ ಭದ್ರಗೊಳಿಸಲು ಈ ಸ್ನಾಯು ನೆರವಾಗುವುದು. ಒಂದುಗೂಡಿದ ನಡುವಣ ಭಾಗ (ಒಡಲು) ಕಂಡರದಲ್ಲಿ (ಟೆಂಡನ್) ಕೊನೆಗೊಳ್ಳುತ್ತದೆ. ಈ ಕಂಡರದ ಕೆಳಕೊನೆ ಮುಂದೋಳಲ್ಲಿರುವ ಆರೆಲುವಿಗೆ (ರೇಡಿಯಸ್) ತಗಲಿಕೊಂಡಿದೆ. ಇತ್ತಲೆಗ ಕುಗ್ಗಿದಾಗ ಮುಂದೋಳು ಮೊಣಕೈಯಲ್ಲಿ ಮಡಿಸಿಕೊಂಡು ರಟ್ಟೆಯ ಮೇಲೆ ಬರುವುದು. ಅಲ್ಲದೆ ಅಂಗೈಯನ್ನು ಮಗುಚಿಹಾಕುತ್ತದೆ. ಭಾರ ಎತ್ತುವವರಲ್ಲಿ ಇದು ಬಲವಾಗಿರುತ್ತದೆ.

ತೊಡೆಯಲ್ಲೂ ಹಿಂದುಗಡೆ ಆಚೆಪಕ್ಕದಲ್ಲಿ ತೋಳಿನದರಷ್ಟು ಎದ್ದುಕಾಣದ ಒಂದು ಇತ್ತಲೆಗ ಸ್ನಾಯುವಿದೆ. ಮೂಳೆಗಂಟುವ ಇದರ ಕೆಳಗಣ ಕಂಡರ ಒಂದನ್ನು ಮಾತ್ರ ಮೇಲೆ ಗುರುತಿಸಬಹುದು. ಮೊಣಕಾಲಿನ ಹಿಂದುಗಡೆ ಹೊರಪಕ್ಕದಲ್ಲಿ ಮುಟ್ಟಲು ಸಿಗುವ, ಕಾಲಿನ ತೆಳುಮೂಳೆಯಾದ ಸೂಚಿಲುಕದ (ಫಬುಲ) ಮೇಲ್ಕೊನೆಗೆ ಈ ಕಂಡರ ಅಂಟಿರುತ್ತದೆ. ಹಿಂತೊಡೆಯ ತುಂಬ ಈ ಸ್ನಾಯುವಿನ ಒಡಲು ಇದೆ. ಇದರ ಮೇಲ್ಕೊನೆ ಕುಳಿತುಕೊಂಡಾಗ ನೆಲಕ್ಕೆ ತಾಕುವ ಮೂಳೆಯ ಭಾಗವಾದ ಕುಂಡೆಲುಬಿಗೆ (ಇಸ್ಕಿಯಂ) ಅಂಟಿದೆ. ಈ ಸ್ನಾಯುವಿನ ಇನ್ನೊಂದು ತಲೆ ತೊಡೆಮೂಳೆಗೆ (ಫೀಮರ್) ಉದ್ದಕ್ಕೂ ಅಂಟಿದೆ. ರಟ್ಟೆಯ ಇತ್ತಲೆಗದಂತೆ ಇದು ಕೂಡ ಕಾಲನ್ನು ತೊಡೆ ಹಿಂದಕ್ಕೆ ಮೊಣಕಾಲಲ್ಲಿ ಬಲವಾಗಿ ಹಿಮ್ಮಡಿಸುವಂತೆ ಮಾಡುತ್ತದೆ. ಮೊಣಕಾಲನ್ನು ಮಡಿಸಿರುವಾಗ, ಪಾದವನ್ನು ಹೊರಗೆ ಮಗುಚುವುದು. ಹಿಂತೊಡೆಯಲ್ಲಿರುವ ಸ್ನಾಯುಗಳಲ್ಲಿ ಇದು ಬಲು ಬಲವಾದುದು. ಮೊಣಕಾಲಿನ ರೋಗಗಳಲ್ಲಿ ಈ ಸ್ನಾಯುವಿನ ಎಳೆತದಿಂದ ಮೊಣಕಾಲು ಮಡಿಸಿಕೊಂಡೇ ಇದ್ದುಬಿಡುವುದನ್ನು ತಪ್ಪಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ (**ನೋಡಿ : ಸ್ನಾಯು ; ಸ್ನಾಯುವಿನ ಮಂಡಲ**). (ಡಿ.ಎಸ್.ಎಸ್.)

**ಇತ್ತಲೆ ಮಂಡಲ:** ಜಿಮ್ನೊಫಿಯಾನ ಅಥವಾ ಏಪೋಡ ಎಂಬ ವಿಭಾಗಕ್ಕೆ ಸೇರಿದ ಒಂದು ದ್ವಿಚರಪ್ರಾಣಿ (ಇಕ್ತಿಯಾಫಿಸ್). ಕಾಲಿಲ್ಲದ ಈ ದ್ವಿಚರಿಗಳು ಉಷ್ಣವಲಯದ ಜವುಗು ಪ್ರದೇಶಗಳಲ್ಲೂ ಕೊಳೆಯುತ್ತಿರುವ ಎಲೆ ಮರಮುಟ್ಟುಗಳಲ್ಲೂ ವಾಸಿಸಿ ಕ್ರಿಮಿಕೀಟಾದಿಗಳನ್ನು ತಿಂದು ಜೀವಿಸುತ್ತವೆ. ಚರ್ಮ ಲೋಳೆಗಟ್ಟಿರುತ್ತದಲ್ಲದೆ ಕೊಂಚ ಸುಕ್ಕಾಗಿಯೂ ಇದೆ. ಮೂಗಿನ ಹಿಂದೆ ಎರಡು ಚಿಕ್ಕದಾದ ಕರಬಳ್ಳಿಗಳಿವೆ. ಕಿವಿಗಳಿಗೆ ತಮಟೆ ಇಲ್ಲ. ಬಾಲ ಮೊಂಡು. ಸುರುಳಿ ಸುತ್ತಿಕೊಂಡು ಹೆಣ್ಣು ಪ್ರಾಣಿ ಮೊಟ್ಟೆಗಳನ್ನು ರಕ್ಷಿಸುತ್ತದೆ. ಈ ಗುಂಪಿಗೆ ಸೇರಿದ ಕೆಲವು ಪ್ರಭೇದಗಳು ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿ ಜೀವಿಸುತ್ತವೆ.(ಎಂ.ಡಿ.ಪಿ.)

**ಇತ್ತಲೆಮುಂಡ :** ಆಫ್ರಿಕ, ಸ್ಪೇನ್, ಉತ್ತರ ಅಮೆರಿಕ, ಮೆಕ್ಸಿಕೊ, ದಕ್ಷಿಣ ಅಮೆರಿಕ ಮುಂತಾದ ದೇಶಗಳಲ್ಲಿ ಹೇರಳವಾಗಿರುವ ಆಂಫಿಸ್ಬೇನ ಎಂಬ ಒಂದು ಸರೀಸೃಪ. ಹೆಂಟೆಗೊದ್ದ, ಹಲ್ಲಿ, ಊಸರವಳ್ಳಿಗಳಂತೆ ಹಲ್ಲಿಗಳ ಗುಂಪಿಗೆ ಇದನ್ನು ಸೇರಿಸಲಾಗಿದೆ. ಹಗ್ಗದಂತೆ ದುಂಡಾಗಿರುವ ಶರೀರ ನೋಟಕ್ಕೆ ಹಾವಿನಂತೆ ಕಾಣುತ್ತದೆ. ಆದರೆ ಇದಕ್ಕೂ ಹಾವುಗಳಿಗೂ ಯಾವ ಸಂಬಂಧವೂ ಇಲ್ಲ. ಇದು ಹಿಂದಕ್ಕೂ ಮುಂದಕ್ಕೂ ಚಲಿಸಬಲ್ಲದು. ಇದಕ್ಕೆ ಒಂದೇ ತಲೆ ಇದ್ದರೂ ತಲೆ ಮತ್ತು ಬಾಲದ ತುದಿ ಎರಡೂ ಒಂದೇ ಗಾತ್ರ ಮತ್ತು ಆಕಾರವನ್ನು ಹೊಂದಿರುವುದರಿಂದ ಎರಡು ತಲೆ ಹಾವೆಂದು ತಿಳಿದಿದ್ದಾರೆ. ಹಾವಿನಂತೆ ಕಾಲಿಲ್ಲದ ಪ್ರಾಣಿ. ಆದರೆ ಚಲನೆ ಮಾತ್ರ ಹಾವಿನಂತಲ್ಲ, ಹಲ್ಲಿಯಂತೆ. ಆದರೆ ಹಲ್ಲಿಗಳಿಗೆ

ಮುಖ್ಯವಾಗಿ ಇರಬೇಕಾದ ಫಲಕಗಳು ಇದರಲ್ಲಿ ಕಾಣಬರುವುದಿಲ್ಲ. ಎಡಭಾಗದ ಶ್ವಾಸಕೋಶ ಮಾತ್ರ ಇದೆ. ಕಣ್ಣುಗಳು ಕ್ಷಯಿಸಿ ಹೋಗಿವೆ. ಹೊರಕಿವಿ ಇಲ್ಲ. ಕಾಲುಮೂಳೆಗಳು ಮತ್ತು ಅವಕ್ಕೆ ಸಂಬಂಧಪಟ್ಟ ಭುಜದ ಮತ್ತು ಸೊಂಟದ ಕಟ್ಟಿನ ಮೂಳೆಗಳು ನಶಿಸಿಹೋಗಿವೆ. ಭೂಮಿಯ ಒಳಗೆ ವಾಸಮಾಡುವ ಪ್ರವೃತ್ತಿಯೇ ಇದಕ್ಕೆ ಕಾರಣ. ಸು.1 ಮೀ ವರೆಗೆ



ಉದ್ದವಾಗಿರುತ್ತದೆ. ವಾಸ ಬಿಲಗಳಲ್ಲಿ. ಅದರಲ್ಲೂ ಇರುವೆಗೂಡು ಮತ್ತು ಗೆದ್ದಲಿನ ಹುತ್ತಗಳಲ್ಲಿ ವಾಸಿಸುವುದು ಹೆಚ್ಚು. ಇರುವೆ ಗೆದ್ದಲುಹುಳುಗಳ ಕಡಿತವನ್ನು ಸಹಿಸಿಕೊಳ್ಳುವ ಶಕ್ತಿ ಇದಕ್ಕೆ ಇರುವುದರಿಂದ ಆ ಗೂಡುಗಳಲ್ಲಿ ವಾಸಿಸಬಲ್ಲುದು. ಅಷ್ಟೇ ಅಲ್ಲ, ಇರುವೆ ಗೆದ್ದಲುಗಳನ್ನು ತಿಂದು ಅವುಗಳ ಗೂಡುಗಳನ್ನು ತನ್ನ ಆಹಾರ ಶೇಖರಣೆಗೂ ತತ್ತಿಗಳನ್ನು ಕಾಪಾಡುವುದಕ್ಕೂ ಇದು ಉಪಯೋಗಿಸುತ್ತದೆ. (ಜಿ.ಎಂ.ಬಿ.)

**ಇ–ತ್ಸಿಂಗ್:** 635–713. ಯೂವಾನ್‌ಚಾಂಗ್‌ನ ಅನಂತರ ಭಾರತಕ್ಕೆ ಬಂದ ಚೀನೀ ಬೌದ್ಧಯಾತ್ರಿಕರಲ್ಲಿ ಕೊನೆಯವ. ಏಳನೆಯ ವಯಸ್ಸಿನಲ್ಲಿ ಚೀನಿ ಭಾಷಾಧ್ಯಯನ ನಡೆಸಿದ. 12ನೆಯ ವಯಸ್ಸಿನಲ್ಲಿ ಇವನ ಶಿಕ್ಷಕನೊಬ್ಬ ನಿಧನನಾದಾಗ ಇವನ ಜೀವನದ ದಿಶೆ ಬದಲಿಸಿತು. ಗುರುವಿನ ಅಗಲುವಿಕೆಯಿಂದ ತುಂಬ ದುಃಖಿಕ್ಕೀಡಾಗಿ ಲೌಕಿಕ ಸಾಹಿತ್ಯಾಭ್ಯಾಸ ತ್ಯಜಿಸಿ ಬೌದ್ಧಸಾಹಿತ್ಯದ ಅಧ್ಯಯನ ನಡೆಸಿದ. ಹದಿನಾಲ್ಕನೆಯ ವಯಸ್ಸಿನಲ್ಲಿ ಶ್ರಮಣನಾದ. ಚಿಕ್ಕಂದಿನಿಂದಲೂ ಭಾರತಕ್ಕೆ ಕ್ಷೇತ್ರಯಾತ್ರೆ ಕೈಗೊಳ್ಳಬೇಕೆಂದು ಆಶಿಸುತ್ತಿದ್ದನಾದರೂ 37ನೆಯ ವಯಸ್ಸಿನವರೆಗೂ ಅದು ಫಲಿಸಲಿಲ್ಲ.

19 ವರ್ಷಗಳ ತನ್ನ ಯೌವನವನ್ನು ಬೌದ್ಧಗ್ರಂಥಗಳ ಅಧ್ಯಯನದಲ್ಲಿ ಕಳೆದ. ವಿನಯ, ಸೂತ್ರ, ಅಭಿಧರ್ಮಗಳನ್ನು ಆಳವಾಗಿ ಅಭ್ಯಸಿಸಿದ. 670ರಲ್ಲಿ ಭಾರತಕ್ಕೆ ಯಾತ್ರೆ ಹೊರಟ. 673ರಲ್ಲಿ ತಾಮ್ರಲಿಪ್ತಿಗೆ ಬಂದ. ಯಾತ್ರೆಯ ಮುಖ್ಯ ಉದ್ದೇಶ ಪವಿತ್ರ ಬೌದ್ಧ ಯಾತ್ರಾಸ್ಥಳಗಳನ್ನು ಸಂದರ್ಶಿಸುವುದು ಮತ್ತು ಬೌದ್ಧ ಧರ್ಮಗ್ರಂಥಗಳನ್ನು ಸಂಗ್ರಹಿಸುವುದು ಆಗಿತ್ತು. ಯೂವಾನ್‌ಚಾಂಗ್‌ನಂತೆ ಈತ ಭಾರತದ ಬಹುಭಾಗದಲ್ಲಿ ಸಂಚರಿಸಲಿಲ್ಲ. ಬುದ್ಧಗಯೆ, ನಾಲಂದ, ವೈಶಾಲಿ, ಶ್ರಾವಸ್ತಿ, ಕುಶಿನಗರ ಮತ್ತು ವಾರಾಣಸಿ ಮುಂತಾದವು ಈತ ಸಂದರ್ಶಿಸಿದ ಮುಖ್ಯಸ್ಥಳಗಳು. ತಾಮ್ರಲಿಪ್ತಿಯಲ್ಲಿ ಈತ ಮಹಾಯಾನ ಪ್ರದೀಪನೆಂಬುವವನಿಂದ ಸಂಸ್ಕೃತ ಕಲಿತು ವ್ಯಾಕರಣ ಅಭ್ಯಾಸ ಮಾಡಿದ. ನಾಲಂದದಲ್ಲಿ 10 ವರ್ಷ ಅಧ್ಯಯನ ಮಾಡಿ 400ಕ್ಕೂ ಹೆಚ್ಚು ಬೌದ್ಧಗ್ರಂಥಗಳನ್ನು ಸಂಗ್ರಹಿಸಿಕೊಂಡು ತಾಮ್ರಲಿಪ್ತಿಯ ಮುಖಾಂತರ ಸ್ವದೇಶಕ್ಕೆ ಮರಳಿದ.

ತನ್ನ 25 ವರ್ಷಗಳ ಕ್ಷೇತ್ರಯಾತ್ರೆ ಮುಗಿಸಿ 695ರಲ್ಲಿ ಚೀನಕ್ಕೆ ಹಿಂತಿರುಗಿದಾಗ ಅಲ್ಲಿಯ ಚಕ್ರವರ್ತಿನಿ ಈತನಿಗೆ ಗೌರವದ ಸ್ವಾಗತ ನೀಡಿದಳು. ತನ್ನ ಜೀವಿತದ ಉಳಿದ ಭಾಗವನ್ನೆಲ್ಲ ಈತ ಬೌದ್ಧಗ್ರಂಥಗಳ ಭಾಷಾಂತರದಲ್ಲಿ ಕಳೆದ. 230 ಪುಟಗಳ 56 ಧರ್ಮಗ್ರಂಥಗಳನ್ನು ಭಾಷಾಂತರ ಮಾಡಿದ (700–712). ಅಲ್ಲದೆ ಬೇರೆ ಐದು ಗ್ರಂಥಗಳನ್ನು ಬರೆದ. ಇವುಗಳಲ್ಲಿ ಇವನ ಪ್ರವಾಸಕಥನವೂ ಒಂದು.

ಇ–ತ್ಸಿಂಗ್ ಭಾರತಕ್ಕೆ ಬಂದುದು ಬೌದ್ಧಧರ್ಮಾಸಕ್ತಿಯಿಂದಾದುದರಿಂದ ಇವನ ಪ್ರವಾಸಕಥನದಲ್ಲಿ ಬೌದ್ಧರ ಆಚಾರ ವಿಚಾರಗಳಿಗೆ ಹೆಚ್ಚಿನ ಗಮನ ಕೊಟ್ಟಿದ್ದಾನೆ. ಆದರೂ ಇವನ ಕಥನ ಭಾರತೀಯ ಸಾಹಿತ್ಯಚರಿತ್ರೆಯ ಕಾಲಗಳನ್ನು ಗುರುತಿಸುವುದಕ್ಕೆ ಬಹು ಸಹಾಯಕವಾಗಿದೆ. ತನ್ನ ಕಥನದಲ್ಲಿ ಈತ ಭಾರತೀಯರು ಸ್ವಚ್ಛತೆಗೆ, ನೈರ್ಮಲ್ಯಕ್ಕೆ ಮತ್ತು ಅತಿಥಿಸತ್ಕಾರಕ್ಕೆ ಕೊಟ್ಟಿದ್ದ ಪ್ರಾಶಸ್ತ್ಯವನ್ನು ವರ್ಣಿಸಿದ್ದಾನೆ. (ಎಚ್.ಆರ್.)

ಅಂದಿನ ಜ್ಞಾನಕೇಂದ್ರಗಳನ್ನು ಕುರಿತು ತನ್ನ ಕಥನದಲ್ಲಿ ಇ–ತ್ಸಿಂಗ್ ಹೀಗೆ ಹೇಳಿದ್ದಾನೆ: ಮಧ್ಯ ಇಂಡಿಯಾ ದೇಶದಲ್ಲಿರುವ ನಾಲಂದವೂ ಪಶ್ಚಿಮ ಇಂಡಿಯಾ ದೇಶದಲ್ಲಿರುವ ವಲ್ಲಭಿಯೂ ಜ್ಞಾನಕೇಂದ್ರಗಳು. ಇವು ಚೀನಾದೇಶದ ಚಿನ್–ಮಾ, ಶಿಹ್–ಚು, ಲುಂಗ್–ಮೀನ್ ಮತ್ತು ಚೂಯ್–ಲೀಗಳಿದ್ದಂತೆ. ಇಲ್ಲಿ ಹೆಸರಾಂತ ವಿದ್ವಾಂಸರು ತಂಡೋಪತಂಡವಾಗಿ ನೆರೆದು ಸಾಧ್ಯವಾದ ಹಾಗೂ ಅಸಾಧ್ಯವಾದ ತತ್ತ್ವಗಳನ್ನು ಚರ್ಚಿಸುತ್ತಾರೆ. ಅವರ ಅಭಿಪ್ರಾಯಗಳಲ್ಲಿ ಬಹು ಶ್ರೇಷ್ಠವಾದವುಗಳಿಗೆ ಬುದ್ಧಿವಂತರಾದವರಿಂದ ಅಂಗೀಕಾರ ಮುದ್ರೆ ಬಿದ್ದಮೇಲೆ ಮಾತ್ರ ಅವರು ತಮ್ಮ ಬುದ್ಧಿವಂತಿಕೆಗೆ ಹೆಸರಾಗುತ್ತಾರೆ. ತಮ್ಮ ಬುದ್ಧಿಚಾತುರ್ಯವನ್ನು ತೋರಿಸಲು ಅವರು ರಾಜನ ಆಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ರಾಜಕೀಯ ಪ್ರತಿಭೆಯನ್ನು ಪ್ರದರ್ಶಿಸಿ ಆಡಳಿತದಲ್ಲಿ ತಮಗೆ ಸ್ಥಾನ ಬೇಕೆಂದು ಕೇಳುತ್ತಾರೆ. ಅವರು ಪಾಷಂಡ ತತ್ತ್ವಗಳನ್ನು ಖಂಡಿಸಲು ಪ್ರಾರಂಭಿಸಿದರೆ ಎದುರಾಳಿಗಳು ಆ ವಾದವನ್ನು ತುಟಿಪಿಟಕ್ಕೆನ್ನದೆ ಕೇಳಿ ತಮ್ಮ ಸೋಲನ್ನು ಒಪ್ಪಿಕೊಳ್ಳುತ್ತಾರೆ. ಈ ರೀತಿ ಜಯಗಳಿಸಿದವರ ಕೀರ್ತಿಯ ಜಯಭೇರಿ ಪಂಚಪರ್ವತಗಳಲ್ಲಿ ಮೊಳಗಿ ನಾಲ್ಕು ದಿಕ್ಕುಗಳಿಗೂ ಹರಡುತ್ತದೆ. ಇಂಥವರಿಗೆ ಭೂಮಿಯನ್ನು ದತ್ತಿ ಕೊಡುತ್ತಾರೆ. ಉನ್ನತ ಅಧಿಕಾರಗಳನ್ನೀಯುತ್ತಾರೆ. ಇಷ್ಟನ್ನು ಸಾಧಿಸಿದ ಮೇಲೆ ಅವರು ಯಾವ ವೃತ್ತಿಯನ್ನಾದರೂ ಅನುಸರಿಸಬಹುದು. (ಎಂ.ಎಸ್.)

**ಇಥಾಕ:** 1. ಅಯೋನಿಯದ ಸಪ್ತದ್ವೀಪಗಳಲ್ಲಿ ಒಂದು. ವಿಸ್ತೀರ್ಣ 117.81 ಚ.ಕಿಮೀ. ಪರ್ವತಮಯ ದೇಶ. ಪಶ್ಚಿಮಭಾಗದಲ್ಲಿ ಮಲೋ ಕೊಲ್ಲಿಯಿದೆ. ವಥಿ, ಅಯೆಟೊ, ಅನಾಯ್, ಎಕ್ಸಾಯ್ ಎಂಬ ನಾಲ್ಕು ಜಿಲ್ಲೆಗಳಿವೆ. ಜನ ಧೈರ್ಯಶಾಲಿಗಳೆಂದು ಹೆಸರು ಪಡೆದಿದ್ದಾರೆ. ಮುಖ್ಯಪಟ್ಟಣ ಇಥಾಕ. ಜನಸಂಖ್ಯೆ 3084 (2001) ಪುರಾಣ ಪ್ರಸಿದ್ಧನಾದ ಒಡೀಸಿಯಸ್ಸಿನ ಊರೆಂದು ಖ್ಯಾತವಾಗಿದೆ.

2 ನ್ಯೂಯಾರ್ಕ್ ಪ್ರಾಂತ್ಯದ ಕೇಯುಗ ಸರೋವರದ ದಕ್ಷಿಣ ತುದಿಯಲ್ಲಿದೆ. ಫಿಂಗರ್ ಸರೋವರದ ಸಮೀಪದಲ್ಲಿ ಕಣಿವೆ, ಪ್ರಪಾತಗಳು ಮತ್ತು ಜಲಪಾತಗಳಿರುವುದರಿಂದ ಅಲ್ಲಿಯ ಪ್ರದೇಶ ಸೌಂದರ್ಯದ ಬೀಡಾಗಿದೆ. ಜಲಪಾತಗಳಲ್ಲಿ ಬಟರ್ ಮಿಲ್ಕ್ ಹಾಗೂ ಟೌಘಾನಾಕ್ (65.5ಮೀ) ಮುಖ್ಯವಾದುವು. ಇಲ್ಲಿ ಕಾರ್ನೆಲ್ ವಿಶ್ವವಿದ್ಯಾನಿಲಯವಿದೆ. ಸಂಗೀತ, ನಾಟಕ ಹಾಗೂ ವ್ಯಾಯಾಮ ಮತ್ತು ಶಿಕ್ಷಣಗಳ ಕೇಂದ್ರವಾಗಿದೆ. ಕಾಗದ, ಸಿಮೆಂಟ್, ಗೊಬ್ಬರ, ಚರ್ಮ, ಬಂದೂಕು ಮತ್ತು ಯಂತ್ರಸಾಮಗ್ರಿಗಳ ಉತ್ಪಾದನೆಗೆ ಹೆಸರುವಾಸಿಯಾಗಿದೆ. (ಎಂ.ಎಸ್.)

**ಇಥಿಯೋಪಿಯ: ನೋಡಿ–ಅಬಿಸೀನಿಯ.**

**ಇದ್ರಿಸ್:** ಪಶ್ಚಿಮ ಏಷ್ಯ ಪ್ರದೇಶದಲ್ಲಿದ್ದನೆಂದು ನಂಬಲಾದ ಒಬ್ಬ ಪ್ರಾಚೀನ ಪ್ರವಾದಿ. ಈತನ ಹೆಸರು, ವಂಶ ಮತ್ತು ವಾಸಸ್ಥಳಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇವನು ಯಹೂದಿಯೆಂದೂ ಈತನಿಗೆ ಇಲ್ಯಾಸ್ ಎಂದು ಇನ್ನೊಂದು ಹೆಸರಿದೆಯೆಂದೂ ಹೇಳಲಾಗಿದೆ. ಕುರಾನಿನಲ್ಲಿ ಇಲ್ಯಾಸ್ ಮತ್ತು ಇದ್ರಿಸ್ ಎಂಬ ಎರಡು ಬೇರೆ ಬೇರೆ ಹೆಸರುಗಳು ಬಂದಿವೆ. ಒಂದು ಹೇಳಿಕೆಯ ಪ್ರಕಾರ ಇವನು ಈಜಿಪ್ಟಿನ ಒಂದು ಊರಿನಲ್ಲಿ ಹುಟ್ಟಿದ. ಇನ್ನೊಂದು ಹೇಳಿಕೆಯ ಪ್ರಕಾರ ಈತ ಬ್ಯಾಬಿಲೋನಿಯದಲ್ಲಿ ಹುಟ್ಟಿ, ಪ್ರವಾದಿಯಾದ ಮೇಲೆ ಶತ್ರುಗಳ ಕಾಟದಿಂದ ತಪ್ಪಿಸಿಕೊಳ್ಳಲು ಈಜಿಪ್ಟಿಗೆ ಬಂದ. ಈತ 72 ಭಾಷೆಗಳಲ್ಲಿ ಪ್ರವೀಣನಾಗಿದ್ದನೆಂದು ಪ್ರತೀತಿ. ಈತನ ಬಳಿಗೆ ಬಂದವರಿಗೆ ಅವರವರ ಭಾಷೆಯಲ್ಲೇ ಉಪದೇಶಿಸುತ್ತಿದ್ದನೆಂದೂ ಹೇಳಲಾಗಿದೆ. ಈತ ಖಗೋಳವಿಜ್ಞಾನ ತತ್ತ್ವಶಾಸ್ತ್ರಗಳೆರಡನ್ನೂ ತಿಳಿದಿದ್ದ ಮೊದಲಿಗರಲ್ಲೊಬ್ಬನೆಂದೂ ವಿಶ್ವದ ಸ್ವರೂಪವನ್ನು ಕುರಿತು ಇತರರಿಗೆ ಬೋಧಿಸುತ್ತಿದ್ದನೆಂದೂ ನಂಬಿಕೆಯಿದೆ. ದೇವರು ಒಬ್ಬನೇ ಎಂದೂ ಕೆಟ್ಟ ಕೆಲಸ ಮಾಡುವವರಿಗೆ ನರಕ ಪ್ರಾಪ್ತವಾಗುವುದೆಂದೂ ಮೈ ಕೈ ಹೃದಯಗಳು ಶುದ್ಧವಾಗಿರಬೇಕೆಂದೂ ಜನರು ನೀತಿವಂತರಾಗಿರಬೇಕೆಂದೂ ಸುಳ್ಳು ಆಣೆ ಇಡಬಾರದೆಂದೂ ದೇವರ ಹೆಸರಿನಲ್ಲಿ ಆಣೆ ಇಡಬಾರದೆಂದೂ ನಾಯಕರ ಆಣತಿಯಂತೆ ನಡೆಯಬೇಕೆಂದೂ ಇನ್ನೊಬ್ಬರು ಸುಖವಾಗಿರುವುದನ್ನು ನೋಡಿ ಅಸೂಯೆ ಪಡಬಾರದೆಂದೂ ಇವನು ಬೋಧಿಸಿದ. (ಎಸ್.ಎ.ಟಿ.ಕೆ.)

**ಇದ್ರಿಸಿ:** ಸು. 1100–1166. ಪೂರ್ಣ ಹೆಸರು ಅಬು ಅಬ್ದುಲ್ಲಾ ಮಹಮದ್ ಇಬ್ನ್ ಮಹಮದ್ ಅಷ್‌ರೀಫ್ ಅಲ್ ಇದ್ರಿಸಿ. ಅರಬ್ಬೀ ಭೂಗೋಳಶಾಸ್ತ್ರಜ್ಞ, ವಿಜ್ಞಾನಿ, ಕವಿ. ಈತ ಸೀಟಾ (ಮೊರಾಕ್ಕೊ) ಎಂಬಲ್ಲಿ ಜನಿಸಿದನೆಂದು ಇತ್ತೀಚೆಗೆ ಹೇಳಲಾಗಿದೆಯಾದರೂ ಹೀಗೆಂದು ನಿಷ್ಕರ್ಷೆಯಾಗಿಲ್ಲ. ಈತ ಕಾರ್ಡೋಬದಲ್ಲಿ ವಿದ್ಯಾರ್ಜನೆ ಮುಗಿಸಿ ಸ್ಪೇನ್, ಉತ್ತರ ಆಫ್ರಿಕ, ಏಷ್ಯಾ ಮೈನರ್‌ಗಳಲ್ಲಿ ಪರ್ಯಟನೆ ಮಾಡಿದ. ಸಿಸಿಲಿಯ ಎರಡನೆಯ ರೋಜರ್ ಈತನನ್ನು ಗೌರವಿಸಿ ಆಗ ಗೊತ್ತಿದ್ದ ಪ್ರಪಂಚದ ಬಗ್ಗೆ ವಿವರಣ ಗ್ರಂಥವೊಂದನ್ನು ರಚಿಸುವ ಕೆಲಸವನ್ನು ಈತನಿಗೆ ವಹಿಸಿಕೊಟ್ಟ. ಈ ಕೆಲಸವನ್ನು ಇದ್ರಿಸಿ ಸುಮಾರು ಹದಿನೈದು ವರ್ಷಗಳ ಅವಧಿಯಲ್ಲಿ ಮುಗಿಸಿದ. ಈ ಗ್ರಂಥದ ಹೆಸರು ನುಜಾಹತ್ ಲಾ ಮುಸ್ತಾಕ್ಫಿ ತೀಕಲಾ ಅಫ್ಕ. ಇದನ್ನು ಸಾಮಾನ್ಯವಾಗಿ ರೋಜರನ ಪುಸ್ತಕ (ಕಿತಾಬ್ ರೋಜರ್) ಎಂದು ಹೇಳಲಾಗುತ್ತದೆ. ರೋಜರನ ಪುಸ್ತಕದಲ್ಲಿ ಭೂಮಿಯನ್ನು ಗ್ರೀಕ್ ಭೂಗೋಳಶಾಸ್ತ್ರಜ್ಞರು ವಿಂಗಡಿಸಿದ್ದ ಏಳು ವಾಯುಗುಣಗಳಿಗೆ ಅನುಗುಣವಾಗಿ ವಿಭಾಗಿಸಿದೆ. ಸಮಭಾಜಕ ವೃತ್ತದಿಂದ ಪ್ರಾರಂಭವಾಗಿ ಶೀತಪ್ರದೇಶದವರೆಗೂ ಇರುವ ನೆಲ ಈ ವಿಭಾಗಕ್ಕೆ ಒಳಪಟ್ಟಿದೆ. ಇದರ ಪ್ರತಿಯೊಂದು ಭಾಗವನ್ನೂ ಸಮಾನಾಂತರ ಲಂಬರೇಖೆಗಳಿಂದ ಹತ್ತು ಉಪವಿಭಾಗಗಳನ್ನಾಗಿ ಮಾಡಿದೆ. ಈ ವಿಭಾಗಗಳನ್ನು ಪಶ್ಚಿಮದಿಂದ ಪೂರ್ವದ ಕಡೆಗೆ ಎಣಿಸಲಾಗಿದೆ. ಒಂದಕ್ಕೊಂದು ಹೊಂದಾಣಿಕೆ ಇಲ್ಲದ ಅಂಶಗಳನ್ನೆಲ್ಲ ಈ ಪುಸ್ತಕದ ಜೋಡಣೆಯಲ್ಲಿ ನಿರ್ಲಕ್ಷಿಸಲಾಗಿದೆ. ಕೆಲವು ಪುರಾಣಗಳಲ್ಲಿ ಬರುವ ಗೋಗ್ ಮತ್ತು ಮಗೋಗ್ ಭೂಮಿ, ವಿಸ್ಮಯ ರೋಮ್ ಹಾಗೂ ಸೇಂಟ್ ಬ್ರಾಂಡನ್ ದ್ವೀಪಗಳ ವಿವರಣೆಯನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ಪುಸ್ತಕದಲ್ಲಿ ಗಣಿತ ಹಾಗೂ ವಿವರಣೆಯ ತಪ್ಪುಗಳಿರುವುದು ಸಹಜ. ಇದರಲ್ಲಿರುವ ಭೂಪಟಗಳು ಚಿಕ್ಕವಾದರೂ ಲೇಖಕನಿಗೆ ಗೊತ್ತಿರುವ ಪ್ರದೇಶಗಳನ್ನು ಬಹು ಸ್ಪಷ್ಟವಾಗಿ ತೋರಿಸಲಾಗಿದೆ. ಪೀಠಿಕೆಯಲ್ಲಿ ಲೇಖಕನಿಗೆ ಉಪಯುಕ್ತವಾದ ಮೂಲ ಲೇಖನಗಳನ್ನು ನಮೂದಿಸಲಾಗಿದೆ. ಇಲ್ಲಿ ಟಾಲಮಿ ಮತ್ತು ಒರೊಸಿಯಸರನ್ನು ಬಿಟ್ಟು ಇನ್ನಾವ ಐರೋಪ್ಯ ಲೇಖಕರನ್ನೂ ನಮೂದಿಸಿಲ್ಲ. ಇದ್ರಿಸಿ ತನ್ನ ಕೃತಿಯಲ್ಲಿ ಮಸೂದಿ ಮತ್ತು ಇಬ್ನ್ ಹೌಕಾಲರು ಅರಬ್ಬೀ ದೇಶದ ಮುಖ್ಯ ಅಧಿಕಾರಿಗಳೆಂದು

ತಿಳಿಸಿದ್ದಾನೆ. ಆದರೆ ಇವನಿಗೆ ಬಿರೂನಿ ಅಥವಾ ಮಕ್ದಿಸಿ ಬಹುಶಃ ಗೊತ್ತಿಲ್ಲವೆಂದು ಕಂಡುಬರುತ್ತದೆ. ಇದ್ರಿಸಿ ತನ್ನ ಪುಸ್ತಕಗಳಲ್ಲಿ ಕೊಟ್ಟಿರುವ ಹೆಚ್ಚು ವಿಷಯಗಳನ್ನು ಪ್ರಯಾಣಿಕರ ವರದಿ ಹಾಗೂ ರೋಜರನ ರಾಜ್ಯದ ಅಧಿಕಾರಿಗಳ ದಾಖಲೆಗಳಿಂದ ಸ್ವೀಕರಿಸಿದ್ದಾನೆ. ಇಲ್ಲಿಯ ಸಿಸಿಲಿಯ ವರ್ಣನೆ ವಿವರವಾಗಿದ್ದರೂ ಅದರಲ್ಲಿ ಭೂಗೋಳದ ಅಂಶಕ್ಕಿಂತ ಇತಿಹಾಸದ ಅಂಶವೇ ಹೆಚ್ಚಾಗಿ ಕಂಡುಬಂದಿದೆ. ಇದನ್ನು ಸಮುದ್ರಯಾತ್ರಿಕರ ಬರೆಹದ ಆಧಾರದ ಮೇಲೆ ರಚಿಸಲಾಗಿದೆ. ಇದರಲ್ಲಿ ಭೌಗೋಳಿಕ ಭಾಗಗಳ ಲಕ್ಷಣ, ರೋಮ್, ಸಿಸಿಲಿ, ಇಟಲಿ, ಗ್ರೀಸ್, ಬ್ರಿಟನ್ ದೇಶಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಬೆಳ್ಳಿಯ ಭೂಗೋಳವನ್ನೂ ಪ್ಲಾನಿಸ್ಫಿಯರ್ ಎಂಬ ಉಪಕರಣವನ್ನೂ ಈತ ರಚಿಸಿದ. ವಿಲಿಯಂ ದಿ ಬ್ಯಾಡ್‌ನ ಬಗ್ಗೆ ಈತ ಬರೆದ ಕೆಲವು ಟೀಕೆಗಳು ನಾಶವಾಗಿವೆ. ಸಸ್ಯಶಾಸ್ತ್ರ ಹಾಗೂ ವೈದ್ಯಶಾಸ್ತ್ರದ ಬಗ್ಗೆ ಈತ ಬರೆದ ಕೆಲವು ಲಿಪಿಗಳನ್ನು ಇಸ್ತಾನ್‌ಬುಲ್‌ನಲ್ಲಿ ಇಡಲಾಗಿದೆ. ಈತ ಬರೆದ ಪುಸ್ತಕದ ಕೆಲವು ಭಾಗಗಳನ್ನು ಆಕ್ಸ್‌ಫರ್ಡ್, ಪ್ಯಾರಿಸ್‌ಗಳಲ್ಲಿನ ಗ್ರಂಥಾಲಯಗಳಲ್ಲಿ ಇಡಲಾಗಿದೆ. ಈತನ ಭೂಪಟಶಾಸ್ತ್ರ ಯುರೋಪಿನ ಮೇಲೆ ಹೆಚ್ಚು ಪ್ರಭಾವ ಬೀರದಿದ್ದರೂ ಮಾರಿನೋ-ಸನುಡೂ ಮತ್ತು ಪಿಯೆತ್ರೊ ವೈಕಾಂಟಿ ರಚಿಸಿದ ಭೂಪಟದ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಆಫ್ರಿಕ ಪಶ್ಚಿಮದ ಕಡೆಗೆ ಬೆಳೆದು ಹಿಂದೂ ಮಹಾಸಾಗರದ ದಕ್ಷಿಣ ಭಾಗವನ್ನು ಸೇರಿದೆಯೆಂದು ಟಾಲಮಿಯಂತೆ ಈತನೂ ನಂಬಿದ್ದ. ಮಡೀರ ಮತ್ತು ಕೆನರೀಗಳ ಸಮುದ್ರಯಾನ ಕುರಿತ ಈತನ ವಿವರಣೆಯಿಂದ ಅಟ್ಲಾಂಟಿಕ್ ಸಾಗರದ ಅನ್ವೇಷಣೆಗೆ ದಾರಿಯಾಯಿತೆಂದು ನಂಬಲಾಗಿದೆ. ಈತನ ಜೀವನಚರಿತ್ರೆಯ ಕುರುಹುಗಳು ಅರಬ್ಬೀದೇಶಗಳ ಇತಿಹಾಸ ಸಾಮಗ್ರಿಯಲ್ಲಿ ಕಂಡುಬರುವುದಿಲ್ಲ. 1161ರ ಮುಸ್ಲಿಂ ವಿರುದ್ಧ ದಂಗೆಯ ಬಳಿಕ ಈತ ಸಿಸಿಲಿಯಲ್ಲಿದ್ದದ್ದು ಅಸಂಭವವಾದರೂ ತನ್ನ ಅಂತಿಮ ಕಾಲದಲ್ಲಿ ಈತ ಎಲ್ಲಿದ್ದನೆಂಬುದಾಗಲಿ, ಯಾವಾಗ ಮರಣ ಹೊಂದಿದನೆಂಬುದಾಗಲಿ ಸ್ಪಷ್ಟವಾಗಿಲ್ಲ.(ಬಿ.ಜಿ.ಎನ್.)

**ಇನಾಂಗಳು:** ಇನಾಂ ಎಂಬ ಮಾತು ಪರ್ಷಿಯನ್ ಭಾಷೆಗೆ ಸೇರಿದ್ದು. ಪರ್ಷಿಯನ್ ಭಾಷೆಯಲ್ಲಿ ಇನಾಂ ಎಂಬ ಮಾತಿಗೆ ಪ್ರತಿಫಲ ಅಥವಾ ಬೆಲೆಯಿಲ್ಲದೆ ಕೊಡುವ ವಸ್ತು ಎಂಬ ಅರ್ಥ ಇದೆ. ಆದರೆ ಇನಾಂ ಎಂಬ ಮಾತು ಭಾರತೀಯ ಭಾಷೆಗಳಲ್ಲಿ ಬಹು ಕಾಲದ ಹಿಂದೆ ಸೇರಿ, ಅದರ ಮೂಲ ಯಾವುದು ಎಂಬುದು ಗೊತ್ತಿಲ್ಲದಷ್ಟು ದೇಶ್ಯವಾಗಿ ಹೋಗಿದೆ. ಇನಾಂ ಎಂಬ ಮಾತು ಸರ್ವಸಾಧಾರಣವಾಗಿ ಸಂಭಾವನೆ ಎಂಬ ಅರ್ಥದಲ್ಲಿ ಈಗ ಬಳಕೆಯಲ್ಲಿದೆ. ಇಲ್ಲಿ ಅದಕ್ಕೆ ನ್ಯಾಯಶಾಸ್ತ್ರದಲ್ಲಿ ಇರುವ ಅರ್ಥವನ್ನು ವಿವರಿಸಲು ಪ್ರಯತ್ನಿಸಲಾಗಿದೆ.

ಇನಾಂ ಎಂದರೆ ಒಬ್ಬ ವ್ಯಕ್ತಿಯ ಅಥವಾ ಸಂಸ್ಥೆಯ ಹಿತಕ್ಕಾಗಿ ಕೊಟ್ಟ ಹಿಡುವಳಿ-ಎಂದು ಹೇಳಬಹುದು. ಇನಾಂಗಳು ಭಾರತದಲ್ಲಿ ಬಹು ಪುರಾತನ ಕಾಲದಿಂದಲೂ ಇವೆ. ಹಿಂದೂ ರಾಜರ ಆಳ್ವಿಕೆಯ ಕಾಲದಲ್ಲಿ, ದೇವಸ್ಥಾನಗಳ ರಕ್ಷಣೆಗಾಗಿಯೋ ದೇವರ ಸೇವೆಗಾಗಿಯೋ ಗುರುಗಳ-ಹಾಗೂ ಮಠಗಳ ಪೋಷಣೆಗಾಗಿಯೋ ಕಂದಾಯವಿಲ್ಲದೆಯೇ ಭೂಮಿಯನ್ನು ದತ್ತಿ ಕೊಡುವ ಪರಿಪಾಟವಿತ್ತು. ಕೆಲವು ಬಾರಿ ದೇವಸ್ಥಾನಗಳಲ್ಲಿ ದೇವತಾಸೇವೆ ಮಾಡುವ ಅರ್ಚಕರಿಗೆ, ನಗಾರಿ ಬಡಿಯುವವರಿಗೆ, ಮೇಳ ಮಾಡುವವರಿಗೆ, ಇಂಥ ಇತರ ಸೇವೆ ಮಾಡುವವರಿಗೆ ಇನಾಂಗಳನ್ನು ಕೊಡುವ ಪದ್ಧತಿಯೂ ಇತ್ತು. ಇನ್ನೂ ಕೆಲವು ಬಾರಿ, ದೊರೆಗಳಿಗೆ ಸಲ್ಲಿಸುವ ಸೇವೆಗಾಗಿ-ಸೈನ್ಯದಲ್ಲಿ ದುಡಿಯುವುದೋ ಹಳ್ಳಿಗಳಲ್ಲಿ ಕಂದಾಯ ವಸೂಲು ಮಾಡುವುದೋ ಗ್ರಾಮದ ಲೆಕ್ಕಪತ್ರ ಬರೆಯುವುದೋ ಊರಿನ ಕಾವಲು ಕಾಯುವುದೋ ಮುಂತಾದ ಯಾವುದಾದರೂ ರೀತಿಯ ಸೇವೆಗಾಗಿ ದೊರೆಗಳು ಇನಾಂಗಳನ್ನು ಕೊಡುತ್ತಿದ್ದರು. ಒಮ್ಮೊಮ್ಮೆ ಹಳ್ಳಿಯಲ್ಲಿ ಸಾರ್ವಜನಿಕ ಸೇವೆ ಸಲ್ಲಿಸುವ ಬಡಗಿ, ಕಮ್ಮಾರ, ಅಗಸ, ನಾಯಿಂದ, ಮುಂತಾದ ಕಸಬುದಾರರಿಗೂ ಆಳುವ ದೊರೆ ಬಹುಮಾನವಾಗಿ ಭೂಮಿಯನ್ನು ಇನಾಂ ಆಗಿ ಕೊಡುತ್ತಿದ್ದದ್ದು ಉಂಟು.

ಹಿಂದೂ ಅರಸರು ಅನುಸರಿಸುತ್ತಿದ್ದ ಈ ಪದ್ಧತಿಯನ್ನು ಭಾರತಕ್ಕೆ ಬಂದ ಮುಸ್ಲಿಂ ದೊರೆಗಳೂ ಅನುಸರಿಸಿದರು. ಮುಸ್ಲಿಂ ದೊರೆಗಳು ಕೊಟ್ಟ ಹಿಡುವಳಿಗಳನ್ನು ಜಹಗೀರುಗಳು ಎಂದು ಕರೆಯುತ್ತಿದ್ದರು. ಹಿಂದೂ ದೊರೆಗಳು ಕೊಡುತ್ತಿದ್ದ ಇನಾಂ ಹಿಡುವಳಿಗಳಿಗೂ ಮುಸ್ಲಿಂ ರಾಜರು ಕೊಡುತ್ತಿದ್ದ ಜಹಗೀರುಗಳಿಗೂ ಇದ್ದ ಒಂದು ಮುಖ್ಯ ವ್ಯತ್ಯಾಸವೆಂದರೆ, ಜಹಗೀರುಗಳು ಜಹಗೀರುದಾರರು ಸತ್ತೊಡನೆಯೇ ಮರಳಿ ದೊರೆಗೇ ಸೇರುತ್ತಿದ್ದುವು. ಮೂಲ ಜಹಗೀರುದಾರನ ವಂಶಸ್ಥರಿಗೆ ದೊರೆ ಮತ್ತೆ ಹೊಸ ಸನ್ನದು ಕೊಟ್ಟರೆ ಮಾತ್ರ ಜಹಗೀರು ಮುಂದುವರಿಯುತ್ತಿತ್ತು. ಆದರೆ ಧಾರ್ಮಿಕ ಬಾಬಾಗಳಿಗೆ, ಸತ್ಪುರುಷರಿಗೆ, ಸಾಧು ಸಂತರಿಗೆ, ವಿದ್ವಾಂಸರಿಗೆ ಕೊಟ್ಟ ಜಹಗೀರುಗಳು ಮಾತ್ರ ನಿರಂತರವಾಗಿ ಜಹಗೀರುದಾರರಿಗೇ ಸೇರುತ್ತಿದ್ದುವು.

ಬ್ರಿಟಿಷರೂ ಹಿಂದೂ ಮತ್ತು ಮುಸ್ಲಿಂ ದೊರೆಗಳು ಇಟ್ಟುಕೊಂಡಿದ್ದ ಈ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದರು. ಈಸ್ಟ್ ಇಂಡಿಯ ಕಂಪನಿಯು ತನಗೆ ಅಮೋಘ ಸೇವೆ ಸಲ್ಲಿಸಿದವರಿಗೆ ಜಹಗೀರುಗಳನ್ನು ಹಾಕಿಕೊಟ್ಟಿತು. ಆದರೆ 1829ರ ಹೊತ್ತಿಗೆ ಕಂಪನಿಯ ಡೈರೆಕ್ಟರುಗಳ ನಿರ್ದೇಶನದ ಮೇರೆಗೆ ಜಹಗೀರುಗಳನ್ನು ಹಾಕಿ ಕೊಡುವ ಪದ್ಧತಿ ನಿಂತುಹೋಯಿತು. ಸಾಧಾರಣವಾಗಿ ಯೋಗ್ಯ ಸೇವೆ ಸಲ್ಲಿಸಿದವರಿಗೆ ಹಣವನ್ನೇ ಸಂಭಾವನೆಯನ್ನಾಗಿ ಕೊಡುತ್ತಿದ್ದರು. ಆದರೆ ವಿಶೇಷ ಸಂದರ್ಭಗಳಲ್ಲಿ-ಅದರಲ್ಲೂ ತಮ್ಮ ಯುದ್ಧಗಳಲ್ಲಿ ವಿಶೇಷ ಸಹಾಯ ನೀಡಿದವರಿಗೆ-ಭೂಮಿಯನ್ನು ಜಹಗೀರು ಹಾಕಿ ಕೊಡುತ್ತಿದ್ದರು. ಅದೇ ಜಮೀನ್‌ದಾರಿ ಪದ್ಧತಿ ಎಂಬ ಹೆಸರಿನಿಂದ ಮುಂದುವರಿದುಕೊಂಡು ಬಂತು.

ಈ ಇನಾಂಗಳನ್ನು ಮತ್ತು ಮಾನ್ಯಗಳನ್ನು ಕೊಟ್ಟಾಗ ದೊರೆ ತನ್ನ ವಂಶಪರಂಪರೆಯನ್ನು ಎತ್ತಿ ಹೊಗಳಿಸಿ, ಯಾರಿಗೆ ಕೊಟ್ಟಿದೆಯೋ ಅವರ ಹೆಸರನ್ನು ನಮೂದಿಸಿ, ಕೊಟ್ಟ ಭೂಮಿಯ ವಿವರಗಳನ್ನು ಸ್ಪಷ್ಟಪಡಿಸಿ, ಯಾವ ಉದ್ದೇಶಕ್ಕಾಗಿ ಕೊಟ್ಟಿದೆಯೋ ಅದನ್ನೂ ಉಲ್ಲೇಖಿಸಿ, ಯಾವ ಷರತ್ತುಗಳಿಗೆ ಒಳಪಟ್ಟು ಕೊಟ್ಟಿದೆಯೋ ಅದನ್ನೂ ಕಾಣಿಸಿ ಶಿಲಾಲಿಪಿಯಲ್ಲೋ ತಾಮ್ರಪಟದಲ್ಲೋ ಬರೆಸಿಕೊಡುತ್ತಿದ್ದರು. ಈ ಇನಾಂಗಳು ಸರ್ವಸಾಧಾರಣವಾಗಿ ಸೂರ್ಯಚಂದ್ರರು ಇರುವ ತನಕ ನಡೆದುಕೊಂಡು ಹೋಗಬೇಕೆಂದೂ ಉದ್ದೇಶಕ್ಕೆ ಭಂಗ ತಂದವರಿಗೆ ಇಂಥಿಂಥ ಪಾಪ ತಟ್ಟುವುದೆಂದೂ ಬರೆಸುತ್ತಿದ್ದರು. ಅಂಥವುಗಳನ್ನು ಸನ್ನದು ಎಂದು ಕರೆಯುತ್ತಿದ್ದರು.

ಇಂಥ ಇನಾಂಗಳನ್ನು ಅಥವಾ ಮಾನ್ಯಗಳನ್ನು ಪೂರ್ವದಲ್ಲಿ ಹಿಂದೂ ದೊರೆಗಳ ಕಾಲದಲ್ಲಿ ಸಾಧಾರಣವಾಗಿ ರಾಜ್ಯದ ದೊರೆಯೇ ಹಾಕಿಕೊಡುತ್ತಿದ್ದ. ಬರಬರುತ್ತ ಮೊಗಲರ ಆಳ್ವಿಕೆ ಬಂದಮೇಲೆ ಪಾಳೆಯಗಾರರು ಕೂಡ ಇನಾಂಗಳನ್ನೂ ಮಾನ್ಯಗಳನ್ನೂ ಹಾಕಿಕೊಡಲು ಆರಂಭಿಸಿದರು.

**ಇನಾಂಗಳ ಬಗೆ:** ನಮ್ಮ ದೇಶದ ವಿವಿಧ ಭಾಗಗಳಲ್ಲಿ ವಿವಿಧ ಬಗೆಯ ಇನಾಂಗಳಿದ್ದುವು. ಇವನ್ನು ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ಹೆಸರಿನಿಂದ ಕರೆಯುತ್ತಿದ್ದರು. ಬಂಗಾಳದಲ್ಲಿ ಬಾದಶಾಹಿ (ಅರಸರು ಕೊಟ್ಟದ್ದು) ಮತ್ತು ಹುಕುಮ (ಕೆಳದರ್ಜೆಯ ಅಧಿಕಾರಿಗಳು ಕೊಟ್ಟದ್ದು) ಎಂದು ಎರಡು ಬಗೆಯ ಇನಾಂಗಳಿದ್ದುವು. ಪಂಜಾಬ್ ಮತ್ತು ಈಶಾನ್ಯ ಸರಹದ್ದು ಪ್ರಾಂತ್ಯದಲ್ಲಿ ಲೇಖಿರಾಜ (ಲಾಖಿರಾಜ್) ಅಥವಾ ತೆರಿಗೆ ಇಲ್ಲದ ಇನಾಂಗಳು ಎನ್ನುತ್ತಿದ್ದರು. ಮುಂಬೈ ಪ್ರಾಂತ್ಯದಲ್ಲಿ ಅನೇಕಾನೇಕ ಹೆಸರಿನ ಇನಾಂಗಳಿದ್ದುವು. ಯಾವ ಉದ್ದೇಶಕ್ಕಾಗಿ ಕೊಡುತ್ತಿದ್ದರೋ ಅದನ್ನು ಅವಲಂಬಿಸಿ ಅವುಗಳ ಹೆಸರಿತ್ತು. ಹಾಗೆಯೇ ಮದ್ರಾಸ್ ಮತ್ತು ಮೈಸೂರು ಪ್ರಾಂತ್ಯಗಳಲ್ಲೂ ಇನಾಂಗಳು ಇದ್ದುವು. ಈಸ್ಟ್ ಇಂಡಿಯ ಕಂಪನಿ ಮತ್ತು ಬ್ರಿಟಿಷ್ ಸರ್ಕಾರ ಆಗಾಗ ನೇಮಿಸಿದ ಇನಾಂ ಆಯೋಗಗಳು ಅಂದು ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ ಇದ್ದಂಥ ಇನಾಂಗಳನ್ನು ಹೀಗೆ ವಿಂಗಡಿಸಿದೆ:

1 ಧಾರ್ಮಿಕ ಸಂಸ್ಥೆಗಳ, ದೇವಾಲಯಗಳ ರಕ್ಷಣೆ ಮತ್ತು ಪೋಷಣೆಗಾಗಿಯೂ ಅವುಗಳಿಗೆ ಸೇವೆ ಸಲ್ಲಿಸುವವರಿಗಾಗಿಯೂ ಕೊಟ್ಟಂಥ ಹಿಡುವಳಿಗಳು. ಅಂಥವುಗಳನ್ನು ದೇವಸ್ಥಾನ ಅಥವಾ ದೇವದಾಯ ಇನಾಂಗಳು ಎಂದು ಕರೆಯುವರು.

2 ಧಾರ್ಮಿಕ ಸತ್ಪುರುಷರಿಗೆ-ಸ್ವಾಮಿಗಳು, ಸಾಧು ಸಂತರು, ಮಠಾಧಿಪತಿಗಳು ಮುಂತಾದವರಿಗೆ-ದೊರೆಯೋ ಪಾಳೆಯಗಾರನೋ ದಾನರೂಪವಾಗಿ ಕೊಟ್ಟ ಇನಾಂಗಳು. ಇವುಗಳನ್ನು ಧರ್ಮದಾಯ ಇನಾಂಗಳೆಂದು ಕರೆಯುತ್ತಾರೆ. ಇವು ಸಾರ್ವಜನಿಕರ ಹಿತಾರ್ಥವಾಗಿ ಉಪಯೋಗವಾಗುವಂಥವು.

3 ಬ್ರಾಹ್ಮಣರು, ವೀರಶೈವ ಮಠಸ್ಥರು ಮುಂತಾದ ಮತೀಯ ವ್ಯಕ್ತಿಗಳಿಗೆ ವೈಯಕ್ತಿಕ ಉಪಭೋಗಕ್ಕಾಗಿ, ವಂಶಪಾರಂಪರ್ಯವಾಗಿ, ತೆರಿಗೆ ಇಲ್ಲದೆ ಅಥವಾ ಕನಿಷ್ಠ ನಾಮಕಾರ್ಥ ತೆರಿಗೆ ವಿಧಿಸಿ, ದಾನ ಮಾಡಿದ ಇನಾಂಗಳು ಇನ್ನೊಂದು ಬಗೆಯವು. ಶ್ರೋತ್ರಿಯ ಇನಾಂಗಳು, ಜಗಂ ಇನಾಂಗಳು ಇಂಥವು.

4 ಗ್ರಾಮಾಧಿಕಾರಿಗಳಿಗೆ-ಪಟೇಲ, ಶಾನುಭೋಗ (ಹಳೆಯ ಮೈಸೂರಿನಲ್ಲಿ), ಕುಲಕರ್ಣಿ, ಪಟವಾರಿ, ಸನದಿ, ಹಳಬ (ಮುಂಬೈ ಕರ್ನಾಟಕದಲ್ಲಿ), ಗೌಡ, ತಳವಾರ, ಬಿಟ್ಟಿ, ನೀರುಗಂಟಿ (ಮದ್ರಾಸ್ ಕರ್ನಾಟಕದಲ್ಲಿ) ಮುಂತಾದವರಿಗೆ-ಅವರು ಸರ್ಕಾರಕ್ಕೆ ಸಲ್ಲಿಸುತ್ತಿದ್ದ ಸೇವೆಗೆ ಪ್ರತಿಫಲವಾಗಿ ಕೊಟ್ಟ ಇನಾಂಗಳು ಇಂಥ ಬಗೆಯವು. ಇವು ಯಾರು ಸೇವೆ ಸಲ್ಲಿಸುವರೋ ಅವರ ವಶದಲ್ಲಿದ್ದುವು. ಇವುಗಳನ್ನು ಸೇವಾದಾಯ ಇನಾಂಗಳೆಂದು ಕರೆಯಬಹುದು. ಮುಂಬೈ ಕರ್ನಾಟಕದಲ್ಲಿದ್ದ ವತನದಾರಿ ಇನಾಂಗಳು ಈ ಬಗೆಯವು.

5 ಗ್ರಾಮಗಳಲ್ಲಿದ್ದ ಆಯಗಾರರಿಗೆ, ಗ್ರಾಮಸ್ಥರಿಗೆಲ್ಲ ಸೇವೆ ಸಲ್ಲಿಸುತ್ತಿದ್ದವರಿಗೆ, ಗ್ರಾಮದ ಕಸಬುದಾರರಿಗೆ-ಬಡಗಿ, ಕಮ್ಮಾರ, ನಾಯಿಂದ, ಅಗಸ ಮುಂತಾದವರಿಗೆ-ಕೊಟ್ಟಿದ್ದ ಇನಾಂಗಳು. ಇವುಗಳನ್ನು ಆಯಗಾರ ಇನಾಂಗಳೆನ್ನಬಹುದು.

6 ಹಿಂದಿನ ಕಾಲದಲ್ಲಿ ದೊರೆಗಳಿಗೆ, ಆಳುವ ಒಡೆಯರಿಗೆ ವಿಶೇಷವಾದ ಸೇವೆಯನ್ನು ಮಾಡಿದ್ದಕ್ಕಾಗಿ, ದೊರೆ ಆಪತ್ತಿನಲ್ಲಿದ್ದಾಗ ಪ್ರಾಣರಕ್ಷಣೆ ಮಾಡಿದ್ದಕ್ಕಾಗಿ, ಯುದ್ಧಕಾಲದಲ್ಲಿ ಅಸಹಾಯ ಶೌರ್ಯದ ಕೆಲಸ ಮಾಡಿದ್ದಕ್ಕಾಗಿ ಶತ್ರುಪಕ್ಷದ ರಹಸ್ಯಗಳನ್ನು ತಿಳಿಸಿದ ಸೇವೆಗಾಗಿ, ಯುದ್ಧಕಾಲದಲ್ಲಿ ಸೈನ್ಯವನ್ನು ಒದಗಿಸಿ ಕೊಟ್ಟ ಕೈಂಕರ್ಯಕ್ಕಾಗಿ, ಪ್ರಭುವಾದವ ಒಂದು ಹಳ್ಳಿಯನ್ನೋ ಕೆಲವು ಹಳ್ಳಿಗಳನ್ನೋ ಜಹಗೀರು ಹಾಕಿ ಕೊಡುತ್ತಿದ್ದ. ಇಂಥವುಗಳನ್ನು ಜಹಗೀರ್ ಇನಾಂಗಳು ಎಂದು ಕರೆಯಬಹುದು.

7 ಭಾರತದಲ್ಲಿ ಬ್ರಿಟಿಷ್ ಆಡಳಿತ ಸ್ಥಾಪನೆ ಆದಮೇಲೆ, ಅದಕ್ಕಿಂತ ಹಿಂದೆ ಇದ್ದ ಸರ್ಕಾರಗಳ ಕೈ ಕೆಳಗಿನ ಪಾಳೆಯಗಾರರಿಗೂ ವಂಶಪಾರಂಪರ್ಯವಾಗಿ ಸೇವೆ ಸಲ್ಲಿಸುತ್ತಿದ್ದ ಗ್ರಾಮ ನೌಕರರಿಗೂ ಕೆಲವೊಂದು ಷರತ್ತುಗಳ ಮೇಲೆ ಇನಾಂಗಳನ್ನು ಕೊಟ್ಟರು.

8 ಇನ್ನು ಕೆಲವು ಸಾರಿ ಯಾವುದಾದರೂ ಚಿಕ್ಕಪುಟ್ಟ ಸಂಸ್ಥಾನಗಳನ್ನು ಬ್ರಿಟಿಷ್ ಸರ್ಕಾರ ತನ್ನ ವಶಪಡಿಸಿಕೊಂಡಾಗ ಆ ಸ್ಥಳೀಯ ಪಾಳೆಗಾರರ, ದೇಸಾಯಿಗಳ, ಸಂಸ್ಥಾನಾಧೀಶರ ವಂಶಸ್ಥರಿಗೆ ಅವರಿಂದ ವಶಪಡಿಸಿಕೊಂಡ ರಾಜ್ಯಕ್ಕೆ ಬದಲಾಗಿ ಅವರ ಜೀವನಾಂಶಕ್ಕಾಗಿ ಇನಾಂಗಳನ್ನು ಕೊಡಲಾಗುತ್ತಿತ್ತು. ಇಂಥವುಗಳನ್ನು ಮಾಜಿ ದೊರೆಗಳ ಜೀವನಾಂಶ ಇನಾಂಗಳು ಎಂದು ಕರೆಯಬಹುದು. (ಕೆ.ಸಿ.)

**ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ:** ಕಾಲ ಕಳೆದಂತೆ ಈ ಏರ್ಪಾಡಿನಲ್ಲಿ ಕೆಲವು ಅಕ್ರಮ ವ್ಯವಹಾರಗಳು ಕಂಡುಬಂದುವು. ಸ್ವಂತ ಲಾಭಕ್ಕಾಗಿ ದಾಖಲೆಗಳನ್ನೇ ಬದಲಾಯಿಸುವುದು. ಸರಿಯಾದ ಅಂಕಿ ಅಂಶಗಳೇ ಸಿಗದಂತೆ ಅವುಗಳನ್ನು ನಾಶಪಡಿಸುವುದು, ಮುಂತಾದ ಅಕೃತ್ಯಗಳು ಅನೇಕ ಕಡೆ ನಡೆದವು. 18ನೆಯ ಶತಮಾನದ ರಾಜಕೀಯ ಅವ್ಯವಸ್ಥೆಯ ಕಾಲದಲ್ಲಂತೂ ಇವು ಹೆಚ್ಚಾಗಿ ನಡೆದುವು. ಸಂದೇಹಕ್ಕೆಡೆಯಿಲ್ಲದಂತೆ ನಿಷ್ಪಕ್ಷಪಾತವಾದ ದಾಖಲೆಗಳಿಲ್ಲದ ಇನಾಂಗಳನ್ನು ರದ್ದು ಮಾಡಿ ಅವುಗಳನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ಬ್ರಿಟಿಷ್ ಸರ್ಕಾರ ಯೋಚಿಸಿತು. ಆಡಳಿತದ ದೃಷ್ಟಿಯಿಂದ ಈ ಯೋಜನೆ ಸಮಂಜಸವಾದದ್ದೇ. ಆದರೆ ಕೆಲವು ಹಿಡುವಳಿಗಳು ಶತಮಾನಗಳ ಹಿಂದೆಯೇ ಕೊಟ್ಟದ್ದಂಥವು; ಅವಕ್ಕೆ ಸಂಬಂಧಿಸಿದ ದಾಖಲೆಗಳು ನಷ್ಟವಾಗಿದ್ದುವು. 18ನೆಯ ಶತಮಾನದ ಅರಾಜಕತೆಯ ಪರಿಣಾಮವಾಗಿ, ಅನುದಾನವನ್ನು ಪುನಃ ಪಡೆಯುವ ವಿಚಾರದಲ್ಲಿ ಸರ್ಕಾರ ಹೊರಡಿಸಿದ ನಿಬಂಧನೆಗಳು ಕ್ರಮೇಣ ಬಿಗಿಯಾದುವು. ಅವುಗಳನ್ನುಳಿಸಿಕೊಳ್ಳುವುದು ಇನಾಂದಾರರಿಗೆ ಕಷ್ಟವಾಯಿತು.

1793ರ ಕಾನೂನಿನ ಪ್ರಕಾರವಾಗಿ, ಜಿಲ್ಲಾಧಿಕಾರಿ ಅಥವಾ ಕಲೆಕ್ಟರನೇ ವಾದಿಯಾಗಿ ನ್ಯಾಯಾಲಯದಲ್ಲಿ ದಾವೆ ಹೂಡಬೇಕಾಗಿತ್ತು. ಕ್ರಮಬದ್ಧವಾದ ಗ್ರಹಣಾಧಿಕಾರವಿಲ್ಲದ ಗೇಣಿರಹಿತ ಹಿಡುವಳಿದಾರನಿಗೆ ವಿರೋಧವಾಗಿ, 1871ರ ನಿಯಮಕ್ಕೆ ಅನುಸಾರವಾಗಿ, ಅಭ್ಯರ್ಪಿತ (ಸೀಡೆಡ್) ಪ್ರಾಂತ್ಯಗಳು ಮತ್ತು ಗೆದ್ದ ರಾಜ್ಯಗಳಲ್ಲಿ ಜಿಲ್ಲಾಧಿಕಾರಿಗಳು ರಾಜಸ್ವ ಮಂಡಳಿಯ (ರೆವಿನ್ಯೂ ಬೋರ್ಡ್) ಅನುಮತಿ ಪಡೆದು ಹಿಡುವಳಿಗಳ ಬೆಲೆ ಕಟ್ಟುವ ಅಧಿಕಾರ ಹೊಂದಿದ್ದರು; ಅವರ ನಿರ್ಣಯಕ್ಕೊಪ್ಪದಿದ್ದ ಹಿಡುವಳಿದಾರರು ನ್ಯಾಯಾಲಯದಲ್ಲಿ ದಾವೆ ಹೂಡಬೇಕಾಗಿತ್ತು. ಸರ್ಕಾರದ ನೀತಿ ಎಷ್ಟೇ ಯುಕ್ತವಾದುದಾದರೂ ಸ್ವಾಧೀನಾನುಭವದ ಹಕ್ಕನ್ನು ಕಸಿದುಕೊಂಡದ್ದು ವ್ಯಾಪಕವಾದ ತೀವ್ರ ಅಸಮಾಧಾನಕ್ಕೆ ಕಾರಣವಾಯಿತು; ಹಿಂದಿನಿಂದಲೂ ಬಂದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯೂ ಹದಗೆಟ್ಟಿತು. ಸರ್ಕಾರವೂ ಈ ಪರಿಣಾಮವನ್ನು ಗಮನಿಸಿತು. 1822ರ ಗೊತ್ತುವಳಿಯೊಂದರಲ್ಲಿ ಸರ್ಕಾರ ದೇಶದಲ್ಲಿ ನಾನಾ ಕಡೆ ಅಶಾಂತಿ ಹರಡುತ್ತಿದೆಯೆಂದೂ ಆಡಳಿತವ್ಯವಸ್ಥೆ ಸಡಿಲಗೊಳ್ಳುತ್ತಿದೆಯೆಂದೂ ಹೇಳಿತು. ಈ ಅಶಾಂತಿಗೆ ಸರ್ಕಾರದ ನೀತಿ ಕಾರಣವಲ್ಲವೆಂದೂ ಆ ನೀತಿಯನ್ನು ತೀವ್ರವಾಗಿ ಕಾರ್ಯಗತಗೊಳಿಸಿದ್ದೇ ಕಾರಣವೆಂದೂ ಒಪ್ಪಿತು. ನಿಧಾನವಾಗಿ ಹಂತಹಂತವಾಗಿ ಈ ಬದಲಾವಣೆಗಳನ್ನು ಮಾಡಿದ್ದರೆ ಜನರಲ್ಲಿ ಇಷ್ಟೊಂದು ಅಸಮಾಧಾನವಿರುತ್ತಿರಲಿಲ್ಲ; ಅವರೂ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಿದ್ದರು.

ಜಮೀನ್ದಾರರ ಸ್ವತ್ತನ್ನು ಕಿತ್ತುಕೊಂಡದ್ದರಿಂದ ಅವರ ಆಶ್ರಿತರಿಗೆ ಕೆಲಸವಿಲ್ಲದಂತಾಗಿ ತೀವ್ರ ಅಸಮಾಧಾನಕ್ಕೆ ಎಡೆಯಾಯಿತು. ಅದರಲ್ಲನೇಕರು ಬಂಡಾಯಗಾರರ ಗುಂಪಿಗೆ ಸೇರಿದರು. ಗೇಣಿರಹಿತ ಭೂಮಿಗಳನ್ನು ಸ್ವಾಧೀನಪಡಿಸಿಕೊಂಡದ್ದರಿಂದ ಸರ್ಕಾರಕ್ಕೆ ಹೆಚ್ಚು ಕಂದಾಯ ದೊರಕಿತೇನೋ ನಿಜ. ಆದರೆ ಎಷ್ಟೋ ತಲೆಮಾರುಗಳಿಂದ ವೈಭವದಲ್ಲಿ ಮೆರೆದ ಜಮೀನ್ದಾರರು ಹಠಾತ್ತನೆ ದಟ್ಟದಾರಿದ್ರ್ಯವನ್ನು ಅನುಭವಿಸಬೇಕಾಯಿತು. ಇದು ಅನೇಕರ ವಿಷಯದಲ್ಲಿ ನೈತಿಕ ಪತನಕ್ಕೂ ಕಾರಣವಾಯಿತು. 1852ರಲ್ಲಿ ಗವರ್ನರ್ ಜನರಲ್ ಡಾಲ್‍ಹೌಸಿಯಿಂದ ನಿಯಮಿತವಾದ ಜನಾಂ ಆಯೋಗ ಜಮೀನ್ದಾರರು ತಮ್ಮ ಭೂಮಿಯ ಮೇಲೆ ಹೊಂದಿದ್ದ ಹಕ್ಕನ್ನು ಬೊಂಬಾಯಿನಲ್ಲಿ ನಿಂತು ತನಿಖೆ ಮಾಡಿತು. ಇದರ ಫಲವಾಗಿ ಸುಮಾರು 20,000 ಆಸ್ತಿಗಳನ್ನು ಸರ್ಕಾರವು ದಖನ್ ಪ್ರಾಂತ್ಯದಲ್ಲೇ ವಶಪಡಿಸಿಕೊಂಡಿತು. ಇದರಿಂದ ದೇಶದ ಆರ್ಥಿಕ ಪರಿಸ್ಥಿತಿ ಎಷ್ಟು ಹದಗೆಡುತ್ತಿತ್ತೆಂಬುದನ್ನು ಸರ್ಕಾರ ಗಮನಿಸಲಿಲ್ಲ. ಔಧ್‍ನಲ್ಲಂತೂ ಜನರ ಪರಿಸ್ಥಿತಿ ಶೋಚನೀಯವಾಯಿತು. ಅದನ್ನು ವಶಪಡಿಸಿಕೊಂಡ ಮೇಲೆ ಕೆಲವು ಕಾಲ ಕಮೀಷನರ್ ಆಗಿ ಸರ್ ಜೇಮ್ಸ್ ಔಟ್ರ್ಯಾಂ ಎಂಬ ಅಧಿಕಾರಿಯಿದ್ದ. ಉಪಕಾರಶೀಲನೂ ದಯಾಪರನೂ ಆಗಿದ್ದ ಇವನ ಅನಂತರ ಕವರ್ಲಿ ಜಾಕ್ಸನ್ ಎಂಬ ದುರಹಂಕಾರಿಯೂ ನಿರ್ದಯನೂ ಆಗಿದ್ದ ಕಮೀಷನರ್ ಬಂದ. ಹಿಂದಿನ ದೊರೆಗಳಿಂದ ವೇತನ ಪಡೆಯುತ್ತಿದ್ದವರ ವೇತನವನ್ನು ಈತ ರದ್ದುಮಾಡಿದ. ಹಿಂದಿನ ಸೈನಿಕರನ್ನು ಉದ್ಯೋಗದಿಂದ ನಿವೃತ್ತಿ ಮಾಡಿದ. ಹೀಗೆ ಹಿಂದೆ ಪ್ರಜೆಗಳ ರಾಜನಿಷ್ಠೆಗೆ ಹೆಸರಾಗಿದ್ದ ಔಧ್ ಸಂಸ್ಥಾನ ಅತೃಪ್ತಿ ಒಳಸಂಚುಗಳ ಉಗಮಸ್ಥಾನವಾಯಿತು. ಜಾಕ್ಸನ್ನನನ್ನು ಕೆಲಸದಿಂದ ನಿವೃತ್ತಿಗೊಳಿಸಿ ಹೆನ್ರಿ ಲಾರೆನ್ಸ್ ಎಂಬ ಸೌಮ್ಯ ಸ್ವಭಾವದ ಅಧಿಕಾರಿಯನ್ನು ನಿಯಮಿಸಿದ ಮೇಲೂ ಜನರ ಅತೃಪ್ತಿ ಹೋಗಲಿಲ್ಲ.

ಹೀಗೆ ಹಿಂದಿನ ಕಾಲದಿಂದಲೂ ನಡೆದು ಬಂದಿದ್ದ ಇನಾಂ ಪದ್ಧತಿಯ ಅಕ್ರಮಗಳನ್ನು ನಿವಾರಿಸಲೆತ್ನಿಸಿದ್ದು ಭಾರತೀಯರು 1857ರಲ್ಲಿ ಬ್ರಿಟಿಷರಿಗೆ ವಿರೋಧವಾಗಿ ಸಿಡಿದೇಳುವುದಕ್ಕೆ ಒಂದು ಕಾರಣವಾಯಿತು.

**ಸ್ವಾತಂತ್ರ್ಯಾನಂತರದ ಸ್ಥಿತಿ:** ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿಯೇ ಭಾರತ ದೇಶದಲ್ಲಿ ವಿಸ್ತಾರವಾಗಿ ಹಬ್ಬಿದ ಈ ಜಹಗೀರ್ ಮತ್ತು ಇನಾಂ ಪದ್ಧತಿಯಿಂದ ಭೂಮಿಯ ಅಸಮಾನ ಹಂಚಿಕೆಯಾಗಿ ಆರ್ಥಿಕ ಅಸಮಾನತೆ ಹೆಚ್ಚಿದೆ ಎಂಬ ಅಸಂತೃಪ್ತಿ ಜನತೆಯಲ್ಲಿ ಹಬ್ಬಿತ್ತು. 1947ರಲ್ಲಿ ದೇಶ ಸ್ವತಂತ್ರವಾದ ಮೇಲೆ ದೇಶದ ಈ ಭೂ ಹಿಡುವಳಿಗಳ ಬಗ್ಗೆ ಸುಧಾರಣೆ ಮಾಡುವ ಕಾರ್ಯವನ್ನು ರಾಜ್ಯ ಸರ್ಕಾರಗಳು ಕೈಗೆತ್ತಿಕೊಂಡವು. ವಿವಿಧ ರಾಜ್ಯ ಸರ್ಕಾರಗಳು ಇನಾಂ ಮತ್ತು ಜಹಗೀರುಗಳನ್ನು ರದ್ದು ಮಾಡುವ ಅನೇಕ ಕಾಯಿದೆಗಳನ್ನು ಜಾರಿಯಲ್ಲಿ ತಂದಿವೆ. ಆ ಕಾಯಿದೆಗಳು ಜಾರಿಯಲ್ಲಿ ಬಂದ ಮೇಲೆ ಈ ಎಲ್ಲ ಬಗೆಯ ಇನಾಂಗಳೂ ಅಪಾರ ಬದಲಾವಣೆ ಹೊಂದಿವೆ. ಉಳುವವನೇ ನೆಲದೊಡೆಯನಾಗಬೇಕೆಂಬ ನೀತಿಗೆ ಅನುಗುಣವಾಗಿ ಈ ಕಾಯಿದೆಗಳನ್ನು ರಚಿಸಲಾಗಿದೆ. (ಕೆ.ಸಿ.)

**ಇನಾಂಗಾಂವ್:** ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯಲ್ಲಿರುವ ತಾಮ್ರ-ಶಿಲಾ ಯುಗದ ವಸತಿ ನೆಲೆ. ಇದು ಭೀಮಾ ನದಿಯ ಉಪನದಿಯಾದ ಘೋಡ್ ನದಿಯ ಬಲದಂಡೆ ಮೇಲಿದೆ. 5 ಹೆಕ್ಟೇರ್ ಪ್ರದೇಶದಲ್ಲಿ ವ್ಯಾಪಿಸಿರುವ ಈ ನೆಲೆಯಲ್ಲಿ ಡೆಕ್ಕನ್ ಕಾಲೇಜಿನ ತಂಡ 1968–82 ರವರೆಗೆ ವಿಸ್ತೃತ ಉತ್ಖನನ ನಡೆಸಿ 3 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಯಿತು. ಮಾಳ್ವ (ಪ್ರಶ.ಪೂ.1800–1500), ಆದಿ ಜೋರ್ವೆ (ಪ್ರಶ.ಪೂ. 1500–1400) ಮತ್ತು ಅಂತ್ಯ ಜೋರ್ವೆ (ಪ್ರಶ.ಪೂ.1400–1000). ವಸತಿ ಅವಶೇಷಗಳಲ್ಲದೆ ಇಲ್ಲಿ ಬುರುಜು ಸಹಿತವಾದ ಮಣ್ಣಿನ ಗೋಡೆ, ಏರಿ ಮತ್ತು ನೀರಾವರಿ ಕಾಲುವೆಯ ಕುರುಹುಗಳೂ ದೊರೆತಿವೆ.

ಮೊತ್ತಮೊದಲು ಮಾಳ್ವ ಸಂಸ್ಕೃತಿಯ ಜನರು ಇಲ್ಲಿ ವಾಸ್ತವ್ಯ ಹೂಡಿದ್ದರು. ಇವರು ನೆಲೆಸಿದ್ದ 23 ಗುಡಿಸಲುಗಳ ಅಳಿದುಳಿದ ಭಾಗಗಳು ಉತ್ಖನನದಲ್ಲಿ ಕಂಡುಬಂದವು. ಈ ಪೈಕಿ 28 ಗುಡಿಸಲುಗಳ ತಳವಿನ್ಯಾಸ ಆಯತಾಕಾರವಾಗಿದ್ದರೆ, ಮೂರು ವೃತ್ತಾಕಾರದ ಗುಂಡಿ ಮನೆಗಳು, ಗುಡಿಸಲುಗಳ ನಡುವೆ ಒಣಗಿಳಿದ್ದವು. ಆಯತಾಕಾರದಲ್ಲಿದ್ದ ಗುಡಿಸಲಿನ ಗೋಡೆಗಳು ಮಣ್ಣು ಮೆತ್ತಿದ ಬೊಂಬಿನಿಂದ ನಿರ್ಮಿಸಿದಂತವು. ಛಾವಣಿ ಪ್ರಾಯಶಃ ಹುಲ್ಲಿನದಾಗಿದ್ದು ಶಂಕುವಿನಾಕಾರದಲ್ಲಿತ್ತು. ಕೆಲವು ಗುಡಿಸಲುಗಳಲ್ಲಿ 8×5 ಮೀ ವಿಸ್ತೀರ್ಣದ ಒಂದೇ ಕೋಣೆಯಿದ್ದರೆ ಇನ್ನು ಕೆಲವರಲ್ಲಿ ಇಂಥ ಕೋಣೆಯನ್ನು ಎರಡು ಭಾಗಗಳಾಗಿ ವಿಭಜಿಸಲಾಗಿತ್ತು. ನೆಲವನ್ನು ಆಗಾಗ್ಗೆ ಮಣ್ಣು, ಸುಣ್ಣ ಮತ್ತು ಸಗಣಿಯಿಂದ ಸಾರಿಸುವ ರೂಢಿಯಿದ್ದಿತು. ಪ್ರತಿ ಗುಡಿಸಲಿನಲ್ಲಿ ಧಾನ್ಯ ಕಣಜ, ಒಲೆ, ಅಗ್ಗಿಷ್ಟಿಕೆಗಳಿದ್ದವು. ಈ ವಸತಿಯ ಅತಿದೊಡ್ಡ ಮನೆ 9.75×5.5 ವಿಸ್ತೀರ್ಣದ, 2 ಕೋಣೆಗಳುಳ್ಳ ಮನೆ. ಹಲವು ಧಾನ್ಯ ಕಣಜಗಳೂ ಸುಟ್ಟ ಧಾನ್ಯದ ರಾಶಿಯೂ ಈ ಮನೆಯೊಳಗೆ ಕಂಡುಬಂದಿದ್ದು, ಇದು ಶ್ರೀಮಂತ ವರ್ಗಕ್ಕೆ ಸೇರುವ ವ್ಯಕ್ತಿಯ ನಿವಾಸವಾಗಿದ್ದಿರಬೇಕು. ಮತ್ತೊಂದು ಗುಡಿಸಲಿನಲ್ಲಿ ಮಣಿಯನ್ನು ನಯಗೊಳಿಸುವ ಸಾಧನವೂ ಮಗದೊಂದರಲ್ಲಿ ಕುಂಬಾರನ ಭಟ್ಟಿಯೂ ಇದ್ದವು. ಈ ಹಂತದಲ್ಲಿ ಮಾತ್ರ ಅಪರೂಪವಾದ 3 ಗುಂಡಿ ಮನೆಗಳು ಕಂಡುಬಂದವು. ಇಂತಹ ಒಂದು ಗುಂಡಿಯು 1.23 ಮೀ ಆಳವಿದ್ದು ಇದರೊಳಗೆ ಇಳಿಯಲು 2 ಮೆಟ್ಟಿಲುಗಳನ್ನು ಮಾಡಲಾಗಿತ್ತು. ಗುಂಡಿಯ ಗೋಡೆ ನುಣುಪಾಗಿದ್ದುದಲ್ಲದೆ ಸುಣ್ಣದ ಗಿಲಾವನ್ನು ಹೊಂದಿತ್ತು. ಮಾಳ್ವ ಜನ ಧಾನ್ಯಗಳನ್ನು ಕಣಜಗಳಲ್ಲಿ ಮತ್ತು ನೆಲದಡಿಯ ಗುಳಿಗಳಲ್ಲಿ ಶೇಖರಿಸಿಡುತ್ತಿದ್ದರು. ಕಣಜಗಳನ್ನು ವೃತ್ತಾಕಾರದ ಮಣ್ಣಿನ ಕಟ್ಟೆಗಳ ಮೇಲೆ ನಿಲ್ಲಿಸಲಾಗುತ್ತಿತ್ತು. ಇಂತಹ ಕಟ್ಟೆಗಳು ಮಾತ್ರ ಕೀಟಗಳಿಂದ ರಕ್ಷಿಸಲು ಗುಂಡಿಗಳ ಗೋಡೆಗೆ ಸುಣ್ಣದ ಲೇಪನವನ್ನು ಹಚ್ಚಲಾಗುತ್ತಿತ್ತು. ಇಂತಹ ಕಟ್ಟೆಗಳು ಮಾತ್ರ ಉತ್ಖನನದಲ್ಲಿ ದೊರೆತವು. ಕಣಜಗಳು ಮನೆಯ ಒಳ ಅಥವಾ ಹೊರಭಾಗದಲ್ಲಿರುತ್ತಿದ್ದವು. ಧಾನ್ಯವನ್ನು ಕೀಟಗಳಿಂದ ರಕ್ಷಿಸಲು ಗುಂಡಿಗಳ ಗೋಡೆಗೆ ಸುಣ್ಣದ ಲೇಪನವನ್ನು ಹಚ್ಚಲಾಗುತ್ತಿತ್ತು. ಒಮ್ಮೊಮ್ಮೆ 4 ಕಾಲಿನ ದೊಡ್ಡ ಜಾಡಿಗಳಲ್ಲೂ ಧಾನ್ಯವನ್ನು ತುಂಬಿಡಲಾಗುತ್ತಿತ್ತು. ಇಂತಹ ಜಾಡಿಗಳ ಕಾಲಿಗೆ ಆಧಾರವಾಗಿ ಇಟ್ಟಿದ್ದ 4 ಕಲ್ಲುಗಳು ಉತ್ಖನನದಲ್ಲಿ ಕಂಡುಬಂದವು. ಇಂತಹ ಧಾನ್ಯ ಸಂಗ್ರಹಣಾ ಪದ್ಧತಿಗಳನ್ನು ಇಂದಿಗೂ ಹಳ್ಳಿಮನೆಗಳಲ್ಲಿ ಕಾಣಬಹುದಾಗಿದೆ. ಈ ಹಂತದ ಪಾತ್ರೆಗಳಲ್ಲಿ 3 ಪ್ರಕಾರಗಳಿವೆ– ಮಾಳ್ವ ಮಾದರಿಯ ಪಾತ್ರೆಗಳು ನುಣುಪಾದ ಮಣ್ಣಿನಿಂದ ಮಾಡಿದ್ದು ಚೆನ್ನಾಗಿ ಬೇಯಿಸಿದ ತೆಳು ಪಾತ್ರೆಗಳಾಗಿದ್ದವು. ಇವನ್ನು ತಿಗುರಿಯ ಮೇಲೆ ಮಾಡಲಾಗಿತ್ತು. ಪಾತ್ರೆಗಳ ಎರಡೂ ಮೈಮೇಲೆ ಪೇಲಗೆಂಪು ಬಣ್ಣದ ಅತಿ ತೆಳುವಾದ ಲೇಪನವಿದೆ. ಹೊರಮೈ ಮೇಲೆ ರೇಖಾಕೃತಿಯ ವಿನ್ಯಾಸ, ಗೂಳಿ–ನಾಯಿ ಮುಂತಾದ ಪ್ರಾಣಿಗಳ ಚಿತ್ರಗಳನ್ನು ಕಪ್ಪುಬಣ್ಣದಲ್ಲಿ ಬಿಡಿಸಲಾಗಿದೆ. ಈ ಮಾದರಿಯಲ್ಲಿ ಗಿಂಡಿಯಾಕಾರದ ಪಾತ್ರೆಗಳೇ ಹೆಚ್ಚು. ಬೋಗುಣಿ, ಬಟ್ಟಲು, ಗೋಲ ಮಡಕೆಗಳು ಇತರ ಆಕಾರಗಳು. ಬೂದು ಹಾಗೂ ಕೆಂಪುಬಣ್ಣದ ಪ್ರಕಾರಗಳಲ್ಲಿ ದೊರಕು ಮಣ್ಣಿನಿಂದ ಮಾಡಿದ ಮಂದ ಜಾಡಿಗಳು ಮಾತ್ರ ಇವೆ. ಕೈಯಿಂದಲೇ ಮಾಡಿದ ಈ ಜಾಡಿಗಳು ಧಾನ್ಯ ಸಂಗ್ರಹಣೆಗೆ ಮತ್ತು ಅಸ್ಥಿ ಮಡಕೆಗಳಾಗಿ ಬಳಕೆಯಾಗುತ್ತಿದ್ದವು. ಇವುಗಳ ಹೊರಮೈ ಮೇಲೆ ಮಣ್ಣಿನ ಪಟ್ಟಿಯನ್ನು ಅಂಟಿಸಿ ಮಾಡಿದಂತಹ ಅಲಂಕರಣವಿದೆ. ಈ ಹಂತದಲ್ಲಿ ಸಿಕ್ಕ ಸಮಾಧಿಗಳಲ್ಲಿ ಎಳೆ ಮಕ್ಕಳ ಅಸ್ಥಿ ಅವಶೇಷಗಳನ್ನು ಇಡಲಾದ ಮಡಕೆಗಳು ಅಧಿಕವಾಗಿವೆ. ಒಂದು ಅಥವಾ ಜೋಡಿ ಮಡಕೆಗಳಲ್ಲಿ ಅವಶೇಷಗಳನ್ನಿಟ್ಟು ಹೂಳಲಾಗಿದೆ. ವಯಸ್ಕರ ಸಮಾಧಿಗಳು ಕೆಲವೊಂದು ಮಾತ್ರ ಇದ್ದು ಇವುಗಳಲ್ಲಿ ಶವವನ್ನು ಕುಣಿಯೊಳಗೆ ನೇರಭಂಗಿಯಲ್ಲಿ

ಹೂಳಲಾಗಿದೆ. 3 ಹಂತಗಳಲ್ಲೂ ಹೂಳುವ ಮುನ್ನ ಶವದ ಪಾದಗಳನ್ನು ತುಂಡರಿಸುವ ಸಂಪ್ರದಾಯವಿತ್ತು. ಆದ್ದರಿಂದ ಅಸ್ಥಿಪಂಜರಗಳ ಪಾದ ಮೂಳೆಗಳು ಸಮಾಧಿಗಳಲ್ಲಿ ಕಂಡುಬರಲಿಲ್ಲ. ಎಲ್ಲ ಹಂತಗಳಲ್ಲೂ ಮನೆಯೊಳಗೇ ಶವವನ್ನು ಹೂಳುವ ಪದ್ಧತಿಯಿತ್ತು.

ಆದಿ ಜೋರ್ವೆ ಹಂತದಲ್ಲಿ ವಸತಿ ಸಮೃದ್ಧವಾಯಿತು. ಗುಡಿಸಲುಗಳ ರಚನೆಯಲ್ಲಿ ಅಂತಹ ವ್ಯತ್ಯಾಸಗಳೇನೂ ಆಗಲಿಲ್ಲ. 33 ಗುಡಿಸಲುಗಳಲ್ಲಿ 30 ಆಯತಾಕಾರದವೂ 3 ವೃತ್ತಾಕಾರದವೂ ಆಗಿದ್ದವು. ವಸತಿಯ ಮಧ್ಯದಲ್ಲಿ 5 ಕೋಣೆಗಳುಳ್ಳ ಒಂದು ದೊಡ್ಡ ಮನೆಯಿದ್ದಿತು.ಇದರೊಳಗೆ ಒಲೆಗಳು, ಕೆಲವು ಕಣಜಗಳು ಇದ್ದವು. ಅಲ್ಲದೆ ಒಂದು ಕೋಣೆಯ ನೆಲದಡಿಯಲ್ಲಿ ಆ ಕಾಲಕ್ಕೆ ಅಪೂರ್ವವಾದ ಒಂದು ಸಮಾಧಿ ಕಂಡುಬಂದಿತು. ಇದರಲ್ಲಿ 4 ಕಾಲಿನ ಜಾಡಿಯೊಳಗೆ ಪುರುಷನ ಶವವನ್ನು ಕೈಕಾಲು ಮಡಚಿ ಕುಳ್ಳರಿಸಲಾಗಿತ್ತು. ಆಶ್ಚರ್ಯವೆಂದರೆ ಈ ವ್ಯಕ್ತಿಯ ಪಾದಗಳನ್ನು ತುಂಡರಿಸಲಾಗಿರಲಿಲ್ಲ. ಈ ಮನೆ ಗ್ರಾಮದ ಮುಖ್ಯಸ್ಥನದಾಗಿತ್ತು ಎಂಬುದಕ್ಕೆ ಈ ಎಲ್ಲ ಅಂಶಗಳೂ ಇಂಬು ಕೊಡುತ್ತವೆ. ಈ ಮನೆಯ ನೈರುತ್ಯದಲ್ಲಿ ಕಣಜ–ಧಾನ್ಯದ ಗುಳಿಗಳಿಂದ ತುಂಬಿದ ಎರಡು ಕೋಣೆಯಲ್ಲಿ ಮಗುವೊಂದರ ಶವವನ್ನು 4 ಕಾಲಿನ ಹಸಿ ಮಣ್ಣಿನ ಜಾಡಿಯಲ್ಲಿ ಹೂಳಲಾಗಿತ್ತು; ಇಲ್ಲಿಯೂ ಪಾದಗಳನ್ನು ಕತ್ತರಿಸಿರಲಿಲ್ಲ. ಹಾಗಾಗಿ ಮಗು ಮುಖ್ಯಸ್ಥನ ಸಂಬಂಧಿಯಾಗಿದ್ದಿರಬಹುದು. ಇದೇ ಕೋಣೆಯೊಳಗೆ ಕೃಷಿಯ ಸಾಧನದಂತೆ (ಪಿಕಾಸಿ) ಕಾಣುವ ಜಿಂಕೆ ಕೊಂಬಿನಿಂದ ಮಾಡಿದ ಉಪಕರಣವು ದೊರೆಯಿತು. ಮಾಳ್ವ ಹಂತದಲ್ಲಿದ್ದ ಧಾನ್ಯ ಶೇಖರಣೆಯ ಪದ್ಧತಿಗಳು ಯಾವ ಬದಲಾವಣೆಗಳೂ ಇಲ್ಲದೆ ಮುಂದುವರೆದವು. ಮಾಳ್ವ ಮಾದರಿಯ ಪಾತ್ರೆಗಳು ಮರೆಯಾಗಿ ಅವನ್ನೇ ಹೋಲುವ ಜೋರ್ವೆ ಮಾದರಿಯ ಪಾತ್ರೆಗಳು ಬಳಕೆಗೆ ಬಂದವು. ಇವು ಸಹ ಕಪ್ಪುವರ್ಣ ಚಿತ್ರಿತ ಕೆಂಪು ಪಾತ್ರೆಗಳು. ನಳಿಕೆ ಯುಳ್ಳ ಬಟ್ಟಲು ಇದರ ವಿಶಿಷ್ಟ ಪ್ರಕಾರ. ಬಟ್ಟಲು, ಬೋಗುಣಿ, ಸಣ್ಣ ಮಡಕೆ, ಗೋಲ ಜಾಡಿ ಮತ್ತು ಹಿಡಿಕೆಯಿರುವ ಮುಚ್ಚಳಗಳು ಈ ಮಾದರಿಯಲ್ಲಿರುವ ಇತರ ಪಾತ್ರೆಗಳು. ಬೂದುಬಣ್ಣದ ಪಾತ್ರೆಗಳ



ತಾಮ್ರ–ಶಿಲಾಯುಗ ಸಂಸ್ಕೃತಿಯ ಶವಕುಣಿಗಳು

ರೂಪ, ಆಕಾರ ಮತ್ತು ಬಳಕೆಯಲ್ಲಿ ಯಾವುದೇ ಬದಲಾವಣೆಗಳಾಗಿರಲಿಲ್ಲ. ಈ ಹಂತದಲ್ಲಿ 72 ಸಮಾಧಿಗಳಿದ್ದು, ಈ ಪೈಕಿ 47 ಮಕ್ಕಳದ್ದು, ಉಳಿದವು ವಯಸ್ಕರದ್ದೂ ಆಗಿದ್ದವು. ಮೂರನ್ನು ಹೊರತುಪಡಿಸಿ ವಯಸ್ಕರ ಉಳಿದೆಲ್ಲ ಸಮಾಧಿಗಳೂ ನೇರ ಅಥವಾ ಕೈಕಾಲು ಮಡಸಿದ ಭಂಗಿಗಳಲ್ಲಿದ್ದವು. 3 ವಿಶಿಷ್ಟ ಸಮಾಧಿಗಳಲ್ಲಿ ಒಂದು ಮುಖ್ಯಸ್ಥನದೂ ಮತ್ತೊಂದು ಅವನ ಸಂಬಂಧಿಯಾಗಿದ್ದಿರಬಹುದಾದ ಮಗುವಿನದೂ ಆಗಿದ್ದವು. ಮತ್ತೊಂದು ಸಾಂಕೇತಿಕವಾಗಿ ತೋರುವ ಸಮಾಧಿಯಲ್ಲಿ 4 ಕಾಲಿನ ಜಾಡಿಯಿದ್ದು ಅಸ್ಥಿ ಅವಶೇಷಗಳಿರಲಿಲ್ಲ. ಎಲ್ಲ ಸಮಾಧಿಗಳಲ್ಲೂ ಚಿತ್ರವಿರುವ ನಳಿಕೆಯುಳ್ಳ ಬಟ್ಟಲುಗಳಿದ್ದವು. ಅಪರೂಪವಾಗಿ ತಾಮ್ರದ ವಸ್ತುಗಳನ್ನು ಕಾಣಿಕೆಯಾಗಿ ಶವದೊಂದಿಗೆ ಇಡಲಾಗಿತ್ತು.

ಅಂತ್ಯ ಜೋರ್ವೆ ಹಂತದಲ್ಲಿ ಸಾಂಸ್ಕೃತಿಕ ಪಲ್ಲಟವಾದಂತೆ ಕಾಣುತ್ತದೆ. ಈ ಅವಧಿಯಲ್ಲಿ ಆಯತಾಕಾರದ ಬದಲಿಗೆ ವೃತ್ತಾಕಾರದವು ತಲೆಯೆತ್ತಿದ್ದವು. ಕಣಜಗಳ ಸಂಖ್ಯೆಯೂ ಗಣನೀಯವಾಗಿ ಇಳಿಯಿತು. ಆರ್ಥಿಕ ಪರಿಸ್ಥಿತಿ ಕುಸಿದುದ್ದರ ಸಂಕೇತ ಇದು ಎಂಬುದು ಉತ್ಖನನಕಾರರ ಅಭಿಪ್ರಾಯ. ವಸತಿ ರಚನೆಯಲ್ಲಿ ಆಂತರಿಕ ಬದಲಾವಣೆಗಳಾದವು. ಆರ್ಥಿಕವಾಗಿ ಬಲವಾಗಿದ್ದವರು ವಸತಿಯ ಕೇಂದ್ರ ಭಾಗದಲ್ಲಿ ಮನೆಗಳನ್ನು ಕಟ್ಟಿಕೊಂಡರು. ಕುಂಬಾರ, ಸುಣ್ಣಗಾರ, ಮಣಿಗಾರ ಮುಂತಾದ ಕಸುಬುದಾರರ ಪಂಗಡಗಳಿಗೆ ನೆಲೆಯ ಪಶ್ಚಿಮ ಭಾಗದಲ್ಲಿ ವಸತಿ ಅವಕಾಶ ಕಲ್ಪಿಸಲಾಯಿತು. ಆದಿ ಜೋರ್ವೆ ವಸತಿಯಲ್ಲಿ ಹೀಗೆ ಎರಡು ಭಾಗಗಳಿರಲಿಲ್ಲ. ಮಣ್ಪಾತ್ರೆಗಳೂ ಈ ಹಂತದಲ್ಲಿ ತಮ್ಮ ಮಟ್ಟವನ್ನು ಕಳೆದುಕೊಂಡವು. ಆದಿ ಜೋರ್ವೆಯ ಪ್ರಕಾರಗಳೇ ಮುಂದುವರೆದರೂ ಈ ಹಂತದಲ್ಲಿ ಸಾಮಾನ್ಯ ದರ್ಜೆಯ ಪಾತ್ರೆಗಳೇ ಹೆಚ್ಚಾಗಿ ತಯಾರಾಗತೊಡಗಿದವು. ಜೊತೆಗೆ ಪಾತ್ರೆಗಳನ್ನು ಚಿತ್ರಗಳಿಂದ ಅಲಂಕರಿಸುವುದು ವಿರಳವಾಯಿತು. ನಳಿಕೆಯುಳ್ಳ ಬಟ್ಟಲು ಸಂಪೂರ್ಣ ಕಣ್ಮರೆಯಾಗಿ ಸರಳ ಬಟ್ಟಲುಗಳು, ಮಟ್ಟಸ ತಳದ ತಟ್ಟೆ ಮತ್ತು ಬೋಗುಣಿಗಳು ಜನಪ್ರಿಯವಾದವು. ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಹೊಸ ಪ್ರಕಾರವಾಗಿ ಸೇರ್ಪಡೆಯಾಯಿತು. ಸಮಾಧಿ ಪದ್ಧತಿಯಲ್ಲಿ ಬದಲಾವಣೆಗಳಾಗಲಿಲ್ಲ. ಆದರೆ ಈ ಹಂತದ ಅವಶೇಷಗಳು ವಸ್ತು ಸಂಸ್ಕೃತಿಯಲ್ಲಿ ಗಮನಾರ್ಹ ಬದಲಾವಣೆಯಾದುದನ್ನು ಸೂಚಿಸುತ್ತವೆ. ಈ ಹಂತದ ಹೊತ್ತಿಗೆ ಹವಾಮಾನವು ಶುಷ್ಕವಾಗತೊಡಗಿದ್ದರಿಂದ ಕೃಷಿ ಸೊರಗಿ ಈ ಪರಿಸ್ಥಿತಿ ಉಂಟಾಗಿರಬೇಕೆಂದು ತರ್ಕಿಸಲಾಗಿದೆ.

ಆಹಾರ ಪದ್ಧತಿ: ಮಾಳ್ವ ಮತ್ತು ಆದಿ ಜೋರ್ವೆ ಹಂತಗಳಲ್ಲಿ ವ್ಯವಸಾಯ, ಬೇಟೆ, ಮೀನುಗಾರಿಕೆ ಮತ್ತು ಪಶುಪಾಲನೆ ಆಹಾರ ಸಂಪಾದನ ಮಾರ್ಗವಾಗಿದ್ದವು. ಈ ಅವಧಿಯಲ್ಲಿ ಕೃಷಿ ಸಮೃದ್ಧವಾಗಿತ್ತು. ಮುಖ್ಯವಾಗಿ ಬೆಳೆಯಲಾಗುತ್ತಿದ್ದ ಧಾನ್ಯವೆಂದರೆ ಜವೆ. ಜೊತೆಗೆ ಬತ್ತ, ಜೋಳ, ಹುರುಳಿ, ಕೆಂಪು ತೊಗರಿ, ಬಟಾಣಿ, ಹೆಸರುಕಾಳು ಮುಂತಾದವು ಧಾನ್ಯ–ಕಾಳುಗಳ ಕೃಷಿಯೂ ಆಗುತ್ತಿತ್ತು. ಕಾಡುಹಣ್ಣುಗಳಾದ ಬಾರಿ ಮತ್ತು ನೇರಳೆಗಳನ್ನು ಇವರು ಸಂಗ್ರಹಿಸಿ ತಿನ್ನುತ್ತಿದ್ದರು. ಆದಿ ಜೋರ್ವೆ ಹಂತದಲ್ಲಿ ಮಾತ್ರ ಚಳಿಗಾಲದ ಬೆಳೆಯಾದ ಗೋದಿಯ ಕರಕಲಾದ ಧಾನ್ಯಗಳು ದೊರೆತಿರುವುದು ಕುತೂಹಲಕಾರಿ. ಚಳಿಗಾಲದಲ್ಲಿ ಮಳೆಯೇ ಆಗದಿರುವ ಈ ಪ್ರದೇಶದಲ್ಲಿ ನೀರನ್ನು ಮುಖ್ಯವಾಗಿ ಅವಲಂಬಿಸಿರುವ ಗೋದಿಯ ಬೆಳೆ ಹೇಗೆ ಸಾಧ್ಯವಾಯಿತು ಎಂಬುದಕ್ಕೆ ಉತ್ತರವಾಗಿ 6 ಮೀ ಅಗಲದ ನೀರಿನ ಕಾಲುವೆ ಹಾಗೂ ಕೆರೆ ಏರಿಯ ಅವಶೇಷಗಳು ಇಲ್ಲಿ ಪತ್ತೆಯಾಗಿವೆ. ಅಂದರೆ ಕಾಲುವೆಯ ಮೂಲಕ ಕೆರೆಯ ನೀರನ್ನು ಗೋದಿಯ ಹೊಲ–ಗದ್ದೆಗಳಿಗೆ ಹಾಯಿಸಲಾಗುತ್ತಿತ್ತು.

ಮೂರು ಹಂತಗಳಲ್ಲಿಯ ಜನರು ಜಾನುವಾರು, ಕೃಷ್ಣಮೃಗ, ನೀಲಗಾಯ್ ಮುಂತಾದ ಪ್ರಾಣಿಗಳ ಮಾಂಸವನ್ನು ಸೇವಿಸುತ್ತಿದ್ದರು. ಮೀನು ಹಾಗೂ ಪಕ್ಷಿಗಳನ್ನೂ ಆಹಾರಕ್ಕಾಗಿ ಹಿಡಿಯಲಾಗುತ್ತಿತ್ತು. ಅಂತಿಮ ಜೋರ್ವೆ ಹಂತದಲ್ಲಿ ಬೇಟೆ ಮತ್ತು ವನ್ಯಸಸ್ಯ ಸಂಗ್ರಹಣೆಯನ್ನೇ ಹೆಚ್ಚು ಅವಲಂಬಿಸಬೇಕಾದ ಸನ್ನಿವೇಶ ಒದಗಿಬಂತು ಎಂಬುದು ಪ್ರಾಣಿಮೂಳೆಗಳ (ಮುಖ್ಯವಾಗಿ ಜಿಂಕೆ) ಸಂಖ್ಯೆಯಿಂದ ತಿಳಿಯುತ್ತದೆ. ಈ ಹಂತದ ಜನ ಮೇವಿಗಾಗಿ ಊರೂರು ಸುತ್ತುವ ಅರೆ–ಅಲೆಮಾರಿಗಳಾಗಿದ್ದಿರಬೇಕು. ಎಲ್ಲ ಹಂತಗಳಲ್ಲೂ ಮಂದಗೆಂಪಿನ ಕಲ್ಲು ಮತ್ತು ಕ್ಯಾಲ್ಸೆಡನಿಯಲ್ಲಿ ಮಾಡಿದ ಸಮಾನಾಂತರ ಅಲಗುಗಳೂ ಸೇರಿದಂತೆ ವಿವಿಧ ನಮೂನೆಯ ಅಲಗುಗಳು ದೊರೆತವು. ಇವನ್ನು ಮಚ್ಚಿನಲ್ಲಿ ಸಿಕ್ಕಿಸಿ–ಹುಲ್ಲಿನ ಕಟಾವಿನಲ್ಲಿ ಬಳಸುತ್ತಿದ್ದಂತೆ ಕಾಣುತ್ತದೆ. ಅರ್ಧಚಂದ್ರಾಕೃತಿ, ಟ್ರಪೀಜ಼್ ಮುಂತಾದ ನಮೂನೆಗಳು ವಿರಳವಾಗಿದ್ದವು.

ಸುಡಾವೆ ಮಣ್ಣಿನ ಆಕೃತಿಗಳು: ಮೂರೂ ಹಂತಗಳಲ್ಲಿ ಸ್ತ್ರೀ–ಪುರುಷ ಹಾಗೂ ಪ್ರಾಣಿಗಳ ಸರಳ ಆಕೃತಿಗಳಿದ್ದವು. ಕೆಲವು ಬೇಯಿಸಿದವಾದರೆ ಇನ್ನು ಕೆಲವು ಹಸಿಮಣ್ಣಿನಿಂದ ಮಾಡಿದವು. ಕೆಲವೊಂದು ಆಕೃತಿಗಳ ದೈಹಿಕ ಲಕ್ಷಣಗಳನ್ನು ಚಿವುಟಿ ಆಕಾರಕ್ಕೆ ತರಲಾಗಿದೆ. ಆದರೆ ಹೆಚ್ಚಿನ ಆಕೃತಿಗಳು ಬೋಳಾಗಿವೆ. 3 ಸ್ತ್ರೀ ಆಕೃತಿಗಳು ಸ್ವಾರಸ್ಯಕರ ಸನ್ನಿವೇಶದಲ್ಲಿ ದೊರೆತವು. 2ನ್ನು ಸುಡಾವೆ ಮಣ್ಣಿನ ಪೆಟ್ಟಿಗೆ, ಉಂಗುರ ಮತ್ತು ಗೂಳಿಯಾಕೃತಿಗಳೊಂದಿಗೆ ಗುಡಿಸಲಿನ ಮೂಲೆ ಕಂಬದ ಗುಳಿಯೊಳಗೆ ಹೂಳಲಾಗಿತ್ತು. ಒಂದು ಆಕೃತಿ ಪೆಟ್ಟಿಗೆಯೊಳಗಿದ್ದರೆ ಮತ್ತೊಂದು ಹೊರಗೆ ಮುಚ್ಚಳದ ಮೇಲಿತ್ತು. ಇವೆಲ್ಲ ವಸ್ತುಗಳು ಯಾವುದೋ ವಿಧಿಗೆ ಸಂಬಂಧಿಸಿದ್ದಿರಬೇಕು. ಆಭರಣಗಳಿಂದ ಅಲಂಕೃತವಾದ ಮತ್ತೊಂದು ಸ್ತ್ರೀ ಆಕೃತಿಯನ್ನು ಮೂರು ಧಾನ್ಯ ಶೇಖರಣೆ ಗುಳಿಗಳ ಮಧ್ಯದಲ್ಲಿ ಹೂಳಿದ್ದುದು ಕಂಡುಬಂತು. ಇಂದಿಗೂ ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಕಣಜದಲ್ಲಿ ಧಾನ್ಯ ತುಂಬುವ ಮೊದಲು ಸ್ತ್ರೀ ಆಕೃತಿಗಳನ್ನು ಭೂಮಿಯೊಳಗೆ ಹುಗಿಯುವ ಸಂಪ್ರದಾಯವಿದೆ. ಇಲ್ಲಿ ಸಿಕ್ಕ ಪುರುಷರ ಆಕೃತಿಗಳಿಗೆ ವಿಜಯದ ಆಚರಣೆಯ ಸಂದರ್ಭದಲ್ಲಿ ಪೂಜಿಸುತ್ತಿದ್ದರೆನ್ನಬಹುದು. ಗೂಳಿಯ ಆಕೃತಿಗಳು ಸಹಜ ಭಂಗಿಯಲ್ಲಿವೆ. ಇನಾಂಗಾಂವ್ ಹಳ್ಳಿಯಲ್ಲಿ ಇಂದಿಗೂ ಕೆಲವು ವಿಶೇಷ ಸಂದರ್ಭಗಳಲ್ಲಿ ಇಂತಹ ಆಕೃತಿಗಳನ್ನು ಗ್ರಾಮದೇವತೆಗೆ ಅರ್ಪಿಸುವ ವಾಡಿಕೆಯಿದೆ. ಅಂತ್ಯ ಜೋರ್ವೆಯ ಶೇಖರಣೆ ಜಾಡಿಯೊಂದರ ಮೇಲೆ ಅಂಟಿಸಿದ್ದ ಮನುಷ್ಯನ ತಲೆಯಿರುವ ಚಿರತೆಯ ಆಕೃತಿಯನ್ನು ಇಲ್ಲಿ ಉಲ್ಲೇಖಿಸಬಹುದು. ತಾಮ್ರ ವಸ್ತುಗಳು ಬೆರಳೆಣಿಕೆಯಲ್ಲಿ ದೊರೆತವು. ಆದಿ ಜೋರ್ವೆ ಹಂತದಲ್ಲಿ ಸಿಕ್ಕ ತಾಮ್ರದ ಕುಲುಮೆ ಮತ್ತು ಅಂತ್ಯ ಜೋರ್ವೆಯ ತಾಮ್ರದ ಅದಿರಿನ ಉಂಡೆಗಳು ಸ್ಥಳೀಯವಾಗಿ ಈ ಲೋಹದ ವಸ್ತುಗಳು ತಯಾರಾಗುತ್ತಿದ್ದು, ಬಳೆ, ಮಣಿ, ಸೂಜಿ ಮತ್ತು ತಾಯತಗಳಲ್ಲದೆ ಮೀನುಗಾಳದ ಕೊಕ್ಕೆ, ಉಳಿ, ಉಂಗುರ, ಬಾಣದ ಮೊನೆಗಳು ಇಲ್ಲಿ ಸಿಕ್ಕಿವೆ.

ಮೇಲಿನ ಎಲ್ಲ ಆಧಾರಗಳನ್ನು ಪರಿಶೀಲಿಸಿದಾಗ ಇನಾಂಗಾಂವ್ ವಸತಿ ಶ್ರೇಣೀಕೃತ ಹಳ್ಳಿಯಾಗಿತ್ತೆಂದು ತಿಳಿಯುತ್ತದೆ. ಕಂಚುಗಾರ, ಕುಂಬಾರ, ಮಣಿಗಾರ, ಸುಣ್ಣಗಾರ ಮುಂತಾದ ವೃತ್ತಿಪಂಗಡದ ಜನ, ಕೃಷಿಕರು. ವಸತಿಗೆ ಯಜಮಾನನಾಗಿ ಮುಖ್ಯಸ್ಥನಿದ್ದನು. ಒಟ್ಟಿನಲ್ಲಿ ತಾಮ್ರ–ಶಿಲಾಯುಗ ಕಾಲದ, ಅದರಲ್ಲೂ ಜೋರ್ವೆ ಹಂತದ ರೈತಾಪಿ ಜನರ ಶೈಲಿ ಮತ್ತು ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳ ಚಿತ್ರಣವನ್ನು ಕೊಟ್ಟ ಮೊತ್ತಮೊದಲ ನೆಲೆ ಇನಾಂಗಾಂವ್ ಎನ್ನಬಹುದು. *

**ಇನಾಂದಾರ್, ವಿ.ಎಂ.:** 1912–86. ಕನ್ನಡದ ಪ್ರಸಿದ್ಧ ಕಾದಂಬರಿಕಾರರು, ಅನುವಾದಕರು, ವಿಮರ್ಶಕರು. ವೆಂಕಟೇಶ ಮಧ್ವರಾವ್ ಇನಾಂದಾರ್ ಇವರ ಪೂರ್ಣ ಹೆಸರು. ಬೆಳಗಾಂವಿ ತಾಲ್ಲೂಕಿನ ಹುದಲಿಯಲ್ಲಿ 1912 ಅಕ್ಟೋಬರ್ 1ರಂದು ಜನಿಸಿದರು. ತಂದೆ ಮಧ್ವರಾಯ, ತಾಯಿ ಕಮಲಾಬಾಯಿ. ಪ್ರಾಥಮಿಕ ಶಿಕ್ಷಣವನ್ನು ಹುದಲಿಯಲ್ಲಿ ಮುಗಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಬಿ.ಎ. (ಆನರ್ಸ್) ಪದವಿ ಪಡೆದರು. ಅನಂತರ ಇಂಗ್ಲಿಷ್ ವಿಷಯದಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು (1941). ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ (1943–50), ಉಪಪ್ರಾಧ್ಯಾಪಕರಾಗಿ (1950–60), ಪ್ರಿನ್ಸಿಪಾಲರಾಗಿ (1960–67), ಅನಂತರ ಯು.ಜಿ.ಸಿ. ಪ್ರಾಧ್ಯಾಪಕರಾಗಿ (1967–70) ಹೀಗೆ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆಸಲ್ಲಿಸಿ ನಿವೃತ್ತರಾದರು.



ಮರಾಠಿಯ ಪ್ರಸಿದ್ಧ ಲೇಖಕ ವಿ.ಸ. ಖಾಂಡೇಕರರ ಎರಡು ಧ್ರುವ (1937) ಕಾದಂಬರಿಯ ಅನುವಾದ ದೊಂದಿಗೆ ಸಾಹಿತ್ಯರಂಗಕ್ಕೆ ಪ್ರವೇಶಿಸಿದ ಇನಾಂದಾರರು ಸ್ವತಂತ್ರ ಕಾದಂಬರಿಗಳನ್ನು ಬರೆದರು, ಅನುವಾದಗಳನ್ನು ಮಾಡಿದರು. ಇವರಿಗೆ ಇಂಗ್ಲಿಷ್, ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಆಳವಾದ ಪರಿಶ್ರಮವಿತ್ತು. ಇವರು ಒಟ್ಟು 45ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮೊದಲಿಗೆ ವಿಮರ್ಶಾ ಗ್ರಂಥಗಳನ್ನು ಬರೆದು ಹೆಸರು ಮಾಡಿದರು. ಮೂರಾಬಟ್ಟೆ ಇವರ ಮೊದಲ ಸ್ವತಂತ್ರ ಕಾದಂಬರಿ (1946). ಕನಸಿನ ಮನೆ (1947), ವಿಜಯ ಯಾತ್ರೆ (1948), ಶಾಪ (1949), ಸ್ವರ್ಗದ ಬಾಗಿಲು (1950) ಹೀಗೆ ಒಂದೇ ಕಾದಂಬರಿಯನ್ನು ನಾಲ್ಕು ಭಾಗಗಳಲ್ಲಿ ಬರೆದರು. ಈ ಪರಿಯ ಸೊಬಗು, ನವಿಲು ನೌಕೆ, ಚಿತ್ರಲೇಖ, ಯಾತ್ರಿಕರು, ಮುಕ್ತಿ ಮುಂತಾದ ಹದಿನೆಂಟು ಕಾದಂಬರಿಗಳನ್ನು ಬರೆದಿದ್ದಾರೆ. ಪಾಶ್ಚಾತ್ಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ ಇವು ಇವರ ವಿದ್ವತ್ ಕೃತಿಗಳು. ಗೋವಿಂದ ಪೈಗಳ ಕಾವ್ಯ, ಕುವೆಂಪು ಕಾದಂಬರಿಗಳು, ಶ್ರೀನಿವಾಸರ ಕಾದಂಬರಿಗಳು, ಕಾರಂತರ ಕಾದಂಬರಿಗಳು, ಕಾಳಿದಾಸನ ಕೃತಿಗಳು ಮೊದಲಾದವುಗಳ ಬಗ್ಗೆ ವಿಮರ್ಶೆ ಬರೆದಿದ್ದಾರೆ. ವಿ.ಸ.ಖಾಂಡೇಕರರ ಇನ್ನೊಂದು ಪಸಿದ್ಧ ಕಾದಂಬರಿ ಯಯಾತಿ ಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅನುವಾದ ಅತ್ಯಂತ ಸೃಜನಶೀಲವಾಗಿದೆ. ಬಿಡುಗಡೆ ಎಂಬುದು ಇವರು ಬರೆದ ಒಂದು ನಾಟಕ. ಅಂಬೇಡ್ಕರ್ ಅವರನ್ನು ಕುರಿತು ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಉತ್ತರರಾಮ ಚರಿತೆ, ಗೋವಿಂದ ಪೈ, ಶಿವರಾಮಕಾರಂತ – ಇವು ಇಂಗ್ಲಿಷ್‌ನಲ್ಲಿ ಬರೆದ ಗ್ರಂಥಗಳು. ಇವರು ಕೆಲವು ಕಾಲ ಸುಧಾ, ಜಯಂತಿ ಪತ್ರಿಕೆಗಳಲ್ಲಿ ಬರೆದು ಅಂಕಣಕಾರರಾಗಿಯೂ ಪ್ರಸಿದ್ಧಿ ಪಡೆದಿದ್ದರು. ಇವರು ಬರೆದ ಶಾಪ, ಮುಕ್ತಿ ಕಾದಂಬರಿಗಳು ಚಲನಚಿತ್ರವಾಗಿವೆ.

ಇವರ ಸಾಹಿತ್ಯ ಸೇವೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಗಳು ಗೌರವಿಸಿವೆ. ಯಯಾತಿ ಕಾದಂಬರಿಯ ಅನುವಾದಕ್ಕೆ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ. ಸಂಸ್ಕೃತ ನಾಟಕಗಳಲ್ಲಿಯ ನಾಯಿಕೆಯರು ಎಂಬ ಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾಲಯದ ಮಾಂಡಲಿಕ ಸುವರ್ಣ ಪದಕ, ಸಂಸ್ಕೃತ ನಾಟಕಗಳಲ್ಲಿಯ ದೀರ್ಘ ಎಂಬ ವಿದೂಷಕ ಪ್ರಬಂಧಕ್ಕೆ ಭಾರತೀಯ ವಿದ್ಯಾಭವನದ ಸುವರ್ಣ ಪದಕ ಇವರಿಗೆ ಲಭಿಸಿದ್ದವು. ಇಂಗ್ಲೆಂಡ್ ಕೆನಡ, ಅಮೆರಿಕ ದೇಶಗಳನ್ನು ಪ್ರವಾಸ ಮಾಡಿದ್ದ ಇವರು 1986ರಲ್ಲಿ ನಿಧನರಾದರು. (ಎಸ್.ಎಂ.ಕೆ.)

**ಇನಾಮತಿ, ಎಚ್.ಎಸ್.:** 1900–86. ಕರ್ನಾಟಕದ ಹಿರಿಯ ಚಿತ್ರಕಲಾವಿದ, ಕಲಾ ಶಿಕ್ಷಕ. ಇವರ ಪೂರ್ತಿ ಹೆಸರು ಹರಿರಾವ್ ಶಾಮರಾವ್ ಇನಾಮತಿ. 1900 ಏಪ್ರಿಲ್ 14ರಂದು ಜಬಲಪುರದಲ್ಲಿ ಜನಿಸಿದರು. ಇಂಟರ್ ಪರೀಕ್ಷೆಯನ್ನು ಪೂರೈಸುವ ಮುನ್ನವೇ ಚಿತ್ರಕಲೆಯಲ್ಲಿ ಆಕರ್ಷಿತರಾಗಿ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ವ್ಯಾಸಂಗ ಮಾಡಿದರು (1926). ಅಲ್ಲಿಯೇ ಡಿಪ್ಲೊಮಾ ಪದವಿ ಪಡೆದರು. (1931). ವಿದ್ಯಾರ್ಥಿ ಜೀವನದಲ್ಲಿಯೇ ಡ್ಯಾಲಿಕರ್ಸಡ್ಜಿ ಎರಡನೆಯ ಬಹುಮಾನ ಪಡೆದರು (1929). ಈ ಬಹುಮಾನದಿಂದಾಗಿ ಇವರಿಗೆ ಮೇಯೋ ವಿದ್ಯಾರ್ಥಿವೇತನ ದೊರೆಯಿತು. ಕಲಾಶಾಲೆಯ ಪ್ರಾಂಶುಪಾಲರಾದ ಡಬ್ಲ್ಯು.ಜೆ.ಜೆ. ಗ್ಲ್ಯಾಡ್‌ಸ್ಟನ್ ಸಾಲೋಮನ್ ಅವರು 1930ರಲ್ಲಿ ಲಂಡನ್ನಿನಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಇವರು ರಚಿಸಿದ 'ನ್ಯಾಯ' ಚಿತ್ರ ಬಹುಮಾನ ಗಳಿಸಿತು. ಕೆಲ ಕಾಲ ಟೈಮ್ಸ್ ಆಫ್ ಇಂಡಿಯ ಮತ್ತು ಇಲಸ್ಟ್ರೇಟೆಡ್ ವೀಕ್ಲಿಯಂಥ ಪ್ರಸಿದ್ಧ ಪತ್ರಿಕೆಗಳಲ್ಲಿ ಕಲಾವಿದರಾಗಿ ದುಡಿದರು. ಅನಂತರ ಸ್ವತಂತ್ರವಾಗಿ ಚಿತ್ರಗಳನ್ನು ಬರೆಯತೊಡಗಿದರು. ಜಲವರ್ಣದಲ್ಲಿ ನಿಸರ್ಗದ ಅಪೂರ್ವ ದೃಶ್ಯಗಳನ್ನು ಸೆರೆಹಿಡಿದರು. ಚಿತ್ರ ರಚಿಸುವಲ್ಲಿ ಪ್ರಭುತ್ವ ಪಡೆದರು. ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಇವರ ಚಿತ್ರಗಳಿಗೆ ಬಹುಮಾನ ದೊರೆಯಿತು. ಜಗನ್ಮೋಹನ ಚಿತ್ರಶಾಲೆಯಲ್ಲಿ ಇವರ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ. ಎಂ.ಎಸ್.ಎಂ.ರೈಲ್ವೆ ಕಂಪನಿಗೆ ಅನೇಕ ಭಿತ್ತಿ ಪತ್ರಗಳನ್ನು ರಚಿಸಿಕೊಟ್ಟರು. ಅವುಗಳಲ್ಲಿ ಪ್ರಮುಖವಾದುದು ವಿನೆಟ್ ಬಾಂಬೆ, ವಿನೆಟ್ ನಾಗಪುರ, ವಿನೆಟ್ ಮೈಸೂರ್ ದಸರ, ಪ್ರಸಿದ್ಧ ಕನ್ನಡ ಲೇಖಕ ಕೆ.ವಿ.ಅಯ್ಯರ್ ಅವರ ಶಿಷ್ಯರಲ್ಲೊಬ್ಬರಾಗಿದ್ದ ಇವರು ಅಂಗಸಾಧನೆಯಿಂದ ಉತ್ತಮ ದೇಹ ಸಂಪತ್ತನ್ನು ಹೊಂದಿದ್ದರು. ಕಲೆ ಕುರಿತಂತೆ ಇವರು ಅನೇಕ ಲೇಖನಗಳನ್ನು ಇಂಗ್ಲಿಷ್‌ನಲ್ಲಿ ಬರೆದರು. ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಮೈಸೂರು ಜಗನ್ಮೋಹನ ಶಾಲೆಯ ಕಲಾ ಗ್ಯಾಲರಿಯನ್ನು ಸುವ್ಯವಸ್ಥೆಗೊಳಿಸಿದ ಜೇಮ್ಸ್‌ಕಸಿನ್ಸ್ ಅವರು ಇನಾಮತಿಯವರ ಎಲ್ಲ ಕಲಾಕೃತಿಗಳನ್ನು ಒಂದೇ ಕಡೆ ವೀಕ್ಷಿಸುವ ಅವಕಾಶ ಕಲ್ಪಿಸಿದರು (1948–49). ಇವರು ರಚಿಸಿದ ಅನೇಕ ಕಲಾ ಕೃತಿಗಳು ಹಲವಾರು ಚಿತ್ರ ಸಂಗ್ರಹಾಲಯಗಳಲ್ಲಿವೆ.

1950ರ ಬಳಿಕ ಆಧ್ಯಾತ್ಮದ ಕಡೆ ಇವರ ಗಮನ ಹರಿಯಿತು. ಕೆಲಕಾಲ ಕಾಶ್ಮೀರಕ್ಕೆ ತೆರಳಿ ಆಶ್ರಮದಲ್ಲಿದ್ದರು. ಸಮಕಾಲೀನ ಕಲಾವಿದರಿಂದ ಜೀನಿಯಸ್ ಎಂದು ಕರೆಸಿಕೊಂಡರು. ಬೆಂಗಳೂರಿನ ಜ್ಞಾನಜ್ಯೋತಿ ಕಲಾ ಸಂಘದವರು ಇವರನ್ನು ಸನ್ಮಾನಿಸಿ ಗೌರವಿಸಿದ್ದಾರೆ (1962). ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯೂ ಇವರಿಗೆ ದೊರೆತಿದೆ. ಇವರು 1986 ಆಗಸ್ಟ್ 5ರಂದು ನಿಧನರಾದರು. (ಆರ್.ಜಿ.ಆರ್.)

**ಇನೋನು, ಇಸ್ಮತ್:** 1884–1973. ಆಧುನಿಕ ತುರ್ಕಿದೇಶದ ಮೊದಲ ಪ್ರಧಾನಿ ಹಾಗೂ ಎರಡನೆಯ ರಾಷ್ಟ್ರಾಧ್ಯಕ್ಷ. ಇಜ್ಮಿರ್ (ಸ್ಮರ್ನ) ಪ್ರಾಂತ್ಯದ ತುರ್ಕಿವಂಶದಲ್ಲಿ ಜನಿಸಿದ. ಇಜ್ಮಿರ್‌ನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಅನಂತರ ಸೈನಿಕ ಶಿಕ್ಷಣಶಾಲೆಯಲ್ಲಿ ವಿದ್ಯಾರ್ಜನೆ ಮಾಡಿ ಪದವೀಧರನಾದ. 1902ರಲ್ಲಿ ಮದ್ದುಗುಂಡಿನ ಇಲಾಖೆಯಲ್ಲಿ ಜಮಾದಾರ್ ಆದ. 1908ರಲ್ಲಿ ತುರ್ಕಿಯ ರಾಜ್ಯಭಾರತದಲ್ಲಿ ಅಸಮಾಧಾನಗೊಂಡಿದ್ದ ಅನೇಕ ತುರ್ಕಿ ತರುಣರು ದಂಗೆಯೆದ್ದು ಹೊಸ ರಾಜಕೀಯ ವ್ಯವಸ್ಥೆ ಮಾಡಿದರು. ಅದಾದ ಮೇಲೆ ಅನೇಕ ಸಲ ಈತ ಸೈನಿಕ ಕಾರ್ಯಾರ್ಥಿಯಾಗಿ ಯೆಮೆನ್‌ಗೆ ಹೋದ. ತುರ್ಕಿ ನಡೆಸಿದ ಯುದ್ಧಗಳಲ್ಲೆಲ್ಲ ಕೆಮಾಲ್ ಪಾಷಾನೊಂದಿಗೆ ಭಾಗವಹಿಸುತ್ತಿದ್ದ. ಮೊದಲನೆಯ ಮಹಾಯುದ್ಧಕಾಲದಲ್ಲಿ ಸಿರಿಯದಲ್ಲಿ ಸೇವೆಯನ್ನು ಸಲ್ಲಿಸಿದ. ಆದರೆ 1918ರಲ್ಲಿ ತುರ್ಕಿ ಶತ್ರುಗಳ ಪಾಲಾಯಿತು. ಏಷ್ಯದ ತುರ್ಕಿಯಲ್ಲಿದ್ದ ಸ್ಮರ್ನ ಪ್ರಾಂತ್ಯವನ್ನು ಜಾತಿಶತ್ರುಗಳಾದ ಗ್ರೀಕರಿಗೆ ಕೊಟ್ಟರು. ಕೆಮಾಲ್ ಶತ್ರುಗಳನ್ನು ಸ್ವದೇಶದಿಂದ ಅಟ್ಟುವುದಕ್ಕಾಗಿ ದೇಶಪ್ರೇಮಿಗಳನ್ನೆಲ್ಲ ಒಟ್ಟುಗೂಡಿಸಿ ಏಷ್ಯದ ತುರ್ಕಿಯಲ್ಲಿರುವ ಅಂಕಾರ ಪಟ್ಟಣದಲ್ಲಿ ಹೊಸದಾದ ತುರ್ಕಿರಾಜ್ಯವೊಂದನ್ನು ಸ್ಥಾಪಿಸಿದ. ಅಂಕಾರದಲ್ಲಿ ಒಟ್ಟುಗೂಡಿದ ಪ್ರತಿನಿಧಿಗಳು ಕೆಮಾಲನನ್ನು ಅಧ್ಯಕ್ಷನನ್ನಾಗಿಯೂ ಇನೋನುವನ್ನು ಸೈನ್ಯಾಧಿಪತಿಯನ್ನಾಗಿಯೂ ಚುನಾಯಿಸಿದರು. ಇನೋನು ಕೆಮಾಲನೊಡನೆ ಗ್ರೀಕರ ಮೇಲೆ ಯುದ್ಧಮಾಡಿ ಅವರ ಸೈನ್ಯವನ್ನು ನಿರ್ಮೂಲಮಾಡಿ ತುರ್ಕಿಯನ್ನು ವಿಪತ್ತಿನಿಂದ ಪಾರುಮಾಡಿದ. ಇನೋನು ಗ್ರಾಮದಲ್ಲಿ ಗ್ರೀಕರನ್ನು ಎರಡುಬಾರಿ ಹಿಮ್ಮೆಟ್ಟಿಸಿ ಅಂದಿನಿಂದ ಇನೋನು ಇಸ್ಮತ್ ಎಂದು ಪ್ರಖ್ಯಾತನಾದ. ಅನಂತರ ವಿದೇಶಾಂಗ ಮಂತ್ರಿಯಾಗಿ, ಲಾಸಾನ್ ಎಂಬಲ್ಲಿ ಯೂರೋಪಿನ ರಾಜ್ಯಗಳೊಂದಿಗೆ ಹೊಸ ಕೌಲೊಂದನ್ನು ಮಾಡಿಕೊಂಡ. 1923ರಲ್ಲಿ ತುರ್ಕಿಯಲ್ಲಿ ಪ್ರಜಾಪ್ರಭುತ್ವ ಏರ್ಪಟ್ಟಿತು. ಇನೋನು ಪ್ರಧಾನಮಂತ್ರಿಯಾಗಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ರಾಜಕೀಯದಲ್ಲಿ ಮತಾಧಿಕಾರಿಗಳಿಗೆ ಯಾವ ಪ್ರಾಬಲ್ಯವೂ ಇರಕೂಡದೆಂಬ ತತ್ತ್ವಾನುಸಾರ ಕಲೀಫನನ್ನೇ ತೆಗೆದು ಹಾಕಿದ. ಧರ್ಮಬೋಧೆಯ ಪಾಠಶಾಲೆಗಳನ್ನು ಮುಚ್ಚಿದ. ದೇಶದ ರಕ್ಷಣೆಗಾಗಿ ಹೊಸಬಗೆಯ ಸೈನ್ಯವನ್ನು ಸೃಷ್ಟಿಮಾಡಿದ. ಕೆಮಾಲನ ಮರಣಾನಂತರ ಇನೋನು ತುರ್ಕಿಯ ರಾಷ್ಟ್ರಪತಿಯಾಗಿ ಚುನಾಯಿತನಾದ. 1943ರಲ್ಲಿ ಪಾರ್ಲಿಮೆಂಟ್ ಪುನಃ ಇನೋನುವನ್ನು ರಾಷ್ಟ್ರಪತಿಯಾಗಿ ಆರಿಸಿತು. 1950ರವರೆಗೂ ರಾಷ್ಟ್ರಪತಿಯಾಗಿದ್ದ. ಇನೋನು ದೇಶಕ್ಕಾಗಿ ಮಾಡಿದ ಸ್ವಾರ್ಥತ್ಯಾಗವೂ ಸೇನಾನಾಯಕತ್ವವೂ ತುರ್ಕಿಯನ್ನು ಅನೇಕ ವಿಪತ್ತುಗಳಿಂದ ಪಾರುಮಾಡಿದವು. (ಎಸ್.ಕೆ.ಕೆ.)

**ಇನೋಸಿಟಾಲ್:** ಶರೀರದಲ್ಲಿ ಉತ್ಪತ್ತಿಯಾಗಿ, ದೇಹದ ಬೆಳವಣಿಗೆಗೆ ಅತ್ಯಾವಶ್ಯಕವಾಗಿರುವ, ಸಕ್ಕರೆಗಳಿಗೆ ಸಂಬಂಧಿಸಿದ ಇದನ್ನು ಬಿ–ಕಾಂಪ್ಲೆಕ್ಸ್ ಗುಂಪಿಗೆ ಸೇರಿದ ಜೀವಾತು ಎಂದು ಪರಿಗಣಿಸಿದೆ. ಪ್ರಾಣಿಗಳಲ್ಲಿ ಕೂದಲು ಉದುರುವುದನ್ನು ತಡೆಹಿಡಿಯುವ ಮತ್ತು ಚರ್ಮರೋಗನಿವಾರಣೆ ಮಾಡುವ ಜೀವಾತು ಇದೇ. ಹೆಕ್ಸಹೈಡ್ರೋಸೈಕ್ಲೊಹೆಕ್ಸೇನಿನ ಒಂಬತ್ತು ಸ್ಟೀರಿಯೋ ಸಮಘಟಕಗಳಲ್ಲಿ (ಐಸೊಮರ್ಸ್) ಒಂದು ಮಾತ್ರ ಜೀವಿತ ಪ್ರಾಮುಖ್ಯ ಪಡೆದಿದೆ. ಅದನ್ನು ಇನೋಸಿಟಾಲ್ ಅಥವಾ ಮೈಯೊಇನೊಸಿಟಾಲ್ ಎನ್ನುತ್ತಾರೆ. ಶರೀರದ ಮಾಂಸಖಂಡಗಳಿಂದ ಉತ್ಪತ್ತಿಯಾಗುವ ಕೆಲವು ರಸಗಳಲ್ಲಿ ಇನೋಸಿಟಾಲ್ ಇದೆ. ಮಾನವನ ಮಿದುಳಿನಲ್ಲಿ ಮಿದುಳುಬಳ್ಳಿಯಲ್ಲಿ ಇದು ಲೈಪೊಸಿಟಾಲ್ ಎಂಬ ರಂಜಕವುಳ್ಳ ಪದಾರ್ಥರೂಪದಲ್ಲಿದೆ. ಕೆಂಪುರಕ್ತಕಣಗಳುಳ್ಳ ಕೋಶಗಳು ಮತ್ತು ಕಣ್ಣುಗಳಲ್ಲಿರುವ ಕೋಶಗಳಲ್ಲಿ ಇನೋಸಿಟಾಲ್ ಅಲ್ಲದೆ ಕೆಲವು ಹಣ್ಣುಗಳಲ್ಲೂ ಕಾಯಿಪಲ್ಯಗಳಲ್ಲೂ ಮತ್ತು ಕೆಲವು ಧಾನ್ಯಗಳಲ್ಲೂ ಇನೋಸಿಟಾಲ್ ಫೈಟಿಕ್

ಆಮ್ಲದ ಹೆಕ್ಸ್‌ಫಾಸ್ಫೆರಿಕ್ ಎಸ್ಟರಾಗಿ ದೊರೆಯುತ್ತದೆ. ನಮ್ಮ ಶರೀರದಲ್ಲಿ ಗ್ಲೈಕೋಜನ್ ಶೇಖರವಾಗುವಂತೆ ಷಾರ್ಕ್ ಗುಂಪಿನ ಮೀನುಗಳ ದೇಹದಲ್ಲಿ ಇನೋಸಿಟಾಲ್ ಶೇಖರವಾಗುತ್ತದೆ.

ಇನೋಸಿಟಾಲ್ ಹರಳಾಕೃತಿಯ, ನೀರಿನಲ್ಲಿ ಕರಗುವ ಮದ್ಯಸಾರಗುಂಪಿನ ವಸ್ತು. ಇದರಲ್ಲಿ ಹೆಚ್ಚು—OH ಭಾಗಗಳಿರುವುದರಿಂದ ಸಕ್ಕರೆಯಂತೆಯೇ ಇದು ಸಿಹಿ. ಶರ್ಕರಪಿಷ್ಟ ಪದಾರ್ಥಗಳ ಮತ್ತು ಬೆಂಜೀನ್ ಉಂಗುರವುಳ್ಳ ವಸ್ತುಗಳ ಲಕ್ಷಣಗಳೆರಡೂ ಇವೆ. ಇದರ ರಚನೆ ಚಿತ್ರದಲ್ಲಿ ತೋರಿಸಿದೆ:




1928ರಲ್ಲಿ ಇ.ವಿ. ಈಸ್ಟ್‌ಕಾಟ್ ಕೆಲವು ಯೀಸ್ಟುಗಳ ಬೆಳವಣಿಗೆಗೆ ಆವಶ್ಯಕವಾಗಿ ಇನೋಸಿಟಾಲ್ ಬೇಕಾದುದೆಂದು ಮೊದಲಬಾರಿಗೆ ತೋರಿಸಿದ. 1940ರಲ್ಲಿ ಇನೋಸಿಟಾಲ್ ಇಲಿಗಳಿಗೆ ಅತ್ಯಾವಶ್ಯಕವೆಂದು ವೂಲೀ ತೋರ್ಪಡಿಸಿದ. ಆದರೂ ಇದರ ಆವಶ್ಯಕತೆ ಯಾವಾಗಲೂ ಇರಲೇಬೇಕಾದುದು ಕಂಡುಬಂದಿಲ್ಲ. ಕಾರಣ ಇಲಿಗಳ ಬೆಳವಣಿಗೆ ಸಂಬಂಧವಾಗಿ ಒದಗಿಸುವ ಅನೇಕ ಶುದ್ಧ ಆಹಾರ ಪದಾರ್ಥಗಳಲ್ಲಿ ಇನೋಸಿಟಾಲ್ ಸೇರಿಸಿರುವುದಿಲ್ಲ. ಸೂಕ್ಷ್ಮಜೀವಿಗಳ ಸಹಾಯವಿಧಾನದಿಂದ ಇದರ ಪ್ರಮಾಣ ನಿಗದಿ ಮಾಡಿದ್ದಾರೆ. ಕಿಣ್ವಗಳ (ಎಂಜೈಮ್ಸ್) ಸನ್ನಿವೇಶದಲ್ಲಿ ಇದರ ಪಾತ್ರವೇನೆಂಬುದು ವಸ್ತುತಃ ತಿಳಿದಿಲ್ಲ. ಶರ್ಕರಪಿಷ್ಟಪದಾರ್ಥವಾಗಿ ಅದು ಜೀವವಸ್ತುಕರಣಕ್ಕೆ (ಮೆಟಬಾಲಿಸಂ) ಒಳಗಾಗಬಲ್ಲುದು. ಸೂಕ್ಷ್ಮಜೀವಾಣುಗಳ ಬೆಳವಣಿಗೆಗೆ ಇದು ಅತ್ಯಾವಶ್ಯಕ ವಸ್ತುವಾಗಿರುವುದರ ಜೊತೆಗೆ ಇಲಿಗಳಿಗೆ ಕೆಲವು ಸಂದರ್ಭಗಳಲ್ಲಿ ಬೇಕೇಬೇಕಾದ ವಸ್ತುವಾಗಿದೆ. ಇನೋಸಿಟಾಲ್ ಅಭಾವದಿಂದಾಗಿ ಇಲಿಗಳಲ್ಲಿ ಕುಬ್ಜ ಬೆಳವಣಿಗೆ ಮತ್ತು ಕೂದಲು ಉದುರುವುದು ಗೋಚರವಾಗುತ್ತದೆ. ಕೆಲವು ಪರೀಕ್ಷಾ ಸನ್ನಿವೇಶಗಳಲ್ಲಿ ಇನೋಸಿಟಾಲ್ ಪಿತ್ತಜನಕಾಂಗದಲ್ಲಿ ಮೇದಸ್ಸು ಶೇಖರಿಸುವುದನ್ನು ನಿವಾರಿಸುವುದರಿಂದ ಅದನ್ನು ಲಿಪೊಟ್ರೋಪಿಕ್ ಏಜೆಂಟ್ ಎಂದು ಪರಿಗಣಿಸಿದ್ದಾರೆ. ಸಮಸ್ಥಾನಿ (ಐಸೋಟೋಪಿಕ್) ಗ್ಲೂಕೋಸನ್ನುಪಯೋಗಿಸಿ ಕೊಂಡು ನಡೆಸಿದ ಪ್ರಯೋಗಗಳಲ್ಲಿ ಅದು ಇನೋಸಿಟಾಲ್ ಆಗಿ ಪ್ರಾಣಿಗಳಲ್ಲಿ ಪರಿವರ್ತನೆ ಹೊಂದಿರುವುದು ತಿಳಿದುಬಂದಿದೆ. ಕರುಳುಗಳಲ್ಲಿನ ಸೂಕ್ಷ್ಮಜೀವಿಗಳು ಇನೋಸಿಟಾಲನ್ನು ಸಾಕಷ್ಟು ಪ್ರಮಾಣದಲ್ಲಿ ಸಂಶ್ಲೇಷಿಸಿವೆ. ಮಾನವನ ಆಹಾರ ಪಟ್ಟಿಯಲ್ಲಿ ಇನೋಸಿಟಾಲ್ ಆವಶ್ಯಕವೆಂಬುದಕ್ಕೆ ಯಾವ ಸಾಕ್ಷಿಯೂ ಇಲ್ಲ. ಅತ್ಯಂತ ಬೇರ್ಪಡಿಸಿದ ಮಾನವ ಜೀವಕಣಕೂಟ ಅದರ ಸಂವರ್ಧಿಯಲ್ಲಿ (ಕಲ್ಚರ್) ತನ್ನ ಬೆಳವಣಿಗೆಗೆ ಈ ವಸ್ತುವನ್ನು ಅಪೇಕ್ಷಿಸುತ್ತದೆ ಎಂಬುದಾಗಿ 1956ರಲ್ಲಿ ಎಚ್. ಈಗಲ್ ತಿಳಿಸಿದ್ದಾನೆ. ಇನೋಸಿಟಾಲಿನ ಪೋಷಣ ಪಾತ್ರದ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆ ಆಗಬೇಕೆಂಬುದು ಇದರಿಂದ ವ್ಯಕ್ತವಾಗುತ್ತದೆ. (ಪಿ.ಜಿ.ಆರ್.)

**ಇನ್‌ಕ್ವಿಸಿಷನ್:** ರೋಮನ್ ಕೆಥೊಲಿಕ್ ಧರ್ಮಕ್ಕೆ ವಿರೋಧವಾದ ಪಾಷಂಡ ಮತಗಳನ್ನಡಗಿಸುವುದಕ್ಕಾಗಿ 13ನೆಯ ಶತಮಾನದಲ್ಲಿ ಯುರೋಪಿನಲ್ಲಿ ಸ್ಥಾಪಿತವಾದ ನ್ಯಾಯಾಲಯಗಳು, ಆಲಿಜನ್ಸಿಸ್ ಎಂಬ ಪಾಷಂಡ ಧರ್ಮೀಯರ ವಿಷಯದಲ್ಲಿ ತನಿಖೆ ನಡೆಸಲು ಒಬ್ಬ ಬಿಷಪ್‌ನನ್ನು ಪೋಪನೇ ಕಳುಹಿಸಿದಾಗ ಈ ಇನ್‌ಕ್ವಿಸಿಷನ್ ಪ್ರಾರಂಭವಾಯಿತೆನ್ನಬಹುದು. ಏಕೆಂದರೆ ಪಾಷಂಡಿಗಳನ್ನು ಪತ್ತೆ ಹಚ್ಚುವುದು, ದಂಡಿಸುವುದು ಮುಂತಾದ ಕೆಲಸವೆಲ್ಲ ಅಲ್ಲಿನ ತನಕ ಸ್ಥಳೀಯ ಬಿಷಪನಿಗೆ ಸೇರಿತ್ತು; ಇನ್ನು ಮುಂದೆ ಅದಕ್ಕಾಗಿ ವ್ಯಾಪಕವಾದ ವ್ಯವಸ್ಥೆ ಏರ್ಪಾಡಾಗಿ ಎಲ್ಲವೂ ಪೋಪನ ನೇತೃತ್ವದಲ್ಲಿ ನಡೆಯುವಂತಾಯಿತು. ಇದಕ್ಕಾಗಿ ನಿಯಮಿತರಾದ ವಿಚಾರಣಾಧಿಕಾರಿಗಳು ಒಂದು ಸ್ಥಳಕ್ಕೆ ಬಂದಕೂಡಲೆ ಸ್ಥಳೀಯ ಮುಖಂಡರನ್ನು ಕರೆಸಿ ಅವರೆದುರಿಗೆ ವಿಚಾರಣೆ ನಡೆಸುತ್ತಿದ್ದರು. ಆದರೆ ಎಲ್ಲವೂ ಗೋಪ್ಯವಾಗಿರುತ್ತಿತ್ತು. ಆಪಾದಿತರಿಗೆ ಮತ್ತು ಅವರ ಸಾಕ್ಷಿಗಳಿಗೆ ಯಾವ ವಿಧವಾದ ಚಿತ್ರಹಿಂಸೆಯನ್ನೂ ಕೊಡಕೂಡದೆಂದು ಪೋಪನ ನಿರ್ದೇಶವಿದ್ದರೂ ಅದು ನಡೆಯುತ್ತಲೇ ಇತ್ತು. ಆಪಾದಿತ ಅಪರಾಧಿಯೆಂದು ತೀರ್ಪುಕೊಟ್ಟು ದಂಡನೆ ವಿಧಿಸಿದ ಮೇಲೆ ಅದನ್ನು ಕಾರ್ಯಗತಗೊಳಿಸುವುದು ಅಲ್ಲಿನ ದೊರೆಯ ಕೆಲಸ. ಮೊದಲು ಅಪರಾಧಿಗಳನ್ನು ಸಜೀವ ಸುಡುವುದು ಅಪೂರ್ವವಾಗಿತ್ತು; ಕಾರಾಗೃಹವಾಸ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದು ಸಾಮಾನ್ಯ ದಂಡನೆಗಳಾಗಿದ್ದುವು. ಮುಟ್ಟುಗೋಲು ಹಾಕಿದ ಆಸ್ತಿ ಯಾರಿಗೆ ಸೇರಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾಯಿತಲ್ಲದೆ ಅನೇಕವೇಳೆ ಅಕ್ರಮ ಸಂಪಾದನೆ, ಮತವೃತ್ತಿಗಳ ವ್ಯಾಪಾರ ಮುಂತಾದ ಅಕ್ರಮ ವ್ಯವಹಾರಗಳಿಗೆ ಎಡೆಕೊಟ್ಟಿತು. ವಾಸ್ತವವಾಗಿ ಯುರೋಪಿನ ಮಧ್ಯಯುಗದಲ್ಲಿ (ಸು. 14ನೆಯ ಶತಮಾನದವರೆಗೆ) ಪೋಪರಾಗಲಿ ಇತರ ಧರ್ಮಾಧಿಕಾರಿಗಳಾಗಲಿ ಪಾಷಂಡ ಧರ್ಮೀಯರ ವಿಷಯದಲ್ಲಿ ಅಷ್ಟೊಂದು ಉಗ್ರ ಮನೋಭಾವವನ್ನು ಹೊಂದಿರಲಿಲ್ಲ. ಅವರ ದಂಡನೆ, ದಮನ ನಡೆಯುತ್ತಿದ್ದುದು ದೊರೆಗಳಿಂದ ಮತ್ತು ಲೌಕಿಕಾಧಿಕಾರಿಗಳಿಂದ. ಇವನ ಕೈಗೆ ಸಿಕ್ಕ ಆಪಾದಿತರು ಅಪರಾಧಿಗಳೆಂದೇ ತೀರ್ಮಾನವಾಗುತ್ತಿತ್ತು; ದಂಡನೆಯೂ ಹಿಂಸಾತ್ಮಕ, ಅನೇಕ ವೇಳೆ ಉಗ್ರ. ಆ ಕಾಲದಲ್ಲಿ ಇನ್‌ಕ್ವಿಸಿಷನ್ ಹೆಚ್ಚಾಗಿ ಕೆಲಸ ಮಾಡಿದ್ದು ದಕ್ಷಿಣ ಫ್ರಾನ್ಸ್, ಉತ್ತರ ಇಟಲಿ, ಜರ್ಮನಿ ಮತ್ತು ಪೋಪರ ನೇರ ಆಡಳಿತಕ್ಕೆ ಸೇರಿದ ರಾಜ್ಯಗಳಲ್ಲಿ. ಹೆಚ್ಚುಕಡಿಮೆ ಪೋಪರ ನೇರ ನಿಯಂತ್ರಣಕ್ಕೊಳಪಟ್ಟ ಇಂಥ ಇನ್‌ಕ್ವಿಸಿಷನ್ ಅಲ್ಲದೆ ಸ್ಪೇನ್ ದೇಶದಲ್ಲಿ ಇನ್ನೊಂದು ರೀತಿಯ ಇನ್‌ಕ್ವಿಸಿಷನ್ 15ನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿಕೊಂಡಿತು. ಸ್ಪೇನಿನ ದೊರೆ ಫರ್ಡಿನೆಂಡ್ ಮತ್ತು ರಾಣಿ ಇಸಬೆಲ್ ಕೆಥೊಲಿಕ್ ಸಮ್ರಾಟರೆಂದು ಪ್ರಸಿದ್ಧರಾಗಿದ್ದಾರೆ. ಅವರು 1478ರಲ್ಲಿ ಕೆಥೊಲಿಕ್ ಮತವಿರೋಧಿಗಳಿಗಾಗಿ ಒಂದು ಇನ್‌ಕ್ವಿಸಿಷನ್ ಸ್ಥಾಪಿಸಿದರು. ಇದರ ಮೇಲೆ ಪೋಪರ ಹತೋಟಿ ಅತ್ಯಲ್ಪ. ಇದರ ನೇತಾರ ತಾಮಸ್ ದ ಟಾರ್ಕಮಾಧ. ಈ ಸ್ವತಂತ್ರ ಸಂಸ್ಥೆಗೆ ಪೋಪರ ವಿರೋಧ ಕೊನೆಯ ವರೆಗೂ ಇದ್ದೇ ಇತ್ತು. ಅದರ ವ್ಯವಸ್ಥೆ, ಆಡಳಿತ, ತುಂಬಾ ಬಿಗಿಯಾಗಿತ್ತು; ಮರಣದಂಡನೆ ಹೆಚ್ಚಾಗಿತ್ತು; ಅಪರಾಧಿಗಳ ವಿಷಯದಲ್ಲಿ ಅದು ಅತ್ಯಂತ ಕ್ರೂರ, ನಿಷ್ಠುರವಾಗಿತ್ತು. ಟಾರ್ಕಮಾಧನೊಬ್ಬನೇ ಕನಿಷ್ಠ ಪಕ್ಷ ಎರಡು ಸಾವಿರ ಪಾಷಂಡಿಗಳನ್ನು ಮರಣದಂಡನೆಗೆ (ಸಜೀವದಹನ) ಗುರಿಮಾಡಿದನೆಂದು ಹೇಳುತ್ತಾರೆ. ಈ ಇನ್‌ಕ್ವಿಸಿಷನ್ ಸ್ಥಾಪಿಸಿದುದರ ಮುಖ್ಯ ಉದ್ದೇಶ, ತೋರಿಕೆಗೆ ಮಾತ್ರ ರೋಮನ್ ಕೆಥೊಲಿಕರಾಗಿ, ಮತಾಂತರಹೊಂದಿದ ಯೆಹೂದ್ಯರನ್ನು ಮತ್ತು ಮುಸ್ಲಿಮರನ್ನು ಪತ್ತೆ ಹಚ್ಚಿ ಅವರನ್ನು ಶಿಕ್ಷೆಗೊಳಪಡಿಸುವುದು. ಆದರೆ ಸಂದೇಹ ಬಂದವರೆಲ್ಲರನ್ನೂ ವಿಚಾರಣೆಗೊಳಪಡಿಸಿ ಮರಣದಂಡನೆಗೊಳಪಡಿಸುತ್ತಿದ್ದರು. ಸಾವಿರಾರು ಮಂದಿ ಕ್ರೈಸ್ತರೂ ಹೀಗೆ ಸಂಶಯಕ್ಕೊಳಗಾಗಿ ದಂಡಿಸಲ್ಪಟ್ಟರು. ಸಂತ ಇಗ್ನೇಷಿಯಸ್, ಆವಿಲದ ಸಂತ ತೆರೀಸಾ ಮುಂತಾದವರೇ ವಿಚಾರಣೆಯನ್ನೆದುರಿಸಬೇಕಾಯಿತು. ಅನೇಕ ಸಂದರ್ಭಗಳಲ್ಲಿ ಸುಲಭವಾಗಿ ದೊರೆತ ಪದವಿಯ ದುರುಪಯೋಗ ನಡೆಯಿತು. ಈ ಇನ್‌ಕ್ವಿಸಿಷನ್ ಪೋರ್ಚುಗೀಸರೊಂದಿಗೆ ಭಾರತಕ್ಕೂ ಬಂದು ಕೆಲಕಾಲ ನಡೆಯಿತು. ಸ್ಪೇನಿನಲ್ಲಿ ಇದು 1820ರಲ್ಲಿ ರದ್ದಾಯಿತು.

ಮುಂದೆ 16ನೆಯ ಶತಮಾನದಲ್ಲಿ, ಶೀಘ್ರವಾಗಿ ಬೆಳೆಯತೊಡಗಿದ ಪ್ರಾಟೆಸ್ಟಂಟ್ ಧರ್ಮವನ್ನಡಗಿಸುವುದಕ್ಕಾಗಿ ರೋಮನ್ ಕೆಥೊಲಿಕ್ ಪ್ರತಿಸುಧಾರಣಾ (ಕೌಂಟರ್ ರಿಫಾರ್ಮೇಷನ್) ಚಳವಳಿ ಪೋಪರ ನೇತೃತ್ವದಲ್ಲೇ ಪ್ರಾರಂಭವಾದಾಗ ಅದರ ಅಂಗವಾಗಿ ಇನ್‌ಕ್ವಿಸಿಷನ್ ಕೂಡ ಪ್ರಯೋಗಕ್ಕೆ ಬಂತು. ಇಂಗ್ಲೆಂಡಿನ ಕೆಥೊಲಿಕ್ ರಾಣಿ ಮೇರಿ ಟ್ಯೂಡರ್ (1553–58) ಪ್ರಾಟೆಸ್ಟಂಟರನ್ನಡಗಿಸುವುದಕ್ಕೆ ಅದನ್ನು ಉಪಯೋಗಿಸಿದಳು. ಅವಳ ತರುವಾಯ ಸಿಂಹಾಸನಕ್ಕೆ ಬಂದ ಪ್ರಾಟೆಸ್ಟಂಟ್ ಎಲಿಜಬೆತ್ ರಾಣಿ ರೋಮನ್ ಕೆಥೊಲಿಕರ ಮೇಲೆಯೇ ಅದನ್ನು ಪ್ರಯೋಗಿಸಿದಳು. ಜರ್ಮನಿಯಲ್ಲಿ ಅದನ್ನು ಮಾಟಗಾತಿಯರೆಂದು ಆಪಾದಿಸಲ್ಪಟ್ಟವರ ಮೇಲೆ ಪ್ರಯೋಗಿಸಲಾಯಿತು. ಈ ರೋಮನ್ ಇನ್‌ಕ್ವಿಸಿಷನ್ ವ್ಯವಸ್ಥೆ ಪೋಪನ ಆಡಳಿತ ವ್ಯವಸ್ಥೆಯ ಒಂದು ಅಂಗವಾಗಿ ಇಟಲಿಯಲ್ಲಿ ಹೆಚ್ಚಾಗಿ ಪ್ರಯೋಗದಲ್ಲಿತ್ತು. ಆದರೂ ಮತವಿರೋಧಿಗಳನ್ನಡಗಿಸುವುದಕ್ಕಾಗಿ ನಿರ್ಮಿತವಾಗಿದ್ದ ಈ ವ್ಯವಸ್ಥೆ, ಆಧುನಿಕ ಯುಗ ಮುಂದುವರಿದು ಉದಾರಾಭಿಪ್ರಾಯಗಳು ಬೆಳೆದಂತೆ, ಜನವಿರೋಧವನ್ನೆದುರಿಸಬೇಕಾಗಿ ಬಂದು ಕ್ರಮೇಣ ಅಳಿಸಿಹೋಯಿತು. (ಡಿ.ಎ.ಎ.)

**ಇನ್‌ಫ್ಲೂಯೆಂಜ: ನೋಡಿ– ಉರಿಶೀತ**

**ಇನ್ವರ್ಟ್ ಸಕ್ಕರೆ:** ಬಳಕೆ ಸಕ್ಕರೆಯನ್ನು ಆಮ್ಲದಿಂದ ಅಥವಾ ಇನ್‌ವರ್ಟೇಸ್ (ನೋಡಿ) ಕಿಣ್ವದ ಸಹಾಯದಿಂದ ಜಲವಿಚ್ಛೇದನೆಗೊಳಿಸಿದಾಗ ಗ್ಲೂಕೋಸ್ ಮತ್ತು ಫ್ರಕ್ಟೋಸ್ ಸಕ್ಕರೆಗಳನ್ನು 1: 1 ಪ್ರಮಾಣದಲ್ಲಿ ಒಳಗೊಂಡ ಮಿಶ್ರಣ ಉತ್ಪತ್ತಿಯಾಗುತ್ತದೆ. ಔದ್ಯೋಗಿಕವಾಗಿ 96% ಪ್ರಮಾಣ ಸಕ್ಕರೆಯ ದ್ರಾವಣವನ್ನು ವಿಚ್ಛೇದಿಸಿ ಇನ್ವರ್ಟ್ ಸಕ್ಕರೆಯನ್ನು ತಯಾರಿಸುತ್ತಾರೆ. ಫಲಿತವಸ್ತು ಮೂಲವಸ್ತುವಿನಲ್ಲಿ ಹಾಯುವ ಧ್ರುವೀಕೃತ ಬೆಳಕಿನ ಸಮತಲದ ದಿಕ್ಕನ್ನು ಬಲದಿಂದ ಎಡಕ್ಕೆ ತಿರುಗಿಸಿ, ಚಿಹ್ನೆಯ ಸಂಕೇತವನ್ನು [(+) → (–)] ಧನದಿಂದ ಋಣಕ್ಕೆ ಬದಲಾಯಿಸುವುದರಿಂದ (ತಲೆಕೆಳಗು ಮಾಡುವುದರಿಂದ) ಇದಕ್ಕೆ ಇನ್ವರ್ಟ್ ಸಕ್ಕರೆ ಎಂದು ಹೆಸರಿಡಲಾಗಿದೆ. ನೀರನ್ನು ಅತಿಶೀಘ್ರವಾಗಿ ಹೀರುತ್ತದೆ. ಆದ್ದರಿಂದ ಈ ಮಿಶ್ರಣವನ್ನು ಸಾಮಾನ್ಯವಾಗಿ ಪಾಕದ (ಸಿರಪ್) ರೂಪದಲ್ಲಿ ಉಪಯೋಗಿಸುತ್ತಾರೆ. ಸಕ್ಕರೆಗಿಂತ ಸಿಹಿ ಹೆಚ್ಚು. ಆಹಾರ ಮತ್ತು ಔಷಧ ಉದ್ಯಮಗಳಲ್ಲಿಯೂ ಮದ್ಯಸಾರದ ತಯಾರಿಕೆಯಲ್ಲೂ ಉಪಯೋಗವಾಗುತ್ತದೆ. (ಎಚ್.ಎಸ್.ಎಸ್.)

**ಇನ್ವರ್ಟೇಸ್:** ಜೀವಿಗಳ ದೇಹದಲ್ಲಿ ಸಕ್ಕರೆಯ (ಬಳಸುವ ಸಕ್ಕರೆಯ ಹೆಸರು ಸುಕ್ರೋಸ್) ಜಲವಿಚ್ಛೇದನ ಕ್ರಿಯೆಯನ್ನು (ಹೈಡ್ರಾಲಿಸಿಸ್) ವರ್ಧಿಸುವ ಕಿಣ್ವ (ಎಂಜೈಮ್). ಗ್ಲೂಕೋಸ್ ಮತ್ತು ಫ್ರಕ್ಟೋಸ್ ಸಕ್ಕರೆಗಳ ಸಂಯೋಜನೆಯಿಂದ ರಚನೆಗೊಳ್ಳುವ ದ್ವಿಶರ್ಕರವಾದ ಸಕ್ಕರೆ ವಿಭಜನೆಹೊಂದಿ ಗ್ಲೂಕೋಸ್ ಮತ್ತು ಫ್ರಕ್ಟೋಸ್ (ಲೆವ್ಯುಲೋಸ್) ಸಕ್ಕರೆಯ ಅಣುಗಳನ್ನು ಬಿಡುಗಡೆ ಮಾಡುತ್ತದೆ.

$C_{12}H_{22}O_{11} + H_2O$ ಇನ್ವರ್ಟೇಸ್ $C_6H_{12}O_6 + C_6H_{12}O_6$

ಸಕ್ಕರೆ ನೀರು → ಗ್ಲೂಕೋಸ್ ಫ್ರಕ್ಟೋಸ್

ಈ ಕಿಣ್ವ ಯೀಸ್ಟ್, ಕೀಟ, ಸಸ್ಯ ಮತ್ತು ಸಸ್ತನಿಗಳಲ್ಲಿ ಉತ್ಪತ್ತಿಯಾಗುತ್ತದೆ. ಮನುಷ್ಯನಲ್ಲಿ ಇದು ಚಿಕ್ಕ ಕರುಳಿನಲ್ಲಿದೆ. ಸಕ್ಕರೆಯ ವಿಭಜನೆ ಎರಡು ಬಂಧಗಳೆಡೆಯಲ್ಲಿ ಜರುಗಬಹುದು. ಭೇದನೆ ಹೊಂದುವ ಬಂಧಗಳ ಆಧಾರದ ಮೇಲೆ ಇನ್ವರ್ಟೇಸ್ ಕಿಣ್ವಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದನೆಯ ಬಂಧದ ಭೇದನೆಯನ್ನು ವರ್ಧಿಸುವ

ಕಿಣ್ವಗಳನ್ನು $\beta$ ಫ್ರಕ್ಟೋಫ್ಯೂರನೋ ಸೈಡೇಸ್ I ಎಂಬುದಾಗಿಯೂ ಎರಡನೆಯ ಬಂಧವನ್ನು ಭೇದಿಸುವ ಕಿಣ್ವಗಳನ್ನು ಗ್ಲೂಕೋಸಿಡೊ ಇನ್ವರ್ಟೇಸ್ II ಗಳೆಂದೂ ಕರೆಯಲಾಗಿದೆ. ಈ ಕಿಣ್ವಗಳು ಸಕ್ಕರೆಯನ್ನು ಭೇದಿಸುವ ಕ್ರಿಯೆಯನ್ನು ಮಾತ್ರವಲ್ಲದೆ, ಗ್ಲೂಕೋಸ್ ಅಥವಾ ಫ್ರಕ್ಟೋಸ್ ಅಂಶಗಳನ್ನು ಇತರ ಪರಿಗ್ರಾಹ (ಅಕ್ಸೆಪ್ಟರ್) ಅಣುಗಳಿಗೆ ವರ್ಗಾಯಿಸುವ




ಕ್ರಿಯೆಯನ್ನು ವರ್ಧಿಸುತ್ತವೆ. ಒಂದನೆಯ ಗುಂಪಿಗೆ ಸೇರಿದ ಕಿಣ್ವಗಳು ಫ್ರಕ್ಟೋಸ್ ಅಂಶವನ್ನೂ IIನೆಯ ಗುಂಪಿನ ಕಿಣ್ವಗಳು ಗ್ಲೂಕೋಸ್ ಅಂಶವನ್ನೂ ವರ್ಗಾಯಿಸುತ್ತವೆ. ಸಕ್ಕರೆ, ಅರಾಬಿನೋಸ್ ಸಕ್ಕರೆ, ಮೀಥೈಲ್ ಆಲ್ಕೊಹಾಲ್, ಮದ್ಯಸಾರದ ಅಣುಗಳು ಪರಿಗ್ರಾಹಿಗಳಂತೆ ವರ್ತಿಸುತ್ತವೆ. ಸಕ್ಕರೆ ಪರಿಗ್ರಾಹಿಯಾದಾಗ ಫ್ರಕ್ಟೋಸ್ ಅಂಶಗಳ ವರ್ಗಾವಣೆಯಿಂದ, ಕೆಸ್ಟೋಸ್, ಐಸೊಕೆಸ್ಟೋಸ್ ಮತ್ತು ನಿಯೋಕೆಸ್ಟೋಸ್ ಎಂಬ ತ್ರಿಶರ್ಕರಗಳೂ ಇತರ ಬಹುಶರ್ಕರಗಳೂ ಉತ್ಪತ್ತಿಯಾಗುತ್ತವೆ.

ಇನ್ವರ್ಟೇಸ್ ಕಿಣ್ವದ ಚಟುವಟಿಕೆಯನ್ನು ಸಾಮಾನ್ಯವಾಗಿ ಎರಡು ವಿಧಾನಗಳಿಂದ ಅಳೆಯುತ್ತಾರೆ. ಸಕ್ಕರೆ ಅಪಕರ್ಷಕ ವಸ್ತುವಲ್ಲ. ಕಿಣ್ವದೊಂದಿಗೆ ಹುದುಗೇರಿಸಿದಾಗ ಅಪಕರ್ಷಕ ಗುಣವುಳ್ಳ ಗ್ಲೂಕೋಸ್ ಮತ್ತು ಫ್ರಕ್ಟೋಸ್ ಸಕ್ಕರೆಗಳು ಉತ್ಪತ್ತಿಯಾಗುವುದರಿಂದ ಅಪಕರ್ಷಕ ಶಕ್ತಿಯನ್ನು ಅಳೆದು ಚಟುವಟಿಕೆಯ ಮಟ್ಟವನ್ನು ಗೊತ್ತು ಮಾಡಬಹುದು. ಹುದುಗೇರಿಸಿಟ್ಟ ಸಕ್ಕರೆಯ ದ್ರಾವಣದ ಮೂಲಕ ಧ್ರುವೀಕೃತ ಬೆಳಕಿನ ಕಿರಣವನ್ನು ಹಾಯಿಸಿ ಕಿರಣಸಮತಲದ ದಿಕ್ಕಿನಲ್ಲಿ ಉಂಟಾಗುವ ವ್ಯತ್ಯಾಸವನ್ನು ಪೋಲಾರಿಮೀಟರಿನಲ್ಲಿ ಅಳೆಯುವುದು ಇನ್ನೊಂದು ವಿಧಾನ. ಸಕ್ಕರೆ ಧ್ರುವೀಕೃತ ಕಿರಣದ ಸಮತಲವನ್ನು (ಪರೀಕ್ಷಕನ) ಬಲ ಪಾರ್ಶ್ವಕ್ಕೂ (ಧನಚಿಹ್ನೆ) ಫ್ರಕ್ಟೋಸ್ ಎಡಪಾರ್ಶ್ವಕ್ಕೂ (ಋಣಚಿಹ್ನೆ) ತಿರುಗಿಸುತ್ತದೆ. ಸಕ್ಕರೆಯ ವಿಭಜನೆಯ ಪರಿಣಾಮವಾಗಿ ಧ್ರುವೀಕೃತ ಕಿರಣ ಸಮತಲದ ದಿಕ್ಕು ಎಡಕ್ಕೆ ತಿರುಗುತ್ತದೆ. ಸಂಪ್ರದಾಯದ ಪ್ರಕಾರ ಧನಚಿಹ್ನೆ ಋಣಚಿಹ್ನೆಗೆ ಪರಿವರ್ತನೆಯಾದಾಗ ಆ ಕ್ರಿಯೆಗೆ ಪ್ರತಿಲೋಮಕ್ರಿಯೆ (ಇನ್ವರ್ಷನ್) ಎನ್ನುತ್ತಾರೆ. ಬದಲಾವಣೆಯ ಪ್ರಮಾಣವನ್ನು ಪೋಲಾರಿಮೀಟರಿನಲ್ಲಿ ಕೋನಮಾಪಕ ವಿಧಾನದಿಂದ ಅಳೆಯಬಹುದು. ದೇಹದಲ್ಲಿ ಸಕ್ಕರೆಯ ವಿಭಜನೆಗೆ ಇನ್ವರ್ಟೇಸ್ ನೆರವಾಗುತ್ತದೆ; ಔದ್ಯೋಗಿಕವಾಗಿ ಸಕ್ಕರೆಪಾಕ (ಸಿರಪ್) ಮತ್ತು ಕ್ಯಾಂಡಿಗಳ ತಯಾರಿಕೆಗೆ ಉಪಯೋಗವಾಗುತ್ತದೆ. (ಎಚ್.ಎಸ್.ಎಸ್.)

**ಇನ್ಶಾ ಅಲ್ಲಾಖಾನ್:** 1756–1818. ಆಧುನಿಕ ಹಿಂದೀ ಸಾಹಿತ್ಯದ ಆದ್ಯ ಆಚಾರ್ಯ ಪುರುಷರಲ್ಲಿ ಒಬ್ಬ. ಖಡೀಬೋಲಿ ಗದ್ಯಸಾಹಿತ್ಯದ ಸುಂದರ ಮಾದರಿಯನ್ನು ಪ್ರಥಮವಾಗಿ ರೂಪಿಸಿದಾತ. ಉರ್ದು ಕವಿಯಾಗಿದ್ದರೂ ಆಧುನಿಕ ಹಿಂದೀ ಸಾಹಿತ್ಯದ ಮೊದಲ ಕಥೆಯನ್ನು ಬರೆದ ಕೀರ್ತಿವಂತ. ಸಂಸ್ಕೃತ, ಬ್ರಜ ಹಾಗೂ ಉರ್ದುಗಳ ಹಾವಳಿಗೆ ಸಿಲುಕಿದ್ದ ಹಿಂದಿಯನ್ನು ಈತ ಮುಕ್ತಗೊಳಿಸಿದ. ತನ್ನ ವಿಖ್ಯಾತ ರಾನೀ ಕೇತಕಿ ಕೀ ಕಹಾನೀ (ರಾಣಿ ಕೇತಕಿಯ ಕಥೆ) ಅಥವಾ ಉದಯಭಾನಚರಿತ ಎಂಬ ಪುಸ್ತಕದಲ್ಲಿ ಕಥೆಯ ಉದ್ದೇಶವನ್ನು ಹೀಗೆ ಹೇಳಿಕೊಂಡಿದ್ದಾನೆ: ಹಿಂದೀ ಭಾಷೆಯಲ್ಲಿರುವುದನ್ನು ಬಿಡಬಾರದು. ಅನ್ಯಭಾಷೆಗಳದ್ದನ್ನು ತೊಡಲೂಬಾರದು (ಹಿಂದವೀ ಛೂಟ್ ಔರ್ ಕಿಸೀ ಬೋಲೀಕಾ ಪುಟ್ ನ ಹೋ). ಅನ್ಯಭಾಷೆಯ ಜನ ಪ್ರಾದೇಶಿಕ ಭಾಷೆಗೆ ತೋರಬೇಕಾದ ಗೌರವ, ನಿಷ್ಠೆಗಳ ಮನೋಹರವಾದ ಮಾದರಿ ಇದಾಗಿದೆ.

ಹಿಂದೀ ಭಾಷೆಯ ಮೊದಲ ಕಥೆಯೆಂದು ಐತಿಹಾಸಿಕ ಮಹತ್ತ್ವವುಳ್ಳ ರಾಣಿ ಕೇತಕಿಯ ಕಥೆ 1798–1803ರ ಅವಧಿಯಲ್ಲಿ ರಚಿತವಾಗಿರಬೇಕೆಂದು ವಿದ್ವಾಂಸರ ಅಭಿಪ್ರಾಯ.

ಇನ್ಶಾ ಮೊದಲು 2ನೆಯ ಶಾಹ ಅಲಮ್‌ನ ದರ್ಬಾರಿನಲ್ಲಿ ಆಶ್ರಯ ಪಡೆದಿದ್ದ. ಅಲ್ಲಿ ಇವನ ಖ್ಯಾತಿಯೂ ಬೆಳೆದಿತ್ತು. ಗುಲಾಮ ಕಾದಿರ್ ಎಂಬ ವಿದ್ರೋಹಿ ಬಾದಶಹನ ಕಣ್ಣು ಕಿತ್ತು, ಅವನ ಭಂಡಾರವನ್ನು ಸುಲಿದೊಯ್ದ ಅನಂತರ, ಉಪಜೀವಿಕೆಗಾಗಿ ಇನ್ಶಾ ಲಖನೌ ನವಾಬನಾದ ಸಾದತ್ ಆಲಿಖಾನನನ್ನು ಆಶ್ರಯಿಸಿದ. ಅಂದಿನ ಕಾಲದ ಜನತೆಯ ಭಾಷೆಯಲ್ಲಿ ಮನೋರಂಜಕವಾದ ಕಥೆಯನ್ನು ಬರೆದು ಹಿಂದೀ ಭಾಷೆಯ ಅಭಿವೃದ್ಧಿಗೆ, ಭದ್ರತೆಗೆ ಕಾರಣರಾದವರಲ್ಲಿ ಒಬ್ಬನೆಂದು ಇವನ ಖ್ಯಾತಿ. ಆಧುನಿಕ ಹಿಂದೀ ಸಾಹಿತ್ಯದ ಇತಿಹಾಸದಲ್ಲಿ ಈತನ ಹೆಸರು ಅಮರವಾದದ್ದು ಎನ್ನುವುದರಲ್ಲಿ ಸಂದೇಹವಿಲ್ಲ.

ಹಿಂದೀ ಗದ್ಯದ ವಿಕಾಸಮಾಲೆಗೆ ಸುಂದರವಾದ, ಸುಗಂಧಪೂರ್ಣವಾದ, ವರ್ಣರಂಜಿತವಾದ ಪುಷ್ಪವೊಂದನ್ನು ಇನ್ಶಾ ನೀಡಿ ಕೃತಾರ್ಥನಾದ ಎಂದು ಪ್ರೊ. ಮೋಹನ ಲಾಲ ಜಿಜ್ಞಾಸು ತಮ್ಮ ಹಿಂದೀ ಗದ್ಯ ವಿಕಾಸ್ ಎಂಬ ಗ್ರಂಥದಲ್ಲಿ ಬಣ್ಣಿಸಿದ್ದಾರೆ. ಅಂದಿನ ಉರ್ದು ಮತ್ತು ಪಾರಸಿ ಕವಿಗಳಲ್ಲಿ ಇನ್ಶಾ ಬಹು ಪ್ರಸಿದ್ಧ ವ್ಯಕ್ತಿಯಾಗಿದ್ದ. ಈತ ಅನೇಕ ಶೇರ್‌ಗಳನ್ನು (ಗೀತೆ) ರಚಿಸಿ ಉರ್ದು ಶಾಯರಿಗೆ ಒಂದು ಹೊಸ ಕಳೆಯನ್ನೇ ತಂದ. ಉರ್ದು ಮತ್ತು ಪಾರಸಿ ಭಾಷೆಗಳಲ್ಲಿ ಈತ ಅಮೂಲ್ಯವಾದ ಕೃತಿಗಳನ್ನು ರಚಿಸಿದ್ದಾನೆ. ಪಾರಸಿ ಭಾಷಾವಿಜ್ಞಾನ, ಉರ್ದು ವ್ಯಾಕರಣ, ಅಲಂಕಾರ, ಕಾವ್ಯಶಾಸ್ತ್ರ ಮುಂತಾದ ವಿಷಯಗಳ ಮೇಲೆ ಅತ್ಯಮೂಲ್ಯವಾದ ಗ್ರಂಥಗಳನ್ನು ರಚಿಸಿ ಮುಂದಿನ ಪೀಳಿಗೆಗೆ ಒದಗಿಸಿದ್ದಾನೆ. ದರಿಯಾಯೆ ಲತಾಫತ್, ಲತಾಯಫುಸ್ಸ ಆದತ್, ಕುಲಯಾತೆ ಇನ್ಶಾ– ಇವು ಅವನ ಇತರ ಪ್ರಸಿದ್ಧ ಗ್ರಂಥಗಳು. (ಆರ್.ಜಿ.ಕೆ.)

**ಇನ್ಸ್ ಆಫ್ ಕೋರ್ಟ್:** ಇಂಗ್ಲೆಂಡಿನಲ್ಲಿ ವಕೀಲ ವೃತ್ತಿ ಅವಲಂಬಿಸಲು ಅನುಮತಿ ಕೊಡುವ ಸರ್ವಾಧಿಕಾರವುಳ್ಳ ನಾಲ್ಕು ನ್ಯಾಯವಾದಿ ಸಂಸ್ಥೆಗಳು. ಲಿಂಕನ್ಸ್ ಇನ್, ಗ್ರೇಸ್ ಇನ್, ದಿ ಇನ್ನರ್ ಟೆಂಪ್ಲ್, ದಿ ಮಿಡ್ಲ್ ಟೆಂಪ್ಲ್ ಎಂಬ ಈ ನಾಲ್ಕು ಸಂಸ್ಥೆಗಳೂ ಲಂಡನ್ನಿನಲ್ಲಿವೆ. ನ್ಯಾಯಶಾಸ್ತ್ರ ವಿಶ್ವವಿದ್ಯಾನಿಲಯದ ಕಾಲೇಜುಗಳೆಂದು ಇವನ್ನು ಕರೆಯುವುದು ರೂಢಿ. ಇವುಗಳ ಸಾಮಾನ್ಯ ರಚನೆ, ಆಡಳಿತ ವ್ಯವಸ್ಥೆ ಹಾಗೂ ಕಾರ್ಯಭಾರದ ದೃಷ್ಟಿಯಿಂದ ಇವನ್ನು ಹೀಗೆನ್ನುವುದು ಉಚಿತವೇ ಆಗಿದೆ. ಕೋಕ್, ಸೆಲ್ಡನ್ ಮುಂತಾದವರು ಆಕ್ಸ್‌ಫರ್ಡ್ ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಂತೆಯೇ ಇವನ್ನೂ ಪರಿಗಣಿಸಿದ್ದಾರೆ. ವಿಶ್ವವಿದ್ಯಾನಿಲಯಗಳಂತೆಯೇ ಇವುಗಳೂ ಪದವಿಪ್ರದಾನಕ್ಕಾಗಿ ವಿದ್ಯಾರ್ಥಿಗಳನ್ನು ತಯಾರಿಸುತ್ತವೆ; ಅವರ ಶಿಸ್ತಿನ ಹೊಣೆ ಹೊರುತ್ತವೆ. ಅಭ್ಯರ್ಥಿಗಳು ನ್ಯಾಯವಾದಿಗಳಾಗಿ ವೃತ್ತಿಯಲ್ಲಿ ತೊಡಗಬಹುದೆಂದು ಅವರಿಗೆ ವಿಧಿವತ್ತಾಗಿ ದೀಕ್ಷೆ ನೀಡುವ ವಿಶಿಷ್ಟಾಧಿಕಾರವುಳ್ಳ ಬೆಂಚುಗಳೆಂಬ ಆಡಳಿತ ಮಂಡಲಿಗಳನ್ನೂ ಇವು ಹೊಂದಿರುತ್ತವೆ.

ಈ ಇನ್‌ಗಳು ಸ್ವಯಂಪ್ರವೃತ್ತ (ವಾಲಂಟರಿ) ಸಂಘಗಳು. ಇವುಗಳಿಗೆ ಸನ್ನದುಗಳಿಲ್ಲ. ವಿಶಿಷ್ಟವಾದ ಶಾಸನದಿಂದ ಇವನ್ನು ನಿರ್ಮಿಸಿಲ್ಲ. ಇವಕ್ಕಾಗಿ ಯಾವ ದತ್ತಿ ಅಥವಾ ಉಂಬಳಿಯನ್ನೂ ಯಾರೂ ಬಿಟ್ಟಿಲ್ಲ. ಆದ್ದರಿಂದ ಇವುಗಳ ಪೂರ್ವೇತಿಹಾಸವನ್ನರಿಯುವುದು ಕಠಿಣ. ಇವಕ್ಕೆ ತಮ್ಮದೆಂಬ ನೆಲವಿಲ್ಲ; ಗುತ್ತಿಗೆಯ ನೆಲದ ಮೇಲೆ ಇವುಗಳ ನಿವಾಸ. ಈ ಕರಾರುಗಳ ದಾಖಲೆಗಳ ಮೂಲ ಹುಡುಕುವುದೂ ಅಸಾಧ್ಯ. ಆದ್ದರಿಂದ ಇವುಗಳ ಜನ್ಮದಿನಗಳನ್ನರಿಯುವುದು ಶಕ್ಯವಿಲ್ಲ.

ಈ ಇನ್‌ಗಳು ನ್ಯಾಯಶಾಸ್ತ್ರ ಶಿಕ್ಷಣ ನೀಡಲಾರಂಭಿಸಿದ್ದು ಯಾವಾಗ?–ಎಂಬ ವಿಚಾರವೂ ಸ್ಪಷ್ಟವಾಗಿಲ್ಲ. 13ನೆಯ ಶತಮಾನದಲ್ಲಿ ಕ್ರೈಸ್ತಪಾದ್ರಿಗಳು ನ್ಯಾಯಾಲಯಗಳಲ್ಲಿ ವಕೀಲಿ ಮಾಡುವುದನ್ನು ನಿಲ್ಲಿಸಿದಾಗ, ಕಾಯಿದೆಯ ವಿಶೇಷ ಅಭ್ಯಾಸ ಮಾಡದಿದ್ದ ಪ್ರಾಧ್ಯಾಪಕರೂ ಅಭ್ಯಾಸಿಗಳೂ ಈ ಕಾರ್ಯ ನಿರ್ವಹಿಸಲಾರಂಭಿಸಿದರೆಂದೂ ಆಗ ಈ ಇನ್‌ಗಳು ಉಗಮವಾಗಿರಬೇಕೆಂದೂ ಹೇಳಲಾಗಿದೆ.

ಸಾಮಾನ್ಯ ಶಿಕ್ಷಣವನ್ನಷ್ಟೇ ಪಡೆದಿದ್ದ ಈ ಜನ ನ್ಯಾಯಕ್ಷೇತ್ರದಲ್ಲಿ ವಿಶೇಷ ಆಸಕ್ತಿ ತಳೆದರು. ನ್ಯಾಯಕ್ಷೇತ್ರದಲ್ಲಿ ಇವರು ಬಲು ಹೆಚ್ಚಿನ ಪ್ರಭಾವ ಬೀರಿದರು; ನ್ಯಾಯಶಾಸ್ತ್ರ ಶಿಕ್ಷಣ ಸಂಬಂಧವಾದ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿದರು; ಪರಿಹರಿಸಿದರು. ಇವರೇ ನ್ಯಾಯವಾದಿಗಳ ವೃತ್ತಿಗೂ ಶಿಕ್ಷಣಕ್ಕೂ ರಾಜಮಾರ್ಗ ನಿರ್ಮಿಸಿದರು. ಮುಂದೆ ಇನ್ಸ್ ಆಫ್ ಕೋರ್ಟುಗಳು ಕ್ರಮೇಣ ವಿಕಾಸಗೊಂಡುವು.

ರೋಮನ್ ಹಾಗೂ ಧರ್ಮ ಪ್ರಾಮಾಣ್ಯ ನ್ಯಾಯಸೂತ್ರಗಳಿಗಿಂತ ಭಿನ್ನವಾದ ಇಂಗ್ಲಿಷ್ ನ್ಯಾಯಮಾರ್ಗ ಸುಮಾರು ಈ ಕಾಲದಲ್ಲಿ ಸ್ಪಷ್ಟವಾಗಿ ರೂಪು ತಳೆದಿರಬೇಕು. ಯಾವ ವಿಶ್ವವಿದ್ಯಾನಿಲಯವೂ ಆಗ ಇದನ್ನು ಬೋಧಿಸುತ್ತಿರಲಿಲ್ಲ. ಆ ಕಾಲದಲ್ಲಿ ನ್ಯಾಯಗ್ರಂಥಗಳನ್ನು ಬರೆದವರು ಲ್ಯಾಟಿನ್ ಬದಲು ಫ್ರೆಂಚ್ ಭಾಷೆಯಲ್ಲಿ ಬರೆದರು. ಆ ವೇಳೆಗಾಗಲೇ ಇಂಗ್ಲಿಷ್ ನ್ಯಾಯಶಾಸ್ತ್ರ ಬೋಧನೆ ಆರಂಭವಾಗಿತ್ತೆಂದು ಹೇಳಬಹುದು. ಆ ಕಾಲದಲ್ಲಿ ನ್ಯಾಯಪಂಡಿತರು ಬರೆದ ಚೊಕ್ಕ ಹೊತ್ತಗೆಗಳೂ ಲೇಖನಗಳೂ ಅಸಂಖ್ಯಾತವಾಗಿವೆ.

ವಿದ್ಯಾರ್ಥಿಗಳು ಆಗ ನ್ಯಾಯಾಲಯಗಳಲ್ಲಿ ನಡೆಯುತ್ತಿದ್ದ ವಾದ ಪ್ರತಿವಾದಗಳನ್ನು ಆಲಿಸುತ್ತಿದ್ದರು. ತತ್ಸಂಬಂಧವಾದ ನ್ಯಾಯಸಮಸ್ಯೆಗಳನ್ನು ತಂತಮ್ಮಲ್ಲೇ ಚರ್ಚಿಸುತ್ತಿದ್ದರು. ಆದರೂ ಆಗ ಇನ್‌ಗಳಿನ್ನೂ ಉದ್ಭವಿಸಿರಲಿಲ್ಲ. ನ್ಯಾಯಶಿಕ್ಷಣಕ್ಕೂ ವಸತಿಗೂ ವಿದ್ಯಾರ್ಥಿಗಳೇ ಖಾಸಗಿಯಾಗಿ ವ್ಯವಸ್ಥೆ ಮಾಡಿಕೊಂಡಿದ್ದಿರಬಹುದು. ಇವರು ಕೋರ್ಟಿನ ಹೊರಗೆ ಯಾವುದೋ ನಿರ್ದಿಷ್ಟ ಸ್ಥಳದಲ್ಲಿ ಸಮಾವೇಶಗೊಳ್ಳುತ್ತಿದ್ದರೆಂಬುದಂತೂ ನಿಜ.

ಆಗ ನ್ಯಾಯಶಾಸ್ತ್ರದಲ್ಲಿ ಆಸಕ್ತಿ ಹೊಂದಿದ್ದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಧನಿಕರಾಗಿದ್ದರು. ನ್ಯಾಯದ ರೀತಿಯನ್ನರಿಯುವ ಸಲುವಾಗಿಯೇ ಅವರು ಒಮ್ಮೊಮ್ಮೆ ಮೊಕದ್ದಮೆಗಳನ್ನು ಸೃಷ್ಟಿಸುತ್ತಿದ್ದರು. ನ್ಯಾಯಾಲಯದ ಮುಂದೆ ಬಂದಿದ್ದ ತೊಡಕಿನ ಮೊಕದ್ದಮೆಯೊಂದರ ಸಂಬಂಧವಾಗಿ ಪರಮೋಚ್ಚ ನ್ಯಾಯಾಧೀಶನಿಗೆ ಒಮ್ಮೆ ಈ ಸಂದೇಹ ಹುಟ್ಟಿತ್ತು. ನ್ಯಾಯಾಭ್ಯಾಸಿಯೊಬ್ಬ ಬೇಕೆಂದೇ ಯಾವುದೋ ಒಂದು ನೆಲ ಕೊಂಡು ತಕರಾರು ನಿರ್ಮಿಸಿ ಅದನ್ನು ನ್ಯಾಯಾಲಯಕ್ಕೆ ಕೊಂಡೊಯ್ದಿರಬೇಕೆಂದು ನ್ಯಾಯಾಧೀಶನಿಗೆ ಅನಿಸಿತ್ತು.

1300ರ ವೇಳೆಗೆ ನಾನಾ ಬಗೆಯ ವಕೀಲರು ಬಹುಸಂಖ್ಯಾತರಾಗಿ ಬೆಳೆದುಕೊಂಡರು. ಇವರನ್ನು ಕ್ರಮಕ್ಕೊಳಪಡಿಸಲು 1280ರಲ್ಲಿ ನಗರವ್ಯವಸ್ಥೆ ಕೆಲವು ನಿಬಂಧನೆಗಳನ್ನು ರಚಿಸಿತು. 1292ರಲ್ಲಿ ರಾಜಾಜ್ಞೆಯೊಂದು ಹೊರಬಿತ್ತು. ಇಂಗ್ಲೆಂಡಿನ ನಾನಾ ಜಿಲ್ಲೆಗಳಿಂದ 140 ಮಂದಿ ಅಭ್ಯಾಸಿಗಳನ್ನೂ ವಕೀಲರನ್ನೂ ನ್ಯಾಯಮೂರ್ತಿಗಳು ಆಯ್ಕೆ ಮಾಡಬೇಕೆಂದೂ

ಇವರಲ್ಲದೆ ಬೇರೆ ಯಾರೂ ನ್ಯಾಯಸಂಬಂಧ ವ್ಯವಹಾರಗಳಲ್ಲಿ ಕೈ ಹಾಕತಕ್ಕದ್ದಲ್ಲವೆಂದೂ ವಿಧಿಸಲಾಯಿತು. ಬೇರೆಡೆಗಳ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿದ್ದಂತೆಯೇ ನ್ಯಾಯ ವಿದ್ಯಾರ್ಥಿಗಳೂ ತಮ್ಮ ಶಿಕ್ಷಣದಲ್ಲಿ ತೊಡಗಿದ್ದರೆಂಬುದು ಈ ಕಾಲಕ್ಕೆ ಸಂಬಂಧಿಸಿದ ನಾನಾ ಪುರಾವೆಗಳಿಂದ ವೇದ್ಯವಾಗುತ್ತದೆ. ಇವರು ವಿದ್ಯಾರ್ಥಿನಿಲಯಗಳನ್ನೋ ಖಾನಾವಳಿ ಗಳನ್ನೋ (ಇನ್ಸ್) ಬಾಡಿಗೆಗೆ ಪಡೆಯುತ್ತಿದ್ದರು. ಇಲ್ಲಿ ಇವರು ಒಟ್ಟಿಗೆ ವಾಸಿಸುತ್ತಿದ್ದರು. ನ್ಯಾಯಬೋಧನೆಗಾಗಿ ಸೂಕ್ತವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಪ್ರಸಿದ್ಧಿ ಹೊಂದಿದ ನ್ಯಾಯವಾದಿಯೇ ಒಂದು ಸ್ಥಳವನ್ನು ಬಾಡಿಗೆಗೆ ಪಡೆದು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅವರಿಗೆ ನ್ಯಾಯಶಾಸ್ತ್ರ ಬೋಧಿಸುತ್ತಿದ್ದುದೂ ಇರಬಹುದು. ಇಂಗ್ಲೆಂಡಿನಲ್ಲಿ ಸಾಮಾನ್ಯವಾಗಿ ಶ್ರೀಮಂತರು ಮಾತ್ರವೇ ನ್ಯಾಯವಿದ್ಯೆ ಕಲಿಯುವ ಸಲುವಾಗಿ ಬರುತ್ತಿದ್ದುದರಿಂದ ಬಡವಿದ್ಯಾರ್ಥಿಗಳಿಗೋಸ್ಕರವಾಗಿ ಯಾರೂ ದತ್ತಿಯನ್ನೇನೂ ಬಿಡಲಿಲ್ಲ. ಈ ಇನ್‌ಗಳಿಗೆ ಸ್ವಂತ ಕಟ್ಟಡಗಳಿಲ್ಲದ್ದರಿಂದ ಇವು ಬಾಡಿಗೆಯ ಕರಾರಿನ ಅವಧಿ ಮುಗಿದೊಡನೆಯೇ ಎಷ್ಟೋ ಸಾರಿ ಉತ್ತಮ ಸ್ಥಳಗಳಿಗೆ ವರ್ಗವಾಗುತ್ತಿದ್ದದ್ದೂ ಉಂಟು. ಇಂಥ ಕೆಲವು ಇನ್ನುಗಳು ಕ್ರಮೇಣ ಪ್ರಸಿದ್ಧವಾಗಿ ಜನರ ನಂಬಿಕೆ ಗಳಿಸಿಕೊಂಡು ಶಾಶ್ವತ ಸಂಸ್ಥೆಗಳಾಗಿ ಬೆಳೆದಿದ್ದಿರಬೇಕು.

15ನೆಯ ಶತಮಾನದ ಆದಿಯ ವೇಳೆಗೆ ವಿಶಿಷ್ಟ ಸಂಪ್ರದಾಯಗಳನ್ನು ಬೆಳೆಸಿಕೊಂಡು ನಾಲ್ಕು ಇನ್‌ಗಳು ಭದ್ರವಾದ ವ್ಯವಸ್ಥೆ ಹೊಂದಿದ್ದುವು. ಬೆಂಚರುಗಳು (ಹಿರಿಯ ಸದಸ್ಯರು) ಈ ಸಂಸ್ಥೆಗಳ ಆಡಳಿತ ನಡೆಸುತ್ತಿದ್ದರು. ಕನಿಷ್ಠಪಕ್ಷ ಎರಡು ಶಿಕ್ಷಣಾವಧಿಗಳಲ್ಲಿ ವಿದ್ಯಾರ್ಥಿಗಳಿಗೆ ಉಪನ್ಯಾಸ (ರೀಡಿಂಗ್ಸ್) ನೀಡಿದ್ದವರೂ ಅಣಕುವಾದಗಳ (ಮೂಟ್ಸ್) ಅಧ್ಯಕ್ಷತೆ ವಹಿಸಿದ್ದವರೂ ಮಾತ್ರವೇ ಬೆಂಚ್ ಸದಸ್ಯತ್ವದ ಅರ್ಹತೆ ಹೊಂದಿರುತ್ತಿದ್ದರು. ಈ ಉಪನ್ಯಾಸಗಳೂ ವಾದಗೋಷ್ಠಿಗಳೂ ಬಹು ಉನ್ನತ ಶ್ರೇಣಿಯವಾಗಿರುತ್ತಿದ್ದುವೆಂಬುದು ಅವುಗಳ ದಾಖಲೆಗ ಳಿಂದ ಸ್ಪಷ್ಟಪಡುತ್ತದೆ.

ನ್ಯಾಯಕ್ಷೇತ್ರ ತುಂಬ ಕ್ಲಿಷ್ಟಕರವಾಗಿದ್ದರಿಂದ ಈ ಇನ್‌ಗಳಲ್ಲಿ ತೀವ್ರ ಶಿಕ್ಷಣ ಪಡೆದವರು ಮಾತ್ರವೇ ಇದರಲ್ಲಿ ಪ್ರವೀಣರಾಗುವುದು ಸಾಧ್ಯವಿತ್ತು. ಆದ್ದರಿಂದ ವಾಸ್ತವವಾಗಿ ಈ ಸಂಸ್ಥೆಗಳು ಈ ಶಿಕ್ಷಣದಲ್ಲಿ ಸರ್ವಾಧಿಕಾರ ಹೊಂದಿದ್ದುವು. ಇವಕ್ಕೆ ಕ್ರಮೇಣ ಮನ್ನಣೆ ದೊರಕಿತು. ಬೆಂಚರುಗಳಿಂದ ಇನ್ನಿನ ಬಾರ್‌ಗೆ ಆಮಂತ್ರಣ (ಕಾಲ್) ಪಡೆದ ವಿದ್ಯಾರ್ಥಿ ಅರ್ಹ ಅಭ್ಯಾಸಿ ಅಥವಾ ಬ್ಯಾರಿಸ್ಟರ್ ಎನ್ನಿಸಿಕೊಳ್ಳುತ್ತಿದ್ದ. ಪ್ರಮುಖ ಬ್ಯಾರಿಸ್ಟರುಗಳಿಗೆ ದೊರೆಯ ಮನ್ನಣೆ ದೊರೆತು ಅವರು ಸಾರ್ಜೆಂಟ್–ಅಟ್–ಲಾ ಅಥವಾ ಮೇಲುದರ್ಜೆಯ ವಕೀಲರೆಂಬ ಪದವಿ ಪಡೆದಾಗ ಅವರ ಅಭ್ಯಾಸದ (ಅಪ್ರೆಂಟಿಸ್) ಆಶ್ರಮ ಮುಗಿಯುತ್ತಿತ್ತು. ಅವರು ತಮ್ಮ ಹಳೆಯ ಇನ್‌ಗಳನ್ನು ಬಿಟ್ಟು ಸಾರ್ಜೆಂಟುಗಳ ಇನ್‌ಗೆ ಹೋಗುತ್ತಿದ್ದರು. ನ್ಯಾಯಾಧೀಶರೆಲ್ಲ ಸಾರ್ಜೆಂಟುಗಳೇ ಆಗಿದ್ದರು. ಅವರೂ ಸಾರ್ಜೆಂಟುಗಳ ಇನ್ನಿನಲ್ಲಿರುತ್ತಿದ್ದರು. ಈ ಇನ್‌ಗಳ ನಿಯಮಗಳು ಬಹು ಕಠಿಣವಾಗಿದ್ದರೂ 15–16ನೆಯ ಶತಮಾನಗಳಲ್ಲಿ ಅನೇಕ ಮಂದಿ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಇವುಗಳಿಗೆ ಸೇರುತ್ತಿದ್ದರು. ಇವರಲ್ಲನೇಕರಿಗೆ ನ್ಯಾಯವೃತ್ತಿಯಲ್ಲಿ ತೊಡಗಬೇಕೆಂಬ ಆಕಾಂಕ್ಷೆಯೇನೂ ಇರುತ್ತಿರಲಿಲ್ಲ. ಶಿಕ್ಷಣ ಪಡೆಯುವುದಷ್ಟೇ ಇವರ ಉದ್ದೇಶವಾಗಿರುತ್ತಿತ್ತು. ಈ ಕಾಲದಲ್ಲಿ ನ್ಯಾಯಶಿಕ್ಷಣ ಬಹು ಉತ್ತಮ ಸ್ಥಿತಿಯಲ್ಲಿತ್ತು.

ಮುಂದೆ ಇವು ಕ್ಷೀಣಿಸಿದುವು. ಅಚ್ಚುಕೂಟದ ಆಗಮನದಿಂದ ವಿದ್ಯಾರ್ಥಿಗಳು ಗ್ರಂಥವ್ಯಾಸಂಗದಿಂದಲೇ ಈ ವಿದ್ಯೆಯನ್ನು ಸುಲಭವಾಗಿಯೂ ಶೀಘ್ರವಾಗಿಯೂ ಕಲಿಯಬಹು ದೆಂದು ಭಾವಿಸಿದರು. ರೀಡಿಂಗ್ ಮತ್ತು ಮೂಟುಗಳಿಗೆ ತಮ್ಮ ಪರವಾಗಿ ಇತರರನ್ನು ಕಳಿಸುತ್ತಿದ್ದರು. ವಿದ್ಯಾರ್ಥಿಗಳಂತೆ ರೀಡರುಗಳೂ ಉದಾಸೀನ ಪ್ರವೃತ್ತಿ ಬೆಳೆಸಿಕೊಂಡರು. ಇವರಿಗೆ ಪ್ರವಚನಗಳಿಗಾಗಿ ಸಂಭಾವನೆಯೇನೂ ದೊರಕುತ್ತಿರಲಿಲ್ಲ. ಪ್ರತಿಯಾಗಿ ಇವರು ಅಂತ್ಯದಲ್ಲಿ ಬಹು ವೆಚ್ಚದ ಭೋಜನಕೂಟಗಳನ್ನೇರ್ಪಡಿಸಬೇಕಾಗುತ್ತಿತ್ತು. ವಕೀಲಿಗೆ ಅಮೂಲ್ಯವಾದ ಸಮಯವನ್ನು ಪ್ರವಚನ ಸಿದ್ಧತೆಗಾಗಿ ಇವರು ವ್ಯಯಮಾಡಲಿಚ್ಛಿಸಲಿಲ್ಲ. ನ್ಯಾಯಾಧೀಶರು ಮಾತ್ರ ಇನ್‌ಗಳ ಮೇಲೆ ಕಟ್ಟುನಿಟ್ಟಾಗಿ ಅಧಿಕಾರ ಚಲಾಯಿಸಲು ಯತ್ನಿಸುತ್ತಿದ್ದರು. ಕೊನೆಗೆ, ಇಂಗ್ಲೆಂಡಿನ ಅಂತರ್ಯುದ್ಧದ ಕಾಲದಲ್ಲಿ, ಈ ವ್ಯವಸ್ಥೆ ಸಂಪೂರ್ಣವಾಗಿ ಮುರಿದು ಬಿತ್ತು. 1677ರಲ್ಲಿ ತರಗತಿಗಳು ಕೊನೆಗೊಂಡುವು. ಗೊತ್ತಾದ ಶುಲ್ಕ ಕೊಟ್ಟ ವಿದ್ಯಾರ್ಥಿ ಸುಲಭವಾಗಿ 'ಬಾರ್' ಗೆ ಪ್ರವೇಶ ಪಡೆಯಬಹುದಿತ್ತು.

ಈ ಶೂನ್ಯಸ್ಥಿತಿ 1762ರ ವರೆಗೂ ಹೆಚ್ಚು ಕಡಿಮೆ ಮುಂದುವರಿಯಿತು. ಆ ವರ್ಷ ಈ ನಾಲ್ಕು ಇನ್‌ಗಳೂ ಒಂದು ಒಡಂಬಡಿಕೆ ಮಾಡಿಕೊಂಡುವು. ಕೆಲವು ಗೊತ್ತಾದ ಅವಧಿಗಳ ಹಾಜರಿ ಕೊಟ್ಟ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದೆಂದು ಸಮ್ಮತಿಸಲಾಯಿತು. ಮೂರು ಭೋಜನಕೂಟಗಳಿಗೆ ಬಂದವರು ಅವಧಿಯ ಪೂರ್ತಿ ಹಾಜರಾದಂತೆ ಭಾವಿಸಬೇಕೆಂದು ಮುಂದೆ ತೀರ್ಮಾನಿಸಲಾಯಿತು. ಕೋಶಾಧಿಕಾರಿಯಾದವ ಇನ್ನಿನ ಅಧ್ಯಕ್ಷನೆಂದೂ ಸರದಿಯಂತೆ ಹಿರಿತನದ ಕ್ರಮದಲ್ಲಿ ಈ ಅಧಿಕಾರ ಎಲ್ಲರಿಗೂ ದೊರಕತಕ್ಕ ದ್ದೆಂದೂ ನಿರ್ಣಯವಾಯಿತು. 1873, 1874 ಮತ್ತು 1875ರ ನ್ಯಾಯನಿರ್ವಾಹ ಕಾಯಿದೆಗಳು ಬಂದಮೇಲೆ ಸಾರ್ಜಂಟ್–ಅಟ್–ಲಾ ಎಂಬ ಪದವಿ ರದ್ದಾಯಿತು. ನ್ಯಾಯಾಧೀಶರಾದವರು ಈಗ ತಂತಮ್ಮ ಇನ್‌ಗಳ ಸದಸ್ಯರಾಗಿಯೇ ಮುಂದುವರಿಯಬಹುದು.

1854ರಿಂದೀಚೆಗೆ ಇನ್‌ಗಳು ಮತ್ತೆ ತಮ್ಮ ಶಿಕ್ಷಣಕಾರ್ಯಗಳಲ್ಲಿ ತೊಡಗಿದುವು. ರೀಡರ್ ಹುದ್ದೆಗಳು ನಿರ್ಮಾಣವಾದುವು. ದಕ್ಷ ವಕೀಲರು ಅಧ್ಯಾಪಕರಾದರು. ಕೌನ್ಸಿಲ್ ಆಫ್ ಲೀಗಲ್ ಎಜುಕೇಷನ್ ಎಂಬ ಸಂಸ್ಥೆಯವರು ನಡೆಸುವ ಪರೀಕ್ಷೆಗಳಿಗೆ ಈ ನಾಲ್ಕು ಇನ್‌ಗಳ ವಿದ್ಯಾರ್ಥಿಗಳೂ ಕೂಡುತ್ತಾರೆ. *

**ಇನ್ಸ್‌ಬ್ರುಕ್:** ಆಸ್ಟ್ರಿಯದ ಟೈರೋಲ್ ಪ್ರಾಂತ್ಯದ ರಾಜಧಾನಿ. ಮ್ಯೂನಿಚ್‌ನಿಂದ 60ಮೈ. ದೂರದಲ್ಲಿದೆ. ಜನಸಂಖ್ಯೆ ಸು. 119,249 (2010). ಮಧ್ಯಕಾಲದಲ್ಲಿ ಸಾಮ್ರಾಜ್ಯದ ಕೇಂದ್ರವಾಗಿತ್ತು. ಐತಿಹಾಸಿಕ ಕಟ್ಟಡಗಳು, ಸುಂದರ ಚರ್ಚುಗಳು, ಅರಮನೆ–ಮೊದಲಾದುವು ಇವೆ. ಒಂದು ಪ್ರಾಚೀನ ವಿಶ್ವವಿದ್ಯಾನಿಲಯವೂ ಇದೆ. ಇನ್ಸ್ ಕಣಿವೆಯಲ್ಲಿದ್ದು ಗಿರಿ ಕಂದರಗಳಿಂದ ಸುತ್ತುವರಿದಿರುವುದರಿಂದ ಪ್ರವಾಸಿಗರಿಗೆ ವಿಶೇಷ ಆಕರ್ಷಣೀಯ ತಾಣವಾಗಿದೆ. ವ್ಯಾಪಾರ ಮತ್ತು ಔದ್ಯೋಗಿಕ ಕೇಂದ್ರ. *

**ಇನ್ಸುಲಿನ್:** ಮಾಂಸಲಿಯಲ್ಲಿ (ಪ್ಯಾಂಕ್ರಿಯಾಸ್, ಮೇದೋಜೀರಕಾಂಗ) ಇರುವ ಕೆಲವು ವಿಶೇಷ ಕೋಶದ ಸಮೂಹಗಳಲ್ಲಿ ಹುಟ್ಟಿ ನೇರವಾಗಿ ರಕ್ತಕ್ಕೆ ಸೇರುವ ಅಂತಃಸ್ರಾವಕ (ಎಂಡೊಕ್ರೈನ್) ರಸ. ಮೈಯಲ್ಲಿ ಸಕ್ಕರೆ, ಹಿಟ್ಟುಗಳ ಬಳಕೆಯನ್ನು ಹತೋಟಿಗೊಳಿಸುವುದು ಇದರ ಮುಖ್ಯ ಕೆಲಸ. ಒಂದು ಆರೋಗ್ಯವಂತ ಜೀವಿಯಲ್ಲಿ ಆಹಾರದ ಸೇವನೆ ವಿಸರ್ಜನೆಗಳ ಪ್ರಮಾಣವೆಷ್ಟೇ ಇದ್ದರೂ ರಕ್ತದಲ್ಲಿ ಸಕ್ಕರೆಯ ಮಟ್ಟ ಮಾತ್ರ ಸ್ಥಿರವಾಗಿಯೇ ಇರುವುದು. ಈ ಮಟ್ಟವನ್ನು ಏರಿಸಿದಾಗ ಮಾಂಸಲಿಯಲ್ಲಿರುವ ಲ್ಯಾಂಗರ್‌ಹಾನ್ಸನ ದ್ವೀಪಗಳು (ಐಲೆಟ್ಸ್) ಇನ್ಸುಲಿನ್ ಸುರಿಕೆಯನ್ನು ಏರಿಸುತ್ತವೆ. ಇದರಿಂದ ಸಕ್ಕರೆಯ ಉತ್ಕರ್ಷಣವಾಗಿ ಲಭಿಸುವ ಶಕ್ತಿ ಅಂಗಗಳ ಚಟುವಟಿಕೆಗಳಿಗೆ ದೊರೆಯುವುದು. ಸಿಹಿಮೂತ್ರ ರೋಗಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇನ್ಸುಲಿನ್ ಉತ್ಪತ್ತಿಯಾಗದಿರುವುದರಿಂದ ಸೇವಿಸಿದ ಸಕ್ಕರೆ ಶಕ್ತಿಯಾಗಿ ಮಾರ್ಪಡುವುದರ ಬದಲು ರಕ್ತದಲ್ಲಿ ಹೆಚ್ಚಾಗಿ ಸೇರಿಕೊಳ್ಳುತ್ತದೆ; ಬಳಸಲಾಗದ ಈ ಸಕ್ಕರೆ ಮೂತ್ರದಲ್ಲಿ ಹೊರಬೀಳುತ್ತದೆ. ಸಿಹಿಮೂತ್ರ ರೋಗಿಗಳಲ್ಲಿ ಇಲ್ಲದ ಅಥವಾ ಕೊರತೆಯಾದ ಇನ್ಸುಲಿನನ್ನು ಪೂರೈಸಲು ಸಾಮಾನ್ಯವಾಗಿ ದನ, ಹಂದಿ ಇವುಗಳ ಮಾಂಸಲಿಯಿಂದ ತೆಗೆದ ಇನ್ಸುಲಿನ್ ನೆರವಾಗುತ್ತದೆ. ಆದರೂ ಸಿಹಿಮೂತ್ರ ರೋಗಕ್ಕೆ ಇದೊಂದೇ ಮದ್ದು ಎನ್ನುವಂತಿಲ್ಲ. ಈ ರೋಗ ಇಲ್ಲದಿದ್ದರೂ ಬೇರೆ ರೋಗಿಗಳಿಗೆ ಪುಷ್ಟಿಗೂಡಿಸಲೂ ಹಸಿವನ್ನು ಹೆಚ್ಚಿಸಲೂ ಇನ್ಸುಲಿನನ್ನು ಕೊಡಬಹುದು. ಇಚ್ಛಿತ್ತ (ಸ್ಕಿಜೋಫ್ರೆನಿಯ) ರೋಗಿಗಳ ಚಿಕಿತ್ಸೆಯಾಗಿ ಸೆಳವು, ಮಯಕ ಬರಿಸಲು ಇನ್ಸುಲಿನ್ ಬಳಕೆಯಲ್ಲಿತ್ತು. ಮದ್ಯಪಾನದ ಅಮಲನ್ನು ಬೇಗನೆ ಇಳಿಸಲು ಇನ್ಸುಲಿನ್ನಿನೊಂದಿಗೆ ದ್ರಾಕ್ಷಿಸಕ್ಕರೆ (ಗ್ಲೂಕೋಸ್) ಸೇರಿಸಿಕೊಡುವುದು ರೂಢಿಯಲ್ಲಿದೆ.

ಮಾಂಸಲಿ ಒಂದು ಬಿಡಿ ಅಂಗವಾಗಿರುವ ಸಸ್ತನಿಗಳಿವೆ. ಅವುಗಳಲ್ಲಿ ಲ್ಯಾಂಗರ್‌ಹ್ಯಾನ್ಸ್ ವಿವರಿಸಿದ (1869) ದ್ವೀಪಗಳೆಂದಿರುವ (ಐಲೆಟ್ಸ್) ಬೀಟ ಜೀವಕಣಗಳ ತಂಡಗಳಲ್ಲಿ ಇನ್ಸುಲಿನ್ ಸುರಿಸುವವೂ ಇವೆ. ಕೊಬ್ಬು, ಪ್ರೋಟೀನು, ಹಿಟ್ಟು ಸಕ್ಕರೆಗಳನ್ನು ಕರುಳಿನಲ್ಲೇ ಅರಗಿಸುವ ಮಾಂಸಲಿಯ ಬಹಿಸ್ರಾವಕ (ಎಕ್ಸೊಕ್ರೈನ್) ರಸವನ್ನು ಸಾಗುನಾಳದ ಮೂಲಕ ಸಣ್ಣ ಕರುಳೊಳಕ್ಕೆ ಸುರಿಸುವ ಜೀವಕಣಗಳೇ ಮಾಂಸಲಿ ಗ್ರಂಥಿಯ ತುಂಬ, ಇನ್ನೂ ದೊಡ್ಡ ತಂಡಗಳಾದ ಗ್ರಂಥಿನರಗಳಲ್ಲಿ (ಅಸಿನೈ) ಇರುವುವು. ಕೆಲವು ಜೀವಿಗಳಿಗೆ ಮಾಂಸಲಿ ಅಂಗ ಇಲ್ಲವಾದರೂ ಕರುಳಿನ ಮುಸುಪರೆಗಳ ನಡುವೆ ಅಲ್ಲಲ್ಲಿ ದೀವುಗಳಂತೆ ಜೀವಕಣ ಗುಂಪುಗಳಾಗಿ ಹರಡಿರುತ್ತವೆ.

**ಚರಿತ್ರೆ:** ಮಾಂಸಲಿ ಕೆಲಸಗೆಟ್ಟದ್ದರಿಂದ ಸಿಹಿಮೂತ್ರ ಬರಬಹುದೆಂದು ತಾಮಸ್ ಕಾಲಿ ಊಹಿಸಿದ್ದುದನ್ನು (1788) ಅದರ ಮುಂದಿನ ಶತಮಾನದಲ್ಲಿ ಲ್ಯಾಸಿರೂ ಸಮರ್ಥಿಸಿದ. ಮಾಂಸಲಿಯ ಒಂದು ಒಳಸುರಿವ ರಸದಿಂದ ಸಿಹಿಮೂತ್ರ ತಪ್ಪುವುದೆಂದು ಲೇಸಿನ್ ಸೂಚಿಸಿದ್ದನ್ನು ತಿಳಿದು ನಾಯಿಯ ಮಾಂಸಲಿಯನ್ನು ಕೊಯ್ದು ತೆಗೆದುಹಾಕಿದರೆ, ಅದು ಸಿಹಿಮೂತ್ರವನ್ನು ವಿಪರೀತವಾಗಿ ಸುರಿಸುತ್ತ ಕೊನೆಗೆ ಸಾಯುವುದನ್ನು ಜೆ. ಫಾನ್ ಮೇರಿಂಗ್, ಮಿಂಕೋವ್‌ಸ್ಕಿ ಆಸ್ಕರ್ (1889) ಮಾಡಿ ತೋರಿಸಿದರು. ಸಕ್ಕರೆ, ಹಿಟ್ಟುಗಳನ್ನು ರಕ್ತಗತವಾಗಿಸಿ ಮೈ ಶಕ್ತಿಗೂ ಬೆಳವಣಿಗೆಗೂ ಬಳಸುವ ಜೀವವಸ್ತುಕರಣ (ಮೆಟಬಾಲಿಸಂ) ಕೆಲಸವನ್ನು ಹತೋಟಿಗೊಳಿಸುವ ಯಾವುದೋ ಒಂದು ಚೋದನಿಕ (ಹಾರ್ಮೋನ್) ಇದರಲ್ಲಿ ಸುರಿಯುತ್ತಿರಬೇಕೆಂದು ಊಹಿಸಲು ಹೆಚ್ಚು ಕಾಲ ಹಿಡಿಯಲಿಲ್ಲ. ಮಾಂಸಲಿಯಲ್ಲಿ ಒಂದು ಅಂತಃಸ್ರಾವಕ ರಸ ಇರಬಹುದೆಂದು ಊಹಿಸಿ ಅದಕ್ಕೆ ಇನ್ಸುಲಿನ್ ಎಂದು ಹೆಸರಿತ್ತವನು ಎಡಿನ್‌ಬರೋದ ಷಾರ್ಪಿ ಷೇಫರ್ (1910). ಈ ರಸವನ್ನು ಸಾರಕವಾಗಿ (ಎಕ್ಸ್‌ಟ್ರಾಕ್ಟ್) ಹೊರತೆಗೆಯಲು ಮಾಡಿದ 20–30 ವರ್ಷಗಳ ಯತ್ನಗಳಾವೂ ಕೈಗೂಡಲಿಲ್ಲ. ಮಾಂಸಲಿ ಗ್ರಂಥಿಯ ಬಲವಾದ ಪ್ರೋಟೀನುಲಯಕ (ಪ್ರೋಟಿಯೊ ಲಿಟಿಕ್) ಅರಗಿಸುವ ರಸದಿಂದ ಇದರಲ್ಲಿನ ಇನ್ಸುಲಿನ್ ಹಾಳಾಗಿ ಒಡೆಯುತ್ತಿತ್ತು. ಕೊನೆಗೆ ಕೆನಡಾದ ಜೆ.ಜೆ.ಆರ್. ಮೆಕ್ಲಿಯಾಡನ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದ ಫ್ರೆಡರಿಕ್ ಜೆ. ಬ್ಯಾಂಟಿಂಗ್. **(ನೋಡಿ)** ಚಾರಲ್ಸ್ ಎಚ್. ಬೆಸ್ಟ್ **(ನೋಡಿ)** ಇಬ್ಬರೂ ಕೂಡಿ ಮೊದಲು ನಾಯಿಯಲ್ಲಿ ಮಾಂಸಲಿಯ ಅರಗಿಸುವ ರಸದ ಸಾಗುನಾಳವನ್ನು ಕಟ್ಟಿ ಬಿಗಿದು ಗ್ರಂಥಿಯನ್ನೇ ಹಾಳುಗೆಡಿಸಿ, ಆಮೇಲೆ ಗ್ರಂಥಿಯ ಸಾರವಿಳಿಸಿದಾಗ ಇನ್ಸುಲಿನ್ ರಸವಾಗಿ ಕೈಗೆ ಸಿಕ್ಕಿತು (1921). ಈ ವಿಧಾನದ ಶೋಧನೆ ಕಳೆದ ಶತಮಾನದ ಮಹಾವೈದ್ಯ ಶೋಧನೆಗಳಲ್ಲಿ ಒಂದು ಮೈಲಿಗಲ್ಲು.

ಮಾಂಸಲಿಯಲ್ಲಿ ಇನ್ಸುಲಿನ್ ಇರುವುದು ಈ ಪ್ರಯೋಗದಿಂದ ಖಚಿತವಾಯಿತು. ಆದರೆ ಅದನ್ನು ಚೊಕ್ಕ ರೂಪದಲ್ಲಿ ರೋಗಿಗಳ ಬಳಕೆಗಾಗಿ ಹೇರಳವಾಗಿ ಸಾರ ತೆಗೆವ ವಿಧಾನ ಗೊತ್ತಿರಲಿಲ್ಲ. ಮಾಂಸಲಿಯನ್ನು ಮದ್ಯಸಾರದಲ್ಲಿ ಕದಡಿದರೆ, ಬೇಡದ ಕಸರೆ ವಸ್ತುಗಳನ್ನು ಬಿಟ್ಟು ಇನ್ಸುಲಿನ್ ಮಾತ್ರ ಕರಗುತ್ತದೆ. ಹೀಗೆ ಮದ್ಯಸಾರದಲ್ಲಿ ಕರಗಿಸಿ ತೆಗೆದ ಕಚ್ಚಾ ಇನ್ಸುಲಿನ್ನನ್ನು ಸಿಹಿಮೂತ್ರ ರೋಗಿ ಆಗಿದ್ದ 14 ವರ್ಷದ ಹುಡುಗ ಲಿಯೊನಾರ್ಡ್ ತಾಂಪ್ಸನ್ನನಿಗೆ 1922ರ ಜನವರಿ 11 ರಂದು ಮೊಟ್ಟಮೊದಲು ಚುಚ್ಚಿದರು. ಮೂತ್ರಸಕ್ಕರೆ, ರಕ್ತಸಕ್ಕರೆ ಇಳಿಯುತ್ತ ಬಂದುವು. 23ನೆಯ ತೇದಿಯಿಂದ ದಿನವೂ ಚುಚ್ಚುತ್ತ ಬಂದರು. ಹುಡುಗ ಬಲು ಗೆಲುವಾದ; ಬಲ ಬಂದಿತೆಂದ; ಚೆನ್ನಾಗಿ ಮೈ ತುಂಬಿಕೊಂಡಂತೆ ಕಂಡ. ಕೆಲವೇ ತಿಂಗಳಲ್ಲಿ ಸಾಯಲಿದ್ದವನನ್ನು ಬದುಕಿಸಿದ ಪವಾಡವದು. ಇದರಿಂದ ಟೊರೊಂಟೋ ನಗರ ಸಿಹಿಮೂತ್ರ ರೋಗಿಗಳ ಜಾತ್ರೆ ಸ್ಥಳವಾಯಿತು. ಸಿಹಿಮೂತ್ರ ರೋಗಿಗಳಿಗೆ ಅಂದಿನಿಂದ ಎಲ್ಲರಂತೆ ಬದುಕಿ ಬಾಳುವ ಕನಸು ನನಸಾಯಿತು. ಈ ಇನ್ಸುಲಿನ್ ಚುಚ್ಚಿದ ಕಡೆ ಊದಿಕೊಂಡು ಉರಿಯುತ್ತಿತ್ತು.

ಬಲವಾದ ಇರ್ತಡೆಗೂಡಿದ (ಬಫರ್ಡ್) ದ್ರಾವಣದಲ್ಲಿರುವ ಕಚ್ಚಾ ಸಾರಕಗಳಲ್ಲಿ ಸಾರವಿಳಿಸಿದ ಕ್ಷಾರವನ್ನು ಹಾಕಿ, ಹರಳು ರೂಪದ ಇನ್ಸುಲಿನ್ ಪಡೆದವನು (1926) ಅಮೆರಿಕದ ಜೆ.ಜೆ. ಅಬೆಲ್. (**ನೋಡಿ**) ಅಲ್ಲಿಯ ತನಕ ಪ್ರೋಟೀನುಗಳನ್ನು ಹರಳಿನ ರೂಪದಲ್ಲಿ ಕಂಡವರೇ ಇರಲಿಲ್ಲ. ಆದ್ದರಿಂದ ಇದು ಅಪ್ಪಟ ಇನ್ಸುಲಿನ್ ಅಲ್ಲವೆಂಬ ಅನುಮಾನ ಕೆಲಕಾಲ ಇತ್ತು. ಇನ್ಸುಲಿನ್ ಜೊತೆಗೆ ಸುಮಾರು 0.4% ಕ್ಯಾಡ್ಮಿಯಂ, ನಿಕ್ಕಲ್, ಸುಣ್ಣ, ಕೋಬಾಲ್ಟ್ ಇಲ್ಲವೇ ಸತು (ಜಿಂಕ್) ಸಂಯೋಗವಾಗಿದ್ದಲ್ಲಿ ಹರಳುಗಳಾಗುವುದು ಸುಲಭವೆಂದೂ ಅಬೆಲ್ ತಯಾರಿಸಿದ್ದರಲ್ಲಿ ಸತು ಇರುವುದೆಂದೂ ಡಿ.ಎ. ಸ್ಕಾಟ್ (1934) ತೋರಿಸಿಕೊಟ್ಟ. ಸ್ಫಟಿಕಶಾಸ್ತ್ರದಂತೆ (ಕ್ರಿಸ್ಟಲೋಗ್ರಫಿ), ಈ ಭಾರದ ಲೋಹಗಳು ಇನ್ಸುಲಿನ್ನಿನ ಹರಳುಗಳಲ್ಲಿ ಕಸವಾಗಿರದೆ, ಹರಳಿನ ರಾಸಾಯನಿಕ ರಚನೆಯ ಒಂದು ಭಾಗವಾಗಿದೆ. ಮುಂದೆ ಇದೇ ಮದ್ಯಸಾರದಲ್ಲಿ ತೆಗೆದ ಸಾರಕವನ್ನು ಭಾಗಾಂಶವಾಗಿ ಗಟ್ಟಿಬೀಳುವಂತೆ (ಪ್ರೆಸಿಪಿಟೇಟ್) ಮಾಡಿಯೋ ಪಿಕ್ರಿಕ್ ಆಮ್ಲದಲ್ಲಿ ಹಾಕಿದ ಮೇಲೆ ಹೈಡ್ರೊಕ್ಲೋರಿಕ್ ಆಮ್ಲ ಬೆರೆತ ಮದ್ಯಸಾರದಲ್ಲಿ ಸಾರಕವಾಗಿ ತೆಗೆದಾಗಲೋ ಇನ್ನೂ ಚೊಕ್ಕರೂಪದಲ್ಲಿ ಇನ್ಸುಲಿನ್ ಹೈಡ್ರೊಕ್ಲೋರೈಡು ಲವಣವಾಗಿ ದೊರೆಯಿತು. ಪ್ರೋಟೀನುಲಯಕ ರಸದಿಂದ ಹಾಳಾಗುವುದನ್ನು ಹೈಡ್ರೊಕ್ಲೋರಿಕ್ ಆಮ್ಲ ತಡೆಯುತ್ತದೆ.



**ಚಿತ್ರ 1. ಮಾಂಸಲಿಯ ರಚನೆ : 1 ಇನ್ಸುಲಿನ್ ಸುರಿಸುವ ಲ್ಯಾಂಗರ್‌ಹ್ಯಾನ್ಸ್ ದೀವು ; 2 ಅರಗಿಸುವ ರಸ ಸುರಿಸುವ ಗ್ರಂಥಿನರಿ ; 3 ಸಾಗುನಾಳ ; 4 ಲೋಮನಾಳ**

ವಿಷಮಜ್ವರದ ಚಿಕಿತ್ಸೆಯಲ್ಲಿ ಸಲ್ಫೋನೇಮೈಡು ತೆರನ ಮದ್ದುಗಳನ್ನು ನುಂಗಿಸಿದಾಗ ರಕ್ತದ ಸಕ್ಕರೆ ಇಳಿವುದನ್ನು ಜಾನ್ಬಾನ್ ಮತ್ತು ಸಂಗಡಿಗರು (1942) ಕಂಡುಕೊಂಡರು.

ಇನ್ಸುಲಿನ್ನಿಗೆ ಪರ್‌ಫಾರ್ಮಿಕ್ ಆಮ್ಲದಿಂದ ಆಕ್ಸಿಜನ್ ಕೂಡಿಸಿ ಅದರಲ್ಲಿನ ಅಮೈನೋ ಆಮ್ಲಗಳ ಜೋಡಣೆಯ ಕ್ರಮವನ್ನೂ ಸಿಸ್ಟಿಯೀನಿನ ಡೈಸಲ್ಫೈಡ್ ಸೇತುಗಳು ಇರುವುದನ್ನೂ ಕೇಂಬ್ರಿಜ್ ವಿಶ್ವವಿದ್ಯಾಲಯದ ಫ್ರೆಡರಿಕ್ ಸ್ಯಾಂಗರ್ (1960) 1945 ರಿಂದ 1955ರ ತನಕ ಕಷ್ಟಪಟ್ಟು ದುಡಿದು ನಿರ್ಧರಿಸಿದ. ಡೈಸಲ್ಫೈಡ್ ಕೂಡಿಕೆಗಳ (ಡೈಸಲ್ಫೈಡ್ ಲಿಂಕೇಜಸ್) ಅಮೈನೋ ಆಮ್ಲಗಳ ಎರಡು ಸರಪಣಿಗಳು ಇನ್ಸುಲಿನ್ನಿನಲ್ಲಿವೆ. ಇವಕ್ಕೆ ಎ ಮತ್ತು ಬಿ ಭಾಗಾಂಶ ಸರಪಣಿಗಳೆಂದು ಹೆಸರಿಟ್ಟ: ಎ ಭಾಗಾಂಶ, ಗ್ಲೈಸೀನಿಂದ ಮೊದಲಾಗುವ 21 ಅಮೈನೋ ಆಮ್ಲಗಳಿರುವ ಆಮ್ಲಗುಣದ ಸರಪಣಿ; ಬಿ ಭಾಗಾಂಶ, ಅಲನೀನ್ ಕೊನೆಯಲ್ಲಿರುವ 30 ಅಮೈನೋ ಆಮ್ಲಗಳಿರುವ ದೊಡ್ಡ ಸರಪಣಿ. ಈ ಯತ್ನಗಳ ಫಲವಾಗಿ ಅಮೆರಿಕದ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದ ಪ್ರಯೋಗಾಲಯದಲ್ಲಿ ಪಿ. ಜಿ. ಕಾಟ್ಸೊಯನ್ನಿಸ್ ಮತ್ತು ಸಂಗಡಿಗರು ಒಂದೊಂದೇ ಅಮೈನೋ ಆಮ್ಲವನ್ನು ಜೋಡಿಸುತ್ತ ಇನ್ಸುಲಿನ್ನಿನ ಎ. ಬಿ. ಭಾಗಾಂಶ ಸರಪಣಿ ಹಲಪೆಪ್ಟೈಡುಗಳು ಎರಡನ್ನೂ ಕೃತಕವಾಗಿ ತಯಾರಿಸಿದರು (1963). ಕೃತಕವಾಗಿ ಹಾಗೆ ತಯಾರಾದ ಎರಡು ಹಲ ಪೆಪ್ಟೈಡುಗಳನ್ನೂ ಒಂದುಗೂಡಿಸಿ ಪ್ರಾಣಿಯಲ್ಲಿ 15% ರಷ್ಟು ಪಟುವಾಗಿರುವ ಕುರಿಯ ಇನ್ಸುಲಿನ್ನನ್ನು ತಯಾರಿಸಿದರು. ಆದರೆ ಹೀಗೆ



**ಚಿತ್ರ 2. ಇನ್ಸುಲಿನ್ ತಯಾರಿಕೆಗಳನ್ನು ಚುಚ್ಚಿದಾಗ ರಕ್ತದ ಸಕ್ಕರೆಯಲ್ಲಿನ ವ್ಯತ್ಯಾಸಗಳ ಮಾದರಿಗಳು**

ಕೃತಕವಾಗಿ ತಯಾರಾಗಿ ಬರುವ ಪ್ರಮಾಣ ತೀರ ಸ್ವಲ್ಪ. ಇವರೇ ಅಲ್ಲದೆ ಕೃತಕ ತಯಾರಿಕೆಗೆ ಕಾರಣರಾದ ಇತರರು ಚೀನದ ಕುಂಗ್ ಮತ್ತು ಸಂಗಡಿಗರು, ಅಮೆರಿಕದ ಮಾರ್ಗ್ಲಿನ್, ಮೇರಿ ಫೀಲ್ಡ್, ಜರ್ಮನಿಯ ಸಾನ್ ಮತ್ತು ಸಂಗಡಿಗರು.

**ಮೈಯಲ್ಲಿ ಪ್ರಭಾವ:** ಇನ್ಸುಲಿನ್ನಿನ ನಿಜಗೆಲಸದ ವಿಚಾರ ಪೂರ್ತಿಯಾಗಿ ಇನ್ನೂ ಗೊತ್ತಾಗಿಲ್ಲ. ಸಂಮಿಶ್ರ ಸಕ್ಕರೆಯಾದ ಮಿಗದಿಟ್ಟು (ಗ್ಲೈಕೊಜನ್), ಪ್ರೋಟೀನು, ಕೊಬ್ಬುಗಳನ್ನು ಸವೆದುಹೋಗಿರುವ ಅಂಗಾಂಶಗಳಾಗಿ (ಟಿಷ್ಯೂಸ್) ಬದಲಿಸಲು ನೆರವಾಗಿ, ಸಕ್ಕರೆಯನ್ನು ಉರಿಸುವುದರಿಂದ ಮೈಗೆ ಶಕ್ತಿಯನ್ನು ಒದಗಿಸಿ, ಪ್ರೋಟೀನು ಕೊಬ್ಬುಗಳು ಒಡೆದು ವಿಪರೀತವಾಗಿ ಈಲಿಯಲ್ಲಿ ತಯಾರಾಗುವುದನ್ನು ಇನ್ಸುಲಿನ್ ತಡೆಯುತ್ತದೆ; ಪೊಟ್ಯಾಸಿಯಂ, ರಂಜಕಗಳ ಜೀವವಸ್ತುಕರಣದ ಹತೋಟಿಗೆ ನೆರವಾಗುವುದು.

ಈ ಕ್ರಮಗತಿಗಳ ಮೇಲಿನ ಇನ್ನಿತರ ಕೆಲವು ಚೋದನಿಕಗಳ ಕುಗ್ಗಿಸುವ ಪ್ರಭಾವಗಳನ್ನು ಇನ್ಸುಲಿನ್ ಎದುರಿಸುತ್ತದೆ. ಎಲ್ಲಕ್ಕೂ ಮುಖ್ಯವಾಗಿ ಜೀವಕಣಗಳು ದ್ರಾಕ್ಷಿಸಕ್ಕರೆಯನ್ನು ಸಾಕಷ್ಟು ಒಳಸೇರಿಸಿಕೊಂಡು ಬಳಸಲು ನೆರವಾಗುವುವು.

ಮಾಂಸಲಿಯ ದೀವುಗಳ ಬೀಟ ಜೀವಕಣಗಳಲ್ಲಿ ಇನ್ಸುಲಿನ್ ತಯಾರಾಗಿ, ಮಾಂಸಲಿಯ ಧಮನಿಗಳಲ್ಲಿ ದ್ರಾಕ್ಷಿಸಕ್ಕರೆಯ ಮಟ್ಟ ಏರಿದಾಗ, ಇನ್ಸುಲಿನ್ ರಕ್ತದೊಳಕ್ಕೆ ಸೇರುತ್ತದೆ. ಮುಂದಣ ತೆಮಡಿಕ (ಆ್ಯಂಟೀರಿಯರ್ ಪಿಟ್ಯುಟರಿ) ಗ್ರಂಥಿಯಿಂದ ಸುರಿವ ಸಿಹಿಮೂತ್ರಜನಿಕ (ಡಯಬೆಟೋಜನಿಕ್) ರಸದ ಅಂಶ ಬೀಟ ಜೀವಕಣಗಳನ್ನು ಬರಿದು ಮಾಡುವುದೆಂಬ ಅಭಿಪ್ರಾಯವೂ ಇದೆ. ರಕ್ತದಲ್ಲಿ ಸೇರಿದ ಇನ್ಸುಲಿನ್ ಈಲಿಗೆ ಹೋದಾಗ ಅದರ ಒಂದು ಪಾಲನ್ನು ಇನ್ಸುಲಿನ್‌ದೊಳೆ (ಇನ್ಸುಲಿನೇಸ್) ಬಿಡಿಯಾಗಿರುವ ಎ ಮತ್ತು ಬಿ ಭಾಗಾಂಶ ಸರಪಣಿಗಳಾಗಿ ಒಡೆದುಹಾಕುವುದು. ಇನ್ನೊಂದು ಪಾಲು ಪ್ರೋಟೀನಿನೊಂದಿಗೆ ಅಂಟಿಕೊಳ್ಳುತ್ತದೆ. ಇಲ್ಲಿಂದ ರಕ್ತದ ಮೂಲಕ ಮೈಯೆಲ್ಲ ಹರಡಿದ ಇನ್ಸುಲಿನ್ ಹಲವಾರು ಇನ್ಸುಲಿನ್ ರೋಧಕಗಳಿಗೆ ಸಿಕ್ಕಿ ಬಲಿ ಯಾಗುವುದು. ಇಂಥ ರೋಧಕಗಳಲ್ಲಿ, ಮುಂದಣ ತೆಮಡಿಕದ ಅಲ್ಲದೆ ಅಡ್ರಿನಲ್ ರಗಟೆಯ ಚೋದನಿಕಗಳು (ಕಾರ್ಟಿಕಲ್ ಹಾರ್ಮೋನ್ಸ್) ಮುಖ್ಯವಾದವು. ಕೊನೆಗೆ ಜೀವಕಣಗಳನ್ನು ಇನ್ಸುಲಿನ್ ತಲಪಬೇಕು. ಸಿಹಿಮೂತ್ರ ರೋಗದಲ್ಲಿ ಲೋಮನಾಳಗಳ ಒಳರಚನೆ ಕೆಟ್ಟಿರುವುದರಿಂದ ಜೀವಕಣಗಳನ್ನು ಇನ್ಸುಲಿನ್ ಸಾಕಷ್ಟು ತಲುಪದೆಂಬ ಅಭಿಪ್ರಾಯವಿದೆ. ಆರೋಗ್ಯದ ಮಾಂಸಲಿ ಒಂದರ ಬೀಟ ಜೀವಕಣಗಳಲ್ಲಿರುವ ಹರಳುಗಳಲ್ಲಿ ಒಟ್ಟು 200 ಏಕಮಾನಗಳಷ್ಟು (ಯೂನಿಟ್ಸ್) ಇನ್ಸುಲಿನ್ ಇರುತ್ತದೆ. ಆದರೆ ಮಾಂಸಲಿ ಗ್ರಂಥಿ ಪೂರ್ತಿ ಇಲ್ಲವಾದರೆ, ಒಬ್ಬನಿಗೆ ದಿನಕ್ಕೆ 30–40 ಏಕಮಾನಗಳಷ್ಟು ಸಾಕಾಗುತ್ತದೆ. ಮಾಂಸಲಿಯನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಿದಾಗ, ಸಿಹಿಮೂತ್ರ ರೋಗದಿಂದ ದೀವುಗಳು ಹಾಳಾಗಿದ್ದಾಗ, ರಕ್ತದಲ್ಲಿ ಇನ್ಸುಲಿನ್ ಇಲ್ಲದಂತಾಗಿ, ದ್ರಾಕ್ಷಿ

ಸಕ್ಕರೆ ಜೀವಕಣಗಳ ಬಳಕೆಗೆ ಸಿಗದಂತೆ ಆದಾಗ. ಈಲಿಯಲ್ಲಿ ಬೇಗಬೇಗನೆ ಸಕ್ಕರೆ ತಯಾರಾಗಿ ರಕ್ತಕ್ಕೆ ಸೇರುತ್ತದೆ. ರಕ್ತದಲ್ಲಿ ದ್ರಾಕ್ಷಿಸಕ್ಕರೆ ಪ್ರಮಾಣ ಬಹಳ ಹೆಚ್ಚಿಕೊಂಡು (ಸಕ್ಕರೆರಕ್ತವೇರಿಕೆ, ಹೈಪರ್‌ಗ್ಲೈಸೀಮಿಯ) ಮೂತ್ರದಲ್ಲೂ ಸಕ್ಕರೆ ಹೊರಬೀಳುತ್ತದೆ (ಸಕ್ಕರೆಮೂತ್ರ, ಗ್ಲೈಕೊಸೂರಿಯ). ಹೀಗೇ ಮುಂದುವರಿದರೆ, ಕೊಬ್ಬಿನ ಆಮ್ಲಗಳ ತಯಾರಿಕೆ ಬೇಕಿರುವುದಕ್ಕಿಂತಲೂ ಮಿಗಿಲಾಗಿ ಮಿತಿ ಮೀರಿ ಕೀಟೋನು ವಸ್ತುಗಳು (ಅಸಿಟೋನ್, ಬೀಟ ಹೈಡ್ರಾಕ್ಸಿ ಬೆಣ್ಣೆಯಾಮ್ಲ) ರಕ್ತ, ಅಂಗಾಂಶ, ಮೂತ್ರಗಳಲ್ಲೂ ಕಾಣಿಸಿಕೊಳ್ಳುತ್ತವೆ. ಕೊಬ್ಬಿನ ಅಮ್ಲಗಳು, ಕೆಲವೇಳೆ ಅಮೈನೊ ಆಮ್ಲಗಳೂ ಅರೆಬರೆಯಾಗಿ ಆಕ್ಸಿಜನ್ ಕೂಡುವುದರಿಂದ ಕೊಬ್ಬು, ಪ್ರೋಟೀನುಗಳಿಂದ ಈ ಕೀಟೋನು ವಸ್ತುಗಳು ತಯಾರಾಗುತ್ತವೆ. ಕೀಟೋನು ಮೂತ್ರ (ಕೀಟೋನೂರಿಯ) ಕಂಡಿತೆಂದರೆ ಪ್ರಾಣಕ್ಕೆ ಬಲು ಅಪಾಯಕರ. ಮೈಯಲ್ಲಿರುವ ಆಹಾರ ವಸ್ತುಗಳೆಲ್ಲ ಹೀಗೆ ಮುಗಿದು ಇನ್ನಿಲ್ಲದಂತಾಗಿ, ಕೀಟೋನು ವಸ್ತುಗಳಿಂದ ಬಹುಮಟ್ಟಿಗೆ ವಿಷವೇರಿ ಆಮ್ಲವಿಷತೆ (ಅಸಿಡೋಸಿಸ್) ಆಗಿ, ಮಯಕದಿಂದ (ಕೋಮ) ಕೊನೆಗೆ ರೋಗಿ ಸಾಯುವನು. ಚರ್ಮದಡಿಯೋ ರಕ್ತನಾಳದೊಳಕ್ಕೋ ಇನ್ಸುಲಿನ್ನನ್ನು ಕೂಡಲೇ ಚುಚ್ಚಿಹೊಗಿಸಿದಲ್ಲಿ ಈ ರೋಗ ಲಕ್ಷಣಗಳೆಲ್ಲ ಕಳೆಯುತ್ತವೆ. ಇನ್ಸುಲಿನ್ನನ್ನು ಹೊಟ್ಟೆಗೆ ಕೊಟ್ಟರೆ ಕರುಳಲ್ಲಿನ ಅರಗಿಸುವ ರಸಗಳಿಂದ ಇನ್ಸುಲಿನ್ ಹಾಳಾಗುತ್ತದೆ. ಚುಚ್ಚಿದ ಇನ್ಸುಲಿನ್ನಿನ ಪ್ರಭಾವ ಕೂಡ ಕೆಲವೇ ತಾಸುಗಳಿರುತ್ತದೆ. ಇದಕ್ಕಾಗಿ ಮೇಲಿಂದ ಮೇಲೆ ಚುಚ್ಚುತ್ತಲೇ ಇರಬೇಕು. ನಿಧಾನವಾಗಿ ವರ್ತಿಸುವ ಹಲವಾರು ಬಗೆಗಳ ಇನ್ಸುಲಿನ್ ಸಂಯುಕ್ತಗಳು ತಯಾರಾಗಿ ಮಾರಾಟವಾಗಿ ಬಳಕೆಯಲ್ಲಿವೆ.



ಚಿತ್ರ 3. ಜೀವವಸ್ತುಕರಣದಲ್ಲಿ ಇನ್ಸುಲಿನ್ನಿನ ಪಾತ್ರ

ಪ್ರಾಣಿಜನ್ಯ (ಹಂದಿ, ಹಸು) ಇನ್ಸುಲಿನ್‌ಗೆ ಬದಲಾಗಿ, ಡಿಎನ್‌ಎಯ ಪುನರ್ ಹೊಂದಾಣಿಕೆಯ (ರಿಕಾಂಬಿನೆಂಟ್) ತಾಂತ್ರಿಕತೆ ಬಳಸಿ ಸಿದ್ಧಪಡಿಸಿದ ಇನ್ಸುಲಿನ್‌ಗಳು (ಮಾನವ ಇನ್ಸುಲಿನ್) ಇಂದು ಜನಪ್ರಿಯವಾಗಿವೆ. ಆ ತಾಂತ್ರಿಕತೆಯಿಂದ ಇನ್ಸುಲಿನ್ನನ್ನು ಹೆಚ್ಚು ಪ್ರಮಾಣದಲ್ಲಿ ಸಿದ್ಧಪಡಿಸಬಹುದಾಗಿದೆ.

ಇನ್ಸುಲಿನ್ ಆಮ್ಲವಾಗಿ ವರ್ತಿಸುವುದರಿಂದ ಪ್ರೋಟಮೀನುಗಳು, ಗ್ಲೋಬಿನ್ನೊಂದಿಗೆ ಸೇರಿಸಿದಾಗ ಲವಣಗಳಾಗಿ ತಯಾರಾಗುತ್ತವೆ. ಇವು ನೀರಲ್ಲಿ ಅಷ್ಟಾಗಿ ಕರಗದೇ ಇರುವುದರಿಂದ ಅಪ್ಪಟ ಇನ್ಸುಲಿನ್ನಿಗಿಂತಲೂ ಹೆಚ್ಚು ಕಾಲ ಪ್ರಭಾವ ತೋರುತ್ತವೆ. ಸತು ಸಂಯೋಗ ಆದರಂತೂ ಇನ್ನೂ ಹೆಚ್ಚು ಹೊತ್ತು ಇದರ ಪ್ರಭಾವ ಮುಂದುವರಿಯುತ್ತದೆ.

ಸಾಮಾನ್ಯ ಬಳಕೆಯಲ್ಲಿ ಮುಖ್ಯವಾಗಿ ಮೂರು ಬಗೆಗಳ ಇನ್ಸುಲಿನ್ನುಗಳಿವೆ. ನಾಲ್ಕಾರು ತಾಸುಗಳ ಪ್ರಭಾವದ ಕರಗುವ, ಸರಳ, ಸಾಧಾರಣ ಇನ್ಸುಲಿನ್; 18–24 ತಾಸುಗಳ ಕಾಲ ಇನ್ನೂ ನಿಧಾನವಾಗಿ ವರ್ತಿಸುವ ಪ್ರೋಟಮೀನ್ ಸತು ಇನ್ಸುಲಿನ್; ಇವೆರಡರ ನಡುವೆ 12–16 ತಾಸುಗಳಿರುವ ಗ್ಲೋಬಿನ್ ಇನ್ಸುಲಿನ್. ಮೊದಲಿನ ಎರಡನ್ನು ಒಟ್ಟಾಗಿ ಸೇರಿಸಿಕೊಟ್ಟರೆ, ಕೂಡಲೇ ಅಲ್ಲದೆ ನಿಧಾನದ ಪ್ರಭಾವ ಎರಡನ್ನೂ ತೋರುವುದು. ಅಲ್ಲದೆ ಲೆಂಟೆ ಇನ್ಸುಲಿನ್‌ಗಳು ತಯಾರಾಗಿ ಬಂದು ಬಳಕೆಯಲ್ಲಿವೆ. ಇವುಗಳ ಹೆಚ್ಚಳಿಕೆ ಇನ್ಸುಲಿನ್ನಿಗೆ ಮತ್ತಾವ ಹೊರ ಪ್ರೋಟೀನು ವಸ್ತುವನ್ನೂ ಸೇರಿಸದಿರುವುದರಲ್ಲಿದೆ. ಇವಲ್ಲೂ ಕೂಡಲೇ ವರ್ತಿಸುವ ಮತ್ತು ನಿಧಾನವಾಗಿ ವರ್ತಿಸುವ ಎಂಬ ಎರಡು ಬಗೆಗಳಿವೆ. ಇವನ್ನು ಒಂದಕ್ಕೊಂದು ಸೇರಿಸುವ ಪ್ರಮಾಣಗಳನ್ನು ಹೆಚ್ಚುಕಡಿಮೆ ಮಾಡುವುದರಿಂದ ರೋಗಿಗೆ ಬೇಕಿರುವಷ್ಟು ಹೊತ್ತು ವರ್ತಿಸುವ ಸಂಯುಕ್ತವನ್ನು ಪಡೆಯಬಹುದು.

ಸಾಮಾನ್ಯವಾಗಿ ಆರೋಗ್ಯವಂತರ ರಕ್ತದಲ್ಲಿರುವ ದ್ರಾಕ್ಷಿಸಕ್ಕರೆಯ ಮಟ್ಟ 0.10% (100 ಮಿಲಿಲೀಟರು ರಕ್ತದಲ್ಲಿ 100 ಮಿಲಿಗ್ರಾಂ) ಇದ್ದುದು ಇನ್ಸುಲಿನ್ನನ್ನು ಚುಚ್ಚಿದಾಗ ಕೂಡಲೆ ಇಳಿದುಹೋಗುವುದು. ರಕ್ತದಲ್ಲಿನ ದ್ರಾಕ್ಷಿಸಕ್ಕರೆಯ ಮಟ್ಟ 0.04%–0.05%ಗೆ ಇಳಿದರೆ ಕೆಲವು ವಿಚಿತ್ರ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮನಸ್ಸು ಚಂಚಲವಾಗಿ, ಮಿದುಳು ಚೋದಗೊಂಡು ಕೊನೆಗೆ ಸೆಳವುಗಳಾಗುತ್ತವೆ. ಮಯಕ ಬಂದು ಮೈಕಾವು ಇಳಿದು ರೋಗಿ ತಣ್ಣಗಾಗುತ್ತಾನೆ. ರಕ್ತದಲ್ಲಿನ ಸಕ್ಕರೆಯ ಮಟ್ಟದ ಕುಸಿತದಿಂದಲೇ ಹೀಗೆಲ್ಲ ಆಗುವುದೆಂದು ತೋರಿಸಬಹುದು. ಒಂದಿಷ್ಟು ಕಬ್ಬುಸಕ್ಕರೆಯನ್ನು (ಸುಕ್ರೋಸ್) ನುಂಗಿಸಿಯೋ ದ್ರಾಕ್ಷಿಸಕ್ಕರೆಯನ್ನು ರಕ್ತನಾಳದಲ್ಲಿ ಚುಚ್ಚಿಹೊಗಿಸಿಯೋ ಎಂದಿನಂತಾಗಿಸಬಹುದು. ಎಲ್ಲಕ್ಕಿಂತಲೂ ಬಲವಾದದ್ದು ದ್ರಾಕ್ಷಿಸಕ್ಕರೆ.

ರಕ್ತದಲ್ಲಿರುವ ಸಕ್ಕರೆಯನ್ನು ಇಳಿಸುವ (ಹೈಪೊಗ್ಲೈಸೀಮಿಕ್) ಮತ್ತು ಬಾಯಿ ಮೂಲಕ ಸೇವಿಸುವ ಬಗೆಬಗೆಯ ಮದ್ದುಗಳು ಇರುವುವಾದರೂ ಇನ್ಸುಲಿನ್ನಿಗೆ ಬದಲಿ ಮದ್ದನ್ನು ಇನ್ನೂ ಯಾರೂ ಕಂಡುಹಿಡಿದಿಲ್ಲ. ಈ ಮದ್ದುಗಳಲ್ಲಿ ಕೆಲವು ಗ್ವಾನಿಡೀನಿಗೆ ಸಂಬಂಧಿಸಿರುವುದರಿಂದ ಈಲಿಯನ್ನು ಕೆಡಿಸುತ್ತವೆ. ರಾಸಾಯನಿಕ ರಚನೆಯಲ್ಲಿ ಸಲ್ಫೋನೇಮೈಡುಗಳನ್ನು ಹೋಲುವ ಮದ್ದುಗಳಲ್ಲಿ ಒಂದಾದ ಟೋಲ್ಬುಟೇಮೈಡನ್ನು ಸಿಹಿಮೂತ್ರ ರೋಗ ಅಷ್ಟಾಗಿ ಜೋರಾಗಿಲ್ಲದವರಿಗೆ ಕೊಡಬಹುದು. ಮೈಗೆ ಇದು ಹೊರ ವಸ್ತುವಾದ್ದರಿಂದ ವರ್ಷಗಟ್ಟಲೆ ಇದನ್ನು ಸೇವಿಸುವಾಗ ಕೆಡುಕಾಗದಂತೆ ಹುಷಾರಾಗಿರಬೇಕು. ಬಾಯಲ್ಲಿ ಸೇವಿಸುವ ಈ ಮದ್ದುಗಳನ್ನು ಬಳಸಬೇಕಾದರೆ ರೋಗಿಯ ಮಾಂಸಲಿಯಲ್ಲಿ ತುಸುವಾದರೂ ಇನ್ಸುಲಿನ್ ಸುರಿಯುತ್ತಿರಬೇಕು. ಇಲ್ಲವೇ ಜೊತೆಗೆ ಇನ್ಸುಲಿನ್ ಚುಚ್ಚುತ್ತಿರಬೇಕು. ಮಕ್ಕಳಲ್ಲಿ ಸಿಹಿಮೂತ್ರ ವಿದ್ದರೂ ದೊಡ್ಡವರಲ್ಲಿ ಆಮ್ಲವಿಷತೆಯೋ ಮಯಕವೋ ಆಗಿದ್ದರೂ, ಈ ಮದ್ದಿನ ಮಾತ್ರೆಗಳು ಕೆಲಸಕ್ಕೆ ಬಾರವು. ಕೇವಲ ಆಹಾರ ಪಥ್ಯಗಳಿಂದ ಮೂತ್ರ ಸಕ್ಕರೆ ತಗ್ಗಬಹುದಾದ, 10 ವರ್ಷಗಳಿಂದೀಚೆಗೆ ರೋಗ ಇರುವುದು ತೋರಿರುವ, ವಯಸ್ಸಾದ ರೋಗಿಗಳಿಗೆ ಮಾತ್ರ ಮಾತ್ರೆಗಳ ಮದ್ದು ಒಳ್ಳೆಯದು.

ಮತ್ತೆ ಮತ್ತೆ ತೆಗೆದು ಚುಚ್ಚಲು ಅನುವಾಗುವ ದ್ರಾವಣವಾಗಿ ಇನ್ಸುಲಿನ್ ಸಣ್ಣ ಸೀಸೆಗಳಲ್ಲಿ ದೊರೆಯುವುದು. ಇದು ಜೀವಿಮಡಿ (ಸ್ಟರೈಲ್) ಆಗಿರುವುದಲ್ಲದೆ ಆಮ್ಲದಲ್ಲಿ ಇರುವುದರಿಂದ ಕೆಡದಂತಿರುವುದು. ಈ ಚುಚ್ಚುಗೆಯ ದ್ರಾವಣದ ಒಂದು ಮಿಲಿಲೀಟರಲ್ಲಿ 20, 40 ಇಲ್ಲವೇ 80 ಇನ್ಸುಲಿನ್ ಏಕಮಾನಗಳಿರುತ್ತವೆ. ಈ ಒಂದಕ್ಕೊಂದು ಅದಲುಬದಲಾದರೆ ಬಲು ತೊಂದರೆ ಅಗುವುದರಿಂದ ಇವುಗಳ ಮೇಲೆ ಗೊತ್ತಾದ ಬಣ್ಣಗಳನ್ನು ಎದ್ದುಕಾಣುವಂತೆ ಅಚ್ಚುಹಾಕಿರುತ್ತದೆ.

ಇನ್ಸುಲಿನ್ನಿನ ಪ್ರಮಾಣ, ಬಲಗಳನ್ನು ಕಂಡುಕೊಳ್ಳಲು ಜೀವವೈಜ್ಞಾನಿಕ ವಿಧಾನಗಳಿವೆ. ಮೊಲಗಳಿಗೆ ಇನ್ಸುಲಿನ್ ಚುಚ್ಚಿ, ಅದರ ರಕ್ತದಲ್ಲಿನ ಸಕ್ಕರೆ ಇಳಿದ ರೀತಿಯನ್ನು ಗುರುತಿಸುವುದರಿಂದ ನಿರ್ಧರಿಸಬಹುದು. ಇನ್ಸುಲಿನ್ನನ್ನು ತೂಕಕ್ಕಿಂತಲೂ ಏಕಮಾನಗಳಲ್ಲಿ ಅಳೆವುದೇ ರೂಢಿ, ಅನುಕೂಲ. ನಾಲ್ಕೈದು ತಾಸುಗಳು ಬರಿಯ ಹೊಟ್ಟೆಯಲ್ಲಿರುವ 2 ಕಿಲೊಗ್ರಾಂಗಳ ತೂಕದ ಮೊಲಕ್ಕೆ ಚರ್ಮದಡಿ ಚುಚ್ಚಿದರೆ ಅದರ ರಕ್ತದಲ್ಲಿನ ಸಕ್ಕರೆಯನ್ನು ಐದು ತಾಸುಗಳ ಹೊತ್ತು ಸೆಳವು ಬರಿಸುತ್ತಿರುವ ಮಟ್ಟದಲ್ಲಿ (0.45%) ಇರಿಸಲು ಬೇಕಾಗುವಷ್ಟು ಇನ್ಸುಲಿನ್ ಒಂದು ಏಕಮಾನ. ಒಂದು ಮಿಲಿಗ್ರಾಂ ತೂಕದಲ್ಲಿ 24 ಏಕಮಾನಗಳಿರುತ್ತವೆ. ಪ್ರಪಂಚದಲ್ಲಿ ಎಲ್ಲ ನಾಡುಗಳಲ್ಲೂ ಒಂದೇ ಅಳತೆ ಇರಬೇಕೆಂದೂ ಈ ಅಂತಾರಾಷ್ಟ್ರೀಯ ಏಕಮಾನವನ್ನು ನಿರ್ಧರಿಸಿ ಒಣಗಿಸಿದ ಅಚ್ಚ ಇನ್ಸುಲಿನ್ನನ್ನು ಲಂಡನ್, ಪ್ಯಾರಿಸ್ ಇತ್ಯಾದಿ ಕೆಲವೆಡೆಗಳಲ್ಲಿ ಜೋಪಾನವಾಗಿ ಇರಿಸಿದ್ದಾರೆ. ಇನ್ನೂ ಚೊಕ್ಕವಾದ ಇನ್ಸುಲಿನ್ ದೊರೆತಾಗ ಕಚ್ಚಾ ಇನ್ಸುಲಿನ್ ಬದಲಾಗಿ ಇರಿಸಲಾಯಿತು. ತನಿಖೆಯ ಪ್ರಯೋಗಾಲಯಗಳವರು(ಟೆಸ್ಟಿಂಗ್ ಲ್ಯಾಬೊರೇಟರೀಸ್) ತಮ್ಮದೇ ಶಿಷ್ಟಮಾನಗಳನ್ನು (ಸ್ಟ್ಯಾಂಡರ್ಡ್ ಯೂನಿಟ್ಸ್) ಇಟ್ಟುಕೊಂಡಿದ್ದು ಆಗಿಂದಾಗ್ಗೆ ಅಂತಾರಾಷ್ಟ್ರೀಯ ಮಾನದೊಂದಿಗೆ ತಾಳೆನೋಡಿಕೊಳ್ಳುವರು. ಸಿಹಿಮೂತ್ರ ರೋಗಿಗಳು ಪ್ರಪಂಚದಲ್ಲಿ ಎಲ್ಲಿ ಹೋದರೂ ಒಂದೇ ಪ್ರಮಾಣದ ಇನ್ಸುಲಿನ್ ದೊರೆವಂತಾಗುವುದೇ ಇದರ ಮುಖ್ಯ ಉದ್ದೇಶ.

**(ನೋಡಿ– ಒಳಸುರಿರ ಗ್ರಂಥಿ–ಶಾಸ್ತ್ರ; ಚೋದನಿಕಗಳು; ಪ್ರಾಣಿಸಾರಕಗಳು; ಮಾಂಸಲಿ; ಸಿಹಿಮೂತ್ರ)**

**ರಾಸಾಯನಿಕ ರಚನೆ:** ಇನ್ಸುಲಿನ್ನಿನ ಮಹತ್ತಮ ಅಣುತೂಕ ಸುಮಾರು 5,700. ಕ್ಷಾರಾಮ್ಲಾಂಕ (pH) 5–4ರಲ್ಲಿ ಇನ್ಸುಲಿನ್ ಸಮವಿದ್ಯುತ್ತಿನಲ್ಲಿ (ಐಸೊ ಎಲೆಕ್ಟ್ರಿಕ್) ಇರುವುದು. ಇನ್ಸುಲಿನ್ ಆಮ್ಲವಾಗಿರುವುದರಿಂದ ಕ್ಷಾರಗಳೊಂದಿಗೆ ಸಂಯೋಗವಾಗಿ ಲವಣಗಳಾಗುತ್ತವೆ. ಇನ್ಸುಲಿನ್ ಅಣುವಿಗೂ ಅದರ ಅಣ್ವಂಶಗಳಿಗೂ ಅದರ ನಿಜಗೆಲಸಕ್ಕೂ ಸಂಬಂಧ ಕಲ್ಪಿಸುವ ಯತ್ನಗಳಾಗಿವೆ. ಇದಕ್ಕಾಗಿ ಪ್ರೋಟೀನಾಗಿರುವ ಇನ್ಸುಲಿನ್ ಬಲುಚೊಕ್ಕ ರೂಪದಲ್ಲಿ ಇರಬೇಕು. ಕೇವಲ ಹರಳಿನ ರೂಪದಲ್ಲಿ ಇದ್ದ ಮಾತ್ರಕ್ಕೆ ಚೊಕ್ಕವಾಗಿದೆ ಎನ್ನುವಂತಿಲ್ಲ. ಇದಕ್ಕಾಗಿ ಅದನ್ನು ಕಟ್ಟುನಿಟ್ಟಾದ ಭೌತರಸಾಯನಿಕ, ರಾಸಾಯನಿಕ, ಜೀವವೈಜ್ಞಾನಿಕ ತನಿಖೆಗಳಿಗೆ ಒಳಪಡಿಸಬೇಕು. ರಕ್ತದಲ್ಲಿ ಇನ್ಸುಲಿನ್ ಒಂದು ಪಾಲು ಪ್ರೋಟೀನಿಗೆ ಅಂಟಿಕೊಂಡು ಇರುವುದು.

ಪ್ರೋಟೀನಾಗಿರುವ ಇನ್ಸುಲಿನ್ನಿನ ನಿಜಗೆಲಸಕ್ಕೆ ಎರಡು ಹಲಪೆಪ್ಟೈಡು ಸರಪಳಿಗಳು ಇದ್ದೇ ತೀರಬೇಕು. ಎ ಭಾಗಾಂಶದ ಸರಪಣಿಯಲ್ಲಿ ಗ್ಲೈಸೀನಿಂದ ಆರಂಭವಾಗಿ 21 ಅಮೈನೋ ಆಮ್ಲಗಳಿವೆ. ಬಿ ಭಾಗಾಂಶದ ಸರಪಳಿ ಫಿನೈಲ್ ಅಲನೀನಿಂದ ಮೊದಲಾಗಿ 30 ಅಮೈನೋ ಆಮ್ಲಗಳಿವೆ. ಎರಡು ಡೈಸಲ್ಫೈಡ್ ಕೂಡಿಕೆಗಳು ಇರುವುದೊಂದು ವಿಶೇಷ. ಈ ಕೂಡಿಕೆಗಳು ಒಡೆದರೆ ಇನ್ಸುಲಿನ್ ಕೆಲಸ ಕೆಡುತ್ತದೆ. ಆದರೂ ಇನ್ಸುಲಿನ್ನಿನಲ್ಲಿರುವ ಎಷ್ಟೋ ಅಮೈನೋ ಆಮ್ಲಗಳು ಬೇಕೇಬೇಕಿರುವಂತೆ ಕಾಣವುದು. ಎ ಭಾಗಾಂಶದ ಸರಪಳಿಯ ಡೈಸಲ್ಫೈಡ್ ಸುತ್ತಿನಲ್ಲಿರುವ ಅಮೈನೊ ಆಮ್ಲಗಳು ಒಂದೊಂದು ಪ್ರಾಣಿಯಲ್ಲೂ ಬೇರೆ ಬೇರೆ ಇರುವುದೇ ಇದರ ಉದಾಹರಣೆ. ಹಾಗೆ ಬಿ ಭಾಗಾಂಶದ ಸರಪಣಿಯ ಕೊನೆಯಲ್ಲಿರುವ ಅಲನೀನನ್ನು ತೆಗೆದರೂ ಇನ್ಸುಲಿನ್ ಪ್ರಭಾವ ಏನೂ ವ್ಯತ್ಯಾಸವಾಗದು. ಕೊನೆಯ ಎಂಟು ಅಮೈನೋ ಆಮ್ಲಗಳನ್ನು ತೆಗೆದುಹಾಕಿದರೆ, ಕೇವಲ 15% ರಷ್ಟು ಪ್ರಭಾವ ಕುಗ್ಗುತ್ತದೆ. ಆದರೆ ಕರುಳಲ್ಲಿ ಸುರಿಬೀಳುವ (ಟ್ರಿಪ್ಸಿನ್) ತೆರನ ರಸದಿಂದ ಇನ್ಸುಲಿನ್ನಿನ ಅಮೈನೋ ಆಮ್ಲಗಳ ಒಂದೆರಡು ಕೊಂಡಿಗಳು ಕಳಚಿದರೂ ಇನ್ಸುಲಿನ್ ಪ್ರಭಾವ ಪೂರ್ತಿ ಕಳೆಯುತ್ತದೆ. ಒಡೆದು ಬಿದ್ದ ಭಾಗಾಂಶಗಳು ರಕ್ತ ಸಕ್ಕರೆಯ ಮಟ್ಟ ಇಳಿಸವು. ಉಳಿದ ಪ್ರೋಟೀನುಗಳಲ್ಲಿ ಇರುವ ಹಾಗೆ, ಇಲ್ಲಿ ಮುಖ್ಯವಾಗಿ 'ಚಟುವಟಿಕೆಯ ಕೇಂದ್ರ' ಯಾವ ಅಮೈನೋ ಆಮ್ಲದಲ್ಲಿ ಇದೆಯೆಂದು ಗೊತ್ತಾಗಿಲ್ಲ. ಇನ್ಸುಲಿನ್ ಅಣುವಿನಲ್ಲಿ ಇತರ ಅಮೈನೋ

**ಎ ಸರಪಣಿ**

ಗ್ಲೈ—ಐಲ್ಯೂ—ವ್ಯಾ—ಗೂ—ಗ್ಲೂ—ಸಿಸ್—ಗಂಧಕ—ಗಂಧಕ—ಸಿಸ್—ಸೆರೀ—ಲ್ಯೂ—ಟೈರೊ—ಗ್ಲೂ—ಲ್ಯೂ—ಗ್ಲೂ—ಆಸ್—ಟೈರೊ—ಸಿಸ್—ಅಸ್

। ।

ಸಿಸ್—ಅಲ—ಸೇರೀ—ವ್ಯಾ ಗಂಧಕ

। (8) (9) (10) ।

ಗಂಧಕ ಗಂಧಕ

। ।

ಗಂಧಕ ಗಂಧಕ

। ।

ಫಿಅ—ವ್ಯಾ—ಅಸ್—ಗ್ಲೂ—ಹಿಸ್ಟಿ—ಲ್ಯೂ—ಸಿಸ್—ಗ್ಲೈ—ಸೆರೀ—ಹಿಸ್ಟಿ—ಲ್ಯೂ—ವ್ಯಾ—ಗ್ಲೂ—ಅಲ—ಲ್ಯೂ—ಟೈರೊ—ಲ್ಯೂ—ವ್ಯಾ—ಸಿಸ್—ಗ್ಲೈ—ಗ್ಲೂ—ಅರ್ಜಿ—ಗ್ಲೈ—ಫಿಅ—ಫಿಅ—ಟೈರೊ—

ತ್ರಿಯೊ—ಪ್ರೊ—ಲೈ—ಅಲ

।

(30)

**ಬಿ ಸರಪಣಿ**

**ಚಿತ್ರ 4 ದನದಿಂದ ತಯಾರಾದ ಇನ್ಸುಲಿನ್ ಅಣುವಿನಲ್ಲಿ ಅಮೈನೋ ಆಮ್ಲಗಳ ಜೋಡಣೆ**

ಸಂಕೇತಗಳು : ಆಲ–ಅಲನೀನ್, ಗ್ಲೈ ಗ್ಲೈಸೀನ್, ಐಲ್ಯೂ ಯಸೊಲ್ಯೂಸೀನ್, ವ್ಯಾ–ವ್ಯಾಲೀನ್, ಗ್ಲೂ–ಗ್ಲೂಟೇಮಿಕಾಮ್ಲ
ಸಿಸ್–ಸಿಸ್ಟೀನ್, ಸೆರೀ–ಸೆರೀನ್, ಲ್ಯೂ–ಲ್ಯೂಸೀನ್, ಟೈರೊ–ಟೈರೊಸೀನ್, ಅಸ್–ಅಸ್ಪರ್ಜೀನ್, ಫಿಅ–ಫಿನೈಲ್ ಅಲನೀನ್,
ತ್ರಿಯೊ–ತ್ರಿಯೋನೀನ್, ಪ್ರೋ–ಪ್ರೊಲೀನ್, ಲೈ–ಲೈಸೀನ್, ಹಿಸ್ಟಿ–ಹಿಸ್ಟಿಡೀನ್, ಅರ್ಜಿ–ಅರ್ಜಿ–ಅರ್ಜಿನೀನ್.

ಆಮ್ಲಗಳೊಂದಿಗೆ ಮುಖ್ಯವಾಗಿ ಟೈರೋಸೀನ್, ಸಿಸ್ಟೀನ್, ಗ್ಲುಟೇಮಿಕ್ ಆಮ್ಲ. ಲ್ಯೂಸೀನ್, ಅರ್ಜಿನೀನ್, ಲೈಸೀನುಗಳಿರುವುವು. ಟ್ರಿಪ್ಟೊಫೇನ್ ಇಲ್ಲ. ಇವಲ್ಲಿ ಮೊದಲ ಮೂರರ ವಿಶಿಷ್ಟ ಜೋಡಣೆಯೇ ಇದರ ಪ್ರಭಾವಕ್ಕೆ ಮುಖ್ಯ ಕಾರಣ.

ಬೇರೆ ಬೇರೆ ಪ್ರಾಣಿಗಳ ಇನ್ಸುಲಿನ್ ಅಣುವಿನ ರಚನೆಯಲ್ಲಿ ಎ ಭಾಗಾಂಶ ಸರಪಣಿಯಲ್ಲಿ ಮೂರು (8, 9, 10) ಅಮೈನೋ ಆಮ್ಲಗಳೂ ಬಿ ಭಾಗಾಂಶ ಸರಪಣಿಯಲ್ಲಿ ಕೊನೆಯ (30) ಅಮೈನೊ ಆಮ್ಲವೂ ಬೇರೆ ಬೇರೆ ಆಗಿರುವುವು.

ಕಾಡ್ ಮೀನಿನಲ್ಲಿ ತಯಾರಾಗುವ ಇನ್ಸುಲಿನ್ನಿಗೂ ಇದೇ ಪ್ರಭಾವ ಇದ್ದರೂ ಅದರ ರಚನೆಯೇ ಬೇರೆ. ಆದ್ದರಿಂದ ಇನ್ಸುಲಿನ್ ಪ್ರಭಾವ ಪೂರ್ತಿ ಚೆನ್ನಾಗಿರಲು ಅದರ ಒಟ್ಟಾರೆ ಆಕಾರ ಮುಖ್ಯ ಎಂದಂತಾಯಿತು. ಮಾರಾಟಕ್ಕೆ ಈ ಮೊದಲು ಬರುತ್ತಿದ್ದ ಇನ್ಸುಲಿನ್ನುಗಳೆಲ್ಲ ದನ, ಹಂದಿಗಳಿಂದ ತಯಾರಾದವು. ಯಾವ ಪ್ರಾಣಿಯಿಂದಲೇ ಬಂದಿರಲಿ ಇನ್ಸುಲಿನ್

| | ಎ–8 | ಎ–9 | ಎ–10 | ಬಿ–30 |
|---|---|---|---|---|
| ಮಾನವ | ತ್ರಿಯೊ | ಸೆರೀ | ಐಲ್ಯೂ | ತ್ರಿಯೊ |
| ಹಂದಿ | ತ್ರಿಯೊ | ಸೆರೀ | ಐಲ್ಯೂ | ಅಲ |
| ದನ | ಅಲ | ಸೆರೀ | ವ್ಯಾ | ಅಲ |
| ಕುರಿ | ಅಲ | ಗ್ಲೂ | ವ್ಯಾ | ಅಲ |
| ಕುದುರೆ | ತ್ರಿಯೊ | ಗ್ಲೈ | ಐಲ್ಯೂ | ಅಲ |
| ತಿಮಿಂಗಿಲ | ತ್ರಿಯೊ | ಸೆರೀ | ಐಲ್ಯೂ | ಅಲ |
| ನಾಯಿ | ತ್ರಿಯೊ | ಸೆರೀ | ಐಲ್ಯೂ | ಅಲ |
| ಮೊಲ | ತ್ರಿಯೊ | ಸೆರೀ | ಐಲ್ಯೂ | ಸೆರೀ |

ನಿಜಗೆಲಸಗಳು ಒಂದೇ ತೆರನಾಗಿವೆ. ಇನ್ಸುಲಿನ್ ಅಣುವಿನ ರೋಧಜನಕ (ಆಂಟಿಜನ್) ನಿರ್ಧಾರಕ (ಡಿಟರ್ಮಿನೇನಂಟ್) ಎ ಭಾಗಾಂಶ ಸರಪಣಿಯ 8, 9, 10 ನೆಯ ಜಾಗಗಳ ಅಮೈನೋ ಆಮ್ಲಗಳಲ್ಲಿ ಇರುವುದೆಂಬ ಒಂದು ಸೂಚನೆ ಇದೆ. ಇದು ನಿಜವಾದರೆ ದನದ ಇನ್ಸುಲಿನ್ನಿಗಿಂತಲೂ ಹಂದಿಯಿಂದ ತಯಾರಾದ ಇನ್ಸುಲಿನ್ನೇ ಮಾನವ ರೋಗಿಗೆ ಚೆನ್ನಾಗಿ ಒಗ್ಗುವುದು ಎಂದಾಯಿತು. ರೋಗಿಗಳ ಚಿಕಿತ್ಸೆಯಲ್ಲಿ ತುಸುಮಟ್ಟಿಗೆ ಈ ಕಲ್ಪನೆ ನಿಜ ಎನ್ನಿಸುತ್ತದೆ. ಹಂದಿ ಇನ್ಸುಲಿನ್ನಿಗೂ ಮಾನವನ ಇನ್ಸುಲಿನ್ನಿಗೂ ಇರುವ ವ್ಯತ್ಯಾಸ ಬಿ ಭಾಗಾಂಶದ ಸರಪಣಿಯ ಕೊನೆಯ ಅಮೈನೋ ಆಮ್ಲದಲ್ಲಿ ಮಾತ್ರ.

ಈಲಿಯಲ್ಲಿ ಇನ್ಸುಲಿನ್ ಅಣು ಸಾಗಿಹೋಗುವಾಗ ಅಲ್ಲೊಂದು ದೊಳೆಯಿಂದ (ಎಂಜೈಮ್) ಎ, ಬಿ ಸರಪಣಿಗಳಾಗಿ ಒಡೆವಂತೆ ತೋರುತ್ತದೆ. ವಿದ್ಯುತ್ ಕ್ಷೇತ್ರಚಲನೆಯ (ಎಲೆಕ್ಟ್ರೊಫಾರೆಸಿಸ್) ರೀತಿಯಲ್ಲಿ ಬಿ ಸರಪಣಿ ಹಲಪೆಪ್ಟೈಡು ರಕ್ತದಲ್ಲಿರುವ ಕೋಳೆಯೊಂದಿಗೆ (ಆಲ್ಬುಮಿನ್) ಸಾಗುತ್ತದೆ. ಬಿ. ಸರಪಣಿಯ ಹಲಪೆಪ್ಟೈಡಿಗೆ ಇನ್ಸುಲಿನ್ ರೋಧಕ ಪ್ರಭಾವ ಇದೆ. ಆದ್ದರಿಂದ ಸಿಹಿಮೂತ್ರದಲ್ಲಿ ಈ ಹಲಪೆಪ್ಟೈಡು ಹೆಚ್ಚಿರುವುದೂ ಒಂದು ಕಾರಣವೆಂಬ ಊಹೆಯೂ ಇದೆ. ಇನ್ಸುಲಿನ್ನನ್ನು ಚರ್ಮದಡಿ ಉದರದ ಮುಂದಿನ ಭಿತ್ತಿಯಲ್ಲಿ ಅಥವಾ ತೊಡೆಯ ಹೊರಭಾಗ ಇಲ್ಲವೆ ಅಂಡಿನ ಭಾಗದಲ್ಲಿ ಚುಚ್ಚಿ ಒಳಸೇರಿಸಲಾಗುತ್ತದೆ. ಆ ಸ್ಥಳದಿಂದ ಇನ್ಸುಲಿನ್ ಹೀರಿಕೆ ಕೊಡುವ ಸ್ಥಳ ಮತ್ತು ಪ್ರಮಾಣ ಚರ್ಮದ ಉಷ್ಣತೆ, ಸ್ಥಳಿಕವಾಗಿ ಉಜ್ಜುವುದು ಮತ್ತು ವ್ಯಾಯಾಮವನ್ನು ಆಧರಿಸಿದೆ. (ವೈ.ಎಸ್.ಎಲ್.)

**ಇನ್ಸೆಕ್ಟಿವೋರ:** ಕೀಟಾಹಾರಿ ಪ್ರಾಣಿಗಳು. ಸಸ್ತನಿಗಳ ಒಂದು ಗುಂಪು. ಮುಳ್ಳಿಲಿ, ಮೂಗಿಲಿ ಮುಂತಾದ ಕೀಟಾಹಾರಿ ಸ್ತನಿಗಳು ಉದಾಹರಣೆಗಳು. ಇವು ಸಾಮಾನ್ಯವಾಗಿ ರಾತ್ರಿಸಂಚಾರಿಗಳು. ಇನ್ಸೆಕ್ಟಿವೋರಗಳು ಸ್ತನಿಗಳ ವಿಕಾಸದಲ್ಲಿ ಬಲು ಹಿಂದೆಯೇ ಕಾಣಿಸಿ ಕೊಂಡವು. ಆದರೆ ಇವುಗಳ ಗುಂಪಿನ ಸ್ಥಾನವನ್ನು ನಿರ್ದಿಷ್ಟವಾಗಿ ನಿಷ್ಕರ್ಷಿಸುವುದು ಕಷ್ಟ ಅನೇಕ ಮೂಲ ಗಳಿಂದ ಉದ್ಭವಿಸಿದ್ದು ಕೀಟಾಹಾರ ವನ್ನು ರೂಢಿಗೆ ತಂದುಕೊಂಡ ವಿವಿಧ ಪ್ರಾಣಿಗಳು ಈ ಗುಂಪಿಗೆ ಸೇರುವುದು ಸಾಧ್ಯ. ಹಾಗಿದ್ದರೂ ಗುಂಪನ್ನು ಸಾಮಾನ್ಯವಾಗಿ 8 ಕುಟುಂಬಗಳಾಗಿ ವಿಭಾಗಿಸಿದೆ. ಕೀಟಾಹಾರ ದಿಂದಾಗಿ ಇವುಗಳ ರಚನೆಯಲ್ಲಿ ಅನೇಕ ಮಾರ್ಪಾಡುಗಳಾಗಿವೆ. ಅಗಿಯುವ ಕೆಲಸವಿಲ್ಲ ದಿರುವುದರಿಂದ ಹಲ್ಲುಗಳು ಸರಳವಾಗಿರುತ್ತದೆ ಇಲ್ಲವೆ ನಶಿಸಿಯೂ ಹೋಗಿರಬಹುದು. ಇವುಗಳ ನಾಲಿಗೆ ಕೀಟಗಳನ್ನು ಸಂಗ್ರಹಿಸಲು ಅನುಕೂಲಿಸುವಂತೆ ಅಂಟಿನಿಂದ ಕೂಡಿರುತ್ತದೆ.



(ಎಚ್.ಬಿ.ಡಿ.)

**ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ (ಇಂಡಿಯ), ದಿ:** ಭಾರತದ ಎಂಜಿನಿಯರುಗಳ ಸಂಸ್ಥೆ. ಸ್ಥಾಪನೆ 1920ರಲ್ಲಿ, ಉದ್ಘಾಟನೆ 1921ರಲ್ಲಿ. ಕೇಂದ್ರ ಕಚೇರಿ ಕೊಲ್ಕತ್ತೆಯಲ್ಲಿದೆ. ರಾಯಲ್ ಪ್ರಣಾಳಿಕೆ ದೊರೆತುದರ ಫಲವಾಗಿ 1935ರಲ್ಲಿ ಭಾರತದ ಎಂಜಿನಿಯರುಗಳ ಪ್ರತಿನಿಧಿ ಸಂಸ್ಥೆಯಾಗಿ ಅಸ್ತಿತ್ವ ಗಳಿಸಿತು. ಉದ್ದೇಶ – ಭಾರತದ ಎಂಜಿನಿಯರುಗಳ ಕಾರ್ಯದಕ್ಷತೆಯ ವರ್ಧನೆ, ಗೌರವಯುತ ಬಾಳ್ವೆ ನಡೆಸಲು ಅವರಿಗೆ ಅನುಕೂಲ ಒದಗಿಸುವುದು, ತಾಂತ್ರಿಕ ಪರೀಕ್ಷೆ ನಡೆಸುವುದು, ಎಂಜಿನಿಯರಿಂಗಿನ ವಿವಿಧ ಶಾಖೋಪಶಾಖೆಗಳಲ್ಲಿ ಬೆಳೆಯುತ್ತಿರುವ ಜ್ಞಾನದ ವಿನಿಮಯದ ಏರ್ಪಾಡು, ಇತ್ಯಾದಿ. ಸದಸ್ಯತ್ವ ಪಡೆಯಲು ಸಂಸ್ಥೆಯ ಪರೀಕ್ಷಾಮಂಡಲಿ ಏರ್ಪಡಿಸುವ ಮೆಂಬರ್‌ಷಿಪ್ ಪರೀಕ್ಷೆಯಲ್ಲಿ (ಎ.ಎಂ.ಐ.ಇ.) ಉತ್ತೀರ್ಣನಾಗಬೇಕು ಅಥವಾ ಹಲವಾರು ವರ್ಷಗಳ ಉದ್ಯೋಗಾನುಭವ ಪಡೆದಿರುವ ಬಿ.ಇ. ಪದವೀಧರನಾಗಿ ಸಂಸ್ಥೆಯಿಂದ ವಿನಾಯಿತಿ ಪಡೆದಿರಬೇಕು. ವಾರ್ಷಿಕ ಪರೀಕ್ಷೆ ನಡೆಸಿ, ಈ ಸಂಸ್ಥೆ ನೀಡುತ್ತಿರುವ ಎ.ಎಂ.ಐ.ಇ. ಪದವಿ ಬಿ.ಇ. ಪದವಿಗೆ ಸಮಾನವೆಂದು ಭಾರತ ಸರ್ಕಾರ ಪರಿಗಣಿಸಿದೆ. 2005ರಲ್ಲಿ ಸಂಸ್ಥೆಯ ಒಟ್ಟು ಸದಸ್ಯತ್ವ ಸಂಖ್ಯೆ ನಾಲ್ಕು ಲಕ್ಷಕ್ಕೂ ಮೀರಿದೆ. ಭಾರತದ ವಿವಿಧ ಪ್ರಾಂತಗಳ ರಾಜಧಾನಿಗಳಲ್ಲಿ ಸಂಸ್ಥೆಯ 21 ಕೇಂದ್ರಗಳಿವೆ. 72 ಸ್ಥಳೀಯ ಕೇಂದ್ರಗಳು ಬೇರೆ ಬೇರೆ ಮುಖ್ಯ ಪಟ್ಟಣಗಳಲ್ಲಿವೆ. ಸಂಸ್ಥೆಯ ಕೇಂದ್ರಗಳು ಅಬುಧಾಬಿ, ಬಹ್ರೇನ್, ದುಬೈ, ಕುವೈಟ್ ಮತ್ತ ಖತಾರ್‌ಗಳಲ್ಲಿವೆ.

ಈ ಸಂಸ್ಥೆಯು ವರ್ಷಕ್ಕೆ ಎರಡು ಬಾರಿ ನಡೆಸುವ ಪರೀಕ್ಷೆಗಳಲ್ಲಿ ಸುಮಾರು 1 ಲಕ್ಷ ಪರೀಕ್ಷಾರ್ಥಿಗಳು ಭಾಗವಹಿಸುತ್ತಾರೆ. ಬಿ.ಇ. ವ್ಯಾಸಂಗ ಮಾಡಲು ಅವಕಾಶ ಸಿಕ್ಕದ ಸಹಸ್ರಾರು ಆಕಾಂಕ್ಷಿಗಳು ಸಂಸ್ಥೆಯು ನಡೆಸುತ್ತಿರುವ ಈ ಪರೀಕ್ಷೆಗಳ ಮೂಲಕ ಎಂಜನಿಯರ್ ಪದವಿಯನ್ನು ಗಳಿಸಲು ಅವಕಾಶವನ್ನು ಪಡೆಯುತ್ತಿದ್ದಾರೆ.

ಎ.ಎಂ.ಐ.ಇ. ಗಳಿಸಿದವರು ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರಗಳ, ಕೇಂದ್ರ ಮತ್ತು ರಾಜ್ಯ ಲೋಕ ಸೇವಾ ಆಯೋಗಗಳ ಹುದ್ದೆಗಳಿಗೆ ಸ್ಪರ್ಧಿಸಲು ಅರ್ಹತೆ ಪಡೆದಿರುತ್ತಾರೆ. ಭಾರತದ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಐ.ಐ.ಟಿ.ಗಳಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡಲೂ ಇವರಿಗೆ ಅವಕಾಶ ಉಂಟು.

ಸಂಸ್ಥೆಯ ನೇತೃತ್ವದಲ್ಲಿ ರಾಷ್ಟ್ರೀಯ ವಿನ್ಯಾಸ ಮತ್ತು ಸಂಶೋಧನಾ ಸಂಸ್ಥೆ, ಗ್ರಾಮೀಣ ವಿಕಾಸ ಸಂಸ್ಥೆ, ಎಂಜನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯ, ಜಲ ನಿರ್ವಹಣ ವೇದಿಕೆ ಎಂಬ ವಿವಿಧ ಉದ್ದೇಶಗಳಿಗೆ ಸ್ಥಾಪಿಸಲ್ಪಟ್ಟಿರುವ ಅಂಗ ಸಂಸ್ಥೆಗಳು ಕ್ರಮವಾಗಿ ಬೆಂಗಳೂರು, ಕೊಲ್ಕತ್ತ, ಹೈದರಾಬಾದ್ ಮತ್ತು ಅಹಮದಾಬಾದ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಕರ್ನಾಟಕದಲ್ಲಿ ರಾಜ್ಯದ ಕೇಂದ್ರವು ಬೆಂಗಳೂರಿನಲ್ಲಿಯೂ, ಸ್ಥಳೀಯ ಕೇಂದ್ರಗಳು ಬೆಳಗಾವಿ, ದಾವಣಗೆರೆ, ಧಾರವಾಡ, ಗುಲ್ಬರ್ಗ, ಮಂಗಳೂರು, ಮುನೀರಾಬಾದ್ ಮತ್ತು ಮೈಸೂರುಗಳಲ್ಲಿಯೂ ಕೆಲಸ ಮಾಡುತ್ತಿವೆ. ಕರ್ನಾಟಕದಲ್ಲಿ ಒಟ್ಟು 28,000ಕ್ಕೂ ಹೆಚ್ಚು ಮಂದಿ ಈ ಸಂಸ್ಥೆಯ ಸದಸ್ಯರಾಗಿದ್ದಾರೆ. *

**ಇಪಿಕ್ಯಾಕುವಾನ:** ಕಿಫೇಲಿಸ್ ಇಪಿಕ್ಯಾಕುವಾನ ಎ. ರಿಚ್. (ರಯೊ ಇಲ್ಲವೇ ಬ್ರೆಜಿಲಿನದು). ಇಲ್ಲವೇ ಕಿಫೇಲಿಸ್ ಅಕ್ಯುಮಿನೇಟ (ಕಾರ್ಟಜೀನ, ನಿಕರಾಗುವದ್ದು) ಕಾರ್ಸ್ಟೆನ್ ಪೊದೆಗಿಡಗಳ ಒಣ ಬೇರು ಇಲ್ಲವೇ ಬೇರುಕಾಂಡದೊಂದಿಗಿನ (ರೈಜ಼ೋಂ) ಬೇರು. ಇದು ದಕ್ಷಿಣ ಅಮೆರಿಕ, ಮಲಯ, ಮಾಯಾನ್ಮಾರ್‌ಗಳಲ್ಲಿ ಬೆಳೆಯುವುದು. ಆಯಾ ದೇಶಗಳ ಹೆಸರಿನ ಬಗೆಗಳಿವೆ. ದಕ್ಷಿಣ ಅಮೆರಿಕದ ಆದಿವಾಸಿಗಳು ಇದನ್ನು ಮದ್ದಾಗಿ ಬಳಸುತ್ತಿದ್ದುದು 17ನೆಯ ಶತಮಾನದಲ್ಲಿ ವೈದ್ಯಕ್ಕೆ ಬಂತು. ಇಪಿಕ್ಯಾಕುವಾನದಲ್ಲಿ ಮುಖ್ಯವಾಗಿ ಎರಡು ಆಲ್ಕಲಾಯ್ಡುಗಳಿವೆ; ಎಮಿಟೀನ್, ಕಿಫೇಲೀನ್. ವೈದ್ಯ ಚಿಕಿತ್ಸೆಯಲ್ಲಿ ಎಮಿಟೀನ್ ಬಳಕೆಯಲ್ಲಿದೆ. ಇಪಿಕ್ಯಾಕುವಾನ ಪುಡಿ ನುಂಗಿದರೆ ಜಠರ, ಕರುಳುಗಳನ್ನು ಕೆರಳಿಸುವುದರಿಂದ ಓಕರಿಕೆ, ವಾಂತಿ, ಉಚ್ಚಾಟ ಆಗುವುದಲ್ಲದೆ ಹಿಮ್ಮರಿಗೆಯಿಂದ (ರಿಫ್ಲೆಕ್ಸ್‌ಲಿ) ಬೆವರಿಕೆಯೂ ಪಂಗುಸಿರ್ನಾಳದ (ಬ್ರಾಂಕಿಯಲ್) ಗ್ರಂಥಿಗಳ ಸುರಿಕೆಯೂ ಹೆಚ್ಚುತ್ತವೆ. ವಾಂತಿ ಆಗಿಸದ ಪ್ರಮಾಣದಲ್ಲಿ ಕೊಟ್ಟಾಗಲೂ ಈ ಗ್ರಂಥಿಗಳ ಸುರಿಕೆಯನ್ನು ಹೆಚ್ಚಿಸುವುದರಿಂದ, ಎದೆಯಲ್ಲಿ ಸೇರಿಬಿಟ್ಟಿರುವ ಕಫವನ್ನು ಹೊರಕಳೆಯಲು ನೆರವಾಗುವುದೆಂದಿದ್ದ ಹಳೆಯ ಕಾಲದ ನಂಬಿಕೆಗೆ ಆಧಾರವಿಲ್ಲ. ಇಷ್ಟಾದರೂ ಕಫ ಕಳೆವ ಕೆಮ್ಮಿನ ಮದ್ದುಗಳಲ್ಲಿ ಈಗಲೂ ಸೇರಿಸುವ ವಾಡಿಕೆ ತಪ್ಪಿಲ್ಲ. ವಾಂತಿಗೆ ಬಹುಮಟ್ಟಿನ ಕಾರಣ ಅದರಲ್ಲಿನ ಕಿಫೇಲೀನ್, ಈಗ ಇಪಿಕ್ಯಾಕುವಾನ ವಾಂತಿಕಾರಕವಾಗಿ (ಎಮಿಟಿಕ್) ಬಳಕೆಯಲ್ಲಿಲ್ಲ. ಡೋವರನ ಪುಡಿಯಲ್ಲಿ ಇಪಿಕ್ಯಾಕುವಾನ ಬೇರಿನ ಪುಡಿ, ಅಫೀಮು ಪುಡಿ ಒಂದೊಂದೂ 10% ಪಾಲು ಇರುತ್ತದೆ. ಈ ಪುಡಿಗೆ ಮೆಲುಪಿನ ಶಾಮಕ, ನೋವು ಕಳೆವ, ಬೆವರಿಸುವ ಗುಣಗಳಿವೆ. ನೆಗಡಿ ಮತ್ತಿತರ ಬೇನೆಗಳಲ್ಲಿ ಅನುಕೂಲಕರ.

**ಎಮಿಟೀನ್:** $C_{28}H_{37}(CH_2)N_2O_4$, (ಮೀಥೈಲ್ ಕಿಫೇಲೀನ್) ಇಪಿಕ್ಯಾಕುವಾನ ಬೇರಿಂದಲೇ ಅಲ್ಲದೆ ಕೃತಕವಾಗಿಯೂ ತಯಾರಾಗುತ್ತದೆ. ಲೋಳೆಪೊರೆಯನ್ನು ಕೆರಳಿಸುವುದರಿಂದ ಇದನ್ನು ನುಂಗಿದರೆ ವಾಂತಿ ಮಾಡಿಸುತ್ತದೆ. ಇದಕ್ಕಾಗಿಯೇ ಇದನ್ನು ಮದ್ದಾಗಿ ಕೊಡಲು ಚರ್ಮದಡಿ ಆಳವಾಗಿ ಇಲ್ಲವೇ ಸ್ನಾಯುವಿನೊಳಗೆ ಚುಚ್ಚಿ ಹೊಗಿಸಬೇಕು. ಇದರ ಮುಖ್ಯ ಬಳಕೆ ಒಂದು ಬಗೆಯ ಆಮಶಂಕೆಯಾಗಿಯೂ ತೋರುವ ಚಲ್ಲಣಬೇನೆಯಲ್ಲಿ (ಅಮೀಬಿಯಾಸಿಸ್). ಬಿಸ್ಮತ್ ಅಯೊಡೈಡ್ ಒಂದಿಗೆ ದೊರೆಯುವ ಇದರ ಹೈಡ್ರೋಕ್ಲೋರೈಡಿನ ಲವಣಗಳು ಮದ್ದುಗಳು. ಮುಖ್ಯವಾಗಿ, ಕರುಳಲ್ಲಿ ಇಲ್ಲವೇ ಈಲಿ, ಪುಪ್ಪುಸಗಳ ತೆರನ ಒಳಾಂಗಗಳಲ್ಲಿ ಕೂರಾದ ಚಲ್ಲಣಬೇನೆ ಆಗಿ ಹೊಟ್ಟೆ ನುಲಿತ, ಜ್ವರ, ನೋವು, ಉಚ್ಚಾಟಗಳಿದ್ದಲ್ಲಿ ಮಾತ್ರ ಕೆಲವೇ ದಿನಗಳು ಕೊಟ್ಟರೆ ಇದರ ಪ್ರಭಾವ ಹೆಚ್ಚು. ಈಲಿಯಲ್ಲಿ ಉರಿತವೂ ಕುರುವೂ ಆಗಿದ್ದರಂತೂ ಇನ್ನೂ ಪ್ರಭಾವಕರ. ಆಮಶಂಕೆ ಬೇರೂರಿದ್ದರೆ, ರೋಗ ಅನುಭವಿಸದೆ ಕೇವಲ ಸೋಂಕನ್ನು ಹೊತ್ತು ಸಾಗಿಸಿ ಅಂಟಿಸುವ ರೋಗಿಗಳಲ್ಲಿ ಇದರ ಪ್ರಭಾವವಿಲ್ಲ. ಎಮಿಟೀನ್ ಕೊಟ್ಟಮೇಲೆ ಮೈಯಲ್ಲೇ ಬಹುಕಾಲ ಉಳಿದುಬಿಡುವುದರಿಂದ ವಿಷಕರವಾಗಬಹುದು, ಇದು ಗುಂಡಿಗೆಯ ಸ್ನಾಯುವಿಗೆ ಶಾಶ್ವತವಾಗಿ ವಿಷಕರ. ಆದ್ದರಿಂದ. ಇದನ್ನು ಪಡೆದ ರೋಗಿ ಪೂರಾ ಆರಾಮವಾಗಿರುವಂತೆ ಮಲಗಿರಲೇಬೇಕು. ಬೇಕಿರುವುದಕ್ಕಿಂತ ಹೆಚ್ಚಿನ ಪ್ರಮಾಣವನ್ನು ಕೊಡುವುದು ಎಂದಿಗೂ ತರವಲ್ಲ. ಇದರ ಬದಲಾಗಿ ಆಮಶಂಕೆ ಚಿಕಿತ್ಸೆಗಾಗಿ ಕ್ಲೋರೊಕ್ವಿನ್ ಇತ್ಯಾದಿ ಮದ್ದುಗಳಿವೆ **(ನೋಡಿ– ಆಮಶಂಕೆ; ವಮನಕಾರಿಗಳು)**. (ಡಿ.ಎಸ್.ಎಸ್.)

**ಇಪ್ಪಾರು ಚಾವಣಿ:** ಮಧ್ಯಭಾಗ ಎತ್ತರವಾಗಿದ್ದು ಎರಡು ಕಡೆ ಗೋಡೆಗಳ ಮೇಲೆ ಇಳಿಜಾರಾಗಿ ಹಾಕಿರುವ ಚಾವಣಿ (ಗೇಬಲ್ ರೂಫ್). ಕಟ್ಟಡದ ಮೇಲೆ ಒಂದು ಕೊನೆಯಿಂದ ನೋಡಿದರೆ ತ್ರಿಕೋಣಾಕೃತಿಕಾರದಲ್ಲಿ ಇರುತ್ತದೆ. ಇಂಥ ಚಾವಣಿಯಲ್ಲಿ ನೀರು ನಿಲ್ಲುವುದಿಲ್ಲ ಮತ್ತು ಇಳಿಜಾರು ಇರುವುದರಿಂದ ನೀರು ಗೋಡೆಗಳಿಗೆ ಇಳಿಯದೆ ದೂರಕ್ಕೆ ಬೀಳುತ್ತದೆ. ಈ ಚಾವಣಿಗೆ ಸಾಮಾನ್ಯವಾಗಿ ಹೆಂಚು, ಕಲ್ನಾರಿನ ತಗಡು ಹಾಗೂ ಜ಼ಿಂಕ್‌ಶೀಟುಗಳನ್ನು ಉಪಯೋಗಿಸುವರು. ಸಿಮೆಂಟ್ ಕಾಂಕ್ರೀಟ್ ಬಳಕೆಗೆ ಬರುವುದಕ್ಕೆ ಮೊದಲು, ಕೇವಲ ಹೆಂಚುಗಳನ್ನೇ ಉಪಯೋಗಿಸುತ್ತಿದ್ದ ಕಾಲದಲ್ಲಿ ಎಲ್ಲ ದೇಶಗಳ ಎಲ್ಲ ಮನೆಗಳಿಗೂ ಸಾಮಾನ್ಯವಾಗಿ ಇಪ್ಪಾರು ಚಾವಣಿ ಇರುತ್ತಿತ್ತು. ಮಳೆ ಅತಿಯಾಗಿರುವ ಮಲೆನಾಡು ಭಾಗಗಳಲ್ಲಿ ಈ ಚಾವಣಿ ತುಂಬ ಇಳಿಜಾರಾಗಿ ಇರಬೇಕಾಗುತ್ತಿತ್ತು. ಹಾಗಿಲ್ಲದಲ್ಲಿ ಇರಿಚಲಿನಿಂದ ಗೋಡೆಗಳು ನೆನೆದು ಹಾಳಾಗುತ್ತಿದ್ದವು. ಅಲ್ಲಿನ ವಾತಾವರಣಕ್ಕೆ ಎರಡು ಚಾವಣಿಗಳು



ಇಪ್ಪಾರು ಚಾವಣಿಯ ವಿವಿಧ ಬಗೆಗಳು

ಸಾಲದೆ ಬಂದಾಗ ಅಕ್ಕಪಕ್ಕದ ಗೋಡೆಗಳನ್ನೂ ಮುಚ್ಚಿ ನಾಲ್ಕು ಚಾವಣಿಗಳನ್ನು ಹಾಕತೊಡಗಿದರು. ಕೊಡಗು, ನೀಲಗಿರಿ ಮೊದಲಾದ ಮಲೆನಾಡು ಸ್ಥಳಗಳಲ್ಲಿ ಇಂಥ ಮನೆಗಳೇ ಹೆಚ್ಚು. ಬರಬರುತ್ತ ಈ ಚಾವಣಿಗಳಿಗೆ ಅಲಂಕಾರಕ್ಕಾಗಿ ಉಪಚಾವಣಿಗಳನ್ನು ಹಾಕುವ ಹವ್ಯಾಸ ಬೆಳೆಯಿತು. ಚೀನದಲ್ಲಿ ಇಂಥವನ್ನು ಮೆಟ್ಟಲು ಮೆಟ್ಟಲಾಗಿ ಕಟ್ಟುತ್ತಾರೆ: ಕಿಟಕಿಗಳ ಮೇಲೆ ಬಿಸಿಲು ಮರೆಗಾಗಿ ಹಾಕುವ ಸಜ್ಜಾಗಳನ್ನು, ಮನೆಯ ವರಾಂಡದ ತುದಿಯನ್ನು ಇಪ್ಪಾರು ಚಾವಣಿಗಳಿಂದ ಕಟ್ಟಿರುವುದಕ್ಕೆ ಅನೇಕ ಉದಾಹರಣೆಗಳಿವೆ. ಜೈನ, ಬೌದ್ಧ ಮಾದರಿಯ ದೇವಾಲಯಗಳಲ್ಲಿನ ಸುಕನಾಸಿಗಳಲ್ಲಿ ಈ ಬಗೆಯ ಚಾವಣಿಗಳನ್ನು ಕಾಣಬಹುದು. ಈಗ ಅಲಂಕಾರಕ್ಕಾಗಿ ಸಿಮೆಂಟ್ ಕಾಂಕ್ರೀಟ್‌ನಲ್ಲೂ ಇಪ್ಪಾರು ಚಾವಣಿ ಹಾಕುತ್ತಾರೆ. (ಎಚ್.ಎಸ್.ಆರ್.)

**ಇಪ್ಪೆಮರ:** ಸಪೋಟೇಸೀ ಜಾತಿಗೆ ಸೇರಿದ ಮರ. ಮಧೂಕಾ ಅಥವಾ ಬ್ಯಾಸಿಯ ಇದರ ವೈಜ್ಞಾನಿಕ ಹೆಸರು. ಇದರಲ್ಲಿ ಮ.ಲಾಂಜಿಫೋಲಿಯ (ಸಣ್ಣ ಇಪ್ಪೆ) ಮತ್ತು ಮ.ಲ್ಯಾಟಿಫೋಲಿಯ (ದೊಡ್ಡ ಇಪ್ಪೆ) ಎಂಬ ಎರಡು ಪ್ರಭೇದಗಳಿವೆ. ಉಷ್ಣವಲಯದ

ಕಾಡುಗಳಲ್ಲೂ ದಖನ್ ಪ್ರಸ್ಥಭೂಮಿಯ ಕಾಡುಗಳಲ್ಲೂ ಹೇರಳವಾಗಿ ಬೆಳೆಯುತ್ತದೆ. ಎತ್ತರ 10–20 ಮೀಟರ್‌ಗೆ. ವರ್ಷದ ಕೆಲವು ತಿಂಗಳಲ್ಲಿ ಎಲೆ ಉದುರುತ್ತದೆ. ಇದರ ಮೂಲ ಕಾಂಡ ದಪ್ಪ ಮತ್ತು ಚಿಕ್ಕದು; ಮೇಲ್ಭಾಗದಲ್ಲಿ ಹೆಚ್ಚು ಕವಲೊಡೆದು ಬೆಳೆಯುವುದು. ಎಲೆಗಳು ಸರಳ, ಪರ್ಯಾಯ ಕ್ರಮದಲ್ಲಿ ಅಥವಾ ಗುಂಪಾಗಿ ಗಿಣ್ಣುಗಳ ಮೇಲೆ ಜೋಡಿಸಿಕೊಂಡಿರುತ್ತವೆ. ಹೂ ಬಿಡುವುದು ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ. ಗುಂಪಾಗಿರುವ ಹೂಗೊಂಚಲುಗಳಲ್ಲಿ ಹೂಗಳಿರುವುವು. ಪ್ರತಿ ಹೂವಿಗೂ ತೊಟ್ಟು ಇದೆ. ಹೂ ಉಚ್ಚ ಅಂಡಾಶಯದ ದ್ವಿಲಿಂಗ ಜಾತಿಗೆ ಸೇರಿದೆ. ಪುಷ್ಪಪಾತ್ರದ ಸಂಖ್ಯೆ 4 ಅಥವಾ 5. ದಳಗಳು ಬೆಳ್ಳಗೆ: 8–10 ಸಂಖ್ಯೆಯಲ್ಲಿ ಸಂಯುಕ್ತವಾಗಿರುತ್ತವೆ. ಕೇಸರಗಳ ಸಂಖ್ಯೆ ದಳಗಳ ಸಂಖ್ಯೆಗಿಂತ 2 ಅಥವಾ 3ರಷ್ಟು. ಇವು ದಳಗಳಿಗೆ ಅಂಟಿಕೊಂಡಿರುತ್ತವೆ. ಸಂಯುಕ್ತ ಅಂಡಾಶಯದಲ್ಲಿ 8–10 ಕಾರ್ಪೆಲುಗಳಿವೆ. ಹೂಗಳು ಅನ್ಯಪರಾಗಸ್ಪರ್ಶಕ್ಕೆ ಹೊಂದಿಕೊಂಡಿವೆ. ಈ ವೃಕ್ಷ ಜೂನ್ ಅಥವಾ ಆಗಸ್ಟ್ ತಿಂಗಳುಗಳಲ್ಲಿ ಹಣ್ಣು ಬಿಡುವುದು. ಪ್ರತಿಯೊಂದು ಕಾರ್ಪೆಲಿಗೂ ಒಂದು ಬೀಜವಿದೆ. ಈ ಹಣ್ಣು ಬೆರ್ರಿ ಜಾತಿಗೆ ಸೇರಿದುದು.

ಹೂಗಳಲ್ಲಿ ಒಂದು ಬಗೆಯ ಮಧು ಇದೆ. ಯೀಸ್ಟ್ ಎಂಬ ಸೂಕ್ಷ್ಮ ಸಸ್ಯಗಳು ಮಧುವನ್ನು ಮಾದಕದ್ರವ್ಯವನ್ನಾಗಿ ಮಾಡುವುವು. ಹೂಗಳಲ್ಲಿರುವ ಮಧುವನ್ನು ಶೇಖರಿಸಿ ಮೂಲವ್ಯಾಧಿಗೆ (ಪೈಲ್ಸ್) ಔಷಧಿಯಾಗಿ ಉಪಯೋಗಿಸುವುದಿದೆ. ಬೀಜಗಳಿಂದ ಎಣ್ಣೆ ತೆಗೆದು ದೀಪಕ್ಕೂ, ಸೋಪ್, ವನಸ್ಪತಿ ತುಪ್ಪ, ಗ್ಲಿಸರೀನ್ ಮುಂತಾದುವುಗಳ ತಯಾರಿಕೆಯಲ್ಲೂ ಬಳಸುತ್ತಾರೆ. ಮರದ ತೊಗಟೆಗೆ ಔಷಧ ಗುಣವಿದೆ. ಇದರ ಮರ ಬಹಳ ಗಟ್ಟಿ. ಬಣ್ಣ ಕೆಂಪುಮಿಶ್ರ ಬೂದು. ಮರ ಬಲು ಬಾಳಿಕೆ ಬರುವುದರಿಂದ ಇದನ್ನು ಮರಮಟ್ಟುಗಳನ್ನು ಮಾಡಲು ಉಪಯೋಗಿಸುವರು. ಮೊದಲು ಬೀಜಗಳನ್ನು ಬಿತ್ತಿ ಸಸಿಗಳನ್ನು ಬೇಕಾದಲ್ಲಿ ನೆಟ್ಟು ಇಪ್ಪೆಮರದ ಕೃಷಿ ಮಾಡುತ್ತಾರೆ. (ಜಿ.ವಿ.ಪಿ.)

**ಇಪ್ಸಸ್ ಕದನ:** ಪ್ರ.ಶ.ಪೂ. 301ರಲ್ಲಿ ನಡೆದ ಈ ಕದನ ಐತಿಹಾಸಿಕ ಪ್ರಾಮುಖ್ಯ ಪಡೆದಿದೆ. ಅಲೆಕ್ಸಾಂಡರನ ಮರಣಾನಂತರ (ಪ್ರ.ಶ.ಪೂ. 323) ಆತ ಜಯಿಸಿದ್ದ ವಿಶಾಲ ಚಕ್ರಾಧಿಪತ್ಯದ ನಾನಾಭಾಗಗಳನ್ನು ಅವನ ಸೇನಾಪತಿಗಳು ಸ್ವಾಧೀನಪಡಿಸಿಕೊಂಡು ಸ್ವತಂತ್ರ್ಯವಾಗಿ ಆಳತೊಡಗಿದರು. ಒಂದು ಸಾಮ್ರಾಜ್ಯಕ್ಕೆ ಪ್ರತಿಯಾಗಿ ಅನೇಕ ಸಣ್ಣ ಸಣ್ಣ ರಾಜ್ಯಗಳಾದವು. ಇದರಲ್ಲಿ ವೈಮನಸ್ಯ ಕ್ರಮೇಣ ಬೆಳೆದು, ಕೊನೆಗೆ ಪ್ರ.ಶ.ಪೂ. 302ರಲ್ಲಿ ಪೂರ್ವ ಏಷ್ಯದಲ್ಲಿ ದೊರೆಯಾಗಿದ್ದ ಆಂಟಿಗೋನಸ್‍ನ ಮಗ ಡೆಮಟ್ರಿಯಸ್ ಮ್ಯಾಸಿಡೋನಿಯದ ದೊರೆ ಕೆಸಾಂಡರನ ರಾಜ್ಯದ ಮೇಲೆ ನುಗ್ಗಿದಾಗ ದೊಡ್ಡ ಯುದ್ಧವೇ ಪ್ರಾರಂಭವಾಯಿತು. ಶತ್ರುವಿನ ಬಲವನ್ನರಿತ ಕೆಸಾಂಡರ್ ಮೊದಲು ಸಂಧಿ ಮಾಡಿಕೊಳ್ಳ ಲೊಪ್ಪಿದ. ಯಾವ ಷರತ್ತೂ ಇಲ್ಲದೆ ಶರಣಾಗತನಾಗಬೇಕೆಂದು ಆಂಟಿಗೋನಸ್ ಅವನಿಗೆ ತಿಳಿಸಿದ. ಯುದ್ಧವನ್ನು ನಡೆಸುವುದೇ ಮೇಲೆಂದು ನಿಶ್ಚಯಿಸಿ ಕೆಸಾಂಡರ್ ಪೂರ್ವ ಏಷ್ಯದಲ್ಲಿದ್ದ ತನ್ನ ಮಿತ್ರರಾಜರನ್ನು ಆಂಟಿಗೋನಸ್‍ನ ರಾಜ್ಯದ ಮೇಲೆ ದಾಳಿಯಿಡಲು ಕೇಳಿಕೊಂಡ. ಅವರು ಒಪ್ಪಿ ನಾನಾ ಕಡೆಯಿಂದ ನುಗ್ಗಿದರು. ತಂದೆಯ ನೆರವಿಗಾಗಿ ಡೆಮೆಟ್ರಿಯಸ್ ಮ್ಯಾಸಿಡೋನಿಯವನ್ನು ಬಿಟ್ಟು ಹಿಂತಿರುಗಬೇಕಾಯಿತು. ಫ್ರಿಜಿಯ ದೇಶದ ಇಪ್ಸಸ್ ಎಂಬಲ್ಲಿ ಭಾರಿ ಕದನ ನಡೆಯಿತು. ಆಂಟಿಗೋನಸ್ ಸೋತು ರಣರಂಗದಲ್ಲಿ ಮಡಿದ. ಅಲೆಕ್ಸಾಂಡರ್ ನಿರ್ಮಿಸಿದ ಸಾಮ್ರಾಜ್ಯ ವ್ಯವಸ್ಥೆ ಮುಂದೆಂದೂ ತಲೆಯೆತ್ತದಂತೆ ಈ ಒಂದು ಕದನದಿಂದ ಮುರಿದು ಬಿತ್ತು. *

**ಇಫಿಜೀನಿಯ[1]:** ಗ್ರೀಕ್ ಮಹಾಪುರಾಣಗಳ ಪ್ರಕಾರ ಆಗಮೆಮ್ನಾನ್ ಮತ್ತು ಕ್ಲೈಟೆಮ್‍ನೆಸ್ಟ್ರರ ಒಬ್ಬ ಮಗಳು. ಒರೆಸ್ಟಿಸ್ ಮತ್ತು ಎಲೆಕ್ಟ್ರರ ಸಹೋದರಿ. ಟ್ರಾಯ್ ನಗರದ ಮೇಲೆ ಯುದ್ಧ ಘೋಷಿಸಿದಾಗ ಆಗಮೆಮ್ನಾನನ ಸೇನೆ ಆಲಿಸ್ ರೇವಿನಲ್ಲಿ ಸಿದ್ಧವಾಗಿತ್ತು. ಆಗ ದೇವಸ್ಥಾನದ ಗಂಡುಜಿಂಕೆಯನ್ನು ಬಲಿಕೊಟ್ಟನೆಂಬ ಕಾರಣದಿಂದ ಆರ್ಟೆಮಿಸ್ ದೇವತೆಗೆ ಆಗಮೆಮ್ನಾನನ ಮೇಲೆ ಕೋಪ ಬಂತು. ದೇವಕೋಪ ಶಮನವಾದ ಹೊರತು ಸಹಾಯಕಮಾರುತಗಳು ಬೀಸವು, ಹಡಗುಪಡೆ ಹೊರಡದು. ಕೋಪಕ್ಕೆ ಕಾರಣನಾದವನ ಕನ್ಯಾಪುತ್ರಿಯನ್ನು ಬಲಿಕೊಟ್ಟಲ್ಲಿ ದೇವತೆಯ ಕೋಪ ಶಮನವಾಗುವುದೆಂದು ಹೇಳಿದ ಪುರೋಹಿತವಚನದಂತೆ ಆಗಮೆಮ್ನಾನ್ ಇಫಿಜೀನಿಯಳನ್ನು ಬಲಿಕೊಡುವ ಸಿದ್ಧತೆ ನಡೆಸಿದ. ಅಕಿಲೀಸನಿಗೆ ಕೊಟ್ಟು ಮದುವೆ ಮಾಡುತ್ತೇನೆಂದು ಹುಸಿ ಆಶೆ ತೋರಿಸಿ ಅವಳನ್ನು ಅಲ್ಲಿಗೆ ಕರೆಸಿದ. ಆ ಹೆಣ್ಣುಮಗಳ ಮುಗ್ಧತೆಯನ್ನು ಕಂಡು ಕನಿಕರಿಸಿದ ದೇವತೆ ಅವಳಿಗೆ ಪ್ರತಿಯಾಗಿ ಜಿಂಕೆಯೊಂದನ್ನು ವಧ್ಯಸ್ಥಾನದಲ್ಲಿರಿಸಿ ಕನ್ಯೆಯನ್ನು ಟಾರಿಯನ್ನರ ನಾಡಿಗೊಯ್ದು ಅಲ್ಲಿ ಅವಳನ್ನು ತನ್ನ ಪೂಜಾರಿಣಿಯಾಗಿ ಇರಿಸಿದಳು. ಅವಳನ್ನು ಬಲಿಕೊಟ್ಟನೆಂದೂ ಒಂದು ಕಥೆ ಇದೆ. ಊರಿಗೆ ಬಂದ ಹೊಸಬರನ್ನು ದೇವತೆಗೆ ಬಲಿಯಿಕ್ಕುವುದು ಟಾರಿಸ್ ನಾಡಿನವರ ಸಂಪ್ರದಾಯ. ಆರ್ಟೆಮಿಸಳ ಪ್ರತಿಮೆಯೊಂದನ್ನು ತರಲು ಅಲ್ಲಿಗೆ ಬಂದ ಒರೆಸ್ಟಿಸ್‍ನನ್ನು ಆ ಜನ ಬಲಿಗೊಡಲು ಯತ್ನಿಸಿದಾಗ ಇಫಿಜೀನಿಯ ತನ್ನ ಸಹೋದರನನ್ನು ಗುರುತಿಸಿ ದೇವತೆಯ ಪ್ರತಿಮೆಯನ್ನು ತೆಗೆದುಕೊಂಡು ಅವನೊಂದಿಗೆ ಗ್ರೀಸಿಗೆ ಓಡಿಹೋಗುತ್ತಾಳೆ.

ಈ ಕಥೆಗೆ ಅನೇಕ ಪಾಠಾಂತರಗಳಿವೆ. ಇಫಿಜೀನಿಯಳ ಕಥೆಯನ್ನು ಪ್ರಸಿದ್ಧ ನಾಟಕಕಾರರಾದ ಈಸ್ಕಿಲಸ್, ಸೊಫೋಕ್ಲಿಸ್ ಮುಖ್ಯವಾಗಿ ಯೂರಿಪಿಡೀಸ್–ಇವರೂ ಈಚೆಗೆ ರ್‍ಯಾಸೀನ್ ಮತ್ತು ಗಯಟೆ ಕವಿಗಳೂ ಬಳಸಿಕೊಂಡು ನಾಟಕರಚನೆ ಮಾಡಿದ್ದಾರೆ. *

**ಇಫಿಜೀನಿಯ[2]:** ಚಿಕ್ಕ ಮೂಲಿಕೆ ಸಸ್ಯಗಳ ಜಾತಿಯದು. 12 ಪ್ರಭೇದಗಳಿವೆ. ದಕ್ಷಿಣ ಆಫ್ರಿಕ, ಮಡಗಾಸ್ಕರ್, ಭಾರತ, ಆಸ್ಟ್ರೇಲಿಯ, ನ್ಯೂಜಿಲೆಂಡ್‍ಗಳ ಉಷ್ಣವಲಯ ಪ್ರದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಭಾರತದಲ್ಲಿ ಈ ಜಾತಿಗೆ ಸೇರಿದ ಇಫಿಜೀನಿಯ ಇಂಡಿಕ ಮತ್ತು ಇಫಿಜೀನಿಯ ಪ್ಯಾಲಿಡ ಎಂಬ ಎರಡು ಮುಖ್ಯ ಪ್ರಭೇದಗಳು ಅನೇಕ ಕಡೆಗಳಲ್ಲಿ ಕಂಡುಬಂದಿವೆ.

ಈ ಸಸ್ಯದ ಕಾಂಡ ಬಲು ಸಣ್ಣದು. ಭೂಮಿಯ ಒಳಗೆ ಸಣ್ಣ ಈರುಳ್ಳಿಯಂಥ ಗೆಡ್ಡೆಗಳಿರುತ್ತವೆ. ಎಲೆಗಳು ಕೆಲವೇ ಇದ್ದು ಹೂಗಳು ಬಹು ಆಕರ್ಷಕ ವರ್ಣಗಳಿಂದ ಕೂಡಿ ಬಹು ಸುಂದರವಾಗಿರುತ್ತವೆ. ಹೂಗಳಲ್ಲಿ ಆರು ಪೆರಿಯಾಂತ್ ಭಾಗಗಳು, ಆರು ಕೇಸರಗಳು ಮತ್ತು ಮೂರು ಭಾಗಗಳಾಗಿ ವಿಂಗಡಣೆಗೊಂಡ ಅಂಡಾಶಯಗಳು ಇವೆ. ಕಾಯಿ ಅನಂತರ ಮೂರು ಭಾಗವಾಗಿ ಒಡೆದಾಗ ಬೀಜಗಳು ಪ್ರಸಾರವಾಗುತ್ತವೆ.

ಇಫಿಜೀನಿಯ ಇಂಡಿಕ ಸಸ್ಯದ ಹೂಗಳಿಂದ ಒಂದು ಬಗೆಯ ಕೆಂಪು ಬಣ್ಣವನ್ನು ತೆಗೆಯುತ್ತಾರೆ. ಗೆಡ್ಡೆಗಳ ರಸವನ್ನು ಬೆಳ್ಳುಳ್ಳಿ, ನಿಂಬೆ ಮತ್ತು ಜೀರಿಗೆ ರಸಗಳೊಡನೆ ಬೆರೆಸಿ ತಲೆಗೆ ಲೇಪಿಸಿಕೊಂಡು ಕ್ರಮಾನುಗತವಾಗಿ ಒಂದು ವಾರ ಸ್ನಾನ ಮಾಡಿದರೆ ಅರೆ



ತಲೆನೋವಿನ ಕಾಯಿಲೆ ಗುಣವಾಗುತ್ತದೆ. ಹೊಟ್ಟೆ ಶೂಲೆ ಮತ್ತಿತರ ಉದರ ಸಂಬಂಧ ತೊಂದರೆಗಳಿಗೆ ಇದರ ರಸವನ್ನು ಸ್ವಲ್ಪ ಬಿಸಿನೀರಿಗೆ ಸೇರಿಸಿ, ಈ ಮಿಶ್ರಣಕ್ಕೆ ಹಸುವಿನ ತುಪ್ಪ ಮತ್ತು ಜೇನುತುಪ್ಪಗಳನ್ನು ಬೆರೆಸಿ ಸೇವಿಸಿದರೆ ಕೇವಲ ಅರ್ಧ ಗಂಟೆಯೊಳಗೆ ಉದರಶೂಲೆ ನಿವಾರಣೆಯಾಗುತ್ತದೆ. ತಲೆಯಲ್ಲಿ ನೀಳವಾಗಿ ಸೊಂಪಾಗಿ ಕೂದಲು ಬೆಳೆಯಲು ಹೂಗಳ ರಸವನ್ನು ಚಿಟ್ಟ ಹರಳೆಣ್ಣೆ ಮತ್ತು ನೆಲ್ಲಿಕಾಯಿಗಳ ಬೀಜದ ರಸದೊಡನೆ ಬೆರೆಸಿ ಉಪಯೋಗಿಸುವ ಪದ್ಧತಿ ಸೋಲಿಗರಲ್ಲಿದೆ. (ಎಸ್.ಎನ್.ಆರ್.)

**ಇಫ್ನಿ:** ಆಫ್ರಿಕದ ದಕ್ಷಿಣ ಮೊರಾಕೊ ದೇಶದ ಅಟ್ಲಾಂಟಿಕ್ ತೀರದಲ್ಲಿ ಸ್ಪೇನಿಗೆ ಸೇರಿದ ಸಣ್ಣ ದೇಶ. ವಿಸ್ತಾರ 1502 ಚ.ಕಿಮೀ. ಜನಸಂಖ್ಯೆ 51,517 (1964). ನಿವಾಸಿಗಳು ಬರ್ಬರರು; ಸೂಡಾನಿನ ನೀಗ್ರೊ ವೈಲಕ್ಷಣ್ಯಗಳನ್ನೂ ಹೊಂದಿದ್ದಾರೆ. ಎಲ್ಲರೂ ಇಸ್ಲಾಂ ಧರ್ಮೀಯರು. ಯುರೋಪಿಯನ್ನರ ಸಂಖ್ಯೆ ಅತ್ಯಲ್ಪ. ಮೊರಾಕೊ ದೇಶದ ದಕ್ಷಿಣ ಭಾಗದಲ್ಲಿರುವಂತೆ ಇಲ್ಲೂ ಸೆಕೆ ಹೆಚ್ಚು, ಮಳೆ ಕಡಿಮೆ. 80 ಕಿಮೀ. ಸಮುದ್ರತೀರವನ್ನು ಹೊಂದಿದೆ. ಇಡೀ ದೇಶ ಮರಗಿಡಗಳೇನೂ ಬೆಳೆಯದ ಹುಲ್ಲುಗಾವಲು ಪ್ರದೇಶ. ಕೆಲ ಭಾಗದಲ್ಲಿ ಆಹಾರಕ್ಕಾಗಿ ಕಾಳುಗಳನ್ನು ಬೆಳೆಯುತ್ತಾರೆ. ಕೆಲವು ಕಡೆ ಆಲಿವ್ ಮರಗಳು ಬೆಳೆಯುತ್ತವೆ. ಕುರಿ ಸಾಕುತ್ತಾರೆ; ಮೀನು ಹಿಡಿಯುವುದು ಮುಖ್ಯ ಕಸುಬು. ಹತ್ತಿರ ಇರುವ ಕ್ಯಾನರಿ ದ್ವೀಪಗಳಲ್ಲಿ ತಮ್ಮ ಸ್ವಾಸ್ಥ್ಯಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ 1476ರಲ್ಲಿ ಈ ಪ್ರದೇಶವನ್ನು ಸ್ಪೇನಿನವರು ವಶಪಡಿಸಿಕೊಂಡು ಒಂದು ರೇವು ಪಟ್ಟಣವನ್ನು ಸ್ಥಾಪಿಸಿದರು. ಆದರೆ 1524ರಲ್ಲಿ ಮೂರರು ಇದನ್ನು ನಾಶಪಡಿಸಿದರು. ಮುಂದೆ 1860ರವರೆಗೂ ಈ ಪ್ರದೇಶದಲ್ಲಿ ಸ್ಪೇನಿನ ಅಧಿಕಾರವಿರಲಿಲ್ಲ. ಸ್ಪೇನಿಗೂ ಮೊರಾಕೊಗೂ ಯುದ್ಧ ನಡೆದು ಕೊನೆಗೊಂಡ ಮೇಲೆ, ರೇವುಪಟ್ಟಣವಿದ್ದ ಪ್ರದೇಶವನ್ನು ಸ್ಪೇನಿಗೆ ಬಿಟ್ಟುಕೊಡಲು ಮೊರಾಕೊ ಸರ್ಕಾರ ಒಪ್ಪಿಕೊಂಡಿತು. ಆದರೂ ಈ ಪ್ರದೇಶ ಸಂಪೂರ್ಣವಾಗಿ ಸ್ಪೇನಿನ ವಶಕ್ಕೆ ಬಂದದ್ದು 1934ರಲ್ಲಿ, ಫ್ರೆಂಚ್ ಸರ್ಕಾರ ನಡೆಸಿದ ಮಧ್ಯಸ್ಥಿಕೆಯ ಪರಿಣಾಮವಾಗಿ. ಆದರೂ ಮೊರಾಕೊ ರಾಷ್ಟ್ರೀಯ ಚಳವಳಿಗಾರರ ಪ್ರತಿಭಟನೆ ಇದ್ದೇ ಇತ್ತು. ಕೊನೆಗೆ 1958ರಲ್ಲಿ ಈ ಪ್ರದೇಶವನ್ನು ಸ್ಪೇನಿನ ಒಂದು ಪ್ರಾಂತ್ಯವನ್ನಾಗಿ ಮಾಡಿ ಒಬ್ಬ ಗವರ್ನರ್ ಜನರಲ್‍ನನ್ನು ನೇಮಿಸಿದ ಮೇಲೆ ಇಫ್ನಿ ಒಂದು ಸ್ಥಿಮಿತಸ್ಥಿತಿಗೆ ಬಂದಿತು.

ಸಿಡೀ ಇಫ್ನಿ ಈ ಪ್ರಾಂತ್ಯದ ರಾಜಧಾನಿ. ಜನಸಂಖ್ಯೆ 20,051 (2004). ಹಡಗುಗಳಿಗೆ ಕೊಂಚ ರಕ್ಷಣೆ ಕೊಡುವ ಕೊಲ್ಲಿಯಿಲ್ಲಿದೆ. ಕ್ಯಾನರಿ ದ್ವೀಪಗಳು, ಸ್ಪ್ಯಾನಿಷ್ ಸಹರ ಮತ್ತು ಮೊರಾಕೊ ದೇಶಗಳ ವ್ಯಾಪಾರ ಈ ರೇವಿನ ಮೂಲಕ ನಡೆಯುತ್ತದೆ. ಹೊರದೇಶದವರ ವಿರುದ್ಧ ಮೊರಾಕೊ ರಾಷ್ಟ್ರೀಯ ಚಳವಳಿ ಮಾತ್ರ ಇನ್ನೂ ನಿಂತೇ ಇಲ್ಲ. *

**ಇಬಾದಾನ್:** ಆಫ್ರಿಕ ಖಂಡದ ಪಶ್ಚಿಮ ನೈಜೀರಿಯ ದೇಶದ ಓಯೋ ಪ್ರಾಂತ್ಯದ ಮುಖ್ಯ ಪಟ್ಟಣ. ನೈಜೀರಿಯದ ನೈರುತ್ಯ ಭಾಗದಲ್ಲಿದೆ. ಆಫ್ರಿಕದ ಅಟ್ಲಾಂಟಿಕ್ ತೀರದಿಂದ 160 ಕಿಮೀ ಒಳನಾಡಿನಲ್ಲಿದೆ. ಉ.ಅ. $7^{\circ}$–$25^{\circ}$, ಪೂ.ರೇ. $4^{\circ}$. ಏಳು ಗುಡ್ಡಗಳ ಮೇಲೆ ನಿಂದಿದೆ. ಸರಾಸರಿ ಎತ್ತರ 228 ಮೀ. ನಗರದ ಸುತ್ತ ಮಳೆಕಾಡು ಮತ್ತು ಸವನ್ನ ಮಾದರಿ ಸಸ್ಯ ವರ್ಗವಿದೆ. ಅತಿಶಾಖ ಮತ್ತು ತೀವ್ರವಾದ ವಾಯುಗುಣ. ಮಾರ್ಚ್‍ನಿಂದ ಅಕ್ಟೋಬರ್ ವರೆಗೆ ಮಳೆಗಾಲ. ಅನಂತರ ಬೇಸಿಗೆ. ಜನಸಂಖ್ಯೆ 17,31,00 (2001) ನೀಗ್ರೊ ಜನರು ಹೆಚ್ಚು; ಅವರಲ್ಲಿ ಬಹುಮಂದಿ ಮುಸಲ್ಮಾನರು. 1948ರಲ್ಲಿ ಇಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು. ವಿದ್ಯಾಕ್ಷೇತ್ರದಲ್ಲಿ ಕ್ರೈಸ್ತರ ಪ್ರಭಾವ ಹೆಚ್ಚು. ಸುತ್ತ ಮುತ್ತ ಕೋಕೋ, ಹತ್ತಿ, ಜೋಳ, ನಿಂಬೆ, ನೇರಳೆ ಮುಂತಾದುವನ್ನು ಬೆಳೆಯುತ್ತಾರೆ. ಮುಖ್ಯ ಕಸಬು ವ್ಯವಸಾಯ, ವ್ಯಾಪಾರ. ಇದು ನೈಜೀರಿಯದ ಒಂದು ಮುಖ್ಯ ವ್ಯಾಪಾರ ಮತ್ತು ಕೈಗಾರಿಕಾ ಕೇಂದ್ರ. ಈ ಪಟ್ಟಣಕ್ಕೆ ಲಾಗೋಸ್‍ನಿಂದ ರೈಲುಮಾರ್ಗವಿದೆ. ಎರಡನೆಯ ಮಹಾಯುದ್ಧವಾದ ಮೇಲೆ ಇದು ಹೆಚ್ಚು ಪ್ರಗತಿ ಹೊಂದಿದೆ. (ಎಸ್.ಎನ್.ಎ.ಆರ್.)

**ಇಬ್ನ್ ಅಲ್ ಫಾರಡಿ:** 962–1013 ಅರೇಬಿಯ ದೇಶದ ಒಬ್ಬ ಇತಿಹಾಸಕಾರ. ಅಂಡಲೂಸಿಯದಲ್ಲಿದ್ದ, ಸ್ಪೇನ್‍ನಲ್ಲಿದ್ದ ಅರಬ್ ವಿದ್ವಾಂಸರ ಬಗ್ಗೆ ಈತ ಬರೆದ ಚರಿತ್ರೆ ತಾರೀಖಲ್‍ಆಮಾಲ್ ಬಹು ಮುಖ್ಯವಾದ ಗ್ರಂಥ (1891ರಲ್ಲಿ ಎಫ್. ಕೊಡೆರ ಎಂಬಾತ ಇದನ್ನು ಸಂಪಾದಿಸಿದ). ಸ್ಪೇನಿನ ಕಾರ್ಡೋಬ ಎಂಬಲ್ಲಿ ಜನಿಸಿದ. ನ್ಯಾಯಶಾಸ್ತ್ರವನ್ನೂ ಮತಧರ್ಮ ಶಾಸ್ತ್ರಗಳನ್ನೂ ಚೆನ್ನಾಗಿ ಓದಿ ಘನ ಪಂಡಿತನಾದ. 992ರಲ್ಲಿ ಮೆಕ್ಕಾಯಾತ್ರೆಯನ್ನು ಕೈಗೊಂಡು, ಅಲ್ಲಿ ಸ್ವಲ್ಪಕಾಲವಿದ್ದು, ಅನಂತರ ಈಜಿಪ್ಟ್ ಟ್ಯೂನಿಸ್‍ಗಳಲ್ಲಿ ಇರತೊಡಗಿದ. 1009ರಲ್ಲಿ ಸ್ಪೇನಿಗೆ ಹಿಂದಿರುಗಿದ ಮೇಲೆ ಈತನನ್ನು ನ್ಯಾಯಾಧೀಶನನ್ನಾಗಿ ನೇಮಕ ಮಾಡಿ ವಾಲೆನ್ಸಿಯ ಎಂಬಲ್ಲಿಗೆ ಕಳುಹಿಸಲಾಯಿತು. ಬರ್ಬರರು ಕಾರ್ಡೋಬದ ಮೇಲೆ

ಆಕ್ರಮಣ ಮಾಡಿ ಪಟ್ಟಣವನ್ನು ಲೂಟಿ ಮಾಡಿದಾಗ ಯಾರೋ ದುರಾತ್ಮರು ಈತನನ್ನು ಕೊಂದರು. ಅಂಡಲೂಸಿಯದ ಕವಿ ಕಾವ್ಯಗಳ ಚರಿತ್ರೆಯೊಂದನ್ನೂ ಈತ ಬರೆದಿದ್ದಾನೆ. (ಬಿ.ಎಂ.)

**ಇಬ್ನ್ ಇಶಾಕ್:** 704–767. ಅರೇಬಿಯದ ಇತಿಹಾಸಕಾರ. ಪೂರ್ಣ ಹೆಸರು ಮಹಮದ್ ಇಬ್ನ್ ಇಶಾಕ್. ಈತನ ಕಿತಾಬ್ ಸೀರತ್‌ರಸೂಲ್ಲಲ ಎಂಬ ಪುಸ್ತಕ ಮಹಮ್ಮದ್ ಪೈಗಂಬರರ ಚರಿತ್ರೆಯನ್ನು ತಿಳಿಯಲು ಮುಖ್ಯವಾದ ಆಧಾರಗ್ರಂಥವಾಗಿದೆ. ಮದೀನದಲ್ಲಿ ಹೆಚ್ಚು ಕಾಲವಿದ್ದದ್ದರಿಂದ ಇವನಿಗೆ ಮಹಮ್ಮದನ ಜೀವನ, ತತ್ತ್ವಪ್ರಚಾರಗಳ ಬಗ್ಗೆ ಅಧಿಕವಾದ ಆಸಕ್ತಿ ಹುಟ್ಟಿತು. ಈತನ ಧರ್ಮಾ ಧರ್ಮದ ಅಭಿಪ್ರಾಯದ ಬಗ್ಗೆ ಕೆಲವರು ಕ್ಷುಲ್ಲಕವಾದ ಆರೋಪಗಳನ್ನು ಮಾಡಿದ್ದರಿಂದ 733ರಲ್ಲಿ ಮದೀನವನ್ನು ಬಿಟ್ಟು ಹೊರಟು, ಸ್ವಲ್ಪಕಾಲ ಅಲೆಕ್ಸಾಂಡ್ರಿಯದಲ್ಲೂ ಇನ್ನಷ್ಟು ಕಾಲ ಕೂಫ ಮತ್ತು ಹೀರಾದಲ್ಲೂ ಇದ್ದು ಅಂತ್ಯದಲ್ಲಿ ಬಾಗ್ದಾದನ್ನು ಸೇರಿ ಅಲ್ಲಿಯೇ ತನ್ನ ಇತಿಹಾಸ ಗ್ರಂಥವನ್ನು ಬರೆದ. ಈಗ ಮೂಲಗ್ರಂಥ ಉಪಲಬ್ಧವಿಲ್ಲ. ಅರಬ್ಬೀ ಬರೆಹಗಾರರು ಈ ಗ್ರಂಥವನ್ನು ನಂಬಿಕೆಗೆ ಅನರ್ಹವಾದುದೆಂದು ಟೀಕಿಸಿದರೂ ಇದೊಂದು ಉತ್ತಮವಾದ ಚರಿತ್ರೆಯಾಗಿಯೇ ಉಳಿದಿದೆಯೆಂದು ಹಲವರ ಅಭಿಪ್ರಾಯ. (ಬಿ.ಎಂ.)

**ಇಬ್ನ್ ಎಜ್ರಾ, ಏಬ್ರಹಾಂ ಬೆನ್ ಮೇರ್:** 1092–1167. ವಿಖ್ಯಾತ ಯೆಹೂದ್ಯ ವಿದ್ವಾಂಸ, ಜ್ಯೋತಿಷಿ, ಗ್ರಂಥಕರ್ತ. ಬೆನ್‌ಎಜ್ರಾಎಬೆನೆಜ್ರಾ ಎಂದೂ ಅವನನ್ನು ಕರೆಯುವು ದುಂಟು. ಸ್ಪೇನಿನವ. ಈತ 1140ರಲ್ಲಿ ಸ್ಪೇನನ್ನು ಬಿಟ್ಟು ಹೊರಟು ಬಹಳ ಕಾಲ ದೇಶಾಟನೆ ಮಾಡಿದ. ಇಟಲಿ, ಉತ್ತರ ಆಫ್ರಿಕ, ಫ್ರಾನ್ಸ್, ಇಂಗ್ಲೆಂಡ್ ದೇಶಗಳಿಗೆ ಹೋಗಿ ಬಂದ. 1158ರಲ್ಲಿ ಲಂಡನ್ನಿನಲ್ಲಿದ್ದನೆಂದು ತಿಳಿದುಬಂದಿದೆ.

ಇಬ್ನ್ ಎಜ್ರಾನ ಪುಸ್ತಕಗಳು ಬಹುಮಟ್ಟಿಗೆ ಅವನ ಜೀವನದ ದ್ವಿತೀಯಾರ್ಧದಲ್ಲಿ ರಚಿತವಾದವು. ಹೀಬ್ರು ಭಾಷೆಯಲ್ಲಿ ವ್ಯಾಕರಣ, ತತ್ತ್ವಶಾಸ್ತ್ರಗಳನ್ನು ಕುರಿತು ಗ್ರಂಥರಚನೆ ಮಾಡಿರುವುದಲ್ಲದೆ ಬೈಬಲ್‌ನ ಮೇಲೆ ಟೀಕೆ ಟಿಪ್ಪಣಿ ರಚಿಸಿದ್ದಾನೆ. ಕೆಲವು ಯೆಹೂದ್ಯ ವೈಯಾಕರಣಿಗಳ ಅರಬ್ಬೀ ಭಾಷೆಯ ಕೃತಿಗಳನ್ನು ಹೀಬ್ರುಗೆ ಅನುವಾದ ಮಾಡುವಾಗ ಅವನಿಗೆ ಬೈಬಲ್‌ನ ಅರ್ಥಾನ್ವೇಷಣೆಯಲ್ಲೂ ಆಸಕ್ತಿ ಮೂಡಿತು. ವ್ಯಾಕರಣ ಮತ್ತು ಭಾಷಾಶಾಸ್ತ್ರಗಳ ಸಹಾಯದಿಂದ ಬೈಬಲ್‌ನ ಹಳೆಯ ಒಡಂಬಡಿಕೆಯ ವಿವಿಧ ಭಾಗಗಳ ಅರ್ಥವಿವರಣೆ ಮಾಡಿದ್ದಾನೆ. ಆ ಗ್ರಂಥದ ವೈಜ್ಞಾನಿಕ ವಿಮರ್ಶೆಗೆ ತಳಹದಿ ಹಾಕಿದವ ಇವನೇ ಎನ್ನಬಹುದು. ವಿಜ್ಞಾನಕ್ಷೇತ್ರದಲ್ಲೂ ಈತ ಹೆಸರು ಗಳಿಸಿದ್ದಾನೆ. ಇವನ ವೈಜ್ಞಾನಿಕ ಗ್ರಂಥಗಳು ಹೀಬ್ರು ಮತ್ತು ಲ್ಯಾಟಿನ್ ಭಾಷೆಗಳೆರಡಲ್ಲೂ ಇವೆ. ಖಗೋಳವಿಜ್ಞಾನ, ಜ್ಯೋತಿಷ, ಗಣಿತಶಾಸ್ತ್ರಗಳಲ್ಲಿ ಈತ ವಿಶೇಷ ಪಾಂಡಿತ್ಯವನ್ನು ಪಡೆದಿದ್ದುದಲ್ಲದೆ ಪುಸ್ತಕಗಳನ್ನೂ ಬರೆದ. ಹೀಬ್ರು ವಿಜ್ಞಾನಕ್ಕೆ ದಶಮಾಂಶವನ್ನು ನೀಡಿದವ ಈತನೇ ಎಂದು ಹೇಳುತ್ತಾರೆ. ಈತ ಕವಿಯೂ ಆಗಿದ್ದ. ಲೌಕಿಕ ವಿಷಯಗಳನ್ನು ಕುರಿತು ಈತ ರಚಿಸಿರುವ ಕವಿತೆಗಳು ಬಹಳವಿಲ್ಲ. ಆದರೆ ಅವುಗಳಲ್ಲಿ ಧರ್ಮ ಬೇಕಾದಷ್ಟು ಛಂದೋವೈವಿಧ್ಯವಿದೆ. ಯೆಹೂದ್ಯ ಧರ್ಮಕ್ಕೂ ಆಚಾರಗಳಿಗೂ ಸಂಬಂಧಪಟ್ಟ ಅನೇಕ ಹಾಡುಗಳನ್ನು ಈತ ರಚಿಸಿದ್ದಾನೆ. ಅವುಗಳಲ್ಲಿ ಕೆಲವು ಈಗಲೂ ಯೆಹೂದ್ಯ ದೇವಾಲಯಗಳಲ್ಲಿ ಬಳಕೆಯಲ್ಲಿವೆಯೆಂದು ಹೇಳಲಾಗಿದೆ. ಇಂಗ್ಲಿಷಿನಲ್ಲಿ ಪ್ರಸಿದ್ಧವಾಗಿರುವ ಬ್ರೌನಿಂಗ್ ಕವಿಯ ರಬ್ಬೈ ಬೆನ್ ಎಜ್ರಾ (Rabbi Bend Ezra) ಎಂಬ ದೀರ್ಘಕವನ ಇಬ್ನ್ ಎಜ್ರಾನ ನೆನಪಿನಿಂದ ಪ್ರೇರಿತವಾದದ್ದು. (ಎಂ.ಆರ್.)

**ಇಬ್ನ್ ಖಾಲ್ದೂನ್:** 1332–1406 ಅರಬ್ ಇತಿಹಾಸಕಾರ, ಕಿತಾಬ್ ಅಲ್ ಇಬರ್ (ವಿಶ್ವದ ಇತಿಹಾಸ) ಎಂಬ ಗ್ರಂಥದಲ್ಲಿ ಈತ ಇತಿಹಾಸವನ್ನು ವಿಜ್ಞಾನವೆಂದು ಪರಿಗಣಿಸಿದ್ದಾನೆ: ಇತಿಹಾಸದ ದರ್ಶನವನ್ನು ವಿವರಿಸಿದ್ದಾನೆ. ಚಾರಿತ್ರಿಕ ಘಟನೆಗಳೂ ಅವುಗಳ ಅರ್ಥ, ಸತ್ಯ, ಸಾಮ್ಯ, ವೈಷಮ್ಯ, ವೈವಿಧ್ಯ, ಪ್ರಭಾವಗಳೇ ಮುಂತಾದವು. ಆ ಕೃತಿಯ ಪೀಠಿಕಾ ಪ್ರಕಾರಣದಲ್ಲಿ ವಿಶದವಾಗಿಯೂ ಪ್ರೌಢವಾಗಿಯೂ ಚರ್ಚಿಸಲ್ಪಟ್ಟಿವೆ. ಮಾನವ ಜೀವನದ ಆಶೋತ್ತರಗಳು, ಸಮಾಜದ ಉಗಮ ವಿಕಾಸ ವಿನಾಶಗಳು–ಮುಂತಾದವುಗಳು ಕೂಲಂಕಷ ವಿವೇಚನೆ ಮಾಡಿರುವ ಈ ಗ್ರಂಥದಲ್ಲಿ ಮಾನವನ ಮೇಲೆ ನಾಗರಿಕತೆಯ ಪರಿಣಾಮದ ವೈಜ್ಞಾನಿಕ ಪರಿಶೀಲನೆಯಿದೆ.

ಸರ್ಕಾರಗಳ ರೀತಿನೀತಿಗಳಿಗನುಸಾರವಾಗಿ ಖಾಲ್ದೂನ್ ರಾಜ್ಯಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾನೆ. ಪ್ರಜೆಗಳ ಇಹ ಪರ ಮೇಲ್ಮೆಗೆ ಶ್ರಮಿಸುವ ಸರ್ಕಾರ ಹೊಂದಿರುವ ರಾಷ್ಟ್ರಗಳದ್ದು ಮೊದಲನೆಯ ಗುಂಪು. ಪ್ರಜೆಗಳ ಇಹಲೋಕದ ಕಲ್ಯಾಣಕ್ಕಾಗಿ ಮಾತ್ರ ಕಾರ್ಯೋನ್ಮುಖವಾಗಿರುವ ಸರ್ಕಾರಗಳನ್ನುಳ್ಳ ರಾಷ್ಟ್ರಗಳದ್ದು ಎರಡನೆಯ ಗುಂಪು. ರಾಜನ ಹಿತವನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡಿರುವ ಸರ್ಕಾರಗಳಿರುವ ರಾಷ್ಟ್ರಗಳು ಕೊನೆಯ ದರ್ಜೆಗೆ ಸೇರಿದವು. ಮೊದಲನೆಯ ಎರಡು ವರ್ಗದ ಸರ್ಕಾರಗಳು ದೈವಿಕ ಭಾವನೆ ಹಾಗೂ ಮಾರ್ಗಗಳ ಪ್ರೇರಣೆಗೆ ಮನ್ನಣೆ ನೀಡುತ್ತವೆ; ಆದರೆ ಕೊನೆಯ ವರ್ಗದ ರಾಜ್ಯಗಳು ಮಾನವನ ಬೌದ್ಧಿಕ ವಾದಸರಣಿಗೆ ಹೆಚ್ಚು ಮನ್ನಣೆ ನೀಡುತ್ತವೆ ಎಂಬುದು ಖಾಲ್ದೂನನ ಅಭಿಪ್ರಾಯ.

ಸಂಸ್ಕೃತಿ ವಿಶ್ವವ್ಯಾಪಿ. ಅದು ಒಂದು ದೇಶಕ್ಕಾಗಲಿ ಒಂದು ಜನಾಂಗಕ್ಕಾಗಲಿ ಸೀಮಿತವಾದದ್ದಲ್ಲ ಎಂಬ ಸತ್ಯವನ್ನು ಮೊಟ್ಟಮೊದಲಿಗೆ ಮನಗಂಡ ಇತಿಹಾಸಕಾರನೇ ಇಬ್ನ್ ಖಾಲ್ದೂನ್. ಇವನು ವಿಜ್ಞಾನವನ್ನು ತಾತ್ತ್ವಿಕ, ಪ್ರಾಯೋಗಿಕ ಮತ್ತು ಉತ್ಪಾದಕ ಎಂಬುದಾಗಿ ಮೂರು ಭಾಗಗಳಾಗಿ ವಿಂಗಡಿಸಿದ್ದಾನೆ. ಸಂಸ್ಕೃತಿ ಇವೆಲ್ಲವುಗಳ ಸಮ್ಮಿಳನ. ಅದು ಜಡವಲ್ಲ. ವಿಕಾಸವೂ ಪ್ರಗತಿಯೂ ಸಂಸ್ಕೃತಿಯ ಲಕ್ಷಣ. ಸನ್ನಿವೇಶ, ವಾಯುಗುಣ, ಸಸ್ಯವರ್ಗ, ಮಿಗಿಲಾಗಿ ಜನತೆಯ ಆಶೋತ್ತರಗಳು–ಇವೆಲ್ಲವೂ ಸಂಸ್ಕೃತಿಯ ಬೆಳವಣಿಗೆಗೆ ಬಹುಮಟ್ಟಿಗೆ ಸಹಾಯಕವಾಗಿವೆ. ಹುಟ್ಟು, ಬೆಳವಣಿಗೆ, ವಿನಾಶ ಮೊದಲಾದ ಪ್ರಭೇದಗಳಿಗೆ ಸಂಸ್ಕೃತಿಯೂ ಹೊರತಲ್ಲವೆಂದು ಖಾಲ್ದೂನನ ಖಚಿತ ನಂಬಿಕೆ. ಅರಬ್ಬೀ ಇತಿಹಾಸಕಾರರಲ್ಲಿ ಅಗ್ರಗಣ್ಯನೆಂದು ಭಾವಿಸಿರುವ ಈತನನ್ನು ಕೆಲವರು ಇತಿಹಾಸಶಾಸ್ತ್ರದ ಪಿತಾಮಹನಾದ ಗ್ರೀಸ್ ದೇಶದ ಥ್ಯೂಸಿಡಿಡಿಸನಿಗೂ ಪ್ರಖ್ಯಾತ ರೋಮನ್ ಇತಿಹಾಸಜ್ಞನಾದ ಟಾಸಿಟಸ್‌ಗೂ ಹೋಲಿಸಿದ್ದಾರೆ. ಆರ್ನಲ್ಡ್ ಟಾಯನ್ಬೀಯವರು ಇವನನ್ನು ಜಗತ್ತಿನಲ್ಲಿ ಆಗಿಹೋದ ಇತಿಹಾಸ ಶಾಸ್ತ್ರತತ್ತ್ವಜ್ಞರಲ್ಲಿ ಅತ್ಯಂತ ಶ್ರೇಷ್ಠನೆಂದು ಪ್ರಶಂಸಿಸಿದ್ದಾರೆ. (ಜಿ.ಆರ್.ಆರ್.)

**ಇಬ್ನ್‌ಬತೂತ್:** 1304–1368. 14ನೆಯ ಶತಮಾನದ ಪ್ರಸಿದ್ಧ ಮುಸ್ಲಿಂ ಪ್ರವಾಸಿ. ಪೂರ್ಣ ಹೆಸರು ಇಬ್ನ್ ಬತೂತ ಅಬು ಅಬ್ದುಲ್ಲಾ ಮೊಹಮ್ಮದ್. ಆಫ್ರಿಕದ ಟ್ಯಾಂಜೀರ್‌ನಲ್ಲಿ ಈತ ಹುಟ್ಟಿದ. 1325–1354ರ ಕಾಲವನ್ನು ಪ್ರವಾಸದಲ್ಲೇ ಕಳೆದ. ಆಫ್ರಿಕದ ನೈಜರ್ ನದಿಯಿಂದ ಹಿಡಿದು ಚೀನದ ತುದಿಯವರೆಗೆ ಸುತ್ತಾಡಿದ. ಮೆಕ್ಕಾ ಯಾತ್ರೆಯಿಂದ ಆರಂಭಿಸಿ ಪರ್ಷಿಯ, ಮೆಸೊಪೊಟೇಮಿಯ, ಅರೇಬಿಯ, ಆಫ್ರಿಕದ ಪೂರ್ವ ಕರಾವಳಿ, ಏಷ್ಯ ಮೈನರ್, ಕ್ಯಾಸ್ಪಿಯನ್ ಪ್ರದೇಶ, ಆಫ್ಘಾನಿಸ್ತಾನ, ಭಾರತ, ಸಿಂಹಳ, ಸುಮಾತ್ರ, ಚೀನ, ಸ್ಪೇನ್, ಟಿಂಬಕ್ಟೂ ಮುಂತಾದವನ್ನೆಲ್ಲ ಕುತೂಹಲದ ಕಣ್ಣುಗಳಿಂದ ಸಂದರ್ಶಿಸಿದ. ಹೀಗೆ ಒಟ್ಟು ಸು.120 75 ಕಿಮೀಗಳಷ್ಟು ಪ್ರವಾಸ ಮಾಡಿ ಕೊನೆಗೆ 1354ರಲ್ಲಿ ಮೊರಾಕೊ ದೇಶದ ಫೆಜ್‌ಗೆ ಮರಳಿ ಬಂದ. ಅಲ್ಲಿಯೇ ನೆಲೆಸಿದ. ತನ್ನ ಪ್ರವಾಸದ ದೀರ್ಘಕಥನ ರಚಿಸಿದ. ಸ್ವಂತ ಅನುಭವಗಳ ಐತಿಹ್ಯಗಳೇ ತುಂಬಿರುವ ಈ ಕಥನದಲ್ಲಿ ಅಲ್ಲಲ್ಲಿ ಹಾಸ್ಯವೂ ವರ್ಣನೆಯೂ ಕಂಗೊಳಿಸುತ್ತವೆ. ಆ ಕಾಲದಲ್ಲಿ ತಾನು ಸಂದರ್ಶಿಸಿದ ನಾನಾ ದೇಶದ ಆಗುಹೋಗುಗಳನ್ನೆಲ್ಲ ಕಂಡಂತೆ ಈತ ಬಣ್ಣಿಸಿದ್ದಾನೆ. ಚರಿತ್ರಕಾರರಿಗಂತೂ ಇದು ಬಹು ಉಪಯುಕ್ತ ಗ್ರಂಥ. (ಎಸ್.ಎನ್.)

ಅದರಲ್ಲಿನ ವಿಚಾರಗಳಲ್ಲಿ ಸತಿಪದ್ಧತಿಯೂ ಒಂದು ಅದನ್ನು ಕುರಿತು ಈತ ಬರೆದಿರುವ ಭಾಗವನ್ನು ನೋಡಬಹುದು: "ಎರಡು ದಿವಸಗಳಾದ ಮೇಲೆ ನಾವು ಅಜೂಧಾನ್ (ಪಕಟ್ಟನ್) ಎಂಬ ಸಣ್ಣ ಊರಿಗೆ ಬಂದೆವು. ಇಲ್ಲಿ ಹಿಂದೂ ಸ್ತ್ರೀಯೊಬ್ಬಳು ಸತ್ತ ಗಂಡನೊಡನೆ ಸಹಗಮನ ಮಾಡುವುದನ್ನು ನೋಡಿದೆವು. ಗಂಡನ ಶವವನ್ನು ಹೆಂಡತಿ ತಬ್ಬಿಕೊಂಡು ಆಕೆ ಚಿತೆಯಲ್ಲಿ ಭಸ್ಮವಾದಳು. ಹಿಂದೂ ಸ್ತ್ರೀಯರು ಈ ರೀತಿ ಮಾಡಿದುದನ್ನು ಆಮೇಲೆ ಅನೇಕ ಸಲ ನೋಡಿದ್ದೇನೆ. ಚಿತೆಯನ್ನೇರುವ ಹಿಂದೂ ಸ್ತ್ರೀ ಅಲಂಕಾರ ಮಾಡಿಕೊಂಡು ಕುದುರೆಯ ಮೇಲೆ ಹೊರಡುತ್ತಾಳೆ. ಅವಳನ್ನು ಮುಸಲ್ಮಾನರೂ ಹಿಂದುಗಳೂ ತಾಳಮೇಳ ಸಮೇತ ಹಿಂಬಾಲಿಸುತ್ತಾರೆ. ಹಿಂದೂಗಳ ಮುಖ್ಯಸ್ಥರಾದ ಬ್ರಾಹ್ಮಣರು ಅವಳೊಡನೆ ಇರುತ್ತಾರೆ. ಆಕೆಯನ್ನು ನೋಡಬೇಕಾದರೆ ಸುಲ್ತಾನನ ಅಪ್ಪಣೆ ಪಡೆಯಬೇಕು. ಸುಲ್ತಾನನು ಅಪ್ಪಣೆ ಕೊಡುತ್ತಾನೆ. ಗಂಡ ಸತ್ತ ಮೇಲೆ ಹೆಂಡತಿ ಚಿತೆಯಲ್ಲಿ ಬೀಳುವುದು ಬಹಳ ಮೆಚ್ಚಿನ ಕೆಲಸವೆಂದು ಭಾವಿಸುತ್ತಾರೆ. ಆದರೆ ಬಲಾತ್ಕಾರವಿಲ್ಲ. ವಿಧವೆಯಾದವಳು ಈ ರೀತಿ ದಹನಮಾಡಿಕೊಂಡರೆ ಆಕೆಯ ಮನೆತನದ ಹೆಸರು ಹೆಚ್ಚುತ್ತದೆಯಲ್ಲದೆ, ಆಕೆ ಪತಿವ್ರತೆಯೆಂಬ ಹೆಸರನ್ನೂ ಪಡೆಯುತ್ತಾಳೆ. ಹೀಗೆ ದಹನಮಾಡಿಕೊಳ್ಳದವಳು ಒರಟು ಬಟ್ಟೆಗಳನ್ನು ಧರಿಸಿ ತನ್ನ ಮನೆಯವರೊಡನೆ ನೆರೆಹೊರೆಯವರ ಚುಚ್ಚುಮಾತುಗಳಿಗೊಳಗಾಗಿ ಕಷ್ಟದಲ್ಲಿ ಬಾಳಬೇಕಾಗುತ್ತದೆ.

"ಒಮ್ಮೆ ನಾನು ಆಮ್‌ಜಾರಿ (ಅಮ್ಝೇರ: ಇದು ಧಾರ್ ಬಳಿ ಇದೆ) ಎಂಬ ಪಟ್ಟಣದ ಬಳಿ ಯುದ್ಧದಲ್ಲಿ ಸತ್ತ ಮೂವರು ಯೋಧರ ಹೆಂಡತಿಯರು ದಹನ ಮಾಡಿಕೊಳ್ಳಲು ಹೊರಟಿದ್ದನ್ನು ಕಂಡೆ. ಅವರು ಅಲಂಕಾರ ಮಾಡಿಕೊಂಡು ಸುಗಂಧದ್ರವ್ಯಗಳನ್ನು ಪೂಸಿಕೊಂಡು ಕುದುರೆಗಳನ್ನೇರಿದರು. ಒಂದು ಕೈಯಲ್ಲಿ ಒಂದು ತೆಂಗಿನಕಾಯಿ, ಇನ್ನೊಂದು ಕೈಯಲ್ಲಿ ಕನ್ನಡಿ. ತೆಂಗಿನಕಾಯನ್ನು ಕೈಯಲ್ಲಿ ಆಡಿಸುತ್ತ ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತ ಹೊರಟರು. ಸುತ್ತಮುತ್ತ ವಾದ್ಯಗಳ ಜಯಘೋಷವಾಗುತ್ತಿತ್ತು. ನೆಂಟರಿಷ್ಟರೂ ಬ್ರಾಹ್ಮಣರೂ ಅವರನ್ನು ಹಿಂಬಾಲಿಸುತ್ತಿದ್ದರು. ಪ್ರತಿಯೊಬ್ಬ ಹಿಂದುವೂ ಅವರನ್ನು ಕುರಿತು ನಮ್ಮ ಅಪ್ಪ ಅಮ್ಮನಿಗೆ ನಮಸ್ಕಾರ ಹೇಳು. ನನ್ನ ಸ್ನೇಹಿತನಿಗೆ ನಮ್ಮ ಯೋಗಕ್ಷೇಮ ತಿಳಿಸು ಎಂದು ಹೇಳುತ್ತಿದ್ದರು. ಇವರು ಹೇಗೆ ದಹನಮಾಡಿಕೊಳ್ಳುತ್ತಾರೆಂಬು ದನ್ನು ನೋಡಲು ನಾನೂ ನನ್ನ ಜತೆಗಾರರೂ ಹೋದೆವು. 4.80 ಕಿಮೀ ಹೋದ ಮೇಲೆ ಯಥೇಚ್ಛವಾಗಿ ನೀರೂ ನೆರಳೂ ಇರುವ ಸ್ಥಳದಲ್ಲಿ ನಾಲ್ಕು ವೇದಿಕೆಗಳಿದ್ದುದನ್ನು ನೋಡಿದೆವು. ಪ್ರತಿಯೊಂದರ ಮೇಲೂ ಕಲ್ಲಿನ ವಿಗ್ರಹಗಳಿದ್ದುವು. ವೇದಿಕೆಗಳ ಬಳಿ ಇದ್ದ ಕೊಳಗಳಲ್ಲಿ ನೀರು ತುಂಬಿತ್ತು. ಸೂರ್ಯರಶ್ಮಿಯೂ ಬೀಳದಷ್ಟು ಒತ್ತಾಗಿದ್ದ ಆ ನೆರಳಿನಲ್ಲಿ ಆ ಸ್ಥಳ ನರಕದಂತೆ ಕಾಣುತ್ತಿತ್ತು. ದೇವರೇ ! ನಮ್ಮನ್ನು ಆ ನರಕದಿಂದ ಪಾರುಮಾಡು ! ಈ ವೇದಿಕೆಗಳ ಬಳಿ ಹೋದಮೇಲೆ ಸ್ತ್ರೀಯರು ಕೊಳದಲ್ಲಿ ಇಳಿದು ನೀರಿನಲ್ಲಿ

ಮುಳುಗಿ ಸ್ನಾನ ಮಾಡಿದರು. ತಮ್ಮ ಮೈಮೇಲಿದ್ದ ಬಟ್ಟೆಬರೆಗಳನ್ನೂ ಒಡವೆಗಳನ್ನೂ ಕಳಚಿ ದಾನ ಮಾಡಿದರು. ಅನಂತರ ಹೊಲಿಯದೆ ಇದ್ದ ಒಂದು ಬಟ್ಟೆಯನ್ನು ತೆಗೆದುಕೊಂಡು ಮೈಗೆ ಸುತ್ತಿಕೊಂಡರು. ವೇದಿಕೆಗಳ ಮಧ್ಯೆ ತೋಡಿದ್ದ ಗುಂಡಿಗಳಲ್ಲಿ ಬೆಂಕಿ ಉರಿಯುತ್ತಿತ್ತು. ಎಳ್ಳೆಣ್ಣೆಯನ್ನು ಸುರಿದು ಉರಿಯನ್ನು ಹೆಚ್ಚಿಸುತ್ತಿದ್ದರು. ಇಪ್ಪತ್ತೈದು ಜನ ಈ ಕುಂಡಗಳ ಬಳಿ ಸಣ್ಣ ಸಣ್ಣ ಕಟ್ಟಿಗೆಗಳನ್ನೂ ದೊಡ್ಡ ದೊಡ್ಡ ಮರದ ತುಂಡುಗಳನ್ನೂ ಹಿಡಿದು ನಿಂತಿದ್ದರು. ವಾದ್ಯಘೋಷ ಸಾಗುತ್ತಿತ್ತು. ಸ್ತ್ರೀಯರಿಗಾಗಿ ಕಾಯುತ್ತಿದ್ದರು. ಅವರಿಗೂ ಬೆಂಕಿಗೂ ಮಧ್ಯ ಗಂಡಸರು ಒಂದು ಪರದೆ ಹಿಡಿದು ನಿಂತಿದ್ದರು–ಸ್ತ್ರೀಯರು ಬೆಂಕಿಯನ್ನು ನೋಡಿ ಹೆದರಿಕೊಳ್ಳದಿರಲಿ ಎಂದು. ಸ್ತ್ರೀಯರಲ್ಲಿ ಒಬ್ಬಳು ಪರದೆಯ ಬಳಿಗೆ ಬಂದು ಅದನ್ನು ಕಿತ್ತು ಬಿಸಾಡಿ ನಗುತ್ತಾ ನಾನು ಬೆಂಕಿಗೆ ಹೆದರುವೆನೆಂದು ಭಾವಿಸಿದಿರಾ? ಅದು ಬೆಂಕಿ ಎಂದು ನನಗೆ ಗೊತ್ತು. ನನ್ನ ಪಾಡಿಗೆ ನನ್ನನ್ನು ಬಿಡಿ ! ಎಂದು ಹೇಳಿ ಆಕೆ ತನ್ನ ಕೈಗಳನ್ನು ಜೋಡಿಸಿ ಬೆಂಕಿಗೆ ವಂದಿಸಿ ಕುಂಡದೊಳಗೆ ದುಮುಕಿದಳು. ಅದೇ ಗಳಿಗೆಯಲ್ಲಿ ತಾಳ ಮದ್ದಳೆಗಳನ್ನು ಬಾರಿಸಿದರು; ತುತ್ತೂರಿಗಳನ್ನು ಊದಿದರು. ಗಂಡಸರು ತಮ್ಮ ಕೈಯಲ್ಲಿದ್ದ ಸಣ್ಣ ಕಟ್ಟಿಗೆಗಳನ್ನೂ ಅನಂತರ ದೊಡ್ಡ ದೊಡ್ಡ ತುಂಡುಗಳನ್ನೂ ಆಕೆಯ ಮೇಲೆ ಹಾಕಿದರು–ಆಕೆ ಅಲುಗಾಡದಿರುವಂತೆ. ನೆರೆದಿದ್ದ ಜನರು ಜೈಜೈಕಾರ ಮಾಡಿದರು. ಇದನ್ನು ನೋಡುತ್ತಿದ್ದ ನಾನು ಜ್ಞಾನತಪ್ಪಿ ಕುದುರೆಯಿಂದ ಬೀಳುವುದರಲ್ಲಿದ್ದೆ. ಅಷ್ಟರೊಳಗೆ ನನ್ನ ಜೊತೆಗಾರರು ನೀರು ತಂದು ನನ್ನ ಮುಖಕ್ಕೆ ಎರಚಿ ನನಗೆ ಪ್ರಜ್ಞೆ ಬರುವಂತೆ ಮಾಡಿದರು".*

**ಇಬ್ನ್ ಸೌದ್:** 1880–1953. ಸೌದಿ ಅರೇಬಿಯದ ದೊರೆ. ಪೂರ್ತಿ ಹೆಸರು: ಅಬ್ದುಲ್ ಅಜೀಜ್ ಇಬ್ನ್‌ಸೌದ್. ಇಸ್ಲಾಂ ಧರ್ಮದ ವೀರನಿಯಮ ಪಂಥದವರಾದ ವಹಾಬಿಗಳ ಅಧಿಕಾರವನ್ನು ಅರೇಬಿಯದಲ್ಲಿ ಸ್ಥಾಪಿಸಿದ. ನೆಜ್ದ್ ದೇಶದ ರಿಯಾದ್ ಎಂಬಲ್ಲಿ ಜನಿಸಿದ. ತಂದೆಯಾದ ಅಬ್ದುಲ್ ರಹಮಾನ್ ಮತ್ತು ಬಂಧುಗಳೊಡನೆ ದೇಶಭ್ರಷ್ಟನಾಗಿ ಕುವೈತ್ ಮತ್ತು ಅರೇಬಿಯದ ಮರುಭೂಮಿಯಲ್ಲಿ ಜೀವನದ ಪೂರ್ವಕಾಲವನ್ನು ಕಳೆಯಬೇಕಾಯಿತು. 1902 ಜನವರಿಯಲ್ಲಿ ತನ್ನ ಪೂರ್ವಿಕರ ರಾಜಧಾನಿಯಾಗಿದ್ದ ರಿಯಾದಿನ ಮೇಲೆ ಥಟ್ಟನೆ ಎರಗಿ ಕೆಚ್ಚಿನಿಂದ ಕಾದಿ ಅದನ್ನು ಹಿಡಿದುಕೊಂಡ. ಅಲ್ಲಿನ ನೆಲಸುಗಾರರೊಂದಿಗೂ ವಿರೋಧಿ ಮನೆತನದವರೊಂದಿಗೂ ತುರ್ಕಿಯ ಸೇನೆಗಳೊಂದಿಗೂ ವರ್ಷಾಂತರ ಕಾಲ ಕಾದಾಟ ನಡೆಸಬೇಕಾಯಿತು. 1907ರ ವೇಳೆಗೆ ನೆಜ್ದ್‌ನಲ್ಲಿ ನೆಲೆಸಿ ಆಟೊಮನ್ ಪ್ರಭುವೆಂಬ ಬಿರುದು ಪಡೆದು, ಬ್ರಿಟಿಷರ ಬೆಂಬಲಕ್ಕೆ ಮಾರ್ಗ ಮಾಡಿಕೊಂಡ. ಇಖ್ವಾನ್ ಅಥವಾ ಸೋದರರೆಂದು ಕರೆಸಿಕೊಳ್ಳುತ್ತಿದ್ದ ವಹಾಬಿ ಜನ ತಮ್ಮ ಹೋರಾಟದ ಜೀವನವನ್ನು ತ್ಯಜಿಸಿ ಶಾಂತಿ ನೆಮ್ಮದಿಗಳಿಂದ ವ್ಯವಸಾಯ ನಿರತರಾಗುವಂತೆ ಅವರನ್ನು ನೆಲೆಗೊಳಿಸುವುದು ಇಬ್ನ್ ಸೌದ್ ದೊರೆಯ ಮುಂದಿನ ಹೊಣೆಯಾಯಿತು. ಈ ಜನರ ನಿಷ್ಠೆ ಬೆಂಬಲಗಳಿಂದ ಈತನ ಆಡಳಿತ ಅರೇಬಿಯದಲ್ಲಿ ಭದ್ರವಾಯಿತು. 1913ರಲ್ಲಿ ಅರೇಬಿಯದ ಈಶಾನ್ಯ ಕರಾವಳಿ ಪ್ರಾಂತ್ಯವಾದ ಹೌಸಾ ಎಂಬುದನ್ನು ತುರ್ಕಿಗಳಿಂದ ಕಿತ್ತುಕೊಂಡ. ಒಂದನೆಯ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷರು ಈತನನ್ನು ನೆಜ್ದ್ ಮತ್ತು ಎಲ್ ಹೌಸಾ ಪ್ರದೇಶಗಳ ದೊರೆಯೆಂದು ಅಂಗೀಕರಿಸಿದರು. ಅದಕ್ಕೆ ಪ್ರತಿಯಾಗಿ ಕುವೈತ್, ಬಹ್ರೇನ್, ಕಾಟಾರ್ ಮತ್ತು ಒಮಾನ್ ಕರಾವಳಿಯ ಮೇಲೆ ತಾನು ಆಕ್ರಮಣ ನಡೆಸುವುದಿಲ್ಲವೆಂದೂ ಆ ಪ್ರದೇಶದ ವ್ಯವಹಾರಗಳಲ್ಲಿ ಪ್ರವೇಶಿಸುವುದಿಲ್ಲವೆಂದೂ ಈ ದೊರೆ ಪ್ರತಿಜ್ಞೆ ಮಾಡಿದ. ಯುದ್ಧಾನಂತರದಲ್ಲಿ ಇವನ ರಾಜ್ಯ ಇನ್ನೂ ವಿಸ್ತಾರವಾಯಿತು. ಅರಬ್ಬೀ ರಾಜ್ಯಗಳಿಗೆಲ್ಲ ತಾನೇ ದೊರೆಯೆಂದು ಮೆರೆಯುತ್ತಿದ್ದ ಹುಸೇನನನ್ನೂ ಅವನ ಸಂಗಡಿಗರನ್ನೂ ಈತ ಹೊಡೆದೋಡಿಸಿ 1926ರಲ್ಲಿ ಹೆಜಾಜ್ ದೇಶಕ್ಕೂ ಅಧಿಪತಿಯಾದ.

1952ರ ಅನಂತರ ಹೆಜಾಜ್ ಮತ್ತು ನೆಜ್ದ್ ದೇಶಗಳ ಒಕ್ಕೂಟ ಸಾಧ್ಯವಾಯಿತು. ಇದೇ ಸೌದಿ ಅರೇಬಿಯ. ಸೌದಿ ಅರೇಬಿಯದ ದೊರೆಯೆನಿಸಿಕೊಂಡ ಇಬ್ನ್ ಸೌದ್ ಮುಂದೆ ಸ್ವಲ್ಪ ಕಾಲ ಆಡಳಿತದಲ್ಲಿ ಕಷ್ಟಗಳನ್ನೆದುರಿಸಬೇಕಾಯಿತು. ಬಂಡಾಯವೇಳುತ್ತಿದ್ದ ವಹಾಬಿಗಳನ್ನಡಗಿಸುವುದು ಸ್ವಲ್ಪ ಪ್ರಯಾಸಕರವಾಯಿತು. ಇಬ್ನ್ ಸೌದನ ರಾಜ್ಯವಿಸ್ತರಣದಿಂದ ಉತ್ತರದಲ್ಲಿ ಬ್ರಿಟಿಷ್ ಮೇಲ್ವಿಚಾರಣೆಗೊಳಪಟ್ಟ ಪ್ರದೇಶಗಳೊಡನೆ ಎಲ್ಲೆಕಟ್ಟಿನ ಸಂಬಂಧವಾಗಿ ವಿರಸವೇರ್ಪಡುವ ಸಂಭವವಿತ್ತು. ಇಬ್ನ್ ಸೌದ್ ಸಂಧಾನದ ಮಾರ್ಗದಿಂದ ಅದನ್ನು ಪರಿಹರಿಸಿಕೊಂಡದ್ದರಿಂದ ಮುಂದೆ ಈತನ ಆಡಳಿತ ಸುಗಮವಾಯಿತು. 1936ರಲ್ಲಿ ಇರಾಕ್ ಈಜಿಪ್ಟುಗಳೊಡನೆಯೂ ಒಪ್ಪಂದ ಮಾಡಿಕೊಂಡಿದ್ದರಿಂದ ದೇಶದಲ್ಲಿ ನೆಮ್ಮದಿ ನೆಲೆಸಿತು. ಮುಂದೆ ಇಬ್ನ್ ಸೌದ್ ತನ್ನ ದೇಶದ ಅಭಿವೃದ್ಧಿಯ ಕಡೆಗೆ ಗಮನ ಹರಿಸಿದ. ಪರ್ಷಿಯ ಖಾರಿ ಹಾಗೂ ಕೆಂಪು ಕಡಲುಗಳ ತೀರಪ್ರದೇಶದಲ್ಲಿನ ತೈಲಸಂಪತ್ತಿನ ಪ್ರಯೋಜನ ಪಡೆಯುವುದು ಸಾಧ್ಯವಾಯಿತು. ವಿದೇಶಿ ತೈಲ ಸಂಸ್ಥೆಗಳೊಂದಿಗೆ ಕರಾರು ಏರ್ಪಟ್ಟಿತು. ದೊರೆಯ ಬೊಕ್ಕಸಕ್ಕೆ ಹಣ ಹರಿದುಬಂತು.

1940ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೂ ಅರೇಬಿಯಕ್ಕೂ ನಡುವೆ ರಾಜತಾಂತ್ರಿಕ ಸಂಬಂಧವೇರ್ಪಟ್ಟಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಈತ ಆ್ಯಂಗ್ಲೋ–ಸೌದಿ ಒಪ್ಪಂದದ ಷರತ್ತುಗಳಿಗೆ ಬದ್ಧನಾಗಿ ತಾಟಸ್ಥ್ಯ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದರಿಂದ ಯುದ್ಧದ ಬಿಸಿ ಈ ರಾಜ್ಯಕ್ಕೆ ಸ್ವಲ್ಪವೂ ತಟ್ಟಲಿಲ್ಲ. 1947ರಿಂದ ಈತ ಅರಬ್ಬೀ ಒಕ್ಕೂಟದ ಸದಸ್ಯನಾಗಿದ್ದ. ಪ್ರತ್ಯೇಕ ಇಸ್ರೇಲ್ ರಾಜ್ಯ ಸ್ಥಾಪನೆಯನ್ನು ವಿರೋಧಿಸಿದವರಲ್ಲಿ ಈ ದೊರೆಯೂ ಒಬ್ಬ. ಅರಬ್ಬೀ ದೇಶಗಳ ಸ್ವಾತಂತ್ರ್ಯವನ್ನೂ ಒಗ್ಗಟ್ಟನ್ನೂ ಸ್ವಾಗತಿಸಿದ್ದಾಗ್ಯೂ ಅರಬ್ಬೀ ಒಕ್ಕೂಟವನ್ನು ಈತ ಕಾರ್ಯತಃ ವಿರೋಧಿಸುತ್ತಿದ್ದ.

ಅರೇಬಿಯ ದೇಶಕ್ಕೆ ಸ್ಥಿರವಾದ ಸರ್ಕಾರ ತಂದುಕೊಟ್ಟು ಅರಬ್ಬರ ರಾಷ್ಟ್ರೀಯತೆಗೆ ಇಂಬುಗೊಟ್ಟ ಇಬ್ನ್ ಸೌದ್ ಇಸ್ಲಾಂ ಧರ್ಮಪ್ರಿಯ. ತನ್ನ ದೇಶದ ಜನ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ ಮಾಡದಂತೆ ತಡೆಯಲು ಈತ ಯತ್ನಿಸಿದ. (ಎಂ.ಎಸ್.ಬಿ.)

**ಇಬ್ಬನಿ:** ಗಾಳಿಯಲ್ಲಿರುವ ನೀರಿನ ಆವಿ ರಾತ್ರಿವೇಳೆಯಲ್ಲಿ ಸಾಂದ್ರೀಕರಿಸಿ ನೆಲಕ್ಕೆ ಬೀಳುವಾಗ ಉಂಟಾಗುವ ನೀರಹನಿ (ಡ್ಯೂ). ಪ್ರಾತಃಕಾಲದಲ್ಲಿ ಗಿಡಮರಗಳ ಹುಲ್ಲುಗಾವಲುಗಳ ಮೇಲೆ ಬೀಳುವ ಸೂರ್ಯಕಿರಣಗಳನ್ನು ಪ್ರತಿಫಲಿಸಿ ವಕ್ರೀಭವಿಸಿ ವರ್ಣರಂಜಿತ ದೃಶ್ಯ ಬೀರುವ ಇಬ್ಬನಿಗಳ ಹಾಸೆ ನೋಡಲು ಬಲು ಸುಂದರ. ನಿರಭ್ರ ಆಕಾಶ ಮತ್ತು ಸ್ತಬ್ಧ ಇಲ್ಲವೇ ಮಂದಚಲನೆಯ ವಾಯುಮಂಡಲ ಇವು ಇಬ್ಬನಿಯ ಬೆಳವಣಿಗೆಗೆ ಸಹಕಾರಿಗಳು.

ನಿರಾತಂಕವಾಗಿ ಆಗಸಕ್ಕೆ ಒಡ್ಡಿರುವ ಹೊರಮೈಯಿಂದ ವಸ್ತುಗಳು ಉಷ್ಣವನ್ನು (ವಿಸರಣದಿಂದ–ರೇಡಿಯೇಷನ್) ಕಳೆದುಕೊಳ್ಳುವುವು. ಹೀಗೆ ಸಂಭವಿಸುವ ನಷ್ಟ ಆಯಾ ವಸ್ತುವಿನ ಆಂತರಿಕ ರಚನೆಯಿಂದ ಅಥವಾ ಬಾಹ್ಯಾವರಣದಿಂದ ಭರ್ತಿಯಾಗಬೇಕು. ಹೀಗಾಗದಿದ್ದಾಗ ವಸ್ತುವಿನ ಹೊರಮೈ ಉಷ್ಣತೆ ತಗ್ಗುತ್ತದೆ. ಎಲೆ, ಹೂದಳ ಮತ್ತು ಹುಲ್ಲಿನ ಗರಿ ಇವು ಉಷ್ಣವನ್ನು ಕಳೆದುಕೊಂಡು ಸುತ್ತಲಿನ ಗಾಳಿಯನ್ನು ತಂಪುಗೊಳಿಸುತ್ತವೆ. ಇಂಥ ತಂಪಾದ ಗಾಳಿಯ ಉಷ್ಣತೆ ಇಬ್ಬನಿಬಿಂದುವಿಗಿಂತ **(ನೋಡಿ– ಆರ್ದ್ರತೆ)** ತಗ್ಗಿನಲ್ಲಿದ್ದರೆ ನೀರಿನ ಆವಿ ಸಾಂದ್ರೀಕರಿಸಿ ಎಲೆ ದಳ ಮತ್ತು ಗರಿಗಳ ಮೇಲೆ ಹನಿಹನಿಯಾಗಿ ಮೂಡುತ್ತದೆ. ಆಕಾಶದಲ್ಲಿ ಮೋಡಗಳಿದ್ದರೆ ಅಥವಾ ಗಾಳಿ ಬಲವಾಗಿ ಬೀಸುತ್ತಿದ್ದರೆ ಇಬ್ಬನಿ ಉಂಟಾಗುವುದಿಲ್ಲ. ವಿಸರಣೆಯಿಂದ ಉಂಟಾಗುವ ಉಷ್ಣನಷ್ಟವನ್ನು ಮೋಡಗಳು ತಡೆದು ಭೂಮಿಯ ಮೇಲಣ ಉಷ್ಣತೆಯನ್ನು ಕಾದಿಡುತ್ತವೆ; ಬೀಸುವ ಗಾಳಿ ಉಷ್ಣತೆಯನ್ನು ಎಲ್ಲೂ ಇಬ್ಬನಿ ಬಿಂದುವಿಗಿಂತ ತಗ್ಗಿಗೆ ಇಳಿಯಲು ಬಿಡುವುದಿಲ್ಲ.

ಹಿಂದಿನ ಕಾಲದ ಜನ ಇಬ್ಬನಿ ಆಕಾಶದಿಂದ ಬೀಳುತ್ತದೆಂದು ತಿಳಿದಿದ್ದರು. ಅರಿಸ್ಟಾಟಲ್ ಕೂಡ (ಮೀಟಿಯರೊಲಾಜಿಕ್‌ದಲ್ಲಿ ವಿವರಿಸಿದ್ದಾನೆ) ಬೆಳಗಿನ ವೇಳೆಯಲ್ಲಿ ಕಾದು ಆವಿಯಾದ ನೀರು ರಾತ್ರಿ ವೇಳೆಯಲ್ಲಿ ಸಾಂದ್ರೀಕರಿಸಿ ಇಬ್ಬನಿ ಇಲ್ಲವೆ ಮಂಜಾಗಿ ಬೀಳುತ್ತದೆಂದು ನಂಬಿದ್ದ. ಪ್ರಾಯಶಃ ಲೂಯಿಕಾನಸ್ಟಂಟ್ ಪ್ರಿವಾಸ್ಟ್ (1792) ಎಂಬ ವಿಜ್ಞಾನಿಯೇ ಇಬ್ಬನಿಗೂ ವಸ್ತುಗಳ ತೆರೆದ ಹೊರಮೈಗಳ ವಿಸರಣೆಗೂ ಇರುವ ಸಂಬಂಧವನ್ನು ಗುರುತಿಸುವವರಲ್ಲಿ ಮೊದಲಿಗ. ಇಬ್ಬನಿಯ ಸೃಷ್ಟಿಯ ಬಗ್ಗೆ ಆಮೂಲಾಗ್ರವಾಗಿ ಪ್ರಯೋಗಗಳನ್ನು ನಡೆಸಿದವರಲ್ಲಿ ಮೊದಲಿಗೆ ಲಂಡನ್ನಿನ ಸೇಂಟ್ ಥಾಮಸ್ ಆಸ್ಪತ್ರೆಯ ವೈದ್ಯ ಚಾರಲ್ಸ್ ವೆಲ್ಸ್ (1814). ಗಾಳಿ ಮೆಲ್ಲನೆ ಬೀಸುತ್ತಿದ್ದರೆ ಇಬ್ಬನಿಯ ಬೆಳವಣಿಗೆ ತ್ವರಿತಗತಿಯಿಂದ ಆಗುತ್ತದೆಂಬುದನ್ನು ಈತ ಚೆನ್ನಾಗಿ ತೋರಿಸಿದ. ಜಾನ್ ಆಟ್ಕಿನ್ (1885) ಎಂಬ ವಿಜ್ಞಾನಿ ಇಬ್ಬನಿಯಂತೆ ಬೇರಿನ ಒತ್ತಡದಿಂದ ಎಲೆಗಳ ಮೇಲೆ ಒಮ್ಮೊಮ್ಮೆ ನೀರಿನ ಹನಿಗಳು ಮೂಡುವುದನ್ನು ಗುರುತಿಸಿದ.

ಇಬ್ಬನಿಯ ಬೆಳವಣಿಗೆಗೆ ನೀರಿನ ಆವಿಯ ವಿಸರಣವೇ ಕಾರಣ. ವಾಯುಮಂಡಲದ ಮೇಲ್ಭಾಗದಲ್ಲಿ ಅದರ ಒತ್ತಡ ಹೆಚ್ಚಾಗಿದ್ದರೆ ನೀರಿನ ಆವಿ ಅಧೋಮುಖವಾಗಿ ವಿಸರಣವಾಗಿ ಇಬ್ಬನಿಯ ಬೆಳವಣಿಗೆಗೆ ಪೂರಕವಾಗುತ್ತದೆ. ಇಲ್ಲವೆ ತೇವವಾಗಿರುವ ನೆಲದ ಉಷ್ಣತೆ ಎಲೆಗಳ ಮೇಲ್ಮೈಯ ಉಷ್ಣತೆಗಿಂತ ಹೆಚ್ಚಾಗಿದ್ದರೆ ನೀರಿನ ಆವಿ ಊರ್ಧ್ವಮುಖವಾಗಿ ವಿಸರಣವಾಗಿ ಇಬ್ಬನಿಯ ಬೆಳವಣಿಗೆಗೆ ಪೂರಕವಾಗುತ್ತದೆ. ಅಧೋಮುಖವಾಗಿ ವಿಸರಣವಾದ ನೀರಿನ ಆವಿಯಿಂದ ಬೆಳೆದ ಇಬ್ಬನಿಯನ್ನು ಇಬ್ಬನಿಪಾತ (ಡ್ಯೂಫಾಲ್) ಎಂದೂ ಊರ್ಧ್ವಮುಖವಾಗಿ ವಿಸರಣವಾದ ನೀರಿನ ಆವಿಯಿಂದ ಬೆಳೆದ ಇಬ್ಬನಿಯನ್ನು ಬಟ್ಟಿಇಬ್ಬನಿ (ಡಿಸ್ಟಿಲೇಷನ್) ಎಂದೂ ಕರೆಯುವುದಿದೆ.

ಗಿಡಗಳ ಮತ್ತು ಹುಲ್ಲಿನ ಮೇಲೆ ಬೀಳುವ ಇಬ್ಬನಿಯ ಮೊತ್ತವನ್ನು ಗೊತ್ತು ಮಾಡುವುದು ಪ್ರಯಾಸದ ಕೆಲಸ. ಒಂದು ರಾತ್ರಿಯಲ್ಲೇ ಸುಮಾರು (1/50)" ಇಬ್ಬನಿ ಬೀಳುವುದುಂಟು. ಸಮಶೀತೋಷ್ಣ ಮತ್ತು ಉಷ್ಣವಲಯಗಳ ಹವಾಗುಣ ಇಬ್ಬನಿಯ ಸೃಷ್ಟಿಗೆ ಪ್ರೇರಕವಾಗಿದೆ. ಶೀತವಲಯಗಳ ಇಬ್ಬನಿ ಬಲು ಅಪೂರ್ವ. ಯಾವುದೇ ಪ್ರದೇಶದಲ್ಲಿ ಬೀಳುವ ಸಾಲಿಯಾನ ಇಬ್ಬನಿಯ ಮೊತ್ತ ಆ ಪ್ರದೇಶದ ಸರಾಸರಿ ಉಷ್ಣತೆ ಮತ್ತು ಗಾಳಿಯ ಆರ್ದ್ರತೆಗಳನ್ನವಲಂಬಿಸಿದೆ. ಚಳಿ ಇಲ್ಲವೆ ನಿರಾರ್ದ್ರತೆ ಬಿಸಿ ಹವಾಗುಣವಿರುವ ಪ್ರದೇಶಗಳಲ್ಲಿ ಸುಮಾರು 1/2" ಮತ್ತು ಸಾಮಾನ್ಯ ಆರ್ದ್ರತೆ ಇದ್ದು ಬಿಸಿ ಹವಾಗುಣವಿರುವ ಪ್ರದೇಶಗಳಲ್ಲಿ ಸುಮಾರು 3" ಇಬ್ಬನಿ ಬೀಳುತ್ತದೆ. ಇಸ್ರೇಲಿನಂಥ ಪ್ರದೇಶಗಳಲ್ಲಿ ಇಬ್ಬನಿಯಿಂದಲೇ ಬೇಸಗೆ ಬೆಳೆ ಮಾಡುತ್ತಾರೆ. ಮರುಭೂಮಿಯ ಮರಗಳು ಬದುಕಿರುವುದೂ ಇಬ್ಬನಿಯಿಂದಲೇ, ಇಬ್ಬನಿಯಿಂದ ಅನುಕೂಲದಂತೆ ಪ್ರತಿಕೂಲವೂ ಇದೆ. ಬಹಳ ಕಡೆ ಇದನ್ನುಂಡು ಬೆಳೆಯುವ ಅಣಬೆ ಮತ್ತು ಕಳೆ ಉಪಯುಕ್ತ ಗಿಡಮರಗಳಿಗೆ ಹಾನಿ ಉಂಟುಮಾಡುತ್ತದೆ.

**ಇಬ್ಬನಿಬಿಂದು:** ಗಾಳಿ ತಂಪುಗೊಂಡಂತೆ ಸಂತೃಪ್ತನೀರಾವಿಯ ಮತ್ತು ನೀರಾವಿಯ ಸಂಮರ್ದಗಳು ಸಮಾನವಾಗಿರುವ ಸ್ಥಿತಿಯನ್ನು ತಲಪುತ್ತವೆ. ಎಂದರೆ ಅಲ್ಲಿಂದ ಮುಂದೆ ಗಾಳಿ ಉಷ್ಣವಿಸರಣೆಯಿಂದ ಲಭ್ಯವಾಗುವ ನೀರಾವಿಯನ್ನು ಸ್ವೀಕರಿಸಲು ಅಸಮರ್ಥವಾಗು

ವುದು. ಇಂಥ ಅವಧಿಕ ಉಷ್ಣತೆಯ ಹೆಸರು ಇಬ್ಬನಿ ಬಿಂದು. ಸಮುದ್ರ, ನದಿ ಮತ್ತು ಸರೋವರಗಳಲ್ಲಿ ನೀರು ಸದಾ ಬಾಷ್ಪೀಕರಣಗೊಂಡು (ಇವಾಪರೇಷನ್) ವಾಯುಮಂಡಲವನ್ನು ಸೇರುವುದರಿಂದ ಗಾಳಿ ಸದಾ ನೀರಾವಿಯಿಂದ ಕೂಡಿರುತ್ತದೆ. ಇದರ ಪ್ರಮಾಣ ಬೆಳಗಿನ ವೇಳೆಯ ಸರಾಸರಿ ಉಷ್ಣತೆಯನ್ನೂ ಪರಿಸರದ ಪ್ರಕೃತಿಯ ಸ್ವಭಾವನ್ನೂ ಆವಲಂಬಿಸಿದೆ.




ರಾತ್ರಿ ವೇಳೆಯಲ್ಲಿ ಎಲೆ, ದಳ ಮತ್ತು ಗರಿಗಳಿಂದ ಉಷ್ಣವಿಸರಣಗೊಂಡು ತತ್ಫಲವಾಗಿ ಗಾಳಿಯ ಉಷ್ಣತೆ ಇಬ್ಬನಿಬಿಂದುವಿಗಿಂತ ಕೆಳಗೆ ಇಳಿದರೆ ಹೆಚ್ಚಾದ ಆವಿ ಸಾಂದ್ರೀಕರಿಸಿ ಇಬ್ಬನಿಯಾಗುತ್ತದೆ. ಉಷ್ಣತೆ ಹಿಮಬಿಂದುವಿಗಿಂತ (ಫ್ರೀಸ್ಸಿಂಗ್ ಪಾಯಿಂಟ್) ತಗ್ಗಿನಲ್ಲಿದ್ದರೆ ಇಬ್ಬನಿ ಹೆಪ್ಪುಗಟ್ಟಿ ಬಿಳಿ ಮಂಜು ಆಗುತ್ತದೆ. ಸಾಮಾನ್ಯವಾಗಿ ಗಾಳಿ ನೀರಿನ ಆವಿಯಿಂದ ಸಂತೃಪ್ತವಾಗಿರುವುದಿಲ್ಲ. ಇರುವ ನೀರಿನ ಆವಿಯಿಂದಲೇ ಅದನ್ನು ಸಂತೃಪ್ತಗೊಳಿಸಬೇಕಾದರೆ ಅದರ ಉಷ್ಣತೆಯನ್ನು ತಗ್ಗಿಸಬೇಕು. ಗಾಳಿಯನ್ನು ಸಂತೃಪ್ತಗೊಳಿಸುವ ನೀರಿನ ಆವಿಯ ಪ್ರಮಾಣ ಉಷ್ಣತೆಯನ್ನವ ಲಂಬಿಸಿದೆ. ಗಾಜಿನ ಲೋಟದಲ್ಲಿರುವ ನೀರಿಗೆ ಮಂಜುಗಡ್ಡೆಯನ್ನು ಹಾಕಿ ಕಲಕಿದರೆ ಸ್ವಲ್ಪ ಕಾಲದಲ್ಲೇ ಲೋಟದ ಹೊರಮೈಮೇಲೆ ಇಬ್ಬನಿ ಮೂಡುತ್ತದೆ. ರೀನೋನ ಆರ್ದ್ರತಾಮಾಪಿ ಯನ್ನು ಉಪಯೋಗಿಸಿ ಮಾಡುವ ಪ್ರಯೋಗವೂ ಇಂಥದೇ.

ಗಾಳಿ B ಯಿಂದ A ಗೆ ಹೋಗದಂತೆ ಅಡ್ಡಿಯಿದೆ. ವಾಯುಚೋಷಕ ಕೆಲಸ ಮಾಡಲಾರಂಭಿಸಿದರೆ ಗಾಳಿ ಗಾಜಿನ ನಳಿಗೆಯ ಮೂಲಕ ಈಥರನ್ನು ಪ್ರವೇಶಿಸಿ ಅದರ ಆವಿಯನ್ನು ಹೊತ್ತು ಹೊರಗೆ ಹೋಗುವುದು. ಇದರಿಂದ Aಯ ಉಷ್ಣತೆ ಕಡಿಮೆಯಾಗುತ್ತ ಬರುತ್ತದೆ. ಒಮ್ಮೆ Aಯ ಉಷ್ಣತೆ ಸುತ್ತಿನ ಗಾಳಿಯ ಇಬ್ಬನಿಬಿಂದುವಿಗಿಂತ ತಗ್ಗಿದರೆ ಇಬ್ಬನಿ $S_1$ ರ ಮೇಲೆ ಮೂಡುವುದು. ಆಗ $T_1$ ತೋರಿಸುವ ಉಷ್ಣತೆಯನ್ನು ಓದಬೇಕು. ಇದನ್ನೇ ಇಬ್ಬನಿಬಿಂದು ಎಂದು ತಿಳಿಯುವುದು ಸರಿಯಲ್ಲ. ಆದ್ದರಿಂದ ವಾಯುಚೋಷಕವನ್ನು ನಿಲ್ಲಿಸಿ $S_1$ರ ಮೇಲಿನ ಇಬ್ಬನಿ ಆರಿದ ತತ್‌ಕ್ಷಣ ಮತ್ತೆ $T_1$ ತೋರಿಸುವ ಉಷ್ಣತೆಯನ್ನು ಓದಬೇಕು. ಈ ಎರಡು ಉಷ್ಣತೆಗಳ ಸರಾಸರಿ ಬಲುಮಟ್ಟಿಗೆ ಸಮರ್ಪಕವಾದ ಇಬ್ಬನಿಬಿಂದುವನ್ನು ಕೊಡುತ್ತದೆ.

B ಮತ್ತು ಅದರ ತುದಿಯಲ್ಲಿರುವ ಅಂಗುಸ್ತಾನ $S_2$ ಪ್ರಯೋಗ ನಡೆಸುವವನಿಗೆ ಸಹಾಯಕವಾಗಿದೆ. $S_2$ರ ಹೊರಮೈ ನೋಡುತ್ತ $S_1$ರ ಹೊರಮೈ ಮೇಲೆ ಇಬ್ಬನಿ ಮೂಡುವುದನ್ನೂ ಅದು ಮತ್ತೆ ಆರುವುದನ್ನೂ ಸುಲಭವಾಗಿ ನಿರ್ಧರಿಸಬಹುದು. ರೀನೋನ ಆರ್ದ್ರತಾಮಾಪಿಯಿಂದ ಸಾಪೇಕ್ಷ ಆರ್ದ್ರತೆಯನ್ನೂ ನಿರ್ಧರಿಸಬಹುದು. (ಎಸ್.ಎ.ಎಚ್.)

**ಇಬ್ರಾಹಿಂ ಆದಿಲ್ ಷಾ:** ದಖನ್ನಿನಲ್ಲಿದ್ದ ಬಹುಮನಿ ರಾಜ್ಯ ಒಡೆದದ್ದರ ಫಲವಾಗಿ ಉದ್ಭವಿಸಿದ ಐದು ಸುಲ್ತಾನ ಮನೆತನಗಳಲ್ಲೊಂದಾದ ಬಿಜಾಪುರದ ಆದಿಲ್ ಷಾಹಿ ಮನೆತನದಲ್ಲಿ (1489–1686) ಆಳಿದವರ ಪೈಕಿ ಈ ಹೆಸರಿನವರು ಇಬ್ಬರು (**ನೋಡಿ– ದಖನ್ನಿನ ಸುಲ್ತಾನರು**).

**ಇಬ್ರಾಹಿಂ ಆದಿಲ್ ಷಾ I:** 1534–1557. ದಖನ್ನಿನ ಸುಲ್ತಾನರ ಮನೆತನಗಳಲ್ಲೊಂದಾದ ಬಿಜಾಪುರದ ಆದಿಲ್ ಷಾಹಿ ಮನೆತನದ ನಾಲ್ಕನೆಯ ಸುಲ್ತಾನ. ಈ ಮನೆತನದ ಸ್ಥಾಪಕನಾದ ಯೂಸುಫ್ ಆದಿಲ್ ಷಾನ ಮೊಮ್ಮಗ. ಮಲ್ಲು ಎಂಬುವನು ಈತನ ಅಣ್ಣ. ಇವನಿಗಿಂತ ಮುಂಚೆ ಅವನು ಸ್ವಲ್ಪ ಕಾಲ ರಾಜ್ಯವಾಳಿದ. ಈತನ ತಾತ ಷಿಯ ಪಂಗಡದ ಮುಸ್ಲಿಮನಾಗಿದ್ದರೂ ಇವನು ಸುನ್ನಿ ಮತಸ್ಥ. ದೇಶದ ರಾಜಕೀಯದಲ್ಲಿ ಹೊರಗಿನವರ ಕೈವಾಡ ತಗ್ಗಿಸಬೇಕೆಂಬ ಉದ್ದೇಶದಿಂದ ಇವನು ಹೊರದೇಶಗಳಿಂದ ಬಂದಿದ್ದ ಅಡಳಿತಾಧಿಕಾರಿ ಗಳನ್ನೂ ಸೈನಿಕರನ್ನೂ ಹಿಂದಕ್ಕೆ ಕಳುಹಿಸಿ ಅವರ ಸ್ಥಾನಗಳಲ್ಲಿ ದಖನೀ ಜನರನ್ನೂ ಆಫ್ರಿಕನ್ನರನ್ನೂ ನೇಮಿಸಿದ; ಪರ್ಷಿಯನ್ ಭಾಷೆಯ ಬದಲು ಕನ್ನಡ ಮರಾಠಿಗಳನ್ನು ಆಡಳಿತ ಭಾಷೆಗಳಾಗಿ ಬಳಸಬೇಕೆಂದು ಆಜ್ಞಾಪಿಸಿದ. ಈ ಕ್ರಮದ ಫಲವಾಗಿ ಸ್ಥಳೀಯ ಮುಸ್ಲಿಮರಿಗೂ ಹಿಂದೂಗಳಿಗೂ ಸರ್ಕಾರಿ ಹುದ್ದೆಗಳು ದೊರಕುವುದು ಸಾಧ್ಯವಾಯಿತು.

ಇವನ ಕಾಲದಲ್ಲಿ ದಖನ್ನಿನಲ್ಲಿದ್ದ ಇತರ ಸುಲ್ತಾನರ ಮನೆತನಗಳಾದ ಇಮಾದ್‌ಷಾಹಿ (ಬೀರಾರ್), ನಿಜಾಂ ಷಾಹಿ (ಅಹಮದ್ ನಗರ), ಕುತುಬ್ ಷಾಹಿ (ಗೋಲ್ಕೊಂಡ), ಬಾರಿದ್ ಷಾಹಿ (ಬೀದರ್) ರಾಜ್ಯಗಳಲ್ಲೂ ಕೃಷ್ಣದೇವರಾಯನ ಅನಂತರದಲ್ಲಿ ಇಳಿಮುಖವಾಗಿದ್ದ ವಿಜಯನಗರದಲ್ಲೂ ಅಂತಃಕಲಹಗಳು ಸಾಮಾನ್ಯವಾಗಿದ್ದುವು. ಪಕ್ಷ ಪ್ರತಿಪಕ್ಷಗಳು ನೆರೆರಾಜ್ಯಗಳ ನೆರವಿನಿಂದ ಮಸಲತ್ತಿನಲ್ಲಿ ತೊಡಗಿದ್ದುವು. ಈ ಗೊಂದಲದ ಫಲವಾಗಿ ಇಬ್ರಾಹಿಂನಿಗೂ ಶಾಂತಿ ಇಲ್ಲವಾಗಿತ್ತು. ತನ್ನ ಆಳ್ವಿಕೆಯ ಹೆಚ್ಚು ಕಾಲವನ್ನು ಇವನು ಯುದ್ಧಗಳಲ್ಲಿ ಕಳೆದ.*

**ಇಬ್ರಾಹಿಂ ಅದಿಲ್ ಷಾ II:** 1580–1626. ಬಿಜಾಪುರದ ಆದಿಲ್ ಷಾಹಿ ಮನೆತನದಲ್ಲಿ ಆರನೆಯ ಸುಲ್ತಾನ. ಮೊದಲನೆಯ ಇಬ್ರಾಹಿಂ ಆದಿಲ್ ಷಾನ ಮೊಮ್ಮಗ. ಮೊದಲನೆಯ ಇಬ್ರಾಹಿಂ ಆದಿಲ್ ಷಾನ ಮಗನಾದ ಆಲಿ ಆದಿಲ್ ಷಾ ಸತ್ತ ಮೇಲೆ ಒಂಬತ್ತನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದ. ಈತ ಸಾಮ್ರಾಟ್ ಅಕ್ಬರ್ ಮತ್ತು ಗೋಲ್ಕೊಂಡದ ಮಹಮ್ಮದ್ ಕುಲಿ ಕುತುಬ್ ಷಾ ಕಾಲದಲ್ಲಿ ಬಿಜಾಪುರದಲ್ಲಿ ಆಳುತ್ತಿದ್ದ. ಈತ ಪರಮತಸಹಿಷ್ಣು, ವಿವೇಕಿ. ಕಲೆಗೂ ಶಾಸ್ತ್ರಗಳಿಗೂ ಆಶ್ರಯದಾತ. ಪರ್ಷಿಯದಿಂದಲೂ ಭಾರತದ ಹಲವಾರು ಭಾಗಗಳಿಂದಲೂ ಕವಿಗಳೂ ಲೇಖಕರೂ ಸಂತರೂ ಆಗ ಬಿಜಾಪುರಕ್ಕೆ ಆಗಮಿಸಿದ್ದರು. ಈತನ ಕಾಲದಲ್ಲಿ ವಿಭಿನ್ನ ಕಲಾಶಾಖೆಗಳಲ್ಲಿ ಪ್ರಸಿದ್ಧವಾದ ಗ್ರಂಥಗಳು ರಚಿತವಾದುವು. ಇಬ್ರಾಹಿಂನಿಗೆ ಶಿಲ್ಪಕಲೆಯೆಂದರೆ ಬಹಳ ಇಷ್ಟ. ಈತನ ಆಸ್ಥಾನದಲ್ಲಿದ್ದ ಪರ್ಷಿಯನ್ ಭಾಷೆಯ ಕವಿಗಳಲ್ಲಿ ಜಹೂರಿ ಮತ್ತು ಮಲಿಕ್‌ಕುಮಿ ಪ್ರಸಿದ್ಧರು. ಅಬುಲ್ ಕಾಸಿಂ ಫರಿಷ್ತ ಎಂಬುವನು ಆದಿಲ್ ಷಾನ ಪ್ರೋತ್ಸಾಹದಿಂದ ತಾರೀಖ್ ಫರಿಷ್ತ ಎಂಬ ಹೆಸರಿನಲ್ಲಿ ಭಾರತದ ಇತಿಹಾಸ ಬರೆದಿದ್ದಾನೆ. ಭಾರತೀಯ ಭಾಷೆ ಸಂಸ್ಕೃತಿಗಳಿಗೆ ಈ ಸುಲ್ತಾನ ತುಂಬ ಪ್ರೋತ್ಸಾಹ ನೀಡುತ್ತಿದ್ದ. ಪರ್ಷಿಯನ್ ಭಾಷೆಯಲ್ಲೂ ಇವನು ವಿದ್ವಾಂಸನಾಗಿದ್ದ. ಇವನಿಗೆ ದಖನಿ ಭಾಷೆಯಲ್ಲಿ ಬಹಳ ಪ್ರೇಮವಿತ್ತು. ಕಿತಾಬ್‌ನವರಸವೆಂಬ ಪುಸ್ತಕವನ್ನು ಇವನು ಬರೆದನೆಂದು ಹೇಳಲಾಗಿದೆ. ಇದು ಸಂಗೀತವನ್ನು ಕುರಿತು ಬರೆದಿರುವ ಪುಸ್ತಕ. ಇದರಲ್ಲಿ ರಾಗಗಳ ವಿವರಣೆಯೂ ಒಂದೊಂದು ರಾಗದ ಮೇಲೆ ಇವನು ಬರೆದಿರುವ ಗೀತೆಗಳೂ ದೋಹಗಳೂ ಇವೆ. 17 ರಾಗಗಳಲ್ಲಿ 59 ಗೀತೆಗಳು ಮತ್ತು 17 ದೋಹಗಳಿವೆ. ಗೀತೆಗಳು ಈ ಪ್ರಕಾರ ಇವೆ: ಭೂಪಾಲಿ–2, ರಾಮಕಲಿ–2, ಭೈರು–2, ಹಜೀಜ್–ಒಂದು, ಮಾರು–2, ಅಸಾವರಿ–2, ದೇಶಿ–ಒಂದು, ಪೂರ್ಬಾ–ಒಂದು, ಬರಾರಿ–ಒಂದು, ತೋಡಿ–4, ಮಲ್ಹಾರ್–5, ಗೌರಿ–2, ಕಲ್ಯಾಣ–4, ಧನಸುರಿ–2, ಕೇದಾರಾ–4, ನವರೋಜ್–ಒಂದು. ಮತ್ತು ಕನ್ನಡ ಅಥವಾ ಕರ್ನಾಟ–19. ಇವುಗಳಲ್ಲಿ ಕನ್ನಡ ಅಥವಾ ಕರ್ನಾಟ ರಾಗ ಇವನಿಗೆ ಹೆಚ್ಚು ಇಷ್ಟ. ಈ ಪುಸ್ತಕವನ್ನು ಬರೆದದ್ದು ಸು.ಪ್ರ.ಶ. 1600ರಲ್ಲಿ. ಇವನ ಸಂಗೀತದ ಹುಚ್ಚು ಈತನ ಎಲ್ಲ ವ್ಯವಹಾರಗಳಲ್ಲೂ ಪ್ರಕಟವಾಗಿತ್ತು. ನವರಸವೆಂಬುದು ಈತನ ಪ್ರೀತಿಯ ಶಬ್ದ. ಇವನ ಪಟ್ಟದ ಆನೆಯ ಹೆಸರು ನವರಸ್ ಪೈಕರ್. ಧ್ವಜವೇ ಮುಂತಾದ ಒಂಬತ್ತು ಲಾಂಛನಗಳೂ ನವರಸವೇ. ಇವನು ಆಬಾದ್ ಮಾಡಿದ್ದ ಪಟ್ಟಣ ನವರಸಪುರವೆಂದೂ ನವರಸಮಹಲ್ ಮತ್ತು ನವರಸಬಿಹಿಷ್ತ್ ಎಂಬ ಕಟ್ಟಡಗಳನ್ನು ಇವನು ಕಟ್ಟಿಸಿದನೆಂದೂ ಹೇಳಲಾಗಿದೆ. ಇದರ ಒಂದು ಕೇರಿ ಸಂಗೀತ ವಿದ್ವಾಂಸರಿಗೆ ಮೀಸಲು. ಇಲ್ಲಿದ್ದ ಕಲಾಕಾರರು ಸಾವಿರಾರು ಮಂದಿ. ಉತ್ತರ ಭಾರತ ಹಾಗೂ ವಾರಾಣಾಸಿಯಿಂದ ಸಾವಿರಾರು ಮಂದಿ ಸಂಗೀತ ವಿದ್ವಾಂಸರು ಇಲ್ಲಿ ಬಂದು ವಾಸಿಸುತ್ತಿದ್ದರೆಂದು ಪ್ರತೀತಿ. ಉತ್ತಮ ದರ್ಜೆಯ ವಿದ್ವಾಂಸರಿಗೆ ಅತಾಯಿ ಎಂದೂ ಅವರಿಗಿಂತ ಕಡಿಮೆ ದರ್ಜೆಯವರಿಗೆ ಗುಣಿಜನರೆಂದೂ ಹೆಸರಿತ್ತಂತೆ. ಈತನ ಸಂಗೀತ ಪ್ರೇಮದಿಂದ ಇವನಿಗೆ ಜಗದ್ಗುರುವೆಂಬ ಖ್ಯಾತಿ ಬಂತೆಂದು ಪ್ರತೀತಿ. ಮೆಡೋಸ್ ಟೇಯ್ಲರ್ ಎಂಬ ಇತಿಹಾಸಕಾರ ಈತನನ್ನು ಆದಿಲ್‌ಷಾಹಿ ಮನೆತನದಲ್ಲೇ ಅತ್ಯಂತ ಶ್ರೇಷ್ಠನೆಂದು ಹೊಗಳಿದ್ದಾನೆ. ಈ ಮನೆತನದ ಸ್ಥಾಪಕನಾದ ಯೂಸುಫ್ ಆದಿಲ್ ಷಾನನ್ನು ಬಿಟ್ಟರೆ ಇವನಷ್ಟು ದಕ್ಷನೂ ಜನಪ್ರಿಯನೂ ಆಗಿದ್ದ ದೊರೆ ಈ ಮನೆತನದಲ್ಲೇ ಬೇರೆ ಯಾರೂ ಹುಟ್ಟಲಿಲ್ಲವೆಂದು ಟೇಯ್ಲರನ ಅಭಿಪ್ರಾಯ. (ಎಸ್.ಎ.ಟಿ.ಕೆ.)

**ಇಬ್ರಾಹಿಂಖಾನ್ ಲೋದಿ:** ದೆಹಲಿಯ ಲೋದಿ ಸುಲ್ತಾನರಲ್ಲಿ ಕೊನೆಯವ. ಇಬ್ರಾಹಿಮ್ ಷಾ ಎಂದೂ ಕರೆಯುತ್ತಿದ್ದ ಇವನು 1517ರಲ್ಲಿ ಸಿಂಹಾಸನವನ್ನೇರಿದ. ವಿವೇಕಿಯೂ ಸಮರ್ಥನೂ ಆಗಿದ್ದ ಸುಲ್ತಾನ್ ಸಿಕಂದರ್ ಷಾ ಈತನ ತಂದೆ. ಆದರೆ

ಈತ ಅವಿವೇಕಿ, ದುಡುಕು ಸ್ವಭಾವದವ. ತನ್ನ ಅಧಿಕಾರವನ್ನು ಬಲಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಇವನು ಪ್ರಬಲರಾದ ಶ್ರೀಮಂತ ಆಡಳಿತ ವರ್ಗದವರನ್ನೇ ಕೆಣಕಿದ; ಫಾರ್ಮುಲಿ, ಲೋದಿ, ಲೊಹಾನಿ ಮನೆತನಗಳನ್ನು ಹತ್ತಿಕ್ಕಲೆತ್ನಿಸಿದ. ಇದರಿಂದ ಈ ಜನರೆಲ್ಲ ಈತನ ವಿರೋಧಿಗಳಾದರು. ಇವರನ್ನಡಗಿಸಲು ಈತ ದಿನೇ ದಿನೇ ಹೆಚ್ಚು ಹೆಚ್ಚು ಉಗ್ರ ಕ್ರಮಗಳನ್ನು ಕೈಕೊಂಡ. ಇಬ್ರಾಹಿಮನ ದಮನನೀತಿ ದುರಾಡಳಿತಗಳಿಗೆ ಪಂಜಾಬಿನ ದೌಲತ್‌ಖಾನ್, ಆಲಂಖಾನ್ ಮುಂತಾದವರು ರೋಸಿಹೋದರು; ಕಾಬೂಲನ್ನು ಸ್ವಾಧೀನಪಡಿಸಿಕೊಂಡು ದೆಹಲಿಯ ಮೇಲೆ ಕಣ್ಣಿಟ್ಟು ಕಾಯುತ್ತಿದ್ದ ಬಾಬರನ ಸಹಾಯ ಬೇಡಿದರು. ಹಿಂದೂಸ್ತಾನಕ್ಕೆ ನುಗ್ಗುವ ಹಂಚಿಕೆಯಲ್ಲಿ ಬಾಬರ್ ಇವರ ಆಹ್ವಾನವನ್ನು ಸಂತೋಷದಿಂದ ಮನ್ನಿಸಿದ. ವಾಯವ್ಯದ ಕಣಿವೆಗಳನ್ನು ದಾಟಿ 1524ರಲ್ಲಿ ಸೈನ್ಯದೊಡನೆ ಲಾಹೋರಿನಲ್ಲಿ ಬಂದಿಳಿದ. ಅವನನ್ನು ಸ್ವಾಗತಿಸಿದ್ದ ಶ್ರೀಮಂತರಿಗೆ ಅವನ ಉದ್ದೇಶವೇನೆಂಬುದು ಆಗ ಅರ್ಥವಾಯಿತು. ಅವರು ಬಾಬರನ ಮೇಲೆ ತಿರುಗಿಬಿದ್ದರು. ದೆಹಲಿಯ ರಾಜ್ಯ ಗೆಲ್ಲಲು ಹೆಚ್ಚು ಸಿದ್ಧತೆ ಬೇಕೆಂಬುದನ್ನು ಮನಗಂಡು ಬಾಬರ್ ಕಾಬೂಲಿಗೆ ಹಿಂತಿರುಗಿದ. ಆವಶ್ಯಕವಾದ ಸಿದ್ಧತೆ ಮಾಡಿಕೊಳ್ಳಲು ಒಂದು ವರ್ಷ ಹಿಡಿಯಿತು. 1525 ನವೆಂಬರ್‌ನಲ್ಲಿ ಪಂಜಾಬನ್ನು ಸ್ವಾಧೀನಪಡಿಸಿಕೊಂಡ. ಅಲ್ಲಿಂದ ದೆಹಲಿಯ ಕಡೆಗೆ ನುಗ್ಗಿದ. 1526 ಏಪ್ರಿಲ್ 20ರಂದು ಪಾಣಿಪತ್‌ನಲ್ಲಿ ಕಾಳಗ ನಡೆಯಿತು. ಇಬ್ರಾಹಿಂ ಸೋತು ಯುದ್ಧರಂಗದಲ್ಲಿ ಮಡಿದ. ಅಲ್ಲಿಗೆ ದೆಹಲಿ ಸುಲ್ತಾನರ ಆಳ್ವಿಕೆ ಕೊನೆಗಂಡಿತು. ಮೊಗಲ್ ಸಾಮ್ರಾಜ್ಯ ಅಂದು ಜನ್ಮತಾಳಿತು **ನೋಡಿ–ದೆಹಲಿಯ–ಸುಲ್ತಾನರು**. *

**ಇಬ್ಲೀಸ್:** ಇಸ್ಲಾಂಧರ್ಮಕ್ಕೆ ಅನುಗುಣವಾಗಿ ದೇವರ ಪ್ರೀತಿಯ ದೂತನಾಗಿದ್ದು, ಅನಂತರ ಅವನ ಕೋಪಕ್ಕೆ ಗುರಿಯಾದವ. ಇವನು ಘೋರ ತಪಸ್ಸು ಮಾಡಿ ದೇವರನ್ನು ಮೆಚ್ಚಿಸಿದ್ದ. ದೇವರು ಈತನ ಸಾಧನೆ ಮೆಚ್ಚಿ ಈತನನ್ನು ಎಲ್ಲ ದೂತರಿಗೂ ನಾಯಕನನ್ನಾಗಿ ಮಾಡಿದ್ದ. ಅಜಾಜೀಲ್ ಎಂದು ಇವನಿಗೆ ನಾಮಕರಣವಾಗಿತ್ತು. ಪ್ರಪಂಚದಲ್ಲಿಯ ಭೂತಗಳನ್ನು ನಾಶಮಾಡಲು ದೇವರು ಇವನನ್ನು ಕಳಿಸಿದನೆಂದೂ ಪ್ರತೀತಿ. ದೇವರು ಆದಂನನ್ನು ಮಣ್ಣಿನಿಂದಲೂ ಹವ್ವಾಳನ್ನು (ಈವ್) ಪಕ್ಕೆಲುಬಿನಿಂದಲೂ ಸೃಷ್ಟಿಸಿ, ಆದಂನಿಗೆ ಎಲ್ಲರೂ ತಲೆಬಾಗಬೇಕೆಂದು ಆದೇಶ ನೀಡಿದ. ಆದರೆ ಅಜಾಜೀಲ್ ಮಾತ್ರ ದರ್ಪದಿಂದ ಇದನ್ನು ನಿರಾಕರಿಸಿದ. ಸ್ವತಃ ನನ್ನ ಕೈಯಿಂದಲೇ ಸೃಷ್ಟಿಯಾದವನಿಗೆ ನೀನೇಕೆ ತಲೆಬಾಗುತ್ತಿಲ್ಲ ಎಂದು ದೇವರು ಕೇಳಿದಾಗ, ಆದಂ ಮಣ್ಣಿನಿಂದ ಸೃಷ್ಟಿಯಾದವನೆಂದೂ ತಾನಾದರೋ ಅಗ್ನಿಪುತ್ರನೆಂದೂ (ಕುರಾನ್–38; 75–79) ಆದ್ದರಿಂದ ತಾನೇ ಶ್ರೇಷ್ಠನೆಂದೂ ಈತ ಉತ್ತರಿಸಿದ. ದೇವರು ಕೋಪಗೊಂಡ ಮಾನವರನ್ನು ಮೋಸಗೊಳಿಸು, ಅವರಿಗೆ ದಾರಿತಪ್ಪಿಸು ಎಂದು ಇವನಿಗೆ ಶಾಪವಿತ್ತು ಸ್ವರ್ಗ ಪ್ರವೇಶಿಸದಂತೆ ಈತನನ್ನು ಪ್ರತಿಬಂಧಿಸಿದ. ಆದರೆ ಇಬ್ಲೀಸ್ ಜಗ್ಗಲಿಲ್ಲ. ನವಿಲೊಂದರ ಸಹಾಯದಿಂದ ನೇರ ಸ್ವರ್ಗದ ಸಮೀಪಕ್ಕೆ ಬಂದ; ಅನಂತರ ಹಾವಿನ ಬಾಯೊಳಗೆ ಕುಳಿತು ಸ್ವರ್ಗ ಪ್ರವೇಶಿಸಿದ. ಆದಂ ಮತ್ತು ಹವ್ವಾಗಳು ಗೋಧಿ ಗಿಡದ ಸಮೀಪ ಹೋಗಕೂಡದೆಂಬುದೂ ಗೋದಿಯನ್ನು ತಿನ್ನಕೂಡದೆಂಬುದೂ ದೇವರ ವಿಧಿಯಾಗಿತ್ತು. ಆದಂನಿಂದ ಗೋದಿ ತಿನ್ನಿಸಲು ಇಬ್ಲೀಸ್ ಪ್ರಯತ್ನಿಸಿ ವಿಫಲನಾದ. ಆದರೆ ಈತನ ಯುಕ್ತಿ ಹವ್ವಾಳ ವಿಚಾರದಲ್ಲಿ ಫಲಿಸಿತು. ಅವಳಿಗೆ ಈತ ಗೋದಿ ತಿನ್ನಿಸಿದ. ಹವ್ವಾ ಆದಂನಿಗೂ ತಿನ್ನಿಸಿದಳು. ಆದಂ ಮತ್ತು ಹವ್ವಾ ದೇವರ ಆಜ್ಞೆ ಉಲ್ಲಂಘಿಸಿದುದರಿಂದ ಅವರಿಬ್ಬರ ಸ್ವರ್ಗದ ಉಡುಪುಗಳು ಕೆಳಗೆ ಬಿದ್ದುಹೋದುವು. ತಕ್ಷಣ ಅವರಿಬ್ಬರೂ ಅಂಜೂರದ ಮತ್ತು ಧೂಪದ ಗಿಡಗಳ ಎಲೆಗಳನ್ನು ತಮ್ಮ ಬೆತ್ತಲೆ ಮೈಗೆ ಸುತ್ತಿಕೊಂಡರು. ತನ್ನ ಆಜ್ಞೆ ಉಲ್ಲಂಘಿಸಿ ಇಬ್ಲೀಸನ ಮಾತು ಕೇಳಿದ್ದರಿಂದ ದೇವರು ಇವರಿಬ್ಬರನ್ನೂ ಭೂಮಿಗೆ ತಳ್ಳಿದ. ಅಂದಿನಿಂದಲೂ ಇಬ್ಲೀಸ್ ಮಾನವನ ಶತ್ರು. ಮಾನವರನ್ನು ಕೆಟ್ಟ ಕೆಲಸಗಳಿಗೆ ಪ್ರೇರೇಪಿಸುವುದೂ ಅವರು ದೇವರ ಪ್ರಾರ್ಥನೆ ಮಾಡದಂತೆ ಅಡ್ಡಿ ಆತಂಕಗಳನ್ನೊಡ್ಡುವುದೂ ಇವನ ಕೆಲಸ. ಜ್ಯೂವಿಫ ಮತ್ತು ಕ್ರೈಸ್ತರ ಸೈತಾನನಿಗೆ ಈತ ಸಮಾನ. ದೇವರ ವಿರುದ್ಧ ಬಂಡೆದ್ದವನೆಂದು ಹನ್ನೊಂದು ಬಾರಿ ಕುರಾನಿನಲ್ಲಿ ಇವನನ್ನು ಹೆಸರಿಸಲಾಗಿದೆ. (ಎಸ್.ಎ.ಟಿ.ಕೆ.)

**ಇಬ್ಸೆನ್, ಹೆನ್ರಿಕ್:** 1828–1906. ನಾರ್ವೆ ದೇಶದ ಕವಿ. ನಾಟಕಕಾರ. ದಕ್ಷಿಣ ನಾರ್ವೆಯ ಸ್ಕೀಯೆನ್ ಎಂಬ ಸಣ್ಣ ಊರಿನಲ್ಲಿ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಹುಟ್ಟಿದ. ಬಾಲ್ಯದಲ್ಲೇ ಬಡತನಕ್ಕೆ ಗುರಿಯಾಗಿ ಔಷಧ ವ್ಯಾಪಾರಿಯೊಬ್ಬನ ಬಳಿ ಕೆಲಸಕ್ಕೆ ಸೇರಬೇಕಾಯಿತು. ಹಾಗೆಯೇ ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡತೊಡಗಿದ. ತನ್ನ ನೈಜಪ್ರವೃತ್ತಿ ಆ ಕ್ಷೇತ್ರಕ್ಕೆ ಸೇರಿದುದಲ್ಲವೆಂಬುದನ್ನು ಅರಿತುಕೊಂಡು ಪತ್ರಿಕೋದ್ಯಮಕ್ಕೂ ನಾಟಕ ಪ್ರಪಂಚಕ್ಕೂ ತಿರುಗಿದ. 1851ರಲ್ಲಿ ಬರ್ಗೆನ್ ನಗರದ ನಾಟಕಶಾಲೆಯೊಂದರಲ್ಲಿ ಕೆಲಸ ಮಾಡತೊಡಗಿ ಅಲ್ಲಿ ಪ್ರದರ್ಶನಕ್ಕೆಂದು ನಾಲ್ಕು ನಾಟಕಗಳನ್ನು ಬರೆದ. ಅವುಗಳಲ್ಲಿ ಮುಖ್ಯವಾದುದು ಆಸ್ಟ್ರಾಟಿನ ಶ್ರೀಮತಿ ಇಂಜರ್ (ಲೇಡಿ ಇಂಜರ್ ಆಫ್ ಆಸ್ಟ್ರಾಟ್, 1855). ಅದರ ವಸ್ತು ಪರಾಕ್ರಾಂತವಾಗಿದ್ದ ಮಧ್ಯಯುಗದ ನಾರ್ವೆಯ ವಿಮೋಚನೆ. 1857ರಲ್ಲಿ ಬರ್ಗೆನ್‌ನಿಂದ ಕ್ರಿಶ್ಚಿಯೇನಿಯ (ಇಂದಿನ ಆಸ್ಲೊ) ನಗರಕ್ಕೆ ತೆರಳಿ ಅಲ್ಲಿನ ಹೊಸ ರಾಷ್ಟ್ರೀಯ ನಾಟಕಾಲಯದಲ್ಲಿ ನಿರ್ದೇಶಕನಾಗಿ ನೇಮಿತನಾಗಿ, 1864ರಲ್ಲಿ ಆ ನಾಟಕಸಂಸ್ಥೆ ಮುರಿದುಬೀಳುವವರೆಗೂ ಅಲ್ಲಿದ್ದ. ಈ ಅವಧಿಯಲ್ಲಿ ವೀರರಸಭರಿತವಾದ ಕೆಲವು ನಾಟಕಗಳನ್ನು ರಚಿಸಿದ. ಅವುಗಳಲ್ಲಿ ಹೆಲ್ಗೊಲೆಂಡಿನ ವೀರರು (ಹಿರೋಸ್ ಆಫ್ ಹೆಲ್ಗೊಲೆಂಡ್, 1858) ಎಂಬುದು ಹೆಸರಾದಂತಿದೆ. ಹಳೆಯ ಕಾಲದ ನಾರ್ವೆಯ ಸಾಹಸಿಗನ ಚಿತ್ರವಿದು. ನಟನಕಾರರು (ದಿ ಪ್ರಿಟೆಂಡರ್ಸ್, 1864) ಚಾರಿತ್ರಿಕ ನಾಟಕ. ಪ್ರಣಯದ ಪ್ರಹಸನ (ಲವ್ಸ್ ಕಾಮೆಡಿ, 1867) ವಿಡಂಬನಾತ್ಮಕವಾದ ಹಾಸ್ಯನಾಟಕ. ಸಮಕಾಲೀನ ಸಮಾಜದ ವಿವಾಹ ಪದ್ಧತಿಗಳನ್ನು ಅಪಹಾಸ್ಯಕ್ಕೀಡುಮಾಡುವ ಈ ಪ್ರಣಯ ಪ್ರಹಸನ ಅವನಿಗೆ ತುಂಬ ಅಪಖ್ಯಾತಿ ತಂದಿತು. ಈ ಕಾರಣದಿಂದಲೂ, ತಾನು ಕೆಲಸ ಮಾಡುತ್ತಿದ್ದ ನಾಟಕಶಾಲೆಯೇ ಊರ್ಜಿತವಾಗದೆ ಮುರಿದು ಬಿದ್ದುದರಿಂದಲೂ ಅವನಿಗೆ ನಾರ್ವೆಯಲ್ಲಿರುವುದೇ ಬೇಸರವಾಯಿತು. ಜೊತೆಗೆ ಆಗ ಸ್ವಾತಂತ್ರ್ಯಕ್ಕಾಗಿ ಜರ್ಮನಿಯೊಡನೆ ಹೋರಾಡುತ್ತಿದ್ದ ಡೇನರಿಗೆ ತನ್ನವರು ಸಹಾಯ ಮಾಡಲಿಲ್ಲವೆಂಬ ಅಸಮಾಧಾನವು ಸೇರಿ ಅವನನ್ನು ವಿದೇಶ ಯಾತ್ರೆಗೆ ಪ್ರೇರಿಸಿತು. 1864ರಲ್ಲಿ ಪ್ರವಾಸವೇತನವೊಂದಿಷ್ಟನ್ನು ಪಡೆದು ದೇಶ ಬಿಟ್ಟು ಹೊರಟು ಬಹಳ ವರ್ಷಗಳ ಕಾಲ ಯುರೋಪಿನ ಬೇರೆ ಬೇರೆ ಪಟ್ಟಣಗಳಿಗೆ ಹೋಗಿ ಇದ್ದು ಬಂದ. ಹೀಗೆ ಅವನಿದ್ದ ಸ್ಥಳಗಳಲ್ಲಿ ಮುಖ್ಯವಾದುವು ರೋಮ್, ಮ್ಯೂನಿಚ್ ಮತ್ತು ಡ್ರೆಸ್ಡನ್. 1891ರಲ್ಲಿ ಕ್ರಿಶ್ಚಿಯೇನಿಯಕ್ಕೆ ಹಿಂತಿರುಗಿ ಬಂದು ಅನಂತರ ತನ್ನ ಜೀವಿತದ ಕೊನೆಯವರೆಗೂ ಅಲ್ಲೇ ಇದ್ದ. 1806ರಲ್ಲಿ ನಾರ್ವೆಯ ಪಾರ್ಲಿಮೆಂಟ್ ಸಭೆ ಅವನಿಗೆ ಗೌರವವೇತನವೊಂದನ್ನು ದಯಪಾಲಿಸಿತು. ಮನಸ್ಸಿಲ್ಲದ ಮನಸ್ಸಿನಿಂದ ಆ ವರ್ಷವೂ ಮರುವರ್ಷವೂ ಆತ ಬ್ರ್ಯಾಂಡ್ ಮತ್ತು ಪೀರ್‌ಗಿಂಟ್ ಎಂಬ ತನ್ನ ದೃಶ್ಯಕಾವ್ಯಗಳನ್ನು ಪ್ರಕಟಿಸಿದ. ಅವು ಅವನ ಕೃತಿಗಳಲ್ಲೆಲ್ಲಾ ಅತ್ಯುತ್ತಮವಾದುವೆಂದು ಕೆಲವರ ಅಭಿಪ್ರಾಯ. ಮೊದಲನೆಯದು ತನ್ನ ಉನ್ನತಾದರ್ಶಗಳನ್ನು ಬಿಟ್ಟುಕೊಡಲೊಪ್ಪದೆ ತತ್ತಲವಾಗಿ ಹಾಳಾಗುವ ಸಜ್ಜನನೊಬ್ಬನ ಸಾಂಕೇತಿಕ ಚಿತ್ರ. ಎರಡನೆಯದು ಆದರ್ಶರಹಿತವಾದ ವಾಸ್ತವಜೀವನವನ್ನು ನಡೆಸುವ ಪ್ರಣಯಿಯೊಬ್ಬನ ಕಥೆ. ಎರಡೂ ಸತ್ತ್ವಶಾಲಿಗಳಾದ ಕೃತಿಗಳೆಂದು ಪರಿಗಣಿತವಾಗಿವೆ.

ಇಬ್ಸೆನ್ ಉತ್ತಮ ಕವಿಯಾದರೂ ಅವನ ಕವನಗಳು ಇತರರ ಮೇಲೆ ಹೆಚ್ಚು ಪ್ರಭಾವವನ್ನು ಬೀರಲಿಲ್ಲ. ಸಾಹಿತ್ಯಚರಿತ್ರೆಯಲ್ಲಿ ಆತ ವಿರಾಜಿಸುತ್ತಿರುವುದೂ ಪ್ರಭಾವಶಾಲಿಯಾಗಿರುವುದೂ ಸಮಾಜ ಸುಧಾರಕನಾಗಿ, ಸಂಪ್ರದಾಯಬದ್ಧ ಸಾಮಾಜಿಕ ಸಂಸ್ಥೆಗಳ ಮತ್ತು ವ್ಯವಸ್ಥೆಗಳ ಕಟುವಿಮರ್ಶಕನಾಗಿ. 1869ರಲ್ಲಿ ರಚಿತವಾದ ತಾರುಣ್ಯದ ಕೂಟ (ದಿ ಲೀಗ್ ಆಪ್ ಯೂತ್) ಅವನ ಮೊಟ್ಟ ಮೊದಲನೆಯ ಗದ್ಯನಾಟಕ. ಅದೊಂದು ರಾಜಕೀಯ ವಸ್ತುವನ್ನು ಒಳಗೊಂಡಿರುವ ವಿಡಂಬನಾತ್ಮಕ ಕೃತಿ. ಚಕ್ರವರ್ತಿ ಮತ್ತು ಗ್ಯಲೀಲಿಯನ್ (ಎಂಪರರ್ ಅಂಡ್ ಗ್ಯಲೀಲಿಯನ್, 1873) ಚರಿತ್ರಾತ್ಮಕವಾದುದು. ಎರಡು ಭಾಗಗಳಿರುವ ಈ ನಾಟಕದ ಮುಖ್ಯಪಾತ್ರ ಧರ್ಮದ್ರೋಹಿ ಜ್ಯೂಲಿಯನ್. ಸಮಾಜದ ಸ್ತಂಭಗಳು (ಪಿಲ್ಲರ್ಸ್ ಆಫ್ ಸೊಸೈಟಿ, 1876) ಹಣಗಾರರೂ ಮೋಸಗಾರರೂ ಆದ ವ್ಯಾಪಾರಿಗಳ ಕೃತ್ರಿಮಗಳನ್ನು ಎತ್ತಿ ತೋರಿಸುತ್ತದೆ. ಗೊಂಬೆಯ ಮನೆ (ದಿ ಡಾಲ್ಸ್ ಹೌಸ್) ವೈವಾಹಿಕ ಜೀವನದ ಸಮಸ್ಯೆಯನ್ನು ಒಳಗೊಂಡಿರುವ ನಾಟಕ. ಇದನ್ನು ಬರೆದಾಗ ಇಬ್ಸೆನ್ ಒಂದು ಕಡೆ ವಿಶೇಷ ಪ್ರಶಂಸೆಗೂ ಇನ್ನೊಂದು ಕಡೆ ವಿಪರೀತ ನಿಂದೆಗೂ ಗುರಿಯಾದ. ಗಂಡನಿಗೆ ಗುಲಾಮಳಾಗಿರಲು, ಅವನ ಕೈಗೊಂಬೆಯಾಗಿರಲು ಒಪ್ಪದೆ ಅವನ ಮನೆಯಿಂದ ಹೊರಬಿದ್ದು ಬಾಗಿಲು ಬಡಿಯುವ ನೋರಾ ಹೆಲ್ಮರ್‌ಳ ವರ್ತನೆ ಎಲ್ಲೆಲ್ಲೂ ತೀವ್ರವಾದ ಚರ್ಚೆ, ಮೆಚ್ಚಿಕೆ, ಟೀಕೆಗಳನ್ನು ಪ್ರಚೋದಿಸಿತು. ಈ ನಾಟಕದಿಂದ ಇಬ್ಸೆನ್ನನ ಹೆಸರು ಯುರೋಪಿನ ಇತರ ದೇಶಗಳಲ್ಲೂ ಪ್ರಸಿದ್ಧವಾಯಿತು. ದೆವ್ವಗಳು (ಘೋಸ್ಟ್ಸ್, 1881) ನಾಟಕದ ವಸ್ತು ವಂಶಪಾರಂಪರ್ಯವಾಗಿ ಬರುವ ವ್ಯಾಧಿಗಳು. ಇಂಥ ವಿಷಯವನ್ನು ನಾಟಕದಲ್ಲಿ ತರುವ ಧೈರ್ಯ ಮಾಡಿದವರಲ್ಲಿ ಇಬ್ಸೆನ್ನನೇ ಮೊದಲಿಗ. ಯಾರದೊ ತಪ್ಪಿಗೆ ಯಾರೋ ಅನುಭವಿಸಬೇಕಾಗುವ ಗುಪ್ತರೋಗಗಳನ್ನು ಕಂಡು ಕನಿಕರಿಸಿ ಸಮಾಜದ ಅನ್ಯಾಯದ ಒಂದು ಮುಖವನ್ನು ಆತ ಇಲ್ಲಿ ತೆರೆದು ತೋರಿದ್ದಾನೆ. ಜನತೆಯ ಶತ್ರು (ಆನ್ ಎನಿಮಿ ಆಫ್ ದಿ ಪೀಪಲ್, 1882) ಎಂಬ ನಾಟಕದಲ್ಲಿ ಇಬ್ಸೆನ್ ತಿಳಿವಿಲ್ಲದವರಾದರೂ ಶಕ್ತರಾದ ಬಹುಸಂಖ್ಯಾತರ ಕೈಯಲ್ಲಿ ಸಿಕ್ಕು ಜ್ಞಾನಿಗಳೂ ವಿಚಾರಪರರೂ ಆದರೆ ಅಲ್ಪಸಂಖ್ಯಾತರೂ ಆದ ವ್ಯಕ್ತಿಗಳು ಹೇಗೆ ತೊಂದರೆಗೀಡಾಗಬೇಕಾಗುತ್ತದೆ ಎಂಬುದನ್ನು ತೋರಿಸುತ್ತಾನೆ. ಇದರ ನಾಯಕ ಡಾಕ್ಟರ್ ಸ್ಟಾಕ್ಮನ್ ಊರಿನ ಲಾಭಕೋರರು ಕೆಲವರು ನಡೆಸುತ್ತಿರುವ ಸಾರ್ವಜನಿಕ ಸ್ನಾನದ ಕೊಳಗಳು ಹೇಗೆ ಆರೋಗ್ಯನಾಶಕವಾದ ವಸ್ತುಗಳಿಂದ ಅಶುದ್ಧಗೊಂಡಿವೆಯೆಂದೂ ಅವುಗಳನ್ನು ಮುಚ್ಚಬೇಕಾದ ಅಗತ್ಯ ಎಷ್ಟಿದೆಯೆಂದೂ ವಾದಿಸುತ್ತಾನೆ. ಪರಿಣಾಮವಾಗಿ ಜನತೆಯ ಶತ್ರು ಎಂಬ ಅಪವಾದಕ್ಕೆ ಗುರಿಯಾಗುತ್ತಾನೆ. ಸಂಪ್ರದಾಯಬದ್ಧ ಸಮಾಜದಲ್ಲಿ ಬಹುಜನಪ್ರಿಯವಾದ ದೋಷಗಳನ್ನು ಹೊರಗೆಡವುದೂ ಹೇಗೆ ಅಪಾಯಕರ ಎಂಬ ವ್ಯಂಗ್ಯಾರ್ಥ ಇಲ್ಲಿದೆ. ಈ ನಾಟಕದ ಅನಂತರ ಬಂದ ಕಾಡುಕೋಳಿ (ದಿ ವೈಲ್ಡ್ ಡಕ್, 1884) ಕಾವ್ಯಮಯವಾದ ಸಾಂಕೇತಿಕ ಕೃತಿ. ರಾಸ್‌ಮೆರ್ಷಾಮ್ ನಾಟಕದಲ್ಲಿ ಇಬ್ಸೆನ್ ಮತ್ತೆ ಆದರ್ಶದ ಔನ್ನತ್ಯದ ಪ್ರತಿಪಾದನೆಗೆ ಬರುತ್ತಾನೆ. ಕಡಲಿನಿಂದ ಬಂದ ಮಹಿಳೆಯಲ್ಲಿ (ಎ ಲೇಡಿ ಫ್ರಮ್ ದಿ ಸೀ, 1888) ಅದ್ಭುತ ಘಟನೆಗಳ ಛಾಯೆಯಿದೆ. ಅದು ಸುಖಾಂತ ನಾಟಕ ಹೆಡ್ಡಾಗ್ಯಾಬ್ಲರ್ ಇಬ್ಸೆನ್ನನ ಅತ್ಯಂತ ಮಹತ್ತರವಾದ ನಾಟಕಗಳಲ್ಲೊಂದು. ಅದರ

ನಾಯಕಿ ಮಾನಸಿಕ ದೌರ್ಬಲ್ಯದಿಂದ ವಿಪರೀತವಾಗಿ ಆಡುವ ಆಧುನಿಕ ಸ್ತ್ರೀಯರ ಪ್ರತಿನಿಧಿ. ನಿಪುಣ ನಿರ್ಮಾಪಕ (ದಿ ಮಾಸ್ಟರ್ ಬಿಲ್ಡರ್) ಕಲೆಗಾರರ ಸ್ಥಿತಿಗತಿಗಳ ಮತ್ತು ಆದರ್ಶಗಳ ಸಾಂಕೇತಿಕ ಚಿತ್ರಣ. ಪುಟ್ಟ ಇಯೋಲ್ಫ್ (ಲಿಟ್ಲ್ ಇಯೋಲ್ಫ್ 1894) ಮಕ್ಕಳ ವಿಷಯದಲ್ಲಿ ತಂದೆತಾಯಿಗಳ ಹೊಣೆಯನ್ನು ಕುರಿತದ್ದು. ಜಾನ್ ಗೇಬ್ರಿಯಲ್ ಬಾರ್ಕ್‌ಮನ್ ಮತ್ತು ಸತ್ತವರು ನಾವು ಎಚ್ಚೆತ್ತಾಗ (ವೆನ್ ವಿ ಡೆಡ್ ಅವೇಕ್) ಇಬ್ಸೆನ್ನನ ಕೊನೆಯ ನಾಟಕಗಳು. ಮೊದಲನೆಯದು ವಾಸ್ತವಿಕ ವಸ್ತು ಪ್ರತಿಪಾದಕವಾದರೆ, ಎರಡನೆಯದು ಸಂಕೇತಪ್ರಧಾನವಾದುದು. ಆದರೆ ಎರಡೂ ಪ್ರೇಮಶೂನ್ಯತೆಯ ಫಲವಾಗಿ ಹೃದಯ ಬರಿದಾಗಿ ಮೃತಸಮಾನರಾಗುವವರನ್ನು ಚಿತ್ರಿಸುತ್ತವೆ.

ಆಧುನಿಕ ನಾಟಕದ ಮೇಲೆ ಇಬ್ಸೆನ್ನನ ಪ್ರಭಾವ ಮಹತ್ತರವಾದುದು. ಆಧುನಿಕ ನಾಟಕದ ಪಿತಾಮಹನೆಂಬ ಹೆಸರೂ ಅವನಿಗೆ ಸಂದಿದೆ. ನಾಟಕ ಆದ್ಯಗಮನ ಕೊಡಬೇಕಾದುದು ರಚನೆಗೆ–ಕಲೆಗೆ–ಎಂಬ ಫ್ರೆಂಚ್ ಲೇಖಕರ ವಾದವನ್ನು ಆತ ನಿರಾಕರಿಸಿದ. ಅವನ ನಾಟಕಗಳು ತಂತ್ರದ ದೃಷ್ಟಿಯಿಂದ, ರಂಗಸ್ಥಳದಲ್ಲಿ ಉಂಟುಮಾಡುವ ಪರಿಣಾಮದ ದೃಷ್ಟಿಯಿಂದ ಬಲಹೀನವೆಂದೇನೂ ಅಲ್ಲ. ಬಾಲ್ಯದಿಂದಲೂ ನಾಟಕಶಾಲೆಗಳ ಮತ್ತು ನಾಟಕಗಳ ವಾತಾವರಣದಲ್ಲೇ ಬೆಳೆದು ದುಡಿದವನ ಕೃತಿಗಳ ರಚನೆ ಸಹಜವಾಗಿಯೇ ಚೆನ್ನಾಗಿರಬೇಕು. ಆದರೆ ಕೇವಲ ಬಾಹ್ಯತಂತ್ರಗಳಿಗಿಂತಲೂ ಹೆಚ್ಚಾಗಿ ಆತ ಗಮನಕೊಟ್ಟದ್ದು ನಾಟಕದ ವಸ್ತುವಿಗೆ. ಅವನಿಗೆ ನಾಟಕ ಪ್ರತಿಪಾದಿಸುವ ವಿಷಯ ಅದರ ಜೀವಾಳ. ತನ್ನ ಕಾಲದ ಸಾಮಾಜಿಕ ಮತ್ತು ಇತರ ಸಮಸ್ಯೆಗಳನೇಕವನ್ನು ಆತ ರಂಗಭೂಮಿಗೆ ತಂದು ತಂತ್ರಕ್ಕಿಂತಲೂ ಹೆಚ್ಚಾಗಿ ಪಾತ್ರಗಳ ಗುಣದೋಷಗಳಿಗೆ ಪ್ರಾಮುಖ್ಯವನ್ನು ಕೊಟ್ಟುದಲ್ಲದೆ ಕುಟುಂಬಗಳಲ್ಲಿ, ಸಮಾಜದಲ್ಲಿ, ನಡೆಯುವ ಮಾನಸಿಕ ಘರ್ಷಣೆಗಳನ್ನು ವಸ್ತುವಾಗಿ ಉಳ್ಳ ನಾಟಕಗಳನ್ನು ಸೃಜಿಸಿದ. ನೀರ್ಗಲ್ಲು ಹೊನಲುಗಳೂ ಪೈನ್ ಮರಗಳ ಹೆಗ್ಗಾಡುಗಳೂ ಇನ್ನು ಸಾಕು. ಇಂದು ನಮಗೆ ಬೇಕಾಗಿರುವುದು ಜನಮನಗಳಲ್ಲಿ ನಡೆಯುತ್ತಿರುವ ಮೂಕಚಿಂತನೆ–ಇದು ಆತ ತನ್ನ 22ನೆಯ ವರ್ಷದಲ್ಲಿ ನಾರ್ವೆದೇಶದ ಅಂದಿನ ಸಾಹಿತ್ಯದ ವಿಚಾರವಾಗಿ ಹೇಳಿದ ಮಾತು. ಅವನ ನಾಟಕಗಳಲ್ಲಿ ನಾವು ಈ ಹೊಸ ವಸ್ತುವನ್ನು ಹೇರಳವಾಗಿ ಕಾಣುತ್ತೇವೆ. ವ್ಯಕ್ತಿಸ್ವಾತಂತ್ರ್ಯ ಸಮಾಜಕ್ಕಿಂತಲೂ ಹೆಚ್ಚಿನದು; ಪಾಪವಿರುವುದು ವಿಚಾರಶೂನ್ಯವಾದ ಪದ್ಧತಿಗಳನ್ನೂ ಸಂಪ್ರದಾಯಗಳನ್ನೂ ಎದುರಿಸುವುದರಲ್ಲಲ್ಲ, ಪ್ರೇಮಶೂನ್ಯತೆಯಲ್ಲಿ–ಎಂಬುದು ಅವನ ನಾಟಕಗಳಲ್ಲಿ ಉದ್ದಕ್ಕೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಹರಿಯುವ ಭಾವಗಳು. ಇವೇ ಮೊದಲಾದ ತತ್ತ್ವಗಳನ್ನೂ ಪ್ರಶ್ನೆಗಳನ್ನೂ ತನ್ನ ನಾಟಕಗಳಲ್ಲಿ ತಂದು ಆತ ನಾಟಕಕ್ಕೇ ತೂಕ ಕೊಟ್ಟ. ಆದರೆ ಕೆಲವು ವೇಳೆ ಆ ತೂಕದ ಪರಿಣಾಮವಾಗಿಯೇ ಅವನ ನಾಟಕಗಳ ಪ್ರದರ್ಶನ ಅಸಮರ್ಪಕ ವಾಗುತ್ತದೆಯೆಂದೂ ಹೇಳಬೇಕು.

ಇಬ್ಸೆನ್ ಯುರೋಪಿನ ನಾಟಕಕಾರರನೇಕರ ಮೇಲೆ ಪ್ರಭಾವ ಬೀರಿದ ಇಂಗ್ಲಿಷ್ ನಾಟಕಕಾರ ಬರ್ನಾರ್ಡ್ ಷಾ ಅಂಥವರಲ್ಲಿ ಒಬ್ಬ.

ಇಬ್ಸೆನ್ನನ ಕೆಲವು ನಾಟಕಗಳು ಕನ್ನಡಕ್ಕೆ ಅನುವಾದವಾಗಿವೆ. ಮೊಟ್ಟಮೊದಲು ಈ ಕೆಲಸ ಮಾಡಿದವರು ದಿವಂಗತ ಎಸ್.ಜಿ. ಶಾಸ್ತ್ರಿಗಳು. ಹೆಲ್ಗೊಲೆಂಡಿನ ವೀರರು ಮತ್ತು ಗೊಂಬೆಯ ಮನೆಗಳನ್ನು ಅವರು ಅನುವಾದಿಸಿದರು. ಈಚೆಗೆ ಗೋಪಾಲಕೃಷ್ಣ ಅಡಿಗರು ಜನತೆಯ ಶತ್ರುವನ್ನೂ ಶ್ರೀರಂಗರು ಕಾಡು ಕೋಳಿ ಮತ್ತು ದೆವ್ವಗಳು ನಾಟಕಗಳನ್ನೂ ಕನ್ನಡಿಕರಿಸಿದ್ದಾರೆ. ಇಬ್ಸೆನ್ನನ ನಾಲ್ಕು ನಾಟಕಗಳು ಎಂಬ ಎಸ್.ಮಂಜುನಾಥರ ಉಪನ್ಯಾಸ ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯ ಕಿರುಹೊತ್ತಗೆಗಳ ಮಾಲೆಯಲ್ಲಿ ಪ್ರಕಟವಾಗಿದೆ. (ಎಂ.ಆರ್.)

**ಇಮಾದ್‌ಷಾಹಿ ಸುಲ್ತಾನರು:** ಬಹಮನಿ ರಾಜ್ಯ 14 ಮತ್ತು 15ನೆಯ ಶತಮಾನದ ಅಂತ್ಯಕಾಲಕ್ಕೇ ಒಡೆದು 5 ಸಣ್ಣ ಸಣ್ಣ ಸ್ವತಂತ್ರ್ಯರಾಜ್ಯಗಳಾದಾಗ ಮೊತ್ತಮೊದಲು ಸ್ಥಾಪಿತವಾದದು ಬೀರಾರಿನ ಇಮಾದ್ ಷಾಹಿ ಸುಲ್ತಾನರ ರಾಜ್ಯ. ಉಳಿದ ನಾಲ್ಕೆಂದರೆ ಅಹಮದ್‌ನಗರದ ನಿಜಾಂಷಾಹಿ, ಬಿಜಾಪುರದ ಆದಿಲ್‌ಷಾಹಿ, ಗೋಲ್ಕೊಂಡದ ಕುತುಬ್‌ಷಾಹಿ, ಬೀದರಿನ ಬಾರೀದ್‌ಷಾಹಿ. ಈ ಒಂದೊಂದು ರಾಜ್ಯಕ್ಕೂ ಅದರ ಸ್ಥಾಪಕನ ಹೆಸರನ್ನೇ ಇಡಲಾಗಿದೆ. ಬೀರಾರ್ ಬಹಮನಿ ರಾಜ್ಯದ ಉತ್ತರ ಭಾಗದಲ್ಲಿದ್ದ ಪ್ರಾಂತ್ಯ. ಹಿಂದೆ ಇದು ವಿದರ್ಭ ದೇಶವೆಂದು ಹೆಸರು ಪಡೆದಿತ್ತು. 15ನೆಯ ಶತಮಾನದ ಅಂತ್ಯಕಾಲದಲ್ಲಿ ಇದು ಎರಡು ದೊಡ್ಡ ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟಿತ್ತು: ಉತ್ತರದ ಗಾವೀಲ್ ಜಿಲ್ಲೆ ಮತ್ತು ದಕ್ಷಿಣದ ಮಾಹೂರ್ ಜಿಲ್ಲೆ. ಬಹಮನಿ ರಾಜ್ಯದ ಕೊನೆಯ ಸುಲ್ತಾನ ಮಹಮ್ಮದ್‌ಷಾಹನ ಕಾಲದಲ್ಲಿ (1482–1518) ಗಾವೀಲ್‌ಘಡದ ಪ್ರಾಂತ್ಯಾಧಿಪತಿ ಇಮಾದ್‌ಉಲ್‌ಮುಲ್ಕ್ ಎಂಬ ಹೆಸರಿನಿಂದ ಸ್ವಾತಂತ್ರ್ಯ ಘೋಷಿಸಿದ. ಇಮಾದ್‌ಷಾಹಿ ಸಂತತಿ ಹೀಗೆ ಮೊದಲಾಯಿತು. ಅಸಮರ್ಥನಾದ ಬಹಮನಿ ಸುಲ್ತಾನನಿಗೆ ಇವನನ್ನಡಗಿಸಲು ಸಾಧ್ಯವಾಗಲಿಲ್ಲ, ನಾಲ್ಕು ತಲೆಮಾರು ಕಾಲ ಈ ಸಂತತಿಯವರು ಸ್ವತಂತ್ರ ರಾಗಿ ಆಳಿದರು. 1574ರಲ್ಲಿ ಬೀರಾರನ್ನು ಅಹಮ್ಮದ್ ನಗರದ ಸುಲ್ತಾನರು ವಶಪಡಿಸಿಕೊಂಡರು. ಇಮಾದ್‌ಷಾಹಿ ಅರಸರ ಕಾಲದಲ್ಲಿ ಚಾರಿತ್ರಿಕ ಪ್ರಾಮುಖ್ಯವುಳ್ಳ ಘಟನೆಗಳೇನೂ ನಡೆಯಲಿಲ್ಲ. *

**ಇಮಾಮ್:** ಅರಬ್ಬೀಭಾಷೆಯಲ್ಲಿ ಈ ಪದಕ್ಕೆ ನಾಯಕ ಅಥವಾ ಮಾರ್ಗದರ್ಶಿ ಎಂಬರ್ಥಗಳಿವೆ. ಈಗ ಸಾಮಾನ್ಯವಾಗಿ ಒಬ್ಬ ಧಾರ್ಮಿಕ ಮುಂದಾಳು ಎಂಬರ್ಥದಲ್ಲಿ ಬಳಕೆಯಲ್ಲಿದೆ. ದೈವನಿಯೋಜಿತ ಧಾರ್ಮಿಕ ಮುಖಂಡನನ್ನು ಸೂಚಿಸುತ್ತದೆ. ಅಲ್ಲದೆ ಪ್ರಮುಖ ದೈವಶಾಸ್ತ್ರಜ್ಞನ ಬಿರುದನ್ನೂ ಸೂಚಿಸುತ್ತದೆ. ವಿಶೇಷವಾಗಿ ಆತ ಪ್ರಾರ್ಥನೆಗಳನ್ನು ನಡೆಸಿಕೊಡುವ ಧರ್ಮಜ್ಞ, ಮಸೀದಿಯಲ್ಲಿ ಅಥವಾ ಮತ್ತಾವುದೇ ಪ್ರಾರ್ಥನಾಕೂಟದಲ್ಲಿ ಆತ ಪ್ರಾರ್ಥನಾಮಗ್ನ ವ್ಯಕ್ತಿಗಳ ಸಾಲುಗಳ ಅಗ್ರಭಾಗದಲ್ಲಿ ನಿಲ್ಲುತ್ತಾನೆ. ಜುಹರ್ (ಮಧ್ಯಾಹ್ನದ) ಮತ್ತು ಅಸರ್ (ಸಂಧ್ಯಾಪೂರ್ವದ) ಪ್ರಾರ್ಥನೆಗಳ ಸಂದರ್ಭದಲ್ಲಿ ಕುರಾನಿನ ಪದ್ಯಗಳನ್ನು ಮೌನವಾಗಿ ಪಠಿಸುತ್ತಾನಲ್ಲದೆ ಬೆಳಗಿನ, ಸಂಜೆಯ ಹಾಗೂ ರಾತ್ರಿಯ ಪ್ರಾರ್ಥನೆಗಳ ಸಂದರ್ಭದಲ್ಲಿ ಕುರಾನಿನ ಪದ್ಯಗಳನ್ನು ಗಟ್ಟಿಯಾಗಿ ಪಠಿಸುತ್ತಾನೆ. ಪ್ರತಿ ಮಸೀದಿಯಲ್ಲೂ ಒಬ್ಬ ಇಮಾಮ್ ಇರುತ್ತಾನೆ. ಮುಸ್ಲಿಂ ಜನಾಂಗದವರ ನ್ಯಾಯ ಮತ್ತು ನೀತಿಗಳ ಉಸ್ತುವಾರಿ ನಡೆಸಿ ನೀತಿ ತಪ್ಪಿ ನಡೆಯದಂತೆ ಮಾರ್ಗದರ್ಶನ ಮಾಡುವುದೂ ಈತನ ಕೆಲಸ.(ಜಿ.ಎಂ.ಒ.)

**ಇಮಿಟೇಷನ್ ಫ್ಲ್ಯಾನಲ್:** ಉಣ್ಣೆ (ಫ್ಲ್ಯಾನಲ್) ನೇಯ್ಗೆಯ ಒಪ್ಪವನ್ನು ಅಣಕು ಮಾಡುವ ಹತ್ತಿನೂಲಿನ ಬಟ್ಟೆ(ಫ್ಲ್ಯಾನಲೆಟ್). ಇದನ್ನು ವಿಶೇಷವಾಗಿ ಸಾದಾ ಮತ್ತು ಕೆಲವೊಮ್ಮೆ 2/2ರ ಮೂಲೆ ನೇಯ್ಗೆ ಕ್ರಮದಿಂದ ನೇಯುತ್ತಾರೆ. ನೂಲಿನ ಎಳೆಗಳ ಕೂಳೆಗಳು ಎದ್ದಿರುವ ಮೇಲ್ಮೈ ಉಳ್ಳಂತೆ (ಫೈಬ್ರಸ್ ಸರ್ಫೇಸ್) ಕಾಣಲು ಈ ಬಟ್ಟೆಯನ್ನು ಪರಿಣಮಿಸುವ ಪೂರ್ಣೀಕರಣ ಕ್ರಿಯೆಗೆ ಒಳಪಡಿಸಿದಾಗ ಇದರಿಂದ ಉಣ್ಣೆವಸ್ತ್ರದ ಒಪ್ಪ (ಫಿನಿಷ್)ಬರುತ್ತದೆ. ಈ ವಿಧವಾದ ಮೇಲ್ಮೈಯನ್ನು ಮೃದುವಾಗಿ ನೂತ ಹಾಗೂ ದಪ್ಪವಾದ ಹೊಕ್ಕು ಎಳೆಗಳಿಂದಲೇ ಏರ್ಪಡಿಸುತ್ತಾರೆ. ಇದರ ದಾರವನ್ನು ಭಾರತದಲ್ಲಿ ಬೆಳೆವ ಅಥವಾ ತತ್ಸಮವಾದ ಉತ್ತಮವಾದ ಕಿರಿ ಎಳೆಯ ಹತ್ತಿಯಿಂದ ನೂತಿರುತ್ತಾರೆ. ಈ ವಿಧವಾದ ದಪ್ಪನೆಯ ಮೃದುವಾದ ದಾರವೇ ಬಟ್ಟೆಯ ಮೇಲ್ಮೈಯಲ್ಲಿ ನೂಲಿನ ಎಳೆಗಳನ್ನು ಎತ್ತಲು ಸಹಕಾರಿಯಾಗುತ್ತದೆ. ವಾಸ್ತವಿಕವಾಗಿ ಬಿಗಿಯಾಗಿ ನೂತದಾರಗಳನ್ನು ಉತ್ತಮತರ ನೇಯ್ಗೆ ಬಟ್ಟೆಯನ್ನು ನೇಯಲು ಉಪಯೋಗಿಸುತ್ತಾರೆ. ಅಲ್ಲದೆ ನೇಯ್ಗೆ ಕಾಣದಿರುವಂತಿರುವ ಸಂಯೋಜನೆಗೆ (ಸ್ಟ್ರಕ್ಚರ್‌ಲೆಸ್ ಟೆಕ್ಸ್ಚರ್) ಹೊಕ್ಕುದಾರವನ್ನು ಹಾಸಿನ ದಿಶೆಯಲ್ಲಿಯೇ ಹುರಿಮಾಡಿರುತ್ತಾರೆ. ಕೋರಾ ಬಟ್ಟೆ ನೇಯ್ದ ಅನಂತರ ಬಟ್ಟೆಯನ್ನು ಕುದಿಸಿ, ಚೆಲುವೆ ಮಾಡುತ್ತಾರೆ; ಇಲ್ಲವೇ ಬಣ್ಣಹಾಕುತ್ತಾರೆ. ಬಟ್ಟೆಗಳನ್ನು ಬಣ್ಣಬಣ್ಣದ ಗೆರೆ ಅಥವಾ ಪಟ್ಟಿಗಳಿರುವಂತೆ ನೇಯುತ್ತಾರೆ. ಕೆಲವೊಮ್ಮೆ ಮುದ್ರಿತದಾರಗಳನ್ನು ಉಪಯೋಗಿಸುತ್ತಾರೆ ಮತ್ತೆ ಕೆಲವೊಮ್ಮೆ ಬಟ್ಟೆಯ ಮೇಲೆಯೇ ಮುದ್ರಿಸುವುದುಂಟು. ಮುದ್ರಿತ ಫ್ಲ್ಯಾನಲೆಟ್‌ನ ಹೆಸರು ವೆಲೊಸೆಟ್. ಸಾದಾನೇಯ್ಗೆಯ ಬಟ್ಟೆಯನ್ನು 24ರ ಹಾಸು, 12ರ ಹೊಕ್ಕು ಮತ್ತು ಅಂಗುಲಕ್ಕೆ 50 ಹಾಸುದಾರಗಳು, ಅಂಗುಲಕ್ಕೆ 48 ಹೊಕ್ಕುದಾರಗಳು ಇರುವಂತೆ ನೇಯುತ್ತಾರೆ. ಫ್ಲ್ಯಾನಲೆಟ್ ರೂಪದ ಒಪ್ಪವನ್ನು ಷರಾಯಿ ಬಟ್ಟೆಗಳು, ಹೊದಿಕೆಗಳು, ಕಂಬಳಿಗಳು, ಮೊದಲಾದ ಬಹು ವಿಧವಾದ ಬಟ್ಟೆಗಳಲ್ಲಿ ಒಂದು ಅಥವಾ ಎರಡು ಮುಖಗಳಲ್ಲೂ ಬೇಕಾದಂತೆ (ಎಳೆಗಳು ಎದ್ದಿರುವಂತೆ) ನೇಯುತ್ತಾರೆ. (ವಿ.ಎಸ್.ವಿ.)

**ಇಮೇಜಿಸ್ಟ್ ಕಾವ್ಯ:** 20ನೆಯ ಶತಮಾನದ ಆರಂಭದಲ್ಲಿ ಇಂಗ್ಲಿಷ್ ಮತ್ತು ಅಮೆರಿಕನ್ ಕವಿಗಳು ರಚಿಸಿದ ಒಂದು ವಿಶೇಷ ರೀತಿಯ ಕಾವ್ಯಪ್ರಕಾರ. ಪ್ರತಿಮಾಸಿದ್ಧಾಂತದ ಮೇಲೆ ರಚನೆಗೊಂಡ ಕಾವ್ಯವೆಂದು ಇದನ್ನು ವಿವರಿಸಬಹುದು. ಕಾವ್ಯದಲ್ಲಿ ಬಳಸಲಾಗುವ ಪ್ರತಿಮಾತಂತ್ರದ ಗುಣಲಕ್ಷಣಗಳನ್ನು ಖಚಿತವಾಗಿ ವಿವರಿಸಿ ಆ ಸೂತ್ರಗಳಿಗನುಸಾರವಾಗಿ ಹೊಸ ಭಾವಗೀತೆಗಳನ್ನು ರಚಿಸಲು 1912ರಲ್ಲಿ ಕವಿ ಎಜ್ರಾ ಪೌಂಡ್ ಲಂಡನ್ನಿನಲ್ಲಿ ಇಮೇಜಿಸ್ಟ್ ಪಂಥವನ್ನೇ ಪ್ರಾರಂಭಿಸಿದ. ಎರಡು ವರ್ಷದ ಅನಂತರ ಅದನ್ನು ಬಿಟ್ಟು, ಆವರ್ತವಾದವೆಂಬ (ವಾರ್ಟಿಸಿಸಂ) ಹೊಸದೊಂದು ತತ್ತ್ವವನ್ನು ಆತ ನಿರೂಪಿಸಿದರೂ ಅದು ಮೊದಲ ತತ್ತ್ವಕ್ಕಿಂತ ಅಷ್ಟೇನೂ ಭಿನ್ನವಾಗಿಲ್ಲದಿದ್ದರಿಂದ ಹಲವು ಕಾಲ ಇಮೇಜಿಸ್ಟ್ ಪಂಥದ ಪ್ರಭಾವ ಮುಂದುವರಿಯಿತು. ಈ ಪಂಥದ ಪ್ರತಿನಿಧಿಗಳು ನಾಲ್ಕುವರ್ಷ (1914–1917) ಪ್ರಕಟಿಸಿದ ಕಾವ್ಯಸಂಕಲನಗಳಲ್ಲಿ ಎಜ್ರಾ ಪೌಂಡ್, ಎಮಿ ಲವೆಲ್, ಜೇಮ್ಸ್ ಜಾಯ್ಸ್, ಡಿ.ಎಚ್.ಲಾರೆನ್ಸ್ ಮುಂತಾದವರೂ ಸೇರಿದಂತೆ ಹದಿಮೂರು ಮಂದಿ ಉದಯೋನ್ಮುಖ ಕವಿಗಳ ಪ್ರಪ್ರಥಮ ಕೃತಿಗಳು ಬೆಳಕು ಕಂಡವು. ಅಮೆರಿಕ, ಇಂಗ್ಲೆಂಡುಗಳಲ್ಲಿ ಈ ಹೊಸ ತತ್ತ್ವದ ಪ್ರಸಾರ, ಪ್ರಚಾರಗಳ ಸಲುವಾಗಿಯೇ ಕೆಲವು ನಿಯತಕಾಲಿಕಗಳು ಪ್ರಕಟವಾದುವು.

ಟಿ.ಇ. ಹ್ಯೂಮ್‌ನನ್ನು (1886–1917) ಪ್ರತಿಮಾಸಿದ್ಧಾಂತದ ಮೂಲಪುರುಷನೆನ್ನುತ್ತಾರೆ. ರೊಮ್ಯಾಂಟಿಕ್ ಪ್ರವೃತ್ತಿಯ ನಿವಾರಣೆಯಾಗಬೇಕಾದರೆ ಅದರ ಬದಲು ಶಬ್ದಾಡಂಬರವಿಲ್ಲದ, ಖಚಿತ ಅಭಿವ್ಯಕ್ತಿ ಹಾಗೂ ತಂತ್ರದಿಂದ ಕೂಡಿದ ಬೇರೊಂದು ವಿಧಾನ ಸೃಷ್ಟಿಯಾಗಬೇಕೆಂದು ಆತ ವಾದಿಸಿದ. ಈ ವಾದದ ಒಂದು ಸ್ವರೂಪ ಇಮೇಜಿಸ್ಟ್ ಕಾವ್ಯ. ಅದು ಆ ಕಾಲದಲ್ಲಿ ಹೊರಹೊಮ್ಮಿದ ಸಿಂಬಲಿಸಂ, ಫ್ಯೂಚರಿಸಂ, ಕ್ಯೂಬಿಸಂ ಮುಂತಾದ ಹಲವು ಹೊಸ ಪ್ರವೃತ್ತಿಗಳ ವಿರುದ್ಧ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿತು. ಕಾವ್ಯದಲ್ಲಿ ವಿಚಾರದ ವಿಕಾಸಕ್ಕಿಂತ ರಚನೆ, ಶಿಲ್ಪ, ಪ್ರತಿಮೆ, ಭಾಷೆ ಇವೆ ಮುಖ್ಯವೆನ್ನುವುದು ಈ ಪಂಥದ ತತ್ತ್ವ. 1915ರಲ್ಲಿ ಪ್ರಕಟವಾದ ಸಮ್ ಇಮೇಜಿಸ್ಟ್ ಪೊಯಟ್ಸ್ ಎನ್ನುವ ಕಾವ್ಯಸಂಕಲನದಲ್ಲಿ ಉಲ್ಲೇಖಿಸಿದ ಸೂತ್ರಗಳು ಈ ಪಂಥದ ಘೋಷಣೆಗಳಂತಿದ್ದವು. ಅವುಗಳಲ್ಲಿ 1. ಕಾವ್ಯದಲ್ಲಿ ಕೇವಲ ಅಲಂಕಾರಿಕವಲ್ಲದ, ಖಚಿತ ದಿನಬಳಕೆಯ ಆಡುಮಾತುಗಳಿಗೆ ಅವಕಾಶವಿರಬೇಕು.

2. ಮನಸ್ಸಿನ ಅವ್ಯಕ್ತ ಸ್ಥಿತಿಗತಿಗಳ ಅಭಿವ್ಯಕ್ತಿಗಾಗಿ ಹೊಸ ವಲಯಗಳನ್ನು ಸೃಜಿಸಬೇಕು. 3. ವಸ್ತುವಿನ ಆಯ್ಕೆಯಲ್ಲಿ ಕವಿಗೆ ಪೂರ್ಣಸ್ವಾತಂತ್ರ್ಯವಿರಬೇಕು, 4. ಕಾವ್ಯದಲ್ಲಿ ಸುಸಂಗತ ಪ್ರತಿಮೆಗಳ ವಿನ್ಯಾಸವಿರಬೇಕು. ಅಸ್ಪಷ್ಟ ಸರ್ವಸಾಮಾನ್ಯ ವಿವರಗಳಿಗಿಂತಲೂ ಹೆಚ್ಚಾಗಿ ವಿವರಗಳ ನಿಚ್ಚಳ ಅಭಿವ್ಯಕ್ತಿ ಅತ್ಯಾವಶ್ಯಕ. 5. ಪ್ರತಿಮಾವಿನ್ಯಾಸ ಭದ್ರವಾದ, ಬನಿಯುಳ್ಳ ಪ್ರಖರ ಚಿತ್ರಣವನ್ನು ಸಾಧಿಸುವಂತಾಗಬೇಕು–ಇತ್ಯಾದಿ ಸೂತ್ರಗಳು ಸೇರಿದ್ದುವು.

ಒಂದನೆಯ ಮಹಾಯುದ್ಧದ ಕೊನೆಯಲ್ಲಿ ಇಮೇಜಿಸ್ಟ್ ಕಾವ್ಯಪಂಥ ಅವನತಿ ಹೊಂದಿತು. ಈ ಪಂಥ ನಿರ್ದೇಶಿಸಿದ ಶಿಸ್ತು, ಸಂಯಮಗಳು ಅಂದಿನ ಅಭಿವ್ಯಕ್ತಿಯ ಗೊಂದಲ ನಿವಾರಿಸಿ, ಏಕಸೂತ್ರ ರೂಪಿಸಲು ಸ್ವಲ್ಪಮಟ್ಟಿಗೆ ಶಕ್ತವಾದುವು. ಆದರೆ ಕಾವ್ಯದ ಜೀವನಾಡಿಯಾದ ಅರ್ಥ, ಕವಿ ಬಳಸುವ ಪ್ರತಿಮೆ ಇವೆರಡರ ನಡುವೆ ಸಾಂಗತ್ಯ ಸಾಧಿಸಲು ಕೆಲವು ಕಾಲದ ಅನಂತರ ಉಂಟಾದ ಅಸಮರ್ಥತೆ ಅದರ ಅವನತಿಗೆ ಮುಖ್ಯ ಕಾರಣವಾಯಿತು. (ಎಚ್.ಕೆ.ಆರ್.)

'ಇಮೇಜ್' ಎನ್ನುವುದನ್ನು ಪೌಂಡ್ "ಕಾಲದ ಒಂದು ಕ್ಷಣದಲ್ಲಿ ಒಂದು ಬೌದ್ಧಿಕ ಮತ್ತು ಭಾವನಾತ್ಮಕ ಸಂಕೀರ್ಣವನ್ನು ನಿರೂಪಿಸುವಂಥದು" ಎಂದು ವಿವರಿಸಿದ. ತನ್ನ 'ಇನ್ ಎ ಸ್ಟೇಷನ್ ಆಫ್ ದ ಮೆಟ್ರೋ' ಕವನವನ್ನು ಉದಾಹರಣೆಯಾಗಿ ಕೊಟ್ಟ ಗುಂಪಿನಲ್ಲಿ ಈ ಮುಖಗಳ ಅಸಾಮಾನ್ಯ ದರ್ಶನ, ತೊಯ್ದ ಕಪ್ಪು ರಂಬೆಯ ಮೇಲಿನ ದಳಗಳು.

'ಇಮೇಜ್' ಒಳಗೊಳ್ಳುವ ಅಂಶಗಳು ವಾಸ್ತವಕ್ಕೆ ನಿಷ್ಠವಾಗಿರುತ್ತವೆ, ಆದರೆ ಒಟ್ಟಿಗೆ ಸೇರಿ ಇನ್ನೂ ಹೆಚ್ಚಿನ ವಾಸ್ತವತೆಯನ್ನು ಸೃಷ್ಟಿಸುತ್ತದೆ ಎನ್ನುವುದು ಅವನ ವಿವರಣೆ.

ಇಮೇಜಿಸಂ ಪಂಥದ ಜನನವು ಇಂಗ್ಲೆಂಡ್–ಅಮೆರಿಕಗಳಲ್ಲಿ ಆಧುನಿಕ ಕಾವ್ಯದ ಪ್ರಾರಂಭದ ಸೂಚನೆಯೂ ಹೌದು. ರೋಮ್ಯಾಂಟಿಕ್–ವಿಕ್ಟೋರಿಯನ್ ಸಂಪ್ರದಾಯವು ಇಲ್ಲಿಗೆ ಮುಕ್ತಾಯವಾಯಿತು. ಖಚಿತತೆ, ವಸ್ತುನಿಷ್ಠತೆಗಳಿಗೆ ಕವಿಗಳು ಪ್ರಾಧಾನ್ಯ ನೀಡಲಾರಂಭಿಸಿದರು. ಅಮೂರ್ತತೆ ರೆಟರಿಕ್ ಮತ್ತು ಅನಗತ್ಯ ಅಲಂಕಾರಗಳನ್ನು ಕಟ್ಟುನಿಟ್ಟಾಗಿ ದೂರವಿಡಬೇಕೆಂಬುದು ಪೌಂಡ್‌ನ ಎಚ್ಚರಿಕೆ. ಅನಗತ್ಯವಾದ ಒಂದು ಶಬ್ದವನ್ನು ಬಳಸಲಾಗದು, ಲಯವು ಸಂಗೀತವನ್ನು (ಮ್ಯೂಸಿಕಲ್ ಫ್ರೇಸ್) ಅನುಸರಿಸಬೇಕು, ಎನ್ನುವುದು ಈ ಪಂಥದವರ ನಿಯಮಗಳು.

ಇಮೇಜಿಸಂನ ಸಾಧನೆಯನ್ನು ಕುರಿತು ವಿಮರ್ಶಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಟಿ.ಎಸ್.ಎಲಿಯಟ್ ಇದರ ಸಾಧನೆ ಸೃಜನಶೀಲವಾದುದಕ್ಕಿಂತ ವಿಮರ್ಶಾತ್ಮಕವಾದುದು, ವಿಮರ್ಶೆಯಲ್ಲಿ ಇದಕ್ಕೆ ಮಹತ್ವ ಉಂಟು ಎಂದ. ಕಾವ್ಯಕ್ಕೆ ವಸ್ತು ಯಾವುದಾದರೂ ಆದೀತು ಎನ್ನುವ ಇದರ ನಿಲುವನ್ನು ನಿರಲಂಕೃತ ಮೇಲ್ಮೈಯೇ ಕವನದ ಅರ್ಥ ಎನ್ನುವ ಈ ಪಂಥದ ಸಮೀಕರಣವನ್ನು ವ್ಯಾಲೆಸ್ ಸ್ಟೀವನ್ಸ್ ವಿರೋಧಿಸಿದ. ಈ ಪಂಥವು ಆಗ ಪ್ರಭಾವಶಾಲಿಯಾಗಿದ್ದ ರೋಮ್ಯಾಂಟಿಸಿಸಂ ಪಂಥದ ಪುನರ್ವಿಮರ್ಶೆಯನ್ನು ಮಾಡಿದ್ದು ದೊಡ್ಡ ಕೊಡುಗೆ ಎನ್ನಬೇಕು. ಕಾವ್ಯ ಪ್ರತಿಮೆಯ ಸಾಧ್ಯತೆ ಸಾಮರ್ಥ್ಯಗಳಿಗೆ ಪ್ರಾಧಾನ್ಯವನ್ನು ನೀಡಿದ್ದು ಮತ್ತೊಂದು ಸಾಧನೆ. ಇದರಿಂದ ಈ ಪಂಥವು ಆಧುನಿಕ ಕಾವ್ಯದ ಮೂಲ ಘಟಕವನ್ನು ಗುರುತಿಸಿದಂತಾಯಿತು ಎಂದು ಸ್ಟೀಫನ್ ಸ್ಪೆಂಡರ್ ಹೇಳಿದ. ಆದರೆ 'ಇಮೇಜ್'ಗೆ ಅತಿ ಪ್ರಾಧಾನ್ಯ ನೀಡಿತೆಂಬುದು ನಿಜ. (ಎಲ್.ಎಸ್.ಎಸ್.)

**ಇಮ್ಮಡಿ ತೆರಿಗೆ:** ಒಂದು ಹಣಕಾಸಿನ ಅವಧಿಯಲ್ಲಿ ಒಂದೇ ಮೂಲದ ಮೇಲೆ ಎರಡು ತೆರಿಗೆಗಳ ಲೆಕ್ಕಾಚಾರ, ವಿಧಾಯಕ ಹಾಗೂ ವಸೂಲಿ (ಡಬಲ್ ಟ್ಯಾಕ್ಸೇಷನ್). ಅಧಿಕಾರವ್ಯಾಪ್ತಿಯುಳ್ಳ ಎರಡು ನಿಯೋಜಿತಾಧಿಕಾರಗಳು ಪರಸ್ಪರವಾಗಿ ಸ್ಪರ್ಧಿಸಿ ಒಂದೇ ಮೂಲದ ಮೇಲೆ ತೆರಿಗೆ ವಿಧಿಸಬಹುದು; ಅಥವಾ ಒಂದೇ ನಿಯೋಜಿತಾಧಿಕಾರ ಒಂದೇ ಮೂಲದ ಮೇಲೆ ಎರಡು ಬಾರಿ ತೆರಿಗೆ ವಿಧಿಸಬಹುದು. ಆದಾಯದ ಮೇಲೂ ಆದಾಯ ಸಂಪಾದನೆಗಾಗಿ ಮಾಡಿದ ಖರ್ಚಿನ ಮೇಲೂ ಸರ್ಕಾರ ತೆರಿಗೆ ವಿಧಿಸಿದರೆ ಆಗ ಒಂದೇ ತೆರಿಗೆಯ ಮೂಲ ಒಂದೇ ನಿಯೋಜಿತಾಧಿಕಾರದಿಂದ ಎರಡು ಸಲ ತೆರಿಗೆಗೆ ಒಳಪಟ್ಟು ಅದು ಇಮ್ಮಡಿ ತೆರಿಗೆಯೆನಿಸುತ್ತದೆ. ಒಬ್ಬ ವ್ಯಕ್ತಿಯ ಆದಾಯದ ಮೇಲೆ ಅದನ್ನು ಸಂಪಾದಿಸಿದ ದೇಶದಲ್ಲೂ ಮತ್ತೆ ಆತ ವಾಸಿಸುವ ದೇಶದಲ್ಲೂ ತೆರಿಗೆ ವಿಧಿಸಿದರೆ ಆಗ ಅದು ಎರಡು ನಿಯೋಜಿತಾಧಿಕಾರಗಳು ವಿಧಿಸಿದ ಇಮ್ಮಡಿ ತೆರಿಗೆಯಾಗುತ್ತದೆ. ಒಬ್ಬ ತನ್ನ ಆದಾಯವನ್ನು ಭಾರತದಲ್ಲಿ ಪಡೆಯಬಹುದು. ಆದರೆ ಆತ ಅಮೆರಿಕದಲ್ಲಿ ವಾಸಿಸುತ್ತಿರಬಹುದು. ಆಗ ಭಾರತ ಮತ್ತು ಅಮೆರಿಕ ದೇಶಗಳೆರಡು ಆ ಆದಾಯದ ಮೇಲೆ ತೆರಿಗೆ ಹಾಕಿದರೆ ಅದು ಇಮ್ಮಡಿ ತೆರಿಗೆಗೆ ಉದಾಹರಣೆ. ಇಲ್ಲಿ ಬೇರೆ ಬೇರೆ ತೆರಿಗೆ ವಿಧಿಸುವ ಹಕ್ಕುಳ್ಳವರು ಇರುವುದರಿಂದ ಈ ಪರಿಸ್ಥಿತಿ ಸಂಭವಿಸುತ್ತದೆ. ಒಂದು ದೇಶದಲ್ಲಿ ರಾಜ್ಯ ಸರ್ಕಾರಗಳೂ ಕೇಂದ್ರ ಸರ್ಕಾರಗಳೂ ಒಂದೇ ಆದಾಯ ಅಥವಾ ಪದಾರ್ಥದ ಮೇಲೆ ತೆರಿಗೆ ಹಾಕಿದರೆ ಅದೂ ಇಮ್ಮಡಿ ತೆರಿಗೆಯಾಗುತ್ತದೆ. ಒಂದು ವೇಳೆ ಒಬ್ಬ ವ್ಯಕ್ತಿ ಒಂದು ದೇಶದಿಂದ ಆದಾಯ ಪಡೆದು ಎರಡನೆಯ ದೇಶದಲ್ಲಿ ವಾಸವಾಗಿದ್ದು ಮೂರನೆಯ ದೇಶದಲ್ಲಿ ಅದನ್ನು ಖರ್ಚು ಮಾಡಬಹುದು. ಆಗ ಅವನು ಎರಡಕ್ಕಿಂತ ಜಾಸ್ತಿ ತೆರಿಗೆ ಕೊಡಬೇಕಾಗುತ್ತದೆ. ಈ ರೀತಿ ಹಾಕುವ ತೆರಿಗೆಯಲ್ಲಿ ನ್ಯಾಯ ದೊರಕಿಸುವ ಉದ್ದೇಶವಿದ್ದರೆ ಅದು ತಪ್ಪಾಗುವುದಿಲ್ಲ. ಆದರೆ ಇಂಥ ತೆರಿಗೆಗಳಿಂದ ತೆರಿಗೆ ಕೊಡುವವರಿಗೆ ಭಾರ ಜಾಸ್ತಿಯಾಗುತ್ತದೆಯೆಂಬುದೂ ನಿಜ. ತೆರಿಗೆ ವಿಧಿಸುವ ಕೇಂದ್ರ, ರಾಜ್ಯ ಸರ್ಕಾರಗಳೆರಡೂ ರಾಜ್ಯಾಂಗ ದೃಷ್ಟಿಯಿಂದ ಪ್ರತ್ಯೇಕವಾಗಿದ್ದ ಪಕ್ಷದಲ್ಲಿ ಈ ಬಗೆಯ ವಿಧಾಯಕವನ್ನು ಕಾಯಿದೆಯ ದೃಷ್ಟಿಯಿಂದ ಇಮ್ಮಡಿ ತೆರಿಗೆಯೆನ್ನಲಾಗುವುದಿಲ್ಲ. ಆದರೆ ಒಬ್ಬ ವ್ಯಕ್ತಿ ಒಂದು ರಾಜ್ಯದಲ್ಲಿ ವಾಸಿಸುತ್ತಿದ್ದು ಅವನ ಸ್ವತ್ತು ಇನ್ನೊಂದು ರಾಜ್ಯದಲ್ಲಿದ್ದರೆ ಆಗ ಆತ ತನ್ನ ರಾಜ್ಯದಲ್ಲಿ ವಾಸಿಸುತ್ತಿದ್ದನೆಂದು ಅಲ್ಲಿನ ಸರ್ಕಾರವೂ ತನ್ನ ರಾಜ್ಯದಲ್ಲಿ ಆತನ ಸ್ವತ್ತು ಇದೆಯೆಂದು ಇನ್ನೊಂದು ಸರ್ಕಾರವೂ ತೆರಿಗೆ ವಿಧಿಸುವ ಹಕ್ಕು ಚಲಾಯಿಸಿ, ಅದರಿಂದ ಆತನಿಗೆ ಅನ್ಯಾಯವಾಗಿದ್ದರೆ ಅಂಥ ಅನ್ಯಾಯದ ಸಂದರ್ಭವನ್ನು ಸಾಮಾನ್ಯವಾಗಿ ಇಮ್ಮಡಿ ತೆರಿಗೆಯೆಂದು ಹೆಸರಿಸಲಾಗುತ್ತದೆ.

ಒಂದು ದೇಶದ ನಿವಾಸಿಗಳು ಇನ್ನೊಂದು ದೇಶದಲ್ಲಿ ಸಂಪಾದಿಸಿದ ಆದಾಯದ ಮೇಲೆ ಎರಡು ಕಡೆಯೂ ತೆರಿಗೆ ಕೊಡಬೇಕಾಗಿ ಬಂದರೆ ಆಗ ಇಂಥ ಪರಿಸ್ಥಿತಿಯಿಂದ ಒಂದು ದೇಶದ ಬಂಡವಾಳವೂ ಕೆಲಸಗಾರರ ಸೇವೆಯೂ ಇನ್ನೊಂದು ದೇಶಕ್ಕೆ ನಿರಂತರವಾಗಿ ಹರಿಯಲು ಅಡಚಣೆಯಾಗುತ್ತದೆ. ಇಮ್ಮಡಿ ತೆರಿಗೆಯ ಭಾರ ಕಡಿಮೆ ಮಾಡಲು ಈ ಎರಡೂ ದೇಶಗಳು ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಬಹುದು. ಪರಸ್ಪರವಾಗಿ ಅವು ಪೂರ್ತಿಯಾಗಿಯೋ ಆಂಶಿಕವಾಗಿಯೋ ಅಂಥ ನಿವಾಸಿಗಳಿಗೆ ತೆರಿಗೆ ವಿನಾಯಿತಿ ಕೊಡಬಹುದು; ಅಥವಾ ಸಾಮಾನ್ಯವಾಗಿ ಅಂತಾರಾಷ್ಟ್ರೀಯ ವ್ಯಾಪ್ತಿ ಇರುವ ಉದ್ಯಮಗಳನ್ನು ಮಾತ್ರ ಇಮ್ಮಡಿ ತೆರಿಗೆಗೆ ಒಳಪಡಿಸಲು ಒಪ್ಪಂದವಾಗಬಹುದು. ಉದಾಹರಣೆ: ಬ್ಯಾಂಕು ಮತ್ತು ವಿಮಾ ಕಂಪನಿಗಳು, ಅಂತಾರಾಷ್ಟ್ರೀಯ ಜಲ ಮತ್ತು ವಾಯುಯಾನಗಳು. ಕೇಂದ್ರ, ರಾಜ್ಯ ಸರ್ಕಾರಗಳಿರುವ ಸಂಯುಕ್ತ ರಾಜ್ಯಗಳಲ್ಲಿ ಇಂಥ ತೆರಿಗೆಯನ್ನು ಒಂದೇ ಸರ್ಕಾರದ ವ್ಯಾಪ್ತಿಗೆ ಒಳಪಡಿಸಿ ಇಮ್ಮಡಿ ತೆರಿಗೆಯ ಸಮಸ್ಯೆಯನ್ನು ಪರಿಹಾರ ಮಾಡಬಹುದು; ಅಥವಾ ರಾಜ್ಯ ಮತ್ತು ಸಂಯುಕ್ತ ಸರ್ಕಾರಗಳ ನಡುವೆ ಒಪ್ಪಂದದಿಂದ ಈ ಸಮಸ್ಯೆಯನ್ನು ಪರಿಹಾರ ಮಾಡಬಹುದು. ಒಟ್ಟಿನಲ್ಲಿ ಪರಸ್ಪರ ಒಪ್ಪಂದದಿಂದ ಇಮ್ಮಡಿ ತೆರಿಗೆಯಿಂದಾಗಬಹುದಾದ ತೊಂದರೆಗಳನ್ನು ನಿವಾರಿಸುವುದು ಸಾಧ್ಯ. (ಎಸ್.ಎಂ.ವಿ.)

**ಇಮ್ಮರ್ಮಾನ್, ಕಾರ್ಲ್ ಲೆಬ್ರೆಷ್ಟ್:** 1796–1840. ಜರ್ಮನಿಯ ಕವಿ, ನಾಟಕಕಾರ ಮತ್ತು ಕಾದಂಬರಿಕಾರ. ಜನನ ಮ್ಯಾಗ್‌ಡೀಬರ್ಗ್‌ನಲ್ಲಿ. ಹಲ್ಲೆ ವಿಶ್ವವಿದ್ಯಾಲಯದಲ್ಲಿ ನ್ಯಾಯಶಾಸ್ತ್ರವನ್ನು ಅಭ್ಯಾಸಮಾಡಿ, 1817ರಲ್ಲಿ ಪ್ರಷ್ಯದ ನ್ಯಾಯಾಂಗ ಇಲಾಖೆಯಲ್ಲಿ ನೌಕರನಾದ. 1823ರಲ್ಲಿ ನ್ಯಾಯಾಧೀಶನಾಗಿ 1829ರಲ್ಲಿ ಮ್ಯಾಜಿಸ್ಟ್ರೇಟನಾದ. 1829ರಲ್ಲಿ ಡಸ್ಸೆಲ್‌ಡಾರ್ಫ್ ವಿಭಾಗದ ನ್ಯಾಯಾಂಗ ಮುಖ್ಯಸ್ಥನಾಗಿ ನೇಮಿತನಾದ. ಈತನ ಅಧಿಕಾರ ವ್ಯಾಪ್ತಿ ಭೂವಿಭಾಗವನ್ನು ಕುರಿತದ್ದಾಗಿತ್ತು. 1837ರಲ್ಲಿ ಡಸ್ಸೆಲ್‌ಡಾರ್ಫ್ ನಗರದಲ್ಲಿ ನಾಟ್ಯಶಾಲೆಗಳ ಸಂಘವನ್ನು ಸ್ಥಾಪಿಸಿದ. 1834–36ರವರೆಗೆ ಪ್ರಾದೇಶಿಕ ನಾಟ್ಯಶಾಲೆಗಳ ನಿಯಂತ್ರಕನಾಗಿದ್ದ. ಈ ಕೆಲಸ ಆರ್ಥಿಕದೃಷ್ಟಿಯಿಂದ ಇಮ್ಮರ್ಮಾನ್‌ಗೆ ಅನುಕೂಲಕರವಾಗಿಲ್ಲವಾದರೂ ಇದಕ್ಕೆ ಜರ್ಮನಿಯ ನಾಟಕದ ಇತಿಹಾಸದಲ್ಲಿ ಮಹತ್ತ್ವದ ಸ್ಥಾನವಿದೆ. ಪ್ರಷ್ಯದ ಸೈನ್ಯಾಧಿಕಾರಿ ಲಟ್‌ಜ್ಞಾನ ಮೇಧಾವಿ ಪತ್ನಿ ಎಲೀಜಳನ್ನು ಇಮ್ಮರ್ಮಾನ್ ಪ್ರೇಮಿಸಿದ. 1825ರಲ್ಲಿ ವಿವಾಹವಿಚ್ಛೇದನೆ ಮಾಡಿಕೊಂಡ ಎಲೀಜ ಎರಡನೆಯ ಮದುವೆಗೆ ಒಪ್ಪದಿದ್ದ ಕಾರಣ ಆಕೆಯ ಮತ್ತು ಇಮ್ಮರ್ಮಾನನ 14 ವರ್ಷಗಳ ಪ್ರಣಯ ಹಠಾತ್ತನೆ ಕೊನೆಗೊಂಡಿತು. 1839ರಲ್ಲಿ ಮೇರಿಯಾನೆ ನಿಮೀಯರ್ ಎಂಬ 20ರ ಕನ್ಯೆಯನ್ನು ಈತ ಮದುವೆಯಾದ. ತನ್ನ ಈ ಸಂಸಾರದಿಂದ ಪಡೆದ ನೆಮ್ಮದಿಯನ್ನು, ಸುಖವನ್ನು ತನ್ನ ಮಹಾಕೃತಿ ಟ್ರಿಸ್ಟಾನ್ ಅಂಡ್ ಐಸೋಡೋಲ್ ಎಂಬುದರಲ್ಲಿ ಈತ ಅಭಿವ್ಯಕ್ತಗೊಳಿಸಿದ್ದಾನೆ. ಆದರೆ ಮರುವರ್ಷವೇ ತನ್ನ 44ನೆಯ ವಯಸ್ಸಿನಲ್ಲಿ ಈತ ದೈವಾಧೀನನಾದ.

ಇಮ್ಮರ್ಮಾನ್ ಜರ್ಮನ್ ಸಾಹಿತ್ಯದಲ್ಲಿ ನಾಟಕಕಾರ ಮತ್ತು ಕಾದಂಬರಿಕಾರನೆಂದು ಹೆಸರುವಾಸಿಯಾಗಿದ್ದಾನೆ. ಆದರೆ ಇವನ ಸಮಕಾಲೀನ ಗಯಟೆಯ ಪ್ರಾಶಸ್ತ್ಯದಿಂದಾಗಿ ಈತನ ರೂಪಕಗಳು ಆ ಕಾಲದಲ್ಲಿ ಜನಮನವನ್ನು ಸೆಳೆಯಲಾಗಲಿಲ್ಲ. ಈತನ ಎರಡು ಪ್ರಸಿದ್ಧವಾದ ಕಾದಂಬರಿಗಳಲ್ಲಿ ಅನುಜಾತರು (Die Epigonen) ಅಧ್ಯಯನಯೋಗ್ಯವಾದುದು. 18ನೆಯ ಶತಮಾನದಲ್ಲಿ ಜರ್ಮನಿಯ ಜನಜೀವನ ಹೇಗಿದ್ದಿತು, ಆ ಜೀವನಕ್ರಮ ಬದಲಾದ ಬಗೆ ಹೇಗೆ? ಆ ಬದಲಾವಣೆಗೆ ಕಾರಣಗಳಾವುವು? – ಎಂಬ ವಿವರಗಳನ್ನು ಈ ಕಾದಂಬರಿಯಲ್ಲಿ ನೋಡಬಹುದು. ಈತನ ಮರಣಾನಂತರ ಪ್ರಕಟವಾದ ನೆನಪುಗಳು (Memorabillen) ಎಂಬ ಕೃತಿ 1813ರ ಹಿಂದೆ ಜರ್ಮನಿಯ ಜನಜೀವನ ಹೇಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.

ಈತನ ರೂಪಕಗಳಲ್ಲಿ 1828ರಲ್ಲಿ ಅಭಿನಯಿಸಲ್ಪಟ್ಟ ಟೈರೋಲ್‌ನಲ್ಲಿ ರುದ್ರಕ್ರೀಡೆ (Trehurspiel in Tirol) 1827 ಎಂಬುದು ಈಗಲೂ ವ್ಯಾಸಂಗಕ್ಕೆ ಅರ್ಹವಾದ ಕೃತಿ. ಈತನ ವಿಡಂಬನ ಕಾವ್ಯ Tulifantchen (1830). ಇತರ ಕಾದಂಬರಿಯೆಂದರೆ Munchhausen (ನಾಲ್ಕು ಸಂಪುಟಗಳು 1838–39). (ಕೆ.ಕೆ.ಐ.)

**ಇಮ್ಯೂನೋ ಎಲೆಕ್ಟ್ರೋಫಾರಿಸಿಸ್:** ಕಶೇರುಕ ಜೀವಿಗಳ ದೇಹದಿಂದ ಬೇರ್ಪಡಿಸಿದ ಪ್ರೋಟೀನ್ ಶುದ್ಧವಾದ ವಸ್ತುವೇ ಅಥವಾ ಹಲವಾರು ಪ್ರೋಟೀನುಗಳ ಮಿಶ್ರಣವೇ ಎಂಬುದನ್ನು ಅರಿಯುವ ವಿಧಾನ (ಪ್ರತಿರಕ್ಷೆ ವಿದ್ಯುತ್ಕಣ ಸಂಚಲನ). ಈ ಜೀವಿಗಳ ದೇಹವನ್ನು ಅನ್ಯವರ್ಗದ ಕೆಲವು ವಸ್ತುಗಳು ಪ್ರವೇಶಿಸಿದಾಗ ಅದನ್ನು ನಾಶಮಾಡಲು ಇಲ್ಲವೆ ನಿಷ್ಕ್ರಿಯಗೊಳಿಸಲು ವಿಶಿಷ್ಟವಾದ ನಿರೋಧಕ ವಸ್ತುಗಳನ್ನು (ಆ್ಯಂಟಿಬಾಡೀಸ್)

ದೇಹ ತಯಾರಿಸುತ್ತದೆ. ನಿರೋಧಕಗಳ ಉತ್ಪತ್ತಿಯನ್ನು ಪ್ರಚೋದಿಸುವ ವಸ್ತುಗಳನ್ನು ನಿರೋಧಜನಕಗಳೆನ್ನುತ್ತಾರೆ (ಆ್ಯಂಟಿಜನ್ಸ್). ವೈರಸ್, ಪ್ರೋಟೀನುಗಳು, ಮತ್ತು ಬಹುಶರ್ಕರಗಳು ನಿರೋಧಜನಕಗುಣಗಳನ್ನು ಹೊಂದಿವೆ. ನಿರೋಧಜನಕದ ರಾಸಾಯನಿಕ ರಚನೆ ಏನೇ ಇರಲಿ, ಉತ್ಪತ್ತಿಯಾಗುವ ನಿರೋಧಕ ಪ್ರೋಟೀನೇ ಆಗಿರುತ್ತದೆ. **(ನೋಡಿ- ಇಮ್ಯೂನೋರಸಾಯನ ಶಾಸ್ತ್ರ)**. ಈ ವಸ್ತುಗಳು ಪ್ರಾಣಿಯ ರಕ್ತದಲ್ಲಿ ಕಾಣಬರುತ್ತವೆ. ನಿರೋಧಕಗಳ ರಚನೆ ನಿರೋಧಜನಕಗಳ ಪ್ರಕೃತಿಯನ್ನು ಅವಲಂಬಿಸಿ ವಿಶಿಷ್ಟ ರೀತಿಯಲ್ಲಿ ಆಗುತ್ತದೆ. ಯಾವುದೇ ಒಂದು ನಿರೋಧಜನಕದ ಪ್ರವೇಶದಿಂದ ಉತ್ಪತ್ತಿಯಾದ ನಿರೋಧಕ ಆ ನಿರೋಧಜನಕದೊಂದಿಗೆ ಮಾತ್ರ ಕೂಡಿ ಒತ್ತರವನ್ನು ರಚಿಸುತ್ತದೆ. ಈ ನಿರ್ದಿಷ್ಟತೆಯನ್ನು



**ಆರೋಗ್ಯವಂತ ಮನುಷ್ಯನ ರಕ್ತಸಾರವನ್ನು ಇಮ್ಯೂನೋ ಎಲೆಕ್ಟ್ರೋಫಾರಿಸಿಸ್ ವಿಧಾನದಿಂದ ವಿಶ್ಲೇಷಣೆ ಮಾಡಿದಾಗ ಮೂಡಿಬಂದ ರೇಖೆಗಳನ್ನು ತೋರಿಸಿದೆ. ಪ್ರತಿಯೊಂದು ವಕ್ರರೇಖೆಯೂ ರಕ್ತಸಾರದಲ್ಲಿರುವ ಒಂದು ಪ್ರೋಟೀನನ್ನು ಪ್ರತಿನಿಧಿಸುತ್ತದೆ. ಪ್ರೋಟೀನುಗಳು ಪ್ರಸರಿಸುವಾಗ ಚಕ್ರಾಕೃತಿಯಲ್ಲಿ ಚಲಿಸುವುದರಿಂದ ಒತ್ತರ ರೇಖೆಗಳು ವಕ್ರಾಕೃತಿಯಲ್ಲಿರುತ್ತವೆ.**

ಉಪಯೋಗಿಸಿಕೊಂಡು ನಿರೋಧಜನಕದ ಶುದ್ಧತೆಯನ್ನು ಕಂಡುಹಿಡಿಯಬಹುದು. ಇದೇ ಇಮ್ಯೂನೋ ಎಲೆಕ್ಟ್ರೋಫಾರಿಸಿಸ್ ವಿಧಾನದ ತತ್ತ್ವ. ಈ ವಿಧಾನದಲ್ಲಿ ಬೇರ್ಪಡಿಸಿ ಪರಿಶೀಲನೆಗೆ ಒಳಗಾಗಿರುವ ಪ್ರೋಟೀನನ್ನು ನಿರೋಧಜನಕವನ್ನಾಗಿ ಬಳಸಿ ನಿರೋಧಕಗಳನ್ನು ಮೊಲದಲ್ಲಿ ಉತ್ಪತ್ತಿಮಾಡುತ್ತಾರೆ. ಅನಂತರ ಮೊಲದ ರಕ್ತವನ್ನು ತೆಗೆದು ರಕ್ತಸಾರವನ್ನು (ವಸೆ) ಬೇರ್ಪಡಿಸಿ ಸ್ಟಾರ್ಚ್ ಜೆಲ್ಲನ್ನು ಆಧಾರವಸ್ತುವನ್ನಾಗಿ ಉಪಯೋಗಿಸಿ ವಸೆಯನ್ನು ವಿದ್ಯುತ್‍ಪ್ರವಾಹಕ್ಕೆ ಒಳಪಡಿಸುತ್ತಾರೆ. ಕೆಲವು ಗಂಟೆಗಳ ಕಾಲ ಪ್ರವಾಹವನ್ನು ಹರಿಸಿದಾಗ ನಿರೋಧಕಗಳು ವಿವಿಧ ಅಂತರಗಳಿಗೆ ಚಲಿಸಿ ಬೇರ್ಪಡೆಯಾಗುತ್ತವೆ. ಅನಂತರ ಸ್ಟಾರ್ಚ್‍ಜಲ್ಲನ್ನು ಒಂದು ಗಾಜಿನ ಹಲಗೆಯ ಮೇಲೆ ಹರಡಿರುವ ಆಗಾರ್ ಜೆಲ್ಲಿನ ಮೇಲೆ ಇಡುತ್ತಾರೆ. ಆಗಾರ್ ಜೆಲ್ಲಿನಲ್ಲಿ ಸ್ಟಾರ್ಚ್‍ಜೆಲ್ಲಿಗೆ ಅನತಿದೂರದಲ್ಲಿ ಸಮಾನಾಂತರವಾಗಿ ಅದರ ಉದ್ದದಷ್ಟು ಉತ್ತಳ (ಶ್ಯಾಲೋ) ಮತ್ತು ಕಿರಿದಾದ ಕಾಲುವೆಯನ್ನು ಇಕ್ಕಡೆಗಳಲ್ಲಿ ಮಾಡಿ ಈ ಕಾಲುವೆಗಳಲ್ಲಿ ನಿರೋಧಜನಕವಸ್ತುವಿನ ದ್ರಾವಣವನ್ನು ತುಂಬುತ್ತಾರೆ. ಇಂಥ ವ್ಯವಸ್ಥೆಯನ್ನು ಕೆಲವು ಗಂಟೆಗಳ ಕಾಲ ಸ್ಥಿರವಾಗಿಟ್ಟರೆ ನಿರೋಧಕ ಮತ್ತು ನಿರೋಧಜನಕಗಳು ಈ ಅವಧಿಯಲ್ಲಿ ಆಗಾರ್ ಜೆಲ್ಲಿನಲ್ಲಿ ಪ್ರಸರಿಸುತ್ತವೆ. ಈ ಸಂದರ್ಭದಲ್ಲಿ ಪರಸ್ಪರ ಅನುಗುಣವಾದ ನಿರೋಧ ಮತ್ತು ನಿರೋಧಜನಕಗಳು ಸಂಧಿಸಿದರೆ ಒತ್ತರ ರಚಿತವಾಗುತ್ತದೆ. ಒತ್ತರ ತಿಳಿಯಾದ ಆಗಾರ್ ಜೆಲ್ಲಿನಲ್ಲಿ ವಕ್ರಾಕೃತಿಯ ಒತ್ತರರೇಖೆಗಳಂತೆ ಕಾಣುತ್ತದೆ. ಒತ್ತರದ ರೇಖೆಯ ಸಂಖ್ಯೆ ಒಂದಕ್ಕಿಂತ ಹೆಚ್ಚಾಗಿದ್ದರೆ ನಿರೋಧಜನಕ ವಸ್ತು ಪ್ರೋಟೀನ್, ಒಂದೇ ಬಗೆಯ ಪ್ರೋಟೀನ್ ಆಗಿರದೆ ಒತ್ತರದ ರೇಖೆಯ ಸಂಖ್ಯೆಗಳಷ್ಟು ಪ್ರೋಟೀನುಗಳನ್ನೊಳಗೊಂಡ ಮಿಶ್ರವಸ್ತುವೆಂದು ಗೊತ್ತಾಗುತ್ತದೆ. ಈ ವಿಧಾನ ಎಷ್ಟು ಸೂಕ್ಷ್ಮವಾಗಿದೆಯೆಂದರೆ ಪ್ರೋಟೀನಿನಲ್ಲಿ 1–2 ಮೈಕ್ರೋ ಗ್ರಾಂಗಳಷ್ಟು (1 ಮೈಕ್ರೋ ಗ್ರಾಂ=$10^{-6}$ ಗ್ರಾಂ; ಗ್ರಾಂನ 10ಲಕ್ಷ ಭಾಗಗಳಲ್ಲಿ ಒಂದು ಭಾಗ) ಅಶುದ್ಧತೆಯಿದ್ದರೂ ಕಂಡುಹಿಡಿಯಬಹುದು. ಆರೋಗ್ಯವಂತ ಮನುಷ್ಯನ ರಕ್ತಸಾರವನ್ನು ಇಮ್ಯೂನೋ ಎಲೆಕ್ಟ್ರೋಫಾರಿಸಿಸ್ ವಿಧಾನದಿಂದ ವಿಶ್ಲೇಷಣೆಮಾಡಿದಾಗ ಮೂಡಿಬಂದ ರೇಖೆಗಳನ್ನು ಉಲ್ಲೇಖಿಸಿದೆ. ಪ್ರತಿ ಒಂದು ವಕ್ರ ರೇಖೆಯೂ ರಕ್ತಸಾರದಲ್ಲಿರುವ ಒಂದು ಪ್ರೋಟೀನನ್ನು ಪ್ರತಿನಿಧಿಸುತ್ತದೆ. ಪ್ರೋಟೀನುಗಳು ಪ್ರಸರಿಸುವಾಗ ಚಕ್ರಾಕೃತಿಯಲ್ಲಿ ಚಲಿಸುವುದರಿಂದ ಒತ್ತರ ರೇಖೆಗಳು ವಕ್ರಾಕೃತಿಯಲ್ಲಿರುತ್ತವೆ.

(ಎಚ್.ಎಸ್.ಎಸ್.)

**ಇಮ್ಯೂನೋರಸಾಯನ ವಿಜ್ಞಾನ:** ನಿರೋಧಜನಕ ಮತ್ತು ನಿರೋಧಕ (ಆಂಟಿಜೆನ್ ಅಂಡ್ ಆಂಟಿಬಾಡಿ) ಇವುಗಳ ಸಂಬಂಧ, ನಿರೋಧಕಗಳ ಉತ್ಪತ್ತಿಕ್ರಮ ಮತ್ತು ಅನುವಂಶೀಯತೆ ಇತ್ಯಾದಿ ವಿಷಯಗಳ ರಸಾಯನವಿಜ್ಞಾನ ದೃಷ್ಟಿಯ ಅಭ್ಯಾಸ (ಇಮ್ಯೊನೋಕೆಮಿಸ್ಟ್ರಿ). ತಮ್ಮ ದೇಹವನ್ನು ಆಕ್ರಮಿಸಿ ಆರೋಗ್ಯಕ್ಕೆ ಧಕ್ಕೆ ತರುವಂಥ ಬ್ಯಾಕ್ಟೀರಿಯ ಮತ್ತು ನಂಜುಗಳನ್ನು ಎದುರಿಸಿ ದೇಹರಕ್ಷಣೆ ಮಾಡಬಲ್ಲಂಥ ನಿರೋಧಕ ವಸ್ತುಗಳನ್ನು ತಯಾರಿಸುವ ಶಕ್ತಿ ಎಲ್ಲ ಕಶೇರುಕ ಪ್ರಾಣಿಗಳಿಗೆ ಪ್ರಕೃತಿದತ್ತ ವರ. ಇನ್‍ಫ್ಲುಯೆಂಜ, ಟೈಫಾಯ್ಡ್ ಮುಂತಾದ ನಂಜುಬೇನೆಗಳಿಂದ ಒಂದು ಸಲ ನರಳಿದವರು ಪುನಃ ಅವುಗಳಿಗೆ ಥಕ್ಕನೆ ಬಲಿಯಾಗುವುದಿಲ್ಲವೆಂಬುದು ಅನುಭವಕ್ಕೆ ಬಂದಿರುವ ಸಂಗತಿ, ಎಂದರೆ ಈ ಸಹಜ ನರಳಿಕೆಯ ಪರಿಣಾಮವಾಗಿ ದೇಹದಲ್ಲಿ ತಯಾರಾದ ನಿರೋಧಕ ವಸ್ತುಗಳು ಒಂದು ವಿಧದ ರಕ್ಷಣಾಸ್ತ್ರಗಳಾಗಿ ವರ್ತಿಸುತ್ತವೆ. ಇಂಥ ತಿಳಿವಳಿಕೆಯ ಆಧಾರದ ಮೇಲೆ ಸಿಡುಬು, ಕಾಲರ ಮುಂತಾದ ಕಾಯಿಲೆಗಳಿಗೆ ವಿರುದ್ಧ ರಕ್ಷಣೆ ನೀಡುವ ಚುಚ್ಚುಮದ್ದುಗಳನ್ನು ಬಳಸುವ ವಿಧಾನ ರೂಢಿಗೆ ಬಂದಿದೆ. ಇದರ ಪ್ರಕಾರ ಯಾವುದೊಂದು ಬ್ಯಾಕ್ಟೀರಿಯ ಅಥವಾ ನಂಜನ್ನು ಹಲವಾರು ಪ್ರಯೋಗಗಳ ಮೂಲಕ ಸೌಮ್ಯರೂಪಕ್ಕೆ ಮಾರ್ಪಡಿಸಿ (ಎಂದರೆ ವಿಷವಿಲ್ಲದಂತೆ ಮಾಡಿ) ದೇಹಕ್ಕೆ ಚುಚ್ಚುತ್ತಾರೆ. ಆಗ ದೇಹದಲ್ಲಿ ಉತ್ಪತ್ತಿಯಾಗುವ ನಿರೋಧಕಗಳು ಇದೇ ವ್ಯಾಧಿಯ ಬ್ಯಾಕ್ಟೀರಿಯ ಅಥವಾ ನಂಜುಗಳು ದೇಹವನ್ನು ಮುತ್ತಿದಾಗ ಅವನ್ನು ನಾಶಪಡಿಸುತ್ತವೆ. ಹೀಗೆ ಒಂದು ದೇಹಕ್ಕೆ ಪೂರ್ವಭಾವಿಯಾಗಿ ಈ ರಕ್ಷಣೆಯನ್ನು ಕಲ್ಪಿಸಿಕೊಡುವ ವಿಧಾನಕ್ಕೆ ಪ್ರತಿರಕ್ಷಣೆ (ಇಮ್ಯೂನೈಸೇಷನ್) ಎನ್ನುತ್ತಾರೆ. ದೇಹಕ್ಕೆ ಹೊರತಾದ(ಫಾರಿನ್) ಕೆಲವು ವಸ್ತುಗಳು–ಅವು ಜೀವಂತವಾಗಿರಲಿ ನಿರ್ಜೀವಿಗಳಾಗಲಿ–ದೇಹವನ್ನು ಹೊಕ್ಕರೆ ನಿರೋಧಕಗಳು ಉತ್ಪತ್ತಿಯಾಗುತ್ತವೆ. ನಿರೋಧಕಗಳ ಉತ್ಪತ್ತಿಯನ್ನು ಪ್ರೇರೇಪಿಸುವ ವಸ್ತುಗಳ ಹೆಸರು ನಿರೋಧಜನಕಗಳು (ಆಂಟಿಜನ್ಸ್). ಬ್ಯಾಕ್ಟೀರಿಯ ಮತ್ತು ನಂಜುಗಳ ದಾಳಿಯ ಫಲಿತವೇ ಸೋಂಕು ರಕ್ಷಣಾಕ್ರಿಯೆ (ಇಮ್ಯುನಲಾಜಿ ಕಲ್ ಫಿನಾಮಿನನ್) ಎಂದು ಮೊದಮೊದಲು ಪರಿಗಣಿಸಲಾಗಿತ್ತು. ಆದರೆ ಈಗ ಬ್ಯಾಕ್ಟೀರಿಯದಲ್ಲಿರುವ ಅನೇಕ ವಸ್ತುಗಳು ನಿರೋಧಜನಕಗಳಂತೆ ವರ್ತಿಸುತ್ತವೆಯೆಂದು ಗೊತ್ತುಮಾಡಲಾಗಿದೆ. ಯಾವ ಒಂದು ನಿರೋಧಜನಕ ತನಗೆಂದೇ ವಿಶಿಷ್ಟವಾದ ನಿರೋಧಕಗಳ ಸೃಷ್ಟಿಯನ್ನು ಪ್ರಚೋದಿಸುತ್ತದೆ ಎಂಬುದು ಗಮನಾರ್ಹ ವಿಷಯ. ಪ್ರೋಟೀನುಗಳು, ಬಹುಶರ್ಕರಗಳು (ಪಾಲಿಸಾಕರೈಡ್ಸ್) ಸಾಮಾನ್ಯವಾಗಿ ಶ್ರೇಷ್ಠ ದರ್ಜೆಯ ನಿರೋಧಜನಕಗಳು. ಕೊಬ್ಬು ನಿರೋಧಜನಕವಲ್ಲ. ನ್ಯೂಕ್ಲಿಯಿಕ್ ಆಮ್ಲಗಳು ಸಾಮಾನ್ಯವಾಗಿ ನಿರೋಧಜನಕಗಳಲ್ಲವಾದರೂ ಕೆಲವು ಬ್ಯಾಕ್ಟೀರಿಯೊಫೇಜ್ ಡಿಎನ್‍ಎ ಅಣುಗಳು ನಿರೋಧಕಗಳನ್ನು ಉತ್ಪತ್ತಿ ಮಾಡುವ ಸಾಮರ್ಥ್ಯ ಪಡೆದಿವೆ.

ಒಂದು ಜಾತಿಯ ಜೀವಿಗಳಲ್ಲಿ ನಿರೋಧಕಗಳನ್ನು ಪ್ರೇರೇಪಿಸುವ ಬ್ಯಾಕ್ಟೀರಿಯ ಮತ್ತು ನಂಜುಗಳು ಇನ್ನೊಂದು ಬಗೆಯ ಜೀವಿಗಳಲ್ಲಿ ಅವನ್ನು ಪ್ರಚೋದಿಸಲು ಅಸಮರ್ಥವಾಗಿರಬಹುದೆಂಬ ತಿಳಿವಳಿಕೆ ಬಹಳ ವರ್ಷಗಳಿಂದಿದೆ. ಅನೇಕ ಸಂದರ್ಭಗಳಲ್ಲಿ ಒಂದೇ ಜಾತಿಗೆ ಸೇರಿದ ಎರಡು ಪ್ರಾಣಿಗಳು ಈ ಬಗೆಯ ಭಿನ್ನತೆಯನ್ನು ಪ್ರದರ್ಶಿಸಬಹುದು. ಆದ್ದರಿಂದ ನಿರೋಧಕದ ಉತ್ಪತ್ತಿ ನಿರೋಧಜನಕದ ಈ ಗುಣವನ್ನು ಮಾತ್ರವಲ್ಲದೆ ಆತಿಥೇಯ (ಹೋಸ್ಟ್) ಪ್ರಾಣಿಯ ಪ್ರತಿವರ್ತನೆಯನ್ನೂ (ರೆಸ್ಪಾನ್ಸ್) ಅವಲಂಬಿಸಿದೆ. ಜೀವಿ ಯಾವುದೊಂದು ನಿರೋಧಜನಕವನ್ನು ಕುರಿತಾದ ಪ್ರತಿವರ್ತನೆ ಗುಣವನ್ನು ಅನುವಂಶೀಯವಾಗಿ ಪಡೆಯುತ್ತದೆ. ಸೋಂಕು ರಕ್ಷಣಾಕ್ರಿಯೆ ಯಾವಾಗಲೂ ರಕ್ಷಣೆಯನ್ನು ಒದಗಿಸುವುದೆಂದು ಹೇಳಬರುವುದಿಲ್ಲ. ಅಲರ್ಜಿ ಮತ್ತು ತೀವ್ರ ಪ್ರತಿಕ್ರಿಯೆಗಳುಂಟಾದಾಗ ಜೀವಿಗೆ ಅಪಾಯವೇ ಉಂಟಾಗಬಹುದು. ಉದಾಹರಣೆಗೆ, ಮೊಟ್ಟೆಯಿಂದ ತೆಗೆದ ಆಲ್ಬುಮಿನ್(ಓವಾಲ್ಬುಮಿನ್) ಮತ್ತು ಹಸುವಿನ ರಕ್ತದಿಂದ ಬೇರ್ಪಡಿಸಿದ ಆಲ್ಬುಮಿನುಗಳನ್ನು (ಬೋವೈನ್ ಸೀರಂ ಆಲ್ಬುಮಿನ್–ಬಿಎಸ್‍ಎ) ಮನುಷ್ಯನ ರಕ್ತನಾಳಗಳ ಮೂಲಕ ಚುಚ್ಚಿದರೂ ಮನುಷ್ಯನಿಗೆ ಅಪಾಯವೇನೂ ಆಗುವುದಿಲ್ಲ. ಆದರೆ ಅವನ್ನೇ 2–3 ವಾರಗಳ ತರುವಾಯ ಮತ್ತೆ ಚುಚ್ಚಿದರೆ ತತ್‍ಕ್ಷಣವೇ ಪ್ರಬಲ ಪ್ರತಿಕ್ರಿಯೆ ಉಂಟಾಗಿ ಮರಣವೇ ಸಂಭವಿಸಬಹುದು. ಈ ನಿರೋಧಜನಕಗಳು ಮೊದಲನೆಯ ಬಾರಿ ಚುಚ್ಚಿದ ನಿರೋಧಜನಕಗಳಿಗೆ ವಿರುದ್ಧವಾಗಿ ಉತ್ಪತ್ತಿಯಾಗಿ ರಕ್ತದಲ್ಲಿ ಸಂಚರಿಸುವ ನಿರೋಧಕ ವಸ್ತುಗಳೊಂದಿಗೆ(ಆಂಟಿ ಬಿಎಸ್‍ಎ ಅಥವಾ ಆಂಟಿ ಓವಾಲ್ಬುಮಿನ್) ವರ್ತಿಸುವುದೇ ಕಾರಣ. ಇಂಥ ವೇಳೆಯಲ್ಲಿ ದೇಹಕ್ಕೆ ರಕ್ಷಣೆ ಒದಗುವುದೆಂಬ ಅಭಿಪ್ರಾಯ ಅಸಮಂಜಸವಾಗುವುದು.

ನಿರೋಧಜನಕದ ದ್ರಾವಣವನ್ನು ಅದರ ಆತ್ಮೀಯವಸೆಯೊಂದಿಗೆ (ಹೊಮೊಲೋಗಸ್ ಆಂಟಿಸೀರಂ) ಸೇರಿಸಿದಾಗ ಬಲುಮಟ್ಟಿಗೆ ಒತ್ತರ ರಚನೆಯಾಗುವುದು. (ಆತ್ಮೀಯವಸೆ ಎಂದರೆ ಒಂದು ನಿರೋಧಜನಕದ ಪ್ರಯೋಗದಿಂದ ಅದರ ವಿರುದ್ಧವಾಗಿ ಅದನ್ನೇ ಗುರಿಯಾಗಿ ಉಳ್ಳ ಉತ್ಪತ್ತಿಯಾದ ನಿರೋಧಕವನ್ನು ಒಳಗೊಂಡ ರಕ್ತಸಾರ ಅಥವಾ ವಸೆ ಎಂದರ್ಥ). ಬಿಎಸ್‍ಎಯನ್ನು ನಿರೋಧಜನಕವನ್ನಾಗಿ ಉಪಯೋಗಿಸಿ ಇತರ ಪ್ರಾಣಿಗಳಲ್ಲಿ (ಉದಾಹರಣೆಗೆ ಮೊಲದಲ್ಲಿ) ಪಡೆದ ನಿರೋಧಕವನ್ನು (ಆಂಟಿ ಬಿಎಸ್‍ಎ) ಉಳ್ಳ ವಸೆ ಬಿಎಸ್‍ಎಗೆ ಆತ್ಮೀಯವಸೆಯೆಂದು ಪರಿಗಣಿಸಲಾಗಿದೆ. ನಿರೋಧಜನಕ ತನ್ನ ಆತ್ಮೀಯವಸೆಯೊಂದಿಗೆ ನಿರ್ದಿಷ್ಟ (ಸ್ಪೆಸಿಫಿಕ್) ರೀತಿಯಲ್ಲಿ ವರ್ತಿಸಿ ಒತ್ತರವನ್ನುಂಟುಮಾಡಲಾರದು. ಈ ಗುಣದ ಆಧಾರದ ಮೇಲೆ ಮಾಂಸ ಮತ್ತು ಮಾಂಸವನ್ನೊಳಗೊಂಡ ಆಹಾರ ವಸ್ತುಗಳಲ್ಲಿರುವ ಪ್ರೋಟೀನುಗಳನ್ನು ದನದ ಮಾಂಸ, ಹಂದಿಮಾಂಸ ಅಥವಾ ಇನ್ನಾವ ಪ್ರಾಣಿಗಳಿಂದ ಅಥವಾ ಸಸ್ಯಮೂಲಗಳಿಂದ ಪಡೆಯಲಾಗಿದೆಯೆ ಎಂಬುದನ್ನು ಪರೀಕ್ಷಿಸಬಹುದು. ನಿರೋಧಜನಕಗಳನ್ನು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡುವ ಅಗ್ಲುಟಿನಿನ್ನುಗಳು, ರಕ್ತಕೋಶಗಳನ್ನು ಸೀಳುವ ಸೈಟೊಲೈಸಿನ್ನುಗಳು, ವಿಷಾಕ್ತ ನಿರೋಧಜನಕಗಳನ್ನು (ಟಾಕ್ಸಿನ್) ನಿಶ್ಚೇತನಗೊಳಿಸುವ ಆಂಟಿಟಾಕ್ಸಿನ್ನುಗಳು ನಿರೋಧಕಗಳ ಗುಂಪಿಗೆ ಸೇರಿವೆ. ಮೊದಲಿಗೆ ನಿರೋಧಕಗಳನ್ನು ಈ ರೀತಿ ವರ್ಗೀಕರಣ ಮಾಡಲಾಗಿದ್ದರೂ ಈಚೆಗೆ ಸಂಗ್ರಹವಾಗಿರುವ ವಿಷಯಗಳ ದೃಷ್ಟಿಯಿಂದ ಈ ವರ್ಗೀಕರಣ ಉಚಿತವಲ್ಲವೆಂದೂ ಈ ಎಲ್ಲ ಕ್ರಿಯೆಗಳು ಒಂದೇ ಕ್ರಿಯೆಯ ನಾನಾಮುಖಗಳೆಂದೂ ಪರಿಗಣಿಸಲಾಗಿದೆ. ಉದಾಹರಣೆಗೆ, ನ್ಯೂಮೋಕಾಕ್ಕೈ ಎಂಬ ಸೂಕ್ಷ್ಮಜೀವಿಯಲ್ಲಿರುವ ಬಹುಶರ್ಕರಕ್ಕೆ ವಿರುದ್ಧವಾಗಿ ಪಡೆದ ನಿರೋಧಕವನ್ನು

ಆ ಬಹುಶರ್ಕರಕ್ಕೆ ಸೇರಿಸಿದಾಗ ಪ್ರಿಸಿಪಿಟನ್ನಿನಂತೆಯೂ (ಒತ್ತರ ರಚಿತವಾಗುತ್ತದೆ), ನ್ಯೂಮೋಕಾಕ್ಕೈ ಕ್ರಿಮಿಯ ಕೋಶಗಳು ತೇಲುತ್ತಿರುವ ದ್ರಾವಣಕ್ಕೆ ಸೇರಿಸಿದರೆ ಅಗ್ಲುಟಿನ್ನಿನಂತೆಯೂ (ಕೋಶಗಳು ಒಂದಕ್ಕೊಂದು ಅಂಟಿಕೊಳ್ಳುತ್ತವೆ) ವರ್ತಿಸುತ್ತದೆ.

ನಿರೋಧಕ, ನಿರೋಧಜನಕದೊಂದಿಗೆ ಒತ್ತರವನ್ನು ರಚಿಸಿದರೆ ವಸೆಯಲ್ಲಿ ಅದರ ಇರವನ್ನು ಸುಲಭವಾಗಿ ಗೊತ್ತುಮಾಡಬಹುದು. ಅನೇಕ ವೇಳೆ ಇವೆರಡು ವಸ್ತುಗಳ ಸಂಯೋಗವಸ್ತು ವಿಲೀನವಾಗುವುದೂ ಉಂಟು. ಈ ಸಂದರ್ಭಗಳಲ್ಲಿ ಅತಿ ಹೆಚ್ಚಿನ ವೇಗದ ಭ್ರಮಣಯಂತ್ರದಲ್ಲಿ (ಅಲ್ಟ್ರಾ ಸೆಂಟ್ರಿಫ್ಯೂಜ್) ಸಂಯೋಗವನ್ನು ತಿರುಗಿಸಿ ನಿರೋಧಕ ಮತ್ತು ನಿರೋಧಜನಕಗಳಿಗಿಂತ ಅಧಿಕ ತೂಕವುಳ್ಳ ವಸ್ತುವಿನ ಒತ್ತರವನ್ನು ಗೊತ್ತುಮಾಡಬಹುದು. ಒತ್ತರವನ್ನುಂಟುಮಾಡದ ನಿರೋಧಕಗಳ ಹೆಸರು ರಿಯಾಗಿನ್ಸ್. ರಿಯಾಗಿನ್ಸನ್ನು ಸಲ್ಫಹೈಡ್ರಿಲ್ ವಸ್ತುಗಳ ಸಾನ್ನಿಧ್ಯದಲ್ಲಿ ಪೆಪ್ಸೈನ್ ಎಂಬ ಕಿಣ್ವದೊಂದಿಗೆ ಸಂಸ್ಕರಿಸಿದರೆ ಒತ್ತರವನ್ನುಂಟುಮಾಡಬಲ್ಲ ನಿರೋಧಕಗಳಾಗಿ ಪರಿವರ್ತನೆ ಹೊಂದುತ್ತವೆ.

ಒತ್ತರ ರಚನೆ ಮತ್ತು ಅಂಟುವಿಕೆ ಕ್ರಿಯೆಗಳು ನಡೆಯಲು ಆ ನಿರೋಧಕ ಮತ್ತು ನಿರೋಧಜನಕಗಳು ಮಾತ್ರ ಸಾಕು. ಈ ಕ್ರಿಯೆಗಳು ದೇಹದ ಹೊರಗೂ ನಡೆಯುತ್ತವೆ (ಇನ್ವಿಟ್ರೋ). ಆದರೆ ಕೋಶಭೇದನೆಗೆ (ಸೆಲ್ ಲೈಸಿಸ್) ರಕ್ತದಲ್ಲಿರುವ ಇನ್ನೊಂದು ವಸ್ತುವಿನ ಸಹಾಯವೂ ಬೇಕು. ಈ ವಸ್ತುವಿಗೆ ಕಾಂಪ್ಲಿಮೆಂಟ್ ಎಂಬ ಹೆಸರಿದೆ. ಕಾಂಪ್ಲಿಮೆಂಟ್ ಸಾನ್ನಿಧ್ಯದಲ್ಲಿ ನಿರೋಧಜನಕ ಮತ್ತು ಆತ್ಮೀಯ ವಸೆಯನ್ನು ಮಿಶ್ರಣ ಮಾಡಿದರೆ ಕಾಂಪ್ಲಿಮೆಂಟ್ ಕಣ್ಮರೆಯಾಗುತ್ತದೆ. ಅದು ನಿರೋಧಕ ನಿರೋಧಜನಕಗಳ ಸಂಯುಕ್ತಕ್ಕೆ ಸೇರಿಹೋಗುತ್ತದೆ, ಇಲ್ಲವೆ ನಶಿಸುತ್ತದೆ. ಕಾಂಪ್ಲಿಮೆಂಟಿಗೂ ಇತರ ನಿರೋಧಜನಕಗಳಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಈ ವಸ್ತು 55–58 ಸೆಂ.ಗ್ರೇ. ಉಷ್ಣತೆಯಲ್ಲಿ ನಾಶವಾಗುವುದು. ಇತರ ನಿರೋಧಕಗಳು ನಾಶವಾಗುವುದಿಲ್ಲ. ಕಾಂಪ್ಲಿಮೆಂಟ್ ಒಂದೇ ಬಗೆಯ ವಸ್ತುವಾಗಿರದೆ 7–10 ವಿವಿಧ ಅಂಶಗಳನ್ನೊಳಗೊಂಡ ವಸ್ತುವೆಂದು ಈಗ ಪರಿಗಣಿಸಲಾಗಿದೆ.

ನಿರೋಧಕಗಳನ್ನು ಉತ್ಪತ್ತಿ ಮಾಡುವ ವಿಧಾನಗಳು : ಇಮ್ಯೂನೋರಾಸಾಯನಿಕ ಸಂಶೋಧನೆಗಳಲ್ಲಿ ಮೊಲವನ್ನು ಬಲುಮಟ್ಟಿಗೆ ಬಳಸಲಾಗುತ್ತದೆ. ಇದಕ್ಕೆ ಕಾರಣಗಳಿವೆ: 1 ಎಲ್ಲ ಕಾಲಗಳಲ್ಲಿಯೂ ಋತುಗಳಲ್ಲಿಯೂ ಇವು ದೊರೆಯುತ್ತವೆ. ಇವನ್ನು ಬೆಳೆಸಿ ರಕ್ಷಿಸುವುದು ಸುಲಭ. 2 ಸಾಕಷ್ಟು ನಿರೋಧಕ ವಸ್ತುವಿನ ಉತ್ಪತ್ತಿ ಆಗುತ್ತದೆ. 3 ಕಿವಿಯಲ್ಲಿರುವ ಸಣ್ಣ ರಕ್ತನಾಳದ ಮೂಲಕ ಮರಳಿ ಮರಳಿ ನಿರೋಧಜನಕವನ್ನು ಚುಚ್ಚುವ ಮತ್ತು ರಕ್ತವನ್ನು ಬಸಿಯುವ ಸಾಧ್ಯತೆ ಇದೆ. ಹೆಚ್ಚಿನ ಪ್ರಮಾಣದಲ್ಲಿ ನಿರೋಧಕ ಬೇಕಾದಾಗ ಕುದುರೆಯನ್ನು ಉಪಯೋಗಿಸಲಾಗುತ್ತದೆ. ಡಿಫ್ತೀರಿಯ ಮತ್ತು ಕ್ಲಾಸ್ಟ್ರೀಡಿಯಂ ಟೆಟಾನಿಗಳ ವಿಷಗಳ ವಿರುದ್ಧ ನಿರೋಧಕಗಳನ್ನೊಳಗೊಂಡ ಇಮ್ಯೂನ್‌ಸೀರಾ (ಚುಚ್ಚುಮದ್ದಿನ) ಉತ್ಪಾದನೆಗೆ ಕುದುರೆಯನ್ನೇ ಉಪಯೋಗಿಸುತ್ತಾರೆ. ಈಚೆಗೆ ಕೋಳಿಮರಿಗಳನ್ನೂ ಅಧಿಕ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಗಿನಿ ಹಂದಿಗಳನ್ನು ಅತಿಪ್ರತಿಕ್ರಿಯೆ (ಹೈಪರ್ ಸೆನ್ಸಿಟಿವಿಟಿ) ಉಂಟುಮಾಡ ಬೇಕಾದ ಸಂದರ್ಭಗಳಲ್ಲಿ ನಿರೋಧಜನಕಗಳನ್ನು ಚರ್ಮದ ಕೆಳಭಾಗ ಸಬ್‌ಕ್ಯುಟೇನಿಯಸ್ ಅಥವಾ ಮಾಂಸಖಂಡ ಅಥವಾ ನೇರವಾಗಿ ಮಲಿನ ರಕ್ತನಾಳಗಳ ಮೂಲಕ ದೇಹಕ್ಕೆ ಸೇರಿಸುತ್ತಾರೆ. ಆದರೆ ಬಾಯಿ ಮುಖಾಂತರ ಸೇರಿಸುವುದಿಲ್ಲ. ಏಕೆಂದರೆ ಆಹಾರನಾಳಗಳಲ್ಲಿರುವ ಕಿಣ್ವಗಳು ನಿರೋಧಜನಕಗಳನ್ನು ನಾಶ ಮಾಡುವುವು. ಚರ್ಮದ ಪರೆಗಳ ಮಧ್ಯೆ (ಇಂಟ್ರಾಡರ್ಮಲ್) ಚರ್ಮದ ಕೆಳಗೆ ಮತ್ತು ಮಾಂಸಖಂಡಕ್ಕೆ ಚುಚ್ಚಿನ ನಿರೋಧಜನಕ ಸಾವಕಾಶವಾಗಿ ದೇಹದಲ್ಲಿ ವ್ಯಾಪಿಸುತ್ತದೆ. ರಕ್ತನಾಳ ಮತ್ತು ಪೆರಿಟೋನಿಯಲ್ ಕ್ಯಾವಿಟಿ ಮೂಲಕ ಒಳಸೇರಿದ ನಿರೋಧಜನಕ ದೇಹದಲ್ಲಿ ಅತಿ ಶೀಘ್ರವಾಗಿ ವ್ಯಾಪಿಸುತ್ತದೆ. ನಿರೋಧಜನಕದ ವ್ಯಾಪನೆ, ಅದರ ಚುಚ್ಚುವಿಕೆಯ ಮಾರ್ಗವನ್ನು (ರೊಟ್ ಆಫ್ ಇಂಜೆಕ್ಷನ್) ಅವಲಂಬಿಸುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ಕಣರೂಪದಲ್ಲಿರುವ ಹೆಚ್ಚಿನ ಅಣುತೂಕವುಳ್ಳ ನಿರೋಧಜನಕಗಳು ಪ್ರಾದೇಶಿಕ ದುಗ್ಧ ಗ್ರಂಥಿಗಳಲ್ಲಿ (ರೀಜನಲ್ ಲಿಂಫ್ ನೋಡ್ಸ್) ಸೆರೆಹಿಡಿಯಲ್ಪಡುತ್ತವೆ. ರಕ್ತದ ಮೂಲಕ ಸೇರುವ ನಿರೋಧಜನಕ ಪ್ರಥಮತಃ ಶ್ವಾಸಕೋಶಕ್ಕೆ ಒಯ್ಯಲ್ಪಡುತ್ತದೆ. ಈ ಅವಯವ ಗಣನೀಯ ಪ್ರಮಾಣದಲ್ಲಿ ನಿರೋಧಜನಕವನ್ನು ಶೇಖರಿಸುತ್ತದೆ. ಶ್ವಾಸಕೋಶದ ಮೂಲಕ ಹಾದ ತರುವಾಯ ಅದು ಗುಂಡಿಗೆಯನ್ನು (ಹಾರ್ಟ್) ಸೇರಿ ಅಲ್ಲಿಂದ ಶುದ್ಧ ರಕ್ತನಾಳಗಳ ಮೂಲಕ ದೇಹದ ಎಲ್ಲೆಡೆಗೆ ರವಾನಿಸಲ್ಪಡುತ್ತದೆ. ಗುಲ್ಮ (ಸ್ಪ್ಲೀನ್) ಅಧಿಕ ಪ್ರಮಾಣದಲ್ಲಿ ನಿರೋಧಜನಕವನ್ನು ಶೇಖರಿಸುತ್ತದೆ.

ನಿರೋಧಕಜನಕವನ್ನು ಪ್ರಚೋದಿಸಲು ಆವಶ್ಯಕವಾದ ನಿರೋಧಜನಕದ ಪ್ರಮಾಣ, ನಿರೋಧಜನಕದ ಪ್ರಕೃತಿ ಮತ್ತು ಚುಚ್ಚುಮಾರ್ಗವನ್ನವಲಂಬಿಸುತ್ತದೆ. ಕಣರೂಪೀ ನಿರೋಧಕ ಜನಕಗಳು ವಿಲೀನವಾದ ನಿರೋಧಜನಕಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನಿರೋಧಕಗಳನ್ನು ಉತ್ಪಾದಿಸುತ್ತವೆ. ಹೆಚ್ಚಿನ ಅಣುತೂಕವುಳ್ಳ ನಿರೋಧಜನಕ ಅಲ್ಪ ಅಣುತೂಕವುಳ್ಳ ನಿರೋಧ ಜನಕಗಳಿಗಿಂತ ಉತ್ತಮ ಪ್ರಚೋದಕ. ಉದಾಹರಣೆಗೆ, ಸಾಲ್ಮೊನೆಲ್ಲಾ ಅಡಿಲೈಡ್ ಸೂಕ್ಷ್ಮಜೀವಿಯ ಕಶಾಂಗವನ್ನು (ಫ್ಲಾಜೆಲ) ಅತಿ ಅಲ್ಪ ಪ್ರಮಾಣದಲ್ಲಿ ಚುಚ್ಚಿದರೂ ನಿರೋಧಕ ಉತ್ಪತ್ತಿಯಾಗುತ್ತದೆ. ಆದರೆ ಕಶಾಂಗದಿಂದ ಹೊರತೆಗೆದ ಬಹು ಅಣು ಅಥವಾ ಏಕಾಣುಗಳನ್ನು (ಪಾಲಿಮರ್ ಅಥವಾ ಮೊನೊಮರ್) ಕ್ರಮವಾಗಿ 1,000 ಮತ್ತು 1,000,000 ದಷ್ಟು ಪ್ರಮಾಣದಲ್ಲಿ ಅಷ್ಟೇ ನಿರೋಧಕವನ್ನು ಉತ್ಪತ್ತಿ ಮಾಡಲು ಉಪಯೋಗಿಸಬೇಕಾಗುತ್ತದೆ. ನಿರೋಧಜನಕವನ್ನು ಒತ್ತರಿಸಲ್ಪಟ್ಟ ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಮತ್ತು ಫ್ರೂಂಡನ ಸಹಾಯದ್ರವ್ಯಗಳೊಂದಿಗೆ (ಅಡ್‌ಜುವಂಟ್) ಚುಚ್ಚಿ ಉತ್ತಮ ಪ್ರಮಾಣದಲ್ಲಿ ನಿರೋಧಕವನ್ನು ಪಡೆಯಬಹುದು. ಮೊಲಗಳಲ್ಲಿ ಮೊದಲನೆಯ ಸಾರಿ ನಿರೋಧಜನಕವನ್ನು ಚುಚ್ಚಿದ 5–8 ದಿವಸಗಳ ತರುವಾಯ ನಿರೋಧಕವನ್ನು ಪತ್ತೆ ಮಾಡಬಹುದು. ಕೆಲವು ದಿವಸಗಳ ಮೇಲೆ ನಿರೋಧಕದ ಪ್ರಮಾಣ ಅತ್ಯುನ್ನತ ಮಟ್ಟವನ್ನು ತಲುಪುತ್ತದೆ. ಮಲಿನ ರಕ್ತನಾಳಕ್ಕೆ ಚುಚ್ಚಿದರೆ ಶೀಘ್ರವಾಗಿಯೂ ಮಾಂಸಖಂಡಗಳಿಗೆ ಚುಚ್ಚಿದರೆ ಕೊಂಚ ನಿಧಾನವಾಗಿಯೂ ಉತ್ಪತ್ತಿಯಾಗುತ್ತದೆ. ನಿರೋಧಜನಕವನ್ನು ಕೆಲವು ವಾರಗಳ ಅಥವಾ ತಿಂಗಳುಗಳ ಅನಂತರ ಪುನಃ ಚುಚ್ಚಿದರೆ ಎರಡನೇ ಬಾರಿ ಪ್ರತಿಕ್ರಿಯೆಯಲ್ಲಿ ನಿರೋಧಕ ಮೊದಲನೆಯ ಪ್ರತಿಕ್ರಿಯೆ ಮಟ್ಟಕ್ಕಿಂತ ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಈ ಸ್ಥಿತಿಯನ್ನು ಅತಿಪ್ರತಿಕ್ರಿಯೆ (ಹೈಪರ್‌ಸೆನ್ಸಿಟಿವಿಟಿ) ಎನ್ನಬಹುದು. ಅಧಿಕ ಪ್ರಮಾಣದಲ್ಲಿ ನಿರೋಧಕಗಳನ್ನು ಉತ್ಪತ್ತಿಮಾಡುವ ಸಲುವಾಗಿ ಪ್ರಾಣಿಗಳಿಗೆ 6 ಅಥವಾ ಅದಕ್ಕಿಂತ ಹೆಚ್ಚು ಸಾರಿ ನಿರೋಧಜನಕಗಳನ್ನು 2–3 ದಿವಸಗಳ ಅಂತರದಲ್ಲಿ ಚುಚ್ಚುವ ಪದ್ಧತಿ ಇದೆ. 5–6 ದಿವಸಗಳಿಗಿಂತ ಹೆಚ್ಚಿನ ಅಂತರ ಕೂಡದು. ನಿರೋಧಕಗಳ ಉತ್ಪತ್ತಿ 5–6 ದಿವಸಗಳ ಮೇಲೆ ಅತ್ಯುನ್ನತ ಮಟ್ಟವನ್ನು ತಲಪುವುದರಿಂದ ಪುನಃ ಚುಚ್ಚಿದ ನಿರೋಧಜನಕ ಮತ್ತು ನಿರೋಧಕಗಳ ಒತ್ತರ ರಕ್ತನಾಳಗಳಲ್ಲಿ ಉಂಟಾಗಿ ಅಪಾಯ ಪರಿಸ್ಥಿತಿ ಒದಗಿ ಮರಣವೂ ಸಂಭವಿಸಬಹುದು.

ನಿರೋಧಜನಕಗಳ ನಿರ್ದಿಷ್ಟತೆ ಮತ್ತು ಸಾಮರ್ಥ್ಯ. ಪ್ರೋಟೀನುಗಳು: ನಿರೋಧ ಪ್ರಚೋದಕ ಸಾಮರ್ಥ್ಯವಿರುವ ವಸ್ತುಗಳಿವೆ ಎಂಬುದರ ಅರಿವು ಮೊದಲ ಬಾರಿಗೆ ಪ್ರೋಟೀನುಗಳ ಮೂಲಕವಾಯಿತೆನ್ನಬಹುದು. ಒಂದು ಪ್ರಾಣಿಯ ಪ್ರೋಟೀನಿಗೆ ನಿರ್ದಿಷ್ಟವಾದ ನಿರೋಧಕ ಆ ಪ್ರೋಟೀನನ್ನು ಮಾತ್ರವಲ್ಲದೆ ಆ ಪ್ರಾಣಿಗೆ ವಂಶವೃಕ್ಷದಲ್ಲಿ (ಟ್ಯಾಕ್ಸಾನಾಮಿಕಲಿ) ಸಂಬಂಧಪಟ್ಟ ಪ್ರಾಣಿಯ ಪ್ರೋಟೀನನ್ನು ಸಹ ಒತ್ತರಿಸುತ್ತದೆ. ಉದಾಹರಣೆಗೆ, ಕುದುರೆಯ ವಸೆಗೆ ವಿರುದ್ಧವಾದ ನಿರೋಧಕಗಳು ಕತ್ತೆ ಮತ್ತು ಹೇಸರಕತ್ತೆಗಳ ವಸೆಯಲ್ಲಿರುವ ಪ್ರೋಟೀನುಗಳನ್ನು ಒತ್ತರಿಸಬಲ್ಲವು. ಈ ಗುಣ ಭಿನ್ನಜಾತಿಗಳಿಗೆ ಸೇರಿದ ಪ್ರಾಣಿಗಳಿಗಿರುವ ಪರಸ್ಪರ ಸಂಬಂಧವನ್ನು ಕಂಡುಹಿಡಿಯಲು ಸಾಧಕ. ಪ್ರಾಣಿಗಳ ದೇಹದಲ್ಲಿ ಒಸರಿಸುವ ದ್ರವಗಳಲ್ಲಿರುವ (ರಕ್ತ, ಹಾಲು, ಇತರ ದ್ರವಗಳು) ಪ್ರೋಟೀನುಗಳು ಮತ್ತು ವಿಲೀನವಾಗಬಲ್ಲ ಸಸ್ಯ ಪ್ರೋಟೀನುಗಳು ಶ್ರೇಷ್ಠ ನಿರೋಧಜನಕಗಳು. ವಿಲೀನವಾಗಲಾರದ ಕೂದಲು, ಉಗುರು ಇತ್ಯಾದಿ ಪ್ರೋಟೀನುಗಳು ನಿರೋಧಜನಕಗಳಲ್ಲ. ಅಲ್ಪ ಗಾತ್ರದ ಮತ್ತು ಅಲ್ಪ ಅಣುಭಾರವುಳ್ಳ ಇನ್ಸುಲಿನ್ ಮತ್ತು ಚೋದಕ ದ್ರವಗಳು ಅತಿ ಅಲ್ಪ ಪ್ರಮಾಣದಲ್ಲಿ ನಿರೋಧಕಗಳನ್ನು ಉತ್ಪತ್ತಿ ಮಾಡುತ್ತವೆ. ಹಂದಿಯಿಂದ ತೆಗೆಯಲ್ಪಟ್ಟ ಇನ್ಸುಲಿನ್, ಮನುಷ್ಯನ ದೇಹಕ್ಕೆ ಪ್ರವೇಶಿಸಿದರೂ ಅಪಾಯಕಾರಿಯಾಗುವುದಿಲ್ಲ. ಅಪೂರ್ವವಾಗಿ ಕೆಲವು ವ್ಯಕ್ತಿಗಳ ದೇಹದಲ್ಲಿ ಇನ್ಸುಲಿನ್ ಪ್ರಯೋಗದಿಂದ ಬಾಸುಂಡೆ, ಊತಗಳೂ ತಲೆದೋರಬಹುದು. ನಿರೋಧಜನಕ ಸಾಮರ್ಥ್ಯ ಪಡೆದಿರಲು ಪ್ರೋಟೀನುಗಳ ಅಣುಭಾರ ಕನಿಷ್ಠಪಕ್ಷ 10,000 ಇರಬೇಕೆಂದು ಗೊತ್ತುಮಾಡಲಾಗಿದೆ. ಉದಾಹರಣೆಗೆ, 6,000 ಅಣುಭಾರವುಳ್ಳ ಇನ್ಸುಲಿನ್ನಿಗಿಂತ 14,000 ಅಣುಭಾರವುಳ್ಳ ರೈಬೋ ನ್ಯೂಕ್ಲಿಯೇಸ್ ಉತ್ತಮ ನಿರೋಧಜನಕ.

ರಾಸಾಯನಿಕವಾಗಿ ಶುದ್ಧವಾದ ಪ್ರೋಟೀನುಗಳನ್ನು ನಿರೋಧಜನಕಗಳನ್ನಾಗಿ ಬಳಸಿದರೂ ಅವಕ್ಕೆ ವಿರುದ್ಧವಾಗಿ ವಿಶಿಷ್ಟವಾದ ವಿವಿಧ ರೀತಿಯ ನಿರೋಧಕಗಳು ಉತ್ಪತ್ತಿಯಾಗುತ್ತವೆ. ಒಂದೊಂದು ನಿರೋಧಕವೂ ಪ್ರೋಟೀನ್ ಬೃಹದಣುವಿನ ಮೇಲ್ಮೈನಲ್ಲಿರುವ ಒಂದೊಂದು ಗುಂಪುಗಳಿಗೆ ವಿರುದ್ಧವಾಗಿರುತ್ತದೆ. ಈ ಗುಂಪುಗಳು ನಿರೋಧಕಗಳ ನಿರ್ದಿಷ್ಟತೆಗೆ ಕಾರಣವಾಗಿರುವುದರಿಂದ ಇವನ್ನು ನಿರ್ದಿಷ್ಟಕಗಳೆಂದು (ಡಿಟರ್ಮಿನೆಂಟ್ಸ್) ಕರೆಯಲಾಗಿದೆ. ರಾಸಾಯನಿಕ ರಚನೆ ಗೊತ್ತಾಗಿರುವ ಗುಂಪುಗಳನ್ನು ಕೃತಕವಾಗಿ ಪ್ರೋಟೀನುಗಳಿಗೆ ಜೋಡಿಸಿ ಅವುಗಳ ವಿರುದ್ಧವಾಗಿ ನಿರೋಧಕಗಳನ್ನು ಪಡೆಯುವುದರ ಮೂಲಕ ಪ್ರೋಟೀನಿನಲ್ಲಿ ನಿರ್ದಿಷ್ಟಕ ಗುಂಪುಗಳ ಅಸ್ತಿತ್ವವನ್ನು ತೋರಿಸಲಾಯಿತು. ಪ್ರಕೃತಿಯಲ್ಲಿ ದೊರಕುವ ಪ್ರೋಟೀನಿನಲ್ಲಿರುವ ನಿರ್ದಿಷ್ಟಕ ಗುಂಪುಗಳ ಪರಿಚಯ ಇದುವರೆಗೆ ನಮಗಿಲ್ಲವಾದರೂ ನಿರ್ದಿಷ್ಟತೆ ಬಹುಶಃ ಟೈರೋಸೀನ್ ಫೀನೈಲ್ ಆಲಾನಿನ್ ಟ್ರೀಸ್ಟೋಫೇನ್, ಗ್ಲುಟಾಮಿಕ್ ಆಮ್ಲ. ಲೈಸಿನ್ ಮತ್ತು ಸಿಸ್ಟಿನ್ ಅಮೀನೋ ಆಮ್ಲಗಳಿಂದ (ಅವುಗಳು ಪ್ರಕೃತಿಯಲ್ಲಿ ದೊರಕುವ ರಚನೆಯಲ್ಲಿ) ಉಂಟಾಗುತ್ತದೆಯೆಂದು ಊಹಿಸಲಾಗಿದೆ.

ಪ್ರೋಟೀನ್ ನಿರೋಧಜನಕಗಳ (ಪ್ರೋಟೀನ್ ಆಂಟಿಜನ್ಸ್) ನಿರ್ದಿಷ್ಟತೆ ಪ್ರೋಟೀನಿನ ಮೂರು ಆಯಾಮಗಳ ರಚನೆಯನ್ನವಲಂಬಿಸಿದೆ (ತ್ರೀ–ಡೈಮೆನ್ಷನಲ್ ಕಾನ್‌ಫಿಗ್ಯುರೇಷನ್). ಪ್ರೋಟೀನನ್ನು ಕಾಯಿಸಿ ಅಥವಾ ಅದರಲ್ಲಿರುವ ಗಂಧಕ ಪರಮಾಣುಗಳ ನಡುವಿರುವ (-S–S-) ಬಂಧಗಳನ್ನು ಮುರಿದು ಈ ರಚನೆಯಲ್ಲಿ ವ್ಯತ್ಯಾಸವನ್ನುಂಟುಮಾಡಿದರೆ ನಿರ್ದಿಷ್ಟತೆಯಲ್ಲಿ ಬದಲಾವಣೆಯುಂಟಾಗುತ್ತದೆ. ಇದರಿಂದ ಪ್ರೋಟೀನಿನ ನಿರ್ಧಾರಕ ಗುಂಪಿನಲ್ಲಿರುವ ಅಮೈನೋ ಆಮ್ಲಗಳು ಯಾವುದೊಂದು ವಿಶಿಷ್ಟವಾದ ಆಕಾರದಲ್ಲಿ ಜೋಡಣೆಯಾಗಿರುತ್ತವೆ ಎಂದಾಯಿತು. ಉಷ್ಣತೆಯಿಂದ ಅಥವಾ ರಾಸಾಯನಿಕ ಕ್ರಿಯೆಗಳಿಂದ ಪ್ರಕೃತಿಹೀನವಾದ (ಡೀನೇಚರ್ಡ್) ಅದೇ ಪ್ರೋಟೀನಿನಲ್ಲಿ ಈ ವಿಶಿಷ್ಟ ಜೋಡಣೆಯಲ್ಲಿ ವ್ಯತ್ಯಾಸ ಉಂಟಾಗುವುದರಿಂದ ಸಹಜ ಪ್ರೋಟೀನಿಗೆ (ನೇಟಿವ್ ಪ್ರೋಟೀನ್) ನಿರ್ದಿಷ್ಟವಾದ

ನಿರೋಧಕ ಉಂಟಾಗದೆ ವ್ಯತ್ಯಾಸ್ಥ ಪರಿಸ್ಥಿತಿಗೆ ಹೊಂದಿಕೊಂಡ ಬೇರೊಂದು ನಿರೋಧಕ ಉತ್ಪತ್ತಿಯಾಗುವುದು. ಸಾಮಾನ್ಯವಾಗಿ ಸಹಜ (ನ್ಯಾಚುರಲ್) ಪ್ರೋಟೀನಿನ ವಿರುದ್ಧ ನಿರೋಧಕ ಕೊಂಚಮಟ್ಟಿಗೆ ಪ್ರಕೃತಿಹೀನ ಪ್ರೋಟೀನನ್ನು ಮತ್ತು ಪ್ರಕೃತಿಹೀನ ಪ್ರೋಟೀನಿಗೆ ವಿರುದ್ಧವಾದ ನಿರೋಧಕ ಕೊಂಚ ಭಾಗ ಸಹಜ ಪ್ರೋಟೀನನ್ನು ಒತ್ತರಿಸುತ್ತವೆ. ಆದರೆ ರೈಬೋನ್ಯೂಕ್ಲಿಯೇಸ್ ಪ್ರೋಟೀನಿನ ವಿಷಯದಲ್ಲಿ ಈ ತರಹೆಯ ಗುಣ ಕಂಡುಬಂದಿಲ್ಲ. ನಿರೋಧಕ ಉತ್ಪತ್ತಿ ನಿರ್ದಿಷ್ಟತೆ ಪ್ರಾಣಿಗಳ ಜಾತಿಭೇದಗಳಲ್ಲಿ ಮಾತ್ರವಲ್ಲದೆ ಸ್ವಲ್ಪಮಟ್ಟಿಗೆ ಅಂಗಾಂಗಗಳ ಭೇದಗಳಲ್ಲಿಯೂ ಕಂಡುಬಂದಿದೆ.

ಪ್ರೋಟೀನುಗಳ ನಿರೋಧಜನಕ ಸಾಮರ್ಥ್ಯದ ಬಗ್ಗೆ ಹೆಚ್ಚಿನ ತಿಳಿವಳಿಕೆಯನ್ನು ಪಡೆಯುವುದು ಅತ್ಯಾವಶ್ಯಕ. ಏಕೆಂದರೆ, ಡಿಫ್ತೀರಿಯ, ಟೆಟನಸ್ ಮತ್ತು ಬಾಟುಲಿಸಂ ಉಂಟುಮಾಡುವ ಕ್ರಿಮಿಗಳ ವಿಷ ಪ್ರೋಟೀನು ರೂಪದಲ್ಲಿರುತ್ತದೆ. ಈ ಕ್ರಿಮಿಗಳು ವಿಷವನ್ನು ಅವು ಬೆಳೆಯುವ ದ್ರಾವಣದಲ್ಲಿ ಬಿಡುಗಡೆ ಮಾಡುತ್ತವೆ (ಎಕ್ಸೋಟಾಕ್ಸಿನ್). ಅತ್ಯಂತ ತೀಕ್ಷ್ಣವಾದ ವಿಷಗಳಾದ್ದರಿಂದ ಈ ಪ್ರೋಟೀನುಗಳನ್ನು ಅವುಗಳ ಸ್ವಾಭಾವಿಕ ರೂಪದಲ್ಲಿ ಪ್ರಾಣಿಯ ದೇಹಕ್ಕೆ ಚುಚ್ಚಲು ಸಾಧ್ಯವಾಗುವುದಿಲ್ಲ. ಅದರೆ ಇವನ್ನು ಫಾರ್ಮಾಲ್ಡಿಹೈಡಿನಿಂದ ಸಂಸ್ಕರಿಸಿದರೆ ವಿಷಸ್ವಭಾವ ನಾಶವಾಗುತ್ತದೆ. ಸಂಸ್ಕರಿಸಲ್ಪಟ್ಟ ಪ್ರೋಟೀನನ್ನು ಚುಚ್ಚುವುದ ರಿಂದಲೂ ವಿಷಾಕ್ತವಾದ ಪ್ರೋಟೀನಿಗೆ ವಿರುದ್ಧ ನಿರೋಧಕಗಳನ್ನು ಪಡೆಯಬಹುದು. ಈ ಪ್ರಯೋಗದಿಂದ ಪ್ರೋಟೀನಿನ ನಿರ್ದಿಷ್ಟಕ ಗುಂಪುಗಳು ವಿಷಾಕ್ತ ಗುಂಪುಗಳಿಂದ ಭಿನ್ನವಾದುವುಗಳೆಂದೂ ಇವೆರಡು ಗುಂಪುಗಳು ಪ್ರೋಟೀನಿನಲ್ಲಿ ಪರಸ್ಪರ ನಿಕಟವಾಗಿರುವುದ ರಿಂದ ನಿರ್ದಿಷ್ಟಕ ಗುಂಪುಗಳ ವಿರುದ್ಧ ಉತ್ಪತ್ತಿಯಾದ ನಿರೋಧಕಗಳು, ವಿಷಾಕ್ತ ಗುಂಪುಗಳು ತಮ್ಮ ಪ್ರಭಾವವನ್ನು ದೇಹದಲ್ಲಿ ಚಲಾಯಿಸದಂತೆ ಮಾಡುತ್ತವೆಂದೂ ಊಹಿಸಬಹುದು. ವಿಷಾಕ್ತ ಗುಂಪುಗಳ ರಾಸಾಯನಿಕ ರಚನೆಯಾಗಲೀ ವಿಷ ವರ್ತಿಸುವ ವಿಧಾನವಾಗಲೀ ಇದುವರೆಗೆ ಗೊತ್ತಿಲ್ಲ. ಬಲು ಮಟ್ಟಿಗೆ ವಿಷಾಕ್ತ ಪ್ರೋಟೀನುಗಳು ಕಿಣ್ವಗಳಂತೆ ವರ್ತಿಸುತ್ತವೆ. ಇವು ದೇಹದ ಪ್ರೋಟೀನುಗಳನ್ನು ಛೇದಿಸುವ ಮೂಲಕವಾಗಿಯೋ ಇಲ್ಲವೆ ಕೋಶಗಳನ್ನು ನಾಶಮಾಡುವ ಮೂಲಕವಾಗಿಯೋ ವರ್ತಿಸಬಹುದೆಂದು ಊಹಿಸಲಾಗಿದೆ.

ಸಂಬದ್ಧ ಪ್ರೋಟೀನುಗಳನ್ನು (ಕಾಂಜುಗೇಟೆಡ್ ಪ್ರೋಟೀನ್ಸ್) ನಿರೋಧಜನಕಗಳಂತೆ ಬಳಸಿ ನಿರೋಧಕ ಮತ್ತು ನಿರೋಧಜನಕಗಳ ನಡುವೆ ನಡೆಯುವ ಕ್ರಿಯೆಯ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆಯಲಾಗಿದೆ. ಈ ವಿಧಾನದಲ್ಲಿ ಯಾವುದೊಂದು ಪ್ರೋಟೀನಿಗೆ ಪರಿಚಿತ ರಾಸಾಯನಿಕ ರಚನೆಯುಳ್ಳ ಅಲ್ಪ ಗಾತ್ರದ ಗುಂಪನ್ನು ಜೋಡಿಸಲಾಗುವುದು. ಈ ಸಂಬದ್ಧ ಪ್ರೋಟೀನುಗಳನ್ನು ನಿರೋಧಜನಕಗಳಂತೆ ಬಳಸಿ ನಿರ್ದಿಷ್ಟತೆಗೆ ಕಾರಣಗಳನ್ನು ಕಂಡುಹಿಡಿಯಲಾಗಿದೆ. ಈ ಬಗೆಯ ಒಂದು ವಿಧಾನದಲ್ಲಿ ಪ್ರೋಟೀನಿನಲ್ಲಿರುವ ಟೈರೋಸೀನ್ ಮತ್ತು ಹಿಸ್ಟಿಡಿನ್ ಅಮೈನೋ ಆಮ್ಲಗಳ ಅಂಶಕ್ಕೆ ಡೈಅಜೊ ಗುಂಪುಗಳನ್ನು ಕೆಳಕಂಡಂತೆ ಜೋಡಿಸಿ ಆಜೊ ಪ್ರೋಟೀನುಗಳನ್ನು ತಯಾರಿಸುತ್ತಾರೆ.

ಈ ಬಗೆಯ ಪ್ರೋಟೀನುಗಳನ್ನು ಚುಚ್ಚಿ ನಿರೋಧಕಗಳನ್ನು ಪಡೆದು ನಿರೋಧಕ ನಿರೋಧಜನಕಗಳ ಪರಸ್ಪರ ಕ್ರಿಯೆಯನ್ನು ಅಧ್ಯಯನಮಾಡಿ ಕೆಳಗಿನ ಸಂಗತಿಗಳನ್ನು ಕಂಡುಹಿಡಿದಿದ್ದಾರೆ: 1 ನಿರ್ದಿಷ್ಟತೆ, ಸಂಯೋಜಿತವಾದ ಆ್ಯರೋಮ್ಯಾಟಿಕ್ ಅಸೋಫಿನೈಲ್ ಗುಂಪುಗಳನ್ನು ಅವಲಂಬಿಸಿದೆ; 2 ಬೆಂಜೀನ್ ಅವರ್ತದಲ್ಲಿರುವ ಆಮ್ಲೀಯ ಗುಂಪಿನ ಜಾಗ, ನಿರೋಧಜನಕದ ನಿರ್ದಿಷ್ಟತೆಯಲ್ಲಿ ಗಮನೀಯ ಅಂಶವಾಗಿದೆ; 3 ಬೆಂಜೀನ್ ಗುಂಪಿನಲ್ಲಿ ಸೇರಿಸಲ್ಪಟ್ಟಿರುವ ಗುಂಪಿನ ಒಟ್ಟು ವಿದ್ಯುದಂಶ ರಾಸಾಯನಿಕ ನಿರ್ದಿಷ್ಟತೆಗೆ ಮುಖ್ಯವಾದ ಅಂಶ. ಇದೇ ವಿಧಾನಗಳನ್ನು ಅನುಸರಿಸಿ ಆಜೊ ಗುಂಪಿನ ಬದಲು ಧ್ರುವೀಕೃತ ಬೆಳಕಿನ ಕಿರಣಗಳನ್ನು ಬಲಕ್ಕೆ ತಿರುಗಿಸುವ ಟಾರ್ಟಾರಿಕ್ ಆಮ್ಲ ಮತ್ತು ಎಡಕ್ಕೆ ತಿರುಗಿಸುವ ಟಾರ್ಟಾರಿಕ್ ಆಮ್ಲಗಳನ್ನು ಪ್ರೋಟೀನಿಗೆ ಸೇರಿಸಿ ಸಂಬದ್ಧ ಪ್ರೋಟೀನುಗಳನ್ನು ತಯಾರಿಸಬಹುದು.

ಸ್ವಾಭಾವಿಕವಾಗಿ ದೊರೆಯುವ ಸಕ್ಕರೆಗಳನ್ನೂ ಸೇರಿಸಬಹುದು. ಈ ಪ್ರಯೋಗಗಳಿಂದ ತಿಳಿಯಬಂದಿರುವ ವಿಷಯಗಳು: 1 ಸಮಾನ ಘಟಕಗಳು (ಸಿಸ್ ಮತ್ತು ಟ್ರಾನ್ಸ್) ತಮಗೆ ವಿಶಿಷ್ಟವಾದ ಬೇರೆ ಬೇರೆ ನಿರೋಧಕಗಳನ್ನು ಅಂದರೆ ಸಮಾನಘಟಕ ತನಗೆ ಸಂಬಂಧಿಸಿದ ನಿರೋಧಕವನ್ನು ಉತ್ಪಾದಿಸುತ್ತವೆ; 2 ರಾಸಾಯನಿಕ ನಿರ್ದಿಷ್ಟತೆ ಪ್ರೋಟೀನ್ ಅಣುವಿನ ನಿರ್ದಿಷ್ಟತೆಗಳು ಅಕಾಶದಲ್ಲಿ (ಸ್ಪೇಸ್) ಯಾವ ದಿಕ್ಕಿಗೆ ತಿರುಗಿದೆಯೆಂಬುದನ್ನು ಅವಲಂಬಿಸಿದೆ; 3 ನಿರೋಧಜನಕಗಳ ಆಕಾರ ಮತ್ತು ದೃಢತೆ (ಶೇಪ್ ಅಂಡ್ ರಿಜಿಡಿಟಿ) ಕೂಡ ನಿರ್ದಿಷ್ಟತೆಯ ಮೇಲೆ ಪರಿಣಾಮವನ್ನುಂಟುಮಾಡುತ್ತವೆ; 4 ಲಂಬ ಸರಪಳಿಯುಳ್ಳ ಆ್ಯಲಿಫ್ಯಾಟಿಕ್ ಸರಣಿಗಳು ನಿರ್ದಿಷ್ಟತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ.

ಪ್ರೋಟೀನುಗಳಿಗೆ ಸೇರಿಸಲ್ಪಡುವ ಅಲ್ಪ ಅಣುತೂಕವುಳ್ಳ ಮತ್ತು ನಿರೋಧಕ ನಿರ್ದಿಷ್ಟತೆಗೆ ಕಾರಣಗಳಾದ ರಾಸಾಯನಿಕ ಗುಂಪುಗಳಿಗೆ ಹಾಪ್ಟೆನ್ ಅಥವಾ ಹಿಡಿಕೆ ಎನ್ನುತ್ತಾರೆ. ಹಿಡಿಕೆಗಳು ಸ್ವಯಂ ನಿರೋಧಜನಕಗಳಲ್ಲ. ಆದ್ದರಿಂದ ಇವನ್ನು ಚುಚ್ಚಿದರೆ ನಿರೋಧಕಗಳು ಉತ್ಪತ್ತಿಯಾಗುವುದಿಲ್ಲ. ನಿರೋಧಕ ಮತ್ತು ನಿರೋಧಜನಕಗಳಿಗಿರುವ ಮೈತ್ರಿಯನ್ನು ಕಂಡುಹಿಡಿಯಲು ಈ ಗುಂಪುಗಳು ಸಾಧಕಗಳಾಗಿವೆ. ಉದಾಹರಣೆಗೆ, ಆಜೊ ಪ್ರೋಟೀನು ಗಳು ತಮ್ಮ ನಿರೋಧಕಗಳೊಂದಿಗೆ ಸೇರಿ ಒತ್ತರವನ್ನು ರಚಿಸುತ್ತವೆ. ಈ ಪ್ರತಿಕ್ರಿಯೆ ಆಜೊ ಪ್ರೋಟೀನಿನ ಒಂದು ನಿರ್ದಿಷ್ಟ ರಾಸಾಯನಿಕ ಗುಂಪನ್ನು ಮತ್ತು ಅದರ ಆಕಾರವನ್ನು ಅವಲಂಬಿಸುವುದರಿಂದ ಅದೇ ಗುಂಪುಗಳನ್ನೊಳಗೊಂಡ ಸಣ್ಣ ಅಣುಗಳು ನಿರೋಧಜನಕ ಗಳೊಂದಿಗೆ ನಿರೋಧಕಗಳನ್ನು ಕೂಡುವ ಕ್ರಿಯೆಯಲ್ಲಿ ಸ್ಪರ್ಧಿಸುತ್ತವೆಂದು ಊಹಿಸಬಹುದು. ಈ ತರದ ಪ್ರಯೋಗಗಳಿಂದ ನಿರ್ದಿಷ್ಟಕ ಗುಂಪುಗಳ ಪ್ರಕೃತಿಯನ್ನೂ ಅದರ ಗಾತ್ರವನ್ನೂ




ಸಂಬದ್ಧ ಪ್ರೋಟೀನ್

ಕಂಡುಹಿಡಿಯಬಹುದು. ಒಂದೇ ಪ್ರೋಟೀನಿನಲ್ಲಿ ಅನೇಕ ನಿರ್ದಿಷ್ಟಕ ಗುಂಪುಗಳಿದ್ದರೆ ಪ್ರತಿಯೊಂದು ಗುಂಪಿನ ವಿರುದ್ಧವಾಗಿ ಭಿನ್ನ ಪ್ರಕೃತಿಯ ನಿರೋಧಕಗಳು ಉತ್ಪತ್ತಿಯಾಗುತ್ತವೆ.

ಪ್ರೋಟೀನುಗಳ ನಿರೋಧಜನಕತೆಯ ಲಕ್ಷಣಗಳ ಸಂಶೋಧನೆಯಲ್ಲಿ ಕೃತಕವಾಗಿ ರಚಿಸಲ್ಪಟ್ಟ ಬಹು ಅಮೈನೋ ಆಮ್ಲಗಳು (ಪಾಲಿಅಮೈನೋ ಆ್ಯಸಿಡ್ಸ್) ನೆರವಾಗಿವೆ. ಕಾರ್ಬಮೈನೋ ಆಮ್ಲಗಳ ಅನ್‌ಹೈಡ್ರೈಡುಗಳಿಂದ ಕೃತಕ ಬಹ್ವಣುಗಳನ್ನು ರಚಿಸಬಹುದು. ಈ ಬಹ್ವಣುಗಳು ಸ್ವಯಂ ನಿರೋಧಜನಕಗಳಲ್ಲ. ಆದರೆ ಇವನ್ನು ಜಿಲಾಟಿನ್ ಪ್ರೋಟೀನಿಗೆ ಸಂಬದ್ಧಿಸಿದರೆ ಸಂಬದ್ಧಪ್ರೋಟೀನ್ ನಿರೋಧಕದಂತೆ ವರ್ತಿಸುತ್ತದೆ. ಜಿಲಾಟಿನ್ ಸ್ವಯಂ ದುರ್ಬಲ ನಿರೋಧಜನಕ. ಆದರೆ ಬಹು ಟೈರೋಸೀನ್ ಬಹು ಟ್ರಿಪ್ಟೋಫಾನ್, ಬಹುಫೀನೈಲ್ ಅಲಾನಿನ್ನುಗಳನ್ನು ಸಂಬದ್ಧಿಸಿದಾಗ ನಿರೋಧಜನಕದಂತೆ ವರ್ತಿಸುತ್ತದೆ. ಬಹುಗ್ಲೈಸಿನ್, ಬಹು ಅಲಾನಿನ್, ಬಹುಲೈಸಿನ್ ಅಥವಾ ಬಹುಸೆರಿನ್ ಅಮೈನೋ ಆಮ್ಲಗಳನ್ನು ಸಂಬದ್ಧಿಸಿ ದರೂ ಜಿಲಾಟಿನ್ ನಿರೋಧಜನಕ ಗುಣವನ್ನು ಪಡೆಯುವುದಿಲ್ಲ. ಈ ಪ್ರಯೋಗಗಳಿಂದ ಪ್ರೋಟೀನಿನ ನಿರೋಧಜನಕಶೀಲತೆ ಅದರ ಮೇಲ್ಮೈನಲ್ಲಿರುವ ಆ್ಯರೊಮ್ಯಾಟಿಕ್ ಅಥವಾ ಮುದ್ರಿಕೆಗಳಿರುವ ಅಮೈನೋ ಆಮ್ಲಗಳಿಂದ ಜನಿತವಾದದ್ದೆಂಬ ಅಭಿಪ್ರಾಯ ಮೂಡಿದೆ. ಈ ಗುಂಪುಗಳು ಪ್ರೋಟೀನಿನ ಒಳಗೆ ಅಡಗಿರದೆ ಮೇಲ್ಮೈನಲ್ಲಿದ್ದು ಕಿಣ್ವಗಳಿಗೆ ದೊರಕುವಂತಿರ ಬೇಕು. ಕೃತಕ ಬಹುಅಮೈನೋ ಆಮ್ಲಗಳು ಪ್ರೋಟೀನುಗಳಂತೆಯೇ ಹಿಡಿಕೆಗಳನ್ನು

ಸೇರಿಸಿಕೊಳ್ಳಬಲ್ಲವು. ಬಹು ಟೈರೊಸೀನ್ ಸ್ವಯಂ ನಿರೋಧಜನಕವಲ್ಲದಿದ್ದರೂ ಡೈ ಅಜೋಟೈಸ್ ಮಾಡಿದ ಆರ್ಸನಿಲಿಕ್ ಆಮ್ಲದೊಂದಿಗೆ ಸಂಬದ್ಧಿಸಿದಾಗ ನಿರೋಧಜನಕವಾಗುತ್ತದೆ ಬಹು ಲೈಸಿನ (ಪಾಲಿಲೈಸಿನ) ಅಣುವಿಗೆ 2, 4, ಡೈನೈಟ್ರೋ ಫೀನೈಲ್ ಗುಂಪನ್ನು ಸೇರಿಸಿದಾಗ ಉತ್ಪತ್ತಿಯಾಗುವ ಡಿಎನ್‌ಪಿ ಬಹುಲೈಸಿನನ್ನು ನಿರೋಧಜನಕವನ್ನಾಗಿ ಮಾರ್ಪಡಿಸಬಹುದು. ನಿರೋಧಜನಕತೆ ಲೈಸಿನ್ ಸರಣಿಯ ಉದ್ದವನ್ನು ಅವಲಂಬಿಸಿದೆ. 2–6 ಲೈಸಿನ ಅಣುಗಳಿರುವ ಸರಪಳಿ ನಿರೋಧಜನಕವಲ್ಲ. 7–9 ಅಣುಗಳನ್ನೊಳಗೊಂಡ ಶ್ರೇಣಿ ಗಿನಿಹಂದಿಗಳಲ್ಲಿ ಅತಿ ಪ್ರತಿಕ್ರಿಯೆಯನ್ನುಂಟುಮಾಡುತ್ತದೆ. ಡಿಎನ್‌ಪಿ ಬಹು L ಲೈಸಿನ್ ನಿರೋಧಜನಕವಾದರೂ ಡಿಎನ್‌ಪಿ ಬಹು D ಲೈಸಿನ್ ನಿರೋಧಕಜನಕವಲ್ಲ. ಒಂದೇ ಜಾತಿಗೆ ಸೇರಿದ ಎರಡು ಪ್ರಾಣಿಗಳಲ್ಲಿ ಒಂದೇ ಬಗೆಯ ನಿರೋಧಜನಕಕ್ಕೆ ಭಿನ್ನವಾದ ಪ್ರತಿಕ್ರಿಯೆ ತೋರಬಹುದೆನ್ನುವುದಕ್ಕೆ ದೃಷ್ಟಾಂತವನ್ನು ಡಿಎನ್‌ಪಿ ಬಹು L ಲೈಸಿನ್ ನಿರೋಧಜನಕ ಗಿನಿಹಂದಿಗಳಲ್ಲಿ ಪ್ರೇರೇಪಿಸುವ ಪ್ರತಿಕ್ರಿಯೆಯಲ್ಲಿ ಕಾಣಬಹುದಾಗಿದೆ. ಡಿಎನ್‌ಪಿ ಬಹು L ಲೈಸಿನ್ 13ನೆಯ ಗುಂಪಿನ ಶುದ್ಧ ಪೀಳಿಗೆಗೆ (ಪ್ಯೂರ್ ಸ್ಟ್ರೈನ್ ನಂ. 13) ಸೇರಿದ ಗಿನಿಹಂದಿಗಳಲ್ಲಿ ಅತಿ ಪ್ರತಿಕ್ರಿಯೆಯನ್ನು ಪ್ರೇರೇಪಿಸಲಾರದು. ಆದರೆ 2ನೆಯ ಗುಂಪಿನ ಶುದ್ಧ ಪೀಳಿಗೆಗೆ ಸೇರಿದ ಗಿನಿಹಂದಿಗಳಲ್ಲಿ ಪ್ರತಿಕ್ರಿಯೆಯನ್ನುಂಟುಮಾಡಿತು. 13ನೆಯ ಪೀಳಿಗೆ ಡಿಎನ್‌ಪಿ ಬಹು L ಲೈಸಿನ್ನಿಗೆ ಪ್ರತಿಕ್ರಿಯೆಯನ್ನು ತೋರಿಸಲಿಲ್ಲವಾದರೂ ಯಾವುದೊಂದು ಡಿಎನ್‌ಪಿ ಪ್ರೋಟೀನಿಗೆ ವಿರುದ್ಧವಾಗಿ ನಿರೋಧಕಗಳನ್ನು ಉತ್ಪತ್ತಿಸಿತು. ನಿರೋಧಜನಕಕ್ಕೆ ಭಿನ್ನ ಪ್ರತಿಕ್ರಿಯೆ ಅನುವಂಶೀಯವಾಗಿದೆಯೆಂದು ಗೊತ್ತುಮಾಡಲಾಗಿದೆ. ಕೃತಕ ಬಹುಅಮೈನೋ ಆಮ್ಲಗಳು, ನಿರೋಧಕಗಳನ್ನು ಉತ್ಪತ್ತಿಸಿದುವು. ವಿಧಾನ ಕ್ರಮವನ್ನು ತಿಳಿಯಲು ಸಾಧಕಗಳಾಗಬಹುದೆಂಬ ನಿರೀಕ್ಷೆ ಇದೆ.

ಸೂಕ್ಷ್ಮಜೀವಿಗಳ (ಬ್ಯಾಕ್ಟೀರಿಯ) ಬಹುಶರ್ಕರಗಳು: ನ್ಯೂಮೋಕಾಕೈಗಳ (ನ್ಯೂಮೋನಿಯ ಉಂಟುಮಾಡುವ ಸೂಕ್ಷ್ಮಜೀವಿ) ಪೊರೆಚೀಲದಲ್ಲಿ (ಕ್ಯಾಪ್ಸೂಲ್) ಶರ್ಕರಗಳ ಅಂಶಗಳಿವೆ. ಈ ಶರ್ಕರಾಂಶಗಳು ಸ್ವಯಂ ನಿರೋಧಜನಕಗಳಲ್ಲದಿದ್ದರೂ ಇಮ್ಯೂನ್‌ವಸೆಯಿಂದ ವಿಶಿಷ್ಟ ರೀತಿಯಲ್ಲಿ ಒತ್ತರಿಸಲ್ಪಡುತ್ತವೆ. ಶರ್ಕರಾಂಶಗಳು ಪೊರೆಯಲ್ಲಿದ್ದು ನಿರೋಧಕಗಳಿಗೆ ಸುಲಭವಾಗಿ ನಿಲುಕುವುದರಿಂದ ನ್ಯೂಮೋಕಾಕೈಗಳು ತೇಲುತ್ತಿರುವ ದ್ರಾವಣಕ್ಕೆ ನಿರೋಧಕಗಳನ್ನೊಳಗೊಂಡ ಇಮ್ಯೂನ್‌ವಸೆಯನ್ನು ಸೇರಿಸಿದಾಗ ಸೂಕ್ಷ್ಮಜೀವಿಗಳು ಒಂದಕ್ಕೊಂದು ಅಂಟಿಕೊಳ್ಳುವಂತಾಗುತ್ತದೆ. ಸೂಕ್ಷ್ಮಜೀವಿಗಳ ವಿರುದ್ಧವಾಗಿ ಉತ್ಪತ್ತಿಯಾಗುವ ನಿರೋಧಕಗಳ ಪ್ರಕೃತಿ ಬಹುಶರ್ಕರಗಳ ರಾಸಾಯನಿಕ ಘಟನೆ ಮತ್ತು ರಚನೆಗಳನ್ನು ಅವಲಂಬಿಸಿರುವುದರಿಂದ ಇವು ಬ್ಯಾಕ್ಟೀರಿಯವನ್ನು ಹಲವಾರು ಗುಂಪುಗಳಾಗಿ ವರ್ಗೀಕರಿಸಲು ಸಾಧಕಗಳಾಗಿವೆ. ವಿವಿಧ ರಚನೆಯುಳ್ಳ ಬಹುಶರ್ಕರಗಳನ್ನು ಇಮ್ಯೂನ್ ವಸೆಯ ಪರೀಕ್ಷೆಯಿಂದ (ಸೀರಾಲಜಿ) ಮಾತ್ರವಲ್ಲದೆ ರಾಸಾಯನಿಕ ವಿಧಾನಗಳಿಂದಲೂ ಪ್ರಭೇದ ಮಾಡಬಹುದು. ಉದಾಹರಣೆಗೆ, ಒಂದನೆಯ ವರ್ಗಕ್ಕೆ ಸೇರಿದ ನ್ಯೂಮೋಕಾಕೈನಲ್ಲಿರುವ ನಿರೋಧಜನಕ ಬಹುಶರ್ಕರ ಗ್ಯಲಾಕ್ಟ್ಯುರೋನಿಕ್ ಆಮ್ಲ, ಗ್ಯಲಕ್ಟೋಸ್, ಫ್ಯೂಕೋಸ್ ಮತ್ತು ಗ್ಲೂಕೋಸಮೀನ್ ಶರ್ಕರಗಳನ್ನೊಳಗೊಂಡಿದೆ. ಎರಡನೆಯ ವರ್ಗದ ಬಹುಶರ್ಕರಗಳಲ್ಲಿ ರ್‍ಹಾಮ್ನೋಸ್, ಗ್ಲೂಕೋಸ್ ಮತ್ತು ಗ್ಲೂಕ್ಯುರೋನಿಕ್ ಆಮ್ಲಗಳಿವೆ. ಮೂರನೆಯ ವರ್ಗದ ಬಹುಶರ್ಕರ ಸೆಲ್ಲೋಬೈಯೂರೋನಿಕ್ ಆಮ್ಲಗಳ ಬಹ್ವಣು. ಈ ಆಮ್ಲದಲ್ಲಿ ಗ್ಲೂಕೋಸ್ ಮತ್ತು ಗ್ಲೂಕ್ಯುರೋನಿಕ್ ಆಮ್ಲಗಳು ಒಂದಾದ ಮೇಲೊಂದು ಜೋಡಿಸಲ್ಪಟ್ಟಿರುತ್ತವೆ. ವಿಧವಿಧವಾದ ಮೂವತ್ತು ಬಗೆಯ ಪೊರೆ ಬಹುಶರ್ಕರಗಳನ್ನು ಇದುವರೆಗೆ ಅಧ್ಯಯನ ಮಾಡಲಾಗಿದೆ. ಇವೆಲ್ಲವೂ ಭಿನ್ನ ಪ್ರಕೃತಿಯುಳ್ಳವು; ಮತ್ತು ಈ ಭಿನ್ನ ಪ್ರಕೃತಿ ಅವುಗಳಲ್ಲಿರುವ ಸಾರಜನಕ, ರಂಜಕ, ಆಮ್ಲಗಳ ಗುಂಪುಗಳು ಮತ್ತು ಶರ್ಕರಗಳ ಪ್ರಮಾಣ ಮತ್ತು ವೈವಿಧ್ಯಗಳನ್ನು ಅವಲಂಬಿಸಿವೆ.

ಸೂಕ್ಷ್ಮಜೀವಿಗಳ ಪೊರೆಗಳ ಬಹುಶರ್ಕರಗಳು ಅತ್ಮೀಯ ನಿರೋಧಕಗಳಿಂದ ಒತ್ತರಿಸಲ್ಪಡುತ್ತವೆ. ಈ ಬಹುಶರ್ಕರಗಳನ್ನು ಬೇರ್ಪಡಿಸಿ ಮನುಷ್ಯ ಮತ್ತು ಮೂಗಿಲಿಗಳಿಗೆ ಚುಚ್ಚಿ ಪ್ರತಿಕ್ರಿಯೆಯನ್ನು ಉಂಟುಮಾಡಬಹುದು. ಆದರೆ ಕುದುರೆ ಮತ್ತು ಮೊಲಗಳಲ್ಲಿ ಪ್ರತಿಕ್ರಿಯೆ ತೋರಿಬರುವುದಿಲ್ಲ. ವಾಹಕ ಪ್ರೋಟೀನಿನೊಂದಿಗೆ ಚುಚ್ಚಿದ್ದಾದರೆ ಪ್ರತಿಕ್ರಿಯೆ ಉಂಟಾಗುತ್ತದೆ. ಮನುಷ್ಯನಿಗೆ ಕೇವಲ 30–6– ಮೈಕ್ರೋಗ್ರಾಂ ಪ್ರಮಾಣದಲ್ಲಿ ನ್ಯೂಮೋಕಾಕೈನ ಬಹುಶರ್ಕರವನ್ನು ಚುಚ್ಚಿದರೂ ನ್ಯೂಮೋಕಾಕೈ ಸೂಕ್ಷ್ಮಜೀವಿಗಳಿಂದ ರಕ್ಷಿಸಬಹುದು.

ಕೆಲವು ಬಹುಶರ್ಕರಗಳ ರಚನೆಯನ್ನು ಕಂಡು ಹಿಡಿಯಲಾಗಿದೆ. ಉದಾಹರಣೆಗೆ. ಸಿಲ್ 18ನೆ ವರ್ಗದ ನ್ಯೂಮೋಕಾಕೈನ ಬಹುಶರ್ಕರಗಳಲ್ಲಿ ಮುಖ್ಯವಾಗಿ (–3ಗ್ಯಲಾಕ್ಟೋಸಿಲ್–1⟶4 ಗ್ಲೂಕೋಸಿಲ್–1⟶6 ಗ್ಲೂಕೋಸಿಲ್–1⟶3 ರ್‍ಹಾಮ್ನೋಸಿಲ್–1⟶4 ಗ್ಲೂಕೋಸಿಲ್) ಅಂಶಗಳಿವೆ. ಇವಲ್ಲದೆ ಅಸಿಟೈಲ್ ಮತ್ತು ಗ್ಲಿಸಿರೋಫಾಸ್ಫೇಟ್ ಗುಂಪುಗಳೂ ಇವೆ. ಅಂಥ್ರಾಕ್ಸ್ ಬಾಸಿಲ್ಲೈನಲ್ಲಿ ಕವಲೊಡೆದ ಓ–ಅಸಿಟೈಲ್ ಗ್ಲೂಕೋಸಮೀನ್ ಗುಂಪುಗಳಿವೆ.

ಬ್ಯಾಕ್ಟೀರಿಯ ಪೊರೆ ಚೀಲಗಳಲ್ಲಿರುವ ನಿರೋಧಜನಕ ಬಹುಶರ್ಕರಗಳು ವಿಷಾಕ್ತವಲ್ಲ. ಆದರೆ ಗ್ರಾಂ ನೆಗೆಟಿವ್ ಬ್ಯಾಕ್ಟೀರಿಯ ಕೋಶಗಳಲ್ಲಿರುವ ವಿಷಗಳಲ್ಲಿ ಶರ್ಕರದ ಅಂಶವೂ ಸೇರಿದೆ. ಸಾಲ್ಮೊನೆಲ್ಲಾ, ಷಿಗೆಲ್ಲಾ ಮತ್ತಿತರ ರೋಗಾಣುಗಳ (ಪ್ಯಾಥೋಜೆನಿಕ್ ಬ್ಯಾಕ್ಟೀರಿಯ) ಕೋಶಗಳಲ್ಲಿ ಕ್ಲಿಷ್ಟ ರಚನೆಯುಳ್ಳ ವಿಷ ಉತ್ಪತ್ತಿಯಾಗುತ್ತದೆ. ಈ ವಿಷ ಹೊರಗಡೆಗೆ ವಿಸರ್ಜನೆಯಾಗುವುದಿಲ್ಲ. ಇದರಲ್ಲಿ ಇರುವ ಅಂಶಗಳು: ಫಾಸ್ಫೋ ಲಿಪಿಡುಗಳು ರಂಜಕವನ್ನೊಳಗೊಂಡ ಕೊಬ್ಬುಗಳು; 2 ಶರ್ಕರಗಳು. 3 ಪ್ರೋಟೀನ್ ಅಥವಾ ಪಾಲಿಪೆಪ್ಟೈಡ್. ಕೋಶಾಂತರ್ಗತವಾದ ಈ ವಿಷ (ಎಂಡೋಟಾಕ್ಸಿನ್) ಜ್ವರ ಮತ್ತು ಚುಚ್ಚಿದೆಡೆ ಊತವನ್ನುಂಟುಮಾಡುತ್ತದೆ. ಈ ಗುಂಪಿಗೆ ಸೇರಿದ ರೋಗಾಣುಗಳು ಸ್ಕಾರ್ಲೆಟ್‌ಜ್ವರ, ಟೈಫಾಯಿಡ್, ಗೊನೋರಿಯ ಮತ್ತು ಇನ್ನು ಅನೇಕ ಕಾಯಿಲೆಗಳನ್ನುಂಟುಮಾಡುತ್ತವೆ. ವಿಷಕ್ಕೆ ಕಾರಣ ಕೊಬ್ಬೇ ಅಥವಾ ಶರ್ಕರಗಳೇ ಎಂಬುದು ನಿರ್ಧಾರವಾಗಿಲ್ಲ. ಈ ಎರಡು ಗುಂಪುಗಳೂ ಕಾರಣವಾಗಿರಬಹುದು.

ಸಾಲ್ಮೊನೆಲ್ಲಾ ಗುಂಪಿಗೆ ಸೇರಿದ ರೋಗಾಣುಗಳ ಕೋಶಾಂತರ್ಗತ ವಿಷಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆದಿದೆ; ಅಲ್ಲದೆ ಹೆಚ್ಚಿನ ವಿಷಯ ಸಂಗ್ರಹವಾಗಿದೆ. ಈ ರೋಗಾಣುಗಳು ಟೈಫಾಯಿಡ್ ಮತ್ತು ಪ್ಯಾರಾ ಟೈಫಾಹಯಿಡ್ ಮುಂತಾದ ಕಾಯಿಲೆಗಳಿಗೆ ಕಾರಣವಾದ ಸೂಕ್ಷ್ಮಜೀವಿಗಳು. ಸಾಲ್ಮೊನೆಲ್ಲಾ ರೋಗಾಣುಗಳ ಕೋಶಗಳಲ್ಲಿ O–ನಿರೋಧಜನಕವೆಂದು ಕರೆಯಲಾಗಿರುವ ನಿರೋಧಜನಕವಿದೆ. ಇವು ವರ್ಗವಿಶಿಷ್ಟಗಳಾದ ವಸ್ತುಗಳು (ಟೈಪ್ ಸ್ಪೆಸಿಫಿಕ್). ಇವಲ್ಲದೆ ರೋಗಾಣುಗಳ ಕಶೆಗಳಲ್ಲಿ (ಫ್ಲಾಗೆಲ್ಲಾ) H–ನಿರೋಧಜನಕಗಳಿವೆ. O–ನಿರೋಧಜನಕಗಳ ವಿಶ್ಲೇಷಣೆಯಿಂದ ಸುಮಾರು 20 ಬಗೆಯ ರೋಗಾಣುಗಳನ್ನು ವಿಂಗಡಿಸಲಾಗಿದೆ. ಈ ನಿರೋಧಜನಕಗಳು ಕೊಬ್ಬು ಮತ್ತು ಬಹುಶರ್ಕರಗಳ ಸಂಯುಕ್ತಗಳಾಗಿದ್ದು ಅಲ್ಪ ಪ್ರಮಾಣದಲ್ಲಿ ಸಹ ದೇಹದ ಉಷ್ಣತೆಯನ್ನು ಹೆಚ್ಚಿಸಬಲ್ಲವು (ಪೈರೋಜೆನಿಕ್). ಇವು ಅತ್ಯಂತ ವಿಷಕಾರಿಗಳು. ಕೊಬ್ಬು ಮತ್ತು ಬಹುಶರ್ಕರಗಳ ಪ್ರಮಾಣ ಸಾಧಾರಣವಾಗಿ ಸಮನಾಗಿರುತ್ತದೆ. ಕೊಬ್ಬಿನ ಭಾಗ ವಿಷಪ್ರಕೃತಿಗೆ ಬಲು ಮಟ್ಟಿಗೆ ಕಾರಣ.

ರೋಗಾಣು ವರ್ಗೀಕರಣವನ್ನು ನಿರೋಧವಸೆಗಳ ಆಧಾರದಮೇಲೆ (ಸೀರಾಲಜಿ) ಮಾಡಿದೆ. ಈ ವರ್ಗೀಕರಣಕ್ಕೂ ಬಹುಶರ್ಕರಗಳಲ್ಲಿರುವ ರಾಸಾಯನಿಕ ವ್ಯತ್ಯಾಸಗಳಿಗೂ ಹೊಂದಾಣಿಕೆ ಇದೆಯೆಂದು ತೋರಿಸಲಾಗಿದೆ. ಎಲ್ಲ ಸಾಲ್ಮೊನೆಲ್ಲಾ ರೋಗಾಣುಗಳಲ್ಲೂ ಅವುಗಳ ವರ್ಗೀಕರಣ ವೈಶಿಷ್ಟ ಏನೇ ಇರಲಿ. ಬಹುಶರ್ಕರಗಳ ಪ್ರಕೃತಿ ಒಂದೇ ಆಗಿದೆ. ಈ ಶರ್ಕರಗಳಲ್ಲಿ ಹೆಪ್ಟೋಸ್‌ಫಾಸ್ಫೇಟ್ (ಏಳು ಇಂಗಾಲದ ಪರಮಾಣುಗಳುಳ್ಳ ಶರ್ಕರ), 2–ಕೀಟೋ 3–ಡೀ ಆಕ್ಸಿ–ಅಕ್ಟೋನಿಕ್ ಆಮ್ಲ ಮತ್ತು N–ಅಸಿಟೈಲ್ ಗ್ಲೂಕೋಸಮೀನ್ ಇರುತ್ತವೆ. ಶ್ರೇಣಿಯ ಕೊನೆಯಲ್ಲಿರುವ ಕೀಟೋ ಡೀ ಆಕ್ಸಿ ಅಕ್ಟೋನೇಟ್ ಅಂಶಕ್ಕೆ ಕೊಬ್ಬಿನ ಅಂಶ ಸೇರಿದೆ. ಬಹುಹೆಪ್ಟೋಸ್ ಫಾಸ್ಫೇಟ್ ಗುಂಪಿನ ಕವಲುಗಳಲ್ಲಿ ಗ್ಲೂಕೋಸ್ ಮತ್ತು ಗ್ಯಲಾಕ್ಟೇಸ್ ಗುಂಪುಗಳಿರುತ್ತವೆ. ಕೊಬ್ಬಿನ ಅಂಶದಲ್ಲಿ ಅಮೈನೋ ಆಮ್ಲಗಳೂ ಸೇರಿವೆಯೆಂದು ಗೊತ್ತಾಗಿದೆ. ಕೊಬ್ಬು–ಬಹುಶರ್ಕರಗಳು ಸಂಯುಕ್ತ, ಪೊರೆಯಿರುವ ರೋಗಾಣುಗಳಲ್ಲಿ (ನಯ ರೋಗಾಣು–ಸ್ಮೂತ್ ಸ್ಟ್ರೈನ್) ಇವೆ. ರೋಗಾಣುಗಳ ಬಹುಶರ್ಕರಗಳಿಗೆ ಗ್ಲೂಕೋಸನ್ನು ಮೊದಲು ಅನಂತರ ಗ್ಯಲಾಕ್ಟೋಸ್, ತದನಂತರ ಗ್ಲೂಕೋಸ್ ಮತ್ತು N–ಅಸಿಟೈಲ್ ಗ್ಲೂಕೋಸಮೀನ್ ಸೇರಿಸುವುದರಿಂದ ಮೂರು ಬಗೆಯ ನಿರೋಧಜನಕ ಬಹುಶರ್ಕರಗಳುಂಟಾಗುತ್ತವೆ. ಇದನ್ನು ಕ್ರಮವಾಗಿ M, RI ಮತ್ತು RH ನಿರೋಧಜನಕಗಳೆಂದು ಕರೆಯಲಾಗಿದೆ. ಅನೇಕ ಸಾಲ್ಮೊನೆಲ್ಲಾ ರೋಗಾಣುಗಳ ವರ್ಗವಿಶಿಷ್ಟ ಬಹುಶರ್ಕರಗಳು RH ಬಹು ಶರ್ಕರಕ್ಕೆ ಅಂತ್ಯಭಾಗದಲ್ಲಿ 3,6 ಡೈಡೀಆಕ್ಸಿಹೆಕ್ಸೋಸ್–ಅಂದರೆ 6 ಇಂಗಾಲ ಪರಮಾಣುಗಳುಳ್ಳ ಶರ್ಕರಗಳಲ್ಲಿ 3 ಮತ್ತು 6 ಇಂಗಾಲದ ಸ್ಥಾನಗಳಲ್ಲಿ ಆಕ್ಸಿಜನ್ ಇಲ್ಲದ–ಶರ್ಕರಗಳನ್ನು ಸೇರಿಸುವುದರಿಂದ ಉಂಟಾಗುತ್ತವೆ. D–ಮ್ಯಾನೋಸ್, D–ಗ್ಲೂಕೋಸ್, D–ಗ್ಯಲಾಕ್ಟೋಸ್ ಮತ್ತು L–ಗ್ಯಲಾಕ್ಟೋಸುಗಳಿಂದ ಉತ್ಪತ್ತಿಯಾದ ಡೈಡೀಆಕ್ಸಿಶರ್ಕರಗಳನ್ನು ಇದುವರೆಗೆ ಪತ್ತೆ ಮಾಡಿದೆ. ಈ ಶರ್ಕರಗಳಿಗೆ ಅನುಕ್ರಮವಾಗಿ ಟೈವಿಲೋಸ್, ಪ್ಯಾರಟೋಸ್, ಅಬಿಕ್ವೋಸ್ ಮತ್ತು ಕೋಲಿಟೇಸ್ ಎಂಬ ಹೆಸರುಗಳಿವೆ. ಇವು ಬಹುಶರ್ಕರ ಶ್ರೇಣಿಯ ಕೊನೆಯಲ್ಲಿರುವುದರಿಂದ ನಿರೋಧಜನಕ ನಿರ್ದಿಷ್ಟತೆಗೆ ಕಾರಣ ವಸ್ತುಗಳಾಗಿರಬಹುದು.

ರಕ್ತವರ್ಗದ ವಸ್ತುಗಳು: ಅಪಘಾತಗಳ ಪರಿಣಾಮವಾಗಿಯೋ ಅಥವಾ ಕಾಯಿಲೆಯ ದೆಸೆಯಿಂದಲೋ ರಕ್ತವನ್ನು ಕಳೆದುಕೊಂಡಿರುವ ವ್ಯಕ್ತಿಗಳಿಗೆ ಇತರರ ರಕ್ತವನ್ನು ತುಂಬುವುದು ನಮಗೆಲ್ಲ ಪರಿಚಿತವಾದ ವಿಷಯ. ಆದರೆ ತುಂಬುವ ರಕ್ತ ಪರಿಗ್ರಾಹಿಯ ರಕ್ತವನ್ನು ಹೋಲಬೇಕು. ಇಲ್ಲದಿದ್ದರೆ ರಕ್ತಕಣಗಳು ಒಂದಕ್ಕೊಂದು ಗುಂಪುಗೂಡಿ ಅಂಟಿಕೊಳ್ಳಬಹುದು; ಇಲ್ಲವೆ ರಕ್ತಕಣಗಳು ಛೇದನೆಯಾಗಬಹುದು ಮತ್ತು ರೋಗಿಯಲ್ಲಿ ತೀವ್ರ ಪ್ರತಿಕ್ರಿಯೆ ಉಂಟಾಗಿ ಮರಣವೂ ಸಂಭವಿಸಬಹುದು. ಬಹುತೇಕ ಜನರ ರಕ್ತದಲ್ಲಿ, ಎಲ್ಲರ ರಕ್ತವನ್ನಲ್ಲದಿದ್ದರೂ, ಅನೇಕ ಮಂದಿ ಇತರರ ರಕ್ತಕಣಗಳನ್ನು ಗುಂಪುಗೂಡಿಸುವ ಅಥವಾ ಛೇದಿಸುವ ವಸ್ತುಗಳಿವೆ. ರಕ್ತಕಣಗಳ ಗುಂಪುಕೂಡಿಕೆಯನ್ನು ಉಂಟುಮಾಡಬಲ್ಲ ಗುಣದ ಅಧಾರದ ಮೇಲೆ ಮನುಷ್ಯರ ರಕ್ತಕಣಗಳನ್ನು ಲ್ಯಾಂಡ್‌ಸ್ಟೀನರ್ A, B, AB ಮತ್ತು O ಎಂಬ ನಾಲ್ಕು ವರ್ಗಗಳಾಗಿ ವಿಂಗಡಿಸಿದ. A ಗುಂಪಿಗೆ ಸೇರಿದ ರಕ್ತಕಣಗಳಲ್ಲಿ A ಎಂಬ ವಸ್ತುವೂ B ಗುಂಪಿಗೆ ಸೇರಿದ ಕಣಗಳಲ್ಲಿ B ವಸ್ತುವೂ AB ಗುಂಪಿನ ರಕ್ತಕಣದಲ್ಲಿ A ಮತ್ತು B ವಸ್ತುಗಳೆರಡೂ ಇವೆ. O ವಸ್ತುವಿನಲ್ಲಿ A ಮತ್ತು B ಇಲ್ಲವಾದರೂ ಇವಕ್ಕೆ ಸಂಬಂಧಪಟ್ಟ ವಸ್ತುಗಳಿವೆ. A ಮತ್ತು B ವಸ್ತುಗಳನ್ನು ಅನುವಂಶೀಯವಾಗಿ ಮೆಂಡೆಲ್ಲನ ತತ್ತ್ವಗಳ ಪ್ರಕಾರ ಒಂದು ಪೀಳಿಗೆ ಅದರ ಪಿತೃಗಳಿಂದ ಪಡೆಯುತ್ತದೆ. A ಗುಂಪಿಗೆ ಸೇರಿದ ವ್ಯಕ್ತಿಗಳ ವಸೆಗಳಲ್ಲಿ ನಿರೋಧಕದಂತಿರುವ ಒಂದು ಪ್ರೋಟೀನು B ಗುಂಪಿಗೆ ಸೇರಿದ ರಕ್ತಕಣಗಳನ್ನು

ಪರಸ್ಪರ ಅಂಟಿಕೊಳ್ಳುವಂತೆ ಮಾಡುತ್ತದೆ. ಇದೇ ರೀತಿ B ಗುಂಪಿಗೆ ಸೇರಿದ ವ್ಯಕ್ತಿಗಳ ವಸೆಯಲ್ಲಿರುವ ಒಂದು ಪ್ರೋಟೀನು Aಗುಂಪಿನ ರಕ್ತಕಣಗಳನ್ನು ಗುಂಪುಗೂಡಿಸುತ್ತದೆ. AB ಗುಂಪಿನ ವ್ಯಕ್ತಿಗಳ ವಸೆ A ಗುಂಪಿನ ರಕ್ತಕಣಗಳನ್ನಾಗಲಿ B ಗುಂಪಿನ ರಕ್ತಕಣಗಳನ್ನಾಗಲೀ ಗುಂಪುಗೂಡಿಸುವುದಿಲ್ಲ. O ಗುಂಪಿನ ವ್ಯಕ್ತಿಯ ವಸೆ A ಮತ್ತು B ಗುಂಪಿನ ರಕ್ತಕಣಗಳನ್ನು ಗುಂಪುಗೂಡಿಸಬಲ್ಲದು. ವಸೆಯಲ್ಲಿರುವ ಗುಂಪುಗೂಡಿಸುವ ಸಾಮರ್ಥ್ಯವಿರುವ ಪ್ರೋಟೀನುಗಳನ್ನು ಐಸೊಆಗ್ಲುಟನಿನ್ ಎನ್ನುತ್ತಾರೆ. ಈ ವಸ್ತುಗಳು ನಿಜವಾದ ನಿರೋಧಕಗಳೇ ಅಥವಾ ಇಮ್ಯೂನೋ ಗ್ಲಾಬ್ಯುಲಿನ್ನಗಳೇ ಎಂಬುದು ನಿರ್ಧಾರವಾಗಿಲ್ಲ.

ರಕ್ತಕಣಗಳ ವರ್ಗವಿಶಿಷ್ಟತೆಗೆ ಕಾರಣಗಳಾದ ಮತ್ತು ರಕ್ತಕಣಗಳಲ್ಲಿರುವ ವಸ್ತುಗಳಿಗೆ ರಕ್ತವರ್ಗ ವಸ್ತುಗಳೆಂದು ಹೆಸರು (ಬ್ಲಡ್ ಗ್ರೂಪ್ ಸಬ್‌ಸ್ಟೆನ್ಸಸ್). ರಾಸಾಯನಿಕ ವಿಶ್ಲೇಷಣೆಯ ಫಲವಾಗಿ ಈ ವಸ್ತುಗಳಲ್ಲಿ ಶರ್ಕರ ಮತ್ತು ಕೊಬ್ಬುಗಳಿವೆಯೆಂದು ಗೊತ್ತಾಯಿತು. ಈ ವಸ್ತುಗಳಲ್ಲಿ ತೈಲಾಮ್ಲಗಳು (ಫ್ಯಾಟೀ ಆಸಿಡ್ಸ್) ಸ್ಪಿಂಗೋಸಿನ್ ಮತ್ತು ಮ್ಯೂಕೋ ಪ್ರೋಟೀನ್ ಅಥವಾ ಮ್ಯೂಕೊಪೆಪ್ಟೈಡುಗಳಿವೆ. ಮ್ಯೂಕೋ ಪ್ರೋಟೀನುಗಳನ್ನು ಜಲಭೇದನೆ ಮಾಡಿದಾಗ ಅಮೈನೋ ಆಮ್ಲಗಳು ಮತ್ತು ಶರ್ಕರಗಳು ದೊರೆಯುತ್ತವೆ. ಈ ಮ್ಯೂಕೋ ಪ್ರೋಟೀನುಗಳು ಅತ್ಯಲ್ಪ ಪ್ರಮಾಣದಲ್ಲಿ ದೊರೆಯುವುದರಿಂದ ಅವುಗಳ ರಾಸಾಯನಿಕ ರಚನೆಯನ್ನು ಕಂಡು ಹಿಡಿಯುವುದು ಬಲು ಪ್ರಯಾಸದ ಕೆಲಸ. ಅದರೆ ಈ ಮ್ಯುಕೋಪೆಪ್ಟೈಡುಗಳ ಗುಣಗಳನ್ನೇ ಬಲುಮಟ್ಟಿಗೆ ಹೋಲುವ ಮತ್ತು ವಿಶಿಷ್ಟ ರೀತಿಯಲ್ಲಿ ಆತ್ಮೀಯ ಐಸೊ ಆಗ್ಲುಟಿನಿನ್ನುಗಳಿಂದ ರಕ್ತಕಣಗಳು ಗುಂಪುಗೂಡುವ ಕ್ರಿಯೆಯಲ್ಲಿ ಸ್ಪರ್ಧಿಸುವ (ಅದ್ದರಿಂದ ರಾಸಾಯನಿಕ ರಚನೆಯಲ್ಲಿ ಮ್ಯೂಕೋ ಪೆಪ್ಟೈಡುಗಳನ್ನು ಬಲುಮಟ್ಟಿಗೆ ಹೋಲುವ) ಮ್ಯೂಕೋಪೆಪ್ಟೈಡುಗಳು ಜೊಲ್ಲು ಮತ್ತು ಮಾನವ ಮತ್ತು ಪ್ರಾಣಿಗಳು ಸ್ರವಿಸುವ ಇತರ ದ್ರವಗಳಿಂದ ಬೇರ್ಪಡಿಸಲ್ಪಟ್ಟಿವೆ. ಜಠರಕೋಶದ ಲೋಳೆಗ್ರಂಥಿಗಳಿಂದಲೂ ಅಂಡಾಶಯದ ಪೂರ್ತಿ ಕೋಶಗಳಿಂದಲೂ (ಒವೇರಿಯನ್ ಸಿಸ್ಟ್) ಈ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು. ಶುದ್ಧ ರೂಪದಲ್ಲಿ ತಯಾರಿಸಿದ ರಕ್ತವರ್ಗ ಗುಂಪಿನ ವಸ್ತುಗಳಲ್ಲಿ ಮುಖ್ಯವಾಗಿ ಬಹುಶರ್ಕರವೂ ಸೀರೀನ್ ಥ್ರಿಯೋನಿನ್ ಮತ್ತು ಪ್ರೋಲೀನ್ ಅಮೈನೋ ಆಮ್ಲಗಳನ್ನೊಳಗೊಂಡ ಪಾಲಿಪೆಪ್ಟೈಡ್ ಶೇ. 25 ಪ್ರಮಾಣದಲ್ಲಿಯೂ ಇವೆ.

ಮನುಷ್ಯನ A,B ಮತ್ತು H (O–ಗುಂಪಿನ ರಕ್ತಕಣದಲ್ಲಿರುವ ವಸ್ತು) ವಸ್ತುಗಳಲ್ಲಿರುವ ಶರ್ಕರಾಂಶದಲ್ಲಿ ಗ್ಯಲಕ್ಟೋಸ್, N–ಅಸಿಟೈಲ್ ಗ್ಲೂಕೋಸಮೀನ್, N–ಅಸಿಟೈಲ್ ಗ್ಯಲಾಕ್ಟೋಸಮೀನ್ ಮತ್ತು ಫ್ಯೂಕೋಸ್ ಸಕ್ಕರೆಗಳಿವೆ. ಜೊಲ್ಲಿನಲ್ಲಿ ರಕ್ತವರ್ಗ ವಸ್ತುಗಳಂತೆ ಚಟುವಟಿಕೆಯುಳ್ಳ ಪದಾರ್ಥಗಳನ್ನು ಸ್ರವಿಸದ ಮನುಷ್ಯರಲ್ಲಿ ಲೂಯಿಸ್ಟ್ ಎ ಅಥವಾ $Le^a$ ಎಂಬ ಮೇಲೆ ಹೇಳಿದ ವಸ್ತುಗಳನ್ನು ಹೋಲುವ, ನಾಲ್ಕನೆಯ ಪದಾರ್ಥವನ್ನು ಕಂಡುಹಿಡಿಯಲಾಗಿದೆ. $Le^a$ ಪದಾರ್ಥ ಉತ್ಪತ್ತಿಗೆ ಕಾರಣವಾದ ಜೀನಿ ABO ಜೀನಿಗಳ ಗುಂಪಿನಲ್ಲಿರದೆ ಸ್ವತಂತ್ರವಾಗಿದೆ. A, B, H ಮತ್ತು $Le^a$ ರಕ್ತವರ್ಗ ವಸ್ತುಗಳ ಬಹುಶರ್ಕರದ ಅಂತ್ಯಭಾಗದಲ್ಲಿ ಗ್ಯಲಾಕ್ಟೋಸಮೀನ್ ಇರುತ್ತವೆ. ಅವುಗಳ ರಚನೆ ಹೀಗಿದೆ: ಗ್ಯಲಾಕ್ಟೋಸ್, N–ಅಸಿಟೈಲ್ ಗ್ಲೂಕೋಸಮೀನ್ ಮತ್ತು N–ಅಸಿಟೈಲ್ ಗ್ಯಲಾಕ್ಟೋಸೋಮಿನೈಲ್ $1\longrightarrow3$ ಗ್ಯಲಾಕ್ಟೋಸಿಲ್ $1\longrightarrow x$ N–ಅಸಿಟೈಲ್ ಗ್ಲೂಕೋಸಮಿನೈಲ್ $1\longrightarrow3$ ಗ್ಯಲಾಕ್ಟೋಸಿಲ್ ($x$=3 ಅಥವಾ 4). ಬಹುತೇಕವಾಗಿ $1\longrightarrow3$ ಮತ್ತು $1\longrightarrow4$ ಬಂಧಗಳು ಬೀಟ ಮಾದರಿಯವು.

B ಗುಂಪಿನ ವಸ್ತುಗಳಲ್ಲಿ N–ಅಸಿಟೈಲ್ ಗ್ಲೂಕೋಸಮೀನ್ ಬದಲು ಒಂದು ಗ್ಯಲಾಕ್ಟೋಸ್ ಅಣುವಿದೆ. A ಮತ್ತು B ಗಳೆರಡರಲ್ಲೂ ಫ್ಯೂಕೋಸ್ ಸಕ್ಕರೆ ಅಣುಗಳಿವೆ. ಒಂದು ಫ್ಯೂಕೋಸ್ ಅಣು ಉಪಾಂತ್ಯ (ಪೆನಲ್ಟಿಮೇಟ್) ಗ್ಯಲಾಕ್ಟೋಸ್ ಅಣುವಿಗೂ ಮತ್ತೊಂದು ಪಕ್ಕದ N–ಅಸಿಟೈಲ್ ಗ್ಲೂಕೋಸಮೀನ್ ಅಣುವಿಗೂ ಸೇರಿರುತ್ತದೆ. H ಮತ್ತು $Le^a$ ವಸ್ತುಗಳ ಬಹುಶರ್ಕರಗಳ ರಚನೆ B ವಸ್ತುವಿನ ಬಹುಶರ್ಕರದಂತೆಯೇ ಇದೆ. ಅದರೆ ಅಂತ್ಯದಲ್ಲಿ ಗ್ಯಲಾಕ್ಟೋಸ್ ಅಣು ಇದೆ. ಅಂದರೆ ಐದು ಶರ್ಕರಾಂಶಗಳ ಬದಲು ನಾಲ್ಕು ಶರ್ಕರಾಂಶಗಳು ಅಂತ್ಯ ಗುಂಪುಗಳಾಗುತ್ತವೆ. H ಮತ್ತು $Le^a$ ವಸ್ತುಗಳಲ್ಲಿ ಫ್ಯೂಕೋಸ್ ಕೂಡ ಇರುತ್ತವೆ.

A, B, H ಮತ್ತು $Le^a$ ವಸ್ತುಗಳ ರಚನೆಯನ್ನು ಪರಿಶೀಲಿಸಿದರೆ ಅವು ನಿಕಟಸಂಬಂಧಿಗಳೆಂದು ತಿಳಿದುಬರುತ್ತದೆ. ಈ ವಸ್ತುಗಳನ್ನು ಒಂದನ್ನೊಂದಕ್ಕೆ ಪರಿವರ್ತಿಸಲು ಸಾಧ್ಯವಾಗಿದೆ. B ವಸ್ತುವನ್ನು ಕಾಫಿಬೀಜದಿಂದ ತೆಗೆದ ಕಿಣ್ವದಿಂದ ಸಂಸ್ಕರಿಸಿ H ವಸ್ತುವನ್ನಾಗಿ ಮಾರ್ಪಡಿಸಬಹುದು. H ವಸ್ತುವನ್ನು ಕಿಣ್ವ ಸಂಸ್ಕರಣದಿಂದ $Le^a$ ವಸ್ತುವಿಗೂ $Le^a$ ವಸ್ತುವನ್ನು 14ನೆಯ ಗುಂಪಿಗೆ ಸೇರಿದ ನ್ಯೂಮೊಕಾಕ್ಕೈ ಪೊರೆಚೀಲದ ಬಹುಶರ್ಕರದ ರಚನೆಯನ್ನು ಹೋಲುವ ವಸ್ತುವನ್ನಾಗಿಯೂ ಮಾರ್ಪಡಿಸಬಹುದು. ಈ ಪರಿವರ್ತನೆಗಳು ಸಾಧ್ಯವಿರುವುದರಿಂದ H ವಸ್ತು A ಮತ್ತು B ವಸ್ತುಗಳ ಮೂಲವಸ್ತು (ಪ್ರೀಕರ್ಸರ್) ಇರಬಹುದು; ದೇಹದಲ್ಲಿ ಕಿಣ್ವಗಳಿಂದ A ಮತ್ತು B ವಸ್ತುಗಳಿಗೆ ಪರಿವರ್ತನೆ ಅಗುವುದಿರ ಬಹುದು ಎಂಬ ಅಭಿಪ್ರಾಯ ಮೂಡಿದೆ. ಪರಿವರ್ತನೆಗೆ ಕಾರಣಗಳಾದ ಕಿಣ್ವಗಳ ಉತ್ಪತ್ತಿ A ಮತ್ತು B ಜೀನಿಗಳ ಹತೋಟಿಯಲ್ಲಿದೆ. A, B, H ಮತ್ತು $Le^a$ ವಸ್ತುಗಳ ರಚನೆಯಲ್ಲಿ ಅತ್ಯಲ್ಪ ವ್ಯತ್ಯಾಸವಿದೆ. ಈ ವ್ಯತ್ಯಾಸ ಬಹುಶರ್ಕರದ ಶ್ರೇಣಿಯ ಅಂತ್ಯದಲ್ಲಿರುವ ಏಕಶರ್ಕರದ ರಾಸಾಯನಿಕ ಪ್ರಕೃತಿಯ ವ್ಯತ್ಯಾಸದಿಂದ ಉಂಟಾಗುವುದು. ಆದ್ದರಿಂದ ವಿಶಿಷ್ಟ ನಿರ್ದಿಷ್ಟಕ ಗುಂಪಿನ ಗಾತ್ರ ಏಕಶರ್ಕರದ ಗಾತ್ರಕ್ಕಿಂತ ಹೆಚ್ಚಿರಲಾರದು. ರಕ್ತವರ್ಗ, ವಸ್ತುಗಳು, ಪೆಪ್ಟೈಡ್ ಗುಂಪುಗಳಿಗೆ ಗ್ಯಲಾಕ್ಟೋಸ್ ಅಥವಾ N–ಅಸಿಟೈಲ್ ಗ್ಲೂಕೋಸಮೀನುಗಳ ಮತ್ತು ಸೀರಿನ್ ಅಥವಾ ಥ್ರಿಯೋನಿನ್ ಅಮೈನೊ ಅಮ್ಲಗಳ (OH) ಗುಂಪಿನ ನಡುವೆ ಉಂಟಾಗುವ ಬಂಧದ ಮೂಲಕ ಸೇರ್ಪಡೆಯಾಗಿರುತ್ತವೆ. A, B, O ರಕ್ತವರ್ಗಗಳಲ್ಲದೆ ಇನ್ನೂ ಅನೇಕ ರಕ್ತವರ್ಗಗಳಿವೆ. ಕನಿಷ್ಠಪಕ್ಷ ಹದಿನಾಲ್ಕು ವರ್ಗಗಳನ್ನು ಪಟ್ಟಿ ಮಾಡಿದೆ. ಮನುಷ್ಯ ವರ್ಗದಲ್ಲಿ ಕೇವಲ 1% ರಷ್ಟು ಭಾಗ ಜನರು ಮಾತ್ರ A, B, H ಮತ್ತು $Le^a$ ವಸ್ತುಗಳಲ್ಲಿ ಯಾವುದೊಂದನ್ನೂ ಸ್ರವಿಸುವುದಿಲ್ಲ.

ರಕ್ತವರ್ಗಕ್ಕೆ ಸೇರಿದ ಮತ್ತು ಮುಖ್ಯವಾದ Rh ಅಂಶದ ರಚನೆಯ ವಿಷಯ ನಮಗಿನ್ನೂ ತಿಳಿದು ಬಂದಿಲ್ಲ. Rh ಅಂಶವಿಲ್ಲದ ತಾಯಿಯಲ್ಲಿ Rh ಅಂಶವಿರುವ ಭ್ರೂಣ ನಿರೋಧಕ ವಸ್ತುಗಳ ಉತ್ಪತ್ತಿಯನ್ನು ಪ್ರೇರೇಪಿಸಬಲ್ಲುದು. ಈ ನಿರೋಧಜನಕಗಳು ಜರಾಯುವಿನ (ಪ್ಲಾಸೆಂಟಾ) ಮೂಲಕ ಭ್ರೂಣಕ್ಕೆ ಸೇರಿದರೆ ಭ್ರೂಣದ ಕೆಂಪು ರಕ್ತಕಣಗಳು ಛೇದಿಸಲ್ಪಡ ಬಹುದು ಮತ್ತು ತೀವ್ರ ಪ್ರತಿಕ್ರಿಯೆ ತೋರಿಬರಬಹುದು. Rh ಅಂಶ ವೈದ್ಯಕೀಯ ದೃಷ್ಟಿಯಿಂದ ಮುಖ್ಯವಾದದ್ದಲ್ಲವಾದರೂ ಮಗುವಿನ ವಂಶಾವಳಿಯನ್ನು ಗೊತ್ತುಮಾಡುವುದಕ್ಕೂ ಮಾನವಶಾಸ್ತ್ರ ಅಧ್ಯಯನಕ್ಕೂ ಸಾಧಕವಾಗಿದೆ. ಈ ದೃಷ್ಟಿಯಿಂದ M, N ಮತ್ತು P ಗುಂಪಿನ ರಕ್ತವರ್ಗಗಳೂ ಮುಖ್ಯವಾಗಿವೆ.

ಇತರ ನಿರೋಧಜನಕಗಳು. 1 ನ್ಯೂಕ್ಲಿಯೆಕ್ ಆಮ್ಲಗಳು: ನ್ಯೂಕ್ಲಿಯೆಕ್ ಆಮ್ಲಗಳು ನಿರೋಧಜನಕಗಳಂತೆ ವರ್ತಿಸುವ ಪ್ರವೃತ್ತಿಯನ್ನು ತೋರಿಸಿಲ್ಲ. $T_2$, $T_4$ ಮತ್ತು $T_6$ ಬ್ಯಾಕ್ಟೀರಿಯೋಫೇಜುಗಳು ಡಿಎನ್‌ಎ ನಿರೋಧಜನಕಗಳಂತೆ ವರ್ತಿಸಿ ನಿರೋಧಕಗಳ ಉತ್ಪತ್ತಿಯನ್ನು ಪ್ರಚೋದಿಸಬಲ್ಲವು. ಈ ಬ್ಯಾಕ್ಟೀರಿಯೋಫೇಜುಗಳ ಡಿಎನ್‌ಎಗೂ ಪ್ರಾಣಿಗಳ ಮತ್ತು ಸಸ್ಯಗಳು ಡಿಎನ್‌ಎಗಳಿಗೂ ಒಂದು ವ್ಯತ್ಯಾಸವಿದೆ. ಬ್ಯಾಕ್ಟೀರಿಯೋಫೇಜುಗಳ ಡಿಎನ್‌ಎಯಲ್ಲಿ 5–ಹೈಡ್ರಾಕ್ಸಿ ಮೀಥೈಲ್ ಸೈಟೋಸಿನ್ ಅಂಶಗಳಿದ್ದು ಕೆಲವಕ್ಕೆ ಗ್ಲೂಕೋಸ್ ಅಂಶ ಸೇರಿಸಲ್ಪಟ್ಟಿರುತ್ತದೆ. ಈ ಗ್ಲೂಕೋಸ್ ಅಂಶವಿಲ್ಲದ ಡಿಎನ್‌ಎ ನಿರೋಧಕವನ್ನು ಉತ್ಪತ್ತಿ ಮಾಡುವುದಿಲ್ಲವಾದ್ದರಿಂದ ನಿರ್ದಿಷ್ಟತೆ ಗ್ಲೂಕೋಸ್ ಅಂಶಗಳಿಂದಾಗಿದೆಯೆನ್ನಬಹುದು.

ಆರ್‌ಎನ್‌ಎಗಳ ಅಂಶಗಳಾದ ರೈಬೋನ್ಯೂಕ್ಲಿಯೋಟೈಡುಗಳನ್ನು ಬಿಎಸ್‌ಎ ಅಥವಾ ಮತ್ತಿನ್ನಾವ ಪ್ರೋಟೀನುಗಳಿಗೆ ಸಂಬದ್ದಿಸಿ ನಿರೋಧಜನಕಗಳನ್ನು ಪಡೆಯಬಹುದು. ಇವುಗಳಿಂದ ಉತ್ಪತ್ತಿಯಾದ ನಿರೋಧಕಗಳು ಪ್ರಕೃತಿಹೀನ ಡಿಎನ್‌ಎಗಳೊಂದಿಗೆ ಸೇರುತ್ತವೆಯೇ ವಿನಾ ಅರ್‌ಎನ್‌ಎಯೊಂದಿಗೆ ಸೇರುವುದಿಲ್ಲ. ಮೆಥಿಲೇಟೆಡ್ (ಮೀಥೈಲ್ ಗುಂಪುಗಳನ್ನು ಸೇರಿಸಿರುವ) ಬಿಎಸ್‌ಎಯೊಂದಿಗೆ ಬಹುಅಡಿನೆಲಿಕ್, ಬಹುಇನೋಸಿನಿಕ್ ಮತ್ತು ಬಹುಸೈಟಿಡಿಲಿಕ್ ಆಮ್ಲಗಳನ್ನು ಚುಚ್ಚಿ ನಿರೋಧಕಗಳನ್ನು ಪಡೆಯಬಹುದು.

2 ಕೊಬ್ಬಿನ ಪದಾರ್ಥಗಳು: ತೈಲಾಮ್ಲಗಳು, ಟ್ರೈಗ್ಲಿಸರೈಡುಗಳು ಮತ್ತು ಇತರ ಶುದ್ಧ ಕೊಬ್ಬುಗಳು ನಿರೋಧಜನಕಗಳಂತೆ ವರ್ತಿಸುವುದಿಲ್ಲ. ಆದರೆ ಈ ವಸ್ತುಗಳು ಇತರ ನಿರೋಧಜನಕಗಳಿಗೆ ಸಹಾಯಕ ದ್ರವದಂತೆ ವರ್ತಿಸಿ ನಿರೋಧಕಗಳ ಉತ್ಪತ್ತಿಯನ್ನು ಹೆಚ್ಚಿಸುತ್ತವೆ.

ನಿರೋಧಕಗಳ ಪತ್ತೆ: ನಿರೋಧಕಗಳು ಪ್ರೋಟೀನುಗಳು. ವಸೆಯಲ್ಲಿ ಗಾಮ ಗ್ಲಾಬ್ಯುಲಿನ್ ಅಂಶದಲ್ಲಿಯೂ ದೇಹದ ಮತ್ತಿತರ ಸ್ರವಗಳಲ್ಲಿಯೂ ಇರುತ್ತವೆ. ಗಾಮ ಗ್ಲಾಬ್ಯುಲಿನ್ನುಗಳು ಮತ್ತು ನಿರೋಧಕಗಳು ರಾಸಾಯನಿಕ ರಚನೆಯಲ್ಲಿ ಮತ್ತು ಗುಣಗಳಲ್ಲಿ ಒಂದನ್ನೊಂದು ಬಲುಮಟ್ಟಿಗೆ ಹೋಲುವುದರಿಂದ ನಿರೋಧಕಗಳನ್ನು ಸಾಧಾರಣ ಗಾಮ ಗ್ಲಾಬ್ಯುಲಿನ್ನುಗಳಿಂದ ರಾಸಾಯನಿಕವಾಗಿ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ನಿರೋಧಕಗಳನ್ನು ಅವುಗಳ ಅತ್ಮೀಯ ನಿರೋಧಜನಕಗಳೊಂದಿಗೆ ಮಿಶ್ರ ಮಾಡುವುದರಿಂದ ಮಾತ್ರ ಗೊತ್ತು ಹಚ್ಚಬಹುದು.

ನಿರೋಧಕ ತನ್ನ ಆತ್ಮೀಯ ನಿರೋಧಜನಕದೊಂದಿಗೆ ಒತ್ತಡವನ್ನು ರಚಿಸುತ್ತದೆ. ಈ ಪರೀಕ್ಷೆ ಮಾಡುವಾಗ ನಿರೋಧಜನಕವನ್ನು ಅಧಿಕ ಪ್ರಮಾಣದಲ್ಲಿ ಮಿಶ್ರಣಕ್ಕೆ ಸೇರಿಸಬಾರದು. ಏಕೆಂದರೆ ನಿರೋಧಜನಕ–ನಿರೋಧಕಗಳ ಕೂಡುವಿಕೆಯಿಂದ ಉಂಟಾದ ಒತ್ತರ ಹೆಚ್ಚಿನ ಪ್ರಮಾಣದ ನಿರೋಧಜನಕದಲ್ಲಿ ವಿಲೀನವಾಗುವುದು. ಈ ಪರೀಕ್ಷೆ ಯಶಸ್ವಿಯಾಗಲು ಬೇಕಾದ ನಿರೋಧಜನಕ ಮತ್ತು ನಿರೋಧಕಗಳ ಪ್ರಮಾಣವನ್ನು ತಿಳಿಯುವುದು ಕಷ್ಟವಾದ ಕೆಲಸ. ಆದ್ದರಿಂದ ಇದನ್ನು ಸ್ವಲ್ಪಮಟ್ಟಿಗೆ ಬದಲಾಯಿಸಲಾಗಿದೆ. ನಿರೋಧಜನಕದ ದುರ್ಬಲ ದ್ರಾವಣವನ್ನು ಬೇರೆ ಬೇರೆ ಪ್ರನಾಳಗಳಲ್ಲಿಟ್ಟು ನಿರೋಧಕದ ದ್ರಾವಣವನ್ನು ಎಚ್ಚರಿಕೆಯಿಂದ ಪ್ರನಾಳಗಳ ಕೆಳಭಾಗಕ್ಕೆ ಸೇರಿಸಿದರೆ ಎರಡು ದ್ರಾವಣಗಳು ಮಿಶ್ರಿತವಾಗದೆ ಎರಡು ಪದರಗಳು ರಚಿತವಾಗುವುವು. ಇವು ಸಂಧಿಸುವ ಜಾಗದಲ್ಲಿ ನಿರೋಧಕ ಮತ್ತು ನಿರೋಧಜನಕಗಳೂ ಕೂಡಿ ಉಂಗುರದ ಆಕಾರದಲ್ಲಿ ಒತ್ತರ ರಚನೆಯಾಗುವುದು (ರಿಂಗ್ ಟೆಸ್ಟ್). ಇದೇ ಪರೀಕ್ಷೆಯನ್ನು ನಿರೋಧಕ ಮತ್ತು ನಿರೋಧಜನಕಗಳು ಅಗಾರ್‌ಜೆಲ್ಲಿನಲ್ಲಿ ಪ್ರಸರಿಸುವಂತೆ ಮಾಡುವುದರ ಮೂಲಕ ಸೂಕ್ಷ್ಮಪ್ರಮಾಣದಲ್ಲಿ ನಡೆಸಬಹುದು. ಈ ವಿಧಾನವನ್ನು ಓಡಿನ್ ಎಂಬಾತ ಸೂಚಿಸಿದ. ಇದರ ಪ್ರಕಾರ ನಿರೋಧಕ ವಸ್ತುವಿನ ದ್ರಾವಣವನ್ನು ಸುಮಾರು

47° ಸೆಂ.ಗ್ರೇಡಿಗೆ ಕಾಯಿಸಿ ಸಮ ಪ್ರಮಾಣದಲ್ಲಿ ಅದೇ ಉಷ್ಣತೆಯಲ್ಲಿರುವ ದ್ರವೀಕೃತ 1% ಅಗಾರ್ ಜೆಲ್ಲಿನೊಂದಿಗೆ ಬೆರೆಸಿ ಸಣ್ಣ ಸಣ್ಣ ಪ್ರನಾಳಗಳಿಗೆ ಹೊಯ್ಯುತ್ತಾರೆ. ಅನಂತರ ಕೊಠಡಿಯ ಉಷ್ಣತೆಗೆ ಶೀತಲಿಸಿದಾಗ ಜೆಲ್ ರಚನೆಯಾಗುತ್ತದೆ. ತರುವಾಯ ನಿರೋಧಜನಕ ದ್ರಾವಣವನ್ನು ಎಚ್ಚರಿಕೆಯಿಂದ ಜೆಲ್ಲಿನ ಮೇಲೆ ಸುರಿಯುತ್ತಾರೆ. ನಿರೋಧಜನಕ ನಿಧಾನವಾಗಿ ಜೆಲ್ಲಿನಲ್ಲಿ ಪ್ರಸರಿಸಿದಾಗ ಒತ್ತರರೇಖೆ (ಪ್ರೆಸಿಪಿಟಿನ್ ಬ್ಯಾಂಡ್) ರಚನೆಯಾಗುತ್ತದೆ. ಈ ವಿಧಾನದಲ್ಲಿ ಕೆಲವು ಅನುಕೂಲತೆಗಳಿವೆ: 1 ಒತ್ತರ ರೇಖೆ ಉಷ್ಣತೆಯಲ್ಲಿ ವ್ಯತ್ಯಾಸ ಅಥವಾ ಅಲುಗಾಡುವಿಕೆಯಿಂದ ವ್ಯತ್ಯಸ್ತಹೊಂದದೆ ಸ್ಥಿರವಾಗಿರುತ್ತದೆ; 2 ನಿರೋಧಜನಕ ಜೆಲ್ಲಿನಲ್ಲಿ ನಿಧಾನವಾಗಿ ಪ್ರಸರಿಸುವುದರಿಂದ ಅದರ ಸಾಂದ್ರತೆ ಕ್ರಮವಾಗಿ ಹೆಚ್ಚುತ್ತದೆ. ದ್ದರಿಂದ ಒತ್ತರದ ರಚನೆಗೆ ಅನುಕೂಲತಮವಾದ ಸಾಂದ್ರತೆ ಒದಗಿಯೇ ಒದಗುತ್ತದೆ; 3 ನಿರೋಧಜನಕ ಮತ್ತು ನಿರೋಧಕಗಳು ಎರಡು ಅಥವಾ ಹೆಚ್ಚಾದ ಸಂಖ್ಯೆಯಲ್ಲಿದ್ದರೆ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಒತ್ತರ ರೇಖೆಗಳು ರಚಿತವಾಗುತ್ತವೆ. ನಿರೋಧಕ ಮತ್ತು ನಿರೋಧಜನಕಗಳೆರಡೂ ಅಗಾರ್ ಜೆಲ್ಲಿನಲ್ಲಿ ಪ್ರಸರಿಸಿ ಒತ್ತರವನ್ನು ರಚಿಸುವಂತೆ ಮಾಡುವುದರಿಂದ ಈ ಪರೀಕ್ಷೆಯನ್ನು ಮತ್ತಷ್ಟು ಸೂಕ್ಷ್ಮ ಮಟ್ಟದಲ್ಲಿ ನಡೆಸಬಹುದು.

ಅನೇಕ ವೇಳೆ ರಚನೆಯಲ್ಲಿ ಹೋಲಿಕೆಯಿರುವ ಎರಡು ನಿರೋಧಕಗಳು ಒಂದೇ ನಿರೋಧಜನಕಗಳೊಂದಿಗೆ ಕೂಡಿ ಒತ್ತರವನ್ನು ರಚಿಸುತ್ತವೆ. ಈ ತರಹೆಯ ಕ್ರಿಯೆಗೆ ಕ್ರಾಸ್ ರೀಆಕ್ಷನ್ ಅಥವಾ ಅಡ್ಡ ಪ್ರತಿಕ್ರಿಯೆ ಎನ್ನುತ್ತಾರೆ. ಮೇಲೆ ವಿವರಿಸಿದ ವಿಧಾನಗಳಲ್ಲಿ ಅಡ್ಡ ಪ್ರತಿಕ್ರಿಯೆ ತೋರಿಸುವ ಎರಡು ನಿರೋಧಕಗಳನ್ನು ಗೊತ್ತುಹಚ್ಚಲು ಸಾಧ್ಯವಾಗುವುದಿಲ್ಲ. ಓಕ್ಟರ್‌ಲೋನಿ ಎಂಬಾತ ಸೂಚಿಸಿದ ವಿಧಾನದಲ್ಲಿ ಈ ಪರೀಕ್ಷೆ ಸಾಧ್ಯವಿದೆ. ಈ ವಿಧಾನದಲ್ಲಿ ಅಗಾರ್ ಜೆಲ್ಲನ್ನು ಚಪ್ಪಟೆಯ ತಳವಿರುವ ಗುಂಡಾಗಿರುವ ಗಾಜಿನ ಪಾತ್ರೆಗಳಿಗೆ ಸುರಿಯುತ್ತಾರೆ. ಅಥವಾ ಜೆಲ್ಲಿನಲ್ಲಿ ತಳವಿಲ್ಲದ ಸಣ್ಣ ಪಾತ್ರೆಗಳನ್ನಿಟ್ಟು ಅವುಗಳಿಗೆ ಸೇರಿಸುತ್ತಾರೆ ಸಾಧಾರಣವಾಗಿ ನಿರೋಧಕಗಳಿಗಿರುವ (ನಿರೋಧಜನಕ) ಒಂದು ಮಧ್ಯದ ಗುಂಡಿ ನಿರೋಧಜನಕಗಳಿರುವ (ನಿರೋಧಕ) ನಾಲ್ಕು ಅಥವಾ ಆರು ಗುಂಡಿಗಳಿಂದ ಸುತ್ತುವರಿಯಲ್ಪಟ್ಟಿರುತ್ತೆ. ಒಂದೇ ಬಗೆಯ ನಿರೋಧಕ ಒಂದೇ ಬಗೆಯ ನಿರೋಧಜನಕದ ಕಡೆಗೆ ಪ್ರಸರಿಸಿದರೆ ಒಂದೇ ಒತ್ತರರೇಖೆ ಕಾಣಬರುತ್ತದೆ. ಎರಡು ಅಥವಾ ಹೆಚ್ಚು ಸಂಖ್ಯೆಯ ನಿರೋಧಕಗಳಿರುವ ಕಡೆಗೆ ಪ್ರಸರಿಸಿದರೆ ಎರಡು ಅಥವಾ ಹೆಚ್ಚು ಸಂಖ್ಯೆಯ ಒತ್ತರ ರೇಖೆಗಳು ಕಾಣಬರುತ್ತವೆ.




**ಚಿತ್ರ 2. ಓಕ್ಟರ್ ಲೋನಿ ಪ್ರಯೋಗ X ಮತ್ತು Y ಗಳು x ಮತ್ತು y ನಿರೋಧಜನಕಗಳಿಗೆ ವಿರುದ್ಧವಾಗಿ ಉತ್ಪತ್ತಿಯಾದ ನಿರೋಧಕಗಳು. x', x ಬದಿಗೆ ಅಡ್ಡ ಪ್ರತಿಕ್ರಿಯೆ ತೋರುವ ನಿರೋಧಜನಕ**

**1. ಸಂಬಂಧಪಟ್ಟ ನಿರೋಧಜನಕಗಳು**

**2. ಸಂಬಂಧವಿಲ್ಲದ ನಿರೋಧಜನಕಗಳು**

**3. ಅಡ್ಡ ಪ್ರತಿಕ್ರಿಯೆ ತೋರುವ ನಿರೋಧಜನಕಗಳು**

ಅಂಚಿನಲ್ಲಿರುವ ಎರಡು ಗುಂಡಿಗಳಲ್ಲಿ ಒಂದೇ ತರಹೆಯ ನಿರೋಧಜನಕವಿದ್ದರೆ ಎರಡೂ ಗುಂಡಿಗಳಿಗೆ ಸೇರಿದಂತೆ ಒಂದೇ ಒಂದು ರೇಖೆ ರಚನೆಯಾಗುತ್ತದೆ. ಅಕ್ಕಪಕ್ಕದ ಎರಡು ಗುಂಡಿಗಳಿಂದ ಎರಡು ವಿಭಿನ್ನವಾದ ನಿರೋಧಜನಕಗಳು ಮಧ್ಯದ ಗುಂಡಿಯಲ್ಲಿರುವ ಎರಡು ನಿರೋಧಕಗಳ ಕಡೆ ಪ್ರಸರಿಸಿದರೆ ಎರಡು ಒತ್ತರ ರೇಖೆಗಳು ರಚನೆಯಾಗುತ್ತವೆ ಮತ್ತು ಇವು ಒಂದನ್ನೊಂದು ಸೇರಿಕೊಳ್ಳದೆ ದಾಟುತ್ತವೆ. ಅಡ್ಡಪ್ರತಿಕ್ರಿಯೆ ತೋರುವ ನಿರೋಧಕ–ನಿರೋಧಜನಕಗಳು ಸೇರುವ ಸಂದರ್ಭದಲ್ಲಿ ಒತ್ತರದ ರೇಖೆಗಳು ಭಾಗಶಃ ಕೂಡಿಕೊಳ್ಳುವುವಲ್ಲದೆ ಕೊಂಡಿಯನ್ನೂ ರಚಿಸುವುವು. ನಿರೋಧಕ ಮತ್ತು ನಿರೋಧಜನಕಗಳೆರಡೂ ಪ್ರಸರಿಸುವ ವಿಧಾನಕ್ಕೆ ದ್ವಿಪ್ರಸರಣ ವಿಧಾನ (ಡಬಲ್ ಡಿಫ್ಯೂಶನ್ ಟೆಕ್ನೀಕ್) ಎನ್ನಬಹುದು. ವಿದ್ಯುತ್‌ಕ್ಷೇತ್ರ ಚಲನ (ಎಲೆಕ್ಟ್ರೊಫಾರಿಸಿಸ್) ಮತ್ತು ದ್ವಿಪ್ರಸರಣ ವಿಧಾನಗಳನ್ನು ಒಂದುಗೂಡಿಸಿ ವಿಭಿನ್ನ ನಿರೋಧಕಗಳ ಇರವನ್ನು ಮತ್ತಷ್ಟು ಸೂಕ್ಷ್ಮಮಟ್ಟದಲ್ಲಿ ಪರಿಶೀಲಿಸಬಹುದು. ಈ ವಿಧಾನದ ಹೆಸರು ಇಮ್ಯೂನೋಎಲೆಕ್ಟ್ರೋಫಾರಿಸಿಸ್ (**ನೋಡಿ**) ವಿಧಾನ. ಎಲೆಕ್ಟ್ರೋಫಾರಿಸಿಸ್ ವಿಧಾನಕ್ಕೆ ಆಗಾರ್ ಅಥವಾ ಸ್ಟಾರ್ಚ್ ಜೆಲ್ಲುಗಳನ್ನು ಉಪಯೋಗಿಸುತ್ತಾರೆ. ಈಚೆಗೆ ಅಕ್ರಿಲಮೈಡ್ ಜೆಲ್ಲಿನ ಉಪಯೋಗ ಉತ್ತಮವೆಂದು ತೋರಿಬಂದಿದೆ.

ಒತ್ತರದ ರಚನೆ ಸುಲಭವಾದ ಮತ್ತು ನಿರ್ದಿಷ್ಟವಾದ ಪರೀಕ್ಷೆಯಾದರೂ ಅಷ್ಟು ಸೂಕ್ಷ್ಮಮಟ್ಟದ್ದಲ್ಲ. ಅತ್ಯಲ್ಪ ಪ್ರಮಾಣದಲ್ಲಿರುವ ನಿರೋಧಕಗಳನ್ನು ರಕ್ತಕಣಗಳ ಗುಂಪುಗೂಡುವಿಕೆಯ ಪರೀಕ್ಷೆ (ಹೇಮಾಗ್ಲೂಟಿನೇಷನ್ ಟೆಸ್ಟ್). ರಕ್ತಕಣಭೇದನೆ ಮುಂತಾದ ವಿಧಾನಗಳಿಂದ ಕಂಡುಹಿಡಿಯಬಹುದು. ರಕ್ತಕಣಗಳು ಅಂಟುವಂತೆ ಮಾಡುವ ಪರೀಕ್ಷೆಯ ವಿಧಾನದಲ್ಲಿ ರಕ್ತಕಣಗಳಿಗೆ ಮೇಲ್ಮೈಗೆ ಪರೀಕ್ಷಿಸಬೇಕೆಂದಿರುವ ನಿರೋಧದ ಆತ್ಮೀಯ ನಿರೋಧಜನಕವನ್ನು ಲೇಪಿಸುತ್ತಾರೆ. ಈ ರಕ್ತಕಣಗಳಿಗೆ ನಿರೋಧಕಗಳನ್ನು ಸೇರಿಸಿದಾಗ ನಿರೋಧಜನಕದೊಂದಿಗೆ ಸೇರಿ ಅಕ್ಕಪಕ್ಕಗಳಲ್ಲಿರುವ ರಕ್ತಕಣಗಳಿಗೆ ಸೇತುವಿನಂತೆ ವರ್ತಿಸುತ್ತದೆ. ಇದರಿಂದ ಕಣ್ಣಿಗೆ ಕಾಣಿಸುವ ಗಾತ್ರದ ಗುಂಪುಗಳು ರಚಿತವಾಗುತ್ತದೆ. ಈ ವಿಧಾನದಿಂದ $9 \times 10^{-3}$ ಮೈಕ್ರೋಗ್ರಾಂನಷ್ಟು ನಿರೋಧಕವನ್ನು ಪತ್ತೆ ಮಾಡಬಹುದು. ರಕ್ತಕಣಗಳು ಸ್ವಯಂ ಕ್ರಿಯೆಯಲ್ಲಿ ನೇರವಾಗಿ ಭಾಗವಹಿಸದೆ ನಿರೋಧಜನಕಕ್ಕೆ ಕೇವಲ ಆಧಾರಭೂತವಾಗಿರುವುದರಿಂದ ಇದನ್ನು ನಿಷ್ಕ್ರಿಯ ರಕ್ತಕಣಗಳ ಗುಂಪು ಕೂಡಿಕೆಯ ವಿಧಾನ (ಪ್ಯಾಸಿವ್ ಹೇಮಾ ಗ್ಲೂಟಿನೇಷನ್ ಟೆಕ್ನೀಕ್) ಎಂದು ಹೆಸರಿಸಲಾಗಿದೆ. ರಕ್ತಕಣಗಳು ಶೀಘ್ರವಾಗಿ ನಾಶವಾಗುವುದರಿಂದ ಅವುಗಳ ಬದಲು ಬೆಂಟೋನೈಟ್ (ಮಾಂಟ್‌ಮರಿಲ್ಲೋನೈಟ್) ಎಂಬ ಅಲ್ಯೂಮಿನಿಯಂ ಸಿಲಿಕೇಟನ್ನಾಗಲೀ ಪಾಲಿಸ್ಟೈರಿನ್ ಎಂಬ ಬಹ್ವಣುವನ್ನಾಗಲೀ ಉಪಯೋಗಿಸಬಹುದು.

ಪ್ಲಾಸಿವ್ ಕ್ಯುಟೇನಿಯಸ್ ಅನಾಫಿಲಾಕ್ಸಿಸ್ (ಪ್ಯಾಸಿವ್–ನಿಷ್ಕ್ರಿಯ, ಕ್ಯುಟೇನಿಯಸ್–ಚರ್ಮದ, ಅನಾಫಿಲಾಕ್ಸಿಸ್–ಅತಿಪ್ರತಿಕ್ರಿಯೆ) ಅತಿಪ್ರತಿಕ್ರಿಯೆ ವಿಧಾನದಲ್ಲಿ ಪರೀಕ್ಷೆಗೊಳಗಾಗಿರುವ ದ್ರಾವಣವನ್ನು ಗಿನಿ ಹಂದಿಯ ಚರ್ಮದ ಮಧ್ಯಭಾಗಕ್ಕೆ ಚುಚ್ಚುತ್ತಾರೆ. ಅನಂತರ ಅದರ ಆತ್ಮೀಯ ನಿರೋಧಜನಕ ಮತ್ತು ಈವಾನ್ಸ್ ನೀಲಿ ಬಣ್ಣಗಳ ಮಿಶ್ರಣವನ್ನು ಆ ಪ್ರಾಣಿಗೆ ಚುಚ್ಚುತ್ತಾರೆ. ಹದಿನೈದು ನಿಮಿಷಗಳೊಳಗಾಗಿ ಪರೀಕ್ಷಾ ದ್ರಾವಣವನ್ನು ಚುಚ್ಚಿದ ಪ್ರದೇಶ ಗಾಢವಾದ ನೀಲಿ ಬಣ್ಣವನ್ನು ತಳೆದರೆ ನಿರೋಧಕ–ನಿರೋಧಜನಕಗಳ ಕ್ರಿಯೆ ನಡೆದಿದೆಯೆಂದು ಗೊತ್ತಾಗುವುದು. ಈ ವಿಧಾನದಲ್ಲಿಯೂ ಗಿನಿ ಹಂದಿಯ ಚರ್ಮ ನೇರವಾಗಿ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ.

ಅಂಗಾಂಶಗಳಲ್ಲಿ ನಿರೋಧಕಗಳು ಇರುವ ಸ್ಥಳವನ್ನು ಪತ್ತೆಮಾಡಲು ಅನೇಕ ವಿಧಾನಗಳಿವೆ. ಅತಿನೇರಳೆ ಕಿರಣಗಳಿಂದ (ಅಲ್ಟ್ರಾವಯೊಲೆಟ್ ರೇಸ್) ಸ್ಫುರಣಗೊಂಡು ವಿಶಿಷ್ಟವಾದ ರೀತಿಯಲ್ಲಿ ದೃಷ್ಟಿರೋಹಿತದಲ್ಲಿ ಬೆಳಕನ್ನು ಚೆಲ್ಲುವ (ವಿಸಿಬಲ್ ಸ್ಪೆಕ್ಟ್ರಂ) ಫ್ಲೂರಿಸೀನ್ ಐಸೋಸಯನೇಟ್ ಮತ್ತು ಫ್ಲೂರಿಸೀನ್ ಐಸೋಥಯೋಸಯನೇಟ್ ವಸ್ತುಗಳನ್ನೊಳಗೊಂಡ ನಿರೋಧಗಳನ್ನು ಉಪಯೋಗಿಸುವ ವಿಧಾನ ಹೆಚ್ಚಾಗಿ ಬಳಕೆಯಲ್ಲಿಲದೆ. ರೇಡಿಯೋ ವಿಕಿರಣ ಹೊಂದುವ ಸಮಘಟಕಗಳನ್ನೊಳಗೊಂಡ ನಿರೋಧಜನಕಗಳನ್ನು ಬಳಸಿ, ನಿರೋಧಕ–ನಿರೋಧಜನಕಗಳ ಒತ್ತರವಿರುವ ಪ್ರದೇಶವನ್ನು ಅಟೋರೇಡಿಯೋಗ್ರಫಿ ವಿಧಾನದಿಂದ ಪತ್ತೆ ಮಾಡಬಹುದು.

ನಿರೋಧಕಗಳ ಶುದ್ಧೀಕರಣ: ನಿರೋಧಕಗಳು ವಸೆಯಲ್ಲಿ ಗಾಮಾಗ್ಲಾ ಬ್ಯುಲಿನ್ ಅಂಶದಲ್ಲಿರುತ್ತವೆ. ಶುದ್ಧೀಕರಣದ ಮೊದಲನೆ ಹೆಜ್ಜೆಯಲ್ಲಿ ಗಾಮಾ ಗ್ಲಾಬ್ಯುಲಿನ್ನುಗಳನ್ನು ಮಿಕ್ಕೆಲ್ಲ ಪ್ರೋಟೀನುಗಳಿಂದ ಅಮೋನಿಯಂ ಸಲ್ಫೇಟ್ ಅಥವಾ ಸೋಡಿಯಂ ಸಲ್ಫೇಟ್ ಲವಣಗಳನ್ನು ವಸೆಗೆ ಸೇರಿಸುವುದರ ಮೂಲಕ ಬೇರ್ಪಡಿಸುತ್ತಾರೆ. ಅಮೋನಿಯಂ ಸಲ್ಫೇಟಿನ ಸಂದ್ರಾಣ 1.34 M ರಷ್ಟಿದ್ದಾಗ (M=ಒಂದು ಅಣುಭಾರ, ಗ್ರಾಂಗಳಲ್ಲಿ) ಗಾಮಾಗ್ಲಾಬ್ಯುಲಿನ್ನುಗಳು ಒತ್ತರದ ರೂಪದಲ್ಲಿ ಹೊರಬೀಳುತ್ತವೆ. ಈ ಪ್ರೋಟೀನುಗಳನ್ನು –5° ಸೆಂ.ಗ್ರೇ.ನಲ್ಲಿ ವಸೆಗೆ ಮದ್ಯಸಾರವನ್ನು ಸೇರಿಸುವುದರ ಮೂಲಕ ಬೇರ್ಪಡಿಸಬಹುದು. ಆಲ್ಕೊಹಾಲಿನ (ಮದ್ಯಸಾರ) ಸಾಂದ್ರಣ 20% ಪ್ರಮಾಣವಿದ್ದಾಗ ಗಾಮಾಗ್ಲಾಬ್ಯುಲಿನ್ನುಗಳು ಬೇರ್ಪಡುತ್ತವೆ. ಡಿಇಎಇ–ಲ್ಯುಲೋಸ್ ರಾಳವನ್ನು (ಡಿಇಎಇ ಸೆಲ್ಯುಲೋಸ್ ಅಯಾನ್ ಎಕ್ಸ್‌ಚೇಂಜರ್) ಉಪಯೋಗಿಸಿಯೂ ಬೇರ್ಪಡಿಸಬಹುದು. ಈ ವಿಧಾನಗಳಿಂದ ನಿರೋಧಕಗಳನ್ನು ವಸೆಯ ಇತರ ಪ್ರೋಟೀನುಗಳಿಂದ ಬೇರ್ಪಡಿಸಬಹುದೇ ಹೊರತು ಇತರ ಗಾಮಾಗ್ಲಾಬ್ಯುಲಿನ್ನುಗಳಿಂದಾಗಲೀ ಅಥವಾ ಇತರ ನಿರೋಧಕಗಳಿಂದಾಗಲೀ ಬೇರ್ಪಡಿಸಲಾಗುವುದಿಲ್ಲ. ಯಾವುದೊಂದು ನಿರೋಧಕವನ್ನು ಶುದ್ಧರೂಪದಲ್ಲಿ ಬೇರ್ಪಡಿಸಬೇಕಾದರೆ ಅದರ ಆತ್ಮೀಯ ನಿರೋಧಜನಕವನ್ನು ಬಳಸಬೇಕಾಗುತ್ತದೆ. ಅನೇಕ ನಿರೋಧಕಗಳಿರುವ ದ್ರಾವಣಕ್ಕೆ ಆತ್ಮೀಯ ನಿರೋಧಜನಕದ ದ್ರಾವಣವನ್ನು ಸೇರಿಸಿದರೆ ನಿರೋಧಜನಕಕ್ಕೆ ಸಂಬಂಧಪಟ್ಟ ನಿರೋಧಕ ಮಾತ್ರ ಒತ್ತರಿಸುವುದು. ಒತ್ತರವನ್ನು ಬೇರ್ಪಡಿಸಿ ಅನಂತರ ನಿರೋಧಕವನ್ನು ಸಂಯುಕ್ತದಿಂದ ಬಿಡುಗಡೆ ಮಾಡಬಹುದು. ಒತ್ತರದ ಉಷ್ಣತೆಯನ್ನು ಹೆಚ್ಚಿಸುವುದರಿಂದಾಗಲೀ pH ನ್ನು ತಗ್ಗಿಸುವುದರಿಂದಾಗಲೀ ಅಯನನ ಸಾಂದ್ರಣವನ್ನು ಹೆಚ್ಚಿಸುವುದರಿಂದಾಗಲೀ ಸೋಡಿಯಂ ಡೋಡೆಕೈಲ್ ಸಲ್ಫೇಟ್ ಯೂರಿಯ ಮುಂತಾದ ವಸ್ತುಗಳನ್ನು ಸೇರಿಸುವುದರಿಂದಾಗಲೀ ನಿರೋಧಕವನ್ನು ನಿರೋಧಕ–ನಿರೋಧಜನಕಗಳ ಸಂಯುಕ್ತದಿಂದ ಬೇರ್ಪಡಿಸಬಹುದು. ನಿರೋಧಕವನ್ನು ವಿಶಿಷ್ಟರೀತಿಯಲ್ಲಿ ಬೇರ್ಪಡಿಸಲು ನಿರೋಧಜನಕವನ್ನು ದ್ರಾವಣದ ರೂಪದಲ್ಲಿ ಉಪಯೋಗಿಸುವ ಬದಲು ವಿಲೀನವಾಗದ ರೂಪದಲ್ಲಿ ಉಪಯೋಗಿಸಿದರೆ ನಿರೋಧಕವನ್ನು ಹೆಚ್ಚು ಪ್ರಮಾಣದಲ್ಲಿ ಪಡೆಯಬಹುದು. ಈ ವಿಧಾನದಲ್ಲಿ ಸೆಲ್ಯುಲೋಸನ್ನು (ಹತ್ತಿಯ ಅಂಶ) ಡೈ ಅಜೋಟೈಸ್ ಮಾಡಿ ಅನಂತರ ಪ್ರೋಟೀನ್ ನಿರೋಧಜನಕವನ್ನು ಅದಕ್ಕೆ ಸೇರಿಸಿ ವಿಲೀನವಾಗದ ವಸ್ತುವನ್ನು ಪಡೆಯುತ್ತಾರೆ. ನಿರೋಧಕಗಳಿರುವ ದ್ರಾವಣವನ್ನು ಈ ವಸ್ತುವಿನ ಮೂಲಕ ಹಾಯಿಸಿದರೆ ನಿರೋಧಜನಕಕ್ಕೆ ಆತ್ಮೀಯವಾದ ನಿರೋಧಕ ಮಾತ್ರ ಅಧಿಶೋಷಣೆಯಾಗುತ್ತದೆ. ಅಂದರೆ ವಿಲೀನವಾಗದ ನಿರೋಧಜನಕ ವಿಶಿಷ್ಟವಾದ ಅಧಿಶೋಷಕದಂತೆ ವರ್ತಿಸುತ್ತದೆ. ಅಧಿಶೋಷಕ ನಿರೋಧಕವನ್ನು 1% ಸೋಡಿಯಂ ಕ್ಲೋರೈಡ್ ದ್ರಾವಣದಿಂದ (ಅಡಿಗೆ ಉಪ್ಪು) pH 2.0 ಅಥವಾ 3.2 ರಲ್ಲಿ ಹೊರಹೊರಡಿಸಬಹುದು (ಎಲ್ಯುಟ್).

ಅನೇಕ ಸಂದರ್ಭಗಳಲ್ಲಿ ನಿರೋಧಜನಕ–ನಿರೋಧಕಗಳ ಸಂಯುಕ್ತವನ್ನು ಒಡೆಯಲು ಕಿಣ್ವಗಳನ್ನು ಉಪಯೋಗಿಸಬಹುದು. ಇಂಥ ಕಿಣ್ವಗಳು ನಿರೋಧಜನಕವನ್ನು ಮಾತ್ರ ನಾಶಮಾಡುವಂತಿರಬೇಕು. ಈ ವಿಧಾನವನ್ನು ಔದ್ಯೋಗಿಕಮಟ್ಟದಲ್ಲಿ ನಿರೋಧಕಗಳನ್ನು ಪಡೆಯಲು ಅನುಸರಿಸುತ್ತಾರೆ. ಉದಾಹರಣೆಗೆ, ಡಿಫ್ತೀರಿಯ ರೋಗಾಣುವಿನ ಟಾಕ್ಸಿನ್ ವಿರುದ್ಧ ಪಡೆದ ನಿರೋಧಕ ಅಂಟಿಟಾಕ್ಸಿನ ತಯಾರಿಕೆಯಲ್ಲಿ ಪೆಪ್ಸಿನ್ ಕಿಣ್ವವನ್ನು (ಜಠರದಲ್ಲಿರುವ ಕಿಣ್ವ) ಟಾಕ್ಸಿನ್–ಅಂಟಿಟಾಕ್ಸಿನ್ ಸಂಯುಕ್ತದಿಂದ ಅಂಟಿಟಾಕ್ಸಿನನ್ನು ಬೇರ್ಪಡಿಸಲು ಉಪಯೋಗಿಸುತ್ತಾರೆ. ಈಚೆಗೆ ಸೆಫಾಡೆಕ್ಸ್ ಎಂಬ ರಾಳದ ಮೂಲಕ ನಿರೋಧಕಗಳನ್ನು ಶೋಧಿಸುವ ವಿಧಾನ ಆಚರಣೆಗೆ ಬಂದಿದೆ. ಈ ವಿಧಾನದಲ್ಲಿ ನಿರೋಧಕಗಳು ಅವುಗಳ ಅನುಭಾರವನ್ನನುಸರಿಸಿ ಬೇರ್ಪಡಿಸಲ್ಪಡುತ್ತವೆ.

ನಿರೋಧಕಗಳ ಮೌಲ್ಯ ವಿಶ್ಲೇಷಣೆ: ವಸೆಯಲ್ಲಿರುವ ನಿರೋಧಕಗಳ ಮಟ್ಟವನ್ನು ಖಚಿತವಾಗಿ ಕಂಡುಹಿಡಿಯುವ ಪ್ರಯತ್ನ ಇದುವರೆಗೆ ಸಾರ್ಥಕವಾಗಿಲ್ಲ. ಬಳಕೆಯಲ್ಲಿರುವ ವಿಧಾನಗಳ ಪ್ರಕಾರ ವಸೆಯಿಂದ ನಿರೋಧಕವನ್ನು ಆತ್ಮೀಯ ನಿರೋಧಜನಕದ ಪ್ರಯೋಗ ದಿಂದ ಒತ್ತರಿಸಿ ಒತ್ತರವನ್ನು ತೊಳೆದು ನಿರೋಧಕವನ್ನು ಬಿಡುಗಡೆಮಾಡಿ ಅನಂತರ ನಿರೋಧಕದ ಪ್ರಮಾಣವನ್ನು ಕಂಡುಹಿಡಿಯುವ ಪದ್ಧತಿ ರೂಢಿಯಲ್ಲಿದೆ. ನಿರೋಧಕ ಪ್ರೋಟೀನ್ ವಸ್ತುವಾದ್ದರಿಂದ ಪ್ರೋಟೀನನ್ನು ಅಳೆಯಲು ಉಪಯೋಗಿಸುವ ವಿಧಾನವನ್ನು ಅನುಸರಿಸಬಹುದು. ಈ ವಿಧಾನ ಸುಲಭವೆಂದು ತೋರಿಬಂದರೂ ಒತ್ತರದ ರಚನೆ ಅನೇಕ ಕ್ಲಿಷ್ಟಸಮಸ್ಯೆಗಳಿಂದ ಕೂಡಿರುವುದರಿಂದ ಇದರಲ್ಲಿ ಯಥಾರ್ಥವಾದ ಉತ್ತರ ದೊರೆಯಲಾರದು.

ನಿರೋಧಜನಕ ಬಣ್ಣವುಳ್ಳ ಪದಾರ್ಥವಾದರೆ ಒತ್ತರವನ್ನು ವಿಲೀನಗೊಳಿಸಿ ಬಣ್ಣದ ಸಾಂದ್ರಣವನ್ನು ಅಳೆದು ನಿರೋಧಜನಕದ ಪ್ರಮಾಣವನ್ನು ಕಂಡುಹಿಡಿಯಬಹುದು. ಒತ್ತರದ ತೂಕದಿಂದ ನಿರೋಧಜನಕದ ಪ್ರಮಾಣವನ್ನು ಕಂಡುಹಿಡಿಯಬಹುದು. ಒತ್ತರದ ತೂಕದಿಂದ ನಿರೋಧಜನಕದ ಪ್ರಮಾಣವನ್ನು ಕಳೆದು ನಿರೋಧಕದ ಪ್ರಮಾಣವನ್ನು ಗೊತ್ತುಮಾಡಲಾಗುತ್ತದೆ. ವಿಕಿರಣಶೀಲ ವಸ್ತುವನ್ನೊಳಗೊಂಡ ನಿರೋಧಜನಕವನ್ನು ಉಪಯೋಗಿಸಿ ಒತ್ತರದ ವಿಕಿರಣಶೀಲತೆಯನ್ನು ಅಳೆಯುವುದರ ಮೂಲಕ ನಿರೋಧಜನಕದ ಪ್ರಮಾಣವನ್ನು ಅಳೆಯಬಹುದು. ಒತ್ತರದ ಒಟ್ಟು ತೂಕದಿಂದ ನಿರೋಧಜನಕದ ಪ್ರಮಾಣವನ್ನು ಕಳೆದು ನಿರೋಧಕದ ಪ್ರಮಾಣವನ್ನು ಕಂಡುಹಿಡಿಯಲಾಗುವುದು.

ನಿರೋಧಕಗಳ ಮತ್ತು ಇಮ್ಯೂನೋಗ್ಲಾಬ್ಯುಲಿನ್ನುಗಳ ಘಟನೆ: ನಿರೋಧಕಗಳು ಸದ್ಯಕ್ಕೆ ಇಮ್ಯೂನೋ ಗ್ಲಾಬ್ಯುಲಿನ್ನುಗಳೆಂದು ಕರೆಯಲಾಗುತ್ತಿರುವ ಗ್ಲಾಬ್ಯುಲಿನ್ನುಗಳ ಗುಂಪಿಗೆ ಸೇರಿದ ಪ್ರೋಟೀನುಗಳೆಂದು ಭಾವಿಸಲಾಗಿದೆ. ಇಮ್ಯೂನೋ ಗ್ಲಾಬ್ಯುಲಿನ್ನುಗಳ ರಾಸಾಯನಿಕ ಪ್ರಕೃತಿ ಮತ್ತು ಅವುಗಳ ಭೌತ ಮತ್ತು ರಾಸಾಯನಿಕ ವರ್ತನೆ ಬೇರ್ಪಡಿಸಿದ ನಿರೋಧಕಗ ಳಂತೆಯೇ ಇರುತ್ತವೆ ಎಂಬರ್ಥದಲ್ಲಿ ಈ ಬಗೆಯ ವರ್ಗೀಕರಣ ಮಾಡಲಾಗಿದೆ. ಇಮ್ಯೂನೋಗ್ಲಾಬ್ಯುಲಿನ್ನುಗಳೂ ನಿರೋಧಕಗಳೇ, ಅವುಗಳ ನಿರೋಧಜನಕಗಳ ಅರಿವು ಮಾತ್ರ ನಮಗಿಲ್ಲವೆಂಬ ಅಭಿಪ್ರಾಯವನ್ನು ಆಗಿಂದಾಗ್ಗೆ ಸೂಚಿಸಲಾಗುತ್ತಿದೆ. ಸೂಕ್ಷ್ಮಜೀವಿರಹಿತ ವಾತಾವರಣದಲ್ಲಿ (ಜರ್ಮ್ ಫ್ರೀ ಅಟ್‍ಮಾಸ್ಫಿಯರ್) ಪ್ರಾಣಿಗಳನ್ನು ಬೆಳೆಸಿದರೆ ಅವುಗಳ ರಕ್ತದಲ್ಲಿ ನಿರೋಧಕಗಳ ಮಟ್ಟ ಅತ್ಯಲ್ಪ ಪ್ರಮಾಣದಲ್ಲಿರುತ್ತದೆ. ಇದರಿಂದ ಮೇಲೆ ಹೇಳಿದ ಸೂಚನೆಗೆ ಸ್ವಲ್ಪ ಮಟ್ಟಿಗೆ ಬೆಂಬಲ ದೊರೆತಂತಾಗಿದೆ. ಇಮ್ಯೂನೋಗ್ಲಾಬ್ಯುಲಿನ್ ಗುಂಪಿನ ಪ್ರೋಟೀನುಗಳು ಒಂದೇ ತರಹೆಯ ವಸ್ತುಗಳಾಗಿರದೆ ಭಿನ್ನರೀತಿಯ ಪ್ರೋಟೀನುಗಳನ್ನೊಳ ಗೊಂಡಿವೆ. ಅಲ್ಬುಮಿನ್, ಬೀಟ–ಲ್ಯಾಕ್ಟೋಗ್ಲಾಬ್ಯುಲಿನ್ ಪ್ರೋಟೀನುಗಳನ್ನು ಶುದ್ಧವದ ಹರಳಿನ ರೂಪದಲ್ಲಿ ಪಡೆಯಲಾಗಿದೆ ಮತ್ತು ಅವುಗಳ ರಾಸಾಯನಿಕ ರಚನೆಯನ್ನು ಕೂಡ ಗೊತ್ತುಮಾಡಲಾಗಿದೆ. ಆದರೆ ಇದುವರೆಗೆ ನಿರೋಧಕಗಳ ವಿಷಯದಲ್ಲಿ ಈ ಕಾರ್ಯ ಸಾಧ್ಯವಾಗಿಲ್ಲ. ನಿರೋಧಕಗಳ ಅಣುತೂಕದಲ್ಲಿ ವ್ಯತ್ಯಾಸಗಳಿವೆ ಮತ್ತು ಅವು ವಿವಿಧ ಜೀನಿಗಳ ನೇತೃತ್ವದಲ್ಲಿ ರಚಿಸಲ್ಪಟ್ಟಿವೆ. ಒಂದೇ ನಿರೋಧಜನಕಕ್ಕೆ ವಿರುದ್ಧವಾಗಿ ಉತ್ಪತ್ತಿಯಾದ ನಿರೋಧಕಗಳು ಕೂಡ ಈ ಬಗೆಯ ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ. ಈ ವ್ಯತ್ಯಾಸಗಳ ದೆಸೆಯಿಂದ ನಿರೋಧಕಗಳ ರಾಸಾಯನಿಕ ರಚನೆಯನ್ನು ಕಂಡುಹಿಡಿಯುವ ಕಾರ್ಯ ಸುಲಭವಾಗಿಲ್ಲ. ದೊರೆತ ಉತ್ತರಗಳೂ ಕರಾರುವಾಕ್ಕೆಂದು ಹೇಳಬರುವುದಿಲ್ಲ.

ನಿರೋಧಕಗಳ ವೈವಿಧ್ಯಕ್ಕೆ ಎರಡು ಮುಖ್ಯಕಾರಣಗಳಿವೆ. ಮೊದಲನೆಯದಾಗಿ ನಿರೋಧಜನಕಗಳಲ್ಲಿ ಒಂದಕ್ಕಿಂತ ಹೆಚ್ಚಾಗಿ ನಿರ್ದಿಷ್ಟಕ ಗುಂಪುಗಳಿರಬಹುದು. ಪ್ರತಿಯೊಂದು ಗುಂಪಿನ ವಿರುದ್ಧವಾಗಿಯೂ ನಿರೋಧಕಗಳು ಉತ್ಪತ್ತಿಯಾಗುವುದರಿಂದ ವೈವಿಧ್ಯ ಉಂಟಾಗುತ್ತದೆ. ಎರಡನೆಯದಾಗಿ ಒಂದೇ ನಿರೋಧಜನಕದ ವಿರುದ್ಧವಾಗಿ ದೇಹದ ಅನೇಕ ಅಂಗಾಂಶಗಳು ನಿರೋಧಕಗಳನ್ನು ರಚಿಸುತ್ತವೆ. ಪ್ರತಿ ಒಂದು ಅಂಗವೂ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ನಿರೋಧಕಗಳನ್ನು ರಚಿಸುವುದರಿಂದಲೂ ವೈವಿಧ್ಯ ಉಂಟಾಗುತ್ತದೆ. (ಹೆಟರೋಜಿನೈಟಿ). ಇಮ್ಯೂನ್ ವಸೆಯನ್ನು (ಪ್ರತಿರಕ್ಷಿತ ವಸೆ) ವಿದ್ಯುತ್‍ಕ್ಷೇತ್ರ ಚಲನ (ಎಲೆಕ್ಟ್ರೋಫಾರಿಸಿಸ್) ವಿದಾನದಿಂದ ಮತ್ತು ಅತಿವೇಗ ಭ್ರಮಣಯಂತ್ರದಲ್ಲಿ ಪರೀಕ್ಷಿಸಿದಾಗ ಐದುವರ್ಗದ ಇಮ್ಯೂನೋಗ್ಲಾಬ್ಯುಲಿನ್ನುಗಳು ತೋರಿಬರುತ್ತವೆ. ಈ ಗುಂಪುಗಳನ್ನು ಸಮವರ್ಗ (ಐಸೋಟೈಪ್ಸ್) ಎನ್ನುವುದೂ ಉಂಟು. ಇವನನು ವಿಶ್ವ ಆರೋಗ್ಯ ಸಂಸ್ಥೆ (ವರ್ಲ್ಡ್‍ಹೆಲ್ತ್ ಆರ್ಗನೈಸೇಷನ್) ಮಾಡಿರುವ ಸೂಚನೆಯ ಮೇರೆಗೆ (1964) $\gamma$G, $\gamma$A, $\gamma$M, $\gamma$D, ಮತ್ತು $\gamma$E ಎಂದು ಕರೆಯಲಾಗಿದೆ. ಇವನ್ನು IgG, IgA, IgM, IgD ಮತ್ತು IgE ಎಂಬ ಸಂಕೇತಗಳಿಂದಲೂ ಗುರುತಿಸಲಾಗಿದೆ. ಈ ಐದುವರ್ಗಗಳ ಗುಣಗಳನ್ನು ಕೋಷ್ಟಕ 1ರಲ್ಲಿ ತೋರಿಸಿದೆ.

ನಿರೋಧಕಗಳ ಮೂಲಭೂತ ಘಟನೆ ಹೀಗಿದೆ. ನಿರೋಧಕ ಒಂದು ಅಣುವಿನಲ್ಲಿ ಎರಡು ಗುರು (ಹೆವಿ) ಪೆಪ್ಟೈಡ್ ಶ್ರೇಣೀಗಳೂ (H–ಚೈನ್ಸ್) ಎರಡು ಲಘು ಪೆಪ್ಟೈಡ್ ಶ್ರೇಣಿಗಳೂ (L–ಚೈನ್ಸ್) ಇರುತ್ತವೆ. IgG, IgA, IgD, IgE ಮತ್ತು IgM ವರ್ಗಗಳು ಅವುಗಳಲ್ಲಿರುವ ಗುರುಶ್ರೇಣಿಯ ಪ್ರಕೃತಿಯನ್ನನುಸರಿಸಿ ಮರುವಿಂಗಡಿಸಲ್ಪಟ್ಟಿವೆ. ಗುರುಶ್ರೇಣಿಯನ್ನು $Y$, x, $\delta$, ಮತ್ತು $\mu$ ಎಂಬುದಾಗಿ ವರ್ಗೀಕರಣ ಮಾಡಿದ್ದಾರೆ. ಈ ವರ್ಗೀಕರಣವನ್ನು ಆ ಶ್ರೇಣಿಗಳ ಗಾತ್ರ ಮತ್ತು ನಿರೋಧಜನಕಶೀಲತೆಗಳ ಆಧಾರದ ಮೇಲೆ ಮಾಡಲಾಗಿದೆ. (ಗುರುಶ್ರೇಣಿಗಳನ್ನು ಲಘುಶ್ರೇಣಿಗಳಿಂದ ಪ್ರತ್ಯೇಕಿಸಬಹುದು. ಪ್ರತ್ಯೇಕಿಸಲ್ಪಟ್ಟ ಗುರುಶ್ರೇಣಿಗಳನ್ನು ಭಿನ್ನಜಾತಿಯ ಪ್ರಾಣಿಗೆ ಚುಚ್ಚಿದರೆ ಅವು ನಾಲ್ಕು ತರಹೆಯ ನಿರೋಧಕಗಳ ಉತ್ಪತ್ತಿಯನ್ನು ಪ್ರೇರೇಪಿಸುವುದರಿಂದ ಅವನ್ನು ನಾಲ್ಕು ಪಂಗಡಗಳನ್ನಾಗಿ ವಿಂಗಡಿಸಲಾಗಿದೆ). ಲಘುಶ್ರೇಣಿಗಳನ್ನು ರಚನೆ ಮತ್ತು ನಿರೋಧಜನಕ ಶೀಲತೆಯ ಆಧಾರದ ಮೇಲೆ $K$ (ಕಪ್ಪಾ) ಮತ್ತು ë (ಲ್ಯಾಮ್ಡಾ) ಎಂಬ ಎರಡು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಯಾವುದೇ ಒಂದು ಗುಂಪಿಗೆ ಸೇರಿದ ($\kappa$ ಆಗಲಿ ಅಥವಾ ë ಆಗಲಿ) ಎರಡು ಲಘುಶ್ರೇಣಿಗಳು ಒಂದೇ ಗುಂಪಿಗೆ ($\mu$ ವಿನಾ) ಎರಡು ಗುರುಶ್ರೇಣಿಗಳೊಂದಿಗೆ ಸೇರಿ ಒಂದು ನಿರೋಧಕ ಅಣುವನ್ನು ರಚಿಸುತ್ತವೆ. ಅಂದರೆ ಒಂದು ನಿರೋಧಕ ಅಣುವಿನಲ್ಲಿ ನಾಲ್ಕು ಪೆಪ್ಟೈಡ್ ಶ್ರೇಣಿಗಳಿರುತ್ತವೆ. IgG ಅಣುವಿನ ಸೂತ್ರವನ್ನು $K_2Y_2$ ಅಥವಾ ಎಂಬುದಾಗಿ $ë_2\mu_2$ ಸೂಚಿಸಬಹುದು. ಅಂತೆಯೇ ಇತರ ಇಮ್ಯೂನೋಗ್ಲಾಬ್ಯುಲಿನ್ನುಗಳ ಸೂತ್ರವನ್ನು ಇದೇ ರೀತಿ ಸೂಚಿಸಬಹುದು. ಉದಾಹರಣೆಗೆ, $k_2x_2$ ಅಥವಾ $k_2x_2$. Igm ಬೃಹದಣುವಿನಲ್ಲಿ ಐದು $K$ ಅಥವಾ ë ಶ್ರೇಣಿಗಳೂ ಐದು $\mu$ ಶ್ರೇಣಿಗಳೂ ಇವೆ.

IgG ಅಣುವಿನ ಗುರುಶ್ರೇಣಿಯಲ್ಲಿ ($\Upsilon$ ವರ್ಗ) ನಾಲ್ಕು ಉಪವರ್ಗಗಳಿವೆ. ಇವನ್ನು $YG_1$, $\Upsilon G_2$, $\Upsilon G_3$ ಮತ್ತು $\Upsilon G_4$ ಎಂದು ಕರೆಯಲಾಗಿದೆ. $a$ ಶ್ರೇಣಿಯಲ್ಲಿ $\Upsilon A_a$ ಮತ್ತು $\Upsilon A_b$ ಎಂಬ ಎರಡು ಪಂಗಡಗಳಿವೆ.

ಒಂದೇ ಒಂದು ನಿರೋಧ ಅಣುವಿನ ಘಟನೆಯನ್ನು ಪರಿಶೀಲಿಸಿದಲ್ಲಿ ಅದರಲ್ಲಿ ಒಂದೇ ವರ್ಗದ ಎರಡು ಲಘುಶ್ರೇಣಿಗಳೂ ಒಂದೇ ವರ್ಗಕ್ಕೆ ಸೇರಿದ ಎರಡು ಗುರು ಶ್ರೇಣಿಗಳೂ ಇರುತ್ತವೆ. ಅದ್ದರಿಂದ ಒಂದು ನಿರೋಧಕ ಅಣು ಸಮರೂಪತೆಯನ್ನು (ಸಿಮೆಟ್ರಿ) ಪ್ರದರ್ಶಿಸುತ್ತದೆ. ಪ್ರಕೃತಿಯಲ್ಲಿ ಇದುವರೆಗೆ ಸಂಕರವರ್ಗದ (ಹೈಬ್ರಿಡ್) ನಿರೋಧಕ ಅಣುವನ್ನು ಬೇರ್ಪಡಿಸಲಾಗಿಲ್ಲ. ನಿರೋಧಕದ ಅಣುವಿಗೆ ಚಿತ್ರದಲ್ಲಿ ಸೂಚಿಸಿರುವ ಘಟನೆ ಇರಬಹುದೆಂಬ ಅಭಿಪ್ರಾಯ ಹಲವಾರು ಪ್ರಯೋಗಗಳ ಆಧಾರದಿಂದ ಮಾಡಿದೆ. ಚಿತ್ರದಲ್ಲಿ ತೋರಿಸಿರುವಂತೆ ನಾಲ್ಕು ಪೆಪ್ಟೈಡ್ ಶ್ರೇಣಿಗಳೂ ಒಂದೇ ಸಮತಲದಲ್ಲಿಲ್ಲ. ಮೊಲದಿಂದ ಪಡೆದ ನಿರೋಧಕಗಳು ಕಡ್ಡಿಯಂತೆ ದುಂಡಗಿರುವ ಕಣಗಳೆಂದು ತೋರಿಸಲಾಗಿದೆ. ಈ ಕಣಗಳ ಉದ್ದ 200Å-250Å ಮತ್ತು ಅಡ್ಡಳತೆ 30Å-40Å.




**ಚಿತ್ರ 3. Igb ಇಮ್ಯೂನೋ ಗ್ಲಾಬ್ಯುಲಿನ್ ರಚನೆಯ ಒಂದು ಮಾದರಿ**

ನಿರೋಧಕ ನಿರೋಧಜನಕಗಳೊಂದಿಗೆ ವಿಶಿಷ್ಟ ರೀತಿಯಲ್ಲಿ ಸೇರುವ ಗುಣ ಅವುಗಳ ಅಮೈನೋ ಆಮ್ಲಗಳ ನಿರ್ದಿಷ್ಟ ಜೋಡಣೆಯಿಂದ ಉಂಟಾಗುತ್ತದೆ. ಅಣುವಿನಲ್ಲಿರುವ *S-S* ಬಂಧಗಳನ್ನು ಅಪಕರ್ಷಿಸಿ ಛೇದಿಸಿದರೆ ಸೇರುವ ಸಾಮರ್ಥ್ಯನಷ್ಟವಾಗುವುದು.

ಅಪಕರ್ಷಿತ ಅಣುವನ್ನು ಮತ್ತೆ ಉತ್ಕರ್ಷಿಸಿದರೆ ಈ ಗುಣ ಮತ್ತೆ ಉಂಟಾಗುವುದು. ಅಣುವಿನಲ್ಲಿ 2%–3% ಶರ್ಕರಾಂಶವಿದೆ. ಈ ಅಂಶ Fc ಭಾಗದಲ್ಲಿದೆ ಮತ್ತು ನಿರೋಧಕಗಳು ನಿರೋಧಜನಕಗಳೊಂದಿಗೆ ಸೇರ್ಪಡೆಯಾಗುವ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ.

ಲಘುಶ್ರೇಣಿಯ ರಚನೆ: ಮಾನವನ ಮತ್ತು ಮೂಗಿಲಿಯ ಇಮ್ಯೂನೋಗ್ಲಾಬ್ಯುಲಿನ್ನುಗಳು ಬಹುಶಃ ಇತರ ವರ್ಗದ ಪ್ರಾಣಿಗಳ ಇಮ್ಯೂನೋಗ್ಲಾಬ್ಯುಲಿನ್ನುಗಳ–ಲಘುಶ್ರೇಣಿಗಳು $K$ ಮತ್ತು ë ಎಂಬ ವರ್ಗಗಳಿಗೆ ಸೇರಿದೆ ಎಂದು ಮೇಲೆ ಹೇಳಿದೆ. ಇವೆರಡು ಶ್ರೇಣಿಗಳನ್ನು ಅನೇಕ ವಿಧಾನಗಳಿಂದ ಬೇರ್ಪಡಿಸಬಹುದು. ಬೇರ್ಪಡಿಸಿ ಶುದ್ಧ ಮಾಡಲ್ಪಟ್ಟ

ಲಘುಶ್ರೇಣಿಗಳನ್ನು ವಿದ್ಯುತ್‌ಕ್ಷೇತ್ರ ಚಲನ (ಎಲೆಕ್ಟ್ರೋಫಾರಿಸಿಸ್) ವಿಧಾನದಿಂದ ಪರೀಕ್ಷಿಸಿದರೆ ಶುದ್ಧವಾದ ಲಘುಶ್ರೇಣಿ ಸಹ ಒಂದೇ ತರಹದ ಪೆಪ್ಟೈಡ್ ಶ್ರೇಣಿಗಳನ್ನೊಳಗೊಂಡಿರದೆ ನಾನಾ ಪೆಪ್ಟೈಡುಗಳ ಮಿಶ್ರಣವೆಂದು ತಿಳಿಯುತ್ತದೆ. ಆದರೆ ಮಾನವನ ಮಯೋಲೋಮಾ ಪ್ರೋಟೀನುಗಳು ಕೇವಲ ಒಂದು ಅಥವಾ ಎರಡು ತರಹೆಯ ಪ್ರೋಟೀನುಗಳ ಮಿಶ್ರಣ. ಮೂಗಿಲಿಯ ಮಯೋಲೋಮಾ ಪ್ರೋಟೀನುಗಳಲ್ಲಿರುವ ಲಘುಶ್ರೇಣಿಗಳು *K* ಮಾದರಿಯವು. ಸ್ಟಾರ್ಚ್‌ಜೆಲ್ಲಿನಲ್ಲಿ ವಿದ್ಯುತ್‌ಕ್ಷೇತ್ರ ಒಳಪಡಿಸಿದಾಗ ಈ ಪ್ರೋಟೀನುಗಳು ಎರಡು ಫಲವಾಗಿ ಎಲ್ಲ ಬೆನ್ಸ್–ಜೋನ್ಸ್ ಪ್ರೋಟೀನುಗಳ ಶ್ರೇಣಿಯಲ್ಲಿ ಕಾರ್ಬಾಕ್ಸಿ ಅಂತ್ಯದ (ಆಮ್ಲಾಂಶ ಅಂತ್ಯ) 107 ಅಮೈನೋ ಆಮ್ಲಗಳ ರಚನಾಕ್ರಮ ಒಂದೇ ಆಗಿದ್ದು ಮನುಷ್ಯನ ಲಘುಶ್ರೇಣಿಯ *K* ಅಥವಾ ë ಶ್ರೇಣಿಗಳ ಕಾರ್ಬಾಕ್ಸಿ ಅಂತ್ಯದ 107 ಅಮೈನೋ ಅಮ್ಲಗಳ ರಚನೆಯನ್ನು ಕರಾರುವಾಕ್ಕಾಗಿ ಹೋಲುತ್ತವೆ. ಅದರೆ ಅಮೈನೋ ಅಂತ್ಯದ ($NH_2$ ಟರ್ಮಿನಲ್) 105 ಅಮೈನೋ ಆಮ್ಲಗಳ ರಚನೆಯಲ್ಲಿ ಒಬ್ಬ ವ್ಯಕ್ತಿಯ ಪ್ರೋಟೀನ್ ಇನ್ನೊಬ್ಬ ವ್ಯಕ್ತಿಯ ಪ್ರೋಟೀನುಗಳನ್ನು ಹೋಲುವುದಿಲ್ಲ ಎಂದು ತಿಳಿದು ಬಂದಿತು. ಈ

ಕೋಷ್ಟಕ–1
ಮನುಷ್ಯನ ಇಮ್ಯೂನೋಗ್ಲಾಬ್ಯುಲಿನ್ ವರ್ಗಗಳು

| ವರ್ಗ | γG | A | γM | γD | γE |
|---|---|---|---|---|---|
| * ಗುರುಶ್ರೇಣಿಗಳು<br>ವರ್ಗ<br>ಉಪವರ್ಗ<br>ಅಣು ಭಾರ | <br>γ<br>$\gamma_1, \gamma_2, \gamma_3, \gamma_4$<br>53,000 | <br>*a*<br>$a_1 a_2$<br>64,000 | <br>μ<br>–<br>70,000 | <br>δ<br>–<br>– | <br>∊<br>–<br>75,0010 |
| * ಲಘುಶ್ರೇಣಿಗಳು<br>ಅಣು ಭಾರ<br>22,500<br>ಅಣುಸೂತ್ರ | κ.ë<br>($K_2$ $_2$) | κ.ë<br>($K_2$ë$_2$) | κ.ë<br>$(K_2\mu_2)_5$ | κ.ë<br>$(K_2\delta_2)$ | κ.ë<br>$(K_2\epsilon_2)$ |
| $S_{20w}$ | 6.5–7.0 | 7,10,13.15 | 18–20 | 6.2–6.8 | 7.9 |
| ಅಣುಭಾರ (ಒಟ್ಟಿನ) | 1,50,000 | 1.80,000–5,00,000 | 9.50,000 | – | 1.96,000 |
| ಶರ್ಕರಾಂಶ (ಶೇಕಡ) | 2.9 | 7.5 | 11.8 | – | 10.7 |
| ಮನುಷ್ಯನ ವಸೆಯಲ್ಲಿರುವ ಸಾಂದ್ರಣ ಮಿಲಿಗ್ರಾಂ/100 ಮಿಲಿಲೀಟರ್ | 800–1,680 | 140–200 | 50–190 | 3–40 | 0.01–.14 |

* ಮುಂದೆ ನೋಡಿ.

ಅಥವಾ ಮೂರು ಪ್ರದೇಶಗಳಲ್ಲಿ ಕಾಣಬರುತ್ತವೆ. ಈ ವ್ಯತ್ಯಾಸ ಅವುಗಳಲ್ಲಿ ಇರುವ ನ್ಯೂರಮಿನಿಕ್ ಆಮ್ಲದ ಸಂಖ್ಯೆಯಲ್ಲಿರುವ ವ್ಯತ್ಯಾಸದಿಂದುಂಟಾಗಿದೆ. ನ್ಯೂರಮಿನಿಕ್ ಆಮ್ಲವನ್ನು ಪ್ರೋಟೀನುಗಳಿಂದ ತೆಗೆದರೆ ಎಲ್ಲ ಮಯೋಲೋಮಾ ಪ್ರೋಟೀನುಗಳೂ ಒಂದೇ ಪ್ರದೇಶದಲ್ಲಿ ಕಾಣುತ್ತವೆ. ಮಯೋಲೋಮಾ ಪ್ರೋಟೀನುಗಳ ಲಘುಶ್ರೇಣಿಗಳು ಒಂದೇ ಮಾದರಿಯ ಪ್ರೋಟೀನುಗಳು ಎಂಬ ಶೋಧನೆಯಿಂದ ಇಮ್ಯೂನೋಗ್ಲಾಬ್ಯುಲಿನ್ನುಗಳ ಲಘುಶ್ರೇಣಿಯ ರಚನೆಯನ್ನು ಕಂಡುಹಿಡಿಯಲು ಸಾಧ್ಯವಾಯಿತು. ಮಯೋಲೋಮಾ ಎನ್ನುವುದು ಮನುಷ್ಯನ ಎಲುಬಿನ ನೆಣದ (ಬೋನ್ ಮ್ಯಾರೋ) ದುಗ್ಧಗ್ರಂಥಿಗಳಿಗೆ ಉಂಟಾಗುವ ಅರ್ಬುದರೋಗ

ಮೇಲೆ ಹೇಳಿದ ಈಡಿಯೋಟೈಪ್ ಮತ್ತು ಐಸೋಟೈಪುಗಳಲ್ಲದೆ ನಿರೋಧಕಗಳನ್ನು ಅಲೋಟೈಪ್ಸ್ ಎಂಬುದಾಗಿಯೂ ವರ್ಗೀಕರಿಸಬಹುದು. ಈ ಬಗೆಯ ವೈವಿಧ್ಯ ಒಂದೇ ಜೀನಿಯಲ್ಲಿರುವ ವಿವಿಧ ಅಲೀಲುಗಳು ಬೇರೆಬೇರೆ ರೀತಿಯ ನಿರೋಧಕಗಳ ರಚನೆಯನ್ನು ನಿರ್ದೇಶಿಸುವುದರಿಂದ ಉಂಟಾಗುತ್ತದೆ. ಒಂದೇ ನಿರೋಧಜನಕಕ್ಕೆ ವಿರುದ್ಧವಾದ ನಿರೋಧಕಗಳು ಈ ಬಗೆಯ ನಾನಾವರ್ಗಗಳಿಗೆ ಸೇರುವುದರಿಂದ ಅವುಗಳ ರಾಸಾಯನಿಕ ವಿಶ್ಲೇಷಣೆ ಕಷ್ಟವಾದ ಕೆಲಸ. (ಟ್ಯೂಮರ್). ಈ ಕಾಯಿಲೆಯಿಂದ ನರಳುವ ರೋಗಿಯ ಮೂತ್ರದಲ್ಲಿ ಬೆನ್ಸ್–ಜೋನ್ಸ್ ಎಂಬ ಪ್ರೋಟೀನುಗಳು ವಿಸರ್ಜಿಸಲ್ಪಡುತ್ತವೆ. ಮೂತ್ರವನ್ನು 45°–55° ಸೆಂ.ಗ್ರೇಡಿನಲ್ಲಿ ಕಾಯಿಸಿದರೆ ಇವು ಒತ್ತರಿಸುತ್ತವೆ. ಬೆನ್ಸ್–ಜೋನ್ಸ್ ಪ್ರೋಟೀನುಗಳ ಗುಣಗಳು ಮನುಷ್ಯನ ಇಮ್ಯೂನೋಗ್ಲಾಬ್ಯುಲಿನ್ನುಗಳ ಗುಣಗಳನ್ನು ಬಲುಮಟ್ಟಿಗೆ ಹೋಲುತ್ತದೆ. ಮನುಷ್ಯನ ನಿರೋಧಕದ Fab ಅಂಶಕ್ಕೆ ವಿರುದ್ಧವಾಗಿ ಉತ್ಪತ್ತಿಯಾದ ನಿರೋಧಕಗಳಿಂದ ಒತ್ತರಿಸಲ್ಪಡುತ್ತವೆ. ಬೇರೆ ಬೇರೆ ವ್ಯಕ್ತಿಗಳಿಂದ ವಿಸರ್ಜಿಸಲ್ಪಟ್ಟ ಬೆನ್ಸ್–ಜೋನ್ಸ್ ಪ್ರೋಟೀನುಗಳು ವಿದ್ಯುತ್‌ಕ್ಷೇತ್ರ ಚಲನ ವಿಧಾನದಲ್ಲಿ ಭಿನ್ನವೇಗಗಳಿಂದ ಚಲಿಸುತ್ತವೆ ಮತ್ತು ಅವುಗಳ ಅಮೈನೋ ಆಮ್ಲಗಳ ಘಟನೆಯಲ್ಲಿ ವ್ಯತ್ಯಾಸಗಳು ಕಂಡುಬಂದಿದೆ. ಪ್ರತಿಯೊಬ್ಬ ವ್ಯಕ್ತಿಯ ಬೆನ್ಸ್–ಜೋನ್ಸ್ ಪ್ರೋಟೀನುಗಳು ಪರಿಶುದ್ಧವಾಗಿರುವುದರಿಂದ ಅವುಗಳ ಅಮೈನೋ ಆಮ್ಲಗಳ ರಚನೆಯನ್ನು ನಿರ್ಧರಿಸಬಹುದು. ಈ ಬಗೆಯ ವಿಶ್ಲೇಷಣೆಯ ಭಾಗಗಳಿಗೆ ಸ್ಥಿರ (ಇನ್‌ವೇರಿಯಂಟ್) ಮತ್ತು ಅಸ್ಥಿರ (ವೇರಿಯಂಟ್) ಭಾಗಗಳೆಂದು ಹೆಸರಿಡಲಾಗಿದೆ. ಪ್ರತಿಯೊಬ್ಬ ರೋಗಿ ಅಮೈನೋ ಅಂತ್ಯದಲ್ಲಿ ನಿರ್ದಿಷ್ಟ ರೀತಿಯಲ್ಲಿ ಅಮೈನೋ ಆಮ್ಲಗಳ ಅನುಕ್ರಮ ರಚನೆಯುಳ್ಳ ಪ್ರೋಟೀನುಗಳನ್ನು ವಿಸರ್ಜಿಸುತ್ತಾನೆ. ಅಸ್ಥಿರಭಾಗದಲ್ಲಿರುವ 105 ಅಮೈನೋ ಆಮ್ಲಗಳಲ್ಲಿ ಕನಿಷ್ಠಪಕ್ಷ 30 ಆಮ್ಲಗಳಲ್ಲಿ ಅನುಕ್ರಮವಾಗಿ ಸ್ಥಳಪಲ್ಲಟಣೆ ಕಂಡುಬಂದಿದೆ. ಅಮೈನೋ ಆಮ್ಲಗಳ ಸ್ಥಾನಗಳು ಜೀನಿಯಲ್ಲಿರುವ ಪ್ರತ್ಯಾಮ್ಲಗಳ ತ್ರಿವಳಿ ಶ್ರೇಣಿಗಳಿಂದ ನಿರ್ಧರಿಸಲ್ಪಡುತ್ತದೆ (ಬೇಸ್ ಟ್ರಿಪ್ಲೆಟ್). ಅಸ್ಥಿರ ಭಾಗದಲ್ಲಿ ಉಂಟಾಗುವ ಅನುಕ್ರಮ ವ್ಯತ್ಯಾಸಕ್ಕೆ ಸಂಕೇತ ತ್ರಿವಳಿಯಲ್ಲಿರುವ (ಕೋಡಿಂಗ್ ಟ್ರಿಪ್ಲೆಟ್) ಒಂದೇ ಒಂದು ಪ್ರತ್ಯಾಮ್ಲದಲ್ಲಿ ಉಂಟಾಗುವ ವ್ಯತ್ಯಾಸ ಬಲುಮಟ್ಟಿಗೆ ಕಾರಣ.

ಕುದುರೆ ಮತ್ತು ಮೊಲಗಳಲ್ಲಿ ಮಯೋಲೋಮಾ ಕಾಯಿಲೆ ಉಂಟಾಗುವುದಿಲ್ಲ. ಆದರೆ ಮೂಗಿಲಿಯಲ್ಲಿ (ಮೌಸ್). ಈ ಕಾಯಿಲೆಯನ್ನು ಉಂಟುಮಾಡಬಹುದು. ಒಂದು ಇಲಿಯಿಂದ ಮತ್ತೊಂದು ಇಲಿಗೆ ವರ್ಗಾಯಿಸಲೂಬಹುದು. ಮೂಗಿಲಿಗಳು ಮನುಷ್ಯರಂತೆ ಗಾಮಾಗ್ಲಾಬ್ಯುಲಿನ್ನುಗಳನ್ನು ಬೆನ್ಸ್–ಜಾನ್ಸ್ ತರಹೆಯ ಪ್ರೋಟೀನುಗಳನ್ನು ಉತ್ಪತ್ತಿಮಾಡುತ್ತವೆ. ಮೂಗಿಲಿಯ *K* ಲಘುಶ್ರೇಣಿಗಳ ಸ್ಥಿರಭಾಗದ ಅಮೈನೋ ಆಮ್ಲಗಳ ಅನುಕ್ರಮ ಮನುಷ್ಯನ *K* ಶ್ರೇಣಿಯ ಸ್ಥಿರಭಾಗದ ಅನುಕ್ರಮವನ್ನು ಬಲುಮಟ್ಟಿಗೆ ಹೋಲುತ್ತದೆ. ಎರಡರಲ್ಲೂ 107 ಅಮೈನೋ ಅಮ್ಲಗಳಿವೆ. ಅವುಗಳ ಪೈಕಿ 62 ಅಮೈನೋ ಅಮ್ಲಾಂಶಗಳು ಎರಡು ಶ್ರೇಣಿಗಳಲ್ಲಿ ತದ್ವತ್ತಾಗಿರುತ್ತವೆ (ಐಡೆಂಟಿಕಲ್). ವ್ಯತ್ಯಸ್ತವಾಗಿರುವ 45 ಅಮೈನೋ ಅಂಶಗಳ: ಪೈಕಿ 31 ಅಂಶಗಳನು ತ್ರಿವಳಿಸಂಕೇತದಲ್ಲಿ ಒಂದು ಪ್ರತ್ಯಾಮ್ಲದ ವ್ಯತ್ಯಾಸದಿಂದಲೂ 14 ಅಂಶಗಳನ್ನು ಎರಡು ಪ್ರತ್ಯಾಮ್ಲಗಳ ವ್ಯತ್ಯಾಸದಿಂದಲೂ ಪರಸ್ಪರ ಬದಲಾಯಿಸಬಹುದು. ಅಂದರೆ ಇಲಿ ಮತ್ತು ಮನುಷ್ಯನಲ್ಲಿ ಸಾಮಾನ್ಯವಾದ ಭಾಗದ ಅಮೈನೋ ಆಮ್ಲಗಳಲ್ಲಿ ಉಂಟಾಗಿರುವ ಭೇದ 29 ಪ್ರತ್ಯಾಮ್ಲ ವ್ಯತ್ಯಾಸಗಳಿಂದಾಗಿವೆ. ಈ ಸಂಶೋಧನೆಯಿಂದ ಎಲ್ಲ ಲಘುಶ್ರೇಣಿಗಳು (ಅಂದರೆ ಎಲ್ಲ ಪ್ರಾಣಿಗಳಲ್ಲಿ ಉತ್ಪತ್ತಿಯಾಗುವ ಎಲ್ಲ ಲಘುಶ್ರೇಣಿಗಳು) ಒಂದೇ ಪುರಾತನ ಲಘುಶ್ರೇಣಿಯಿಂದ ಉಂಟಾಗಿರುವುವು ಎಂದೂ ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ಉಂಟಾದ ವಿಕಾಸದ ಅಂಗವಾಗಿ ಆಗಾಗ್ಗೆ ಜೀನಿಯಲ್ಲಿ ಉಂಟಾದ

ಮಾರ್ಪಾಟುಗಳಿಂದ ಅಲ್ಲಲ್ಲಿ ಅಮೈನೋ ಆಮ್ಲಗಳು ಬದಲಾವಣೆ ಹೊಂದಿದವುಗಳೆಂದೂ ಬದಲಾವಣೆ ಹೊಂದಿದ ಲಘುಶ್ರೇಣಿಯಲ್ಲಿ ಆರಿಸಿ ಉಳಿದ ಶ್ರೇಣಿಗಳನ್ನು ಮಾತ್ರ ಪ್ರಕೃತಿ ಬಾಳಲು ಯೋಗ್ಯವೆಂದು ಆರಿಸಿತೆಂದೂ ಊಹಿಸಲಾಗಿದೆ.

ಮನುಷ್ಯನ ಲಘುಶ್ರೇಣಿಯಲ್ಲಿ ಎರಡು ಸಿಸ್ಟೈನ್ ಅಂಶಗಳಿವೆ. ಈ ಅಂಶಗಳು ಸರಪಣಿಯಲ್ಲಿರುವ ಡೈಸಲ್ಫೈಡ್ ಬಂಧಕ್ಕೆ ಕಾರಣವಾಗಿವೆ. ಇವಲ್ಲದೆ ಒಂದು ಸಿಸ್ಟೈನ್ ಅಂಶವೂ ಇದೆ. ಈ ಅಂಶ ಅಮ್ಲಾಂತ್ಯಭಾಗದಲ್ಲಿದೆ ಮತ್ತು ಪೂರ್ಣ ಗಾಮಾಗ್ಲಾಬ್ಯುಲಿನ್ನಿನಲ್ಲಿ ಗುರುಶ್ರೇಣಿ ಮತ್ತು ಲಘುಶ್ರೇಣಿಗಳ ನಡುವೆ ಡೈಸಲ್ಫೈಡ್ ಬಂಧವನ್ನು ಏರ್ಪಡಿಸುತ್ತದೆ.

ಇತ್ತೀಚೆಗೆ ಮನುಷ್ಯನ ಮೂರು ė ಶ್ರೇಣಿಯ ಅಮೈನೋ ಆಮ್ಲಗಳ ಕ್ರಮಾನುಗತಿಯನ್ನು ಕಂಡುಹಿಡಿಯಲಾಗಿದೆ. ಈ ಮೂರು ಶ್ರೇಣಿಗಳ ಉದ್ದ ಒಂದೇ ಸಮನಾಗಿಲ್ಲ. ಅಂತ್ಯಭಾಗದ 105 ಅಮೈನೋ ಅಮ್ಲಗಳ ಕ್ರಮಾನುಗತಿ (ಸೀಕ್ವೆನ್ಸ್) ಒಂದೇ ಆಗಿದೆ. ಮನುಷ್ಯನ $\kappa$ ಲಘುಶ್ರೇಣಿಯಲ್ಲಿ ಸ್ಥಿರವಾದ ಭಾಗವನ್ನು ė ಲಘುಶ್ರೇಣಿಯ ಸ್ಥಿರಭಾಗಕ್ಕೆ ಹೋಲಿಸಿದಾಗ $\kappa$ ಶ್ರೇಣಿಯಲ್ಲಿ ವ್ಯತ್ಯಾಸ ಹೊಂದದ ಭಾಗಗಳು ė ಶ್ರೇಣಿಯಲ್ಲಿಯೂ ವ್ಯತ್ಯಾಸ ಹೊಂದಿರುವುದಿಲ್ಲವೆಂದೂ $K$ದಲ್ಲಿ ವ್ಯತ್ಯಸ್ತವಾಗುವ ಭಾಗ ė ಶ್ರೇಣಿಯಲ್ಲಿಯೂ ವ್ಯತ್ಯಾಸ ಹೊಂದುವುದೆಂದೂ ತಿಳಿದುಬಂತು.

ಇಮ್ಯೂನೋಗ್ಲಾಬ್ಯುಲಿನ್ (IgG) ಗುರುಶ್ರೇಣಿಯನ್ನು ಸಹ ವಿಶ್ಲೇಷಿಸಲಾಗಿದೆ. ಶ್ರೇಣಿಗಳಲ್ಲಿ 440 ಅಮೈನೋ ಆಮ್ಲಗಳಿವೆ. ವಿವಿಧ ಜಾತಿಯ ಪ್ರಾಣಿಗಳಿಂದ ದೊರೆತ ಗುರುಶ್ರೇಣಿಗಳ ರಚನೆಯನ್ನು ಹೋಲಿಸಿದಾಗ ಈ ಶ್ರೇಣಿಗಳಲ್ಲಿಯೂ ಅಮೈನೋ ಆಮ್ಲಗಳ ಅನುಕ್ರಮತೆ ಒಂದು ಭಾಗದಲ್ಲಿ ಮಾತ್ರ ವ್ಯತ್ಯಾಸವನ್ನು ತೋರುತ್ತದೆ. ಈ ಭಾಗ ಅಮೈನೋ ಅಂತ್ಯದಲ್ಲಿದ್ದು ಸುಮಾರು 115 ಅಮೈನೋ ಆಮ್ಲಗಳನ್ನೊಳಗೊಂಡಿದೆ. ಮಿಕ್ಕ ಭಾಗದ ಅಮೈನೋ ಆಮ್ಲಗಳ ಅನುಕ್ರಮತೆಯಲ್ಲಿ ವ್ಯತ್ಯಾಸವಿರುವುದಿಲ್ಲ. ವ್ಯತ್ಯಾಸವಾಗದ ಭಾಗದ ಅಮೈನೋ ಆಮ್ಲಗಳ ಅನುಕ್ರಮತೆಯನ್ನು ಪರಿಶೀಲಿಸಿದರೆ ಈ ಭಾಗವನ್ನು ಸರಿಸಮಾನವಾದ ಮೂರು ಭಾಗಗಳನ್ನಾಗಿ ಮರುವಿಂಗಡಣೆ ಮಾಡಬಹುದೆಂದೂ ಈ ಮೂರು ಭಾಗಗಳೂ ಒಂದನ್ನೊಂದು ಹೋಲುವುವೆಂದೂ ತಿಳಿದುಬರುತ್ತದೆ. ಈ ಗುಣಕ್ಕೆ ಅಂತರಾತ್ಮೀಯತೆ (ಇಂಟರ್ನಲ್ ಹೊಮಾಲಜಿ) ಎನ್ನಬಹುದು. ಒಂದೊಂದು ಭಾಗವೂ ಲಘುಶ್ರೇಣಿಯ ವ್ಯತ್ಯಾಸ ಹೊಂದದ ಭಾಗವನ್ನು ಕರಾರುವಾಕ್ಕಾಗಿ ಹೋಲುತ್ತದೆ.



ಚಿತ್ರ 4

ಲಘುಶ್ರೇಣಿಯ ಸ್ಥಿರಭಾಗಗಳಿಗೂ ಗುರುಶ್ರೇಣಿಯ ಸ್ಥಿರಭಾಗಗಳಿಗೂ ಹೋಲಿಕೆಯಿರುವುದರಿಂದ ಲಘು ಮತ್ತು ಗುರುಶ್ರೇಣಿಗಳು ಪುರಾತನ ಕಾಲದಲ್ಲಿ ಒಂದೇ ಜೀನಿಯಿಂದ ಉಂಟಾಗಿರಬಹುದೆಂಬ ಸಲಹೆ ಬಂದಿದೆ. ಈ ಸಲಹೆಯ ಪ್ರಕಾರ ಆದಿಯಲ್ಲಿದ್ದ ಜೀನಿ (ಪ್ರೈಮಾರ್ಡಿಯಲ್ ಜೀನಿ ದ್ವಿಗುಣವಾಗಿ ಅನುರೂಪವಾದ ಎರಡು ಭಾಗವುಳ್ಳ ಜೀನಿಯಾಗಿ ಪರಿವರ್ತಿತವಾಯಿತು. ಈ ಜೀನಿ ಲಘು ಮತ್ತು ಗುರುಶ್ರೇಣಿಗಳ ಉತ್ಪಾದನೆಗೆ ಕಾರಣವಾಯಿತು. ಕಾಲಕ್ರಮೇಣ ಜೀನಿಯ ಒಂದು ಭಾಗದಲ್ಲಿ ಮಾತ್ರ ಪ್ರತ್ಯಾಮ್ಲಗಳ ಬದಲಾವಣೆಯಾಗಿ (ಮ್ಯುಟೇಷನ್) ಶ್ರೇಣಿಗಳ ಅಮೈನೋ ಆಮ್ಲಗಳ ಅನುಕ್ರಮವನ್ನು ವ್ಯತ್ಯಾಸ ಹೊಂದುವ ಭಾಗದಲ್ಲಿ ಮಾತ್ರ ಮಾರ್ಪಡಿಸಿತು. ಈ ಅಭಿಪ್ರಾಯಗಳನ್ನು 5ನೆಯ ಚಿತ್ರದಲ್ಲಿ ತೋರಿಸಿದೆ.

ನಿರೋಧಕಗಳ ಅಂದರೆ ಇಮ್ಯೂನೋಗ್ಲಾಬ್ಯುಲಿನ್ನುಗಳ ಮೂರು ಆಯಾಮಗಳ (ತ್ರೀ ಡೈಮೆನ್ಶನಲ್) ಆಕೃತಿಯ ಬಗ್ಗೆ ಹೆಚ್ಚಿನ ಸಮಾಚಾರ ದೊರೆತಿಲ್ಲ. ನಿರೋಧಕ ಮತ್ತು ನಿರೋಧಜನಕಗಳ ಸೇರ್ಪಡೆಯಾಗುವ ಸ್ಥಳ ಮತ್ತು ಅದರ ಪ್ರಕೃತಿಯನ್ನು ಕರಾರುವಾಕ್ಕಾಗಿ ತಿಳಿಯಬೇಕಾದರೆ ನಿರೋಧಕದ ಮೂರು ಅಯಾಮಗಳ ಆಕೃತಿಯ ಬಗ್ಗೆ ಪೂರ್ಣವಾದ ಜ್ಞಾನಸಂಪಾದನೆಯಾಗಬೇಕು. ಆದರು ಈಗ ತಿಳಿದು ಬಂದಿರುವ ವಿಷಯಗಳ ಪ್ರಕಾರ– 1 ನಿರೋಧಜನಕ ಸೇರುವ ಎರಡು ಸ್ಥಳಗಳೂ ನಿರೋಧಕಗಳ ತುದಿಯಲ್ಲಿವೆ; 2 ವಿವಿಧ ನಿರೋಧಜನಕಗಳು ಸೇರುವ ಸ್ಥಳಗಳು ನಿರೋಧಕದ ಮೂರು ಆಯಾಮಗಳ ಆಕೃತಿಯಲ್ಲಿ ಒಂದು ನಿರ್ದಿಷ್ಟಸ್ಥಾನಗಳಲ್ಲಿವೆ; 3 ಈ ಸ್ಥಳದ ಗಾತ್ರ ಸುಮಾರು 25ÅX10ÅX6Å. ನಿರೋಧಕ ನಿರೋಧಜನಕದೊಂದಿಗೆ ಸೇರುವ ಗುಣವನ್ನು ಪಡೆಯಲು ಲಘು ಮತ್ತು ಗುರುಶ್ರೇಣಿಗಳು ಅವಶ್ಯಕ. ಬೇರ್ಪಡಿಸಲ್ಪಟ್ಟ ಲಘುಶ್ರೇಣಿಗಳು ನಿರೋಧಜನಕದೊಂದಿಗೆ ಸೇರಲಾರವು. ಗುರುಶ್ರೇಣಿಗಳನ್ನು ಎಚ್ಚರಿಕೆಯಿಂದ ಬೇರ್ಪಡಿಸಿ, ಅವು ನಿರೋಧಜನಕಗ ಳೊಂದಿಗೆ ಸೇರುವ ಗುಣವನ್ನು ಕೊಂಚಮಟ್ಟಿಗೆ ಉಳಿಸಿಕೊಂಡಿರುತ್ತದೆಂದು ತೋರಿಸಲಾಗಿದೆ. ಬೇರ್ಪಡಿಸಲ್ಪಟ್ಟ ಲಘು ಮತ್ತು ಗುರುಶ್ರೇಣಿಗಳನ್ನು ಮತ್ತೆ ಕೂಡಿಸಿ ನಿರೋಧಜನಕದೊಂದಿಗೆ ಸೇರಬಲ್ಲ ಇಮ್ಯೂನೊಗ್ಲಾಬ್ಯುಲಿನ್ನನ್ನು ಪಡೆಯಬಹುದು.

ನಿರೋಧಜನಕಗಳು ಮತ್ತು ನಿರೋಧಕಗಳು ವಿಶಿಷ್ಟ ರೀತಿಯಲ್ಲಿ ಸೇರ್ಪಡೆಯಾಗುತ್ತವೆ. ನಿರೋಧಜನಕಗಳ ಆಕಾರ ಮತ್ತು ನಿರೋಧಕಗಳ ಆಕಾರ ಅನುರೂಪವಾಗಿರುವುದರಿಂದ ಈ ವೈಶಿಷ್ಟ್ಯ ಉಂಟಾಗುತ್ತದೆ. ಸೇರ್ಪಡೆಯ ಕ್ರಿಯೆಯಲ್ಲಿ ಅನೇಕ ತರಹೆಯ ಆಕರ್ಷಣಶಕ್ತಿಗಳು ಪಾಲ್ಗೊಳ್ಳುತ್ತವೆ. ಇವುಗಳಲ್ಲಿ ಹೈಡ್ರೋಜನ್ ಬಂಧ, ಕೂಲಾಂಬ್ ಆಕರ್ಷಣ ಬಲಗಳು ಮುಖ್ಯವಾದುವುಗಳು. ಎಲ್ಲಕ್ಕಿಂತ ಹೆಚ್ಚಾಗಿ ನಿರೋಧಜನಕದ ಆಕಾರ ಅಥವಾ ಹಿಡಿಕೆಯ ಆಕಾರ ನಿರೋಧಕಗಳಲ್ಲಿರುವ ಸೇರ್ಪಡೆ ಸ್ಥಳದ ಅಕಾರಕ್ಕೆ ಅನುರೂಪವಾಗಿರಬೇಕು. ಇದರಿಂದಲೇ ವಿಶಿಷ್ಟತೆಯುಂಟಾಗುತ್ತದೆ.

ಜೈವಿಕ ವ್ಯವಸ್ಥೆಯಲ್ಲಿ ನಿರೋಧಕಗಳ ಉತ್ಪತ್ತಿ: ನಿರೋಧಕಗಳು ಅನೇಕ ಅಂಗಾಂಶಗಳಲ್ಲಿ ಉತ್ಪತ್ತಿಯಾಗುತ್ತವೆ. ನಿರೋಧಜನಕ ದೇಹವನ್ನು ಪ್ರವೇಶಿಸುವ ಮಾರ್ಗವನ್ನವಲಂಬಿಸಿ ನಿರೋಧಕಗಳು ಯಾವುದೊಂದು ಅಂಗಾಂಶದಲ್ಲಿ ರಚಿತವಾಗುತ್ತವೆ. ನಿರೋಧಜನಕವನ್ನು ಚರ್ಮಕ್ಕೆ ಅಥವಾ ಮಾಂಸಖಂಡಕ್ಕೆ ಚುಚ್ಚಿದರೆ ನಿರೋಧಜನಕವು ಪ್ರಾದೇಶಿಕ ದುಗ್ಧಗ್ರಂಥಿಗಳಲ್ಲಿ (ರೀಜನಲ್‌ಲಿಂಫ್ ನೋಡ್ಸ್) ಶೇಖರವಾಗುವುದರಿಂದ ನಿರೋಧಕಗಳೂ ಅಲ್ಲಿಯೇ ಉತ್ಪತ್ತಿಯಾಗುತ್ತವೆ. ಮಲಿನ ರಕ್ತನಾಳದ ಮೂಲಕ ಪ್ರವೇಶಿಸುವ ನಿರೋಧಜನಕಗಳು, ಗುಲ್ಮ, ಪಿತ್ತಜನಕಾಂಗ, ಮೂಳೆಯ ನೆಣ ಮತ್ತು ಶ್ವಾಸಕೋಶಗಳಲ್ಲಿ ಶೇಖರವಾಗುತ್ತವೆ. ಈ ಸಂದರ್ಭಗಳಲ್ಲಿ ನಿರೋಧಕದ ಉತ್ಪತ್ತಿ ಗುಲ್ಮದಲ್ಲಿ ಮೊದಲು ಪ್ರಾರಂಭವಾಗಿ ಅನಂತರ ಇತರ ಅಂಗಾಂಶಗಳಲ್ಲಿಯೂ ಉಂಟಾಗುತ್ತವೆ. ರೆಟಿಕ್ಯೂಲೋ ಎಂಡೋಥಿಲಿಯಲ್ ಕೋಶಗಳನ್ನು ಮತ್ತು ದುಗ್ಧಗ್ರಂಥಿಗಳನ್ನೊಳಗೊಂಡ ಅಂಗಾಂಶಗಳಲ್ಲಿ ನಿರೋಧಕ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ದೇಹಕ್ಕೆ ಹೊರತಾದ ಸೂಕ್ಷ್ಮಜೀವಿ ಮತ್ತು ಇತರ ಕಣಗಳನ್ನು ಸೆರೆಹಿಡಿಯಬಲ್ಲ ಕೋಶಗಳಿಗೆಲ್ಲ ರೆಟಿಕ್ಯೂಲೋ ಎಂಡೋಥಿಲಿಯಲ್ ಕೋಶಗಳೆನ್ನುತ್ತಾರೆ. ಈ ಕೋಶಗಳಿಗೆ ಕಣಗಳನ್ನು, ಸೆರೆ ಹಿಡಿದು ಪೂರ್ಣವಾಗಿ ತಮ್ಮಲ್ಲಿ ಅಡಗಿಸಬಲ್ಲ ಶಕ್ತಿ ಇದೆ. ಕೋಶಗಳಿಂದ ಸೆರೆಹಿಡಿಯಕಲ್ಪಟ್ಟ ಕಣಗಳನ್ನು ಅವುಗಳಲ್ಲಿರುವ ಕಿಣ್ವಗಳು ವಿಚ್ಛೇದಿಸುತ್ತವೆ (ಡಿಗ್ರೇಡ್). ಆ ನಿರೋಧಕದ ಉತ್ಪತ್ತಿಗೆ ಕಣಗಳ ವಿಚ್ಛೇದನೆ ಆವಶ್ಯಕ. ನಿರೋಧಕದ ಉತ್ಪತ್ತಿಯಲ್ಲಿ ಎರಡು ತರಹೆಯ ಕೋಶಗಳು ಪಾಲ್ಗೊಳ್ಳುತ್ತವೆಂದು ಕಂಡುಬಂದಿದೆ. ಮೊದಲನೆಯ ಗುಂಪಿನ ಕೋಶಗಳು ನಿರೋಧಜನಕವನ್ನು ಆವರಿಸಿ ಕಣಗಳನ್ನು ಅರಗಿಸಿ ತುಂಡರಿಸುತ್ತವೆ. ಈ ಕೋಶಗಳನ್ನು ಮ್ಯಾಕ್ರೋಫೇಜಸ್ ಎಂದು ಕರೆಯಲಾಗಿದೆ. ಎರಡನೆಯ ವರ್ಗದ ಕೋಶಗಳು ಮ್ಯಾಕ್ರೋಫೇಜುಗಳಿಂದ ಬಿಡುಗಡೆಯಾಗುವ ನಿರೋಧಜನಕಗಳ ತುಣುಕುಗಳನ್ನೊಳಗೊಂಡ ವಸ್ತುವಿನಿಂದ ಪ್ರೇರೇಪಿತವಾಗಿ ನಿರೋಧಕಗಳನ್ನು ಉತ್ಪತ್ತಿಸುತ್ತವೆ. ಈ ವರ್ಗದ ಕೋಶಗಳಿಗೆ ಲಿಂಫೋಸೈಟುಗಳೆನ್ನುತ್ತಾರೆ. ನಿರೋಧಜನಕಗಳು ದೇಹಕ್ಕೆ ಪ್ರವೇಶಿಸಿದಾಗ ಈ ಕೋಶಗಳು ಅನಂತಸಂಖ್ಯೆಯಲ್ಲಿ ರಚಿತವಾಗುತ್ತವೆ. ನಿರೋಧಕವನ್ನು ಉತ್ಪತ್ತಿ ಮಾಡುವುದಷ್ಟೇ ಅಲ್ಲದೆ ನಿರೋಧಜನಕಗಳನ್ನು ಗುರುತಿಸಬಲ್ಲ ಜ್ಞಾಪಕಶಕ್ತಿಯನ್ನೂ (ಇಮ್ಯೂನೋ ಕಾಂಪಿಟೆಂಟ್) ಪಡೆದಿರುತ್ತವೆ. ಲಿಂಫೋಸೈಟುಗಳನ್ನು ಪ್ರಚೋದಿಸಬಲ್ಲ ಮ್ಯಾಕ್ರೋಫೇಜಿನಿಂದ ಪಡೆದ ವಸ್ತುವಿನಲ್ಲಿ


ಚಿತ್ರ 5.

ರೈಬೋನ್ಯೂಕ್ಲಿಯೆಕ್ ಆಮ್ಲವಿದೆ. ಮ್ಯಾಕ್ರೋಫೇಜಿನಿಂದ ಈ ವಸ್ತುಗಳು ಲಿಂಫೋಸೈಟುಗಳಿಗೆ ವರ್ಗಾವಣೆಯಾಗುವ ವಿಧಾನ ಸರಿಯಾಗಿ ಗೊತ್ತಾಗಿಲ್ಲ. ಇವೆರಡು ಕೋಶಗಳಿಗೆ ಅವುಗಳಲ್ಲಿರುವ ದ್ರವಗಳ ಮೂಲಕ ಸಂಬಂಧವೇರ್ಪಡಬಹುದೆಂದು ಊಹಿಸಲಾಗಿದೆ. ಯಾವುದಾದರೂ ಒಂದು ಕೋಶ ವಿವಿಧ ವೈಶಿಷ್ಟ್ಯವಿರುವ ಅನೇಕ ನಿರೋಧಕಗಳ್ನು

ಉತ್ಪತ್ತಿಮಾಡಬಲ್ಲುದೆ ಎಂಬ ಸಮಸ್ಯೆ ಚರ್ಚಾಸ್ಪದವಾಗಿ ಉಳಿದಿದೆ. ಈಗ ಒದಗಿರುವ ಸಾಕ್ಷ್ಯಗಳ ಆಧಾರದ ಮೇಲೆ ಒಂದು ಕೋಶ ಒಂದೇ ತರಹೆಯ ಅಂದರೆ ಒಂದೇ ವೈಶಿಷ್ಟ್ಯದ ನಿರೋಧಕವನ್ನು ಮಾತ್ರ ಉತ್ಪತ್ತಿ ಮಾಡುತ್ತದೆಯೆಂದು ಹೇಳಬಹುದಾಗಿದೆ.

ಒಂದೇ ತರಹದ ನಿರೋಧಕಗಳನ್ನು ಉತ್ಪತ್ತಿಮಾಡುವ ಕೋಶಗಳು ಒಂದೇ ವರ್ಗದ ಲಘುಶ್ರೇಣಿಗಳನ್ನು ಒಂದೇ ವರ್ಗದ ಗುರುಶ್ರೇಣಿಗಳನ್ನು ರಚಿಸುತ್ತವೆ.

ಮಿಕ್ಕೆಲ್ಲ ಪ್ರೋಟೀನುಗಳು ಉತ್ಪತ್ತಿಯಾಗುವ ವಿಧಾನವನ್ನು ಅನುಸರಿಸಿಯೇ ನಿರೋಧಕಗಳೂ ರಚಿತವಾಗುತ್ತವೆ. ಲಘು ಮತ್ತು ಗುರುಶ್ರೇಣಿಗಳ ರಚನೆ ಬಹುಶಃ ಒಂದೇ ಸ್ಥಳದಿಂದ ಪ್ರಾರಂಭವಾಗಬಹುದು. ಆದರೆ ಇವು ಭಿನ್ನಗಾತ್ರದ ಪಾಲಿರೈಬೋಸೋಮುಗಳ ಸಹಾಯದಿಂದ ರಚಿತವಾಗುತ್ತವೆ. ದೂತರೈಬೋನ್ಯೂಕ್ಲಿಯರ್ ಆಮ್ಲಗಳು (ಮೆಸೆಂಜರ್ ಆರ್‌ಎನ್‌ಎ) ಗುರುಶ್ರೇಣಿಗಳನ್ನಾಗಲಿ, ಲಘುಶ್ರೇಣಿಗಳನ್ನಾಗಲಿ ಪೂರ್ಣವಾಗಿ ಒಮ್ಮೆಲೇ ರಚಿಸುವಷ್ಟು ಲಂಬವಾಗಿರುತ್ತವೆ. ಪಾಲಿರೈಬೋಸೋಮುಗಳು ಲಘುಶ್ರೇಣಿಗಳ ಅಥವಾ ಗುರುಶ್ರೇಣಿಗಳ ಪೂರ್ಣರಚನೆಗೆ ಬೇಕಾಗುವ ಗಾತ್ರವನ್ನು ಪಡೆದಿರುತ್ತವೆ. ಕೋಶದಲ್ಲಿ ಲಘುಶ್ರೇಣಿಗಳೂ ಗುರು ಶ್ರೇಣಿಗಳೂ ಸಮಪ್ರಮಾಣದಲ್ಲಿ ತಯಾರಾಗಬಹುದು. ಲಘು ಮತ್ತು ಗುರುಶ್ರೇಣಿಗಳ ಜೋಡಣೆಯಾದ ತರುವಾಯ ಶರ್ಕರಾಂಶ ಜೋಡಿಸಲ್ಪಡುತ್ತದೆ. ಮೈಕ್ರೋಸೋಮಿನಲ್ಲಿ ತಯಾರಾಗುವ ಇಮ್ಯೂನೋಗ್ಲಾಬ್ಯುಲಿನ್ನುಗಳು ಕೋಶದ್ರವಕ್ಕೆ ಬಿಡುಗಡೆಯಾಗಲು ಶರ್ಕರಾಂಶ ಸೇರಲೇಬೇಕು ಎಂದು ತೋರುತ್ತದೆ. ಪೂರ್ಣವಾಗಿ ಜೋಡಿಸಲ್ಪಟ್ಟ ಇಮ್ಯೂನೋಗ್ಲಾಬ್ಯುಲಿನ್ ಅಥವಾ ನಿರೋಧಕಗಳು ಪ್ಲಾಸ್ಮಾ ಕೋಶಗಳಲ್ಲಿ ಶೇಖರವಾಗುತ್ತವೆ. ಪ್ಲಾಸ್ಮಾಕೋಶಗಳು, ವಿಶಿಷ್ಟರೀತಿಯ ದುಗ್ಧಕೋಶಗಳು. ನಿರೋಧಜನಕಗಳು ಪ್ರವೇಶಿಸಿದಾಗ ಈ ಕೋಶಗಳು ಅಧಿಕಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ.

ಇಮ್ಯೂನೋಗ್ಲಾಬ್ಯುಲಿನ್ ರಚನೆಯ ಬಗ್ಗೆ ನಮಗೆ ಈಗ ತಿಳಿದುಬಂದಿರುವ ಜ್ಞಾನದಿಂದ, ನಿರೋಧಕಗಳ ಉತ್ಪತ್ತಿ ರಚನೆ ಮತ್ತು ಜೀನಿಗಳ ಸಂಬಂಧಗಳ ಬಗ್ಗೆ ಹೊಸದೃಷ್ಟಿಕೋನವನ್ನು ತಳೆಯಲು ಅವಕಾಶವಾಗಿದೆ. ಇಮ್ಯೂನೋರಸಾಯನವಿಜ್ಞಾನಿಯ ಮುಂದೆ ಹಲವಾರು ಸಮಸ್ಯೆಗಳಿವೆ. ಅವುಗಳಲ್ಲಿ ಮುಖ್ಯವಾದುವುಗಳಿವು:

1 ದೇಹ ಅನೇಕ ನಿರೋಧಜನಕಗಳಿಗೆ ಅನೇಕ ನಿರೋಧಕಗಳನ್ನು ವಿಶಿಷ್ಟರೀತಿಯಲ್ಲಿ ತಯಾರಿಸುತ್ತದೆ. ಒಂದು ಬಗೆಯ ಕೋಶ ಒಂದೇ ರೀತಿಯ ನಿರೋಧಕಗಳನ್ನು ಹೇಗೆ ಉತ್ಪತ್ತಿಮಾಡುತ್ತದೆ? ಈ ಆಯ್ಕೆಗೆ ಆಧಾರವೇನು? 2 ನಿರೋಧಜನಕ ಪ್ರಥಮಬಾರಿಗೆ ದೇಹವನ್ನು ಹೊಕ್ಕಾಗ ಅದಕ್ಕೆ ವಿರುದ್ಧವಾಗಿ ನಿರೋಧಕಗಳು ಅಲ್ಪಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ. ಕೆಲವು ದಿನಗಳು ಕಳೆದ ತರುವಾಯ ನಿರೋಧಕಗಳ ಉತ್ಪತ್ತಿ ಪ್ರಮಾಣ ತಗ್ಗುತ್ತ ಬಂದು ಕಡೆಗೆ ನಿಂತು ಹೋಗುವುದು. ಉತ್ಪತ್ತಿ ನಿಂತ ಕೆಲವು ತಿಂಗಳಾದ ಮೇಲೆ ಎರಡನೆಯ ಬಾರಿ ನಿರೋಧಜನಕ ದೇಹವನ್ನು ಹೊಕ್ಕರೆ ಅತಿಪ್ರತಿಕ್ರಿಯೆಯುಂಟಾಗಿ ದೇಹ ತತ್‌ಕ್ಷಣವೇ ಮೊದಲನೆಯ ಸಲಕ್ಕಿಂತ ಅತ್ಯಧಿಕ ಪ್ರಮಾಣದಲ್ಲಿ ನಿರೋಧಜನಕಗಳನ್ನು ತಯಾರಿಸುತ್ತದೆ. ಮೊದಲನೆಯ ಸಲ ರಚಿತವಾದ ನಿರೋಧಕಗಳಿಗೂ ಅತಿಪ್ರತಿಕ್ರಿಯೆಯಲ್ಲಿ ಉತ್ಪತ್ತಿಯಾದ ನಿರೋಧಕಗಳಿಗೂ ಕೆಲವು ವ್ಯತ್ಯಾಸಗಳಿವೆ. ಉದಾಹರಣೆಗೆ. ಅತಿಪ್ರತಿಕ್ರಿಯೆಯಲ್ಲಿ ಉತ್ಪತ್ತಿಯಾದ ನಿರೋಧಕಗಳಿಗೂ ಅದರ ನಿರೋಧಜನಕಗಳಿಗೂ ವಾತ್ಸಲ್ಯ ಮೊದಲ ಸಲಕ್ಕಿಂತ ಹೆಚ್ಚಾಗಿರುತ್ತದೆ. ದೇಹ ಎರಡನೆಯ ಸಲ ನಿರೋಧಜನಕವನ್ನು ಹೇಗೆ ಗುರುತಿಸಿತು? ಈ ಜ್ಞಾಪಕ ಶಕ್ತಿಗೆ ಆಧಾರವೇನು? 3 ಒಂದೇ ನಿರೋಧಜನಕದ ವಿರುದ್ಧವಾಗಿ ಉತ್ಪತ್ತಿಯಾಗುವ ನಿರೋಧಕಗಳಲ್ಲಿಯೇ ವೈವಿಧ್ಯ ಕಂಡುಬಂದಿದೆ. ಈ ವೈವಿಧ್ಯ ಲಘು ಮತ್ತು ಗುರುಶ್ರೇಣಿಗಳಲ್ಲಿ ವ್ಯತ್ಯಾಸಹೊಂದುವ ಅಮೈನೋ ಆಮ್ಲಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದ ಉಂಟಾಗುತ್ತದೆ. ಅಮೈನೋ ಆಮ್ಲಗಳ ವ್ಯತ್ಯಾಸ, ಜೀನಿಯಲ್ಲಿ ಉಂಟಾಗುವ ಪ್ರತ್ಯಾಮ್ಲಗಳ (ಬೇಸ್) ಪರಿಣಾಮವಾದ್ದರಿಂದ, ಜೀನಿಗಳಿಗೆ ಮತ್ತು ನಿರೋಧಕಗಳ ಉತ್ಪತ್ತಿಗೆ ಇರುವ ಸಂಬಂಧವೇನು?

ಈ ಬಗೆಯ ಪ್ರಶ್ನೆಗಳಿಗೆ ಉತ್ತರ ಕೊಡಲು ಅನೇಕ ಸಲಹೆಗಳು ಮಂಡಿಸಲ್ಪಟ್ಟಿವೆ. ಯಾವ ಒಂದು ಸಲಹೆಯೂ ಎಲ್ಲ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವನ್ನು ದೊರಕಿಸಿಕೊಟ್ಟಿಲ್ಲ.

(ಎಚ್.ಎಸ್.ಎಸ್.)

**ಇಯೊಸೀನ್:** ಭೂವಿಜ್ಞಾನದಲ್ಲಿ ಟರ್ಷಿಯರಿ ಯುಗದ ಎರಡನೆಯ ಕಲ್ಪ 60 ದಶಲಕ್ಷವರ್ಷ ಪ್ರಾಚೀನದಿಂದ 40 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ. ಈ ಗ್ರೀಕ್ ಪದದ ಅರ್ಥ ಪ್ರಾರಂಭದ (eo) ಈಚಿನದು (Kainos); ಎಂದರೆ ವಿಕಾಸಶ್ರೇಣಿಯಲ್ಲಿ ಈಚಿನ ಜೀವಿಗಳ ಪ್ರಾರಂಭಕಾಲವನ್ನು ಇಯೊಸೀನ್ ಪದ ಸೂಚಿಸುತ್ತದೆ. **(ನೋಡಿ– ಆಲಿಗೊಸೀನ್)**

**ಇಯೊಸೀನ್ ಸ್ತೋಮ:** ಇಯೊಸೀನ್ ಕಲ್ಪದಲ್ಲಿ ರೂಪುಗೊಂಡ ಶಿಲಾಸ್ತೋಮಗಳಿಗೆ ಈ ಹೆಸರಿದೆ. ಭೂಮಿಯ ಬೇರೆ ಬೇರೆ ಖಂಡಗಳಲ್ಲಿ ಇವನ್ನು ಗುರುತಿಸಲಾಗಿದೆ.

**ಭಾರತ ಪರ್ಯಾಯ ದ್ವೀಪ:** ಪಾಕಿಸ್ತಾನದ ಸಿಂಧ್‌ನಲ್ಲಿ ಈ ಸ್ತೋಮ ಶ್ರೇಷ್ಠ ರೀತಿಯಲ್ಲಿ ನಿಕ್ಷೇಪಗೊಂಡಿದೆ. ಇದನ್ನು ಮೂರು ಮುಖ್ಯಭಾಗಗಳನ್ನಾಗಿ ವಿಭಾಗಿಸಬಹುದು. ಕೆಳಭಾಗದ ಹೆಸರು ರಾಣಿಕೋಟ್ ಶಿಲಾಶ್ರೇಣಿ. ಇದು ಭಾರತದ ವಾಯುವ್ಯ ಭಾಗದಲ್ಲಿಯೂ ಅಸ್ಸಾಂ, ಬರ್ಮಾ ಮತ್ತು ಟಿಬೆಟ್ ಪ್ರದೇಶಗಳಲ್ಲಿಯೂ ರೂಪುಗೊಂಡಿದೆ. ಮಧ್ಯಭಾಗದ ಹೆಸರು ಲಾಕಿ ಶಿಲಾಶ್ರೇಣಿ. ಇದು ಹೇರಳವಾದ ನಮ್ಮುಲೈಟುಗಳ ಅವಶೇಷಗಳನ್ನೊಳಗೊಂಡ ಸುಣ್ಣಶಿಲೆ, ಸುಣ್ಣಮಿಶ್ರ ಜೇಡು ಮತ್ತು ಜೇಡು ಶಿಲೆಗಳಿಂದ ಕೂಡಿದೆ. ಮೇಲ್ಭಾಗದ ಹೆಸರು ಕರ್ತಾರ್ ಶಿಲಾ ಶ್ರೇಣಿ. ನಮ್ಮುಲಿಟಿಕ್ ಶಿಲಾಶ್ರೇಣಿಯ ಬಹುಭಾಗ ಈ ಗುಂಪಿಗೆ ಸೇರಿದೆ. ರಾಣಿ ಕೋಟ್, ಲಾಕಿ ಮತ್ತು ಕಿರ್ತಾರ್ ಎಂಬ ಹೆಸರುಗಳು ಸಿಂಧ್‌ನಲ್ಲಿರುವ ಪರ್ವತ ಶ್ರೇಣಿಗಳಿಂದ ಬಂದಿವೆ. ಸಾಲ್ಟ್‌ರೇಂಜ್ ಪ್ರದೇಶದಲ್ಲಿ ರಾಣಿ ಕೋಟ್ ಮತ್ತು ಲಾಕಿ ಶಿಲಾಶ್ರೇಣಿಗಳು ಉತ್ತಮರೀತಿಯಲ್ಲಿ ರೂಪುಗೊಂಡಿವೆ. ಈ ಶಿಲೆಗಳು ಜುರಾಸಿಕ್ ಕಲ್ಪದ ಶಿಲೆಗಳ ಮೇಲೆ ನಿಕ್ಷೇಪಗೊಂಡಿವೆ. ರಾಣಿಕೋಟ್ ಭಾಗದ ವಿಶಿಷ್ಟ ಜೀವಾವಶೇಷಗಳು ಮಿಸ್ಸಲೇನಿಯ ಮಿಸ್ಸೆಲ್ಲಾ, ಒಪರ್ಕುಲೈನ ಕೆನಾಲಿಫೆರೆ ಮತ್ತು ಲೊಕಾರ್ಟಿಯಂ ಕಾಂಡಿಟ. ಲಾಕಿ ಶಿಲಾಶ್ರೇಣಿಯಲ್ಲಿ ಸಾಕೆಸಾರ್ ಸುಣ್ಣಶಿಲೆ ವಿಶಿಷ್ಟ ಭಾಗವಾಗಿದೆ. ಕೆಲವು ಕಡೆ ಇದು ಜಿಪ್ಸಂ ಖನಿಜಕ್ಕೆ ರೂಪಾಂತರವಾಗಿದೆ. ಕಿರ್ತಾರ್ ಶಿಲಾಶ್ರೇಣಿ ಸಾಲ್ಟ್‌ರೇಂಜ್ ಪ್ರದೇಶದಲ್ಲಿ ನಿಕ್ಷೇಪಗೊಂಡಿಲ್ಲ. ಇಲ್ಲಿಗೆ ಹತ್ತಿರವಿರುವ ಕೊಹಟ್ ಎಂಬಲ್ಲಿ ಈ ಕಾಲದ ಲವಣ ಮತ್ತು ಜಿಪ್ಸಂ ಲಾಕಿ ಶಿಲೆಗಳಿಂದ ಬಂದಿದೆ. ಇವೇ ಅಲ್ಲದೆ ನಮ್ಮುಲೈಟಿಸ್ ಮತ್ತು ಅಲ್ವಿಯೋಲೈನ ಮೊದಲಾದ ಜೀವಾವಶೇಷಗಳಿಂದ ಕೂಡಿದ ಸುಣ್ಣಶಿಲೆಯೂ ಇದೆ. ಇದು ಕಿರ್ತಾರ್ ಕಾಲಕ್ಕೆ ಸೇರಿದುದು. ಅಸ್ಸಾಂ ಪ್ರಾಂತ್ಯದ ದಕ್ಷಿಣ ಮತ್ತು ಮಧ್ಯಕಾಲದ ನಿಕ್ಷೇಪಗಳಿವೆ. ಇವನ್ನು ದಿಸಂಗ್ ಶಿಲಾಶ್ರೇಣಿಗಳೆಂದು ಕರೆಯುವರು. ಷಿಲಾಂಗ್ ಮೈದಾನದ ದಕ್ಷಿಣ ಗಡಿಯಲ್ಲಿ ಕೆಲವು ನಿಕ್ಷೇಪಗಳಿವೆ. ಇದರ ಕೆಳಭಾಗ ನಮ್ಮುಲಿಟಿಕ್ ಸುಣ್ಣಶಿಲೆ ಮತ್ತು ಮರಳುಶಿಲೆಗಳಿಂದಲೂ ಮೇಲ್ಭಾಗ ಮರಳು ಶಿಲೆ. ಇಂಗಾಲಾಂಶದಿಂದ ಕೂಡಿದ ಜೇಡುಶಿಲೆ ಮತ್ತು ಸುಣ್ಣಶಿಲೆಗಳಿಂದಲೂ ಕೂಡಿದೆ. ಕೆಳಭಾಗಕ್ಕೆ ಷಿಲಾಂಗ್ ಸುಣ್ಣಶಿಲಾವರ್ಗ ಎಂದೂ ಮೇಲ್ಭಾಗಕ್ಕೆ ಕೊಪಿಲಿ ಶಿಲಾವರ್ಗ ಎಂದೂ ಹೆಸರಿದೆ. ಈ ಎಲ್ಲ ಶಿಲೆಗಳ ಒಟ್ಟು ಸಮುದಾಯದ ಹೆಸರು ಜಯಂತಿಯಾ ಶಿಲಾಶ್ರೇಣಿ. ಇವು ಲಾಕಿ ಮತ್ತು ಕಿರ್ತಾರ್ ಶಿಲೆಗಳ ಕೆಳಭಾಗಕ್ಕೆ ಸಮಕಾಲೀನವಾದವು.

**ಲಂಡನ್:** ಲಂಡನ್ ತಗ್ಗು ಪ್ರದೇಶದಲ್ಲಿ ಪೇಲಿಯೊಸೀನ್ ಸ್ತೋಮಗಳ ಮೇಲೆ ಇಯೊಸೀನ್ ಸ್ತೋಮಗಳು ನಿಕ್ಷೇಪಗೊಂಡಿವೆ. ಇಲ್ಲಿ ಇಯೊಸೀನ್ ಸ್ತೋಮಗಳನ್ನು ಎಪ್ರೆಸಿಯನ್, ಲುಟೆಟಿಯನ್, ಲುಡಿಯನ್ ಮತ್ತು ಬಾರ್ಟೋನಿಯನ್ ಎಂಬ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಎಪ್ರೆಸಿಯನ್ ಶಿಲಾವರ್ಗದಲ್ಲಿ ಸಾಗರ ಮತ್ತು ಭೂನಿಕ್ಷೇಪಗಳೆರಡೂ ಇವೆ. ಸಾಗರ ನಿಕ್ಷೇಪದ ಬಹುಭಾಗ ಜೇಡು. ಇದನ್ನು ಲಂಡನ್ ಜೇಡು ಎನ್ನುವರು. ಇದರ ತಳದಲ್ಲಿ ಗುಂಡಾದ ಕರಿಯ ಬೆಣಚುಗಳಿವೆ. ಇವುಗಳನ್ನೊಳಗೊಂಡ ಪದರಗಳಿಗೆ ಪಶ್ಚಿಮದಲ್ಲಿ ಕಹೀತ್ ಪದರಗಳೆಂದೂ ಪೂರ್ವದಲ್ಲಿ ಓಲ್ಡ್‌ಹ್ಯಾವನ್ ಪದರಗಳೆಂದೂ ಹೆಸರು. ಲಂಡನ್ ಜೇಡು ಪಶ್ಚಿಮದಲ್ಲಿ 15' ದಪ್ಪವಿದ್ದು ಪೂರ್ವಕ್ಕೆ ಹೋದಂತೆಲ್ಲ ಹೆಚ್ಚು ದಪ್ಪವಾಗುತ್ತದೆ. ಪೂರ್ವದ ಕೊನೆಯಲ್ಲಿ ಇದರ ದಪ್ಪ 500'. ಈ ಶಿಲೆಗಳಲ್ಲಿ ಜೀವಾವಶೇಷಗಳು ಹೇರಳವಾಗಿವೆ. ಅವುಗಳಲ್ಲಿ ಪಲೊಡೋಮಿಯ, ಮೋಡಿಯೋಲ, ಪೆಕ್ಟೆನ್, ಪ್ರೋಟೋಕಾರ್ಡಿಯ ಸಿಪ್ಪಿನ ಮತ್ತು ಶಂಖಗಳು ಮುಖ್ಯವಾದುವು. ಇವುಗಳ ಜೊತೆಯಲ್ಲಿ ತೆಂಗುಜಾತಿಯ ಕಾಯಿಗಳೂ ಆಮೆಗಳ ಚಿಪ್ಪುಗಳೂ ಇವೆ. ಇವೆಲ್ಲ ಭೂಮಿ ನಿಕ್ಷೇಪಪ್ರದೇಶದ ಹತ್ತಿರವಿದ್ದುದನ್ನು ಸೂಚಿಸುತ್ತವೆ. ಲಂಡನ್ ಜೇಡು ನಿಕ್ಷೇಪ ಮೇಲಿರುವ ಭೂನಿಕ್ಷೇಪಗಳೊಂದಿಗೆ ಬೆರೆಯುತ್ತದೆ. ಭೂನಿಕ್ಷೇಪಗಳು ಜೀವಾವಶೇಷರಹಿತ. ಅವನ್ನು ಬಾಗ್‌ಷಾಟ್ ಪದರಗಳೆಂದು ಕರೆದಿದೆ.

**ಪ್ಯಾರಿಸ್:** ಲಂಡನ್ ಪ್ರದೇಶದ ಎಪ್ರಿಸಿಯನ್ ಶಿಲಾವರ್ಗದ ಎಲ್ಲ ಪಾದಗಳನ್ನೂ ಪ್ಯಾರಿಸ್ ಪ್ರದೇಶದಲ್ಲಿ ಗುರುತಿಸಬಹುದು. ಸೆನ್ನೆನಿ ಪದರಗಳು ಬ್ಲಾಕ್‌ಹೀತ್ ಪದರಗಳನ್ನು ಹೋಲುತ್ತವೆ. ಈ ಶಿಲೆಗಳಲ್ಲಿ ಆಸಕ್ತಿ ಹುಟ್ಟಿಸುವ ಜೀವಾವಶೇಷಗಳು ಇವೆ. ನಮ್ಮುಲೈಟಿಸ್ ಪ್ಲಾನುಲೇಟಗಳಿಂದ ಕೂಡಿದ ಮರಳು ಮತ್ತು ಪಲೋಡೋಮಿಯ ಮಾರ್ಗರಿಟೇಸಿಯಗಳಿಂದ ಕೂಡಿದ ಜೇಡುಪದರಗಳ ಪುನರಾವೃತ್ತ ಶಿಲೆಗಳು ಲಂಡನ್ ಜೇಡು ನಿಕ್ಷೇಪವನ್ನು ಪ್ರತಿನಿಧಿಸುತ್ತವೆ. ಈ ಪ್ರದೇಶದಲ್ಲಿ ಭೂನಿಕ್ಷೇಪ ಹೆಚ್ಚಾಗಿಲ್ಲ. ಬೆಲ್ಜಿಯಂನಲ್ಲಿ ಲಂಡನ್ ಜೇಡುನಿಕ್ಷೇಪಕ್ಕೆ ಸರಿದೂಗುವ ಶಿಲೆಗಳನ್ನು ಎಪ್ರಿಸಿಯನ್ ಎಂದು ಕರೆದಿದೆ. ಈ ಶಿಲೆಗಳಲ್ಲಿ ಜೀವಾವಶೇಷಗಳು ವಿರಳ. ಒಪ್ರಿಸಿಯನ್ ಮೇಲ್ಭಾಗವನ್ನು ಪ್ಯಾನಿಸೇಲಿಯನ್ ಶಿಲಾಪಾದ ಎಂದು ಕರೆದಿದೆ. ಪ್ಯಾರಿಸಿನ ಹಳೆಯ ಹೆಸರಾದ ಲುಟೆಟಿಯದಿಂದ ಈ ಶಿಲಾಶ್ರೇಣಿಗೆ ಲುಟೇಟಿಯನ್ ಎಂಬ ಹೆಸರು ಬಂದಿದೆ. ಪ್ಯಾರಿಸ್ ಪ್ರದೇಶದಲ್ಲಿ ಇದರ ಪ್ರತಿನಿಧಿ ಕ್ಯಾಲ್ಕರೆ ಗೋಸಿಯರ್ ನಿಕ್ಷೇಪಗಳು. ಇವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿದೆ. ಕೆಳ ಮತ್ತು ಮೇಲ್ಭಾಗಗಳು ಭೂನಿಕ್ಷೇಪಗಳಿಂದಲೂ ಮಧ್ಯಭಾಗ ಸಾಗರ ನಿಕ್ಷೇಪಗಳಿಂದಲೂ ಆಗಿವೆ. ಇವುಗಳಲ್ಲಿ ಕೆಲವು ಶಿಲೆಗಳ ರಚನೆ ಸಂಪೂರ್ಣವಾಗಿ ನಮ್ಮುಲೈಟಿಸ್ ಲ್ಯಾವಿಗೇಟಸುಗಳಿಂದ ಆಗಿದೆ. ಲಂಡನ್ ಮತ್ತು ಹ್ಯಾಂಪ್‌ಷೈರಿನ ಬ್ರ್ಯಾಕಲ್ ಶ್ಯಾಮ್ ಪದರಗಳು ಮತ್ತು ಬಾರ್ನ್‌ಮೌತ್ ಸಾಗರ ನಿಕ್ಷೇಪಗಳು ಈ ಶಿಲೆಗಳಿಗೆ ಸರಿದೂಗಬಹುದು. ಭೂನಿಕ್ಷೇಪಗಳನ್ನು ಬಾಸ್‌ಕೊಂ ಪದರಗಳೆಂದು ಕರೆದಿದೆ. ಇವುಗಳಲ್ಲಿ ಲಿಗ್ನೈಟ್ ಪದರಗಳಿವೆ. ಈ ಪದರಗಳು ನೀಪಡೈಟಿಸುಗಳನ್ನು ಹೊಂದಿವೆ. ಬೆಲ್ಜಿಯಂನ ಶಿಲೆಗಳು ಇಂಗ್ಲೆಂಡಿನ ಶಿಲೆಗಳನ್ನೇ ಹೋಲುತ್ತವೆ.

**ಇತರ ಸ್ಥಳಗಳು:** ಲುಡಿಯನ್ ಶ್ರೇಣಿ ಎಂಬ ಹೆಸರು ಬ್ರಸಲ್ಸ್‌ಗೆ ಉತ್ತರ ವಾಯುವ್ಯದಲ್ಲಿರುವ ಲುಡೆ ಎಂಬ ಸ್ಥಳದಿಂದ ಬಂದಿದೆ. ಇದಕ್ಕೆ ಸರಿದೂಗುವ ಶಿಲೆಗಳನ್ನು ಪ್ಯಾರಿಸ್ ಪ್ರದೇಶದಲ್ಲಿ ಔವೆರಿಯನ್ ಶ್ರೇಣಿ ಎಂದು ಕರೆದಿದೆ. ಎರಡು ಪ್ರದೇಶಗಳ ಶಿಲೆಗಳಲ್ಲಿಯೂ ನಮ್ಮುಲೈಟಿಸ್ ವೇರಿಯೋಲಸ್ ಎಂಬ ವಿಶಿಷ್ಟ ಅವಶೇಷಗಳಿವೆ. ಇಂಗ್ಲೆಂಡಿನ ಬಾಗ್‌ಷಾಟ್ ಪದರಗಳು ಇವುಗಳಿಗೆ ಸಮನಾದ ಶಿಲೆಗಳು. ಇವೇ ಇಲ್ಲಿನ ಇಯೊಸೀನ್ ಸ್ತೋಮದ ಅತ್ಯಂತ ಕಿರಿಯ ಶಿಲೆಗಳು. ಇವುಗಳಲ್ಲಿ ನಮ್ಮುಲೈಟಿಸ್ ವೇರಿಯೋಲಸ್ ಮಾತ್ರವಲ್ಲದೆ ಅನೇಕ ಸಾಗರವಾಸಿ ಪ್ರಾಣಿಗಳ ಅವಶೇಷಗಳೂ ಇವೆ. ಹ್ಯಾಂಪ್‌ಷೈರಿನ ಬ್ರ್ಯಾಕಲ್‌ಶ್ಯಾಮ್ ಶ್ರೇಣಿಯ ಮೇಲ್ಪದರಗಳು ಈ ಕಾಲದವುಗಳೇ ಆಗಿವೆ.

ಇಂಗ್ಲೆಂಡಿನಲ್ಲಿ ಬಾರ್ಟೋನಿಯನ್ ಭಾಗ ಹ್ಯಾಂಪ್‌ಷೈರಿನಲ್ಲಿ ಮಾತ್ರ ಸಂಚಯನ ಗೊಂಡಿದೆ. ಇವು ಬಾರ್ಟನ್ ಜೇಡು ಮತ್ತು ಮರಳು, ಹೇಡನ್ ಶಿಲೆಗಳ ಕೆಳಭಾಗವನ್ನು ಒಳಗೊಂಡಿವೆ. ನಮ್ಮುಲೈಟಿಸ್ ಎಮ್ಮೆಲೆನ್ಸಿಸ್ ಎಂಬ ವಿಶಿಷ್ಟ ಅವಶೇಷವೂ ವಲ್ಯುಟ, ಅತ್ಲೆಟ, ಕ್ಯಾಸಿಯ ಅಂಬ್ಯುಗುವ, ಫ್ಯೂಜಸ್ ಲಾಂಗೆವಸ್, ಕ್ರಾಸೆಟೆಲ್ಲ ಸಲ್ಕಟಗಳೇ ಮೊದಲಾದ ಅವಶೇಷಗಳೂ ಇವೆ. ಮರಳುಗಳಲ್ಲಿ ಚಾಮ ಮತ್ತು ಸೆರೆತಿಯಂಗಳು ಇವೆ. ಹೇಡನ್ ಪದರಗಳು ಭೂನಿಕ್ಷೇಪಗಳು ಲಿಗ್ನೈಟ್ ಮರಳು, ಪ್ಲೆನಾರ್ಬಿಸ್ ಮತ್ತು ಲಿಮ್ನಿಯಗಳಿಂದ ಕೂಡಿದ ಸುಣ್ಣ ಶಿಲೆಗಳಿಂದ ಆಗಿವೆ. ಈ ನಿಕ್ಷೇಪಗಳು ಸರೀಸೃಪ ಮತ್ತು ಸಸ್ತನಿಗಳ ಅವಶೇಷಗಳನ್ನು ಹೊಂದಿದೆ. ಇಲ್ಲಿ ಶಿಲೆಗಳು ನಿಕ್ಷೇಪಗೊಳ್ಳುತ್ತಿರುವ ವೇಳೆಗೆ ಪ್ಯಾರಿಸ್ ಪ್ರದೇಶ ಸಾಗರದಿಂದ ಬೇರ್ಪಟ್ಟಂತೆ ತೋರುವುದು. ಅಲ್ಲಿ ಜಿಪ್ಸಂ ಮತ್ತು ಜಿಪ್ಸಂಗಳಿಂದ ಕೂಡಿದ ಮಾರಲ್ ಶಿಲೆಗಳು ನಿಕ್ಷೇಪಗೊಂಡಿವೆ. ಆದರೆ ಇಯೊಸೀನ್ ಕಲ್ಪದ ಕೊನೆಯಲ್ಲಿ ಈ ಪ್ರದೇಶ ಸ್ವಲ್ಪಕಾಲ ಸಮುದ್ರಸಂಪರ್ಕವನ್ನು ಹೊಂದಿದ್ದಂತೆ ತೋರುವುದು. ಇದು ಪಲೊಡೋಮಿಯಗಳಿಂದ ಕೂಡಿದ ಮಾರಲ್ ಶಿಲೆಗಳಿಂದ ವ್ಯಕ್ತವಾಗಿದೆ. ಬೆಲ್ಜಿಯಂನಲ್ಲಿ ಬಾರ್ಟೋನಿಯನ್ ಶ್ರೇಣಿಯ ಪ್ರತಿನಿಧಿ ಮರಳುನಿಕ್ಷೇಪ. ಈ ಮರಳಿನಲ್ಲಿ ನಮ್ಮುಲೈಟಿಸ್ ಎಮ್ಮೆಲೆನ್ಸಿಸುಗಳ ಅವಶೇಷಗಳಿವೆ.

ಯುರೋಪಿನ ದಕ್ಷಿಣದಲ್ಲಿ ಟೆತಿಸ್ ಸಾಗರದ ಉದ್ದಕ್ಕೂ ಘನತರ ಸುಣ್ಣಶಿಲೆಗಳ ನಿಕ್ಷೇಪವಿದೆ. ಈ ಸುಣ್ಣಶಿಲೆಯಲ್ಲಿ ಫೊರಮಿನಿಫೆರಗಳು, ಅದರಲ್ಲೂ ನಮ್ಮ ಲೈಟಿಸ್‌ಗಳು ಹೇರಳವಾಗಿರುವುದು ಒಂದು ವೈಶಿಷ್ಟ್ಯ. ಆದ್ದರಿಂದ ಇದನ್ನು ನಮ್ಮುಲಿಟಿಕ್ ಸುಣ್ಣಶಿಲೆ ಎಂದು ಕರೆದಿದೆ. ಇದು ಬಹಳ ಗಡಸು ಮತ್ತು ಅನೇಕ ಕಡೆಗಳಲ್ಲಿ ಅಮೃತಶಿಲೆಗಳಾಗಿ ಮಾರ್ಪಟ್ಟಿದೆ. ಈ ಶಿಲೆಗಳ ಮೇಲಿರುವ ಮರಳುಶಿಲೆಗಳು ನಮ್ಮುಲೈಟುಗಳಿವೆ. ವಿಯನ್ನ ಪ್ರದೇಶದ ಇಯೊಸೀನ್ ಸ್ತೋಮ ಸಂಪೂರ್ಣವಾಗಿ ಜೀವಾವಶೇಷರಹಿತ.

**ಉತ್ತರ ಅಮೆರಿಕದಲ್ಲಿ:** ಪೇಲಿಯೊಸೀನ್ ಸ್ತೋಮದ ಮೇಲೆ ಇಯೊಸೀನ್ ಯುಗದ ಆದಿಕಾಲದ ನದೀನಿಕ್ಷೇಪಗಳು ಸಂಚಯನಗೊಂಡಿವೆ. ಇವನ್ನು ವಾಸಾಚ್ ಶಿಲೆಗಳೆಂದು ಕರೆದಿದೆ. ವಾಸಾಚ್ ಶಿಲೆಗಳು ಉತ್ತರವ್ಯೋಮಿಂಗ್ ಪ್ರಾಂತ್ಯದ ಬಿಗ್ ಹಾರನ್ ಪ್ರದೇಶ ಮತ್ತು ಮಾಂಟಾನಗಳಲ್ಲಿ ಉತ್ತಮವಾಗಿ ರೂಪುಗೊಂಡಿವೆ. ಇವುಗಳಲ್ಲಿ ಸಸ್ತನಿಗಳ ಅವಶೇಷಭಂಡಾರವೇ ಇದೆ. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಆದಿಕುದುರೆ (ಇಯೊಹಿಪ್ಪಸ್). ಈ ಶ್ರೇಣಿ ಯೂಟಾ ಪ್ರಾಂತ್ಯದ ದಕ್ಷಿಣದಲ್ಲಿ ನದಿಗಳ ಕೊರೆತಕ್ಕೆ ಸಿಕ್ಕಿ ಪ್ರಪಂಚದ ಅತ್ಯಂತ ಮೋಹಕ ದೃಶ್ಯಗಳಲ್ಲೊಂದಾದ ಬ್ರೈಸ್ ಪ್ರಪಾತ ಉಂಟಾಗಿದೆ. ಇಯೊಸೀನ್ ಮಧ್ಯಕಾಲದಲ್ಲಿ ಯೂಟಾ, ಕೊಲರ್‍ಯಾಡೊ ಮತ್ತು ವಯೋಮಿಂಗ್ ಪ್ರಾಂತ್ಯಗಳಲ್ಲಿ ಸುಮಾರು 40,000 ಚ. ಮೈಗಳ ವಿಸ್ತಾರದ ಒಂದು ಸರೋವರವಿತ್ತು. ಇದರಲ್ಲಿ ಸುಮಾರು 2,000' ದಪ್ಪದ ಸೂಕ್ಷ್ಮಕಣ ಜೇಡುಶಿಲೆಗಳು ಸಂಚಯನಗೊಂಡಿವೆ. ಈ ಶಿಲೆಗಳನ್ನು ಗ್ರೀನ್ ರಿವರ್ ಲೇಕ್ ಶಿಲಾಶ್ರೇಣಿ ಎಂದು ಕರೆದಿದೆ. ಇಲ್ಲಿ ಪ್ರಪಂಚದಲ್ಲೇ ಅತ್ಯಂತ ಭಾರೀ ತೈಲಾಶಯಗಳಿವೆ. ಈ ಶಿಲೆಗಳಲ್ಲಿ ಮತ್ಸ್ಯ, ಕೀಟ, ಸಸ್ಯಗಳ ಎಲೆಗಳು ಮುಂತಾದ ಅವಶೇಷಗಳೂ ಇವೆ. ಗ್ರೀನ್ ರಿವರ್ ಲೇಕ್ ಶ್ರೇಣಿಗಿಂತ ಸ್ವಲ್ಪ ಕಿರಿಯ ಶಿಲೆಗಳು ವಯೋಮಿಂಗ್ ಪ್ರಾಂತ್ಯದ ಆಗ್ನೇಯ ಮತ್ತು ಯೂಟಾ ಪ್ರಾಂತ್ಯದ ಈಶಾನ್ಯ ಪ್ರದೇಶಗಳಲ್ಲಿ ನಿಕ್ಷೇಪಗೊಂಡಿವೆ. ಇವು ಪೋರ್ಟ್‌ಬ್ರಿಡ್ಜರ್ ಪ್ರದೇಶದಲ್ಲಿ ಅತ್ಯುತ್ತಮವಾಗಿ ರೂಪುಗೊಂಡಿರುವುದರಿಂದ ಇವುಗಳಿಗೆ ಬ್ರಿಡ್ಜರ್ ಶ್ರೇಣಿ ಎಂದು ಹೆಸರು ಬಂದಿದೆ. ಇವು ಸಿಹಿನೀರು ನಿಕ್ಷೇಪಗಳಾಗಿದ್ದು ಮುಖ್ಯವಾಗಿ ಮರಳು ಮತ್ತು ಜೇಡುಶಿಲೆಗಳಿಂದ ಕೂಡಿವೆ. ಇವುಗಳಲ್ಲಿ ವಿವಿಧ ಸಸ್ತನಿಗಳ ಅಮೂಲ್ಯ ಅವಶೇಷ ಸಂಗ್ರಹವಿದೆ. ಇವುಗಳಲ್ಲಿ ಲೆಮೂರ್ ಕಪಿಗಳ ಅವಶೇಷಗಳು ಬಹುಮುಖ್ಯ.

ಇಯೋಸಿನ್ ಸ್ತೋಮದ ಅತ್ಯಂತ ಮೇಲ್ಪದರುಗಳು ಯೂಟಾ ಮತ್ತು ಕೊಲರ್‍ಯಾಡೊ ಪ್ರಾಂತ್ಯಗಳಲ್ಲಿರುವ ಯೂಂಟ ಪರ್ವತಗಳ ದಕ್ಷಿಣ ತಪ್ಪಲುಗಳಲ್ಲಿ ಇವೆ. ಇವನ್ನು ಯೂಂಟ ಶಿಲೆಗಳೆಂದು ಕರೆದಿದೆ. ಇವು ಬ್ರಿಡ್ಜರ್ ಶಿಲೆಗಳ ಮೇಲೆ ಅನನ್ಯರೂಪ್ಯತೆ ಹೊಂದಿ ನಿಕ್ಷೇಪಗೊಂಡಿವೆ. ಇಲ್ಲಿ ಸಸ್ತನಿಗಳ ಅವಶೇಷರಾಶಿಯೇ ಇದೆ. ಇವುಗಳಲ್ಲಿ ಯೂರಿಟತೀರಿಯಂ ಮತ್ತು ಟಿಲ್ಮತೋತೀರಿಯಂ ಮುಖ್ಯವಾದುವು.

**ಇಯೊಸೀನ್ ಯುಗದ ಜೀವರಾಶಿ:** ಈ ಯುಗದಲ್ಲಿ ಅನೇಕ ಪ್ರಗತಿಪರ ಸಸ್ತನಿಗಳ ಉದಯವಾಯಿತು. ಇವು ಈಗಿನ ಸಸ್ತನಿಗಳ ಪೂರ್ವಜರು. ಈ ಪ್ರಗತಿಪರ ಸಸ್ತನಿಗಳೂ ಪ್ರಾಚೀನ ಸಸ್ತನಿಗಳೂ ಒಟ್ಟಿಗೆ ಸಹಬಾಳ್ವೆ ನಡೆಸಿದವು. ಕ್ರಿಯೊಡಾಂಟಗಳೇ ಈ ಕಾಲದ ಮುಖ್ಯ ಮಾಂಸಾಹಾರಿಗಳು. ಅವು ನಾಯಿ, ಚಿರತೆ, ಬೆಕ್ಕು ಮೊದಲಾದವುಗಳ ರೂಪವನ್ನು ಹೋಲುತ್ತಿದ್ದುವು. ಈ ಕಾಲದ ಮತ್ತೊಂದು ಮಾಂಸಾಹಾರಿ ಸಸ್ತನಿಶಾಖೆಯೆಂದರೆ ವಂಶನಷ್ಟ ಹೊಂದಿರುವ ಮಿಯಾಸಿಡುಗಳು. ಕುದುರೆಗಳು, ಒಂಟೆಗಳು, ಖಡ್ಗಮೃಗಗಳು ಪ್ರಗತಿಪರ ಸಸ್ತನಿಗಳಲ್ಲಿ ಮುಖ್ಯವಾದುವು. ಆದಿಕುದುರೆ ಇಯೊಹಿಪ್ಪಸ್, ಓರೊಹಿಪ್ಪಸ್ ಮತ್ತು ಎಪಿಹಿಪ್ಪಸುಗಳು ಈ ಕಾಲದ ಕುದುರೆಗಳು. ಖಡ್ಗಮೃಗಗಳು ಚಿಕ್ಕವಾಗಿದ್ದುವು. ಕೊಂಬುಗಳಿರಲಿಲ್ಲ. ಟಿಟನೋತೀರುಗಳು ಮತ್ತು ಓರಿಯೊಡಾನುಗಳು ಈ ಕಾಲದ ಇತರ ಸಸ್ತನಿಗಳು. ಮೊದಲನೆಯವಕ್ಕೂ ಖಡ್ಗಮೃಗ ಮತ್ತು ಕುದುರೆ ಶಾಖೆಗಳಿಗೂ ಅಸ್ಪಷ್ಟ ಸಂಬಂಧ ಇದೆ. ಓರಿಯೊಡಾನುಗಳೇನೋ ಒಂಟೆಗಳನ್ನು ಹೋಲುತ್ತವೆ ಆದರೆ ಅವುಗಳ ದೇಹ ಉದ್ದ ಮತ್ತು ಕಾಲುಗಳು ತುಂಡು.

ಉತ್ತರಾರ್ಧಗೋಳದಲ್ಲಿ ಇಯೊಸೀನ್ ಯುಗದ ಸಸ್ಯವರ್ಗ ಈಗಿನದಕ್ಕಿಂತ ಹೇರಳವಾಗಿಯೂ ವೈವಿಧ್ಯಮಯವಾಗಿಯೂ ಇತ್ತು. ಇದು ಉಷ್ಣವಲಯದ ಸಸ್ಯವರ್ಗವನ್ನು ಹೋಲುತ್ತದೆ. ಹೂಬಿಡುವ ಸಸ್ಯಗಳಲ್ಲಿ ಏಕದಳ ಮತ್ತು ದ್ವಿದಳ ಸಸ್ಯಗಳೆರಡೂ ಇದ್ದುವು. ತಾಳೆ, ಈಚಲು ತೆಂಗು ಜಾತಿಯ ಗಿಡಗಳು ಬಲು ಹೆಚ್ಚಾಗಿದ್ದುವು. ಮ್ಯಾಗ್ನೋಲಿಯ ಗಿಡಗಳೂ ಇದ್ದುವು. ತಾವರೆ, ದಾಲ್ಚಿನ್ನಿ, ಪ್ರೋಟಿಯ, ಕ್ಯಾಸಿಯ, ಪ್ಲಟನಸ್ ಮೊದಲಾದ ಉಷ್ಣವಲಯದ ಗಿಡಗಳನ್ನು ಕಾಣಬಹುದಾಗಿತ್ತು. ಆದರೂ ಬರ್ಚ್, ಆಲ್ಡರ್ ಮತ್ತು ಓಕ್ ಮರಗಳೇ ಹೇರಳವಾಗಿದ್ದುವು. ಈ ಉಷ್ಣವಲಯದ ಗಿಡ ಮರಗಳ ಜೊತೆಯಲ್ಲಿ, ಗತವಂಶಿಗಳಾದ ಡ್ರಯೊಫಿಲ್ಲಂ ಮೊದಲಾದ ಸಸ್ಯಗಳಿರುವುದು ಇಯೊಸೀನ್ ಕಾಲದ ವೈಶಿಷ್ಟ್ಯಗಳಲ್ಲೊಂದು.

ಆಧುನಿಕ ಜೀವಯುಗದ ಸಾಗರಗಳಲ್ಲಿ ನಾನಾ ವರ್ಗದ ಬೆನ್ನೆಲುಬಿಲ್ಲದ ಪ್ರಾಣಿಗಳಲ್ಲಿ ಫೊರಮಿನಿಫೆರಗಳಲ್ಲೂ ಹಿಂದೆಂದೂ ಇರದಷ್ಟು ಹೇರಳವಾಗಿದ್ದುವು. ಅವುಗಳಲ್ಲಿ ಅನೇಕ ಪ್ರಕಾರಗಳೂ ಇದ್ದುವು. ಅವುಗಳಲ್ಲೆಲ್ಲ ಚಪ್ಪಟೆಯಾದ ಮತ್ತು ವೃತ್ತಾಕಾರದ ನಮ್ಮುಲೈಟುಗಳು ಬಲು ಮುಖ್ಯವಾದುವು. ಸಿಂಧ್ ಪ್ರದೇಶದ ಇಯೊಸೀನ್ ಶಿಲೆಗಳಲ್ಲಿ ನಮ್ಮುಲೈಟಿಸ್ ಆಸ್ಸಿಲೈನ, ಅಲ್ವಿಯೊಲೈನ, ಡಿಸ್ಕೊಸೈಕ್ಲೈನ, ಡಿಕ್ಟಿಯೊ ಕೊನಾಯಿಡ್ಸ್, ಲೊಕಾರ್ಟಿಯ, ಓಪರ್ಕುಲೈನ, ಅರ್ಬಿಟೊಲೈಟಿಸ್ ಮೊದಲಾದ ನಾನಾಜಾತಿಯ ಫೊರಮಿನಿಫೆರಗಳಿವೆ. ರಾಣಿಕೋಟ್ ಶಿಲೆಯಲ್ಲಿ ನಾನಾ ಜಾತಿಯ ಷಡ್‌ಭಿತ್ತಿ ಹವಳಗಳಿವೆ. ಅವುಗಳಲ್ಲಿ ಟ್ರೊಕೊಸ್ಮಿಲಿಯ, ಸೈಕ್ಲೊಲೈಟಿಸ್, ಸ್ಟೈಲಿನ, ಫೆಡ್ಡಿನ, ಐಸಾಸ್ಟ್ರಯ, ತ್ಯಾಮ್ನಾಸ್ಟ್ರಿಯ ಮತ್ತು ಮಾಂಟ್ಲಿವಾಲ್ಟಿಯಗಳು ಬಲು ಹೇರಳವಾಗಿವೆ. ಅಲ್ಲದೆ ಸಿಡಾರಿಸ್, ಸೆಲೇನಿಯ, ಕೋನೊಕ್ಲಿಪಿಯಸ್, ಡಿಕ್ಟಿಯೊ ಪ್ಲೂರಸ್, ಎಕೈನೊ ಲ್ಯಾಂಪಸ್, ಮೆಟಾಲಿಯ, ಹೆಮಿಯಾಸ್ಟರ್, ಸ್ಕೈಜಾಸ್ಟರ್ ಮತ್ತು ಮೈಕ್ರಾಸ್ಟರಗಳೇ ಮೊದಲಾದ ಪಂಚಸಮಸೂತ್ರಿ ಮತ್ತು ದ್ವಿಸಮಸೂತ್ರಿ ಎಕಿನಾಯಿಡುಗಳೂ ಹೇರಳವಾಗಿವೆ. ಲೆಮಿಲಿಬ್ರ್ಯಾಂಕ್, ಶಂಖುಗಳು ಮತ್ತು ನಾಟಿಲಸುಗಳ ಅನೇಕ ಮೃದ್ವಂಗಿಗಳ ಪ್ರತಿನಿಧಿಗಳು. ಬೆಲೆಮ್ನೈಟು ಮತ್ತು ಕಟಲ್ ಫಿಷುಗಳ ಸಂಯೋಜಿತ ಜೀವಿಯಾದ ಬೆಲಸಿಪಿಯ, ಕ್ಯಾಲಪ್ಟ್ರೊಫೊರಸ್ ಎಂಬ ಶಂಖುಗಳು ರಾಣಿಕೋಟೆ ಶಿಲೆಗಳ ವಿಶಿಷ್ಟ ಮೃದ್ವಂಗಿಗಳು, ಆಸ್ಟ್ರಿಯ, ಸ್ಪಾಂಡೈಲಿಸ್, ಕಾರ್ಬುಲ, ವೆನರಿಕಾರ್ಡಿಯ ಮತ್ತು ಪೊಲಡೋಮಿಯಗಳು ಇಯೊಸೀನ್ ಯುಗದಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದ ಲೆಮಲಿಬ್ರ್ಯಾಂಕುಗಳು. (ಡಿ.ಆರ್.)

**ಇಯೋ ಆಂಥ್ರೊಪಸ್:** ನೋಡಿ– ಪಿಲ್ಟ್‌ಡೌನ್–ಮನುಷ್ಯ

**ಇಯೋಜ಼ೋನ್ ಕೆನಡೆನ್ಸಿಸ್:** ಕೆನಡದಲ್ಲಿ ನಿಕ್ಷೇಪಗೊಂಡ ಪೂರ್ವ ಕೇಂಬ್ರಿಯನ್ ಕಲ್ಪದ (600 ದಶಲಕ್ಷ ವರ್ಷಗಳಿಂದಲೂ ಹಿಂದಿನ ಕಾಲ) ಕೆಲವು ಸುಣ್ಣ ಕಲ್ಲುಗಳಲ್ಲಿ ಏಕಕೇಂದ್ರೀಯವಾಗಿ ವಿನ್ಯಾಸಗೊಂಡಿದ್ದ ಪಟ್ಟಿಗಳನ್ನು ಇ. ಕೆನಡೆನ್ಸಿಸ್ ಎಂಬ ಜೀವಿಗಳ ಅವಶೇಷಗಳೆಂದು ಕರೆದರು. ಪೂರ್ವ ಕೇಂಬ್ರಿಯನ್ ಶಿಲಾಸ್ತೋಮಗಳು ಸಂಪೂರ್ಣವಾಗಿ ಜೀವಾವಶೇಷರಹಿತ ಶಿಲೆಗಳು. ಆದರೂ ಆ ಕಾಲದಲ್ಲಿ ಜೀವಿಗಳು ಇದ್ದಿರಬಹುದೆಂಬ ಅನುಮಾನವನ್ನು ಹುಟ್ಟಿಸುವ ಹಲವು ಕುರುಹುಗಳು ದೊರೆತದ್ದರಿಂದ ಕೆಲವು ಭೂವಿಜ್ಞಾನಿಗಳು ಆ ದಿಶೆಯಲ್ಲಿ ತೀವ್ರ ಪ್ರಯತ್ನ ಮಾಡಿದರು. ಸರ್ ವಿಲಿಯಂ ಲೋಗನ್ ಕೆನಡದ ಲಾರೆನ್ಸಿಯನ್ ನೈಸ್ ಶಿಲೆಯಲ್ಲಿ ಒಂದು ಕುತೂಹಲಕರವಾದ ಖನಿಜಶೇಖರಣೆಯನ್ನು ವರದಿ ಮಾಡಿದ (1858). ಅದರಲ್ಲಿ ಕ್ಯಾಲ್ಸೈಟ್ ಮತ್ತು ಸರ್ಪೆಂಟೈನ್ ಖನಿಜಗಳು ಒಂದಾದ ಮೇಲೆ ಒಂದರಂತೆ ಅನೇಕ ಪಟ್ಟಿಗಳಾಗಿ ನಿಕ್ಷೇಪಗೊಂಡಿವೆ. ಸರ್ಪೆಂಟೈನ್ ಡೊಂಕುಪಟ್ಟಿಗಳಾಗಿಯೂ ಕ್ಯಾಲ್ಸೈಟ್ ಪ್ರಧಾನವಾಗಿ ಗೂಡುಗಳನ್ನು ತುಂಬಿದಂತೆಯೂ (ಕ್ಯಾವಿಟಿ ಫಿಲಿಂಗ್) ಇವೆ. ಇಂಥ ರಚನೆ ಖನಿಜಗಳಲ್ಲಿ ಇರುವುದು ಬಲು ವಿರಳ. ಆದ್ದರಿಂದ ಇದಕ್ಕೆ ಜೀವಸಂಬಂಧ ವಿರಬೇಕೆಂಬ ನಿರ್ಧಾರಕ್ಕೆ ಆತ ಬಂದುದೇ ಅಲ್ಲದೆ ಇಯೋಜ಼ೋನ್ ಕೆನಡೆನ್ಸಿಸ್ ಎಂಬ ಹೆಸರನ್ನೂ ಆ ಜೀವಿಗೆ ನೀಡಿದ. ಕಾರ್ಪೆಂಟರ್ ಎಂಬಾತ ಈ ಜೀವಿಯನ್ನು ಕುರಿತು ಹೆಚ್ಚು ವಿವರಗಳನ್ನು ವರದಿ ಮಾಡಿದ್ದಾನೆ. ಆದರೆ ಕಿಂಗ್ ಮತ್ತು ಗೆಲವೇಯದ ರೊಮ್ನೆ ಇವರು ಇಯೋಜ಼ೋನ್ ಕೆನಡೆನ್ಸಿಸ್‌ನಲ್ಲಿರುವ ಪಟ್ಟಿಗಳು ಸರ್ಪೆಂಟೈನ್ ಖನಿಜದ ಸುಣ್ಣ ದ್ರಾವಣ ತೇಯುವ ಕಾರ್ಯಗತಿಯಿಂದ (ವೇಸ್ಟಿಂಗ್ ಆ್ಯಕ್ಷನ್) ಆದವುಗಳೆಂದೂ ಅವುಗಳ ಕ್ರಮ ಖನಿಜದ ಸೀಳುಗಳ ಪ್ರಭಾವದಿಂದ ಉಂಟಾದವುಗಳೆಂದೂ ಹೇಳಿದ್ದಾರೆ. ಆದ್ದರಿಂದ

ಇಲ್ಲಿ ಜೀವಿ ಇದ್ದಿರಬಹುದೇ ಎಂಬ ಸಂದೇಹ ಆಧಾರ ರಹಿತವೆಂದು ಅವರ ಅಭಿಪ್ರಾಯ. ಮೊದಲೇ ಇದ್ದ ಗೂಡುಗಳಲ್ಲಿ ಕ್ಯಾಲ್ಸೈಟ್ ಮತ್ತು ಸರ್ಪೆಂಟೈನ್ ಖನಿಜ ದ್ರಾವಣಗಳು ಒಳಹರಿದು ನಿಕ್ಷೇಪಗೊಳ್ಳುವಿಕೆಯಿಂದ ಈ ಪಟ್ಟಿಗಳು ಆಗಿವೆಯೆಂದು ಕೀಲ್‌ನ ಪ್ರೊಫೆಸರ್ ಮೋಬಿಯಸ್ ಹೇಳಿದ್ದಾನೆ. ಇಯೋಜ಼ೋನ್ ಕೆನಡೆನ್ಸಿಸ್ ರೀತಿಯ ವಿನ್ಯಾಸ ಖನಿಜಪ್ರಪಂಚದಲ್ಲಿ ಎಲ್ಲೂ ಕಂಡು ಬಂದಿಲ್ಲದಿರುವುದೇನೋ ನಿಜ. ಆದರೆ ಅಂಥ ಜೀವಿಯೊಂದು ಇದ್ದಿದ್ದರೆ ಅದರ ಪಳೆಯುಳಿಕೆ ಅಷ್ಟು ಕಲಕಿ ರೂಪಾಂತರಗೊಂಡಿರುವ ಶಿಲೆಗಳಲ್ಲಿ ಉಳಿದಿರುವ ಅವಕಾಶವಂತೂ ತೀರ ಅಸಂಭಾವ್ಯ. ಆದ್ದರಿಂದ ಇಂಥ ಸಂದರ್ಭಗಳಲ್ಲಿ ನಿಖರವಾಗಿ ಜೀವಸಂಬಂಧದ್ದೇ ಎಂದು ತೋರುವ ವಸ್ತುವನ್ನಲ್ಲದೆ ಬೇರಾವುದನ್ನೂ ಜೀವಾವಶೇಷ ಎಂದು ಅಂಗೀಕರಿಸುವುದು ಸಾಧುವಲ್ಲ. ಪೂರ್ವ ಕೇಂಬ್ರಿಯನ್ ಕಲ್ಪದಲ್ಲಿ ತೀರ ಸರಳ ಜೀವಿಗಳು ಮಾತ್ರವಿದ್ದವು. ಈ ಕಾರಣದಿಂದಲೂ ಇಯೋಜ಼ೋನ್ ಕೆನಡೆನ್ಸಿಸ್ ಜೀವಾವಶೇಷವಲ್ಲ ಎಂದು ತರ್ಕಿಸಬಹುದು. (ಡಿ.ಆರ್.)

**ಇ ಆರ್ ಪಿ -(ಎಂಟರ್‌ಪ್ರೈಸಿಂಗ್ ರಿಸೋರ್ಸ್ ಪ್ಲಾನಿಂಗ್):** ಉದ್ಯಮ ಮಟ್ಟದಲ್ಲಿ ವಸ್ತು ಸಾಮಗ್ರಿ ಹಣಕಾಸು ಮತ್ತು ಮಾನವ ಸಂಪನ್ಮೂಲದ ಕೇಂದ್ರೀಕೃತ ಯೋಜನೆ ಅಂದರೆ ಒಂದು ಸಂಸ್ಥೆಯ ಎಲ್ಲಾ ಇಲಾಖೆಗಳು ಮತ್ತು ಕಾರ್ಯಗಳನ್ನು ಒಂದೇ ಗಣಕಯಂತ್ರ ವ್ಯವಸ್ಥೆಯಲ್ಲಿ ಕ್ರೋಡೀಕರಿಸಿ ಆಯಾ ಇಲಾಖೆಗಳ ಬೇಡಿಕೆಗಳಿಗೆ ಸೇವೆ ಸಲ್ಲಿಸುವುದು ಇಆರ್‌ಪಿ-ಯ ನೈಜ ಗುರಿ. ಇಆರ್‌ಪಿ- ತಂತ್ರಾಂಶ ಹಣಕಾಸಿನ ನುರಿತ ಕೆಲಸಗಾರರಿಗೆ, ಮಾನವ ಸಂಪನ್ಮೂಲದ ಕೆಲಸಗಾರರಿಗೆ ಮತ್ತು ಕೋಠಿಯ ಕೆಲಸಗಾರರಿಗೂ ಸೇವೆಯನ್ನು ಒದಗಿಸುತ್ತದೆ. ಪ್ರತಿಯೊಂದು ಇಲಾಖೆಯಲ್ಲಿ ತನ್ನದೇ ಆದ ನುರಿತ ಗಣಕಯಂತ್ರ ವ್ಯವಸ್ಥೆ ಇರಬಹುದು. ಆದರೆ ಇಆರ್‌ಪಿ ಇವೆಲ್ಲವನ್ನೂ ಕ್ರೋಡೀಕರಿಸಿ ಒಂದೇ ಏಕೀಕೃತ ತಂತ್ರಾಂಶದಲ್ಲಿ, ಒಂದೇ ದತ್ತಾಂಶದಲ್ಲಿ ಇರಿಸಿ ಎಲ್ಲ ಇಲಾಖೆಗಳು ಸುಲಭವಾಗಿ ಮತ್ತು ತ್ವರಿತಗತಿಯಲ್ಲಿ ಮಾಹಿತಿಯನ್ನು ಹಂಚಬಹುದು ಮತ್ತು ಪಡೆಯಬಹುದು. ಇಆರ್‌ಪಿ ಇಲ್ಲದ ಕಾರ್ಯ ವೈಖರಿ ಸಣ್ಣ ಉದಾಹರಣೆಯೆಂದರೆ ಒಬ್ಬ ಗ್ರಾಹಕ ತನ್ನ ಸಾಮಗ್ರಿ ಖರೀದಿಗೆ, ಗ್ರಾಹಕರ ಆದೇಶವನ್ನು ಬಹುಶಃ ಪತ್ರದ ಮುಖಾಂತರ ಆದೇಶಿಸಿ, ಪ್ರತಿ ಇಲಾಖೆಯಲ್ಲೂ ದಾಖಲಿಸಬೇಕಾಗುತ್ತದೆ. ಇದು ನಿಧಾನಗತಿಯಲ್ಲಿ ಅಥವಾ ಒಂದು ಬಾರಿ ಕಳೆದುಹೋಗುವ ಸಂದರ್ಭಗಳು ಇರುತ್ತವೆ. ಒಂದು ವೇಳೆ ಸಾಮಗ್ರಿ ರವಾನೆಯಾಗಿದೆಯೇ? ಎಂದು ತಿಳಿಯಲು ಯಾವ ಇಲಾಖೆಯಲ್ಲೂ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ. ಅಥವಾ ಹಲವಾರು ದಾಖಲಾತಿ ಪುಸ್ತಕಗಳನ್ನು ಹುಡುಕಬೇಕಾಗುತ್ತದೆ.

ಇಆರ್‌ಪಿ ವ್ಯವಸ್ಥೆಯಲ್ಲಿ ಒಂದೇ ತಂತ್ರಾಂಶವನ್ನು ಹಲವು ಇಲಾಖೆಗಳು ಅನುಗುಣವಾಗಿ ಹಲವು ತಂತ್ರಾಂಶ ವಿಭಾಗಗಳಾಗಿ (ದಾಖಲು) ಮಾರ್ಪಾಟಾಗಿರುತ್ತದೆ. ಅಂದರೆ ಒಂದು ಇಲಾಖೆಯಲ್ಲಿ ಆ ಗ್ರಾಹಕರ ಆದೇಶವನ್ನು ಪ್ರೋಸೆಸ್ ಮಾಡಿದ ಮೇಲೆ ಮುಂದಿನ ಇಲಾಖೆಗೆ ಸ್ವಯಂ ಆಗಿ ರವಾನೆಯಾಗುತ್ತದೆ. ಈ ಎಲ್ಲ ಇಲಾಖೆಗಳ ಉದ್ಯೋಗಿಗಳ ಇಆರ್‌ಪಿ ವ್ಯವಸ್ಥೆಗೆ ಲಾಗಿನ್ ಆಗಿ, ಆ ಗ್ರಾಹಕರ ಆದೇಶ ಎಲ್ಲಿದೆ, ಯಾವ ಹಂತದಲ್ಲಿದೆ ಎಂದು ತಿಳಿಯಬಹುದು. ಅದೃಷ್ಟವೋ ಎಂಬಂತೆ ಆರ್ಡರ್‌ಗಳು ಕ್ಷಣಾರ್ಧದಲ್ಲಿ ಸಂಚರಿಸುತ್ತಾ ಗ್ರಾಹಕರಿಗೆ ಶೀಘ್ರದಲ್ಲಿ ಸೇವೆ ಲಭಿಸುವುದು. ಅಂತೆಯೇ ಇಆರ್‌ಪಿ ಇತರ ವ್ಯಾಪಾರ ವ್ಯವಹಾರದಲ್ಲಿ ಉದ್ಯೋಗಿಗಳ ಲಾಭಾದಾಯ ಅಥವಾ ಹಣಕಾಸಿನ ವರದಿಗಳಲ್ಲಿ ಉಪಯುಕ್ತವಾಗಲಿದೆ.

ಇಆರ್‌ಪಿಗೆ ಇಂದು ಹೊಣೆ, ಜವಾಬ್ದಾರಿತನ ಮತ್ತು ಸಂಪರ್ಕ ಇನ್ನೂ ಹೆಚ್ಚಾಗಿದೆ. ಇಆರ್‌ಪಿ ಇಂದು ನಿತ್ಯ ಕೆಲಸಗಳಲ್ಲಿ ಅಂದರೆ ಆದೇಶ ತೆಗೆದುಕೊಳ್ಳುವುದು. ಸಾಮಗ್ರಿ ತಯಾರಿಸುವುದು, ರವಾನಿಸುವುದು. ಮತ್ತು ಕ್ರಯ ಮಾಡುವ ಕೆಲಸಗಳ ಗುಣಮಟ್ಟವನ್ನು ಹೆಚ್ಚಿಸಿದರೆ ಆ ತಂತ್ರಾಂಶದಿಂದ ಹೆಚ್ಚಿನ ಮೌಲ್ಯ ದೊರೆಯುವುದು. ಉದಾ: ಕೋಠಿಯ ಉದ್ಯೋಗಿ ಇನ್‌ವೆಂಟರಿ ಮಟ್ಟವನ್ನು ಸರಿಯಾಗಿ ತುಂಬದಿದ್ದಲ್ಲಿ, ಕಸ್ಟಮರ್ ರೆಪ್ರೆಸೆಂಟೇಟಿವ್ ಗ್ರಾಹಕರಿಗೆ ದಾಸ್ತಾನು ಹೆಚ್ಚಾಗಿ ಅಥವಾ ಕಡಿಮೆ ಹೇಳಿ ಗೊಂದಲಕ್ಕೀಡಾಗಬಹುದು. ಅಂದರೆ ತಂತ್ರಾಂಶ ಅನ್ವಯದ ಜೊತೆಗೆ ಜನರ ಕೆಲಸ ಮಾಡುವ ಶೈಲಿಯು ಬದಲಾಗಬೇಕು.

ಸಮನ್ವಯಿಸುವ ಮತ್ತು ಶೇಖರಿಸುವಲ್ಲಿ ಇಆರ್‌ಪಿ ಮುಖ್ಯ ಪಾತ್ರ ನಿರ್ವಹಿಸುತ್ತದೆ. ಇಲ್ಲಿ ಎರಡು ಸಂಸ್ಥೆಗಳು ಭಿನ್ನವಾಗಿ ಬಗೆಯಲ್ಲಿ ಭಿನ್ನವಾದ ತಂತ್ರಾಂಶದಲ್ಲಿ ಕೆಲಸ ಮಾಡುತ್ತಿರುತ್ತದೆ. ಇಆರ್‌ಪಿ ಸ್ವಯಂ ನಿಲುವಿನ ಬಗೆಯಿಂದ ಕೆಲವು ಸಾಮಾನ್ಯ ಉತ್ಪಾದನಾ ವ್ಯವಸ್ಥೆಯನ್ನು ಒಂದುಗೂಡಿಸಬಹುದು. ಕಾರ್ಯವನ್ನು ಸುಧಾರಿಸಿದರೆ ಸಮಯ ಉಳಿತಾಯ, ಹೆಚ್ಚಿನ ಉತ್ಪಾದನೆ ಮತ್ತು ಕಡಿಮೆ ಸಂಪನ್ಮೂಲದಿಂದ ಕಾರ್ಯ ನಿರ್ವಹಿಸಬಹುದು.

ಇಆರ್‌ಪಿಯ ಇನ್ನುಳಿದ ಮುಖ್ಯ ಅಂಶಗಳೆಂದರೆ ಹೊಂದಿಕೊಂಡ ಹಣಕಾಸಿನ ಮಾಹಿತಿ. ಇದರಿಂದ ಸಿಇಓ ಸಂಸ್ಥೆಯ ಎಲ್ಲಾ ಇಲಾಖೆಯ ಕಾರ್ಯ ತಿಳಿಯಲು ಅನುಕೂಲವಾಗುತ್ತದೆ. ಮತ್ತು ಷೇರು ಸದಸ್ಯರಿಗೆ ಒಮ್ಮೆಲೆ ಹಣಕಾಸಿನ ವರದಿಯನ್ನು ಸುಲಭವಾಗಿ ತಿಳಿಸಬಹುದು. ಮಾನವ ಸಂಪನ್ಮೂಲ ಮಾಹಿತಿಯನ್ನು ಉತ್ತಮಪಡಿಸಿದರೆ, ಬಹು ದೊಡ್ಡ ಕಂಪೆನಿಗಳಲ್ಲಿ ಹಲವಾರು ವ್ಯಾಪಾರ ಘಟ್ಟಗಳಲ್ಲಿ ಕೆಲಸ ಮಾಡುವ ಸಮಯ ಮತ್ತು ಸಮರ್ಪಕತೆಯನ್ನು ಇಆರ್‌ಪಿ ಒಂದೇ ವ್ಯವಸ್ಥೆ ಯಡಿಯಲ್ಲಿ ಸಹಾಯಮಾಡುತ್ತದೆ.

ಇಆರ್‌ಪಿಯ ಅನುಷ್ಠಾನ ವ್ಯಾಪಾರ ಕ್ರಮದ ಮೇಲೆ ಅವಲಂಬಿತವಾಗಿರುತ್ತದೆ. ಸಂಸ್ಥೆಯ ಕಾರ್ಯವೈಖರಿಗಳು ಬಹಳ ಚೆನ್ನಾಗಿ ನಡೆದರೆ, ಅಂದರೆ ಸಾಮಗ್ರಿಗಳು ಸರಿಯಾದ ಸಮಯಕ್ಕೆ ಸಂಚರಿಸಿದರೆ, ಪ್ರತಿಸ್ಪರ್ಧಿಗಳಿಗಿಂತ ಹೆಚ್ಚಿನ ಉತ್ಪಾದನೆ ಇದ್ದರೆ, ಗ್ರಾಹಕರು ಸಂಪೂರ್ಣವಾಗಿ ಸಂತೃಪ್ತಿ ಹೊಂದಿದ್ದರೆ ಇಆರ್‌ಪಿಯ ಆವಶ್ಯಕತೆ ಇರುವುದಿಲ್ಲ. ಇಆರ್‌ಪಿ ಕ್ರಮವನ್ನು ಯಶಸ್ವಿಯಾಗಿ ಸಂಸ್ಥೆಯಲ್ಲಿ ಅನುಷ್ಠಾನ ಮಾಡಬೇಕಾದರೆ, ಕ್ರಮ ತರಬೇತಿ ತಂತ್ರಾಂಶದ ತರಬೇತಿಯನ್ನು ಕೊಡಬೇಕಾಗುತ್ತದೆ. ಇದು ಒಂದು ಬೆಲೆಯಾದರೂ ಹೊಸ ಉನ್ನತ ವಿಧಾನ ಕಾರ್ಯ ನಿರ್ವಹಿಸಿದರೆ ಕಾಲಾನುಕ್ರಮದಲ್ಲಿ ಹೆಚ್ಚಿನ ಮೌಲ್ಯ ವರ್ಧಿತ ಬೆಳವಣಿಗೆ ಕಾಣಬಹುದು. ಈ ಇಆರ್‌ಪಿ ಕ್ರಮವನ್ನು ಪರೀಕ್ಷಿಸುವುದು ಇದರ ಅಭಿವೃದ್ಧಿಯಷ್ಟೆ ಮಹತ್ತ್ವದ್ದಾಗಿರುತ್ತದೆ. ಇದನ್ನು ಕೊನೆಯಿಂದ ಕೊನೆಗೆ ಒಳಪರೀಕ್ಷೆ ಮಾಡಬೇಕಾಗುತ್ತದೆ. ಇದಕ್ಕೆ ಜೀವಂತ ವಾತಾವರಣ ಪುಷ್ಟಿಸುವುದು ಒಂದು ದೊಡ್ಡ ಅನುಷ್ಠಾನ ಅಷ್ಟೆ ದೊಡ್ಡ ಸಾಹಸವಾಗುತ್ತದೆ. ವ್ಯವಸ್ಥಿತ ಕ್ರಮದಿಂದ ಹೊಸ ಕ್ರಮಕ್ಕೆ ಬದಲಾಗಲು ಇಆರ್‌ಪಿ ಒಳ ವ್ಯವಸ್ಥೆ ಸಾಫ್ಟ್‌ವೇರ್ ಆಗಿಯೂ ಕೆಲಸ ನಿರ್ವಹಿಸುತ್ತದೆ. ಇಲ್ಲಿ ಹೆಚ್ಚಾಗಿ ವ್ಯಾಪಾರೀಕರಣ ಮತ್ತು ಇರುವುದರ ಬದಲೀಕರಣ ಮಾಡಬೇಕಾಗುತ್ತದೆ. ಗಿರಾಕಿಗಳ ದಾಖಲೆ, ಒದಗಿಸುವರ ದಾಖಲೆ, ವಸ್ತುರೂಪ ಇವುಗಳ ವ್ಯವಸ್ಥೆಯಿಂದ ಇಆರ್‌ಪಿ ವ್ಯವಸ್ಥೆಗೆ ಬದಲಾಯಿಸಬೆಕಾಗುತ್ತದೆ.

ಇಆರ್‌ಪಿ ಮತ್ತು ವಿದ್ಯುನ್ಮಾನ ವಾಣಿಜ್ಯ ನೇರವಾಗಿ ಮತ್ತು ಸುಲಭವಾಗಿ ಒಂದಾಗುವ ಸಾಧ್ಯತೆ ಕಡಿಮೆ. ಇಆರ್‌ಪಿ ಸಂಸ್ಥೆಯ ಒಳಗೆ ಉದ್ಯಮ ಮಟ್ಟದಲ್ಲಿ ಉದ್ಯೋಗಿಗಳಿಗೆ ಹೆಚ್ಚಿನ ಮೌಲ್ಯಾಧಾರಿತ ಕೆಲಸಕ್ಕೆ ಅನುಕೂಲವಾದರೆ, ವಿದುನ್ಮಾನ ವಾಣಿಜ್ಯ ಗ್ರಾಹಕರು, ಸಂಸ್ಥೆಯ ವಸ್ತು ಮಾಹಿತಿಯನ್ನು ತಿಳಿದು ವ್ಯವಹರಿಸುವಂತಾದ್ದು. ಆದರೆ ಇಂದು ಗ್ರಾಹಕರು ಮತ್ತು ಒದಗಿಸುವರು ಇನ್ನೂ ಹೆಚ್ಚಿನ ಅಂದರೆ ಉದ್ಯೋಗಿಗಳಿಗೆ ಸಿಗುವ ಮಾಹಿತಿಯನ್ನು ಬೇಡುತ್ತಲಿದ್ದರೆ ಅಂದರೆ ಆದೇಶದ ಬೆಲೆ, ಹೊಸ ಉತ್ಪಾದನಾ ಮಟ್ಟ, ಬೆಲೆಪಟ್ಟಿ ಹೊಂದಾಣಿಕೆ ಇತ್ಯಾದಿ. ಅಂತೆಯೆ ಇಂದು ಗ್ರಾಹಕರಿಗೆ ಮತ್ತು ಒದಗಿಸುವವರುಗಳಿಗೆ ಎರಡು ತರಹದ ಮಾರ್ಗ ರೂಪಿಸುವ ಅಗತ್ಯವಿರುತ್ತದೆ. ಅಂದರೆ ಗ್ರಾಹಕ ವ್ಯಾಪಾರಕ್ಕೆ (b2c) ಮತ್ತು ವ್ಯಾಪಾರಕ್ಕೆ ವ್ಯಾಪಾರ (b2b). ಮುಂದೆ ಇಂಥ ಮಾರ್ಗಗಳು ಸುಲಭವಾಗಿ ಇಆರ್‌ಪಿ ಮತ್ತು ವಿದ್ಯುನ್ಮಾನ ವಾಣಿಜ್ಯಕ್ಕೆ ಮುಖ್ಯವಾಗಿ ಜೋಡಣೆಗಳಾಗುತ್ತವೆ. (ಕೆ.ಎಸ್.ಪಿ)

**ಇಯೋಲಿತ್: ನೋಡಿ–ಆದಿಶಿಲಾಯುಗ**

**ಇರಂಗೋಳದೇವ:** ಚಾಲುಕ್ಯವಂಶದ ಇಮ್ಮಡಿ ಜಗದೇಕಮಲ್ಲ 12ನೆಯ ಶತಮಾನದಲ್ಲಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕರ್ಣಾಟಕ ಸಾಮ್ರಾಜ್ಯವನ್ನು ಆಳುತ್ತಿದ್ದಾಗ ಮಂಡಲೇಶ್ವರನಾದ ಈತ ಅನಂತಪುರ ಜಿಲ್ಲೆಯ ರಾಜ್ಯಭಾಗದಲ್ಲಿ ಗುಯ್ಯಲೂರು ಅಥವಾ ಗೊಯ್ಯದವಾಡಿ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ. ಇವನಿಗೆ ಹೈಹಯರಾಜೇಂದ್ರಚೋಳನೆಂಬ ಹೆಸರೂ ಇದೆ. ಇರಂಗೋಳದೇವನ ಅನೇಕ ಶಾಸನಗಳು ಈ ಪ್ರಾಂತ್ಯದಲ್ಲಿ ದೊರಕಿವೆ. ಇರಂಗೋಳನ ಮಗನ ಶಾಸನಗಳು ಪ್ರ.ಶ. 1173, 1181ರಲ್ಲಿ ಲಿಖಿತವಾಗಿವೆ. ಈ ಶಾಸನಗಳಲ್ಲಿ ಇವನನ್ನು ಮಹಾಮಂಡಲೇಶ್ವರ ಇರಂಗೋಳ ಚೋಳ ಮಹಾರಾಜನೆಂದು ಕರೆಯಲಾಗಿದೆ. ಇದು ಪ್ರ. ಶ. 1139ರ ಕಾಲದ್ದು. ಹೈಹಯ ಕಾರ್ತವೀರ್ಯನ ವಂಶಜರೆಂದು ಹೇಳಿಕೊಳ್ಳುವ ಚೋಳರ ಇತಿಹಾಸ 1128–1206ರ ಸುಮಾರಿನ ಶಾಸನಗಳಲ್ಲಿ ಲಿಖಿಸಲಾಗಿದೆ. ಮಾಹಿಷ್ಮತೀಪುರಕ್ಕೆ ಅಲಂಕಾರಭೂತನೂ ಕೋನಮಂಡಲಾಧಿಪತಿಯೂ ಹೈಹಯವಂಶಜ ರಾಜ ಪೆರೇಡುಕುಮಾರನೂ ವಿಕ್ರಮರುದ್ರ ಬಿರುದಾಂಕಿತನೂ ಆದ ರಾಜೇಂದ್ರ ಚೋಳನ ಶಾಸನ ಇವುಗಳಲ್ಲಿ ಪುರಾತನವಾದುದು. ಮಾಹಿಷ್ಮತಿ ಕಾರ್ತವೀರ್ಯನ ವಂಶಜರಲ್ಲಿ ಒಬ್ಬನಾದ ಪ್ರತೀಪನಿಗೆ ರಾಜಧಾನಿಯಾಗಿದ್ದು ರೇವಾನದೀತೀರದಲ್ಲಿದ್ದಂತೆ ರಘುವಂಶದಲ್ಲಿ ಹೇಳಿದೆ. ಚಾಲುಕ್ಯ ಚೋಳ ಮತ್ತು ವೆಲನಾಟಚೋಳರಿಗೆ ಸೇರಿದ ಕೋನಮಂಡಲವನ್ನು ಆಳಿದ ರಾಜವಂಶಕ್ಕೆ ಹೈಹಯವಂಶವೆಂದು ಹೆಸರು. (ಎಂ.ಜಿ.ಎನ್.)

**ಇರಾಂತಿಮಮ್:** ಆಕ್ಯಾಂತೇಸಿ ಕುಟುಂಬಕ್ಕೆ ಸೇರಿದ ಒಂದು ಸಸ್ಯ ಜಾತಿ, ಉಷ್ಣ ಪ್ರದೇಶಗಳಲ್ಲಿ ಬೆಳೆಯುತ್ತದೆ. ಇರಾಂತಿಮಮ್‌ಎಂದರೆ ಸುಂದರ ಪುಷ್ಪವೆಂದರ್ಥ. ಈ ಸಸ್ಯವನ್ನು ಕುಂಡ, ಅಂಚು, ಕಲ್ಲೇರಿ ಸಸ್ಯಗಳಾಗಿ ಬೆಳೆಸುತ್ತಾರೆ. ಎಲೆಗಳು ಪ್ರಭೇದಗಳಿಗೆ ಅನುಸಾರವಾಗಿ ಕೆಂಪು, ಹಸಿರಿನ ಮೇಲೆ ಬಿಳುಪು ಹಳದಿ ಮತ್ತು ಇತರ ಬಣ್ಣದ ಮಚ್ಚೆಗಳಿಂದ ಕೂಡಿದ್ದು ಬಹಳ ಸುಂದರವಾಗಿ ಕಾಣುತ್ತವೆ.

ಎಲೆಯ ಆಕಾರ ಕರನೆಯಂತೆ, ನಾಳರಚನೆ ಗರಿರೂಪದ್ದು. ಅಂಚು ನಯ ಇಲ್ಲವೆ ಗರಗಸದ ಹಲ್ಲಿನಂತೆ, ಹೂಗೊಂಚಲು ಸ್ಪೈಕ್ ಮಾದರಿಯದು, ಹೂಬಣ್ಣ ನೀಲಿ ಇಲ್ಲವೆ ಕಿತ್ತಳೆ. ಹೂದಳಗಳು ಕೂಡಿವೆ. ಹೂವಿನ ಆಕಾರ ಕೊಳವೆಯಂತೆ, ತುದಿ ವಿಶಾಲವಾಗಿ ಹರಡಿ ಐದು ಭಾಗಗಳಾಗಿ ಒಡೆದಿದೆ. ಪುಷ್ಪಪತ್ರ ಉಪದಳಗಳಿಂದ ಆವೃತ. ಹೂದಳದ ಮೇಲೆ ಅಂಟಿರುವ ಎರಡು ಕೇಸರಗಳಿವೆ. ದೀರ್ಘವೃತ್ತಾಕಾರ ಅಥವಾ ಆಯತಾಕಾರದ ಮೇಲು ಅಂಡಾಶಯ ನಾಲ್ಕು ಬೀಜವಿರುವ ಕ್ಯಾಪ್ಸೂಲ್ ಮಾದರಿಯದು. ಕಾಂಡದ ತುಂಡುಗಳಿಂದ ಹೊಸ ಗಿಡಗಳನ್ನು ಪಡೆಯಬಹುದು. ಜೌಗಿಲ್ಲದ ಒಳ್ಳೆಯ ನೆಲದಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಅರ್ಧ ನೆರಳಿದ್ದರಂತೂ ಇನ್ನೂ ಒಳ್ಳೆಯದು.

ಇರಾಂತಿಮಮ್ ಎಲ್ಡೊರ್‍ರ್ಯಾಡೊ ಪ್ರಭೇದವೂ 2 ಅಡಿ ಎತ್ತರ ಬೆಳೆಯುತ್ತದೆ. ಹಳದಿ ಮಚ್ಚೆ ಮತ್ತು ಹಸಿರು ನಾಳಗಳಿರುವ ಎಲೆಗಳು ಬಹಳ ಸುಂದರವಾಗಿವೆ. ಇರಾಂತಿಮಮ್‍ನೊಬಿಲಿಸ್ ಪ್ರಭೇದ 3–4 ಅಡಿ ಎತ್ತರ ಬೆಳೆಯುತ್ತದೆ. ಅತಿ ಹಸುರಾದ ಎಲೆಗಳಲ್ಲಿ ಹಳದಿಬಣ್ಣದ ನಾಳಗಳಿರುವುದರಿಂದ ಬಹಳ ಸುಂದರವಾಗಿ ಕಾಣುತ್ತದೆ. ಇರಾಂತಿಮಮ್ ವರ್‍ಸಿಕೊಲೊರ್ ಪ್ರಭೇದದ ಎಲೆಗಳಲ್ಲಿ ಬಿಳಿಯ ಮತ್ತು ಹಸುರು ಬಣ್ಣದ ಮಚ್ಚೆಗಳಿವೆ. ಇರಾಂತಿಮಮ್‍ಆಟ್ರೊಪರ್ವ್ಯೂರಿಯಮ್ ಪ್ರಭೇದದ ಎಲೆಗಳ ಮೇಲೆ ಕೆಂಬು ಅಥವಾ ಕಡುಗೆಂಪು ಬಣ್ಣದ ಮಚ್ಚೆಗಳಿವೆ. *

**ಇರಾಕ್:** ಪಶ್ಚಿಮ ಏಷ್ಯದ ಒಂದು ಪುರಾತನ ಪ್ರದೇಶ. ಇದಕ್ಕೆ ಮೆಸಪೊಟೇಮಿಯ ಅಂದರೆ ನದಿಗಳ ನಡುವಣ ನಾಡು ಎಂಬುದು ಅನ್ವರ್ಥನಾಮ. ಸುಮಾರು ನೂರು ವರ್ಷಗಳಿಂದ ಇಲ್ಲಿ ನಡೆದ ಭೂಶೋಧನೆಗಳಿಂದ ಈ ಪ್ರದೇಶ ಅತ್ಯಂತ ಪ್ರಾಚೀನ ನಾಗರಿಕತೆಗಳ ತೌರು ಮಾತ್ರವಲ್ಲದೆ ಇತಿಹಾಸಪೂರ್ವ ಯುಗದಲ್ಲೂ ಆದಿಮಾನವನ ಕಾರ್ಯರಂಗವಾಗಿದ್ದು ನಾಗರಿಕತೆಯ ತೊಟ್ಟಿಲು ಎನಿಸಿದೆ.



ರಾಜಕೀಯ ಭೂಪಟ

**ಪುರಾತತ್ತ್ವ:** ಇರಾಕ್ ದೇಶದಲ್ಲಿ ನಡೆದಿರುವ 6,400 ಕ್ಕಿಂತಲೂ ಹೆಚ್ಚಿನ ಭೂಶೋಧನೆಗಳಿಂದ ದೇಶದ ಪುರಾತನ ನಾಗರಿಕತೆ ತಿಳಿದುಬರುತ್ತದೆ. ನವಶಿಲಾಯುಗದಲ್ಲಿ ಕೊರೆದ ಮತ್ತು ಬಣ್ಣಗಳಿಂದ ಚಿತ್ರಿತವಾದ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತ ಒಂದೇ ಸ್ಥಳದಲ್ಲಿ ಸ್ಥಿರಜೀವನ ನಡೆಸುತ್ತಿದ್ದ ಜನರ ಸಂಸ್ಕೃತಿಯ ಚಿತ್ರ ಟೆಲ್‍ಹಸೂನಾದ ಭೂಶೋಧನೆಗಳಿಂದ ಕಂಡು ಬರುತ್ತದೆ. ಟೆಲ್ ಹಲಾಫ಼ ಭೂಶೋಧನೆಗಳು ವಿವಿಧ ಬಣ್ಣಬಳಿದ ರಮ್ಯವಾಗಿ ಅಲಂಕೃತವಾದ ಮಣ್ಣಿನ ಪಾತ್ರೆಗಳನ್ನೂ ಕಲ್ಲಿನ ಆಯುಧಗಳನ್ನೂ ಬಳಸುತ್ತಿದ್ದ ಜನರ ಜೀವನವನ್ನು ನಿರೂಪಿಸುತ್ತವೆ.

ತಾಮ್ರ–ಶಿಲಾಯುಗದವರೆಗೆ ಅಂದವಾದ ಬಣ್ಣದ ಮಡಕೆಗಳು, ತಾಮ್ರ, ಮೊದಲಾದ ಲೋಹಗಳ ಉಪಯೋಗ ತಿಳಿದಿತ್ತು. ಮೊತ್ತ ಮೊದಲನೆಯ ದೇವಸ್ಥಾನ ಕಟ್ಟಿದ್ದ ಆ ಜನರ ಜೀವನಚಿತ್ರ ಅಲ್ ಉಬೈದ್ ಭೂಶೋಧನೆಗಳಿಂದ ದೊರಕುತ್ತದೆ. ದಕ್ಷಿಣ ಇರಾಕಿನಲ್ಲಿ ಉರುಕ್ ಸಂಸ್ಕೃತಿ ಕಾಲದಲ್ಲಿ ದೊಡ್ಡ ದೊಡ್ಡ ದೇವಾಲಯಗಳೂ ಹೊಸನಗರಗಳೂ ಉರುಳೆಯಾಕಾರದ ಮುದ್ರೆಗಳೂ ಚಿತ್ರಲಿಪಿಯೂ ಇದ್ದುದಕ್ಕೆ ಸಾಕ್ಷಿ ಒದಗಿಸಿವೆ. ಖಫಾಜೆ ಮತ್ತು ಟೆಲ್ ಅಸಮಾರ್ ಭೂಶೋಧನೆಗಳಿಂದ ತಿಳಿದುಬರುವಂತೆ ಪ್ರಾಚೀನರಾಜ್ಯವಂಶದ ಕಾಲದಲ್ಲಿ ದೇಶ ನೀರಾವರಿ ವ್ಯವಸಾಯದಿಂದ ಸಂಪದ್ಯುಕ್ತವಾಗಿದ್ದು, ಇರಾಕ್ ಅಂದಿನ ಪ್ರಪಂಚದ ಧಾನ್ಯ ಕಣಜದಂತಿತ್ತು. ಉರ್ ನಗರದ ಆಳರಸರ ಸ್ಮಶಾನ ಶೋಧನೆಗಳಿಂದ ಆ ಕಾಲದ ಐಶ್ವರ್ಯ ಮತ್ತು ಸಂಸ್ಕೃತಿಯ ಮಟ್ಟ ತಿಳಿದು ಬರುತ್ತದೆ (**ನೋಡಿ–ಉರ್**). ಮಾರಿ, ನೂಜಿ, ದುರ್ ಕುರಿಕಾಲ್ಜುಗಳ ಭೂಶೋಧನೆಗಳಲ್ಲಿ ದೊರೆತ ಜೇಡಿಮಣ್ಣಿನ ಲಿಖಿತ ಫಲಕಗಳಿಂದ ಪ್ರ.ಶ.ಪೂ. 3ನೆಯ ಸಹಸ್ರಾಬ್ದದ ಇತಿಹಾಸ ತಿಳಿದುಬರುತ್ತದೆ. ಅಸ್ಸೂರ್, ನಿನೆವೆ, ನಿಮ್ರುಸ್, ನಿಪ್ಪೂರ್ ಮುಂತಾದ ಸ್ಥಳಗಳ ಭೂಶೋಧನೆಗಳಿಂದ ಪ್ರ.ಶ.ಪೂ.3 ರಿಂದ 1ನೆಯ ಸಹಸ್ರಾಬ್ದಗಳ ಇರಾಕಿ ಸಂಸ್ಕೃತಿಯ ಅನೇಕ ವಿಷಯಗಳು ಗೊತ್ತಾಗಿವೆ. ಇವುಗಳ ಕೆಲವು ವಿವರಗಳನ್ನಿಲ್ಲಿ ಸಂಗ್ರಹಿಸಲಾಗಿದೆ. ಉತ್ತರ ಇರಾಕಿನ ಬಾರ್ದ್ಬಲ್ಕಾ ಎಂಬಲ್ಲಿ ದೊರೆಕಿರುವ ನಾಜೂಕಿಲ್ಲದ ಕೈ ಕೊಡಲಿ ಮತ್ತು ಕಲ್ಲಿನ ಚಕ್ಕೆಗಳಿಂದ ಮಾಡಲ್ಪಟ್ಟ ಉಪಕರಣಗಳು ಅತ್ಯಂತ ಪುರಾತನವಾದವು. ಇವನ್ನು ಆದಿಹಳೆಶಿಲಾಯುಗದ ಉಪಕರಣಗಳನ್ನು ಹಜರ್‍ಮರ್ದ್ ಮತ್ತು ಷನಿದಾರ್ ಗುಹೆಗಳಲ್ಲಿ ಕಂಡುಬಂದಿವೆ. ಈ ಪದರಗಳಲ್ಲಿ ಹಳೆಯ ಕೈಕೊಡಲಿಗಳು ಹೊಸರೀತಿಯ ಚಕ್ಕೆ ಉಪಕರಣಗಳ ಜೊತೆಯಲ್ಲಿ ಕಂಡುಬರುವುದರಿಂದ ಇದು ಆದಿ ಮಾನ್ ಸಂಸ್ಕೃತಿಯ ಅವಿಚ್ಛಿನ್ನ ಬೆಳವಣಿಗೆಯನ್ನು ಸಾಕ್ಷೀಕರಿಸುತ್ತದೆ. ಹಜರ್‍ಮರ್ದ್, ನಿದಾರ್, ಜರ್ಜಿ ಮತ್ತು ಪಲೇಗಾವ್ರಾ ಎಂಬೆಡೆಗಳಲ್ಲಿ ಅಂತ್ಯ ಹಳೆಶಿಲಾಯುಗದ ಕೂಲಗುಳ್ಳ ಚಕ್ಕೆಗಳೂ ಸೂಕ್ಷ್ಮ ಶಿಲಾಯುಗದ ಉಪಕರಣಗಳ ಬೆರಕೆಯಿದ್ದು ಕಾಲಗಣನೆಯಲ್ಲಿ ಇವು ಯುರೋಪಿನ ಸೂಕ್ಷ್ಮ ಶಿಲಾಯುಧಗಳಿಗಿಂತಲೂ ಹಳೆಯವಾಗಿರುವುವೆಂದೂ ಪಶ್ಚಿಮದ ಏಷ್ಯದಲ್ಲಿ ಈ ಕಾಲದ ಮಾನವ ಹೆಚ್ಚು ಪ್ರಗತಿಪರನಾಗಿದ್ದನೆಂದೂ ಅಂತ್ಯಹಳೆಶಿಲಾಯುಗದ ಯುರೋಪಿನ ಸಂಸ್ಕೃತಿ ಗಳು ಕೂಡ ಇಲ್ಲಿ ಆವಿರ್ಭವಿಸಿ ಅನಂತರ ಯುರೋಪಿಗೆ ಹರಡಿದುವೆಂದೂ ಪಂಡಿತರ ಅಭಿಪ್ರಾಯ.

ಇದರ ಮುಂದಿನ ಸಂಸ್ಕೃತಿಗಳ ಅವಶೇಷಗಳು ಇರಾಕಿನಲ್ಲಿ ಹೆಚ್ಚಾಗಿ ದೊರೆತಿಲ್ಲ. ಕೇವಲ ಷನಿದಾರ್ ಗುಹೆಗಳಲ್ಲಿ ಮಾತ್ರ ನಾಗರಿಕತೆಯ ಉಗಮಕಾಲದವರೆಗೂ ಮಾನವ ಅವಿಚ್ಛಿನ್ನವಾಗಿ ವಾಸಿಸಿದ ಮಾಹಿತಿಗಳು ದೊರಕಿವೆ. ಇಲ್ಲಿನ ತಳಮಟ್ಟದ ಪದರಗಳಲ್ಲಿ ಮೊದಮೊದಲು ನವಶಿಲಾಯುಗದ ಅವಶೇಷಗಳೂ ಮೇಲ್ಭಾಗದಲ್ಲಿ ಚರಿತ್ರ ಪೂರ್ವ ಅಕ್ಷರಸ್ಥನಾಗರಿಕತೆಯ ಕುರುಹುಗಳೂ ದೊರಕಿವೆ.

ಇರಾಕಿನ ಹೆಚ್ಚಿನ ಅಭಿವೃದ್ಧಿಯ ಮಾಹಿತಿಗಳು ನವ ಶಿಲಾಯುಗದಲ್ಲಿ ದೊರಕುತ್ತವೆ. ಪಶ್ಚಿಮ ಏಷ್ಯ ಪ್ರದೇಶಗಳಲ್ಲಿ ಮಾನವನ ಪುರೋಗಾಮಿತ್ವ ಮತ್ತು ನಾಗರಿಕತೆಯ ಬೆಳವಣಿಗೆಯ ಮೂಲಾಧಾರವಾದ ಆಹಾರೋತ್ಪತ್ತಿಯ ಉದ್ಘಾಟನೆ ನಡೆದದ್ದು ನಿರ್ವಿವಾದ ಸಂಗತಿ. ಇರಾಕಿನ ಜಾವಿ ಷಮಿ, ಷನಿದಾರ್, ಕರೀಮ್ ಷಾಹಿರ್, ಮ್ಲೆಫಾತ್ ಮುಂತಾದ ನೆಲೆಗಳಲ್ಲಿ ಈ ಸಂಸ್ಕೃತಿಯ ಅತ್ಯಂತ ಪ್ರಾಚೀನ ಅವಶೇಷಗಳು ದೊರಕಿವೆ. ಇವು ಪ್ರ.ಶ.ಪೂ.ಸು. 9000 ವರ್ಷಗಳಷ್ಟು ಹಳೆಯವೆಂದು ನಿರ್ಣಯಿಸಲಾಗಿದೆ. ಈ ಸಂಸ್ಕೃತಿಯಲ್ಲಿ ನಯಮಾಡಿದ ಕಲ್ಲಿನ ಕೊಡಲಿಗಳೂ ಅಗೆಯುವ ಕೋಲಿನ ಭಾರದಗುಂಡುಗಳೂ ಅರೆಯುವ ಕಲ್ಲುಗಳೂ ಒರಟಾಗಿ ಕಟ್ಟಿದ ಗುಡಿಸಲ ಅವಶೇಷಗಳೂ ಸಾಕುಪ್ರಾಣಿಯಾದ ಆಡು, ಕುರಿ, ಹಂದಿ ಮತ್ತು ದನಗಳ ಅವಶೇಷಗಳೂ ಸಿಕ್ಕಿವೆಯಾದರೂ ಬೇಟೆಯೇ ಆಹಾರೋತ್ಪತ್ತಿಯ ಮುಖ್ಯ ವಿಧಾನವಾಗಿತ್ತೆಂದು ಹೇಳಲಾಗಿದೆ.

ವ್ಯವಸಾಯವನ್ನೇ ಮುಖ್ಯ ಆಹಾರೋತ್ಪತ್ತಿಮಾರ್ಗವಾಗುಳ್ಳ ಜನ ಗ್ರಾಮಗಳಲ್ಲಿ ನೆಲೆನಿಂತು ಉತ್ತರದ ಕುರ್ದಿಸ್ತಾನ್ ಬೆಟ್ಟಗಳ ಬುಡದಲ್ಲಿರುವ ಕಾಲಾತ್ ಜಾರ್ಮೋ ಎಂಬಲ್ಲಿ ದೊರಕಿವೆ. ಇಲ್ಲಿನ ಕ್ರಮಾಗತ 12 ಪದರಗಳಲ್ಲಿ ದೊರಕುವ ಸಾಕ್ಷ್ಯಗಳಲ್ಲೂ ನೂತನ ಶಿಲಾಯುಗಕ್ಕೆ ಸೇರಿದ್ದುವಾದರೂ ಆ ಜನಗಳಿಗೆ ಇನ್ನೂ ಮಣ್ಣಿನ ಪಾತ್ರೆಗಳನ್ನು ಮಾಡುವ ಕಲೆ ಗೊತ್ತಿರಲಿಲ್ಲ. ಕಲ್ಲಿನ ಆಸ್ತಿಭಾರದ ಮೇಲೆ ಮಣ್ಣಿನಿಂದ ಕಟ್ಟಿದ ಅನೇಕ ಆಯತಾಕಾರದ ಕೊಠಡಿಗಳಿಂದ ಕೂಡಿದ ಮನೆಗಳು, ಗಾರ್ಕಿ ಗೋದಿಗಳ ವ್ಯವಸಾಯ ಇವು ಮೊದಲಿನ ಹಂತದಲ್ಲೂ ಸಾಕುಆಡು, ಕುರಿ, ಹಂದಿಗಳು ಮೇಲಿನ ಪದರಗಳಲ್ಲೂ ದೊರಕಿರುವುದು ಈ ಸಂಸ್ಕೃತಿಯ ಮುನ್ನಡೆಗೆ ಸಾಕ್ಷಿ. ಚಕಮಕಿ ಕಲ್ಲಿನಿಂದ ಮತ್ತು ಜ್ವಾಲಾಮುಖಿಯಿಂದ ಉತ್ಪನ್ನವಾದ ಅಬ್ಸಿಡಿಯನ್ ಗಾಜಿನಿಂದ ಮಾಡಿದ ಸೂಕ್ಷ್ಮ ಶಿಲಾಯುಧಗಳು, ನಯಮಾಡಿದ ಕಲ್ಲಿನ ಕೊಡಲಿಗಳು, ಬಾಚಿಗಳು, ಮಣಿಯ ಕೈಗಡಗಳು ಮತ್ತು ಅತಿ ಕೌಶಲದಿಂದ ಮಾಡಲಾದ ಕಲ್ಲಿನ ಪಾತ್ರೆಗಳು ಆಗ ಬಳಕೆಯಲ್ಲಿದ್ದವು. ಮಣ್ಣಿನಲ್ಲಿ ಮಾಡಿದ ಬೆತ್ತಲೆ ಗರ್ಭಿಣಿ ಗೊಂಬೆಗಳು ಪೂರ್ವ ಶಿಲಾಯುಗದಿಂದಲೂ ಈ ಜನಗಳಲ್ಲಿ ಬೆಳೆದುಬಂದ ಮಾಂತ್ರಿಕ ಹಾಗೂ ಬಹುಸಂತಾನ ಪಂಥದ ಕುರುಹುಗಳಾಗಿವೆ. ಕಡೆಕಡೆಗೆ ಕೈಯಲ್ಲಿ ಮಾಡಿದ ಮಣ್ಣಿನ ಮಡಕೆಗಳೂ ಬಳಕೆಗೆ ಬಂದಿದ್ದವು. ಈ ಸಂಸ್ಕೃತಿ ಪ್ರ.ಶ.ಪೂ. 6750ರಷ್ಟು ಹಳೆಯದೆಂದು ಇಂಗಾಲ–14ರ ಪ್ರಯೋಗದಿಂದ ಗುರುತಿಸಲಾಗಿದೆ. ಇವರು ಹೊರಗಿನಿಂದ ಬಂದಿರಬಹುದೆಂಬುದಕ್ಕೆ ಅನೇಕ ಸೂಚ್ಯ ಆಧಾರಗಳಿವೆ.

ಇದರ ಮುಂದಿನ ಹಂತವೂ ಉತ್ತರ ಇರಾಕಿನ ಟೈಗ್ರಿಸ್ ನದೀತೀರದಲ್ಲಿರುವ ಹಸ್ಸುನಾ ಎಂಬೆಡೆಯಲ್ಲಿ ದೊರಕಿದೆ. ಇದೇ ರೀತಿಯ ಮಾಹಿತಿಗಳು ಮಟಾರ್‍ರಾನಿನ್ವೆಹ್, ಅರ್ಪಾಚಿಯಾ ಹಾಗೂ ಗಾವ್ರಾ ಎಂಬ ಎಡೆಗಳಲ್ಲಿ ದೊರಕಿವೆ. ಚಕಮಕಿ ಕಲ್ಲಿನ ಉಪಕರಣಗಳ ಜೊತೆಗೆ ಅಗೆಯುವ ಗುದ್ದಲಿ ಮತ್ತು ಅರೆಯುವ ಕಲ್ಲಿನ ಉಪಕರಣಗಳನ್ನು ಈ ಬೇಟೆಗಾರ ಜನ ಉಪಯೋಗಿಸುತ್ತಿದ್ದರು. ಅವರ ಹಿಂದುಳಿದ ವ್ಯವಸಾಯದ ರೀತಿಗಳು, ವ್ಯವಸಾಯಾತ್ಮಕ ಸಂಸ್ಕೃತಿಯ ಕಡೆಗೆ ಕ್ರಮಕ್ರಮವಾಗಿ ಅವರ ಮುನ್ನಡೆ, ಸ್ವಲ್ಪಮಟ್ಟಿನ ಅಲೆಮಾರಿತನ–ಇವು ಈ ಸಂಸ್ಕೃತಿಯ ಲಕ್ಷಣಗಳೆಂದು ಹೇಳಬಹುದು. ಅವರ ಮಡಕೆ ಕುಡಿಕೆಗಳು ಸಾಮಾನ್ಯವಾಗಿ ಅಲಂಕಾರ ರಹಿತವಾಗಿದ್ದವು. ಕೆಂಪು, ಕಂದು, ಕಪ್ಪು; ಬಣ್ಣಗಳ ಒರಟು ಚಿತ್ರಗಳಿರುವ ಮಡಕೆಗಳೂ ಕೆಲವು ಸಿಕ್ಕಿವೆ. ಇವಲ್ಲದೆ ಮೂಲವಸ್ತು ಒರಟಾದ ಕಪ್ಪು ಮಣ್ಣು. ಶಿಲಾಜಿತು (ಬಿಟ್ಯೂಮೆನ್) ಮತ್ತು ಸುಣ್ಣದಿಂದ ಪಕ್ಕಗಳನ್ನೂ ತಳಭಾಗವನ್ನೂ ಹದಮಾಡಿದ್ದ ಹಳ್ಳಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಕಟ್ಟಡಗಳನ್ನು ಕಟ್ಟಲು ಹಸಿ ಇಟ್ಟಿಗೆಗಳನ್ನು ಬಳಸುತ್ತಿದ್ದರು. ಬಿದಿರು ಹೆಣಿಗೆ ಮತ್ತು ಬಟ್ಟೆ ನೇಯ್ಗೆ ಕ್ರಮಗಳು ಇವರಿಗೆ ತಿಳಿದಿದ್ದಿರಬಹುದು. ಮಕ್ಕಳ ಶವಗಳನ್ನು ಜಾಡಿಗಳಲ್ಲೂ ವಯಸ್ಕರ ಶವಗಳನ್ನು ಹಳ್ಳಗಳಲ್ಲೂ ಹೂಳುತ್ತಿದ್ದರು. ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ. 5000–4000. ಇದರ ಮುಂದಿನ ಹಲಾಫ್ ಸಂಸ್ಕೃತಿಯ ಜನ ಕೈಯಲ್ಲಿ ಮಾಡಿದ, ವಿವಿಧ ಆಕಾರದ, ವರ್ಣಚಿತ್ರಗಳಿಂದ ಕೂಡಿದ ಮಡಕೆಗಳನ್ನು

ಬಳಸುತ್ತಿದ್ದರು. ಇವರಿಗೆ ತಾಮ್ರದ ಕೆಲವು ಅಲಂಕರಣ ಸಾಮಗ್ರಿಗಳ ಪರಿಚಯವಿದ್ದರೂ ಇವರ ಆಯುಧೋಪಕರಣಗಳು ಕಲ್ಲಿನವೇ ಆಗಿದ್ದವು. ಕಲ್ಲಿನ ಗುಂಡಿ ಮುದ್ರೆಗಳೂ (ಬಟನ್ ಸೀಲ್ಸ್) ಮಣಿಗಳೂ ಯಂತ್ರಗಳೂ (ಆಮ್ಯುಲೆಟ್ಸ್) ಮತ್ತು ಸಣ್ಣ ಪಾತ್ರೆಗಳೂ ಬಳಕೆಯಲ್ಲಿದ್ದವು. ಇತರ ವಿಷಯಗಳಲ್ಲಿ ಹಳೆಯ ಸಂಸ್ಕೃತಿಯ ಚಿಹ್ನೆಗಳೇ ಕಂಡು ಬಂದರೂ ಅವು ಹೆಚ್ಚು ಮುಂದುವರಿದಿದ್ದವು.



ಮೇಲ್ಮೈಲಕ್ಷಣ

ಮೇಲೆ ಹೇಳಿದ ಸಂಸ್ಕೃತಿಗಳೆಲ್ಲವೂ ಉತ್ತರ, ಮಧ್ಯ ಇರಾಕಿನಲ್ಲಿ ಮಾತ್ರ ನೆಲೆಸಿದ್ದವು. ದಕ್ಷಿಣ ಪ್ರದೇಶ ಚೌಗುಪ್ರದೇಶವಾಗಿದ್ದು ಜನವಸತಿಗೆ ಅನುಕೂಲವಾಗಿರಲಿಲ್ಲ. ಸುಮಾರು ಆ ಕಾಲಕ್ಕೆ ಯೂಫ್ರೆಟೀಸ್ ಟೈಗ್ರಿಸ್ ನದಿಗಳು ಒತ್ತಳ್ಳಿದ ಮೆಕ್ಕಲುಮಣ್ಣಿನ ಹರಡುವಿಕೆಯಿಂದ ನೆಲ ವಾಸಯೋಗ್ಯವಾದದ್ದಲ್ಲದೆ ಬಹಳ ಫಲವತ್ತಾದ ಭೂಮಿಯಾಗಿ ಹೆಚ್ಚು ಬೆಳೆ ಕೊಡುವಂತಾಯಿತು.

ಈ ಸುಮಾರಿಗೆ ಪ್ರಾರಂಭವಾದ ತಾಮ್ರ–ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಇರಾಕಿನ ಎಲ್ಲೆಡೆಗಳಲ್ಲೂ ದೊರಕಿವೆ. ಉಬೈದ್ ಸಂಸ್ಕೃತಿಯ ಮೊದಲ ಹಂತದಲ್ಲಿ ವ್ಯವಸಾಯ ಸುಧಾರಿತವಾಯಿತು. ನೀರಾವರಿ ಕಾಲುವೆಗಳಿಂದ ಉತ್ತಮ ಬೆಳೆಗಳನ್ನು ತೆಗೆಯುತ್ತಿದ್ದರು. ಲೋಹಗಳ ಕೆಲಸ ಉತ್ತಮಮಟ್ಟದ್ದಾಗಿ ತಾಮ್ರದ ಆಯುಧೋಪಕರಣಗಳು ಮಾತ್ರವಲ್ಲದೆ ಮನೆಬಳಕೆ ಪಾತ್ರೆಗಳೂ ರೂಢಿಗೆ ಬಂದಿದ್ದವು. ತಮಗೆ ಅವಶ್ಯಕವಾದ ಕಚ್ಚಾಪದಾರ್ಥಗಳನ್ನು ದೂರ ದೇಶಗಳಿಂದ ವ್ಯಾಪಾರಮುಖೇನ ತರಿಸಿಕೊಳ್ಳುತ್ತಿದ್ದರು. ತಮ್ಮ ಬೆಳೆಗಳನ್ನು ಚಕಮಕಿಕಲ್ಲಿನ ಹಲ್ಲುಗಳಿಂದ ಸಜ್ಜಾದ ಕುಡುಗೋಲುಗಳಿಂದ ಕುಯ್ಯುತ್ತಿದ್ದರು. ಹುಲ್ಲು ಮತ್ತು ಮಣ್ಣಿನ ಗೋಡೆಗಳನ್ನೂ ನೆಲವನ್ನೂ ಸಗಣಿಯಿಂದ ಹದಗೊಳಿಸುತ್ತಿದ್ದರು. ಕೈಯಲ್ಲಿ ಮಾಡಿದ ಮಡಕೆಗಳನ್ನು ವಿವಿಧ ಬಣ್ಣಗಳ ಜ್ಯಾಮಿತಿಕ ಆಕಾರಗಳಿಂದ ಚಿತ್ರಿಸುತ್ತಿದ್ದರು. ವ್ಯವಸಾಯೋತ್ಪನ್ನವೇ ಮುಖ್ಯ ಆಹಾರವಾದರೂ ಬೇಟೆ ಮೀನುಗಾರಿಕೆಗಳೂ ರೂಢಿಯಲ್ಲಿದ್ದವು. ಗ್ರಾಮಜೀವನದ ಜೊತೆಗೆ ನಗರ ಜೀವನವೂ ಈ ಕಾಲದಲ್ಲೇ ಪ್ರಾರಂಭವಾದ ಚಿಹ್ನೆಗಳು ಕಂಡುಬರುತ್ತವೆ. ಈ ಜನ ಮೊತ್ತಮೊದಲಿಗೆ ಸಾಮಾಜಿಕ ಜೀವನದ ಅಂಗವಾಗಿ ದೇವಾಲಯಗಳನ್ನು ನಿರ್ಮಿಸಿದರು. ಅಬು ಷಹರೀನ್ ಎಂಬಲ್ಲಿ 13 ಸಲ ಪುನರ್ನಿರ್ಮಿತವಾದ ದೇವಾಲಯವೊಂದರ ಅವಶೇಷಗಳು ದೊರಕಿವೆ. ಮೊದಲಿಗೆ ಈ ದೇವಾಲಯದಲ್ಲಿ ಆಯತಾಕಾರದ ಒಂದು ಕೊಠಡಿ, ಅದರ ಒಂದು ಮೂಲೆಯಲ್ಲಿ ಬಾಗಿಲು ವೇದಿಕೆ ಮತ್ತು ಬಲಿಪೀಠಗಳಿದ್ದು ಕ್ರಮೇಣ ಮಧ್ಯಕೋಣೆಯ ಎರಡು ಪಾರ್ಶ್ವಗಳಲ್ಲಿ ಮತ್ತೆರಡು ಕೋಣೆಗಳು ನಿರ್ಮಿತವಾದವು. ಈ ಕಾರಣಗಳಿಂದ ಉಬೈದ್ ಜನ ಇರಾಕಿನ ನಾಗರಿಕತೆಯ ಆದ್ಯಪ್ರವರ್ತಕರೆನ್ನಬಹುದು.

ಈ ಉಬೈದ್ ಸಂಸ್ಕೃತಿಯ ಅಸ್ತಿಭಾರದ ಮೇಲೆ ಮುಂದಿನ ಹಂತವಾದ ಉರಕ್ ಸಂಸ್ಕೃತಿ ಬೆಳೆಯಿತು. ಪ್ರಾಯಶಃ ಅನಟೋಲಿಯ ಪ್ರಾಂತದಿಂದ ಆಮದಾದ, ಗಟ್ಟಿಮುಟ್ಟಾದ, ವರ್ಣಚಿತ್ರಗಳಿಂದ ಹೊಸರೀತಿಯ ಮಡಕೆಗಳು ಬಳಕೆಗೆ ಬಂದವು. ಇವು ಚಕ್ರಯಂತ್ರದಿಂದ ತಯಾರಾದವು. ವಾಸ್ತುಶಿಲ್ಪಕಲೆ ಆಗ ಚೆನ್ನಾಗಿ ಬೆಳೆಯಿತು. ಆ ಕಾಲದ ಅತ್ಯುತ್ತಮವಾದ ಶ್ವೇತದೇವಾಲಯ ಎರಡು ಪಟ್ಟಣದಲ್ಲಿ ನಿರ್ಮಿತವಾಯಿತು. 70 ಮೀ ಉದ್ದ 66 ಮೀ ಅಗಲ ಮತ್ತು 13 ಮೀ ಎತ್ತರದ ಜಗತಿಯ ಮೇಲಿದ್ದ ಈ ದೇವಾಲಯದ ವಿಸ್ತೀರ್ಣ 22.3×17.5 ಮೀ. ಇರಾಕೀ ಸಂಸ್ಕೃತಿಯ ವಿಶಿಷ್ಟಲಕ್ಷಣಗಳಲ್ಲೊಂದಾದ ಜಿಗ್ಗುರಾಟ್ ಅಥವಾ ಪವಿತ್ರ ಶಿಖರ ಈ ರೀತಿ ಹುಟ್ಟಿಕೊಂಡಿತು. ಇತರ ವಿಶಿಷ್ಟ ಕುರುಹುಗಳಾದ ಉರುಳೆಯಾಕಾರದ ಮುದ್ರೆ ಮತ್ತು ಲೇಖನಕಲೆಗಳೂ ಈ ಕಾಲದಲ್ಲೇ ಪ್ರಾರಂಭವಾದಂತೆ ಕಂಡುಬರುತ್ತದೆ.

ಮುಂದಿನ ಹಂತವಾದ ಜಿಮ್‍ಡೆಟ್ ನಾಸ್ರ್ ಸಂಸ್ಕೃತಿಗೆ ಲೇಖನಪೂರ್ವ ಸಂಸ್ಕೃತಿಯೆಂದೂ ಹೆಸರಿಟ್ಟಿದ್ದಾರೆ. ದೇವಾಲಯಕ್ಕೆ ಅಭಿವೃದ್ಧಿಹೊಂದಿ ಹಂತ ಹಂತವಾದ ಜಗತಿ ಅಥವಾ ತಾಜಾ ಜಿಗ್ಗುರಾಟ್ ಬೆಳೆದು ಬಂದು ದೊಡ್ಡ ಸ್ತಂಭಗಳಿಂದೊಡಗೂಡಿದ ಮೂರು ಕೋಣೆಗಳುಳ್ಳ ದೇವಾಲಯಗಳು ರೂಢಿಗೆ ಬಂದವು. ಗೋಡೆಗಳಿಗೆ ಸುಟ್ಟ ಮಣ್ಣಿನ, ಬಣ್ಣಬಣ್ಣದ ಶಂಕುವಿನಾಕಾರದ ಕೊಳವೆಗಳ ಅಲಂಕಾರ ಬಳಕೆಗೆ ಬಂತು. ಇವು ಅಲಂಕರಣದ ಜೊತೆಗೆ ಭದ್ರತೆಯನ್ನೂ ಹೆಚ್ಚಿಸಿದವು. ತಾಮ್ರ ಮತ್ತು ಬೆಳ್ಳಿಯ ಪಾತ್ರೆಗಳು, ಭವ್ಯ ಶಿಲ್ಪಕೃತಿಗಳು ಮತ್ತು ಚಿತ್ರಲಿಪಿ, ದಶಮಾಂಶ ಮತ್ತು ಷಷ್ಟ್ಯಂಶ ಗಣಪದ್ಧತಿಗಳು ಬಳಕೆಗೆ ಬಂದವು. ಈ ಶಿಲ್ಪಗಳಿಗೆ ಶಂಖದ ಕಣ್ಣುಗುಡ್ಡೆಗಳನ್ನಿಡುತ್ತಿದ್ದರು. ಭೂ ಸಾರಿಗೆ ರೂಢಿಗೆ ಬಂತು. ದೇವಾಲಯ ಕೇಂದ್ರಸ್ಥವಾದ ನಾಗರಿಕತೆ ಸರ್ವತೋಮುಖವಾಗಿ ಬೆಳೆದು ಪ್ರ.ಶ.ಪೂ. 3ನೆಯ ಸಹಸ್ರಮಾನದ ಆದಿಯಲ್ಲಿ ಅದು ಇನ್ನೂ ಹೆಚ್ಚಿನ ಮಟ್ಟ ಮುಟ್ಟಿತು. (ಬಿ.ಕೆ.ಜಿ.)

ಪ್ರ.ಶ.ಪೂ.3000 ದಿಂದ ಪ್ರ.ಶ. 600 ರವರೆಗೆ: ಪ್ರ.ಶ.ಪೂ. 3ನೆಯ ಸಹಸ್ರಮಾನದ ಕೆಲವು ಲಿಖಿತ ದಾಖಲೆಗಳು ಇರಾಕಿನ ಚರಿತ್ರೆಯ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತವೆ. ಇವುಗಳ ಪ್ರಕಾರ ಇರಾಕಿನಲ್ಲಿ ಯಾವುದೋ ಕಾಲದಲ್ಲಿ ಬಂದ ಒಂದು ಮಹಾಪೂರ ಹಿಂದಿನ ರಾಜವಂಶಗಳ ಬಗ್ಗೆ ಈ ದಾಖಲೆಗಳಲ್ಲಿ ದೊರಕುವ ವಿಷಯ ನಂಬಲರ್ಹವಲ್ಲ. ಆದರೆ ಆ ಪ್ರವಾಹಾನಂತರದ ವಿಷಯಗಳ ಬಗ್ಗೆ ಸಿಗುವ ಹೇಳಿಕೆಗಳಲ್ಲು ಪೂರ್ಣವಾಗಿ ನಿರ್ದಿಷ್ಟವಾಗಿಲ್ಲವಾದರೂ ಹೆಚ್ಚು ಕಡಿಮೆ ಸರಿಯಾಗಿದ್ದು, ಭೂಶೋಧನೆಗಳಲ್ಲಿ ದೊರಕಿರುವ ಅನೇಕ ಸಾಮಗ್ರಿಗಳ ಸಹಾಯದಿಂದ ಒಂದು ಸ್ಪಷ್ಟಚಿತ್ರವನ್ನು ಕಲ್ಪಿಸಿಕೊಳ್ಳಲು ಸಹಾಯ ಮಾಡುತ್ತವೆ.

ಪ್ರವಾಹದ ಅನಂತರ ಅನೇಕ ನಗರರಾಜ್ಯಗಳು ದಕ್ಷಿಣ ಇರಾಕಿನಲ್ಲಿ (ಸುಮೇರಿಯ) ಸ್ಥಾಪಿತವಾದವು. ಅವುಗಳಲ್ಲಿ ಎರೆಕ್ ಮತ್ತು ಉರ್ ಮುಖ್ಯವಾದವು. ಈ ನಗರರಾಜ್ಯಗಳ ಪ್ರಭಾವ ಬಹುಮಟ್ಟಿಗೆ ಆಯಾ ನಗರಗಳಿಗೆ ಮಾತ್ರ ಸೀಮಿತವಾಗಿರುತ್ತಿದ್ದರೂ ಕೆಲವು ಸಂದರ್ಭಗಳಲ್ಲಿ ಒಂದೆರೆಡು ನಗರರಾಜ್ಯಗಳು ಮಿಕ್ಕವುಗಳ ಮೇಲೆ ಮೇಲ್ಮೈಯನ್ನು ಸಾಧಿಸಿಕೊಂಡಿದ್ದುದೂ ಕಂಡುಬರುತ್ತದೆ. ಪ್ರ.ಶ.ಪೂ.2350ರ ಸುಮಾರಿನಲ್ಲಿ ಅಕ್ಕಾಡಿನ ಸಾರಗಾನ್ ಈ ನಗರರಾಜ್ಯಗಳನ್ನೆಲ್ಲ ಮೂಲೆಗೊತ್ತಿ ದೊಡ್ಡ ಸಾಮ್ರಾಜ್ಯವೊಂದನ್ನು ಸ್ಥಾಪಿಸಿದ.

ಸ್ವಾಭಾವಿಕ ಸಸ್ಯವರ್ಗ

ಈ ಸಾಮ್ರಾಜ್ಯ ಅನತಿಕಾಲದಲ್ಲಿ ಅನೇಕ ಜನರ ಧಾಳಿಗಳಿಂದಾಗಿ ಶಿಥಿಲಗೊಂಡು, ಇರಾಕ್ ಪುನಃ ಸಣ್ಣ ರಾಜ್ಯಘಟಕಗಳಾಗಿ ಹಂಚಿಹೋಯಿತು. ಈ ಸಂದರ್ಭದಲ್ಲಿ ಇಸಿನ್ ಮತ್ತು ಲಾಸ ಎಂಬ ಎರಡು ನಗರಗಳಲ್ಲಿದ್ದ ರಾಜ್ಯಪಾಲ ಕುಲಗಳು ಬಹಳ ಪ್ರಭಾವ ಬೆಳೆಸಿಕೊಂಡಿದ್ದವು.

ಪ್ರ.ಶ.ಪೂ.18ನೆಯ ಶತಮಾನದಿಂದ ಇರಾಕಿನ ಬ್ಯಾಬಿಲೋನಿಯ ಒಂದು ಮುಖ್ಯ ಸ್ಥಾನವನ್ನಾಕ್ರಮಿಸಿತು. ಇಲ್ಲಿ ಆಳಿದವರಲ್ಲಿ ಪ್ರಸಿದ್ಧ ನ್ಯಾಯವಾದಿ ಹಮ್ಮುರಬಿ (ಪ್ರ.ಶ.ಪೂ.1728–1686) ಮತ್ತು ಅವನ ಮಗ ಶಂಸುಲಿನ್ ಮುಖ್ಯರು. ಆದರೆ ಬ್ಯಾಬಿಲೋನಿಯ ಸಾಮ್ರಾಜ್ಯ

ಪ್ರ.ಶ.ಪೂ. 16ನೆಯ ಶತಮಾನದಲ್ಲಿ ಹೆವ್ವೈಟ್ ಜನರ ಧಾಳಿಯಿಂದ ನಾಶವಾಗಿ, ಈ ಪ್ರದೇಶ ಇಂಡೊ–ಯೂರೋಪಿಯನ್ ಜನಾಂಗಕ್ಕೆ ಸೇರಿದ ಕ್ಯಾಸೈಟ್ ಕುಲದ ಅರಸರ ಕೈಸೇರಿತು.

ಇದೇ ಸುಮಾರಿನಲ್ಲಿ ಉತ್ತರ ಇರಾಕಿನ ಅಶುರ್ ಎಂಬಲ್ಲಿ ಒಂದು ರಾಜವಂಶದವರು ಪ್ರವರ್ಧಮಾನಕ್ಕೆ ಬರುತ್ತಿದ್ದರು. ಈ ರಾಜವಂಶ ಮೊದಮೊದಲು ಅಷ್ಟೇನು ಪ್ರಭಾವಶಾಲಿ ಯಾಗಿರದಿದ್ದರೂ ಮುಂದೆ ಆ ಕುಲದ ಅದದ್ ನಿಕರಿ (ಪ್ರ.ಶ.ಪೂ.14ನೆಯ ಶತಮಾನ) ಮುಂತಾದ ಶೂರರ ಸಾಹಸಗಳಿಂದಾಗಿ ಒಂದು ದೊಡ್ಡ ಸಾಮ್ರಾಜ್ಯವನ್ನು ಕಟ್ಟಿತು. ಇದೇ ಪ್ರಸಿದ್ಧವಾದ ಅಸ್ಸೀರಿಯನ್ ಸಾಮ್ರಾಜ್ಯ. ತಿಗಲಕ್ ಪಲೆಸರ್, ಶಲ್ಮನೆಸ್ಸರ್, ಅಶುರ್ ಬನಿಪಾಲ್



ಟೇಸಿಫಾನನ ಸಭಾಂಗಣದ ಮಹಾದ್ವಾರ

ಮುಂತಾದವರು ಈ ವಂಶದ ಪ್ರಖ್ಯಾತ ದೊರೆಗಳು. ಸುಮಾರು ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಪ್ರಭಾವಶಾಲಿಯಾಗಿದ್ದ ಈ ಸಾಮ್ರಾಜ್ಯ ಪ್ರ.ಶ.ಪೂ. 606ರಲ್ಲಿ ಮೀಡರ ಧಾಳಿಯಿಂದ ಅಳಿಸಿಹೋಯಿತು. ಅನಂತರ ಪುನಃ ಬ್ಯಾಬಿಲಾನನ್ನು ರಾಜ್ಯ ಕೇಂದ್ರವಾಗಿ ಹೊಂದಿದ್ದ ಕಾಲ್ಡೀಯ ಸಾಮ್ರಾಜ್ಯ ಹುಟ್ಟಿ ಪ್ರ.ಶ.ಪೂ.539ರಲ್ಲಿ ಪರ್ಷಿಯದ ಅಖಮೇನಿಯನ್ ವಂಶದ ಸೈರಸ್ನ ಕೈವಶವಾಗುವವರೆಗೆ ಮುಂದುವರೆಯಿತು.

ಪ್ರ.ಶ.ಪೂ.539ರಂದು ಸುಮಾರು ಹನ್ನೊಂದು ಶತಮಾನಗಳ ಕಾಲ ಇರಾಕ್ ಪರಕೀಯರ ಆಳಿಕೆಗೆ ಒಳಪಟ್ಟಿತ್ತು. ಪ್ರ.ಶ.ಪೂ. 330ರಲ್ಲಿ ಅಖಮೇನಿಯನ್ನರಿಂದ ಮ್ಯಾಸಿಡೋನಿಯದ ಅಲೆಕ್ಸಾಂಡರ್ ಇರಾಕನ್ನು ಸ್ವಾಧೀನಪಡಿಸಿಕೊಂಡ. ಅನಂತರ ಪ್ರ.ಶ.ಪೂ.ಸು.2ನೆಯ ಶತಮಾನದ ಕೊನೆಯವರೆಗೆ ಸೆಲ್ಯೂಕೀ ಗ್ರೀಕರ, ಅನಂತರ ಪ್ರ.ಶ.3ನೆಯ ಶತಮಾನದ ಆದಿಭಾಗದವರೆಗೆ ಪಾರ್ಥಿಯನ್ ಪರ್ಷಿಯನ್ನರ, ಆಮೇಲೆ ಸಸ್ಸಾನೀಯ ಪರ್ಷಿಯನ್ನರ ವಶದಲ್ಲಿದ್ದ ಇರಾಕ್ 637ರ ಸುಮಾರಿನಲ್ಲಿ ದೇಶೀಯ ಇಸಾಮೀ ಸಾಮ್ರಾಜ್ಯದ ಸ್ಥಾಪನೆಯಿಂದಾಗಿ ಸ್ವತಂತ್ರವಾಯಿತು. (ಬಿ.ಕೆ.ಜಿ.)

**ಏಳನೆಯ ಶತಮಾನದಿಂದ:** ಬೈಜಾಂಟೀಯನ್ ಮತ್ತು ಪರ್ಷಿಯ ಸಾಮ್ರಾಜ್ಯಗಳ ಘರ್ಷಣೆಗಳ ಪರಿಣಾಮವಾಗಿ ಉಂಟಾದ ಕಲಹಗಳನ್ನು ನಿಲ್ಲಿಸಿ ಎಲ್ಲ ಇರಾಕಿಗಳು ಮತ್ತು ಅರಬರು ಒಂದುಗೂಡಲು ಮಹಮ್ಮದ್ ಪೈಗಂಬರ್ ಮತಪ್ರಚಾರ ಸಹಾಯಮಾಡಿತು.

ಮಹಮ್ಮದನ ಮರಣಾನಂತರ ಅವನ ಸ್ಥಾನಕ್ಕೆ ಯಾರು ಬರಬೇಕೆಂಬ ವಿಷಯದಲ್ಲಿ ವಿವಾದ ಬಂತು. ಅಳಿಯನಾದ ಅಲಿಯ ಪರವಾಗಿ ವಾದಿಸಿದವರು ಷಿಯ ಪಂಥದವರಾದರು. ವಿರೋಧಿಸಿದವರು ಸುನ್ನಿ ಪಂಥದವರಾದರು. ಇವರ ಕಲಹ ಐಕ್ಯಮತ್ಯಕ್ಕೆ ಭಂಗ ತರುವ ಹಾಗಾಯಿತು. ಷಿಯಗಳು ಗೆದ್ದು ಅಬುಬೇಕರನ್ನು ಕಲೀಫನನ್ನಾಗಿ ಆರಿಸಿದರು. ಪರ್ಷಿಯದ ಜನರೂ ಷಿಯಗಳಾಗಿ, ಐರೋಪ್ಯ ರಾಷ್ಟ್ರಗಳಾದ ಗಾಲ್ ಸ್ಪೇನಗಳನ್ನು ಜಯಿಸಿ, ಅನೇಕ ರಾಷ್ಟ್ರಗಳ ಆಕ್ರಮಣ ಮಾಡಿ, ಆಫ್ರಿಕದ ಬಹುಭಾಗವನ್ನು ಸ್ವಾಧೀನಪಡಿಸಿಕೊಂಡು ಇಸ್ಲಾಂ ಮತಕ್ಕಾಗಿ ದೊಡ್ಡ ಸಾಮ್ರಾಜ್ಯವನ್ನು ಗಳಿಸಿದರು. ಅತ್ಯಲ್ಪ ಕಾಲದಲ್ಲಿ ಅಷ್ಟು ದೊಡ್ಡ ರಾಜ್ಯವನ್ನು ಕಟ್ಟಲು ಅವರಿಗೆ ಸಾಧ್ಯವಾದದ್ದಕ್ಕೆ ಎರಡು ಕಾರಣಗಳನ್ನು ಹೇಳಬಹುದು. ಒಂದು–ತಾವು ಅವಲಂಬಿಸಿದ ಹೊಸ ಮತಧರ್ಮದ ಬಗ್ಗೆ ಅವರಿಗಿದ್ದ ಆಸಕ್ತಿ. ಎರಡು–ಅನ್ಯ ರಾಷ್ಟ್ರಗಳ ದೌರ್ಬಲ್ಯ.

ಬಾಗ್‌ದಾದ್ ನಗರ ಮುಸ್ಲಿಂ ಸಾಮ್ರಾಜ್ಯದ ರಾಜಧಾನಿಯಾಯಿತು. ಆಳಿದ ಅತಿ ಮುಖ್ಯ ಕಲೀಫರಲ್ಲಿ ಮೂವರು ಮೂರು ಖಂಡಗಳನ್ನಾವರಿಸಿಕೊಂಡ ಸಾಮ್ರಾಜ್ಯವನ್ನೂ ಅಖಂಡ ಸಂಪತ್ತನ್ನೂ ಗಳಿಸಿದರು. ಅವರಲ್ಲಿ ಅತ್ಯಂತ ಪ್ರಸಿದ್ಧನೆಂದರೆ ಹರೂನ್ ಅಲ್ ರಷೀದ್ (ಪ್ರ.ಶ.786–809) ಹಾಗೂ ಇವನ ಮಗ ಮಮೂನ್ ಅಲ್ ರಷೀದ್ (ಪ್ರ.ಶ.813–833). ಇವನ ಸಾಮರ್ಥ್ಯ ಸದ್ಗುಣಗಳನ್ನು ಅರೇಬಿಯನ್ ನೈಟ್ಸ್ ಗ್ರಂಥ ಮನೋರಂಜಕವಾಗಿ ವಿವರಿಸಿದೆ.

ಇಸ್ಲಾಂ ಧರ್ಮ ಮೊದಲು ಹರಡಿ ಇಡೀ ರಾಷ್ಟ್ರದ ಜನರನ್ನೇ ತನ್ನ ಕಡೆಗೆಳೆದದ್ದು ಇರಾಕ್ ರಾಜ್ಯದಲ್ಲಿ. ಮತ ತತ್ತ್ವದ ಜೊತೆಗೆ ಅರಬ್ಬೀ ಭಾಷೆಯೂ ಅಲ್ಲಿ ಮೊದಲು ಪ್ರಚಾರಕ್ಕೆ ಬಂತು. ಉಮಾಯದ್ ಕಲೀಫರ ಕಾಲದಲ್ಲಿ ಗರೀಕ್ ಮತ್ತು ಪಾರಸಿ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿ ಸಮನ್ವಯದ ಒಂದು ನೂತನ ದರ್ಶನವನ್ನೂ ಇರಾಕ್ ಜನ ಪಡೆದರು. ಅಬ್ಬಾಸಿದ್ದರ ಪರವಾಗಿ ಇರಾಕ್ ಮತ್ತು ಖುರೇಸಾನ್ ಜನ ಹೋರಾಟ ನಡೆಸಿ ಉಮಾಯದ್ದರನ್ನು ಸೋಲಿಸಿ ಅಬ್ಬಾಸಿದ್ ರಾಜ್ಯ ಭಾರವನ್ನು ಬಾಗ್‌ದಾದ್‌ನಲ್ಲಿ ಸ್ಥಾಪಿಸಿದರು. ಇರಾಕಿನ ದಕ್ಷಿಣ ಪ್ರಾಂತಗಳ ಸುನ್ನಿಪಂಥದವರ ಅಸಹ್ಯ ದೌರ್ಜನ್ಯಗಳನ್ನು ತಡೆಯಲಾರದೆ ಪ್ರಬಲರಾಗಿದ್ದ ಷಿಯ ಜನ ವಲಸೆ ಹೋದರು. 1945ರಲ್ಲಿ ಅಬ್ಬಾಸಿದ್ ಕಲೀಫರು ಷಿಯಪಂಗಡದ ಬುವೇಹಿದ್ ಜನರ ಆಕ್ರಮಣಕ್ಕೆ ಒಳಗಾದರು. 1258ರಂದು ಮಂಗೋಲರ ನಾಯಕ ಹುಲ್ಲಗುಖಾನ್ ಬಾಗ್ದಾದ್‌ನ ಮೇಲೆ ಧಾಳಿ ನಡೆಸಿ ಅಬ್ಬಾಸಿದ್ದರ ಖಲೀಫ ಮುತ್ತಾಸಿಂನನ್ನು ಹತ್ಯೆಗೈದು ಬಾಗ್ದಾದ್ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡನು. ನಂತರ ಸು.150 ವರ್ಷಗಳ ಕಾಲ ಕ್ಷೋಭೆಗೆ ಒಳಗಾಗಿ ಕೊನೆಗೆ ಎರಡನೆಯ ಮಹಾಯುದ್ಧದ ವೇಳೆ ಕ್ಷಿಪ್ರಕ್ರಾಂತಿಯಿಂದಾಗಿ ಅರಬ್ಬರು ಬ್ರಿಟಿಷರನ್ನು ಇರಾಕ್ ಪ್ರಾಂತದಿಂದ ಹೊರಹಾಕಲು ಪ್ರಯತ್ನ ನಡೆಸಿದರು. ರಷೀದ್ ಆಲ್ ಅರಬ್ಬರಲ್ಲಿ ರಾಷ್ಟ್ರೀಯ ಪ್ರಜ್ಞೆ ತರಲು ಪ್ರಯತ್ನಿಸಿದರು. ಹೊಸಜೀವನ ನಿಯಮದಡಿಯಲ್ಲಿ ಅನೇಕ ಶಿಕ್ಷಣಸಂಸ್ಥೆ ಹಾಗೂ ಸಾಂಸ್ಕೃತಿಕ ಸಂಘಟನೆಗಳು ಇರಾಕಿನ ಜೀವನ ವ್ಯವಸ್ಥೆಯಲ್ಲಿ ಹೊಸ ರೂಪ ತರಲು ಪ್ರಯತ್ನಿಸಿತು. ಆದರೆ ಬ್ರಿಟಿಷರು ತಮ್ಮ ಸೈನ್ಯಬಲ ಬಳಸಿ ತಮ್ಮ ಬೆಂಬಲಿಗನಾಗಿದ್ದ ನೂರಿ ಅಸ್ ಸೈಯದ್‌ನನ್ನು ಅಧಿಕಾರಕ್ಕೆ ತಂದರು. ಅರಬ್‌ಲೀಗ್ ಸ್ಥಾಪನೆಯಾಯಿತು. ಮಾಸಲಲ್‌ನಲ್ಲಿ ಮೊದಲ ಬಾರಿಗೆ ತೈಲ ಪತ್ತೆಹಚ್ಚಲಾಯಿತು. ಯುದ್ಧನಂತರದಲ್ಲಿ ಬ್ರಿಟಿಷರು ಮತ್ತೆ ಈ ಪ್ರದೇಶದ ಮೇಲೆ ಹತೋಟಿ ಸಾಧಿಸಿ ಹಸೀಮಾ ಮನೆತನದ ಫೈಸಲ್‌ನನ್ನು ರಾಜನಾಗಿ ನೇಮಿಸಿದರು. ಆದರೆ ಅಸಮರ್ಥರಾದ ಕಾರಣ ಈತ ಹಾಗೂ ಇತನ ಮಗ ಗಾಜಿ ಬಹಳಕಾಲ ಅಧಿಕಾರ ನಡೆಸಲಾಗ ಲಿಲ್ಲ. ಮೆಸಪೊಟೇಮಿಯಾ ಪ್ರದೇಶದ ಅಸ್ಸೀರಿಯನ್ನರು ಉತ್ತರದ ಕುರ್ದರು ಘರ್ಷಣೆಗೆ ಧುಮುಕಿದರು.

1944–46ರ ತನಕ ಆಡಳಿತ ನಡೆಸಿದ ಹಸಿಮಮನೆತನದವರು ಹಾಗೂ ಹಮಾದಿ ಅಲ್ ಪಚಾಚಿ ಸರ್ಕಾರವನ್ನು ನೂರಿ ಅಲ್ ಸೈಯದ್‌ನ ಬೆಂಬಲಿಗ ಸೈನಿಕರು ಕ್ಷಿಪ್ರಕ್ರಾಂತಿಯ ಮೂಲಕ ಅಧಿಕಾರಕ್ಕೆ ಬಂದರು. ಇರಾಕಿನಲ್ಲಿ ಬ್ರಿಟಿಷ್ ವಿರೋಧಿ ಭಾವನೆಯಿಂದಾಗಿ ಬ್ರಿಟಿಷರು ಒಲ್ಲದ ಮನಸ್ಸಿನಿಂದ ಇರಾಕ್ ರಾಜಕೀಯ ವ್ಯವಸ್ಥೆಯಿಂದ ಹಿಂದೆ ಸರಿದರು. 1948ರಲ್ಲಿ ಜನ್ಮತಳೆದ ಬಾತ್ ಪಕ್ಷ ಇರಾಕಿನಲ್ಲಿ ರಾಷ್ಟ್ರೀಯ ಪ್ರಜ್ಞೆಯ ಕಿಡಿ ಹೊತ್ತಿಸಿತು. ಜಾತ್ಯಾತೀತ ಧೋರಣೆಯಿಂದಾಗಿ ಬಹುಬೇಗ ಅರಬ್ಬರ ಮನಸಳೆಯಿತು. 1955 ಜನವರಿಯಲ್ಲಿ ಬಾಗ್ದಾದ್ ಒಪ್ಪಂದವಾಗಿ ಸೋವಿಯತ್ ಒಕ್ಕೂಟದ ವಿರೋಧಿ ಬಣಕ್ಕೆ ಇರಾಕ್ ವೇದಿಕೆ ಯಾದರೂ ಸಹ ಹೆಚ್ಚಿನದೇನೂ ಸಾಧಿಸಲಾಗಲಿಲ್ಲ.

1958 ಜುಲೈ 14ರಂದು ಸೈನ್ಯಾಧಿಕಾರಿ ಅಬ್ದುಲ್ ಕರೀಮ್‌ಖಾಸಿಂ ಕ್ಷಿಪ್ರಕ್ರಾಂತಿಯ ಮೂಲಕ ಅಧಿಕಾರ ಕಸಿದುಕೊಂಡನು. ಎರಡನೆಯ ಫೈಸಲ್ ಹಾಗೂ ಕುಟುಂಬ ಮತ್ತು ವಯಸ್ಸಾಗಿದ್ದ ನೂರಿ ಅಲ್ ಸೈಯದ್‌ನನ್ನು ಹತ್ಯೆಗಯ್ಯಲಾಯಿತು. ಇರಾಕ್ ಆಡಳಿತ ಈಜಿಪ್ಟಿನ ಮಾದರಿಯಂತೆ ರೆವಲ್ಯೂಷನರಿ ಕಮ್ಯಾಂಡ್ ಕೌನ್ಸಿಲ್ ಸ್ಥಾಪಿಸಿಕೊಂಡು ತನ್ನ ವಿರೋಧಿಗಳನ್ನು ಮಟ್ಟಹಾಕಿತು. 1958–63ರ ನಡುವೆ ಖಾಸಿಂ ತನ್ನ ಆಡಳಿತ ಚಾಕಚಕ್ಯತೆಯಿಂದ ಬ್ರಿಟಿಷರನ್ನು ಇರಾಕ್ ಆಡಳಿತದಿಂದ ದೂರವಿರಿಸಿದ. ಬಾತ್ ಪಕ್ಷ ಸಮರ್ಥವಾಗಿ ಕೆಲಸ ಮಾಡುವುದರ ಮೂಲಕ ವ್ಯಕ್ತಿಗಿಂತ ಪಕ್ಷ ಮುಖ್ಯವೆಂಬುದನ್ನು ಎತ್ತಿಹಿಡಿಯಿತು. 1961ರಲ್ಲಿ ಖಾಸಿಂ ಕುವೈತ್ ಮೇಲೆ ಧಾಳಿ ನಡೆಸಲು ಮುಂದಾದರೂ ಸಹ ಬ್ರಿಟಿಷರ ಪ್ರಬಲ ವಿರೋಧದಿಂದಾಗಿ ಸಫಲತೆ ಕಾಣಲಿಲ್ಲ. ಇರಾಕ್ ತನ್ನ ಬೆಳವಣಿಗೆಯ ಜೊತೆಯಲ್ಲಿ (ಸಫಲ್ ಅರಬ್) ಗಡಿ ಸಮಸ್ಯೆಯನ್ನು ಬೆಳಸುವಂತಾಯಿತು.

ಇರಾಕಿನ ಉತ್ತರ ಭಾಗದಲ್ಲಿ ಕುರ್ದರು ಖಾಸಿಂ ಆಡಳಿತದ ವಿರುದ್ಧ ದಂಗೆಯೆದ್ದರು. ಮುಸ್ತಾಫ ಅಲ್ ಬರ್ಜಾನಿ ಗಡಿಪಾರಾದನು. ಕುರ್ದರ ದಂಗೆಯನ್ನು ಇರಾನ್ ಹಾಗೂ ಟರ್ಕಿ ಸೈನ್ಯದ ನೆರವಿನೊಂದಿಗೆ ಇರಾಕ್ ತಾತ್ಕಾಲಿಕವಾಗಿ ಶಮನಗೊಳಿಸಿಕೊಂಡಿತು.

1963ರಲ್ಲಿ ಕ್ಷಿಪ್ರಕ್ರಾಂತಿ ನಡೆಸುವುದರ ಮೂಲಕ ಕರ್ನಲ್ ಅಬ್ದುಲ್ ಸಲೀಮ್ ಹರೀಫ್ ಅಧಿಕಾರಕ್ಕೆ ಬಂದನು. ಅಧ್ಯಕ್ಷರಾಗಿದ್ದ ಖಾಸಿಂನನ್ನು ಗಲ್ಲಿಗೇರಿಸಲಾಯಿತು. ಇರಾಕಿನಲ್ಲಿ ಅರಬ್ ಸೋಷಿಯಲಿಸ್ಟ್ ಪಕ್ಷವು ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸತತವಾಗಿ ನಡೆದ ಕುರ್ದರ ಘರ್ಷಣೆ, ಸಿರಿಯಾ, ಈಜಿಪ್ಟಗಳ ಹಳಸಿದ ಸಂಬಂಧಗಳಿಂದಾಗಿ ಇರಾಕ್ ತನ್ನ ಅಮೂಲ್ಯವಾದ ಅಪಾರ ಪ್ರಮಾಣದ ಸಂಪತ್ತಿನ ನಾಶಕ್ಕೆ ಈಡಾಯಿತು.

1966ರಲ್ಲಿ ಅಧ್ಯಕ್ಷರಾಗಿದ್ದ ಸಲೀಮ್ ಹರೀಫ್ ಅಪಘಾತ ಒಂದರಲ್ಲಿ ಸಾವನ್ನಪ್ಪಿದ. ಅವರ ಸ್ಥಾನಕ್ಕೆ ಅವರ ಸಹೋದರ ಅಬ್ದುಲ್ ರಹಮಾನ ಹರೀಫ್ ಅಧಿಕಾರಕ್ಕೆ ಬಂದ. 1967ರಲ್ಲಿ ಸಂಭವಿಸಿದ ಅರಬ್–ಇಸ್ರೇಲಿ ಯುದ್ಧದಲ್ಲಿ ಇರಾಕ್ ತಟಸ್ಥವಾಗಿದ್ದರೂ ಸಹ ಇಸ್ರೇಲಿನ ನೀತಿಯನ್ನು ಖಂಡಿಸಿತು. ಅರಬ್ ಸೋಷಿಯಲಿಸ್ಟ್ ಪಕ್ಷ ಈ ಘಟನೆಯಿಂದ ತನ್ನ ಜನಪ್ರಿಯತೆ ಕಳೆದುಕೊಂಡಿತು. ಬಾತಿಷ್ಟ್ ಪಕ್ಷ ತನ್ನ ಸೈದ್ಧಾಂತಿಕ ನಿಲುವುಗಳಿಂದಾಗಿ ಮತ್ತೆ ಜನಮನ್ನಣೆ ಗಳಿಸಿಕೊಂಡಿತು.

1968 ಜುಲೈ 17ರಂದು ಬಾತ್ ಪಕ್ಷದ ನಾಯಕ ಜನರಲ್ ಅಹಮದ್ ಅಲ್ ಬಕರ್ ಹಾಗೂ ಯುವ ನಾಯಕ ಸದ್ದಾಂಹುಸೇನ್ ಕ್ಷಿಪ್ರಕ್ರಾಂತಿಯ ಮೂಲಕ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕ್ರಮವಾಗಿ ಅಧಿಕಾರಕ್ಕೆ ಬಂದರು.

1979 ಜುಲೈ 11ರಂದು ಬಾತ್ ಪಕ್ಷದ ಅಧ್ಯಕ್ಷರಾಗಿದ್ದ ಅಲ್–ಬಕರ್ ಅನಾರೋಗ್ಯದ ಕಾರಣ ಅಧಿಕಾರ ತ್ಯಜಿಸಿದಾಗ ಉಪಾಧ್ಯಕ್ಷರಾಗಿದ್ದ ಸದ್ದಾಂಹುಸೇನ್ ಇರಾಕಿನ ಅಧ್ಯಕ್ಷರು ಹಾಗೂ ಆರ್.ಸಿ.ಸಿಯ ಮುಖ್ಯಸ್ಥರಾಗಿ ಅಧಿಕಾರಕ್ಕೆ ಬಂದ. ಅರಬ್ ಜಗತ್ತಿನಲ್ಲಿ ಗಟ್ಟಿ

ಮನುಷ್ಯ ಎಂದು ಹೆಸರು ಪಡೆದಿದ್ದ ಸದ್ದಾಂಹುಸೇನ್ ತನ್ನ ಖಚಿತ ನಿಲುವುಗಳ ಮೂಲಕ ಬಾತ್ ಪಕ್ಷದ ನೇತೃತ್ವದಲ್ಲಿ ಇರಾಕಿನ ಬೆಳೆವಣಿಗೆಗಾಗಿ ಶ್ರಮಿಸಿದ. ಅನೇಕ ಜನಪದ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು. ಕಿರ್ಕುಕ್, ಮಾಸುಲ್‌ನಲ್ಲಿ ದೊರೆತ ತೈಲ ಸಂಪತ್ತಿನಿಂದಾಗಿ ಇರಾಕಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತು. ಹಲವಾರು ಕೈಗಾರಿಕೆಗಳು ಸ್ಥಾಪಿತವಾದವು. ಪರ್ಷಿಯನ್‌ಖಾರಿ ಒಡೆತನದ ವಿವಾದದಿಂದಾಗಿ 1980–88ರ ತನಕ ಸತತವಾಗಿ ಇರಾಕ್ ಮತ್ತು ಇರಾನ್ ನಡುವೆ ಯುದ್ಧ ಸಂಭವಿಸಿತು. ಈ ವೇಳೆಯಲ್ಲಿ ಉತ್ತರದಲ್ಲಿ ಕುರ್ದ್ ಸಮುದಾಯದವರು ದಂಗೆಯೆದ್ದರು, ದಂಗೆಯ ನಿಗ್ರಹಕ್ಕೆ ಸದ್ದಾಂಸೇನೆ ವಿನಾಶಕಾರಿ ಬಾಂಬ್‌ಗಳನ್ನು ಬಳಸಿ ಸಾವಿರಾರು ಕುರ್ದರನ್ನು ಹತ್ಯೆಗೈಯ್ಯಲಾಯಿತು. ಇರಾಕಿನ ಆಧುನಿಕ ಇತಿಹಾಸದಲ್ಲಿ ಕುರ್ದರು ಅಪಾರ ಪ್ರಮಾಣದಲ್ಲಿ ಸಾವನ್ನಪ್ಪಬೇಕಾಯಿತು. ಆಗಸ್ಟ್ 1988ರಂದು ಇರಾನ್–ಇರಾಕ್ ಯುದ್ಧಕ್ಕೆ ತೆರೆ ಎಳೆಯಲಾಯಿತು. ಯುದ್ಧ ಹಾಗೂ ಕುರ್ದರ ದಂಗೆಯಿಂದ ತೀರಾ ಹದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿ ಹಾಗೂ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸದ್ದಾಂಹುಸೇನ್ ತೈಲ ವ್ಯಾಪಾರದಲ್ಲಿ ಇರಾಕಿನ ಹೆಚ್ಚಿನ ಪಾಲು ಕೇಳಿ ಒಪೆಕ್ ಸಭೆಯಲ್ಲಿ ಒತ್ತಾಯ ತಂದಾಗ ಕುವೈತ್ ವಿರೋಧ ವ್ಯಕ್ತಪಡಿಸಿತು. ಅನಿವಾರ್ಯತೆ ಹಾಗೂ ಅಸಹಾಯಕತೆಯಿಂದಾಗಿ ಸದ್ದಾಂಹುಸೇನ್ ಕುವೈತ್ ಇರಾಕ್ ಗಡಿಭಾಗದ ತಟಸ್ಥವಲಯದಲ್ಲಿನ ತೈಲವನ್ನು ಹೊರತೆಗೆಯಲು ಮುಂದಾದನು. ಇದು ಕುವೈತ್ ಮೇಲಿನ ಧಾಳಿಗೆ ಇರಾಕನ್ನು ಪ್ರಚೋದಿಸಿತು. 1990 ಸೆಪ್ಟೆಂಬರ್ 10ರಂದು ಇರಾನ್–ಇರಾಕ್ ನಡುವೆ ರಾಯಭಾರಿ ಸಂಬಂಧಗಳು ಮತ್ತೆ ಪ್ರಾರಂಭವಾದವು. ಸ್ವಲ್ಪದಿನಗಳ ಕಾಲ ಇರಾಕ್ ಮತ್ತೆ ಆರ್ಥಿಕವಾಗಿ ಚೇತರಿಸಿಕೊಂಡು ಪ್ರಗತಿಯತ್ತ ಹೆಜ್ಜೆಯನ್ನಿಡುತ್ತಿರುವಾಗಲೇ ಸದ್ದಾಂಹುಸೇನ್ ಕುವೈತ್ ಮೇಲೆ ಆಗಸ್ಟ್ 2 1990ರಂದು ಧಾಳಿ ನಡೆಸಿದರು. ಅಮೆರಿಕ ಹಾಗೂ ಬ್ರಿಟಿಷ್ ಪಡೆಗಳು ಕುವೈತ್ ಸಹಾಯಕ್ಕೆ ಬಂದು ಇರಾಕನ್ನು ಕುವೈತ್‌ನಿಂದ ಕಾಲ್ತೆಗೆಯುವಂತೆ ಮಾಡಿದವು.

ಅಮೆರಿಕ ಹಾಗೂ ವಿಶ್ವಸಂಸ್ಥೆಯ ಒತ್ತಾಯಕ್ಕೆ ಮಣಿದು ಭದ್ರತಾ ಮಂಡಲಿ ಇರಾಕ್ ದೇಶದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿತು. 1993ರಿಂದ ಜರ್ಜರಿತಗೊಂಡಿದ್ದ ಯುದ್ಧನಂತರದ ಇರಾಕ್‌ನ ಜನಜೀವನ 1994ರ ವಿಶ್ವಸಂಸ್ಥೆಯ ಆರ್ಥಿಕ ದಿಗ್ಬಂಧನದಿಂದ ತೀರಾ ಕುಸಿದು ಹೋಯಿತು. ಜನ ಆಹಾರ, ಔಷಧಿ ಹಾಗೂ ಜೀವನ ಅವಶ್ಯಕ ವಸ್ತುಗಳ ಕೊರತೆಯಿಂದ ನರಳುವಂತಾಯಿತು. ವಿದೇಶಿ ಸಾಲ ಆಂತರಿಕ ಒತ್ತಡಕ್ಕೆ ಸಿಲುಕಿದ ಇರಾಕಿನ ಮೇಲೆ ಅಮೆರಿಕ ಹಾಗೂ ಬ್ರಿಟನ್ ಸುಳ್ಳು ಅಣ್ವಸ್ತ್ರ ನೆಪದಲ್ಲಿ 2002ರಲ್ಲಿ ಧಾಳಿ ನಡೆಸಿ ಸದ್ದಾಂ ಸರ್ಕಾರ ಹಾಗೂ ಬಾತ್‌ಪಕ್ಷದ ಆಡಳಿತವನ್ನು ಕಿತ್ತೊಗೆದು ತಾತ್ಕಾಲಿಕ ಸರ್ಕಾರ ನೇಮಿಸಿದವು. ಇರಾಕಿನ ಮೇಲೆ ಅಮೆರಿಕ ಹಾಗೂ ಮಿತ್ರ ಪಡೆಯ ಸೈನ್ಯ ಅಧಿಕಾರ ಹೊಂದಿದವು. ಸದ್ದಾಂ ಹುಸೇನ್‌ರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಯಿತು. ಕುರ್ದರ ಮೇಲಿನ ಹತ್ಯೆಯ ಆರೋಪದ ಮೇರೆಗೆ ಸದ್ದಾಂಹುಸೇನ್ ಹಾಗೂ ಅವನ ಸರ್ಕಾರದ ಹಿರಿಯ ಅಧಿಕಾರಿಗಳನ್ನು 2006ರ ಡಿಸೆಂಬರ್ 30ರಂದು ಗಲ್ಲಿಗೇರಿಸಲಾಯಿತು.

ಇತಿಹಾಸದುದ್ದಕ್ಕೂ ಆಕ್ರಮಣ, ಕದನ, ದಂಗೆ ಹಾಗೂ ಕ್ಷಿಪ್ರಕ್ರಾಂತಿಗಳ ಮೂಲಕ ರಾಜಕೀಯ ವಲಯದಲ್ಲಿ ಸಂಚಲನೆ ಮೂಡಿಸುತ್ತಿದ್ದ ಇರಾಕ್ ದೇಶ ತನ್ನ ಅಭದ್ರವಾದ ಗಡಿಗಳು ಜನಾಂಗೀಯವಾದ ಹಾಗೂ ಇಸ್ಲಾಂಧರ್ಮದ ಷಿಯಾ–ಸುನ್ನಿ ಸಂಘರ್ಷದಲ್ಲಿ ನಲುಗಿಹೋಗಿದೆ. ಯೂಫ್ರಟೀಸ್ ಹಾಗೂ ಟೈಗ್ರೀಸ್ ನದಿಗಳ ಸಮೃದ್ಧ ನೀರು, ಫಲವತ್ತಾದ ಮೆಸಪೊಟೇಮಿಯ ಪ್ರದೇಶ ವಿಶ್ವದಲ್ಲೇ ತೈಲ ಸಂಪತ್ತಿನ ದೃಷ್ಟಿಯಿಂದ ದ್ವಿತೀಯ ಸ್ಥಾನದಲ್ಲಿದ್ದರೂ ಸಹ ರಾಜಕೀಯ ದೂರಾಲೋಚನೆ, ಸಮರ್ಥ ನಾಯಕತ್ವದ ಕೊರತೆ ಯಿಂದಾಗಿ ಇಂದಿಗೂ ಸಹ ವಸಾಹತುಶಾಹಿಯ ಶೋಷಣೆಗೆ ಒಳಗಾಗುತ್ತಿರುವ ರಾಷ್ಟ್ರವೆನಿಸಿದೆ.(ಸಿ.ಜಿ.ಎಸ್.)

1400ರಲ್ಲಿ ತೈಮೂರ್‌ಲೇನನ ಯುದ್ಧಗಳ ಮತ್ತು ದೌರ್ಜನ್ಯಕೃತ್ಯಗಳ ಪರಿಣಾಮವಾಗಿ ಸುಸಂಸ್ಕೃತರೂ ಶಾಂತಿ ಮತಧರ್ಮ ಪೋಷಕರೂ ಆದ ಇರಾಕಿನ ಬಹು ಮಂದಿ ಹತರಾದರು. ಬಾಗ್‌ದಾದ್ ನಾಶಹೊಂದಿತು.

ಮ್ಯಾಮಲೂಕರ ರಾಜ್ಯಭಾರ ಕ್ಷೀಣವಾಯಿತು. ನೂರ ಇಪ್ಪತ್ತೆಂಟು ವರ್ಷಗಳಲ್ಲಿ ಇಪ್ಪತ್ತೊಂಬತ್ತು ರಾಜರು ಆಳಿದರು. 1480ರಲ್ಲಿ ಟರ್ಕೊಮನ್ ಮತ್ತು ಕುರ್ದ್ ಪರ್ವತವಾಸಿಗಳು ಧಾಳಿ ನಡೆಸಿ ರಾಜ್ಯದ ಬಹುಭಾಗವನ್ನು ನಾಶ ಮಾಡಿದರು. ನಾಗರಿಕತೆಯ ಪರಾಕಾಷ್ಠೆಯನ್ನು ಮುಟ್ಟಿದ್ದ ಇರಾಕಿನ ಜನ ದಿಕ್ಕೆಟ್ಟು ಹೋದರು. ಪಾಶ್ಚಾತ್ಯ ರಾಷ್ಟ್ರಗಳ ಸ್ವಾಧೀನಕ್ಕಾಗಿ ಆಟೋಮನ್ ಮತ್ತು ಪರ್ಷಿಯ ರಾಷ್ಟ್ರಗಳ ಭಯಂಕರ ಸ್ಪರ್ಧೆ, ಅಂತರ್ಯುದ್ಧ ಗಳಲ್ಲೂ–ಇವು ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಇರಾಕ್ ಜನರ ಇಡೀ ಇತಿಹಾಸವನ್ನೇ ರೂಪಾಂತರಗೊಳಿಸಿದವು.

ಆಟೋಮನ್ನರು ಇರಾಕನ್ನು ಗೆದ್ದು ರಾಜ್ಯಾಡಳಿತವನ್ನು ಸರಿಪಡಿಸಿ ಇರಾಕೀ ಶ್ರೀಮಂತರಿಗೂ ಪರ್ವತವಾಸಿಗಳಾದ ಕುರ್ದ್‌ನಾಯಕರಿಗೂ ರಾಜ್ಯಭಾರವನ್ನು ಒಪ್ಪಿಸಿದ ಪರಿಣಾಮವಾಗಿ ಕೆಲವು ಕಾಲ ಶಾಂತಿ ಸೌಹಾರ್ದಗಳು ನೆಲೆಗೊಂಡವು. ಆದರೆ ಕೆಲವು ಕಾಲದಲ್ಲಿಯೇ ಅನಾಯಕತ್ವ ಮತ್ತೆ ತಲೆದೋರಿತು. ಈ ಮಧ್ಯ ವಾಣಿಜ್ಯ, ವ್ಯಾಪಾರ ಬೆಳವಣಿಗೆಗಳನ್ನೇ ಪರಮ ಧ್ಯೇಯವಾಗಿಟ್ಟಿಕೊಂಡ ಫ್ರೆಂಚ್ ಮತ್ತು ಇಂಗ್ಲೆಂಡಿನ ವ್ಯಾಪಾರ ಸಂಸ್ಥೆ ಪ್ರಬಲವಾಗಿ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಪ್ರಭಾವ ಕ್ಷೇತ್ರಗಳನ್ನು ಸ್ಥಾಪಿಸಿ, ಅಂತರ ರಾಜಕೀಯದಲ್ಲಿ ಪ್ರವೇಶಿಸಿ, ರಾಜಮನೆತನಗಳನ್ನು ಒಡೆದು ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿಕೊಂಡಿತು. ಫ್ರೆಂಚ್ ಸಮ್ರಾಟನಾದ ಲೂಯಿಯ ಲಿವಾಂಟ್ ಕಂಪನಿ, ಈಸ್ಟ್ ಇಂಡಿಯ ಕಂಪನಿಗಳು ಇವುಗಳಲ್ಲಿ ಬಹು ಮುಖ್ಯ. ಪರ್ಷಿಯ ಕೊಲ್ಲಿ ವ್ಯಾಪಾರ ಸ್ಪರ್ಧೆಗೆ ಮುಖ್ಯ ಕೇಂದ್ರವಾಯಿತು. ಬಾಬಲ್ ಮಂಡಬ್, ಬಸ್ರ, ಬಾಗ್‌ದಾದ್ ಮತ್ತು ಇತರ ಪಟ್ಟಣಗಳು ಐರೋಪ್ಯ ಜನರ ಧನಾರ್ಜನೆಯ ದಾಹಕ್ಕೆ ಬಲಿಯಾದವು.

19ನೆಯ ಶತಮಾನದ ಆದಿಯಲ್ಲಿ ಇತರ ರಾಷ್ಟ್ರಗಳಲ್ಲಿ ಉಂಟಾದ ಹಾಗೆ ಇಲ್ಲೂ ರಾಷ್ಟ್ರೀಯ ಭಾವನೆ ಮೂಡಿತು. ಐರೋಪ್ಯ ವ್ಯಾಪಾರಸ್ಥರು ಪ್ರತಿಭಾವಂತರು, ಪ್ರಗಲ್ಭರು, ಸಾಹಸಿಗಳು. ಅವರು ಮಧ್ಯಪ್ರಾಚ್ಯ, ರಾಷ್ಟ್ರಗಳಲ್ಲಿ ತಿರುಗಿ ಆಧುನಿಕ ಭಾವನೆಗಳನ್ನು ಹರಡಿದರು. ವೃತ್ತಪತ್ರಿಕೆಗಳು ಹೊಸ ಸ್ಫೂರ್ತಿಯನ್ನು ಕೊಟ್ಟವು. 1853ರಲ್ಲಿ ಪ್ರಗತಿಪರ ಭಾವನೆಗಳಿಂದ ಕೂಡಿದ ಮಹಮ್ಮದ್ ರಷೀದ್ ಪಾಷಾ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿ, ಜನಗಳಿಗೆ ಅಂತರಾಷ್ಟ್ರೀಯ ಉದ್ಯಮ ವ್ಯಾಪಾರ ಮತ್ತು ಸಂಸ್ಕೃತಿಯ ವೈವಿಧ್ಯಗಳ ಪರಿಚಯವನ್ನು ಮಾಡಿಸಿದ. ನಿರಂಕುಶ ಆಳ್ವಿಕೆಗೆ ಮನಸೋತ ಪಾಷಗಳನ್ನು ಪದಚ್ಯುತರನ್ನಾಗಿ ಮಾಡಿ, ನೌಕರಿ ದರ್ಜೆಯ ಜನರನ್ನು ಹದಗೊಳಿಸಿ, ಈಫೆಂಡಿ ಎಂಬ ಹೆಸರಿನ ಉನ್ನತ ಅಧಿಕಾರಿಗಳನ್ನು ನಾನಾ ಕ್ಷೇತ್ರಗಳಲ್ಲಿ ನೇಮಿಸಿ, ಉಡುಪು ನೀತಿನಡೆಗಳನ್ನು ತಿದ್ದಿ, ಇರಾಕ್ ರಾಷ್ಟ್ರಜೀವನದ ಮಾರ್ಪಾಟಿಗಾಗಿ ಬಹಳ ಶ್ರಮ ವಹಿಸಿದ. ಪರಿಣಾಮವಾಗಿ ಹೊರ ಜನಾಂಗಗಳ ಪ್ರಭಾವ ಕ್ಷೇತ್ರಗಳನ್ನೂ ಅವುಗಳ ಅಧಿಕಾರಿಗಳನ್ನೂ ಹೊರದೂಡುವ ಪ್ರಯತ್ನಗಳು ನಡೆದವು. ಆಟೊಮನ್ ಸೇನೆಯಲ್ಲಿ ಅಧಿಕಾರಿಯಾಗಿದ್ದ ಅಜ಼ೀಜ಼್ ಆಲಿ ಅಲ್ ಅಹದ್ ಸಾಲೆಂ ಲೀಗ್ ಮತ್ತು ಕಾವನೆಂಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಬ್ರಿಟಿಷ್ ಜನರನ್ನೂ ಹೊರದೂಡುವಂತೆ ಪ್ರೇರೇಪಿಸಿದ.

ಅರಬ್ಬಿ ಕ್ರಾಂತಿಗಳು ಜರುಗಿದವು. ಬ್ರಿಟಿಷ್ ಸೇನಾನಾಯಕ ಕಿಚನ್, ರೊನಾಲ್ಡ್ ಸ್ಟಾಟ್ ಮತ್ತು ಇತರ ಪ್ರತಿಭಾವಂತರು ಗೊಂದಲಕ್ಕೆ ಸಿಕ್ಕರು. ಅನೇಕ ಕಾರಣಗಳಿಂದ ಹೋರಾಟ ಯಶಸ್ವಿಯಾಗಲಿಲ್ಲ. 1918ರಲ್ಲಿ ಆಂಗ್ಲೋ–ಫ್ರೆಂಚ್ ಒಪ್ಪಂದ ಅರಬ್ಬರ ರಾಷ್ಟ್ರ ಪ್ರೇಮವನ್ನು ಲಾಲಿಸಿ ಅವರ ಸ್ವಾತಂತ್ರ್ಯದ ಹಾದಿಯನ್ನು ತೆರೆಯಿತು. ಜಿಲ್ಲಾ ಸಮಿತಿಗಳಾದವು. ಸೆವರಸ್ ಒಪ್ಪಂದದ ಪ್ರಕಾರ ಸಮಿತಿಗಳ ಮೂಲಕ ಏಕರಾಷ್ಟ್ರ ಸಿದ್ಧಿಗಾಗಿ ವಿಲ್ಸನ್ ಉತ್ತಮ ಸಲಹೆಗಳನ್ನು ಮಾಡಿದ. ಬ್ರಿಟಿಷರ ಪ್ರತಿನಿಧಿಗಳೇ ಅರಬ್ಬರ ಪ್ರತಿನಿಧಿಗಳಿಗಿಂತ ಹೆಚ್ಚು ಅಧಿಕಾರವನ್ನು ಗಳಿಸಿದರು. ಸಮಿತಿಗಳು ಬ್ರಿಟಿಷರ ಕೈವಾಡಕ್ಕೆ ಸಿಕ್ಕಿದವು. ಸರ್ ಪರ್ಸಿ ಕಾಕ್ಸ್ ಮುಖ್ಯಾಧಿಕಾರಿಯಾಗಿ ಇರಾಕ್ ಸ್ವಾತಂತ್ರ ರಾಷ್ಟ್ರವಾಗುವುದಕ್ಕೆ ಬೇಕಾದ ಸಲಹೆಗಳನ್ನು ಸೂಚಿಸಿದ. ಉಜ್ವಲ ರಾಷ್ಟ್ರ ಪ್ರೇಮಿಗಳು ಸಣ್ಣ ಸಣ್ಣ ಸುಧಾರಣೆಗಳನ್ನು ಒಪ್ಪದೆ ಮತ್ತೆ ಉಗ್ರ ವಿಪ್ಲವಗಳನ್ನು ಎಬ್ಬಿಸಿದರು. ಭಾರತ ಸರ್ಕಾರದ ಸೇನಾದಳ ಪ್ರಭಾವಯುತವಾಗಿ ಹೋರಾಡಿ, ಬ್ರಿಟಿಷ್ ಸರ್ಕಾರಕ್ಕೆ ಯಶಸ್ಸು ತಂದಿತು. 1924ರಲ್ಲಿ ಮತ್ತೆ ಒಪ್ಪಂದವಾಯಿತು. ಸರ್ ಜಾರ್ಜ್ ಕ್ಲೇಟನ್ ಎಂಬ ಅಧಿಕಾರಿ ಬ್ರಿಟಿಷ್ ಮತ್ತು ಇರಾಕ್ ಜನರ ಪರಸ್ಪರ ಸಹಕಾರ ಸದ್ಭಾವನೆಗಳಿಗಾಗಿ ಮತ್ತೆ ಒಪ್ಪಂದ ಮಾಡಿ ಯುದ್ಧ ಸಮಯಗಳಲ್ಲಿ ಇರಾಕ್ ಜನ ಸಹಕಾರ ನೀಡಬೇಕೆಂದು ಸಲಹೆ ಮಾಡಿದ. ಲೀಗ್ ಆಫ್ ನೇಷನ್ಸ್‌ನಲ್ಲಿ ಇರಾಕಿಗೆ ಪ್ರಾತಿನಿಧ್ಯ ಕೊಡಲು ಬ್ರಿಟಿಷ್ ಸರ್ಕಾರಕ್ಕೆ ಸಲಹೆಮಾಡಿದ.

ಆದರೂ ಅಸ್ಸೀರಿಯ ಮಧ್ಯ ಯೂಫ್ರಟೀಸ್ ಪ್ರದೇಶಗಳಲ್ಲಿ ಅಶಾಂತಿ ಇದ್ದೇ ಇತ್ತು. ಕ್ರಾಂತಿಗಳು, ರಕ್ತಪಾತ, ದೌರ್ಜನ್ಯ ಕೃತ್ಯಗಳು 1940ರಲ್ಲೂ ಜರುಗುತ್ತಲೇ ಇದ್ದವು. ಫೈಸಲ್ ದೊರೆಯ ಮರಣಾನಂತರ 1933ರಲ್ಲಿ ಪಟ್ಟಕ್ಕೆ ಬಂದ ಘಾಸಿಯೂ ಶಾಂತಿ ಪ್ರಯತ್ನದಲ್ಲಿ ವಿಫಲನಾದ. ಎರಡನೆಯ ಮಹಾಯುದ್ಧದಲ್ಲಿ ಅನೇಕ ಉತ್ಪಾದಕರ ಘಟನೆಗಳು ಜರುಗಿದವು. ಅಬ್ದುಲ್ಲನ ಉತ್ಕಟಾಕಾಂಕ್ಷೆ ಸಿರಿಯ ರಾಷ್ಟ್ರವನ್ನು ಅರಬ್ಬರ ಧರ್ಮಸಾಮ್ರಾಜ್ಯವನ್ನಾಗಿ ಮಾಡಬೇಕೆಂಬುದಾಗಿತ್ತು. ಆ ಪ್ರಯತ್ನಕ್ಕೆ ಅನೇಕ ವಿರೋಧಿಗಳು ಹುಟ್ಟಿಕೊಂಡರು. ಯುದ್ಧದ ತರುವಾಯ ಕಮ್ಯೂನಿಸ್ಟ ಸಾಮ್ರಾಜ್ಯದ ನಾಯಕನಾದ ಸ್ಟಾಲಿನ್ನನ ಪ್ರಭಾವ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಬಲವಾಯಿತು. ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಅಧಿಕಾರ ವ್ಯಾಪ್ತಿ ಕುಂಠಿತವಾಯಿತು. (ಎಂ.ವಿ.ಕೆ.)

ಎರಡನೆಯ ಮಹಾಯುದ್ಧದ ವೇಳೆ ಕ್ಷಿಪ್ರಕ್ರಾಂತಿಯಿಂದಾಗಿ ಅರಬ್ಬರು ಬ್ರಿಟಿಷರನ್ನು ಇರಾಕ್ ಪ್ರಾಂತ್ಯದಿಂದ ಹೊರಹಾಕಲು ಪ್ರಯತ್ನ ನಡೆಸಿದರು. ರಷೀದ್ ಅಲಿಯು ಅರಬ್ಬರಲ್ಲಿ ರಾಷ್ಟ್ರೀಯ ಪ್ರಜ್ಞೆ ತರಲು ಪ್ರಯತ್ನಸಿದ. ಹೊಸಜೀವನ ನಿಯಮದಡಿಯಲ್ಲಿ ಅನೇಕ ಶಿಕ್ಷಣ ಸಂಸ್ಥೆ ಹಾಗೂ ಸಾಂಸ್ಕೃತಿಕ ಸಂಘಟನೆಗಳೊಡನೆ ಇರಾಕಿನ ಜೀವನ ವ್ಯವಸ್ಥೆಯಲ್ಲಿ ಹೊಸ ರೂಪತರಲು ಪ್ರಯತ್ನಿಸಿತು. ಆದರೆ ಬ್ರಿಟಿಷರು ತಮ್ಮ ಸೈನ್ಯಬಲ ಬಳಸಿ ತಮ್ಮ ಬೆಂಬಲಿಗನಾಗಿದ್ದ ನೂರಿ ಅಸ್ ಸೈಯದ್‌ನನ್ನು ಅಧಿಕಾರಕ್ಕೆ ತಂದರು. ಅರಬ್ ಲೀಗ್ ಸ್ಥಾಪನೆಯಾಯಿತು. ಮಾಸುಲ್‌ನಲ್ಲಿ ಮೊದಲಬಾರಿಗೆ ತೈಲ ಪತ್ತೆ ಹಚ್ಚಲಾಯಿತು. ಯುದ್ಧಾನಂತರದಲ್ಲಿ ಬ್ರಿಟಿಷರು ಮತ್ತೆ ಈ ಪ್ರದೇಶದ ಮೇಲೆ ಹತೋಟಿ ಸಾಧಿಸಿ ಹಸೀಮಾ ಮನೆತನದ ಫೈಸಲ್‌ನನ್ನು ರಾಜನಾಗಿ ನೇಮಿಸಿತು. ಆದರೆ ಅಸಮರ್ಥರಾದ ಕಾರಣ ಈತ ಹಾಗೂ ಈತನ ಮಗ ಗಾಜಿ ಬಹಳ ಕಾಲ ಅಧಿಕಾರ ನಡೆಸಲಾಗಲಿಲ್ಲ. ಮೆಸಪೊಟೇಮಿಯ ಪ್ರದೇಶದ ಅಸ್ಸೀರಿಯನ್ನರು ಉತ್ತರದ ಕುರ್ದರು ಪ್ರತ್ಯೇಕತೆಗಾಗಿ ಘರ್ಷಣೆಗೆ ದುಮುಕಿದರು.

1944–46ರ ತನಕ ಆಡಳಿತ ನಡೆಸಿದ ಹಸೀಮಾ ಮನೆತನದವರು ಹಾಗೂ ಹಮಾದಿ ಅಲ್ ಪಚಾಚಿ ಸರ್ಕಾರವನ್ನುರುಳಿಸಿ ನೂರಿ ಅಲ್ ಸೈಯದ್‌ನ ಬೆಂಬಲಿಗ ಸೈನಿಕರು ಕ್ಷಿಪ್ರ ಕ್ರಾಂತಿಯ ಮೂಲಕ ಅಧಿಕಾರಕ್ಕೆ ಬಂದರು. ಇರಾಕಿನಲ್ಲಿ ಬ್ರಿಟಿಷ್ ವಿರೋಧಿ ಭಾವನೆಯಿಂದ

ಬ್ರಿಟಿಷರು ಒಲ್ಲದ ಮನಸ್ಸಿನಿಂದ ಇರಾಕ್ ರಾಜಕೀಯ ವ್ಯವಸ್ಥೆಯಿಂದ ಹಿಂದೆ ಸರಿದರು. 1948ರಲ್ಲಿ ಜನ್ಮತಳೆದ ಬಾತ್ ಪಕ್ಷ ಇರಾಕಿನಲ್ಲಿ ರಾಷ್ಟ್ರೀಯ ಪ್ರಜ್ಞೆಯ ಕಿಡಿಹೊತ್ತಿಸಿತ್ತು. ಜಾತ್ಯತೀತ ಧೋರಣೆಯಿಂದಾಗಿ ಬಹುಬೇಗ ಅರಬ್ಬರ ಮನ ಸೆಳೆಯಿತು. 1955 ಜನವರಿಯಲ್ಲಿ ಬಾಗ್ದಾದ್ ಒಪ್ಪಂದವಾಗಿ ಸೋವಿಯತ್ ಒಕ್ಕೂಟದ ವಿರೋಧಿ ಬಣಕ್ಕೆ ಇರಾಕ್ ವೇದಿಕೆಯಾದರು ಸಹ ಹೆಚ್ಚಿನದೇನೂ ಸಾಧಿಸಲಾಗಲಿಲ್ಲ.

1958 ಜುಲೈ 14ರಂದು ಸೈನ್ಯಾಧಿಕಾರಿ ಅಬ್ದುಲ್ ಕರೀಮ್ ಖಾಸಿಂ ಕ್ಷಿಪ್ರಕ್ರಾಂತಿಯ ಮೂಲಕ ಅಧಿಕಾರ ಕಸಿದುಕೊಂಡ. ಎರಡನೆಯ ಫೈಸಲ್ ಹಾಗೂ ಕುಟುಂಬ ಮತ್ತು ವಯಸ್ಸಾಗಿದ್ದ ನೂರಿ ಅಲ್ ಸೈಯದ್‌ನನ್ನು ಹತ್ಯೆಗಯ್ಯಲಾಯಿತು. ಇರಾಕ್ ಆಡಳಿತ ಈಜಿಪ್ಟಿನ ಮಾದರಿಯಂತೆ ರೆವಲ್ಯೂಷನರಿ ಕಮ್ಯಾಂಡ್ ಕೌನ್ಸಿಲ್ ಸ್ಥಾಪಿಸಿಕೊಂಡು ತನ್ನ ವಿರೋಧಿಗಳನ್ನು ಮಟ್ಟಹಾಕಿತು. 1958–63ರ ನಡುವೆ ಖಾಸಿಂ ತನ್ನ ಆಡಳಿತ ಚಾಕಚಕ್ಯತೆಯಿಂದ ಬ್ರಿಟಿಷ್‌ರನ್ನು ಇರಾಕ್ ಆಡಳಿತದಿಂದ ದೂರವಿರಿಸಿದ. ಬಾತ್ ಪಕ್ಷ ಸಮರ್ಥವಾಗಿ ಕೆಲಸ ಮಾಡುವುದರ ಮೂಲಕ ವ್ಯಕ್ತಿಗಿಂತ ಪಕ್ಷ ಮುಖ್ಯವೆಂಬುದನ್ನು ಎತ್ತಿಹಿಡಿಯಿತು. 1961ರಲ್ಲಿ ಖಾಸಿಂ ಕುವೈತ್ ಮೇಲೆ ಧಾಳಿ ನಡೆಸಲು ಮುಂದಾದರು ಸಹ ಬ್ರಿಟಿಷರ ಪ್ರಬಲ ವಿರೋಧದಿಂದಾಗಿ ಸಫಲತೆ ಕಾಣಲಿಲ್ಲ. ಇರಾಕ್ ತನ್ನ ಬೆಳವಣಿಗೆಯ ಜೊತೆಯಲ್ಲಿ (ಸಫಲ್ ಅರಬ್) ಗಡಿ ಸಮಸ್ಯೆಯನ್ನು ಬೆಳೆಸುವಂತಾಯಿತು.

ಇರಾಕಿನ ಉತ್ತರ ಭಾಗದಲ್ಲಿ ಕುರ್ದರು ಖಾಸಿಂ ಆಡಳಿತದ ವಿರುದ್ಧ ದಂಗೆಯೆದ್ದರು. ಮುಸ್ತಾಫ್ ಅಲ್ ಬರ್ಜಾನಿ ಗಡಿಪಾರಾದ. ಕುರ್ದರ ದಂಗೆಯನ್ನು ಇರಾನ್ ಹಾಗೂ ಟರ್ಕಿ ಸೈನ್ಯದ ನೆರವಿನೊಂದಿಗೆ ಇರಾಕ್ ತಾತ್ಕಾಲಿಕವಾಗಿ ಶಮನಗೊಳಿಸಿಕೊಂಡಿತು.

1963ರಲ್ಲಿ ಕ್ಷಿಪ್ರಕ್ರಾಂತಿ ನಡೆಸುವುದರ ಮೂಲಕ ಕರ್ನಲ್ ಅಬ್ದುಲ್ ಸಲೀಮ್ ಹರೀಫ್ ಅಧಿಕಾರಕ್ಕೆ ಬಂದ. ಅಧ್ಯಕ್ಷರಾಗಿದ್ದ ಖಾಸಿಂನನ್ನು ಗಲ್ಲಿಗೇರಿಸಲಾಯಿತು. ಇರಾಕಿನಲ್ಲಿ ಅರಬ್ ಸೋಷಲಿಸ್ಟ್ ಪಕ್ಷ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸತತವಾಗಿ ನಡೆದ ಕುರ್ದರ ಘರ್ಷಣೆ, ಸಿರಿಯ, ಈಜಿಪ್ಟ್‌ಗಳ ಹಳಸಿದ ಸಂಬಂಧಗಳಿಂದಾಗಿ ಇರಾಕ್ ತನ್ನ ಅಮೂಲ್ಯವಾದ ಅಪಾರ ಪ್ರಮಾಣದ ಸಂಪತ್ತಿನ ನಾಶಕ್ಕೆ ಈಡಾಯಿತು.

1966ರಲ್ಲಿ ಅಧ್ಯಕ್ಷರಾಗಿದ್ದ ಸಲೀಮ್ ಹರೀಫ್ ಅಪಘಾತ ಒಂದರಲ್ಲಿ ಸಾವನ್ನಪ್ಪಿದರು. ಅವರ ಸ್ಥಾನಕ್ಕೆ ಅವರ ಸಹೋದರ ಅಬ್ದುಲ್ ರಹಮಾನ್ ಹರೀಫ್ ಅಧಿಕಾರಕ್ಕೆ ಬಂದರು. 1967ರಲ್ಲಿ ಸಂಭವಿಸಿದ ಅರಬ್ ಇಸ್ರೇಲಿ ಯುದ್ಧದಲ್ಲಿ ಇರಾಕ್ ತಟಸ್ಥವಾಗಿದ್ದರು ಸಹ ಇಸ್ರೇಲಿನ ನೀತಿಯನ್ನು ಖಂಡಿಸಿತು. ಅರಬ್ ಸೋಷಿಯಲಿಸ್ಟ್ ಪಕ್ಷ ಈ ಘಟನೆಯಿಂದ ತನ್ನ ಜನಪ್ರಿಯತೆ ಕಳೆದುಕೊಂಡಿತು. ಬಾತಿಷ್ಟ್ ಪಕ್ಷ ತನ್ನ ಸೈದ್ಧಾಂತಿಕ ನಿಲುವುಗಳಿಂದಾಗಿ ಮತ್ತೆ ಜನಮನ್ನಣೆ ಗಳಿಸಿಕೊಂಡಿತು.

1968 ಜುಲೈ 17ರಂದು ಬಾತ್ ಪಕ್ಷದ ನಾಯಕ ಜನರಲ್ ಅಹಮದ್ ಅಲ್ ಬಕರ್ ಹಾಗೂ ಯುವ ನಾಯಕ ಸದ್ದಾಂಹುಸೇನ್ ಕ್ಷಿಪ್ರಕ್ರಾಂತಿಯ ಮೂಲಕ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕ್ರಮವಾಗಿ ಅಧಿಕಾರಕ್ಕೆ ಬಂದರು.

1979 ಜುಲೈ 11 ರಂದು ಬಾತ್ ಪಕ್ಷದ ಅಧ್ಯಕ್ಷರಾಗಿದ್ದು ಅಲ್–ಬಕರ್ ಅನಾರೋಗ್ಯದ ಕಾರಣ ಅಧಿಕಾರ ತ್ಯಜಿಸಿದಾಗ ಉಪಾಧ್ಯಕ್ಷರಾಗಿ ಸದ್ದಾಂ ಹುಸೇನ್ ಇರಾಕಿನ ಅಧ್ಯಕ್ಷ ಹಾಗೂ ಆರ್.ಸಿ.ಸಿ.ಯ ಮುಖ್ಯಸ್ಥರಾಗಿ ಅಧಿಕಾರಕ್ಕೆ ಬಂದ. ಅರಬ್ ಪ್ರಪಂಚದ ಗಟ್ಟಿ ಮನುಷ್ಯ ಎಂದು ಹೆಸರು ಪಡೆದಿದ್ದ ಸದ್ದಾಂ ಹುಸೇನ್ ತನ್ನ ಖಚಿತ ನಿಲುವುಗಳ ಮೂಲಕ ಬಾತ್ ಪಕ್ಷದ ನೇತೃತ್ವದಲ್ಲಿ ಇರಾಕಿನ ಬೆಳವಣಿಗೆಗಾಗಿ ಶ್ರಮಿಸಿದರು. ಅನೇಕ ಜನಪರ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು. ಕಿರ್ಕುಕ್, ಮಾಸುಲ್‌ನಲ್ಲಿ ದೊರೆತ ತೈಲ ಸಂಪತ್ತಿನಿಂದಾಗಿ ಇರಾಕಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತು. ಹಲವಾರು ಕೈಗಾರಿಕೆಗಳು ಸ್ಥಾಪಿತವಾದವು. ಪರ್ಷಿಯನ್ ಖಾರಿ ಒಡೆತನದ ವಿವಾದದಿಂದಾಗಿ 1980–88ರ ತನಕ ಸತತವಾಗಿ ಇರಾಕ್ ಮತ್ತು ಇರಾನ್ ನಡುವೆ ಯುದ್ಧ ಸಂಭವಿಸಿತು. ಈ ವೇಳೆಯಲ್ಲೆ ಉತ್ತರದಲ್ಲಿ ಕುರ್ದ್ ಸಮುದಾಯದವರು ದಂಗೆಯೆದ್ದರು, ದಂಗೆಯ ನಿಗ್ರಹಕ್ಕೆ ಸದ್ದಾಂ ಸೇನೆ ವಿನಾಶಕಾರಿ ಬಾಂಬ್‌ಗಳನ್ನು ಬಳಸಿ ಸಾವಿರಾರು ಕುರ್ದರನ್ನು ಹತ್ಯೆಗೈಯಿತು. ಇರಾಕಿನ ಆಧುನಿಕ ಇತಿಹಾಸದಲ್ಲಿ ಕುರ್ದರು ಅಪಾರ ಪ್ರಮಾಣದಲ್ಲಿ ಸಾವನ್ನಪ್ಪಬೇಕಾಯಿತು. 1988 ಆಗಸ್ಟ್‌ರಲ್ಲಿ ಇರಾನ್–ಇರಾಕ್ ಯುದ್ಧಕ್ಕೆ ತೆರೆ ಎಳೆಯಲಾಯಿತು. ಯುದ್ಧ ಹಾಗೂ ಕುರ್ದರ ದಂಗೆಯಿಂದ ತೀರಾ ಹದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿ ಹಾಗೂ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸದ್ದಾಂ ಹುಸೇನ್ ತೈಲ ವ್ಯಾಪಾರದಲ್ಲಿ ಇರಾಕಿಗೆ ಹೆಚ್ಚಿನ ಪಾಲು ಕೇಳಿ ಒಪೆಕ್ ಸಭೆಯಲ್ಲಿ ಒತ್ತಾಯ ತಂದಾಗ ಕುವೈತ್ ವಿರೋಧ ವ್ಯಕ್ತಪಡಿಸಿತು. ಅನಿವಾರ್ಯತೆ ಹಾಗೂ ಅಸಹಾಯಕತೆಯಿಂದ ಸದ್ದಾಂ ಹುಸೇನ್ ಕುವೈತ್ ಇರಾಕ್ ಗಡಿಭಾಗದ ತಟಸ್ಥವಲಯದಲ್ಲಿನ ತೈಲವನ್ನು ಹೊರತೆಗೆಯಲು ಮುಂದಾದ. ಇದು ಕುವೈತ್ ಮೇಲಿನ ಧಾಳಿಗೆ ಇರಾಕನ್ನು ಪ್ರಚೋದಿಸಿತು.

1990 ಸೆಪ್ಟೆಂಬರ್ 10 ರಂದು ಇರಾನ್–ಇರಾಕ್ ನಡುವೆ ರಾಯಭಾರಿ ಸಂಬಂಧಗಳು ಮತ್ತೆ ಪ್ರಾರಂಭವಾದವು. ಸ್ವಲ್ಪ ದಿನಗಳ ಕಾಲ ಇರಾಕ್ ಮತ್ತೆ ಆರ್ಥಿಕವಾಗಿ ಚೇತರಿಸಿಕೊಂಡು ಪ್ರಗತಿಯತ್ತ ಹೆಜ್ಜೆಯನ್ನಿಡುತ್ತಿರುವಾಗಲೇ ಸದ್ದಾಂ ಹುಸೇನ್ ಕುವೈತ್ ಮೇಲೆ 1990 ಆಗಸ್ಟ್ 2ರಂದು ಧಾಳಿ ನಡೆಸಿದ. ಅಮೇರಿಕ ಹಾಗೂ ಬ್ರಿಟಿಷ್ ಪಡೆಗಳು ಕುವೈತ್ ಸಹಾಯಕ್ಕೆ ಬಂದು ಇರಾಕನ್ನು ಕುವೈತ್‌ನಿಂದ ಕಾಲ್ತೆಗೆಯುವಂತೆ ಮಾಡಿದವು.

ಅಮೇರಿಕ ಹಾಗೂ ವಿಶ್ವಸಂಸ್ಥೆಯ ಒತ್ತಾಯಕ್ಕೆ ಮಣಿದು ಭದ್ರತಾ ಮಂಡಲಿ ಇರಾಕ್ ದೇಶದ ಮೇಲೆ ಆರ್ಥಿಕ ದಿಗ್ಬಂದನ ವಿಧಿಸಿತು. 1993ರಿಂದ ಜಜ್ಜರಿತಗೊಂಡಿದ್ದ ಯುದ್ಧಾನಂತರದ ಇರಾಕ್‌ನ ಜನಜೀವನ 1994ರ ವಿಶ್ವಸಂಸ್ಥೆಯ ಆರ್ಥಿಕ ದಿಗ್ಬಂದನದಿಂದ ತೀರಾ ಕುಸಿದು ಹೋಯಿತು. ಜನ ಆಹಾರ, ಔಷಧಿ ಹಾಗೂ ಜೀವನ ಅವಶ್ಯಕ ವಸ್ತುಗಳ ಕೊರತೆಯಿಂದ ನರಳುವಂತಾಯಿತು. ವಿದೇಶಿ ಸಾಲ ಆಂತರಿಕ ಒತ್ತಡಕ್ಕೆ ಸಿಲುಕಿದ ಇರಾಕಿನ ಮೇಲೆ ಅಮೆರಿಕ ಹಾಗೂ ಬ್ರಿಟನ್ ಸುಳ್ಳು ಅಣ್ವಸ್ತ್ರ ನೆಪದಲ್ಲಿ 2002ರಲ್ಲಿ ಧಾಳಿ ನಡೆಸಿ ಸದ್ದಾಂ ಸರ್ಕಾರ ಹಾಗೂ ಬಾತ್ ಪಕ್ಷದ ಆಡಳಿತವನ್ನು ಕಿತ್ತೊಗೆದು ತಾತ್ಕಾಲಿಕ ಸರ್ಕಾರ ನೇಮಿಸಿತು. ಇರಾಕಿನ ಮೇಲೆ ಅಮೇರಿಕ ಹಾಗೂ ಮಿತ್ರ ಪಡೆಯ ಸೈನ್ಯ ಅಧಿಕಾರ ಹೊಂದಿದವು. ಸದ್ದಾಂ ಹುಸೇನ್‌ರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಯಿತು. ಕುರ್ದರ ಮೇಲಿನ ಹತ್ಯೆಯ ಆರೋಪದ ಮೇರೆಗೆ ಸದ್ದಾಂಹುಸೇನ್ ಹಾಗೂ ಅವರ ಸರ್ಕಾರದ ಹಿರಿಯ ಅಧಿಕಾರಿಗಳನ್ನು 2006 ಡಿಸೆಂಬರ್ 30 ರಂದು ಗಲ್ಲಿಗೇರಿಸಲಾಯಿತು.

ಇತಿಹಾಸದುದ್ದಕ್ಕೂ ಆಕ್ರಮಣ, ಕದನ, ದಂಗೆ ಹಾಗೂ ಕ್ಷಿಪ್ರಕ್ರಾಂತಿಗಳ ಮೂಲಕ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸುತ್ತಿದ್ದ ಇರಾಕ್ ದೇಶ ತನ್ನ ಅಭದ್ರವಾದ ಗಡಿಗಳು, ಜಾನಾಂಗೀಯವಾದ ಹಾಗೂ ಇಸ್ಲಾಂ ಧರ್ಮದ ಷಿಯ–ಸುನ್ನಿ ಸಂಘರ್ಷದಲ್ಲಿ ನಲುಗಿಹೋಗಿದೆ. ಯೂಫ್ರಟೀಸ್ ಹಾಗೂ ಟೈಗ್ರೀಸ್ ನದಿಗಳ ಸಮೃದ್ಧ ನೀರು, ಫಲವತ್ತಾದ ಮೆಸಪೊಟೇಮಿಯ ಪ್ರದೇಶ, ಪ್ರಪಂಚದಲ್ಲೇ ತೈಲ ಸಂಪತ್ತಿನ ದೃಷ್ಟಿಯಿಂದ ದ್ವಿತೀಯ ಸ್ಥಾನದಲ್ಲಿದ್ದರೂ ರಾಜಕೀಯ ದೂರಾಲೋಚನೆ ಹಾಗೂ ಸಮರ್ಥ ನಾಯಕತ್ವದ ಕೊರತೆಯಿಂದಾಗಿ ಇಂದಿಗೂ ವಸಾಹತುಶಾಹಿಯ ಶೋಷಣೆಗೆ ಒಳಗಾಗುತ್ತಿರುವ ರಾಷ್ಟ್ರವೆನಿಸಿದೆ. (ಸಿ.ಜಿ.ಎಸ್.)

**ಇರಾಕಿನ ಇತಿಹಾಸ: ಪ್ರಾಕ್ತನ:** ಇರಾಕ್ ದೇಶ ಪಶ್ಚಿಮ ಏಷ್ಯದ ಒಂದು ಪುರಾತನ ಪ್ರದೇಶ. ಇದಕ್ಕೆ ಮೆಸೊಪೊಟೇಮಿಯ (ನದಿಗಳ ನಡುವಣ ನಾಡು) ಎಂಬುದು ಪುರಾತನವಿಟ್ಟ ಅನ್ವರ್ಥನಾಮ. ಸುಮಾರು ನೂರು ವರ್ಷಗಳಿಂದ ಇಲ್ಲಿ ನಡೆದ ಭೂಶೋಧನೆಗಳಿಂದ ಈ ಪ್ರದೇಶ ಅತ್ಯಂತ ಪ್ರಾಚೀನ ನಾಗರಿಕತೆಗಳ ತೌರು ಮಾತ್ರವಲ್ಲದೆ ಇತಿಹಾಸಪೂರ್ವ ಯುಗದಲ್ಲೂ ಆದಿಮಾನವನ ಕಾರ್ಯರಂಗವಾಗಿದ್ದು ನಾಗರಿಕತೆಯ ತೊಟ್ಟಿಲು ಎಂಬ ಬಿರುದನ್ನು ಸಾರ್ಥಕಗೊಳಿಸಿಕೊಂಡಿದೆ.

ಇರಾಕ್ ದೇಶದಲ್ಲಿ ನಡೆದಿರುವ 6,400 ಕ್ಕಿಂತಲೂ ಹೆಚ್ಚಿನ ಭೂಶೋಧನೆಗಳಿಂದ ದೇಶದ ಪುರಾತನ ಚರಿತ್ರೆ ತಿಳಿದುಬರುತ್ತದೆ. ನವಶಿಲಾಯುಗದಲ್ಲಿ ಕೊರೆದ ಮತ್ತು ಬಣ್ಣಗಳಿಂದ ಚಿತ್ರಿತವಾದ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತ ಒಂದೇ ಸ್ಥಳದಲ್ಲಿ ಸ್ಥಿರಜೀವನ ನಡೆಸುತ್ತಿದ್ದ ಜನರ ಸಂಸ್ಕೃತಿಯ ಚಿತ್ರ ಟೆಲ್ ಹಸೂನಾದ ಭೂಶೋಧನೆಗಳಿಂದ ಕಂಡುಬರತ್ತದೆ. ಟೆಲ್ ಹಲಾಫೆ ಭೂಶೋಧನೆಗಳು ವಿವಿಧ ಬಣ್ಣಬಳಿದ ರಮ್ಯವಾಗಿ ಅಲಂಕೃತವಾದ ಮಣ್ಣಿನ ಪಾತ್ರೆಗಳನ್ನೂ ಕಲ್ಲಿನ ಆಯುಧಗಳನ್ನೂ ಬಳಸುತ್ತಿದ್ದ ಜನರ ಜೀವನವನ್ನು ನಿರೂಪಿಸುತ್ತದೆ.

ತಾಮ್ರ ಶಿಲಾಯುಗದವರಿಗೆ ಅಂದವಾದ ಬಣ್ಣದ ಮಡಕೆಗಳು, ತಾಮ್ರ, ಇತರ ಮೊದಲಾದ ಲೋಹಗಳ ಉಪಯೋಗ ತಿಳಿದಿತ್ತು. ಮೊತ್ತ ಮೊದಲನೆಯ ದೇವಸ್ಥಾನ ಕಟ್ಟಿದ್ದ ಆ ಜನರ ಜೀವನಚಿತ್ರ ಅಲ್ ಉಬೈದ್ ಭೂಶೋಧನೆಗಳಿಂದ ದೊರಕುತ್ತದೆ. ದಕ್ಷಿಣ ಇರಾಕಿನಲ್ಲಿ ಉರುಕ್ ಸಂಸ್ಕೃತಿ ಕಾಲದಲ್ಲಿ ದೊಡ್ಡ ದೊಡ್ಡ ದೇವಾಲಯಗಳೂ ಹೊಸನಗರಗಳೂ ಉರುಳೆಯಾಕಾರದ ಮುದ್ರೆಗಳೂ ಚಿತ್ರಲಿಪಿಯೂ ಇದ್ದುದಕ್ಕೆ ಉತ್ಪನ್ನಗಳು ಸಾಕ್ಷಿ ಒದಗಿಸಿವೆ. ಖಫಾಜೆ ಮತ್ತು ಟೆಲ್ ಅಸಮಾರ್ ಭೂಶೋಧನೆಗಳಿಂದ ತಿಳಿದುಬರುವಂತೆ ಪ್ರಾಚೀನರಾಜ್ಯವಂಶದ ಕಾಲದಲ್ಲಿ ದೇಶ ನೀರಾವರಿ ವ್ಯವಸಾಯದಿಂದ ಸಂಪದ್ಯುಕ್ತವಾಗಿದ್ದು, ಇರಾಕ್ ಅಂದಿನ ಜಗತ್ತಿನ ಧಾನ್ಯ ಕಣಜದಂತಿತ್ತು. ಅರ್ ನಗರದ ಆಳರಸರ ಶ್ಮಶಾನ ಶೋಧನೆಗಳಿಂದ ಆ ಕಾಲದ ಐಶ್ವರ್ಯ ಮತ್ತು ಸಂಸ್ಕೃತಿಯ ಮಟ್ಟ ತಳಿದು ಬರುತ್ತದೆ **(ನೋಡಿ– ಅರ್)**. ಮಾರಿ, ನೂಜಿ, ದುರ್ ಕುರಿಕಾಲ್ಜುಗಳ ಭೂಶೋಧನೆಗಳಲ್ಲಿ ದೊರೆತ ಜೇಡಿಮಣ್ಣಿನ ಲಿಖಿತ ಫಲಕಗಳಿಂದ ಪ್ರ.ಶ.ಪೂ. 3ನೆಯ ಸಹಸ್ರಾಬ್ದದ ಇತಿಹಾಸ ತಿಳಿದುಬರುತ್ತದೆ. ಅಸ್ಸೂರ್, ನಿನೆವೆ, ನಿಮ್ರುಸ್, ನಿಪ್ಪೂರ್ ಮುಂತಾದ ಸ್ಥಳಗಳ ಭೂಶೋಧನೆಗಳಿಂದ ಪ್ರ.ಶ.ಪೂ. 3 ರಿಂದ 1ನೆಯ ಸಹಸ್ರಾಬ್ದಗಳ ಇರಾಕಿ ಸಂಸ್ಕೃತಿಯ ಅನೇಕ ವಿಷಯಗಳು ಗೊತ್ತಾಗಿವೆ. ಇವುಗಳ ಕೆಲವು ವಿವರಗಳನ್ನಿಲ್ಲಿ ಸಂಗ್ರಹಿಸಲಾಗಿದೆ.

ಉತ್ತರ ಇರಾಕಿನ ಬಾರ್ದಾಬಲ್ಕಾ ಎಂಬಲ್ಲಿ ದೊರಕಿರುವ ನಾಜೂಕಿಲ್ಲದ ಕೈ ಕೊಡಲಿ ಮತ್ತು ಕಲ್ಲಿನ ಚಕ್ಕೆಗಳಿಂದ ಮಾಲಡ್ಪಟ್ಟ ಆಯುಧಗಳು ಅತ್ಯಂತ ಪುರಾತನವಾದವು. ಇವನ್ನು ಪೂರ್ವಶಿಲಾಯುಗದ ಆಯುಧಗಳನ್ನು ಹಜರ್‌ಮರ್ದ್ ಮತ್ತು ಷನಿದಾರ್ ಗುಹೆಗಳಲ್ಲಿ ಕಂಡುಬಂದಿವೆ. ಈ ಪದರಗಳಲ್ಲಿ ಹಳೆಯ ಕೈಕೊಡಲಿಗಳು ಹೊಸರೀತಿಯ ಚಕ್ಕೆ ಆಯುಧಗಳ ಜೊತೆಯಲ್ಲಿ ಕಂಡುಬರುವುದರಿಂದ ಇದು ಆದಿ ಮಾನ್ ಸಂಸ್ಕೃತಿಯ ಅವಿಚ್ಛಿನ್ನ ಬೆಳವಣಿಗೆಯನ್ನು ಸಾಕ್ಷೀಕರಿಸುತ್ತದೆ. ಹಜರ್‌ಮರ್ದ್, ನಿದಾರ್, ಜರ್ಜಿ ಮತ್ತು ಪಲೇಗ್ರಾವ್ರಾ ಎಂಬೆಡೆಗಳಲ್ಲಿ ಅಂತ್ಯಶಿಲಾಯುಗದ ಕೂಲಗುಳ್ಳ ಚಕ್ಕೆಗಳೂ ಸೂಕ್ಷ್ಮ ಶಿಲಾಯುಗದ ಆಯುಧಗಳ ಬೆರಕೆಯಿದ್ದು ಕಾಲಗಣನೆಯಲ್ಲಿ ಇವು ಯುರೋಪಿನ ಸೂಕ್ಷ್ಮ ಶಿಲಾಯುಧಗಳಿಗಿಂತಲೂ ಹಳೆಯವಾಗಿರುವುವೆಂದೂ ಪಶ್ಚಿಮದ ಏಷ್ಯದಲ್ಲಿ ಈ

ಕಾಲದ ಮಾನವ ಹೆಚ್ಚು ಪ್ರಗತಿಪರನಾಗಿದ್ದನೆಂದೂ ಅಂತ್ಯಶಿಲಾಯುಗದ ಯುರೋಪಿನ ಸಂಸ್ಕೃತಿಗಳು ಕೂಡ ಇಲ್ಲಿ ಆವಿರ್ಭವಿಸಿ ಅನಂತರ ಯುರೋಪಿಗೆ ಹರಡಿದುವೆಂದೂ ಪಂಡಿತರ ಅಭಿಪ್ರಾಯ

ಇದರ ಮುಂದಿನ ಸಂಸ್ಕೃತಿಗಳ ಅವಶೇಷಗಳು ಇರಾಕಿನಲ್ಲಿ ಹೆಚ್ಚಾಗಿ ದೊರೆತಿಲ್ಲ. ಕೇವಲ ಷನಿದಾರ್ ಗುಹೆಗಳಲ್ಲಿ ಮಾತ್ರ ನಾಗರಿಕತೆಯ ಉಗಮಕಾಲದವರೆಗೂ ಮಾನವ ಅವಿಚ್ಛಿನ್ನವಾಗಿ ವಾಸಿಸಿದ ಮಾಹಿತಿಗಳು ದೊರಕಿವೆ. ಇಲ್ಲಿನ ತಳಮಟ್ಟದ ಪದರಗಳಲ್ಲಿ ಮೊದಮೊದಲು ನೂತನಶಿಲಾಯುಗದ ಅವಶೇಷಗಳೂ ಮೇಲ್ಭಾಗದಲ್ಲಿ ಚರಿತ್ರ ಪೂರ್ವ ಅಕ್ಷರಸ್ಥನಾಗರಿಕತೆಯ ಕುರುಹುಗಳೂ ದೊರಕಿವೆ.

ನೂತನ ಶಿಲಾಯುಗದಲ್ಲಿ ಇರಾಕಿನಲ್ಲಿ ಹೆಚ್ಚಿನ ಅಭಿವೃದ್ಧಿಯ ಮಾಹಿತಿಗಳು ದೊರಕುತ್ತವೆ. ಪಶ್ಚಿಮ ಏಷ್ಯ ಪ್ರದೇಶಗಳಲ್ಲಿ ಮಾನವನ ಪುರೋಗಾಮಿತ್ವ ಮತ್ತು ನಾಗರಿಕತೆಯ ಬೆಳವಣಿಗೆಯ ಮೂಲಾಧಾರವಾದ ಆಹಾರೋತ್ಪತ್ತಿಯ ಉದ್ಘಾಟನೆ ನಡೆದದ್ದು ನಿರ್ವಿವಾದ ಸಂಗತಿ. ಇರಾಕಿನ ಚಾವಿ ಷಮಿಷನಿದಾರ್, ಕರೀಮ್ ಷಾಹಿರ್, ಮ್ಲಾಫಾತ್ ಮುಂತಾದ ನೆಲೆಗಳಲ್ಲಿ ಈ ಸಂಸ್ಕೃತಿಯ ಅತ್ಯಂತ ಪ್ರಾಚೀನ ಅವಶೇಷಗಳು ದೊರಕಿವೆ. ಇವು ಸು.ಪ್ರಶ.ಪೂ. 9000 ವರ್ಷಗಳಷ್ಟು ಹಳೆಯವೆಂದು ನಿರ್ಣಯಿಸಲಾಗಿದೆ. ಈ ಸಂಸ್ಕೃತಿಯಲ್ಲಿ ನಯಮಾಡಿದ ಕಲ್ಲಿನ ಕೊಡಲಿಗಳೂ ಅಗೆಯುವ ಕೋಲಿನ ಭಾರದಗುಂಡುಗಳೂ ಅರೆಯುವ ಕಲ್ಲುಗಳೂ ಒರಟಾಗಿ ಕಟ್ಟಿದ ಗುಡಿಸಲ ಅವಶೇಷಗಳೂ ಸಾಕುಪ್ರಾಣಿಯಾದ ಆಡು, ಕುರಿ, ಹಂದಿ ಮತ್ತು ದನಗಳ ಅವಶೇಷಗಳೂ ಸಿಕ್ಕಿವೆಯಾದರೂ ಬೇಟೆಯೇ ಆಹಾರೋತ್ಪತ್ತಿಯ ಮುಖ್ಯ ವಿಧಾನವಾಗಿತ್ತೆಂದು ಹೇಳಲಾಗಿದೆ.

ಕಾಜಮಿಯಾ ಮಸೀದಿ, ಬಾಗ್‌ದಾದ್

ವ್ಯವಸಾಯವನ್ನೇ ಮುಖ್ಯ ಆಹಾರೋತ್ಪತ್ತಿಮಾರ್ಗವಾಗುಳ್ಳ ಜನ ಗ್ರಾಮಗಳಲ್ಲಿ ನೆಲೆನಿಂತು ಉತ್ತರದ ಕುರ್ದಿಸ್ತಾನ್ ಬೆಟ್ಟಗಳ ಬುಡದಲ್ಲಿರುವ ಕಾಲಾತ್ ಚಾರ್ಮೋ ಎಂಬಲ್ಲಿ ದೊರಕಿವೆ. ಇಲ್ಲಿನ ಕ್ರಮಾಗತ 12 ಪದರಗಳಲ್ಲಿ ದೊರಕುವ ಸಾಕ್ಷ್ಯಗಳಲ್ಲೂ ನೂತನ ಶಿಲಾಯುಗಕ್ಕೆ ಸೇರಿದ್ದುವಾದರೂ ಆ ಜನಗಳಿಗೆ ಇನ್ನೂ ಮಣ್ಣಿನ ಪಾತ್ರೆಗಳನ್ನು ಮಾಡುವ ಕಲೆ ಗೊತ್ತಿರಲಿಲ್ಲ. ಕಲ್ಲಿನ ಆಸ್ತಿಭಾರದ ಮೇಲೆ ಮಣ್ಣಿನಿಂದ ಕಟ್ಟಿದ ಅನೇಕ ಆಯತಾಕಾರದ ಕೊಠಡಿಗಳಿಂದ ಕೂಡಿದ ಮನೆಗಳು, ಗಾರ್ಲಿ ಗೋದಿಗಳ ವ್ಯವಸಾಯ ಇವು ಮೊದಲಿನ ಹಂತದಲ್ಲೂ ಸಾಕುಆಡು, ಕುರಿ, ಹಂದಿಗಳು ಮೇಲಿನ ಪದರಗಳಲ್ಲೂ ದೊರಕಿರುವುದು ಈ ಸಂಸ್ಕೃತಿಯ ಮುನ್ನಡೆಗೆ ಸಾಕ್ಷಿ. ಚಕಮಕಿ ಕಲ್ಲಿನಿಂದ ಮತ್ತು ಜ್ವಾಲಾಮುಖಿಯಿಂದ ಉತ್ಪನ್ನವಾದ ಅಬ್ಸಿಡಿಯನ್ ಗಾಜಿನಿಂದ ಮಾಡಿದ ಸೂಕ್ಷ್ಮ ಶಿಲಾಯುಧಗಳು, ನಯಮಾಡಿದ ಕಲ್ಲಿನ ಕೊಡಲಿಗಳು, ಬಾಚಿಗಳು, ಮಣಿಯ ಕೈಗಡಗಳು ಮತ್ತು ಅತಿ ಕೌಶಲದಿಂದ ಮಾಡಲಾದ ಕಲ್ಲಿನ ಪಾತ್ರೆಗಳು ಆಗ ಬಳಕೆಯಲ್ಲಿದ್ದವು. ಮಣ್ಣಿನಲ್ಲಿ ಮಾಡಿದ ಬೆತ್ತಲೆ ಗರ್ಭಿಣಿ ಗೊಂಬೆಗಳು ಪೂರ್ವಶಿಲಾಯುಗದಿಂದಲೂ ಈ ಜನಗಳಲ್ಲಿ ಬೆಳೆದುಬಂದ ಮಾಂತ್ರಿಕ ಹಾಗೂ ಬಹುಸಂತಾನ ಪಂಥದ ಕುರುಹುಗಳಾಗಿವೆ. ಕಡೆಕಡೆಗೆ ಕೈಯಲ್ಲಿ ಮಾಡಿದ ಮಣ್ಣಿನ ಮಡಕೆಗಳೂ ಬಳಕೆಗೆ ಬಂದಿದ್ದವು. ಈ ಸಂಸ್ಕೃತಿ ಪ್ರಶ.ಪೂ. 6750ರಷ್ಟು ಹಳೆಯದೆಂದು ಇಂಗಾಲ-14ರ ಪ್ರಯೋಗದಿಂದ ಗುರುತಿಸಲಾಗಿದೆ. ಇವರು ಹೊರಗಿನಿಂದ ಬಂದಿರಬಹುದೆಂಬುದಕ್ಕೆ ಅನೇಕ ಸೂಚ್ಯ ಆಧಾರಗಳಿವೆ.

ಇದರ ಮುಂದಿನ ಹಂತವೂ ಉತ್ತರ ಇರಾಕಿನ ಟೈಗ್ರಿಸ್ ನದೀತೀರದಲ್ಲಿರುವ ಹಸ್ಸುನಾ ಎಂಬೆಡೆಯಲ್ಲಿ ದೊರಕಿದೆ. ಇದೇ ರೀತಿಯ ಮಾಹಿತಿಗಳು ಮಟಾರ್‍ರಾನಿನೆವ್ವೇ, ಅರ್ಪಾಚಿಯಾ ಹಾಗೂ ಗಾವ್ರಾ ಎಂಬ ಎಡೆಗಳಲ್ಲಿ ದೊರಕಿವೆ. ಚಕಮಕಿ ಕಲ್ಲಿನಾಯುಧಗಳು, ಅಗೆಯುವ ಗುದ್ದಲಿ ಮತ್ತು ಅರೆಯುವ ಕಲ್ಲಿನ ಉಪಕರಣಗಳನ್ನು ಈ ಬೇಟೆಗಾರ ಜನ ಉಪಯೋಗಿಸುತ್ತಿದ್ದರು. ಅವರ ಹಿಂದುಳಿದ ವ್ಯವಸಾಯದ ರೀತಿಗಳು, ವ್ಯವಸಾಯಾತ್ಮಕ ಸಂಸ್ಕೃತಿಯ ಕಡೆಗೆ ಕ್ರಮಕ್ರಮವಾಗಿ ಅವರ ಮುನ್ನಡೆ, ಸ್ವಲ್ಪಮಟ್ಟಿನ ಅಲೆಮಾರಿತನ-ಇವು ಈ ಸಂಸ್ಕೃತಿಯ ಲಕ್ಷಣಗಳೆಂದು ಹೇಳಬಹುದು. ಅವರ ಮಡಕೆ ಕುಡಿಕೆಗಳು ಸಾಮಾನ್ಯವಾಗಿ ಅಲಂಕಾರ ರಹಿತವಾಗಿದ್ದವು. ಕೆಂಪು, ಕಂದು, ಕಪ್ಪು; ಬಣ್ಣಗಳ ಒರಟು ಚಿತ್ರಗಳಿರುವ ಮಡಕೆಗಳೂ ಕೆಲವು ಸಿಕ್ಕಿವೆ. ಇವಲ್ಲದೆ ಮೂಲವಸ್ತು ಒರಟಾದ ಕಪ್ಪು ಮಣ್ಣು. ಶಿಲಾಜಿತು (ಬಿಟ್ಯೂಲಮೆನ್) ಮತ್ತು ಸುಣ್ಣದಿಂದ ಪಕ್ಕಗಳನ್ನೂ ತಳಭಾಗವನ್ನೂ ಹದಮಾಡಿದ್ದ ಹಳ್ಳಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಕಟ್ಟಡಗಳನ್ನು ಕಟ್ಟಲು ಹಸಿ ಇಟ್ಟಿಗೆಗಳನ್ನು ಬಳಸುತ್ತಿದ್ದರು. ಬಿದಿರು ಹಣಿಗೆ ಮತ್ತು ಬಟ್ಟೆ ನೇಯ್ಗೆ ಕ್ರಮಗಳು ಇವರಿಗೆ ತಿಳಿದಿದ್ದಿರಬಹುದು. ಮಕ್ಕಳ ಶವಗಳನ್ನು ಜಾಡಿಗಳಲ್ಲೂ ವಯಸ್ಕರ ಶವಗಳನ್ನು ಹಳ್ಳಗಳಲ್ಲೂ ಹೂಳುತ್ತಿದ್ದರು. ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ. 5000-4000.

ಇದರ ಮುಂದಿನ ಹಲಾಫ್ ಸಂಸ್ಕೃತಿಯ ಜನ ಕೈಯಲ್ಲಿ ಮಾಡಿದ, ವಿವಿಧ ಆಕಾರದ, ವರ್ಣಚಿತ್ರಗಳಿಂದ ಕೂಡಿದ ಮಡಕೆಗಳನ್ನು ಬಳಸುತ್ತಿದ್ದರು. ಇವರಿಗೆ ತಾಮ್ರದ ಕೆಲವು ಅಲಂಕರಣ ಸಾಮಗ್ರಿಗಳ ಪರಿಚಯವಿದ್ದರೂ ಇವರ ಆಯುಧೋಪಕರಣಗಳು ಕಲ್ಲಿನವೇ ಆಗಿದ್ದವು. ಕಲ್ಲಿನ ಗುಂಡಿ ಮುದ್ರೆಗಳೂ (ಬಟನ್ ಸೀಲ್ಸ್) ಮಣಿಗಳೂ ಯಂತ್ರಗಳೂ (ಆಮ್ಯುಲೆಟ್ಸ್) ಮತ್ತು ಸಣ್ಣ ಪಾತ್ರೆಗಳೂ ಬಳಕೆಯಲ್ಲಿದ್ದವು. ಇತರ ವಿಷಯಗಳಲ್ಲಿ ಹಳೆಯ ಸಂಸ್ಕೃತಿಯ ಚಿಹ್ನೆಗಳೇ ಕಂಡು ಬಂದರೂ ಅವು ಹೆಚ್ಚು ಮುಂದುವರಿದಿದ್ದವು.

ಮೇಲೆ ಹೇಳಿದ ಸಂಸ್ಕೃತಿಗಳೆಲ್ಲವೂ ಉತ್ತರ, ಮಧ್ಯ ಇರಾಕಿನಲ್ಲಿ ಮಾತ್ರ ನೆಲೆಸಿದ್ದವು. ದಕ್ಷಿಣ ಪ್ರದೇಶ ಚೌಗುಪ್ರದೇಶವಾಗಿದ್ದು ಜನವಸತಿಗೆ ಅನುಕೂಲವಾಗಿರಲಿಲ್ಲ. ಸುಮಾರು ಆ ಕಾಲಕ್ಕೆ ಯೂಫ್ರೆಟಿಸ್ ಟೈಗ್ರಿಸ್ ನದಿಗಳು ಒತ್ತಿಳಿದ ಮೆಕ್ಕಲುಮಣ್ಣಿನ ಹರಡುವಿಕೆಯಿಂದ ನೆಲ ವಾಸಯೋಗ್ಯವಾದದ್ದಲ್ಲದೆ ಬಹಳ ಫಲವತ್ತಾದ ಭೂಮಿಯಾಗಿ ಹೆಚ್ಚು ಬೆಳೆ ಕೊಡುವಂತಾಯಿತು.

ಈ ಸುಮಾರಿಗೆ ಪ್ರಾರಂಭವಾದ ತಾಮ್ರಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಇರಾಕಿನ ಎಲ್ಲೆಡೆಗಳಲ್ಲೂ ದೊರಕಿವೆ. ಉಬೈದ್ ಸಂಸ್ಕೃತಿಯ ಮೊದಲ ಹಂತದಲ್ಲಿ ವ್ಯವಸಾಯ ಸುಧಾರಿತವಾಯಿತು. ನೀರಾವರಿ ಕಾಲುವೆಗಳಿಂದ ಉತ್ತಮ ಬೆಳೆಗಳನ್ನು ತೆಗೆಯುತ್ತಿದ್ದರು. ಲೋಹಗಳ ಕೆಲಸ ಉತ್ತಮಮಟ್ಟದ್ದಾಗಿ ತಾಮ್ರದ ಆಯುಧೋಪಕರಣಗಳು ಮಾತ್ರವಲ್ಲದೆ ಮನೆಬಳಕೆ ಪಾತ್ರೆಗಳೂ ರೂಢಿಗೆ ಬಂದಿದ್ದವು. ತಮಗೆ ಆವಶ್ಯಕವಾದ ಕಚ್ಚಾಪದಾರ್ಥಗಳನ್ನು ದೂರ ದೇಶಗಳಿಂದ ವ್ಯಾಪಾರಮುಖೇನ ತರಿಸಿಕೊಳ್ಳುತ್ತಿದ್ದರು. ತಮ್ಮ ಬೆಳೆಗಳನ್ನು ಚಕಮಕಿಕಲ್ಲಿನ ಹಲ್ಲುಗಳಿಂದ ಸಜ್ಜಾದ ಕುಡುಗೋಲುಗಳಿಂದ ಕುಯ್ಯುತ್ತಿದ್ದರು. ಹುಲ್ಲು ಮತ್ತು ಮಣ್ಣಿನ ಗೋಡೆಗಳನ್ನೂ ನೆಲವನ್ನೂ ಸಗಣಿಯಿಂದ ಹದಗೊಳಿಸುತ್ತಿದ್ದರು. ಕೈಯಲ್ಲಿ ಮಾಡಿದ ಮಡಕೆಗಳನ್ನು ವಿವಿಧ ಬಣ್ಣಗಳ ಜ್ಯಾಮಿತಿಕ ಆಕಾರಗಳಿಂದ ಚಿತ್ರಿಸುತ್ತಿದ್ದರು. ವ್ಯವಸಾಯೋತ್ಪನ್ನವೇ ಮುಖ್ಯ ಆಹಾರವಾದರೂ ಬೇಟೆ ಮೀನುಗಾರಿಕೆಗಳೂ ರೂಢಿಯಲ್ಲಿದ್ದವು. ಗ್ರಾಮಜೀವನದ ಜೊತೆಗೆ ನಗರ ಜೀವನವೂ ಈ ಕಾಲದಲ್ಲೇ ಪ್ರಾರಂಭವಾದ ಚಿಹ್ನೆಗಳು ಕಂಡುಬರುತ್ತವೆ. ಈ ಜನ ಮೊತ್ತಮೊದಲಿಗೆ ಸಾಮಾಜಿಕ ಜೀವನದ ಅಂಗವಾಗಿ ದೇವಾಲಯಗಳನ್ನು ನಿರ್ಮಿಸಿದರು. ಅಬು ಷಹರೀನ್ ಎಂಬಲ್ಲಿ 13 ಸಲ ಪುನರ್‌ನಿರ್ಮಿತವಾದ ದೇವಾಲಯವೊಂದರ ಅವಶೇಷಗಳು ದೊರಕಿವೆ. ಮೊದಲಿಗೆ ಈ ದೇವಾಲಯದಲ್ಲಿ ಆಯತಾಕಾರದ ಒಂದು ಕೊಠಡಿ, ಅದರ ಒಂದು ಮೂಲೆಯಲ್ಲಿ ಬಾಗಿಲು ವೇದಿಕೆ ಮತ್ತು ಬಲಿಪೀಠಗಳಿದ್ದು ಕ್ರಮೇಣ ಮಧ್ಯಕೋಣೆಯ ಎರಡು ಪಾರ್ಶ್ವಗಳಲ್ಲಿ ಮತ್ತೆರಡು ಕೋಣೆಗಳು ನಿರ್ಮಿತವಾದವು. ಈ ಕಾರಣಗಳಿಂದ ಉಬೈದ್ ಜನ ಇರಾಕಿನ ನಾಗರಿಕತೆಯ ಆದ್ಯಪ್ರವರ್ತಕರೆನ್ನಬಹುದು.

ಈ ಉಬೈದ್ ಸಂಸ್ಕೃತಿಯ ಅಸ್ತಿಭಾರದ ಮೇಲೆ ಮುಂದಿನ ಹಂತವಾದ ಉರುಕ್ ಸಂಸ್ಕೃತಿ ಬೆಳೆಯಿತು. ಪ್ರಾಯಶಃ ಅನಟೋಲಿಯ ಪ್ರಾಂತ್ಯದಿಂದ ಆಮದಾದ, ಗಟ್ಟಿ ಮುಟ್ಟಾದ, ವರ್ಣಚಿತ್ರಗಳಿಂದ ಹೊಸರೀತಿಯ ಮಡಕೆಗಳು ಬಳಕೆಗೆ ಬಂದವು. ಇವು ಚಕ್ರಯಂತ್ರದಿಂದ ತಯಾರಾದವು. ವಾಸ್ತುಶಿಲ್ಪಕಲೆ ಆಗ ಚೆನ್ನಾಗಿ ಬೆಳೆಯಿತು. ಆ ಕಾಲದ ಅತ್ಯುತ್ತಮವಾದ ಶ್ವೇತದೇವಾಲಯ ಎರಡು ಪಟ್ಟಣದಲ್ಲಿ ನಿರ್ಮಿತವಾಯಿತು. 70 ಮೀ. ಉದ್ದ 66 ಮೀ. ಅಗಲ ಮತ್ತು 13 ಮೀ. ಎತ್ತರದ ಜಗತಿಯ ಮೇಲಿದ್ದ ಈ ದೇವಾಲಯದ ವಿಸ್ತೀರ್ಣ 22.3´17.5 ಮೀ. ಇರಾಕಿ ಸಂಸ್ಕೃತಿಯ ವಿಶಿಷ್ಟಲಕ್ಷಣಗಳಲ್ಲೊಂದಾದ ಜಿಗುರೇಟ್ ಅಥವಾ ಪವಿತ್ರ ಶಿಖರ ಈ ರೀತಿ ಹುಟ್ಟಿಕೊಂಡಿತು. ಇತರ ವಿಶಿಷ್ಟ ಕುರುಹುಗಳಾದ ಉರುಳೆಯಾಕಾರದ ಮುದ್ರೆ ಮತ್ತು ಲೇಖನಕಲೆಗಳೂ ಈ ಕಾಲದಲ್ಲೇ ಪ್ರಾರಂಭವಾದಂತೆ ಕಂಡುಬರುತ್ತದೆ.

ಮುಂದಿನ ಹಂತವಾದ ಜಿಮಡೆಟ್ ನಾಸ್ರ್ ಸಂಸ್ಕೃತಿಗೆ ಲೇಖನಪೂರ್ವ ಸಂಸ್ಕೃತಿಯೆಂದೂ ಹೆಸರಿಟ್ಟಿದ್ದಾರೆ. ದೇವಾಲಯಕ್ಕೆ ಅಭಿವೃದ್ಧಿಹೊಂದಿ ಹಂತ ಹಂತವಾದ ಜಗತಿ ಅಥವಾ ತಾಜಾ ಜಿಗುರೇಟ್ ಬೆಳೆದು ಬಂದು ದೊಡ್ಡ ಸ್ತಂಭಗಳಿಂದೊಡಗೂಡಿದ ಮೂರು ಕೋಣೆಗಳುಳ್ಳ ದೇವಾಲಯಗಳು ರೂಢಿಗೆ ಬಂದವು. ಗೋಡೆಗಳಿಗೆ ಸುಟ್ಟ ಮಣ್ಣಿನ, ಬಣ್ಣಬಣ್ಣದ ಶಂಕುವಿನಾಕಾರದ ಕೊಳವೆಗಳ ಅಲಂಕಾರ ಬಳಕೆಗೆ ಬಂತು. ಇವು ಅಲಂಕರಣದ ಜೊತೆಗೆ ಭದ್ರತೆಯನ್ನೂ ಹೆಚ್ಚಿಸಿದವು. ತಾಮ್ರ ಮತ್ತು ಬೆಳ್ಳಿಯ ಪಾತ್ರೆಗಳು,

ಭವ್ಯ ಶಿಲ್ಪಕೃತಿಗಳು ಮತ್ತು ಚಿತ್ರಲಿಪಿ, ದಶಮಾಂಶ ಮತ್ತು ಷಷ್ಠ್ಯಂಶ ಗಣಪದ್ಧತಿಗಳು ಬಳಕೆಗೆ ಬಂದವು. ಈ ಶಿಲ್ಪಗಳಿಗೆ ಶಂಖದ ಕಣ್ಣುಗುಡ್ಡೆಗಳನ್ನಿಡುತ್ತಿದ್ದರು. ಭೂ ಸಾರಿಗೆ ರೂಢಿಗೆ ಬಂತು. ದೇವಾಲಯ ಕೇಂದ್ರಸ್ಥವಾದ ನಾಗರಿಕತೆ ಸರ್ವತೋಮುಖವಾಗಿ ಬೆಳೆದು ಪ್ರ.ಶ.ಪೂ. 3ನೆಯ ಸಹಸ್ರಮಾನದ ಆದಿಯಲ್ಲಿ ಅದು ಇನ್ನೂ ಹೆಚ್ಚಿನ ಮಟ್ಟ ಮುಟ್ಟಿತು. (ಬಿ.ಕೆ.ಜಿ.)

ಪ್ರ.ಶ.ಪೂ. 3000 ರಿಂದ ಪ್ರ.ಶ. 600ರ ವರೆಗೆ: ಪ್ರ.ಶ.ಪೂ. 3ನೆಯ ಸಹಸ್ರಮಾನದ ಕೆಲವು ಲಿಖಿತ ದಾಖಲೆಗಳು ಇರಾಕಿನ ಚರಿತ್ರೆಯ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತವೆ. ಇವುಗಳ ಪ್ರಕಾರ ಇರಾಕಿನಲ್ಲಿ ಯಾವುದೋ ಕಾಲದಲ್ಲಿ ಬಂದ ಒಂದು ಮಹಾಪೂರ ಹಿಂದಿನ ರಾಜವಂಶಗಳ ಬಗ್ಗೆ ಈ ದಾಖಲೆಗಳಲ್ಲಿ ದೊರಕುವ ವಿಷಯ ನಂಬಲರ್ಹವಲ್ಲ. ಆದರೆ ಆ ಪ್ರವಾಹಾನಂತರದ ವಿಷಯಗಳ ಬಗ್ಗೆ ಸಿಗುವ ಹೇಳಿಕೆಗಳಲ್ಲೂ ಪೂರ್ಣವಾಗಿ ನಿರ್ದಿಷ್ಟವಾಗಿಲ್ಲವಾದರೂ ಹೆಚ್ಚು ಕಡಿಮೆ ಸರಿಯಾಗಿದ್ದು, ಭೂಶೋಧನೆಗಳಲ್ಲಿ ದೊರಕಿರುವ ಅನೇಕ ಸಾಮಗ್ರಿಗಳ ಸಹಾಯದಿಂದ ಒಂದು ಸ್ಪಷ್ಟಚಿತ್ರವನ್ನು ಕಲ್ಪಿಸಿಕೊಳ್ಳಲು ಸಹಾಯಮಾಡುತ್ತವೆ.

ಪ್ರವಾಹದ ಅನಂತರ ಅನೇಕ ನಗರರಾಜ್ಯಗಳು ದಕ್ಷಿಣ ಇರಾಕಿನಲ್ಲಿ (ಸುಮೇರಿಯ) ಸ್ಥಾಪಿತವಾದವು. ಅವುಗಳಲ್ಲಿ ಕ್ರಿಶ, ಎರೆಕ್ ಮತ್ತು ಅರ್ ಮುಖ್ಯವಾದವು. ಈ ನಗರರಾಜ್ಯಗಳ ಪ್ರಭಾವ ಬಹುಮಟ್ಟಿಗೆ ಆಯಾ ನಗರಗಳಿಗೆ ಮಾತ್ರ ಸೀಮಿತವಾಗಿರುತ್ತಿದ್ದರೂ ಕೆಲವು ಸಂದರ್ಭಗಳಲ್ಲಿ ಒಂದೆರೆಡು ನಗರರಾಜ್ಯಗಳು ಮಿಕ್ಕವುಗಳ ಮೇಲೆ ಮೇಲ್ಮೆಯನ್ನು ಸಾಧಿಸಿಕೊಂಡಿದ್ದುದೂ ಕಂಡುಬರುತ್ತದೆ. ಪ್ರ.ಶ.ಪೂ. 2350ರ ಸುಮಾರಿನಲ್ಲಿ ಅಕ್ಕಾಡಿನ ಸಾರಗಾನ್ ಈ ನಗರರಾಜ್ಯಗಳನ್ನೆಲ್ಲ ಮೂಲೆಗೊತ್ತಿ ದೊಡ್ಡ ಸಾಮ್ರಾಜ್ಯವೊಂದನ್ನು ಸ್ಥಾಪಿಸಿದ. **(ನೋಡಿ- ಅಕ್ಕಾಡ್)** ಈ ಸಾಮ್ರಾಜ್ಯ ಅನತಿಕಾಲದಲ್ಲಿ ಅನೇಕ ಮಲೆಜನರ ದಾಳಿಗಳಿಂದಾಗಿ ಶಿಥಿಲಗೊಂಡು, ಇರಾಕ್ ಪುನಃ ಸಣ್ಣ ರಾಜ್ಯಘಟಕಗಳಾಗಿ ಹಂಚಿಹೋಯಿತು. ಈ ಸಂದರ್ಭದಲ್ಲಿ ಇಸಿನ್ ಮತ್ತು ಲಾಸ ಎಂಬ ಎರಡು ನಗರಗಳಲ್ಲಿದ್ದ ರಾಜ್ಯಪಾಲ ಕುಲಗಳು ಬಹಳ ಪ್ರಭಾವ ಬೆಳೆಸಿಕೊಂಡಿದ್ದವು.

ಪ್ರ.ಶ.ಪೂ. 18ನೆಯ ಶತಮಾನದಿಂದ ಇರಾಕಿನ ಬ್ಯಾಬಿಲೋನಿಯ ಒಂದು ಮುಖ್ಯ ಸ್ಥಾನವನ್ನಾಕ್ರಮಿಸಿತು. ಇಲ್ಲಿ ಆಳಿದವರಲ್ಲಿ ಪ್ರಸಿದ್ಧ ನ್ಯಾಯವಾದಿ ಹಮ್ಮುರಬಿ (1728–1686) ಮತ್ತು ಅವನ ಮಗ ಶಂಸುಲಿನ್ ಮುಖ್ಯರು. ಆದರೆ ಬ್ಯಾಬಿಲೋನಿಯ ಸಾಮ್ರಾಜ್ಯ ಸಹ ಪ್ರ.ಶ.ಪೂ. 16ನೆಯ ಶತಮಾನದಲ್ಲಿ ಹೆಟ್ಟೈಟ್ ಜನರ ದಾಳಿಯಿಂದ ನಾಶವಾಗಿ, ಈ ಪ್ರದೇಶ ಇಂಡೊ–ಯೂರೋಪಿಯನ್ ಜನಾಂಗಕ್ಕೆ ಸೇರಿದ ಕ್ಯಾಸೈಟ್ ಕುಲದ ಅರಸರ ಕೈಸೇರಿತು.

ಇದೇ ಸುಮಾರಿನಲ್ಲಿ ಉತ್ತರ ಇರಾಕಿನ ಅಶುರ್ ಎಂಬಲ್ಲಿ ಒಂದು ರಾಜವಂಶದವರು ಪ್ರವರ್ಧಮಾನಕ್ಕೆ ಬರುತ್ತಿದ್ದರು. ಈ ರಾಜವಂಶ ಮೊದಮೊದಲು ಅಷ್ಟೇನು ಪ್ರಭಾವಶಾಲಿಯಾಗಿರದಿದ್ದರೂ ಮುಂದೆ ಆ ಕುಲದ ಅದದ್ ನಿಕರಿ (ಪ್ರ.ಶ.ಪೂ. 14ನೆಯ ಶತಮಾನ) ಮುಂತಾದ ಶೂರರ ಸಾಹಸಗಳಿಂದಾಗಿ ಒಂದು ದೊಡ್ಡ ಸಾಮ್ರಾಜ್ಯವನ್ನು ಕಟ್ಟಿತು. ಇದೇ ಪ್ರಸಿದ್ಧವಾದ ಅಸ್ಸೀರಿಯನ್ ಸಾಮ್ರಾಜ್ಯ. ತಿಗಲಕ್ ಪಲೆಸರ್, ಶಲ್ಮನೆಸ್ಸರ್, ಅಶುರ್ ಬನಿಪಾಲ್ ಮುಂತಾದವರು ಈ ವಂಶದ ಪ್ರಖ್ಯಾತ ದೊರೆಗಳು. ಸುಮಾರು ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಪ್ರಭಾವಶಾಲಿಯಾಗಿದ್ದ ಈ ಸಾಮ್ರಾಜ್ಯ ಪ್ರ.ಶ.ಪೂ. 606ರಲ್ಲಿ ಮೀಡರ ದಾಳಿಯಿಂದ ಅಳಿಸಿಹೋಯಿತು. ಅನಂತರ ಪುನಃ ಬ್ಯಾಬಿಲಾನನ್ನು ರಾಜ್ಯ ಕೇಂದ್ರವಾಗಿ ಹೊಂದಿದ್ದ ಕಾಲ್ಡೀಯ ಸಾಮ್ರಾಜ್ಯ ಹಟ್ಟಿ ಪ್ರ.ಶ.ಪೂ. 539ರಲ್ಲಿ ಪರ್ಷಿಯದ ಅಖಮೇನಿಯನ್ ವಂಶದ ಸೈರಸ್ನ ಕೈವಶವಾಗುವವರೆಗೆ ಮುಂದುವರೆಯಿತು.

ಪ್ರ.ಶ.ಪೂ. 539ರಂದು ಸು. 11 ಶತಮಾನಗಳ ಕಾಲ ಇರಾಕ್ ಪರಕೀಯರ ಆಳ್ವಿಕೆಗೆ ಒಳಪಟ್ಟಿತ್ತು. ಪ್ರ.ಶ.ಪೂ. 330ರಲ್ಲಿ ಅಖಮೇನಿಯನ್ನರಿಂದ ಮ್ಯಾಸಿಡೋನಿಯದ ಅಲೆಕ್ಸಾಂಡರ್ ಇರಾಕನ್ನು ಸ್ವಾಧೀನಪಡಿಸಿಕೊಂಡ. ಅನಂತರ ಪ್ರ.ಶ.ಪೂ. ಸು. 2ನೆಯ ಶತಮಾನದ ಕೊನೆಯವರೆಗೆ ಸೆಲ್ಯೂಕೀ ಗ್ರೀಕರ, ಅನಂತರ ಪ್ರ.ಶ. 3ನೆಯ ಶತಮಾನದ ಆದಿಭಾಗದವರೆಗೆ ಪಾರ್ಥಿಯನ್ ಪರ್ಷಿಯನ್ನರ, ಆಮೇಲೆ ಸಸ್ಸಾನೀಯ ಪರ್ಷಿಯನ್ನರ ವಶದಲ್ಲಿದ್ದ ಇರಾಕ್ ಪ್ರ.ಶ. 637ರ ಸುಮಾರಿನಲ್ಲಿ ದೇಶೀಯ ಇಸ್ಲಾಮೀ ಸಾಮ್ರಾಜ್ಯದ ಸ್ಥಾಪನೆಯಿಂದಾಗಿ ಸ್ವತಂತ್ರವಾಯಿತು. (ಎಸ್.ಎನ್.)

7ನೆಯ ಶತಮಾನದಿಂದ: ಬೈಜಾಂಟಿಯಂ ಮತ್ತು ಪರ್ಷಿಯ ಸಾಮ್ರಾಜ್ಯಗಳ ಘರ್ಷಣೆಗಳ ಪರಿಣಾಮವಾಗಿ ಉಂಟಾದ ಕಲಹಗಳನ್ನು ನಿಲ್ಲಿಸಿ ಎಲ್ಲ ಇರಾಕಿಗಳು ಮತ್ತು ಅರಬ್ಬರು ಒಂದುಗೂಡಲು ಮಹಮ್ಮದ್ ಪೈಗಂಬರ್ ಧರ್ಮಪ್ರಚಾರ ಸಹಾಯಮಾಡಿತು.

ಮಹಮ್ಮದನ ಮರಣಾನಂತರ ಅವನ ಸ್ಥಾನಕ್ಕೆ ಯಾರು ಬರಬೇಕೆಂಬ ವಿಷಯದಲ್ಲಿ ವಿವಾದ ಬಂತು. ಅಳಿಯನಾದ ಆಲಿಯ ಪರವಾಗಿ ವಾದಿಸಿದವರು ಷೀಯ ಪಂಥದವರಾದರು. ವಿರೋಧಿಸಿದವರು ಸುನ್ನಿ ಪಂಥದವರಾದರು. ಇವರ ಕಲಹ ಐಕ್ಯಮತ್ಯಕ್ಕೆ ಭಂಗ ತರುವ ಹಾಗಾಯಿತು. ಷೀಯಗಳು ಗೆದ್ದು ಅಬುಬೇಕರನ್ನು ಕಲೀಫನನ್ನಾಗಿ ಆರಿಸಿದರು. ಪರ್ಷಿಯದ ಜನರೂ ಷೀಯಗಳಾಗಿ, ಐರೋಪ್ಯ ರಾಷ್ಟ್ರಗಳಾದ ಗಾಲ್ ಸ್ಪೇನ್ಗಳನ್ನು ಜಯಿಸಿ, ಅನೇಕ ರಾಷ್ಟ್ರಗಳ ಆಕ್ರಮಣ ಮಾಡಿ, ಆಫ್ರಿಕದ ಬಹುಭಾಗವನ್ನು ಸ್ವಾಧೀನಪಡಿಸಿಕೊಂಡು ಇಸ್ಲಾಂ ಮತಕ್ಕಾಗಿ ದೊಡ್ಡ ಸಾಮ್ರಾಜ್ಯವನ್ನು ಗಳಿಸಿದರು. ಅತ್ಯಲ್ಪ ಕಾಲದಲ್ಲಿ ಅಷ್ಟು ದೊಡ್ಡ ರಾಜ್ಯವನ್ನು ಕಟ್ಟಲು ಅವರಿಗೆ ಸಾಧ್ಯವಾದದ್ದಕ್ಕೆ ಎರಡು ಕಾರಣಗಳನ್ನು ಹೇಳಬಹುದು. ಒಂದು–ತಾವು ಅವಲಂಬಿಸಿದ ಹೊಸ ಮತಧರ್ಮದ ಬಗ್ಗೆ ಅವರಿಗಿದ್ದ ಆಸಕ್ತಿ. ಎರಡು–ಅನ್ಯ ರಾಷ್ಟ್ರಗಳ ದೌರ್ಬಲ್ಯ.

ಬಾಗ್‌ದಾದ್ ನಗರ ಮುಸ್ಲಿಂ ಸಾಮ್ರಾಜ್ಯದ ರಾಜಧಾನಿಯಾಯಿತು. ಆಳಿದ ಅತಿ ಮುಖ್ಯ ಕಲೀಫರಲ್ಲಿ ಮೂವರು ಮೂರು ಖಂಡಗಳನ್ನಾವರಿಸಿಕೊಂಡ ಸಾಮ್ರಾಜ್ಯವನ್ನೂ ಅಖಂಡ ಸಂಪತ್ತನ್ನೂ ಗಳಿಸಿದರು. ಅವರಲ್ಲಿ ಅತ್ಯಂತ ಪ್ರಸಿದ್ಧನೆಂದರೆ ಹಾರೂನ್ ಅಲ್ ರಷೀದ್. ಇವನ ಸಾಮರ್ಥ್ಯ ಸದ್ಗುಣಗಳನ್ನು ಅರೇಬಿಯನ್ ನೈಟ್ಸ್ ಗ್ರಂಥ ಮನೋರಂಜಕವಾಗಿ ವಿವರಿಸಿದೆ.

ಇಸ್ಲಾಂಧರ್ಮ ಮೊದಲು ಹರಡಿ ಇಡೀ ರಾಷ್ಟ್ರದ ಜನರನ್ನೇ ತನ್ನ ಕಡೆಗೆಳೆದದ್ದು ಇರಾಕ್ ರಾಜ್ಯದಲ್ಲಿ. ಮತ ತತ್ತ್ವದ ಜೊತೆಗೆ ಅರಬ್ಬೀ ಭಾಷೆಯೂ ಅಲ್ಲಿ ಮೊದಲು ಪ್ರಚಾರಕ್ಕೆ ಬಂತು. ಉಮಾಯದ್ದ ಕಲೀಫರ ಕಾಲದಲ್ಲಿ ಗ್ರೀಕ್ ಮತ್ತು ಪಾರಸಿ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿ ಸಮನ್ವಯದ ಒಂದು ನೂತನ ದರ್ಶನವನ್ನೂ ಇರಾಕ್ ಜನ ಪಡೆದರು. ಪೈಗಂಬರನ ಮಾವನಾದ ಅಬ್ಬಾಸಿದ್ದನ ಪರವಾಗಿ ಇರಾಕ್ ಮತ್ತು ಖುರೇಸಾನ್ ಜನ ಹೋರಾಟ ನಡೆಸಿ ಉಮಾಯದ್ದರನ್ನು ಸೋಲಿಸಿ ಅಬ್ಬಾಸಿದ್ ರಾಜ್ಯ ಭಾರವನ್ನು ಬಾಗ್‌ದಾದ್‌ನಲ್ಲಿ ಸ್ಥಾಪಿಸಿದರು. ಇರಾಕಿನ ದಕ್ಷಿಣ ಪ್ರಾಂತ್ಯಗಳ ಸುನ್ನಿಪಂಥದವರ ಅಸಹ್ಯ ದೌರ್ಜನ್ಯಗಳನ್ನು ತಡೆಯಲಾರದೆ ಪ್ರಬಲರಾಗಿದ್ದ ಷೀಯ ಜನ ವಲಸೆ ಹೋದರು. 1945ರಲ್ಲಿ ಅಬ್ಬಾಸಿದ್ ಕಲೀಫರು ಷೀಯಪಂಗಡದ ಬುವೇಹಿದ್ ಜನರ ಆಕ್ರಮಣಕ್ಕೆ ಒಳಗಾದರು. 1400ರಲ್ಲಿ ತೈಮೂರ್‌ಲೇನನ ಯುದ್ಧಗಳ ಮತ್ತು ದೌರ್ಜನ್ಯಕೃತ್ಯಗಳ ಪರಿಣಾಮವಾಗಿ ಸುಸಂಸ್ಕೃತರೂ ಶಾಂತಿ ಮತಧರ್ಮ ಪೋಷಕರೂ ಆದ ಇರಾಕಿನ ಬಹು ಮಂದಿ ಹತರಾದರು. ಬಾಗ್‌ದಾದ್ ನಾಶಹೊಂದಿತು.

ಮ್ಯಾಮಲೂಕರ ರಾಜ್ಯಭಾರ ಕ್ಷೀಣವಾಯಿತು. ನೂರ ಇಪ್ಪತ್ತೆಂಟು ವರ್ಷಗಳಲ್ಲಿ ಇಪ್ಪತ್ತೊಂಬತ್ತು ರಾಜರು ಆಳಿದರು. 1480ರಲ್ಲಿ ಟರ್ಕೊಮನ್ ಮತ್ತು ಬಿದೂಯಿನ್ ಪರ್ವತವಾಸಿಗಳು ದಾಳಿ ನಡೆಸಿ ರಾಜ್ಯದ ಬಹುಭಾಗವನ್ನು ನಾಶ ಮಾಡಿದರು. ನಾಗರಿಕತೆಯ ಪರಾಕಾಷ್ಠೆಯನ್ನು ಮುಟ್ಟಿದ್ದ ಇರಾಕಿನ ಜನ ದಿಕ್ಕೆಟ್ಟು ಹೋದರು. ಪಾಶ್ಚಾತ್ಯ ರಾಷ್ಟ್ರಗಳ ಸ್ವಾಧೀನಕ್ಕಾಗಿ ಆಟೊಮನ್ ಮತ್ತು ಪರ್ಷಿಯ ರಾಷ್ಟ್ರಗಳ ಭಯಂಕರ ಸ್ಪರ್ಧೆ, ಅಂತರ್ಯುದ್ಧಗಳಲ್ಲೂ–ಇವು ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಇರಾಕ್ ಜನರ ಇಡೀ ಇತಿಹಾಸವನ್ನೇ ರೂಪಾಂತರಗೊಳಿಸಿದವು.

ಆಟೊಮನ್ನರು ಇರಾಕನ್ನು ಗೆದ್ದು ರಾಜ್ಯಾಡಳಿತವನ್ನು ಸರಿಪಡಿಸಿ ಇರಾಕೀ ಶ್ರೀಮಂತರಿಗೂ ಪರ್ವತವಾಸಿಗಳಾದ ಕುರ್ದನಾಯಕರಿಗೂ ರಾಜ್ಯಭಾರವನ್ನು ಒಪ್ಪಿಸಿದ ಪರಿಣಾಮವಾಗಿ ಕೆಲವು ಕಾಲ ಶಾಂತಿ ಸೌಹಾರ್ದಗಳು ನೆಲೆಗೊಂಡವು. ಆದರೆ ಕೆಲವು ಕಾಲದಲ್ಲಿಯೇ ಅನಾಯಕತ್ವ ಮತ್ತೆ ತಲೆದೋರಿತು. ಈ ಮಧ್ಯ ವಾಣಿಜ್ಯ, ವ್ಯಾಪಾರ ಬೆಳವಣಿಗೆಗಳನ್ನೇ ಪರಮ ಧ್ಯೇಯವಾಗಿಟ್ಟುಕೊಂಡ ಫ್ರೆಂಚ್ ಮತ್ತು ಇಂಗ್ಲೆಂಡಿನ ವ್ಯಾಪಾರ ಸಂಸ್ಥೆ ಪ್ರಬಲವಾಗಿ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಪ್ರಭಾವ ಕ್ಷೇತ್ರಗಳನ್ನು ಸ್ಥಾಪಿಸಿ, ಅಂತರ ರಾಜಕೀಯದಲ್ಲಿ ಪ್ರವೇಶಿಸಿ, ರಾಜಮನೆತನಗಳನ್ನು ಒಡೆದು ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿಕೊಂಡಿತು. ಫ್ರೆಂಚ್ ಸಾಮ್ರಾಟನಾದ ಲೂಯಿಯ ಲಿವಾಂಟ್ ಕಂಪನಿ, ಈಸ್ಟ್ ಇಂಡಿಯ ಕಂಪನಿಗಳು ಇವುಗಳಲ್ಲಿ ಬಹು ಮುಖ್ಯ. ಪರ್ಷಿಯ ಕೊಲ್ಲಿ ವ್ಯಾಪಾರ ಸ್ಪರ್ಧೆಗೆ ಮುಖ್ಯ ಕೇಂದ್ರವಾಯಿತು. ಬಾಬಲ್ ಮಂಡಬ್, ಬಸ್ರ, ಬಾಗ್‌ದಾದ್ ಮತ್ತು ಇತರ ಪಟ್ಟಣಗಳು ಐರೋಪ್ಯ ಜನರ ಧನಾರ್ಜನೆಯ ದಾಹಕ್ಕೆ ಬಲಿಯಾದವು.

19ನೆಯ ಶತಮಾನದ ಆದಿಯಲ್ಲಿ ಇತರ ರಾಷ್ಟ್ರಗಳಲ್ಲಿ ಉಂಟಾದ ಹಾಗೆ ಇಲ್ಲೂ ರಾಷ್ಟ್ರೀಯ ಭಾವನೆ ಮೂಡಿತು. ಐರೋಪ್ಯ ವ್ಯಾಪಾರಸ್ಥರು ಪ್ರತಿಭಾವಂತರು, ಪ್ರಗಲ್ಭರು, ಸಾಹಸಿಗಳು. ಅವರು ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ತಿರುಗಿ ಆಧುನಿಕ ಭಾವನೆಗಳನ್ನು ಹರಡಿದರು. ವೃತ್ತಪತ್ರಿಕೆಗಳು ಹೊಸ ಸ್ಫೂರ್ತಿಯನ್ನು ಕೊಟ್ಟವು. 1853ರಲ್ಲಿ ಪ್ರಗತಿಪರ ಭಾವನೆಗಳಿಂದ ಕೂಡಿದ ಮಹಮ್ಮದ್ ರಷೀದ್ ಪಾಷಾ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿ, ಜನಗಳಿಗೆ ಅಂತಾರಾಷ್ಟ್ರೀಯ ಉದ್ಯಮ ವ್ಯಾಪಾರ ಮತ್ತು ಸಂಸ್ಕೃತಿಯ ವೈವಿಧ್ಯಗಳ ಪರಿಚಯವನ್ನು ಮಾಡಿಸಿದ. ನಿರಂಕುಶ ಆಳ್ವಿಕೆಗೆ ಮನಸೋತ ಪಾಷಗಳನ್ನು ಪದಚ್ಯುತರನ್ನಾಗಿ ಮಾಡಿ, ನೌಕರಿ ದರ್ಜೆಯ ಜನರನ್ನು ಹದಗೊಳಿಸಿ, ಈಫೆಂಡಿ ಎಂಬ ಹೆಸರಿನ ಉನ್ನತ ಅಧಿಕಾರಿಗಳನ್ನು ನಾನಾ ಕ್ಷೇತ್ರಗಳಲ್ಲಿ ನೇಮಿಸಿ, ಬಟ್ಟೆ ನೀತಿನಡೆಗಳನ್ನು ತಿದ್ದಿ, ಇರಾಕ್ ರಾಷ್ಟ್ರಜೀವನದ ಮಾರ್ಪಾಟಿಗಾಗಿ ಬಹಳ ಶ್ರಮ ವಹಿಸಿದ. ಪರಿಣಾಮವಾಗಿ ಹೊರ ಜನಾಂಗಗಳ ಪ್ರಭಾವ ಕ್ಷೇತ್ರಗಳನ್ನೂ ಅವುಗಳ ಅಧಿಕಾರಿಗಳನ್ನೂ ಹೊರದೂಡುವ ಪ್ರಯತ್ನಗಳು ನಡೆದವು. ಆಟೊಮನ್ ಸೇನೆಯಲ್ಲಿ ಅಧಿಕಾರಿಯಾಗಿದ್ದ ಅಜೀಜ್ ಆಲಿ ಅಲ್ ಅಹದ್ ಸಾಲೆಂ ಲೀಗ್ ಮತ್ತು ಕಾವನೆಂಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಬ್ರಿಟಿಷ್ ಜನರನ್ನೂ ಹೊರದೂಡುವಂತೆ ಪ್ರೇರೇಪಿಸಿದ.

ಅರಬ್ಬಿ ಕ್ರಾಂತಿಗಳು ಜರುಗಿದವು. ಬ್ರಿಟಿಷ್ ಸೇನಾನಾಯಕ ಕಿಚನ್, ರೊನಾಲ್ಡ್ ಸ್ಟಾಟ್ ಮತ್ತು ಇತರ ಪ್ರತಿಭಾವಂತರು ಗೊಂದಲಕ್ಕೆ ಸಿಕ್ಕರು. ಅನೇಕ ಕಾರಣಗಳಿಂದ ಹೋರಾಟ ಯಶಸ್ವಿಯಾಗಲಿಲ್ಲ. 1918ರಲ್ಲಿ ಆಂಗ್ಲೊ–ಫ್ರೆಂಚ್ ಒಪ್ಪಂದ ಅರಬ್ಬರ

ರಾಷ್ಟ್ರಪ್ರೇಮವನ್ನು ಲಾಲಿಸಿ ಅವರ ಸ್ವತಂತ್ರ್ಯದ ಹಾದಿಯನ್ನು ತೆರೆಯಿತು. ಜಿಲ್ಲಾ ಸಮಿತಿಗಳಾದವು. ಸೆವರಸ್ ಒಪ್ಪಂದದ ಪ್ರಕಾರ ಸಮಿತಿಗಳ ಮೂಲಕ ಏಕರಾಷ್ಟ್ರ ಸಿದ್ಧಿಗಾಗಿ ವಿಲ್ಸನ್ ಉತ್ತಮ ಸಲಹೆಗಳನ್ನು ಮಾಡಿದ. ಬ್ರಿಟಿಷರ ಪ್ರತಿನಿಧಿಗಳೇ ಅರಬ್ಬರ ಪ್ರತಿನಿಧಿಗಳಿಗಿಂತ ಹೆಚ್ಚು ಅಧಿಕಾರವನ್ನು ಗಳಿಸಿದರು. ಸಮಿತಿಗಳು ಬ್ರಿಟಿಷರ ಕೈವಾಡಕ್ಕೆ ಸಿಕ್ಕಿದವು. ಸರ್ ಪರ್ಸಿ ಕಾಕ್ಸ್ ಮುಖ್ಯಾಧಿಕಾರಿಯಾಗಿ ಇರಾಕ್ ಸ್ವತಂತ್ರ ರಾಷ್ಟ್ರವಾಗುವುದಕ್ಕೆ ಬೇಕಾದ ಸಲಹೆಗಳನ್ನು ಸೂಚಿಸಿದ. ಉಜ್ವಲ ರಾಷ್ಟ್ರ ಪ್ರೇಮಿಗಳು ಸಣ್ಣ ಸಣ್ಣ ಸುಧಾರಣೆಗಳನ್ನು ಒಪ್ಪದೆ ಮತ್ತೆ ಉಗ್ರ ವಿಪ್ಲವಗಳನ್ನು ಎಬ್ಬಿಸಿದರು. ಭಾರತ ಸರ್ಕಾರದ ಸೇನಾದಳ ಪ್ರಭಾವಯುತವಾಗಿ ಹೋರಾಡಿ, ಬ್ರಿಟಿಷ್ ಸರ್ಕಾರಕ್ಕೆ ಯಶಸ್ಸನ್ನು ತಂದಿತು. 1924ರಲ್ಲಿ ಮತ್ತೆ ಒಪ್ಪಂದವಾಯಿತು. ಸರ್ ಜಾರ್ಜ್ ಕ್ಲೇಟನ್ ಎಂಬ ಅಧಿಕಾರಿ ಬ್ರಿಟಿಷ್ ಮತ್ತು ಇರಾಕ್ ಜನರ ಪರಸ್ಪರ ಸಹಕಾರ ಸದ್ಭಾವನೆಗಳಿಗಾಗಿ ಮತ್ತೆ ಒಪ್ಪಂದ ಮಾಡಿ ಯುದ್ಧ ಸಮಯಗಳಲ್ಲಿ ಇರಾಕ್ ಜನ ಸಹಕಾರ ನೀಡಬೇಕೆಂದು ಸಲಹೆ ಮಾಡಿದ. ಲೀಗ್ ಆಫ್ ನೇಷನ್ಸ್‌ನಲ್ಲಿ ಇರಾಕಿಗೆ ಪ್ರಾತಿನಿಧ್ಯ ಕೊಡಲು ಬ್ರಿಟಿಷ್ ಸರ್ಕಾರಕ್ಕೆ ಸಲಹೆಮಾಡಿದ.

ಆದರೂ ಅಸ್ಸೀರಿಯ ಮಧ್ಯ ಯುಫ್ರಟಿಸ್ ಪ್ರದೇಶಗಳಲ್ಲಿ ಅಶಾಂತಿ ಇದ್ದೇ ಇತ್ತು. ಕ್ರಾಂತಿಗಳು, ರಕ್ತಪಾತ, ದೌರ್ಜನ್ಯ ಕೃತ್ಯಗಳು 1940ರಲ್ಲೂ ಜರುಗುತ್ತಲೇ ಇದ್ದವು. ಫೈಸಲ್ ದೊರೆಯ ಮರಣಾನಂತರ 1933ರಲ್ಲಿ ಪಟ್ಟಕ್ಕೆ ಬಂದ ಘಾಸಿಯೂ ಶಾಂತಿ ಪ್ರಯತ್ನದಲ್ಲಿ ವಿಫಲನಾದ. ಎರಡನೆಯ ಮಹಾಯುದ್ಧದಲ್ಲಿ ಅನೇಕ ಉತ್ಪಾದಕರ ಘಟನೆಗಳು ಜರುಗಿದವು. ಅಬ್ದುಲ್ಲನ ಉತ್ಕಟಾಕಾಂಕ್ಷೆ ಸಿರಿಯ ರಾಷ್ಟ್ರವನ್ನು ಅರಬ್ಬರ ಧರ್ಮಸಾಮ್ರಾಜ್ಯವನ್ನಾಗಿ ಮಾಡಬೇಕೆಂಬುದಾಗಿತ್ತು. ಆ ಪ್ರಯತ್ನಕ್ಕೆ ಅನೇಕ ವಿರೋಧಿಗಳು ಹುಟ್ಟಿಕೊಂಡರು. ಯುದ್ಧದ ತರುವಾಯ ಕಮ್ಯೂನಿಸ್ಟ ಸಾಮ್ರಾಜ್ಯದ ನಾಯಕನಾದ ಸ್ಟಾಲಿನ್ನನ ಪ್ರಭಾವ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಬಲವಾಯಿತು. ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಅಧಿಕಾರ ವ್ಯಾಪ್ತಿ ಕುಂಠಿತವಾಯಿತು. ಈ ರಾಷ್ಟ್ರಗಳಲ್ಲಿ ಇನ್ನೂ ಶಾಂತಿ ಸ್ಥಾಪನೆಯಾಗಿಲ್ಲ. ಪೂರ್ಣ ಸ್ವಾತಂತ್ರ್ಯ ಸಾಧ್ಯವಾಗಿಲ್ಲ. ಪ್ರಪಂಚದ ದೊಡ್ಡ ಸಾಮ್ರಾಜ್ಯಗಳ ಕೈವಾಡದಿಂದ ಕಮ್ಯೂನಿಸಂ ತತ್ತ್ವ ಮತ್ತು ಇಸ್ಲಾಂ ಧರ್ಮಗಳ ಸಮನ್ವಯ ಸಾಧ್ಯವೇ ಎಂಬ ಪ್ರಶ್ನೆ ಜಟಿಲವಾಗಿದೆ. ಈ ಸಂದಿಗ್ಧ ಸ್ಥಿತಿಯಲ್ಲಿ ಆಗಿಂದಾಗ್ಗೆ ವಿಪ್ಲವಗಳು, ಪುಟ್ಟ ಪುಟ್ಟ ಕ್ರಾಂತಿಗಳು ಆಗುತ್ತಿವೆ. ಅಂತಾರಾಷ್ಟ್ರೀಯ ಪರಿಸ್ಥಿತಿಗನುಗುಣವಾಗಿ, ಎಣ್ಣೆ ವ್ಯಾಪಾರದ ರಾಜಕೀಯ ಆಂದೋಲನಗಳು ಜರುಗಿವೆ. ಅಂತರ್ಯುದ್ಧಗಳು, ದೌರ್ಜನ್ಯ, ಶ್ರೀಮಂತರ ಕೊಲೆ, ಅಶಾಂತಿ–ಇವೆಲ್ಲ ಸರ್ಕಾರದ ಸುಭದ್ರತೆಯನ್ನು ಅಲುಗಿಸಿವೆ. ಭವಿಷ್ಯ ಕಷ್ಟವಾಗಿದೆ. (ಎಂ.ವಿ.ಕೆ.)

**ಇರಾಜ್ಮಸ್:** (1469 ?–1536) ಡಚ್ ಲೇಖಕ, ಸಂಪಾದಕ ಮತ್ತು ಕ್ರೈಸ್ತ ದಾರ್ಶನಿಕ. ಡೆಸಿಡೇರಿಯಸ್ ಇರಾಜ್ಮಸ್ ಎಂಬ ಹೆಸರೂ ಉಂಟು. ಜನನ ರಾಟರ್ ಡಾಂನಲ್ಲಿ. ತಾಯಿ ತಂದೆಗಳ ಬಲವಂತಕ್ಕೆ ಒಳಗಾಗಿ ಆಗಸ್ಟೈನ್ ಪಂಥದಲ್ಲಿ ಸನ್ಯಾಸ ಸ್ವೀಕರಿಸಿದ. ಆದರೆ, ಕೇಂಬ್ರಾಯ್ ಬಿಷಪ್‌ನಿಂದ ಸಹಾಯ ಪಡೆದು ಮೊತ್ತಮೊದಲು ಫ್ರಾನ್ಸಿಗೂ ಅನಂತರ ಯುರೋಪಿನ ಇತರ ದೇಶಗಳಿಗೂ ಭೇಟಿ ಕೊಟ್ಟ. 1502ರಲ್ಲಿ ಟ್ಯೂರಿನ್ ವಿದ್ಯಾಲಯ ದೈವಶಾಸ್ತ್ರದಲ್ಲಿ ಡಾಕ್ಟರೇಟ್ ಪ್ರಶಸ್ತಿ ಪಡೆದ. ಇಂಗ್ಲೆಂಡಿಗೆ ಅನೇಕ ಸಲ ಭೇಟಿಕೊಟ್ಟ. ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಲೇಡಿ ಮಾರ್ಗರೇಟ್ ಪದುವಟ್ಟಿನ ಗ್ರೀಕ್ ಭಾಷಾ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ. ಪ್ರಸಿದ್ಧ ವಿದ್ವಾಂಸರಾದ ಸರ್ ಥಾಮಸ್ ಮೋರ್, ಜಾನ್ ಕೋಲೆಟ್ ಮತ್ತು ವಿಲಿಯಂ ಗೋಕೈನ್‌ರು ಇಂಗ್ಲೆಂಡಿನಲ್ಲಿ ಇರಾಜ್ಮಸ್ನನ ಮಿತ್ರರಾಗಿದ್ದರು. ಆಂಗ್ಲರ ಮುಖ್ಯ ಮತಾಧೀಶ ವಾರ್ ಹ್ಯಾಮ್ ಈತನಿಗೆ ಕೆಂಟ್ ಪ್ರದೇಶದ ಅಲಿಂಗ್ಟನ್ ಪ್ರದೇಶದ ಮತಾಧಿಕಾರ ಕೊಟ್ಟ. ಆ ಪದವಿಯನ್ನು ತ್ಯಾಗಮಾಡಿದ ಅನಂತರವೂ ಆತನಿಗೆ ವಿಶ್ರಾಂತಿವೇತನ ಸಿಗುತ್ತಿತ್ತು. ಇರಾಜ್ಮಸ್ ಮತದ ಪುನ: ಪರಿವರ್ತನೆಯಲ್ಲಿ ಯಾವ ಪಕ್ಷವನ್ನೂ ಪೃಥಕ್ಕರಿಸಲಿಲ್ಲ. ಎಲ್ಲರಿಂದಲೂ ಮಾನ್ಯನಾಗಿ ಮುಖ್ಯವಾಗಿ ವಿದ್ವಾಂಸರ ಪ್ರಶಂಸೆಗೊಳಗಾದವನಾಗಿದ್ದ.

ಈತ ಹಲವು ಗ್ರಂಥಗಳನ್ನು ಬರೆದಿದ್ದಾನೆ ಜೀವಿತಕಾಲದಲ್ಲಿ ರೋಮನ್ ಕೆಥೊಲಿಕ್ ಪಂಥ ಭಿನ್ನಮತೀಯರನ್ನು ಈತ ಎದುರಿಸಬೇಕಾಗಿತ್ತು. ಆದ್ದರಿಂದ ಮೋರ್ ಮಹಾಶಯ ನಂತೆ, ಪ್ರತಿಸ್ಪರ್ಧಿ ಖಂಡನಾತ್ಮಕವಾದ ಲೇಖನಗಳನ್ನು ಬರೆದ. ಈತನ ಎಲ್ಲ ಕೃತಿಗಳನ್ನೂ ಬಾಸೆಲ್ಲಿನ ಫ್ರೋಬೆನ್ ಮುದ್ರಣಾಲಯದವರು ಪ್ರಕಟಿಸಿದ್ದಾರೆ. ಆದರೆ, ಅವುಗಳಲ್ಲಿ ಕೆಲವು ಸಂದರ್ಭೋಚಿತವಾದವುಗಳು. ಸರ್ವಕಾಲಕ್ಕೂ ಮಾನ್ಯವಾದಂಥ ಅವನ ಕೆಲವು ಗ್ರಂಥಗಳನ್ನು ಇಲ್ಲಿ ಹೆಸರಿಸಬಹುದು.

(ಅ) ಇರಾಜ್ಮಸನ ಗ್ರಂಥಗಳಲ್ಲಿ ಸರ್ವಮಾನ್ಯವಾದದ್ದು 1516ರಲ್ಲಿ ಪರಿಷ್ಕರಿಸಿ, ಲ್ಯಾಟಿನ್ ಭಾಷೆಯ ಭಾಷಾಂತರದೊಡನೆ ಪ್ರಕಟಿಸಿದ ಹೊಸ ಒಡಂಬಡಿಕೆ. ಅನೇಕ ಹಸ್ತಪ್ರತಿಗಳ ತುಲನೆಯಿಂದಲೂ ವಿವೇಚನೆಯಿಂದಲೂ ರಚಿತವಾದ ಈ ಹೊಸ ಆವೃತ್ತಿ ವಿದ್ವಾಂಸರ ಅವಲೋಕನಕ್ಕೆ ಮತ್ತು ಅಧ್ಯಯನಕ್ಕೆ ಯೋಗ್ಯವಾದುದಾಗಿದೆ. (ಆ) ದಿ ಪ್ರೇಸ್ ಆಫ್ ಫಾಲಿ (ಮೌಢ್ಯದ ಹೆಗ್ಗಳಿಕೆ) ಎಂಬುದು 1509ರಲ್ಲಿ ಪ್ರಕಟವಾದ ಮತ್ತೊಂದು ಮೇರುಕೃತಿ. ಇದರಲ್ಲಿ ವಿಡಂಬನೆಯೇ ಪ್ರಧಾನವಾಗಿದೆ. ಸರ್ ಥಾಮಸ್ ಮೋರನ ಪ್ರಚೋದನೆಯ ಕಾರಣವಾಗಿ ಈ ಗ್ರಂಥದ ರಚನೆಯಾಯಿತಂತೆ. (ಇ) ದಿ ಎಜುಕೇಷನ್ ಆಫ್ ಎ ಕ್ರಿಶ್ಚಿಯನ್ ಪ್ರಿನ್ಸ್ (ಕ್ರೈಸ್ತ ಮತಾವಲಂಬಿ ರಾಜಕುಮಾರ ಅನುಸರಿಸಲು ಯೋಗ್ಯವಾದ ವಿದ್ಯಾಭ್ಯಾಸಕ್ರಮ) ಎಂಬುದು ಅವರ ಪಾಂಡಿತ್ಯವನ್ನು ಪ್ರದರ್ಶಿಸುವ ಗ್ರಂಥ. (ಈ) ಗಾದೆಗಳು ಎಂಬ ಗ್ರಂಥ 1500ರಲ್ಲಿ ಪ್ರಕಟವಾಯಿತು. ಈ ಗ್ರಂಥದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿನ ಗಾದೆಗಳನ್ನು ಸಂಕಲಿಸಲಾಗಿದೆ. ಸಮಕಾಲೀನ ಸಾಹಿತಿಗಳಿಂದ ಈ ಸಂಕಲನ ಗ್ರಂಥ ಮಾನ್ಯತೆ ಪಡೆದಿತ್ತು. ಈ ನಾಲ್ಕು ಗ್ರಂಥಗಳೂ ಅನುಕ್ರಮವಾಗಿ ಕರ್ತೃವಿನ ಹೆಚ್ಚಳವನ್ನು ತೋರಿಸುತ್ತವೆ. ಮತಸುಧಾರಣೆಯ (ರೆಫರ್‌ಮೇಷನ್) ಬಗ್ಗೆ ಈತ ತಳೆದ ನಿಲುವಿನಿಂದ ಇವನಿಗೂ ಲೂಥರಿಗೂ ವೈಷಮ್ಯ ಉಂಟಾಯಿತು. (ಕೆ.ಕೆ.ಐ.)

**ಇರಾನ್:** ಪಶ್ಚಿಮ ಏಷ್ಯದ ಪ್ರಮುಖ ದೇಶಗಳಲ್ಲೊಂದು. ಕ್ಯಾಸ್ಪಿಯನ್ ಸಮುದ್ರದ ಬಳಿ ಇರುವ ಕೆಮೆನ್ ಶಾ ಎಂಬ ಗುಹೆಯಲ್ಲಿನ ಉತ್ಖನನಗಳಿಂದಲೂ ಇರಾನಿನ ಹಲವು ಸ್ಥಳಗಳಲ್ಲಿ ದೊರಕಿರುವ ಶಿಲಾಯುಧಗಳಿಂದಲೂ ಹಳೆಶಿಲಾಯುಗದ ಸಂಸ್ಕೃತಿಗಳು ಇರಾನಿನಲ್ಲಿ ಹರಡಿದ್ದ ವಿಷಯ ತಿಳಿದುಬಂದಿದೆ. ಭಕ್ತಿಯಾರಿ ಪರ್ವತ ಪ್ರದೇಶದಲ್ಲಿನ ತಂಗ್–ಇ–ಪಬ್ಬ ಎಂಬ ಗುಹೆಯಲ್ಲಿನ ಅಗೆತದಿಂದ, ಇರಾನಿನ ಜಾಡೋ, ಹಸ್ಸುವಾ ಮುಂತಾದೆಡೆಗಳಲ್ಲಿ ಬೇಟೆಗಾರ ಜನ ಅಲ್ಲಲ್ಲಿ ನೆಲೆಗೊಂಡು ನವಶಿಲಾಯುಗದ ಜೀವನ ವಿಧಾನದತ್ತ ಪರಿವರ್ತನೆ ಹೊಂದುತ್ತಿದ್ದ ಕಾಲದ ಸಂಸ್ಕೃತಿಗಳು ಬೆಳಕಿಗೆ ಬಂದಿವೆ. ಈ ಜನ ಕಲ್ಲಿನ ಕೊಡಲಿ ಸುತ್ತಿಗೆ ಮುಂತಾದ ಉಪಕರಣಗಳನ್ನು ಉಪಯೋಗಿಸುತ್ತಿದ್ದರಲ್ಲದೆ, ಕೈಯಲ್ಲಿ ಮಾಡಿದ ಮಡಕೆಗಳನ್ನೂ ಬಳಸುತ್ತಿದ್ದರು.

ಟೆಹರಾನಿನ ದಕ್ಷಿಣಕ್ಕಿರುವ ಸಿಯಾಲ್ಕಿನಲ್ಲಿ ಇರಾನಿನ ಅತ್ಯಂತ ಪ್ರಾಚೀನ ಗ್ರಾಮದ ಅವಶೇಷಗಳಿವೆ. ಇಲ್ಲಿ ಮೊದಲು ಪ್ರ.ಶ.ಪೂ. ಸು. 5ನೆಯ ಶತಮಾನದಲ್ಲಿ ತಂಗಿದ ಜನ (ಸಿಯಾಲ್ಕ್ 1) ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಕ್ರಮೇಣ ಮಣ್ಣಿನ ಗೋಡೆಗಳನ್ನೂ ಕಟ್ಟಲಾರಂಭಿಸಿದರು. ವ್ಯವಸಾಯ ಮತ್ತು ಪಶುಪಾಲನೆ ರೂಢಿಯಲ್ಲಿದ್ದರೂ ಬೇಟೆ ಇನ್ನೂ ಜನರ ಒಂದು ಮುಖ್ಯ ಕಸುಬಾಗಿತ್ತು. ಈ ಕಾಲದಲ್ಲಿ ಹಳೆಯ ರೀತಿಯ ಕಪ್ಪುಬಣ್ಣದ ಮಡಕೆಗಳ ಜೊತೆಯಲ್ಲಿಯೇ ಒಂದು ಹೊಸ ರೀತಿಯ ಚಿತ್ರಿತ ಮಡಕೆಗಳೂ ಬಳಕೆಗೆ




ರಾಜಕೀಯ ಭೂಪಟ

ಬಂದವು. ಚಿತ್ರಣದಲ್ಲಿ ಬುಟ್ಟಿಗಳ ಮೇಲ್ಮೈ ಮಾದರಿಯ ನಮೂನೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಈ ಕಾಲದ ಉಪಕರಣಗಳೆಲ್ಲವೂ ಕಲ್ಲಿನವು. ಕತ್ತರಿಸುವ ಮತ್ತು ಒರೆಯುವ ಸಾಧನಗಳು, ನಯ ಮಾಡಿದ ಕೊಡಲಿ ಇತ್ಯಾದಿಗಳು ಉಪಯೋಗದಲ್ಲಿದ್ದವು. ಬಟ್ಟೆಯ ನೇಯ್ಗೆ ಸಹ ಆಗಲೇ ರೂಢಿಗೆ ಬಂದಿತ್ತು. ಈ ಕಾಲದ ಕೊನೆಯ ಭಾಗದ ಹೊತ್ತಿಗೆ ತಾಮ್ರವೂ ಬೆಳಕಿಗೆ ಬಂತು. ಆದರೆ ಈ ಕಾಲದ ತಾಮ್ರದ ವಸ್ತುಗಳೆಲ್ಲವೂ ಅದುರನ್ನು ಜಜ್ಜಿ ರೂಪಿಸಿದವು ಮಾತ್ರ; ಅದುರನ್ನು ಕರಗಿಸಿ ಎರಕ ಹುಯ್ಯುವ ವಿಧಾನ ಇನ್ನೂ ಪ್ರಚಲಿತ ವಾಗಿರಲಿಲ್ಲ. ಬಣ್ಣಹಾಕಿದ ಕಲ್ಲಿನ ಮತ್ತು ಚಿಪ್ಪಿನ ಉಂಗುರಗಳು, ಆಭರಣಗಳೂ ಉಪಯೋಗದಲ್ಲಿದ್ದವು. ಈ ಕಾಲದಲ್ಲಾಗಲೇ ಕಲಾಸೃಷ್ಟಿಯೂ ಪ್ರಾರಂಭವಾಯಿತೆಂಬುದಕ್ಕೆ ಎಲುಬಿನಲ್ಲಿ ಕೆತ್ತಿದ ಬೊಂಬೆಗಳು ಸಾಕ್ಷಿಗಳಾಗಿವೆ. ಈ ಕಾಲದಲ್ಲಿ ಮೃತರನ್ನು ಮನೆಯ ಒಳಗೆ ಹೂಳುವ ಪದ್ಧತಿಯಿತ್ತು.

ಪ್ರ.ಶ.ಪೂ.4ನೆಯ ಸಹಸ್ರಮಾನದಲ್ಲಿ ತಾಮ್ರ–ಶಿಲಾಯುಗದ ಹಾಗೂ ಕೆಂಪುಬಣ್ಣದ ಮಡಕೆಗಳು ಪ್ರಚಲಿತವಾಗಿದ್ದ ಸಂಸ್ಕೃತಿಗಳು, ಪಶ್ಚಿಮ ಮತ್ತು ನೈರುತ್ಯ ಇರಾನಿನಲ್ಲಿ ಕಂದುಬಣ್ಣದ ಮಡಕೆಗಳು ಪ್ರಚಲಿತವಾಗಿದ್ದ ಸಂಸ್ಕೃತಿಗಳು ಎಂಬ ಎರಡು ಮುಖ್ಯ ವಿಧಗಳನ್ನು ಗುರುತಿಸಲಾಗಿದೆ. ನಾಗರಿಕತೆಯ ಬೆಳವಣಿಗೆಗೆ ಅವಶ್ಯಕವಾದ ಸಾಧನಗಳೆಲ್ಲ ಈ ಕಾಲದಲ್ಲಿಯೇ

ರೂಢಿಗೆ ಬಂದವು. ಹಲವು ಉದ್ದೇಶಗಳಿಗಾಗಿ ಉಪಯೋಗಿಸಬಹುದಾದ ನಾನಾ ರೀತಿಯ ಎರಕ ಹೊಯ್ದ ತಾಮ್ರದ ವಸ್ತುಗಳು, ಮಡಕೆಗಳನ್ನು ಮಾಡಲು ಚಕ್ರ, ಅವುಗಳನ್ನು ಸುಡಲು ಆವೆ, ಮನೆ ಕಟ್ಟಲು ಅಚ್ಚಿನಿಂದ ತಯಾರಿಸಿದ ಹಸಿಇಟ್ಟಿಗೆ ಮುಂತಾದವು ಬಳಕೆಗೆ ಬಂದವು. ಈ ಸಂಸ್ಕೃತಿಗಳಿಗೆ ಸಂಬಂಧಿಸಿದ ಮಣ್ಣಿನ ನಗ್ನ ಸ್ತ್ರೀ ಬೊಂಬೆಗಳು ಆ ಕಾಲದ ಧಾರ್ಮಿಕ ನಡೆವಳಿಕೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಮೃತರನ್ನು ಮನೆಯ ಒಳಗೆ ಒಲೆಯ ಬಳಿಯಲ್ಲಿ ಹೂಳುವ ಪದ್ಧತಿ ರೂಢಿಯಲ್ಲಿತ್ತು. ಮಡಕೆಗಳ ಮೇಲೆ ಕಂಡುಬರುವ ಬಣ್ಣದ ಚಿತ್ರಗಳು ಆ ಕಾಲದ ಕಲಾಭಿರುಚಿಯನ್ನು ಪ್ರತಿಬಿಂಬಿಸುತ್ತವೆ. ಮೊದಮೊದಲು ಜ್ಯಾಮಿತಿಕ ನಮೂನೆಗಳು ಉಪಯೋಗದಲ್ಲಿದ್ದರೆ, ಕ್ರಮೇಣ ಪ್ರಾಣಿ ಮತ್ತು ಮನುಷ್ಯನ ಸ್ವಾಭಾವಿಕ ಚಿತ್ರಗಳೂ ಅನಂತರ ಅವುಗಳನ್ನೇ ಸೂಚ್ಯಚಿಹ್ನೆಗಳಿಂದ ವ್ಯಕ್ತಪಡಿಸುವ ವಿಧಾನವೂ ಪ್ರಚಲಿತವಾದವು. ಈ ಮಡಕೆಗಳ ಮೇಲಿನ ಚಿತ್ರಗಳಲ್ಲಿ ಕಂಡುಬರುವ ವಸ್ತುಗಳನ್ನು ಅವುಗಳ ಆಕಾರಕ್ಕೆ ಸಮೀಪದ ಸೂಕ್ತ ಚಿಹ್ನೆಗಳಿಂದ ವ್ಯಕ್ತಪಡಿಸುವ ವಿಧಾನದಿಂದ ಮುಂದೆ ಲಿಪಿಯ ಬೆಳವಣಿಗೆಗೆ ಹಾದಿಯಾಯಿತೆಂದು ಕೆಲವರು ಊಹಿಸುತ್ತಾರೆ. ಈ ಕಾಲಕ್ಕೆ ಸಂಬಂಧಿಸಿದ

ಮೇಲ್ಮೈಲಕ್ಷಣ

ಅವಶೇಷಗಳನ್ನು ಸಿಯಾಲ್ಕ್ ಸೂಸ, ಸವಾ, ಖೊಮ್, ಗಿಯಾನ್, ಬಕುನ್ ಮುಂತಾದೆಡೆಗಳಲ್ಲಿ ಗುರುತಿಸಲಾಗಿದೆ. ಇದೆಲ್ಲ ಗ್ರಾಮೀಣ ಸಂಸ್ಕೃತಿಗಳು.

ಆದರೆ 4ನೆಯ ಸಹಸ್ರಮಾನದ ಕೊನೆಯ ಭಾಗದಲ್ಲಿಯೇ ಪಕ್ಕದ ಇರಾಕ್ ಪ್ರದೇಶದಲ್ಲಿ ನಗರೀಕರಣದ ಪ್ರಾರಂಭದ ಸೂಚನೆಗಳು ಕಂಡುಬಂದವು. ಇರಾಕಿಗೆ ಸೇರಿದಂತೆಯೇ ಇರುವ ವಾಯವ್ಯ, ಇರಾನ್ ಪ್ರಾಂತದಲ್ಲೂ ಅದೇ ರೀತಿಯ ನಾಗರಿಕತೆ ಅನತಿಕಾಲದಲ್ಲೇ ಬೆಳೆಯಿತು. ಈ ಸಹಸ್ರಮಾನದ ಕೊನೆಯಭಾಗದಲ್ಲಿ ಇರಾನ್ ದೇಶಕ್ಕೆ ಹಲವು ಹೊಸ ಸಂಸ್ಕೃತಿಗಳೂ ಕಾಲಿಟ್ಟವು. ಇವೆಲ್ಲವೂ ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಸ್ಥಳೀಯ ಸಂಸ್ಕೃತಿಗಳೊಡನೆ ಬೆರೆತು ಪ್ರವರ್ಧಮಾನ ಹೊಂದಿದವು. 3ನೆಯ ಸಹಸ್ರಮಾನದ ಇರಾನಿ ಸಂಸ್ಕೃತಿಗಳು ಬಹುಮಟ್ಟಿಗೆ ಸುಮೇರಿಯ ಸಂಸ್ಕೃತಿಗಳಿಂದ ಪ್ರಭಾವಿತವಾಗಿದ್ದಂತೆ ಕಂಡುಬರುತ್ತವೆ. ಈ ಕಾಲದಲ್ಲಿ ಬೆಳೆದ ಈ ಎರಡು ದೇಶಗಳ ವ್ಯಾಪಾರಸಂಬಂಧ ಇದಕ್ಕೆ ಕಾರಣವಿರಬಹುದು. ಇರಾನಿನ ಪಶ್ಚಿಮಭಾಗದ ಎಲಾಮ್ ವಿಭಾಗ ಕೆಲಕಾಲ ಸುಮೇರಿಯದ ರಾಜ್ಯಾಡಳಿತಕ್ಕೆ ಒಳಪಟ್ಟಿತು. ಈ ಕಾಲದ ಅವಶೇಷಗಳು ಗಿಯಾನ್, ಹಿಸ್ಸಾರ ಮುಂತಾದೆಡೆಗಳಲ್ಲಿ ಸಿಕ್ಕಿವೆ.

ಪ್ರ.ಶ.ಪೂ.2ನೆಯ ಸಹಸ್ರಮಾನದ ವೇಳೆಗೆ ಇರಾನಿನಲ್ಲಿ, ಅದರಲ್ಲೂ ಎಲಾಮ್ ಪ್ರಾಂತದಲ್ಲಿ ನಾಗರಿಕತೆಯೊಂದು ಉಚ್ಛ್ರಾಯಸ್ಥಿತಿಯಲ್ಲಿತ್ತು. ಎಲಾಮ್ ಪ್ರಾಂತದ ಅರಸರು ಸ್ವಲ್ಪ ಕಾಲ ಪಶ್ಚಿಮ ಏಷ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದ ಬ್ಯಾಬಿಲಾನನ್ನೇ ವಶಪಡಿಸಿಕೊಂಡಿದ್ದರು, ಎಲಾಮಿನ ಈ ವೈಭವ ಕಾಲದ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಅವಶೇಷಗಳು ಅಲ್ಲಿನ ರಾಜಧಾನಿಯಾದ ಸೂಸದ ಉತ್ಖನನಗಳಲ್ಲಿ ಬೆಳಕಿಗೆ ಬಂದಿವೆ. ಅಲ್ಲಿ ಸಿಕ್ಕಿರುವ ಎಲಾಮೈಟ್ ಮತ್ತು ಅಕ್ಕೇಡಿಯನ್ ಭಾಷೆ ಮತ್ತು ಲಿಪಿಯ ಶಾಸನಗಳೇ ಇರಾನಿನ ಅತ್ಯಂತ ಪ್ರಾಚೀನ ಲಿಖಿತ ದಾಖಲೆಗಳು. ಪ್ರ.ಶ.ಪೂ. 2ನೆಯ ಸಹಸ್ರಮಾನ ಪಶ್ಚಿಮ ಏಷ್ಯದ ಚರಿತ್ರೆಯಲ್ಲಿ ಆಂದೋಲನದ ಕಾಲ. ಬಹು ಕಾಲದಿಂದ ಬಂದ ರಾಜಕೀಯ ವ್ಯವಸ್ಥೆಗಳ ಕುಸಿತ, ಅನಾಗರಿಕ ಗುಡ್ಡಗಾಡು ಜನಾಂಗಗಳಿಂದ ನಾಗರಿಕ ಪ್ರದೇಶಗಳತ್ತ ವಲಸೆ, ಆಕ್ರಮಣ, ನಾಗರಿಕತೆಗಳ ವಿನಾಶ ಮುಂತಾದುವನ್ನು ಈ ಕಾಲದಲ್ಲಿ ಕಾಣುತ್ತೇವೆ. ಬಹುಶಃ ಈ ಕಾರಣದಿಂದಲೇ ತಿಯಾನ್, ಸಿಯಾಲ್ಕ್ ಮುಂತಾದ ಇರಾನಿನ ಪುರಾತನ ನೆಲೆಗಳಲ್ಲೂ ಹಲವಾರು ವಿನೂತನ ಸಾಂಸ್ಕೃತಿಕ ಅಂಶಗಳು ಇದ್ದಕ್ಕಿದ್ದಂತೆಯೇ ಕಾಣಿಸಿ ಕೊಳ್ಳುತ್ತವೆ. ಇಂಡೋ ಯೂರೋಪಿಯನ್ ಭಾಷೆಯನ್ನಾಡುತ್ತಿದ್ದ ಜನರ ಮೊದಲ ವಲಸೆ ಈ ಕಾಲದಲ್ಲೆ ಆಗಿರಬೇಕು.

ಪ್ರ.ಶ.ಪೂ.2ನೆಯ ಶತಮಾನದ ಕೊನೆಯಲ್ಲಿ ಅಥವಾ 1ನೆಯ ಸಹಸ್ರಮಾನದ ಮೊದಲಲ್ಲಿ ಇರಾನಿನ ಇತಿಹಾಸದಲ್ಲಿ ಎರಡು ಗಮನಾರ್ಹ ಘಟನೆಗಳು ಜರುಗಿದವು. ಇಂಡೊ–ಯುರೋಪಿಯನ್ ಅದರಲ್ಲೂ ಇರಾನೀ ಭಾಷೆಯನ್ನಾಡುತ್ತಿದ್ದ ಜನರ ಪ್ರಭಾವ ಬೆಳೆದುದ್ದು ಒಂದು ಘಟನೆ. ಕಬ್ಬಿಣವನ್ನು ಬಳಸಲಾರಂಭಿಸಿದ್ದು ಇನ್ನೊಂದು ಘಟನೆ. ಕಬ್ಬಿಣದ ಉಪಯೋಗದಲ್ಲಿ ಇವರೇ ಮೊದಲಿಗರೆಂದು ನಿಷ್ಕರ್ಷೆಯಾಗಿ ಹೇಳಲು ಸಾಕಷ್ಟು ಆಧಾರಗಳು ದೊರೆತಿಲ್ಲ. ಪೂರ್ವ ಇರಾನಿನ ಸಿಮಾಲ್ ಪ್ರದೇಶದಲ್ಲಿ ಪ್ರ.ಶ.ಪೂ. 1ನೆಯ ಸಹಸ್ರಮಾನಕ್ಕೆ ಸೇರಿದ ಸ್ಮಶಾನವೊಂದನ್ನು ಅಗೆಯಲಾಗಿದೆ. ಪಶ್ಚಿಮ ಇರಾನಿನ ಗಿಯಾನ್ ನಲ್ಲೂ ಲೂರಿಸ್ಥಾನ್ ಪ್ರದೇಶದಲ್ಲೂ ಈ ಕಾಲದ ನೆಲೆಗಳು ಕಂಡುಬಂದಿವೆ. ಲೂರಿಸ್ಥಾನ್ ಪ್ರದೇಶದ ಹಲವು ಗೋರಿಗಳಲ್ಲಿ ಎರಕಹೊಯ್ದು ನಯ ಮಾಡಿದ ಅನೇಕ ಕಂಚಿನ ಉಪಕರಣಗಳೂ ಕಲಾಕೃತಿಗಳೂ ಸಿಕ್ಕಿವೆ. ಕುಶಿದಷ್ಟ್ ಎಂಬಲ್ಲಿ ಹಲವು ದೊಡ್ಡತಲೆಯ ಗುಂಡುಸೂಜಿಗಳೂ ಧಾರ್ಮಿಕ ಕ್ರಿಯೆಗಳಿಗಾಗಿ ಉಪಯೋಗಿಸಲಾಗುತ್ತಿದ್ದ ವಸ್ತುಗಳೂ ದೊರಕಿವೆ. ಅಜರ್‌ಬೈಜಾನ್ ಪ್ರದೇಶದಲ್ಲಿ ಮಿಡಿಯ ಸಾಮ್ರಾಜ್ಯ ಕಾಲದ ಅವಶೇಷಗಳಿವೆ.*

**ಇತಿಹಾಸ:** ಆರ್ಯರ ಭಾಷೆಯನ್ನಾಡುತ್ತಿದ್ದ ಶ್ವೇತವರ್ಣದ ಜನರ ಒಂದು ಪಂಗಡ ಪ್ರ.ಶ.ಪೂ.2500ರ ಸುಮಾರಿಗೆ ಮಧ್ಯ ಏಷ್ಯದಿಂದ ಹೊರಟು ಪರ್ಷಿಯನ್ ಕೊಲ್ಲಿಯ ಹತ್ತಿರ ನೆಲೆಸಿತು ಎಂದು ನಂಬಲಾಗಿದೆ. ಇರಾನ್ ಎಂಬುದು ಆರ್ಯ ಶಬ್ದದ ಪರ್ಯಾಯ ರೂಪ. ಆರ್ಯಭಾಷಿಗಳಾದ ಈ ಪರ್ಷಿಯನ್ನರು, ಅಸ್ಸೀರಿಯ ಸಾಮ್ರಾಜ್ಯ ನಾಶವಾದ ಮೇಲೆ ಪ್ರಶ.ಪೂ.6ನೆಯ ಶತಮಾನದಲ್ಲಿ ಕೈರಸನ ನಾಯಕತ್ವದಲ್ಲಿ ಅಕೆಮೆನಿಡ್ ಸಾಮ್ರಾಜ್ಯವನ್ನು ಕಟ್ಟಿದರು. ಇಲ್ಲಿಂದ ಮುಂದೆ ಒಂದಾದ ಮೇಲೊಂದರಂತೆ ಅನೇಕ ಸಾಮ್ರಾಜ್ಯಗಳು ಇಲ್ಲಿ ಬೆಳೆದು ಆಳಿದವು.

ಏಳನೆಯ ಶತಮಾನದಲ್ಲಾದ ಅರಬ್ ಮುಸ್ಲಿಮರ ಆಕ್ರಮಣ ಇರಾನಿನ ಸ್ವರೂಪವನ್ನೇ ಬದಲಾಯಿಸಿತು. ಅರಬ್ ಸಾಮ್ರಾಜ್ಯತನ್ನೊಂದಿಗೆ ಶಕ್ತಿ ಹಾಗು ಧಾರ್ಮಿಕ ಭಾವನೆ ತಂದಿತು. ಅರಬ್ಬೀ ರಾಜ್ಯಭಾಷೆಯಾಯಿತು. ಅನೇಕ ಪರ್ಷಿಯನ್ನರು ಅಬು ಮುಸ್ಲಿಮರಾದರು. ಇದೇ ಕಾಲಕ್ಕೆ ಎಷ್ಟೋ ಜನ ಇರಾನಿಯನ್ನರು ಜರತುಷ್ಟ್ರ ಧರ್ಮ ಉಳಿಸಿಕೊಳ್ಳಲು ದೇಶವನ್ನು ತ್ಯಜಿಸಬೇಕಾಯಿತು. ಅವರಲ್ಲಿ ಕೆಲವರು ಸೂರತ್, ಮುಂಬಯಿಗೆ ಬಂದು ನೆಲೆಸಿದರು. ಅವರ ವಂಶದವರನ್ನು ನಾವು ಭಾರತದಲ್ಲಿ ಇಂದಿಗೂ ಕಾಣಬಹುದು. ಅವರೇ ಪಾರ್ಸಿಗಳು. ಕೆಲವರು ಅಲ್ಲಿಯೇ ಇದ್ದುಕೊಂಡು ಗುಪ್ತರೂಪದಿಂದ ಜರತುಷ್ಟ್ರ ಧರ್ಮ ಅನುಸರಿಸುತ್ತಿದ್ದರು. ಅವರ ವಂಶಜರು ಇರಾನಿನ ಯಜ್ಞ ಹಾಗೂ ಕಿರ್ಮಾನ ಪ್ರದೇಶದಲ್ಲಿ ಇಂದಿಗೂ ಇದ್ದಾರೆ. ಅರಬ್ಬರು ಇರಾನನ್ನು ಗೆದ್ದು ಕಲೀಫನ ವಶಕ್ಕೆ ಕೊಟ್ಟರು.

1614ರಿಂದ ಬ್ರಿಟಿಷರು ಇರಾನಿನೊಂದಿಗೆ ವ್ಯಾಪಾರ ಆರಂಭಿಸಿದರು. ಹಾಲೆಂಡ್ ಹಾಗೂ ರಷ್ಯದೊಂದಿಗೆ ವ್ಯಾಪಾರ ಸಂಬಂಧಗಳು ಸ್ಥಾಪಿಸಲ್ಪಟ್ಟವು. ಈ ವ್ಯಾಪಾರದಿಂದಾಗಿ ಇರಾನ್ ಅಭಿವೃದ್ಧಿ ಹೊಂದಿತು. ಆದರೆ ದೇಶ ಕೂಟನೀತಿಯ ಕೇಂದ್ರವಾಯಿತು. ಪದೇ ಪದೇ ಆಫ್ಘನ್ನರ ಹಾಗೂ ರಷ್ಯನರ ಆಕ್ರಮಣಕ್ಕೊಳಗಾಯಿತು. ಇರಾನ್ ಬ್ರಿಟಿಷರ ಹಾಗೂ ರಷ್ಯನರ ನೆಲೆಯಾಯಿತು. ನಿರಂಕುಶ ಶಾಸನದ ವಿರುದ್ಧ ಅತೃಪ್ತಿ ಹೆಚ್ಚಾಗಿ ವಿದ್ರೋಹ ಚಟುವಟಿಕೆಗಳು ಆರಂಭವಾದವು. ಶಫವಿದ್ ಮನೆತನದ ಕೊನೆಯ ಅರಸ ಕರೀಮಖಾನ್ ಝೆಂಡ್ 1750ರಿಂದ 1779ರವರೆಗೆ ಆಳಿದ. ಅನಂತರ ತುರ್ಕಿ ಜಾತಿಯ ಕ್ವಾಜರರ ಆಡಳಿತ 1834ರವರೆಗೆ ನಡೆಯಿತು. ಈ ಕಾಲದಲ್ಲಿ ರಷ್ಯನರು ಇರಾನಿನಲ್ಲಿ ತಮ್ಮ ಬಲವನ್ನು ಹೆಚ್ಚಿಸಿ ಕೊಂಡರು. ರಷ್ಯ ಪರ ಮೊಹಮ್ಮದ್ ಷಾ 1834ರಲ್ಲಿ ಪಟ್ಟಕ್ಕೆ ಬಂದ. ಅನಂತರ ಬ್ರಿಟಿಷರು ತಮ್ಮ ಶಕ್ತಿಯನ್ನು ಬೆಳೆಸಿಕೊಂಡರು. ಷಾನ್ ನಿರಂಕುಶ ಪ್ರಭುತ್ವ 1896ರಲ್ಲಿ ಕೊನೆಗೊಂಡಿತು. 1905ರಲ್ಲಿ ಅಶಾಂತಿ ತಲೆದೋರಿ ಮಧ್ಯಮ ವರ್ಗದವರು ದಂಗೆಯೆದ್ದರು.

1906ರಲ್ಲಿ ಷಾ ಮಜಲಿಸ್ (ಸಂಸತ್ತು) ರಚಿಸಲು ಸಮ್ಮತಿಸಿ, ಅದರಿಂದ ರಚಿತವಾದ ಸಂವಿಧಾನಕ್ಕೆ ಅಂಕಿತ ಹಾಕಿದ. 1908ರಲ್ಲಿ ತೈಲ ಶೋಧವಾದಂದಿನಿಂದ, ಒಡೆತನಕ್ಕಾಗಿ ಆಂಗ್ಲೋ ರಷ್ಯನರ ಕಚ್ಚಾಟ ಹೆಚ್ಚಿತು. ಆರ್ಥಿಕ ಬಿಕ್ಕಟ್ಟೂ ತಲೆದೋರಿತು. ಒಂದನೆಯ ಮಹಾಯುದ್ಧದ ಕಾಲಕ್ಕೆ ಪರ್ಷಿಯ ತಟಸ್ಥವಾಗಿ ಕಂಡರೂ ದೇಶದಲ್ಲಿ ಗುಪ್ತ ಚಟುವಟಿಕೆಗಳು ನಡೆದವು. ದೇಶದಲ್ಲಿ ಅಸ್ಥಿರ ಪರಿಸ್ಥಿತಿ ಏರ್ಪಟ್ಟಿತು. ಬ್ರಿಟನ್ ಸುಧಾರಣೆ ಕೈಗೊಳ್ಳಲು ಪ್ರಯತ್ನಿಸಿ ವಿಫಲಗೊಂಡಿತು. 1921ರಲ್ಲಿ ರೇಜ್ಹಾನನ ನೇತೃತ್ವದಲ್ಲಿ ನಡೆದ ದಂಗೆಯಿಂದ ಸೈನ್ಯ ಪ್ರಭುತ್ವ ಸ್ಥಾಪಿತವಾಯಿತು. 1923ರಲ್ಲಿ ಆತ ಪ್ರಧಾನ ಮಂತ್ರಿಯಾದ. 1925ರಲ್ಲಿ ಷಾನನ್ನು ಉರುಳಿಸಿ ತಾನೇ ರೇಜ್ಹಾಪಹ್ಲವಿ ಎಂಬ ಹೆಸರಿನಲ್ಲಿ ಅರಸನೆಂದು ಘೋಷಿಸಿಕೊಂಡ. ದೇಶದಲ್ಲಿ ಅನೇಕ ಸುಧಾರಣೆಗಳನ್ನು ಕೈಕೊಂಡು ಸುಭದ್ರ ಕೇಂದ್ರ ಸರ್ಕಾರವನ್ನು ಸ್ಥಾಪಿಸಿದ. ಆತ ದೇಶವನ್ನು ಆಧುನಿಕಗೊಳಿಸಲು ಪ್ರಯತ್ನಿಸಿದ. 1935ರಲ್ಲಿ ದೇಶದ ಹೆಸರನ್ನು ಪರ್ಷಿಯದ ಬದಲಾಗಿ ಇರಾನ್ ಎಂದು ನಾಮಕರಣ ಮಾಡಿದ. ಅದೇ ವರ್ಷ ಟೆಹರಾನ್ ವಿಶ್ವವಿದ್ಯಾಲಯ ವನ್ನೂ ತೆರೆಯಲಾಯಿತು. 1937ರಲ್ಲಿ ಮಹಿಳೆಯರಿಗೆ ಬುರ್ಖಾ ಇಲ್ಲದೆ ಓಡಾಡುವ ಅವಕಾಶ ಕಲ್ಪಿಸಲಾಯಿತು ಹಾಗೂ 1938ರಲ್ಲಿ ಪ್ರಥಮವಾಗಿ ರೈಲು ಮಾರ್ಗ ರಚಿಸಲಾಯಿತು.

ಎರಡನೆಯ ಮಹಾಯುದ್ಧದ ಕಾಲಕ್ಕೆ ಇರಾನ್ ಜರ್ಮನಿಯೊಂದಿಗೆ ಹೊಂದಿದ್ದ ಮಿತ್ರತ್ವದಿಂದಾಗಿ ಬ್ರಿಟಿಷರು ಹಾಗೂ ಸೋವಿಯತರು ಅದನ್ನು ಆಕ್ರಮಿಸಿದರು. ಅರಸ ರಾಜ್ಯವನ್ನು ಮಗ ಮೊಹಮದ್ ರೇಜ್ಹಾ ಷಾಗೆ ಬಿಟ್ಟು ಕೊಟ್ಟ; ಅದಕ್ಕೆ ಬ್ರಿಟಿಷರ ಹಾಗೂ

ರಷ್ಯನ್ನರ ಒತ್ತಾಯವೇ ಕಾರಣ. ಯುದ್ಧ ಮುಗಿದ ಮೇಲೆ ರಷ್ಯ ಇರಾನಿನ ಉತ್ತರ ಭಾಗದ ಮೇಲೆ ತನ್ನ ಅಧಿಕಾರ ಬೆಳೆಸಿತು. ಅನಂತರ ವಿಶ್ವಸಂಸ್ಥೆಯ ಒತ್ತಾಯದಿಂದ ಸೋವಿಯತ್ ಒಕ್ಕೂಟ ತನ್ನ ಸೈನ್ಯವನ್ನು ಹಿಂತೆಗೆದುಕೊಂಡಿತು. ಈ ಮಧ್ಯೆ ದೇಶದಲ್ಲಿ ರಾಷ್ಟ್ರೀಯ ಭಾವನೆ ಬಲಗೊಂಡಿತು. ಜನ ಸರ್ಕಾರದಲ್ಲಿ ಅತೃಪ್ತಿ ವ್ಯಕ್ತಪಡಿಸಿದರು. ಇದರಿಂದಾಗಿ 1949ರಲ್ಲಿ ಇರಾನಿನ ಮಜಲಿಸ್ ಪುನಃ ಸ್ಥಾಪಿತವಾಗಿ ಚುನಾವಣೆಯ ಅನಂತರ ತನ್ನ ಕಾರ್ಯಾರಂಭಗೊಳಿಸಿತು. ಮುಸಾದಿಕ್ ಪ್ರಧಾನ ಮಂತ್ರಿಯಾದ. 1952ರಲ್ಲಿ ಆಂಗ್ಲೋ–ಇರಾನಿಯನ್ ಆಯಿಲ್ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಿದ. ಅದೊಂದು ಅಂತಾರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸಿತು. ಸಂಯುಕ್ತ ರಾಷ್ಟ್ರ ಸಂಘದಲ್ಲೂ ಈ ಸಮಸ್ಯೆ ಬಗೆಹರಿಯಲಿಲ್ಲ. ಇದರಿಂದ ಇರಾನಿನ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು. ಮುಸಾದಿಕ್‌ನ ಬದಲಾಗಿ ಫಜಲುಲ್ಲಾ ಜಾಹೆದಿಯನ್ನು ಪ್ರಧಾನ ಮಂತ್ರಿಯನ್ನಾಗಿ ಷಾ ನೇಮಿಸಿದ. ಅದೇ ವರ್ಷ ಎಂಟು ಯುರೋಪಿಯನ್ ಕಂಪನಿಗಳೊಂದಿಗೆ ಒಪ್ಪಂದವೊಂದರ ಮೂಲಕ ತೈಲ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಯಿತು. ಅನಂತರ ಷಾ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸ ಲಾರಂಭಿಸಿದರು. ಷಾರ ಇಚ್ಛೆಯ ಮೇರೆಗೆ ದ್ವಿಪಕ್ಷ ಪ್ರಜಾಪ್ರಭುತ್ವ ಸರ್ಕಾರ ರಚಿಸಲು

ವರ್ಣಚಿತ್ರಿತ ಮಣ್ಪಾತ್ರೆಗಳು

ನಿರ್ಧರಿಸಲಾಯಿತು. ಜನತಾ ಪಕ್ಷ ಹಾಗೂ ರಾಷ್ಟ್ರೀಯ ಪಕ್ಷಗಳು ರಚಿತವಾದವು. 1960ರಲ್ಲಿ ಚುನಾವಣೆ ನಡೆಯಿತು. ಆದರೆ ಈ ಸರ್ಕಾರ ಪದ್ಧತಿ ಅಷ್ಟೊಂದು ಯಶಸ್ಸು ಪಡೆಯಲಿಲ್ಲ. ಆರ್ಥಿಕ ಪ್ರಗತಿ ಹಿನ್ನಡೆ ಕಾಣಲಾರಂಭಿಸಿತು. 1963 ಜನವರಿಯಲ್ಲಿ ಷಾ ಇರಾನಿನ ಆರ್ಥಿಕ ರಂಗದಲ್ಲಿ ಚೇತರಿಕೆ ತರಲು ಅನುವಾಗುವಂತೆ ಆರು ಅಂಶಗಳುಳ್ಳ ಒಂದು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ. ಭೂಸುಧಾರಣೆ, ಜಂಟಿ ಸಹಭಾಗಿತ್ವದ ಕೈಗಾರಿಕೆಗಳು, ಹುಲ್ಲುಗಾವಲು ಹಾಗೂ ಅರಣ್ಯದ ರಾಷ್ಟ್ರೀಕರಣ ಹಾಗೂ ಚುನಾವಣ ಸುಧಾರಣೆಯ ಮೂಲಕ ಮಜ್ಲಿಸ್ ಸಂಸತ್ತಿನಲ್ಲಿ ಜನಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ನೀಡುವುದಾಗಿತ್ತು. ಆದರೆ ಈ ಸುಧಾರಣೆಗಳು ಭೂಮಾಲೀಕರು ಹಾಗೂ ಧಾರ್ಮಿಕ ಪ್ರಮುಖರ ಆರ್ಥಿಕ ಹಿತಾಸಕ್ತಿಗೆ ಕುಂದುತರುವಂತಹವುಗಳಾಗಿದ್ದವು. ಅರಣ್ಯ ಹಾಗೂ ಹುಲ್ಲುಗಾವಲುಗಳ ರಾಷ್ಟ್ರೀಕರಣದಿಂದ ಬಿಖ್ತಿಯಾರಿ ಹಾಗೂ ಇತರ ಅಲೆಮಾರಿ ಸಮುದಾಯಗಳು ಮಹಮ್ಮದ್ ರೇಜಾಷಾನ ಆಡಳಿತದ ವಿರುದ್ಧ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು. 1963ರಲ್ಲಿ ಮಹಮ್ಮದ್ ರೇಜಾಷಾ ಜಾರಿಗೆ ತಂದ ಸುಧಾರಣೆಗಳು ದೇಶದ ಪ್ರಗತಿಯ ದೃಷ್ಟಿಯಿಂದ ಪ್ರಾಮುಖ್ಯತೆ ಹೊಂದಿದ್ದರು ಸಹ ಇರಾನಿನ ಅಂದಿನ ಸಮಾಜ ಧಾರ್ಮಿಕತೆಗೆ ಹೆಚ್ಚು ಒತ್ತು ನೀಡಿತ್ತು. ಈಗಾಗಲೇ ಇರಾನಿನಲ್ಲಿ ಜಾರಿಗೊಂಡಿದ್ದ ಕಾರ್ಯಕ್ರಮಗಳನ್ನು ಧಾರ್ಮಿಕ ನಾಯಕರು ತಿರಸ್ಕರಿಸಿದ್ದರು. ಮಹಿಳೆಯರು ಹಾಗೂ ರೈತರ ಪರ ತೆಗೆದುಕೊಂಡ ನಿರ್ಣಯಗಳಿಂದಾಗಿ ಧಾರ್ಮಿಕ ನಾಯಕರು ಹಾಗೂ ಶ್ರೀಮಂತ ಭೂಮಾಲೀಕರು ಒಂದಾಗಿ ಈ ಸುಧಾರಣೆಗಳು ಬಿಳಿಯರನ್ನು (ಪಾಶ್ಚಿಮಾತ್ಯ) ತೃಪ್ತಿಪಡಿಸಲು ತೆಗೆದುಕೊಂಡ ನಿರ್ಣಯಗಳು ಎಂದು ಕರೆದು, ಇದನ್ನು ಶ್ವೇತಾಕ್ರಾಂತಿ ಅಂದರೆ ಪಾಶ್ಚಿಮಾತ್ಯ ವಿರೋಧಿ ಚಳವಳಿ ಎಂಬಂತೆ ಜನತೆಯನ್ನು ಆಡಳಿತದ ವಿರುದ್ಧ ಎತ್ತಿಕಟ್ಟಿದರು.

ಅಯಾತುಲ್ಲಾ ಅಲ್ ಖೋಮೇನಿಯ ಮುಂದಾಳತ್ವದಲ್ಲಿ ಧಾರ್ಮಿಕ ನಾಯಕರು, ಭೂಮಾಲೀಕರು, ಶ್ರೀಮಂತ ವ್ಯಾಪಾರಿವರ್ಗ ಹಾಗೂ ವಿದ್ಯಾರ್ಥಿಗಳು ಬೀದಿಗಿಳಿದು ತಮ್ಮ ಪ್ರತಿಭಟನೆ ವ್ಯಕ್ತಪಡಿಸಲಾರಂಬಿಸಿದರು. ಚಳವಳಿ ದಿನದಿಂದ ದಿನಕ್ಕೆ ಹೆಚ್ಚು ಕಾವು ಪಡೆದುಕೊಂಡಿತು. ರೇಜಾಷಾ ಸವಕ್ ಎಂಬ ಸರ್ಕಾರಿ ಪೋಲಿಸರನ್ನು ಬಳಸಿ ಚಳವಳಿ ಯನ್ನು ಹತ್ತಿಕ್ಕಲು ಪ್ರಯತ್ನ ನಡೆಸಿದರು. ಆದರೆ ಇದು ಸಾವಿರಾರು ಜನರ ಸಾವಿಗೆ ಕಾರಣವಾಯಿತು. ದಿನದಿಂದ ದಿನಕ್ಕೆ ಚಳವಳಿ ಉಗ್ರರೂಪ ಪಡೆದುಕೊಂಡಿತು. 1964ರಲ್ಲಿ ಧಾರ್ಮಿಕ ಮುಂದಾಳು ದೇಶಭ್ರಷ್ಟನಾಗಿ ಫ್ರಾನ್ಸ್‌ಗೆ ಗಡಿಪಾರಾದರೂ ಸಹ ಅಲ್ಲಿಂದಲೇ ಚಳವಳಿಗಾರರಿಗೆ ಕುಮ್ಮಕ್ಕು ನೀಡಿದ. ಇದು 1979ರ ಪ್ರಾರಂಭದ ತನಕ ಉಗ್ರರೂಪ ತಳೆಯಿತು. ಜನತೆಯ ಪ್ರತಿಭಟನೆಯನ್ನು ಎದುರಿಸಲಾರದೆ 1979ರ ಜನವರಿಯಲ್ಲಿ ದೊರೆ ಮಹಮ್ಮದ್ ರೇಜಾಷಾ ದೇಶಪರಿತ್ಯಾಗ ಮಾಡಿ ಈಜಿಪ್ಟ್‌ಗೆ ಹೋದ. ಇರಾನಿಗೆ ವಾಪಸಾದ ಚಳವಳಿಯ ನೇತಾರ ಆಯಾತುಲ್ಲಾ ಅಲ್ ಖೋಮೇನಿ ಇರಾನಿನಲ್ಲಿ ರಾಜಪ್ರಭುತ್ವವನ್ನು ರದ್ದುಗೊಳಿಸಿ ಧಾರ್ಮಿಕ ಪ್ರಭುತ್ವಕ್ಕೆ ನಾಂದಿ ಹಾಡಿದ. 1979ರಿಂದೀಚೆಗೆ ಇರಾನಿನ ರಾಜಕೀಯ ವ್ಯವಸ್ಥೆ ಇಸ್ಲಾಂ ಧಾರ್ಮಿಕ ವ್ಯವಸ್ಥೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಸ್ಲಾಮಿಕ್ ಧಾರ್ಮಿಕ ಮಂಡಳಿ ಷೆರಿಯತ್ ರಾಷ್ಟ್ರದ ಉನ್ನತ ಸ್ಥಾನಮಾನ ಹೊಂದಿದೆ. 1980–88ರ ನಡುವೆ ಇರಾನ್–ಇರಾಕ್ ಯುದ್ಧ ಸಂಭವಿಸಿದ್ದು ಇರಾನಿನ ಆರ್ಥಿಕ ಹಿನ್ನೆಡೆಗೆ ಕಾರಣವಾಗಿತ್ತು. ದಕ್ಷನಾಯಕತ್ವ ನಿರ್ದಿಷ್ಟ ಗುರಿಯನ್ನು ಹೊಂದಿರುವ ಕ್ರಾಂತಿ ಅನಂತರದ ಸರ್ಕಾರ ಆರ್ಥಿಕ ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ. ಅಬೋಲ್ಹಾಸ್ ಬಾಷಿಸದರ್, ಅಲಿ ಖಮೇನಿ, ಹಷ್ಮಿ ರಫ್ಸಾಂಜಾನಿ, ಅಲಿ ಕಟಾಮಿ ಅನಂತರದಲ್ಲಿ ಆಡಳಿತಕ್ಕೆ ಬಂದಿರುವ ಮುಹಮುದ್ ಅಹ್ಮದಿಸಿಜದ್ (2005 ರಿಂದ) ಇರಾನಿನ ಆರ್ಥಿಕ ಪ್ರಗತಿ ಹಾಗೂ ರಾಜಕೀಯ ಬೆಳವಣಿಗೆಯಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದ್ದಾರೆ.

ಇರಾನ್ ದೇಶದ ಪ್ರಮುಖ ಸಂಪನ್ಮೂಲ ಪೆಟ್ರೋಲಿಯಂ ತೈಲ ಹಾಗೂ ನೈಸರ್ಗಿಕ ಅನಿಲ. ಪ್ರಪಂಚದಲ್ಲೆ ಅನಿಲ ದಾಸ್ತಾನಿನಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಚಾರಿತ್ರಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಇರಾನ್ ಪ್ರಪಂಚದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಪರ್ಸೆಪಲೀಸ್, ನಜ್ದ, ಸೂಸ, ಹಮಾದನ್, ನೀಷಾಪೂರ್‌ನಲ್ಲಿರುವ ಪ್ರಾಚೀನ ಸ್ಮಾರಕಗಳಿಂದಾಗಿ ಹೆಸರುವಾಸಿಯಾಗಿದೆ. (ಎಸ್.ಎನ್.;ಎ.ಎಂ.ಆರ್.;ಸಿ.ಜಿ.ಎಸ್.)

**ಇರಾನಿನ ಆರ್ಥಿಕ ಚಟುವಟಿಕೆ: ಕೃಷಿ:** ಇರಾನಿನ ಉತ್ಪಾದನೆಯ ಹೆಚ್ಚಿನ ಅಂಶ ಕೃಷಿ ವಸ್ತುಗಳೇ. ಇಲ್ಲಿನ ಮುಖ್ಯ ಬೆಳೆಯೆಂದರೆ ಗೋದಿ, ಬಾರ್ಲಿ, ಬತ್ತ, ಟೀ, ಅಂಜೂರ, ಹತ್ತಿ, ಹೊಗೆಸೊಪ್ಪು ಮತ್ತು ಅಫೀಮು. ಉತ್ತರ ಇರಾನಿನಲ್ಲಿ ಅಧಿಕ ಮಳೆ ಇದ್ದು ವಿಶೇಷ ಫಸಲನ್ನು ತೆಗೆಯಲಾಗುತ್ತದೆ. ಆದರೆ ದಕ್ಷಿಣದಲ್ಲಿ ಪದೇ ಪದೇ ಕೊರತೆಯಿರು ತ್ತದೆ. ಇರಾನಿನಲ್ಲಿ ಅಫೀಮಿನ ಉತ್ಪಾದನೆ ಪ್ರಪಂಚದಲ್ಲಿ ಔಷಧ ತಯಾರಿಕೆಗೆ ಅಗತ್ಯವಾದ ಪ್ರಮಾಣದ 3ರಷ್ಟಿದೆ ಎಂದು ಅಂದಾಜು ಮಾಡಲಾಗಿದೆ. ಅಫೀಮನ್ನು ಸೇವಿಸುವ ಪರಿಪಾಠವನ್ನು ಇರಾನಿನ ಜನ ಬೆಳೆಸಿಕೊಂಡಿದ್ದಾರೆ. ಇಲ್ಲಿನ ಬೇಸಾಯಕ್ರಮ ತೀರ ಹಿಂದುಳಿದಿದೆ. ತಲಾ ಉತ್ಪಾದನೆ ಹಾಗೂ ಎಕರೆಯೊಂದರ ಉತ್ಪಾದನೆ ತೀರ ಹಿಂದಿದ್ದು, ಕೃಷಿ ರಂಗದಲ್ಲಿ ಅದ್ಭುತ ಪ್ರಗತಿಯೇನೂ ಸಾಧಿತವಾಗಿಲ್ಲ. ಇತ್ತೀಚೆಗೆ ಅಮೆರಿಕದ ಸಹಾಯದಿಂದ ಕೃಷಿರಂಗದಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತಿದೆ. ಆದರೂ ಪಟ್ಟಣದ ಸಮೀಪದ ಹಳ್ಳಿಗಳನ್ನು ಬಿಟ್ಟರೆ ಉಳಿದ ಕಡೆ ಕೃಷಿಪದ್ಧತಿ ಪುರಾತನಕ್ರಮದಲ್ಲೇ ನಡೆಯುತ್ತಿದೆ.

**ಕೈಗಾರಿಕೆ:** ಕೈಗಾರಿಕೆಯ ಕ್ಷೇತ್ರದಲ್ಲೂ ಇರಾನ್ ಹಿಂದುಳಿದಿದೆ. ಇತ್ತೀಚೆಗೆ ಸ್ಥಾಪಿತವಾಗಿ ರುವ ಉದ್ಯಮಗಳೆಂದರೆ ಸಕ್ಕರೆ, ಜವಳಿವಸ್ತು, ಚರ್ಮ, ಸಿಮೆಂಟ್ ಮತ್ತು ಗಾಜಿನ ಕಾರ್ಖಾನೆಗಳು. ಇವು ಯಾವುವೂ ಇರಾನಿಗೆ ಅಗತ್ಯವಿರುವಷ್ಟು ವಸ್ತುಗಳನ್ನು ಉತ್ಪಾದಿಸುತ್ತಿಲ್ಲ. ಆದರೆ ಕುಶಲ ಕೈಗಾರಿಕೆಗಳು ರಾಷ್ಟ್ರದಾದ್ಯಂತ ಹರಡಿವೆ. ಕಂಬಳಿ ತಯಾರಿಕೆ, ಕಸೂತಿ, ನೇಯ್ಗೆ, ಇವು ಮುಖ್ಯವಾದವು. ಇರಾನಿನ ಕೈಕೆಲಸ, ಕಸೂತಿ ಕೆಲಸ ಬಹಳ ಪ್ರಸಿದ್ಧವಾಗಿವೆ.

**ವಾಣಿಜ್ಯ:** ಇರಾನ್ ತಾನು ಉತ್ಪಾದಿಸುವ ಹೆಚ್ಚಿನ ವಸ್ತುಗಳನ್ನು ತನ್ನ ಅನುಭೋಗಕ್ಕೆ ಉಪಯೋಗಿಸಿಕೊಳ್ಳುತ್ತದೆ. ಈ ದೇಶದ ಮುಖ್ಯ ನಿರ್ಯಾತ ವಸ್ತುಗಳೆಂದರೆ ತೈಲ, ಅಫೀಮು, ಕಚ್ಚಾ ಎಣ್ಣೆ, ಚರ್ಮ, ಒಣಗಿಸಿದ ಹಣ್ಣುಗಳು, ಕಚ್ಚಾ ರೇಷ್ಮೆ ಮತ್ತು ಗೋಂದು. ಇರಾನ್ ಆಯಾತ ಮಾಡಿಕೊಳ್ಳುವ ಮುಖ್ಯ ವಸ್ತುಗಳೆಂದರೆ ಸಕ್ಕರೆ, ಟೀ, ಕಬ್ಬಿಣ ಮತ್ತು ಉಕ್ಕು, ಕಾರುಗಳು, ಯಂತ್ರ ಕಾಗದ, ವಿದ್ಯುತ್ ಸಲಕರಣೆಗಳು. ಎರಡನೆಯ ಮುಹಾಯುದ್ಧಾನಂತರ ಇರಾನಿನ ವಿದೇಶೀ ವ್ಯಾಪಾರಕ್ಕೆ ಧಕ್ಕೆಯುಂಟಾಯಿತು. ರಾಷ್ಟ್ರವನ್ನು ಆವರಿಸಿದ ಹಣದ ಉಬ್ಬರದಿಂದ ವಾಣಿಜ್ಯದ ಮೇಲೆ ತೀವ್ರ ಪರಿಣಾಮ ಉಂಟಾಯಿತು.

**ಬ್ಯಾಂಕ್ ವ್ಯವಸ್ಥೆ:** 1889ರಲ್ಲಿ ಸ್ಥಾಪಿತವಾದ ಇಂಪೀರಿಯಲ್ ಬ್ಯಾಂಕ್ ಆಫ್ ಇರಾನ್ ಎಂಬ ಬ್ರಿಟಿಷ್ ಬ್ಯಾಂಕು ಅನೇಕ ದಶಕಗಳ ವರೆಗೆ ಬ್ಯಾಂಕ್ ಚಟುವಟಿಕೆಗಳನ್ನು ನಡೆಸುತ್ತ ಬಂತು. ಆದರೆ 1927ರಲ್ಲಿ ಇರಾನ್ ಸರ್ಕಾರದ ನ್ಯಾಷನಲ್ ಬ್ಯಾಂಕಿನ (ಬ್ಯಾಂಕ್–ಇ–ಮಿಲ್ಲಿ) ಅಸ್ತಿತ್ವದ ಅನಂತರ ಇಂಪೀರಿಯಲ್ ಬ್ಯಾಂಕಿನ ವ್ಯವಹಾರ ಸಂಪೂರ್ಣವಾಗಿ ಮಾಯವಾಯಿತು. ಈಗ ನ್ಯಾಷನಲ್ ಬ್ಯಾಂಕು ತೀರ ಪ್ರಭಾವಶಾಲಿಯಾಗಿದೆ. ಅದು ಕೇಂದ್ರಿಯ ಬ್ಯಾಂಕ್ ಮಾತ್ರವೇ ಅಲ್ಲದೆ ಸರ್ಕಾರದ ಬ್ಯಾಂಕ್ ಸಹ ಆಗಿದೆ. ಸರ್ಕಾರದ ಪರವಾಗಿ ನೋಟು ಚಲಾವಣೆ ಮಾಡುವುದು ಈ ಬ್ಯಾಂಕಿನ ಅತಿ ಮುಖ್ಯ ಕಾರ್ಯಗಳಲ್ಲೊಂದು. ಇದಲ್ಲದೆ. ಸರ್ಕಾರದಿಂದ ಸ್ಥಾಪಿತವಾದ ಕೃಷಿ ಬ್ಯಾಂಕ್, ಕೈಗಾರಿಕಾ ಬ್ಯಾಂಕ್ ಮತ್ತು ಅಡಮಾನ ಬ್ಯಾಂಕ್‌ಗಳಿಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಯೋನ್ಮುಖವಾಗಿವೆ. ಈ ನಾಲ್ಕು ಬ್ಯಾಂಕುಗಳು ಇರಾನಿನ ಆರ್ಥಿಕ ಪ್ರಗತಿಗಾಗಿ ಶ್ರಮಿಸುತ್ತಿವೆ.

**ಸಾರಿಗೆ:** ಕೇವಲ 1930ರಿಂದೀಚೆಗೆ ರೈಲ್ವೆ ಮತ್ತು ಆಧುನಿಕ ಸಾರಿಗೆ ವ್ಯವಸ್ಥೆ ಪ್ರಧಾನವಾಗು ತ್ತಿದೆ. ಆದರೂ ಹಳ್ಳಿಗಳಲ್ಲಿ ಒಂಟೆ ಕುದುರೆ, ಹೇಸರಗತ್ತೆ ಮತ್ತು ಕತ್ತೆಗಳು ಇನ್ನೂ ಹೆಚ್ಚು ಹೆಚ್ಚು ಬಳಕೆಯಲ್ಲಿವೆ. ಯುದ್ಧಕಾಲದಲ್ಲಿ ಸಾರಿಗೆ ಅನುಕೂಲಕ್ಕಾಗಿ ಪರ್ಷಿಯ ಕೊಲ್ಲಿಯಿಂದ ಕಾಜ್‌ವಿನ್‌ವರೆಗೆ ಒಂದು ಅಂತರ್ದೇಶಿಯ ಹೆದ್ದಾರಿಯ ನಿರ್ಮಾಣವಾಯಿತು. 1937ರ ಆಗಸ್ಟ್ 28ರಂದು ಪರ್ಷಿಯನ್ ಕೊಲ್ಲಿಯಿಂದ ಕ್ಯಾಸ್ಪಿಯನ್ ಸಮುದ್ರದ ವರೆಗೆ, 875 ಮೈಲಿಗಳ ರೈಲ್ವೆ ಸಂಚಾರ ಪ್ರಾರಂಭವಾಯಿತು. 1946ರಲ್ಲಿ ವಿಮಾನ ವ್ಯವಸ್ಥೆ ಆರಂಭವಾಯಿತು.

**ಪೆಟ್ರೋಲಿಯಂ:** ಪೆಟ್ರೋಲಿಯಂ ಸಂಪತ್ತು ಇರಾನಿನ ವರಪ್ರಸಾದವೆಂದು ಹೇಳಬಹುದು. ಪ್ರತಿಯೊಂದು ತೈಲಕ್ಷೇತ್ರವನ್ನೂ ಒಂದೊಂದು ಘಟಕವಾಗಿ ವ್ಯವಸ್ಥೆಗೊಳಿಸಲಾಗಿದ್ದು, ವೈಜ್ಞಾನಿಕವಾಗಿ ತೈಲ ತೆಗೆಯಲಾಗುತ್ತಿದೆ. ಇದನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ನಿರ್ವಹಿಸಲಾಗುತ್ತಿದೆ. 1930ರಲ್ಲಿ ಪರಿಷ್ಕೃತ ತೈಲದ ಉತ್ಪಾದನೆ ಸುಮಾರು 50,00,000 ಮೆಟ್ರಿಕ್ ಟನ್ನುಗಳಷ್ಟಿತ್ತು. 1938ರಲ್ಲಿ ಅದು ಸುಮಾರು 1,05,00,000 ಮೆಟ್ರಿಕ್ ಟನ್ನುಗಳಿಗೇರಿತು. 1950ರಲ್ಲಿ 3,20,00,000 ಮೆಟ್ರಿಕ್ ಟನ್‌ಗಳಿಗೇರಿತು. ಹಾಫ್ ಕೇಲ್ ನಫ್–ಇ–ಸಫಿದ್, ಆಗಾಜಾರಿ ಮತ್ತು ಗಾಜ್ ಸರಾನ್‌ನಲ್ಲಿ ಅದ್ಭುತ ಪ್ರಮಾಣದ ತೈಲದ ನಿಕ್ಷೇಪಗಳು ಸಿಕ್ಕಿವೆ. ತೈಲದ ಉತ್ಪಾದನೆ ವೃದ್ಧಿಯಾಗುತ್ತಿವೆ. ಆಗ್ನೇಯ ಮಕ್ರಾನ್ ಮತ್ತು ಮಧ್ಯ ಇರಾನಿನಲ್ಲಿ ತೈಲ ನಿಕ್ಷೇಪಗಳಿವೆ ಎಂದೂ ನಿರೀಕ್ಷಿಸಲಾಗಿದೆ. ವಿದೇಶಿ ಕಂಪನಿಗಳು ಪ್ರಾರಂಭದಿಂದಲೂ ತೈಲ ಉತ್ಪಾದಿಸುವುದರಲ್ಲಿ ತೊಡಗಿವೆ. 1949ರಿಂದೀಚೆಗೆ ತೈಲ ಉದ್ಯಮವನ್ನು ರಾಷ್ಟ್ರೀಕರಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಲಾಯಿತು. ಆದರೆ ಆಗಿನ ಪ್ರಧಾನಿ ಅಲಿ ರಾಜ್ಮಾರ ಇದನ್ನು ವಿರೋಧಿಸಿದ. 1951ರಲ್ಲಿ ಅವನ ಕೊಲೆಯಾಯಿತು. ಮುಂದಿನ ಪ್ರಧಾನಿ ಮಸಾದಿಕ್ ತೈಲ ಉದ್ಯಮವನ್ನು ರಾಷ್ಟೀಕರಿಸಿದ. ಇದರಿಂದಾಗಿ ಬ್ರಿಟಿಷ್ ತೈಲ ಉದ್ಯಮಿಗಳು ಇರಾನಿನಿಂದ ನಿರ್ಗಮಿಸಬೇಕಾಗಿ ಬಂದು ತೈಲೋತ್ಪಾದನೆ ಸ್ಥಗಿತಗೊಂಡಿತು. 1953ರಲ್ಲಿ ಸರ್ಕಾರ ಬದಲಾಗಿ ಹೊಸ ಪ್ರಧಾನಿ ಬಂದ. 1953ರಲ್ಲಿ ಮತ್ತೆ ವಿದೇಶಿ ಉದ್ಯಮಿಗಳಿಗೆ ಸ್ವಾಗತ ದೊರಕಿತು. 1954ರಲ್ಲಿ ಅಂತರರಾಷ್ಟ್ರೀಯ ತೈಲ ಸಂಸ್ಥಾಕೂಟಗಳು ತೈಲೋತ್ಪಾದನೆ ಮಾಡುವಂತೆ ಒಡಂಬಡಿಕೆಯಾಯಿತು. ಈ ಪ್ರದೇಶದ ಇತರ ರಾಷ್ಟ್ರಗಳಲ್ಲಿ ಕೊಡುವ ಲಾಭಾಂಶದ ದರವನ್ನೇ ಇರಾನಿಗೂ ಕೊಡುವ ಏರ್ಪಾಡಾಯಿತು.

**ಕಾರ್ಮಿಕ ಚಳವಳಿ:** 1947 ರವರೆಗೆ ಇರಾನಿನಲ್ಲಿ ಕಾರ್ಮಿಕ ಸಂಘಗಳಿರಲಿಲ್ಲ. ಅದಕ್ಕೆ, ಮೊದಲು ವೃತ್ತಿಸಂಘಗಳು ಅಸ್ತಿತ್ವದಲ್ಲಿದ್ದವು. ತೈಲಕೇಂದ್ರಗಳು. ರೈಲ್ವೆನಿರ್ಮಾಣ. ಹೊಸ ಕಾರ್ಖಾನೆಗಳ ಪ್ರಾರಂಭ – ಇವು ಕಾರ್ಮಿಕ ಚಟುವಟಿಕೆಗಳನ್ನು ವೃದ್ಧಿಗೊಳಿಸಿದವು. 1942ರಲ್ಲಿ ಕಾರ್ಮಿಕ ಸಂಘಗಳನ್ನು ಪ್ರಾರಂಭಿಸಲಾಯಿತು. ಸೋವಿಯತ್ ಒಕ್ಕೂಟಕ್ಕೆ ಹೋಗಿ ಬಂದವರು ಇವುಗಳ ಸ್ಥಾಪನೆಗೆ ಕಾರಣರು. ಕೇಂದ್ರ ಕಾರ್ಮಿಕ ಸಮಿತಿಯಲ್ಲಿ ಹೆಚ್ಚಾಗಿ ರಾಜಕೀಯ ಪಟುಗಳೇ ತುಂಬಿದ್ದು ಅವರು ಸೋವಿಯತ್ ಒಕ್ಕೂಟದ ರಕ್ಷಣೆಯಿಂದ ಒಂದು ರಾಜಕೀಯ ಪಕ್ಷವನ್ನು ಸಹ ಕಟ್ಟಿದರು. ಆದರೆ 1946ರಲ್ಲಿ ಸೋವಿಯತ್ ಒಕ್ಕೂಟ ತನ್ನ ಸೇನೆಯನ್ನು ಇರಾನಿನಿಂದ ಹಿಂದೆಗೆದುಕೊಂಡ ಅನಂತರ, ಕಾರ್ಮಿಕ ಸಂಘದ ಬಲಹೀನ ಚಟುವಟಿಕೆಗಳಿಂದಾಗಿ ಅದರ ಪ್ರಭಾವ ಕಡಿಮೆಯಾಯಿತು. 1947ರ ಅನಂತರ ಕಾರ್ಮಿಕರ ಕೇಂದ್ರ ಸಿಂಡಿಕೇಟನ್ನು ಸರ್ಕಾರವೇ ನಿರ್ದೇಶಿಸಿತು. ಇವಲ್ಲದೆ ಸಣ್ಣ ಸಣ್ಣ ಕಂಪನಿಗಳಲ್ಲಿ ಕಾರ್ಮಿಕ ಸಂಘಗಳಿವೆ. ಆದರೆ ಅವು ಕಾರ್ಮಿಕ ಚಟುವಟಿಕೆಗಳಲ್ಲಿ ಅಷ್ಟು ಪ್ರಮುಖ ಪಾತ್ರ ವಹಿಸುತ್ತಿಲ್ಲ. ಇರಾನಿನ ಕಾರ್ಮಿಕ ಸಂಘಗಳ ಮುಖ್ಯ ಲಕ್ಷಣಗಳೆಂದರೆ. ಇವು ಕಾರ್ಮಿಕರಿಗೆ ಒಳಿತು ಮಾಡುವುದರಲ್ಲಿ ಅಷ್ಟೇನೂ ಸಮರ್ಥವಾಗಿಲ್ಲ. ಕಾರ್ಮಿಕ ಶಾಸನಗಳು ಸಹ ಬಹು ಬಲಹೀನವಾಗಿವೆ.

**ಆರ್ಥಿಕ ಯೋಜನೆಗಳು:** ಎರಡನೆಯ ಮಹಾಯುದ್ಧಾನಂತರ, ಇರಾನಿನ ಆರ್ಥಿಕ ಪ್ರಗತಿಗೆ ಯೋಜನೆಯನ್ನು ರೂಪಿಸುವುದು ಅಗತ್ಯವೆಂದು ಮನಗಾಣಲಾಯಿತು. ಅದಕ್ಕಾಗಿ ಸಹಾಯ ಮಾಡಲು ಅಮೆರಿಕದ ಸಂಸ್ಥೆಯೊಂದರ ನೆರವನ್ನು ಪಡೆದುಕೊಳ್ಳಲಾಯಿತು. ಇರಾನಿನ ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಯೋಜನೆಯಲ್ಲಿ ಕೃಷಿಗೆ ಪ್ರಧಾನ್ಯ ಕೊಡಬೇಕೆಂದು ಈ ಸಂಸ್ಥೆ ಸಲಹೆ ಮಾಡಿತು. ಹೀಗೆ ಮಾಡಿದಲ್ಲಿ ರಾಷ್ಟ್ರದ ವಿದೇಶಿ ವಿನಿಮಯ ಆಯಾತ ಇತ್ಯಾದಿ ಸಮಸ್ಯೆಗಳು ಬಗೆ ಹರಿಯುವುದೆಂದು ತಿಳಿಸಿತು. ಆದರೆ ಇರಾನ್ ಸರ್ಕಾರದ ಒಲವು ಕೃಷಿಗಿಂತ ಕೈಗಾರಿಕಾ ಪ್ರಗತಿಯ ಕಡೆಗಿದ್ದುದರಿಂದ ಇರಾನಿನ ಪ್ರಥಮ ಯೋಜನೆಯಲ್ಲಿ ಕೈಗಾರಿಕೆಗೆ ಪ್ರಾಧಾನ್ಯ ದೊರೆಯಿತು.

**ಪ್ರಥಮ ಯೋಜನೆ:** 1949ರಲ್ಲಿ ಪ್ರಥಮ ಸಪ್ತವಾರ್ಷಿಕ ಆರ್ಥಿಕ ಯೋಜನೆಯನ್ನು ಪ್ರಾರಂಭಿಸಲಾಯಿತು. ಇದರ ಒಟ್ಟು ವೆಚ್ಚ 16 ಕೋಟಿ ಪೌಂಡುಗಳಷ್ಟಿತ್ತು. ಇದರಲ್ಲಿ 25%ರಷ್ಟು ಕೃಷಿಗೂ 25%ರಷ್ಟು ಸಾರಿಗೆಗೂ ಉಳಿದದ್ದನ್ನು ಕೈಗಾರಿಕೆ ಹಾಗೂ ಸಮಾಜ ಕಲ್ಯಾಣಕ್ಕೂ ವೆಚ್ಚ ಮಾಡಬೇಕೆಂದು ನಿರ್ಧರಿಸಲಾಯಿತು. ಯೋಜನೆಯ 1/3ರಷ್ಟು ಹಣವನ್ನು ತೈಲ ಉತ್ಪಾದನಾ ರಂಗದಿಂದಲೂ 1/3ರಷ್ಟನ್ನು ರಾಷ್ಟ್ರದ ಉತ್ಪನ್ನದಿಂದಲೂ ಉಳಿದದ್ದನ್ನು ಅಂತರರಾಷ್ಟ್ರೀಯ ಬ್ಯಾಂಕಿನಿಂದಲೂ ಪಡೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಆದರೆ ಅಂತರರಾಷ್ಟ್ರೀಯ ಬ್ಯಾಂಕಿನಿಂದ ಯೋಜನೆಗೆ ಸಹಾಯ ಲಭಿಸಲಿಲ್ಲ. ತೈಲ ಉತ್ಪನ್ನದ ರಾಷ್ಟ್ರೀಕರಣದ ಗೊಂದಲದಿಂದ ಅದರಿಂದಲೂ ಹಣ ಪಡೆದುಕೊಳ್ಳಲಾಗಲಿಲ್ಲ. ಹೀಗಾಗಿ ಮೊದಲನೆಯ ಯೋಜನೆಯ ವೆಚ್ಚ ಕೇವಲ 5ಕೋಟಿ ಪೌಂಡುಗಳಲ್ಲೆ ಮುಕ್ತಾಯವಾಯಿತು.

**ದ್ವಿತೀಯ ಯೋಜನೆ:** 1956ರಲ್ಲಿ ಎರಡನೆಯ ಸಪ್ತ ವಾರ್ಷಿಕ ಯೋಜನೆಯನ್ನು ರೂಪಿಸಲಾಯಿತು. ಇದರ ವೆಚ್ಚವನ್ನು 40 ಕೋಟಿ ಪೌಂಡುಗಳೆಂದು ನಿಗದಿ ಮಾಡಲಾಯಿತು. ಈ ವೆಚ್ಚದ ಹೆಚ್ಚು ಭಾಗವನ್ನೂ ತೈಲೋತ್ಪಾದನೆಯ ರಂಗದಿಂದ ಪಡೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಎರಡನೆಯ ಸಪ್ತವಾರ್ಷಿಕ ಯೋಜನೆಯಲ್ಲಿ ಸಂಪರ್ಕಕ್ಕೆ ಯೋಜನೆಯಲ್ಲಿ ಸಂಪರ್ಕಕ್ಕೆ ಆದ್ಯತೆ ಕೊಡಲಾಯಿತು. ಒಟ್ಟು ಕೃಷಿ. ಹಾಗೂ ಸಮಾಜಕಲ್ಯಾಣಕ್ಕೆ ತಲಾ 25%ರಷ್ಟನ್ನೂ ಕೈಗಾರಿಕೆಗೆ 15%ರಷ್ಟನ್ನೂ ಪಡೆಯುವುದೆಂದಾಯಿತು. ಆದರೆ ಈ ಯೋಜನೆ ಸಹ ಆರ್ಥಿಕ ಸಂಕಟಕೊಳ್ಳಗಾಗಬೇಕಾಯಿತು. ಆದ್ದರಿಂದ ತೈಲ ಉತ್ಪಾದನಾ ರಂಗದಿಂದ ಸರ್ಕಾರವೇ ಹೆಚ್ಚು ಹಣವನ್ನು ಪಡೆದುಕೊಂಡು ಯೋಜನೆಗೆ ಉತ್ಪಾದನೆಯ 55%ರಷ್ಟನ್ನೂ ಮಾತ್ರ ಬಿಟ್ಟುಕೊಟ್ಟಿತು. ತೈಲೋತ್ಪಾದನೆಯ ರಂಗದಿಂದ 60–80%ರಷ್ಟು ಯೋಜನಾ ವೆಚ್ಚ ದೊರಕುವುದೆಂದು ಯೋಜನೆಯಲ್ಲಿ ನಿರೀಕ್ಷಿಸಲಾಗಿತ್ತು. ಆದರೆ ಕೊರತೆಯ ಬಹುಪಾಲು ಹಣವನ್ನು ಇರಾನ್ ಅಮೆರಿಕದ ನೆರವಿನಿಂದಲೂ ಅಂತರರಾಷ್ಟ್ರೀಯ ಬ್ಯಾಂಕಿನ ಸಾಲದಿಂದಲೂ ತುಂಬಿಕೊಂಡಿತು. 1960–64ರ ಅವಧಿಯಲ್ಲಿ ಆರ್ಥಿಕ ಯೋಜನೆ, ಹಣದ ಉಬ್ಬರ ಹಾಗೂ ವಿದೇಶಿ ವಿನಿಮಯ ಕೊರತೆಯ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೆ ಈ ಸಮಸ್ಯೆಗಳನ್ನು ಯೋಜನೆ ಸಮರ್ಥವಾಗಿ ಎದುರಿಸಿತು.

**ಮೂರನೆಯ ಯೋಜನೆ:** ಸೆಪ್ಟೆಂಬರ್ 1962–ಮಾರ್ಚ್ 1968. ಇದರಲ್ಲಿ ಖಾಸಗಿ ರಂಗಕ್ಕೆ ಪ್ರಾಧಾನ್ಯ ಕೊಟ್ಟಿದೆ. ಮೊದಲ ಎರಡು ಯೋಜನೆಗಳಲ್ಲಿ ಖಾಸಗಿ ರಂಗದ ಆರ್ಥಿಕ ಚಟುವಟಿಕೆಗಳಲ್ಲಿ ಗಮನ ಕೊಟ್ಟಿರಲಿಲ್ಲ. ಮೊದಲೆರಡು ಯೋಜನೆಯಲ್ಲಿ ಬೃಹತ್ ಯೋಜನೆಗಳನ್ನು ಹಾಕಿಕೊಂಡು ಅದರಲ್ಲಿ ಹಣ ತೊಡಗಿಸಲಾಗಿತ್ತು. ಆದರೆ ಮೂರನೆಯ ಯೋಜನೆಯಲ್ಲಿ ಸಣ್ಣ ಸಣ್ಣ ಆರ್ಥಿಕ ಯೋಜನೆಗಳಿಗೆ ವಿಶೇಷ ಅಧ್ಯಯನ ಕೊಡಲಾಯಿತು. ಉದಾಹರಣೆಗೆ, ಸಣ್ಣ ನೀರಾವರಿ ಯೋಜನೆ. ಹಳ್ಳಿ ಹಳ್ಳಿಗಳಿಂದ ಮುಖ್ಯ ಹೆದ್ದಾರಿಗಳಿಗೆ ರಸ್ತೆಗಳನ್ನು ಕೂಡಿಸುವುದು, ಪ್ರಾದೇಶಿಕವಾಗಿ ದೊರಕುವ ಕೈಗಾರಿಕೆಗಳನ್ನು ಸ್ಥಾಪಿಸುವುದು ಇತ್ಯಾದಿ. ಮೂರನೆಯ ಯೋಜನೆಗೆ ಒಟ್ಟು ವೆಚ್ಚ 266 ಕೋಟಿ ಡಾಲರುಗಳೆಂದು ನಿಗದಿ ಮಾಡಲಾಯಿತು. ಇದರಲ್ಲಿ ಕೃಷಿರಂಗಕ್ಕೆ 59.4ಕೋಟಿ ಡಾಲರುಗಳೂ ಸಾರಿಗೆ ಹಾಗೂ ಸಂಪರ್ಕಕ್ಕೆ 266 ಕೋಟಿ ಡಾಲರುಗಳೂ ಕೈಗಾರಿಕೆ ಹಾಗೂ ಗೇಣಿಗೆ 28.9 ಕೋಟಿ ಡಾಲರುಗಳೂ ದೊರೆತಿದ್ದವು. ಒಟ್ಟು ವೆಚ್ಚದ 80% ರಷ್ಟನ್ನು ತೈಲ ಉತ್ಪಾದನೆಯ ರಂಗದಿಂದ ಪಡೆದುಕೊಳ್ಳಬೇಕೆಂದು ಉದ್ದೇಶಿಸಲಾಗಿತ್ತು. ಮೂರನೆಯ ಯೋಜನೆಯ ಅವಧಿಯಲ್ಲಿ ಇರಾನಿಗೆ ಸಾಕಷ್ಟು ವಿದೇಶಿ ನೆರವು ದೊರೆಯಿತು. ಈ ನೆರವನ್ನು ಸೋವಿಯತ್ ಒಕ್ಕೂಟ, ಹಂಗೆರಿ, ಪೋಲೆಂಡ್, ಪಶ್ಚಿಮ ಜರ್ಮನಿ, ಫ್ರಾನ್ಸ್, ಜಪಾನ್, ಬ್ರಿಟನ್, ವಿಶ್ವಬ್ಯಾಂಕುಗಳಿಂದ ಪಡೆದುಕೊಂಡಿತು. ಈ ವಿದೇಶಿ ನೆರವಿನ ಹೆಚ್ಚಳದಿಂದಾಗಿ ಹಾಗೂ ತೈಲ ಉತ್ಪಾದನೆಯ ರಂಗದಿಂದ ಬಂದ ಹಣದ ಆಧಿಕ್ಯದಿಂದಾಗಿ ಯೋಜನೆಯ ವೆಚ್ಚವನ್ನು 266.5 ಕೋಟಿ ಡಾಲರುಗಳಿಗೆ ಏರಿಸಲಾಯಿತು.

**ನಾಲ್ಕನೆಯ ಅಭಿವೃದ್ಧಿ ಯೋಜನೆ:** ಮಾರ್ಚ್ 1968– ಮಾರ್ಚ್ 1973.ನಾಲ್ಕನೆಯ ಯೋಜನೆಯಲ್ಲಿ 9%ರ ವಾರ್ಷಿಕ ಬೆಳವಣಿಗೆಯಾಗುತ್ತದೆ. ಒಂದು ಇದು ಸಿದ್ಧಿಸಿದರೆ ಇರಾನಿನ ಒಟ್ಟು ರಾಷ್ಟ್ರೀಯ ತಲಾ ವಾರ್ಷಿಕ ಉತ್ಪಾದನೆ ಡಾಲರನ್ನು ಮುಟ್ಟುತ್ತದೆ. ಇರಾನಿನಲ್ಲಿ 65–67ರ ಕೃಷಿರಂಗದ ಪ್ರಗತಿ ಅದ್ಭುತವಿದ್ದು ಈ ಯೋಜನೆಯ ಭವಿಷ್ಯ ಉಜ್ವಲವಿದೆ. ಅದು ಹೆಚ್ಚಿನ ಅಮೆರಿಕನ್ ನೆರವನ್ನು ಈ ಯೋಜನೆಗೆ ಬಯಸುತ್ತಿಲ್ಲ. ಈ ಪಂಚವಾರ್ಷಿಕ ಯೋಜನೆಯ ಒಟ್ಟು ವೆಚ್ಚವನ್ನು 1,100 ಕೋಟಿ ಡಾಲರುಗಳೆಂದು ನಿಗದಿ ಮಾಡಲಾಗಿದೆ. ಇದರಲ್ಲಿ ಸುಮಾರು 59%ರಷ್ಟನ್ನು ತೈಲೋತ್ಪಾದನೆಯ ರಂಗ ಹಾಗೂ ವಿದೇಶಿ ನೆರವಿನಿಂದಲೂ ಉಳಿದದ್ದನ್ನು ಖಾಸಗಿ ರಂಗದಿಂದಲೂ ತೂಗಿಸಬೇಕೆಂದು ನಿಶ್ಚಯಿಸಲಾಗಿದೆ. ಕೈಗಾರಿಕಾರಂಗದಲ್ಲಿ, 26% ರಷ್ಟನ್ನೂ ಕೃಷಿ ಹಾಗೂ ನೀರಾವರಿ ರಂಗದಲ್ಲಿ, 23.5% ರಷ್ಟನ್ನೂ ವೆಚ್ಚ ಮಾಡಬೇಕೆಂದು ನಿರ್ಧರಿಸಲಾಗಿದೆ. ನಾಲ್ಕನೆಯ ಯೋಜನೆಯಲ್ಲಿ ಕೃಷಿ ಹಾಗೂ ನೀರಾವರಿ ಪ್ರಗತಿಗೆ ಬಹಳ ಗಮನ ಕೊಡಲಾಗಿದೆ. ಸಾರಿಗೆ, ಸಂಪರ್ಕದ ಪ್ರಗತಿಯನ್ನೂ ಮನಗಾಣಲಾಗಿದೆ. ಆದರೆ ಒಂದು ಭಯವೆಂದರೆ, ಇವರು ಮನಗಂಡಿರುವ ಮಟ್ಟದಲ್ಲಿ ತೈಲೋತ್ಪಾದನೆಯಾಗದೆ ಯೋಜನೆಗೆ ಮತ್ತೆ ವಿದೇಶೀ ನೆರವನ್ನು ಪಡದುಕೊಳ್ಳಬೇಕಾದ ಸಂದರ್ಭ ಒದಗಿಬರಬಹುದು. ಇದಕ್ಕೆ ಕಾರಣ, ಯೋಜನೆಯ ಅವಧಿಯಲ್ಲಿ ತೈಲ ಉತ್ಪಾದನೆ ವರ್ಷಕ್ಕೆ, 20% ರಂತೆ ಹೆಚ್ಚುತ್ತದೆ ಎಂದು ಅಂದಾಜುಮಾಡಲಾಗಿದೆ. (ಸಿ.ಕೆ.ಆರ್.)

**ಇರಾನಿನ ಇತಿಹಾಸ: ಪ್ರಾಕ್ತನ:** ಕ್ಯಾಸ್ಪಿಯನ್ ಸಮುದ್ರದ ಬಳಿ ಇರುವ ಕೆಮೆನ್ ಶಾ ಎಂಬ ಗುಹೆಯಲ್ಲಿನ ಉತ್ಖನನಗಳಿಂದಲೂ ಈ ದೇಶದ ಹಲವು ಸ್ಥಳಗಳಲ್ಲಿ ದೊರಕಿರುವ ಶಿಲಾಯುಧಗಳಿಂದಲೂ ಇರಾನಿನಲ್ಲಿ ಪೂರ್ವಶಿಲಾಯುಗದ ಸಂಸ್ಕೃತಿಗಳು ಹರಡಿದ್ದವು ಎಂಬ ವಿಷಯ ತಿಳಿದುಬಂದಿದೆ. ಭಕ್ತಿಯಾರಿ ಪರ್ವತ ಪ್ರದೇಶದಲ್ಲಿನ ತಂಗ್–ಇ–ಪಬ್ಬ ಎಂಬ ಗುಹೆಯಲ್ಲಿನ ಅಗೆತದಿಂದ, ಇರಾನಿನ ಜಾರ್ಮೋ, ಹಸ್ಸುವಾ ಮುಂತಾದೆಡೆಗಳಲ್ಲಿ ಬೇಟೆಗಾರ ಜನ ಅಲ್ಲಲ್ಲಿ ನೆಲೆಗೊಂಡು ನವಶಿಲಾಯುಗದ ಜೀವನ ವಿಧಾನದತ್ತ ಪರಿವರ್ತನೆಯನ್ನು ಹೊಂದುತ್ತಿದ್ದ ಕಾಲದ ಸಂಸ್ಕೃತಿಗಳು ಬೆಳಕಿಗೆ ಬಂದಿವೆ. ಈ ಜನ ಕಲ್ಲಿನ ಕೊಡಲಿ ಸುತ್ತಿಗೆ ಮುಂತಾದ ಆಯುಧಗಳನ್ನು ಉಪಯೋಗಿಸುತ್ತಿದ್ದರಲ್ಲದೆ, ಕೈಯಲ್ಲಿ ಮಾಡಿದ ಮಡಕೆಗಳನ್ನೂ ಬಳಸುತ್ತಿದ್ದರು.

ಟೆಹರಾನಿನ ದಕ್ಷಿಣಕ್ಕಿರುವ ಸಿಯಾಲ್ಕಿನಲ್ಲಿ ಇರಾನಿನ ಅತ್ಯಂತ ಪ್ರಾಚೀನ ಗ್ರಾಮದ ಅವಶೇಷಗಳಿವೆ. ಇಲ್ಲಿ ಮೊದಲು ಪ್ರ.ಶ.ಪೂ. ಸು. 5ನೆಯ ಶತಮಾನದಲ್ಲಿ ತಂಗಿದ ಜನ (ಸಿಯಾಲ್ಕ್ 1) ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಕ್ರಮೇಣ ಮಣ್ಣಿನ ಗೋಡೆಗಳನ್ನೂ (ಪುಟದ ಗೋಡೆ) ಕಟ್ಟಲಾರಂಭಿಸಿದರು. ವ್ಯವಸಾಯ ಮತ್ತು ಪಶುಪಾಲನೆ ರೂಢಿಯಲ್ಲಿದ್ದರೂ ಬೇಟೆ ಇನ್ನೂ ಜನರ ಒಂದು ಮುಖ್ಯ ಕಸುಬಾಗಿತ್ತು. ಈ ಕಾಲದಲ್ಲಿ ಹಳೆಯ ರೀತಿಯ

ಕಪ್ಪುಬಣ್ಣದ ಮಡಕೆಗಳ ಜೊತೆಯಲ್ಲಿಯೇ ಒಂದು ಹೊಸ ರೀತಿಯ ಚಿತ್ರಿತ ಮಡಕೆಗಳೂ ಬಳಕೆಗೆ ಬಂದವು. ಚಿತ್ರಣದಲ್ಲಿ ಬುಟ್ಟಿಗಳ ಮೇಲ್ಮೈ ಮಾದರಿಯ ನಮೂನೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಈ ಕಾಲದ ಆಯುಧಗಳೆಲ್ಲವೂ ಕಲ್ಲಿನವು. ಕತ್ತರಿಸುವ ಮತ್ತು ಒರೆಯುವ ಸಾಧನಗಳು, ನಯ ಮಾಡಿದ ಕೊಡಲಿ ಇತ್ಯಾದಿಗಳು ಉಪಯೋಗದಲ್ಲಿದ್ದವು. ಬಟ್ಟೆಯ ನೇಯ್ಗೆ ಸಹ ಆಗಲೇ ರೂಢಿಗೆ ಬಂದಿತ್ತು. ಈ ಕಾಲದ ಕೊನೆಯ ಭಾಗದ ಹೊತ್ತಿಗೆ ತಾಮ್ರವೂ ಬೆಳಕಿಗೆ ಬಂತು. ಆದರೆ ಈ ಕಾಲದ ತಾಮ್ರದ ವಸ್ತುಗಳೆಲ್ಲವೂ ಅದಿರನ್ನು ಜಜ್ಜಿ ರೂಪಿಸಿದವು ಮಾತ್ರ; ಅದಿರನ್ನು ಕರಗಿಸಿ ಎರಕ ಹುಯ್ಯುವ ವಿಧಾನ ಇನ್ನೂ ಪ್ರಚಲಿತವಾಗಿರಲಿಲ್ಲ. ಬಣ್ಣಹಾಕಿದ ಕಲ್ಲಿನ ಮತ್ತು ಚಿಪ್ಪಿನ ಉಂಗುರಗಳು, ದಾರಗಳು ಮುಂತಾದ ಆಭರಣಗಳೂ ಉಪಯೋಗದಲ್ಲಿದ್ದವು. ಈ ಕಾಲದಲ್ಲಾಗಲೇ ಕಲಾಸೃಷ್ಟಿಯೂ ಪ್ರಾರಂಭವಾಯಿತೆಂಬುದಕ್ಕೆ ಎಲುಬಿನಲ್ಲಿ ಕೆತ್ತಿದ ಬೊಂಬೆಗಳು ಸಾಕ್ಷಿಗಳಾಗಿವೆ. ಈ ಕಾಲದಲ್ಲಿ ಮೃತರನ್ನು ಮನೆಯ ಒಳಗೆ ಹೂಳುವ ಪದ್ಧತಿಯಿತ್ತು.

ಪ್ರ.ಶ.ಪೂ 4ನೆಯ ಸಹಸ್ರಮಾನದಲ್ಲಿ ತಾಮ್ರಶಿಲಾಯುಗದ ಹಲವು ಸಂಸ್ಕೃತಿಗಳು ಇರಾನಿನಲ್ಲಿ ಕೆಂಪುಬಣ್ಣದ ಮಡಕೆಗಳು ಪ್ರಚಲಿತವಾಗಿದ್ದ ಸಂಸ್ಕೃತಿಗಳು, ಪಶ್ಚಿಮ ಮತ್ತು ನೈಋತ್ಯ ಇರಾನಿನಲ್ಲಿ ಕಂದುಬಣ್ಣದ ಮಡಕೆಗಳು ಪ್ರಚಲಿತವಾಗಿದ್ದ ಸಂಸ್ಕೃತಿಗಳು ಎಂಬ ಎರಡು ಮುಖ್ಯ ವಿಧಗಳನ್ನು ಗುರುತಿಸಲಾಗಿದೆ. ನಾಗರಿಕತೆಯ ಬೆಳೆವಣಿಗೆಗೆ ಆವಶ್ಯಕವಾದ ಸಾಧನಗಳೆಲ್ಲ ಈ ಕಾಲದಲ್ಲಿಯೇ ರೂಢಿಗೆ ಬಂದವು. ಹಲವು ಉದ್ದೇಶಗಳಿಗಾಗಿ ಉಪಯೋಗಿಸಬಹುದಾದ ನಾನಾ ರೀತಿಯ ಎರಕ ಹುಯ್ದ ತಾಮ್ರದ ವಸ್ತುಗಳು, ಮಡಕೆಗಳನ್ನು ಮಾಡಲು ಚಕ್ರ, ಅವುಗಳನ್ನು ಸುಡಲು ಆವೆ, ಮನೆ ಕಟ್ಟಲು ಅಚ್ಚಿನಿಂದ ತಯಾರಿಸಿದ ಹಸಿಇಟ್ಟಿಗೆ, ಮುಂತಾದವು ಬಳಕೆಗೆ ಬಂದವು. ಈ ಸಂಸ್ಕೃತಿಗಳಿಗೆ ಸಂಬಂಧಿಸಿದ ಮಣ್ಣಿನ ನಗ್ನ ಸ್ತ್ರೀ ಬೊಂಬೆಗಳು ಆ ಕಾಲದ ಧಾರ್ಮಿಕ ನಡೆವಳಿಕೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಮೃತರನ್ನು ಮನೆಯ ಒಳಗೆ ಒಲೆಯ ಬಳಿಯಲ್ಲಿ ಹೂಳುವ ಪದ್ಧತಿ ರೂಢಿಯಲ್ಲಿತ್ತು. ಮಡಕೆಗಳ ಮೇಲೆ ಕಂಡುಬರುವ ಬಣ್ಣದ ಚಿತ್ರಗಳು ಆ ಕಾಲದ ಕಲಾಭಿರುಚಿಯನ್ನು ಪ್ರತಿಬಿಂಬಿಸುತ್ತವೆ. ಮೊದಮೊದಲು ಜ್ಯಾಮಿತಿಕ ನಮೂನೆಗಳು ಉಪಯೋಗದಲ್ಲಿದ್ದರೆ, ಕ್ರಮೇಣ ಪ್ರಾಣಿ ಮತ್ತು ಮನುಷ್ಯನ ಸ್ವಾಭಾವಿಕ ಚಿತ್ರಗಳೂ ಅನಂತರ ಅವುಗಳನ್ನೇ ಸೂಚ್ಯಚಿಹ್ನೆಗಳಿಂದ ವ್ಯಕ್ತಪಡಿಸುವ ವಿಧಾನವೂ ಪ್ರಚಲಿತವಾದವು. ಈ ಮಡಕೆಗಳ ಮೇಲಿನ ಚಿತ್ರಗಳಲ್ಲಿ ಕಂಡುಬರುವ ವಸ್ತುಗಳನ್ನು ಅವುಗಳ ಆಕಾರಕ್ಕೆ ಸಮೀಪದ ಸೂಕ್ತ ಚಿಹ್ನೆಗಳಿಂದ ವ್ಯಕ್ತಪಡಿಸುವ ವಿಧಾನದಿಂದ ಮುಂದೆ ಲಿಪಿಯ ಬೆಳೆವಣಿಗೆಗೆ ಹಾದಿಯಾಯಿತೆಂದು ಕೆಲವರು ಊಹಿಸುತ್ತಾರೆ. ಈ ಕಾಲಕ್ಕೆ ಸಂಬಂಧಿಸಿದ ಅವಶೇಷಗಳನ್ನು ಸಿಯಾಲ್ಕ್, ಸೂಸ, ಸವಾ, ಖೂಮ್, ಗಿಯಾನ್, ಬಕುನ್ ಮುಂತಾದೆಡೆಗಳಲ್ಲಿ ಗುರುತಿಸಲಾಗಿದೆ. ಇದೆಲ್ಲ ಗ್ರಾಮೀಣ ಸಂಸ್ಕೃತಿಗಳು.

ಆದರೆ 4ನೆಯ ಸಹಸ್ರಮಾನದ ಕೊನೆಯ ಭಾಗದಲ್ಲಿಯೇ ಪಕ್ಕದ ಇರಾಕ್ ಪ್ರದೇಶದಲ್ಲಿ ನಗರೀಕರಣದ ಪ್ರಾರಂಭದ ಸೂಚನೆಗಳು ಕಂಡುಬಂದವು. ಇರಾಕಿಗೆ ಸೇರಿದಂತೆಯೇ ಇರುವ ವಾಯವ್ಯ, ಇರಾನ್ ಪ್ರಾಂತ್ಯದಲ್ಲೂ ಅದೇ ರೀತೀಯ ನಾಗರಿಕತೆ ಅನತಿಕಾಲದಲ್ಲೇ ಬೆಳೆಯಿತು. ಈ ಸಹಸ್ರಮಾನದ ಕೊನೆಯಭಾಗದಲ್ಲಿ ಇರಾನ್ ದೇಶಕ್ಕೆ ಹಲವು ಹೊಸ ಸಂಸ್ಕೃತಿಗಳೂ ಕಾಲಿಟ್ಟವು. ಇವೆಲ್ಲವೂ ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಸ್ಥಳೀಯ ಸಂಸ್ಕೃತಿಗಳೊಡನೆ ಬೆರೆತು ಪ್ರವರ್ಧಮಾನ ಹೊಂದಿದವು. 3ನೆಯ ಸಹಸ್ರಮಾನದ ಇರಾನಿ ಸಂಸ್ಕೃತಿಗಳು ಬಹುಮಟ್ಟಿಗೆ ಸುಮೇರಿಯ ಸಂಸ್ಕೃತಿಗಳಿಂದ ಪ್ರಭಾವಿತವಾಗಿದ್ದಂತೆ ಕಂಡುಬರುತ್ತದೆ. ಈ ಕಾಲದಲ್ಲಿ ಬೆಳೆದ ಈ ಎರಡು ದೇಶಗಳ ವ್ಯಾಪಾರಸಂಬಂಧ ಇದಕ್ಕೆ ಕಾರಣವಿರಬಹುದು. ಇರಾನಿನ ಪಶ್ಚಿಮಭಾಗದ ಎಲಾಮ್ ವಿಭಾಗ ಕೆಲಕಾಲ ಸುಮೇರಿಯದ ರಾಜ್ಯಾಡಳಿತಕ್ಕೇ ಒಳಪಟ್ಟಿತು. ಈ ಕಾಲದ ಅವಶೇಷಗಳು ಗಿಯಾನ್, ಹಿಸ್ಸಾರ ಮುಂತಾದೆಡೆಗಳಲ್ಲಿ ಸಿಕ್ಕಿವೆ.

ಪ್ರ.ಶ.ಪೂ 2ನೆಯ ಸಹಸ್ರಮಾನದ ವೇಳೆಗೆ ಇರಾನಿನಲ್ಲಿ, ಅದರಲ್ಲೂ ಎಲಾಮ್ ಪ್ರಾಂತ್ಯದಲ್ಲಿ, ನಾಗರೀಕತೆಯೊಂದು ಉಚ್ಛ್ರಾಯಸ್ಥಿತಿಯಲ್ಲಿತ್ತು. ಎಲಾಮ್ ಪ್ರಾಂತ್ಯದ ಅರಸರು ಸ್ವಲ್ಪ ಕಾಲ ಪಶ್ಚಿಮ ಏಷ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದ ಬ್ಯಾಬಿಲಾನನ್ನೇ ವಶಪಡಿಸಿಕೊಂಡಿದ್ದರು, ಎಲಾಮಿನ ಈ ವೈಭವ ಕಾಲದ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಅವಶೇಷಗಳು ಅಲ್ಲಿನ ರಾಜಧಾನಿಯಾದ ಸೂಸದ ಉತ್ಖನನಗಳಲ್ಲಿ ಬೆಳಕಿಗೆ ಬಂದಿವೆ. ಅಲ್ಲಿ ಸಿಕ್ಕಿರುವ ಎಲಾಮೈಟ್ ಮತ್ತು ಅಕ್ಕೇಡಿಯನ್ ಭಾಷೆ ಮತ್ತು ಲಿಪಿಯ ಶಾಸನಗಳೇ ಇರಾನಿನ ಅತ್ಯಂತ ಪ್ರಾಚೀನ ಲಿಖಿತ ದಾಖಲೆಗಳು. ಪ್ರ.ಶ.ಪೂ. 2ನೆಯ ಸಹಸ್ರಮಾನ ಪಶ್ಚಿಮ ಏಷ್ಯದ ಚರಿತ್ರೆಯಲ್ಲಿ ಆಂದೋಲನದ ಕಾಲ. ಬಹು ಕಾಲದಿಂದ ಬಂದ ರಾಜಕೀಯ ವ್ಯವಸ್ಥೆಗಳ ಕುಸಿತ, ಅನಾಗರಿಕ ಗುಡ್ಡಗಾಡು ಜನಾಂಗಗಳಿಂದ ನಾಗರಿಕ ಪ್ರದೇಶಗಳತ್ತ ವಲಸೆ, ಆಕ್ರಮಣ, ನಾಗರಿಕತೆಗಳ ವಿನಾಶ ಮುಂತಾದುವನ್ನು ಈ ಕಾಲದಲ್ಲಿ ಕಾಣುತ್ತೇವೆ. ಬಹುಶಃ ಈ ಕಾರಣದಿಂದಲೇ ತಿಯಾನ್, ಸಿಯಾಲ್ಕ್ ಮುಂತಾದ ಇರಾನಿನ ಪುರಾತನ ನೆಲೆಗಳಲ್ಲೂ ಹಲವಾರು ವಿನೂತನ ಸಾಂಸ್ಕೃತಿಕ ಅಂಶಗಳು ಇದ್ದಕ್ಕಿದ್ದಂತೆಯೇ ಕಾಣಿಸಿಕೊಳ್ಳುತ್ತದೆ. ಇಂಡೋ ಯುರೋಪಿಯನ್ ಭಾಷೆಯನ್ನಾಡುತ್ತಿದ್ದ ಜನರ ಮೊದಲ ವಲಸೆ ಈ ಕಾಲದಲ್ಲೆ ಆಗಿರಬೇಕು.

ಪ್ರ.ಶ.ಪೂ. 2ನೆಯ ಕೊನೆಯಲ್ಲಿ ಅಥವಾ 1ನೆಯ ಸಹಸ್ರಮಾನದ ಮೊದಲಲ್ಲಿ ಇರಾನಿನ ಇತಿಹಾಸದಲ್ಲಿ ಎರಡು ಗಮನಾರ್ಹ ಘಟನೆಗಳು ಜರುಗಿದವು. ಇಂಡೋ–ಯುರೋಪಿಯನ್ ಅದರಲ್ಲೂ ಇರಾನೀ ಭಾಷೆಯನ್ನಾಡುತ್ತಿದ್ದ ಜನರ ಪ್ರಭಾವ ಬೆಳೆದುದ್ದು ಒಂದು ಘಟನೆ. ಕಬ್ಬಿಣವನ್ನು ಬಳಸಲಾರಂಭಿಸಿದ್ದು ಇನ್ನೊಂದು ಘಟನೆ. ಕಬ್ಬಿಣದ ಉಪಯೋಗದಲ್ಲಿ ಇವರೇ ಮೊದಲಿಗರೆಂದು ನಿಷ್ಕರ್ಷೆಯಾಗಿ ಹೇಳಲು ಸಾಕಷ್ಟು ಆಧಾರಗಳು ದೊರಕಿಲ್ಲ. ಪೂರ್ವ ಇರಾನಿನ ಸಿಮಾಲ್ ಪ್ರದೇಶದಲ್ಲಿ ಪ್ರ.ಶ.ಪೂ. 1ನೆಯ ಸಹಸ್ರಮಾನಕ್ಕೆ ಸೇರಿದ ಸ್ಮಶಾನವೊಂದನ್ನು ಅಗೆಯಲಾಗಿದೆ. ಪಶ್ಚಿಮ ಇರಾನಿನ ಗಿಯಾನ್ ನಲ್ಲೂ ಲೂರಿಸ್ಥಾನ್ ಪ್ರದೇಶದಲ್ಲೂ ಈ ಕಾಲದ ನೆಲೆಗಳು ಕಂಡುಬಂದಿವೆ. ಲೂರಿಸ್ಥಾನ್ ಪ್ರದೇಶದ ಹಲವು ಗೋರಿಗಳಲ್ಲಿ ಎರಕಹೊಯ್ದು ನಯ ಮಾಡಿದ ಅನೇಕ ಕಂಚಿನ ಉಪಕರಣಗಳೂ ಕಲಾಕೃತಿಗಳೂ ಸಿಕ್ಕಿವೆ. ಕುಶಿದಷ್ಟ್ ಎಂಬಲ್ಲಿ ಹಲವು ದೊಡ್ಡತಲೆಯ ಗುಂಡುಸೂಜಿಗಳೂ ಧಾರ್ಮಿಕ ಕ್ರಿಯೆಗಳಾಗಿ ಉಪಯೋಗಿಸಲಾಗುತ್ತಿದ್ದ ವಸ್ತುಗಳೂ ದೊರಕಿವೆ. ಅಜರ್ ಬೈಜಾನ್ ಪ್ರದೇಶದಲ್ಲಿ ಮಿಡಿಯ ಸಾಮ್ರಾಜ್ಯ ಕಾಲದ ಅವಶೇಷಗಳಿವೆ.

ಇರಾನ್ ಅಖಮೇನಿಯನ್ ಸಾಮ್ರಾಜದ ಹೃದಯಪ್ರದೇಶ. ಈ ಸಾಮ್ರಾಜ್ಯದ ಕಾಲ ಪ್ರ.ಶ.ಪೂ. 559–331; ಇರಾನಿನ ಇತಿಹಾಸದಲ್ಲಿ ಇದು ವೈಭವದ ಕಾಲ. ಅಂದಿನ ಉಚ್ಛ್ರಾಯ ನಾಗರಿಕತೆಯ ಬಗ್ಗೆ ಬೆಳಕು ಬೀರುವ ಪ್ರಾಚೀನ ನೆಲೆಗಳು ಮತ್ತು ವಾಸ್ತುಶಿಲ್ಪ ಕೃತಿಗಳು ಪಸರ್ಗಡೆ, ಸೂಸ, ಪರ್ಸೆಪೊಲಿಸ್, ಎಕ್ಬಟಾನ, ಬೆಹಿಸ್ತನ್, ನಕ್ಷ್–ಇ–ರುಸ್ತಮ್ ಮುಂತಾದೆಡೆಗಳಲ್ಲಿ ಕಂಡುಬಂದಿವೆ.

ಅಖಮೇನಿಯನ್ನರಲ್ಲಿ ಮೊದಲನೆಯ ಪ್ರಸಿದ್ಧ ರಾಜ ಸೈರಸ್ ಪಸರ್ಗಡೆಯನ್ನು ಕಟ್ಟಿದ. ಇಲ್ಲಿನ ಉತ್ಖನನದಲ್ಲಿ ದೊಡ್ಡಗೋಡೆಯಿಂದ ಸುತ್ತುವರಿದ ಉದ್ಯಾನದ ಮಧ್ಯದಲ್ಲಿ ಕಟ್ಟಲಾಗಿದ್ದ ಅರಮನೆ, ದೇವಾಲಯ, ಸೈರಸ್ಸನ ಗೋರಿ ಮುಂತಾದವುಗಳ ಉಳಿಕೆಗಳೂ ದೊರಕಿವೆ. ಪ್ರಾಚೀನ ವಾಸ್ತು ಕಲಾಭ್ಯಾಸಿಗಳ ಅಭಿಪ್ರಾಯದಲ್ಲಿ ಈಗಿರುವ ಸ್ಥಿತಿಯಲ್ಲೂ ಪಸರ್ಗಡೆಯ ಕಟ್ಟಡಗಳು ಅದ್ಭುತ ಕೃತಿಗಳು. ಇಲ್ಲಿನ ವಾಸ್ತು ರಚನೆಯಲ್ಲಿ ಹಸಿಇಟ್ಟಿಗೆ ಮತ್ತು ಕಲ್ಲಿನ ಉಪಯೋಗ ಬಹಳವಾಗಿದೆ. ಬಾಗಿಲುವಾಡ, ಕಂಬಗಳು ಮತ್ತು ಮಹಾದ್ವಾರಗಳು ಶಿಲ್ಪಗಳಿಂದ ಅಲಂಕೃತವಾಗಿವೆ. ಸೈರಸ್ಸಿನ ಸಮಾಧಿ ಮತ್ತು ದೇವಾಲಯ ಸಾಮಾನ್ಯ ದರ್ಜೆಯ ಕಟ್ಟಡಗಳಾದರೂ ವಿಶಿಷ್ಟಶೈಲಿಯಲ್ಲಿ ರಚಿತವಾಗಿವೆ. ಅರಮನೆಯಲ್ಲಿ ವಿಶಾಲವಾದ ಆಯಾಕಾರದ ಕೊಠಡಿಗಳೂ ಸಾಲುಕಂಬಗಳನ್ನೊಳಗೊಂಡ ಹಜಾರಗಳೂ ಹಲವಾರು ಇದ್ದು, ವಿವಿಧ ರೀತಿಯ ಶಿಲ್ಪ ಮತ್ತು ವರ್ಣಾಲಂಕರಣಗಳಿಗೆ ವಿಸ್ತಾರವಾದ ಸ್ಥಳಾವಕಾಶವನ್ನೊದಗಿಸಿದ್ದವು. ಪಸರ್ಗಡೆಯಿಂದ 40 ಕಿಮೀ. ನೈಋತ್ಯದಲ್ಲಿ ಡೇರಿಯಸ್ ಪ್ರ.ಶ.ಪೂ. 520–515ರಲ್ಲಿ ಕಟ್ಟಿಸಿದ ಪರ್ಸೆಪೊಲಿಸ್ ಪಟ್ಟಣ ಪ್ರಾಚೀನ ಇರಾನಿನ ಒಂದು ಮುಖ್ಯಸ್ಥಳ. ಇಲ್ಲಿನ ಕೋಟೆಯ ಒಳಭಾಗದಲ್ಲಿ ಮೂರು ಘಟ್ಟಗಳಲ್ಲಿ ಎತ್ತಿದ ಒಂದು ದೊಡ್ಡ ಜಗತಿಯಿದೆ. ಜಗತಿಯ ಮೇಲೆ ಅರಮನೆಗೆ ಸಂಬಂಧಪಟ್ಟ ಮುಖೀ ಕಟ್ಟಡಗಳಿದ್ದವು. ಇವುಗಳಲ್ಲಿ 'ಅಪದನ' ಎಂದು ಕರೆಯುವ ದಿವಾನಖಾನೆ ಬಹು ಭವ್ಯವಾಗಿದ್ದಿರಬೇಕು. ಈಗ ಇದರ ಜಗಲಿ ಮತ್ತು ಕೆಲವು ಕಂಬಗಳು ಮಾತ್ರ ಉಳಿದಿವೆ. ದೇಶವಿದೇಶಗಳ ಆಶ್ರಿತಜನರು ಕಾಣಿಕೆಗಳನ್ನು ತಂದು ರಾಜನಿಗೆ ಒಪ್ಪಿಸುತ್ತಿರುವ ಶಿಲ್ಪವೊಂದು ಈ ಜಗತಿಯ ಪಾವಟಿಗಳ ಪಕ್ಕದಲ್ಲಿದೆ. ಇದು ಪ್ರಸಿದ್ಧವಾಗಿದೆ. ಪರ್ಸೆಪೊಲಿಸನ ವಾಸ್ತುರಚನೆಯಲ್ಲಿ ಪಸರ್ಗಡೆಯಲ್ಲಿಯಂತೆಯೇ ಹಸಿ ಇಟ್ಟಿಗೆಗಳ ಕಟ್ಟಡಗಳನ್ನು ಕಟ್ಟಿ ಅವನ್ನು ಕಲ್ಲು ಚಪ್ಪಡಿಗಳಿಂದ ಮುಚ್ಚುತ್ತಿದ್ದ ಸಂಪ್ರದಾಯ ರೂಢಿಯಲ್ಲಿತ್ತು. ಬಾಗಿಲುವಾಡ, ಕಂಬಗಳು ಮತ್ತು ಗೋಡೆಗಳ ಮೇಲೆ ಉಬ್ಬುಶಿಲ್ಪಗಳಿರುತ್ತಿದ್ದವು. ಗೋಡೆಗಳಲ್ಲಿ ದೊಡ್ಡ ಕಿಟಕಿಗಳನ್ನಿಡುತ್ತಿದ್ದುದ್ದು ಇಲ್ಲಿಯ ಒಂದು ವಿಶೇಷ. ಸೂಸದ ಅರಮನೆ ಮೊದಲು ಎರಡನೆಯ ಡೇರಿಯಸ್ಸನಿಂದ ನಿರ್ಮಿತವಾಗಿತ್ತು. ಅದು ಬೆಂದು ಹೋದದ್ದರಿಂದ ಪುನಃ ಅದನ್ನು ಕಟ್ಟಲಾಯಿತು. ಅದನ್ನು ಅಸ್ಸೀರಿಯದ ಅರಮನೆಗಳ ಮಾದರಿಯಲ್ಲಿ ಕಟ್ಟಲಾಗಿದೆ. ಇಲ್ಲಿಯೂ ಗೋಡೆಗಳಲ್ಲಿ ಹಲವಾರು ಉಬ್ಬುಶಿಲ್ಪಗಳಿವೆ. ಕೆಲವಡೆ ಗಾಜುಹೊಳಪಿನ ಮಟ್ಟ ಹೆಂಚುಗಳನ್ನು ಉಪಯೋಗಿಸಿದೆ. ಬೆಹಿಸ್ತನ್ನಿನಲ್ಲಿ ಬಂಡೆಯೊಂದರ ಮೇಲೆ ಕೆತ್ತಿರುವ (ಪ್ರ.ಶ.ಪೂ. ಸು. 516) ಡೇರಿಯಸ್ಸನ ಶಾಸನ ಮತ್ತು ಶಿಲ್ಪ ಲೋಕಪ್ರಸಿದ್ಧವಾದದ್ದು. ಅಖಮೇನಿಯನ್ ಸಾಮ್ರಾಜ್ಯದ ವಿಸ್ಮರಣೀಯ ಸಾಹಸ ಮತ್ತು ಹೆಮ್ಮೆಯನ್ನು ಇಲ್ಲಿಯ ಶಿಲ್ಪಗಳು ಪ್ರತಿಬಿಂಬಿಸುತ್ತವೆ. ಇಲ್ಲಿ ಡೇರಿಯಸ್ ಇಬ್ಬರು ಅನುಯಾಯಿಗಳೊಡನೆ ನಿಂತಿರುವಂತೆಯೂ ಮಾಜಿಯನ್ನನೊಬ್ಬ ಆತನ ಕಾಲಿಗೆ ಬೀಳುತ್ತಿರುವಂತೆಯೂ ಹಲವು ಶತ್ರುಗಳು ಬಂಧಿತರಾಗಿರುವಂತೆಯೂ ತೋರಿಸಿದೆ. ಶತ್ರುಗಳ ತಲೆಯ ಮೇಲೆ ಅಖಮೇನಿಯನ್ನರ ದೇವತೆ ಅಹುರಮಜ್ದನ ಚಿಹ್ನೆಯಿದೆ. ಇದನ್ನು ಅಸ್ಸೀರಿಯನ್ನರ ಅಸ್ಸೂರ್ ದೇವತೆಯಂತೆಯೇ ಕೆತ್ತಲಾಗಿದೆ. ಶಿಲ್ಪದಲ್ಲಿ ಅಸ್ಸೀರಿಯದ ಶೈಲಿಯ ಛಾಯೆಯಿದ್ದರೂ ಇದು ತನ್ನದೇ ಆದ ಹೆಚ್ಚು ಸಹಜವಾದ ಅವಿಷ್ಕಾರದಿಂದ ವಿನೂತನವಾಗಿದೆ. ನಕ್ಷ್–ಇ–ರುಸ್ತುಮನ ಶಿಲ್ಪಗಳೂ ಇದೇ ಸಂಪ್ರದಾಯಕ್ಕೆ ಸೇರಿದವು. ಅಖಮೇನಿಯನ್ನರ ಕಾಲದ ಚಿನ್ನ ಮತ್ತು ಬೆಳ್ಳಿಯ ಆಭರಣಗಳೂ ಸುಂದರ ಕಲ್ಲಿನ ಪಾತ್ರೆಗಳೂ ಕಲಾತ್ಮಕವಾಗಿ ಕೆತ್ತಿದ ವಜ್ರ ಕೆಂಪು ಮುಂತಾದ ಅಮೂಲ್ಯ ಕಲ್ಲುಗಳೂ ಎಕ್ಬಟಾನವೇ ಮುಂತಾದ ಸ್ಥಳಗಳಲ್ಲಿ ಸಿಕ್ಕಿವೆ. ಭಾರತದ ಮೌರ್ಯ ಕಲೆಯಲ್ಲಿ ಅಖಮೇನಿಯನ್ನರ ಶಿಲೆಯ ಪ್ರಭಾವ ಬಹಳವಾಗಿ ಕಂಡುಬಂದಿವೆ.

ಅಲೆಕ್ಸಾಂಡರನಿಂದ ಪರ್ಷಿಯ ಸಾಮ್ರಾಜ್ಯ ಕೊನೆಗೊಂಡ ಅನಂತರ, ಈ ಪ್ರದೇಶ ಮ್ಯಾಸಿಡೋನಿಯನ್ನರ ಮತ್ತು ಪಾರ್ಥಿಯನ್ನರ ಆಳ್ವಿಕೆಗೆ ಒಳಪಟ್ಟಿತ್ತು. ರೆಯ್, ಸೂಸ ಮುಂತಾದ ಸ್ಥಳಗಳಲ್ಲಿನ ಉತ್ಖನನಗಳೂ ಶಮಿ ಎಂಬಲ್ಲಿನ ದೇವಾಲಯದ ಅವಶೇಷಗಳಲ್ಲಿ ಸಿಕ್ಕಿದ ಕಂಚಿನ ಮೂರ್ತಿಗಳೂ ಬೆಹಿಸ್ತನ್ನ ಕೆಲವು ಶಿಲ್ಪಗಳೂ ಗ್ರೀಕ್ ವಾಸ್ತುಶಿಲ್ಪ ಕಲಾರೀತಿಗಳ ಪ್ರಭಾವವನ್ನು ತೋರಿಸುತ್ತವೆ. ಇವೆಲ್ಲ ಬಹುತೇಕ ಪಾರ್ಥಿಯನ್ನರ ಕಾಲದವು.

ಪ್ರ.ಶ. 3 ರಿಂದ 7ನೆಯ ಶತಮಾನದವರೆಗೆ ಇರಾನ್ ಸಸ್ಸಾನಿಯನ್ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಈ ಕಾಲದಲ್ಲಿ ಅಖಮೇನಿಯನ್ನರ ಕಾಲದ ವೈಭವದ ಪುನರಾವರ್ತನೆ ಕಂಡುಬರುತ್ತದೆ. ಈ ಕಾಲದ ಬಗ್ಗೆ ಹೆಚ್ಚಿನ ಪುರಾತತ್ತ್ವ ಮಾಹಿತಿಗಳು ಫಿರೋಜಾಬಾದ್ ಗಿರ್ರಾ, ಶಾಪುರ್, ಸರ್ವಿಸ್ತಾನ್, ಇವಾನ್-ಇ-ಕರ್ಖ, ದಿಜ್ ಫುಲ್, ಶುಸ್ಟರ್ ಮುಂತಾದೆಡೆ ಗಳಲ್ಲಿವೆ. ಶಿಲ್ಪಗಳಲ್ಲಿ ಹಳೆಯ ಅಖಮೇನಿಯನ್ ಶೈಲಿಯ ಅನುಕರಣೆ ಬಹಳವಾಗಿ ಕಂಡುಬರುತ್ತದೆ. ಆದರೆ ವಾಸ್ತುರೀತಿಯಲ್ಲಿ ಹಳೆಯ ಅನುಕರಣೆಗಳಿದ್ದರೂ ಸುಟ್ಟ ಇಟ್ಟಿಗೆಯನ್ನೂ ಗಾರೆಯನ್ನೂ ಬಳಕೆಗೆ ತಂದದ್ದು ಒಂದು ವಿಶೇಷ. ಕಟ್ಟಡಗಳ ಮೇಲೆ ಅರ್ಧಪೀಪಾಯಿಯಾಕೃತಿಯ ಚಾವಣಿಯ ನಿರ್ಮಾಣವೂ ಈ ಕಾಲದಲ್ಲೇ ಮೊಟ್ಟಮೊದಲಿಗೆ ಕಂಡು ಬಂದಿದೆ. ಸಸೇನಿಮನ್ನರ ಕಾಲದ ಬೆಳ್ಳಿಯ ಆಭರಣಗಳು ಅಂದಿನ ಚಿನಿವಾರ ಕಲೆಯ ಔನ್ನತ್ಯವನ್ನು ಸೂಚಿಸುತ್ತವೆ. ಈ ಕಾಲದ ರೇಷ್ಮೆಯ ಬಟ್ಟೆಗಳೂ ಕಂಬಳಿಗಳೂ ಪ್ರಖ್ಯಾತವಾಗಿದ್ದವು. ಅವುಗಳ ಮಾದರಿಯನ್ನು ತಖ್-ಇ-ಬುಸ್ತನ್ ಶಿಲ್ಪಗಳಲ್ಲಿ ಕಾಣಬಹುದಾಗಿದೆ.

ಇಸ್ಲಾಮೀ ವಾಸ್ತುರೀತಿಯ ಬೆಳವಣಿಗೆಗೆ ಸಸ್ಸಾನಿ ಶೈಲಿಯ ಕೊಡುಗೆ ಅಪಾರ. ಮುಂದೆ ವಿಶ್ವದ ಹಲವೆಡೆಗಳಲ್ಲಿ ಹರಡಿದ ಇಸ್ಲಾಮೀ ವಾಸ್ತು ಸಂಪ್ರದಾಯದ ನಿರ್ದಿಷ್ಟ ಪ್ರತೀಕಗಳಾದ ಮಸೀದಿ, ಗೋರಿ, ಮದರಸ ಮುಂತಾದ ಕಟ್ಟಡಗಳ ಮತ್ತು ಗುಮ್ಮಟ, ಮೀನಾರ್ ಮೊದಲಾದ ವೈಶಿಷ್ಟಗಳ ಆದಿರೂಪಗಳು ಸಸ್ಸಾನಿಯ ವಾಸ್ತು ಪದ್ಧತಿಯಲ್ಲಿ ಕಂಡುಬಂದಿವೆ. ಪ್ರ.ಶ. 7ನೆಯ ಶತಮಾನದಲ್ಲಿ ಇಸ್ಲಾಮ್ ಧರ್ಮ ಇರಾನಿನಲ್ಲಿ ಹರಡಿದ ಮೇಲೆ, ಆ ಧರ್ಮಕ್ಕೆ ಸಂಬಂಧಪಟ್ಟ ಹಲವಾರು ಕಟ್ಟಡಗಳು ನಿರ್ಮಾಣವಾದವು. ಇವೆಲ್ಲ ಒಂದು ಸಂಪ್ರದಾಯಬದ್ಧ ಶೈಲಿಯಲ್ಲೇ ಇದ್ದರೂ ಇವುಗಳಲ್ಲೂ ಕಾಲಕಾಲಕ್ಕೆ ವ್ಯತ್ಯಾಸಗಳು ಕಂಡುಬರುತ್ತವೆ. ಇಸ್ಲಾಮೀ ಸಂಸ್ಕೃತಿಯ ಕೇಂದ್ರಗಳಾದ ಇಸಹಾನ್, ಟೆಹರಾನ್, ಮೆಕೆದ್, ದೀರ್ಮಾನ್, ಅರ್ದಬಿಲ್, ತಬ್ರಿಜ್, ಕಿರಾಜ್, ಕತನ್ ಮುಂತಾದೆಡೆಗಳಲ್ಲಿ ಈ ಶೈಲಿಯ ಭವ್ಯ ಕಟ್ಟಡಗಳು ಉಳಿದುಬಂದಿವೆ. **(ನೋಡಿ- ಇಸ್ಲಾಮೀ-ವಾಸ್ತುಶಿಲ್ಪ,-ಕಲೆ)**

ಇರಾನಿನ ಪುರಾತನ ಇತಿಹಾಸದ ಅಧ್ಯಯನಕ್ಕೆ ಈ ದೇಶದ ಪ್ರಾಚೀನ ನೆಲೆಗಳು ಮತ್ತು ವಾಸ್ತುಶಿಲ್ಪ ಅವಶೇಷಗಳಷ್ಟೇ ಅಲ್ಲದೆ, ಪ್ರ.ಶ.ಪೂ.ಸು. 7ನೆಯ ಶತಮಾನದಿಂದಲೇ ಆರಂಭವಾಗುವ ಶಾಸನಸಂಪತ್ತೂ ಅಖಮೇನಿಯನ್ನರ ಕಾಲದಿಂದ ಆರಂಭವಾಗುವ ನಾಣ್ಯಗಳೂ ಮುಖ್ಯವಾದವು. ಇಲ್ಲಿನ ಶಾಸನಗಳು ಮೊದ ಮೊದಲು ಎಲಾಮೆಟ್ ಲಿಪಿಯಲ್ಲಿರುತ್ತಿದ್ದವು. ಅಖಮೇನಿಯನ್ನರ ಕಾಲದವನ್ನು ಪ್ರಾಚೀನ ಇರಾನೀ ಭಾಷೆಯಲ್ಲಿ ಅರಾಮೇಯಿಕ್ ಲಿಪಿಯಲ್ಲಿ ಬರೆಯಲಾಗಿದೆ. ಅಲ್ಲಲ್ಲಿ ಕ್ಯೂನಿಫಾರ್ಮ್ ಎಲಾಮೈಟ್ ಲಿಪಿಗಳನ್ನೂ ಬಳಸುತ್ತಿದ್ದರು. ಸಸ್ಸೇನಿಯನ್ನರ ಕಾಲದ ಶಾಸನಗಳ ಭಾಷೆ ಮತ್ತು ಲಿಪಿಪಹ್ಲವಿ. ಮುಸಲ್ಮಾನ ಅರಸರ ಕಾಲದ ಶಾಸನಗಳು ಕುಫಿಕ್, ನಸ್ಬ್ ಮುಂತಾದ ಲಿಪಿಗಳಲ್ಲಿ ಅರಾಬಿಕ್-ಪರ್ಷಿಯನ್ ಭಾಷೆಯಲ್ಲಿವೆ.

ಅಖಮೇನಿಯನ್ ಸಾಮ್ರಾಜ್ಯ ಕಾಲದಲ್ಲಿ ಬಳಕೆಯಲ್ಲಿದ್ದ ನಾಣ್ಯಗಳು ಬಹು ಸಾಮಾನ್ಯ ತರದವು. ಅಲೆಕ್ಸಾಂಡರನ ದಂಡಯಾತ್ರೆಯ ಅನಂತರ ಇರಾನಿನಲ್ಲಿ ಗ್ರೀಕ್-ರೋಮನ್ ಮಾದರಿಯ ನಾಣ್ಯಗಳು ಕಲಾತ್ಮಕ ಕೃತಿಗಳೆನ್ನಬಹುದು. ಇವುಗಳಲ್ಲಿ ಸಾಮಾನ್ಯವಾಗಿ ರಾಜನ ಭಾವಚಿತ್ರವೂ, ಅವನ ಹೆಸರು ಮುಂತಾದ ವಿವರಗಳೂ ಇರುತ್ತವೆ. ಮುಸಲ್ಮಾನ ಅರಸರ ನಾಣ್ಯಗಳಲ್ಲಿ ಸಾಮಾನ್ಯವಾಗಿ ಕೇವಲ ಲಿಪಿ ಮಾತ್ರ ಇರುತ್ತದೆ.

**ಪ್ರಾಚೀನ, ಅರ್ವಾಚೀನ ಇತಿಹಾಸ:** ಆರ್ಯರ ಭಾಷೆಯನ್ನಾಡುತ್ತಿದ್ದ ಶ್ವೇತವರ್ಣದ ಜನರ ಒಂದು ಪಂಗಡ ಪ್ರ.ಶ.ಪೂ. 2500ರ ಸುಮಾರಿಗೆ ಮಧ್ಯ ಏಷ್ಯದಿಂದ ಹೊರಟು ಪರ್ಷಿಯನ್ ಕೊಲ್ಲಿಯ ಹತ್ತಿರ ನೆಲೆಸಿತು ಎಂದು ನಂಬಲಾಗಿದೆ. ಇರಾನ್ ಎಂಬುದು ಆರ್ಯ ಶಬ್ದದ ಪರ್ಯಾಯ ರೂಪ. ಆರ್ಯಭಾಷಿಗಳಾದ ಈ ಪರ್ಷಿಯನ್ನರು, ಅಸ್ಸೀರಿಯ ಸಾಮ್ರಾಜ್ಯ ನಾಶವಾದ ಮೇಲೆ ಕ್ರಿ.ಪೂ. ಆರನೆಯ ಶತಮಾನದಲ್ಲಿ ಕೈರಸನ ನಾಯಕತ್ವದಲ್ಲಿ ಅಕೆಮೆನಿಡ್ ಸಾಮ್ರಾಜ್ಯವನ್ನು ಕಟ್ಟಿದರು. ಇಲ್ಲಿಂದ ಮುಂದೆ ಒಂದಾದ ಮೇಲೊಂದರಂತೆ ಅನೇಕ ಸಾಮ್ರಾಜ್ಯಗಳು ಇಲ್ಲಿ ಬೆಳೆದು ಆಳಿದವು. **(ನೋಡಿ- ಪರ್ಷಿಯ)**

7ನೆಯ ಶತಮಾನದಲ್ಲಾದ ಅರಬ್ ಮುಸ್ಲಿಮರ ಆಕ್ರಮಣ ಇರಾನಿನ ಸ್ವರೂಪವನ್ನೇ ಬದಲಾಯಿಸಿತು. ಅರಬ್ ಸಾಮ್ರಾಜ್ಯ ತನ್ನೊಂದಿಗೆ ಶಕ್ತಿ ಹಾಗೂ ಧಾರ್ಮಿಕ ಭಾವನೆ ತಂದಿತು. ಅರಬ್ಬೀ ರಾಜ್ಯಭಾಷೆಯಾಯಿತು. ಅನೇಕ ಪರ್ಷಿಯನ್ನರು ಅಬು ಮುಸ್ಲಿಮರಾದರು. ಇದೇ ಕಾಲಕ್ಕೆ ಎಷ್ಟೋ ಜನ ಇರಾನಿಯನ್ನರು ತಮ್ಮ ಜರತುಷ್ಟ್ರ ಧರ್ಮ ಉಳಿಸಿಕೊಳ್ಳಲು ದೇಶವನ್ನು ತ್ಯಜಿಸಬೇಕಾಯಿತು. ಅವರು ಬೇರೆಡೆ ಬಂದು ನೆಲೆಸಿದರು. ಅವರ ವಂಶದವರನ್ನು ನಾವು ಭಾರತದಲ್ಲಿ ಇಂದಿಗೂ ಕಾಣಬಹುದು. ಅವರೇ ಪಾರ್ಸಿಗಳು **(ನೋಡಿ- ಪಾರ್ಸಿಗಳು)**. ಕೆಲವರು ಅಲ್ಲಿಯೇ ಇದ್ದುಕೊಂಡು ಗುಪ್ತರೂಪದಿಂದ ಜರತುಷ್ಟ್ರ ಧರ್ಮ ಅನುಸರಿಸುತ್ತಿದ್ದರು. ಅವರ ವಂಶಜರು ಇರಾನಿನ ಯಜ್ಞ ಹಾಗೂ ಕಿರಮಾನ ಪ್ರದೇಶದಲ್ಲಿ ಇಂದಿಗೂ ಇದ್ದಾರೆ. ಅರಬ್ಬರು ಇರಾನನ್ನು ಗೆದ್ದು ಕಲೀಫನ ವಶಕ್ಕೆ ಕೊಟ್ಟರು.

1614ರಿಂದ ಬ್ರಿಟಿಷರು ಇರಾನಿನೊಂದಿಗೆ ವ್ಯಾಪಾರ ಆರಂಭಿಸಿದರು. ಹಾಲೆಂಡ್ ಹಾಗೂ ರಷ್ಯದೊಂದಿಗೆ ವ್ಯಾಪಾರ ಸಂಬಂಧಗಳು ಸ್ಥಾಪಿಸಲ್ಪಟ್ಟವು. ಈ ವ್ಯಾಪಾರದಿಂದಾಗಿ ಇರಾನ್ ಅಭಿವೃದ್ಧಿ ಹೊಂದಿತು. ಆದರೆ ದೇಶ ಕೂಟನೀತಿಯ ಕೇಂದ್ರವಾಯಿತು. ಪದೇ ಪದೇ ಆಫ್ಘನ್ನರ ಹಾಗೂ ರಷ್ಯನರ ಆಕ್ರಮಣಕ್ಕೊಳಗಾಯಿತು. ಇರಾನ್ ಬ್ರಿಟಿಷರ ಹಾಗೂ ರಷ್ಯನರ ನೆಲೆಯಾಯಿತು. ನಿರಂಕುಶ ಶಾಸನದ ವಿರುದ್ಧ ಅಸಂತೋಷ ಹೆಚ್ಚಾಗಿ ವಿದ್ರೋಹ ಚಟುವಟಿಕೆಗಳು ಆರಂಭವಾದವು. ಶಫವಿದ್ ಮನೆತನದ ಕೊನೆಯ ಅರಸ ಕರೀಮಖಾನ್ ಝೆಂಡ್ 1750ರಿಂದ 1779ರವರೆಗೆ ಆಳಿದ. ಅನಂತರ ತುರ್ಕಿ ಜಾತಿಯ ಕ್ವಾಜರರ ಆಡಳಿತ 1834ರವರೆಗೆ ನಡೆಯಿತು. ಈ ಕಾಲದಲ್ಲಿ ರಷ್ಯನರು ಇರಾನಿನಲ್ಲಿ ತಮ್ಮ ಬಲವನ್ನು ಹೆಚ್ಚಿಸಿಕೊಂಡರು. ರಷ್ಯ ಪರ ಮೊಹಮ್ಮದ್ ಷಾ 1834ರಲ್ಲಿ ಪಟ್ಟಕ್ಕೆ ಬಂದ. ಅನಂತರ ಬ್ರಿಟಿಷರು ತಮ್ಮ ಶಕ್ತಿಯನ್ನು ಬೆಳೆಸಿಕೊಂಡರು. ಷಾನ್ ನಿರುಂಕುಶ ಪ್ರಭುತ್ವ 1896ರಲ್ಲಿ ಕೊನೆಗೊಂಡಿತು. 1905ರಲ್ಲಿ ಅಶಾಂತಿ ತಲೆದೋರಿ ಮಧ್ಯಮ ವರ್ಗದವರು ದಂಗೆಯೆದ್ದರು.

1906ರಲ್ಲಿ ಷಾ ಮಜಲಿಸ್ (ಪಾರ್ಲಿಮೆಂಟ್) ರಚಿಸಲು ಸಮ್ಮತಿಸಿ, ಅದರಿಂದ ರಚಿತವಾದ ಸಂವಿಧಾನಕ್ಕೆ ಅಂಕಿತ ಹಾಕಿದ. 1908ರಲ್ಲಿ ತೈಲ ಶೋಧವಾದಂದಿನಿಂದ, ಒಡೆತನಕ್ಕಾಗಿ ಆಂಗ್ಲೋ ರಷ್ಯನರ ಕಚ್ಚಾಟ ಹೆಚ್ಚಿತು. ಆರ್ಥಿಕ ಬಿಕ್ಕಟ್ಟೂ ತಲೆದೋರಿತು. ಒಂದನೆಯ ಮಹಾಯುದ್ಧದ ಕಾಲಕ್ಕೆ ಪರ್ಷಿಯ ತಟಸ್ಥವಾಗಿ ಕಂಡರೂ ದೇಶದಲ್ಲಿ ಗುಪ್ತ ಚಟುವಟಿಕೆಗಳು ನಡೆದವು. ದೇಶದಲ್ಲಿ ಅಸ್ಥಿರ ಪರಿಸ್ಥಿತಿ ಏರ್ಪಟ್ಟಿತು. ಬ್ರಿಟನ್ ಸುಧಾರಣೆ ಕೈಕೊಳ್ಳಲು ಪ್ರಯತ್ನಿಸಿ ವಿಫಲಗೊಂಡಿತು. 1921ರಲ್ಲಿ ರೇಜ್ಹಾನನ ನೇತೃತ್ವದಲ್ಲಿ ನಡೆದ ದಂಗೆಯಿಂದ ಸೈನ್ಯ ಪ್ರಭುತ್ವ ಸ್ಥಾಪಿತವಾಯಿತು. 1923ರಲ್ಲಿ ಆತ ಪ್ರಧಾನ ಮಂತ್ರಿಯಾದ. 1925ರಲ್ಲಿ ಷಾನನ್ನು ಉರುಳಿಸಿ ತಾನೇ ರೇಜ್ಹಾಪಹ್ಲವಿ ಎಂಬ ಹೆಸರಿನಲ್ಲಿ ಅರಸನೆಂದು ಘೋಷಿಸಿಕೊಂಡ. ದೇಶದಲ್ಲಿ ಅನೇಕ ಸುಧಾರಣೆಗಳನ್ನು ಕೈಕೊಂಡು ಸುಭದ್ರ ಕೇಂದ್ರ ಸರ್ಕಾರವನ್ನು ಸ್ಥಾಪಿಸಿದ. ಆತ ದೇಶವನ್ನು ಆಧುನಿಕಗೊಳಿಸಲು ಪ್ರಯತ್ನಿಸಿದ. 1835ರಲ್ಲಿ ದೇಶದ ಹೆಸರನ್ನು ಪರ್ಷಿಯದ ಬದಲಾಗಿ ಇರಾನ್ ಎಂದು ನಾಮಕರಣ ಮಾಡಿದ. ಅದೇ ವರ್ಷ ತೆಹರಾನ್ ವಿಶ್ವವಿದ್ಯಾನಿಲಯವನ್ನೂ ತೆರೆಯಲಾಯಿತು. 1937ರಲ್ಲಿ ಮಹಿಳೆಯರಿಗೆ ಪರದೆ ಇಲ್ಲದೆ ಓಡಾಡುವ ಅವಕಾಶ ಕಲ್ಪಿಸಲಾಯಿತು ಹಾಗೂ 1938ರಲ್ಲಿ ಪ್ರಥಮವಾಗಿ ರೈಲು ಮಾರ್ಗ ರಚಿಸಲಾಯಿತು.

ಎರಡನೆಯ ಮಹಾಯುದ್ಧದ ಕಾಲಕ್ಕೆ ಇರಾನ್ ಜರ್ಮನಿಯೊಂದಿಗೆ ಹೊಂದಿದ್ದ ಮಿತ್ರತ್ವದಿಂದಾಗಿ ಬ್ರಿಟಿಷರು ಹಾಗೂ ಸೋವಿಯತರು ಅದನ್ನು ಆಕ್ರಮಿಸಿದರು. ಅರಸ ರಾಜ್ಯವನ್ನು ಮಗ ಮೊಹಮದ್ ರೇಜ್ಹಾ ಷಾಗೆ ಬಿಟ್ಟು ಕೊಟ್ಟ; ಅದಕ್ಕೆ ಬ್ರಿಟಿಷರ ಹಾಗೂ ರಷ್ಯನ್ನರ ಒತ್ತಾಯವೇ ಕಾರಣ. ಯುದ್ಧ ಮುಗಿದ ಮೇಲೆ ರಷ್ಯ ಇರಾನಿನ ಉತ್ತರ ಭಾಗದ ಮೇಲೆ ತನ್ನ ಅಧಿಕಾರ ಬೆಳೆಸಿತು. ಅನಂತರ ವಿಶ್ವಸಂಸ್ಥೆಯ ಒತ್ತಾಯದಿಂದ ಸೋವಿಯತ್ ಒಕ್ಕೂಟ ತನ್ನ ಸೈನ್ಯವನ್ನು ಹಿಂತೆಗೆದುಕೊಂಡಿತು. ಈ ಮಧ್ಯೆ ದೇಶದಲ್ಲಿ ರಾಷ್ಟ್ರೀಯ ಭಾವನೆ ಬಲಗೊಂಡಿತು. ಜನ ಸರ್ಕಾರದಲ್ಲಿ ಅತೃಪ್ತಿ ವ್ಯಕ್ತಪಡಿಸಿದರು. ಇದರಿಂದಾಗಿ 1949ರಲ್ಲಿ ಇರಾನಿನ ಮಜಲಿಸ್ ಪುನಃ ಸ್ಥಾಪಿತವಾಗಿ ಚುನಾವಣೆಯ ಅನಂತರ ತನ್ನ ಕಾರ್ಯಾರಂಭಗೊಳಿಸಿತು. ಮುಸಾದಿಕ್ ಪ್ರಧಾನ ಮಂತ್ರಿತ್ವ ವಹಿಸಿಕೊಂಡ. 1952ರಲ್ಲಿ ಆಂಗ್ಲೋ-ಇರಾನಿಯನ್ ಆಯಿಲ್ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಿದ. ಅದೊಂದು ಅಂತಾರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸಿತು. ಸಂಯುಕ್ತ ರಾಷ್ಟ್ರ ಸಂಘದಲ್ಲೂ ಈ ಸಮಸ್ಯೆ ಬಗೆಹರಿಯಲಿಲ್ಲ. ಇದರಿಂದ ಇರಾನಿನ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು. ಮುಸಾದಿಕ್‍ನ ಬದಲಾಗಿ ಫಜಲುಲ್ಲಾ ಜಾಹೆದಿಯನ್ನು ಪ್ರಧಾನ ಮಂತ್ರಿಯನ್ನಾಗಿ ಷಾ ನೇಮಿಸಿದರು. ಅದೇ ವರ್ಷ ಎಂಟು ಯುರೋಪಿಯನ್ ಕಂಪನಿಗಳೊಂದಿಗೆ ಒಪ್ಪಂದವೊಂದರ ಮೂಲಕ ತೈಲ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಯಿತು. ಅನಂತರ ಷಾ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಲಾರಂಭಿಸಿದರು. ಷಾರ ಇಚ್ಛೆಯ ಮೇರೆಗೆ ದ್ವಿಪಕ್ಷ ಪ್ರಜಾಪ್ರಭುತ್ವ ಸರ್ಕಾರ ರಚಿಸಲು ನಿರ್ಧರಿಸಲಾಯಿತು. ಜನತಾ ಪಕ್ಷ ಹಾಗೂ ರಾಷ್ಟ್ರೀಯ ಪಕ್ಷಗಳು ರಚಿತವಾದವು. 1960ರಲ್ಲಿ ಚುನಾವಣೆ ನಡೆಯಿತು. ಆದರೆ ಈ ಸರ್ಕಾರ ಪದ್ಧತಿ ಅಷ್ಟೊಂದು ಯಶಸ್ಸು ಪಡೆಯಲಿಲ್ಲ.

1961ರಲ್ಲಿ ಷಾ ದೇಶದಲ್ಲಿ ಕ್ರಾಂತಿಕಾರಿ ಸುಧಾರಣೆಗಳನ್ನು ಕೈಕೊಳ್ಳಲು ನಿರ್ಧರಿಸಿದರು. ಊಳಿಗಮಾನ್ಯ ಪದ್ಧತಿಯ ಅಂತ್ಯ, ಗುಲಾಮಗಿರಿ ಪದ್ಧತಿಯ ರದ್ದು, ಚುನಾವಣೆ ಹಾಗೂ ಆಡಳಿತ ಕ್ರಮದಲ್ಲಿ ಸುಧಾರಣೆ, ಕಾರ್ಮಿಕರಿಗೆ ಆದಾಯದಲ್ಲಿ ಪಾಲು-ಇವು ಆ ಯೋಜನೆಯ ಮುಖ್ಯ ಗುರಿಗಳು. 1963ರಲ್ಲಿ ಮಹಿಳೆಯರಿಗೆ ಮತನೀಡುವ ಹಕ್ಕು ಕೊಡಲಾಯಿತು. ಅಕ್ಟೋಬರ್ 26, 1967ರಂದು ನಡೆದ ಕಿರೀಟಧಾರಣಾ ಸಮಾರಂಭದಲ್ಲಿ ಮಹಮ್ಮದ್ ರೇಜ್ಹಾ ಷಾ ಪಹ್ಲವಿ ಹಾಗೂ ಅವನ ರಾಣಿ ಫರಾಗೆ ಕಿರೀಟ ಧಾರಣೆಯಾಯಿತು.(ಎ.ಎಂ.ಆರ್.)

**ಇರಾನೀ ಭಾಷೆಗಳು:** ಇರಾನ್ ಮತ್ತು ಅದರ ಸೀಮಾವರ್ತಿ ರಾಷ್ಟ್ರಗಳಲ್ಲಿ ಬಳಕೆಯಲ್ಲಿರುವ ಭಾಷೆಗಳು. ಇಂಡೊ-ಇರಾನಿ ಭಾಷಾಪರಿವಾರದ ಇರಾನೀ ಉಪಶಾಖೆಯಿಂದ ಅಥವಾ ಇಂಡೊ-ಯುರೋಪಿಯನ್ ಭಾಷಾಪರಿವಾರದ ಆರ್ಯ ಶಾಖೆಯಿಂದ ಇವು

ಕವಲೊಡೆದವು. ಭಾರತ ಮತ್ತು ಪಾಕಿಸ್ತಾನಗಳಲ್ಲಿ ಬಳಕೆಯಲ್ಲಿರುವ ಇಂಡೋ–ಆರ್ಯನ್ ಭಾಷೆಗಳೇ ಇರಾನೀ ಭಾಷೆಗಳಿಗೆ ತೀರ ಹತ್ತಿರದ ಸಂಬಂಧಿಗಳು. ಇರಾನೀ ಭಾಷೆಗಳ ಇತಿಹಾಸವನ್ನು ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಎಂಬ ಮೂರು ವಿಭಾಗಗಳಲ್ಲಿ ವರ್ಗೀಕರಿಸಬಹುದು.

ಪ್ರಾಚೀನ ಇರಾನಿನಲ್ಲಿ (ಪ್ರ.ಶ.ಪೂ.1000–400) ಹಲವು ಸ್ಥಳೀಯ ರೂಪಗಳು ಅಥವಾ ಉಪಭಾಷೆಗಳಿದ್ದುವು. ಅವುಗಳಲ್ಲಿ ಎರಡರ ವಿಚಾರದಲ್ಲಿ ವಿವರಗಳು ದೊರೆತಿವೆ. ಕೆಲವು ಶಬ್ದರೂಪಗಳಿಂದ ಮೂರನೆಯ ಉಪಭಾಷೆಯೊಂದರ ಅಸ್ತಿತ್ವ ತಿಳಿದು ಬಂದಿದೆ. ಇದನ್ನು ಮೀಡೀಯದೇಶದ್ದೆಂದು ಕರೆಯಲಾಗಿದೆ. ಇದು ಮೂಲತಃ ಪಶ್ಚಿಮ ಇರಾನಿನಲ್ಲಿ ಬಳಕೆಯಲ್ಲಿತ್ತು. ನಮಗೆ ಗೊತ್ತಿರುವ ಎರಡು ಪ್ರಾಚೀನ ಇರಾನೀ ಭಾಷೆಗಳಲ್ಲಿ ಒಂದು ಪ್ರಾಚೀನ ಮತ್ತು ಆಧುನಿಕ ಪಾರ್ಸಿ ಭಾಷೆಗಳ ಮೂಲಭಾಷೆಯಾಗಿದೆ. ನೈಋತ್ಯ ಇರಾನಿನಲ್ಲಿ ಬಳಕೆಯಲ್ಲಿದ್ದ ಈ ಭಾಷೆ ಅಕಮೇನಿಯನ್ ಚಕ್ರವರ್ತಿಗಳ (ಪ್ರ.ಶ.ಪೂ. 558ರಿಂದ 331ರ ವರೆಗೆ) ತಾಯ್ನುಡಿಯಾಗಿತ್ತು. ಅಕೇಮೆನಿಡೀವಂಶದ ಶಾಸನಗಳಿಂದಲೇ ಪ್ರಾಚೀನ ಪಾರ್ಸಿ ಭಾಷೆಯ ಸ್ವರೂಪ ನಮಗೆ ತಿಳಿದುಬಂದಿದೆ. ಈ ಶಾಸನಗಳು ಸರಳರೂಪದ ಕೋಣಾಕಾರದ ಅಕ್ಷರಗಳಲ್ಲಿ ಇವೆ. ಮತ್ತೊಂದು ಪ್ರಾಚೀನ ಇರಾನೀ ಭಾಷೆಯೆಂದರೆ ಅವೆಸ್ತ (**ನೋಡಿ– ಅವೆಸ್ತ**). ಜರತುಷ್ಟ್ರ ಧರ್ಮದ ಧಾರ್ಮಿಕ ಸಾಹಿತ್ಯದಿಂದ ಈ ಭಾಷೆಯ ಸ್ವರೂಪ ತಿಳಿದುಬಂದಿದೆ. ಭಾರತದಲ್ಲಿ ಕಾಣಬರುವ ಪಾರ್ಸಿ ಜನಾಂಗಕ್ಕೆ ಇಲ್ಲಿಯವರೇ ಮೂಲಪುರುಷರು, ಜರತುಷ್ಟ್ರನದು ಪ್ರಾಚೀನ ಇರಾನಿನ ಧರ್ಮವಾಗಿತ್ತು. ವೇದಕಾಲದ ಭಾರತೀಯರ ಧರ್ಮ ಈ ಧರ್ಮಕ್ಕೆ ಹತ್ತಿರದ ಸಂಬಂಧಿಯಾಗಿದ್ದ ಪ್ರಾಚೀನ ಆರ್ಯ ಧರ್ಮದ ಮೇಲೆ ಪ್ರಭಾವವನ್ನು ಬೀರಿತು. ಅವೆಸ್ತಭಾಷೆ ಮೀಡೀಯದ ಭಾಷೆಗೆ ಹತ್ತಿರದ ಸಂಬಂಧಿಯಾಗಿರುವ ಭಾಷೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಅದು ಪೂರ್ವ ಅಥವಾ ಈಶಾನ್ಯ ಇರಾನ್ ಪ್ರದೇಶಕ್ಕೆ ಸೇರಿದ್ದ ಭಾಷೆ ಎಂಬುದು ಇತರರ ಅಭಿಪ್ರಾಯ.

ಮಧ್ಯಕಾಲೀನ ಇರಾನಿನಲ್ಲಿ (ಪ್ರ.ಶ.ಪೂ. 400–ಕ್ರಿ. ಶ. 800) ಪಹ್ಲವಿ, ಸೊಗ್ಡಿಯನ್ ಮತ್ತು ಶಕ ಭಾಷೆಗಳು ಸೇರಿವೆ. ಪ್ರಾಚೀನ ಪಾರ್ಸಿ ಭಾಷೆಯಿಂದ ಹುಟ್ಟಿರುವುದಾದರೂ ಪಹ್ಲವಿಯ ಮೇಲೆ ಇತರ ಉಪಭಾಷೆಗಳ ಮತ್ತು ಸಿಮಿಟಿಕ್ ಭಾಷೆಗಳ ಪ್ರಭಾವ ಬಿದ್ದಿರುವುದು ಕಂಡುಬರುತ್ತದೆ. ಇದು ಇರಾನಿನ ಸಸ್ಸೇನಿಯನ್ ರಾಜರ ಕಾಲದಲ್ಲಿ (ಪ್ರ.ಶ. 226–652) ಅಧಿಕೃತ ಭಾಷೆಯಾಗಿತ್ತು. ಅರಾಮೇಯಿಕ್ ಲಿಪಿಯಿಂದ ಹುಟ್ಟಿದ ಒಂದು ಲಿಪಿಯಲ್ಲಿ ಇದನ್ನು ಬರೆಯಲಾಗುತ್ತಿತ್ತು. ಸಿಮಿಟಿಕ್ ಪ್ರಭಾವಕ್ಕೆ ಒಳಗಾಗದಿದ್ದ ಪಹ್ಲವಿಯ ಒಂದು ರೂಪ ಪೂರ್ವ ಇರಾನಿನಲ್ಲಿ ಬಳಕೆಯಲ್ಲಿತ್ತು. ಇದೇ ಮುಂದೆ ಭಾರತಕ್ಕೆ ವಲಸೆಬಂದ ಜರತುಷ್ಟ್ರಾನುಯಾಯಿಗಳ ಭಾಷೆಯಾಯಿತು. ಇದನ್ನು ಪಾರ್ಸಿ (ಅಥವಾ ಪಜ಼ೆಂಡ್) ಎಂದು ಕರೆಯುತ್ತಾರೆ.

20ನೆಯ ಶತಮಾನದಲ್ಲಿ ಬೆಳಕಿಗೆ ಬಂದ ಹಸ್ತಪ್ರತಿ ಅವಶೇಷಗಳಿಂದ ಸೊಗ್ಡಿಯನ್ ಮತ್ತು ಶಕ ಭಾಷೆಗಳ ವಿಚಾರ ತಿಳಿದುಬಂದಿದೆ.

ಆಧುನಿಕ ಇರಾನೀ ಭಾಷೆಗಳಲ್ಲಿ ಪಾರ್ಸಿ ಭಾಷೆಯೇ (ಅಥವಾ ಆಧುನಿಕ ಪಾರ್ಸಿಯೇ) ಅತ್ಯಂತ ಪ್ರಮುಖವಾದುದು. ಆನುವಂಶಿಕವಾದ ಪ್ರತ್ಯಯ ಸಂಬಂಧಿಗಳಾದ ಎಲ್ಲ ಕುರುಹುಗಳನ್ನು ಸಂಪೂರ್ಣವಾಗಿ ತೊಡೆದು ಹಾಕಿರುವ ದೃಷ್ಟಿಯಿಂದ ಬೇರಾವುದೇ ಇಂಡೊ–ಯುರೋಪಿಯನ್ ಭಾಷೆಯೂ ಮುಟ್ಟದಿರುವಂಥ ಪರಿಷ್ಕೃತಾವಸ್ಥೆಯನ್ನು (ಕೊಂಚಮಟ್ಟಿಗೆ ಇಂಗ್ಲಿಷ್ ಇದನ್ನು ಸಾಧಿಸಿದೆ) ತೋರುವ ಇದು ಅತ್ಯಂತ ಸಮೃದ್ಧವಾದ ಭಾಷೆ.

ಕುರ್ದಿಶ್ (ಮತ್ತು ಅದರ ಉಪಭಾಷೆಗಳು) ಮಜ಼ಂದ್ರಾನಿ (ಕ್ಯಾಸ್ಪಿಯನ್ ಪ್ರದೇಶದಲ್ಲಿ) ಓಸ್ಸೆಟಿಕ್ (ಪೂರ್ವಇರಾನ್ ಪ್ರದೇಶಕ್ಕೆ ಸೇರಿರುವುದಾದರೂ ಇಂದು ಕಕೇಸಿಯನ್ ವಲಯದಲ್ಲಿ ಬಳಕೆಯಲ್ಲಿದೆ), ಪಷ್ಟೊ (ಆಫ್ಘಾನಿಸ್ತಾನದಲ್ಲಿ ಬಳಕೆಯಲ್ಲಿದೆ.), ಬಲೋಚಿ (ಬಲೋಚಿಸ್ತಾನದಲ್ಲಿ ಬಳಕೆಯಲ್ಲಿದೆ), ಮತ್ತು ಘಲ್ ಛಾಹ್ (ಅಥವಾ ಪಾಮಿರ್ ಉಪಭಾಷೆಗಳು)– ಇವು ಇತರ ಆಧುನಿಕ ಇರಾನೀ ಭಾಷೆಗಳು. *

**ಇರಾವಾಡಿ:** ಮಾಯನ್ಮಾರ್‌ನ (ಹಿಂದಿನ ಬರ್ಮಾದ) ಪ್ರಮುಖ ನದಿ. ಅಸ್ಸಾಮಿನ ಈಶಾನ್ಯ ತುದಿಯಲ್ಲಿ, ಟಿಬೆಟ್ಟಿನ ಗಡಿಯಲ್ಲಿ. 4,570–5790ಮೀ. ಎತ್ತರದ ಪರ್ವತ ಪ್ರದೇಶದಲ್ಲಿ ಇದರ ಉಗಮ. ಸರಿಸುಮಾರಾಗಿ ಉತ್ತರ–ದಕ್ಷಿಣ ಮಾರ್ಗವಾಗಿ ಮಾಯನ್ಮಾರ್ ಉದ್ದಕ್ಕೂ ಸು. 2,400 ಕಿ.ಮೀ. ಹರಿದು ಬಂಗಾಲ ಕೊಲ್ಲಿಯನ್ನು ಸೇರುತ್ತದೆ. ಸಮುದ್ರವನ್ನು ಸೇರುವಾಗ ಸುಮಾರು 12 ಕವಲುಗಳಾಗಿ ಒಡೆಯುತ್ತದೆ. ನದೀಮುಖಜಭೂಮಿ ಬಹು ಫಲವತ್ತಾದ ವಿಶಾಲ ಪ್ರದೇಶ. ಸುಮಾರು 4,09,220 ಚ.ಕಿ.ಮೀ. ಹರಡಿರುವ ಜಲಾಯನ ಪ್ರದೇಶದಲ್ಲಿ ಉತ್ಕೃಷ್ಟ ಬತ್ತ ಬೆಳೆಯುತ್ತದೆ. ಮಿಟ್‌ಕೈನದಿಂದ ಕೆಲವು ಕಿಲೊಮೀಟರುಗಳ ಮುಂದೆ ನದಿ ಸುಮಾರು 1 ಕಿ.ಮೀ. ಅಗಲವಾಗೂ 9.ಮೀ ಗಳಷ್ಟು ಆಳವಾಗೂ ಇದ್ದು 1450ಕಿ.ಮೀ ನೌಕಾಸಂಚಾರಕ್ಕೆ ಅನುಕೂಲವಾಗಿದೆ. ಬಸ್ಸೇನ್ ಮತ್ತು ಯಾಂಗೂನ್ ನದಿಗಳನ್ನು ಇರಾವಾಡಿ ನದಿಗೆ 1833ರಲ್ಲಿ ಕಾಲುವೆಯ ಮೂಲಕ ಜೋಡಿಸಲಾಯಿತು. ದೊಡ್ಡ ಹಡಗುಗಳ ಸಂಚಾರಕ್ಕೆ ಇದನ್ನು 1923–35ರಲ್ಲಿ ವಿಸ್ತರಿಸಲಾಯಿತು. ಇಂದು ಇರಾವಾಡಿ ನದಿ ಮಾಯನ್ಮಾರಿನ ಪ್ರಮುಖ ವಾಣಿಜ್ಯಮಾರ್ಗವಾಗಿದ್ದು ಆರ್ಥಿಕ ಪ್ರಗತಿಯ ಬೆನ್ನೆಲುಬಾಗಿದೆ. ಬಸ್ಸೇನ್, ಯಾಂಗೂನ್, ಹೆಂಜಾದ, ಮಗ್ವೆ, ಪಕೊಕೊ, ಭಾಮೊ ಮುಂತಾದುವು ಇದರ ದಡದಲ್ಲಿರುವ ಪ್ರಮುಖ ಪಟ್ಟಣಗಳು. (ಎಂ.ಎಸ್.)

**ಇರಾಸ್:** ಕ್ಷುದ್ರಗ್ರಹಗಳ (ಆಸ್ಟಿರಾಯಿಡ್ಸ್) ಪೈಕಿ ಒಂದು. ವ್ಯಾಸ 32–48 ಕಿ.ಮೀ. ಬೀರುವ ಕಾಂತಿ (ಸೂರ್ಯಪ್ರಕಾಶದ ಪ್ರತಿಫಲನ) ಬಲು ಚಂಚಲ. ಇದೊಂದು ಕಿರಿಯ ಆಕಾಶಶಿಲೆ; ಸೌರವ್ಯೂಹದ ಮೂಲ ಇಟ್ಟಿಗೆಗಳಲ್ಲೊಂದು. ಇಂಥ ಇಟ್ಟಿಗೆಗಳು ಒಂದುಗೂಡಿ ಗ್ರಹಗಳಾದುವೆಂದೂ ಹಾಗಾಗದೆ ಉಳಿದವು ಕ್ಷುದ್ರಗ್ರಹಗಳೆಂದೂ ಕೆಲವು ವಿಜ್ಞಾನಿಗಳ ಅಭಿಮತ, ಮಂಗಳ, ಗುರು ಗ್ರಹಗಳ ಕಕ್ಷೆಗಳ ನಡುವೆ (ಎಂದರೆ ಸೂರ್ಯನಿಂದ ಸುಮಾರು 1.52 ಮತ್ತು 5.2 ಖಗೋಲ ಮಾನಗಳು 1 ಖ.ಮಾ= 9,30,00,000 ಮೈ.) ಕ್ಷುದ್ರಗ್ರಹಗಳಿವೆ. ಇವು (ಇದುವರೆಗೆ ಗುರುತಿಸಿರುವಂತೆ) ವಿವಿಧ ಗಾತ್ರ ಆಕಾರಗಳ ಸುಮಾರು 1300 ಬಿಡಿ ತುಂಡುಗಳ ಸಮುದಾಯ; ಇವುಗಳ ಸಾಮೂಹಿಕ ಕಕ್ಷೆಗಳ ವ್ಯಾಪ್ತಿ ಸುಮಾರು 2.17–3.45 ಖ.ಮಾ. ಕೆಲವು ಬಿಡಿ ತುಂಡುಗಳ ಕಕ್ಷೆಗಳು ಆಶ್ಚರ್ಯಕರವೆನಿಸುವಷ್ಟು ಪ್ರತ್ಯೇಕವಾಗಿವೆ. ಇಕಾರಸ್ (ನೋಡಿ– ಇಕಾರಸ್) ಇಂಥ ಒಂದು ಬಿಡಿ ತುಂಡಾದರೆ ಇರಾಸ್ ಇನ್ನೊಂದು. ಭೂಮಿಗೆ ಅತಿಸಮೀಪ ಆಗಮಿಸುವ ಆಕಾಶಕಾಯಗಳಲ್ಲಿ ಚಂದ್ರನ ತರುವಾಯ ಇರಾಸಿಗೆ ಪ್ರಥಮಸ್ಥಾನ. ಇದೇ ಅದರ ವೈಶಿಷ್ಟ್ಯ. ಭೂಮಿ–ಇರಾಸ್ ಅಂತರದ ಕನಿಷ್ಠ ಬೆಲೆ ಸುಮಾರು 1,38,40,000 ಮೈ. (ಭೂಮಿ–ಚಂದ್ರ ಅಂತರದ ಸರಾಸರಿ ಬೆಲೆ 2,39,000 ಮೈ.) ಇಂಥ ಅನುಕೂಲ ಸಂದರ್ಭವನ್ನು ಉಪಯೋಗಿಸಿಕೊಂಡು ಸೂರ್ಯ–ಭೂಮಿ ಅಂತರದ ನಿಖರ ಬೆಲೆ ಅಳೆಯುತ್ತಾರೆ. ಇರಾಸಿನ ಕಕ್ಷೆಯ ಉತ್ಕೇಂದ್ರತೆ (ಎಕ್ಸೆಂಟ್ರಿಸಿಟಿ) 0.22; ಅರ್ಧ ದೀರ್ಘಾಕ್ಷ 1.46 ಖ.ಮಾ.; ಕಕ್ಷಾತಲ, ಕ್ರಾಂತಿವೃತ್ತಗಳ ನಡುವಿನ ಕೋನ 10–8°. ನಾಕ್ಷತ್ರಿಕ ಅವಧಿ (ಸೂರ್ಯನನ್ನು ಒಂದು ಸಲ ಪರಿಭ್ರಮಿಸಲು ಬೇಕಾಗುವ ಕಾಲ) 1.76 ವರ್ಷಗಳು (1 ವರ್ಷ=365,2422 ದಿವಸಗಳು). ಈ ಕ್ಷುದ್ರಗ್ರಹ ಬಾಹ್ಯಾಕಾಶದಿಂದ ಅನೇಕ ಅಧ್ಯಯನಕ್ಕೆ ಒಳಪಟ್ಟಿದೆ. *

**ಇರಾಸಿಸ್ಟ್ರೇಟಸ್: ನೋಡಿ–ಅಂಗರಚನಾಶಾಸ್ತ್ರ, ಒಟ್ಟಾರೆ**

**ಇರಾಸ್ಮಸ್, ಅಲ್ಬೆರಸ್:** 1500–1553. ಮಾರ್ಟಿನ್ ಲೂಥರನ ಬೆಂಬಲಿಗ. ಫ್ರಾಂಕ್‌ಫರ್ಟ್ ನಗರದ ಹತ್ತಿರದ ಸ್ಥಳವಾದ ಸ್ಟ್ರೆಂಡ್ ಅಂಗೆನ್ ಎಂಬಲ್ಲಿ ಜನಿಸಿದ. ಈತನ ಬರೆವಣಿಗೆ ಕೆಥೋಲಿಕ್ ಪಂಥದ ಅವಹೇಳನವನ್ನೂ ಪ್ರಾಟೆಸ್ಟಂಟ್ ಪಂಥದ ಹೆಚ್ಚಳವನ್ನೂ ಕುರಿತದ್ದಾಗಿದೆ. ಈ ಬಗೆಯ ಬರೆವಣಿಗೆ ಅಡಗೂಲಜ್ಜಿ ಕಥೆಗಳನ್ನು ಹೋಲುವಂಥದು. 1550ರಲ್ಲಿ ಪ್ರಕಟವಾದ ಧರ್ಮ ಮತ್ತು ಜ್ಞಾನವನ್ನು ಕುರಿತ ಗ್ರಂಥ (Das Buch Von Tugend and Weisheit) ಕೆಥೋಲಿಕ್ ಪಂಥವನ್ನು ವಿಡಂಬನಾತ್ಮಕವಾಗಿ ಟೀಕಿಸುವ ಕಥಾನಕಗಳನ್ನೊಳಗೊಂಡಿದೆ. ಇದಕ್ಕೂ ಮುಂಚಿತವಾಗಿ, 1542ರಲ್ಲಿ ಕ್ರಿಯಾಪ್ರಹಸನ ಮತ್ತು ಅಲ್ ಕೊರಾನ್ (Enlenspiegel and Alcorn) ಎಂಬ ಹೊತ್ತಗೆಯಲ್ಲಿ ರೋಮನ್ ಕೆಥೋಲಿಕರು ನಡೆಸುವ ಸಂತರ ಪೂಜೆಯನ್ನು ಈತ ಖಂಡಿಸಿದ್ದಾನೆ. ಈ ಹೊತ್ತಿಗೆ ಗಮನಾರ್ಹವಾದುದು. ಏಕೆಂದರೆ, ಈ ಹೊತ್ತಗೆಗೆ ಮುನ್ನುಡಿಯನ್ನು ಸ್ವತಃ ಮಾರ್ಟಿನ್ ಲೂಥರನೇ ಬರೆದಿದ್ದಾನೆ. (ಕೆ.ಕೆ.ಐ.)

**ಇರಿಡಿಯಂ:** ಒಂದು ಲೋಹಧಾತು. ರಾಸಾಯನಿಕ ಸಂಕೇತ Ir. ಪರಮಾಣುಸಂಖ್ಯೆ 77, ಪರಮಾಣುಭಾರ 192.23 ಇದರ ಸಹಜಲಭ್ಯಸಮಸ್ಥಾನಿಗಳು 191, 193, ಎಲೆಕ್ಟ್ರಾನ್ ವಿನ್ಯಾಸ $1s^2\ 2s^2\ sp^6\ 3s^2\ 3p^6\ 3d^{10}\ 4s^2\ 4p^6\ 4d^{10}$- $4f^{14}\ 5s^2\ 5p^6\ 5d^9$. ಮೆಂಡಿಲೀಫ್ ಆವರ್ತಕೋಷ್ಟಕದ ಎಂಟನೆಯ ಗುಂಪಿನ (ಗ್ರೂಪ್) ಮೂರು ಧಾತುತ್ರಯಗಳಲ್ಲಿ ಕಡೆಯದರ ಮಧ್ಯದ ಲೋಹವಾಗಿದೆ; ಪ್ಲಾಟಿನಂ ಲೋಹಗಳೆಂದು ಪ್ರಸಿದ್ಧವಾಗಿರುವ ರುಥೇನಿಯಂ (Ru), ರ್‍ಹೋಡಿಯಂ (Rh) ಪೆಲೇಡಿಯಂ (Pd) ಮತ್ತು ಆಸ್ಮಿಯಂ (Os), ಇರಿಡಿಯಂ (Ir.) ಪ್ಲಾಟಿನಂಗಳಲ್ಲಿ (Pt) ಇರಿಡಿಯಂ ಐದನೆಯದು. ಈ ಲೋಹ 2454 ಸೆಂಗ್ರೇ.ನಲ್ಲಿ ಕರಗಿ 4800 ಸೆಂಟಿಗ್ರೇಡ್ ನಲ್ಲಿ ಕುದಿಯುತ್ತದೆ. ಜಗತ್ತಿನ ಎಲ್ಲ ವಸ್ತುಗಳಲ್ಲಿಯೂ ಆಸ್ಮಿಯಂ ಲೋಹವನ್ನು ಬಿಟ್ಟರೆ ಇದರದೇ ಗರಿಷ್ಠ ಸಾಪೇಕ್ಷ ಸಾಂದ್ರತೆ (22.64) ಇದರ ಪರಮಾಣು ಲಕ್ಷಣಗಳ ಸಂಕ್ಷೇಪ ವಿವರ: ತ್ರಿಜ್ಯ 1.26A; ಆಯಾನಿಕ್ ತ್ರಿಜ್ಯ 0.66A; ಪರಮಾಣು ಗಾತ್ರ 8.54 ಗ್ರಾಂ/ಮಿ.ಲೀ : ಎಲೆಕ್ಟ್ರೋನೆಗೆಟಿವಿಟಿ (ಪಾಲಿಂಗ್ ಮಾನದಲ್ಲಿ) 0.22; ಆನಿಲೀಕರಣ ಉಷ್ಣ 152 ಕಿ.ಗ್ರಾಂ–ಕೆಲೊರಿ/ಗ್ರಾಂ ಆಟಂ: ಕರಗುವ ಉಷ್ಣ 6.6 g ಕಿ.ಗ್ರಾಂ. ಕೆಲೊರಿ/ಗ್ರಾಂ ಆಟಂ; ವಿದ್ಯುದ್ವಾಹನ 0.189 ಮೈಕ್ರೋಮ್ಹೋಗಳು; ಉಷ್ಣವಾಹನ 0.14 ಕೆಲೊರಿ/ಚ.ಸೆಂ. ಮೀ). ಸೆ. ಸೆಕೆಂಡ್: ಸಾಪೇಕ್ಷ ಉಷ್ಣತೆ 0.031 ಕೆಲೊರಿ/ಗ್ರಾಂ ಸೆಂ.ಗ್ರೇ ಮೊದಲನೆಯ ಎಲೆಕ್ಟ್ರಾನ್ ಹರಣಕ್ಕೆ ಬೇಕಾಗುವ ಶಕ್ತಿ 212 ಕೆಲೊರಿ/ಗ್ರಾಂ ಮೋಲ್.

ಇರಿಡಿಯಂ ಲೋಹ ಸ್ವಸ್ವರೂಪದಲ್ಲಿ ಪ್ರಕೃತಿಯಲ್ಲಿ ದೊರೆಯುವುದಿಲ್ಲ; ಪ್ಲಾಟಿನಂಗಳ ಜೊತೆಯಲ್ಲಿಯೇ ಪ್ಲಾಟಿನಿರಿಡಿಯಂ, ಆಸ್ಮಿರಿಡ್, ನೆವ್ಯಾನ್ ಸ್ಕೈಟ್ ಮತ್ತು ಸೈಸರ್ಟ್ಸ್‌ಕೈಟ್, ಇರೈಟ್, ಆರಾಸ್ಮಿಡ್ ಮೊದಲಾದ ಅದುರುಗಳ ರೂಪದಲ್ಲಿ ಭೂಮಿಯ ಮೇಲ್ಪದರದಲ್ಲಿ ಪ್ರತಿ ಲಕ್ಷ ಕೋಟಿಯಲ್ಲಿ ಮೂರು ಭಾಗಗಳಷ್ಟು ಅತ್ಯಲ್ಪವಾಗಿ ದೊರೆಯುತ್ತದೆ. ಇದು ಮುಖ್ಯವಾಗಿ ರಷ್ಯದ ಯೂರಲ್ ಪರ್ವತದಲ್ಲಿಯೂ ಸೈಬಿರಿಯ, ಕ್ಯಾಲಿಪೋರ್ನಿಯ, ಓರೆಗಾನ್, ಸ್ಪೇನ್, ನ್ಯೂಸೌತ್ ವೇಲ್ಸ್, ಬ್ರಿಟಿಷ್ ಕೊಲಂಬಿಯ (ಕೆನಡ), ವಿಟ್ ವಾಟರ್ಸ್ ರ್‍ಯಾಂಡ್ (ದ. ಆಫ್ರಿಕ) ಮುಂತಾದ ಪ್ರಾಂತ್ಯಗಳಲ್ಲಿಯೂ ಸಿಗುತ್ತದೆ. ಆಸ್ಮಿಯಂ–ಇರಿಡಿಯಂ ಮಿಶ್ರಣಗಳಲ್ಲಿ ಪ್ರತಿಶತ 60ಕ್ಕಿಂತ ಕಡಿಮೆ ಇರಿಡಿಯಂ ಇರುವ ಅದುರನ್ನು ಸೈಸರ್ಟ್ಸ್‌ಕೈಟ್ ಎಂದೂ ಇದಕ್ಕಿಂತ ಹೆಚ್ಚಾಗಿದ್ದರೆ ನೆವ್ಯಾನ್‌ಸ್ಕೈಟ್ ಎಂದೂ ಕರೆಯುತ್ತಾರೆ. 1804ರಲ್ಲಿ

ಸ್ಮಿತ್ ಸನ್ ಟೆನ್ನೆಂಟ್ ಇದನ್ನು ಮೊದಲನೆಯ ಬಾರಿಗೆ ಪ್ರತ್ಯೇಕಿಸಿ ಅದರ ಲವಣಗಳಿಗೆ ಕಾಮನಬಿಲ್ಲಿನ ಸಕಲ ವರ್ಣಗಳೂ ಇರುವುದರಿಂದ ಇರಿಡಿಯಂ (ಗ್ರೀಕ್: ಐರಿಸ್, ಕಾಮನಬಿಲ್ಲು) ಎಂದು ಹೆಸರಿಟ್ಟ.

ಇರಿಡಿಯಂ ಲೋಹವನ್ನು ಅದರ ಅದುರುಗಳಿಂದ ಪ್ರತ್ಯೇಕಿಸುವ ಹಲವು ವಿಧಾನಗಳ ಲ್ಲಿವೆ. ಅದಿರಿನಲ್ಲಿ ರುಥೇನಿಯಂ ಇರುವಾಗ ಅನುಸರಿಸುವ ವಿಧಾನ ಬಹು ಪ್ರಚಾರದಲ್ಲಿರುವುದ ರಿಂದ ಅದನ್ನಿಲ್ಲಿ ಸಂಕ್ಷೇಪವಾಗಿ ವಿವರಿಸಬಹುದು: ಪ್ಲಾಟಿನಂ, ರುಥೇನಿಯಂ, ಆಸ್ಮಿಯಂ ಮತ್ತು ಇರಿಡಿಯಂಗಳಿರುವ ಅದಿರನ್ನು ಪುಡಿ ಮಾಡಿ ರಾಜಾಮ್ಲದಲ್ಲಿ (ಪ್ರಬಲ ನೈಟ್ರಿಕ್ ಆಮ್ಲ ಮತ್ತು ಪ್ರಬಲ ಹೈಡ್ರೊಕ್ಲೋರಿಕ್ ಆಮ್ಲಗಳ ಮಿಶ್ರಣ) ಬಟ್ಟಿಯಿಳಿಸಿದಾಗ ಕುದಿಯಲ್ಲಿ ಆಸ್ಮಿಕ್‌ಆಮ್ಲದ ಬಹುಭಾಗ ಹೊರಟುಹೋಗಿ ಹಿಂದೆ ಪ್ಲಾಟಿನಂ, ರುಥೇನಿಯಂ ಮತ್ತು ಇರಿಡಿಯಂ (ಮತ್ತು ಅಳಿದುಳಿದ ಆಸ್ಮಿಯಂ) ಉಳಿಯುತ್ತವೆ. ಇವುಗಳಿಗೆ ನೈಟ್ರಿಕ್ ಆಮ್ಲವನ್ನೂ ಅಮೋನಿಯಂ ಕ್ಲೋರೈಡನ್ನು (ನವಾಸಾಗರ) ಬೆರೆಸಿ, ಒಣಗಿಸಿ ನವಾಸಾಗರದ ದ್ರಾವಣ ದೊಡನೆ ತೊಳೆಯಲಾಗುತ್ತದೆ. ಇದರಿಂದ ಅಮೋನಿಯಂ ಕ್ಲೋರೋ ಇರಿಡೇಟ್ ಹಾಗೂ ಅಮೋನಿಯಂ ಕ್ಲೋರೋಪ್ಲಾಟಿನೇಟ್ ಎಂಬ ಸಂಕೀರ್ಣ ಲೋಹಗಳೂ ರುಥೇನಿಯಂ ಲೋಹವೂ ದೊರೆಯುತ್ತವೆ. ಇವನ್ನು ಹೈಡ್ರೊಜನ್ನಿನಲ್ಲಿ ಕೆಂಪಗೆ ಕಾಯಿಸಿದಾಗ ಇವೂ ಉಳಿದ ಆಸ್ಮಿಯಂ ಅಂಶವೂ ಅಯಾ ಲೋಹಗಳಾಗಿ ಅಪಕರ್ಷಣಗೊಳ್ಳುತ್ತದೆ. ಇವನ್ನು ಪುನಃ ರಾಜಾಮ್ಲದೊಡನೆ ಕಾಸಲಾಗುತ್ತದೆ. ಪ್ಲಾಟಿನಂ ಮತ್ತು ಆಸ್ಮಿಯಂಗಳು ಮಾತ್ರ ಕರಗಿ ಇರಿಡಿಯಂ ರುಥೇನಿಯಂಗಳು ಘನಸಾರವಾಗಿ (ಕಿಟ್ಟವಾಗಿ) ಉಳಿಯುತ್ತವೆ. ಇದನ್ನು ಕಾಸ್ಟಿಕ್ ಪೊಟಾಷ್ ಮತ್ತು ಪೊಟಾಸಿಯಂ ನೈಟ್ರೇಟುಗಳೊಡನೆ ವಿಲೀನಿಸಿ, ತಂಪಿಸಿ, ನೀರಿನೊಡನೆ ತೊಳೆದಾಗ ರುಥೇನಿಯಂ ಲವಣ ಮಾತ್ರ ವಿಲೀನವಾಗಿ ಇರಿಡಿಯಂ ಲೋಹ ಹಾಗೆಯೇ ಉಳಿದುಹೋಗುತ್ತದೆ. ಇದನ್ನು ಕರಗಿಸಿ ಬೇಕಾದ ರೂಪ, ಆಕಾರಗಳಲ್ಲಿ ಪಡೆದುಕೊಳ್ಳಬಹುದು. ಈ ಲೋಹವನ್ನು ಹರಳು ತಂತಿ, ಸ್ಪಂಜಿನಂಥ ಸರಂಧ್ರಕ ವಸ್ತು ಮೊದಲಾದ ರೂಪಗಳಲ್ಲಿಯೂ ತೆಳುವಾದ ಪದರಗಳಲ್ಲಿಯೂ ಕಪ್ಪು ಪುಡಿಯಾಗಿಯೂ ಆಸ್ಫೋಟಕ ರೂಪದಲ್ಲಿಯೂ ಕಲಾಯ್ಡ್ ರೂಪದಲ್ಲಿಯೂ ಪಡೆಯಬಹುದು.

ಇರಿಡಿಯಂ ಉಕ್ಕಿನಂತೆ ಬಿಳುಪಾದ ಬಲು ಗಟ್ಟಿಯಾದಲೋಹ. ಶುದ್ಧಾವಸ್ಥೆಯಲ್ಲಿ ಇದನ್ನು ತಂತಿಯಾಗಿ ಎಳೆದು ತಗಡಾಗಿ ತಟ್ಟಬಹುದಾದರೂ ಕಲ್ಮಷಗಳಿಂದಾಗಿ ಸಾಮಾನ್ಯವಾಗಿ ದೊರೆಯುವ ಲೋಹ ಬಲು ಪೆಡಸಾಗಿರುತ್ತದೆ. ರಾಸಾಯನಿಕವಾಗಿ ಅದು ಚುರುಕಲ್ಲವೆಂದೇ ಹೇಳಬೇಕು. ಸ್ಪಂಜಿನಂಥ ಇರಿಡಿಯಂ ಮತ್ತು ಈ ಲೋಹದ ಕಪ್ಪು ಪುಡಿಗಳೆರಡೂ ರಾಸಾಯನಿಕವಾಗಿ ಹೆಚ್ಚು ಕ್ರಿಯಾಶಾಲಿಗಳು. ಲೋಹ ಫ್ಲೂರಿನ್, ಕ್ಲೋರಿನ್ ಮತ್ತು ಗಂಧಕಗಳೊಡನೆ ಕಾಸಿದಾಗ ವರ್ತಿಸುತ್ತದೆ. ಆಮ್ಲಗಳಲ್ಲಿಯೂ ಕ್ಷಾರಗಳಲ್ಲಿಯೂ ಅದು ವಿಲೀನವಾಗದು; ರಾಜಾಮ್ಲದಲ್ಲಿ ಸ್ವಲ್ಪ ವಿಲೀನವಾಗುತ್ತದೆ. ಕರಗಿದ ಪೊಟಾಷ್ ಮತ್ತು ಆಕ್ಸಿಜನುಗಳಿಂದ ಅದು ಉತ್ಕರ್ಷಿತವಾಗಿ ಆಕ್ಸೈಡುಗಳನ್ನು ಕೊಡುತ್ತದೆ. 1,2,3,4,5 ಮತ್ತು 6 ಎಲೆಕ್ಟ್ರಾನುಗಳನ್ನು ಕಳೆದುಕೊಂಡು ಅದು ಆರು ಬಗೆಯ ಲವಣಗಳನ್ನು ಕೊಡಬಲ್ಲದು. ಇವುಗಳ ಪೈಕಿ ಮೂರು ಮತ್ತು ನಾಲ್ಕು ಎಲೆಕ್ಟ್ರಾನುಗಳನ್ನು ಕಳೆದುಕೊಳ್ಳುವುದರಿಂದ ಉಂಟಾಗುವ ಸಂಯುಕ್ತಗಳೇ ಹೆಚ್ಚು ಸ್ಥಿರವಾಗಿರುತ್ತದೆ. ಅಮೋನಿಯ, ಸಯನೈಡ್, ನೀರು, ನೈಟ್ರೈಟ್ ಮೊದಲಾದ ಪರಮಾಣು ಸಮುದಾಯಗಳು ಇರಿಡಿಯಂ ಪರಮಾಣುವಿ ನೊಡನೆ ನೇರವಾಗಿ ಬಂಧಗಳನ್ನು ಏರ್ಪಡಿಸಿಕೊಳ್ಳುವುದರಿಂದ ಬಲು ಬಗೆಯ ಸಂಕೀರ್ಣ ಸಂಯುಕ್ತಗಳು ಹುಟ್ಟುತ್ತವೆ.

ಒಂದು ವಸ್ತುವಿನಲ್ಲಿ ಇರಿಡಿಯಂ ಅಂಶ ಇದೆಯೆನ್ನುವುದನ್ನು ಈ ಪರೀಕ್ಷೆಗಳಿಂದ ತಿಳಿಯಬಹುದು: 1 ಅದರ ಕ್ಲೋರೈಡ್ ದ್ರಾವಣಕ್ಕೆ ಹೈಡ್ರೊಜನ್ ಸಲ್ಫೈಡನ್ನು ಹಾಯಿಸಿದಾಗ ಹಸಿರು ಅಥವಾ ಹಳದಿ ಬಣ್ಣ ನಿರ್ವರ್ಣವಾಗಿ ಕಂದು ಬಣ್ಣದ ಇರಿಡಿಯಂ ಸಲ್ಫೈಡು ಒತ್ತರಿಸುತ್ತದೆ. ಇದು ಅಮೋನಿಯಂ ಸಲ್ಫೈಡಿನ ಆಧಿಕ್ಯದಲ್ಲಿ ಕರಗುತ್ತದೆ. 2 ಸೋಡಿಯಂ ಕ್ಲೋರೋಇರಿಡೇಟ್ ದ್ರಾವಣಕ್ಕೆ ಕಾಸ್ಟಿಕ್‌ಸೋಡಾ ಅಥವಾ ಸೋಡಿಯಂ ಹೈಪೊಕ್ಲೋರೈಟನ್ನು ಸೇರಿಸಿದಾಗ ಬಣ್ಣ ಕಡುಕೆಂಪಿನಿಂದ ಹಸಿರಿಗೂ ಕಾಸಿದಾಗ ಆಕಾಶನೀಲಿಗೂ ತಿರುಗುತ್ತದೆ. 3 ಅನಿಲೀನ್ ಸಲ್ಫೇಟಿನೊಡನೆ ಕಾಸಿದಾಗ ಕಡುನೀಲಿ ಬಣ್ಣಕ್ಕೆ ತಿರುಗುತ್ತದೆ.

ಇರಿಡಿಯಂ ಲೋಹ ಬಲು ಗಟ್ಟಿ ಮತ್ತು ಅಶುದ್ಧವಾಗಿರುವಾಗ ಬಹು ಪೆಡಸು ಆಗಿರುವುದರಿಂದಲೂ ಮಿಶ್ರಲೋಹದಲ್ಲಿ 20%ಕ್ಕಿಂತ ಹೆಚ್ಚಾಗಿದ್ದರೆ ಇಷ್ಟಬಂದ ಆಕಾರ, ರೂಪವಾಗಿ ಮಾಡಿಕೊಳ್ಳಲು ಆಗದಿರುವುದರಿಂದಲೂ ಅದರ ಉಪಯೋಗಗಳು ಕಡಿಮೆಯೇ. ಮಾರುಕಟ್ಟೆಯಲ್ಲಿ ದೊರೆಯುವ ಪ್ಲಾಟಿನಂನಲ್ಲಿ ಇದು 2% ಆದರೂ ಇದ್ದೇ ತೀರುತ್ತದೆ. ಇದಿಲ್ಲದಿದ್ದ ಪ್ಲಾಟಿನಂ ಉಪಯೋಗಕ್ಕೆ ಬಾರದಷ್ಟು ಮೆತುವಾಗಿಬಿಡುತ್ತದೆ. ಜಗತ್ತಿನಲ್ಲಿ ಇಂದು ತೂಕಕ್ಕೂ ಅಳತೆಗೂ ಪ್ರಮಾಣ ಭೂತವಾಗಿರುವ ವಸ್ತುಗಳನ್ನು ನಿರ್ಣಯಿಸಿ ನಿರ್ಮಿಸಲು ಅಂತಾರಾಷ್ಟ್ರೀಯ ತೂಕ ಅಳತೆಗಳ ಸಮಿತಿ 90% ಪ್ಲಾಟಿನಂ, 10% ಇರಿಡಿಯಂ ಇರುವ ಮಿಶ್ರಲೋಹವನ್ನು ಆರಿಸಿದೆ: ಪ್ಲಾಟಿನಂ ಇರಿಡಿಯಂ ಮಿಶ್ರಣಗಳನ್ನು ಸೂಕ್ಷ್ಮತ್ರಾಸುಗಳ ಬೇರಿಂಗುಗಳು, ದಿಕ್ಸೂಚಿ, ತಿರುಗಣಿ, ವಿಜ್ಞಾನದ ಸೂಕ್ಷ್ಮಮಾಪಕ ಯಂತ್ರಗಳು, ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ ಶಸ್ತ್ರಗಳು. ಫೌಂಟನ್ ಪೆನ್ ನಿಬ್ಬುಗಳ ತುದಿ (ಪಾಯಿಂಟ್) ಮುಂತಾದುವುಗಳಲ್ಲಿ ಬಳಸುತ್ತಾರೆ. ಈ ಲೋಹ ಮಿಶ್ರವನ್ನು 1000° ಸೆ. ವರೆಗಿನ ಉಷ್ಣೋತ್ಪತ್ತಿಗಾಗಿ ಥರ್ಮೋಕಪಲ್ ಆಗಿಯೂ ವಿದ್ಯುತ್ ಬಲ್ಬುಗಳಲ್ಲಿನ ಸೂಕ್ಷ್ಮತಂತುವಿ ಗಾಗಿಯೂ ಉಪಯೋಗಿಸುವುದೂ ಉಂಟು. ಇರಿಡಿಯಂ ಮೂಸೆಗಳನ್ನು ಕೆಲವು ವಿಶೇಷ ರಾಸಾಯನಿಕ ಕ್ರಿಯೆಗಳನ್ನು ನಡೆಸಲು ಬಳಸಲಾಗುತ್ತದೆ. ಈ ಲೋಹದ ಎಲೆಕ್ಟ್ರೋಡುಗಳನ್ನು ಬಳಸಿ ಕ್ಲೋರೈಡುಗಳನ್ನು ತಯಾರಿಸುತ್ತಾರೆ. ಇರಿಡಿಯಂ ಆಕ್ಸೈಡ್ ಪಿಂಗಾಣಿಗೆ ಕಪ್ಪು ಬಣ್ಣ ಕೊಡಲೂ ಕ್ಲೋರೈಡಿನ ಮೈಕ್ರೊಸ್ಕೋಪಿಯಲ್ಲಿಯೂ ನೈಟ್ರಸ್‌ಆಮ್ಲದ ಸಾನ್ನಿಧ್ಯದಲ್ಲಿರುವ ನೈಟ್ರಿಕ್ ಆಮ್ಲವನ್ನು ಕಂಡುಹಿಡಿಯಲೂ ಉಪಯೋಗವಿದೆ. ಇರಿಡಿಯಂ ಸಂಯುಕ್ತಗಳನ್ನು ಛಾಯಾಚಿತ್ರೋದ್ಯಮದಲ್ಲಿ ಬಳಸುತ್ತಾರೆ ಮತ್ತು ರಾಸಾಯನಿಕ ವೇಗವರ್ಧಕಗಳಾಗಿ ಉಪಯೋಗಿಸುತ್ತಾರೆ. ಆದರೆ ಲೋಹ ಮತ್ತು ಅದರ ಸಂಯುಕ್ತಗಳು ಇನ್ನೂ ಬಲು ದುಬಾರಿಯಾಗಿಯೇ ಇವೆ.

*

**ಇರಿಡೇಸಿ :** ಏಕದಳ ಸಸ್ಯಗಳ ಒಂದು ಕುಟುಂಬ. 60 ಜಾತಿಗಳೂ 600 ಪ್ರಭೇದಗಳೂ ಇವೆ. ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ಚೆನ್ನಾಗಿ ಬೆಳೆಯಬಲ್ಲುವು. ಭಾರತದಲ್ಲಿ ಬೆಳೆಯುವ ಜಾತಿಗಳು ಮೂರು–ಐರಿಸ್, ಬೆಲಮ್‌ಕಾಂಡ ಮತ್ತು ಸಿಪುರ.

ಕ್ರೋಕಸ್ ಸಟೈವಸ್ (ಕುಂಕುಮ ಕೇಸರಿ) ಗಿಡ

ಗುಣಗಳು: ಇರಿಡೇಸಿ ಕುಟುಂಬದ ಸಸ್ಯಗಳು ಸಾಮಾನ್ಯವಾಗಿ ಬಹುವಾರ್ಷಿಕ ಮೂಲಿಕೆಗಳು: ಗೆಡ್ಡೆಗಳು ಬಹುತೇಕ ಒಳಗಿರುತ್ತವೆ. ಕಾಂಡದ ಕೆಳಗೆ ಎಲೆಗಳು ಗುಂಪು ಗುಂಪಾಗಿ ಮೂಡುತ್ತವೆ. ಪುಷ್ಪಗಳು ನೇರವಾದ ಇಲ್ಲವೇ ಸೊಟ್ಟನೆಯ ಪೇರಿಯಾಂತ್ ಕೊಳವೆ ಇರುವ ದ್ವಿಲಿಂಗ ಜಾತಿಯವು. ಅಲ್ಲಲ್ಲಿ ಬೇರೆ ಬೇರೆ ಬಣ್ಣಗಳ ಮಚ್ಚೆಗಳಿರುವುದರಿಂದ ಈ ಪುಷ್ಪಗಳು ನೋಡಲು ಬಲು ಸುಂದರ. ಪೆರಿಯಾಂತ್ ವರ್ಣಮಯವಾಗಿದೆ. ಇದರಲ್ಲಿ ಎರಡು ವೃತ್ತಗಳಲ್ಲಿ ಆರು ದಳಗಳಿವೆ. ದಳಗಳ ಆಕೃತಿಗಳು ಬೇರೆ ಬೇರೆ ಆಗಿರುವುದುಂಟು. ಸಿಸಿರಿಂಖಿಯೆಯನ್ನು ಬಿಟ್ಟರೆ ಸಾಮಾನ್ಯವಾಗಿ ಹೂಗೊಂಚಲು ಸೈಮೋಸ್ ರೀತಿಯದು. ಕೇಸರಗಳ ಸಂಖ್ಯೆ ಮೂರು. ಇವು ಸಾಮಾನ್ಯವಾಗಿ ಪೇರಿಯಾಂತಿನ ಹೊರದಳಗಳಿಗೆ ಅಭಿಮುಖವಾಗಿವೆ. ಕೇಸರದಂಡಗಳು ಬಿಡಿಬಿಡಿಯಾಗಿಯೋ ಅಥವಾ ಸ್ವಲ್ಪಮಟ್ಟಿಗೆ ಕೂಡಿಕೊಂಡೋ ಇರುವುವು. ಪರಾಗಕೋಶಗಳಲ್ಲಿ ಎರಡೆರಡು ಭಾಗಗಳಿವೆ. ಇವು ಬಲಿತಮೇಲೆ ಉದ್ದನೆಯ ರಂಧ್ರಗಳು ಮೂಡಿ ಪರಾಗರೇಣುಗಳು ಹೊರಬಂದು ಪರಾಗಸ್ಪರ್ಶ ಕಾರ್ಯಕ್ಕೆ ಸಹಕಾರಿಯಾಗುವುವು. ಅಂಡಾಶಯ ಸಾಮಾನ್ಯವಾಗಿ ನೀಚಸ್ಥಾನದಲ್ಲಿದೆ. ಕೆಲವು ಸಸ್ಯಗಳಲ್ಲಿ ಉಚ್ಚಸ್ಥಾನದಲ್ಲಿರುವುದೂ ಉಂಟು. ಅಂಡಾಶಯದಲ್ಲಿ ಮೂರು ಕೋಣೆಗಳಿದ್ದರೆ ಅಂಡಕಗಳು ಆಕ್ಸೈಲ್ ಪ್ಲಾಸೆಂಟಕ್ಕೆ ಸೇರಿಕೊಂಡಿರುತ್ತವೆ. ಹೀಗಲ್ಲದೆ ಒಂದೇ ಕೋಣೆ ಇದ್ದರೆ ಸಾಮಾನ್ಯವಾಗಿ ಅದಕ್ಕೆ ಮೂರು ಪೆರೈಟಲ್ ಪ್ಲಾಸೆಂಟಗಳಿರುವುವು. ಅಂಡಾಶಯದ ಮೇಲಿರುವ ಶಲಾಕನಳಿಕೆಯ ಮೇಲುಭಾಗದಲ್ಲಿ ಮೂರು ವಿಭಾಗಗಳಿವೆ. ಪ್ರತಿ ಅಂಡಾಶಯದಲ್ಲೂ ಇರುವ ಅಂಡಕಗಳು ಅನೇಕ; ಅವುಗಳ ಜಾತಿ ಅನಟ್ರೋಪಸ್, ಬೀಜಗಳೊಳಗೆ ಸ್ವಲ್ಪ ಭ್ರೂಣಾಹಾರವೂ ಚಿಕ್ಕದೊಂದು ಭ್ರೂಣವೂ ಇವೆ. ಫಲ ಕ್ಯಾಪ್ಸೂಲ್ ಮಾದರಿಯದು.

ಇರಿಡೇಸಿ ಕುಟುಂಬವನ್ನು ಡಯೆಲ್ಸ್ ಎಂಬಾತ ಮೂರು ಗುಂಪುಗಳಾಗಿ ವರ್ಗೀಕರಿಸಿದ್ದಾನೆ. 1. ಸಿಸಿರಿಂಖೆ ಉದಾ: ಸಿಪುರ ಮತ್ತು ಕ್ರೊಕೆಸ್. 2. ಇಕ್ಸಿಯೆ, ಉದಾ: ಗ್ಲಾಡಿಯೋಲಸ್ ಮತ್ತು ಮೈಕ್ರಾಂಥಸ್. 3. ಮೊರೇಯಿಯ, ಉದಾ: ಐರಿಸ್, ಮೊರೇಯಿಯ.

ಆರ್ಥಿಕದೃಷ್ಟಿಯಿಂದ ಇರಿಡೇಸಿಗೆ ಬಲು ಪ್ರಾಮುಖ್ಯವುಂಟು. ಐರಿಸ್ ಜರ್ಮಾನಿಕ ಮತ್ತು ಐರಿಸ್ ಫ್ಲಾರೆನ್ಷಿಯಾನ ಗಿಡಗಳ ಗೆಡ್ಡೆಗಳಿಂದ ಒಂದು ಬಗೆಯ ಸುಗಂಧದ್ರವ್ಯ ತೆಗೆಯುತ್ತಾರೆ. ಕ್ರೋಕಸ್ ಸಟೈವಸ್ ಸಸ್ಯದ ಒಣಗಿದ ಶಲಾಕಾಗ್ರಗಳಿಂದ ಕುಂಕುಮಕೇಸರಿ ಪಡೆಯುತ್ತಾರೆ. ಐರಿಸ್ ಪೊಟಿಡಿಸಿಮ ಗಿಡದ ಗೆಡ್ಡೆಯ ರಸ ಹಿಸ್ಟೀರಿಯ ಕಾಯಿಲೆಯಲ್ಲಿ ಔಷಧವಾಗಿ ಬಳಕೆಯಲ್ಲಿದೆ. (ಎಸ್.ಎನ್.ಆರ್.)

**ಇರಿನ್ನ:** (ಪ್ರ.ಶ.ಪೂ.ಸು. 4ನೆಯ ಶತಮಾನ). ಒಬ್ಬ ಗ್ರೀಕ್ ಕವಿಯಿತ್ರಿ, ಬರೆದಿರುವುದು ಗಾತ್ರದಲ್ಲಿ ಕಿರಿದಾದರೂ ಗುಣದಲ್ಲಿ ಕಳಪೆಯದೇನಲ್ಲ. ಕ್ರಿ.ಪೂ. ಆರನೆಯ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದ ಗ್ರೀಕ್ ಕವಯಿತ್ರಿ ಸ್ಯಾಪೋಳ ಗೆಳತಿಯಾಗಿದ್ದಳು ಎಂದು ಒಂದು

ಪ್ರತೀತಿ. ಆದರೆ ಅವಳ ಕಾಲ ನಿರ್ದಿಷ್ಟವಾಗಿ ಗೊತ್ತಾಗಿಲ್ಲ. ಪ್ರಶ. ಮೂರನೆಯ ಶತಮಾನದಲ್ಲಿದ್ದ ಯುಸೆಬಿಯಸ್ ಎಂಬ ಚರಿತ್ರಕಾರನ ಪ್ರಕಾರ ಅವಳ ಕಾಲ ಪ್ರ.ಶ.ಪೂ. ನಾಲ್ಕನೆಯ ಶತಮಾನದ ಮಧ್ಯ. ಈಗಿನ ಕೆಲವು ವಿದ್ವಾಂಸರು ಅವಳ ಕಾಲ ಪ್ರ.ಶ.ಪೂ. ಮೂರನೆಯ ಶತಮಾನವಿದ್ದಿರಬೇಕೆಂದು ಅಭಿಪ್ರಾಯಪಡುತ್ತಾರೆ. ಹುಟ್ಟಿದ್ದು ಏಷ್ಯಮೈನರ್‌ನ ಕ್ನಿಡುಸ್ ಎಂಬ ಗ್ರೀಕ್ ಪಟ್ಟಣಕ್ಕೆ ಸಮೀಪದ ಟೆಲಾಸ್ ಎಂಬ ದ್ವೀಪದಲ್ಲಿ. ಕೇವಲ 19ನೆಯ ವಯಸ್ಸಿನಲ್ಲೇ ನಿಧನಳಾದಳು ಅವಳ ಜೀವನದ ಅತಿ ಮುಖ್ಯಸಂಗತಿಯೆಂದರೆ ಬಾಕಿಸ್ ಎಂಬ ಹುಡುಗಿಯೊಡನೆ ಅವಳಿಗಿದ್ದ ಗೆಳೆತನ. ಮದುವೆಯಾಗಿ ಸ್ವಲ್ಪ ಕಾಲದಲ್ಲಿಯೇ ತೀರಿಕೊಂಡಳು. ಇರಿನ್ನ ಅವಳ ಚರಮಗೀತೆಯನ್ನು ರಚಿಸಿದಳು. ಅದು ಮತ್ತು ಅವಳ ಕೆಲವು ನಾಡುನುಡಿಗಳು ಈಗಲೂ ದೊರೆಯುತ್ತವೆ.

ಅವಳ ಕವನಗಳು ಅವಳ ಜೀವಿತಕಾಲದಲ್ಲಿ ತುಂಬಾ ಜನಪ್ರಿಯವಾಗಿದ್ದವೆಂದು ತಿಳಿಯಬರುತ್ತದೆ. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ದಿ ಡಿಸ್ಟಾಫ್. ಅದು ಹೆಕ್ಸಾಮೀಟರ್‌ನಲ್ಲಿ ಬರೆಯಲ್ಪಟ್ಟಿದೆ. ಮುನ್ನೂರು ಸಾಲುಗಳ ಆ ಕವನದಲ್ಲಿ ಈಗ ದೊರೆತಿರುವುದು ಕೇವಲ ಕೆಲವು ಸಾಲುಗಳು ಮಾತ್ರ. ಬಾಕಿಸ್ ಸಂಗಡ ತಾನು ಆಡಿದ ಆಟಗಳು ಮತ್ತು ಮಾಡಿದ ಕೆಲಸಗಳನ್ನು ಇರಿನ್ನ ಈ ಕವನದಲ್ಲಿ ಹೇಳಿದ್ದಾಳೆ.

ನಮಗೆ ದೊರೆತಿರುವ ಸಾಲುಗಳನ್ನು ಸೂಕ್ಷ್ಮವಾಗಿ ನೋಡಿದರೆ ಇರಿನ್ನ ಸ್ಯಾಫೋಳ ಕವನಗಳನ್ನು ಓದಿದ್ದಳು ಮತ್ತು ಅವಳಿಂದ ಪ್ರಭಾವಿತಳಾಗಿದ್ದಳು ಎಂಬುದು ತಿಳಿದುಬರುತ್ತದೆ. ಇರಿನ್ನಳ ಸ್ವಂತ ಭಾಷೆ ಡೋರಿಕ್ ಆದರೂ ಅವಳ ಕವನಗಳಲ್ಲಿ ಈಯೊಲಿಕ್ ಮತ್ತು ಡೋರಿಕ್ ಉಪಭಾಷೆಗಳ ಮಿಶ್ರಣ ಕಂಡುಬರುತ್ತದೆ. (ಎಸ್.ಎನ್.ಎಸ್.ವಿ.)

**ಇಜೀವ ಬೆಡಂಗ ಸತ್ಯಾಶ್ರಯ:** ಆಳ್ವಿಕೆ 907–1008. ಕಲ್ಯಾಣಿಯ ಚಾಲುಕ್ಯ ಮನೆತನದ ಅರಸರಲ್ಲೊಬ್ಬ. ಕರ್ನಾಟಕ ಚರಿತ್ರೆಯಲ್ಲಿ ಪ್ರಸಿದ್ಧನಾದ ಈತನಿಗೆ ಇಜೀವ ಬೆಡಂಗನೆಂಬ ಬಿರುದಿತ್ತು. ಯುದ್ಧದಲ್ಲಿ ಇರಿದು ಕೊಲ್ಲುವ ಕೆಲಸದಲ್ಲಿ ಬೆಡಗನ್ನುಳ್ಳವನು ಎಂಬುದು ಈ ಬಿರುದಿನ ಅರ್ಥ. ಈತ ಆಹವಮಲ್ಲ ತೈಲಪ (ಇಮ್ಮಡಿ ತೈಲಪ) ಮತ್ತು ರಾಷ್ಟ್ರಕೂಟ ರಾಜಪುತ್ರಿಯಾದ ಜಾಕವ್ವೆಯರ (ಜಕ್ಕಲಾದೇವಿ, ಜಕ್ಕಲ ಮಹಾದೇವಿ) ಮೊದಲ ಮಗ, ದಶವರ್ಮ (ಯಶೋವರ್ಮ) ಈತನ ತಮ್ಮ. ಮಹಾದೇವಿ ಮಗಳು. (ಈಕೆಯನ್ನು ನೊಳಂಬ ಪಲ್ಲವರ ನಾಯಕನಾದ ಇಜೀವ ನೊಳಂಬಾಧಿರಾಜನಿಗೆ ಕೊಟ್ಟು ಮದುವೆಯಾಗಿತ್ತು). ಸತ್ತಿಗ, ಸತ್ತಿಮ ಎಂಬುವುದು ಸತ್ಯಾಶ್ರಯನ ಉಪನಾಮಗಳು. ಅಕಳಂಕಚರಿತ, ಅಮ್ಮನ ಗಂಧವಾರಣ, ಕುಮರಾಂಕ ರಾಮ, ಸಾಹಸಾಂಕ–ಎಂಬುವು ಈತನ ಇತರ ಕೆಲವು ಬಿರುದುಗಳು.

ತಂದೆಯ ರಾಜ್ಯಭಾರ ಕಾಲದಲ್ಲಿಯೇ ಯುವರಾಜ ಸತ್ಯಾಶ್ರಯ ಆತನ ಅನುಜ್ಞೆಯಂತೆ ಕೊಂಕಣದ ಶಿಲಾಹಾರರ ಮೇಲೆ ಮತ್ತು ಇನ್ನೂ ಉತ್ತರದಲ್ಲಿಯ ಗುರ್ಜರರ ಮೇಲೆ ಹೋರಾಡಿದ. ಕೊಂಕಣೇಶ್ವರನಾದ ಅಪರಾದಿತ್ಯನ ಮೇಲೆ ಈತ ಸಾಧಿಸಿದ ವಿಜಯವನ್ನು ರನ್ನಕವಿ ಸಾಹಸಭೀಮವಿಜಯವೆಂಬ (ಗದಾಯುದ್ಧ) ತನ್ನ ಕಾವ್ಯದಲ್ಲಿ ಸ್ವಾರಸ್ಯವಾಗಿಯೂ ವಿಶದವಾಗಿಯೂ ವರ್ಣಿಸಿದ್ದಾನೆ. ಈ ವರ್ಣನೆ ಅಪರಾದಿತ್ಯನ (ಅಪರಾಜಿತನ) ಪ್ರ.ಶ. 997ರ ಭದನದ ಶಾಸನದಲ್ಲಿ ಉಕ್ತವಾಗಿರುವ ಸಂಗತಿಗಳಿಗೆ ಪೋಷಕವಾಗಿದೆ.

ಆಹವಮಲ್ಲ ತೈಲಪ ಕಲ್ಯಾಣಿಯ ಚಾಲುಕ್ಯ ಸಿಂಹಾಸನದ ಮೇಲೆ 24 ವರ್ಷಗಳ ಕಾಲ ರಾಜ್ಯವಾಳಿದ ಮೇಲೆ (ಪ್ರ.ಶ. 973–997) ಸತ್ಯಾಶ್ರಯ ಪ್ರಾಯಶಃ 997ರಲ್ಲಿ ಅಥವಾ ಆ ಕೂಡಲೇ ಪಟ್ಟಕ್ಕೆ ಬಂದು 1008ರವರೆಗೆ ರಾಜ್ಯವಾಳಿದ. ಈತ ಆಳುತ್ತಿದ್ದ ಪ್ರದೇಶ ರಟ್ಟಪಾಡಿಯೆನ್ನಿಸಿದ್ದು, ರಾಜಧಾನಿ ಮಾನ್ಯಖೇಟವಾಗಿತ್ತು. ಈತ ತನ್ನ ತಂದೆಯ ಆಳ್ವಿಕೆಯ ಸೀಮೆಗೆಲ್ಲ ಒಡೆಯನಾದುದೇ ಅಲ್ಲದೆ ತನ್ನದೇ ಆದ ನೀತಿಯನ್ನು ಮುಂದುವರಿಸಿದ.

ಸತ್ಯಾಶ್ರಯಚಾಲುಕ್ಯ ಚಕ್ರವರ್ತಿಯಾದ ಸಮಯದಲ್ಲಿ ಕರ್ನಾಟಕಕ್ಕೆ ಚೋಳರ ಆಕ್ರಮಣ ಭಯವಿದ್ದಿತು. ಅವರು ಒಂದನೆಯ ರಾಜರಾಜನ ನೇತೃತ್ವದಲ್ಲಿ ದಕ್ಷಿಣ ಭಾರತವನ್ನೆಲ್ಲ ವ್ಯಾಪಿಸಿತೊಡಗಿದ್ದು, ತಮ್ಮ ಅಧಿಕಾರವನ್ನು ಆಂಧ್ರದೇಶದೊಳಕ್ಕೂ ಕೂಡ ಹರಡಲು ಸಿದ್ಧರಾಗುತ್ತಿದ್ದರು. ಕರ್ನಾಟಕದ ದಕ್ಷಿಣ ಮತ್ತು ಪೂರ್ವಭಾಗಗಳ ಗಡಿಗಳಲ್ಲಿ ಅವರು ಮೇಲೇರಿ ಬರುವುದನ್ನು ತಡೆಗಟ್ಟುವುದು ಅನಿವಾರ್ಯವಾಯಿತು. ಇದಕ್ಕೆ ಅನುಕೂಲವಾಗು ವಂತೆ ಸತ್ಯಾಶ್ರಯ ವೆಂಗಿರಾಜ್ಯದ ಕಡೆಗೆ ಸೈನ್ಯದೊಡನೆ ತೆರಳಿ ಹೋರಾಟಕ್ಕೆ ಮಧ್ಯಕ್ಷೇತ್ರವಾಗು ವಂತಿದ್ದ ಶ್ರೀಪರ್ವತದಲ್ಲಿ ಬೀಡು ಬಿಟ್ಟನೆಂದೂ ಪ್ರತಿಕ್ರಮವಾಗಿ ಚೋಳರ ರಾಜರಾಜ ಯುವರಾಜನಾದ ರಾಜೇಂದ್ರನ ಕೈಕೆಳಗೆ ಪ್ರಬಲ ಸೈನ್ಯವನ್ನು ಕೊಟ್ಟು ಚಾಲುಕ್ಯರ ಸ್ವಂತ ನೆಲೆಯನ್ನು ಮುತ್ತಲೆಂದು ಕಳಿಸಿಕೊಟ್ಟನೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಇದಕ್ಕೆ ಮೊದಲು ರಾಜರಾಜನೊಡನೆ ಸತ್ಯಾಶ್ರಯ ಹೋರಾಡಿದ ವಿಷಯ ರಾಜರಾಜನ ಶಾಸನಗ ಳಿಂದಲೇ ತಿಳಿಯುತ್ತದೆ. ಚೋಳರ ಸೈನ್ಯ ಗಡಿದಾಟಿ ಬಂದು ದೊನವೂರಿನಲ್ಲಿ (ಬಿಜಾಪುರ ಜಿಲ್ಲೆಯ ದೊನೂರು) ಬೀಡುಬಿಟ್ಟು ಚಾಲುಕ್ಯ ರಾಜ್ಯವನ್ನು ಲೂಟಿ ಮಾಡಿತೆಂದೂ ಸತ್ಯಾಶ್ರಯ ಆ ಪಡೆಯನ್ನು ಸದೆಬಡಿದು ಹಿಂದಟ್ಟಿದನೆಂದೂ ಹೊಟ್ಟೂರು ಶಾಸನದಲ್ಲಿ (1077–1008) ಬಂದಿದೆ. ಈ ಯುದ್ಧ 1077–1008 ರಲ್ಲಿ ತಾವರೆಯ ಘಟ್ಟ ಎಂಬ ಸ್ಥಳದಲ್ಲಿ ಪ್ರಾಯಶಃ ನಡೆದಿರಬೇಕೆಂದು ಕೆಲವರು ತಿಳಿದಿದ್ದಾರೆ. ಅಂತೂ ಈ ಯುದ್ಧ ಚಾಲುಕ್ಯರಿಗೆ ಸತ್ತ್ವಪರೀಕ್ಷೆಯನ್ನು ಒಡ್ಡಿತೆಂದು ಹೇಳಬಹುದು.

ಇಜೀವ ಬೆಡಂಗನ ಆಳ್ವಿಕೆಯ ಕಾಲದಲ್ಲಿ ಆತನ ತಂದೆಯ ಕಾಲದಲ್ಲಿ ಸಾಮಂತರಾಗಿ ದ್ದವರೇ ಸಾಮಂತರಾಗಿದ್ದರು. ಇವರಲ್ಲಿ ಬೆಳ್ವಲ, ಪುಲಿಗೆರೆ, ಕುಂದೂರು, ಕುಕ್ಕನೂರು ಈ ಪ್ರಾಂತ್ಯಗಳನ್ನು ಶೋಭನರಸ ನೋಡಿಕೊಳ್ಳುತ್ತಿದ್ದ. ತೈಲಪನ ಅಂಕಕಾರನೆನಿಸಿದ ಭೀಮರಾಜ ಬನವಾಸಿ. ಸಾಂತಲಿಗೆ, ಕಿಸುಕಾಡುನಾಡುಗಳನ್ನು ನೋಡಿಕೊಳ್ಳುತ್ತಿದ್ದ. ದಕ್ಷಿಣ ಶಾಖೆಯ ಶಿಲಾಹಾರರ ಮಾಂಡಲಿಕ ರಟ್ಟರಾಜ ಕೊಂಕಣವನ್ನಾಳುತ್ತಿದ್ದ. ಈಚಿನ ಚಾಲುಕ್ಯ ಚಕ್ರವರ್ತಿಗಳ ಶಾಸನಗಳಲ್ಲಿ ಬನವಾಸಿ ಸಾಚಿತಲಿಗೆ ನಾಡುಗಳ ಒಡೆಯನೆಂಬುದಾಗಿ ಉಕ್ತವಾಗಿರುವ ಕುಂದುಮರಸನೆಂಬುವನನ್ನು ಇಜೀವ ಬೆಡಂಗನ ಮಗನೆಂದೂ ತಿಗುಳರ ಮಾರಿಯೆಂದೂ ಕರೆದಿರುವುದು ಕಾಣುತ್ತದೆ. ಇಲ್ಲಿ ಮಗನೆಂಬ ಮಾತು ಆತ ಚಕ್ರವರ್ತಿಗೆ ಅಚ್ಚುಮೆಚ್ಚಿನ ಸ್ವಾಮಿಭಕ್ತನಾಗಿದ್ದನೆಂಬುದನ್ನೂ ತಿಗುಳರ ಮಾರಿಯೆಂಬ ಮಾತು ಆತ ಚಕ್ರವರ್ತಿಗೆ ಚೋಳರ ಆಕ್ರಮಣ ಕಾಲದಲ್ಲಿ ಬಹಳವಾಗಿ ಸಹಾಯ ಮಾಡಿದನೆಂಬುದನ್ನೂ ಸೂಚಿಸುತ್ತವೆ.

ಆಹವಮಲ್ಲ ತೈಲಪನ ಆಸ್ಥಾನದಲ್ಲಿ ಕವಿಚಕ್ರವರ್ತಿಯಾಗಿದ್ದ ರನ್ನ ಬರೆದಿರುವ ಸಾಹಸಭೀಮವಿಜಯವೆಂಬ (ಗದಾಯುದ್ಧ) ಕಾವ್ಯ ಇಜೀವ ಬೆಡಂಗ ಸತ್ಯಾಶ್ರಯನ ಹೆಸರನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಸ್ಥಾಯಿಗೊಳಿಸಿದೆ. ಪಂಪಕವಿ ಆತನ ಆಶ್ರಯದಾತೃವಾದ ಅರಿಕೇಸರಿಯನ್ನು ಭಾರತದ ಅರ್ಜುನನೊಡನೆ ಅಭೇದ ಭಾವದಿಂದ ಕಂಡು ಅರಿಕೇಸರಿಯ ಹೆಸರು ಅಚಂದ್ರಾರ್ಕವಾಗಿ ನಿಲ್ಲುವ ಹಾಗೆ ವಿಕ್ರಮಾರ್ಜುನವಿಜಯವನ್ನು ರಚಿಸಿರುವಂತೆ ರನ್ನಕವಿ ಸತ್ಯಾಶ್ರಯನನ್ನು ಭೀಮನೊಡನೆ ಅಭೇದಭಾವದಿಂದ ಕಂಡು ಸಾಹಸಭೀಮವಿಜಯ ವನ್ನು ರಚಿಸಿದ್ದಾನೆ. ಸತ್ಯಾಶ್ರಯನ ಗುಣವಿಶೇಷಗಳನ್ನೂ ಯುವರಾಜನಾಗಿದ್ದಾಗ ಭಾಗವಹಿಸಿದ ಕೆಲವು ಯುದ್ಧೋದ್ಯಮಗಳಲ್ಲಿ ಮೆರೆದ ಶೌರ್ಯಸ್ಥೈರ್ಯಗಳನ್ನೂ ಮೆಚ್ಚಿಕೊಂಡು ಇಜುವ ಬೆಡಂಗನ ಸಾಹಸಗಳೂ ಭಾರತ ಕಥೆಯ ಗದಾಯುದ್ಧ ಭಾಗದಲ್ಲಿ ಬರುವ ಭೀಮಸೇನನ ಸಾಹಸಗಳೂ ಒಂದರೊಡನೆ ಒಂದು ಹೊಂದಿಕೊಳ್ಳುವ ಹಾಗೆ ತನ್ನ ಈ ಚಾರಿತ್ರಿಕ ಧ್ವನಿಕಾವ್ಯವನ್ನು ಕವಿ ಕಟ್ಟಿರುವನೆಂದು ಹೇಳಬಹುದು. ಇಲ್ಲಿ ಸತ್ಯಾಶ್ರಯನೇ ಕಥಾನಾಯಕನಾಗಿರು ವುದರಿಂದ ಆತನ ಅನ್ವಯಾಗತ ಚರಿತ್ರೆಯೂ ವಿಜಯೋದ್ಯಮಗಳೂ ಗುಣವಿಶೇಷಗಳೂ ಬಿರುದುಗಳೂ ಭೀಮಸೇನನಿಗೆ ಆರೋಪಿತವಾಗಿವೆ. ಚಾಲುಕ್ಯವಂಶದ ಹಾಗೂ ಸತ್ಯಾಶ್ರಯನ ಚರಿತ್ರೆಯನ್ನು ಸಮರ್ಪಕವಾಗಿ ತಿಳಿಯಲು ರನ್ನಕವಿಯ ಸಾಹಸಭೀಮವಿಜಯ ಕೂಡ ಅಮೂಲ್ಯವಾದ ಆಕರವಾಗಿದೆಯೆಂಬುದೂ ಆ ಕಾಲದ ಚಾರಿತ್ರಿಕ ಸಂಗತಿಗಳು ಸರಿಯಾಗಿ ತಿಳಿದುಬಂದಂತೆಲ್ಲ ಆ ಕಾವ್ಯ ಹೆಚ್ಚು ಅರ್ಥಪೂರ್ಣವಾಗಿ ತೋರುವುದೆಂಬುದೂ ಇಲ್ಲಿ ನೆನೆಯತಕ್ಕದ್ದಾಗಿದೆ. **(ನೋಡಿ– ಚಾಲುಕ್ಯ) (ನೋಡಿ– ರನ್ನ).** (ಟಿ.ವಿ.ವಿ.)

**ಇರುಕು ಸಿದ್ಧಾಂತ: (ನೋಡಿ– ಕ್ಯೂ–ಸಿದ್ಧಾಂತ)**

**ಇರುಗಪ್ಪ ದಂಡನಾಯಕ:** ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ಅರಸನಾದ ಇಮ್ಮಡಿ ಹರಿಹರನ (1376–1404) ಮಂತ್ರಿ. ದಂಡನಾಯಕರಲ್ಲಿ ಒಬ್ಬ. ತಂದೆ ಬೈಚೆಯ ದಂಡನಾಯಕ ಒಂದನೆಯ ಬುಕ್ಕರಾಯನ ಪ್ರಧಾನಿಗಳಲ್ಲಿ ಒಬ್ಬನಾಗಿದ್ದ. ಜೈನಮತೀಯ. ಪಂಡಿತಾರ್ಯ ಈತನ ಗುರು. 1385ರ ಶಾಸನವೊಂದರ ಪ್ರಕಾರ ರಾಜಧಾನಿ ಯಾದ ವಿಜಯನಗರದಲ್ಲಿ ಕುಂತಜಿನಾಲಯ ಎಂಬ ಬಸದಿಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಈಗ ಹಂಪೆಯಲ್ಲಿರುವ ಗಾಣಿಗಿತ್ತಿ ದೇವಾಲಯವೇ ಈತ ಕಟ್ಟಿಸಿದ ಬಸದಿಯಾಗಿರಬೇಕೆಂದು ವಿದ್ವಾಂಸರ ಊಹೆ. ಶ್ರವಣಬೆಳಗೊಳದಲ್ಲಿ ಒಂದು ಕೆರೆಯನ್ನು ಕಟ್ಟಿಸಿ ಒಂದು ತೋಪನ್ನು ಬೆಳೆಸಿದನೆಂದು ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ಇರುಗಪ್ಪ ದಕ್ಷ ದಂಡನಾಯಕನಾಗಿದ್ದುದಲ್ಲದೆ ಕವಿಯೂ ಆಗಿದ್ದ. ಇವನ ಕಾಲದಲ್ಲಿ ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ದೊರಕಿತು. ಸಂಸ್ಕೃತದ ನಾನಾರ್ಥರತ್ನಮಾಲಾ ಎಂಬ ಗ್ರಂಥ ಈತನಿಂದ ರಚಿತವಾಯಿತೆಂದು ಹಲವು ವಿದ್ವಾಂಸರೂ ಇರುಗಪ್ಪನಿಂದ ಪೋಷಿತನಾದ ಭಾಸ್ಕರ ಕವಿಯಿಂದ ರಚಿತವಾಯಿತೆಂದು ಮತ್ತೆ ಕೆಲವರೂ ಅಭಿಪ್ರಾಯ ಪಟ್ಟಿದ್ದಾರೆ. ಇಮ್ಮಡಿ ಬೈಚ ಮತ್ತು ಇಮ್ಮಡಿ ಇರುಗಪ್ಪ ಇವರು ಈತನ ಮಕ್ಕಳು. ಇಮ್ಮಡಿ ದೇವರಾಯನ ಆಳ್ವಿಕೆಯ ಪ್ರಾರಂಭದಲ್ಲಿ ಇರುಗಪ್ಪ ದಂಡನಾಯಕ ಮರಣಹೊಂದಿದ. (ಜಿ.ಆರ್.ಆರ್.)

**ಇರುಪು:** ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನಲ್ಲಿರುವ ಒಂದು ಯಾತ್ರಾಸ್ಥಳ ಹಾಗೂ ಪ್ರೇಕ್ಷಣಿಯ ಸ್ಥಳ. ವಿರಾಜಪೇಟೆಯಿಂದ ಸು. 45ಕಿಮೀ ದೂರದಲ್ಲಿದೆ. ಇದನ್ನು ಇರ್ಪು ಎಂದೂ ಕರೆಯಲಾಗುತ್ತದೆ. ಕುರ್ಚಿ ಗ್ರಾಮಕ್ಕೆ ಸೇರಿರುವ ಈ ಯಾತ್ರಾಸ್ಥಳವನ್ನು ತಲುಪಲು ಕುಟ್ಟ ಶ್ರೀಮಂಗಲ ರಸ್ತೆಯಲ್ಲಿ ಹಾದು ಎಡಕ್ಕೆ ತಿರುಗಿ ಕಚ್ಚಾ ರಸ್ತೆಯಲ್ಲಿ 5ಕಿಮೀ ಸಾಗಿದರೆ ಇರ್ಪು ಸಿಗುತ್ತದೆ. ಇದು ಕಣಿವೆ ಭಾಗದಲ್ಲಿರುವ ರಮಣೀಯ ಜಾಗ. ಪೌರಾಣಿಕ ಹಿನ್ನಲೆ ಉಳ್ಳದ್ದು. ಇಲ್ಲಿರುವ ರಾಮೇಶ್ವರ ದೇವಾಲಯ ಹಾಗೂ ಬ್ರಹ್ಮಗಿರಿ ಬೆಟ್ಟದಿಂದ ಹರಿದುಬರುವ ಲಕ್ಷ್ಮಣ ತೀರ್ಥಹೊಳೆ ಇಲ್ಲಿಯ ಮಹತ್ತ್ವವನ್ನು ಹೆಚ್ಚಿಸಿದೆ. ಲಕ್ಷ್ಮಣತೀರ್ಥ ಇಲ್ಲಿ ಧುಮುಕಿ ಹರಿಯುವುದರಿಂದ ಜಲಪಾತ ಸೃಷ್ಟಿಯಾಗಿದೆ. ಇದು ಇರ್ಪು ಜಲಪಾತವೆಂದು ಜನಪ್ರಿಯವಾಗಿದೆ. ಶ್ರೀರಾಮನು ಲಕ್ಷ್ಮಣತೀರ್ಥದ ದಡದಲ್ಲಿ ರಾಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನೆಂಬುದು ಸ್ಥಳಪುರಾಣ. ಈಗಿನ ದೇಗುಲದ ವಿಶಾಲ

ಆವರಣ ಸುಂದರವಾಗಿದ್ದು ವಿವಿಧ ಕಟ್ಟಡಗಳನ್ನು ಹೊಂದಿದೆ. ಇಲ್ಲಿರುವ ಶಿಲ್ಪ ರಚನೆ ಕೇರಳದ ವಾಸ್ತುಶಿಲ್ಪವನ್ನು ಹೋಲುತ್ತದೆ. ದೇವಾಲಯದ ಸುತ್ತ ಪ್ರದಕ್ಷಿಣಾ ಪಥವಿದೆ. ಮೇಲ್ಭಾಗದಲ್ಲಿ ಶಿಖರವಿದೆ. ಹೊರ ಪ್ರಾಕಾರದಲ್ಲಿ ಗಂಧರ್ವ, ಭೈರವ, ಕುರ್ಚಿ ಮಹಾದೇವ, ಪಾರ್ವತಿ ಹಾಗೂ ಗಣಪತಿಯ ಗುಡಿಗಳಿವೆ. ಒಂದು ಸಣ್ಣ ಚೆಂಬಿಟ್ಟಿಗೆಯ ಗುಡಿಯಲ್ಲಿ ಖಾಲಿ ಇರುವ ಪಾಣಿಪೀಠವಿದೆ. ಎರಡು ಕಂಚಿನ ಮೂರ್ತಿಗಳಿದ್ದು, ಕುದುರೆಯ ಮೇಲೆ ಕುಳಿತ ಮತ್ತೊಂದು ಮೂರ್ತಿ ಗಂಡಿನದಾಗಿದ್ದು ಕೈಯಲ್ಲಿ ಖಡ್ಗ ಹಾಗೂ ಫಲಕವಿದೆ. ಶಿವರಾತ್ರಿಯಂದು ಇಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತದೆ.

ಇರುಪು ಜಲಪಾತ

ರಾಮೇಶ್ವರ ದೇವಾಲಯ ಆಗಿಂದಾಗ್ಗೆ ಜೀರ್ಣೋದ್ಧಾರವಾಗಿದೆ. ಕಿಗ್ಗಟ್ಟು ಹತ್ತುನಾಡು ರೈತರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ಬಗ್ಗೆ ಶಾಸನ ದಾಖಲೆಯಿದೆ.

ದೇವಾಲಯದ ದಕ್ಷಿಣಕ್ಕಿರುವ ಕುರ್ಚಿ ಗ್ರಾಮದಲ್ಲಿ ಹಿಂದೆ ಅರಮನೆ ಇತ್ತು. ದೊಡ್ಡವೀರರಾಜೇಂದ್ರ ಪಿರಿಯಾಪಟ್ಟಣದಿಂದ ಕಣ್ತಪ್ಪಿಸಿಕೊಂಡು ಬಂದಾಗ ಇಲ್ಲಿಯ ಆಯಕಟ್ಟಿನ ಜಾಗದಲ್ಲಿ ಚಿಕ್ಕ ಅರಮನೆ ಕಟ್ಟಿಸಿದ. ಇದನ್ನು ಕೇರಳದ ಇವನ ಶತ್ರುಗಳು ಸುಟ್ಟುಹಾಕಿದರು ಎಂದು ಹೇಳಲಾಗುತ್ತದೆ. ಪಿರಿಯಾಪಟ್ಟಣ ತಾಲ್ಲೂಕಿನ ಕಂಪಲಾಪುರದ 1174ರ ಶಾಸನದಲ್ಲಿ ಉಲ್ಲೇಖಿತವಾಗಿರುವ ಮಾಂಡಲೀಕ ಉದಯಾದಿತ್ಯನ ರಾಜಧಾನಿ ಕುರುಚಿ ಎಂಬ ಸ್ಥಳ ಇದೇ. ಕುರ್ಚಿ ಎಂದೂ ಹೇಳಲಾಗಿದೆ. ಇಲ್ಲಿ ಅಜಮಾಡ ಕುಟುಂಬಕ್ಕೆ ಸೇರಿದ ದೊಡ್ಡಮನೆ ಇದ್ದು ಎರಡು ಹಳೆಯ ತಾಳವಾರಗಳಿವೆ.

ದೇವಾಲಯದ ವಾಯವ್ಯಕ್ಕೆ ಸುಮಾರು 1ಕಿ.ಮೀ ಏರುದಾರಿಯನ್ನು ಶ್ರಮಿಸಿದರೆ ಇರ್ಪು ಜಲಪಾತ ಸಿಗುತ್ತದೆ. ಇದಕ್ಕೆ ಸ್ವಲ್ಪ ದೂರದಲ್ಲಿ ಬ್ರಹ್ಮಗಿರಿ ಪರ್ವತ ಶ್ರೇಣಿ ಇದೆ. ಇಲ್ಲಿಂದ ಸುಂದರ ನಿಸರ್ಗವನ್ನು ವೀಕ್ಷಿಸಬಹುದು. ಕಡಿದಾದ ಕೋನಾಕಾರದ ಬೆಟ್ಟಗಳ ನಡುವೆ ಸು.100 ಅಡಿ ಹಾಗೂ 70 ಅಡಿ ಎತ್ತರದಿಂದ ಎರಡು ಹಂತಗಳಲ್ಲಿ ಈ ಹೊಳೆಯು ಭೋರ್ಗರೆಯುವ ಬಂಡೆಗಳಿಂದ ಕೂಡಿರುವ ಪ್ರಪಾತಕ್ಕೆ ಧುಮುಕುವ ದೃಶ್ಯ ನಯನ ಮನೋಹರವಾದುದು. ಲಕ್ಷ್ಮಣತೀರ್ಥ ಹೊಳೆ ಇಲ್ಲಿಂದ ವಾಯವ್ಯಕ್ಕೆ ಹರಿದು ರಾಯತೀರ್ಥವೆಂಬ ಸಣ್ಣಹೊಳೆಯನ್ನು ಕೂಡಿಕೊಂಡು ಸಾಗಿ ಮೈಸೂರು ಜಿಲ್ಲೆಯಲ್ಲಿ ಕಾವೇರಿಯನ್ನು ಸೇರುತ್ತದೆ. ಇರ್ಪುವಿನಲ್ಲಿ ಶಿವರಾತ್ರಿಯ ಮರುದಿನ ದೊಡ್ಡ ಜಾತ್ರೆ ನಡೆಯುತ್ತದೆ.

*

**ಇರುವಂತಿಗೆ:** ಮಲ್ಲಿಗೆ (ಓಲಿಯೇಸಿ) ಕುಟುಂಬದ ಒಂದು ಸಸ್ಯ. ಭಾರತ ದೇಶದ ತೋಟಗಳಲ್ಲಿ ಬಹುಪುರಾತನ ಕಾಲದಿಂದಲೂ ಇದನ್ನು ಬೆಳೆಸುತ್ತಿದ್ದಾರೆ. ಅಧಿಕ ಸುವಾಸನೆಯ ಹೂಗಳಿಂದ ಈ ಗಿಡಕ್ಕೆ ಪ್ರಾಶಸ್ತ್ಯ ಬಂದಿದೆ. ಪ್ರಪಂಚದ ಉಷ್ಣ ಪ್ರದೇಶಗಳಲ್ಲೆಲ್ಲ ಬೆಳೆಸುತ್ತಿದ್ದರೂ ಇದರ ಮೂಲಸ್ಥಾನ ಭಾರತದ ಪಶ್ಚಿಮ ದಿಕ್ಕಿನ ಯಾವುದೋ ಪ್ರದೇಶವಾಗಿರಬೇಕೆಂದು ಬಹುಜನರ ಅಭಿಮತ. ಪೊದೆಯಂತೆ ಹರಡಿಕೊಂಡು ಅಥವಾ ಯಾವುದಾದರೂ ಆಸರೆಯನ್ನು ಅಪ್ಪಿಕೊಂಡು ಬೆಳೆಯುವ ಈ ಗಿಡದ ಶಾಸ್ತ್ರೀಯ ಹೆಸರು ಜಾಸ್ಮಿನಮ್ ಸಂಬಕ್. ಎಲೆಗಳು ಅಭಿಮುಖಿ ಅಥವಾ ತ್ರಿಪರ್ಣಕವಾಗಿ ಜೋಡಣೆಗೊಂಡಿದ್ದು ಅಂಡಾಕೃತಿಯಲ್ಲಿವೆ. ಹೂಗಳು ಬಿಡಿಬಿಡಿಯಾಗಿಯೋ ಇಲ್ಲವೇ ಮೂರು ಮೂರರಂತೆ ಒಟ್ಟಾಗಿ ಗೊಂಚಲುಗಳಲ್ಲೋ ಇರುತ್ತದೆ. ಬಣ್ಣ ಅಚ್ಚ ಬಿಳಿ. ದಳಗಳ ತುದಿ ಚೂಪಾಗಿರಬಹುದು ಅಥವಾ ಮೊಂಡಾಗಿರಬಹುದು. ಕಾಯಿಗಳು ಹಣ್ಣಾದಾಗ ಕಪ್ಪುಬಣ್ಣ ತಾಳುವುವು.

ಭಾರತದ ಇರುವಂತಿಗೆಯಲ್ಲಿ ಮುಖ್ಯವಾಗಿ ನಾಲ್ಕು ವಿಧಗಳಿವೆ: 1 ಇರುವಂತಿಗೆ: ಇದರಲ್ಲಿ ಎರಡು ಸುತ್ತಿನ ಹೂಗಳಿದ್ದು ಮೊಗ್ಗುಗಳು ಗುಂಡಾಗಿವೆ. 2 ಕೋಲುಮಲ್ಲಿಗೆ: ಇದರಲ್ಲೂ ಎರಡು ಸುತ್ತಿನ ಹೂಗಳಿದ್ದು ದಳಗಳು ಉದ್ದವಾಗಿವೆ. 3 ಸೂಜಿಮಲ್ಲಿಗೆ: ಇದರಲ್ಲಿ ಒಂದೇ ಸುತ್ತಿನ ಹೂಗಳಿವೆ. 4 ಏಳು ಸುತ್ತಿನ ಮಲ್ಲಿಗೆ: ಇದರಲ್ಲಿ ಸುಮಾರು ಒಂದು ಅಂಗುಲ ದಪ್ಪದ ಮೊಗ್ಗುಗಳಿವೆ. ಹೂವಿನಲ್ಲಿರುವ ಸುತ್ತುಗಳು ಹಲವಾರು. ಇವುಗಳಲ್ಲೆಲ್ಲ ಎರಡು ಸುತ್ತಿನ ಹೂವುಳ್ಳ ಗಿಡಗಳು ಹೆಚ್ಚು ಜನಪ್ರಿಯ. ಇವನ್ನು ಉತ್ತರ ಪ್ರದೇಶ, ತಮಿಳುನಾಡು, ಮೈಸೂರುಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಒಂದು ಎಕರೆಗೆ ಸರಾಸರಿ 600ಕಿ.ಗ್ರಾಂ. ಹೂಗಳನ್ನು ಪಡೆಯಬಹುದು.

ಒಣಹವೆಯ ಪ್ರದೇಶಗಳಲ್ಲಿ ಕಾಂಡದ ತುಂಡನ್ನು ನೆಟ್ಟು ಗಿಡ ಬೆಳೆಸುತ್ತಾರೆ. ಹೂ ಬಿಡುವ ಋತುಗಳು ಬೇಸಗೆ ಮತ್ತು ಮಳೆಗಾಲಗಳು. ಚೆನ್ನಾಗಿ ಬಿಸಿಲು ಬೀಳುವ ಪ್ರದೇಶದಲ್ಲಿ ಬೆಳೆಸಿ ಹೂ ಬಿಡುವುದಕ್ಕೆ ಮುಂಚೆ ಎಲೆಗಳನ್ನು ಕಿತ್ತು ಹಾಕಿದರೆ ವಿಪುಲವಾಗಿ ಹೂ ದೊರೆಯುತ್ತದೆ.

ಹಾರ ತುರಾಯಿಗಳನ್ನು ಕಟ್ಟಲು, ಸುಗಂಧ ದ್ರವ್ಯಗಳನ್ನು ತಯಾರಿಸಲು ಇರುವಂತಿಗೆಯ ಉಪಯೋಗವಿದೆ. ವರ್ಷಕ್ಕೆ ಸುಮಾರು 700ರ ಮಣಗಳಷ್ಟು ಹೂ ಸುಗಂಧದ್ರವ್ಯ ಮತ್ತು ಅತ್ತರು ತಯಾರಿಕೆಗಳಲ್ಲಿ ಬಳಕೆಯಾಗುವುದು. ಉತ್ತಮ ದರ್ಜೆಯ ಸಾಬೂನು, ಎಣ್ಣೆ ಮತ್ತು ಇತರ ಹಲವಾರು ಸೌಂದರ್ಯ ಸಾಧನಗಳ ತಯಾರಿಕೆಯಲ್ಲಿ



ಇದರ ಸುಗಂಧದ್ರವ್ಯವನ್ನು ಬಳಸುತ್ತಾರೆ. ಚೀನ ದೇಶದಲ್ಲಿ ಟೀ ಸೊಪ್ಪಿಗೆ ಕಂಪುಕೊಡಲು ಇದರ ಉಪಯೋಗವಿದೆ. ಔಷಧಿಯಾಗಿಯೂ ಇರುವಂತಿಗೆಯ ಪ್ರಯೋಜನ ಉಂಟು. ಮಲಯದಲ್ಲಿ ಒಂದು ಬಗೆಯ ತಲೆನೋವಿನ ನಿವಾರಣೆಗೆ ಇದರ ಹೂಗಳನ್ನು ಬಳಸುತ್ತಾರೆ. ಎಲೆಗಳಿಂದ ತಯಾರಿಸಿದ ಕಷಾಯ ಜ್ವರನಿವಾರಕ ಔಷಧಿ. ಹಲವಾರು ಬಗೆಯ ಚರ್ಮರೋಗಗಳಿಗೆ, ಹುಣ್ಣುಗಳಿಗೆ ಇದರ ಎಲೆಯನ್ನು ಚಚ್ಚಾರವಾಗಿ ಕಟ್ಟುತ್ತಾರೆ. ಇರುವಂತಿಗೆಗೆ ಹಲವು ಬಗೆಯ ಕೀಟಗಳೂ ಒಂದು ವಿಶಿಷ್ಟ ರೀತಿಯ ನೊಣವೂ ಹತ್ತಿಕೊಂಡು ಎಲೆ ಮತ್ತು ಮೊಗ್ಗುಗಳನ್ನು ನಾಶಪಡಿಸುತ್ತವೆ. ಪ್ಯಾರಾಥಿಯೋನ್ ಎಂಬ ಔಷಧಿಯನ್ನು ಸಿಂಪಡಿಸುವುದರ ಮೂಲಕ ಅವನ್ನು ನಿವಾರಿಸಬಹುದು. (ಕೆ.ಬಿ.ಎಸ್.)

**ಇರುವೆ:** ಸಂಧಿಪದಿ ವಂಶದ ಹೈಮೆನೊಪ್ಟೆರ ಉಪವರ್ಗಕ್ಕೆ ಸೇರಿರುವ ಹಲವಾರು ಕೀಟಗಳಲ್ಲಿ ಒಂದು (ಆಂಟ್). ಎಣಿಸಿರುವ ಪ್ರಭೇದಗಳು ಸುಮಾರು 15,000. ಇರುವೆಗಳು ಸಂಘಜೀವಿಗಳು. ಇವುಗಳ ಪೂರ್ವಜರು ನೆಲದೊಳಗೆ ಗುಂಡಿ ತೋಡಿ ಗೂಡುಮಾಡಿ ಒಂಟಿಜೀವನ ನಡೆಸುತ್ತಿದ್ದಿರಬಹುದೆಂದು ನಂಬಲಾಗಿದೆ. ವಿಕಾಸಶ್ರೇಣಿಯಲ್ಲಿ ಮೊದಲ ಹಂತಗಳು ದೊರೆತಿಲ್ಲ. ಈಗ ಲಭಿಸಿರುವ ಅತ್ಯಂತ ಪ್ರಾಚೀನ ಪಳೆಯುಳಿಕೆಗಳು ಸೀನೋಜೋಯಿಕ್ ಯುಗದ ಪ್ರಾರಂಭಕಾಲದವು (65 ದಶಲಕ್ಷ ವರ್ಷ ಪ್ರಾಚೀನ). ಆದರೆ ಆ ವೇಳೆಗಾಗಲೇ ಇವುಗಳ ವಿಕಾಸ ಪೂರ್ಣವಾಗಿತ್ತು. 35,000,000 ವರ್ಷಗಳ ಹಿಂದೆ ಮರದ ಮೇಣ ಅಥವಾ ಅರಗಿನೊಳಗೆ ಸಿಕ್ಕಿಕೊಂಡು ಅಸುನೀಗಿರುವ ಇರುವೆಗಳ ಶರೀರಗಳು ಸ್ವಲ್ಪವೂ ಕೆಡದಂತೆ ಪಳೆಯುಳಿಕೆಗಳಾಗಿ ಉಳಿದಿವೆ. ಅವುಗಳ ಮತ್ತು ಇಂದಿರುವ ಇರುವೆಗಳ ಅಂಗರಚನೆ, ಶರೀರ ರಚನೆಗಳಲ್ಲಿ ಅಂಥ ಹೆಚ್ಚಿನ ಬದಲಾವಣೆಗಳೇನೂ ಕಂಡುಬರುವುದಿಲ್ಲ.

ಬೆಚ್ಚಗಿನ ಗೂಡು ಇರುವೆಗೆ ಬಲುಪ್ರಿಯ. ಅಂಥ ಸ್ಥಳಗಳನ್ನೇ ಅವು ತಮ್ಮ ನಿವಾಸ ಸ್ಥಾನಗಳಿಗೆ ಆರಿಸಿಕೊಳ್ಳುತ್ತವೆ. ಉಷ್ಣವಲಯ, ಸಮಶೀತೋಷ್ಣವಲಯಗಳಲ್ಲಿ ಇರುವೆಗಳ ಪ್ರಸಾರ ಹೆಚ್ಚು. ಕೆಲವು ಮಾತ್ರ ಶೀತವಲಯದಲ್ಲೂ ಇವೆ. ಆದರೆ ತೀವ್ರ ಶೀತ ಭಾಗಗಳಲ್ಲಿ ಇರುವುದಿಲ್ಲ.

ಇರುವೆಗಳ ನಿವಾಸ ಒಂದೊಂದು ಪ್ರಭೇದದಲ್ಲಿ ಒಂದೊಂದು ತೆರ. ಇದರ ಕಾರಣ ಸಂತಾನೋತ್ಪತ್ತಿಯ ಕ್ರಮ ಹಾಗೂ ಮರಿಗಳನ್ನು ಬೆಳೆಸುವ ವಿಧಾನ. ಇವು ತಮ್ಮ ಲಾರ್ವಗಳನ್ನು ಅವುಗಳಿಗೆಂದೇ ತಯಾರಾದ ಗೂಡುಗಳಲ್ಲಿಟ್ಟು ಮುಚ್ಚುವುದಿಲ್ಲ. ಆದ್ದರಿಂದ

ಮರಿಗಳನ್ನು ಹೊತ್ತುಕೊಂಡು ಬೇಕಾದೆಡೆಗೆ ಚಲಿಸಲು ಅನುಕೂಲವಾಗಿದೆ. ಇರುವೆಗಳು ಗೂಡುಬದಲಾಯಿಸಬೇಕಾಗಿ ಬಂದಾಗ ಮರಿಗಳನ್ನು ಹೊತ್ತುಕೊಂಡು ಹೋಗುತ್ತವೆ. ಗೂಡು ಸಾಮಾನ್ಯವಾಗಿ ನೆಲದಡಿಯಲ್ಲಿರುವುದು. ಅವು ಚಿಕ್ಕ ಚಿಕ್ಕ ಬಿಲಗಳೂ ಆಗಿರಬಹುದು. ಆದರೆ ಕೆಲವು ಜಾತಿಯ ಇರುವೆಗಳು ಮರದಮೇಲೆ, ಕಲ್ಲುಗಳ ಕೆಳಗೆ, ಕಸಕಡ್ಡಿಗಳ ರಾಶಿಗಳಲ್ಲಿ ಗೂಡುಮಾಡಿಕೊಂಡು ಬಾಳುತ್ತವೆ.

ಒಂದು ಇರುವೆಗೂಡಿನಲ್ಲಿರುವ ವರ್ಗ ಮೂರು-ಗಂಡು, ಹೆಣ್ಣು ಮತ್ತು ಕೆಲಸಗಾರ. ಇರುವೆಗಳ ಬಹಳ ಪ್ರಭೇದಗಳಲ್ಲಿ ಕೆಲಸಗಾರ ಇರುವೆ ಬಹುರೂಪಗಳನ್ನು ಹೊಂದಿರುವುದು. ಕೆಲವು ಕೆಲಸಗಾರ ಇರುವೆಗಳು ಅತಿ ದೊಡ್ಡವಾಗಿಯೂ, ಕೆಲವು ಮಧ್ಯಸ್ಥಿತಿಯಲ್ಲಿಯೂ, ಮತ್ತೆ ಕೆಲವು ಅತಿಚಿಕ್ಕವಾಗಿಯೂ ಇರುವುದು ಬಹುರೂಪತೆಯ ಲಕ್ಷಣ. ಒಂದು ಗೂಡಿನಲ್ಲಿರುವ ಮೂರು ವರ್ಗಗಳಲ್ಲೂ ಬಾಹ್ಯ ನೋಟದಲ್ಲಿ ಅತಿ ಹೆಚ್ಚಿನ ವೈವಿಧ್ಯಗಳಿವೆ, ಇವು ಒಂದೇ ಪ್ರಭೇದವೆಂದು ಗುರುತಿಸುವುದೇ ಕಷ್ಟವೆನಿಸುವಷ್ಟು ಭಿನ್ನವಾಗಿವೆ.

ಇರುವೆಯ ಶರೀರದಲ್ಲಿ ಸಾಮಾನ್ಯವಾಗಿ ಇರುವ ಭಾಗಗಳು ತಲೆ, ಎದೆ, ಸೊಂಟ ಮತ್ತು ಉದರ. ಎದೆಯ ತಳಭಾಗದಲ್ಲಿ ಮೂರು ಜೊತೆ ಕಾಲುಗಳಿವೆ. ಸೊಂಟದ ಭಾಗ ಉದರದ ಎರಡು ಖಂಡಗಳ ಮಿಲನದಿಂದಾಗಿದೆ. ಈ ಭಾಗದಲ್ಲಿ ಒಂದು ಅಥವಾ ಎರಡು ಮಣಿಯಂಥ ಗಂಟುಗಳಿವೆ. ಹೆಣ್ಣಿನ ಉದರದ ಹಿಂತುದಿಯಲ್ಲಿ ಒಂದು ಚೂಪಾದ ಮುಳ್ಳಿನಂಥ ರಚನೆ ಇದೆ. ಮೊಟ್ಟೆಯಿಡಲು ಇದರ ಸಹಾಯ ಅವಶ್ಯ. ತಲೆಯಲ್ಲಿ ಕಣ್ಣುಗಳು ಮತ್ತು ಒಂದು ಜೊತೆ ಕುಡಿಮೀಸೆಗಳಿವೆ. ಮೊಂಡಾದ ಕುಡಿಮೀಸೆಗಳು ಕೈಗಳಂತೆ ಕಾಣುತ್ತವೆ. ಬಾಯ ಸುತ್ತಲೂ ಸೂಕ್ಷ್ಮ ಅಂಗಗಳಿವೆ.

ಒಂದು ಪ್ರಭೇದದ ಎಲ್ಲ ಜಾತಿಯ ಇರುವೆಗಳ ಭ್ರೂಣಾವಸ್ಥೆಯ ಬೆಳವಣಿಗೆಯೂ ಒಂದೇ ತೆರ. ಮೊಟ್ಟೆಯೊಡೆದು ಹೊರಬಂದ ಮರಿಯ ಹೆಸರು ಲಾರ್ವ, ಇದು ಕೆಲಕಾಲ ಬೆಳೆದು ಕೋಶಾವಸ್ಥೆಯನ್ನು ತಲುಪುತ್ತದೆ. ಈ ಕಾಲದಲ್ಲಿಯೆ ಆ ಪ್ರಭೇದದ ಬಹುರೂಪ ಜೀವಿಗಳ ಉದಯಕ್ಕೆ ಬೇಕಾದ ಬೆಳವಣಿಗೆಗಳು ನಡೆಯುತ್ತವೆ. ಯಾವುದು ರಾಣಿಯಾಗಬೇಕು. ಯಾವುದು ಗಂಡಾಗಬೇಕು ಮತ್ತು ಯಾವುದು ಕೆಲಸಗಾರನಾಗಬೇಕು ಎಂಬುದು ಮೊಟ್ಟೆಸ್ಥಿತಿ ಯಲ್ಲೇ ತೀರ್ಮಾನವಾಗಿರುತ್ತದೆ. ಗಂಡುಗಳಾಗಿ ಬೆಳೆಯುವ ಮೊಟ್ಟೆಗಳು ಗರ್ಭಧರಿಸುವುದೇ ಇಲ್ಲ. ಆದ್ದರಿಂದ ಈ ಮೊಟ್ಟೆಗಳಲ್ಲಿ ಆ ಪ್ರಭೇದದ ವರ್ಣತಂತುಗಳ (ಕ್ರೋಮೋಸೋಮ್ಸ್) ಸಂಖ್ಯೆಯ ಅರ್ಧದಷ್ಟು ವರ್ಣತಂತುಗಳಿರುತ್ತವೆ. ಇದು ಹ್ಯಾಪ್ಲಾಯ್ಡ್ ಸ್ಥಿತಿ. ಆದರೆ ಹೆಣ್ಣುಗಳಾಗಿ ಬೆಳೆಯುವ ಮೊಟ್ಟೆಗಳು ರೇತಸ್ಸುಗಳ ಮಿಲನದಿಂದ ಗರ್ಭಧರಿಸುತ್ತವೆ. ಇವುಗಳಲ್ಲಿ ಆ ಪ್ರಭೇದದ ವರ್ಣತಂತುಗಳ ಸಂಖ್ಯೆ ಪೂರ್ಣವಾಗಿರುತ್ತದೆ. ಇದರ ಹೆಸರು ಡಿಪ್ಲಾಯ್ಡ್ ಸ್ಥಿತಿ. ಹೆಣ್ಣುಗಳ ಬೆಳವಣಿಗೆ ಎರಡು ಬಗೆಯಾಗಿ ನಡೆಯುತ್ತದೆ. ತಾಯಿತನದ ಗುಣ ಕೆಲವು ಹೆಣ್ಣುಗಳಿಗೆ ಮಾತ್ರ ಇರುವುದು. ಉಳಿದುವು ಬಂಜೆಯಂತೆ ಬೆಳೆಯುತ್ತವೆ. ತಾಯಾಗಬಲ್ಲ ಜೀವಿ ವಯಸ್ಸಿಗೆ ಬಂದಾಗ ರೆಕ್ಕೆಗಳು ಹುಟ್ಟುವುವು. ಇವು ರಾಣಿಗಳು. ಬಂಜೆಗಳಿಗೆ ರೆಕ್ಕೆ ಬೆಳೆಯುವುದಿಲ್ಲ. ಇವೇ ಕೆಲಸಗಾತಿಗಳು. ರಾಣಿಯ ಎದೆ ಮತ್ತು ಉದರ ಭಾಗಗಳು ಕೆಲಸಗಾತಿಗಳದಕ್ಕಿಂತ ಭಿನ್ನ. ಆದರೆ ಕೆಲವು ಪ್ರಭೇದಗಳಲ್ಲಿ ರೆಕ್ಕೆಗಳಿಲ್ಲದ ಹೆಣ್ಣುಗಳೂ ಹುಟ್ಟುವುದಿದೆ. ಇಂಥದಲ್ಲಿ ರಾಣಿಗೂ ಕೆಲಸಗಾತಿಗಳಿಗೂ ಶರೀರದಲ್ಲಿ ವ್ಯತ್ಯಾಸವಿರಬೇಕು. ಇದು ರೇತಸ್ಸನ್ನು ತುಂಬಿಟ್ಟುಕೊಳ್ಳಬಲ್ಲ ಚೀಲದಲ್ಲಿದೆ. ರಾಣಿಯಾಗುವ ಜೀವಿಯಲ್ಲಿ ಮಾತ್ರ ಸಂಭೋಗಕ್ರಿಯೆಯ ಕಾಲದಲ್ಲಿ ಗಂಡಿನಿಂದ ಸೂಸುವ ರೇತಸ್ಸನ್ನು ಶೇಖರಿಸಿಟ್ಟುಕೊಳ್ಳಬಲ್ಲ ಚೀಲವಿರುವುದು ಈ ಚೀಲವಿಲ್ಲದವುಗಳೇ ಕೆಲಸಗಾತಿಯರು. ಬಂಜೆಗಳಾಗಲು ಚೀಲದ ಬೆಳವಣಿಗೆ ಆಗದಿರುವುದೇ ಕಾರಣ. ಆದ್ದರಿಂದ ಇವು ಸಂಭೋಗ ಕ್ರಿಯೆಯಲ್ಲಿ ಪಾಲುಗೊಳ್ಳುವುದಿಲ್ಲ. ಇಷ್ಟಾದರೂ ಇವು ಪೂರ್ಣ ಬಂಜೆಗಳಲ್ಲ. ಇವಕ್ಕೆ ಮೊಟ್ಟೆಯಿಡುವ ಶಕ್ತಿಯೇನೋ ರಾಣಿಯಂತೆಯೇ ಇದೆ. ಈ ಮೊಟ್ಟೆಗಳು ಹ್ಯಾಪ್ಲಾಯ್ಡ್ ಸ್ಥಿತಿಯಲ್ಲಿರುತ್ತದೆ. ಇಂಥ ಮೊಟ್ಟೆಗಳು ಗರ್ಭಧರಿಸದೆ ಬೆಳೆದು ಗಂಡು ಇರುವೆಗಳನ್ನು ಕೊಡುತ್ತವೆ. ಬೇಸಗೆ ಕಾಲದಲ್ಲಿ ಪರಿಸರದಲ್ಲಿ ಉಷ್ಣತೆ ಉತ್ತಮಮಟ್ಟದಲ್ಲಿದ್ದಾಗ ರಾಣಿ ಮತ್ತು ಕೆಲಸಗಾತಿಯರಿಟ್ಟ ಮೊಟ್ಟೆಗಳು ಒಡದುಕೊಂಡು ಮರಿಗಳು ಹೊರ ಬರುತ್ತವೆ. ಕಂಬಳಿಹುಳುಗಳನ್ನು ಹೋಲುವ ಇವೇ ಲಾರ್ವಗಳು. ತಿಂದು ಬೆಳೆದು ಕೋಶಾವಸ್ಥೆ ತಲುಪಿ ಮುಂದೆ ವಯಸ್ಕಜೀವಿಗಳಾಗಿ ಇವು ಬೆಳೆಯುತ್ತವೆ.

ಗರ್ಭ ಧರಿಸಲು ರಾಣಿ ಇರುವೆಗೆ (ಎಂದರೆ ಸಂಭೋಗಿಸಬಲ್ಲ ಹೆಣ್ಣು) ಸಂಭೋಗಕ್ರಿಯೆ ಅಗತ್ಯ. ಈ ಕಾಲದಲ್ಲಿ ಅದು ವೀರ್ಯರಸ ಮತ್ತು ರೇತಸ್ಸುಗಳನ್ನು ಗಂಡಿನಿಂದ ಪಡೆಯುತ್ತದೆ. ಆದ್ದರಿಂದ ಕನ್ಯೆಯಾಗಿರುವ ರಾಣಿ ಇರುವೆ ಗರ್ಭಧಾರಣೆಗಿಂತ ಮುಂಚೆ ಗೂಡಿನಿಂದ ಹಾರಿಹೋಗುತ್ತದೆ. ರಾಣಿ ಗಂಡು ಇರುವೆಯೊಡನೆ ಸಂಭೋಗಿಸುತ್ತ ಹಾರಾಡುತ್ತಿರುತ್ತದೆ. ಇದನ್ನು ಶೋಭನನೃತ್ಯವೆನ್ನುತ್ತಾರೆ. ಗಂಡು ತನ್ನೆಲ್ಲ ವೀರ್ಯರಸ ಹೆಣ್ಣಿನ ರೇತಸ್ಸು-ಸಂಗ್ರಹಣ ಚೀಲದೊಳಕ್ಕೆ ತುಂಬಿದಾಗ ನೃತ್ಯ ಮುಕ್ತಾಯವಾಗುವುದು. ಮುಂದೆ ಇವು ಬೇರೆ ಬೇರೆಯಾಗುತ್ತವೆ. ಗಂಡು ಸತ್ತುಹೋಗುತ್ತದೆ. ರಾಣಿ ಗಳಿಸಿಕೊಂಡ ಈ ವೀರ್ಯರಸದ ಉಪಯೋಗ ಅದರ ಜೀವಿತಕಾಲದ ಕೊನೆಯವರೆಗೂ ಮೊಟ್ಟೆಗಳ ಗರ್ಭಧಾರಣೆಗೆ ಸಾಕು. ಇವು ರಾಣಿಯ ರೇತಸ್ಸು-ಸಂಗ್ರಹಣ ಚೀಲದಲ್ಲಿ ಕೊನೆಯ ಪಕ್ಷ 15 ವರ್ಷಗಳವರೆಗಾದರೂ ಉಳಿದಿರುತ್ತವೆ. ತನ್ನ ಜೀವಿತ ಕಾಲದಲ್ಲೆಲ್ಲ ರಾಣಿ ಒಂದೇ ಸಲ ಮಾತ್ರ ಗಂಡಿನೊಡನೆ ಸಂಭೋಗಿಸುತ್ತದೆ. ಸಂಭೋಗಕ್ರಿಯೆ ಮುಗಿದ ಮರುಗಳಿಗೆಯಿಂದಲೇ ರಾಣಿ ವಿಧವೆಯಾಗಿ ಮುಂದಿನ ಪೀಳಿಗೆಯ ಉದಯದ ಕಡೆ ಗಮನಹರಿಸುತ್ತದೆ. ಆದ್ದರಿಂದ ಗೂಡುಬಿಟ್ಟು ಹಾರಿಬಂದು ಗರ್ಭಧರಿಸಿದ ರಾಣಿ ಹೊಸ ಗೂಡನ್ನು ಹುಡುಕಬೇಕಾಗುತ್ತದೆ. ಹೊಸ ಗೂಡಿನಲ್ಲಿ ತನ್ನ ಪೀಳಿಗೆಯ ಭದ್ರತೆ, ರಕ್ಷಣೆ, ಆಹಾರ ಮುಂತಾದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ದೊರಕಬೇಕು. ಆದ್ದರಿಂದ ರಾಣಿ ಹುಡುಕುವ ಸ್ಥಳ ಅದರ ಮತ್ತು ಮುಂದೆ ಅದರಿಂದ ಹುಟ್ಟುವ ಸಂತಾನಕ್ಕೆ ರಕ್ಷಣೆ ಕೊಡಬೇಕು. ಇಲ್ಲದಿದ್ದಲ್ಲಿ ರಾಣಿಯನ್ನೊಳಗೊಂಡು ಅದರ ಪೀಳಿಗೆಯೇ ನಿರ್ನಾಮವಾಗುತ್ತದೆ.



ಇರುವೆಗಳ ಸಂಗಜೀವನ

ಶೋಭನನೃತ್ಯ ಮುಗಿದ ತರುವಾಯ ರಾಣಿ ನೆಲಕ್ಕಿಳಿಯುತ್ತದೆ. ಆಗ ಅದರ ರೆಕ್ಕೆಗಳು ನಷ್ಟವಾಗುತ್ತವೆ. ರೆಕ್ಕೆಗಳು ಅವಾಗಿಯೇ ಉದುರಿಹೋಗಬಹುದು. ಇಲ್ಲವೇ ರಾಣಿಯೇ ಅವನ್ನು ಕಿತ್ತುಹಾಕಬಹುದು. ದೊಡ್ಡದಾಗಿ ಬೆಳೆದು ರೆಕ್ಕೆಗಳಿಗೆ ಆಶ್ರಯ ನೀಡಿದ್ದ ಮಾಂಸಖಂಡ ಗಳು ಕ್ರಮೇಣ ಕರಗಿ ಕೆಲವು ಕಾಲದಲ್ಲಿ ಲಾಲಾ ಗ್ರಂಥಿಗಳಾಗಿ ಪರಿವರ್ತನೆ ಹೊಂದುತ್ತವೆ. ಇಷ್ಟರಲ್ಲಿ ರಾಣಿಯ ಅಂಡಾಶಯ ಮೊಟ್ಟೆಗಳನ್ನು ಉತ್ಪಾದಿಸಲಾರಂಭಿಸುತ್ತದೆ. ಮೊಟ್ಟೆಗಳು ಹೊರಬರುವಾಗ ಒಂದು ಮೊಟ್ಟೆಗೆ ಒಂದು ರೇತಸ್ಸಿನಂತೆ ರೇತಸ್ಸು ಸಂಗ್ರಹಣ ಚೀಲ ರೇತಸ್ಸುಗಳನ್ನು ಹೊರಹಾಕುತ್ತದೆ. ಈ ರೇತಸ್ಸಿನಿಂದ ಗರ್ಭ ಧರಿಸಿದ ಮೊಟ್ಟೆಗಳನ್ನು ರಾಣಿ ಗೂಡಿನಲ್ಲಿಡುತ್ತದೆ. ಕೆಲಕಾಲದಲ್ಲಿಯೇ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ. ಮರಿಗಳಿಗೆ ಆಹಾರ ಒದಗಿಸುವ ಹೊಣೆ ರಾಣಿಗೇ ಸೇರಿದ್ದು. ಕೆಳದರ್ಜೆಯ ಇರುವೆಗಳಲ್ಲಿ ರಾಣಿ ತನ್ನ ಮಕ್ಕಳ ಆಹಾರಕ್ಕಾಗಿ ಗೂಡುಬಿಟ್ಟು ಹೊರಬಂದು ಆಹಾರಾನ್ವೇಷಣೆ ಮಾಡಿ ಅದನ್ನು ತೆಗೆದುಕೊಂಡು ಹೋಗಿ ಮರಿಗಳಿಗೆ ಕೊಟ್ಟು ಪೋಷಿಸುತ್ತದೆ. ವಿಕಾಸ ಹೊಂದಿದ ಮೇಲುದರ್ಜೆಯ ಇರುವೆಗಳಲ್ಲಿ ಗೂಡಿನಿಂದ ರಾಣಿ ಹೊರಬರುವುದೇ ಇಲ್ಲ. ಬದಲು ರೆಕ್ಕೆಯ ಮಾಂಸಖಂಡಗಳು ಉತ್ಪತ್ತಿ ಮಾಡುವ ಲಾಲಾರಸವನ್ನೇ ಮರಿಗಳಿಗೆ ಉಣಿಸಿ ಪೋಷಿಸಲಾರಂಭಿಸುತ್ತದೆ. ಈ ರೀತಿಯ ರಾಣಿ ಇರುವೆಗಳು ಹೊಟ್ಟೆ ಹಸಿದಾಗ ತಮ್ಮ ಮೊಟ್ಟೆಗಳನ್ನೇ ತಿನ್ನುವುದುಂಟು. ರಾಣಿ ತಿಂದುಳಿದ ಮೊಟ್ಟೆಗಳಿಂದ ಹುಟ್ಟಿದ ಮರಿಗಳು ಕೆಲಸಗಾತಿಗಳಾಗುತ್ತವೆ. ಇವುಗಳಿಗೆ ಮೊದಲು ಹುಟ್ಟಿದ ಇರುವೆಗಳಿಗೆ ದಾದಿಯರ ಪೀಳಿಗೆ ಯೆಂದು ಹೆಸರು. ಈ ಪೀಳಿಗೆ ಹುಟ್ಟಿ ಬಂದಮೇಲೆ ರಾಣಿಯ ಕಷ್ಟಗಳೆಲ್ಲ ಪರಿಹಾರವಾ ದಂತೆಯೇ, ದಾದಿ ಇರುವೆಗಳು ಗೂಡುಬಿಟ್ಟು ಹೊರಬಂದು ಆಹಾರ ಸಂಗ್ರಹಿಸಿಕೊಂಡು ಹೋಗಿ ರಾಣಿಗೆ ಮತ್ತು ಮರಿಗಳಿಗೆ ಉಣ್ಣಿಸುತ್ತವೆ. ಹೀಗೆ ಇರುವೆಯ ಗೂಡು ಪೂರ್ಣವಾಗು ತ್ತದೆ. ಆಗ ರಾಣಿಗೆ ಮೊಟ್ಟೆಯಿಡುವುದೊಂದೇ ಕೆಲಸ. ಈ ಕೆಲಸ 10-15 ವರ್ಷಗಳ ಕಾಲ ನಿರಂತರವಾಗಿ ನಡೆಯುತ್ತದೆ.

ಇರುವೆಯ ಸಂಘಜೀವನದ ರಹಸ್ಯವೇನು ಎಂಬ ಪ್ರಶ್ನೆಗೆ ಗೂಡಿನಲ್ಲಿ ಬೆಳೆಯುತ್ತಿರುವ ಎಳೆಯ ಜೀವಿಗಳ ಮೇಲಿನ ವ್ಯಾಮೋಹಕ್ಕಿಂತ ಆ ಎಳೆಯ ಜೀವಿಗಳ ಶರೀರದಲ್ಲಿರುವ ಬೆವರಿನಂಥ ವಸ್ತುವೇ ಕಾರಣವೆಂದು ಸಂಶೋಧನೆಗಳು ತಿಳಿಸುತ್ತವೆ. ಏಕೆಂದರೆ ಮಕ್ಕಳ ಮೇಲಿನ ವ್ಯಾಮೋಹವಿದ್ದರೆ ರಾಣಿ ತನ್ನ ಮೊಟ್ಟೆಗಳನ್ನೇ ತಿಂದು ಬದುಕುತ್ತಿರಲಿಲ್ಲ. ದಾದಿಗಳು ಅಥವಾ ಕೆಲಸಗಾತಿಗಳು ಮರಿಗಳನ್ನು ಎತ್ತಿ ಇಳಿಸಿ ಆಹಾರ ಒದಗಿಸಲು ಕಾರಣ ಈ ಮರಿಗಳ ಚರ್ಮದ ಮೇಲೆ ಉತ್ಪತ್ತಿಯಾಗುವ ಸಿಹಿಯಾದ ರಸ. ಕೆಲಸಗಾತಿಗಳು

ಹೊರಗಿನಿಂದ ತಂದ ಆಹಾರವನ್ನು ಆ ಮರಿಗಳಿಗೆ ಉಣಿಸಿ ತಾವು ಅವುಗಳ ಮೈಮೇಲಿರುವ ಸಿಹಿರಸವನ್ನು ಹೀರುತ್ತವೆ. ಈ ವಿಧಾನವನ್ನು ಟ್ರೊಫಲ್ಯಾಕ್ಸಿಸ್ ಎನ್ನುತ್ತಾರೆ. ಇದೇ ಇರುವೆಗಳನ್ನು ಸಂಘಜೀವಿಗಳಾಗಿರುವಂತೆ ಮಾಡುವ ಸ್ನೇಹಬಂಧನ.

ಸೆರಬ್ರ ಎಂಬ ಇರುವೆಯ ಜಾತಿಯಲ್ಲಿ ರಾಣಿ ತನ್ನ ಮರಿಗಳಿಗಿಂತ 2,000 ದಷ್ಟು ದೊಡ್ಡದು. ಇದು ತನ್ನ ಶೋಭನನೃತ್ಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಅದರ ಶರೀರದ ರೋಮಗಳನ್ನು ಕೆಲವು ಕೆಲಸಗಾರ ಇರುವೆಗಳು ಭದ್ರವಾಗಿ ತಮ್ಮ ದವಡೆಗಳಿಂದ ಹಿಡಿದುಕೊಳ್ಳುತ್ತವೆ. ಇವು ಈ ರಾಣಿ ಎಲ್ಲೆಲ್ಲಿ ಹರಿಹೋಗುವುದೋ ಅಲ್ಲೆಲ್ಲ ಅದಕ್ಕಂಟಿಕೊಂಡೇ ಚಲಿಸುತ್ತವೆ. ರಾಣಿಯೊಡನೆ ಸಂಭೋಗಿಸುತ್ತಿರುವ ಗಂಡಿನ ಶರೀರದ ರೋಮಗಳಿಗೂ ಕೆಲವು ಕೆಲಸಗಾರರು ಅಂಟಿಕೊಂಡಿರುವುದುಂಟು. ಆದರೆ ರಾಣಿ, ಸಂಭೋಗಕ್ರಿಯೆ ಮುಗಿದ ಮೇಲೆ ಗಂಡನನ್ನು ಬಿಟ್ಟು ಹಾರಿಹೋಗುತ್ತದೆ. ಗಂಡಿನ ಮೈಗೆ ಅಂಟಿಕೊಂಡಿದ್ದ ಕೆಲಸಗಾತಿಗಳು ಅದರೊಡನೆಯೇ ಆಹಾರವಿಲ್ಲದೆ ಅಸುನೀಗುತ್ತವೆ. ಆದರೆ ರಾಣಿಯನ್ನು ಹಿಡಿದುಕೊಂಡಿದ್ದ ಕೆಲಸಗಾತಿಗಳು ಅದು ಮೊಟ್ಟೆಯಿಡಲಾರಂಭಿಸಿದಾಗ ಅದರ ಪಾಲನೆಯಲ್ಲಿ ತೊಡಗುತ್ತವೆ. ಈ ಜಾತಿಯಲ್ಲಿ ರಾಣಿಗೆ ತನ್ನ ಮರಿಗಳ ಶರೀರದಲ್ಲಿ ಉತ್ಪತ್ತಿಯಾಗುವ ಸಿಹಿರಸವನ್ನು ಹೀರಲು ಆಗುವುದಿಲ್ಲ ಅದರ ಗಾತ್ರ ಆ ಕ್ರಿಯೆಗೆ ಅಡ್ಡಿಬರುತ್ತದೆ. ಚಿಕ್ಕ ಚಿಕ್ಕ ಕೆಲಸಗಾರರು ಮರಿಗಳ ಶರೀರದಿಂದ ಹೊರಬರುವ ರಸವನ್ನು ತಿಂದುಕೊಂಡು ಗೂಡುಗಟ್ಟುವ ಹಾಗೂ ಮರಿಗಳನ್ನು ಪಾಲಿಸುವ ಕೆಲಸ ಮಾಡುತ್ತವೆ.

ಫಾರ್ಮಿಕ, ಬೋಥ್ರಿಯೋಮಿರ್ ಮೆಕ್ಸ್ ಮುಂತಾದ ಇರುವೆ ಜಾತಿಗಳ ರಾಣಿ ಅತಿ ಚಿಕ್ಕದು. ತನ್ನ ಕೆಲಸಗಾತಿಗಳಿಗಿಂತಲೂ ಕಿರಿದು. ಇಂಥ ರಾಣಿಯ ರೆಕ್ಕೆಗಳ ಮಾಂಸಖಂಡಗಳಲ್ಲಿ ಉತ್ಪತ್ತಿಯಾಗುವ ಲಾಲಾರಸ ಅದರ ಮರಿಗಳಿಗೆ ಸಾಕಾಗುವುದಿಲ್ಲ. ಈ ರಾಣಿ ಕೆಲಸಗಾತಿಯರೊಡನಿದ್ದಾಗ ಗುರುತಿಸುವುದೂ ಕಷ್ಟವೆ. ಇದು ಇನ್ನಾವುದೋ ಇರುವೆಯ ಗೂಡಿಗೆ ಮೆಲ್ಲಗೆ ನುಸುಳಿಕೊಂಡು ಆಶ್ರಯದಾತನ ಗೂಡಿನಲ್ಲಿ ತಲೆಮರೆಸಿಕೊಂಡು ಇರುವುದಿದೆ. ಈ ಕಾಲದಲ್ಲೇನಾದರೂ ಆ ಗೂಡಿನಲ್ಲಿರುವ ಕೆಲಸಗಾತಿಯ ಕೈಗೆ ಇದು ಸಿಕ್ಕಿಹಾಕಿಕೊಂಡರೆ ಸತ್ತಂತೆಯೇ ಸರಿ. ಅವುಗಳ ಕಣ್ಣು ತಪ್ಪಿಸಿ ರಾಣಿ ಮೊಟ್ಟೆಯಿಡಲಾರಂಭಿಸುತ್ತದೆ. ಈ ಮೊಟ್ಟೆಗಳಿಂದ ಹೊರಬಂದ ಮರಿಗಳನ್ನು ಆಶ್ರಯದಾತ ಜೀವಿಯ ಗೂಡಿನಲ್ಲಿರುವ ಕೆಲಸಗಾತಿಯರೇ ಸಲಹುತ್ತಾರೆ. ಹೀಗೆ ಇದರ ಪೀಳಿಗೆ ಹುಟ್ಟಿಬರುತ್ತದೆ. ಇದರಿಂದಾಗಿ ಕೆಲವೊಂದು ಬಾರಿ ಇರುವೆಯ ಗೂಡಿನಲ್ಲಿ ಎರಡು ವಿಭಿನ್ನ ವೈಜ್ಞಾನಿಕ ಜಾತಿಯ ಇರುವೆಗಳು ಜೊತೆಜೊತೆಯಾಗಿರುತ್ತವೆ. ಆಗಂತುಕ ರಾಣಿ ಹೊಸಪೀಳಿಗೆಯ ಸಹಾಯದಿಂದ ಅಲ್ಲಿಯ ರಾಣಿಯನ್ನು ಕೊಂದು ಆ ಗೂಡನ್ನೇ ತನ್ನದಾಗಿ ಮಾಡಿಕೊಳ್ಳಬಹುದು. ಬೋಥ್ರಿಯೋಮಿರ್ ಮೆಕ್ಸ್ ಜಾತಿಯ ರಾಣಿ ಆಶ್ರಯ ಕೊಟ್ಟ ಗೂಡಿನ ರಾಣಿಯ ಬೆನ್ನಿನ ಮೇಲೆ ಹತ್ತಿ ಅದರ ಕುತ್ತಿಗೆಯನ್ನು ತನ್ನ ದವಡೆಗಳಿಂದ ಕಡಿದುಹಾಕುವುದುಂಟು. ರಾಣಿ ಸತ್ತ ಮೇಲೆ ಅದರಿಂದ ಹುಟ್ಟಿದ್ದ ಕೆಲಸಗಾತಿಗಳು ಸತ್ತು ಹೋಗುತ್ತವೆ. ಆದರೆ ಬದುಕಿರುವವರೆಗೆ ಅವು ಆಗಂತುಕ ರಾಣಿಯ ಮಕ್ಕಳ ಪಾಲನೆ ಮಾಡುತ್ತವೆ.

ಗುಲಾಮಗಿರಿ ಕೂಡ ಇರುವೆಯ ಜೀವನದಲ್ಲಿ ಕಂಡುಬರುವುದು ಚೋದ್ಯದ ಸಂಗತಿ. ಪಾಲಿಯೆರ್ಗಸ್ ಹರ್ ಪಗೊರ್ಕ್ಸಿನಸ್, ಸ್ಟ್ರಾಂಗೈಲೊನ್ಯಾಥಸ್, ಫಾರ್ಮಿಕ ಮತ್ತು ಲೆಪ್ಟೊಥೊರ್ಯಾಕ್ಸ್ ಜಾತಿಗಳಲ್ಲಿ ರಾಣಿಗಳು ತಮ್ಮ ಕ್ರೌರ್ಯಕ್ಕೆ ಹೆಸರಾಗಿವೆ. ಈ ರಾಣಿ ಇರುವೆಗಳು ಇತರರ ಗೂಡನ್ನು ಪ್ರವೇಶಿಸುತ್ತವೆ. ಇಂಥ ಅತಿಕ್ರಮ ಪ್ರವೇಶಕ್ಕೆ ಅಡ್ಡಿ ತರುವ ಇರುವೆಗಳಿಗೆ ಮರಣವೇ ಗತಿ. ಇದರಿಂದಾಗಿ ಆಶ್ರಯ ಕೊಡುವ ಗೂಡಿನ ಕೆಲಸಗಾರರು ತಮ್ಮ ರಕ್ಷಣೆ ಹಾಗೂ ತಮ್ಮ ಗೂಡಿನ ರಕ್ಷಣೆಯಲ್ಲಿ ತೊಡಗುತ್ತವೆ. ಆದರೆ ರಾಣಿ ಅವನ್ನು ರಕ್ಷಣಾಕಾರ್ಯದಲ್ಲಿರಬಿಡದೆ ಧ್ವಂಸ ಮಾಡಲು ಉಪಕ್ರಮಿಸುತ್ತದೆ. ಹೀಗೆ ಹಳೆಯಗೂಡಿನ ಮಾಲಿಕರನ್ನೆಲ್ಲ ಕೊಲ್ಲುತ್ತದೆ. ಆದರೆ ಆ ಗೂಡಿನಲ್ಲಿ ಹಳೆಯರಾಣಿ ಇಟ್ಟಿದ್ದ ಮೊಟ್ಟೆಗಳು ಉಳಿದು ಮರಿಗಳಾಗುತ್ತವೆ. ಆ ಮರಿಗಳು ಬೆಳೆದಾಗ ಈ ರಾಣಿಗೆ ಸೇವಕರಾಗುತ್ತವೆ. ಹಳೆಯ ರಾಣಿಯ ಸಂತತಿ ಹಾಗೂ ಹೊಸ ರಾಣಿಯ ಸಂತತಿ ಎರಡರ ಉದಯವಾಗಿ ದೊಡ್ಡ ಸಂಗ್ರಾಮವೇ ನಡೆಯುತ್ತದೆ. ಈ ಸಂಗ್ರಾಮದಲ್ಲಿ ಯಾವುದು ಮೇಲುಗೈ ಪಡೆಯುತ್ತದೊ ಅದು ಬದುಕುತ್ತದೆ. ಕೆಲವೊಂದು ಬಾರಿ ಸೋಲುಗೈಯಾದ ಇರುವೆಗಳು ತಮ್ಮ ಮಕ್ಕಳು ಮರಿಯನ್ನೆಲ್ಲ ಒಂದುಗೂಡಿಸಿಕೊಂಡು ಆ ಜಾಗವನ್ನೇ ಬಿಟ್ಟು ಹೊರಡುತ್ತವೆ. ಜಾಗಬಿಟ್ಟ ಇವು ಹೊಸಗೂಡು ಕಟ್ಟಿಕೊಂಡು ತಮ್ಮ ಸಂತಾನವನ್ನು ಮುಂದುವರಿಸುತ್ತವೆ.

ಇರುವೆಗಳು ಬಾಯಿಂದ ಬಾಯಿಗೆ ಆಹಾರ ತೆಗೆದುಕೊಳ್ಳಬೇಕಾದರೆ ಅದು ದ್ರವ ಸ್ಥಿತಿಯಲ್ಲಿರಬೇಕು. ಹೀಗಿರುವ ರಸವನ್ನು ದೊಡ್ಡ ಇರುವೆಗಳು ಮರಿಗಳಿಗೆ ಉಣಿಸುವುದು ಸುಲಭ. ವಿಕಾಸದ ದೃಷ್ಟಿಯಿಂದ ಈ ರೀತಿಯ ದ್ರವಸ್ಥಿತಿ ಆಹಾರ ಸೇವನೆ ಮಾಡುವ ಇರುವೆಗಳು ಉತ್ತಮಮಟ್ಟದವೆಂತಲು ಪರಿಗಣಿಸಲಾಗಿದೆ. ಘನರೂಪದ ಆಹಾರವಸ್ತುಗಳನ್ನು ತೆಗೆದುಕೊಳ್ಳುವ ಇರುವೆಗಳು ಕೆಳಮಟ್ಟದ ಜೀವಿಗಳು. ರಸಸ್ಥಿತಿಯ ಆಹಾರವನ್ನು ಮರಿಗಳಿಗೆ ಸುಲಭವಾಗಿ ಉಣಿಸಬಹುದು. ಹೂವಿನಲ್ಲಿ ಉತ್ಪತ್ತಿಯಾಗುವ ಮಧು, ಗಿಡಗಳ ತಿಗಣೆಗಳ ಶರೀರದಲ್ಲಿ ಉತ್ಪತ್ತಿಯಾಗುವ ಸಿಹಿರಸ ಮತ್ತು ಹಣ್ಣುಗಳ ರಸ ಮುಂತಾದುವು ಇರುವೆಗಳ ಪ್ರೀತಿಯ ಆಹಾರ. ಕೆಲಸಗಾರ ಇರುವೆಗಳು ತಾವು ಕುಡಿದ ಆಹಾರವನ್ನು ತಮ್ಮ ಜೀರ್ಣಾಂಗದ ಒಂದು ಪ್ರತ್ಯೇಕ ಭಾಗವಾದ ಪ್ರೊವಂಟ್ರಿಕುಲಸ್‌ನಲ್ಲಿ ಶೇಖರಿಸಿಟ್ಟುಕೊಳ್ಳುತ್ತವೆ. ಗೂಡಿಗೆ ಬಂದ ತತ್ ಕ್ಷಣ ಈ ಆಹಾರವನ್ನು ಪುನಃ ಬಾಯಿಗೆ ತೆಗೆದುಕೊಂಡು ಮರಿಗಳಿಗೆ ಉಣ್ಣಿಸುತ್ತವೆ. ಆಹಾರವನ್ನು ಬಾಯಿಗೆ ತೆಗೆದುಕೊಳ್ಳುವಾಗ ಇವುಗಳ ಜೀರ್ಣಾಂಗದಲ್ಲಿ ವಾಂತಿಯಂಥ ಕ್ರಿಯೆಗಳು ನಡೆಯುತ್ತವೆ. ಹೀಗೆ ವಾಂತಿಯಾದ ಆಹಾರವನ್ನು ಮರಿಗಳು, ದೊಡ್ಡವು ಎಲ್ಲವೂ ಉಪಯೋಗಿಸಬಹುದು.

ಆಹಾರ ಶೇಖರಣೆಗಾಗಿಯೇ ಪ್ರತ್ಯೇಕ ಇರುವೆಗಳು ಕೆಲವು ಜಾತಿಯಲ್ಲಿವೆ. ಕಾಂಪೊಗೋಟಸ್ಸ್ ಮಿರ್ಮೆಕೋಸಿಸಟಸ್, ಲೆಪ್ಟೊಮಿರ್ಮೆಕ್ಸ್ ಮುಂತಾದ ಪ್ರಭೇದಗಳ ಇರುವೆಗಳಲ್ಲಿ ಆಹಾರ ಶೇಖರಣೆಗಾಗಿಯೇ ಪ್ರತ್ಯೇಕ ಇರುವೆಗಳಿವೆ. ಇವನ್ನು ಆಹಾರದ ಕಣಜಗಳೆನ್ನುತ್ತಾರೆ. ಇವು ಕೆಲಸಗಾತಿಗಳು. ಈ ಇರುವೆಗಳ ಜೀರ್ಣಾಂಗ ಭಾಗವಾದ ಮ್ಯಾತೆ ಅತಿ ದೊಡ್ಡ ಚೀಲದಂತಾಗಿ ಆಹಾರವನ್ನು ಶೇಖರಿಸುತ್ತದೆ. ಬೇರೆ ಕೆಲಸಗಾತಿ ಇರುವೆಗಳು ತಾವು ತಿಂದ ಆಹಾರವನ್ನೆಲ್ಲ ತಂದು ಇದರ ಬಾಯಿಗೆ ವಾಂತಿ ಮಾಡುತ್ತವೆ. ಎಲ್ಲ ಇರುವೆಗಳ ಆಹಾರ ರಸಗಳನ್ನು ಈ ಇರುವೆ ಕುಡಿದು ಅದನ್ನು ಮ್ಯಾತೆಯಲ್ಲಿ ಶೇಖರಿಸಿಟ್ಟುಕೊಳ್ಳುತ್ತದೆ. ಈ ರೀತಿ ಆಹಾರ ಶೇಖರಣೆ ಮಾಡಿರುವ ಇರುವೆಯ ಶರೀರ ಒಂದೊಂದು ಬಾರಿ ಅವರೆ ಕಾಳಿಗಿಂದ ದಪ್ಪವಾಗಿರುತ್ತದೆ. ಇದರೊಳಗೆ ಜೇನಿನಂಥ ರಸ ತುಂಬಿರುವುದು. ಕೆಲವೊಂದು ಬಾರಿ ಇದು ಒಡೆದೇ ಹೋಗುತ್ತದೇನೊ ಎನ್ನುವಷ್ಟು ಬಿಗಿಯಾಗಿರುವುದುಂಟು. ಇಂಥ ಇರುವೆಗಳು ಚಲಿಸಲಾರವು. ಗೂಡಿನ ಕೆಲವು ಪ್ರತ್ಯೇಕ ಭಾಗಗಳ ಮೇಲ್ಚಾವಣಿಗೆ ಇವು ಅಂಟಿಕೊಂಡು ಕುಳಿತುಕೊಳ್ಳುತ್ತವೆ. ಗೂಡಿನ ಇತರ ಜೀವಿಗಳಿಗೆ ಆಹಾರ ಬೇಕಾದಾಗ ಇಂಥ ಒಂದು ಇರುವೆಯಲ್ಲಿಗೆ ಹೋಗಿ ವಾಂತಿ ಮಾಡುವಂತೆ ಕೇಳಿಕೊಳ್ಳುತ್ತವೆ. ಆ ಇರುವೆಗಳು ಕೆಲಸಕ್ಕೆ ಹೊರಡುತ್ತವೆ.



ಅಹಾರ ಹುಡುಕುತ್ತಿರುವ ಇರುವೆಗಳು

ಇರುವೆಗಳು ಸ್ರವಿಸುವ ಪ್ರಾಣಿಗಳನ್ನು ಸಾಕುವುದರಲ್ಲಿ ಪ್ರಖ್ಯಾತಿಹೊಂದಿದೆ. ಕೆಲವು ಜಾತಿಯ ಇರುವೆಗಳು ಗಿಡಗಳಲ್ಲಿರುವ ತಿಗಣೆಗಳನ್ನು ತಂದು ತಮ್ಮ ಗೂಡಿನಲ್ಲಿ ಸಾಕುತ್ತವೆ. ಹೀಗೆ ತರುವಾಗ ತಿಗಣೆಗಳು ಅಂಟಿಕೊಂಡಿರುವ ಎಲೆ ಅಥವಾ ಕಾಂಡಸಹಿತ ಸಾಗಿಸಿ ಗೂಡಿನಲ್ಲಿಟ್ಟುಕೊಳ್ಳುತ್ತವೆ. ತಿಗಣೆಗಳಿಗೆ ಬೇಕಾದ ಹೊಸ ಹೊಸ ಎಲೆ ಮತ್ತು ಕಾಂಡಗಳನ್ನು ಕೆಲಸಗಾರ ಇರುವೆಗಳು ಪ್ರತಿನಿತ್ಯವೂ ತಂದು ಹಾಕುವುವು. ಈ ಆಹಾರವನ್ನು ಸೇವಿಸಿಕೊಂಡು ತಿಗಣೆಗಳು ಬೆಳೆಯುತ್ತವೆ. ಇರುವೆಗೆ ಆಹಾರ ಬೇಕೆಂದಾಗ ಅದು ತಿಗಣೆಯ ಬೆನ್ನನ್ನು ಮೆಲ್ಲಗೆ ತಟ್ಟುತ್ತದೆ. ಈ ಕ್ರಿಯೆಯಿಂದ ಪ್ರಚೋದಿತವಾದ ತಿಗಣೆ ಸಿಹಿರಸವನ್ನು ಬೆನ್ನಿನ ಮೇಲೆ ಸ್ರವಿಸುತ್ತದೆ. ಅದನ್ನು ಹೀರಿಕೊಂಡು ಇರುವೆ ಬದುಕುತ್ತದೆ. ಆದ್ದರಿಂದ ಇಂಥ ತಿಗಣೆಗಳು ಇರುವೆಗಳಿಗೆ ಕರೆವ ಹಸು ಇದ್ದಂತೆ.

ತೋಟಗಾರ ಇರುವೆಯದು ಮತ್ತೊಂದು ರೀತಿಯ ಜೀವನ. ಮರ್‌ಮಿಸೈನ್ ಗುಂಪಿನ ಇರುವೆಗಳು ಕೆಲವು ಜಾತಿಯ ಸೊಪ್ಪನ್ನು ತಮ್ಮ ಗೂಡುಗಳಲ್ಲಿ ಶೇಖರಿಸಿಟ್ಟುಕೊಳ್ಳುತ್ತವೆ. ಗೂಡಿನ ಈ ಭಾಗ ವಿಶಾಲವಾಗಿರುತ್ತದೆ. ಸೊಪ್ಪಿನಲ್ಲಿ ಬೆಳೆಯುವ ಒಂದು ಜಾತಿಯ ಬೂಷ್ಟು ಇರುವೆಗಳಿಗೆ ಆಹಾರ.

ಭಾರತದ ಸುಗ್ಗಿ ಇರುವೆಗಳು ರಾಗಿ, ಬತ್ತ, ಜೋಳದ ಕಾಳುಗಳನ್ನು ಸಿಪ್ಪೆ ತೆಗೆದು ಶೇಖರಿಸುತ್ತವೆ. ತೇವದಿಂದ ಈ ಕಾಳುಗಳು ಮೊಳೆಯಲಾಗದಂತೆ ಕಾಳುಗಳ ಭ್ರೂಣಗಳನ್ನು ಬೇಳೆಗಳಾಗುವಂತೆ ಒಡೆದು ತುಂಬಿಕೊಳ್ಳುವುದುಂಟು. ಕಾಳುಗಳು ತೇವಗೊಂಡರೆ ಅವನ್ನು ಗೂಡಿನಿಂದ ಹೊರತಂದು ಬಿಸಿಲಿನಲ್ಲಿ ಒಣಗಿಸಿ ಮತ್ತೆ ಗೂಡಿನೊಳಕ್ಕೆ ಕೊಂಡೊಯ್ಯುತ್ತವೆ.

ಬ್ರೆಜಿಲ್ ದೇಶದ ಕೆಲವು ಇರುವೆಗಳು ಮಾಂಸಾಹಾರಕ್ಕೆ ಪ್ರಖ್ಯಾತವಾಗಿವೆ. ಇವು ಹುಲಿಸಿಂಹಗಳಂತೆ ತಮಗೆ ಆಹಾರವಾಗಬಲ್ಲ ಪ್ರಾಣಿಯನ್ನು ಹುಡುಕಿ, ಮುತ್ತಿಗೆ ಹಾಕಿ ಕೊಂದು ತಿನ್ನುವುವು. ಗುಂಪಿನಲ್ಲಿ ಎಣಿಸಲಾಗದಷ್ಟು ಇರುವೆಗಳಿರುತ್ತವೆ. ಒಟ್ಟು ಸಮುದಾಯ ಸಾಲಾಗಿ ಹರಿಯುತ್ತಿರುವಂಥ ಯಾತ್ರೆಯ ಕಾಲದಲ್ಲಿ ಯಾವುದಾದರೂ ಪ್ರಾಣಿ ಅಡ್ಡಬಂದರೆ ಅದು ಮುಗಿದಂತೆಯೇ ಸರಿ. ಹಾವುಗಳು ಸಾಮಾನ್ಯವಾಗಿ ಇರುವೆಗಳಿಗೆ ಆಹಾರವಾಗುತ್ತವೆ. ಇರುವೆಗಳು ಮುತ್ತಿಕೊಂಡರೆ ಹಾವಿನ ಮೂಳೆ ಮಾತ್ರ ಉಳಿಯುತ್ತದೆ. ಭಾರತದ ಕೆಂಜಿಗ ಭಯಂಕರವಾಗಿ ಆಕ್ರಮಣ ಮಾಡುತ್ತದೆ. ಕೆಂಜಿಗಗಳು, ಮರದ ಇರುವೆಗಳು ತೆಂಗಿನಮರ, ಮಾವಿನಮರದಲ್ಲಿ ಹೆಚ್ಚು. ತೆಂಗಿನಮರದ ಗರಿಗಳನ್ನು ಒಟ್ಟುಗೂಡಿಸಿ ಗೂಡು ನೇಯ್ದು

ಅದರೊಳಗೆ ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ಗೂಡುಕಟ್ಟುವಾಗ ಎಲೆಗಳ ಅಂಚನ್ನು ಕೆಲಸಗಾರ ಇರುವೆಗಳು ಸರಿಯಾಗಿ ಹಿಡಿದು ನಿಲ್ಲುತ್ತವೆ. ಈ ಎಲೆಗಳನ್ನು ಅಂಟಿಸಬಲ್ಲ ರೇಷ್ಮೆಯಂಥ ವಸ್ತುವನ್ನು ಮರಿಗಳು ಉತ್ಪಾದಿಸುತ್ತವೆ. ಕೆಲವು ಕೆಲಸಗಾರ ಇರುವೆಗಳು ಮರಿಗಳನ್ನು ಎತ್ತಿಕೊಂಡು ಆ ಎಲೆಯ ಮೇಲೆ ಹಿಂದಕ್ಕೆ ಮುಂದಕ್ಕೆ ಓಡಾಡುತ್ತಿರುತ್ತವೆ. ಮರಿ ಸುರಿಸಿದ ಅಂಟಿನಿಂದ ಎಲೆ ಅಂಟಿಕೊಳ್ಳುತ್ತದೆ. **(ನೋಡಿ– ಕೆಂಜಿಗ)**

ಗೊದ್ದ **(ನೋಡಿ– ಗೊದ್ದ)** ಅಥವಾ ದೈತ್ಯ ಕರೀ ಇರುವೆಗಳೂ ಮರದ ಮೇಲೆಯೇ ವಾಸಿಸುತ್ತವೆ. ಆದರೆ ಅವುಗಳ ಗೂಡು ಮಾತ್ರ ಮರದ ಬುಡದಲ್ಲಿರುತ್ತದೆ.

ಈ ರೀತಿಯ ಕರೀ ಇರುವೆಯ ಜಾತಿಯಲ್ಲಿ ಕಟ್ಟಿರುವೆಗಳು ಭಯಂಕರ ಜೀವಿಗಳು. ಇವು ಕಚ್ಚಿದಾಗ ಒಂದು ರೀತಿಯ ವಿಷಪದಾರ್ಥವನ್ನು ಹೊರಬಿಡುತ್ತವೆ. ಆದ್ದರಿಂದ ಇವು ಕಚ್ಚಿದ ಜಾಗದಲ್ಲಿ ಕಡಿತ ಹಾಗೂ ಊತ ಬರುವುದುಂಟು. ಒಟ್ಟಿನಲ್ಲಿ ಇರುವೆಗಳು ಅತಿ ಚತುರ ಸಂಘಜೀವಿಗಳು. ಮಾನವ ಇವುಗಳಿಂದ ಕಲಿಯಬೇಕಾದ್ದು ಇನ್ನೂ ಇದೆ.

(ಎಲ್.ಎಸ್.ಜಿ.)

**ಇರುಳರು: ನೋಡಿ–ಆದಿವಾಸಿಗಳು**

**ಇರುಳುಗಳ್ಳತನ:** ರಾತ್ರಿ ನಡೆಯುವ ಅತಿಕ್ರಮ ಪ್ರವೇಶದ ಒಂದು ಬಗೆ. ಇನ್ನೊಂದು ಬಗೆಯೆಂದರೆ ಹಗಲುಗಳ್ಳತನ.

ತಾನು ಪ್ರವೇಶಿಸುವುದಕ್ಕೋಸ್ಕರವೇ ತನ್ನಿಂದ ಅಥವಾ ತನ್ನ ಸಹಾಯಕನಿಂದ ಮಾಡಲ್ಪಟ್ಟ ದ್ವಾರದಿಂದ ಇಲ್ಲವೆ ಕಿಟಕಿಯಂಥ ದ್ವಾರದಿಂದ, ಇಲ್ಲವೆ ಮುಚ್ಚಿದ ದ್ವಾರವನ್ನು ಬಲತ್ಕಾರದಿಂದ ತೆರೆದು ಅಥವಾ ಬೀಗ (ಕೀಲಿ) ಮುರಿದು ಇಲ್ಲವೆ ಗೋಡೆ ಏರಿ ಅಥವಾ ಕಟ್ಟಡದ ಮೇಲೆ ಹತ್ತಿ ಅಥವಾ ಯಾರೊಬ್ಬನ ಮೈಮೇಲೆರಗಿ (ಅಸಾಲ್ಟ್) ಇಲ್ಲವೆ ಅವನ ಮೇಲೆ ಬಲಾತ್ಕಾರ ಪ್ರಯೋಗಮಾಡಿ ಅಥವಾ ಹೆದರಿಕೆ ಹಾಕಿ ರಾತ್ರಿಕಾಲದಲ್ಲಿ ಮನೆಯಲ್ಲಿ ಅಥವಾ ಹೊರಮನೆಯಲ್ಲಿ (ಔಟ್ ಹೌಸ್) ಅತಿಕ್ರಮ ಪ್ರವೇಶ ಮಾಡಿದರೆ ಅದು ಇರುಳುಗಳ್ಳತನ ಅಥವಾ ರಾತ್ರಿ ದರೋಡೆ ಎನಿಸಿಕೊಳ್ಳುತ್ತದೆ (ಬರ್ಗ್ಲರಿ). ಇದು ಭಾರತೀಯ ದಂಡ ಸಂಹಿತೆಯ (ಐಪಿಸಿ) 447ನೆಯ ಕಲಮಿನ ಪ್ರಕಾರ ಅಪರಾಧವಾಗುತ್ತದೆ.

ರಾತ್ರಿ ಕನ್ನ ಕೊರೆದು, ಕಳ್ಳತನಕ್ಕಾಗಲಿ ಅಥವಾ ಇನ್ನಾವುದಾದರೂ ಅಪರಾಧವನ್ನು ಎಸಗುವುದಕ್ಕಾಗಲಿ ಮಾಡುವ ಮನೆಯ ಅಕ್ರಮಪ್ರವೇಶ ಕನ್ನಗಳ್ಳತನವಾಗುತ್ತದೆ. ಇದು ಇರುಳುಗಳ್ಳತನದ ಒಂದು ಪ್ರಭೇದ. ಇಲ್ಲಿ ಮನೆಯೆಂದರೆ ಡೇರೆ, ಹಡಗು ಇಲ್ಲವೇ ಪೂಜಾಮಂದಿರ, ವಸ್ತುಗಳ ಉಗ್ರಾಣ–ಇವೆಲ್ಲ ಸೇರುತ್ತವೆ. ಕನ್ನಗಳ್ಳತನಮಾಡುವವ ಮನೆಯನ್ನು ಕೊರೆದೇ ಪ್ರವೇಶಿಸಬೇಕಿಲ್ಲ. ಮನುಷ್ಯ ಪ್ರವೇಶಕ್ಕೆ ಲೇಶ ಅವಕಾಶವುಳ್ಳ ಕಿಟಕಿಯಿಂದಾಗಲಿ, ಚಿಮಣಿಯ ತೂತಿನಿಂದಾಗಲಿ, ಇನ್ನಾವ ತರಹದ ಬಿಲದ್ವಾರಗಳಿಂದಾಗಲಿ ಪ್ರವೇಶಿಸಿದರೆ ಈ ಅಪರಾಧವಾಗುತ್ತದೆ. ಕೀಲಿಮುರಿದು, ಕದವನ್ನು ಕಿತ್ತು, ದ್ವಾರದಲ್ಲಿ ಇದ್ದವರನ್ನು ಬೆದರಿಸಿ ಪ್ರವೇಶಿಸಿದರೂ ಅಪರಾಧವಾಗುತ್ತದೆ. ಹೇಗಾದರೂ ಅಪರಾಧೋದ್ದೇಶದಿಂದ ಪ್ರವೇಶ ಪಡೆದ ಮೇಲೆ ಮೇಲ್ಕಂಡ ಯಾವ ರೀತಿಯಲ್ಲಾದರೂ ಹೊರಬಂದರೂ ಇದೇ ಅಪರಾಧವಾಗುತ್ತದೆ. ಇಲ್ಲಿ ಇರುಳೆಂದರೆ ಸೂರ್ಯಾಸ್ತದ ಅನಂತರ ಸೂರ್ಯೋದಯಕ್ಕೆ ಮೊದಲು–ಎಂದು ವ್ಯಾಖ್ಯೆ ಮಾಡಲಾಗಿದೆ. ಕಳ್ಳತನಕ್ಕಾಗಿ ಮನೆ ಒಡೆದು ಅಕ್ರಮ ಪ್ರವೇಶಮಾಡಿದವನ ವಿಷಯದಲ್ಲಿ ಬೇರೆ ದುರುದ್ದೇಶದವನಿಗಿಂತ ಹೆಚ್ಚು ಶಿಕ್ಷೆಯನ್ನು ಕಾಯಿದೆ ವಿಧಿಸುತ್ತದೆ. ಅದರಂತೆ ಹಗಲು ಪ್ರವೇಶಕ್ಕಿಂತ ರಾತ್ರಿ ಮನೆ ಒಡೆದು ಪ್ರವೇಶಿಸುವುದಕ್ಕೆ ಅಧಿಕ ಶಿಕ್ಷೆಯನ್ನು ವಿಧಿಸಲಾಗಿದೆ.

(ಆರ್.ಆರ್.ಟಿ.)

**ಇರ್ಕೂಟ್ಸ್ಕ್:** ಪೂರ್ವ ಸೈಬೀರಿಯದ ಪುರಾತನ ಹಾಗೂ ಅತಿ ದೊಡ್ಡ ಪಟ್ಟಣಗಳಲ್ಲಿ ಒಂದು . ಮುಖ್ಯ ವಿದ್ಯಾಕೇಂದ್ರವೂ ಆಗಿದೆ, ಜನಸಂಖ್ಯೆ 5.89.000. ಬೈಕಲ್ ಸರೋವರದ ವಾಯವ್ಯಕ್ಕೆ 48 ಕಿಮೀ ದೂರದಲ್ಲಿ ಅಂಗಾರ ನದಿ ದಂಡೆಯಲ್ಲಿದೆ. ಟ್ರಾನ್ಸ್–ಸೈಬೀರಿಯ ರೈಲುಮಾರ್ಗದ ಒಂದು ಪ್ರಮುಖ ಕೇಂದ್ರ. ವಾರ್ಷಿಕ ಮಳೆ 38 ಸೆಂ.ಮೀ. ಜನವರಿಯಲ್ಲಿ ಸರಾಸರಿ ಉಷ್ಣಾಂಶ–6° ಫ್ಯಾ. ವಾಯವ್ಯ ಪ್ರದೇಶದಲ್ಲಿ ಅಧಿಕ ಪ್ರಮಾಣದ ಕಲ್ಲಿದ್ದಲಿನ ನಿಕ್ಷೇಪ ಕಂಡುಬಂದಿದೆ. ಸುತ್ತಲೂ ಅಗಾಧವಾದ ಮೊನಚಾದ ಎಲೆಯುಳ್ಳ ಕಾಡುಗಳು ಆವರಿಸಿ ನಗರದ ಪ್ರಕೃತಿ ಸೌಂದರ್ಯವನ್ನು ಹೆಚ್ಚಿಸಿವೆ. ಗಣಿಗಾರಿಕೆ. ಎಂಜಿನಿಯರಿಂಗ್, ಜವಳಿ ಉದ್ಯಮ, ಮರ–ಮುಟ್ಟು ಕೈಗಾರಿಕೆ ಮತ್ತು ಆಹಾರ ಸಂಸ್ಕರಣೆ ಜನರ ಮುಖ್ಯ ವೃತ್ತಿಗಳು ಇಲ್ಲೊಂದು ವಿಶ್ವವಿದ್ಯಾನಿಲಯವೂ ವೈಜ್ಞಾನಿಕ ಅಧ್ಯಯನ ಕೇಂದ್ರಗಳೂ ಇವೆ.

(ಎಂ.ಎಸ್.)

**ಇರ್ನೋಟ:** ಕಣ್ಣಿಗೆ ಕಾಣುವ ಒಂದೊಂದು ವಸ್ತುವೂ ಎರಡಾಗಿ ಕಾಣುವುದು (ಡಿಪ್ಲೋಪಿಯ). ಎರಡು ಕಣ್ಣುಗಳೂ ಒಂದೇ ಹೊತ್ತಿನಲ್ಲಿ ಒಂದು ವಸ್ತುವಿನ ಮೇಲೆ ಕೂಡದಿರುವುದೇ ಕಾರಣ. ಚೆನ್ನಾಗಿರುವ ಕಣ್ಣಿಗೆ ದಿಟಬಿಂಬ ಕಂಡರೆ ಕೆಟ್ಟಿರುವ ಕಣ್ಣು ಹುಸಿ ಬಿಂಬವನ್ನು ತೋರುತ್ತದೆ. ಕಣ್ಣುಗುಡ್ಡೆಯನ್ನು ಬೆರಳ ತುದಿಯಿಂದ ತುಸು ಒತ್ತಿ ಹಿಡಿದರೆ ಯಾರಿಗಾದರೂ ಇರ್ನೋಟ ಕಾಣುತ್ತದೆ. ಮೆಳ್ಳೆಗಣ್ಣಿನಲ್ಲಿ (ಸ್ಕ್ವಿಂಟ್) ಇದು ಬಲು ಸಾಮಾನ್ಯ ತೊಡಕು. ಇರ್ನೋಟ ಒಂಟಿ ಕಣ್ಣಿನದೋ ಇಗ್ಗಣ್ಣಿನದೋ ಆಗಿರಬಹುದು. ಒಂಟಿಕಣ್ಣಿನ ಇರ್ನೋಟದ ಕಾರಣ ಕಣ್ಣಲ್ಲಿ ಓಸರಿಸುವ ನಡುವರ್ತಿಗಳ (ಡಿಫ್ರ್ಯಾಕ್ಟಿವ್ ಮೀಡಿಯಂ) ವ್ಯತ್ಯಾಸಗಳು, ಕಣ್ಣುನೋಟದ ಕುಂದುಗಳು, ಅಸಮನಿಟ್ಟು (ಅಸ್ಟಿಗ್ಮಾಟಿಸಂ), ಎಡೆಬಿಟ್ಟ ಇಲ್ಲವೇ ಕೆಳಬಿದ್ದ ಕಣ್ಣಮಸೂರ (ಲೆನ್ಸ್), ಆಗತಾನೆ ತಲೆದೋರಿರುವ ಮೋತಿಬಿಂದು (ಕ್ಯಾಟರಾಕ್ಟ್), ಕಣ್ಣಿನ ಕೋಡುಪೊರೆಯ (ಕಾರ್ನಿಯಲ್) ಹೂ–ಆಗಿರಬಹುದು. ಒಂಟಿಕಣ್ಣಿನ ಇನ್ನಷ್ಟು ಕಾರಣಗಳು: 1. ಮೆಳ್ಳೆಗಣ್ಣಿನಲ್ಲಿ ಇದ್ದಂತೆ, ಕಣ್ಣುಗುಡ್ಡೆಯನ್ನು ಆಡಿಸುವ ಕಣ್ಣ ಹೊರಗಣ ಸ್ನಾಯುಗಳಲ್ಲಿ ಒಂದೋ ಎರಡೋ ನಿರ್ಬಲವಾದರೆ, ಇಲ್ಲವೆ ಬಹಳ ಎಳೆದರೆ, ಎರಡು ಕಣ್ಣುಗಳೂ ಒಂದೇ ವಸ್ತುವನ್ನು ನೋಡಿದಂತಾಗುವುದು. ಆಗ ಪಕ್ಕಕ್ಕೆಳೆವ, ಹುಸಿಬಿಂಬ ತೋರುವ, ಒಂದು ಕಣ್ಣನ್ನು ಮುಚ್ಚಿದರೆ ಇರ್ನೋಟ ಕಳೆವುದು. ಉದ್ದನಾದ ಸ್ನಾಯುವನ್ನು ಶಸ್ತ್ರಕ್ರಿಯೆಯಿಂದ ಸಾಕಷ್ಟು ಮೊಟಕು ಮಾಡಿ, ಮೋಟಾದುದನ್ನು ಕಿತ್ತು ಇನ್ನೂ ಹಿಂದಕ್ಕೆ ಹೊಲಿದು ಮೆಳ್ಳೆಗಣ್ಣನ್ನು ಸರಿಪಡಿಸಬಹುದು; 2. ಒಂದು ಕಣ್ಣೊಳಗಿನ ಬಿಂಬದ ಜಾಗವನ್ನು ಕನ್ನಡಕದಿಂದ ಬದಲಿಸಿದರೂ ಎರಡಾಗಿ ಕಾಣುವುದು; ಮೋತಿಬಿಂದುವಿನ ಚಿಕಿತ್ಸೆಯಾಗಿ ಒಂಟಿ ಕಣ್ಣಿನ ಮಸೂರವನ್ನು ತೆಗೆದಾಗಲೂ ಎರಡಾಗಿ ತೋರುವುದು; 3. ಕಣ್ಣುಳಿಯಲ್ಲಿ (ಆರ್ಬಿಟ್) ಗಂತಿಯೋ ಕುರುವೋ ಎದ್ದರೆ ಕಣ್ಣುಗುಡ್ಡೆ ಒತ್ತಿದಂತಾಗುವುದೂ ಒಂದು ಕಾರಣ; ಘನದರ್ಶನದಲ್ಲಿ (ಸ್ಟೀರಿಯೊಸ್ಕೋಪಿ) ವಸ್ತುಗಳ ಗಾತ್ರ, ಆಕಾರಗಳು ಚೆನ್ನಾಗಿ ಕಾಣಲು ಇರ್ನೋಟವೇ ಕಾರಣ. ಎರಡೂ ಕಣ್ಣುಗಳ ನೇರ ದಿಟ್ಟಿಗಳೂ ಒಂದೆಡೆ ಸಂಗಮಿಸದಿದ್ದರೆ (ಫೋಕಸ್) ಎರಡಾಗಿ ತೋರುವುದು. ಕಣ್ಣುಗುಡ್ಡೆಗಳ ರೋಗಗಳು, ತಲೆಯ ನರಗಳ ಅರನಾರಿಯಿಂದ (ಪೆರಾಲಿಸಿಸ್) ಸ್ನಾಯು ಆಡದಂತಾಗುವುದು, ಹಿಮ್ಮಿದುಳಿನ (ಸೆರಿಬೆಲ್ಲಂ), ಮುಖ್ಯ ಮಿದುಳಿನ (ಸೆರಿಬ್ರಂ), ಮಿದುಳು ಪೊರೆಗಳ (ಮೆನಿಂಜಿಸ್) ರೋಗಗಳಲ್ಲಿ ಇದು ಸಾಮಾನ್ಯ. ಕಾಣಿಸುವ ಎರಡರಲ್ಲಿ, ದೂರದಲ್ಲಿರುವಂತೆ ತೋರುವುದೇ ದಿಟವಾದುದು, ಇನ್ನೊಂದು ಹುಸಿ. ವಸ್ತು ಎರಡಾಗಿ ಕಾಣುವಾಗ, ದಿಟ, ಹುಸಿ ಬಿಂಬಗಳು ಆಯಾ ಕಣ್ಣಿನ ಪಕ್ಕಗಳಲ್ಲಿದ್ದು ಅಡ್ಡಡ್ಡನಾಗಿರಬಹುದು (ಕ್ರಾಸ್ಡ್); ಮೇಲೋ ಕೆಳಗೋ ಇದ್ದು ನೀಟಾಗಿರಬಹುದು (ವರ್ಟಿಕಲ್). **(ನೋಡಿ– ಅಸಮನಿಟ್ಟು; ನೋಟ;ಮಾನವಕಣ್ಣು; ಮೆಳ್ಳೆಗಣ್ಣು,–ಮಾಲಗಣ್ಣು).**

(ಡಿ.ಎಸ್.ಎಸ್.)

**ಇರ್ಲಿಂಗಿ:** ಹೆಣ್ಣು ಗಂಡುಗಳ ಲಿಂಗಗಳಿಗೆ ವಿಶಿಷ್ಟವಾದ ಎರಡು ತೆರನ ಲಕ್ಷಣಗಳನ್ನೂ ಹೊಂದಿರುವ ವ್ಯಕ್ತಿ (ಹರ್ಮಾಫ್ರೊಡೈಟ್). ಹರ್ಮಫ್ರೊಡೈಟ್ ಪದದ ಮೂಲ ಹರ್ಮಾಫ್ರೊಡೈಟಿಸ್. ದೇವದೂತ ಹರ್ಮಿಸನೊಡನೆ ಕಾಮದೇವತೆ ಅಫ್ರೊಡೈಟ್ ತಾನು ಚಿರವಾಗಿ ಸೇರಬೇಕೆಂದು ದೇವತೆಗಳನ್ನು ಬೇಡಿದ್ದರ ಫಲ ಹರ್ಮಾಫ್ರೊಡೈಟಿಸ್ ಎಂದು ಗ್ರೀಕ್ ಪುರಾಣದಲ್ಲಿದೆ. ಹೆಣ್ಣು, ಗಂಡಿನ ಅಂಗಗಳು ಎರಡು ಮೊಗಗಳೊಡನೆ ಚಂದ್ರನ ಅಂಶವಾಗಿ ಹುಟ್ಟಿದ ಒಬ್ಬ ವ್ಯಕ್ತಿಯನ್ನು ಗ್ರೀಕ್ ಮಹಾಧಿದೇವ ಜ್ಯೂಸ್ ಎರಡಾಗಿ ಕತ್ತರಿಸಿ ಮತ್ತೆ ಒಂದುಗೂಡಿಸಲು ಮಾಡಿದ ಯತ್ನಗಳು ಕೈಗೂಡಲಿಲ್ಲವೆಂದು ಪ್ಲೇಟೊ ಹೇಳಿದ್ದಾನೆ. ಹೆಣ್ಣು ಗಂಡುಗಳು ಎದುರುಬದುರು ರೂಪಗಳು, ಎರಡು ಲಿಂಗಗಳೂ ಒಂದೇ ಮೈಯಲ್ಲಿದ್ದರೆ, ಗಂಡಿನ ರಸಗಳಿಂದ ಹೆಣ್ಣಿನ ಲಿಂಗವು ನಶಿಸುವುವು. ಹಾಗೆಯೆ ಹೆಣ್ಣಿನ ಅಂಡಾಶಯ ರಸಗಳಿಂದ ಗಂಡಿನ ಅಂಗಗಳ ಬೆಳವಣಿಗೆ ಕುಗ್ಗುವುದು. ಈ ಕಥೆಯಲ್ಲಿ, ಹೀಗೆ ಹೆಣ್ಣು ಗಂಡುಗಳು ಕೂಡಿ ಒಟ್ಟಿಗಿರುವುದು ಕಷ್ಟಸಾಧ್ಯವೆಂಬ ಅರ್ಥವಿದೆ. ಹಿಂದೂ ಪುರಾಣಗಳಲ್ಲೂ ಅರ್ಧನಾರೀಶ್ವರ, ಶಿಖಂಡಿಗಳ ವಿಚಾರಗಳಿವೆ. ಗಂಡಸಾದ ಮಾಂಧಾತ ಗರ್ಭವನ್ನು ಧರಿಸಿ ಮಗುವನ್ನು ಹೆತ್ತನಂತೆ. ಗ್ರೀಕರ, ರೋಮನ್ನರ ಕಲೆಗಳಲ್ಲಿ, ಗಂಡಿನ ಜನನಾಂಗಗಳಿರುವ ಹೆಣ್ಣಿನ ರೂಪಗಳು ಚಿತ್ರಿತವಾಗಿವೆ. ಇದು ಕಲಾವಂತರ ಕಲ್ಪನೆ ಮಾತ್ರವಲ್ಲ, ನಿಜವಾಗೂ ಈ ತೆರನ ಮಂದಿ ಒಮ್ಮೊಮ್ಮೆ ಕಾಣಬರುವರು.

ಸಾಮಾನ್ಯವಾಗಿ, ನಿಸರ್ಗದಲ್ಲಿ ಒಂದು ಗಂಡು ಜೀವಕಣದೊಂದಿಗೆ (ರೇತ್ರಾಣು), ಒಂದು ಹೆಣ್ಣು ಜೀವಕಣ (ಅಂಡಾಣು) ಒಂದುಗೂಡುವುದರಿಂದ ಒಬ್ಬ ವ್ಯಕ್ತಿ ಆಗುವನು. ಪೂರ್ತಿ ಬೆಳೆದ ಗಂಡಲ್ಲಾಗಲಿ, ಹೆಣ್ಣಲ್ಲಾಗಲಿ, ಇನ್ನೊಂದು ಲಿಂಗದ ಜನನಾಂಗಗಳ ಅಂಕುರಾಂಗಗಳು (ರೂಡಿಮೆಂಟ್ಸ್) ಇದ್ದೇ ಇರುತ್ತವೆ. ಎಳೆಯ ಪಿಂಡದಲ್ಲಿ ಗಂಡು ಹೆಣ್ಣುಗಳ ವ್ಯತ್ಯಾಸವನ್ನು ಕಂಡುಕೊಳ್ಳುವುದು ಬಲು ಕಷ್ಟ. ತುಸು ಕಾಲದಲ್ಲೇ ಗಂಡಿನ ಇಲ್ಲವೇ ಹೆಣ್ಣಿನ ಲಕ್ಷಣಗಳು ತೋರುತ್ತ ಬರುವವು. ಕೊನೆಗೆ ಜನನಾಂಗಗಳು ಅನುಮಾನ ಇರದಂತೆ ಗಂಡು ಇಲ್ಲವೇ ಹೆಣ್ಣಿನವಾಗುತ್ತವೆ.

ಜನನಾಂಗದ ಲಿಂಗನಿರ್ಧಾರದೊಂದಿಗೇ ಇತರ ಅಂಗಾಂಗಗಳೂ ಅದೇ ಲಿಂಗದವಕ್ಕೆ ತಕ್ಕ ಹಾಗೆ ಬೆಳೆಯುತ್ತವೆ. ಹೀಗೆ ತರಡು (ಟೆಸ್ಟಿಸ್, ವೃಷಣ) ಬೆಳೆದ ಕೂಸಿನಲ್ಲಿ ಶಿಶ್ನ (ಪೀನಿಸ್), ಮುನ್ನಿಲುಗ (ಪ್ರಾಸ್ಟೇಟ್) ಇತ್ಯಾದಿಗಳೂ ಅಂಡಾಶಯ (ಓವರಿ) ಬೆಳೆದ ಕೂಸಿನಲ್ಲಿ ಯೋನಿ, ಗರ್ಭಕೋಶ, ಗರ್ಭನಾಳ ಮುಂತಾದವೂ ಬೆಳೆವುವು. ಆದರೆ ಶಿಶ್ನದ ಅಂಕುರಾಂಗ ಹೆಂಗಸಿನಲ್ಲಿ ಭಗಾಂಕುರ (ಕ್ಲೈಟೊರಿಸ್) ಗರ್ಭಕೋಶದ ಅಂಕುರಾಂಗ ಗಂಡಸಿನಲ್ಲಿ ಗಂಡುಗರ್ಭ ಕೋಶವಾಗೂ (ಯೂಟೆರಸ್ ಮ್ಯಾಸ್ಕುಲೈನಸ್) ಉಳಿದಿರುತ್ತವೆ. ಹರೆಯಕ್ಕೆ ಬಂದವರಲ್ಲಿ ಈ ಅಂಗರಚನೆಗಳಲ್ಲಿನ ಬದಲಾವಣೆಯೊಂದಿಗೆ ಎಂದಿನಂತೆ ಅದೇ ಲಿಂಗದ ಗೊತ್ತಾದ ವರ್ತನೆಗಳೂ ಹೊರಗಾಣುತ್ತವೆ. ಅಂದರೆ ಸಾಮಾನ್ಯವಾಗಿ ಗಂಡಿನ ಒಲವು ಹೆಣ್ಣಿನ ಕಡೆಗೂ ಹೆಣ್ಣಿನ ಒಲವು ಗಂಡಿನ ಕಡೆಗೂ ಇರುತ್ತವೆ. ಕೆಲವೇಳೆ ಹೀಗೆ ಸಹಜವಾಗಿ ಬೆಳೆಯುವುದಕ್ಕೆ ಅಡ್ಡಿಯಾಗಿ ಗಂಡು ಹೆಣ್ಣಿನ ಅಂಗಗಳು ಎರಡೂ ಒಂದೇ ವ್ಯಕ್ತಿಯಲ್ಲಿ ಇರಬಹುದು; ಒಂದು ವ್ಯಕ್ತಿಯಲ್ಲಿ ತರಡು, ಅಂಡಾಶಯ ಈ ಎರಡು

ಜನನಾಂಗ ಗ್ರಂಥಿಗಳೂ ಇರಬಹುದು; ಇಲ್ಲವೇ ಅಂಡಾಶಯತರಡು (ಓವೊಟೆಸ್ಟಿಸ್) ಗ್ರಂಥಿ ಮಾತ್ರ ಇರಬಹುದು. ಇವನಲ್ಲಿ ಇತರ ಜನನಾಂಗಗಳು ಬೇರೆಬೇರೆ ಆಗಿರಬಹುದು. ಒಳಗಿನ ಜನನಾಂಗಕ್ಕೂ ಹೊರಗಾಣುವವಕ್ಕೂ ಹೊಂದಾಣಿಕೆ ಕಾಣದಾಗುತ್ತದೆ; ಹೊರಗೆ ಶಿಶ್ನ ಇದ್ದರೂ ಒಳಗೆ ಗರ್ಭಕೋಶ ಇರಬಹುದು; ಹೊರಗಡೆ ಯೋನಿ ಕಾಣುತ್ತಿದ್ದರೂ ಒಳಗೆ ಗಂಡಿನ ಜನನಗ್ರಂಥಿ ಇರಬಹುದು. ಇವರು ತೋರ್ಕೆಯ ಇರ್ಲಿಂಗಿಗಳು. ಅಂದರೆ, ಇವರು ನಿಜವಾದ ಇರ್ಲಿಂಗಿಗಳಲ್ಲ. ಎರಡು ಲಿಂಗಗಳ ಪ್ರಭಾವಗಳೂ ಒಮ್ಮೆಗೇ ತೋರವು. ಸಂತಾನಬಲವಿಲ್ಲದ ಇವರು ನಪುಂಸಕರು. ಇವರಲ್ಲಿರುವ ಹೆಣ್ಣುಗಂಡಿನ ಜನನಾಂಗಗಳಲ್ಲಿ ಹಲವು ಸರಿಯಾಗಿರವು. ಹೆಣ್ಣಂತಿರುವ ಗಂಡೂ ಗಂಡಂತಿರುವ ಹೆಣ್ಣೂ ಇರಬಹುದು. ಆದರೂ ಇವರು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಹರೆಯಕ್ಕೆ ಬರುವ ತನಕ ನಿಜವಾದ ಲಿಂಗದ ಲಕ್ಷಣಗಳು ಸರಿಯಾಗಿ ಹೊರದೋರವು. ಹರೆಯಕ್ಕೆ ಬರುವ ಹೊತ್ತಿನಲ್ಲಿ ಹೀಗಾದಾಗಲೇ ಇದ್ದಕ್ಕಿದ್ದ ಹಾಗೆ ಹುಡುಗಿ ಹುಡುಗನಾಗಿ ಕಂಡುದು ಪತ್ರಿಕೆಗಳಲ್ಲಿ ಸೋಜಿಗದ ಸುದ್ದಿ ಆಗುವುದು.

ನಿಸರ್ಗದಲ್ಲಿ ಎಷ್ಟೊ ಗಿಡಗಳೂ ವಿಕಾಸದಲ್ಲಿ ಕೆಳ ಮಟ್ಟದಲ್ಲಿರುವ ಕೆಲವು ಹುಳುಗಳು, ಮೃದ್ವಂಗಿಗಳು (ಮೊಲಸ್ಕಗಳು), ಚಿಪ್ಪಂಗಿಗಳು (ಕ್ರಸ್ಟೇಷಿಯನ್ಸ್) ಇತ್ಯಾದಿ ವರ್ಗಗಳ, ಪ್ರಾಣಿಗಳೂ ಹೆಣ್ಣು ಗಂಡುಗಳ ಜನಾಂಗಗಳು ಒಂದೇ ಮೈಯಲ್ಲಿರುವ ಇರ್ಲಿಂಗಿಗಳು. ಇರ್ಲಿಂಗಿ ತನ್ನ ಅಂಡಗಳನ್ನೊ ಇತರವನ್ನೊ ಫಲವಂತಿಸಬಹುದಾದರೂ (ಫರ್ಟಿಲೈಸ್) ಈ ಜೀವಿಗಳಲ್ಲಂತೂ ತಮ್ಮದೇ ಆದ ಅಂಡಾಣುವೂ (ಓವಂ) ರೇತ್ರಾಣುವೂ (ಸ್ಪರ್ಮಟೊಝೊವನ್) ಒಂದುಗೂಡಲಾರವು. ಕೂಡಿದರೂ ಫಲವಿಲ್ಲ. ಸಂತಾನ ಸರಿಯಾಗಿ ಬೆಳೆಯದು. ಮುಸುಕಿನ ಜೋಳದ ಕೆಲವು ತಳಿಗಳಲ್ಲಿ ಎರಡು ಲಿಂಗಗಳೂ ಇರುವುವು. ಕೆಲವಲ್ಲಿ ಒಂದೇ ಇರುತ್ತದೆ. ಎರೆಹುಳು (ಅರ್ತ್‌ವರ್ಮ್), ಬಸವನ ಹುಳುಗಳಲ್ಲಿ ಎರಡು ಲಿಂಗಗಳಲ್ಲೂ ಬೇರೆ ಬೇರೆ ಆಗಿದ್ದರೂ ತನ್ನಲ್ಲಿ ತನ್ನಿಂದಲೇ ಫಲವಂತಿಕೆ ಆಗದೆ ಎರಡು ಪ್ರಾಣಿಗಳು ಜೋಡಿಬಿದ್ದು ರೇತ್ರಾಣು ಕಣಗಳನ್ನು ಒಂದಕ್ಕೊಂದು ಅದಲುಬದಲು ಮಾಡಿಕೊಳ್ಳುತ್ತವೆ. ಬಲುಮಟ್ಟಿಗೆ ಎಲ್ಲ ಬೆನ್ನೆಲುಬು ಪ್ರಾಣಿಗಳಲ್ಲೂ (ಮಾನವನಲ್ಲೂ) ಗಂಡು ಹೆಣ್ಣು ಬೇರೆ ಬೇರೆ.

**ಲಿಂಗ ನಿರ್ಧಾರ:** ಒಂದು ಪ್ರಾಣಿಯ ಒಂದೊಂದು ಜೀವಕಣದಲ್ಲಿರುವ ವರ್ಣತಂತುಗಳು (ಕ್ರೋಮೊಸೋಮ್ಸ್) ಆ ಪ್ರಾಣಿಕುಲಕ್ಕೆ ತಕ್ಕಂತೆ ಗೊತ್ತಾದ ಸಂಖ್ಯೆಯಲ್ಲಿರುವುವು. ಇವುಗಳಲ್ಲಿ X ವರ್ಣತಂತುಗಳೊಡನೆ ಸೇರುವ, ಹೆಣ್ಣಿನ ಜೀನ್‌ಗಳನ್ನು (ಜನಿಕಗಳು) ಹೊತ್ತಿರುವ ವರ್ಣತಂತು X ಕೂಡಿದಾಗಲೋ ಗಂಡಿನ ಜೀನ್‌ಗಳಿರುವ Y ಕೂಡಿದಾಗಲೋ ಲಿಂಗನಿರ್ಧಾರವಾಗುವುದು (ಲಿಂಗದ ವರ್ಣತಂತುಗಳು). ಮಿಕ್ಕ ವರ್ಣತಂತು ಜೊತೆಗಳು ಮೈಗೆ ಸಂಬಂಧಪಟ್ಟ ಅಲಿಂಗ ವರ್ಣತಂತುಗಳು (ಆಟೊಸೋಮ್ಸ್). ಉದಾಹರಣೆಗಾಗಿ, ಮಾನವನಲ್ಲಿ 22 ಜೊತೆ ಅಲಿಂಗ ವರ್ಣತಂತುಗಳಿವೆ. ಹೆಣ್ಣಲ್ಲಿ XX ಮತ್ತು ಗಂಡಲ್ಲಿ XY ಲಿಂಗದ ವರ್ಣತಂತುಗಳಿವೆ. Y ವರ್ಣತಂತು X ಗಿಂತ ಸಣ್ಣದು.

ಅಂಡಾಶಯಗಳೂ ತರಡುಗಳೂ ಸರಿಯಾಗಿ ಬೆಳೆದು ಹರೆಯದ ಹೊತ್ತಿಗೆ ಚೆನ್ನಾಗಿ ಕೆಲಸ ಮಾಡುವುದು ಮುಖ್ಯ. ಜನನಾಂಗ ಗ್ರಂಥಿಗಳ ರಸಗಳಿಂದ ಗಂಡಿನ, ಹೆಣ್ಣಿನ ಅಂಗಲಕ್ಷಣಗಳು (ಗಡ್ಡ ಮೀಸೆಗಳು, ಸ್ತನಗಳು,) ಹರೆಯದಲ್ಲಿ ಕಾಣಿಸಿಕೊಂಡು ಜನನಾಂಗ ನಾಳಗಳು (ಶಿಶ್ನ, ಗರ್ಭಕೋಶ, ಇತ್ಯಾದಿ) ಸರಿಯಾಗಿ ಪೂರ್ತಿಯಾಗಿ ಬೆಳೆಯುತ್ತವೆ. ಹರೆಯಕ್ಕೆ ಬರಲು ಎಲ್ಲ ಒಳಸುರಿಕ ಗ್ರಂಥಿಗಳೂ ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡಬೇಕು.

ವ್ಯಕ್ತಿತ್ವ, ನಡೆ, ನುಡಿ, ಉಡುಪು, ತನ್ನ ರೂಪದ ವ್ಯಾಮೋಹ, ಮನಸ್ಸು, ಭಾವನೆಗಳಲ್ಲಿ ಹರೆಯದ ಹೊತ್ತಿಗೆ ಬದಲಾವಣೆಗಳಾಗುತ್ತವೆ. ಗೂಳಿಗೂ ಎತ್ತಿಗೂ ಇರುವ ವ್ಯತ್ಯಾಸವನ್ನು ಇಲ್ಲಿ ನೆನೆಯಬಹುದು. ಹೆಣ್ಣಂತಿರುವ ಗಂಡಿಗೆ ಗಂಡಿನಲ್ಲೇ ಒಲವು, ಗಂಡಂತಿರುವ ಹೆಣ್ಣಿಗೆ ಹೆಣ್ಣಿನಲ್ಲೇ ಒಲವು. ಇದೇ ಸ್ವಲಿಂಗತನ (ಹೋಮೊಸೆಕ್ಷುಯಾಲಿಟಿ).

ಲಿಂಗನಿರ್ಧಾರವಾಗಲು, ಆಯಾ ಜಾತಿಯ ಜೀವಿಗೆ ತಕ್ಕಂತೆ ಜೀವಕಣಗಳಲ್ಲಿ ವರ್ಣತಂತುಗಳು ಸರಿಯಾದ ಸಂಖ್ಯಾ ಪ್ರಮಾಣದಲ್ಲಿ ಇರುವುದು ಬಲು ಮುಖ್ಯ. ಅದರಲ್ಲೂ ಪಿಂಡದ ಬೆಳವಣಿಗೆಯ ಮೊದಲಲ್ಲಿ ಇನ್ನೂ ಮುಖ್ಯ. ವರ್ಣತಂತುಗಳು ಮೈ ಅಂಗಗಳ ಬೆಳವಣಿಗೆಗೆ ದಾರಿ ತೋರುತ್ತವೆ. ಇವುಗಳ ಸಂಖ್ಯಾಪ್ರಮಾಣಗಳು ಸರಿಯಾಗಿಲ್ಲದಲ್ಲಿ (ಹಲವೇಳೆ ಆಗುವಂತೆ,) ಪಿಂಡಗಳು ಸರಿಯಾಗಿ ಬೆಳೆಯದೆ ಬರಡಾಗಿ ಇಬ್ಬಂದಿ ಲಿಂಗಲಕ್ಷಣಗಳನ್ನು ತೋರುತ್ತವೆ. ವರ್ಣತಂತುಗಳ ಮೂಲಕ ಲಿಂಗವನ್ನು ನಿರ್ಧರಿಸುವ ಜೀವಕಣೀಯ ಹೊಸ ವಿಧಾನಗಳು ಬಂದ ಮೇಲೆ ಅಂಗಗಳ ವಿಚಿತ್ರಗಳ ವಿಚಾರ ಹೆಚ್ಚಾಗಿ ಗೊತ್ತಾಗಿದೆ. ಹೆಣ್ಣಿನ ಜೀವಕಣದ ಬೀಜದ (ನ್ಯೂಕ್ಲಿಯಸ್) ಅಂಚಿನಲ್ಲಿ ಲಿಂಗದ ಕ್ರೊಮ್ಯಾಟಿನ್ ಇರುವುದೇ ವಿಶೇಷ ಲಕ್ಷಣ. ಗಿಡಗಳ ಕುಡಿಗಳಿಗೂ ಮೊಗ್ಗುಗಳಿಗೂ ಕಾಲ್ಚಿಸೀನ್ ಎಂಬ ರಾಸಾಯನಿಕವನ್ನು ತುಸು ಸವರಿದರೆ ಆಮೇಲೆ ಬೆಳೆದು ಬರುವ ಬೀಜಗಳ ಜೀವಕಣಗಳಲ್ಲಿ ವರ್ಣತಂತುಗಳ ಸಂಖ್ಯೆ ಎರಡು–ಮೂರರಷ್ಟು ಗುಣಿತವಾಗಿ, ಕೊನೆಗೆ ಆ ಬೀಜಗಳಿಂದ ಹುಟ್ಟುವ ಗಿಡಗಳಲ್ಲಿ ಮೊಳೆವ ಬೀಜಗಳೇ ಬಿಡುವುದಿಲ್ಲ. ಪ್ರಾಣಿಗಳಲ್ಲೂ ಹೀಗೆ ಏನೋ ಕಾರಣದಿಂದ ವರ್ಣತಂತುಗಳ ಸಂಖ್ಯೆಯಲ್ಲಿ ಬದಲಾವಣೆ ಆಗಿ ಇರ್ಲಿಂಗಿ ಲಕ್ಷಣಗಳಿರುವ ನಪುಂಸಕ ಪ್ರಾಣಿಗಳು ಹುಟ್ಟುತ್ತವೆ.

ವರ್ಣತಂತುಗಳು ದುಪ್ಪಟ್ಟು ಇಲ್ಲವೆ ಮುಪ್ಪಟ್ಟಾದಾಗ ಕೆಲವೇಳೆ ಹೆಣ್ಣುಗಂಡುರೂಪತನ (ಗೈನ್ಯಾಂಡ್ರೊಮಾರ್ಫಿಸಂ), ಅಂದರೆ ಮೈಯ ಒಂದು ಪಕ್ಕ ಹೆಣ್ಣಾಗೂ ಇನ್ನೊಂದು ಗಂಡಾಗೂ ಇರುವ ಪ್ರಾಣಿಗಳು ಹುಟ್ಟುತ್ತವೆ. ಹುಳುಹುಪ್ಪಟೆಗಳಲ್ಲಿ ಈ ವಿಚಿತ್ರ ಬಲು ಸಾಮಾನ್ಯ. ಈ ಜೀವಿಗಳಲ್ಲಿ ಹೆಣ್ಣಿನ ಜನನಾಂಗಗಳಿರುವ ಪ್ರಾಣಿಯಲ್ಲಿ ಸಂತಾನಬಲ ಇರುವುದು. ಆದರೆ, ಗಂಡಿನವು ಪ್ರಾಣಿಯಲ್ಲಿರದು. ಸಾಧಾರಣವಾಗಿ, ಕೀಟಕಗಳಲ್ಲಿ ವರ್ಣತಂತುಗಳು ಆಯಾ ಜಾತಿಗೆ ಗೊತ್ತಾದವಕ್ಕಿಂತ ಮುಪ್ಪಟ್ಟಿದ್ದರೆ ಮೇಟಿ ಹೆಣ್ಣು (ಸೂಪರ್ ಫೀಮೇಲ್), ಮೇಟಿ ಗಂಡು (ಸೂಪರ್ ಮೇಲ್) ನಡುಲಿಂಗ (ಇಂಟರ್ ಸೆಕ್ಸ್) ಪ್ರಾಣಿಗಳಾಗುತ್ತವೆ.

**ಮಾನವ ಇರ್ಲಿಂಗಿಗಳು:** ಇಲ್ಲಿ ಐದು ಮಾದರಿಗಳಿವೆ: ನಿಜ ಇರ್ಲಿಂಗಿಗಳು: ಹುಸಿ ಹೆಣ್ಣುಗಳು ಇಲ್ಲವೇ ಗಂಡುಗಳು; ಗಂಡು ಇಲ್ಲವೇ ಹೆಣ್ಣು ಹುಸಿ ಇರ್ಲಿಂಗಿಗಳು. ನಿಜ (ಟ್ರೂ) ಇರ್ಲಿಂಗಿಗಳಲ್ಲಿ ಹೆಣ್ಣಿನ ಅಂಡಾಶಯವೂ ಗಂಡಿನ ತರಡೂ ಒಂದಾಗಿರುವುವು; ಇಲ್ಲವೇ ಒಂದು ಪಕ್ಕದಲ್ಲಿ ಹೆಣ್ಣಿನ ಜನನಾಂಗವಾದ ಅಂಡಾಶಯ ಇದ್ದು, ಮತ್ತೊಂದೆಡೆ ಗಂಡಿನ ತರಡು ಇರುವುದು; ಎರಡೂ ಒಂದಾಗಿ ಕೂಡಿ ಅಂಡಾಶಯತರಡು ಆಗಿರಬಹುದು. ಇದುವರೆಗೆ ಪ್ರಪಂಚದಲ್ಲಿ ಈ ಬಗೆಯ 200 ಜನರ ವಿಷಯ ಮಾತ್ರ ತಿಳಿದಿದೆ. ಇವರಲ್ಲಿ ಗಂಡಿನ ಶಿಶ್ನ, ಗರ್ಭಕೋಶ, ಯೋನಿ, ಅಂಡಾಶಯ ಎಲ್ಲ ಒಟ್ಟಿಗೇ ಇರುತ್ತವೆ. ಆದರೆ ಯಾವುದೂ ಪೂರ್ತಿ ಸರಿಯಾಗಿರದು. ಇದರಿಂದಲೇ ನಿಜವಾಗೂ ಪೂರ್ತಿ ಇರ್ಲಿಂಗಿ ಆಗಿರುವವರೇ ಇಲ್ಲವೆನ್ನಬಹುದು. ಗಡ್ಡ, ಮೀಸೆ, ಸ್ತನಗಳಿರಬಹುದು; ಇವು ಕೂಡ ಕೆಲವು ಕಾಲ ಇದ್ದು ಆಮೇಲೆ ಇಲ್ಲವಾಗಬಹುದು.

ಹುಸಿ (ಸೂಡೊ) ಗಂಡುಗಳು ಗಂಡಲ್ಲದ ಗಂಡುಗಳು. ಇವರಲ್ಲಿ ವರ್ಣತಂತುಗಳಿದ್ದರೂ ಗಂಡಿನ ಲಕ್ಷಣಗಳೇ ಇರುತ್ತವೆ. ಹೆಣ್ಣಿನ ಅಂಡಾಣುವಿನೊಂದಿಗೆ ಕೂಡದ ರೇತ್ರಾಣುಗಳನ್ನು ತರಡುಗಳು ಹುಟ್ಟಿಸುವುದರಿಂದ ಬರಡಾಗಿರುವುವು. ಗಡ್ಡದಲ್ಲಿ ಕೂದಲು ವಿರಳ. ಕೆಲವೇಳೆ ಸ್ತನಗಳೂ ಬೆಳೆದಿರುತ್ತವೆ. ಹುಸಿ ಹೆಣ್ಣುಗಳು ಹೆಣ್ಣಲ್ಲದ ಹೆಣ್ಣುಗಳು. ಗಂಡಲ್ಲಿರುವಂತೆ ವರ್ಣತಂತುಗಳಿದ್ದರೂ ಜನನಾಂಗಗಳೆಲ್ಲ ಹೆಣ್ಣಿನವೇ. ಅಂಡಾಶಯ ಇಲ್ಲವಾದರೂ ಗರ್ಭಕೋಶ, ಯೋನಿ ಇರುತ್ತವೆ. ಈ ಹೆಣ್ಣು ಕುಳ್ಳು, ಸ್ತನಗಳಿಲ್ಲ, ಮುಟ್ಟೂ ಇಲ್ಲ. ಗರ್ಭದಲ್ಲಿ ಇರುವಾಗಲೇ ಅಡ್ರಿನಲ್ ಗ್ರಂಥಿ ಹೆಚ್ಚಿನ ಚಟುವಟಿಕೆ ತೋರುವುದರಿಂದ ಗಂಡಿನ ಲಕ್ಷಣಗಳು ಈ ಹೆಣ್ಣಲ್ಲಿ ಕಾಣಬರುತ್ತವೆ.

ದ್ವಿಲಿಂಗಿ ಅಂಗಾಂಗಗಳು ಅರೆಬರೆ ಬೆಳೆದಿರುವಾಗ ಕೂಸು ಗಂಡೋ ಹೆಣ್ಣೋ ಎಂದು ಅನುಮಾನ ಇರುವುದು. ಹೊರಗಿನ ಜನನಾಂಗಗಳಲ್ಲಿ ಹೆಣ್ಣು ಗಂಡು ಎರಡರ ಲಕ್ಷಣಗಳು ಇದ್ದರೂ ಒಳಗಡೆ ಅಂಡಾಶಯ ಇಲ್ಲವೇ ತರಡು ಒಂದು ಮಾತ್ರ ಇರಬಹುದು. ಇದಕ್ಕೆ ಮುಖ್ಯ ಕಾರಣ ಒಳಸುರಿಕ ರಸಗಳೇ. ಕೆಲವೇಳೆ ಕೆಲವರ ಮೈಯ ಕೆಲವು ಅಂಗಗಳೋ ಎಷ್ಟೋ ವೇಳೆ ಇಡೀ ಒಂದು ಪಕ್ಕವೋ ಗಂಡಿನವಂತಿದ್ದು ಉಳಿದ ಭಾಗಗಳು ಹೆಣ್ಣಿನವಂತಿರಬಹುದು. ಈ ತೆರನವರು ಹೆಣ್ಣುಂಡು ರೂಪಿಗಳು. ಎಷ್ಟೋ ವೇಳೆ ಬಟ್ಟೆ ಬರೆ, ವಿದ್ಯಾಭ್ಯಾಸ, ನಡೆವಳಿಕೆಗಳ ವಿಚಾರಗಳಲ್ಲಿ ಹುಸಿ ಇರ್ಲಿಂಗಿ ಮಗುವನ್ನು ಗಂಡೋ ಹೆಣ್ಣೋ ಜೀವಕಣಗಳಲ್ಲಿ ಮಾತ್ರ ಇರುವ ಕ್ರೊಮ್ಯಾಟಿನ್ ಚುಕ್ಕೆಯಿಂದ ನಿಜವಾದ ಹುಟ್ಟು ಲಿಂಗವನ್ನು ಗುರುತಿಸಬಹುದು. ಬಹುರೂಪಕಬೀಜ (ಪಾಲಿಮಾರ್ಫೊನ್ಯೂಕ್ಲಿಯಾರ್) ಬಿಳಿ ರಕ್ತಕಣಗಳು. ಕೆನ್ನೆಯ ಒಳವರಿಯ ಮೇಲ್ಪೊರೆಯ ಜೀವಕಣಗಳಲ್ಲೂ ಮುಖ್ಯವಾಗಿ ಚರ್ಮದ ಮೇಲ್ಪೊರೆಯ ಮುಳ್ಳಿರುವ ಜೀವಕಣಗಳಲ್ಲೂ ಈ ಚುಕ್ಕೆಗಳನ್ನು ಸೂಕ್ಷ್ಮದರ್ಶಕದಲ್ಲಿ ಗುರುತಿಸಬಹುದು. ಕೂಸಿನ ಲಿಂಗದ ನಿರ್ಧಾರಕ ವ್ಯತ್ಯಾಸಗಳು ಗರ್ಭದಲ್ಲಿ ಇದ್ದಾಗಲೇ ಕಾಣಬಹುದು. ಇಲ್ಲವೇ ಮಗು ಹುಟ್ಟಿದ ಮೇಲೆ ಬೆಳೆವಾಗ ಕಂಡುಬರಬಹುದು.

ಗಂಡು ಹುಸಿ ಇರ್ಲಿಂಗಿಗಳಲ್ಲಿ XY ವರ್ಣತಂತುಗಳಿರುತ್ತವೆ. ತರಡುಗಳಿದ್ದರೂ ಗಡ್ಡ, ಮೀಸೆ, ಮತ್ತಿತರ ಗಂಡಿನ ಲಕ್ಷಣಗಳು ಹೊರಗಾಣವು. ಈ ಸ್ಥಿತಿಯ ತೀರ ಕೆಳಮಟ್ಟದವರಲ್ಲಿ ಹೆಣ್ಣಿನ ಅಂಡಾಶಯಗಳಿದ್ದು ಹೆಣ್ಣಂತಿರುವರು. ಮೇಲುಮಟ್ಟದವರು ಗಂಡಿನಂತೆ ಕಂಡರೂ ಶಿಶ್ನದಲ್ಲಿ ಮೂತ್ರನಾಳ ಇರದು. ಅಲ್ಲದೇ ತರಡುಗಳು ಬೀಜಚೀಲದಲ್ಲಿ (ಸ್ಕ್ರೋಟಂ) ಇರದೆ ಹೊಟ್ಟೆಯಲ್ಲೊ ಹೊಟ್ಟೆಗೋಡೆಯಲ್ಲೊ ಒಳಗೊ ಉಳಿದಿರಬಹುದು. ಹೆಣ್ಣು ಹುಸಿ ಇರ್ಲಿಂಗಿಗಳಲ್ಲಿ XX ಬಣ್ಣದಂಡಗಳೂ ಹೆಣ್ಣಿನ ಅಂಡಾಶಯಗಳೂ ಇರುತ್ತವೆ. ಮೊದಲು ಹೆಣ್ಣಂತೆ ಕಂಡರೂ ಗರ್ಭದಲ್ಲೊ ಹೊರಗೊ ಕೂಸು ಬೆಳೆವಾಗ ಅಂಡಾಶಯದ ಇಲ್ಲವೇ ಅಡ್ರಿನಲ್ ಗ್ರಂಥಿಗಳ ಬಲು ಹದಗೆಟ್ಟ ಚಟುವಟಿಕೆಯಿಂದ ಗಂಡಿನ ಲಕ್ಷಣಗಳು ಕಾಣಿಸಿಕೊಳ್ಳುವುವು. ಹೆಂಬುಲ್ಲ ದೊಡ್ಡದಾಗಿ ಕಾಣುವುದರಿಂದ ಕೂಸನ್ನು ಗಂಡೆಂದು ಭಾವಿಸುವರು. ಬೆಳೆದ ಹೆಣ್ಣಿನಲ್ಲಿ ಈ ಬದಲಾವಣೆ ಆದರೆ, ಗಡ್ಡ, ಮೀಸೆಗಳು ಬೆಳೆದು ದನಿ ಒಡೆಯುತ್ತದೆ. ಹೀಗೆ ವರ್ಣತಂತುಗಳ ಜನಿಕದ (ಜೆನೆಟಿಕ್) ಲಿಂಗ, ಹೊರಗೆ ತೋರಿ ಕೂಸನ್ನು ಪಾಲಿಸಿದ ಲಿಂಗ (ನರ್ಸರಿ ಸೆಕ್ಸ್), ಕಾನೂನಿನ ಲಿಂಗ (ಲೀಗಲ್ ಸೆಕ್ಸ್). ಇತ್ಯಾದಿ ವಿವರಗಳು ಮದುವೆ ಒಡೆವುದರ ಮೊಕದ್ದಮೆಗಳಲ್ಲಿ ನ್ಯಾಯಾಲಯದ ಚರ್ಚೆಗೆ ಬರುವುವು.

(ಎಂ.ಡಿ.;ಕೆ.ಕೆ.ಎಸ್.ಡಬ್ಲ್ಯು.)

**ಇರ್ವಿನ್ ನಾಲೆ ಚಳವಳಿ:** 1930ರ ದಶಕದಲ್ಲಿ ಮೈಸೂರು ಸರ್ಕಾರದ ವಿರುದ್ಧ ನಡೆದ ರೈತರ ಧರಣಿ. ಮೈಸೂರು ಪ್ರಾಂತದ ಮಂಡ್ಯ ಜಿಲ್ಲೆಯಲ್ಲಿ ನೀರಿನ ಸಮಸ್ಯೆಯನ್ನು ಪರಿಹರಿಸಬೇಕೆಂದು ನಡೆದ ಗಮನಾರ್ಹ ಘಟನೆ. ವಿದ್ಯುತ್ ಉತ್ಪಾದನೆ ಸಲುವಾಗಿ 1902ರಲ್ಲಿ

ಮೊದಲ ಬಾರಿಗೆ ಶಿವಸಮುದ್ರದ ನೀರನ್ನು ಬಳಸಲು ಯತ್ನಿಸಲಾಯಿತ್ತಾದರೂ ಬೇಸಗೆಯಲ್ಲಿ ನೀರು ಹೆಚ್ಚು ಸಿಗದ ಕಾರಣ ವಿದ್ಯುತ್ ದೊರೆಯುವುದು ಕಷ್ಟವಾಗಿತ್ತು. ಹೀಗಾಗಿ ಕಾವೇರಿ ನದಿಗೆ ಅಣೆಕಟ್ಟು ಕಟ್ಟುವ ಆಲೋಚನೆ ಮೂಡಿಬಂತು. ಅಂದಿನ ಜಿಲ್ಲಾಧಿಕಾರಿ ಕ್ಯಾಪ್ಟನ್ ಡೆವ್ಸ್ ಕನ್ನಂಬಾಡಿ ಬಳಿ ಅಣೆಕಟ್ಟು ನಿರ್ಮಿಸುವ ಸಂಬಂಧ ನೀಲಿ ನಕಾಶೆ ಸಿದ್ಧಪಡಿಸಿದರೂ ಅದನ್ನು ಕುರಿತ ಪ್ರಸ್ತಾಪಗಳು ನಡೆವ ಮುನ್ನವೇ ಅವನು ಅಪಘಾತವೊಂದರಲ್ಲಿ ಮೃತಪಟ್ಟ.

ಅಣೆಕಟ್ಟಿನ ಪ್ರಯತ್ನ ಅಲ್ಲಿಗೇ ನಿಲ್ಲದೆ ಮುಖ್ಯ ಎಂಜಿನಿಯರ್ ಆಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರ (1912–18) ಮೂಲಕ ಮುಂದುವರಿದು (1909), ಈ ಯೋಜನೆಯ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿದರು. ವಿದ್ಯುತ್ ಪಡೆಯುವ ಸಲುವಾಗಿ ಮೊದಲ ಹಂತದಲ್ಲಿ ನದಿಯಿಂದ ಸು.24 ಮೀ ಎತ್ತರಕ್ಕೆ ಅಣೆಕಟ್ಟು ನಿರ್ಮಿಸಲಾಯಿತು. ಅನಂತರ ಕೃಷಿ ಮತ್ತು ವಿದ್ಯುತ್ ಎರಡೂ ಉದ್ದೇಶಗಳಿಗಾಗಿ ಅಣೆಕಟ್ಟನ್ನು ಸು.36 ಮೀಗೆ ಎತ್ತರಿಸಲಾಯಿತು. ಶಿವಸಮುದ್ರ ವಿದ್ಯುತ್ ಕೇಂದ್ರಕ್ಕೆ ನಿರಂತರವಾಗಿ ನೀರನ್ನು ಪಡೆಯುವುದೇ ಜಲಾಶಯ ನಿರ್ಮಾಣದ ಪ್ರಮುಖ ಉದ್ದೇಶವಾಗಿತ್ತಾದರೂ ಜೊತೆಗೆ ಕೈಗಾರಿಕೆ ಮತ್ತು ಕೃಷಿ ಉದ್ದೇಶಗಳಿಗೆ ಹೆಚ್ಚುವರಿ ನೀರನ್ನು ಪಡೆಯುವ ಆಕಾಂಕ್ಷೆಯೂ ಇತ್ತು.

ಮೊದಲ ಹಂತದ ಕೆಲಸ 1911ರಲ್ಲಿ ಪ್ರಾರಂಭಗೊಂಡು 1915ರಲ್ಲಿ ಪೂರ್ಣಗೊಂಡಿತು. ಮದರಾಸು ಮತ್ತು ಮೈಸೂರು ಸರ್ಕಾರದ ನಡುವಿನ ವಿವಾದದ ಕಾರಣದಿಂದ ಎರಡನೆಯ ಹಂತದ ಕೆಲಸ ನನೆಗುದಿಗೆ ಬಿತ್ತು. 1924ರ ಹೊತ್ತಿಗೆ ಎರಡೂ ಸರ್ಕಾರಗಳ ನಡುವೆ ಒಪ್ಪಂದವೊಂದು ಏರ್ಪಟ್ಟಿತು. ದಿವಾನರಾಗಿದ್ದ ಮಿರ್ಜಾ ಎಂ. ಇಸ್ಮಾಯಿಲ್ (1927–41) 2580ಮೀ ಉದ್ದ ಮತ್ತು 39ಮೀ ಎತ್ತರದ ಅಣೆಕಟ್ಟು 1931ರ ಹೊತ್ತಿಗೆ ನಿರ್ಮಾಣ ಗೊಂಡಿತು. 6835ಚ.ಕಿಮೀ ವರೆಗೂ ಜಲಾಶಯ ಹರಡಿ, 85 ಚ.ಕಿಮೀ ವರೆಗೂ ನೀರು ಮುಳುಗಡೆ ಸಾಧ್ಯತೆಯನ್ನು ಸೃಷ್ಟಿಸಿತ್ತು. 210ಕಿಮೀ ವ್ಯಾಪ್ತಿಯಲ್ಲಿ ನೀರಿನ ಸಂಗ್ರಹ ಪ್ರಮಾಣ 44,827 ಕ್ಯೂಸೆಕ್ಸ್.

ಸರ್ಕಾರಕ್ಕೆ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ ನೀಡುವ ಸಲುವಾಗಿ 1921ರಲ್ಲಿ ಮುಖ್ಯ ಎಂಜಿನಿಯರ್ ಕದಂಬಿ ನೇತೃತ್ವದ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಈ ಯೋಜನೆಯಿಂದ ರೈತರಿಗಷ್ಟೆ ಅಲ್ಲದೆ ರಾಜ್ಯದ ಆರ್ಥಿಕ ಅಭಿವೃದ್ಧಿಗೂ ಸಹಾಯವಾಗಲಿದೆ ಎಂದು ಸಲಹೆ ನೀಡಿತು. ಅಲ್ಲದೆ ಎತ್ತರದ ಕಾಲುವೆ ನಿರ್ಮಾಣ ಆಗಬೇಕು ಎಂಬುದೂ ಸಮಿತಿಯ ಆಶಯವಾಗಿತ್ತು. ಕೃಷಿ ಉತ್ಪತ್ತಿಯನ್ನು ಉತ್ತಮಗೊಳಿಸಲು ಆವರ್ತನ ಬೆಳೆ ಪದ್ಧತಿಯನ್ನು ಪ್ರಾರಂಭಿಸಲಾಯಿತು.

ಈಗ ವಿಶ್ವೇಶ್ವರಯ್ಯ ನಾಲೆ ಎಂದು ಪ್ರಸಿದ್ಧವಾಗಿರುವ ಇರ್ವಿನ್ ನಾಲೆ ನಿರ್ಮಾಣ ಎಂ.ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ (ಹುಲಿಕೆರೆ ಟನಲ್ – ಮದ್ದೂರು) ಪೂರ್ಣಗೊಂಡಿತು (1931). ಮಂಡ್ಯ ಜಿಲ್ಲೆಯ ಸು.60,000 ಹೆಕ್ಟೇರ್ ವ್ಯಾಪ್ತಿಯಲ್ಲಿ ಕೃಷಿ ಕಾರ್ಯ ಹೆಚ್ಚಿಸುವ ಯೋಜನೆಯೊಂದನ್ನು ರೂಪಿಸಲಾಯಿತು. ಇಂಥ ದೊಡ್ಡ ಸಾಹಸ ಈ ಉಪಖಂಡದಲ್ಲಿಯೇ ಆಗ ಪ್ರಥಮ ಎನ್ನಬಹುದು.

ಸು.5 ಕೋಟಿ ವೆಚ್ಚದ ಹೈಡ್ರೋ ಎಲೆಕ್ಟ್ರಿಕಲ್ ಮತ್ತು ಕೃಷಿ ಸಂಬಂಧಿಯಾದ ಯೋಜನೆಗೆ ಕೃಷ್ಣರಾಜಸಾಗರ ಜಲಾಶಯ ಮೂಲಮಾತೃಕೆಯಾಯಿತು. ಇರ್ವಿನ್ ನಾಲೆ ನಿರ್ಮಾಣದ ವೆಚ್ಚ 2 ಕೋಟಿ. ಈ ವೆಚ್ಚವನ್ನು ಸರಿದೂಗಿಸಲು ಜಲಾನಯನ ಪ್ರದೇಶಗಳ ಫಲಾನುಭವಿ ರೈತರಿಂದ ತೆರಿಗೆ ವಸೂಲು ಮಾಡಲು ಸರ್ಕಾರ ನಿರ್ಧರಿಸಿತು.

ಎಂ.ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಕೃಷ್ಣರಾಜಸಾಗರ ಕಾಮಗಾರಿ ಸಮಿತಿಯು ಪ್ರತಿ ಅರ್ಧ ಹೆಕ್ಟೇರಿಗೆ 90–100 ರೂಪಾಯಿ ವಸೂಲು ಮಾಡಲು ಸಲಹೆ ನೀಡಿತು. ಆದರೆ ರೈತರು 75 ರೂಪಾಯಿ ಮಾತ್ರ ಪಾವತಿಸಲು ಒಪ್ಪಿದರು. ಆದರೆ ಇದನ್ನು ಸರ್ಕಾರ ಒಪ್ಪದೆ ಮಣ್ಣಿನ ಫಲವತ್ತತೆಯನ್ನು ಆಧರಿಸಿ ಪ್ರತಿ ಅರ್ಧ ಹೆಕ್ಟೇರಿಗೆ 100–150 ರೂಪಾಯಿ ಶುಲ್ಕವನ್ನು ವಿಧಿಸಿ, ಪ್ರತಿ ಅರ್ಧ ಹೆಕ್ಟೇರಿಗೆ 10 ರೂಪಾಯಿಯಂತೆ ನೀರಿನ ಶುಲ್ಕವನ್ನು ನಿಗದಿಗೊಳಿಸಿತು.

ಇರ್ವಿನ್ ನಾಲೆ ವ್ಯಾಪ್ತಿಯ ರೈತರು ಈ ಸಂಗತಿಯನ್ನು ಶಾಸನ ಸಭೆಯ ಗಮನಕ್ಕೆ ತಂದರಾದರೂ ಪರಿಹಾರ ದೊರೆಯದೆ ಶಾಸನ ಸಭೆಯ ಸದಸ್ಯರ ಬಗ್ಗೆ ಅಸಮಾಧಾನ ಗೊಂಡರು. ರೈತ ಮುಖಂಡರಾದ ಇಂಡವಾಳು ಎಚ್.ಹೊನ್ನಯ್ಯ, ಹೊನಗಾನಹಳ್ಳಿಯ ಕೆ.ಪುಟ್ಟಣ್ಣಯ್ಯ ಮತ್ತು ಎಚ್.ಕೆ.ವೀರಣ್ಣಗೌಡರ ನೇತೃತ್ವದಲ್ಲಿ ಸಂಘವೊಂದನ್ನು ರಚಿಸಿಕೊಂಡ ರೈತರು ಬೆಂಗಳೂರಿನಲ್ಲಿ ದಿವಾನರನ್ನು ಭೇಟಿ ಮಾಡಿದರು (1931). ಆದರೆ ಪ್ರಯೋಜನ ದೊರೆಯದ ಪರಿಣಾಮವಾಗಿ ಸು. ನಾಲ್ಕು ಸಾವಿರಕ್ಕೂ ಹೆಚ್ಚು ರೈತರು ಬೆಂಗಳೂರಿನಲ್ಲಿ 1931 ಡಿಸೆಂಬರ್ 31ರಂದು ವೀರಣ್ಣಗೌಡರ ನೇತೃತ್ವದಲ್ಲಿ ಜಾಥಾ ನಡೆಸಿ 2½ ಕಿಮೀ ಉದ್ದಕ್ಕೂ ಮಾನವ ಸರಪಳಿಯನ್ನು ನಿರ್ಮಿಸಿದರು. ಕೊನೆಗೆ ಅಠಾರ ಕಚೇರಿಯಲ್ಲಿ ರೈತರು ನೆರೆದರು. 1932 ಜನವರಿ 4ರಂದು ವೀರಣ್ಣಗೌಡರ ಮನವಿ ಮೇರೆಗೆ ದಿವಾನರು ಧರಣಿ ನಿರತರ ಭೇಟಿಗೆ ಒಪ್ಪಿದರು. ರೈತರು 14 ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಿದರೂ ಅದರಲ್ಲಿ ಕೆಲವನ್ನು ಮಾತ್ರ ಈಡೇರಿಸಲು ದಿವಾನರು ಒಪ್ಪಿದರು. ರೈತರಿಗೆ ನೀರಿನ ಪೂರೈಕೆ ಅಷ್ಟೇನೂ ಸಮಾಧಾನಕಾರಿಯಾಗಿಲ್ಲ ಎಂಬುದು ಸರ್ಕಾರಕ್ಕೆ ಮನವರಿಕೆಯಾಯಿತು. ಈ ನಡುವೆಯೂ ರೈತರು ತಮ್ಮ ಪಾಲಿನ ಕೊಡುಗೆಯನ್ನು ಸಲ್ಲಿಸಲು ನಿಗದಿ ಮಾಡಲಾಗಿದ್ದ 10 ವರ್ಷದ ಗಡುವನ್ನು 12 ವರ್ಷಕ್ಕೆ ಏರಿಸಲಾಯಿತು. ಮೊದಲ ನಾಲ್ಕು ವರ್ಷ ಅವರು 1/10 ಭಾಗದಷ್ಟನ್ನು ಮಾತ್ರ ಸಲ್ಲಿಸಬೇಕಾಗಿತ್ತು. ಉಳಿದದ್ದನ್ನು 8 ವರ್ಷಗಳ ಅವಧಿಯಲ್ಲಿ ಬಡ್ಡಿರಹಿತವಾಗಿ ಸಲ್ಲಿಸಬಹುದಾಗಿತ್ತು.

ಸಮಾಧಾನವಾಗದ ರೈತರು ಹಲವು ಸಭೆ ನಡೆಸಿ ಸಮಸ್ಯೆಗಳ ಬಗ್ಗೆ ಚರ್ಚಿಸಿದರು. 1932ರಲ್ಲಿ ವೀರಣ್ಣಗೌಡರು ರೈತರ ಸಭೆ ನಡೆಸಿದ್ದನ್ನು ಮನಗಂಡ ಸರ್ಕಾರ 1 ತಿಂಗಳ ಕಾಲ ಯಾವುದೇ ಸಭೆಗಳನ್ನು ನಡೆಸಬಾರದೆಂದು ಜಿಲ್ಲಾ ದಂಡಾಧಿಕಾರಿಗಳ ಮೂಲಕ ಆದೇಶ ಹೊರಡಿಸಿತು. 1932ರ ಜುಲೈನಲ್ಲಿ ದಿವಾನರು ರೈತರನ್ನು ಭೇಟಿ ಮಾಡಿದರು. ಸರ್ಕಾರ ಭೂಮಿಯನ್ನು ಮೂರು ರೀತಿಯಲ್ಲಿ ವಿಂಗಡಿಸಿತ್ತು. ಆದರೆ ಕೃಷಿ ಕೈಗೊಳ್ಳಲು ರೈತರು ನಿರಾಕರಿಸಿ ಎರಡೇ ರೀತಿ ವಿಂಗಡಿಸಿ ಒಂದರಲ್ಲಿ ನೀರಾವರಿ ಬೆಳೆ, ಇನ್ನೊಂದರಲ್ಲಿ ತೋಟಗಾರಿಕೆ ಬೆಳೆಗೆ ಅವಕಾಶ ಕಲ್ಪಿಸಬೇಕೆಂದೂ ಆಗ್ರಹಿಸಿದರು. ಆದರೆ ರೈತರ ಬೇಡಿಕೆಗೆ ದಿವಾನರು ಒಪ್ಪಲಿಲ್ಲ.

ರೈತರು ತಮ್ಮ ಬೇಡಿಕೆ ಈಡೇರಿಕೆಗಾಗಿ ಚಳವಳಿಯನ್ನು ಮುಂದುವರೆಸಿದರಲ್ಲದೆ ಕೃಷಿಗೆ ನೀರನ್ನು ಬಳಸಿಕೊಳ್ಳಲಿಲ್ಲ. ಕ್ರಮೇಣ ಸರ್ಕಾರ ನಿಯಮಗಳನ್ನು ಸಡಿಲಿಸಿದರಿಂದ ರೈತರು ಜಮೀನಿಗಿಳಿದರು. ಪ್ರತಿಭಟನೆ ನಿಧಾನಕ್ಕೆ ಕೊನೆಗೊಂಡಿತು. ತಮ್ಮ ಸಮಸ್ಯೆಗಳನ್ನು ದಿವಾನರು ಮತ್ತು ಅಧಿಕಾರಿಗಳು ಅರ್ಥ ಮಾಡಿಕೊಳ್ಳದೇ ಇದ್ದುದು ರೈತರಿಗೆ ತೀವ್ರ ಅಸಮಾಧಾನ ತಂದಿತ್ತು. ಸರ್ಕಾರದ ವಿರುದ್ಧ ರೈತರೆಲ್ಲ ಒಟ್ಟಾಗಿ ನಿಂತದ್ದು ಆ ದಿನಗಳಲ್ಲಿ ವಿಶೇಷವಾಗಿತ್ತು. ಈ ಚಳವಳಿಯು ಮುಂದಿನ ಹೋರಾಟಕ್ಕೆ ಪ್ರೇರಣೆ ಒದಗಿಸಿತೆನ್ನಬಹುದು.

(ಎಂ.ಎಸ್.)

**ಇರ್ವಿನ್, ಲಾರ್ಡ್: (1881– ?).** ಬ್ರಿಟನ್ನಿನ ರಾಜಕಾರಣಿ, ಬ್ರಿಟಿಷ್ ಭಾರತದ ಗೌರ್ನರ್–ಜನರಲ್ಲರಲ್ಲೊಬ್ಬ. ಜನನ, 1881. ತಂದೆ ವೈಕೌಂಟ್ ಹ್ಯಾಲಿಫಾಕ್ಸ್ II. ವಿದ್ಯಾಭ್ಯಾಸ ಈಟನ್ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ. 1903ರಲ್ಲಿ ಆಲ್ ಸೋಲ್ಸ್ ಕಾಲೇಜಿನ ಫೆಲೊ ಆಗಿ ಚುನಾಯಿತನಾದ. 1910ರಲ್ಲಿ ಸಂಪ್ರದಾಯ ಪಕ್ಷದ ಸದಸ್ಯನಾಗಿ ಪಾರ್ಲಿಮೆಂಟಿಗೆ ಆಯ್ಕೆಯಾದ. 1925ರ ವರೆಗೆ ಪಾರ್ಲಿಮೆಂಟಿನ ಸದಸ್ಯನಾಗಿದ್ದ. ಒಂದನೆಯ ಮಹಾಯುದ್ಧದ ಕಾಲದಲ್ಲಿ 1915–17ರಲ್ಲಿ ಫ್ರಾನ್ಸ್ ದೇಶದಲ್ಲಿ ಇಂಗ್ಲೆಂಡಿನ ಸೈನ್ಯತುಕಡಿಯ ನಾಯಕನಾಗಿಯೂ 1916–18ರಲ್ಲಿ ನ್ಯಾಷನಲ್ ಸರ್ವಿಸ್ ಶಾಖೆಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ. 1921ರಲ್ಲಿ ವಸಾಹತು ಮಂತ್ರಿಶಾಖೆಯ ಕಾರ್ಯದರ್ಶಿಯಾಗಿ ನೇಮಕಗೊಂಡ. ಅನಂತರ ವಸಾಹತುಗಳಲ್ಲಿ ಸಂಚರಿಸಿ ಅಲ್ಲಿನ ಆಡಳಿತ ಮತ್ತು ಆರ್ಥಿಕ ಸಮಸ್ಯೆಗಳನ್ನೂ ಅವುಗಳ ಪರಿಹಾರವನ್ನೂ ಕುರಿತ ವರದಿ ಪ್ರಕಟಿಸಿದ. 1922–24ರಲ್ಲಿ ವಿದ್ಯಾಮಂಡಲಿಯ ಅಧ್ಯಕ್ಷನಾಗಿದ್ದ ಮೇಲೆ ಈತನಿಗೆ 1924ರಲ್ಲಿ ಬ್ರಿಟನ್ನಿನ ಬಾಲ್ಡ್‌ವಿನ್ ಸಂಪುಟದಲ್ಲಿ ವ್ಯವಸಾಯ ಮತ್ತು ಮೀನುಗಾರಿಕೆ ಶಾಖೆಗಳ ಸಚಿವಸ್ಥಾನ ದೊರಕಿತು.

1925 ಅಕ್ಟೋಬರ್ ತಿಂಗಳಲ್ಲಿ ಈತ ಭಾರತದ ಗೌವರ್ನರ್ ಜನರಲ್ ಆದ. ಇರ್ವಿನ್ ಭಾರತದಲ್ಲಿದ್ದಾಗ ಹಲವಾರು ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಭಾರತದ ರಾಜಕೀಯ ಸುಧಾರಣೆಗಳನ್ನೂ 1927ರಲ್ಲಿ ರಚಿತವಾಗಿ ಕೇವಲ ಬಿಳಿಯರಿಂದಲೇ ಕೂಡಿದ್ದ ಸೈಮನ್ ಸಮಿತಿಯನ್ನೂ ಭಾರತೀಯರು ವಿರೋಧಿಸಿದರು. ದೇಶಾದ್ಯಂತ ಹರತಾಳ ಮತ್ತು ವಿಧ್ವಂಸಕ ಕೃತ್ಯಗಳು ಸಂಭವಿಸಿದವು. 1928 ಡಿಸೆಂಬರಿನಲ್ಲಿ ಕಾಂಗ್ರೆಸ್ ಸಮಿತಿ ಕಲ್ಕತ್ತೆಯಲ್ಲಿ ಸಭೆ ಸೇರಿ, ಬ್ರಿಟಿಷ್ ಸರ್ಕಾರ ಭಾರತೀಯರಿಗೆ ಅಧಿಕಾರ ವಹಿಸಿಕೊಡಬೇಕೆಂದು ಆಗ್ರಹಪಡಿಸಿತು. ಅಂತೆಯೇ ಸರ್ಕಾರ 1929 ಅಕ್ಟೋಬರಿನಲ್ಲಿ ಒಂದು ಹೇಳಿಕೆ ಹೊರಡಿಸಿ, ಭಾರತೀಯರಿಗೆ ಅಧಿಕಾರಾವಕಾಶ ಕಲ್ಪಿಸುವ ಆಕಾಂಕ್ಷೆ ತನಗೆ ಇದೆ ಎಂಬುದನ್ನು ಪ್ರಕಟಿಸಿತು. ಇಂಥ ಹೇಳಿಕೆಯಿಂದಲೇ ಭಾರತೀಯ ನಾಯಕರನ್ನು ತೃಪ್ತಿಗೊಳಿಸಲಾಗಲಿಲ್ಲ. ಭಾರತ ಸಂಪೂರ್ಣವಾಗಿ ಸ್ವತಂತ್ರವಾಗಬೇಕೆಂದು 1930 ಡಿಸೆಂಬರಿನಲ್ಲಿ ಲಾಹೋರಿನಲ್ಲಿ ಸೇರಿದ್ದ ಕಾಂಗ್ರೆಸ್ ಸಮಿತಿ ಸಭೆಯ ಘೋಷಣೆ ಹೊರಬಂತು. 1930 ಜನವರಿ 26ರಂದು ದೇಶದಲ್ಲಿ ಅಸಹಕಾರ ಚಳವಳಿ ಪ್ರಾರಂಭವಾಯಿತು. ಮಹಾತ್ಮ ಗಾಂಧಿಯವರೇ ಇದರ ನಾಯಕತ್ವ ವಹಿಸಿದರು. ಈ ಆಂದೋಳನದಲ್ಲಿ ಸಾವಿರಾರು ಮಂದಿಯನ್ನು ಬಂಧಿಸಿ ಶಿಕ್ಷಿಸಲಾಯಿತು. ಅನೇಕರು ಆಸ್ತಿಪಾಸ್ತಿಗಳನ್ನು ಕಳೆದುಕೊಂಡರು. ಸೈಮನ್ ಸಮಿತಿಯ ವರದಿಯ ಪ್ರಕಾರ 1930ರಲ್ಲಿ ಲಂಡನ್ನಿನಲ್ಲಿ ಮೊದಲನೆಯ ದುಂಡುಮೇಜಿನ ಪರಿಷತ್ತು ಸಭೆ ಸೇರಿತು. ಆದರೆ ಕಾಂಗ್ರೆಸ್ಸಿನ ಗೈರುಹಾಜರಿಯಿಂದಾಗಿ ಈ ಸಭೆಯಲ್ಲಿ ಯಾವ ಖಚಿತ ತೀರ್ಮಾನವನ್ನೂ ಕೈಗೊಳ್ಳಲಾಗಲಿಲ್ಲ. ಕೊನೆಗೆ ಸಪ್ರು ಹಾಗೂ ಜಯಕರರ ಯತ್ನದ ಫಲವಾಗಿ 1931ರಲ್ಲಿ ಗಾಂಧಿ–ಇರ್ವಿನ್ ಒಪ್ಪಂದವಾಯಿತು. ಅನಂತರ ಗಾಂಧಿಯವರು ಭಾರತೀಯ ಕಾಂಗ್ರೆಸ್ಸಿನ ಪ್ರಮುಖ ಪ್ರತಿನಿಧಿಯಾಗಿ ಇಂಗ್ಲೆಂಡಿನ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದರು. ರಾಜಕೀಯ ವಿಷಯವಾಗಿ ಜಿಜ್ಞಾಸೆಗಳಿದ್ದರೂ ಗಾಂಧಿ–ಇರ್ವಿನ್ನರ ಮಧ್ಯೆ ಒಳ್ಳೆಯ ಮೈತ್ರಿಯಿತ್ತು.

ಲಾರ್ಡ್ ಇರ್ವಿನ್ ಶ್ರೇಷ್ಠ ಆಡಳಿತಗಾರ ಮತ್ತು ಮುತ್ಸದ್ದಿಯೆಂದು ಹಲವು ಚರಿತ್ರಕಾರರ ಅಭಿಪ್ರಾಯ. ದೌರ್ಬಲ್ಯದಿಂದವನು ದಮನನೀತಿಯನ್ನನುಸರಿಸಿದನೆಂದು ಮತ್ತೆ ಕೆಲವು ಚರಿತ್ರಕಾರರ ಮತ. ತನ್ನ ತಂದೆಯಂತೆ ಈತನೂ ಧಾರ್ಮಿಕ ವಿಷಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದನೆಂಬುದಂತೂ ಸತ್ಯ. ಆತ 1959 ಡಿಸೆಂಬರ್ 23 ರಂದು ನಿಧನನಾದ.

(ಕೆ.ಎಸ್.ಎನ್.)

**ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ, ದಿ:** ಮುಂಬಯಿಯ ಟೈಮ್ಸ್‌ಆಫ್ ಇಂಡಿಯ ವೃತ್ತಪತ್ರಿಕೆಗಳ ಗುಂಪಿಗೆ ಸೇರಿದ ಇಂಗ್ಲಿಷ್ ವಾರಪತ್ರಿಕೆ. ಬ್ರಿಟಿಷರು ಸ್ಥಾಪಿಸಿದ ಈ ಸಂಸ್ಥೆಯನ್ನು 1946ರಲ್ಲಿ ಭಾರತದ ಹೆಸರಾಂತ ಕೈಗಾರಿಕೋದ್ಯಮಿ ಸೇಠ್ ರಾಮಕೃಷ್ಣ ದಾಲ್ಮಿಯ ಕೊಂಡರು. ಭಾರತೀಯರೇ ಈ ಪತ್ರಿಕೆಯ ಮಾಲಿಕತ್ವದ ಸಂಪೂರ್ಣ ಹೊಣೆಯನ್ನು ಹೊತ್ತುಕೊಂಡಿದ್ದರೂ ಬೆನೆಟ್ ಆ್ಯಂಡ್ ಕೋಲ್ಮನ್ ಅಂಡ್ ಕಂಪನಿ ಲಿಮಿಟೆಡ್ ಎಂಬ ಹಿಂದಿನ ಹೆಸರನ್ನೇ ಇಂದಿಗೂ ಉಳಿಸಿಕೊಂಡು ಬರಲಾಗಿದೆ.

ಇದು ಒಂದು ಅತ್ಯುತ್ತಮ ವಾರ ಪತ್ರಿಕೆಯೆಂದು ಹೆಸರಾಗಿತ್ತು. ಮೊದ ಮೊದಲು ಈ ಪತ್ರಿಕೆ ಟೈಮ್ಸ್ ಆಫ್ ಇಂಡಿಯ ದಿನಪತ್ರಿಕೆಯ ಅಂಗವಾಗಿ ಟೈಮ್ಸ್ ಆಫ್ ಇಂಡಿಯ ವೀಕ್ಲಿ ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿತ್ತು. 1880 ರಲ್ಲಿ ಇದನ್ನು ಪ್ರತ್ಯೇಕವಾಗಿ ಪ್ರಕಟಿಸಲು ಆರಂಭಿಸಿದರು. ಮುಂದೆ ಭಾರತೀಯ ಪತ್ರಿಕೋದ್ಯಮದಲ್ಲಿ ಚಿತ್ರಗಳು ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡದ್ದ ರಿಂದ 1901ರಲ್ಲಿ ಈ ಪತ್ರಿಕೆಯ ಹೆಸರನ್ನು ದಿ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ ಎಂದು ಬದಲಾಯಿಸಿ, ಚಿತ್ರಗಳ ಮೂಲಕ ಸುದ್ದಿ, ಲೇಖನಗ ಳನ್ನು ನೀಡಲಾರಂಭಿಸಿ ದರು. ಅಂದಿ ನಿಂದ ಇದು ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡಿತಲ್ಲದೆ, ಇಡೀ ವಿಶ್ವದಲ್ಲಿ ಪ್ರಕಟವಾಗುವ ಉತ್ತಮ ವಾರಪತ್ರಿಕೆಗಳಲ್ಲಿ ಮಹತ್ವದ ಸ್ಥಾನ ಗಳಿಸಿಕೊಂಡಿತ್ತು.

ಈ ಪತ್ರಿಕೆಯಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ಲೇಖನಗಳು, ಸಣ್ಣ ಕಥೆ, ವ್ಯಂಗ್ಯ ಚಿತ್ರಗಳು, ನಗೆಬರೆಹಗಳು, ಶೈಕ್ಷಣಿಕ ಮತ್ತು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಲೇಖನಗಳು ಇನ್ನೂ ಅನೇಕ ಬಗೆಯ ಸುದ್ದಿಸಾರಗಳು ಪ್ರಕಟವಾಗುತ್ತಿದ್ದು ಓದುಗರ ಮನಸ್ಸನ್ನು ಬಲು ಆಕರ್ಷಿಸಿತ್ತು. ಸಾಮಾನ್ಯವಾಗಿ ವಾರವಾರವೂ ಭಾರತಕ್ಕೆ ಸಂಬಂಧಿಸಿದ ಸಚಿತ್ರ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಅಲ್ಲದೆ ವರ್ಷದಲ್ಲಿ ಅನೇಕ ವಿಶೇಷಾಂಕಗಳು ಪ್ರಕಟವಾಗುತ್ತಿದ್ದವು. ವಾರ್ಷಿಕ ವಿಶೇಷ ಸಂಚಿಕೆಯಂತೂ ಸರ್ವಾಂಗ ಸುಂದರವಾಗಿದ್ದು ಭಾರತೀಯ ಕಲೆ, ಸಾಹಿತ್ಯ, ಗತ ವೈಭವ, ಪ್ರಚಲಿತ ರಾಜಕೀಯ ದೃಷ್ಟಿಗಳಿಂದ ಸಂಗ್ರಹಯೋಗ್ಯವಾಗಿತ್ತು. ಸಿ. ಆರ್. ಮಾಂಡೆ, ಎ. ಎಸ್. ರಾಮನ್ ಇವರ ನಂತರ ಸಂಪಾದಕರಾದ ಖುಷ್ವಂತ್ ಸಿಂಗ್ ಇದರ ಪ್ರಚಾರ ಸಂಖ್ಯೆಯನ್ನು ತುಂಬಾ ಹೆಚ್ಚಿಸಿದರು. ಅವರ ನಂತರ ಎಂ ವಿ ಕಾಮತ್, ಪ್ರೀತಿಶ್ ನಂದಿ ಸಂಪಾದಕರಾದರು. ಆರ್. ಕೆ. ಲಕ್ಷ್ಮಣ್ ಮತ್ತು ಮಾರಿಯೊ ಮಿರಿಂಡರ ವ್ಯಂಗ್ಯ ಚಿತ್ರಗಳು ಈ ಸಾಪ್ತಾಹಿಕದ ರಂಗೇರಿಸಿತ್ತು. ಆಮೇಲೆ ಪ್ರಸಾರ ಇಳಿಮುಖವಾಗಿ ನವೆಂಬರ್ 1993ರಲ್ಲಿ ಇದರ ಪ್ರಕಟಣೆ ನಿಂತಿತು.

*

**ಇಲಾಟೆರಿಡೇ:** ಕೋಲಿಯಾಪ್ಟರ ಗಣದ ಒಂದು ಕುಟುಂಬ. ಈ ಕುಟುಂಬದ ಕೀಟಗಳನ್ನು ಸ್ಕಿಪ್‌ಜಾಕ್ಸ್ ಅಥವಾ ಕ್ಲಿಕ್ ಬೀಟ್ಸ್ ಎಂಬ ಸಾಮಾನ್ಯ ನಾಮದಿಂದ ಗುರುತಿಸಲಾಗುತ್ತದೆ. ಪ್ರೌಢ ಜೀರುಂಡೆಯ ದೇಹ ಗಡುಸು. ಬಣ್ಣ ನಸುಗಪ್ಪು ಅಥವಾ ನಸುಕಂದು. ಬೆನ್ನಿನ ಮೇಲೆ ಮುಟ್ಟಿದರೆ ತಟಕ್ಕನೆ ಮೇಲಕ್ಕೆ ಚಿಮ್ಮಿ ಹಾರುವ ಗುಣವುಳ್ಳದ್ದು. ಎದೆಯ ಮೊದಲನೆಯ ಖಂಡ ದೊಡ್ಡದು, ಆಕಾರ ಗುರಾಣಿಯಂತೆ. ಉದರ ಉದ್ದ ಮತ್ತು ಕಿರಿದು; ತುದಿಯಲ್ಲಿ ಸ್ವಲ್ಪ ಚೂಪು. ಕಾಲುಗಳು ಮತ್ತು ಕುಡಿಮೀಸೆಗಳು ಮೋಟಕು. ಸ್ಪರ್ಶ ಕುಡಿಮೀಸೆಗಳು ಗರಗಸದ ಅಥವಾ ಬಾಚಣಿಗೆಯ ಅಂಚಿನಂತೆ. ಈ ಜೀರುಂಡೆಗಳ ಡಿಂಭಗಳ ದೇಹ ತಂತಿಯಂತೆ ತೆಳು, ಚರ್ಮ ಗಡುಸು–ಆದ್ದರಿಂದ ಇವನ್ನು ತಂತಿ ಹುಳುಗಳೆಂದೇ (ವೈರ್ ವರ್ಮ್ಸ್) ಎಂದು ಕರೆಯುತ್ತಾರೆ. ಭೂಮಿಯಲ್ಲಿ ನಾಟಿರುವ ಬೀಜಗಳನ್ನೂ ಸಸ್ಯಗಳ ಬೇರುಗಳನ್ನೂ ಇವು ತಿಂದು ನಾಶ ಮಾಡುತ್ತವೆ. ಇವುಗಳ ಹಾವಳಿ ಬಹಳ ಹೆಚ್ಚು ಮತ್ತು ಹತೋಟಿಗೆ ತರುವುದು ಬಹಳ ಕಷ್ಟ. ಪೈರೋಫೋರಸಿನ ಕೆಲವು ಪ್ರಭೇದಗಳು ಸ್ವಯಂಪ್ರಕಾಶಕ ರಚನೆಗಳನ್ನು ಹೊಂದಿವೆ. (ಪಿ.ಎ.ಆರ್.)

**ಇಲಿ:** ರಾಡೆಂಶಿಯ (ದಂಶಕ) ಗಣದ ಮ್ಯೂರಿಡೀ ಕುಂಟುಂಬಕ್ಕೆ ಸೇರಿದ ಹಲವಾರು ಜಾತಿಗಳ ಸ್ತನ ಪ್ರಾಣಿಗಳ ಸಾಮಾನ್ಯ ಹೆಸರು. ಇಂಗ್ಲಿಷಿನಲ್ಲಿ ರ್‍ಯಾಟ್ಸ್ ಮತ್ತು ಮೈಸ್ ಎಂದು ಕರೆಯಲಾಗುವ ಇವಕ್ಕೆ ಕನ್ನಡದಲ್ಲಿ ಇಲಿ ಎಂಬ ಹೆಸರೇ ಅನ್ವಯವಾಗುತ್ತದೆ. ಮೂಷಕ ಪರ್ಯಾಯ ನಾಮ. ಇದೇ ಕುಟುಂಬಕ್ಕೆ ಇತರ ಪ್ರಾಣಿಗಳಾದ ಹ್ಯಾಮಸ್ಟರ್, ವೋಲ್, ಲೆಮಿಂಗ್, ಜೆರ್ಬಿಲ್ ಮತ್ತು ಹೆಗ್ಗಣ (ಬ್ಯಾಂಡಿಕೂಟ್) ಸೇರಿವೆಯಾದರೂ ಇವನ್ನು ಇಲಿಗಳೆಂದು ಕರೆಯುವುದಿಲ್ಲ.

ಸಾಧಾರಣವಾಗಿ ಎಲ್ಲರಿಗೂ ಪರಿಚಿತವಿರುವ ಇಲಿ ಪ್ರಭೇದಗಳೆಂದರೆ ರ್‍ಯಾಟಸ್ ರ್‍ಯಾಟಸ್, ರ್‍ಯಾಟಸ್ ನಾರ್ವಿಜಿಕಸ್ (ಮನೆ ಇಲಿಗಳು), ಮಿಲಾರ್ಡಿಯ ಮೆಲ್ಟಾಡ (ಹೊಲದ ಇಲ್ಲವೆ ಬಯಲು ಇಲಿ), ಗೋಲುಂಡ ಎಲಿಯೋಟಿ (ಪೊದೆ ಇಲಿ), ಮುಸ್ ಮಸ್ಕುಲಸ್, ಮುಸ್ ಬೂದುಗ (ಕಂದು ಇಲಿ) ಹಾಗೂ ವ್ಯಾಂಡಿಲೂರಿಯ ಓಲರೇಸಿಯ (ಉದ್ದ ಬಾಲದ ಮರದಿಲಿ) ಎಂಬವು.

ಇಲಿಗಳ ವ್ಯಾಪ್ತಿ (ಡಿಸ್ಟ್ರಿಬ್ಯೂಷನ್) ತುಂಬ ವ್ಯಾಪಕವಾದದ್ದು; ಪ್ರಪಂಚಾದ್ಯಂತ (ಸಾಗರಗಳ ಕೆಲವು ದ್ವೀಪಗಳು, ಮತ್ತು ಅಂಟಾರ್ಕ್‌ಟಿಕ ಭೂಖಂಡವನ್ನು ಬಿಟ್ಟು) ಇವು ಕಾಣದೊರೆಯುತ್ತವೆ. ಮ್ಯೂರಿಡೀ ಕುಟುಂಬದಲ್ಲಿ 281 ಜಾತಿಯ 1326 ಪ್ರಭೇದಗಳಿಗೆ ಸೇರಿದ ಇಲಿಗಳಿವೆಯೆಂದು ಅಂದಾಜು ಮಾಡಲಾಗಿದೆ.

ಇಲಿಗಳು ಸಣ್ಣ ಗಾತ್ರದವು, ಉದ್ದ ಬಾಲವುಳ್ಳವು, ಚಿಕ್ಕ ಕೈಕಾಲುಗಳನ್ನೂ, ಚೂಪು ಮೂತಿಯನ್ನೂ ಪಡೆದಿವೆ. ಆಹಾರವನ್ನು ಕಡಿಯಲು, ಗೆಬರಲು ಅನುಕೂಲವಾಗುವಂಥ ಬಾಚಿಹಲ್ಲುಗಳಿವೆ; ಆದ್ದರಿಂದಲೇ ಇವನ್ನು ದಂಶಕಗಳೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಇವು ನೆಲವಾಸಿಗಳು. ಬಿಲಗಳನ್ನು ಕೊರೆದು ವಾಸಿಸುತ್ತವೆ. ಕೆಲವು ಮರಗಳ ಪೊಟರೆಗಳಲ್ಲೊ, ಸ್ವಾಭಾವಿಕ ಕಂದಕಗಳಲ್ಲೊ, ಗಚಾರಗಳಲ್ಲೊ ವಾಸಿಸುತ್ತವೆ. ಇವು ಸಾಧಾರಣವಾಗಿ ನಿಶಾಚರಿಗಳು. ಆದರೆ ಅಪಾಯ ಇಲ್ಲ ಎಂದು ಮನವರಿಕೆಯಾದರೆ ಹಗಲಿನಲ್ಲೂ ನಿರ್ಭಯವಾಗಿ ಸಂಚರಿಸುವುವು.

ಇವುಗಳ ಆಹಾರ ಕಾಳುಕಡ್ಡಿ. ಕೆಲವು ಸಸ್ಯಹಾರದ ಜೊತೆಯಲ್ಲಿ ಸಣ್ಣಮಟ್ಟ ಕೀಟಾದಿ ಅಕಶೇರುಕಗಳನ್ನೂ ಸ್ತನಿಗಳನ್ನೂ ಭಕ್ಷಿಸುತ್ತವೆ. ಧಾನ್ಯ ಸಂಗ್ರಹಾಗಾರಗಳಲ್ಲಿ ಇವುಗಳ ಹಾವಳಿ ಹೆಚ್ಚು. ಕಾಳುಗಳನ್ನು ತಿಂದು ನಾಶ ಮಾಡುವುದಲ್ಲದೆ, ತಮ್ಮ ಹಿಕ್ಕೆ, ಮೂತ್ರಗಳನ್ನು ಆಹಾರಸಾಮಗ್ರಿಗಳ ಮೇಲೆ ಬೇಕಾಬಿಟ್ಟಿ ಮಾಡಿ ಹಾಳುಗೆಡವುತ್ತವೆ. ಹೀಗಾಗಿ ಜನವಸತಿಗಳ ಬಳಿ ಬದುಕುವ ಇಲಿಗಳು ಆಹಾರವನ್ನು ಕಲುಷಿತಗೊಳಿಸುವುದರ ಜೊತೆಗೆ ಪ್ಲೇಗ್ ಮುಂತಾದ ರೋಗಗಳನ್ನೂ ಹರಡಿ ಮಾನವಪಿಡುಗು ಎನಿಸಿವೆ. ಹಾಗೆಯೇ ಇವು ಮನುಷ್ಯರನ್ನೂ ಸಾಕುಪ್ರಾಣಿಗಳನ್ನೂ ಕಡಿದು ಹಲವು ವೇಳೆ ಮಾರಕವಾಗಿ ಪರಿಣಮಿಸಿವೆ.

ಕಾಡಿನಲ್ಲಿ ಬಿದಿರು ಹೂಬಿಟ್ಟು, ಕಾಳುಗಳನ್ನು ಅಪಾರ ಪ್ರಮಾಣದಲ್ಲಿ ಉದುರಿಸಿದಾಗ, ಇವುಗಳ ಸಂಖ್ಯೆ ಗಣನೀಯವಾಗಿ ಏರುತ್ತದೆ. ಆಗ ಇವುಗಳ ಉಪದ್ರವ ಹೆಚ್ಚು. ಹಿಂದಿನ ಕಾಲದಲ್ಲಿ ಇವುಗಳ ಏರುಸಂಖ್ಯೆಯನ್ನು ಗಣಿಸಿ ಬರಗಾಲ ಬಂತೆಂದೇ ಬಗೆಯಲಾಗುತ್ತಿತ್ತು.

ಪುಸ್ತಕ ಲೇಖನದಲ್ಲಿ ಹೆಗ್ಗಣವನ್ನು ಒಳಗೊಂಡಂತೆ ಭಾರತದಲ್ಲಿ ಕಂಡುಬರುವ ಕೆಲವು ಇಲಿಗಳ ವಿವರ ಕೊಡಲಾಗಿದೆ.

ಇಲಿಯ ಕೆಲವು ಮುಖ್ಯ ಪ್ರಭೇದಗಳು ಹೀಗಿವೆ : ಕೌಚ ಇಲಿ, ಪಾಲ್ಲಿಟ್ ಇಲಿ, ರಾಜಾ ಇಲಿ, ಗದ್ದಲ ಇಲಿ, ಹಾರು ಇಲಿ, ಚಿಂಚಿಲ್ಲ ಇಲಿ, ಥೈಲೆಂಡಿನ ಇಲಿ, ಸೂರಿಲಿ, ಸುಂಡಿಲಿ, ಮೂಗಿಲಿ, ಹೊಲದ ಇಲಿ, ಬಿಳಿಕಾಲಿನ ಇಲಿ, ಮರದಿಲಿ, ಹೆಗ್ಗಣ, ಕಾಡಿಲಿ, ಇವುಗಳಲ್ಲಿ ಕೆಲವು ಪ್ರಭೇದಗಳ ವಿವರಗಳನ್ನು ಮುಂದೆ ಕೊಟ್ಟಿದೆ. ಸುಗ್ಗಿ ಇಲಿ ಹೆಸರೇ ಸೂಚಿಸುವಂತೆ ಕೊಯ್ಲು ಸಮಯದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಸಾಮಾನ್ಯವಾಗಿ ವರ್ಷದಲ್ಲಿ ಎರಡು ಸಲ ಮರಿ ಹಾಕುತ್ತದೆ. ಏಪ್ರಿಲ್ ಮತ್ತು ಸೆಪ್ಟಂಬರ್ ತಿಂಗಳುಗಳು ಋತುಕಾಲಗಳು; ಆಗ ಗಂಡಿನ ತೀವ್ರ ಧ್ವನಿಯ ಸಿಳ್ಳಿನ ಆಕರ್ಷಣೆ ಪ್ರಾರಂಭ. ಹೆಣ್ಣಿಗೆ ಋತು ಮುಗಿದು ಸುಮಾರು ಇಪ್ಪತ್ತನಾಲ್ಕು ದಿವಸಗಳ ತರುವಾಯ ಮೂರರಿಂದ ಏಳರವರೆಗೆ ಜಡಮರಿಗಳು ಹುಟ್ಟುತ್ತವೆ. ಇವುಗಳ ಭಾರ 1/20 ಔನ್ಸಿಗಿಂತಲೂ ಕಡಿಮೆ; ಇವುಗಳಿಗೆ ರೋಮದ ಕವಚವಿಲ್ಲ; ಕಣ್ಣುಗಳು ಮುಚ್ಚಿರುತ್ತವೆ. ಮುಂದಿನ ಎಂಟು ದಿವಸಗಳಲ್ಲಿ ಕಣ್ಣುಗಳು ತೆರೆಯುತ್ತವೆ; ಮೊದಲ ಹಲ್ಲುಗಳು ಮೊಳೆಯುತ್ತವೆ. ಸುಮಾರು ಎರಡು ವಾರ ಪ್ರಾಯವಾಗುವಾಗ ತಾಯಿ ಇಲಿ ಮೊಲೆಯೂಡಿಸುವುದನ್ನು ನಿಲ್ಲಿಸುತ್ತದೆ; ಮತ್ತೆ ಹತ್ತು ದಿವಸಗಳಲ್ಲಿ ಮರಿ ಇಲಿಗಳು ಸ್ವತಂತ್ರವಾಗುವುವು. ಐದುವಾರಗಳು ಮುಗಿಯುವಾಗ ಹೊಸ ಪೀಳಿಗೆ ಪೂರ್ಣವಿಕಸನಗೊಂಡಿರುತ್ತದೆ. ಇಂಥ ಒಂದೊಂದು ಇಲಿಯ ಭಾರ ಸುಮಾರು 1/3 ಔನ್ಸ್. ಒಂದು ವರ್ಷ ವಯಸ್ಸಾಗಿರುವ ಸುಗ್ಗಿ ಇಲಿ ಮುದಿಯಾಗಿರುತ್ತದೆ. ಈ ಪ್ರಭೇದಕ್ಕಿಂತಲೂ ಅದೆಷ್ಟೋ ತೀವ್ರ ವೇಗದಿಂದ ವೃದ್ಧಿಯಾಗುವ ಇತರ ಪ್ರಭೇದಗಳು ಹಲವಾರು. ಆದರೆ ಇಲಿಗಳ ಶತ್ರುಗಳ ಸಂಖ್ಯೆ ಏನೂ ಕಡಿಮೆಯಿಲ್ಲ. ಹಕ್ಕಿ, ಹಾವು, ಬೆಕ್ಕು, ನಾಯಿ ಮುಂತಾದುವೆಲ್ಲ ಇಲಿಯ ಸಹಜ ಶತ್ರುಗಳು. ಈ ಕಾರಣದಿಂದ ನಿಸರ್ಗದ ಸಮತೋಲ ಉಳಿದಿದೆ.

ಬಿಳಿ ಮತ್ತು ಕಂದು ಇಲಿಗಳನ್ನು ಮನೆಯಲ್ಲಿ ಸಾಕುವುದಿದೆ. ಕೋಗಿಲೆಯಂತೆ ಹಾಡುವ ಇಲಿಗಳು, ವರ್ತುಲಾಕಾರವಾಗಿ ಓಡುವ, ಕುಣಿಯುವ ಇಲಿಗಳು ರೋಗಗ್ರಸ್ತ ಇಲಿಗಳೇ ವಿನಾ ಬೇರೆ ಪ್ರಭೇದಗಳಲ್ಲ. ಉದ್ದ ಬಾಲದ ಕಾಡಿಲಿಗಳು ಮನೆಯ ಇಲಿಗಳಿಗಿಂತ ದೊಡ್ಡವು. ಎಲ್ಲ ಸಸ್ತನಿಗಳ ಸಂಖ್ಯೆಗೆ ಹೋಲಿಸಿದರೆಸ ಇಲಿಗಳ ಸಂಖ್ಯೆ ಹೆಚ್ಚು.

(ಎಸ್.ಎನ್.ಕೆ.ಯು.)

**ಇಲಿಗಳ ವಿವಿಧ ಜಾತಿಗಳು:** ಮೈಸೂರು ರಾಜ್ಯದಲ್ಲೂ ಅದರ ಸುತ್ತ ಮುತ್ತಲೂ ಕಾಣದೊರೆಯುವ ಕೆಲವು ಜಾತಿಯ ಇಲಿಗಳನ್ನೂ ಅವುಗಳ ಪ್ರಭೇದಗಳನ್ನೂ ಕೆಳಗೆ ಸೂಚಿಸಿದೆ.

1. ಹೆಗ್ಗಣ: ಬ್ಯಾಂಡಿಕೋಟ ಎಂಬ ಜಾತಿಗೆ ಸೇರಿದ್ದು; ಈ ಹೆಸರು ತೆಲುಗಿನ ಪಂದಿಕೋಕು (ಹಂದಿ ಇಲಿ) ಎಂಬ ಹೆಸರಿನ ಅಪಭ್ರಂಶವಿರುವಂತೆ ತೋರುತ್ತದೆ. ಮೈಮೇಲಿನ ತುಪ್ಪಳದ ಅರ್ಧದಷ್ಟು ಭಾಗದಲ್ಲಿ ಮುಳ್ಳುಗಳಿವೆ. ಹೆಬ್ಬೆರಳನ್ನುಳಿದು ಮಿಕ್ಕ ಬೆರಳುಗಳಿಗೆ ಚೂಪಾದ ನಖಗಳುಂಟು. ಅಂಗಾಲಿನಲ್ಲಿ ಆರು ಮೆತ್ತೆಗಳಿವೆ. ಇದು ಮೂಷಕವರ್ಗದಲ್ಲೇ ದೊಡ್ಡ ಪ್ರಾಣಿ. ತಲೆಯಿಂದ ಬಾಲದಬುಡದವರೆಗೆ 30–33 ಸೆಂ.ಮೀ; ಆದರೆ ಬಾಲವೇ 28–33 ಸೆಂ.ಮೀ; ಇರುತ್ತದೆ. ಬಣ್ಣ ಮೇಲ್ಭಾಗದಲ್ಲಿ ಕಪ್ಪು ಮಿಶ್ರಿತ ಕಂದು; ಪಕ್ಕಗಳಲ್ಲಿ ಬೂದು ಛಾಯೆ; ತಳಭಾಗ ಬೂದು ಮಿಶ್ರಿತ ಕಂದು. ಭಾರತ ಮತ್ತು ಶ್ರೀಲಂಕಾದಾದ್ಯಂತ ವ್ಯಾಪಿಸಿದೆ. ಆದರೆ ಪಶ್ಚಿಮ ಬಂಗಾಳ ಮತ್ತು ಪಂಜಾಬ್ ರಾಜ್ಯಗಳಲ್ಲಿ ವಿರಳ. ಹಗಲು ಹೊತ್ತು ಬಿಲಗಳಲ್ಲಿ ಮರೆಯಾಗಿದ್ದು ರಾತ್ರಿ ವೇಳೆ ಸಿಕ್ಕಿದೆಡೆ ತೋಡಿ ಮಣ್ಣು ಗುಡ್ಡೆಹಾಕುವುದು ಇದರ ಸ್ವಭಾವ. ಊರು, ಗ್ರಾಮಗಳಲ್ಲೂ ವ್ಯವಸಾಯ ಪ್ರದೇಶಗಳಲ್ಲೂ ಇದರ ಉಪಟಳ ಹೆಚ್ಚು. ಕಾಳು ಕಡ್ಡಿಗಳನ್ನೂ ದವಸಧಾನ್ಯಗಳನ್ನೂ ಹಣ್ಣುಹಂಪಲು ತರಕಾರಿಗಳನ್ನೂ ಕತ್ತರಿಸಿ ತಿಂದು ಹಾಕಿ ನಷ್ಟ ಉಂಟುಮಾಡುತ್ತದೆ. ಇದು ಸಾಮಾನ್ಯವಾಗಿ ಅಂಜುಬುರುಕ ಪ್ರಾಣಿ ನಾಯಿಗಳು ಇದನ್ನು ಬೇಟೆಯಾಡಿ ತಿಂದುಬಿಡುತ್ತವೆ. ಆದರೂ ಒಮ್ಮೊಮ್ಮೆ ಶತ್ರುಗಳನ್ನು ಧೈರ್ಯದಿಂದ ಎರಡು ಕಾಲುಗಳ ಮೇಲೆ ಎದ್ದುನಿಂತು ಎದುರಿಸುವುದುಂಟು. ಈ ಜಾತಿಯ ಬ್ಯಾಂಡಿಕೋಟ ಮಲಬಾರಿಕ ಎಂಬ ಪ್ರಭೇದ ಎಲ್ಲ ಕಡೆಯೂ ಹರಡಿದೆ. ಎದುರಾಳಿಯನ್ನು ಕಂಡರೆ ಹಂದಿಯಂತೆ ಎಗರಿನಿಂತು ಎದುರಿಸುತ್ತದೆ. ಗಾತ್ರ ಸಾಧಾರಣ. ತುಪ್ಪಳ ಒರಟು. ಸ್ತನಗಳ ಸಂಖ್ಯೆ 16–18.

2. ಮುಖಮಲ್ ಹೆಗ್ಗಣ: ಇದರಲ್ಲಿ ಎರಡು ಜಾತಿಗಳಿವೆ. ಗುನೋಮಿನ್ ಮತ್ತು ರ್‍ಯಾಟಸ್, ಮೊದಲಜಾತಿಯ ಪ್ರಾಣಿಗಳಲ್ಲಿ ಸ್ತನಗಳು 10–12. ಉದರದ ಮೇಲಿನ ಕೂದಲ ಛಾಯೆ ಬಿಳಿ. ಮೇಲ್ಭಾಗದ ತಳಭಾಗದ ಬಣ್ಣಗಳು ಪಕ್ಕದಲ್ಲಿ ಬೆರೆತಿಲ್ಲ. ತಲೆ ಮೈ ಕೂಡಿ ಉದ್ದ 15–26 ಸೆಂ.ಮೀ. ಇವೆರಡು ಜಾತಿಗಳಿಂದಲೂ ಬೆಳೆಗಳಿಗೆ ಭಾರಿ ಪ್ರಮಾಣದ ನಷ್ಟವುಂಟು. ದಕ್ಷಿಣ ಭಾರತದಲ್ಲಿ ಇವುಗಳ ಹಾವಳಿ ಬಲು ಹೆಚ್ಚು. ಬತ್ತ, ರಾಗಿ, ಮರಗೆಣಸು, ತೆಂಗಿನ ಸಸಿ, ತರಕಾರಿ, ಹಣ್ಣಿನ ಗಿಡ ಇವಕ್ಕೆಲ್ಲ ಭಾರಿನಷ್ಟ ಉಂಟುಮಾಡುತ್ತವೆ. ಗದ್ದೆ ಏರಿಗಳಲ್ಲಿ, ಕಾಲುವೆ ಪಕ್ಕದಲ್ಲಿ ಚರಂಡಿ ಸಂದುಗಳಲ್ಲಿ ಇವುಗಳ ವಾಸ. ಬಿಲ 40'–60 ಸೆಂ.ಮೀಗಳಷ್ಟು ಆಳ. ಒಂದೊಂದು ಗೂಡಿಗೂ ನಾಲ್ಕೈದು ದ್ವಾರಗಳಿರುವುದುಂಟು. ಮುಖ್ಯ ಸುರಂಗದಿಂದ ನಾಲ್ಕೈದು ಉಪ ಸುರಂಗಗಳು ಕವಲೊಡೆದಿರುತ್ತವೆ. ಒಂದೊಂದು ಬಿಲದಲ್ಲೂ ಒಂದು ಜೊಡಿ ಮಾತ್ರ ವಾಸಿಸುತ್ತವೆ. ಹುಲ್ಲು, ಎಲೆ, ಬಟ್ಟೆ ಚಿಂದಿ – ಇವನ್ನೆಲ್ಲ ಹಾಕಿ ಗೂಡಿನಲ್ಲಿ ಹಾಸಿಗೆ ಮಾಡಿ ಮರಿಗಳಿಗೆ ತಾಯಿ ಮೆತ್ತನೆಯ ಸ್ಥಳ ಕಲ್ಪಿಸುತ್ತದೆ. ಒಂದು ಸಲಕ್ಕೆ ಹತ್ತಕ್ಕಿಂತಲೂ ಹೆಚ್ಚು ಮರಿ ಹಾಕುತ್ತದೆ. ಬತ್ತ, ರಾಗಿ, ಹುಲ್ಲು–ಇವುಗಳ ತೆನೆಗಳನ್ನು ಸಾಗಿಸಿ ಗೂಡಿನಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತದೆ. ಮಖಮಲ್ ಹೆಗ್ಗಣಗಳು ಅತಿ ಚುರುಕು ; ಅಪಾಯದ ಕುರುಹನ್ನು ಬಲುಬೇಗ ಗ್ರಹಿಸಿ ಅಪಾಯ ಒದಗಿದಾಗ ಬಲು ಜಾಣ್ಮೆಯಿಂದ ಓಡಿಹೋಗಿ ಶತ್ರುಗಳಿಂದ ತಪ್ಪಿಸಿಕೊಳ್ಳುತ್ತವೆ. ಕಳ್ಳ ಮಾರ್ಗಗಳಿಂದ ಗುಪ್ತ ಸ್ಥಳಕ್ಕೆ ಹೋಗಿ ಸೇರಿ ಬಿಡುತ್ತವೆ. ಕೆಲವೇಳೆ, ನೀರಿನಲ್ಲೂ ಅಡಗಿಕೊಳ್ಳುವುದುಂಟು. ವಿಧಿಯಿಲ್ಲದೆ ಶತ್ರುಗಳಿಗೆ ಸಿಕ್ಕಿದಾಗ ಸುಮ್ಮನೆ ಮಣಿಯುವುದಿಲ್ಲ. ಗುಟುರುಹಾಕಿ ವೀರಾವೇಶದಿಂದ ಕಾದಾಡಿ ಸಾಯುತ್ತವೆ. ಇದರ ಮರಿಗಳು ಹುಟ್ಟಿದ ಮೇಲೆ ಕೆಲವು ದಿವಸಗಳ ತನಕ ಕಣ್ಣು ಬಿಡುವುದಿಲ್ಲ ; ಆ ಕಾಲದಲ್ಲಿ ತಾಯಿಹೆಗ್ಗಣ ಮರಿಗಳಿಗೆ ಮೊಲೆಯೂಡಿಸಿ ರಕ್ಷಣೆಯೀಯುತ್ತದೆ. ಆದರೂ ಕೆಲವು ಪ್ರಭೇದಗಳು ಅಪೂರ್ವವಾಗಿ ತಮ್ಮ ಮರಿಗಳನ್ನೇ ತಿಂದು ಬಿಡುವುವೆಂದು ವರದಿಯಾಗಿದೆ.

ಹೊಲದ ಇಲಿ

3. ಮನೆ ಇಲಿ: ರ್‍ಯಾಟಸ್ ರೌಟಿನಿ, ರ್‍ಯಾಟಸ್ ರೂಫಿಸೆಸ್ ಎಂಬೆರಡು ಪ್ರಭೇದಗಳನ್ನು ಈ ಹೆಸರಿನಿಂದ ಕರೆಯುವುದುಂಟು. ಇವಕ್ಕೆ ಕಪ್ಪಿಲಿ ಎಂಬ ಹೆಸರೂ ಉಂಟು. ರ್‍ಯಾ. ರೌಟಿನಿಗೆ ಉದರದ ಕೂದಲು ಸ್ಲೇಟಿನ ಬಣ್ಣ. ಮೇಲಿನ ಕೆಳಗಿನ ಬಣ್ಣಗಳು ಪಕ್ಕದಲ್ಲಿ ಬೆರೆತಂತಿವೆ. ಮಾನವನ ನಿವಾಸ ಇವುಗಳಿಗೆ ಬಹು ಪ್ರಿಯವೆನಿಸುವ ವಾಸಸ್ಥಳವಾದ್ದರಿಂದ ಇವಕ್ಕೆ ಈ ಹೆಸರು. ರ್‍ಯಾ. ರೂಫೆಸೆಸ್‌ಗೆ ಅಂಗಾಲಿನಲ್ಲಿ ಆರು ಅಥವಾ ಕಮ್ಮಿ ಮೆತ್ತೆಗಳು ಇರುತ್ತವೆ. ಒಟ್ಟು ಸ್ತನಗಳ ಸಂಖ್ಯೆ 8. ಮನೆ ಇಲಿ ಚಿಕ್ಕವು. ತಲೆ ದೇಹ 12–20 ಸೆಂ.ಮೀ. ಉದ್ದ. ಇವು ಏಷ್ಯದಲ್ಲಿ ಉಗಮಿಸಿ ವಿಶ್ವದ ಇತರ ಖಂಡಗಳಿಗೆ ವಾಣಿಜ್ಯ ಸಾರಿಗೆಗಳ ಮೂಲಕ ಹರಡಿವೆ. ರ್‍ಯಾಟಸ್ ನಾರ್ವಿಜಿಕಸ ಎಂಬ ಪ್ರಭೇದ ಪ್ರಂಪಚದ ಅನೇಕ ಕಡೆ ಹರಡಿದೆ. ಎಲ್ಲ ಪ್ರಭೇದಗಳೂ ಮಾನವನೊಡನೆಯೂ ಅವನ ಕೃಷಿಕ್ಷೇತ್ರಗಳ್ಲೂ ವಾಸಿಸುತ್ತವೆ.


ಥೈಲೆಂಡಿನ ಇಲಿ


ಸೂರಿಲಿ

ಚಿಂಚಿಲ್ಲ ಇಲಿ


ಮೇಲಿನದು: ಕೌಚ ಇಲಿ. ಕೆಳಗಿನದು: ಪಾಲ್ಲಿಡ್ ಇಲಿ


ಉತ್ತರ ಅಮೆರಿಕದ ಹುಲ್ಲುಗಾವಲು ಇಲಿ ಕುಪ್ಪಳಿಸುತ್ತ ಓಡುತ್ತದೆ


ಗದ್ದಲ ಮಾಡುವ ಇಲಿ



ರಾಜಾ ಇಲಿ

ರ್‍ಯಾ. ನಾರ್ವಿಜಿಕಸ್ ಪ್ರಭೇದ ತೋಟ ಹೊಲಗಳಲ್ಲೂ ಇರುವುವು. ಇನ್ನು ಕೆಲವು ಪ್ರಭೇದಗಳು ಎತ್ತರದಲ್ಲಿ ಎಂದರೆ ಸೂರು, ಹಂಚಿನ ಸಂದು, ಮೇಲ್ಛಾವಣಿ ಮರಗಳ ಪೊಟರೆ ಇತ್ಯಾದಿ ಸ್ಥಳದಲ್ಲಿ ವಾಸಿಸುತ್ತವೆ. ಮನೆ ಇಲಿ ನೋಡಲು ಸಣ್ಣ ಪ್ರಾಣಿಯಾದರೂ ಅದರ ಪಿಡುಗು ವಿಪರೀತ. ಸಂಗ್ರಹಿಸಿಟ್ಟ ಕಾಳು ಕಡ್ಡಿ ದವಸಧಾನ್ಯಗಳನ್ನೆಲ್ಲ ಒಳಗೇ ತಿಂದುಹಾಕಿ ಸಿಪ್ಪೆಯನ್ನು ಹಾಗೇ ಉಳಿಸಿ ಹೋಗುತ್ತದೆ. ಇನ್ನು ಕೆಲವು ವೇಳೆ ತಿಂದೂ ಅದಕ್ಕೂ ಹೆಚ್ಚು ಪಾಲನ್ನು ಹರಡಿ ಹೊಲಸುಮಾಡಿ ಕೆಡಿಸುತ್ತದೆ. ಜೊತೆಗೆ ಇದು ವರ್ಷಕ್ಕೆ 4–5 ಬಾರಿ, ಒಂದೊಂದು ಬಾರಿಗೂ 10–12 ಮರಿ ಹಾಕುವುದರಿಂದ ಇದರ ಸಂತಾನ ಬಹು ತೀವ್ರವೇಗ ದಲ್ಲಿ ಹೆಚ್ಚುತ್ತದೆ. ಇದರಿಂದಲೇ ಒಂದೊಂದು ಸ್ಥಳದಲ್ಲಿ ಇದ್ದಕ್ಕಿದ್ದ ಹಾಗೆಯೆ ಇವುಗಳ ಪಿಡುಗು ಎದ್ದು ತೋರುವುದು. ಬಿಳಿ ಹೊಟ್ಟೆಯ ರೌಟನಿ ಇಲಿ ತೆಂಗಿನ ಫಸಲಿಗೆ ಕಂಟಕ. ಮರದ ಮೇಲೆ ಗೂಡುಮಾಡಿಕೊಂಡು ತೆಂಗಿನ ಹೂವನ್ನು ತಿನ್ನುವುದು, ಎಳೆಯ ಕಾಯಿಗಳ ನೀರು ಹೀರಿ ಒಣಗಿಸುವುದು, ಹೀಚುಕಾಯಿಗಳನ್ನು ಕಡಿದೆಸೆಯುವುದು ಇತ್ಯಾದಿ ಕಾರ್ಯಗ ಳಿಂದ ತೋಟಕ್ಕೆ ತೀರ ನಷ್ಟವುಂಟುಮಾಡುತ್ತದೆ. ರೂಫಿಸೆಸ್ ಇಲಿಯಿಂದ ದವಸಧಾನ್ಯಗಳಿಗೂ ವಾಣಿಜ್ಯ ಪ್ರಮುಖತೆಯ ಸಂಬಾರಾದಿ ವಸ್ತುಗಳಿಗೂ ತೀರ ಅಪಾಯ ಸಂಭವಿಸುವುದುಂಟು. ಮಾನವನ ಆಹಾರ ಸಾಮಗ್ರಿಗಳ ನಾಶದಲ್ಲಿ ಈ ಇಲಿಗಳು ಮುಖ್ಯ ಪಾತ್ರ ವಹಿಸುತ್ತವೆ.

4. ಹುಲ್ಲಿಲಿ: ಮಿಲ್ಲಾರ್ಡಿಯ ಎಂಬ ಜಾತಿಯವನ್ನೂ ಮಸ್ ಎಂಬ ಜಾತಿಯವನ್ನೂ ಒಟ್ಟಿಗೆ ಜನಸಾಮಾನ್ಯದಲ್ಲಿ ಈ ಹೆಸರಿನಿಂದ ಕರೆಯುವುದುಂಟು. ಮಿಲ್ಲಾರ್ಡಿಯ ವಿಲ್ಡಾಡ ಎಂಬ ಪ್ರಭೇದವೇ ಮನೆಯ ಸುಂಡಿಲಿ. ಇದರ ಮೂತಿ ಕಿರಿದು, ಮೊನಚು. ಮಸ್ ಜಾತಿಯ ಇಲಿಗಳ ಉದರ ನೀಲಿಮಿಶ್ರಿತ ಬೂದುಬಣ್ಣದ್ದಾಗಿರುತ್ತದೆ. ಸಾಮಾನ್ಯವಾಗಿ ಇವು ತೀರ ಸಣ್ಣ ಜಾತಿಗಳು. ತಲೆ, ಮೈ ಉದ್ದ 12 ಸೆಂ.ಮೀ. ಕೂದಲು ಬಲು ನುಣುಪು. ಕುಷ್ಕಿ ಜಮೀನಿನ ಪೊದೆಗಳಲ್ಲೊ ಅವುಗಳ ಹತ್ತಿರದ ಬಿಲಗಳಲ್ಲೊ ವಾಸಿಸುತ್ತವೆ. ಕಲ್ಲುಗುಡ್ಡೆಗಳಲ್ಲೂ ಮಣ್ಣಿನ ಬಿರುಕುಗಳಲ್ಲೂ ಇತರ ಜಾತಿ ಇಲಿಗಳ ಬಿಲದಲ್ಲೂ ವಾಸಿಸುವುದುಂಟು. ಬಿಲ ಕೊರೆಯುವ ಶಕ್ತಿ ಅಷ್ಟಾಗಿ ಇದಕ್ಕೆ ಇಲ್ಲ. ಒಂದೇ ಗೂಡಿನಲ್ಲಿ ಹಲವಾರು ಇಲಿಗಳು ವಾಸಿಸುವುದುಂಟು. ಬತ್ತ ಹತ್ತಿ ಮುಂತಾದ ಬೆಳೆಗಳಿಗೆ ಇವುಗಳಿಂದ ತುಂಬ ಹಾನಿಯುಂಟು. ಇವು ನೀರಿನಲ್ಲಿ ಇಳಿಯಲಾರವು. ಅನೇಕ ವೇಳೆ ಮಳೆಯನೀರಿನ ಪ್ರವಾಹ ಬಿಲಕ್ಕೆ ನುಗ್ಗಿ ಇವುಗಳ ಸಾವಿಗೆ ಕಾರಣವಾಗುತ್ತದೆ.

5. ಚಿಟ್ಟಿಲಿ: ಮಸ್ ಮಸ್ಕ್ಯುಲಸ್, ಮೂಸ್ ಡೂಬಿಯಸ್ ಮತ್ತು ಲೆಗ್ಗಡ ಜಾತಿಯ ಕೆಲವು ಪ್ರಭೇದಗಳ ಒಟ್ಟು ಹೆಸರು. ಮಸ್ ಮಸ್ಕುಲಸ್ ಪ್ರಭೇದದ ಉದರ ಮಾಸಲು ಕಂದು ಛಾಯೆಯ ಹಳದಿ. ಮಸ್ ಡೂಬಿಯಸ್ ಪ್ರಭೇದ ಕಡು ಇಲಿ; ಇದರ ಮೂತಿ ಬಲು ಉದ್ದ. ಲೆಗ್ಗಡ ಜಾತಿಯ ಪ್ರಭೇದಗಳು ಸಣ್ಣ ಗಾತ್ರದವು. ಮೊದಲಿಗೆ ಯುರೋಪು ಉತ್ತರ ಆಫ್ರಿಕಗಳ ನಿವಾಸಿಗಳಾದ ಮಸ್ ಪ್ರಭೇದಗಳು ಕಾಲಕ್ರಮದಲ್ಲಿ ಭಾರತ ಮುಂತಾದ ದೇಶಗಳಿಗೂ ಹರಡಿದಂತೆ ತೋರುತ್ತದೆ. ಇವು ಗಾತ್ರದಲ್ಲಿ ಬಲುಸಣ್ಣ. ಮೈ ಉದ್ದ 6–8ಸೆಂ.ಮೀ. ಬಾಲದ ಉದ್ದ 6–9ಸೆಂ.ಮೀ. ಬಾಲದಲ್ಲಿ ಕೂದಲು ಕಡಿಮೆ. ವಾಸ ಹೆಚ್ಚಾಗಿ ಮನೆಗಳಲ್ಲಿ; ವಿರಳವಾಗಿ ತೋಟ ಹೊಲಗಳಲ್ಲಿ ತುಂಬ ಚಟುವಟಿಕೆಯಿಂದ ಕಂಬ, ಮರ, ಒರಟು, ಗೋಡೆ ಇವನ್ನು ಸರಾಗವಾಗಿ ಹತ್ತುತ್ತವೆ. ದೂರಕ್ಕೆ ಚಿಮ್ಮಿ ನೆಗೆಯುವುದೂ ಉಂಟು. ದವಸ ಧಾನ್ಯಗಳನ್ನು ತಿಂದುಹಾಕಿ ಮಾನವನಿಗೆ ನಷ್ಟವುಂಟು ಮಾಡುತ್ತವೆ. ಒಂದೊಂದು ಸಲಕ್ಕೂ 7–8 ಮರಿಗಳಂತೆ ವರ್ಷಕ್ಕೆ ಮೂರು ನಾಲ್ಕು ಬಾರಿ ಈಯುತ್ತವೆ.

6. ಸುಂಡಿಲಿ: ವ್ಯಾಂಡಲೂರಿಯ ಜಾತಿಯ ಪ್ರಭೇದಗಳನ್ನು ಈ ಹೆಸರಿನಿಂದ ಕರೆಯುವುದುಂಟು. ಗಾತ್ರದಲ್ಲಿ ಇವು ಚಿಕ್ಕವು. ಮುಖದ ಮೇಲೆ ಕಪ್ಪು ಗುರುತುಗಳಿಲ್ಲ. ಮೈಬಣ್ಣ ಕಂದು. ಪಾದಗಳು ಬಿಳಿ. ತಲೆ–ಮೈ ಉದ್ದ 5 - 8ಸೆಂ.ಮೀ; ಬಾಲದ ಉದ್ದವೂ ಅಷ್ಟೇ. ಹೊಲಗಳಲ್ಲಿ ಆಳವಾದ ಆದರೆ ತೀರ ಉದ್ದವಿಲ್ಲದ ಬಿಲಗಳಲ್ಲೂ ಕಲ್ಲು ರಾಶಿಗಳಲ್ಲೂ ವಾಸಿಸುತ್ತವೆ. ರಾಗಿ, ಹತ್ತಿ ಮುಂತಾದ ಬೆಳೆಗಳಿಗೆ ಸ್ವಲ್ಪ ಮಟ್ಟಿಗೆ ನಷ್ಟವುಂಟುಮಾಡುತ್ತವೆ.

7. ಮರ ಇಲಿ: ವ್ಯಾಂಡಲೂರಿಯ ಓಲಿರೋನಿಯ ಎಂಬ ಪ್ರಭೇದ ಮರಗಳಲ್ಲಿ ವಾಸಿಸುವುದು ಹೆಚ್ಚು. ಆದ್ದರಿಂದ ಈ ಹೆಸರು. ಇದರ ತುಪ್ಪಟ ಒರಟು. ಸುಮಾರು 6 ಬಣ್ಣದ ಬಗೆಗಳಿವೆ. ಮೈ ಉದ್ದ 5–9 ಸೆಂ.ಮೀ, ಬಾಲದ ಉದ್ದ 10-12 ಸೆಂ.ಮೀ. ಸ್ತನ ನಸುಗೆಂಪು, ತಳದಲ್ಲಿ ಬಿಳುಪು. ಮರಗಳಲ್ಲಿ ಎಲೆ ಹುಲ್ಲುಗಳಿಂದ ಗೂಡು ಕಟ್ಟುತ್ತದೆ. ತೆಂಗಿನ ಮರಗಳಲ್ಲೂ ಬಿದಿರು ಮೆಳೆಗಳಲ್ಲೂ ಗುಡಿಸಲ ಸೂರುಗಳಲ್ಲೂ ವಾಸಿಸುವುದುಂಟು.

8. ಪೊದೆ ಇಲಿ: ಗೋಲುಂಡ ಎಲಿಯಟಿ ಎಂಬ ಪ್ರಭೇದಕ್ಕೆ ಈ ಹೆಸರುಂಟು. ಗುಳ್ಳಂದಿಯೆಂದೂ ಇದನ್ನು ಕರೆಯುವುದುಂಟು. ತುಪ್ಪಳ ಒರಟು. ಮುಳ್ಳುಗಳಿಲ್ಲ. ಮೇಲಿನ ಬಣ್ಣ ಹಳದಿ ಮಿಶ್ರಿತ ಕಂದು ; ಕಪ್ಪು ನಸುಗೆಂಪು ಚುಕ್ಕೆಗಳುಂಟು; ಕೆಳಗೆ ಕಂದು ಮಿಶ್ರಿತ ಬಿಳಿ ಅಥವಾ ಬೂದು. ದೇಹದ ಉದ್ದ 10 ಸೆಂ.ಮೀ. ಬಾಲದ ಉದ್ದ 10 ಸೆಂ.ಮೀ. ದಟ್ಟವಾದ ಪೊದೆಗಳಲ್ಲಿ ನಾರು ಕಡ್ಡಿಗಳನ್ನು ಹೆಣೆದು ಅಗಲವಾದ ಗೂಡು ಕಟ್ಟುತ್ತದೆ. ಇತರ ಜಾತಿಯ ಇಲಿಗಳಂತೆ ಚುರುಕಾಗಿಲ್ಲ. ನೆಗೆಯುವ ಸಾಮರ್ಥ್ಯವನ್ನೂ ಹೊಂದಿಲ್ಲ. ಕಂದಮೂಲಗಳು ಇದರ ಆಹಾರ. ಒಂಟೊಂಟಿಯಾಗಿ ವಾಸಿಸುವುದುಂಟು. ಸಿಲೋನಿನಲ್ಲಿ ಇವು ಕಾಫಿ ತೋಟದ ಬಳಿ ವಾಸಿಸುತ್ತ ಗಿಡದ ಎಲೆ, ಹೂ ಮೊಗ್ಗುಗಳನ್ನು ತಿಂದು ಹಾಕುತ್ತವೆ.

9. ಬಿಳಿ ಇಲಿ: ಟ್ಯಾಟೀರ ಕುವಿಯೇರಿ ಎಂಬ ಪ್ರಭೇದವನ್ನು ಬಿಳಿ ಇಲಿ ಎನ್ನುವರು. ಮೈ ಉದ್ದ 16-20 ಸೆಂ.ಮೀ. ಕಣ್ಣು, ಕಿವಿ ಕಿರಿದು, ಮೊಂಡಾದ ಮುಸುಡಿ. ಸಣ್ಣ ಬಾಲ. ದೇಹದ ಮೇಲ್ಗಡೆ ಮಾಸಲು ಕಂದು ತಳದಲ್ಲಿ ಬೂದಿಮಿಶ್ರಿತ ಬಿಳುಪು. ಇವು ಉತ್ತ ಹೊಲಗಳ ಮಣ್ಣಿನಲ್ಲಿ ಬಿಲಮಾಡಿಕೊಂಡು ವಾಸಿಸುತ್ತವೆ. ಹೊರಗೆ ಬರಲೂ ಒಳಕ್ಕೆ ಹೋಗಲೂ ಹಲವಾರು ದ್ವಾರಗಳನ್ನು ಮಾಡಿಕೊಂಡಿರುತ್ತವೆ. ಸಂಶಯ ಹುಟ್ಟಿದೊಡನೆ ಅಪಾಯ ಕಂಡುಬಂದ ಮಾರ್ಗವನ್ನುಳಿದು ಮಿಕ್ಕ ಯಾವುದಾದರೂ ದ್ವಾರದ ಮೂಲಕ ಜಾಣ್ಮೆಯಿಂದ ನುಸುಳಿ ತಪ್ಪಿಸಿಕೊಳ್ಳುವುವು. ಮರಿಗಳಿಗೆ ಗರಿಕೆ ಹುಲ್ಲಿನಿಂದ ಮೆತ್ತನೆಯ ಗೂಡನ್ನು ನಿರ್ಮಿಸುತ್ತವೆ.

ಬಿಳಿಯ ಇಲಿ ರಾಗಿ, ಜೋಳ, ನವಣೆ, ಅವರೆ, ತೊಗರಿ, ಉದ್ದು, ಹೆಸರು, ಹಲಸಂದೆ, ಹುಚ್ಚೆಳ್ಳು, ಕಡಲೆಕಾಯಿ, ಹರಳು ಮಂತಾದವನ್ನು ತಿನ್ನುತ್ತದೆ. ಹುಲ್ಲು ಗೆಡ್ಡೆಗಳನ್ನೂ ತಿನ್ನುವುದುಂಟು. ಕೊಡತಿ ಹುಳುಗಳನ್ನು ತಿನ್ನುವುದನ್ನೂ ನೋಡಲಾಗಿದೆ. ವ್ಯವಸಾಯಕ್ಕೆ ತೊಂದರೆಯೊಡ್ಡುವ ಹುಲ್ಲುಗೆಡ್ಡೆಗಳನ್ನೂ ಕೊಡತಿ ಹುಳುಗಳನ್ನೂ ತಿನ್ನುವುದರಿಂದ ರೈತನಿಗೆ ಸ್ವಲ್ಪಮಟ್ಟಿಗಾದರೂ ಬಿಳಿಯ ಇಲಿ ಸಹಾಯಕ; ಆದರೆ ಅದು ದವಸಧಾನ್ಯ ಗಳಿಗೆ ಮಾಡುವ ನಷ್ಟದ ಪ್ರಮಾಣವನ್ನು ಪರಿಗಣಿಸಿದರೆ ಈ ಸಹಾಯ ಅಷ್ಟು ದೊಡ್ಡದೆನಿಸದು. (ಎನ್.ಎಸ್.ವಿ.)

ಬಿಳಿಯ ಕಾಲಿನ ಇಲಿ

10. ಮೂಗಿಲಿ (ಷ್ರೂ): ಇವು ಇಲಿಗಳಂತಿರುವ ಕೀಟಭಕ್ಷಕಗಳು. ಇನ್‌ಸೆಕ್ಟಿವೊರ ಎಂಬ ವರ್ಗಕ್ಕೆ ಸೇರಿದ ಸೋರಿಕೊ ಇಡಿಯಾ ಪಂಗಡಕ್ಕೆ ಸೇರಿವೆ. ಅವುಗಳಲ್ಲಿ ಕೆಲವು ನೆಲ ಜೀವಿಗಳು. ಉಳಿದವು ಜಲವಾಸಿಗಳು. ದಕ್ಷಿಣ ಅಮೆರಿಕದ ಉಷ್ಣವಲಯ ಮತ್ತು ಆಸ್ಟ್ರೇಲಿಯಗಳಲ್ಲಿ ಹೊರತು ಪ್ರಪಂಚದ ಮಿಕ್ಕೆಲ್ಲ ಭಾಗಗಳಲ್ಲೂ ಇವು ನೆಲೆಸಿವೆ. ದಕ್ಷಿಣ ಅಮೆರಿಕದಲ್ಲಿ ಕೂಡ ಇವು ಉತ್ತರಭಾಗಗಳಲ್ಲಿ ಗೋಚರಿಸುತ್ತವೆ. ಗಾತ್ರದಲ್ಲೂ ರೂಪದಲ್ಲೂ ಮೂಗಿಲಿಗಳು ಸಣ್ಣಿಲಿಗಳಂತೆ. ಆದರೆ ಇವಕ್ಕೆ ಉದ್ದವಾಗಿಯೂ ಮೊನಚಾಗಿಯೂ ಇರುವ ಮೂತಿಯುಂಟು. ಕಣ್ಣು ಚಿಕ್ಕದು, ಮೈಯನ್ನು ಮುಚ್ಚಿರುವ ತುಪ್ಪಳ ಮೃದುವಾಗಿಯೂ ರೇಷ್ಮೆಯಂತೆಯೂ ಇದೆ. ಮುನುಗಿನಂಥ ವಾಸನೆಯನ್ನು ಹರಡುತ್ತವೆ. ಹುಳು, ಗೊಂಡಿಹುಳು, ಕೀಟ, ಕೀಟಗಳ ತತ್ತಿ ಮುಂತಾದವು ಇವಕ್ಕೆ ಆಹಾರ. ಮರದ ದಿಮ್ಮಿಗಳ ಕೆಳಗೊ ಮರದ ಪೊಟರೆಗಳಲ್ಲೊ ನೆಲದಲ್ಲೊ ಇವು ಸಾಮಾನ್ಯವಾಗಿ ಗೂಡುಗಳನ್ನು ಕಟ್ಟುತ್ತವೆ. ಆಕಾರ ಬಟ್ಟಲಿನಂತೆ. ಒಣಹುಲ್ಲೇ ಕಟ್ಟುವ ಸಾಧನ. ಗೂಡಿಗೆ ಬಿಗಿಯಿಲ್ಲದ ಮುಚ್ಚಳಗಳಿರುತ್ತವೆ. ವರ್ಷಕ್ಕೆರಡು ಸಲ ಪ್ರತಿಯೊಂದು ಸಲವೂ 5–7 ಮರಿಗಳು ಹುಟ್ಟುತ್ತವೆ. ಸಂಪೂರ್ಣವಾಗಿ ಬೆಳೆಯುವವರೆಗೂ ಅವು ತಮ್ಮ ಹೆತ್ತವರೊಂದಿಗೆ ಗೂಡಿನಲ್ಲೇ ಇರುತ್ತವೆ. ಅವು ಬಾಳುವ ಕಾಲ ತುಂಬ ಕಿರಿದು. ಸುಮಾರು ಹದಿನೆಂಟು ತಿಂಗಳುಗಳಷ್ಟು ಮಾತ್ರ.

ಲೋಕದಲ್ಲಿ ಸಾಮಾನ್ಯವಾಗಿ ಕಂಡುಬರುವ ಮೂಗಿಲಿಗಳು ಯಾವುವೆಂದರೆ ಉತ್ತರ ಅಮೆರಿಕದ ಮೋಟುಬಾಲದ ಮೂಗಿಲಿ–ಬ್ಲಾರಿನ ಬ್ರೆವಿಕಾವುಡ, ಯುರೋಪು, ಆಫ್ರಿಕ ಮತ್ತು ಯುರೋಪಿನ ಎರಡು ಬಣ್ಣಗಳ ಬಿಳಿ ಹಲ್ಲಿನ ಮೂಗಿಲಿಗಳು–ಕ್ರೊಸಿಡ್ಯೂರ ಲ್ಯೂಕೋಡಾನ್, ಯುರೋಪಿನ ನೀರು ಮೂಗಿಲಿ–ನಿಯೋಮಿಸ್ ಫೋಡಿಯನ್ಸ್ ಮತ್ತು ಯೂರೇಷಿಯ ಮತ್ತು ಉತ್ತರ ಅಮೆರಿಕಗಳ ಸಾಮಾನ್ಯ ಮೂಗಿಲಿ–ಸೋರೆಕ್ಸ್ ಆರಾನಿಯಸ್. ಇಂಡಿಯದ ಸಾಮಾನ್ಯ ಮೂಗಿಲಿ–ಸೆನ್ ಕಸ್ ಕೊ ಇರೂಲಿಯಸ್ ಎಂಬುದು ಕೀಟಗಳನ್ನು ಹುಡುಕುತ್ತ ರಾತ್ರಿಯಲ್ಲಿ ಮನೆಯೊಳಕ್ಕೂ ಬರುತ್ತದೆ. ಅದರ ಕಂಕುಳಲ್ಲಿರುವ ಗ್ರಂಥಿಗಳಿಂದ ದ್ರವಿಸುವ ದ್ರವಕ್ಕೆ ಮುನುಗಿನ ವಾಸನೆ ಇದೆ.

ಯುರೋಪಿನ ನೀರು ಮೂಗಿಲಿಗಳಿಗೆ ಹೊಳೆಯುವ ತುಪ್ಪಳ ಇದೆ. ಇದು ಸುಲಭವಾಗಿ ನೀರಿನಲ್ಲಿ ನೆನೆಯುವುದಿಲ್ಲ. ಈ ಪ್ರಾಣಿಗಳು ತಮ್ಮ ಕಾಲದ ಅಧಿಕ ಅಂಶವನ್ನು ನೀರಿನಲ್ಲಿ ಕಳೆಯುತ್ತವೆ. ಮತ್ತು ಮುಂದಿನ ಕಾಲುಗಳನ್ನು ಚುಕ್ಕಾಣಿಯಂತೆ ಮಾತ್ರ ಉಪಯೋಗಿಸಿಕೊಳ್ಳುತ್ತ ಮೀನುಗಳಂತೆ ತಮ್ಮ ಮೈಯನ್ನು ಅಲುಗಾಡಿಸಿ ಈಜುತ್ತವೆ.

ಉಸಿರಾಡುವುದಕ್ಕೆ ಪದೇ ಪದೇ ಮೇಲಕ್ಕೆ ಬರುತ್ತವೆ. ಇವು ನೀರಿನೊಳಗಿರುವ ಕಲ್ಲುಗಳನ್ನು ತಿರುವಿಹಾಕಿ ಮೀನಿನ ತತ್ತಿಗಳನ್ನು ತಿನ್ನುತ್ತವೆ. ಒಮ್ಮೊಮ್ಮೆ ಇವು ಆಹಾರವನ್ನು ಹುಡುಕುತ್ತ ನೆಲದ ಮೇಲಕ್ಕೂ ಬರುವುದುಂಟು. ಹೊಳೆಯ ದಡಗಳಲ್ಲಿ ಇವು ಹುಲ್ಲು, ಬೇರು ಮತ್ತು ಎಲೆಗಳಿಂದ ಗೂಡುಗಳನ್ನು ಕಟ್ಟುತ್ತವೆ. **(ನೋಡಿ– ದಂಶಕಗಳು)**. (ಪಿ.ಎಸ್.ಆರ್.)

**ಹತೋಟಿ:** ಕೀಟವರ್ಗದ ಅನಂತರ ಮಾನವ ವರ್ಗಕ್ಕೆ ಅತ್ಯಂತ ಹೆಚ್ಚಿನ ಅಪಾಯಕಾರಿಯೆನಿಸಿರುವ ಪ್ರಾಣಿ ಮೂಷಕವರ್ಗ. ಈ ವರ್ಗದ ಪ್ರಾಣಿಗಳು ಮನುಷ್ಯ ಬೆಳೆಸುವ ಆಹಾರದಲ್ಲಿ ಗಣನೀಯ ಪ್ರಮಾಣವನ್ನು ತಿಂದು ಹಾಕುತ್ತವೆ; ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಚೆಲ್ಲಿ ಹೊಲಸುಗೊಳಿಸಿ ಹಾಳು ಮಾಡುತ್ತವೆ ; ಅವನ ಬಳಕೆಯ ಸಾಮಾನುಗಳಾದ ಮರ ಮುಟ್ಟುಗಳು, ಚರ್ಮದ ಸಾಮಾನುಗಳು, ಪುಸ್ತಕಗಳು, ಬಟ್ಟೆಗಳು, ಸಾಬೂನುಗಳು, ನಯನಾಜೂಕಿನ ಸಾಮಾನುಗಳು– ಇವನ್ನೆಲ್ಲ ಕಡಿದು ಹಾಳು ಮಾಡುತ್ತವೆ. ಅಲ್ಲದೆ, ಮಾನವನ ಸಾಮೂಹಿಕ ಹನನಕ್ಕೆ ಕಾರಣವೆನಿಸುವ ಸಾಂಕ್ರಾಮಿಕ ರೋಗಗಳನ್ನೂ ಹರಡುತ್ತವೆ. ಇನ್ನು ಅವುಗಳಿಂದ ಮಾನವನಿಗಾಗುತ್ತಿರುವ ಉಪಯೋಗ ಅಷ್ಟೇನೂ ಹೇಳಿಕೊಳ್ಳುವಂಥ ಸ್ಥಿತಿಯದಲ್ಲ. ಆದ್ದರಿಂದ ಮಾನವನ ಹಿತದೃಷ್ಟಿಯಿಂದ ಮೂಷಕವರ್ಗದ ಹತೋಟಿ ಅನಿವಾರ್ಯವೆನಿಸುತ್ತದೆ. ತನ್ನ ಅಸ್ತಿತ್ವಕ್ಕೆ ಕುಠಾರಪ್ರಾಯವೆನಿಸುತ್ತಿರುವ ಇಲಿ ಹೆಗ್ಗಣಗಳನ್ನು ಪೂರ್ಣವಾಗಿ ನಾಶಮಾಡುವುದಂತೂ ಸಾಧ್ಯವೇ ಆಗದ ಕೆಲಸ. ಸಹಸ್ರಾರು ವರ್ಷಗಳಿಂದಲೂ ಮಾನವ ಅವುಗಳ ಕೋಟಲೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೂ ಅವು ಉಳಿದುಕೊಂಡೇ ಬಂದಿವೆ. ಈ ಕಾರ್ಯದಲ್ಲಿ ಸದಾ ಬೆಳೆಯುವ ಅವುಗಳ ಬಾಚಿಹಲ್ಲು, ಚಿಕ್ಕಮೈ, ಎಲ್ಲ ರೀತಿಯ ಆಹಾರವನ್ನೂ ತಿಂದು ಅರಗಿಸುವ ಬಲಯುತವಾದ ಜೀರ್ಣಾಂಗ, ದೂರಪ್ರದೇಶಗಳಲ್ಲಿ ಹರಡುವ ಅವುಗಳ ಸಾಹಸ, ಎಂಥ ಸನ್ನಿವೇಶಗಳಿಗೂ ಹೊಂದಿಕೊಳ್ಳುವ ಅನುಸರಣಾ ಸಾಮರ್ಥ್ಯ, ಎಡರುತೊಡರುಗಳಿಂದ ಕಡೆಹಾಯುವ ಚಾಕಚಕ್ಯ., ಮೇಲಾಗಿ ತೀವ್ರವೇಗದಲ್ಲಿ ತಮ್ಮ ಸಂತಾನವನ್ನು ಹೆಚ್ಚಿಸಿಕೊಳ್ಳುವ ಅದ್ಭುತ ಶಕ್ತಿ–ಇವೆಲ್ಲ ಅವಕ್ಕೆ ನೆರವಾಗುತ್ತಿವೆ. ಆದರೂ ಮಾನವ ಅವುಗಳ ಹತೋಟಿಗಾದರೂ ಯತ್ನಿಸಬೇಕು. ಇದೊಂದು ಧರ್ಮಯುದ್ಧವೆಂದು ಭಾವಿಸಿ ಸಾರ್ವತ್ರಿಕವಾಗಿ ಹತೋಟಿ ಕಾರ್ಯವನ್ನು ಆರಂಭಿಸಬೇಕು. ಮಾನವನ ಭವಿಷ್ಯದ ದೃಷ್ಟಿಯಿಂದ ಇದು ತೀರ ಅಗತ್ಯ.

**ಗಮನಿಸಬೇಕಾದ ಅಂಶಗಳು:** ಇಲಿ ಹೆಗ್ಗಣಗಳ ಹತೋಟಿಗೆ ಬಳಸುವ ಕಾರ್ಯವಿಧಾನ ಎಲ್ಲ ಸಂದರ್ಭಗಳಲ್ಲೂ ಒಂದೇ ಆಗಿರಬಾರದು. ಮೊದಲನೆಯದಾಗಿ ಆಯಾ ಸನ್ನಿವೇಶಕ್ಕೆ ತಕ್ಕಂತೆ ಹತೋಟಿ ಕಾರ್ಯಕ್ರಮ ಇರಬೇಕಾದುದು ಅಗತ್ಯ. ಹೊಲ ಗದ್ದೆ ಬಯಲುಕಾಡುಗಳಲ್ಲಿ ಕೈಗೊಳ್ಳುವ ಹತೋಟಿ ಕ್ರಮ ಮನೆಗಳಲ್ಲಿ ಸಾಧ್ಯವಾಗದು. ಎರಡನೆಯದಾಗಿ, ಶತ್ರುವಿನ ವಾಸದ ಸ್ಥಳ, ಅದರ ಆಹಾರವೆಂಥದು, ಈಯುವ ಕಾಲ ಯಾವುದು ಇತ್ಯಾದಿ ಅಂಶಗಳನ್ನು ಗಮನಿಸಬೇಕು. ಮೂರನೆಯದಾಗಿ, ಅನುಸರಿಸುವ ಕಾರ್ಯಕ್ರಮ ಮನುಷ್ಯನಿಗೆ ಅಥವಾ ಅವನ ಸನ್ನಿವೇಶಗಳಿಗೆ ಮಾರಕವಾಗಬಾರದು. ಎಂದರೆ ಅವನ ಮಕ್ಕಳು ಮರಿಗಳಿಗೆ ಅಪಾಯಕಾರಿಯಾಗಬಾರದು, ಪರಿಸರ ಕಲುಷಿತವಾಗಬಾರದು; ಆಹಾರ ಮತ್ತು ಬಳಸುವ ಇತರ ಪದಾರ್ಥಗಳು ಕಲುಷಿತಗೊಳ್ಳಬಾರದು; ವಾಸದ ಕಟ್ಟಡಕ್ಕೆ ಅಪಾಯವಾಗಬಾರದು. ನಾಲ್ಕನೆಯದಾಗಿ, ಅದಕ್ಕೆ ತಗಲುವ ವೆಚ್ಚ ವಹಿಸಬೇಕಾದ ಶ್ರಮ– ಇವೆಲ್ಲ ಅತಿಯಾಗಬಾರದು. ಕೊನೆಯದಾಗಿ, ಆ ಕಾರ್ಯವನ್ನು ಸಾರ್ವತ್ರಿಕವಾಗಿ ಅನುಸರಿಸುವಾಗ ಉಪಕರಣಗಳು, ವಸ್ತುಗಳು, ಜನಸಹಾಯ, ಧನಸಹಾಯ, ತಾಂತ್ರಿಕ ನೆರವು ಇತ್ಯಾದಿಗಳನ್ನೆಲ್ಲ ಸಿದ್ಧಪಡಿಸಿಕೊಂಡೇ ಕಾರ್ಯ ಆರಂಭಮಾಡಬೇಕು.

ಹತೋಟಿಯ ವಿಧಾನಗಳು: ಇಲಿ ಹೆಗ್ಗಣಗಳ ಉಪಟಳವು ಸಾಮಾಜಿಕ ಸಮಸ್ಯೆಯೆಂಬುದು ಸ್ಪಷ್ಟವಾಗಿದ್ದರೂ ಅವುಗಳ ನಿಯಂತ್ರಣಕ್ಕೆ ನಿರ್ದಿಷ್ಟವೂ ಸಾರ್ವತ್ರಿಕವೂ ಆದ ಯೋಜನೆಗಳು ಪ್ರತ್ಯೇಕವಾಗಿ ಏರ್ಪಟ್ಟಿಲ್ಲ. ಕಟ್ಟಡಗಳ ನಿರ್ಮಾಣ ನಗರಗಳ ನೈರ್ಮಲ್ಯ, ಉಗ್ರಾಣಗಳ ನಿರ್ಮಾಣ ಇತ್ಯಾದಿಯಾದ ಕೆಲವು ಅನ್ಯಕಾರ್ಯ ಕ್ರಮಗಳ ಫಲವಾಗಿ ಸ್ವಲ್ಪಮಟ್ಟಿಗೆ ಅವುಗಳ ನಿಯಂತ್ರಣ ಕಾರ್ಯ ನಡೆಯುತ್ತಿದೆ. ಅವುಗಳ ಉಪಟಳವನ್ನು ತಡೆಯಲಾರದೆ ಪ್ರತಿ ಕುಟುಂಬವೂ ಅವನ್ನು ನಿಗ್ರಹಿಸಲು ಯತ್ನಿಸುತ್ತಲೇ ಇದೆ. ಆ ಕಾರ್ಯದಲ್ಲಿ ಅನುಸರಿಸುತ್ತಿರುವ ಹಲವಾರು ವಿಧಾನಗಳಲ್ಲಿ ಮುಖ್ಯವಾದ ಕೆಲವನ್ನು ಕೆಳಗೆ ಸೂಚಿಸಿದೆ.

1 ಇಲಿ ಹೆಗ್ಗಣಗಳ ಪ್ರವೇಶಕ್ಕೆ ಅವಕಾಶವೀಯದ ತಡೆಗಳು: ನಮ್ಮ ವಾಸದ ಮನೆ, ಉಗ್ರಾಣ, ಅಂಗಡಿ, ಕಾರ್ಖಾನೆ ಇತ್ಯಾದಿಗಳನ್ನು ಕಟ್ಟುವಾಗಲೇ ಕಲ್ಲು ಸಿಮೆಂಟುಗಳ ತಳಪಾಯ ಹಾಕಿ ಕಟ್ಟುವುದರಿಂದಲೂ ಬಚ್ಚಲು ಗವಾಕ್ಷಿಗಳಿಗೆ ಲೋಹದ ಬಲೆ ಜೋಡಿಸುವುದರಿಂದಲೂ ಅವು ಒಳಕ್ಕೆ ಪ್ರವೇಶಿಸದಂತಾಗುತ್ತದೆ. ಕಾಲಕ್ರಮದಲ್ಲಿ ಅದು ಶಿಥಿಲವಾಗಿ ಅವು ಕೊರೆದುಕೊಂಡು ಒಳನುಗ್ಗಬಹುದು. ಆದ್ದರಿಂದ ಕಟ್ಟಡ ಕಟ್ಟಿದ ಮೇಲೂ ಎಚ್ಚರಿಕೆಯಿಂದ ಆಗಾಗ ದುರಸ್ತು ಕಾರ್ಯ ಮಾಡಿಕೊಳ್ಳುತ್ತಿರಬೇಕು.

2 ಪಾಷಾಣ ಪ್ರಯೋಗ: ಇದು ಮೂಷಕನಿಗ್ರಹಕ್ಕೆ ಬಳಸುತ್ತಿರುವ ಮುಖ್ಯ ಉಪಾಯ. ರಾಸಾಯನಿಕ ಅಥವಾ ಸಸ್ಯಜನ್ಯ ಪಾಷಾಣಗಳನ್ನು ಆಹಾರದೊಡನೆ ಸೇರಿಸಿ ಇಲಿ ಹೆಗ್ಗಣಗಳು ಅದನ್ನು ತಿನ್ನುವಂತೆ ಮಾಡಿ ಅವನ್ನು ಕೊಲ್ಲುವುದೇ ಈ ಉಪಾಯದ ಮುಖ್ಯೋದ್ದೇಶ. ಆದರೆ ಮನೆಗಳಲ್ಲಿ ಈ ವಿಧಾನವನ್ನು ಅನುಸರಿಸುವಾಗ ಎಚ್ಚರಿಕೆ ಅಗತ್ಯ. ಇಲಿಗೆ ಎಂದಿಟ್ಟ ಪಾಷಾಣಮಿಶ್ರಿತ ಆಹಾರವನ್ನು ಅಜಾಗರೂಕತೆಯಿಂದ ಮಕ್ಕಳು ಮರಿಗಳಾಗಲಿ ಇತರ ಪಶುಪ್ರಾಣಿಗಳಾಗಲಿ ಸೇವಿಸಿದರೆ ಅಪಾಯ. ಹತೋಟಿ ಕಾರ್ಯದಲ್ಲಿ ಬಳಸುವ ಪಾಷಾಣಗಳು ಅನೇಕ. ನಂಜಿನ ಕೊರಡು ಸಸ್ಯದಿಂದ ದೊರಕುವ ಸ್ಟ್ರಿಕ್ನೀನ್ ಎಂಬ ವಿಷವಸ್ತು ತೀಕ್ಷ್ಣವಾದ ಪಾಷಾಣ. ಮೆಡಿಟರೇನಿಯನ್ ಸಮುದ್ರತೀರದಲ್ಲಿ ಬೆಳೆಯುವ ಬೆಳ್ಳುಳ್ಳಿಯಂಥ ರೆಡ್‍ಸ್ಕಿಲ್ ಎಂಬ ಸಸ್ಯದ ಕೆಂಪು ಗೆಡ್ಡೆಯೂ ಅಷ್ಟೇ ಶಕ್ತಿಯುತವಾದ ಪಾಷಾಣವೆಂಬುದು ವ್ಯಕ್ತಪಟ್ಟಿದೆ. ಇವು ಸಸ್ಯಜನ್ಯಪಾಷಾಣಗಳು. ಖನಿಜ ಜನ್ಯ ಪಾಷಾಣಗಳಲ್ಲಿ ಅನೇಕ ಬಗೆಯವು ಬಳಕೆಯಲ್ಲಿವೆ. ಆರ್ಸೆನಿಕ್ ಆಕ್ಸೈಡನ್ನು (ಗೌರಿ ಪಾಷಾಣ) 17ನೆಯ ಶತಮಾನದಿಂದಲೂ ಈ ಕಾರ್ಯಕ್ಕಾಗಿ ಬಳಸಲಾಗುತ್ತಿದೆ. 19ನೆಯ ಶತಮಾನದಲ್ಲಿ ರಂಜಕ ಮತ್ತು ಬೇರಿಯಂ ಕಾರ್ಬೊನೇಟುಗಳು ಬಳಕೆಗೆ ಬಂದಿವೆ. ಆದರೆ ಆಧುನಿಕ ಸತುವಿನ ಆಕ್ಸೈಡ್ ಆ ಕಾರ್ಯಕ್ಕೆ ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿದ್ದು ಅಮೆರಿಕದಲ್ಲಿ ಮುಖ್ಯವಾಗಿ ಥಾಲಿಯಂ ಸಲ್ಫೇಟ್ ಎಂಬ ವಸ್ತುವನ್ನು ಬಳಸುತ್ತಿದ್ದರು. ಥಯೋಯೋರಿಯ, ಸೋಡಿಯಂ, ಫ್ಲೋರೊ ಅಸಿಟೇಟ್ ಇವೂ ಪರಿಣಾಮಕಾರಿಯೆನಿಸುವ ಆಲ್ಫನಾಫ್ಥೈಲ್ ಇಲಿ ಪಾಷಾಣಗಳು. ಮೇಲಿನ ಪಾಷಾಣಗಳನ್ನು ಕಂಡುಹಿಡಿದಂತೆ ಸಸ್ಯಪಾಷಾಣಗಳ ಬಳಕೆ ನಿಂತು ಹೋಗುತ್ತಿದೆ. ಇಲಿ ಹೆಗ್ಗಣಗಳ ಹತೋಟಿಗೆ ಪಾಷಾಣವನ್ನು ಆರಿಸಿಕೊಳ್ಳುವಾಗ ತೀಕ್ಷ್ಣತೆ, ಸರಬರಾಜು, ಬೆಲೆ– ಈ ನಾಲ್ಕು ಅಂಶಗಳ ಕಡೆಗೆ ಗಮನಕೊಡಬೇಕಾಗುತ್ತದೆ. ಅದನ್ನು ಪ್ರಯೋಗಿಸುವಾಗ ಕಾಳುಕಡ್ಡಿಗಳೊಡನೆ, ಬಿಸ್ಕತ್ತು ಅಥವಾ ರೊಟ್ಟಿ ಚೂರುಗಳಲ್ಲಿ ಸೇರಿಸಿಡಬೇಕು. ಬಳಸುವ ಯಾವುದೇ ಪಾಷಾಣವಾಗಲಿ ಅದರ ಇತರ ಅಂಶಗಳೊಡನೆ ಮಿಶ್ರಿತವಾಗಿರಬಾರದು; ಅದರ ಮಾರಕ ಶಕ್ತಿ ಬಹುಬೇಗ ಕುಂದಿಹೋಗುವಂತಿರಬೇಕು; ಅವು ಇಲಿ ಹೆಗ್ಗಣದ ಅನ್ನನಾಳದ ರಸಗಳಲ್ಲಿ ಕರಗುವಂತಿರಬೇಕು; ಜೊತೆಗೆ ಅದರ ಮಾರಕಶಕ್ತಿ ತೀಕ್ಷ್ಣ ಸ್ವರೂಪದ್ದಾಗಿರಬೇಕು. ಪ್ರಯೋಗಿಸುವಾಗ ಅದನ್ನು ಮುಟ್ಟುವುದರಿಂದಲೋ ಆಹಾರ ನೀರುಗಳಿಗೆ ಸೋಂಕುವುದರಿಂದಲೊ ಇತರ ಬಿಸಿರಕ್ತ ಪ್ರಾಣಿಗಳಿಗೂ ಅಪಾಯ ತಟ್ಟುವು ದುಂಟು. ಆದ್ದರಿಂದ ಅದನ್ನು ಪ್ರಯೋಗಿಸುವವರು ಆ ಅಂಶಗಳನ್ನೆಲ್ಲ ತಿಳಿದು ಎಚ್ಚರಿಕೆ ಚೀಟಿ ಅಂಟಿಸಿ ಭದ್ರವಾದ ಸ್ಥಳದಲ್ಲಿಟ್ಟು ಬೀಗಹಾಕಬೇಕು. ಆಕಸ್ಮಿಕವಾಗಿ ಇದನ್ನೇನಾದರೂ ಸೇವಿಸಿಬಿಟ್ಟರೆ ಬೆಕ್ಕು, ನಾಯಿ ಮುಂತಾದ ಸಾಕುಪ್ರಾಣಿಗಳು ವಾಂತಿಮಾಡುವುದರಿಂದಲೇ ಪಾರಾಗಬಹುದು. ದನ, ಕುರಿ, ಹಸುಗಳಂಥ ಪ್ರಾಣಿಗಳು ವಾಂತಿಮಾಡಲಾರವು. ಅಂಥ ಸಂಧರ್ಭಗಳಲ್ಲಿ ಬಳಸಿದ ಪಾಷಾಣದ ವಿವರವನ್ನು ವೈದ್ಯರಿಗೆ ನೀಡಿ ಚಿಕಿತ್ಸೆ ಮಾಡಿಸುವುದು ಅಗತ್ಯ.

3 ವಿಷವಾಯು ಪ್ರಯೋಗ: ಇದು ಇಲಿ ಹೆಗ್ಗಣಗಳ ಹತೋಟಿಗೆ ನಗರಗಳಲ್ಲಿ ಬಳಸುವ ಸಾಮಾನ್ಯ ವಿಧಾನ. ಇದನ್ನು ಎರಡು ರೀತಿಯಲ್ಲಿ ಬಳಸುವುದುಂಟು. ಪೀಪಾಯಿಗಳಲ್ಲಿ ಅನಿಲ ಅಥವಾ ದ್ರವರೂಪದಲ್ಲಿ ಅದುಮಿಟ್ಟಿರುವ ವಿಷವಸ್ತುವನ್ನು ಇಲಿಗಳು ವಾಸಿಸುವ ಕಟ್ಟಡ ಬಿಲ ಮುಂತಾದುವುಗಳ ಬಳಿಕೆ ಬಿಡುಗಡೆ ಮಾಡುವುದು ಒಂದು ವಿಧಾನ. ವಿಷವಸ್ತುವನ್ನು ಪುಡಿಯ ರೂಪದಲ್ಲಿ ಉದುರಿಸಿದಾಗ ಅದು ಗಾಳಿಯ ಸಂಪರ್ಕದಿಂದ ಹೈಡ್ರೊಸಯನಿಕ್ ಆಮ್ಲದ ಅನಿಲವನ್ನು ಉತ್ಪತ್ತಿಯಾಗಿಸುವುದು ಇನ್ನೊಂದು ವಿಧಾನ. ಆಗ ವಿಷವಾಯು ಆವರಣವನ್ನೆಲ್ಲ ಆಕ್ರಮಿಸಿ ಕಂಟಕಪ್ರಾಯವಾಗುವುದು. ಎರಡನೆಯ ವಿಧಾನಕ್ಕೆ ಸಯನೈಡ್ ಲವಣವನ್ನು ಬಳಸುವುದರಿಂದ ಅದನ್ನು ಸಯನೈಡ್ ಧೂಳು ಉದುರಿಸುವುದು (ಸಯನೈಡ್ ಡಸ್ಟಿಂಗ್) ಎನ್ನುವರು. ಈ ಲವಣಕ್ಕೆ ಸಯನೊಗ್ಯಾಸ್ ಎಂಬ ಹೆಸರೂ ಉಂಟು. ಸಯನೈಡ್ ವಾಯುವನ್ನು ಹೊರಗಡೆಯ ಬಿಲಗಳಿಗೆ ಹಾಯಿಸಿ ಇಲಿ ಹೆಗ್ಗಣಗಳನ್ನು ಹತೋಟಿಗೆ ತರುವುದು ಸುಲಭ. ಮನೆಯ ಬಿಲಗಳಿಗೆ ಹಾಯಿಸುವಾಗ ಎಲ್ಲ ರೀತಿಯ ಎಚ್ಚರಿಕೆಗಳನ್ನೂ ವಹಿಸಬೇಕಾಗುತ್ತದೆ. ಪುಡಿಯನ್ನು ಬಳಸುವಾಗ ಬಿಲದ ಆಳದಲ್ಲಿ ಒಂದು ಚಮಚದ ಮೂಲಕ ಪುಡಿಯನ್ನು ಇರಿಸಿ ಬಿಲದ ಬಾಯಿಗೆ ಹಸಿಮಣ್ಣು ಮೆತ್ತಿ ಮುಚ್ಚಬೇಕು. ಅದರಿಂದ ಉತ್ಪತ್ತಿಯಾಗುವ ಹೈಡ್ರೊಸಯ ನೈಡ್ ಅನಿಲ ಬಿಲದೊಳಗೆ ತುಂಬಿಕೊಂಡು ಅಲ್ಲಿರುವ ಪ್ರಾಣಿಗಳು ಸಾಯುತ್ತವೆ. ಹೀಗೆಯೇ ಅವುಗಳಿರುವ ಬಿಲಗಳಿಗೆಲ್ಲ ವಿಷಪ್ರಯೋಗಿಸಬೇಕು. ವಿಷವಾಯುವನ್ನು ಪ್ರಯೋಗಿಸಲು ಸಯನೊಗ್ಯಾಸ್ ಫುಟ್ ಪಂಪ್ ಎಂಬ ರೇಚಕಯಂತ್ರವನ್ನು ಬಳಸುವುದುಂಟು. ಪಂಪನ ಹೊರಕೊಳವೆಯ ಹೊರತುದಿಯ ಕೆಳಗೆ ಒಂದು ಪುಡಿ ತುಂಬುವ ಪಾತ್ರೆಯಿದೆ. ಅದರ ಹೊರ ತುದಿಯಿಂದ ಹೊರಟ ರಬ್ಬರ್ ಕೊಳವೆಯನ್ನು ಬಿಲದೊಳಕ್ಕೆ ಹಾಯಿಸಿ ರೇಚಕವನ್ನು ಒತ್ತುವುದರಿಂದ ಪುಡಿ ತೆಳ್ಳನೆ ದೂಳಿನಂತೆ ಬಿಲದೊಳಕ್ಕೆ ಸಾಗುತ್ತದೆ. ಸಾಕಷ್ಟು ಧೂಳು ಒಳಹೊಕ್ಕ ಅನಂತರ ರಬ್ಬರ್ ಕೊಳವೆಯನ್ನು ತೆಗೆದು ಬಿಲದ ಬಾಯನ್ನು ಮಣ್ಣಿನಿಂದ ಮುಚ್ಚಬೇಕು. ಹೀಗೆಯೇ ಇತರ ಬಿಲಗಳಿಗೂ ವಾಯುವನ್ನು ತುಂಬಿ ಮುಚ್ಚಬೇಕು. ವಿಷವಾಯು ಪ್ರಯೋಗಿಸುವವರು ಕೆಲವು ಎಚ್ಚರಿಕೆ ತೆಗೆದುಕೊಳ್ಳಬೇಕು. ಪುಡಿಯ ಮುಚ್ಚಳವನ್ನು ತೆರೆಯುವಾಗ ಮುಖ ಅದರೆಡೆಗೆ ತಿರುಗಿಸಬಾರದು; ಪುಡಿ ತೆಗೆದುಕೊಂಡೊಡನೆ ಡಬ್ಬಕ್ಕೆ ಮುಚ್ಚಳ ಹಾಕಿ ಮುಚ್ಚಬೇಕು. ಹುಡಿಯನ್ನು ಬಟ್ಟೆಯಮೇಲೆ ಚೆಲ್ಲಿಕೊಳ್ಳಬಾರದು. ಉಪಯೋಗಿಸಿದ ತರುವಾಯ ಡಬ್ಬವನ್ನು ಮುಚ್ಚಿ ತೇವವಿರದ ರಕ್ಷಿತ ಸ್ಥಳದಲ್ಲಿ ಇಟ್ಟಿರಬೇಕು; ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.

4 ಯಂತ್ರೋಪಕರಣಗಳ ಬಳಕೆ: ಹಿಂದಿನಿಂದಲೂ ಇಲಿ ಹೆಗ್ಗಣಗಳ ಹತೋಟಿಗೆ ಕೆಲವು ಯಂತ್ರಗಳನ್ನು ಬಳಸುತ್ತಿರುವರು. ಅವುಗಳಲ್ಲಿ ಎರಡು ಮುಖ್ಯ ವಿಧಗಳುಂಟು. ಒಂದು ಪೆಟ್ಟಿಗೆಯ ಆಕಾರದಲ್ಲಿದ್ದು ಅದರ ತೆರೆದಿರುವ ಬಾಗಿಲಿಗೆ ಜೋಡಿಸಿರುವ ಸುರುಳಿಗೂ

ಆಹಾರ ನೇತುಹಾಕಿರುವ ಕೊಕ್ಕೆಗೂ ಸಂಬಂಧವಿರುತ್ತದೆ. ಇಲಿ ಆಹಾರ ತಿನ್ನಲು ಒಳಕ್ಕೆ ಬಂದು ಆಹಾರವನ್ನು ಮುಟ್ಟಿದೊಡನೆ ಬಾಗಿಲು ಧಿಡೀರೆಂದು ಮುಚ್ಚಿಕೊಳ್ಳುವುದು. ಇನ್ನೊಂದು ಕತ್ತರಿಯ ವಿಧಾನ. ಹಲ್ಲಿನ ಅಂಚಿನ ತೆರದ ದವಡೆಯ ಕತ್ತರಿಯ ನಡುವೆ ಆಹಾರ ಇರುತ್ತದೆ. ಇಲಿ ಆಹಾರ ಇರುವ ಹಲಗೆಯಮೇಲೆ ಕಾಲಿಟ್ಟೊಡನೆ ಕತ್ತರಿಯ ದವಡೆಗಳು ಚಂಗನೆ ಒಟ್ಟುಗೂಡಿ ಇಲಿಯ ಬೆನ್ನುಮೂಳೆಯನ್ನು ಇರುಕಿಸಿ ಕತ್ತರಿಸುತ್ತದೆ. ಈ ವಿಧಾನಗಳಿಂದ ಇಲಿ ಹೆಗ್ಗಣಗಳ ಹತೋಟಿ ಅಷ್ಟಾಗಿ ಯಶಸ್ವಿಯಾಗದು. ಅಲ್ಲದೆ ಆಕಸ್ಮಿಕವಾಗಿ ಒಮ್ಮೆ ಯಂತ್ರಗಳಿಂದ ತಪ್ಪಿಸಿಕೊಂಡ ಇಲಿ ಮತ್ತೆ ಅವುಗಳ ಬದಿಗೇ ಸುಳಿಯಲೊಲ್ಲದು.

5 ಮೂಷಕವರ್ಗದ ಸ್ವಾಭಾವಿಕ ವೈರಿಗಳ ಬಳಕೆ: ಹಾವುಗಳಿಗೆ ಇಲಿ ಬಹು ಮುಖ್ಯ ಆಹಾರವಾದ್ದರಿಂದ ಹಾವುಗಳು ಇಲಿಗಳ ಹತೋಟಿಗೆ ನೆರವಾಗುತ್ತವೆ. ಆದರೆ ಇಲಿಗಳ ಹಾವಳಿಗಿಂತ ಹಾವಿನ ಭೀತಿ ಮಾನವನಿಗೆ ಹೆಚ್ಚಿನ ಉಪಟಳವಾಗಬಹುದು. ಮೇಲಾಗಿ ಹಾವುಗಳನ್ನು ಮನೆಗಳಲ್ಲಿ ಅದಕ್ಕಾಗಿ ಬರಗೊಡುವುದು ಸಾಧ್ಯವಾಗದ ಕೆಲಸ. ಆದರೆ ಬೆಕ್ಕುಗಳಂಥ ಪ್ರಾಣಿಗಳನ್ನು ಮನೆಯಲ್ಲಿ ಸಾಕುವುದರಿಂದ ಅವು ಇಲಿಗಳನ್ನು ಕೊಂದುತಿಂದು ಬಲುಮಟ್ಟಿಗೆ ಹತೋಟಿಗೆ ತರುತ್ತವೆ. ನಾಯಿಗಳೂ ಈ ಕಾರ್ಯದಲ್ಲಿ ನೆರವಾಗಬಲ್ಲುವು. ಈಚೆಗೆ ಇಲಿಗಳಿಗೆ ಮಾರಕವಾಗಿರುವ ಕೆಲವು ರೋಗಕ್ರಿಮಿಗಳನ್ನು ಅವುಗಳ ಮೇಲೆ ಬಳಸುವುದು ನಡೆದಿದೆ. ಆದರೆ ಅವು ಮಾನವನಿಗೂ ಹರಡುವ ಸಂಭವವಿರುವುದರಿಂದ ಅದರ ಪ್ರಚಾರ ಅಷ್ಟಾಗಿ ಆಗಿಲ್ಲ.

6 ಇತರ ವಿಧಾನಗಳು: ಇಲಿಗಳ ಬಿಲಗಳಿಗೆ ನೀರು ತುಂಬುವುದು, ಬೆಂಕಿ ಇಡುವುದು, ಕಡ್ಡಿ ಕಸ ತುರುಕುವುದು ಇತ್ಯಾದಿಯಾಗಿ ಪ್ರಯತ್ನಿಸಿ ಅವು ಹೊರಗೆ ಬರುವಂತೆ ಮಾಡಿ ಹೊಡೆದು ಹಾಕುವುದು ಸಾಮಾನ್ಯವಾಗಿ ಪ್ರಪಂಚದ ಎಲ್ಲ ಕಡೆಯೂ ದಿನ ಬೆಳಗಾದರೆ ನಡೆಯುತ್ತಲೇ ಇರುತ್ತದೆ. ಇದು ವ್ಯಾಪ್ತಿಯ ದೃಷ್ಟಿಯಿಂದ ಇಲಿ ಹೆಗ್ಗಣಗಳ ನಿಯಂತ್ರಣಕ್ಕೆ ಸತತವಾಗಿ ನೆರವಾಗುತ್ತಿದೆ. *

**ಇಲಿನಾಯ್:** ಅಮೆರಿಕ ಸಂಯುಕ್ತಸಂಸ್ಥಾನದ ಮಧ್ಯಭಾಗದಲ್ಲಿ ಉತ್ತರಕ್ಕಿರುವ ಒಂದು ರಾಜ್ಯ. 1673ರಲ್ಲಿ ಫ್ರೆಂಚ್ ಅನ್ವೇಷಕರಾದ ಜೋಲಿಯಟ್ ಮತ್ತು ಮಾರ್ಕ್ವೆಟ್ಟೆ ಅವರಿಂದ ಗುರುತಿಸಲ್ಪಟ್ಟಿತು. 1763ರಲ್ಲಿ ಫ್ರೆಂಚರಿಂದ ಬ್ರಿಟಿಷರ ಅಧೀನಕ್ಕೆ ಬಂತು. ಬಹುಕಾಲ ಇಂಡಿಯಾನದ ಒಂದು ಭಾಗವಾಗಿದ್ದು 1809ರಲ್ಲಿ ಪ್ರತ್ಯೇಕ ಪ್ರಾಂತ್ಯವಾಗಿ 1818ರಲ್ಲಿ ಒಕ್ಕೂಟಕ್ಕೆ ಸೇರಿತು. ಮಿಸಿಸಿಪಿ ನದಿಯ ಮೈದಾನದಲ್ಲಿ 480 ಕಿಮೀಗಳವರೆಗೂ ಉತ್ತರದಲ್ಲಿ ಒಹಾಯೊ ನದಿಯಿಂದ ದಕ್ಷಿಣಕ್ಕೆ ಮಿಚಿಗನ್ ಸರೋವರದವರೆಗೂ ಹಬ್ಬಿದೆ. ವಿಸ್ತೀರ್ಣ 146,076 ಚ.ಕಿಮೀ. ಜನಸಂಖ್ಯೆ: 127.13634 (2004) ಇದು ಒಂದು ಒಳನಾಡು ರಾಜ್ಯವಾದರೂ ಉತ್ತಮವಾದ ಜಲಮಾರ್ಗಗಳ ಸೌಕರ್ಯವಿದೆ.

**ಮೇಲ್ಮೈಲಕ್ಷಣ:** ಮೈದಾನದ ಪ್ರಾಂತ್ಯ. ಸಮುದ್ರ ಮಟ್ಟಕ್ಕೆ 183 ಮೀ ಎತ್ತರವಾಗಿದ್ದು, ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ನಾಲ್ಕು ಸ್ವಾಭಾವಿಕ ಪ್ರದೇಶಗಳಿವೆ: ಕೇಂದ್ರ ತಗ್ಗು ಮೈದಾನ, ಓಜಾರ್ಕ್ ಪ್ರಸ್ಥಭೂಮಿ, ಒಳನಾಡಿನ ತಗ್ಗು ಪ್ರಸ್ಥಭೂಮಿ ಮತ್ತು ಕರಾವಳಿ ಪ್ರದೇಶ. ಒಂದನೆಯದು ಪ್ರಾಂತ್ಯದ ಶೇ. 90 ಭಾಗವನ್ನಾವರಿಸಿದ್ದು ಅಲ್ಲಲ್ಲಿ ಸಾಧಾರಣ ಇಳಿಜಾರುಳ್ಳ ಬೆಟ್ಟಗಳು, ಅಗಲ ಮತ್ತು ಆಳವಿಲ್ಲದ ನದಿಕಣಿವೆಗಳಿಂದ ಕೂಡಿದೆ. ಚಾರ್ಲ್ಸ್ ಮೌಂಡ್ ಅತಿ ಎತ್ತರವಾದ ಸ್ಥಳ (1235ಮೀ.) ಉಳಿದೆಲ್ಲ ಭಾಗ ಹಿಮನದಿಯ ಪಕ್ಷಾಲಿತ ಮೈದಾನದಿಂದ ಕೂಡಿದೆ ಮತ್ತು ಫಲವತ್ತಾಗಿದೆ. ಎರಡನೆ ಸ್ವಾಭಾವಿಕ ಪ್ರದೇಶವು ಮಿಸ್ಸೌರಿ ಪ್ರಾಂತ್ಯದಿಂದ ಮುಂದುವರಿದದ್ದು. ಮಿಸಿಸಿಪಿ ನದಿಯ ಉದ್ದಕ್ಕೂ ಹಬ್ಬಿದ ಬೆಟ್ಟಗಳ ಸರಣಿ ಎತ್ತರ 300 ಮೀ. ಮೂರನೆ ಪ್ರದೇಶ ಪ್ರಾಂತ್ಯದ ದಕ್ಷಿಣಕ್ಕಿರುವ ಸಣ್ಣಪುಟ್ಟ ಬೆಟ್ಟಗಳನ್ನು ಹೊಂದಿದೆ. ವಿಲಿಯಂ ಹಿಲ್ ಎಂಬುದು ಎತ್ತರವಾದ ಬೆಟ್ಟ (325 ಮೀ.) ಪ್ರಾಂತ್ಯದ ದಕ್ಷಿಣದಂಚಿನಲ್ಲಿ ಕರಾವಳಿ ಪ್ರದೇಶವಿದೆ. ವಾಬಾಷ್ ಇಲಿನಾಯ್‌ನಲ್ಲಿ ಹರಿಯುವ ಪ್ರಮುಖ ನದಿ.

**ವಾಯುಗುಣ:** ಖಂಡಾಂತರ ವಾಯುಗುಣ. ಹೆಚ್ಚು ಶಾಖ ಮತ್ತು ಮಳೆ ಬೀಳುವ ಬೇಸಿಗೆ ಹಾಗೂ ಅತಿಶೀತವಾದ ಚಳಿಗಾಲ. ಸರಾಸರಿ ವಾರ್ಷಿಕ ಉಷ್ಣಾಂಶ $10^{o}$ ಸೆಂ. ಉತ್ತರದಿಂದ ದಕ್ಷಿಣಕ್ಕೆ ಹೋದಂತೆ ಉಷ್ಣಾಂಶ ಹೆಚ್ಚಾಗುತ್ತದೆ. ಮಳೆಯು ಉತ್ತರದಲ್ಲಿ ಕಡಮೆ (8 ಸೆಂ.ಮೀ), ದಕ್ಷಿಣದಲ್ಲಿ ಹೆಚ್ಚು (12 ಸೆಂ.ಮೀ). ಚಳಿಗಾಲದಲ್ಲಿ ಹಿಮಪಾತವಿರುತ್ತದೆ. ಫಲವತ್ತಾದ ಮಣ್ಣು ಮತ್ತು ಬೆಲೆಯುಳ್ಳ ಖನಿಜಗಳಿರುವುದರಿಂದ ಈ ಪ್ರದೇಶಕ್ಕೆ ಹೆಚ್ಚು ಜನ ಬಂದು ನೆಲೆಸಿದರು. ವ್ಯವಸಾಯ ಈ ರಾಜ್ಯದ ಆರ್ಥಿಕ ಆದಾಯದ ಮೂಲಾಧಾರ. ಸು. ಶೇ. 90 ಭಾಗದಲ್ಲಿ ವ್ಯವಸಾಯ ಹರಡಿದೆ. ಮೆಕ್ಕೆಜೋಳ, ಸೋಯಾ ಬೀನ್ಸ್, ಓಟ್ಸ್, ಬಟಾಣಿ, ಅವರೆ, ಆಲೂಗೆಡ್ಡೆ, ಆಲ್ಫಾಲ್ಫ ಹುಲ್ಲು, ಹಣ್ಣು, ತರಕಾರಿಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ. ಅಲ್ಲದೆ ಮಾಂಸ, ಹಾಲುಗಳಿಗಾಗಿ ಸಾಕಲಾದ ಹಂದಿ, ದನಕರುಗಳು ಹೆಚ್ಚು ಸಂಖ್ಯೆಯಲ್ಲಿವೆ. 1858ರಲ್ಲಿ ಅಬ್ರಹಾಂ ಲಿಂಕನ್ ಮತ್ತು ಸ್ಟೀಫನ್ ಡಗ್ಲಾಸರು ಇಲ್ಲಿ ನಡೆಸಿದ ಗುಲಾಮೀ ವಿಷಯಕವಾದ ಚರ್ಚೆಯಿಂದ ಅವರ ಹೆಸರು ರಾಷ್ಟ್ರೀಯ ಪ್ರಾಮುಖ್ಯ ಪಡೆಯಿತು. ಅಂತರ್ಯುದ್ಧ ಮುಗಿಯುತ್ತಿದ್ದಂತೆ ಕೈಗಾರಿಕೆಗಳು ಬೆಳೆದುವು. ರೈತರು ಗ್ರ್ಯಾಂಜರ್ ಆಂದೋಳನಕ್ಕೆ ಸೇರಿ ರೈಲು ವಿಸ್ತರಣೆಯನ್ನು ವಿರೋಧಿಸಿದರು. 1886ರಲ್ಲಿ ನಡೆದ ಹೇ ಮಾರ್ಕೆಟ್ ಸ್ಕ್ವೇರ್ ದೊಂಬಿ ಮತ್ತು ಪುಲ್‌ಮನ್‌ನಲ್ಲಿನ ಮುಷ್ಕರಗಳು ಕಾರ್ಮಿಕ ವರ್ಗದ ಮನೋಧರ್ಮಸೂಚಕವಾಗಿವೆ. ಎರಡನೆಯ ಮಹಾಯುದ್ಧವಾದ ಮೇಲೆ ದೇಶದ ಪ್ರಗತಿ ಇಮ್ಮಡಿಸಿದೆ. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಎಣ್ಣೆಯನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. ಈ ಖನಿಜಗಳು ರಾಜ್ಯವನ್ನು ದೇಶದ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲೊಂದಾಗಿ ಮಾಡಿವೆ. ಭಾರಿ ಪ್ರಮಾಣದ ಮತ್ತು ಸಣ್ಣ ಪ್ರಮಾಣದ ಕೈಗಾರಿಕೋದ್ಯಮಗಳು ಇಲ್ಲಿ ಹೇರಳವಾಗಿ ಬೆಳೆದಿವೆ. ಷಿಕಾಗೊ ನಗರದಲ್ಲಿ ರಾಜ್ಯದ ಒಟ್ಟು ಕೈಗಾರಿಕೋತ್ಪಾದನೆಯಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ಕೇಂದ್ರೀಕೃತವಾಗಿದ್ದು,



ನ್ಯೂಯಾರ್ಕ್ ನಗರವನ್ನು ಬಿಟ್ಟರೆ ಪ್ರಾಮುಖ್ಯದಲ್ಲಿ ಇದು ರಾಷ್ಟ್ರದ ಎರಡನೆಯ ನಗರವಾಗಿದೆ. ಕಬ್ಬಿಣ ಮತ್ತು ಉಕ್ಕು, ಭಾರಿ ಯಂತ್ರಗಳು, ವ್ಯವಸಾಯೋಪಕರಣಗಳು, ಆಹಾರ ವಸ್ತುಗಳು, ಪೆಟ್ರೋಕೆಮಿಕಲ್ ವಸ್ತುಗಳು, ವಿದ್ಯುದುಪಕರಣಗಳು, ರೈಲ್ವೆಗೆ ಆವಶ್ಯಕವಾದ ವಸ್ತುಗಳು, ಮರದ ಸಾಮಾನುಗಳು, ಗಡಿಯಾರಗಳು, ಗಾಜಿನ ಸಾಮಾನುಗಳು, ಡೀಸೆಲ್ ಯಂತ್ರಗಳು, ಬಟ್ಟೆ ಪಾದರಕ್ಷೆಗಳು–ಮುಂತಾದವು ರಾಜ್ಯದ ಪ್ರಮುಖ ಕೈಗಾರಿಕೋತ್ಪನ್ನ ಜನಸಂಖ್ಯೆ 28,69,121(2003)ಗಳಾಗಿವೆ. ಶೇ.80 ರಷ್ಟು ಜನ ನಗರವಾಸಿಗಳು. ಷಿಕಾಗೊ ನಗರ ಮತ್ತು ಬಡಾವಣೆಗಳಲ್ಲೇ ಶೇ.50ಕ್ಕಿಂತ ಹೆಚ್ಚು ಜನ ವಾಸಿಸುವರು. ಪಿಯೋರಿಯ, ರಾಕ್‌ಫೋರ್ಡ್, ಷಾಂಪೇನ್, ಅರ್ಬಾನ, ಸ್ಪ್ರಿಂಗ್‌ಫೀಲ್ಡ್, ಡಿಕೇಟರ್, ಈಸ್ಟ್ ಸೇಂಟ್ ಲೂಯಿ, ರಾಕ್ ಐಲೆಂಡ್ ಮತ್ತು ಮೋಲೀನ್ ಎಂಬುವು ಇತರ ದೊಡ್ಡ ಕೈಗಾರಿಕಾ ನಗರಗಳು. ರಾಜಧಾನಿ ಸ್ಪ್ರಿಂಗ್‌ಫೀಲ್ಡ್ ಜನಸಂಖ್ಯೆ 113,586 (2003).

ಅರ್ಬಾನ, ಷಾಂಪೇನ್ ಮತ್ತು ಷಿಕಾಗೊ ನಗರಗಳಲ್ಲಿ ಇಲಿನಾಯ್ ವಿಶ್ವವಿದ್ಯಾನಿಲಯ ಹರಡಿದೆ. ಇದಕ್ಕೆ 1867ರಲ್ಲಿ ಮನ್ನಣೆ ಸಿಕ್ಕಿತು. ಇದು ದೇಶದ ಪ್ರಮುಖ ವಿದ್ಯಾ ಕೇಂದ್ರಗಳಲ್ಲೊಂದಾಗಿದೆ. (ಪಿ.ಎಂ.)

**ಇಲಿಯಡ್:** ಪ್ರಾಚೀನ ಗ್ರೀಕ್ ಮಹಾಕಾವ್ಯಗಳಲ್ಲೊಂದು. ಕಾಲ ಪ್ರ.ಶ. ಪೂ. ಸು.8ನೆಯ ಶತಮಾನ. ರಚಿಸಿದವ ಹೋಮರ್ ಕವಿ ಎಂದು ಪ್ರತೀತಿಯಿದೆ. ಗ್ರೀಕರಿಗೂ ಟ್ರಾಯ್ ನಗರದವರಿಗೂ ನಡೆದ ಯುದ್ಧದ ವರ್ಣನೆ ಇದರ ವಸ್ತು. ಆ ಯುದ್ಧದ ಕಡೆಯ ದಿನಗಳ ಘಟನೆಗಳು ಇದರಲ್ಲಿ ನಿರೂಪಿತವಾಗಿವೆ. ಗ್ರೀಕರ ಅಗ್ರವೀರ ಅಕಿಲೀಸ್ ತಾನು ಯುದ್ಧ ಮಾಡುವುದಿಲ್ಲವೆಂದು ಹೇಳಿ ಬೇರೆಯಾಗಿ ನಿಂತುದರ ಪರಿಣಾಮವಾಗಿ ಗ್ರೀಕರಿಗಾದ ಅನಾಹುತಗಳಲ್ಲೂ ಇದರ ಬಹುಭಾಗವನ್ನು ತೆಗೆದುಕೊಂಡಿದೆ. ಇದರಲ್ಲಿರುವುದು ಒಟ್ಟು ಇಪ್ಪತ್ತನಾಲ್ಕು ಕಾಂಡಗಳು. ಟ್ರಾಯ್ ನಗರದ ರಾಜ ಪ್ರಿಯಮ್‌ನ ಮಗ ಪ್ಯಾರಿಸ್ ಗ್ರೀಸಿನ ಸ್ಪಾರ್ಟಾದ ಮೆನೆಲಾಸನ ಪತ್ನಿ ಪರಮ ಸುಂದರಿ ಹೆಲೆನಳನ್ನು ಎತ್ತಿಕೊಂಡು ಹೋದುದು

ತಮ್ಮ ನಾಡಿಗೇ ಆದ ಅಪಮಾನವೆಂದು ಕೆರಳಿದ ಗ್ರೀಕ್ ರಾಜರು ತಮ್ಮ ತಮ್ಮ ಯೋಧರೊಡನೆ ನೂರಾರು ಹಡಗುಗಳಲ್ಲಿ ಈಜಿಯನ್ ಸಮುದ್ರವನ್ನು ದಾಟಿ ಏಷ್ಯ ಮೈನರಿನ ವಾಯವ್ಯಮೂಲೆಯಲ್ಲಿ ಕಡಲತೀರಕ್ಕೆ 4.80.ಕಿಮೀ. ದೂರದಲ್ಲಿದ್ದ ಟ್ರಾಯ್ ಕೋಟೆಗೆ ಮುತ್ತಿಗೆ ಹಾಕಿದರು. ಟ್ರಾಯ್ ಜನ (ಟ್ರೋಜನರು) ಕೋಟೆಯ ಬಾಗಿಲನ್ನು ಭದ್ರಪಡಿಸಿ ಒಂಬತ್ತು ವರ್ಷ ಕಳೆದರೂ ಅಲ್ಲಾಡಲಿಲ್ಲ. ಅಷ್ಟು ಕಾಲವೂ ಗ್ರೀಕರು ಸುತ್ತಮುತ್ತಲ ಸಣ್ಣಪುಟ್ಟ ರಾಜ್ಯಗಳಿಗೆ ಮುತ್ತಿಗೆ ಹಾಕಿ ಅವನ್ನು ಗೆದ್ದು ಅಲ್ಲಿನವರನೇಕರನ್ನು ಸೆರೆಯಾಳುಗಳಾಗಿಯೂ ದಾಸಿಯರಾಗಿಯೂ ಹಿಡಿದು ತಂದರು. ಅಂಥವರಲ್ಲಿ ಒಬ್ಬಳು ಅಕಿಲೀಸನ ದಾಸಿ ಬ್ರಿಸೇಯಿಸ್, ಬ್ರೈಸಿಸ್ ಎಂಬುವನ ಮಗಳು. ಗ್ರೀಕರ ಪ್ರಧಾನ ಸೇನಾಪತಿ ಮೆನೆಲಾಸನ ತಮ್ಮ ಆಗಮೆಮ್ನಾನ್‌ನ ದಾಸಿ ಕ್ರಿಸೇಯಿಸ್, ಕ್ರೈಸೀನ ಮಗಳು ಇನ್ನೊಬ್ಬಳು. ಕ್ರೈಸೀಸ್ ಅಪೊಲೊ ದೇವನ ಪೂಜಾರಿ, ಅವನು ತನ್ನ ಮಗಳಿಗುಂಟಾದ ಪಾಡನ್ನು ನೋಡಿ ಆ ದೇವತೆಗೆ ಮೊರೆಯಿಡಲು, ಗ್ರೀಕರನ್ನು ಶಿಕ್ಷಿಸುವ ಸಲುವಾಗಿ ಅಪೊಲೊ ವ್ಯಾಧಿಯೊಂದನ್ನು ಗ್ರೀಕ್ ಸೈನಿಕರಲ್ಲಿ ಹರಡಿದ. ಕಾಲ್ಚಾಸ್ ಎಂಬ ದಿವ್ಯಜ್ಞಾನಿಯಿಂದ ಈ ಪಿಡುಗಿಗೆ ಕಾರಣವನ್ನು ತಿಳಿದುಕೊಂಡ ಗ್ರೀಕರು ಕ್ರಿಸೇಯಿಸಳನ್ನು ಅವಳ ತಂದೆಗೆ ಹಿಂದಿರುಗಿಸಬೇಕೆಂದು ಒತ್ತಾಯ ಮಾಡಿದರು. ಹಾಗೆ ಮಾಡಲೇಬೇಕಾಗಿ ಬಂದಾಗ ಆಗಮೆಮ್ನಾನ್ ತನ್ನ ದಾಸಿ ಹೋದುದರಿಂದ ಅವಳಿಗೆ ಬದಲಾಗಿ ಅಕಿಲೀಸನ ದಾಸಿಯನ್ನು ಬಲವಂತವಾಗಿ ತಂದಿಟ್ಟುಕೊಂಡ. ಇದರಿಂದ ಅಸಮಾಧಾನಗೊಂಡ ಅಕಿಲೀಸ್ ತಾನು ಯುದ್ಧದಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿ ತನ್ನ ಅನುಯಾಯಿಗಳಾದ ಮಿರ್ ಮಿಡನ್ನರನ್ನು ಕರೆದುಕೊಂಡು ದೂರನಿಂತ. ಅಕಿಲೀಸನ ತಾಯಿ ಥೆಟಿಸ್ ಎಂಬ ದೇವತೆ. ಅವಳು ತನ್ನ ಮಗನಿಗಾದ ಅಪಮಾನವನ್ನು ಕಂಡು ದುಃಖಿತಳಾಗಿ ದೇವಾಧಿದೇವ ಜ್ಯೂಸನ ಬಳಿಗೆ ಹೋಗಿ ದೂರಿತ್ತಳು. ಗ್ರೀಕರು ಅಕಿಲೀಸನ ಹಿರಿಮೆಯನ್ನು ಅರಿತುಕೊಳ್ಳುವಂತೆ ಮಾಡುವುದಾಗಿ ಜ್ಯೂಸ್ ಮಾತುಕೊಟ್ಟ. ಈ ದಾಸಿಯರ ಪ್ರಸಂಗ ಇಲಿಯಡ್‌ನ ಮೊದಲ ಕಾಂಡದ ಕಥೆ.

ಗ್ರೀಕರಿಗೆ ಅಕಿಲೀಸನ ಔನ್ನತ್ಯದ ಅರಿವಾಗಬೇಕಾದರೆ ಯುದ್ಧ ಆರಂಭವಾಗಬೇಕು. ಆದ್ದರಿಂದ ಎರಡನೆಯ ಕಾಂಡದಲ್ಲಿ ಜ್ಯೂಸ್ ಆಗಮೆಮ್ನಾನಿಗೊಂದು ಕನಸನ್ನು ಕಳುಹಿಸಿ ಯುದ್ಧ ಮಾಡಬೇಕೆಂದು ಸೂಚಿಸುತ್ತಾನೆ. ಆಗಮೆಮ್ನಾನ್ ತನ್ನ ಜನರನ್ನು ಪರೀಕ್ಷಿಸಲು ತಾವೆಲ್ಲ ಸ್ವದೇಶಕ್ಕೆ ಹಿಂದಿರುಗಬೇಕೆಂದು ಹೇಳುತ್ತಾನೆ. ತಕ್ಷಣ ಅವರೆಲ್ಲ ಸಂತೋಷದಿಂದ ಹಡಗುಗಳ ಕಡೆಗೆ ಓಡುತ್ತಾರೆ. ಒಡಿಸ್ಸಿಯಸ್ ಅವರನ್ನು ಹಿಂದಕ್ಕಟ್ಟುತ್ತಾನೆ. ಈ ಸಂದರ್ಭದಲ್ಲಿ ಗ್ರೀಕ್ ಹಡಗುಗಳನ್ನೂ ಗ್ರೀಕ್ ಸೈನ್ಯದ ಪ್ರಮುಖರನ್ನೂ ಕುರಿತ ವಿವರಗಳು ಬರುತ್ತವೆ. ಮೂರನೆಯ ಕಾಂಡದಲ್ಲಿ ಹೆಲೆನಳನ್ನು ಹಾರಿಸಿಕೊಂಡು ಬಂದು ಯುದ್ಧಕ್ಕೆ ಕಾರಣನಾಗಿದ್ದ ಪ್ಯಾರಿಸ್ ಅವಳ ಪತಿ ಮೆನೆಲಾಸ್‌ನೊಡನೆ ದ್ವಂದ್ವಯುದ್ಧದಲ್ಲಿ ತೊಡಗಿ ಸಾಯುತ್ತಾನೆ. ಅವನು ಸಾಯುವ ವೇಳೆಗೆ ಅವನ ಪಕ್ಷಪಾತಿಯಾದ ಸೌಂದರ್ಯಾಧಿದೇವತೆ ಆಫ್ರೋಡಿಟಿ ಅವನನ್ನು ಯುದ್ಧಭೂಮಿಯಿಂದ ಕರೆದೊಯ್ಯುತ್ತಾಳೆ. ನಾಲ್ಕನೆಯ ಕಾಂಡದಲ್ಲಿ ಗ್ರೀಕರ ಪರವಾಗಿರುವ ಅಥೀನದೇವಿ ಟ್ರಾಯ್ ಪಕ್ಷದ ಪ್ಯಾಂಡರಸ್ ಎಂಬಾತನನ್ನು ಮೆನಲಾಸನಿಗೆ ಗುರಿಯಿಟ್ಟು ಬಾಣಪ್ರಯೋಗ ಮಾಡುವಂತೆ ಪ್ರೇರೇಪಿಸಿ ಎರಡು ಸೈನ್ಯಗಳಿಗೂ ಮತ್ತೆ ಯುದ್ಧ ಆರಂಭವಾಗುವಂತೆ ಮಾಡುತ್ತಾಳೆ. ಐದನೆಯ ಕಾಂಡದಲ್ಲಿ ಗ್ರೀಕರ ಡಿಯೋಮಿಡಿಸ್ ವೀರಾವೇಶದಿಂದ ಹೋರಾಡಿ ಪ್ಯಾಂಡರಸನ್ನೂ ಇನ್ನಿತರ ಅನೇಕ ಟ್ರೋಜನರನ್ನೂ ಕೊಲ್ಲುತ್ತಾನೆ. ಟ್ರೋಜನರಿಗೆ ಸಹಾಯ ಮಾಡುವ ಆಫ್ರೋಡಿಟಿ ಮತ್ತು ಐರಿಸ್ ದೇವತೆಗಳೂ ಅವನ ಆಯುಧಗಳ ಸವಿಗಾಣದೆ ಹೋಗುವುದಿಲ್ಲ. ಆರನೆಯ ಕಾಂಡದಲ್ಲಿ ಟ್ರಾಯ್‌ನ ಹಿರಿಯ ರಾಜಕುಮಾರ ಹೆಕ್ಟರ್ ಟ್ರಾಯ್ ನಗರದವರೆಲ್ಲ ಅಥೀನಳಿಗೆ ಪ್ರಾರ್ಥನೆ ಸಲ್ಲಿಸಬೇಕೆಂದು ಸಲಹೆಕೊಟ್ಟು ತನ್ನ ಹೆಂಡತಿ (ಆಂಡ್ರೊಮೆಕೆ) ಮತ್ತು ಪುಟ್ಟಮಗುವನ್ನು ಮನಕರಗುವಂಥ ಸನ್ನಿವೇಶವೊಂದರಲ್ಲಿ ಭೇಟಿಮಾಡಿ ಬೀಳ್ಕೊಂಡು ಸಮರಭೂಮಿಗೆ ತೆರಳುತ್ತಾನೆ. ಏಳನೆಯ ಕಾಂಡದಲ್ಲಿ ಟ್ರೋಜನ್ ವೀರ ಹೆಕ್ಟರನಿಗೂ ಗ್ರೀಕರ ಕಡೆಯ ಏಜ್ಯಾಕ್ಸ್‌ಗೂ ಕಾಳಗ ನಡೆಯುತ್ತದೆ. ದೇವತೆಗಳು ಯಾರೂ ಯುದ್ಧದಲ್ಲಿ ಭಾಗವಹಿಸಕೂಡದೆಂದು ಜ್ಯೂಸ್ ಅಪ್ಪಣೆ ಮಾಡುತ್ತಾನೆ (ಎಂಟನೆಯಕಾಂಡ). ಹೀರಾ ಮತ್ತು ಅಥೀನ ದೇವಿಯರು ಮೊದಮೊದಲು ಇದನ್ನು ಒಪ್ಪದೆ ಇದ್ದರೂ ಆಮೇಲೆ ಸುಮ್ಮನಾಗುತ್ತಾರೆ. ಯುದ್ಧ ಗ್ರೀಕರಿಗೆ ಪ್ರತಿಕೂಲವಾಗಿ ತಿರುಗುತ್ತದೆ. ತತ್ಕಾರಣ (ಒಂಬತ್ತನೆಯ ಕಾಂಡದಲ್ಲಿ) ಆಗಮೆಮ್ನಾನ್ ಬ್ರಿಸೇಯಿಸಳನ್ನು ಅಕಿಲೀಸಿಗೆ ಹಿಂದಕ್ಕೆ ಕೊಟ್ಟುಬಿಡುವುದಾಗಿಯೂ ಜೊತೆಗೆ ಬೇರೆ ಉಡುಗೊರೆಗಳನ್ನು ಕೊಡುವುದಾಗಿಯೂ ಹೇಳಿಕಳುಹಿಸುತ್ತಾನೆ. ಅಕಿಲೀಸ್ ಈ ಸಂಧಾನಕ್ಕೆ ಒಪ್ಪದೆ ಕೋಪದಿಂದ ಸಿಡಿದೆದ್ದು ಮಾರನೆಯ ದಿನವೇ ಸ್ವದೇಶಕ್ಕೆ ಮರುಳುವುದಾಗಿ ಶಪಥ ಮಾಡುತ್ತಾನೆ. ಹತ್ತನೆಯ ಕಾಂಡದಲ್ಲಿ ಒಡಿಸ್ಸಿಯಸ್ ಮತ್ತು ಡಿಯೊಮೀಡರು ಟ್ರಾಯ್ ಸೈನ್ಯವ್ಯೂಹದಲ್ಲಿ ಗೂಢಚರ್ಯೆ ನಡೆಸಿ ಆ ಕಡೆಯ ಕೆಲವರನ್ನು ಸಂಹರಿಸುತ್ತಾರೆ. ಹನ್ನೊಂದನೆಯ ಕಾಂಡದಲ್ಲಿ ಆಗಮೆಮ್ನಾನ್, ಒಡಿಸ್ಸಿಯಸ್, ಡಿಯೊಮೀಡಿಸ್ ಮೊದಲಾದವರು ಗಾಯಗೊಳ್ಳುತ್ತಾರೆ. ಅಕಿಲೀಸ್ ಯುದ್ಧ ಹೇಗೆ ಸಾಗುತ್ತಿದೆಯೆಂದು ನೋಡಿಬರಲು ತನ್ನ ಆಪ್ತ ಸ್ನೇಹಿತ ಪೆಟ್ರಾಕ್ಲಸನನ್ನು ಕಳುಹಿಸಿಕೊಡುತ್ತಾನೆ. ವೃದ್ಧ ನೆಸ್ಟರ್ ಅಕಿಲೀಸ್ ಯುದ್ಧಕ್ಕೆ ಬರುವಂತೆ ಮಾಡಬೇಕೆಂದೂ ಅದಿಲ್ಲದಿದ್ದರೆ ತನ್ನ ಇತರ ಯೋಧರೊಡನೆ ಪೆಟ್ರಾಕ್ಲಿಸನನ್ನಾದರೂ ಕಳುಹಿಸಿಕೊಡಬೇಕೆಂದೂ ಸೂಚಿಸುತ್ತಾನೆ. ಹನ್ನೆರಡರಿಂದ ಹದಿನಾರನೆಯ ಕಾಂಡಗಳವರೆಗೂ ಯುದ್ಧದಲ್ಲಿ ಒಮ್ಮೆ ಆ ಕಡೆ ಒಮ್ಮೆ ಈ ಕಡೆ ಜಯ ಲಭಿಸುತ್ತದೆ. ಜ್ಯೂಸನ ಆಜ್ಞೆಗೆ ವಿರೋಧವಾಗಿಯೇ ದೇವತೆಗಳು ತಮತಮಗೆ ಬೇಕಾದವರಿಗೆ ಸಹಾಯವೆಸಗುತ್ತಾರೆ. ಕೊನೆಗೆ ಹೆಕ್ಟರ್ ನುಗ್ಗಿ ಬಂದು ಗ್ರೀಕರ ನಾವೆಗಳಿಗೆ ಬೆಂಕಿಯಿಡಲು ಯತ್ನಿಸುತ್ತಾನೆ. ಪೆಟ್ರಾಕ್ಲಿಸ್ ಅಕಿಲೀಸನನ್ನು ಯುದ್ಧಕ್ಕೆ ಬರಬೇಕೆಂದು ಬೇಡಿಕೊಳ್ಳುತ್ತಾನೆ. ಅಕಿಲೀಸ್ ತಾನು ಹೋಗಲು ಈಗಲೂ ಇಷ್ಟಪಡುವುದಿಲ್ಲ. ತನ್ನ ಯುದ್ಧಕವಚವನ್ನು ಗೆಳೆಯನಿಗೆ ಕೊಟ್ಟು ಅದನ್ನು ಧರಿಸಿಹೋಗಿ ಟ್ರೋಜನರನ್ನು ಹಿಂದಕ್ಕಟ್ಟಿ ಬರಬೇಕೆಂದು ಪೆಟ್ರಾಕ್ಲಿಸನಿಗೆ ಹೇಳುತ್ತಾನೆ. ಅಕಿಲೀಸನ ಕವಚವನ್ನು ಧರಿಸಿ ಹೋಗುವ ಪೆಟ್ರಾಕ್ಲಿಸ್ ಟ್ರೋಜನರನ್ನು ಟ್ರಾಯ್ ಕೋಟೆಯವರೆಗೂ ಅಟ್ಟಿಸಿಕೊಂಡು ಹೋಗುತ್ತಾನೆ. ಅಲ್ಲಿ ಅವನು ಹೆಕ್ಟರಿನಿಂದ ಹತನಾಗುತ್ತಾನೆ (16ನೆಯ ಕಾಂಡ). ಹದಿನೇಳನೆಯ ಕಾಂಡದಲ್ಲಿ ಹೆಕ್ಟರ್ ಅಕಿಲೀಸನ ಕವಚವನ್ನು ಕಿತ್ತಿಟ್ಟುಕೊಳ್ಳುತ್ತಾನೆ. ಅವನ ಮೃತದೇಹವನ್ನು ಮೆನೆಲಾಸ್ ಮೊದಲಾದವರು ಕಷ್ಟಪಟ್ಟು ಉಳಿಸಿಕೊಂಡು ಹೋಗುತ್ತಾರೆ. ಗೆಳೆಯನಿಗಾದ ದುರಂತವನ್ನು ಕಂಡು ಕೋಪೋದ್ರಿಕ್ತನಾಗುವ ಅಕಿಲೀಸ್ ಸೇಡು ತೀರಿಸಿಕೊಳ್ಳಲೆಂದು ಸಮರಕ್ಕಿಳಿಯುತ್ತಾನೆ. ಈಗ ಹೆಕ್ಟರನ ವಶವಾಗಿರುವ ಅವನ ಕವಚಕ್ಕೆ ಬದಲಾಗಿ ದೇವತೆಗಳ ಕಮ್ಮಾರ ಹಿಫೀಸ್ಟಸ್ ಅವನಿಗೊಂದು ಹೊಸ ಗುರಾಣಿಯನ್ನೂ ಇತರ ಆಯುಧಗಳನ್ನೂ ಮಾಡಿಕೊಡುತ್ತಾನೆ. ಆ ಗುರಾಣಿಯ ಮೇಲೆಲ್ಲ ಗ್ರೀಕರ ಜೀವನದ ಚಿತ್ರಗಳು ವಿಪುಲವಾಗಿ ಚಿತ್ರಿತವಾಗಿರುತ್ತವೆ. ಅವನ್ನು ಧರಿಸಿ ಅಕಿಲೀಸ್ (ತಾನು ಅಲ್ಪಾಯು ಎಂಬ ಭವಿಷ್ಯವಾಣಿಯಿದ್ದರೂ ಲೆಕ್ಕಿಸದೆ) ಮುಂದೆ ನುಗ್ಗಿ ಯುದ್ಧದ ಕಣವನ್ನು ಹೊಕ್ಕು ಹೋರಾಡತೊಡಗುತ್ತಾನೆ. ಅವನಿಲ್ಲದೆ ಗ್ರೀಕರಿಗೆ ಜಯ ದೊರೆಯಕೂಡದೆಂದು ಜ್ಯೂಸ್ ಥೆಟಿಸಳಿಗಿತ್ತಿದ್ದ ಮಾತು ಈಗ ಸತ್ಯವಾಗುತ್ತದೆ. ಜ್ಯೂಸ್ ದೇವನೇ ಈಗ ಒಂದು ಪಕ್ಷ ವಹಿಸುವುದರಿಂದ ಇತರ ಸ್ತ್ರೀಪುರುಷ ದೇವತೆಗಳೆಲ್ಲ ತಮಗೆ ಬೇಕಾದ ಕಡೆ ಸೇರಿ ಬೇಕಾದವರಿಗೆ ಸಹಾಯ ಮಾಡುತ್ತಾರೆ (21ನೆಯ ಕಾಂಡ). ಅಕಿಲೀಸ್ ಟ್ರೋಜನ್ ಸೈನಿಕರನ್ನು ಮಟ್ಟಹಾಕುತ್ತಾನೆ (21ನೆಯ ಕಾಂಡ). ಇಪ್ಪತ್ತೆರಡನೆಯ ಕಾಂಡದಲ್ಲಿ ಹೆಕ್ಟರ್ ಟ್ರಾಯ್ ಕೋಟೆಯ ಗೋಡೆಯ ಬಳಿ ಕಾದು ನಿಂತಿರುತ್ತಾನೆ. ಅಲ್ಲಿಗೆ ಬರುವ ರೋಷಭೀಷಣನಾದ ಅಕಿಲೀಸನನ್ನು ನೋಡಿ ಅವನು ಕಾಲುಕೀಳುತ್ತಾನೆ. ಅದರಿಂದ ಪ್ರಯೋಜನವಾಗುವುದಿಲ್ಲ. ಕಡೆಗೆ ಆತ ಅಕಿಲೀಸನ ಆಯುಧಕ್ಕೆ ತುತ್ತಾಗಿ ಸತ್ತುಬೀಳುತ್ತಾನೆ. ಅವನ ಶವವನ್ನು ತನ್ನ ರಥದ ಗಾಲಿಗೆ ಕಟ್ಟಿ ಮಣ್ಣಿನಲ್ಲಿ ಎಳೆದುಕೊಂಡು ಅಕಿಲೀಸ್ ತನ್ನ ಬಿಡಾರಕ್ಕೆ ಧಾವಿಸುತ್ತಾನೆ. ಹೆಕ್ಟರನ ನೆಂಟರಿಷ್ಟರ ದುಃಖ ಉಕ್ಕಿಬರುತ್ತದೆ. ಇಪ್ಪತ್ತಮೂರನೆಯ ಕಾಂಡದಲ್ಲಿ ಅಕಿಲೀಸ್ ಪೆಟ್ರಾಕ್ಲಿಸನ ಮೃತದೇಹದ ದಹನ ಮಾಡುತ್ತಾನೆ. ಅದರೊಡನೆ ಹನ್ನೆರಡು ಮಂದಿ ಟ್ರೋಜನ್ ಯುವಕರನ್ನು ಸುಡುತ್ತಾನೆ. ಆದರೆ (24ನೆ ಕಾಂಡ) ಹೆಕ್ಟರನ ದೇಹಕ್ಕೆ ಅವನು ಅತ್ಯಂತ ಅಗೌರವವನ್ನು ತೋರಿಸಲು ಜ್ಯೂಸ್ ಥೆಟಿಸಳನ್ನು ಕಳುಹಿಸಿ ಹೀಗೆ ಮಾಡಿದರೆ ಅವನು ದೇವತೆಗಳ ಕೋಪಕ್ಕೆ ಪಾತ್ರನಾಗಬೇಕಾಗುವುದೆಂದು ಹೇಳಿಕಳಿಸುತ್ತಾನೆ. ಹೆಕ್ಟರನ ಮುದಿ ತಂದೆ ಪ್ರಿಯಮ್ ಮಗನ ದೇಹವನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲು ರಾತ್ರಿಯ ಕತ್ತಲಲ್ಲಿ ಅಕಿಲೀಸನ ಬಿಡಾರಕ್ಕೆ ಬರುತ್ತಾನೆ. ಅವನನ್ನು ಕಂಡು ಮರುಕದಿಂದ ಕರಗುವ ಅಕಿಲೀಸ್ ಹೆಕ್ಟರನ ದೇಹವನ್ನು ಹಿಂದಕ್ಕೆ ಕೊಡಲು ಒಪ್ಪುವುದಲ್ಲದೆ ಹೆಕ್ಟರನ ಉತ್ತರಕ್ರಿಯೆಗಳೆಂದು ಕೆಲದಿನ ಯುದ್ಧ ನಿಲ್ಲಿಸುತ್ತಾನೆ. ಹೀಗೆ ಅಕಿಲೀಸನ ಹಿರಿಮೆ ಸ್ಥಾಪಿತವಾಗುತ್ತದೆ.

ಇದು ಇಲಿಯಡ್ ಕಾವ್ಯದ ಕಥೆ. ಇಲಿಯಡ್ ಎಂಬುದು ಟ್ರಾಯ್‌ನ ಇನ್ನೊಂದು ಹೆಸರಾದ ಇಲಿಯಮ್‌ನಿಂದ ಬಂದುದು (ಇಲ್ಲಸ್ ಎಂಬುವನು ಅದರ ಸ್ಥಾಪಕನೆಂಬ ನಂಬಿಕೆಯಿತ್ತು. ಇಲಿಯಮ್‌ನಲ್ಲಿ ಅವನ ಹೆಸರಿನ ಸೂಚನೆಯಿದೆ). ಟ್ರೋಜನ್ ಯುದ್ಧ ವಾಸ್ತವವಾಗಿ ನಡೆಯಿತೆಂಬುದಕ್ಕೆ ಪುರಾತತ್ತ್ವಜ್ಞರಿಗೆ ರುಜುವಾತು ಸಿಕ್ಕಿದೆ. ಪ್ರ.ಶ. ಪೂ. 12ನೆಯ ಶತಮಾನದಲ್ಲಿ ಗ್ರೀಕರಿಗೂ ಟ್ರಾಯ್ ಜನಕ್ಕೂ ಒಂದು ನಿಜವಾದ ಯುದ್ಧ ನಡೆದಿರಬೇಕು;. ಅದರ ಯೋಧರ ಮತ್ತು ವೀರರ ವಿಚಾರವಾಗಿ ಅನೇಕಾನೇಕ ಕಥೆಗಳು ಹುಟ್ಟಿಕೊಂಡು ಬೆಳೆದಿರಬೇಕು. ಪ್ರ.ಶ. ಪೂ. 8ನೆಯ ಶತಮಾನದ ಹೊತ್ತಿಗೆ ಇಂಥ ನೂರಾರು ಕಥೆ, ಕವನಗಳು ಜನಗಳಲ್ಲಿ ಬಾಯಿಂದ ಬಾಯಿಗೆ ಹಬ್ಬಿ ಪ್ರಚಾರವಾಗಿದ್ದಿರಬೇಕು. ಹೋಮರ್ ಎಂಬ ಕವಿ ಅವನ್ನು ಸಂಗ್ರಹಿಸಿ ಅವಕ್ಕೆ ಪರಸ್ಪರ ಸಂಬಂಧವನ್ನು ಕಲ್ಪಿಸಿ ಅವನ್ನು ಜೋಡಿಸಿ ಪರಿಷ್ಕರಿಸಿ ಇಲಿಯಡ್ ಕಾವ್ಯವಾಗಿ ಹೆಣೆದಿರಬೇಕು.

ಈ ಮಹಾಕಾವ್ಯದ ಪ್ರಾರಂಭದ ಪಂಕ್ತಿಗಳೇ ಹೇಳುವಂತೆ ಇದರ ವಸ್ತು "ಅಕಿಲೀಸನ ಕ್ರೋಧ". ಸತ್ತ ಮಹಾವೀರ ಹೆಕ್ಕಾಹೆಕ್ಟರನ ಶವವನ್ನು ರಥಕ್ಕೆ ಕಟ್ಟಿ ಪ್ರತಿ ಬೆಳಗೂ ಅಕಿಲೀಸ್ ಅದನ್ನು ಮಣ್ಣಿನಲ್ಲಿ ಎಳೆಯುತ್ತಾನೆ. ಕ್ರೋಧವು ಮನುಷ್ಯನನ್ನು ಹೇಗೆ ಮೃಗವನ್ನಾಗಿ ಮಾಡಿಬಿಡುವುದೆಂಬ ಚಿತ್ರ ಇಲ್ಲಿದೆ. ಪ್ರಿಯಮ್ ಅಕಿಲೀಸನ ಗುಡಾರಕ್ಕೆ ಬಂದು ಮಗನ ದೇಹವನ್ನು ಬೇಡುವುದು ಜಗತ್ತಿನ ಸಾಹಿತ್ಯದ ಮರೆಯಲಾಗದ ದೃಶ್ಯಗಳಲ್ಲಿ ಒಂದು. ಅಕಿಲೀಸ್ ಕರಗಿ ಹೋಗಿ, ಪಶುವಾಗಿದ್ದವನು ಮತ್ತೆ ಮನುಷ್ಯನಾಗುತ್ತಾನೆ. ಹೆಕ್ಟರ್ ತನ್ನ ಹೆಂಡತಿಯನ್ನೂ ಮಗುವನ್ನು ನೋಡುವುದು, ಹೆಲೆನ್ ಹೆಕ್ಟರನ ಶವದ ಬಳಿ ದುಃಖಿಸುವುದು ಭಾವಾತಿರೇಕವಿಲ್ಲದೆ ಹೃದಯವನ್ನು ಮುಟ್ಟುವ ದೃಶ್ಯಗಳು.

ಈ ಮಹಾಕಾವ್ಯದಲ್ಲಿ ದೇವತೆಗಳ ಚಿತ್ರಣವೂ ಇದೆ. ಬಹುಮಟ್ಟಿಗೆ, ಈ ದೇವತೆಗಳಿಗಿಂತ ಬಹುಮಂದಿ ಮನುಷ್ಯರೇ ಉದಾತ್ತರಾಗಿ, ಗೌರವಾರ್ಹರಾಗಿ ಕಾಣುತ್ತಾರೆ. ದೇವತೆಗಳು ಅಮರರು, ಶಕ್ತಿಶಾಲಿಗಳು, ಅದರಿಂದ ಮನುಷ್ಯರು ಅವರಿಗೆ ತಲೆ ಬಾಗಿ ನಡೆಯಬೇಕು.

ಇಲ್ಲಿ ಮನುಷ್ಯರ ಜಗತ್ತಿನ ಅತ್ಯುನ್ನತ ಮೌಲ್ಯಗಳು ಸಾಹಸ ಮತ್ತು ವೀರನೆಂಬ ಶುಭ್ರ ಯಶಸ್ಸನ್ನು ಇಲ್ಲಿ ಕವಿ ಪ್ರ.ಶ.ಪೂ. ಸು. 11–12ನೆಯ ಶತಮಾನದ ಕಂಚಿನಯುಗದ ಜೊತೆ ಚಿತ್ರಿಸಿದ್ದಾನೆ, ಇದೊಂದು ವೀರಯುಗ.

ಹೋಮರನ ಮಹಾಕಾವ್ಯಗಳು ಯುರೋಪಿನ ಮಹಾಕಾವ್ಯ ಪರಂಪರೆಯನ್ನು ಪ್ರಾರಂಭಿಸಿದವು. ಮಹಾಕಾವ್ಯವು ತನ್ನ (ನಾಯಕನ) ಯುಗದ ಮೌಲ್ಯಗಳ ಸಾಕಾರಮೂರ್ತಿಯಾದ ಅಪ್ರತಿಮ ವೀರನ ಸುತ್ತ ಬೆಳೆದ ದೀರ್ಘ ಕಥೆಯಾಯಿತು, ಮಾನವಾತೀತಿ ಜಗತ್ತು ಇದರಲ್ಲಿ ಸೇರಿಕೊಂಡಿತು, ಇಡೀ ಕಾವ್ಯ ಒಂದು ಮಹತ್ತರ ಘಟನೆಯ ಸುತ್ತ ರೂಪ ತಾಳಿತು, ಹಿನ್ನೋಟದ ಕಥನ (ರಿಟ್ರಾಸ್ಪೆಕ್ಟಿವ್ ನರೇಷನ್) ಕಥನತಂತ್ರದ ಭಾಗವಾಯಿತು. ಮಹೋಪಮೆಯನ್ನು ಮೊದಲು ಬಳಸಿದವನು ಹೋಮರ್, ಆದುದರಿಂದ ಇದಕ್ಕೆ ಹೋಮರಿಕ್ ಸಿಮಿಲಿ ಎಂದೂ ಹೆಸರು.

ಪಾಶ್ಚಾತ್ಯ ವಿಮರ್ಶಕರು ಮಹಾಕಾವ್ಯಗಳಲ್ಲಿ ಎರಡು ಬಗೆ ಎನ್ನುತ್ತಾರೆ. ಮೊದಲನೆಯದು ಪ್ರೈಮರಿ ಎಪಿಕ್. ಇದಕ್ಕೆ ಮಾದರಿ ಇಲ್ಲಿ, ಇದೇ ಮುಂದಿನ ಮಹಾಕಾವ್ಯಗಳಿಗೆ ಮಾದರಿ, ಮಹಾಕಾವ್ಯಗಳ ಪರಂಪರೆಯನ್ನು ಪ್ರಾರಂಭಿಸುತ್ತದೆ. ಇದು "ಪ್ರಿಮಿಟಿವ್ ಎಪಿಕ್' ಅನಂತರ ಬರುವವು "ಸೆರೆಂಡಾ ಎಪಿಕ್"ಗಳು, ನಾಗರಿಕತೆಯ ಮಹಾಕಾವ್ಯಗಳು. ಇಲಿಯಡ್ ಪ್ರೈಮರಿ ಎಪಿಕ್; ಪಾಶ್ಚಾತ್ಯ ಮಹಾಕಾವ್ಯ ಪರಂಪರೆಯ ಉದ್ಘಾಟನೆಯನ್ನು ಮಾಡಿತು. (ಎಲ್.ಎಸ್.ಎಸ್.)

ಹೋಮರ್ ಎಂಬ ವ್ಯಕ್ತಿಯೇ ಇರಲಿಲ್ಲವೆಂಬ ವಾದವೂ ಇದೆ. ಗ್ರೀಕ್ ಭಾಷೆಯಲ್ಲಿ ಆ ಮಾತಿಗೆ ಸಂಗ್ರಾಹಕ ಎಂದು ಅರ್ಥ. ಆದಕಾರಣ ಹಲವರು ರಚಿಸಿದ ಕವಿತೆಗಳನ್ನು ಯಾರೋ ಸಂಗ್ರಹಿಸಿ ಸಂಪಾದಿಸಿರಬೇಕು. ಅವನಿಗೆ ಹೋಮರ್ ಎಂಬ ಅನ್ವರ್ಥನಾಮ ಬಂದಿರಬೇಕು ಎಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಆದರೆ ಹೋಮರ್ ಕವಿ ತಮ್ಮವನು, ತಮ್ಮ ಮಡಿಲಲ್ಲಿ ಹುಟ್ಟಿ ಬೆಳೆದವನು ಎಂದು ಈಗಲೂ ಗ್ರೀಕ್ ಪಟ್ಟಣಗಳು ಹೇಳಿಕೊಳ್ಳುತ್ತಿದ್ದುದನ್ನೂ ಈ ಸಂದರ್ಭದಲ್ಲಿ ನೆನಪಿನಲ್ಲಿಟ್ಟುಕೊಂಡಿರಬೇಕು. ಒಬ್ಬನೇ ರಚಿಸಿರಲಿ ಅನೇಕರ ಕೈವಾಡ ಅದರಲ್ಲಿರಲಿ, ಈ ಕಾವ್ಯದಲ್ಲಿ ಎದ್ದು ಕಾಣುವ ಕಲ್ಪನೆಯ ಐಕ್ಯತೆಯನ್ನು ಮಾತ್ರ ಅಲ್ಲಗಳೆಯುವಂತಿಲ್ಲ. ಇದರ ಸರಳತೆ, ನೇರವಾದ ಕಥಾನಿರೂಪಣೆ, ಯುದ್ಧ ಪ್ರಸಂಗಗಳ ವರ್ಣನೆಗಳು, ಪ್ರಾಚೀನ ಗ್ರೀಕರ ಜನಜೀವನದ ಚಿತ್ರಗಳು, ಬಗೆಬಗೆಯ ಪಾತ್ರಗಳು, ಅಲ್ಲಲ್ಲಿ ಬರುವ ತಿಳಿ ಹಾಸ್ಯ, ಮನಕರಗಿಸುವ ದೃಶ್ಯಗಳು, ಮಾನವಸ್ವಭಾವದ ಅರಿವು, ಎಲ್ಲಕ್ಕಿಂತಲೂ ಹೆಚ್ಚಾಗಿ ಮನುಷ್ಯನ ಕ್ರೋಧದ ದುಷ್ಪರಿಣಾಮದ ಸೂಚನೆ–ಇವೇ ಮೊದಲಾದ ಅಂಶಗಳಿಗೆ ಈ ಕೃತಿ ಹೆಸರಾಂತಿದೆ. ಇಲಿಯಡ್ ಕಾವ್ಯ ಗ್ರೀಕ್ ಮಹಾರುದ್ರ ನಾಟಕಗಳಿಗೆ ವಸ್ತುವನ್ನೊದಗಿಸಿತಲ್ಲದೆ ಯುರೋಪಿನ ಸಾಹಿತ್ಯದಲ್ಲಿ ಮುಂದೆ ಬಂದ ವರ್ಜಿಲ್, ಡಾಂಟೆ, ಟ್ಯಾಸೊ, ಮಿಲ್ಟನ್ ಮೊದಲಾದ ಕವಿಗಳ ಮಹಾಕಾವ್ಯಗಳಿಗೆ ಮಾದರಿಯಾಯಿತು. ಇದರ ರೂಪಲಕ್ಷಣಗಳನೇಕವನ್ನು ಆ ಕವಿಗಳು ಅನುಕರಿಸಿದ್ದಾರೆ. ಅದರ ಛಂದಸ್ಸು ಕೂಡ (ಅಲ್ಪ ಸ್ವಲ್ಪ ಬದಲಾವಣೆಗಳೊಡನೆ) ಐರೋಪ್ಯ ಮಹಾಕಾವ್ಯಗಳ ಕವಿಪ್ರಿಯ ಛಂದಸ್ಸಾಗಿ ಉಳಿದುಬಂದಿದೆ. **(ನೋಡಿ– ಒಡಿಸಿ ;– ಹೋಮರ್)** (ಎಂ.ಆರ್.)

**ಇಲಿರಿಯ:** ಮೆಡಿ=ಟರೇನಿಯನ್ನಿನ ಒಂದು ಕವಲಾದ ಏಡ್ರಿಯಾಟಿಕ್ ಸಮುದ್ರ ಪೂರ್ವದ ದಕ್ಷಿಣ ಕರಾವಳಿಯ ಹಾಗೂ ಅದರ ಹಿನ್ನಾಡಿನ ಪ್ರದೇಶಕ್ಕೆ ಪುರಾತನ ಗ್ರೀಕರು ಇಟ್ಟಿದ್ದ ಹೆಸರು. ಇದನ್ನವರು ಇಲಿರಿಸ್ ಎಂದೂ ಕರೆಯುತ್ತಿದ್ದರು. ಮುಂದೆ ರೋಮನ್ನರ ಕಾಲದಲ್ಲಿ ಇದರ ಉತ್ತರಕ್ಕಿರುವ ಸಾವ, ಡಾನ್ಯೂಬ್ ಮತ್ತು ಮೊರಾವ್ ನದಿಗಳವರೆಗಿನ ಭಾಗವೂ ಸೇರಿದ ಇಡೀ ಪ್ರದೇಶಕ್ಕೆ ಇಲಿರಿಕಂ ಎಂದು ಹೆಸರಾಯಿತು. ಕಬ್ಬಿಣಯುಗದಲ್ಲಿ ಇಲ್ಲಿ ಮುಖ್ಯವಾಗಿ ಡಾನ್ಯೂಬಿಯನ್ ಮೂಲದಿಂದ ಬಂದ ಜನ ವಾಸವಾಗಿದ್ದರು. ಪ್ರಾಚೀನ ಯುಗದ ಪೂರ್ತಿ ಇಲ್ಲಿನ ಜನರಲ್ಲಿ ಬಣವ್ಯವಸ್ಥೆ ಉಳಿದುಕೊಂಡು ಬಂದಿತ್ತು. ರೋಮನ್ನರ ಕಾಲದಲ್ಲಿ ಇಲ್ಲಿನ ಪರ್ವತಪ್ರದೇಶಗಳಲ್ಲಿ ರಸ್ತೆಗಳ ನಿರ್ಮಾಣವಾಗುವವರೆಗೂ ಇದು ಹೆಚ್ಚಾಗಿ ಪ್ರಗತಿ ಹೊಂದಲಿಲ್ಲ. ದಕ್ಷಿಣದಲ್ಲಿ 7ನೆಯ ಶತಮಾನ ದಿಂದೀಚೆಗೆ ಇಲಿರಿಯನ್ ಜನ ಗ್ರೀಕರ ವಸಾಹತುಗಳೊಂದಿಗೆ ಸಂಪರ್ಕ ಬೆಳೆಸಿದ್ದರು.

ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಇಲಿರಿಯನ್ನರು ಬಾರ್ಡಿಲಿಸ್ ಮತ್ತು ಕ್ಲೈಟಸರ ನೇತೃತ್ವದಲ್ಲಿ ಪ್ರಬಲ ರಾಜ್ಯ ಕಟ್ಟಿದರು. ಮ್ಯಾಸಿಡೋನಿಯದ ಅರಸನಾಗಿದ್ದ ಫಿಲಿಪ್ ಸೈನ್ಯಸಜ್ಜಿತನಾಗಿ ತನ್ನ ರಾಜ್ಯದ ಉತ್ತರದಲ್ಲಿದ್ದ ಇಲಿರಿಯಕ್ಕೆ ನುಗ್ಗಿ ಡಾನ್ಯೂಬ್ ನದಿಯವರೆಗೂ ದಾಳಿ ನಡೆಸಿ ಗ್ರೀಸ್ ಸಂಸ್ಕೃತಿಯ ರಕ್ಷಕನೆಂದು ಹೆಸರು ಪಡೆದ. ಈತನ ಮಗ ಅಲೆಕ್ಸಾಂಡರ್ ತನ್ನ ತಂದೆಯ ಪರಾಕ್ರಮದ ಮುಂದೆ ತನಗೇನೂ ಹೆಚ್ಚಾಗಿ ಮಾಡಲುಳಿದಿಲ್ಲವೆಂದು ಮುನಿಸಿಕೊಂಡು ತಾಯಿಯೊಂದಿಗೆ ಇಲಿರಿಯಕ್ಕೆ ಹೋದ. ತಂದೆಯ ಮರಣಾನಂತರ ಮ್ಯಾಸಿಡೋನಿಯದ ಪ್ರಭುವಾಗಿ, ಆಗ ಮತ್ತೆ ತಲೆ ಎತ್ತಿದ್ದ ಇಲಿರಿಯದ ಕ್ಲೈಟಸ್‍ನನ್ನು ಹತ್ತಿಕ್ಕಿದ.

ಪ್ರ.ಶ.ಪೂ. 240ರಿಂದ ಮುಂದೆ 22 ವರ್ಷಕಾಲ ಇಲ್ಲಿ ಶಾಂತಿ ನೆಲೆಸಿತ್ತು. ಮತ್ತೆ ಇಲಿರಿಯನ್ನರು ಪ್ರಬಲರಾದರು. ದೊರೆ ಆಗ್ರನ್ ಮತ್ತು ರಾಣಿ ಟ್ಯೂಟಳ ನೇತೃತ್ವದಲ್ಲಿ ದಕ್ಷಿಣದಲ್ಲಿ ಇನ್ನೊಂದು ರಾಜ್ಯ ಪ್ರಬಲವಾಯಿತು. ಅಲ್ಲಿನ ಕಡಲ್ಗಳ್ಳರ ಪಡೆಗೆ ರಾಣಿ ಟ್ಯೂಟಳೇ ಸ್ವಾಮಿನಿ. ಪ್ರ.ಶ. ಪೂ. 228ರಲ್ಲಿ ರೋಮನ್ನರು ಇವಳನ್ನು ಸೋಲಿಸಿ ಕರಾವಳಿಯನ್ನು ವಶಪಡಿಸಿಕೊಂಡರು. ಆಮೇಲೆ ಡಿಮಿಟ್ರಿಯಸ್ ತಲೆಯೆತ್ತಿದ. ಪ್ರ.ಶ. ಪೂ. 219ರಲ್ಲಿ ರೋಮನ್ನರು ಅವನನ್ನೂ ಸೋಲಿಸಿ ಉತ್ತರ ಭಾಗವನ್ನೂ ವಶಪಡಿಸಿಕೊಂಡರು. ಅನಂತರದಲ್ಲಿ ಇಲಿರಿಯನ್ ದೊರೆ ಜೆಂತಿಯಸ್, ಮ್ಯಾಸಿಡೋನಿಯದ ಪರ್ಸೂಸ್‍ನೊಂದಿಗೆ ಕೂಡಿಕೊಂಡಾಗ ರೋಮನ್ನರು ಸ್ಕೊಡ್ರಾ ಪ್ರದೇಶದ ಮೇಲೆ ಆಕ್ರಮಣ ನಡೆಸಿದರು. ಅದರ ಆಳ್ವಿಕೆ ನಾರೊ ನದಿಯವರೆಗೂ ವಿಸ್ತರಿಸಿತು (ಪ್ರ.ಶ. ಪೂ. 168). ಇಡೀ ಇಲಿರಿಯನ್ ಬಣಗಳ ಸಂಪೂರ್ಣ ಪರಾಭವವಾಗಿ ಸಾವ ನದಿಯವರೆಗಿನ ಪ್ರದೇಶವೆಲ್ಲ ರೋಮನ್ನರ ವಶವಾದದ್ದು ಆಕ್ಟೇವಿಯನ್ನನ ಕಾಲದಲ್ಲಿ (ಪ್ರ.ಶ. ಪೂ. 35–33). ಮುಂದೆ ಇಲ್ಲಿ ಅನೇಕ ದಂಗೆಗಳಾದವು. ಕೊನೆಗೆ ರೋಮನ್ನರು ಇಲಿರಿಕಂನಲ್ಲಿ ರಸ್ತೆಗಳನ್ನು ನಿರ್ಮಿಸಿದರು. ಪಟ್ಟಣಗಳು ಮೇಲೆದ್ದವು. ಇಲ್ಲಿ ಜನರು ರೋಮನ್ ಪ್ರಭಾವಕ್ಕೊಳಗಾಗಿ ಅದರ ಪ್ರಜೆಗಳಾದರು. ರೋಮನ್ ಸಾಮ್ರಾಜ್ಯಕ್ಕೆ ದಕ್ಷ ಪಡೆಗಳನ್ನೊದಗಿಸಿದರು. ಕ್ಲಾಡಿಯಸ್, ಆರಿಲಿಯನ್, ಪ್ರೋಬಸ್, ಕ್ಯಾರಸ್, ಡೈಯಕ್ಲೀಷಿಯನ್, ಮಾಕ್ಸಿಮಿಯನ್ ಚಕ್ರವರ್ತಿಗಳು ಇಲ್ಲಿನವರು. ಸ್ಪಿಟ್‍ನಲ್ಲಿನ ಪ್ರಸಿದ್ಧ ಅರಮನೆಯ ನಿರ್ಮಾತೃ ಡೈಯಕ್ಲೀಷಿಯನ್, ರೋಮನ್ ಸಾಮ್ರಾಜ್ಯ ಕ್ಷೀಣದೆಸೆಗೆ ಬಂದಾದ ಇಲಿರಿಯನ್ ಪ್ರಾಂತ್ಯಗಳ ಮೇಲೆ ಅವರ ಹತೋಟಿ ಕಡಿಮೆಯಾಯಿತು. ಇಲಿರಿಯ ರೋಮಿಗೆ ಕಪ್ಪ ಕಾಣಿಕೆ ಸಲ್ಲಿಸುವಷ್ಟಕ್ಕೆ ಮಾತ್ರವೇ ಈ ಸಂಬಂಧ ಉಳಿದುಕೊಂಡಿತು. ಕೊನೆಯಲ್ಲಿ ಇದು ಬಿಜಾಂಟೀನ್ ಸಾಮ್ರಾಜ್ಯಕ್ಕೆ ಸೇರಿಹೋಯಿತು **(ನೋಡಿ– ಬೈಜಾಂಟೀಯನ್–ಸಾಮ್ರಾಜ್ಯ).** (ಸಿ.ವಿ.ಆರ್.)

**ಇಲೋಡಿಯ:** ಹೈಡ್ರೊಕಾರಿಟೇಸೀ ಕುಟುಂಬದ ಒಂದು ಬಗೆಯ ಜಲ ಸಸ್ಯ. ಬೆಳವಣಿಗೆ ಸಾಮಾನ್ಯವಾಗಿ ನೀರಿನಲ್ಲಿ ಅಥವಾ ನೀರಿನ ಅಂಚಿನಲ್ಲಿ. ದೋಣಿಯಾಕಾರದ ಹೂಗಳಂತೆ ಗಿಡದ ಆಕಾರವಿದೆ. ಗಿಡ ಬಲು ಚಿಕ್ಕದು. ಕತ್ತಾಳೆಯಂತಿದೆ. ಎಲೆಗಳ ಬಣ್ಣ ಸಾಮಾನ್ಯವಾಗಿ ಕಪ್ಪು ಮಿಶ್ರಿತ ಕೆಂಪು. ಎಲೆಯ ತೊಟ್ಟಿನ ಪ್ರದೇಶದಲ್ಲಿರುವ ದೋಣಿಯಾಕಾರದ



ಆಕೃತಿಗಳನ್ನು ಬಿಡಿಸಿದಾಗ ಒಳಗೆ ಮೊಗ್ಗುಗಳು ಕಾಣುತ್ತವೆ. ಒಂದೊಂದು ದೋಣಿಯಾಕಾರದ ದಳದಲ್ಲಿರುವ ಮೊಗ್ಗುಗಳ ಸಂಖ್ಯೆ ಸುಮಾರು 15–20, ಇಲೋಡಿಯದಲ್ಲಿ ಸುಮಾರು ಹತ್ತು ಜಾತಿಗಳಿವೆ. ಗೊಬ್ಬರಕ್ಕಾಗಿ ಈ ಗಿಡವನ್ನು ಬೆಳೆಸುವುದುಂಟು. (ಎ.ಎನ್.ಎಸ್.)

**ಇಲ್ಬರ್ಟ್ ವಿಧೇಯಕ:** ಭಾರತದಲ್ಲಿದ್ದ ಯುರೋಪಿಯನ್ ಬ್ರಿಟಿಷ್ ಪ್ರಜೆಗಳ ಮೇಲಣ ಆಪಾದನೆಯ ವಿಚಾರಣೆಗಳನ್ನು ಬಿಳಿಯ ನ್ಯಾಯಾಧೀಶರೇ ನಡೆಸತಕ್ಕದ್ದೆಂದಿದ್ದ ಪಕ್ಷಪಾತದ ವಿನಾಯಿತಿಯನ್ನು ಹಿಂತೆಗೆದುಕೊಳ್ಳುವ ಉದ್ದೇಶದಿಂದ ವೈಸ್‍ರಾಯ್ ಸಂಪುಟದಲ್ಲಿ ನ್ಯಾಯಸಚಿವನಾಗಿದ್ದ ಸರ್ ಕೋರ್ಟ್ನಿ ಇಲ್ಬರ್ಟ್ 1883ರಲ್ಲಿ ಮಂಡಿಸಿದ್ದು.

ಭಾರತದ ಲೋಕಸೇವೆಗೆ (ಸಿವಿಲ್ ಸರ್ವಿಸ್) ಅಧಿಕಾರಿಗಳನ್ನು ನೇಮಿಸಲು ಇಂಗ್ಲೆಂಡಿನಲ್ಲಿ ಏರ್ಪಡಿಸಲಾಗಿದ್ದ ಸ್ಪರ್ಧಾಪರೀಕ್ಷೆಗಳಿಗೆ ಕೂರಲು ಭಾರತೀಯ ವಿದ್ಯಾವಂತ ತರುಣರಿಗೂ ಅವಕಾಶ ಕಲ್ಪಿಸಿದ ಫಲವಾಗಿ **(ನೋಡಿ– ಇಂಡಿಯನ್–ಸಿವಿಲ್–ಸರ್ವಿಸ್)** ಅನೇಕ ಭಾರತೀಯರು ಉಚ್ಚವರ್ಗದ ನ್ಯಾಯಾಧೀಶರಾಗಿದ್ದರು. ಇವರಲ್ಲನೇಕರು ಜ್ಯೇಷ್ಠತೆಯ (ಸೀನಿಯಾರಿಟಿ) ಅರ್ಹತೆ ಪಡೆದಿದ್ದಾಗ್ಯೂ ಇವರು ತಮ್ಮ ಮುಂದೆ ವಿಚಾರಣೆಗಾಗಿ ಐರೋಪ್ಯ ಬ್ರಿಟಿಷ್ ಪ್ರಜೆಗಳನ್ನು ಬರಮಾಡಿಕೊಳ್ಳುವ ಹಾಗಿರಲಿಲ್ಲ. ಈ ವ್ಯತಿಕ್ರಮವನ್ನು

ಸರಿಪಡಿಸಿ, ಅವರೂ ಭಾರತೀಯ ಜಿಲ್ಲಾ ಹಾಗೂ ಸತ್ರ ನ್ಯಾಯಮೂರ್ತಿಗಳ ಮುಂದೆ ಹಾಜರಾಗುವಂತೆ ದಂಡಪ್ರಕ್ರಿಯಾ ಸಂಹಿತೆಯಲ್ಲಿ ಆವಶ್ಯಕ ತಿದ್ದುಪಡಿ ಮಾಡುವುದೇ ಈ ವಿಧೇಯಕದ ಉದ್ದೇಶ.

ವರ್ಣಭೇದ ನೀತಿಯನ್ನು ನ್ಯಾಯಾಂಗದಿಂದ ತೊಡೆದು ಹಾಕುವ ಈ ಪ್ರಯತ್ನವನ್ನು ಭಾರತೀಯ ಪತ್ರಿಕೆಗಳು ಸ್ವಾಗತಿಸಿದವು. ಇದಕ್ಕೆ ರಾಷ್ಟ್ರಾಭಿಮಾನಿಗಳೆಲ್ಲರ ಬೆಂಬಲ ದೊರಕಿತು.

ಆದರೆ ಭಾರತದಲ್ಲಿದ್ದ ಆಂಗ್ಲ ಸಮುದಾಯಕ್ಕೆ ಬಲು ಅಸಮಾಧಾನವಾಯಿತು. ಈ ವಿಧೇಯಕವನ್ನು ವಿರೋಧಿಸಿ ಅವರು ಭಾರತದಲ್ಲೂ ಇಂಗ್ಲೆಂಡಿನಲ್ಲೂ ಪ್ರಚಂಡ ಚಳವಳಿ ನಡೆಸಿದರು. ತಮ್ಮ ಈ ಹಕ್ಕಿನ ರಕ್ಷಣೆಗಾಗಿ ಸಂಘವೊಂದು ಸ್ಥಾಪಿತವಾಗಿ, ದೇಶಾದ್ಯಂತ ಇದರ ಶಾಖೋಪಶಾಖೆಗಳು ಎದ್ದವು. ಒಂದೂವರೆ ಲಕ್ಷ ರೂಪಾಯಿ ನಿಧಿ ಸಂಗ್ರಹವಾಯಿತು. ಭಾರತದ ವೈಸ್‌ರಾಯಿಗೂ ಬ್ರಿಟನ್ನಿನಲ್ಲಿದ್ದ ಭಾರತ ಮಂತ್ರಿಗೂ (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ) ಮನವಿಗಳೂ ನಿಯೋಗಗಳೂ ಹೋದವು. ಭಾರತೀಯರಾದರೂ ಸುಮ್ಮನಿರಲಿಲ್ಲ. ಬಿಳಿಯರ ಈ ಆಂದೋಲನವನ್ನು ಪ್ರತಿಭಟಿಸಿದರು. ಆ್ಯಂಗ್ಲೋ–ಇಂಡಿಯನ್ ಪತ್ರಿಕೆಗಳು ಈ ವಿಧೇಯಕವನ್ನು ಖಂಡಿಸಿಯೂ ರಾಷ್ಟ್ರೀಯ ಪತ್ರಿಕೆಗಳು ಇದನ್ನು ಸಮರ್ಥಿಸಿಯೂ ಲೇಖನಗಳನ್ನೂ ಸಂಪಾದಕೀಯವನ್ನೂ ಪ್ರಕಟಿಸಿದವು.

ಇಂಗ್ಲೆಂಡಿನಲ್ಲಿ ಆಗ ಅಧಿಕಾರದಲ್ಲಿದ್ದ ಲಿಬರಲ್ ಪಕ್ಷ ಇಲ್ಬರ್ಟ್‌ವಿಧೇಯಕದ ಪರವಾಗಿತ್ತು. ಈ ಭೇದಭಾವವನ್ನು ಇನ್ನೂ ಮುಂದುವರಿಸಿದರೆ ಭಾರತದ ಜನರಲ್ಲಿ ಅತೃಪ್ತಿ ಹೆಚ್ಚೀತು, ರಾಜದ್ರೋಹಾತ್ಮಕ ಚಳವಳಿಯತ್ತ ಅವರ ಮನಸ್ಸು ಹರಿದೀತು ಎಂದು ಜಾನ್ ಬ್ರೈಟ್ ಅಭಿಪ್ರಾಯಪಟ್ಟ. ಆಗ ಭಾರತದ ವೈಸ್‌ರಾಯಿಯಾಗಿದ್ದ ಲಾರ್ಡ್ ರಿಪ್ಪನ್ ಕೂಡ ಈ ವಿಧೇಯಕದ ಪರವಾಗಿದ್ದ. ಋಜುಮಾರ್ಗ, ಧರ್ಮನಿಷ್ಠೆಗಳೇ ರಾಷ್ಟ್ರೋನ್ನತಿಯ ಸಾಧನೆಗಳೆಂಬ ಧ್ಯೇಯವಾಕ್ಯದಲ್ಲಿ ಆತನಿಗೆ ಅಚಲವಾದ ನಂಬುಗೆ. ಸಾಮ್ರಾಜ್ಯ ಕಟ್ಟುವುದಕ್ಕೆ ಸೈನಿಕರ ಧೈರ್ಯಸ್ಥೈರ್ಯಗಳು ಮಾತ್ರವೇ ಸಾಲದು; ನೀತಿಯೂ ಧರ್ಮವೂ ನ್ಯಾಯಕಟ್ಟಳೆಗಳೂ ಒಂದು ಸಾಮ್ರಾಜ್ಯದ ಆಧಾರಸ್ತಂಭಗಳು. ಇತಿಹಾಸದಿಂದ ಈ ಪಾಠ ಕಲಿತಿದ್ದ ಲಾರ್ಡ್ ರಿಪ್ಪನ್ ಈ ಮಸೂದೆಯನ್ನು ಮನಃಪೂರ್ವಕವಾಗಿ ಸಮರ್ಥಿಸಿದ.

ಆದರೆ ಬ್ರಿಟಿಷ್ ಹಿತಾಸಕ್ತಿಗಳ ಪ್ರಬಲ ಪ್ರಚಾರದಿಂದಲೂ ಒತ್ತಾಯದಿಂದಲೂ ಈ ವಿಧೇಯಕದ ಬದಲು ಅಷ್ಟು ತೀವ್ರವಲ್ಲದ ಇನ್ನೊಂದು ವಿಧೇಯಕ 1884ರಲ್ಲಿ ಕಾಯಿದೆಯಾಗಿ ಜಾರಿಗೆ ಬಂತು. ಭಾರತೀಯ ಜಿಲ್ಲಾ ನ್ಯಾಯಾಧೀಶರು ಹಾಗೂ ಸತ್ರ (ಸೆಷನ್ಸ್) ನ್ಯಾಯಾಧೀಶರು ಯುರೋಪಿಯನ್ ಬ್ರಿಟಿಷ್ ಪ್ರಜೆಗಳ ವಿಚಾರಣೆಯನ್ನೂ ನಡೆಸಬಹುದೆಂಬುದು ಈ ಕಾಯಿದೆಯ ಮುಖ್ಯಾಂಶ.

ಇಲ್ಬರ್ಟ್ ವಿಧೇಯಕದ ವಿರುದ್ಧವಾದ ಚಳವಳಿಯ ವಿಜಯದಿಂದ ಭಾರತೀಯರ ಅಭಿಮಾನಕ್ಕೆ ಬರೆ ಬಿದ್ದ ಹಾಗಾಯ್ತು. ಆದರೆ ಒಗ್ಗಟ್ಟು ಸಂಘಟನೆಗಳಿಂದ ಎಷ್ಟರಮಟ್ಟಿಗೆ ಉದ್ದೇಶ ಸಾಧನೆಯಾದೀತೆಂಬುದನ್ನು ಭಾರತೀಯ ವಿದ್ಯಾವಂತರಿಗೆ ಮನವರಿಕೆ ಮಾಡಿಕೊಟ್ಟಿದ್ದರಿಂದ ಇದೂ ಒಂದು ಅಜ್ಞಾತ ವರಪ್ರಸಾದವೆಂದೇ ಹೇಳಬಹುದು.(ಎನ್.ಕೆ.)

**ಇಲ್ಮೆನೈಟ್:** ಒಂದು ಖನಿಜ, ರಾಸಾಯನಿಕ ಸೂತ್ರ $FeTiO_3$. ಫೆರಿಕ್ ಕಬ್ಬಿಣ ಮತ್ತು ಟೈಟೇನಿಯಂಗಳ ಇಮ್ಮಡಿ ಆಕ್ಸೈಡ್ ಆಗಿರುವುದಕ್ಕಿಂತ ಮಿಗಿಲಾಗಿ ಫೆರಸ್ ಕಬ್ಬಿಣದ ಟೈಟನೇಟ್ ಆಗಿದೆ. ಇದು ರಾಂಬೊಹೀಡ್ರಲ್ ವರ್ಗಕ್ಕೆ ಸೇರಿದ ಹರಳುಗಳಾಗಿ ದೊರೆಯುತ್ತದೆ. ಹರಳುಗಳಿಗೆ ಸಾಮಾನ್ಯವಾಗಿ ಮಂದವಾದ ಫಲಾಕೃತಿ ಇರುವುದು. ರಚನೆಯಲ್ಲಿ ಸ್ಥೂಲವಾಗಿ ಹಿಮಟೈಟ್‌ನ್ನು ಹೋಲುವುದು. ಅಲ್ಲದೆ ಅಸ್ಪಷ್ಟ ಮುದ್ದೆ ಅಥವಾ ಸಣ್ಣ ಸಣ್ಣ ಕಣರಚನೆಯೂ ತೋರಿಬರುವುದುಂಟು. ಹಲವು ವೇಳೆ ಮರಳಿನೋಪಾದಿಯಲ್ಲೂ ದೊರೆಯುತ್ತದೆ. ಬಣ್ಣದಲ್ಲಿ ಕಬ್ಬಿಣದ ಕಪ್ಪು ಅಪಾರದರ್ಶಕ. ಒರೆ ಕಪ್ಪು ಅಥವಾ ಕಂದು ಕೆಂಪು. ಮಿತಲೋಹ ಹೊಳಪು. ಶಂಖಾಕೃತಿಯ ಬಿರಿತ. ಅಯಸ್ಕಾಂತದ ಆಕರ್ಷಣೆ ಬಹು ದುರ್ಬಲ. ಕಾಠಿಣ್ಯ 5–6. ಅಂದರೆ ಉಗುರಿನಿಂದ ಗೀರಲು ಸಾಧ್ಯವಿಲ್ಲ. ಸಾಪೇಕ್ಷ ಸಾಂದ್ರತೆ 4.5–5.

**ರಾಸಾಯನಿಕ ಸಂಯೋಜನೆ:** ಕಬ್ಬಿಣ ಮತ್ತು ಟೈಟೇನಿಯಂ ಆಕ್ಸೈಡು. ಅನೇಕ ವೇಳೆ ನಿರ್ದಿಷ್ಟ ರಾಸಾಯನಿಕ ಸಂಯೋಜನೆಯನ್ನು ತೋರದೆ ಧಾತುಗಳ ಪ್ರಮಾಣದಲ್ಲಿ ಏರುಪೇರುಗಳನ್ನು ತೋರಿಸುವುದು ಉಂಟು. ಹಲವು ಬಾರಿ ಹಿಮಟೈಟ್ ಅಥವಾ ಮ್ಯಾಗ್ನಟೈಟ್ ಪದರುಗಳೊಡನೆ ಒಂದು ರೀತಿಯ ವಿಶಿಷ್ಟ ಹೆಣಿಗೆ ರಚನೆಯನ್ನು ಇಲ್ಮೆನೈಟ್ ತೋರಿಸುತ್ತದೆ. ಇದು ವಿವಿಧ ಅಗ್ನಿಶಿಲೆಗಳಲ್ಲಿ ಅದರಲ್ಲೂ ಬಹುತೇಕ ಗ್ಯಾಬ್ರೊ ಮತ್ತು ಡಯೋರೈಟ್ ಗುಂಪಿನ ಶಿಲೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ದೊರೆಯುತ್ತದೆ. ಹಲವು ಸಾರಿ ರೂಪಾಂತರಿತ ಶಿಲೆಗಳಲ್ಲೂ ಕಂಡು ಬರುವುದುಂಟು. ಈ ಖನಿಜದ ಉತ್ತಮ ಬಗೆಯ ಮೆಕ್ಕಲು ನಿಕ್ಷೇಪಗಳನ್ನು ಕಾಣಬಹುದು.

ಟೈಟೇನಿಯಂ ಮತ್ತು ಟೈಟೇನಿಯಂ ಡೈ ಆಕ್ಸೈಡುಗಳು ಉತ್ಪತ್ತಿಗೆ ಮುಖ್ಯ ಮೂಲ ಖನಿಜ ಇಲ್ಮೆನೈಟ್. ಈ ಆಕ್ಸೈಡುಗಳನ್ನು ಪಡೆಯಲು ಖನಿಜದ ಅದಿರನ್ನು ವಿದ್ಯುತ್ ಕುಲುಮೆಗಳಲ್ಲಿ ಕಾಯಿಸಿ ಕರಗಿಸುತ್ತಾರೆ. ಹೀಗೆ ಕರಗಿಸಿದ ವಸ್ತುವನ್ನು ಸಲ್ಫ್ಯೂರಿಕ್ ಆಮ್ಲದೊಡನೆ ಬೆರೆಸಿ ಶುದ್ಧೀಕರಣಕ್ಕೊಳಪಡಿಸಿದಾಗ ಟೈಟೇನಿಯಂ ಆಕ್ಸೈಡುಗಳನ್ನು ಪಡೆಯಬಹುದು. ಈಚಿನ ವರ್ಷಗಳಲ್ಲಿ ಟೈಟೇನಿಯಂ ಡೈ ಆಕ್ಸೈಡನ್ನು ಹೆಚ್ಚಿನ ಪ್ರಮಾಣದಲ್ಲಿ ನಾನಾ ಬಗೆಯ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆ. ಉದಾ: ದ್ರವಬಣ್ಣಗಳ ತಯಾರಿಕೆಗೆ ಅಗತ್ಯವಾದ ಬಿಳಿ ಬಣ್ಣ, ಕಾಗದ, ರಬ್ಬರ್, ಪ್ಲಾಸ್ಟಿಕ್ ಸಾಮಾನು, ಪಿಂಗಾಣಿ ಸಾಮಾನು, ಮುದ್ರಣ ಶಾಯಿ, ಹತ್ತಿ ಬಟ್ಟೆ, ಸಾಬೂನು, ಸುಗಂಧ ದ್ರವ್ಯಗಳು, ಕೃತಕ ದಂತ ನಿರ್ಮಾಣ, ಚರ್ಮ ಹದ ಮಾಡುವಿಕೆ ಹೀಗೆ ನಾನಾ ಬಗೆಯ ಕೈಗಾರಿಕೆಗಳಲ್ಲಿ ಇದೊಂದು ಅಗತ್ಯವಾದ ಮೂಲ ಪದಾರ್ಥವೆನಿಸಿದೆ.

ಖನಿಜದ ಈ ಬಗೆಯ ಪ್ರಾಮುಖ್ಯಕ್ಕೆ ಮುಖ್ಯ ಕಾರಣಗಳು ಟೈಟೇನಿಯಂ ಡೈ ಆಕ್ಸೈಡಿನ ಅಚ್ಚ ಬಿಳಿಯ ಬಣ್ಣ, ಹೊಳಪು (ಬಹುಕಾಲ ಮಾಸದಿರುವ), ಬಣ್ಣ ಕೆಡದಿರುವಿಕೆ, ಯಾವ ತೆರನಾದ ರಾಸಾಯನಿಕ ಕ್ರಿಯೆಗೂ ಒಳಗಾಗದಿರುವಿಕೆ, ಆರೋಗ್ಯಕ್ಕೆ ಅಪಾಯಕಾರಿಯಾಗಿಲ್ಲದಿರುವುದು ಮತ್ತು ಸುಲಭವಾಗಿ ಇತರ ದ್ರವ ಬಣ್ಣಗಳೊಡನೆ ಬೆರೆಯುವುದು. ಇತ್ತೀಚಿನ ಸಂಶೋಧನೆಗಳಿಂದ ಖನಿಜದಿಂದ ದೊರೆಯುವ ರಾಸಾಯನಿಕ ವಸ್ತುಗಳ ಮತ್ತಷ್ಟು ಉತ್ತಮ ಗುಣಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ಬಲು ಮುಖ್ಯವಾದ ಗುಣ–ಟೈಟೇನಿಯಂ ಬಲು ಹಗುರವಾಗಿರುವುದೇ ಅಲ್ಲದೆ ಹೆಚ್ಚಿನ ನಿರ್ವಹಣ ಶಕ್ತಿಯನ್ನೂ ಹೊಂದಿದೆ; ಅಲ್ಲದೆ ಬಹು ಕಾಲ ಉಪಯೋಗಿಸಿದರೂ ತುಕ್ಕು ಹಿಡಿಯುವುದಿಲ್ಲ. ಎಚ್‌ಸಿಎಲ್‌ನಲ್ಲಿ ಮಂದಗತಿಯಲ್ಲಿ ಕರಗುತ್ತದೆ. ಅಲ್ಯೂಮಿನಿಯಂ ಮತ್ತು ತುಕ್ಕು ಹಿಡಿಯದ ಉಕ್ಕಿನ ಉತ್ತಮ ಗುಣಗಳನ್ನು ಇಲ್ಮೆನೈಟ್ ಹೊಂದಿರುವುದರ ಜೊತೆಗೆ ಅವಕ್ಕಿಂತಲೂ ಮಿಗಿಲಾದ ನಿರ್ವಹಣಾ ಶಕ್ತಿಯನ್ನು ಹೊಂದಿದೆ. ಈಗೀಗ ವಿಮಾನಗಳು, ನೌಕೆಗಳು ಮತ್ತು ರಕ್ಷಣಾ ಸಾಮಗ್ರಿಗಳ ತಯಾರಿಕೆಯಲ್ಲಿ ಇದರ ಬಳಕೆ ಹೆಚ್ಚುತ್ತಿದ್ದು ಇದಕ್ಕೆ ಎಲ್ಲಿಲ್ಲದ ಮಹತ್ತ್ವ ಬಂದಿದೆ. ಸದ್ಯದಲ್ಲಿ ಇದನ್ನು ಬಲುಮಟ್ಟಿಗೆ ವಿಪರೀತ ಗಡುಸಾದ ಮತ್ತು ಅಷ್ಟೇ ಪ್ರಮಾಣದ ಸ್ಥಿತಿಸ್ಥಾಪಕ ಸಾಮರ್ಥ್ಯವುಳ್ಳ ಲೋಹಮಿಶ್ರಣಗಳಾದ ಫೆರೋ–ಟೈಟೇನಿಯಂ ಮತ್ತು ಫೆರೋ ಕಾರ್ಬನ್–ಟೈಟೇನಿಯಂಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಹೀಗೆಯೇ ನಿಕ್ಕಲ್, ತಾಮ್ರ, ಮ್ಯಾಂಗನೀಸ್, ಕ್ರೋಮಿಯಂ, ಸಿಲಿಕಾನ್, ಟಂಗ್‌ಸ್ಟನ್ನುಗಳೊಡನೆ ಬೆರೆಸಿ ವಿಶೇಷ ರೀತಿಯ ಉಕ್ಕನ್ನು ತಯಾರಿಸುತ್ತಾರೆ.

ಇಲ್ಮೆನೈಟ್ ಮತ್ತು ಟೈಟೇನಿಯಂ ಡೈಆಕ್ಸೈಡುಗಳನ್ನು ಉಕ್ಕಿನ ಸರಳುಗಳ ಬೆಸೆಯುವಿಕೆ, ಆರ್ಕ್ ಲ್ಯಾಂಪುಗಳಲ್ಲಿ ಬಳಸುವ ಎಲೆಕ್ಟ್ರೋಡುಗಳ ತಯಾರಿಕೆ, ಕೃತಕ ಮೋಡಗಳ ಉತ್ಪತ್ತಿಗೆ ಅಗತ್ಯವಾದ ಟೈಟೇನಿಯಂ ಟೆಟ್ರಕ್ಲೋರೈಡ್ ತಯಾರಿಕೆ ಮತ್ತು ಬಣ್ಣಗಚ್ಚುಗಳ ತಯಾರಿಕೆಗಳಲ್ಲೆಲ್ಲ ಉಪಯೋಗಿಸುತ್ತಾರೆ. ಹತ್ತಿ ಬಟ್ಟೆಗಳಿಗೆ ಬಣ್ಣ ಹಾಕಲು ಇದು ಬಲು ಅಗತ್ಯವಾದ ವಸ್ತು.

**ದೊರೆಯುವ ಪ್ರದೇಶಗಳು:** ಈ ಖನಿಜವು ಮುಖ್ಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನ, ಭಾರತ, ಬ್ರೆಜಿಲ್ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿ ದೊರೆಯುತ್ತದೆ. ಅಮೆರಿಕದಲ್ಲಿ ಮುಖ್ಯವಾಗಿ ವರ್ಜೀನಿಯ ಪ್ರಾಂತ್ಯ ಆಮ್‌ಹರ್ಸ್ಟ್ ಕೌಂಟಿ ಅಲ್ಲದೆ ಫ್ಲಾರಿಡದ ಜಾಕ್‌ಸನ್ ವಿಲೆ ಮತ್ತು ಟ್ರೇಲ್ ರಿಜ್ ಬಳಿಯ ಕರಾವಳಿ ಹಾಗೂ ಸ್ಯಾನ್‌ಫರ್ಡ್‌ನಲ್ಲಿಯೂ ಇಲ್ಮೆನೈಟ್ ಉತ್ಪತ್ತಿಯಾಗುತ್ತಿದೆ. ಇದಲ್ಲದೆ ಕ್ವಿಬೆಕ್‌ನ ಅಲಾರ್ಡ್ ಸರೋವರದ ಬಳಿ ಇಡೀ ಪ್ರಪಂಚದಲ್ಲೇ ಅತಿ ದೊಡ್ಡ ಇಲ್ಮೆನೈಟ್ ಮೂಲ ನಿಕ್ಷೇಪಗಳಿವೆ.

ನಾರ್ವೆ ದೇಶದ ಬ್ಲಾಫೆಲ್‌ಡೈಟ್ ಪ್ರದೇಶದಲ್ಲಿ, ಬ್ರೆಜಿಲ್, ಆಸ್ಟ್ರೇಲಿಯದ ನ್ಯೂಸೌತ್‌ವೇಲ್ಸ್, ಕ್ವೀನ್ಸ್‌ಲೆಂಡ್ ಹಾಗೂ ಜಪಾನಿನ ಹಾಂಡೂ ಸಮುದ್ರತೀರದ ಮರಳಿನಲ್ಲಿ ಇಲ್ಮೆನೈಟ್ ದೊರೆಯುತ್ತದೆ. ಅಲ್ಪಸ್ವಲ್ಪ ಪ್ರಮಾಣದಲ್ಲಿ ಮಲೇಷಿಯದಲ್ಲೂ ದೊರೆಯುತ್ತದೆ.

ಭಾರತ ಇಲ್ಮೆನೈಟ್ ಅದಿರಿಗೆ ಪ್ರಸಿದ್ಧವಾದದ್ದು. ಪಶ್ಚಿಮ ಮತ್ತು ಪೂರ್ವ ಕರಾವಳಿ ಪ್ರದೇಶಗಳು ಈ ದೃಷ್ಟಿಯಿಂದ ಬಲು ಮುಖ್ಯ. ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದ ಕರಾವಳಿಗಳಲ್ಲಿ ಇಲ್ಮೆನೈಟಿನಿಂದ ಕೂಡಿದ ಮರಳು ನಿಕ್ಷೇಪಗಳಿವೆ. ಇವುಗಳಲ್ಲೆಲ್ಲ ಅತಿ ಮುಖ್ಯವಾದ ನಿಕ್ಷೇಪ ಕೇರಳದ ಪಶ್ಚಿಮ ಕರಾವಳಿಯ ಕ್ವಿಲಾನಿನಿಂದ ಮೊದಲಾಗಿ ದಕ್ಷಿಣಕ್ಕೆ ತಮಿಳು ನಾಡಿನ ಕನ್ಯಾಕುಮಾರಿಯ ಉದ್ದಕ್ಕೂ ಹರಡಿದೆ. ಮುಖ್ಯ ಮೆಕ್ಕಲು ನಿಕ್ಷೇಪಗಳು ಕ್ವಿಲಾನ್ ಜಿಲ್ಲೆಯ ಚವರ ಮತ್ತು ಕನ್ಯಾಕುಮಾರಿ ಬಳಿಯಿರುವ ಮನವಾಲ ಕುರುಚಿಯಲ್ಲಿವೆ. ಚವರ ಕೇಂದ್ರದಲ್ಲಿ ಉತ್ಪತ್ತಿಯಾಗುವ ಇಲ್ಮೆನೈಟ್ ಬಲು ಉತ್ತಮ ದರ್ಜೆಯದು.

ಭಾರತದ ನಾನಾ ಕೈಗಾರಿಕೆಗಳು ಸದ್ಯದಲ್ಲಿ ವರ್ಷಕ್ಕೆ ಸುಮಾರು 8,000 ಟನ್ನುಗಳಷ್ಟು ಇಲ್ಮೆನೈಟನ್ನು ಬಳಸುತ್ತಿದ್ದು ಮಿಕ್ಕ ಅದಿರನ್ನು ಇತರ ದೇಶಗಳಿಗೆ ಮಾರಾಟ ಮಾಡಲಾಗುತ್ತಿದೆ (1969).

ಈ ಮುಖ್ಯ ಮೆಕ್ಕಲು ನಿಕ್ಷೇಪಗಳಲ್ಲದೆ ಬಿಹಾರ್, ಒರಿಸ್ಸ, ಕರ್ನಾಟಕ, ರಾಜಸ್ಥಾನ ಮತ್ತು ಪಂಜಾಬಿನ ಶಿಲಾಸಮುದಾಯಗಳಲ್ಲಿ ಇಲ್ಮೆನೈಟ್ ಅಲ್ಪಸ್ವಲ್ಪ ಪ್ರಮಾಣದಲ್ಲಿ ಹುದುಗಿವೆ. ಬಿಹಾರಿನ ಮಯೂರ್‌ಭಂಜ್, ಒರಿಸ್ಸದ ಕಿಯಂಝರ್ ಜಿಲ್ಲೆಗಳಲ್ಲಿನ ಎಪಿಡಯೊರೈಟ್, ಸರ್ಪೆಂಟಿನೈಟ್ ಮೊದಲಾದ ಕ್ಷಾರ ಶಿಲೆಗಳಲ್ಲಿ ಅಲ್ಲಲ್ಲೇ ಈ ಖನಿಜದ ಪಟ್ಟಿಗಳನ್ನು ಕಾಣಬಹುದು. ಇವು ತಾವು ಹುದುಗಿರುವ ಶಿಲೆಯಂತೆ ಮಾತೃಶಿಲಾದ್ರವದ ಚಟುವಟಿಕೆಯಿಂದ ಉಂಟಾದುವು. (ಬಿ.ವಿ.ಜಿ.)

**ಇಲ್ವಲ:** ನೋಡಿ– ವಾತಾಪಿ

**ಇವಾನ್ಸ್, ಸರ್ ಆರ್ಥರ್ ಜಾನ್:** 1851–1941. ಬ್ರಿಟಿಷ್ ಪ್ರಾಕ್ತನಶಾಸ್ತ್ರಜ್ಞ, ಕಾಗದ ತಯಾರಿಕೆ ಸಂಸ್ಥೆಯಾದ ಜಾನ್ ಡಿಕೆನ್ಸನ್ ಮತ್ತು ಕಂಪನಿಯ ಸರ್ ಜಾನ್ ಇವಾನ್ಸ್ ಎಂಬುವನ ಹಿರಿಯ ಮಗ. ಹ್ಯಾರೋ ಮತ್ತು ಬ್ರೇಸ್ ನೋಸ್‌ಗಳಲ್ಲಿ

ವ್ಯಾಸಂಗಮಾಡಿದ. ಪ್ರಾಕ್ತನಶಾಸ್ತ್ರದಲ್ಲಿ ಇವಾನ್ಸನ ತಂದೆ ಭೂವಿಜ್ಞಾನಿಯೆಂದೂ ಪ್ರಾಚೀನಾನ್ವೇಷಕನೆಂದೂ ಪ್ರಖ್ಯಾತನಾಗಿದ್ದ. ಆದ್ದರಿಂದಲೇ ಮಗನಿಗೆ ಪ್ರಾಕ್ತನಶಾಸ್ತ್ರದಲ್ಲಿ ಆಸಕ್ತಿ ಬೆಳೆಯಿತು. 1871–78ರ ವರೆಗೆ ಈತ ರಗುಸ ಎಂಬಲ್ಲಿ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕಾಪ್ರತಿನಿಧಿಯಾಗಿ, ಬಾಲ್ಕನ್ ಪ್ರದೇಶದಲ್ಲಿ ವಿಶೇಷವಾಗಿ ಸಂಚರಿಸಿ, ಡಾಲ್ಮೇಷಿಯನ್ ಇತಿಹಾಸವನ್ನೂ ಪ್ರಾಕ್ತನವನ್ನೂ ಅಭ್ಯಾಸ ಮಾಡಿದ.

ಈತ 1878ರಲ್ಲಿ ಇ.ಎ. ಫ್ರೀಮನ್ ಎಂಬ ಇತಿಹಾಸ ಶಾಸ್ತ್ರಜ್ಞನ ಮಗಳಾದ ಮಾರ್ಗರೆಟ್ ಎಂಬುವಳನ್ನು ಮದುವೆಯಾದ. ರಗುಸ ಎಂಬಲ್ಲೇ ಈತ 1882ರವರೆಗೂ ಇದ್ದ. ಆ ಪ್ರದೇಶದ ಬಂಡಾಯವೊಂದರಲ್ಲಿ ಈತನ ಮೇಲೂ ಸಂಶಯ ಹುಟ್ಟಿತು. ಆಸ್ಟ್ರಿಯನ್ ಸರ್ಕಾರ ಈತನನ್ನು ಹೊರಹಾಕಲಾಗಿ ಸ್ವದೇಶಕ್ಕೆ ಹಿಂದಿರುಗಿದ. 1884–1909ರವರೆಗೆ ಆಕ್ಸ್‌ಫರ್ಡಿನ ಆಷ್ಮೋಲಿಯನ್ ವಸ್ತುಸಂಗ್ರಹಾಲಯದ ಕ್ಯೂರೇಟರ್ ಆಗಿದ್ದ. ಈ ಸಂಗ್ರಹಾಲಯದ ಜೀರ್ಣೋದ್ಧಾರ ಹಾಗೂ ವಿಸ್ತರಣೆಗೆ ಈತನೇ ಬಹುಮಟ್ಟಿಗೆ ಕಾರಣ. ರತ್ನಗಳನ್ನೂ ನಾಣ್ಯಗಳನ್ನೂ ಅಭ್ಯಾಸ ಮಾಡುವುದೆಂದರೆ ಈತನಿಗೆ ತುಂಬ ಇಷ್ಟ. ಆದಿಮ ಲಿಪಿಯಲ್ಲಿ ಇವಾನ್ಸ್ ತಳೆದ ಆಸಕ್ತಿಯ ಫಲವೇ ನಾಸಸ್‌ನಲ್ಲಿ ನಡೆದ ಭೂಶೋಧನೆ. 1899ರಲ್ಲಿ ಕ್ರೀಟನ್ ಪರಿಶೋಧನ ನಿಧಿಯಿಂದ ದೊರೆತ ಸಹಾಯದಿಂದ ಆರಂಭಿಸಿ, ಮುಂದೆ ಅನ್ಯರ ನೆರವನ್ನಪೇಕ್ಷಿಸದೆ ಸ್ವಪ್ರಯತ್ನದಿಂದಲೇ ಈ ಕಾರ್ಯದಲ್ಲಿ ಮುಂದುವರಿದ ಇವಾನ್ಸ್ ಐರೋಪ್ಯ ನಾಗರಿಕತೆಗೆ ಮೂಲವೆನ್ನಬಹುದಾದ ಕ್ರೀಟ್ ನಾಗರಿಕತೆಯನ್ನು ಬೆಳಕಿಗೆ ತಂದ. ಇದು ಈತನ ಜೀವನದ ದೊಡ್ಡ ಸಾಧನೆ. 1911ರಲ್ಲಿ ಈತನಿಗೆ ನೈಟ್ ಬಿರುದು ಲಭ್ಯವಾಯಿತು.

ಕ್ರೀಟನ್ ಪಿಕ್ಟೊಗ್ರಾಫ್ಸ್ ಮತ್ತು ಫೋನೀಷಿಯನ್ ಸ್ಕ್ರಿಪ್ಟ್ಸ್, ಪ್ಯಾಲೇಸ್ ಆಫ್ ಮಿನೊಸ್ ಮತ್ತು ರಿಪೋರ್ಟ್ಸ್ ಆನ್ ಎಕ್ಸ್‌ಕವೇಷನ್ಸ್ ಅಟ್ ನಾಸಸ್–ಇವು ಈತ ಬರೆದಿರುವ ಪುಸ್ತಕಗಳಲ್ಲಿ ಮುಖ್ಯವಾದುವು. (ಎ.ವಿ.ಎಸ್.)

**ಇಷರ್‌ವುಡ್, ಕ್ರಿಸ್ಟಫರ್ ವಿಲಿಯಂ ಬ್ರಾಡ್ ಷಾ:** 1904–89. ಇಂಗ್ಲಿಷ್ ಕಾದಂಬರಿಕಾರ. ಜನನ ಇಂಗ್ಲೆಂಡಿನ ಚೆಷೈರ್ ಪ್ರಾಂತ್ಯದ ಡಿಸ್ಲಿಯಲ್ಲಿ. 1904ರಲ್ಲಿ ಶಿಕ್ಷಣ ಕೇಂಬ್ರಿಜಿನ ಕಾರ್ಪಸ್ ಕ್ರಿಸ್ಟಿಯಲ್ಲಿ. ಮುಂದೆ (1928–29) ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ವೈದ್ಯಶಾಸ್ತ್ರಾಭ್ಯಾಸ. ಇದೇ ಕಾಲದಲ್ಲಿ (1928) ಈತನ ಕಾದಂಬರಿ ಆಲ್ ದಿ ಕಾನ್‌ಸ್ಪಿರೇಟರ್ಸ್ ಪ್ರಕಟವಾಯಿತು. ದಿ ಮೆಮೋರಿಯಲ್ ಬೆಳಕು ಕಂಡಿದ್ದು 1932ರಲ್ಲಿ. **(ಎಚ್.ಎ.ಎಸ್.)**

ಮಿಸ್ಟರ್ ನಾರಿಸ್ ಛೇಂಜಸ್ ಟ್ರೇನ್ಸ್ (1935) ಮತ್ತು ಗುಡ್‌ಬೈ ಟು ಬರ್ಲಿನ್ (1939) ಕೃತಿಗಳಿಂದ ಈತ ಪ್ರಸಿದ್ಧನಾದ. ಆರ್ಥಿಕ ಮುಗ್ಗಟ್ಟಿನ ಅನಂತರದ, ಹಿಟ್ಲರ್ ಪೂರ್ವಕಾಲದ ಬರ್ಲಿನ್ ನಗರದಲ್ಲಿ (1930–33) ಇಷರ್‌ವುಡ್ ಇಂಗ್ಲಿಷ್ ಬೋಧಕನಾಗಿದ್ದಾಗ ಗಳಿಸಿದ ಅನುಭವದ ಆಧಾರದ ಮೇಲೆ ಈ ಎರಡು ಕಾದಂಬರಿಗಳೂ ರಚಿತವಾಗಿವೆ. ನಾನೊಂದು ಕ್ಯಾಮೆರ, ಮುಚ್ಚಳ ತೆರೆದ ಕ್ಯಾಮೆರ; ನಡೆಯುತ್ತಿರುವ ಸಮಸ್ತಕ್ಕೂ ಸಾಕ್ಷೀಭೂತ; ನಿರ್ಲಿಪ್ತ; ಗ್ರಹಿಸುವುದಷ್ಟೇ ನನ್ನ ಕೆಲಸ; ಯೋಚಿಸುವುದಲ್ಲ–ಎಂದು ಹೇಳಿಕೊಂಡಿರುವ ಇಷರ್‌ವುಡ್ ತನ್ನ ಈ ಕೃತಿಗಳಲ್ಲಿ ಆ ಕಾಲದ ಜರ್ಮನಿಯ–ಒಟ್ಟಿನಲ್ಲಿ ಇಂಥ ಎಲ್ಲ ಸಮಾಜಗಳ–ಪತನದ ಚಿತ್ರ ನೀಡಿದ್ದಾನೆ. ಸಾಯುತ್ತಿದ್ದ ನಗರವೊಂದರ ಕ್ಷೋಭೆ ದುರಂತಗಳನ್ನೂ ಭ್ರಷ್ಟಜನರ ಬಂಡಾಟಗಳನ್ನೂ ಕೆಳದರ್ಜೆಯ ವಸತಿಗಳಲ್ಲಿನ ಹೀನದೀನ ಜೀವನವನ್ನೂ ಆ ಜನರ ಲೈಂಗಿಕ ಸಮಸ್ಯೆಗಳನ್ನೂ ಕಣ್ಣಾರೆ ಕಂಡಂತೆ ಬಣ್ಣಿಸಿದ್ದಾನೆ.

ಇಷರ್‌ವುಡ್ ವಿದ್ಯಾರ್ಥಿಯಾಗಿದ್ದಾಗ ತನ್ನ ಗೆಳೆಯನಾಗಿದ್ದ ಆಡೆನ್ ಕವಿಯೊಂದಿಗೆ ಕೂಡಿ ಮೂರು ಗದ್ಯ ಪದ್ಯ ನಾಟಕ ಬರೆದ. ಅಂದಿನ ರಾಜಕೀಯ ಅನುರಣನವೇ ತುಂಬಿರುವ ಈ ನಾಟಕಗಳಲ್ಲಿ ಇವರು ಅಭಿವ್ಯಕ್ತಿ (ಎಕ್ಸ್‌ಪ್ರೆಷನಿಸ್ಟ್) ವಿಧಾನವನ್ನವಲಂಬಿಸಿದ್ದಾರೆ. ಆಡನ್ 'ಪೊಯಟ್ರಿ ಆಫ್ ಆಕ್ಷನ್' ಅನ್ನು ಸೃಷ್ಟಿಸಿದ. ಇದಕ್ಕೆ ಇಷರ್‌ವುಡ್ ನಾಟಕ ಸ್ವರೂಪವನ್ನು ಕೊಟ್ಟ. ಸಂಗೀತಮಾರ್ಗವನ್ನೂ ಪ್ರತೀಕ ಪದ್ಧತಿಯನ್ನೂ ಅಳವಡಿಸಿಕೊಂಡು ಧ್ವನಿಯುಕ್ತವಾಗಿರುವ ನಾಟಕಗಳು ಅಂದಿನ ವಸ್ತುಸ್ಥಿತಿಗೂ ಆದರ್ಶಗಳಿಗೂ ನಡುವಣ ಘರ್ಷಣೆಯನ್ನೂ ಬಹಳ ಪರಿಣಾಮಕಾರಿಯಾಗಿ ಎತ್ತಿ ತೋರಿಸುತ್ತವೆ. ದಿ ಡಾಗ್ ಬಿನೀತ್ ದಿ ಸ್ಕಿನ್ (1935), ದಿ ಅಸೆಂಟ್ ಆಫ್ ಎಫ್ 6 (1937), ಆನ್ ದಿ ಫ್ರಾಂಟಿಯರ್ (1938) ಇವನ ನಾಟಕಗಳು.

ಇಷರ್‌ವುಡ್ 1938ರಲ್ಲಿ ಆಡೆನ್ನನೊಂದಿಗೆ ಚೀನದಲ್ಲಿ ಪ್ರವಾಸ ಮಾಡಿದ; ಈತ ಜರ್ನಿ ಟು ಎ ವಾರ್ ಎಂಬುದನ್ನು ಬರೆದದ್ದು 1939ರಲ್ಲಿ. ಅನಂತರ 1940ರಲ್ಲಿ ಕ್ಯಾಲಿಫೋರ್ನಿಯಕ್ಕೆ ಹೋಗಿ ಅಲ್ಲಿ ಮೆಟ್ರೋ–ಗೋಲ್ಡ್ ವಿನ್–ಮೇಯರ್ ಚಲನಚಿತ್ರ ಸಂಸ್ಥೆಗಾಗಿ ನಾಟಕ ರಚನೆಯ ಕಾರ್ಯ ನಿರ್ವಹಿಸಿದ. 1946ರಲ್ಲಿ ಈತ ಅಮೆರಿಕದ ಪ್ರಜೆಯಾದ.

ಭಾರತದ ಸನಾತನ ಧರ್ಮ ಸಾಹಿತ್ಯಗಳಲ್ಲಿ ಇಷರ್‌ವುಡ್‌ಗೆ ತುಂಬ ಆಸಕ್ತಿ. ಈತ ಸ್ವಾಮಿ ಪ್ರಭವಾನಂದರೊಂದಿಗೆ ಭಗವದ್ಗೀತೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾನೆ (1944). ಶಂಕರಾಚಾರ್ಯರ ವಿವೇಕ ಚೂಡಾಮಣಿಯ ಆಂಗ್ಲ ರೂಪ 1947ರಲ್ಲಿ ಪ್ರಕಟವಾಯಿತು. ಉಪನಿಷದ್ಸ್ ಇವನ ಇನ್ನೊಂದು ಗ್ರಂಥ. ಹೌ ಟು ನೋ ಗಾಡ್ ಮತ್ತು ದಿ ಯೋಗಿ ಅಫಾರಿಸಮ್ಸ್ ಆಫ್ ಪತಂಜಲಿ (1953) ಇವು ಈತನ ಇನ್ನೆರಡು ಪುಸ್ತಕಗಳು.

ಫ್ರೆಂಚ್ ಲೇಖಕ ಬೋದಿಲೇರನ ಇಂಟಿಮೇಟ್ ಜರ್ನಲ್ಸ್ ಎಂಬ ಕೃತಿಯನ್ನು ಇಷರ್‌ವುಡ್ ಇಂಗ್ಲಿಷಿಗೆ ಭಾಷಾಂತರಿಸಿದ್ದಾನೆ (1947). ಪ್ರೇಟರ್ ವೈಯೊಲೆಟ್ (1945), ದಿ ವರ್ಲ್ಡ್ ಇನ್ ದಿ ಈವ್ನಿಂಗ್ (1954) ಮತ್ತು ಮೀಟಿಂಗ್ ಬೈದಿ ರಿವರ್ (1967) ಇವನ ಕಾದಂಬರಿಗಳು. 1938ರಲ್ಲಿ ಈತ ಬರೆದ ಲಯನ್ಸ್ ಅಂಡ್ ಷಾಡೋಸ್ ಆತ್ಮಕಥಾತ್ಮಕವಾಗಿದೆ. *

**ಇಷ್ಟಲಿಂಗ:** ವೀರಶೈವರು ಶಿವಾಗಮೋಕ್ತವಾಗಿ ಕಂಠ, ಹೃದಯ, ಬಾಹು ಮತ್ತು ತಲೆಗಳಲ್ಲಿ ಧರಿಸುವ ಲಿಂಗ. ಇದನ್ನು ಅನುಸರಿಸಿ ಭಾವಲಿಂಗ, ಪ್ರಾಣ ಲಿಂಗಗಳ ಪೂಜೆಯಾಗಬೇಕೆಂದು ವೀರಶೈವ ಸಿದ್ಧಾಂತ ಹೇಳುತ್ತದೆ.

ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಾದಿಗಳಿಗೆ ಕಾರಣವಾದುದೇ ಬ್ರಹ್ಮ ಎಂದು ಭಾರತೀಯ ತತ್ತ್ವಶಾಸ್ತ್ರ ಹೇಳುತ್ತದೆ. ಆ ಪರಬ್ರಹ್ಮವನ್ನೇ ಇಲ್ಲಿ ಸ್ಥಲ, ಲಿಂಗ ಎಂದು ಹೆಸರಿಸಲಾಗಿದೆ. ಸ್ಥಾವರಜಂಗಮಾತ್ಮಕವಾದ ಸಮಸ್ತ ವಿಶ್ವಕ್ಕೂ ಆಶ್ರಯವಾದುದೇ ಸ್ಥಲತತ್ತ್ವ. ಈ ವಿಶ್ವ ಯಾವ ಮೂಲವಸ್ತುವಿನಿಂದ ಹುಟ್ಟಿ ಮತ್ತೆ ಎಲ್ಲಿ ಅಡಗುವುದೋ ಅದು ಲಿಂಗ. ಮೇಲೆ ಹೇಳಿದ ಸ್ಥಲ ಅಥವಾ ಲಿಂಗತತ್ತ್ವಗಳಿಂದ ಈ ಬ್ರಹ್ಮಾಂಡ ಮತ್ತು ಪಿಂಡಾಂಡಗಳು (ಶರೀರ) ನಿರ್ಮಿತವಾಗಿವೆ. ಮೇಲಾಗಿ ಇವೆರಡಕ್ಕೂ ತಾತ್ತ್ವಿಕ ಸಂಬಂಧವಿದೆ.

ಜ್ಞಾನ ಮತ್ತು ಕ್ರಿಯೆಗಳಿಗೆ ಸಂಬಂಧಿಸಿದ ಎಲ್ಲ ಶರೀರವ್ಯಾಪಾರಗಳಿಗೆ ಹೃದಯ ಆಶ್ರಯ. ಅಲ್ಲಿರುವ ಆಕಾಶ (ಅವಕಾಶ) ಚೇತನ ಅದನ್ನು ದಹರಾಕಾಶ, ಪರವೇಶ್ಮ ಎಂದು ಉಪನಿಷತ್ತುಗಳು ಹೇಳುತ್ತವೆ. ಗೀತೆ ಎಲ್ಲ ಪ್ರಾಣಿಗಳ ಹೃದಯದಲ್ಲೂ ಈಶ್ವರನಿದ್ದಾನೆ ಎನ್ನುತ್ತದೆ. ಇದೇ ವೀರಶೈವ ಪರಿಭಾಷೆಯಲ್ಲಿ ಪ್ರಾಣಲಿಂಗವೆನಿಸಿದೆ.

ಹೃದಯಕೋಶದಲ್ಲಿನ ಆಕಾಶದ ಆಕಾರವನ್ನು ಗಮನಿಸಿಯೇ ಇಷ್ಟಲಿಂಗದ ರೂಪರಚನೆಯಾಗಿದೆ. "ಹೃದಯಾಬ್ಜಕೋಶಾಂತರಾವಕಾಶಲಬ್ಧಾಂಗುಷ್ಠ ಪರಿಮಾಣಸ್ಯ ಲಿಂಗಾಕಾರತ್ವಮಸ್ತೀತಿ ತಸ್ಯ ಲಿಂಗರೂಪತ್ವ ಸಿದ್ಧಿಃ" ಎಂದು ಅಪ್ಪಯ್ಯ ದೀಕ್ಷಿತರು ತಮ್ಮ ಪಂಚರತ್ನ ಸ್ತುತಿಯಲ್ಲಿ ಹೇಳಿದ್ದಾರೆ. ಅಂದರೆ ಮಾನವನ ಹೃದಯಕೋಶ ಅಂಗುಷ್ಠದಷ್ಟು (ಹೆಬ್ಬೆರಳು) ಇರುವುದರಿಂದ ಅಲ್ಲಿರುವ ಆಕಾಶದ ಪರಿಮಾಣವನ್ನು ಅನುಸರಿಸಿ ಲಿಂಗರೂಪ ಸಿದ್ಧಿಸುತ್ತದೆ. ಅಂಗುಷ್ಠಪರಿಮಾಣವುಳ್ಳ ಓಂಕಾರರೂಪಿಯಾದ ಲಿಂಗರೂಪ ಶಿವನನ್ನು ಹೃದಯದಲ್ಲಿ ಧ್ಯಾನಿಸಬೇಕು. ಹೆಬ್ಬೆರಳಿನ ಪ್ರಮಾಣದಷ್ಟಿರುವ ಅಂತರಾತ್ಮ ಜನರ ಹೃದಯದಲ್ಲಿದ್ದಾನೆ. ಅವನನ್ನು ಧ್ಯಾನಿಸುವವರು ಅಮೃತರಾಗುತ್ತಾರೆ ಎಂದು ಉಪನಿಷತ್ತುಗಳಲ್ಲಿ ಉಕ್ತವಾದ ಅಂಶವನ್ನು ವೀರಶೈವ ಆಚಾರ್ಯರು ಉಲ್ಲೇಖಿಸಿದ್ದಾರೆ. ಆ ಪ್ರಾಣಲಿಂಗದ ಪ್ರತೀಕವಾಗಿ ಬಾಹ್ಯ ಇಷ್ಟಲಿಂಗವನ್ನು ಶರೀರದ ಮೇಲೆ ಧರಿಸುತ್ತಾರೆ.

ಪೀಠ, ಗೋಮುಖ, ಬಾಣ ಮೊದಲಾದ ಅವಯವಗಳಿಂದ ಕೂಡಿದ್ದು ಇಷ್ಟಲಿಂಗ ಪಂಚಸೂತ್ರ ಪ್ರಮಾಣದಂತೆ ರಚಿತವಾಗುತ್ತದೆ. ಅದನ್ನು ಸ್ಫಟಿಕ, ಶೈಲಜ (ಶ್ರೀಶೈಲಶಿಲೆ), ಬಾಣ, ಚಂದ್ರಕಾಂತ ಅಥವಾ ಸೂರ್ಯಕಾಂತ ಮಣಿಗಳಿಂದ ರಚಿಸಬೇಕು. ಅದರ ಮೇಲೆ ಕಾಂತಿ (ಚಿದ್ ರಸ) ಎಂಬ ರಾಸಾಯನಿಕ ವಸ್ತುವನ್ನು ಧರಿಸಬೇಕು. ಈ ಕಾಂತಿ ಗೇರೆಣ್ಣೆ, ಎಳ್ಳೆಣ್ಣೆ, ಕರ್ಪೂರದ ಕಾಡಿಗೆ ಮುಂತಾದವುಗಳಿಂದ ಸಿದ್ಧವಾಗುತ್ತದೆ. ಕಾಂತಿಧರಿಸಿದ ಈ ಲಿಂಗ ದುಂಡಾಗಿಯೂ ನುಣುಪಾಗಿಯೂ ಇದ್ದು ಹೊಳೆಯುವ ಕಪ್ಪು ನೇರಳೆಹಣ್ಣಿನ ಆಕಾರ (ಅಂಗುಷ್ಠಪರಿಮಾಣ) ತಳೆಯುತ್ತದೆ. ಇದರಲ್ಲಿ ಗುರುವಾದವ ಹೃದಯದಲ್ಲಿರುವ ಪ್ರಾಣಲಿಂಗಕಲೆಯನ್ನು ವಿಧ್ಯುಕ್ತವಾಗಿ ತನ್ನ ಯೋಗಶಕ್ತಿಯಿಂದ ಆಕರ್ಷಿಸಿ ಸ್ಥಾಪಿಸುತ್ತಾನೆ. ಲಿಂಗಪೂಜಾವಿಧಾನ, ಮಂತ್ರರಹಸ್ಯಗಳನ್ನು ಬೋಧಿಸಿದ ತರುವಾಯ ಹೀಗೆ ಬೆಸಸುತ್ತಾನೆ; ಅನಿಷ್ಟವನ್ನು ಕಳೆದು ಇಷ್ಟಾರ್ಥವನ್ನು ನೀಡುವ ಪರವಸ್ತುವೇ ಇಷ್ಟಲಿಂಗ. ಇದನ್ನು ಯಾವಾಗಲೂ ಶರೀರದ ಮೇಲೆ ಧರಿಸಿ ಏಕಾಗ್ರತೆಯಿಂದ ಪೂಜಿಸು, ಅಮೃತಸ್ಯ ದೇವಧಾರಣೋ ಭೂಯಾಸಂ, ತಸ್ಯಾಭಿಧ್ಯಾನಾದ್ಯೋಜನಾತತ್ತ್ವ ಭಾವಾದ್ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ–ಮುಂತಾದ ಶ್ರುತಿಗಳು ಇಷ್ಟಲಿಂಗವನ್ನು ಶರೀರದ ಮೇಲೆ ಧರಿಸಬೇಕೆಂದು ವಿಧಿಸುತ್ತವೆ. ವಾಮಹಸ್ತದಲ್ಲಿಟ್ಟು ಇಷ್ಟಲಿಂಗವನ್ನು ಪೂಜಿಸಿ 12 ಅಂಗುಲ ದೂರದಿಂದ ನಿರೀಕ್ಷಿಸುತ್ತ ಮಂತ್ರ ಜಪಮಾಡುವುದರಿಂದ ಯೋಗಶಾಸ್ತ್ರೋಕ್ತವಾದ ದೃಷ್ಟಿಯೋಗ (ರಾಜಯೋಗ) ಸಿದ್ಧಿಸುತ್ತದೆ.

ಓಂಕಾರವೇ ಲಿಂಗವಾದ್ದರಿಂದ ಇಷ್ಟಲಿಂಗ ತಾರಾದಿ ಪಂಚಸೂತ್ರಗಳಿಂದ ಘಟಿತವಾದ ಹೃದಯಾಕಾಶದ ಅವಯವಗಳ ಪ್ರಮಾಣವನ್ನು ಅನುಸರಿಸಿ ಪ್ರಣವ, ಪಂಚಾಕ್ಷರಗಳು, ತನ್ಮೂಲಕ ಪ್ರಾಣಲಿಂಗವೆನಿಸಿ, ಪುನಃ ಗುರುಮುಖದಿಂದ ಅದೇ ಬಾಹ್ಯದಲ್ಲಿ ಇಷ್ಟಲಿಂಗವೆನಿಸಿ ವಾಮಹಸ್ತದಲ್ಲಿ ಪೂಜೆಗೊಳ್ಳುತ್ತದೆ.

ಮತ್ತೊಂದು ದೃಷ್ಟಿಯಿಂದ ಇಷ್ಟಲಿಂಗ ಶಿವಶಕ್ತಿಗಳ ಸಮಷ್ಟಿ. ಲಿಂಗದ ಪಾಣಿಪಾಟವೇ ಶಕ್ತಿ; ಮೇಲಿನ ಬಾಣವೇ ಶಿವ. ಮೇಲಾಗಿ ಲಿಂಗ ತ್ರಿಮೂರ್ತಿ ಸ್ವರೂಪ; ಲಿಂಗದ ಕೆಳಭಾಗ ಬ್ರಹ್ಮ, ಗೋಮುಖಭಾಗ ವಿಷ್ಣು, ಮೇಲಿನ ಬಾಣ ಶಿವ. ಹೀಗೆ ಇಷ್ಟಲಿಂಗ ಅನೇಕ ದೃಷ್ಟಿಯಿಂದ ಭಗವತ್ ಸ್ವರೂಪ ತಳೆದಿದೆ.

ಮಾನವನ ಹೃದಯಾದಿಗಳಲ್ಲಿ ಜ್ಯೋತಿರ್ಲಿಂಗರೂಪದಿಂದ ಶಿವನಿರುವನಾದರೂ ಅವನನ್ನು ಅನುಸಂಧಾನ ಮಾಡುವುದು ಕೇವಲ ಯೋಗಿಗಳಿಗೆ ಮಾತ್ರ ಸಾಧ್ಯ. ಅದಕ್ಕಾಗಿ ಬಾಹ್ಯದಲ್ಲಿ ಆ ಪ್ರಾಣಲಿಂಗದ ಕುರುಹನ್ನು (ಇಷ್ಟಲಿಂಗ) ಸಾಮಾನ್ಯರು ಧರಿಸಬೇಕೆಂಬುದು

ಒಂದು ದೃಷ್ಟಿ. ಹಾಗೆ ಹೃದಯಾದಿಗಳಲ್ಲಿ ಅನುಸಂಧಾನ ಮಾಡುವ ಶಕ್ತಿಯಿರಲಿ ಇಲ್ಲದಿರಲಿ ಬಾಹ್ಯದಲ್ಲಿ ಅದರ ಪ್ರತೀಕವಾದ ಇಷ್ಟಲಿಂಗವನ್ನು ಧರಿಸಲೇಬೇಕು ಎಂಬುದು ಇನ್ನೊಂದು ದೃಷ್ಟಿ. ಮಾನವನಿಗೆ ಕರ್ಮವಶದಿಂದ ಬಂದಿರುವ ಭವರೋಗ ವಾಸಿಯಾಗಬೇಕಾದರೆ ಅವನ ಶರೀರದಲ್ಲಿಯೇ ಇರುವ ಪ್ರಾಣಲಿಂಗಕಲೆಯನ್ನು ಹೊರತೆಗೆದು ಇಷ್ಟಲಿಂಗರೂಪದಿಂದ ಪೂಜಾಯೋಗ್ಯವಾಗಿ ಮಾಡಬೇಕು ಎಂದು ಮಗ್ಗೆ ಮಾಯಿದೇವಕೃತ ಶತಕತ್ರಯದಲ್ಲಿ ಉಕ್ತವಾಗಿದೆ.

ಗುರು ದೀಕ್ಷಾಕಾಲದಲ್ಲಿ ಭಕ್ತನ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ಕ್ರಮವಾಗಿ ಇಷ್ಟ. ಪ್ರಾಣ ಮತ್ತು ಭಾವಲಿಂಗಗಳನ್ನು ಸ್ಥಾಪಿಸುತ್ತಾನೆ. ಅದೇ ಸಮಯದಲ್ಲಿ ಅವರ ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮತ್ತು ಮನಸ್ಸುಗಳಲ್ಲಿ ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳನ್ನು ಸ್ಥಾಪಿಸುತ್ತಾನೆ. ಇದರಿಂದ ಸಾಧಕ ಇಂದ್ರಿಯಮುಖದಿಂದ ಸ್ವೀಕರಿಸುವ ಪ್ರತಿಯೊಂದು ವಿಷಯವೂ ಲಿಂಗಮುಖವಾಗಿ ಬರುವುದರಿಂದ ಪ್ರಸಾದವೆನಿಸುತ್ತದೆ. ಆಗ ಆತ ಲಿಂಗಭೋಗೋಪಭೋಗಿ ಎನಿಸಿ ಜೀವನಮುಕ್ತನಾಗಿ ಕಡೆಗೆ ಮುಕ್ತನಾಗುತ್ತಾನೆ.

ಇಷ್ಟಲಿಂಗಧಾರಣ ಚಾರಿತ್ರಿಕ ದೃಷ್ಟಿಯಿಂದ ಸುಮಾರು ಪ್ರ.ಶಕೆಯ ಆರಂಭ ಕಾಲದಿಂದಲೂ ಭಾರತದಲ್ಲಿರುವಂತೆ ತಿಳಿದುಬಂದಿದೆ. ಭಾರತದ ಸಾರ್ವಭೌಮರೆನಿಸಿದ್ದ ಭಾರಶಿವ (2ನೆಯ ಶತಮಾನ), ಪಲ್ಲವ (5–7ನೆಯ ಶತಮಾನ) ರಾಜರು ಲಿಂಗಧಾರಿಗಳಾಗಿದ್ದರು. (ಎಂ.ಜಿ.ಎನ್.)

**ಇಷ್ಟಾರ್:** ಬ್ಯಾಬಿಲೋನಿಯ ಮತ್ತು ಅಸ್ಸೀರಿಯಗಳ ಒಬ್ಬ ದೇವತೆ. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿವೆ : ಕ್ಯನ್ಸಾನ್‌ನಲ್ಲಿ ಅಷ್ಟಾರ್ಟ್, ಮೆಸಪೊಟೇಮಿಯದಲ್ಲಿ ಅಟಾರ್, ಮೋಯಬ್‌ನಲ್ಲಿ ಅಷ್ಟಾರ್, ದಕ್ಷಿಣ ಆಫ್ರಿಕದಲ್ಲಿ ಅಥ್‌ಟಾರ್, ಅಬಿಸಿನಿಯದಲ್ಲಿ ಅಸ್ಟಾರ್–ಹೀಗೆ.

ಈ ದೇವತೆಯ ಕಲ್ಪನೆಗೆ ಸುಮೇರಿಯದ ಅಥವಾ ಬ್ಯಾಬಿಲೋನಿಯದ ಮೂಲನಿವಾಸಿಗಳು ಕಾರಣರಲ್ಲ. ಸೆಮಿಟಿಕ್ ವಲಸೆಗಾರರು ಈ ದೇವತೆಯನ್ನು ಬ್ಯಾಬಿಲೋನಿಯಕ್ಕೆ ತಂದು ಸ್ಥಾಪಿಸಿದರು. ಸೆಮಿಟಿಕ್ ವಲಸೆಗಾರರು ಬ್ಯಾಬಿಲೋನಿಯಕ್ಕೆ ಬಂದಾಗ ಅಲ್ಲಿಯ ಜನ ಅನೇಕ ನಾಡು ದೇವತೆಗಳಿಗೆ ಪೂಜೆ ಸಲ್ಲಿಸುತ್ತಿದ್ದರು. ಈ ವಲಸೆಗಾರರು ಆ ನಾಡು ದೇವತೆಗಳ ಲಕ್ಷಣಗಳನ್ನೆಲ್ಲ ಒಳಗೊಂಡಂತೆ ಇಷ್ಟಾರ್ ದೇವತೆಯ ಭಾವನೆಯನ್ನು ಬೆಳೆಸಿದರು. ಕಾಲಕ್ರಮದಲ್ಲಿ ನಾಡದೇವತೆಗಳು ಲುಪ್ತವಾಗಿ ಅವುಗಳ ಸ್ಥಾನವನ್ನು ಇಷ್ಟಾರ್ ದೇವತೆ ಆಕ್ರಮಿಸಿದಳು. ಹೀಗೆ ಇಷ್ಟಾರ್ ದೇವತೆಯಲ್ಲಿ ಐಕ್ಯಗೊಂಡ ಕೆಲವು ದೇವತೆಗಳು–ಎರಿಚ್ಚಿನ ಇನ್ನನ್ನ ದೇವತೆ, ಸೈನಿವೇಯ ನಿನಾ ದೇವತೆ, ನಿಪ್ಪೂರ್‌ನ ನಿನ್–ಲಿಲ್ ದೇವತೆ, ಬ್ಯಾಬಿಲಾನಿನ ಜರ್‌ಪನಿಟ್ (ಮರ್‌ಡುಕ್ ದೇವರ ಹೆಂಡತಿ) ದೇವತೆ.

ಹೀಗೆ ಅನೇಕ ದೇವತೆಗಳ ಲಕ್ಷಣಗಳನ್ನು ಒಳಗೊಂಡು ಬೆಳೆದ ಇಷ್ಟಾರ್ ದೇವತೆಯ ಸ್ವರೂಪ ತುಂಬ ಸಂಕೀರ್ಣವಾದದ್ದು. ಇವಳು ಪ್ರಥಮತಃ ಸಕಲ ಸಸ್ಯಗಳ ಮತ್ತು ಪ್ರಾಣಿಗಳ ಸೃಷ್ಟಿಗೆ ಕಾರಣಳಾದ ಮಾತೃ ದೇವತೆಯಾದಳು. ತಾಯಿಯಾದ ಇವಳು ಮಾನವರಲ್ಲಿ ವಿಶೇಷ ವಾತ್ಸಲ್ಯ ಪಡೆದಿರುತ್ತಾಳೆ; ನೊಂದ ಮಾನವರಿಗೆ ಅನುಕಂಪ ತೋರಿಸುತ್ತಾಳೆ. ಪಾಪ ಮಾಡಿದವರನ್ನು ಕರುಣೆಯಿಂದ ನೋಡಿ ಅವರನ್ನು ನಿರಂತರವಾಗಿ ತಿದ್ದುತ್ತಾಳೆ. ತನ್ನ ಮಂತ್ರಶಕ್ತಿಯಿಂದ ರಾಕ್ಷಸರನ್ನು ನಿರ್ಮೂಲಮಾಡಿ ಮಾನವರನ್ನು ಅವರ ಉಪಟಳದಿಂದ ರಕ್ಷಿಸುತ್ತಾಳೆ. ಯುದ್ಧದಲ್ಲಿ ತನ್ನ ಭಕ್ತರಿಗೆ ಜಯಗಳಿಸುತ್ತಾಳೆ. ಮಾನವರ ಸಕಲ ಸಂಪದಭಿವೃದ್ಧಿಗೂ ಈಕೆ ಕಾರಣಳು. ಇವಳು ಬೆಳಗಿನ ಮತ್ತು ಸಂಜೆಯ ನಕ್ಷತ್ರ (ವೀನಸ್ ಶುಕ್ರಗ್ರಹ) ರೂಪದಲ್ಲಿ ಕಾಣಿಸಿಕೊಂಡು ಜನರಿಗೆ ಉಂಟಾಗುವ ಶುಭಾಶುಭಗಳನ್ನು ಸೂಚಿಸುತ್ತಾಳೆ. ನಕ್ಷತ್ರದೇವತೆಯಾದ ಈಕೆ ಚಂದ್ರನ ಮಗಳು. ಕೆಲವು ಕಡೆಗಳಲ್ಲಿ ಸ್ವರ್ಗದ ರಾಣಿ ಅಥವಾ ಹೆಂಡತಿ ಎಂದು ವರ್ಣಿತಳಾಗಿದ್ದಾಳೆ.

ಇವಳಿಗೆ ಯಾವ ವಿಧದಿಂದ ಪೂಜೆ ಸಲ್ಲಿಸುತ್ತಿದ್ದರು ಎಂಬ ವಿಚಾರದಲ್ಲಿ ಸ್ಪಷ್ಟ ವಿವರಗಳು ದೊರೆತಿಲ್ಲ. ಈ ದೇವತೆಯ ಪೂಜೆಗಾಗಿ ಬ್ಯಾಬಿಲೋನಿಯದ ಮತ್ತು ಅಸ್ಸೀರಿಯದ ಮುಖ್ಯ ಪಟ್ಟಣಗಳಲ್ಲಿ ದೇವಾಲಯಗಳಿದ್ದುವೆಂಬುದು ಖಚಿತ. ಇವುಗಳಲ್ಲಿ ಇಷ್ಟಾರ್ ದೇವತೆಯ ವಿಗ್ರಹಗಳಿದ್ದವು. ಆಗಿನ ಕಾಲದ ಕಲೆಯ ಅವಶೇಷಗಳಿಂದ ಈ ದೇವತೆಗೆ ಕಿರೀಟ, ಕರ್ಣಕುಂಡಲ, ಹಾರ, ಕಟಿಸೂತ್ರ, ಬಳೆ, ಕಾಲ ಗೊಲಸು, ಕವಚ ಮುಂತಾದ ಅಲಂಕಾರಗಳು ಇದ್ದುವೆಂದು ಹೇಳಬಹುದು. ಭಕ್ತರು ಪೂಜೆಯ ಕಾಲದಲ್ಲಿ ಪರಿಮಳದ್ರವ್ಯಗಳನ್ನು, ಹಕ್ಕಿ, ಕುರಿಮರಿ, ಹಣ್ಣು ಕಾಯಿಪಲ್ಯಗಳನ್ನು, ಹಾಲಿನಿಂದ ಮತ್ತು ಹಿಟ್ಟಿನಿಂದ ಮಾಡಿದ ಭಕ್ಷ್ಯಭೋಜ್ಯಗಳನ್ನು ಉಡುಗೆ ಮತ್ತು ಆಭರಣಗಳನ್ನು ಅರ್ಪಿಸುತ್ತಿದ್ದರು. ಬೇಸಿಗೆಯಲ್ಲಿ ಗಿಡ ಮತ್ತು ಪೈರು ಒಣಗಿದಾಗ ಇಷ್ಟಾರಳ ಗಂಡ ಸತ್ತು ಕೆಳಗಿನ ಲೋಕಕ್ಕೆ ಹೋದನೆಂದು ಭಾವಿಸಿ ಭಕ್ತರು ಇವಳ ಗುಡಿಯಲ್ಲಿ ಶೋಕವನ್ನು ಪ್ರದರ್ಶಿಸುತ್ತಿದ್ದರು. ಆದಾದ ಮುಂದಿನ ತಿಂಗಳಲ್ಲಿ ಇಷ್ಟಾರ್ ಕೆಳಗಿನ ಲೋಕಕ್ಕೇ ಹೋಗಿ ತನ್ನ ಗಂಡನನ್ನು ಕರೆದುಕೊಂಡು ಬರುವಳೆಂದು ಉತ್ಸಾಹ ಪ್ರದರ್ಶಿಸುತ್ತಿದ್ದರು. ಈ ಎರಡೂ ವಿಶೇಷ ಪೂಜೆಯ ಕಾಲಗಳು.

ಇಷ್ಟಾರ್ ದೇವತೆಯ ಪೂಜೆ ಕಾಲಕ್ರಮದಲ್ಲಿ ಬ್ಯಾಬಿಲೋನಿನಿಂದ ಪರ್ಷಿಯ, ಮೆಸಪೊಟೇಮಿಯ, ಸಿರಿಯ, ಪ್ಯಾಲಸ್ತೀನ್, ಗ್ರೀಸ್ ಮತ್ತು ಇಟಲಿಗಳಿಗೆ ಹಬ್ಬಿತು. ಸೆಲೂಸಿಡ್ ಗ್ರೀಕರ ಮತ್ತು ಪ್ರಾಚೀನ ರೋಮನ್ನರ ಆಳ್ವಿಕೆಯ ಕಾಲದಲ್ಲಿ ಪೂರ್ವದೇಶಗಳ ಮತ್ತು ಪಶ್ಚಿಮದೇಶಗಳ ಮತಗಳು ಬೆರೆತು ಪುಷ್ಟಿಗೊಂಡಾಗ ಗ್ರೀಕರ ಮತ್ತು ರೋಮನ್ನರ ಕೆಲವು ದೇವತೆಗಳು ಬ್ಯಾಬಿಲೋನಿಯ ದೇವತೆಗಳ ಪಡಿರೂಪಗಳಾದುವು. ಝ್ಯೂಸ್, ಜೂಪಿಟರ್ ಬ್ಯಾಬಿಲೋನಿಯದ ಬೆಲ್ ಮತ್ತು ಮರ್‌ಡುಕ್ ದೇವರುಗಳ ಪಡಿರೂಪಗಳಾಗಿರುವಂತೆ ಗ್ರೀಕರ ಮತ್ತು ರೋಮನ್ನರ ಆ್ಯಪ್ರೊಡೈಟಿ, ವೀನಸ್ಸರು ಬ್ಯಾಬಿಲೋನಿಯದ ಇಷ್ಟಾರ್ ದೇವತೆಯ ಪಡಿರೂಪಗಳು. (ಜಿ.ಎಚ್.)

**ಇಷ್ಟಾರ್ಥಗಳು: ನೋಡಿ– ಪುರುಷಾರ್ಥಗಳು**

**ಇಷ್ಟಿ:** ಒಂದು ವಿಧದ ಯಾಗ. ಸೂರ್ಯ ಸೋಮ ಇಂದ್ರ ಮೊದಲಾದ ದೇವತೆಗಳನ್ನು ಉದ್ದೇಶಿಸಿ ನಿರ್ದಿಷ್ಟ ಕಾಲಗಳಲ್ಲಿ ಮಂತ್ರಪೂರ್ವಕ ಹವಿಸ್ಸನ್ನು ಅಗ್ನಿಗೆ ಹಾಕುವುದು. ಅಗ್ನಿಗೆ ಹಾಕುವ ಹಾಲು ಮೊಸರು ತುಪ್ಪ ಅನ್ನ (ಚರು), ರೊಟ್ಟಿ (ಪುರೋಡಾಶ) ಇವೇ ಇಷ್ಟಿಯಲ್ಲಿ ಉಪಯೋಗಿಸುವ ಹವಿಸ್ಸುಗಳು. ವಿವಾಹದ ಬಳಿಕ ಆಧಾನಕ್ರಿಯೆಯಿಂದ ವೇದೋಕ್ತ ಕರ್ಮಗಳನ್ನು ಮಾಡುವುದಕ್ಕಾಗಿಯೇ ಸಿದ್ಧವಾದ ವೈದಿಕಾಗ್ನಿಯನ್ನು ಯಾಗಗಳಲ್ಲಿ ಉಪಯೋಗಿಸಬೇಕು. ನಿತ್ಯ, ನೈಮಿತ್ತಿಕ, ಕಾಮ್ಯ ಎಂದು ಇಷ್ಟಿ ಮೂರು ಬಗೆ. ಯಾವ ವಿಧವಾದ ಫಲಾಪೇಕ್ಷೆಯೂ ಇಲ್ಲದೆ ತಪ್ಪದೇ ಮಾಡಬೇಕಾದುದು ನಿತ್ಯೇಷ್ಟಿ. ಅಮಾವಾಸ್ಯೆ ಮತ್ತು ಪೂರ್ಣಿಮೆ ದಿವಸಗಳಲ್ಲಿ ಮಾಡುವ ದರ್ಶಪೂರ್ಣಮಾಸೇಷ್ಟಿ ಮೊದಲಾದವು ಈ ವರ್ಗಕ್ಕೆ ಸೇರಿದವು. ನಿಮಿತ್ತವನ್ನು ಉದ್ದೇಶಿಸಿ ಮಾಡುವ ಇಷ್ಟಿ ನೈಮಿತ್ತಿಕೇಷ್ಟಿ. ಮಗ ಹುಟ್ಟಿದಾಗ, ಮನೆ ಬೆಂಕಿಯಿಂದ ಸುಟ್ಟಾಗ ಮಾಡುವಂಥವು ಮತ್ತು ಇಂಥವೇ ಕೆಲವು ನೈಮಿತ್ತಿಕೇಷ್ಟಿಗಳು. ಗೊತ್ತಾದ ಫಲವನ್ನು ಉದ್ದೇಶಿಸಿ ಕಾಮನೆಯಿಂದ ಮಾಡುವ ವೈಶ್ವಾನರೇಷ್ಟಿ, ಆಗ್ನಾವೈಷ್ಣವೇಷ್ಟಿ, ಕ್ಷಾಮವತೇಷ್ಟಿ, ಪುತ್ರಕಾಮ್ಯೇಷ್ಟಿ–ಮೊದಲಾದವು ಕಾಮ್ಯೇಷ್ಟಿಗಳು.

ಆರಂಭ ದಿನದಲ್ಲೇ ಮುಗಿಸುವ ಇಷ್ಟಿಗೆ ಸದ್ಯಸ್ಕಾಲೇಷ್ಟಿ ಎಂದೂ ಮೊದಲಿನ ದಿನ ಪ್ರಾರಂಭಮಾಡಿ ಮಾರನೆಯ ದಿನ ಮುಗಿಸುವುದಕ್ಕೆ ದ್ವ್ಯಹಕಾಲೀನ ಇಷ್ಟಿ ಎಂದೂ ಹೆಸರು. ಈ ವಿಧಗಳಲ್ಲದೆ ಪ್ರಕೃತಿ, ವಿಕೃತಿ ಎಂದು ಇಷ್ಟಿಗಳಲ್ಲಿ ಎರಡು ವಿಧ. ಇಷ್ಟಿ ಸಾಮಾನ್ಯದಲ್ಲೂ ಪ್ರಧಾನ ಮತ್ತು ಅಂಗ ಎಂದು ಎರಡು ವಿಧವಾದ ಕಾರ್ಯಗಳಿವೆ.

ಪ್ರಧಾನ ಮತ್ತು ಅಂಗ ಈ ಎರಡನ್ನು ಒಳಗೊಂಡ ದರ್ಶಪೂರ್ಣಮಾಸೇಷ್ಟಿ ಪ್ರಕೃತಿ. ಉಳಿದ ಇಷ್ಟಿಗಳಲ್ಲಿ ಪ್ರಧಾನ ಮಾತ್ರ ಇರುತ್ತದೆ. ಇವು ವಿಕೃತೇಷ್ಟಿಗಳು. ಪ್ರಕೃತೇಷ್ಟಿಯಾದ ದರ್ಶಪೂರ್ಣಮಾಸೇಷ್ಟಿಯಲ್ಲಿ ಹೇಳಿರುವ ಅಂಗಗಳನ್ನೇ ವಿಕೃತೇಷ್ಟಿಗಳಲ್ಲೆಲ್ಲ ಸ್ವೀಕರಿಸಬೇಕು ಎಂಬ ನಿಯಮವಿದೆ. (ಎಸ್.ಎನ್.ಕೆ.)

**ಇಸಗಲೆ:** ಸ್ಯಾಲ್ವಡೊರೇಸೀ ಕುಟುಂಬಕ್ಕೆ ಸೇರಿದ ಸಸ್ಯ. ಕುಂಡಲಿ ಗಿಡ ಬಿಳಿ ಉಪ್ಪಿಗಿಡ ಪರ್ಯಾಯನಾಮಗಳು. ಅಜ಼ೀಮ ಟೆಟ್ರಕ್ಯಾಂತ ಶಾಸ್ತ್ರೀಯ ಹೆಸರು. ಮೈತುಂಬ



ಮುಳ್ಳಿನಿಂದ ಕೂಡಿರುವ ಪೊದರು. ಬೇಲಿಯ ಗಿಡವಾಗಿ ಬೆಳೆಸುವುದಿದೆ. ಈ ಜಾತಿಯಲ್ಲಿ ಮೂರು ಪ್ರಭೇದಗಳಿವೆ. ಇವನ್ನು ಉಷ್ಣವಲಯದ ಆಫ್ರಿಕ ಮತ್ತು ಏಷ್ಯಖಂಡಗಳಲ್ಲಿ ನೋಡಬಹುದು. ಇದು ದಖನ್ ಪ್ರಸ್ಥಭೂಮಿಯಲ್ಲೂ ತೀರಪ್ರದೇಶಗಳಲ್ಲೂ ಬರಡು ಜಿಲ್ಲೆಗಳಲ್ಲೂ ಬೆಳೆಯುವುದು. ಒರಿಸ್ಸ ಮತ್ತು ಬಂಗಾಲದ ಸುಂದರಬನ್‌ದಲ್ಲಿಯೂ ಕಂಡುಬರುತ್ತದೆ. ಇಸಗಲೆ ಗಿಡದಲ್ಲಿ ಗಂಡು ಹೂ ಹೆಣ್ಣು ಹೂ ಬೇರೆ ಬೇರೆ ಸಸ್ಯಗಳಲ್ಲಿರುತ್ತವೆ. ಹೆಣ್ಣುಗಿಡದಲ್ಲಿ ಬಿಳಿ ಬಣ್ಣದ ಹಣ್ಣುಗಳಿರುತ್ತವೆ. ಎಲೆಗಳ ರಸ ಗೊರಲಿನ ಕೆಮ್ಮಲನ್ನೂ

ಹೊರ ಬೀಳುವ ಕಫವನ್ನೂ ನಿಲ್ಲಿಸುತ್ತದೆ. ಪೂರ್ವ ಆಫ್ರಿಕ ದೇಶದಲ್ಲಿ ಬೇರು ಮತ್ತು ಎಲೆಗಳನ್ನು ಹಾವಿನ ಕಡಿತಕ್ಕೆ ಔಷಧಿಯಾಗಿ ಉಪಯೋಗಿಸುತ್ತಾರೆ. ಈ ಸಸ್ಯದ ಹಣ್ಣುಗಳನ್ನು ತಿನ್ನುವ ಆಡುಗಳು ರುಚಿಕರವಾದ ಹಾಲು ಕೊಡುವುವೆಂದು ಹೇಳಲಾಗಿದೆ. (ಡಿ.ಜಿ.ಕೆ.)

**ಇಸಬು:** ತುಂಬಾ ಕೆರೆತವಿರುವ, ಉರಿಯುವ, ಉರಿತದ (ಇನ್‌ಫ್ಲಮೇಟರಿ), ಆದರೆ ಇನ್ನೊಬ್ಬರಿಗೆ ಅಂಟದ ಚರ್ಮರೋಗ (ಎಕ್ಸೀಮ). ಕೂರಾಗೋ (ಅಕ್ಯೂಟ್), ಬೇರೂರಿಯೋ (ಕ್ರಾನಿಕ್), ಇವೆರಡರ ನಡುವೆಯೋ ಇದ್ದು ಮಿಟ್ಟಿದದ್ದು (ಪ್ಯಾಪ್ಯೂಲ್). ನೀರ್ಗುಳ್ಳೆ (ವೆಸಿಕಲ್), ಕೀವ್ಗುಳ್ಳೆಗಳೊಂದಿಗೆ (ಪುಸ್ಟ್ಯೂಲ್ಸ್), ಕೆಂಗಂದೆಯಂತೆ (ಎರಿತೀಮ)– ಮೊದಲಾಗಿ, ಹಕ್ಕು (ಸ್ಕ್ಯಾಬ್), ಹಗರು (ಸ್ಕೇಲ್ಸ್), ಹೆಕ್ಕಳಿಕೆ (ಕ್ರಸ್ಟ್ಸ್) ಏಳಬಹುದು. ಒಣಗಿರಬಹುದು ಇಲ್ಲವೇ ನೀರಾಡುತ್ತ ತೇವಗೂಡಿ ತುರಿಸಬಹುದು. ಬರಬರುತ್ತ ಚರ್ಮ ಗಡುಸುಗಟ್ಟುತ್ತದೆ. ರೋಗ ಎನ್ನುವುದಕ್ಕಿಂತ ಇದನ್ನು ಒಂದು ರೋಗಲಕ್ಷಣ ಎನ್ನಬಹುದು (ನೋಡಿ– ಚರ್ಮರೋಗಗಳು). (ಡಿ.ಎಸ್.ಎಸ್.)

**ಇಸಬೆಲ (ಇಂಗ್ಲೆಂಡಿನ):** 1292–1358. ಫ್ರಾನ್ಸಿನ ನಾಲ್ಕನೆಯ ಫಿಲಿಪನ ಮಗಳು. ಇಂಗ್ಲೆಂಡಿನ ಎರಡನೆಯ ಎಡ್ವರ್ಡನನ್ನು ಮದುವೆಯಾಗಿ ರಾಣಿ ಎನಿಸಿದಳು. ಗಂಡನ ಅನಾದರಕ್ಕೆ ಪಾತ್ರಳಾದ ಈಕೆ ರಾಜವಂಶದ ಬೆಂಬಲಿಗರನ್ನು ದ್ವೇಷಿಸಿದಳು. 1325ರಲ್ಲಿ ಫ್ರಾನ್ಸಿಗೆ ಬಂದಳು. ಅಲ್ಲಿ ರೋಜರ್ ಮಾರ್ಟಿಮರ್‌ನೊಂದಿಗೆ ಸೇರಿ ಸೈನ್ಯವನ್ನು ಕಟ್ಟಿ ಇಂಗ್ಲೆಂಡನ್ನು ವಶಪಡಿಸಿಕೊಂಡಳು. ಎಡ್ವರ್ಡ್ ರಾಜ್ಯಭ್ರಷ್ಟನಾಗಿ ಕೊಲೆಯಾದ. 1330ರಲ್ಲಿ ಮೂರನೆಯ ಎಡ್ವರ್ಡ್ ಅಧಿಕಾರ ಕಿತ್ತುಕೊಳ್ಳುವವರೆಗೂ ಇಸಬೆಲ ಮತ್ತು ಮಾರ್ಟಿಮರ್ ಇಂಗ್ಲೆಂಡನ್ನು ಆಳಿದರು. *

**ಇಸಬೆಲ (ಸ್ಪೇನಿನ):** 1451–1504. ಸ್ಪೇನಿನ ಕ್ಯಾಸ್ಟೈಲ್ ಮತ್ತು ಲಿಯಾನ್ ಭಾಗಗಳ ರಾಣಿ. ಮೊದಲನೆಯ ಇಸಬೆಲ ಅಥವಾ ಇಸಬೆಲ ದಿ ಕ್ಯಾಥೊಲಿಕ್ ಎಂದು ಹೆಸರು. ಲಾ ಕಾಟೋಲೀಕ್ ಎಂದೂ ಹೆಸರು ಈಕೆ ಕ್ಯಾಸ್ಟೈಲಿನ 2ನೆಯ ಜಾನನ ಮಗಳು. ಜಾನ್ ಆಫ್ ಗಾಂಟ್‌ನ ವಂಶದವಳು. ಆರಿವಲ್ಸ್‌ನಲ್ಲಿ ವಿದ್ಯಾಭ್ಯಾಸ ಪಡೆದಳು. ಈಕೆಯನ್ನು ಮದುವೆಯಾಗಲು ಅನೇಕ ರಾಜಪುತ್ರರು ಆಸೆಪಡುತ್ತಿದ್ದರು. ಈ ಸ್ಪರ್ಧಿಗಳಲ್ಲಿ ಪೋರ್ಚುಗಲ್ಲಿನ ಅಲ್ಫಾನ್ ಸ್ಗೋ ಪೆಡ್ರೂಜಿರಾನ್ ಮತ್ತು ಆರೆಗಾನಿನ ಫರ್ಡಿನೆಂಡ್ ಮುಖ್ಯರು. ಕೊನೆಗೆ 1469ರಲ್ಲಿ ಆರೆಗಾನಿನ ಫರ್ಡಿನೆಂಡನನ್ನು ಮದುವೆಯಾದಳು. ಕ್ರಾಂತಿಕಾರರ ಮುಖಂಡರಿಂದ ಬಂದ ಕ್ಯಾಸ್ಟೈಲಿನ ಸಿಂಹಾಸನವನ್ನೇರಲು ಒಪ್ಪದ ಇವಳನ್ನು ಇವರ ಸಹೋದರ 4ನೆಯ ಹೆನ್ರಿ 1468ರಲ್ಲಿ ತನ್ನ ಉತ್ತರಾಧಿಕಾರಿಯೆಂದು ಅಂಗೀಕರಿಸಿದ. 1474ರಲ್ಲಿ 4ನೆಯ ಹೆನ್ರಿಯ ಮರಣಾನಂತರ ಇಸಬೆಲ ಕ್ಯಾಸ್ಟೈಲ್ ಮತ್ತು ಲಿಯಾನ್‌ಗಳ ರಾಣಿಯಾದಳು.

ಇಲ್ಲಿಂದ ಮುಂದೆ ಸ್ಪೇನ್ ಯುರೋಪಿನಲ್ಲೆಲ್ಲ ಬಲಯುತವೂ ಸಂಪದ್ಯುಕ್ತವೂ ಆದ ರಾಜ್ಯವಾಯಿತು. ಇದಕ್ಕೆ ಇಸಬೆಲಳ ವಿವೇಕ, ದೃಢನಿಶ್ಚಯ, ಉತ್ಸಾಹಶಕ್ತಿ ಮತ್ತು ನಿಸ್ವಾರ್ಥ ದೇಶಾಭಿಮಾನಗಳು ಕಾರಣವಾಗಿವೆ. ಪೀಟರ್ ಮಾರ್ಟಿರ ಡಿ ಆಂಘೀರ್ ಎಂಬಾತನಿಗೆ ಆಶ್ರಯದಾತಳಾಗಿಯೂ ಪ್ಯಾಲೆಸ್ ಸ್ಕೂಲ್ ಎಂಬುದರ ಸ್ಥಾಪಕಳಾಗಿಯೂ ಸ್ಪೇನಿನಲ್ಲಿ ವಿದ್ಯೆಗೆ ಪ್ರೋತ್ಸಾಹವಿತ್ತಳು. ಕ್ಯಾಸ್ಟೈಲಿಗೆ ಇನ್‌ಕ್ವಿಸಿಷನ್ **(ನೋಡಿ)** ನ್ಯಾಯಾಲಯವನ್ನು ಬರಮಾಡಿಕೊಳ್ಳಲು ಮತ್ತು ಯೆಹೂದ್ಯರನ್ನು ದೇಶದಿಂದ ಹೊರದೂಡಲು ಇವಳು ಅನೇಕ ಪ್ರಯತ್ನಗಳನ್ನು ಮಾಡಿದಳು.

ಜಿನೋವದ ಸಾಹಸಿ ನಾವಿಕ ಕ್ರಿಸ್ಟೋಫರ್ ಕೊಲಂಬಸನಿಗೆ ಸಮುದ್ರಯಾನ ಮಾಡಲು ಇವಳು ಉತ್ಸಾಹದಿಂದ ಮುಂದೆ ಬಂದು ಧನಸಹಾಯ ಮಾಡಿದ್ದು ಸ್ತುತ್ಯರ್ಹವಾದದ್ದು. ಅದರಿಂದಲೇ ಕೊಲಂಬಸನ ಅದ್ಭುತ ಸಾಹಸಕ್ಕೆ ಒಂದು ಅವಕಾಶವಾಯಿತು.

ತನ್ನ 30ವರ್ಷಗಳ ಆಳ್ವಿಕೆಯ ಅನಂತರ ಮೆಡಿನ ಡೆಲ್ ಕ್ಯಾಂಪೊ ಎಂಬಲ್ಲಿ ಈಕೆ ನಿಧನಳಾದಳು. (ಎ.ಎಚ್.ಎಸ್.)

**ಇಸಾಂಪುರ:** ಗುಲ್ಬರ್ಗ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಹುಣಸಗಿ–ಬೈಚಬಾಳು ಬಯಲುಗಳಲ್ಲಿ ಇರುವ ಆದಿಹಳೆಶಿಲಾಯುಗದ ಅಶೂಲಿಯನ್ ಸಂಸ್ಕೃತಿಯ 200 ವಸತಿ ನೆಲೆಗಳ ಪೈಕಿ ಒಂದು. ಹುಣಸಗಿ ಬಯಲಿನ ವಾಯವ್ಯ ಮೂಲೆಯಲ್ಲಿರುವ ಈ ವಸತಿನೆಲೆಯಲ್ಲಿ ಕೆ.ಪದ್ದಯ್ಯನವರು 1997–2000ದವರೆಗೆ ವ್ಯವಸ್ಥಿತ ಭೂಸರ್ವೇಕ್ಷಣೆ ಮತ್ತು ಸತತ ಉತ್ಖನನ ನಡೆಸಿದರು. ಇದು ಪ್ರಾಚ್ಯವಿಶ್ವದ ಅತಿದೊಡ್ಡ ಮತ್ತು ಉತ್ತಮ ಸ್ಥಿತಿಯಲ್ಲಿರುವ ಆದಿಹಳೆಶಿಲಾಯುಗದ ವಸತಿನೆಲೆಗಳಲ್ಲೊಂದು ಎಂಬ ಸಂಗತಿ ಈ ಸಂಶೋಧನೆಯಿಂದ ಹೊರಬಂದಿದೆ.

ಇಲ್ಲಿನ ಭೂಪರಿಸರ ನೈಸರ್ಗಿಕವಾಗಿ ಸವೆದ ಸುಣ್ಣಕಲ್ಲಿನ ವಿವಿಧಾಕಾರದ ಚಪ್ಪಡಿಕಲ್ಲು ಮತ್ತು ಬಂಡೆಗಲ್ಲುಗಳಿಂದ ಕೂಡಿರುವುದು ಪರೀಕ್ಷೆ ಗುಂಡಿಗಳಲ್ಲಿ ಕಂಡುಬಂದಿದೆ. ತಮ್ಮ ದೈನಂದಿನ ಕೆಲಸಗಳಿಗೆ ಬೇಕಾಗುವ ಉಪಕರಣಗಳಿಗೆ ಉಪಯೋಗವಾಗುವಂತಹ ಈ ಚಪ್ಪಡಿಕಲ್ಲುಗಳು ಆದಿಮಾನವರನ್ನು ಆಕರ್ಷಿಸಿರುವುದರಲ್ಲಿ ಸಂದೇಹವೇ ಇಲ್ಲ. ಈ ಜಾಗವನ್ನು ನೆಲೆಯಾಗಿ ಆಯ್ದುಕೊಂಡ ಮತ್ತೊಂದು ಕಾರಣವೆಂದರೆ ಇದರ ಹತ್ತಿರದಲ್ಲಿಯೇ ಹರಿಯುತ್ತಿದ್ದ ಸಣ್ಣ ಹಳ್ಳ. ಈ ಹಳ್ಳ ಎಂದೋ ಬತ್ತಿಹೋಗಿದ್ದು ಈಗ ಪುರಾತನ ಹರಿವಿನ ರೂಪದಲ್ಲಿ ಮಾತ್ರ ಉಳಿದಿದೆ. ಈ ಸ್ಥಳದಿಂದ ಇಡಿಯ ಬಯಲು ಪರಿಸರವನ್ನು ಒಂದೇ ನೋಟದಲ್ಲಿ ಕಾಣಬಹುದು. ಹೀಗಾಗಿ ಗುಂಪಿನ ಸದಸ್ಯರ ಮತ್ತು ಕಾಡುಪ್ರಾಣಿಗಳ ಚಲನವಲನಗಳ ಮೇಲೆ ನಿಗವಿಡಲು ಇದು ಪ್ರಶಸ್ತ ಸ್ಥಳ.

ವಿಸ್ತಾರವಾದ ಈ ವಸತಿನೆಲೆಯಲ್ಲಿ ಒಟ್ಟು 159 ಚ.ಮೀ ಜಾಗದಲ್ಲಿ 5 ಗುಂಡಿಗಳನ್ನು ಅಗೆಯಲಾಯಿತು. ಈ ಮೂಲಕ 20–30 ಸೆಂಮೀ ದಪ್ಪದ, ಸುಸ್ಥಿತಿಯಲ್ಲಿರುವ ಅಶೂಲಿಯನ್ ಸಾಂಸ್ಕೃತಿಕ ಪದರವನ್ನು ಹೊರತೆಗೆಯಲಾಯಿತು. ಕಂದುಬಣ್ಣದ ಸುಣ್ಣಮಿಶ್ರಿತ ಹೂಳು

ಆದಿ ಹಳೆಶಿಲಾಯುಗ ಸಂಸ್ಕೃತಿಯ ನೆಲೆಯ ಉತ್ಖನನ

ಮಣ್ಣಿನಲ್ಲಿ ಅಶೂಲಿಯನ್ ಶಿಲಾವಶೇಷಗಳು ಬೆರೆತು ಈ ಪದರ ಉಂಟಾಗಿ ಕಾಲಕ್ರಮೇಣ ಗಟ್ಟಿಗೊಂಡಿದೆ. ಈ ಪದರ 10–50 ಸೆಂಮೀ ದಪ್ಪದ ಕರಿಹೂಳುಮಣ್ಣಿನಿಂದ ಮುಚ್ಚಲ್ಪಟ್ಟಿದೆ. ವಸತಿನೆಲೆಯ ಬಗ್ಗೆ ಉತ್ಖನನದಿಂದ ಒದಗಿಬಂದ ಮಾಹಿತಿ ಹೀಗಿದೆ:

1. ಈ ವಸತಿನೆಲೆಯ ಒಟ್ಟು ವಿಸ್ತೀರ್ಣ 0.75 ಹೆ. ಇದನ್ನು 4 ಉಪ–ನೆಲೆಗಳನ್ನಾಗಿ ವಿಂಗಡಿಸಬಹುದು. ಪ್ರತಿ ಉಪನೆಲೆ 500–700 ಚ.ಮೀ ಜಾಗದಲ್ಲಿ ವ್ಯಾಪಿಸಿದೆ. ಎಲ್ಲ ಉಪ–ನೆಲೆಗಳಲ್ಲಿ ಮೂಲಶಿಲೆ, ತ್ಯಾಜ್ಯವಸ್ತು, ಸಿದ್ಧಉಪಕರಣಗಳು ಮತ್ತು ಚರ್ಟ್, ಬಸಾಲ್ಟ್ ಹಾಗೂ ಕ್ವಾರ್ಟ್ಸೈಟ್‌ಗಳ ಸುತ್ತಿಗೆಕಲ್ಲುಗಳು ಹೇರಳವಾಗಿವೆ.

2. ಈ ನೆಲೆ ಪ್ರಮುಖವಾದ ಕಲ್ಲಿನ ಆಕರವಾಗಿತ್ತು. ಇಲ್ಲಿ ನೈಸರ್ಗಿಕವಾಗಿ ಸವೆದ ಸುಣ್ಣಕಲ್ಲಿನ ಚಪ್ಪಡಿಗಳನ್ನು ಉಪಕರಣಗಳಿಗೆ ತಕ್ಕ ಆಕಾರ ಅಳತೆಯಲ್ಲಿ ಒಡೆದು ತೆಗೆಯಲಾಗುತ್ತಿತ್ತು. ಅಷ್ಟೇ ಅಲ್ಲದೆ ಇಲ್ಲಿ ಉಪಕರಣಗಳ ತಯಾರಿಕೆಯೂ ಭಾರಿ ಪ್ರಮಾಣದಲ್ಲಿ ನಡೆಯುತ್ತಿತ್ತು.

3. ಒಂದೆರಡು ಗುಂಡಿಗಳಲ್ಲಿ ದನ ಮತ್ತು ಜಿಂಕೆ ಜಾತಿಯ ಪ್ರಾಣಿಗಳ ಹಲ್ಲು ಮತ್ತು ಮೂಳೆಯ ತುಣುಕುಗಳು ಹಾಗೂ ಆಮೆಯ ಚಿಪ್ಪಿನ ಚೂರುಗಳು ಅಶೂಲಿಯನ್ ಅವಶೇಷಗಳೊಂದಿಗೆ ಸಿಕ್ಕಿವೆ. ಇವು ಆಹಾರ ಸಂಸ್ಕರಣೆ ಮತ್ತು ಬಳಕೆಯ ಕುರುಹುಗಳು.

4. ಒಂದನೆಯ ಉಪನೆಲೆಯಲ್ಲಿನ ಗುಂಡಿಯೊಂದರಲ್ಲಿ ಮೂಲಶಿಲೆ, ದೊಡ್ಡಗಾತ್ರದ ಚಕ್ಕೆ, ಸಿದ್ಧಉಪಕರಣ, ಸುತ್ತಿಗೆಕಲ್ಲು ಮತ್ತು ತ್ಯಾಜ್ಯ ಚಕ್ಕೆಚೂರುಗಳಿಂದ ಕೂಡಿದ 7 ಪ್ರತ್ಯೇಕ ಸಂಗ್ರಹಗಳನ್ನು ಗುರುತಿಸಲಾಯಿತು. ಪ್ರತಿಯೊಂದು ಸಮುಚ್ಚಯದಲ್ಲಿ ಸುಣ್ಣಕಲ್ಲಿನ ಅಗಲವಾದ ಚಪ್ಪಡಿಗಳ ಹಾಸು ಇರುವುದು ಆಶ್ಚರ್ಯಕರ. ಉಪಕರಣಗಳ ತಯಾರಕರು ಇವನ್ನು ಕೂರುವ ಮಣೆಗಳಾಗಿ ಉಪಯೋಗಿಸಿದ್ದಿರಬೇಕು.

ಉತ್ಖನನದಲ್ಲಿ 15,000ಕ್ಕೆ ಮಿಗಿಲಾಗಿ ಕಲ್ಲಿನ ಉಪಕರಣಗಳು ಸಂಗ್ರಹಿಸಲ್ಪಟ್ಟಿವೆ. ಉಪಕರಣ ತಯಾರಿಕೆಗೆ ಸಂಬಂಧಿಸಿದ ಅನೇಕ ಹೊಸ ವಿಷಯಗಳು ಇದರಿಂದ ತಿಳಿದು ಬಂದಿವೆ. ಸುಣ್ಣಕಲ್ಲಿನ ಯುಕ್ತ ಚಪ್ಪಡಿಗಳನ್ನು ಆಯ್ದ ಬಳಿಕ ಅವುಗಳ ಮೊನಚಾದ ತುದಿ ಮತ್ತು ಓರೆಕೋರೆಯಾದ ಮೇಲ್ಮೈಯನ್ನು ತರಿದು ಒಂದು ರೂಪಕ್ಕೆ ಮೊದಲಿಗೆ ತರಲಾಗುತ್ತಿತ್ತು. 2ನೆಯ ಹಂತದಲ್ಲಿ ಈ ಚಪ್ಪಡಿಗಳಿಂದ ದೊಡ್ಡದಾದ (20–25 ಸೆಂಮೀ) ಚಕ್ಕೆ ಅಥವ ಹಲ್ಲೆಗಳನ್ನು ತೆಗೆಯಲಾಗುತ್ತಿತ್ತು. ತರುವಾಯ ಅಲ್ಲೊಂದು ಇಲ್ಲೊಂದು ಸಣ್ಣಚಕ್ಕೆಗಳನ್ನು ತೆಗೆಯುವ ಮೂಲಕ ಈ ದೊಡ್ಡಚಕ್ಕೆಗಳನ್ನು ಚೂರಿಯಾಕಾರದ ಮತ್ತು ಕೊಚ್ಚುವ ಉಪಕರಣಗಳಾಗಿ ಪರಿವರ್ತಿಸಲಾಗುತ್ತಿತ್ತು. ಕೆಲವೊಮ್ಮೆ ದೊಡ್ಡ ಚಕ್ಕೆಗಳಿಂದ ಕ್ರಮಬದ್ಧವಾಗಿ ಅನೇಕ ಸಣ್ಣಚಕ್ಕೆಗಳನ್ನು ತೆಗೆದು ಕೈಗೊಡಲಿ, ಕಡುಗತ್ತಿ ಮತ್ತು ದ್ವಿಮುಖ ಉಪಕರಣಗಳನ್ನು ತಯಾರುಮಾಡಲಾಗಿದೆ. ತೆಳುವಾದ ಚಪ್ಪಡಿಗಳಿಂದ ನೇರವಾಗಿ ದ್ವಿಮುಖ ಉಪಕರಣಗಳನ್ನು ತಯಾರಿಸಿದ ನಿದರ್ಶನಗಳೂ ಇವೆ.

ಇಸಾಂಪುರದ 5–6 ಕಿಮೀ ಪರಿಧಿಯೊಳಗೆ ಇದೇ ಸಂಸ್ಕೃತಿಗೆ ಸೇರುವ 10 ಅತಿ ಸಣ್ಣ ವಸತಿ ಅಥವಾ ಉಪಕರಣ ನೆಲೆಗಳಿವೆ. ಈ ದೃಷ್ಟಿಯಿಂದ ಇಸಾಂಪುರದ ನೆಲೆ ಆದಿಮಾನವನ ಕೇಂದ್ರ ವಸತಿನೆಲೆಯೂ ಶಿಲೋಪಕರಣ ಕಾರ್ಯಾಗಾರವೂ ಆಗಿರುವ ಸಾಧ್ಯತೆ ಇದೆ. ಈ ನೆಲೆಯನ್ನು ಕೇಂದ್ರವಾಗಿಟ್ಟುಕೊಂಡು ಆದಿಮಾನವರು ಸುತ್ತಮುತ್ತಲಿನ ಪ್ರದೇಶದಲ್ಲಿ ಚಿಕ್ಕಗುಂಪುಗಳಲ್ಲಿ ಆಹಾರಾದಿಗಳಿಗಾಗಿ ದಿನನಿತ್ಯ ಅಲೆದಾಡಿಕೊಂಡು ಬದುಕು

ನಡೆಸಿದ್ದಿರಬಹುದು. ಇಲ್ಲಿಯ ಅವಶೇಷಗಳಿಂದ ನಿರ್ಣಯಿಸಲ್ಪಟ್ಟ ಕಾಲಮಾನ ಇಸಾಂಪುರದ ಮಹತ್ತ್ವವನ್ನು ಮತ್ತಷ್ಟು ಹೆಚ್ಚಿಸಿದೆ. ಬೋಸ್ಟನ್ನಿನ ವಿಲಿಯಮ್ಸ್ ಕಾಲೇಜಿನಲ್ಲಿ ಕಾಡುದನದ ಹಲ್ಲಿನ 3 ತುಣುಕುಗಳನ್ನು ಇ.ಎಸ್.ಆರ್ (ಎಲೆಕ್ಟ್ರಾನ್ ಸ್ಪಿನ್ ರೆಸೊನೆನ್ಸ್) ಕಾಲನಿರ್ಣಯ ವಿಧಾನಕ್ಕೆ ಒಳಪಡಿಸಿದಾಗ ಇವು ಸು.1.2 ದಶಲಕ್ಷ ವರ್ಷಗಳ ಕಾಲಮಾನದವು ಎಂಬ ಸಂಗತಿ ಖಚಿತವಾಯಿತು. ಇದರೊಂದಿಗೆ ಇಸಾಂಪುರ ಭಾರತದ ಅತ್ಯಂತ ಪ್ರಾಚೀನ ವಸತಿನೆಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. (ಪಿ.ಕೆ.)

**ಇಸಾಟಿನ್:** ಇಂಡೋಲಿನ ಆಕ್ಸಿಜನ್ ಪಡೆದಿರುವ ವಸ್ತುಗಳ ಗುಂಪಿಗೆ ಸೇರಿದೆ. ನೀಲಿಬಣ್ಣವನ್ನು (ಇಂಡಿಗೊ) ನೈಟ್ರಿಕ್ ಆಮ್ಲ ಅಥವಾ ಕ್ರೋಮಿಕ್ ಆಮ್ಲದಿಂದ ಉತ್ಕರ್ಷಿಸಿ ಇಸಾಟಿನನ್ನು ಮೊದಲು ತಯಾರಿಸುತ್ತಿದ್ದರು. ಇದು ಕಿತ್ತಳೆ ಬಣ್ಣದ ಸ್ಫಟಿಕಾಕೃತಿಯ ಘನ. ಇದರ ಕರಗುವ ಬಿಂದು 200° ಸೆಂ.ಗ್ರೇ. ಟಾಟೋಮೆರಿಸಮ್ಮಿನ ಅಂಗೀಕೃತ ಉದಾಹರಣೆಗಳಲ್ಲಿ ಇಸಾಟಿನ್ ಮೊಟ್ಟ ಮೊದಲನೆಯದು. ಆದ್ದರಿಂದ ವೈಜ್ಞಾನಿಕ ಆಸಕ್ತಿಯಲ್ಲಿ ಇದೊಂದು ವಿಶಿಷ್ಟ ವಸ್ತು. ಇದು ಎರಡು ವ್ಯಕ್ತಿತ್ವವುಳ್ಳ ಒಂದೇ ರಾಸಾಯನಿಕ ವಸ್ತು. ಇದರ ಕೆಲವು ಕ್ರಿಯೆಗಳು ಲ್ಯಾಕ್ಟಾಮ್ ರಚನೆಯನ್ನೂ (I) ಮತ್ತೆ ಕೆಲವು ಲ್ಯಾಕ್ಟಿಮ್ ರಚನೆಯನ್ನೂ (II) ಸೂಚಿಸುತ್ತವೆ.



I



II

ಇಸಾಟಿನ್ ಒಂದೇ ಬಗೆಯಾದರೂ ಎರಡು ಮೀಥೈಲ್ ಈಥರುಗಳನ್ನು ಹೊಂದಿದೆ. ಡೈಬ್ರೋಮೋಮೀಥೈಲ್ ಆಕ್ಸಿಂಡೋಲಿನಿಂದ ಮಾಡಿದ ಸ್ಯೂಡೋ ಮೀಥೈಲ್ ಇಸಾಟನ್ (III) ಮತ್ತು ಮೀಥೈಲ್ ಅಯೊಡೈಡನ್ನು ಬೆಳ್ಳಿ ಇಸಾಟಿನ್‌ನೊಡನೆ ಸಂಯೋಗಿಸಿ ತಯಾರಿಸಿದ ಮೀಥೈಲ್ ಇಸಾಟಿನ್ (IV) ಇವೇ ಆ ಎರಡು ವಸ್ತುಗಳು.



III



IV

ಇಸಾಟಿನ್‌ನ ಅತಿರಕ್ತ ಅಳತೆಗಳು ಘನಸ್ಥಿತಿಯಲ್ಲಾಗಲೀ ಅಥವಾ ದುರ್ಬಲ ಕ್ಲೋರೋಫಾರಂ ದ್ರಾವಣದಲ್ಲಾಗಲೀ ಲ್ಯಾಕ್ಟಿಮ್ ರಚನೆ ಇರುವುದರ ಬಗ್ಗೆ ಯಾವ ಬೆಂಬಲವನ್ನೂ ಸೂಚಿಸಿಲ್ಲವೆಂದೂ ೧೯೫೬ರಲ್ಲಿ ತಿಳಿದುಬಂತು.




ಪ್ರಬಲ ಹೈಡ್ರೋಕ್ಲೋರಿಕ್ ಆಮ್ಲದೊಡನೆ ಅನಿಲೀನ್ ಕ್ಲೋರಾಲ್ ಹೈಡ್ರೇಟು, ಹೈಡ್ರಾಕ್ಸಿಲ್ ಅಮೈನು ಮತ್ತು ಸೋಡಿಯಂ ಸಲ್ಫೇಟು ದ್ರಾವಣವನ್ನು ಕಾಸಿ ಬರುವ ಐಸೊನೈಟ್ರೋಸೋ ಅಸಿಟಾನಿಲೈಡನ್ನು ಪ್ರಬಲ ಸಲ್ಫ್ಯೂರಿಕ್ ಆಮ್ಲದೊಡನೆ ವರ್ತಿಸಿ ಇಸಾಟಿನ್ನನ್ನು ತಯಾರಿಸುತ್ತಾರೆ. ಇದು ರಂಜಕದ (ಫಾಸ್ಫರಸ್) ಪೆಂಟಾಕ್ಲೋರೈಡಿನೊಡನೆ ವರ್ತಿಸಿ ಇಸಾಟಿನ್ ಕ್ಲೋರೈಡನ್ನು ಕೊಡುತ್ತದೆ. ಬಿಸಿ ಸೋಡಿಯಂ ಹೈಡ್ರಾಕ್ಸೈಡಿನೊಡನೆ ಇಸಾಟಿಕ್ ಆಮ್ಲವನ್ನು ಕೊಡುತ್ತದೆ. ಸತು ಮತ್ತು ಹೈಡ್ರೋಕ್ಲೋರಿಕ್ ಆಮ್ಲದಲ್ಲಿ ಅಪಕರ್ಷಣೆ ಹೊಂದಿ ಡೈ ಆಕ್ಸಿಂಡೋಲಾಗಿ ಪರಿವರ್ತನೆ ಹೊಂದುತ್ತದೆ. ಆರ್ಥೋನೈಟ್ರೋ ಬೆನ್ಜಾಯಿಲ್ ಕ್ಲೋರೈಡಿನಿಂದ ಇಸಾಟಿನ್ನನ್ನು ಸಂಶ್ಲೇಷಿಸಿ ಅದರ ರಚನೆಯನ್ನು ಸ್ಥಿರೀಕರಿಸಲಾಗಿದೆ. ವ್ಯಾಟ್ ಬಣ್ಣಗಳ ಉತ್ಪಾದನೆಯಲ್ಲಿ ಇದು ಪ್ರಮುಖ ಪಾತ್ರವಹಿಸುತ್ತದೆ. ಉದಾಹರಣೆಗೆ, ಸೀಬಾ ಕೆಂಪು–G ಯನ್ನು (ಸೀಬಾರಡ್–G ; ಥಯೋ ಇಂಡಿಗೋ ಸ್ಕಾರ್ಲೆಟ್–G) ಇಸಾಟಿನನ್ನು 2-ಹೈಡ್ರಾಕ್ಸಿಥೈಯೊನ್ಯಾಫ್ತೀನಿನೊಡನೆ ಸಂಘನಿಸಿ (ಕಂಡೆನ್ಸ್) ಬರುವ ವಸ್ತುವನ್ನು ಬ್ರೋಮಿನೇಷನ್ ಮಾಡುವುದರಿಂದ ತಯಾರಿಸುತ್ತಾರೆ. (ಪಿ.ಜಿ.ಆರ್.)

**ಇಸಿಲ:** ಇಂದು ವಾಸ್ತವವಾಗಿ ಕಣ್ಮರೆಯಾಗಿರುವುದಾದರೂ ಭಾರತದ ಪ್ರಾಕ್ತನ ಭೂಪಟದಲ್ಲಿ ಶಾಶ್ವತವಾಗಿ ಉಳಿದಿರುವ ನಗರವೊಂದರ ಹೆಸರು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ಬ್ರಹ್ಮಗಿರಿಯಲ್ಲಿ ಸಿಕ್ಕಿರುವ ಅಶೋಕನಕಾಲದ ಶಾಸನಗಳಲ್ಲಿ ಈ ನಗರದ ಉಲ್ಲೇಖವಿದೆ (**ನೋಡಿ– ಬ್ರಹ್ಮಗಿರಿ–1**). ಮೌರ್ಯ ಸಾಮ್ರಾಜ್ಯದ ದಕ್ಷಿಣದ ರಾಜಧಾನಿಯಾಗಿದ್ದ ಸುವರ್ಣಗಿರಿಯಿಂದ ಈ ನಗರಕ್ಕೆ ರಾಜಶಾಸನ ತರಲಾಯಿತೆಂದು ಇವುಗಳಲ್ಲಿ ಹೇಳಿರುವುದರಿಂದ ಈ ಪ್ರದೇಶದಲ್ಲೆ ಇಸಿಲವಿದ್ದಿರಬೇಕೆಂದು ಊಹೆ. ಜನಗಹಳ್ಳ ಅಥವಾ ಸಣ್ಣ ಹಗರಿ ನದಿಯ ಆಚೀಚೆ ದಡಗಳ ಮೇಲೆ, ತ್ರಿಭುಜದ ಮುಮ್ಮೂಲೆಗಳಂತಿರುವ ಈ ಶಾಸನಗಳು ಇರುವ ಸುತ್ತಮುತ್ತಲಿನಲ್ಲಿ ಈ ನಗರವಿತ್ತೆಂಬುದು ಇಲ್ಲಿನ ನೆಲದ ಪರಿಶೀಲನೆಯಿಂದ ವ್ಯಕ್ತವಾಗಿದೆ. (ಎಂ.ಎಚ್.)

ಈ ಪ್ರದೇಶದ ಇತಿಹಾಸದಲ್ಲಿ ಏಳುಬೀಳುಗಳಿದ್ದಿರಬೇಕು. 1190ರ ಸುಮಾರಿನಲ್ಲಿ ಈ ಬೆಟ್ಟದ ಪಶ್ಚಿಮಕ್ಕೆ ಹನೆಯವೆಂಬ ನಗರ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆದರೆ ಇಸಿಲ ಇದಕ್ಕಿಂತ ಪುರಾತನ, ಪ್ರತ್ಯೇಕ. ಇದರ ಪೂರ್ವಕ್ಕೆ ಚೌಡೇಶ್ವರಿ ಕೆರೆ ಮತ್ತು ಕೊಪ್ಪ ಗುಡ್ಡ, ಉತ್ತರಕ್ಕೆ ಹಗರಿ ಹೊಳೆ, ಪಶ್ಚಿಮಕ್ಕೆ ಎಮ್ಮೆತಮ್ಮನ ಗುಂಡು ಮತ್ತು ಅಕ್ಕತಂಗಿ ಕೆರೆ, ದಕ್ಷಿಣಕ್ಕೆ ಬ್ರಹ್ಮಗಿರಿ ಬೆಟ್ಟ (ಈ ಬೆಟ್ಟದಲ್ಲಿರುವ ಗುಹೆಗಳಲ್ಲಿ ಚರಿತ್ರಪೂರ್ವಕಾಲದ ಮಾನವನಿದ್ದುದರ ಕುರುಹುಗಳಿವೆ).

ಹಿಂದೆ ಒಂದು ಸಾಮಾನ್ಯ ಊರಾಗಿದ್ದ ಇಸಿಲ ಅಶೋಕನ ಕಾಲಕ್ಕಾಗಲೆ ಪ್ರಾಂತೀಯ ಮುಖ್ಯ ಪಟ್ಟಣವಾಗಿ ಬೆಳೆದಿರಬೇಕು; ಅನಂತರವೂ ಸಾತವಾಹನರ ಕಾಲದಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದಿರಬೇಕು. ಆದರೆ ಬ್ರಹ್ಮಗಿರಿಯ ಮೇಲಿದ್ದ ಚೈತ್ಯಾಲಯದ ಇಟ್ಟಿಗೆಯ ತಳಪಾಯವೊಂದನ್ನು ಬಿಟ್ಟರೆ ಆ ಕಾಲದ ಅವಶೇಷಗಳು ಯಾವುವೂ ದೊರೆತಿಲ್ಲ. *

**ಇಸ್ಕಂದರ್ ಬೇಗ್:** ಸು. 1440–68. ಆಲ್ಬೇನಿಯದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಖ್ಯಾತವೀರ. ಮೊದಲ ಹೆಸರು ಜಾರ್ಜ್ ಕ್ಯಾಸ್ಟ್ರಿಯೋಟ. ಸ್ಕಾಂಡರ್ ಬೇ ಅಥವಾ ಇಸ್ಕಂದರ್ ಬೇ ಎಂಬ ಹೆಸರುಗಳೂ ಇದ್ದವು. ಆಲ್ಬೇನಿಯದ ಮಧ್ಯ ಮತ್ತು ಉತ್ತರ ಭಾಗಗಳಲ್ಲಿ ವಿಶಾಲ ಪ್ರಾಂತ್ಯದ ಒಡೆತನವನ್ನು ಹೊಂದಿದ್ದ ಅರಸುಮನೆತನಕ್ಕೆ ಸೇರಿದ ಮಾಂಡಲಿಕ ಜಾನ್ ಕ್ಯಾಸ್ಟ್ರಿಯೋಟನ ನಾಲ್ವರು ಮಕ್ಕಳಲ್ಲಿ ಒಬ್ಬ. ಆಟೊಮನ್ ತುರ್ಕರು ಕ್ಯಾಸ್ಟ್ರಿಯೋಟನ ರಾಜ್ಯಕ್ಕೆ ನುಗ್ಗಿ ಕಾಳಗದಲ್ಲಿ ಗೆದ್ದ ಮೇಲೆ, ಆತ ರಾಜ್ಯದ ಅತ್ಯುತ್ತಮ ಕೋಟೆ ಎನಿಸಿದ ಕ್ರೂಯೀಯನ್ನು ಬಿಟ್ಟುಕೊಟ್ಟು ಸುಲ್ತಾನ ಎರಡನೆಯ ಮುರಾದನಿಗೆ ತನ್ನ ನಾಲ್ಕು ಮಕ್ಕಳನ್ನು ಒತ್ತೆಯಾಳುಗಳಾಗಿ ಒಪ್ಪಿಸಬೇಕಾಯಿತು. ಅಲ್ಲಿ ಜಾರ್ಜ್ ಕ್ಯಾಸ್ಟ್ರಿಯೋಟನನ್ನು ಮುಸ್ಲಿಮನಾಗಿ ಮತಾಂತರಗೊಳಿಸಿ ಇಸ್ಕಂದರ್ ಬೇ ಎಂದು ಕರೆಯಲಾಯಿತು. ಅನಂತರ ಬೇ ಏಡ್ರಿಯನೋಪಲಿನಲ್ಲಿ ಸೈನಿಕಶಿಕ್ಷಣ ಪಡೆದ. ಬಾಲ್ಯದಲ್ಲೇ ಇವನ ಪ್ರತಿಭೆಯನ್ನು ಗುರುತಿಸಿ ಸುಲ್ತಾನ ಇವನನ್ನು ತನ್ನ ಖಾಸಾ ಅಧಿಕಾರಿ ವರ್ಗಕ್ಕೆ ಸೇರಿಸಿಕೊಂಡು ಬೇ ಎಂಬ ಗೌರವಸ್ಥಾನ ನೀಡಿದ.

1443ರಲ್ಲಿ ಜಾನ್ ಹ್ಯೂನ್ಯಾಡಿ ಎಂಬುವನ ಕೈಕೆಳಗೆ ಆಲ್ಬೇನಿಯನ್ನರು ಸ್ವಾತಂತ್ರ್ಯಕ್ಕಾಗಿ ತುರ್ಕರ ವಿರುದ್ಧ ಹೋರಾಡುತ್ತಿದ್ದರೆಂಬುದನ್ನು ತಿಳಿದು ಇಸ್ಕಂದರ್ ತುರ್ಕಿ ಪಡೆಯನ್ನು ತ್ಯಜಿಸಿ ಆಲ್ಬೇನಿಯದ ಕಡೆಗೆ ಸೇರಿದ. ಕ್ರೂಯೀ ಕೋಟೆಯಿಂದ ತುರ್ಕಿ ಸೈನ್ಯವನ್ನೋಡಿಸಿ ಅಲ್ಲಿ ಆಲ್ಬೇನಿಯದ ರಾಷ್ಟ್ರೀಯ ಧ್ವಜವನ್ನೇರಿಸಿದ. ತುರ್ಕರ ವಿರುದ್ಧ ಧರ್ಮಯುದ್ಧವನ್ನೇ ಸಾರಿದ. ತನ್ನ ತಂದೆಗೆ ಸೇರಿದ್ದ ಪ್ರಾಂತಗಳನ್ನೆಲ್ಲ ವಶಪಡಿಸಿಕೊಂಡ. ಪರಕೀಯರ ಕೈಲಿದ್ದ ರಾಷ್ಟ್ರವನ್ನು ವಿಮೋಚನೆ ಮಾಡಲು ಎಲ್ಲರಿಗೂ ಕರೆಕೊಟ್ಟ. ಈ ಮಧ್ಯೆ ಇಸ್ಲಾಂ ಧರ್ಮವನ್ನು ತ್ಯಜಿಸಿ ಮತ್ತೆ ಕ್ರೈಸ್ತನಾಗಿದ್ದ. ಆಲ್ಬೇನಿಯದ ಮಾಂಟೆನೀಗ್ರೊ ದೇಶಗಳ ಜನರೆಲ್ಲ ಇವನ ಕರೆಗೆ ಓಗೊಟ್ಟರು. ವೆನಿಸ್ ಇವನ ಸಹಾಯವನ್ನು ಕೋರಿತು. 1457ರಲ್ಲಿ ಪೋಪ್ ಮೂರನೆಯ ಕ್ಯಾಲಿಕ್ಸ ತುರ್ಕರ ವಿರುದ್ಧ ನಡೆಸಬೇಕಾಗಿದ್ದ ಧರ್ಮಯುದ್ಧಕ್ಕೆ ಇವನನ್ನೇ ಪ್ರಧಾನ ಸೇನಾಪತಿಯನ್ನಾಗಿ ನೇಮಿಸಿದ. ಆಗ ಸುಲ್ತಾನನ ಭಾರಿ ಸೈನ್ಯವೊಂದು ಆಲ್ಬೇನಿಯಕ್ಕೆ ನುಗ್ಗಿತು. ಅತ್ಯಂತ ಧೈರ್ಯ ಸಾಮರ್ಥ್ಯಗಳಿಂದ ಆ ಸೈನ್ಯವನ್ನು ಇಸ್ಕಂದರ್ ಎದುರಿಸಿದ. ಕೊನೆಗೆ 1461ರಲ್ಲಿ ಸುಲ್ತಾನ ಹತ್ತು ವರ್ಷದ ಯುದ್ಧವಿರಾಮಕ್ಕೆ ಒಪ್ಪಿಕೊಳ್ಳಬೇಕಾಯಿತು. ಆದರೆ, ಪೋಪ್ (ಎರಡನೆಯ ಪಯಸ್) ಮುಸ್ಲಿಮರ ಮೇಲೆ ಇನ್ನೊಂದು ಧರ್ಮಯುದ್ಧದ ಏರ್ಪಾಡು ನಡೆಸುತ್ತಿರುವುದನ್ನು ತಿಳಿದು, 1463ರಲ್ಲೇ ಯುದ್ಧವಿರಾಮ ಒಪ್ಪಂದವನ್ನು ಮುರಿದು ಸುಲ್ತಾನ ಕದನಕ್ಕೆ ತೊಡಗಿದ. ಪೋಪ್ ಸ್ವಲ್ಪಕಾಲದ ಮೇಲೆ ಮರಣಹೊಂದಿದ. ಮುಂದೆ ಧರ್ಮಯುದ್ಧದಲ್ಲಿ ಆಸಕ್ತಿ ಕುಗ್ಗಿತು. ಆಗ ಇಸ್ಕಂದರ್ ಒಬ್ಬನೇ ತುರ್ಕಿಯ ದೊಡ್ಡ ಸೈನ್ಯವನ್ನೆದುರಿಸಬೇಕಾಯಿತು. ಸುಲ್ತಾನನ

ಸೈನ್ಯ ಕ್ರೂಯೀ ಕೋಟೆಯನ್ನು ಮುತ್ತಿತು. ಅತ್ಯಂತ ಧೈರ್ಯ ಸಾಮರ್ಥ್ಯಗಳಿಂದ ಆಕ್ರಮಣಕಾರರನ್ನು ತಡೆಗಟ್ಟಿ ಕೋಟೆಯನ್ನು ರಕ್ಷಿಸಿದ. ಈತ ಕಾಲವಾಗುವವರೆಗೂ (1468) ಆಲ್ಬೇನಿಯ ತುರ್ಕರ ವಶವಾಗಲಿಲ್ಲ. *

**ಇಸ್ತಾನ್‌ಬುಲ್:** ಟರ್ಕಿದೇಶದ ದೊಡ್ಡನಗರ ಒಂದು ಪ್ರಮುಖ ರೇವುಪಟ್ಟಣ. ಮಾರ್ಮರಾ ಸಮುದ್ರತೀರದ ಬಾಸ ಪೊರಸ್ ಜಲಸಂಧಿಯ ದಕ್ಷಿಣ ತುದಿಯಲ್ಲಿದೆ. ರೋಮನ್ ಚಕ್ರಾಧಿಪತ್ಯದ ಕಾಲದಲ್ಲಿ ಅಂದರೆ ಪ್ರ.ಶ.330ರಲ್ಲಿ, ಕಾನ್‌ಸ್ಟ್ಯಾಂಟೈನ್ ಚಕ್ರವರ್ತಿಯಿಂದ ಹಿಂದೆ ಗ್ರೀಕ್ ಪ್ರದೇಶವಾಗಿದ್ದ ಬೈಜ಼ಾಂಟೀಯನ್‌ನ ಈ ಭಾಗ ಕಾನ್‌ಸ್ಟಾಂಟಿನೋಪಲ್ ಎಂಬ ಹೆಸರನ್ನು ಪಡೆಯಿತು (ಈ ಪಟ್ಟಣದ ಚರಿತ್ರೆಯ ವಿವರಗಳಿಗೆ – (ನೋಡಿ– ಕಾನ್‌ಸ್ಟಾಂಟಿನೋಪಲ್). 1453ರಲ್ಲಿ ತುರ್ಕಿಯರ ಅಧೀನಕ್ಕೆ ಒಳಗಾದ ಮೇಲೆ ಆಟೋಮನ್ ಚಕ್ರಾಧಿಪತ್ಯದ ರಾಜಧಾನಿಯಾಗಿ ಇಸ್ತಾನ್‌ಬುಲ್ ಎಂದಾಯಿತು. 1922ರಲ್ಲಿ ಈ ಪಟ್ಟಣದಿಂದ ರಾಜಧಾನಿಯನ್ನು ಅಂಕಾರಕ್ಕೆ ವರ್ಗಾಯಿಸಲಾಯಿತು. ಇಸ್ತಾನ್‌ಬುಲ್ 10,018,735 (2001) ಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿದ ದೊಡ್ಡ ನಗರ. ಇಂದಿಗೂ ಇದು ಮುಖ್ಯ ವ್ಯಾಪಾರ ಕೇಂದ್ರವಾಗಿ ಉಪಯುಕ್ತ ರೇವುಪಟ್ಟಣವಾಗಿ ಉಳಿದಿದೆ. ಇಲ್ಲೊಂದು ವಿಶ್ವವಿದ್ಯಾನಿಲಯವಿದೆ (ಸ್ಥಾಪನೆ 1453, ಪುನರ್ ವ್ಯವಸ್ಥೆ 1933). ಊರಿನ ಐರೋಪ್ಯ ಭಾಗ ಗೋಲ್ಡನ್ ಹಾರನ್ನಿನ ಏಳು ಬೆಟ್ಟಗಳ ಮೇಲಿದೆ. ಮಧ್ಯಯುಗದ ಕೋಟೆ ಕೊತ್ತಳಗಳ ಪಳೆಯುಳಿಕೆಗಳನ್ನು ಅಲ್ಲಿ ಈಗಲೂ ಕಾಣಬಹುದು. ಇದಲ್ಲದೆ ಊರಿನ ಕೆಲಭಾಗಗಳು ಗ್ರೀಸ್ ಮತ್ತು ಏಷ್ಯಗಳ ಸಂಪರ್ಕವನ್ನು ಈಗಲೂ ಪ್ರದರ್ಶಿಸುತ್ತಿದೆ. ಬಿಜಾಂಟೈನ್ ಸಂಸ್ಕೃತಿಯ ಪ್ರಸಿದ್ಧ ಸ್ಮಾರಕವಾಗಿ ಈಗ ಉಳಿದಿರುವುದೆಂದರೆ ಹಾಜಿಯ ಸೋಫಿಯ. ಹಿಂದೆ ಚರ್ಚಾಗಿದ್ದ ಈ ಭವ್ಯಮಂದಿರ ಈಗ ಕಲಾವಸ್ತುಗಳ ಪ್ರದರ್ಶನಶಾಲೆಯಾಗಿದೆ. ತುರ್ಕಿ ಕಲೆಗೆ ನಿದರ್ಶನಗಳಾಗಿ ಈಗ 16ನೆಯ ಶತಮಾನದ ಅನೇಕ ಮಸೀದಿಗಳು ಉಳಿದು ಬಂದಿವೆ. ಜೊತೆಗೆ 19–20ನೆಯ ಶತಮಾನದ ಸುಲ್ತಾನರ ಅರಮನೆಗಳು ರಮಣೀಯವಾಗಿವೆ.

ಏಷ್ಯ ಮತ್ತು ಯುರೋಪ್ ಎರಡೂ ಖಂಡಗಳಿಗೆ ಈ ನಗರ ಸೇರಿರುವುದೊಂದು ವಿಶೇಷ. ವಿಸ್ತೀರ್ಣ 238 ಚ.ಕಿಮೀ. ಇದರಲ್ಲಿ ಒಂದೂವರೆ ಪಟ್ಟು ಯುರೋಪ್‌ಗೆ ಸೇರಿದ್ದು, ನಗರದ ಜನಸಂಖ್ಯೆಯಲ್ಲಿ ಶೇ.75 ಈ ಭಾಗದಲ್ಲಿದೆ. ಯುರೋಪಿನ ಇಸ್ತಾನ್‌ಬುಲ್‌ನ್ನು ಆಧುನಿಕ ಮತ್ತು ಹಳೆಯ ನಗರವೆಂದು ಗೋಲ್ಡನ್ ಹಾರ್ನ್ ಅಳಿವೆಯಿಂದ ವಿಂಗಡಿಸಲಾಗಿದೆ. ದಕ್ಷಿಣದ ಹಳೆನಗರಭಾಗದಲ್ಲಿ ಸುಂದರವಾದ ಆಕಾಶದೆತ್ತರದ ಮಸೀದಿಗಳಿವೆ. ವಾಣಿಜ್ಯ ವಲಯ, ಉದ್ಯಾನಗಳು ಮತ್ತು ಸ್ಮಾರಕಗಳೂ ಹೆಚ್ಚು. ಚರ್ಚ್, ವಿಶ್ವವಿದ್ಯಾನಿಲಯಗಳೂ ಇವೆ. ಇಸ್ಲಾಮಿಯರೇ ಪ್ರಧಾನ. ಯಹೂದಿ, ಗ್ರೀಕ್ ಮತ್ತು ಆರ್ಮೀನಿಯ ಕ್ರೈಸ್ತರು ಅಲ್ಪಸಂಖ್ಯಾತರು. ಸಿಮೆಂಟ್, ಗಾಜು, ಔಷಧಿ, ವಿದ್ಯುದುಪಕರಣ, ಪ್ಲಾಸ್ಟಿಕ್, ಜವಳಿವಸ್ತು ಮತ್ತು ಆಹಾರ ಪದಾರ್ಥಗಳ ಸಂಸ್ಕರಣೆ ಇಲ್ಲಿನ ಪ್ರಮುಖ ಕೈಗಾರಿಕೆಗಳು. (ಎಂ.ಎಸ್.)

**ಇಸ್ತೂರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಗ್ರಾಮ. ದೊಡ್ಡಬಳ್ಳಾಪುರದಿಂದ ಸು.12ಕಿಮೀ ದೂರದಲ್ಲಿದೆ. ಇದಕ್ಕೆ ಇಟ್ಟೂರು, ಏಸೂರು ಎಂಬ ಹೆಸರುಗಳೂ ಇವೆ. ಗ್ರಾಮದ ಹೊರವಲಯದಲ್ಲಿರುವ ನೀಲಕಂಠೇಶ್ವರ ದೇವಾಲಯ ಗಂಗರ ಕಾಲದ ಶೈಲಿಯಲ್ಲಿದೆ. ದೇವಾಲಯಕ್ಕೆ ಚತುರಸ್ರ ಗರ್ಭಗುಡಿ ಮತ್ತು ಕದಂಬನಾಗರ ಶೈಲಿಯ ಶಿಖರಗಳಿವೆ. ಇಲ್ಲಿ ಸೂರ್ಯ, ವಿಷ್ಣು, ಗಣೇಶ ಹಾಗೂ ಮಹಿಷಮರ್ದಿನಿ ಶಿಲ್ಪಕೃತಿಗಳಿವೆ. ಗರ್ಭಗುಡಿಯ ಮುಂದೆ ಅರ್ಧಮಂಟಪ ಹಾಗೂ ಅದರ ಮುಂದೆ ಹೊರಮಂಟಪ ಇದ್ದು ಇವೆರಡೂ ತರುವಾಯದಲ್ಲಿ ಸೇರಿಸಿದವಾಗಿದ್ದು ಹೊರಮಂಟಪ ಸಂಪೂರ್ಣ ವಿಜಯನಗರ ಶೈಲಿಯಲ್ಲಿದೆ. ಊರಿನ ಒಳಗೆ ಕೋದಂಡರಾಮ, ಆಂಜನೇಯ, ಕಬ್ಬಾಳಮ್ಮ ಮತ್ತು ಬಸವಣ್ಣ ದೇವಾಲಯಗಳಿವೆ. ಕಬ್ಬಾಳಮ್ಮ ದೇವಾಲಯದ ಬಳಿಯಲ್ಲಿ 1306ರ ಹೊಯ್ಸಳರ ಶಾಸನವೊಂದಿದೆ. ಮುಮ್ಮಡಿ ಬಲ್ಲಾಳನು ಬಡಿಗ, ಕಮ್ಮಾರ ಹಾಗೂ ಅಕ್ಕಸಾಲಿಗ ಮತ್ತು ಎಲ್ಲಾ ವೀರಪಾಂಚಾಳರು ಯಾರು ದ್ವಾರಸಮುದ್ರದ ಹಿರಿಯ ಕಲಮಠ ಹಾಗೂ ಅದರ ಶಾಖಾಮಠವಾದ ಜಪೆಗೂಮಠಕ್ಕೆ ಸಂಬಂಧಿಸಿರುವರೊ ಅವರೆಲ್ಲರಿಗೂ ಅನೇಕ ದಾನಗಳನ್ನು ಇತ್ತುದನ್ನು ದಾಖಲಿಸಿದೆ. ಅನೇಕ ಸುಂಕಗಳಿಗೆ ಸಂಬಂಧಿಸಿದಂತೆ ತಾಮ್ರಶಾಸನವನ್ನು ಬರೆಸಿದ ಸಂಗತಿಯನ್ನೂ ಈ ಶಾಸನ ತಿಳಿಸಿದೆ. ಇಲ್ಲಿಗೆ ಸಮೀಪದ ಕಾಡನೂರು ಮತ್ತು ದೊಡ್ಡಹೆಜ್ಜಾಜಿ ಗ್ರಾಮಗಳಲ್ಲಿ ವಿಜಯನಗರ ಕಾಲದ ದೇವಾಲಯಗಳಿವೆ. *

**ಇಸ್ಪೀಟು ಆಟಗಳು:** ನಿಶ್ಚಿತ ನಮೂನೆಯ ಒಂದು ಅಥವಾ ಹೆಚ್ಚು ಕಟ್ಟು ಎಲೆಗಳ (ರಟ್ಟು ತುಂಡುಗಳ) ಸಹಾಯದಿಂದ ಒಳಾಂಗಣದಲ್ಲಿ ಆಡುವ ಆಟಗಳು (ಕಾರ್ಡ್‌ಗೇಮ್ಸ್). ಇವುಗಳ ಚರಿತ್ರೆ ಬಲು ಪುರಾತನ. ಯುರೋಪಿನಲ್ಲಿ ಇವಕ್ಕೆ ಆರುನೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಇತಿಹಾಸವಿದೆ. ಪೌರಸ್ತ್ಯ ದೇಶಗಳಿಗೆ ಇವು ಇನ್ನೂ ಹಿಂದಿನಿಂದಲೂ ಪರಿಚಿತ; ಆಟವಾಡುವುದಕ್ಕೆ ಮಾತ್ರವೇ ಅಲ್ಲದೆ ಇಂದ್ರಜಾಲ, ಅಜ್ಞಾತಜ್ಞಾನ ಮುಂತಾದ ಉದ್ದೇಶಗಳಿಗೂ ಈ ಎಲೆಗಳನ್ನು ಬಳಸುತ್ತಿದ್ದುದುಂಟು. ಇವನ್ನು ಶಿಕ್ಷಣ ಸಾಧನವಾಗಿಯೂ ವಿಶೇಷವಾಗಿ ಬಳಸಲಾಗುತ್ತಿತ್ತು. ಈಗ ಇಸ್ಪೀಟು ಎಲೆಗಳು ಬಹುತೇಕವಾಗಿ ಕ್ರೀಡಾಸಾಧನ. ಹೊತ್ತು ಕಳೆಯಲು ಸುಲಭ ಮಾಧ್ಯಮ.

ಇಸ್ಪೀಟಿನ ಇತಿಹಾಸವನ್ನರಿಯಲು ಕಳೆದ ಮುನ್ನೂರು ವರ್ಷಗಳಿಂದ ಸತತವಾಗಿ ಪ್ರಯತ್ನ ನಡೆಯುತ್ತಿದೆ. ಇಸ್ಪೀಟು ಎಲೆಗಳ ಹಾಗೂ ಆಟಗಳ ವಿಚಾರವಾಗಿ ವಿಪುಲ ಸಾಹಿತ್ಯವೇ ಸೃಷ್ಟಿಯಾಗಿದೆ. ಆದರೆ ಇವುಗಳ ಉಗಮ ಎಂದಾಯಿತು? ಹೇಗಾಯಿತು ಎಂಬ ವಿಚಾರವಾಗಿ ನಿಷ್ಕರ್ಷೆಯಾಗಿ ಹೇಳುವ ಪ್ರಯತ್ನವೆಲ್ಲ ಇದುವರೆಗೂ ಸಫಲವಾಗಿಲ್ಲ. 969ರಷ್ಟು ಹಿಂದೆಯೇ ಚೀನಿಯರಿಗೆ ಇಸ್ಪೀಟಿನ ಪರಿಚಯವಿತ್ತಂತೆ. 1120ರಲ್ಲಿ ಚೀನಿ ಚಕ್ರವರ್ತಿ ಸಯುನ್ ಹೊನ ಉಪಪತ್ನಿಯೊಬ್ಬಳ ಮನೋರಂಜನೆಗಾಗಿ ಇಸ್ಪೀಟು ಆಟದ ಸೃಷ್ಟಿಯಾಯಿತಂತೆ. 1678ರ ಚೀನಿ ವಿಶ್ವಕೋಶದಲ್ಲಿ ಇದರ ಉಲ್ಲೇಖವಿದೆಯೆಂದು ಹೇಳಲಾಗಿದೆ.

ಪುರಾತನವಾದ ಟಾಂಗ್ ವಂಶದ ಅರಸರ ಕಾಲದಲ್ಲಿ ಚೀನದಲ್ಲಿ ಕಾಗದದ ಹಣ (ನೋಟು) ಚಲಾವಣೆಯಲ್ಲಿತ್ತು. ಚೀನಿ ಇಸ್ಪೀಟು ಎಲೆಗಳೂ ಈ ನೋಟುಗಳೂ ಒಂದೇ ನಮೂನೆಯವಾಗಿದ್ದುದರಿಂದ ಇವೆರಡರಲ್ಲಿ ಒಂದು ಇನ್ನೊಂದಕ್ಕೆ ಜನ್ಮವಿತ್ತಿರಬಹುದೆಂದು ಊಹೆ. ಚಿತ್ರ ಬಿಡಿಸುವ ಕಲೆಯ ಉಗಮದೊಂದಿಗೇ ಇಸ್ಪೀಟಿನ ಅವತಾರವೂ ಎಲ್ಲ ದೇಶಗಳಲ್ಲೂ ಆಗಿದ್ದರಬಹುದು. ಈಜಿಪ್ಷಿನವರೊ ಅರಬ್ಬರೊ ಭಾರತೀಯರೊ ಚೀನಿಯರೊ– ಅಥವಾ ಇವರೆಲ್ಲರೂ–ಈ ಆಟಗಳ ಜನ್ಮದಾತರೆಂದು ಮಾತ್ರ ಹೇಳುವುದು ಸಾಧ್ಯ.

ಆಟಸಾಧನವಾಗಿ ಮಾತ್ರವೇ, ಅಲ್ಲದೆ ಭವಿಷ್ಯ ಜ್ಞಾನ, ಯಕ್ಷಿಣಿ ಮುಂತಾದ ಉದ್ದೇಶಗಳಿಗಾಗಿಯೂ ಈ ಎಲೆಗಳು ಬಳಕೆಯಾಗುತ್ತಿದ್ದುವೆಂಬುದಕ್ಕೆ ಚೀನ, ಕೊರಿಯಗಳ ಇತಿಹಾಸಗಳಲ್ಲಿ ಅನೇಕ ಆಧಾರಗಳಿವೆ. ಹಿಂದುಗಳು ಬಳಸುತ್ತಿದ್ದ ಎಲೆಗಳಲ್ಲಿ ವಿಷ್ಣುವಿನ ಹತ್ತು ಅವತಾರಗಳನ್ನು ಸೂಚಿಸುವ ಹತ್ತು ರಂಗುಗಳಿದ್ದುವು. ಮಧ್ಯಯುಗದ ವೇಳೆಗೆ ಏಷ್ಯ ಯುರೋಪುಗಳಲ್ಲಿ ಕಣಿ ಹೇಳುವುದಕ್ಕೆ ಇಸ್ಪೀಟು ಎಲೆಗಳು ಬಳಕೆಯಲ್ಲಿದ್ದುವಾದರೂ ಇವು ಯುರೋಪಿಗೆ ಪ್ರಯಾಣ ಬೆಳೆಸಿದ್ದು ಯಾವಾಗ ಎಂಬುದು ಇನ್ನೂ ಸ್ಥಿರಪಟ್ಟಿಲ್ಲ. 14ನೆಯ ಶತಮಾನದ ವೇಳೆಗಂತೂ ಇವು ಪಾಶ್ಚಾತ್ಯರಿಗೆ ಗೊತ್ತಿದ್ದುವೆಂಬುದು ಬಹುತೇಕ ಖಂಡಿತ.

ಯುರೋಪಿನಲ್ಲಿ ತಯಾರಾದ ಅತ್ಯಂತ ಪ್ರಾಚೀನ ಇಸ್ಪೀಟು ಎಲೆಗಳೆಂದರೆ ಇಟಲಿಯ ಟ್ಯಾರೊ. ಇವು ಇಟಲಿಯ ಅಪ್ಪಟ ಸೃಷ್ಟಿ. ಪೌರಸ್ತ್ಯ ದೇಶಗಳಿಂದ ಇವು ಬಂದ ಎಲೆಗಳಿಗಿಂತ ಭಿನ್ನವಾಗಿದ್ದು, ಚಿತ್ರಗಳನ್ನೊಳಗೊಂಡಿದ್ದುವು. ಇವುಗಳಲ್ಲಿದ್ದ 22 ಎಲೆಗಳಲ್ಲಿ ಇಪ್ಪತ್ತೊಂದಕ್ಕೆ 1–21ರ ವರೆಗೆ ಅನುಕ್ರಮವಾಗಿ ಸಂಖ್ಯೆಗಳಿದ್ದುವು.

1. ಇಸ್ಪೀಟ್ 2. ಆಠೀನ್ 3. ಡಯಮಂಡ್ 4. ಕಳಾವರ್

ಇವು ಭೌತಶಕ್ತಿಗಳ ಹಾಗೂ ಪ್ರಕೃತಿಯ ಮೂಲದ್ರವ್ಯಗಳ ಸಂಕೇತಗಳು. ಇಪ್ಪತ್ತೆರಡನೆಯ ಎಲೆಗೆ ಸಂಖ್ಯೆಯಿರಲಿಲ್ಲ. ಅದು ಮೂರ್ಖ–ಈಗಿನ ಜೋಕರಿನ ಮೂಲ ಪುರುಷ. ಡಾಂಟೆ ಕವಿಯ ಡಿವೈನ್ ಕಾಮೆಡಿ ಎಂಬ ಮಹಾಕಾವ್ಯದಲ್ಲಿ ಬಳಕೆಯಾಗಿರುವ ಪ್ರತೀಕಗಳಿಗೂ ಈ ಟ್ಯಾರೊಗಳಿಗೂ ಸಂಬಂಧವಿದೆಯೆಂದು ಸೀಬರಿ ಎಂಬ ಲೇಖಕನ ಮತ. ಹಾಗಿದ್ದ ಪಕ್ಷದಲ್ಲಿ 1,320ಕ್ಕಿಂತ ಹಿಂದೆ ಈ ಆಟ ಹುಟ್ಟಿರಲಾರದು. 20ನೆಯ ಶತಮಾನದ ಇಂಗ್ಲಿಷ್ ಮಹಾಕವಿಯಾದ ಟಿ.ಎಸ್. ಎಲಿಯಟ್ಟನ ವೇಸ್ಟ್‌ಲ್ಯಾಂಡಿನಲ್ಲೂ ಟ್ಯಾರೊವಿನ ಪ್ರತೀಕದ ಬಳಕೆಯಾಗಿದೆ.

14ನೆಯ ಶತಮಾನದಲ್ಲಿ ಇಟಲಿಯ ಈ 22 ಎಲೆಗಳು ಪೂರ್ವರಾಷ್ಟ್ರಗಳ 56ಕ್ಕೆ ಸೇರಿ 78 ಎಲೆಗಳ ಒಂದು ಕಟ್ಟಾಯಿತು. ಟ್ಯಾರೊ ಎಂಬ ಇಸ್ಪೀಟು ಆಟ ಪರಿಪೂರ್ಣ ಸ್ಥಿತಿ ಮುಟ್ಟಿ ಎಲ್ಲೆಲ್ಲೂ ಪ್ರಚಾರವಾಯಿತು. ಇದರಲ್ಲಿ ಮೂಲದ 22 ಟ್ಯಾರೊ ಎಲೆಗಳು ನೈಬುಗಳೆನಿಸಿಕೊಂಡವು. ಮಾಟ ಎಂಬುದಕ್ಕೆ ಸಮನಾರ್ಥಕವಾದ ನೈಬಿ ಎಂಬ ಹೀಬ್ರು ಪದಕ್ಕೆ ತೀರ ಹತ್ತಿರವಿರುವ ನೈಬುಗಳನ್ನು ಈಗಿನ ತುರುಫುಗಳೆನ್ನಬಹುದು. 56 ಎಲೆಗಳ ಕಟ್ಟಿನಲ್ಲಿ ನಾಲ್ಕು ರಂಗುಗಳಿದ್ದುವು. ನಾಣ್ಯ, ಗಾತ್ರ, ದಶಸಹಸ್ರ, ಲಕ್ಷಾಂತರ ಎಂಬ ಚೀನಿ ರಂಗುಗಳ ಮಾದರಿಯಲ್ಲಿ ಇವು ರೂಪಿತವಾದುವು. ಪ್ರತಿಯೊಂದು ರಂಗಿನಲ್ಲೂ ರಾಜ, ರಾಣಿ, ಸರದಾರ, ಗುಲಾಮ ಎಂದು ನಾಲ್ಕು ಕೋಟ್ ಅಥವ ಕೋರ್ಟ್ ಎಲೆಗಳು ಚಿತ್ರೆಲೆಗಳು (ಕವಚತೊಟ್ಟ ವ್ಯಕ್ತಿ ಚಿತ್ರವುಳ್ಳವು) ಮತ್ತು 1ರಿಂದ 10ರ ವರೆಗೆ ಸಂಖ್ಯೆ ಧರಿಸಿದ ಹತ್ತು ಎಲೆಗಳು. ಈ 56 ಎಲೆಗಳಿಗಿಂತ ಕಡಿಮೆ ಮೊತ್ತದ ಎಲೆಗಳ ಕಟ್ಟುಗಳು ಮುಂದೆ ಹುಟ್ಟಿಕೊಂಡವು. ಇಟಲಿ ಸ್ಪೇನುಗಳಲ್ಲಿ 40 ಎಲೆಗಳ ಕಟ್ಟು ಹುಟ್ಟಿತು. ಒಂದೊಂದು ರಂಗಿನಲ್ಲೂ ಹತ್ತು ಎಲೆ: ಹಾಸು (ಎಕ್ಕ), 2, 3, 4, 5, 6, 7, ಗುಲಾಮ. ರಾಣಿ ಅಥವಾ

ಸರದಾರ ಮತ್ತು ರಾಜ. ಜರ್ಮನಿಯಲ್ಲಿ 32 ಅಥವಾ 36 ಎಲೆಗಳ ಕಟ್ಟುಗಳು: ಹಾಸು, 7, 8, 9, 10 ಮತ್ತು ಮೂರು ಅಥವಾ ನಾಲ್ಕು ಚಿತ್ರೆಲೆಗಳು. ಫ್ರೆಂಚರು 32 ಮತ್ತು 52 ಎಲೆಗಳ ಕಟ್ಟುಗಳನ್ನಳವಡಿಸಿಕೊಂಡರು. ಇಂಗ್ಲಿಷ್ ಮಾತನಾಡುವ ದೇಶಗಳಲ್ಲೆಲ್ಲ 52 ಎಲೆಗಳ (ನಾಲ್ಕು ರಂಗುಗಳ) ಇಸ್ಪೀಟು ಸಾಮಾನ್ಯವಾಯಿತು. ಇಂಗ್ಲಿಷರು ಫ್ರೆಂಚರ ಸಂಕೇತಗಳನ್ನೆ ಬಳಸಿಕೊಂಡರಾದರೂ ಅವಕ್ಕೆ ಬೇರೆ ಹೆಸರು ಕೊಟ್ಟುಕೊಂಡರು. ಫ್ರೆಂಚರ ಪಿಕ್ ಅಥವಾ ಪೈಕ್ (1) ಗುದ್ದಲಿಯಂತೆ ಕಂಡದ್ದರಿಂದ ಇಂಗ್ಲಿಷಿನಲ್ಲಿ ಅದು ಸ್ಪೇಡ್ ಆಯಿತು (ಕನ್ನಡದಲ್ಲಿ ಇಸ್ಪೀಟು). ಫ್ರೆಂಚರ ಕಾರ್‍ರ್ಯೂ ಅಥವಾ ಚೌಕ (4) ಇಂಗ್ಲಿಷಿನಲ್ಲಿ ಡೈಮಂಡ್ (ಕನ್ನಡದಲ್ಲಿ ಡಯಮಂಡು) ಆಯಿತು. ಫ್ರೆಂಚರ ಟ್ರೆಫ್ಲ್ ಅಥವಾ ಟ್ರೆಫಾಯಿಲ್ (3) ಇಂಗ್ಲಿಷಿನಲ್ಲಿ ಕ್ಲಬ್ (ಕನ್ನಡದಲ್ಲಿ ಕಳಾವರ್) ಆಯಿತು. ಇನ್ನುಳಿದದ್ದೆಂದರೆ ಹಾರ್ಟ್ ಅಥವಾ ಆಠೀನ್ (2). ಇದು ಫ್ರೆಂಚರ ಕೋಯು ಎಂಬುದರ ಇಂಗ್ಲಿಷ್ ಅವತರಣಿಕೆ.

18ನೆಯ ಶತಮಾನದಲ್ಲಿ ಭಾರತದಲ್ಲಿ ಬಳಕೆಯಲ್ಲಿದ್ದ ದಂತದ ದುಂಡೆಲೆ. ವಾಮನ, ಪರಶುರಾಮ

ಭಾರತದಲ್ಲಿ ಇಸ್ಪೀಟಿನ ಬಗ್ಗೆ ಹೆಚ್ಚು ಸಂಶೋಧನೆಯಾಗಲಿ ಸಾಹಿತ್ಯವಾಗಲಿ ಬೆಳೆದುಬಂದಿಲ್ಲ. ಇದು ನಮ್ಮಲ್ಲಿ ಪ್ರಾಚೀನ ಕಾಲದಿಂದ ಬಳಕೆಯಲ್ಲಿದ್ದಿರಬಹುದೆಂದು ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯ. ಆದರೆ ಈಗ ಭಾರತದಲ್ಲಿ ಬಳಕೆಯಲ್ಲಿರುವ ಇಸ್ಪೀಟಾಟ ಬಹುಮಟ್ಟಿಗೆ ಪಾಶ್ಚಾತ್ಯ ಪದ್ಧತಿಯ ಅನುಕರಣೆ.

ಇಸ್ಪೀಟು ಎಲೆಗಳ ರೂಪ ಆಕಾರಗಳು ಕಾಲಕಾಲಕ್ಕೆ ಮಾರ್ಪಟ್ಟಿವೆ. ಬಲು ಹಿಂದೆ ಮರದ ಹಲಗೆಗಳನ್ನು ಒಂದು ಆಕಾರಕ್ಕೆ ಕತ್ತರಿಸಿ ಅವಕ್ಕೆ ಕೈಯಿಂದ ಬಣ್ಣ ಹಚ್ಚಲಾಗುತ್ತಿತ್ತು. ಆಮೇಲೆ ಮರದ ಅಚ್ಚುಗಳಿಂದ ಮುದ್ರಿಸುವ ಕ್ರಮ ಜಾರಿಗೆ ಬಂತು ನಿಷ್ಪಾರದರ್ಶಕವಾದ ಹೊಳಪು ರಟ್ಟು ಕಾಗದಗಳ ಮೇಲೆ ಆಕರ್ಷಕವಾಗಿ ಮುದ್ರಣವಾದ ಎಲೆಗಳು ಈಗ ತಯಾರಾಗುತ್ತಿವೆ. ಪ್ರತಿ ಕಟ್ಟಿನಲ್ಲೂ 52 ಎಲೆಗಳೂ ಒಂದು ಅಥವಾ ಎರಡು ಜೋಕರೂ ಇರುತ್ತವೆ. ಇಸ್ಪೀಟ್, ಆಠೀನ್, ಡಯಮಂಡ್, ಕಳಾವರ್ ಎಂದು ನಾಲ್ಕು ರಂಗುಗಳಿವೆ. ರಾಜ, ರಾಣಿ, ಗುಲಾಮ, 10, 9, 8, 6, 5, 4, 3, 2, ಮತ್ತು 1 ಅಥವಾ ಹಾಸು (ಎಕ್ಕ). ಇವು ಒಂದೊಂದು ರಂಗಿನಲ್ಲೂ ಇರುವ ಎಲೆಗಳು.

ಇಸ್ಪೀಟ್ ಎಲೆಗಳನ್ನು ಅಚ್ಚು ಮಾಡಿ ಮಾರುವುದೇ ಇಂದು ಒಂದು ದೊಡ್ಡ ಉದ್ಯಮ. ಇವುಗಳ ಮೇಲೆ ಸುಂಕ ವಿಧಿಸುವ ಕ್ರಮ ಎಲ್ಲ ರಾಷ್ಟ್ರಗಳಲ್ಲೂ ಜಾರಿಯಲ್ಲಿವೆ. ಫ್ರಾನ್ಸಿನಲ್ಲಿ ಇದು ರಾಷ್ಟ್ರೀಕೃತ ಉದ್ಯಮ. ದೇಶ ಆಮದು ಮಾಡಿಕೊಳ್ಳುವ ಇಸ್ಪೀಟು ಎಲೆಗಳ ಮೇಲೆ ಸುಂಕ ವಸೂಲು ಮಾಡುವ ಪದ್ಧತಿಯನ್ನು ಸುಮಾರು ಪ್ರ.ಶ.1615ರಲ್ಲಿ ಇಂಗ್ಲೆಂಡು ಜಾರಿಗೆ ತಂದಿತು. ಅಮೆರಿಕದಲ್ಲಿ 1894ರಲ್ಲಿ ಮೊದಲ ಬಾರಿಗೆ ಇಸ್ಪೀಟು ಎಲೆಗಳ ಮೇಲೆ ಸುಂಕ ವಿಧಿಸಲಾಯಿತೆಂದು ತಿಳಿದುಬರುತ್ತದೆ.

ಇಸ್ಪೀಟು ಆಟಗಳಲ್ಲಿ ನಾನಾ ವಿಧ. ರಾಷ್ಟ್ರದಿಂದ ರಾಷ್ಟ್ರಕ್ಕೆ ಇವು ಭಿನ್ನ. ಪ್ರಾದೇಶಿಕ ಭಿನ್ನತೆಗಳೂ ಇರುತ್ತವೆ. ಒಂದು ಊರಿನ ಒಂದು ವಿರಾಮ ಕೂಟದಲ್ಲಿ (ಕ್ಲಬ್) ನಡೆಯುವ ಆಟದ ವಿಧಿ ವಿಧಾನಗಳಿಗೂ ಮತ್ತೊಂದು ಊರಿನ ಕೂಟದವಕ್ಕೂ ವ್ಯತ್ಯಾಸವಿರಬಹುದು. ಆದರೂ ಒಟ್ಟಿನಲ್ಲಿ ಈ ಆಟಗಳನ್ನು ಸ್ಥೂಲವಾಗಿ ವಿಂಗಡಿಸುವುದು ಸಾಧ್ಯ. ಕನ್ನಡನಾಡೂ ಇಸ್ಪೀಟಿನಿಂದ ಹೊರತೇನಲ್ಲ. ಇಲ್ಲೂ ಅನೇಕ ಆಟಗಳು ಜಾರಿಯಲ್ಲಿವೆ. ವಿರಾಮ ಕೂಟಗಳು ಇವಕ್ಕೆ ಆಶ್ರಯಸ್ಥಾನಗಳು. ಈ ಆಟಗಳು ಜನಪ್ರಿಯವಾಗಿವೆ.

ಇಸ್ಪೀಟು ಆಡುವವರು ಮೇಜಿನ ಸುತ್ತ ಕುಳಿತುಕೊಳ್ಳುತ್ತಾರೆ. ನೆಲದಮೇಲೂ ಕೂರಬಹುದು. ಆಡುವವರ ನಡುವೆ ಎಲೆಗಳನ್ನು ಕಲಸಿಹಾಕಲೂ ಆಟವಾಡಲೂ ಅನುಕೂಲವಾಗುವಂತೆ ಬಟ್ಟೆಯೊಂದನ್ನು ಹಾಸುತ್ತಾರೆ. ಆಡುವವರ ಸಂಖ್ಯೆ ಹಾಗೂ ಆಡುವ ಆಟಕ್ಕೆ ಅನುಗುಣವಾಗಿ ಒಂದು ಅಥವಾ ಹೆಚ್ಚು ಕಟ್ಟುಗಳ ಎಲೆಗಳನ್ನು ಅವುಗಳ ಮುಖ ಕೆಳಗಾಗಿರುವಂತೆ ಕಲಸಿ ಹಂಚುವುದು ಆಟದ ಮೊದಲ ಹಂತ. ರಹಸ್ಯವಾಗಿ ಹಂಚಲಾದ ಈ ಎಲೆಗಳಲ್ಲಿ ಯಾವುದು ಯಾರಿಗೆ ಬಂದಿದೆ ಎಂಬುದರ ಮೇಲೆ ಆಟಗಾರನ ಅದೃಷ್ಟ ಇದರ ಜೊತೆಗೆ ಆತನ ಊಹಾಶಕ್ತಿ, ಲೆಕ್ಕಾಚಾರ, ಇತರರ ಮನೋವ್ಯಾಪಾರವನ್ನರಿಯುವ ಸಾಮರ್ಥ್ಯ–ಇವೆಲ್ಲ ಗುಣಗಳ ಸಂಕಲನವೇ ಇಸ್ಪೀಟಿನ ಐತಿಹ್ಯ. ಆಟಗಾರರಲ್ಲಿ ಒಂದೊಂದು ಆಟ ಮುಗಿದ ಮೇಲೂ ಒಬೊಬ್ಬ ಆಟಗಾರ ಅನುಕ್ರಮವಾಗಿ ಎಲೆಗಳನ್ನು ಮತ್ತೆ ಕಲಸಿ ಎಲ್ಲರಲ್ಲೂ ಹಂಚುತ್ತಾನೆ. ಹೀಗೆ ಹಂಚುವ ಮೊದಲು ಇನ್ನೊಬ್ಬ ಆಟಗಾರ ಈ ಎಲೆಗಳಲ್ಲಿ ಕೆಲವನ್ನು ಎತ್ತಿ ಇಡುತ್ತಾನೆ. ಉಳಿದವನ್ನು ಹಂಚಿದ ಮೇಲೆ ಹಾಗೆ ಎತ್ತಿಟ್ಟ ಎಲೆಗಳನ್ನು ಹಂಚುವುದು ವಾಡಿಕೆ. ಹಂಚಿಕೆದಾರನ ಕೈವಾಡವೇನೂ ಇಲ್ಲದಂತೆ ಮಾಡುವುದೇ ಹೀಗೆ ಎಲೆಗಳಲ್ಲಿ ಕೆಲವನ್ನು ಎತ್ತಿಡುವುದರ (ಕಟ್ ಮಾಡುವುದರ) ಉದ್ದೇಶ.

ಇಪ್ಪತ್ತೆಂಟರ ಆಟ ಅಥವಾ ಗುಲಾಮನಾಟ ಸಾಮಾನ್ಯವಾಗಿ ಹೆಚ್ಚಾಗಿ ಪ್ರಚಾರದಲ್ಲಿದೆ. ಆಟದಲ್ಲಿ ಗುಲಾಮನಿಗೆ ಮೂರು ಅಂಕ; ಒಂಬತ್ತನೆಯ ಸಂಖ್ಯೆಯ ಎಲೆಗೆ (ನೈಲ) ಎರಡು ಅಂಕ; ಹಾಸು ಅಥವಾ ಎಕ್ಕಕ್ಕೆ ಒಂದು. ಹತ್ತನೆಯ ಸಂಖ್ಯೆಯ ಎಲೆಗಳ ಮೌಲ್ಯವೂ ಒಂದೇ ಆದರೂ ಎಕ್ಕದ ಅನಂತರ ಇದರ ಸ್ಥಾನ. ಆಮೇಲೆ ಬರುವ ಎಲೆಗಳೆಂದರೆ ಕ್ರಮವಾಗಿ ರಾಜ, ರಾಣಿ, 8, 7, 6, 5, 4, 3, 2, ಇವುಗಳಿಗೇನೂ ಮೌಲ್ಯವಿಲ್ಲ. ಆಟಗಾರರ ಸಂಖ್ಯೆಗೆ ಅನುಗುಣವಾಗಿ ಈ ಎಲೆಗಳಲ್ಲಿ ಎಲ್ಲವನ್ನು ಅಥವಾ ಕೆಲವನ್ನು ಇಟ್ಟುಕೊಳ್ಳುವ ಅಥವಾ ಬಿಡುವ ತೀರ್ಮಾನ ಮಾಡಬಹುದು. ಎಲೆಗಳನ್ನು ಕಲಸಿ ಹಾಕಿದಾಗ ಯಾರ ಕೈಯಲ್ಲಿ ಹೆಚ್ಚಿನ ಮೌಲ್ಯದ ಎಲೆಗಳು ಬರುತ್ತವೋ ಆತನಿಗೆ ಆಟದಲ್ಲಿ ಗೆಲ್ಲುವ ಅವಕಾಶ ಹೆಚ್ಚು. ಒಂದೇ ರಂಗಿನ ಎಲೆಗಳು ಅಧಿಕ ಸಂಖ್ಯೆಯಲ್ಲಿ ಆತನ ಕೈಗೆ ಬಂದಿದ್ದರೆ ಬಲು ಅನುಕೂಲ. ಆಟಗಾರರು ವರಸೆಯಾಗಿ (ಕ್ರಮವಾಗಿ) ತಮ್ಮ ಕೈಯಿಂದ ಒಂದೊಂದು ಎಲೆಯನ್ನು ಇಳಿಸಿದಾಗ (ಇತರರಿಗೆ ಕಾಣಿಸುವಂತೆ ಹಾಕಿದಾಗ) ಮೊದಲು ಎಲೆಯಿಳಿಸಿದವ ಯಾವ ರಂಗನ್ನಿಳಿಸುತ್ತಾನೋ ಆ ರಂಗಿನ ಎಲೆಗಳನ್ನೇ ಇತರರು ಇಳಿಸಬೇಕು. ಆ ರಂಗಿನ ಎಲೆ ಇಲ್ಲದಿದ್ದರೆ ಬೇರೆ ರಂಗಿನದನ್ನಿಳಿಸಬಹುದು. ಆದರೆ ಆ ರಂಗಿನ ಎಲೆ ಇದ್ದು ಅದನ್ನಿಳಿಸದಿದ್ದರೆ ಅದು ರಂಗು ಚೌರ್ಯ. ಆ ರಂಗಿನಲ್ಲಿ ಹೆಚ್ಚಿನ ಮೌಲ್ಯದ ಎಲೆಯನ್ನು ಇಳಿಸಿದವನಿಗೆ ಆ ಇಳಿತದ (ಸುತ್ತಿನ) ಎಲೆಗಳೆಲ್ಲ ಸೇರುತ್ತವೆ. ಅವು ಆತನ ಪಟ್ಟು. ಆ ಪಟ್ಟಿನ ಎಲೆಗಳಲ್ಲಿ ಎಷ್ಟು ಅಂಕಗಳಿರುತ್ತವೋ ಆತ ಗೆದ್ದಂತೆ ಲೆಕ್ಕ. ಮುಂದೆ ಆತ ತನಗೆ ಯುಕ್ತ ಕಂಡ ಎಲೆಯನ್ನು ತನ್ನ ಕೈಯಿಂದ ಕಳಿಸುತ್ತಾನೆ. ಇತರರು ಅನುಕ್ರಮವಾಗಿ ಎಲೆ ಹಾಕುತ್ತಾರೆ. ಈ ಪಟ್ಟು ಯಾರಿಗೆ ಸೇರುತ್ತದೋ ಅವರದು ಎಲೆ ಇಳಿಸುವ ಸರದಿ. ಹೀಗೆ ಕೈಲಿರುವ ಎಲೆಗಳೆಲ್ಲ ಮುಗಿಯುವ ವರೆಗೂ ಆಟದ ಮುಂದುವರಿಕೆ.



ಎಲೆಗಳನ್ನು ಕಲಸಿ ಹಂಚಿದಾಗ ಯಾರ ಕೈಗೆ ಹೆಚ್ಚು ಅಂಕದ ಎಲೆಗಳು ಬಂದಿರುತ್ತವೋ ಹೆಚ್ಚು ಅಂಕಗಳನ್ನು ಗೆಲ್ಲಬಹುದೆಂದು ಯಾರಿಗೆ ನಂಬಿಕೆಯಿರುತ್ತದೋ ಆತ ತಾನು ಗಳಿಸುವ ಅಂಕಗಳನ್ನು ಸಾರುತ್ತಾನೆ. ಆತ ಸಾರಿದ ಅಂಕಗಳಿಗಿಂತ ಹೆಚ್ಚು ಅಂಕ ಗೆಲ್ಲುವ ಭರವಸೆಯಿದ್ದವರು ಈತನ ಸವಾಲನ್ನು ಎದುರಿಸಬಹುದು. ಹೀಗೆ ಒಬ್ಬೊಬ್ಬರು ತಂತಮ್ಮ ಶಕ್ತಿ, ಅಶಕ್ತಿಗಳನ್ನು ಸಾರಿಕೊಂಡಮೇಲೆ, ಗೆಲ್ಲಲಿರುವ ಅಂಕಗಳ ಪರಮಾವಧಿ ತಲುಪಿರುತ್ತದೆ. ಇಷ್ಟು ಅಂಕ ಗಳಿಸುವುದಾಗಿ ಯಾವಾತ ಹೇಳುತ್ತಾನೋ ಅವನನ್ನು ಸೋಲಿಸಲು ಉಳಿದವರ ಪ್ರಯತ್ನ, ಆಟ ಹೇಳಿದವನ ಕೈಯಲ್ಲಿ ಯಾವುದಾದರೂ ಒಂದು ರಂಗಿನ ಎಲೆಗಳು ಹೆಚ್ಚಾಗಿದ್ದರೆ ಆತ ಆ ರಂಗನ್ನು ತುರುಪು ಎಂದು ಸಾರಬಹುದು. ಆಗ ಇತರ ರಂಗುಗಳ ಎಲೆಗಳನ್ನು ಹೊಡೆದು ಹಾಕುವ ಶಕ್ತಿ ಆ ರಂಗಿಗೆ ಬರುತ್ತದೆ. ಜೋಕರ್ ಎಲೆಗೆ ಸ್ವತಃ ಯಾವ ರಂಗೂ ಇಲ್ಲದಿದ್ದರೂ ತುರುಪು ಯಾವ ರಂಗೋ ಜೋಕರಿಗೂ ಆ ಆಟದಲ್ಲಿ ಅದೇ ರಂಗು. ಸರದಿಯ ಆಟಗಾರರಲ್ಲಿ ಮೊದಲಿನವನ ಬೇರೆ ಯಾವುದಾದರೂ ರಂಗಿನ ಎಲೆಯನ್ನಿಳಿಸಿದಾಗ, ಉಳಿದವರ ಪೈಕಿ ಯಾರಲ್ಲಾದರೂ ಆ ರಂಗಿನ ಎಲೆ ಇಲ್ಲದಿದ್ದರೆ ಆತ ತುರುಪಿನ ಎಲೆ ಹಾಕಿ ಆ ಇಳಿತದ ಎಲೆಗಳನ್ನೆಲ್ಲ ತನ್ನ ಪಟ್ಟಾಗಿ ಮಾಡಿಕೊಳ್ಳಬಹುದು.

ಹೀಗೆ ಆಟ ಸಾಗಿ ಕೈಯ ಎಲೆಗಳೆಲ್ಲ ಮುಗಿದಾಗ ಆಟ ಹೇಳಿದವ ಗಳಿಸುವುದಾಗಿ ಸಾರಿಕೊಂಡ ಅಂಕಗಳನ್ನು ಆತ ಗಳಿಸಿದ್ದಾನೆಯೆ, ಇಲ್ಲವೆ ಎಂಬುದರ ಮೇಲಿಂದ ಆತ ಆಟದಲ್ಲಿ ಗೆದ್ದನೆ, ಸೋತನೆ ಎಂಬುದರಲ್ಲಿ ನಿಷ್ಕರ್ಷೆ. ಆಟದಲ್ಲಿ ತನ್ಮಯತೆ ಬರುವ ಸಲುವಾಗಿ ಪಣ ಒಡ್ಡುವುದೂ ಸಾಮಾನ್ಯ. ಗೆದ್ದವನಿಗೆ ಉಳಿದವರು ಪಣದ ಮೊಬಲಗನ್ನು ಕೊಡಬೇಕು. ಆಟ ಹೇಳಿ ಸೋತವ ಇತರರಿಗೆ ಕೊಡಬೇಕು. ಗೆದ್ದವನ ಲಾಭದ ಪ್ರಮಾಣವನ್ನೂ ಸೋತವನ ನಷ್ಟ ಮಿತಿಯನ್ನೂ ಹೆಚ್ಚಿಸುವ ಉದ್ದೇಶದಿಂದ ಬೇಸ್ತು ಎಂಬ ವಿಧಾನವನ್ನನು ಸರಿಸುವುದೂ ಉಂಟು. ಒಬ್ಬ ಆಟ ಹೇಳಿ ಸೋತರೆ ಅದು ಮೊದಲ ಬೇಸ್ತು. ಮುಂದಿನ ಆಟದಲ್ಲಿ ಗೆಲ್ಲುವ ಸವಾಲು ಹಾಕಿದವನಿಗೆ ಗೆದ್ದರೆ ಬರುವ ಲಾಭವೂ ಸೋತರೆ ತೆರಬೇಕಾದ ದಂಡವೂ ಮೊದಲಿನದಕ್ಕಿಂತ ಹೆಚ್ಚು. ಇವನೂ ಸೋತರೆ ಅದು ಎರಡನೆಯ ಬೇಸ್ತು. ಮುಂದಿನ ಆಟಗಾರನ ಹೊಣೆ ಇನ್ನೂ ಹೆಚ್ಚಿನದು. ಆತ ಗೆದ್ದರೆ ತೆರಬೇಕಾದ ದಂಡ



ಹೆಚ್ಚಿನದಾದ್ದರಿಂದ, ಇತರರು ಆತನಿಗೆ ತೆರಬೇಕಾದ ಶುಲ್ಕವೂ ಹೆಚ್ಚಿನವಾದ್ದರಿಂದ ಗೆಲ್ಲಲು ಆತ ಬಲು ಎಚ್ಚರಿಕೆಯ ಆಟವಾಡುತ್ತಾನೆ; ಆತನನ್ನು ಸೋಲಿಸಲು ಇತರರು ಹೆಚ್ಚಾಗಿ ಶ್ರಮಿಸುತ್ತಾರೆ. ಅವನು ಸೋತರಂತೂ ಅದು ಮೂರನೆಯ ಬೇಸ್ತು. ಅದು ಸೋಲಿನ ಪರಮಾವಧಿ. ಇದು ಈ ಆಟದ ವೈಖರಿ. ಜೀವನದಲ್ಲಿ ಬಲವಾದ ಸೋಲನ್ನನುಭವಿಸಿದವನನ್ನು ಇಸ್ಪೀಟು ಆಟದಲ್ಲಿ ಮೂರನೆಯ ಬೇಸ್ತು ತಿಂದವನಿಗೆ ಹೋಲಿಸುವುದು ಜನಸಾಮಾನ್ಯರಲ್ಲಿ ರೂಢಿ.

ಪೋಕರ್ ಎಂಬುದು ಇನ್ನೊಂದು ಪ್ರಮುಖ ಆಟ. 4 ರಿಂದ 8 ಜನರ ವರೆಗೆ ಈ ಆಟ ಆಡುತ್ತಾರೆ. 4 ಜನರಿರುವಾಗ ಪ್ರತಿಯೊಬ್ಬರಿಗೂ 5 ಎಲೆಗಳನ್ನು ಹಾಕುತ್ತಾರೆ. 4 ರಂಗುಗಳಲ್ಲಿ ಒಂದಕ್ಕೊಂದಕ್ಕೂ 9 ಎಲೆಗಳ ಪ್ರಕಾರ 38 ಎಲೆಗಳನ್ನು ಆರಿಸಲಾಗುತ್ತದೆ. ಆಟಗಾರನ ಕೈಯ ಎಲೆಗಳ ಜೋಡಣೆಗೆ ಅನುಸಾರವಾಗಿ ಆಟದ ಗೆಲುವು. ಒಂದು ಜೊತೆ ಎಲೆಗಳಿಗಿಂತ ಎರಡು ಜೊತೆ ಇದ್ದರೆ ಶ್ರೇಷ್ಠ. ಒಂದೇ ರೀತಿಯ ಮೂರು ಎಲೆಗಳು ಬಂದರೆ ಎರಡು ಜೊತೆಗಳಿಗಿಂತ ಜಾಸ್ತಿ. ಮೂರು ಒಂದೇ ರೀತಿಯ ಎಲೆಗಳು ಮತ್ತು ಒಂದು ಜೊತೆ ಬಂದರೆ (ಉದಾ : ಎರಡು ರಾಣಿ) ಅದು ಫುಲ್‌ಹೌಸ್. 7, 8, 9, 10 ; ಅಥವಾ ಹಾಸು, ರಾಣಿ, ಜೋಕರ್, 10 ಇದ್ದರೆ ಸ್ಟ್ರೇಟ್ (ನೇರ). ಒಂದೇ ರಂಗಿನ ಐದು ಎಲೆಗಳು ಬಂದಿದ್ದರೆ ಕಲರ್ ಅಥವಾ ಬಣ್ಣ. ಒಂದೇ ಬಣ್ಣದ 4 ಎಲೆಗಳು ಒಟ್ಟಿಗೆ ಬಂದಾಗ, ಅಂದರೆ 4 ರಾಣಿ, 4 ಹಾಸು, 4 ರಾಜ ಬಂದರೆ ಆನರ್. ರಾಣಿ, ಗುಲಾಮ, 10, 9, 8 ಇದ್ದರೆ ಸ್ಟ್ರೇಟ್ ಫ್ಲೆಷ್. ಯಾವುದಾದರು ಒಂದು ಜೋಡಣೆಯ ಕ್ರಮದಲ್ಲಿ ಖಾಲಿ ಇರುವ ಸ್ಥಳವನ್ನು ಜೋಕರ್ ತುಂಬುತ್ತದೆ. ಈ ಆಟದಲ್ಲಿ 5 ಹಾಸುಗಳದೇ ಅತ್ಯಂತ ಅಧಿಕಮೌಲ್ಯ. ಭಾರತದ ವಿರಾಮಕೂಟಗಳಲ್ಲಿ ಈ ಆಟ ಹೆಚ್ಚು ಬಳಕೆಯಲ್ಲಿದೆ.

ಭಾರತದಲ್ಲಿ ಪ್ರಚಾರದಲ್ಲಿರುವ ಆಟಗಳಲ್ಲಿ ರಮ್ಮಿ ಇನ್ನೊಂದು. ಇದರಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಎಂದು ಎರಡು ವಿಧ. ಈ ಆಟಕ್ಕೆ ಎರಡು ಕಟ್ಟು ಎಲೆಗಳು ಬೇಕು. ಎಂದರೆ 104ರ ಜೊತೆಗೆ ಎರಡು ಜೋಕರ್. ಈ ಎಲೆಗಳನ್ನು ಸರಿಯಾಗಿ ಕಲಸಿ, ಭಾಗ (ಕಟ್) ಮಾಡಿದ ಅನಂತರ ಪ್ರತಿ ಆಟಗಾರನಿಗೂ 13ರಂತೆ ಎಲೆಗಳನ್ನು ಹಂಚಲಾಗುತ್ತದೆ. ಎಲೆಗಳನ್ನು ಭಾಗಮಾಡಿದ ವ್ಯಕ್ತಿಯೇ ಹಂಚಿಕೆಯಾಗದೆ ಉಳಿದದ್ದರಲ್ಲಿ ಕೊನೆಯ ಎಲೆಯನ್ನು ಜೋಕರ್ ಆಗಿ ತೆಗೆಯುತ್ತಾನೆ. (ಆಟಗಾರರಲ್ಲಿ ಯಾರಾದರೂ ತಮ್ಮ ಕೈಯಲ್ಲಿರುವ ಬೇಡದ ಎಲೆಯನ್ನು ಇಟ್ಟು ಈ ಎಲೆಯನ್ನು ತೆಗೆದುಕೊಳ್ಳಬಹುದು.) ಮಧ್ಯಭಾಗದಿಂದ ಮತ್ತೊಂದು ಎಲೆಯನ್ನೂ ತೆರೆದು (ಓಪನ್) ಹಾಕುತ್ತಾನೆ. (ಉದಾ: ಡಯಮಂಡ್ 8 ತೆರೆದರೆ ಅದರ ವಿರುದ್ಧ ಬಣ್ಣಗಳೆಲ್ಲ ಜೋಕರುಗಳಾಗುತ್ತವೆ.) ಆಠೀನ್ ಗುಲಾಮ ತೆರೆದು ಬಿದ್ದರೆ ಉಳಿದ 7 ಗುಲಾಮಗಳು ಜೋಕರುಗಳಾಗುತ್ತವೆ. ಆಟ ಮುಂದುವರಿಸಲು ಕಡೆಯ ಪಕ್ಷ ಎರಡು ಸ್ಟ್ರೇಟುಗಳಿರಬೇಕು. ಜೊತೆಗೆ ಬೇರೆ ಬೇರೆ ಬಣ್ಣದ 3 ಹಾಜರಿರಬೇಕು. ಕಲಸಿ ಹಂಚಿದ ವ್ಯಕ್ತಿಯ ಎಡಪಕ್ಕದವ ಮೊದಲು ಎಲೆ ಇಳಿಸಿ ತನಗೆ ಬೇಕಾದ ಎಲೆಗಳನ್ನು ಎತ್ತಿಕೊಳ್ಳುತ್ತಾನೆ. ತನಗೆ ಬೇಕಾದ ಎಲೆ ಬಂದು ಆಟವಾದ ಕೂಡಲೆ ಎಲೆಗಳನ್ನು ತೋರಿಸಬಹುದು. ಇದು ರಾಷ್ಟ್ರೀಯ ರಮ್ಮಿ ಆಟ.

ಅಂತಾರಾಷ್ಟ್ರೀಯ ರಮ್ಮಿ ಕೊಂಚ ಬೇರೆ ತೆರ. ಇಲ್ಲಿ ತೆರೆದು ಬಿದ್ದ ಎಲೆಯ ಬಣ್ಣದ ಎಲೆಗಳೇ ಜೋಕರ್‌ಗಳಾಗುತ್ತವೆ. ಈ ಆಟದಲ್ಲಿ ಗೆಲ್ಲಲು ಆಟಗಾರನ ಕೈಯಲ್ಲಿ ಒಂದಾದರೂ ನ್ಯಾಚುರಲ್ ರಮ್ಮಿ ಎಂದರೆ 8, 9, 10 ; 5, 4, 3 ; 3, 2, 4 ಇತ್ಯಾದಿ ಇರಬೇಕು. ಒಂದೇ ಬಣ್ಣದ ಮೂರು ಎಲೆಗಳೂ ಇರಲೇಬೇಕು. ಮಿಕ್ಕೆಲ್ಲ ವಿವರಗಳು ರಾಷ್ಟ್ರೀಯ ರಮ್ಮಿಯಂತೆಯೆ. ಆಡುವವರ ಸಂಖ್ಯೆ ಮತ್ತು ಅನುಕೂಲದ ದೃಷ್ಟಿಯಿಂದ ಈ ಆಟದಲ್ಲಿ ಯುಕ್ತಕಂಡ ಮಾರ್ಪಾಡು ಮಾಡಿಕೊಳ್ಳುವುದೂ ಉಂಟು.

ಈ ಆಟಗಳೇ ಅಲ್ಲದೆ ಪಿಕ್, ರಾಣಿಸಾಲು, ಮೂರೆಲೆ, ಕತ್ತೆ, 108 ಮುಂತಾದ ಆಟಗಳ ಪ್ರಕಾರಗಳೂ ಭಾರತದಲ್ಲಿ ಪ್ರಚಾರದಲ್ಲಿವೆ. ಯಾರ ಸಂಗವೂ ಇಲ್ಲದಾಗ ಒಬ್ಬರೇ ಆಡಿಕೊಳ್ಳಬಹುದಾದ ಸಹನೆಯ ಆಟವೂ ಉಂಟು ಇಸ್ಪೀಟು ಆಟಗಳು ಬೇಸರ ಕಳೆಯುವ ಮನೋರಂಜನೆಯ ಸಾಧನೆಗಳಾಗಿರುವಂತೆಯೇ ಜೂಜುಗಳಾಗಿ ಪರಿಣಮಿಸುವುದೂ ಸಾಧ್ಯ. ಪಣವೊಡ್ಡುವುದೇ ಪ್ರಧಾನವಾಗಿ ಇವು ಜೂಜಿನ ರೂಪ ತಳೆದಾಗ ಸರ್ಕಾರದ ಕಾನೂನು ಅಡ್ಡಿಯಾಗಿ ಬರುತ್ತದೆ. **(ನೋಡಿ– ಜೂಜು)** (ಎಚ್.ಕೆ.ಆರ್.ಜಿ.)

ಇಸ್ಪೀಟು ಆಟ ಪ್ರಪಂಚಾದ್ಯಂತ ಪ್ರಚಲಿತ ಇರುವ ಆಟ. ಈ ಆಟಕ್ಕೆ ಸಂಬಂಧಪಟ್ಟಂತೆ ಪತ್ರಿಕೆಗಳಿವೆ. 'ಪ್ಲೇಯಿಂಗ್ ಕಾರ್ಡ್ ಸೊಸೈಟಿಯ' ಎಂಬ ಇಸ್ಪೀಟಾಟದ ಸಮಾಜಗಳೂ ಇವೆ. ಈ ಸಮಾಜದ ಇಸ್ಪೀಟಿನ ಎಲೆಗಳ ಸಂಗ್ರಹವೂ ಒಂದು ಹವ್ಯಾಸ.

ಮುಂಬೈನಲ್ಲಿರುವ ಕಿಶೋರ್ ಗೋವರ್ಧನ ದಾಸ ಇಸ್ಪೀಟು ಆಟದಲ್ಲಿ ಆಸಕ್ತರು, ಇಸ್ಪೀಟು ಎಲೆಗಳ ಸಂಗ್ರಹದಲ್ಲೂ ಹೆಸರು ಮಾಡಿದ್ದಾರೆ. ಅವರ ಮನೆಯಲ್ಲಿ ಸು. 3000 ಇಸ್ಪೀಟು ಎಲೆಗಳ ಕಟ್ಟುಗಳಿವೆ. ಏಷ್ಯದಲ್ಲೇ ಅತ್ಯಂತ ಹೆಚ್ಚಿನ ಇಸ್ಪೀಟು ಎಲೆಗಳ ಕಟ್ಟನ್ನು ಸಂಗ್ರಹಿಸಿರುವ ವ್ಯಕ್ತಿ ಇವರು. ಈ ಹವ್ಯಾಸ ಅವರನ್ನು ಗಿನ್ನೀಸ್ ದಾಖಲೆಯಲ್ಲೂ ದಾಖಲಾಗಿದೆ. ತಮ್ಮಲ್ಲಿರು ಎಲ್ಲ ಕಟ್ಟುಗಳ ಬಣ್ಣ, ಅವುಗಳ ನಿಖರವಾದ ಇತಿಹಾಸವನ್ನೂ ದಾಖಲು ಮಾಡಿ ಇಟ್ಟಿದ್ದಾರೆ. ದೇಶೀಯ ಇಸ್ಪೀಟ್–ಗಂಜೀಫಾದ ಭಾರಿ ಸಂಗ್ರಹ ಇವರಲ್ಲಿದೆ.*

**ಇಸ್ಫಹಾನ್:** ಮಧ್ಯ ಇರಾನಿನಲ್ಲಿ ಟೆಹರಾನಿಗೆ 32 ಕಿಮೀ ದಕ್ಷಿಣಕ್ಕೂ ಶಿರಾಜ್ ನಗರಕ್ಕೆ 348 ಕಿಮೀ ಉತ್ತರಕ್ಕೂ ಇರುವ ಸುಂದರ ನಗರ. ಸಮುದ್ರಮಟ್ಟಕ್ಕೆ 1067 ಮೀ ಎತ್ತರವಾಗಿರುವುದರಿಂದ ಬಹಳ ಹಿತಕರವಾದ ವಾಯುಗುಣವನ್ನು ಹೊಂದಿದೆ. ಜನಸಂಖ್ಯೆ 12,66,072 (1996). ಧಾರಾಳವಾಗಿ ನೀರು ಸರಬರಾಜು ಇರುವುದರಿಂದ ರಮ್ಯವಾದ ಉದ್ಯಾನಗಳನ್ನೂ ಫಲವತ್ತಾದ ಹೊಲಗದ್ದೆಗಳನ್ನೂ ಕಾಣಬಹುದು. ಜೈನ್‌ದೇಹ್ (ಅರ್ಥ ಜೀವನದಿ) ನದಿ ಊರಿನ ಪಕ್ಕದಲ್ಲೇ ಹರಿಯುತ್ತದೆ. ಹಿಂದೆ, 1051–63ರ ವರೆಗೆ, 1072–92ರವರೆಗೆ 1590–1722ರವರೆಗೆ ಪರ್ಷಿಯದ ರಾಜಧಾನಿಯಾಗಿತ್ತು. 17ನೆಯ ಶತಮಾನದಲ್ಲೇ ಜನಸಂಖ್ಯೆ ಸುಮಾರು ಆರು ಲಕ್ಷವಿತ್ತೆಂದು ತಿಳಿದುಬಂದಿದೆ. ನಗರದ ಮಧ್ಯದಲ್ಲಿ ಸುಲ್ತಾನ ಮೊದಲನೆಯ ಅಬ್ಬಾಸನ ಭವ್ಯ ಅರಮನೆ ಮತ್ತು ಸುಂದರವಾದ ಮಸೀದಿ ಇವೆ. ಇವು ಉನ್ನತಮಟ್ಟದ ಪಾರಸಿ ಕಲಾಕೌಶಲಕ್ಕೂ ವಾಸ್ತುಶಿಲ್ಪಕ್ಕೂ ನಿದರ್ಶನಗಳು, ಇಂಥ ಅನೇಕ ಸುಂದರ ಮಸೀದಿಗಳು ನಗರದ ಬೇರೆ ಕಡೆಗಳಲ್ಲೂ ಇವೆ. ತನ್ನ ಸೈನಿಕರಲ್ಲಿ ಕೆಲವರನ್ನು ಕೊಂದರೆಂಬ ಕಾರಣದಿಂದ ಚೆಂಗೇಸ್‌ಖಾನ್ ಮತ್ತು ತೈಮೂರ್ 1387ರಲ್ಲಿ 70.000 ಪರ್ಷಿಯನ್ ನಾಗರಿಕರನ್ನು ಕೊಲ್ಲಿಸಿದರು. 1723ರಲ್ಲಿ ಘಾಲ್ಜೈ ಆಫ್ಘನ್ನರು 14 ದಿನಗಳ ಕಾಲ ನಡೆಸಿದ ಸಾಮೂಹಿಕ ಕೊಲೆ ಇನ್ನೂ ಭೀಕರವಾಗಿತ್ತು. 1916ರಲ್ಲಿ ಈ ನಗರವನ್ನು ರಷ್ಯನರು ಸ್ವಲ್ಪಕಾಲ ಆಕ್ರಮಿಸಿದ್ದರು. ನಾನಾ ಬಣ್ಣಗಳಿಂದ ರಮ್ಯವಾಗಿ ಅಲಂಕೃತವಾದ ಮನೆಗಳು, ವಿಶಾಲವಾದ ಉಪ್ಪರಿಗೆ ಮೊಗಸಾಲೆಗಳು, ಸಾಲು ಮರಗಳು, ಹೂದೋಟಗಳು ಸುಂದರ ಕಮಾನು ಸೇತುವೆಗಳು–ಈಗ ಅಲ್ಲಲ್ಲೇ ಶಿಥಿಲವಾಗಿದ್ದರೂ – ನಗರಕ್ಕೆ ಆಕರ್ಷಕ ಮೆರುಗು ಕೊಟ್ಟಿವೆ. ಅನೇಕ ಜವಳಿ ಕಾರ್ಖಾನೆಗಳಿವೆ. ಚಿನ್ನ, ಬೆಳ್ಳಿಯ ಸೂಕ್ಷ್ಮತಂತಿಯಿಂದ ಮಾಡುವ ತೆರೆಪುಚಿತ್ರ ಕೆಲಸಕ್ಕೂ ಲೋಹ ಪದಾರ್ಥಗಳ ತಯಾರಿಕೆಗೂ ನಗರ ಪ್ರಸಿದ್ಧಿ ಪಡೆದಿದೆ. ಇತ್ತೀಚೆಗೆ ಉಕ್ಕು ತಯಾರಿಕೆ ಮತ್ತು ತೈಲ ಶುದ್ಧೀಕರಣ ಕೇಂದ್ರಗಳು ಸಹ ಅಭಿವೃದ್ಧಿಗೊಂಡಿವೆ. *

**ಇಸ್ಮಾಯೀಲ್:** ಹಳೆ ಒಡಂಬಡಿಕೆಯ ಪ್ರಕಾರ ಏಬ್ರಹಾಂನ (ಇಬ್ರಾಹೀಂ) ಹಿರಿಯ ಮಗ (ಹೀಬ್ರೂ–ಇಷ್ಮೇಅಲ್). ತಾಯಿ ಹೆಗರ್, ಈಜಿಪ್ಷಿಯನ್ ದಾಸಿ. ಏಬ್ರಹಾಂನ ಮೊದಲ ಪತ್ನಿ ಸಾರಾ ಅಸೂಯೆಯಿಂದ ನೀರಿಲ್ಲದ ಸ್ಥಳದಲ್ಲಿ ಬಿಡುವಂತೆ ನೌಕರರಿಗೆ

ನಿರ್ದೇಶಿಸಿ ತಾಯಿಮಗನನ್ನು ಮನೆಯಿಂದ ಹೊರಗಟ್ಟುತ್ತಾಳೆ. ನೌಕರರು ಅವರನ್ನು ಅರೇಬಿಯದಲ್ಲಿ ತಂದು ಬಿಡುತ್ತಾರೆ. ನೀರಿಗಾಗಿ ಪರದಾಡುವಾಗ ಇಸ್ಮಾಯೀಲನ ಕಾಲಿನ ಬಳಿ ಚಿಲುಮೆಯೊಂದು ಚಿಮ್ಮುತ್ತದೆ. ಅದೇ ಇಂದಿನ ಜಂಜಂ ಚಿಲುಮೆ. ಅವರಿದ್ದ ಸ್ಥಳವೇ ಮುಂದೆ ಮೆಕ್ಕ ಪಟ್ಟಣವಾಗಿ ಬೆಳೆಯಿತು. ಅನಂತರ ಇಸ್ಮಾಯೀಲ್ ಅರಬ್ಬೀಯರ ಮೂಲಪುರುಷನೆಂದೂ ಒಬ್ಬ ಪ್ರವಾದಿಯೆಂದೂ ಪ್ರಖ್ಯಾತನಾದ. ಚಿಕ್ಕವನಿದ್ದಾಗ, ಏಬ್ರಹಾಂನ ಕನಸಿನಲ್ಲಿ ದೇವರು ಅವನ ಮೆಚ್ಚಿನ ವಸ್ತುವನ್ನು ಬಲಿ ಕೇಳಿದನಂತೆ. ಅದರಂತೆ ಏಬ್ರಹಾಂ ತನ್ನ ಮೆಚ್ಚಿನ ಮಗ ಇಸ್ಮಾಯೀಲನನ್ನೇ ಬಲಿ ಕೊಡಲು ಸಿದ್ಧನಾದ. ಭಕ್ತಿಗೆ ಮೆಚ್ಚಿ ದೇವರು ಬಲಿಸ್ಥಾನದಲ್ಲಿ ಇಸ್ಮಾಯೀಲನ ಬದಲಾಗಿ ಒಂದು ಕುರಿಯನ್ನು ತಂದಿಟ್ಟ. ಏಬ್ರಹಾಂ ಅದನ್ನೇ ಬಲಿ ಕೊಟ್ಟ. ಇದನ್ನೇ ಸಂಕೇತವಾಗಿಟ್ಟುಕೊಂಡು ಮುಂದೆ ಮುಸಲ್ಮಾನರಲ್ಲಿ ಬಕ್ರೀದ್ ಹಬ್ಬ ಬೆಳೆದು ಅಂದು ಕುರಿ, ಒಂಟೆಗಳನ್ನು ಬಲಿಕೊಡುವ ಸಂಪ್ರದಾಯ ಬೆಳೆದು ಬಂತು. ಏಬ್ರಹಾಂ ಮತ್ತು ಇಸ್ಮಾಯೀಲ್ ಮೆಕ್ಕದಲ್ಲಿರುವ ಪವಿತ್ರ ಕಾಬಾವನ್ನು (ಕಪ್ಪು ಕಲ್ಲಿನ ಕಟ್ಟಡ) ಕಟ್ಟಿದರು. ಇದರ ದಿಕ್ಕಿನಲ್ಲಿಯೇ ಪ್ರಪಂಚದ ಎಲ್ಲ ಮುಸಲ್ಮಾನರೂ ನಮಾಜನ್ನು ಮಾಡುವುದು. (ಎಸ್.ಎ.ಟಿ.ಕೆ.)

**ಇಸ್ಮಾಯಿಲ್, ಮಿರ್ಜಾ ಮಹಮ್ಮದ್:** 1883–1959. ಪ್ರಸಿದ್ಧ ಆಡಳಿತಗಾರರು, ಮೈಸೂರು ಸಂಸ್ಥಾನದ ದಿವಾನರು (1926–41).

ಪರ್ಷಿಯಾದಿಂದ ಬಂದು ಬೆಂಗಳೂರಿನಲ್ಲಿ ನೆಲೆಸಿದ್ದ ಗಣ್ಯ ಕುಟುಂಬವೊಂದರಲ್ಲಿ 1883 ಅಕ್ಟೋಬರ್ 20ರಂದು ಜನಿಸಿದರು. ಬಾಲ್ಯ ವಿದ್ಯಾಭ್ಯಾಸ ಬೆಂಗಳೂರಿನ ಸೇಂಟ್ ಪ್ಯಾಟ್ರಿಕ್ ಶಾಲೆ ಮತ್ತು ವೆಸ್ಲಿಯನ್ ಶಾಲೆಗಳಲ್ಲಿ. ಅನಂತರ ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿದ (1901) ವಿಶೇಷ ಶಾಲೆಯಲ್ಲಿ ಅವರ ಸಹಪಾಠಿಗಳಾಗಿದ್ದು, ಮುಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಪದವೀಧರರಾಗಿ (1905), ಅದೇ ವರ್ಷ ಮೈಸೂರು ಸರ್ಕಾರದ ಪೊಲೀಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಸೂಪರಿಟೆಂಡೆಂಟ್ ಆಗಿ ನೇಮಕವಾದರು. ಮಹಾರಾಜರ ಉಪಕಾರ್ಯದರ್ಶಿ (1908), ಹುಜೂರ್ ಕಾರ್ಯದರ್ಶಿ (1914), ಆಪ್ತಕಾರ್ಯದರ್ಶಿ (1923) ಹುದ್ದೆಗಳನ್ನು ವಹಿಸಿಕೊಂಡು 1926ರಲ್ಲಿ ಸಂಸ್ಥಾನದ ದಿವಾನರಾದರು.

ಇವರು ದಿವಾನರಾಗಿದ್ದ ಹದಿನೈದು ವರ್ಷಗಳಲ್ಲಿ (1926–41) ಸರ್ ಎಂ.ವಿಶ್ವೇಶ್ವರಯ್ಯನವರು ಹಾಕಿದ್ದ ತಳಹದಿಯ ಮೇಲೆ ರಾಜ್ಯದ ಸರ್ವತೋಮುಖ ಬೆಳವಣಿಗೆಯನ್ನು ಸಾಧಿಸಲು ಯತ್ನಿಸಿದರು. ಮೈಸೂರು ಸಂಸ್ಥಾನ ಬ್ರಿಟಿಷರಿಗೆ ಕೊಡಬೇಕಾಗಿದ್ದ ಕಪ್ಪವನ್ನು 35 ಲಕ್ಷದಿಂದ 10½ ಲಕ್ಷಕ್ಕೆ ಇಳಿಸಿದರು (1928). ಮಂಡ್ಯ, ಮಳವಳ್ಳಿ ಮತ್ತು ತಿರುಮಕೂಡಲು ನರಸೀಪುರ ತಾಲ್ಲೂಕುಗಳಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುವ ಇರ್ವಿನ್ ನಾಲೆ (ಈಗಿನ ವಿಶ್ವೇಶ್ವರಯ್ಯ ನಾಲೆ) ನಿರ್ಮಾಣ ಮೊದಲಾದ ಕಾರ್ಯಗಳಿಂದ ಇವರ ಆಡಳಿತ ಕಾಲದಲ್ಲಿ 1,20,000 ಎಕರೆ ಭೂಮಿ ನೀರಾವರಿ ವ್ಯವಸಾಯಕ್ಕೆ ಬಂದಿತು. ಜೋಗ್ ಮತ್ತು ಶಿಂಷಾಗಳಲ್ಲಿ ವಿದ್ಯುದುತ್ಪಾದನಾ ಸ್ಥಾವರಗಳನ್ನು ಸ್ಥಾಪಿಸಿದ್ದಲ್ಲದೆ, ಗ್ರಾಮಗಳಿಗೂ ವಿದ್ಯುತ್ ಒದಗಿಸುವ ಯೋಜನೆಯನ್ನು ಇಡೀ ಭಾರತದಲ್ಲೇ ಮೊದಲು ಈ ಸಂಸ್ಥಾನದಲ್ಲಿ ಜಾರಿಗೆ ತಂದರು. ಭದ್ರಾವತಿಯಲ್ಲಿ ಕಾಗದ ಮತ್ತು ಸಿಮೆಂಟ್ ಕಾರ್ಖಾನೆಗಳು, ಬೆಂಗಳೂರಿನಲ್ಲಿ ಪಿಂಗಾಣಿ ಮತ್ತು ವಿಮಾನ ಕಾರ್ಖಾನೆಗಳು, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಬೆಳಗೊಳದಲ್ಲಿ ರಾಸಾಯನಿಕ ಮತ್ತು ಗೊಬ್ಬರದ ಕಾರ್ಖಾನೆ, ಶಿವಮೊಗ್ಗದಲ್ಲಿ ಬೆಂಕಿಪೆಟ್ಟಿಗೆ ಕಾರ್ಖಾನೆ ಇತ್ಯಾದಿಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಿ ರಾಜ್ಯದ ಔದ್ಯಮಿಕ ಪ್ರಗತಿಗೆ ಕಾರಣರಾದರು. ಗ್ರಾಮಕೈಗಾರಿಕೆಯನ್ನು ಉತ್ತಮಪಡಿಸಲು ಇವರು ಶ್ರಮಿಸಿದರು. ರೇಷ್ಮೆ ಕೈಗಾರಿಕೆಗೂ ಗಮನವಿತ್ತರು. ಮೈಸೂರಿನ ಉತ್ಪನ್ನಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆ ಪಡೆಯುವ ಸಲುವಾಗಿ ಲಂಡನ್ನಿನಲ್ಲಿ ಒಬ್ಬ ಟ್ರೇಡ್ ಕಮಿಷನರನ್ನು ನೇಮಿಸಿದರು. ಬೆಂಗಳೂರು ಮತ್ತು ಮೈಸೂರು ನಗರಗಳನ್ನು ಸುಂದರಗೊಳಿಸಿದ್ದಲ್ಲದೆ, ಕೃಷ್ಣರಾಜಸಾಗರ ಜಲಾಶಯದ ಹಿಂಬದಿಯಲ್ಲಿ ಪ್ರಸಿದ್ಧ ಬೃಂದಾವನವನ್ನು ನಿರ್ಮಿಸಲು ಮಿರ್ಜಾರವರೇ ಕಾರಣ. ಗಾಂಧೀಜೀಯವರಲ್ಲಿ ಗೌರವವಿದ್ದ ಇವರು ಅವರನ್ನು 1927ರಲ್ಲಿ ಮೈಸೂರಿಗೆ ಆಹ್ವಾನಿಸಿ ಕೆಲವು ಕಾಲ ಆರೋಗ್ಯ ಸುಧಾರಣೆಗಾಗಿ ನಂದಿಬೆಟ್ಟದಲ್ಲಿ ತಂಗುವಂತೆ ಮಾಡಿದ್ದರು. ಮಿರ್ಜಾರವರು ಲಂಡನ್ನಿನಲ್ಲಿ ನಡೆದ (1930–32) ಮೂರು ದುಂಡುಮೇಜಿನ ಪರಿಷತ್ತುಗಳಲ್ಲೂ ದಕ್ಷಿಣ ಭಾರತದ ದೇಶಿ ರಾಜ್ಯಗಳ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಭಾರತದ ಭಾವೀ ರಾಜ್ಯ ಘಟನೆಯಲ್ಲಿ ದೇಶಿ ರಾಜ್ಯಗಳ ಮತ್ತು ಬ್ರಿಟಿಷ್ ಭಾರತದ ಪ್ರಾಂತ್ಯಗಳ ಸಂಯುಕ್ತ ವ್ಯವಸ್ಥೆಯ ಅಭಿಪ್ರಾಯವನ್ನು ಸ್ಪಷ್ಟೀಕರಿಸಿದರು. ಇವರ ಕಾಲದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮೈಸೂರು ರಾಜ್ಯದಲ್ಲೂ ಬಿರುಸಾಗಿ ನಡೆದು ಸರ್ಕಾರಕ್ಕೂ ಜನತೆಗೂ ನಡುವೆ ಅನೇಕ ಘರ್ಷಣೆಗಳುಂಟಾದವು. ನಾಲ್ವಡಿ ಕೃಷ್ಣರಾಜ ಒಡೆಯರ್ ಅನಂತರ ಜಯಚಾಮರಾಜ ಒಡೆಯರ್ ಅವರು 1940ರಲ್ಲಿ ಸಿಂಹಾಸನಕ್ಕೆ ಬಂದಮೇಲೂ ಕೆಲಕಾಲ ದಿವಾನರಾಗಿದ್ದು 1941ರ ಮೇ ತಿಂಗಳಲ್ಲಿ ವಿಶ್ರಾಂತಿ ಪಡೆದರು.

ಮೈಸೂರಿನಿಂದ ನಿವೃತ್ತರಾದ ಮೇಲೆ ಜಯಪುರದಲ್ಲಿ ಪ್ರಧಾನಮಂತ್ರಿಯಾಗಿ (1942–46) ಆ ನಗರದ ಸೌಂದರ್ಯವರ್ಧನೆ, ರಾಜಸ್ಥಾನ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ಆ ದೇಶದ ಸಂವಿಧಾನದ ಹಲವು ಬದಲಾವಣೆಗಳಿಗೆ ಕಾರಣರಾದರು. ಅನಂತರ 1946ರ ಆಗಸ್ಟ್‌ನಿಂದ 1947ರ ಮೇ ವರೆಗೆ ಹೈದರಾಬಾದ್ ಸಂಸ್ಥಾನದ ಪ್ರಧಾನ ಮಂತ್ರಿಯಾಗಿದ್ದರು. ನಿಷ್ಠಾವಂತ ಅಧಿಕಾರಿಯೆಂದು ಹೆಸರುಗಳಿಸಿದ್ದ ಇವರಿಗೆ ಬ್ರಿಟಿಷ್ ಸಾರ್ವಭೌಮರಿಂದ 1930ರಲ್ಲಿ ಕೆ.ಸಿ.ಐ.ಇ. ಪ್ರಶಸ್ತಿ ದೊರಕಿತು. ಮಿರ್ಜಾರವರು 1959ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. (ಬಿ.ಎಸ್.ಎ.)

**ಇಸ್ಮಾಯ್ಲಿಯ:** ಈಜಿಪ್ಟಿನಲ್ಲಿ ಸೂಯೆಜ್ ಕಾಲುವೆಯ ದಡದ ಮೇಲಿರುವ ಒಂದು ಪಟ್ಟಣ. ಮೆಡಿಟರೇನಿಯನ್ ಸಮುದ್ರ ತೀರದಿಂದ ಮತ್ತು ಕೆಂಪುಸಮುದ್ರದಿಂದ 80 ಕಿಮೀ ಮತ್ತು ಕೈರೋನಗರದಿಂದ ಈಶಾನ್ಯಕ್ಕೆ 149 ಕಿಮೀ ದೂರದಲ್ಲಿದೆ. ಜನಸಂಖ್ಯೆ ಸು. 1 ಲಕ್ಷ. ಪೋರ್ಟ್ ಸೈದ್ ಮತ್ತು ಸೂಯೆಜ್ ನಗರಗಳಿಗೆ ಸಿಹಿ ನೀರಿನ್ನೊಯ್ಯುವ ಕಾಲುವೆ ಇದರ ಪಕ್ಕದಲ್ಲೇ ಹರಿಯುತ್ತದೆ; ಕೈರೋ ನಗರದಿಂದ ಆ ಎರಡು ನಗರಗಳಿಗೆ ಹೋಗುವ ರೈಲ್ವೆ ಮಾರ್ಗದಲ್ಲಿದೆ. ಸೂಯೆಜ್ ಕಾಲುವೆಯ ನಿರ್ಮಾಣಕ್ಕೆ ಅನುಕೂಲವಾಗಲೆಂದು ಈ ನಗರವನ್ನು 1863ರಲ್ಲಿ ಕಟ್ಟಿದರು; ಖೇಡಿವ್ (ತುರ್ಕಿ ಸರಕಾರದ ರಾಜಪ್ರತಿನಿಧಿ) ಇಸ್ಮಾಯಿಲ್‌ನ ಹೆಸರನ್ನಿಟ್ಟರು. ಇದು ಆಧುನಿಕ ನಗರನಿರ್ಮಾಣಕ್ಕನುಸಾರವಾಗಿ ಕಟ್ಟಿರುವ ಊರು. ಸರಳ ಚೌಕಟ್ಟಿನ ನಕ್ಷೆಗನುಸಾರವಾಗಿ ನಿರ್ಮಿತವಾಗಿ ಅನೇಕ ಚೌಕಗಳನ್ನೂ ಸಾಲು ಮರಗಳನ್ನು ಉದ್ಯಾನಗಳನ್ನೂ ಉನ್ನತ ಸೌಧಗಳನ್ನೂ ಹೊಂದಿರುವ ಸುಂದರ ನಗರ. ಸೂಯೆಜ್ ಕಾಲುವೆಯಲ್ಲಿ ಹಡಗು ಚಲನೆಯನ್ನು ನಿಯಂತ್ರಿಸುವ ಭಾರಿ ಕಚೇರಿಯೂ ಕೆಲಸಗಾರರ ವಸತಿಗೃಹಗಳೂ ಸಮಾಜ ಕಲ್ಯಾಣಕ್ಕೆ ಬೇಕಾದ ಇತರ ಅನುಕೂಲತೆಗಳೂ ಇವೆ. ಆಧುನಿಕ ವೈದ್ಯವಿಜ್ಞಾನಕ್ಕನುಸಾರವಾಗಿ ಮಲೇರಿಯ ನಿರ್ಮೂಲವನ್ನು ಮೊತ್ತಮೊದಲು ನಡೆಸಿದ್ದು ಇಲ್ಲಿ. *

**ಇಸ್ರೇಲ್:** ಬೈಬಲ್ಲಿನ ಕಾಲದಲ್ಲಿ ಯಹೂದಿ ಜನಸಮುದಾಯದ ಹೆಸರಾಗಿದ್ದು ಮುಂದೆ ಹೀಬ್ರು ರಾಜ್ಯಕ್ಕೂ ಇದೇ ಅಂಕಿತವಾಯಿತು. ಈಗ ನೈರುತ್ಯ ಏಷ್ಯದಲ್ಲಿರುವ ಒಂದು ಗಣರಾಜ್ಯ. 1948ರ ಮೇ 15 ರಂದು ಅಸ್ತಿತ್ವಕ್ಕೆ ಬಂದಿತು. ಉತ್ತರದಲ್ಲಿ ಲೆಬನಾನ್, ಪೂರ್ವಕ್ಕೆ ಸಿರಿಯ ಮತ್ತು ಜೋರ್ಡನ್, ದಕ್ಷಿಣಕ್ಕೆ ಸೌದಿ ಅರೇಬಿಯ, ಪಶ್ಚಿಮಕ್ಕೆ ಈಜಿಪ್ಟ್ ಮತ್ತು ಮೆಡಿಟರೇನಿಯನ್ ಸಮುದ್ರಗಳಿವೆ. $29^0.30'$ ದಿಂದ $33^0.15'$ ಉತ್ತರ ಅಕ್ಷಾಂಶದವರೆಗೂ ಮತ್ತು $34^0.15'$ ಪೂರ್ವ ರೇಖಾಂಶದಿಂದ $35^0.41'$ ಪೂರ್ವ ರೇಖಾಂಶದವರೆಗೂ ಹರಡಿದೆ. ವಿಸ್ತೀರ್ಣ 20770 ಚ.ಕಿಮೀ. ಜನಸಂಖ್ಯೆ 7.2 ಮಿಲಿಯನ್ (2002). ಇದರಲ್ಲಿ 4/5 ಜನರು ಯಹೂದಿಯರು, 1/4 ಅರಬ್ಬಿಯನ್ನರು. ಭಾಷೆ ಹೀಬ್ರು ಮತ್ತು ಅರೇಬಿಕ್. ಇಲ್ಲಿ ಯಹೂದಿ, ಇಸ್ಲಾಂ, ಮತ್ತು ಕ್ರಿಶ್ಚಿಯನ್ ಧರ್ಮದ ಜನರಿದ್ದಾರೆ. ರಾಜಧಾನಿ ಜೆರೂಸಲೆಂ. ಜನಸಂಖ್ಯೆ 7,32,100 (2006).


ಜೆರೂಸಲೆಂನ ಒಂದು ಪಕ್ಷಿನೋಟ

**ಮೇಲ್ಮೈ ಲಕ್ಷಣ:** ಇಲ್ಲಿ ನಾಲ್ಕು ಪ್ರಮುಖ ಭೂ ಮೇಲ್ಮೈ ಸ್ವರೂಪಗಳು ಕಂಡುಬರುತ್ತವೆ. ಅವುಗಳೆಂದರೆ ಪಶ್ಚಿಮದಲ್ಲಿರುವ ಮೆಡಿಟರೇನಿಯನ್ ಕರಾವಳಿ ಮೈದಾನ, ಉತ್ತರದ

ಅಂಚಿನಿಂದ ಮಧ್ಯ ಭಾಗದವರೆಗೆ ಇರುವ ಬೆಟ್ಟಗಳ ಪ್ರದೇಶ, ಪೂರ್ವಕ್ಕಿರುವ ಜೋರ್ಡಾನ್ ನದಿಯ ಸೀಳು ಕಣಿವೆ ಪ್ರದೇಶ ಮತ್ತು ದಕ್ಷಿಣದಲ್ಲಿ ನೆಗೆವ್. ಇದು ಶುಷ್ಕ ಪ್ರದೇಶ. ಇದರ ವಾಯವ್ಯ ಭಾಗದಲ್ಲಿ ಮರಳುಕಲ್ಲು ಭೂಮಿಯಿದೆ. ಉತ್ತರದ ಗ್ಯಾಲಿಲೀ ಬೆಟ್ಟಗಳೇ ಇಸ್ರೇಲಿನಲ್ಲಿ ಅತ್ಯುನ್ನತ ಪ್ರದೇಶ. ಶಿಖರಗಳ ಪೈಕಿ ಅತ್ಯಂತ ಎತ್ತರವಾದುದ್ದು ಮೆರಾನ್ (1208 ಮೀ).




ಜೋರ್ಡಾನ್ ಕಣಿವೆ ಉತ್ತರ ಭಾಗ ಸಮುದ್ರಮಟ್ಟಕ್ಕಿಂತ 1210 ಮೀ ಎತ್ತರ. ಆದರೆ ಗ್ಯಾಲಿಲೀ ಕಣಿವೆಯು ಸಮುದ್ರದ ಬಳಿ 304 ಮೀ ತಗ್ಗಾಗಿದೆ. ಮೃತ್ಯ ಸಮುದ್ರದ ಮಟ್ಟ ಮೆಡಿಟರೇನಿಯನ್ ಸಮುದ್ರಮಟ್ಟಕ್ಕಿಂತ 399 ಮೀ ತಗ್ಗಾಗಿದೆ. ಅಕಾಬ ಖಾರಿಯವರೆಗೂ ಸೀಳು ಕಣಿವೆ ಹಬ್ಬಿದೆ. ಜೋರ್ಡಾನ್ ನದಿ ಇಸ್ರೇಲ್‌ನ ಅತ್ಯಂತ ಪ್ರಮುಖ ನದಿಯಾಗಿದ್ದು ಸು. 200 ಕಿಮೀ ಉದ್ದವಾಗಿದೆ. ಇದರ ಪ್ರಮುಖ ಉಪನದಿ ಯಾರ್ಮುಕ್ ಇತರ ನದಿ ಕಣಿವೆಗಳು ಮಳೆ ಹೊರತು ಉಳಿದ ಕಾಲದಲ್ಲಿ ಶುಷ್ಕವಾಗಿರುತ್ತವೆ. ಗ್ಯಾಲಿಲೀ ಸಮುದ್ರದ ನೀರು ತಿಳಿಯಾಗಿದ್ದು, ಮೃತ್ಯು ಸಮುದ್ರದ ನೀರು ಸಾಗರದ ನೀರಿಗಿಂತಲೂ ಉಪ್ಪಾಗಿರುತ್ತದೆ. ಇದಕ್ಕೆ ಅಲ್ಲಿನ ನೀರು ಹೆಚ್ಚು ಆವಿಯಾಗುವುದೆ ಕಾರಣ. ಆದ್ದರಿಂದ ಆ ಸಮುದ್ರದ ನೀರಿನ ಲವಣ ಸಾಂದ್ರೀಕರಣ ಸಾಗರದ ಸರಾಸರಿಗಿಂತ ಎಂಟು ಪಟ್ಟು ಹೆಚ್ಚು.

ಕಫರ್ ಬರಮ್‌ನಲ್ಲಿರುವ ಪ್ರಾಚೀನ ಯೆಹೂದ್ಯ ಆರಾಧನಾ ಮಂದಿರ

ಇಸ್ರೇಲ್‌ನ ಉತ್ತರಭಾಗದಲ್ಲಿ ಮೆಡಿಟರೇನಿಯನ್ ಮತ್ತು ದಕ್ಷಿಣದಲ್ಲಿ ಮರುಭೂಮಿ ವಾಯುಗುಣ ಕಂಡುಬರುತ್ತದೆ. ಬೇಸಗೆಯಲ್ಲಿ ನಿರಭ್ರ ಆಕಾಶವಿದ್ದು ಮಳೆ ರಹಿತವಾಗಿರುತ್ತದೆ. ಚಳಿಗಾಲದಲ್ಲಿ ಉತ್ತರ ಭಾಗಕ್ಕೆ ಸಾಧಾರಣ ಸರಾಸರಿ 70 ಸೆಂಮೀ ಮಳೆಯಾಗುತ್ತದೆ. ಅಕ್ಟೋಬರ್‌ನಿಂದ ಮಾರ್ಚಿಯವರೆಗೆ ಮಳೆಗಾಲ. ಮಳೆಯು ದಕ್ಷಿಣದ ಕಡೆಗೆ ತೀವ್ರವಾಗಿ ಕಡಿಮೆಯಾಗುತ್ತದೆ. ಬಿರ್‌ಶಿಬಾ ಮತ್ತು ಗಾಜ಼ಾದಿಂದಾಚೆಗೆ ಮರುಭೂಮಿ ಪರಿಸ್ಥಿತಿ ವಿಶೇಷವಾಗಿ ಕಂಡುಬರುತ್ತದೆ.

ಜುಲೈನಲ್ಲಿ ಸರಾಸರಿ ಉಷ್ಣಾಂಶ $20^0$ಸೆ. ಚಳಿಗಾಲ ತಂಪಾಗಿದ್ದು ತೀರ ಪ್ರದೇಶದಲ್ಲಿ $14^0$ಸೆ. ಮತ್ತು ಪರ್ವತಗಳಲ್ಲಿ $9^0$ಸೆ. ಇರುತ್ತದೆ. ಮೃತ್ಯು ಸಮುದ್ರ ಪ್ರದೇಶ ನೈಋತ್ಯ ಏಷ್ಯದಲ್ಲೇ ಅತಿ ಹೆಚ್ಚು ಉಷ್ಣಾಂಶಭರಿತ ($49^0$ಸೆ.) ಪ್ರದೇಶವಾಗಿದೆ. ಖಮ್‌ಸಿನ್ ಉಷ್ಣಭರಿತ, ಶುಷ್ಕ ಹಾಗೂ ಧೂಳಿನಿಂದ ಕೂಡಿದ ಮಾರುತ ವಸಂತ ಮತ್ತು ಶರತ್ ಕಾಲದಲ್ಲಿ ಮರುಭೂಮಿಯಿಂದ ಪೂರ್ವದ ಕಡೆಗೆ ಬೀಸುತ್ತದೆ.

ಇಸ್ರೇಲಿನ ರಾಜಧಾನಿ ಜೆರೋಸಲೆಂ

ಇಲ್ಲಿನ ಸ್ವಾಭಾವಿಕ ಸಸ್ಯವರ್ಗಗಳೆಲ್ಲ ಅದೃಶ್ಯವಾಗಿವೆ. ಗ್ಯಾಲಿಲೀ ಮತ್ತು ಷರಾನ್‌ಗಳಲ್ಲಿ ಅಲ್ಲಲ್ಲಿ ಒಂಟೊಂಟಿಯಾಗಿ ಓಕ್ ಮರಗಳಿವೆ. ಇತ್ತೀಚೆಗೆ ಎತ್ತರದ ಭಾಗಗಳಲ್ಲಿ ಮಣ್ಣು ಮತ್ತು ಅಂತರ್ಜಲವನ್ನು ಸಂರಕ್ಷಿಸುವುದಕ್ಕಾಗಿ ಹೊಸದಾಗಿ ಪೈನ್ ಮರಗಳ ಅರಣ್ಯವನ್ನು ಬೆಳೆಸಲಾಗಿದೆ. ಪ್ರಾಣಿ ಸಂರಕ್ಷಣೆ ಮತ್ತು ಸಂರಕ್ಷಣಾ ಕಾನೂನುಗಳಿಂದ ಪ್ರಾಣಿಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಲ್ಲಿ ಸು. 100 ಜಾತಿಯ ಪ್ರಾಣಿಗಳು, 400 ರೀತಿಯ ಪಕ್ಷಿಗಳು ಕಂಡುಬರುತ್ತವೆ. ಮುಖ್ಯ ಪ್ರಾಣಿಗಳೆಂದರೆ ತೋಳ, ಮುಂಗುಸಿ, ನರಿ, ನೀರುನಾಯಿ, ಕತ್ತೆಕಿರುಬ ಮತ್ತು ಮುಳ್ಳುಹಂದಿ.

**ಆರ್ಥಿಕ ವ್ಯವಸ್ಥೆ:** ಇಸ್ರೇಲಿನ ಆರ್ಥಿಕ ಚಟುವಟಿಕೆ ಪ್ರಾರಂಭದಿಂದಲೂ ಎರಡು ಸಮಸ್ಯೆಗಳನ್ನು ಎದುರಿಸುತ್ತ ಬಂದಿದೆ. ಮೊದಲನೆಯದು ಸತತವಾದ ಯುದ್ಧಭಯ. ಎರಡನೆಯದು ಹೆಚ್ಚುತ್ತಿರುವ ವಲಸೆಗಾರರು. ಇಂತಹ ಕಠಿಣ ಪರಿಸ್ಥಿತಿಯಲ್ಲೂ ಈ ಸಣ್ಣ ರಾಷ್ಟ್ರ ಸಾಧಿಸುತ್ತಿರುವ ಆರ್ಥಿಕ ಪ್ರಗತಿ ಗಮನಾರ್ಹ. ಕೃಷಿ, ಗಣಿಗಾರಿಕೆ ಹಾಗೂ ಕೈಗಾರಿಕೆಗಳು ಇಲ್ಲಿನ ಆರ್ಥಿಕ ಚಟುವಟಿಕೆಗಳು. ದೇಶದ ವಿಸ್ತೀರ್ಣದ ಶೇ. 20 ಭಾಗ ಭೂಮಿಯಲ್ಲಿ

ಇಸ್ರೇಲ್‌ನ ಉಲ್ಲೇಖವಿರುವ ಮೆರೆಪ್ತಹ್ ಶಾಸನ

ಬೇಸಾಯ ಕಂಡುಬರುತ್ತದೆ. ಇಲ್ಲಿನ ಮುಖ್ಯ ಬೆಳೆಗಳೆಂದರೆ ಗೋದಿ, ಬಾರ್ಲಿ, ಹತ್ತಿ, ಹೊಗೆಸೊಪ್ಪು, ಬಿಟ್‌ರೂಟ್, ನೆಲಗಡಲೆ ಮತ್ತು ಹಣ್ಣುಗಳು. ಇಲ್ಲಿ ಬೆಳೆಯುವ ಪ್ರಮುಖ ಹಣ್ಣುಗಳೆಂದರೆ ಆಲಿವ್, ದ್ರಾಕ್ಷಿ, ಗೊಡಂಬಿ ಮತ್ತು ಕಿತ್ತಳೆ ವಿವಿಧ ತರಕಾರಿ ಮತ್ತು ಹೂವು. ಜಫ್ಫ಼ ಕಿತ್ತಳೆ ಮತ್ತು ತರಕಾರಿಗಳು ಇಲ್ಲಿನ ರಫ್ತಾಗುವ ಪ್ರಮುಖ ಸರಕಾಗಿದೆ. ಕಬ್ಬಿಣ, ಪೊಟಾಷ್, ಬ್ರೊಮೈನ್, ಅಭ್ರಕ, ಗಂಧಕ, ಕಾಸ್ಟಿಕ್ ಸೋಡ, ತಾಮ್ರ, ಜಿಪ್ಸಮ್ ಮತ್ತು ಪೆಟ್ರೋಲ್ ಇಲ್ಲಿನ ಮುಖ್ಯ ಖನಿಜಗಳು. ಇಲ್ಲಿ ದೊರೆಯುವ ಪೆಟ್ರೋಲ್ ಸ್ಥಳೀಯ ಬಳಕೆಗೆ ಸಾಲದೆ ಆಮದು ಮಾಡಿಕೊಳ್ಳಲಾಗುವುದು. ಇಸ್ರೇಲ್ ನೈಋತ್ಯ ಏಷ್ಯದಲ್ಲಿ ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿರುವ ಒಂದು ರಾಷ್ಟ್ರವಾಗಿದೆ. ಟೆಲ್‌ಅವಿವ್ ಮತ್ತು ಹೈಫ ಇಸ್ರೇಲ್‌ನ ಪ್ರಮುಖ ಕೈಗಾರಿಕಾ ಕೇಂದ್ರಗಳು. ಪ್ರಮುಖ ಕೈಗಾರಿಕೆಗಳೆಂದರೆ ಜವಳಿ, ಆಹಾರ ಸಂಸ್ಕರಣೆ, ರಾಸಾಯನಿಕ, ರಸಗೊಬ್ಬರ, ಯಂತ್ರೋಪಕರಣಗಳು, ವಿದ್ಯುತ್ ಉಪಕರಣಗಳು, ಆಭರಣಗಳು ಮತ್ತು ವಜ್ರದ ಕತ್ತರಿ ಸಾಣೆ.

ಉತ್ತಮ ಸಾರಿಗೆ ವ್ಯವಸ್ಥೆ ಹೊಂದಿದೆ. ರೈಲು ಮತ್ತು ರಸ್ತೆ ಸಾರಿಗೆ ಸಾಕಷ್ಟು ಕಂಡುಬರುತ್ತದೆ. ರೈಲು ಮಾರ್ಗಗಳು ಕರಾವಳಿ ಪ್ರದೇಶವನ್ನು ಒಳನಾಡು ಪ್ರದೇಶಗಳ ಜೊತೆಗೆ ಸಂಪರ್ಕಿಸುತ್ತವೆ. ಪ್ರಮುಖ ರೈಲು ನಿಲ್ದಾಣಗಳೆಂದರೆ ಜೆರುಸಲೆಮ್, ಹೈಫ ಮತ್ತು ಟೆಲ್‌ಅವಿವ್. ಜೆರುಸಲೆಂ ಪ್ರಮುಖ ರಸ್ತೆ ಮಾರ್ಗದ ಕೇಂದ್ರ. ಇಸ್ರೇಲ್‌ನಲ್ಲಿ ಒಳನಾಡು ಜಲ ಸಾರಿಗೆ ಕಂಡುಬರುವುದಿಲ್ಲ. ಆದರೆ ವಿದೇಶಿ ಜಲಮಾರ್ಗದ ಸಂಪರ್ಕ ಹೊಂದಿದೆ. ಮುಖ್ಯ ಬಂದರುಗಳೆಂದರೆ ಹೈಫ, ಟೆಲ್‌ಅವಿವ್, ಜಾಫ಼ಾ ಮತ್ತು ಯಾಲೆಟ್. ಟೆಲ್‌ಅವಿವ್‌ನ ಸಮೀಪದ ಬೆನ್-ಗುರಿಯನ್ ರಾಷ್ಟ್ರದ ಪ್ರಮುಖ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ.



ಅಬ್ರಹಾಂ, ವರ್ಣಚಿತ್ರ

ಇಸ್ರೇಲ್‌ನಲ್ಲಿ ರಫ್ತಿಗಿಂತ ಆಮದು ಮೊತ್ತ ಹೆಚ್ಚು ಇರುತ್ತದೆ. ಇದು ರಫ್ತು ಮಾಡುವ ಪ್ರಮುಖ ಸರಕುಗಳೆಂದರೆ ಕತ್ತರಿಸಿದ ವಜ್ರ, ಯಂತ್ರೋಪಕರಣಗಳು, ಹುಳಿ ಹಣ್ಣುಗಳು ಮತ್ತು ಜವಳಿ. ಇದರ ಪ್ರಮುಖ ಆಮದುಗಳೆಂದರೆ ಕಚ್ಚವಜ್ರ, ಕಬ್ಬಿಣ, ಸಿಮೆಂಟ್, ಉಕ್ಕು, ಚರ್ಮ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಸೈನಿಕ ಸಾಮಗ್ರಿಗಳು. ಇದು ಹೆಚ್ಚು ಐರೋಪ್ಯ ಆರ್ಥಿಕ ಸಮುದಾಯ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೊಡನೆ ವಿಶೇಷ ವ್ಯಾಪಾರ ಸಂಪರ್ಕ ಹೊಂದಿದೆ.

ಇಲ್ಲಿ ಜನಸಂಖ್ಯೆ ಅಸಮವಾಗಿ ಹಂಚಿಕೆಯಾಗಿದೆ. ಶೇ. 90 ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಮೆಡಿಟರೇನಿಯನ್ ತೀರ ಪ್ರದೇಶದಲ್ಲಿ ಹೆಚ್ಚು ಜನಸಂಖ್ಯೆ ಕಂಡುಬರುತ್ತದೆ. ನೆಗೆವ್ ಮರುಭೂಮಿ ಅತಿ ಕಡಿಮೆ ಜನಸಂಖ್ಯೆ ಹೊಂದಿದೆ. ಇಲ್ಲಿನ ಜನಸಂಖ್ಯೆಯ ಶೇ. 83 ಭಾಗ ಯಹೂದಿ ಜನಾಂಗದವರು. (ಆರ್.ಟಿ.ಎಸ್.)

**ಇಸ್ರೇಲಿನ ಇತಿಹಾಸ: ಪ್ರಾಕ್ತನ ಚರಿತ್ರೆ:** ಈ ದೇಶದ ಪ್ರಾಕ್ತನಶಾಸ್ತ್ರದ ಶಾಸ್ತ್ರೀಯವಾದ ಅಭ್ಯಾಸ ಆರಂಭವಾದದ್ದು 19ನೆಯ ಶತಮಾನದ ಮಧ್ಯಭಾಗದಲ್ಲಿ. ಆಗಿನಿಂದ ಈಗಿನ ವರೆಗೂ ಅನೇಕ ಪ್ರಾಕ್ತನಸಂಶೋಧನ ಸಂಸ್ಥೆಗಳೂ ಪ್ರಾಕ್ತನ ಶಾಸ್ತ್ರಜ್ಞರೂ ತೋರಿದ ವಿಶೇಷ ಆಸ್ಥೆಯ ಫಲವಾಗಿ ಹಲವಾರು ಉತ್ಖನನಗಳೂ ಸಂಶೋಧನೆಗಳೂ ನಡೆದು ಈಗ ಇಲ್ಲಿನ ಪ್ರಾಚೀನ ಚರಿತ್ರೆಯ ಅನೇಕ ವಿವರಗಳು ತಿಳಿದು ಬಂದಿವೆ.

ಹಳೆಯ ಶಿಲಾಯುಗಕ್ಕೆ ಸೇರಿದ ಅಬೆವಿಲಿಯನ್ ಮತ್ತು ಅಷೂಲಿಯನ್ ಹಂತದ ಕೈಗೊಡಲಿಗಳು ಇಲ್ಲಿ ದೊರಕಿರುವ ಅವಶೇಷಗಳಲ್ಲಿ ಅತ್ಯಂತ ಪ್ರಾಚೀನ. ಇವು ಸು. 2,50,000 ವರ್ಷಗಳಿಂದಲೂ ಮೊದಲಿನವೆಂಬುದು ಅಭಿಪ್ರಾಯ. ಚಕ್ಕೆ ಕಲ್ಲಿನಾಯುಧಗಳ ತಯೇಷಿಯನ್ ಮತ್ತು ಮುಸ್ಟೀರಿಯನ್ ಸಂಸ್ಕೃತಿಗಳ ಅವಶೇಷಗಳನ್ನು ಮೌಂಟ್ ಕಾರ್ಮೆಲ್ ಪರ್ವತದ ಗುಹೆಗಳಲ್ಲಿ ಡರೊಥಿ ಗ್ಯಾರಡ್ ಎಂಬ ವಿದೂಷಿ ಕಂಡುಹಿಡಿದಳು. ಪಶ್ಚಾದುಷೋ ಮಾದರಿಯ (ನಿಯಾಂಡರ್ಥಾ ಲಾಯಿಡ್) ಮತ್ತು ಆಧುನಿಕ ಮಾನವ ವರ್ಗದ ಮಿಶ್ರಸಂತತಿಯ ಜನ ಈ ಸಂಸ್ಕೃತಿಯ ಕರ್ತೃಗಳಾಗಿದ್ದರೆಂಬುದು ಅವರ ಅಸ್ತಿಗಳ ಅವಶೇಷಗಳಿಂದ ಗೊತ್ತಾಗಿದೆ. ಹಳೆಯ ಶಿಲಾಯುಗದ ಅಂತ್ಯಶಿಲಾಯುಗಕ್ಕೆ ಸು. 50,000 ವರ್ಷಗಳ ಆರಿಗ್ನೇಷಿಯನ್ ಸಂಸ್ಕೃತಿಯ ಅವಶೇಷಗಳೂ ಅನಂತರ ಸುಮಾರು 20,000 ವರ್ಷಗಳ ಆಟ್ಲಿಟಿಯನ್ ಸಂಸ್ಕೃತಿಯ ಅವಶೇಷಗಳೂ ಇಲ್ಲಿ ದೊರಕಿವೆ.

ಮಧ್ಯ ಶಿಲಾಯುಗದ ಅವಶೇಷಗಳು ಮೊದಲು ವಾಡಿಎಲ್ ನಟೂಫ್ ಎಂಬಲ್ಲಿ ದೊರಕಿದುದರಿಂದ ಆ ಸಂಸ್ಕೃತಿಗೆ ನಟೂಫಿಯನ್ ಎಂದು ಹೆಸರಾಯಿತು. ಇಸ್ರೇಲಿನ ಅನೇಕ ಪ್ರದೇಶಗಳಲ್ಲಿ ದೊರಕಿರುವ, ಸು.10,000–6,000 ಅವಧಿಗೆ ಸೇರಿರುವ ಈ ಸಂಸ್ಕೃತಿಯ ಜನ ಆಹಾರ ಸಂಗ್ರಹಣ ದೆಸೆಯಿಂದ ಮುನ್ನಡೆದು ಆಹಾರೋತ್ಪಾದನೆಯನ್ನು ಮೊತ್ತಮೊದಲಿಗೆ ಪ್ರಾರಂಭಿಸಿದರು. ವ್ಯವಸಾಯ ಮಾಡಿ ಬೆಳೆಸಿದ ಪೈರುಗಳನ್ನು ಚಕಮಕಿಕಲ್ಲಿನ ಹಲ್ಲುಗಳಿದ್ದ ಕುಡುಗೋಲುಗಳಿಂದ ಕುಯ್ಯುತ್ತಿದ್ದುದೂ ದುಷ್ಟಪ್ರಾಣಿಗಳನ್ನು ಪಳಗಿಸಿ ಸಾಕುತ್ತಿದ್ದುದೂ ಈ ಜನರ ವಿಶಿಷ್ಟ ಸಾಧನೆಗಳು.

ನೂತನ ಶಿಲಾಯುಗದ ಅತ್ಯಂತ ಪ್ರಾಚೀನವಾದ ಮತ್ತು ವಿಶದವಾಗಿ ಸಂಶೋಧಿಸಲ್ಪಟ್ಟಿರುವ ನೆಲೆಗಳಲ್ಲಿ ಮುಖ್ಯವಾದ ಜೆರಿಕೊ ಈ ದೇಶದಲ್ಲಿವೆ. ಮೊತ್ತ ಮೊದಲಿಗೆ ಅಂಚುಗಳನ್ನು ನಯವಾಗಿಸಿದ ಕಲ್ಲಿನ ಆಯುಧಗಳನ್ನು ಉಪಯೋಗಿಸುತ್ತಿದ್ದ ಈ ಜನ ಪ್ರ.ಶ.ಪೂ. 6–5ನೆಯ ಸಹಸ್ರಮಾನಗಳಲ್ಲಿ ಬೃಹತ್ತಾದ ವರ್ತುಳಾಕಾರದ ಶಿಲಾ ಸಮಾಧಿಗಳಲ್ಲಿ ಸತ್ತವರನ್ನು ಹಿಡಿಯುತ್ತಿದ್ದರು. ಪ್ರ.ಶ.ಪೂ. 5000ದ ಸುಮಾರಿನಲ್ಲಿ ಮಡಕೆಗಳ ಉಪಯೋಗವೂ ಕಲ್ಲಿನ ಗೋಡೆ ಕಂದಕಗಳಿಂದ ರಕ್ಷಿತವಾದ ಗ್ರಾಮೀಣ ಜೀವನವೂ ರೂಢಿಗೆ ಬಂದುವು. ಆಹಾರೋತ್ಪಾದನೆ, ಕೈಗಾರಿಕೆ, ವಾಣಿಜ್ಯ ಇವರ ಮುಖ್ಯ ಸಾಧನೆಗಳು.

ತಾಮ್ರ ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಘಸ್ಸೂಲ್ ಎಂಬಲ್ಲಿ ಮೊದಲಿಗೆ ದೊರಕಿದರು ಅನಂತರ ಇತರ ಅನೇಕ ನೆಲೆಗಳಲ್ಲೂ ದೊರಕಿವೆ. ವಿವಿಧ ಹಂತಗಳಲ್ಲಿ ಬೆಳೆದು ಬಂದ ಈ ಸಂಸ್ಕೃತಿ ಈಜಿಪ್ಟಿನಲ್ಲೂ ಕಂಡುಬಂದಿದೆ. ಇದು ಪ್ರ.ಶ.ಪೂ. 3100ರ ಹೊತ್ತಿಗೆ ಕೊನೆಗೊಂಡಿತೆಂದು ಹೇಳಬಹುದು. ತಾಮ್ರದ ಉಪಯೋಗ ರೂಢಿಗೆ ಬಂದದ್ದರ ಗುರುತಾಗಿ ಈ ಲೋಹದ ಎರಡು ಕೊಡಲಿಗಳೂ ಮತ್ತೆ ಕೆಲವು ಅವಶೇಷಗಳೂ ದೊರಕಿವೆ. ಮಡಕೆಗಳ ಮೇಲೆ ವರ್ಣಚಿತ್ರ ಬಿಡಿಸುವ ರೂಢಿ ಈ ಕಾಲದಲ್ಲೇ ಆರಂಭವಾಯಿತು.

ಇಸ್ರೇಲಿನ ಕಂಚಿನ ಯುಗ ಪ್ರ.ಶ.ಪೂ. 3000–1200ರಲ್ಲಿ ರೂಢಿಯಲ್ಲಿತ್ತು. ಆ ಕಾಲವನ್ನು ಕಂಚಿನಯುಗ ಆದಿ, ಮಧ್ಯ ಮತ್ತು ಅಂತ್ಯಕಾಲಗಳೆಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಘಸ್ಸೂಲ್ ಮೈದಾನಪ್ರದೇಶದಲ್ಲಿರುವ ನೆಲೆ. ಪ್ಯಾಲಿಸ್ಟೈನಿನ ಈ ಕಾಲದ ಬಹು ಸಂಖ್ಯಾತ ನೆಲೆಗಳು ಬೆಟ್ಟಗಳ ಶಿಖರಗಳ ಮೇಲೂ ತಪ್ಪಲುಗಳಲ್ಲೂ ಇವೆ. ಮೆಗಿಡ್ಡೋ ಖಿರ್ಬೆಟ್–ಕೆರಕ್, ಲಚಿಷ್ ಮುಂತಾದ ಈ ಕಾಲದ ನೆಲೆಗಳಲ್ಲಿ ಚಕಮಕಿ ಕಲ್ಲಿನಾಯುಧಗಳ ಬಳಕೆಯೂ ಇತ್ತು. ಕೆಂಪು ಮತ್ತು ಕಪ್ಪು ಬಣ್ಣದ ಹೊಸ ಬಗೆಯ ಮಡಕೆಗಳು ಪ್ರ.ಶ.ಪೂ. 2500 ಸುಮಾರಿಗೆ ಬಳಕೆಗೆ ಬಂದುವು. ಅದರ ನೆಲೆಗಳ ರಕ್ಷಣೆಗೆ ಕೋಟೆ ಕೊತ್ತಲುಗಳು ನಿರ್ಮಿತವಾದುವು.

ಈ ಕಾಲದಲ್ಲಿ ನೆರೆಹೊರೆಯ ರಾಜ್ಯಗಳೊಂದಿಗೆ, ಮುಖ್ಯವಾಗಿ ಈಜಿಪ್ಟ್ ಸಿರಿಯ ಮೆಸೊಪೊಟೇಮಿಯಗಳೊಂದಿಗೆ, ಬಿರುಸಿನ ವ್ಯಾಪಾರ ಸಾಗಿತ್ತು. ಬ್ಯಾಬಿಲೋನಿಯನ್ನರ ಕೀಲಾಕಾರ (ಕ್ಯೂನಿಫಾರಂ) ಬರೆಹ ರೂಢಿಗೆ ಬಂತು. ಮೆಗಿಡ್ಡೊ ನೆಲೆಯಲ್ಲಿ ದೊರಕಿರುವ ಚಿನ್ನದ ಮತ್ತು ದಂತದ ವಸ್ತುಗಳು ಈ ಯುಗದ ಅಂತ್ಯದಲ್ಲಿ ನೆಲೆಸಿದ್ದ ಉನ್ನತ ಮಟ್ಟದ ಸಂಸ್ಕೃತಿಯ ಪ್ರತೀಕಗಳು. ದಂತದ ವಸ್ತುಗಳ ಮೇಲೆ ಸಿಂಹವೇ ಮುಂತಾದ ಪ್ರಾಣಿಗಳ ಚಿತ್ರಗಳನ್ನು ಕೊರೆದಿದೆ. ಉತ್ಸವ ದೃಶ್ಯಗಳೂ ಹಲವು ಕಂಡುಬಂದಿವೆ. ಗೆಜೆರ್, ಜೆರೂಸಲೆಂ, ಲಚಿಷ್ ಮುಂತಾದೆಡೆಗಳಲ್ಲಿದ್ದಂತೆ ಮೆಗಿಡ್ಡೊದಲ್ಲಿ ಸಹ ಈ ಕಾಲದ ಒಂದು ಬೃಹತ್ತಾದ ನೀರಿನ ಕಾಲುವೆಯನ್ನು ಮನೆಗಳ ತಳಭಾಗದಲ್ಲಿ ನಿರ್ಮಿಸಿ ಬೆಟ್ಟದಿಂದ ಕುಡಿಯುವ ನೀರನ್ನು ಪೂರೈಸುತ್ತಿದ್ದರು. ಇದು ಕಂದಕದಂತೆ ನಗರವನ್ನು ಬಳಸಿದ್ದರಿಂದ ರಕ್ಷಣೆಯೂ ಒದಗಿತ್ತು. ಈಜಿಪ್ಟಿನಲ್ಲಿರುವ ಅಮರ್ನ ಪತ್ರಗಳಿಂದ ತಿಳಿದುಬರುವಂತೆ ಅನೇಕ ಸಣ್ಣಪುಟ್ಟ ರಾಜರು ಅಧಿಕಾರದಲ್ಲಿದ್ದುಕೊಂಡು ತಮ್ಮತಮ್ಮಲ್ಲೇ ಕಚ್ಚಾಡುತ್ತಿದ್ದುದಲ್ಲದೆ ಈಜಿಪ್ಟ್ ಮೆಸಪೊಟೇಮಿಯ ಮತ್ತು ಅಸ್ಸೀರಿಯದ ರಾಜರುಗಳ ಪ್ರಭಾವಕ್ಕೊಳಪಟ್ಟಿದ್ದರು. ಪ್ರ.ಶ.ಪೂ. 1200ರ ಸುಮಾರಿಗೆ ಈ ಪ್ರದೇಶದಲ್ಲಿ ಕಬ್ಬಿಣದ ಬಳಕೆ ಹಬ್ಬಿತು. ಸ್ವಲ್ಪ ಕಾಲಾನಂತರ ಇಸ್ರೇಲಿನ ಹೆಸರಿಗೆ ಕಾರಣರಾದ ಇಸ್ರೇಲಿಗಳು ಅಥವಾ ಹೀಬ್ರೂಗಳು ಈ ದೇಶಕ್ಕೆ ಪ್ರವೇಶಿಸಿದರು. ಇವರ ಕಾಲದಲ್ಲಿ ಜನಜೀವನರೀತಿ ಹೆಚ್ಚೇನೂ ಬದಲಾಗದಿದ್ದರೂ ಮುಖ್ಯವಾಗಿ ಹಿಟೈಟ್ ಸಾಮ್ರಾಜ್ಯದ ಪತನಾನಂತರ ಕಬ್ಬಿಣ ಲೋಹಗಾರಿಕೆ ಎಲ್ಲೆಡೆಯಲ್ಲೂ ಪ್ರಸರಿಸಲಾರಂಭಿಸಿತು. ಟೆಲ್–ಎಲ್–ಫುಲ್ ಎಂಬಲ್ಲಿನ ಭೂಉತ್ಖನನದಿಂದ ಗೊತ್ತಾಗಿರುವಂತೆ ಈ ಕಾಲದವರು ಸರಳ ಗ್ರಾಮೀಣ ಸಂಸ್ಕೃತಿ. ಇವರು ಹೊಸರೀತಿಯ ಮತ್ತು ಆಕಾರದ ಮಡಕೆ ಕುಡಿಕೆಗಳನ್ನೂ ನೂಲುವ ತಕಲಿಗಳನ್ನೂ ಉಪಯೋಗಿಸುತ್ತಿದ್ದರು. ಈ ಕಾಲದಲ್ಲಿ ರಾಜಕೀಯ ಸಾಮಾಜಿಕ ಹಾಗೂ ಬೌದ್ಧಿಕ ಚಟುವಟಿಕೆಗಳು ನೆರೆಹೊರೆಯ ಜನಾಂಗಗಳಿಂದ ಪ್ರಭಾವಿತವಾಗಿ ಮುಂದುವರಿದವು. ಈ ಕಾಲದ ಬಹು ಮುಖ್ಯ ಸಾಧನೆಗಳೆಂದರೆ ನೆರೆಯ ಫಿಲಿಸ್ಟೈನರ ಪ್ರಭಾವದಿಂದ ಬಂದ ಅಕ್ಷರಪದ್ಧತಿಯ ಬರವಣಿಗೆಗೆ, ಮಸಿ ಮತ್ತು ಲೇಖನಿಯ ಉಪಯೋಗ. ಪ್ರ.ಶ.ಪೂ. 8ನೆಯ ಶತಮಾನದ ಅಂತ್ಯದಲ್ಲಿ ಅಸ್ಸೀರಿಯನ್ನರಿಂದಲೂ 6ನೆಯ ಶತಮಾನದಲ್ಲಿ ಬ್ಯಾಬಿಲೋನಿಯನ್ನರಿಂದಲೂ ಪರ್ಷಿಯನ್ನರಿಂದಲೂ 4ನೆಯ ಶತಮಾನದಲ್ಲಿ ಗ್ರೀಕರಿಂದಲೂ ಇಸ್ರೇಲು ಪರಾಜಯಹೊಂದಿತು. (ಬಿ.ಕೆ.ಜಿ.)

**ಈಚಿನ ಚರಿತ್ರೆ:** ಈಗ ಇಸ್ರೇಲ್ ಇರುವ ಪ್ರದೇಶಕ್ಕೆ ಪ್ರಾಚೀನ ಕಾಲದಲ್ಲಿ ಕೇನನ್ ಎಂಬ ಹೆಸರಿತ್ತು; ಅನಂತರ ಇದು ಪ್ಯಾಲಿಸ್ಟೈನ್ ಆಯಿತು. ಯೆಹೂದ್ಯರು ಈಜಿಪ್ಟನ್ನು ಬಿಟ್ಟು, ಸಿನಾಯ್ ಮರಳುಗಾಡುಗಳಲ್ಲಿ ಅಲೆದು, ಪ್ಯಾಲಸ್ತೀನಿಗೆ ಬಂದು, ಅಲ್ಲಿ ಮೊದಲ ಬಾರಿಗೆ ಸ್ವತಂತ್ರ ಜನಾಂಗವಾಗಿ ಬಾಳಿದರು; ವಿಶ್ವದಲ್ಲೆ ಹೆಸರಾದ ಸಂಸ್ಕೃತಿ ಬೆಳೆಸಿದರು. ಯೆಹೂದ್ಯ ಪ್ರವಾದಿಗಳು, ಪುರೋಹಿತರು, ಕವಿಗಳು, ದಾರ್ಶನಿಕರು ಬದುಕಿ ಗ್ರಂಥರಚನೆ ಮಾಡಿದ್ದು ಇಲ್ಲಿ (**ನೋಡಿ– ಪ್ಯಾಲಸ್ತೀನ್**).

ಪ್ರಾಚೀನ ಇಸ್ರೇಲಿನಲ್ಲಿ ಮೊದಲು ರಾಜ್ಯ ಸ್ಥಾಪಿಸಿದವನು ಸಾಲ್. ಅವನ ತರುವಾಯ ರಾಜ್ಯವಾಳಿದ ಡೇವಿಡ್ ಈ ರಾಷ್ಟ್ರವನ್ನು ಬಲಪಡಿಸಿದ; ಜೆರೂಸಲೆಂ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ. ಮುಂದೆ ರಾಜ್ಯವಾಳಿದ ಸಾಲಮನ್ ತಾಮ್ರದ ಸ್ತಂಭಗಳಿದ್ದ ದೇವಸ್ಥಾನವನ್ನು ರಾಜಧಾನಿಯಲ್ಲಿ ಕಟ್ಟಿಸಿದ. ಆದರೆ ಮೇಲಿಂದ ಮೇಲೆ ನುಗ್ಗಿ ಬರುತ್ತಿದ್ದ ದಾಳಿಕಾರರು ಅನೇಕ ಸಲ ಈ ದೇಶವನ್ನು ಗೆದ್ದು ಆಳಿದರು. ಇಸ್ರೇಲ್ ಪಶ್ಚಿಮದ ಫಲವತ್ತಾದ ನೈಲ್ ನದೀ ಬಯಲಿನಲ್ಲೂ ಪೂರ್ವದಲ್ಲಿನ ಅಷ್ಟೇ ಫಲವತ್ತಾದ ಯೂಫ್ರೆಟೀಸ್ ನದೀ ಪ್ರದೇಶದಲ್ಲೂ ಇದ್ದ ಬಲಿಷ್ಠ ರಾಜ್ಯಗಳ ನಡುವಣ ಕಾಲ್ಚೆಂಡಾಯಿತು. ಅಸ್ಸೀರಿಯನ್ನರು, ಬ್ಯಾಬಿಲೋನಿಯನ್ನರು ಪರ್ಷಿಯನ್ನರು, ಗ್ರೀಕರು, ರೋಮನರು–ಹೀಗೆ ಒಬ್ಬರಾದ ಮೇಲೊಬ್ಬರು ಇಸ್ರೇಲನ್ನು ಗೆದ್ದು ಆಕ್ರಮಿಸಿದರು. ಮುಂದೆ ಇದು ಆಟೋಮನ್ ಸಾಮ್ರಾಜ್ಯದ ಭಾಗವಾಗಿದ್ದು, ಕೊನೆಗೆ ತುರ್ಕಿ ರಾಜ್ಯಕ್ಕೆ ಸೇರಿಹೋಯಿತು. ಈ ಆಕ್ರಮಣಗಳ ನಡುವೆ ಇಸ್ರೇಲ್ ಕೊಂಚ ಕಾಲ ಮಾತ್ರ ಸ್ವಾತಂತ್ರ್ಯ ಪಡೆದಿತ್ತು; ಉಳಿದ ಕಾಲಗಳಲ್ಲಿ, ಶತ್ರುಗಳು ದೇಶವನ್ನು ನಾಶಗೊಳಿಸುತ್ತಿದ್ದಾಗಲೂ ಯೆಹೂದ್ಯರ ತಾಯ್ನಾಡಿನ ಮಮತೆ ಕುಗ್ಗಲಿಲ್ಲ; ಗೋಳುಗೋಡೆಯ (ವೇಲಿಂಗ್ ವಾಲ್) ಎದುರು ನಿಂತು ಪರದಾಸ್ಯಕ್ಕಾಗಿ ಪ್ರಲಾಪಿಸಿ, ವಿಮೋಚನೆಗಾಗಿ ದೇವರಿಗೆ ಮೊರೆಯಿಡುತ್ತಿದ್ದರು.

ಈ ಚಾರಿತ್ರಿಕ ಪರಿಸ್ಥಿತಿಗಳಿಂದಾಗಿ ಯೆಹೂದ್ಯರು ತಮ್ಮ ತಾಯ್ನಾಡನ್ನು ತೊರೆದು, ತಮ್ಮದೆಂದು ಹೇಳಿಕೊಳ್ಳುವ ದೇಶವಿಲ್ಲದೆ, ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲೂ ಹರಡಿ ಹೋಗಬೇಕಾಯಿತು. ಶತಮಾನಗಳ ಕಾಲ ಅವರ ಈ ಸ್ಥಿತಿ ಮುಂದುವರೆಯಿತು. 19ನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಯೆಹೂದ್ಯರು ತಮ್ಮದೇ ಆದ ಸ್ವಾಸ್ಥ್ಯವೊಂದರ ರಚನೆಗಾಗಿ ಚಳವಳಿ ಹೂಡಿದರು. ಆ ಚಳವಳಿಯ ಪ್ರವರ್ತಕ ಟೆಯೋಡೋರ್ ಹರ್ಟ್ಸಲ್. ಕ್ರೌರ್ಯಕ್ಕೆ ಗುರಿಯಾಗಿ ಹರಡಿ ಹಂಚಿಹೋಗಿದ್ದ ಯೆಹೂದ್ಯರಿಗೆ ಪ್ಯಾಲಸ್ತೀನಿನಲ್ಲಿ ಒಂದು ನೆಲೆಯ ನಿರ್ಮಾಣವೇ ಈ ಚಳವಳಿಯ ಗುರಿ. ಸ್ವಪ್ರೇರಣೆಯಿಂದ ಹಿತೈಷಿಗಳು ಕೊಟ್ಟ ಹಣ, ರಾತ್‌ಚೈಲ್ಡ್ ನೀಡಿದ ಉದಾರ ಧನಸಹಾಯ ಇವುಗಳಿಂದ ಯೆಹೂದ್ಯ ರಾಷ್ಟ್ರೀಯ ಸಹಾಯನಿಧಿಯೊಂದು ನಿರ್ಮಿತವಾಯಿತು. ಇದರಿಂದ ಪ್ಯಾಲಸ್ತೀನಿನಲ್ಲಿ ನೆಲಸಬಯಲಿಚ್ಛಿಸಿದವರಿಗೋಸ್ಕರ ಭೂಮಿಯನ್ನು ಕೊಳ್ಳಲನುಕೂಲವಾಯಿತು. ಈ ಅನುಕೂಲವನ್ನೊದಗಿಸುವುದಕ್ಕಾಗಿ 1908ರಲ್ಲಿ ಜಾಫದಲ್ಲಿ ಒಂದು ಯೆಹೂದ್ಯ ಸ್ವಾಸ್ಥ್ಯವಾದಿ ನಿಯೋಗ ರಚಿಸಲಾಯಿತು.

**ಎರಡು ಮಹಾಯುದ್ಧಗಳ ಪರಿಣಾಮ:** 1914ರಲ್ಲಿ ಪ್ರಾರಂಭವಾದ ಒಂದನೆಯ ಮಹಾಯುದ್ಧದ ಕಾಲದಲ್ಲಿ ಅನುಕೂಲ ಸಂದರ್ಭ ಒದಗಿತು. ಜರ್ಮನ್ನರ ಪಕ್ಷ ವಹಿಸಿದ್ದ ತುರ್ಕರು ಪ್ಯಾಲಸ್ತೀನ್ ಆಕ್ರಮಿಸಿದರು. ಯೆಹೂದ್ಯರ ನೈತಿಕ ಬೆಂಬಲ ಗಳಿಸುವುದಕ್ಕಾಗಿ ಬ್ರಿಟಿಷ್ ಸರ್ಕಾರ ಯೆಹೂದ್ಯ ಸ್ವಾಸ್ಥ್ಯನೀತಿಗೆ ಮನ್ನಣೆ ಕೊಡುವುದಾಗಿ ತಿಳಿಯಪಡಿಸಿತು. ಈ ವಿಷಯವಾಗಿ ಮಿತ್ರರಾಷ್ಟ್ರಗಳೊಡನೆ ವಿಚಾರ ವಿನಿಮಯ ನಡೆಸಿದ ಮೇಲೆ 1917ರಲ್ಲಿ ಬ್ಯಾಲ್ಫುರ್ ಘೋಷಣೆ ಹೊರಬಂತು; ಅದರಲ್ಲಿ ಗ್ರೇಟ್ ಬ್ರಿಟನ್ ಮತ್ತು ಇತರ ಕೆಲವು ಮಿತ್ರರಾಷ್ಟ್ರಗಳು ಯೆಹೂದ್ಯರಿಗಾಗಿ ಪ್ಯಾಲಸ್ತೀನಿನಲ್ಲಿ ಒಂದು ನೆಲೆಸುನಾಡನ್ನು ರಚಿಸುವ ಯೋಜನೆಗೆ ತಮ್ಮ ಬೆಂಬಲ ವ್ಯಕ್ತಪಡಿಸಿದುವು. ಅರಬ್ ರಾಷ್ಟ್ರೀಯ ಮುಖಂಡರೂ ಇದನ್ನು ಸ್ವಾಗತಿಸಿದರು. 1919ರ ಜನವರಿ 3ರಂದು, ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಅರಬ್ ರಾಷ್ಟ್ರಗಳ ಪ್ರಧಾನ ನಿಯೋಗಿಯೂ ಇದನ್ನು ಒಪ್ಪಿದ. ಪ್ಯಾಲಸ್ತೀನು ಬ್ರಿಟನ್ನಿನ ರಕ್ಷಿತ ಪ್ರದೇಶವಾಗಿರಬೇಕೆಂದು ಈ ಘೋಷಣೆಯಲ್ಲಿ ಸೂಚಿಸಲಾಗಿತ್ತು. ಇಲ್ಲಿ ಯೆಹೂದ್ಯರಿಗಾಗಿ ಒಂದು ಹೊಸ ರಾಜ್ಯ ನಿರ್ಮಿಸುವ ಜವಾಬ್ದಾರಿಯನ್ನು ಇಂಗ್ಲೆಂಡಿಗೆ ವಹಿಸಿಕೊಡಲಾಯಿತು. ರಾಷ್ಟ್ರಸಂಘದ (ಲೀಗ್ ಆಫ್ ನೇಷನ್ಸ್) ನಿರ್ಣಯದಂತೆ ಇದನ್ನು ಬ್ರಿಟನ್ನಿಗೆ ವಹಿಸಿಕೊಟ್ಟದ್ದು 1922ರಲ್ಲಿ.

ಅರಬ್ಬರ ಮತ್ತು ಯೆಹೂದರ ಹಕ್ಕುಬಾಧ್ಯತೆಗಳನ್ನು ಪರಿಗಣಿಸಿ ಅವುಗಳಿಗೆ ಅನುಸಾರವಾದ ರೀತಿಯಲ್ಲಿ ಇಬ್ಬರಿಗೂ ಸ್ವಾತಂತ್ರ್ಯ ಕೊಡುವ ವಿಷಯದಲ್ಲಿ ಅನುಸರಿಸಬೇಕಾದ ಮಾರ್ಗವನ್ನು ಬ್ರಿಟಿಷ್ ಸರ್ಕಾರ ಹುಡುಕುತ್ತಿತ್ತು. ಅರಬ್ ಪ್ಯಾಲಸ್ತೀನ್, ಯೆಹೂದ್ಯ ಪ್ಯಾಲಸ್ತೀನ್ ಎಂಬುದಾಗಿ ಆ ಸಣ್ಣ ರಾಜ್ಯವನ್ನು ಇಬ್ಭಾಗ ಮಾಡುವ ಯೋಚನೆಯೂ ಇತ್ತು. ಆದರೆ ಇದಕ್ಕೆ ತೊಡಕುಗಳಿದ್ದುವು. ಅರಬ್ಬರ ಹಾಗೂ ಯೆಹೂದ್ಯರ ಎರಡು ಪ್ರಬಲ ಗುಂಪುಗಳು ಮೊದಲೇ ಯೋಚಿಸಿದಂತೆ ಸ್ಪಷ್ಟವಾಗಿ ಬೇರ್ಪಟ್ಟಿರಲಿಲ್ಲ. ಯೆಹೂದ್ಯರಿಗೆ ಅತ್ಯಂತ ಪವಿತ್ರಕ್ಷೇತ್ರವಾದ ಜೆರೂಸಲೆಂನಲ್ಲೇ ಬಹುಸಂಖ್ಯಾತ ಅರಬ್ಬರಿದ್ದರು. ಇದು ತಮ್ಮ ರಾಜ್ಯದಲ್ಲಿ ಸೇರಲೇಬೇಕೆಂದು ಯೆಹೂದ್ಯರ ಆಗ್ರಹ. ಅರಬ್ಬರು ಮಂಡಿಸಿದ ವಾದವೂ ನ್ಯಾಯವಾಗಿತ್ತು. ಪ್ರತ್ಯೇಕ ಇಸ್ರೇಲ್ ರಾಜ್ಯ ರಚನೆಗೆ ಅವರು ಅನೇಕ ಆಕ್ಷೇಪಣೆಗಳನ್ನೆತ್ತಿದರು. ಹೊಸ ರಾಜ್ಯ ರಚನೆಯ

ಹಂಚಿಕೆಯಾದದ್ದು ರಾಜಕೀಯ ಒತ್ತಾಯದಿಂದ. ಅದು ಅರಬ್ ರಾಜ್ಯಗಳ ಕ್ಷೇಮ ಮುನ್ನಡೆಗಳನ್ನು ತಡೆಗಟ್ಟುವ ಕುಟಿಲ ಪ್ರಯತ್ನ. ಪ್ಯಾಲಸ್ತೀನಿನ ಜನಸಂಖ್ಯೆಯಲ್ಲಿ ಶೇ. 90ರಷ್ಟು (ಹೊರದೇಶಗಳಿಂದ ಯೆಹೂದ್ಯರು ವಲಸೆ ಬರುವ ಮುನ್ನ) ಜನ ಅರಬ್ಬರೇ ಇದ್ದರು. 7ನೆಯ ಶತಮಾನದಲ್ಲಿ ಅದನ್ನು ರೋಮನ್ನರಿಂದ ವಶಪಡಿಸಿಕೊಂಡಾಗಿನಿಂದಲೂ ಅಲ್ಲಿ ಅರಬ್ಬರೇ ವಾಸಿಸುತ್ತಿದ್ದರು: ಈ ಅಸ್ವಾಭಾವಿಕ ಹಂಚಿಕೆಯಿಂದ ಅರಬ್ ಜನಾಂಗವನ್ನು ಇಬ್ಭಾಗಮಾಡಿದಂತಾಗುತ್ತದೆ; ಭಿನ್ನ ಭಿನ್ನ ರಾಷ್ಟ್ರಗಳಲ್ಲಿದ್ದ ಲಕ್ಷಾಂತರ ಯೆಹೂದ್ಯರು ವಲಸೆ ಬಂದದ್ದರಿಂದ ಈಗಾಗಲೇ ಎಷ್ಟೋ ಅರಬ್ಬರು ಮನೆಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ; ಮಧ್ಯ ಏಷ್ಯಕ್ಕೇ ಯೆಹೂದ್ಯರು ಅನ್ಯಜನರು. ಇದು ಅರಬ್ಬರ ವಾದ.

ಆದರೆ ಈ ಮಧ್ಯೆ ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. ಅರಬ್–ಯೆಹೂದ್ಯರ ಪ್ರಶ್ನೆ ಮುಂದಕ್ಕೆ ಹೋಯಿತು. 1940ರ ಮುಂದಿನ ವರ್ಷಗಳಲ್ಲಿ ಹಿಟ್ಲರನ ಉನ್ಮಾದಕ್ಕೆ ಅರವತ್ತು ಲಕ್ಷ ಯೆಹೂದ್ಯರು ಬಲಿಯಾದರು. ಆಧುನಿಕ ಮಾನವನ ಸಂಸ್ಕೃತಿಗೆ ಬೆಲೆಯೇನಾದರೂ ಇದೆಯೆ ಎಂದು ವಿಶ್ವಾದ್ಯಂತ ಜನ ಶಂಕಿಸುವಂತಾಯಿತು. ಯೆಹೂದ್ಯರನ್ನು ನಾಶಗೊಳಿಸಿ ಅವರ ಪ್ರಶ್ನೆಯನ್ನು ಬಗೆಹರಿಸುವುದು ಹಿಟ್ಲರನ ರೀತಿ **(ನೋಡಿ–ಹಿಟ್ಲರ್,–ಅಡಾಲ್ಫ್)**.

ಪ್ಯಾಲಸ್ತೀನಿನಲ್ಲಿ ತಮ್ಮ ರಾಷ್ಟ್ರೀಯ ನೆಲೆಯನ್ನೂರಿಸಬೇಕೆಂದು ಬಹುಕಾಲದಿಂದ ಆಸೆ ಹೊಂದಿದ್ದು, ಯುರೋಪಿನಿಂದ ಅಧಿಕ ಸಂಖ್ಯೆಯಲ್ಲಿ ಇಲ್ಲಿ ಬಂದು ತುಂಬಿದ್ದ ಯೆಹೂದ್ಯರಿಗೂ ಅರಬ್ಬರಿಗೂ 1947ರಲ್ಲಿ ಯುದ್ಧವಾಯಿತು. ವಿಶ್ವಸಂಸ್ಥೆಯ ನಿರ್ಣಯಕ್ಕಾನುಸಾರವಾಗಿ ಅಲ್ಲಿ 1948ರ ಮೇ 14ರಂದು ಬ್ರಿಟಿಷರ ರಕ್ಷಣೆ ಕೊನೆಗೊಂಡು, ಮೇ 15ರಂದು ಪ್ಯಾಲಿಸ್ತೀನಿನ ಉದಯವಾಯಿತು. ಅದು ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಿತು. 1949ರ ಜನವರಿಯ ವರೆಗೂ ಯುದ್ಧ ಮುಂದುವರೆಯಿತು. ಅರಬ್ ರಾಷ್ಟ್ರಗಳಿಗೂ ಇಸ್ರೇಲಿಗೂ ನಡುವೆ ಶಾಂತಿ ಕೌಲಿನ ಸಹಿಯಾಗಿಲ್ಲ; ರಾಜತಾಂತ್ರಿಕ ಸಂಬಂಧವಿಲ್ಲ. ವಿಶ್ವಸಂಸ್ಥೆ ನೇಮಿಸಿರುವ ಯುದ್ಧ ವಿರಾಮ ಮೇಲ್ವಿಚಾರಣಾ ವ್ಯವಸ್ಥೆ ಮುಂದುವರಿಯುತ್ತಿದೆ. 1967ರಲ್ಲಿ ಇಸ್ರೇಲಿಗೂ ನೆರೆಯ ಅರಬ್ ರಾಜ್ಯಗಳಿಗೂ ನಡುವೆ ನಡೆದ ಆರು ದಿನಗಳ ಯುದ್ಧದ ಫಲವಾಗಿ ಇಡೀ ಜೆರೂಸಲೆಂ, ಜಾರ್ಡನ್ ನದಿಯ ಪಶ್ಚಿಮ ದಂಡೆಯ ಪ್ರದೇಶ. ಸಿನಾಯ್ ಪರ್ಯಾಯದ್ವೀಪ ಮತ್ತು ಗೋಲನ್ ದಿಬ್ಬಗಳು ಇಸ್ರೇಲಿನ ವಶವಾದುವು. ಜೆರೂಸಲೆಂ ಅನ್ನು ಇಸ್ರೇಲ್ ರಾಜ್ಯದಲ್ಲಿ ತಕ್ಷಣವೇ ವಿಲೀನಗೊಳಿಸಲಾಯಿತು. ಆದರೆ ಅಂತಾರಾಷ್ಟ್ರೀಯ ಒಪ್ಪಿಗೆ ಸಿಕ್ಕಿಲ್ಲ. 1973ರಲ್ಲಿ ಅರಬ್–ಇಸ್ರೇಲ್ ಯುದ್ಧದಿಂದಾಗಿ ಇಸ್ರೇಲ್‌ಗೆ ಅಪಾರ ನಷ್ಟ ಸಂಭವಿಸಿತು. ಅಮೆರಿಕದ ಮಧ್ಯಸ್ಥಿಕೆಯಲ್ಲಿ 1979ರಲ್ಲಿ ನಡೆದ ಕ್ಯಾಂಪ್ ಡೇವಿಡ್ ಒಪ್ಪಂದದಂತೆ ಈಜಿಪ್ಟ್ ಇಸ್ರೇಲ್ ನಡುವೆ ಶಾಂತಿ ನೆಲಸಿ ಸಿನಾಯ್ ಮರುಭೂಮಿಯನ್ನು ಈಜಿಪ್ಟಿಗೆ ಬಿಟ್ಟು ಕೊಡಲಾಯಿತು. 1982ರಲ್ಲಿ ಇಸ್ರೇಲ್ ಲೆಬನಾನ್‌ನಲ್ಲಿದ್ದ ಪ್ಯಾಲಸ್ತೀನ್ ವಿಮೋಚನಾ ಹೋರಾಟಗಾರರ ಶಿಬಿರಗಳ ಮೇಲೆ ಧಾಳಿ ನಡೆಸಿತು. 1987ರಲ್ಲಿ ಇಸ್ರೇಲ್ ಆಕ್ರಮಿತ ಗಾಜಾಪಟ್ಟಿ, ಪಶ್ಚಿಮದಂಡೆ, ಸರಿಯದ ಮತ್ತು ಗೋಲನ್ ದಿಬ್ಬಗಳಲ್ಲಿದ್ದ ಅರಬ್ಬರು ದಂಗೆಯೆದ್ದರು. 1992ರಲ್ಲಿ ಇಸ್ರೇಲ್ ಮತ್ತು ಅರಬ್ಬರ ನಡುವೆ ಸಂಧಾನವೇರ್ಪಟ್ಟಿತು. 1993ರಲ್ಲಿ ಇಸ್ರೇಲ್ ಮತ್ತು ಪ್ಯಾಲಸ್ತೀನ್ ಲಿಬರೇಷನ್ ಆರ್ಗನೈಸೇಷನ್ ನಡುವೆ ಶಾಂತಿ ಒಪ್ಪಂದವೇರ್ಪಟ್ಟಿತು. 1998ರಲ್ಲಿ ಸ್ವಾಯತ್ತ ಪ್ಯಾಲಸ್ತೀನ್ ಅರಬ್ಬರ ಆಳಿಕೆ ಆರಂಭವಾಯಿತು. ಆದರೆ ಅರಬ್ಬರ ಪ್ರದೇಶಗಳು ಇಂದಿಗೂ ಇಸ್ರೇಲ್‌ನ ಸೈನಿಕರ ವಶದಲ್ಲಿವೆ. 2002ರಲ್ಲಿ ಬಿಲ್ ಕ್ಲಿಂಟನ್, ಇಸ್ರೇಲ್ ಮತ್ತು ಪ್ಯಾಲಸ್ತೀನ್ ಅರಬ್ಬರ ಪ್ರತಿನಿಧಿಯಾಗಿದ್ದ ಯಾಸರ ಅರಾಫತ್ ನಡುವೆ ವೈನದಿಯ ಒಪ್ಪಂದವಾಯಿತು. ಇದರಂತೆ ಇಸ್ರೇಲ್ ತಾನು ಆಕ್ರಮಿಸಿಕೊಂಡಿರುವ ಅರಬ್ ಪ್ರದೇಶಗಳಿಂದ ತನ್ನ ಸೈನ್ಯವನ್ನು ಹಿಂತೆಗೆ ಕೊಳ್ಳಬೇಕಾಯಿತು. ಆದರೆ ಪ್ಯಾಲಸ್ತೀನಿನ ಹಿಜಾ ಬುಲ್ಲಾ ಮತ್ತು ಹಮಾಸ್ ಕಾರ್ಯಕರ್ತರು ನಡೆಸುತ್ತಿರುವ ದೊಂಬಿಗಳಿಂದ ಶಾಂತಿ ನೆಲೆಸಿಲ್ಲ. ಇಸ್ರೇಲಿನ ಯಹೂದಿಯರು ಮತ್ತು ಅರಬ್ಬರ ನಡುವೆ ಒಪ್ಪಂದವೇರ್ಪಟ್ಟರೆ ಶಾಂತಿ ನೆಲಸಬಹುದು. (ಆರ್.ಟಿ.ಎಸ್.;ಕೆ.ಜಿ.)

**ಇಸ್ಲಾಂ:** ಮಹಮ್ಮದೀಯರ ಧರ್ಮಕ್ಕೆ ಇರುವ ಅರಬ್ಬೀ ಹೆಸರು. ಪೈಗಂಬರ್ ಮಹಮ್ಮದರು ಬೋಧಿಸಿದ ಅನುಜ್ಞೆಯಂತೆ, ವಿಧಿನಿಯಮಗಳಂತೆ ನಡೆಯಬೇಕೆಂಬುದೇ ಇಸ್ಲಾಂ ಧರ್ಮದ ತಿರುಳು. ಇಸ್ಲಾಂ ಎಂದರೆ ದೈವಸಂಕಲ್ಪಕ್ಕೆ ಶರಣಾಗತಿ. ಅದು ಮನುಷ್ಯನ ಸಹಜಧರ್ಮ; ಏಕೆಂದರೆ ಅವನನ್ನು ಹಾಗೆ ಸೃಷ್ಟಿಸಿದವ ಸೃಷ್ಟಿಕರ್ತ–ಅಲ್ಲಾ. ಇಸ್ಲಾಂ ಎಂಬ ಹೆಸರನ್ನು ಮೊದಲು ಕೊಟ್ಟವ ಇಬ್ರಾಹೀಂ (ಏಬ್ರಾಹಾಂ) ಎಂದು ಕುರಾನ್ ಹೇಳುತ್ತದೆ. ಇಬ್ರಾಹೀಂ ಮತ್ತು ಅವನ ಮಗ ಇಸ್ಮಾಯೀಲ್ ಅಲ್ಲಾಮಂದಿರದ (ಇದಕ್ಕೆ ಅನಂತರ ಕಾಬಾ ಎಂದು ಹೆಸರಾಯಿತು) ತಳಹದಿ ಹಾಕುತ್ತಿದ್ದಾಗ ಹೀಗೆ ಪ್ರಾರ್ಥಿಸಿದರು; ಪ್ರಭು! ನಾವು ನಿನಗೆ ಶರಣಾಗುವಂತೆ (ಮುಸ್ಲೆಮಿನ್) ಮಾಡು; ನಮ್ಮ ಸಂತತಿಯಿಂದ, ನಿನಗೆ ಅಧೀನವಾದ ಜನಾಂಗವೊದನ್ನು ಸೃಜಿಸು ಮತ್ತು ನಮ್ಮ ಭಕ್ತಿ ಮಾರ್ಗಗಳನ್ನು ನಮಗೆ ತೋರಿಸು, ನಮಗೆ ಕೃಪೆಮಾಡು. ನೀನು, ನೀನು ಮಾತ್ರವೇ ಸಂರಕ್ಷಕ, ದಯಾಮಯ.

ಅದೇ ಸಂದರ್ಭದಲ್ಲಿ ಇಬ್ರಾಹೀಂ ತನ್ನ ಮಕ್ಕಳಿಗೆ ಹೀಗೆ ವಿಧಿಸಿದ: ಓ ಮಕ್ಕಳೇ ! ನಿಶ್ಚಿತವಾಗಿಯೂ ಅಲ್ಲಾ ನಿಮಗೆ ಈ ಧರ್ಮವನ್ನು ಆರಿಸಿದ್ದಾನೆ: ಆದ್ದರಿಂದ, ನೀವು ಮುಸ್ಲಿಮರಾಗದೆ ಸಾಯಬೇಡಿ ಅಥವಾ ಜೇಕಬನಿಗೆ ಸಾವು ಬಂದಾಗ ನೀವು ಅಲ್ಲಿರುವಿರಾ? ಜೇಕಬ್ ಅವರನ್ನು ಕೇಳಿದ: ನಾನು ಸತ್ತ ಮೇಲೆ ನೀವು ಯಾರನ್ನು ಸೇವಿಸುವಿರಿ? ಅವರು ಹೇಳಿದರು: ನಿಮ್ಮ ದೇವನನ್ನು ನಿಮ್ಮ ಪಿತೃಗಳಾದ ಇಬ್ರಾಹೀಂ, ಇಸ್ಮಾಯಿಲ್ ಮತ್ತು ಐಸಾಕರ ದೇವನನ್ನು–ಅವನೊಬ್ಬನನ್ನೇ–ನಾವು ಸೇವಿಸುತ್ತೇವೆ ಮತ್ತು ಅವನಿಗೆ ಶರಣಾಗುತ್ತೇವೆ. ಹೀಗೆ ಇಸ್ಲಾಂ ಧರ್ಮದ ಚರಿತ್ರೆ ಮೊದಲಾಗುತ್ತದೆ.

ಪೈಗಂಬರನ ಮಾತಿನಲ್ಲೇ ಹೇಳುವುದಾದರೆ ಆಡಂನ ಕಾಲದಿಂದ ಜಾರಿಯಲ್ಲಿದ್ದ ಮತಧರ್ಮಗಳಲ್ಲಿ ಅತ್ಯಂತ ಪ್ರಾಚೀನವೂ ಸಂಪ್ರದಾಯಬದ್ಧವೂ ಆದುದೆಂದರೆ ಇಸ್ಲಾಂ ಧರ್ಮವೇ. ಇದರ ಆಧಾರಭೂತವಾದ ಭಾವನೆಗಳು ಎರಡು : ಇಮಾನ್ – ನಂಬಿಕೆ. ಇದು ಮೊದಲನೆಯದು, ದೀನ್ – ಧರ್ಮ. ಇದು ಎರಡನೆಯದು.

ಇಸ್ಲಾಂ ಸಂಸ್ಥೆ ಐದು ಮೂಲಭೂತ ಸೂತ್ರಗಳ ಮೇಲೆ ನಿಂತಿದೆ. ದೇವರಿಗೆಲ್ಲ ದೇವನಾದ ಅಲ್ಲಾನಲ್ಲೂ ಪ್ರವಾದಿ ಪೈಗಂಬರರಲ್ಲೂ ಇರಬೇಕಾದ ನಂಬಿಕೆ ಮೊದಲನೆಯದು. ಉಳಿದ ನಾಲ್ಕೆಂದರೆ, ಪ್ರಾರ್ಥನೆ, ಉಪವಾಸ, ಜ಼ಕಾತ್ ಮತ್ತು ಯಾತ್ರೆ. ಮೊದಲ ಸೂತ್ರಕ್ಕೆ ವ್ಯಾಖ್ಯಾನದ ಅಗತ್ಯವಿಲ್ಲವಾದ್ದರಿಂದ ಉಳಿದ ನಾಲ್ಕನ್ನು ಗಮನಿಸಬಹುದು.

ಸಾರತಃ ಮುಸ್ಲಿಮನೊಬ್ಬ ತನ್ನ ಸೃಷ್ಟಿಕರ್ತನೊಡನೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಮಸೀದಿಯಲ್ಲಿ ದಿನಕ್ಕೆ ಐದು ಸಲ ಪಡೆಯುವ ಆಧ್ಯಾತ್ಮಿಕ ಸಂಪರ್ಕಕ್ಕೆ ಸಾಧನವಾದದ್ದು ಪ್ರಾರ್ಥನೆ. ಪ್ರಾರ್ಥನೆಯಲ್ಲಿ ಪ್ರತಿಯೊಬ್ಬ ಮುಸ್ಲಿಮನೂ ತನ್ನ ದೇಹ, ಆತ್ಮಗಳಿಗೆ ಕಾರಣವಾದ ಪವಿತ್ರ ಶಕ್ತಿಯ ಸಾನ್ನಿಧ್ಯದಲ್ಲಿ ತಾನಿದ್ದೇನೆಂಬುದನ್ನು ಮನಸ್ಸಿನಲ್ಲಿ ದೃಢ ಮಾಡಿಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ. ಸರ್ವ ದ್ರಷ್ಟಾರನೂ ಸರ್ವಜ್ಞಾತೃವೂ ಆದ ನ್ಯಾಯಾಧೀಶನ ಮುಂದಿನ ಈ ಹಾಜರಿ ಮುಸ್ಲಿಮನನ್ನು ಎಲ್ಲ ಅನೀತಿಗಳಿಂದ ಮತ್ತು ಅಪರಾಧಗಳಿಂದ ದೂರವಿರಿಸುತ್ತದೆ. ಇದು ಪ್ರಾರ್ಥನೆಯ ಮುಖ್ಯೋದ್ದೇಶಗಳಲ್ಲಿ ಒಂದು. ಕುರಾನ್ ಹೀಗೆ ಹೇಳುತ್ತದೆ : ಪ್ರಾರ್ಥನೆ ಮುಸ್ಲಿಮನನ್ನು ದೇಹದಲ್ಲಿ ಮತ್ತು ಆತ್ಮದಲ್ಲಿ ಕ್ಲುಪ್ತನನ್ನಾಗಿ, ವ್ಯವಸ್ಥಿತನನ್ನಾಗಿ, ಸ್ವಸ್ಥ ಹಾಗೂ ಶುದ್ಧನನ್ನಾಗಿ ಇರಿಸುವ ಆಧ್ಯಾತ್ಮಿಕ ಸಾಧನ. ಸಾಮೂಹಿಕ ಪ್ರಾರ್ಥನೆಗಳು ಅವನ ಮನಸ್ಸಿನಲ್ಲಿ ಸಮಷ್ಟಿ ಚೈತನ್ಯವನ್ನೂ ಸಮಾನತೆ ಸೋದರತೆಗಳ ಭಾವನೆಗಳನ್ನೂ ಉಂಟುಮಾಡುತ್ತವೆ. ದೊಡ್ಡವರಿರಲಿ ಸಣ್ಣವರಿರಲಿ, ಧನಿಕರಿರಲಿ ದರಿದ್ರರಿರಲಿ, ದೊರೆಗಳಾಗಲಿ, ಪ್ರಜೆಗಳಾಗಲಿ ಎಲ್ಲ ಮುಸ್ಲಿಮರೂ ಧರ್ಮದಲ್ಲಿ ಸಹೋದರರು. ಆರೋಗ್ಯದಿಂದಿರಲಿ ಅಥವಾ ಕಾಯಿಲೆಯಿಂದಿರಲಿ, ಮೇಲೇಳಲು ಅಶಕ್ತರಾಗಿರಲಿ, ಶಾಂತಿಕಾಲದಲ್ಲಾಗಲಿ ಯುದ್ಧ ಕಾಲದಲ್ಲಾಗಲಿ ಮುಸ್ಲಿಮರಾದವರು ಅಲ್ಲಾನಿಗೆ ಪ್ರಾರ್ಥನೆ ಸಲ್ಲಿಸಲೇಬೇಕು : ಅದಕ್ಕಾಗಿ ವಿಶೇಷ ನಿಯಮಗಳನ್ನು ರೂಪಿಸಲಾಗಿದೆ. ಏಕೆಂದರೆ ಪ್ರಾರ್ಥನೆಯ ಜೀವಾಳ ಕರುಣಾಮಯನಾದ ವಿಶ್ವೇಶನೊಡನೆ ಮುಸ್ಲಿಮನ ನೇರ ಸಂವಾದ.

ಉಪವಾಸದ ಪ್ರಾಶಸ್ತ್ಯ ಕುರಾನಿನಲ್ಲಿ ಹೀಗೆ ನಿರೂಪಣೆಗೊಂಡಿದೆ : ಮಾನವ ಕುಲದ ಮಾರ್ಗದರ್ಶಿಯೂ ತಪ್ಪು ಒಪ್ಪುಗಳ ಮಾನದಂಡವೂ ಆದ ಕುರಾನ್ ಪ್ರಕಾಶನಗೊಂಡ ತಿಂಗಳು ರಂಜಾನ್. ನಿಮ್ಮಲ್ಲಿ ಹಾಜರಿರತಕ್ಕವರೆಲ್ಲ ಈ ತಿಂಗಳು ಉಪವಾಸವನ್ನಾಚರಿಸಿ ಮತ್ತು ನಿಮ್ಮಲ್ಲಿ ಅನಾರೋಗ್ಯದಿಂದಿರುವವರು ಮತ್ತು ಪ್ರಯಾಣದಲ್ಲಿರುವವರು ಅಷ್ಟೇ ಸಂಖ್ಯೆಯ ಇತರ ದಿನಗಳಲ್ಲಿ ಉಪವಾಸವನ್ನಾಚರಿಸಲಿ. ಅಲ್ಲಾ ನಿಮಗೆ ಸುಖವನ್ನು ಬಯಸುತ್ತಾನೆ; ಕಷ್ಟಗಳನ್ನು ಬಯಸುವುದಿಲ್ಲ.

ಉಪವಾಸ ಎಲ್ಲ ಮುಸ್ಲಿಮರಿಗೂ–ಹೆಣ್ಣಾಗಲಿ, ಗಂಡಾಗಲಿ, ಬಡವರಾಗಲಿ, ಶ್ರೀಮಂತರಾಗಲಿ–ಕಡ್ಡಾಯವಾದುದು. ಇದರಿಂದ ಶ್ರೀಮಂತರು ಹಸಿವು. ಅವಶ್ಯಕತೆಗಳ ವೈಯಕ್ತಿಕ ಅನುಭವ ಪಡೆಯುತ್ತಾರೆ. ಮತ್ತು ರಂಜಾನಿನ ಅವಧಿಯಲ್ಲಿ ಬಡವರು ಶ್ರೀಮಂತರ ಸಮಾನಸ್ಕಂಧರಾಗಿರುವುದರಿಂದ ಅವರನ್ನು ಅಲಕ್ಷಿಸುವಂತಿಲ್ಲ. ಆಧ್ಯಾತ್ಮಿಕ ಲಾಭಗಳ ಜೊತೆಗೆ ವೈದ್ಯರು ಉಪವಾಸಕ್ಕೆ ಬಹಳ ಮಹತ್ವ ಕೊಡುತ್ತಾರೆ. ಮತ್ತು ಆಂತರಿಕ ವ್ಯಾಧಿಗಳಿಗೆ ಅದು ಏಕೈಕ ಚಿಕಿತ್ಸೆಯೆಂದು ಭಾವಿಸುತ್ತಾರೆ.

ಜ಼ಕಾತ್ ಎಂಬುದು ಒಂದು ಬಗೆಯ ದಾನ; ಅದರ ಉದ್ದೇಶ ಸಾಮಾಜಿಕ ಸೇವೆ. ದೀನ ದರಿದ್ರರಿಗೆ ಆಹಾರವನ್ನೀಯುವುದು. ವಾರ್ಷಿಕ ಉಳಿತಾಯದ 2 1/2% ಯಷ್ಟನ್ನು–ಬಡವರ ಹಿತಕ್ಕಾಗಿ ಪ್ರತಿಯೊಬ್ಬ ಮುಸ್ಲಿಮನೂ ಕೊಡಬೇಕು. ಜನಾಂಗದ ಒಳಿತಿಗಾಗಿ ಶ್ರೀಮಂತರು ಕೊಡಬೇಕಾಗಿದ್ದ ಕಡ್ಡಾಯ ತೆರಿಗೆಯಾಗಿತ್ತು. ಈ ಜ಼ಕಾತ್ ಇದರಿಂದ ಮುಸ್ಲಿಮರಿಗೆ ಮಾತ್ರವಲ್ಲದೆ ಮುಸ್ಲೀಮೇತರಿಗೂ ಲಾಭವಾಗುತ್ತಿತ್ತು.

ಇಸ್ಲಾಮಿನ ನಾಲ್ಕನೆಯ ಆಧಾರ ಸ್ತಂಭವೆಂದರೆ ಹಾಜ್. ಇದರ ಅರ್ಥ, ಸಾಧ್ಯವಾದಲ್ಲಿ ಪ್ರತಿಯೊಬ್ಬ ಮುಸ್ಲಿಮನೂ ತನ್ನ ಜೀವಮಾನದಲ್ಲಿ ಕಡೆಯಪಕ್ಷ ಒಂದು ಸಲವಾದರೂ ಮೆಕ್ಕಾದಲ್ಲಿ ಪ್ರತಿ ವರ್ಷ ನಡೆಯುವ ಅಂತರರಾಷ್ಟ್ರೀಯ ಮೇಳಕ್ಕೆ ಹೋಗಬೇಕು, ಹಿಂದೂಗಳಿಗೆ ಕಾಶಿ ರಾಮೇಶ್ವರ ಯಾತ್ರೆಗಳಿದ್ದಂತೆ ಮುಸಲ್ಮಾನರಿಗೆ ಮೆಕ್ಕಾಯಾತ್ರೆ.

ಪ್ರಪಂಚದ ಮೂಲೆಮೂಲೆಗಳಿಂದ ಸಾವಿರಾರು ಮಂದಿ, ಭಿನ್ನ ಭಿನ್ನ ದೇಶಗಳಿಗೆ, ವರ್ಣಗಳಿಗೆ ಮತ್ತು ಜನಾಂಗಗಳಿಗೆ ಸೇರಿದ ದೊರೆಗಳು ಮತ್ತು ದರಿದ್ರರು ಸರಳವಾದ, ಹೊಲಿಗೆಯಿಲ್ಲದ ವಸ್ತ್ರಗಳನ್ನು ಧರಿಸಿ, ಬರಿಗಾಲಿನಲ್ಲಿ, ಬರಿತಲೆಯಲ್ಲಿ ಬಂದು ಒಂದು ಕೇಂದ್ರಸ್ಥಳದಲ್ಲಿ ಸೇರುವಂಥ ಈ ಮೇಳ ಇಸ್ಲಾಮೀ ಸಾಮ್ಯವಾದದ ವಾರ್ಷಿಕ ಪ್ರದರ್ಶನವಾ

ಗಿದ್ದು, ಸೋದರತೆ, ಸಮಾನತೆಗಳನ್ನು ವ್ಯಕ್ತಪಡಿಸುವುದು ಮಾತ್ರವಲ್ಲದೆ, ಎಲ್ಲ ಮಾನವಕುಲದ ಪರವಾಗಿ ಉದ್ದೇಶದ ಏಕತೆಯನ್ನು ಸಾರುತ್ತದೆ. ಪುರುಷರ ಮತ್ತು ಸ್ತ್ರೀಯರ, ಮುದುಕರ ಮತ್ತು ಯುವಕರ ಈ ಪ್ರವಾಹಗಳು ಅಸಂಖ್ಯ ಕಷ್ಟಗಳನ್ನು ಸಹಿಸಿ, ಪ್ರಾಣಕ್ಕೂ ಆಸ್ತಿಗೂ ಇರುವ ಅಪಾಯವನ್ನು ಲೆಕ್ಕಿಸದೆ ಮರಳಿನ ಸಮುದ್ರಕ್ಕೆ ಬರುತ್ತವೆ. ಅವೆಲ್ಲಕ್ಕೂ ಒಂದೇ ಗುರಿ–ಅಲ್ಲಾನಿಗೆ ತಮ್ಮ ಗೌರವವನ್ನು ಸಮರ್ಪಿಸುವುದು; ಅವನನ್ನು ಸರ್ವತ್ರ ಕಾಣಬಹುದಾಗಿದ್ದರೂ ಸಾಮೂಹಿಕವಾಗಿ ಆತನನ್ನು ತಮ್ಮೆಲ್ಲರ ದೈವವೆಂದರು ಉದ್ಘೋಷಿಸುವುದು ಅವರ ಬಯಕೆ. ಇದು ಹಾಜ್ ಸಂಸ್ಥೆ.

ಹೀಗೆ ಇಸ್ಲಾಂ ದೇವರ ಬಗ್ಗೆ ಹೇಗೋ ಹಾಗೆ ಸಹಮಾನವರ ಬಗ್ಗೆಯೂ ನಮಗೆ ಇರಬೇಕಾದ ಕರ್ತವ್ಯ ಶ್ರದ್ಧೆಯನ್ನು ಬೋಧಿಸುತ್ತದೆ.

ಷರೀಯತ್ ಎಂದರೆ ಇಸ್ಲಾಮಿನ ಶಾಸನ. ಯಾವುದು ಧರ್ಮಬದ್ಧ, ಯಾವುದು ನಿಷಿದ್ಧ ಎಂಬುದನ್ನಿದು ತಿಳಿಸುತ್ತದೆ. ಕೆಲವು ಕೃತ್ಯಗಳನ್ನು ಭಗವಂತನ ಹಕ್ಕುಗಳೆಂದೂ ಕೆಲವನ್ನು ಮಾನವರ ಹಕ್ಕುಗಳೆಂದೂ ಹೆಸರಿಸಲಾಗಿದೆ ಈ ಎರಡೂ ವರ್ಗದ ಕೃತ್ಯಗಳನ್ನು ಸಂಪೂರ್ಣ ಮತ್ತು ಆಂಶಿಕ ಎಂದು ಪುನರ್ವಿಭಾಗಿಸಲಾಗಿದೆ. ಭಗವಂತನ ಸಂಪೂರ್ಣ ಹಕ್ಕುಗಳಲ್ಲಿ ಇವು ಸೇರಿವೆ. 1. ಶ್ರದ್ಧೆ ಅಥವಾ ಇಮಾನ್. 2. ಐದು ನಿರ್ದಿಷ್ಟ ಸಮಯಗಳಲ್ಲಿ ಪ್ರಾರ್ಥನೆ. 3. ರಂಜಾನಿನ ಉಪವಾಸ. 4. ಆಹ್ಸ್ವ ಅಥವಾ ಜ಼ಕಾತ್. 5. ಯಾತ್ರೆ 6. ಖುಮ್ಸ್–ಎಂದರೆ ಶತ್ರುವನ್ನು ಸೋಲಿಸುವುದರಿಂದ ಬಂದ ಲಾಭದಲ್ಲಿ ಅಥವಾ ಗಣಿಯಲ್ಲಿ ಸಿಕ್ಕಿದ್ದರಲ್ಲಿ ಐದನೆಯ ಒಂದು ಭಾಗವನ್ನು ಸರ್ಕಾರಕ್ಕೆ ಸಲ್ಲಿಸುವುದು. 7. ಕೊಲೆ ಮಾಡದಿರುವುದು. 8. ಮಾದಕ ಪಾನೀಯಗಳನ್ನು ಸೇವಿಸದಿರುವುದು. 9. ವ್ಯಭಿಚಾರ, ಜೂಜು ಮುಂತಾದವುಗಳಲ್ಲಿ ತೊಡಗದಿರುವುದು.

ಭಗವಂತನ ಆಂಶಿಕ ಹಕ್ಕುಗಳು ಯಾವುವೆಂದರೆ, ವ್ಯಕ್ತಿಗೆ ಸಂಬಂಧಿಸಿದ್ದರೂ ಸರ್ಕಾರದ ಉಸ್ತುವಾರಿಗೆ ಒಳಪಟ್ಟಿರತಕ್ಕವು; ಅಂದರೆ ಕಳ್ಳತನ ಇತ್ಯಾದಿ.

ವ್ಯಕ್ತಿಗತ ಹಕ್ಕುಗಳಲ್ಲಿ ಇವು ಸೇರಿವೆ; 1. ವ್ಯಕ್ತಿಯ ಕ್ಷೇಮ. 2. ಪ್ರತಿಷ್ಠೆಯ ಕ್ಷೇಮ. 3. ಆಸ್ತಿಯ ಕ್ಷೇಮ. 4. ವಿವಾಹಸಂಬಂಧಗಳ ಕ್ಷೇಮ. 5. ಪೋಷಕತ್ವದ ಕ್ಷೇಮ. 6. ಅನುವಂಶಿಕತೆಯ ಹಕ್ಕುಗಳ ಕ್ಷೇಮ. 7. ಎಲ್ಲ ನ್ಯಾಯಬದ್ಧ ಕೃತ್ಯಗಳಲ್ಲಿ ಸ್ವಾತಂತ್ರ್ಯದ ಕ್ಷೇಮ.

ಆಂಶಿಕವಾದ ವ್ಯಕ್ತಿಗತ ಮತ್ತು ಸರ್ಕಾರದ (ಭಗವಂತನ) ಹಕ್ಕುಗಳು ಮತ್ತೊಬ್ಬರ ಪ್ರತಿಷ್ಠೆಯ ಮೇಲಿನ ಆಕ್ರಮಣಕ್ಕೆ ಸಂಬಂಧಿಸಿದವು ಅಥವಾ ಮತ್ತೊಬ್ಬರ ಶೀಲದ ಮೇಲೆ ಆಕ್ರಮಣವೆಸಗುವಂಥವು. ಈ ಸಂದರ್ಭಗಳಲ್ಲಿ ಆಕ್ರಮಣಕಾರಿಯ ಮೇಲೆ ಸರ್ಕಾರ ಸ್ವತಂತ್ರ ಕ್ರಮವನ್ನು ಕೈಗೊಳ್ಳಬೇಕು.

ಪೈಗಂಬರರ ಉಪದೇಶಗಳ ಸಾರ ಸರ್ವಸ್ವವನ್ನು ಮಥನಮಾಡಿ ಬಂದ ಮುಖ್ಯಾಂಶಗಳನ್ನು ತತ್ತ್ವಗಳ ರೂಪದಲ್ಲಿ ಬಹು ಸಂಗ್ರಹವಾಗಿ ಇಲ್ಲಿ ಹೇಳಲಾಗಿದೆ. ಶ್ರದ್ಧಾವಂತನಾದವನು ಈ ವಿಷಯಗಳಲ್ಲಿ ಅವಿಚಲವಾದ ನಂಬಿಕೆಯನ್ನಿಡಬೇಕಾದುದು ಅಗತ್ಯ : ದೇವರನ್ನು ಅವನ ದೂತರು ಮತ್ತು ಗ್ರಂಥಗಳನ್ನು ಅವನ ಪ್ರತಿನಿಧಿಗಳಾದ ಪ್ರವಾದಿಗಳನ್ನು ನಂಬಬೇಕು. ಭಗವಂತನ ಆಜ್ಞೆಗಳನ್ನು ಶಂಕಿಸಬಾರದು. ಪುನರುತ್ಥಾನದ ಮತ್ತು ತೀರ್ಪಿನ ದಿನದ ವಿಷಯದಲ್ಲಿ ನಿಷ್ಠೆಯ ನಂಬಿಕೆ ಅಗತ್ಯ. ಪವಿತ್ರ ಕುರಾನಿನಲ್ಲಿ ಮತ್ತು ಅದರ ಸಂಪ್ರದಾಯ ಪರಂಪರೆಯಲ್ಲಿ ಉಕ್ತವಾಗಿರುವಂಥವೇ ಅನುಕರಣಯೋಗ್ಯವಾದ ನೀತಿನಿಯಮಗಳು (ಅದೇಲ್‌ಗಳು).

ಪ್ರಾರ್ಥನೆ ಮತ್ತು ಪೂಜೆ (ಇಬಾದತ್) ಭವಗತ್ ಸಾನ್ನಿಧ್ಯವನ್ನು ಪಡೆಯಲು ಮಾನವನಿಗಿರುವ ಸುಲಭ ಮಾರ್ಗ. ಉಷಃಕಾಲ, ಪ್ರಾತಃಕಾಲ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿ–ಹೀಗೆ ದಿನದಲ್ಲಿ ಐದು ಬಾರಿ ಪ್ರಾರ್ಥನೆ (ಸಲತ್) ಮಾಡಬೇಕು. ಇವುಗಳಲ್ಲಿ ಇಷ್‌ರಕ್ (ಸೂರ್ಯೋದಯದ ಬಳಿಕದ್ದು), ಜಹ ಮತ್ತು ತಹಜ್ಜದ್ (ಮಧ್ಯರಾತ್ರಿಯದು) ಪ್ರಾರ್ಥನೆಗಳನ್ನು ಮಾಡುವ ಅಥವಾ ಬಿಡುವ ವಿಷಯ ವ್ಯಕ್ತಿಗೆ ಸೇರಿದ್ದು. ಮೌಜ್ಜಿನ್ (ಘೋಷಕ) ಪ್ರಾರ್ಥನೆಗೆ ಮೊದಲು ಕೂಗಿ ಹೇಳುವ ಮಾತುಗಳು ಹೀಗಿವೆ : ಭಗವಂತ ದೊಡ್ಡವ, ಅಲ್ಲಾನ ವಿನಾ ದೇವರಿಲ್ಲವೆಂಬುದಕ್ಕೆ ನಾನು ಸಾಕ್ಷಿ. ಮಹಮ್ಮದ್ ಭಗವಂತನ ಪ್ರವಾದಿಯೆಂಬುದಕ್ಕೆ ನಾನು ಸಾಕ್ಷಿ. ಪ್ರಾರ್ಥನೆಗೆ ಬರಲು ತ್ವರೆಮಾಡಿ, ಮುಕ್ತಿಗೆ ಬರಲು ತ್ವರೆಮಾಡಿ, ಅಲ್ಲಾನ ವಿನಾ ದೇವರಿಲ್ಲ. ಈ ವಾಕ್ಯಗಳು ಪ್ರಾರ್ಥನೆಗೆ ಇಸ್ಲಾಂ ಕೊಟ್ಟಿರುವ ಪ್ರಾಧಾನ್ಯವನ್ನು ಎತ್ತಿ ತೋರಿಸುತ್ತವೆ.

ಇಸ್ಲಾಂ ಪ್ರಕಾರ ಮಾನವನ ನಿಜವಾದ ವ್ಯಕ್ತಿತ್ವದಲ್ಲಿ ಏನೂ ಕೆಡುಕಿಲ್ಲ; ಆದರೆ ಅವನಲ್ಲಿ ಕೆಡುಕುಮಾಡಲು ಪ್ರಲೋಭನಗೊಳ್ಳುವ ದೌರ್ಬಲ್ಯವಿದೆ. ಆದ್ದರಿಂದ ಕೆಡುಕು ಮಾನವಸ್ವಭಾವವಲ್ಲ. ಅರ್ಜಿತ ಗುಣ. ಅದೊಂದು ಮಾನಸಿಕ ವ್ಯಾಧಿ; ಅದನ್ನು ಸರಿಯಾದ ಬೋಧನೆ ಮತ್ತು ಶಿಕ್ಷಣದಿಂದ ಗುಣಪಡಿಸಬಹುದು. ಸ್ವಭಾವದಿಂದ ಕೆಟ್ಟವನಾದ ಸೈತಾನ್ ಪಾಪಮಾಡಿದವರಲ್ಲಿ ಎಂದರೆ ದೇವರ ಆಜ್ಞೆಗೆ ಅವಿಧೇಯರಾದವರಲ್ಲಿ ಮೊದಲಿಗ. ಅವನ ಪಾಪಗಳೆಂದರೆ ಸ್ವಪ್ರತಿಷ್ಠೆ ಮತ್ತು ಅಹಂಕಾರ; ಇವು ಮಹಾಪಾಪಗಳಲ್ಲಿ ಸೇರಿವೆ. ಕೆಟ್ಟ ಪ್ರವೃತ್ತಿಯೆಂಬುದು ಪಾಶವೀ ಆತ್ಮದ ಪ್ರೇರಣೆ. ಕುರಾನಿನ ಒಂದು ಮೂಲಭಾಗ ಹೇಳುತ್ತದೆ:

ವಿಜೋಸೆಫ್ ಹೇಳುತ್ತಾನೆ. ನಾನು (ದೌರ್ಬಲ್ಯದಿಂದ) ಸರ್ವತಂತ್ರನೆಂದು ಘೋಷಿಸುವುದಿಲ್ಲ ಅತ್ಯಂತ ನಿಶ್ಚಯವಾಗಿ ನನ್ನ ಪಾಶವೀ ಆತ್ಮ ಕೆಡುಕನ್ನು ಪ್ರಚೋದಿಸುತ್ತದೆ (ಆದ್ದರಿಂದ ಮನುಷ್ಯ ಕೆಡುಕನ್ನಾಚರಿಸುತ್ತಾನೆ); ಆದರೆ ಅದರ ಬಗೆಗೆ ಪರಮಾತ್ಮನಿಗೆ ಕರುಣೆಯಿದೆಹಿ.

ಆದಕಾರಣ, ಪಾಶವೀ ಆತ್ಮವನ್ನು ನಿಜವಾದ ವ್ಯಕ್ತಿತ್ವಕ್ಕೆ ಅಧೀನಗೊಳಿಸಿದರೆ, ಮನುಷ್ಯ ಕೆಡುಕಿನಿಂದ ಬಿಡುಗಡೆಗೊಳ್ಳಬಹುದು. ಪಾಪಗಳನ್ನು ದೊಡ್ಡವು ಮತ್ತು ಚಿಕ್ಕವೆಂದು ವಿಂಗಡಿಸಲಾಗಿದೆ. ಈ ವಿಂಗಡಣೆಗೆ ಕುರಾನಿನ ಆಧಾರ ಹೀಗಿದೆ : ವಿಮಹಾಪಾಪಗಳನ್ನು ವರ್ಜಿಸಿ, ಕೇವಲ ಲಘುತರವಾದ ಅಪರಾಧಗಳನ್ನು ಎಸಗುವವರಿಗೆ ಭಗವಂತ ನಿಜವಾಗಿಯೂ ದಯೆ ಸೂಸುತ್ತಾನೆಹಿ.

ಮಹಾಪಾಪಗಳಲ್ಲಿ ಮುಖ್ಯವಾದ ಕೆಲವು ಹೀಗಿವೆ: ವ್ಯಕ್ತಿಗೆ ದೇವರ ಸಾಹಚರ್ಯ ಕಲ್ಪಿಸುವುದು: ಉದ್ದೇಶಪೂರ್ವಕ ಕೊಲೆಮಾಡುವುದು; ವ್ಯಭಿಚಾರ; ಕಳವು; ಅಸಹಜವಾದ ಅಪರಾಧ; ಕುಡಿತ; ದುಬಾರಿ ಬಡ್ಡಿ ಹಾಕುವುದು; ತಂದೆ ತಾಯಿಗಳಿಗೆ ಅವಿಧೇಯತೆ ತೋರುವುದು : ಕ್ವಾಜ್ಬ್ ಅಥವಾ ವಿವಾಹಪೂರ್ವ ಸಂಭೋಗ: ಸುಳ್ಳು ಸಾಕ್ಷಿ; ಅನಾಥರಿಗೆ ಮೋಸ; ಭಗವತ್ಕಾರುಣ್ಯದ ಬಗ್ಗೆ ನಿರಾಶೆ; ಯುದ್ಧದಲ್ಲಿ ಹೇಡಿತನ : ಪ್ರಾರ್ಥನೆಗಳ ಲಕ್ಷ್ಯ; ಜೂಜಾಟ; ಉಪವಾಸಗಳ ಅಲಕ್ಷ್ಯ.

ಯಾವುದೇ ಪಾಪಕ್ಕಾಗಿ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಪಟ್ಟರೆ ಅದರಿಂದ ಭಗವಂತನ ಕರುಣೆ ಮತ್ತು ಮುಕ್ತಿ ದೊರಕಬಹುದು. ಮುಸ್ಲಿಮನಲ್ಲದವನೊಬ್ಬ ಇಸ್ಲಾಂ ಧರ್ಮವನ್ನವಲಂಬಿಸಿದರೆ, ಅವನ ಹಿಂದಿನ ದೋಷಗಳೆಲ್ಲ ನಿವಾರಣೆಯಾಗುತ್ತವೆ. ಮುಸ್ಲಿಮನಾದವ ದೊಡ್ಡ ಪಾಪವೊಂದರಿಂದ ಪಾಪಿಯಾದರೂ ವಿಶ್ವಾಸ ದ್ರೋಹಿಯಾಗುವುದಿಲ್ಲ.

ಆತ್ಮಹತ್ಯೆಯೊಂದು ಪಾಪ; 'ಶ್ರದ್ಧಾಳುವೊಬ್ಬ ಮತ್ತೊಬ್ಬ ಶ್ರದ್ಧಾಳುವನ್ನು ತಪ್ಪು ತಿಳಿವಳಿಕೆಯಿಂದಲ್ಲದೆ ಕೊಲ್ಲುವುದು ತಪ್ಪಾಗುತ್ತದೆ' ಎಂಬ ಕುರಾನಿನ ವಾಕ್ಯದಲ್ಲಿ ಇದಕ್ಕೆ ಪುಷ್ಟಿ ದೊರೆಯುತ್ತದೆ. ತನ್ನನ್ನು ತಾನು ಕೊಂದುಕೊಳ್ಳುವುದರಲ್ಲಿ ತಪ್ಪು ತಿಳುವಳಿಕೆಗಿಂತ ಸರಿಯಾದ ಉದ್ದೇಶವೇ ಕಂಡುಬರುತ್ತದಾದ ಕಾರಣ ಅದೊಂದು ಪಾಪ. ಸಂಪ್ರದಾಯದ ಪ್ರಕಾರ ತನ್ನನ್ನು ತಾನು ಕೊಂದುಕೊಳ್ಳುವವ ನರಕದಲ್ಲಿ ನರಳುತ್ತಾನೆ. ಇಸ್ಲಾಮಿನಲ್ಲಿ, ಜೀವಕ್ಕೆ ಗೌರವವುಂಟು, ಅದರ ನಾಶಕ್ಕೆ ಅದರ ಮಾಲೀಕನೆ ಕಾರಣನಾದರೂ ಅದು ನಿಷಿದ್ಧ, ಈ ಕಾರಣದಿಂದ, ಮುಸ್ಲಿಂ ರಾಷ್ಟ್ರಗಳಲ್ಲಿ ಆತ್ಮಹತ್ಯೆಯಿಂದಾಗುವ ಮರಣಗಳು ವಿರಳ. ಮುಸ್ಲಿಮನಾದ ಭಗವಂತನ ಆಜ್ಞೆಗಳಿಗೆ ಒಳಪಡಬೇಕು ಮತ್ತು ಅಪರಿಹಾರ್ಯವಾದ ಎಲ್ಲ ಪ್ರಸಂಗಗಳನ್ನೂ ಉಲ್ಲಾಸದಿಂದ ಅಂಗೀಕರಿಸಬೇಕು. ಕೆಲವು ಘಟನೆಗಳನ್ನು ಮಾನವ ಜೀವಿಗಳ ವಿಷಯದಲ್ಲಿ ಸರ್ವಶಕ್ತನಾದ ದೇವರು ವಿಧಿಸಿರುವ ಪರೀಕ್ಷೆಗಳೆಂದು ತೆಗೆದುಕೊಳ್ಳಬೇಕು–ಎಂಬ ಮಾತಿಗೆ ಕುರಾನಿನ ಈ ವಾಕ್ಯ ಪುಷ್ಟಿಯನ್ನೀಯುತ್ತದೆ : ವಿಆತ ನಿಮ್ಮನ್ನು ಭಯದಿಂದ, ಹಸಿವಿನಿಂದ, ಆಸ್ತಿ ನಷ್ಟದಿಂದ, ಬದುಕು ಮತ್ತು ಫಲಗಳಿಂದ ನಿಶ್ಚಿತವಾಗಿ ಪರೀಕ್ಷಿಸುತ್ತಾನೆ; (ಓ ಪ್ರವಾದಿಯೇ), ರೋಗಿಗೆ (ಈ ಎಲ್ಲ ಪರೀಕ್ಷೆಗಳ ಸಂದರ್ಭದಲ್ಲಿ) ಸುವಾರ್ತೆಗಳನ್ನು ನೀಡು, ಆಗ ಆತ ದುರದೃಷ್ಟಕ್ಕೆ ಸಿಕ್ಕಿದ್ದರೂ 'ನಿಜವಾಗಿ ನಾವು ಭಗವಂತನಿಗೆ ಸೇರಿದವರು, ಅವನಲ್ಲಿಗೇ ಖಂಡಿತ ಮರಳುತ್ತೇವೆ' ಎಂದು ಹೇಳುತ್ತಾನೆ.

ಈ ದೃಷ್ಟಿಯಿಂದ, ಆತ್ಮಹತ್ಯೆಗೆ ಯತ್ನಿಸುವ ಪ್ರತಿಯೊಬ್ಬನೂ ಭಗವಂತನೇ ದುರದೃಷ್ಟಗಳ ರೂಪದಲ್ಲಿ ಕಳುಹಿಸಿರುವ ಪರೀಕ್ಷೆಗಳ ವಿರುದ್ಧ ನಿಜವಾಗಿಯೂ ದಂಗೆ ಎದ್ದಂತಾಗುತ್ತದೆ.

ಇಸ್ಲಾಮಿನ ಪ್ರಕಾರ ಯಜ್ಞದ ಹಿಂದಿರುವ ಭಾವನೆ ದರಿದ್ರರಿಗೆ ಸಹಾಯ ಮಾಡುವುದು ಅಥವಾ ಜನರ ಹಸಿವನ್ನು ತಣಿಸುವುದು. ಅದು ಔದಾರ್ಯದ ಅಥವಾ ಹಬ್ಬದ ಆಚರಣೆ. ಮುಸ್ಲಿಮರಲ್ಲಿ ಯಜ್ಞಾಹುತಿಗೊಂಡ ಪ್ರಾಣಿಯ ಮಾಂಸವನ್ನು ಆಹ್ವಾನಿತರೆಲ್ಲ ಬಳಸುತ್ತಾರೆ. ಅದು ಆರಾಧನೆಯ ವಿಹಿತಕರ್ಮ.

ಮುಸ್ಲಿಮನಾದವ ಮರಣವನ್ನು ಬಯಸಬಾರದು, ಏಕೆಂದರೆ, ಆತ ಸದಾಚಾರಿಯಾಗಿದ್ದರೆ, ಅದರಿಂದ ಅವನ ಜೀವಮಾನ ದೀರ್ಘವಾಗಬಹುದು, ಕೆಟ್ಟವನಾಗಿದ್ದರೆ ಒಳಿತನ್ನೆಸಗುವ ಮತ್ತು ಕೆಡುಕಿಗಾಗಿ ಪಶ್ಚಾತ್ತಾಪಪಡುವ ಅವಕಾಶ ಅವನಿಗಿದ್ದೀತು. ಆದರೆ ಸಾವನ್ನೆದುರಿಸಬೇಕಾದ ಆತ್ಮ ಭಗವದಿಚ್ಛೆಗೆ ಶರಣಾಗಬೇಕು ಮತ್ತು ಉಲ್ಲಸಿತ ಹೃದಯದಿಂದ ಅದಕ್ಕೆ ತನ್ನನ್ನರ್ಪಿಸಿಕೊಳ್ಳಬೇಕು. ಕುರಾನ್ ಪ್ರಕಾರ ಪ್ರತಿಯೊಂದು ಜೀವಿಗೂ ಮರಣದ ವೇಳೆ ನಿಶ್ಚಿತವಾಗಿದೆ. ಸಮಾಧಿಯಾದ ಬಳಿಕ. ಮೃತವ್ಯಕ್ತಿ ಮುಂಕರ್ ಮತ್ತು ನಕಿರ್ ಎಂಬಿಬ್ಬರು ದೇವದೂತರನ್ನು ಸಂಧಿಸುತ್ತಾನೆ; ಅವರು ಅವನನ್ನು ಅವನ ಧರ್ಮ, ದೇವರು ಮತ್ತು ಶ್ರದ್ಧೆಗಳ ಬಗೆಗೆ ಪ್ರಶ್ನಿಸುತ್ತಾರೆ; ಅವರು ಅವನನ್ನು ಅವನ ಧರ್ಮ, ದೇವರು ಮತ್ತು ಶ್ರದ್ಧೆಗಳ ಬಗೆಗೆ ಪ್ರಶ್ನಿಸುತ್ತಾರೆ. ಮೃತವ್ಯಕ್ತಿಯ ಆತ್ಮದಿಂದ ಅವರು ತೃಪ್ತಿಕರವಾದ ಉತ್ತರಗಳನ್ನು ಪಡೆದಲ್ಲಿ, ಅವನನ್ನು ಪುನರುತ್ಥಾನದ ದಿನದವರೆಗೆ ಪ್ರಶಾಂತವಾದ ಅವಸ್ಥೆಯಲ್ಲಿ ಇರಿಸುತ್ತಾರೆ. ಇಲ್ಲವಾದರೆ, ಪುನರುತ್ಥಾನವಾಗುವ ತನಕ ಆತ ಹಿಂಸೆಗೆ ಗುರಿಯಾಗಬೇಕು. ಅನಂತರ ಒಳಿತು ಕೆಡುಕುಗಳೆರಡನ್ನೂ ಪರೀಕ್ಷಿಸಿ ಪುನರುತ್ಥಾನವಾಗುವ ತನಕ ಆತ ಹಿಂಸೆಗೆ ಗುರಿಯಾಗಬೇಕು. ಅನಂತರ ಒಳಿತು ಕೆಡುಕುಗಳೆರಡನ್ನೂ ಪರೀಕ್ಷಿಸಿ ಪುರಸ್ಕಾರವನ್ನೊ ಶಿಕ್ಷೆಯನ್ನೊ ವಿಧಿಸಲಾಗುವುದು. ಸಾವು ಹಾಗೂ ಪುನರುತ್ಥಾನಗಳ ನಡುವಣ ಅವಸ್ಥೆಯನ್ನು ಬರ್ಜ್ಹ್ ಅಖ್ ಎಂದು ಕರೆದಿದೆ. ಸೂಫಿಗಳ ಪ್ರಕಾರ ಅದು ಅರ್ಧಭೌತಿಕ ಮತ್ತು ಅರ್ಧ ಆಧ್ಯಾತ್ಮಕ ಜೀವನ.

ಮುಸ್ಲಿ ಪಾಪಿಗಳ (ಷಫ) ಪರವಾಗಿ ತೀರ್ಪಿನ ದಿನದಂದು ಪ್ರವಾದಿ ಮಧ್ಯಸ್ತಿಕೆ ವಹಿಸುವನೆಂದು ಸಂಪ್ರದಾಯವಾಗಿ ಮುಸ್ಲಿಮರಲ್ಲಿ ಸಾಮಾನ್ಯವಾಗಿರುವ ನಂಬಿಕೆ. ಕುರಾನ್ ಪ್ರಕಾರ. ಮುಸ್ಲಿಮನಾದ ಭಗವತ್ಕರುಣೆಯಲ್ಲಿ ಭರವಸೆ ಕಳೆದುಕೊಳ್ಳಕೂಡದು. ತನ್ನ ಬದುಕಿನ ಯಾವುದಾದರೊಂದು ಘಟ್ಟದಲ್ಲಿ ಪಶ್ಚಾತ್ತಾಪ ಪಡುವುದರ ಮೂಲಕ ಆತ ಮೋಕ್ಷ ಗಳಿಸಬಹುದು.

ದೇವತೆಗಳ ಅಸ್ತಿತ್ವವನ್ನು ಇಸ್ಲಾಂ ಒಪ್ಪುತ್ತದೆ. ಜ್ವಾಲಾದೇಹಿಗಳಾದ ಅವರು ದೇವರಿಗೂ ಮಾನವರಿಗೂ ನಡುವೆ ಇದ್ದಾರೆ. ಗೇಬ್ರಿಯಲ್, ಮೈಕೇಲ್, ಅಜ್ರೇಲ್ ಮತ್ತು ಇಸ್ರಾಫಿಲ್–ಇವರು ನಾಲ್ವರು ಪ್ರಸಿದ್ಧ ದೇವತೆಗಳು. ದಾನವಾಂಶವನ್ನುಳ್ಳವರೂ ಇದ್ದಾರೆ. ಇಬ್ಲಿಸ್ ಅಂಥವರಲ್ಲಿ ಒಬ್ಬ. ಆಡಮ್ಮನಿಗೆ ಗೌರವ ಸಲ್ಲಿಸದ ಈತನನ್ನು ದೇವರು ಬಹಿಷ್ಕರಿಸಿದ. ಈ ಎಲ್ಲರಿಗೂ ಹುಟ್ಟು ಸಾವುಗಳುಂಟು. ಪ್ರವಾದಿಗಳ ಮೂಲಕ ದೇವರ ಸಂದೇಶ ಕಾಲಕಾಲಕ್ಕೆ ನಡೆದುಬಂದಿದೆ. ಅಂಥ 104 ಪವಿತ್ರಗ್ರಂಥಗಳಲ್ಲಿ ಕೇವಲ ನಾಲ್ಕು ಮಾತ್ರ ಉಳಿದಿವೆ. ಅವುಗಳಲ್ಲಿ ಕುರಾನು ಒಂದು. ಪ್ರವಾದಿಗಳಲ್ಲಿ ಆರು ಜನ ಹಳೆಯ ಸಂಪ್ರದಾಯಗಳನ್ನು ತೊಡೆದು ಹಾಕಿ ಧರ್ಮವನ್ನು ಪರಿಷ್ಕರಿಸಿದ್ದಾರೆ. ಕಾಲಾನುಕ್ರಮದಲ್ಲಿ ಅವರ ಹೆಸರುಗಳು ಹೀಗಿವೆ: ಆಡಮ್, ನೋವ, ಏಬ್ರಹಾಂ, ಮೋಸೆಸ್, ಜೀಸಸ್ ಮತ್ತು ಮಹಮ್ಮದ್.

ಸತ್ತವರನ್ನು ಗೋರಿಗೊಳಿಸಿದ ಮೇಲೆ ಅವರ ಆತ್ಮಗಳು ತಮ್ಮ ತಮ್ಮ ಪಾಪ ಪುಣ್ಯಗಳಿಗೆ ತಕ್ಕಂತೆ ಸುಖವನ್ನೋ ಪಡೆದು ಸ್ವರ್ಗಕ್ಕೋ ನರಕಕ್ಕೋ ಹೋಗುತ್ತವೆ. ದೇವರಲ್ಲಿ ಮತ್ತು ಪ್ರವಾದಿಯಲ್ಲಿ ದೃಢನಂಬಿಕೆ ಉಳ್ಳವರು ನೇರ ಸ್ವರ್ಗಕ್ಕೆ ಹೋಗುತ್ತಾರೆ. ಪ್ರವಾದಿಗಳಿಗೆ ಈ ಭಾಗ್ಯ ಉಂಟು; ಅಥವಾ ಹಸಿರು ಹಕ್ಕಿಯಾಗಿ ಸ್ವರ್ಗೋದ್ಯಾನದಲ್ಲಿ ಆನಂದದಿಂದಿರುತ್ತಾರೆ. ಈ ಭಾಗ್ಯ ಹುತಾತ್ಮರಿಗುಂಟು. ಸಾಮಾನ್ಯರ ಆತ್ಮಗಳು ತಮ್ಮ ಗೋರಿಗಳ ಬಳಿಯೇ ಉಳಿಯುತ್ತವೆ. ಇಲ್ಲದಿದ್ದರೆ ಆಡಂನ ಜೊತೆ ಮೊದಲ ಸ್ವರ್ಗದಲ್ಲಿರುತ್ತವೆ. ಪಾಪಿಗಳ ಆತ್ಮಗಳು ಹರ್ದಮೌತ್ ಪ್ರಾಂತ್ಯದಲ್ಲಿ ಉಳಿಯುತ್ತದೆ ಅಥವಾ ಭೂಮಿ ಮತ್ತು ಸ್ವರ್ಗ–ಎರಡನ್ನೂ ಕಳೆದುಕೊಂಡು ತ್ರಿಶಂಕುಗಳಾಗಿ ಪಡಬಾರದ ಯಾತನೆಗೆ ಗುರಿಯಾಗುತ್ತವೆ.

ನರಕದಲ್ಲಿ ಏಳು ಭಾಗಗಳಿವೆ. ಅಲ್ಲಿ ಬಿದ್ದ ಪಾಷಂಡಿಗಳಿಗೆ ಸುಲಭದಲ್ಲಿ ಮುಕ್ತಿ ಇಲ್ಲ. ಪಶ್ಚಾತ್ತಾಪದಿಂದ ಪರಿಷ್ಕಾರಗೊಂಡಲ್ಲಿ ಮುಸಲ್ಮಾನರು ನರಕದಿಂದ ಬಿಡುಗಡೆ ಪಡೆಯಬಹುದು.

ಸುಂತಿ ಇಸ್ಲಾಂ ಧರ್ಮದಲ್ಲಿನ ನಂಬಿಕೆಯ ಮುದ್ರ ಸ್ವರೂಪವಾದ್ದು. ಆರರಿಂದ ಎಂಟು ವರ್ಷದ ಮಕ್ಕಳಿಗೆಲ್ಲ ಇದನ್ನು ಮಾಡಲಾಗುತ್ತದೆ. ಕುರಾನಿನ ಪ್ರಕಾರ ದ್ರಾಕ್ಷರಸದಂಥ ಮಾದಕದ್ರವ್ಯಗಳ ಸೇವನೆ ಕೂಡದು. ಇನ್ನೂ ಕಟ್ಟುನಿಟ್ಟಾಗಿರುವವರು ಅಫೀಮು, ಕಾಫಿ, ಹೊಗೆಸೊಪ್ಪುಗಳನ್ನು ಸೇವಿಸರು. ಮಾಂಸಾಹಾರದಲ್ಲೂ ಒಂದು ವಿವೇಕ ಉಂಟು. ರಕ್ತ, ಹಂದಿ ಮಾಂಸ, ವಯಸ್ಸಾಗಿ ಅಥವಾ ಕಾಯಿಲೆಯಿಂದ ಸತ್ತ ಪ್ರಾಣಿ, ದೇವರ ಹೆಸರಿನಲ್ಲಿ ಕಡಿದಂಥ ಪ್ರಾಣಿ, ಪೆಟ್ಟು ಕೊಟ್ಟು ಕೊಂದಂಥಾದ್ದು, ಬೇರೊಂದು ಪ್ರಾಣಿ ಕಚ್ಚಿಕೊಂದದ್ದು–ಇಂಥವು ಸೇವನಾಬಾಹಿರ. ದೇವರ ಹೆಸರಿನಲ್ಲಿ ಶುದ್ಧವಾದ ಪ್ರಾಣಿಗಳನ್ನು ಯುಕ್ತವಿಧಿಯಿಂದ ಮಾತ್ರ ಕಡಿದು ಅವುಗಳ ಮಾಂಸವನ್ನು ಬಳಸತಕ್ಕದ್ದೆಂದು ಸೂಚಿಸಲಾಗಿದೆ.

ಅಂತೆಯೇ ಜೂಜಾಟ ನಿಷಿದ್ಧ. ಜೂಜುಗಾರನ ಸಾಕ್ಷಿಯನ್ನು ನ್ಯಾಯಾಲಯ ಒಪ್ಪದು. ಪರಧನಾಪಹರಣ ಮಹಾ ಪಾಪ. ಅದೇರೀತಿ ಕಲೆಯ ಹೆಸರಿನಲ್ಲಿ ಮಾನವರ ಚಿತ್ರಗಳನ್ನು ಬರೆಯುವುದೂ ಹೇಯ. ಹಾಗೆ ಮಾಡಿದವರು ನರಕಕ್ಕೆ ಹೋಗುತ್ತಾರೆ.

ಯುದ್ಧ, ಜಗಳಗಳನ್ನು ಸಾಮಾನ್ಯವಾಗಿ ಒಪ್ಪದಿದ್ದರೂ ಪಾಷಂಡಿಗಳ ವಿರುದ್ಧ ನಡೆಸುವ ಧರ್ಮಯುದ್ಧವನ್ನು ಇಸ್ಲಾಂ ಒಪ್ಪುತ್ತದೆ. ಅಂಥ ಯುದ್ಧಗಳಲ್ಲಿ ವೀರಮರಣ ಪಡೆದವರನ್ನು ಹುತಾತ್ಮರೆಂದು ಗೌರವಿಸುತ್ತಿದ್ದರು. ಶತ್ರುಗಳಿಗೆ ಬದುಕಲು ಇದ್ದುದು ಎರಡೇ ಮಾರ್ಗ. ಒಂದು ಇಸ್ಲಾಮನ್ನು ಸ್ವೀಕರಿಸುವುದು. ಎರಡು ಕೇಳಿದಷ್ಟು ಪರಿಹಾರ ಕೊಡುವುದು. ಇಲ್ಲದಲ್ಲಿ ಯುದ್ಧವೇ ಅದರ ಅದೃಷ್ಟವನ್ನು ನಿಶ್ಚಯಿಸುತ್ತಿತ್ತು.

ಇಸ್ಲಾಂ ಧರ್ಮದ ಒಳತಿರುಳನ್ನು ಪರಿಶೀಲಿಸಿದರೆ ವಿಶ್ವದ ಎಲ್ಲ ಪ್ರಮುಖ ಧರ್ಮಗಳ ತಾತ್ಪರ್ಯವೂ ಒಂದೇ ಎಂಬ ಭಾವನೆ ಪುಷ್ಟಿಗೊಳ್ಳುತ್ತದೆ. ಪ್ರಾರ್ಥನೆ, ಸರಳಜೀವನಕ್ರಮ, ದಾನಧರ್ಮ, ಪರೋಪಕಾರ, ಆತ್ಮೋದ್ಧಾರ ಮುಂತಾದ ಎಲ್ಲ ಧರ್ಮಗಳ ಪಲ್ಲವಿ. ಅವನ್ನೇ ಇಸ್ಲಾಂನಲ್ಲೂ ಕಾಣಬಹುದು. ಪ್ರಾರ್ಥನೆಗಳು ಮುಸ್ಲಿಮನ ಧಾರ್ಮಿಕ ಕರ್ತವ್ಯಗಳಲ್ಲಿ ಲಘುವಾದ ಭಾಗವೇನಲ್ಲ; ಏಕೆಂದರೆ ಅವು ಎಚ್ಚರಿಕೆಯಿಂದ ಕೂಡಿದ ಸಿದ್ಧತಾಶುದ್ಧಿಗಳನ್ನೊಳಗೊಳ್ಳುತ್ತವೆ; ನಿಜಕ್ಕೂ ಶುಚಿರ್ಭೂತತೆ ದೈವಿಕತೆಯ ಒಂದು ಮುಖ್ಯ ಅಂಗವೆಂಬುದನ್ನು ಪ್ರವಾದಿ ತನ್ನ ಅನುಯಾಯಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದಾನೆ; ಮತ್ತು ಮುಸ್ಲಿಮರ ಕಟ್ಟುನಿಟ್ಟಿನ ಶೌಚ ಅದರ ವಾಸ್ತವಿಕ ಪ್ರಭಾವದಲ್ಲಿನ ಒಂದು ಸೊಗಸಾದ ಲಕ್ಷಣವಾಗಿದೆ. ಮಸೀದಿಯ ಪ್ರಾರ್ಥನೆಗಳಲ್ಲಿ ಸಮೃದ್ಧವಾದ ಮತ್ತು ನಿಜವಾದ ಕಳಕಳಿಯಿದೆ. ಆರಾಧಕರು ಅವುಗಳಲ್ಲಿ ಆಸಕ್ತಿಯಿಂದ ಸೇರುತ್ತಾರೆ. ಪ್ರವಾದಿ ಮನೆಯಲ್ಲಿ ಖಾಸಗಿಯಾಗಿ ಪ್ರಾರ್ಥನೆ ಮಾಡಬೇಕೆಂದು ಆಗಾಗ ಒತ್ತಿ ಹೇಳುತ್ತಾನೆ; ಮತ್ತು ದೇವರನ್ನರ್ಚಿಸುತ್ತ ಇರುಳನ್ನು ಕಳೆಯುವ ವ್ಯಕ್ತಿಯನ್ನು ವಿಶೇಷವಾಗಿ ಕೊಂಡಾಡುತ್ತಾನೆ.

ಮಧ್ಯ ಹಾಗೂ ಪಶ್ಚಿಮ ಆಫ್ರಿಕದಲ್ಲಿ ಇಸ್ಲಾಮಿನ ಪ್ರಭಾವ ಒಟ್ಟಿನಲ್ಲಿ ಅತ್ಯಂತ ಹಿತಕರ ಸ್ವರೂಪದ್ದಾಗಿದೆಯೆಂದು ಎಲ್ಲ ಜಾಗೃತ ಹಾಗೂ ಪ್ರಾಮಾಣಿಕ ವೀಕ್ಷಕರು ಒಪ್ಪಿಕೊಳ್ಳುತ್ತಾರೆ. ತನ್ನ ಪ್ರಚಾರಕರಿಂದ ತುಂಬಿಹೋಗಿರುವ ಆ ವಿಶಾಲ ಪ್ರಾಂತ್ಯದಲ್ಲೆಲ್ಲ ಅದು ಸಂಯಮ ಸಹನೆಗಳ ಸ್ವಭಾವವನ್ನು ಪ್ರಚೋದಿಸಿದೆ; ಅದರ ಬೋಧನೆಯ ಪ್ರಭಾವ ಎಷ್ಟು ಅಪಾರವೆಂದರೆ, ಮುಸ್ಲಿಮ ನಿವಾಸಿಗಳಿರುವೆಡೆಗಳಲ್ಲಿ–ನಾಸ್ತಿಕರಿರುವ ನಗರಗಳಲ್ಲಿ ಕೂಡ–ಕುಡಿತದಿಂದ ಮತ್ತನಾದ ಒಬ್ಬ ವ್ಯಕ್ತಿಯನ್ನು ಕಾಣುವುದೂ ದುರ್ಲಭ ಎನ್ನಲಾಗಿದೆ.

ಸೆನೆಗಾಲ್‌ನಿಂದ ಲಾಗೋಸ್‌ವರೆಗೆ, ಎರಡು ಸಾವಿರ ಮೈಲಿಗಳ ಅಂತರದಲ್ಲಿ, ಒಂದು ಮಸೀದಿಯಾದರೂ ಇಲ್ಲದಿರುವಂಥ ಮುಖ್ಯ ನಗರ ಕಾಣಸಿಗದು. ಯಾವನಾದರೂ ನಾಸ್ತಿಕ–ಆತ ಎಷ್ಟೇ ಯಃಕಶ್ಚಿತ್ ಅಥವಾ ಕೀಳಾಗಿರಲಿ–ಇಸ್ಲಾಮನ್ನು ಸ್ವೀಕರಿಸಿದ ಕೂಡಲೇ, ಅವನಿಗೆ ಸಮಾನತೆ ತೋರಿ ಸಮಾಜಕ್ಕೆ ಸೇರಿಸಿಕೊಳ್ಳುವುದನ್ನು ನೋಡಿದರೆ ಈ ಧರ್ಮದ ಮನೋವೈಶಾಲ್ಯ ವ್ಯಕ್ತವಾಗುತ್ತದೆ.

ಮುಸ್ಲಿಂ ಉಪಾಧ್ಯಾಯರು ತಮ್ಮ ನೆರೆಯೊರೆಯವರ ಮೇಲೆ ಆಚರಣೆ ಮತ್ತು ಉಪದೇಶಗಳಿಂದ ಸತ್ ಪ್ರಭಾವ ಬೀರುತ್ತಿರುವುದಕ್ಕೆ ಅನೇಕ ನಿರ್ಶನಗಳಿವೆ. ಮಧ್ಯ ಹಾಗೂ ಪಶ್ಚಿಮ ಆಫ್ರಿಕದಲ್ಲಿ ಇಸ್ಲಾಂ ಹರಡಿದ್ದರಿಂದ, ಗುಲಾಮ ವ್ಯಾಪಾರದ, ದಾರುಣತೆಯ ವಿರುದ್ಧ ಅದು ಬಹು ಮುಖ್ಯವಾದ ರಕ್ಷಣೆಯಾಗಿ ಪರಿಣಮಿಸಿದೆ. ತನ್ನನ್ನು ಅವಲಂಬಿಸಿದ ಜನಾಂಗಕ್ಕೆ ಇಸ್ಲಾಂ ರಕ್ಷಣೆಯನ್ನೊದಗಿಸಿದೆ. ಅವರನ್ನು ಒಂದು ಪ್ರಬಲ ಧಾರ್ಮಿಕ ಬಾಂಧವ್ಯದಲ್ಲಿ ಪರಿಣಾಮಕಾರಿಯಾಗಿ ಒಗ್ಗೂಡಿಸಿ, ಶಕ್ತರಾದ ಗುಲಾಮೀ ವ್ಯಾಪಾರಿಗಳ ಪ್ರಯತ್ನಗಳನ್ನವರು ತಮ್ಮ ಸಂಘಟಿತಕಾರ್ಯಗಳಿಂದ ವಿಫಲಗೊಳಿಸಲು ಸಹಾಯಮಾಡಿದೆ.

ಇಸ್ಲಾಮಿ ಜನ ಸಹಜವಾಗಿ ಸಾಹಸಪ್ರಿಯರು. ಜ್ಞಾನಾಕಾಂಕ್ಷಿಗಳು. ಅರಬ್ಬೀ ಭಾಷೆಯ ಅಧ್ಯಯನದಿಂದ ಅವರು ಸಾಹಿತ್ಯಾಕಾಂಕ್ಷಿಗಳಾಗಿ ಉದಾತ್ತದೃಷ್ಟಿಯನ್ನೂ ವಿಶಾಲ ಅಭಿರುಚಿಗಳನ್ನೂ ತಮ್ಮ ನಾಸ್ತಿಕ ಸಹಜೀವಿಗಳಿಂದ ತಮ್ಮನ್ನು ಬೇರ್ಪಡಿಸುವಂಥ ಶಕ್ತಿಯುತ ಸ್ವಭಾವಗಳನ್ನೂ ಪಡೆದುಕೊಂಡರು. ಕೈರೋದಲ್ಲಿರುವ ಅಜ್ಹರ್ ವಿಶ್ವವಿದ್ಯಾಲಯದ ಮಹಾ ಮಸೀದಿಯಲ್ಲಿ ಅಧ್ಯಯನ ಮಾಡುವುದಕ್ಕಾಗಿ ವಿದ್ಯಾರ್ಥಿಗಳು ಆಫ್ರಿಕದ ಉದ್ದಕ್ಕೂ ಬರಿಗಾಲಿನಲ್ಲಿ ಪಯಣ ಮಾಡುವುದುಂಟು.

ಈಗ ಇಸ್ಲಾಮಿನ ಒಂದು ಅವಶ್ಯಾಂಗವೆಂದು ಪರಿಗಣಿತವಾಗಿರುವ ದುರ್ದಮ ಸಂಸ್ಕಾರಗಳ ವ್ಯವಸ್ಥೆಯ ಜಟಿಲ ಜಾಲವನ್ನು ಮೂಲದಲ್ಲಿ ನಾವು ಕಾಣೆವು. ಇಸ್ಲಾಂ ಒಂದು ಸರಳ ಸುಲಭವಾದ ಧರ್ಮ; ಯಾವ ಅಸ್ಪಷ್ಟತೆಯೂ ಇಲ್ಲದ್ದು. (ಎಸ್.ಜಿ.ಎಂ.)

**ಇಸ್ಲಾಂ ಧರ್ಮ:** ಇಸ್ಲಾಂ ಎಂಬುದು ಅರಬ್ಬಿ ಭಾಷೆಯ ಸಲಾಮ್ ಪದದಿಂದ ಬಂದಿದೆ. ಶರಣಾಗು ಅಥವಾ ಒಳಪಡು ಎಂಬುದು ಇದರರ್ಥ. ಪ್ರವಾದಿ ಮಹಮ್ಮದ್‌ನು ಬೋಧಿಸಿದ ಧರ್ಮಕ್ಕೆ ಶರಣಾದವರನ್ನು ಮುಸ್ಲಿಮರು ಅಥವಾ ಇಸ್ಲಾಮಿಯರು ಎಂದು ಪರಿಗಣಿಸಲಾಗುತ್ತದೆ. ಪಶ್ಚಿಮ ಏಷ್ಯದಲ್ಲಿ ಉದಯಿಸಿದ ಪ್ರಮುಖ ಧರ್ಮಗಳ ಪೈಕಿ ಇಸ್ಲಾಂ ಧರ್ಮವೂ ಒಂದು. ಇಸ್ಲಾಂ ಧರ್ಮದ ಮೂಲ ನೆಲೆ ಇಂದಿನ ಸೌದಿ ಅರೇಬಿಯದ ಪಶ್ಚಿಮ ಭಾಗದಲ್ಲಿರುವ ಹೆಜಾಜ್ ಪ್ರಾಂತ್ಯದ ಮೆಕ್ಕಾ ನಗರ. ಮೆಕ್ಕಾ ಮತ್ತು ಮದೀನಾ ಇಸ್ಲಾಂ ಧರ್ಮದ ಪ್ರಮುಖ ಕೇಂದ್ರಗಳು.

ಇಸ್ಲಾಂ ಧರ್ಮ ಏಕದೇವತಾರಾಧನೆಯನ್ನು ಪ್ರತಿಪಾದಿಸುತ್ತದೆ. ಇಸ್ಲಾಂ ಧರ್ಮದ ಪ್ರಕಾರ ದೇವರು ಒಬ್ಬನೇ ಅವನೇ ಅಲ್ಲಾ. ಅವನನ್ನು ಹೊರತುಪಡಿಸಿ ಬೇರಾವ ದೇವರಿಲ್ಲ. ಅಲ್ಲಾಹ್ ಸಕಲ ಜೀವಿಗಳ ಸೃಷ್ಟಿ ಕರ್ತ. ಮಹಮ್ಮದರು ಪ್ರವಾದಿ ಮಾತ್ರ ಎಂಬುದಾಗಿ ಈ ಧರ್ಮ ಸಾರುತ್ತದೆ. ಇಸ್ಲಾಂ ಧರ್ಮ ಮನುಷ್ಯ ದಯಾಳುವಿನಂತೆ ಬದುಕಬೇಕೆಂದು ಸಾರುತ್ತದೆ. ಬಡವರು, ಅನಾಥರು, ನಿರ್ಗತಿಕರು ಹಾಗೂ ಹಿರಿಯರ ಬಗ್ಗೆ ದಯೆ, ಅನುಕಂಪವಿರಬೇಕೆಂದು ಹೇಳುತ್ತದೆ. ಸಂಪತ್ತಿನ ಕ್ರೋಡೀಕರಣವನ್ನು ಅಲ್ಲಗಳೆದು ಅದು ಸರ್ವರಲ್ಲೂ ಹಂಚಿಕೆಯಾಗ ಬೇಕೆಂದು ಬಯಸುತ್ತದೆ.

ಇಸ್ಲಾಂ ಧರ್ಮದ ಪೂರ್ಣ ತಿರುಳು ಅದರ ಧರ್ಮಗ್ರಂಥ ಕುರಾನ್‌ನಲ್ಲಿ ಬಿಂಬಿತವಾಗಿದೆ. ಕುರಾನ್ ಎಂದರೆ ಓದಲು ಅರ್ಹವಾದುದು ಎಂಬುದಾಗಿದೆ. ಕುರಾನ್ ಕೇವಲ ಧರ್ಮಗ್ರಂಥ ವಲ್ಲ, ಇದು ಸಕಲ ಮುಸ್ಲಿಂ ಸಮುದಾಯದವರ ಜೀವನದ ಮಾರ್ಗದರ್ಶಿಯೂ ಆಗಿದೆ. ಮಹಮ್ಮದಿಯರ ನಂಬಿಕೆಯಂತೆ ಕುರಾನ್‌ನಲ್ಲಿ ಅಡಕವಾಗಿರುವ ಬಹುತೇಕ ಅಂಶಗಳು ದೇವರಿಂದ ಗೇಬ್ರಿಯಲ್ ಮೂಲಕ ಮಹಮ್ಮದರಿಗೆ ಬೋಧಿಸಿದ ಜೀವನ ತತ್ತ್ವಗಳಾಗಿವೆ. ಇದರ ಜೊತೆಗೆ ಪ್ರವಾದಿ ಮಹಮ್ಮದ್ ಅನುಸರಿಸುತ್ತಿದ್ದ ಸಂಪ್ರದಾಯಗಳನ್ನು ಸುನ್ನಾ ಎಂದು ಕರೆಯಲಾಗುತ್ತದೆ. ಸುನ್ನಾಗಳೆಂದರೆ ಧಾರ್ಮಿಕ ಸಂಪ್ರದಾಯಗಳೆಂದು ಅರ್ಥ.

ಇಸ್ಲಾಂ ಧರ್ಮಗ್ರಂಥವಾದ ಕುರಾನ್ ಪ್ರಪಂಚದ ಹಲವಾರು ಭಾಷೆಗಳಿಗೆ ಭಾಷಾಂತರ ಗೊಂಡಿದ್ದರೂ ಅರಬ್ಬಿ ಭಾಷೆಯನ್ನು ಕಲಿತು ಓದುವುದು ಸೂಕ್ತವೆಂಬುದು ಅನೇಕ ಮುಸ್ಲಿಂ ವಿದ್ವಾಂಸರ ಅಭಿಪ್ರಾಯ. ಈ ಗ್ರಂಥವು ಸುರಾ ಎಂದು ಕರೆಯುವ 114 ಅಧ್ಯಾಯಗಳು 6,236 ಶ್ಲೋಕ ಅಥವಾ ಚರಣಗಳು, 77,924 ಪದಗಳು, 3,23,621 ಅಕ್ಷರಗಳನ್ನು ಒಳಗೊಂಡಿದೆ.

ಇಸ್ಲಾಂ ಧರ್ಮ ಬೋಧಿಸುವ ತತ್ತ್ವಗಳ ಬಗ್ಗೆ ಪೂರ್ಣ ತಿಳುವಳಿಕೆಗೆ ಅನುಕೂಲ ವಾಗುವಂತೆ ಕುರಾನ್ ಗ್ರಂಥದ ವಿಮರ್ಶೆಯನ್ನು ಪ್ರಖ್ಯಾತ ಮುಸ್ಲಿಂ ವಿದ್ವಾಂಸರಾದ ಅಲ್–ತಬರಿ (ದಿ. 923), ಅಲ್ ಜಮಾಕ್ ಸಾರಿ (1075–1143), ಅಲ್ ರಾಜಿ (1149–1208) ಮತ್ತು ಅಲ್ ಬೈದಾವಿ (1246)ರಲ್ಲಿ ವಿಶ್ಲೇಷಿಸುವುದರ ಮೂಲಕ ಅರ್ಥವಿವರಣೆ ನೀಡಲು ಪ್ರಯತ್ನಿಸಿದ್ದಾರೆ. ಇಸ್ಲಾಂ ಧರ್ಮ ಅತ್ಯಂತ ಪ್ರಮುಖವಾದ ಪಂಚಸೂತ್ರಗಳ ಮೇಲೆ

ನಿಂತಿದೆ. ಇವುಗಳನ್ನು ಇಸ್ಲಾಂ ಧರ್ಮದ ಆಧಾರ ಸ್ತಂಭಗಳೆನ್ನುತ್ತಾರೆ. ಅವುಗಳು 1. ನಂಬಿಕೆ, 2. ಸಲಾತ್, 3. ಜಕಾತ್, 4. ಉಪವಾಸ ಮತ್ತು 5. ಯಾತ್ರೆ. ಪ್ರತಿಯೊಬ್ಬ ಮುಸ್ಲಿಮನೂ ಈ ಸೂತ್ರಗಳನ್ನು ತಪ್ಪದೇ ಆಚರಿಸಬೇಕೆಂಬುದು ನಿಯಮವಾಗಿದೆ.

ಇಸ್ಲಾಂ ಧರ್ಮ 7ನೆಯ ಶತಮಾನದ ಪೂರ್ವಾರ್ಧದಲ್ಲಿ ಉದಯವಾದರೂ ಅತ್ಯಲ್ಪ ಕಾಲದಲ್ಲೇ ಅತಿ ಶೀಘ್ರವಾಗಿ ವಿಶ್ವದ ನಾನಾ ಕಡೆ ಹರಡಿತು. ಈ ಧರ್ಮ ಮೂಲತಃ ಅರೇಬಿಯದ ಅಲೆಮಾರಿ ಬುಡಕಟ್ಟು ಜೀವನ ಕ್ರಮಕ್ಕೆ ಒಂದು ಧಾರ್ಮಿಕ ಆಯಾಮ ತರಲು ಪ್ರವಾದಿ ಮಹಮ್ಮದ್‍ರಿಂದ ಸ್ಥಾಪಿತವಾಯಿತು. ಈ ಧರ್ಮದ ಸರಳತೆ, ಭ್ರಾತೃತ್ವ ಭಾವನೆ ಹಾಗೂ ಸಮಾನತೆಯ ತತ್ತ್ವಗಳಿಂದಾಗಿ ವಿಶ್ವವ್ಯಾಪಿ ಮನ್ನಣೆ ಗಳಿಸಿಕೊಂಡಿತು. ಅರೇಬಿಯದಿಂದ ಏಷ್ಯದ ಪೂರ್ವಭಾಗದ ತನಕ, ದಕ್ಷಿಣದ ಯಮನ್ ಪ್ರಾಂತದಿಂದ ಉತ್ತರದ ಕ್ಯಾಸ್ಪಿಯನ್ ಸಮುದ್ರದ ತನಕ, ಉತ್ತರ ಆಫ್ರಿಕದಿಂದ ಯುರೋಪಿನ ಡಾನ್ಯುಬ್ ನದಿಯ ತನಕ ವಿಸ್ತರಿಸಿದ ಈ ಧರ್ಮ, ಇಂದು ವಿಶ್ವದ ಅತಿ ದೊಡ್ಡ ಧರ್ಮವೆನಿಸಿದೆ.

ಇಸ್ಲಾಂ ಧರ್ಮದ ಏಳಿಗೆ ಹಾಗೂ ವಿಸ್ತರಣೆಗೆ ಪ್ರಮುಖವಾಗಿ ಕಾರಣಕರ್ತರೆಂದರೆ ಪ್ರವಾದಿ ಮಹಮ್ಮದ್‍ರ ಅನಂತರ ಅಧಿಕಾರಕ್ಕೆ ಬಂದ ಸಂಪ್ರದಾಯಸ್ಥ ಖಲೀಫರು, ಉಮಾಯಿದ್ದ್, ಅಬ್ಬಾಸಿದ್ ಹಾಗೂ ತುರ್ಕರು ರಾಜ್ಯವಿಸ್ತರಣೆಯ ಜೊತೆ ಜೊತೆಯಲ್ಲಿಯೇ ಸಾಗಿದ ಈ ಧರ್ಮ, ಅರಬ್ಬಿ ಭಾಷೆ ಎಲ್ಲ ಕಡೆ ಹರಡುವಲ್ಲಿ ಸಹಕಾರಿಯಾಯಿತು. ಧರ್ಮದ ವಿಸ್ತರಣೆಯಲ್ಲಿ ಖಡ್ಗ ಸಹ ತನ್ನ ಪಾತ್ರ ವಹಿಸಿತೆಂದರೆ ತಪ್ಪಾಗಲಾರದು. ಮುಂದೆ ಸೂಫಿ ಪಂಥ, ಷಿಯಾ ಪಂಥ, ಬಹಾಯಿ ಪಂಥ ಜನ್ಮ ತಳೆದು ಮುಸ್ಲಿಮ್ ಧರ್ಮದ ದೋಷಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾದವು. ಸೂಫಿ ಪಂಥ ವಿಶ್ವದಲ್ಲೇ ತನ್ನ ಧಾರ್ಮಿಕ ಸ್ವರೂಪವನ್ನು ಎತ್ತಿಹಿಡಿದಿದೆ. ಸಂಪ್ರದಾಯಬದ್ಧ ಆಚರಣೆಗಳನ್ನು ಸುನ್ನಾಗಳೆಂದೂ ಅದನ್ನು ಪಾಲಿಸುವವರು ಸುನ್ನಿಗಳೆಂದು ಕರೆಯಲಾಗುತ್ತದೆ. 4ನೆಯ ಸಂಪ್ರದಾಯ ಖಲೀಫರಾದ ಹಜರತ್ ಅಲಿ ಯವರನ್ನು ಬೆಂಬಲಿಸಿ ಅವರಿಗೋಸ್ಕರ ತಮ್ಮ ಪ್ರಾಣವನ್ನು ತ್ಯಜಿಸಿದ ಅನುಯಾಯಿಗಳ ಪಂಥವನ್ನು ಸಯ್ಯದ್ಸ್ ಅಥವಾ ಷಿಯಾಗಳೆಂದು ಕರೆಯುತ್ತಾರೆ.

ಇಸ್ಲಾಂ ಧರ್ಮದ ಆಚರಣೆಗಳಲ್ಲಿ ಮೊಹರಂ, ರಂಜಾನ್, ಬಕ್ರೀದ್ ಹಬ್ಬಗಳು ಪ್ರಮುಖವಾದವುಗಳಾಗಿದ್ದು, ಮೊಹರಂ ಷಿಯಾಗಳ ಪವಿತ್ರ ಹಬ್ಬ. ರಂಜಾನ್ ಹಾಗೂ ಬಕ್ರೀದ್ ಆಚರಣೆಗೆ ಇಸ್ಲಾಂ ಪೂರ್ವದಿಂದಲೂ ಮನ್ನಣೆಯಿದೆ. ಸರಳವಾದ ಆಚರಣೆಯಿಂದ ರಚಿತವಾದ ಧರ್ಮವೊಂದು ಸರಿಯಾದ ಧಾರ್ಮಿಕ ಮುಖಂಡರ ಮಾರ್ಗದರ್ಶನದಲ್ಲಿ ಹೇಗೆ ಅಭಿವೃದ್ಧಿ ಕಾಣಬಹುದು ಎಂಬುದಕ್ಕೆ ಸು. 1400 ವರ್ಷಗಳ ಇತಿಹಾಸವಿರುವ ಇಸ್ಲಾಂ ಧರ್ಮ ಒಂದು ನಿದರ್ಶನ. (ಎಸ್.ಜಿ.ಎಂ.)

**ಇಸ್ಲಾಂ ಷಾ: 1545–53.** ಷೇರ್ ಷಾನ ಮಗ. ತಂದೆಯ ಮರಣಾನಂತರ (1545) ಪಟ್ಟಕ್ಕೆ ಬಂದ. ಹುಟ್ಟು ಹೆಸರು ಜಲಾಲ್. ಇಸ್ಲಾಂ ಷಾ ಎಂಬುದು ಹೊಸ ಹೆಸರು. ಸಲೀಂ ಷಾ ಎಂಬುದು ಬಿರುದು. ಈತ ರಾಜ್ಯದಲ್ಲಿ ಅನೇಕ ಸುಧಾರಣಾ ಕೆಲಸಗಳನ್ನು ಕೈಗೊಂಡ. ದೇಶದ ಭದ್ರತೆಗೆ ಸೈನ್ಯವೇ ಬೆನ್ನುಮೂಳೆಯೆಂದು ಅರಿತು ಸಿಂಹಾಸನವನ್ನೇರಿದ ಕೆಲದಿನಗಳಲ್ಲಿ ಪ್ರತಿಯೊಬ್ಬ ಸೈನಿಕನಿಗೂ ಎರಡು ತಿಂಗಳ ಸಂಬಳವನ್ನು ಪುಕ್ಕಟೆಯಾಗಿ ಕೊಟ್ಟ. ಮಾಲೀಕರಿಗೆ ಪರಿಹಾರ ದ್ರವ್ಯವನ್ನು ಕೊಟ್ಟು ಜಹಗೀರು ಜಮೀನುಗಳನ್ನು ವಶಪಡಿಸಿಕೊಂಡ. ದೇಶದ ಶಾಂತಿಯನ್ನು ಕದಡಿದ ಕಾಲಿಂಜರ್ ದೊರೆಯನ್ನು ನಿರ್ನಾಮ ಮಾಡಿದ. ಪ್ರವಾಸಿಗಳಿಗೆ ಹೆಚ್ಚಿನ ಸೌಕರ್ಯಗಳನ್ನೊದಗಿಸಿದ. ಸರಾಯ್ ಎಂಬ ವಿಶ್ರಾಂತಿಗೃಹಗಳನ್ನು ಕಟ್ಟಿಸಿ, ಬಡಬಗ್ಗರಿಗೆ ಅನ್ನದಾನ ನಡೆಯುವಂತೆ ಏರ್ಪಾಡು ಮಾಡಿದ. ಹಿಂದು ಮುಸ್ಲಿಮರ ನಡುವೆ ಯಾವ ತಾರತಮ್ಯವನ್ನೂ ತೋರುತ್ತಿರಲಿಲ್ಲ. ಸಿವಿಲ್ ಮತ್ತು ಸೈನಿಕ ಅಧಿಕಾರಿಗಳ ಮಾರ್ಗದರ್ಶನಕ್ಕಾಗಿ ಕಾಯಿದೆಗಳನ್ನು ಹೊಸದಾಗಿ ರೂಪಿಸಿ ಅವನ್ನು ಚಾಚೂ ತಪ್ಪದೆ ಕಾರ್ಯಗತಮಾಡಬೇಕೆಂದು ಅಧಿಕಾರಿಗಳಿಗೆ ಆಜ್ಞೆ ಇತ್ತ. ಅವರಲ್ಲಿ ಶಿಸ್ತು ಪ್ರಧಾನವಾಗಿರುವಂತೆ ಕ್ರಮ ಕೈಗೊಂಡ. ದೇಶದಾದ್ಯಂತ ಗೂಢಚಾರರನ್ನು ನೇಮಕಮಾಡಿ ಅವರ ಮೂಲಕವಾಗಿ ದೇಶದಲ್ಲಿ ನಡೆಯುವ ಘಟನೆಗಳ ಬಗ್ಗೆ ವರ್ತಮಾನವನ್ನು ತಿಳಿಯುತ್ತಿದ್ದ. ಅಪರಾಧಿಗಳನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತಿದ್ದ. ದೇಶದ ವಿವಿಧ ಭಾಗಗಳಲ್ಲಿ ಶಿಬಿರಗಳನ್ನೇರ್ಪಡಿಸಿ, ಅವುಗಳಲ್ಲಿ ಸೈನ್ಯವನ್ನಿಟ್ಟ. ಆಗಾಗ ತಾನೇ ಶಿಬಿರಗಳಿಗೆ ಭೇಟಿ ಕೊಡುತ್ತಿದ್ದ. ನ್ಯಾಯ ತೀರ್ಮಾನದ ಕೆಲಸ ಸಾಮಾನ್ಯವಾಗಿ ಶುಕ್ರವಾರ ನಡೆಯುತ್ತಿತ್ತು.

ಶಕ್ತಿ ಮತ್ತು ಸಾಮರ್ಥ್ಯಗಳಿದ್ದರೂ ಸ್ವಾಭಾವಿಕವಾಗಿ ಈತ ಇನ್ನೊಬ್ಬರನ್ನು ಸಂಶಯ ದೃಷ್ಟಿಯಿಂದಲೇ ನೋಡುತ್ತಿದ್ದ. ತನ್ನ ತಂದೆಯನ್ನು ದೇವರೆಂದು ಪೂಜಿಸುತ್ತಿದ್ದ. ಶ್ರೀಮಂತರ ಪ್ರೀತ್ಯಾದರಗಳನ್ನು ಈತ ಸಂಪಾದಿಸಲಿಲ್ಲ. ತತ್ಪರಿಣಾಮವಾಗಿ ಷೇರ್ ಷಾನ ಉತ್ಕರ್ಷಕ್ಕೆ ಕಾರಣರಾದ ಆಫ್ಘನ್ ಶ್ರೀಮಂತರು ಇಸ್ಲಾಂ ಷಾನನ್ನು ಬಿಟ್ಟು ಹೊರಡಲುಪಕ್ರಮಿಸಿದರು. ಇದರಿಂದ ದೇಶದ ಭದ್ರತೆ ಕಡಿಮೆಯಾಗಿ ಅಂತ್ಯದಲ್ಲಿ ಸಾಮ್ರಾಜ್ಯ ಒಡೆದುಹೋಗಲು ಅವಕಾಶ ಮಾಡಿಕೊಟ್ಟಿತು.

ಇಸ್ಲಾಂ ಷಾನನ್ನು ಕೊಲೆಮಾಡಲು ಆಫ್ಘನ್ ಶ್ರೀಮಂತರೂ ಸಹೋದರನಾದ ಆದಿಲ್‍ಖಾನನೂ ಗುಟ್ಟಾಗಿಯೇ ಪಿತೂರಿಯನ್ನು ನಡೆಸಿದರು. ಆದರೆ ಅದು ಯಶಸ್ವಿಯಾಗಲಿಲ್ಲ. ಒಳಸಂಚಿನಲ್ಲಿ ಕೈವಾಡವಿದ್ದ ಖವಾಸ್‍ಖಾನನನ್ನು ಸೋಲಿಸಲಾಯಿತು. ಆದಿಲ್‍ಖಾನ್ ತಲೆಮರೆಸಿಕೊಂಡು ಓಡಿಹೋದ. ಶಂಕಿತರನ್ನು ಉಗ್ರಶಿಕ್ಷೆಗೆ ಗುರಿಮಾಡಲಾಯಿತು. ಪ್ರಮುಖ ಹುದ್ದೆಗಳಲ್ಲಿದ್ದ ಎಲ್ಲ ಆಫ್ಘನ್ ಶ್ರೀಮಂತರನ್ನೂ ಷಾ ತೆಗೆಯಲಾರಂಭಿಸಿದ. ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಧನಮದದಿಂದ ಕೊಬ್ಬಿದ್ದಾನೆಂಬ ಕಾರಣದ ಮೇಲೆ ಷೇರ್‍ಷಾನಿಂದ ನೇಮಕಗೊಂಡು ಮಾಳ್ವ ಪ್ರಾಂತ್ಯದ ಅಧಿಕಾರಿಯಾದ ಶುಜಾತ್‍ಖಾನನನ್ನು ಅಧಿಕಾರದಿಂದ ಉರುಳಿಸಲು ಷಾ ಪ್ರಯತ್ನಿಸಿದ. ಅಷ್ಟರಲ್ಲಿ ಆತ ತನ್ನ ರಾಜನಿಷ್ಠೆಯನ್ನು ತೋರಿ ತನ್ನ ಸ್ಥಾನಮಾನಗಳನ್ನು ಉಳಿಸಿಕೊಂಡ. ಪಂಜಾಬಿನ ಆಡಳಿತಾಧಿಕಾರಿಯಾದ ಹಯಬತ್‍ಖಾನ್ ನಿಯಾಜಿ ಅಜಿಂ ಹುಮಾಯೂನ್ ತನ್ನ ಬಗ್ಗೆ ರಾಜನಿಗಿದ್ದ ಸಂಶಯವನ್ನು ತೊಡೆದುಹಾಕಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ತತ್ಪರಿಣಾಮವಾಗಿ ಇಬ್ಬರಿಗೂ ಸಮರವೇರ್ಪಟ್ಟಿತು. ಖವಾಸ್‍ಖಾನ್ ಪಂಜಾಬಿನ ಆಡಳಿತಾಧಿಕಾರಿಗೆ ಸಹಾಯ ನೀಡಿದ. ವಿರೋಧ ವಿಷಮವಾಗಿಯೇ ಕಂಡಿತು. ಆದರೆ ಅವರಿಬ್ಬರಲ್ಲೂ ವೈಮನಸ್ಯವುಂಟಾಗಲಾಗಿ ಇಸ್ಲಾಂ ಷಾನ ಕೆಲಸ ಸುಲಭವಾಯಿತು. ರಣಭೂಮಿಯಲ್ಲಿ ಇಬ್ಬರೂ ಸೋತು ಓಡಿದರು. ಅವರ ಬಗ್ಗೆ ಎಚ್ಚರಿಕೆ ವಹಿಸಿದುದರಿಂದ ಇಸ್ಲಾಂ ಷಾಗೆ ಅವರಿಂದ ಯಾವ ತೊಂದರೆಯೂ ಆಗಲಿಲ್ಲ.

ಕಾಶ್ಮೀರದ ದೊರೆಯಾದ ಮಿರ್ಜಾಹೈದರ್‍ನೊಂದಿಗೆ ಷಾ ಸ್ನೇಹಸಂಬಂಧ ವನ್ನಿಟ್ಟುಕೊಂಡಿದ್ದ. ಮೈತ್ರಿಯ ಜ್ಞಾಪಕಾರ್ಥವಾಗಿ ಹೈದರ್ ದೆಹಲಿಯ ಆಸ್ಥಾನಕ್ಕೆ ತನ್ನ ವಕೀಲನನ್ನು ಉಡುಗೊರೆಗಳೊಡನೆ ಕಳುಹಿಸಿಕೊಟ್ಟ..

ಇಸ್ಲಾಂ ಷಾನ ಆಡಳಿತ ಪ್ರಧಾನವಾಗಿ ವೈಯಕ್ತಿಕವಾಗಿತ್ತು. ಹಲವಾರು ವಿಷಯಗಳಲ್ಲಿ ಈತ ತಂದೆಯಂತೆಯೇ ನಡೆದುಕೊಂಡರೂ ಆಫ್ಘನ್ ಶ್ರೀಮಂತರ ಬೆಂಬಲವನ್ನು ಕಳೆದುಕೊಂಡದ್ದು ಇವನಿಗೆ ಒಂದು ದೊಡ್ಡ ಆಘಾತವಾಗಿ ಪರಿಣಮಿಸಿತು. ತನ್ನ ಅಮಾನುಷ ಕೃತ್ಯದಿಂದಲೂ ನಿಷ್ಠುರ ನುಡಿಗಳಿಂದಲೂ ಈತ ಜನತೆಯ ಗೌರವವನ್ನು ಕಳೆದುಕೊಂಡ. ಇವನ ಕಟ್ಟುನಿಟ್ಟಾದ ನೀತಿಯಿಂದ ಆಫ್ಘನ್ನರಲ್ಲಿದ್ದ ರಾಷ್ಟ್ರೀಯ ಒಕ್ಕೂಟ ಒಡೆಯಿತು. ಪರಿಣಾಮವಾಗಿ ಇವನ ಮರಣಾನಂತರ ಆಫ್ಘನ್ ಸಾಮ್ರಾಜ್ಯ ಪತನಗೊಂಡಿತು. (ಬಿ.ಎಂ.)

**ಇಸ್ಲಾಮಾಬಾದ್:** ಭಾರತದ ಜಮ್ಮು ಮತ್ತು ಕಾಶ್ಮೀರದಲ್ಲಿ ಶ್ರೀನಗರದ ಆಗ್ನೇಯಕ್ಕೆ 56 ಕಿಮೀ ದೂರದಲ್ಲಿ ಝೀಲಂ ನದೀದಡದ ಮೇಲಿರುವ ಪಟ್ಟಣ. ಇಂದಿನ ಹೆಸರು ಅನಂತ್‍ನಾಗ್, ಪ್ರಸ್ಥಭೂಮಿಯ ಬುಡದಲ್ಲಿದೆ. ಇದರ ಅಂಚಿನಲ್ಲಿ ಸೂಚ್ಯಗ್ರ ಪರ್ವತವಿದೆ. ಪಟ್ಟಣದ ಹತ್ತಿರ ಅನೇಕ ಚಿಲುಮೆಗಳಿವೆ; ಅತಿ ದೊಡ್ಡದು ಅನಂತನಾಗ್. ಈ ಹೆಸರೇ ಪಟ್ಟಣಕ್ಕೂ ಬಂದಿದೆ. ಮಲ್ಲಿಕ್‍ನಾಗ್ ಎಂಬ ಇನ್ನೊಂದು ಚಿಲುಮೆ ಗಂಧಕಾಂಶವನ್ನೊಳ ಗೊಂಡಿರುವುದರಿಂದ ತೋಟಗಳ ವ್ಯವಸಾಯಕ್ಕೆ ಉಪಯುಕ್ತವಾಗಿದೆ. ಕಾಶ್ಮೀರದ ದೊಡ್ಡ ಕಣಿವೆಯಲ್ಲಿ ಇದೊಂದು ಅತಿರಮ್ಯ ಸ್ಥಳ. ಹಿಂದೆ ಕಾಶ್ಮೀರದ ರಾಜಧಾನಿ, ಬೇಸಿಗೆಯಲ್ಲಿ ಉಪಯೋಗಿಸುತ್ತಿದ್ದ ಒಂದು ಅರಮನೆ, ಸುಂದರ ಮಸೀದಿ, ದೇವಸ್ಥಾನಗಳು ಇಂದಿಗೂ ನಿಂತಿವೆ. ಜನರ ಮುಖ್ಯ ಕಸುಬು ಕೃಷಿ ಇಲ್ಲವೆ ಶಾಲು ನೇಯುವುದು. *

**ಇಸ್ಲಾಮಾಬಾದ್ 2:** ಪಾಕಿಸ್ತಾನದ ನೂತನ ರಾಜಧಾನಿ. ರಾವಲ್ಪಿಂಡಿಯ ವಾಯವ್ಯಭಾಗದಲ್ಲಿ ಉತ್ತರ ಅಕ್ಷಾಂಶ 33.44 ಮತ್ತು ಪೂರ್ವರೇಖಾಂಶ 73.10ಗಳಲ್ಲಿ ನೆಲಸಿದೆ. 1959ರಲ್ಲಿ ಇದನ್ನು ಕರಾಚಿಗೆ ಬದಲಾಗಿ ರಾಜಧಾನಿಯಾಗಿ ಆಯ್ಕೆ ಮಾಡಲಾಯಿತು. ನಗರದ ವಾಸ್ತು ಶಿಲ್ಪವು ಆಧುನಿಕವಾಗಿದ್ದರೂ ಇಸ್ಲಾಮಿಕ್ ಸಂಪ್ರದಾಯವನ್ನು ಪ್ರತಿಬಿಂಬಿಸುತ್ತದೆ. ನಗರದ ವಿಸ್ತೀರ್ಣ 65 ಚ.ಕಿಮೀ ಗಳಷ್ಟೇ ಚಿಕ್ಕದು. ಜನಸಂಖ್ಯೆ: 201,000 (2002). ಮುಂದೆ ಅದನ್ನು 90ಚ.ಕಿಮೀಗಳವರೆಗೆ ವಿಸ್ತರಿಸುವುದು ನಗರ ಯೋಜನೆಯ ಉದ್ದೇಶ 1965ರಲ್ಲಿ ಸ್ಥಾಪನೆಗೊಂಡ ವಿಶ್ವವಿದ್ಯಾನಿಲಯವಿದೆ. *

**ಇಸ್ಲಾಮಿನ ಇತಿಹಾಸ:** ಪ್ರಪಂಚದ ಮುಖ್ಯ ಧರ್ಮಗಳಲ್ಲಿ ಇಸ್ಲಾಂ ಒಂದಾಗಿದೆ. ಇದು ಏಷ್ಯ, ಆಫ್ರಿಕ ಮತ್ತು ಯುರೋಪ್ ಖಂಡಗಳ ಅನೇಕ ಭಾಗಗಳಲ್ಲಿ ವಾಸಿಸುವ ಸುಮಾರು ನಾನೂರು ದಶಲಕ್ಷ ಜನರ ಮುಖ್ಯ ಧರ್ಮ. ಇಸ್ಲಾಂ ಎಂಬ ಪದ ಆ ಮತಾವಲಂಬಿಗಳನ್ನೂ ಪ್ರದೇಶಗಳನ್ನೂ ಸೂಚಿಸುತ್ತದೆ. ಆಧುನಿಕ ಪ್ರಪಂಚದಲ್ಲಿ ಆಫ್ಘಾನಿಸ್ತಾನ, ಆಲ್ಜೇರಿಯ, ಇರಾಕ್, ಇಂಡೋನೇಷ್ಯ, ಟರ್ಕಿ, ಟ್ಯುನೀಷಿಯ, ಪಾಕಿಸ್ತಾನ, ಮೊರಾಕೊ, ಲಿಬಿಯ, ಸಿರಿಯ, ಸೌದಿ ಅರೇಬಿಯ–ಇವು ಪ್ರಮುಖ ಮುಸ್ಲಿಂ ರಾಷ್ಟ್ರಗಳು. ಹಾಗೂ ಹೆಚ್ಚು ಸಂಖ್ಯೆಯಲ್ಲಿ ಮುಸ್ಲಿಮರು ಭಾರತ, ಆಫ್ರಿಕ, ಚೀನ, ಫಿಲಿಪೈನ್ಸ್, ಯೂಗೋಸ್ಲಾವಿಯ, ಲೆಬನಾನ್ ಮತ್ತು ಸೋವಿಯತ್ ದೇಶಗಳಲ್ಲಿದ್ದಾರೆ.

ಮಹಮ್ಮದ್‍ನ ಅನಂತರ ಪಟ್ಟಕ್ಕೆ ಬರಬೇಕಾದವರ ವಿಷಯದಲ್ಲಿ ಭಿನ್ನಾಭಿಪ್ರಾಯ ವುಂಟಾಗಿ ಇಸ್ಲಾಂನಲ್ಲೂ ಮತಭೇದಗಳು ಹುಟ್ಟಿದುವು. ಇವುಗಳಲ್ಲಿ ಮುಖ್ಯವಾದುವು ಮೂರು: ಸುನ್ನತ್ ಜಮಾತ್, ಷಿಯ ಪಂಗಡ ಮತ್ತು ವಹಾಬಿಗಳು.

ಮುಸ್ಲಿಮರಲ್ಲಿ ಸುನ್ನತ್ ಜಮಾತ್ ಪಂಗಡದವರ ಸಂಖ್ಯೆ ನೂರಕ್ಕೆ ಎಪ್ಪತ್ತು. ಸುನ್ನೆ (ದಾರಿ)–ಅಂದರೆ ಸಂಪ್ರದಾಯಗಳಲ್ಲಿರುವಂತೆ ಮಹಮ್ಮದ್ ತೋರಿಸಿಕೊಟ್ಟ ದಾರಿ–ಎಂಬುದರಿಂದ ಅವರಿಗೆ ಈ ಹೆಸರು ಬಂದಿದೆ. ಕಲೀಫನನ್ನು ಆಯ್ಕೆ ಮಾಡಬೇಕೆಂದೂ ಆತ ಮೆಕ್ಕದ ಖುರಾಯಿಷ್ ಪಂಗಡದವನೊಬ್ಬನಾಗಬೇಕೆಂದೂ ಇವರ ಅಭಿಪ್ರಾಯ. ಪ್ರ.ಶ. 9ನೆಯ ಶತಮಾನದ ಹೊತ್ತಿಗೆ ನಾಲ್ಕು ನ್ಯಾಯಾಲಯಗಳು ಸುನ್ನತ್ ಪ್ರಪಂಚದಲ್ಲಿ

ಹುಟ್ಟಿದುವು. ಅವು ಯಾವುವೆಂದರೆ ಹನಾಫಿ, ಮಲಿಕಿ, ಷಫೀಯತ್ ಮತ್ತು ಹನ್‌ಬಲಿತ್. ಇವು ಇಸ್ಲಾಂ ಧರ್ಮದ ವಿವಿಧ ಗುಂಪುಗಳ ಧರ್ಮ ಮತ್ತು ನ್ಯಾಯಶಾಸ್ತ್ರಗಳನ್ನು ಕ್ರಮಪಡಿಸಿದುವು. ಇವುಗಳ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸುನ್ನತೆ ದೇಶಗಳ ಇತಿಹಾಸದಲ್ಲಿ ಪ್ರಮುಖಸ್ಥಾನ ಗಳಿಸಿದ ಉಲೇಮಗಳಾದರು. ಅವರ ವರ್ಗದಿಂದ ನ್ಯಾಯಾಧೀಶರನ್ನೂ ಮತ್ತು ಮುಫ್ತಿಗಳನ್ನೂ ಆರಿಸಿದರು.

ಷಿಯ ಕೂಡ ಮತ್ತೊಂದು ಮುಖ್ಯವಾದ ಪಂಗಡ. ಇವರು ಆಲಿ ಮತ್ತು ಅವನ ಅನುಯಾಯಿಗಳೇ ನಿಜವಾದ ಕಲೀಫರೆಂದು ತಿಳಿಯುತ್ತಾರೆ. ಕುರಾನಿನಲ್ಲಿ ಅಡಗಿರುವ ತತ್ತ್ವಗಳನ್ನು ಬಿಡಿಸಿ ಅರ್ಥ ಹೇಳತಕ್ಕವ ಮಹಮ್ಮದನಷ್ಟೇ ಪರಿಶುದ್ಧಾತ್ಮನೂ ದೈವನಿಯಮಿತನೂ ಆಗಿರಬೇಕೆಂದು ಹೇಳಿ, ಅಂಥವ ಮಹಮ್ಮದನ ಸೋದರ ಮಗನೂ ಅಳಿಯನೂ ಆದ ಆಲಿಯೊಬ್ಬನೇ ಎಂದು ಇವರು ಸಾಧಿಸಿದರು. ಹೀಗೆ ನಿರಂಕುಶ ಪ್ರಭುತ್ವದ ಅಭಿಪ್ರಾಯ ಆಲಿಯ ಅನುಯಾಯಿಗಳಲ್ಲಿ ಬೆಳೆಯಿತು.

ಷಿಯ ಪಂಗಡಗಳಲ್ಲಿ 12 ಇಮಾಮಿಗಳು 7 ಇಮಾಮಿಗಳು ಎಂಬ ಒಳಪಂಗಡಗಳಿವೆ. ಈ ಪಂಗಡದವರು ಪರ್ಷಿಯದಲ್ಲೂ ಭಾರತ, ಇರಾಕ್ ಮತ್ತು ದಕ್ಷಿಣ ಲೆಬನಾನಿನಲ್ಲಿಯೂ ಇದ್ದಾರೆ. ಕಲೀಫನ ರಾಜಕೀಯ ಹಕ್ಕಿನಲ್ಲಿ ಅಲ್ಲದೆ, ನ್ಯಾಯ ಮತ್ತು ಆಚರಣೆಗಳಲ್ಲೂ ಷಿಯ ಪಂಗಡದವರು ಸುನ್ನಿಗಳಿಂದ ಬೇರೆಯಾಗಿದ್ದಾರೆ.

ವಹಾಬಿಗಳು ಅಥವ ಅಹ್‌ಲೆ ಹದೀಗಳು ಇಸ್ಲಾಂನ ಮೂರನೆಯ ಪಂಗಡ. 1691ರಲ್ಲಿ ಅರೇಬಿಯದಲ್ಲಿ ಹುಟ್ಟಿದ ಅಬ್ದುಲ್ ವಹಾಬನ ಮಗ ಮಹಮ್ಮದ್ ಇದನ್ನು ಸ್ಥಾಪಿಸಿದ. ಇವರು ಪ್ರಾರ್ಥನೆ, ಉಪವಾಸ ಮೊದಲಾದ ವಿಷಯಗಳಲ್ಲಿ ಇತರರಿಗಿಂತ ಹೆಚ್ಚು ನೇಮಬದ್ಧರು.

ಮುಖ್ಯವಾದ ಈ ಮೂರು ಪಂಗಡಗಳಲ್ಲದೆ ಷೈಖಿ, ಮಹ್‌ದವೀಯ ಮೊದಲಾದ ಪಂಗಡಗಳೂ ಉಂಟು. ಮಹ್‌ದವೀಯ ಪಂಗಡದವರು ಮೈಸೂರು ಮತ್ತು ಆಂಧ್ರ ಪ್ರದೇಶದಲ್ಲಿದ್ದಾರೆ. ಇವರು 12ನೆಯ ಇಮಾಮ್ ಮಹದಿ ಆಗಲೆ ಬಂದು ಹೋದನೆಂದು ನಂಬುತ್ತಾರೆ.

ಧರ್ಮವಿಷಯದಲ್ಲಿ ತತ್ತ್ವಭೇದದಿಂದ ಹುಟ್ಟಿದ ಈ ಪಂಗಡಗಳೇ ಅಲ್ಲದೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸುಧಾರಣೆಗಳನ್ನು ಮೂಲಮಾಡಿಕೊಂಡು ಹೊರಟ, ಮತ್ತು ಶುದ್ಧ ಇಸ್ಲಾಂ ಧರ್ಮದ ಪುನರುದ್ಧಾರಕ್ಕೆ ಕೆಲಸ ನಡೆಸುತ್ತಿರುವ, ಅನೇಕ ಸಂಸ್ಥೆಗಳೂ ಹುಟ್ಟಿಕೊಂಡಿವೆ. ಈ ಸುಧಾರಣಾ ಕಾರ್ಯಗಳಿಗೆ ಮೂಲ ಕಾರಣ ಮೊಗಲ್‌ಬಾದಷಾಹಿ ಒಡೆದುಹೋಗಿ, ಮುಸ್ಲಿಮರ ಪ್ರಾಬಲ್ಯ ಕ್ಷೀಣದೆಸೆಗೆ ಬಂದು, ಪೂರ್ವ ದೇಶಗಳಿಗೆ ಕ್ರಮೇಣ ಪಾಶ್ಚಾತ್ಯ ಸಂಪರ್ಕ ಉಂಟಾಗಿ ಅದರ ಪ್ರಭಾವದಿಂದ ಜನಜೀವನದಲ್ಲಿ ಮೂಡಿದ ಒಂದು ಹೊಸ ಚೈತನ್ಯ. ಈ ಸುಧಾರಣೆಯ ಕೆಲಸ ಸುಸಂಘಟಿತ ಸಂಸ್ಥೆಯಿಂದಾಗಲೀ ಸರ್ಕಾರದ ಬೆಂಬಲದಿಂದಾಗಲೀ ನಡೆಯುವುದಕ್ಕಿಂತ ಹೆಚ್ಚಾಗಿ ಕೆಲವು ಪ್ರಮುಖರು ವ್ಯಕ್ತಿಗಳಿಂದ ನಡೆದಿದೆ. ಹೀಗೆ ಸುಧಾರಣೆ ಮಾಡಿದವರಲ್ಲಿ ಮುಖ್ಯರಾದವರು ತುರ್ಕಿಯ ವಿಥತ್‌ಪಾಷ, ಇರಾನಿನ ಮುಖ್ಯಮಂತ್ರಿ ಮಿಸ ತಕೀಖಾನ್, ಆಫ್ಘಾನಿಸ್ತಾನದ ಸಯದ್ ಜಮಾಲುದ್ದೀನ್, ಭಾರತದಲ್ಲಿ ಬಂಗಾಳದ ಹಾಜಿ ಷರೀಯತ್ ಉಲ್ಲ ಮತ್ತು ಪಂಜಾಬಿನ ಸರ್ ಸಯದ್ ಅಹಮ್ಮದ್, ಆಫ್ರಿಕದ ಸಿದಿ ಮಹಮ್ಮದರ ಅಸ್ಸನೂಸೀ ಮೊದಲಾದವರು. ಇಸ್ಲಾಮಿನಲ್ಲಿ ನಡೆದಿರುವ ಇತ್ತೀಚಿನ ಸುಧಾರಣೆಗಳಲ್ಲಿ ತೀವ್ರ ರೀತಿಯದೂ ಬಹು ಪರಿಣಾಮಕಾರಿಯೂ ಒಂದು ರೀತಿಯಲ್ಲಿ ಕ್ರಾಂತಿಕಾರವೂ ಆದ ಚಳವಳಿ ಎಂದರೆ, ಟರ್ಕಿ ಗಣರಾಜ್ಯದ ಅಧ್ಯಕ್ಷನಾದ ಮುಸ್ತಫ ಕೆಮಾಲ್ ಪಾಷ ಕಳೆದ ಮಹಾಯುದ್ಧದ ಅನಂತರ ಹೂಡಿದ್ದು. ಈ ಚಳವಳಿಯ ಫಲವಾಗಿ ಟರ್ಕಿ ಸರ್ವ ಮುಸ್ಲಿಮ್ ಚಳವಳಿಯನ್ನು ಕನಸೆಂದೆ ಕೈಬಿಟ್ಟು, ಕಲೀಫ್ ಅಬ್ದುಲ್ ಮಜೀದನನ್ನು ಓಡಿಸಿ, ದೇಶದಲ್ಲಿ ಗಣರಾಜ್ಯ ಪ್ರಜಾಪ್ರಭುತ್ವ ಸ್ಥಾಪಿಸಿ, ತನ್ನ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳನ್ನು ರಾಷ್ಟ್ರತತ್ತ್ವದ ಮೂಲಭಾವನೆಯ ಮೇಲೆ ನಿಲ್ಲಿಸಿತು. ರಾಷ್ಟ್ರ ಪ್ರಗತಿಗೆ ಸಹಾಯವಾದದ್ದನ್ನೆಲ್ಲ ಉಳಿಸಿಕೊಂಡು, ಹಾನಿಕರವಾದ್ದನ್ನೆಲ್ಲ ಕಳೆದು ಬಿಸುಟಿತು. ಈ ಸುಧಾರಣೆಯ ಕಾರ್ಯದಲ್ಲಿ ಪಾಶ್ಚಾತ್ಯ ಅನುಕರಣೆಯೇ ಹೆಚ್ಚಾಗಿ ಜನರ ವೇಷಭೂಷಣಗಳು ಆಹಾರ ವ್ಯವಹಾರಗಳು ಎಲ್ಲವೂ ಮಾರ್ಪಾಡಾದವು. ಇತರ ಕಡೆಗಳಲ್ಲೂ ಇದೇ ರೀತಿಯ ನೂತನ ಮನೋಭಾವಗಳು ಬೆಳೆದವು.

ಮಹಮ್ಮದ್ ಸಾಯುವ ಒಂದೆರಡು ವರ್ಷಗಳಿಗೆ ಮುಂಚೆಯೇ ಅರೇಬಿಯದಲ್ಲೆಲ್ಲರೂ ಅವನನ್ನು ಅಧಿಪತಿಯಾನ್ನಾಗಿ ಒಪ್ಪಿಕೊಂಡರು. ಮದೀನ ಸಾಮ್ರಾಜ್ಯದ ಕೇಂದ್ರವಾಯಿತು. 632ರಲ್ಲಿ ಮಹಮ್ಮದ್ ಮಡಿದಾಗ ಅಬುಬಕರ್ ಅವನ ಅಧಿಕಾರಕ್ಕೆ ಬಂದು ಸುಮಾರು ಮೂರು ವರ್ಷ ಆಳಿದ. ಈ ಕಾಲದಲ್ಲಿ ಕೆಲವು ನಾಡುಗಳಿಗೆ ದಾಳಿ ಮೊದಲು ಮಾಡಿದ. ಎರಡನೆಯ ಕಲೀಫ ಉಮರನ ಆಳ್ವಿಕೆಯಲ್ಲಿ ಪರ್ಷಿಯ, ಈಜಿಪ್ಟ್ ಮತ್ತು ಸಿರಿಯ ದೇಶಗಳು ಕೈವಶವಾದವು. ಮೂರನೆಯ ಕಲೀಫ ಉಸ್ಮಾನ್ ಪೂರ್ವಕ್ಕೆ ಆಫ್ಘಾನಿಸ್ತಾನದವರೆಗೂ ಪಶ್ಚಿಮದಲ್ಲಿ ಆಫ್ರಿಕದ ತ್ರಿಪೋಲಿಯವರೆಗೂ ಇಸ್ಲಾಂ ಸಾಮ್ರಾಜ್ಯವನ್ನು ವಿಸ್ತರಿಸಿದ. ನಾಲ್ಕನೆಯ ಕಲೀಫ ಆಲಿ ಸರ್ಕಾರದ ಕೇಂದ್ರವನ್ನು ಇರಾಕಿನಲ್ಲಿಯ ಕೂಫ ಪಟ್ಟಣಕ್ಕೆ ವರ್ಗಾಯಿಸಿದ. ಅಂದಿನಿಂದ ಅರೇಬಿಯ ಇಸ್ಲಾಂ ಸಾಮ್ರಾಜ್ಯದ ಒಂದು ಪ್ರಾಂತ್ಯವಾಯಿತು.

ಸಿರಿಯ ಅರಬ್ಬರಿಗೆ ಪುಣ್ಯಕ್ಷೇತ್ರವಾಗಿತ್ತು. 637ರಲ್ಲಿ ಎರಡನೆಯ ಕಲೀಫನ ಕಾಲದಲ್ಲಿ ಜೆರೂಸಲೆಂ ಮತ್ತು ಸಿರಿಯ ಇಸ್ಲಾಂ ರಾಜ್ಯಕ್ಕೆ ಸೇರಿದುವು. ಮೊದಲನೆಯ ಉಮಾಯಿದ್ ಕಲೀಫ ಮಾವಿಯ ಡಮಾಸ್ಕಸ್ಸನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಉಮಾಯಿದ್ ಅರಸರ ಅನಂತರ ಬಂದ ಅಬ್ಬಾಸಿದ್ದರು ಬಾಗ್ದಾದನ್ನು ರಾಜಧಾನಿಯಾಗಿ ಮಾಡಿಕೊಂಡರು. ಫಾತೆಮಿಗಳ ಆಳ್ವಿಕೆಯಲ್ಲಿ ಸಿರಿಯ ಈಜಿಪ್ಟಿಗೆ ಸೇರಿತು. ಒಂದನೆಯ ಮಹಾಯುದ್ಧದವರೆಗೂ ಆಟೊಮನ್ ತುರ್ಕರ ಕೈಯಲ್ಲಿತ್ತು. ಅನಂತರ 1958 ಫೆಬ್ರವರಿಯಲ್ಲಿ ಸಂಯುಕ್ತ ಗಣರಾಜ್ಯ ಸ್ಥಾಪನೆಯಾಯಿತು. ಈಗ ಪುನಃ ಅದು ಒಡೆದು ಬೇರೆ ಸ್ವತಂತ್ರ ರಾಜ್ಯಗಳಾಗಿವೆ.

640ರಿಂದ ಈಜಿಪ್ಟ್ ಮುಸ್ಲಿಂ ದೇಶವಾಗಿದೆ ಫಾತೆಮಿಗಳ ಆಳ್ವಿಕೆಯಲ್ಲಿ ಈಜಿಪ್ಟ್ ಸ್ವತಂತ್ರ ನಾಡಾಗಿ, ಇಸ್ಲಾಂ ಜ್ಞಾನ ಮತ್ತು ಸಂಸ್ಕೃತಿಗಳ ಪ್ರಸಿದ್ಧ ಕೇಂದ್ರಗಳಲ್ಲಿ ಒಂದಾಗಿತ್ತು. ಮೊದಲನೆಯ ಕಲೀಫನ ಕಾಲದಲ್ಲಿ ಅರಬರು ಮೊದಲು ಇರಾಕಿಗೆ ದಾಳಿಯಿಟ್ಟರು. ಹದಿನೈದು ವರ್ಷಗಳೊಳಗೆ ಇರಾಕ್ ಒಂದನ್ನೇ ಅಲ್ಲದೆ ಒಟ್ಟು ಪರ್ಷಿಯವನ್ನೇ ಗೆದ್ದು ಅರಬ್ಬೀ ಸಾಮ್ರಾಜ್ಯಕ್ಕೆ ಸೇರಿಸಿಕೊಂಡರು. 750–1258ರ ವರೆಗೆ ಅಬ್ಬಾಸಿದ್ದರು ಆಳಿದರು. ಇರಾಕ್ ಷಿಯ ಪಂಗಡದ ಧರ್ಮಶಾಸ್ತ್ರ ವ್ಯಾಸಂಗಕ್ಕೆ ಮುಖ್ಯ ಕೇಂದ್ರವಾಗಿದೆ. 650ರ ವೇಳೆಗೆ ಇರಾನ್ ಅಥವಾ ಪರ್ಷಿಯದಲ್ಲೆಲ್ಲಾ ಅರಬ್ಬರ ಆಳಿಕೆ ನೆಲಸಿತು. 16ನೆಯ ಶತಮಾನದವರೆಗೂ ಪರ್ಷಿಯದ ಬಹುಭಾಗದಲ್ಲಿ ಸುನ್ನತ್ ಜಮಾತ್ ಪಂಗಡ ಪ್ರಬಲವಾಗಿತ್ತು. ತರುವಾಯ ಷಿಯ ಪಂಗಡ ರಾಜಕೀಯ ಪ್ರಾಮುಖ್ಯ ಪಡೆಯಿತು.

ಇಸ್ಲಾಂ ಚೀನ ದೇಶಕ್ಕೂ ಹರಡಿತು; ಅಲ್ಲಿ ಮುಸ್ಲಿಮರು ಸುಮಾರು ಮೂರು ಕೋಟಿಯಷ್ಟಿದ್ದಾರೆ. ಅಂತೆಯೇ ಫೆಸಿಫಿಕ್ ಸಾಗರದ ದ್ವೀಪಗಳಲ್ಲೂ ಅರಬ್ಬೀ ಮತ್ತು ಪಾರಸಿಕ ವ್ಯಾಪಾರಿಗಳು ಸಿಪಾಯಿಗಳು ಮುಂತಾದವರಿಂದ ಇಸ್ಲಾಂ ಧರ್ಮ ಪ್ರಚಾರಗೊಂಡಿತು. ಜಾವಾದಲ್ಲಿ ಇಸ್ಲಾಂ ಹರಡಿಕೆ ನಿಧಾನವಾಗಿ ನಡೆದರೂ ಕಾಲಕ್ರಮದಲ್ಲಿ ನ್ಯೂಗಿನಿ, ಬೋರ್ನಿಯೊ, ಸಾಂಬವ, ಸೆಲೆಬಿಸ್, ಮೊರಕ್ಕ, ಫಿಲಿಪೈನ್ಸ್ ಇವೇ ಮೊದಲಾದ ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ಹರಡಿತು. ಮಹಮ್ಮದರ ಸತ್ತ 70 ವರ್ಷಗಳೊಳಗೆ ಇಸ್ಲಾಂ ಆಫ್ರಿಕದ ಪಶ್ಚಿಮಕ್ಕೆಲ್ಲ ಹರಡಿದ್ದೇ ಅಲ್ಲದೆ ಸ್ಪೇನ್ ಕೈವಶವಾಗಿ ಮುಸ್ಲಿಂ ಕಲೀಫರು ಮತ್ತು ಮುಸ್ಲಿಂ ದೊರೆಗಳು ಅದನ್ನು ಸುಮಾರು 700 ವರ್ಷಗಳ ಕಾಲ ಆಳಿದರು. 11ನೆಯ ಶತಮಾನದಲ್ಲಿ ಇಸ್ಲಾಂ ಸಹರದ ಕಡೆಗೆ ಹೊರಟು, 16ನೆಯ ಶತಮಾನದ ಕೊನೆಯ ಹೊತ್ತಿಗೆ ಅದರ ಬಹುಭಾಗದಲ್ಲೆಲ್ಲ ಹರಡಿ ಟಿಂಬಕ್ಟು ಮೊದಲಾದ ಮುಸ್ಲಿಂ ರಾಜ್ಯಗಳು ಹುಟ್ಟಿಕೊಂಡವು. ಭಾರತದಲ್ಲಿಯ ಇಸ್ಲಾಂ ಪ್ರಚಾರ ಕೆಲವು ವ್ಯಕ್ತಿಗಳ ಮೂಲಕ ನಡೆಯಿತು.

ತನ್ನ ಉಚ್ಛ್ರಾಯ ಕಾಲದಲ್ಲಿ ತುರ್ಕಿ ಸಾಮ್ರಾಜ್ಯ ಏಷ್ಯ ಮೈನರ್, ಆರ್ಮೀನಿಯ, ಮೆಸಪೊಟೇಮಿಯ, ಸಿರಿಯ, ಅರೇಬಿಯ ಬಾಲ್ಕನ್ ರಾಜ್ಯಗಳು, ಹಂಗೇರಿ, ಈಜಿಯನ್ ದ್ವೀಪಗಳು ಈಜಿಪ್ಟ್, ಉತ್ತರ ಆಫ್ರಿಕ ಮೊದಲಾದ ಪ್ರದೇಶಗಳನ್ನು ಒಳಗೊಂಡಿತ್ತು. ತುರ್ಕರು ಸಾಮಾನ್ಯವಾಗಿ ತಮ್ಮ ಪ್ರಜೆಗಳ ಧರ್ಮ ವಿಷಯದಲ್ಲಿ ಕೈಹಾಕುತ್ತಿರಲಿಲ್ಲ. ಕೆಥೊಲಿಕ್ ಮತ್ತು ಗ್ರೀಕ್ ಚರ್ಚುಗಳ ಪರಸ್ಪರ ದ್ವೇಷವೂ ಕ್ರೈಸ್ತ ವೈದಿಕರ ದಬ್ಬಾಳಿಕೆಯೂ ಸರ್ಕಾರದ ಪ್ರಭಾವವೂ ಇಸ್ಲಾಂ ಹರಡಿಕೆಗೆ ಸಹಾಯಕವಾದುವು. ಇಸ್ಲಾಂ ಪ್ರಮುಖ ಧರ್ಮವಾಯಿತು.

ಖಿಲಾಫತ್ತಿನ ಮೊದಲ ಮೂವತ್ತು ವರ್ಷಗಳಲ್ಲಿ ಅರಬ್ಬರು ಸಿರಿಯ, ಪ್ಯಾಲಸ್ತೀನ್, ಇರಾನ್, ಈಜಿಪ್ಟ್ ಮೊದಲಾದ ಪ್ರದೇಶಗಳನ್ನು ಗೆದ್ದು ಅಲ್ಲಿ ನೆಲೆಸಿದ್ದಲ್ಲದೆ, ಆ ದೇಶಗಳ ಸಂಪತ್ತನ್ನು ಅರೇಬಿಯಕ್ಕೆ ತಂದು ಹಾಕಿದ್ದರಿಂದ ದರಿದ್ರರಾಗಿದ್ದ ಅರಬ್ಬರು ಐಶ್ವರ್ಯವಂತ ರಾದರು. ನೆಮ್ಮದಿ ನೆಲೆಸಿ ಸಾಹಿತ್ಯದ ಕಡೆಗೆ ಗಮನ ಹರಿಯಿತು. ಈ ಕಾಲದ ಕವಿಗಳು ಮರಳುಗಾಡಿನ ಜೀವನದ ಸರಳ ಭಾವಗಳನ್ನು ಉಳಿಸಿಕೊಂಡು ಬಂದಿದ್ದರೂ ಕಾವ್ಯಪ್ರಪಂಚ ವಿಸ್ತಾರವಾಗುತ್ತ ಬಂದು ಇಸ್ಲಾಂ ತತ್ತ್ವಗಳು, ಕಲೀಫರ ಪ್ರಶಂಸೆಗಳು ಮೊದಲಾದ ಹೊಸ ವಿಷಯಗಳ ಮೇಲೂ ಕಾವ್ಯಗಳು ರಚಿತವಾದುವು. ಅಬ್ಬಾಸಿದ್ದರ ಕಾಲವನ್ನು ಅರಬ್ಬೀ ಸಾಹಿತ್ಯದಲ್ಲಿ ಸ್ವರ್ಣಯುಗವೆನ್ನಬಹುದು. ಈ ಕಾಲದಲ್ಲಿ ಇರಾನೀ ಪ್ರಭಾವವೇ ಹೆಚ್ಚಾಗಿದ್ದು ಅರಬ್ಬೀ, ಯೆಹೂದ್ಯ, ಅರಾಮೇಯಿಕ್, ಸಿರಿಯನ್ ಮೊದಲಾದ ಸಿಮಿಟಿಕ್ ಸಂಸ್ಕೃತಿಗಳೂ ಬೆರೆತು, ಇಸ್ಲಾಂ ತತ್ತ್ವಗಳನ್ನು ಆಧಾರಮಾಡಿಕೊಂಡು ಒಂದು ಹೊಸ ಸಂಸ್ಕೃತಿ ರೂಪುಗೊಂಡಿತು. ಅಬ್ಬಾಸಿದ್ ಮನೆತನದ ಮೊದಲ ಏಳು ಕಲೀಫರೂ ಸ್ವತಃ ವಿದ್ವಾಂಸರಾಗಿದ್ದು ವಿದ್ಯಾ ಸಾಹಿತ್ಯಗಳಿಗೆ ಆಶ್ರಯದಾತರಾಗಿದ್ದರು. ಇವರು ಜ್ಞಾನಮಂದಿರ ವೊಂದನ್ನು ಸ್ಥಾಪಿಸಿ ಅನೇಕ ವಿದ್ವಾಂಸರನ್ನು ಕವಿಗಳನ್ನು ನೇಮಿಸಿ ಸಿರಿಯನ್, ಇರಾನಿ, ಹಿಂದೂ ಮೊದಲಾದ ಭಾಷೆಗಳಿಂದ ಗ್ರಂಥವನ್ನು ಅರಬ್ಬಿಗೆ ಭಾಷಾಂತರ ಮಾಡಿಸಿದರು. ಬಹು ದೂರದ ದೇಶಗಳಿಂದ ಅನೇಕ ವಿದ್ವಾಂಸರೂ ಕವಿಗಳೂ ಬಾಗ್ದಾದಿನಲ್ಲಿ ಬಂದು ನೆರೆಯುತ್ತಿದ್ದರು.

ಕಲೀಫ್ ಹಾರೂನ್ ಅಲ್ ರಷೀದನ (786) ಕಾಲದಲ್ಲೂ ಅವನ ಮಗನ ಕಾಲದಲ್ಲೂ ಅನೇಕ ವಿದ್ಯಾಶಾಲೆಗಳೂ ಒಂದು ವಿಶ್ವವಿದ್ಯಾಪೀಠವೂ ಖಗೋಳ ಶಾಲೆಯೂ ಹಲವು ಪುಸ್ತಕ ಭಂಡಾರಗಳೂ ಸ್ಥಾಪನೆಯಾದುವು. ಅಬ್ಬಾಸಿದ್, ಫಾತಿಮಿ ಮತ್ತು ಸ್ಪೇನಿನ ಉಮಾಯದ್ ರಾಜ್ಯಗಳ ಪ್ರಧಾನ ಪಟ್ಟಣಗಳಲ್ಲೆಲ್ಲ ಪುಸ್ತಕ ಭಂಡಾರಗಳು ಸ್ಥಾಪನೆಯಾದುವು. ಸಸ್ಯವಿಜ್ಞಾನ ವ್ಯಾಸಂಗಕ್ಕಾಗಿ ಕಾರ್ಡೋವ, ಪೆಸ್, ಕೈರೋ, ಬಾಗ್ದಾದ್ ಮೊದಲಾದೆಡೆಗಳಲ್ಲಿ ಪ್ರಯೋಗಕ್ಕಾಗಿ ತೋಟಗಳನ್ನು ಬೆಳೆಸಿದ್ದರು. ಅರಬ್ಬೀ ಭಾಷೆಯಲ್ಲಿ ಅತ್ಯುತ್ತಮವಾದ

ಶಾಸ್ತ್ರಗ್ರಂಥಗಳು ಹಲವಿದ್ದರೂ ಖಗೋಳಶಾಸ್ತ್ರ ಮತ್ತು ಜ್ಯೋತಿಷ್ಯ ಶಾಸ್ತ್ರದವು ಬಹು ಮುಖ್ಯವಾದುವು. ಖಗೋಳ ಶಾಲೆಗಳ ನಿರ್ಮಾಣವನ್ನು ಯುರೋಪಿನವರು ಮೊದಲು ಮುಸ್ಲಿಮರಿಂದ ಕಲಿತರು.

ಸಂಗೀತ ಕಲಾಭ್ಯಾಸ ಉಮಾಯುದ್ಧರ ಆಳ್ವಿಕೆಯ ಕೊನೆಯಲ್ಲಿ ಮೊದಲಾಗಿ ಅಬ್ಬಾಸಿದ್ದರ ಆಳ್ವಿಕೆಯಲ್ಲಿ ಬಲಗೊಂಡು ಬೆಳೆಯಿತು. 10ನೆಯ ಶತಮಾನದಿಂದ 18ನೆಯ ಶತಮಾನದವರೆಗೆ ಇಸ್ಲಾಂ ಸಂಗೀತ ಜಗತ್ತಿನ ಕಲಾ ಸಂಸ್ಕೃತಿಯ ಬೆಳೆವಣಿಗೆಗೆ ಸಹಾಯ ಮಾಡಿದೆ. ಇತರ ಪೂರ್ವ ದೇಶಗಳ ಸಂಗೀತ ಪದ್ಧತಿಗಳಂತೆಯೇ ಮುಸ್ಲಿಂ ಪದ್ಧತಿಯೂ ಲಯ ತತ್ತ್ವದ ಆಧಾರದ ಮೇಲೆ ನಿಂತಿದೆ. ಮುಸ್ಲಿಂ ಕೇವಲ ಪ್ರಾರ್ಥನಾಲಯ ಮಾತ್ರವಲ್ಲದೆ, ವಿದ್ಯಾಶಾಲೆ, ಪುಸ್ತಕ ಭಂಡಾರ, ಸತ್ರ ಮೊದಲಾದುವಾಗಿ ಉಪಯೋಗಿಸಲ್ಪಟ್ಟು ಮುಸ್ಲಿಂ ಜೀವನಕ್ಕೆ ಕೇಂದ್ರಪ್ರಾಯವಾಯಿತು. ಈ ಕಾರಣದಿಂದ ಕ್ರಮೇಣ ಮುಸ್ಲಿಂ ವಾಸ್ತುಶಿಲ್ಪದ ವೈಭವವೆಲ್ಲ ಈ ಮಸೀದಿಗಳಲ್ಲಿ ಕಂಡುಬರಲು ಅವಕಾಶವಾಯಿತು.

ಎಲ್ಲ ಮುಸ್ಲಿಮರು ಅಣ್ಣತಮ್ಮಂದಿರು ಎಂದು ಮಹಮ್ಮದ್ ಬೋಧಿಸಿದ. ಮದುವೆಗೆ ಪ್ರೋತ್ಸಾಹ ಕೊಟ್ಟ. ಒಬ್ಬನಿಗೆ ಒಬ್ಬ ಹೆಂಡತಿ ಎಂಬುದು ಸಾಮಾನ್ಯ ಕಟ್ಟಾಯಿತು. ಆದರೆ, ಹಲವು ಹೆಂಡಿರನ್ನು ಸಾಕುವ ಶಕ್ತಿಯಿದ್ದರೆ ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಳ್ಳಲು ಅಡ್ಡಿಯಿಲ್ಲ. ವಿಧಿಬದ್ಧವಾದ ಮದುವೆಯ ಜೊತೆಗೆ ಷಿಯ ಮತ್ತು ಕೆಲವು ಪಂಗಡಗಳಲ್ಲಿ ಮುತಾ ಎಂಬ ಒಂದು ವಿಧವಾದ ಹಂಗಾಮಿ ಮದುವೆಯುಂಟು. ಇದರಲ್ಲಿ ಗಂಡಸರು ಮತ್ತು ಹೆಂಗಸರು ಒಂದು ಗೊತ್ತುಮಾಡಿಕೊಂಡ ಕಾಲ ಒಡನಿದ್ದು ಸಂಸಾರ ಮಾಡಿ, ತರುವಾಯ ವಿಘಟನೆಯಿಲ್ಲದೆ ವಿಧಿಪೂರ್ವಕ ಬೇರೆಯಾಗಬಹುದು. ಕೆಲವು ಕಾರಣಗಳಿಗೆ ಮದುವೆಯ ವಿಚ್ಛೇದವೂ ಆಗಬಹುದು. ಒಂದೇ ಮನೆತನದಲ್ಲೂ ಹತ್ತಿರ ಸಂಬಂಧದಲ್ಲೂ ಮದುವೆ ಮಾಡಿಕೊಳ್ಳುವುದು ತುಂಬ ವಾಡಿಕೆಯಲ್ಲಿತ್ತು. ಯಾವ ಯಾವ ನೆಂಟರಲ್ಲಿ ಸಂಬಂಧ ಬೆಳೆಸಬಹುದು ಬೆಳೆಸಬಾರದು ಎಂಬ ವಿಷಯವಾಗಿ ಕುರಾನಿನಲ್ಲಿ ವಿಶದವಾಗಿ ಹೇಳಿದೆ. ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ ದೊಡ್ಡಮ್ಮ–ವರನ ಮಕ್ಕಳನ್ನು ಮದುವೆಯಾಗುವುದು ನಿಷಿದ್ಧವಲ್ಲ. ಮದುವೆಯಲ್ಲಿ ಪ್ರಧಾನ ಕರ್ಮ ನಿಕಾ ಇದು ಅರಬ್ಬೀ ಮಾತು ಸಂಯೋಗ ಎಂದು ಅರ್ಥ. ಆದರೆ ಸಾಮಾನ್ಯವಾಗಿ ಕರಾರು ಅಥವಾ ಒಪ್ಪಂದ ಎಂಬ ಭಾವದಲ್ಲಿ ಈಗ ಪದ ಉಪಯೋಗವಾಗುತ್ತಿದೆ. ಇದಕ್ಕೆ ಬೇಕಾದದ್ದು ಗಂಡು ಹೆಣ್ಣುಗಳ ಒಪ್ಪಿಗೆ. ವಧೂವರರ ತಂದೆತಾಯಿಗಳು, ಬಂಧು ಬಳಗದವರು, ಇಷ್ಟ ಮಿತ್ರರು–ಇವರ ಸಮಕ್ಷಮದಲ್ಲಿ ಹೆಣ್ಣಿನ ಮತ್ತು ಗಂಡಿನ ಒಪ್ಪಿಗೆ ಪಡೆದು ಕುರಾನಿನ ಕೆಲವು ವಚನಗಳನ್ನು ಪಠನ ಮಾಡಿ ವಿವಾಹದ ಕೆಲವು ಸ್ತೋತ್ರಗಳನ್ನು ಹೇಳಿ ಪುರೋಹಿತ (ಕಾಜಿ) ಇಬ್ಬರಿಗೂ ಆಶೀರ್ವಾದ ಮಾಡುತ್ತಾನೆ. ತರುವಾಯ ಬಾದಾಮಿ, ಖರ್ಜೂರ, ಸಕ್ಕರೆ ಇವನ್ನು ಎರಚುತ್ತಾರೆ. ಈಗ ಕೆಲವು ಕಡೆ ಹಂಚುತ್ತಾರೆ.

ಶ್ರೀಮಂತತನದ ಗೌರವಕ್ಕಾಗಿಯೊ ಅಥವಾ ಇತರ ಕಾರಣಗಳಿಂದಲೂ ಸೂಳೆಯರನ್ನು ಗುಲಾಮಿ ಹುಡುಗಿಯರನ್ನು ಇಟ್ಟುಕೊಳ್ಳುವುದು ಅರಬ್ಬರಲ್ಲಿ ಸಾಮಾನ್ಯವಾಗಿತ್ತು. ಇವರಲ್ಲಿ ಹುಟ್ಟಿದ ಮಕ್ಕಳಿಗೂ ಮದುವೆಯಾದ ಹೆಂಡತಿಯಲ್ಲಿ ಹುಟ್ಟಿದ ಮಕ್ಕಳಿಗೂ ಸ್ಥಾನಮಾನಗಳಲ್ಲಿ ವ್ಯತ್ಯಾಸವೇನೂ ಇರಲಿಲ್ಲ. ಪರದಾ ಪದ್ಧತಿ ಅಥವಾ ಹೆಂಗಸರು ಗಂಡಸರ ಕಣ್ಣಿಗೆ ಬೀಳದೆ ಮರೆಯಾಗಿರುವುದು ಒಂದಲ್ಲ ಒಂದು ರೀತಿಯಲ್ಲಿ ಯುರೋಪ್ ಮತ್ತು ಏಷ್ಯ ಖಂಡಗಳ ಹಲವು ದೇಶಗಳಲ್ಲಿ ಬಹಳ ಹಿಂದಿನಿಂದ ಬಂದ ಸಂಪ್ರದಾಯ. ಈ ಪದ್ಧತಿ ಎಲ್ಲ ದೇಶಗಳಲ್ಲೂ ಒಂದೇ ಸಮನಾಗಿಲ್ಲ. ಈಗೀಗ ಜನ ಎಚ್ಚೆತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳಿಗೆ ತಕ್ಕಂತೆ ಬದುಕನ್ನು ಮಾರ್ಪಡಿಸಿಕೊಳ್ಳುತ್ತಿರುವುದನ್ನು ನೋಡಿದರೆ ಈ ಪರದಾ ಪದ್ಧತಿಯೂ ಬೇಗ ತಪ್ಪಿಹೋಗಬಹುದೆಂದು ತೋರುತ್ತದೆ.

ಮಗು ಹುಟ್ಟಿದ ಒಡನೆ ಅದನ್ನು ತೊಳೆದು, ತಾಯಿ ಬಸಿರಾಗಿದ್ದಾಗಲೇ ಮಾಡಿಟ್ಟುಕೊಂಡಿದ್ದ ಬಟ್ಟೆ ಹಾಕಿ, ಅದರ ಕಿವಿಯಲ್ಲಿ ಮನೆಯ ಯಜಮಾನ ಅಸಾನ್ ಜಪಿಸುತ್ತಾನೆ. ತರುವಾಯ ಮಗುವಿನ ತಂದೆಯೋ ಅಥವಾ ಮನೆಯ ಹಿರಿಯನೋ ನಾಮಕರಣ ಮಾಡುತ್ತಾನೆ. ಏಳನೆಯ ದಿನದಿಂದ 10–12 ವರ್ಷದ ವಯಸ್ಸಿನವರೆಗೆ ಯಾವಾಗಲಾದರೂ ಸುಂತಿ ನಡೆಸುತ್ತಾರೆ. ಸತ್ತವರ ಕಣ್ಣು ಬಾಯಿಗಳನ್ನು ಮುಚ್ಚಿ ಮೆಕ್ಕದ ಕಡೆಗೆ ತಿರುಗಿಸಿಟ್ಟು ಧೂಪ ಹಾಕುತ್ತಾರೆ. ಶವವನ್ನು ತೊಳೆದು ಗಂಡಸಿನ ಹೆಣವನ್ನು ಮೂರು ಹೊಸ ಬಿಳಿಯ ಬಟ್ಟೆಗಳಿಂದಲೂ ಹೆಂಗಸಿನದನ್ನು ಐದು ಹೊಸ ಬಿಳಿಯ ಬಟ್ಟೆಗಳಿಂದಲೂ ಹೊದಿಸುತ್ತಾರೆ. ಹೆಣವನ್ನು ಪೆಟ್ಟಿಗೆಯಲ್ಲಿ ಸಾಗಿಸಿ ಸ್ಮಶಾನದಲ್ಲಿ ಹೂತು ಮನೆಗೆ ಬಂದು, ಸತ್ತೆಡೆ ದೀಪವಿಡುತ್ತಾರೆ. ಮೂರನೆಯ ದಿನ ಗೋರಿಗೆ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಏಳನೆಯ ಅಥವಾ ಹತ್ತನೆಯ ದಿನ ಜನರಿಗೆ ಊಟ ಹಾಕುತ್ತಾರೆ. 40ನೆಯ ದಿನ ನೆಂಟರಿಷ್ಟರು ಗೋರಿಗೆ ಹೋಗಿ ಸತ್ತವನ ಆತ್ಮಶಾಂತಿಗಾಗಿ ಪ್ರಾರ್ಥನೆ ಮಾಡಿ ಜನರಿಗೆ ಊಟ ಹಾಕುತ್ತಾರೆ.

ಕುರಾನಿನಲ್ಲಿ ಹಬ್ಬಗಳನ್ನು ಹೇಳಿಲ್ಲದಿದ್ದರೂ ಎರಡು ಹಬ್ಬಗಳು ಮತಸಂಬಂಧವಾಗಿದ್ದು ಪ್ರಪಂಚದ ಎಲ್ಲ ಮುಸ್ಲಿಮರೂ ಅವನ್ನು ಆಚರಿಸುತ್ತಾರೆ. ಇವು ಈದ್–ಎ–ಸುಹಾ ಮತ್ತು ರಮ್‌ಜಾನ್. ಈದ್–ಎ–ಸುಹ ಎಂದರೆ ಬಲಿಹಬ್ಬ ಎಂದರ್ಥ. ಇದನ್ನು ಭಾರತದಲ್ಲಿ ಬಕ್ರೀದ್ ಎಂದು ಕರೆಯುತ್ತಾರೆ. ಈ ಹಬ್ಬದ ದಿನ ಮುಸ್ಲಿಮರು ಸ್ನಾನ ಮಾಡಿ ಹೊಸ ಬಟ್ಟೆ ಹಾಕಿಕೊಂಡು ಈದ್ಗ ಅಥವಾ ಪ್ರಾರ್ಥನಾಲಯಕ್ಕೆ ಹೋಗುತ್ತಾರೆ. ಮನೆಗೆ ಬಂದು ಪಶುಬಲಿ ಕೊಟ್ಟು ಹಬ್ಬ ಮಾಡುತ್ತಾರೆ. ರಂಜಾನ್ ಹಬ್ಬವನ್ನು ಪೈಗಂಬರ್ ಆರಂಭಿಸಿದ್ದು. ಈ ದಿನವೂ ಮುಸ್ಲಿಮರು ಸ್ನಾನ ಮಾಡಿ ಹೊಸ ಬಟ್ಟೆಯನ್ನು ಹಾಕಿಕೊಂಡು ಈದ್ಗಕ್ಕೆ ಹೋಗಿ ಪ್ರಾರ್ಥನೆಯಲ್ಲಿ ಭಾಗಿಗಳಾಗುತ್ತಾರೆ. ತರುವಾಯ ನೆಂಟರಿಷ್ಟರು ಒಬ್ಬರನ್ನೊಬ್ಬರು ನೋಡಿಕೊಂಡು ಬರುತ್ತಾರೆ. ಚಿಕ್ಕವರು ದೊಡ್ಡವರ ಹರಕೆಯನ್ನು ಪಡೆಯುತ್ತಾರೆ. ಮೊಹರಂ ಸಂತೋಷದ ಹಬ್ಬವಲ್ಲ, ಹಜ್ರತ್ ಆಲಿಯ ಮಗ ಇಮಾಮ್ ಹುಸೇನ್ ಕರ್ಬಲ ಕಾಳಗದಲ್ಲಿ ಬಲಿಯಾದ ದಿನದ ನೆನಪಿಗಾಗಿ ಪ್ರತಿವರ್ಷವೂ ಮುಸ್ಲಿಮರು ಸ್ಮರಣ ವಿಧಿಯನ್ನು ಆಚರಿಸುತ್ತಾರೆ. ಇಸ್ಲಾಂ ಶಕೆ ಪ್ರಾರಂಭವಾಗುವುದು ಅಂದಿನಿಂದಲೇ. ಅಲ್ಲಿಂದ ಒಂದು ತಿಂಗಳ ಕಾಲ ಮುಸ್ಲಿಮರಿಗೆ ದುಃಖದ ದಿನಗಳು. ಇವಲ್ಲದೆ ಇನ್ನೂ ಹಲವು ಹಬ್ಬಗಳುಂಟು. ಇವು ಕೆಲವು ಪಂಗಡದವು ಮಾತ್ರವಾಗಿವೆ. (ವಿ.ಕೆ.)

**ಇಸ್ಲಾಮೀ ಅಧ್ಯಯನ ಸಂಸ್ಥೆಗಳು:** ಸಂಪ್ರದಾಯಗಳು ಬಹುಸಂಖ್ಯೆಯಲ್ಲಿ ಪ್ರಚುರವಾಗಿದ್ದ ನಾಲ್ಕನೆಯ ಅವಧಿಯಲ್ಲಿ ಯಾವುದನ್ನು ಸ್ವೀಕರಿಸಬೇಕು ಮತ್ತು ಯಾವುದನ್ನು ಬಿಡಬೇಕು ಎಂಬುದು ಜನತೆಗೆ ತಿಳಿಯದಾಯಿತಾದ ಕಾರಣ ಎಲ್ಲವನ್ನೂ ಅಧ್ಯಯನ ಮಾಡಿ ವಿಚಾರಮಥನ ಮಾಡಲು ಹುಟ್ಟಿಕೊಂಡ ಸಂಸ್ಥೆಗಳಿವು. ಮುಖ್ಯವಾಗಿ ಮದೀನ, ಮೆಕ್ಕ, ಕಫಾ, ಬಸ್ರಾ, ದಮಾಸ್ಕಸ್, ಈಜಿಪ್ಟ್ ಮತ್ತು ಯೆಮೆನ್‌ಗಳಲ್ಲಿ ಇಂಥ ಪ್ರಸಿದ್ಧ ಕೇಂದ್ರಗಳಿದ್ದುವು. ಈ ಕೇಂದ್ರಗಳಲ್ಲಿ ಅಂದು ಪ್ರಸಿದ್ಧರಾಗಿದ್ದ ವಿದ್ವಾಂಸರ ಹೆಸರುಗಳನ್ನಿಲ್ಲಿ ನಿರೂಪಿಸಿದೆ.

ಮದೀನದಲ್ಲಿ ವಿಖ್ಯಾತನಾದ ಎರಡನೆಯ ಕಲೀಫನ ಮಗ ಅಬ್ದುಲ್ಲ ತನ್ನ ಭಕ್ತಿ, ಏಕಾಂತಜೀವನಗಳಿಂದಾಗಿ ಪ್ರಸಿದ್ಧನಾಗಿದ್ದ. ಮುಸ್ಸ್ಯಾಬನ ಮಗ ಸಯೀದ್, ಝುಬೇರನ ಮಗ ಉರ್ವಾ, ಅಬ್ದುರ್–ರಹಮಾನನ ಮಗ ಅಬು ಬಕರ್, ಹುಸೇನನ ಮಗ ಆಲಿ, ಪ್ರವಾದಿಯ ಮರಿಮಗ ಹುಸೇನ್, ಅಬ್ದುಲ್ಲನ ಮಗ ಉಬೈದುಲ್ಲ, ಉಮರನ ಮಗ ಅಬ್ದುಲ್ಲನ ಮಗನಾದ ಸಾಲಿಂ, ಅಬು ಬಕರನ ಮಗ ಮಹಮ್ಮದನ ಮಗನಾದ ಖಾಸಿಂ. ನಫೆ ಎಂಬ ಇರಾನೀ–ಇವರೆಲ್ಲ ಈ ಕೇಂದ್ರದ ಪ್ರಮುಖರು.

ಮೆಕ್ಕದಲ್ಲಿ ಅಬ್ಬಾಸನ ಮಗ ಅಬ್ದುಲ್ಲ, ಝುಬೇರನ ಮಗ ಮುಜಹದ್, ಅಬಿರಬ್ಬಹ್‌ನ ಮಗ ಅತಾ ಇಕ್ರಮ ಮತ್ತು ಅಬು ಝುಬೇರ್ ಮಹಮ್ಮದ್–ಇವರು ಮುಖ್ಯರು. ಇವರಲ್ಲಿ ಕೊನೆಯ ನಾಲ್ವರು ಅರಬ್ಬರಲ್ಲ.

ಕಾಫಾದಲ್ಲಿ ಕಾಯಿಸನ ಮಗ ಅಲ್ಕಮ, ಅಜ್ಜನ ಮಗ ಮಸ್ತಕ್, ಅಮ್ರನ ಮಗ ಉಬೈದ, ಹನಿಯ ಮಗ ಷುರಿಹ್ (ಪ್ರಾಚೀನ ಧರ್ಮಶಾಸ್ತ್ರಜ್ಞರ ವರ್ಗಕ್ಕೆ ಸೇರಿದವ ಮತ್ತು ಸುಮಾರು ಅರವತ್ತು ವರ್ಷಗಳವರೆಗೆ ನ್ಯಾಯಾಧೀಶನಾಗಿ ಉಳಿದವ), ಮತ್ತು ಝುಬೇರನ ಮಗ ಸಯಿದ್ (ಅರಬ್ಬನಲ್ಲ)–ಇವರು ಹೆಸರಾಗಿದ್ದರು.

ಬಾಸ್ರಾದಲ್ಲಿ ಮಲಿಕ್‌ನ ಮಗ ಅನಸ್, ಮೆಹ್ರನ್ನನ ಮಗ ಅಬುಲ್ ಉರುಫ್ ರಫಿ (ಇರಾನಿ); ಯಾಸರ್‌ನ ಮಗ ಹಸನ್, ಸಿರೀನನ ಮಗ ಮಹಮ್ಮದ್ ಮತ್ತು ಕತಾದಾ–ಇವರು ಉಲ್ಲೇಖಾರ್ಹರು.

ಡಮಾಸ್ಕಸ್‌ನಲ್ಲಿ ಘನೇಮನ ಮಗ ಅಬ್ದುರ್–ರಹಮಾನ್, ಅಬು ಇದ್ರಿಸ್ ಉಲ್–ಖುಲಮಿ, ಝುವೇವಲನ ಮಗ ಕಬೀಸಾ ಮತ್ತು ಅಬ್ದುಲ್ ಅಜ಼ೀಜ಼ನ ಮಗ ಉಮರ್–ಇವರು ಗಣ್ಯರು.

ಈಜಿಪ್ಟಿನಲ್ಲಿ ಆಸ್‌ನ ಮಗನಾದ ಉಮ್ರರನ ಮಗ ಅಬ್ದುಲ್ಲ, ಅಬ್ದುಲ್ಲನ ಮಗ ಮುರ್ಷದ್ ಮತ್ತು ಅಬಿ ಹಬೀಬನ ಮಗ ಯಜ಼ೀದ್ (ಅರಬನಲ್ಲ)–ಇವರು ಮುಖ್ಯರು.

ಯೆಮೆನಿನಲ್ಲಿ ಕೈಸನ್ನನ ಮಗ ತಾವೂಸ್ (ಅರಬ್ಬನಲ್ಲಿ), ಮುನಬ್ಬೇಯ ಮಗ ವಹಾಬ್ ಮತ್ತು ಕಥೇರನ ಮಗ ಯಾಹ್ಯ (ಅರಬ್ಬನಲ್ಲ) ಇವರು ಉಲ್ಲೇಖಾರ್ಹರು.

ಈ ಧರ್ಮಶಾಸ್ತ್ರ ಕೇಂದ್ರಗಳು ನಮಗೆ ಗೊತ್ತಿರುವ ಅತ್ಯಂತ ಪ್ರಾಚೀನ ನ್ಯಾಯಶಾಸ್ತ್ರ ರಚನೆಗೆ ತಮ್ಮ ಕೊಡುಗೆ ಸಲ್ಲಿಸಿದುವು. ಪ್ರತಿಯೊಬ್ಬ ಧರ್ಮಶಾಸ್ತ್ರಜ್ಞನಿಗೂ ಅನೇಕ ಅನುಯಾಯಿಗಳಿದ್ದು, ಅವರು ಪರಂಪರೆಯ ಖಂಡಗಳನ್ನು ಆಯಾ ಬೋಧಕನ ಹೆಸರಿನಲ್ಲಿ ನಿರೂಪಿಸುತ್ತಿದ್ದರು. ಅವರ ಸಂಖ್ಯೆ ಹೆಚ್ಚಿತು. ಆಳುತ್ತಿದ್ದ ಕಲೀಫನಾದ ಉಮ್ರ–ಅಬ್ದುಲ್ ಅಜ಼ೀಜ಼ನ ಮಗ–ಬಹಳ ಶ್ರದ್ಧಾಳುವಾಗಿದ್ದು, ಪರಂಪರೆಯ ಉಪಲಬ್ಧ ಖಂಡಗಳ ಸಂಗ್ರಹ ಸಂಕಲನಗಳಿಗೆ ಆಜ್ಞೆ ಹೊರಡಿಸಿದ. ಆ ಕೆಲಸವನ್ನು ಮಹಮ್ಮದನ ಮಗ ಅಬು ಬಕರ್ (ಹಿಜಿರ 170) ಮಾಡಿದ.

ಉಮಾಯದ್ ಅವಧಿಯ ಅಂತ್ಯದ ಹೊತ್ತಿಗೆ ಪರಂಪರೆಯ ವಿಷಯದ ಬಗ್ಗೆ ಮತ್ತು ಪ್ರವಾದಿಯ ಒಂದು ಜೀವನ ಚರಿತ್ರೆಯ ಬಗ್ಗೆ ಮಹಾ ಧರ್ಮಶಾಸ್ತ್ರಜ್ಞರಿಂದ ಸಾಕಷ್ಟು ಸಾಮಗ್ರಿ ಸಂಗ್ರಹಗೊಂಡಿತ್ತು. ಇವರು ಮುಸ್ಲಿಂ ಕಾನೂನು ಹಾಗೂ ನ್ಯಾಯಶಾಸ್ತ್ರದ ಸ್ಥಾಪಕರಾಗಿ ಪರಿಣಮಿಸಿದರು. ಈ ವಿಷಯಗಳ ಬಗ್ಗೆ ಅತ್ಯುನ್ನತ ಪ್ರಮಾಣಗಳೆಂದೂ ಇಂದಿಗೂ ಇವರು ಜಗತ್ತಿನಾದ್ಯಂತ ಪರಿಗಣಿತರಾಗಿದ್ದಾರೆ. ಅಲ್ಲದೆ, ಸಂಪ್ರದಾಯವಾದಿಗಳು ಮತ್ತು ಧರ್ಮಶಾಸ್ತ್ರಜ್ಞರೂ, ಕುರಾನಿನ ವಾಚಕರೂ (ಅವರಿಗೆ ಕರಿ ಎಂದು ಹೆಸರು) ತಾವೇ ಒಂದು ಪ್ರತ್ಯೇಕ ಸಂಸ್ಥೆಯಾಗಿ ರೂಪುಗೊಂಡರು. ಇವರು ಕುರಾನಿನ ಇಲ್ಮೆ–ತಜ್‌ವಿದ್ ವಾಚನದಲ್ಲಿ ತಜ್ಞತೆ ಪಡೆದುಕೊಂಡರು. ಅನಂತರ ಅದು ಇಲ್ಮೆ–ತಜ್‌ವಿದ್ ಎಂಬ ಸ್ವತಂತ್ರ ಶಾಸ್ತ್ರವಾಗಿ ಪರಿಣಮಿಸಿತು. ಏಳು ಮಂದಿ ಕರಿಗಳು ಅಥವಾ ವಾಚಕರು

ಇದ್ದರು. ಇವರನ್ನು ಪವಿತ್ರಗ್ರಂಥ ವಾಚನದ ಕಲೆಯಲ್ಲಿ ನಿಷ್ಣಾತರೆಂದು ಪರಿಗಣಿಸಲಾಗಿದೆ; ಮತ್ತು ಇವರ ವಾಚನ ವಿಧಾನವನ್ನು ಇಸ್ಲಾಮೀ ಜಗತ್ತಿನಲ್ಲೆಲ್ಲ ವಾಚಕರು ಅನುಸರಿಸುತ್ತ ಬಂದಿದ್ದಾರೆ.

1 ಅಬ್ದುಲ್ಲ – ಕಾಥಿರನ ಮಗ, ಮೆಕ್ಕದ ಒಬ್ಬ ಇರಾನೀ; 2 ಅಬು ಉಮ್ರ್–ಇರಾನಿನ ಕಜ್ಜೇರನಿನ ಅಲ್ ಉಲ್‌ನ ಮಗ; 3 ಅಬ್ದುಲ್ಲ–ಅಮೀರನ ಮಗ; 4 ಅಬು ಬಕರ್ ಅಸೆಮ್–ಅಬಿನ್–ನುಜದ್‌ನ ಮಗ; 5 ಹಂಜ–ಹಬೀಬನ ಮಗ; 6 ನಫೆ–ಅರಬ್ಬನಲ್ಲದ ಆಲಿ ನಯಿಮ್‌ನ ಮಗ; 7 ಆಲಿ–ಇರಾನಿನ ಹಂಜ ಕಿಸಾಯಿಯ ಮಗ–ಇವರು ಕುರಾನ್ ವಾಚನ ಕಲೆಯಲ್ಲಿ ಸುಪ್ರಸಿದ್ಧರೆಂದು ಖ್ಯಾತರಾಗಿದ್ದಾರೆ. (ಎಸ್.ಜಿ.ಎಂ.)

**ಇಸ್ಲಾಮೀ ನ್ಯಾಯ:** ಪ್ರತಿಯೊಬ್ಬ ಮುಸ್ಲಿಮನ ಜೀವನವನ್ನೂ ನಡೆಸುವ ಪ್ರೇರಕಶಕ್ತಿಗಳು ಎರಡು: ಒಂದು ಆತನ ಮತಧರ್ಮಶಾಸ್ತ್ರ; ಇನ್ನೊಂದು ನ್ಯಾಯಶಾಸ್ತ್ರ. ಅವನ ಶ್ರದ್ಧೆ, ನಂಬಿಕೆಗಳಿಗೆ ಮತಧರ್ಮಶಾಸ್ತ್ರ ಮೂಲ. ಏನನ್ನು ಮಾಡಬೇಕು, ಯಾವುದನ್ನು ಮಾಡಬಾರದು –ಎಂಬುದನ್ನು ನಿರ್ಣಯಿಸುವುದು ನ್ಯಾಯ. ನ್ಯಾಯದ ಅಡಿಗಲ್ಲಿನ ಮೇಲೆಯೇ ಮುಸ್ಲಿಮನ ವ್ಯಕ್ತಿತ್ವ ಬೆಳೆಯುತ್ತದೆ. ನ್ಯಾಯಸೂತ್ರಕ್ಕೆ ಬೇರಾವ ಧರ್ಮದಲ್ಲೂ ಇಲ್ಲದಷ್ಟು ಪ್ರಾಧಾನ್ಯ ಈ ಧರ್ಮದಲ್ಲಿ ಉಂಟು.

ಇಸ್ಲಾಮೀ ನ್ಯಾಯ ಪವಿತ್ರ ನ್ಯಾಯಗಳ ಶ್ರೇಣಿಗೆ ಸೇರಿದೆ; ಆದ್ದರಿಂದ ಆಧುನಿಕ ವಿಚಾರ ಪರಂಪರೆಯಲ್ಲಿ ಬರುವ ನ್ಯಾಯದ ಕಲ್ಪನೆಯಿಂದ ಇದು ಭಿನ್ನವಾದದ್ದು. ಇದು ಮಾನವ ಕಲ್ಪಿತವಲ್ಲ; ದೇವರಿಂದ ಮಹಮ್ಮದರ ಮುಖಾಂತರ ಬಂದದ್ದು; ಮಹಮ್ಮದರ ಮರಣದೊಂದಿಗೆ ನ್ಯಾಯ ಬರುವ ಬಾಗಿಲು ಮುಚ್ಚಿತು; ಇದು ದೈವಸಂಕಲ್ಪ; ಈ ನ್ಯಾಯ ಬದಲಾಗದು–ಈ ನಂಬಿಕೆಗಳೇ ಇದರ ವೈಶಿಷ್ಟ್ಯ. ಇಸ್ಲಾಂ ಧರ್ಮಕ್ಕೂ ಇಸ್ಲಾಮೀ ನ್ಯಾಯಕ್ಕೂ, ಮಹಮ್ಮದ್ ಪೈಗಂಬರ್ (570–632) ಮೂಲ ಕೇಂದ್ರ. ಅವರು 622ನೆಯ ಇಸವಿಯ ಜೂನ್ ತಿಂಗಳ ದಿನಾಂಕ 20ರಂದು ಮೆಕ್ಕದಿಂದ ಮದೀನಕ್ಕೆ ಓಡಿಹೋಗ ಬೇಕಾಯಿತು. ಇದಕ್ಕೆ ಹಿಜರತ್ ಎನ್ನುತ್ತಾರೆ. ಮುಂದೆ ಮಹಮ್ಮದರು ಮೊದಲು ಮದೀನದಲ್ಲೂ, ಆಮೇಲೆ ಇಡೀ ಅರೇಬಿಯದಲ್ಲೂ ಲೌಕಿಕ ಮತ್ತು ಧಾರ್ಮಿಕ ಸರ್ವಾಧಿಕಾರಿಯಾದರು. ಆಗ ಅವರು ಕುರಾನಿನ ಮೇರೆಗೆ ತೀರ್ಪು ಕೊಡುತ್ತಿದ್ದರು. ಕುರಾನಿನಲ್ಲಿ ಹೇಳಿರದ ವಿಷಯಗಳಿಗೆ ಸಂಪ್ರದಾಯಗಳನ್ನು ಹಾಕಿಕೊಟ್ಟರು. ಹೀಗೆ ಇಸ್ಲಾಮೀ ನ್ಯಾಯ ಮಹಮ್ಮದರ ಕಾಲದಲ್ಲೇ ಆಚರಣೆಯಲ್ಲಿ ಬಂತು.

ಮಹಮ್ಮದರ ಮರಣಾನಂತರ (632) ಕಲೀಫರು ಯಾರಾಗಬೇಕೆಂಬ ಪ್ರಶ್ನೆ ಬಂತು. ಅಬೂಬಕರ್ ಮತ್ತು ಆಲಿ ಇವರಿಬ್ಬರೂ ಅವರ ಸಂಬಂಧಿಗಳೂ ಅನುಯಾಯಿಗಳೂ ಆಗಿದ್ದರು. ಅವರ ಪತ್ನಿಯರಲ್ಲಿ ಒಬ್ಬಳಾದ ಆಯಷಳ ತಂದೆಯಾದ ಅಬುಬಕರ್ ಬಹುಜನರ ಅಭಿಪ್ರಾಯದ ಮೇರೆಗೆ ಕಲೀಫನಾದ. ಆದರೆ ಅಲ್ಪ ಸಂಖ್ಯಾತರು ಅವರ ಚಿಕ್ಕಪ್ಪನ ಮಗನೂ ಅವರ ಮಗಳಾದ ಫಾತಿಮಾಳ ಗಂಡನೂ ಆದ ಆಲಿಯೇ ಕಲೀಫನಾಗಬೇಕೆಂದು ಆಶಿಸಿದ್ದರು. ಕಲೀಫನನ್ನು ಆರಿಸಿದ ಬಹುಸಂಖ್ಯಾತರು ಸುನ್ನತ್ ಜಮಾತ್ ಎನಿಸಿಕೊಂಡರು. ಇಮಾಮನಲ್ಲಿ ನಂಬಿಕೆಯಿದ್ದ ಅಲ್ಪ ಸಂಖ್ಯಾತರು ಷಿಯ ಮತೀಯರಾದರು. ಹೀಗೆ ಈ ಇಬ್ಬರಿಂದ ಎರಡು ಮತಭೇದಗಳು ಹುಟ್ಟಿದುವು. ಇಸ್ಲಾಮೀ ನ್ಯಾಯವನ್ನು ಮುಸ್ಲಿಂ ಮತಭೇದಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಬುಬಕರ್ ಮತ್ತು ಅಲಿ–ಇವರ ಸಂಪ್ರದಾಯಗಳು ಇಸ್ಲಾಮೀ ನ್ಯಾಯಕ್ಕೆ ಆಧಾರಗಳೂ ನ್ಯಾಯದ ಪ್ರಭೇದಗಳಿಗೆ ಕಾರಣಗಳೂ ಆದುವು.

ಇಸ್ಲಾಮೀ ನ್ಯಾಯದ ಹೆಸರು ಷರೀಯತ್, ನೀರೆರೆವ ತಾಣಕ್ಕೆ ಕರೆದೊಯ್ಯುವ ಮಾರ್ಗ, ಮಾನವ ಕ್ರಮಿಸಬೇಕಾದ ಸತ್ಪಥ–ಎಂದು ಇದರ ಅರ್ಥ; ಮನುಷ್ಯನ ಸಕಲ ಕ್ರಿಯೆಗಳಿಗೂ ಅನ್ವಯವಾಗುವಂಥ ವಿಶಾಲವಾದ ಅರ್ಥ. ಫಿಕ್ ಅಥವಾ ನ್ಯಾಯಶಾಸ್ತ್ರ ಇದರಲ್ಲಿ ಅಂತರ್ಗತವಾದದ್ದು. ಹಿಜರತ್‌ನ ಮೊದಲ ಶತಮಾನದಲ್ಲಿಯೇ ಷರೀಯತ್ ಅಥವಾ ಬೃಹತ್ ಸ್ವರೂಪದ ಇಸ್ಲಾಮೀ ನ್ಯಾಯ ರೂಪುಗೊಳ್ಳಹತ್ತಿತು. ಈ ನ್ಯಾಯ ಎಲ್ಲ ಮತಭೇದಗಳಿಗೂ ಅನ್ವಯವಾಗುವಂತೆ ಏಕ ಸ್ವರೂಪದ್ದಲ್ಲ. ಮುಖ್ಯ ಮತಭೇದಗಳಿಗೂ ಅವುಗಳ ಒಳಪಂಗಡಗಳಿಗೂ ಅನ್ವಯವಾಗುವ ನ್ಯಾಯಸೂತ್ರಗಳಲ್ಲಿ ಪ್ರಭೇದಗಳು ಇವೆ. ಇಸ್ಲಾಮೀ ನ್ಯಾಯ ಬೆಳೆದಿರುವುದೂ ಹೀಗೆಯೇ.

ಇಸ್ಲಾಮೀ ನ್ಯಾಯದ ಮೂಲ ಆಧಾರಗಳೆಂದರೆ 1 ಕುರಾನ್, 2 ಹದೀಸ್ ಮತ್ತು ಸುನ್ನಾ, 3 ಇಜ್ಮಾ ಮತ್ತು 4 ಕಿಯಾಸ್.

1 ಕುರಾನ್: ಮಹಮ್ಮದರ ಕೊನೆಯ 23 ವರ್ಷಗಳಲ್ಲಿ ಆಗಾಗ, ಅವರು ಸ್ಫೂರ್ತಸ್ಥಿತಿಯಲ್ಲಿದ್ದಾಗ, ದೇವರಿಂದ ಅವರ ಮುಖಾಂತರ ಬಂದ ಸಂದೇಶಗಳೇ ಕುರಾನು. ಕುರಾನಿನಲ್ಲಿ 114 ಸೂರ ಅಥವಾ ಅಧ್ಯಾಯಗಳುಂಟು. ಇದರಲ್ಲಿ ದೇವತಾಶಾಸ್ತ್ರ ಮತ್ತು ನ್ಯಾಯಸೂತ್ರಗಳಿವೆ. ಇದರಲ್ಲಿ ಉಕ್ತವಾಗಿರುವ ನ್ಯಾಯ ಸೂತ್ರಗಳು ಇಸ್ಲಾಂ ಧರ್ಮದ ಎಲ್ಲ ಪಂಗಡಗಳಿಗೂ ಅನ್ವಯವಾಗುತ್ತವೆ.

2 ಹದೀಸ್ ಮತ್ತು ಸುನ್ನಾ : ಹದೀಸ್ ಎಂದರೆ ಸಂಪ್ರದಾಯ ಅಥವಾ ಗುರು ಆಜ್ಞೆ, ಪೈಗಂಬರರ ಆಚರಣೆಗಳನ್ನು ಸುನ್ನಾ ಎಂದು ಕರೆಯುತ್ತಾರೆ. ಮಹಮ್ಮದರ ಆಚರಣೆಗಳು, ಅವರು ಹಾಕಿಕೊಟ್ಟ ಸಂಪ್ರದಾಯಗಳು, ಅವರು ನೀಡಿದ ನಿರ್ಣಯಗಳು ಹಾಗೂ ಅವರ ಅನುಮತಿಗಳು ಇಸ್ಲಾಮೀ ನ್ಯಾಯಕ್ಕೆ ಆಧಾರಗಳಾದುವು. ಇದರಲ್ಲಿ ಮಹಮ್ಮದರ ಸಂಗಡಿಗರ ಸಂಪ್ರದಾಯಗಳೂ ಸೇರಿದುವು. ಬರಬರುತ್ತ ಕೃತ್ರಿಮ ಸಂಪ್ರದಾಯಗಳು ಸೇರಿಕೊಂಡುವು. ಸಂಪ್ರದಾಯಗಳ ಸಂಖ್ಯೆ 6 ಲಕ್ಷದಷ್ಟಾಗಿತ್ತು. ಅದರಲ್ಲಿ 7 ಸಾವಿರ ಸಂಪ್ರದಾಯಗಳು ಮಾತ್ರ ನಿಜವಾದವು ಇರಬಹುದೆಂದು ಅಲ್–ಬುಖಾರಿ ಹೇಳುತ್ತಾನೆ. ಅನೇಕ ನ್ಯಾಯವೇತ್ತರು ಈ ಸಂಪ್ರದಾಯಗಳ ಸಂಕಲನ ಮಾಡಿದ್ದಾರೆ.

(ಅ) ಸುನ್ನತ್ ಜಮಾತ್ ಪಂಗಡದ ಮುಖ್ಯ ಸಂಕಲನಗಳು: 1 ಇಮಾಮ್ ಮುಲಿಕ್‌ನ ಮುವತ್, 2 ಅಬು–ಅಬ್ದುಲ್–ಅಹಮದ್‌ಹನ್‌ಬಲ್‌ನ ಮಸನದ್, 3 ಅಲ್–ಬುಖಾರಿಯ ಸಾಹಿ ಬುಖಾರಿ ಮತ್ತು 4 ಇಮಾಮ್ ಮುಸ್ಲಿಮ್‌ನ ಸಾಹಿ ಮುಸ್ಲಿಂ. ಇವುಗಳಲ್ಲದೆ ಇಮಾಮ್ ಷಾಫಯ್ ಮೊದಲಾದವರ ಸಂಕಲನಗಳೂ ಪ್ರಸಿದ್ಧ.

(ಆ) ಷಿಯ ಮತದವರ ಸಂಕಲನಗಳು: 1 ಅಬುಜಾಫರನ ಎರಡು ಸಂಕಲನಗಳು: ತಹಜೀಬ–ಉಲ್–ಅಹಕಾಮ್ ಮತ್ತು ಇಸ್ತಿಬ್ಸಾರ್, 2 ಮಹಮದ್–ಬಿನ್–ಯಾಕೂಬನ ಜಮೀ–ಉಲ್–ಕಾಫಿಯ್, 3 ಷೇಖ್ ಮಹಮ್ಮದನ ಮನ್–ಲಾಯಸ್–ತಹಜೀರ್‍ಹುಲ್ ಮೊದಲಾದುವು.

3 ಇಜ್ಮಾ: ಇಜ್ಮಾ ಎಂದರೆ ಸರ್ವಸಮ್ಮತಿ ಅಥವಾ ಸಾಮಾನ್ಯ ಅಭಿಪ್ರಾಯ. ಕುರಾನ್ ಮತ್ತು ಸಂಪ್ರದಾಯಗಳ ಆಧಾರದ ಮೇಲೆಯೇ ಕಾಲಕ್ರಮದಲ್ಲಿ ಉದ್ಭವಿಸಿದ ಹೊಸ ಹೊಸ ಸಮಸ್ಯೆಗಳನ್ನು ನಿರ್ಧರಿಸುವುದು ಕಷ್ಟವಾಯಿತು. ಕುರಾನಿನ ಸೂರಗಳಲ್ಲಿಯೇ ನ್ಯಾಯವೇತ್ತರ ಮತ್ತು ಪಂಡಿತರ ಒಮ್ಮತ ಅಥವಾ ಸಾಮಾನ್ಯಾಭಿಪ್ರಾಯಕ್ಕೆ ಮಾನ್ಯತೆ ಕೊಡುವಂತೆ ಹೇಳಿದೆ. ಜನಸಾಮಾನ್ಯರ ಸಾಮಾನ್ಯಾಭಿಪ್ರಾಯಗಳನ್ನೂ ಆಗಾಗ್ಗೆ ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಆದರೆ ಪಂಡಿತರ (ಉಲೇಮಾಗಳ) ಮತ್ತು ಮೂಲಗ್ರಂಥಗಳ ಆಧಾರದ ಮೇಲೆ ತೀರ್ಪುಗಳನ್ನು ಅಭಿಪ್ರಾಯಗಳನ್ನೂ ಕೊಡುತ್ತಿದ್ದ ಮುಜ್ತಹಿದರ ಒಮ್ಮತಗಳು ನ್ಯಾಯ ವಿಷಯದಲ್ಲಿ ಪ್ರಮಾಣಗಳಾದುವು.

4 ಕಲಿಯಾಸ್: ಮುಸ್ಲಿಂ ನ್ಯಾಯಶಾಸ್ತ್ರಜ್ಞರು ತಮ್ಮ ವಿವೇಕ, ಯುಕ್ತಾಯುಕ್ತ ಜ್ಞಾನ ಮತ್ತು ತರ್ಕಶಕ್ತಿಗಳಿಂದ ವಿವೇಚಿಸಿ ಕುರಾನ್ ಮತ್ತು ಸಂಪ್ರದಾಯಗಳಿಗೆ ಅಧೀನವೂ ಸಮ್ಮತವೂ ಆಗಿರುವಂಥ ನಿರ್ಣಯಗಳನ್ನು ಕೊಡುತ್ತಿದ್ದರು. ಈ ಪ್ರಕಾರದ ತಾರ್ಕಿಕ ಸಾದೃಶ್ಯದ ಪದ್ಧತಿಯ ಉಪಯೋಗವನ್ನು ಕಿಯಾಸ್ ಎಂದು ಹೇಳಬಹುದು. ಪಾಶ್ಚಾತ್ಯ ನ್ಯಾಯದಲ್ಲಿನ ವಿಧಿಪರಿಕಲ್ಪನೆ ಕಿಯಾಸ್ಗೆ ಹತ್ತಿರವಾದದ್ದು. ಮೌಜ್ಯ ಉದಾಹರಣೆಯಿಂದ ಕಿಯಾಸ್‌ಗೆ ಮಹಮ್ಮದರ ಒಪ್ಪಿಗೆ ಇತ್ತು ಎಂಬುದು ತಿಳಿದು ಬರುತ್ತದೆ. ಕಿಯಾಸನ್ನು ಸುನ್ನತ್ ಜಮಾತ್‌ನವರು ಸಾಧಾರಣವಾಗಿ ಇಸ್ಲಾಮೀ ನ್ಯಾಯದ ಮೂಲಾಧಾರಗಳಲ್ಲಿ ಒಂದೆಂದು ಪರಿಗಣಿಸುತ್ತಾರೆ. ಷಿಯ ಮತದ ಒಂದು ಒಳಪಂಗಡ ಮಾತ್ರ ಇದನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಇಸ್ಲಾಮೀ ನ್ಯಾಯಕ್ಕೆ ಸಂಬಂಧಿಸಿದ ಶಾಖೆಗಳು: ಇಸ್ಲಾಂಧರ್ಮದ ಭಿನ್ನ ಭಿನ್ನ ಪಂಗಡಗಳಿಗೆ ಅನ್ವಯವಾಗುವ ನ್ಯಾಯಸೂತ್ರಗಳು ಭಿನ್ನವಾಗಿದ್ದುವು. ಈ ವ್ಯತ್ಯಾಸಗಳು ಒಂದು ಸ್ಪಷ್ಟರೂಪದಲ್ಲಿ ಆಚರಣೆಯಲ್ಲಿ ಬರುವುದಕ್ಕೆ ಸ್ವಲ್ಪ ಕಾಲ ಹಿಡಿಯಿತು. 6ನೆಯ ಇಮಾಮರ ಕಾಲಕ್ಕೆ ಷಿಯ ಮತೀಯರಿಗೆ ಅನ್ವಯವಾಗುವ ನ್ಯಾಯ ಅಸ್ತಿತ್ವಕ್ಕೆ ಬಂತು. ಹೀಗೆ ಇಸ್ಲಾಂ ಧರ್ಮದ ಒಳಪಂಗಡಗಳ ವಿಚಾರ ಆಚಾರಗಳು, ಇಸ್ಲಾಂ ಪೂರ್ವದ ರೂಢಿಗಳು, ಇಸ್ಲಾಂ ಧರ್ಮವನ್ನು ಸ್ವೀಕರಿಸಿದವರಲ್ಲಿ ಉಳಿದುಬಂದ ಸಂಪ್ರದಾಯಗಳು, ಹೊಸದಾಗಿ ಬೆಳೆಯಹತ್ತಿದ ಇಸ್ಲಾಂ ಧರ್ಮಕ್ಕೂ ಇಸ್ಲಾಂ ರಾಜಕೀಯ ಅಧಿಕಾರಕ್ಕೂ ಒಳಗಾದ ಪ್ರದೇಶಗಳ ನಡೆವಳಿಕೆಗಳು, ಮತ್ತು ರೋಮನ್ ಮೊದಲಾದ ನ್ಯಾಯ ವ್ಯವಸ್ಥೆಗಳ ಬಾಹ್ಯ ಪ್ರಭಾವಗಳು ಇಸ್ಲಾಮೀ ನ್ಯಾಯದ ವಿವಿಧ ಶಾಖೆಗಳ ಅಸ್ತಿತ್ವಕ್ಕೂ ವಿಕಾಸಕ್ಕೂ ಕಾರಣವಾದುವು.

**(ಅ) ಸುನ್ನತ್ ಜಮಾತ್‌ಗೆ ಸಂಬಂಧಿಸಿದ ಶಾಖೆಗಳು:** 1 ಹನಾಫಿ ಶಾಖೆ: ಸುನ್ನತ್ ಜಮಾತ್‌ಗೆ ಸಂಬಂಧಿಸಿದ ಶಾಖೆಗಳಲ್ಲಿ ಹನಾಫಿ ಶಾಖೆ ಬಹಳ ಪ್ರಸಿದ್ಧಿ ಪಡೆದಿದೆ. ಈ ಶಾಖೆಯನ್ನು ಕುಫಾ ಶಾಖೆ ಎಂದು ಕರೆಯುವುದುಂಟು; ಆದರೂ ಹನಾಫಿ ಶಾಖೆ ಎಂಬ ಹೆಸರೇ ಪ್ರಚಾರದಲ್ಲಿದೆ. ಈ ಶಾಖೆಗೆ ಇರಾಕಿನ ಅಬುಹನೀಫನ (699–767) ಹೆಸರು ಬಂದಿದೆ. ಈ ಶಾಖೆಯವರು ಸಂಪ್ರದಾಯಗಳಿಗೆ ಮಹತ್ತ್ವ ಕೊಟ್ಟರೂ ನಿಜವಾದ ಸಂಪ್ರದಾಯಗಳಿಂದ ಖಚಿತಪಟ್ಟ ಕೆಲವೇ ಆಚಾರಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಕಿಯಾಸ್ ಎಂದರೆ ತರ್ಕದಿಂದ ಪ್ರಾದುರ್ಭವಿಸಿದ ಪ್ರಮಾಣಗಳು. ಇವರು ವಿಧಿಪರಿಕಲ್ಪನೆಯ ತತ್ತ್ವಗಳನ್ನು ಒಪ್ಪುತ್ತಾರೆ, ಇಜ್ಮಾದ ವ್ಯಾಪ್ತಿಯನ್ನು ಹೆಚ್ಚಿಸಿದ್ದಾರೆ. ಈ ಶಾಖೆಯ ಮುಖ್ಯ ತತ್ತ್ವ ಇಸ್ತಹ್ ಸಾನ್ ಅಥವಾ ಔಚಿತ್ಯ. ಅಬು ಹನೀಫನ ಶಿಷ್ಯರಲ್ಲಿ ಅಬು ಯೂಸುಫ್ (731–98). ಇಮಾಮ್–ಮಹಮ್ಮದ್ ಆಶ್–ಷಾಯ್ಬಾನಿ (749–802) ಮುಂತಾದವರು ಮುಖ್ಯರು. ಈ ಶಾಖೆಯ ಅನುಯಾಯಿಗಳು ಅರೇಬಿಯ, ಸಿರಿಯ, ಈಜಿಪ್ಟ್, ತುರ್ಕಿ, ಆಫ್ಘನಿಸ್ತಾನ, ಪಾಕಿಸ್ತಾನ ಮತ್ತು ಉತ್ತರ ಭಾರತದಲ್ಲಿ ಇದ್ದಾರೆ. ಇದರ ಪ್ರಸಿದ್ಧಿಗೆ ಆಟೊಮನ್ ಚಕ್ರಾಧಿಪತ್ಯದ ಮಾನ್ಯತೆಯೂ ಕಾರಣವಾಯಿತು.

2 ಮಾಲಿಕಿ ಶಾಖೆ: ಈ ಶಾಖೆಯನ್ನು ಮದೀನದ ಮಲಿಕ್ ಇಬ್ನ ಅನಸ್ (713–95) ಸ್ಥಾಪಿಸಿದ. ಈತನ ಮುವತ್ ಎಂಬ ಸಂಕಲನಗ್ರಂಥ ಪ್ರಸಿದ್ಧವಾಗಿದೆ. ಈ ಶಾಖೆಯವರು ಕುರಾನ್ ಮತ್ತು ಸುನ್ನಾಗಳ ಜೊತೆಗೆ ಮದೀನದ ಸಂಪ್ರದಾಯಗಳಿಗೆ ಹೆಚ್ಚು ಮಹತ್ತ್ವ

ಕೊಡುತ್ತಾರೆ. ಕಿಯಾಸ್‌ಗೆ ಬಹಳ ಮಹತ್ತ್ವ ಕೊಡದಿದ್ದರೂ ಸಾಧಾರಣವಾಗಿ ಇದನ್ನೂ ಗಣನೆಗೆ ತೆಗೆದುಕೊಳ್ಳುತ್ತಾರೆ. ಈ ಶಾಖೆಯ ಮುಖ್ಯ ತತ್ತ್ವ ಮುಸ್ಲಹತ್ ಅಥವಾ ಸಾರ್ವಜನಿಕ ಮೇಲ್ಮೆ ಎಂಬುದಾಗಿದೆ. ಉತ್ತರ ಮತ್ತು ಪಶ್ಚಿಮ ಆಫ್ರಿಕ, ಸೂಡಾನ್ ಮತ್ತು ಪರ್ಷಿಯ ದೇಶಗಳಲ್ಲಿ ಈ ಶಾಖೆಯವರು ಇದ್ದಾರೆ.

3 ಷಾಫಯ್ ಶಾಖೆ: ಈ ಶಾಖೆಗೆ ಇಮಾಂ ಷಾಫಯ್‌ನ (767–820) ಹೆಸರು ಬಂದಿದೆ. ಈತ ಮಹಮ್ಮದ್ ಪೈಗಂಬರರ ವಂಶಸ್ಥ. ಇಮಾಂ ಮಲಿಕ್ ಮತ್ತು ಇಮಾಂ ಮಹಮ್ಮದ್ ಈತನ ಗುರುಗಳು. ಷಾಫಯ್ ನ್ಯಾಯಶಾಸ್ತ್ರದಲ್ಲಿ ಪಂಡಿತನಾಗಿದ್ದನಲ್ಲದೆ, ಅದಕ್ಕೊಂದು ವ್ಯವಸ್ಥಿತ ರೂಪು ಕೊಟ್ಟ. ಈ ಶಾಖೆಯವರು ಇಸ್ತೆಹ್‌ಸಾನ್ ಮತ್ತು ಇಸ್ತೆಸ್ಲಾಹ್‌ಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸಂಪ್ರದಾಯಗಳಿಗೆ ಹೆಚ್ಚು ಮಹತ್ತ್ವ ಕೊಡುವುದರ ಜೊತೆಗೆ ಸತ್ಯತೆಯ ಬಗ್ಗೆ ಸಂಶೋಧನೆ ನಡೆಸಿದ ಹಿರಿಮೆ ಈ ಶಾಖೆಗಿದೆ. ಇಜ್ಮಾಕ್ಕೆ ಪ್ರಾಧಾನ್ಯ ದೊರೆತದ್ದು ಷಾಫಯ್‌ನ ಕಾಲದಲ್ಲಿ ಎಂದು ಹೇಳಬಹುದು. ಈ ಶಾಖೆಯವರು ಅರೇಬಿಯ, ಪೂರ್ವ ಆಫ್ರಿಕ, ಸಿಂಹಳ, ದಕ್ಷಿಣ ಭಾರತ, ಜಾವ, ಇಂಡೋನೇಷ್ಯ, ಮಲಯ ಮುಂತಾದ ದೇಶಗಳಲ್ಲಿದ್ದಾರೆ.

4 ಹನ್‌ಬಲಿ ಶಾಖೆ: ಹೊಸ ಹೊಸ ತತ್ತ್ವಗಳೂ ಅಭಿಪ್ರಾಯಗಳೂ ಪೈಗಂಬರರ ಸಂಪ್ರದಾಯಗಳ ಮೂಲಕ ಬಂದ ನ್ಯಾಯದ ಸ್ವರೂಪವನ್ನು ಬದಲಿಸುತ್ತಿವೆ. ಹಾಗಾಗಬಾರದು ಎಂಬ ಪ್ರತಿಕ್ರಿಯೆ ಆರಂಭವಾಯಿತು. ಈ ರೀತಿಯ ಪ್ರತಿಕ್ರಿಯೆ ಇದ್ದವರು ಅಬು ಅಬ್ದುಲ್ ಅಹಮ್ಮದ್ ಹನ್‌ಬಾಲನ (780–855) ಅನುಯಾಯಿಗಳಾದರು. ಈ ಕಾರಣದಿಂದಾಗಿ ಈ ಶಾಖೆಗೆ ಹನ್ಬಲಿ ಶಾಖೆ ಎಂದು ಹೆಸರು ಬಂದಿದೆ. ಅಹಮ್ಮದ್ ಹನ್‌ಬಾಲನ ಸಂಪ್ರದಾಯಗಳ ಸಂಕಲನ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಈ ಶಾಖೆ ಕಿಯಾಸ್ ಮತ್ತು ಇಜ್ಮಾಗಳ ವ್ಯಾಪ್ತಿಯನ್ನು ಹೆಚ್ಚು ಪರಿಮಿತಗೊಳಿಸಿತಲ್ಲದೆ, ಸಂಪ್ರದಾಯಗಳಿಗೆ ಬಹಳ ಮಹತ್ತ್ವ ಕೊಟ್ಟಿತು. ಈ ಶಾಖೆಯವರು ಪರ್ಷಿಯ ಮತ್ತು ಮಧ್ಯ ಅರೇಬಿಯದಲ್ಲಿ ಇದ್ದಾರೆ.

5 ಈ ನಾಲ್ಕು ಮುಖ್ಯ ಶಾಖೆಗಳಲ್ಲದೆ ಹಲವಾರು ಶಾಖೆಗಳು ಹುಟ್ಟಿಕೊಂಡರೂ ಪ್ರಸಿದ್ಧಿಗೆ ಬಾರದೆ ಹೋದುವು; ಕೆಲವಂತೂ ಹೇಳ ಹೆಸರಿಲ್ಲವಾದುವು. ದಾವೂದ್–ಇಬ್ನ್–ಅಲಿಯ ಝಾಹಿರಿ ಶಾಖೆ ಸುಮಾರು ಒಂದು ಶತಮಾನ ಕಾಲ ಬದುಕಿತ್ತು. ಮಹ್‌ದವೀಯ ಎಂಬ ಒಂದು ಪಂಗಡವೂ ಉಂಟು. ಇವರು ದಕ್ಷಿಣ ಭಾರತದಲ್ಲಿ, ಅದರಲ್ಲೂ ಮೈಸೂರು ಮತ್ತು ಆಂಧ್ರ ಪ್ರದೇಶಗಳಲ್ಲಿ ಇದ್ದಾರೆ. ಇಂದಿಗೂ ಉಳಿದಿರುವ ಶಾಖೆಗಳಲ್ಲಿ ವಹಾಬೀಗಳದು ಒಂದು. ವಹಾಬೀಗಳು ಅರೇಬಿಯದ ಅಬ್ದುಲ್ ವಹಾಬನ ಮಗನಾದ ಮಹಮ್ಮದನ ಅನುಯಾಯಿಗಳು. 1691ರಲ್ಲಿ ಹುಟ್ಟಿದ ಮಹಮ್ಮದ್ ಇಸ್ಲಾಂ ಮತದ ಪುರಾತನ ತತ್ತ್ವಗಳನ್ನು ಮಾತ್ರ ಆಚರಣೆಗೆ ತರಬಯಸಿದ. ಈ ಶಾಖೆಯವರು ಕಠಿಣ ನ್ಯಾಯವಾದಿಗಳು. ಕುರಾನಿಗೂ ಮೂಲ ಸಂಪ್ರದಾಯಗಳಿಗೂ ಸ್ವಬುದ್ಧಿಗೂ ಪ್ರಾಧಾನ್ಯಕೊಟ್ಟರು. ವಹಾಬೀಗಳು ತಕ್‌ಲಿದ್ ಪದ್ಧತಿಯನ್ನು ಖಂಡಿಸುತ್ತಾರೆ. ವಹಾಬೀಗಳ ಹಲವು ಪಂಗಡಗಳು ಪಾಕಿಸ್ತಾನ ಮತ್ತು ಭಾರತಗಳಲ್ಲಿ ಇವೆ.

**(ಆ) ಷಿಯ ಮತಕ್ಕೆ ಸೇರಿದ ಶಾಖೆಗಳು**: ಷಿಯ ಮತೀಯರಿಗೆ ಇಮಾಮರಲ್ಲಿ ನಂಬಿಕೆ. ಷಿಯ ಮತದವರಲ್ಲಿ ಕೂಡ ಹಲವು ಒಳಪಂಗಡಗಳು ಇವೆ. ಅವರಿಗೆ ಅನ್ವಯವಾಗುವ ನ್ಯಾಯಸೂತ್ರಗಳು ಅವರವರ ಶಾಖೆಗಳ ಪ್ರಕಾರವಾಗಿರುತ್ತವೆ. ಕುರಾನ್, ಮಹಮ್ಮದರ ಸಂಪ್ರದಾಯಗಳು ಇವು ನ್ಯಾಯ ವಿಷಯದಲ್ಲಿ ಇವರಿಗೆ ಪ್ರಮಾಣಗಳು, ಇಜ್ಮಾ ತತ್ತ್ವವನ್ನು ಇವರು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇಮಾಮರಿಂದ ನೇಮಕ ಹೊಂದಿದ ಮುಜ್ತಹಿಂದರಿಗೆ ಷಿಯ ಮತದವರು ಹೆಚ್ಚು ಮಹತ್ತ್ವ ಕೊಡುತ್ತಾರೆ. ಅವರಲ್ಲಿರುವ ಮುಖ್ಯ ಶಾಖೆಗಳು ಇವು:

1 ಅಸ್ನಾ–ಅಷಾರಿಗಳು: ಇವರು ಆಲಿಯಿಂದ ಹಿಡಿದು ಮಹಮ್ಮದನವರೆಗಿನ 12 ಇಮಾಮರ ಅನುಯಾಯಿಗಳು. ಇವರಲ್ಲಿ ಅಕ್ಬರಿಗಳು ಮತ್ತು ಉಸೂಲಿಗಳು ಎಂಬ ಒಳಪಂಗಡಗಳಿವೆ. ಅಕ್ಬರಿಗಳಿಗೆ ನ್ಯಾಯ ವಿಷಯಗಳಲ್ಲಿ ಮುಜ್ತಹಿದರ ಅಭಿಪ್ರಾಯಗಳೇ ಪ್ರಮಾಣ. ಉಸೂಲಿಗಳು ಹಲವು ವಿಷಯಗಳಲ್ಲಿ ಕಿಯಾಸನ್ನು ಗಣನೆಗೆ ತೆಗೆದುಕೊಳ್ಳುವುದುಂಟು. ವಿಶ್ವದ ಅನೇಕ ದೇಶಗಳಲ್ಲಿರುವ ಅಸ್ನಾ–ಅಷಾರಿಗಳು ಪರ್ಷಿಯ, ಪಾಕಿಸ್ತಾನ ಮತ್ತು ಭಾರತದಲ್ಲೂ ಇದ್ದಾರೆ.

2 ಝುಯ್‌ದಿಗಳು: ಷಿಯ ಮತದವರಲ್ಲಿ ನಾಲ್ಕನೆಯ ಇಮಾಮರ ತರುವಾಯ ಭಿನ್ನಾಭಿಪ್ರಾಯಗಳು ಬಂದುವು. ಮಹಮ್ಮದ್ ಅಲಿ ಬಕೀರನನ್ನು ಐದನೆಯ ಇಮಾಮನೆಂದು ಪರಿಗಣಿಸಲಾಯಿತು. ಇದನ್ನು ಹಲವರು ಒಪ್ಪಲಿಲ್ಲ. ಅವರು ಈತನ ಸಹೋದರ ಝುಯಿದನನ್ನು ಇಮಾಮನೆಂದು ಸ್ವೀಕರಿಸಿದರು. ಯೆಮೆನ್ನಿನ ಇಮಾಮರು ಇವನ ವಂಶಜರು. ಇವರ ನ್ಯಾಯಸೂತ್ರಗಳು ಸುನ್ನತ್ ಜಮಾತ್ ನ್ಯಾಯಸೂತ್ರಗಳಿಗೆ ಸಮೀಪವರ್ತಿಗಳಾಗಿವೆ. ಮುತಾ ಎಂಬ ಹಂಗಾಮಿ ವಿವಾಹವನ್ನು ಇವರು ಒಪ್ಪುವುದಿಲ್ಲ. ಇವರು ಪರ್ಷಿಯದ ಉತ್ತರ ಭಾಗದಲ್ಲೂ ಅರೇಬಿಯದ ದಕ್ಷಿಣ ಭಾಗದಲ್ಲೂ ಪಾಕಿಸ್ತಾನ ಮತ್ತು ಭಾರತದಲ್ಲೂ ಇದ್ದಾರೆ.

3 ಇಸ್ಮಾಯಿಲರು: ಆರನೆಯ ಇಮಾಮ್ ಜಾಫರನ ಮರಣಾನಂತರ ಬಂದ ಇಮಾಮ್ ಮೂಸಾ–ಅಲ್–ಕಾಸಿಮನನ್ನು ಇವರು ಇಮಾಮನೆಂದು ಸ್ವೀಕರಿಸುವುದಿಲ್ಲ. ಆದರೆ ಆತನ ಸಹೋದರ ಇಸ್ಮಾಯಿಲನನ್ನು 7ನೆಯ ಇಮಾಮನೆಂದು ಪರಿಗಣಿಸುತ್ತಾರೆ. ಇಸ್ಮಾಯಿಲರಲ್ಲಿ ಪೌರಸ್ತ್ಯ ಮತ್ತು ಪಾಶ್ಚಾತ್ಯ ಇಸ್ಮಾಯಿಲರೆಂಬ ಪಂಗಡಗಳು ಅಸ್ತಿತ್ವಕ್ಕೆ ಬಂದಿವೆ. ಅರೇಬಿಯ, ಪರ್ಷಿಯ, ಸಿರಿಯ, ಪಾಕಿಸ್ತಾನ, ಭಾರತ ಮೊದಲಾದ ದೇಶಗಳಲ್ಲಿ ಇಸ್ಮಾಯಿಲರು ಇದ್ದಾರೆ.

ಈ ಪ್ರಭೇದಗಳಲ್ಲದೆ ಭೋರರು, ಬಾಬಿಗಳು, ಖೋಜರು, ಷೇಖಿಗಳು ಎಂಬ ಅನೇಕ ಒಳ ಪಂಗಡಗಳು ಇವೆ. ಭೋರರ ಮುಖ್ಯಸ್ಥ ಯೆಮೆನ್ನಿನಲ್ಲಿ ಇರುತ್ತಾನೆ. ಷಿರಾಜ್ ಅಲಿ ಮಹಮ್ಮದನ ಅನುಯಾಯಿಗಳೇ ಬಾಬಿಗಳು. ಖೋಜರು ಆಗಾಖಾನನನ್ನು ತಮ್ಮ ಲೌಕಿಕ, ಧಾರ್ಮಿಕ ಮುಖ್ಯಸ್ಥನೆಂದು ಪರಿಗಣಿಸುತ್ತಾರೆ. ಷೇಖ್ ಅಹಮ್ಮದ್ ಅಹ್‌ಸಾಯನ (1753–1826) ಪಂಗಡದವರು ಷೇಖಿಗಳು.

**ಇಸ್ಲಾಮೀ ನ್ಯಾಯದ ರೂಪರೇಷೆಗಳು:** ನಮಗೆ ಸಮೀಪವಿರುವ, ನಮ್ಮನ್ನು ರಕ್ಷಿಸುವ, ದೇವರು ನಮ್ಮ ಸಕಲ ಕಾರ್ಯಗಳಿಗೂ ಸಾಕ್ಷಿಯಿರುವ ಕಾರಣ ತಾನು ತನ್ನವರೆನ್ನದೆ, ಬಡವ–ಬಲ್ಲಿದರೆನ್ನದೆ, ನ್ಯಾಯಸಂಬಂಧದಲ್ಲಿ ಆತ್ಮಸಾಕ್ಷಿಯಾಗಿ ನಿಶ್ಚಲ ಚಿತ್ತನಾಗಿರು ಎಂಬುದು ಕುರಾನಿನ ಉಕ್ತಿ. ಸರ್ವರೂ ನ್ಯಾಯವನ್ನು ತಿಳಿದಿರಬೇಕೆಂಬುದನ್ನು ಅಬು ಹನಿಫ್ ಬೇರೊಂದು ರೀತಿಯಲ್ಲಿ–ತನ್ನ ಹಕ್ಕುಬಾಧ್ಯತೆಗಳನ್ನು ಆತ್ಮ ಅರಿತುಕೊಳ್ಳುವುದೇ ನ್ಯಾಯಶಾಸ್ತ್ರ ಎಂದು ಹೇಳಿದ್ದಾನೆ. ಸರ್ವಸಮಾನತೆ ಇಸ್ಲಾಮೀ ನ್ಯಾಯದ ತಳಹದಿ. ನ್ಯಾಯ ಅನ್ವಯಿಸುವುದು ಮನುಷ್ಯನ ಕೃತ್ಯಗಳಿಗೆ. ಕೌಲ್ ಅಥವಾ ನುಡಿ, ಅಮಲ್ ಅಥವಾ ಕೆಲಸದ ರೂಪದ್ದಾಗಿರಬೇಕು. ಈ ಕೃತ್ಯದ ಹಿಂದೆ ನಿಯ್ಯಾ ಅಥವಾ ಉದ್ದೇಶ ಇರಬೇಕು. ಉದ್ದೇಶ ಒಂದಿಲ್ಲೊಂದು ರೀತಿಯಲ್ಲಿ–ಎಂದರೆ ಇಷಾರಾಮಾಹುದಾ ಅಥವಾ ಸಂಜ್ಞೆಯ ರೂಪದಲ್ಲೋ ರಿಜಾ ಅಥವಾ ಸಮ್ಮತಿಗಳ ರೂಪದಲ್ಲೋ–ಪ್ರಕಟಗೊಳ್ಳಬೇಕು. ಸಾಧಾರಣವಾಗಿ ಇಂಥ ಕೃತ್ಯಗಳು ನ್ಯಾಯದ ವ್ಯಾಪ್ತಿಯಲ್ಲಿ ಬರುತ್ತವೆ.

ಆಸ್ತಿಯ ಸ್ವರೂಪವನ್ನು ವಿಶದೀಕರಿಸಿಲ್ಲ. ಹಲವು ವಸ್ತುಗಳನ್ನು ವ್ಯವಹಾರಗಳಿಂದ ದೂರವಿಡಲಾಗಿದೆ. ಆಸ್ತಿ ಸಾರ್ವಜನಿಕರಿಗೆ ಸೇರಿರಬಹುದು; ಅಥವಾ ಯಾವೊಬ್ಬ ವ್ಯಕ್ತಿಯ ಒಡೆತನಕ್ಕೊ ಸ್ವಾಧೀನಕ್ಕೋ ಒಳಪಟ್ಟಿರಬಹುದು. ವ್ಯವಹಾರದ ವಸ್ತು–ಮಾಲ್, ಅದರ ಒಡೆತನ–ಮಿಲ್ಕ್. ಅದರ ಸ್ವಾಧೀನ–ಯದ್. ಇವುಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನೂ ಹಕ್ಕುಬಾಧ್ಯತೆಗಳನ್ನೂ ಇಸ್ಲಾಮೀ ನ್ಯಾಯ ನಿಯಂತ್ರಣಗೊಳಿಸುತ್ತದೆ. ಪೂರ್ವ ಕ್ರಯಾಧಿಕಾರದ ಹಕ್ಕು ಮತ್ತು ನ್ಯಾಸಕ್ಕೆ ಹತ್ತಿರವೆನಿಸಿದರೂ ಅವುಗಳಿಂದ ಭಿನ್ನವಾದ ವಕ್ಫ್‌ಗಳಿಗೆ ಸಂಬಂಧಿಸಿದ ನ್ಯಾಯಸೂತ್ರಗಳು ಇದರ ವೈಶಿಷ್ಟ್ಯ. ಇಮಾಮನ ಅನುಜ್ಞೆಯನ್ನು ಪಡೆದು ಮುಸಲ್ಮಾನ್ ಅಥವಾ ಧಿಮ್ಮಿಯ (ಮುಸ್ಲಿಮನಲ್ಲದವನ) ಒಡೆತನಕ್ಕೆ ಸೇರಿರದ ಭೂಮಿಯನ್ನು ಸಾಗುಮಾಡಬಹುದು. ನೀರು ಸಾರ್ವಜನಿಕರ ವಸ್ತು. ವೈಯಕ್ತಿಕ ಒಡೆತನಕ್ಕೆ ಸೇರಿದ ಭೂಮಿಯಲ್ಲಿರುವ ಬಾವಿ ಮತ್ತು ನಾಲೆಗಳಲ್ಲಿನ ನೀರನ್ನು ಕೂಡ ದೇವತಾ ಕಾರ್ಯಕ್ಕೆ ಮತ್ತು ಕುಡಿಯುವುದಕ್ಕೆ ಮುಸ್ಲಿಂ ಜನರು ಉಪಯೋಗಿಸಬಹುದು.

ವ್ಯಕ್ತಿಗೆ ಹುಟ್ಟಿನೊಂದಿಗೆ ಹಲವು ಬಾಧ್ಯತೆಗಳೂ ಅಧಿಕಾರಗಳೂ ಲಭಿಸುತ್ತವೆ; ಮರಣದೊಂದಿಗೆ ಹೋಗುತ್ತವೆ. ಗರ್ಭದಲ್ಲಿರುವ ಮಗುವಿಗೆ ಉತ್ತರಾಧಿಕಾರ ಮತ್ತು ರಿಕ್ಥಗಳನ್ನು (ಲೆಗೆಸಿ) ಪಡೆಯುವ ಹಕ್ಕು ಅಂಥ ಸಂದರ್ಭದಿಂದ ಆರು ಚಾಂದ್ರಮಾನ ತಿಂಗಳುಗಳೊಳಗೆ ಹುಟ್ಟಿದರೆ ಮಾತ್ರ ಲಭಿಸುತ್ತದೆ. ಹಲವು ಅಧಿಕಾರಗಳು ಬಾಲಕ ಪ್ರಾಪ್ತವಯಸ್ಕನಾದ ಮೇಲೆ ಬರುತ್ತದೆ. ವ್ಯಕ್ತಿ ಸ್ವತಂತ್ರನಾಗಲಿ, ಗುಲಾಮನಾಗಲಿ ಇರಬಹುದು. ಗುಲಾಮರನ್ನು ಸಾಧಾರಣವಾಗಿ ಆಸ್ತಿಯಂತೆ ಪರಿಗಣಿಸಲಾಗುವುದು. ಒಡೆಯನ ಅನುಮತಿ ಪಡೆದು ಗುಲಾಮರು ಮದುವೆ ಮಾಡಿಕೊಳ್ಳಬಹುದು. ಗುಲಾಮ ಒಡೆಯನಿಗೆ ಹತ್ತಿರದ ಸಂಬಂಧಿಯಾದರೆ ಗುಲಾಮತನ ಹೋಗಿಬಿಡುತ್ತದೆ. ಬೇರೆ ರೀತಿಯಲ್ಲೂ ಗುಲಾಮತನ ಹೋಗಬಹುದು.

ಒಪ್ಪಂದ ಮಾಡಿಕೊಳ್ಳಲು ಸ್ವಸ್ಥ ಮನದವನೂ ವಯಸ್ಕನೂ ಆಗಿರಬೇಕು. ಸಾಕ್ಷಿಯಾಗುವುದಕ್ಕೆ ಉತ್ತಮ ಚಾರಿತ್ರ್ಯ–ಅದಲ್–ಇರಬೇಕು. ಸ್ತ್ರೀಯರಿಗೆ ಆಸ್ತಿಯಲ್ಲಿ ಹಕ್ಕುಂಟು; ಆದರೆ ಪುರುಷರಿಗೆ ಎರಡು ಪಾಲಾದರೆ ಸ್ತ್ರೀಯರಿಗೆ ಒಂದು ಪಾಲು. ಒಪ್ಪಂದ ಮಾಡಿಕೊಳ್ಳುವುದರಲ್ಲಿ ಆಕೆ ಪುರುಷನಿಗೆ ಸರಿಸಮಾನ. ವಿವಾಹ ವಿಷಯಗಳಲ್ಲಿ ಆಕೆಯ ಸ್ಥಾನ ಮೇಲಾದರೆ, ವಿವಾಹ ವಿಚ್ಛೇದನದ ಸಂಬಂಧದಲ್ಲಿ ಅವನ ಹಕ್ಕುಗಳು ಹೆಚ್ಚು. ತಾಯಿ ಚಿಕ್ಕ ಮಕ್ಕಳ ಪಾಲನೆಯ ಹೊಣೆ ಹೊರಬಹುದು. ಪೋಷಕಳಾಗಲಾರಳು. ಕೆಲವು ವಿಷಯಗಳಲ್ಲಿ ಮಾತ್ರ ಸ್ತ್ರೀ ಕಾಜಿಯಾಗಬಲ್ಲಳು.

ಇಸ್ಲಾಮೀ ನ್ಯಾಯ ಇಸ್ಲಾಮೇತರನ್ನು ಬಲಾತ್ಕಾರದಿಂದ ಇಸ್ಲಾಂ ಮತಕ್ಕೆ ಸೇರಿಸಿಕೊಳ್ಳುವುದನ್ನು ಒಪ್ಪುವುದಿಲ್ಲ . ಒಪ್ಪಂದಕ್ಕೊಳಗಾದ ಮುಸ್ಲಿಮೇತರರನ್ನು ಧಿಮ್ಮಿಗಳೆಂದು ಕರೆಯುತ್ತಾರೆ. ಇವರು ಇಸ್ಲಾಂ ಧರ್ಮಕ್ಕೂ ಮುಸ್ಲಿಂ ಸಮಾಜಕ್ಕೂ ವಿಧೇಯರಾಗಿ ನಡೆಯಬೇಕು.

ಇಸ್ಲಾಂ ವಿವಾಹದಲ್ಲಿ ಪ್ರಧಾನ ಕರ್ಮ ನಿಕಾ. ಸಂಯೋಗ ಎಂಬರ್ಥದ ಈ ಪದಕ್ಕೆ ವಿವಾಹದ ಒಪ್ಪಂದ ಎನ್ನುವ ಅರ್ಥ ಹೇಗೋ ಬಂದಿದೆ. ವಿವಾಹನಿಷಿದ್ಧ ವರ್ಗಕ್ಕೆ ಸೇರದ, ಪ್ರಾಪ್ತ ವಯಸ್ಸಿನ, ಸ್ವಸ್ಥ ಮನದ ಮುಸ್ಲಿಂ ಸ್ತ್ರೀ–ಪುರುಷರ ವಿವಾಹ ಸಮಾಜ ವ್ಯವಹಾರದ ಒಂದು ಒಪ್ಪಂದ. ಇಂಥ ಒಪ್ಪಂದದಲ್ಲಿ ಸ್ತ್ರೀಗೆ ಕೊಡಬೇಕಾದ ಹಣವನ್ನು (ಮಹರ್) ಸೂಚಿಸುವುದು ಅವಶ್ಯಕ. ಹಣವನ್ನು ವಿವಾಹ ಸಮಯದಲ್ಲಾಗಲಿ ಆಮೇಲಾಗಲಿ ಕೊಡಬಹುದು. ಪುರುಷರಿಗೆ ನಾಲ್ಕು ಜನ ಪತ್ನಿಯರಿರಬಹುದು. ಹಲವು ಕಾರಣಗಳ

ಮೇಲೆ ತಲಾಕ್ (ವಿವಾಹ ವಿಚ್ಛೇದನ) ಕೇಳಬಹುದು. ಇಬ್ಬರಿಗೂ ಈ ಹಕ್ಕು ಇರುವುದಾದರೂ, ಈ ಸಂಬಂಧದ ನ್ಯಾಯಸೂತ್ರಗಳು ಗಂಡನಿಗೆ ಅನುಕೂಲಕರವಾಗಿವೆ. ವಿವಾಹವಿಚ್ಛೇದನದ ರೂಪಗಳು ಹಲವುಂಟು. ವಿವಾಹವಿಚ್ಛೇದನದ ತರುವಾಯ ಇದ್ದತ್ ಅಥವಾ ನಿರೀಕ್ಷಣೆಯ ಅವಧಿ ಮುಗಿಯುವವರೆಗೆ ಮರು ಮದುವೆಗೆ ಅವಕಾಶವಿಲ್ಲ. ಇದ್ದತ್ ಅವಧಿಯಲ್ಲಿ ಹುಟ್ಟಿದ ಶಿಶುವನ್ನು ಔರಸ ಸಂತಾನವೆಂದು ಪರಿಗಣಿಸಲಾಗುತ್ತದೆ. ಇಂಥ ಅವಧಿಯಲ್ಲಿ ಇಬ್ಬರಲ್ಲಿ ಒಬ್ಬರು ಸತ್ತರೆ ಉಳಿದವರಿಗೆ ಕೆಲವು ಸಂದರ್ಭಗಳಲ್ಲಿ ಉತ್ತರಾಧಿಕಾರದ ಹಕ್ಕು ಹುಟ್ಟುತ್ತದೆ.

ಸಾಧಾರಣವಾಗಿ ಮೇಲೆ ಹೇಳಿದ ಎಲ್ಲ ವಿಷಯಗಳಿಗೂ ಅನ್ವಯವಾಗುವ ನ್ಯಾಯ ಸೂತ್ರಗಳಲ್ಲಿ ಸುನ್ನತ್ ಜಮಾತ್ ಮತ್ತು ಷಿಯ ಮತಗಳ ಒಳಪಂಗಡಗಳಿಗೆ ಸಂಬಂಧಪಟ್ಟಂತೆ ವ್ಯತ್ಯಾಸಗಳಿವೆ. ಆದರೆ ಉತ್ತರಾಧಿಕಾರಕ್ಕೆ ಸಂಬಂಧಿಸಿದ ನ್ಯಾಯಸೂತ್ರಗಳಲ್ಲಿ ವ್ಯತ್ಯಾಸಗಳು ಇನ್ನೂ ಹೆಚ್ಚಾಗಿವೆ. ಸುನ್ನತ್ ಜಮಾತ್‌ಗೆ ಸೇರಿದ ಎಲ್ಲ ಪಂಗಡಗಳೂ ಪುರುಷ ಸಂತತಿಗೆ ಪ್ರಾಧಾನ್ಯ ಕೊಡುತ್ತವೆ. ಆದರೆ ಷಿಯ ಮತದವರು ಹತ್ತಿರದ ಸಂಬಂಧವನ್ನು ನೋಡುತ್ತಾರೆ. ಆಸ್ತಿಯನ್ನು ಉಯಿಲಿನ ಮೇರೆಗೆ ವಿನಿಯೋಗ ಮಾಡಬೇಕಾದಲ್ಲಿ, 1/3 ಭಾಗವನ್ನು ಸ್ವಂತ ಇಚ್ಛೆಯಂತೆಯೂ 2/3 ಭಾಗವನ್ನು ಉತ್ತರಾಧಿಕಾರಿಗಳಿಗೂ ವಿನಿಯೋಗ ಮಾಡಬೇಕಾಗುತ್ತದೆ.

ಇಸ್ಲಾಮೀ ದಂಡನ್ಯಾಯವು ವಿಶಿಷ್ಟವಾದದ್ದೆ, ಜೀವದಂಡನೆ, ಹದ್‌ದಂಡನೆ ಮುಂತಾದ ಕೆಲವು ರೂಪದ ದಂಡನೆಗಳಿದ್ದುವು. ಕೊಲೆಯಂಥ ಅಪರಾಧಗಳನ್ನೂ ರಾಜಿಮಾಡಿ ಕೊಳ್ಳುವುದರ ಮೂಲಕ ಬಗೆಹರಿಸಿಕೊಳ್ಳಬಹುದಿತ್ತು. ವ್ಯವಹಾರಗಳಲ್ಲಿ ಅಪನಂಬಿಕೆ ತೋರಿಸಿದರೂ ದಂಡವಿತ್ತು. ಕುಸೀದ ಪದ್ಧತಿಯನ್ನು ನಿಷೇಧಿಸಲಾಗಿತ್ತು.

ವಿಧಿ ವ್ಯಕ್ತಿಯನ್ನು ಇಸ್ಲಾಮೀ ನ್ಯಾಯ ಒಪ್ಪುವುದಿಲ್ಲ. ದಾನದ ಕಲ್ಪನೆ ಈ ನ್ಯಾಯಕ್ಕೆ ವಿಶಿಷ್ಟವಾದದ್ದು.

ಕಾಜಿಯನ್ನು ಕಲೀಫರು, ಆಡಳಿತಗಾರರು ನೇಮಿಸುತ್ತಿದ್ದರು. ದಿವಾಣಿ ವಿಷಯಗಳು ಮತ್ತು ಮುಸ್ಲಿಂ ರಾಜ್ಯಗಳಲ್ಲಿ ಇಸ್ಲಾಮೇತರರ ವ್ಯಾಜ್ಯಗಳು ಇವರ ಅಧಿಕಾರಕ್ಕೊಳಪಟ್ಟಿರುತ್ತಿದ್ದುವು. ಸಾಕ್ಷ್ಯಾಧಾರಗಳನ್ನೂ ನ್ಯಾಯಪಂಡಿತರ ಅಭಿಪ್ರಾಯಗಳನ್ನೂ ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಮೇಲಧಿಕಾರಿಗಳಿಂದ ತೀರ್ಪುಗಳ ಪುನರ್ ವಿಮರ್ಶೆಗೂ ಅವಕಾಶವಿತ್ತು.

**ಇಸ್ಲಾಮೀ ನ್ಯಾಯದ ಬೆಳವಣಿಗೆ:** ಪೈಗಂಬರರಿಂದ ಆಚರಣೆಗೆ ತರಲಾದ ಇಸ್ಲಾಮೀ ನ್ಯಾಯ ಹಿಜರತ್‌ನ ಮೊದಲ ಹತ್ತು ವರ್ಷಗಳಲ್ಲಿ ರೂಪುಗೊಳ್ಳಹತ್ತಿತ್ತು. ಆಮೇಲೆ ಆರಂಭದ ನಾಲ್ವರು ಕಲೀಫರು (632–661), ಮತ್ತು ತರುವಾಯದ ಉಮಾಯದ ಕಲೀಫರು (661–750) ಇಸ್ಲಾಮೀ ನ್ಯಾಯದ ಬೆಳವಣಿಗೆಗೆ ಸಹಾಯ ಮಾಡಿದರು. 711ನೆಯ ಇಸವಿಯ ಸುಮಾರಿಗೆ ಇಸ್ಲಾಂ ಅಧಿಪತ್ಯ ಭಾರತದ ಕಡೆಗೂ ಹಬ್ಬತೊಡಗಿತು. ಭಾರತದಲ್ಲೂ ಇಸ್ಲಾಮೀ ನ್ಯಾಯ ಬೆಳೆಯಿತು. ಕಾಲಕ್ರಮದಲ್ಲಿ ನಿರ್ಣಯಗಳನ್ನು ಕೊಡುವ ವಿಷಯದಲ್ಲಿ ಕೆಲವು ಪದ್ಧತಿಗಳು ಆಚರಣೆಯಲ್ಲಿ ಬಂದುವು. ಇಂಥ ಆಚರಣೆಗಳ ಕೊಡುಗೆಯೂ ಸಾಕಷ್ಟಿದೆ. ಕುರಾನ್ ಮತ್ತು ಅಧಿಕೃತ ಸಂಪ್ರದಾಯಗಳ ಮೇರೆಗೆ ತೀರ್ಪುಗಳನ್ನು ಕೊಡಲಾಗುತ್ತಿತ್ತು. ಈ ವಿಧಾನಕ್ಕೆ ಇಜ್ತಹದ್ ಎಂದೂ ಹೀಗೆ ತೀರ್ಪು ಕೊಡುವವರನ್ನು ಮುಜ್ತಹಿದ್ ಎಂದೂ ಕರೆಯಲಾಗುತ್ತದೆ. ಹಿಂದಿನ ನಿರ್ಣಯಗಳನ್ನು ಒಪ್ಪಿ, ಅವುಗಳ ಆಧಾರದ ಮೇಲೆ ತೀರ್ಪು ಕೊಡುವ ವಿಧಾನ ಆಮೇಲೆ ಬೆಳೆಯಿತು. ಇದನ್ನು ತಕ್‌ಲಿದ್ ಎನ್ನುತ್ತಾರೆ. ತಕ್‌ಲಿದ್ ಪದ್ಧತಿಯನ್ನು ಹನ್‌ಬಲಿ ಶಾಖೆಯವರು ಖಂಡಿಸಿದರು. ಅಬ್ಬಾಸಿದ್ ಕಲೀಫರ (750–1258) ಕಾಲದಲ್ಲಿ ಇಸ್ಲಾಮೀ ನ್ಯಾಯದ ವಿವಿಧ ಶಾಖೆಗಳು ಬೆಳೆಯುವುದರ ಜೊತೆಗೆ ಅವುಗಳ ವ್ಯತ್ಯಾಸಗಳು ಸ್ಪಷ್ಟವಾಗಿ ರೂಪುಗೊಂಡಿದ್ದುವು. ಷಾಫಯ್‌ನ (767–820) ಕಾಲಕ್ಕಾಗಲೇ ನ್ಯಾಯಪಂಡಿತರ–ಮುಫ್ತಿಗಳ ಗುಂಪುಗಳು ಅಸ್ತಿತ್ವಕ್ಕೆ ಬಂದಿದ್ದುವು. ಮುಫ್ತಿಗಳ ವಿವೇಚನಾತ್ಮಕ ಅಭಿಪ್ರಾಯಗಳಿಗೆ ಫತಾವ ಎನ್ನುತ್ತಾರೆ. ಮುಫ್ತಿಗಳ ಅಭಿಪ್ರಾಯಗಳು ನ್ಯಾಯನಿರ್ಣಯ ವಿಷಯಗಳಲ್ಲಿ ಕಾಜಿಗಳಿಗೆ ಸಹಾಯಕವಾಗುತ್ತಿದ್ದುವು. ಇಸ್ಲಾಮೀ ನ್ಯಾಯದ ಬೆಳವಣಿಗೆಗೆ ಫತಾವಗಳಿಂದ ಬಹಳ ಸಹಾಯವಾಗಿದೆ. ಆಟೊಮನ್ ಸುಲ್ತಾನರ ಕಾಲಕ್ಕೆ ಇಸ್ಲಾಮೀ ನ್ಯಾಯ ಸಂಪೂರ್ಣ ರೂಪುಗೊಂಡಿತ್ತು. ತುರ್ಕಿಯ ಆಟೊಮನ್ ಸುಲ್ತಾನರು 1517ರಲ್ಲಿ ತಾವೇ ಕಲೀಫರಾದರು. 1924ರಲ್ಲಿ ಖಿಲಾಫತ್ತು ರದ್ದಾಯಿತು. ಆಟೊಮನ್ ಸುಲ್ತಾನರಿಗೆ ಕಾನೂನುಗಳನ್ನು ಮಾಡುವ ಆಸಕ್ತಿ ಇದ್ದರೂ ಕಾಲಮಾನ ಪರಿಸ್ಥಿತಿಯಿಂದಾಗಿ ಷರೀಯತ್‌ನಲ್ಲಿನ ನ್ಯಾಯಸೂತ್ರಗಳಿಗೆ ಬದ್ಧರಾಗಿದ್ದರು.

ಸುಲ್ತಾನ ಮಹಮ್ಮದನ (1451–81) ಕಾಲದಲ್ಲಿ ಷರೀಯತ್‌ನ ಹದ್ ದಂಡನೆಗಳಿಗೆ ಬದಲಾಗಿ ತಜೀರ್ (ಚಾಟಿ ಹೊಡೆತ) ಮತ್ತು ದ್ರವ್ಯ ದಂಡನೆಗಳು ಆಚರಣೆಯಲ್ಲಿ ಬಂದುವು. ಸುಮಾರು 1850 ರ ವರೆಗೆ ಸ್ಥಳೀಯ ಸಂಪ್ರದಾಯಗಳನ್ನೂ ಸಾರ್ವಜನಿಕ ಶಾಂತಿ ಮತ್ತು ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ ಆಡಳಿತಗಾರರ ನಿಯಮಗಳನ್ನೂ ಬಿಟ್ಟರೆ ಪ್ರಪಂಚದ ಇಸ್ಲಾಂ ರಾಜ್ಯಗಳಲ್ಲೆಲ್ಲ ಷರೀಯತ್ ಆಚರಣೆಯಲ್ಲಿತ್ತು. ಸುಲ್ತಾನ ಅಬ್ದುಲ್ ಮಜೀದನ (1839–61) ಕಾಲದಲ್ಲಿ ಧಿಮ್ಮಿಗಳ ಸ್ಥಾನಮಾನ ಬದಲಾಗಿ, ಎಲ್ಲ ಇಸ್ಲಾಮೇತರರನ್ನೂ ರಾಜಕೀಯವಾಗಿ ಪ್ರಜೆಗಳೆಂದು ಪರಿಗಣಿಸಲಾಯಿತು. 1850ರ ವಾಣಿಜ್ಯ ಸಂಹಿತೆಯಿಂದಾಗಿ ಷರೀಯತ್‌ನ ಒಂದು ವಿಷಯ ಪ್ರವರ್ತನೆಯಲ್ಲಿ ಇಲ್ಲವಾಯಿತು.

1877ರ ಆಟೊಮನ್ ದಿವಾಣಿ ಸಂಹಿತೆ ಇಸ್ಲಾಮೀ ನ್ಯಾಯದ ರೂಪ ಬದಲಾವಣೆಗೆ ಬಹಳಷ್ಟು ಕಾರಣವಾಯಿತು. ಅಲ್ಲಿಂದ ಮುಂದೆ ಇಸ್ಲಾಮೀ ರಾಷ್ಟ್ರಗಳಲ್ಲಿ ಸುಧಾರಣೆಗಳು ನಡೆದಿವೆ. ಮಜಲಿಯನ್ನು 1926ರಲ್ಲಿ ರದ್ದುಗೊಳಿಸಲಾಗಿದೆ. 1883ರಿಂದ ಈಜಿಪ್ಟ್ ದೇಶದಲ್ಲಿ ಬದಲಾವಣೆಗಳು ನಡೆದಿವೆ. ಕೌಂಟುಬಿಕ ಹಕ್ಕು ಬಾಧ್ಯತೆಗಳಿಗೆ ಸಂಬಂಧಿಸಿದ ಆಟೊಮನರ 1917ರ ಕಾನೂನು ಈ ಹಾದಿಯಲ್ಲಿ ಮತ್ತೊಂದು ಮೈಲಿಗಲ್ಲು. ತುರ್ಕಿಯಲ್ಲಿ ಇದನ್ನು ರದ್ದುಗೊಳಿಸಲಾಗಿದ್ದರೂ ಲೆಬನಾನ್ ಮುಂತಾದ ದೇಶಗಳಲ್ಲಿ ಪ್ರವರ್ತನೆಯಲ್ಲಿ ಉಳಿಯಿತು. 1928ರಲ್ಲಿ ಅಲ್ಬೇನಿಯದಲ್ಲಿ ಕಾಜಿ ಪದ್ಧತಿಯ ನ್ಯಾಯಾಲಯಗಳು ರದ್ದಾದುವು. 1932ರಲ್ಲಿ ಲೆಬನಾನಿನಲ್ಲೂ 1949ರಲ್ಲಿ ಸಿರಿಯದಲ್ಲೂ 1953ರಲ್ಲಿ ಇರಾಕಿನಲ್ಲೂ ದಿವಾಣಿ ಸಂಹಿತೆಗಳು ಜಾರಿಗೆ ಬಂದಿವೆ. ಟ್ಯುನೀಷಿಯದಲ್ಲಿ 1956ರಲ್ಲಿ ವಕ್ಫ್‌ಗಳ ಸಂಬಂಧದ ಕಾನೂನು ಮಾಡಲಾಯಿತು. ಈಜಿಪ್ಟ್, ಸಿರಿಯ ಮುಂತಾದ ದೇಶಗಳಲ್ಲಿ ವಕ್ಫ್ ಬಗೆಗಿನ ಕಾನೂನುಗಳು ಬಂದಿವೆ. ಈಗ ಅನೇಕ ದೇಶಗಳಲ್ಲಿ ವ್ಯಕ್ತಿಗತ ವಕ್ಫ್‌ಗಳನ್ನು ರದ್ದುಗೊಳಿಸಲಾಗಿದೆ. ಇಲ್ಲವೆ ಅವಕ್ಕೆ ಸಮಯದ ನಿರ್ಬಂಧ ಹಾಕಲಾಗಿದೆ. 1961ರಲ್ಲಿ ಮುಸ್ಲಿಂ ಕುಟುಂಬಗಳಿಗೆ ಅನ್ವಯಿಸುವ ನಿಯಮಗಳ ಅಧ್ಯಾದೇಶವನ್ನು (ಆರ್ಡಿನೆನ್ಸ್) ಪಾಕಿಸ್ತಾನ ಜಾರಿಗೆ ತಂದಿತ್ತು. 1963ರ ಇರಾಕಿನ ಕಾನೂನಿನ ಮೇರೆಗೆ ಅಲ್ಲಿಯ ಇಸ್ಲಾಂ ಮತದ ಎಲ್ಲ ಪಂಗಡದವರಿಗೂ ಷಿಯ ಮತದ ಉತ್ತರಾಧಿಕಾರದ ನಿಯಮಗಳೇ ಅನ್ವಯವಾಗುತ್ತವೆ.

ಗುಲಾಮ ಪದ್ಧತಿ, ದಂಡನಿಯಮಗಳು, ಸಾಕ್ಷ್ಯ, ಗರ್ಭಕಾಲ (ಜೆಸ್ಟೇಷನ್), ಸ್ಥಾನಮಾನ, ಹಕ್ಕು ಬಾಧ್ಯತೆಗಳು ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ಇಸ್ಲಾಮೀ ನ್ಯಾಯಸೂತ್ರಗಳು ಎಲ್ಲ ದೇಶಗಳಲ್ಲಿಯೂ ಸಂಪೂರ್ಣವಾಗಿ ಮಾರ್ಪಾಟು ಹೊಂದಿವೆ. ವಿವಾಹ, ವಿವಾಹ ವಿಚ್ಛೇದನ ಮತ್ತು ಬಹುಪತ್ನೀತ್ವಕ್ಕೆ ಸಂಬಂಧಿಸಿದ ನ್ಯಾಯ ಸೂತ್ರಗಳು ವ್ಯತ್ಯಾಸಗೊಳ್ಳುತ್ತಿವೆ.

**ಭಾರತದಲ್ಲಿ ಇಸ್ಲಾಮೀ ನ್ಯಾಯದ ಬೆಳವಣಿಗೆ:** ಮೊದಲು ವ್ಯಾಪಾರಿಗಳು ಮತ್ತು ಧರ್ಮಪ್ರಚಾರಕರ ಮೂಲಕ ಭಾರತಕ್ಕೆ ಇಸ್ಲಾಂ ಧರ್ಮ ಬಂತು. 712ರಲ್ಲಿ ಮಹಮ್ಮದ್ ಆಕ್ರಮಿಸಿದ ಸಿಂಧೂ ಪ್ರಾಂತ್ಯ 871ರ ವರೆಗೆ ಕಲೀಫರ ಆಳ್ವಿಕೆಯಲ್ಲಿತ್ತು. ತದನಂತರದ ಆಕ್ರಮಣಕಾರರಾದ ಗುಲಾಮೀ ಸಂತತಿಯ ಸುಲ್ತಾನರು, ಖಿಲ್ಜಿಗಳು, ತುಘಲಕರು ಉತ್ತರದಲ್ಲೂ, ಬಹಮನಿ ಅರಸರು ದಕ್ಷಿಣದಲ್ಲೂ ಇಸ್ಲಾಮೀ ನ್ಯಾಯದ ತಳಹದಿ ಹಾಕಿದರು. ಆಕ್ರಮಣಕಾರರು ಹನಾಫಿಗಳಾಗಿದ್ದದ್ದರಿಂದಲೂ ಆಗ ಇಸ್ಲಾಂ ದೇಶಗಳಲ್ಲಿ ಹನಾಫಿಗಳಿಗೆ ಮಾನ್ಯತೆಯಿದ್ದದ್ದರಿಂದಲೂ ಭಾರತದಲ್ಲೂ ಹನಾಫಿಗಳೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಮೊಗಲರ ಮತ್ತು ಪರ್ಷಿಯದ ಚಕ್ರವರ್ತಿಗಳ ಸಂಪರ್ಕಗಳು ಷಿಯ ಮತದ ನ್ಯಾಯಸೂತ್ರಗಳ ಆಚರಣೆಗೆ ಕಾರಣವಾದುವು. ಮೊಗಲರ ಕಾಲದಲ್ಲಿ ದೊಡ್ಡ ಪಟ್ಟಣಗಳಲ್ಲಿ ಕಾಜಿಗಳನ್ನು ನೇಮಿಸಲಾಗುತ್ತಿತ್ತು. ಹಿಂದೂಗಳ ವಿಷಯದಲ್ಲಿ ಆ ಮತದ ಪಂಡಿತರ ಸಲಹೆ ಪಡೆದು ತೀರ್ಪು ಕೊಡಲಾಗುತ್ತಿತ್ತು. ಈ ಪದ್ಧತಿ 1772ರ ಮತ್ತು 1780ರ ವಿಧಿನಿಯಮಗಳ ಪ್ರಕಾರ ಪರಿಮಿತವ್ಯಾಪ್ತಿಯಲ್ಲಿ ಮುಂದುವರಿಯಿತು. 1862ರಲ್ಲಿ ಇಸ್ಲಾಮೀ ದಂಡನ್ಯಾಯವೂ 1872ರಲ್ಲಿ ಸಾಕ್ಷ್ಯಕ್ಕೆ ಸಂಬಂಧಿಸಿದ ನ್ಯಾಯಸೂತ್ರಗಳೂ ರದ್ದಾದುವು. ಹೀಗಾಗಿ ಮಾರಾಟ, ವ್ಯವಹಾರಗಳು, ಧಾರ್ಮಿಕವಲ್ಲದ ಇತರ ಹಕ್ಕು ಬಾಧ್ಯತೆಗಳು, ಸ್ಥಾನಮಾನ ಇವುಗಳಿಗೆ ಸಂಬಂಧಿಸಿದ ಇಸ್ಲಾಮೀ ನ್ಯಾಯಸೂತ್ರಗಳು ಆಚರಣೆಯಲ್ಲಿಲ್ಲ. ವಿವಾಹ, ವಿಚ್ಛೇದನ, ಔರಸತ್ವ, ಪೋಷಣೆ. ಉತ್ತರಾಧಿಕಾರ, ದಾನ, ಉಯಿಲು, ವಕ್ಫ್ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ನ್ಯಾಯಸೂತ್ರಗಳು ಆಚರಣೆಯಲ್ಲಿವೆ. ಇವುಗಳಿಗೆ ಭಾರತೀಯ ಷರೀಯತ್ ಕಾನೂನು ಮತ್ತು ಇತರ ಕಾನೂನುಗಳು ಅನ್ವಯವಾಗುತ್ತವೆ. ಸುನ್ನತ್ ಜಮಾತ್‌ನವರ ಸಂಬಂಧದಲ್ಲಿ ಷೇಖ್ ಬುರ್‌ಹಾನುದ್ದೀನನ ಹಿದಾಯಹ್, ಕಾಜಿಖಾನನ (1195) ಫತಾವೇ ಕಾಜಿಖಾನ್, ಔರಂಗಜೇಬನ ಆಜ್ಞೆಯ ಮೇರೆಗೆ ಸಂಕಲನ ಮಾಡಿದ ಫತಾವೇ ಆಲಮ್‌ಗಿರಿ. ಮಹಮ್ಮದ್ ಅಲ್ಲಾವುದ್ದೀನ್ 1660ರಲ್ಲಿ ಬರೆದ ದುರಲ್ ಮುಖ್‌ತಾರ್, ಸಿರಾಜುದ್ದೀನನ ಸಿರಾಜೀಯ್ಯದ್ ಮುಂತಾದವು ಪ್ರಮಾಣಗ್ರಂಥಗಳಾಗಿವೆ. ಹಾಗೆಯೇ ಷಿಯ ಮತದವರ ಸಂಬಂಧದಲ್ಲಿ ಷೇಖ್ ನಿಜಾಮುದ್ದೀನನ ಷರಾಯೆ ಉಲ್ ಇಸ್ಲಾಂ, ಮಹಮ್ಮದನ ಮಫಾತೀಹ್, ತೆಹರಾನಿನ ಸಂಕಲನವಾದ ಜಾಮ್–ಉಷ್–ಷರಾಯೆ ಇವೇ ಮುಂತಾದ ಗ್ರಂಥಗಳನ್ನು ಪ್ರಮಾಣ ಗ್ರಂಥಗಳೆಂದು ಪರಿಗಣಿಸಲಾಗುತ್ತದೆ.

ಇಂಗ್ಲಿಷರ ಕಾಲದಲ್ಲಿ ಇಸ್ಲಾಮೀ ಬದಲಾವಣೆಗಳನ್ನು ತಂದ ಕೆಲವು ಕಾಯಿದೆಗಳು ಈ ರೀತಿ ಇವೆ:

1. 1913 ಮತ್ತು 1923ರ ವಕ್ಫ್ ಬಗೆಗಿನ ಕಾಯಿದೆಗಳು.
2. 1935ರ ಭಾರತ ಸರ್ಕಾರಕ್ಕೆ ಸಂಬಂಧಿಸಿದ ಕಾಯಿದೆ.
3. 1937ರ ಷರೀಯತ್ ಕಾಯಿದೆ.
4. 1939ರ ಮುಸ್ಲಿಂ ವಿವಾಹಗಳ ವಿಚ್ಛೇದನಕ್ಕೆ ಸಂಬಂಧಿಸಿದ ಕಾಯಿದೆ.
5. 1942ರ ಕಾಯಿದೆ, ಭಾರತದ ಸಂವಿಧಾನದ 225ನೆಯ ಅನುಚ್ಛೇದದ ಮೇರೆಗೆ

ಸಂವಿಧಾನಪೂರ್ವದಲ್ಲಿ ಆಚರಣೆಯಲ್ಲಿದ್ದ ಇಸ್ಲಾಮೀ ನ್ಯಾಯಕ್ಕೆ ಸಂಬಂಧಿಸಿದ ಕಾನೂನುಗಳು ಹಾಗೆಯೇ ಆಚರಣೆಯಲ್ಲಿ ಉಳಿದಿವೆ. 1954ರ ವಕ್ಫ್‌ಗಳ ಕಾಯಿದೆ ಸ್ವಾತಂತ್ರ್ಯ ಬಂದ ತರುವಾಯದಲ್ಲಿನ ಒಂದು ಮಹತ್ತ್ವದ ಹೆಜ್ಜೆಯಾಗಿದೆ. ಹಾಗೆ ನೋಡಿದರೆ ಮುಸ್ಲಿಂ ರಾಷ್ಟ್ರಗಳಲ್ಲಿ ಆದಷ್ಟು ಬದಲಾವಣೆಗಳು ಭಾರತದಲ್ಲಿ ಆಚರಣೆಯಲ್ಲಿರುವ ಇಸ್ಲಾಮೀ

ನ್ಯಾಯದಲ್ಲಿ ಆಗಿಲ್ಲ. ಒಟ್ಟಿನಲ್ಲಿ ಈ ಪರಿವರ್ತನೆಯ ಯುಗದಲ್ಲೂ ಇಸ್ಲಾಮೀ ನ್ಯಾಯದ ಹಲವು ಮೂಲ ತತ್ತ್ವಗಳೂ ನ್ಯಾಯಿಕ ಕಲ್ಪನೆಗಳೂ ಉಳಿದುಕೊಂಡು ಬಂದಿವೆ. ವಿಶ್ವದ ಪ್ರಮುಖ ನ್ಯಾಯಪದ್ಧತಿಗಳಲ್ಲಿ ಇಸ್ಲಾಮೀ ನ್ಯಾಯಪದ್ಧತಿಯೂ ಒಂದು. (ಎಲ್.ಎಸ್.ಜಿ.)

**ಇಸ್ಲಾಮೀ ವಾಸ್ತುಶಿಲ್ಪ, ಕಲೆ:** 7ನೆಯ ಶತಮಾನದಲ್ಲಿ ಈ ಕಲೆ ಹುಟ್ಟುವುದಕ್ಕೆ ಮುಂಚೆ, ಅಕ್ಕಪಕ್ಕದಲ್ಲಿದ್ದ, ಸಿರಿಯ, ಮೆಸಪೊಟೇಮಿಯ ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲಿ ವಾಸ್ತುಶಿಲ್ಪ, ಚಿತ್ರರಚನೆ, ಮುಂತಾದ ಕಲೆಗಳು ಒಂದು ರೀತಿಯ ಮೇಲ್ಮಟ್ಟವನ್ನು ಆಗಲೇ ಸಾಧಿಸಿದ್ದುವು. ಇಸ್ಲಾಮೀ ಕಲೆಯ ಪ್ರಾರಂಭದ ದಶಕಗಳಲ್ಲಿ ವಿಗ್ರಹರಚನೆ, ಅದರ ಆರಾಧನೆ ಮತ್ತು ಚಿತ್ರಕಲೆಯಲ್ಲಿ ಮನುಷ್ಯ, ಪಶು, ಪಕ್ಷಿ ಮುಂತಾದ ಜೀವಿಗಳ ನಿರೂಪಣೆ ಕಂಡುಬರುವುದಿಲ್ಲ. ದೇವರ ವಿನಾ ಮತ್ತೊಬ್ಬರಿಗೆ ಆಕೃತಿಗಳನ್ನು ಸೃಷ್ಟಿಸುವ ಅಧಿಕಾರವಿಲ್ಲವೆಂದು ಅವರು ಭಾವಿಸಿದ್ದರು. ಷಟ್ ದಿಕ್ಕುಗಳನ್ನು ಸೂಚಿಸುವುದು, ಪಂಚೇಂದ್ರಿಯಗಳಿಗೆ ಪರಿಣಾಮವನ್ನುಂಟುಮಾಡುವಂತೆ ಚಿತ್ರರಚನೆ ಮಾಡುವುದು–ಅಂದರೆ ಮುಖ್ಯವಾಗಿ ಉದ್ದ, ಅಗಲ, ಎತ್ತರ ಮತ್ತು ಜೀವಂತವಾದ ಆಕೃತಿಗಳ ರಚನೆ–ಘೋರ ಪಾಪವೆಂದು ಹನಾಫೀಯರು ಭಾವಿಸಿದ್ದರು. ಉದಾರ ಮನಸ್ಸಿನವರಾದ ಷಿಯ ಪಂಗಡದವರು ಈ ನಿಯಮವನ್ನು ಪಾಲಿಸಲಿಲ್ಲ. ಆದ್ದರಿಂದ ಇಸ್ಲಾಮೀ ಕಲೆಯ ಪ್ರಾರಂಭದಲ್ಲಿ ಮಾನವ ಪಶು ಪ್ರಾಣಿಗಳ ಆಕೃತಿಗಳು ಕಾಣವು. ರೇಖಾಗಣಿತದ ಚತುರಶ್ರ, ಮತ್ತು ವಿವಿಧ ಭಂಗಿಗಳ ಸುರಳೀ ರೂಪಗಳು ಕುರಾನ್ ವಚನಗಳನ್ನೊಳಗೊಂಡಂತೆ ಮಾತ್ರ ರಚಿತವಾದುವು ಈ ನಿರೂಪಣೆಯಲ್ಲಿನ ಪುಷ್ಪಲತಾವಿನ್ಯಾಸದ ಕಲ್ಪನಾಶಕ್ತಿ ಗಮನೀಯ.

ಜೆರೂಸಲೆಂನ ಮಣ್ಣಿನ ದೀಪದ ಬುರುಡೆ

ರಮ್ಯವಾದ ಇಸ್ಲಾಂ ಶಿಲ್ಪಾಕೃತಿಗಳು ಮತ್ತು ಚಿತ್ರಗಳು ಮುಖ್ಯವಾಗಿ ಸ್ಪೇನ್, ಸಿಸಿಲಿ, ಪರ್ಷಿಯ, ತುರ್ಕಿ, ಈಜಿಪ್ಟ್, ಭಾರತ, ಪಾಕಿಸ್ತಾನ ಮುಂತಾದ ದೇಶಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಭಾರತ, ಚೀನ, ಬಿಜಾಂಟಿಂಗಳ ಪ್ರಾಚೀನ ಧರ್ಮ ಮತ್ತು ಸಂಸ್ಕೃತಿಗಳ ಪ್ರಭಾವಗಳು ಕಂಡುಬಂದರೂ ಇಸ್ಲಾಮೀ ಕಲೆಯ ಪ್ರತ್ಯೇಕತೆ ಗಮನಾರ್ಹವಾಗಿ ಉಳಿದು ಬಂದಿದೆ.

ದಂತದ ಕೆತ್ತನೆ ಮತ್ತು ಕುಂದಣದ ಕೆಲಸ, ನೇಯ್ಗೆಯ ಕೆಲಸ, ಲೋಹ, ಗಾಜು, ಮಡಕೆ, ವಾಸ್ತಶಿಲ್ಪ ಮುಂತಾದವುಗಳ ಅಲಂಕಾರವಿಧಾನದಲ್ಲಿ ಮುಸಲ್ಮಾನರ ಶೈಲಿ ಪಾಶ್ಚಾತ್ಯ ಕಲೆಗಳ ಮೇಲೆ ಪರಿಣಾಮವನ್ನುಂಟುಮಾಡಿತು. ಮಿನಾಯಿ (ಎನಾಮ್ಲ) ಹಾಕುವುದರಲ್ಲಿ ಇಸ್ಲಾಮೀ ಕಲೆ ಮೇಲ್ಮಟ್ಟವನ್ನು ಸಾಧಿಸಲಿಲ್ಲ. ಆದರೆ ಮಡಕೆಗಳಿಗೆ ಬಣ್ಣ ಬಣ್ಣದ ಹೊಳಪು ಕೊಡುವುದರಲ್ಲಿ ನೈಪುಣ್ಯವನ್ನು ಮಾತ್ರ ಸಾಧಿಸಿತ್ತು. ಇದಕ್ಕೆ ವೆಲೆನ್‌ಷಿಯ ಕೇಂದ್ರವಾಗಿತ್ತು. ಅಲ್ಲಿಂದ ಆಮದು ಮಾಡಿದ ಮಡಕೆಗಳು ಪಾಯಿಷರ್ಸ್ ಮಡಕೆಗಳ ತಳಹದಿ ಹಾಕಿದುವು. ಸ್ಪೇನ್ ದೇಶದಿಂದ ಇಟಲಿಗೂ ಹಾಲೆಂಡಿಗೂ ಇಸ್ಲಾಮೀ ಕಲೆಯ ಪ್ರಭಾವ ಹಬ್ಬಿತು. ಸ್ಪೇನ್, ಸಿರಿಯ ದೇಶಗಳಿಂದ ಗಾಜಿಗೆ ಬಣ್ಣ ಹಾಕುವ ಶೈಲಿ ಬಂತು. ಮಡಕೆ ನಿರ್ಮಾಣದಲ್ಲಿ, ನಾನಾ ವರ್ಣಪ್ರಸ್ತರಗಳನ್ನು ಅಳವಡಿಸುವಲ್ಲಿ, ಹೊಳಪು ಕೊಡುವುದರಲ್ಲಿ ಸ್ಪೇನ್ ಮತ್ತು ಪೋರ್ಚುಗಲ್ಲಿನವರು ಇಸ್ಲಾಮಿಯರಿಗೆ ಚಿರಋಣಿಗಳಾಗಿರುತ್ತಾರೆ. ಆದರೆ ಹೊಳೆಯುವ ಮುಡೇಗಾರ್ ಮಡಕೆಗಳು ಚೀನಿಯರ ಮಡಕೆಗಳನ್ನು ಮೀರಿಸಲಾರವು.

ಮಧ್ಯಯುಗದ ರತ್ನಗಂಬಳಿ ಮುಂತಾದವುಗಳ ನೇಯ್ಗೆಯ ಕೆಲಸದಲ್ಲಿ ಅರಬ್ಬರು ಪ್ರಖ್ಯಾತಿ ಹೊಂದಿದ್ದರೂ ಅವರು ಅಲಂಕಾರ ರಚನೆಯಲ್ಲಿ ಪರ್ಷಿಯನ್ನರಿಗಿಂತ ಮಿಗಿಲೆನಿಸಲಾರರು. ಅಲ್–ಮೌಸಿಲ್ ಪ್ರದೇಶದಿಂದ ಇಟಲಿಗೆ ಆಮದು ಮಾಡಿದ ನಿರ್ಮಲವಾದ ಅತಿ ಪಾರದರ್ಶಕ ಬಟ್ಟೆ, ರೇಶ್ಮೆಯ ಚಪ್ಪರ ಇವು ಮತ್ತೆರಡು ಉದಾಹರಣೆಗಳಾಗಿವೆ. ಅರ್ಥವಿಲ್ಲದ ಬರೆಹದ ಅಲಂಕಾರ ಮತ್ತು ಅರಬೆಸ್ಕುಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ 12ನೆಯ ಶತಮಾನದಿಂದ (ಲೋಹ, ಗಾಜು, ಮಡಕೆ, ವಾಸ್ತುಶಿಲ್, ಅಲಂಕಾರರಚನೆ, ಚಿತ್ರಣ ಮುಂತಾದವುಗಳಲ್ಲಿ) ಇಸ್ಲಾಮೀ ಕಲೆಯನ್ನು ಅನುಕರಿಸಲಾಯಿತು. ಇಂದಿಗೂ ಸ್ಪೇನ್, ಸಿಸಿಲಿ ಮುಂತಾದ ದೇಶಗಳಲ್ಲಿ ಪೂರ್ವ ಪ್ರದೇಶದ ಕಸಬುಗಾರರು ಅಲ್ಲಿಯೇ ಉಳಿದುಕೊಂಡು ತಮ್ಮ ಕಲಾಕೃತಿಗಳಿಗೆ ಇಸ್ಲಾಮೀ ಪಾರಿಭಾಷಿಕ ಪದಗಳನ್ನು ಉಪಯೋಗಿಸುತ್ತಾರೆ. ಸ್ಪೇನ್ ದೇಶದಲ್ಲಿ ಇಸ್ಲಾಂ ಸಂಪ್ರದಾಯದ ವಾಸ್ತುಶಿಲ್ಪದ ಅವಶೇಷಗಳು ಕಾರ್ಡೋವದಲ್ಲಿ ಗ್ರಾನಡ ಪ್ರಾಂತ್ಯದ ಅಲ್–ಹಮ್–ಬ್ರಾನಲ್ಲಿ ನೋಡಬಹುದು. ಜೆರೂಸಲೆಂ ಮತ್ತು ಮೆಕ್ಕಗಳಲ್ಲಿನ ಮಸೀದಿಗಳಿಗೆ ಅವು ಪ್ರಕೃತಿಗಳಾಗಿವೆ. ಅಲ್–ಹಮ್–ಬ್ರಾ ಕಟ್ಟಡ 786ರಲ್ಲಿ ಅಬ್–ಅಲ್ ರಾಜನಿಂದ ಪ್ರಾರಂಭಗೊಂಡು ಅವನ ವಂಶಿಕರಿಂದ ಪೂರ್ಣಗೊಂಡಿತು. ಅದು ಪಾಶ್ಚಾತ್ಯ ಕಬಾಷ್ ಎಂದು ಪ್ರಖ್ಯಾತಿ ಪಡೆಯಿತು. ಘನವಾದ 1,203 ಸ್ತಂಭಗಳನ್ನೊಳಗೊಂಡ ಅರಣ್ಯದಂತೆ ಕಾಣುವ ಈ ಮಸೀದಿಯಲ್ಲಿ ಕ್ರೈಸ್ತರ ಹಿತ್ತಾಳೆ ಗಂಟೆಗಳಿಂದ ರಚಿಸಲಾದ, ಒಂದು ಸಾವಿರ ಜ್ಯೋತಿಗಳನ್ನೊಳಗೊಂಡ ಒಂದು ಗುಚ್ಛವಿದೆ. ಉಮಾಯದ್ ಮಸೀದಿಗಳನ್ನು ಕಟ್ಟಿದ ಬೈಝಾಂಟೀಯನ್ ಕಲೆಗಾರರು ಇದನ್ನು ಅಲಂಕರಿಸಿದ್ದಾರೆ. ಗ್ರೀಕರ ಕಲೆ ಸಂಸ್ಕೃತಿಗಳ ಪ್ರಭಾವ ಇದರ ಗುಂಡಾದ ಕಂಬಗಳ ಮೇಲಿನ ಅಕ್ಯಾಂತಸ್ ಶೃಂಗಾರವನ್ನೊಳಗೊಂಡ ಚತುರರ್ಶರ ಬೋದಿಗೆಗಳಿಂದ ಸ್ಪಷ್ಟವಾಗುತ್ತದೆ. ಬಿಳಿ ಮತ್ತು ಕಪ್ಪು ಬಣ್ಣದ ಕಲ್ಲುಗಳಿಂದ ರೂಪಿಸಿದ ಅರ್ಧಚಂದ್ರಾಕಾರದ ಕಮಾನುಗಳನ್ನು ಈ ಬೋಧಿಗೆಗಳು ಧರಿಸಿವೆ. ಕಂಬಗಳಿಗೆ ಪಾದಗಳಿಲ್ಲ.

ಮಧುರವಾದ ಇಸ್‌ಫಾನೋ ಶೈಲಿನ ಶೃಂಗಾರದ ವೈಶಿಷ್ಟ್ಯ ಅಲ್–ಹಮ್–ಬ್ರಾ ವಾಸ್ತುಶಿಲ್ಪದಲ್ಲಿ ಹೇರಳವಾಗಿ ಕಂಡು ಬರುತ್ತದೆ. ಇಲ್ಲಿನ ಮೊಸಾಯಿಕ್ಸ್, ಸ್ಟಾ–ಲಕ್–ಟೈಟ್ಸ್ ಬರೆಹದ ಅಲಂಕಾರ ಪಕ್ಷಿ ಮೃಗಗಳನ್ನೊಳಗೊಂಡ ಲತಾ ವಿಧಾನದ ಸುರಳೀ ಶೃಂಗಾರವುಳ್ಳ ಸ್ತಂಭಗಳು ವಿವಿಧ ರೂಪಗಳನ್ನೊಳಗೊಂಡ ಬೋಧಿಗೆಗಳು–ಮುಂತಾದುವು ಅತ್ಯದ್ಭುತವಾಗಿದೆ. ಅದರ ಒಳಗಿನ ಅಲಂಕಾರ ಅಬ್–ಅಲ್–ಹಾಜ್ಜಾಜ್ ಕಾಲದಲ್ಲಿ (1333–54) ಪೂರ್ಣಗೊಂಡಿತೆಂದು ಗೋಡೆಗಳ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ. ಸಿಂಹಗಳ ಪ್ರಾಂಗಣದಲ್ಲಿ ಅಲ್ಲಿನ ಅತ್ಯುತ್ತಮ ಸೌಂದರ್ಯ ಕಂಡುಬರುತ್ತದೆ. ಅಲ್ಲಿ ಹನ್ನೆರಡು ಅಮೃತಶಿಲೆಯ ಸಿಂಹಗಳು ಗುಂಡಾಗಿ ನಿಂತು ಬಾಯಿಂದ ನೀರನ್ನು ಹೊರಸೂಸುತ್ತವೆ. ಈ ಪ್ರಾಂಗಣ ದೀರ್ಘ ಚತುರರ್ಶರವಾಗಿದ್ದು (126' x 66') 124 ಅಮೃತಶಿಲೆಯ ಕಂಬಗಳುಳ್ಳ ಭವನವಾಗಿದೆ. ಕಂಬಗಳ ಮೇಲೆ ತಗ್ಗಾದ ಕೈಸಾಲೆ ಇದೆ. ಇದರ ಮುಂಭಾಗದಲ್ಲಿನ ಭದ್ರಮಂಟಪ ಪ್ರಾಂಗಣದಲ್ಲಿ ಹೊರಟುಕೊಂಡು ಅದರ ಎರಡು ಪಾರ್ಶ್ವಗಳ ಕೊನೆಗಳಲ್ಲಿ ಅಲಂಕೃತ ಗೋಪುರಗಳಿವೆ. ಪ್ರಾಂಗಣದ ನೆಲಕ್ಕೆ ಬಣ್ಣಬಣ್ಣದ ಹೆಂಚುಗಳನ್ನು ಹಾಸಲಾಗಿದೆ. ಗೋಡೆಗಳ ಮೇಲೆ 5' ಎತ್ತರದ ವರೆಗೂ ಮೇಲೆ ಕೆಳಗೆ ನೀಲಿ ಮತ್ತು ಚಿನ್ನದ ಬಣ್ಣದ ವಜ್ರಾಗಾರೆಯ ರೇಖಾ ಚೌಕಟ್ಟಿನಲ್ಲಿ ಕೂಡಿಸಿದ ನೀಲಿ ಮತ್ತು ಹಳದಿ ಬಣ್ಣಗಳ ಹೆಂಚುಗಳನ್ನು ಅಂಟಿಸಲಾಗಿದೆ. ಸ್ತಂಭಗಳ ಮೇಲಿನ ಕಮಾನುಗಳೂ ಅವುಗಳ ಮೇಲಿನ ಲತಾವಿಧಾನದ ಅಲಂಕಾರವೂ ಅತಿ ಕೋಮಲವಾಗಿವೆ. ಕಮಾನುಗಳು ಮಧ್ಯಭಾಗದಲ್ಲಿ ಜರತಾರಿ ಕಸೂತಿಯಂತೆ ಕಾಣುವ ಚತುರಶ್ರ ಬಿಲ್ಲೆಯ ಕೆಳಗೆ ಮತ್ತೊಂದು ಅರಬೆಸ್ಕ್ ಮಾದರಿಯ ಚಿತ್ತಾರ ಕೂಡ ಇದೆ.

ನ್ಯಾಯಸ್ಥಾನದ ಪಡಸಾಲೆಯ ಒಳಮಾಳಿಗೆಯ ಚಿತ್ರಗಳು ತೊಗಲಿನ ಮೇಲೆ ರಚಿತವಾಗಿ ಮುಸಲ್ಮಾನರ ಶೌರ್ಯಸೂಚಕವಾದ ವಿವಿಧ ಬೇಟೆಯ ದೃಶ್ಯಗಳನ್ನು ಒಳಗೊಂಡಿವೆ. ಇಲ್ಲಿನ ಚಿತ್ರರಚನೆಯಲ್ಲಿ ಮೇಲ್ಮಟ್ಟದ ಬೈಝಾಂಟೀಯನ್ ಕಲೆಯ ಮುಖ್ಯಾಂಶಗಳು ವಿಶೇಷವಾಗಿ ಕಂಡುಬರುವುವು. ದೇಶವನ್ನಾಳಿದ ಹತ್ತು ರಾಜರು ವರ್ತುಲಾಕಾರದ ಪೀಠದಲ್ಲಿ ಕುಳಿತಿರುವ ಚಿತ್ರವಿದೆ. ಸ್ತಂಭಗಳು ಸುಂದರವಾದ ಲತಾವಿನ್ಯಾಸದಿಂದ ಶೋಭಿಸುತ್ತಿವೆ. ಇವುಗಳ ಮೇಲಿನ ಲಾಳದಾಕಾರವುಳ್ಳ ಕಮಾನುಗಳು ಇಸ್ಲಾಂ ಮತ ಹುಟ್ಟುವುದಕ್ಕೆ ಮುಂಚೆಯೇ ಭಾರತದಲ್ಲಿ (ಕೆನ್ಹೇರಿ, ಅಜಂತ, ಬಾಜಾ ಗುಹೆಗಳು) ಹೇರಳವಾಗಿದ್ದುವು.

ರಾಯಭಾರಿಗಳ ಪಡಸಾಲೆ ಚಚ್ಚೌಕವಾಗಿದೆ (37' x 37'). ಇದು ಇಸ್ಲಾಂ ಸುಲ್ತಾನ ಸಿಂಹಾಸನಾಧಿಷ್ಠನಾಗಿ ದೇಶೀಯ ರಾಯಭಾರಿಗಳಿಗೆ ದರ್ಶನ ಕೊಡುವ ಸ್ಥಳ. 1' ಎತ್ತರದ ವರ್ಣರಂಜಿತ ಹೆಂಚುಗಳನ್ನು ಗೋಡೆಗಳ ಸುತ್ತಲೂ ಹಾಸಿ ಅವುಗಳ ಮೇಲೆ ಹೂವು ಮತ್ತು ಎಲೆಗಳ ಮಧ್ಯದಲ್ಲಿ ಶೋಭಿಸುವ ಶಾಸನಗಳನ್ನೊಳಗೊಂಡ ವರ್ತುಲಾಕಾರದ ಪದಕಗಳನ್ನಿಟ್ಟಿದ್ದಾರೆ. 75' ಎತ್ತರ ಇರುವ ಪಡಸಾಲೆಯ ಗೋಪುರದ ಒಳಮಾಳಿಗೆ ನಕ್ಷತ್ರಗಳಿಂದ ತುಂಬಿ ತುಳುಕಾಡುವ ಆಕಾಶದಂತೆ ವಿನ್ಯಾಸಗೊಂಡಿದೆ. ರಾಯಭಾರಿಗಳ ಪಡಸಾಲೆಯಲ್ಲಿನ ಮೊಸಾಯಿಕ್, ಅರಬೆಸ್ಕ್ ಅಲಂಕಾರ ಭಾರತದಲ್ಲಿ ಅಕ್ಬರ್ ನಿರ್ಮಿಸಿದ ಫತೆಪುರ್ ಸಿಕ್ರಿ ಮುಂತಾದಕಡೆ ಮಾತ್ರ ಕಂಡು ಬರುತ್ತದೆ. ಸುಂದರವಾದ ಜೋಡಿಸಿದ ಮೊಸಾಯಿಕ್ ಹೆಂಚುಗಳ ವಿಧಾನ ಭಾರತದ ಲಾಹೋರ್ ಕೋಟೆಯ ಸೌಂದರ್ಯವನ್ನು ಹೋಲುತ್ತದೆ. ಅಲ್–ಹಮ್ರಾದ ಗಾಂಭೀರ್ಯ, ಅದರ ಒಳಮಾಳಿಗೆಯ ಕೆತ್ತನೆ, ಪಾರದರ್ಶಕ ಪರದೆಯಂತೆ ಕೋಮಲವಾಗಿ ಗಾರೆಯಿಂದ ಕೊರೆದ ಜರತಾರಿ, ಕಸೂತಿ ಕೆಲಸ, ಅತಿ ಉತ್ತಮವಾದ ಅಲಂಕಾರ ಮುಂತಾದವು ಅಲ್ಲಿನ ತಂಪುಗಾಳಿಯಷ್ಟು ನವುರಾಗಿದೆ.

ಸಿಸಿಲಿ ದ್ವೀಪದಲ್ಲಿ ಇಸ್ಲಾಂ ಕಲಾ ಅವಶೇಷಗಳು ಹೆಚ್ಚಾಗಿ ಇಲ್ಲ. ಆದರೆ ಅದು ನಾರ್ಮನ್ನರ ಆಡಳಿತಕ್ಕೆ ಬಂದ ಅನಂತರ ಅಲ್–ಹಮ್–ಬ್ರಾ ವೈಶಿಷ್ಟ್ಯವನ್ನು ನೆನಪಿಗೆ ತರುವ ಕಲಾಕೃತಿಗಳೂ ಕ್ರೈಸ್ತರ, ಗ್ರೀಕರ ಮತ್ತು ಚೀನಿಯರ ಸಂಸ್ಕೃತಿಗಳ ಮಿಶ್ರಣದವು ಕೆಲವೂ ಉಳಿದುಕೊಂಡಿವೆ. ಅವುಗಳ ಪೈಕಿ ಅತಿ ಮುಖ್ಯವಾದವು ಸುಲ್ತಾನ್ ಮತ್ತು ಅಮೀರ್ಗಳ ಅಂತಃಪುರಗಳಾದ ಲಾ–ಕ್ಯೂಬಾ ಮತ್ತು ಲಾ–ಬೀಜಾ. ಮೀನುಗಳು ಕ್ರೀಡಿಸುವ ಅಮೃತಶಿಲೆಯ ಕೊಳಗಳು, ಅವುಗಳ ಸುತ್ತಿನ ಕೋಮಲವಾದ ಅರಬೆಸ್ಕ್ ಕೆತ್ತನೆ, ಸ್ತಂಭಗಳ ಮೇಲಿನ ಅಡ್ಡಪಟ್ಟಿಗಳ ಶೃಂಗಾರ, ವಿಧವಿಧವಾದ ಗ್ರೀಕರ ಶೈಲಿಯಲ್ಲಿ ಅಲಂಕರಿಸಲಾದ ಬೋದಿಗೆಗಳು, ಹೊಳೆಯುವ ಅಮೃತಶಿಲೆಯ ಕಂಬಗಳು, ಜರತಾರಿ ಕಸೂತಿಯನ್ನು ಮೀರಿಸುವ, ಒಳಮಾಳಿಗೆಯಿಂದ ನೇತಾಡುವ, ನಯಗಾರೆಯಲ್ಲಿ ಕೊರೆದ ಜೇನುಗೂಡು

ಗಳು–ಮುಂತಾದವು ಹೇರಳವಾಗಿರುವುದಲ್ಲದೆ ವಿಸ್ಮಯಕರವಾಗಿವೆ. ಮಾರ್ಡೋಲ್ಸ್ ಎಂಬ ಸಿಹಿನೀರಿನ ಸರೋವರ ನಾರ್ಮನ್ ರಾಜರಿಗೆ ವಿಶ್ರಾಂತಿಸ್ಥಾನವಾಗಿತ್ತು. ಮುಸಲ್ಮಾನರ ವಾಸ್ತುಶಿಲ್ಪಕ್ಕೆ ಬೆರಗಾಗಿ ಅವರು ಪೆಲೆರ್ಮೊವನ್ನು ತಮ್ಮ ಮುಖ್ಯ ಪಟ್ಟಣವನ್ನಾಗಿ ಮಾಡಿಕೊಂಡರು. ಕ್ರೈಸ್ತರ, ಗ್ರೀಕರ, ಮುಸಲ್ಮಾನರ ಮತ್ತು ಇತರ ವರ್ಣೀಯರ ಸಂಕಟ ಅಲ್ಲಿ ಹೆಚ್ಚಾಗಿತ್ತು. ಈ ಪರಿಸ್ಥಿತಿಯಲ್ಲಿ ರಾಜ ರೋಜರ್ಸ್‌ನಿಂದ ನಿರ್ಮಿತವಾದ (1132) ಚಾಪೆಲ್–ರಿಯಲ್ ಹೆಸರಿನ ಸಣ್ಣ ದೇವಾಲಯ ಇಸ್ಲಾಮೀ ಕಲಾದೃಷ್ಟಿಯಲ್ಲಿ ಹೆಸರಾಗಿತ್ತು. ಇದರಲ್ಲಿನ ಸಂಕೀರ್ಣ ಜಾತಿಯ ಬೋದಿಗೆಗಳನ್ನೊಳಗೊಂಡ ಪ್ರಾಚೀನ ಸಂಸ್ಕೃತಿಯ ಕಂಬಗಳು, ಅಲ್–ಹಮ್–ಬ್ರಾ ರೀತಿಯ ಓಲಮಾಳಿಗೆ, ಮುಸಲ್ಮಾನರ ಶೈಲಿಯಲ್ಲಿ ಅಲಂಕರಿಸಿದ ಮೊನೆಯುಳ್ಳ ಅರ್ಧಚಂದ್ರಾಕಾರದ ಕಮಾನುಗಳು, ಚಿನ್ನದಿಂದ ಬಳಿದ ಗೋಡೆಗಳಲ್ಲಿನ ಅಮೃತಶಿಲೆಯ ಫಲಕಗಳು. ಚಿನ್ನದ ನೀರೆರೆದ ಗೋಪುರಗಳು–ಮುಂತಾದವು



ಹುಮಾಯೂನನ ಗೋರಿ ಸಂಕೀರ್ಣದ ಒಂದು ಭಾಗ

ರಮಣೀಯವಾಗಿವೆ. ಗೋಡೆಗಳ ಮೇಲೆ, ಗೋಪುರಗಳೊಳಗೆ ಕ್ರೈಸ್ತಧರ್ಮವನ್ನು ಸಾರುವ ಬೈಬಲ್ ದೃಶ್ಯಗಳು ಮೊಸಾಯಿಕ್ ಶ್ಲಾಘನೀಯವಾಗಿ ಚಿತ್ರಿತವಾಗಿವೆ. ಇದೇ ಉತ್ತಮವರ್ಗಕ್ಕೆ ಸೇರಿದ ಮತ್ತಿತರ ಕ್ರೈಸ್ತ ದೇವಾಲಯಗಳೆಂದರೆ ಲಾ–ಮೊರ್ಟೋರನ, ಪೆಲೆರ್ಮೊ ಕತೀಡ್ರಲ್ (1300–1426) ಮತ್ತು ಮ್ಯಾನ್‌ರಿಯಲ್ ಕತೀಡ್ರಲ್ (1186).

ಸತ್ತವರನ್ನು ಪೆಲೆರ್ಮೊ ದೇವಾಲಯದ ನೆಲಮಾಳಿಗೆಯಲ್ಲಿ ಸಮಾಧಿ ಮಾಡುತ್ತಿದ್ದರು. ಇದು ಗ್ರೀಕರ ಅಲಂಕಾರಯುತವಾದ ಸ್ಥೂಲ ಸ್ತಂಭಗಳ ಮೇಲೆ ನಡುನಡುವೆ ಹಾಯುವ ಕಮಾನುಗಳನ್ನೊಳಗೊಂಡ ಗಂಭೀರವಾದ ಕಟ್ಟಡ. ಒಳಗೆ ಹೋದಲ್ಲಿ ಅಲ್ಲಿನ ಚಿನ್ನ ಮತ್ತು ಮೊಸಾಯಿಕ್ ಕಲೆಗಳಿಂದ ಅಲಂಕರಿಸಿದ ಗೋಡೆ ಮುಂತಾದುವು ವಿಸ್ಮಯಕಾರಕ ವಾಗಿವೆ. ಇಲ್ಲಿ ಕೂಡ ಮೇಲ್ಕಂಡ ಸಂಕೀರ್ಣ ಜಾತಿಯ ಕಲೆ ಕಂಡುಬರುತ್ತದೆ. ಇದರ ಮಠದಲ್ಲಿ (ಕ್ಲಾಯಿಸ್ಟರ್) ಕೂಡ ಸಂಕೀರ್ಣ ಜಾತಿಯ ವಾಸ್ತುಶಿಲ್ಪವಿದೆ. ಇಲ್ಲಿನ ಸ್ತಂಭಗಳು ಒಂದನ್ನು ಮತ್ತೊಂದು ರೂಪದಲ್ಲಾಗಲಿ ಅಥವಾ ಶೃಂಗಾರದಲ್ಲಾಗಲಿ ಹೋಲುವುದಿಲ್ಲ. ಅತ್ಯಂತ ಕುಶಲತೆಯಿಂದ ಸಾಧಿಸಿದ ಇಲ್ಲಿನ ಲಲಿತಾಲಂಕಾರ ಆಶ್ಚರ್ಯವನ್ನುಂಟುಮಾಡುತ್ತದೆ. ಒಂದು ಕಡೆ ಭಾರತ ಸಂಪ್ರದಾಯದ, ಅಮೃತಶಿಲೆಯಲ್ಲಿ ಕೊರೆದ, ಅರಳುವ ಪದ್ಮ, ಅದರ ಮಧ್ಯದಲ್ಲಿ ನಾರ್ಮನ್ ಶೈಲಿಯಲ್ಲಿ ಕೆತ್ತಿರುವ ವಕ್ರಾಲಂಕಾರ ಸ್ತಂಭೀಯುತ ಗರ್ಭ ಕೇಸರ, ಅದರ ಮೇಲಿನ ಇಸ್ಲಾಂ ರೀತಿಯ ಗುಂಡಾಕಾರದ ತುದಿ, ಮತ್ತೊಂದು ಕಡೆ ಚಿತ್ರವಿಚಿತ್ರವಾದ ಶೃಂಗಾರದಲ್ಲಿ ಒಂದನ್ನು ಮತ್ತೊಂದು ಹೋಲದೇ ಇರುವ ಬೋದಿಗೆಗಳು–ಇವೆಲ್ಲವೂ ಇಸ್ಲಾಂ ಸಂಕೀರ್ಣ ಜಾತಿಯ ಕಲಾ ವೈಶಿಷ್ಟ್ಯಕ್ಕೆ ಕೌಶಲಕ್ಕೆ ಉನ್ನತಮಟ್ಟದ ನಿದರ್ಶನಗಳು. ಪೆಲೆರ್ಮೊ ಪ್ರಾಂತ್ಯದಲ್ಲಿ ಮನೋರಂಜನೆಯ ಅಥವಾ ವಿಶ್ರಾಂತಿಗಾಗಿ ನಿರ್ಮಿಸಿದ ಭವನಗಳು ಸಹ ಇಸ್ಲಾಮೀ ಕಲೆಯನ್ನು ಸಾರುತ್ತವೆ. ಪೆಲಗೋನಿಯ ಯುವರಾಜ ನಿರ್ಮಿಸಿದವುಗಳಲ್ಲಿ ಮನುಷ್ಯ, ಪಶು ಮತ್ತು ಇತರ ಸಂಕೀರ್ಣ ರೂಪಗಳ ಉತ್ಕೃಷ್ಟ ವಿವರಣೆ ಕಂಡುಬರುತ್ತದೆ. ಗೋಡೆಗಳೆಲ್ಲ ಕನ್ನಡಿಗಳಿಂದ ಕೂಡಿದ್ದು ಮಹಾಭಾರತದಲ್ಲಿನ ರಾಜಸೂಯಯಾಗದ ಮಯನಿರ್ಮಿತ ಮಂಟಪವನ್ನು ನೆನಪಿಗೆ ತರುತ್ತದೆ. ಇದರಲ್ಲಿನ ಕಳ್ಳ ಬಾಗಿಲುಗಳು, ವನವಾಸಿಗಳ ಮತ್ತು ಕ್ರೈಸ್ತರ ಪ್ರತಿಮೆಗಳು ಅದ್ಭುತವಾಗಿವೆ. ಈ ಭವನಗಳು ಬಾಬರ್, ಮತ್ತು ಜಹಾಂಗೀರ್ ಭಾರತದಲ್ಲಿ ನಿರ್ಮಿಸಿದ ಉದ್ಯಾನವನಗಳ ರೀತಿಯ ಉಪವನಗಳ ಮಧ್ಯೆ ಇದ್ದವೆಂದು ಸಿಸಿಲಿ ದೇಶದ ಚರಿತ್ರಕಾರರು ತಿಳಿಸುತ್ತಾರೆ.

ವಾಸ್ತು ಶಿಲ್ಪದಲ್ಲಿ ಪರ್ಷಿಯ ಅಂಥ ಘನತೆಯನ್ನು ಸಾಧಿಸಲಿಲ್ಲವಾದರೂ ಚಿತ್ರ ಕಲೆಯಲ್ಲಿ ಮಾತ್ರ ಉನ್ನತಮಟ್ಟದ ಸೊಬಗನ್ನು ಗಳಿಸಿತು. ಪಾರಸಿಕರಲ್ಲಿ ಅಸ್ಸಿರಿಯ ಮತ್ತು ಬ್ಯಾಬಿಲೋನಿಯ ಸಂಸ್ಕೃತಿಗಳ ಸಂಯೋಗ ಕಾಣುತ್ತದೆ. ಇಲ್ಲಿನ ಇಸ್ಲಾಮೀ ಕಲೆಯ ಚರಿತ್ರೆ ಎರಡನೆಯ ಸಸೇನಿಯನ್ನರ ಆಡಳಿತದಿಂದ (226–652) ಪ್ರಾರಂಭವಾಯಿತು. ಅದು ವೀರರ ಯುಗ. ಆದಕಾರಣ ಅರ್ತಷೀರ್, ಪಾಪೂರ್, ಬಹ್ರಾಮ್‌ಗೂರ್ ಮುಂತಾದ ವೀರರ ಚರಿತ್ರೆಗಳನ್ನೊಳಗೊಂಡ ಚಿತ್ರರಂಜನೆ ಇದೆ. ಯುದ್ಧದ ಸಂಘಟನೆಗಳು, ಬೇಟೆಯ ದೃಶ್ಯಗಳು, ಮತ್ತು ವನ ನಿರ್ಮಾಣಗಳು ಅಲ್ಲಿ ವರ್ಣಿತವಾಗಿವೆ. ಸಸ್ಸಾನಿಯನ್ನರ ಆಡಳಿತದಲ್ಲಿ ರೂಪರಚನೆ ಕಟುವಾಗಿಯೂ ಬಲಯುತವಾಗಿಯೂ ಇತ್ತು; ಮುಖ ಚಿತ್ರಣ ಸುಧಾರಿಸಿದ್ದರೂ ಶೈಲಿ ಪ್ರಾಚೀನವೇ. ಸಸೇನಿಯನ್ನರ ಕಾಲದಲ್ಲಿ ಮೆನಿಕಿಯನ್ಸ್ ಎಂಬ ಹೆಸರಿನ ಒಂದು ಮತ ಹುಟ್ಟಿತು. ಇದು ಕ್ರೈಸ್ತ ಬೌದ್ಧ ಪಾರಸಿಕ ಮತಗಳ ಸಂಯೋಗ. ಈ ಮತ ಪರ್ಷಿಯದ ಚಿತ್ರ ಕಲೆಯ ಮೇಲೆ ಗಮನಾರ್ಹವಾದ ಪರಿಣಾಮವನ್ನುಂಟುಮಾಡಿತು. ಫಿರ್ದೌಸಿ ನುಡಿದಂತೆ ಮಣಿ ಉತ್ತಮ ದರ್ಜೆಯ ಚಿತ್ರಕಾರ. ಅವನ ಪಂಥದವರ ಪ್ರಖ್ಯಾತ ಕಲಾ ಸೂತ್ರಗಳು ಮುಂದಿನ ಇಸ್ಲಾಮೀ ಕಲೆಯ ಮೇಲೆ ಹೆಚ್ಚಾದ ಪ್ರಭಾವ ಬೀರಿದುವು. ಸಸೇನಿಯನ್ನರ ಹಿಂಸೆಯಿಂದ ಚೀನಕ್ಕೆ ವಲಸೆ ಹೋದ ಕೆಲವರು 271ರಲ್ಲಿ ಪ್ರಸಿದ್ಧವಾದ ಹಸ್ತಲಿಖಿತ ಪುಸ್ತಕದ ಸೂಕ್ಷ್ಮ ಚಿತ್ರಗಳನ್ನು ರಚಿಸಿದರು.

ಪರ್ಷಿಯದ ಇಸ್ಲಾಮೀ ಕಲೆಯ ಚರಿತ್ರೆಯಲ್ಲಿ ಎರಡು ಮುಖ್ಯ ಯುಗಗಳನ್ನು ಗುರುತಿಸಬಹುದು: 1 ಉಮಾಯದ್ ಸುಲ್ತಾನರ ಯುಗ (661–750), ಅಬ್ಬಾಸಿದ್ದ ಸುಲ್ತಾನರ ಯುಗ (750–1258). ಮೊದಲ ಯುಗದಲ್ಲಿ ಮಹಮ್ಮದ್ ಪ್ರಚಾರ ಮಾಡಿದ ನಿರ್ಬಂಧಗಳನ್ನು ಕಲೆಯಲ್ಲಿ ಅನುಸರಿಸಲಾಯಿತು. ಆದಕಾರಣ ಕೇವಲ ಕಲ್ಪನಾರೂಪದ (ಅಬ್‌ಸ್ಟ್ರಾಕ್ಟ್) ಅಲಂಕಾರ ಶೈಲಿ ಮಾತ್ರ ಕಂಡುಬರುತ್ತದೆ. ಸೂಕ್ಷ್ಮ ಚಿತ್ರಗಳನ್ನೊಳಗೊಂಡ ಹಸ್ತಲಿಖಿತ ಪುಸ್ತಕಾಲಂಕಾರಕ್ಕೆ ಹೆಚ್ಚು ಮನ್ನಣೆ ಇತ್ತು. ಪ್ರಾರಂಭದಲ್ಲಿ ಲಿಪಿ ಸಂಬಂಧವಾದ ವಿಧಾನದಲ್ಲಿ ರೂಪ ರಚನೆ ಸಾಗಿತು. ಕೆಲವು ಕಾಲಾನಂತರ ಮನುಷ್ಯ ಪಶು ಪಕ್ಷಿ ರೂಪಗಳನ್ನೂ ಸೇರಿಸಲಾಯಿತು. ರೆಕ್ಕೆಗಳುಳ್ಳ ಕುದುರೆಯ ಮೇಲೆ ಮಹಮ್ಮದ್ ಸ್ವರ್ಗಕ್ಕೆ ಹಾರುತ್ತಿರುವ ಚಿತ್ರ ರಚಿತವಾಯಿತು. ನಯಗಾರೆಯ ಮೇಲಿನ ಚಿತ್ರಣ (ಫ್ರೆಸ್ಕೋ). ಮೊಸಾಯಿಕ್ ರಚನೆಗಳು ಉಮಾಯದ್ ಆಡಳಿತದಲ್ಲಿ (8ನೆಯ ಶತಮಾನ) ಟ್ರಾನ್ಸ್–ಜೋರ್ಡನ್, ಜೆರೂಸಲೆಂ, ಪ್ಯಾಲಿಸ್ಟೈನ್ ಪ್ರದೇಶಗಳಲ್ಲಿ ವಿಪುಲವಾಗಿ ಹುಟ್ಟಿದುವು. ಆದರೆ ಚಿತ್ರಕಲೆ ಷಿಯ ಪಂಗಡಕ್ಕೆ ಸೇರಿದ ಅಬ್ಬಾಸಿದ್ ರಾಜರ ಕಾಲದಲ್ಲಿ ಮಾತ್ರ ಔನ್ನತ್ಯ ಪಡೆಯಿತು. ಈ ಶೈಲಿಯನ್ನು ಮೆಸೊಪೊಟೇಮಿಯ ಸಂಪ್ರದಾಯವೆಂದು ಕರೆಯುತ್ತಾರೆ. ಹಾರೂನ್–ಅಲ್–ರಷೀದನ ಕಾಲದಲ್ಲಿ (786–809) ಹಸ್ತಪ್ರತಿಗಳ ಅಲಂಕಾರ ಅತ್ಯುತ್ತಮ ಮಟ್ಟಕ್ಕೆ ಏರಿತು. ಸುಲ್ತಾನ್ ಮಹಮ್ಮದನ ಕಾಲದಲ್ಲಿ ಫರ್ದೌಸಿಯಿಂದ (1310) ರಚಿತವಾದ ಷಾ ನಾಮ ಹಸ್ತಲಿಖಿತ ಪುಸ್ತಕದಲ್ಲಿ ಚಿತ್ರರಚನೆ ಮತ್ತಷ್ಟು ರಮ್ಯತೆ ಪಡೆಯಿತು. ಇದೇ ರೀತಿಯ ಚಿತ್ರಣ ಸಂಸ್ಕೃತ ಹಿತೋಪದೇಶದ ಅನುವಾದ ಮತ್ತು ಇಬ್ನುಲ್–ಮುಖೊಫ ರಚಿಸಿದ ಕಲಿಲ–ವ–ದಿಮ್ನಗಳಲ್ಲೂ (760) ಫಣ್ಣವೀಡ್ತು, ಶಮನೀಡ್ರು (900–1229) ಮತ್ತು ಸೆಲ್‌ಜೂಕರ ಕಾಲದ ಅನೇಕ ಕೃತಿಗಳಲ್ಲೂ ದೊರೆಯುತ್ತವೆ. ಮಂಗೋಲ್ ವಂಶದ ಇಲ್–ಖಾನ್ ಮನೆತನದವರು (1220–1335) ಪರ್ಷಿಯವನ್ನು ಗೆದ್ದ ಅನಂತರ ಚಿತ್ರರಚನೆಯಲ್ಲಿ ಮಂಗೋಲಾಯಿಡ್ ಮುಖವನ್ನು ಉಡುಪುಗಳನ್ನು ಹೊಸ ಜಾತಿಯ ಕುದುರೆಗಳ ರೂಪಗಳನ್ನು ಮತ್ತು ಮುಖ್ಯವಾಗಿ ಚೀನಿಯರ ಕಲಾಸಂಸ್ಕೃತಿಯನ್ನು ಪರ್ಷಿಯದ ಕಲೆಗೆ ಕಾಣಿಕೆಯಾಗಿ ನೀಡಿದರು. ಸೂಕ್ಷ್ಮ ಚಿತ್ರಗಳು ಮತ್ತೊಮ್ಮೆ ಕಲ್ಪನಾಶೈಲಿಯೊಡನೆ ತಲೆದೋರಿದುವು. ಅದಲ್ಲದೆ ಸೂಕ್ಷ್ಮಾಕೃತಿಗಳ ಶೈಲಿ ಪರಿಪೂರ್ಣತೆ ಪಡೆಯಿತು. ಉದಾಹರಣೆ: ಇಬಲ್–ಭಕ್ತಿಷು (1205) ಬರೆದ ನೈಸರ್ಗಿಕ ಚರಿತ್ರೆಯಲ್ಲಿನ ಚಿತ್ರಗಳು ಮತ್ತು ರಶೀದ್–ಅದ್–ದೀನ್ ರಚಿಸಿದ ಪ್ರಪಂಚ ಚರಿತ್ರೆಯ (1247–1318) ಚಿತ್ರಗಳು. ಮೊದಲನೆಯದು ಬಿದ್–ಪೈನ್ ಜಾನವಾರದ ಕಥನವನ್ನು ಹೋಲುತ್ತ ಕ್ರೈಸ್ತರ, ಬೌದ್ಧರ, ಮುಸಲ್ಮಾನರ ಆಧ್ಯಾತ್ಮತತ್ತ್ವವನ್ನು ಸಾರುತ್ತದೆ. ಉತ್ತಮದರ್ಜೆಯ ಚೀನೀ ಕಲೆಯೇ ಶ್ರೇಷ್ಠವಾದುದೆಂದು ಭಾವಿಸಿ, ಎರಡನೆಯದರಲ್ಲಿನ ಚಿತ್ರಗಳಿಗೆ, ಹೆಚ್ಚಾದ ಸನ್ಮಾನವನ್ನು ನೀಡುತ್ತಿದ್ದರು ಈ ಸೂಕ್ಷ್ಮ ಚಿತ್ರಗಳಲ್ಲಿ ವಿಷಯಾಂಶ ಮುಖ್ಯ. ಆದರೆ ರೇಖಾವಿನ್ಯಾಸದಲ್ಲಿ ಕೋಮಲತೆಯಿದ್ದರೂ ಆಕೃತಿರೇಖೆಯಲ್ಲಿ ಬೈಜಾಂಟೀಯನ್‌ನಿಂದ ಅಬ್ಬಾಸಿದ್ದರು ಅನುಕರಿಸಿದ ಶೈಲಿಯ ಕಟುತ್ವ ಬಿಕ್ಕಟ್ಟು ಇದ್ದುವು. ಭಾವಪ್ರದರ್ಶನದಲ್ಲಿ ಮಾತ್ರ ಮೇಲ್ಮಟ್ಟವನ್ನು ಸಾಧಿಸಲಾಗಿತ್ತು. ಮುಖಗಳು, ಮುಖವಾಡಗಳಂತೆ, ನಿರ್ಜೀವವಾಗಿದ್ದರೂ ಅವುಗಳ ಅಭಿನಯದ ಭಂಗಿಗಳು ಜೀವಕಳೆಯನ್ನು ಹೊಂದಿದ್ದುವು. ಲಿಪಿಸಂಬಂಧವಾದ ಅಲಂಕಾರದ ಮಧ್ಯದಲ್ಲಿ ಇಡಲಾದ ಈ ರೂಪಗಳ ಸೌಂದರ್ಯ ಮನೋಹರವಾಗಿತ್ತು. ಫಿರ್ದೌಸಿಯ ಷಾ ನಾಮ ಇದೇ ಕಾಲದ್ದು.

ಅನಂತರ ಬಂದ ತೈಮುರಿದರ್‌ರ ಕಾಲದಲ್ಲಿ (1309–1509) ಈ ರೂಪಚಿತ್ರಣ ಲಿಪಿ ಸಂಬಂಧವಾದ ಅಲಂಕಾರದ ಹಿನ್ನಲೆಯಿಂದ ಪ್ರತ್ಯೇಕಿಸಲ್ಪಟ್ಟು ಎರಡನೆಯ ಮಂಗೋಲರ ದಾಳಿಯ (1381–1392) ಕಾಲದಲ್ಲಿ ಹೊಸ ಮಾಧುರ್ಯ ಪಡೆಯಿತು. ಬರಹದ ಹಿನ್ನಲೆ ಕೊನೆಗಂಡು ಪ್ರಕೃರತಿ ಚಿತ್ರಣದ ಹಿನ್ನೆಲೆಯಲ್ಲಿ ರೂಪಚಿತ್ರಣ ಹೊಸ ಸೂಕ್ಷ್ಮತೆಯನ್ನೂ ರಮ್ಯತೆಯನ್ನೂ ಹೊಂದಿ ಬೆಳೆಯಿತು. ಪ್ರಕೃತಿ ಸೌಂದರ್ಯ ಚಿತ್ರಣಕ್ಕೆ ಮಾನ್ಯತೆ ದೊರೆತದ್ದು ಈಗಲೇ. ಈ ಚಿತ್ರಗಳಲ್ಲಿ ವೈವಿಧ್ಯವಿತ್ತು. ಸೂಕ್ಷ್ಮ ವಿವರಣೆಯಿತ್ತು. ಲಾಲಿತ್ಯವಿತ್ತು. ಚೀನಿಯರ ಮಿಂಗ್ ಕಾಲದ ನಕ್ಷೆಗಳು. ಪುಷ್ಪಭರಿತವಾದ ಗಿಡಗಳು–ಪ್ರತಿ ಚಿತ್ರದಲ್ಲಿಯೂ ಕಂಡುಬಂದುವು. ಆದರೆ ಸ್ವಲ್ಪ ಕಾಲಾನಂತರ ಪರ್ಷಿಯನ್ನರು ತಮ್ಮ ಸ್ವಾಭಾವಿಕ ಸೌಂದರ್ಯ ಪ್ರಜ್ಞೆಯನ್ನು ಮತ್ತೊಮ್ಮೆ ಪಡೆದು ತಮ್ಮ ಉದ್ದೇಶಗಳಿಗೆ ಅನುಗುಣವಾದ ಮೇಲ್ಮಟ್ಟದ ಅಲಂಕಾರಕ್ಕೆ ತೆರಳಿ, ಚೀನಿ ಕಲೆಯ ಆಧ್ಯಾತ್ಮಿಕ ದೃಷ್ಟಿಯಿಂದ ಪಾರಾದರು. ತೈಮೂರ್ ಒಂದು ಅಚ್ಚುಕಟ್ಟಿನಲ್ಲಿ ಮಾತ್ರ ಸ್ವೇಚ್ಛೆಯನ್ನು ಪ್ರೋತ್ಸಾಹಿಸಿದರೆ, ಅವನ ಮಗನಾದ ಷಾ–ರುಖ್ (1404–1447) ತಂದೆಯ ನಿರ್ಬಂಧಗಳನ್ನು ಸಡಿಲಿಸಿದ, ಇವನ ಕಾಲದಲ್ಲಿನ ಅತ್ಯುತ್ತಮವಾದ ಹಸ್ತಲಿಖಿತ ಸೂಕ್ಷ್ಮಚಿತ್ರಗಳ ಪುಸ್ತಕಗಳು ಎಂದರೆ ಚಂಗೀಸ್ ಖಾನನ ದಿಗ್ವಿಜಯವನ್ನು (1167–1227) ಚಿತ್ರಿಸುವ ಕಾವ್ಯಸಂಗ್ರಹ, ಕಾರ್ಮಾನ್–ಖಾಜು ಕವಿಯ 43 ಕವನಗಳ



ಘಿಯಾಸುದ್ದೀನ್ ತುಗಲಕ್‌ನ ಸಮಾಧಿ, ದೆಹಲಿ

ಸಂಗ್ರಹ (1281–1350). ಈ ಎರಡರಲ್ಲಿ ವಿನಿಯೋಗಿಸಿದ ಬಣ್ಣಗಳಲ್ಲಿ ಚಿನ್ನದ ನೀರು ಮತ್ತು ಟಾರ್ಕ್ವಾಯಿಸ್ ಪ್ರಾಧಾನ್ಯ ಹೊಂದಿದೆ. ತೈಮೂರ್ ಸುಲ್ತಾನನ ಮೊಮ್ಮಗನಾದ ಸುಲ್ತಾನ್ ಇಸ್ಕಾನ್ ಸಂಗ್ರಹಿಸಿದ ಕವನಗಳ ಹಸ್ತಲಿಪಿಗಳಲ್ಲಿ ಲೈಲಾ–ಮಜನೂ ಪ್ರೇಮದ ಘಟ್ಟವೂ ಮಂಗೋಲರ ಚರಿತ್ರೆಯೂ ಇವೆ. ಸುಲ್ತಾನ್ ಷಾ–ರುಖ್ ಆಡಳಿತದಲ್ಲಿ ರಾಜಧಾನಿ ಹೀರತ್‌ಗೆ ಬದಲಾವಣೆಯಾದುದರಿಂದ ಈ ಕಲಾ ಸಂಪ್ರದಾಯಕ್ಕೆ ಹೀರತ್ ಶೈಲಿ ಎಂದು ಹೆಸರಾಯಿತು. ಈ ಕಾಲದಲ್ಲಿ (1404–1447) ಸೂಕ್ಷ್ಮ ರೂಪರಚನೆ ಔನ್ನತ್ಯ ಹೊಂದಿತು. ವಿಶ್ವವಿಖ್ಯಾತ ಕಲೆಗಾರನಾದ ಬಿಜ್ಜದ್ ಈ ಯುಗಕ್ಕೆ ಸೇರಿದವ. ಅಲಂಕಾರವನ್ನು ವಿರಳವಾಗಿಸಿದ್ದೇ ಇವರ ವೈಶಿಷ್ಟ್ಯ.

ಸಫವಿದ್ ಯುಗದಲ್ಲಿ (1502–1756) ಸೂಕ್ಷ್ಮಚಿತ್ರರಚನೆ ಮತ್ತಷ್ಟು ಮೇಲ್ಮಟ್ಟಕ್ಕೇರಿತು. ಬಿಜ್ಜದ್ ಶೈಲಿ ಹರಡಿತು. ಮೂಲಪುರುಷನಾದ ಇಸ್ಮಾಯೀಲ್‌ನ ರಾಜಧಾನಿಯಾದ ಟೈಬ್ರಿಜ್‌ನಲ್ಲಿ ಅಸಂಖ್ಯಾತ ಬರೆಹಗಾರರೂ, ಕಲೆಗಾರರೂ, ರಾಜ ಪೋಷಣೆಯಲ್ಲಿ ಪಾಲ್ಗೊಂಡರು. ಅವರಲ್ಲಿ ಮಿರಾಕ್, ಕಾಸಿಂಆಲಿ, ಸುಲ್ತಾನ್ ಮಹಮ್ಮದ್ ಮುಂತಾದವರಿದ್ದರು. ಇವರಲ್ಲಿ ಅಗ್ರಸ್ಥಾನ ಪಡೆದಿದ್ದ ಸುಲ್ತಾನ್ ಮಹಮ್ಮದ್ ಸೂಕ್ಷ್ಮಚಿತ್ರರಚನೆಯಲ್ಲೂ ಹಸ್ತಲಿಖಿತ ಪುಸ್ತಕಾಲಂಕಾರದಲ್ಲೂ ಹಳೆಯ ಸಂಪ್ರದಾಯವನ್ನೇ ಅನುಸರಿಸಿದ. ಆತ ಮೀರ್ ಸೈಯದ್ ಆಲಿ ನೈಜಜಾಮಿಯ ಕವನಗಳನ್ನು ಸುಂದರವಾಗಿ ಚಿತ್ರಿಸಿದ್ದಾನೆ. ಸಹ–ಇಡ್ರ ಕಾಲದಲ್ಲಿ ಭಾವಚಿತ್ರಗಳಿಗೆ ಹೆಚ್ಚಾದ ಪ್ರಾಧಾನ್ಯ ದೊರಕಿತು. ಸ್ಪಷ್ಟವಾದ ರೇಖಾ ವಿನ್ಯಾಸದ ಆವರಣದಲ್ಲಿ ಬಣ್ಣ ತುಂಬಿದ ರೂಪಗಳು ಪ್ರಚಾರಕ್ಕೆ ಬಂದುವು. ಈ ಯುಗದಲ್ಲಿ ಅಸಂಪೂರ್ಣ ಸೂಕ್ಷ್ಮಚಿತ್ರಣ, ಮುಖ್ಯಾಂಶಗಳನ್ನು ಮಾತ್ರ ಎತ್ತಿ ತೋರುವ ಉದ್ದೇಶದಿಂದ ಮೊದಲನೆಯ ಬಾರಿ ಚಿತ್ರಿತವಾದವು. ರಿಜ಼ಾ–ಅಬ್ಬಾಸಿ ಉತ್ತಮ ದರ್ಜೆಯ ಭಾವಚಿತ್ರಗಳನ್ನೂ ಸಾಮಾನ್ಯ ಜೀವನದ ದೃಶ್ಯಗಳನ್ನೂ ಚಿತ್ರಿಸಿದ. ಖುಸ್ರಾ ಮತ್ತು ಷಿರಿನ ಹಸ್ತಲಿಖಿತ ಪ್ರತಿಯನ್ನು ಕೂಡ (16–17) ಬಣ್ಣಿಸಿರುತ್ತಾನೆ. ಇವನ ಅನಂತರ ಸೂಕ್ಷ್ಮ ಚಿತ್ರಣ ಯೂರೋಪಿಯನ್ನರ ಪ್ರಭಾವದಿಂದ ಕ್ಷೀಣಿಸಿತು. ಆದರೆ, ಸುಸಂಸ್ಕೃತಿ ಹೊಂದಿದ ಪಾರಸೀ ಕಲಾವಿದರು ಪಾಶ್ಚಾತ್ಯ ಆವರಣವನ್ನು ಮಾತ್ರ ಅನುಕರಿಸಿಕೊಂಡು ತಮ್ಮ ರೂಪಚಿತ್ರಣದಲ್ಲಿ ಹಿಂದಿನ ಸಂಪ್ರದಾಯವನ್ನೇ ಮುಂದೂ ಹರಡಿದರು. ಸಾಮಾನ್ಯರು ಕಾಂಚನಕಾಂಕ್ಷೆಯಿಂದ ಅಧಮ ದರ್ಜೆಯ ಕಲಾಕೃತಿಗಳ ರಚನೆಯಲ್ಲಿ ಲೀನವಾದರು. ಇದಕ್ಕೆ ಮೀರ್–ಆಫ್ಜಲ್‌ನ ಚಿತ್ರಗಳು ಉದಾಹರಣೆಗಳಾಗಿವೆ.

19ನೆಯ ಶತಮಾನದಲ್ಲಿ ಮೆರುಗೆಣ್ಣೆ (ಲ್ಯಾಕರ್) ಚಿತ್ರಗಳು ಮುಂದುವರಿದುವು. ಪರಿಣಾಮವಾಗಿ ಪುಸ್ತಕಗಳ ಹೊದಿಕೆಯ ಅಲಂಕಾರ, ಪೆಟ್ಟಿಗೆ, ಸಂಪುಟ ಮತ್ತು ಗೃಹೋಪಕರಣಗಳ ಶೃಂಗಾರ ಹೆಚ್ಚಿತು. ಭಾರತ ಕಲಾ ಸಂಸ್ಕೃತಿಯ ಸಂಪರ್ಕದಿಂದ ಪರಿಣಮಿಸಿದ ಇಸ್ಲಾಂ ಕಲೆ ಮತ್ತಷ್ಟು ವೈಶಿಷ್ಟ್ಯಗಳಿಸಿತು.

ಈಜಿಪ್ಟ್ ಕಲಾಚರಿತ್ರೆಯಲ್ಲಿ ಇಸ್ಲಾಮಿನ ಕಾಣಿಕೆ ಪ್ರಶಂಸನೀಯವಾಗಿದೆ. 1200ರಲ್ಲಿ ಐಬಾಕಿನಿಂದ ಸ್ಥಾಪಿತವಾದ ಮಾಲೂಕ್ ಸುಲ್ತಾನರ ಆಡಳಿತದಲ್ಲಿ ನಿರ್ಮಾತವಾದ ವಾಸ್ತುಶಿಲ್ಪ ಉನ್ನತಮಟ್ಟದ್ದು. ತುರ್ಕರ ಮತ್ತು ಮಂಗೋಲರ ಸಮ್ಮಿಳಿತದ ಮೊದಲ ಬಾಹ್ರೀ ವಂಶ 1250–1390ರ ವರೆಗೂ ಆಡಳಿತ ನಡೆಸಿತು. ಸುಲ್ತಾನ್–ಅಲ್–ಹಸನ್ ಮಸೀದಿ (1362) 19ನೆಯ ಕಲೀಫ್ ಅಲ್–ಹಸನ್ ಕಾಲದಲ್ಲಿ (1347–61) ನಿರ್ಮಾಣಗೊಂಡಿತು. ಅದರ ರಮ್ಯ, ಭವ್ಯ, ಅಲಂಕರಣಗಳು ಕಲಾಪ್ರಪಂಚಕ್ಕೆ ಅದು ನೀಡಿದ ಕಾಣಿಕೆಯಾಗಿವೆ. ಅದು ಶಿಲುಬೆಯಾಕಾರದ ಮದ್ರಸಾ ಮಿಳಿತವಾದ ಮಸೀದಿ. ಸರ್‌ಕೇಷಿಯ ಪರಂಪರೆ (1382–1517)– ನಿರ್ಮಿಸಿದ ಮಸೀದಿಗಳನ್ನು ಎರಡನೆಯ ಬುರ್ಜೀ ವಂಶದ ಸುಲ್ತಾನರು ಪರಿಪೂರ್ಣತೆಗೆ ತಂದರು. ಹಿಂದಿನ ಗೋಪುರಗಳಂತೆ ಇವರ ಗೋಪುರಗಳು ಸಹ ಹಗುರವಾಗಿಯೂ ಅವುಗಳ ಹೊರಮೇರೆ ಲಘುವಾಗಿಯೂ ಅಲಂಕಾರ ಮತ್ತಿಷ್ಟು ಸೌಂದರ್ಯದಿಂದ ಕೂಡಿಯೂ ಮುಂದುವರಿಯಿತು. ಕಲ್ಲುಕಟ್ಟಡದ ವಿಧಾನದಲ್ಲಿ, ಮುಖ್ಯವಾಗಿ ಕಮಾನುಗಳ ರಚನೆಯಲ್ಲಿ, ಬಿಳಿ ಕಪ್ಪು ಪಟ್ಟಿಗಳ ಪ್ರಾಧಾನ್ಯ ಹೆಚ್ಚಿತು. ರೇಖಾಗಣಿತ ನಕ್ಷೆಗಳ ಅಲಂಕಾರ, ಕೂಫಿಕ್ ಬರೆಹದ ಶೃಂಗಾರ, ಜೇನುಗೂಡುಗಳಂತೆ ಒಳಮಾಳಿಗೆಯಿಂದ ಜೋಲಾಡುವ ನಯಗಾರೆಯ ಕೆಲಸ, ಇಲ್ಲಿ ಹೆಚ್ಚು ಪ್ರಶಂಸನೀಯವಾಗಿವೆ. ಆದರೆ ಈ ಅಲಂಕಾರದಲ್ಲಿ ಸ್ಪೇನ್, ಪರ್ಷಿಯಗಳ ಕಲೆಗಳಲ್ಲಿ ಹೇರಳವಾಗಿರುವಂತೆ ಪ್ರಾಣಿರೂಪಗಳು ಇಲ್ಲ. ಮಾಮಲೂಕ್‌ರ ಕಾಲದ ಕುಂದಣ ಕೌಶಲ, ಕುರಾನ್ ಹೊದ್ದಿಕೆಗಳ ಮೇಲಿನ ಶೃಂಗಾರಗಳು ಮಧುರವಾಗಿದ್ದು ಇಸ್ಲಾಮೀ ಕಲೆಗೆ ಮೆರಗುಕೊಟ್ಟಿವೆ. ಕ್ವಾ–ಇಟ್–ಬೇ ನಿರ್ಮಿಸಿದ ಮದ್ರಾಸ ಸುಂದರವಾಗಿದೆ. ಸೂಕ್ಷ್ಮಾಕೃತಿಗಳ ರಚನೆಯಲ್ಲಿ ಪ್ರಗತಿ ಸಾಧನೆಯಷ್ಟು ಆಗಿಲ್ಲ. ಆಟೊಮನ್ ಆಡಳಿತ ಈಜಿಪ್ಟ್ ಮತ್ತು ಸಿರಿಯ ಪ್ರದೇಶಗಳಲ್ಲಿ ಹರಡಿದ ಅನಂತರ ಹೊಳೆಯುವ ಹೆಂಚುಗಳ ತಯಾರಿಕೆಯಲ್ಲಿ ವಿನಾ ಉಳಿದಂತೆ ಇಸ್ಲಾಂ ಕಲೆ ಅವನತಿ ಹೊಂದಿತೆಂದೇ ಹೇಳಬಹುದು.

ಸೆಲ್ಯೂಕರು ಬೈಜ಼ಾಂಟೀಯನ್ ಆಡಳಿತದಿಂದ ರೋಮನ್ನರ ಪ್ರದೇಶಗಳನ್ನು ಕೈಕೊಂಡ ಅನಂತರ ಇಕೋನಿಯಂ ನಗರ ಕೋನಿಯ ಆಗಿ ಬದಲಾವಣೆ ಹೊಂದಿ ನಂತರ ರಾಜಧಾನಿಯಾಯಿತು. ಸೆಲ್ಯೂಕರು ನಿರ್ಮಿಸಿದ ಭವ್ಯವಾದ ಅಂತಃಪುರ ಹಾಗೂ ಮಸೀದಿಗಳೂ ಪ್ರಖ್ಯಾತವಾದುವು; ಪ್ರಪಂಚವನ್ನು ನೋಡದೇ ಇದ್ದರೂ ಸರಿ, ಕೋನಿಯ ನೋಡಬೇಕು ಎನ್ನುವ ಲೋಕೋಕ್ತಿ ಜಾರಿಗೆ ಬಂತು. ಮ್ಯಾಕ್ ವಂಶದವರ ಪೈಕಿ ಅರೇಬಿಯನ್ ನೈಟ್ಸ್ ಖ್ಯಾತಿಯ ಅಲಾ–ಯನ್–ದೀನ್ (1219–1236) ಕಾಲದಲ್ಲಿ ಕೋನಿಯ ಅಂತಾರಾಷ್ಟ್ರೀಯ ಸಂಸ್ಕೃತಿಗಳ ಕೇಂದ್ರವಾಗಿ ಪರಿಣಮಿಸಿತು. ಮೆಹ್ಲಾವಿ–ಸೋಫೀ ಎಂಬ ಉದಾರ ಧೋರಣೆಯ ಪಂಥ ಲುದ್ದೀನ್ ರೂಮಿನಿಂದ ಸ್ಥಾಪಿತವಾಯಿತು. ಈ ಪಂಗಡದ ಮುಸಲ್ಮಾನರು ವಿವಿಧ ಮತಗಳ ಆದೇಶಗಳನ್ನು ಖಂಡಿಸುತ್ತ, ದೇವತಾರಾಧನೆಯಲ್ಲಿ ಸಂಗೀತಕ್ಕೂ ತಾಳಮೇಳಕ್ಕೂ ತಕ್ಕಂಥ ಪ್ರಾಧಾನ್ಯ ಕೊಡುತ್ತ, ಕವಿತೆಗೆ, ಚಿತ್ರರಚನೆಗೆ, ನಾಟ್ಯಕಲೆಗೆ ಪ್ರೋತ್ಸಾಹವನ್ನು ನೀಡಿದರು. ಒಟ್ಟಿನಲ್ಲಿ ಅವರು ಕಲೆಯ ಮೂಲಕ ದೇವರನ್ನು ಪಡೆಯಲು ಯತ್ನಿಸಿದರು. ಸೌಂದರ್ಯ ನಿಧಿಯಾದ ದೇವರು ಸೌಂದರ್ಯವನ್ನು ಪ್ರೀತಿಸುತ್ತಾನೆ ಎಂಬ ಮಹಮ್ಮದನ ನುಡಿ ಈ ಮತಕ್ಕೆ ತಳಹದಿಯಾಗಿತ್ತು. ಈ ಪಂಗಡದ ಚಿತ್ರಕಾರರಲ್ಲಿ ಬೆದ್ರ–ದೀನ್–ಬೆಬ್ರಜಿ, ಬೆದ್ರ–ದೀನ್–ಯವಸಿ ಅದ್ವಿತೀಯರಾಗಿರುತ್ತಾರೆ. ಆದರೆ ಆಟೋಮನರು 1326ರಲ್ಲಿ ಆಡಳಿತಕ್ಕೆ ಬಂದ ಅನಂತರ 1453 ರಲ್ಲಿ ಬೈಜ಼ಾಂಟೀಯನ್ ಅನ್ನು ಗೆದ್ದ ಮೇಲೆ ಕಾನ್‌ಸ್ಟ್ಯಾಂಟಿನೋಪಲ್ (ಇಸ್ತಾನ್ ಬುಲ್) ರಾಜಧಾನಿ ಆದಮೇಲೆ ಸೇಂಟ್ ಸೋಫಿಯ ದೇವಾಲಯ ಮಸೀದಿಯಾಯಿತು. ಅಲ್ಲಿನ ಕ್ರೈಸ್ತರ ಚಿತ್ರಗಳನ್ನು ಸುಣ್ಣದಿಂದ ಮುಚ್ಚಿ, ಅವುಗಳ ಮೇಲೆ ಮುಸಲ್ಮಾನರ ಗೂಢ ಸಾರಂಶದ ಚಿತ್ರಾಲಂಕಾರವನ್ನು ರಚಿಸಲಾಯಿತು. ಕೂಫಿ ಕೈಬರೆಹದ ಶೃಂಗಾರ ಚಿಕ್ಕ ದೊಡ್ಡ ಗೋಪುರಗಳ ಮೇಲೆ, ಮಸೀದಿಗಳಲ್ಲಿ ಕಂಡು ಬಂತು.

ಆಟೊಮನ್ ಸುಲ್ತಾನರ ಉತ್ಕರ್ಷ ಕಾಲದಲ್ಲಿ ಅಂದರೆ 15, 16ನೆಯ ಶತಮಾನಗಳಲ್ಲಿ ಅಲಂಕಾರ, ಸೌಲಭ್ಯ ಮತ್ತು ಮನೋರಂಜನ ಪ್ರವೃತ್ತಿ ಇಸ್ಲಾಮೀ ಕಲೆಯಲ್ಲಿ ಕಂಡುಬಂದುವು. ಇದರ ಸಾರಾಂಶದ ಶೈಲಿಯಲ್ಲಿ ಕ್ಷೇತ್ರಗಣಿತ ನಕ್ಷೆಗಳೂ ಸೇರಿವೆ. ಆದರೆ ಇದರಲ್ಲಿ ವಾಸ್ತವಿಕತೆ ಇಲ್ಲ. ಸೆಲ್ಯೂಕರ ಅಲಂಕಾರ ವಿನ್ಯಾಸದಲ್ಲಿ ಪ್ರದರ್ಶಿತವಾದ ಮನುಷ್ಯ ಮತ್ತು ಪ್ರಾಣಿಗಳ ರೂಪಗಳು ಇಲ್ಲಿಲ್ಲ. ಪರಿಣಾಮವಾಗಿ ಅಲಂಕಾರದ ಸ್ಥೂಲತೆಯನ್ನು ಕಳೆದುಕೊಂಡು ಹಗುರವಾಗಿದೆ.

ಕಾಲಕ್ರಮೇಣ ಮುಸ್ಸವ್ವಿರ್ ಪಂಗಡದ ಕಲೆಗಾರರು ಸಾಮಾನ್ಯ ಜೀವನದ ಆವಶ್ಯಗಳನ್ನೂ ಭಾವಚಿತ್ರಗಳನ್ನೂ ರಚಿಸಿದ ಮೇಲೆ ಬರೆಹದ ಅಲಂಕಾರ ಕ್ಷೀಣಿಸಿತು. ಜೊತೆಯಲ್ಲಿ ಪುಸ್ತಕಾಲಂಕಾರದ ಸೂಕ್ಷ್ಮ ಚಿತ್ರಗಳು ಹೆಚ್ಚಿದುವು. ಬೇಟೆ, ಅಂತಃಪುರದ ಉತ್ಸವಗಳು ಮತ್ತು ಸಾಮಾನ್ಯ ಜೀವನದ ದೃಶ್ಯಗಳನ್ನೊಳಗೊಂಡ ಘ್ಯೂನರ್–ನಾಮ ಮುಂತಾದ ಹಸ್ತಲಿಖಿತ ಪ್ರತಿಗಳು ತಲೆದೋರಿದುವು.

ಆದರೆ 15ನೆಯ ಶತಮಾನದ ಉತ್ತರಾರ್ಧದಲ್ಲಿ 2ನೆಯ ಮಹಮ್ಮದನ ಆಡಳಿತದಲ್ಲಿ (1451–1481) ಪಾಶ್ಚಾತ್ಯ ಕಲೆಗಾರರ ಸಂಪರ್ಕದ ಪರಿಣಾಮವಾಗಿ ಶಾಸ್ತ್ರೀಯ ಇಸ್ಲಾಂ ಕಲೆ ಅಧೋಮುಖವಾಯಿತು. ಭಾವಚಿತ್ರ, ಬರೆಹ, ಅಲಂಕಾರ ಮುಂತಾದವು ಕ್ಷೀಣಿಸಿದುವು. ಹಿಂದೀಬೇ ಸ್ಥಾಪಿಸಿದ ಅಕೆಡೆಮಿ ಆಫ್ ಆರ್ಟ್ಸ್ (1883). ಬುರಾನ್–ಟ್ರೋಪಕ್ ಸ್ಥಾಪಿಸಿದ ಯೂನಿಯನ್ ಆಫ್ ಆರ್ಟ್ಸ್ (1908), ಆಲಿ, ಜಕೀ, ನೂರುಲ್ಲ ಮುಂತಾದವರು ಸ್ಥಾಪಿಸಿದ ಯೂನಿಯನ್ ಸೊಸೈಟಿ ಆಫ್ ಇಂಡಿಪೆಂಡೆಂಟ್ಸ್ ಮೊದಲಾದ ಸಂಸ್ಥೆಗಳ ಮೇಲೆ ಫ್ರಾನ್ಸಿನ ಪರಿಣಾಮ ವಿಧಾನ (ಇಂಪ್ರೆಸಲಿಸಂ) ಮತ್ತು ಅತಿ ವಾಸ್ತವ್ಯ ವಾದಗಳ (ಸರ್‍ರಿಯಲಿಸಂ) ಪ್ರಭಾವ ಹೆಚ್ಚಾದಂತೆಲ್ಲ ಇಸ್ಲಾಂ ಕಲೆ ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡಿತು.

ಭಾರತ ಇಸ್ಲಾಮೀ ಕಲೆಯಲ್ಲಿ ವಾಸ್ತುಶಿಲ್ಪಕ್ಕೂ ಚಿತ್ರಲೇಖನಕ್ಕೂ ಶತಮಾನವಾದ ಪ್ರಾಧಾನ್ಯ ದೊರಕಿತು. ಪ್ರಾರಂಭದಲ್ಲಿ ಪರ್ಷಿಯನ್ನರ ಕಲೆಯ ಅಭಾವ ಹೆಚ್ಚಾಗಿ ತೋರಿಬಂದರೂ ಭಾರತೀಯ ಕಲಾ ಸಂಪ್ರದಾಯಗಳು, ಮುಖ್ಯವಾಗಿ ಅಕ್ಬರನ ಕಾಲದಲ್ಲಿ ಕಂಡುಬರುತ್ತದೆ. ಸಂಪ್ರದಾಯದ ಗಿಡ, ಹೂವು, ಕಲಶ ಮುಂತಾದುವುಗಳಿಂದ ರಚಿಸಿದ ಚಿತ್ರಾಲಂಕಾರವನ್ನು ಭಾರತೀಯರಿಂದ ಬೌದ್ಧರೂ ಬೌದ್ಧರಿಂದ ಚೀನಿಯರೂ ಅನುಕರಿಸಿದ್ದನ್ನು ಮೆಚ್ಚಿದ ಪರ್ಷಿಯನ್ನರು ತಮ್ಮ ಕಲೆಯಲ್ಲಿ ಅದನ್ನು ತಂದಿದ್ದಾರೆ. ವಾಸ್ತುಶಿಲ್ಪದಲ್ಲಿ ಅರ್ಧಚಂದ್ರಾಕಾರದ ಗೋಪುರಗಳು, ಕಮಾನುಗಳು, ಕುದುರೆಲಾಳದ ರೂಪವನ್ನು ತಾಳಿದ ಕಮಾನುಗಳು ಕೊಠಡಿಗಳಾಗಿ ಕೊರೆದ ಪರದೆ ಮಾದರಿಯ ಕಿಟಿಕಿಗಳು, ಮರೆ ಮಾಡುವ ಅಡ್ಡ ಪಟ್ಟಿಗಳು, ನೀಪ, ಮಲ್ಲಿಕಾ, ಕಮಲ, ಕಲ್ಪಪುಷ್ಪಗಳನ್ನೊಳಗೊಂಡ ಲತಾ ಸುರುಳಿಗಳು, ಕಮಲದಳಪಾದಗಳ ಮೇಲೆ ಕುಂಭಾಕೃತಿಗಳಲ್ಲಿ ಕಡೆದ ಸ್ತಂಭಗಳು, ಅವುಗಳ ಮೇಲೆ ಕಲಶರೂಪದಲ್ಲಿ ರಚಿಸಿದ ಬೋದಿಗೆಗಳಿಂದ ನೇತಾಡುವ ಬಾಳೆ ಅಥವಾ ಕಮಲ ಮೊಗ್ಗುಗಳ ಪದಕಗಳು. ಕಟ್ಟಡದ ಮುಂಭಾಗದಲ್ಲಿನ ಕಮಾನಿನ ಉಭಯ ಪಾರ್ಶ್ವಗಳಲ್ಲಿ ಕಮಾಲಾಕಾರದಂತೆ ಕೆತ್ತಿದ ಅಥವಾ ಕೊರೆದ ಪದಕಗಳು–ಮುಂತಾದವು ಭಾರತ ಸಂಪ್ರದಾಯದವು.

ಮೊಗಲರ ವಾಸ್ತುಕಲೆಯ ಚರಿತ್ರೆಯನ್ನು 3 ಯುಗಗಳಾಗಿ ವಿಭಜಿಸಬಹುದು. ಮೊದಲನೆಯದು ಪ್ರಾಚೀನವಾದದ್ದು. 1199–1411ರ ವರೆಗಿನದು. ಮಧ್ಯಮ ಕಾಲದ್ದು 1414–1510ರ ವರೆಗಿನದು, ಈಚಿನದು 1560–1658ರ ವರೆಗಿನದು. ಕುನಾಕ್–ಉಲ್–ಇಸ್ಲಾಂ ಮಸೀದಿ, ಅದಕ್ಕೆ ಪೂರ್ವದಲ್ಲಿದ್ದ ಭಾರತೀಯರ ದೇವಾಲಯದ ರೂಪಾಂತರ (1199). ಅದರ ಮುಂದಿನ ಹೆಬ್ಬಾಗಿಲ ದಾರಿ ಆಮಲಕ ಆಧಾರವುಳ್ಳ ಕಮಾನುಗಳಿಂದ ಕಟ್ಟಲಾಗಿ, ಪುಷ್ಕಳವಾದ ಸುರುಳಿಗಳಿಂದ ಅಲಂಕೃತವಾಗಿದೆ. ಮಸೀದಿಯಲ್ಲಿನ ಪ್ರಾರ್ಥನೆ ಗೂಡು ಮತ್ತು ಅದರ ಸುತ್ತ ಇರುವ ಗೋಡೆಗಳು ಅತಿ ನಾಜೂಕಾದ ಸುರಳಿ, ನಕ್ಷತ್ರಗಳಿಂದ ತುಂಬಿದೆ, ಕುಂಭಪೀಠಗಳ ಮೇಲಿನ ಅರ್ಧಸ್ತಂಭ ಚಿತ್ರಣ ಭಾರತೀಯ ವಿಧಾನದಲ್ಲಿದ್ದು ಅತ್ಯಂತ ರಮಣೀಯವಾಗಿದೆ. ಇದೇ ಕಾಲದ ಕುತುಬ್ ಮಿನಾರಿನ (1200) ಶೃಂಗಾರದಲ್ಲಿ ಕೂಡ ಭಾರತ ಸಂಪ್ರದಾಯಗಳು ಕಂಡುಬರುತ್ತವೆ. ಇಲ್ಲಿ ರೇಖಾಗಣಿತ ನಕ್ಷೆಗಳ ಅಲಂಕಾರ, ಬರೆಹಾಲಂಕಾರದ ಸುತ್ತ ಹೆಚ್ಚಾಗಿದೆ. ಇಲ್–ಕಾತ್‍ಮಿರ್ (1235) ಗೋರಿಯ ಅಂತರದಲ್ಲಿ ಇರುವ ಗೋಡೆಗಳು, ಕಮಾನುಗಳು, ಕುಂಭಾಕೃತಿಯ ಕಂಬಗಳು ಮುಂತಾದವುಗಳ ಮೇಲೆ ಬರೆಹಾಲಂಕಾರ, ಪುಷ್ಪಭರಿತ ಲತಾವಿಧಾನ, ಮೂಲೆ ಮೂಲೆಗಳಿಂದ ನೇತಾಡುವ ಕಮಲ ಮೊಗ್ಗುಗಳು, ಕೊಠಡಿಗಳಾಗಿ ಕೊರೆದ ಅಡ್ಡಪಟ್ಟಿಗಳ ನಮೂನೆಗಳು–ಇವೆಲ್ಲವೂ ಇನ್ನೂ ಮುಂದೆ ಬರುವ ಅಲಂಕಾರ ವಿಧಾನವನ್ನು ಸೂಚಿಸುತ್ತವೆ. ಇಲ್ಲಿ ಭಾರತ, ಇಸ್ಲಾಂ ಅಲಂಕಾರ ಶೈಲಿಗಳ ಸಂಯೋಗವನ್ನು ಕಾಣಬಹುದು. (ಷೇಕ್ ಯೂಸುಫ್ ಕಾಟಿಲ್‍ನ ಗೋರಿ, ಫತೇಪುರ್ ಸಿಕ್ರಿ, ಕಿಲಾಕುನ್ನ ಮಸೀದಿಯ ಪ್ರಾರ್ಥನೆ ಗೂಡು, ಷೇಕ್ ಇಮಾಮ್ ಸಲೀಮ್ ಛಿಸಿಟಯ ಗೋರಿ, ತುರ್ಕಿ ಸುಲ್ತಾನನ ಅಂತಃಪುರ, ದಿವಾನ್–ಇ–ಖಾಸಿಗೆ ಸೇರಿದ ಸಿಂಹಾಸನದ ಗೌಸಣಿಕೆ; ಸಿಕಂದರದಲ್ಲಿನ ಅಕ್ಬರನ ಗೋರಿ; ಶೀಷ್‍ಮಹಲ್).

ಹುಮಾಯೂನನ ಅಜ್ಞಾತವಾಸದಲ್ಲಿ ಷೇರ್‍ಷಾ ತನ್ನ ಉಪಯೋಗಕ್ಕೆ ಕಟ್ಟಿಸಿದ ಖಿಲಾ–ಈ–ಕುನ್ಹಾ ಮಸೀದಿಯ ಅಲಂಕಾರ (1545) ಮತ್ತಷ್ಟು ಕಲಾಕೌಶಲ್ಯವನ್ನು ಪಡೆದು ಮುಂದಿನ ಅಲಂಕಾರದ ಪಕ್ವತೆಗೆ ದಾರಿ ಮಾಡಿತು. ಷೇರ್‍ಷಾನ ಗೋರಿಯಲ್ಲಿ ಬಣ್ಣ ಬಣ್ಣದ ಕಲ್ಲುಗಳಿಂದಲೂ ಅಮೃತಶಿಲೆಯಿಂದಲೂ ಗೋಡೆಗಳ ಮೇಲೆ ಭಾರತದಲ್ಲಿ ಮೊದಲನೆಯ ಬಾರಿ ಮಾಡಿದ ಕುಂದಣದ ಕೆಲಸ ಸುಂದರವಾಗಿದೆ. ಅಕ್ಬರ್ ಕಾಲದ ವಾಸ್ತುಶಿಲ್ಪದ ಪ್ರಾರಂಭದಿಂದ (1560) ಷಾಹಜಹಾನ್ ಮರಣದವರೆವಿಗೂ (1658) ಮೊಗಲರ ಕಟ್ಟಡದ ಚಟುವಟಿಕೆಗಳು ಅಸಂಖ್ಯಾತವಾಗಿದ್ದು, ವರ್ಣನಾತೀತವಾಗಿವೆ. ಈ ಕಾಲದ ಕಟ್ಟಡಗಳ ಕಲಾಪ್ರೌಢಿಮೆಯನ್ನೂ ಅವುಗಳಲ್ಲಿನ ಅಲಂಕಾರ ವೈಶಿಷ್ಟ್ಯವನ್ನೂ ಕುಶಲತೆಯನ್ನೂ ತೋರಲು ಇಂದಿಗೂ ದೆಹಲಿ, ಲಾಹೋರ್ ಪ್ರಾಂತ್ಯಗಳಲ್ಲಿ ಉಳಿದುಕೊಂಡಿರುವ ಕಲಾಕೃತಿಗಳನ್ನು ಮಾತ್ರ ಇಲ್ಲಿ ವರ್ಣಿಸಲಾಗಿದೆ. ಅಕ್ಬರ್ ತನ್ನ ಕಾಲದಲ್ಲಿ ಸಾಧಿಸಿದ ಮತಸಂಯೋಗವನ್ನು ವಾಸ್ತುಶಿಲ್ಪದಲ್ಲೂ ಚಿತ್ರರಚನೆಯಲ್ಲೂ ಸ್ಪಷ್ಟವಾಗಿ ಕಾಣಬಹುದು. ಇದು ಜಹಾಂಗೀರನ ಕಾಲದಲ್ಲಿ ಇನ್ನೂ ಮುಂದುವರಿಯಿತು. ಆದರೆ ಷಾಹಜಹಾನನ ಕಾಲದಲ್ಲಿ ಪರ್ಷಿಯನ್ ಶೈಲಿಯ ಪ್ರಭಾವ ಹೆಚ್ಚಿತ್ತೆನ್ನಬಹುದು. ಇದಲ್ಲದೆ ಅಲಂಕಾರದ ಉಪಕರಣಗಳು ಕೂಡ ಬದಲಾದುವು. ಅವುಗಳ ಶೇಖರಣೆ ಕಷ್ಟವಾಗಿರ ಬಹುದು. ಆದಕಾರಣ ಗುರ್ಝರ ಪ್ರದೇಶಗಳಲ್ಲಿ ಮುಸಲ್ಮಾನರ ಆಡಳಿತ ಕಾಲದಲ್ಲಿ ಪ್ರಚುರವಾಗಿದ್ದ ಮರದ ಮದನಕೈಗಳು, ತೋರಣಗಳು ಮುಂತಾದವನ್ನು ಅಕ್ಬರ್ ತನ್ನ ಕಟ್ಟಡಗಳಲ್ಲಿ ಅಷ್ಟಾಗಿ ಬಳಸಲಿಲ್ಲ. ಇದರಿಂದ ಹೈಂದವ ಶಿಲ್ಪದ ಸಂಪ್ರದಾಯದ ಅಂಶ ಇಸ್ಲಾಂ ಕಲೆಯಲ್ಲಿ ಹೆಚ್ಚಾಗಿ ಬೆರೆಸಬೇಕಾಗಿ ಬಂತು. ಅದು ಊರ್ಜಿತಕ್ಕೆ ಬಂತು. ದೆಹಲಿಯ ಉತ್ತರದಲ್ಲಿ ಹೇರಳವಾಗಿರುವ ಕೆಂಪುಬಣ್ಣದ ಪದರಕಲ್ಲು (ಸ್ಯಾಂಡ್ ಸ್ಟೋನ್) ದೊಡ್ಡ ದೊಡ್ಡ ಮೂಲಗಳಿಗೂ ಹಾಸಿಗೆಯ ಕಲ್ಲುಗಳಿಗೂ ಅನುಕೂಲವಾದದ್ದು. ಇವುಗಳ ಮೇಲಿನ ಕೆತ್ತನೆಯ ಅಲಂಕಾರ ವಿಸ್ತಾರವಾಯಿತು. ಅಕ್ಬರನ ಕಾಲದಲ್ಲಿ ಅಮೃತಶಿಲೆಯನ್ನು ಹೆಚ್ಚಾಗಿ ಉಪಯೋಗಿಸಲಿಲ್ಲ. ಬಾಹ್ಯಾಲಂಕಾರದಲ್ಲಿ, ಮುಖ್ಯ ಸ್ಥಳಗಳಲ್ಲಿ ಮಾತ್ರ, ಅದನ್ನು ಉಪಯೋಗಿಸಿದರು. ಆದರೆ ಜಹಾಂಗೀರನ ಕಾಲದಲ್ಲಿ ಕುಂದಣದ ಅಲಂಕಾರವನ್ನು ಹೊರಗಿನ ಗೋಡೆಗಳ ಮೇಲೆ ಶೋಭಾಯಮಾನವಾಗಿ ಮಾಡಲಾಯಿತು. ಆದರೂ ಗೋರಿಗಳ ನಕ್ಷೆಗಳು, ಅವುಗಳ ವಿಧಾನಗಳು ಇಸ್ಲಾಂ ತೈಮೂರಿದ್ ಕಾಲದವಾಗಿಯೇ ಉಳಿದುಕೊಂಡವು. ಅಕ್ಬರ್, ಇತ್ಮ್–ಉದ್–ದೌಲಾ, ಹುಮಾಯೂನ್ ಇವರ ಕಾಲದ ಶಿಲ್ಪ ತೈಮೂರಿದ್ ಮಾದರಿಯವು ಎನ್ನಬಹುದು.

ತಾಜ್‍ಮಹಲ್ (1635) ಸ್ಥೂಲವಾಗಿ ಹುಮಾಯೂನನ ಗೋರಿ ನಕ್ಷೆಯನ್ನು ಹೋಲುತ್ತದೆ. ಅದರ ಗೋಪುರ ಸಂಪೂರ್ಣ ಅರ್ಧಚಂದ್ರಾಕಾರದಲ್ಲಿದ್ದರೆ, ಹುಮಾಯಿನ್ ಗೋರಿಯ ಗೋಪುರ ಮೊನಚಾಗಿ ಆಮಲಕದ ಚಿತ್ರರೇಖೆಯನ್ನು ತಾಳಿದೆ. ತಾಜಮಹಲಿನ ಅಮೃತಶಿಲೆಯ ತೇಜಸ್ಸು ಅತ್ಯಂತಾಕರ್ಷಣೀಯವಾಗಿದ್ದು, ಆ ಭವನಕ್ಕೆ ಅಮೃತಶಿಲೆಯಲ್ಲಿನ

ನವಾಬಿ ಮಸೀದಿ, ಮದೀನ

ಕನಸು ಎಂಬ ಪ್ರಶಸ್ತಿಯನ್ನು ತಂದಿದೆ. ಅಲ್ಲಿನ ಕುಂದಣಗೆಲಸ, ಅಮೃತಶಿಲೆಯಲ್ಲಿ ಕುಶಲತೆಯಿಂದ ಕೊರೆದ ವಿವಿಧಾಲಂಕಾರ–ಇವು ಅದ್ಭುತದಾಗಿವೆ. ವಾಸ್ತುಶಿಲ್ಪದ ಬಿಡಿ ಬಿಡಿ ಭಾಗಗಳ ಮಧುರವಾದ ಸಂಯೋಗ ಇಲ್ಲಿ ವಿಸ್ಮಯಗೊಳಿಸುತ್ತದೆ. ಅಕ್ಬರನ ಔದಾರ್ಯದಲ್ಲಿ, ಸಂಪತ್ತಿನಲ್ಲಿ, ಸಂಯೋಗದ ದೃಷ್ಟಿಯಲ್ಲಿ, ಹಿಂದೂ ಮುಸಲ್ಮಾನ್ ವಾಸ್ತುಶಿಲ್ಪ ಔನ್ನತ್ಯವನ್ನು ಹೊಂದಿತೋ ಅಥವಾ ಷಾಹಜಹಾನ್ ಕಾಲದ ವಿಶಿಷ್ಟಾಲಂಕಾರ ಸೊಂಪಿನಿಂದ ಮೇಲ್ಮಟ್ಟವನ್ನು ಗಳಿಸಿತೋ ಹೇಳುವುದು ಕಷ್ಟ ನಿಜವಾಗಿ, ಅಲಂಕಾರ ರಚನೆಯಲ್ಲಿ ಇವೆರಡೂ ಸಮನಾಗಿದೆ. ಆದರೆ ಷಾಹಜಹಾನನ ಕಾಲದಲ್ಲಿ ಅಮೃತಶಿಲೆಯಲ್ಲಿ ಮಾಡಿದ ಬಣ್ಣಬಣ್ಣದ ನವರತ್ನಗಳ ಕುಂದಣದ ಕೆಲಸ ಮಾತ್ರ ಅಸದೃಶ. ಇದೇ ಮಾದರಿಯಲ್ಲಿ ಇತ್ಮ್–ಉದ್–ದೌಲಾನ ಗೋರಿ ಅಲಂಕೃತವಾಗಿದೆ. ತುರ್ಕಿ ಸುಲ್ತಾನ್ ಮನೆಯ ಅಲಂಕಾರ ಹೂವು ಹಣ್ಣುಗಳಿಂದ ಕೂಡಿದ ಗಿಡಗಳ ವಿವಿಧ ರೂಪವನ್ನೊಳಗೊಂಡ ಅಕ್ಬರ್ ಗೋರಿಯ ಅಲಂಕಾರವನ್ನು ಹೋಲುತ್ತದೆ.

ಇದೇ ಕಾಲಕ್ಕೆ ಸೇರಿದ, ಹೆಂಚುಗಳಿಂದ ನಾನಾ ರೂಪಗಳಲ್ಲಿ ಅಲಂಕೃತವಾದ, ಲಾಹೋರಿನ ವಜೀರ್‍ಖಾನ್ ಗೋರಿ, ಆಗ್ರದ ಚೀನಿತಾಜ್, ಲಾಹೋರ್ ಕೋಟೆಗಳ ಅಲಂಕಾರ ಹೆಚ್ಚಾದ ಮನ್ನಣೆ ಪಡೆದಿವೆ. ಇವುಗಳ ಸೌಂದರ್ಯ ಅದ್ವಿತೀಯವಾದ್ದು. ಇಲ್ಲಿನ ಮೊಸಯಿಕ್ ಚಿತ್ರಗಳು ಸಾಧಾರಣ ಜೀವನಕ್ಕೂ ರಾಜರ ಆಡಂಬರಕ್ಕೂ ಸಾದೃಶ್ಯವಾಗಿವೆ. ಚೀನಿ ಕಾತಾಂಜಾದಲ್ಲಿ ರಾಜರ ಮತ್ತು ಶ್ರೀಮಂತರ ಭಾವಚಿತ್ರಗಳು ಮಿಶ್ರಿತವಾಗಿವೆ. ಇಲ್ಲಿನ ಚಿತ್ರಗಳಲ್ಲಿ ರಾಜರು ಪೋಲೋ ಆಡುವುದು; ಸವಾರರು ಆನೆ, ಒಂಟೆ, ಕುದುರೆಗಳನ್ನು ಮುಂದೆ ಒಯ್ಯುವುದು; ಆನೆ, ಒಂಟೆ, ಕುದುರೆಗಳ ಮೇಲೆ ಕುಳಿತು ಯುದ್ಧಮಾಡುವುದು; ಹೋರಿ, ಆನೆ, ಒಂಟೆಗಳ ಗುದ್ದಾಟಗಳು; ಅಂತಃಪುರದ ಮಧುಪಾನ ಮತ್ತು ನೃತ್ಯ ಮುಂತಾದ ಕ್ರೀಡೆಗಳು; ಚಿರತೆಗಳ ಸಹಿತ ರಾಜರು ಬೇಟೆ ಆಡುವುದು; ಭೂಮಿಯನ್ನು ಉಳುವುದು; ಬಾತು, ಕೊಕ್ಕರೆ, ಗಿಡುಗ, ಹಮ್ಮಿಂಗ್ ಪಕ್ಷಿಗಳ ಹಾರಾಟ ಮುಂತಾದವು ರಮಣೀಯವಾಗಿವೆ. ಆಡುಗಳನ್ನು ಕೊಂದ ಅನಂತರ ಕೈಗಳನ್ನು ತೊಳೆಯುವ ಮತ್ತು ಮಧುವನ್ನು ಹಂಚುವ ವಿಧಾನಗಳು ಶ್ರೀಮಂತರ ಉದ್ಯಾನವನದ ಕ್ರೀಡೆಗಳು ಆಕರ್ಷಣೀಯ

ವಾಗಿವೆ. ಈ ಹೆಂಚುಗಳ ಶೃಂಗಾರ ಜಹಾಂಗೀರ್ ಕಾಲದಲ್ಲಿ ಪ್ರಾರಂಭವಾಗಿ ಷಾಹಜಹಾನ್ ಕಾಲದಲ್ಲಿ ಶ್ರೇಷ್ಠತೆಯನ್ನು ಗಳಿಸಿತು. ಈ ಶೃಂಗಾರದಲ್ಲಿ ಅಸಂಖ್ಯಾತ ಬಣ್ಣಬಣ್ಣದ ಕಲ್ಲಿನ ಫಲಕಗಳನ್ನೂ ಉಪಯೋಗಿಸಲಾಗಿದೆ. ಹೆಂಚಿನ ಅಲಂಕಾರ ಲಾಹೋರ್ ಕೋಟೆಯಲ್ಲಿ ಕೇಂದ್ರೀಕೃತವಾಯಿತು. ಅದು ಷಾಹಜಹಾನ್ ಆಡಳಿತದಲ್ಲಿ ವೈಭವದ ಶ್ರೇಷ್ಠತೆಯನ್ನು (1628–58) ಸಾಧಿಸಿತು.ಲಾಹೋರಿನ ಅಲಂಕಾರ ಚತುರಶ್ರದಲ್ಲಿ ನಿರ್ಮಿತವಾದ ಮೊಸಾಯಿಕ್ ಗಳಿಂದ ಕೂಡಿದೆ. ಒಂದೊಂದು ಸಲ ಚತುರಶ್ರ ಬಿಲ್ಲೆಗಳ ಮಧ್ಯಭಾಗ ಕೆಂಪು ಗಾರೆಯಿಂದ ತುಂಬಿಸಲ್ಪಟ್ಟು ಇಟ್ಟಿಗೆಗಳಿಂದ ಕಟ್ಟಲಾಗಿದೆಯೋ ಎನ್ನುವ ಭಾವನೆಯನ್ನು ಕೊಡುತ್ತದೆ (ಉದಾ: ವಜೀರ್‌ಖಾನನ ಮಸೀದಿ). ಹೆಂಚುಗಳಿಂದ ಹೊದ್ದಿಸಿದ ಬಿಲ್ಲೆಗಳ ಮೇಲೆ ಕ್ಷೇತ್ರಗಣಿತದ ನಕ್ಷೆಗಳ ಮಧ್ಯೆ ಪುಷ್ಪಭರಿತ ಲತಾ ಸುರಳಿಗಳ ಅಲಂಕಾರ ಮಾಡಲಾಗಿದೆ. ಫಲಭರಿತ ತಟ್ಟೆಗಳಲ್ಲಿ ಕರಬೂಜ, ಕಲ್ಲಂಗಡಿ, ದಾಳಿಂಬರ ಹಣ್ಣುಗಳು ನೈಜ ಬಣ್ಣಗಳಿಂದ ಚಿತ್ರಿತವಾಗಿವೆ. ಪುಷ್ಪಗಳ ಪೈಕಿ ದಾಳಿಂಬೆ ಹಣ್ಣುಗಳು ನೈಜ ಬಣ್ಣಗಳಿಂದ ಚಿತ್ರಿತವಾಗಿವೆ. ಪುಷ್ಪಗಳ ಪೈಕಿ ದಾಳಿಂಬೆ, ಟ್ಯೂಲಿಪ್, ನಾರ್ಸಿಸಸ್ ಮುಂತಾದವು ತಟ್ಟೆಗಳಲ್ಲಿ ಹೊಳೆಯುತ್ತಿವೆ. ಕೆಲವು ಬಳ್ಳಿಗಳ ಮೇಲೆ ಪರ್ಷಿಯನ್ನರ ಪುಸ್ತಕಗಳಿಂದ ಶೇಖರಿಸಿದ ಮಾತುಗಳ ಶಾಸನಗಳಿವೆ. ಒಳಗಿನ ಗಾರೆಯ ಮೇಲಿನ ಚಿತ್ರಗಳಿಗೂ ಈ ನಕಾಶೆಗಳಿಗೂ ಪರಸ್ಪರ ಸಂಬಂಧವಿದೆ. ಕಮಾನುಗಳ ಎರಡು ಪಾರ್ಶ್ವಗಳಲ್ಲಿನ ಪುಷ್ಪಲತಾ ಸುರಳಿಗಳ ಅಲಂಕಾರ, ಜೀರಂಗಡಿಗಳ ಉದ್ದಕ್ಕೂ ಅವುಗಳ ಸುತ್ತಲೂ ಇರುವ ರೇಖಾವಿಲಾಸ, ಮಸೀದಿ ಮತ್ತು ಗೋಡೆಗಳ ಮೇಲೆ ಹೊಳೆಯುವ ಬಣ್ಣಬಣ್ಣದ ಹೆಂಚುಗಳ ಹೊದ್ದಿಗೆ, ಇವೆಲ್ಲವೂ ರಮಣೀಯವಾಗಿವೆ. (ಉದಾ: ಶಾಹೀ ಮಸೀದಿಯ ಷಾ–ಬುರಾನಿನ ಗೋರಿ, ಆಲಿ–ಮರ್ದಾನ್–ಖಾನನ ಧಕ್ಕೈಶರಾಯ್ 1640, ಚೀನೀವಾಲೇ ಮಸೀದಿ 1565–66, ಅಬ್ದುಲ್ ವಾಹಬ್ ಮಸೀದಿ.)

ಮುಸಲ್ಮಾನರು ಭಾರತಕ್ಕೆ ಬಂದ ಪ್ರಾರಂಭದಲ್ಲಿ ಮಿತವಾಗಿ ಉಪಯೋಗಿಸಿದ ಹೆಂಚಿನ ಅಲಂಕಾರ ಮೊಗಲರ ಆಡಳಿತದಲ್ಲಿ ಪ್ರಾಮುಖ್ಯ ಪಡೆಯಿತು. ರುಕ್ನುದ್ದೀನ್ (1320–24) ಗೋರಿಯ ಹೊರಭಾಗ ಹೊಳೆಯುವ ನೀಲಿ, ಉದಾ ಮತ್ತು ಬಿಳೀ ಹೆಂಚುಗಳಿಂದ ಬಿಲ್ಲೆ ಬಿಲ್ಲೆಗಳಾಗಿ ವಿಭಾಗಗೊಂಡಿದೆ. ಪಂಜಾಬಿನಲ್ಲಿ ಲೋದಿ ಸುಲ್ತಾನರ ಕಾಲದಲ್ಲಿ ಈ ಬಣ್ಣಗಳಿಗೆ ಹಳದೀ ಬಣ್ಣದ ಹೆಂಚುಗಳು ಸೇರಿದುವು. ಸಿಕಂದರ್ ಲೋದಿ (1517) ಗೋರಿಯ ಉಭಯ ಪಾರ್ಶ್ವಗಳಲ್ಲಿನ ಅಲಂಕಾರದಲ್ಲಿ ರೋಜಾ ರೂಪದ ಆಕಾಶ ಬಣ್ಣದ ಪದಕಗಳನ್ನು ಕ್ಷೇತ್ರಗಣಿತ ನಮೂನೆಗಳ ಅಂತರದಲ್ಲಿ ಲತಾವಿನ್ಯಾಸ ಸಹಿತ ಸೇರಿಸಲಾಗಿದೆ.

ಕ್ಷೇತ್ರಗಣಿತ ನಕ್ಷೆಗಳನ್ನೊಳಗೊಂಡ ಪುಷ್ಪಲತಾಲಂಕಾರದ ಮಧ್ಯೆ ರಚಿಸಲಾದ ನೀಲಿಚ್ಛಾತ್ರಿ ಹೆಸರಿನ ಗೋರಿ ಮತ್ತು ನೀಲಿಗುಂಬಸ್ (1567) ರಮಣೀಯವಾಗಿವೆ. ಈ ಗೋರಿಗಳಲ್ಲಿ ಅತ್ಯಾಕರ್ಷಣೀಯವಾದದ್ದು ಅಕ್ಬರನ ಸಾಕು ತಂದೆಯಾದ ಶಂಶುದ್ದೀನ್ ಅತ್ಗಖಾನನ (1567) ಗೋರಿ. ಇದು ಎನಾಮಲ್, ಮೊಸಾಯಿಕ್‌ಗಳಿಂದ ಅಲಂಕೃತವಾಗಿದೆ. ಇದರಲ್ಲಿ ಹೊಳೆಯುವ ಆಕಾಶನೀಲ ಮತ್ತು ಹಳದಿ ಬಣ್ಣಗಳ ಹೆಂಚುಗಳು ಬಿಳೀ ಅಮೃತಶಿಲೆಗಳೊಡನೆ ರೇಖಾನಕ್ಷತ್ರಗಳ ಅಲಂಕಾರದಲ್ಲಿ ಬೆರೆತಿವೆ. ಅಕ್ಬರನ ಕಾಲದಲ್ಲಿ ಅಲಂಕಾರಕ್ಕೆ ನೀಲಿ, ಆಕಾಶ ನೀಲಿ, ಹಳದಿ ಮತ್ತು ಹಸಿರು ಬಣ್ಣಗಳ ಹೆಂಚುಗಳನ್ನು ಮುಖ್ಯವಾಗಿ ಉಪಯೋಗಿಸಿದರು. ಮೊಗಲ್ ಕಾಲದ ಅಲಂಕಾರ ಭಾರತದ ಪ್ರಭಾವವನ್ನಲ್ಲದಿದ್ದರೂ ಸಮಕಾಲೀನವಾದ ಪರ್ಷಿಯ ದೇಶದ ಸಫಾವಿದ್ ರಾಜರ ಅಲಂಕಾರದ ಧೋರಣೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೋಲುತ್ತದೆ.

ಮೊಗಲ್ ಕಾಲದ ಚಿತ್ರಣದಲ್ಲಿ ಭಾವಚಿತ್ರಗಳು ಪುಷ್ಕಳವಾಗಿವೆ. ಪ್ರಸ್ತುತ ವಿಷಯವನ್ನು ವಿವರಿಸುವುದಕ್ಕಾಗಿ ಇದನ್ನು ಸೂಕ್ಷ್ಮರೂಪದಲ್ಲಿ ತಿಳಿಸಬೇಕಾಗಿದೆ. ಈ ಸಂಪ್ರದಾಯ ಪರ್ಷಿಯ ದೇಶದ ಆಚರಣೆಯನ್ನು ಮುಂದುವರಿಸುತ್ತದೆ. ಅದು ಸೆಫಾವಿದ ಕಲಾವಿಧಾನದಲ್ಲಿದ್ದರೂ ರೇಖಾವಿನ್ಯಾಸದಲ್ಲೂ, ಬಣ್ಣಗಳ ವಿನಿಯೋಗದಲ್ಲೂ, ಹೈಂದವ, ಅಜಂತ ಶೈಲಿಗಳಲ್ಲಿದೆ. ಯಥಾದೃಷ್ಟ ರೂಪಣ (ಪರ್‌ಸ್ಪೆಕ್ಟಿವ್), ಬೆಳಕು ನೆರಳುಗಳ ವಿನ್ಯಾಸ ಇವು ಉತ್ತಮ ಚಿತ್ರಗಳಲ್ಲಿ ಕಂಡುಬರುತ್ತದೆ (ಉದಾ: ಚಕ್ರವರ್ತಿ ಷಹಜಹಾನನ ಭಾವಚಿತ್ರ, ಜಯಂತ್ಯುತ್ಸವ, ಹಕಿಮ್‌ತಾಯ್‌ನ ಯುದ್ಧ ಚಿತ್ರಣ. ಅಕ್ಬರ್‌ನಾಮದ ಬೇಟೆ ದೃಶ್ಯಗಳು–ಮುಂತಾದವು). ಪರ್ಷಿಯದ ಇಸ್ಲಾಮೀ ಕಲೆಯಲ್ಲಿ ಪಾರ್ಶ್ವದೃಷ್ಟಿಯ ಭಾವಚಿತ್ರಗಳು ಹೆಚ್ಚಾಗಿಲ್ಲ; ಸಂಪೂರ್ಣ ಅಥವಾ ಮುಕ್ಕಾಲು ವದನವನ್ನು ಅವು ಚಿತ್ರಿಸುತ್ತವೆ. ಮೊಗಲರ ಕಾಲದ ಭಾವಚಿತ್ರಗಳ ಅಂಚಿನಲ್ಲಿ ಚಿನ್ನ ಅಥವಾ ನೀಲಿ ಹಿನ್ನೆಲೆಯಲ್ಲಿ ಮನೋಹರವಾದ ಪುಷ್ಪಲತಾ ಸುರಳಿಗಳ ಮಧ್ಯೆ ಕ್ರೀಡಿಸುವ, ಹಾಡುತ್ತಿರುವ ಅಥವಾ ಹಾರಿ ಹೋಗುತ್ತಿರುವ ವಿವಿಧ ಹಕ್ಕಿಗಳು ಚಿತ್ರತವಾಗಿವೆ. ಇವೆಲ್ಲವೂ ಖಗ, ಮೃಗ, ವನಸ್ಪತಿಗಳ ಸಂಯೋಗವನ್ನು ಸಾರುತ್ತವೆ. ಈ ಅಲಂಕಾರ ಲಾಹೋರ್ ಗೋಡೆಯ ಹೆಂಚಿನ ಜೋಡಣೆಯಂತೆ, ಮಾದರಿಗಳ ವೈಶಿಷ್ಟ್ಯವನ್ನಲ್ಲದೆ ಘನತರವಾದ ಲಾಲಿತ್ಯವನ್ನೂ ಪಡೆದಿರುತ್ತವೆ. ಲಾವಣ್ಯದಲ್ಲಿ ಈ ಶೃಂಗಾರ ಅದ್ವಿತೀಯ. ಇದರಲ್ಲಿ ಭಾವಚಿತ್ರದ ರಸಭಾವವಿದೆ. ಇವುಗಳಲ್ಲಿನ ಚರಿತ್ರಾಂಶ, ಪುರುಷರ ಚಿತ್ರಣ ಪರ್ಷಿಯನ್ನರ ಸಂಪ್ರದಾಯ ಭಂಗಿಗಳಲ್ಲಿ, ವ್ಯವಸ್ಥೆಯಲ್ಲಿ, ಆಡಂಬರದಲ್ಲಿ ಅಸಹಜವಾಗಿದ್ದರೂ ಆಕರ್ಷಣೀಯವಾಗಿವೆ. ಆದರೆ, ಸಾಮಾನ್ಯ ಜೀವನದ ದೃಶ್ಯಗಳಲ್ಲಿ ಬೇಟೆ, ಯುದ್ಧ, ವ್ಯವಸಾಯ ಹೆಚ್ಚಾದ ನೈಜತೆ, ಭಾವನಿರೂಪಣೆ, ಜೀವಕಳೆ ಕಂಡುಬರುತ್ತವೆ. ಅಂತಃಪುರದಲ್ಲಿನ ಮನೋರಂಜನೆಯ ದೃಶ್ಯಗಳು, ಸ್ತ್ರೀಸಹಿತವಾದವು. ಇಸ್ಲಾಮೀ ಕಲೆಯಲ್ಲಿ ಎಲ್ಲಿಯೂ ಚಿತ್ರಿತವಾಗಿಲ್ಲ.

ಉದ್ಯಾನವನಗಳ ನಿರ್ಮಾಣ, ಅಪೂರ್ವ ಬಣ್ಣದ ಹಕ್ಕಿಗಳ ಶೇಖರಣೆ, ಲಾಲನೆ, ಪಾಲನೆ ಮತ್ತು ಅವುಗಳ ಆಟ ಕಾದಾಟಗಳ ವೀಕ್ಷಣೆ ಈ ಕ್ರಿಯೆಗಳಲ್ಲಿ ತನ್ನ ಮುತ್ತಾತನಾದ ಬಾಬರನಂತೆಯೂ ಕಟ್ಟಡಗಳ ನಿರ್ಮಾಣ ಮತ್ತು ಶೃಂಗಾರ ವಿಧಾನಗಳಲ್ಲಿ ತನ್ನ ತಾತನಾದ ಅಕ್ಬರನಂತೆಯೂ ಜಹಾಂಗೀರ್ ಉತ್ಸುಕನಾಗಿದ್ದ. ಔರಂಗಜೇಬ್ ವಿನಾ ಮೊಗಲ್ ಚಕ್ರವರ್ತಿಗಳೆಲ್ಲರೂ ಕೇಸರವಿಲ್ಲದ ಸಿಂಹಗಳ ಕಾಡುಕತ್ತೆಗಳ, ಜಿಂಕೆಗಳ, ಆನೆಗಳ, ಹುಲಿಗಳ ಬೇಟೆಯಲ್ಲಿ ಆಸಕ್ತಿ ಹೊಂದಿದ್ದರು. ಅದೂ ಅಲ್ಲದೆ ಜಹಾಂಗೀರ್ ಕಾಲದ ಭಾವಚಿತ್ರಗಳ ಅಂಚುಗಳಲ್ಲಿ ಆತ ಶೇಖರಿಸಿದ ಪಕ್ಷಿಗಳ ರೂಪಗಳು ಮಧುರವಾಗಿ ಚಿತ್ರತವಾಗಿವೆ. ಅಂತಃಪುರದಲ್ಲಿ ಏರ್ಪಡಿಸಿದ ಕ್ರೀಡೆಗಳಲ್ಲಿ, ಆನೆಗಳ, ಒಂಟೆಗಳ, ಕೋಳಿಗಳ, ಗುದ್ದಾಟಗಳನ್ನು, ಕುಸ್ತಿ ಭಂಗಿಗಳನ್ನು ನೋಡುವುದರಲ್ಲಿ, ಅವರಿಗೆ ತುಂಬ ಅಭಿಲಾಷೆ ಇತ್ತೆಂದು ತೋರುತ್ತದೆ. ಮುಖ್ಯವಾಗಿ ಭಾರತ ಚಿತ್ರಕಾರರೇ ಜೀವಕಳೆ ತುಂಬಿ ಮಧುರವಾಗಿ ಚಿತ್ರಿಸಿದ ಹಸ್ತ ಲಿಖಿತ ಪುಸ್ತಕಗಳಲ್ಲಿನ ಚಿತ್ರಗಳು (ವಾಕಿಯತ್–ಈ–ಬಾಬರಿ 1528, ಅಕ್ಬರ್ ನಾಮಾ) ಇದನ್ನು ಉದಾಹರಿಸುತ್ತವೆ. ಜೈನ ಕವಿ ನಯಚಂದ್ರಸೂರಿ ಸಂಸ್ಕೃತದಲ್ಲಿ ರಚಿಸಿದ ಹಮ್ಮೀರ ಮಹಾಕಾವ್ಯದ ವೀರ ಚರಿತೆಯ ವರ್ಣನೆ (1496) 18ನೆಯ ಶತಮಾನದ ಕಾಂಗ್ರಾ ಚಿತ್ರಕಾರರಿಂದ ಶಕ್ತಿಯುತವಾಗಿಯೂ ಜೀವಯುತವಾಗಿಯೂ ಚಿತ್ರಿತವಾಗಿದೆ. ಹಮ್ಮೀರ್ ರಾಜ್ಯದ ಮೇಲೆ ಅಲ್ಲಾಉದ್ದೀನ್ ಖಿಲ್ಜಿ ನಡೆಸಿದ ರಣ ಥಂಭೂರ್ ದಾಳಿಯನ್ನು (1096) ಅಲ್ಲಾ ಉದ್ದೀನನ ಪರಾಭವವನ್ನೂ ತಪ್ಪು ತಿಳಿವಳಿಕೆಯಿಂದ ಅಂತಃಪುರ ಸ್ತ್ರೀಯರ ಸಹಗಮನವನ್ನೂ ಕಡೆಗೆ ಹಮ್ಮೀರ್ ವೀರನ ಆತ್ಮಹತ್ಯವನ್ನೂ ಈ ಹಸ್ತಲಿಖಿತ ಪುಸ್ತಕ ಶ್ರೇಷ್ಠ ಚಿತ್ರಗಳೊಡನೆ ಘನತೆಯಿಂದ ವರ್ಣಿಸುತ್ತದೆ.

ಇಸ್ಲಾಂ ಚರಿತ್ರೆಗೆ ಅವರ ಕಲೆ ಹೊಂದಿಕೊಂಡಿದೆ. ಶಿಲ್ಪವಾಗಲೀ ಉಬ್ಬಿರುವ ಕೆತ್ತನೆಯ ಕೆಲಸವಾಗಲೀ ವಾಸ್ತುಶಿಲ್ಪ ಸೌಂದರ್ಯಕ್ಕೆ ಅತ್ಯವಸರವಾದುದೆನ್ನುವ ಭಾವನೆ ಇಸ್ಲಾಮೀ ಕಲೆಯಲ್ಲಿ ಎಲ್ಲೂ ತೋರುವುದಿಲ್ಲ.

ಭಾರತ ಇಸ್ಲಾಮೀ ಚಿತ್ರಕಲೆಯಲ್ಲಿ ಪಾಲ್ಗೊಂಡವರು ಮಧು, ಮಹೇಶ, ಬಸವಾನ್, ಮನೋಹರ್, ಸರ್ವಾನ್, ಧರ್ಮದಾಸ್, ಮುಕುಂದ್, ಛಾತ್ರಮುನಿ ಮುಂತಾದ ಹೈಂದವರೇ. ಇಸ್ಲಾಮೀ ಚಿತ್ರಕಲೆಗೂ ಭಾರತ ಚಿತ್ರಕಲೆಗೂ ವಿಷಯಾಂಶದಲ್ಲಿ ಮಾತ್ರ ಭೇದವಿದೆ. ಶೈಲಿಗಳು ಒಂದೇ. ಅತ್ಯಂತ ಪ್ರಾಚೀನವಾದ ಭಾರತೀಯ ಸಂಪ್ರದಾಯವನ್ನು ಅನುಸರಿಸಿದ ಅಜಂತಾ ಚಿತ್ರಗಳು ಇವೆಲ್ಲಕ್ಕೂ ಸ್ಫೂರ್ತಿದಾಯಕವಾಗಿವೆ. (ಪಿ.ಎಸ್.)

ಭಾರತದಲ್ಲಿ ನಿರ್ಮಿತವಾದ ಇಸ್ಲಾಂ ಶೈಲಿ ಭಾರತೀಯ ಸಂಸ್ಕೃತಿ ಮತ್ತು ಕಲೆಗಳ ಪ್ರಭಾವದಿಂದಾಗಿ ಒಂದು ವಿಶೇಷ ರೀತಿಯ ಶೈಲಿಗಾಗಿ ಬೆಳೆಯಿತು. ದೆಹಲಿ ಮತ್ತು ಆಗ್ರ ನಗರಗಳಲ್ಲಿ ನಿರ್ಮಿತವಾಗಿರುವ ಭವನಗಳನ್ನು ನೋಡಿದರೆ ಇದು ಚೆನ್ನಾಗಿ ವೇದ್ಯವಾಗುತ್ತದೆ.

ಭಾರತೀಯ ಇಸ್ಲಾಂ ಕಟ್ಟಡಗಳು ಹೆಚ್ಚು ಚತುರತೆಯಿಂದ ನಿರ್ಮಿತವಾಗಿವೆಯಲ್ಲದೆ, ನಿರ್ಮಾಣ ಕಲೆಯ ಅನೇಕ ಸಮಸ್ಯೆಗಳನ್ನು ಇವುಗಳಲ್ಲಿ ಪರಿಹರಿಸಲಾಗಿದೆ. ಮೊದಮೊದಲು ಇಸ್ಲಾಂ ದಂಡನಾಯಕರು ಭಾರತದ ಜೈನ ದೇವಾಲಯಗಳ ಗರ್ಭ ಗೃಹವನ್ನು ಒಡೆದುಹಾಕಿ, ಪಶ್ಚಿಮ ಭಾಗದಲ್ಲಿ ಮೆಕ್ಕ ಕಡೆಗೆ ಮಿಹ್ರಾಬ್ ಅನ್ನು (ಪೀಠ) ನಿರ್ಮಿಸಿದರು. ಇಸ್ಲಾಂ ಶೈಲಿಯ ಕಮಾನುಗಳನ್ನು ಉಪಯೋಗಿಸಿ, ಬಳಕೆಗೆ ತಂದರು. ಅಮೃತಶಿಲೆ ಮತ್ತು ಬಳಪದ ಕಲ್ಲಿನಲ್ಲಿ ಕಟ್ಟಲ್ಪಟ್ಟು ಬಹು ಅಂದವಾದ ಶೈಲಿಯಲ್ಲಿ ಇವರ ವಾಸ್ತುಶಿಲ್ಪ ಬೆಳೆಯಿತು.

ದೆಹಲಿಯ ಕುತುಬ್ ಮಿನಾರ್, ಜುಮ್ಮಾ ಮಸೀದಿ, ಕೆಂಪುಕೋಟೆಯೊಳಗಿನ ಅರಮನೆಗಳು, ಆಗ್ರಾದ ಕೆಂಪುಕೋಟೆ, ಫತೇಪುರ್ ಸಿಕ್ರಿ ನಗರ, ಅಕ್ಬರ್ ಹುಮಾಯೂನ್ ಮೊದಲಾದ ಚಕ್ರವರ್ತಿಗಳ ಗೋರಿಗಳು, ಎಲ್ಲಕ್ಕೂ ಮಿಗಿಲಾಗಿ ಪ್ರಪಂಚದ ಅದ್ಭುತಗಳ ಲ್ಲೊಂದಾದ ವಿಶ್ವವಿಖ್ಯಾತ ತಾಜ್‌ಮಹಲ್–ಇವು ಭಾರತೀಯ ಇಸ್ಲಾಂ ಶೈಲಿಯ ಪ್ರತೀಕವಾಗಿ ಇಂದೂ ಆಕರ್ಷಣೀಯವಾಗಿವೆ.

ಮುಸ್ಲಿಮರಾದ ಮೇಲೆ ಬಂದ ಆಂಗ್ಲರೂ ಇತರ ಸಾಮಂತ ರಾಜರೂ ಇಸ್ಲಾಂ ಶೈಲಿಯ ಕೆಲವು ರೂಪರೇಷೆಗಳನ್ನು ತಾವು ನಿರ್ಮಿಸಿದ್ದ ಕೆಲವು ಕಟ್ಟಡಗಳಲ್ಲೂ ಉಪಯೋಗಿಸಿದರು. ಮೈಸೂರಿನ ಅರಮನೆ ಇಂಥ ನಿರ್ಮಾಣ ಕಲೆಗೆ ಉತ್ತಮ ನಿದರ್ಶನವಾಗಿದೆ.

(ಕೆ.ಎಸ್.ಆರ್.ಜಿ.)

**ಇಸ್ಲಿಂಗ್‌ಟನ್ ಆಯೋಗ:** ವಿದ್ಯಾವಂತ ಭಾರತೀಯರನ್ನು ಉದ್ಯೋಗಗಳಿಗೆ ನೇಮಿಸುವ ವಿಷಯವಾಗಿ ಸಲಹೆ ನೀಡಲು 1912ರಲ್ಲಿ ನಿಯಮಿತವಾದ ಮಂಡಲಿ. ಲಾರ್ಡ್ ಇಸ್ಲಿಂಗ್‌ಟನ್ ಈ ಮಂಡಲಿಯ ಅಧ್ಯಕ್ಷ; ಲಾರ್ಡ್ ರೊನಾಲ್ಡ್ ಪೆ (ಲಾರ್ಡ್ ಜೆಟ್‌ಲೆಂಡ್), ಸರ್ ವ್ಯಾಲನ್‌ಟೀನ್ ಪಿರಾಲ್, ರ‍್ಯಾಂಸೆ ಮ್ಯಾಕ್‌ಡೊನಾಲ್ಡ್, ಹರ್ಬರ್ಟ್ ಫಿಷರ್, ಗೋಪಾಲಕೃಷ್ಣ ಗೋಖಲೆ, ಸರ್ ಅಬ್ದುರ್ ರಹೀಂ ಮೊದಲಾದ ಪ್ರಮುಖರು ಸದಸ್ಯರು. ಈ ಮಂಡಲಿ ವರದಿಯನ್ನು ಸಿದ್ಧಪಡಿಸುವ ಕಾಲಕ್ಕೆ 1914ರಲ್ಲಿ ಒಂದನೆಯ ಮಹಾಯುದ್ಧ ಪ್ರಾರಂಭವಾದ್ದರಿಂದ ಅದನ್ನು 1917ರಲ್ಲಿ ಪ್ರಸಿದ್ಧಪಡಿಸಬೇಕಾಯಿತು. ಲಂಡನ್ನಿನಲ್ಲಿ ನಡೆಯುವ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಸ್ಪರ್ಧಿಸಲು ವಿದ್ಯಾವಂತ ಭಾರತೀಯ ತರುಣರಿಗೆ ಅವಕಾಶ ನೀಡಬೇಕು; ಅಲ್ಲದೆ ಶೇ. 25 ಹುದ್ದೆಗಳು ಭಾರತೀಯರಿಗೆಂದೇ ಮೀಸಲಾಗಿರತಕ್ಕದ್ದು; ನೇಮಕ ಮಾತ್ರ ನೇರವಾಗೂ ಬಡ್ತಿ ಮೂಲಕವೂ ನಡೆಯತಕ್ಕದ್ದು, ಸೈನ್ಯೇತರ ಇಲಾಖೆಗಳಿಗೆ ಅಧಿಕಾರಿಗಳನ್ನು ಆರಿಸಲು ಇಂಗ್ಲೆಂಡಿನಲ್ಲಲ್ಲದೆ

ಭಾರತದಲ್ಲೂ ಸಿವಿಲ್ ಸರ್ವಿಸ್ (ಲೋಕಸೇವಾ) ಸ್ಪರ್ಧಾಪರೀಕ್ಷೆ ನಡೆಸಬೇಕು–ಎಂಬುವು ಈ ಸಮಿತಿಯ ಕೆಲವು ಮುಖ್ಯ ಸಲಹೆಗಳು. ಅಂತೂ ಸುಮಾರು ಅರ್ಧ ಶತಮಾನದಿಂದಲೂ ಭಾರತೀಯರು ನಡೆಸುತ್ತಿದ್ದ ಚಳವಳಿಗೆ ಇದರಿಂದ ಸ್ವಲ್ಪ ಸಮಾಧಾನ ಸಿಕ್ಕಂತಾಯಿತು. ಆದರೆ ಅತಿ ಮುಖ್ಯ ಹುದ್ದೆಗಳಿಗೆ ಬ್ರಿಟಿಷರನ್ನೇ ನೇಮಿಸುವ ಕೆಲಸ ನಿರಾತಂಕವಾಗಿ ಮುಂದುವರಿದಿತ್ತು. ಈ ಸೇವಾವ್ಯವಸ್ಥೆಯ ಬ್ರಿಟಿಷ್ ಅಧಿಕಾರಿಗಳು ಭಾರತೀಯ ಅಧಿಕಾರಿಗಳಿಗಿಂತ ಮೇಲು ಎಂಬ ಭಾವನೆ ಅಳಿಯಲಿಲ್ಲ. ಇದರಿಂದ ಭಾರತೀಯರಲ್ಲಿನ ಅಸಂತೃಪ್ತಿ ಕಡಿಮೆಯಾಗಲಿಲ್ಲ, ಪರಿಸ್ಥಿತಿ ಸ್ವಲ್ಪ ಸುಧಾರಿಸಬೇಕಾದರೆ ಮಾಂಟೆಗೂ ಚೆಮ್ಸ್‌ಫರ್ಡ್ ವರದಿ (**ನೋಡಿ**) ಬರಬೇಕಾಯಿತು. *

**ಇಳಂಗೋ ಅಡಿಗಳ್:** ತಮಿಳಿನಲ್ಲಿ ಲಭ್ಯವಿರುವ ಮೊತ್ತಮೊದಲಿನ ಸ್ವತಂತ್ರ ಶ್ರೇಷ್ಠ ಕಾವ್ಯವಾದ ಶಿಲಪ್ಪದಿಗಾರಂ ಎಂಬುದರ ಕರ್ತೃ. ಸು. 465 ಇವರು ಸಂಗಂ ಕಾಲದ ಅನಂತರದ ಕವಿ. ಮಣಿಮೇಖಲೈ ಎಂಬ ಬೌದ್ಧಕಾವ್ಯವನ್ನು ಬರೆದ ಶೀತ್ತಲೈಚ್ಚಾತ್ತನಾರರೂ ಇಳಂಗೋ ಅಡಿಗಳೂ ಸಮಕಾಲೀನರು. ಇಳಂಗೋ ಅಡಿಗಳ ಕಾಲ 2ನೆಯ ಶತಮಾನವೆಂದೂ ಒಂದು ಮತ.

ಇಳಂಗೋ ಅಡಿಗಳ್ ಒಬ್ಬ ರಾಜಕುಮಾರ. ಇಳಂಗೋ ಅಡಿಗಳ್ ಎಂಬುದನ್ನು ಇಳಂ+ಕೋ+ಅಡಿಗಳ್ ಎಂದು ಬಿಡಿಸಿ, ಎಳೆಯ ಯುವರಾಜ ಎಂದು ಅರ್ಥ ಮಾಡಬಹುದು. ಚೇರ ರಾಜ್ಯದ ದೊರೆಯಾಗಿದ್ದ ಸೆಂಗುಟ್ಟುವನ್ ಎಂಬಾತ ಇವರ ಅಣ್ಣ. ಶಿಲಪ್ಪದಿಗಾರಂನಲ್ಲಿ ಇವರು ತಮ್ಮ ಕಥೆಯನ್ನು ಹೇಳಿಕೊಂಡಿದ್ದಾರೆ. ಚಿಕ್ಕಂದಿನಲ್ಲಿ ಇವರು ನೋಡಲು ಬಲು ಮುದ್ದಾಗಿದ್ದರು. ಇವರೂ ಇವರ ಅಣ್ಣನೂ ತಮ್ಮ ತಂದೆಯೊಂದಿಗಿದ್ದಾಗ ತಂದೆಯ ಆಸ್ಥಾನಕ್ಕೆ ನೈಮಿತ್ತಿಕನೊಬ್ಬ ಬಂದ; ಇವರ ಮೋಹಕ ವ್ಯಕ್ತಿತ್ವವನ್ನು ಕಂಡು ಕೊಂಡಾಡಿದ. ಮುಂದೆ ಇವರೇ ಸಿಂಹಾಸನವನ್ನೇರುವರೆಂದು ಹಿಂದೆ ಮುಂದೆ ನೋಡದೆ ಹೇಳಿದ. ಈ ಮಾತು ಕೇಳಿದಾಗ ಇವರ ಅಣ್ಣನಿಗೆ ಕೊರಗು ತಟ್ಟಿತು. ಅಣ್ಣನ ಅಳಲನ್ನರಿತ ಇಳಂಗೋ ಅಡಿಗಳು ನೊಂದುಕೊಂಡರು. ತಾವು ದೊರೆತನವನ್ನೆಂದಿಗೂ ಬಯಸುವುದೇ ಇಲ್ಲವೆಂದು ಪ್ರತಿಜ್ಞೆ ಮಾಡಿದರು. ತಾವು ಮದುವೆಯಾದರೆ ತಮ್ಮ ಮಕ್ಕಳು ಸಿಂಹಾಸನಕ್ಕಾಗಿ ಅಣ್ಣನ ಮಕ್ಕಳೊಂದಿಗೆ ಸ್ಪರ್ಧಿಸಬಹುದಾದ್ದರಿಂದ ಎಲ್ಲವನ್ನೂ ತ್ಯಾಗಮಾಡಿ ಸನ್ಯಾಸಿಯಾಗಿ ಗುಣವಾಯಿರ್‌ಕೋಟ್ಟಂ ಎಂಬಲ್ಲಿ ತಪಸ್ಸು ಮಾಡಿದರು. ಈ ಕಾರಣದಿಂದ ಇವರನ್ನು ಅಡಿಗಳ್ ಅಥವಾ ಸಂತರೆಂದು ಕರೆಯುವುದು ರೂಢಿಯಾಯಿತು.

ಇಳಂಗೋ ಅಡಿಗಳ್ ಚೇರನಾಡಿನವರು, ಸಂಗೀತ ಸಾಹಿತ್ಯ ನಾಟಕಗಳಲ್ಲಿ ಬಲ್ಲಿದರು. ಚೇರ, ಚೋಳ, ಪಾಂಡ್ಯ ರಾಜ್ಯಗಳನ್ನು ಚೆನ್ನಾಗಿ ತಿಳಿದಿದ್ದವರು. ಪರಮತ ದ್ವೇಷವಿಲ್ಲದವರು. ಈ ಅಂಶಗಳೂ ಶಿಲಪ್ಪದಿಗಾರಂ ಕಾವ್ಯದಿಂದಲೇ ತಿಳಿದುಬರುತ್ತವೆ. ಈ ಕಾವ್ಯದಲ್ಲಿ ಕೆಲವೆಡೆಗಳಲ್ಲಿ ಜೈನಮತ ತತ್ತ್ವಗಳ ವಿಶೇಷವಾದ ವಿವರಣೆಗಳಿರುವುದರಿಂದ ಇವರು ಜೈನಮತಸ್ಥರೆಂದು ಊಹಿಸಲು ಸಾಧ್ಯವಿದೆ.

***ಶಿಲಪ್ಪದಿಗಾರಂ***: ತಮಿಳಿನ ಐದು ಮಹಾಕಾವ್ಯಗಳಲ್ಲಿ ಒಂದೆಂದು ಭಾವಿಸಲ್ಪಟ್ಟಿದೆ. ಇದರಲ್ಲಿ ಜೈನಧರ್ಮದ ಬಗೆಗೆ ಒಲವು ಕಂಡರೂ ಆಗಿನ ಕಾಲದ ಧಾರ್ಮಿಕ ಪ್ರವೃತ್ತಿಗಳನ್ನೆಲ್ಲ ಇದು ಬಿಂಬಿಸುತ್ತದೆ.

ತಮಿಳುನಾಡಿನಲ್ಲಿ ಜನಪ್ರಿಯವಾದ ಕಣ್ಣಗಿಯ ಕಥೆಯೇ ವಸ್ತುವಾಗಿ ಉಳ್ಳ ಶಿಲಪ್ಪದಿಗಾರಂನಲ್ಲಿ ಮೂರು ಕಾಂಡಗಳಿವೆ. ಮೊದಲನೆಯ ಪುಗಾರ್ ಕಾಂಡದಲ್ಲಿ ಚೋಳನಾಡಿನ ಹಿರಿಮೆಯನ್ನೂ ಅದರ ಮುಖ್ಯ ಪಟ್ಟಣವಾದ ಪೂಂಬುಗಾರ್ ಅಥವಾ ಕಾವೇರಿ ಪೊಂಬಟ್ಟಣದ ಸಮೃದ್ಧಿಯನ್ನು ಎರಡನೆಯ ಮಧುರೈ ಕಾಂಡದಲ್ಲಿ ಪಾಂಡ್ಯ ನಾಡಿನ ಮೇಲ್ಮೆಯನ್ನೂ ಅದರ ಮುಖ್ಯ ಪಟ್ಟಣವಾದ ಮಧುರೈ ಮಹಾನಗರದ ಸಂಪತ್ತನ್ನೂ ಮೂರನೆಯ ವಂಜಿ ಕಾಂಡದಲ್ಲಿ ಚೇರನಾಡಿನ ಹಿರಿಮೆಯನ್ನೂ ಅದರ ರಾಜಧಾನಿಯಾದ ವಂಜಿನಗರದಲ್ಲಿ ಕಣ್ಣಗಿ ಪ್ರತಿಷ್ಠಿತಳಾಗಿದ್ದ ರೀತಿಯನ್ನೂ ವರ್ಣಿಸಿದೆ.

ಶಿಲಪ್ಪದಿಗಾರಂ ಕಾವ್ಯದ ಕಥಾವಸ್ತು ಹೀಗಿದೆ: ಚೋಳನಾಡಿನ ಕಾವೇರಿಪೊಂಬಟ್ಟಣದಲ್ಲಿ ವಾಸಿಸುತ್ತಿದ್ದ ಕೋವಲನಿಗೂ ಕಣ್ಣಗಿಗೂ ವಿವಾಹವಾಗಿ ಇಬ್ಬರೂ ಸುಖವಾಗಿ ಸಂಸಾರ ಮಾಡುತ್ತಿದ್ದಾಗ ಕೋವಲನಿಗೆ ಮಾದವಿಯೆಂಬ ಗಣಿಕಾಸ್ತ್ರೀಯಲ್ಲಿ ಆಸಕ್ತಿಯುಂಟಾಗುತ್ತದೆ. ಆಕೆಯ ಸಹವಾಸದಲ್ಲಿ ಅವನು ತನ್ನ ಐಶ್ವರ್ಯವೆಲ್ಲವನ್ನೂ ಕಳೆದುಕೊಂಡು ಆಕೆಯ ಮನಸ್ತಾಪಕ್ಕೆ ಗುರಿಯಾಗಿ ಕಣ್ಣಗಿಯ ಬಳಿಗೆ ತಿರುಗಿ ಬರುತ್ತಾನೆ. ಕಣ್ಣಗಿಯ ಬಳಿಯಲ್ಲಿದ್ದದ್ದು ಆಗ ಎರಡು ಕಾಲ್ಬಳೆಗಳು ಮಾತ್ರ. (ಶಿಲಂಬು; ಶಿಲಂಬು + ಅಧಿಕಾರಂ; ಆದ್ದರಿಂದ ಶಿಲಪ್ಪದಿಗಾರಂ). ಅವನ್ನೇ ಕಣ್ಣಗಿ ತನ್ನ ಗಂಡನಿಗೆ ಕೊಡುತ್ತಾಳೆ. ಹೆಂಡತಿಯೊಂದಿಗೆ ಅವನು ಮಧುರೈಗೆ ಹೋಗಿ, ಅಲ್ಲಿ ಅವಳ ಕಾಲ್ಬಳೆಯೊಂದನ್ನು ವಿಕ್ರಯಿಸಲು ಹೋದಾಗ ಕಳ್ಳತನದ ಸುಳ್ಳು ಅಪವಾದಕ್ಕೆ ಗುರಿಯಾಗಿ ಮರಣದಂಡನೆಗೆ ಬಲಿಯಾಗುತ್ತಾನೆ. ಈ ವಾರ್ತೆ ಕೇಳಿದ ಪತಿವ್ರತಾ ಶಿರೋಮಣಿಯಾದ ಕಣ್ಣಗಿ ಕೋಪೋದ್ರಿಕ್ತಳಾಗಿ ಪಾಂಡ್ಯರಾಜನ ಆಸ್ಥಾನ ಪ್ರವೇಶಮಾಡಿ ತನ್ನ ಪತಿ ನಿರಪರಾಧಿಯೆಂದೂ ಅನ್ಯಾಯವಾಗಿ ಅವನ ಕಗ್ಗೊಲೆಯಾಯಿತೆಂದೂ ನಿರೂಪಿಸುತ್ತಾಳೆ. ತಾನು ವಿಚಾರಿಸದೆ ವಿಧಿಸಿದ ಶಿಕ್ಷೆಯ ಘೋರ ಅಪರಾಧವನ್ನರಿತ ಪಾಂಡ್ಯರಾಜ ಕೂಡಲೇ ಸತ್ತು ಬೀಳುತ್ತಾನೆ. ಅವನ ರಾಣಿಯಾದ ಕೋಪ್ಪೆರುಂದೇವಿಯೂ ತತ್‌ಕ್ಷಣವೇ ಪತಿಯನ್ನನುಸರಿಸುತ್ತಾಳೆ. ಆದರೂ ಕಣ್ಣಗಿಯ ಕೋಪ ತಣ್ಣಗಾಗುವುದಿಲ್ಲ. ಮಧುರೈ ನಗರವೇ ಸುಟ್ಟು ಭಸ್ಮವಾಗಲೆಂದು ಶಪಿಸುತ್ತಾಳೆ. ಮಧುರೈ ನಗರ ನಿರ್ನಾಮವಾಗುತ್ತದೆ. ಅಲ್ಲಿಂದ ಅವಳು ಚೇರನಾಡಿಗೆ ಹೋಗಿ ಇಂದ್ರ ಕಳುಹಿಸಿದ ವಿಮಾನವನ್ನೇರಿ ದೇವಲೋಕಕ್ಕೆ ಪ್ರಯಾಣ ಮಾಡುತ್ತಾಳೆ.

ಭಾರತೀಯ ಸಾಹಿತ್ಯದಲ್ಲಿ ದುರಂತ ಕಾವ್ಯಗಳು ತೀರ ವಿರಳ. ಇಳಂಗೋ ಅಡಿಗಳ್ ರಚಿಸಿದ ಈ ಕಾವ್ಯ ಒಂದು ಉತ್ತಮ ದುರಂತಕಾವ್ಯ. ರಾಜ ರಾಣಿಯರನ್ನಾಗಲಿ ಪುರಾಣ ವ್ಯಕ್ತಿಗಳನ್ನಾಗಲಿ ಕಥಾನಾಯಕ ನಾಯಕಿಯರೆಂದು ಆರಿಸಿಕೊಳ್ಳದೆ ಕಣ್ಣಗಿಯಂಥ ಸಾಮಾನ್ಯ ವ್ಯಕ್ತಿಗಳನ್ನೇ ಆರಿಸಿಕೊಂಡು ಬರೆದ ಈ ಕಾವ್ಯ ಇಳಂಗೋ ಅಡಿಗಳ ನವೀನ ದೃಷ್ಟಿಗೆ ಸಾಕ್ಷಿಯಾಗಿದೆ. ಕಾವ್ಯದಲ್ಲಿ ಕಣ್ಣಗಿಯ ಪಾತ್ರವೇ ಪ್ರಧಾನ. ಬಂಧದ ದೃಷ್ಟಿಯಿಂದ ಈ ಕೃತಿ ತೀರ ಸಡಿಲವೆನಿಸಬಹುದಾದರೂ ಇದರ ಕಾವ್ಯಗುಣವೂ ಪಾತ್ರಚಿತ್ರಣವೂ ಉತ್ಕೃಷ್ಟವಾಗಿದೆ. ವಿಧಿಗೆ ಅತಿ ಹೆಚ್ಚಿನ ಪ್ರಾಧಾನ್ಯ ಕೊಟ್ಟಿರುವುದೇ ಇದರ ಒಂದು ದೊಡ್ಡ ದೋಷವೆಂದು ಕೆಲವು ವಿಮರ್ಶಕರ ಮತ.

ಶಿಲಪ್ಪದಿಗಾರಂ ಹಾಗೂ ಮಣಿಮೇಖಲೈ–ಈ ಎರಡು ಕಾವ್ಯಗಳೂ ಸೇರಿ ಅರಮ್, ಪೊರುಳ್, ಇನ್ಬಮ್, ವಿಡು ಎಂಬ ಚತುರ್ವಿಧ ಪುರುಷಾರ್ಥಗಳನ್ನು ಪ್ರತಿಪಾದಿಸುತ್ತವೆಯೆಂದೂ ಮೊದಲನೆಯ ಮೂರು ಪುರುಷಾರ್ಥಗಳ ಪ್ರತಿಪಾದನೆ ಶಿಲಪ್ಪದಿಗಾರಂ ಕೃತಿಯಲ್ಲೂ ನಾಲ್ಕನೆಯದು ಮಣಿಮೇಖಲೈ ಕೃತಿಯಲ್ಲೂ ಎದ್ದು ಕಾಣುವುವೆಂದೂ ಹೇಳಲಾಗಿದೆ. ಆದರೆ ಮಣಿಮೇಖಲೈ ಬೌದ್ಧಧರ್ಮದ ಉತ್ಕೃಷ್ಟತೆಯನ್ನೇ ಪ್ರಚಾರ ಮಾಡುತ್ತದೆ. ಶಿಲಪ್ಪದಿಗಾರಂ ಕೃತಿಯಲ್ಲಿ ಕವಿಯ ಜೈನಧರ್ಮದ ಒಲವು ತೋರಿಬರುವುದಾದರೂ ಇದರಲ್ಲಿ ಕಲೆಯದೇ ಮೇಲುಗೈ ಆಗಿದೆ. ಇದು ಇಳಂಗೋ ಅಡಿಗಳರ ಉದಾತ್ತ ದೃಷ್ಟಿಯ ಪ್ರತೀಕವಾಗಿದೆ. (ಎನ್.ಕೆ.ಎಸ್.ಆರ್.)

**ಇಳಕಲ್ಲು:** ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಒಂದು ಮುಖ್ಯ ಊರು. ಹುನಗುಂದದ ದಕ್ಷಿಣಕ್ಕೆ 13 ಕಿಮೀಗಳ ದೂರದಲ್ಲಿದೆ. ಸನ್ನಿವೇಶ : 15° 55' ಉ. ಅ. 76° 7' ಪೂ. ರೇ. ಜನಸಂಖ್ಯೆ 1450 (2001). ಇಲ್ಲಿನ ಸೀರೆಗಳು ಬಹಳ ಪ್ರಸಿದ್ಧ, ನೇಯ್ಗೆಯ ಹಾಗೂ ಬಣ್ಣಹಾಕುವ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿದೆ. ಈ ಊರಿನಲ್ಲಿ ಬನಶಂಕರಿ, ಬಸವಣ್ಣ, ಮತ್ತು ವೆಂಕೋಬ ದೇವಸ್ಥಾನಗಳಿವೆ. ಕೊನೆಯದು ಪೂರ್ವಕಾಲದ ಶಿಲ್ಪಕಲೆಯಿಂದ ಕೂಡಿದೆ. ಇಲ್ಲಿ ಬಳಸಲಾಗಿರುವ ಕಲ್ಲಿನ ಕಂಬಗಳನ್ನು ಐಹೊಳೆಯಿಂದ ತಂದಿರಬಹುದೆಂದು ನಂಬಿಕೆ. ದೇವಸ್ಥಾನದ ಕಲ್ಲಿನ ಚಾವಣಿಯಲ್ಲಿ ದೂಲ ಮತ್ತು ಅಡ್ಡಪಟ್ಟಿಗಳನ್ನು ಕೆತ್ತಲಾಗಿದೆ. ಮಹಂತಸ್ವಾಮಿಗಳೆಂಬ ವಿರಕ್ತ ಸ್ವಾಮಿಗಳೊಬ್ಬರು ಇಲ್ಲಿ ಒಂದು ವೀರಶೈವ ಮಠವನ್ನು ಸ್ಥಾಪಿಸಿದ್ದಾರೆ. ಇದನ್ನು ಈ ಸ್ಥಳದ ಎಲ್ಲ ವಿಭಾಗದ ಜನರೂ ಆದರಿಸುತ್ತಾರೆ.

ಇಲ್ಲಿನ ಪೌರಸಭೆ 1867ರಲ್ಲಿ ಸ್ಥಾಪಿತವಾಯಿತು. ಅದರ 21 ಜನ ಸದಸ್ಯ ಸ್ಥಾನಗಳಲ್ಲಿ 2 ಮಹಿಳೆಯರಿಗಾಗಿ ಮೀಸಲಿವೆ. ಸದಸ್ಯರನ್ನು ನಾಲ್ಕು ವರ್ಷಗಳಿಗೊಂದಾವರ್ತಿ ಚುನಾಯಿಸಲಾಗುತ್ತದೆ. ಇಲ್ಲಿ ಎರಡು ಪ್ರೌಢಶಾಲೆಗಳು, ಒಂದು ಕಾಲೇಜು ಹಾಗೂ ಒಂದು ಸರ್ಕಾರಿ ಶಿಕ್ಷಕರ ತರಬೇತಿ ಕಾಲೇಜು ಇವೆ. (ಕೆ.ಎನ್.ಸಿ.)

**ಇಳಿಕಲು:** ಸಂಧಿಸುವ ಎರಡು ಸರಳರೇಖೆಗಳ ಅಥವಾ ಸಮತಲಗಳ ನಡುವಿನ ಕೋನ (ಇನ್‌ಕ್ಲಿನೇಷನ್); ಬಾಗು ಪರ್ಯಾಯ ಪದ. l ಮತ್ತು m ಎಂಬ ಎರಡು ರೇಖೆಗಳ (ಅಥವಾ p ಮತ್ತು q ಎಂಬ ಎರಡು ತಲಗಳ) ನಡುವಿನ ಕೋನ e ಆಗಿದ್ದರೆ ಒಂದನ್ನು ಕುರಿತು ಇನ್ನೊಂದರ ಇಳಿಕಲು e.



ಒಂದು ರೇಖೆ (ಅಥವ ತಲ) ಮಟ್ಟಸ (ಹಾರಿಜ಼ಾಂಟಲ್) ಆಗಿದೆಯೆಂದು ಭಾವಿಸಿದರೆ ಆಗ e ಕೋನವನ್ನು ಇನ್ನೊಂದು ರೇಖೆಯ (ಅಥವಾ ತಲದ) ಇಳಿಕಲು ಅಥವಾ (ರೂಢಿಯಲ್ಲಿ) ಇಳಿಜಾರು ಎನ್ನುತ್ತೇವೆ.

ಇಳಿಕಲುಸಮತಲ: p ಮತ್ತು q ಎಂಬ ಎರಡು ಸಮತಲಗಳಲ್ಲಿ q ಮಟ್ಟಸವಾಗಿವೆಯೆಂದು ಭಾವಿಸಿದರೆ ಆಗ p ತಲ q ವನ್ನು ಕುರಿತು ಇಳಿಕಲು ತಲವೆನ್ನಿಸುವುದು. ಇವೆರಡು ತಲಗಳು ಸಂಧಿಸುವ ರೇಖೆ l. ಅದರ ಮೇಲೆ ಯಾವುದೇ ಒಂದು A ಯನ್ನು ಆರಿಸಿ

ABಯನ್ನು pಯಲ್ಲಿಯೂ ACಯನ್ನು qನಲ್ಲಿಯೂ lಗೆ ಲಂಬವಾಗಿರುವಂತೆ ಎಳೆಯಬೇಕು. ಆಗ AB, ACಗಳ ನಡುವಿನ ಕೋನ (∠BAC=è) p ತಲದ ಇಳಿಕಲು. A ಬಿಂದು l ನ ಮೇಲೆ ಎಲ್ಲಿಯೇ ಇದ್ದರೂ èದ ಬೆಲೆ ಒಂದೇ ಆಗಿದೆ. pಯ ಇಳಿಕಲನ್ನು è ಅಳೆಯುವುದಾದರೂ ಈ ಕೋನದ ಟ್ಯಾಂಜೆಂಟಿನಿಂದ ಅದನ್ನು ಸೂಚಿಸುವುದು ವಾಡಿಕೆ. ಇದರ ಪ್ರಕಾರ pಯ ಇಳಿಕಲು tan è.ಈ ತ್ರಿಕೋನಮಿತೀಯ ಉತ್ಪನ್ನದ ಹೆಸರು p ಯ ಓಟ ಸ್ಲೋಪ್, ಗ್ರೇಡಿಯೆಂಟ್). ಆದ್ದರಿಂದ ಇಳಿಕಲು ಸೂಚಿಸುವ ಕೋನದ ಟ್ಯಾಂಜೆಂಟ್ ಓಟ ಎಂದಾಗುತ್ತದೆ. ಇದರ ಅನುಕೂಲತೆಗಳಿಷ್ಟು : ಕೋನದ ಬದಲು ಒಂದು ನಿರ್ದಿಷ್ಟ ಸಂಖ್ಯೆ ಇಳಿಕಲನ್ನು ಸೂಚಿಸುತ್ತದೆ; p ತಲದ ಮೇಲೆ ಒಂದು ಬಿಂದು ಆಗಿರಲಿ, PQವನ್ನು qಗೆ ಲಂಬವಾಗಿ ಎಳೆಯಬೇಕು: ಆಗ

PQ = Pಯ ಲಂಬದೂರ, AQ=Pಯ ಮಟ್ಟಸ ದೂರ, AP=Pಯ ತಲದೂರ. tan è ದ (ಆದ್ದರಿಂದ èದ) ಬೆಲೆ ತಿಳಿದಿರುವುದಿಂದ AQ, QP, PA ಇವುಗಳ ಪೈಕಿ ಯಾವುದೇ ಒಂದರ ಬೆಲೆ ಗೊತ್ತಿರುವಾಗ ಉಳಿದೆರಡರ ಬೆಲೆಗಳನ್ನು ಗಣಿಸಬಹುದು.

p ಸಮತಲದ ಮೇಲೆ ಅಸಂಖ್ಯಾತ ಸರಳರೇಖೆಗಳನ್ನು ಎಳೆಯಬಹುದು. ಇವುಗಳ ಪೈಕಿ lಗೆ ಲಂಬವಾಗಿರುವ ಎಲ್ಲ ಸರಳರೇಖೆಗಳೂ ಪರಸ್ಪರ ಸಮಾನಾಂತರವಾಗಿವೆ. ಇಂಥ ಒಂದೊಂದು ರೇಖೆಯ ಇಳಿಕಲು ಸಹ ಇತರ (ಎಂದರೆ, l ಗೆ ಲಂಬವಾಗಿರದ) ರೇಖೆಗಳ ಇಳಿಕಲುಗಳಿಗಿಂತ ಹೆಚ್ಚು ಇದೆ. ಈ ಕಾರಣದಿಂದ l ಗೆ ಲಂಬವಾಗಿರುವ ಮತ್ತು p ಸಮತಲದ ಮೇಲಿರುವ ಎಲ್ಲ (ಸಮಾನಾಂತರ) ರೇಖೆಗಳಿಗೂ ಗರಿಷ್ಠ ಓಟದ ರೇಖೆಗಳೆಂದು (ಲೈನ್ಸ್ ಆಫ್ ಗ್ರೇಟೆಸ್ಟ್ ಸ್ಲೋಪ್) ಹೆಸರಿದೆ.

ಒಂದು ದೊರಗು ಇಳಿಕಲು ಸಮತಲದ ಓಟ tanè ಆಗಿರಲಿ. ಅದರ ಮೇಲೆ W ತೂಕವಿರುವ P ಎಂಬ ಒಂದು ಕಣ ನಿಂತಿರಲಿ. Pಯ ಸಮತೋಲವನ್ನು ನಿರ್ಧರಿಸುವ ಬಲಗಳು ಮೂರು– ಅದರ ತೂಕ W, ತಲದ ಲಂಬ ಪ್ರತಿಕ್ರಿಯೆ (ನಾರ್ಮಲ್ ರೀಆಕ್ಷನ್) R ಮತ್ತು ತಲದ ಘರ್ಷಣ F.




ಸ್ಥಿತಿ ಶಾಸ್ತ್ರದ ಸಿದ್ಧಾಂತಗಳ ಪ್ರಕಾರ ಯಾವುದೇ ದಿಕ್ಕಿನಲ್ಲೂ ಈ ಬಲಗಳ ಘಟಕಗಳ ಬೈಜಿಕಮೊತ್ತ ಸೊನ್ನೆ ಆಗಬೇಕು. ಆದ್ದರಿಂದ

$$\tan\theta = \frac{PQ}{QA}, \quad \sin\theta = \frac{QP}{AP}, \quad \cos\theta = \frac{AQ}{AP}$$

F-W sinè=0

R-W cosè=0

F=R tan è

ಮೊದಲಿನ ಸಮೀಕರಣದಿಂದ ತಿಳಿಯುವ ಅಂಶವಿಷ್ಟು; W sinè ಕ್ಕಿಂತ ಸ್ವಲ್ಪ ಹೆಚ್ಚು ಬೆಲೆಯ ಬಲವನ್ನು Pಯ ಮೇಲೆ, AP ದಿಕ್ಕಿನಲ್ಲಿ ಬಲದ ಪ್ರಯುಕ್ತ ರೇಖೆ ಇರುವಂತೆ ಪ್ರಯೋಗಿಸಿದಾಗ, P ಕಣ ತಲದ ಶಿಖರವಾದ B ಎಡೆಗೆ ಸರಿಯತೊಡಗುತ್ತದೆ; ಈ ಸಂದರ್ಭದಲ್ಲಿ ಕಣದ ತೂಕದ ಬಹ್ವಂಶವನ್ನು ತಲವೇ ಹೊತ್ತಿರುತ್ತದೆ. ಪ್ರಾಯೋಗಿಕವಾಗಿ ಇದರಿಂದ ಉಪಯೋಗವಿದೆ–ಪ್ರಾರಂಭದಲ್ಲಿ P ಕಣ AC ಮಟ್ಟಸ ತಲದ ಮೇಲಿರುವುದೆಂದೂ ಅದನ್ನು Bಗೆ ಒಯ್ಯಬೇಕೆಂದೂ ಭಾವಿಸೋಣ; Cಯಿಂದ Bಗೆ ನೇರವಾಗಿ (ಲಂಬದೂರ) ಎತ್ತುವುದು ಒಂದು ವಿಧಾನವಾದರೆ A ಯಿಂದ Bಗೆ ಇಳಿಕಲು ಸಮತಲದ ಸಹಾಯದಿಂದ ಸರಿಸುವುದು ಇನ್ನೊಂದು ವಿಧಾನ. ಮೊದಲಿನದರಲ್ಲಿ ಪ್ರಯುಕ್ತಿಸಬೇಕಾದ ಬಲ Wಗಿಂತ ಹೆಚ್ಚು ಇರಬೇಕು; ಎರಡನೆಯದರಲ್ಲಿ ಇದು W sinè ಕ್ಕಿಂತ ಸ್ವಲ್ಪ ಹೆಚ್ಚು ಇದ್ದರೆ ಸಾಕು. ಎಂದರೆ, ಕಡಿಮೆ ಬಲವನ್ನು ಪ್ರಯುಕ್ತಿಸಿ ತೂಕವಸ್ತುಗಳನ್ನು ಇಳಿಕಲು ಸಮತಲದ ಸಹಾಯದಿಂದ ಎತ್ತರಕ್ಕೆ ಸರಿಸುವುದು ಸಾಧ್ಯ. ಹೀಗೆ ತೂಕಗಳ ಸಾಗಾಣಿಕೆಯಲ್ಲಿ ಇಳಿಕಲು ಸಮತಲಗಳ ಪ್ರಾಯೋಗಿಕ ಉಪಯೋಗ ಬಹಳವಾಗಿದೆ. ಕಾರ್ಖಾನೆ, ರೈಲ್ವೆನಿಲ್ದಾಣ ಮುಂತಾದೆಡೆಗಳಲ್ಲೆಲ್ಲ ಇದರ ಪ್ರತ್ಯಕ್ಷ ನಿದರ್ಶನಗಳನ್ನು ನೋಡಬಹುದು. (ಟಿ.ಟಿ.)

**ಇಳಿಗತಿ:** ಸಮಾಜಶಾಸ್ತ್ರ, ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿ ಬಳಕೆಗೆ ಬಂದಿರುವ ಒಂದು ಸಿದ್ಧಾಂತ. ಯೋಗ್ಯತೆಯ ಇಳಿಮುಖ ಪರಿಸ್ಥಿತಿಗೆ, ಅವನತಿಗೆ ಈ ಹೆಸರಿದೆ (ಡಿಕೆಡೆನ್ಸ್). ಇಳಿಗತಿಯೆಂಬ ಮಾತು ಹೊಸದಾದರೂ ಅಭಿಪ್ರಾಯ ಹೊಸದಲ್ಲ. ಕಾಲ ಕೆಟ್ಟು ಹೋಯ್ತು ಎಂಬ ಉದ್ಗಾರ ಎತ್ತದೇ ಇರುವ ತಲೆಮಾರು ಅಪರೂಪ. ಕೆಟ್ಟದೆಂಬ ಅಭಿಶಾಪ ವರ್ತಮಾನ ಸಮಯದ ನೆತ್ತಿಯಮೇಲೆ ಕುಳಿತೇ ಇರುತ್ತದೆ. ದ್ವಾಪರಯುಗ, ಕಲಿಯುಗ. ಉತ್ಸರ್ಪಿಣಿ, ಅವಸರ್ಪಿಣಿ, ಚಿನ್ನದ ಅವಧಿ, ಕಂಚಿನ ಅವಧಿ ಇತ್ಯಾದಿ ವಿಭೇದಗಳನ್ನು ಎಲ್ಲರೂ ಬಲ್ಲರು. ವಾಲ್ಮೀಕಿ ವ್ಯಾಸರಾದ ಮೇಲೆ ಕಾವ್ಯಕ್ಕೆ ಇಳಿಮುಖ ತಾನೆ? ಈಸ್ಕಿಲಸ್ ಸೊಫೋಕ್ಲೀಸರ ತರುವಾಯ ಗ್ರೀಕ್ ರುದ್ರನಾಟಕ ಕುಸಿದು ಬೀಳದೆ ಮತ್ತೇನು? ಪ್ರಾಚೀನ ಸಂಸ್ಕೃತಿ ಕಣ್ಮರೆಯಾದ ಅನಂತರ ಯುರೋಪಿನಲ್ಲಿ ಕತ್ತಲೆಯ ಕಾಲವೇ ಅಲ್ಲವೆ? ಜನಪದದ ಇಂಥ ಗುಂಪು ಕೂಗನ್ನು ಸಾವಧಾನವಾಗಿ ವಿಚಾರ ಮಾಡಬೇಕಾಗುತ್ತದೆ. ಇಳಿಗತಿಯೆಂಬುದಕ್ಕೆ ಸಿದ್ಧಾಂತದ ಸ್ವರೂಪವೂ ಹಿರಿಮೆಯೂ ಬಂದದ್ದು 17, 18ನೆಯ ಶತಮಾನಗಳಲ್ಲಿ. ಫ್ರಾನ್ಸಿನ ಮಾಂಟೆಸ್ಕ್ಯೂ ಇಂಗ್ಲೆಂಡಿನ ಗಿಬನ್ ಇಬ್ಬರೂ ರೋಮನ್ ಚಕ್ರಾಧಿಪತ್ಯದ ಏರಿಕೆ ಇಳಿತ ಪತನಗಳನ್ನು ಕುರಿತು ಪಾಂಡಿತ್ಯಪೂರ್ಣವಾದ ಚರ್ಚೆ ನಡೆಸಿದರು. ಇಟಲಿಯ ವಿಕೊ ಚರಿತ್ರೆಯ ಮುನ್ನಡೆ, ಹಿನ್ನಡೆ ಎಂಬ ಶಬ್ದಗಳನ್ನು ಆಲೋಚನಾಪರರ ಮುಂದಿಟ್ಟ. ನಾನಾ ಶೃಂಖಲೆ ಕೃತಕತೆಗಳಿಂದ ನಾಗರಿಕತೆ ಕ್ಷೀಣವಾಗಿದೆ. ಬುನಾದಿಯ ಕಾಡುಜನರಂತೆ ಸರಳವೂ ಸಹಜವೂ ಆದ ಬದುಕಿಗೆ ನರವರ್ಗ ಹಿಂತಿರುಗಬೇಕು ಎಂದು ರೂಸೊ ಸಲಹೆಯಿತ್ತ. ಜನಕ್ಕಿಂತೂ ಜನಾಂಗಗಳಿಗೂ ಹಾಗೆಯೇ ವೃದ್ಧಿ ಕ್ಷಯಗಳು ಅನಿವಾರ್ಯವೆಂಬ ನಂಬಿಕೆ ಬೇರೂರಿತು. ಏನಾದರೂ ಇಳಿಗತಿಯೆಂಬ ನುಡಿಯಲ್ಲಿ ಕೊಂಚ ನಿಂದೆ ಇದ್ದೇ ಇತ್ತು. ಮುದಿತನದ ಮುಖ ಸುಕ್ಕನ್ನೂ ಮರಣದ ನಿಶ್ಚೇಷ್ಟತೆಯನ್ನೂ ಅಂದವೆನ್ನುವವರಾರು, ಹೊಗಳುವವರಾರು?

ಆದರೆ, ಭೂಗೋಳದ ಆ ಭಾಗ ಈ ಭಾಗದ ಜನ ಯಾವೊತ್ತು ಯಾವ ರೀತಿ ವರ್ತಿಸುತ್ತಾರೊ ಖಚಿತವಾಗಿ ಮುಂಗಾಣ್ಕೆ ಕಾಣುವವರಾರು? 19ನೆಯ ಶತಮಾನದ ಮಧ್ಯಭಾಗದಲ್ಲಿ ಫ್ರಾನ್ಸಿನಲ್ಲಿ ಒಂದು ಸಾಹಿತ್ಯಕ್ರಾಂತಿ ಉಂಟಾಯಿತು. ನಾಗರಿಕ ಮಂದಿಯ ಬೇಸರದ ಬಾಳನ್ನು ಕಲಾವಂತಿಕೆಯಿಂದ ಕಾದಂಬರಿಯಲ್ಲಿ ಚಿತ್ರಿಸಿದ ಪ್ರತಿಭಾಶಾಲಿ ಫ್ಲೋಬರ್. ಬೋದಿಲೇರ್ ಎಂಬ ದಕ್ಷ ಕವಿ ತನ್ನ ಅವಧಿಯನ್ನು ಸರಿಯಾಗಿ ರೂಪಿಸುವುದಕ್ಕೆ ಹಿಂದೆ ಇಳಿಗತಿಯನ್ನು ಹೊಂದಿದ್ದ ಲ್ಯಾಟಿನ್ ಬಲು ಉಪಯುಕ್ತವೆಂದು ಭಾವಿಸಿ, ಅದರಲ್ಲಿ ಒಂದು ಕವನವನ್ನು ಕಟ್ಟಿದ. ಗೋತಿಯರ್ ಎಂಬಾತ ಇಳಿಗತಿಯೇ ಆಧುನಿಕ ಜೀವನದ ಸ್ವಾರಸ್ಯವೆಂದು ಒತ್ತಿ ಹೇಳಿದ. ಇವರಾರಿಗೂ ಇಳಿಗತಿ ಎಳ್ಳಷ್ಟೂ ಕುರೂಪವಾಗಿ ತೋರಲಿಲ್ಲ; ಪದಾರ್ಥಗಳೂ ಪರಿಸ್ಥಿತಿಯೂ ಇಳಿಗತಿಯಲ್ಲಿ ಇರುವುದರಲ್ಲೇ ಒಂದು ವಿಶಿಷ್ಟ ಲಾವಣ್ಯ, ಒಂದು ಅತ್ಯಾಕರ್ಷಣೆ, ಇವರಿಗೆ ! ಭಗ್ನಾವಶೇಷ, ಸಮಾಧಿ, ಕಣ್ಣು ಕುಕ್ಕುವ ಹಳದಿ ಕೆಂಪು ಬಣ್ಣ, ದೊಡ್ಡದಾಗಿ ವಿಕೃತವಾಗಿ ಬೆಳೆದ ಹೂಮರ, ಕೊಳಕು ಚಿಂದಿ ಬಟ್ಟೆ, ಸ್ತ್ರೀ ಪುರುಷರ ಅಸಹ್ಯ ವ್ಯಾಧಿ ವ್ಯವಹಾರಗಳು–ಎಲ್ಲವೂ ರಸಾನುಭವದ ದೃಷ್ಟಿಯಿಂದ ರುಚಿಕರವಾದವು. ಧರ್ಮದ ದೌರ್ಬಲ್ಯವೂ ನೀತಿಯ ಸಡಿಲತೆಯೂ ಸೊಗಸಾದವೇ. ಇವರ ಅನುಯಾಯಿಗಳಾದ ಮಲರ್ಮೆ, ವರ್ಲೇನ್, ಯೂಯಿಸ್‌ಮನ್ ಮೊದಲಾದವರಿಂದ ಇಳಿಗತಿ ಒಂದು ಚಳವಳಿಯಾಗಿ ಪರಿಣಮಿಸಿತು. ಆಸ್ಕರ್ ವೈಲ್ಡ್, ಇಟಲಿಯ ಗೇಬ್ರಿಯಲ್ ಡನನ್ಜಿಯೊಗಳನ್ನು ಈ ಗುಂಪಿಗೆ ಸೇರಿಸಬೇಕು. ಅನೇಕ ದೇಶಗಳಲ್ಲಿ ಸಣ್ಣ ಸಣ್ಣ ಗುಂಪುಗಳು ಹುಟ್ಟಿಬಂದು ಇಳಿಗತಿಯ ಮಠಗಳಾದುವು. ಅವರ ಮೂಲ ಸೂತ್ರ ಇದು: ಕಲೆಯೆಂಬುದು ಮಾನವ ನಿರ್ಮಿತವಾದ ತಂತ್ರ; ಅದಕ್ಕೂ ಪ್ರಕೃತಿಗೂ ವೈಷಮ್ಯ ಅನಿವಾರ್ಯ. ಬೇಕಾದರೆ ಪ್ರಕೃತಿ ಕಲೆಯನ್ನು ಹಿಂಬಾಲಿಸಲಿ ! ನಾನಾ ವೈಪರೀತ್ಯಗಳೂ ವಿಕಟಾಭಾಸಗಳೂ ಕೆಲ ಕಾಲ ಇಳಿಗತಿಯ ಹೆಸರಿನಲ್ಲಿ ಆಚರಣೆಗೆ ಬಂದುವು. ಈಗ ಈ ಪಂಥ ಪ್ರಚಲಿತವಾಗಿಲ್ಲ. ಅದು ಅಳಿದು ಎಷ್ಟೋ ಸಂವತ್ಸರಗಳಾಗಿವೆ. (ಎಸ್.ವಿ.ಆರ್.)

ಸಾಹಿತ್ಯ ಮತ್ತು ಕಲೆಗಳ ಚರಿತ್ರೆಯಲ್ಲಿ, ಹಿಂದಿನ ಯುಗದ ಶ್ರೇಷ್ಠತೆ ಇಲ್ಲದ ಯುಗವನ್ನು 'ಇಳಿಗತಿ' ಎಂದು ವರ್ಣಿಸುವುದು. ಆದರೆ 19ನೆಯ ಶತಮಾನದ ಫ್ರಾನ್ಸಿನಲ್ಲಿ 'ಇಳಿಗತಿ ಚಳವಳಿ' ಎಂದೇ ಒಂದು ಚಳುವಳಿ ಮೂಡಿತು ಕಲೆ ಸ್ವತಂತ್ರವಾದದು, ಅದಕ್ಕೆ ನೀತಿ–ಔಚಿತ್ಯಗಳ ಸಂಕೋಲೆ ಇರಲಾಗದು, ಕೃತಕ ಸೃಷ್ಟಿಯ ನಿಸರ್ಗಕ್ಕಿಂತ ಹಿರಿದು, ಹೊಸ ಇಂದ್ರಿಯಾನುಭವಗಳ ಅನ್ವೇಷಣೆಯಿಂದ ಬದುಕು ಸಾರ್ಥಕವಾಗುವುದು ಎನ್ನುವುದು ಈ ಪಂಥದ ನಿಲುವು. (ಎಲ್.ಎಸ್.ಎಸ್.)

**ಇಳಿಗಾಲುವೆ:** ಮರ, ಕಲ್ಲು, ಆಹಾರಧಾನ್ಯಗಳು, ಕಲ್ಲಿದ್ದಲು ಇತ್ಯಾದಿ ತೂಕವಾದ ಸಾಮಗ್ರಿಗಳನ್ನು ಮೇಲಿನ ಮಟ್ಟದಿಂದ ಕೆಳಕ್ಕೆ ಇಳಿಜಾರಿನಲ್ಲಿ ತಳ್ಳುವ ನೈಸರ್ಗಿಕ ಇಲ್ಲವೆ ಕೃತಕವಾದ ತೊಟ್ಟಿ, ನಾಲೆ ಇಲ್ಲವೆ ಕಂಬಿ ಸಾಲು (ಷೂಟ್). ಹೊಳೆಗಳಿಗೆ ಅಡ್ಡಲಾಗಿ ಕಲ್ಲುಗಾರೆಯ ಕಟ್ಟೆಯನ್ನು ಕಟ್ಟುವಾಗ ಭರ್ತಿಕಲ್ಲನ್ನು ಕಡಿದಾದ ಗುಡ್ಡದ ನೆತ್ತಿಯಿಂದ ತಪ್ಪಲಿನಲ್ಲಿ ರಸ್ತೆಯನ್ನು ಮಾಡಿ ಸಾಗಿಸುವುದು ಕೆಲವು ವೇಳೆ ಸಾಧ್ಯವಾಗಲಾರದು. ಅಂಥ ಕಡೆಗಳಲ್ಲಿ ಹಳೆಯ ರೈಲ್ವೆ ಕಂಬಿಗಳನ್ನು ಒಂದರ ಪಕ್ಕದಲ್ಲೊಂದರಂತೆ ಇಳಿಕಲ್ಲಿನಲ್ಲಿ ಭದ್ರಮಾಡಿ ಮೇಲಿನಿಂದ ಕಲ್ಲುಗಳನ್ನು ಕೆಳಕ್ಕೆ ಉರುಳಿಸಿ ಅಲ್ಲಿಂದ ಗಾಡಿಗಳ ಮೇಲೆಯೋ ಲಾರಿಗಳ ಮೇಲೆಯೋ ಕಟ್ಟೆಯನ್ನು ಕಟ್ಟುವ ಜಾಗಕ್ಕೆ ಸಾಗಿಸಬಹುದು. ಕಾಂಕ್ರೀಟಿನ ಮೇಲಿನಿಂದ ನದಿಯಲ್ಲಿ ತೇಲಿಬಂದ ಮರಗಳನ್ನು ಕಟ್ಟೆಯ ಹಿಂದಿನ ಮುಖದಲ್ಲಿ ಕೊರೆದ ಕಾಲುವೆಯ ಮೂಲಕ ತಿರುಗಿ ಕೆಳಕ್ಕೆ ತಳ್ಳುತ್ತಾರೆ. ನೀರಿನ ಇಳಿಗಾಲುವೆ ಮರದಿಂದ ಮಾಡಿದ ಕಡಿದಾದ ಇಳಿಕಲು. ಇದರ ತಳದಲ್ಲಿ ಹೆಚ್ಚು ಆಳವಿಲ್ಲದ ಕೊಳವಿರುತ್ತದೆ. ಇದರ ಮೇಲೆ ಕ್ರೀಡಾರ್ಥವಾಗಿ ಚಪ್ಪಟೆತಳದ ದೋಣಿಗಳನ್ನು ಇಳಿಸುತ್ತಾರೆ. (ಎಚ್.ಸಿ.ಕೆ.)

**ಇಳಿಗೊಳವೆ:** ಒಂದು ಪಾತ್ರೆಯಲ್ಲಿರುವ ದ್ರವಪದಾರ್ಥವನ್ನು ಇನ್ನೊಂದು ಪಾತ್ರೆಗೆ ವರ್ಗಾಯಿಸಲು ಬಳಸುವ, ಬಗ್ಗಿಸಿದ ಮತ್ತು ಅಸಮ ಬಾಹುಗಳಿರುವ ಕೊಳವೆ (ಸೈಫನ್). ದ್ರವ ತುಂಬಿದ ಪಾತ್ರೆಯನ್ನು ಎತ್ತರಮಟ್ಟದಲ್ಲೂ ಖಾಲಿ ಪಾತ್ರೆಯನ್ನು ತಗ್ಗುಮಟ್ಟದಲ್ಲೂ ಇಟ್ಟು ಇಳಿಗೊಳವೆಯ ಗಿಡ್ಡ ಬಾಹುವನ್ನು ದ್ರವದೊಳಗೆ ಮುಳುಗಿಸುತ್ತಾರೆ; ಉದ್ದ ಬಾಹುವನ್ನು ಖಾಲಿ ಪಾತ್ರೆಯೊಳಗಿಟ್ಟು ದ್ರವ ಅಲ್ಲಿಗೆ ಬರುವಂತೆ ಹೀರುತ್ತಾರೆ. ಒಮ್ಮೆ ದ್ರವ ಹರಿಯಲು

ಪ್ರಾರಂಭಿಸಿದರೆ ಮುಂದೆ ದ್ರವ ತುಂಬಿದ ಪಾತ್ರೆ ಖಾಲಿಯಾಗುವ ವರೆಗೆ ಅಥವಾ ಗಿಡ್ಡ ಬಾಹು ದ್ರವಸ್ಪರ್ಶ ಕಳೆದುಕೊಳ್ಳುವವರೆಗೆ (ಯಾವುದು ಮೊದಲಾಗುವುದೋ ಅಲ್ಲಿಯವರೆಗೆ) ಇಳಿಗೊಳವೆಯ ಮೂಲಕ ದ್ರವ ಹರಿದು ಖಾಲಿ ಪಾತ್ರೆಯನ್ನು ತುಂಬುತ್ತದೆ. ಸೀಮೆಎಣ್ಣೆ ಟಿನ್ನು ಖಾಲಿಮಾಡುವಾಗ, ಕೊಳಾಯಿಯಿಂದ ನೀರನ್ನು ಕೆಳಗಿನ ತೊಟ್ಟಿಗೆ ಹರಿಸಬೇಕಾದಾಗ ಒಂದು ರಬ್ಬರ್ ನಳಿಗೆಯ ಸಹಾಯದಿಂದ ಇಳಿಗೊಳವೆ ಕ್ರಿಯೆ ನಡೆಸುವುದು ವಾಡಿಕೆ.

ಇಳಿಗೊಳವೆಯ ತತ್ತ್ವವಿಷ್ಟು : ದ್ರವದ ತೆರೆದ ಮೇಲ್ಮೈ ಮೇಲೆ ವಾಯುಸಂಮರ್ದವಿದೆ. ಎಂದರೆ ದ್ರವಸಂಮರ್ದ ಮತ್ತು ವಾಯುಸಂಮರ್ದ ಪರಸ್ಪರ ಸಮಾನ ಮತ್ತು ವಿರುದ್ಧ ದಿಕ್ಕುಗಳಲ್ಲಿದ್ದು ದ್ರವ ಸಮತೋಲದಲ್ಲಿದೆ. ಒಂದು ನಿರ್ವಾತ ಕೊಳವೆಯ ಬಾಯಿಯನ್ನು ಕೊಳವೆಯಲ್ಲಿ ಮುಳುಗಿಸಿದಾಗ ಆ ಕೊಳವೆಯ ಒಳಗೆ ದ್ರವ ಒಂದು ನಿರ್ದಿಷ್ಟ ಎತ್ತರಕ್ಕೆ ಏರುವುದನ್ನು ನೋಡಬಹುದು. ಈ ಎತ್ತರ ದ್ರವದ ಸಾಂದ್ರತೆಯನ್ನು ಅವಲಂಬಿಸಿದೆಯೇ ವಿನಾ ಕೊಳವೆಯ ಆಕೃತಿ ಅಥವಾ ಅಡ್ಡಕೊಯ್ತವನ್ನಲ್ಲ. ದ್ರವ ಏರುವ ಈ ಎತ್ತರವನ್ನು ವಾಯುಭಾರ ಸೂಚಿಯಾಗಿ ಪರಿಗಣಿಸುತ್ತೇವೆ. ಒಂದೊಂದು ದ್ರವಕ್ಕೆ ಒಂದೊಂದು ಎತ್ತರದ ಸ್ಥಳದಲ್ಲಿ ಈ ಸೂಚಿ ಬೇರೆ ಬೇರೆಯಾಗಿರುವುದು. ಸಮುದ್ರಮಟ್ಟದಲ್ಲಿ ನೀರು ಏರುವ ಎತ್ತರ ಸು. 33.8';ಪಾದರಸ ಏರುವ ಎತ್ತರ ಸು. 30".




ಈ ಎತ್ತರ ದ್ರವ ಸೂಚಿಸುವ ವಾಯುಭಾರ. ತಾತ್ವಿಕವಾಗಿ, ಇಳಿಗೊಳವೆಯ ಪ್ರಯೋಗದಲ್ಲಿ ಅದನ್ನು ನಿರ್ವಾತಗೊಳಿಸಿ ಗಿಡ್ಡ ಬಾಹುವಿನ ತೆರೆದ ಬಾಯಿಯನ್ನು ದ್ರವತುಂಬಿದ ಪಾತ್ರೆಯೊಳಗೆ ಮುಳುಗಿಸುತ್ತೇವೆ (A). ಆಗ ಸಹಜವಾಗಿ ಅದರೊಳಗೆ ಏರಿದ ದ್ರವ ಬಾಗನ್ನು (B) ಉತ್ತರಿಸಿ ಮುಂದಿನ ತಗ್ಗಿನ ಪ್ರದೇಶಕ್ಕೆ ಇಳಿಯುತ್ತದೆ.

ಇಲ್ಲಿ AB(=x) ಎತ್ತರ (ಎಂದರೆ ದ್ರವ ಮಟ್ಟದಿಂದ ಇಳಿಗೊಳವೆಯ ಬಾನವರೆಗಿನ ಲಂಬ ಎತ್ತರ) ಆ ದ್ರವ ಸೂಚಿಸುವ ವಾಯುಭಾರ ಎತ್ತರಕ್ಕಿಂತ ಹೆಚ್ಚಾಗಿದ್ದರೆ ದ್ರವ ಬಾಗಿನ ವರೆಗೆ ಏರದ ಕಳಮಟ್ಟದಲ್ಲಿಯೇ ನಿಲ್ಲುವುದು; ಆಗ ಇಳಿಗೂಳವ ಅಪ್ರಯೋಜಕವಾಗುತ್ತದೆ. ನೀರನ್ನು ಇಳಿಗೊಳವೆ ಮೂಲಕ ಸಾಗಿಸಬೇಕಾದಾಗ x ಬೆಲೆ ಸು. 33' ಗಿಂತ ಕಡಿಮೆ ಇರಬೇಕು. ಇನ್ನೂ ಒಂದು ರೀತಿಯಲ್ಲಿ ಇಳಿಗೊಳವೆಯ ತತ್ತ್ವವನ್ನು ಪರಿಶೀಲಿಸಹುದು.

ಗಿಡ್ಡ ಬಾಹುವಿನೊಳಗಿನ ಸಂಮರ್ದ = ವಾಯುಸಂಮರ್ದ (p)
- x ಎತ್ತರದ ದ್ರವಸಂಮರ್ದ (p')

ಉದ್ದ ಬಾಹುವಿನೊಳಗಿನ ಸಂಮರ್ದ = ವಾಯುಸಂಮರ್ದ (p)
- (x+h) ಎತ್ತರ ದ್ರವಸಂಮರ್ದ (p' + p1)

ಆದ್ದರಿಂದ ಗಿಡ್ಡ ಬಾಹುವಿನೊಳಗಿನ ಸಂಮರ್ದ (p' - p1) ಉದ್ದ ಬಾಹುವಿನೊಳಗಿನ ಸಂಮರ್ದ (p - p' - p') ಕ್ಕಿಂತ ಹೆಚ್ಚು ಎಂಬುದು ಸ್ಪಷ್ಟವಾಗಿದೆ. ಇದರ ಪರಿಣಾಮವಾಗಿ ಅಧಿಕ ಸಂಮರ್ದವಿರುವೆಡೆಯಿಂದ (A) ಕಡಿಮೆ ಸಂಮರ್ದವಿರುವೆಡೆಗೆ (D) ದ್ರವ ಹರಿಯುತ್ತದೆ.

*

**ಇಳಿಮುಖ ಉಪಯುಕ್ತತೆಯ ಸೂತ್ರ :** ಯಾವುದೇ ಸರಕನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಪಡೆದಾಗ, ಯಾವುದೋ ಒಂದು ಘಟ್ಟದ ಅನಂತರ ಅದರ ಬಯಕೆಯ ತೀವ್ರತೆ ಕಡಿಮೆಯಾಗುತ್ತ ಹೋಗುವುದೆಂಬ ಅನುಭವಸಿದ್ಧವೂ ಸ್ವಾಭಾವಿಕವೂ ಆದ ವಿಷಯ ವನ್ನು ನಿರ್ದಿಷ್ಟವಾಗಿ ನಿರೂಪಿಸುವ ಅರ್ಥಶಾಸ್ತ್ರಸೂತ್ರ. ಒಬ್ಬ ಅನುಭೋಗಿಯ ಇತರ ಸರಕುಗಳ ಅನುಭೋಗ ಏಕರೀತಿಯಾಗಿದ್ದು, ಒಂದು ಸರಕಿನ ಅನುಭೋಗವನ್ನು ಆತ ಹೆಚ್ಚಿಸುತ್ತ ಹೋದರೆ, ಹೀಗೆ ಹೆಚ್ಚುವ ಪ್ರಮಾಣದ ಸರಕಿನ ಅಂಚಿನ ಉಪಯುಕ್ತತೆ (ಎಂದರೆ ಆ ಸರಕಿನ ಅಂಚಿನ ಘಟಕದ ಉಪಯುಕ್ತತೆ) ಕ್ರಮೇಣ ಇಳಿಯುತ್ತ ಸಾಗುತ್ತದೆ.

ಒಬ್ಬ ಅನುಭೋಗಿ ತಾನು ಬಯಸುವ ಸರಕೊಂದನ್ನು ಸಮಾನ ಪ್ರಮಾಣದ ಘಟಕಗಳಲ್ಲಿ ಒಂದೊಂದು ಘಟಕವನ್ನಾಗಿ ಪಡೆಯುತ್ತ ಹೋಗುವನೆಂದೂ ಹೀಗೆ ಒಂದೊಂದಾಗಿ 5 ಘಟಕಗಳನ್ನು ಪಡೆಯುವನೆಂದೂ ಊಹಿಸಿದ ಪಕ್ಷದಲ್ಲಿ ಮೊದಲನೆಯ ಘಟಕದಿಂದ ಇಂತಿಷ್ಟು ಪ್ರಮಾಣದ ತೃಪ್ತಿ ದೊರಕುವುದೆಂದು ಭಾವಿಸಿದರೆ, ಎರಡು, ಮೂರು, ನಾಲ್ಕು ಮತ್ತು ಐದನೆಯ ಘಟಕಗಳ ಅನುಭೋಗದಿಂದ ಆತ ಹೊಂದುವ ಒಟ್ಟು ತೃಪ್ತಿಯ ಪ್ರಮಾಣ ಕ್ರಮವಾಗಿ ಹೆಚ್ಚಬಹುದಾದರೂ ಆ ಸರಕಿನ ಯಾವುದೋ ಘಟ್ಟದಿಂದ ಮುಂದಕ್ಕೆ ಇಳಿಯುತ್ತ ಹೋಗಬಹುದು. ಹೀಗೆ ಕ್ರಮ ಕ್ರಮವಾಗಿ ಸಮಪ್ರಮಾಣದಲ್ಲಿ ಅಧಿಕಾಧಿಕವಾಗಿ ಆತ ಪಡೆಯುತ್ತಿರುವ ಒಂದೊಂದು ಹೆಚ್ಚಿನ ಘಟಕವೂ ಅಂಚಿನ ಘಟಕ. ಇದರ ಉಪಯು ಕ್ತತೆಯೇ ಅಂಚಿನ ಉಪಯುಕ್ತತೆ, ಈ ಅಂಚಿನ ಉಪಯುಕ್ತತೆ ಒಂದು ಘಟ್ಟದಿಂದಾಚೆಗೆ ಇಳಿಯುತ್ತ ನಡೆಯುತ್ತದೆ; ಸೊನ್ನೆಯತ್ತ ಸಾಗುತ್ತದೆ. ಈ ಅಂಚಿನ ಘಟಕದಿಂದ ಲಭಿಸಿದ ತೃಪ್ತಿ ಅಥವಾ ಉಪಯುಕ್ತತೆ ಸೊನ್ನೆಯನ್ನು ತಲುಪಿದಾಗ ಆ ಸರಕಿನ ಎಲ್ಲ ಘಟಕಗಳ ಒಟ್ಟು ಉಪಯುಕ್ತತೆ ಪರಮಾವಧಿ ಮುಟ್ಟಿದಂತೆ. ಅಲ್ಲಿಂದ ಮುಂದೆ ಆ ಸರಕಿನ ಉಪಯುಕ್ತತೆ ಧನಾತ್ಮಕವಾಗಿರದೆ ಋಣಾತ್ಮಕವಾಗುತ್ತದೆ. ಆದ್ದರಿಂದ ಅದು ಆ ಹಂತಮುಟ್ಟುವ ಮುನ್ನವೇ ಅನುಭೋಗಿ ಆ ಸರಕು ಪಡೆಯುವುದನ್ನು ನಿಲ್ಲಿಸುತ್ತಾನೆ. ಆ ಸರಕು ಪುಕ್ಕಟೆ ದೊರಕುವುದಾದರೆ ಅಂಚಿನ ಉಪಯುಕ್ತತೆ ಸೊನ್ನೆ ಆಗುವವರೆಗೂ ಅದರ ಅನುಭೋಗವನ್ನು ಆತ ಮುಂದುವರಿಸಿಯಾನು,




ಚಿತ್ರ 1.

ಅದಕ್ಕೆ ಬೆಲೆ ಕೊಡಬೇಕಾಗಿದ್ದಲ್ಲಿ, ಅದರ ಅಂಚಿನ ಘಟಕಕ್ಕಾಗಿ ಹಣ ಕೊಡುವುದರ ಅನುಪಯುಕ್ತತೆಯನ್ನು (ಡಿಸ್‌ಯುಟಿಲಿಟಿ) ಸರಕಿನಿಂದ ಲಭಿಸುವ ಉಪಯುಕ್ತತೆಯೊಡನೆ ಹೋಲಿಸಿ, ಉಚಿತವೆನಿಸುವ ಹಂತದಲ್ಲಿ ಆತ ಅದರ ಅನುಭೋಗ ನಿಲ್ಲಿಸುತ್ತಾನೆ. ಪದಾರ್ಥದ ಒಟ್ಟು ಉಪಯುಕ್ತತೆ ಇಳಿಮುಖದರದಲ್ಲೇ ಹೆಚ್ಚಾಗುವುದನ್ನು ಮುಂದೆ ಕೊಟ್ಟಿರುವ ಒಂದನೆಯ ನಕ್ಷೆಯೂ ಅಂಚಿನ ಉಪಯುಕ್ತತೆ ಇಳಿಮುಖವಾಗುವುದನ್ನು ಎರಡನೆಯ ನಕ್ಷೆಯೂ ತೋರಿಸುತ್ತದೆ.

ಮೊದಲನೆಯ ನಕ್ಷೆಯಲ್ಲಿ ಒಟ್ಟು ಉಪಯುಕ್ತತೆಯನ್ನು ತೋರಿಸಿದೆ. ಅನುಭೋಗಿ ಬಳಸುವ ಸರಕಿನ ಘಟಕ ಸಂಖ್ಯೆ ಏರಿದಂತೆ ಆತನಿಗೆ ಅವುಗಳ ಉಪಯುಕ್ತತೆ ಒಟ್ಟಿನಲ್ಲಿ




ಚಿತ್ರ 2.

ಏರುತ್ತ ಸಾಗಿದೆಯೆಂಬುದನ್ನು ಆ ಕಂಬಗಳ ಎತ್ತರ ಹೆಚ್ಚುತ್ತಿರುವುದರಿಂದ ಗೊತ್ತಾಗುತ್ತದೆ. ಆದರೆ ಹೀಗೆ ಅಧಿಕವಾಗಿ ಅನುಭೋಗಿಸುತ್ತ ಹೋದಂತೆಲ್ಲ ಆ ಸರಕಿನ ಅಂಚಿನ ಘಟಕದ ಉಪಯುಕ್ತತೆ ಕಡಿಮೆಯಾಗುತ್ತದೆಂಬುದನ್ನು ಆಯಾ ಘಟ್ಟಗಳ ಕಂಬಗಳ ಕಪ್ಪು ಛಾಯೆಯ ಭಾಗಗಳಿಂದ ವ್ಯಕ್ತವಾಗುತ್ತದೆ. ಎಂದರೆ ಆ ಸರಕುಗಳ ಒಟ್ಟು ಉಪಯುಕ್ತತೆ ಇಳಿಯುವ ದರದಲ್ಲಿ ಏರುತ್ತದೆ.

ಎರಡನೆಯ ನಕ್ಷೆಯಲ್ಲಿ ಅಂಚಿನ ಉಪಯುಕ್ತತೆಯನ್ನು ಮಾತ್ರವೇ ತೋರಿಸಿದೆ. ಇದು ಹೇಗೆ ಇಳಿಯುತ್ತ ಸಾಗುತ್ತದೆಂಬುದನ್ನು ಎತ್ತರ ಕಡಿಮೆಯಾಗುತ್ತ ಸಾಗುವ ಐದು ಕಂಬಗಳೂ ಸೂಚಿಸುತ್ತವೆ. ಆರನೆಯ ಘಟಕದ ಘಟ್ಟದಲ್ಲಿ ಅಂಚಿನ ಉಪಯುಕ್ತತೆ ಸೊನ್ನೆ. ಅಲ್ಲಿಂದ ಮುಂದೆ ಅನುಪಯುಕ್ತತೆ.

ಉಪಯುಕ್ತತೆಯನ್ನು ಒಂದು ರೀತಿಯಾಗಿ ಅಳೆಯುವುದು ಸಾಧ್ಯ. ಆದರೆ ಈ ಪ್ರಯತ್ನ ಮಾಡುವ ಮೊದಲು ಈ ಕೆಲವು ಊಹೆಗಳು ಅವಶ್ಯ : ಅನುಭೋಗಿಸುವ ಸರಕುಗಳ ಸಮಾನ ಗುಣವುಳ್ಳವಾಗಿರಬೇಕು; ಅನುಗುಣ ಪ್ರಮಾಣದ ಘಟಕಗಳಾಗಿರಬೇಕು; ಅನುಭೋಗಿಗಳ ಅಭಿರುಚಿ ಏಕರೀತಿ ಇರಬೇಕು; ಒಂದು ಘಟಕವನ್ನು ಪಡೆದ ಮೇಲೆ ಇನ್ನೊಂದು ಘಟಕ ಪಡೆಯುವ ವರೆಗಿನ ಕಾಲ ಹೆಚ್ಚಿರಬಾರದು. ಇಳಿಮುಖ ಉಪಯುಕ್ತತೆಯ ಸೂತ್ರ ಈ ಊಹೆಗಳನ್ನೇ ಅವಲಂಬಿಸಿದೆ. ಈ ಸೂತ್ರವನ್ನು ಪ್ರಪಂಚದ ವಾಸ್ತವ ಸಂದರ್ಭಗಳಿಗೆ ಅನ್ವಯಿಸುವಾಗ ಇರುವ ಇತಿಮಿತಿಗಳೆಷ್ಟೆಂಬುದು ಇದರಿಂದ ಸ್ಪಷ್ಟ.

ಸರಕುಸೇವೆಗಳ ಅನುಭೋಗದಲ್ಲಿ ತೋರುವ ಇಳಿಮುಖ ಉಪಯುಕ್ತತೆಯ ಪ್ರವೃತ್ತಿಯಿಂದಾಗಿ ಮಿತವ್ಯಯ ದೃಷ್ಟಿಯಿಂದ ಅನುಭೋಗಿ ಹೇಗೆ ವರ್ತಿಸಬಹುದೆಂಬುದರ ಅಧ್ಯಯನಕ್ಕೂ ಹಣ, ಬೇಡಿಕೆ, ಬೆಲೆ, ತೆರಿಗೆ, ವೆಚ್ಚ ಮುಂತಾದ ಅರ್ಥ ಮೀಮಾಂಸೆಯ ಅನೇಕ ವಿಭಾಗಗಳ ವಿಶ್ಲೇಷಣೆಗೂ ಈ ಸೂತ್ರ ಸಹಾಯಕ. (ಎ.ಪಿ.ಎಸ್.)

**ಇಳಿಮುಖ ಪ್ರತಿನಿಧಾನ ಅಂಚುದರ ಸೂತ್ರ:** ಒಬ್ಬ ಅನುಭೋಗಿ ತನ್ನಲ್ಲಿರುವ ಒಂದು ಸರಕು ಅಥವಾ ಸೇವೆಗೆ ಪ್ರತಿಯಾಗಿ ಇನ್ನೊಂದು ಸರಕನ್ನೋ–ಸೇವೆಯನ್ನೋ ಪಡೆಯುವಾಗ, ಆ ಇನ್ನೊಂದು ಸರಕಿನ ಅಥವಾ ಸೇವೆಯ ಒಂದೊಂದು ಹೆಚ್ಚಿನ ಘಟಕಕ್ಕೂ ತಾನು ಕೊಡಬಯಸುವ ಸರಕಿನ ಅಥವಾ ಸೇವೆಯ ಪ್ರಮಾಣ ಕಡಿಮೆಯಾಗುತ್ತ ಹೋಗುವುದೆಂಬುದನ್ನು ನಿರೂಪಿಸುವ ಅರ್ಥಶಾಸ್ತ್ರ ಸೂತ್ರ (ಲಾ ಆಫ್ ಡಿಮಿನಿಷಿಂಗ್ ಮಾರ್ಜಿನಲ್ ರೇಟ್ ಆರ್ಫ್ ಸಬ್‌ಸ್ಟಿಟ್ಯೂಷನ್). ಇಳಿಮುಖ ಉಪಯುಕ್ತತೆಯ ಸೂತ್ರಕ್ಕೂ ಇದಕ್ಕೂ ನೇರ ಸಂಬಂಧ.

ಹಣ ಕೊಟ್ಟು ಕೊಳ್ಳುವ ಸರಕು ಸೇವೆಗಳಿಗೂ ಈ ಸೂತ್ರ ಅನ್ವಯವಾಗುತ್ತದೆ. ಒಂದು ಸರಕನ್ನೋ ಸೇವೆಯನ್ನೋ ಹೆಚ್ಚು ಹೆಚ್ಚಾಗಿ ಪಡೆದಂತೆಲ್ಲ ಆತನಿಗೆ ಸಾಪೇಕ್ಷವಾಗಿ ಆ ಪದಾರ್ಥದ ಉಪಯುಕ್ತತೆ ಕಡಿಮೆ ಆಗುವುದರಿಂದ ಆ ಸರಕಿನ ಇನ್ನೊಂದು ಘಟಕಕ್ಕೆ ಪ್ರತಿಯಾಗಿ ಕೊಡಬಯಸುವ ಹಣದ ಪ್ರಮಾಣ ಕಡಿಮೆಯಾಗುವುದು ಸಹಜ. ಒಂದು ಸರಕಿನ ಅಥವಾ ಸೇವೆಯ ನಿರ್ದಿಷ್ಟ ಪ್ರಮಾಣಕ್ಕೆ ಅನುಭೋಗಿ ಕೊಡಬಯಸುವ ಬೆಲೆಯೇ ಅದು ಪ್ರತಿನಿಧಾನದ ಅಂಚಿನ ದರ.

ಪರಮಾವಧಿ ತೃಪ್ತಿ ಪಡೆಯುವ ದೃಷ್ಟಿಯಿಂದ ಹಲವು ವಿವಿಧ ಸರಕು ಸೇವೆಗಳ ಬಯಕೆಗಳ ನಡುವೆ ಅನುಭೋಗಿ ಆಯ್ಕೆ ಮಾಡುವ ಜೋಡಣೆಯ ಸ್ವರೂಪವೂ ತತ್ಸಂಬಂಧವಾಗಿ ಆತನ ವರ್ತನೆಯ ರೀತಿನೀತಿಗಳೂ ಅರ್ಥಶಾಸ್ತ್ರದ ಒಂದು ಮುಖ್ಯ ಅಧ್ಯಯನ ವಿಷಯ, ಉಪಯುಕ್ತತೆಯನ್ನಳೆಯಬಹುದು ಎಂಬ ಊಹೆಯ ಆಧಾರದ ಮೇಲೆ ಅರ್ಥಶಾಸ್ತ್ರದ ನವ ಅಭಿಜಾತ ಪಂಥ ರಚಿಸಿದ ಸೂತ್ರಗಳನ್ನು ನಿರಾಕರಿಸಿ, ಅದನ್ನು ಹೋಲಿಸುವುದು ಮಾತ್ರ ಸಾಧ್ಯವೆಂಬ ಭಾವನೆಯ ಆಧಾರದ ಮೇಲೆ ಕೆಲವು ಆಧುನಿಕ ಅರ್ಥಶಾಸ್ತ್ರಜ್ಞರು ರಚಿಸಿರುವ ಹೊಸ ಸಿದ್ಧಾಂತಗಳಿಗೆ ಅಳವಡುವಂತೆ ಈ ಇಳಿಮುಖ ಅಂಚು ದರ ಸೂತ್ರ ರಚಿತವಾಗಿದೆ. ಹಿಂದೆಯೇ ಎಡ್ಜ್‌ವರ್ತ್. ಆರ್ವಿಂಗ್ ಫಿಷರ್, ವಿಲ್‌ಫ್ರೆಡೋ ಪೇರೇಟೊ ಮುಂತಾದ ಗಣ್ಯ ಅರ್ಥಶಾಸ್ತ್ರಜ್ಞರು ಈ ನಿಟ್ಟಿನಲ್ಲಿ ಆಲೋಚಿಸಿದ್ದರಾದರೂ ಈ ಹೊಸ ಚಿಂತನೆಗೆ ಅನುಸಾರವಾದ ಸಿದ್ಧಾಂತಗಳಿಗೆ ಖಚಿತರೂಪ ಕೊಟ್ಟವರು ಜೆ.ಆರ್.ಹಿಕ್ಸ್ ಮತ್ತು ಆರ್.ಜಿ.ಡಿ.ಅಲೆನ್.

ಒಬ್ಬ ವ್ಯಕ್ತಿ ಅನುಕ್ರಮವಾಗಿ ಒಂದು ಸರಕಿನ ಅಥವಾ ಸೇವೆಯ ಘಟಕಗಳನ್ನು ಇನ್ನೊಂದು ಸರಕಿನ ಅಥವಾ ಸೇವೆಯ ಘಟಕಗಳಿಗೆ ವಿನಿಮಯ ಮಾಡಲು ಸಿದ್ಧವಿರುವ ದರವೇ ಪ್ರತಿನಿಧಾನದ ಅಂಚು ದರ. ಉದಾಹರಣೆಗೆ, ಒಬ್ಬಾತನಲ್ಲಿ ಆರಂಭದಲ್ಲಿ x ಸರಕು ತಾನು ಬಯಸುವುದಕ್ಕಿಂತ ಅಲ್ಪ ಪ್ರಮಾಣದಲ್ಲಿಯೂ y ಸರಕಿನ ಪ್ರಮಾಣ ಹೆಚ್ಚಾಗಿಯೂ ಇರುವುದಾದರೆ, x ಸರಕಿನ ಇನ್ನೂ ಕೆಲವು ಘಟಕಗಳನ್ನು ಪಡೆಯಲು ಆತ ಹೆಚ್ಚು ಪ್ರಮಾಣದಲ್ಲಿ ಸರಕು ಕೊಡಲು ಸಿದ್ಧನಾಗಿರುವನೆಂದು ಹೇಳಬಹುದು. x ಸರಕಿನ ಇನ್ನೊಂದು ಘಟಕ ಹೊಂದಲು ಇದಕ್ಕೆ ಪ್ರತಿಯಾಗಿ ಆತ ತ್ಯಜಿಸಲು ಸಿದ್ಧವಿರುವ y ಸರಕಿನ ಪ್ರಮಾಣವೇ ಪ್ರತಿನಿಧಾನದ ಅಂಚಿನ ದರ; ಅಂದರೆ ಒಬ್ಬ ವ್ಯಕ್ತಿಗೆ ಆಸಕ್ತಿಯಿರುವ ಎರಡು ಸರಕುಗಳ ವಿನಿಮಯದಲ್ಲಿ ಅವುಗಳ ಅಂಚಿನ ಘಟಕಗಳ ವಿನಿಮಯದರ. ಅಂಚಿನ ಘಟಕಗಳಿಗೆ ಆತ ನೀಡುವ ವಿನಿಮಯ ಮೌಲ್ಯವೆಂದೂ ಇದನ್ನು ಹೇಳಬಹುದು.

ಪ್ರತಿನಿಧಾನದ ಅಂಚು ದರಕ್ಕೆ ಇಳಿಯುವ ಪ್ರವೃತ್ತಿ ಇರುವುದೆಂಬುದೇ ಈ ಸೂತ್ರ. ಈ ಎರಡು ಸರಕುಗಳಲ್ಲಿ ಒಂದನ್ನು ಇನ್ನೊಂದಕ್ಕೆ ಪ್ರತಿನಿಧಾನಿಸುವ ಕ್ರಿಯೆಯಲ್ಲಿ ಒಂದು ಸರಕಿನ ಹೆಚ್ಚು ಘಟಕಗಳನ್ನು ಪಡೆಯುವುದಕ್ಕಾಗಿ ಅನುಭೋಗಿ ತ್ಯಜಿಸುವ ಇನ್ನೊಂದು ಸರಕಿನ ಘಟಕಗಳ ಪ್ರಮಾಣ–ಅಂದರೆ ಪ್ರತಿನಿಧಾನದ ಅಂಚಿನ ದರ–ಕ್ರಮವಾಗಿ ಇಳಿಯುತ್ತ ಸಾಗುತ್ತದೆಯೆಂಬ ಈ ಸೂತ್ರದ ನಿರೂಪಣೆಯಲ್ಲಿ ವ್ಯಕ್ತವಾಗುವ ಭಾವನೆಯನ್ನು ಔದಾಸೀನ್ಯ ರೇಖೆಯ ಸಹಾಯದಿಂದ ವಿಸ್ತರಿಸಬಹುದು. **(ನೋಡಿ– ಔದಾಸೀನ್ಯ–ರೇಖೆಗಳು)** (ಎ.ಪಿ.ಎಸ್.)

**ಇಳಿಮುಖ ಪ್ರತಿಫಲ ಸೂತ್ರ:** ಪದಾರ್ಥೋತ್ಪಾದನೆಯ ಅಂಗಗಳ ಪರಸ್ಪರ ಪ್ರಮಾಣಗಳನ್ನು ವ್ಯತ್ಯಾಸಗೊಳಿಸುವುದರಿಂದ ಪ್ರತಿಫಲದ ಮೇಲಾಗುವ ಪರಿಣಾಮಗಳನ್ನು ಸೂಚಿಸುವ ಸೂತ್ರಗಳಲ್ಲೊಂದು. ಉತ್ಪಾದನೆ ಅಂಗಗಳಲ್ಲಿ ಒಂದನ್ನು ಸ್ಥಿರವಾಗಿರಿಸಿಕೊಂಡು ಉಳಿದವನ್ನು ಹೆಚ್ಚಿಸುತ್ತ ಹೋದರೆ ಯಾವುದೋ ಒಂದು ಘಟ್ಟದಿಂದ ಮುಂದಕ್ಕೆ ಉತ್ಪನ್ನದ ಆಧಿಕ್ಯದ ವೇಗ ಇಳಿಮುಖವಾಗುವುದೆಂಬ ಅರ್ಥಶಾಸ್ತ್ರ ನಿಯಮ. ಕೃಷಿಕ್ಷೇತ್ರಕ್ಕೆ ಸಂಬಂಧಿಸಿದ್ದೆಂದು ನಂಬಲಾಗಿದ್ದ ಈ ಸೂತ್ರ ಉತ್ಪಾದನೆಯ ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುವುದೆಂದು ಈಗ ಸಿದ್ಧಪಟ್ಟಿದೆ.

ಅತ್ಯಂತ ಪ್ರಾಚೀನ ಗ್ರೀಕ್ ಬರಹಗಾರನಾದ ಜೆನಫನ್ ಕೃಷಿಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ನಿಯಮವನ್ನು ಕುರಿತು ವಿವೇಚನೆ ನಡೆಸಿದ್ದಾನೆ. ತಮ್ಮ ಭೂಮಿಗೆ ಎಷ್ಟು ಕೆಲಸಗಾರರು ಬೇಕೆಂಬುದನ್ನು ಭೂಮಾಲೀಕರು ಹೇಳಬಲ್ಲ; ಅಗತ್ಯಕ್ಕಿಂತ ಹೆಚ್ಚಿನ ಕೆಲಸಗಾರರನ್ನು ನೇಮಿಸಿಕೊಂಡರೆ ಉತ್ಪನ್ನ ನಷ್ಟವೇ ಪರಿಣಾಮ–ಎಂಬುದು ಈತ ಬರೆದ ಮಾತು. ಅನೇಕ ಶತಮಾನಗಳ ಅನಂತರ ಬಂದ ಪ್ರಕೃತಿ ಪ್ರಾಧಾನ್ಯವಾದಿ (ಫಿಜಿಯೋಕ್ರಾಟ್ಸ್) ಅರ್ಥಶಾಸ್ತ್ರಜ್ಞರು ಜೆನಫನ್ನನ ವಾದಕ್ಕೆ ಪುಷ್ಟಿ ಕೊಟ್ಟರು. ಈ ಪಂಥದ ಪ್ರಮುಖ ಬರಹಗಾರರಲ್ಲಿ ಒಬ್ಬನಾದ ಟೂರ್ಗೋ ಕೃಷಿಕ್ಷೇತ್ರಕ್ಕೆ ಈ ನಿಯಮ ಹೇಗೆ ಅನ್ವಯವಾಗುತ್ತದೆ ಎಂಬುದನ್ನು ವಿಶದವಾಗಿ ನಿರೂಪಿಸಿದ. ಹೆಚ್ಚು ಹೆಚ್ಚು ಬಂಡವಾಳವನ್ನು ಒಂದು ನಿರ್ದಿಷ್ಟ ಭೂಭಾಗದ ಮೇಲೆ ನಿಯೋಜಿಸಿದಾಗ, ಪ್ರಾರಂಭದಲ್ಲಿ ಉತ್ಪನ್ನದ ಮಟ್ಟ ವೃದ್ಧಿಯಾಗುವುದೆಂದೂ ಆದರೆ ಒಂದು ಘಟ್ಟದ ಅನಂತರ ಬಂಡವಾಳದ ನಿಯೋಜನೆ ವೃದ್ಧಿಯಾದಂತೆ ಅದಕ್ಕೆ ಸಮಪ್ರಮಾಣದಲ್ಲಿ ಉತ್ಪನ್ನ ವೃದ್ಧಿಯಾಗುವುದಿಲ್ಲವೆಂದೂ ಎಂದರೆ ಬಂಡವಾಳದ ಪ್ರಮಾಣಕ್ಕಿಂತ ಕಡಿಮೆಯಾಗುತ್ತ ಬರುವುದೆಂದೂ ಈ ಇಳಿತ ಶೂನ್ಯದತ್ತ ಸಾಗುವುದೆಂದೂ ನಿರೂಪಿಸಿದ.

ಇಳಿವರಿ ಪ್ರತಿಫಲ ಸೂತ್ರ ಅಭಿಜಾತ ಪಂಥದವರ ಹಸ್ತದಲ್ಲಿ ಸಾಕಷ್ಟು ಹದಗೊಂಡಿತೆಂದು ಹೇಳಬಹುದು. ಇವರಲ್ಲಿ ಅನೇಕ ಅರ್ಥಶಾಸ್ತ್ರಜ್ಞರು ತಮ್ಮ ಪ್ರಸಿದ್ಧ ಸಿದ್ಧಾಂತಗಳನ್ನು ಮಂಡಿಸಲು ಈ ನಿಯಮವನ್ನು ಆಧಾರಸ್ತಂಭವನ್ನಾಗಿ ಮಾಡಿಕೊಂಡರು. ಡೇವಿಡ್ ರಿಕಾರ್ಡೋ ತನ್ನ ಗೇಣಿ ಹಾಗೂ ಶ್ರಮಸಿದ್ಧಾಂತವನ್ನು ಪ್ರತಿಪಾದಿಸುವುದಕ್ಕೂ ಮಾಲ್ಥಸ್ ತನ್ನ ಜನಸಂಖ್ಯೆಯ ಸಿದ್ಧಾಂತವನ್ನು ಮಂಡಿಸುವುದಕ್ಕೂ ಈ ಸೂತ್ರವನ್ನು ಉಪಯೋಗಿಸಿಕೊಂಡರು. ಇವರಲ್ಲದೆ ವೆಸ್ಟ್, ಸೀನಿಯರ್, ಮಾರ್ಕ್ಸ್, ಮಾರ್ಷಲ್ ಸಹ ಈ ಸೂತ್ರದ ಉಪಯೋಗ ಪಡೆದುಕೊಂಡರು.

ಡೇವಿಡ್ ರಿಕಾರ್ಡೋ ಈ ಸಿದ್ಧಾಂತವನ್ನು ಉಪಯೋಗಿಸಿಕೊಂಡು ಭೂಮಿಯಲ್ಲಿ ಹೇಗೆ ಗೇಣಿ ಉದ್ಭವವಾಗುತ್ತದೆಂಬುದನ್ನೂ ಕೂಲಿ ಹೇಗೆ ಹೆಚ್ಚುತ್ತ ಹೋಗುತ್ತದೆಂಬುದನ್ನೂ ಚರ್ಚಿಸಿದ್ದಾನೆ. ಜನಸಂಖ್ಯೆ ಏರಿದಂತೆಲ್ಲ ಭೂಮಿಗೆ ಬೇಡಿಕೆ ಹೆಚ್ಚುತ್ತ ಹೋಗುತ್ತದೆ. ಪ್ರಾರಂಭದಲ್ಲಿ ಹೆಚ್ಚು ಫಲವತ್ತಾದ ಭೂಮಿಯಲ್ಲಿ ಮಾತ್ರವೇ ಕೃಷಿಕಾರ್ಯ ಸಾಗುತ್ತಿರುತ್ತದೆ. ಅನಂತರ ದಿನಗಳಲ್ಲಿ, ಕಡಿಮೆ ಫಲವತ್ತಾದ ಭೂಮಿಯನ್ನೂ ಕೃಷಿಗೆ ಬಳಸುವುದು ಅಗತ್ಯವಾಗುತ್ತದೆ. ಆದರೆ ಇಳಿಮುಖ ಪ್ರತಿಫಲ ನಿಯಮದಿಂದಾಗಿ, ಬರಬರುತ್ತ ಈ ನೆಲದಲ್ಲಿ ಉತ್ಪನ್ನ ಕಡಿಮೆಯಾಗುತ್ತದೆ. ವಿವಿಧ ಫಲಕ್ಷೇತ್ರದಿಂದಾಗಿ ಗೇಣಿ ಉದ್ಭವಿಸಿದರೂ ಇಳಿಮುಖ ಪ್ರತಿಫಲದಿಂದಾಗಿ ಆಹಾರದ ಬೆಲೆ ವೃದ್ಧಿಯಾಗುತ್ತದೆ. ಜೀವನದ ಮಟ್ಟ ಹೆಚ್ಚುವುದರಿಂದ ಕೂಲಿ ಹೆಚ್ಚಾಗುತ್ತ ಹೋಗುತ್ತದೆ. ಗೇಣಿ ಹಾಗೂ ಲಾಭಕ್ಕೆ ವಿಪರ್ಯಯ ಸಂಬಂಧವಿರುವುದರಿಂದ ಲಾಭ ಬರಬರುತ್ತ ಕಡಿಮೆಯಾಗುವುದು ಅನಿವಾರ್ಯ. ಹೀಗೆ ಭವಿಷ್ಯದ ನಿರಾಶಾದಾಯಕ ಸ್ಥಿತಿಯನ್ನು ವರ್ಣಿಸಲು ಡೇವಿಡ್ ರಿಕಾರ್ಡೋ ಇಳಿಮುಖ ಪ್ರತಿಫಲ ಸೂತ್ರದ ಉಪಯೋಗ ಪಡೆದುಕೊಂಡ. ಆದರೆ ಕೃಷಿವಿಜ್ಞಾನ ಈತನ ಸಿದ್ಧಾಂತವನ್ನು ಸುಳ್ಳಾಗಿಸಬಹುದೆಂಬುದನ್ನು ವೈಜ್ಞಾನಿಕ ವಿಧಾನಗಳಿಂದ ಪ್ರತಿಫಲದ ಇಳಿಮುಖ ಪ್ರವೃತ್ತಿಯನ್ನೇ ಬದಲಾಯಿಸಬಹುದೆಂಬುದನ್ನೂ ರಿಕಾರ್ಡೋ ಮನಗಾಣಲಿಲ್ಲ.

ಅಭಿಜಾತ ಪಂಥದ ಮತ್ತೊಬ್ಬ ಪ್ರಮುಖ ಅರ್ಥಶಾಸ್ತ್ರಜ್ಞನಾದ ಥಾಮಸ್ ರಾಬರ್ಟ್ ಮಾಲ್ಥಸ್ ಇಳಿಮುಖ ಪ್ರತಿಫಲಸೂತ್ರವನ್ನು ಆಧಾರವಾಗಿ ಬಳಸಿಕೊಂಡು 1798ರಲ್ಲಿ ಜನಸಂಖ್ಯಾ ಸಿದ್ಧಾಂತವೆಂಬ ಪ್ರಬಂಧ ಪ್ರಕಟಿಸಿದ. ಜನಸಂಖ್ಯೆ ವೇಗವಾಗಿ ಬೆಳೆಯುವ ಶಕ್ತಿ ಪಡೆದಿರುತ್ತದೆ; ಆಹಾರದ ಉತ್ಪನ್ನವಾದರೋ ಇಳಿಮುಖ ಪ್ರತಿಫಲ ಸೂತ್ರಕ್ಕೆ ಬದ್ಧವಾಗಿದೆ; ಆದ್ದರಿಂದ ಆಹಾರೋತ್ಪಾದನೆಯ ಹೆಚ್ಚಳಕ್ಕಿಂತ ಜನಸಂಖ್ಯೆ ವೇಗವಾಗಿ ವೃದ್ಧಿಗಾಗುತ್ತದೆ; ಆಹಾರ ಸಮಸ್ಯೆ ಉದ್ಭವಿಸುತ್ತದೆ–ಎಂದು ಈತ ಪ್ರತಿಪಾದಿಸಿದ.

ಪ್ರಜಾಸಂಖ್ಯೆಯನ್ನು ನಿರೋಧಕಗಳಿಂದ ತಡೆಗಟ್ಟಬಹುದೆಂಬುದನ್ನಾಗಲೀ ಸುಧಾರಿತ ಹಾಗೂ ವೈಜ್ಞಾನಿಕ ಕೃಷಿ ವಿಧಾನಗಳಿಂದ ಪ್ರತಿಫಲದ ಇಳಿಮುಖ ಪ್ರವೃತ್ತಿಯನ್ನು ಬದಲಾಯಿಸಬಹುದೆಂಬುದನ್ನಾಗಲಿ ಈತ ಮನಗಾಣಲಿಲ್ಲ.

ಸೀನಿಯರ್ ಎಂಬ ಅರ್ಥಶಾಸ್ತ್ರಜ್ಞ ಇಳಿಮುಖ ಪ್ರತಿಫಲಸೂತ್ರವನ್ನು ಖಚಿತಗೊಳಿಸಲು ಯತ್ನಿಸಿದ. ಕೃಷಿ ವಿಧಾನ ಇದ್ದಂತೆಯೇ ಇದ್ದು, ಒಂದು ನಿರ್ದಿಷ್ಟ ತಾಕಿನ ನೆಲದ ಮೇಲೆ ಹೆಚ್ಚು ದುಡಿಮೆಗಾರರನ್ನು ನೇಮಿಸಿದರೆ, ಅದು ಕಡಿಮೆ ಪ್ರಮಾಣದ ಉತ್ಪನ್ನ ದೊರಕಿಸಿಕೊಡುವುದೆಂದು ಆತ ಹೇಳಿದ. ಅಧಿಕ ಪ್ರಮಾಣಕ್ಕಿಂತ ಉತ್ಪಾದನೆ ಅಧಿಕವಾದರೂ ದುಡಿಮೆಯ ಅಧಿಕ ಪ್ರಮಾಣಕ್ಕಿಂತ ಉತ್ಪಾದನೆಯ ಆಧಿಕ್ಯ ಕಡಿಮೆಯಿರುತ್ತದೆ ಎಂದು ಆತನ ವಾದ. ಅದರಲ್ಲಿ ವಿಶೇಷವೇನೂ ಇಲ್ಲದಿದ್ದರೂ 'ಕೃಷಿ ವಿಧಾನ ಇದ್ದಂತೆಯೇ ಇದ್ದು' ಎಂಬ ಮಾತನ್ನು ಆತ ಒತ್ತಿ ಹೇಳುವುದು ಗಮನಿಸಬೇಕಾದ ಅಂಶ. ಕೃಷಿ ವಿಧಾನದಲ್ಲಿ

ಬದಲಾವಣೆಯಾದರೆ ಪ್ರತಿಫಲದ ಇಳಿಮುಖ ಪ್ರವೃತ್ತಿಯಲ್ಲಿ ಬದಲಾವಣೆಯಾಗಬಹುದು ಎಂಬುದು ಸ್ಪಷ್ಟ. ಸೀನಿಯರ್ ವಿಚಾರದ ಮತ್ತೊಂದು ವಿಶೇಷವೆಂದರೆ, ಆ ಕಾಲದ ಅರ್ಥಶಾಸ್ತ್ರಜ್ಞರೆಲ್ಲರೂ ಕೃಷಿಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿದ್ದ ಇಳಿಮುಖ ಪ್ರತಿಫಲಸೂತ್ರವನ್ನು ಇತರ ಕ್ಷೇತ್ರಗಳಿಗೂ ವಿಸ್ತರಿಸಿದ್ದು, ವೆಸ್ಟ್ ಮತ್ತು ಮ್ಯಾಕ್‌ಕಲಕ್ ಎಂಬವರು ಕೈಗಾರಿಕಾ ಕ್ಷೇತ್ರದಲ್ಲಿ ಏರುಮುಖ ಸೂತ್ರವನ್ನು ಕೈಗಾರಿಕಾ ಕ್ಷೇತ್ರಕ್ಕೂ ಅನ್ವಯಿಸಿದ. ಕೈಗಾರಿಕಾ ಕ್ಷೇತ್ರದಲ್ಲಿ ಯಾವಾಗಲೂ ಏರುಮುಖ ಪ್ರವೃತ್ತಿಯೇ ಇರುವುದಿಲ್ಲವೆಂದು ಪ್ರತಿಪಾದಿಸಿ ಇಳಿಮುಖ ಪ್ರತಿಫಲಸೂತ್ರದ ಚರ್ಚೆಯಲ್ಲಿ ಸೀನಿಯರ್ ತನ್ನ ಹಿಂದಿನವರಿಗಿಂತ ಒಂದು ಹೆಜ್ಜೆ ಮುಂದಿಟ್ಟನೆಂದು ಹೇಳಬಹುದು.

ಸರ್ ಎಡ್ವರ್ಡ್ ವೆಸ್ಟ್ ಅಭಿಜಾತ ಪಂಥದ ಇಳಿಮುಖ ಪ್ರತಿಫಲಸೂತ್ರದ ಎರಡು ಅಂಶಗಳನ್ನು ಸ್ಪಷ್ಟವಾಗಿ ಚರ್ಚಿಸಿದ್ದಾನೆ. ಆವಶ್ಯಕತೆಯಿಂದಾಗಿ ಕಡಿಮೆ ದರ್ಜೆಯ ನೆಲಗಳನ್ನು ಕೃಷಿಗೆ ತರುವುದರಿಂದ ಉದ್ಭವಿಸಬಹುದಾದ ಇಳಿಮುಖ ಪ್ರತಿಫಲ ಪ್ರವೃತ್ತಿ ಒಂದು ಅಂಶ. ಹಳೆಯ ಭೂಮಿಯ ಮೇಲೇ ಅಧಿಕ ಸಂಖ್ಯೆಯಲ್ಲಿ ದುಡಿಮೆಗಾರರನ್ನು ನಿಯೋಜಿಸುವುದರಿಂದ ಉದ್ಭವಿಸಬಹುದಾದ ಇಳಿಮುಖ ಪ್ರತಿಫಲ ಪ್ರವೃತ್ತಿ ಇನ್ನೊಂದು ಅಂಶ. ಇದರಲ್ಲಿ ಎರಡನೆಯದು ಹೆಚ್ಚು ಮುಖ್ಯ. ಒಂದು ನಿರ್ದಿಷ್ಟ ಭೂಮಿಯ ಮೇಲೆ ದುಡಿಮೆಯನ್ನು ಸಮ ಪ್ರಮಾಣದಲ್ಲಿ ಹೆಚ್ಚು ಹೆಚ್ಚಾಗಿ ನಿಯೋಜಿಸುತ್ತ ಹೋದಂತೆ ಒಂದು ಘಟ್ಟದ ಅನಂತರ ಉತ್ಪನ್ನದ ಏರಿಕೆ ಸೊನ್ನೆಯತ್ತ ಇಳಿಯುವುದಕ್ಕೆ ಪ್ರಾರಂಭಿಸುತ್ತದೆನ್ನುವ ವೆಸ್ಟ್ ಇಲ್ಲಿ ಚರ್ಚಿಸುತ್ತಿರುವುದು ಸರಾಸರಿ ನಿಯಮವನ್ನೋ ಅಥವಾ ಇಳಿಮುಖ ಅಂಚಿನ ನಿಯಮವನ್ನೋ ಎಂಬ ಸಂಶಯ ಬರುತ್ತದೆ. ಆತ ಸರಾಸರಿ ಇಳಿಮುಖಸೂತ್ರವನ್ನು ಮನಸ್ಸಿನಲ್ಲಿಟ್ಟುಕೊಂಡಂತೆ ಕಾಣುತ್ತದೆ. ಹೆಚ್ಚು ಕಡಿಮೆ ಎಲ್ಲ ಬರಹಗಾರರನ್ನೂ ಈ ದ್ವಂದ್ವಸಮಸ್ಯೆ ಕಾಡಿದಂತೆ ಕಾಣಿಸುತ್ತದೆ. ಈ ಮಾತನ್ನು ಸೀನಿಯರನಂತೆಯೇ ಇಳಿಮುಖ ಪ್ರತಿಫಲ ಪ್ರವೃತ್ತಿಯಲ್ಲಿ ಅಂಚಿನ ಇಳಿಮುಖ ಅತಿ ಮುಖ್ಯವಾದದ್ದೆಂಬುದನ್ನು 1911ರ ವರೆಗೆ ಯಾರೂ ಸ್ಪಷ್ಟಪಡಿಸಲಿಲ್ಲ. 1911ರಲ್ಲಿ ಎಡ್ಜ್‌ವರ್ತ್ ಈ ಕಾರ್ಯ ಮಾಡಿದ. ಸೀನಿಯರ್ ಮತ್ತು ಇತರರು ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದದ್ದು ಕೇವಲ ಸರಾಸರಿಯ ಇಳಿಮುಖವನ್ನು ಮಾತ್ರ ಎಂದು ತೋರುತ್ತದೆ. ಸೀನಿಯರ್ ಮತ್ತು ಇತರ ಲೇಖಕರ ಇಳಿಮುಖ ಪ್ರತಿಫಲಸೂತ್ರವನ್ನು ಗಣಿತದ ಭಾಷೆಯಲ್ಲಿ ಹೀಗೆ ಹೇಳಬಹುದು: ಒಂದು ನಿರ್ದಿಷ್ಟ ಭೂಮಿಯ ಒಟ್ಟು ಪ್ರತಿಫಲವನ್ನು y ಎಂದೂ ಅದರ ಮೇಲೆ ನಿಯೋಜಿಸಲಾದ ಒಟ್ಟು ಶ್ರಮವನ್ನು x ಎಂದೂ ಭಾವಿಸಿ ಹೆಚ್ಚಿಗೆ ಶ್ರಮವಾದ Äx ಅನ್ನು ಭೂಮಿಯ ಮೇಲೆ ನಿಯೋಜಿಸಿದರೆ, ಈ ಹೆಚ್ಚು ಶ್ರಮನಿಯೋಜನೆಯಿಂದ (Äx) ದೊರಕುವ ಅಧಿಕ ಪ್ರತಿಫಲವೇ Äy ಆದರೆ – $\frac{y+\Delta y}{x+\Delta x} < \frac{y}{x}$

ಇದು ಸರಾಸರಿ ಇಳಿಮುಖ ಪ್ರತಿಫಲವನ್ನು ನಿಯೋಜಿಸುತ್ತದೆ. ಆದರೆ ಇಳಿಮುಖ ಪ್ರತಿಫಲ ಸೂತ್ರದಲ್ಲಿ ಮುಖ್ಯವಾದದ್ದು ಅಂಚಿನ ಪ್ರತಿಫಲದ ಇಳಿಮುಖ. ನಾವು ಅರ್ಥಶಾಸ್ತ್ರದ ಬೆಳೆವಣಿಗೆಯಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಈ ಸರಾಸರಿ ಪ್ರತಿಫಲ ಮತ್ತು ಅಂಚಿನ ಪ್ರತಿಫಲ–ಇವುಗಳ ವ್ಯತ್ಯಾಸವನ್ನು ಅನೇಕರು ಇತ್ತೀಚಿನ ವರೆಗೂ ಸರಿಯಾಗಿ ಮನಗಾಣಲಿಲ್ಲ. ಆದ್ದರಿಂದ ಅಂಚಿನ ಪ್ರತಿಫಲದ ಇಳಿಮುಖಸೂತ್ರಕ್ಕೇ ಒಂಧು ಪ್ರತ್ಯೇಕ ಪರಂಪರೆಯನ್ನು ಬೆಳೆಸಿಕೊಡುವಂತಾಯಿತು (ಇದು ಶುಂಪೀಟರ್ ಅಭಿಮತ). ವೆಸ್ಟನೇ ಅಲ್ಲದೆ, ಜಾನ್ ಸ್ಟುವರ್ಟ್ ಮಿಲ್ ಮತ್ತು ಕಾರ್ಲ್ ಮಾರ್ಕ್ಸರು ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಲು ಇಳಿಮುಖ ಪ್ರತಿಫಲ ಸೂತ್ರವನ್ನು ಉಪಯೋಗಿಸಿಕೊಂಡರು. ಮುಂದೆ ಬಹಳವಾಗಿ ಈ ಸೂತ್ರಕ್ಕೆ ಗಮನ ಕೊಟ್ಟವನೆಂದರೆ ಆಲ್‌ಫ್ರೆಡ್ ಮಾರ್ಷಲ್. ಅಭಿಜಾತ ಪಂಥದವರು ಪ್ರತಿಯೊಂದು ಪದಾರ್ಥದ ಉತ್ಪಾದನ ವೆಚ್ಚಕ್ಕೂ ಕೈಗಾರಿಕೆಯ ಆಕಾರಕ್ಕೂ ಹೆಚ್ಚು ಗಮನ ಕೊಡಲಿಲ್ಲ. ಅವರು ಇಳಿಮುಖ ಸೂತ್ರವನ್ನು ಪ್ರಮುಖವಾಗಿ ಕೃಷಿಗೆ ಸಂಬಂಧಿಸಿದಂತೆ ಚರ್ಚಿಸಿದ್ದರು. ಅಲ್ಲಲ್ಲಿ ಒಬ್ಬೊಬ್ಬರು ಕೈಗಾರಿಕಾ ರಂಗಕ್ಕೆ ಗಮನಕೊಟ್ಟಿದ್ದರೂ ಇಳಿಮುಖ ಪ್ರತಿಫಲದ ಎಲ್ಲ ಮುಖಗಳನ್ನೂ ಅವರು ವಿಮರ್ಶಿಸಲು ಅಸಮರ್ಥರಾಗಿದ್ದರು. ಗೇಣಿಗೆ ಸಂಬಂಧಿಸಿದಂತೆ ಮುಖ್ಯವಾಗಿ ಈ ಸೂತ್ರವನ್ನು ಅವರು ಪರಿಶೀಲಿಸಿದ್ದರು. ಏರುಮುಖ ಪ್ರತಿಫಲವನ್ನು ಶ್ರಮ ವಿಭಾಗದ ಒಂಧು ಅಂಗವಾಗಿ ಪರಿಶೀಲಿಸಿದ್ದರು. ಮಾರ್ಷಲ್ ಮತ್ತು ಈಚಿನ ಅರ್ಥಶಾಸ್ತ್ರಜ್ಞರು ಇಳಿಮುಖ ಹಾಗೂ ಏಕಮುಖ ಪ್ರತಿಫಲ ಸೂತ್ರಗಳ ಸಾರ್ವತ್ರಿಕತೆಯನ್ನು ಮಾನ್ಯ ಮಾಡಿ ಅದನ್ನು ಬೆಲೆಯ ಸಿದ್ಧಾಂತದ ಒಂದು ಅವಿಭಾಜ್ಯ ಭಾಗವನ್ನಾಗಿ ಮಾಡಿದರು. ಈ ಸೂತ್ರ ಸರಬರಾಜು ಸಿದ್ಧಾಂತಕ್ಕೆ ತಳಹದಿಯಾಯಿತು. ಈ ರೂಪದಲ್ಲಿ ಇಳಿಮುಖ ಪ್ರತಿಫಲ ಸೂತ್ರ ಕೇವಲ ಭೂಮಿಗೆ ಅಥವಾ ಒಂಧು ಉತ್ಪಾದನಾಂಗಕ್ಕೆ ಮಾತ್ರವೇ ಸಂಬಧಿಸಿದ್ದಲ್ಲ : ವಿರಳ ಸರಬರಾಜಿರುವ ಎಲ್ಲ ಉತ್ಪಾದನಾಂಗಗಳಿಗೂ ಅನ್ವಯವಾಗುವ ತತ್ತ್ವ. ಪ್ರೊಫೆಸರ್ ಮಾರ್ಷಲ್ ಏರುಮುಖ ಪ್ರತಿಫಲ ಸೂತ್ರ ಹಾಗೂ ಇಳಿಮುಖ ಪ್ರತಿ ಫಲಸೂತ್ರಗಳು ಮೇಲಾಡದ ಕಲ್ಪನೆಯ ಮಿತಿಯಲ್ಲಿ ಬೆಲೆಯ ಸಿದ್ಧಾಂತಕ್ಕೆ ಹೇಗೆ ಅಡಿಗಲ್ಲಾಗಬಹುದೆಂಬುದನ್ನೂ, ಭೂಮಿಯೇ ಅಲ್ಲದೆ ಇತರ ಉತ್ಪದನಾಂಗಗಳಿಗೆ ಹೇಗೆ ಅನ್ವಯವಾಗುತ್ತದೆಂಬುದನ್ನೂ ಸಾಧಿಸಿ ತೋರಿಸಿದ್ದಾನೆ. 1926ರಲ್ಲಿ ಪಿಯರೋ ಸ್ರಾಫ್ ಈ ಸೂತ್ರವನ್ನು ಪರಿಪೂರ್ಣ ಮೇಲಾಟವೇ ಅಲ್ಲದೆ ಅಪರಿಪೂರ್ಣ ಮೇಲಾಟಗಳಿಗೂ ವಿಸ್ತರಿಸಬಹುದೆಂಬುದನ್ನು ತೋರಿಸಿದ. ಪ್ರೊಫೆಸರ್ ಸ್ರಾಫನ ಮೇಲ್ಪಂಕ್ತಿಯನ್ನನುಸರಿಸಿ ಈ ಸೂತ್ರವನ್ನು ಆಶ್ರಯಿಸಿ ಚೇಂಬರ್ಲಿನ್ ಮತ್ತು ಜೋನ್ ರಾಬಿನ್ಸನ್ನರು ಮಾರುಕಟ್ಟೆಯ ಸಮತೋಲವನ್ನು ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಆಧುನಿಕ ಅರ್ಥಶಾಸ್ತ್ರಜ್ಞರು ಇಳಿಮುಖ ಪ್ರತಿಫಲ ಸೂತ್ರದ ಮೇಲೆ ಹೆಚ್ಚು ಬೆಳಕು ಬೀರಲು ಸಮರ್ಥರಾಗಿದ್ದಾರೆ. ಅವರು ಈ ಸೂತ್ರ ಕೃಷಿರಂಗಕ್ಕೇ ಸೀಮಿತವಾದದ್ದಲ್ಲ ವೆಂಬುದನ್ನು ಸ್ಥಿರಪಡಿಸಿದ್ದಾರೆ. ಕೃಷಿಯಲ್ಲದೆ ಈ ಸೂತ್ರ ಗಣಿ ಹಾಗೂ ಇತರ ಉತ್ಪಾದನಾ ಕ್ಷೇತ್ರಗಳಿಗೂ ಹಾಗೆ ಅನ್ವಯವಾಗುತ್ತದೆಂಬುದನ್ನು ಅವರು ವಿಶ್ಲೇಷಿಸಿದ್ದಾರೆ. ಬೇಡಿಕೆಯ ದೃಷ್ಟಿಯಿಂದ ವಿರಳವಾಗಿರುವ ಯಾವ ಉತ್ಪದನಾಂಗಕ್ಕಾದರೂ ಅದು ಅನ್ವಯವಾಗುತ್ತದೆ. ಭೂಮಿಗೆ ಸಂಬಂಧಿಸಿದಂತೆ ಈ ಸೂತ್ರವನ್ನು ಹೀಗೆ ವಿವರಿಸಬಹುದು.

8 ಎಕರೆ ಜಮೀನಿನ ಮೇಲೆ ಹೆಚ್ಚು ಹೆಚ್ಚಾಗಿ ಶ್ರಮ ನಿಯೋಜಿಸಿ ಆಲೂಗಡ್ಡೆಯನ್ನು ಬೆಳೆಯಲಾಗುತ್ತಿದೆಯೆಂದು ಭಾವಿಸುವುದಾದರೆ, ಅದರಿಂದ ಉತ್ಪಾದನೆಯ ಮೇಲೆ ಆಗಬಹುದಾದ ಪರಿಣಾಮವನ್ನು ಒಂದು ಕೋಷ್ಟಕದಲ್ಲಿ ಹೀಗೆ ನಮೂದಿಸಬಹುದು:

ಉತ್ಪಾದನೆಯ ಕೋಷ್ಟಕ

| 8 ಎಕರೆ ಜಮೀನಿನ ಮೇಲೆ ನಿಯೋಜಿಸಲಾದ ಶ್ರಮ | ಒಟ್ಟು ಉತ್ಪನ್ನ (ಟನ್‌ಗಳಲ್ಲಿ) | ಸರಾಸರಿ ಉತ್ಪನ್ನ | ಅಂಚಿನ ಉತ್ಪನ್ನ |
|---|---|---|---|
| (ಕಾರ್ಮಿಕರ ಸಂಖ್ಯೆ) | | | |
| 1 | 8 | 8.0 | 8 (8–0) |
| 2 | 24 | 12.0 | 16 (24–8) |
| 3 | 34 | 11.3 | 10 (34–24) |
| 4 | 40 | 10.0 | 6 (40–34) |
| 5 | 42 | 8.4 | 2 (42–40) |
| 6 | 44 | 7.3 | 2 (44–42) |
| 8 | 46 | 6.6 | 2 (46–44) |
| 9 | 48 | 6.0 | 2 (48–46) |
| 10 | 49 | 5.4 | 1 (49–48) |

ಮೇಲಿನ ಕೋಷ್ಟಕದಲ್ಲಿ ಹೆಚ್ಚು ಹೆಚ್ಚು ಕಾರ್ಮಿಕರನ್ನು ನೇಮಿಸಿದಂತೆ ಒಟ್ಟು ಉತ್ಪನ್ನ ವೃದ್ಧಿಯಾಗುತ್ತ ಹೋಗಿದೆ. 2ನೆಯ ಕಾರ್ಮಿಕನಿಂದ 16 ಟನ್, 3ನೆಯವನಿಂದ 10ಟನ್ ಹೀಗೆ ಒಟ್ಟು ಉತ್ಪನ್ನ ಹೆಚ್ಚುತ್ತ ಹೋಗಿದೆ. ಆದರೆ ಸರಾಸರಿ ಉತ್ಪನ್ನ 2ನೆಯ ಕಾರ್ಮಿಕನ ನೇಮಕದ ವರೆಗೆ ವೃದ್ಧಿಯಾಗಿದ್ದು ಅನಂತರ ಇಳಿಮುಖವಾಗುತ್ತದೆ. ಅಂಚಿನ ಉತ್ಪನ್ನ (ಅಂದರೆ ಒಬ್ಬೊಬ್ಬ ಕಾರ್ಮಿಕರನ್ನೂ ಹೊಸದಾಗಿ ನೇಮಿಸಿಕೊಂಡಿದ್ದರಿಂದ ಸಾಧ್ಯವಾದ ಅಧಿಕ ಉತ್ಪನ್ನ) ಸಹ ಎರಡನೆಯ ಕಾರ್ಮಿಕನ ವರೆಗೆ ವೃದ್ಧಿಯಾಗಿದ್ದು ಅನಂತರ ಕಡಿಮೆಯಾಗುತ್ತ ಹೋಗಿದೆ. ಸರಾಸರಿ ಉತ್ಪನ್ನ ಹಾಗೂ ಅಂಚಿನ ಉತ್ಪನ್ನ, ಕಾರ್ಮಿಕರ ಹೆಚ್ಚಳದ ಪ್ರಮಾಣದಲ್ಲಿ ವೃದ್ಧಿಯಾಗುವುದಿಲ್ಲ ಎಂಬುದು ಇಳಿಮುಖ ಪ್ರತಿಫಲ ಶುತ್ರ. ಇದು ಕೋಷ್ಟಕದಿಂದ ಸ್ಪಷ್ಟ. ಅಂದರೆ ಉತ್ಪನ್ನ ಇಳಿಯುವ ವೇಗದಲ್ಲಿ ವೃದ್ಧಿಯಾಗುತ್ತದೆ. ಒಂದು ಪಕ್ಷ ಅತ್ಯಧಿಕ ಸಂಖ್ಯೆಯಲ್ಲಿ ಕಾರ್ಮಿಕರನ್ನು ಈ ಭೂಮಿಯ ಮೇಲೆ ನಿಯೋಜಿಸಿದರೆ, ಆಲೂಗಡ್ಡೆಯ ಒಟ್ಟು ಉತ್ಪನ್ನದಲ್ಲಿ ಯಾವ ಹೆಚ್ಚಳವೂ ಆಗದೆ ಹೋಗಬಹುದು. ಅದು ಇಳಿಯಲೂ ಬಹುದು.

ಮೇಲೆ ಕೊಟ್ಟಿರುವ ಅಂಕಿಗಳನ್ನಾಧರಿಸಿ ಇಳಿಮುಖ ಪ್ರತಿಫಲ ಸೂತ್ರವನ್ನು ನಕ್ಷೆಯ ರೂಪದಲ್ಲಿ ಹೀಗೆ ತೋರಿಸಬಹುದು:




ನಕ್ಷೆ 1

ಎರಡನೆಯ ನಕ್ಷೆಯಿಂದ ವ್ಯಕ್ತವಾಗುವ ಅಂಶವೆಂದರೆ, ಸರಾಸರಿ ಹಾಗೂ ಅಂಚಿನ ಉತ್ಪನ್ನ ಒಂದು ಮಟ್ಟದ ವರೆಗೆ ಏರುತ್ತ ಹೋಗಿ ಅನಂತರ ಸತತವಾಗಿ ಇಳಿಮುಖವಾಗುತ್ತದೆ. ಒಟ್ಟು ಉತ್ಪನ್ನ ಹೆಚ್ಚುತ್ತಿರಲಿ, ಬಿಡಲಿ, ಅಂಚಿನ ಉತ್ಪನ್ನವೂ ಅದರೊಂದಿಗೆ ಸರಾಸರಿ ಉತ್ಪನ್ನವೂ ಒಂದು ಘಟ್ಟದಿಂದಾಚೆಗೆ ಇಳಿಮುಖವಾಗಿ ನಡೆಯುವುದೆಂಬುದೇ ಈ ಸೂತ್ರದ ತಿರುಳು. ಭೂಮಿಗೆ ಅನ್ವಯವಾಗುವ ಈ ತತ್ತ್ವ ಎಲ್ಲ ಉತ್ಪಾನಾಂಗಗಳಿಗೂ ಅನ್ವಯವಾಗುತ್ತ

ದೆಂಬ ಆಧುನಿಕ ಅರ್ಥಶಾಸ್ತ್ರಜ್ಞರ ವಾದವನ್ನು ಹೀಗೆ ಹೇಳಬಹುದು. ಉತ್ಪದನಾಂಗವೊಂದು ಸ್ಥಿರವಾಗಿದ್ದರೆ ಅಥವಾ ಸರಬರಾಜಿನ ಮೌಲ್ಯಸಾಪೇಕ್ಷವಾಗಿ ಇಲ್ಲದಿದ್ದಲ್ಲಿ ಇತರ ಉತ್ಪಾದನಾಂಗಗಳ ನಿಯೋಜನೆಯನ್ನು ವೃದ್ಧಿಮಾಡಿದಾಗ ಸಂಭವಿಸಿದ ಉತ್ಪನ್ನದ ಹೆಚ್ಚಳ, ವ್ಯತ್ಯಾಸಾತ್ಮಕ ಅಂಗಗಳ ಹೆಚ್ಚಳದ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದ್ದಾಗಿರುತ್ತದೆ. ಆಗ ಉತ್ಪದನಾ ವಿಧಾನದಲ್ಲಿ ಉತ್ತಮ ರೀತಿಯ ಬದಲಾವಣೆ ಇಲ್ಲದೆ ಹೋದ ಪಕ್ಷದಲ್ಲಿ ಅಥವಾ




ನಕ್ಷೆ 2

ಉತ್ಪಾದನಾಂಗಗಳ ಉಳಿತಾಯ ಯೋಜನೆಯನ್ನು ಕಾರ್ಯಗತಗೊಳಿಸದಿದ್ದಲ್ಲಿ ಉತ್ಪಾದನ ವೆಚ್ಚ ವೃದ್ಧಿಯಾಗುತ್ತದೆ (ಇಳಿಮುಖ ಪ್ರತಿಫಲದಿಂದಾಗಿ). ಉತ್ಪಾದನನ ಅವಯವಗಳ ಪ್ರತಿನಿಧಾನದ ಪುಟಿತ (ಎಲಾಸ್ಟಿಸಿಟಿ ಆಫ್ ಸಬ್ಸ್ಟಿಟ್ಯೂಷನ್) ಅನಂತವಲ್ಲ (ಇನ್ಫಿನಿಟಿ). ಎಂಬುದು ಈ ಸೂತ್ರದಿಂದ ಖಚಿತವಾಗಿದೆ.

ಉತ್ಪಾದನಾಂಗಗಳ ಪ್ರತಿನಿಧಾನಕ್ಕೆ ಒಂದು ನಿರ್ದಿಷ್ಟ ಮಿತಿಯುಂಟು. ವಿಸ್ತರಿಸಲಾಗದ ಉತ್ಪಾದನಾಂಗವನ್ನು ಮತ್ತೊಂದು ಉತ್ಪಾದನಾಂಗದಿಂದ ಪ್ರತಿನಿಧಾನಿಸಬಹುದೆಂದು ಸಿದ್ಧಪಡಿಸುವುದು ಸಾಧ್ಯವಾದರೆ ಉತ್ಪಾದನೆಯ ಸಮಸ್ಯೆಗಳೇ ಇರುವುದಿಲ್ಲ. ಕೇವಲ ಒಂದು ನಿರ್ದಿಷ್ಟ ಪ್ರಮಾಣದ ಭೂಮಿಯಲ್ಲಿ ಇಡೀ ವಿಶ್ವದ ಜನತೆಗೆ ಸಾಕಾಗುವಷ್ಟು ಆಹಾರವನ್ನು ಹೆಚ್ಚು ಬಂಡವಾಳ ಹಾಗೂ ಶ್ರಮದ ನಿಯೋಜನೆ ಸಾಕಾಗುವಷ್ಟು ಆಹಾರವನ್ನು ಹೆಚ್ಚು ಬಂಡವಾಳ ಹಾಗೂ ಶ್ರಮದ ನಿಯೋಜನೆಯಿಂದ ಉತ್ಪಾದಿಸಬಹುದು ಸಾಧ್ಯವಾದರೆ ಯಾವ ದೇಶದಲ್ಲೂ ಆಹಾರ ಸಮಸ್ಯೆಯೆಂಬುದೇ ಇರುವುದಿಲ್ಲ. ಆದರೆ ಈಗ ತಿಳಿದಿರುವ ಮಟ್ಟಿಗೆ ಇದು ಅಸಾಧ್ಯ.

ಇಳಿಮುಖ ಪ್ರತಿಫಲ ಸೂತ್ರ ಜೀವನ ಸಿದ್ಧಾಂತವಷ್ಟೇ ಸತ್ಯವಾದದ್ದು, ಇದು ಇಲ್ಲದಿದ್ದ ಪಕ್ಷದಲ್ಲಿ ಜನಸಂಖ್ಯೆ ಹಾಗೂ ಗೇಣಿ ಸಿದ್ಧಾಂತಗಳ ಸ್ವರೂಪವೇ ಬೇರೆಯಾಗುತ್ತಿತ್ತು. ಕೃಷಿರಂಗಕ್ಕಷ್ಟೇ ಅಲ್ಲದೆ ಎಲ್ಲ ಕ್ಷೇತ್ರಗಳಿಗೂ ಇದು ಅನ್ವಯವಾಗುವುದಾದರೂ, ಕೃಷಿರಂಗದಲ್ಲಿ ನೆಲದ ಸರಬರಾಜು ಪ್ರಕೃತಿಯಿಂದ ನಿಯಂತ್ರಿತವಾಗಿರುವುದರಿಂದ ಈ ಸೂತ್ರ ಅಲ್ಲಿ ಶೀಘ್ರವಾಗಿ ಅನ್ವಯವಾಗುತ್ತದೆ. ಮನುಷ್ಯ ಈ ರಂಗದಲ್ಲಿ ಸಾಧಿಸಿರುವುದೆಂದರೆ, ತನ್ನ ಬುದ್ಧಿಶಕ್ತಿಯಿಂದ ಸುಧಾರಿತ ತಳಿ, ಕೃತಕಗೊಬ್ಬರ, ವೈಜ್ಞಾನಿಕ ರೀತಿಯ ಕೃಷಿ ಇವುಗಳ ಮೂಲಕ ಇಳಿಮುಖ ಪ್ರತಿಫಲ ಸೂತ್ರದ ಅನ್ವಯದ ಕಾಲವನ್ನು ಮುಂದೂಡಲು ಸಮರ್ಥನಾಗಿದ್ದಾನೆ. ಆದರೆ ಈ ನಿಯಮವನ್ನು ಸಂಪೂರ್ಣವಾಗಿ ಸೋಲಿಸುವುದರಲ್ಲಿ ಇದುವರೆಗೂ ಅಸಮರ್ಥನಾಗಿದ್ದಾನೆ.

ಕೈಗಾರಿಕಾ ರಂಗದಲ್ಲಿ ಹೀಗಲ್ಲ. ಇಲ್ಲಿ ಪ್ರಕೃತಿಯ (ನೆಲದ) ಪಾತ್ರಕ್ಕಿಂತ ಮನುಷ್ಯನ ಪಾತ್ರ ಹಿರಿದು. ಇಲ್ಲಿ ಆತ ತನ್ನ ಬುದ್ಧಿ ಮತ್ತು ಉತ್ತಮ ಸಂಯೋಜನೆ, ವೈಜ್ಞಾನಿಕ ರೀತಿಯ ವ್ಯವಸ್ಥೆ ಇವುಗಳಿಂದ ಇಳಿಮುಖ ಪ್ರತಿಫಲ ನಿಯಮ ಇನ್ನೂ ಹೆಚ್ಚು ವಿಳಂಬವಾಗಿ ಅನ್ವಯವಾಗುವಂತೆ ಮಾಡಿಕೊಂಡಿದ್ದಾನೆ. ಇದನ್ನು ಸಂಪೂರ್ಣವಾಗಿ ಸೋಲಿಸುವುದು ಹೇಗೆ ಎಂಬುದನ್ನು ಅರಿಯುವುದರಲ್ಲಿ ಆತ ಇನ್ನೂ ಅಸಮರ್ಥ.

ಇಳಿಮುಖ ಪ್ರತಿಫಲ ಸೂತ್ರ ಅನುಭವಜನ್ಯವಾದ್ದು. ಇದರ ಪುರಸ್ಕಾರ ತಿರಸ್ಕಾರಗಳು ಅನುಭವವನ್ನೇ ಹೊಂದಿಕೊಂಡಿರುತ್ತದೆ ಎಂಬುದು ಶುಂಪೀಟರ್ ಅಭಿಮತ. ಸೂತ್ರದ ನೈಜತೆಯನ್ನು ಖಚಿತವಾಗಿ ಸಿದ್ಧಪಡಿಸಲು ಅರ್ಥಶಾಸ್ತ್ರಜ್ಞರು ತೀವ್ರವಾಗಿ ಪ್ರಯತ್ನ ನಡೆಸುತ್ತಿದ್ದಾರೆ.

(ಸಿ.ಕೆ.ಆರ್.)

**ಇಳಿಮೇಡು: ನೋಡಿ– ಜಲಾನಯನ ಪ್ರದೇಶ**

**ಇಳಿವೋರೆ:** ಭೂವಿಜ್ಞಾನದಲ್ಲಿ ಶಿಲಾಸ್ತರಗಳ ವಿನ್ಯಾಸವನ್ನು ಸೂಚಿಸುವ ಪದ (ಡಿಪ್). ಭೂಮಿಯಲ್ಲಿ ಜಲಜಶಿಲೆಗಳು ಮೊದಲ ಹಂತದಲ್ಲಿ ಮಟ್ಟಸ ಪದರಗಳಾಗಿ (ಹಾರಿಸಾಂಟಲ್ ಲೇಯರ್ಸ್) ರೂಪುಗೊಳ್ಳುತ್ತವೆ. ಆದರೆ ನೈಸರ್ಗಿಕ ಬಲಗಳು ಇವನ್ನು ಇದೇ ಸ್ಥಿತಿಯಲ್ಲಿ ಬಲುಕಾಲ ಉಳಿಯಲು ಬಿಡುವುದಿಲ್ಲ. ಕುಸಿತ, ಕಂಪನ ಮುಂತಾದ ಭೂಮಿಯ ಆಂತರಿಕ ಬಲಗಳು; ಗಾಳಿ, ಮಳೆ ಹೊಡೆತ, ನೀರಿನ ಹರಿವು ಮುಂತಾದ ಬಾಹ್ಯಬಲಗಳು–ಇವುಗಳ ಪ್ರಭಾವದಿಂದ ಪದರಗಳ ಪರಂಪರೆಯೇ ತಿರುಚಿ ಮಡಿಸಿ ಏರುಪೇರುಗಳುಂಟಾಗುತ್ತವೆ. ಪದರಗಳು ಉಳಿದಿದ್ದರೂ ಅವು ಮಟ್ಟಸವಾಗಿರುವುದು ಅಪೂರ್ವ. ಇವುಗಳ ವಿವಿಧ ವಿನ್ಯಾಸಗಳನ್ನು ಅಭ್ಯಸಿಸಿದ ಭೂವಿಜ್ಞಾನಿಗಳು ಅವನ್ನು ಇಳಿವೋರೆ, ಮಡಿಕೆ ಮತ್ತು ಸ್ತರಭಂಗ (ಫೋಲ್ಡ್ ಅಂಡ್ ಫಾಲ್ಟ್), ನ್ಯಾಪೆ ಮುಂತಾಗಿ ವರ್ಗೀಕರಿಸಿದ್ದಾರೆ. ಬಾಗಿರುವ ಅಥವಾ ಓರೆಯಾಗಿರುವ ಜಲಜಶಿಲೆಗಳ ಪದರವಿನ್ಯಾಸವೇ ಇಳಿವೋರೆ, ಚಿತ್ರದಲ್ಲಿ ಮೂಲಸ್ಥಿತಿಯ ಎಂದರೆ ಬಲಗಳಿಂದ ಪ್ರಭಾವಿತವಾಗದೆ ಮಟ್ಟಸ




ಚಿತ್ರ 1. ಅ: ಸಮತಲ ಪದರ,
ಆ: ಪದರದ ನಕ್ಷೆ

ಚಿತ್ರ 2. ಅ: ಇಳಿವೋರೆ $60^0$ ಗಳಲ್ಲಿ
ಆ: ಇಳಿವೋರೆಯ ನಕ್ಷೆ

ಪದರಸ್ಥಿತಿ ಯಲ್ಲಿಯೇ ಇರುವ ಜಲಜಶಿಲೆಗಳ ಪದರಗಳನ್ನೂ ಇಂಥ ಪದರಗಳ ಒಂದು ಅಡ್ಡ ಕೊಯ್ತವನ್ನೂ ನೋಡಬಹುದು. ಇಲ್ಲಿನ ಪ್ರತಿಯೊಂದು ಪದರವೂ ಭೂತಲದ ಮೇಲಿನ ಮಟ್ಟಸ ತಲಕ್ಕೆ ಸಮಾಂತರವಾಗಿದೆ; ಆದ್ದರಿಂದ ಪ್ರತಿಯೊಂದು ಈ ಮಟ್ಟಸತಲದೊಡನೆ ರಚಿಸುವ ಕೋನ $0^0$. ಇಲ್ಲಿಪದರದ ಇಳಿವೋರೆ $0^0$ ಎನ್ನುತ್ತೇವೆ.

ಬಾಹ್ಯ ಅಥವಾ ಆಂತರಿಕ ಬಲಗಳಿಂದ ಪ್ರಭಾವಿತವಾಗಿ ಮೂಲಸ್ಥಿತಿಯಿಂದ ಭಿನ್ನವಾಗಿರುವ ಪದರವನ್ನು ಚಿತ್ರ(2)ರಲ್ಲಿ ತೋರಿಸಿದೆ. ಇಲ್ಲಿ ಪದರತಲ ಮಟ್ಟಸತಲಕ್ಕೆ ಓರೆಯಾಗಿದೆ; ಇವುಗಳ ನಡುವಿನ ಕೋನ $X^0$ ಈ ಓರೆಯ ಮಾನ. ಆದ್ದರಿಂದ ಇಲ್ಲಿ ಪದರದ ಇಳಿವೋರೆ $X^0$ ಆಗುವುದು. ಹೀಗೆ ಮಟ್ಟಸತಲಕ್ಕೆ ಪದರತಲ ಓರೆಯಾಗಿರುವ ವಿನ್ಯಾಸ ಇಳಿವೋರೆ; ಮತ್ತು ಅವೆರಡು ತಲಗಳ ನಡುವಿನ ಕೋನ ಇಳಿವೋರೆಯ ಕೋನ. ಈ ಕೋನವನ್ನೇ ಇಳಿವೋರೆ ಎಂದೂ ಹೇಳುವುದಿದೆ. ಇಳಿವೋರೆಯ ಬೆಲೆ $0^0$–$90^0$ ವರೆಗೆ ಯಾವುದಾದರೂ ಆಗಬಹುದು.

ಇಳಿವೋರೆ ಕೋನವೊಂದೇ ಪದರಗಳ ವಿನ್ಯಾಸವನ್ನು ನಿರ್ದಿಷ್ಟಗೊಳಿಸುವುದಿಲ್ಲ. ಪದರಗಳ ಇಳಿವು ಯಾವ ದಿಕ್ಕಿಗೂ ವ್ಯಾಪಿಸಿರಬಹುದು. ಆದ್ದರಿಂದ ಒಂದು ಪ್ರದೇಶದ ಭೂಚಿತ್ರ ಬರೆಯುವಾಗ ಅಲ್ಲಿನ ಪದರಗಳ ಇಳಿವೋರೆಯ ಜೊತೆಗೆ ಅವುಗಳ ಇಳಿವು ಯಾವ ದಿಕ್ಕಿಗಿದೆ ಎಂಬುದನ್ನೂ ಸೂಚಿಸಬೇಕಾಗುತ್ತದೆ. ಇಳಿವೋರೆಯ ದಿಕ್ಕು ಮತ್ತು ಕೋನಗಳನ್ನು ಅಳೆಯುವ ಉಪಕರಣದ ಹೆಸರು ಕಂಪಾಸ್ ಕ್ಲೈನೋಮೀಟರ್. ಒಂದು ಶಿಲಾಪ್ರಸ್ತರ ಸಮೂಹದ ಗರಿಷ್ಠ ಇಳಿವೋರೆ ಒಂದೇ ದಿಕ್ಕಿನಲ್ಲಿರುತ್ತದೆ. ಈ ಇಳಿವೋರೆ ಹೆಸರು ನಿಜ ಇಳಿವೋರೆ (ಟ್ರೂ ಡಿಪ್).

**ಇಳಿಜಾರು:** ಇಳಿವೋರೆಯ ಓಟ (ಸ್ಲೋಪ್). ಇಳಿವೋರೆ ಕೋನ ಹೆಚ್ಚು ಹೆಚ್ಚಾದಂತೆ ಓಟ, ಅದರಿಂದ ಇಳಿಜಾರು ಹೆಚ್ಚಾಗುತ್ತದೆ. ಮಟ್ಟಸ ಪದರದ ಇಳಿಜಾರು ಸೊನ್ನೆ ಎಂಬುದು ಸ್ಪಷ್ಟ.




ಚಿತ್ರ 3. ಚಿತ್ರ 4.

ಚಿತ್ರ 3. ಇಳಿವೋರೆ ಪದರ ಸಮೂಹ
ಚಿತ್ರ 4. ಇಳಿವೋರೆ ಪ್ರಸ್ತರ ಸಮೂಹ (ಶಿಥಿಲೀಕರಣಕ್ರಿಯೆಗೆ ಒಳಗಾದನಂತರ)

ಹೀಗೆ ಇಳಿಜಾರಿನ ಸ್ವಭಾವ ಇಳಿವೋರೆಯಿಂದ ಸಾಮಾನ್ಯವಾಗಿ ನಿರ್ಧರಿತವಾಗುತ್ತದೆ. ಇಳಿವೋರೆ ದಿಕ್ಕಿನ ಇಳಿಜಾರು ಕಡಿದಾಗಿರುವುದಿಲ್ಲ. ಇದರ ಹೆಸರು ಇಳಿವೋರೆ ಇಳಿಜಾರು (ಡಿಪ್ ಸ್ಲೋಪ್). ಇಳಿವೋರೆ ದಿಕ್ಕಿನ ವಿರುದ್ಧ ದಿಕ್ಕಿನ ಇಳಿಜಾರು ಕಡಿದಾಗಿರುತ್ತದೆ. ಇದರ ಹೆಸರು ಎದುರು ಇಳಿಜಾರು (ಎಸ್ಕಾರ್ಪ್‌ಮೆಂಟ್ ಡಿಪ್).

*

ಈ ಕನ್ನಡ ವರ್ಣಮಾಲೆಯ ನಾಲ್ಕನೆಯ ಅಕ್ಷರ. ಬಳಕೆ ಅಪೂರ್ವವಾದ್ದರಿಂದ ಇದರ ಬ್ರಾಹ್ಮೀರೂಪ ಉಪಲಬ್ಧವಿಲ್ಲ. ಶಾತವಾಹನರ ಕಾಲದಲ್ಲಿ ಎರಡು ಚುಕ್ಕೆಗಳನ್ನೊಳ ಗೊಂಡಿದ್ದ ಇದರ ರೂಪ ರಾಷ್ಟ್ರಕೂಟರ ಕಾಲದಲ್ಲಿ ಸಾಕಷ್ಟು ಮಾರ್ಪಟ್ಟಿತು. ನಡುವಿದ್ದ ನೀಳಗೆರೆ ವೃತ್ತವಾಗುತ್ತಿರುವುದನ್ನು ಇಲ್ಲಿ ಗಮನಿಸಬಹುದು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಪಾರ್ಶ್ವದ ಬಿಂದುಗಳು ವೃತ್ತಕ್ಕೆ ಸೇರಿದಂತೆ ಎರಡು ವಕ್ರರೇಖೆಗಳಾದುವು. ಇದೇ ರೂಪ ಸೇವಣ ಮತ್ತು ಕಳಚುರಿಗಳ ಕಾಲದಲ್ಲಿ ಮುಂದುವರಿಯಿತು. ವೃತ್ತದ ತಲೆಕಟ್ಟು ಸಿದ್ಧವಾಯಿತು. ವಿಜಯನಗರದ ಕಾಲದಲ್ಲಿ ನಡುವಿನ ಅಡ್ಡಗೆರೆ ವೃತ್ತದ ನಟ್ಟ ನಡುವೆ ಹಾಯುವುದನ್ನು ಕಾಣಬಹುದು. ಹದಿನೆಂಟನೆಯ ಶತಮಾನದ ಮೈಸೂರು ಅರಸರ ಕಾಲದಲ್ಲಿ ಅಕ್ಷರಕ್ಕೆ ಈಗಿನ ರೂಪ ಬಂದಿತಾದರೂ ನಡುವಿನ ಅಡ್ಡಗೆರೆಯ ತುದಿಯಲ್ಲಿರುವ ಕೊಂಡಿ ಸ್ವಲ್ಪ ಭಿನ್ನವಾಗಿತ್ತು. ಕಾಲ ಕ್ರಮೇಣ ಅಕ್ಷರಕ್ಕೆ ಈಗಿನ ರೂಪಬಂತು.



ಈ ಅಕ್ಷರ ಪೂರ್ವ–ಸಂವೃತ ಅಗೋಳ ದೀರ್ಘಸ್ವರವನ್ನು ಸೂಚಿಸುತ್ತದೆ. (ಎ.ವಿ.ಎನ್.)

**ಈಂಗೇಮಾನ್, ಬರ್ನ್‌ಹಾರ್ಡ್ ಸೆವೆರಿನ್:** 1789–1862. ಡೆನ್ಮಾರ್ಕಿನ ಕವಿ, ಕಾದಂಬರಿಕಾರ. ಈತನ ಕೃತಿಗಳು ಡೆನ್ಮಾರ್ಕಿನಲ್ಲಿ ಹಲವು ತಲೆಮಾರುಗಳವರೆಗೂ ಯುರೋಪಿನಲ್ಲಿ ಮಧ್ಯಯುಗದ ಅಂತ್ಯದವರೆಗೂ ಖ್ಯಾತವಾಗಿದ್ದುವು. ಸ್ಲಾಗೆಲ್ಸ್ ಗ್ರಾಮರ್ ಸ್ಕೂಲಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಈತ 1806ರಲ್ಲಿ ವಿಶ್ವವಿದ್ಯಾನಿಲಯ ಪ್ರವೇಶಿಸಿದ. ಇಂಗ್ಲಿಷರು ಕೋಪನ್‌ಹೇಗನ್ ಅನ್ನು ಮುತ್ತಿ ಅದನ್ನು ಅಗ್ನಿಗಾಹುತಿ ಮಾಡಿದಾಗ ಈತನ ಮೊದಲ ಕೃತಿಗಳ ಹಸ್ತಪ್ರತಿಗಳೆಲ್ಲ ನಾಶವಾದುವು. ತನ್ನ ಕವನಸಂಕಲನದ ಮೊದಲ ಸಂಪುಟವನ್ನು 1811ರಲ್ಲೂ ಎರಡನೆಯದನ್ನು 1812ರಲ್ಲೂ ಪ್ರೊಕ್ನೆ ಎಂಬ ಹೆಸರಿನ ಗೀತೆಗಳ ಪುಸ್ತಕವನ್ನು 1813ರಲ್ಲೂ ಮತ್ತು ದಿ ಬ್ಲ್ಯಾಕ್ ನೈಟ್ಸ್ ಎಂಬ ಪ್ರಣಯಗೀತೆಗಳ ಸಂಕಲನವನ್ನು 1814ರಲ್ಲೂ ಪ್ರಕಟಿಸಿದ. ಮಸಾನಿಲ್ಲೋ ಮತ್ತು ಬ್ಲ್ಯಾಂಕ ಎಂಬ ಎರಡು ರುದ್ರನಾಟಕಗಳು, ದಿ ವಾಯ್ಸ್ ಆಫ್‌ದ ಈಸ್ಟ್, ದಿ ಷೆಪರ್ಡ್ ಆಫ್ ಟೊಲೋಸ ಮುಂತಾದ ಇತರ ನಾಟಕಗಳು ಇವನ ಮುಖ್ಯ ಪ್ರಕಟಣೆಗಳು. ಇವು ವಿಮರ್ಶಕರಿಂದ ಭರ್ತ್ಸನೆಗಳನ್ನು ಪಡೆದರೂ ಸಾಮಾನ್ಯರ ಮೆಚ್ಚಿಗೆ ಪಡೆದುವು. 1818ರಲ್ಲಿ ರೋಮಿಗೆ ಪ್ರಯಾಣ ಮಾಡಿ, ಅಲ್ಲಿ ದಿ ಲಿಬರೇಷನ್ ಆಫ್ ಟ್ಯಾಸೊ ಎಂಬ ಪುಸ್ತಕವನ್ನು ಬರೆದ. ಮನಮೋಹಕ ಕಥೆಗಳನ್ನೊಳಗೊಂಡ ಕಥಾಸಂಪುಟವನ್ನೊಂದನ್ನು ಬರೆದು ತನ್ನ ನೈಜಸಾಹಿತ್ಯ ಸಾಮರ್ಥ್ಯವನ್ನು ಪ್ರಕಟಿಸಿದ. 1821ರಲ್ಲಿ ಪ್ರಕಟವಾದ ಮ್ಯಾಗ್ನೆಟಿಸಂ ಇನ್ ದಿ ಬಾರ್ಬರ್ಸ್ ಷಾಪ್ ಎಂಬುದೇ ಇವರ ಕಟ್ಟಕಡೆಯ ಸುಖಾಂತ ನಾಟಕ. ಸೊರೋನಲ್ಲಿ ಉಪಾಧ್ಯಾಯವೃತ್ತಿ ಪಡೆದ ಮೇಲೆ ಅನೇಕ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ. ಇವನ ವಾಲ್‌ಡೆಮಾರ್ ಸಿಯರ್ (1824) ಎಂಬ ಐತಿಹಾಸಿಕ ಕಾವ್ಯ 1824ರಲ್ಲಿ ಪ್ರಕಟಗೊಂಡಿತು. ಎರಿಕ್‌ಮನ್ ವೆಡ್ಸ್ ಚೈಲ್ಡ್‌ಹುಡ್ (1828), ಕಿಂಗ್ ಎರಿಕ್ (Kind Eric) (1833), ಪ್ರಿನ್ಸ್ ಆಟೋ ಆಫ್ ಡೆನ್ಮಾರ್ಕ್ (1835)– ಇವೇ ಈತನ ಖ್ಯಾತ ಕಾದಂಬರಿಗಳು. ಕ್ವೀನ್ ಮಾರ್ಗರೇಟ್ (1836) ಎಂಬ ಕಾವ್ಯವನ್ನೂ ಹೋಲ್ಗರ್ ಡಾನ್ಸೆಕೆ (1837) ಎಂಬ ಒಂದು ಜನಪ್ರಿಯ ನಾಟಕವನ್ನೂ ಈತ ಬರೆದ. ದಿ ಆಪಲ್ ಆಫ್ ಗೋಲ್ಡ್ (1856) ಎಂಬುದೇ ಈತನ ಅಂತಿಮ ಕೃತಿ. ಈತ ಬರೆದ ಸ್ತೋತ್ರ ಗೀತೆಗಳಲ್ಲಿ ಒಂದಾದ ಥ್ರೂ ದಿ ನೈಟ್ ಆಫ್ ಡೌಟ್ ಅಂಡ್ ಸಾರೊ ಎಂಬ ಇಂಗ್ಲಿಷ್ ಅನುವಾದ ಪ್ರಖ್ಯಾತವಾದುದು. *

**ಈಕ್ವಿಡೇ:** ಪೆರಿಸೊಡ್ಯಾಕ್ಟಿಲ (**ನೋಡಿ– ಪೆರಿಸೊಡ್ಯಾಕ್ಟಿಲ**) ವರ್ಗದ ಒಂದು ಕುಟುಂಬ; ಪರ್ಯಾಯನಾಮ ಅಶ್ವಕುಟುಂಬ. ಗೊರಸಿರುವ ಪ್ರಾಣಿಗಳಲ್ಲಿ ಇಂದಿನ ಮತ್ತು ಜೀವಾವಶೇಷಗಳಾಗಿರುವ ಹಿಂದಿನ ಕುದುರೆಗಳು, ಕತ್ತೆಗಳು, ಜೀಬ್ರಗಳು, ಅನೇಗರ್‌ಗಳು (ಕಾಡುಕತ್ತೆ ಜಾತಿಯ ಪ್ರಾಣಿಗಳು) ಅಶ್ವಕುಂಟುಬದ ಸದಸ್ಯರು. ಈ ಕುಟುಂಬದ ಪ್ರಾಣಿಶಾಸ್ತ್ರೀಯ ಅಧ್ಯಯನದಿಂದ ಕುದುರೆ ಕತ್ತೆ ಮುಂತಾದ ಸದಸ್ಯಪ್ರಾಣಿಗಳ ವಿಕಾಸದ ವಿವಿಧ ಸೋಪಾನಗಳನ್ನು ತಿಳಿಯಬಹುದು.

ಕುದುರೆಗಳ ಅತಿಸಮೀಪ ಪೂರ್ವಜರುಗಳ ಹೆಸರು ಪೇಲಿಯೊಥೀರಸ್. ಇವು ಸುಮಾರು 35 ದಶಲಕ್ಷ ವರ್ಷ ಪ್ರಾಚೀನ ಕಾಲದಲ್ಲಿ ಗತವಂಶಿಗಳಾದುವು. ಟೆಟಾಸೋಥೀರಸ್ ಮತ್ತು ಚಾಲಿಕೊಥೀರಸ್ ಕುದುರೆಯ ಇನ್ನೆರಡು ಗತವಂಶೀ ಬಂಧುಗಳು. ಇನ್ಯಾವ ಸ್ತನಿಗಳ ವಿಷಯದಲ್ಲೂ ದೊರೆತಿಲ್ಲದಷ್ಟು ಜೀವಾವಶೇಷ ದಾಖಲೆಗಳು ಕುದುರೆಯನ್ನು ಕುರಿತು ಲಭಿಸಿವೆ. ಪರಿಣಾಮವಾಗಿ 50 ದ. ಲ. ವರ್ಷ ಪ್ರಾಚೀನ ಕಾಲದಿಂದ ಇಂದಿನವರೆಗೆ ಕುದುರೆಯ ವಿಕಾಸರೇಖೆಯನ್ನು ಅವಿಚ್ಛಿನ್ನವಾಗಿ ಎಳೆಯಬಹುದು.

ಆಧುನಿಕ ಅಶ್ವಕುಟುಂಬದಲ್ಲಿ ಕನಿಷ್ಠಪಕ್ಷ ಆರು ಮುಖ್ಯ ಪ್ರಭೇದಗಳಿವೆ. ಇವುಗಳಲ್ಲಿ ಅಂತರತಳೀಕರಣ ಸಾಧ್ಯ. ಆದರೆ ನಿಸರ್ಗದಲ್ಲಿ ಇದು ನಡೆಯುವುದಿಲ್ಲ. ಕೃತಕ ತಳಿಸಂಕರಣದಿಂದ ಜನಿಸುವ ಮರಿಗಳು ಬಂಜೆಗಳಾಗುತ್ತವೆ. ಆದ್ದರಿಂದ ಒಂದೊಂದು ಪ್ರಭೇದದ ಲಕ್ಷಣವೂ ನಿರ್ದಿಷ್ಟವಾದುದು ಎಂಬುದು ಸ್ಪಷ್ಟ.

ಅಶ್ವ ವಿಕಾಸ: ವೈಜ್ಞಾನಿಕವಾಗಿ ಅಶ್ವಗಳ ವಿಕಾಸದ ಇತಿಹಾಸವನ್ನು ಸಂಪೂರ್ಣವಾಗಿ ಅರಿಯಲಾಗಿದೆ. ಇವುಗಳ ವಂಶವೃಕ್ಷ ಕಾಂಡೈಲಾರ್ಥ್ರ ಎಂಬ ಒಂದು ಸ್ತನಿಗಳ ಗುಂಪಿನಿಂದ ಪ್ರಾರಂಭವಾಯಿತು. ಈ ಗುಂಪು ಇಂದಿರುವ ಎಲ್ಲ ಜಾತಿಯ ಗೊರಸು ಪ್ರಾಣಿಗಳ ಆದಿಜೀವಿ. ಸೀನೊಜೋಯಿಕ್ ಯುಗದ ಆದಿಭಾಗದಲ್ಲಿ ಅಂದರೆ ಸುಮಾರು 60–65 ದಶಲಕ್ಷ ವರ್ಷ ಪ್ರಾಚೀನ ಕಾಲದಲ್ಲಿ ಹೈರಕೋಥೀರಿಯಂ ಎಂಬ ಪ್ರಾಣಿ ಜೀವಿಸಿತ್ತು. ಇಯೊಹಿಪ್ಪಸ್ ಎಂದೂ ಇದಕ್ಕೆ ಹೆಸರಿದೆ. ಇದೇ ಆದಿಹಯ. ಇದರ ಮುಂದಿನ ಕಾಲುಗಳಲ್ಲಿ ನಾಲ್ಕು ಬೆರಳುಗಳೂ ಹಿಂದಿನ ಕಾಲುಗಳಲ್ಲಿ ಮೂರು ಬೆರಳುಗಳೂ ಇದ್ದುವು. ಆ ಕಾಲದಲ್ಲಿ ಇದರ ನಾನಾ ಪ್ರಭೇದಗಳು ಉತ್ತರ ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿದ್ದುವು. ಇದರ ಎತ್ತರ ಸು.60 ಸೆಂಮೀ ಇದು ಇಂದಿನ ನಾಯಿಗಳನ್ನು ಹೋಲುತ್ತಿತ್ತು. ಮೂತಿ ಉದ್ದವಿರಲಿಲ್ಲ; ತಲೆಬುರುಡೆ ಕಾಂಡೈಲಾರ್ಥ್ರದ ತಲೆ ಬುರುಡೆಯನ್ನೇ ಹೋಲುತ್ತಿತ್ತು. ಕಣ್ಣಿನ ಗೂಡು ಸಂಪೂರ್ಣವಾಗಿ ಮೂಳೆಗಳಿಂದ ಆವೃತವಾಗಿತ್ತು. ಮುಚ್ಚಿಕೊಂಡಿರಲಿಲ್ಲ. ಕನಿಷ್ಠ ದರ್ಜೆಯ ಸ್ತನಿಗಳಲ್ಲಿರುವಂತೆ ಇದರಲ್ಲಿಯೂ 44 ಹಲ್ಲುಗಳಿದ್ದುವು (ಇಂದಿರುವ ಗಂಡು ಕುದುರೆಗಳಲ್ಲಿ 40 ಮತ್ತು ಹೆಣ್ಣುಗಳಲ್ಲಿ 36 ಹಲ್ಲುಗಳಿವೆ). ದವಡೆ ಹಲ್ಲುಗಳಲ್ಲಿದ್ದ ಶೃಂಗಗಳು ಬಹಳ ಕೆಳದರ್ಜೆಯಲ್ಲಿದ್ದುವು. ಇದರಿಂದಾಗಿ ಈ ಪ್ರಾಣಿ ಗಿಡಗಳ ಎಲೆಬಳ್ಳಿ ಇತ್ಯಾದಿಗಳನ್ನು ತಿನ್ನುತ್ತಿತ್ತು. ಆಧುನಿಕ ಅಶ್ವಗಳ ಮುಖ್ಯ ಆಹಾರ ಹುಲ್ಲು. ಆದರೆ ಹೈರಕೋಥೀರಿಯಮ್ಮಿಗೆ ಹುಲ್ಲನ್ನು ಅರೆಯಲು ಯುಕ್ತವಾದ ಹಲ್ಲುಗಳು ಇರಲಿಲ್ಲ. ಇದರ ಬೆನ್ನು ಆಧುನಿಕ ಅಶ್ವಗಳ ಬೆನ್ನಿನಂತೆ ನೆಟ್ಟಗಿರದೆ ಕಮಾನಿನಂತೆ ಬಾಗಿತ್ತು. ಕಾಲುಗಳು ಉದ್ದವಾಗುವ ಚಿಹ್ನೆಗಳು ಕಾಣುತ್ತಿದ್ದುವು. ಮಿದುಳು ಅತಿ ಚಿಕ್ಕದಾಗಿತ್ತು. ಇದೊಂದು ಕಾಡುಪ್ರಾಣಿ. ಸಾಮಾನ್ಯವಾಗಿ ಇಂದಿನ ಜಿಂಕೆಗಳಂತೆ ಕಾಡುಗಳಲ್ಲಿ ಗುಂಪುಗುಂಪಾಗಿ ವಾಸಿಸುತ್ತಿದ್ದಿರಬೇಕು.

ಇಯೊಸೀನ್ ಕಾಲದ (40–60 ದಶಲಕ್ಷ ವರ್ಷ ಪ್ರಾಚೀನ) ವಿಕಾಸಕ್ಕೆ ಬೇಕಾದ ಬೆಳವಣಿಗೆಗಳು ಹೈರಕೋಥೀರಿಯಂ ಜೀವಿಗಳಿಂದ ಹುಟ್ಟಿಬಂದ ಸಂತತಿಯಲ್ಲಿ ಕಂಡುಬರಲಾರಂಭಿಸಿದುವು. ಇದಕ್ಕೆ ಬೇಕಾದ ಮುಖ್ಯ ಅಂಶಗಳೆಂದರೆ ಹಲ್ಲುಗಳ ಬೆಳವಣಿಗೆ ಮತ್ತು ಕಾಲುಗಳಲ್ಲಿದ್ದ ಬೆರಳುಗಳ ಕ್ಷೀಣತೆ (ನಡು ಬೆರಳನ್ನು ಬಿಟ್ಟು). ಕುದುರೆಯ ಹಲ್ಲುಗಳಲ್ಲಿ ಹುಲ್ಲನ್ನು ಅರೆಯಲು ಬೇಕಾಧ ಉತ್ಕೃಷ್ಟ ಶೃಂಗಗಳಿವೆ. ಮುಂದವಡೆಯ ಹಲ್ಲುಗಳು ಹಿಂದವಡೆಯ ಹಲ್ಲುಗಳಂತೆಯೇ ಮಾರ್ಪಾಡುಗೊಂಡಿವೆ. ಕುದುರೆಯ ವಿಕಾಸದಲ್ಲಿ ನಡೆದ ಅತಿ ಮುಖ್ಯ ಶಾರೀರಿಕ ಬದಲಾವಣೆಗಳು ಕೆಳಕಂಡಂತಿವೆ.

ಒಂದೇ ಬೆರಳು ಉಳಿದಿದೆ; ಇದು ನಡು ಎಂದರೆ ಮೂರನೆಯ ಬೆರಳು; ಉಳಿದ ಬೆರಳುಗಳು ನಶಿಸಿಹೋಗಿವೆ; ಸ್ಪ್ಲಿಂಟ್ ಮೂಳೆಗಳೆಂದು ಹೆಸರಿರುವ ಎರಡನೆಯ ಮತ್ತು ನಾಲ್ಕನೆಯ ಬೆರಳುಗಳ ಹಸ್ತದ ಮೂಳೇಗಳು ಮಂಡಿಯ ತಳಭಾಗಕ್ಕೆ ಬಂದಿವೆ; ಇನ್ನುಳಿದ ಮಣಿಕಟ್ಟಿನ, ಹಿಮ್ಮಡಿಯ ಹಾಗೂ ಹಸ್ತದ ಮೂಳೆಗಳು ಮಂಡಿಯ ಭಾಗಕ್ಕೇ ಸೇರಿಕೊಂಡಿವೆ; ಮೂರನೆಯ ಬೆರಳಿನ ಹಸ್ತದ ಮೂಳೆ ಮಾತ್ರ ಎರಡು ಕಾಲುಗಳಲ್ಲೂ ಉದ್ದವಾಗಿ ಪ್ರಬುದ್ಧವಾಗಿ ಬೆಳೆದಿದೆ. ರೇಡಿಯಸ್ ಮತ್ತು ಅಲ್ನ ಮೂಳೆಗಳು ಒಂದರೊಡನೊಂದು ಸೇರಿಕೊಂಡುಬಿಟ್ಟಿವೆ; ಮೂರನೆಯ ಬೆರಳು ಅಗಲವಾಗಿದೆ; ಇದರ ಸುತ್ತಲೂ ಗೊರಸಿದೆ. ಈ ಬೆರಳಿನ ತುದಿ ನೆಲಕ್ಕೆ ಊರಿಕೊಳ್ಳುತ್ತದೆ; ತಲೆಯ ಬುರುಡೆಯಲ್ಲಿ ಕಣ್ಣಿನ ಗೂಡಿದೆ; ಕಣ್ಣಿನ ಗೂಡು ಮೂಳೆಗಳಿಂದ ಸುತ್ತುವರಿದ್ದು ಪೂರ್ಣವಾಗಿದೆ; ಕಣ್ಣಿನ ಗೂಡಿನ ಮುಂಭಾಗ ಉದ್ದವಾಗಿ ಮೂತಿಯಾಗಿದೆ.

ಕುದುರೆಯ ಆಹಾರ ಹುಲ್ಲು. ಇದನ್ನು ಮೇಯಲು ಅಗಿಯಲು ಮತ್ತು ಅರೆಯಲು ಅನುಕೂಲವಾಗುವಂತೆ ದವಡೆಯ ಹಲ್ಲುಗಳು ಅಗಲವಾಗಿ ಅವುಗಳ ಮೇಲೆ ಮೊನೆಯಾದ ಶೃಂಗಗಳಿವೆ. ಒಂದು ಶೃಂಗಕ್ಕೂ ಮತ್ತೊಂದು ಶೃಂಗಕ್ಕೂ ಮಧ್ಯೆ ಸಿಮೆಂಟಿನಂಥ ಗಟ್ಟಿಯಾದ ವಸ್ತುವಿದೆ. ಇದರ ಸಹಾಯದಿಂದ ಕುದುರೆ ಹುಲ್ಲನ್ನು ಚೆನ್ನಾಗಿ ಅಗಿಯಬಲ್ಲುದು. ಈ ಬದಲಾವಣೆಗಳ ನಾಂದಿ ಹೈರಕೋಥೀರಿಯಂ ಸಂತತಿಯಿಂದ ಹುಟ್ಟಿಬಂದ ಓರೋಹಿಪ್ಪಸ್ ಮತ್ತು ಎಪಿಹಿಪ್ಪಸ್ ಎಂಬ ಪ್ರಾಣಿಗಳಲ್ಲಿ ಪ್ರಾರಂಭವಾಗಿತ್ತು. ಇವು ಹೈರಕೋಥೀರಿಯಂ ಜೀವಿಯನ್ನೇ ಹೋಲುತ್ತಿದ್ದರೂ ಇವುಗಳಲ್ಲಿ ಹಲ್ಲುಗಳು ಸ್ವಲ್ಪ ಮಟ್ಟಿಗೆ ಮುಂದುವರಿದಿದ್ದುವು. ಇವುಗಳ ಗಾತ್ರ ದೊಡ್ಡದಾಗುತ್ತಿತ್ತು. ಬೆನ್ನಿನ ಬಾಗು ಕಡಿಮೆಯಾಗಿತ್ತು. ಈ ಜೀವಿಗಳಿಂದ ಬಂದ ಮುಂದಿನ ಸಂತತಿಯ ಹೆಸರು ಮೀಸೊಹಿಪ್ಪಸ್. ಇದರ ಮುಂಗಾಲಿನಲ್ಲಿ ಮೂರು




ಇಯೊಸೀನ್ ಕಲ್ಪದಿಂದ ಹಿಡಿದು ಇಂದಿನವರೆಗೆ ಆಗಿರುವ ಕುದುರೆಯ ವಿಕಾಸವನ್ನು ತೋರಿಸುವ ಚಿತ್ರ

ಬೆರಳುಗಳಿದ್ದುವು. ಅಂದರೆ ಒಂದು ಬೆರಳು ಸಂಪೂರ್ಣವಾಗಿ ನಶಿಸಿಹೋಗಿತ್ತು. ಇದರ ಮುಂದವಡೆಯ ಹಲ್ಲುಗಳು ದವಡೆಯ ಹಲ್ಲುಗಳಂತೆಯೇ ಆಗಿದ್ದುವು. ಬೆನ್ನು ನೆಟ್ಟಗಾಗಲಾರಂಭಿಸಿತ್ತು. ಇದರ ಜೀವಾವಶೇಷಗಳು ದಕ್ಷಿಣ ಡಕೋಟ ಪ್ರದೇಶದಲ್ಲಿ ಸಾಕಷ್ಟು ಸಿಕ್ಕಿವೆ. ಹಲ್ಲಿನ ಶೃಂಗಗಳು ಇದರಲ್ಲಿ ಚೆನ್ನಾಗಿ ಬೆಳೆಯದಿದ್ದ ಕಾರಣ ಇದು ಕೂಡ ಎಲೆ, ಬಳ್ಳಿ ಇತ್ಯಾದಿ ಸಸ್ಯಗಳನ್ನೇ ತಿಂದು ಜೀವಿಸುತ್ತಿತ್ತು. ಮೀಸೊಹಿಪ್ಪಸ್ ಆಲಿಗೊಸೀನ್ ಕಾಲದ (25–40 ದಶಲಕ್ಷ. ವರ್ಷ ಪ್ರಾಚೀನ) ಮಧ್ಯಭಾಗದಲ್ಲಿ ಜೀವಿಸಿತ್ತು.

ಅಶ್ವವಿಕಾಸಕ್ಕೆ ತವರುಮನೆ ಉತ್ತರ ಅಮೆರಿಕ ಖಂಡ, ಸಾಮಾನ್ಯವಾಗಿ ಅಶ್ವ ವಿಕಾಸವನ್ನು ನೇರವಿಕಾಸ (ಆರ್ಥೋಜೆನೆಸಿಸ್) ಎಂದು ಕರೆಯುತ್ತಾರೆ. ಏಕೆಂದರೆ ಹೈರಕೋಥೀರಿಯಂ ಜೀವಿಯಿಂದಲೇ ಇಂದಿನ ಅಶ್ವಗಳು ಕಾಲಾನಂತರದಲ್ಲಿ ಹಂತ ಹಂತವಾಗಿ ವಿಕಾಸ ಕ್ರಿಯೆಗೊಳಪಟ್ಟು ಹುಟ್ಟಿಬಂದಿವೆ ಎಂದು ಹೇಳುವವರಿದ್ದಾರೆ. ಆದರೆ ಇದು ನಿಜವಲ್ಲ. ಉತ್ತರ ಅಮೆರಿಕ ದೇಶದಲ್ಲೇನೋ ಅಶ್ವಗಳ ಸಂತತಿಗೆ ಸೇರಿದ ಹೈರಕೋಥೀರಿಯಂ, ಒರೊಹಿಪ್ಪಸ್, ಎಪಿಹಿಪ್ಪಸ್ ಇಸೊಹಿಪ್ಪಸ್, ಮಯೊಹಿಪ್ಪಸ್ ಜೀವಿಗಳು ಒಂದಾದ ಮೇಲೊಂದರಂತೆ ಸಿಕ್ಕಿವೆ. ಈ ಜೀವಿಗಳು 25 ದ. ಲ. ವರ್ಷಗಳ ಅಶ್ವವಿಕಾಸವನ್ನು ನೇರವಾಗಿ ಹಂತ ಹಂತವಾಗಿ ತೋರಿಸುತ್ತವೆ. ಆದರೆ ಮಯೊಹಿಪ್ಪಸ್ ಜೀವಿಯಿಂದ ಮುಂದಕ್ಕೆ ಅಶ್ವವಿಕಾಸ ಚರಿತ್ರೆ ಕ್ಲಿಷ್ಟವಾಗಲಾರಂಭಿಸುತ್ತದೆ. ಮಯೊಹಿಪ್ಪಸ್ ಜೀವಿ ಆಲಿಗೋಸೀನ್ ಯುಗದ ಮಧ್ಯ ಮತ್ತು ಅಂತ್ಯಭಾಗದಲ್ಲಿತ್ತು. ಇದರ ಕಾಲು, ಹಲ್ಲುಗಳು, ಶರೀರದ ಗಾತ್ರ ಎಲ್ಲವೂ ಕೂಡ ಮಿಸೊಹಿಪ್ಪಸ್ ಜೀವಿಗಿಂತ ಉತ್ತಮ ಸ್ಥಿತಿಯಲ್ಲಿದ್ದುವು. ಮಯೊಹಿಪ್ಪಸ್ ಜೀವಿಯಾದ ಮೇಲೆ ಬರುವ ಜೀವಿಗಳನ್ನು ಎರಡು ಉಪಕುಟುಂಬಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಉಪಕುಟುಂಬವನ್ನು ಆಂಕಿಥೀರಿನೆ ಮತ್ತು ಎರಡನೆಯ ಉಪಕುಟುಂಬವನ್ನು ಈಕ್ವಿನೆ ಎಂದು ಕರೆಯಲಾಗಿದೆ. ಈಕ್ವಿನೆಯಲ್ಲಿ ನಿಜಾಶ್ವಗಳಿವೆ. ಆಂಕಿಥೀರುಗಳು ಎಲೆಬಳ್ಳಿಗಳನ್ನು ಮೇಯುತ್ತ ಕಾಡುಗಳಲ್ಲಿ ವಾಸಿಸುತ್ತಿದ್ದುವು; ಇವುಗಳ ಹಲ್ಲುಗಳು ರಚನೆಯಲ್ಲಿ ಮುಂದುವರಿಯಲಿಲ್ಲ. ಕಾಲುಗಳಲ್ಲಿದ್ದ ಮೂರು ಬೆರಳುಗಳು ನಶಿಸಲಿಲ್ಲ. ಇವು ಉತ್ತರ ಅಮೆರಿಕದ ಕಾಡುಗಳಲ್ಲಿ ವ್ಯಾಪಿಸಿದ್ದುವು. ಆಮೇಲೆ ಯೂರೋಪ್ ಖಂಡಕ್ಕೆ ವಲಸೆ ಹೋದುವು. ಆಂಕಿಥೀರಿಯಂ ಹೈಪೊಹಿಪ್ಪಸ್, ಮೆಗಾಹಿಪ್ಪಸ್ ಎಂಬ ಪ್ರಾಣಿಗಳು ಈ ಕುಟುಂಬದ ಅತ್ಯುತ್ತಮ ಉದಾಹರಣೆಗಳು. ಪ್ಲಿಯೊಸೀನ್ ಯುಗದ (1–11 ದ. ಲ. ವ. ಪ್ರಾಚೀನ) ಆದಿಭಾಗದಲ್ಲಿ ಇವು ನಶಿಸಿಹೋದುವು. ಈಕ್ವಿನೀ ಉಪಕುಟುಂಬ ಆಂಕಿಥೀರುಗಳಿಗಿಂತ ವಿಭಿನ್ನವಾಗಿ ವಿಕಾಸ ಹೊಂದಲು ಉಪಕ್ರಮಿಸಿದುವು. ಮಯೊಸೀನ್ ಯುಗದ (11–25 ದಶಲಕ್ಷ ವರ್ಷ ಪ್ರಾಚೀನ) ವೇಳೆಗೆ ಪರಿಸರದಲ್ಲಾದ ಉತ್ಕಟ ಬದಲಾವಣೆಗಳಿಂದಾಗಿ ಉತ್ತರ ಅಮೆರಿಕದ ಬಹುಭಾಗ ಮೈದಾನ ಪ್ರದೇಶವಾಗಿ ಹುಲ್ಲಿನಿಂದಾವೃತವಾಯಿತು. 30 ದ. ಲ. ವರ್ಷಗಳ ಹಿಂದೆ ಪ್ರಾರಂಭವಾದ ಈ ಹುಲ್ಲುಗಾವಲುಗಳಲ್ಲಿದ್ದ ಹುಲ್ಲನ್ನೇ ತಿಂದು ಬದುಕಬೇಕಾದ ಪರಿಸ್ಥಿತಿ ಈ ಎರಡು ಉಪಕುಟುಂಬಗಳಿಗೂ ಒದಗಿತು. ಈಕ್ವಿನೆ ಕುಟುಂಬದ ಜೀವಿಗಳಿಗೆ ಮಾತ್ರ ಇದು ಸಾಧ್ಯವಾಯಿತು. ಏಕೆಂದರೆ ಇವುಗಳ ಹಲ್ಲುಗಳಲ್ಲಿ ಉತ್ಕೃಷ್ಟ ಶೃಂಗಗಳ ಬೆಳವಣಿಗೆ ಈಗಾಗಲೇ ಪ್ರಾರಂಭವಾಗಿತ್ತು. ಎಲೆ ಮತ್ತು ಕಾಂಡಗಳಿಗಿಂತ ಹುಲ್ಲು ಅತಿ ಗಟ್ಟಿಯಾದ ವಸ್ತು. ಜೊತೆಗೆ ಭೂ ಮಟ್ಟದಲ್ಲಿರುವ ಇದರ ಎಸಳುಗಳ ಮೇಲೆ ದೂಳು ಮತ್ತು ಮರಳಿನ ಕಣಗಳು ಅಂಟಿಕೊಳ್ಳಲು ಅವಕಾಶವಿದೆ. ಇಂಥ ವಸ್ತುವನ್ನು ತಿನ್ನಬೇಕಾದರೆ ಆ ಪ್ರಾಣಿಯ ಹಲ್ಲುಗಳೂ ಜೀರ್ಣಾಂಗಗಳೂ ವಿಶಿಷ್ಟ ರೀತಿಯಲ್ಲಿ ರಚನೆಗೊಂಡಿರಬೇಕು. ಇಂಥ ಕಠಿಣವಸ್ತುವನ್ನು ಅಗಿಯುವಾಗ ಉಂಟಾಗುವ ಹಲ್ಲುಗಳ ಸವೆತವನ್ನು ತಡೆಗಟ್ಟಲು ಯೋಗ್ಯರಕ್ಷಣೆ ಅಗತ್ಯ. ಇದರಿಂದಾದ ಹಲ್ಲುಗಳಲ್ಲಿ ಹರಿತವಾದ ಅಲಗುಗಳು, ಶೃಂಗಗಳು, ಇವುಗಳ ಮಧ್ಯೆ ಸಿಮೆಂಟಿನಂಥ ವಸ್ತುಗಳು ಅನಿವಾರ್ಯವೆನಿಸಿದುವು. ಈ ರೀತಿಯ ಹಲ್ಲುಗಳನ್ನು ಈಕ್ವಿನೆ ಕುಟುಂಬ ಬೆಳೆಸಿಕೊಳ್ಳಲಾರಂಭಿಸಿತು. ಮಯೊಸೀನ್ ಯುಗದಲ್ಲಿ ಬದುಕಿದ್ದ ಈಕ್ವಿನೀ ಕುಟುಂಬ ಕ್ಯಾರಾಹಿಪ್ಪಸ್ ಎಂಬ ಪ್ರಾಣಿಯಲ್ಲಿ ಈ ಎಲ್ಲ ಗುಣಗಳೂ ಇದ್ದುವು. ಇದರಿಂದ ಹುಟ್ಟಿಬಂದ ಸಂತತಿ ಹುಲ್ಲನ್ನೇ ತಿಂದು ಬದುಕುಲಾರಂಭಿಸಿತು. ಇದೇ ಮೆರಿಚಿಪ್ಪಸ್, ಮೆರಿಸಿಪ್ಪಸ್ ಪ್ರಾಣಿಯಲ್ಲಿ ಹಲ್ಲುಗಳು ಆಧುನಿಕ ಅಶ್ವದ ಹಲ್ಲುಗಳಂತೆಯೇ ಇದ್ದುವು. ಇದರ ಮೂತಿ ಉದ್ದವಾಗಿತ್ತು. ಕಾಲುಗಳು ಉದ್ದವಾಗಿದ್ದುವು. ಆದರೂ ಇದರ ಕಾಲುಗಳಲ್ಲಿ ಮೂರು ಬೆರಳುಗಳಿದ್ದುವು. 15 ದ. ಲ. ವರ್ಷಗಳ ಹಿಂದೆ ಇದ್ದ ಈ ಪ್ರಾಣಿಗಳು ಹೆಚ್ಚು ಕಡಿಮೆ ಇಂದಿನ ಅಶ್ವಗಳನ್ನೇ ಹೋಲುತ್ತಿದ್ದುವು. ಮೆರಿಚಿಪ್ಪಸ್ ಜೀವಿಯ ನಡುಬೆರಳು ಮಾತ್ರ ನೆಲಕ್ಕೂರುತ್ತಿತ್ತು. ಮಿಕ್ಕವು ನೆಲ ಮುಟ್ಟುವಂತಿರಲಿಲ್ಲ. ಅಲ್ನಾ ಮತ್ತು ಫಿಬುಲಾ ಮೂಳೆಗಳು ರೇಡಿಯಸ್ ಮತ್ತು ಟಿಬಿಯದೊಡನೆ ಮಿಲನಗೊಳ್ಳುತ್ತಿದ್ದುವು. ಮೆರಿಚಿಪ್ಪಸ್ ಸಂತತಿ ಆರು ಗುಂಪುಗಳಾಗಿ ವಿಭಾಗಗೊಂಡಿತ್ತು. ಈ ಗುಂಪುಗಳಲ್ಲಿ ನಾಲ್ಕು ಗುಂಪು ಕೆಲವೇ ಸಂತತಿಗಳವರೆಗೆ ಮಾತ್ರ ಪ್ರಬುದ್ಧಮಾನಕ್ಕೆ ಬಂದುವು. ಉಳಿದೆರಡು ಗುಂಪುಗಳಲ್ಲಿ ಮೊದಲನೆಯ ಗುಂಪಿನ ಅಶ್ವಗಳನ್ನು ಹಿಪ್ಪೇರಿಯಾನ್ ಇದಕ್ಕೆ ಮೂರು ಬೆರಳುಗಳಿದ್ದುವು. ಹಲ್ಲುಗಳಲ್ಲಿ ಎತ್ತರವಾದ ಶೃಂಗಗಳಿದ್ದುವು. ಆದರೆ ಈ ಹಿಪ್ಪೇರಿಯಾನ್ ಪ್ಲಿಯೊಸೀನ್ ಯುಗದ ಅಂತ್ಯಭಾಗದಲ್ಲಿ ನಾಶವಾಯಿತು. ಹಿಪ್ಪೇರಿಯಾನ್ ಉತ್ತರ ಅಮೆರಿಕದಲ್ಲಿ ಹುಟ್ಟಿ ಏಷ್ಯ ಅಲಾಸ್ಕ ಯೂರೋಪ್ ಮತ್ತು ಆಫ್ರಿಕ ಖಂಡದವರೆಗೂ ವಲಸೆ ಹೋಯಿತು. ಮೆರಿಚಿಪ್ಪಸ್ ಸಂತತಿಯಲ್ಲಿ ಪ್ರಬುದ್ಧಮಾನಕ್ಕೆ ಬಂದ ಮತ್ತೊಂದು ಗುಂಪೆಂದರೆ ಪ್ಲಿಯೊಹಿಪ್ಪಸ್. ಇದು 5–10ದ. ಲ.

ವರ್ಷಗಳವರೆಗೂ ಇತ್ತು. ಈ ಪ್ರಾಣಿಗಳ ಒಂದೊಂದು ಕಾಲಿನಲ್ಲೂ ಒಂದೊಂದು ಬೆರಳು ಇತ್ತು. ಪ್ಲಿಯೊಸೀನ್ ಯುಗದಲ್ಲಿ ಇವು ಉತ್ತರ ಅಮೆರಿಕ ಖಂಡದ ಬಹು ಭಾಗಗಳಲ್ಲಿದ್ದುವು. ಮಧ್ಯದ ಒಂದೇ ಬೆರಳು ಕಾಲಿನಲ್ಲಿ ಇದ್ದರೂ ಮಿಕ್ಕೆರಡು ಬೆರಳುಗಳು ಸಂಪೂರ್ಣವಾಗಿ ಮಾಯವಾಗಿರದೆ ಕಾಲಿನೊಳಕ್ಕೆ ಸೆಳೆದುಕೊಂಡಂತೆ ಮೇಲುಭಾಗದಲ್ಲಿ ಉಳಿದಿದ್ದುವು. ಈ ಜೀವಿಯಿಂದ ಆಧುನಿಕ ಅಶ್ವಕುಟುಂಬ ಹುಟ್ಟಿಬಂತು. ಪ್ಲಿಯೊಹಿಪ್ಪಸ್ ಪ್ಲಿಯೊಸೀನ್ ಯುಗದ ಕೊನೆಯ ಭಾಗದಲ್ಲಿ, ಅಂದರೆ 1 ದ. ಲ. ವರ್ಷಗಳ ಹಿಂದೆ ನಾಶವಾಯಿತು. ಇದರಿಂದ ಹುಟ್ಟಿಬಂದ ಅಶ್ವಸಂತತಿ ಪ್ರಪಂಚದ ಎಲ್ಲ ಭಾಗಗಳಿಗೂ ವಲಸೆ ಹೋಯಿತು. ಇದರಲ್ಲಿ ಮಧ್ಯದ ಒಂದೇ ಬೆರಳು ಉಳಿದು ಮಿಕ್ಕೆರಡು ಬೆರಳುಗಳು ಪೂರ್ಣವಾಗಿ ಮಾಯವಾದುವು. ಅಶ್ವದ ವಲಸೆ ಆಸ್ಟ್ರೇಲಿಯ ಖಂಡ ಪ್ರಪಂಚದ ಯಾವ ಭೂ ಭಾಗಕ್ಕೂ ಸಂಪರ್ಕ ಹೊಂದಿಲ್ಲ. ಉತ್ತರ ಅಮೆರಿಕ ಖಂಡದಲ್ಲಿ ಹುಟ್ಟಿದ ಅಶ್ವಸಂತತಿ ದಕ್ಷಿಣ ಅಮೆರಿಕ ಖಂಡಕ್ಕೆ ಪನಾಮ ಬಳಿಯ ಈಸ್ಥಮಸ್ ಮೂಲಕ ವಲಸೆ ಹೋಯಿತು. ದಕ್ಷಿಣ ಅಮೆರಿಕಕ್ಕೆ ಹೋದ ಅಶ್ವಗಳು ಹಿಪ್ಪಿಡಿಯಾನ್ ಎಂಬ ಒಂದು ವಿಚಿತ್ರ ರೀತಿಯ ಅಶ್ವಗಳನ್ನು ಕೊಟ್ಟುವು. ಹಿಪ್ಪಿಡಿಯಾನ್‌ಗಳಿಗೂ ಆಧುನಿಕ ಈಕ್ವಸ್‌ಗಳಿಗೂ ಹತ್ತಿರದ ಸಂಬಂಧವೇನೂ ಇಲ್ಲ. ಆಧುನಿಕ ಅಶ್ವಗಳ ಪ್ರಸರಣವಾದ ಮೇಲೆ ಈ ಹಿಪ್ಪಡಿಯಾನ್ ನಾಶವಾಯಿತು. ಉತ್ತರ ಅಮೆರಿಕ ಖಂಡದಲ್ಲಿ ಅಶ್ವ ಕುಟುಂಬದ ಭವ್ಯ ಇತಿಹಾಸ 50 ದ. ಲ. ವರ್ಷಗಳಿಂದಲು ಇದೆ. ಆದರೆ 10,000 ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ಈ ಹೊಸ ಪ್ರಪಂಚದಲ್ಲಿ ಇವುಗಳ ಸರ್ವನಾಶಕ್ಕೆ ಕಾರಣವಾದ ಕ್ರಿಯೆ ಯಾವುದು? ಇದು ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ. ಇದುವರೆಗೂ ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳಲ್ಲಿ ಇವುಗಳ ನಾಶದ ಬಗ್ಗೆ ಕಾರಣಗಳನ್ನು ತಿಳಿಯಲಾಗಿಲ್ಲ. ಮುಂದೆ ಅಶ್ವಗಳನ್ನು ಹೊಸತಾಗಿ ಇಲ್ಲಿಗೆ ಆಮದು ಮಾಡಿಕೊಳ್ಳಲಾಯಿತು.

ಸಾಕು ಕುದುರೆ ಮತ್ತು ಅದರ ವಿವಿಧ ಬುಡಕಟ್ಟುಗಳನ್ನು ಒಂದೇ ಪ್ರಭೇದಕ್ಕೆ ಸೇರಿಸಿ ಈಕ್ವಸ್ ಕಬಾಲಸ್ ಎಂದು ಕರೆಯುತ್ತಾರೆ. ಇಂದು ಇದು ಕಾಡುಪ್ರಾಣಿಯಾಗಿ ಪ್ರಪಂಚದಲ್ಲಿ ಎಲ್ಲೂ ಇಲ್ಲ. ಹಾಗೆ ಇಂದು ಉಳಿದಿರುವ ಪ್ರಭೇದವೆಂದರೆ ಪ್ರೆಜ್‌ವಾಲ್‌ಸ್ಕಿ. ಇದು ಚಿಕ್ಕ ಕುದುರೆ. ಇದರ ಕುತ್ತಿಗೆಯ ಮೇಲೆ ಉದ್ದಕ್ಕೂ ನೆಟ್ಟಗಿರುವ ರೋಮಗಳಿವೆ. ಒಂದು ಕಾಲದಲ್ಲಿ ಈ ಕುದುರೆಗಳು ಮಧ್ಯ ಏಷ್ಯ ಖಂಡದಲ್ಲಿ ಕಂಡುಬರುತ್ತಿದ್ದುವು. ಇದರ ತಳಿ ಹೊರ ಪ್ರಪಂಚದಿಂದ ನಶಿಸಿಹೋಗಿ ಮೃಗಾಲಯಗಳಲ್ಲಿ ಮಾತ್ರ ಉಳಿದಿದೆ. ಮಧ್ಯ ಯೂರೋಪ್ ಖಂಡದಲ್ಲಿ ಇದ್ದ ಟಾರ್‌ಪಾನ್ ಎಂಬ ಕಾಡುಕುದುರೆಯೂ ಇಂದು ಕಾಣಬರುತ್ತಿಲ್ಲ. ಈ ರೀತಿಯ ಕಾಡು ಕುದುರೆಗಳ ತಳಿ ಮಿಶ್ರಣಕ್ರಿಯೆಯಿಂದಾಗಿ ಇಂದಿರುವ ಎಲ್ಲ ಆಧುನಿಕ ಕುದುರೆಗಳೂ ಹುಟ್ಟಿಬಂದಿವೆ.

ಅನೆಗರ್: ಇದಕ್ಕೆ ಈಕ್ವಸ್ ಹೆಮಿಯೋನಸ್ ಎಂಬ ವೈಜ್ಞಾನಿಕ ಹೆಸರಿದೆ. ದೊಡ್ಡ ಕಿವಿಗಳುಳ್ಳ ಸುಮಾರಾಗಿ ಬೆಳೆದಿರುವ ಕತ್ತೆಯನ್ನೇ ಹೋಲುವ ಈ ಪ್ರಾಣಿಯ ಕುತ್ತಿಗೆಯ ಮೇಲೆ ನೆಟ್ಟಗೆ ನಿಂತಿರುವ ರೋಮಗಳ ಸಾಲನ್ನು ಕಾಣಬಹುದು. ಚೀನ, ಏಷ್ಯ, ಪ್ಯಾಲಿಸ್ತೀನ್ ಪ್ರದೇಶಗಳ ಕಾಡುಗಳಲ್ಲಿ ಇದು ಹಿಂದೆ ಹೆಚ್ಚಾಗಿ ಕಾಣಬರುತ್ತಿತ್ತು. ಈಗ ಈ ಪ್ರಭೇದ ಅವಸಾನ ಸ್ಥಿತಿಯಲ್ಲಿದೆ.

ಕತ್ತೆ: ಆಧುನಿಕ ಕತ್ತೆಗಳ ಪೂರ್ವಜರ ಹೆಸರು ಕಾಡುಕತ್ತೆಗಳು. ಈಕ್ವಸ್ ಅಸಿನಸ್ ಎಂದು ಇದರ ವೈಜ್ಞಾನಿಕ ನಾಮ. ಚಿಕ್ಕ ಶರೀರ, ದೊಡ್ಡ ಕಿವಿಗಳು, ಮತ್ತು ಕುತ್ತಿಗೆಯ ಮೇಲೆ ನೆಟ್ಟಗೆ ನಿಂತಿರುವ ರೋಮಗಳ ಸಾಲು ಇದರ ಮುಖ್ಯ ಲಕ್ಷಣಗಳು. ಒಂದು ಕಾಲದಲ್ಲಿ ಇದು ಉತ್ತರ ಆಫ್ರಿಕಖಂಡದಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು. ಈಗ ಅಲ್ಲಿ ಸಂಪೂರ್ಣವಾಗಿ ನಾಶವಾಗಿದೆ (**ನೋಡಿ– ಕತ್ತೆ**).

ಜೀಬ್ರಾಗಳು: ಮೇಲೆ ಹೇಳಿದವನ್ನು ಬಿಟ್ಟರೆ ಇನ್ನುಳಿದಿರುವ ಅಶ್ವಜಾತಿಯ ಪ್ರಾಣಿಗಳಲ್ಲಿ ಇಂದು ಬದುಕಿ ಉಳಿದಿರುವವು ಜೀಬ್ರಾಗಳು ಮಾತ್ರ. ಇವುಗಳ ಶರೀರದ ಮೇಲೆ ಎದ್ದುಕಾಣುವ ಪಟ್ಟೆಗಳಿವೆ. ಬೂದು ಬಣ್ಣದ ಒಡಲಮೇಲೆ ಕರಿಯ ಪಟ್ಟೆಗಳಿವೆ ಅಥವಾ ಕರಿಯೊಡಲ ಮೇಲೆ ಬಿಳಿಯ ಪಟ್ಟೆಗಳಿವೆ; ಜೀಬ್ರಾಗಳಲ್ಲಿರುವ ಪ್ರಭೇದಗಳು ಹಲವಾರು. ಬಹುಪಾಲು ಆಫ್ರಿಕದಲ್ಲಿವೆ. ಮನುಷ್ಯನ ಹಾವಳಿಯಿಂದಾಗಿ ಇತ್ತೀಚೆಗೆ ಇವೂ ನಶಿಸಿಹೋಗುತ್ತಿವೆ (**ನೋಡಿ– ಕುದುರೆ**). (ಎಲ್.ಎಸ್.ಜಿ.;ಎಸ್.ಎನ್.ಕೆ.ಯು.)

**ಈಕ್ವಿಲೆನಿನ್:** ಈಕ್ವಿಲೆನಿನ್ ($C_{18}H_{18}O_2$) ಮತ್ತು ಈಕ್ವಿಲಿನ್ ($C_{18}H_{20}O_2$) ಈಸ್ಟ್ರೊಜನ್ ವರ್ಗಕ್ಕೆ ಸೇರಿದ ಸ್ತ್ರೀಲಿಂಗ ನಿರ್ಣಾಯಕ ಚೋದನಿಕಗಳು (ಹಾರ್ಮೋನ್ಸ್). ಇವೆರಡೂ ಗರ್ಭಿಣಿಯಾದ ಹೆಣ್ಣು ಕುದುರೆಗಳ ಮೂತ್ರದಲ್ಲಿ ವಿಪುಲ ಪ್ರಮಾಣದಲ್ಲಿರುತ್ತವೆ.







ಈಕ್ವಿಲೆನಿನ್ನಿಗಿಂತ ಈಕ್ವಿಲಿನ್ ಹೆಚ್ಚು ಕ್ರಿಯಾಶಾಲಿಯಾದುದು. ಅವುಗಳ ರಚನೆ ಈ ಸೂತ್ರವನ್ನು ಕೆಳಗೆ ಕೊಡಲಾಗಿದೆ. ಈಕ್ವಿಲೆನಿನ್ನಿನ ದ್ರವೀಕರಣ ಬಿಂದು $258^{o}$ $259^{O}$ ಸೆಂ. ಗ್ರೇ. ಈಕ್ವಿಲೆನಿನ್ ದ್ರವೀಕರಣ ಬಿಂದು $238^{o}-240^{o}$ ಸೆಂ. ಗ್ರೇ. ಅಡ್ರಿನಲ್ ಗ್ರಂಥಿಗೆ ಕ್ಯಾನ್ಸರ್ ರೋಗ ತಗುಲಿದಾಗ ಅದರ ಅಂಗಾಂಶಗಳಲ್ಲಿ ಈಕ್ವಿಲೆನಿನ್ ಇರುವುದು ಮಾನವ ದೇಹದಲ್ಲೂ ವ್ಯಕ್ತವಾಗಿದೆ. ಇದು ಮಹತ್ತ್ವದ ಸಂಗತಿ. (ಎಚ್.ಜಿ.ಎಸ್.)

**ಈಗಾರ್:** ಮಧ್ಯಕಾಲೀನ ರಷ್ಯನ್ನರ ಮನಸ್ಸನ್ನು ಸೂರೆಗೊಂಡ ವೀರಯೋಧ. ದೇಶಕ್ಕಾಗಿ ಹೋರಾಡಿ ಒಡನಾಡಿಗಳಿಗೊಂದು ಜೀವನಾದರ್ಶವನ್ನೊದಗಿಸಿದವ. ರಾಜಕುಮಾರ ಈಗಾರ್ ಪೊಲೊಫ್‌ಟ್ಸಿಯಮೇಲೆ ದಂಡಯಾತ್ರೆ ನಡೆಸಿ, ಪ್ರಾರಂಭದಲ್ಲಿ ಜಯಗಳಿಸಿ ಕೊನೆಗೆ ಸೆರೆಯಾಳಾದ ಕಥೆಯನ್ನು ಬಿತ್ತರಿಸುವ ರಷ್ಯನ್ ಗದ್ಯಕಾವ್ಯ. ದಿ ಲೇ ಆಫ್ ಈಗಾರ್ಸ್ ಕ್ಯಾಂಪೇನ್ ಎಂಬುದು ಗ್ರಂಥದ ಇಂಗ್ಲಿಷ್ ಶೀರ್ಷಿಕೆ, 12ನೆಯ ಶತಮಾನದ್ದು. ಪ್ರಾಚೀನ ರಷ್ಯನ್ ಸಾಹಿತ್ಯದಲ್ಲಿ ರಾಷ್ಟ್ರೀಯ ಕಾವ್ಯ ಎನ್ನಿಸಿಕೊಂಡ ಕೃತಿ. ಸಮರೋತ್ಸಾಹ, ದೇಶಾಭಿಮಾನಗಳು ಬೆರೆತ ಕೃತಿ. ಇದರ ಕರ್ತೃ ಯಾರೆಂದು ತಿಳಿದುಬಂದಿಲ್ಲ. ಈ ಕೃತಿಯಲ್ಲಿ ಕಂಡುಬರುವ ಧ್ವನಿ ಮತ್ತು ಪ್ರತಿಮೆಗಳ ಬಳಕೆ ಮತ್ತು ಭಾಷಾವೈಭವ ಇದಕ್ಕೆ ವಿಶೇಷಸ್ಥಾನವನ್ನು ಕೊಟ್ಟಿವೆ. ಇದರ ಶೈಲಿಯಲ್ಲಿ ಜಟಿಲ ಲಯವುಂಟು. ಭಾವಗೀತೆ, ಮಹಾಕಾವ್ಯ, ರಾಜಕೀಯವಾಗ್ಮಿತೆ–ಈ ಎಲ್ಲದರ ಅಂಶಗಳೂ ಇದರಲ್ಲಿ ಬೆರೆತಿವೆ.

ಯುದ್ಧ ಸಂಗತಿ ನಡೆದದ್ದು 1185ರಲ್ಲಿ. ಇದು ನಡೆದ ಸ್ವಲ್ಪ ದಿನಗಳಲ್ಲೇ ಈ ಕಾವ್ಯರಚನೆ ಆಗಿದ್ದಿರಬೇಕು. 16ನೆಯ ಶತಮಾನದಲ್ಲಿ ರಚನೆಯಾದ ಕೈಬರಹದ ಪ್ರತಿ 1795ರಲ್ಲಿ ದೊರಕಿ 1800ರಲ್ಲಿ ಕಾವ್ಯ ಮೊದಲ ಬಾರಿ ಪ್ರಕಟವಾಯಿತು. 1812ರ ಮಾಸ್ಕೊ ಬೆಂಕಿಯ ಅನಾಹುತದಲ್ಲಿ ಭಸ್ಮವಾಯಿತು. ಈ ಕೃತಿಗೆ ಪ್ರಪಂಚದ ಮಹಾಕಾವ್ಯಗಳ ಪಂಕ್ತಿಯಲ್ಲಿ ಒಂದು ಸ್ಥಾನವಿದೆ. (ಎಲ್.ಎಸ್.ಎಸ್.)

**ಈಗ್ರೆಟ್:** ಸಿಕೋನ್ಯೈಯಿಫಾರ್ಮೀಸ್ ಗುಂಪಿಗೆ ಸೇರಿದ ಬಲು ಸುಂದರ, ಹೆರನ್ ಬಕಪಕ್ಷಿಗಳ ಹೆಸರು. ಗರಿ ಪುಕ್ಕಗಳೆಲ್ಲ ಅಚ್ಚಬಿಳಿ, ಕೊಕ್ಕು ಹಳದಿ, ನಡಿಗೆ, ಕುಣಿತ ಬಲು ಮೋದಕರ. ಈ ಆಕರ್ಷಣೆಯೇ ಪಕ್ಷಿಯ ದೊಡ್ಡ ಶತ್ರುವಾಯಿತು. ಮನುಷ್ಯ ಮೆಚ್ಚಿ ಪಕ್ಷಿಯನ್ನು ಬೆರಸಿ ಹಿಡಿದುಕೊಂಡ. ಗರಿಗಳನ್ನು ಟೊಪ್ಪಿಗೆಗಳಿಗೆ ಉಡುಪುಗಳಿಗೆ ಅಲಂಕರಣ ಸಾಮಗ್ರಿಗಳಾಗಿ ಬಳಸಿಕೊಂಡ. ಹೀಗೆ ಅವ್ಯಾಹತವಾಗಿ ನಡೆದ ಈಗ್ರೆಟಿನ ಕೊಲೆಯಿಂದ

**ಈಗ್ರೆಟ್ ಹಕ್ಕಿ: ಕಾಲಿನ ಬೆರಳುಗಳಲ್ಲೊಂದರ ತುದಿ ಬಾಚಣಿಗೆಯಂತಿರುವುದನ್ನು ಒಳ ಚಿತ್ರದಲ್ಲಿ ತೋರಿಸಿದೆ.**

ಅದರ ವಂಶವೇ ನಷ್ಟವಾಗುವ ಸಂಭಾವ್ಯತೆ ಒದಗಿತ್ತು. ಆದರೆ ಜನರ ಅಲಂಕಾರಪ್ರಜ್ಞೆ ಬದಲಾಯಿತು. ಸರ್ಕಾರದ ಕಾಯಿದೆ ಕಾನೂನು ಬಿಗಿಗೊಂಡುವು. ಪರಿಣಾಮವಾಗಿ ಪಕ್ಷಿ ಅಳಿಯದೇ ಉಳಿದಿದೆ, ವೃದ್ಧಿಯೂ ಆಗುತ್ತಿದೆ. ಪ್ರಪಂಚದ ಬೆಚ್ಚಗಿನ ಪ್ರದೇಶಗಳಲ್ಲಿ ವಾಸಿಸುವ ಈಗ್ರೆಟ್ಟಾ ಜಾತಿಯ ಹಕ್ಕಿಗಳಿಗೆ ಸಾಮಾನ್ಯವಾಗಿ ಈಗ್ರೆಟ್ ಎಂಬ ಹೆಸರು. ಈ. ಗಾರ್ಜೆಟ್ಟಾ (ಸು. 60ಸೆಂಮೀ ಉದ್ದ), ಕಾಸ್ಮೆರೋಡಿಯಸ್ ಆಲ್ಬಸ್ (ಅಥವಾ ಅಮೆರಿಕ ದೇಶದಲ್ಲಿ ಸಾಮಾನ್ಯ ಈಗ್ರೆಟ್ ಸು. 80ಸೆಂಮೀ ಉದ್ದ), ಡೆಮಿಗ್ರೆಟ್ಟಾ, ಲ್ಯೂಕೋ ಪೋಯ್ಕ್ಸ್ ತೂಲಾ (ಸು. 65ಸೆಂಮೀ ಉದ್ದ) ಇವೆಲ್ಲವೂ ಈಗ್ರೆಟ್ಟಾ ಜಾತಿಯಲ್ಲಿ ಸೇರಿವೆ. (ಜಿ.ಎಂ.ಬಿ.)

**ಈಚಲು:** ಪಾಮಿ/ಅರಿಕೇಸೀ ಕುಟುಂಬಕ್ಕೆ ಸೇರಿದ ಒಂದು ಜಾತಿ. ಫೀನಿಕ್ಸ್ ಸಿಲ್ವೆಸ್ಟ್ರಿಸ್ ಇದರ ಶಾಸ್ತ್ರೀಯ ಹೆಸರು ಇದರಲ್ಲಿ ಐದಾರು ಪ್ರಭೇದಗಳಿವೆ. ಖರ್ಜೂರ (ಫೀನಿಕ್ ಕೇರಿಕ ಇದಕ್ಕೆ ಸಂಬಂಧಿ).

ಈಚಲು ಜಾತಿಯ ಮರಗಳು ನೆಟ್ಟಗೆ ಬೆಳೆಯುತ್ತವೆ. ರೆಂಬೆಗಳಿರುವುದಿಲ್ಲ. ಕಾಂಡ ಉರುಟಾಗಿದ್ದು ಎಲೆಗಳ ತೊಟ್ಟಿನ ತಳಭಾಗಗಳಿಂದ ಮುಚ್ಚಿದೆ. ಒಂದು ಪ್ರಭೇಧದಲ್ಲಿ ಮಾತ್ರ ಕಾಂಡ ನೆಲದೊಳಗಿರುತ್ತದೆ. ಎಲೆಗಳು ಮರದ ತುದಿಯಲ್ಲಿ ಗರಿಯೋಪಾದಿಯಾಗಿ ಹರಡಿರುತ್ತವೆ. ಪ್ರತಿ ಗರಿಯೂ ಒಂದು ಸಂಯುಕ್ತ ಪತ್ರ. ಉಪಪತ್ರಗಳು ಗಡುಸಾಗಿ ಬೂದಿಬಣ್ಣವಾಗಿರುತ್ತದೆ. ತುದಿ ದಬ್ಬಳದ ಮೊನೆಯಂತಿದೆ. ಒಂದು ಪ್ರಭೇದದಲ್ಲಿ ಕಿರು ಎಲೆಗಳು ಹಸುರಾಗಿ ಮೃದುವಾಗಿದ್ದು ಮೊನೆ ಚೂಪಾಗಿರುವುದಿಲ್ಲ.

ಈಚಲು ಸು. 10–15ಮೀ ಗಳ ಎತ್ತರಕ್ಕೆ ಬೆಳೆಯುತ್ತದೆ. ಈಚಲು ಮರದಲ್ಲಿ ಸಸಿಗಳು ಬೇರಿನಿಂದ ಹುಟ್ಟುವುದಿಲ್ಲ. ಈಚಲು ಮರದಲ್ಲಿ ಕಿರು ಎಲೆಗಳು ದಿಂಡಿಗೆ ಸಮಕೋನದಲ್ಲಿ ಸೇರಿಕೊಂಡಿರುತ್ತವೆ.

ಈಚಲು ಮರದಿಂದ ನೀರಾ ಇಳಿಸುವುದು

ಸಾಮಾನ್ಯವಾಗಿ ಈ ಮರಗಳು ನೀರು ಒರೆಸುವ ಬಂಜರು ಪ್ರದೇಶಗಳಲ್ಲಿ ಬೆಳೆಯುತ್ತವೆ. ಅರೇಬಿಯ ದೇಶ, ಭಾರತದ ರಾಜಾಸ್ತಾನದ ಮರಳುಗಾಡು ಪ್ರದೇಶ, ಗುಜರಾತು, ಪಂಜಾಬು–ಈ ಕೆಲವು ಪ್ರದೇಶಗಳಲ್ಲಿ ಇದರ ಬೆಳೆ ಹೆಚ್ಚು. ಕರ್ನಾಟಕದ ರಾಜ್ಯದ ತುಮಕೂರು, ಚಿತ್ರದುರ್ಗ, ಮೈಸೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಈಚಲು ಕಾಡುಗಳಿವೆ.

ಈಚಲು ಜಾತಿಯ ಮರಗಳನ್ನು ಗಂಡು ಈಚಲು, ಹೆಣ್ಣು ಈಚಲು ಎಂದು ಕರೆಯುವುದುಂಟು. ಗಂಡು ಮತ್ತು ಹೆಣ್ಣು ಹೂಗಳು ಬೇರೆ ಬೇರೆ ಮರಗಳಲ್ಲಿ ಬರುವುದೇ ಇದಕ್ಕೆ ಕಾರಣ. ಈಚಲು ಮತ್ತು ಖರ್ಜೂರದ ಮರಗಳು ಸಾಮಾನ್ಯವಾಗಿ ಫೆಬ್ರವರಿ, ಮಾರ್ಚ್ ತಿಂಗಳಿಗಳಲ್ಲಿ ಹೂ ಬಿಡುತ್ತವೆ. ಕಾಯಿ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಹಣ್ಣಾಗುತ್ತವೆ.

ಈಚಲು ಮರದಿಂದ ನೀರಾ ಇಳಿಸುತ್ತಾರೆ. ಇದು ಹುಳಿತು ಹೆಂಡವಾಗುತ್ತದೆ. ಏಳೆಂಟು ವರ್ಷ ವಯಸ್ಸಿನ ಮರಗಳು ನೀರಾ ತೆಗೆಯುವುದಕ್ಕೆ ಪಕ್ವವಾಗಿರುತ್ತವೆ. ಒಂದು ಮರ ತನ್ನ ಜೀವಿತಕಾಲದಲ್ಲಿ ಸುಮಾರು 25–30 ವರ್ಷಗಳ ಕಾಲ ನೀರಾ ಕೊಡಬಲ್ಲುದು. ಸಾಮಾನ್ಯವಾಗಿ ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ಪ್ರಾರಂಭಿಸಿ ನಾಲ್ಕರಿಂದ ಆರು ತಿಂಗಳ ಕಾಲ ನೀರಾ ಇಳಿಸುತ್ತಾರೆ. ನೀರಾದ ಪ್ರಮಾಣ ಚಳಿಗಾಲದಲ್ಲಿ ಹೆಚ್ಚಾಗಿದ್ದು ಬೇಸಗೆ ಬಂದಂತೆಲ್ಲ ಕಡಿಮೆಯಾಗುತ್ತ ಹೋಗುತ್ತದೆ.

ನೀರಾ ಇಳಿಸುವ ಕ್ರಮ ಈ ರೀತಿ ಇದೆ: ಮರದ ತುದಿಯ ಒಂದು ಪಾರ್ಶ್ವದಲ್ಲಿನ ಕೆಳಗಿನ ಎಲೆಗಳನ್ನು ಕತ್ತರಿಸಿ ಹಾಕಿ ಅಲ್ಲಿನ ತೊಗಟೆಯನ್ನು ಸುಮಾರು 45 ಸೆಂ. ಮೀ. ಅಗಲದಷ್ಟು ಒಳಗಿನ ಬಿಳಿಯಭಾಗ ಕಾಣುವಂತೆ ತೆಗೆದುಹಾಕುತ್ತಾರೆ. ಕ್ರಮೇಣ ಅದು ಕಂದುಬಣ್ಣಕ್ಕೆ ತಿರುಗುತ್ತದೆ. ಕೆಲವು ದಿನಗಳಾದ ಮೇಲೆ, ಈ ತೆರೆದ ಸ್ಥಳದಲ್ಲಿ V ಆಕಾರದಲ್ಲಿ ಗಾಯವನ್ನುಂಟು ಮಾಡಿ ಒಂದಷ್ಟು ಭಾಗವನ್ನು ತೆಗೆದುಹಾಕುತ್ತಾರೆ. ಅದರಿಂದ ರಸ ಸುರಿಯಲು ಪ್ರಾರಂಭವಾಗುತ್ತದೆ. ಅದನ್ನು ಬೊಂಬಿನ ನಳಿಕೆಯ ಮೂಲಕ ಒಂದು ಮಡಕೆಗೆ ಸುರಿಯುವಂತೆ ಮಾಡಿರುತ್ತಾರೆ. ಮಡಕೆಯ ಒಳಭಾಗಕ್ಕೆ ಸುಣ್ಣ ಬಳಿದಿರುತ್ತಾರೆ. ಮಾರನೆಯ ಬೆಳಗಿನ ಜಾವ (ಸೂರ್ಯೋದಯಕ್ಕೆ ಮುನ್ನ) ಮಡಕೆಯಲ್ಲಿ ಶೇಖರವಾಗಿರುವ ರಸವನ್ನು ಹೊರ ತೆಗೆದು, ಮತ್ತೆ ಮಡಕೆ ಕಟ್ಟುತ್ತಾರೆ. ಹೀಗೆ ಎರಡು ದಿನ ರಸವನ್ನು ಇಳಿಸಿದ ಮೇಲೆ ಮೂರು ದಿನಗಳ ಬಿಡುವು ಕೊಡುತ್ತಾರೆ. ಈ ರೀತಿ ಹಲವಾರು ಬಾರಿ ಹೊಸ ಹೊಸ ಗಾಯಗಳನ್ನು ಮಾಡಿ ನಾಲ್ಕಾರು ತಿಂಗಳುಗಳ ಕಾಲ ನೀರಾವನ್ನು ಇಳಿಸುತ್ತಾರೆ. ಅಲ್ಲದೆ ಹೆಚ್ಚು ಪ್ರಮಾಣದಲ್ಲಿ ನೀರಾ ಸುರಿಯುವಂತೆ ಮಾಡಲು ಕಾಯಿಗೊನೆಗಳನ್ನು ಕತ್ತರಿಸಿಬಿಡುತ್ತಾರೆ. ಈ ವಿಧಾನವನ್ನು ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಅನುಸರಿಸಿದರೂ ಕೆಲವು ಪ್ರದೇಶಗಳಲ್ಲಿ ಸಣ್ಣ ವ್ಯತ್ಯಾಸಗಳುಂಟು. ಬಂಗಾಳದಲ್ಲಿ ಕೆಳಗಿನ ಎಲೆಗಳ ಬುಡದಲ್ಲಿ ಗಾಯಮಾಡಿ ನೀರಾ ಇಳಿಸಿದರೆ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಮೇಲ್ಭಾಗದ ಎಲೆಗಳ ಬುಡದಲ್ಲಿ ಗಾಯಮಾಡಿ ತೆಗೆಯುತ್ತಾರೆ. ಈಚೆಗೆ ಹೊಸ ವಿಧಾನವೊಂದನ್ನು ಅನುಸರಿಸುತ್ತಾರೆ. ಇದರ ಪ್ರಕಾರ ತೊಗಟೆ ತೆಗೆದ ಸ್ಥಳವನ್ನು ಮೂರು ಭಾಗಗಳಾಗಿ ವಿಂಗಡಿಸಿ, ಒಂದೊಂದು ಸರ್ತಿಗೆ ಒಂದೊಂದರಿಂದ ಮಾತ್ರ ರಸ ಸುರಿಯುವಂತೆ ಮಾಡುತ್ತಾರೆ. ಇದರಿಂದ ಇನ್ನೆರಡು ಭಾಗಗಳಿಗೆ ಎರಡು ದಿನ ಬಿಡುವು ದೊರೆತಂತಾಗುತ್ತದೆ. ಈ ವಿಧಾನದಿಂದ ಸಾಮಾನ್ಯವಾಗಿ ಬರುವ ರಸದ ಪ್ರಮಾಣವನ್ನು ದ್ವಿಗುಣಗೊಳಿಸಬಹುದೆಂದು ಹೇಳುತ್ತಾರೆ. ಪ್ರತಿಯೊಂದು ಮರದಿಂದ ಸುಮಾರು 70–310 ಕಿ.ಗ್ರಾಂ. ನೀರಾ ಪಡೆಯಬಹುದೆಂದು ಅಂದಾಜು ಮಾಡಲಾಗಿದೆ.

ನೀರಾ ಸಿಹಿಯಾಗಿದ್ದು ಪುಷ್ಟಿದಾಯಕ ಹಾಗೂ ಚೇತೋಹಾರಿ ಪಾನೀಯವಾಗಿದೆ. ಇದರಲ್ಲಿ ಬಿ ಮತ್ತು ಸಿ ಜೀವಾತುಗಳು ಹೆಚ್ಚು ಪ್ರಮಾಣದಲ್ಲಿದ್ದು, ಪ್ರೋಟೀನುಗಳು, ಶರ್ಕರಗಳು, ರಂಜಕ, ಕ್ಯಾಲ್ಸಿಯಂ, ಕಬ್ಬಿಣ ಇತ್ಯಾದಿ ಲವಣಾಂಶಗಳು ಹೇರಳವಾಗಿವೆ. ಇದರಲ್ಲಿರುವ ಸಿ ವಿಟಮಿನ್ ಅಂಶ ಬಹುಕಾಲ ನಶಿಸದೇ ಇರುವುದು ಒಂದು ವಿಶಿಷ್ಟ ಗುಣ.

ನೀರಾವನ್ನು ಬಹಳಕಾಲ ಕೆಡದಂತೆ, ಅದರ ಸಹಜ ಕಂಪು ಹೋಗದಂತೆ ಪ್ಯಾಶ್ಚರೀಕರಣ ಮಾಡಿ ಶೇಖರಿಸಬಹುದು. ಹಾಗೆ ಮಾಡುವಾಗ ಸೋಡಿಯಂ ಬೆಂಜ್ಹೋಯೇಟ್ ಮತ್ತು ಸಿಟ್ರಿಕ್ ಅಥವಾ ಮ್ಯಾಲಿಕ್ ಆಮ್ಲಗಳ ಮಿಶ್ರಣವನ್ನು ಇದರೊಂದಿಗೆ ಸೇರಿಸುತ್ತಾರೆ. ಅಲ್ಲದೆ ಅಮೋನಿಯಮ್ ಹೈಡ್ರಾಕ್ಸೈಡ್ ಅಥವಾ ಪಾಲುಡ್ರಿನ್ ಎಂಬ ವಸ್ತುವನ್ನು ಇದಕ್ಕೆ ಸೇರಿಸುವುದರಿಂದಲೂ ನೀರಾವನ್ನು ಸುರಕ್ಷಿತವಾಗಿ ಇಡಬಹುದು.

ನೀರಾದಿಂದ ಬೆಲ್ಲವನ್ನೂ ತಯಾರಿಸುತ್ತಾರೆ. ಈಚಲು ಬೆಲ್ಲವನ್ನು ತಯಾರಿಸುವ ವಿಧಾನ ಈ ರೀತಿ ಇದೆ: ಹೊಸದಾಗಿ ಇಳಿಸಿದ ನೀರಾವನ್ನು ದೊಡ್ಡ ದೊಡ್ಡ ಕೊಪ್ಪರಿಗೆಗಳಲ್ಲಿ ಹಾಕಿ ಕುದಿಸುತ್ತಾರೆ. ಒಂದೇ ಸಮನೆ ಕುದಿಯುವಂತೆ ಮಾಡಲು, ಆಗಿಂದಾಗ್ಗೆ ಕಟ್ಟಿಕೊಳ್ಳುವ ಕೆನೆಯನ್ನು ತೆಗೆದುಹಾಕುತ್ತಾರೆ. ಹೀಗೆ ಕೆಲವು ಕಾಲ ಕುದಿಸಿ, ಹದವಾದ ಪಾಕ ಬಂದಾಗ ಅದನ್ನು ಆರಿಸಿ, ಗಾಳಿಯಾಡಿಸಿ, ಮಡಕೆಗಳಿಗೂ ತಟ್ಟೆಗಳಿಗೂ ಹಾಕುತ್ತಾರೆ. ಅದು ಗಟ್ಟಿಯಾಗಿ ಬೆಲ್ಲವಾಗುತ್ತದೆ. ಬೆಲ್ಲ ತಯಾರಿಸುವ ಉದ್ದೇಶವಿದ್ದರೆ, ನೀರಾ ಶೇಖರಿಸುವ ಮಡಕೆಗಳ ಒಳಭಾಗಕ್ಕೆ ಸುಣ್ಣವನ್ನು ಲೇಪಿಸುವುದಿಲ್ಲ. ಸುಣ್ಣ ಸವರಿದ್ದರೆ ಬೆಲ್ಲಕ್ಕೆ ಸರಿಯಾದ ಬಣ್ಣ ಬರುವುದಿಲ್ಲ. ಹಲವಾರು ಬಾರಿ ಕುದಿಸಿ ಶುದ್ಧೀಕರಿಸುವುದರಿಂದ ಸಕ್ಕರೆಯಷ್ಟು ಬಿಳುಪಾದ ಬೆಲ್ಲವನ್ನು ಪಡೆಯಬಹುದು. ಇದರಲ್ಲಿ ಬಿ ಗುಂಪಿನ ಥೈಯಾಮಿನ್, ರೈಬೊಫ್ಲೇವಿನ್, ನಿಕೋಟಿನಿಕ್ ಆಮ್ಲಗಳು, ಸಿ ವಿಟಮಿನ್ ಅಲ್ಲದೆ ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ಸೋಡಿಯಂ, ಪೊಟಾಸಿಯಂ ಲವಣಗಳು, ಹಲವು ಅಮೈನೋ ಆಮ್ಲಗಳು ಇವೆ. ಇದರಿಂದಾಗಿ ಈಚಲು ಬೆಲ್ಲ ಕಬ್ಬಿನ ಬೆಲ್ಲಕ್ಕಿಂತ ಉತ್ತಮ ಎನ್ನುತ್ತಾರೆ. ಈಚಲು ಬೆಲ್ಲವನ್ನು ತಯಾರಿಸುವಾಗ ಬರುವ ಕಾಕಂಬಿಯನ್ನು ತಿನ್ನುವುದಕ್ಕೂ ಮತ್ತು ಆಲ್ಕೊಹಾಲ್ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ.

ಹೆಂಡದಲ್ಲಿ 3.6% ರಷ್ಟು ಆಲ್ಕೊಹಾಲ್ ಇದ್ದು ಜೊತೆಗೆ ಸಕ್ಕರೆ, ಟಾರ್ಟಾರಿಕ್ ಆಮ್ಲ, ಗ್ಲಿಸರಾಲ್, ನೈಟ್ರೋಜನ್, ರಂಜಕ, ಥೈಯಾಮಿನ್ ಹಾಗೂ ರೈಬೊಫ್ಲೇವಿನ್ ಜೀವಾತುಗಳು ಹೆಚ್ಚಿನ ಪ್ರಮಾಣದಲ್ಲಿವೆ. ನೀರಾಕ್ಕಿಂತ ಇದು ಹೆಚ್ಚು ಪುಷ್ಟಿದಾಯಕ ಪಾನೀಯವೆಂದು ಕೆಲವರ ಅಭಿಪ್ರಾಯ.

ನೀರಾದಿಂದ ವಿನೆಗರನ್ನೂ ತಯಾರಿಸುತ್ತಾರೆ. ದೊಡ್ಡ ದೊಡ್ಡ ಕಾರ್ಬಾಯ್‌ಗಳಲ್ಲಿ ನೀರಾವನ್ನು ಗಾಳಿಯೊಂದಿಗೆ ಸಂಬಂಧವಿರದಂತೆ ಭರ್ತಿಮಾಡಿ 12 ರಿಂದ 15 ದಿನಗಳ ಕಾಲ $24^0$–$27^0$ ಸೆಲ್ಸಿಯಸ್ ಉಷ್ಣತೆಯಿರುವಂತೆ ಮಾಡಿ ಜೋಪಾನಿಸುತ್ತಾರೆ. ಈ ರೀತಿ ಇಡುವುದರಿಂದ ನೀರಾ ಹುಳಿಯಾಗುತ್ತದೆ. ಹೀಗೆ ಹುಳಿಯಾದ ನೀರಾವನ್ನು ಬೇರೆ ಪಾತ್ರೆಗಳಿಗೆ ಸುರಿದು, ಚೆನ್ನಾಗಿ ಗಾಳಿಯಾಡುವಂತೆ ಮಾಡಿ ಮೂರು ತಿಂಗಳು ಕಾಲ ಬಿಡುತ್ತಾರೆ. ಆಗ ನೀರಾ ಎಲ್ಲ ವಿನೆಗರ್ ಆಗಿ ಮಾರ್ಪಡುತ್ತದೆ. ಇದರಲ್ಲಿ 6.5% ಅಸಿಟಿಕ್ ಆಮ್ಲವಿರುತ್ತದೆ.

ಈಚಲು ಹಣ್ಣುಗಳು ಖರ್ಜೂರದಷ್ಟು ಉತ್ಕೃಷ್ಟವಲ್ಲದಿದ್ದರೂ ಸಿಹಿಯಾಗಿದ್ದು ತಿನ್ನಲು ಚೆನ್ನಾಗಿರುತ್ತದೆ. ಜೆಲ್ಲಿ, ಜಾಮ್ ಹಾಗೂ ವಿನೆಗರ್ ತಯಾರಿಕೆಯಲ್ಲಿ ಇವನ್ನು ಉಪಯೋಗಿಸುತ್ತಾರೆ.

ಈಚಲು ಗರಿಗಳನ್ನು ಗುಡಿಸಲುಗಳಿಗೆ ಹೊದಿಸಲು ಉಪಯೋಗಿಸುತ್ತಾರೆ. ಅಲ್ಲದೆ ಅವುಗಳಿಂದ ಚಾಪೆ, ಬೀಸಣಿಗೆ, ಬುಟ್ಟಿ, ಪೊರಕೆಗಳನ್ನು ಮಾಡುತ್ತಾರೆ. ಇವುಗಳ ನಾರಿನಿಂದ ಹಗ್ಗವನ್ನೂ ತಯಾರಿಸುತ್ತಾರೆ. ಮರಗಳನ್ನು ಕಡಿದು ತಾತ್ಕಾಲಿಕ ಸೇತುವೆಗಳನ್ನು ಕಟ್ಟುವುದಕ್ಕೂ ಚಪ್ಪರಗಳ ಕಂಬಗಳಿಗೂ ಉಪಯೋಗಿಸುತ್ತಾರೆ. ಈಚಲು ತೊಗಟೆಯಲ್ಲಿ ಟ್ಯಾನಿನ್ ಎಂಬ ವಸ್ತು ದೊರೆಯುತ್ತದೆ. ಈಚಲು ಬೀಜಗಳನ್ನು ಉತ್ತರಾಣಿ ಗಿಡದ ಬೇರಿನೊಂದಿಗೆ ಅರೆದು, ವೀಳೆಯದೆಲೆಯೊಂದಿಗೆ ಸೇವಿಸಿದರೆ ಚಳಿಜ್ವರ ವಾಸಿಯಾಗುವುದೆಂದು ಹೇಳುತ್ತಾರೆ. ಹಲ್ಲುನೋವಿನ ನಿವಾರಣೆಯಲ್ಲಿ ಈಚಲು ಬೇರನ್ನು ಉಪಯೋಗಿಸುತ್ತಾರೆ.

ಈಚಲು, ತಾಳೆ, ಬಗನಿ, ತೆಂಗು ಮುಂತಾದ ಗಿಡಗಳಿಂದ ಹೆಂಡ ಇಳಿಸುವ ವಾಡಿಕೆ ಬಹಳ ಹಿಂದಿನಿಂದಲೂ ಇದೆ. ಆದರೆ ಹೆಂಡವೇ ಈ ಮರಗಳ ಪರಮ ಪ್ರಯೋಜನ ವಲ್ಲ. ಹೀಗಿದ್ದರೂ ಜನ ತಿಳಿದೊ ತಿಳಿಯದೆಯೋ ಪಾನಕ್ಕಾಗಿ ಇವನ್ನು ಬಳಸುವುದು, ಸರ್ಕಾರ ಆದಾಯ ದೃಷ್ಟಿಯಿಂದ ಪಾನ ತಯಾರಿಕೆ ಮತ್ತು ವಿತರಣೆಯನ್ನು ನಡೆಸುವುದು– ಇವನ್ನು ಗಮನಿಸಿದ ಗಾಂಧೀಜಿ ಪಾನನಿರೋಧ ಚಳವಳಿಯನ್ನೂ ಈಚಲು ಮರ ನಿರ್ಮೂಲ ಕಾರ್ಯವನ್ನೂ ಕೈಗೊಂಡರು. ಭಾರತದ ಬಡತನದ ನಿವಾರಣೆಗೆ ಗಾಂಧಿ ರೂಪಿಸಿದ ಯೋಜನೆಗಳು ಎರಡು: ಒಂದು ಸ್ವದೇಶೀ ವಸ್ತುಗಳ ಬಳಕೆ. ಇನ್ನೊಂದು ಪಾನನಿರೋಧ (**ನೋಡಿ– ಪಾನನಿರೋಧ**). (ಕೆ.ಬಿ.ಎಸ್.)

**ಈಜಿಪ್ಟ್:** ಸಂಯುಕ್ತ ಅರಬ್ ಗಣರಾಜ್ಯವೆಂದು ಅಧಿಕೃತ ಹೆಸರು (ಯುನೈಟೆಡ್ ಅರಬ್ ರಿಪಬ್ಲಿಕ್). ಆಫ್ರಿಕದ ಈಶಾನ್ಯ ಮೂಲೆಯನ್ನೂ ನೈರುತ್ಯ ಏಷ್ಯದಲ್ಲಿರುವ ಸಿನಾಯ್ ಪರ್ಯಾಯದ್ವೀಪವನ್ನೂ ಒಳಗೊಂಡ ಪ್ರದೇಶ. ಆಫ್ರಿಕ ಖಂಡದ ಈಶ್ಯಾನ್ಯಾದಲ್ಲಿರುವ ಒಂದು ಗಣರಾಜ್ಯ.

ಆಫ್ರಿಕದ ಸುಮಾರು ಮೂವತ್ತನೆಯ ಒಂದು ಭಾಗದಷ್ಟಿರುವ ಈ ದೇಶದ ವಿಸ್ತೀರ್ಣ 9,97,739. ಚಕಿಮೀ. ಸ್ಥೂಲವಾಗಿ ಇದರ ಸನ್ನಿವೇಶ ಉತ್ತರ ಅಕ್ಷಾಂಶ $22^0$ – $31^0$.35 ಯ ವರೆಗೂ ಪೂರ್ವರೇಖಾಂಶ $25^0$ – $135^0$.40 ಯ ವರೆಗೂ ಇರುವ ಈ ದೇಶದ ದಕ್ಷಿಣೋತ್ತರ ಪರಮಾವಧಿ ಉದ್ದ 1085. ಕಿಮೀ; ಪೂರ್ವ–ಪಶ್ಚಿಮ 1255. ಕಿಮೀ. ಅಗಲ. ಪೂರ್ವಕ್ಕೆ ಇಸ್ರೇಲ್ ಮತ್ತು ಕೆಂಪು ಸಮುದ್ರ ದಕ್ಷಿಣಕ್ಕೆ ಸುಡಾನ್, ಪಶ್ಚಿಮಕ್ಕೆ ಲಿಬಿಯ ಮತ್ತು ಉತ್ತರಕ್ಕೆ ಮೆಡಿಟರೇನಿಯನ್ ಸಮುದ್ರ – ಇವು ಮೇರೆಗಳು. ಜನಸಂಖ್ಯೆ 78 ದಶಲಕ್ಷ (2003).

ಈಜಿಪ್ಟಿನ ಮುಖ್ಯಭಾಗಗಳೆಂದರೆ ನೈಲ್ ನದಿಯ ಕೆಳಭಾಗ ಮತ್ತು ಅದರ ಮುಖಜ ಭೂಮಿ. ಮೇಲಣ ಈಜಿಪ್ಟ್, ಕೆಳಗಣ ಈಜಿಪ್ಟುಗಳೆಂದರೆ ಇವೇ. ನೈಲ್ ನದೀ ಕಣಿವೆಯ ಹೊರಗೆ ಇರುವ ಪ್ರದೇಶಗಳೆಂದರೆ ಪಶ್ಚಿಮ ದಕ್ಷಿಣ ಮರುಭೂಮಿಗಳು, ಸಿನಾಯ್ ಮತ್ತು ಕೆಂಪು ಸಮುದ್ರದ ಜಿಲ್ಲಾಪಾಂತ್ಯಗಳು. ಸೂಯೆಜ್ ಖಾರಿಯಲ್ಲೂ ಕೆಂಪು ಸಮುದ್ರ ದಲ್ಲೂ ಇರುವ ಕೆಲವು ಸಣ್ಣಪುಟ್ಟ ಬಂಜರು ದ್ವೀಪಗಳು ಈಜಿಪ್ಟಿಗೆ ಸೇರಿವೆ. ಇವುಗಳ ಪೈಕಿ ಜಂಬಲ್, ಷದ್ವಾನ್, ಗೇಫಾಟಿನ್ ಮತ್ತು ಜೆಬರ್‌ಗೆಡ್ ಮುಖ್ಯ. 1949ರಲ್ಲಿ ಇಸ್ರೇಲಿ ನೊಂದಿಗೆ ಮಾಡಿಕೊಂಡ ಯುದ್ಧವಿರಾಮ ಒಪ್ಪಂದದ ಪ್ರಕಾರ ಪ್ಯಾಲಿಸ್ಟೈನಿನ ನೈರುತ್ಯಕ್ಕಿರುವ ಗಾಜಾ ಎಂಬ ಕರಾವಳಿಪ್ರದೇಶದ ತುಂಡೊಂದು ಈಜಿಪ್ಟಿಗೆ ಸೇರಿತ್ತು. 1967ರ ಅರಬ್–ಇಸ್ರೇಲ್ ಯುದ್ಧದಲ್ಲಿ ಇಸ್ರೇಲು ಈ ತುಂಡನ್ನೂ ಸಿನಾಯ್ ಪರ್ಯಾಯದ್ವೀಪವನ್ನೂ ಆಕ್ರಮಿಸಿಕೊಂಡಿತು. ಅನಂತರದ ಒಪ್ಪಂದದಂತೆ ಇಸ್ರೇಲ್ ಸಿನಾಯ್ ಪರ್ಯಾಯ ದ್ವೀಪವನ್ನು ಬಿಟ್ಟುಕೊಟ್ಟಿತು.

**ಮೇಲ್ಮೈಲಕ್ಷಣ:** ನೈಲ್‌ನದೀ ಕಣಿವೆ ಮತ್ತು ಮುಖಜಭೂಮಿ, ಪಶ್ಚಿಮದ ಮರುಭೂಮಿ, ಪೂರ್ವದ ಮರುಭೂಮಿ ಮತ್ತು ಸಿನಾಯ್ ಪರ್ಯಾಯದ್ವೀಪಗಳೆಂದು ಈಜಿಪ್ಟನ್ನು ನಾಲ್ಕು ಸ್ವಾಭಾವಿಕ ಪ್ರದೇಶಗಳಾಗಿ ವಿಂಗಡಿಸಬಹುದು. ಈಜಿಪ್ಟಿನಲ್ಲಿ ಹರಿಯುವ ನದಿಯೆಂದರೆ ನೈಲ್ ಒಂದೇ. ಪ್ರಪಂಚದ ಅತ್ಯಂತ ಉದ್ದವಾದ ನದಿ. ಇದರ ಭಾಗಶಃ ಭಾಗ ಈಜಿಪ್ಟಿನಲ್ಲಿ ಹರಿಯುತ್ತದೆ. ಈ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ವಹಿಸುವುದರಿಂದ ಈಜಿಪ್ಟ್ ನೈಲ್ ನದಿಯ ವರಪ್ರಸಾದ ಎಂಬ ಹೇಳಿಕೆ ಅರ್ಥಪೂರ್ಣ. ಗಾಡಿ ಹಾಲ್ಫದ ಉತ್ತರದಲ್ಲಿ ಈಜಿಪ್ಟನ್ನು ಹೊಕ್ಕು, ಬೆಣಚುಕಲ್ಲು–ಮರಳುಗಲ್ಲು ಬಂಡೆಗಳ ನಡುವೆ ನುಸುಳಿ, ಆಸ್ವಾನ್‌ಗೆ 8 ಕಿಮೀ ದೂರದಲ್ಲಿ ದುಮುಕಿ, ಮುಂದೆ ಕ್ರಮೇಣ ವಿಸ್ತಾರವಾಗುವ ಕಣಿವೆಯಲ್ಲಿ ಈ ನದಿ ಹರಿಯುತ್ತದೆ. ಈ ಕಣಿವೆಯ ಸರಾಸರಿ ಅಗಲ 10 ಕಿಮೀ ಕೈರೋವಿನ ಈಶಾನ್ಯಕ್ಕೆ 20 ಕಿಮೀ ದೂರದಲ್ಲಿ ಈ ನದಿ ಎರಡಾಗಿ ಕವಲೊಡೆಯುತ್ತದೆ. ಮುಖಜಭೂಮಿ ಯಲ್ಲಿ ಅಂಕುಡೊಂಕಾಗಿ ಪ್ರವಹಿಸಿ ರಾಸೆಟ್ಟ ಮತ್ತು ಡಾಮಿಯೆಟ್ಟಗಳಲ್ಲಿ ಸಮುದ್ರದಲ್ಲಿ ಈ ಕವಲುಗಳು ಐಕ್ಯವಾಗುತ್ತವೆ. ಈ ಮುಖಜಭೂಮಿಯ ಉತ್ತರದಲ್ಲಿ ಕಿರಿ ಆಳದ ಅನೇಕ ಸರೋವರಗಳಿವೆ. ನೆಲ ಜವುಗು : ಬಂಜರು. ಉಪ್ಪು ಮಿಶ್ರಿತ. ಈಜಿಪ್ಟಿನ ದಕ್ಷಿಣೋತ್ತರವಾಗಿ ಹರಿಯುವ ನೈಲ್‌ನದಿಗೆ ಈ ದೇಶದಲ್ಲಿ ಒಂದಾದರೂ ಉಪನದಿಯಿಲ್ಲ. ನೈಲ್‌ನದಿಯ ಪ್ರವಾಹದಲ್ಲಿ ತೀವ್ರ ಏರಿಳಿತಗಳಿರುತ್ತವೆ.

ಈಜಿಪ್ಟಿನ ಪಶ್ಚಿಮ ಮರುಭೂಮಿಯಲ್ಲಿ ಬಂಡೆ ತುಂಬಿದ ದಿಣ್ಣೆ ನೆಲಗಳೂ ಕಲ್ಲು ಮರಳು ಬಯಲುಗಳೂ ಸಾಮಾನ್ಯ. ಸಮಾನಾಂತರವಾಗಿ ದಕ್ಷಿಣೋತ್ತರವಾಗಿ ಹಬ್ಬಿದ ಮರಳು ರಾಶಿಗಳ ರೇಖೆಗಳೂ ಅಲ್ಲಲ್ಲಿ ಉಂಟು. ಇಲ್ಲಿ ನೀರಿನ ವಸತಿ ಅಪರೂಪವಾದ್ದರಿಂದ ಒಟ್ಟಿನಲ್ಲಿ ಇದು ಮನುಷ್ಯ ಸಂಚಾರಕ್ಕೂ ವಾಸಕ್ಕೂ ಅಪ್ರಯೋಜಕ. ಆದರೆ ಓಯೆಸಿಸ್ಸು ಗಳಿರುವಲ್ಲಿ ವಸತಿ ಸಾಧ್ಯ. ಇವುಗಳ ಪೈಕಿ ಕಟ್ಟಾರ ಎಂಬುದು ಅತ್ಯಂತ ದೊಡದ್ದು. ಉಳಿದವು ಸಿವ, ಬಹಾರಿಯ, ಫರಾಫ್ರ, ದಖ್ಲ ಮತ್ತು ಖರ್ಗ.

ಪೂರ್ವದಲ್ಲಿರುವ ಅರೇಬಿಯನ್ ಮರುಭೂಮಿ 2134 ಮೀ ಎತ್ತರ. ಇದರ ಉತ್ತರಕ್ಕೂ ಪಶ್ಚಿಮಕ್ಕೂ ತಗ್ಗುದಿನ್ನೆಯಿದೆ. ವಿರಳವಾಗಿ ಹಬ್ಬಿರುವ ಬಾವಿಗಳಿಂದಲೂ ಊಟೆಗಳಿಂದಲೂ ಅಲ್ಪಸ್ವಲ್ಪ ಜಲ ಲಭಿಸುತ್ತದೆ. ಉತ್ತರದ ಸೈಕತ ತೀರಪ್ರದೇಶಕ್ಕಿಂತ ಸಿನಾಯ್ ಪರ್ಯಾಯದ್ವೀಪ ಭಿನ್ನವಾದದ್ದು. ಇದರ ನಡುವಿನಲ್ಲಿ ಸುಣ್ಣಕಲ್ಲಿನ ಎತ್ತರ ನೆಲವೂ ದಕ್ಷಿಣದಲ್ಲಿ ಗ್ರಾನೈಟ್ ಪರ್ವತವೂ ಇದರ ನಡುನಡುವೆ ಕಮರಿ, ಒಣಕಲು ತೊರೆಗಳೂ ಇವೆ.



ರಾಜಕೀಯ ಭೂಪಟ

**ವಾಯುಗುಣ:** ಇಲ್ಲಿನದು ಮರುಭೂಮಿಯ ವಾಯುಗುಣ. ಹಗಲು ಉಷ್ಣಾಂಶ 30–35ಸೆಂ. ಆದರೆ ರಾತ್ರಿ ಉಷ್ಣಾಂಶ ಬಹಳ ಕಡಿಮೆ. ಶೀತೋಷ್ಣ ವಿಪರೀತ. ಮೆಡಿಟರೇನಿಯನ್ ತೀರಪ್ರದೇಶದಲ್ಲಿ ಹವಾಗುಣ ಹಿತಕರ. ಮಳೆ ಬಹಳ ಕಡಿಮೆ, ವರ್ಷಕ್ಕೆ ಸರಾಸರಿ 15–30 ಸೆಂಮೀ. ಆದರೆ ಕೆಲವು ವೇಳೆ ಭಾರಿ ಮಳೆಯಾಗುವುದುಂಟು. ಚಳಿಗಾಲದಲ್ಲಿ ಮಳೆ ಬೀಳುತ್ತದೆ. ಪಶ್ಚಿಮದಿಂದ ಖಾಮ್ಸಿಮ್ ಎಂಬ ಉಷ್ಣ ಗಾಳಿ ಬೀಸುತ್ತದೆ. ಇಲ್ಲಿ ಸ್ವಾಭಾವಿಕ ಸಸ್ಯವರ್ಗಗಳು ಬಹಳ ಕಡಿಮೆ. ಓಯೆಸಿಸ್ಸುಗಳ ಸಮೀಪದಲ್ಲಿ ಖರ್ಜೂರ ಮತ್ತು ಕೆಲವು ಸಣ್ಣಪುಟ್ಟ ಗಿಡ ಬೆಳೆಯುತ್ತಾರೆ. ಒಂಟೆ, ಕತ್ತೆ, ಕುರಿ, ಮೇಕೆ, ಕೆಲವು ಜಾತಿಯ ಪಕ್ಷಿ–ಇವು ಇಲ್ಲಿನ ಪ್ರಾಣಿಸಂಕುಲ.

**ಕೃಷಿ:** ಈ ದೇಶದಲ್ಲಿ ವ್ಯವಸಾಯವೇ ಜನರ ಮುಖ್ಯ ಕಸುಬು. ಆದರೆ ಇದಕ್ಕೆ ಯೋಗ್ಯವಾದ ಭೂಮಿ ಬಲು ಸ್ವಲ್ಪ. ನೈಲ್ ನದಿಯ ಬಯಲು ಬಿಟ್ಟರೆ ಇನ್ನಾವ ಉಪಯುಕ್ತ ಭೂಮಿಯೂ ಇಲ್ಲ. ನೈಲ್ ಇಲ್ಲದಿದ್ದರೆ ಇಡೀ ದೇಶವೇ ಮರಳುಗಾಡಾಗುತ್ತಿತ್ತು. ಈ ನದಿಯ ಬಯಲು ಪ್ರದೇಶ ಒಟ್ಟು ವಿಸ್ತೀರ್ಣದಲ್ಲಿ ಶೇ. 9ರಷ್ಟು ಮಾತ್ರ. ವ್ಯವಸಾಯೋಪಯುಕ್ತ ಭೂಮಿಯ ಬೆಲೆ ಬಹಳ ಹೆಚ್ಚು. ನೈಲ್ ನದಿಯ ನೀರಾವರಿ ವ್ಯವಸ್ಥೆಯೇ ಜನಜೀವನ ಧಮನಿ. ಇಲ್ಲಿ ಸು. 24,000 ಕಿಮೀ ಕಾಲುವೆಗಳಿವೆ. ಆಸ್ವಾನ್ ಪಟ್ಟಣದ ಬಳಿ ನೈಲ್‌ನದಿಗೆ ಅಡ್ಡಲಾಗಿ ಕಟ್ಟಿರುವ ಆಸ್ವಾನ್ ಕಟ್ಟೆ ಮತ್ತು ಆಸ್ವಾನ್ ಎತ್ತರ ಕಟ್ಟೆ. ಹಿಂದೆ ಈಜಿಪ್ಟ್ ವ್ಯವಸಾಯದಲ್ಲಿ ಹಿಂದುಳಿದಿತ್ತು. ಆದರೆ ಇತ್ತೀಚೆಗೆ ಕೃಷಿ ವಿಧಾನದಲ್ಲಿ ಕ್ರಾಂತಿಯುಂಟಾಗಿದೆ. ಆಧುನಿಕ ಉಪಕರಣಗಳೂ ಬಳಕೆಗೆ ಬರುತ್ತಿವೆ.

**ಮೀನುಗಾರಿಕೆ:** ಸಮುದ್ರ ಮೀನುಗಾರಿಕೆಗಿಂತ ಒಳನಾಡಿನ ಮೀನುಗಾರಿಕೆ ಪ್ರಧಾನವಾದುದು. ನೈಲ್ ನದಿಗೆ ನಿರ್ಮಿಸಿರುವ ಆಸ್ವಾನ್ ಕಟ್ಟೆಯಿಂದ ಮೆಡಿಟರೇನಿಯನ್ ಸಮುದ್ರದಲ್ಲಿ ಮೀನುಗಾರಿಗೆಕೆ ತೊಂದರೆ. ಪ್ರಸ್ತುತ ದೇಶದ ಮೀನು ಉತ್ಪಾದನೆಯಲ್ಲಿ ಶೇ. 70 ಒಳನಾಡಿನ ನದಿ ಮತ್ತು ಸರೋವರಗಳಿಂದ ಲಭ್ಯ.

**ಖನಿಜಗಳು:** ಪೆಟ್ರೋಲಿಯಂ, ರಂಜಕ, ಕಬ್ಬಿಣದ ಅದಿರು, ಮ್ಯಾಂಗನೀಸ್ ಮತ್ತು ಉಪ್ಪು ಪ್ರಮುಖ ಖನಿಜಗಳು. ಸಮೃದ್ಧ ತೈಲನಿಕ್ಷೇಪದ ಜೊತೆಗೆ ನೈಸರ್ಗಿಕಾನಿಲ ಮತ್ತು ಕಲ್ಲಿದ್ದಲು ನಿಕ್ಷೇಪವುಂಟು ಕಲ್ಲಿದ್ದಲು ಕಡಿಮೆ ದರ್ಜೆಯದು. ಆಸ್ವಾನ್ ಕಟ್ಟೆಯಿಂದ ಸಾಕಷ್ಟು ಜಲವಿದ್ಯುಚ್ಛಕ್ತಿ ದೊರೆಯುತ್ತದೆ.

**ಕೈಗಾರಿಕೆ:** ಕಲ್ಲಿದ್ದಲು ಮತ್ತು ಲೋಹಾಂಶ ಆಧಾರಿತ ಖನಿಜಗಳ ಕೊರತೆಯಿಂದಾಗಿ ಬೃಹತ್ ಕೈಗಾರಿಕೆಗಳ ಪ್ರಗತಿ ಅಸಾಧ್ಯ. ಹಿಂದಿನಿಂದಲೂ ಹತ್ತಿ ಬಟ್ಟೆ ಕೈಗಾರಿಕೆ ಪ್ರಸಿದ್ಧಿ. ಕಬ್ಬಿಣ ಮತ್ತು ಉಕ್ಕು ರಾಸಾಯನಿಕ ಗೊಬ್ಬರ, ಸಿಮೆಂಟ್ ಕೃತಕ ರಬ್ಬರ್, ರಾಸಾಯನಿಕಗಳು,

ಸಕ್ಕರೆ, ಹೊಗೆಸೊಪ್ಪು, ಪಾದರಕ್ಷೆ, ಆಹಾರ ಸಂಸ್ಕರಣೆಗಳು ಇತರ ಕೈಗಾರಿಕೆಗಳು. ಕೈರೊ ಮತ್ತು ಅಲೆಗ್ಸಾಂಡ್ರಿಯ ನಗರಗಳ ಸುತ್ತಮುತ್ತ ಕೈಗಾರಿಕೆಗಳ ಕೇಂದ್ರೀಕರಣ. ಸ್ವಲ್ಪ ಮಟ್ಟಿಗೆ ಪೋರ್ಟ್ ಸೈದ್, ಸೂಯಜ್, ಇಸ್ಲೇಲಿಯ ಮತ್ತು ಆಸ್ವಾನಗಳಲ್ಲಿಯೂ ಕೆಲವು ಉದ್ದಿಮೆಗಳು ಕಂಡು ಬರುತ್ತವೆ. ಪ್ರವಾಸೋದ್ಯಮವೂ ಸಾಕಷ್ಟು ಅಭಿವೃದ್ಧಿಗೊಂಡಿದ್ದು ವಿದೇಶೀ ವಿನಿಮಯಗಳಿಕೆಯ ಬಾಬುಗಳಲ್ಲಿ ಬಂದಾಗಿದೆ.



ಮೇಲ್ಮೈಲಕ್ಷಣ

ಕಚ್ಚಾ ಹತ್ತಿ, ಹತ್ತಿ ಗಿರಣಿ ವಸ್ತುಗಳು, ಭತ್ತ, ಪೆಟ್ರೋಲಿಯಂ ಮತ್ತು ಸಿಮೆಂಟ್ ಪ್ರಮುಖ ರಫ್ತು ಸರಕುಗಳು. ಆಹಾರ ಪದಾರ್ಥ, ಯಂತ್ರೋಪಕರಣ ಮತ್ತು ರಾಸಾಯನಿಕ ಗೊಬ್ಬರಗಳು ಪ್ರಮುಖ ಆಮದು ಸರಕುಗಳು.

**ಜನತೆ:** ಜನಸಂಖ್ಯೆ 78. ದಶಲಕ್ಷ (2003). ಒಟ್ಟು ಜನಸಂಖ್ಯೆಯ ಪೈಕಿ ಶೇ.99 ಜನ ನೈಲ್ ಕಣಿವೆಯಲ್ಲಿ ವಾಸಿಸುತ್ತಾರೆ. ಈ ಪ್ರದೇಶದಲ್ಲಿ ಸರಾಸರಿ ಜನಸಾಂದ್ರತೆ ಹೆಚ್ಚು. ನದೀ ಮುಖಜಭೂಮಿಯ ಬಳಿಯಲ್ಲೂ ಗಿರ್ಗ ಪ್ರಾಂತ್ಯದಲ್ಲೂ ಸಾಂದ್ರತೆ ಹೆಚ್ಚು; ಆದರೆ



ಬೆಳೆಗಳು

ಮುಖಜಭೂಮಿಯ ಪೂರ್ವೋತ್ತರ ಜವುಗು ನೆಲಗಳಲ್ಲಿ ಕಡಿಮೆ. ನೈಲ್ ನದೀ ಕಣಿವೆಯಾಚೆಗಿನ ಪ್ರದೇಶದಲ್ಲಿ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀಗೆ 66.5 ಜನರು. ನಗರದ ಜನಸಂಖ್ಯೆ ಪ್ರಮಾಣ ಶೇ.42. ಈಜಿಪ್ಟಿನ ಜನಸಾಮಾನ್ಯರಲ್ಲಿ ಮೂರು ವರ್ಗಗಳುಂಟು: ನೈಲ್ ಕಣಿವೆಯ ರೈತರು (ಫೆಲ್ಲಾ) ಮತ್ತು ಪಟ್ಟಣಿಗರು; ಮರಳುಗಾಡಿನ ಗ್ರಾಮಕರು; ನೈಲ್ ನದಿಯ ಮೊದಲನೆಯ ಜಲಪಾತದ ದಕ್ಷಿಣದಲ್ಲಿ ವಾಸಿಸುವ ನುಬಿಯನ್ನರು ಅಥವಾ ಬರ್ಬರಿನ್ನರು. ಆಧುನಿಕ ಈಜಿಪ್ಷಿಯನ್ನರದು ಐಗುಪ್ತ ಕುಲ; ಎತ್ತರ 168 ಸೆಂಮೀ. ಅನೇಕ ಸಹಸ್ರಮಾನಗಳಿಂದಲೂ ನೈಲ್‌ನದಿ ದೃಢಕಾಯನಾದ ರೈತನಿಗೂ ಮರುಭೂಮಿಯ ತೆಳುದೇಹಿಗೂ ನಡುವಣ ವ್ಯತ್ಯಾಸ ಖಚಿತವಾಗಿ ಉಳಿದುಕೊಂಡು ಬಂದಿದೆ.

ನೂರಕ್ಕೆ ತೊಂಬತ್ತರಷ್ಟು ಮಂದಿ ಮುಸ್ಲಿಮರು. ಇವರಲ್ಲಿ ಬಹುತೇಕ ಎಲ್ಲರದೂ ಸುನ್ನಿ ಪಂಗಡ. ಇಸ್ಲಾಂ ಧರ್ಮ ಬರುವ ಮೊದಲಿದ್ದ ಹಳೆಗಾಲದ ಸಂಪ್ರದಾಯಾನು ಯಾಯಿಗಳು ಈಗ ವಿರಳವಾಗಿದ್ದಾರೆ. 4ನೆಯ ಶತಮಾನದಲ್ಲಿ ಹಳ್ಳಿಗಳಲ್ಲಿ ಕ್ರೈಸ್ತಧರ್ಮ ಅಪ್ಪಿ, ತಮ್ಮವೇ ಆದ ಚರ್ಚ್, ಪಂಚಾಂಗ ಮತ್ತು ಭಾಷೆಗಳನ್ನುಳ್ಳ ಕಾಪ್ಟಿಕ್ ಧರ್ಮೀಯರೂ ರೋಮನ್ ಕೆಥೊಲಿಕ್, ಪ್ರಾಟೆಸ್ಟಂಟ್ ಮುಂತಾದ ಕ್ರೈಸ್ತರೂ ಇಲ್ಲುಂಟು.

ಕೈರೋ (ರಾಜಧಾನಿ), ಜನಸಂಖ್ಯೆ 6800992 (2004) ಅಲೆಗ್ಸಾಂಡ್ರಿಯ, ಪೋರ್ಟ್ ಸೆಡ್, ಟಾಂಟ, ಮೆಹಲ್ಲ ಎಲ್ ಕುಬ್ರ, ಸೂಯೆಜ್ ಮನ್ಸುರ ಇವು ಮುಖ್ಯ ಪಟ್ಟಣಗಳು. ಈಜಿಪ್ಷಿಯನ್ ಪೌಂಡು ಇಲ್ಲಿನ ನಾಣ್ಯ. (ಎಸ್.ಎನ್.ಎ.ಆರ್.)

**ಈಜಿಪ್ಟಿನ ಆಡಳಿತ ವ್ಯವಸ್ಥೆ: ಸಂವಿಧಾನ:** 1964 ಮಾರ್ಚ್ 25 ರಂದು ಜಾರಿಗೆ ಬಂದ ಸಂವಿಧಾನ ತಾತ್ಪೂರ್ತಿಕ. ಸ್ಥಾಯೀ ಸಂವಿಧಾನವೊಂದು ರಚಿತವಾಗಿ, ಸ್ವೀಕೃತವಾಗುವವರೆಗೆ ಇದು ಜಾರಿಯಲ್ಲಿರುತ್ತದೆ. ಇದರ ಪ್ರಕಾರ ಸಂಯುಕ್ತ ಅರಬ್ಬೀ ಗಣರಾಜ್ಯ ಒಂದು ಪ್ರಜಾತಾಂತ್ರಿಕ ಸಮಾಜವಾದಿ ರಾಜ್ಯ. ಎಲ್ಲ ಉತ್ಪಾದನೆ ಸಾಧನಗಳೂ ಪ್ರಜೆಗಳ ಅಧೀನವಾದವು. ಕಾನೂನಿನೆದುರು ಎಲ್ಲರೂ ಸಮಾನ; ಕಾನೂನಿನ ವ್ಯಾಪ್ತಿಗೆ ಒಳಪಟ್ಟಂತೆ ಸ್ವಾತಂತ್ರ್ಯವುಂಟು. ಎಲ್ಲ ಈಜಿಪ್ಷಿಯನ್ನರಿಗೂ ಮತಾಧಿಕಾರವಿದೆ.

ಗಣರಾಜ್ಯದ ಅಧ್ಯಕ್ಷನೇ ರಾಜ್ಯದ ಮುಖ್ಯಾಧಿಕಾರಿ. ರಾಷ್ಟ್ರೀಯ ಸಭೆಗೆ ಶಾಸನಾಧಿಕಾರ ವಿದೆ. ಸಂವಿಧಾನಕ್ಕನುಗುಣವಾಗಿ ಕಾರ್ಯಾಂಗ ನಿಯಂತ್ರಿಸುವುದು ಈ ಸಭೆಯ ಹೊಣೆ. ಇದರ ಸದಸ್ಯರು ಸಾರ್ವತ್ರಿಕ ಚುನಾವಣೆಗಳಲ್ಲಿ ಆಯ್ಕೆ ಹೊಂದುತ್ತಾರೆ. ಗುಪ್ತ ಮತದಾನ ಪದ್ಧತಿ ಜಾರಿಯಲ್ಲಿದೆ. ಈ ಸಭೆಯ ಸದಸ್ಯನಾಗಲು ಕನಿಷ್ಠ ವಯೋಮಿತಿ 30. ಹತ್ತು ಸದಸ್ಯರನ್ನು ನೇಮಿಸುವ ಅಧಿಕಾರ ಅಧ್ಯಕ್ಷನಿಗಿದೆ. ರಾಷ್ಟ್ರೀಯ ಸಭೆಯ ಸದಸ್ಯರಲ್ಲಿ ಅರ್ಧದಷ್ಟು ಭಾಗ ಕಾರ್ಮಿಕರು ಹಾಗೂ ವ್ಯವಸಾಯಗಾರರಾಗಿರಬೇಕು. ಸಭೆಯ ಅವಧಿ ಅದರ ಪ್ರಥಮ ಅಧಿವೇಶನದಿಂದ 5ವರ್ಷ. ಅನಂತರ 60ದಿನಗಳಲ್ಲಿ ಮತ್ತೆ ಚುನಾವಣೆ ನಡೆಯಲೇಬೇಕು. ಗಣರಾಜ್ಯದ ಅಧ್ಯಕ್ಷನಿಗೆ ಸಭೆ ಕರೆಯುವ ಹಾಗೂ ಮುಕ್ತಾಯಗೊಳಿಸುವ ಅಧಿಕಾರವಿದೆ. ಆದರೆ ಆಯವ್ಯಯಕ್ಕೆ ಒಪ್ಪಿಗೆ ದೊರಕುವ ಮುನ್ನ ಅದನ್ನು ಮುಕ್ತಾಯಗೊಳಿಸುವಂತಿಲ್ಲ. ವರ್ಷಕ್ಕೊಮ್ಮೆಯಲ್ಲದೆ ಅಗತ್ಯವೆನಿಸಿದಾಗ ಅಧ್ಯಕ್ಷನಿಂದ ಅಥವಾ ಬಹು ಸದಸ್ಯರ ಆಗ್ರಹದ ಮೇರೆಗೆ ಈ ಸಭೆ ಕರೆಯಬೇಕು. ಸರ್ಕಾರ ಈ ಸಭೆಗೆ ಹೊಣೆಯಾಗಿರುತ್ತದೆ. ಪ್ರಧಾನಮಂತ್ರಿ ಹಾಗೂ ಇತರ ಮಂತ್ರಿಗಳಿಗೆ ಸಭೆಯನ್ನು ಉದ್ದೇಶಿಸಿ ಮಾತನಾಡುವ ಅಧಿಕಾರವಿದೆ. ಸದಸ್ಯರಿಗೆ ಮಂತ್ರಿಗಳನ್ನು ಪ್ರಶ್ನಿಸುವ ಹಕ್ಕು ಇದೆ. ಪ್ರಧಾನಮಂತ್ರಿ ಸಭೆಯ ಬೆಂಬಲ ಕಳೆದುಕೊಂಡಲ್ಲಿ ಗಣರಾಜ್ಯದ ಅಧ್ಯಕ್ಷನಿಗೆ ರಾಜೀನಾಮೆ ಸಲ್ಲಿಸಬೇಕಾಗುತ್ತದೆ.

ರಾಷ್ಟ್ರದ ಅಧ್ಯಕ್ಷತೆಗೆ ಅಭ್ಯರ್ಥಿಯನ್ನು ರಾಷ್ಟ್ರೀಯ ಸಭೆ ತನ್ನ ಮುಕ್ಕಾಲುಪಾಲು ಸದಸ್ಯರ ಅನುಮತಿಯೊಂದಿಗೆ ನೇಮಿಸಬೇಕು. ಆ ಅಭ್ಯರ್ಥಿ ಅನಂತರ ದೇಶದ ಮತದಾರ ನಾಗರಿಕರಿಂದ ಬಹುಮತ ಪಡೆದಲ್ಲಿ ಗಣರಾಜ್ಯದ ಅಧ್ಯಕ್ಷನಾಗಲು ಅರ್ಹ. ಅಭ್ಯರ್ಥಿಯಾದವನು ಈಜಿಪ್ಟ್ ಸಂಜಾತ ಈಜಿಪ್ಷಿಯನ್ ಆಗಿದ್ದು 35 ವರ್ಷಕ್ಕೆ ಮೇಲ್ಪಟ್ಟಿರಬೇಕು. ಅಧ್ಯಕ್ಷನ ಅಧಿಕಾರದ ಅವಧಿ ಆತ ಚುನಾಯಿತನಾದ ಅನಂತರ 6 ವರ್ಷ, ಒಬ್ಬ ಅಥವಾ ಹೆಚ್ಚು ಉಪಾಧ್ಯಕ್ಷರನ್ನು ಆರಿಸುವ ಹಾಗೂ ಪದಚ್ಯುತಿಗೊಳಿಸುವ ಅಧಿಕಾರ ಅಧ್ಯಕ್ಷನಿಗಿದೆ. ಅಧ್ಯಕ್ಷನ ಅಧಿಕಾರಾವಧಿ ಮುಗಿಯುವ ಒಂದು ವಾರ ಮೊದಲೇ ಹೊಸ ಚುನಾವಣೆ ನಡೆಯಬೇಕು. ರಾಷ್ಟ್ರೀಯ ಸಭೆಗೆ ಅಧ್ಯಕ್ಷನ ಮೇಲೆ ಆರೋಪ ಹೊರಿಸುವ ಅಧಿಕಾರ ಇದೆ. ಸಭೆ ಬಹುಮತ ಆರೋಪ ಹೊರಿಸುವ ಅಧಿಕಾರ ಇದೆ. ಸಭೆಬಹುಮತ ಆರೋಪ ಹೊರಿಸಿದಲ್ಲಿ ಅಧ್ಯಕ್ಷ ತನ್ನ ಅಧಿಕಾರ ಕಳೆದುಕೊಳ್ಳುತ್ತಾನೆ. ಪ್ರಧಾನಮಂತ್ರಿ ಹಾಗೂ ಇತರ ಮಂತ್ರಿಗಳನ್ನು ನೇಮಿಸುವ ಹಾಗೂ ತೆಗೆಯುವ ಅಧಿಕಾರ ಅಧ್ಯಕ್ಷನದು. ತುರ್ತುಪರಿಸ್ಥಿತಿಯಲ್ಲಿ ವಿಶೇಷ ಆಜ್ಞೆ ಹೊರಡಿಸುವ ಅಧಿಕಾರವೂ ಆತನಿಗುಂಟು. ಅಂಥ ಆಜ್ಞೆಗಳನ್ನು ರಾಷ್ಟ್ರೀಯ ಆರಂಭವಾದ 15 ದಿನಗಳೊಳಗಾಗಿ ಅದರ ಮುಂದೆ ಮಂಡಿಸಬೇಕು. ಗಣರಾಜ್ಯದ ಅಧ್ಯಕ್ಷನೇ ರಾಷ್ಟ್ರೀಯ ರಕ್ಷಣಾ ಮಂಡಲಿಯ ನಿರ್ವಹಣಾಧಿಕಾರಿ ಪ್ರಧಾನಮಂತ್ರಿ, ಉಪಮಂತ್ರಿಗಳು ಹಾಗೂ ಮಂತ್ರಿಗಳನ್ನೊಳಗೊಂಡ ಸರ್ಕಾರ ಆಡಳಿತ ನಿರ್ವಹಿಸುತ್ತದೆ.

ದೇಶದ ಆಡಳಿತ ಸೌಕರ್ಯಕ್ಕಾಗಿ ಅದನ್ನು ಅನೇಕ ವಿಭಾಗ ಮಾಡಲಾಗಿದೆ. ರಾಜ್ಯದ ಯೋಜನೆಗಳನ್ನು ಕಾರ್ಯಗತಗೊಳಿಸುವ ಕಾರ್ಯದಲ್ಲಿ ಈ ವಿಭಾಗಗಳು ಭಾಗವಹಿಸುತ್ತವೆ. ನ್ಯಾಯಾಧೀಶರು ತೀರ್ಮಕೊಡುವಲ್ಲಿ ಸ್ವತಂತ್ರರಾಗಿರುತ್ತಾರೆ. ಕಾನೂನಲ್ಲದೆ ಅದರ ಮೇಲೆ ಯಾವ ನಿರ್ಬಂಧವೂ ಇಲ್ಲ. ಗಣರಾಜ್ಯದ ಅಧ್ಯಕ್ಷ ಹಾಗೂ ರಾಷ್ಟ್ರೀಯ ಸಭೆಗೆ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಅಧಿಕಾರವಿದೆ.

**ವಿದೇಶಾಂಗ ನೀತಿ:** ಈಜಿಪ್ಟಿನ ಸ್ವತಂತ್ರ ವಿದೇಶಾಂಗ ನೀತಿ ಆರಂಭವಾದದ್ದು 1952ರ ಅನಂತರ, ಮೊಟ್ಟಮೊದಲು ಈಜಿಪ್ಟಿನ ಗಮನ ಸೆಳೆದದ್ದೆಂದರೆ ಅದಕ್ಕೆ ಬ್ರಿಟನ್ನಿನೊಂದಿಗಿದ್ದ ಸಂಬಂಧ. 1954ರ ಒಪ್ಪಂದದಂತೆ ಬ್ರಿಟನ್ನು ಸೂಯೆಜ್ ಕಾಲುವೆಯಿಂದ ತನ್ನ ಸೈನ್ಯ

ಹಿಂತೆಗೆದುಕೊಂಡಿತು. 1955 ಮತ್ತು 1956ರ ಘಟನೆಗಳ ಫಲವಾಗಿ ಈಜಿಪ್ಟ್ ಸೈನಿಕ ರಾಷ್ಟ್ರವಾಗಿ ಪರಿವರ್ತನೆ ಹೊಂದಿತು. ಈಜಿಪ್ಟಿನ ಅಲಿಪ್ತ ನೀತಿಗೂ ಸೂಯೆಜ್ ಘಟನೆಯೇ ಕಾರಣ. ಬಾಗ್ದಾದ್ ಒಪ್ಪಂದ, ಬಾಂಡುಂಗ್ ಸಮ್ಮೇಳನ ಹಾಗೂ ಅಮೆರಿಕದ ಮನೋವೃತ್ತಿ-ಇವುಗಳಿಂದ ಈಜಿಪ್ಟಿನ ಧೋರಣೆಯಲ್ಲಿ ಸಂಭವಿಸಿದ ಬದಲಾವಣೆ ಅಗಾಧ. ಮಧ್ಯಪ್ರಾಚ್ಯಕ್ಕೆ ಪಶ್ಚಿಮ ರಾಷ್ಟ್ರಗಳ ಸೈನಿಕ ಸಹಾಯ ಅಗತ್ಯವೆಂದು ಪಾಶ್ಚಾತ್ಯ ರಾಷ್ಟ್ರಗಳ ವಾದಕ್ಕೆ ಈಜಿಪ್ಟಿನ ಒಪ್ಪಿಗೆಯಿಲ್ಲ. 1955ರ ಬಾಂಡುಂಗ್ ಸಮ್ಮೇಳನದಲ್ಲಿ ಈಜಿಪ್ಟ್ ಭಾರತದ ಅಲಿಪ್ತ ನೀತಿಯಿಂದ ಪ್ರಭಾವಿತವಾಯಿತು.

1955ರವರೆಗೆ ಅಮೆರಿಕದಿಂದ ಸಾಮಗ್ರಿ ಹಾಗೂ ಶಸ್ತ್ರಗಳನ್ನು ಪಡೆದು ಇಸ್ರೇಲಿನ ವಿರುದ್ಧ ರಕ್ಷಣೆ ಪಡೆಯಲು ಪ್ರಯತ್ನ ನಡೆಸುತ್ತಿದ್ದ ಈಜಿಪ್ಟ್ ಅದು ದೊರೆಯದಂತೆ ಕಂಡುಬಂದಾಗಲೇ ಸೋವಿಯತ್ ಬಣದತ್ತ ತಿರುಗಿದ್ದು. ಅದು ಜೆಕೊಸ್ಲೊವಾಕಿಯದೊಂದಿಗೆ ಶಸ್ತ್ರಾಸ್ತ್ರ ಒಪ್ಪಂದವನ್ನು ಮಾಡಿಕೊಂಡದ್ದು 1955ರಲ್ಲಿ.

ಮೊದಲಿಂದಲೂ ಈಜಿಪ್ಟ್ ಆಸ್ವಾನ್ ಕಟ್ಟೆಗಾಗಿ ಪಶ್ಚಿಮ ರಾಷ್ಟ್ರಗಳಿಂದ ಹಣ ಸಹಾಯ ಕೇಳುತ್ತಿತ್ತು. ಅಮೆರಿಕ, ಬ್ರಿಟನ್ ಹಾಗೂ ವಿಶ್ವಬ್ಯಾಂಕ್ ಹಣ ಒದಗಿಸಬೇಕೆಂದು ಇದರ ಇಚ್ಛೆ. ಆದರೆ ಅಮೆರಿಕದ ನೆರವು ಮುಂದುವರಿಯಲಿಲ್ಲ. ಈಜಿಪ್ಟ್ ಸೋವಿಯತ್ ಬಣದ ನೆರವನ್ನು ಪಡೆದದ್ದೇ ಇದಕ್ಕೆ ಕಾರಣ. ಸೂಯೆಜ್ ಕಾಲುವೆಯ ರಾಷ್ಟ್ರೀಕರಣವಾದದ್ದರ ಪರಿಣಾಮವಾಗಿ ಇಂಗ್ಲೆಂಡ್, ಫ್ರಾನ್ಸ್, ಇಸ್ರೇಲ್‌ಗಳು ಈಜಿಪ್ಟಿನ ಮೇಲೆ ದಾಳಿ ಮಾಡಿದುವು. ಇದರಿಂದಾಗಿ ಈಜಿಪ್ಟ್-ಸೋವಿಯತ್ ಸಂಬಂಧ ಇನ್ನೂ ಬಲವಾಯಿತಾದರೂ ಈಜಿಪ್ಟ್ ತನ್ನ ಅಲಿಪ್ತ ನೀತಿ ಬಿಟ್ಟುಕೊಟ್ಟಿಲ್ಲ.

ಅನಂತರ ಪದೇ ಪದೇ ಇಸ್ರೇಲಿನ ಆಕ್ರಮಣಕ್ಕೊಳಗಾಗುತ್ತ ಬಂದಿರುವ ಈಜಿಪ್ಟ್ ತನ್ನ ಹೋರಾಟ ಮುಂದುವರಿಸುತ್ತಲೇ ಬಂದಿದೆ. ಇಸ್ರೇಲು ಗಾಜಾ ನೆಲಪಟ್ಟಿಯನ್ನೂ ಸಿನಾಯ್ ಪ್ರದೇಶವನ್ನೂ ಆಕ್ರಮಿಸಿಕೊಂಡು ಸೂಯೆಜ್ ದಡದವರೆಗೂ ಬಂದು ನಿಂತಿತು. ಮುಂದೆ ನಡೆದ ಸಂಧಾನದಿಂದ ಸಿನಾಯ್ ಪ್ರದೇಶವನ್ನು ಹಿಂದಿರುಗಿಸಿತು.

**ಸಾಮಾಜಿಕ ವ್ಯವಸ್ಥೆ:** ಈಜಿಪ್ಟಿನ ಸ್ವಾಭಾವಿಕ ವಿಭಾಗಗಳು ಇದರ ಸಾಮಾಜಿಕ ವಿಭಾಗಗಳು ಇದರ ಸಾಮಾಜಿಕ ಜೀವನದ ಮೇಲೂ ತಮ್ಮ ಪ್ರಭಾವ ಬೀರಿವೆ. ನೈಲ್‌ನದಿಯ ಮಹಾಪೂರವೂ ಹಳೆಯ ಕಾಲದ ನೀರಾವರಿ ಪದ್ಧತಿಯೂ ಆಗಿನ ಸಾಮಾಜಿಕ ಸಂಘಟನೆಗಳನ್ನು ರೂಪಿಸಲು ಕಾರಣವಾಗಿದ್ದುವು. ಜಮೀನು ಗ್ರಾಮೀಣ ಗುಂಪುಗಳಿಗೆ ಸೇರಿತ್ತು. ಉಗಿಪಂಪುಗಳನ್ನು ನೀರಾವರಿಗಾಗಿ ಬಳಸಲಾರಂಭಿಸಿದ್ದು ಹತ್ತೊಂಬತ್ತನೆಯ ಶತಮಾನದಿಂದೀಚೆಗೆ. ಅನಂತರ ಅನೇಕ ಸಾಧನೆಗಳು ಬಳಕೆಗೆ ಬಂದುವು. ಈಗ ಸಿದ್ಧವಾಗಿರುವ ಅಸ್ವಾನ್ ಕಟ್ಟೆ ದೇಶದ ಸಾಮಾಜಿಕ ರಚನೆಯನ್ನೇ ಬದಲಾಯಿಸಿದೆ. ನೈಲ್‌ನದಿಯ ಪ್ರವಾಹವನ್ನು ತಡೆಹಿಡಿಯಲಾದದ್ದರಿಂದ ವ್ಯವಸಾಯಕ್ಕೆ ಹೆಚ್ಚು ಅನುಕೂಲವುಂಟಾಗಿದೆ. ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ ಉದ್ಯೋಗಗಳಿಗಾಗಿ ಉಪಯೋಗಿಸಲಾಗುತ್ತಿದೆ.

ಮೊದಲಿನ ಸಾಮಾಜಿಕ ರಚನೆ ಇಂದು ಸಡಿಲವಾಗುತ್ತದೆ. ಪ್ರವಾಹ ಭಯ ಇಲ್ಲದ್ದರಿಂದ ಈಗ ಎಲ್ಲಿ ಬೇಕಾದರೂ ವಾಸಿಸುವುದು ಸಾಧ್ಯ. ಇದರಿಂದಾಗಿ ಹೊಸ ಹೊಸ ಪಟ್ಟಣಗಳೇಳುತ್ತಿವೆ. ಆದರೆ ಗ್ರಾಮಗಳು ಇಂದಿಗೂ ಸಮಾಜದ ಮೂಲಘಟಕಗಳು. ಜಮೀನುದಾರಿ ಪದ್ಧತಿ ಇಂದು ಇಲ್ಲ. ಜಮೀನುಗಳನ್ನು ವ್ಯವಸಾಯಗಾರರಲ್ಲಿ ಹಂಚಲಾಗಿದೆ. ಆದರೆ ಬೆಳೆಯುತ್ತಿರುವ ಜನಸಂಖ್ಯೆಯದು ಒಂದು ಸಮಸ್ಯೆ.

ಮೊದಲಿನಿಂದಲೂ ಈಜಿಪ್ಟಿನ ಸಮಾಜದಲ್ಲಿ ಕುಟುಂಬದ್ದು ಮಹತ್ತ್ವದ ಪಾತ್ರ. ಸಮಾಜದ ಅನೇಕ ಕಾರ್ಯಗಳನ್ನು ನಿರ್ವಹಿಸುವ ಹೊಣೆ ಅದರದೇ. ಕುಟುಂಬ ರಾಜಕೀಯ ಶಕ್ತಿಯ ಕೇಂದ್ರವೂ ಹೌದು. ವ್ಯಕ್ತಿತ್ವ ರೂಪುಗೊಳ್ಳಲು ಕುಟುಂಬವೇ ಸಾಧನ. ಕುಟುಂಬದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಪ್ರತಿಯೊಬ್ಬನ ಕರ್ತವ್ಯ.

ಪಾಶ್ಚಾತ್ಯ ಸಂಸ್ಕೃತಿ ಶಿಕ್ಷಣಗಳ ಪ್ರಭಾವದಿಂದ ಪಟ್ಟಣಗಳ ಸ್ಥಿತಿಯಲ್ಲೂ ಜೀವನಕ್ರಮದಲ್ಲೂ ಬದಲಾವಣೆಯಾಗುತ್ತಿದೆ. ಈಜಿಪ್ಷಿಯನ್ನರು ಪಟ್ಟಣಗಳಲ್ಲಿ ದೊರಕುವ ಶೈಕ್ಷಣಿಕ ಹಾಗೂ ಆರ್ಥಿಕ ಸೌಲಭ್ಯಗಳಿಗೆ ಮಾರು ಹೋಗುತ್ತಿದ್ದಾರೆ. ಪಾಶ್ಚಾತ್ಯ ಮಾದರಿಯ ಸಂಸ್ಥೆಗಳು ಪಟ್ಟಣಗಳಲ್ಲಿ ಬೇರೂರುತ್ತಿವೆ. ಆಧುನಿಕ ಶಾಲೆಗಳಿಗೂ ಹೊಸ ಔದ್ಯೋಗಿಕ ಕೇಂದ್ರಗಳಿಗೂ ವಾಣಿಜ್ಯ ಶಾಖೆಗಳಿಗೂ ಪಟ್ಟಣಗಳೇ ಕೇಂದ್ರ. ಹೀಗಾಗಿ ಪಟ್ಟಣಗಳ ಹೊಟ್ಟೆ ಉಬ್ಬುತ್ತಿವೆ. ಕೈರೊ, ಅಲೆಕ್ಸಾಂಡ್ರಿಯ ಮುಂತಾದ ಪಟ್ಟಣಗಳು ಹಳತು-ಹೊಸತುಗಳ ಸಂಗಮ. ಒಂದೆಡೆ ಹಳ್ಳಿಗರ ಹಳೆ ಪದ್ಧತಿ; ಇನ್ನೊಂದೆಡೆ ಪಟ್ಟಣಿಗರ ಹೊಸ ಜೀವನ ರೀತಿ. ಈ ಎರಡಕ್ಕೂ ಅಂತರವಿದೆ. ಹೊಸ ವಾತಾವರಣದಲ್ಲಿ ಬೆಳೆದ ತರುಣರ ಪೀಳಿಗೆಯಲ್ಲಿ ಹೆಚ್ಚು ವಿಚಾರಶೀಲತೆಯನ್ನೂ ಕ್ರಿಯಾಶೀಲತೆಯನ್ನೂ ಕಾಣಬಹುದು. ಸಮಾಜದಲ್ಲಿ ಹೆಣ್ಣುಮಕ್ಕಳ ಸ್ಥಾನಮಾನಗಳೂ ಸುಧಾರಿಸುತ್ತಿವೆ. ಅವರೂ ವೈದ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ವೃತ್ತಿ ಹಿಡಿಯುತ್ತಿದ್ದಾರೆ.

ಆರ್ಥಿಕ ಪ್ರಗತಿ, ಜನಜೀವನ ಮಟ್ಟದ ಸುಧಾರಣೆ. ಸಕಲರಿಗೆ ಶಿಕ್ಷಣ, ರಾಜಕೀಯ ಒಗ್ಗಟ್ಟು ಮುಂತಾದವುಗಳನ್ನು ಸಾಧಿಸಲು ಈಜಿಪ್ಟ್ ಸರ್ಕಾರ ಶ್ರಮಿಸುತ್ತಿದೆ. ಕಳೆದ ದಶಕದಲ್ಲಿ ಶಾಲೆ ಮತ್ತು ವಿಶ್ವವಿದ್ಯಾಲಯಗಳ ಕ್ಷೇತ್ರವನ್ನು ವಿಸ್ತರಿಸಲಾಯಿತು. 1961ರಲ್ಲಿ ಆಯವ್ಯಯದ ಶೇ.16.5 ರಷ್ಟು ಭಾಗ ಶಿಕ್ಷಣಕ್ಕಾಗಿ ವ್ಯಯವಾಯಿತು. ಆದರೂ ನಿರ್ದಿಷ್ಟ ಗುರಿಯನ್ನು ಮುಟ್ಟಿಲ್ಲ.

ಪ್ರಜೆಗಳು ರಾಜಕೀಯದಲ್ಲಿ ಭಾಗವಹಿಸಲು ನಡೆಸಿದ ಪ್ರಯತ್ನಗಳು ವಿಫಲಗೊಳ್ಳುತ್ತಿವೆ. ಕೆಲ ಸಾಮಾಜಿಕ ಹಾಗೂ ಧಾರ್ಮಿಕ ಪಕ್ಷಗಳು ಪ್ರಜಾತಂತ್ರವನ್ನೂ ಪಾಶ್ಚಾತ್ಯ ಶಿಕ್ಷಣಪದ್ಧತಿಯನ್ನೂ ವಿರೋಧಿಸುತ್ತವೆ. ಈ ರಾಷ್ಟ್ರದ ಪ್ರಗತಿಗೆ ಇಸ್ರೇಲ್ ವಿರಸವೊಂದು ದೊಡ್ಡತಡೆ. ಈಜಿಪ್ಟಿನ ಆಡಳಿತ ಇಂದು ಆಂತರಿಕ ವಿರೋಧವನ್ನೂ ನೆರೆದೇಶದ ವೈರವನ್ನೂ ಪಾಶ್ಚಾತ್ಯ ರಾಷ್ಟ್ರಗಳ ಅಸಮಾಧಾನವನ್ನೂ ಏಕಕಾಲದಲ್ಲಿ ಎದುರಿಸಬೇಕಾಗಿದೆ. (ಎ.ಎಂ.ಆರ್.)

**ಈಜಿಪ್ಟಿನ ಆರ್ಥಿಕ ವ್ಯವಸ್ಥೆ:** ಈಜಿಪ್ಟಿನ ಆಯಕಟ್ಟಿನ ಭೌಗೋಳಿಕ ಸ್ಥಾನದಿಂದಾಗಿ ಪ್ರಪಂಚದ ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಈ ದೇಶಕ್ಕೆ ವಿಶೇಷ ಪ್ರಾಮುಖ್ಯವುಂಟು. ಜನಸಂಖ್ಯೆಯಲ್ಲೂ ಭೂ ವಿಸ್ತೀರ್ಣದಲ್ಲೂ ಈಜಿಪ್ಟು ಸಣ್ಣ ರಾಷ್ಟ್ರವಾದರೂ ಇತ್ತೀಚೆಗೆ-ಮುಖ್ಯವಾಗಿ 1952ರ ತರುವಾಯ-ಇದು ಆಧುನಿಕ ರೀತಿನೀತಿಗಳಿಗೆ ಅನುಸಾರವಾಗಿ ರೂಪುಗೊಳ್ಳುತ್ತಿದೆ.

**ಭೂ ಸುಧಾರಣೆ:** ಭೂ ಸುಧಾರಣೆಯೂ ನೀರಾವರಿ ಪ್ರಗತಿಯೂ ಆಧುನಿಕ ಈಜಿಪ್ಟಿನ ಕೃಷಿ ಜೀವನವನ್ನು ರೂಪಿಸುತ್ತಿರುವ ಎರಡು ಮುಖ್ಯ ಅಂಶಗಳು. ಹಿಂದಿನಿಂದ ನಡೆದು ಬಂದ ಭೂ ಒಡೆತನ ಪದ್ಧತಿಯನ್ನಳಿಸಿ ಹೊಸ ನಮೂನೆಯ ಹಿಡುವಳಿ ಜಾರಿಗೆ ತಂದಿರುವುದು ಒಂದು ಮುಖ್ಯ ಕ್ರಮ.

ಭೂಮಿಯೊಂದು ಅಮೂಲ್ಯ ಆಸ್ತಿಯೆಂಬುದು ಈಜಿಪ್ಟ್ ಜನರ ಹಳೆಯ ಭಾವನೆ. ಭೂ ಒಡೆತನ ಕೆಲವರಲ್ಲೇ ಕೇಂದ್ರೀಕೃತವಾಗುವ ಪ್ರವೃತ್ತಿ ಬೆಳೆದುಬಂದದ್ದರ ಫಲವಾಗಿ 1952ರಲ್ಲಿ ಕೇವಲ ಎರಡು ಸಾವಿರ ಮಂದಿ ಭೂ ಒಡೆಯರಿದ್ದರು. ಜಮೀನಿನ ಬಹುಭಾಗದ ಬೆಳೆಯಾಗಿದ್ದ ಹತ್ತಿಗೆ ಪ್ರಪಂಚದ ಮಾರುಕಟ್ಟೆಯಲ್ಲಿ ಇದ್ದ ಅಧಿಕ ಬೆಲೆಯೂ ಭೂ ಒಡೆಯರು ತೆರಬೇಕಾಗಿದ್ದ ತೆರಿಗೆ ಕಡಿಮೆ ಮಟ್ಟದಲ್ಲಿದ್ದದ್ದೂ ಅವರು ಹೆಚ್ಚು ಐಶ್ವರ್ಯವಂತರಾಗಲು ಸಹಾಯಕವಾದುವು. ಇದರಿಂದ ಭೂಮಿಯ ಬೆಲೆ ಏರಿತು; ಕೇವಲ ಸಿರಿವಂತರು ಮಾತ್ರ ಸ್ಥಿತಿವಂತರಾಗಬಹುದಿತ್ತು. 1952ರ ಸೈನಿಕ ಕ್ರಾಂತಿಗೆ ಮುಂಚೆ ಭಾರಿ ಜಮೀನುದಾರರು ಒಟ್ಟು ಜನಸಂಖ್ಯೆಯ ಕೇವಲ 0.1%ರಷ್ಟು ಇದ್ದು, ಅವರಲ್ಲಿ ಒಬ್ಬೊಬ್ಬರಿಗೂ ಸರಾಸರಿಯಲ್ಲಿ 550.9 ಫೆಡನ್ನು ಭೂಮಿಯಿತ್ತು (1 ಫೆಡನ್ನು=1.038 ಎಕರೆ). ಆದರೆ ಜನಸಂಖ್ಯೆಯ 72%ರಷ್ಟು ಮಂದಿಗೆ ತಲಾ ಕೇವಲ ೪ ಫೆಡನ್ನು 25%ರಷ್ಟು ಮಂದಿಗೆ ತಲಾ ಒಂದರಿಂದ ಹತ್ತು ಫೆಡನ್ನೂ ಇದ್ದುವು. ಆದ್ದರಿಂದ ಅಲ್ಪ ಸಂಖ್ಯಾತರಾದ ಭಾರಿ ಜಮೀನ್ದಾರರಿಗೂ, ಬಹು ಸಂಖ್ಯೆಯ ಸಾಮಾನ್ಯ ರೈತರಿಗೂ ಅತಿಯಾದ ಅಂತರವೇರ್ಪಟ್ಟಿತ್ತು. ಕೃಷಿಯಲ್ಲದೆ ಅನ್ಯ ಜೀವನೋಪಾಯವೇ ಕಾಣದ ಅಸಂಖ್ಯಾತ ರೈತರು ಅತಿಯಾದ ಬಡತನ, ಶೋಷಣೆ, ಅಜ್ಞಾನಗಳಿಗೆ ಒಳಗಾಗಿದ್ದರು.

ಸಾಮಾನ್ಯ ಜನರ ಈ ಶೋಚನೀಯ ಸ್ಥಿತಿಯ ನಿವಾರಣೆಗಾಗಿ ಕ್ರಾಂತಿಕಾರಿ ಸೇನಾಸಮಿತಿ ಭೂಮಿಯ ಪುನರ್‌ವಿತರಣೆಗೆ ಆದ್ಯತೆ ನೀಡಿತು. 1952ರ ಸೆಪ್ಟೆಂಬರಿನ ಕೃಷಿ ಸುಧಾರಣಾ ತುರ್ತು ವಿಧಿಯ ಪ್ರಕಾರ ಪ್ರತಿ ಭೂ ಮಾಲೀಕನೂ ತನ್ನಲ್ಲಿದ್ದ ಎರಡು ನೂರು ಫೆಡನ್ನುಗಳಿಗೂ ಮೀರಿದ ಹಿಡುವಳಿ ಭಾಗವನ್ನು ತಾನೇ ಮಾರಬೇಕು ಅಥವಾ ಬಿಟ್ಟುಕೊಟ್ಟು ಪ್ರತಿಯಾಗಿ 3%ರ 20 ವರ್ಷಗಳ ಬಾಂಡುಗಳ ರೂಪದಲ್ಲಿ ಪರಿಹಾರ ಪಡೆಯಬೇಕು. ಇಬ್ಬರು ಮಕ್ಕಳಿಗೆ ತಲಾ 50 ಫೆಡನ್ನುಗಳಂತೆ ಇನ್ನೂ ಒಂದು ನೂರು ಫೆಡನ್ನು ಭೂಮಿ ಹೊಂದಲು ಕುಟುಂಬಕ್ಕೆ ಅವಕಾಶವಿತ್ತು. ಸರ್ಕಾರದ ವಶಕ್ಕೆ ಬಂದ ಭೂಮಿಯನ್ನು 2 ರಿಂದ 5 ಎಕರೆಗಳ ತಾಕುಗಳಾಗಿ ಮಾಡಿ ರೈತರಿಗೆ ಮಾರಲಾಯಿತು; ನೂತನ ಹಿಡುವಳಿದಾರರಿಗೆ ಬೀಜ, ಉಪಕರಣ, ಗೊಬ್ಬರ ಮತ್ತು ಸಾಲ ಸೌಲಭ್ಯ ಕಲ್ಪಿಸಲು ಕಡ್ಡಾಯ ಕೃಷಿ ಸಹಕಾರಿ ಸಂಸ್ಥೆಗಳ ಸ್ಥಾಪನೆಯಾಯಿತು. ಕನಿಷ್ಠ ಕೂಲಿಯ ನಿಗದಿಯಾಯಿತು.

1961ರ ಅಂತ್ಯದವರೆಗೆ ಹಿಡುವಳಿ ಪಡೆದ ಸಂಸಾರಿಗಳ ಸಂಖ್ಯೆ 1,80,000ಕ್ಕೂ ಹೆಚ್ಚಾಗಿತ್ತು. ಈ ಭೂ ಸುಧಾರಣಾ ಕಾಯಿದೆಯ ಪ್ರಕಾರ ಶ್ರೀಮಂತ ಮಾಲೀಕರಿಂದ ಪಡೆದುಕೊಂಡ ಒಟ್ಟು ನೆಲ 9,35,000 ಫೆಡನ್ನು; ಅಂದರೆ ಇದು ಈಜಿಪ್ಟಿನ ಸಾಗುವಳಿ ಯೋಗ್ಯ ಭೂಮಿಯ 15% ರಷ್ಟು.

ಭೂಮಿಯ ಪುನರ್‌ಹಂಚಿಕೆ ಕಾರ್ಯ ಅಲ್ಲಿಗೇ ನಿಲ್ಲಲಿಲ್ಲ. 1961ರ ಜುಲೈನಲ್ಲಿ ಹೊರಡಿಸಲಾದ ಇನ್ನೊಂದು ತುರ್ತು ಶಾಸನದ ಪ್ರಕಾರ, ವ್ಯಕ್ತಿಯ ಹಿಡುವಳಿಯ ಮಿತಿಯನ್ನು 100 ಫೆಡನ್ನುಗಳಿಗೆ ಇಳಿಸಲಾಯಿತು. ಸರ್ಕಾರ 1892 ಭೂ ಒಡೆಯರಿಂದ ಸುಮಾರು 1,70,000 ಫೆಡನ್ನು ನೆಲ ಪಡೆದು ಅದನ್ನು ಸುಮಾರು 60,000 ಸಂಸಾರಗಳಲ್ಲಿ ಹಂಚಿತು. ಅದೇ ಸಂದರ್ಭದಲ್ಲಿ ಇಸ್ಲಾಮೀ ಮತೀಯ ಜಹಗೀರುಗಳನ್ನು ವಹಿಸಿಕೊಂಡು ಆ ನೆಲವನ್ನು ವಿತರಣೆ ಮಾಡಲಾಯಿತು. ಇಷ್ಟೆಲ್ಲ ಆದರೂ ಅಲ್ಲಿ ಇನ್ನೂ ಸುಮಾರು 1,60 ಕೋಟಿ ರೈತರಿಗೆ ನೆಲ ದೊರಕಲಿಲ್ಲ. ಆದರೂ ಈ ಸುಧಾರಣಾ ಕ್ರಮಗಳಿಂದ ಈಜಿಪ್ಟಿನ ಭೂ ಒಡೆತನದ ನಮೂನೆಯಲ್ಲಿ ಮಹತ್ತ್ವದ ಬದಲಾವಣೆಯಾದದ್ದಂತೂ ನಿಜ.

ಭೂ ಹಂಚಿಕೆ ಕಾರ್ಯಕ್ರಮದೊಡನೆಯೇ ವ್ಯವಸಾಯಾಭಿವೃದ್ಧಿಗೆ ಸಹಾಯಕವಾದ ಇತರ ಕೆಲವು ಕ್ರಮಗಳು ಜಾರಿಗೆ ಬಂದುವು. ಗೇಣಿದಾರರ ಸ್ಥಿತಿಗತಿ ಸುಧಾರಣೆಗೆ ಗೇಣದಾರಿಯನ್ನು ಕ್ರಮಗೊಳಿಸಲಾಯಿತು: ಅದು ಸುಮಾರು ಅರ್ಧಕ್ಕೆ ಇಳಿಯಿತು. ರೈತರ ಬೇಸಾಯ ಕ್ರಮದಲ್ಲಿ ಸುಧಾರಣೆ ಮಾಡುವ ಸಲುವಾಗಿ ವ್ಯಾಪಕ ಸಹಕಾರ

ವ್ಯವಸ್ಥೆಯ ರಚನೆಯಾದದ್ದು ಇನ್ನೊಂದು ಮುಖ್ಯ ಕ್ರಮ. ಸಾಲದ ಹೊರೆ ಇಳಿತ, ಕೃಷಿ ಕಾರ್ಯಾಚರಣೆಗೆ ಉಪಕರಣ ನೀಡಿಕೆ, ಗ್ರಾಮಕೈಗಾರಿಕೆಗಳ ಜೀರ್ಣೋದ್ಧಾರ. ಶಿಕ್ಷಣ– ಈ ಎಲ್ಲ ನಿಟ್ಟಿನಲ್ಲೂ ಸಹಕಾರ ಯಶಸ್ವಿಯಾಗಿದೆ.

**ಕೃಷಿಯೋಗ್ಯ ಭೂ ವಿಸ್ತರಣೆ:** ಈಜಿಪ್ಟಿನ ಬಹುಭಾಗ ಪ್ರದೇಶವನ್ನು ಮರಳುಕಾಡು ಆವರಿಸಿಕೊಂಡಿದೆ. ಕೃಷಿಯೋಗ್ಯ ಭೂಭಾಗ ಒಟ್ಟು ನೆಲದ ಕೇವಲ 3.5% ಮಾತ್ರ. ಈ ಕೊರತೆಯನ್ನು ನಿವಾರಿಸುವುದು ಈಜಿಪ್ಟ್ ಸರ್ಕಾರದ ಇತ್ತೀಚಿನ ನೀತಿ. ಮರಳುಗಾಡಿನ ಮತ್ತು ಇತರ ಭಾಗಗಳ ಪ್ರದೇಶವನ್ನು ಹೊಸದಾಗಿ ಕೃಷಿ ಯೋಗ್ಯಗೊಳಿಸುವ ಯೋಜನೆಗಳನ್ನು ಅದು ಕೈಗೊಂಡಿದೆ. 1959–62ರ ಅವಧಿಯಲ್ಲಿಯೇ ಈ ಕಾರ್ಯಕ್ರಮದ ಪ್ರಕಾರ 2,29,000 ಎಕರೆ ಭೂ ಪ್ರದೇಶವನ್ನು ಹೊಸದಾಗಿ ಕೃಷಿಯೋಗ್ಯಗೊಳಿಸಲಾಯಿತು. ಸೋವಿಯತ್ ಒಕ್ಕೂಟದ ನೆರವಿನಿಂದ 1960ರಲ್ಲಿ ನಿರ್ಮಾಣ ಆರಂಭವಾದ ಆಸ್ವಾನ್ ಎತ್ತರ ಕಟ್ಟೆಯಿಂದ ಇತರ ಪ್ರಯೋಜನಗಳ ಜೊತೆಗೆ ಬೇಸಾಯದ ನೆಲದ ವಿಸ್ತರಣೆಗೂ ಹೆಚ್ಚು ಸಹಾಯವಾಗಿದೆ. ಹೊಸ ಪ್ರದೇಶಗಳಿಗೆ ಜನ ಕುಟುಂಬ ಸಮೇತರಾಗಿ ಹೋಗಿ ನೆಲೆಸಲು ಉತ್ತೇಜನ ನೀಡಲಾಗಿದೆ. ಇದೊಂದು ಹೊಸ ಸಾಮಾಜಿಕ ಪ್ರಯೋಗ. ಇಂಥ ಯೋಜನೆಗಳಿಗೆ ವಿದೇಶೀ ತಾಂತ್ರಿಕ ಶೈಕ್ಷಣಿಕ ನೆರವು ದೊರಕಿದೆ. ಪ್ರಾಕೃತಿಕವಾಗಿ ಅಷ್ಟೇನೂ ಹಿತಕರವಲ್ಲದ ವಾತಾವರಣಗಳಿಗೆ ಜನರನ್ನು ಸ್ಥಳಾಂತರಗೊಳಿಸುವ ಇಂಥ ಕಾರ್ಯಕ್ರಮಗಳ ವೆಚ್ಚ ಹೆಚ್ಚು. ಅಲ್ಲದೆ ಇಂಥ ಕ್ರಮಗಳಿಂದ ಹೆಚ್ಚು ನೆಲವನ್ನು ಕೃಷಿ ಹಾಗೂ ವಸತಿ ಯೋಗ್ಯಗೊಳಿಸಲು ತೀವ್ರವಾದ ಮಿತಿಗಳುಂಟು.

**ನೀರಾವರಿ:** ಪುನರ್ವ್ಯವಸ್ಥಿತ ಭೂ ಒಡೆತನ ಈಜಿಪ್ಟಿನ ಆಧುನಿಕ ವ್ಯವಸಾಯಕ್ಕೆ ಹೊಸ ತಳಹದಿ ಹಾಕಿರುವ ಒಂದು ಮುಖ್ಯಕ್ರಮವಾದರೆ, ಹೊಸ ನೀರಾವರಿ ವ್ಯವಸ್ಥೆ ಇನ್ನೊಂದು ಮುಖ್ಯಕ್ರಮ. ಸಾವಿರಾರು ವರ್ಷಗಳಿಂದಲೂ ಈಜಿಪ್ಟಿನಲ್ಲಿ ನಡೆದು ಬಂದಿರುವುದು ಕುಂಟೆ ನೀರಾವರಿ ವಿಧಾನ (ಬೇಸಿನ್ ಇರಿಗೇಷನ್). 4'–8' ಎತ್ತರದ ಬಾಂದುಗಳ ಮೂಲಕ ಭೂಮಿಯನ್ನು ಸಣ್ಣ ಸಣ್ಣ ಪಾತ್ರಗಳಾಗಿ ವಿಭಾಗಿಸಿ ನದಿಯ ಪ್ರವಾಹ ಉಕ್ಕಿ ಬಂದಾಗ ಅವುಗಳಲ್ಲಿ ನೀರು ತುಂಬುವಂತೆ ಮಾಡಿ ತರುವಾಯ ವ್ಯವಸಾಯಕ್ಕೆ ಆ ನೀರನ್ನು ಉಪಯೋಗಿಸಿಕೊಳ್ಳುವುದೇ ಈ ವಿಧಾನ. ಇದರಿಂದ ಪ್ರವಾಹದ ಋತುಮಾನಕ್ಕೆ ಅನುಗುಣವಾಗಿ ಕೆಲವು ಬೆಳೆಗಳನ್ನು ಮಾತ್ರ ಬೆಳೆಯಬಹುದಲ್ಲದೆ ವರ್ಷಕ್ಕೆ ಕೇವಲ ಒಂದು ಬೆಳೆ ಮಾತ್ರ ತೆಗೆಯಲು ಸಾಧ್ಯ. ಈಚೆಗೆ ಹೊಸದಾದ ಸಾರ್ವಕಾಲಿಕ ನೀರಾವರಿ ವಿಧಾನ ಅಭಿವೃದ್ಧಿಯಾಗಿರುವುದರಿಂದ ಕುಂಟೆ ನೀರಾವರಿ ಕ್ರಮದ ಪ್ರಾಮುಖ್ಯ ಕಡಿಮೆಯಾಗಿದೆ. ನೈಲ್ ನದಿಗೆ ಅಲ್ಲಲ್ಲಿ ಕಟ್ಟೆ ಕಟ್ಟಿ ಸರೋವರಗಳನ್ನು ನಿರ್ಮಿಸಿ, ಜಮೀನುಗಳಿಗೆ ನಾಲೆಗಳ ಮೂಲಕ ನೀರು ಒಯ್ಯುವ ಯೋಜನೆ ಹಂತ ಹಂತವಾಗಿ ಮುಂದುವರಿದಿದೆ. ಈಜಿಪ್ಟ್ ಜನರ ದೃಷ್ಟಿಯಲ್ಲಿ ಈ ಕಟ್ಟೆಗಳು ನೀರಾವರಿ ವಿದ್ಯುಚ್ಛಕ್ತಿ ಯೋಜನೆಗಳು ಮಾತ್ರವಲ್ಲ. ಇವು ಈಜಿಪ್ಟಿನ ಹೊಸ ಸಹಕಾರಿ ಸಮಾಜವಾದೀ ಪ್ರಜಾಪ್ರಭುತ್ವದ ಅಸ್ತಿಭಾರ. ಪುರಾತನ ಫೇರೋಗಳು ಅಂದು ನಿರ್ಮಿಸಿದ ಪಿರಮಿಡ್ಡುಗಳ ನಿರ್ಮಾಣವನ್ನೂ ಮೀರಿದ ಸಾಹಸ ಕಾರ್ಯವೆಂದೂ ಅವರ ಭಾವನೆ. ಈ ಭಾರಿ ನೀರಾವರಿ ಯೋಜನೆಯ ಜೊತೆಗೆ ಸಿಫ್ಟ, ಅಸಿಯತ್, ನಾಗ್ ಹಮ್ಮಡಿ, ಎಡ್‌ಫಿನ, ಫರಸ್ಕೋರ್ ಇತ್ಯಾದಿ ಕಡೆಗಳಲ್ಲಿ ಸಣ್ಣ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ನೈಲ್ ಬಯಲುಪ್ರದೇಶದಲ್ಲಿ ಅಬಿಲ್, ಮನೆಗ, ಬಲಾಮ, ಘುವ ಮತ್ತು ಆಟ್ಟ್ ಎಂಬ ಸ್ಥಳಗಳಲ್ಲಿ ನೀರೆತ್ತುವ ಯಂತ್ರ ಸ್ಥಾಪನೆ ಮಾಡಿ ನದಿಯಿಂದ ನೀರು ಹಾಯಿಸಲಾಗುತ್ತಿದೆ. ಈ ಎಲ್ಲ ಕ್ರಮಗಳಿಂದ ಬೇಸಾಯದ ನೆಲದ ಸುಮಾರು 83% ರಷ್ಟು ಭಾಗಕ್ಕೆ ಸಾರ್ವಕಾಲಿಕ ನೀರಾವರಿ ಸೌಕರ್ಯ ಲಭಿಸಿದೆ.

**ಬೆಳೆಗಳು:** ಹೊಸ ನೀರಾವರಿ ವ್ಯವಸ್ಥೆಯಿಂದ ವರ್ಷಕ್ಕೆ 2–3 ಬೆಳೆಗಳನ್ನು ತೆಗೆಯುವದು ಈಜಿಪ್ಟಿನ ಕೃಷಿಕರ ಅಭ್ಯಾಸ. ಅಲ್ಲದೆ ಬೆಳೆಗಳನ್ನು ಸರದಿಯ ಪ್ರಕಾರ ಬೆಳೆಯುವ ಅಭ್ಯಾಸ ಜಾನುವಾರು ಪೋಷಣೆಗೆ ಉತ್ತೇಜನ ನೀಡಿದೆ. ಹತ್ತಿ ಮತ್ತು ಧಾನ್ಯಗಳ ಜೊತೆಗೆ ಬರ್‌ಸೀಡ್ ಬೆಳೆಯನ್ನು ಸರದಿ ಪ್ರಕಾರ ಹಾಕುತ್ತಿರುವುದು ಭೂಸಾರ ವೃದ್ಧಿಯಾಗಲು ಸಹಾಯಕ. ಬರ್‌ಸೀಡ್ ಬೆಳೆ ಜಾನುವಾರುಗಳಿಗೆ ಆಹಾರ. ಕಳೆದ ಎರಡು ದಶಕಗಳಲ್ಲಿ ಈಜಿಪ್ಟಿನಲ್ಲಿ ಬೆಳೆಗಳಲ್ಲಿ ಸಾಧಿಸಿರುವ ವೈವಿಧ್ಯ ಹೆಚ್ಚು. ಹತ್ತಿ. ಜೋಳ, ಗೋದಿ, ಬತ್ತ, ಮಿಲೆಟ್ಸ್, ಬಾರ್ಲಿ, ಕಬ್ಬು, ಬೀನ್ಸ್ ಮುಖ್ಯ ಬೆಳೆ. ವಿದೇಶಿ ವಿನಿಮಯ ದೃಷ್ಟಿಯಿಂದ ಹತ್ತಿ ಮುಖ್ಯ. ಉಳಿದವು ದೇಶದ ಆಹಾರ ನೀಡಿಕೆಯ ದೃಷ್ಟಿಯಿಂದ ಮುಖ್ಯ. ಈಜಿಪ್ಟಿನ ಒಟ್ಟು ವಾರ್ಷಿಕ ನಿರ್ಯಾತದಲ್ಲಿ ಹತ್ತಿಯ ಭಾಗ ಶೇ.ಸು.70–85 ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಹತ್ತಿ ಬೆಳೆಯುವ ಪ್ರದೇಶದ ಸುಮಾರು ಏಳರಲ್ಲೊಂದು ಭಾಗದಷ್ಟು ನೆಲದಲ್ಲಿ ಮಾತ್ರ ಈಜಿಪ್ಟು ಹತ್ತಿ ಬೆಳೆಯುತ್ತಿರುವುದಾದರೂ ಉತ್ಕೃಷ್ಟತೆಯ ದೃಷ್ಟಿಯಿಂದ ಈಜಿಪ್ಟಿನ ಹತ್ತಿಗೆ ವಿಶ್ವ ಮಾರುಕಟ್ಟೆಯಲ್ಲಿ ಪ್ರಥಮ ಸ್ಥಾನವಿದೆ. ಪ್ರಪಂಚದ ಉದ್ದ ತಂತುವಿನ (ಲಾಂಗ್ ಸ್ಟೇಪ್ಸ್) ಹತ್ತಿಯ ವ್ಯಾಪಾರದಲ್ಲಿ ಶೇ.60–70ರಷ್ಟು ಭಾಗ ಈಜಿಪ್ಟಿನದು. ತುಂಡುತಂತುವಿನ ಹತ್ತಿಯ ವ್ಯಾಪಾರದಲ್ಲಿ ಶೇ.30 ಈಜಿಪ್ಟಿನ ಪಾಲು.

ಖರ್ಜೂರ, ಕಿತ್ತಳೆ, ದ್ರಾಕ್ಷಿ, ಈರುಳ್ಳಿ, ಸಣಬು, ಹರಳು, ನೆಲಗಡಲೆ ಇವು ಈಜಿಪ್ಟಿನ ಇತರ ಬೆಳೆಗಳು. ಈಜಿಪ್ಟಿನ ಬೇಸಾಯ ಉನ್ನತ ಮಟ್ಟದ್ದೆನ್ನಲು ಅದರ ಎಕರೆ ಉತ್ಪನ್ನವೇ ಸಾಕ್ಷಿ. ಇಲ್ಲಿ ತೆಗೆಯುವ ಎಕರೆಗೊಂದು ಟನ್ನು ಜೋಳದ ಫಸಲು ಇಡೀ ಪ್ರಪಂಚಕ್ಕೇ ಅತ್ಯುನ್ನತ ಗೋಧಿಯ ಬೆಳೆ ಎಕರೆಗೆ 17 ಹಂಡ್ರೆಡ್‌ವೆಯ್ಟ್. ಐರೋಪ್ಯರಾಷ್ಟ್ರ ಮಟ್ಟಕ್ಕೆ ಇದು ಸಮ. ಒಂದು ಎಕರೆಯ ಹತ್ತಿ ಉತ್ಪನ್ನ 600 ಪೌಂ. ಇದೂ ಅತ್ಯುನ್ನತ ಮಟ್ಟ. ಇಷ್ಟೆಲ್ಲ ಪ್ರಥಮಗಳನ್ನು ಪಡೆದೂ ಈಜಿಪ್ಟ್ ಆಹಾರ ವಿಚಾರದಲ್ಲಿ ಇನ್ನೂ ಸ್ವಾವಲಂಬಿಯಾಗಿಲ್ಲ.

**ಜಾನುವಾರು ಪೋಷಣೆ:** ಜನಸಂಖ್ಯೆಯ ಒತ್ತಡದ ಪರಿಣಾಮವಾಗಿ ಈಜಿಪ್ಟಿನಲ್ಲಿ ಕೃಷಿಯೋಗ್ಯ ಭೂಮಿಯನ್ನು ಜಾನುವಾರು ಪೋಷಣೆಗಿಂತ ಹೆಚ್ಚಾಗಿ ದವಸ ಧಾನ್ಯ ಬೆಳೆಗಳಿಗೆ ಉಪಯೋಗಿಸಲಾಗಿದೆ. ಹಾಲು, ಹೈನು ಮಾಂಸ ಇವುಗಳ ಉತ್ಪನ್ನ ದೇಶದ ಅವಶ್ಯಕತೆಗಳನ್ನು ಪೂರೈಸುವಷ್ಟು ಇಲ್ಲದ್ದರಿಂದ ಈಜಿಪ್ಟ್ ಇವುಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಉತ್ತಮ ತಳಿಯ ಜಾನುವಾರುಗಳನ್ನು ಅಭಿವೃದ್ಧಿಪಡಿಸಲು ಅವಕಾವಿರುವುದೆಂದೂ ಇದು ಆವಶ್ಯಕವೆಂದೂ ಅಲ್ಲಿನ ಜನತೆಗೆ ಮನವರಿಕೆಯಾಗಿರುವುದು. ಈಚೆಗೆ ಅಲ್ಲದೆ ಬೇಸಿಗೆ ಧಾನ್ಯ ಬೆಳೆ ತೆಗೆಯುವ ಕೃಷಿ ಪದ್ಧತಿ ಹೆಚ್ಚಾಗಿ ಜಾರಿಗೆ ಬರುತ್ತಿರುವುದು ಜಾನುವಾರು ಪೋಷಣೆಗೂ ಸಹಾಯಕ. ಏಕೆಂದರೆ, ಜಾನುವಾರುಗಳಿಗೆ ಆಹಾರ ಕೊರತೆ ಹೆಚ್ಚಾಗಿದ್ದದ್ದು ಬೇಸಿಗೆಯಲ್ಲಿ. ಬೇಸಗೆ ಬೆಳೆಯಿಂದ ಈ ತೊಂದರೆ ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತಿದೆ. ಮಿಶ್ರ ಬೇಸಾಯ ಹಾಗೂ ಇತರ ಯೋಜನೆಗಳ ಮೂಲಕ ಈಜಿಪ್ಟಿನಲ್ಲಿ ಪ್ರಾಣಿ ಸಂಗೋಪನ ಕಾರ್ಯಕ್ರಮಗಳನ್ನು ಗಮನಾರ್ಹವಾಗಿ ವಿಸ್ತರಿಸುವ ಅವಕಾಶವಿರುವುದೆಂಬುದು ತಜ್ಞರ ಅಭಿಪ್ರಾಯ. ಮರಳುಗಾಡಿನ ಅಲೆಮಾರಿ ಅರಬ್ಬರ ಒಂಟೆ ಸಾಕಣೆ ಈಜಿಪ್ಟಿನ ಜಾನುವಾರು ಆರ್ಥಿಕ ವ್ಯವಸ್ಥೆಯ ಒಂದು ವೈಶಿಷ್ಟ್ಯ.

ಈಜಿಪ್ಟಿನ ಆರ್ಥಿಕೋದ್ಯಮಗಳಲ್ಲಿ ಸಮುದ್ರ ಹಾಗೂ ಅಂತರಿಕ ಮೀನುಗಾರಿಕೆ ಸೇರಿರುವುದಾದರೂ ಇದಕ್ಕೆ ಹೆಚ್ಚಿನ ಪ್ರಾಮುಖ್ಯವಿಲ್ಲ. ಕೆಂಪು ಸಮುದ್ರದಲ್ಲಿ ಗಮನಾರ್ಹ ಮೀನುಗಾರಿಕೆ ಚಟುವಟಿಕೆಯೇ ಇಲ್ಲ. ಅನೇಕ ನದಿಗಳು ಬಂದು ಬೀಳುವುದರಿಂದಲೂ ಭಾರಿ ಅಲೆಗಳ ಹೊಡೆತದಿಂದ ನೀರಿನ ತಳ ಮೇಲಾಗುತ್ತಿರುವುದರಿಂದಲೂ ಸಾಗರಗಳಲ್ಲಿ ಸಾಮಾನ್ಯವಾಗಿ ಹುಟ್ಟುವ ಪುಷ್ಟಿಕರ ಲವಣಾಂಶಗಳು ಮೆಡಿಟರೇನಿಯನ್ನಿನಲ್ಲಿ ಇಲ್ಲದಿರುವುದರಿಂದಲೂ ಇಲ್ಲಿ ಮೀನುಗಳು ಹೆಚ್ಚಾಗಿ ಹುಟ್ಟಿ ಬೆಳೆಯಲಾಗುವುದಿಲ್ಲ. ಆದ್ದರಿಂದ ಈ ಸಮುದ್ರ ಮೀನುಗಾರಿಕೆಗೆ ಫಲವತ್ತಾದ ಪ್ರದೇಶವೆಂದು ಪರಿಗಣಿತವಾಗಿಲ್ಲ. ಆದರೆ, ಈಜಿಪ್ಟ್ ತೀರದ ಮೆಡಿಟರೇನಿಯನ್ನಿನ ಒಂದು ಭಾಗದಲ್ಲಿ ಮೀನುಗಾರಿಕೆಗೆ ಸ್ವಲ್ಪ ಅವಕಾಶವಿದೆ. ನೈಲ್ ನದಿ ಸಮುದ್ರ ಸೇರುವ ಜಾಗವೇ ಈ ಪ್ರಶಸ್ತ ಸ್ಥಳ. ಬೇಸಗೆಯ ಕೊನೆ ಹಾಗೂ ಶರದೃತುವಿನಲ್ಲಿ ನೈಲ್ ಪ್ರವಾಹ ಉಕ್ಕಿ ಬರುತ್ತಿರುವಾಗ, ನೈಲ್ ಮುಖಜಭೂಮಿಯ ಕಡೆಗೆ ಭಾರಿ ಸಾರ್ಡೀನ್ ಮೀನುಗಳು ಆಹಾರಾಪೇಕ್ಷೆಯಿಂದ ಹೋಗುತ್ತವೆ. ಹೀಗೆ ನೈಲ್ ಪ್ರವಾಹದ ಈ ಅಲ್ಪ ಕಾಲಾವಧಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಭಾರಿ ಮೀನುಗಳನ್ನು ಹಿಡಿಯಲಾಗುವುದು. ಸಮುದ್ರಮೀನುಗಾರಿಕೆ ಮಿತ ಪ್ರಮಾಣದ್ದು.

ಒಳನಾಡಿನಲ್ಲಿ ಮೀನುಗಾರಿಕೆಗೆ ಹೆಚ್ಚಿನ ಅವಕಾಶವುಂಟು. ನೈಲ್ ನದಿಯ ಸುತ್ತ ಮುತ್ತಲಿನ ಪ್ರದೇಶ ಹೆಚ್ಚು ಜನಸಾಂದ್ರವಾಗಿರುವುದರಿಂದ ಮೀನುಗಾರಿಕೆಗೆ ಬೇಕಾದ ಶ್ರಮ ಒದಗುವುದೂ ಅಲ್ಲದೆ ಮೀನುಗಳಿಗೆ ಬೇಡಿಕೆಯೂ ಹೆಚ್ಚು. ಐದು ಪ್ರಮುಖ ಸರೋವರಗಳಾದ ಮೆನ್‌ಜ಼ಲೇ, ಬ್ರುಲ್ಲೋಸ್, ಇಡ್ಕು, ಮ್ಯಾರಿಯಟ್ ಮತ್ತು ಕ್ವಾರುನ್ ಇವು ಪ್ರಶಸ್ತ ಮೀನುಗಾರಿಕೆ ಕೇಂದ್ರಗಳು.

**ಖನಿಜಗಳು:** ಪೆಟ್ರೋಲಿಯಂ. ಫಾಸ್‌ಫೇಟ್, ಸೋಡಿಯಂ ಲವಣಗಳು, ಮ್ಯಾಂಗನೀಸ್, ಕಬ್ಬಿಣದ ಅದಿರು ಇವು ಈಜಿಪ್ಟಿನ ಮುಖ್ಯ ಖನಿಜಗಳು. ಇವುಗಳಲ್ಲಿ ಪೆಟ್ರೋಲಿಯಂಗೆ ಪ್ರಥಮ ಸ್ಥಾನ. ಈಜಿಪ್ಟಿನಲ್ಲಿ ಪೆಟ್ರೋಲಿಯಂ ಮೂಲಗಳು ಇರಾನ್, ಇರಾಕ್ ಮತ್ತು ಸೌದಿ ಅರೇಬಿಯದಲ್ಲಿರುವಷ್ಟು ಗಣನೀಯವಾಗಿಲ್ಲವಾದರೂ ದೇಶ ಸ್ವಸಂಪೂರ್ಣವಾಗುವಷ್ಟು ತೈಲ ಉತ್ಪಾದನೆಗೆ ಅವಕಾಶವಿದೆ. ಪ್ರಥಮತಃ ಈ ಶತಮಾನದ ಮೊದಲಲ್ಲೇ ತೈಲನಿಕ್ಷೇಪದ ಸೂಚನೆ ತೋರಿದ್ದರಿಂದ, ಈ ಸಂಪತ್ತನ್ನು ರೂಢಿಸಿಕೊಳ್ಳುವ ಪ್ರಯತ್ನ ಅಂದೇ ಆರಂಭವಾಯಿತು.

1913ರಲ್ಲಿ ಹುರ್ಗ್ಹಾಡ ಎಂಬಲ್ಲಿ ಒಂದು ಎಣ್ಣೆ ಕ್ಷೇತ್ರವನ್ನು ಶೋಧಿಸಿ ಅಲ್ಲಿ ಅನೇಕ ತೈಲಬಾವಿಗಳನ್ನು ಸ್ಥಾಪಿಸಲಾಯಿತು. ಅಲ್ಲಿ ಹುದುಗಿರುವ ತೈಲ ಪ್ರಮಾಣ ಕಡಿಮೆ ಎಂಬುದು ಈಚಿನ ಶೋಧನೆಗಳಿಂದ ತಿಳಿದುಬಂದಿದೆ. ಆ ತೈಲಬಾವಿಗಳ ಉತ್ಪನ್ನ ಇಳಿಮುಖ. ಅಲ್ಲದೆ ಆ ಕ್ಷೇತ್ರದ ಕಚ್ಚಾ ಎಣ್ಣೆ ಅತಿಭಾರ, ಹೆಚ್ಚು ಗಂಧಕಮಯ. 1938ರಿಂದ ರಾಸ್ ಘಾರಿಬ್ ಎಂಬ ಪ್ರದೇಶದ ಉತ್ಕೃಷ್ಟ ತೈಲಕ್ಷೇತ್ರವನ್ನು ಶೀಘ್ರವಾಗಿ ಅಭಿವೃದ್ಧಿಗೊಳಿಸಲಾಯಿತು.

ಭೂಮಿಯ ತೈಲಕ್ಷೇತ್ರಗಳಿಗಾಗಿ ಶೋಧನೆಯ ಪ್ರಯತ್ನಗಳನ್ನು 1945ರ ಅನಂತರ ತೀವ್ರಗೊಳಿಸಲಾಯಿತು. ತತ್ಫಲವಾಗಿ ಸೂಯೆಜ಼್‌ಕೊಲ್ಲಿಯ ಎರಡೂ ಕಡೆಗಳಲ್ಲಿ ಅನೇಕ ತೈಲಕೇಂದ್ರಗಳು ಸ್ಥಾಪನೆಯಾದವು. 1945–60ರ ಅವಧಿಯಲ್ಲಿ ಬೆಲಾಯಿಂ, ಸುಡ್‌ರ್, ರಾಸ್‌ಮಟಾರ್ಮ, ಫೀರಾನ್, ಅಸ್‌ಲ್ ಅಬುರೂಡಿಸ್, ಕ್ರಿಮ್, ರ್‍ಯಾಸ್ ಬಾಕರ್–ಈ ಸ್ಥಳಗಳಲ್ಲಿ ತೈಲೋತ್ಪಾದನೆಯಾಗುತ್ತಿದೆ.

ಫಾಸ್ಫೇಟ್ ಶಿಲೆ ಕೆಂಪು ಸಮುದ್ರದ ತೀರಪ್ರದೇಶದಲ್ಲಿರುವ ಟೋರ್ ಮತ್ತು ಕೋಸಿರ್‌ಗಳಲ್ಲಿ ದೊರಕುತ್ತದೆ. ಈಜಿಪ್ಟಿಗೆ ಫಾಸ್ಫೇಟಿನ ಗೊಬ್ಬರಕ್ಕಿಂತ ನೈಟ್ರೇಟ್ ಗೊಬ್ಬರದ ಆವಶ್ಯಕತೆ ಹೆಚ್ಚಾಗಿ ಇರುವುದರಿಂದ ಫಾಸ್ಫೇಟ್ ಉತ್ಪನ್ನ ವಿಶೇಷವಾಗಿ ಆಸ್ಟ್ರೇಲಿಯ ಹಾಗೂ ದಕ್ಷಿಣ ಆಫ್ರಿಕಗಳಿಗೆ ರಫ್ತಾಗುತ್ತಿದೆ.

ಪಶ್ಚಿಮ ಮರುಭೂಮಿಯ ಊಟೆಯ ಪ್ರದೇಶದಲ್ಲಿ ಸೋಡಿಯಂ ಲವಣಗಳ ಉತ್ಪನ್ನವಾಗುತ್ತಿದೆ. ವಾಡಿನಾಟ್ರುನ್ ಪ್ರದೇಶ ಸೋಡಿಯಂ ಲವಣ ಉತ್ಪಾದನೆಯ ಪ್ರಮುಖ ಕೇಂದ್ರ. ಇಲ್ಲಿ ಅನೇಕ ಶತಮಾನಗಳಿಂದಲೂ ವಿವಿಧ ಲವಣಗಳು ದೊರಕುತ್ತಿದ್ದು ಈಗ ವಿಶೇಷವಾಗಿ ಉತ್ಪಾದನೆಯಾಗುತ್ತಿರುವುದು ಸೋಡಿಯಂ ಕಾರ್ಬೊನೇಟ್ ಮತ್ತು ಸಲ್ಫೇಟುಗಳು ಮಾತ್ರ.

ಈಜಿಪ್ಟಿನ ಅಬು ಜೆನಿಮಾ ಪ್ರದೇಶದಲ್ಲಿ ಮ್ಯಾಂಗನೀಸ್ ದೊರಕುತ್ತದೆ. 2ನೆಯ ಮಹಾಯುದ್ಧದ ಅನಂತರ ಸ್ವಲ್ಪಕಾಲ ಇದರ ಉತ್ಪಾದನೆ ಸ್ಥಗಿತಗೊಂಡಿದ್ದು ಈಚೆಗೆ ಮತ್ತೆ ಆರಂಭವಾಗಿದೆ. ಅಸ್ವಾನಿನ ಪೂರ್ವಕ್ಕೆ 30 ಮೈಲಿ ದೂರದ ಪ್ರದೇಶದಲ್ಲಿ ಭೂಮಟ್ಟಕ್ಕೆ ಸಮೀಪದ ಆಳದಲ್ಲಿಯೇ ಉತ್ತಮ ದರ್ಜೆಯ ಕಬ್ಬಿಣದ ಅದಿರಿನ ನಿಧಿ ಇರುವುದನ್ನು 1937ರಲ್ಲಿ ಕಂಡುಹಿಡಿದದ್ದು ಈಜಿಪ್ಟಿನ ಖನಿಜ ಇತಿಹಾಸದ ಮುಖ್ಯ ಘಟನೆ. ಆ ಪ್ರದೇಶದಲ್ಲಿ ಹುದುಗಿರುವ ಅದಿರಿನ ಪ್ರಮಾಣ ಸುಮಾರು 100 ಕೋಟಿ ಟನ್ನುಗಳೆಂದು ಅಂದಾಜು. ಕೆಂಪು ಸಮುದ್ರ ತೀರದಲ್ಲಿ ಕಾಸೀರ್ ಬಳಿಯಲ್ಲೂ ಬೆಹಾರಿಯ ಎಂಬಲ್ಲೂ ಇನ್ನೆರಡು ಗಣಿಗಳಿವೆ.

ಅಭ್ರಕ, ಕಾವಿ ಮಣ್ಣು (ಓಕರ್), ಕಾಚಶಿಲೆ (ಪ್ಯೂಮಿಸ್ ಸ್ಟೋನ್), ಕಲ್ನಾರು, ಶೈವಲಮೃತ್ತಿಕೆ (ಡಯಟೋಮೇಷಸ್ ಅರ್ತ್) ಉಪ್ಪು–ಇವು ಈಜಿಪ್ಟಿನಲ್ಲಿ ಅಲ್ಪ ಪ್ರಮಾಣದಲ್ಲಿ ದೊರಕುವ ಇತರ ಖನಿಜ ಶಿಲೆಗಳು. ಇವೇ ಅಲ್ಲದೆ ಸುಣ್ಣಕಲ್ಲು, ಬೆಣಚುಶಿಲೆ, ಮರಳುಶಿಲೆ, ಪಿಂಗಾಣಿ ಇತ್ಯಾದಿ ಕಲ್ಲುಗಣಿ ಉದ್ಯಮಗಳೂ ಗಣನೀಯ ಪ್ರಮಾಣದಲ್ಲಿ ನಡೆಯುತ್ತಿವೆ.

**ಕೈಗಾರಿಕೆ:** ಈಜಿಪ್ಟಿನ ಕೈಗಾರಿಕಾ ಬೆಳವಣಿಗೆಯ ಇತಿಹಾಸದಲ್ಲಿ ಕೆಲವು ಮುಖ್ಯ ಘಟ್ಟಗಳನ್ನು ಕಾಣಬಹುದು. ಮೊದಲ ಮಹಾಯುದ್ಧ ಪ್ರಥಮತಃ ಕೈಗಾರಿಕೋದ್ಯಮಗಳ ಸ್ಥಾಪನೆಗೆ ಉತ್ತೇಜಕವಾಗಿತ್ತು. ದಿನಬಳಕೆಯ ಹಾಗೂ ರಕ್ಷಣೆಗೆ ಸಂಬಂಧಿಸಿದ ಕೈಗಾರಿಕಾ ಸರಕುಗಳ ಅಭಾವ ಉಂಟಾದ್ದರಿಂದ ಬಟ್ಟೆ, ಆಹಾರ ಸಾಮಗ್ರಿ ಮತ್ತು ರಾಸಾಯನಿಕ ವಸ್ತುಗಳಿಗೆ ಸಂಬಂಧಪಟ್ಟ ಕೆಲವು ಕೈಗಾರಿಕೋದ್ಯಮಗಳು ಸ್ಥಾಪನೆಯಾದುವು. ಆದರೆ ಯುದ್ಧಾನಂತರ ಇವುಗಳಲ್ಲಿ ಕೆಲವು ಕ್ಷೀಣಿಸಿದುವು. ಇನ್ನೂ ಕೆಲವು ಹಾಗೆಯೇ ಮುಂದುವರಿದುವು.

1930ರಲ್ಲಿ ಈಜಿಪ್ಟ್ ದೇಶ ವಿದೇಶೀ ಪೈಪೋಟಿಯಿಂದ ರಕ್ಷಣೆ ಪಡೆಯಲು ತನ್ನದೇ ಆದ ಸುಂಕ ನೀತಿ ಅನುಸರಿಸಲು ಸಾಧ್ಯವಾದದ್ದು ಅಲ್ಲಿನ ಕೈಗಾರಿಕಾಭಿವೃದ್ಧಿಗೆ ಅನುಕೂಲವಾದಂತಾಯಿತು. ಸುಂಕರಕ್ಷಣೆಯ ಸಹಾಯದಿಂದ ಖಾಸಗಿ ಬಂಡವಾಳಸ್ಥರು ಧೈರ್ಯದಿಂದ ಕೆಲವು ಹೊಸ ಉದ್ಯಮಗಳನ್ನೂ ಆರಂಭಿಸಿದರು. ಅನಂತರ ಎರಡನೆಯ ಮಹಾಯುದ್ಧ ಕಾಲದಲ್ಲಿ ಒದಗಿದ ಅನುಕೂಲ ಸಂದರ್ಭಗಳಿಂದಾಗಿ ಕೈಗಾರಿಕಾಭಿವೃದ್ಧಿ ಗಮನಾರ್ಹವಾಗಿ ಮುನ್ನಡೆಯಿತು. ದೇಶದಲ್ಲೇ ದೊರಕುವ ಕಚ್ಚಾ ಸರಕುಗಳ ಆಧಾರದಿಂದ ನಡೆಸಬಹುದಾಗಿದ್ದ ಹತ್ತಿ ಜವಳಿ, ಸಕ್ಕರೆ ಮತ್ತು ಕೆಲವು ರಾಸಾಯನಿಕ ವಸ್ತುಗಳ ಕೈಗಾರಿಕೆಗಳು ಭದ್ರವಾಗಿ ನೆಲೆಸಿದುವು.

ಕೈಗಾರಿಕಾಭಿವೃದ್ಧಿ ಅತ್ಯಂತ ವೇಗವಾಗಿ ಆದದ್ದು 1952ರಿಂದ ಈಚೆಗೆ. ಅಂದು ಅಧಿಕಾರಕ್ಕೆ ಬಂದ ಕ್ರಾಂತಿಕಾರಿ ಆಳ್ವಿಕೆಯ ವಿಶೇಷ ಪ್ರಯತ್ನವೇ ಇದಕ್ಕೆ ಮುಖ್ಯ ಕಾರಣ. ಕೇವಲ ವ್ಯವಸಾಯದ ಮೇಲೆ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿಲ್ಲಿಸುವುದು ಶಾಶ್ವತ ಪರಿಹಾರವಾಗಲಾರದೆಂಬುದನ್ನೂ ಹೆಚ್ಚುತ್ತಿರುವ ಜನಸಂಖ್ಯೆಗೆ ಉದ್ಯೋಗ ದೊರಕಿಸಲು ಕೈಗಾರಿಕೆಗಳು ಅವಶ್ಯಕ ಎಂಬುದನ್ನೂ ದೇಶಕ್ಕೆ ಅಗತ್ಯವಾದ ಆಮದುಗಳಿಗೆ ಸಾಕಷ್ಟು ವಿದೇಶಿ ವಿನಿಮಯ ಗಳಿಸಲು ರಫ್ತು ಸರಕುಗಳ ವೈವಿಧ್ಯ ಹೆಚ್ಚಿಸಬೇಕೆಂಬುದನ್ನೂ ಅರಿತು ಈ ಹೊಸ ಸರ್ಕಾರ ಕೈಗಾರಿಕಾಭಿವೃದ್ಧಿ ಯೋಜನೆಯನ್ನು ಜಾರಿಗೆ ತಂದಿದೆ.

ಈಜಿಪ್ಟಿನಲ್ಲಿ ಕೈಗಾರಿಕಾ ವಿಸ್ತರಣೆಗೆ ಕೆಲವು ಮುಖ್ಯ ಅಡಚಣೆಗಳಿವೆ. ಇಂಧನಗಳ ಅಭಾವ ಒಂದು ಸಮಸ್ಯೆ. ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಸ್ಥಳೀಯವಾಗಿ ಉತ್ಪನ್ನವಾಗುತ್ತಿರುವ ಪೆಟ್ರೋಲಿಯಂ ಹಾಗೂ ವಿದ್ಯುಚ್ಛಕ್ತಿ ಅಗತ್ಯಕ್ಕೆ ತಕ್ಕಷ್ಟಿಲ್ಲ. ಕೈಗಾರಿಕೆಗಳು ಬಹುಮಟ್ಟಿಗೆ ಕೈರೋ, ಅಲೆಗ್ಸಾಂಡ್ರಿಯ ಮತ್ತು ಪೋರ್ಟ್ ಸೈದ್‌ಗಳಲ್ಲಿ ಕೇಂದ್ರೀಕೃತವಾಗಿವೆ.

ಹಿಂದೆಯೇ ಸ್ಥಾಪನೆಯಾಗಿದ್ದ ಕೆಲವು ಕೈಗಾರಿಕೆಗಳು ಹೆಚ್ಚು ಬೆಳೆದಿವೆ. ಹತ್ತಿ ಜವಳಿ ತಯಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸಿರುವುದೇ ಅಲ್ಲದೆ ರಫ್ತಿಗೋಸ್ಕರ ಉತ್ತಮ ದರ್ಜೆಯ ಬಟ್ಟೆಯನ್ನು ಈಚೆಗೆ ತಯಾರಿಸಲಾಗುತ್ತಿದೆ. ರೇಷ್ಮೆ ಕೈಗಾರಿಕೆಗೆ ಉತ್ತಮ ಭವಿಷ್ಯವಿಲ್ಲ. ಉಣ್ಣೆ, ರೇಯಾನ್ ಮತ್ತು ಲಿನನ್ ತಯಾರಿಕೆಯ ಬೆಳವಣಿಗೆಗೆ ಅವಕಾಶವುಂಟು. ಕೆಲವು ದಶಕಗಳ ಹಿಂದೆಯೇ ಸ್ಥಾಪಿತವಾದ ಈಜಿಪ್ಟಿನ ಸಿಮೆಂಟ್ ಕೈಗಾರಿಕೆ ತೀವ್ರ ಪ್ರಗತಿ ಸಾಧಿಸಿದೆ; ದೇಶಕ್ಕೆ ಆವಶ್ಯಕವಾಗುವಷ್ಟು ಸಿಮೆಂಟು ಒದಗಿಸುತ್ತಿರುವುದೇ ಅಲ್ಲದೆ ಅಕ್ಕಪಕ್ಕದ ರಾಷ್ಟ್ರಗಳಿಗೆ ಸ್ವಲ್ಪ ಪ್ರಮಾಣದ ರಫ್ತನ್ನೂ ಮಾಡುತ್ತಿದೆ. ಸಕ್ಕರೆ, ಮದ್ಯಗಳು, ಸಿಗರೇಟ್, ಹತ್ತಿಯ ಬೀಜದ ಎಣ್ಣೆ, ಕಾಗದ, ಗಾಜಿನ ಸಾಮಾನು, ಚರ್ಮದ ಸರಕುಗಳು, ಇತ್ಯಾದಿ ಕೈಗಾರಿಕೆಗಳು ಅಲ್ಪ ಪ್ರಮಾಣದ ಉದ್ಯೋಗಗಳಾಗಿ ವಿಸ್ತಾರವಾಗಿ ಹರಡಿರುವುದರಿಂದ ಅನೇಕ ಜನರಿಗೆ ಉದ್ಯೋಗ ಹಾಗೂ ವರಮಾನದ ಅವಕಾಶವುಂಟು. ಆಮದುಗಳ ಮೇಲಿನ ಅವಲಂಬನೆ ಕಡಿಮೆ ಮಾಡುವ ದೃಷ್ಟಿಯಿಂದ ರೇಡಿಯೊ, ಶೀತಕ ಯಂತ್ರಗಳು ಮತ್ತು ಇತರ ಲಘು ಎಂಜಿನಿಯರಿಂಗ್ ಸರಕುಗಳು ತಯಾರಿಕೆಯ ಪ್ರಯತ್ನ ನಡೆದಿದೆ. ಅರಬ್ಬೀ ಭಾಷೆಯ ಚಲನ ಚಿತ್ರಗಳ ತಯಾರಿಕೆ, ಆಸ್ವಾನ್ ಹತ್ತಿರದ ಗೊಬ್ಬರದ ಕಾರ್ಖಾನೆ ಮತ್ತು ಕೈರೋ ಸಮೀಪದ ಪೆಲ್ವಾನ್ ಬಳಿ ಸ್ಥಾಪನೆಯಾಗಿರುವ ಉಕ್ಕಿನ ಕಾರ್ಖಾನೆ ಇವು ಇತ್ತೀಚೆಗೆ ಬೆಳೆಯುತ್ತಿರುವ ಭಾರಿ ಕೈಗಾರಿಕೆಗಳು. 1952–61ರ ಅವಧಿಯಲ್ಲಿ ಈಜಿಪ್ಟಿನ ಕೈಗಾರಿಕೋತ್ಪನ್ನ ದ್ವಿಗುಣವಾಯಿತು. ಆದರೂ ಒಟ್ಟಿನಲ್ಲಿ ಈಜಿಪ್ಟಿನ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕೆಗಿಂತಲೂ ವ್ಯವಸಾಯವೇ ಇನ್ನೂ ಹೆಚ್ಚು ಪ್ರಧಾನ.

**ಸಾರಿಗೆ:** ಮರಳುಕಾಡಿನಲ್ಲಿ ಒಂಟೆ ಒಂದು ಮುಖ್ಯ ಸಾರಿಗೆ ಸಾಧನ. ಇತರ ಭಾಗಗಳಲ್ಲಿ ಉತ್ತಮವಾದ ಆಧುನಿಕ ಸಾರಿಗೆ ಸಂಪರ್ಕ ವ್ಯವಸ್ಥೆ ರೂಪುಗೊಂಡಿದೆ. ಪ್ರತಿ ಚದರ ಕಿಲೋಮೀಟರಿಗೆ ಸು. 14 ಕಿಮೀ.ಗಳ ರೈಲುಮಾರ್ಗವಿದೆ. ಈಜಿಪ್ಟಿನ ರೈಲು ಮಾರ್ಗಗಳು ಪೂರ್ಣಾಭಿವೃದ್ಧಿ ಹೊಂದಿವೆ ಎಂದು ಹೇಳಬಹುದು. 19ನೆಯ ಶತಮಾನದಲ್ಲಿಯೇ ಆರಂಭವಾದ ರೈಲುಮಾರ್ಗ ನಿರ್ಮಾಣ ಕಾರ್ಯ 1914–18ರಲ್ಲೂ 1930ರ ದಶಕದಲ್ಲೂ ಭರದಿಂದ ಸಾಗಿತು. ಸ್ಟಾಂಡರ್ಡ್ ಗೇಜಿನ ಮುಖ್ಯ ರೈಲ್ವೆಗಳನ್ನು ಸರ್ಕಾರವೂ ಲಘು ರೈಲ್ವೆ ಮಾರ್ಗಗಳನ್ನು ಖಾಸಗಿ ಕಂಪನಿಗಳೂ ನಿರ್ಮಿಸಿದುವು. ಇದರಿಂದಾಗಿ, ರೈಲ್ವೆ ಮಾರ್ಗಗಳು ನೈಲ್ ಕಣಿವೆಯ ಎಲ್ಲ ಮುಖ್ಯ ಭಾಗಗಳಿಗೂ ಸುಲಭ ಸಂಪರ್ಕ ಕಲ್ಪಿಸಿವೆ.

ಅತಿಮುಖ್ಯ ಕೈಗಾರಿಕಾ ಹಾಗೂ ವ್ಯಾಪಾರ ಕೇಂದ್ರವಾದ ಕೈರೋ ಸಾರಿಗೆ ಕೇಂದ್ರ ಅಂತರರಾಷ್ಟ್ರೀಯ ವಿಮಾನ ಮಾರ್ಗಗಳಿಗೂ ಒಂದು ಮುಖ್ಯ ನಿಲ್ದಾಣ.

ಈಜಿಪ್ಟಿನ ಭೌಗೋಳಿಕ ಹಾಗೂ ನದಿ ರಚನೆಯಿಂದ ಆಂತರಿಕ ಜಲಮಾರ್ಗ ಸಾರಿಗೆ ವ್ಯವಸ್ಥೆಗೆ ಅನುಕೂಲವಾಗಿದೆ. ಈ ನದಿಯನ್ನು ಪ್ರಧಾನವಾಗಿ ನೀರಾವರಿಗೆ ರೂಢಿಸಿಕೊಂಡಿರುವುದರಿಂದ ಜಲಮಾರ್ಗ ಸಾಗಣೆ ಸಾಧ್ಯತೆಗಳನ್ನು ಪೂರ್ತಿಯಾಗಿ ಬೆಳೆಸಿಕೊಂಡಂತಾಗಿಲ್ಲ. ಅದರೂ ನದಿಗಳ ಮೂಲಕ ನಡೆಯುತ್ತಿರುವ ಗಣನೀಯ ಸರಕು ಸಾಗಣೆ ಪ್ರಮಾಣ ಮೇಲ್ಭಾಗದ ಈಜಿಪ್ಟಿನಿಂದ ಅಲೆಗ್ಸಾಂಡ್ರಿಯಕ್ಕೆ ಸಾಗಿಸುವ ಬಹುಭಾಗ ಹತ್ತಿಯೂ ಕೆಳ ಭಾಗದ ಈಜಿಪ್ಟಿನ ಈರುಳ್ಳಿಯೂ ಸಾಗುವುದು ಹೆಚ್ಚಾಗಿ ದೋಣಿಗಳ ಮೂಲಕವೇ.

ಅಂತಾರಾಷ್ಟ್ರೀಯ ನೌಕಾ ಸಂಚಾರ ವ್ಯವಸ್ಥೆಯಲ್ಲಿ ಸೂಯೆಜ್ ಕಾಲುವೆಗೆ ಇರುವ ಪ್ರಾಮುಖ್ಯದಿಂದ ಈಜಿಪ್ಟಿಗೆ ವಿಶೇಷ ಸ್ಥಾನ. ಫರ್ಡಿನಾ ಡ ಲೆಸೆಪ್ಸ್ ಎಂಬ ಫ್ರೆಂಚ್ ಎಂಜಿನಿಯರನ ಸಹಾಯದಿಂದ 1869ರಲ್ಲಿ ಸೂಯೆಜ್ ಕಾಲುವೆ ನಿರ್ಮಾಣವಾದದ್ದು ಪ್ರಪಂಚ ನೌಕಾಯಾನ ಅಭಿವೃದ್ಧಿಯಲ್ಲಿ ಮುಖ್ಯ ಘಟನೆ. ಇದರಿಂದ ಯುರೋಪ್ ಮತ್ತು ಭಾರತಗಳ ನಡುವೆ ನೇರ ಸಂಪರ್ಕ ಮಾರ್ಗ ಸಾಧ್ಯವಾಯಿತು. 1956ರಲ್ಲಿ ಸೂಯೆಜ್ ಕಾಲುವೆ ರಾಷ್ಟ್ರೀಕರಣ ರಾಜಕೀಯವಾಗಿಯೂ ಆರ್ಥಿಕವಾಗಿಯೂ ಒಂದು ಮಹತ್ತ್ವದ ಘಟನೆ. ಕಂಪನಿಯ ಮಾಲೀಕರಿಗೆ ಸೂಕ್ತ ಪರಿಹಾರ ನೀಡಿದ ಈ ಕಡಲ್ಗಾಲುವೆಯನ್ನು ನೋಡಿಕೊಳ್ಳುವ ಭಾರವನ್ನು ಈಜಿಪ್ಟ್ ಸರ್ಕಾರವೇ ವಹಿಸಿಕೊಂಡಿತು. ಪೋರ್ಟ್ ಸೈದ್ ಮತ್ತು ಪೋರ್ಟ್ ಸೂಯೆಜ್‌ಗಳ ನಡುವೆ ಕಡಲ್ಗಾಲುವೆಯಲ್ಲಿ ಹೋಗುವ ಅನೇಕ ರಾಷ್ಟ್ರಗಳ ನೌಕೆಗಳಿಗೆ ಅವಶ್ಯಕ ಸೇವೆಗಳನ್ನು ಈಜಿಪ್ಟ್ ಸರ್ಕಾರ ದಕ್ಷತೆಯಿಂದ ಒದಗಿಸುತ್ತಿದೆ. ಇದರಿಂದ ಅದಕ್ಕೆ ಲಭಿಸುತ್ತಿರುವ ನಿವ್ವಳ ವರಮಾನ ವರ್ಷಕ್ಕೆ ಸು. 10 ಕೋಟಿ ಡಾಲರ್. ಸೂಯೆಜ್ ಮತ್ತು ನೈಲ್ ಇವೆರಡೂ ಈಜಿಪ್ಟಿನ ಆರ್ಥಿಕ ವ್ಯವಸ್ಥೆಯ ಮೂಲಾಧಾರ.

(ಎ.ಪಿ.ಎಸ್.)

**ಈಜಿಪ್ಟಿನ ಇತಿಹಾಸ:** ಸು. 60 ಶತಮಾನಗಳ ಹಿಂದೆ ವಿಶಿಷ್ಟ ಸಂಸ್ಕೃತಿಯೊಂದನ್ನು ಕಟ್ಟಿ ಬೆಳೆಸಿ, ಹಲ ಎಡರುತೊಡರುಗಳನ್ನು ದಾಟಿ ನಡೆದು ಏರಿಳಿದು ಉಳಿದಿರುವ ಈಜಿಪ್ಟಿನ ಇತಿಹಾಸ ವರ್ಣಮಯವಾದದ್ದು. ಈ ದೀರ್ಘಕಾಲದ ಮೊದಲ ನಾಲ್ಕು ಸಾವಿರ ವರ್ಷದಲ್ಲಿ ನೈಲ್ ನದಿಯ ದಂಡೆಯ ಮೇಲೆ ಮಾನವನ ನಾಗರಿಕತೆ ಬೆಳೆಯಿತೆನ್ನಬಹುದು. ಪರ್ಷಿಯನ್ನರ ಆಗಮನದಿಂದ (ಪ್ರ.ಶ.ಪೂ. 525) ಮುಂದೆ 20 ಶತಮಾನ ಕಾಲ ಇದನ್ನು ಪರಕೀಯರಾಳಿದರು. ಅನಂತರ ಕ್ರಮವಾಗಿ ಗ್ರೀಕ್, ರೋಮನ್, ಅರಬ್, ತುರ್ಕಿ, ಫ್ರೆಂಚ್, ಬ್ರಿಟಿಷ್ ಜನರು ಈ ದೇಶವನ್ನಾಳಿದರು. ಆಮೇಲೆ ಪರಕೀಯರ ನೊಗ ಕಳಚಿಕೊಂಡರೂ 1955ರ ಅನಂತರವೇ ಈ ದೇಶ ಹೊಸ ಹಾದಿಯಲ್ಲಿ ಹೆಜ್ಜೆ ಹಾಕಲಾರಂಭಿಸಿದ್ದು.

**ರಾಜವಂಶ ಪೂರ್ವಕಾಲ:** ಪ್ರ.ಶ.ಪೂ. 31ನೆಯ ಶತಮಾನಕ್ಕಿಂತ ಹಿಂದಿನ ಕಾಲವನ್ನು ರಾಜವಂಶಪೂರ್ವ (ಪ್ರೀಡೈನಾಸ್ಟಿಕ್) ಕಾಲವೆಂದು ಕರೆಯುವ ರೂಢಿ. ಈ ಅವಧಿಯಲ್ಲಿ ತ್ವರಿತ ಪ್ರಗತಿಯಾಯಿತು. ಪ್ರ.ಶ.ಪೂ. 6000ದ ಕಾಲಕ್ಕೇ ಇಲ್ಲಿನ ಜನ ಯವೆ (ಬಾರ್ಲಿ) ಧಾನ್ಯ ಬೆಳೆಯುತ್ತಿದ್ದರು; ಪ್ರ.ಶ.ಪೂ. 40ನೆಯ ಶತಮಾನದಲ್ಲಿ ತಾಮ್ರ ಬಳಸುತ್ತಿದ್ದರು. ನಯಗೊಳಿಸಿದ ಕಪ್ಪು ಮತ್ತು ಕೆಂಪು ಮೃತ್ಪಾತ್ರೆಗಳ ತಯಾರಿಕೆಯಲ್ಲಿ ಇವರು ನಿಪುಣರು. ವ್ಯಾಪಕ ನೀರಾವರಿ ವ್ಯವಸ್ಥೆ ಆಗ ಇದ್ದದ್ದು ಗಮನಾರ್ಹ. ಜಂಬುಕಾಗದ (ಪಪೈರಸ್), ಶಾಯಿ, ಮುಂತಾದ ಬರವಣಿಗೆಯ ಸಾಧನಗಳನ್ನು ಇವರು ಬಲ್ಲವರಾಗಿದ್ದರು. ವ್ಯಾಪಕ ನೀರಾವರಿಯೇ ಮುಂತಾದ ಕಾರ್ಯಗಳು ನಡೆಯಬೇಕಾದರೆ ಇಡೀ ದೇಶ ಒಂದು ಆಡಳಿತಕ್ಕೊಳಪಟ್ಟಿರಬೇಕಾದ್ದು ಅಗತ್ಯವಾಗಿತ್ತು. ಆದ್ದರಿಂದ ಹಿಂದಿನಿಂದಲೂ ಬಂದಿದ್ದ ಸಣ್ಣ ರಾಜ್ಯಗಳೆಲ್ಲ ಒಟ್ಟುಗೂಡಿ ಉತ್ತರ ಈಜಿಪ್ಟ್, ದಕ್ಷಿಣ ಈಜಿಪ್ಟ್ ಎಂಬ ಎರಡು ದೊಡ್ಡ ರಾಜ್ಯಗಳಾದುವು. ಪ್ರ.ಶ.ಪೂ. ಸು. 3100ರಲ್ಲಿ ಮೀನೀಸ್ ಎಂಬ ದಕ್ಷಿಣ ಈಜಿಪ್ಟ್ ದೊರೆ ಈ ಇರಡು ರಾಜ್ಯಗಳಿಗೂ ರಾಜನಾದ. ಆಗಲೇ ಇಡೀ ಈಜಿಪ್ಟಿನ ರಾಜಮನೆತನದ ಪ್ರಾರಂಭ. ಮೆಂಫಿಸ್ ಆಗಿನ ರಾಜಧಾನಿ.

ಆ ಕಾಲದಲ್ಲಿ ನಾಗರಿಕತೆ ಬೆಳೆಯಿತು. ಹಗಲು ರಾತ್ರಿಗಳ ಬೆಳಕು ಕತ್ತಲೆಯಾಟವನ್ನೂ ನೈಲ್ ನದಿಯ ಉಬ್ಬರವಿಳಿತವನ್ನೂ ಮಾನವನ ಹುಟ್ಟು ಸಾವುಗಳನ್ನೂ ಗಮನಿಸಿದ ಈಜಿಪ್ಷಿಯನ್ನರು ಜೀವನರಹಸ್ಯದ ಕಡೆಗೆ ಚಿಂತೆ ಹರಿಸಿದರು. ಸಾವಿನಿಂದ ಮಾನವನಿಗೆ ನಾಶವಿಲ್ಲ. ಅವನು ಎಂದಾದರೂ ಎದ್ದು ಬಂದಾನು ಎಂದು ಅವರ ಭಯ, ನಂಬಿಕೆ. ಸತ್ತಮೇಲೂ ಅವನ ಜೀವನ ಮುಂದುವರಿಯುವುದಕ್ಕೆ ಆವಶ್ಯಕವಾದ ಸಾಧನ ಸಲಕರಣೆಗಳನ್ನೆಲ್ಲ ಅವನ ಸಮಾಧಿಯಲ್ಲೇ ಒದಗಿಸಲು ಏರ್ಪಾಡಾಯಿತು. ಇವನ್ನೆಲ್ಲ ಒಳಗೊಂಡ ದೊಡ್ಡ ಗೋರಿಗಳ ನಿರ್ಮಾಣ ಆರಂಭವಾದದ್ದು ಹೀಗೆ. ದೊರೆಗಳು ಸತ್ತಾಗಲಂತೂ ಅವರ ಇಹವೈಭವ ಮುಂದುವರಿಯುವುದಕ್ಕೆ ಬೇಕಾದ್ದೆಲ್ಲ ಅವರಿಗೆ ಆ ಸಮಾಧಿಯಲ್ಲೇ ಸಿದ್ಧ, ಸಜ್ಜು. ಹೀಗೆ ಅಪಾರ ಸಂಪತ್ತನ್ನು ನೆಲದೊಳಗೆ ಹುದುಗಿದಾಗ ಕಳ್ಳಕಾಕರಿಂದ ಅವನ್ನು ರಕ್ಷಿಸುವುದಕ್ಕೆ ಬೃಹದಾಕಾರದ ಪಿರಮಿಡ್ಡುಗಳೆಂಬ ಕಟ್ಟಡಗಳೆದ್ದುವು. ಚಿತ್ರಲಿಪಿಯನ್ನೂ ಇವರು ಕಂಡುಹಿಡಿದರು. ಈ ಪಿರಮಿಡ್ಡುಗಳಲ್ಲಿ ದೊರಕಿದ ವಸ್ತುಗಳಿಂದಲೂ ಈ ಚಿತ್ರಲಿಪಿಯಿಂದಲೂ ಐದಾರು ಸಾವಿರ ವರ್ಷಗಳ ಹಿಂದಿನ ಚರಿತ್ರೆಯನ್ನರಿಯುವುದು ಸಾಧ್ಯ. ಅವರ ಕಲಾಪ್ರೌಢಿಮೆ ಎಷ್ಟು ಉನ್ನತಮಟ್ಟದ್ದೆಂಬುದನ್ನು ತಿಳಿಯಲು ಇವೆಲ್ಲವೂ ಸಹಾಯಕ. ಕಲ್ಲಿನ ಬೋಗುಣಿ, ಕುಡಿಯುವ ಪಾತ್ರೆ, ಕುರ್ಚಿಯೇ ಮೊದಲಾದ ಪೀಠೋಪಕರಣ, ದಂತದಲ್ಲಿ ತಯಾರಿಸಿದ ಪದಾರ್ಥ– ಇವುಗಳೆಲ್ಲಲ್ಲ ಕಂಡುಬರುವ ಕಲಾಪ್ರೌಢಿಮೆಯ ಮಟ್ಟ ಬಲು ಉನ್ನತ. ಕಳ್ಳಕಾಕರ ಕಣ್ಣಿಗೆ ಬೀಳದೆ ಅಚ್ಚಳಿಯದಿದ್ದ ಸಮಾಧಿಯೊಂದು 1922ರಲ್ಲಿ ಸಂಶೋಧಕರ ಕಣ್ಣಿಗೆ ಬಿತ್ತು. ಅದು ಟೂಟಂಕ್ ಅಮೆಲಿನ್ ಎಂಬ ಅಪ್ರಸಿದ್ಧ ರಾಜನ ಸಮಾಧಿ. ಅಲ್ಲಿ ಆತನ ಪರಲೋಕದ ಭೋಗಕ್ಕಾಗಿ ಶೇಖರವಾದ ನಿಧಿಯನ್ನು ಯಾರೂ ಕನಸಿನಲ್ಲೂ ಕಂಡಿರಲಾರರು ಎಂಬುದು ಈ ಬಗ್ಗೆ ಒಬ್ಬರ ವರ್ಣನೆ. ಒಂದರೊಳಗೊಂದರಂತೆ ಏಳೂ ಸಂಪುಟಗಳೊಳಗೆ ಕೊಂಚವೂ ಕೆಡದಂತೆ ರಾಸಾಯನಿಕ ವಸ್ತುಗಳಿಂದ ರಕ್ಷಿಸಿಟ್ಟ ಒಳಸಂಪುಟಕ್ಕೆ ಕಾಲು ಅಂಗುಲ ಗಾತ್ರದ ಚಿನ್ನದ ತಗಡು. ಭೋಗಸಾಮಗ್ರಿಗಳ ಶಿಲ್ಪಕಲೆಯಲ್ಲೂ ಅವರು ಬಹುಮಟ್ಟಿಗೆ ಮುಂದುವರಿದಿದ್ದರೆಂಬುದನ್ನು, 14.6 ಮೀ. ಉದ್ದ 21ಮೀ. ಎತ್ತರದ ಸಿಂಹಶರೀರ ಮತ್ತು ಮನುಷ್ಯ ರುಂಡ ಹೊಂದಿರುವ ಸ್ಫಿಂಕ್ಸ್ ಎಂಬ ಬೃಹತ್ಪ್ರತಿಮೆಗಳಲ್ಲೂ ಇತರ ಶಿಲಾ ಮತ್ತು ಲೋಹಪ್ರತಿಮೆಗಳಲ್ಲೂ ಕಾಣಬಹುದು. ಓಬೆಲಿಸ್ಕ್ ಎಂಬ ನಿಲುಗಂಬಗಳ ಎತ್ತರ 18–21 ಮೀ. ಇವುಗಳ ಮೇಲೆ ಅಂದವಾಗಿ ಕೆತ್ತಿದ ಲೇಖನಗಳಿವೆ. ಇವುಗಳ ತುದಿಗೆ ಚಿನ್ನದ ಮುಲಾಮು. ಇದಕ್ಕೆಂದೇ ನಾನು ಚಿನ್ನವನ್ನು ಧಾನ್ಯದಂತೆ ಅಳೆದಳೆದು ಸುರಿದಿದ್ದೇನೆ–ಎಂದು ಹೇಳುವ ಹಾಟ್ಷೆಪ್ಸನ್ ರಾಣಿಯ ಶಿಲಾಶಾಸನವೊಂದು ಇಲ್ಲುಂಟು.

**ಪ್ರಾಚೀನ ಚರಿತ್ರಕಾಲ:** ಪ್ರ.ಶ.ಪೂ. ಸು. 3100–2200ರ ವರೆಗೆ ಪ್ರಾಚೀನ ಚರಿತ್ರಕಾಲ. ಈ ಕಾಲದಲ್ಲಿ ಈಜಿಪ್ಟಿನ ಸಾಂಸ್ಕೃತಿಕ ಪ್ರಗತಿ ಅವ್ಯಾಹತ. ಸು. 21–15ನೆಯ ಶತಮಾನದವರೆಗೆ ಮಧ್ಯಮಕಾಲ. ಕಾಲಕ್ಕೆ ಮುಂಚೆಯೇ ರಾಜ್ಯದ ಅವನತಿ ಪ್ರಾರಂಭವಾಗಿತ್ತು. ಪ್ರಾಂತ್ಯಾಧಿಪತಿಗಳು ಸ್ವತಂತ್ರರಾಗತೊಡಗಿದ್ದರು. ಅವರವರಲ್ಲಿ ಜಗಳ ಹುಟ್ಟಿಕೊಂಡುವು. ಈ ಪರಿಸ್ಥಿತಿಯಲ್ಲಿ ಥೀಬ್ಸ್ ರಾಜ್ಯದ ದೊರೆ ಸಮಗ್ರ ರಾಜ್ಯವನ್ನು ವಶಪಡಿಸಿಕೊಂಡು ಅಖಂಡ ಈಜಿಪ್ಟಿನ ರಾಜನಾದ. ಥೀಬ್ಸ್ ನಗರ ರಾಜಧಾನಿಯಾಯಿತು. ದಕ್ಷಿಣಕ್ಕೂ ಪೂರ್ವಕ್ಕೂ ರಾಜ್ಯ ವಿಸ್ತರಿಸುವ ಪ್ರಯತ್ನ ನಡೆಯಿತು. ಸಿರಿಯ, ಪ್ಯಾಲೆಸ್ಟೈನ್, ಕ್ರೀಟ್, ಸೈಪ್ರಸ್ ಮುಂತಾದ ದೇಶಗಳೊಡನೆ ವ್ಯಾಪಾರ ಸಂಪರ್ಕ ಬೆಳೆಯಿತು. ಈಜಿಪ್ಷಿಯನ್ ಕಲೆಯ ಸೂತ್ರಗಳೂ ವಿಧಿನಿಯಮಗಳೂ ಖಚಿತಗೊಂಡು ಅಭಿಜಾತ ಈಜಿಪ್ಷಿಯನ್ ಕಲೆ ರೂಪುತಾಳಿತು. ಕೃಷಿರಂಗದಲ್ಲಿ ಗಣನೀಯ ಪ್ರಗತಿ ಸಾಧಿಸಿದ್ದು ಈ ಕಾಲದಲ್ಲೇ.

ಪ್ರ.ಶ.ಪೂ. ಸು. 18ನೆಯ ಶತಮಾನದಲ್ಲಿ ಹಿಕ್ಸಾಸ್ ಎಂಬ ಜನ ಈಜಿಪ್ಟಿಗೆ ನುಗ್ಗಿ ದೇಶ ಸ್ವಾಧೀನಪಡಿಸಿಕೊಂಡರು. ಅವರು ನುರಿತ ಯೋಧರು. ಯುದ್ಧದಲ್ಲಿ ರಥಗಳನ್ನೂ ಕುದುರೆಗಳನ್ನೂ ಉಪಯೋಗಿಸುತ್ತಿದ್ದರು. ಅವರು ಬಂದ ಸ್ವಲ್ಪ ಕಾಲದ ಮೇಲೆ ಅವರನ್ನು ಹೊಡೆದಟ್ಟುವುದಕ್ಕೆ ಚಳವಳಿ ಪ್ರಾರಂಭವಾಯಿತು. ಕೊನೆಗೂ ಅವರನ್ನು ಹೊರಗೋಡಿಸಲು ಸಾಧ್ಯವಾದದ್ದು ಪ್ರ.ಶ.ಪೂ. 15ನೆಯ ಶತಮಾನದಲ್ಲಿ ಈಜಿಪ್ಟಿನ 18ನೆಯ ರಾಜಸಂತತಿಯ ಆಳ್ವಿಕೆ ಆಗ ಪ್ರಾರಂಭ. ಈಜಿಪ್ಟ್ ಸಾಮ್ರಾಜ್ಯವಾಗಿ ಬೆಳೆಯಿತು.

**ಸುವರ್ಣಯುಗ:** ಹೊಸ ರಾಜ್ಯಗಳನ್ನು ಗೆದ್ದು ಈಜಿಪ್ಟ್ ದೊರೆಗಳು (ಫೇರೋಗಳು) ಸಾಮ್ರಾಜ್ಯ ಸ್ಥಾಪಿಸಿದ್ದು ಪ್ರ.ಶ.ಪೂ. 14ನೆಯ ಶತಮಾನದ ಪೂರ್ವಾರ್ಧದಲ್ಲಿ ಆಳಿದ ಮೂರನೆಯ ಟಿಟ್‌ಮೋಸನ ಕಾಲದಲ್ಲಿ. ಇವನ ಹಿಂದಿನ ದೊರೆಗಳೂ ಆ ಪ್ರಯತ್ನ ನಡೆಸಿದ್ದರು. ಆದರೆ ಅದು ಫಲಕಾರಿಯಾಗಿರಲಿಲ್ಲ. ಈತ 20 ವರ್ಷ ಕಾಲ ಯುದ್ಧ ಮಾಡಿ ಕೊನೆಗೆ ಸಿರಿಯ ರಾಜ್ಯ ವಶಪಡಿಸಿಕೊಂಡ. ದೂರದೇಶಗಳಿಗೂ ಇವನ ಖ್ಯಾತಿ ಹಬ್ಬಿತು. ಏಷ್ಯಮೈನರಿನ ಹಿಟ್ಟೈಟರು ಈತನ ಸ್ನೇಹಕ್ಕೆ ಕಾತರರಾಗಿದ್ದರು. ಟಿಟ್‌ಮೋಸನ ಆಡಳಿತವ್ಯವಸ್ಥೆ ಉಚ್ಚಮಟ್ಟದ್ದು. ಈ ದೊರೆಗಳ ಪ್ರಭಾವ ನಾನಾ ದೇಶಗಳಿಗೆ ಹರಡಿತು; ಅದು ಪ್ರ.ಶ.ಪೂ. 1411–1375ರ ವರೆಗೆ ಆಳಿದ ಮೂರನೆಯ ಅಮೆನ್‌ಹೋತೆಪ್‌ನ ಕಾಲದಲ್ಲಿ ಉಚ್ಚಮಟ್ಟಕ್ಕೇರಿತು. ಈತನ ಉತ್ತಮ ಆಡಳಿತ ವ್ಯವಸ್ಥೆಯ ಪರಿಣಾಮವಾಗಿ ಸಾಮ್ರಾಜ್ಯದಲ್ಲಿ ಶಾಂತಿಸಂತೃಪ್ತಿಗಳು ನೆಲೆಸಿದವು. ಈಜಿಪ್ಟಿನ ಇತಿಹಾಸದಲ್ಲಿ ಈತನ ಆಳ್ವಿಕೆಯ ಕಾಲವೇ ಸುವರ್ಣಯುಗ. ಈಜಿಪ್ಟಿನ ಸಾಮ್ರಾಟ ಆಗಿನ ಪ್ರಪಂಚಕ್ಕೇ ಹಿರಿಯ ವ್ಯಕ್ತಿಯಾಗಿದ್ದ. ರಾಜಧಾನಿಯಾದ ಥೀಬ್ಸ್ ನಗರಕ್ಕೆ ಕಪ್ಪಕಾಣಿಕೆಗಳು ಪ್ರವಾಹದಂತೆ ಬರುತ್ತಿದ್ದುವು. ದೇವಸ್ಥಾನಗಳು ಅನರ್ಘ್ಯ ರತ್ನಾಭರಣಗಳಿಂದ ಪ್ರಜ್ವಲಿಸುತ್ತಿದ್ದುವು, ಕಂಚಿನ ಬಾಗಿಲುಗಳ ಹಿಂದೆ ಚಿನ್ನದ ರಾಶಿ. ಬ್ಯಾಬಿಲಾನ್, ಅಸೀರಿಯ, ಮಿಟಾನಿಗಳನ್ನೊಳಗೊಂಡ ಆಗಿನ ನಾಗರಿಕ ಪ್ರಪಂಚವೆಲ್ಲ ಮೂರನೆಯ ಅಮೆನ್‌ಹೋತೆಪ್‌ನ ಅನುಗ್ರಹಕ್ಕಾಗಿ ಕಾದಿರುತ್ತಿತ್ತು. ಈತನ ಸಮರನೌಕೆಗಳು ಮೆಡಿಟರೇನಿಯನ್ ಸಮುದ್ರದಲ್ಲಿ ಶಾಂತಿರಕ್ಷಣೆ ಮಾಡುತ್ತಿದ್ದುವು; ವಾಣಿಜ್ಯ ನೌಕೆಗಳು ಥೀಬ್ಸ್ ನಗರದ ಅರಮನೆಗಳಿಗೆ, ದೇವಾಲಯಗಳಿಗೆ ಕಲಾಪೂರ್ಣ ವಸ್ತುಗಳನ್ನು ಸಂಗ್ರಹಿಸುವುದಕ್ಕಾಗಿ ನಾನಾ ಕಡೆ ತಿರುಗುತ್ತಿದ್ದುವು. ಇದು ಡಾಸ್ಮೆ ಎಂಬ ಇತಿಹಾಸಕಾರನ ವರ್ಣನೆ.

ಅಮೆನ್‌ಹೋತೆಪ್‌ನ ಮರಣಾನಂತರ ಈಜಿಪ್ಟಿನ ವೈಭವ ಬಹುಕಾಲ ನಿಲ್ಲಲಿಲ್ಲ. ಆತನ ಮಗ ನಾಲ್ಕನೆಯ ಆಮೆನ್ ಹೋತೆಪ್ ಸಾಮ್ರಾಜ್ಯದ ರಕ್ಷಣೆಯನ್ನು ಕಡೆಗಣಿಸಿ ಮತ ವಿಷಯಗಳಲ್ಲಿ ಆಸಕ್ತಿ ವಹಿಸಿದ; ಹಿಂದಿನ ಧರ್ಮ ಸಂಪ್ರದಾಯಗಳನ್ನು ಬುಡಮೇಲು ಮಾಡಲೆತ್ನಿಸಿದ. ಎಲ್ಲರೂ ಸೂರ್ಯಾರಾಧನೆ ಮಾಡಬೇಕು; ಇತರ ದೇವತೆಗಳ ಪೂಜೆ ತ್ಯಜಿಸಬೇಕು–ಎಂದು ಆತನ ಆಜ್ಞೆ. ಆತ ತನ್ನ ಹೆಸರನ್ನೇ ಬದಲಾಯಿಸಿಕೊಂಡು ಅಕ್ನಾಟನ್ ಎಂಬ ಹೆಸರು ಧರಿಸಿದ. ರಾಜಧಾನಿಯನ್ನು ಥೀಬ್ಸ್‌ನಿಂದ ಅಮನಾನ್ ಬಳಿಯಲ್ಲಿ ಹೊಸದಾಗಿ ಕಟ್ಟಿಸಿದ ನಗರಕ್ಕೆ ಬದಲಿಸಿದ.

ಅಕ್ಬರನ ದೀನ್ ಇಲಾಹಿ ಮತಕ್ಕಾದ ಗತಿಯೇ ಈತನ ಹೊಸ ಧರ್ಮಕ್ಕೂ ಆಯಿತು. ದೊರೆ ಇಂಥ ಸುಧಾರಣೆಗಳ ಪ್ರಯೋಗ ನಡೆಸುತ್ತಿದ್ದಾಗ ಹಿಟ್ಟೈಟರು ಉತ್ತರ ಪ್ರಾಂತ್ಯಗಳ ಮೇಲೆ ದಾಳಿ ನಡೆಸಿದರು. ಈತನಿಂದಾಗಲಿ ಈತನ ತರುವಾಯ ಆಳಿದ ದೊರೆಗಳಿಂದಾಗಲಿ ಹಿಟ್ಟೈಟರನ್ನು ತಡೆಗಟ್ಟುವುದು ಸಾಧ್ಯವಾಗಲಿಲ್ಲ. ವೈಭವದಿಂದ, ದರ್ಪದಿಂದ ಮೆರೆದ ಸಾಮ್ರಾಜ್ಯ ಬಲಗುಂದಿತು. ಪ್ರ.ಶ.ಪೂ. 1292–25ರ ವರೆಗೆ ಆಳಿದ ಎರಡನೆಯ ರ್‍ಯಾಮ್ಸೆಸ್ ಸಿರಿಯದ ಉತ್ತರ ಪ್ರಾಂತ್ಯಗಳನ್ನು ಹಿಟ್ಟೈಟರಿಗೆ ಬಿಟ್ಟುಕೊಡಬೇಕಾಯಿತು. 13ನೆಯ ಶತಮಾನದ ಅಂತ್ಯಕಾಲಕ್ಕೆ ಉತ್ತರದಿಂದ ಫಿಲಿಸ್ಟೈನರು ಸಾಮ್ರಾಜ್ಯದೊಳಕ್ಕೆ ನುಗ್ಗತೊಡಗಿದರು; ಪಶ್ಚಿಮದಿಂದ ಲಿಬಿಯನ್ನರ ಹಾವಳಿ ಪ್ರಾರಂಭವಾಯಿತು. ಈ ದಾಳಿಗಳನ್ನೆದುರಿಸಲು ಅಪಾರ ಹಣ ಖರ್ಚಾಗಿ, 12ನೆಯ ಶತಮಾನ ಮುಗಿಯುವ ಕಾಲಕ್ಕೆ ರಾಜ್ಯದ ಆರ್ಥಿಕಸ್ಥಿತಿ ಪೂರ್ತಿ ಹದಗೆಟ್ಟಿದ್ದು ಆಶ್ಚರ್ಯವಲ್ಲ. ಮುಂದೆ ನಾಲ್ಕು ಶತಮಾನಕಾಲ ಅಸೀರಿಯ, ನ್ಯೂಬಿಯ, ಲಿಬಿಯ ದೊರೆಗಳ ಆಧಿಪತ್ಯವನ್ನೂ ಅನುಭವಿಸಬೇಕಾಯಿತು. ಈ ಅವನತಿಯನ್ನು ತಡೆಗಟ್ಟಿ ರಾಜ್ಯವನ್ನು ಪುನರುಜ್ಜೀವನಗೊಳಿಸಲು ಎರಡನೆಯ ಅಹಮೋಸಸ್ (ಪ್ರ.ಶ.ಪೂ. 569–25) ಮುಂತಾದ ಕೆಲವು ದೊರೆಗಳು ಮಾಡಿದ ಪ್ರಯತ್ನಗಳೂ ಫಲಿಸಲಿಲ್ಲ.

**ಪರಕೀಯರ ಸಾಮ್ರಾಜ್ಯ:** ಈ ಮಧ್ಯೆ ಪೂರ್ವದಲ್ಲಿ ಪರ್ಷಿಯ ಸಾಮ್ರಾಜ್ಯ ಪ್ರಬಲಿಸಿತ್ತು. ಅದು ಬ್ಯಾಬಿಲೋನಿಯ, ಲಿಡಿಯ, ಮೀಡಿಯ ರಾಜ್ಯಗಳನ್ನು ಗೆದ್ದು ಪ್ರ.ಶ.ಪೂ. 525ರಲ್ಲಿ ಈಜಿಪ್ಟನ್ನೂ ವಶಪಡಿಸಿಕೊಂಡಿತು. ನೈಲ್ ನದೀ ಬಯಲು ಪರ್ಷಿಯ ಚಕ್ರಾಧಿಪತ್ಯದ ಒಂದು ಪ್ರಾಂತ್ಯವಾಗಿ (ಸತ್ರಪಿ), ಮಂಡಲಾಧಿಪತಿಯ (ಸತ್ರಪ್) ಆಳ್ವಿಕೆಗೊಳಪಟ್ಟಿತು. ಪರ್ಷಿಯನ್ ಸೈನ್ಯ ತುಕಡಿಗಳು ಇಲ್ಲಿ ಬಂದು ಕುಳಿತಾಗ ಇಲ್ಲಿನ ಜನ ಮುಳಿದು ಆಗಿಂದಾಗ್ಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೇ ಇದ್ದರು. ಆದರೆ ಪ್ರ.ಶ.ಪೂ. 332ರಲ್ಲಿ ಅಲೆಕ್ಸಾಂಡರ್ ದೇಶವನ್ನು ಸ್ವಾಧೀನಪಡಿಸಿಕೊಳ್ಳುವವರೆಗೂ ಇವರಿಗೆ ಪರ್ಷಿಯನ್ನರ ಆಳ್ವಿಕೆ ತಪ್ಪಲಿಲ್ಲ.

ಅಲೆಕ್ಸಾಂಡರ್ ಪ್ರ.ಶ.ಪೂ. 323ರಲ್ಲಿ ಕಾಲವಾದ. ಆತನ ಚಕ್ರಾಧಿಪತ್ಯದ ಬೇರೆ ಬೇರೆ ಭಾಗಗಳನ್ನು ಅವನ ಸೇನಾಧಿಪತಿಗಳು ಆಕ್ರಮಿಸಿಕೊಂಡು ಸ್ವತಂತ್ರರಾಗಿ ಆಳತೊಡಗಿದರು. ಈಜಿಪ್ಟ್ ಟಾಲಮಿಯೆಂಬ ದಂಡನಾಯಕನ ಸ್ವಾಧೀನಕ್ಕೆ ಬಂತು. ಪ್ರ.ಶ.ಪೂ.ಸು.306ರಲ್ಲಿ ಈತ ಸ್ವತಂತ್ರ ದೊರೆಯೆಂದು ಸಾರಿಕೊಂಡ. ಪ್ರ.ಶ.ಪೂ. 30ರಲ್ಲಿ ಕ್ಲಿಯೊಪಾತ್ರ ಮರಣ ಹೊಂದುವವರೆಗೂ ಈತನ ಸಂತತಿಯವರು ಈಜಿಪ್ಟನ್ನಾಳಿದರು. ಇವರೆಲ್ಲರಿಗೂ ಟಾಲಮಿ ದೊರೆಗಳೆಂದು ಹೆಸರು. ಈ ಕಾಲದಲ್ಲಿ ಇಡೀ ದೇಶವೇ ಒಂದು ನೆಡುತೋಟವಾಗಿ ಇದು ಕೃಷಿಯಲ್ಲಿ ಮುಂದರಿಯಿತು. ಮರುವರ್ಷದ ಸ್ಥಿತಿಗತಿ ಆವಶ್ಯಕತೆಗಳನ್ನೆಲ್ಲ ಪೂರ್ವಭಾವಿಯಾಗಿ ಯೋಚಿಸಿ ಬೆಳೆ ನಿರ್ಣಯ ಮಾಡುವ ವ್ಯವಸ್ಥೆಯಿದ್ದದ್ದರಿಂದ, ಮರುವರ್ಷದ ಉತ್ಪನ್ನವೂ ಕಂದಾಯವೂ ಎಷ್ಟೆಂಬುದು ಮೊದಲೇ ಗೊತ್ತಿರುತ್ತಿತ್ತು. ಕೃಷಿವಿಷಯದಲ್ಲಿ ಮಾತ್ರವಲ್ಲದೆ ಬಟ್ಟೆ, ಎಣ್ಣೆ, ಗಣಿ, ಬ್ಯಾಂಕು–ಎಲ್ಲದರ ಮೇಲೂ ಸರ್ಕಾರದ್ದೇ ಏಕಸ್ವಾಮ್ಯ. ನೈಲ್ ನದೀಮುಖದಲ್ಲಿ ಅಲೆಕ್ಸಾಂಡರ್ ಕಟ್ಟಿಸಿದ ಅಲೆಕ್ಸಾಂಡ್ರಿಯ ಈಜಿಪ್ಟಿನ ರಾಜಧಾನಿಯಾಯಿತಲ್ಲದೆ ಗ್ರೀಕರ ಸಾಹಿತ್ಯ, ಕಲೆ ಮತ್ತು ವಿಜ್ಞಾನಗಳಿಗೆ ಸಂಬಂಧಿಸಿದ ಚಟುವಟಿಕೆಗಳ ಪ್ರಭಾವಕೇಂದ್ರವೂ ಆಯಿತು. ಅಲ್ಲಿನ ಸುಪ್ರಸಿದ್ಧ ಪುಸ್ತಕಭಂಡಾರದಲ್ಲೂ ವಸ್ತುಸಂಗ್ರಹಶಾಲೆಯಲ್ಲೂ ಯೂಕ್ಲಿಡ್, ಇರಾಟೋಸ್ತನೀಸ್, ಅರಿಸ್ಟಾರ್ಕಸ್ ಮುಂತಾದ ಪ್ರಖ್ಯಾತ ಗ್ರೀಕ್ ವಿದ್ವಾಂಸರು ಟಾಲಮಿಗಳ ಆಶ್ರಯದಲ್ಲಿ ಕೆಲಸಮಾಡಿದರು. ಸರ್ಕಾರದ ವ್ಯವಹಾರವೆಲ್ಲ ನಡೆಯುತ್ತಿದ್ದದ್ದು ಗ್ರೀಕ್ ಭಾಷೆಯಲ್ಲಿ; ಸ್ಥಳೀಯ ಭಾಷೆಯ ಬೆಳೆವಣಿಗೆಗೂ ಅವಕಾಶವಿತ್ತು. ಈಜಿಪ್ಟಿನ ಪುರಾತನ ಸಂಸ್ಕೃತಿಯ ಮೇಲೆ ಗ್ರೀಕ್ ಸಂಸ್ಕೃತಿ ಬೀರಿದ ಪ್ರಭಾವ ಅಪಾರ.

ಪ್ರ.ಶ.ಪೂ. 30ರಲ್ಲಿ ಕೊನೆಯ ಟಾಲಮಿ ರಾಣಿ ಕ್ಲಿಯೊಪಾತ್ರಳ ಕಾಲಾನಂತರ ಈಜಿಪ್ಟ್ ರೋಮನ್ನರ ಸ್ವಾಧೀನಕ್ಕೆ ಬಂತು. ಇಡೀ ದೇಶವೇ ರೋಮನ್ ಸಮ್ರಾಟನ ಖಾಸಗಿ ಸ್ವತ್ತಾಗಿ ಆತ ನೇಮಿಸಿದ ಸೈನ್ಯಾಧಿಕಾರಿಯ ಆಡಳಿತ ಏರ್ಪಟ್ಟಿತು. ಗ್ರೀಕರ ಕಾಲದ ಕೇಂದ್ರೀಕೃತ ಆಡಳಿತವ್ಯವಸ್ಥೆಯೇ ಈ ಕಾಲದಲ್ಲೂ ಮುಂದುವರಿಯಿತಾದರೂ ರೋಮನರ ನಿರಂಕುಶಾಧಿ

ಪತ್ಯದಿಂದ ಈಜಿಪ್ಟಿನ ಸಂಪತ್ತು ಹೆಚ್ಚಾಗಿ ರೋಮಿನ ಕಡೆ ಹರಿಯತೊಡಗಿತು. ರೋಮನರು ನಡೆಸಿದ ಈ ಶೋಷಣೆಯ ಪರಿಣಾಮವಾಗಿ ಜನರ ಆರ್ಥಿಕ ಪರಿಸ್ಥಿತಿ ಕ್ಷೀಣಿಸಿತು; ಉತ್ಪನ್ನ ಕುಗ್ಗಿತು: ಕೃಷಿಕರು ತಮ್ಮ ಹಿಡುವಳಿಗಳನ್ನು ಬಿಟ್ಟು ಇತರ ಪ್ರಾಂತ್ಯಗಳಿಗೆ ವಲಸೆ ಹೋದರು. ಅಲ್ಲಲ್ಲೇ ಎದ್ದ ದಂಗೆಗಳನ್ನು ಕ್ರೌರ್ಯದಿಂದ ಅಡಗಿಸಲಾಯಿತು. ಕ್ರೈಸ್ತಧರ್ಮ ಈಜಿಪ್ಟಿನಲ್ಲಿ ಹರಡಿದ್ದು ಇದೇ ಕಾಲದಲ್ಲಿ. ಮೊದಲು ಈ ಧರ್ಮವನ್ನು ಅಡಗಿಸುವ ಪ್ರಯತ್ನಗಳು ನಡೆದು ದೇಶದಲ್ಲಿ ಕ್ಷೋಭೆಯುಂಟಾಯಿತು. ಕೊನೆಗೆ ರೋಮನ್ ಚಕ್ರವರ್ತಿ ಕಾನ್‌ಸ್ಟಂಟೀನ್ (ಪ್ರ.ಶ.ಪೂ.427–337) ಕ್ರೈಸ್ತಧರ್ಮಕ್ಕೂ ಮಾನ್ಯತೆ ಕೊಟ್ಟ. ಈಜಿಪ್ಟಿನಲ್ಲಿ ಕ್ರೈಸ್ತಧರ್ಮಕ್ಕೆ ಅಲೆಕ್ಸಾಂಡ್ರಿಯ ಕೇಂದ್ರವಾಯಿತು.

ಬೈಜಾಂಟೀಯನ್ ಅಥವಾ ಪೂರ್ವ ರೋಮನ್ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದದ್ದು ಪ್ರ.ಶ.395ರಲ್ಲಿ. ಈ ಸಾಮ್ರಾಜ್ಯದ ರಾಜಧಾನಿ ಕಾನ್‌ಸ್ಟಾಂಟಿನೋಪಲ್ ಈಜಿಪ್ಟನ್ನಾಳುತ್ತಿದ್ದದ್ದು ಅಲ್ಲಿಂದಲೇ. ಕ್ರಮೇಣ ಈ ಹತೋಟಿ ಸಡಿಲವಾಗುತ್ತ ಬಂದು, ಏಳನೆಯ ಶತಮಾನದ ಮೊದಲ ದಶಕಗಳಲ್ಲಿ ಪರ್ಷಿಯದ ಸೈನ್ಯ ಈಜಿಪ್ಟಿನವರೆಗೂ ನುಗ್ಗಿಬಂತು; ಅದನ್ನು ಕಷ್ಟದಿಂದ ಹಿಮ್ಮೆಟ್ಟಿಸಬೇಕಾಯಿತು.

**ಇಸ್ಲಾಂ ಪ್ರಭಾವ:** ಇಸ್ಲಾಂ ಧರ್ಮಸ್ಥಾಪನೆಯಾದದ್ದು ಇದೇ ಕಾಲದಲ್ಲಿ. ಅರೇಬಿಯದಲ್ಲಿ ಹುಟ್ಟಿದ ಈ ಧರ್ಮ ಬಹುಬೇಗ ಸುತ್ತಮುತ್ತಣ ದೇಶಗಳಿಗೆ ಹರಡಿ ಹೊಸ ಹುರುಪಿನಿಂದ ಕೂಡಿದ್ದ ಮುಸ್ಲಿಂ ರಾಜ್ಯವೊಂದು ಹುಟ್ಟಿಕೊಂಡಾಗ 642ರ ಕಾಲಕ್ಕೆ ಈಜಿಪ್ಟ ಈ ಮುಸ್ಲಿಂ ರಾಜ್ಯಕ್ಕೆ ಸೇರಿಹೋಗಿ ಮುಸ್ಲಿಂ ರಾಜ್ಯಪಾಲರ ಆಡಳಿತವನ್ನು ಕಟ್ಟಿದರು. 10ನೆಯ ಶತಮಾನ ಕಳೆಯುವವರೆಗೂ ಈಜಿಪ್ಟಿನ ಆಡಳಿತ ಸುಗಮವಾಗಿತ್ತು. ಆದರೆ ಮುಂದೆ ಸೆಲ್ಜುಕ್ಕರ ಹಾವಳಿ, ಕ್ರೈಸ್ತ ಧರ್ಮ ಯುದ್ಧಗಳು (ಕ್ರುಸೇಡ್ಸ್) ಇವುಗಳ ಪರಿಣಾಮವಾಗಿ ಈಜಿಪ್ಟ್ ಕ್ಷೋಭೆಗೀಡಾಯಿತು. ಈಜಿಪ್ಟ್ ಕೆಲಕಾಲ ಸೆಲ್ಜುಕ್ ಸುಲ್ತಾನರ ಆಳ್ವಿಕೆಯಲ್ಲಿದ್ದು ಮುಂದೆ ಅಯೂಬಿದ್ ವಂಶದ ಸುಲ್ತಾನ್ ಸಲಾವುದ್ದೀನ್ ಅಥವಾ ಸ್ಯಾಲಡಿನ್ನನ (1174–93) ವಶಕ್ಕೆ ಬಂತು. ಆತನ ವಂಶದವರು 1250ರ ವರೆಗೂ ಈಜಿಪ್ಟನ್ನಾಳಿದರು. ಅವರ ಗುಲಾಮರಾಗಿದ್ದು ಬಿಡುಗಡೆ ಹೊಂದಿ ಆಡಳಿತವರ್ಗದಲ್ಲೂ ಸೈನ್ಯದಲ್ಲೂ ಉಚ್ಚಸ್ಥಾನ ಪಡೆದಿದ್ದ ಮ್ಯಾಮಲೂಕರು ಆ ವರ್ಷ ಸ್ವತಃ ಸುಲ್ತಾನರಾದರು. ಇವರ ಆಳ್ವಿಕೆ ನಡೆದದ್ದು 1517ರ ವರೆಗೆ. ಈ ಕಾಲದಲ್ಲಿ ರಾಜ್ಯದಲ್ಲೆಲ್ಲ ಯುದ್ಧ, ದಂಗೆ, ಅಧಿಕಾರಕ್ಕಾಗಿ ಹೋರಾಟ. ಈಜಿಪ್ಟ್ ಶಾಂತಿಯನ್ನೇ ಕಾಣಲಿಲ್ಲ. ಈ ಮಧ್ಯೆ 1517ರಲ್ಲಿ ಆಟೊಮನ್ ಸುಲ್ತಾನರು ಈಜಿಪ್ಟನ್ನು ವಶಪಡಿಸಿಕೊಂಡರು. ಮುಂದೆ ಸುಮಾರು ನಾಲ್ಕು ಶತಮಾನ ಕಾಲ ಈಜಿಪ್ಟ್ ನಾಮಮಾತ್ರಕ್ಕಾದರೂ ಆಟೊಮನ್ ರಾಜ್ಯದ ಒಂದು ಭಾಗವಾಗುಳಿಯಿತು. ಆ ಸುಲ್ತಾನರಿಗೆ ಅರೇಬಿಯ ಸಿರಿಯ ಮುಂತಾದ ದಕ್ಷಿಣದ ಪ್ರಾಂತ್ಯಗಳನ್ನು ಹತೋಟಿಯಲ್ಲಿಡಲು ಈಜಿಪ್ಟ್ ಸಹಾಯಕವಾಗಿತ್ತು. ಮ್ಯಾಮಲೂಕರು ಆಟೋಮನ್ ಸುಲ್ತಾನರಿಗೆ ಕಪ್ಪಕೊಟ್ಟು ಆಡಳಿತ ನಡೆಸುತ್ತಿದ್ದರು.

**ಪಾಶ್ಚಾತ್ಯರ ಹತೋಟಿ:** 1798–1801ರವರೆಗೆ ಈಜಿಪ್ಟನ್ನು ನೆಪೋಲಿಯನ್ ಸ್ವಾಧೀನ ಪಡಿಸಿಕೊಂಡ. ತತ್ಫಲವಾಗಿ ಈಜಿಪ್ಟಿನ ರಾಜಕೀಯ ಪರಿಸ್ಥಿತಿ ಹದಗೆಟ್ಟಿತು. ಆಂತರಿಕ ಪಕ್ಷಗಳಲ್ಲಿ ಕದನ ಪ್ರಾರಂಭವಾಗಿ 1811ರಲ್ಲಿ ಮೆಹಮೆಟ್ ಅಲಿ ಈಜಿಪ್ಟಿನ ಸುಲ್ತಾನನಾದ. ಮುಂದೆ ಈಜಿಪ್ಟಿನ ಮೇಲೆ ಆಟೊಮನ್ ಸುಲ್ತಾನರ ಸಾರ್ವಭೌಮತ್ವ ನಾಮಮಾತ್ರ ಉಳಿಯಿತು. ಮೆಹಮೆಟ್ ಆಲಿಯ ಕಾಲದಲ್ಲಿ ಈಜಿಪ್ಟಿನ ಪ್ರಗತಿ ಸರ್ವತೋಮುಖವಾಗಿ ಸಾಗಿತು.

ಆದರೆ ಈಜಿಪ್ಟಿನ ಈ ಪ್ರಗತಿಯೇ ಪ್ರಬಲರಾಷ್ಟ್ರಗಳ ಕಣ್ಣು ಮುಳ್ಳಾಯಿತು. ಇಂಗ್ಲೆಂಡ್–ಭಾರತಗಳ ನಡುವೆ ಸೂಯೆಜ಼್ ಇದ್ದದ್ದೇ ಇದಕ್ಕೆ ಕಾರಣ. ಆದ್ದರಿಂದ ಇಂಗ್ಲೆಂಡ್ ಆಟೊಮನ್ನರೊಂದಿಗೆ ಕೂಡಿ ಮೊಹಮದ್ ಆಲಿಯ ಪ್ರಾಬಲ್ಯವನ್ನು ಕುಗ್ಗಿಸಿತು. 1849ರಲ್ಲಿ ಆತ ಕಾಲವಾದ. ಹಿಂದಿನ ಒಪ್ಪಂದದ ಪ್ರಕಾರ ಆತನ ಸಂತತಿಯವರಲ್ಲೇ ಈಜಿಪ್ಟಿನ ಆಳ್ವಿಕೆ ಮುಂದುವರಿಯಿತು. ಸೂಯೆಜ಼್ ಕಾಲುವೆಯ ನಿರ್ಮಾಣ ಪ್ರಾರಂಭವಾದದ್ದು ಆತನ ಮಗನಾದ ಸೈಯದ್ ಪಾಷಾನ ಕಾಲದಲ್ಲಿ. 1863ರಲ್ಲಿ ಸೈಯ್ಯದ್ ಪಾಷಾನ ಮಗ ಇಸ್ಮಾಯಿಲ್ ಪಾಷಾ ಸುಲ್ತಾನನಾದ. ಈತ ರಾಜ್ಯದ ಆರ್ಥಿಕಾಭಿವೃದ್ಧಿಗಾಗಿ ಅನೇಕ ಕ್ರಮಕೈಗೊಂಡ; ರೈಲು ಮಾರ್ಗ ನಿರ್ಮಿಸಿದ. ಬಂದರುಗಳ ನಿರ್ಮಾಣವಾಯಿತು. ಜನರವಿದ್ಯಾಭ್ಯಾಸಕ್ಕಾಗಿ ಅನೇಕ ಕಾರ್ಯಕ್ರಮಗಳು ಜಾರಿಗೆ ಬಂದುವು. ಈತ ದಕ್ಷಿಣದಲ್ಲಿ ಸೂಡಾನಿನ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಂಡ. ಆದರೆ ಹಣದ ವೆಚ್ಚದ ಮೇಲೆ ಹತೋಟಿಯಿಲ್ಲದ್ದರಿಂದ ಈತನ ಖಜಾನೆ ಬೇಗ ಬರಿದಾಯಿತು. ವ್ಯಾಪಾರ ಸೌಕರ್ಯಕ್ಕಾಗಿ ಸೂಯೆಜ಼್ ಕಾಲುವೆಯ ಮೇಲೆ ಹತೋಟಿ ಪಡೆಯಬೇಕೆಂದಿದ್ದ ಬ್ರಿಟಿಷರಿಗೆ ಆಗ ಅನುಕೂಲ ಸಂದರ್ಭವೊದಗಿತು. ಅವರು ಇಸ್ಮಾಯಿಲ್‌ಗೆ 40ಲಕ್ಷ ಪೌಂಡು ಕೊಟ್ಟು ಸೂಯೆಜ಼್ ಕಾಲುವೆಯ ಷೇರುಗಳನ್ನು ಕೊಂಡರು. ಮುಂದೆ ಈತನಿಗೆ ಯಾರೂ ಸಾಲ ಕೊಡಲಿಲ್ಲ. ದೇಶದ ಆಗಿನ ಆರ್ಥಿಕಸ್ಥಿತಿಯಂತೂ ಶೋಚನೀಯ. ಈಜಿಪ್ಟ್ ಸರ್ಕಾರದ ಆದಾಯ ವೆಚ್ಚಗಳ ಮೇಲೆ ಬ್ರಿಟಿಷ್ ಮತ್ತು ಫ್ರೆಂಚ್ ಸರ್ಕಾರಗಳ ಹತೋಟಿ ಬೆಳೆಯಿತು. 1878ರಲ್ಲಿ, ಸಂವಿಧಾನಬದ್ಧ ಸರ್ಕಾರ ಸ್ಥಾಪನೆಗೆ ಆತ ಒಪ್ಪಲೇಬೇಕಾಯಿತು. ಈ ಸರ್ಕಾರದಲ್ಲಿ ಪರಕೀಯರೂ ಇದ್ದರು. ಈ ಕೈವಾಡವನ್ನು ಆತ ಸಹಿಸಲಿಲ್ಲ. ಕೊನೆಗೆ ಆತ ತನ್ನ ಮಂತ್ರಿ ಸಂಪುಟವನ್ನೇ ವಿಸರ್ಜಿಸಿದ. ಆಗ ಇಂಗ್ಲಿಷ್ ಮತ್ತು ಫ್ರೆಂಚ್ ಸರ್ಕಾರಗಳು ಹೆಸರಿಗೆ ಮಾತ್ರವಾದರೂ ಇಸ್ಮಾಯಿಲ್‌ನ ಅಧಿರಾಜನಾಗಿದ್ದ ತುರ್ಕಿ ಸುಲ್ತಾನನಿಗೆ ಮೊರೆಯಿಟ್ಟುವು. ಆತನ ನಿರೂಪಕ್ಕನುಸಾರವಾಗಿ ಇಸ್ಮಾಯಿಲ್ ಪದಚ್ಯುತನಾಗಿ ಅವನ ಮಗ ಟ್ಯೂಫಿಕ್ ಪಾಷಾ ಪಟ್ಟಕ್ಕೆ ಬಂದ.

ಟ್ಯೂಫಿಕ್ ಪಾಷಾ ಹೆಸರಿಗೆ ಮಾತ್ರ ದೊರೆ; ಆಡಳಿತವೆಲ್ಲ ಬ್ರಿಟಿಷ್ ಮತ್ತು ಫ್ರೆಂಚ್ ಕೈವಶ. ಪರಿಣಾಮವಾಗಿ ಜನರಲ್ಲಿ ಮೂಡಿದ ಅತೃಪ್ತಿ ಹೆಚ್ಚಿ ದೇಶದ ಸ್ವಾತಂತ್ರ್ಯಕ್ಕಾಗಿ 1882ರಲ್ಲಿ ಜನ ದಂಗೆಯೆದ್ದರು.

ಬ್ರಿಟಿಷರು ಈ ದಂಗೆಯನ್ನಡಗಿಸಿದರು. ಮುಂದೆ ಅರ್ಧಶತಮಾನ ಕಾಲ ಈಜಿಪ್ಟ್ ಸಂಪೂರ್ಣವಾಗಿ ಬ್ರಿಟಿಷರ ಹತೋಟಿಗೊಳಪಟ್ಟಿತು. ಅದರ ಸೈನ್ಯದ ಮೇಲೆ ಬ್ರಿಟಿಷರ ಹಿಡಿತ ಏರ್ಪಟ್ಟಿತಲ್ಲದೆ ಅವರ ಸೈನ್ಯವೂ ಅಲ್ಲಿ ಠಾಣೆ ಹೂಡಿತು. ದೇಶದ ಹಣಕಾಸು ವ್ಯವಸ್ಥೆಯೂ ಬ್ರಿಟಿಷರ ವಶವಾಯಿತು.

ವಿದೇಶೀ ಆಳ್ವಿಕೆಯ ನಿವಾರಣೆಗಾಗಿ ಈಜಿಪ್ಟಿನಲ್ಲಿ ಹೋರಾಟವಂತೂ ಸಾಗಿಯೇ ಇತ್ತು. ಅಹಮದ್ ಅರಬಿ ಎಂಬ ಉಚ್ಚ ಸೇನಾಪತಿಯೇ ಈ ಚಳವಳಿಯ ಮೊದಲ ಮುಖಂಡ. ಟೆಲ್–ಎಲ್–ಕಬೀರ್ ಕಾಳಗದಲ್ಲಿ ಆತ ಬ್ರಿಟಿಷರಿಂದ ಸೋತು, ದೇಶ ಭ್ರಷ್ಟನಾದ. ದೇಶದ ಅಭಿವೃದ್ಧಿಗಾಗಿ ಬ್ರಿಟಿಷರು ನಾನಾ ಸುಧಾರಣೆಗಳನ್ನು ಜಾರಿಗೆ ತಂದರು. ದಕ್ಷಿಣದ ಸೂಡಾನಿನಲ್ಲಿ ನಡೆದ ದಂಗೆ ಬಲು ಭೀಕರವಾಗಿತ್ತು. ಬ್ರಿಟಿಷ್ ಸೈನ್ಯಕ್ಕೆ ಸಂಭವಿಸಿದ ನಷ್ಟವಂತೂ ಅಗಾಧ.

ಈಜಿಪ್ಟಿನ ಈ ಪ್ರತಿಭಟನೆ 1900ರ ವರೆಗೂ ಮುಂದುವರಿದು ಆ ವರ್ಷ ನಿಂತಿತು. ಇಂಥ ಪರಿಸ್ಥಿತಿಯಲ್ಲೂ ಬ್ರಿಟಿಷರ ಸಮರ್ಥ ಆಡಳಿತದ ಪರಿಣಾಮವಾಗಿ ದೇಶದ ಆರ್ಥಿಕ ಪ್ರಗತಿ ತಕ್ಕಮಟ್ಟಿಗೆ ಉತ್ತಮಗೊಂಡಿತೆನ್ನಬಹುದು. ಈಜಿಪ್ಷಿಯನ್ ಮಂತ್ರಿಗಳ ಹಾಗೂ ಮೇಲ್ದರ್ಜೆ ನೌಕರರ ಅಧಿಕಾರ ಕುಗ್ಗಿತು.

**ಸ್ವತಂತ್ರ ಈಜಿಪ್ಟ್:** ಒಂದನೆಯ ಮಹಾಯುದ್ಧದಲ್ಲಿ ಟರ್ಕಿ ಬ್ರಿಟಿಷರಿಗೆ ವಿರೋಧವಾಗಿ ನಿಂತದ್ದರಿಂದ ಈಜಿಪ್ಟನ್ನು ಬ್ರಿಟಿಷ್ ರಕ್ಷಿತ ರಾಜ್ಯವೆಂದು ಘೋಷಿಸಲಾಯಿತು. ಆಗ ಈಜಿಪ್ಟಿನ ಮೇಲೆ ಬ್ರಿಟನ್ನಿಗೆ ಸಂಪೂರ್ಣ ಹತೋಟಿ ದೊರಕಿತು. ಆದರೆ ಈಜಿಪ್ಟಿನ ಜನತೆ ತೆಪ್ಪಗಿರಲಿಲ್ಲ. 1919ರಲ್ಲಿ ಸಾಅದ್ ಸಗ್ಲೂಲ್ ಪಾಷಾ ಮುಖಂಡತ್ವದಲ್ಲಿ ಭಾರೀ ಸ್ವಾತಂತ್ರ್ಯ ಚಳವಳಿ ಪ್ರಾರಂಭವಾಯಿತು. ತಾತ್ಕಾಲಿಕವಾಗಿ ಇದನ್ನು ಅಡಗಿಸಲು ಸಾಧ್ಯವಾಯಿತಾದರೂ ಈಜಿಪ್ಟಿನ ಜನರ ಬೇಡಿಕೆಯ ನಿರಾಕರಣೆ ಸಾಧ್ಯವಿಲ್ಲವೆಂಬುದನ್ನು ಮನಗಂಡ ಬ್ರಿಟಿಷ್ ಸರ್ಕಾರ 1922ರಲ್ಲಿ ಈಜಿಪ್ಟನ್ನು ಸ್ವತಂತ್ರರಾಜ್ಯವೆಂಬುದನ್ನು ಘೋಷಿಸಿತು. ಆದರೆ ನಾಲ್ಕು ವಿಷಯಗಳ ತೀರ್ಮಾನವನ್ನು ಮಾತ್ರ ಮುಂದಕ್ಕೆ ತಳ್ಳಲಾಯಿತು. ಬ್ರಿಟಿಷ್ ಚಕ್ರಾಧಿಪತ್ಯದ ನಾನಾಭಾಗಗಳ ಸಂಪರ್ಕವ್ಯವಸ್ಥೆ, ಹೊರರಾಷ್ಟ್ರಗಳು ಯುದ್ಧ ಹೂಡಿದಾಗ ಅನುಸರಿಸಬೇಕಾದ ರೀತಿ ನೀತಿ, ಈಜಿಪ್ಟಿನಲ್ಲಿದ್ದ ಐರೋಪ್ಯರ ಆಸ್ತಿಪಾಸ್ತಿ ರಕ್ಷಣೆ, ಸೂಡಾನಿನ ಪ್ರಶ್ನೆ–ಇವೇ ಆ ನಾಲ್ಕು. 1923ರಲ್ಲಿ ಈಜಿಪ್ಟಿನಲ್ಲಿ ಸಂವಿಧಾನಬದ್ಧ ರಾಜಪ್ರಭುತ್ವ ಸ್ಥಾಪನೆಯಾಯಿತು. ಮೊದಲನೆಯ ಫೌದ್ ಸುಲ್ತಾನನಾದ. ಆದರೂ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಜನತೆಯ ಹೋರಾಟ ನಿಲ್ಲಲಿಲ್ಲ. ಅನೇಕ ಬ್ರಿಟಿಷ್ ಅಧಿಕಾರಿಗಳು ಕೊಲೆಯಾದರು. ಕೊನೆಗೆ 1936ರಲ್ಲಿ ಇಂಗ್ಲೆಂಡ್ ಈಜಿಪ್ಟ್‌ಗಳ ನಡುವೆ ಒಪ್ಪಂದವಾಗಿ, ಇಪ್ಪತ್ತು ವರ್ಷಕಾಲ ಬ್ರಿಟಿಷ್ ಸೈನ್ಯ ಈಜಿಪ್ಟಿನಲ್ಲಿರತಕ್ಕದ್ದೆಂದೂ ಇಂಗ್ಲೆಂಡಿನ ವ್ಯಾಪಾರಕ್ಕೆ ಅತ್ಯಾವಶ್ಯಕವಾದ ಸೂಯೆಜ಼್ ಕಾಲುವೆಯ ವಿಷಯದಲ್ಲಿ ಕೆಲವು ವಿಶಿಷ್ಟ ಸೌಕರ್ಯಗಳನ್ನು ಇಂಗ್ಲೆಂಡ್ ಹೊಂದಿರಬೇಕೆಂದೂ ತೀರ್ಮಾನವಾಯಿತು. ಎರಡನೆಯ ಮಹಾಯುದ್ಧದ ಪ್ರತಿಕೂಲ ಪರಿಸ್ಥಿತಿಯಲ್ಲೂ ಈಜಿಪ್ಟ್ ಸರ್ಕಾರ ಈ ಒಪ್ಪಂದವನ್ನು ಮುರಿಯಲಿಲ್ಲ.

ಎರಡನೆಯ ಮಹಾಯುದ್ಧ ಕೊನೆಗೊಂಡಾಗ (1945) ಈಜಿಪ್ಟಿನ ಜನತೆಯಲ್ಲಿ ಮತ್ತೆ ರಾಷ್ಟ್ರೀಯತಾಭಾವನೆ ಉಕ್ಕೇರಿತು. ಗತ್ಯಂತರವಿಲ್ಲದ್ದರಿಂದ 1936ರ ಈ ಒಪ್ಪಂದದ ರದ್ದಿಗಾಗಿ ಇಂಗ್ಲೆಂಡ್ ಸರ್ಕಾರಕ್ಕೆ ಈಜಿಪ್ಟ್ ಸೂಚಿಸಿತು. ಭಾರತದಲ್ಲಿ ಉಗ್ರವಾಗಿದ್ದ ಸ್ವಾತಂತ್ರ್ಯ ಚಳವಳಿಯನ್ನಡಗಿಸುವ ಸಲುವಾಗಿ ಸೂಯೆಜ಼್ ಮಾರ್ಗದ ಮೇಲೆ ಇಂಗ್ಲೆಂಡಿನ ಹತೋಟಿ ಆಗ ಅತ್ಯಂತ ಅವಶ್ಯವಾಗಿದ್ದುದರಿಂದ ಸೂಯೆಜ಼್ ಒಪ್ಪಂದವನ್ನು ಕೊನೆಗೊಳಿಸಬೇಕೆಂಬ ಈಜಿಪ್ಟಿನಲ್ಲೆಲ್ಲಾ ದಂಗೆಗಳಾದುವು. 1947ರ ಜನವರಿಯಲ್ಲಿ ಈಜಿಪ್ಟ್ ಸರ್ಕಾರ ಇಂಗ್ಲೆಂಡಿನೊಂದಿಗೆ ಸಂಧಾನ ನಡೆಸುವುದನ್ನು ನಿಲ್ಲಿಸಿ ವಿಶ್ವಸಂಸ್ಥೆಯ ಭದ್ರತಾಸಮಿತಿಯ ನೆರವು ಕೋರಿತು. ಆದರೆ ಕೊಂಚ ಕಾಲದಲ್ಲೇ ಬ್ರಿಟಿಷ್ ಸರ್ಕಾರ ಕೈರೋ ಅಲೆಕ್ಸಾಂಡ್ರಿಯ ಗಳಲ್ಲಿದ್ದ ತನ್ನ ಸೈನ್ಯಗಳನ್ನು ಹಿಂತೆಗೆದುಕೊಂಡಿತು.

ಈ ಮಧ್ಯೆ 1947ರಲ್ಲಿ ವಿಶ್ವಸಂಸ್ಥೆ ಪ್ಯಾಲಸ್ತೀನಿನ ಸುತ್ತಮುತ್ತಣ ಪ್ರದೇಶಗಳನ್ನೊಳಗೊಂಡ ಇಸ್ರೇಲ್ ರಾಜ್ಯನಿರ್ಮಾಣಕ್ಕೆ ಒಪ್ಪಿಗೆಯಿತ್ತಾಗ ಈಜಿಪ್ಟೂ ಇತರ ಅರಬ್ ರಾಜ್ಯಗಳೂ ಇದನ್ನು ತೀವ್ರವಾಗಿ ವಿರೋಧಿಸಿದುವು. ಇಸ್ರೇಲಿಗೂ ಮುಸ್ಲಿಂ ರಾಜ್ಯಗಳಿಗೂ ನಡುವೆ ಕದನ ಪ್ರಾರಂಭವಾದದ್ದು ಆಗ.

ಈಜಿಪ್ಟಿನಲ್ಲಿ ರಾಜಪ್ರಭುತ್ವವನ್ನೇ ತೊಡೆದು ಹಾಕಿಸಬೇಕೆಂಬ ರಾಷ್ಟ್ರೀಯ ಪಕ್ಷದ ಚಳವಳಿ ಉಗ್ರವಾಯಿತು. 1953 ರಲ್ಲಿ ದೊರೆ ಪದಚ್ಯುತನಾದ. ಗಣರಾಜ್ಯ ಸ್ಥಾಪಿತವಾಯಿತು. ಈ ರಾಷ್ಟ್ರೀಯಪಕ್ಷದ ಉಗ್ರಗಾಮಿಗಳು ಪ್ರಬಲರಾದರು. 1956ರ ಮಾರ್ಚ್ ತಿಂಗಳಲ್ಲಿ ಇವರ ನಾಯಕನಾದ ಗಮೆಲ್ ಅಬ್ದುಲ್ ನಾಸೆರ್ ಮುಖ್ಯಮಂತ್ರಿಯಾದರು. ಇವರೇ

ಮುಂದೆ ರಾಷ್ಟ್ರಾಧ್ಯಕ್ಷರಾದರು. 1955ರಲ್ಲಿ ಆಸ್ವಾನ್ ಕಟ್ಟೆಯ ನಿರ್ಮಾಣಕ್ಕಾಗಿ ಧನ ಮತ್ತು ಯಾಂತ್ರಿಕ ಸಹಾಯ ನೀಡುವುದಾಗಿ ಭರವಸೆಯಿತ್ತಿದ್ದ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟಿಷ್ ಸರ್ಕಾರಗಳು ಮರುವರ್ಷವೇ ತಮ್ಮ ನೆರವನ್ನು ನಿರಾಕರಿಸಿದುವು. ನಾಸೆರ್ ಸೋವಿಯತ್ ಸಹಾಯ ಪಡೆದು ಪಾಶ್ಚಾತ್ಯ ರಾಷ್ಟ್ರಗಳ ವೈರ ಸಂಪಾದಿಸುವ ಸಂದರ್ಭ ಬಂತು. ನಾಸೆರರ ಪ್ರತಿಕ್ರಿಯೆಯೂ ಉಗ್ರವಾಗಿಯೇ ಇತ್ತು: ಸೂಯೆಜ಼್ ಕಾಲುವೆಯ ರಾಷ್ಟ್ರೀಕರಣವಾದದ್ದು ಆಗ. ಈ ಮಧ್ಯೆ ಈಜಿಪ್ಟ್-ಇಸ್ರೇಲ್ ಯುದ್ಧವೂ ಪ್ರಾರಂಭವಾಯಿತು. ಪಾಶ್ಚಾತ್ಯ ರಾಷ್ಟ್ರಗಳ ವಿರೋಧವನ್ನು ಧೈರ್ಯವಾಗಿ ಎದುರಿಸಿ ನಿಂತ ನಾಸೆರರ ಬಗ್ಗೆ ಅರಬ್ ರಾಜ್ಯಗಳಲ್ಲಿ ಗೌರವ ಹೆಚ್ಚಿತು. 1958ರಲ್ಲಿ ಸಂಯುಕ್ತ ಅರಬ್ ಗಣರಾಜ್ಯ ಅಸ್ತಿತ್ವಕ್ಕೆ ಬಂತು. ಆದರೆ ಎಲ್ಲ ಅರಬ್ ರಾಜ್ಯಗಳ ಒಕ್ಕೂಟ ಸ್ಥಾಪಿಸಬೇಕೆಂಬ ನಾಸೆರ್ ಕನಸು ನನಸಾಗುವ ಮುಂಚೆಯೇ ಮುರಿದುಬಿತ್ತು (**ನೋಡಿ- ಅರಬ್ಬೀ-ಗಣರಾಜ್ಯ**). *

**ಈಜಿಪ್ಟಿನ ಪುರಾತತ್ತ್ವ:** ಪ್ರಾಚೀನ ಈಜಿಪ್ಟಿನಲ್ಲಿ ಸಮಕಾಲೀನ ನಾಗರಿಕತೆಗಳಲ್ಲೆಲ್ಲ ಔನ್ನತ್ಯ ಸ್ಥಾಪಿಸಿಕೊಂಡು ಸಾವಿರಾರು ವರ್ಷಗಳ ಕಾಲ ಅವಿರತವಾಗಿ ಬಂದ ನಾಗರಿಕತೆ ಇತ್ತು. ಆ ಕಾಲದ ಅವಶೇಷಗಳಾದ ಪಿರಮಿಡ್ಡುಗಳು, ಗೋರಿಗಳು, ದೇವಾಲಯಗಳು ಮತ್ತು ಶಿಲ್ಪಗಳು ಲೋಕಪ್ರಸಿದ್ಧ. ಅಲ್ಲದೆ, ಪುರಾತನ ಕಾಲದ ಎಲ್ಲ ತರಹದ ವಸ್ತುಗಳನ್ನೂ ಹೆಚ್ಚು ಕೆಡದಂತೆ ರಕ್ಷಿಸುವ ಒಣಹವೆ ಇಲ್ಲಿರುವುದರಿಂದ, ಪ್ರಾಚೀನ ಸಂಸ್ಕೃತಿಗಳ ಅಭ್ಯಾಸಿಗೆ ಬೇರೆ ಯಾವುದೇ ದೇಶದಲ್ಲೂ ಸಿಗದಷ್ಟು ಸಾಮಗ್ರಿಗಳು ಇಲ್ಲಿ ಸಿಗುತ್ತವೆ. 1938ರಲ್ಲಿ ಸಕಾರ ಎಂಬಲ್ಲಿ ಕಂಡುಬಂದ ಸು.ಪ್ರ.ಶ.ಪೂ. 3000ದ ಗೋರಿಯೊಂದರಲ್ಲಿ ಮೃತನಿಗಾಗಿ ಅಂದು ಇಟ್ಟಿದ್ದ ಮೀನು, ಮಾಂಸ, ಹಣ್ಣು, ರೊಟ್ಟಿ, ಮುಂತಾದುವೆಲ್ಲ ಇನ್ನೂ ಉಳಿದಿದ್ದುವು. ಸು. 5,000 ವರ್ಷಗಳ ಹಿಂದೆ ಆ ಗೋರಿಗೆ ಹೆಣ ಸಾಗಿಸಿ ಇರಿಸಿದ ಜನರ ಹೆಜ್ಜೆ ಗುರುತುಗಳೂ ನೆಲದ ಮೇಲೆ ಹಾಗೆಯೇ ಇದ್ದುವು. ಇಂಥ ವೈಶಿಷ್ಟ್ಯವಿದ್ದುದರಿಂದ ಈಜಿಪ್ಟ್ ಪುರಾತತ್ತ್ವಜ್ಞರನ್ನು ಬಹು ಸಂಖ್ಯೆಯಲ್ಲಿ ಆಕರ್ಷಿಸಿತು. ಇವರ ದುಡಿಮೆಯಿಂದ, ಪ್ರ.ಶ.ಪೂ. ಸು.3500ರಿಂದ ಪ್ರಸಕ್ತಶಕದ ಆರಂಭದ ಕಾಲದವರೆಗೆ ಈಜಿಪ್ಟಿನ ರಾಜಕೀಯ, ಸಾಮಾಜಿಕ, ಆರ್ಥಿಕ ಚರಿತ್ರೆ, ಧರ್ಮ, ಕಲೆ, ಭಾಷೆ, ಸಾಹಿತ್ಯ ಇವುಗಳ ಬಗ್ಗೆ ಸಂಗ್ರಹವಾಗಿರುವಷ್ಟು ವಿಷಯಗಳು ಬೇರೆ ಎಷ್ಟೋ ದೇಶಗಳಲ್ಲಿ ಇತ್ತೀಚಿನ ಕಾಲದವರೆಗೂ ದೊರೆಯುವುದಿಲ್ಲ. ಈ ಸಾಧನೆಗಾಗಿ ಅಲ್ಲಿನ ಪುರಾತತ್ತ್ವಜ್ಞರು ಬೆಳೆಸಿಕೊಂಡು ಬಂದ ವೈಜ್ಞಾನಿಕ ದೃಷ್ಟಿ ಮತ್ತು ರೀತಿನೀತಿಗಳು ಇಂದು ಪ್ರಪಂಚದ ಎಲ್ಲ ಭಾಗಗಳಲ್ಲೂ ಅನುಸರಿಸುತ್ತಿರುವ ಪುರಾತತ್ತ್ವಶಾಸ್ತ್ರಕ್ಕೆ ಬುನಾದಿಯಾಗಿವೆ. ಆಧುನಿಕ ಪುರಾತತ್ತ್ವಶಾಸ್ತ್ರ, ಅದರಲ್ಲೂ ಉತ್ಖನನಶಾಸ್ತ್ರ ಬೆಳೆದದ್ದು ಬಹಳಮಟ್ಟಿಗೆ ಈಜಿಪ್ಟಿನಲ್ಲೇ.

18ನೆಯ ಶತಮಾನದ ಕೊನೆಯಲ್ಲಿ ನೆಪೋಲಿಯನ್ ಈಜಿಪ್ಟಿನ ಮೇಲೆ ನಡೆಸಿದ ದಂಡಯಾತ್ರೆಯ ಕಾಲದಲ್ಲಿ, ಅಲ್ಲಿನ ಪ್ರಾಚೀನ ವೈಭವದ ಅವಶೇಷಗಳು ಯುರೋಪಿನ ವಿದ್ವಾಂಸರ ಕಣ್ಸೆಳೆದುವು. ಆಗ ಸಂಗ್ರಹಿಸಿದ್ದ ಹೀರೋಗ್ಲಿಫ್ ಲಿಪಿಯ ರೋಸೆಟ ಶಿಲಾಶಾಸನವನ್ನು 1821ರಲ್ಲಿ ಬ್ರಿಟನ್ನಿನ ಥಾಮಸ್ ಯಂಗ್ ಮತ್ತು ಫ್ರಾನ್ಸಿನ ಜೆ.ಎಫ್.ಶ್ಯಾಂಪಾಲ್ಯೋ ಮೊದಲು ಓದಿದರು. ಆಗ ಈಜಿಪ್ಟಿನ ಹಲವಾರು ಶಾಸನಗಳ ಸಂಗ್ರಹ, ಅರ್ಥವಿವರಣೆ ಹಾಗೂ ಚಾರಿತ್ರಿಕ ಸಂಶೋಧನೆಯ ಹೊಸ ಬಾಗಿಲೇ ತೆರೆಯಿತು. 1850ರಿಂದ ಈಚೆಗೆ ಎ. ಎಚ್. ರಿಂಡ್ ಮತ್ತು ಅಗಸ್ಟೆ ಮೇರಿಯಟ್‍ರಿಂದ ಆರಂಭವಾದ ಉತ್ಖನನಗಳನ್ನು ಎಡ್ವರ್ಡ್ ನೆವಿಲ್ ಮತ್ತು ಸರ್ ಫ್ಲಿಂಡರ್ಸ್ ಪೆಟ್ರೀ ವೈಜ್ಞಾನಿಕವಾಗಿ ಮುಂದುವರಿಸಿದರು. ಬ್ರಿಟನ್, ಅಮೆರಿಕ, ಫ್ರಾನ್ಸ್, ಜರ್ಮನಿ, ಇಟಲಿ ಮುಂತಾದ ದೇಶಗಳ ವಿದ್ವಾಂಸರು ಹಲವು ಸಂಶೋಧನ ಸಂಸ್ಥೆಗಳ ಸಹಾಯದಿಂದ ಈಜಿಪ್ಟಿನ ಪುರಾತತ್ತ್ವ ಸಂಶೋಧನೆಗಾಗಿ ಶ್ರಮಿಸಿದ್ದಾರೆ. ಯುರೋಪ್ ಮತ್ತು ಅಮೆರಿಕದ ಎಷ್ಟೋ ವಿಶ್ವವಿದ್ಯಾಲಯಗಳಲ್ಲಿ ಈಜಿಪ್ಟ್ ನಾಗರಿಕತೆಯ ಅಭ್ಯಾಸಕ್ಕೆ ಮೀಸಲಾದ ವಿಭಾಗಗಳು ಈಗಲೂ ಇವೆ.

ಈಜಿಪ್ಟಿನಲ್ಲಿ ಇದುವರೆಗೆ ದೊರಕಿರುವ ಹೆಚ್ಚಿನ ಪ್ರಾಚೀನ ಅವಶೇಷಗಳು ಕೈರೋದ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿವೆ. ಪ್ಯಾರಿಸ್, ಟ್ಯೂರಿನ್ ವಸ್ತುಸಂಗ್ರಹಾಲಯಗಳಲ್ಲೂ ಬ್ರಿಟನ್ನಿನ ಬ್ರಿಟಿಷ್ ಮತ್ತು ಆಷ್ಮೊಲಿಯನ್ ಮ್ಯೂಸಿಯಂ, ನ್ಯೂಯಾರ್ಕಿನ ಮೆಟ್ರೊಪಾಲಿಟನ್ ಮ್ಯೂಸಿಯಂ, ಬಾಸ್ಟನ್ನಿನ ಮ್ಯೂಸಿಯಂ ಆಫ್ ಫೈನ್ ಆರ್ಟ್ಸ್‍ಗಳಲ್ಲೂ ಗಮನಾರ್ಹ ಸಂಗ್ರಹಗಳಿವೆ. ಇತ್ತೀಚೆಗೆ ಭಾರತ ಸರ್ಕಾರದ ಕೇಂದ್ರ ಪುರಾತತ್ತ್ವ ಇಲಾಖೆಯವರು ಈಜಿಪ್ಟಿನ ನ್ಯೂಬಿಯ ಪ್ರದೇಶದಲ್ಲಿ ಉತ್ಖನನಗಳನ್ನು ನಡೆಸಿ, ಅಲ್ಲಿನ ಕೆಲವು ಅವಶೇಷಗಳನ್ನು ದೆಹಲಿಗೆ ತಂದಿದ್ದಾರೆ. ಹೈದರಾಬಾದಿನ ಪುರಾತತ್ತ್ವ ವಸ್ತುಸಂಗ್ರಹಾಲಯದಲ್ಲಿ ಈಜಿಪ್ಟಿನಲ್ಲಿ ದೊರಕಿದ ಒಂದು ಪುರಾತನ ಮಮ್ಮಿಯನ್ನು (ರಾಸಾಯನಿಕಗಳಿಂದ ಸಂರಕ್ಷಿಸಿದ ಮೃತದೇಹ) ಪ್ರದರ್ಶಿಸಲಾಗಿದೆ.

**ಶಿಲಾಯುಗ:** ಈಜಿಪ್ಟಿನ ಮರಳುಗಾಡು ಪ್ರದೇಶದಲ್ಲಿ ನೈಲ್ ನದಿಯತ್ತ ಹರಿಯುವ ಹಲವು ತೊರೆಗಳ ಪಕ್ಕದಲ್ಲಿ ಪ್ರಾಚೀನ ಶಿಲಾಯುಗದ ಆಯುಧಗಳು ದೊರಕಿವೆ. ಇವುಗಳಲ್ಲಿ ಹೆಚ್ಚಿನವು ಅಷೂಲಿಯನ್ ಸಂಪ್ರದಾಯಕ್ಕೆ ಸೇರಿದವು. ಇವು ಯುರೋಪ್ ಮತ್ತಿತರೆಡೆಯ ಪ್ರಾಚೀನ ಶಿಲಾಯುಗದ ಕಾಲಕ್ಕೆ ಸೇರಿದವೋ ಅಲ್ಲವೋ ಎಂಬುದನ್ನು ನಿಷ್ಕರ್ಷಿಸುವುದು ಕಷ್ಟ. ನ್ಯೂಬಿಯ, ಮೆರಿಮ್ಡೆ, ಫಯೂಮ್ ಮುಂತಾದೆಡೆಗಳಲ್ಲಿ ನವಶಿಲಾಯುಗದ ಕುರುಹುಗಳು ದೊರಕಿವೆ. ಈ ಕಾಲದ ಜನ ಫ್ಲಿಂಟ್ ಮತ್ತು ಚರ್ಟ್ ಕಲ್ಲುಗಳ ಆಯುಧ ತಯಾರಿಕೆಯಲ್ಲಿ ಚತುರರು. ವ್ಯವಸಾಯ, ಪಶುಪಾಲನೆ ಈ ಜನರ ಮುಖ್ಯ ಕಸಬು. ಕೈಯಲ್ಲಿ ತಯಾರಿಸಿದ ಕೆಂಪು-ಕಪ್ಪು ಬಣ್ಣದ ಮಡಕೆಗಳು ಅಥವಾ ಕೆಂಪು ಮತ್ತು ಕಪ್ಪು ಬಣ್ಣದ ಹೊಳಪಿನ ಮಡಕೆಗಳು ಈ ಕಾಲದಲ್ಲಿ ಉಪಯೋಗದಲ್ಲಿದ್ದುವು. ಕಂದು ಬಣ್ಣದ ಮೇಲೆ ಕೆಂಪು ಬಣ್ಣದ ಹಡಗಿನ, ಜನರ ಮತ್ತು ಪ್ರಾಣಿಗಳ ಚಿತ್ರ ಬಿಡಿಸಿದ ಮಡಕೆಗಳು ಈ ಸಂಸ್ಕೃತಿಯ ಕೊನೆಗಾಲದಲ್ಲಿ ಬಳಕೆಗೆ ಬಂದುವು. ಮೃತರನ್ನು ಚಾಪೆಗಳಲ್ಲಿ ಸುತ್ತಿ ಹೂಳುವ ಪದ್ಧತಿ ರೂಢಿಯಲ್ಲಿತ್ತು. ಇಲ್ಲಿನ ನವಶಿಲಾಯುಗದ ಸಂಸ್ಕೃತಿಗಳು ಇತರ ದೇಶದ ಸಮಕಾಲೀನ ಸಂಸ್ಕೃತಿಗಳಿಗಿಂತ ವಿಭಿನ್ನ ರೀತಿಯವು. ವಿಶಿಷ್ಟ ಈಜಿಪ್ಟ್ ಸಂಸ್ಕೃತಿಯ ಬೆಳವಣಿಗೆಗೆ ಇವು ದಾರಿಮಾಡಿದುವು.

**ತಾಮ್ರ-ಶಿಲಾಯುಗ:** ಪ್ರ.ಶ.ಪೂ. ಸು. 4000ದ ಹೊತ್ತಿಗಾಗಲೇ ಈಜಿಪ್ಟಿನಲ್ಲಿ ತಾಮ್ರದ ಉಪಯೋಗ ಪಸರಿಸಿತ್ತು. ಆದರೂ ಅನಂತರ ಬಹುಕಾಲದವರೆಗೂ ಶಿಲಾಯುಧಗಳು ಬಳಕೆಯಲ್ಲಿದ್ದುವು. ಲೋಹದ ಉಪಯೋಗ ಪ್ರಾರಂಭವಾದಂದಿನಿಂದ ಈಜಿಪ್ಟ್ ಸಂಸ್ಕೃತಿಯಲ್ಲಿ ಅಸಾಧಾರಣ ಪ್ರಗತಿ ಕಂಡು ಬಂತು. ಮುಂದೆ ಬಹುಕಾಲದವರೆಗೆ ಈಜಿಪ್ಟಿನಲ್ಲಿ ಪ್ರಚಲಿತವಾಗಿದ್ದ ರಾಜಕೀಯ ವ್ಯವಸ್ಥೆ, ಸಾಮಾಜಿಕ ಕಟ್ಟಳೆ, ಧರ್ಮ, ಕಲೆ, ಮುಂತಾದ ಎಲ್ಲದರ ಮೂಲವನ್ನೂ ಈ ಕಾಲದಲ್ಲೇ ಗುರುತಿಸಬಹುದು. ಈ ಕಾಲದಲ್ಲಾಗಲೇ ಒಂದು ರೀತಿಯ ಪಂಚಾಂಗ ಪದ್ಧತಿಯೂ ಬರವಣಿಗೆಯೂ ರೂಢಿಗೆ ಬಂದಿದ್ದುವು. ಮುಂದಿನ ಈಜಿಪ್ಟಿನ ಪ್ರಬುದ್ಧ ಸಂಸ್ಕೃತಿಗೆ ಬೇಕಾದ ಈ ಮೂಲಸಾಮಗ್ರಿಗಳನ್ನು ರೂಪಿಸುವುದರಲ್ಲಿ, ಈ ಕಾಲದಲ್ಲಿ ಸಿರಿಯ ಮತ್ತು ಲಿಬಿಯ ಪ್ರದೇಶದಿಂದ ವಲಸೆಬಂದ ಜನರ ಕೊಡುಗೆಯೂ ಸಾಕಷ್ಟಿತ್ತು. ನಕದ, ಬಲ್ಲಾಸ್, ಫಯೂಮ್ ಮುಂತಾದೆಡೆಗಳಲ್ಲಿನ ಉತ್ಖನನಗಳಿಂದ ಈ ಕಾಲದ ಬಗ್ಗೆ ಮಾಹಿತಿ ದೊರಕಿದೆ.

**ಚಾರಿತ್ರಿಕ ಯುಗ: ಪುರಾತನ ಈಜಿಪ್ಟ್:** ಈಜಿಪ್ಟಿನ ಚಾರಿತ್ರಿಕಯುಗದ ಆರಂಭಕಾಲಕ್ಕೂ (ಪ್ರ.ಶ.ಪೂ.ಸು.3200) ಅದಕ್ಕೆ ಹಿಂದಿನ ತಾಮ್ರ ಶಿಲಾಯುಗಕ್ಕೂ ಜನಜೀವನ ವಿಧಾನದಲ್ಲಿ ಗಣನೀಯ ವ್ಯತ್ಯಾಸವೇನೂ ಇಲ್ಲ. ಆದರೆ ಈ ಕಾಲದಲ್ಲಿ ಉತ್ತರ ದಕ್ಷಿಣ ಈಜಿಪ್ಟ್ ಏಕಾಡಳಿತಕ್ಕೆ ಒಳಪಟ್ಟಿದ್ದರಿಂದ ಉಂಟಾದ ಹೊಸ ರಾಜಕೀಯ ವಾತಾವರಣದಿಂದ ಸಾಂಸ್ಕೃತಿಕ ಬೆಳವಣಿಗೆಗೆ ಅವಕಾಶವಾಯಿತು. ಎರಡನೆಯ ಮತ್ತು ಮೂರನೆಯ ರಾಜವಂಶದವರ, ಅದರಲ್ಲೂ ಖಸೆಕೆಮುಯಿ ಮತ್ತು ಜ಼ೋಸರ್ ದೊರೆಗಳ ಕಾಲದಲ್ಲಿ ಈಜಿಪ್ಟಿನ ಸಂಸ್ಕೃತಿಯಲ್ಲಿ ಇದ್ದಕ್ಕಿದ್ದಂತೆಯೇ ಊರ್ಧ್ವಮುಖ ವಿಕಾಸ ಕಂಡುಬರುತ್ತದೆ. ಈಜಿಪ್ಟಿನ ಅತ್ಯಂತ ಪ್ರಾಚೀನ ಪಿರಮಿಡ್ಡಾದ ಜ಼ೋಸರನ ಪಿರಮಿಡ್ಡು (ಪ್ರ.ಶ.ಪೂ.ಸು.3000) ಮತ್ತು ಅದರ ಬಳಿಯ ಪೈತೃಕ ದೇವಾಲಯ ಈ ವಿಕಾಸದ ದ್ಯೋತಕಗಳಾಗಿವೆ. ಪಿರಮಿಡ್ಡನ್ನು ನ್ಯೂನತೆಯಿಲ್ಲದೆ ಕಟ್ಟಲು ಬೇಕಾದ ಬೌದ್ಧಿಕ ತಾಂತ್ರಿಕ ಸಲಕರಣೆ ಆ ಕಾಲದಲ್ಲೇ ಸಾಧಿಸಿದ್ದದ್ದು ಆಶ್ಚರ್ಯಕರವಾದರೂ ಸಿದ್ಧವಾದ ವಿಷಯ. ಮುಂದೆ ಕೇವಲ 200ವರ್ಷಗಳಲ್ಲಿ ಈ ಮಾದರಿಯ ಇನ್ನೂ ಕೆಲವು ಪಿರಮಿಡ್ಡುಗಳೂ ದೇವಾಲಯಗಳೂ ನಿರ್ಮಿತವಾದುವು. ಐದನೆಯ ರಾಜವಂಶದವರ ಕಾಲದಲ್ಲಿ ಬೆಳೆಸಿದ ಧಾರ್ಮಿಕ ನಡೆವಳಿಕೆಗಳೂ ವಾಸ್ತು, ಚಿತ್ರಕಲೆ ಮುಂತಾದುವೂ ಮುಂದೆ ಸುಮಾರು 3,000 ವರ್ಷಗಳವರೆಗೆ ಹೆಚ್ಚು ಬದಲಾವಣೆಯಿಲ್ಲದೆ ಅವಿಚ್ಛಿನ್ನವಾಗಿ ಮುಂದುವರಿದುವು. ಐದನೆಯ ರಾಜವಂಶದ ಒಬ್ಬ ದೊರೆ 2,500 ವರ್ಷಗಳ ಅನಂತರ ಆ ದೇಶವನ್ನು ಸಂದರ್ಶಿಸಿದ್ದರೂ ಅದು ಹೆಚ್ಚು ಕಡಿಮೆ ತನ್ನ ಕಾಲವೆಂದೇ ಭ್ರಮಿಸಿಕೊಳ್ಳುವಷ್ಟು ಮಟ್ಟಿಗೆ ಸಾಮ್ಯ ಕಂಡುಬರುತ್ತಿತ್ತು. ಆದರೆ ವಾಸ್ತುಶಿಲ್ಪ, ಚಿತ್ರಕಲೆ ಮತ್ತು ಬರವಣಿಗೆಗಳಲ್ಲಿ ಮಾತ್ರ ಅವಿರತ ಅಧ್ಯಯನದಿಂದಾಗಿ ಅವುಗಳಲ್ಲಿ ಕಾಲಕಾಲಕ್ಕೆ ಕಂಡುಬರುವ ಅತಿ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಆದ್ದರಿಂದ ವಿದ್ವಾಂಸರಿಗೆ ಇತರ ಯಾವ ಆಧಾರಗಳಿಲ್ಲದಿದ್ದರೂ ಇವುಗಳ ಕಾಲನಿಷ್ಕರ್ಷೆ ಕಷ್ಟದ ಕೆಲಸವೇನೂ ಆಗಿಲ್ಲ.

ಚಾರಿತ್ರಿಕ ಯುಗದ ಆದಿಕಾಲದ ಬಗ್ಗೆ ಸಕಾರ, ಹೆಲ್ವಾನ್, ಅಬಿಡಾಸ್ ಮತ್ತು ಹೀರಕನ್ಪೊಲಿಸ್‍ನಲ್ಲಿನ ಉತ್ಖನನಗಳೂ ನಾಲ್ಕನೆಯ ರಾಜವಂಶದವರ ಕಾಲದ ಬಗ್ಗೆ ಗಿಜ಼ೆಯಲ್ಲಿನ ಉತ್ಖನನ, ಮುಂದಿನ ಕಾಲದ ಬಗ್ಗೆ ದಹ್ಶೂರ್, ಅಬುಸಿರ್, ಸಕ್ಕರಾ ಮುಂತಾದೆಡೆಯ ಉತ್ಖನನಗಳು ಮಾಹಿತಿ ಒದಗಿಸಿವೆ. ದೆಂದೆರಾ, ನತ-ಎದ್-ದೆರ್, ದೀರ್-ಎಲ್-ಬಹ್ರಿ, ದಹ್ಶೂರ್; ಲಿಸ್ಟ್, ಲಹೂನ್‍ಗಳಲ್ಲಿನ ಉತ್ಖನನಗಳು ಪುರಾತನ ಈಜಿಪ್ಟಿನ ಮಧ್ಯಕಾಲದ ಬಗ್ಗೆ ಬೆಳಕು ಚೆಲ್ಲಿವೆ. ಪುರಾತನ ಈಜಿಪ್ಟಿನ ಕೊನೆಯ ವಿಭಾಗದ ಅಧ್ಯಯನಕ್ಕೆ ಥೀಬ್ಸ್, ಧೀರ್-ಎಲ್-ಬಹ್ರಿ, ಅಮರ್ನ, ದೀರ್-ಎಲ್-ಮೆದಿನೇ, ಸಕ್ಕರಾ, ಕಾರ್ನಾಕ್, ಲಕ್ಸರ್ ಮುಂತಾದೆಡೆಯ ಉತ್ಖನನಗಳು ಸಾಮಗ್ರಿ ಒದಗಿಸುತ್ತವೆ. ಇವಲ್ಲದೆ ಗಿಜ಼ೆ, ಅಬು ಸಿಂಬೆಲ್, ದೀರ್-ಎಲ್-ಬಹ್ರಿ, ಥೀಬ್ಸ್, ಅಮರ್ನ, ದೀರ್-ಎಲ್-ಮೆದಿನೇ, ಸಕ್ಕರಾ, ಕಾರ್ನಾಕ್, ಲಕ್ಸರ್ ಮುಂತಾದೆಡೆಗಳಲ್ಲಿನ ವಾಸ್ತುಶಿಲ್ಪ ಅವಶೇಷಗಳೂ ಹಲವಾರು ದೇವಾಲಯಗಳಲ್ಲೂ ಗೋರಿಗಳಲ್ಲೂ ಇರುವ ವರ್ಣಚಿತ್ರಗಳೂ ಅಲ್ಲಲ್ಲೇ ಕಂಡುಬಂದಿರುವ ನೂರಾರು ಶಾಸನಗಳೂ ಪ್ರಾಚೀನ ಈಜಿಪ್ಟ್ ಬಗ್ಗೆ ಅಧ್ಯಯನ ಸಾಧನಗಳಾಗಿವೆ. ಇವಲ್ಲದೆ ಈ ಕಾಲಕ್ಕೆ ಸಂಬಂಧಪಟ್ಟ ಕೆಲವು ಪಪೈರಸ್ ಹಸ್ತಪ್ರತಿಗಳೂ ದೊರಕಿವೆ.

ಗ್ರೀಕ್-ರೋಮನ್ನರ ಕಾಲ: ಅಲೆಕ್ಸಾಂಡರ್ ಈಜಿಪ್ಟನ್ನು ಆಕ್ರಮಿಸಿದ (ಪ್ರ.ಶ.ಪೂ. 332) ಅನಂತರ ಗ್ರೀಕ್ ವಂಶೀಯರಾದ ಟಾಲಮಿ ಅರಸರು ಇಲ್ಲಿ ರಾಜ್ಯವಾಳಿದರು. ಇವರ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಹಲವಾರು ಪ್ರಾಚೀನ ಈಜಿಪ್ಟಿನ ಶೈಲಿಯ ಕಟ್ಟಡಗಳು

ಹಾಥೋರ್, ಕೋಮ್ ಒಮ್ಬೋ, ಫಿಲೇ ಎಡ್ಫು ಮುಂತಾದೆಡೆಗಳಲ್ಲಿ ಕಂಡುಬಂದಿವೆ. ಅಲೆಕ್ಸಾಂಡ್ರಿಯದಲ್ಲೂ ಫಯೂಮ್ ಓಯಸಿಸ್ಸಿನ ತೀರಪ್ರದೇಶದಲ್ಲೂ ಗ್ರೀಕ್ ಶೈಲಿಯ ಕಟ್ಟಡಗಳೂ ಪಟ್ಟಣಗಳ ಅವಶೇಷಗಳೂ ಬೆಳಕಿಗೆ ಬಂದಿವೆ. ಈಜಿಪ್ಟಿನಲ್ಲಿ ನಾಣ್ಯಗಳು ಈ ಕಾಲದಲ್ಲಿ ಮೊದಲ ಬಾರಿಗೆ ಪ್ರಚಲಿತವಾದುವು.

ಪ್ರ.ಶ.ಪೂ. 30ರಲ್ಲಿ ಈಜಿಪ್ಟ್ ರೋಮ್ ಸಾಮ್ರಾಜ್ಯದ ಒಂದು ಪ್ರಾಂತ್ಯವಾಯಿತು. ಈ ಕಾಲದಲ್ಲಿ ಈಜಿಪ್ಟಿನ ಸಂಸ್ಕೃತಿಯಲ್ಲಿ ಬಹು ಬದಲಾವಣೆಗಾಗಿ, ರೋಮ್ ಸಂಸ್ಕೃತಿ ಕ್ರಮಕ್ರಮವಾಗಿ ಪುರಾತನ ನಾಗರಿಕತೆಯನ್ನು ಮೂಲೆಗೊತ್ತಿತೆಂದೇ ಹೇಳಬಹುದು. ರೋಮ್ ಚಕ್ರಾಧಿಪತ್ಯದ ಕಾಲದಲ್ಲೇ ಕ್ರೈಸ್ತಧರ್ಮವೂ ಇಲ್ಲಿ ಹರಡಿತು. ರೋಮನ್ನರ ಕಾಲದ ದೇವಾಲಯಗಳು ಫಿಲೇ ಧಕ್ಯಾ ಓಯಸಿಸ್, ದಕ್ಕ, ಎಲ್–ಶೀಕ್–ಇಬದ ಮುಂತಾದೆಡೆಗಳಲ್ಲಿವೆ. ಆ ಕಾಲದ ನಗರದ ಅವಶೇಷಗಳನ್ನೂ ಸಮಾಧಿಗಳನ್ನೂ ಶ್ಮಶಾನಗಳನ್ನೂ ಎಡ್ಫು ಎಲ್–ಬಹನ್ಸಾ ಮತ್ತು ಅಲೆಕ್ಸಾಂಡ್ರಿಯಗಳಲ್ಲಿ ಗುರುತಿಸಲಾಗಿದೆ. ವಾದಿನಮ್ರನ್, ಆಸ್ವಾನ್ ಮತ್ತು ಸೋಹಾಗ್‍ಗಳಲ್ಲಿ ಕ್ರೈಸ್ತರ ಪುರಾತನ ಚರ್ಚುಗಳಿವೆ.

ಅರಬ್ಬರು ಮತ್ತು ಅನಂತರ: ಪ್ರ.ಶ. 640–41ರಲ್ಲಿ ಈಜಿಪ್ಟ್ ಅರಬ್ಬರ ಕೈವಶವಾಯಿತು. ಅಂದಿನಿಂದ ಅರಬ್ ಸಂಸ್ಕೃತಿ ಮತ್ತು ಇಸ್ಲಾಮ್ ಧರ್ಮ ಈಜಿಪ್ಟಿನಲ್ಲಿ ಹರಡಿತು. ಈ ಕಾಲದ ಹಲವಾರು ಕಟ್ಟಡಗಳು ಕೈರೊ ಮತ್ತು ಅಲೆಕ್ಸಾಂಡ್ರಿಯಗಳಲ್ಲಿವೆ. (ಎಸ್.ಎನ್.)

**ಈಜಿಪ್ಟಿನ ಪ್ರಾಚೀನ ಧರ್ಮ:** ದೇವಾಲಯಗಳ ಭಿತ್ತಿಚಿತ್ರ, ಪ್ರತಿಮಾ ಶಿಲ್ಪಗಳಲ್ಲಿ, ಮತೀಯ ಸಂಸ್ಕಾರಗಳಲ್ಲಿ ಬಳಸುವ ಉಪಕರಣಗಳ ಮೇಲೆ ರೂಪಿತವಾಗಿರುವ ಮತ್ತು ಸಾಹಿತ್ಯದಲ್ಲಿ ಕಾಣಬರುವ ಈಜಿಪ್ಟಿನ ಬಹುಸಂಖ್ಯಾತ ದೇವಗಣ, ಆ ಜನರ ಧಾರ್ಮಿಕ ಆಚಾರ ವ್ಯವಹಾರಗಳ ವೈವಿಧ್ಯ–ಇವು ದಿಗ್ಭ್ರಮೆ ಹಿಡಿಸುವಷ್ಟು ವಿಪುಲವೂ ಸಂಕೀರ್ಣವೂ ಆಗಿವೆ. ಆದರೆ ಈ ನಾಗರಿಕತೆ ಪ್ರಾಗೈತಿಹಾಸಿಕ ಕಾಲದ ನಂಬಿಕೆಗಳಿಂದ ಕ್ರಮೇಣ ಬೆಳೆದು ಬಂದು ಮೂರು ಸಹಸ್ರ ವರ್ಷಗಳ ಜೀವಮಾನದಲ್ಲಿ ವಿವಿಧ ಮೂಲಗಳಿಂದ ವಿವಿಧ ರೀತಿಯ ಪ್ರಭಾವಗಳಿಗೊಳಗಾಗಿತ್ತೆಂಬುದನ್ನೂ ಅದು ನಾಶವಾದ ಸಹಸ್ರಾರು ವರ್ಷಗಳ ಅನಂತರದ ನಾವು ಆಧುನಿಕ ಸಂಸ್ಕೃತಿಯಿಂದ ಪ್ರಭಾವಿತವಾಗಿರುವೆವೆಂಬುದನ್ನೂ ಸ್ಮರಿಸಿಕೊಂಡರೆ ಈ ದಿಗ್ಭ್ರಮೆಗೆ ಕಾರಣವಿಲ್ಲ. ಧಾರ್ಮಿಕವಾಗಿ ವಿಶಾಲದೃಷ್ಟಿ ಹೊಂದಿದ್ದ ಈ ಜನ ವಿವಿಧ ಪಂಗಡ. ಪ್ರದೇಶ, ಮೂಲಗಳಿಂದ ಜನ್ಮತಳೆದು ಬಂದ ಪ್ರಾಣಿ, ಮಾನವ ಅಥವಾ ಮಿಶ್ರರೂಪಗಳ–ಕೆಲವು ಸಲ ಪರಸ್ಪರ ವಿರೋಧಾತ್ಮಕವಾದ–ಹಲವಾರು ದೇವತೆಗಳನ್ನುಳಿಸಿಕೊಂಡು ಬಂದಿರುವುದು ಅವರ ವಿಶಾಲದೃಷ್ಟಿಗೆ ಸಾಕ್ಷಿಯಾಗಿದೆ. ಈ ವಿಶಾಲದೃಷ್ಟಿಯ ಪ್ರಭಾವದಿಂದ ಹಳತು–ಹೊಸತುಗಳನ್ನು ಒಂದುಗೂಡಿಸಿ ಹಲವಾರು ವಿರೋಧಾತ್ಮಕ ನಂಬಿಕೆಗಳನ್ನು ಬೆಳೆಸಿಕೊಂಡಿದ್ದರು. ಕಾಲಕ್ರಮದಲ್ಲಿ ಯುದ್ಧಗಳಲ್ಲಿ ಗೆದ್ದು ಅಧಿಕಾರ ಪಡೆದ ಪಂಗಡಗಳ ದೇವತೆಗಳು ಹೆಚ್ಚು ಪ್ರಾಮುಖ್ಯ ಪಡೆದರು. ಥೀಬ್ಸ್ ನಗರದ ಅಮನ್ ದೇವತೆ ಅಲ್ಲಿನ ರಾಜವಂಶದವರು ಈಜಿಪ್ಟಿನ ಚಕ್ರವರ್ತಿಗಳಾದ ಅನಂತರ ಆ ಮೊದಲು ಅಧಿದೇವತೆಯಾಗಿದ್ದ ರಾದೊಂದಿಗೆ ಮಿಳಿತವಾಗಿ ಆಮನ್–ರಾ ಎಂಬ ಹೆಸರಿನಿಂದ ಪ್ರಬಲನಾದ. ಈ ಜನರ ಭಾವನೆಗಳಲ್ಲಿ ಹೆಚ್ಚಿನ ಭಿನ್ನತೆಗಳಿದ್ದರೂ ಮತೀಯಾಚರಣೆಗಳಲ್ಲಿ ಐಕ್ಯ ಕಂಡುಬರುತ್ತಿತ್ತು. ಮಂದಿರಗಳ ಕಟ್ಟಡಗಳು, ಮತೀಯ ಸಂಸ್ಕಾರ ಮತ್ತು ತತ್ತ್ವಗಳಲ್ಲಿ ಈ ಐಕ್ಯವನ್ನು ಕಾಣಬಹುದು. ಮತೀಯ ನಂಬಿಕೆಗಳಲ್ಲಿ ಜಡತೆಯಿರದೆ, ಅನುಕ್ರಮಣ ಶೀಲತೆಯಿದ್ದುದು ಕಾಣಬರುತ್ತದೆ.

ಈ ಜನರ ಧಾರ್ಮಿಕ ಇತಿಹಾಸವನ್ನು ಸುಲಭವಾಗಿ ಗ್ರಹಿಸಲು ಅವರ ದೇವತೆಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬೇಕಾಗುತ್ತದೆ: (ಅ) ಸ್ಥಳೀಯ ಪ್ರಾಣಿರೂಪ ದೇವತೆಗಳು (ಆ) ಓಸಿರಿಸ್ ಮತ್ತು ಪರಿವಾರ (ಇ) ದೇವಾಲಯಗಳಿಲ್ಲದ ರಾಜವಂಶದ ದೇವತೆಗಳು ಮತ್ತು (ಈ) ಸೂರ್ಯ ಮತ್ತು ಇತರ ನಕ್ಷತ್ರಮೂಲ ದೇವತೆಗಳು.

ಆದಿಕಾಲದಲ್ಲಿ ಈಜಿಪ್ಟಿನ ಜನರು ಹಲವಾರು ಪ್ರಾದೇಶಿಕ ಪಂಗಡಗಳಿಗೆ ಸೇರಿದ್ದು ಪ್ರತಿಪಂಗಡದವರೂ ತಮ್ಮವೇ ಆದ ಪ್ರಾಣಿಗಳನ್ನು ಪೂಜಿಸುತ್ತಿದ್ದರು. ಜನೋಪಯೋಗಿ ಸಾಧುಪ್ರಾಣಿಗಳಾದ ಹಸು, ಆಡು, ಕುರಿಗಳೂ ದುಷ್ಟ ಪ್ರಾಣಿಗಳಾದ ನೀರಾನೆ (ಹಿಪಪಾಟಮಸ್), ಮೊಸಳೆ, ನಿಕೃಷ್ಟ ಪ್ರಾಣಿಗಳಾದ ಹಾವು, ಚೇಳು, ಬೆಕ್ಕು ಮುಂತಾದ ಕ್ರಿಮಿಕೀಟಗಳು ದೇವತ್ವ ಪಡೆದು ಪೂಜಿಸಲ್ಪಡುತ್ತಿದ್ದುವು. ಈ ಪ್ರಾಣಿಗಳ ಕಾಲ್ಪನಿಕವಾದ ಶಕ್ತಿ, ಪ್ರಭಾವ, ಹುಟ್ಟು, ಬೆಳವಣಿಗೆ, ಮರಣಗಳನ್ನು ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಧಾರ್ಮಿಕ ನಾಟಕಗಳಾಗಿ ನಿರೂಪಿಸುತ್ತಿದ್ದರು. ಪ್ರತಿ ಪಂಗಡದ ಮುಖ್ಯ ನಗರಗಳಲ್ಲಿ ಈ ಪ್ರಾಣಿಗಳ ದೇವಾಲಯ, ಕೋಟೆ, ಪರಿವಾರಗಳು ಇರುತ್ತಿದ್ದುವು. ಈ ದೇವತೆಗಳು ಭಕ್ತಾದಿಗಳ ಪೂಜೆಯ ಪ್ರತಿಫಲವಾಗಿ ಅವರ ಭೂಸಂಪತ್ತನ್ನೂ ದನಕುರಿಗಳನ್ನೂ ರಕ್ಷಿಸುತ್ತಿದ್ದುದಲ್ಲದೆ, ಅವರ ಶತ್ರುಗಳ ಮತ್ತು ಪಾಷಂಡಿಗಳ ವಿಷಯದಲ್ಲಿ ಕ್ರೂರವಾಗಿ ನಡೆದುಕೊಳ್ಳುತ್ತಿದ್ದರೆಂದು ನಂಬಲಾಗಿತ್ತು. ಈ ದೇವತೆಗಳ ವ್ಯಾಪ್ತಿ ತಮ್ಮ ತಮ್ಮ ನಗರ–ಪ್ರದೇಶಗಳಿಗೆ ಸೀಮಿತವಾಗಿರುತ್ತಿತ್ತು. ಕಾಲಾನುಕ್ರಮದಲ್ಲಿ ದೇಶ ಒಬ್ಬ ರಾಜನ ನೇತೃತ್ವದಲ್ಲಿ ಐಕ್ಯ ಸಾಧಿಸಿದ ಅನಂತರ, ದೇವತೆಗಳನ್ನು ಗಣಗಳನ್ನಾಗಿ ವಿಂಗಡಿಸಿ ಅಧಿದೇವತೆ ಅಧೀನದೇವತೆಗಳೆಂದು ವರ್ಗೀಕರಣ ಮಾಡುವ ಪ್ರಯತ್ನದೊಡನೆ ಆಕಾರವನ್ನು ಪ್ರಾಣಿರೂಪದಿಂದ ಮಾನವರೂಪಕ್ಕೆ ಬದಲಿಸುವ ಯತ್ನವೂ ಕಂಡುಬರುತ್ತದೆ. ಪ್ರಾಣಿಯ ತಲೆಯುಳ್ಳ ಮಾನವಾಕೃತಿ ಅಥವಾ ಮಾನವ ದೇಹದ ಮೇಲೆ ಪ್ರಾಣಿಯ ಸಂಕೇತವಿದ್ದ ಆಕೃತಿಗಳನ್ನು ಕಾಣಬಹುದು. ಬಹುಶಃ ಈ ಘಟ್ಟದಲ್ಲೇ ಪೂರ್ಣ ಮಾನವಾಕೃತಿಯ ಕಾಪ್ಟಾಸಿನ ಮಿನ್, ಥೀಬ್ಸ್‌ನ ಆಮನ್, ಓಸಿರಿಸ್, ಇಸಿಸ್, ಹೋರಸ್ ಮುಂತಾದ ದೇವತೆಗಳೂ ಹುಟ್ಟಿಕೊಂಡಂತೆ ಕಾಣುತ್ತದೆ.

ವಿಶ್ವಸೃಷ್ಟಿ ಮತ್ತು ವಿಶ್ವದೇವತೆಗಳ ವಿಷಯದಲ್ಲಿ ಇವರ ನಂಬಿಕೆ, ಆಚರಣೆಗಳು ಗಮನಾರ್ಹವಾಗಿವೆ. ಭೂಮಿ ತಟ್ಟೆಯಾಕಾರದಲ್ಲಿದ್ದು ಫಲವತ್ತಾದ ಕಣಿವೆ, ಕಂದರ ಗಿರಿದುರ್ಗಗಳಿಂದ ಕೂಡಿದೆಯೆಂದೂ ಜಲರಾಶಿಯ ಮೇಲೆ ತೇಲುತ್ತಿದೆಯೆಂದೂ, ಈ ಜನರಾಶಿಯೇ ಆದಿಕಾಲದ ಜೀವರಾಶಿಯ ಸೃಷ್ಟಿಗೆ ಕಾರಣವೆಂದೂ, ಇದರಿಂದ ಹುಟ್ಟಿದ ಪರ್ವತದಲ್ಲಿ ದಿನಂಪ್ರತಿ ಸೂರ್ಯ ಉದಯಿಸುವನೆಂದೂ ಈಜಿಪ್ಟಿನ ಸಂಪನ್ಮೂಲವಾದ ನೈಲ್‍ನದಿ ಭೂಮಿಯ ತಳದಿಂದ ಪೊಟರೆಗಳ ಮಾರ್ಗವಾಗಿ ನುಗ್ಗಿಬಂದು ಭೂಮಿಯ ಫಲವತ್ತನ್ನು ಹೆಚ್ಚಿಸುವುದೆಂದೂ, ಮೇಲಿನ ಅಂತರಿಕ್ಷ ಬೋಗುಣಿಯಾಕಾರದ ಆಕಾಶವನ್ನು ಎತ್ತಿ ಹಿಡಿದಿರುವುದೆಂದೂ ಈ ಜನ ನಂಬಿದ್ದರು. ವಿಶ್ವದ ಅಂಗಾಂಗಗಳಿಗೂ ಅಧಿದೇವತೆಗಳು ಇರುತ್ತಿದ್ದರು. ಭೂದೇವತೆ ಗೆಬ್ ಮಲಗಿರುತ್ತಿದ್ದರೆ ಆಕಾಶದೇವತೆ ನಟ್ ದೇಹವನ್ನು ಕಮಾನಿನಾಕಾರದಲ್ಲಿ ಬಗ್ಗಿಸಿ, ಭೂಮಿಯ ಮೇಲೆ ತನ್ನ ನಾಲ್ಕು ಪಾದಗಳನ್ನೂರಿ ನಿಂತಿರುತ್ತಿದ್ದಳು. ಅಂತರಿಕ್ಷ ದೇವತೆ ಷು ಭೂಮಿಯ ಮೇಲೆ ನಿಂತು ತನ್ನ ಕೈಗಳಿಂದ ಆಕಾಶ ಬೀಳದಂತೆ ಎತ್ತಿ ಹಿಡಿದಿದ್ದ.

ನಕ್ಷತ್ರರೂಪದ ದೇವತೆಗಳಲ್ಲಿ ರಾ ಎಂದು ಹೆಸರಾದ ಸೂರ್ಯ ಮುಖ್ಯ. ಆತ ಸಂಧ್ಯೆಯ ಅನಂತರ ದೋಣಿಯಲ್ಲಿ ಕುಳಿತು ಅಧೋಲೋಕಕ್ಕೆ ಹೋಗುವಾಗ ತಾತ್ ಎಂದು ಹೆಸರಾದ ಚಂದ್ರನನ್ನು ಆಕಾಶದಲ್ಲಿ ತನ್ನ ಪ್ರತಿನಿಧಿಯಾಗಿ ನೇಮಿಸುತ್ತಿದ್ದ. ಈ ಪ್ರಯಾಣಕಾಲದಲ್ಲಿ ದುಷ್ಟಸರ್ಪವೊಂದು ದೋಣಿಯನ್ನುರುಳಿಸಿ ಮುಳುಗಿಸಲು ಕಾದಿರುತ್ತಿದ್ದುದರಿಂದ ದೀರ್ಘ ಹೋರಾಟದಲ್ಲಿ ಜಯ ಪಡೆದ ಅನಂತರ ಸೂರ್ಯ ಪ್ರಯಾಣ ಮುಂದುವರೆಸಬೇಕಾಗಿತ್ತು.

18ನೆಯ ಚಕ್ರಾಧಿಪತ್ಯದ ಕಾಲದಲ್ಲಿ ದೇವತೆಗಳ ವರ್ಗೀಕರಣ ಕಾರ್ಯ ಭರದಿಂದ ನಡೆದು ಹಲವು ಸ್ತ್ರೀ–ಪುರುಷ ದೇವತೆಗಳನ್ನು ಪತಿ–ಪತ್ನಿಯರನ್ನಾಗಿಯೂ ಮತ್ತೆ ಹಲವರನ್ನು ಅವರ ಮಕ್ಕಳನ್ನಾಗಿಯೂ ವಿಂಗಡಿಸಲಾಯಿತು. ಇಂಥ ವಿಚಾರಶೀಲತೆಯ ಕಾರ್ಯದಲ್ಲಿ ಈಜಿಪ್ಟಿನ ಜನ ಉನ್ನತ ಮಟ್ಟದ ಪ್ರತಿಭೆ ತೋರಿ, ಗೌಣರಾದ ಹೊಸ ದೇವತೆಗಳನ್ನು ಸೃಷ್ಟಿಸಿದ್ದಾರೆ. ಉದಾ: ಸತ್ಯದ ಗೌಣರೂಪನಾದ ಮಾತ್ ದೇವತೆ.

ಇವೆಲ್ಲವೂ ಉನ್ನತ ತಾತ್ತ್ವಿಕ ಮಟ್ಟದವರ ಧರ್ಮಕ್ಕೆ ಸಂಬಂಧಿಸಿದುದಾದರೆ ಜನಸಾಮಾನ್ಯರ ಧರ್ಮಗಳ ವಿಷಯಗಳನ್ನು ಕೆಳವರ್ಗದ ಭೂತಗಣ ಮತ್ತು ಉಪ ದೇವತೆಗಳ ವರ್ಣನೆಯಿಂದ ತಿಳಿಯಬಹುದು. ನೀರಾನೆಯ ದೇಹ, ಮೊಸಳೆಯ ತಲೆ, ಮಾನವನ ಕೈಗಳು ಮತ್ತು ಸಿಂಹದ ಪಾದಗಳುಳ್ಳ ಟ್ಯೂರಿಸ್ ಗರ್ಭಿಣಿ ಸ್ತ್ರೀಯರ ರಕ್ಷಣೆಯನ್ನೂ ದುಷ್ಟಶಕ್ತಿಗಳ ನಿಗ್ರಹವನ್ನೂ ಮಾಡಿದರೆ, ದೀರ್ಘವಾದ ದಾಡಿ, ಚಿರತೆಯ ಡೊಂಕುಬಾಲಗಳ, ಗಿಡ್ಡನಾದ ಬೆಸ್ ಪ್ರಸವ ಸಮಯದಲ್ಲಿ ಸ್ತ್ರೀಯರನ್ನು ರಕ್ಷಿಸುತ್ತಿದ್ದು ನೃತ್ಯ ಸಂಗೀತಗಳ ಅಧಿದೇವತೆಯಾಗಿದ್ದ. ಈ ವರ್ಗದಲ್ಲಿ ಮಂತ್ರಮಾಟಗಳು ಹೆಚ್ಚು ಬಳಕೆಯಲ್ಲಿದ್ದು ದುಷ್ಟಶಕ್ತಿಗಳ ನಿಗ್ರಹಕ್ಕೆ ಉಪಯುಕ್ತವಾಗಿದ್ದುವು. ಸಮಾಧಿನಾಶಕರ ವಿರುದ್ಧ ಶಾಪಗಳು, ಶತ್ರುರಾಜ ಶ್ರೀಮಂತ ಗೊಂಬೆಗಳ ಮೇಲೆ ಮಾಟ ಮಾಡಿ ಅವರನ್ನು ನಾಶಗೊಳಿಸಲು ಉಪಯೋಗಿಸಲ್ಪಡುತ್ತಿದ್ದ ಯಂತ್ರಗಳು ಬಳಕೆಯಲ್ಲಿದ್ದುವು.

ಇವರ ಮತೀಯ ಭಾವನೆಗಳಲ್ಲಿ ದುಃಖಪರ ನಂಬಿಕೆಗಳಿಗೆ ಪ್ರಾಶಸ್ತ್ಯವಿಲ್ಲದೆ ಆಶಾವಾದವೇ ಎದ್ದು ಕಾಣುತ್ತದೆ. ಹಲವು ಹಾಸ್ಯಾಸ್ಪದವಾದ ನಂಬಿಕೆಗಳೂ ಇದ್ದುವು. ಮೈಗಳ್ಳ ಶ್ರೀಮಂತರು ದೈಹಿಕ ಶ್ರಮದ ಕೆಲಸ ಮಾಡಲು ಈ ಲೋಕದಲ್ಲಿ ಮಾಡಿಕೊಂಡಿದ್ದ ವ್ಯವಸ್ಥೆಯ ಮಾದರಿಯಲ್ಲಿ ಮರಣಾನಂತರ ಪರಲೋಕದಲ್ಲೂ ತಮ್ಮ ಪಾಲಿನ ಕೆಲಸ ಮಾಡಲು ಸೇವಕರ ಗೊಂಬೆಗಳನ್ನು ಮಾಡಿಸಿ ಸಮಾಧಿಗಳಲ್ಲಿ ನಿಕ್ಷೇಪಿಸುತ್ತಿದ್ದುದು ಹಾಸ್ಯಾಸ್ಪದವಾಗಿದೆ.

ದೇವಾಲಯ ಮತೀಯ ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಮತೀಯ ಆಚರಣೆಗಳು ಸಂಘಟಿಸಲ್ಪಟ್ಟಿದ್ದು ದಕ್ಷ ಪುರೋಹಿತ ವರ್ಗ ಅವನ್ನು ನಡೆಸುತ್ತಿದ್ದರು. ಹಲವಿಧವಾದ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳು ಅಲ್ಲಿ ನಡೆಯುತ್ತಿದ್ದುವು. ದೇವಾಲಯದ ಆಡಳಿತ ರಾಜರ ಅಧಿಕಾರಕ್ಕೊಳಗಾಗದೇ ಮುಖ್ಯ ಪುರೋಹಿತನ ಮೇಲ್ವಿಚಾರಣೆಗೊಳಪಟ್ಟಿತ್ತು. ದೇವದಾಸಿ ಪದ್ಧತಿ ರೂಢಿಯಲ್ಲಿತ್ತು.

ನಿತ್ಯಪೂಜಾಕ್ರಮದಂತೆ ಅರ್ಚಕ ಶುಚಿರ್ಭೂತನಾಗಿ ಮಂದಿರದ ಬಾಗಿಲುಗಳನ್ನು ತೆರೆದು ಧೂಪದೀಪಾದಿಗಳಿಂದ ಅರ್ಚಿಸಿ, ಅಭಿಷೇಕ ಮಾಡಿ, ಚಂದನಾದಿಗಳನ್ನು ನೈವೇದ್ಯವನ್ನು ಅರ್ಪಿಸಿ ಪ್ರಾರ್ಥಿಸುತ್ತಿದ್ದ. ಅನಂತರ ಗುಡಿಯ ಬಾಗಿಲುಗಳನ್ನು ಮುಚ್ಚಿ ಹಿಂತಿರುಗುತ್ತಿದ್ದ. ವಿಶೇಷ ಸಂದರ್ಭಗಳಲ್ಲೂ ವಾರ್ಷಿಕೋತ್ಸವಗಳಲ್ಲೂ ಅಥವಾ ವ್ಯವಸಾಯಕ್ಕೆ ಸಂಬಂಧಿಸಿದ ಉತ್ಸವಗಳು ಬೇರೆ ಬೇರೆ ಕೇಂದ್ರಗಳಲ್ಲಿ ನಡೆಯುತ್ತಿದ್ದು ಆ ಸಂದರ್ಭಗಳಲ್ಲಿ ದೇವರ ಪ್ರತಿಮೆಯನ್ನು ನಗರದ ವಿವಿಧ ಭಾಗಗಳಲ್ಲಿ ಮೆರವಣಿಗೆ ಮಾಡುತ್ತಿದ್ದರು. ವಿವಿಧ ಭಾಗಗಳಿಂದ ಬಂದ ಜನ ಅಪರಿಮಿತ ಉತ್ಸಾಹದಿಂದ ಭಾಗವಹಿಸಿ ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಿದ್ದರು.

ಇವರ ಮತೀಯ ನಂಬಿಕೆಗಳಲ್ಲಿ ಸಮಾಧಿಗಳಿಗೆ ಮುಖ್ಯಸ್ಥಾನವಿತ್ತು. ಪಿರಮಿಡ್ಡು ಮತ್ತು ಸಂಬಂಧಪಟ್ಟ ದೇವಾಲಯಗಳ ಶೋಧನೆಗಳಲ್ಲಿ ಬಹಳಷ್ಟು ಅವಶೇಷಗಳು ದೊರಕಿ ಈ ನಾಗರಿಕತೆಯ ರೂಪರೇಷೆಗಳನ್ನು ವಿಶದವಾಗಿ ತಿಳಿಸಿವೆ. ಈ ಜನರ ಭಾವನೆಯಲ್ಲಿ ಮರಣಾನಂತರದ ಪರಲೋಕಜೀವನ ಪ್ರಮುಖವಾಗಿದ್ದು ಅವರ ಪ್ರತಿಕಾರ್ಯದಲ್ಲೂ ಅದು ಅಗ್ರಸ್ಥಾನ ಪಡೆದಿತ್ತು. ಮರಣಾನಂತರ ಪರಲೋಕದ ದೊರೆ ಓಸಿರಿಸ್‌ನ ಮುಂದೆ ವಿಚಾರಣೆಗೊಳಪಟ್ಟು ಪ್ರತಿವ್ಯಕ್ತಿಯೂ ತನ್ನ ಕರ್ಮಕ್ಕನುಗುಣವಾದ ಫಲವನ್ನನುಭವಿಸಬೇಕಾಗಿತ್ತು. ಈ ಜನ ಶರೀರ ಮತ್ತು ಆತ್ಮಗಳ ನಡುವಣ ಭೇದವನ್ನು ಗುರ್ತಿಸಿ, ಮರಣಾನಂತರ, ಆತ್ಮನನ್ನು ಆತ್ಮ, ಚೈತನ್ಯ, ನಾಮ, ಛಾಯೆ ಮತ್ತು ಕ ಎಂಬುದಾಗಿ ವಿಂಗಡಿಸುತ್ತಿದ್ದರು. ಆತ್ಮ ಬೇಕಾದಾಗ ಶರೀರಕ್ಕೆ ಹಿಂತಿರುಗುವನೆಂದೂ ಆದ್ದರಿಂದ ಮೃತನ ಶರೀರವನ್ನು ರಕ್ಷಿಸಿಡಬೇಕೆಂದೂ ನಂಬಿದ್ದರು. ಈ ನಂಬಿಕೆಯ ದೆಶೆಯಿಂದ ಈ ಸಂಸ್ಕೃತಿಯ ಮುಖ್ಯ ಲಕ್ಷಣಗಳಲ್ಲೊಂದಾದ ಮೃತದೇಹವನ್ನು ರಕ್ಷಿಸಿಡುವ ಮಮಿ ಪದ್ಧತಿ ಹುಟ್ಟಿಕೊಂಡಿತು. ಇವರ ಸಮಾಧಿಗಳಲ್ಲಿ ಪರಲೋಕ ಜೀವನಕ್ಕೆ ಆವಶ್ಯಕವಾದ ಹಲವು ರೀತಿಯ ವಸ್ತುಗಳನ್ನು ನಿಕ್ಷೇಪಿಸುತ್ತಿದ್ದರು. ಮೃತರ ವಿಷಯದಲ್ಲಿ ಭೀತಿಯಿದ್ದುದು ಶ್ರೀಮಂತನೊಬ್ಬ ತನ್ನ ಮೃತಪತ್ನಿಯಿಂದೊದಗುತ್ತಿದ್ದ ತೊಂದರೆಗಳನ್ನು ವಿವರಿಸಿ ಆಕೆಯ ಆತ್ಮಕ್ಕೆ ಬರೆದ ಪತ್ರವೊಂದರಿಂದ ತಿಳಿದುಬಂದಿದೆ. ಜೀವಂತ ವ್ಯಕ್ತಿಗಳು ಮೃತನ ಆತ್ಮಗಳನ್ನು ತೃಪ್ತಿಪಡಿಸಿ ಅವುಗಳ ಕೃಪೆಯಿಂದ ಲಾಭ ಪಡೆಯಬಹುದಾಗಿತ್ತೆಂದೂ ಈ ಜನ ನಂಬಿದ್ದರು.

ಒಟ್ಟಿನಲ್ಲಿ ಇಷ್ಟು ಹೇಳಬಹುದು: ಈಜಿಪ್ಟಿನ ಮತಧರ್ಮಗಳ ಬಗ್ಗೆ ವಿಪುಲವಾದ ದಾಖಲೆಗಳು ದೊರೆತಿದ್ದರೂ ಅವುಗಳ ವ್ಯಾಖ್ಯಾನದ ಬಗ್ಗೆ ಅಭಿಪ್ರಾಯ ಭೇದ ಇರುವುದರಿಂದ ಅದನ್ನು ಹೀಗೆಯೇ ಎಂದು ಹೇಳಲು ಕಷ್ಟವಾಗುತ್ತದೆ. ಅನೇಕ ಕಡೆ ವಿವರಗಳಲ್ಲಿ ಹೆಚ್ಚಿನ ಸಂಕೀರ್ಣತೆ, ಪರಸ್ಪರ ವಿರೋಧ ಕಂಡುಬರುತ್ತವೆ. ದೇವರುಗಳು ಒಂದೇ ಬಗೆಯವರಾದರೂ ಎಲ್ಲರಿಗೂ ಅಲ್ಲಿ ಸ್ಥಾನ ಉಂಟು. ಸೃಷ್ಟಿ ಮತ್ತು ನೈಸರ್ಗಿಕ ಕ್ರಿಯೆಗಳ ಬಗ್ಗೆ ಇರುವ ಐತಿಹ್ಯಗಳು ಪರಸ್ಪರ ವಿರುದ್ಧವಾಗಿವೆ. ದೇವತೆಗಳಿಗೂ ಪ್ರಾಣಿಗಳಿಗೂ ರೂಪ, ಶಕ್ತಿಗಳಲ್ಲಿ ಸಾಮ್ಯವಿರುವುದು, ಬೆರಕೆಯಾಗಿರುವುದು ಕಂಡುಬರುತ್ತದೆ. ಆಕ್ನಾಟನ್ ದೊರೆ ಸೂರ್ಯದೇವನ ಮೂಲಕ ಏಕದೇವತಾಪಂಥವನ್ನು ಸ್ಥಾಪಿಸಲು ಪ್ರಯತ್ನಿಸಿದಂತೆ ಕಾಣುತ್ತದೆ. ಸತ್ತವರ ಬಗ್ಗೆ ಈಜಿಪ್ಟಿನವರು ದೊಡ್ಡದೊಂದು ತತ್ತ್ವವನ್ನೇ ಬೆಳೆಸಿಕೊಂಡಿದ್ದರು. ಪಿರಮಿಡ್ಡುಗಳು, ಧೂಪಲೇಪನಾದಿಗಳಿಂದ ಹೆಣವನ್ನು ಒಪ್ಪವಿಡುತ್ತಿದ್ದುದು ಇದಕ್ಕೊಂದು ನಿದರ್ಶನ. ಆತ್ಮ, ಪುನರ್ಜನ್ಮಗಳಲ್ಲವರಿಗೆ ನಂಬಿಕೆ ಇತ್ತು. ಅಷ್ಟೇ ಅಲ್ಲ. ದೇಹವೂ ಅವಿನಾಶಿ ಎಂದು ಅವರು ನಂಬಿದ್ದರು. ರಾಜನೇ ಪ್ರತ್ಯಕ್ಷ ದೇವತೆ. ದೇವದೂತನಾದ್ದರಿಂದ ಅವನೇ ಅವರ ಪ್ರಧಾನ ಪುರೋಹಿತನಾಗಿದ್ದ. ಪರಿಷ್ಕಾರವಾದ ದೇವತಾರಾಧನೆ, ಕರ್ಮಾದಿಗಳು, ಆಹುತಿ, ದಾನಧರ್ಮಗಳಲ್ಲಿ ಅವರಿಗೆ ನಂಬಿಕೆ ಇತ್ತಾದರೂ ಪರದೇಶಗಳ ಮೇಲೆ ಘೋರವಾಗಿ ಯುದ್ಧ ಮಾಡುತ್ತಿದ್ದರಲ್ಲದೆ ಗುಲಾಮೀ ಪದ್ಧತಿಯನ್ನು ಒಪ್ಪಿದ್ದರು. ಅವರ ಹೋರಸ್, ಇಸಿಸ್, ಓಸಿರಿಸ್ ಮತ್ತು ಸೆರಾಪಿಸ್ ದೇವತೆಗಳು ಗ್ರೀಸ್ ಮತ್ತು ರೋಮ್ ದೇವತಾವರ್ಗವನ್ನು ಸೇರಿರುವುದನ್ನು ಗಮನಿಸಿದರೆ ನೆರೆಹೊರೆಯ ಪ್ರಾಂತ್ಯಗಳಾದ ಗ್ರೀಸ್ ಮತ್ತು ರೋಮ್‌ಗಳ ಜನಜೀವನದ ಮೇಲೆ ಈಜಿಪ್ಟಿನ ಧಾರ್ಮಿಕ ಪ್ರಭಾವ ಅಪಾರವಾಗಿತ್ತೆಂದು ಹೇಳಬೇಕು.(ಬಿ.ಕೆ.ಜಿ.)

**ಈಜಿಪ್ಟಿನ ಪ್ರಾಚೀನ ಸಾಹಿತ್ಯ:** ಪುರಾತನ ಕಟ್ಟಡ, ದೇವಾಲಯ, ವಿಗ್ರಹ, ಪಿರಮಿಡ್ ಮತ್ತು ಫಲಕಗಳ ಮೇಲೆ ಕೊರೆದಿರುವ ಶಾಸನರೂಪದಲ್ಲಿ ಅಥವಾ ಒಸ್ಟ್ರಾಕ ಮತ್ತು ಪಪೈರಸ್ ಮೇಲೆ ಬರೆಯಲಾಗಿರುವ ಹಸ್ತಪ್ರತಿಗಳ ರೂಪದಲ್ಲಿ ಹೈರಾಟಿಕ್ ಅಥವಾ ಡೆಮಾಟಿಕ್ ಲಿಪಿಗಳಲ್ಲಿ ಉಳಿದುಬಂದಿದೆ. ಕಟ್ಟಡಗಳಲ್ಲಿ ದೊರಕಿರುವ ಸಾಹಿತ್ಯಭಾಗ ಬಹುಮಟ್ಟಿಗೆ ಚಾರಿತ್ರಿಕ ವಿಷಯಗಳಿಗೆ ಸಂಬಂಧಪಟ್ಟಿದ್ದರೆ ಓಲೆಗಳ ಮೇಲೆ ಇರುವ ಬರೆವಣಿಗೆ ನಿಜವಾದ ಸಾಹಿತ್ಯವೆಂದು ಪರಿಗಣಿಸಲ್ಪಟ್ಟಿದೆ. ಈ ಬರೆವಣಿಗೆಗಳು ಬಹುಮಟ್ಟಿಗೆ ಅಪೂರ್ವವಾಗಿ ದೊರಕಿದ್ದರೂ ಪಠ್ಯವಿಷಯಗಳನ್ನಾಗಿ ಇವನ್ನು ಬಳಸಿದ ಅಂದಿನ ವಿದ್ಯಾರ್ಥಿಗಳು ಮಾಡಿರುವ ಪ್ರತಿಗಳು ಸಿಗುತ್ತವಾಗಿ ಬರೆವಣಿಗೆಗಳ ಪೂರ್ಣ ಪಾಠಗಳನ್ನು ಗುರುತಿಸಲು ಸ್ವಲ್ಪ ಸಹಾಯವಾದಂತಾಗಿದೆ. ಆದಾಗ್ಯೂ ಈಜಿಪ್ಟ್ ಸಾಹಿತ್ಯದ ಬಹುಭಾಗ ಕಳೆದುಹೋಗಿರಬಹುದೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಈ ಸಾಹಿತ್ಯದ ಮುಖ್ಯ ಲಕ್ಷಣಗಳೆಂದರೆ ಅದರ ವೈವಿಧ್ಯ ಮತ್ತು ವೈಪುಲ್ಯ. ಆಗಾಗ್ಯೆ ಹೊಸ ಸಾಹಿತ್ಯ ವಿಭಾಗಗಳು ತಲೆದೋರಿ ತಮ್ಮ ವಿಷಯ ಮತ್ತು ಧ್ಯೇಯಗಳಿಂದ ಮತೀಯ ಭಾವನೆಗಳನ್ನು ಸಮರ್ಥಿಸಿರುವುದನ್ನಿಲ್ಲಿ ಕಾಣಬಹುದಾಗಿದೆ. ಇಲ್ಲಿ ಸಾಹಿತ್ಯ ಜಡವಾಗಿರದೆ ಕ್ರಿಯಾತ್ಮಕವಾಗಿದೆ ಮತ್ತು ತನ್ನ ಸುದೀರ್ಘ ಜೀವಿತಕಾಲದಲ್ಲಿ ಪ್ರಗತಿಪರ ಬದಲಾವಣೆಗಳನ್ನು ಪ್ರದರ್ಶಿಸಿದೆ.

ಈಜಿಪ್ಟಿನ ಪ್ರಾಚೀನ ಸಾಹಿತ್ಯವನ್ನು ಪೌರಾಣಿಕ, ಐತಿಹಾಸಿಕ ಅಥವಾ ರಮ್ಯ (ರೊಮಾನ್ಸ್) ಸಾಹಿತ್ಯ, ಸಾಮಾಜಿಕ ಅಥವಾ ಧಾರ್ಮಿಕ ಕವಿತೆಗಳು, ನೀತಿಬೋಧಕ ಸಾಹಿತ್ಯ ಮತ್ತು ಆದರ್ಶಪತ್ರಲೇಖನ ಸಾಹಿತ್ಯಗಳೆಂದು ವಿಂಗಡಿಸಬಹುದು. ಪೌರಾಣಿಕ ಸಾಹಿತ್ಯ ಬಹುವಾಗಿ ಅಂತ್ಯಸಂಸ್ಕಾರಗಳಿಗೆ ಸಂಬಂಧಿಸಿದ ಬರೆವಣಿಗೆಗಳನ್ನೊಳಗೊಂಡಿದ್ದು ಅವುಗಳಲ್ಲಿ ಪ್ರಸಿದ್ಧವಾದ ಮೃತರ ಗ್ರಂಥದಲ್ಲಿನ ಪ್ರಾರ್ಥನೆ, ಸೂಕ್ತ ಮತ್ತು ಮಂತ್ರಗಳು, ವಿಶ್ವದ ಸೃಷ್ಟಿ, ದೇವತೆಗಳ ಸ್ವಭಾವ ಮತ್ತು ಕಾರ್ಯರಂಗ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಈ ವಿಷಯದಲ್ಲಿ ಜನರ ನಂಬಿಕೆಗಳು ಹಲವಾರು ಬಗೆಯಾಗಿದ್ದು ಪರಸ್ಪರ ವಿರೋಧಾತ್ಮಕವಾಗಿದ್ದುವು. ವಿಶ್ವದ ಆದಿಕಾಲದಲ್ಲಿ ಪುರಾತನ ಜಲರಾಶಿಯಿಂದ ಹುಟ್ಟಿಬಂದ ಬೆಟ್ಟದಲ್ಲಿ ಸೂರ್ಯ ಉದಯವಾದಲ್ಲಿಂದ ಸೃಷ್ಟಿ ಪ್ರಾರಂಭವಾಯಿತೆಂದು ಹೇಳಲಾಗಿದೆ. ಈಜಿಪ್ಟ್ ಪ್ರಾಕೃತಿಕ ಸನ್ನಿವೇಶವೇ ಈ ನಂಬಿಕೆಗಳಿಗೆ ಆಧಾರ. ದೇವಸಂಬಂಧವಾದ ಐತಿಹ್ಯಗಳಲ್ಲಿ ಇಸಿಸ್ ಮತ್ತು ಓಸಿರಿಸ್ ಕಥೆ ಮುಖ್ಯವಾದುದು. ಭೂಮಿಯ ರಾಜನಾದ ಓಸಿರಿಸ್ ಶಾಂತಿ ವ್ಯವಸ್ಥೆಗಳನ್ನು ಭೂಮಿಯಲ್ಲಿ ಸ್ಥಾಪಿಸಿದ್ದ. ಆದರೆ ಅಸೂಯಾಪರನಾದ ಆತನ ಸೋದರ ಸೇಟ್ ಮೋಸದಿಂದ ಓಸಿರಿಸನನ್ನು ಶವಪೆಟ್ಟಿಗೆಯಲ್ಲಿ ಮುಚ್ಚಿ ನದಿಯಲ್ಲಿ ಮುಳುಗಿಸಿದುದು, ಓಸಿರಿಸನ ಪತ್ನಿ ಇಸಿಸಳು ಬಹಳ ಕಷ್ಟದಿಂದ ಶವವನ್ನು ಗಳಿಸಿ ದೇವತೆಗಳ ಸಹಾಯದಿಂದ ಪತಿಗೆ ಜೀವದಾನ ಮಾಡಿಸಿದುದು, ಆದರೂ ಆತ ಪಾತಾಳದಲ್ಲಿ ಮೃತರ ರಾಜನಾಗಿ ವಾಸಿಸಬೇಕಾಗಿ ಬಂದದ್ದು – ಇದು ಆ ಗ್ರಂಥದ ಸಾರಾಂಶ. ಪತಿಯ ಮರಣಾನಂತರ ಇಸಿಸಳಲ್ಲಿ ಹುಟ್ಟಿದ ಗೃಧ್ರದೇವತೆ ಹೋರಸ್ ತಂದೆಯ ಹಂತಕನನ್ನು ಹುಡುಕಿ ದೀರ್ಘ ಹೋರಾಟ ನಡೆಸಿ ಗೆದ್ದ ಅನಂತರ ಭೂಮಿಯ ರಾಜನಾಗಿ ದೇವತೆಗಳಿಂದ ನೇಮಿತನಾದುದಾಗಿ ಮತ್ತೊಂದು ಕೃತಿಯಲ್ಲಿ ತಿಳಿಸಲಾಗಿದೆ.

ಭಾವಗೀತೆಗಳು ಮತೀಯ, ಸಾಮಾಜಿಕ ವಸ್ತುಗಳಿಂದ ಕೂಡಿದ್ದು ದೇವತೆಗಳ, ರಾಜರುಗಳ ಯಶೋಗೀತೆಗಳಾಗಿವೆ. ಪಾಷಂಡಿ ದೊರೆಯೆಂದು ಹೆಸರಾದ ಆಕ್ನಾಟನ್ ದೊರೆಯಿಂದ ರಚಿತವಾದ ಸರಳ ಸುಂದರ ಆಟನ್ (ಸೂರ್ಯ) ಸ್ತುತಿ ಉತ್ತಮ ಉದಾಹರಣೆ. ಇದೇ ರೀತಿಯ ಮತ್ತೊಂದು ಉತ್ತಮ ಕೃತಿಯೆಂದರೆ ಆಮನ್–ರಾ ದೇವತೆಯ ಸ್ತುತಿ. ರಾಜನನ್ನು ಹೊಗಳುವ ಪ್ರಶಸ್ತಿ ಕವನಗಳು ಬಹಳವಾಗಿದ್ದು ಮುಮ್ಮಡಿ ಥಟ್ಮೋಸನ ಪ್ರಶಸ್ತಿಗೀತವನ್ನು ಇಲ್ಲಿ ಸ್ಮರಿಸಬಹುದಾಗಿದೆ. ಸಾಮಾಜಿಕ ವಿಷಯವಾದ ಕವನಗಳಲ್ಲಿ ಪ್ರೇಮಗೀತೆಗಳು ಗಮನಾರ್ಹವಾದುವು. ವಿರಹಪೀಡಿತಳಾದ ಯುವತಿಯೊಬ್ಬಳು ತನ್ನ ಪ್ರೇಮಿಯ ಬರವನ್ನು ಕಾದಿರುವಾಗಿನ ಮನಃಸ್ಥಿತಿಯನ್ನು ಒಂದು ಕವಿತೆ ಹೃದಯಂಗಮವಾಗಿ ತಿಳಿಸಿದೆ. ಚಿತ್ತಚಾಂಚಲ್ಯ ಮತ್ತು ಮನಃಕ್ಲೇಶಗಳನ್ನು ಕಣ್ಣುಗಳು ಹೊರಪಡಿಸಿದ್ದೇ ಆದರೆ ಇತರರಿಗೆ ಆಕೆಯ ಗುಟ್ಟು ಹೊರಪಡುವುದೆಂದೂ ಆದುದರಿಂದ ಕಂಪಿಸದಿದ್ದು ತನ್ನ ಗುಟ್ಟನ್ನು ಕಾಯಬೇಕೆಂದೂ ಹೃದಯಕ್ಕೆ ಆದೇಶವಿತ್ತಿದ್ದಾಳೆ.

ಕಂಪಿಸದಿರು ಓ ಎನ್ನ ಹೃದಯ !
ಪ್ರಿಯಕರನು ನಿನ್ನೆಡೆಗೆ ಬಾರದಿರನು.
ಈಕೆ ಪ್ರೇಮಬಾಧಿತಳೆಂದು
ಜನಕೋಟಿ ನುಡಿಯುವರು.
ಪ್ರಿಯಕರನ ಸ್ಮರಿಸುತಲಿ ನಿಶ್ಚಲದಿನಿರು ನೀನು
ಕಂಪಿಸದಿರೆನ್ನ ಹೃದಯ !

ಮತ್ತೊಂದು ಪ್ರೇಮಗೀತೆ ಇಡೀ ವಾರಪರ್ಯಂತ ಪ್ರೇಯಸಿಯ ದರ್ಶನವಿಲ್ಲದೆ ತಪಿಸುತ್ತಿರುವಾಗಿನ ಭಾವನೆಗಳನ್ನು ಹೃದಯಂಗಮವಾಗಿ ವರ್ಣಿಸುತ್ತದೆ. ಇನ್ನೊಂದು ಕವಿತೆ ನಶ್ವರ ಪ್ರಪಂಚದಲ್ಲಿ ಸಾಧ್ಯವಾದಷ್ಟು ಭೋಗಪೂರ್ಣಜೀವನ ನಡೆಸುವಂತೆ ತಿಳಿಸುತ್ತದೆ.

ಈ ಸಾಹಿತ್ಯದಲ್ಲಿ ಶೋಕರಸಪ್ರಧಾನವಾದ ಕಾವ್ಯಗಳಿಲ್ಲವೆಂದರೆ ತಪ್ಪಾಗಲಾರದು. ಕೆಲವು ಕವನಗಳನ್ನು ಈ ಗುಂಪಿಗೆ ಸೇರಿಸುವ ಪ್ರಯತ್ನ ನಡೆದಿದ್ದರೂ (ಉದಾ: ಶವಸಂಸ್ಕಾರ ಸಂದರ್ಭದಲ್ಲಿ, ಜೀವನದ ನಶ್ವರತೆಯನ್ನು ಸಾರುವ ಹಾರ್ಪ್ ವಾದ್ಯಗಾರನ ಗೀತೆ ಅಥವಾ ಆತ್ಮಹತ್ಯೆಯಲ್ಲಿ ತೊಡಗಲಿರುವ ಒಬ್ಬ ಮಾನವ ಮತ್ತು ಅವನ ಆತ್ಮದ ನಡುವಣ ಸಂವಾದ) ಇವು ದುಃಖಾಂತಗಳಾಗಿರದೆ ಕಡೆಗೆ ಆಶಾವಾದವನ್ನೇ ಪ್ರತಿಪಾದಿಸುತ್ತವೆ.

ಜನಪ್ರಿಯ ಕಾಲ್ಪನಿಕ ಸಾಹಿತ್ಯದ ಮತ್ತೊಂದು ವಿಭಾಗದಲ್ಲಿ ಬರುವ ಕಥೆ ಕುಫು ಮತ್ತು ಮಂತ್ರವಾದಿಯರನ್ನು ಕುರಿತದ್ದು. ವಾಚಾಳಿ ರೈತ ಮತ್ತು ಸಿನುಹೆಯ ಇತಿಹಾಸಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ. ಕಡೆಯಲ್ಲಿ ಪ್ರಸ್ತಾಪಿಸಿದ ಸಿನುಹೆಯ ಇತಿಹಾಸದಲ್ಲಿ ಸಿನುಹೆ ಎಂಬ ಶ್ರೀಮಂತ ರಾಜಾಗ್ರಹದಿಂದ ಪಾರಾಗಲು ಈಜಿಪ್ಟಿನಿಂದ ಓಡಿಹೋಗಿ ಪ್ಯಾಲಿಸ್ಟೈನಿನ ರೈತ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದು, ತನ್ನ ವೃದ್ಧಾಪ್ಯದಲ್ಲಿ ತಾಯ್ನಾಡಿನ ಕರೆಯನ್ನು ತಡೆಯಲಾರದೆ ದೊರೆಯಲ್ಲಿ ಕ್ಷಮೆ ಬೇಡಿ ತನ್ನ ಪ್ರಾರ್ಥನೆ ಈಡೇರಿದ ಅನಂತರ ಹಿಂತಿರುಗಿ ರಾಜಾನುಗ್ರಹಕ್ಕೆ ಪಾತ್ರನಾದುದೇ ಕಥಾವಸ್ತು. ತಾಯ್ನಾಡಿನಲ್ಲಿ ಶಾಂತಿಯಿಂದ ಬಾಳಿ ಅನಂತರದ ವಾಸಕ್ಕೆ ಒಳ್ಳೆಯ ಸಮಾಧಿಯನ್ನು ನಿರ್ಮಿಸಿಕೊಳ್ಳುವುದೇ ಜೀವನದ ಉನ್ನತ ಆಕಾಂಕ್ಷೆಯೆಂದು ತಿಳಿದ ಈಜಿಪ್ಟಿನ ಜನಕ್ಕೆ ಆ ಧ್ಯೇಯವನ್ನೇ ಪ್ರತಿಪಾದಿಸುವ ಈ ಕೃತಿ ಬಹು ಪ್ರಿಯವಾಯಿತು.

ಬೋಧನಾತ್ಮಕ ಸಾಹಿತ್ಯ ಹಲವು ಉತ್ತಮ ಕೃತಿಗಳನ್ನು ನೀಡಿದೆ. ಸಾಮಾನ್ಯವಾಗಿ ವೃದ್ಧನೊಬ್ಬ ತರುಣನಿಗೆ ಸಾಮಾಜಿಕ ಹಾಗೂ ವ್ಯಾವಹಾರಿಕ ನಡೆವಳಿಕೆಗಳನ್ನು ಅಥವಾ ದೊರೆ ತನ್ನ ಉತ್ತರಾಧಿಕಾರಿಗೆ ರಾಜ್ಯಾಡಳಿತ ವಿಷಯವಾದ ಶಿಕ್ಷಣವನ್ನು ಬೋಧಿಸುವುದು ವಸ್ತುವಾಗಿರುವ ಈ ಸಾಹಿತ್ಯವಿಭಾಗದಲ್ಲಿ ಪ್ತಾ ಹೋಟೆಪನ ಜ್ಞಾನಸೂತ್ರಗಳು ಬಹಳ ಪ್ರಸಿದ್ಧವಾಗಿದ್ದು ಎಲ್ಲ ತರುಣ ವಿದ್ಯಾರ್ಥಿಗಳೂ ಅದನ್ನು ಕಲಿಯಬೇಕಾಗಿತ್ತು. ಇದೇ ರೀತಿಯ ಮತ್ತೊಂದು ಕೃತಿ ಅಮೆನ್ ಮೊಪೆಟ್‌ನ ಬುದ್ಧಿವಾದಗಳು ಎಂಬ ಗ್ರಂಥ. ಇದು ಬೈಬಲಿನ ಗಾದೆಗಳ ಪುಸ್ತಕ ಎಂಬ ಭಾಗಕ್ಕೆ ಮಾದರಿಯಾಯಿತೆಂದು ಹೇಳಲಾಗಿದೆ. ಗ್ರೀಕ್ ಕಥೆಗಾರ ಈಸೋಪನ ನೀತಿಕಥೆಗಳಿಗೆ ಆಧಾರವಾಗಿದ್ದಿರಬಹುದಾದ ನೀತಿಕಥಾಸಾಹಿತ್ಯ ಕೆಲಮಟ್ಟಿಗೆ ಬಳಕೆಯಲ್ಲಿತ್ತು (**ನೋಡಿ: ಈಸೋಪ್**).

ವಿಶ್ವದ ಪ್ರಾಚೀನ ಸಾಹಿತ್ಯಗಳಲ್ಲಿ ಮತ್ತೆಲ್ಲೂ ಕಂಡುಬರದ ಪತ್ರಲೇಖನ ವಿಭಾಗ ಈಜಿಪ್ಟಿನ ಸಾಹಿತ್ಯದ ಒಂದು ಹೊಸ ಕೊಡುಗೆಯೆಂದು ಹೇಳಬಹುದಾಗಿದೆ. ಸಾಮಾನ್ಯವಾಗಿ ಜೀವಿಸಿರುವವರು ಮೃತರೊಂದಿಗೆ ಪತ್ರಮುಖೇನ ಸಂಪರ್ಕ ಬೆಳೆಸುವುದೇ ಈ ಸಾಹಿತ್ಯ ವಿಭಾಗದ ಮುಖ್ಯವಸ್ತು. ಈ ವಿಭಾಗದಲ್ಲಿ ಗಮನಾರ್ಹವಾದುದು ಉನ್ನತ ಅಧಿಕಾರಿಯೊಬ್ಬ ಗತಿಸಿದ ತನ್ನ ಪತ್ನಿಗೆ ಬರೆದಿರುವ ಒಂದು ಪತ್ರ. ಆಕೆಯ ಜೀವಿತಕಾಲದಲ್ಲಿ ಆಕೆಯನ್ನು ಉತ್ತಮವಾಗಿ ನೋಡಿಕೊಂಡು, ಆಕೆಯ ಮಾತನ್ನುಲ್ಲಂಘಿಸದೆ ಆದರ್ಶಪತಿಯಾಗಿ ನಡೆದುಕೊಂಡಿದ್ದರೂ ಮರಣಾನಂತರ ಆಕೆ ಬಹುರೀತಿಯ ಆತಂಕಗಳನ್ನೊಡ್ಡುತ್ತಿರುವುದರಿಂದ ತನಗಾಗಿರುವ ಕಷ್ಟಗಳನ್ನು ಹೇಳಿಕೊಂಡು ಅಂಥ ನಡತೆಗಾಗಿ ಆಕೆಯನ್ನು ದೂಷಿಸಿರುವುದೇ ಈ ಪತ್ರದ ಸಾರಾಂಶ.

ಇದಲ್ಲದೆ, ನ್ಯಾಯಶಾಸ್ತ್ರ, ವ್ಯಾವಹಾರಿಕ, ಐತಿಹಾಸಿಕ ಮತ್ತು ಶಾಲಾ ಕೆಲಸಕ್ಕೆ ಸಂಬಂಧಿಸಿದ ಅನೇಕ ದಾಖಲೆಗಳು ದೊರಕಿದ್ದರೂ ಅವನ್ನು ಸಾಹಿತ್ಯಿಕ ಬರೆವಣಿಗೆಗಳೆಂದು ಪರಿಗಣಿಸಲಾಗುವುದಿಲ್ಲ. (ಬಿ.ಕೆ.ಜಿ.)

**ಈಜಿಪ್ಟಿನ ಭಾಷೆ:** ಜಗತ್ತಿನ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಒಂದಾಗಿದ್ದು ಆಫ್ರಿಕ ದೇಶದ ಉತ್ತರ ಭಾಗದ ಸುಪ್ರಸಿದ್ಧ ನೈಲ್ ನದಿಯ ಕಣಿವೆಯ ಪ್ರದೇಶದಲ್ಲಿ ಪ್ರಚಲಿತವಾಗಿತ್ತು. ಈ ಭಾಷೆ ಸ್ಥೂಲವಾಗಿ ಆಫ್ರೋ–ಏಷ್ಯ ಎಂದು ಕರೆಯಲ್ಪಡುವ ಭಾಷಾವರ್ಗಕ್ಕೆ ಸೇರಿದ್ದು ಬರ್ಬರ್, ಕುಶೈಟ್ ಮತ್ತು ಚಾಡ್ ಎಂಬ ಇತರ ಭಾಷೆಗಳೊಡನೆ ಹೆಮಿಟಿಕ್ ಎಂಬ ಭಾಷಾಗುಂಪಿಗೆ ಒಳಪಟ್ಟಿದೆ. ಹೆಮಿಟಿಕ್ ಭಾಷಾಗುಂಪಿಗೂ ಸೆಮಿಟಿಕ್ ಎಂದು ಕರೆಯಲ್ಪಡುವ ಭಾಷಾಗುಂಪಿಗೂ ನಿಕಟವಾದ ಸಂಬಂಧವಿರುವುದರಿಂದ ಇವೆರಡನ್ನೂ ಹೆಮಿಟೊ–ಸಿಮಿಟಿಕ್ ಭಾಷಾವರ್ಗವೆಂದು ಹೇಳುವುದುಂಟು. ಈಜಿಪ್ಟಿನ ಭಾಷೆಯ ಅತಿ ಪ್ರಾಚೀನ ಉಲ್ಲೇಖ ನೈಲ್ ನದಿಯ ಕಣಿವೆಯಲ್ಲಿ ದೊರೆತ, ಪ್ರ.ಶ.ಪೂ. 4 ಸಾವಿರ ವರ್ಷದ್ದೆಂದು ಗುರುತಿಸಲಾದ, ಚಿತ್ರಲಿಪಿಯ (ಹೀರೋಗ್ಲಿಫ್) ಶಾಸನಗಳಲ್ಲಿ ಕಂಡುಬರುವುದು. ಈ ಚಿತ್ರಲಿಪಿಯಲ್ಲಡಗಿದ ಈಜಿಪ್ಟ್ ಭಾಷೆಯನ್ನು ಈಜಿಪ್ಟ್ ಮತ್ತು ಗ್ರೀಕ್ ಭಾಷೆಗಳ ದ್ವಿಭಾಷಾಯುತವಾದ ರೋಸೆಟ್ಟ ಶಿಲಾಲೇಖದ ಸಹಾಯದಿಂದ ಫ್ರೆಂಚ್ ವಿದ್ವಾಂಸ ಶಾಂಪೋಲಿಯೊ ಪ್ರಶ. 1822ರಲ್ಲಿ ಓದಿ ಗುರುತಿಸಿದ. ಈ ಭಾಷೆ ಸಾಂಕೇತಿಕವಾಗಿಯೂ ಧ್ವನಿಸೂಚಕವಾಗಿಯೂ ಇರುವ ಅಂಶ ತಿಳಿದಿದೆ. ಇಲ್ಲಿಯ ಭಾಷೆಗೂ ಮೆಸೊಪೊಟೇಮಿಯದ ಸುಮೇರಿಯನ್ ಸಂಸ್ಕೃತಿಗೆ ಸಂಬಂಧಿಸಿದ ಬೆಣೆಲಿಪಿಗಳ (ಕ್ಯೂನಿಫಾರಂ) ಶಾಸನಗಳಲ್ಲಡಗಿದ ಭಾಷೆಗೂ ಭಾರತದೇಶದ ಸಿಂಧೂ ಸಂಸ್ಕೃತಿಗೆ ಸಂಬಂಧಿಸಿದ ಚಿತ್ರಲಿಪಿಯಲ್ಲಡಗಿದ ಭಾಷೆಗೂ ಪರಸ್ಪರ ಸಂಬಂಧವುಂಟೆಂದು ಕೆಲವು ವಿದ್ವಾಂಸರು ಭಾವಿಸುವರು.

ಈಜಿಪ್ಟಿನ ಭಾಷೆಯ ಚರಿತ್ರೆಯಲ್ಲಿ ಮೂರು ಹಂತಗಳನ್ನು ಗುರುತಿಸಲಾಗಿದೆ. ಅತಿ ಪ್ರಾಚೀನವಾದ ಅವಸ್ಥೆ ಈಜಿಪ್ಟಿನ ಇತಿಹಾಸದ ಮೊಟ್ಟಮೊದಲನೆಯ ಅರಸು ಮನೆತನದ ಕಾಲದ ಚಿತ್ರಲಿಪಿಗಳಲ್ಲೂ ರಾಜರು ಮೃತಪಟ್ಟಮೇಲೆ ಅವರ ಸಲುವಾಗಿ ನಿರ್ಮಿಸಿದ ಅದ್ಭುತಗಾತ್ರದ ಸಮಾಧಿಗಳಾದ ಪಿರಮಿಡ್ಡುಗಳ ಮೇಲೆ ಬರೆದಿರುವ ಚಿತ್ರಲಿಪಿಗಳಲ್ಲೂ ಕಂಡುಬರುವುದು. ಇದರ ಕಾಲಾವಧಿ ಪ್ರ.ಶ.ಪೂ. ಸು. 4000ವರ್ಷದಿಂದ ಪ್ರ.ಶ.ಪೂ. 3000 ವರ್ಷದವರೆಗೆ. ಮಧ್ಯಕಾಲದ ಹಾಗೂ ತದನಂತರದ ಭಾಷೆಯ ಹಂತ 3000ದಿಂದ ಪ್ರ.ಶ.ಪೂ. 400ರ ವರೆಗಿನ ಅವಧಿಯ ಬರೆವಣಿಗೆಯಲ್ಲಿ ಕಂಡುಬರುವುದು. ಈ ಬರೆವಣಿಗೆ ಒಂದು ತರದ ಹುಲ್ಲಿನ ಕಾಗದದ (ಪಪ್ಪೈರಸ್) ಮೇಲೂ ಡೆಮೊಟಿಕ್ ಎಂದು ಕರೆಯಲ್ಪಡುವ ಲಿಪಿಯಲ್ಲೂ ಕಂಡುಬರುವುದು. ಕೊನೆಯ ಹಂತ ಈಜಿಪ್ಟಿನಲ್ಲಿ ಕ್ರಿಸ್ತಧರ್ಮ ಪ್ರವೇಶಿಸಿದ ಅನಂತರ ಪ್ರ.ಶ.ಪೂ.2–3ನೆಯ ಶತಮಾನದಲ್ಲಿ ಕೊಪ್ಟಿಕ್ ಎಂದು ಕರೆಯಲ್ಪಡುವ ಜನಸಾಮಾನ್ಯರ ಭಾಷೆಯಲ್ಲಿ ಪರಿವರ್ತನೆಯಾದದ್ದು ಕಂಡುಬರುವುದು. ಈ ಕಾಪ್ಟಿಕ್ ಭಾಷೆಯ ಸಹಾಯದಿಂದ ಪ್ರಾಚೀನ ಹಾಗೂ ಮಧ್ಯಕಾಲದ ಈಜಿಪ್ಟ್ ಭಾಷೆಯ ಸ್ವರೂಪವನ್ನು ತಿಳಿದುಕೊಳ್ಳುವುದು ಸಾಧ್ಯವಾಗಿದೆ. ಕಾಪ್ಟಿಕ್ ಭಾಷೆಯ ಬೆಳೆವಣಿಗೆ ಪ್ರ.ಶ.ಪೂ. 15–16ನೆಯ ಶತಮಾನದವರೆಗೂ ಕಂಡುಬರುವುದು. ಮುಂದೆ ಪ್ರ.ಶ.ಪೂ. 17ನೆಯ ಶತಮಾನದಲ್ಲಿ ಅರಬ್ಬೀ ಭಾಷೆ ಈ ಪ್ರದೇಶದಲ್ಲಿ ಪ್ರಚಾರವಾದ ಅನಂತರ ಈಜಿಪ್ಟ್ ಭಾಷೆಯ ಬಳಕೆ ಪೂರ್ಣವಾಗಿ ನಿಂತುಹೋಯಿತು.

ಈಜಿಪ್ಟ್ ಭಾಷೆಯ ಪ್ರಾಚೀನ ಸ್ವರೂಪದಲ್ಲಿ ವ್ಯಾಕರಣದ ಬೆಳೆವಣಿಗೆ ಕಂಡುಬರುವುದಿಲ್ಲ. ಧಾತುಗಳೂ ಶಬ್ದಗಳೂ ಒಂದೇ ರೂಪವನ್ನು ತಾಳಿದ್ದು ಅವುಗಳಲ್ಲಿ ನಾಮ, ಕ್ರಿಯಾಪದ ಮತ್ತು ವಿಶೇಷಣ ಮುಂತಾದ ವಿವಿಧ ರೂಪಗಳನ್ನು ವಿಂಗಡಿಸಿ ತೋರಿಸುವ ವಿಧಾನಗಳಿಲ್ಲ. ಉದಾ: ಅಂಖ್ ಎಂಬ ಶಬ್ದ ಜೀವಿಸು, ಜೀವನ ಮತ್ತು ಜೀವಂತ ಎಂಬ ಮೂರೂ ಅರ್ಥಗಳನ್ನು ಸೂಚಿಸುವುದು. ಸೆಖಿ ಎಂಬ ಶಬ್ದಕ್ಕೆ ಬರೆ, ಬರೆವಣಿಗೆ ಮತ್ತು ಬರೆಹಗಾರ ಎಂಬ ಮೂರೂ ಅರ್ಥಗಳುಂಟು. ಪುಲ್ಲಿಂಗ ಹಾಗೂ ಸ್ತ್ರೀಲಿಂಗ ಎಂಬ ಎರಡು ಲಿಂಗಗಳ ಭೇದವನ್ನು ಗುರುತಿಸುವುದು ಈ ಭಾಷೆಯ ಮುಖ್ಯ ಲಕ್ಷಣವಾಗಿದ್ದು ಇಂಡೊ–ಯುರೋಪಿಯನ್ ಮತ್ತು ಸೆಮಿಟಿಕ್ ಭಾಷಾವರ್ಗಗಳಲ್ಲಿರುವಂತೆ ಇಲ್ಲೂ ಶಬ್ದಗಳನ್ನು ಲಿಂಗಗಳ ಆಧಾರದ ಮೇಲೆ ವಿಂಗಡಿಸಲಾಗಿದೆ. ಈಜಿಪ್ಟಿನ ಭಾಷೆಯಲ್ಲಿ ವಿಭಕ್ತಿಪ್ರತ್ಯಯಗಳನ್ನು ವಿಂಗಡಿಸುವ ವಿಧಾನವಿಲ್ಲ. ಆದರೆ ಏಕವಚನ, ದ್ವಿವಚನ ಮತ್ತು ಬಹುವಚನಗಳೆಂದು ಮೂರು ವಚನಗಳನ್ನು ಸೂಚಿಸುವ ವಿಧಾನವುಂಟು. (ಜಿ.ಎಸ್.ಜಿ.)

**ಈಜಿಪ್ಟಿನ ಭೂ ಇತಿಹಾಸ:** ಗೊಂಡ್ವಾನ ಭೂಖಂಡದ ಮಂಚೂಣಿಯ ಪ್ರದೇಶಕ್ಕೆ ಸೇರಿದ ಭಾಗವೇ ಈಗಿನ ಈಜಿಪ್ಟ್. ಇಡೀ ದೇಶದುದ್ದಕ್ಕೂ ಅತಿ ಪ್ರಾಚೀನ ಆರ್ಷೇಯ ಕಲ್ಪದ ಶಿಲಾ ಸಮೂಹ ಹರಡಿದೆ. ಈ ಸಮೂಹದ ಬಹುಭಾಗ ಮುಚ್ಚಿಹೋಗಿದ್ದು ಎಲ್ಲೋ ಕೆಲವು ಕಡೆ ಅಲ್ಪಸ್ವಲ್ಪ ದೃಷ್ಟಿಗೆ ಗೋಚರವಾಗುತ್ತದೆ. ದೇಶದ ಉತ್ತರ ಭಾಗದಲ್ಲಿ ಈ ಪುರಾತನ ಶಿಲೆಗಳ ಮೇಲೆ ಇತರ ಭೂಯುಗಗಳ ಶಿಲಾಸ್ತರಗಳು ಶೇಖರವಾಗಿವೆ. ಇವುಗಳಲ್ಲೆಲ್ಲ ನೂಬಿಯನ್ ಮರಳು ಶಿಲಾಸ್ತರಗಳೇ ಅಧಿಕ. ಇದನ್ನು ಬಿಟ್ಟರೆ ಇಯೋಸೀನ್ ಯುಗದ ಸುಣ್ಣಶಿಲಾಸ್ತರಗಳು ಮತ್ತು ಪ್ಲಿಸ್ಟೊಸೀನ್ ಯುಗದ ಜಲಜ ಶಿಲಾಸ್ತರಗಳನ್ನು ಹೆಸರಿಸಬಹುದು. ಆರ್ಷೇಯ ಶಿಲಾಸಮೂಹದ ಅತ್ಯಂತ ಪ್ರಾಚೀನ ಶಿಲೆಯಾದ ಫಂಡಮೆಂಟಲ್ ನೈಸ್ (ಒಂದು ಬಗೆಯ ಗೀರು ಶಿಲೆ) ದೇಶದ ಆಗ್ನೇಯ ಮತ್ತು ನೈಋತ್ಯ ಭಾಗಗಳಲ್ಲಿ ಹರಡಿದೆ. ಈ ಗೀರುಶಿಲೆಯ ಮೇಲೆ ಇತರ ಕಣಶಿಲೆಗಳು ಮತ್ತು ರೂಪಾಂತರಗೊಂಡಿರುವ ಜಲಜಶಿಲಾಸ್ತರಗಳನ್ನು ಗುರುತಿಸಲು ಸಾಧ್ಯ. ಇದೇ ಗುಂಪಿನ ಗ್ರಾನೈಟ್, ಸರ್ಪೆಂಟಿನೈಟ್ ಮತ್ತು ಪದರು ಶಿಲೆಗಳನ್ನು ಆಸ್ವಾನ್, ಪಶ್ಚಿಮ ಮರುಭೂಮಿ, ಪೂರ್ವ ಮರುಭೂಮಿ ಮತ್ತು ಸಿನಾಯ್ ಪ್ರಾಂತ್ಯಗಳಲ್ಲಿ ನೋಡಬಹುದು. ಪೂರ್ವ ಮರುಭೂಮಿ ಮತ್ತು ಸಿನಾಯ್‌ಗಳಲ್ಲಿ ಇಡೀ ಭೂಭಾಗವೇ ಮೇಲಕ್ಕೆದ್ದುದಕ್ಕೆ ಆಧಾರಗಳಿವೆ. ನೈಲ್ ಕಣಿವೆಯ ಹಲವಾರು ಜಲಪಾತಗಳಿಗೂ ಈ ಭೂಚಟುವಟಿಕೆಯೇ ಕಾರಣ. ಒಟ್ಟಿನಲ್ಲಿ ಸದ್ಯದ ಭೂಭಾಗದ ಹತ್ತನೇ ಒಂದು ಭಾಗ ಆರ್ಷೇಯ ಕಲ್ಪದ ಶಿಲೆಗಳಿಂದ ಕೂಡಿದೆ. ಇವುಗಳಲ್ಲಿ ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ, ಮತ್ತು ಇತರ ಖನಿಜನಿಕ್ಷೇಪಗಳೂ ಅಮೃತಶಿಲೆ, ಸರ್ಪೆಂಟಿನೈಟ್, ಅಬ್ಸಿಡಿಯಾನ್, ಪಾರ್‌ಫಿರಿ ಮುಂತಾದ ಕಟ್ಟಡಶಿಲೆಗಳೂ ದೊರೆಯುತ್ತವೆ.

ಪೇಲಿಯೋಜೋಯಿಕ್ ಭೂಕಲ್ಪದ ಶಿಲಾಶ್ರೇಣಿಗಳು ಬಹು ಅಲ್ಪ ಪ್ರಮಾಣದಲ್ಲಿವೆ. ಸೂಯೆಜ಼್ ಕಾಲುವೆಯ ಅಕ್ಕಪಕ್ಕದಲ್ಲಿ ತೋರಿಬರುವ ಮರಳುಶಿಲೆಗಳು ಮತ್ತು ಸುಣ್ಣಶಿಲೆಗಳು ಈ ವರ್ಗದವು. ಈ ಕಲ್ಪದುದ್ದಕ್ಕೂ ಆರ್ಷೇಯ ಶಿಲೆಗಳ ಸವೆತದಿಂದ ದೊರೆತ ಕಣಗಳ ಶೇಖರಣೆಯಿಂದ ವಿಸ್ತಾರವಾದ ಮರಳುಶಿಲೆ ನಿಕ್ಷೇಪಗಳುಂಟಾದುವು. ಕೆಲವೆಡೆ ಇವು 48780 ಮೀ. ಗೂ ಮೀರಿ ಮಂದವಾಗಿವೆ. ಇವುಗಳ ರಚನೆ ಮತ್ತು ಸಂಯೋಜನೆ ವೈವಿಧ್ಯಮಯ. ಇಲ್ಲಿ ಜೀವಾವಶೇಷಗಳ ಸುಳಿವೇ ಇಲ್ಲ. ವಯಸ್ಸಿನಲ್ಲಿ ಕಾರ್ಬಾನಿಫೆರಸ್ ಯುಗದಿಂದ ಕ್ರಿಟೇಷಸ್ ಯುಗದ ತನಕ ಹರಡಿವೆ. ದೇಶದ ಮೂರನೆಯ ಒಂದು ಭೂಭಾಗ ಇವುಗಳಿಂದ ಆವೃತವಾಗಿದೆ. ದಕ್ಷಿಣ ಈಜಿಪ್ಟ್‌ನ ಬಹುಭಾಗ ಇವುಗಳದು. ಅಲ್ಲದೆ ಗಡಿಯಾಚೆ ದಕ್ಷಿಣ ಮತ್ತು ಪಶ್ಚಿಮದತ್ತಲೂ ಇವನ್ನು ಗುರುತಿಸಬಹುದು. ಇವೇ ನೂಬಿಯನ್ ಮರಳುಶಿಲೆಗಳು.

ಕ್ರಿಟೇಷಸ್ ಯುಗದ ಅಂತ್ಯಭಾಗದಲ್ಲಿ ದೇಶದ ಉತ್ತರಭಾಗ ಸಮುದ್ರದಿಂದ ಆವೃತವಾಗಿತ್ತು. ಅದು ಮೊದಲಾಗಿ ಪ್ಲಿಯೊಸೀನ್ ಯುಗ ಮುಗಿಯುವ ತನಕ ಭೂಭಾಗಗಳನ್ನು ಹಲವಾರು ಬಾರಿ ಮೇಲಕ್ಕೆ ಒಯ್ದು, ಕೆಳಕ್ಕೆ ತುಯ್ದ ದಾಖಲೆಗಳಿವೆ. ಹೀಗಾಗಿ ಭೂಭಾಗಗಳನ್ನು ಪಕ್ಕದ ಸಮುದ್ರ ಪದೇ ಪದೇ ಆವರಿಸುತ್ತಿತ್ತು. ಇವುಗಳಲ್ಲೆಲ್ಲ ಕ್ರಿಟೇಷಸ್ ಯುಗದ ಸಮುದ್ರಾಕ್ರಮಣ ಬಹು ವಿಸ್ತಾರವಾದುದು. ಈಗಿನ ಕರಾವಳಿಯಿಂದ 965ಕಿಮೀನಷ್ಟು ಭೂಭಾಗ ನೀರಿನಲ್ಲಿ ಮುಳುಗಿತ್ತು. ಈ ಮುಳುಗಡೆಯ ಪ್ರದೇಶದಲ್ಲಿ 183 ಮೀ ಮಂದದ ಸುಣ್ಣಶಿಲಾಸ್ತರಗಳು ನಿಕ್ಷೇಪಗೊಂಡುವು. ಆದರೆ ಈಗ ಇದರ ಬಹುಭಾಗ ಇತರ ಕಿರಿಯ ಸಮುದ್ರಾಕ್ರಮಣ ಶಿಲಾಸ್ತರಗಳಿಂದ ಮುಚ್ಚಿಹೋಗಿ ಗೋಚರವಾಗುತ್ತಿಲ್ಲ.

ಈಜಿಪ್ಟಿನ ಸಮುದ್ರನಿಕ್ಷೇಪದಲ್ಲಿ ಅತ್ಯಂತ ವಿಸ್ತಾರವಾದವು ಇಯೊಸೀನ್ ಯುಗದ ಸುಣ್ಣಶಿಲಾಸ್ತರಗಳು. ಇವು ಟರ್ಷಿಯರಿ ಕಲ್ಪದ ಆದಿಭಾಗದಲ್ಲಿ (ಅಂದರೆ ಕ್ರಿಟೇಷಸ್ ಯುಗ) ಭೂಭಾಗ ಸಮುದ್ರಗತವಾದುದನ್ನು ಸೂಚಿಸುತ್ತವೆ. ಪಶ್ಚಿಮ ಮರುಭೂಮಿಯ ಮಧ್ಯಭಾಗದುದ್ದಕ್ಕೂ ಇವು ಹರಡಿವೆ. ಈ ಭೂಭಾಗ ಸುಣ್ಣಶಿಲಾಸ್ತರಗಳಿಂದ ಕೂಡಿ ಮೇಲೆದ್ದು ತೋರುವ ಪ್ರಸ್ಥಭೂಮಿ. ಇದನ್ನು ನೈಲ್ ಕಣಿವೆ ಭೇದಿಸಿ ಮುಂಬರಿಯುತ್ತದೆ. ಈ ಶಿಲೆಯನ್ನು ನೈಲ್ ಕಣಿವೆ ಮತ್ತು ನದೀಮುಖಜಭೂಮಿಯ ಪ್ರಾಂತ್ಯಗಳಲ್ಲಿ ಕಟ್ಟಡಶಿಲೆಯಾಗಿ ಬಳಸಿದ್ದಾರೆ. ಆಲಿಗೊಸೀನ್ ಯುಗದಲ್ಲಿ ಸಮುದ್ರ ಮತ್ತೆ ಹಿಂಜರಿಯಿತು. ಅಲ್ಲಲ್ಲೇ ಸಣ್ಣಪುಟ್ಟ ಪ್ರಮಾಣದಲ್ಲಿ ನದೀ ಶಿಲಾನಿಕ್ಷೇಪಗಳು ಕಂಡುಬಂದುವು. ಇವು ಜೀವಾವಶೇಷಗಳಿಲ್ಲದ ಮರಳುಶಿಲೆ ಮತ್ತು ನುರುಜಶಿಲಾಸ್ತರಗಳು, ಹಲವೆಡೆ ಮರಳುಶಿಲೆಗಳಾಗಿರುವ ಪುರಾತನ ವೃಕ್ಷಗಳ ಕಾಂಡಗಳ ಅವಶೇಷಗಳು ದೊರೆತಿವೆ.

ಆಲ್ ಫಯೂಂ ತಗ್ಗಿನ ಉತ್ತರಕ್ಕಿರುವ ಪ್ರದೇಶದ ಜಲಜಶಿಲೆಗಳಲ್ಲಿ ಕೊಂಬುಳ್ಳ ಅಂಗುಲೇಟ ವರ್ಗದ ಪ್ರಾಣಿಗಳ ಪೂರ್ವಜ ಆರ್ಸಿನಾಥೀರಿಯಂ ಮತ್ತು ಆನೆಯ ಪೂರ್ವಜ ಮೋರಿಥೀರಿಯಂ ಮತ್ತು ಪೇಲಿಯೊಮ್ಯಾಸ್ಟಡಾನ್‌ಗಳ ಅವಶೇಷಗಳಿವೆ. ಇವು ಬಾಹ್ರಿಯಾ ಓಯಸಿಸ್ ಬಳಿಯೂ ಪೂರ್ವ ಮರುಭೂಮಿಯಲ್ಲಿ ಕೈರೊ ಮತ್ತು ಸೂಯೆಜ಼್ ನಡುವಿನ ಕಿರಿದಾದ ಶಿಲಾಶ್ರೇಣಿಯಲ್ಲೂ ಕಂಡುಬಂದಿವೆ. ಆಲಿಗೋಸೀನ್ ಯುಗದ ಅಂತ್ಯದಲ್ಲಿ ತಲೆದೋರಿದ ಆಲ್ಪೈನ್ ಪರ್ವತಜನ್ಯ ಶಕ್ತಿಗಳ ಪ್ರಭಾವದಿಂದ ಕೆಂಪುಸಮುದ್ರದ ತಗ್ಗು ಅದರ ಇಕ್ಕೆಲಗಳಲ್ಲಿನ ಪರ್ವತಶ್ರೇಣಿಗಳೂ ಉಂಟಾದುವು. ಮಯೊಸೀನ್ ಯುಗದ ಪ್ರಾರಂಭದಲ್ಲಿ ಕೊಂಚಮಟ್ಟಿಗೆ ಭೂಪ್ರದೇಶ ಕುಗ್ಗಿತು. ಹೀಗಾದ

ತಗ್ಗಿನಲ್ಲಿ ಸುಣ್ಣ ಶಿಲಾಸ್ತರಗಳು ನಿಕ್ಷೇಪವಾದುವು. ಇವನ್ನು ಮೆಡಿಟರೇನಿಯನ್ ಮತ್ತು ಸಿವಾ–ಕ್ವಾಟ್ರಾ–ಮಘಾರ ತಗ್ಗುಗಳ ಮಧ್ಯೆ, ಕೈರೋ–ಸೂಯೆಝ್ ನಡುವೆ ಮತ್ತು ಪಶ್ಚಿಮ ಸಿನಾಯ್‌ಗಳಲ್ಲಿ ನೋಡಬಹುದು. ಮಯೋಸೀನ್ ಯುಗದ ಸಮುದ್ರದ ಶಾಖೆಯೊಂದು ಕೆಂಪುಸಮುದ್ರದ ತಗ್ಗನ್ನು ಆವರಿಸಿ ಅಲ್ಲಿ ಜಿಪ್ಸಂ ಮತ್ತು ಡಾಲೊಮಿಟಿಕ್ ಸುಣ್ಣಶಿಲಾಸ್ತರಗಳ ನಿಕ್ಷೇಪಕ್ಕೆ ಕಾರಣವಾಯಿತು. ಈ ಯುಗದ ಅಂತ್ಯದಲ್ಲಿ ಮತ್ತೆ ಸಂಭವಿಸಿದ ಆಲ್ಪೈನ್ ಭೂಚಟುವಟಿಕೆಗಳ ದೆಸೆಯಿಂದ ಈ ಶಿಲಾಸ್ತರಗಳು ಅನೇಕ ಕಡೆ ತೀವ್ರವಾಗಿ ಮಡಿಕೆ ಬಿದ್ದು ಸ್ತರಭಂಗಗಳೂ ಉಂಟಾಗಿವೆ. ಹಲವು ಕಡೆ ಭೂಭಾಗಗಳು ಮೇಲಕ್ಕೆ ಒಯ್ಯಲ್ಪಟ್ಟಿವೆ. ಕ್ರಮೇಣ ನೈಲ್ ಕಣಿವೆಯ ಕಂದರವೂ ಕಾಣಿಸಿಕೊಂಡಿತು. ಈ ಎಲ್ಲ ಭೂ ಬದಲಾವಣೆಗಳು ಪ್ಲಿಯೊಸೀನ್ ಯುಗದಲ್ಲೇ ಕೊನೆಗೊಂಡುವು.

ಆದರೆ ನೈಲ್ ತಗ್ಗು ಮತ್ತು ಕೆಂಪುಸಮುದ್ರದ ಹಲಕೆಲವು ಅಂಚಿನ ಪ್ರದೇಶಗಳನ್ನು ಸಮುದ್ರ ಆಕ್ರಮಿಸಿತು. ಇದರಿಂದ ವಾಡಿ–ಆನ್‌ನಾಟ್ರಕ್ ಶಿಲಾಸಮೂಹದ ಮರಳು ಶಿಲಾಸ್ತರಗಳೂ ಜಿಪ್ಸಂನಿಂದ ಕೂಡಿದ ಜೇಡುಶಿಲಾಸ್ತರಗಳೂ ಉಂಟಾದುವು. ಇವುಗಳಲ್ಲಿ ಮೊಸಳೆ, ನೀರುಕುದುರೆ, ಆನೆ, ಜಿರಾಫೆ ಇತ್ಯಾದಿ ಪ್ರಾಣಿಗಳ ಅವಶೇಷಗಳು ಹುದುಗಿವೆ. ಅಲ್ಲದೆ ಕೆಂಪುಸಮುದ್ರ ತೀರ ಮತ್ತು ನೈಲ್ ನದಿಯ ತೀರಪ್ರದೇಶಗಳಲ್ಲಿ 182 ಮೀ ಅಡಿಯಷ್ಟು ಮಂದವಾಗಿರುವ ನದೀ ನಿಕ್ಷೇಪಗಳಾದ ಪೆಂಟೆಶಿಲೆ, ನೊರಜುಶಿಲೆ ಮತ್ತು ಮರಳುಶಿಲೆಗಳ ಸ್ತರಗಳಿವೆ.

ಪ್ಲೀಸ್ಟೊಸೀನ್ ಮತ್ತು ಈಚಿನ ಯುಗಗಳ ನಿಕ್ಷೇಪಗಳನ್ನು–ಮುಖ್ಯವಾಗಿ ಊಲೈಟ್ ಸುಣ್ಣಶಿಲಾಸ್ತರಗಳನ್ನು–ಅಲೆಕ್ಸಾಂಡ್ರಿಯದ ಪಶ್ಚಿಮ ಕರಾವಳಿಯಲ್ಲೂ ನೊರಜುಶಿಲೆ. ಮರಳು ಮತ್ತು ಜೇಡನ್ನು ನೈಲ್ ಕಣಿವೆಯಲ್ಲೂ ಕಾಣಬಹುದು. ಈ ಯುಗದಲ್ಲಿ ಯೂರೋಪಿನ ಬಹು ಭಾಗ ಹಿಮದ ಹಾಳೆಗಳಿಂದ ಮುಚ್ಚಿಹೋಗಿತ್ತು. ಬಹುಶಃ ಈ ವಿಪರೀತ ಶೈತ್ಯಹವೆಯ ಕಾರಣ ಈಜಿಪ್ಟ್‌ನಲ್ಲಿ ಅಧಿಕ ಮಳೆ ಮತ್ತು ಪ್ರವಾಹಗಳ ಹಾವಳಿಯುಂಟಾಯಿತು. ಇದರಿಂದ ಅಧಿಕ ಪ್ರಮಾಣದಲ್ಲಿ ಮರಳು, ನೊರಜುಶಿಲೆ ಮತ್ತು ಶಿಲಾಪೆಂಟೆಗಳು ಶೇಖರವಾಗಿ ಮತ್ತೆ ಅವುಗಳ ಮೇಲೆ ಈಗಿನ ನದೀ ಮೆಕ್ಕಲು ಶೇಖರವಾಯಿತು. ಈ ಮೆಕ್ಕಲು ಬಹುಮಟ್ಟಿಗೆ ಇಥಿಯೋಪಿಯ ಪ್ರಸ್ಥಭೂಮಿಯ ಅಗ್ನಿಶಿಲೆಗಳ ಸವೆತದಿಂದಾದುದು. (ಬಿ.ಎ.ಜಿ.)

**ಈಜಿಪ್ಟಿನ ವಾಸ್ತುಶಿಲ್ಪ, ಕಲೆ:** ಜಗತ್ತಿನ ವಾಸ್ತುಶಿಲ್ಪದಲ್ಲೆಲ್ಲ ಮೊದಲಿಗೆ ಕಲ್ಲಿನ ಬಳಕೆಯನ್ನು ಮಾಡಿದವರು ಈಜಿಪ್ಟಿನವರು. ಇವರು ಬಹು ದೊಡ್ಡ ಪ್ರಮಾಣದ ಕಲ್ಲುಗಳನ್ನು ಉಪಯೋಗಿಸಿದರು. ವಾಸ್ತುಶಿಲ್ಪದ ಅತಿ ಪ್ರಾಚೀನ ಮಾದರಿಗಳೆಂದರೆ ಮಸ್ತಬ ಎಂಬ ಗೋರಿಗಳು ಹಾಗೂ ಪಿರಮಿಡ್ಡುಗಳು. ಇವುಗಳ ರಚನೆಯಲ್ಲಿ ವಾಸ್ತುಶಿಲ್ಪಕ್ಕಿಂತ ಎಂಜಿನಿಯರಿಂಗ್ ಚಾತುರ್ಯ ಹೆಚ್ಚಾಗಿದೆ. ಆದರೂ ಬಹಳ ದೊಡ್ಡ ಗಾತ್ರದ ಕಲ್ಲುಗಳನ್ನು ಕಡಿದು, ಹೊರಮೈಯನ್ನು ಮಟ್ಟಮಾಡಿ ಒಂದರ ಮೇಲೊಂದನ್ನು ಒಡ್ಡಿ ಕಟ್ಟಲಾದ ಈ ಪಿರಮಿಡ್ಡುಗಳು ಗಾಂಭೀರ್ಯ ಹಾಗೂ ಭದ್ರತೆಗಳಿಂದ ಕೂಡಿ, ಒಂದು ವಿಶಿಷ್ಟ ಆಕರ್ಷಣೆಯನ್ನು ಹೊಂದಿವೆ. ಮಸ್ತಬ ಮತ್ತು ಪಿರಮಿಡ್ಡುಗಳ ಉದ್ದೇಶ ಒಂದೇ–ಶವವನ್ನೂ, ಪರಲೋಕ ಪ್ರಯಾಣಕ್ಕೆ ಬೇಕಾದುದೆಂದು ಅದರೊಂದಿಗೆ ಇಟ್ಟ ವಸ್ತುಗಳನ್ನೂ ಕೆಡದಂತೆ ಕಾಪಾಡುವುದು. ಸಕ್ಕಾರಾ ಎಂಬಲ್ಲಿ ಮೂರನೆಯ ರಾಜವಂಶದ (ಪ್ರ.ಶ.ಪೂ. 2980–2900) ಕಾಲದ ರಾಜ ಜೋಸೆರ್‌ನ ಸಮಾಧಿ ಇರುವ ಸ್ಟೆಪ್ ಪಿರಮಿಡ್ ಇವುಗಳಲ್ಲಿ ಅತಿ ಹಿಂದಿನದು. ಇಲ್ಲಿನ ಆಕಾರವನ್ನು ಗಮನಿಸಿದರೆ ಒಂದರ ಮೇಲೊಂದು ಮಸ್ತಬಗಳನ್ನು ರಚಿಸಿದಂತೆ ಕಾಣಬರುತ್ತದೆ. ರಾಜನ ಮಂತ್ರಿ ಇಮ್ ಹೊತೆಪ್ ಬಹುಮುಖ ಪ್ರತಿಭಾಶಾಲಿ. ಇವನಿಂದ ಈ ವಾಸ್ತುಶಿಲ್ಪ, ಕಲೆಗಳು ತುಂಬ ಪ್ರೋತ್ಸಾಹ ಪಡೆದುವು. ಮುಂದಿನ ನೂರು ವರ್ಷಗಳೊಳಗೆ ಪಿರಮಿಡ್ಡಿನ ರಚನೆಯಲ್ಲಿ ತುಂಬ ಪ್ರಗತಿಯಾಗಿ ನಾಲ್ಕನೆಯ ರಾಜವಂಶದ (ಪ್ರ.ಶ.ಪೂ. 2900–2750) ಕುಫು ಅರಸನ ಗೀಜೆಹ್ ಎಂಬಲ್ಲಿರುವ ಅತಿ ದೊಡ್ಡ ಪಿರಮಿಡ್ಡಿನ ರಚನೆಯಾಯಿತು. ಚೌಕಾಕೃತಿಯ ಅಡಿಗಟ್ಟಿನ ಮೇಲೆ ಕಟ್ಟಿರುವ ಈ ಶಿಲ್ಪ 146 ಮೀ. ಎತ್ತರವಾಗಿದೆ. ತುದಿಯಿಂದ ಬುಡದವರೆಗೂ ಇಳಿಜಾರಾದ ಇದರ ಬದಿ 232 ಮೀ. ಗಳಷ್ಟಿದೆ. ಇಲ್ಲಿಂದ ಮುಂದೆ ಕಟ್ಟಲ್ಪಟ್ಟ ಪಿರಮಿಡ್ಡುಗಳು ಇಷ್ಟು ಭವ್ಯವಾಗಿಲ್ಲ. ದೊಡ್ಡ ದೊಡ್ಡ ಗಾತ್ರಗಳ, ಸಮ ಕ್ಷೇತ್ರಗಳ ಹೊಂದಾಣಿಕೆ ನೇರವಾದ, ಸರಳವಾದ ಘನತೆ– ಇವು ವಾಸ್ತುಶಿಲ್ಪಕ್ಕೆ ಪಿರಮಿಡ್ಡುಗಳ ಕೊಡುಗೆ.

ದೇವಾಲಯಗಳಲ್ಲಿ ಕೆಲವು ಪೂರ್ಣವಾಗಿ ಕಲ್ಲಿನಲ್ಲಿ ಕೊರೆಯಲ್ಪಟ್ಟವೇ ಆಗಿವೆ. ಸಾಮಾನ್ಯವಾಗಿ ಇಂಥ ದೇವಾಲಯಗಳು ಹೆಬ್ಬಾಗಿಲಿನ ಬಳಿಯೂ ಪೈಲೋನ್ ಎಂಬ ಎರಡು ಘನವಾದ ಕಲ್ಲಿನ ಗೋಪುರಗಳೂ ಇವೆ. ಮೂರು ಬದಿಗಳಲ್ಲಿ ಎರಡು ಸಾಲುಕಂಬಗಳಿರುವ ಅಂಗಣವಿದೆ. ಕಂಬಗಳಿಂದ ತುಂಬಿರುವ ಒಂದು ವಿಶಾಲವಾದ ಕೋಣೆ. ಇದರಲ್ಲಿ ನಡುವಣ ಎರಡು ಸಾಲುಕಂಬಗಳು ಉಳಿದವಕ್ಕಿಂತ ಹೆಚ್ಚು ಎತ್ತರವಾಗಿದ್ದು ಕ್ಲೀರ್ ಸ್ಟೋರಿ ಎಂದು ಕರೆಯಲಾದ ಬೆಳಕಿನ ಕಂಡಿಗಳನ್ನು ಹೊಂದಿವೆ. ಮುಂದೆ ಗರ್ಭಗುಡಿ, ಇದರ ಮೂರು ಬದಿಗಳಲ್ಲಿ ಪೂಜಾರಿಗಳಿಗಾಗಿ ಕೋಣೆಗಳು ಇವೆ. 5ನೆಯ ರಾಜವಂಶ (ಪ್ರ.ಶ.ಪೂ. 2750–2625) ಕಾಲದಿಂದ ಈಚಿನ ಸಮಾಧಿ ದೇಗುಲಗಳು ಭವ್ಯವಾಗಿವೆ. ದೇವಾಲಯಗಳ ಈ ವಿಶಿಷ್ಟಶೈಲಿ ಬದಲಾವಣೆಗಳಿಲ್ಲದ ಪ್ರಸಕ್ತಶಕಾರಂಭದವರೆಗೂ ನಡೆದು ಬಂತು. ಇಂಥ ದೇವಾಲಯಗಳ ಉತ್ತಮ ನಿದರ್ಶನವೆಂದರೆ ಥೀಬ್ಸ್‌ನ ಆಮನ್ ದೇವಾಲಯ (12ನೆಯ ರಾಜವಂಶ ಪ್ರ.ಶ.ಪೂ. 2000–1788) ಇದಕ್ಕೆ ಮುಂದೆ 18ನೆಯ ರಾಜವಂಶ (ಪ್ರ.ಶ.ಪೂ. 1580–1350) ಒಂದನೆಯ ಥಟ್ಮೋಸ್ ಕೆಲವು ಅಂಗಗಳನ್ನು ಕೂಡಿಸಿದ. ಕಾರ್ನಾಕ್ ಎಂಬಲ್ಲಿ 19ನೆಯ ರಾಜವಂಶದ (ಪ್ರ.ಶ.ಪೂ. 1350–1205), ಎರಡನೆಯ ರ್‍ಯಾಮ್ಸೆಸ್ ಕಟ್ಟಿಸಿದ ಆಮನ್ ದೇವಾಲಯ ತುಂಬ ಪ್ರಸಿದ್ಧವಾದುದು. ಇದರ ಮುಂಭಾಗದ ಕಂಬಗಳ ಕೋಣೆ ವಿಶಾಲವೂ ಎತ್ತರವೂ ಆಗಿದೆ. ನಡುವಣ ಎರಡು ಸಾಲು ಕಂಬಗಳು ಸುಮಾರು 21 ಮೀ. ಎತ್ತರವಿದ್ದು 10ಮೀ. ಪರಿಧಿಯುಳ್ಳವು. ಇವುಗಳ ಮೇಲೆಲ್ಲ ಹೀರೋಗ್ಲಿಫ್ (ಚಿತ್ರ) ಬರವಣಿಗೆ ಇದೆ. ಭವ್ಯತೆ ಮತ್ತು ಬೃಹತ್ ಗಾತ್ರಗಳಲ್ಲಿ ಈಜಿಪ್ಟಿನವರಿಗೆ ಇರುವ ಪ್ರೀತಿ ಇದರಲ್ಲಿ ಕಂಡುಬರುತ್ತದೆ. ಆದರೆ ಈ ಕಂಬಗಳು ಒತ್ತಟ್ಟಾಗಿ ಇರುವುದರಿಂದ ಒಳಗಡೆಯ ವೈಶಾಲ್ಯಕ್ಕೆ ಕುಂದು ಬಂದಿರುವುದು ಮಾತ್ರವಲ್ಲದೆ ಇದನ್ನು ಉತ್ತಮ ಅಭಿರುಚಿಯೆನ್ನಲಾಗುವುದಿಲ್ಲ. ಕಂಬಗಳು ಅನೇಕ ರೀತಿಯವಿದ್ದು ಅವುಗಳ ಶಿರೋಭಾಗದಲ್ಲಿ ಕಮಲದ ಹೂ, ತಾಳೆಗರಿ ಕಟ್ಟು, ಪಪೈರಸ್ ಮೊದಲಾದ ಆಕಾರದ ತಲೆಕಟ್ಟುಗಳಿವೆ. ಕಂಬಗಳಲ್ಲಿ ಒಂದು ಮಾದರಿ ಗ್ರೀಕ್ ವಾಸ್ತುಶಿಲ್ಪದಲ್ಲಿ ಕಂಡುಬರುವ ಡೋರಿಕ್ ಕಂಬವನ್ನು ಹೋಲುತ್ತದೆ. ಥೀಬ್ಸ್ ಬಳಿ ಲಕ್ಸರ್ ಎಂಬಲ್ಲಿ ರಾಣಿ ಹಟ್ಷೆಪ್ಸೂಟ್ (18ನೆಯ ರಾಜವಂಶ. ಪ್ರ.ಶ.ಪೂ. 1580–1350) ಕಟ್ಟಿಸಿದ ದೇವಾಲಯ ಚಿಕ್ಕದಾದರೂ ಚೆಲುವಾಗಿದೆ. ಇದರ ಗುಡಿಯನ್ನು ಬಂಡೆಕಲ್ಲಿನಲ್ಲಿ ಕೊರೆದಿದ್ದಾರೆ.

ಈಜಿಪ್ಟಿನ ಅರಸರು ಸ್ಟೀಲ್ ಎಂದು ಕರೆಯಲಾದ ಸೂಜಿಯಾಕಾರದ ಸ್ತಂಭಗಳನ್ನು ತಮ್ಮ ವಿಜಯಗಳ ಸ್ಮಾರಕವಾಗಿ ನೆಟ್ಟಿರುತ್ತಾರೆ. ಕೊನೆಯದಾಗಿ ಸಾಮಾನ್ಯ ಕಟ್ಟಡಗಳು ಮನೆಗಳು, ಹೆಚ್ಚಾಗಿ ಉತ್ತರಾಭಿಮುಖವಾಗಿದ್ದುದಾಗಿ ಕಂಡುಬರುತ್ತದೆ. ಈಜಿಪ್ಟಿನ ವಾಸ್ತುಶಿಲ್ಪದಲ್ಲಿ ಕಮಾನು ರಚನೆ ಅಷ್ಟಾಗಿ ಕಾಣುವುದಿಲ್ಲ.



ಡಯರ್–ಎಲ್–ಬ್ರಾಹಿಯಲ್ಲಿನ ಹಟ್‌ಷೆಪ್‌ಶಟ್ ರಾಣಿಯ ದೇವಾಲಯ

**ಚಿತ್ರಕಲೆ:** ರಾಜವಂಶ ಪೂರ್ವಕಾಲದ (ಪ್ರ.ಶ.ಪೂ. 3400ಕ್ಕೂ ಹಿಂದೆ) ಗೋರಿಗಳಲ್ಲಿ ಕೆಲವು ಅಲ್‌ಕಾಬ್ ಎಂಬಲ್ಲಿವೆ. ಇವುಗಳ ಗೋಡೆಗಳಲ್ಲಿ ಬಿಳಿ, ಕೆಂಪು ಮತ್ತು ಕಪ್ಪು ಬಣ್ಣಗಳಲ್ಲಿ ರಚಿತವಾದ ಸರಳ ವ್ಯಕ್ತಿಚಿತ್ರಗಳಿವೆ. ಚಿತ್ರಗಾರಿಕೆಯ ಅತಿ ಪ್ರಾಚೀನ ನಿದರ್ಶನಗಳಿವು. ನಾಲ್ಕನೆಯ ರಾಜವಂಶ ಕಾಲದ (ಪ್ರಶ.ಪೂ. 2900–2750) ಕೆಲವು ವ್ಯಕ್ತಿಗಳ ಶವಾಗಾರಗಳಲ್ಲಿ ಸಾಮಾನ್ಯ ಜನರ ದೈನಂದಿನ ಜೀವನದ ಚಿತ್ರಣವಿದೆ. ಇವುಗಳಲ್ಲಿ ಗಂಡಹೆಂಡಿರು, ಆಳುಕಾಳು, ತಿಂಡಿತಿನಿಸು, ಆಟಬೇಟೆಗಳ ವಿವರಣೆಗಳಿವೆ. ರಾಜರ ಶವಾಗಾರಗಳಲ್ಲಿ ಧಾರ್ಮಿಕ, ಮತಸಂಬಂಧೀ ಚಿತ್ರಗಳು ಮಾತ್ರ ಕಂಡುಬಂದಿವೆ. ನಡುರಾಜ್ಯಕಾಲದಲ್ಲಿ ಅಂದರೆ ಸುಮಾರು 11–12ನೆಯ ರಾಜವಂಶಗಳ ಕಾಲದಲ್ಲಿ (ಪ್ರ.ಶ.ಪೂ. 2160–1788) ಉಬ್ಬಿನ ಕೆತ್ತನೆಯ ಬದಲು ಬಣ್ಣದ ಟೆಂಪೆರಾ ಚಿತ್ರಗಳನ್ನೂ ಗೋಡೆಯಲ್ಲಿ ಬರೆಯತೊಡಗಿದರು. ಇಂಥ ಒಂದು ಚಿತ್ರದಲ್ಲಿ ಸಾಮಾನ್ಯ ಪ್ರಜೆಯೊಬ್ಬ ತನ್ನ ಹೆಂಡತಿಯೊಡನೆ ಕುಳಿತುಕೊಂಡಿದ್ದಾನೆ.

ಹತ್ತಿರದಲ್ಲೇ ಆತನ ಮಿತ್ರ ಕುಳಿತಿದ್ದು, ಗಂಡಸರಿಬ್ಬರೂ ಕೈಕೈ ಹಿಡಿದುಕೊಂಡಿದ್ದಾರೆ. ಬಳಿಯಲ್ಲಿ ತಿಂಡಿತಿನಿಸುಗಳಿಂದ ತುಂಬಿದ ಬೋಗುಣಿಯೊಂದು ಮರದ ಪೀಠದ ಮೇಲಿದೆ. ಇದಕ್ಕೂ ಈಚೆಗೆ ಇನ್ನೊಬ್ಬ ಹೆಂಗಸು ನಿಂತಿದ್ದಾಳೆ. ಗಂಡಸರು ಸೊಂಟದಿಂದ ಮೊಣಕಾಲ ವರೆಗೆ ಮೈ ಮುಚ್ಚುವಂತೆ ಬಿಳಿ ಬಟ್ಟೆಗಳನ್ನು ಉಟ್ಟಿದ್ದಾರೆ. ಹೆಂಗಸರು ಎದೆ ಮುಚ್ಚುವ ನಿಲುವಂಗಿಗಳನ್ನು ಧರಿಸಿದ್ದಾರೆ. ಇವರೆಲ್ಲರೂ ಬಳೆ, ಕಡಗ, ಹಾರಗಳಿಂದ ಅಲಂಕೃತರಾಗಿದ್ದಾರೆ. ಗಂಡಸರನ್ನು ಕಡು ಕಂದುಬಣ್ಣದಲ್ಲೂ ಹೆಂಗಸರನ್ನು ನಸು ಹಳದಿಬಣ್ಣದಲ್ಲೂ ಚಿತ್ರಿಸಿದ್ದಾರೆ. ಎಲ್ಲರನ್ನೂ ಪಾರ್ಶ್ವಮುಖವಾಗಿ ಕಾಣಿಸಿದೆ. ಇಲ್ಲಿನ ಚಿತ್ರಣದ ಶೈಲಿ ಸರಳವೂ ನೈಜವೂ ಆಗಿದೆ. ಶವಾಗಾರಗಳ ಗೋಡೆಯಲ್ಲಿ ರೇಖೆಗಳನ್ನು ಕೆತ್ತಿ ಬಣ್ಣಗಳನ್ನು ಬಳಿಯುವಂಥ ಕೆತ್ತನೆ ಮತ್ತು ಚಿತ್ರಗಾರಿಕೆಯ ಮಿಶ್ರಣ ವಿರುವ ಶೈಲಿ ಇದೇ ಕಾಲಕ್ಕೆ ಪ್ರಾರಂಭ ವಾಯಿತು. ಇವನ್ನು ಬಣ್ಣದ ಉಬ್ಬು ಚಿತ್ರ ಎಂದು ಕರೆಯಬಹುದು. ಖಾಸಗೀ ವ್ಯಕ್ತಿಗಳ ಶವಾಗಾರಗಳ ಚಿತ್ರಗಳಲ್ಲಿ ಮೃತನು ತನ್ನ ಜೀವಮಾನ ದಲ್ಲಿ ಒಡೆಯನಿಂದ ಸನ್ಮಾನ ಪಡೆಯು ತ್ತಿರುವುದು, ಒಡೆಯನ ಹೆಗ್ಗಳಿಕೆಯನ್ನು ತೋರಿಸುವಂಥದು. ಅರಸ ಪರ ದೇಶದ ರಾಯಭಾರಿಗಳನ್ನು ಬರ ಮಾಡಿಕೊಳ್ಳುವುದು. ಸಾಮಂತರಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸುತ್ತಿರು ವುದು–ಇಂಥ ವಿಷಯಗಳ ವಿವರಣೆ ಯಿದೆ. 18ನೆಯ ರಾಜವಂಶದ ಕಾಲ ದಲ್ಲಿ (ಪ್ರ.ಶ.ಪೂ. 1580–1350) ಕಲೆ ಸಾಂಪ್ರದಾಯಿಕತೆಯ ಬಂಧನದಿಂದ ಬಿಡುಗಡೆ ಹೊಂದಿತು. ಈ ರೀತಿಯ ಸ್ವತಂತ್ರವಾದ ಚಿತ್ರಣ ಮೊದಲಾದುದು ಮೂರನೆಯ ಅಮೆನ್ ಹೋತೆಪ್ (ಪ್ರ.ಶ.ಪೂ. 1411–1375) ರಾಜನ ಕಾಲದಲ್ಲಿ. ಈ ಅರಸು ಸಿಂಹಾಸನದಲ್ಲಿ ಮೊಣಕಾಲುಗಳ ಮೇಲೆ ತೋಳುಗ ಳನ್ನು ಊರಿ ಸ್ವಲ್ಪ ಮುಂದಕ್ಕೆ ಬಾಗಿ ಆರಾಮವಾಗಿ ಕುಳಿತಿರುವಂಥ ಚಿತ್ರದಲ್ಲಿ ಈ ಅಸಾಂಪ್ರದಾಯಿಕತೆ ಕಾಣುತ್ತದೆ. ಆಮೇಲಿನ ಅರಸ ಅಕ್ನಾಟನ್ನನ (ಪ್ರ.ಶ.ಪೂ. 1375–1358) ಕಾಲದಲ್ಲಿ, ಅರಸ ತನ್ನ ರಾಣಿಗೆ ಹೂವನ್ನು ಕೊಡುತ್ತಿರುವುದು; ಅರಸು, ರಾಣಿ ಮಾತನಾಡುತ್ತ ಇರುವುದು; ಅರಸನ ಹೆಣ್ಣುಮಕ್ಕಳಿಬ್ಬರು ಬರಿಮೈಯಲ್ಲಿ ಹಾರ, ಒಡವೆಗಳಿಂದ ಮಾತ್ರ ಅಲಂಕೃತರಾಗಿದ್ದು ಒಬ್ಬಳ ಗದ್ದವನ್ನು ಮತ್ತೊಬ್ಬಳು ಕೈಯಿಂದ ಎತ್ತಿ ಪ್ರೀತಿಯಿಂದ ಮಾತನಾಡುತ್ತಿರುವುದು–ಬಹಳ ಸೊಗಸಾಗಿ ಬರೆಯಲ್ಪಟ್ಟಿವೆ. ಇನ್ನೊಂದು ಚಿತ್ರದಲ್ಲಿ ಇಬ್ಬರು ನರ್ತಕಿಯರು ಕುಣಿಯುತ್ತಿರುವುದು, ಸಂಗೀತಗಾರ್ತಿಯರು ವಾದ್ಯಗಳನ್ನು ನುಡಿಸುತ್ತಿರುವುದು ಚಿತ್ರಿತವಾಗಿದೆ. ಈ ಚಿತ್ರದಲ್ಲಿ ಸಂಗೀತಗಾರ್ತಿಯರನ್ನು ಪೂರ್ಣಮುಖವಾಗಿ ಚಿತ್ರಿಸಿದ್ದಾರೆ. ಇದನ್ನು ಅಮರ್ನ ಕಾಲವೆಂದು ಹೇಳಲಾಗಿದೆ. ಆಮೇಲೆ ಆಳಿದ ಟೂಟನ್ಖಾಮೆನ್ ಅರಸನ ಆಳ್ವಿಕೆಯಲ್ಲಿ ಈ ಶೈಲಿ ನಷ್ಟವಾಗಿ ಪುನಃ ಸಾಂಪ್ರದಾಯಿಕತೆ ತಲೆದೋರಿದೆ. ಅಮರ್ನ ಕಾಲ, ಚಿತ್ರಗಾರಿಕೆಯ ವೈಭವಕ್ಕೆ ಹೆಸರಾಗಿದೆ. ವಿಪುಲತೆ, ಸೌಂದರ್ಯ, ಅನಿರ್ಬಂಧಿತ ಚಿತ್ರಣ–ಇವು ಈ ಕಾಲದ ವೈಶಿಷ್ಟ್ಯ. ಸೂರ್ಯದೇವನ ಒಂದು ವಿನ್ಯಾಸದಲ್ಲಿ ಸೂರ್ಯನ ವೃತ್ತ, ಸುತ್ತಲೂ ಕಿರಣಗಳ ಕೊನೆಯಲ್ಲಿ ಎರಡು ಕೈಗಳು. ಕೈಗಳಲ್ಲಿ ಈಜಿಪ್ಟಿನವರ ಜೀವನದ ಸಂಕೇತ ಇರುವ ಚಿತ್ರಣ ನವ್ಯವಾಗಿದೆ.



ಮೊದಲನೆಯ ಪೆಪಿ ದೊರೆಯ ವಿಗ್ರಹ

**ಶಿಲ್ಪ:** ಶಿಲ್ಪದ ಪ್ರಾಚೀನ ನಿದರ್ಶನಗಳೆಂದರೆ ರಾಜವಂಶಪೂರ್ವಕಾಲದ ಗೋರಿಗಳಲ್ಲಿ ದೊರೆತ ದಂತದ ಕೆತ್ತನೆಗಳು. ಇವುಗಳಲ್ಲಿ ಉದ್ದದ ಗಡ್ಡವಿರುವ ಮನುಷ್ಯರ ತಲೆಗಳನ್ನು ಕೆತ್ತಿದೆ. ಈ ಕಾಲದ ಕೆಲವು ಪ್ರಾಣಿಗಳ ಮೂರ್ತಿಗಳೂ ಕಲ್ಲಿನಲ್ಲಿ ಕೆತ್ತಿದ ಕಲಶಗಳೂ ದೊರೆತಿವೆ. ಮಣ್ಣಿನಲ್ಲಿ ಮಾಡಿ ಬಣ್ಣ ಬಳಿದಿರುವ ಸ್ತ್ರೀಮೂರ್ತಿಗಳು ಇವೆ. ಕೆತ್ತನೆ ನಾಜೂಕಾಗಿಲ್ಲ. ಒಂದನೆಯ ರಾಜವಂಶ ಕಾಲದ (ಪ್ರ.ಶ.ಪೂ. 3400–3200) ಅರಸುಗಳಾದ ಇಪ್. ನಾರ್ಮರ್, ಅಹಮೀನ್ ಇವರ ಚಿತ್ರಗಳು ಉಬ್ಬಿನ ಕೆತ್ತನೆಯಲ್ಲಿ ದೊರೆತಿವೆ. ಈ ಅರಸರು ಉದ್ದನೆಯ ಶಂಖಾಕೃತಿಯ ಟೊಪ್ಪಿಗೆಗಳನ್ನು ಧರಿಸಿದ್ದಾರೆ. ಕೆಲವಲ್ಲಿ ಇವರು ಬಂಧಿತ ಶತ್ರುಗಳನ್ನು ದಂಡಿಸುತ್ತಿದ್ದಾರೆ. ಕೈರೊ ಸಂಗ್ರಹಾಲಯದ ಒಂದು ಫಲಕದಲ್ಲಿ ಉದ್ದನೆಯ ನಿಲುವಂಗಿ ಮತ್ತು ಶಂಖಾಕೃತಿಯ ಟೊಪ್ಪಿಗೆ ಧರಿಸಿರುವ ದಂತದ ಪ್ರತಿಮೆಯೂ ದೊರೆತಿವೆ. ಕೆತ್ತನೆಗಳೆಲ್ಲ ಜನರನ್ನು ಪಾರ್ಶ್ವಮುಖವಾಗಿ ಕಾಣಿಸಿದ್ದಾರೆ. ಕಲ್ಲಿನ ಕಲಶಗಳು, ಬಳಪದ ಫಲಕಗಳ ಮೇಲಿನ ಕೆತ್ತಿದ ಪ್ರಾಣಿಗಳ ಉಬ್ಬು ಕೆತ್ತನೆಗಳು, ಮರದ ಕೆತ್ತನೆಗಳು, ಕಲಶಗಳ ಮೇಲಿನ ಉಬ್ಬು ಕೆತ್ತನೆಗಳು ದೊರಕಿವೆ. ಇವುಗಳಲ್ಲೆಲ್ಲ ಶೈಲಿ ಪುರಾತನವಾಗಿದ್ದು ಕಲ್ಲಿನಲ್ಲಿಯ ಕೆತ್ತನೆ ನಾಜೂಕಾಗಿಲ್ಲ. ಮೂರನೆಯ ರಾಜವಂಶ ಕಾಲದ (ಪ್ರ.ಶ.ಪೂ. 2980–2900) ಸೋಸೆರ್ ಅರಸನ ಮಂತ್ರಿ ಇಮ್‌ಹೋತೆಪ್ ಎಂಬುವನ ಮೂರ್ತಿ ದುಂಡುಶಿಲ್ಪದ ಸುಂದರ ನಿದರ್ಶನ. ಈ ಮೂರ್ತಿಶಿಲ್ಪದಲ್ಲಿ ಆತ ಕುಳಿತುಕೊಂಡಿದ್ದು ಮೊಣಕಾಲ ಮೇಲಿನ ಬಿಡಿಸಿರುವ ಚಂದ್ರಿಕೆಯನ್ನು (ಸ್ಕ್ರೋಲ್) ನೋಡುತ್ತಿರುವಂತೆ ಕಾಣಿಸಿದೆ. ಸೋಸೆರ್ ಅರಸನ ಸಮಾಧಿಯಲ್ಲಿ ಸಿಕ್ಕಿದ ಅರಸನ ಪ್ರತಿಮೆ ಸುಂದರವಾಗಿ ಜೀವಕಳೆಯಿಂದ ತುಂಬಿದೆ. ಈವರೆಗೆ ಈಜಿಪ್ಟಿನವರ ಕಲೆಯಲ್ಲಿ ಕಾಣಬರುವ ಸಿಂಹ, ಬ್ಯಾಬಿಲಾನ್ ಸಿಂಹದಂತೆ ಉರುಟು ಮುಸುಡಿಯ, ಹಲ್ಲುಕಿರಿಯುವ ಪ್ರಾಣಿಯಾಗಿದ್ದು, ಈ ಕಾಲದಲ್ಲಿ ಬಾಯಿ ಮುಚ್ಚಿದ ಗಂಭೀರವಾದ ಸಿಂಹದ ಕೆತ್ತನೆ ಪ್ರಾರಂಭವಾಯಿತು. ದುಂಡುಗಿನ ಶಿಲ್ಪ ಚೆನ್ನಾಗಿದ್ದರೂ ಪರಿಪೂರ್ಣತೆಯನ್ನು ಪಡೆದಿಲ್ಲ. ಇದು ಮುಂದೆ 4ನೆಯ ರಾಜವಂಶ ಕಾಲದಲ್ಲಿ (ಪ್ರ.ಶ.ಪೂ. 2900–2750) ಪೂರ್ಣತೆಯನ್ನು ಹೊಂದುತ್ತದೆ. ಈ ಕಾಲದ ಕುಫು ಅರಸರ ಮೂರ್ತಿ ಡಯೊರೈಟ್ ಕಲ್ಲಿನಲ್ಲಿ ಕೆತ್ತಲ್ಪಟ್ಟು ಅತಿ ಸುಂದರವಾಗಿದೆ. ಅರಸ ತನ್ನ ಬಲಗೈಯನ್ನು ಮುಷ್ಟಿ ಕಟ್ಟಿ ಎಡಗೈಯನ್ನು ಎಡತೊಡೆಯ ಮೇಲಿಟ್ಟು ಕೂತಿರುವಂತೆ ಕಾಣಿಸಿದ ಈ ಮೂರ್ತಿಯ ಮುಖ ಶಾಂತವೂ ಸುಂದರವೂ ಆಗಿದೆ. ಅರಸ ಆ ಕಾಲದ ಸಾಂಪ್ರದಾಯಿಕ ಶಿರೋಭೂಷಣವನ್ನು ಧರಿಸಿದ್ದಾನೆ. ಇದೇ ಕಾಲದ ಮೆನ್‌ಕೌರೆ ಮತ್ತು ಅವನ ರಾಣಿಯರ ಅಲ್ಲದೆ ಪ್ರಾಂತ್ಯ ವಿಭಾಗದ ದೇವಿಯರ ಆಕೃತಿಗಳನ್ನು ಸುಣ್ಣದ ಕಲ್ಲಿನಲ್ಲಿ ವರ್ಣರಂಜಿತವಾಗಿ ಮೂಡಿಸಿದ್ದಾರೆ. ಸ್ಫಟಿಕ, ಬಿಳಿಕಲ್ಲು, ಕಪ್ಪಗಿನ ಕಲ್ಲುಗಳನ್ನು ಉಪಯೋಗಿಸಿ ಸೂಕ್ಷ್ಮವಾಗಿ ಈ ಪ್ರತಿಮೆಗಳಲ್ಲಿ ಕೆತ್ತಲ್ಪಟ್ಟ ಕಣ್ಣುಗಳು ಉತ್ಪನನ ಮಾಡುವ ವಿದ್ವಾಂಸರನ್ನು ಚಕಿತಗೊಳಿಸಿದುವು. ಈ ರೀತಿಯ ಕಣ್ಣುಗಳು ಬ್ಯಾಬಿಲಾನ್ ಮೂರ್ತಿಗಳಲ್ಲೂ ಕಾಣಬರುತ್ತವೆ. ರೇಖೆ ಮತ್ತು ಆಕೃತಿಗಳು ಈ ಕಾಲಕ್ಕೆ ಬಹಳ ಚೆಲುವಾಗಿದ್ದು, ಈಜಿಪ್ಷಿಯನ್ ಎಂಬ ವಿಶೇಷ ಶೈಲಿ ಇಲ್ಲಿಂದ ಮೊದಲಾಗುತ್ತದೆ. 5ನೆಯ ರಾಜವಂಶ ಕಾಲ (ಪ್ರ.ಶ.ಪೂ. 2750–2625)ದಲ್ಲಿ ದೇವಾಲಯಗಳಲ್ಲಿ ಉಪಯೋಗಿಸಲ್ಪಡುವ ಉಬ್ಬಿನ ಕೆತ್ತನೆಗಳು ಸಾಂಪ್ರದಾಯಿಕತೆಯನ್ನು ತಳೆದು ಬದಲಾವಣೆಗಳಿಲ್ಲದೆ ಎರಡು ಸಾವಿರ ವರ್ಷಗಳವರೆಗೆ ಮುಂದುವರಿದಿದೆ. ಈ ಕಾಲದ ಉಬ್ಬಿನ ಕೆತ್ತನೆಗಳಲ್ಲಿ ನೀರಾನೆಗಳನ್ನು ಬೇಟೆಯಾಡುವುದು. ಚಿಕ್ಕಮಕ್ಕಳು ಕೈ ಕೈ ಹಿಡಿದು ಹಿಂದಕ್ಕೆ ಮಾಲಿಕೊಂಡು ತಿರುಗು ಬೊಗರಿ ಆಟವಾಡುವುದು, ಮುಂತಾದುವನ್ನು ಕಾಣಬಹುದು. ಕೈಯಲ್ಲಿ ಪಪೈರಸ್ ಚಂದ್ರಿಕೆಯನ್ನು ಹಿಡಿದು ಕುಳಿತಿರುವ ಬರೆವಣಿಗೆಯ ಸುಂದರ ಮೂರ್ತಿ, ಮರದಲ್ಲಿ ಕೆತ್ತಿದ ಕಾಪರ್ ಎಂಬ ಪೂಜಾರಿಯ ದುಂಡು ಹಸನ್ಮುಖಿ ಮೂರ್ತಿ ಈ ಕಾಲದ ವ್ಯಕ್ತಿಚಿತ್ರಣದ ಉತ್ತಮ ಉದಾಹರಣೆಗಳು. ಒಂದನೆಯ ಪೆಪಿ ಮತ್ತು ಅವನ ಮಗನ ತಾಮ್ರದ ಮೂರ್ತಿಗಳು ಬಹಳ ಚೆನ್ನಾಗಿವೆ. ಇವು ಎರಕದ ಮೂರ್ತಿಗಳಲ್ಲ. ತಾಮ್ರವನ್ನು ಕುಟ್ಟಿ ರೂಪಿಸಿದಂಥವು.

ನೆಫ್ರೈಟಿಟಿ ರಾಣಿಯ ಪ್ರತಿಕೃತಿ

11, 12ನೆಯ ರಾಜವಂಶಗಳ ಕಾಲಕ್ಕೆ ಮೂರನೆಯ ಮೆನ್ ಹೋತೆಪ್‌ನ ಆಳ್ವಿಕೆಯಲ್ಲಿ ಒಬ್ಬ ಚತುರ ಶಿಲ್ಪಿಯ ಕೆಲಸ ಅಪಕ್ವವಾದರೂ ಮುಂದಿನ ಬೆಳವಣಿಗೆಯ ಸೂಚನೆಯನ್ನು ಕೊಡುತ್ತದೆ. ಡೈರ್ ಎಲ್ ಬ್ರಾಹಿಯ ಸಮಾಧಿ ದೇಗುಲದಲ್ಲಿ ಇದನ್ನು ಕಾಣಬಹುದು. 12ನೆಯ ರಾಜವಂಶ (ಪ್ರ.ಶ.ಪೂ. 2000–1788) ಕಾಲದ ಒಂದನೆಯ ಅಮೆನ್ ಆಮ್ಹೆತ್ ರಾಜನ ಕಾಲಕ್ಕೆ ಉಬ್ಬಿನ ಕೆತ್ತನೆಯೂ ಸೆನುಸ್ರೆಟ್ ರಾಜನ ಕಾಲಕ್ಕೆ ಕೊರೆದ ಉಬ್ಬಿನ (ಸಂಕ್ ರಿಲೀಫ್) ಕೆತ್ತನೆಯೂ ಹೆಚ್ಚಾಗಿ ಹರಡಿದುವು. ವ್ಯಕ್ತಿಚಿತ್ರಣದ ಸುಂದರ ನಿದರ್ಶನಗಳು ಅಬಿಡಾಸ್ ಮತ್ತು ಡೈರ್ ಎಲ್ ಬ್ರಾಹಿಯಲ್ಲಿ ದೊರೆತ ಮೂರನೆಯ ಸೆನುಸ್ರೆಟ್ ರಾಜನ ಶಿಲಾಮೂರ್ತಿಗಳು. ಇಲ್ಲಿ ಮುಖದ ಸಾದೃಶ್ಯವಿದೆ. ಉಚ್ಚಮಟ್ಟದ ಶಿಲ್ಪಚಾತುರ್ಯವನ್ನು ಹೊಂದಿದ ಇವನ ಇನ್ನೊಂದು ಕಪ್ಪುಕಲ್ಲಿನ ಚಿಕ್ಕಮೂರ್ತಿಯೂ ದೊರೆತಿದೆ. ಇತರ ಜಾತಿಯ ಕಲ್ಲುಗಳಲ್ಲಿ ಕೆತ್ತಿದ ಮೂರ್ತಿಗಳೂ ಇವೆ. ದಂತದ ಕೆತ್ತನೆ, ಅಮೂಲ್ಯವಾದ ಕಲ್ಲುಗಳಲ್ಲಿ ಕೆತ್ತನೆ, ಈ ಕಾಲಕ್ಕೆ ಜನಪ್ರಿಯವಾಗುತ್ತ ಬಂದಿತ್ತು. ಬಂಗಾರದ ವರ್ಣಲೇಪಗಳಿಂದ ಕೂಡಿದ ಒಂದನೆಯ ಸೆನುಸ್ರೆಟ್ ಅರಸನ ಚಿಕ್ಕ ಮರದ ಮೂರ್ತಿ, ಕೈಯಲ್ಲಿ ರಾಜದಂಡವನ್ನು ಹಿಡಿದಿದ್ದು ಬಹಳ ಸುಂದರವಾಗಿದೆ (ಅಮೆರಿಕದ ಮೆಟ್ರೊಪಾಲಿಟನ್ ಸಂಗ್ರಹಾಲಯ). 13ನೆಯ ರಾಜವಂಶಕಾಲದ (ಪ್ರ.ಶ.ಪೂ. 1788ರಿಂದ) ಶಿಲ್ಪಕಲೆಯ ಅವನತಿ ಪ್ರಾರಂಭವಾಯಿತು. ಈ ಕಾಲದ ಅರಸುಗಳ ಪ್ರತಿಮೆಗಳು ತೆಳ್ಳಗೆ,

ಉದ್ದನೆಯವಾಗಿದ್ದು, ಮುಖ ಕುತ್ತಿಗೆಗಳು ಉದ್ದವಾಗಿಯೂ ತಲೆ ದೇಹಪ್ರಮಾಣಕ್ಕೆ ಕಿರಿದಾಗಿಯೂ ಇವೆ. 18ನೆಯ ರಾಜವಂಶಕಾಲದಿಂದ (ಪ್ರ.ಶ.ಪೂ. 1580–1350) ಪ್ರಾರಂಭವಾಗುವ ಹೊಸರಾಜ್ಯಕಾಲ ಈಜಿಪ್ಟ್ ದೇಶದ ಅತಿ ಉನ್ನತಿಯ ಕಾಲ. ಅರಾಜಕತೆಯಿಂದ ಮತ್ತು ಹಿಕ್ಸೋಸ್ ಆಳ್ವಿಕೆಯಿಂದ ನಷ್ಟವಾದ ನಗರ, ದೇವಾಲಯಗಳು ಈಗ ಪುನಃ ನಿರ್ಮಾಣ ಗೊಂಡುವು. ಅಮಾಸಿಸ್‍ನಿಂದ ಟುಟಂಖಾಮೆನ್‍ವರೆಗಿನ ಅರಸುಗಳೆಲ್ಲರೂ

ಮೆಡುಮ್‍ನಲ್ಲಿನ ಸಮಾಧಿಯಲ್ಲಿರುವ ಬಾತುಕೋಳಿಗಳ ವರ್ಣಚಿತ್ರ

ಕಲೆಯನ್ನು ತುಂಬ ಪ್ರೋತ್ಸಾಹಿಸಿದರು. ಈ ಕಾಲದಲ್ಲಿ ಬೃಹದಾಕಾರದ ಮೂರ್ತಿಗಳ ಕೆತ್ತನೆ ಪ್ರಾರಂಭವಾ ಯಿತು. 4ನೆಯ ರಾಜವಂಶಕಾಲದಲ್ಲಿ ಸ್ಫಿಂಕ್ಸ್‍ನ ಬಹು ದೊಡ್ಡ ಮೂರ್ತಿಯೊಂದನ್ನು (57ಮೀ. ಉದ್ದ 20 ಮೀ. ಎತ್ತರ) ಕೆತ್ತಿದ್ದರು. ಅರಸುಗಳನ್ನು ಅಮಾನುಷ ಗಾತ್ರದಲ್ಲಿ ಚಿತ್ರಿಸುತ್ತಿರಲಿಲ್ಲ. ಬ್ರಿಟಿಷ್ ಮ್ಯೂಸಿಯಂನಲ್ಲಿರುವ 3ನೆಯ ಅಮೆನ್ ಹೋತೆಪ್‍ನ ಬೃಹದಾಕಾರದ ತಲೆ ಇವುಗಳಲ್ಲಿ ಪ್ರಾಯಶಃ ಮೊದಲಿನದು. ಕಾರ್ನಾಕ್‍ನಲ್ಲಿರುವ ಅಕ್ನಾಟನ್ನನ ಮೂರ್ತಿ ಇದಕ್ಕಿಂತ ಚೆನ್ನಾಗಿದೆ. ನೈಲ್ ನದಿಯ ಬಳಿ ಎರಡು ಬಹಳ ದೊಡ್ಡ ಮೂರ್ತಿಗಳು 3ನೆಯ ಅಮೆನ್ ಹೋತೆಪನ ಮೂರ್ತಿಗಳು. ಕೈರೊ ಮ್ಯೂಸಿಯಂನಲ್ಲಿರುವ 3ನೆಯ ಥಟ್ಮೋಸ್ ಅರಸನ ಮೂರ್ತಿ ಚೆನ್ನಾಗಿದೆ. ಚಿಕ್ಕ ಮೂರ್ತಿಗಳು ಶೈಲಿಯಲ್ಲಿ ಸಾಂಪ್ರದಾಯಿಕ ವಾಗಿದ್ದರೂ ನೈಜತೆಯಿಂದ ತುಂಬಿವೆ. ವೇಷಭೂಷಣಗಳು ಸಮಕಾಲೀನ ವಾಗಿವೆ. ರಾಣಿ ಹಟ್ಷೆಪ್ಸುಟ್ ನೌಕೆಗಳನ್ನು ಪಂಟ್ ಎಂಬಲ್ಲಿಗೆ ಕಳುಹಿಸುತ್ತಿರುವ, ಕೆತ್ತಿ ಬಣ್ಣ

ಸಕ್ಕರಾ ಸಮಾಧಿಯಲ್ಲಿ ದೊರಕಿದ ಲಿಪಿಕಾರನ ಚಿತ್ರ

ಬಳಿದ ಚಿತ್ರಗಳು ಚೆನ್ನಾಗಿವೆ. ಅಮರ್ನಕಾಲದ ಅಕ್ನಾಟನ್ನನ ಮೂರ್ತಿಯಲ್ಲಿ ಅರಸನನ್ನು ಸಾಂಪ್ರದಾಯಿಕವಾಗಿ ಚಿತ್ರಿಸುವ ಬದಲು ನೈಜ ಶೈಲಿಯಲ್ಲಿ ಚಿತ್ರಿಸಲಾಗಿದೆ. ತೆಳ್ಳಗಿನ ದೇಹ, ಭಾವುಕ ಮುಖ, ಸ್ವಲ್ಪ ಜೋಲುಹೊಟ್ಟೆಯ ಈ ಮೂರ್ತಿ ಸಂಪ್ರದಾಯಕ್ಕೆ ನೇರ ವಿರುದ್ಧವಾಗಿದೆ. ಮೂರ್ತಿಶಿಲ್ಪದ ಸೌಂದರ್ಯದ ಪರಮಾವಧಿಯನ್ನು ಬರ್ಲಿನ್ ಮ್ಯೂಸಿಯಂನಲ್ಲಿರುವ ರಾಣಿ ನೆಫರ್ ಟಿಟಿಯ ತಲೆಯಲ್ಲಿ ಕಾಣಬಹುದು. ಬಣ್ಣ ಬಳಿಯಲ್ಪಟ್ಟು ಸೂಕ್ಷ್ಮವಾಗಿ ಚಿತ್ರಿತವಾದ ಕಣ್ಣುಗಳುಳ್ಳ ಈ ಶಿಲಾಮೂರ್ತಿಯಲ್ಲಿ ಅವಳ ಸೌಂದರ್ಯ, ಸ್ವಭಾವಗಳು ಚೆನ್ನಾಗಿ ಮೂಡಿವೆ. ಅಗೆತದಲ್ಲಿ ಒಬ್ಬ ಶಿಲ್ಪಿಯ ಮನೆ ಬೆಳಕಿಗೆ ಬಂದಿದ್ದು, ಅದರಲ್ಲಿ ಹಲವಾರು ವ್ಯಕ್ತಿಗಳ ಮುಖಗಳ ಅಚ್ಚುಗಳು (ಮಾಸ್ಕ್ಸ್) ದೊರೆತಿವೆ. 19, 20ನೆಯ ರಾಜವಂಶ (ಪ್ರ.ಶ.ಪೂ. 1350–1094) ಕಾಲದ ಕೆಲವು ಕೆತ್ತನೆಗಳಲ್ಲಿ ಮಾತ್ರ ಸೂಕ್ಷ್ಮತೆ, ಸೌಂದರ್ಯಗಳಿವೆ. ಈಗ ಟ್ಯುರಿನ್‍ನಲ್ಲಿರುವ ಎರಡನೆಯ ರ್‍ಯಾಮ್ಸೆಸ್ ಮೂರ್ತಿ ಈಜಿಪ್ಟಿನ ಕಲೆಯ ಉನ್ನತಿಯ ಕೊನೆಯ ನಿದರ್ಶನ. ರ್‍ಯಾಮ್ಸೆಸ್‍ನ ದಂಡಯಾತ್ರೆಗಳನ್ನು ಚಿತ್ರಿಸುವ ಅನೇಕ ಉಬ್ಬಿನ ಕೆತ್ತನೆಗಳು ಬೃಹತ್ಪ್ರಮಾಣದಲ್ಲಿ ರ್‍ಯಾಮೇಸಿಯಮ್‍ನಲ್ಲಿ ಕೆತ್ತಲ್ಪಟ್ಟಿದ್ದರೂ ಅವುಗಳಲ್ಲಿ ಗಾತ್ರಕ್ಕೇ ಪ್ರಾಧಾನ್ಯವಲ್ಲದೆ ಅಭಿರುಚಿಗಲ್ಲ. ರೇಖಾಕೃತಿಗಳು ಸ್ವಲ್ಪ ಕೆಟ್ಟಿವೆ. ಸ್ವಲ್ಪವಾಗಿ ಏಷ್ಯದ ಪ್ರಭಾವವೂ ಅಲ್ಲಲ್ಲಿ ಕಾಣುತ್ತದೆ.

**ಮಣ್ಣಿನ ಪಾತ್ರೆ, ಕಲಶಗಳು ಮತ್ತು ಇತರ ಕಲೆಗಳು:** ರಾಜವಂಶಪೂರ್ವ ಕಾಲದ ಕಲ್ಲಿನ ಪಾತ್ರೆಗಳಲ್ಲಿ, ಮಡಕೆಗಳಲ್ಲಿ ತೀರ ಹಳೆಯವು ಅಷ್ಟು ಚೆನ್ನಾಗಿಲ್ಲ. ಮುಂದಿನವು ಕೆಂಪು ಮತ್ತು ಕಪ್ಪು ಹೊಳಪಿನ ಹೊರಮೈಯುಳ್ಳವು. ಇದರಲ್ಲಿ ಕೆಲವು ಪಾತ್ರೆಗಳ ಮೇಲೆ ಪ್ರಾಣಿಗಳ ಗೀರುಚಿತ್ರಗಳಿವೆ. ಅಲ್ಪಸ್ವಲ್ಪವಾಗಿ ಕೆಂಪು ಹೊರಮೈಯಲ್ಲಿ ಬಿಳಿಯ ಆಲಂಕಾರಿಕ ರೇಖೆಗಳು, ಪ್ರಾಣಿಗಳ ಚಿತ್ರಗಳು, ಅಪೂರ್ವವಾಗಿ ದೋಣಿಗಳ ಚಿತ್ರಗಳು ಇವೆ. ಆಮೇಲಿನವಲ್ಲಿ ಹಳದಿ ಕಂದು ಹೊರಮೈಯ ಮೇಲೆ ಕೆಂಪು ಬಣ್ಣದಲ್ಲಿ ಹಡಗುಗಳು, ಜಲ್ಲೆಗಳು, ಗಂಡಸರು, ಹೆಂಗಸರು ಮತ್ತು ಪ್ರಾಣಿಗಳ ಚಿತ್ರಗಳಿವೆ. ಇವೆಲ್ಲ ಆ ಕಾಲದ ಆಳವಿಲ್ಲದ ಗೋರಿಗಳಲ್ಲಿ ದೊರಕಿವೆ. ದುಃಖಿಸುತ್ತಿರುವ ಬಣ್ಣದ ಸ್ತ್ರೀಮೂರ್ತಿಗಳು ದೊರಕಿವೆ.

ಟುಟಂಕಮುನ್ ಚಿನ್ನದ ಮುಖವಾಡ

ಇವುಗಳ ಕೆಲಸ ನಾಜೂಕಾಗಿಲ್ಲ. ಕಲ್ಲಿನ ಕಲಶಗಳು ಸಾಧಾರಣವಾಗಿವೆ. ಬಳಪದ ಕಲ್ಲಿನ ಕೆಲವು ದೊಡ್ಡ ಫಲಕಗಳಲ್ಲಿ ಬಿಲ್ಲುಬಾಣಗಳನ್ನು ಹಿಡಿದಿರುವ ಬೇಟೆಗಾರರ ಮತ್ತು ಪ್ರಾಣಿಗಳ ಚಿತ್ರಗಳಿವೆ. ಹಳೆಯ ರಾಜ್ಯ ಕಾಲದಲ್ಲಿ ಮಡಕೆಗಳಿಗೆ ಕುಂಬಾರನ ಚಕ್ರದ ಉಪಯೋಗವಾಗಲಾರಂಭವಾಯಿತು. ರಾಜವಂಶ ಪೂರ್ವಕಾಲದಲ್ಲಿ ಪ್ರಾರಂಭವಾಗಿದ್ದ ನೀಲಿ ಮೆರುಗುಳ್ಳ ಫೆಯಾನ್ಸ್ ವಸ್ತುಗಳಲ್ಲಿ ಸುಧಾರಣೆಯನ್ನು ಕಾಣಬಹುದು. ಸ್ಟೆಪ್ ಪಿರಮಿಡ್ಡಿನೊಳಗಿನ ಒಂದು ಕೋಣೆಯಲ್ಲಿ ಸುಮಾರು 30 ಸಾವಿರ ಕಲ್ಲಿನ ಕಲಶಗಳು ದೊರಕಿದ್ದು ಅವುಗಳಲ್ಲಿ ಅನೇಕ ಕಲಶಗಳು ಈಜಿಪ್ಟಿನ ಕಲೆಗೆ ರತ್ನಪ್ರಾಯವಾಗಿವೆ. ಕೆಂಪು ಮಿರುಗುಳ್ಳ ಮಡಕೆಗಳು, ಕಲಶ ಪೀಠಗಳು, ಮಣಿ ಫಲಕಗಳು ಚೆನ್ನಾಗಿವೆ. ಚಂದ್ರಕಾಂತಶಿಲೆಯ ಕೆತ್ತನೆಯಿರುವ ಸುಂದರವಾದ ಲೇಪದಾನಿ ಕಲಶಗಳು ದೊರಕಿವೆ. 7ನೆಯ ರಾಜವಂಶದ (ಪ್ರ.ಶ.ಪೂ. 2431) ವರೆಗೆ ಮಣ್ಣಿನ ಪಾತ್ರೆಗಳು ಚೆನ್ನಾಗಿದ್ದು, ಆಮೇಲೆ ಕ್ರಮವಾಗಿ ಅವನತಿ ಹೊಂದುತ್ತ 12ನೆಯ ರಾಜವಂಶದ ಕಾಲಕ್ಕೆ ನಷ್ಟವಾಗಿವೆ. ಈ ಕಾಲದ ನಿತ್ಯೋಪಯೋಗಿ ಮಡಕೆಗಳು ಸುಂದರವಾಗಿಲ್ಲ. ಹಳೆಯ ರಾಜ್ಯ ಕಾಲದಲ್ಲಿ ನಸು ನೀಲಿ ಫೆಯಾನ್ಸಿನ ನೀರಾನೆಯೇ ಮೊದಲಾದ ಪ್ರಾಣಿಮೂರ್ತಿಗಳೂ ಈ ಮನುಷ್ಯಮೂರ್ತಿಗಳೂ ಚೆನ್ನಾಗಿವೆ. ಕಲ್ಲಿನ ಕಲಶಗಳಿಗೂ ಈ ಕಾಲದಲ್ಲಿ ಹೊಳಪನ್ನು ಕೊಡುತ್ತಿದ್ದರು. ನಿಜವಾದ ಗಾಜಿನ ಪ್ರಥಮ ಬಳಕೆ ಕೂಡ ಇದೇ ಕಾಲದಲ್ಲಿ ಆದಂತೆ ತೋರುತ್ತದೆ. ಮೊದಲಿಗೆ ನಾಜೂಕಿಲ್ಲದಿದ್ದರೂ ಕೆಲವೇ ವರ್ಷಗಳಲ್ಲಿ ತೆಳ್ಳಗಿನ ಪಾರದರ್ಶಕವಲ್ಲದ ಹಸರುಗಾಜು ಹಾಗೂ ಗಾಜು ಮತ್ತು ಚಿನ್ನಗಳ ಬಳಕೆಯಿರುವ ಸುಂದರವಾದ ಕಲಶ ಪಾತ್ರೆಗಳು, ಈ ಕಾಲದಲ್ಲಿ ನಿರ್ಮಿತವಾದುವು. ಹೊಸ ರಾಜ್ಯ ಕಾಲದ ಗಾತ್ರಪ್ರಿಯತೆಯ ಪ್ರತೀಕವಾಗಿ ದೊಡ್ಡ ದೊಡ್ಡ ಚಂದ್ರಕಾಂತಶಿಲೆಯ ಕಲಶಗಳು ದೊರಕಿವೆ. 19ನೆಯ ರಾಜವಂಶ (ಪ್ರ.ಶ. ಪೂ. 1350–1205) ಕಾಲದ ಚಂದ್ರಕಾಂತಶಿಲೆಯ ಬೋಗುಣಿಗಳು, ಕಲಶಗಳು ಚೆನ್ನಾಗಿವೆ. ಈ ಕಾಲದಲ್ಲಿ ಹೂಜಿಯಾಕಾರದ ಪಾತ್ರೆಗಳು ಜನಪ್ರಿಯವಾಗುತ್ತ ಬಂದುವು. ಮಡಕೆ ಕುಡಿಕೆಗಳಲ್ಲಿ ನೀಲಿ, ಹಳದಿ, ನೇರಳೆ, ಕಂದು, ಹಸುರೇ ಮೊದಲಾದ ಬಹುವರ್ಣದ ಹೊಳಪುಳ್ಳವು ಕಾಣಬರುತ್ತವೆ. ಬಹುವರ್ಣದ ಗಾಜಿನ ಕಲಶಗಳೂ ಈ ಕಾಲದವು. ನೀಲವರ್ಣದ ಗಾಜು ಹೆಚ್ಚು ಬಳಕೆಯಲ್ಲಿತ್ತು. ಕಪ್ಪು ಬಣ್ಣದ ಗಾಜು ತೀರ ಅಪೂರ್ವ. ಒಡವೆಗಳು, ಆಭರಣಗಳು, ಬೆಳ್ಳಿಯ ಮತ್ತು ಬಂಗಾರದ ಪಾತ್ರೆ ಬಟ್ಟಲುಗಳು ಕಾಲಾನುಕ್ರಮವಾಗಿ ಹಳೇ ರಾಜ್ಯಕಾಲದಿಂದ ಮೊದಲಾಗಿ ದೊರಕುತ್ತವೆ.

ಕೆಂಪು ಕಲ್ಲು ಕೂರಿಸಿದ ಚಿನ್ನದ ಕಡಗಗಳು, ಗೋಮೇದಿಕ ಮತ್ತು ಚಿನ್ನ ಕೂಡಿಸಿದ ರಾಜದಂಡ, ಹಳೇ ರಾಜ್ಯಕಾಲದಲ್ಲಿ ಬಳಕೆಯಲ್ಲಿ ಇದ್ದುವು. ಹೆಟೆಫೆರಸ್ ರಾಣಿಯ ಶವಾಗಾರದಲ್ಲಿ ಸುಂದರವಾದ ನಗಗಳು ದೊರಕಿವೆ. ಈ ಕಾಲದ ಬೆಳ್ಳಿಯ ಬೋಗುಣಿಗಳು ಅಪೂರ್ವವಾಗಿದ್ದು, ಈಗ ಕೈರೊ ಸಂಗ್ರಹಾಲಯದಲ್ಲಿವೆ. ನಡುರಾಜ್ಯ ಕಾಲದ ಒಡವೆಗಳು ಬಲು ಚೆನ್ನಾಗಿವೆ. ಈಜಿಪ್ಷಿಯನ್ ಆಭರಣಗಳಲ್ಲಿ ಅತ್ಯಂತ ಸುಂದರವಾದುವು ಈ ಕಾಲದವು. ಕುಂದಣದ ಕೆಲಸವಿರುವ ಎದೆಯ ಪದಕ ಒಂದರಲ್ಲಿ ಹದ್ದಿನ ರೂಪದ ದೇವಿಯ ಹರಡಿದ ರೆಕ್ಕೆಗಳ ಅಡಿಯಲ್ಲಿ 3ನೆಯ ಅಮೆನ್ ಅಮ್ಹೆತ್ ರಾಜವೈರಿಗಳನ್ನು ದಂಡಿಸುತ್ತಿರುವ



ಸಕ್ಕರಾದಲ್ಲಿರುವ ಜ಼ೋಸರನ ಸೆಟಪ್ ಪಿರಮಿಡ್ಡಿನ ಮುಂಭಾಗದ ದೇವಾಲಯದ ಕಂಬಗಳು

ಚಿತ್ರಣ ಸೂಕ್ಷ್ಮವಾಗಿಯೂ ಸುಂದರವಾಗಿಯೂ ಕೆತ್ತಲ್ಪಟ್ಟಿದೆ. ಸ್ಕೆರಬ್ ಎಂಬ ಕೀಟವಿಶೇಷದ ಮಾದರಿಗಳು ಈ ಕಾಲದಲ್ಲಿ ಜನಪ್ರಿಯವಾದುವು. ಹೊಲ, ಕಣಜಗಳಲ್ಲಿ ಜನ ಕೆಲಸಮಾಡುತ್ತಿರುವ, ಗದ್ದೆ ಉಳುವುದು ಮೊದಲಾದ ಕೆಲಸಗಳಲ್ಲಿ ಪ್ರವೃತ್ತರಾಗಿರುವಂತೆ ತೋರಿಸುವ ಚಿಕ್ಕ, ನಾಜೂಕಿಲ್ಲದ ಅನೇಕ ಮೂರ್ತಿಗಳು ಗೋರಿಗಳಲ್ಲಿ ದೊರಕಿವೆ. ಕೆತ್ತನೆಯಿರುವ ಕುರ್ಚಿ, ಮಂಚಗಳು, ಬಾಚಣಿಗೆಗಳು ಮತ್ತು ಇತರ ನಿತ್ಯೋಪಯೋಗಿ ಸಲಕರಣೆಗಳು ಅನೇಕ ಶವಾಗಾರಗಳಲ್ಲಿ ದೊರಕಿವೆ.

ಈಜಿಪ್ಟಿನ ಕಲೆಯ ಮುಖ್ಯವಾದ ಲಕ್ಷಣಗಳು-ಸರಳತೆ, ಭವ್ಯತೆ, ಮತ್ತು ಶಾಂತಭಾವನೆಯ ಪ್ರಚೋದನೆ. ಉನ್ನತಿಯ ಕಾಲದಲ್ಲಿ ಅಲಂಕಾರ ಕಡಿಮೆಯಿದ್ದು ಸೌಂದರ್ಯ ಹೊರಸೂಸುತ್ತದೆ. ಪ್ರಾಣಿಗಳ ಚಿತ್ರಣದಲ್ಲಿ ಔದಾರ್ಯ ಕಾಣುತ್ತದೆ. ದೊಡ್ಡಗಾತ್ರಗಳ ಉಪಯೋಗದಿಂದ ಭಯ, ವಿಸ್ಮಯ ಮತ್ತು ಗೂಢತೆಯ ಪ್ರಚೋದನೆಯನ್ನು ಮಾಡುವ ಪ್ರಯತ್ನ ನಡೆದಿದೆ. ವ್ಯಕ್ತಿಚಿತ್ರಣಕ್ಕೆ ತುಂಬ ಪ್ರಾಶಸ್ತ್ಯವಿದ್ದು ಇದರಲ್ಲಿ ಶಿಲ್ಪಿಗಳು ಯಶಸ್ವಿಯಾಗಿದ್ದಾರೆ. ಉಬ್ಬಿನ ಕೆತ್ತನೆ ಮತ್ತು ಚಿತ್ರಗಾರಿಕೆಯಲ್ಲಿ ಪಾರ್ಶ್ವಮುಖದ ಹೆಚ್ಚಾದ ಪ್ರಯೋಗ ಕಾಣುತ್ತದೆ. ಹಳೆಯ ರಾಜ್ಯಕಾಲದ ಚಿತ್ರಗಾರರ ರೇಖೆ, ರೂಪಗಳ ಮೇಲಿನ ಹಿಡಿತ ಅಸಾಮಾನ್ಯವಾದುದು. ಹೊಸರಾಜ್ಯಕಾಲದಲ್ಲಿ ಗಾತ್ರಪ್ರಿಯತೆ ಹಾಗೂ ಅಭಿರುಚಿಯ ಕುಂದು, ಚಿತ್ರಗಳಲ್ಲಿ ಅನಗತ್ಯವಾದ ಅಲಂಕಾರ ಇಹಕ್ಕಿಂತ ಪರದ ಯೋಚನೆ ಹೆಚ್ಚು ಮಾಡುವಂಥ ಸ್ವಭಾವಗಳು ಕಂಡುಬರುತ್ತವೆ.

(ಎಂ.ಎಂ.ಪಿ.)

**ಈಜಿಯನ್ ನಾಗರಿಕತೆ:** ಮೆಡಿಟರೇನಿಯನ್ ಸಮುದ್ರದ ಒಂದು ಪ್ರಮುಖ ಕವಲಾದ ಈಜಿಯನ್ ಸಮುದ್ರದ ಸುತ್ತಣ ಪ್ರದೇಶದಲ್ಲಿ ಇತಿಹಾಸ ಪೂರ್ವಕಾಲದ ಈಚಿನ ಯುಗದಲ್ಲಿನ ನಾಗರಿಕತೆಗಳೆಲ್ಲಕ್ಕೂ ಅನ್ವಯವಾಗುವ ಹೆಸರು. ಪ್ರ.ಶ.ಪೂ. 2500 – 1100ರ ವರೆಗೆ, ಎಂದರೆ ಈ ಪ್ರದೇಶದಲ್ಲೆಲ್ಲ ಕಬ್ಬಿಣದ ಬಳಕೆ ಸಾಮಾನ್ಯವಾಗುವವರೆಗೆ, ಈ ನಾಗರಿಕತೆ ಪ್ರಬಲವಾಗಿತ್ತು. ಈ ನಾಗರಿಕತೆಯನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಕ್ರೀಟ್ ದ್ವೀಪದ ನಾಗರಿಕತೆಯ ಮಿನೋವನ್ ಎಂದೂ ಗ್ರೀಸಿನ ಭೂ ಪ್ರದೇಶದ್ದಕ್ಕೆ ಹೆಲ್ಲಾಡಿಕ್ ಎಂದೂ ಈಜಿಯನ್ ಸಮುದ್ರದಲ್ಲಿರುವ ಡೆಲಾಸ್ ದ್ವೀಪ ಮತ್ತು ಅದರ ಸುತ್ತಮುತ್ತಲಿರುವ ಇತರ ದ್ವೀಪಗಳದ್ದಕ್ಕೆ ಸೈಕ್ಲಾಡಿಕ್ ಎಂದೂ ಹೇಳುವುದುಂಟು.

ಹೋಮರ್ ಎಂಬ ಗ್ರೀಸಿನ ಪ್ರಖ್ಯಾತ ಕವಿ ಪ್ರ.ಶ.ಪೂ. 9ನೆಯ ಶತಮಾನದಲ್ಲಿ ಕ್ರೀಟ್ ದ್ವೀಪದ ಹಿರಿಮೆಯನ್ನು ತನ್ನ ಕವಿತೆಯಲ್ಲಿ ಕೊಂಡಾಡಿ ಅದರ ಉನ್ನತಿಯ ಕಾಲವನ್ನು ಸುವರ್ಣಯುಗವೆಂದು ಕರೆದಿದ್ದಾನೆ. ಈಜಿಯನ್ ನಾಗರಿಕತೆ ಪ್ರಾಚೀನ ಈಜಿಪ್ಟ್ ಮತ್ತು ಮೆಸಪೊಟೇಮಿಯ ನಾಗರಿಕತೆಗಳ ಸಮಕಾಲೀನವೂ ಮೈಸೀನಿಯನ್ನಿನ ಏಳ್ಗೆಯ ಕಾಲಕ್ಕೆ ಪ್ರಾಚೀನವೂ ಆಗಿತ್ತೆಂದು ಹೇಳಬಹುದು.

ಪ್ರ.ಶ.ಪೂ. ಸು. 3000ದಲ್ಲಿ ಕ್ರೀಟಿನ ಜನ ನವಶಿಲಾಯುಗದಿಂದ ಲೋಹದ ಯುಗಕ್ಕೆ ಸ್ಥಿತ್ಯಂತರ ಹೊಂದಿದರು. ಕ್ರಮೇಣ ಜನಸಂಖ್ಯೆಯೂ ಹೆಚ್ಚಿತು. ಕಂಚು ಇವರ ಮುಖ್ಯ ಲೋಹವಾಗಿ ಬಳಕೆಗೆ ಬಂತು. ಅಂದರೆ ಕಬ್ಬಿಣಯುಗ ಆರಂಭವಾಗುವುದಕ್ಕೆ ಸು.2000 ವರ್ಷಗಳ ಹಿಂದೆ ಕಂಚು ಉಪಯೋಗದಲ್ಲಿತ್ತೆಂದು ತಿಳಿಯುತ್ತದೆ. ಈ ಜನರಿಗೆ ಬಹುಶಃ ಬರವಣಿಗೆಯೂ ತಿಳಿದಿತ್ತು. ಈ ಸಂಸ್ಕೃತಿಗಳ ಬೆಳವಣಿಗೆ ಬೇರೆ ಬೇರೆ ಕಾಲದಲ್ಲಿ ಜರುಗಿತು. ಪ್ರ.ಶ.ಪೂ.ಸು. 1800ರಲ್ಲಿ ನಾಸಾಸ್ ಮತ್ತು ಫೇಸ್ಟಾಸ್ ಎಂಬ ನಗರಗಳು ಪ್ರಮುಖವಾಗಿದ್ದುವು. ಆಗ ಈ ನಾಗರಿಕತೆ ತನ್ನ ಔನ್ನತ್ಯದ ಶಿಖರ ಮುಟ್ಟಿತ್ತು. ಅಲ್ಲಿಂದ ಮುಂದೆ ನೂರು ವರ್ಷಗಳ ಅವಧಿಯಲ್ಲಿ ಯಾವುದೋ ಭಯಂಕರ ವಿಪತ್ತಿಗೆ ಗುರಿಯಾಗಿ ನಾಸಾಸ್‌ನ ಪ್ರಖ್ಯಾತ ಅರಮನೆ ನಾಶವಾಯಿತು. ಹಾಗೆಯೇ ಇತರ ನಗರಗಳಲ್ಲಿದ್ದ ಅರಮನೆಗಳೂ ಕಟ್ಟಡಗಳೂ ನಾಶ ಹೊಂದಿದುವು.

ಸು. 50 ವರ್ಷಗಳ ಅನಂತರ ಟ್ರಾಯ್ ಮತ್ತು ಕ್ರೀಟ್ ನಗರಗಳು ಪುನಃ ನಿರ್ಮಾಣವಾದುವು. ಆಗ ಈಜಿಯನ್ ನಾಗರಿಕತೆ ಮತ್ತೆ ಉಜ್ವಲವೂ ಪ್ರಭಾವಶಾಲಿಯೂ ಆಗಿ ಪ್ರದೇಶದ ಎಲ್ಲ ಭಾಗಗಳಿಗೂ ಹಬ್ಬಿತು. ಆದರೆ ಈ ವೈಭವ ಕೇವಲ ಸ್ವಲ್ಪ ಕಾಲದವರೆಗೆ ಉಳಿದಿದ್ದು ಅನಂತರ ಅಳಿಯಿತು. ಅಕೇಯನ್ನರೆಂಬ ದಾಳಿಕಾರರು ಪ್ರ.ಶ.ಪೂ.ಸು. 1400ರಲ್ಲಿ ಕ್ರೀಟ್ ದ್ವೀಪವನ್ನು ವಶಪಡಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಅಲ್ಲಿ ಹರಡಿದರು.

ಪೂರ್ವ ಮೆಡಿಟರೇನಿಯನ್ ಸಮುದ್ರದ ದ್ವೀಪಗಳನ್ನೊಳಗೊಂಡು, ಅದರ ಕರಾವಳಿ ಪ್ರದೇಶ, ಗ್ರೀಕ್ ಭೂಪ್ರದೇಶ ಏಷ್ಯ ಮೈನರಿನ ಕರಾವಳಿ ಪ್ರದೇಶ, ಮತ್ತು ಸೈಪ್ರೆಸ್‌ನಲ್ಲೂ ಈಜಿಯನ್ ನಾಗರಿಕತೆಯ ಪ್ರಭಾವವಿತ್ತು.

ಏಷ್ಯ ಮೈನರಿನ ಸಮುದ್ರ ತೀರಪ್ರದೇಶ, ಸಿರಿಯ, ಪ್ಯಾಲಸ್ತೀ ಈಜಿಪ್ಟ್ ಪ್ರದೇಶಗಳೂ ಕಂಚಿನ ಯುಗದ ನಾಗರಿಕತೆ ಹೊಂದಿದ್ದುವು. ಈಜಿಯನ್ ನಾಗರಿಕತೆ ಕ್ರೀಟ್ ದ್ವೀಪದಲ್ಲಿ ಜನಿಸಿ, ಅಭಿವೃದ್ಧಿಗೊಂಡು ಅನಂತರ ಗ್ರೀಸಿನ ಭೂಪ್ರದೇಶ ಮತ್ತು ಈಜಿಯನ್ ಪ್ರದೇಶದ ಇತರ ದ್ವೀಪಗಳಿಗೂ ಹರಡಿತು.

ಟ್ರಾಯ್ ಪಟ್ಟಣ ಗ್ರೀಕರ ವಶವಾಗುವುದಕ್ಕೂ ಸಾವಿರ ವರ್ಷ ಹಿಂದೆಯೇ ಈ ನಾಗರಿಕತೆ ಉನ್ನತ ಶಿಖರವನ್ನೇರಿ ಕಲಾಕೌಶಲದಲ್ಲಿ ಪ್ರಪಂಚದಲ್ಲಿಯೇ ಒಂದು ಉನ್ನತ ಸ್ಥಾನ ಪಡೆಯಿತು. ಈಜಿಪ್ಟಿನ ಸಂಪರ್ಕ ಇದರ ಅಭಿವೃದ್ಧಿಗೆ ಚೈತನ್ಯದಾಯಕವಾಗಿತ್ತು. ಅಲ್ಲಿನ ವಸಾಹತು ಜನ ಇಲ್ಲಿ ಬಂದು ನೆಲಸಲಾಗಿ ಅವರ ರೀತಿ ನೀತಿ ಭಾವನೆಗಳು ಇವರಲ್ಲಿ ಮಿಲನವಾಗಲು ಅವಕಾಶ ದೊರೆಯಿತು. ಹೀಗೆಯೇ ಏಷ್ಯ ಮೈನರ್ ಹಾಗೂ ಟೈಗ್ರಿಸ್-ಯೂಫ್ರೆಟೀಸ್ ಕಣಿವೆಯ ಸಂಪರ್ಕವೂ ಸ್ಫೂರ್ತಿದಾಯಕವಾಗಿತ್ತು. ಕ್ರೀಟ್ ದ್ವೀಪದ ನಾಗರಿಕತೆಗೆ ಮಿನೋವನ್ ನಾಗರಿಕತೆ ಎಂದು ಹೆಸರು ಬರಲು ಮಿನಾಸ್ ಎಂಬ ದೊರೆ ಕಾರಣ. ಈತ ವಾಸ್ತವವಾಗಿ ಇದ್ದನೆಂಬ ಬಗ್ಗೆ ಖಚಿತವಾಗಿ ಮಾಹಿತಿಯೇನೂ ದೊರಕಿಲ್ಲ.

**ಮಿನೋವನ್ ನಾಗರಿಕತೆಯ ಮುಖ್ಯ ಲಕ್ಷಣಗಳು:** ಸು. 2000 ವರ್ಷಗಳ ದೀರ್ಘ ಅವಧಿಯ ಮಿನೋವನ್ ನಾಗರಿಕತೆಯನ್ನು ಪೂರ್ವ ಮಿನೋವನ್ (3400–2100) ಮಧ್ಯ ಮಿನೋವನ್ (2100–1600) ಮತ್ತು ಅಂತ್ಯ ಮಿನೋವನ್ (1600–1150) ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಇವನ್ನು ಮತ್ತೆ ತಲಾ ಮೂರು ಭಾಗಗಳಾಗಿ ಮಾಡುವುದು ಸಾಧ್ಯ.

ಮಿನೋವನ್ ಕಾಲ ಆರಂಭವಾಗುವುದಕ್ಕೂ ಮುಂಚೆ ಕ್ರೀಟಿನಲ್ಲಿ ವಾಸಿಸುತ್ತಿದ್ದ ಮೂಲನಿವಾಸಿಗಳು ಮೆಡಿಟರೇನಿಯನ್ ಜನಾಂಗದ ಬೇರೆ ಬೇರೆ ವಂಶಗಳಿಗೆ ಸೇರಿದವರಾಗಿದ್ದರೆಂದೂ ಹೇಳಬಹುದು. ಇವರ ಪೂರ್ವಿಕರು ಬಹುಶಃ ಸಿರಿಯ ಮತ್ತು ಅನಟೋಲಿಯಗಳಿಂದ ಬಂದವರು. ಇವರಿಗೂ ಹಿಟ್ಟೈಟರು ಮತ್ತು ಇಂಡಿಯದ ಮೇಲೆ ಮೊಟ್ಟ ಮೊದಲು ದಾಳಿ ನಡೆಸಿದ ಆರ್ಯರಿಗೂ ಸಂಬಂಧ ಇರಬಹುದು. ಉದ್ದ ತಲೆ, ಕುಳ್ಳನೆಯ ತೆಳು ದೇಹ, ಅಲೆಯಲೆಯ ಕಪ್ಪು ಕೂದಲು-ಈ ಲಕ್ಷಣವಿರುವ ಇವರು ಈಜಿಪ್ಟಿನವರನ್ನು ಹೋಲುತ್ತಿದ್ದರು.

ಮಿನೋವನ್ ಕಾಲದ ಆರಂಭದಲ್ಲಿ ಕ್ರೀಟಿಗೆ ಏಷ್ಯ ಮೈನರಿನಿಂದ ಜನ ವಲಸೆ ಹೋದರು. ಇದರಿಂದ ಅಲ್ಲಿನ ಜನಸಂಖ್ಯೆಯು ಹೆಚ್ಚಿತು. ಆದ್ದರಿಂದ ಕ್ರೀಟಿನ ಪೂರ್ವ, ದಕ್ಷಿಣ ಮತ್ತು ಮಧ್ಯಭಾಗಗಳಿಂದ ಸಂಸ್ಕೃತಿಗಳು ಪರಸ್ಪರ ಭಿನ್ನವಾದುವು.

ಈ ಕಾಲದಲ್ಲಿ ಹಲವು ನಗರಗಳು ಸಮುದ್ರತೀರದಲ್ಲಿ ಉದ್ಭವವಾಗಿ ಕ್ರಮೇಣ ಉನ್ನತ ಸ್ಥಿತಿಗೇರಿದುವು. ಕೃಷಿ, ಕುರಿಸಾಕಣೆ, ಬೇಟೆ, ಮೀನು ಹಿಡಿಯುವುದು ಮತ್ತು ವಿದೇಶೀ ವ್ಯಾಪಾರ-ಇವು ಜನರ ಮುಖ್ಯ ಕಸುಬು. ಸೈಕ್ಲಡೀಸ್, ಏಷ್ಯಮೈನರ್, ಲಿಬಿಯ,

ಈಜಿಪ್ಟ್, ಲವಾಂಟ್, ಗ್ರೀಕ್ ಭೂಪ್ರದೇಶ ಹಾಗೂ ಮೆಸಪೊಟೇಮಿಯಗಳೊಡನೆ ವ್ಯಾಪಾರ ಸಂಪರ್ಕವಿತ್ತು. ಪರದೇಶಗಳ ಪ್ರಭಾವ ಕ್ರೀಟಿನ ಕಲೆಯ ಮೇಲೆ ಸ್ವಲ್ಪಮಟ್ಟಿಗೆ ಇದ್ದರೂ ಒಟ್ಟಿನಲ್ಲಿ ಅದು ವೈಶಿಷ್ಟ್ಯಪೂರ್ಣವಾದ ಪ್ರಗತಿ ಸಾಧಿಸಿತ್ತು. ಇಲ್ಲಿನ ಕಲಾವಿದರು ಈಜಿಪ್ಟಿನ್ನನು ಕರಿಸಿದರೂ ತಮ್ಮ ವೈಶಿಷ್ಟ್ಯವನ್ನೂ ಉಳಿಸಿಕೊಂಡಿದ್ದರು. ತಮ್ಮ ಪ್ರಭಾವವನ್ನು ಇತರ ದೇಶಗಳ ಮೇಲೂ ಬೀರಿದ್ದರು. ಸೈಕ್ಲಡೀಸ್‌ನಲ್ಲಿ ಈ ಕಲೆ ಪ್ರಾಮುಖ್ಯ ಗಳಿಸಿತ್ತು. ಫೈಲಾಕೋಪಿಯಲ್ಲಿ ಜನ ಅಬ್‌ಸಿಡಿಯನ್ ಎಂಬ ಒಂದು ಬಗೆಯ ಕಾಚಶಿಲೆ ಮಾರಿ ಅತ್ಯಧಿಕ ಸಂಪತ್ತುಗಳಿಸಿದ್ದರು. ಅಮರ್‌ಗೋಸ್‌ನ ಶಿಲಾಪ್ರತಿಮೆಗಳು ಪ್ರಖ್ಯಾತವಾಗಿದ್ದುವು.

ವಸಿಲಿಕಿಯಲ್ಲಿದ್ದ ಮನೆಗಳು ಅಗಲ, ತಗ್ಗು. ಅವುಗಳದು ಚೌಕಟ್ಟಿನ ಆಕಾರ. ಸಮತಲವಾದ ಮೇಲ್ಚಾವಣಿ. ಕೆಲವು ಕಾಲದ ಮೇಲೆ ಮಹಡಿ ಮನೆಗಳು ನಿರ್ಮಾಣವಾದುವು. ಕೆಳಭಾಗವನ್ನು ಮಣ್ಣಿನಿಂದಲೂ ಮೇಲ್ಭಾಗವನ್ನು ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳಿಂದಲೂ ಕಟ್ಟಿ, ಕಿಟಕಿ ಬಾಗಿಲುಗಳಿಗೆ ಮರದ ಚೌಕಟ್ಟು ಹಾಕಿ, ಗೋಡೆಗೆ ಗಾರೆ ಬಳಿಯುತ್ತಿದ್ದರು. ಕೋಣೆಗಳನ್ನು ಹೆಚ್ಚಿಸಿದಾಗ ಅಂಗಳಗಳನ್ನೂ ನಿರ್ಮಿಸುತ್ತಿದ್ದರು. ನಗರಗಳು ಬೆಳೆದಂತೆ ಕೈಗಾರಿಕೆಗಳೂ ಬೆಳೆದುವು. ಕುಂಬಾರರೂ ಕೆತ್ತನೆ ಕೆಲಸಗಾರರೂ ತಮ್ಮ ಉತ್ಪಾದನೆ ಹೆಚ್ಚಿಸಿದರು. ಅಮೃತಶಿಲೆ ಮತ್ತು ದಂತದ ಬಿಲ್ಲೆಗಳ ಮೇಲೆ ಚಿತ್ರರೂಪದಲ್ಲಿ (ಸಾಂಕೇತಿಕವಾಗಿ) ಅಕ್ಷರಗಳನ್ನು ಬರೆಯುವುದು ರೂಢಿಗೆ ಬಂತು.

ಪ್ರ.ಶ.ಪೂ. 2000ದ ಅನಂತರ ಕ್ರೀಟನ್ನರ ನಾಗರಿಕತೆ ಉಚ್ಛ್ರಾಯಸ್ಥಿತಿ ಮುಟ್ಟಿತು. ಮಧ್ಯಕಾಲದ ಆರಂಭದಿಂದಲೇ ನಾಸಾಸ್ ರಾಜಕೀಯ ಹಾಗೂ ವಾಣಿಜ್ಯ ಚಟುವಟಿಕೆಯ ಮುಖ್ಯ ಕೇಂದ್ರವಾಯಿತು. ಮೊದಲಿನಿಂದಲೂ ಸಮುದ್ರಯಾನ ಪ್ರಿಯರಾಗಿದ್ದ ಕ್ರೀಟನ್ನರು ಈಜಿಪ್ಟ್, ಬ್ಯಾಬಿಲೋನಿಯಗಳೊಡನೆ ವಿಶೇಷವಾಗಿ ವ್ಯಾಪಾರ ನಡೆಸುತ್ತಿದ್ದರು. ಮಿನೋವನ್ ಕಾಲದ ಅಂತ್ಯಭಾಗದಲ್ಲಿ ಕೆಲವು ವರ್ಷಗಳವರೆಗೆ ಈಜಿಯನ್ ಪ್ರದೇಶದಲ್ಲೆಲ್ಲ ನಾಸಾಸ್ ಮುಖ್ಯ ನಗರವಾಗಿತ್ತು. ಹಿಂದೆಂದೂ ಕಾಣದ ಅನುಭವಯುತವಾದ ಯುಗವೊಂದು ಆಗ ಪ್ರಾರಂಭವಾಯಿತು. ಅಲ್ಲಿಯ ಅರಮನೆ ಎಲ್ಲ ಪ್ರಗತಿಯ ಅನುಕೂಲಗಳನ್ನೂ ಹೊಂದಿ ಭವ್ಯತೆಯಿಂದ ಕಂಗೊಳಿಸುತ್ತಿತ್ತು. ಅರಮನೆಗೆ ಸೇರಿದಂತೆ ದೊಡ್ಡ ದೊಡ್ಡ ಉಗ್ರಾಣ, ಶಾಲೆ, ಯುದ್ಧಸಾಮಗ್ರಿ ತಯಾರಿಸುವ ಕಾರ್ಖಾನೆ, ಹಿಪ್ಪೆ ಎಣ್ಣೆಯ ಗಾಣ, ಹಾಗೂ ನಾನಾ ಪದಾರ್ಥ ತಯಾರಿಸುವ ಕಾರ್ಖಾನೆಗಳು ಇದ್ದು ಅದೇ ಒಂದು ಸ್ವಸಂಪೂರ್ಣ ಪಟ್ಟಣವಾಗಿತ್ತು.

**ರಾಜಕೀಯ ವ್ಯವಸ್ಥೆ:** ಇತರ ಎಲ್ಲ ಕಡೆಗಳಲ್ಲೂ ಸಾಮಾನ್ಯವಾಗಿ ಇದ್ದಂತೆ ಕ್ರೀಟಿನಲ್ಲೂ ಆರಂಭದಲ್ಲಿ ಒಂದೇ ವಂಶದ ಆಡಳಿತ ಒಂದೊಂದು ಸ್ಥಳದಲ್ಲೂ ಪ್ರತ್ಯೇಕವಾಗಿ ವ್ಯವಸ್ಥಿತವಾಗಿತ್ತು. ಮಧ್ಯ ಮಿನೋವನ್ ಕಾಲದಲ್ಲಿ ಅಥವಾ ಅಂತ್ಯದ ಮಿನೋವನ್ ಕಾಲದ ಆರಂಭದಲ್ಲಿ ಕ್ರೀಟ್ ಏಕತೆ ಸಾಧಿಸಿತ್ತು. ಆಗ ಅದನ್ನು ನಾಸಾಸ್ ದೊರೆಗಳು ಆಳುತ್ತಿದ್ದರು. ಮುಂದೆ ಗ್ರೀಸ್ ಭೂಪ್ರದೇಶಕ್ಕೂ ಇವರ ಅಧಿಕಾರ ವ್ಯಾಪಿಸಿತು. ಆಗಿನ ದೊರೆಗಳು ಅರ್ಚಕ–ದೊರೆಗಳು. ಅವರದು ಧಾರ್ಮಿಕ ವೃತ್ತಿ. ಆ ಕಾರಣದಿಂದಾಗಿ ರಾಜ್ಯವಾಳುವುದಕ್ಕೆ ಅವರಿಗೆ ಅಧಿಕಾರಪ್ರಾಪ್ತಿ.

**ಆರ್ಥಿಕ ಜೀವನ:** ಆರಂಭದಲ್ಲಿ ಕ್ರೀಟಿನ ನಿವಾಸಿಗಳು ಕೃಷಿ, ಮೀನುಗಾರಿಕೆ ಮತ್ತು ಕುರಿಸಾಕಣೆಯಿಂದ ಜೀವನ ಸಾಗಿಸುತ್ತಿದ್ದರು. ಭೂಮಿ ಫಲವತ್ತಾಗಿದ್ದರೂ ದೇಶದ ವಿಸ್ತಾರ ಕಡಿಮೆ. ಆದ್ದರಿಂದ ಜನಸಂಖ್ಯೆ ಹೆಚ್ಚಿದ ಹಾಗೆಲ್ಲ ಕೃಷಿಯ ಜೊತೆಗೆ ಇತರ ಉದ್ಯೋಗ ಬೆಳೆಸುವುದು ಅನಿವಾರ್ಯವಾಯಿತು. ಕೆಲವು ಜನ ಬೇರೆ ದೇಶಗಳಿಗೆ ವಲಸೆ ಹೋದರು. ಮತ್ತೆ ಕೆಲವರು ಸಮುದ್ರಯಾನದಲ್ಲಿ ನಿರತರಾದರು. ಆದರೆ ಹೆಚ್ಚು ಜನ ಸ್ವದೇಶದಲ್ಲೇ ಉಳಿದು ವ್ಯಾಪಾರ ಸಾಮಗ್ರಿ ತಯಾರಿಕೆಯಲ್ಲಿ ತೊಡಗಿದರು. ದ್ರಾಕ್ಷಾರಸ, ಸಿಪ್ಪೆ ಎಣ್ಣೆ, ಮಡಕೆ, ಜಾಡಿ, ಹೂದಾನಿ ಮುಂತಾದ ಗೃಹಬಳಕೆ ಸಾಮಾನುಗಳನ್ನು ತಯಾರಿಸುತ್ತಿದ್ದರು. ರತ್ನ, ಮುದ್ರಿಕೆ, ಕಠಾರಿ, ಬಾಕು ಮತ್ತು ಕುಶಲಕಲೆಯ ವಸ್ತುಗಳು ತಯಾರಾಗಿ ಪರದೇಶಗಳಿಗೂ ಹೋಗುತ್ತಿದ್ದುವು. ಆಮದು ಪದಾರ್ಥಗಳಲ್ಲಿ ಆಹಾರ ಮತ್ತು ಲೋಹ ಪದಾರ್ಥಗಳು ಮುಖ್ಯ. ವ್ಯಾಪಾರ ಮತ್ತು ಕೈಗಾರಿಕೆ ಅತ್ಯಂತ ಬಿರುಸಿನಿಂದ ನಡೆದು ಕ್ರೀಟ್ ಕೆಲವು ಕಾಲದವರೆಗೆ ಸಂಪದ್ಭರಿತವಾಗಿತ್ತು.

**ಸಾಮಾಜಿಕ ಜೀವನ:** ಕ್ರೀಟನ್ನರು ಸ್ವಾತಂತ್ರ್ಯಪ್ರೇಮಿಗಳೂ ಕಲಾಪ್ರೇಮಿಗಳೂ ಶಾಂತಿಪ್ರಿಯರೂ ಸ್ತ್ರೀಪುರುಷ ಸಮಾನತೆಯ ಭಾವನೆಯುಳ್ಳವರೂ ಆದ್ದರಿಂದ ಅವರ ಸಾಮಾಜಿಕ ಜೀವನ ಸ್ವಾರಸ್ಯಕರವೂ ಉಲ್ಲಾಸಭರಿತವೂ ಚಟುವಟಿಕೆಯಿಂದ ಕೂಡಿದ್ದೂ ಆಗಿತ್ತು. ಕೃಷಿ, ಕೈಗಾರಿಕೆ, ವ್ಯಾಪಾರಗಳಲ್ಲಿ ತೊಡಗಿದ್ದ ಜನರ ಸಂಖ್ಯೆಯೇ ಹೆಚ್ಚಾಗಿದ್ದರೂ ಕುಶಲಕಲೆಗಳಲ್ಲಿ ಆಸಕ್ತಿಯುಳ್ಳ ಜನರೂ ಹೆಚ್ಚು ಸಂಖ್ಯೆಯಲ್ಲಿಯೇ ಇದ್ದರು. ಶ್ರೀಮಂತರೂ ದೊಡ್ಡ ಜಮೀನುದಾರರೂ ಕೆಲವರಿದ್ದರು. ಮಹಿಳೆಯರು ಸಮಾನ ಹಕ್ಕುಬಾಧ್ಯತೆ ಪಡೆದು ಧಾರ್ಮಿಕ ಮತ್ತು ನಿತ್ಯ ಜೀವನದಲ್ಲಿ ಉಚ್ಚಸ್ಥಾನಗಳಿಸಿದ್ದರು. ಸಂಗೀತ, ನಾಟ್ಯ, ಕ್ರೀಡೆ ಮುಂತಾದ ಮನೋರಂಜನೆಯ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿ ವಹಿಸಿ, ಪುರುಷರೊಡನೆ ವಿರಾಮದ ಕಾಲವನ್ನು ಆನಂದ, ವಿನೋದಗಳಿಂದ ಕಳೆಯುತ್ತಿದ್ದರು. ಅಂತಃಪುರದ ಏಕಾಂತ ಜೀವನ ರೂಢಿಯಲ್ಲಿರಲಿಲ್ಲ. ಜನಪ್ರಿಯ ಕ್ರೀಡೆಗಳಲ್ಲಿ ಮಲ್ಲಯುದ್ಧ, ಗೂಳಿಯ ಕಾಳಗ ಮುಖ್ಯವಾದುವು. ಗೂಳಿಯ ಕಾಳಗ ಮತೀಯ ಆಚರಣೆಯೂ ಆಗಿದ್ದಿರಬಹುದು. ಈ ಕ್ರೀಡೆಯಲ್ಲಿ ತೆಳ್ಳನೆಯ ಯುವಕರು ತಮ್ಮ ಮೇಲೆ ಧಾವಿಸಿ ನುಗ್ಗಿ ಬರುತ್ತಿದ್ದ ಗೂಳಿಯನ್ನು ಕೊಂಬುಗಳಿಂದ ಸೆಳೆದು ಹಿಡಿದು, ಅದು ತಲೆಯನ್ನು ಮೇಲೆ ಎತ್ತಿದಾಗ ಅದರ ಬೆನ್ನಿನ ಮೇಲೆ ಉರುಳಿ ಬೀಳುತ್ತಿದ್ದರು. ಈ ಕ್ರೀಡೆಯಲ್ಲಿ ಶಕ್ತಿ, ಚಳಕ, ಧೈರ್ಯಗಳ ಪ್ರದರ್ಶನ ನಡೆಯುತ್ತಿತ್ತು. ಮುಂದೆ ಇದು ಗ್ರೀಕರಲ್ಲೂ ರೂಢಿಯಾಗಿ ಬಂದು ಅವರ ರಾಷ್ಟ್ರೀಯ ಕ್ರೀಡೆಯಾಯಿತು.

**ಉಡುಪು:** ಪುರುಷರು ಸಾಧಾರಣವಾದ ಬಟ್ಟೆಯಲ್ಲಿ ಎರಡು ತುಂಡುಗಳನ್ನು ಮಾಡಿ ಸೊಂಟದವರೆಗೂ ಮುಚ್ಚುವುದಕ್ಕೆ ಒಂದು ತುಂಡನ್ನೂ ದೇಹದ ಮೇಲ್ಭಾಗವನ್ನು ಮುಚ್ಚಲು ಇನ್ನೊಂದು ತುಂಡನ್ನೂ ಉಪಯೋಗಿಸುತ್ತಿದ್ದರು.

ಸ್ತ್ರೀಯರು ಹೆಚ್ಚು ನಿರಿಗಟ್ಟಿದ ಲಂಗವನ್ನೂ ದೇಹದ ಮೇಲ್ಭಾಗವನ್ನು ಮುಚ್ಚಲು ಒಂದು ಕವಚವನ್ನೂ ಧರಿಸುತ್ತಿದ್ದರು. ಈ ಕವಚ ಮುಂಭಾಗದಲ್ಲಿ ತೆರೆದಂತಿದ್ದು ಹಿಂಭಾಗದಲ್ಲಿ ಮಾತ್ರ ಎತ್ತರವಾದ ಕತ್ತುಪಟ್ಟಿ ಉಳ್ಳದ್ದಾಗಿತ್ತು. ಉಂಗುರವನ್ನು ಅಪರೂಪವಾಗಿ ಉಪಯೋಗಿಸುತ್ತಿದ್ದರು. ಸ್ತ್ರೀಪುರುಷರು ಕೊರಳು ಮತ್ತು ಮುಂಗೈಗಳನ್ನು ಮುದ್ರಿಕೆಯಿಂದ ಅಲಂಕರಿಸಿಕೊಳ್ಳುತ್ತಿದ್ದರು. ಮಕ್ಕಳ ಜೀವನ ಎಲ್ಲ ಕಡೆಯೂ ಸರಳವಾಗಿತ್ತು. ಚಿನ್ನದ ಕೊರಳಹಾರ, ಕೈಕಾಪು, ಮುಕುಟ, ಪಿನ್ನುಗಳು ಉಪಯೋಗದಲ್ಲಿದ್ದುವು.

**ಧಾರ್ಮಿಕ ಜೀವನ:** ಆರಾಧನೆಗಾಗಿ ಪ್ರತ್ಯೇಕವಾಗಿ ಕಟ್ಟಲಾಗಿದ್ದ ದೇವಾಲಯಗಳು ಎಲ್ಲೂ ಕಂಡುಬಂದಿಲ್ಲ. ಬೆಟ್ಟದ ತುದಿ, ತೋಪು, ಗುಹೆಗಳು ಪವಿತ್ರ ಸ್ಥಳಗಳಾಗಿದ್ದುವು. ಕಂಬಗಳಲ್ಲೂ ಶಿಲೆಗಳಲ್ಲೂ ಪ್ರಕೃತಿ ದೇವತೆಗಳು ಇರುವುವೆಂದು ಭಾವಿಸಿ ನರ್ತನ, ಪೂಜೆ ಪುನಸ್ಕಾರಗಳಿಂದ ಅವರನ್ನು ಒಲಿಸಿಕೊಳ್ಳಬಹುದೆಂದೇ ಈ ಜನ ನಂಬಿದ್ದರು. ಖಾಸಗಿ ಗೃಹಗಳಲ್ಲೂ ಕಂಬಗಳನ್ನೊಳಗೊಂಡ ಕೋಣೆಗಳಿದ್ದುವು. ಅರಮನೆಗಳ ನಿರ್ಮಾಣವಾದ ಅನಂತರ ಕಂಬಗಳ ಕೋಣೆಯ ನಿರ್ಮಾಣ ನಿಂತು ಸಣ್ಣ ಗುಡಿಗಳ ರಚನೆ ಪ್ರಾರಂಭವಾಯಿತು.

ಮಹಾಮಾತೆಯೇ ಇವರ ಮುಖ್ಯದೇವತೆ. ಈಕೆಯ ಚಿಹ್ನೆ ದ್ವಿಮುಖಪರಶು. ಈ ದೇವತೆಯ ಜೊತೆಗೆ ಒಂದು ಚಿಕ್ಕ ವಯಸ್ಸಿನ ಪುರುಷದೇವತೆಯೂ ಇರುತ್ತಿತ್ತು. ಮನೆಗಳಲ್ಲಿನ ಸಣ್ಣ ಗುಡಿಗಳಲ್ಲಿ ಗುಂಡಾದ ಮುಕ್ಕಾಲು ಮೇಜನ್ನು ಮಧ್ಯ ಭಾಗದಲ್ಲಿರಿಸಿ, ಪೂಜಾಸಾಮಗ್ರಿಗಳನ್ನು ಅದರ ಮೇಲಿಡುತ್ತಿದ್ದರು. ಹಾಗೆಯೇ ಗೋಡೆಗೆ ಒರಗಿದ ಹಾಗೆ ಒಂದು ಬೆಂಚು ಇಟ್ಟು ಗಂಟೆಯಾಕಾರದ ವಿಗ್ರಹವನ್ನು ಅದರ ಮೇಲಿರಿಸಿ, ಜೊತೆಗೆ ಎರಡು ಕೊಂಬುಗಳ ಮಧ್ಯ ದ್ವಿಮುಖ ಪರಶುವನ್ನು ಇಟ್ಟು ಪೂಜಿಸುತ್ತಿದ್ದರು.

ನಾಸಾಸ್ ಅರಮನೆಯ ಗುಡಿಯಲ್ಲಿ ನಾಗದೇವತೆಯ ಪೂಜೆ ನಡೆಯುತ್ತಿತ್ತು. ಪೂಜಾರಿಣಿ ತನ್ನ ಕೈಗಳಲ್ಲಿ ಸರ್ಪಗಳನ್ನು ಹಿಡಿದುಕೊಂಡಿರುವುದೂ ಅವಳ ಉಡುಪಿನಲ್ಲಿ ಸಮುದ್ರದ ಚಿಪ್ಪುಗಳನ್ನು ಚಿತ್ರಿಸಿರುವುದೂ ಅವಳ ಸುತ್ತ ಪಾರಿವಾಳ, ಹಸು ಕರು, ಆಡು ಕುರಿಗಳು ಮೇಲೆ ನಕ್ಷತ್ರ ಚಿಹ್ನೆಗಳು ಇರುವುದೂ ಚಿತ್ರದಲ್ಲಿ ಕಂಡುಬಂದಿದೆ. ಸರ್ಪ ಮನೆಯನ್ನು ಕಾಯುವುದೆಂದೂ ಶುಭಕರವೆಂದೂ ಆಗಿನ ಜನರ ಭಾವನೆ.

**ಕಲೆ:** ಚಕ್ರದ ಉಪಯೋಗ ಬಳಕೆಗೆ ಬಂದ ಅನಂತರ ಮಡಕೆಯ ತಯಾರಿಕೆ ಸುಲಭವಾಯಿತು. ಕಲ್ಲಿನ, ನೇಯ್ಗೆಯ, ಲೋಹದ, ಚಕ್ಕಳದ ವರ್ಣರಂಜಿತವಾದ ವಿವಿಧಾಕಾರದ ಸಾಮಗ್ರಿಗಳ ತಯಾರಿಕೆಯಾಗುತ್ತಿತ್ತು. ಕಪ್ಪು ಬಣ್ಣದ ಹಿನ್ನೆಲೆಯ ಮೇಲೆ ಬಿಳಿಯ ಬಣ್ಣದಲ್ಲೂ ಇತರ ಬಣ್ಣಗಳ ಹಿನ್ನೆಲೆಯ ಮೇಲೆ ಕಪ್ಪು ಬಣ್ಣದಲ್ಲೂ ತಿದ್ದುತ್ತಿದ್ದರು. ಕ್ರೀಟನ್ ಕಲೆಯ ವೈಶಿಷ್ಟ್ಯ ನಾಸಾಸ್ ಅರಮನೆಯಲ್ಲಿ ಚಿತ್ರಿತವಾಗಿರುವ ವರ್ಣರಂಜಿತ ದೃಶ್ಯಗಳಿಂದಲೂ ಅಲ್ಲಿ ದೊರಕಿರುವ ಇತರ ಸಾಮಗ್ರಿಗಳಿಂದಲೂ ತಿಳಿದುಬರುತ್ತದೆ. ಕೊನೆಯ ಮಿನೋವನ್ ಕಾಲ ಕಲೆಯ ಉತ್ಕೃಷ್ಟ ಕಾಲ. ಊರಿನ ನೈರ್ಮಲ್ಯ ವ್ಯವಸ್ಥೆ, ಕೊಳಾಯಿ ವ್ಯವಸ್ಥೆ, ಕಾಲುವೆಗಳ ನಿರ್ಮಾಣ, ಕಟ್ಟಡ–ಇವುಗಳ ವಿಚಾರದಲ್ಲಿ ಇದು ಈಜಿಪ್ಟ್, ಬ್ಯಾಬಿಲೋನಿಯಗಳಿಗೆ ಸಮಾನವಾಗಿತ್ತು. ಗ್ರೀಕರ ಕಲಾಕೃತಿಗಳು ವಿಶೇಷವಾಗಿ ಕ್ರೀಟನ್ನರ ಕಲೆಯ ವಿಧಾನವನ್ನೇ ಅನುಸರಿಸಿದ್ದುವು.

ದಂತದ ಸಾಮಾನುಗಳು ಬಳಕೆಯಲ್ಲಿದ್ದುವು. ಆರೂವರೆ ಅಂಗುಲ ಎತ್ತರಲ್ಲಿ ಒಂದು ದಂತದ ಸರ್ಪದೇವತೆಯ ಮೂರ್ತಿಶಿಲ್ಪ ಸಿಕ್ಕಿದೆ. ಈ ದೇವತೆಯ ಕೈಯ ಚಿನ್ನದ ಸರ್ಪಗಳೂ ದೇಹದ ಮೇಲೆ ಚಿನ್ನದಿಂದ ಮಾಡಿದ ಉಡುಪೂ ಇವೆ. ಹೀಗೆಯೇ ದಂತದಿಂದ ಕೆತ್ತಿರುವ ಅನೇಕ ಮೂರ್ತಿಗಳು ಸಿಕ್ಕಿವೆ. ಆಗಿನ ಶಿಲ್ಪಕಲೆ ಎಷ್ಟು ಉನ್ನತ ಮಟ್ಟದ್ದಾಗಿತ್ತೆಂಬುದಕ್ಕೆ ಇವು ಸಾಕ್ಷಿಗಳು.

**ಶವಸಂಸ್ಕಾರ:** ಮರಣಾನಂತರದ ಅವಸ್ಥೆಯ ಬಗ್ಗೆ ಈಜಿಯನ್ ಜನರಲ್ಲೂ ಭಯವಿತ್ತು. ಆದ್ದರಿಂದ ಶವಸಂಸ್ಕಾರವನ್ನು ಎಚ್ಚರಿಕೆಯಿಂದ ನಡೆಸುತ್ತಿದ್ದರು. ಸಮಾಧಿಗಳನ್ನು ಸರಿಯಾದ ರೀತಿಯಲ್ಲಿ ಕಟ್ಟಿ ಶವದ ಜೊತೆಗೆ ಆಹಾರ, ಆಯುಧಗಳನ್ನೂ ಸಣ್ಣ ವಿಗ್ರಹಗಳನ್ನೂ ಇಡುತ್ತಿದ್ದರು. ಈ ವಿಗ್ರಹಗಳು ಆ ಮನುಷ್ಯನ ಅನುಯಾಯಿಗಳು, ಸೇವಕರು.

ಹೀಗೆ ನಾನಾ ಬಗೆಯಲ್ಲಿ ವಿಶಿಷ್ಟವಾಗಿದ್ದ ಈಜಿಯನ್ ನಾಗರಿಕತೆಯ ಬಹುಕಾಲ ಬಾಳಿ ನೆರೆಹೊರೆಯ ದೇಶಗಳ ಮೇಲೆ ಪ್ರಭಾವ ಬೀರಿ, ಗ್ರೀಕ್ ಸಂಸ್ಕೃತಿಗೆ ನಾಂದಿಯಾಗಿ ಪರಿಣಮಿಸಿತು.

(ಜೆ.ಎಂ.)

**ಸಂಸ್ಕೃತಿ:** ಮೈಸಿನಿ, ಟ್ರಾಯ್‌ಗಳಲ್ಲಿ ಷ್ಲೀಮನ್ ಮಾಡಿದ ಭೂಶೋಧನೆಗಳಿಂದಲೂ ಕ್ರೀಟ್, ನಾಸಾಸ್‌ಗಳಲ್ಲಿ ಇವಾನ್ಸ್ ಮಾಡಿದ ಭೂಶೋಧನೆಗಳಿಂದಲೂ ಚರಿತ್ರಪೂರ್ವ ಕಾಲದಲ್ಲಿ ಯುರೋಪಿನಲ್ಲಿ ಬಹಳ ಉಚ್ಛ್ರಾಯಸ್ಥಿತಿಯಲ್ಲಿದ್ದ ಕಂಚಿನ ಯುಗದ ಸಂಸ್ಕೃತಿಯೊಂದು ಬೆಳಕಿಗೆ ಬಂತು. ಇದಕ್ಕೆ ಸೇರಿದಂತೆ ಈಜಿಯನ್ ಸಮುದ್ರದ ಅಕ್ಕಪಕ್ಕಗಳಲ್ಲಿರುವ ಏಜಿಯಾ, ಟ್ರಿಯಾಡ, ಟೈಲಿಸಸ್, ಟೈರಿನ್ಸ್, ಹಿಸಾರ್ ಲಿಕ್, ಫೇಸ್ಟಸ್, ಗೌರ್ನಿಯ, ಮಲ್ಲಿಯಾ, ಥೀಬ್ಸ್ ಮುಂತಾದ ಕಡೆಗಳಲ್ಲೂ ಇದೇ ರೀತಿಯ ಅವಶೇಷಗಳು ದೊರಕಿದ್ದರಿಂದ ಈ ಸಂಸ್ಕೃತಿಗೆ ಈಜಿಯನ್ ಸಂಸ್ಕೃತಿ ಎಂದು ಹೆಸರು.

ಈ ಪ್ರದೇಶ ಹೊಸ ಶಿಲಾಯುಗದ ಕಾಲದಿಂದಲೂ ಜನಗಳ ವಾಸಸ್ಥಾನವಾಗಿದ್ದಿತೆಂದೂ ಶಿಲಾಯುಗದ ಅವಶೇಷಗಳಿಂದ ಗೊತ್ತಾಗುತ್ತದೆ. ನವ ಶಿಲಾಯುಗದ ಅನಂತರ ಕಂಚಿನ ಯುಗದಲ್ಲಿ ಈ ಸಂಸ್ಕೃತಿ ಉಚ್ಛ್ರಾಯಸ್ಥಿತಿಯಲ್ಲಿದ್ದು ಬ್ಯಾಬಿಲಾನ್ ಮತ್ತು ಈಜಿಪ್ಟ್ ದೇಶಗಳೊಡನೆ ಸಂಪರ್ಕವನ್ನು ಹೊಂದಿತ್ತು.

ಇಲ್ಲಿ ದೊಡ್ಡ ಅರಮನೆಗಳೂ ಕೋಟೆಗಳೂ ಮನೆಗಳೂ ಕೆತ್ತನೆಯ ಕಂಬಗಳೂ ಬಣ್ಣದ ಚಿತ್ರಗಳೂ, ಕೆತ್ತನೆಯ ಕೆಲಸ ಮಾಡಿದ ಗೋಡೆಗಳೂ ದೊರೆತಿವೆ. ನಾಯಕರ ವಾಸಸ್ಥಾನಗಳಾಗಿದ್ದ ಅರಮನೆಗಳಲ್ಲಿ ನೀರು ಸರಬರಾಜು, ಚರಂಡಿ ವ್ಯವಸ್ಥೆ, ಪ್ರತ್ಯೇಕ ಕೊಠಡಿಗಳು, ಅಂತಃಪುರಗಳು ಇದ್ದುವು. ದೇವಾಲಯಗಳು ಅರಮನೆಯೊಳಗೆ ಮಾತ್ರ ದೊರಕಿರುವುದರಿಂದ ನಾಯಕರೇ ಮತದ ಮೇಲ್ವಿಚಾರಕರಾಗಿದ್ದರೆಂದು ತೋರುತ್ತದೆ. ಇವರು ಕುಶಲಕಲೆಗಳಲ್ಲಿ ಬಹಳ ಮುಂದುವರಿದಿದ್ದರೆಂದೂ ಗೊತ್ತಾಗುತ್ತದೆ. ಕಲ್ಲು, ತಾಮ್ರ, ಚಿನ್ನ, ಬೆಳ್ಳಿ–ಇವುಗಳಿಂದ ಮಾಡಿದ ಪದಾರ್ಥಗಳ ಮೇಲೆ ಅನೇಕ ವಿಧವಾದ ಕೆತ್ತನೆಯ ಕೆಲಸಗಳು ಕಾಣಬರುತ್ತವೆ. ಕಂಚಿನ ಕತ್ತಿ, ಕೊಡಲಿ, ಚಾಕು ಮುಂತಾದ ಆಯುಧಗಳೂ ಬಣ್ಣಬಣ್ಣದ ಮತ್ತು ಬಣ್ಣ ಹಚ್ಚಿದ ಮಡಕೆಗಳೂ ಆಭರಣಗಳೂ ಕೆತ್ತನೆಯ ಕೆಲಸ ಮಾಡಿದ ಮಣಿಗಳೂ ಇವರ ಪಾರಿಶ್ರಮಿಕ ಉದ್ಯೋಗ ಎಷ್ಟರಮಟ್ಟಿಗೆ ಅಭಿವೃದ್ಧಿ ಹೊಂದಿತ್ತೆಂಬುದನ್ನು ತೋರಿಸುತ್ತದೆ.

ಇವರು ವ್ಯಾಪಾರದಲ್ಲಿ ಬಹಳ ಮುಂದುವರಿದಿದ್ದರು. ಕ್ರೀಟನ್ ನಾಗರಿಕತೆಯ ಮಡಕೆಗಳು ಈಜಿಪ್ಟ್, ಬ್ಯಾಬಿಲಾನ್ ಮತ್ತು ಏಷ್ಯ ಮೈನರ್ ದೇಶಗಳೊಡನೆ ಇದ್ದ ವಾಣಿಜ್ಯ ಸಂಬಂಧ ಸೂಚಿಸುತ್ತದೆ.

ಇವರು ಸೂರ್ಯ, ನಕ್ಷತ್ರ, ಬೆಟ್ಟ, ಮರ, ಪ್ರಾಣಿ–ಇವನ್ನು ಪೂಜಿಸುತ್ತಿದ್ದರು. ಸತ್ತವರನ್ನು ಹೂಳುತ್ತಿದ್ದರು. ಮೊದಮೊದಲು ಇವರ ಗೋರಿಗಳು ಸಣ್ಣವಾಗಿದ್ದು, ನೆಲದೊಳಗೇ ಕಲ್ಲುಗಳನ್ನು ಜೋಡಿಸಿ ಮಾಡಿದವಾಗಿದ್ದುವು. ಕ್ರಮೇಣ ಅವು ದೊಡ್ಡವಾಗುತ್ತ ಬಂದುವು. ಅನಂತರ ವೃತ್ತಾಕಾರದ ಗೋರಿಗಳು ಬಂದುವು. ಮೈಸಿನಿ ಎಂಬಲ್ಲಿ ಈ ಸಂಸ್ಕೃತಿಯ ಅಂತ್ಯಕಾಲಕ್ಕೆ ಸಂಬಂಧಿಸಿದ ಜೇನುಗೂಡಿನ ಆಕಾರದ ಗೋರಿಗಳು ದೊರಕಿವೆ. ಮಡಕೆಗಳಲ್ಲಿ ಆಹಾರ, ಪಾನೀಯ ಇಡುತ್ತಿದ್ದರು.

ಇವರು ತಮ್ಮದೇ ಆದ ಬರವಣಿಗೆಯನ್ನು ಉಪಯೋಗಿಸುತ್ತಿದ್ದರೆಂದು ಇಲ್ಲಿ ಸಿಕ್ಕಿರುವ ಬರೆದ ಮಣ್ಣಿನ ಫಲಕಗಳಿಂದ ಹೇಳಬಹುದು. ಈ ಸಂಸ್ಕೃತಿಯ ಆದಿಯಲ್ಲಿ ಅಕ್ಷರಗಳ ಬದಲು ಚಿತ್ರಗಳನ್ನು ಉಪಯೋಗಿಸುತ್ತಿದ್ದರೆಂಬುದು ಚಿತ್ರಲೇಖನಗಳಿಂದ ವ್ಯಕ್ತವಾಗುತ್ತದೆ. ಈ ಚಿತ್ರಲೇಖನ ಇಲ್ಲಿಯೇ ಪ್ರಾರಂಭವಾಯಿತೇ ಅಥವಾ ಈಜಿಪ್ಟ್ ದೇಶದಿಂದ ಇಲ್ಲಿಗೆ ಬಂತೇ ಎಂದು ಹೇಳುವುದು ಕಷ್ಟವಾದರೂ ಈ ಎರಡು ಲಿಪಿಗಳಿಗೂ ಸಂಬಂಧಗಳಿವೆ. ಸ್ವಲ್ಪ ಕಾಲಾನಂತರ ಈ ಚಿತ್ರ ಲೋಪದೋಷಗಳನ್ನು ಸರಿಪಡಿಸಿ ರೇಖಾ (ಲೀನಿಯರ್) ಬರವಣಿಗೆ ಪ್ರಾರಂಭವಾಯಿತು. ಇದು ಬಹಳವಾಗಿ ಕ್ರೀಟ್ ದ್ವೀಪದಲ್ಲಿ ಬಳಕೆಯಲ್ಲಿ ಇದ್ದಿತೆಂದು ಕಾಣುತ್ತದೆ.

ಈ ಸಂಸ್ಕೃತಿಗೆ ಕಾರಣರಾದ ಜನ ಯಾವ ಜನಾಂಗದವರು ಎಂದು ಹೇಳುವುದು ಕಷ್ಟ. ಇವರು ಕಪ್ಪುಬಣ್ಣದ ಉದ್ದ ತಲೆಯುಳ್ಳ ಪೇಲಿಯೋ ಮೆಡಿಟರೇನಿಯನ್ ಎಂಬ ಗುಂಪಿನವರೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಕಂಚಿನ ಯುಗ ಕ್ರೀಟ್‌ನಲ್ಲಿ ಪ್ರ.ಶ.ಪೂ. 4000ರಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಪ್ರ.ಶ.ಪೂ. 12ನೆಯ ಶತಮಾನದ ಕೊನೆಯಲ್ಲಿ ಇಲ್ಲಿನ ಸಂಸ್ಕೃತಿ ನಾಶವಾಯಿತು. ಮೈಸಿನಿ, ಟೈರಿನ್ಸ್, ಮುಂತಾದ ಪಟ್ಟಣಗಳು ನಾಶವಾದುವು. ಕಬ್ಬಿಣದ ಆಯುಧಗಳನ್ನು ಹೊಂದಿದ್ದ ಉತ್ತರದಿಂದ ವಲಸೆ ಬಂದ ಜನಾಂಗವೇ ಇದಕ್ಕೆ ಕಾರಣವಿರಬಹುದು. ಇದರಿಂದ ಈಜಿಯನ್ ಪ್ರದೇಶಗಳಲ್ಲಿ ಕಂಚಿನ ಯುಗ ಕೊನೆಗೊಂಡಿತು ಮತ್ತು ಕಬ್ಬಿಣದ ಯುಗ ಪ್ರಾರಂಭವಾಯಿತು. (ಎ.ವಿ.ಎನ್.)

**ಈಜು:** ನೀರಿನ ಮೇಲೆ ಅಥವಾ ಒಳಗೆ ಸ್ವಶಕ್ತಿಯಿಂದ ತೇಲುವಿಕೆ, ಮುಳುಗಿರುವಿಕೆ ಮತ್ತು ಚಲನೆ–ಇವಿಷ್ಟೂ ಕ್ರಿಯೆಗಳ ಒಟ್ಟು ಹೆಸರು (ಸ್ವಿಮ್ಮಿಂಗ್). ಹಡಗು ಮುಂತಾದ ಅಜೀವಿಗಳು ಮತ್ತು ತಿಮಿಂಗಿಲ ಮುಂತಾದ ಜೀವಿಗಳು ಈ ವ್ಯಾಖ್ಯೆಯ ಪರಿಧಿಯೊಳಗೆ ಬರುತ್ತವಾದರೂ ಪ್ರಸಕ್ತ ಲೇಖನದಲ್ಲಿ ಈಜುವಿಕೆಯನ್ನು ಒಂದು ತಂತ್ರವೆಂದು ಪರಿಗಣಿಸಿ ಮನುಷ್ಯನನ್ನು ಕುರಿತಂತೆ ಅದರ ಅನ್ವಯವನ್ನು ಪರಿಶೀಲಿಸಲಾಗಿದೆ.

ಮನುಷ್ಯ ದೇಹ ಮತ್ತು ನೀರು ಇವುಗಳ ಸಾಪೇಕ್ಷಸಾಂದ್ರತೆಗಳ ತುಲನೆಯಿಂದ ದೇಹ ನೀರಿಗಿಂತ ಹಗುರ ಎಂದು ತಿಳಿಯುವುದು. ಆದ್ದರಿಂದ ದೇಹ ಸಹಜವಾಗಿ ನೀರಿನಲ್ಲಿ ತೇಲಬೇಕು. ಆದರೆ ನೀರಿನ ಪ್ರತಿಕೂಲ ಮತ್ತು ಭಿನ್ನ ಪರಿಸರದಲ್ಲಿ ಮನುಷ್ಯ ಭಯದಿಂದ ಒದ್ದಾಡುತ್ತಾನೆ. ಇದರಿಂದ ಉಂಟಾಗುವ ಬಲಗಳ ಪರಿಣಾಮವಾಗಿ, ಚಲಿಸುವುದು ಒತ್ತಟ್ಟಿಗಿರಲಿ, ತೇಲುವುದೂ ಅವನಿಗೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಮರ, ಇದು ಸಹಜವಾಗಿ ನೀರಿನಲ್ಲಿ ತೇಲುವ ಒಂದು ವಸ್ತು. ಇದನ್ನೇ ರಭಸದಿಂದ ನೀರಿಗೆ ಎಸೆದರೆ ಆ ಅಧಿಕಬಲದ ಪರಿಣಾಮವಾಗಿ ಅದು ಮೊದಲು ಮುಳುಗಿ ತರುವಾಯ ಮೇಲೆ ಬರುತ್ತದೆ. ನೀರಿನಲ್ಲಿ ಒದ್ದಾಡದಿರಲು (ಎಂದರೆ ಮುಳುಗಲು ಸಹಾಯಕವಾಗುವಂಥ ಬಲಗಳನ್ನು ಸೃಷ್ಟಿಸದಿರಲು) ಮತ್ತು ದೇಹದ ಅವಯವಗಳ ಚಲನೆಯಿಂದ ಅನುಕೂಲ ಬಲಗಳನ್ನು ಸೃಷ್ಟಿಸಿಕೊಂಡು ಈಜಲು ಮನುಷ್ಯನಿಗೆ ಶಿಕ್ಷಣ ಆವಶ್ಯಕ. ಪ್ರಾಣಿಗಳ ಪರಿಸ್ಥಿತಿ ಇಲ್ಲಿ ಭಿನ್ನವಾಗಿದೆ. ಹುಟ್ಟಿನಿಂದ ಅವುಗಳಿಗೆ ಈಜು ದತ್ತ. ನೆಲದ ಮೇಲೆ ನಡೆವಂತೆಯೇ ನೀರಿಗಿಳಿದು ಈಜಿ ದಡ ಸೇರುತ್ತವೆ. ಎಂದರೆ ಈಜುವಾಗ ಅವುಗಳ ದೇಹವಿನ್ಯಾಸ ಬದಲಾಗುವುದಿಲ್ಲ. ಮನುಷ್ಯ ಹೀಗೆ ಮಾಡಲಾರ. ನಡೆವಾಗ ಅವನ ದೇಹ ನೆಲಕ್ಕೆ ಲಂಬವಾಗಿದೆ. ಈಜುವಾಗ ಇದು ನೀರಿನ ಮೇಲ್ಮೈಗೆ ಸರಿಸುಮಾರು ಸಮಾನಾಂತರವಾಗಿಯೇ ಇರುವುದು.


ಚಿತ್ರ 1. ತಲೆಮುಂದು ಮುಮ್ಮುಳುಗು

**ಚರಿತ್ರೆ:** ಈಜು ಎಷ್ಟು ಹಳೆಯದೆಂದು ತಿಳಿಯದು. ಇದರ ವಿಚಾರದಲ್ಲಿ ಪುರಾಣೇತಿ ಹಾಸಗಳು ಸಾಕಷ್ಟು ದಾಖಲೆ ಒದಗಿಸುತ್ತವೆ. ಆದ್ದರಿಂದ ಇದು ಮನುಷ್ಯನಷ್ಟೇ ಪ್ರಾಚೀನವಾದದ್ದು ಎಂದು ಭಾವಿಸಬಹುದು. ಲಂಡನ್ನಿನಲ್ಲಿರುವ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ಈಜುವಿಕೆ ಯನ್ನು ಕುರಿತ ಅತ್ಯಂತ ಪ್ರಾಚೀನ ದಾಖಲೆ ಇದೆ. ಅಲ್ಲಿರುವ ಕೆತ್ತನೆ ಚಿತ್ರ ಪ್ರ.ಶ.ಪೂ.9ನೆಯ ಶತಮಾನದ್ದು. ಶತ್ರುಗಳಿಂದ ತಪ್ಪಿಸಿಕೊಳ್ಳಲು ನೀರಿನ ಮೇಲೆ ಈಜಿಕೊಂಡು ಹೋಗುತ್ತಿರುವ ಮೂವರು ಸೈನಿಕರನ್ನು ಅಲ್ಲಿ ಚಿತ್ರಿಸಿದೆ. ಅವರ ಪೈಕಿ ಇಬ್ಬರು ಗಾಳಿತುಂಬಿದ ಚರ್ಮದ ಬುರುಡೆಗಳನ್ನು ಬದಿಗೆ ಸಿಕ್ಕಿಸಿಕೊಂಡಿದ್ದಾರೆ. ಇವುಗಳ ಸಹಾಯದಿಂದ ಅವರ ತೇಲುವ ಶಕ್ತಿ ಹೆಚ್ಚಾಗುತ್ತದೆ ಎಂದು ಅವರಿಗೆ ತಿಳಿದಿತ್ತು. ಮೂರನೆಯವನು ಕೈಗಳ ಹೊಡೆತದಿಂದ ಮುಂದೆ ಸಾಗುತ್ತಿದ್ದಾನೆ. ಹೀಗೆ ಅಷ್ಟು ಹಿಂದಿನ ದಿವಸಗಳಲ್ಲಿಯೇ ಈಜುವಿಕೆಯ ತಂತ್ರದ ಮತ್ತು ಸಹಾಯಕ ಸಾಮಗ್ರಿಗಳ ಪರಿಚಯ ಮನುಷ್ಯನಿಗೆ ಇತ್ತು ಎಂದು ಗೊತ್ತಾಗುವುದು.

ಪ್ರಾಚೀನ ಈಜುಕೊಳಗಳನ್ನು ಪಂಜಾಬಿನ ಹರಪ್ಪ ಮತ್ತು ಮೊಹೆಂಜೊದಾರೋಗಳಲ್ಲಿ ನಡೆಸಿದ ಭೂಶೋಧನೆಗಳಿಂದ ಗುರುತಿಸಲಾಗಿದೆ. ರೋಮನರು ಪ್ರಶ. 1ನೆಯ ಶತಮಾನದಲ್ಲಿ ಕಟ್ಟಿದ ಒಂದು ಕೊಳದ ಅವಶೇಷ ದೊರೆತಿದೆ. ವಿಜಯನಗರದ ರಾಜಧಾನಿ ಹಂಪೆಯಲ್ಲಿ ಈಜುಕೊಳವಿದ್ದುದಕ್ಕೆ ಸ್ಪಷ್ಟ ಪುರಾವೆ ಇದೆ. ಆದ್ದರಿಂದ ಆ ದಿವಸಗಳಲ್ಲಿ ಈಜು ಒಂದು ತಂತ್ರ ಮಾತ್ರವಾಗಿರಲಿಲ್ಲ; ಜನಪ್ರಿಯ ಕ್ರೀಡೆಯೂ ಆಗಿತ್ತೆಂದು ತಿಳಿಯುತ್ತದೆ. ಸೈನಿಕರಿಗೆ ಈಜುವಿಕೆಯ ಜ್ಞಾನ ಅಂದು ಕಡ್ಡಾಯವಾಗಿತ್ತು. ಸೈನ್ಯಗಳು ಹೊಳೆ ಹಾಯಬೇಕಾದ ಸಂದರ್ಭಗಳಲ್ಲಿ ಇದು ಸಹಕಾರಿಯಾಗುತ್ತಿತ್ತು.

ಹಿಂದೂ ದೇಶದಲ್ಲಿ ಪ್ರಚಲಿತವಿದ್ದ ಈಜುವಿಕೆಯ ಒಂದು ವಿಶಿಷ್ಟಶೈಲಿಯನ್ನು 185ರ ಸುಮಾರಿಗೆ ಬ್ರಿಟಿಷ್ ಅಧಿಕಾರಿಗಳು ಕಲಿತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೂಢಿಸಿದುದಕ್ಕೆ ಆಧಾರವಿದೆ. ಈ ಶೈಲಿಯ ಹೆಸರು ತೋಳುಮೇಲೆತ್ತಿ ಬದಿಗೆ ಬಡಿತ (ಓವರ್ ಆರ್ಮ್ ಸೈಡ್ ಸ್ಟ್ರೋಕ್).

**ತಂತ್ರ:** ಈಜಲು ಕಲಿಯುವುದು ಕಷ್ಟವಲ್ಲ. ನಡೆಯಲು ಕಲಿತ ಒಂದು ಮಗು ಕೂಡ ಈಜಬಹುದು. ಒಂದು ವಿಶಿಷ್ಟ ರೀತಿಯಲ್ಲಿ ಕಾಲುಗಳ ಚಲನೆ ಅಗತ್ಯವಷ್ಟೆ. ಅರ್ಧ ಎಚ್ಚರದ ಅವಸ್ಥೆಯಲ್ಲಿ ಸಹ ಈಜಬಹುದು. ಇಲ್ಲಿನ ವೈಜ್ಞಾನಿಕ ತತ್ತ್ವವಿಷ್ಟು. ನೀರಿನ ಪ್ಲವನತೆ (ಬಾಯನ್ಸಿ) ಪ್ರತಿ ವಸ್ತುವನ್ನೂ ಮೇಲಕ್ಕೆ ತಳ್ಳುತ್ತದೆ. ಇದರ ಜೊತೆಗೆ ಹರಿಯುವ ನೀರಿನಲ್ಲಿ ವಾಹಕ ಬಲಗಳೂ ಇರುತ್ತವೆ. ಅವಯವಗಳ ಕ್ರಮಬದ್ಧ ಚಲನೆಯಿಂದ ನೀರಿನ ಸಹಜ ಬಲಗಳಿಗೆ ಒತ್ತಾಸೆ ದೊರೆತು ದೇಹ ತೇಲುವುದು ಮಾತ್ರವಲ್ಲ ವಿವಿಧ ದಿಕ್ಕುಗಳಿಗೆ ಚಲಿಸುವುದೂ ಸಾಧ್ಯವಾಗುತ್ತದೆ. ಮನುಷ್ಯನಿಗೆ ಈಜಿನಲ್ಲಿ ಮೊದಲ ಪಾಠ ಪ್ರಾಯಶಃ ಚತುಷ್ಪಾದಿಯಿಂದ ಆಗಿರಬೇಕು. ಕೈಕಾಲುಗಳೆರಡನ್ನು ನೀರಿನಲ್ಲಿ ಇಳಿಬಿಟ್ಟ ಚತುಷ್ಪಾದಿಯ

ದೇಹದ ವಿನ್ಯಾಸವನ್ನೇ ಮನುಷ್ಯನೂ ಅನುಕರಿಸಲು ತೊಡಗಿದ್ದು ಈ ಕಾರಣದಿಂದಾಗಿರಬಹುದು. ಅಂದಿನ ಮೊದಲ ಪಾಠದ ಅಸ್ಪಷ್ಟತೆಯಿಂದ ಇಂದಿನ ವೈಜ್ಞಾನಿಕ ವಿಧಾನಗಳ ನಿರ್ದಿಷ್ಟತೆ ಮತ್ತು ಸ್ಪಷ್ಟತೆಗಳವರೆಗೆ ಈಜುವಿಕೆಯ ತಂತ್ರದಲ್ಲಿ ಆಗಿರುವ ಬದಲಾವಣೆಗಳು ಹಲವಾರು. ಈಜುವಿಕೆಯಲ್ಲಿ ಅತ್ಯಂತ ಸರಳವಾದ ವಿನ್ಯಾಸ ನಾಯಿಯಂತೆ ಹುಟ್ಟು ಹಾಕುವಿಕೆ (ಡಾಗ್ ಪ್ಯಾಡಲ್). ಇದು ಭೂಮಿಯ ಮೇಲೆ ಒಂದು ನಾಯಿ ಸಹಜ ಸ್ಥಿತಿಯಲ್ಲಿ ಇದ್ದಾಗ ಹೇಗೋ ಅಂಥ ನಿಲುವು–ತಲೆಯನ್ನು ಮೇಲೆತ್ತಿ ಕೈಗಳನ್ನು ಹೊಟ್ಟೆಯ



ಚಿತ್ರ. 2. ತಲೆಮುಂದು ಹಿಮ್ಮುಳುಗು



ಚಿತ್ರ. 3. ಲಾಗಹಾಕಿ ತಲೆಮುಂದು ಮುಮ್ಮುಳುಗು

ಕಡೆಗೆ ಎಳೆದುಕೊಳ್ಳುತ್ತ ಕಾಲುಗಳನ್ನು ಒಂದಾದ ಮೇಲೊಂದರಂತೆ ಬಡಿಯುವುದು. ಮೊದಮೊದಲು ಇಲ್ಲಿ ಗಲಭೆ, ಶ್ರಮ ಜಾಸ್ತಿ, ಚಲನೆ ಕಡಿಮೆ, ಕೈಕಾಲು ಬಡಿತಗಳ ತೀವ್ರತೆ, ನೀರಿನ ತಳದ ಕ್ಷೋಭೆ ಇವುಗಳಿಂದ ಕಲಿಯುವವ ಬೇಗನೆ ದಣಿದುಹೋಗುತ್ತಾನೆ. ಇಲ್ಲಿ ಮುಳುಗದೇ ಇರಲು ಮಾಡಬೇಕಾದ ಪ್ರಯತ್ನವೇ ಅಧಿಕವಾದ್ದರಿಂದ ಚಲನೆ ವಿಶೇಷವಾಗಿರುವುದಿಲ್ಲ. ಮುಂದೆ ಹೆಚ್ಚು ಹೆಚ್ಚು ಅಭ್ಯಾಸವಾದ ಹಾಗೆ ಪ್ರಯತ್ನ ಸಫಲವಾಗುತ್ತದೆ. ಮುಂಚಲನೆ ಗಮನಾರ್ಹವಾಗಿ ಏರುತ್ತದೆ. ಇದೇ ಕ್ರಮದಲ್ಲಿ ಸುಧಾರಣೆ ಮಾಡಿ ತೋಳು ಬಡಿತದ ನಿಲುವು (ಓವರ್ ಆರ್ಮ್ ಸ್ಟ್ರೋಕ್) ಸಾಧ್ಯವಾಯಿತು. ಇಲ್ಲಿ ತೋಳುಗಳನ್ನು ಮೇಲಕ್ಕೆತ್ತಿ ಹಿಂದಿನಿಂದ ಮುಂದಕ್ಕೆ ಬೀಸಿ ನೀರಿನೊಳಗಿಂದ ಹೊಟ್ಟೆಯ ಕಡೆಗೆ ಎಳೆದುಕೊಂಡು ನೀರನ್ನು ಹಿಂದಕ್ಕೆ ತಳ್ಳಿದಾಗ ದೇಹ ಮುಂದಕ್ಕೆ ಚಲಿಸುತ್ತದೆ. ತೋಳಿನ ಹಿಂಚಲನೆ ದೇಹವನ್ನು ಮುಂದಕ್ಕೆ ನೂಕಿದರೆ ಕಾಲುಗಳ ಚಲನೆ ಅದನ್ನು ತೇಲಿಸುವುದೆಂದು ಮೊದಲು ನಂಬಲಾಗಿತ್ತು. ಆದರೆ ಈಗ ಇದರ ಅರ್ಥ ಸ್ಪಷ್ಟವಾಗಿ ತಿಳಿದಿದೆ–ತೋಳುಗಳ ಬಡಿತ ದೇಹವನ್ನು ಸಮತೋಲದಲ್ಲಿ ಇಟ್ಟಿರುವುದು: ಕಾಲುಗಳ ಬಡಿತ ಅದನ್ನು ಮುನ್ನೂಕುವುದು; ತೋಳುಗಳ ಬೀಸುವಿಕೆ ಚಲನೆಯನ್ನು ಪೋಷಿಸುತ್ತದೆ. ದಿಕ್ಕನ್ನು ನಿಯಂತ್ರಿಸುತ್ತದೆ.

ಈ ನಿಲವುಗಳು ಕ್ರಮೇಣ ಇನ್ನೂ ಸುಧಾರಿಸಿದುವು. ಈಜು ಸುಖಕರವಾಗುವಂತೆ ಮಾರ್ಪಾಟಾಗಿ ತೆವಳುಬಡಿತ (ಕ್ರಾಲ್‌ಸ್ಟ್ರೋಕ್). ಎದೆಬಡಿತ (ಬ್ರೆಸ್ಟ್ ಸ್ಟ್ರೋಕ್), ಹಿಂಬಡಿತ (ಬ್ಯಾಕ್‌ಸ್ಟ್ರೋಕ್), ಚಿಟ್ಟೆ ಬಡಿತಗಳು (ಬಟರ್‌ಫ್ಲೈಸ್ಟ್ರೋಕ್ಸ್) ರೂಪುಗೊಂಡುವು. ಬೇರೆ ಬೇರೆ ಸಂದರ್ಭಗಳಿಗೆ ತಕ್ಕ ಹಾಗೆ ಬೇರೆ ಬೇರೆ ವೇಗದಲ್ಲಿ ಈಜುವುದು ಸಾಧ್ಯವಾಯಿತು. ಇವುಗಳಲ್ಲಿ ಯಾವುದೇ ಒಂದು ಬಗೆಯ ಬಡಿತವನ್ನು ಚೆನ್ನಾಗಿ ಕಲಿತರೆ ಉಳಿದವನ್ನು ಸುಲಭವಾಗಿ ತಿಳಿಯಬಹುದು. ಈ ತರದಲ್ಲಿ ಈಜು ಒಂದು ತಂತ್ರವಾಗಿ ಬೆಳೆಯಿತು. ಅದರ ವೈಜ್ಞಾನಿಕ ವಿಶ್ಲೇಷಣೆ, ಅಭ್ಯಾಸ ಸಾಧ್ಯವಾಯಿತು. ವೈಜ್ಞಾನಿಕವಾದ ಈಜಿನಲ್ಲಿ ಅತ್ಯಲ್ಪ ಶ್ರಮ ಅತ್ಯಧಿಕ ವೇಗ ಲಭಿಸುತ್ತವೆ.

ಬಡಿತದ ವಿಧಾನಗಳಲ್ಲೆಲ್ಲ ತೆವಳು ಬಡಿತವೇ ತುಂಬ ವೇಗವಾಗಿ ಅಭ್ಯಾಸ ಮಾಡಬಹುದಾದಂಥದು. ಇದರಲ್ಲಿ ದೇಹ ನೀರಿನ ಮೇಲೆ ಕವುಚಿ ಮಲಗಿರುತ್ತದೆ. ತಲೆ ಕೆಳಮೊಗವಾಗಿದ್ದು ನೀರಿನಲ್ಲಿ ಮುಳುಗಿರುತ್ತದೆ. ಈಜುಗಾರ 25'–30' ಗಳಿಗೊಂದು ಸಲ ತಲೆಯನ್ನು ಉಸಿರಾಟಕ್ಕಾಗಿ ಮೇಲೆತ್ತುತ್ತಾನೆ. ತೋಳುಗಳನ್ನು ನೀರಿನೊಳಗೆ ನೇರವಾಗಿ ಎಳೆದುಕೊಂಡು ತೊಡೆಯ ಬಳಿ ನೀರಿನಿಂದ ಹೊರಗೆ ಮೇಲೆತ್ತಿ ಮತ್ತೆ ಎಷ್ಟು ದೂರ ಸಾಧ್ಯವೋ ಅಷ್ಟು ದೂರ ಅವನ್ನು ಮುಂಚಾಚಿ ನೀರಿನೊಳಕ್ಕೆ ಸೆಳೆಯುತ್ತಾನೆ. ಆಮೇಲೆ ಕಾಲುಬಡಿತದ ಅಭ್ಯಾಸ ಇಲ್ಲಿ ಚಲನೆ ಸೊಂಟದಿಂದ ಪ್ರಾರಂಭವಾಗಿ ಮಂಡಿಗಳು ನೇರವಾಗಿದ್ದು ಅಥವಾ ಸ್ವಲ್ಪವೇ ಬಾಗಿದ್ದು ಕಾಲುಗಳ ಚಲನೆ ಕತ್ತರಿಯ ಹಾಗಿರುತ್ತದೆ. ಕಾಲು ಬೆರಳುಗಳು ನೇರವಾಗಿರುತ್ತವೆ; ಅಂಗಾಲುಗಳು ಸ್ವಲ್ಪ ಒಳಬದಿಗೆ ಬಾಗಿದ್ದು, ತಿರುಗು ಚಲನೆಯನ್ನು ಉಂಟುಮಾಡುತ್ತವೆ. ಸದ್ಯದಲ್ಲಿ ಇದೇ ಅತ್ಯಂತ ವೇಗವಾದ ಬಡಿತ. ಈ ವಿಧಾನದಿಂದ ಒಂದು ಗಂಟೆಗೆ ನಾಲ್ಕು ಮೈಲಿ ಒಂದು ಫರ್ಲಾಂಗಿನಷ್ಟು ದೂರ ಚಲಿಸುವುದು ಸಾಧ್ಯ.

**ಕ್ರೀಡೆಗಳು:** ಚೆನ್ನಾಗಿ ಈಜು ಕಲಿತ ಮೇಲೆ ತಮಾಷೆಗಾಗಿ ಅಥವಾ ವಿನೋದಕ್ಕಾಗಿ ಚಿತ್ರವಿಚಿತ್ರವಾದ ನಿಲವುಗಳನ್ನು ಅಭ್ಯಾಸ ಮಾಡಬಹುದು–ರೋಲಿಂಗ್ ಲಾಗ್, ಸ್ಪಿನ್ನಿಂಗ್ ಟಾಪ್, ಮೇಲು ಮೇಲಾಗಿ ಗರಗರ ಸುತ್ತುವುದು, ವಿವಿಧ ಕಸರತ್ತುಗಳು ಇತ್ಯಾದಿ. ಇವನ್ನು ಮಾಡುವುದು ನೋಟಕನಿಗೂ ಮಾಡುವವನಿಗೂ ನಿಜವಾದ ಮನರಂಜನೆಯೂ ಹೌದು, ಕ್ರೀಡೆಯೂ ಹೌದು. ಉಳಿದೆಲ್ಲ ಕ್ರೀಡೆಗಳಂತೆಯೇ ಈಜುವಿಕೆಯಲ್ಲೂ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ. ಬೇರೆ ಬೇರೆ ಶೈಲಿಗಳಲ್ಲಿ ವೇಗವಾಗಿ ಈಜುವುದು–ದೀರ್ಘವಾದ ಮತ್ತು ಸಮೀಪದ ದೂರಗಳಲ್ಲಿ, ವಾಟರ್ ಪೋಲೋ ಆಟ ಮುಂತಾದ ಸ್ಪರ್ಧೆಗಳು ನಡೆಯುತ್ತವೆ. ವೇಗವಾಗಿ ಮುಳುಗೇಳುವುದು (ಡೈವಿಂಗ್) ಈಜುವಿಕೆಯ ಒಂದು ವಿಶಿಷ್ಟ ಅಂಗ. ಇದು ಒಂದು ಕಲೆಯೂ ಹೌದು. ಎಲ್ಲ ಈಜುಗಾರರೂ ಮುಳುಗೇಳಲಾರರು. ಆದರೆ ಮುಳುಗೇಳಬಲ್ಲವರೆಲ್ಲರೂ ಸುಖವಾಗಿ ಈಜಬಲ್ಲರು. ದೇಹದ ಮೇಲೆ ಸಂಪೂರ್ಣವಾದ ಹತೋಟಿ ಮತ್ತು ಸದಾ ಎಚ್ಚರಿಕೆಯ ಮನಸ್ಸು ಮುಳುಗೇಳುವವರಿಗೆ ಅತ್ಯಗತ್ಯ. ಇದರಲ್ಲಿ ಮುಮ್ಮುಖನಾಗಿ ಮುಳುಗೇಳುವುದು, ಹಿಮ್ಮುಖನಾಗಿ ಬೀಳುವುದು, ಗಾಳಿಯಲ್ಲಿ ತಿರುಗುವುದು, ಚಿತ್ರ ವಿಚಿತ್ರ ಸಾಹಸ ಮುಂತಾದ ಅನೇಕ ಬಗೆಗಳಿವೆ. ಮುಳುಗೇಳುವವ ನೀರಿಗೆ ದುಮ್ಮಿಕ್ಕುವ ಮುನ್ನ ವೇದಿಕೆಯ ಅಂಚಿಗೆ ಬರಬೇಕು. ಇದು ದುಮುಕು ಹಲಗೆ (ಡೈವಿಂಗ್ ಬೋರ್ಡ್). ಹಲಗೆ ಇರಬೇಕಾದ ಎತ್ತರ ಕಿರಿಯರ ಸ್ಪರ್ಧೆಯಲ್ಲಿ ಒಂದು ಮೀಟರ್, ಹೆಂಗಸರ ಸ್ಪರ್ಧೆಯಲ್ಲಿ ಮೂರು ಮೀಟರ್, ಅಂತಾರಾಷ್ಟ್ರೀಯ ಮತ್ತು ಪರಿಣತರ ಸ್ಪರ್ಧೆಗಳಲ್ಲಿ ಐದು ಮತ್ತು ಹತ್ತು ಮೀಟರ್. ಹತ್ತು ಮೀಟರ್ ಎತ್ತರದ ದುಮುಕು ಹಲಗೆ ಇದ್ದಾಗ ಅಲ್ಲಿ ನೀರಿನ ಆಳ 4 ರಿಂದ 4.5 ಮೀ. ಇರುತ್ತದೆ. ಪ್ರಪಂಚದ ಅತ್ಯಂತ ಶ್ರೇಷ್ಠವಾದ ಈಜುಕೊಳಗಳು 4.5 ಮೀ. ಗಿಂತ ಹೆಚ್ಚು ಆಳವಾಗಿಲ್ಲ.



ಚಿತ್ರ. 4 ಅರೆ ತಿರುಗಿ ಲತೆಮುಂದು ಮುಮ್ಮಳಗು



ಚಿತ್ರ. 5 ಮಡಿಸಿ ಲಾಗಹಾಕಿ ತಲೆಮುಂದು ಹಿಮ್ಮಳಗು

**ಈಜು ಸ್ಪರ್ಧೆ :** ಈಜಿನಲ್ಲಿ ನಮಗೆ ತಿಳಿದಿರುವಂತೆ ಮೊದಲನೆಯ ಸ್ಪರ್ಧೆ ನಡೆದದ್ದು 150 ವರ್ಷಗಳ ಹಿಂದೆ. ಅದೇ ಲಂಡನ್ನಿನ ಥೇಮ್ಸ್ ನದಿಯಲ್ಲಿ 100 ಗಜಗಳ ದೂರದ ಸ್ಪರ್ಧೆ. ವಿನ್ಯಾಸ ನಾಯಿಯ ಕ್ರಮದ್ದು (ಡಾಗ್ ಪ್ಯಾಡಲ್). ಆಗ ದಾಖಲಾದ ಕಾಲ 2 ಮಿನಿಟ್ 16 ಸೆಕೆಂಡುಗಳು. ಇಂದು ಈ ದಾಖಲೆ ಮುರಿದಿದೆ. ಅದೇ ದೂರಕ್ಕೆ 53 ಸೆಕೆಂಡುಗಳಾಗಿದೆ. ಈಗ ಇನ್ನೂ ದೀರ್ಘವಾದ ದೂರದ ಸ್ಪರ್ಧೆಗಳು ಏರ್ಪಾಟಾಗುತ್ತಿವೆ. ಅವುಗಳಲ್ಲೊಂದು, ಕ್ರಮವಾಗಿ ನಡೆಯುವ ಇಂಗ್ಲಿಷ್ ಕಡಲ್ಗಾಲುವೆಯ ಈಜು ಸ್ಪರ್ಧೆ. ಇದು 21 ಭೂಮೈಲಿಗಳ ಉದ್ದವಿದೆ. ಪ್ರಪಂಚದ ಎಲ್ಲ ಭಾಗಗಳ, ಸ್ತ್ರೀಪುರುಷರೂ ಇದರಲ್ಲಿ ಭಾಗವಹಿಸುತ್ತಾರೆ. ಈಜಿನ ಇತಿಹಾಸದಲ್ಲಿ ಇಂಗ್ಲಿಷ್ ಕಡಲ್ಗಾಲುವೆಯನ್ನು ಮೊತ್ತಮೊದಲು ದಾಟಿದವ ಇಪ್ಪತ್ತೆಂಟು ವರ್ಷ ವಯಸ್ಸಿನ ಕ್ಯಾಪ್ಟನ್ ವೆಬ್ಸ್. ಅವನು ಇಂಗ್ಲೆಂಡಿನಿಂದ ಫ್ರಾನ್ಸಿಗೆ ಈ ಕಾಲುವೆಯನ್ನು 21 ಗಂಟೆ 43 ನಿಮಿಷಗಳಲ್ಲಿ ದಾಟಿದ. (24ನೆಯ ಆಗಸ್ಟ್ 1875, ಸೋಮವಾರ). ಈ ದಾಖಲೆ 48 ವರ್ಷಗಳು ದೀರ್ಘಕಾಲ




**ಚಿತ್ರ. 6. A: ಹಿಂತೆವಳಿಕೆ: ಎಡಬಾಹುವಿನಿಂದ ತೊಡಗಿದ ದೇಹ ಮಟ್ಟಸವಾಗಿದೆ. ಬಾಹುಗಳ ಕ್ರಮಬದ್ಧ ಚಲನೆ ಮತ್ತು ಕಾಲುಗಳ ಪೂರಕಬಡಿತ ಈಜನ್ನು ಸಾಧ್ಯವಾಗಿಸುತ್ತವೆ. ದೇಹದ ಅನುಕ್ರಮ ಭಿನ್ನಭಂಗಿಗಳನ್ನು ಇಲ್ಲಿ ತೋರಿಸಿದೆ.**

**B: ಎದೆ ಬಡಿತ: ದೇಹ ನೀರಿನ ಮೇಲೆ ಸೆಟೆದು ಮಲಗಿದೆ. ಬಾಹುಗಳ ಕ್ರಮಬದ್ಧ ಚಲನೆ ಮತ್ತು ಕಾಲುಗಳ ಪೂರಕ ಚಲನೆ ಈಜನ್ನು ಸಾಧ್ಯವಾಗಿಸುತ್ತವೆ. ಚಲನವಲನಗಳು ಎದೆಯ ಭಾಗದಲ್ಲಿ ವಿಶೇಷವಾಗಿ ಸಾಂದ್ರೀಕರಿಸುತ್ತವೆ. ದೇಹದ ಅನುಕ್ರಮ ಭಿನ್ನಭಂಗಿಗಳನ್ನು ಇಲ್ಲಿ ತೋರಿಸಿದೆ.**

**C: ಡಾಲ್ಫಿನ್ ಬಡಿತ: ಡಾಲ್ಫಿನ್‌ಮೀನಿನ ಚಲನೆಯಿಂದ ಪ್ರಭಾವಿತವಾದ ಈಜು. ಬಾಹುಗಳ ಬಡಿತದೊಡನೆ ಕಾಲುಗಳ ಒದೆತವೂ ಚಲನೆಯನ್ನು ಪ್ರೇರಿಸುವುವು. ದೇಹದ ಅನುಕ್ರಮ ಭಿನ್ನಭಂಗಿಗಳನ್ನು ಇಲ್ಲಿ ತೋರಿಸಿದೆ.**

**D: ತವಳಿಕೆ: ದೇಹ ನೀರಿನೊಳಗೆ ಮಟ್ಟಸವಾಗಿದೆ. ಬಲ ಬಾಹುವಿನಿಂದ ತೊಡಗಿದ ಎಡಬಾಹುವಿನಿಂದ ಪೂರ್ಣಗೊಂಡ ಬಾಹುಗಳ ಕ್ರಮಬದ್ಧ ಚಲನೆ ಮತ್ತು ಕಾಲುಗಳ ಪೂರಕಬಡಿತ ಈಜನ್ನು ಸಾಧ್ಯವಾಗಿಸುತ್ತವೆ. ದೇಹದ ಅನುಕ್ರಮ ಭಿನ್ನಭಂಗಿಗಳನ್ನು ಇಲ್ಲಿ ತೋರಿಸಿದೆ.**

ಮುರಿಯದೆ ಉಳಿಯಿತು. ಹಾಗಾಗಿ ಕ್ಯಾಪ್ಟನ್ ವೆಬ್‌ನ ಹೆಸರು ಸುಪ್ರಸಿದ್ಧವಾಯಿತು. ಆಮೇಲಿನ ವರ್ಷಗಳಲ್ಲಿ ಅನೇಕ ಫ್ರೆಂಚರು, ಜರ್ಮನರು, ಇಂಗ್ಲಿಷರು ಆ ಸಾಹಸಕ್ಕೆ ಪ್ರಯತ್ನಿಸಿದರು. ಅಂಥ ಮೊದಲನೆಯ ತೀವ್ರ ಪ್ರಯತ್ನಕ್ಕೆ ಕೈಹಾಕಿದವಳೆಂದರೆ ಮಹಾಂ ಇಸಾಸೆಸ್ಕಸ್ ಎಂಬ ಒಬ್ಬ ಮಹಿಳೆ (1900) 1905ರಲ್ಲಿ ಮಿಸ್ ಕೆಲೆರಮನ್ ಎಂಬಾಕೆ ಮತ್ತೆ ಪ್ರಯತ್ನಿಸಿದಳು. ಆದರೆ ಎರಡು ಪ್ರಯತ್ನಗಳೂ ನಿಷ್ಫಲವಾದುವು. ಕೊನೆಗೆ 1926ರಲ್ಲಿ ಮಿಸ್ ಜಿ. ಎಡೆರ್ಲೇ ಎಂಬ ಅಮೆರಿಕದ ಹದಿನಾಲ್ಕು ವರ್ಷದ ಬಾಲಿಕೆ ಇಂಗ್ಲಿಷ್ ಕಾಲುವೆಯನ್ನು 14 ಗಂಟೆ 34 ನಿಮಿಷಗಳಲ್ಲಿ ದಾಟಿದಳು. ಉದ್ದಕ್ಕೂ ತೆವಳು ಬಡಿತದ ವಿನ್ಯಾಸವನ್ನು ಅವಳು ಅನುಸರಿಸಿದ್ದಳು. ಇಂಗ್ಲಿಷ್ ಕಾಲುವೆಯನ್ನು ಈಜಿ ದಾಟಿದ ಮೊದಲನೆಯ ಹೆಂಗಸು ಈ ಹುಡುಗಿಯೇ. ಎರಡನೆಯ ಹೆಂಗಸು ದಕ್ಷಿಣ ಆಫ್ರಿಕದ ಮಿಸ್ ಡಂಕನ್. ಇವಳು ದಾಟಿದುದು 1930ರಲ್ಲಿ. 1951ರಲ್ಲಿ ಇಂಗ್ಲೆಂಡಿನ ಡಬ್ಲ್ಯು.ಇ. ಬಾರ್ನಿ ಎಂಬಾತ ಕಾಲುವೆಯ ಈ ಕಡೆಯಿಂದ ಆ ಕಡೆಗೆ ಮತ್ತು ಆ ಕಡೆಯಿಂದ ಈ ಕಡೆಗೆ ದಾಟಿ ದಾಖಲೆ ಸ್ಥಾಪಿಸಿದ. ಆ ಕಾಲಕ್ಕೆ ಅತ್ಯಂತ ಯಶಸ್ವಿಯಾದ ಈಜುಗಾರನೆಂದು ಅವನನ್ನು ಸನ್ಮಾನಿಸಲಾಯಿತು. ಆಗ ಅವನಿಗೆ ಐವತ್ತೈದು ವರ್ಷ ವಯಸ್ಸು. ಅದೇ ವರ್ಷದಲ್ಲಿ ಅಮೆರಿಕದ ಮಿಸ್ ಫ್ಲಾರೆನ್ಸ್ ಚಾಡ್ವಿಕ್ ಕಾಲುವೆಯ ಎರಡು ಕಡೆಗೆ ಈಜಿದ ಪ್ರಥಮ ಮಹಿಳೆಯಾದಳು. 1950ರಲ್ಲಿ ಈಜಿಪ್ಟಿನ ಅಬ್ದುಲ್ ರಹೀಮ್ ಕಾಲುವೆಯನ್ನು 10 ಗಂಟೆ 50 ಮಿನಿಟುಗಳಲ್ಲಿ ಈಜಿದ. ಅತ್ಯಂತ ದೀರ್ಘವಾದ ದೂರವನ್ನು ಈಜಿದ ದಾಖಲೆ 1940ರಲ್ಲಿ ಜಾನ್ ವಿ. ಸಿಗ್ಮಂಡನದು. ಅವನು ಮಿಸಿಸಿಪಿ ನದಿಯಲ್ಲಿ ನಿರಂತರವಾಗಿ 89 ಗಂಟೆ 48 ಮಿನಿಟು ಈಜಿ ಒಟ್ಟು 292 ಮೈಲಿಗಳನ್ನು ಕ್ರಮಿಸಿದ. ಕೊನೆಯಲ್ಲಿ ಅವನು ಅರೆಪ್ರಜ್ಞೆ ಸ್ಥಿತಿಯಲ್ಲಿದ್ದ. ನದಿಯ ಸೆಳವು ಗಂಟೆಗೆ ಎರಡು ಮೈಲಿಯಷ್ಟಿದ್ದರೂ ಅವನದು ಅತ್ಯಂತ ಉತ್ಕೃಷ್ಟವಾದ ಕೆಲಸವಾಗಿತ್ತು. ಇದು ಅದ್ಭುತ ಸಾಧನೆಯೇ ಸರಿ.

**ಉಪಯೋಗಗಳು:** ಈಜಿನ ಅಗತ್ಯ ಮತ್ತು ಅನುಕೂಲಗಳ ವಿಷಯದಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯೇ ಇಲ್ಲ. ಪ್ರತಿಯೊಂದು ರಾಷ್ಟ್ರವೂ ಉತ್ತಮ ಆರೋಗ್ಯ ಮತ್ತು ಸಾಮಾನ್ಯ ದೇಹದಾರ್ಢ್ಯಕ್ಕಾಗಿ ಈಜನ್ನು ಪುರಸ್ಕರಿಸುತ್ತದೆ. ಜೀವ ಉಳಿಸಿಕೊಳ್ಳುವುದು ಪ್ರತಿಯೊಬ್ಬನಿಗೂ ಅತ್ಯಂತ ಮುಖ್ಯವಾದ ಅಂಶ. ವರ್ತಮಾನ ಪತ್ರಿಕೆಗಳಲ್ಲಿ ಈಜುಬಾರದೆ ಜನ ಮುಳುಗಿ ಸತ್ತುಹೋದ ವರದಿಗಳನ್ನು ಓದುತ್ತೇವೆ. ಮುಳುಗಿಹೋಗದಂತೆ ಮನುಷ್ಯ ಮಾಡಿಕೊಳ್ಳಬಹುದಾದ ವಿಮೆಯೆಂದರೆ ಈಜು ಕಲಿಯುವುದೊಂದೇ. ಅನೇಕ ವೈದ್ಯರು ನರದೌರ್ಬಲ್ಯಕ್ಕೆ ತಣ್ಣೀರಿನ ಉಪಚಾರವನ್ನು ವಿಧಿಸುತ್ತಾರೆ. ಬೇರೆ ಯಾವುದೇ ಕ್ರೀಡೆಗಿಂತ ಮಿಗಿಲಾಗಿ ಈಜುವುದರಲ್ಲಿ ದೇಹದ ಎಲ್ಲ ಮಾಂಸಖಂಡಗಳೂ ಹಗುರಗೊಳ್ಳುತ್ತವೆ. ಹಾಗೆ ಲಘುವಾದ ಮಾಂಸಖಂಡಗಳನ್ನು ಶುಚಿಗೊಳಿಸಿಕೊಂಡು ಅವಕ್ಕೆ ಹೊಸ ಆಹಾರವನ್ನು ಸಮರ್ಪಕವಾಗಿ ಒದಗಿಸಬಹುದು. ಆಗ ಆ ಮಾಂಸಖಂಡಗಳೊಂದಿಗೆ ದಟ್ಟವಾಗಿ ಹೆಣೆದುಕೊಂಡಿರುವ ನರಗಳೂ ಉತ್ತಮ ವಿಶ್ರಾಂತಿಯನ್ನು ಪಡೆಯುತ್ತವೆ. ಈಜುವುದು ಕ್ಷೇತ್ರೀಯವಾಗಿದೆ. ಅದರಿಂದ ಇಡೀ ದೇಹವನ್ನೇ ನೀರಿನ ಒತ್ತಡದಿಂದ ಉಜ್ಜಿದಂತಾಗಿ ರಕ್ತಪರಿಚಲನೆ ಉತ್ತಮಗೊಳ್ಳುವುದು. ಹಾಗೆಯೇ ಹೃದಯದ ಬಳಲಿಕೆಯನ್ನೂ ಪಾದಗಳಿಗೆ ಬೀಳುವ ಭಾರವನ್ನೂ ಇಳಿಸಿದಂತಾಗುವುದು. ಮಾಂಸಖಂಡ, ಮೂಳೆಗಳಿಗೆ ಸಂಬಂಧಿಸಿದ

ಎಷ್ಟೋ ದೋಷಗಳು ನಿವಾರಣೆ ಹೊಂದುವುವು. ಪೋಲಿಯೋ ಅಥವಾ ಶಿಶುಗಳ ಪಾರ್ಶ್ವವಾಯು ವ್ಯಾಧಿಯ ಅನಂತರದ ಪರಿಣಾಮಗಳ ನಿವಾರಣೆಯಲ್ಲಿ ಈಜುವಿಕೆಯ ವೈದ್ಯಕೀಯ ಮೌಲ್ಯವನ್ನು ರೂಸ್‍ವೆಲ್ಟ್ ಅವರೇ ನಾಟಕೀಕರಿಸಿದ್ದರು. ಬೆಂಜಮಿನ್ ಫ್ರಾಂಕ್ಲಿನ್ ಅತ್ಯುತ್ತಮ ಈಜುಗಾರನಾಗಿದ್ದುದಲ್ಲದೆ ಈಜನ್ನು ಒಂದು ಕ್ರೀಡೆ ಮತ್ತು ಮನರಂಜನೆಯಾಗಿ ಸಮರ್ಥಿಸಿದವರಲ್ಲಿ ಮೊದಲಿಗ. ಪೂರ್ವಾಶ್ರಮದಲ್ಲಿ ವೈದ್ಯರಾಗಿದ್ದ ಹೃಷೀಕೇಶದ ಸ್ವಾಮಿ ಶಿವಾನಂದರು ಈಜುವುದು ಅತ್ಯುತ್ತಮ ವ್ಯಾಯಾಮ ಎಂದು ಹೇಳುತ್ತಾರೆ. ಅದು ದೇಹದ ಎಲ್ಲ ಮಾಂಸಖಂಡಗಳನ್ನೂ ಎಳೆಯುತ್ತದೆ. ಸೊಂಟದ ವಾತರೋಗವನ್ನು ಶಮನಗೊಳಿಸುತ್ತದೆ. ತೇಲುತ್ತಲೇ ಪ್ರಾಣಾಯಾಮವನ್ನೂ ಆಚರಿಸಬಹುದು ಎಂದು ಅವರ ಮತ. ಒಂದು ಅಮೆರಿಕನ್ ವಿಶ್ವವಿದ್ಯಾನಿಲಯ ಹದಿಮೂರು ಹದಿನಾಲ್ಕು ವರ್ಷ ವಯಸ್ಸಿನ ಹುಡುಗರು ಮತ್ತು ಹುಡುಗಿಯರನ್ನು ಆರಿಸಿ ನಡೆಸಿದ ಒಂದು ಅಧ್ಯಯನದಲ್ಲಿ ಈಜುಗಾರರಾಗಿದ್ದವರು ಪಾಠ ಪ್ರವಚನಗಳಲ್ಲಿ ಮೇಲುಗೈ ಆಗಿದ್ದು ಹೆಚ್ಚು ಅಂಕಗಳನ್ನು ಗಳಿಸುತ್ತಿದ್ದುದು ಕಂಡುಬಂತು. ಅವರು ಜೀವನದ ಬಗೆಗೆ ಸಹಜವೂ ಆರೋಗ್ಯಕರವೂ ಆದ ಪ್ರವೃತ್ತಿಯನ್ನು ತೋರಿಸುತ್ತಿದ್ದರು. ಅವರ ದೇಹ ದೃಢವಾಗಿತ್ತು. ಮುಖದಲ್ಲಿ ಆರೋಗ್ಯದ ಕಳೆಯಿತ್ತು. ಸರಾಸರಿ ನೋಡಿದ್ದರಲ್ಲಿ ಈಜುಬಾರದವರಿಗಿಂತಲೂ ಎತ್ತರವೂ ಬಲಿಷ್ಠವೂ ಆದ ದೇಹ ಅವರದಾಗಿತ್ತು. ಅವರ ದೇಹದಲ್ಲಿ ಕೊಬ್ಬಿನ ಅಂಶ ಕಡಿಮೆಯಿದ್ದುದರಿಂದ ಅವರ ಶ್ವಾಸಕೋಶಗಳ ಶಕ್ತಿ ಸಾಮಾನ್ಯ ಯುವಕರದಕ್ಕಿಂತ ಹೆಚ್ಚಿನದಾಗಿತ್ತು. ಉಳಿದ ಆಟಗಾರರಿಗಿಂತ ವಿಶ್ರಾಂತಿ ಕಾಲದ ನಾಡಿಮಿಡಿತದ ಗತಿ ಕಡಿಮೆಯಾಗಿದ್ದುದಲ್ಲದೆ ರಕ್ತದ ಒತ್ತಡದ ಪ್ರಮಾಣ ಸಾಮಾನ್ಯ ಸ್ಥಿತಿಗಿಂತ ಕಡಿಮೆಯಾಗಿತ್ತು. ಎದೆಯ ಎಕ್ಸ್–ರೇ ಚಿತ್ರ ಯಾವುದೇ ಬಗೆಯ ಹೃದಯದ ವಿಸ್ತರಣ ಅಥವಾ ಅಸಾಮಾನ್ಯ ಸ್ಥಿತಿಯನ್ನು ತೋರಲಿಲ್ಲ.

ಈಜುವಿಕೆಯಿಂದ ಜೀರ್ಣಕ್ರಮ, ಉಸಿರಾಟ, ರಕ್ತಪರಿಚಲನೆ, ಎಲ್ಲ ಮಾಂಸಖಂಡಗಳ ಸಹಕಾರಯುತ ವರ್ತನೆ, ದೇಹದ ಮಿತಪ್ರಮಾಣ ಬೆಳವಣಿಗೆ, ಒಂದು ಗಂಭೀರ ನಿಲವು ಮತ್ತು ಶಕ್ತಿಯ ಗಳಿಕೆ, ಉತ್ತಮ ವ್ಯಕ್ತಿತ್ವ, ಹೆಚ್ಚಿದ ಸಹಿಷ್ಣುತೆ, ಉತ್ತಮ ಆರೋಗ್ಯ–ಇವಿಷ್ಟನ್ನೂ ಸಾಧಿಸಬಹುದು. (ಯು.ವಿ.)

**ಈಜುಕೊಳ:** ಈಜಲು, ಮುಳುಗೇಳಲು, ಜಲಕ್ರೀಡೆ ಆಡಲು ರಚಿಸಿರುವ ದೊಡ್ಡ ಕೆರೆ (ಸ್ವಿಮಿಂಗ್ ಪೂಲ್). ನಾಗರಿಕ ಜೀವನದ ಪ್ರಿಯಸಂಗಾತಿ ಈಜುಕೊಳ. ಪ್ರಾಚೀನ ರೋಂ ರಾಜ್ಯದಲ್ಲಿ 17 ಕೊಳಗಳಿದ್ದುವೆಂದೂ ಅವುಗಳಲ್ಲಿ ಒಂದು ಸಲಕ್ಕೆ 2,000–



ಬೃಹತ್ ಈಜುಕೊಳ–ಮೊಹೆಂಜೊದಾರೊ

3,000 ಜನರು ಈಜಬಹುದಿತ್ತೆಂದೂ ದಾಖಲೆ ಇದೆ. ಭಾರತದಲ್ಲಿ ದೇವಾಲಯಗಳ ಸಮೀಪ ಕೊಳಗಳಿರುವುದು ಸಂಪ್ರದಾಯ. ಇಲ್ಲಿ ಉದ್ದೇಶ ಭಕ್ತರು ಮಿಂದು ಶುಚಿರ್ಭೂತರಾಗಿ ದೇವಾಲಯ ಪ್ರವೇಶ ಮಾಡಬೇಕೆಂದು. ಈಜುವಿಕೆ (ಎಂದರೆ, ಅದರ ತಂತ್ರ ಅಥವಾ ಜಲಕ್ರೀಡೆಗಳು) ಕೇವಲ ಆನುಷಂಗಿಕ. ಈಜುವಿಕೆಯ ಉದ್ದೇಶವೊಂದರಿಂದಲೇ ರಚಿತವಾದ ಕೊಳಗಳು ನಿರ್ದಿಷ್ಟ ಮಾನಕಗಳನ್ನು ಹೊಂದಿರಲೇಬೇಕು–ಗಾತ್ರ, ನೀರಿನ ಶುದ್ಧೀಕರಣ, ವೇದಿಕೆಗಳ ವಿನ್ಯಾಸ, ಶೌಚಗೃಹಗಳು ಇತ್ಯಾದಿ. ಪ್ರಾಚೀನ ಭಾರತದಲ್ಲಿ ರಾಜರ ಅರಮನೆಗಳಲ್ಲಿ ಸಾಮಾನ್ಯವಾಗಿ ಈಜುಕೊಳಗಳಿರುತ್ತಿದ್ದುವು. ಸಾರ್ವಜನಿಕ ಈಜುಕೊಳಗಳಿದ್ದುದಕ್ಕೆ ನಿದರ್ಶನಗಳಿವೆ. ಹರಪ್ಪ ಮತ್ತು ಮೊಹೆಂಜೊದಾರೊಗಳಲ್ಲಿ ಕಂಡುಬಂದಿರುವ ಕೊಳಗಳು 5,000 ವರ್ಷಗಳ ಹಿಂದೆ ಕಟ್ಟಿದುವು. ವಿಜಯನಗರದ ರಾಜಧಾನಿ ಹಂಪೆಯಲ್ಲಿ 3,000 ಜನ ಕುಳಿತುನೋಡಲು ಅನುಕೂಲವಾಗುವಂತೆ ಅಟ್ಟಣೆಗಳಿಂದ ಕೂಡಿದ ಒಂದು ಕೊಳವಿತ್ತು. ಕ್ರೀಡಾರಂಗ ಬೆಳೆದಂತೆ ಈಜುವಿಕೆಯ ಮಹತ್ತ್ವ ಒಂದು ಎಲ್ಲ ಮುಂದುವರಿದ ರಾಷ್ಟ್ರಗಳಲ್ಲೂ ಅಗತ್ಯಕ್ಕೆ ತಕ್ಕ ಹಾಗೆ ಬೇಕಾದಷ್ಟು ಹಣವನ್ನು ವೆಚ್ಚಮಾಡಿ ಈಜುಕೊಳಗಳನ್ನು ನಿರ್ಮಿಸುತ್ತಿದ್ದಾರೆ.

ಆಧುನಿಕ ಕೊಳಗಳಲ್ಲಿ ಬೇರೆ ಬೇರೆ ಅಗತ್ಯಗಳಿಗೆ ತಕ್ಕಹಾಗೆ ಬೇರೆ ಬೇರೆ ಆಳದ ವಿಭಾಗಗಳಿರುತ್ತವೆ–ಮಕ್ಕಳಿಗಾಗಿ, ಕಲಿಯುವವರಿಗಾಗಿ, ಸ್ಪರ್ಧೆಗಳಿಗಾಗಿ ಇತ್ಯಾದಿ. ವಾಟರ್ ಪೋಲೋ ಕೊಳಗಳು 1–2 ಮೀ. ಆಳ ಇರಬೇಕು. ಮುಳುಗೇಳಲೆಂದು (ಡೈವಿಂಗ್) ರಚಿಸಿರುವ ಕೊಳದ ಮೇಲಿನ ದುಮುಕು ಹಲಗೆ (ಡೈವಿಂಗ್ ಬೋರ್ಡ್) ಎಷ್ಟೇ ಎತ್ತರದಲ್ಲಿದ್ದರೂ ಕೊಳದ ಗರಿಷ್ಠ ಆಳ 4.5 ಮೀ ಇರಬೇಕಾಗುತ್ತದೆ. ದುಮುಕು ಹಲಗೆಗಳಾದರೋ 1, 3, 5 ಮತ್ತು 10 ಮೀಟರ್ ಎತ್ತರದಲ್ಲಿರುತ್ತವೆ. ಕೊಳದ ಉದ್ದಳತೆಯನ್ನು ನಿರ್ಧರಿಸುವುದು ನೆಲದ ಉದ್ದಳತೆ, ನಿರ್ಮಾಣಕ್ಕಾಗಿ ಒದಗಿಸಿರುವ ಹಣ, ಅದನ್ನು ಉಪಯೋಗಿಸುವ ಜನರ ಸಂಖ್ಯೆ ಮುಂತಾದುವುಗಳಿಂದ. ಒಂದು ಸಾಮಾನ್ಯ ಈಜುಕೊಳದ ಉದ್ದಳತೆಯ ವಿವರಗಳಿಷ್ಟು: 8–18 ಮೀ. ಅಗಲ, 15–50 ಮೀ ಉದ್ದ. ಈಚೆಗೆ 100 ಮೀಟರ್ ಉದ್ದದ ಈಜುಸ್ಪರ್ಧೆಗಳನ್ನು ಏರ್ಪಡಿಸುತ್ತಿರುವುದರಿಂದ ಕೊಳಗಳನ್ನು 100 ಮೀಟರಿನ 1/3 ಅಥವಾ ½ ಉದ್ದವಿಟ್ಟು ಕಟ್ಟಲಾಗುತ್ತಿದೆ. ಈ ಅಳತೆಗಳು ಅಂತಾರಾಷ್ಟ್ರೀಯವಾದುವು. ಈಚೆಗಂತೂ ಚಿತ್ರವಿಚಿತ್ರ ವಿನ್ಯಾಸಗಳಲ್ಲಿ ಈಜುಕೊಳಗಳನ್ನು ನಿರ್ಮಿಸಲಾಗುತ್ತಿದೆ–ಚದರ, ಚತುರ್ದಶ, ವರ್ತುಲ, ಎಲೆಯ ಮಾದರಿ, ಹೃದಯದ ಮಾದರಿ ಇತ್ಯಾದಿ.



ವಿಜಯನಗರದ ಈಜುಕೊಳ, ಸುತ್ತಣ ತಂಗುದಾಣಗಳು

ಈಜುಕೊಳಗಳು ಜಪಾನ್, ಅಮೆರಿಕಗಳಲ್ಲಿ ತುಂಬ ಜನಪ್ರಿಯವಾಗಿವೆ. ಈಗ ಜರ್ಮನಿಯಲ್ಲೂ ಹೆಚ್ಚುತ್ತಿವೆ. ಜಪಾನಿನಲ್ಲಿರುವ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮುಕ್ಕಾಲು ಭಾಗದವುಗಳಿಗೆ ಸ್ವಂತ ಈಜುಕೊಳಗಳಿವೆ. ಉಳಿದ ಪಾಠಗಳ ಜೊತೆಗೆ ಈಜನ್ನು ಕಡ್ಡಾಯವಾಗಿ ಎಲ್ಲ ವಿದ್ಯಾರ್ಥಿಗಳಿಗೂ ಕಲಿಸಲಾಗುತ್ತಿದೆ. ಅಮೆರಿಕದಲ್ಲಿ ತಲಾ ನಾಲ್ಕು ಕುಟುಂಬಗಳಿಗೆ ಒಂದರಂತೆ ಖಾಸಗಿ ಕೊಳಗಳಿವೆ. ಎಲ್ಲೆಲ್ಲಿ ಸ್ಥಳಾವಕಾಶವಿದೆಯೋ ಅಲ್ಲೆಲ್ಲ ಈಜುಕೊಳಗಳನ್ನು ಕಟ್ಟಿದ್ದಾರೆ–ತೋಟಗಳು, ಮನೆಯ ಆವರಣಗಳು, ಮನೆಯ ಹಿತ್ತಲುಗಳು, ಮನೆಯ ಮೇಲುಚಾವಣಿಗಳು ಹೀಗೆ. ನಿಮ್ಮ ಹಿತ್ತಲಿನಲ್ಲಿ ಕೇವಲ ಮೂರೇ ದಿವಸಗಳಲ್ಲಿ ಒಂದು ಈಜುಕೊಳ ಎಂಬ ಜಾಹಿರಾತು ಅಮೆರಿಕದಲ್ಲಿ ಸಾಮಾನ್ಯ. ಮೊದಲೇ ಕೊಳಗಳನ್ನು ಎರಕಹೊಯ್ದು, ಲಾರಿಗಳಲ್ಲಿ ಸಾಗಿಸಿ, ಮೂರು ನಾಲ್ಕು ಗಂಟೆಗಳಲ್ಲಿ ನಿರ್ಮಿಸಿ ಮುಗಿಸುವುದುಂಟು. ಪ್ಲಾಸ್ಟಿಕ್ಕಿನಲ್ಲಿ ನಿರ್ಮಿಸಿ, ಸುರುಳಿ ಸುತ್ತಿ ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಎಲ್ಲೆಂದರಲ್ಲಿ ಕೊಳವನ್ನು ಹೂಡಬಹುದು. ಆಮೇಲೆ ಮನೆಗೆ ಹಿಂದಕ್ಕೆ ತರಬಹುದು. ಹಡಗುಗಳಲ್ಲಿ, ಸ್ಟೀಮರುಗಳಲ್ಲಿ ಡೆಕ್ಕುಗಳ ಮೇಲೆ ಈಜುಕೊಳಗಳಿರುತ್ತವೆ. ಶೀತ ಪ್ರದೇಶಗಳಲ್ಲಿ ಕೊಳಗಳಿಗೆ ಬಿಸಿನೀರು ತುಂಬಿ ವರ್ಷವಿಡೀ ಉಪಯುಕ್ತವಾಗುವಂತೆ ಮಾಡಲಾಗುತ್ತದೆ. ಅತ್ಯಂತ ವಿಸ್ತಾರವಾದ ಬಿಸಿನೀರಿನ ಈಜುಕೊಳ ಮಾಸ್ಕೊದಲ್ಲಿದೆ. ಅದು ವರ್ತುಲಾಕಾರದ ಕೊಳ. ಮಕ್ಕಳಿಗೆ ಸ್ಪರ್ಧೆಗಳಿಗೆ, ಕಲಿಯುವವರಿಗೆ, ಮುಳುಗೇಳಲು, ವಾಟರ್‌ಪೋಲೋವಿಗೆ ಅನುಕೂಲಗಳಿದ್ದು ಇದರಲ್ಲಿ ಏಕಕಾಲದಲ್ಲಿ 2,000 ಈಜುಗಾರರಿಗೆ ಅವಕಾಶವಿದೆ. ಭಾರತದಲ್ಲಿ ಈಜುಕೊಳಗಳು ವಿರಳ. ಬಹುವಾಗಿ ಪುರಸಭೆಗಳು ಇಂಥವನ್ನು ನಿರ್ಮಿಸುತ್ತವೆ. ಈಜು ಕೂಡ ಇನ್ನೂ ಜನಪ್ರಿಯವಾಗಬೇಕಾಗಿದೆ, ವಿಕಾಸಗೊಳ್ಳಬೇಕಾಗಿದೆ. (ಯು.ವಿ.)

**ಈಟಾರ್ಡನ ಕ್ರಿಯೆ:** ಮೀಥೈಲ್ ಗುಂಪುಗಳಿರುವ ಬೆಂಜೀನ್ ವರ್ಗದ ಕೆಲವು ಹೈಡ್ರೋಕಾರ್ಬನ್ನುಗಳನ್ನು ಆಲ್ಡಿಹೈಡುಗಳಾಗಿ ಪರಿವರ್ತಿಸಲು ಈಟಾರ್ಡ್ ಎಂಬುವನು ನಿರೂಪಿಸಿದ ಕ್ರಿಯಾವಿಧಾನ. ಟಾಲೀನನ್ನು ($C_6H_5.CH_3$) ಕ್ರೋಮೈಲ್ ಕ್ಲೋರೈಡಿನಿಂದ




($CrO_2Cl_2$) ಉತ್ಕರ್ಷಿಸಿ ಬೆಂಜ಼ಾಲ್ಡಿಹೈಡ್ ($C_6H_5.CHO$) ಮಾಡುವುದು ಇದಕ್ಕೆ ಉದಾಹರಣೆ. ಮೊದಲು ಟಾಲೀನನ್ನು ಇಂಗಾಲದ ಡೈಸಲ್ಫೈಡಿನಲ್ಲಿ ವಿಲೀನ ಮಾಡಬೇಕು. ಉಷ್ಣತೆ 25°–45° ಸೆ. ಮಿತಿಯನ್ನು ಮೀರಬಾರದು. ಆಗ ಕ್ರೋಮೈಲ್ ಕ್ಲೋರೈಡಿನೊಂದಿಗೆ

ಟಾಲೀನು ಕೂಡಿ ಮಧ್ಯವರ್ತಿ ಸಂಯುಕ್ತವೊಂದು ಬೇರ್ಪಡುವುದು. ಇದಕ್ಕೆ ಸ್ಫೋಟಕ ಗುಣವಿರುವುದರಿಂದ ಈ ಕ್ರಿಯೆ ನಡೆಸುವಾಗ ಎಚ್ಚರಿಕೆ ವಹಿಸುವುದು ಅಗತ್ಯ. ಅನಂತರ ತಣ್ಣೀರನ್ನು ಸೇರಿಸಿದರೆ ಬೆಂಜಾಲ್ಡಿಹೈಡ್ ಉಂಟಾಗುವುದು. ಈ ಕ್ರಿಯೆಗಳನ್ನು ಕೆಳಕಂಡ ಸಮೀಕರಣಗಳು ಸೂಚಿಸುತ್ತವೆ.

ಟಾಲೀನಿನ ಬದಲು ಈಥೈಲ್ ಬೆಂಜೀನನ್ನು ($C_6H_5CH_2CH_3$) ಈಟಾರ್ಡನ ಕ್ರಿಯೆಗೆ ಒಳಪಡಿಸಿದರೆ ಫೀನೈಲ್ ಅಸಿಟಾಲ್ಡಿಹೈಡ್ ($C_6H_5.CH_2CHO$) ಮತ್ತು ಅಸಿಟೊಫೀನೋನುಗಳ ($C_6H_5.–CO–CH_3$) ಮಿಶ್ರಣ ದೊರೆಯುವುದು.

ಆದರೆ ಆಲ್ಕೈಲ್ ಪಾರ್ಶ್ವಸರಣಿ ಇನ್ನೂ ನೀಳವಾಗಿದ್ದರೆ ಉತ್ಪನ್ನವಸ್ತು ಕೇವಲ ಕೀಟೋನ್ ಆಗಿರುವುದು. ಆರೋಮ್ಯಾಟಿಕ್ ಆಲ್ಡಿಹೈಡುಗಳು ಉಪಯುಕ್ತ ವಸ್ತುಗಳು. ಆದ್ದರಿಂದ ಅದನ್ನು ತಯಾರಿಸಲು ನೆರವಾಗುವ ಈ ಕ್ರಿಯೆಗೆ ಪ್ರಾಶಸ್ತ್ಯ ಬಂದಿದೆ.

(ಎಚ್.ಜಿ.ಎಸ್.)

**ಈಟಿ:** ಉದ್ದವಾದ ಕೋಲಿನ ತುದಿಗೆ ಮೊನಚಾದ ಉಕ್ಕಿನ ಅಲಗನ್ನು ಸಿಕ್ಕಿಸಿರುವ ಭರ್ಜಿಯಂಥ ಒಂದು ಆಯುಧ (ಲಾನ್ಸ್). ಇದನ್ನು ಬಲುಮಟ್ಟಿಗೆ ಕುದುರೆ ಸವಾರರು ಹಿಡಿದಿರುತ್ತಾರೆ. ಆಯುಧವಾಗಿ ಇದು ಪರಿಣಾಮಕಾರಿಯೇ ಎಂಬ ಬಗ್ಗೆ ವಿವಾದವಿದೆ. ಕತ್ತಿ ಇದಕ್ಕಿಂತ ಹೆಚ್ಚು ಉಪಯುಕ್ತವೆಂದೂ ಕೊಲ್ಲಲು ಹೆಚ್ಚು ಶಕ್ತವೆಂದೂ ಪರಿಗಣಿತವಾಗಿದೆ. ಈಟಿ ತಲ್ಲಣಗೊಳಿಸುವ ಶಸ್ತ್ರ. ಆದರೆ ಕ್ಷಿಪ್ರ ಪ್ರಯೋಗಕ್ಕೆ ಕತ್ತಿಯೇ ಲೇಸು. ಆಧುನಿಕ ಯುದ್ಧಕ್ರಮದಲ್ಲಿ ಈಟಿ ಅನುಪಯುಕ್ತ ಆಯುಧ. ಈಗ ಅದನ್ನು ಕುದುರೆ ಸವಾರರು ಉತ್ಸವ ಸಮಾರಂಭಗಳಲ್ಲಿ ಅಲಂಕಾರ ಸಂಕೇತವಾಗಿ ಹಿಡಿದಿರುತ್ತಾರೆ. ಈಟಿಯ ಉದ್ದ ಪ್ರಾರಂಭದಲ್ಲಿ 4.8 ಮೀ ಇದ್ದು ಈಗ 5.82 ಮೀ ಆಗಿದೆ. ಅದರ ತುದಿ ಮೊನಚು ಮತ್ತು ಕತ್ತಿಯಂತೆ ಅಗಲವಾಗಿ ಅಥವಾ ಎಲೆಯಾಕಾರದಲ್ಲಿ ಇದೆ. ಮೊದಮೊದಲು ಈಟಿಯ ಕೋಲನ್ನು ಬೂದಿ ಮರದಿಂದ ಮಾಡುತ್ತಿದ್ದರು. ಈಗ ಗಟ್ಟಿ ಬಿದಿರಿನ ಗಳೆಯನ್ನು ಉಪಯೋಗಿಸುತ್ತಾರೆ. ಈಟಿಗೆ ಚರ್ಮದಿಂದ ಮಾಡಿದ ತೂಗಾಸರೆಯುಂಟು. ಸವಾರಿ ಮಾಡುವಾಗ ಅದರ ಬುಡ ಒಂದು ಸಣ್ಣ ಚರ್ಮಕೋಶದಲ್ಲಿ ತಂಗಿರುತ್ತದೆ. ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಈ ಆಯುಧ ಎಂದು ಹುಟ್ಟಿತೆಂಬುದು ಗೊತ್ತಾಗಿಲ್ಲ. ಅಸೀರಿಯ, ಗ್ರೀಕ್ ಮತ್ತು ರೋಮ್ ದೇಶಗಳಲ್ಲಿ ಇದು ಉಪಯೋಗದಲ್ಲಿತ್ತು. 1655ರಲ್ಲಿ ಈ ಆಯುಧವುಳ್ಳ ಕೆಲವೇ ಸ್ಪೇನ್ ಸೈನಿಕರು ಸ್ಯಾನ್ ಡಾಮಿಂಗೊ ಎಂಬ ಪ್ರದೇಶದಲ್ಲಿ, ಇದನ್ನು ಹೊಂದಿರದ ಬ್ರಿಟಿಷ್ ಯೋಧರನ್ನು ಸೋಲಿಸಿದರೆಂದು ತಿಳಿದುಬಂದಿದೆ. 1811ರಲ್ಲಿ ನೆಪೋಲಿಯನ್ ವಾಟರ್ಲು ಎಂಬಲ್ಲಿ ಈಟಿ ಹಿಡಿದ ತನ್ನ ಸವಾರರ ಮೂಲಕ ಬ್ರಿಟಿಷರನ್ನು ಸೋಲಿಸಿ ಪ್ರಶಂಸಾರ್ಹ ಜಯಗಳಿಸಿದ. ಇದರಿಂದ ಪಾಠ ಕಲಿತ ಬ್ರಿಟಿಷರು ತಮ್ಮ ಅನೇಕ ದಳಗಳನ್ನು ಈಟಿ ಪಡೆಗಳನ್ನಾಗಿ ಮಾರ್ಪಡಿಸಿದರು. ಭಾರತ ಸೇನೆಯ ಚರಿತ್ರೆಯಲ್ಲಿ ಈಟಿ ದಳದವರು ಬಹಳ ಹಿರಿಮೆಯ ಪಾತ್ರವನ್ನು ವಹಿಸಿದ್ದಾರೆ. 1916ರಲ್ಲಿ ಇಪ್ಪತ್ತೊಂದನೆಯ ಈಟಿ ಪಡೆಯವರು ವಾಯವ್ಯ ಪ್ರದೇಶದ ಮಹಮಂಡ್ ಎಂಬ ಜನರಲ್ಲಿ ಬಹಳ ಹಾವಳಿ ನಡೆಸಿದರು. ಎಸ್‌ಡ್ರಿಲಾನ್ ಎಂಬ ಬಯಲಿನಲ್ಲಿ ಮುಂದುವರಿಯುತ್ತಿದ್ದಾಗ ಲೆಜ್ಜುನ್ ಎಂಬ ಸ್ಥಳದಲ್ಲಿ ಭಾರತದ ಎರಡನೆಯ ಈಟಿ ಪಡೆ ತುರ್ಕಿಯವರನ್ನು ಓಡಿಸಿತು.

(ಎ.ಎನ್.ಎಸ್.ಎಂ.)

**ಈಟಿಗಾಳ:** ಪೂರ್ವಶಿಲಾಯುಗದ ಅಂತ್ಯಕಾಲದಲ್ಲಿ ಬಳಕೆಗೆ ಬಂದ ಬೇಟೆಯ ಸಾಧನ (ಹಾರ್ಪೂನ್). ಪ್ರಾಣಿಗಳ ಮೂಳೆ ಅಥವಾ ಜಿಂಕೆಯ ಕೊಂಬಿನಿಂದ ಮಾಡಿದ್ದು; ಮುಖ್ಯವಾಗಿ ಮೀನು, ತಿಮಿಂಗಿಲ ಮುಂತಾದ ಜಲಚರಗಳ ಬೇಟೆಗೆ ಇದನ್ನು ಉಪಯೋಗಿಸುತ್ತಿದ್ದರು. ಮುಂದುವರಿದ ಪೂರ್ವಶಿಲಾಯುಗದ ಮ್ಯಾಗ್ಡಲೀನಿಯನ್ ಸಂಸ್ಕೃತಿಯಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಈಟಿಯಂತೆ ಉದ್ದವಾಗಿದ್ದು ಹಿಂಬದಿಗೆ ತಿರುಚಿದ ಹಲ್ಲುಗಳನ್ನು ಹೊಂದಿದ್ದುದರಿಂದ ಪ್ರಾಣಿಗಳನ್ನು ಇದರಿಂದ ತಿವಿದಾಗ ಅವುಗಳ ನರಗಳನ್ನು ಇದು ಕೊಕ್ಕೆಯಂತೆ ಹಿಡಿದುಕೊಂಡು ಆ ಪ್ರಾಣಿಗಳು ತಪ್ಪಿಸಿಕೊಳ್ಳಲು ಅವಕಾಶ ಕೊಡುತ್ತಿರಲಿಲ್ಲ. ಅಜ಼ೀಲಿಯನ್ ಮುಂತಾದ ಮಧ್ಯ ಶಿಲಾಯುಗ ಸಂಸ್ಕೃತಿಗಳಲ್ಲಿ ಈಟಿಗಾಳದ ಉಪಯೋಗ ಹೆಚ್ಚಾಗಿತ್ತು. ಭಾರತದಲ್ಲಿ ಶಿಲಾಯುಗ ಸಂಸ್ಕೃತಿಗಳಲ್ಲಿ ಇದರ ಬಳಕೆ ಕಂಡುಬಂದಿಲ್ಲವಾದರೂ ಪ್ರ.ಶ.ಪೂ. 2ನೆಯ ಸಹಸ್ರಮಾನದ ಅಂತ್ಯದಲ್ಲಿ ಗಂಗಾನದೀಬಯಲಿನ ತಾಮ್ರಯುಗೀನ ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಮಧ್ಯಭಾಗದಲ್ಲಿ ಸೂಕ್ಷ್ಮಶಿಲಾಯುಧಗಳನ್ನು ಉಪಯೋಗಿಸುತ್ತಿದ್ದ ಪರ್ವತ ಗುಹಾವಾಸಿಗಳ ವರ್ಣಚಿತ್ರಗಳಲ್ಲೂ ಇವುಗಳ ಚಿತ್ರಣವಿದೆ.

(ಬಿ.ಕೆ.ಜಿ.)

**ಈಟಿಪಡೆ:** ಈಟಿಯ ಸಹಾಯದಿಂದ ಕಾದಾಡುವ ಸೈನಿಕರ ಸಮೂಹ (ಲಾನ್ಸರ್ಸ್). ಮೈಸೂರು ಲಾನ್ಸರ್ಸ್ ಎಂಬ ಹೆಸರಿನ ಈಟಿಪಡೆ ಒಂದು ಕಾಲದಲ್ಲಿ ಹೆಸರಾಂತ ದಳವಾಗಿತ್ತು. ಸೂಯೆಜ಼್ ಕಾಲುವೆ ಪ್ಯಾಲಿಸ್ಟೈನ್ ಮತ್ತು ಗಾಜ಼ ಎಂಬ ಸ್ಥಳಗಳಲ್ಲಿ ಈ ಪಡೆ ಕಾಳಗಕ್ಕೆ ಇಳಿದಿತ್ತು (1905). ಇಲ್ಲೆಲ್ಲ ಮೈಸೂರು ಲಾನ್ಸರುಗಳದ್ದೇ ಸೈನ್ಯದ ಮುಂಚೂಣಿ. ಈ ವೀರಯೋಧರ ಸಾಹಸವನ್ನು ಮೆಚ್ಚಿ ಆಗಿನ ಬ್ರಿಟಿಷ್ ಸಾರ್ವಭೌಮ ಸೈನ್ಯದ ವರಿಷ್ಠಾಧಿಕಾರಿ (ಕಮಾಂಡರ್–ಇನ್–ಚೀಫ್) ಪ್ರಶಂಸಾಪತ್ರವನ್ನು ತಾರು ಮೂಲಕ ಭಾರತದ ವೈಸ್‌ರಾಯರಿಗೆ ಕಳುಹಿಸಿದ್ದ. 1918ರಲ್ಲಿ ಅಲೆಪ್ಪೊ ಎಂಬ ಸ್ಥಳದ ಘೋರ ಕಾಳಗದಲ್ಲಿ ಅನೇಕ ಲ್ಯಾನ್ಸರುಗಳು ಗಾಯಗೊಂಡರು. ಹಲವರು ಮಡಿದರು. ಅವರ ಮಹಾಸೇವೆಯನ್ನು ಪ್ರಶಂಸಿಸಿ ಅಂದಿನ ಮೈಸೂರು ಸಂಸ್ಥಾನದ ಮಹಾರಾಜರು ಜಂಗಿ ಇನಾಂ ಎಂಬ ದೊಡ್ಡ ಪ್ರದೇಶವನ್ನೇ ಅವರಿಗೆ ಉಚಿತವಾಗಿ ಕೊಟ್ಟರು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಈ ಪಡೆಯವರನ್ನು ಭಾರತೀಯ ಸೈನ್ಯದಲ್ಲಿ ವಿಲೀನಗೊಳಿಸಲಾಯಿತು. ಮೈಸೂರು ಲಾನ್ಸರ್ಸ್ ಎಂಬ ಪ್ರತ್ಯೇಕ ಪಡೆ ಇಂದಿಲ್ಲ.

(ಎ.ಎನ್.ಎಸ್.ಎಂ.)

**ಈಡನ್:** ಬೈಬಲ್ಲಿನ ಹಳೆಯ ಒಡಂಬಡಿಕೆಯ ಪ್ರಕಾರ ಯೂಫ್ರಟಿಸ್ ನದೀ ಕಣಿವೆಯಲ್ಲಿನ ಒಂದು ಸ್ಥಳದ ಹೆಸರು. ದೈವನಿರ್ಮಿತವಾದ ಇಲ್ಲಿನ ತೋಟದಲ್ಲಿ ಆದಂ ಮತ್ತು ಈವ್ ವಾಸಿಸಿದರು. ದೇವರ ಆಣತಿಯನ್ನು ಉಲ್ಲಂಘಿಸಿ ಜ್ಞಾನವೃಕ್ಷದ ನಿಷಿದ್ಧ ಹಣ್ಣನ್ನು ತಿನ್ನಲಾಗಿ ಅವರನ್ನು ತೋಟದಿಂದ ಹೊರಹಾಕಲಾಯಿತು. ಈಡನ್ ಎಂದರೆ ಹೀಬ್ರೂ ಭಾಷೆಯಲ್ಲಿ ಸಂತೋಷ ಎಂದರ್ಥವಿದೆ. ಈಡನ್ನಿನಿಂದ ನದಿಯೊಂದು ದೇವರ ತೋಟಕ್ಕೆ ನೀರು ಒದಗಿಸಲು ಹರಿದುಹೋಯಿತೆಂದು ಜೆನಿಸಿಸ್‌ನಲ್ಲಿ ವರ್ಣಿಸಲಾಗಿದೆ. ಈ ನದಿಗೆ ನಾಲ್ಕು ಉಪನದಿಗಳು ಹುಟ್ಟಿಕೊಂಡವೆಂದೂ ಯೂಫ್ರಟಿಸ್ ಮತ್ತು ಟೈಗ್ರಿಸ್ ಅವುಗಳಲ್ಲಿ ಎರಡೆಂದೂ ಪೀಸಸ್, ಗಿಹೊನ್ ಎಂಬ ಉಳಿದೆರಡು ನದಿಗಳು ಇಂದಿನ ಆರಾಖ್ಸೊ ಮತ್ತು ಜಕ್ಕಾಗಳೆಂದೂ ಹೇಳಲಾಗಿದೆ. ಬೈಬಲ್ಲಿನ ಅನಂತರ ಬಂದ ಸಾಹಿತ್ಯಗಳಲ್ಲಿ ಈಡನ್ನಿನ ತೋಟವನ್ನು ಸ್ವರ್ಗವೆನ್ನಲಾಯಿತು. ಅಲ್ಲಿ ಸತ್ಯಧರ್ಮದಿಂದಿರುವವರ ಸಂತಾನ ಚಿರಂಜೀವಿಗಳಾಗಿ ವಾಸಿಸುತ್ತಾರೆಂಬ ಕಲ್ಪನೆಯೂ ಬೆಳೆಯಿತು.

ಯೆಹೂದಿಗಳ ಈ ಭಾವನೆ ಮುಂದುವರಿದು ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳಲ್ಲಿನ ಸ್ವರ್ಗಕಲ್ಪನೆಯಲ್ಲಿ ಲೀನವಾಯಿತು.

*

**ಈಡಿಪಸ್:** ಪ್ರಾಚೀನ ಗ್ರೀಕ್ ಪುರಾಣಗಳಲ್ಲಿನ ನಾಯಕಶಿಖಾಮಣಿಗಳಲ್ಲೊಬ್ಬ. ಇವನ ವೃತ್ತಾಂತ ಅತ್ಯಂತ ಭಯಾನಕವೂ ರೋಮಾಂಚಕಾರವೂ ಸಮಸ್ಯಾತ್ಮಕವೂ ಜಟಿಲವೂ ದುರಂತಮಯವೂ ಆಗಿದೆ. ಗ್ರೀಕ್ ಪುರಾಣದ ಪ್ರಕಾರ ಈಡಿಪಸ್ ಥೀಬ್ಸ್ ರಾಜ್ಯದ ದೊರೆ. ಗೊತ್ತಿಲ್ಲದೆ ತಂದೆಯನ್ನೇ ಕೊಂದು ತಾಯಿಯನ್ನೇ ಮದುವೆಯಾದ ವ್ಯಕ್ತಿ. ಈಡಿಪಸ್ ಥೀಬ್ಸ್‌ನ ದೊರೆಯಾಗಿ ಸಾಯುವತನಕ ರಾಜ್ಯಭಾರ ಮಾಡಿದನಾದರೂ ತಮ್ಮಿಬ್ಬರಿಗೂ ಇರುವ ಸಂಬಂಧದಲ್ಲಿನ ಸತ್ಯ ತಿಳಿದಾಗ ಅವನ ತಾಯಿ ಹೇಗೆ ನೇಣುಹಾಕಿಕೊಂಡಳು ಎಂಬುದನ್ನು ಹೋಮರ್ ಕವಿಯೇ ಉಲ್ಲೇಖಿಸುತ್ತಾನೆ.

ಗ್ರೀಸಿನ ದೊರೆ ಲಯಸ್‌ಗೆ, ಅವನ ಮಗನಿಂದಲೇ ಮರಣವೆಂದು ದಿವ್ಯವಾಣಿಯೊಂದು ಭವಿಷ್ಯ ನುಡಿದಿರುತ್ತದೆ. ಇದನ್ನು ತಿಳಿದ ರಾಜ, ತನಗೊಂದು ಮಗುವಾದಾಗ ಅದರ ಪಾದಗಳನ್ನು ಮೊನಚಾದ ಲೋಹದ ಮೊಳೆಯಿಂದ ಚುಚ್ಚಿ ಗಾಯಮಾಡಿ ಸಾಯಲು ಹೊರಹಾಕಿಬಿಡುತ್ತಾನೆ. ಮಗುವನ್ನು ಮತ್ತಾರೂ ಕಾಪಾಡಕೂಡದೆಂದೂ ಅದರ ದೆವ್ವ ಸಹ ಸುಳಿಯದಂತೆ ನೋಡಿಕೊಳ್ಳತಕ್ಕದ್ದೆಂದೂ ಕಟ್ಟಪ್ಪಣೆ ಮಾಡುತ್ತಾನೆ. ಆದರೆ ದೈವೇಚ್ಛೆ ಬೇರೊಂದು ತೆರನಾಗಿತ್ತು. ಕಾರಿಂಥಿನ ದೊರೆ ಪಾಲಿಬಸ್‌ನ ಕಡೆಯ ಕುರುಬನೊಬ್ಬ ಮಗುವನ್ನು ನೋಡಿ ಕನಿಕರಪಟ್ಟು, ಅದನ್ನು ತೆಗೆದುಕೊಂಡು ಹೋಗಿ ಪಾಲಿಬಸ್‌ನ ರಾಣಿಗೆ ಕೊಟ್ಟ. ಪಾಲಿಬಸ್ ಮತ್ತು ಅವನ ರಾಣಿ ಈ ಮಗುವನ್ನು ತಮ್ಮದೆಂದೇ ತಿಳಿದು ಸಾಕಿದರು. ಪಾದಗಳು ಊದಿಕೊಂಡಿದ್ದರಿಂದ, ಈ ಮಗುವಿಗೆ ಈಡಿಪಸ್ ಎಂಬ ಹೆಸರನ್ನು ಅವರೇ ಕೊಟ್ಟರು. ಈಡಿಪಸ್ ಬೆಳೆದು ಪ್ರಾಯಕ್ಕೆ ಬಂದಾಗ, ಅವನ ಸಂದೇಹಾಸ್ಪದ ವಂಶವೃತ್ತಾಂತದ ಬಗ್ಗೆ ಕುಡುಕನೊಬ್ಬ ಹಂಗಿಸಿದ. ಆಗ ತನ್ನ ನಿಜವಾದ ತಂದೆತಾಯಿಗಳನ್ನು ಪತ್ತೆ ಹಚ್ಚಲು ಈಡಿಪಸ್ ಗ್ರೀಸಿನ ಭವಿಷ್ಯವಾಣಿಯ ಸ್ಥಳವಾದ ಡೆಲ್ಫಿಗೆ ಬಂದ. ಅಲ್ಲಿನ ಗ್ರೀಕರ ಸೂರ್ಯದೇವತೆ ಅಪೊಲೊ ಮುಂದೆ ಈಡಿಪಸ್ ತನ್ನ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗುವ ಭವಿಷ್ಯವನ್ನು ತಿಳಿಸಿತು. ಈಡಿಪಸ್ ಕಾರಿಂಥಿಗೆ ವಾಪಸಾಗದೆ, ಥೀಬ್ಸ್ ಕಡೆಗೆ ಪ್ರಯಾಣ ಬೆಳೆಸಿದ.

ದಾರಿಯಲ್ಲಿ ಲಯಸ್‌ನನ್ನು ಸಂಧಿಸಿದ. ಇಬ್ಬರ ನಡುವೆ ಮಾತಿಗೆ ಮಾತು ಬೆಳೆಯಿತು. ದ್ವಂದ್ವಯುದ್ಧ ಮೊದಲಾಯಿತು. ಈಡಿಪಸ್ ಲಯಸ್‌ನನ್ನು ಕೊಂದುಹಾಕಿದ. ಆದರೆ ಸತ್ತವನು ತನ್ನ ತಂದೆ ಎಂಬುದು ಈಡಿಪಸ್‌ಗೆ ತಿಳಿಯದು. ಹೀಗೆ ತಂದೆಯನ್ನು ಕೊಂದು ಪ್ರಯಾಣ ಮುಂದುವರಿಸಿದಾಗ ಸ್ಫಿಂಕ್ಸ್ ರಾಕ್ಷಸಿಯಿಂದ ಥೀಬ್ಸ್‌ಗೆ ಆಗುತ್ತಿದ್ದ ಉಪದ್ರವದ ವಿಚಾರ ಈಡಿಪಸ್‌ಗೆ ಗೊತ್ತಾಯಿತು. ಗ್ರೀಕ್ ಪುರಾಣದ ಪ್ರಕಾರ ಸ್ಫಿಂಕ್ಸ್ ಒಂದು ಅದ್ಭುತ ಪ್ರಾಣಿ. ಅದಕ್ಕೆ ಹೆಂಗಸಿನ ತಲೆಯೂ ಸಿಂಹದ ಒಡಲೂ ರೆಕ್ಕೆಗಳೂ ಇದ್ದುವು. ತನ್ನೆಡೆಗೆ ಸುಳಿದವರಿಗೆಲ್ಲ ಬಿಡಿಸಲಾರದ ಒಗಟೊಂದನ್ನು ಒಡ್ಡಿ ಅವರನ್ನು ಈ ರಾಕ್ಷಸಿ ಕೊಲ್ಲುತ್ತಿತ್ತು. ಬೆಳಗ್ಗೆ ನಾಲ್ಕು ಕಾಲಿನಲ್ಲಿ, ಮಧ್ಯಾಹ್ನ ಎರಡು ಕಾಲಿನಲ್ಲಿ, ಸಂಜೆ ಮೂರು ಕಾಲಿನಲ್ಲಿ ನಡೆವ ಪ್ರಾಣಿ ಯಾವುದು? ಎಂಬುದೇ ಅದರ ಒಗಟು. ಮನುಷ್ಯನೆಂಬುದೇ ಅದರ ಅರ್ಥವಾದರೂ ಯಾರೂ ಆ ತನಕ ಉತ್ತರ ಹೇಳಿ ಜೀವಂತ ಪಾರಾದವರಿರಲಿಲ್ಲ. ಇಲ್ಲಿ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲಗಳಿಗೆ ಜೀವನದ ಮೂರು ಘಟ್ಟಗಳಾದ ಬಾಲ್ಯ, ಯೌವನ ಮತ್ತು ಮುಪ್ಪು ಎಂಬ ಅರ್ಥವಿದೆ. ಈಡಿಪಸ್ ಅಲ್ಲಿಗೆ ಬಂದು ಸ್ಫಿಂಕ್ಸ್ ರಾಕ್ಷಸಿ ಒಡ್ಡಿದ್ದ ಒಗಟನ್ನು ಬಿಡಿಸುತ್ತಾನೆ. ಇದರಿಂದ ಆ ರಾಕ್ಷಸಿ ತನ್ನನ್ನೇ ತಾನು ಕೊಂದುಕೊಂಡು

ಸತ್ತುಹೋಗುತ್ತದೆ. ಒಗಟನ್ನು ಬಿಡಿಸಿ, ಸ್ಫಿಂಕ್ಸ್ ರಕ್ಕಸಿಯನ್ನು ಕೊಂದವರಿಗೆ ಆ ರಾಜ್ಯ ಮತ್ತು ಅದರ ರಾಣಿ ಉಡುಗೊರೆಯಾಗಬೇಕೆಂದು ಮೊದಲೇ ನಿಗದಿಯಾಗಿರುತ್ತದೆ. ಈಡಿಪಸ್ ಥೀಬ್ಸ್‌ನ ಸಿಂಹಾಸನವನ್ನೂ ವಿಧವೆ ರಾಣಿ–ಅರ್ಥಾತ್ ತಾಯಿ–ಇಯೊಕಾಸ್ಟೆಯನ್ನೂ ಬಹುಮಾನವಾಗಿ ಪಡೆಯುತ್ತಾನೆ.

ಈಡಿಪಸ್ ಮತ್ತು ಇಯೊಕಾಸ್ಟೆ ಬಹಳ ಕಾಲ ಸಹಬಾಳ್ವೆ ನಡೆಸಿದರು. ಅವರಿಗೆ ಈಟಿಯೊಕ್ಲಿಸ್, ಪಾಲಿನೀಸಸ್, ಅಂತಿಗೊನೆ ಮತ್ತು ಇಸ್ಮೇನೆ ಎಂಬ ನಾಲ್ವರು ಮಕ್ಕಳೂ ಆದರು. ಕಡೆಗೆ ಒಂದು ಸಾರಿ ಆ ರಾಜ್ಯಕ್ಕೆ ಕ್ಷಾಮ ತಲೆದೋರಿತೆಂದೂ ಅದಕ್ಕೆ ಇವರಿಬ್ಬರ ಅಕ್ರಮ ಸಂಬಂಧದ ಪಾಪವೇ ಕಾರಣವೆಂದೂ ಭವಿಷ್ಯವಾಣಿ ಹೇಳಿತೆಂದು ಪುರಾಣ ಕಥೆಯ ಸಾಮಾನ್ಯ ಪಾಠ ತಿಳಿಸುತ್ತದೆ. ಇದರಿಂದ ಸತ್ಯ ಬೆಳಕು ಕಂಡಿತು. ಆಗ ಇಯೊಕಾಸ್ಟೆ ಆತ್ಮಹತ್ಯೆ ಮಾಡಿಕೊಂಡಳು. ಈಡಿಪಸ್ ಉದ್ವಿಗ್ನನಾಗಿ ಪಶ್ಚಾತ್ತಾಪರೂಪವಾಗಿ ಕಣ್ಣುಕಿತ್ತುಕೊಂಡ. ಆಮೇಲೆ ಈಡಿಪಸ್ ತನ್ನ ಭಾವನನ್ನು ರಾಜಪ್ರತಿನಿಧಿಯಾಗಿ ನೇಮಿಸಿ, ತನ್ನಿಬ್ಬರು ಮಕ್ಕಳು ಅಂತಿಗೊನೆ ಮತ್ತು ಇಸ್ಮೇನೆಯರೊಡನೆ ದೇಶಭ್ರಷ್ಟನಾದಂತೆ ತಿಳಿದುಬರುತ್ತದೆ. ಕಡೆಗೆ ಅಥೆನ್ಸಿನ ಸಮೀಪದ ಕೊಲೊನಸ್‌ನಲ್ಲಿ ಈಡಿಪಸ್‌ನ ಅಂತ್ಯ ಸಂಭವಿಸಿತೆಂದೂ ಭೂಮಿ ಬಾಯಿಬಿಟ್ಟು ಅವನನ್ನು ಒಳಕೊಂಡಿತೆಂದೂ ಪ್ರತೀತಿ. ಆಮೇಲೆ ಈಡಿಪಸ್ ಆ ಪ್ರದೇಶದ ರಕ್ಷಕವೀರನಾದನೆಂದೂ ಕಥೆ ಇದೆ.

ಈಡಿಪಸ್ ಐತಿಹ್ಯದಲ್ಲಿ ಚಾರಿತ್ರಿಕ ಸತ್ಯಸಂಗತಿ ಇರುವುದಾದರೂ ಜನಪದ ಕಥಾಂಶಗಳಿಂದ ಅದನ್ನು ಬೇರ್ಪಡಿಸಲು ಸಾಧ್ಯವಾಗುತ್ತಿಲ್ಲ. ಆಲ್ಬೇನಿಯ, ಫಿನ್ಲೆಂಡ್, ಸೈಪ್ರಸ್, ಗ್ರೀಸ್ ಮೊದಲಾದ ದೇಶಗಳಲ್ಲಿ ಅಪ್ಪಟ ಈಡಿಪಸ್ ಜನಪದ ಸಂಪ್ರದಾಯವನ್ನು ಕಾಣಬಹುದು. ಮಧ್ಯಯುಗದ ಕೆಲವು ಕೃತಿಗಳಲ್ಲಿ ಇದರ ಸ್ಥಳಾಂತರೀಕರಣ ನಡೆದಿರುವುದೂ ಉಂಟು. ಈಡಿಪಸ್ ಪುರಾತನ ಕಥೆಯಲ್ಲಿ ನಾಟಕೀಯ ತೀವ್ರತೆ ಬಹುವಾಗಿದ್ದು ಪುರಾತನ ಕಲೆಯಲ್ಲಿ ಈ ಸಂಗತಿ ಚಿತ್ರಿತವಾಗಿರುವುದು ಮಾತ್ರವಲ್ಲದೆ, ಕಾರ್ನೈಲ್ಲೆ, ಡ್ರೈಡನ್, ವಾಲ್ಟೇರರನ್ನೂ ಸೇರಿಸಿಕೊಂಡು ಹಲವು ನಾಟಕಕಾರರಿಗೆ ಬಹುಕಾಲ ನಾಟಕದ ವಸ್ತುವಾಗಿತ್ತು ಎಂಬುದು ತಿಳಿದ ಸಂಗತಿಯೇ ಆಗಿದೆ. ಇಪ್ಪತ್ತನೆಯ ಶತಮಾನದಲ್ಲೂ ಇದು ವಿಶೇಷ ಆಕರ್ಷಣೆಗೆ ಗುರಿಯಾಗಿದ್ದು, ಹಲವು ಲೇಖಕರಿಗೆ ಸ್ಫೂರ್ತಿನೀಡಿರುವುದು ಉಲ್ಲೇಖನೀಯ.

ಫ್ರಾಯ್ಡ್ ತನ್ನ ಸಿದ್ಧಾಂತವೊಂದಕ್ಕೆ ಈ ಕಥೆಯನ್ನು ಆಧಾರ ಮಾಡಿಕೊಂಡು ಅದಕ್ಕೆ ಈಡಿಪಸ್ ಕಾಂಪ್ಲೆಕ್ಸ್ ಎಂದು ಹೆಸರಿಟ್ಟಿದ್ದು ಗಮನಾರ್ಹ ಅಂಶವಾಗಿದೆ.

ಈಡಿಪಸ್ ಕಥೆಯಲ್ಲಿ ಹಲವಾರು ಪಾಠಾಂತರಗಳು ಕಾಣಬರುತ್ತವೆ. ಜನಪದ ಕಥೆಯಲ್ಲಿ ರೂಪಾಂತರ ಸಾಧ್ಯತೆ ಒಂದು ಸಾಮಾನ್ಯ ಲಕ್ಷಣ. ಈ ಕಥೆ ಇದಕ್ಕೆ ಹೊರತಾಗಿಲ್ಲ. ಈಡಿಪಸ್ ಕಥೆಯಲ್ಲಿ ಹಲವು ಸಂಪ್ರದಾಯಗಳಿದ್ದು, ಒಂದೊಂದೂ ವಿಶೇಷ ಸಂಗತಿಯನ್ನು ಆಸ್ಫೋಟಿಸುತ್ತದೆ. ಈಗ ಅಂಥ ಕೆಲವನ್ನು ಗುರುತಿಸಬಹುದು. ಇಯೊಕಾಸ್ಟೆಯ ಆತ್ಮಹತ್ಯೆಯಾಗಲಿ, ಈಡಿಪಸ್‌ನ ದೇಶಭ್ರಷ್ಟತೆಯಾಗಲಿ ಕೆಲವು ಪಾಠಾಂತರಗಳ ಪ್ರಕಾರ ಘಟನೆಯ ಸಮೀಪ ಕಾಲದಲ್ಲಿ ನಡೆದಿರಬೇಕೆಂದು ತಿಳಿದುಬರುತ್ತದೆ. ಆದರೆ ಇನ್ನು ಕೆಲವಲ್ಲಿ ಈ ಎರಡು ಘಟನೆಗಳಿಗೂ ನಡುವೆ ಕೆಲವು ವರ್ಷಗಳೇ ಕಳೆದುಹೋಗಿರಬೇಕೆಂದು ಗೊತ್ತಾಗುತ್ತದೆ. ಈಡಿಪಸನ ನಾಲ್ಕುಜನ ಮಕ್ಕಳು ಅವನ ಮೊದಲ ಹೆಂಡತಿ ಅರ್ಥಾತ್ ತಾಯಿ ಇಯೊಕಾಸ್ಟೆಗೆ ಹುಟ್ಟಿದವರೊ ಅಥವಾ ಅವನ ಎರಡನೆಯ ಹೆಂಡತಿ ಈರಿಗನೇಯಾ ಅಥವಾ ಅಸ್ಟಿಮಿಡುಸಿಗೆ ಹುಟ್ಟಿದವರೊ ತಿಳಿಯದು. ಇದರ ಇನ್ನೊಂದು ತೊಡಕೆಂದರೆ ಕಥೆಯ ಅಂತ್ಯವನ್ನು ಕುರಿತದ್ದು. ಅಥೇನಿಯದ ಲೇಖಕರು ಅಟಿಕದಲ್ಲಿ ಈ ಕಥೆ ಕೊನೆಗೊಂಡಿತೆಂದು ಹೇಳಿ ಸಮಸ್ಯೆಯನ್ನು ಮತ್ತಷ್ಟು ತೊಡಕುಮಾಡಿದ್ದಾರೆ. ಕುರುಡ ಈಡಿಪಸನನ್ನು ಭೂಮಿ ಒಳಗೊಂಡ ವಿಚಾರದ ಬಗ್ಗೆ ಇನ್ನೊಂದು ಸಂಪ್ರದಾಯ ಪ್ರಚಲಿತವಾಗಿದೆ. ಥೀಬ್ಸಿನ ದನಗಳನ್ನು ದಾಳಿಕಾರರಿಂದ ರಕ್ಷಿಸುವಾಗ ಪ್ರಾಯಶಃ ನಡೆದ ಯುದ್ಧದಲ್ಲಿ ಈಡಿಪಸ್ ಮಡಿದಿರಬೇಕೆಂಬುದೇ ಅದು. ಇಷ್ಟಾದರೂ ಅವನ ಶವಸಂಸ್ಕಾರ ಥೀಬ್ಸಿನಲ್ಲಿ ನಡೆಯದೆ ಬೇರೆ ಕಡೆ ನಡೆದಂತೆ ತಿಳಿದುಬರುತ್ತದೆ. ಅವನ ಸಮಾಧಿಯ ಪರಿಸರದಲ್ಲಿ ವಾಸಿಸಿದರೆ ವಿಪತ್ತು ಬರುತ್ತದೆ ಎಂಬುದೇ ಆ ಜನ ಅವನ ಶವಸಂಸ್ಕಾರ ಸ್ಥಳಕ್ಕೆ ಪ್ರವೇಶಿಸದಿರಲು ಕಾರಣವಾಗಿರಬೇಕು. ಕಡೆಗೆ ದೇವತೆಯ ಆಜ್ಞೆಯ ಪ್ರಕಾರವಾಗಿ ಎಟಿಯೊನಸನ ಡೆಮೆಟರ್ ಎಂಬ ಪವಿತ್ರಸ್ಥಳದಲ್ಲಿ ಆತನ ಸಮಾಧಿಯಾದಂತೆ ಕಥೆಯೊಂದು ತಿಳಿಸುತ್ತದೆ. ಪ್ರಾಚೀನ ಜಗತ್ತಿನಲ್ಲಿ ಈ ಸ್ಥಳ ತುಂಬ ಪ್ರಸಿದ್ಧಿ ಪಡೆದುಕೊಂಡಿತ್ತಂತೆ. ಇಲ್ಲಿ ಗಮನಿಸಬಹುದಾದ ಮತ್ತೊಂದು ವಿಚಾರವೆಂದರೆ, ಥೀಬ್ಸಿನ ರಾಜರು ದುರಂತತೆಯ ಶಿಕ್ಷೆಗೆ ಗುರಿಯಾಗಬೇಕಾಗಿ ಬಂದುದಕ್ಕೆ ಪೆಲೋಪ್ಸ್ ಕೊಟ್ಟ ಶಾಪವೂ ಒಂದಾಗಿದೆ ಎಂಬುದು. ಇಂಥ ಹಲವಾರು ಸಂಗತಿಗಳಿಂದ ಈಡಿಪಸ್ ಕಥೆ ಅತ್ಯಂತ ಕ್ಲಿಷ್ಟವಾಗಿದೆ. ಈ ಎಲ್ಲ ವಿಷಯಗಳ ಅಧ್ಯಯನದಿಂದ ಇಷ್ಟನ್ನು ಮಾತ್ರ ಹೇಳಬಹುದು. ಪುರಾಣಕಾವ್ಯಗಳ ಆವರ್ತದಲ್ಲಿ ಸಿಕ್ಕಿ ಈ ಕಥೆ ಪ್ರಾರಂಭದಲ್ಲಿ ಒಂದು ರೂಪ ತಾಳಿದುದು ನಿಸ್ಸಂಶಯವಾದರೂ ಹೋಮರನ ಅನಂತರದ ಸಂಪ್ರದಾಯದಲ್ಲಿ, ಬಹುತೇಕವಾಗಿ ನಮಗೆ ಗೊತ್ತಿರುವ ಸೋಫಕ್ಲೀಸನ ಈಡಿಪಸ್ ರೆಕ್ಸ್ ಮತ್ತು ಈಡಿಪಸ್ ಕಾಲೊನಿಯಸುಗಳಿಂದ ಕಥೆಯಲ್ಲಿ ಭಿನ್ನರೂಪಗಳು ಕಾಣಿಸಿಕೊಂಡಿರಬೇಕು.

ಈಡಿಪಸ್ ಕಥೆ ಹಲವು ಆಶಯಗಳಿಂದ ಘಟಿತವಾದದ್ದು. ಭವಿಷ್ಯವಾಣಿ, ಮಗುವಿನ ಪಾದಗಳನ್ನು ಇರಿಯುವುದು, ತ್ಯಜಿಸಿದ ಮಗುವನ್ನು ಬೇರೊಬ್ಬರು ಸಾಕಿಕೊಳ್ಳುವುದು, ತಂದೆಯನ್ನು ಕೊಲ್ಲುವುದು, ಇಯೊಕಾಸ್ಟೆಯ ಆತ್ಮಹತ್ಯೆ, ಈಡಿಪಸ್ ಕಣ್ಣು ಕಳೆದುಕೊಂಡು ದೇಶಭ್ರಷ್ಟನಾಗುವುದು–ಭೂಮಿ ಒಳಗೊಳ್ಳುವುದು–ಇವೇ ಆ ಆಶಯಗಳು. ಈ ಮೂಲ ಆಶಯಗಳೆಲ್ಲ ಪ್ರಪಂಚಾದ್ಯಂತ ಒಂದಲ್ಲ ಒಂದು ರೀತಿಯಲ್ಲಿ ವಿತರಣೆಗೊಂಡಿವೆ. ಈಡಿಪಸ್‌ನನ್ನು ಭೂಮಿ ಒಳಗೊಂಡಿದ್ದರ ಜೊತೆಯಲ್ಲಿ ಸೀತೆಯನ್ನು ಭೂಮಿ ಬಾಯಿಬಿಟ್ಟು ಸೇರಿಸಿಕೊಂಡುದನ್ನು ಹೋಲಿಸಬಹುದು. ಇಲ್ಲಿನ ಕಥನ ಆಶಯಗಳಲ್ಲಿ ಮನಸೆಳೆವ ಮತ್ತೊಂದೆಂದರೆ ಸ್ಫಿಂಕ್ಸ್ ರಕ್ಕಸಿಯ ಒಗಟು. ಈಡಿಪಸ್ ಕಥೆಯ ಈ ಸ್ಫಿಂಕ್ಸ್ ಘಟನೆ ಮಾರ್ಷನ್ ಮತ್ತು ರಾಕ್ಷಸ ಸಂಬಂಧದ ಕಥನವರ್ಗಕ್ಕೆ ಸೇರುತ್ತದೆಂದು ವಿದ್ವಾಂಸರ ಅಭಿಪ್ರಾಯ. ಸ್ಫಿಂಕ್ಸ್ ರಾಕ್ಷಸಿಯ ಒಗಟು ಜಗತ್ತಿನ ಪ್ರಾಚೀನ ರೂಪದ ಒಗಟುಗಳಲ್ಲಿ ಒಂದಾಗಿದೆ. ಇದು ಸ್ಪರ್ಧಾ ಒಗಟಿಗೂ ನಿದರ್ಶನವಾಗುತ್ತವೆ. ಸ್ಫಿಂಕ್ಸ್ ಕಥೆಗೆ ಸಮಾನವಾದ ಒಗಟು ಕಥೆಗಳು ಎಲ್ಲ ಕಡೆಯಲ್ಲೂ ದೊರೆಯುತ್ತವೆ. ಭಾರತದ ವರರುಚಿ ಮತ್ತು ರಾಕ್ಷಸ, ಯಕ್ಷಪ್ರಶ್ನೆ, ವೇತಾಳಪಂಚವಿಂಶತಿ ಮೊದಲಾದುವನ್ನು ನಿದರ್ಶನಗಳಾಗಿ ಕೊಡಬಹುದು. ಹೀಗೆ ಒಂದಕ್ಕಿಂತ ಹೆಚ್ಚು ಆಶಯಗಳು ಇದರಲ್ಲಿರುವುರಿಂದ, ರಚನೆಯ ದೃಷ್ಟಿಯಿಂದ ಇದನ್ನು ಸಂಕೀರ್ಣ ಕಥಾವರ್ಗಕ್ಕೆ ಸೇರಿಸಬಹುದಾಗಿದೆ.

ಒಟ್ಟಿನಲ್ಲಿ ಈಡಿಪಸ್ ಕಥೆ ಜಗತ್ತಿನ ಹೆಚ್ಚು ಪ್ರಸಾರವುಳ್ಳ ಕಥೆಗಳಲ್ಲಿ ಒಂದಾಗಿದೆ. ಇದು ಜನಪದ ಕಥೆಯ ಆಶಯಗಳಿಂದ ರೂಪಗೊಂಡಿದ್ದು. ಥೀಬ್ಸಿನ ಪ್ರಧಾನರನ್ನು ಇದು ಆಕರ್ಷಿಸಿರಬಹುದು ಅಥವಾ ಜನಪದ ಕಥನ ಸಮುದಾಯವನ್ನು ಸ್ವೀಕರಿಸಿ ಗ್ರೀಕರು ಮಿಥ್ಯೇತಿಹಾಸವೊಂದನ್ನು ಸೃಷ್ಟಿಸಿಕೊಂಡಿರಬಹುದು. ಅಂತೂ ಇದರಲ್ಲಿ ಚರಿತ್ರೆಯ ಅಂಶಗಳು ಎಷ್ಟಿವೆಯೊ ಅಥವಾ ಏನೂ ಇಲ್ಲವೊ ಗೊತ್ತಿಲ್ಲ. ವಾಕ್ ಸಂಪ್ರದಾಯದಲ್ಲಿ ಹರಿದು ಪೂರ್ಣ ಜನಪದ ಎನ್ನಿಸುವಷ್ಟರಮಟ್ಟಿಗೆ ಇದು ರೂಪಾಂತರಗೊಂಡಿದೆ ಎಂಬುದಂತೂ ಸತ್ಯವಾದ ಮಾತು. (ಆರ್.ಜಿ.)

**ಈಡಿಪಸ್ ಕಾಂಪ್ಲೆಕ್ಸ್:** ಮನೋವಿಶ್ಲೇಷಣಶಾಸ್ತ್ರದ ಸಂಸ್ಥಾಪಕ ವಿಯೆನ್ನದ ಮನೋವೈದ್ಯ ಸಿಗ್ಮಂಡ್ ಫ್ರಾಯ್ಡನ ಕಲ್ಪನೆಗಳಲ್ಲಿ ಒಂದು, ತಂದೆಯನ್ನು ಕೊಂದು, ತಾಯಿಯನ್ನು ಮದುವೆಯಾಗಿ, ಆಕೆಯಲ್ಲಿ ಮಕ್ಕಳನ್ನು ಪಡೆದ ಈಡಿಪಸ್ ದೊರೆಯ ಕಥೆ ಇಡೀ ಮನುಷ್ಯವರ್ಗದ ಮೂಲಭೂತವಾದ ಪಾಪವನ್ನು ಮತ್ತು ಮನುಷ್ಯನ ಬೆಳೆವಣಿಗೆಯಲ್ಲಿನ ಒಂದು ಸಾರ್ವತ್ರಿಕವಾದ ಅವಸ್ಥೆಯನ್ನು ಸೂಚಿಸುತ್ತದೆಯೆಂದು ಫ್ರಾಯ್ಡನ ವಾದ. ಈಡಿಪಸ್ ದೊರೆ ತನಗೆ ತಿಳಿಯದೇ ಈ ಪಾಪವನ್ನು ಮಾಡಿದ, ಆಮೇಲೆ ನಿಜಾಂಶ ಗೊತ್ತಾದಾಗ ಅಪಾರವಾದ ದುಃಖ, ಪಶ್ಚಾತ್ತಾಪಗಳಲ್ಲಿ ತನ್ನ ಕಣ್ಣುಗಳನ್ನೇ ಕಿತ್ತುಕೊಂಡ ಎಂಬುದು ಮುಖ್ಯವಲ್ಲ. ತಾಯಿಯೊಡನೆ ಆತ ಲೈಂಗಿಕ ಸಂಬಂಧ ಬೆಳೆಸಿದ ಎಂಬುದು ಸಾಂಕೇತಿಕವಾಗಿ ಮನುಷ್ಯನ ಸುಪ್ತಬಯಕೆಯನ್ನು ಅಭಿವ್ಯಕ್ತಗೊಳಿಸುತ್ತದೆ ಎಂಬುದು ಫ್ರಾಯ್ಡನ ಅಭಿಮತ.

ಈಡಿಪಸ್ ಕಾಂಪ್ಲೆಕ್ಸ್ ಎಂಬುದು ಎಲ್ಲ ಮಾನವರಿಗೂ ಸರ್ವ ಸಾಮಾನ್ಯವಾದ ಬಾಲ್ಯಾವಸ್ಥೆಯ ಮಾನಸಿಕ ಬೆಳೆವಣಿಗೆಯ ಹಂತಗಳ ಪೈಕಿ ಒಂದು. ಫ್ರಾಯ್ಡನ ಪ್ರಕಾರ, ಹುಟ್ಟಿನಿಂದ ಸಾವಿನವರೆಗೆ ಮನುಷ್ಯನ ಮಾನಸಿಕ ಬೆಳೆವಣಿಗೆ ಎಂದರೆ ವಾಸ್ತವವಾಗಿ, ಲಿಬಿಡೊ ಅಥವಾ ಆದಿಕಾಮದ ಬೆಳೆವಣಿಗೆ–ಆಗುತ್ತಲೇ ಇರುತ್ತದೆ. ಕಾಮವೆಂಬುದು ಬೆಳೆದ ಗಂಡು ಹೆಣ್ಣುಗಳ ನಡುವಿನ ಲೈಂಗಿಕ ವ್ಯಾಪಾರ ಮಾತ್ರವಲ್ಲ. ಜೀವನದ ಹುಟ್ಟು, ಬೆಳೆವಣಿಗೆ, ಪೋಷಣೆ, ಅಭಿವೃದ್ಧಿ, ಸುಖ, ಸಂತೋಷ, ಔನ್ನತ್ಯ ಇವೆಲ್ಲಕ್ಕೂ ಅನುವಾಗುವ ಎಲ್ಲ ಬಗೆಯ ಮಾನಸಿಕ, ದೈಹಿಕ ಚಟುವಟಿಕೆಗಳನ್ನೂ ಫ್ರಾಯ್ಡ್ ಲಿಬಿಡೊ ಎಂಬ ಕಲ್ಪನೆಗೆ ಒಗ್ಗಿಸುತ್ತಾನೆ. ಅಲ್ಲದೆ, ಕಾಮವೆಂಬುದು ತಾರುಣ್ಯದ ಹೊತ್ತಿಗೆ ಮಾತ್ರ ತಲೆದೋರುವಂಥದಲ್ಲ; ಅದು ಹುಟ್ಟಿದಂದಿನಿಂದಲೇ ಜಾಗೃತವಾಗಿ ಬೇರೆ ಬೇರೆ ಹಂತಗಳನ್ನು ದಾಟಿ ಬೆಳೆದು ಕೊನೆಗಾಣುವ ಪ್ರವೃತ್ತಿ. ಆದ್ದರಿಂದ, ಸಾಮಾನ್ಯವಾಗಿ ಭಾವಿಸಲಾಗುವಂತೆ ಮಕ್ಕಳು ಲೈಂಗಿಕದೃಷ್ಟಿಯಿಂದ ಮುಗ್ಧರಲ್ಲ; ಅವರಲ್ಲೂ ಲೈಂಗಿಕ ಚಟುವಟಿಕೆಗಳು (ಜನನೇಂದ್ರಿಯಗಳೊಡನೆ ಅವರು ಆಡಿಕೊಳ್ಳುವ ಆಟ ಇತ್ಯಾದಿ) ಇದ್ದೇ ಇರುತ್ತವೆ. ಲಿಬಿಡೊ ಈ ರೀತಿ ಹುಟ್ಟಿದಂದಿನಿಂದ ಬೆಳೆದು ಬದಲಾಗುವ ಅನೇಕ ಹಂತಗಳ ಪೈಕಿ ಈಡಿಪಸ್ ಕಾಂಪ್ಲೆಕ್ಸ್ ಒಂದು. ಕೆಲವರಲ್ಲಿ ಇದು ಮುಂದೆ ಮಾನಸಿಕ ಅಸ್ವಾಸ್ಥ್ಯಕ್ಕೆ ಎಡೆಗೊಡಬಹುದಾದರೂ ಸಾಮಾನ್ಯವಾಗಿ ಇದು ಅನಾರೋಗ್ಯವಾದ ಸೂಚನೆಯಲ್ಲ, ತೀರ ಸ್ವಾಭಾವಿಕವಾದದ್ದು, ಪ್ರಾಣಿಗಳಲ್ಲಿ ಇದು ಸಹಜ. ಗಂಡುಕರು ತಾಯ ಮೇಲೆ ಹಾರಹೋಗುವುದು ಸಾಮಾನ್ಯ.

ಲಿಬಿಡೊದ ಬೆಳೆವಣಿಗೆ ಮೊದಲಾಗುವುದು ಮಗುವಿನ ತುಟಿ ಮತ್ತು ನಾಲಗೆಯ ಭಾಗಗಳಲ್ಲಿ. ಏಕೆಂದರೆ ಮಗು ಮೊಟ್ಟಮೊದಲು ತನ್ನಿಂದ ಹೊರತಾದ ವಸ್ತುವೊಂದರೊಡನೆ ಬೆಳೆಸುವ ಸಂಪರ್ಕವೆಂದರೆ ತಾಯಿಯ ಮೊಲೆಯೊಡನೆ. ಲಿಬಿಡೊ ಬೆಳೆವಣಿಗೆಯ ಎರಡನೆಯ ಹಂತವೆಂದರೆ ಗುದಸ್ಥಿತಿ. ಅಂದರೆ ಕಾಮಪ್ರವೃತ್ತಿ ಈ ಅವಸ್ಥೆಯಲ್ಲಿ ದೇಹದ ಆ ಭಾಗದಲ್ಲಿ ಆವರಿಸಿಕೊಂಡಿರುತ್ತದೆ. ಮೂತ್ರಾಂಗದಿಂದ ಮೊದಲಾಗಿ ಜನನಾಂಗದಲ್ಲಿ ಲಿಬಿಡೊ ಕೇಂದ್ರೀಕೃತವಾಗುವುದೇ ಮೂರನೆಯ ಈಡಿಪಸ್ ಅವಸ್ಥೆ. ಗಂಡುಮಕ್ಕಳಲ್ಲಿ ಈಡಿಪಸ್ ಅವಸ್ಥೆ ಸುಮಾರು ನಾಲ್ಕನೆಯ ವರ್ಷದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಅವಸ್ಥೆಯಲ್ಲಿ ಗಂಡುಮಗು ತನ್ನ ತಂದೆಯನ್ನು ಆಚೆ ತಳ್ಳಿ, ಆತನ ಸ್ಥಾನವನ್ನು ಆಕ್ರಮಿಸಿ, ತಾಯಿಯೊಡನೆ ಲೈಂಗಿಕ ಸಂಬಂಧ ಬೆಳೆಸಬೇಕೆಂಬ ತೀವ್ರವಾದ ಬಯಕೆ ತೋರುವುದೇ ಈಡಿಪಸ್ ಕಾಂಪ್ಲೆಕ್ಸ್. ಮಗುವಿನ ದೃಷ್ಟಿಯಲ್ಲಿ ಅದರ ಬಯಕೆಯ ಪೂರೈಕೆಗೆ ಅಡ್ಡ ನಿಂತಿರುವವ ತಂದೆ; ಆದ್ದರಿಂದ ತಾಯಿಯೊಡನೆ ಆತ ವಹಿಸುವ ಸ್ವಾತಂತ್ರ್ಯದಿಂದ ಮಗುವಿಗೆ ತಂದೆಯ

ಮೇಲೆ ವಿಪರೀತವಾದ ದ್ವೇಷಭಾವವಿರುತ್ತದೆ. ಹೀಗಾಗಿ, ತಂದೆಯನ್ನು ನಾಶಮಾಡಿಬಿಡಬೇಕೆಂಬ ಆಸೆ ಹುಟ್ಟಿದರೂ ಅಚ್ಚರಿಯಲ್ಲ. ಇದೇ ಅವಸ್ಥೆಯಲ್ಲಿ ಮಕ್ಕಳು ತಮ್ಮ ಜನನಾಂಗಗಳೊಡನೆ ಆಡುವುದರ ಮೂಲಕ ಸಾಕಷ್ಟು ಸುಖವನ್ನು ಅನುಭವಿಸುತ್ತಾರೆ; ಅನೇಕ ವೇಳೆ ಅವರು ಬಾಲ್ಯದಲ್ಲಿ ಮುಷ್ಟಿಮೈಥುನದಲ್ಲೂ ತೊಡಗುತ್ತಾರೆ.

ಆದರೆ, ಅದೇ ವೇಳೆ, ತಾಯಿಯೊಡನೆ ಸಂಪರ್ಕ ಬೆಳೆಸಬೇಕೆಂಬ ತನ್ನ ಬಯಕೆ ಕೆಟ್ಟದೆಂಬುದೂ ತಂದೆಗೆ ಇದು ಗೊತ್ತಾದರೆ ಆತ ತನ್ನ ಜನನಾಂಗವನ್ನು ಕತ್ತರಿಸಿ ಹಾಕಬಹುದು, ಇಲ್ಲವೆ ಹೇಗಾದರೂ ತನ್ನ ಪುಂಸ್ತ್ವವನ್ನು ನಾಶಮಾಡಬಹುದು ಎಂಬ ಅತಿಯಾದ ಭೀತಿಗೂ ಹುಡುಗ ಒಳಗಾಗಿರುತ್ತಾನೆ. ಕೊನೆಗೆ ಈ ಭೀತಿಯೇ ಅವನನ್ನು ಅನೈತಿಕ ಬಯಕೆಯಿಂದ ಮುಕ್ತನನ್ನಾಗಿ ಮಾಡುತ್ತದೆ. ವಾಸ್ತವವಾಗಿ, ಈ ಭೀತಿ ಅವನ ಈಡಿಪಸ್ ಕಾಂಪ್ಲೆಕ್ಸನ್ನು ಅಚೇತನಕ್ಕೆ ತಳ್ಳುತ್ತದೆ. ಪರಿಣಾಮವಾಗಿ ಅದು ಪ್ರಜ್ಞೆಯಿಂದ ಪೂರ್ತಿಯಾಗಿ ಮರೆಯಾಗುತ್ತದೆ. ಹಾಗಾದ ಮೇಲೆ ಮಗುವಿನಲ್ಲಿ ತಂದೆಯ ಸ್ಥಾನವನ್ನು ಆಕ್ರಮಿಸಬೇಕೆಂಬ ಬಯಕೆಯ ಬದಲು ತಂದೆಯಂತೆಯೇ ತಾನು ಬೆಳೆದು ದೊಡ್ಡವನಾಗಬೇಕೆಂಬ ಬಯಕೆ ಹುಟ್ಟಿಕೊಳ್ಳುತ್ತದೆ. ಆಗ ಲಿಬಿಡೊ ಈಡಿಪಸ್ ಅವಸ್ಥೆಯನ್ನು ಬಿಟ್ಟು ಮುಂದಿನ ಅವಸ್ಥೆಗೆ ಹೋಗುತ್ತದೆ. ಲಿಬಿಡೊದ ಬೆಳವಣಿಗೆ ಸುಗಮವಾಗುತ್ತದೆ. ಬೆಳವಣಿಗೆಯ ಮುಂದಿನ ಅವಸ್ಥೆಯೆಂದರೆ ಸುಪ್ತಕಾಮಸ್ಥಿತಿ. ಆರು ವರ್ಷದಿಂದ ತಾರುಣ್ಯದವರೆಗೆ ಇದರ ಅವಧಿ. ಆಮೇಲಿನದು ಪ್ರಬುದ್ಧ ಲೈಂಗಿಕಜೀವನಸ್ಥಿತಿ.

ಈಡಿಪಸ್ ಕಾಂಪ್ಲೆಕ್ಸ್ ಗಂಡುಮಕ್ಕಳಲ್ಲಿ ಕಾಣಿಸಿಕೊಳ್ಳುವ ಪ್ರತಿಕ್ರಿಯೆಯಾದರೂ ಇದೇ ರೀತಿಯ ಪ್ರತಿಕ್ರಿಯೆ ಹೆಣ್ಣುಮಕ್ಕಳ ಬೆಳವಣಿಗೆಯಲ್ಲೂ ಉಂಟಾಗುತ್ತದೆ. ಎಲೆಕ್ಟ್ರ ಕಾಂಪ್ಲೆಕ್ಸ್ ಎಂದು ಕರೆಸಿಕೊಳ್ಳುವ ಈ ಪ್ರತಿಕ್ರಿಯೆಯ ಮುಖ್ಯ ಅಂಶವೆಂದರೆ, ತಾಯಿಯನ್ನು ಆಚೆ ತಳ್ಳಿ, ಆಕೆಯ ಸ್ಥಾನವನ್ನು ಆಕ್ರಮಿಸಿ, ತಂದೆಯೊಡನೆ ಲೈಂಗಿಕ ಸಂಬಂಧ ಬೆಳೆಸಬೇಕೆಂಬ ಬಯಕೆ.

ಫ್ರಾಯ್ಡನ ಪ್ರಕಾರ ಈಡಿಪಸ್ ಕಾಂಪ್ಲೆಕ್ಸ್ ಸರಿಯಾಗಿ ಬಗೆಹರಿಯದಿರುವುದೇ ಆಮೇಲಿನ ಮನೋರೋಗಗಳಿಗೆ ಮೂಲ ಕಾರಣ. ಈಡಿಪಸ್ ಅವಸ್ಥೆಯಲ್ಲಿ ಮಗು ಅನುಭವಿಸುವ ಅತಿಯಾದ ಆನಂದ ಅಥವಾ ಅತಿಸ್ವಲ್ಪ ಆನಂದ ಮತ್ತು ಇನ್ನಿತರ ಕಾರಣಗಳಿಂದಾಗಿ ಲಿಬಿಡೊ ಪೂರ್ತಿಯಾಗಿ ಬೆಳವಣಿಗೆಯ ಮುಂದಿನ ಅವಸ್ಥೆಗೆ ದಾಟದೆ, ಅದರ ಕೊಂಚಭಾಗ ಅಲ್ಲೇ ಉಳಿದುಕೊಳ್ಳುತ್ತದೆ. ಮುಂದೆ ಜೀವನದಲ್ಲಿ ವ್ಯಕ್ತಿ ತಾಪದಾಯಕವಾದ ಅನುಭವಗಳನ್ನು, ಆಶಾಭಂಗವನ್ನು ಎದುರಿಸಿದಾಗ ಇವುಗಳ ಆಘಾತದಿಂದಾಗಿ ಒಟ್ಟು ಲಿಬಿಡೊ ಹಿಮ್ಮರಳಬಹುದು. ಚಿಕ್ಕಂದಿನಲ್ಲಿ ಈಡಿಪಸ್ ಭಾವ ಸರಿಯಾಗಿ ನಿವಾರಣೆಯಾಗದೆ ಲಿಬಿಡೊದ (ಕಾಮದ) ಒಂದು ಅಂಶ ಅದಕ್ಕೇ ಅಂಟಿಕೊಂಡಿದ್ದರೆ ಆಗ ಲಿಬಿಡೊ ಆ ಅವಸ್ಥೆಗೆ ಮರಳುತ್ತದೆ. ಹಾಗಾದಾಗ, ಆ ವಯಸ್ಸಿಗೆ ತಕ್ಕ ವರ್ತನೆ, ಅಂದರೆ ನಾಲ್ಕೈದು ವರ್ಷಕ್ಕೆ ತಕ್ಕ ವರ್ತನೆ ಕಾಣಿಸಿಕೊಳ್ಳುತ್ತದೆ. ಈ ರೀತಿ ಹಿಮ್ಮರಳಿದ ಲಿಬಿಡೊ ಬೇರೆ ರೂಪದಲ್ಲಿ ವ್ಯಕ್ತವಾಗುವುದೇ ಮನೋರೋಗದ ಚಿಹ್ನೆಗಳು.

ಸಾಹಿತ್ಯ, ಕಲೆ, ವೈದ್ಯಕೀಯ ಮತ್ತು ಸಾಮಾಜಿಕ ವಿಜ್ಞಾನ ವಿಭಾಗಗಳ ಮೇಲೆ ತಕ್ಕಮಟ್ಟಿಗೆ ಪ್ರಭಾವ ಬೀರಿದ ಫ್ರಾಯ್ಡನ ಕಲ್ಪನೆಗಳ ಪೈಕಿ ಈಡಿಪಸ್ ಕಾಂಪ್ಲೆಕ್ಸ್ ಮುಖ್ಯವಾದದ್ದು. ಆದರೆ ಫ್ರಾಯ್ಡನ ಸಿದ್ಧಾಂತಗಳಿಗೆ ವೈಜ್ಞಾನಿಕ ಆಧಾರವಿಲ್ಲವೆಂಬ ಆಕ್ಷೇಪಣೆ ಇತ್ತೀಚಿನ ವರ್ಷಗಳಲ್ಲಿ ತೀವ್ರವಾಗುತ್ತಿದೆ. ಈ ಕಾರಣಕ್ಕಾಗಿ ಇಂದಿನ ಪ್ರಾಯೋಗಿಕ ಮನೋವಿಜ್ಞಾನಿಗಳು ಈಡಿಪಸ್ ಕಾಂಪ್ಲೆಕ್ಸ್ ಕಲ್ಪನೆಯನ್ನು ಅಷ್ಟಾಗಿ ಪುರಸ್ಕರಿಸುವುದಿಲ್ಲ. (ಎಂ.ಎಸ್.ಎಚ್.)

**ಈಡೆಂಟೇಟ:** ಸ್ತನಿವರ್ಗದ ಒಂದು ಗುಂಪು. ಇದರಲ್ಲಿ ಸ್ಲಾತ್ ಇರುವೆ ಭಕ್ಷಕ, ಆರ್ಮಡಿಲ್ಲೊ ಮತ್ತು ಆದಿಕಾಲದಲ್ಲಿದ್ದ ಕೆಲವು ಜೀವಿಗಳು ಸೇರಿವೆ. ಈಡೆಂಟೇಟಗಳು ಜರಾಯುವುಳ್ಳ ಸ್ತನಿಗಳು. ತಾಯಿಯ ಗರ್ಭಕೋಶದಲ್ಲಿ ಬೆಳೆಯುವ ಭವಿಷ್ಯಜೀವಿಗೂ ಗರ್ಭಕೋಶದ ಗೋಡೆಗೂ ಜರಾಯು ಸಂಬಂಧ ಕಲ್ಪಿಸಿದೆ. ಇವುಗಳ ಉಗಮ ಪೂರ್ಣವಾಗಿ



ಹೊಸ ಪ್ರಪಂಚಕ್ಕೆ ಮೀಸಲು. ದಕ್ಷಿಣ ಅರ್ಜೆಂಟೀನ, ದಕ್ಷಿಣ ಅಮೆರಿಕ, ಮಧ್ಯ ಅಮೆರಿಕದಿಂದ ಹಿಡಿದು ದಕ್ಷಿಣ ಮೆಕ್ಸಿಕೊವರೆಗೆ ನೇರ ಪ್ರಸಾರವುಂಟು. ಉತ್ತರ ಅಮೆರಿಕದ ಸಂಯುಕ್ತಸಂಸ್ಥಾನದ ದಕ್ಷಿಣ ಭಾಗದಲ್ಲಿ ಈ ಗುಂಪಿನ ಒಂದೇ ಒಂದು ಪ್ರಭೇದ ಮಾತ್ರವಿದೆ. ಇದೇ 9 ಪಟ್ಟೆಯುಳ್ಳ ಆರ್ಮಡಿಲ್ಲೊ. ಈಡೆಂಟೇಟವೆಂದರೆ ಅದಂತಿ (ಹಲ್ಲುಗಳಿಲ್ಲದ್ದು) ಎಂದು ಅರ್ಥ. ಆದರೆ ಈ ಜೀವಿಯನ್ನು ಪರಿಶೀಲಿಸಿದಾಗ ಈ ಹೆಸರು ಪೂರ್ಣ ಸತ್ಯವಲ್ಲ ಎಂದು ತಿಳಿಯುವುದು. ಏಕೆಂದರೆ ಬಹಳ ಈಡೆಂಟೇಟ ಜೀವಿಗಳಿಗೆ ದವಡೆಹಲ್ಲುಗಳಿವೆ. ಪೂರ್ಣವಾಗಿ ಇರುವೆಗಳನ್ನೇ ತಿಂದು ಬದುಕುವ ನಿಜವಾದ ಇರುವೆ ಭಕ್ಷಕಗಳಲ್ಲಿ ಮಾತ್ರ ಹಲ್ಲುಗಳಿಲ್ಲ. ಸಾಮಾನ್ಯವಾಗಿ ಎಲ್ಲ ಈಡೆಂಟೇಟಗಳಲ್ಲೂ ದವಡೆಯ ಮುಂತುದಿಯ ಬಾಚಿ ಹಲ್ಲುಗಳು ಮತ್ತು ಕೋರೆ ಹಲ್ಲುಗಳಿರುವುದಿಲ್ಲ. ದವಡೆಯಲ್ಲಿರುವ ಮುಂದವಡೆ (ಪ್ರೀಮೋಲಾರ್) ಮತ್ತು ದವಡೆ (ಮೋಲಾರ್) ಹಲ್ಲುಗಳು ಚಿಕ್ಕವಾಗಿ ನಶಿಸಿಹೋದಂತಿವೆ. ಇವುಗಳ ಮೇಲೆ ಹಲ್ಲುಗಾಜಿನ (ಎನ್ಯಾಮೆಲ್) ಕವಚವಿಲ್ಲ. ಮರದ ಸ್ಲಾತುಗಳಲ್ಲಿ ಮೇಲುದವಡೆಯ ಮುಂದವಡೆಯ ಮೊದಲನೆಯ ಹಲ್ಲು ಕೋರೆಯಂತೆ ಹೊರಚಾಚಿಕೊಂಡಿದೆ. ಆದರೆ ಈ ಕೋರೆ ನೆಲದ ಮೇಲೆ ವಾಸಿಸುವ ಸ್ಲಾತುಗಳಲ್ಲಿರಬಹುದು ಅಥವಾ ಇಲ್ಲದಿರಬಹುದು.

ಗತಕಾಲದಲ್ಲಿ ಬದುಕಿದ್ದ ಈಡೆಂಟೇಟಗಳಿಗೆ ಪೇಲಿಯನೋಡೆಂಟೇಟವೆಂದು ಹೆಸರು. ಇವುಗಳ ಚರಿತ್ರೆ ಆಲಿಗೋಸೀನ್ ಮಧ್ಯಭಾಗದಲ್ಲಿ ಪ್ರಾರಂಭವಾಗುತ್ತದೆ. ಉತ್ತರ ಅಮೆರಿಕದಲ್ಲಿ ಇವುಗಳ ಉದಯ 60 ದಶಲಕ್ಷ ವರ್ಷಗಳ ಹಿಂದೆ ಆಯಿತು. ಆ ಕಾಲದಲ್ಲಿ ಬದುಕಿದ್ದ ಜಾತಿಗಳೆಂದರೆ ಪೇಲಿಯಾನ್‌ಡಾನ್ ಮತ್ತು ಮೆಟಖೈರೊಮಿಸ್. ಇವು ಕನಿಷ್ಠ ದರ್ಜೆಯ ಈಡೆಂಟೇಟಗಳು. ಮೇನಿಸ್; ಸ್ಲಾತ್. (**ನೋಡಿ– ಆರ್ಮಡಿಲ್ಲೊ**). (ಎಸ್.ಎನ್.ಕೆ.ಯು.)

**ಈತಿ ಬಾಧೆಗಳು:** ಈತಿ ಎಂಬ ಪದಕ್ಕೆ ಬಾಧೆ ಎಂದು ಅರ್ಥ. ಆದರೂ ಬಳಕೆಯಲ್ಲಿರುವ ಪದ ಈತಿಬಾಧೆಗಳು ಎಂದೇ. ಬಾಧೆಗಳು ಸ್ಥೂಲವಾಗಿ ಎರಡು ಬಗೆಯವು. ಬಾಧೆಗಳಿಗೆ ನಾವೇ ನೇರವಾಗಿ ಕಾರಣವಾಗಬಹುದು ಅಥವಾ ನಾವಿರುವ ಹೊರಸನ್ನಿವೇಶದಲ್ಲಿ ಉಂಟಾಗುವ ಬದಲಾವಣೆಗಳು ಕಾರಣಗಳಾಗಬಹುದು. ಈತಿಬಾಧೆಗಳು ಸನ್ನಿವೇಶದಲ್ಲಿ ಸಂಭವಿಸುವ ಬದಲಾವಣೆಗಳಿಂದ ಹುಟ್ಟುವಂಥವು. ಸಾಮಾನ್ಯವಾಗಿ ಇವುಗಳನ್ನು ಷಡ್ಬಾಧೆಗಳೆಂದು ಕರೆಯುವುದುಂಟು: ಅತಿವೃಷ್ಟಿ, ಅನಾವೃಷ್ಟಿ, ಪ್ರಾಣಿಗಳಿಂದ ಆಗುವ ಕಷ್ಟನಷ್ಟಗಳು, ಪಕ್ಷಿಗಳಿಂದಾಗುವ ಕಷ್ಟನಷ್ಟಗಳು, ಕೀಟಗಳಿಂದ ಆಗುವ ಕಷ್ಟನಷ್ಟಗಳು, ಸೈನ್ಯದಿಂದ ಆಗುವ ಪೀಡೆಗಳು.

ಅತಿವೃಷ್ಟಿಯಿಂದ ನದಿಗಳಲ್ಲಿ ಪ್ರವಾಹ ಹೆಚ್ಚಿ ನೂರಾರು ಕಿ.ಮೀ.ಗಳಷ್ಟು ವಿಸ್ತಾರವಾಗಿ ಹರಡಿ ಅಲ್ಲಿನ ನಿವಾಸಿಗಳು ಸಾಯಬಹುದು. ಮನೆ ಮಠಗಳು ಕೊಚ್ಚಿಹೋಗಬಹುದು, ನೂರಾರು ಎಕರೆಗಳ ಬೆಳೆ ನಷ್ಟವಾಗಬಹುದು, ಸಾವಿರಾರು ದನಕರುಗಳು ಪ್ರವಾಹಕ್ಕೆ ಸಿಕ್ಕಿ ಸಾಯಬಹುದು. ಉತ್ತರ ಭಾರತದಲ್ಲಿ ಬ್ರಹ್ಮಪುತ್ರಾ ಮತ್ತು ಕೋಸಿ ನದಿಗಳು ಅತಿವೃಷ್ಟಿಯಿಂದ ಉಬ್ಬಿ ಉಂಟುಮಾಡುವ ಅನಾಹುತಗಳನ್ನು ಇಲ್ಲಿ ಸ್ಮರಿಸಬಹುದು.

ಅನಾವೃಷ್ಟಿಯಿಂದ, ಅಂದರೆ ಮಳೆಯ ಅಭಾವದಿಂದ ಬಿತ್ತಿದ ಬೆಳೆ ಸುಟ್ಟು ಹೋಗಿ ಕ್ಷಾಮ ಉದ್ಭವಿಸಬಹುದು. ಹಿಂದೆ ಧಾತು, ಈಶ್ವರ ಸಂವತ್ಸರಗಳಲ್ಲಿ ಮಳೆ ಇಲ್ಲದೆ ಕರ್ನಾಟಕದಲ್ಲಿ ಸಾವಿರಾರು ಮಂದಿ ಸತ್ತುಹೋದರು. ತಿನ್ನುವುದಕ್ಕೆ ಮೇವಿಲ್ಲದೆ ಕುಡಿಯುವುದಕ್ಕೆ ನೀರಿಲ್ಲದೆ ಲಕ್ಷಾಂತರ ಜಾನುವಾರುಗಳು ನಷ್ಟವಾದುವು.

ಪ್ರಾಣಿಗಳಿಂದ ಆಗುವ ನಷ್ಟಕ್ಕೆ ಇಲಿಗಳ ಉಪಟಳ ಒಂದು ಉದಾಹರಣೆ. ಕೆಲವು ವೇಳೆ ಆನೆಯ ಹಿಂಡು ಅರಣ್ಯದಿಂದ ಹಳ್ಳಿಯ ಪ್ರದೇಶಗಳಿಗೆ ನುಗ್ಗಿ ಬತ್ತ, ಕಬ್ಬು ಮುಂತಾದ ಬೆಳೆಗಳನ್ನು ನಷ್ಟಪಡಿಸುತ್ತದೆ.

ಗಿಳಿಗಳು ಮತ್ತು ಇತರ ಹಕ್ಕಿಗಳು ಮರಗಳಲ್ಲಿರುವ ಹಣ್ಣುಗಳನ್ನು ತಿಂದು ನಷ್ಟವುಂಟು ಮಾಡುತ್ತವೆ. ಬತ್ತದ ತೆನೆಯಲ್ಲಿ ಹಾಲು ಕೂಡಿದಾಗ ಹಾಲು ಹಕ್ಕಿಗಳು ತೆನೆಯಿಂದ ಹಾಲು ಹೀರಿ ಬೆಳೆಯನ್ನು ಹಾಳು ಮಾಡುತ್ತವೆ.

ಕೀಟಗಳಿಂದ ಆಗುವ ನಷ್ಟ ಅಗಾಧವಾಗಿದೆ. ಕೆಲವು ವೇಳೆ ಕೋಟ್ಯಂತರ ಮಿಡತೆಗಳು ಹಾರಿಬಂದು ಸಾವಿರಾರು ಎಕರೆಗಳ ಗೋಧಿ ಮತ್ತು ಬತ್ತದ ಪೈರನ್ನು ತಿಂದುಹಾಕುತ್ತವೆ. ಕೀಟಗಳು ಹುಟ್ಟಿಕೊಂಡು ಅವರೆ, ತೊಗರಿ ಮುಂತಾದ ಬೆಳೆಗಳಿಗೆ ಅಪಾರ ನಷ್ಟವುಂಟು ಮಾಡುತ್ತವೆ. ಕೀಟಗಳಿಂದ ಸಾಂಕ್ರಾಮಿಕ ರೋಗಗಳೂ ಹರಡುತ್ತವೆ.

ಹೊರದೇಶದಿಂದ ಬಂದ ಸೈನಿಕರು ಒಂದು ದೇಶದ ಮೇಲೆ ದಾಳಿ ನಡೆಸಿದಾಗ, ಹಾಗೆಯೇ ದೇಶದಲ್ಲಿ ವ್ಯಾಪಕವಾಗಿ ಅಂತಃಕಲಹಗಳು ನಡೆದಾಗ ಪ್ರಾಣ, ಮಾನ ನಷ್ಟವಲ್ಲದೆ, ಆಸ್ತಿಪಾಸ್ತಿಗಳ, ಬೆಳೆಗಳ ನಷ್ಟ ಸಂಭವಿಸುತ್ತದೆ. ಈ ಷಡ್ಬಾಧೆಗಳಲ್ಲದೆ, ಬೆಂಕಿ, ಬಿರುಗಾಳಿ, ಭೂಕಂಪಗಳಿಂದಲೂ ಈತಿಬಾಧೆಗಳು ಉದ್ಭವಿಸುತ್ತವೆ.

ಈ ಎಲ್ಲ ಬಗೆಯ ಈತಿಬಾಧೆಗಳಿಂದ ಉಂಟಾಗುವ ನಷ್ಟವನ್ನು ತಡೆಗಟ್ಟುವುದು ದೇಶದ ಜನ ಮತ್ತು ಸರ್ಕಾರಗಳ ಜವಾಬ್ದಾರಿಯಾಗುತ್ತದೆ. ಪ್ರಾಕೃತಿಕವಾಗಿ ಒದಗುವ ಈತಿಬಾಧೆಗಳನ್ನು ಸರ್ಕಾರದ ನೆರವಿನಿಂದ ತಡೆಯಬಹುದು. ಜನಕ್ಕೆ ಸಂಬಂಧಿಸಿದ ಬಾಧೆಗಳನ್ನು ತಡೆಯಲು ಜನರೇ ವಿವೇಕದಿಂದ ನಡೆಯಬೇಕಾಗುತ್ತದೆ. (ಜಿ.ಎಚ್.)

**ಈಥರ್ (ಭೌತವಿಜ್ಞಾನದಲ್ಲಿ):** ಅಖಿಲ ವಿಶ್ವವನ್ನು ವ್ಯಾಪಿಸಿದೆ ಎಂದು ಊಹಿಸಲಾಗಿದ್ದ ಕಾಲ್ಪನಿಕ ಪದಾರ್ಥ. ಮೊದಲು ತತ್ತ್ವಶಾಸ್ತ್ರಜ್ಞರಿಂದ ಪ್ರತಿಪಾದಿತವಾದ ಈ ಭಾವನೆ ಮುಂದೆ ಎಲ್ಲ ಜಾಗವೂ ಇದರಿಂದ ತುಂಬಿದೆ ಎಂಬ ಪರಿಕಲ್ಪನೆ ಪ್ರಚಲಿತವಾಯಿತು. ಗುರುತ್ವಾಕರ್ಷಣೆ, ವಿದ್ಯುತ್ಕಾಂತ ವಿಕಿರಣ ಸಾಗಣೆಗೆ ಅವಶ್ಯವೆಂದು ಒಮ್ಮೆ ಭಾವಿಸಲಾಗಿದ್ದ ಮಾಧ್ಯಮ. ಇಂಥ ಊಹೆ ಅನಾವಶ್ಯಕವೆಂದು ವಿಶೇಷ ಸಾಪೇಕ್ಷತಾ ಸಿದ್ಧಾಂತ ಸ್ಥಾಪಿಸಿತು (1905).

ಸಿದ್ಧಾಂತದ ಬೆಳೆವಣಿಗೆ: ಗ್ರಹಗಳು ಆಕಾಶದಲ್ಲಿ ಚಲಿಸುತ್ತಿವೆಯಷ್ಟೆ. ಈ ಚಲನೆಗೆ ಸಹಾಯಕವಾಗಿ ಕಣ್ಣಿಗೆ ಗೋಚರವಾಗದ ಮತ್ತು ಸ್ಪರ್ಶಕ್ಕೆ ಸಿಕ್ಕದ ವಸ್ತುವೊಂದು ಇರಲೇಬೇಕೆಂದು ಪೂರ್ವಕಾಲದ ದಾರ್ಶನಿಕರು ಅಭಿಪ್ರಾಯಪಟ್ಟಿದ್ದರು. ಅವರ ಬರವಣಿಗೆಯಲ್ಲಿ ಈಥರ್ ಎಂಬ ಪದವನ್ನು ಅನೇಕ ಬಾರಿ ಉಪಯೋಗಿಸಿದ್ದಾರೆ. ಅನೇಕ ತರಹದ ಈಥರುಗಳಿವೆಯೆಂದೂ ಇವು ಆಕಾಶದಲ್ಲಿ ಬೇರೆ ಬೇರೆ ಜಾಗಗಳನ್ನು ಆಕ್ರಮಿಸಿಕೊಂಡಿರುವುವೆಂದೂ ಊಹಿಸಿದ್ದರು. ಆದರೆ ಡೇಕಾರ್ಟ್ ಈ ಅಭಿಪ್ರಾಯವನ್ನು ಒಪ್ಪದೆ ಈಥರ್ ಒಂದೇ ರೀತಿಯದು ಮತ್ತು ಎಲ್ಲ ಪ್ರದೇಶವನ್ನೂ ಆಕ್ರಮಿಸಿದೆ ಎಂದು ಪ್ರತಿಪಾದಿಸಿದ (1638). ಈತನ ಅಭಿಪ್ರಾಯಕ್ಕೆ ಹೆಚ್ಚಾದ ಮನ್ನಣೆ ಇತ್ತು. ಎರಡು ವಸ್ತುಗಳ ನಡುವೆ ಬಲಪ್ರಯೋಗ, ಸಂಮರ್ದವಹನ ಇತ್ಯಾದಿ ನಡೆಯಬೇಕಾದರೆ ಅವುಗಳಲ್ಲಿ ಒಂದು ವಿಧದ ಸಂಪರ್ಕವೇರ್ಪಟ್ಟಿರಬೇಕು. ಇದು ಡೇಕಾರ್ಟನ ತರ್ಕ. ಸೂರ್ಯನಿಂದ ಉಷ್ಣ, ಬೆಳಕು ಎಂಬ ಎರಡು ಸಂಮರ್ದಗಳು ಕ್ಷಣಮಾತ್ರದಲ್ಲಿ ಭೂಮಿಗೆ ಪ್ರವಹಿಸುತ್ತಿವೆ. ಆದ್ದರಿಂದ ಸೂರ್ಯ, ಭೂಮಿ ಅಂತರವನ್ನು ತುಂಬಿರುವ ಒಂದು ಪದಾರ್ಥ ಇರಬೇಕು. ಇದನ್ನೇ ಈಥರ್ ಎಂದು ಕರೆಯಲಾಯಿತು. ಒಂದು ವಸ್ತು ಕಣ್ಣಿಗೆ ತಲುಪಬೇಕು. ಆದ್ದರಿಂದ ಈಥರ್ ಕುರುಡನ ಕೈಯಲ್ಲಿರುವ ದೊಣ್ಣೆಗೆ ಸದೃಶವೆಂದು ವಿನೋದವಾಗಿ ಹೇಳುತ್ತಿದ್ದರು.

ಡೇಕಾರ್ಟನ ಸಿದ್ಧಾಂತಕ್ಕೆ ಎರಡು ಆಕ್ಷೇಪಣೆಗಳು ಬಂದುವು. 1 ಬೆಳಕು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕ್ಷಣಮಾತ್ರದಲ್ಲಿ ತಲುಪುವುದೆಂಬ ಅಭಿಪ್ರಾಯವನ್ನು ಫರ್ಮಾ ಒಪ್ಪಲು ಅನುಮಾನಿಸಿದ. ರೂಮರ್ ಎಂಬ ಖಗೋಳವಿಜ್ಞಾನಿ ಗುರುಗ್ರಹದ ಸುತ್ತಲೂ ಸುತ್ತುತ್ತಿರುವ ಉಪಗ್ರಹಗಳ ಗ್ರಹಣದ ಅವಲೋಕನದಿಂದ ಹಿಡಿದ. ಆದ್ದರಿಂದ ಬೆಳಕಿನ ಪ್ರಸಾರಕ್ಕೆ ನಿರ್ದಿಷ್ಟವಾದ ವೇಗವಿದೆ. 2. ವಿವಿಧ ರೀತಿಯ ಬಣ್ಣಗಳ ಉತ್ಪಾದನೆಯ ಕಾರಣವನ್ನು ಡೇಕಾರ್ಟ್ ಸೂಚಿಸಲಿಲ್ಲ. ಹೂಕನ ಸಿದ್ಧಾಂತದ ಪ್ರಕಾರ ಈಥರ್ ಕಣಗಳ ಸ್ಪಂದನದಿಂದ ಬೆಳಕು ಉಂಟಾಗುತ್ತದೆ. ಸ್ಪಂದನ ಸಂಖ್ಯೆಯ ವ್ಯತ್ಯಾಸದಿಂದ ಬೇರೆ ಬೇರೆ ಬಣ್ಣಗಳು ಉತ್ಪನ್ನವಾಗುತ್ತವೆ. ಈ ರೀತಿಯ ಸ್ಪಂದನದಿಂದ ಈಥರಿನಲ್ಲಿ ನೀಳ ತರಂಗಗಳೂ (ಲಾಂಜಿಟ್ಯೂಡಿನಲ್ ವೇವ್ಸ್) ಉದ್ಭವಿಸುತ್ತವೆ.

ಬೆಳಕಿನಿಂದ ವಿವಿಧ ಬಣ್ಣಗಳನ್ನು ಉಂಟುಮಾಡಲು ನ್ಯೂಟನ್ ಅನೇಕ ಪ್ರಯೋಗಗಳನ್ನು ನಡೆಸಿದ. ಈತನ ಸಿದ್ಧಾಂತದ ಪ್ರಕಾರ ಬೆಳಕು ಕಣಗಳ (ಕಾರ್ಪಸಲ್ಸ್) ರೂಪದಲ್ಲಿ ಬೆಳಕಿನ ಉಗಮದಿಂದ ಅತಿ ವೇಗವಾಗಿ ಹೊರಚಿಮ್ಮಲ್ಪಡುತ್ತದೆ. ಈ ಸಿದ್ಧಾಂತಕ್ಕೆ ಬೆಳಕಿನ ಕಣಗಳ ಸಿದ್ಧಾಂತ (ಕಾರ್ಪಸ್ಕ್ಯುಲರ್ ಥಿಯರಿ ಆಫ್ ಲೈಟ್) ಎಂದು ಹೆಸರು. ಆದರೆ ನ್ಯೂಟನ್ ನೀಳ ತರಂಗಗಳನ್ನು ಉಂಟುಮಾಡುವ ಈಥರ್ ಸಿದ್ಧಾಂತವನ್ನು ಪೂರ್ತಿಯಾಗಿ ನಿಷೇಧಿಸಲಿಲ್ಲ. ಬೆಳಕಿನ ಕಣಗಳು ಈಥರಿನಲ್ಲಿ ವೇಗವಾಗಿ ಚಲಿಸುತ್ತಿರುವಾಗ ತರಂಗಗಳನ್ನು ಉಂಟುಮಾಡಿದರೂ ಮಾಡಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ.

ಇದೇ ರೀತಿಯಲ್ಲಿ ಗುರುತ್ವಾಕರ್ಷಣೆ (ಗ್ರಾವಿಟೇಷನ್) ಮತ್ತು ಈಥರ್ ಇವುಗಳ ಸಂಬಂಧದಲ್ಲೂ ನ್ಯೂಟನ್ ಖಚಿತ ಅಭಿಪ್ರಾಯವನ್ನು ಮುಂದಿಡಲಿಲ್ಲ. ಈಥರ್ ಸಿದ್ಧಾಂತವನ್ನು ಅವಲಂಬಿಸದೆ ಬೆಳಕಿನ ತೀವ್ರತೆಯ ಪ್ರತಿಲೋಮ ವರ್ಗನಿಯಮ (ಇನ್‍ವರ್ಸ್ ಸ್ಕ್ವೇರ್ ಲಾ ಆಫ್ ಇನ್‍ಟೆನ್ಸಿಟಿ ಆಫ್ ಇಲ್ಯೂಮಿನೇಷನ್) ಸೂತ್ರವನ್ನು ಕಂಡುಹಿಡಿದ ಮೇಲೆ ಈಥರ್ ವಿಷಯದ ಚರ್ಚೆ ಇಳಿಮುಖವಾಯಿತು. ಡೇಕಾರ್ಟನ ಸಿದ್ಧಾಂತವನ್ನು ಪೂರ್ತಿಯಾಗಿ ತಿರಸ್ಕರಿಸಿದ ನ್ಯೂಟನ್ನನ ಅನುಯಾಯಿಗಳು ಗುರುತ್ವಾಕರ್ಷಣ ಬಲ ಈಥರ್ ಮೂಲಕ ಹಾಯುವುದೆಂದು ಅಭಿಪ್ರಾಯ ಪಟ್ಟರು. ಇದಕ್ಕೆ ಯಾವ ಆಧಾರವನ್ನೂ ಸೂಚಿಸಲಿಲ್ಲ.

1690ರಲ್ಲಿ ಹೈಜೆನ್ಸ್ ಎಂಬ ವಿಜ್ಞಾನಿ ಐಸ್‍ಲೆಂಡ್‍ಸ್ಪಾರ್ ಸ್ಫಟಿಕದಲ್ಲಿ ಬೆಳಕನ್ನು ಹಾಯಿಸಿದಾಗ ದ್ವಿ–ವಕ್ರೀಭವನ (ಡಬಲ್ ರಿಫ್ರ್ಯಾಕ್ಷನ್) ಆಗುವುದೆಂದೂ ಇದಕ್ಕೆ ಈಥರಿನಲ್ಲಿ ಉಂಟಾಗುವ ನೀಳ ತರಂಗವೇ ಕಾರಣವೆಂದೂ ಸೂಚಿಸಿದ. ಆದರೆ ಈ ಹರಳಿನಲ್ಲಿ ಬೆಳಕಿಗೆ ನಾನಾ ರೀತಿಯ ಪರಿಣಾಮಗಳು ಆಗುವುವು. ಇವಕ್ಕೆಲ್ಲ ಸರಿಯಾದ ವಿವರಣೆಯನ್ನು ಹೆಜೆನ್ಸ್ ನೀಡದಿದ್ದುದರಿಂದ ನ್ಯೂಟನ್ ಈ ಸೂಚನೆಗಳನ್ನು ಒಪ್ಪಲಿಲ್ಲ.

18ನೆಯ ಶತಮಾನದಲ್ಲಿ ವೈಜ್ಞಾನಿಕ ಚಟುವಟಿಕೆಗಳು ವಿಪರೀತವಾಗಿದ್ದುವು. ವಿದ್ಯುತ್ ಮತ್ತು ಕಾಂತ ವಿಷಯಗಳಲ್ಲಿ ಅನೇಕ ಸಂಶೋಧನೆಗಳು ನಡೆದವು. ವಿವಿಧ ರೂಪಗಳ ಈಥರ್ ಇರಬೇಕೆಂಬ ಅಭಿಪ್ರಾಯಗಳು ಇವುಗಳಿಂದ ಪುನಃ ಬಂದುವು. ವಿದ್ಯುತ್ ಹರಿಯಲು ಒಂದು ಈಥರ್, ಕಾಂತ ಬಲದ ಪ್ರವಾಹಕ್ಕೆ ಇನ್ನೊಂದು ಈಥರ್ ಇತ್ಯಾದಿ. ಬೆಳಕಿನ ವಿಷಯದ ಸಂಶೋಧನೆಗಳಲ್ಲಿ ನ್ಯೂಟನ್ನನ ಕಣಸಿದ್ಧಾಂತಕ್ಕೆ ಪ್ರಾಮುಖ್ಯ ನೀಡಲಾಗಿತ್ತು. ಬೆಳಕಿನ ವಿವಿಧ ಬಣ್ಣಗಳು ಈ ಕಣಗಳ ವೇಗದ ವ್ಯತ್ಯಾಸದಿಂದ ಉಂಟಾಗಬಹುದೆಂದು ವಿವರಣೆ ಕೊಟ್ಟರು. ಆದರೆ ಪ್ರಯೋಗಗಳನ್ನು ನಡೆಸಿದಾಗ ಇದು ಸರಿಯಲ್ಲವೆಂದು ಗೊತ್ತಾಯಿತು. ಆದ್ದರಿಂದ ವಿವಿಧ ಬಣ್ಣದ ಎಲ್ಲ ಬೆಳಕಿಗೂ ಒಂದೇ ಚಲನವೇಗ ಇದೆಯೆಂದು ನಿಶ್ಚಿತವಾಯಿತು.

1725ರಲ್ಲಿ ಬ್ರ್ಯಾಡ್‍ಲಿ ಎಂಬಾತ ಬೆಳಕಿನ ದಿಕ್ಪಲ್ಲಟವನ್ನು (ಆ್ಯಬರೇಷನ್ ಆಫ್ ಲೈಟ್) ಕಂಡುಹಿಡಿದ. ಮಳೆಯ ಹನಿಗಳು ಮೇಲಿನಿಂದ ಕೆಳಕ್ಕೆ ನೇರವಾಗಿ ಬೀಳುತ್ತಿದ್ದರೂ ಛತ್ರಿಯನ್ನು ಹಿಡಿದು ನಾವು ವೇಗವಾಗಿ ನಡೆಯುತ್ತಿದ್ದರೆ ಈ ಹನಿಗಳು ಓರೆಯಾಗಿ ಬೀಳುವಂತೆ ಕಾಣುವುದಿಲ್ಲವೇ? ಇದೇ ರೀತಿಯಲ್ಲಿ ಭೂಮಿಯ ಚಲನೆಯಿಂದ ನಕ್ಷತ್ರದಿಂದ ಬಂದ ಬೆಳಕಿನ ಕಣಗಳು ಬಾಗಿದ ದಿಕ್ಕಿನಲ್ಲಿ ಬರುವಂತೆ ಕಾಣುತ್ತವೆ. ತರಂಗಸಿದ್ಧಾಂತದಲ್ಲಿ ಈ ಸಮಸ್ಯೆಗೆ ಸಮಂಜಸ ವಿವರಣೆಯನ್ನು ಕೊಡಲು ಸಾಧ್ಯವಾಗಲಿಲ್ಲ. ಬೆಳಕಿನ ಕಣಸಿದ್ಧಾಂತ ಈ ದಿಶೆಯಲ್ಲಿ ಅಲ್ಪಯಶಸ್ಸು ಸಾಧಿಸಿದ್ದರೂ ಅನೇಕ ವಿಜ್ಞಾನಿಗಳು ತರಂಗಸಿದ್ಧಾಂತದಲ್ಲಿ ನಂಬಿಕೆಯುಳ್ಳವರಾಗಿದ್ದರು. ಇವರಲ್ಲಿ ಮುಖ್ಯರಾದವರು ಬರ್ನೋಲಿ, ಫ್ರ್ಯಾಂಕ್ಲಿನ್ ಮತ್ತು ಆಯ್ಲರ್. ಇವರ ಪ್ರಕಾರ ಶಬ್ದ ಗಾಳಿಯಲ್ಲಿ ಹೇಗೆ ಸೇರಿದೆಯೋ ಅದೇ ರೀತಿಯಲ್ಲಿ ಬೆಳಕು ಈಥರಿನಲ್ಲಿ ಸೇರಿದೆ.

ಸೋಪಿನ ಗುಳ್ಳೆಯ ಮೇಲೆ ಬರುವ ಬಣ್ಣ, ನೀರಿನ ಮೇಲೆ ತೇಲುತ್ತಿರುವ ಎಣ್ಣೆಯ ತೆಳು ಪದರದ ಮೇಲೆ ಕಾಣುವ ಬಣ್ಣಗಳು, ಬೆಳಕನ್ನು ತೆಳುಬಟ್ಟೆಯ ಮೂಲಕ ನೋಡಿದಾಗ ಕಾಣಬರುವ ಬಣ್ಣ ವಿಶೇಷಗಳು–ಇವನ್ನೆಲ್ಲ 18ನೆಯ ಶತಮಾನದಲ್ಲಿ ವಿಜ್ಞಾನಿಗಳು ನೋಡಿದ್ದರೂ ಇವುಗಳ ವಿಷಯದಲ್ಲಿ ಯಾರೂ ಅಷ್ಟಾಗಿ ಗಮನ ಕೊಟ್ಟಿರಲಿಲ್ಲ. 1800ರಲ್ಲಿ ಥಾಮಸ್ ಯಂಗ್ ತೆಳುಪೊರೆಯಲ್ಲಿ ಕಾಣುವ ಬಣ್ಣಗಳಿಗೆ ವಿವರಣೆ ಕೊಟ್ಟ. ಪೊರೆಯ ಎರಡು ಭಾಗಗಳಿಂದಲೂ ಬೆಳಕಿನ ಪ್ರತಿಫಲನ ಉಂಟಾಗುವುದು. ಆದ್ದರಿಂದ ಒಂದು ಪತನ ತರಂಗದಿಂದ ಪ್ರತಿಫಲನವಾದ ಮೇಲೆ ಎರಡು ಪ್ರತಿಫಲನ ತರಂಗಗಳೂ ಉಂಟಾಗುತ್ತವೆ. ಇವೆರಡರ ಅಂತರ ಪೊರೆಯ ದಪ್ಪದ ಎರಡರಷ್ಟಿರುತ್ತದೆ. ಇವುಗಳ ಸಂಧಿಸುವಿಕೆಯಿಂದ ಕೆಲವು ಜಾಗದಲ್ಲಿ ಸಂಪೂರ್ಣ ಕತ್ತಲೆಯೂ ಇನ್ನು ಕೆಲವು ಕಡೆ ವಿವಿಧ ಬಣ್ಣಗಳೂ ಉಂಟಾಗುತ್ತವೆ. ಈ ರೀತಿಯಾಗಿ ಸಂಪೂರ್ಣ ವಿವರಣೆಗಳನ್ನು ಕೊಡುವುದರ ಮೂಲಕ ಯಂಗ್ ತರಂಗಗಳು ಸಂಧಿಸುವ ಸಿದ್ಧಾಂತವನ್ನು ಬೆಳಕಿನ ವ್ಯತಿಕರಣ (ಇಂಟರ್‍ಫಿಯರೆನ್ಸ್ ಆಫ್ ವೇವ್ಸ್) ಸ್ಥಿರಪಡಿಸಿದ. ಸಣ್ಣ ತಂತಿ ಅಥವಾ ಸಣ್ಣ ರಂಧ್ರದ ಸುತ್ತಲೂ ಉಂಟಾಗುವ ಬಣ್ಣ ವಿವರ್ತನೆ (ಡಿಫ್ರ್ಯಾಕ್ಷನ್) ಮೂಲಕ ಆಗುವುದೆಂದು ತರಂಗ ಸಿದ್ಧಾಂತದ ಮೂಲಕ ಫ್ರೆಸ್ನೆಲ್ ಪ್ರತಿಪಾದಿಸಿದ.

ಬೆಳಕು ಕಿಟಕಿಯ ಗಾಜಿನಲ್ಲಿ ಪ್ರತಿಫಲನಗೊಂಡ ತರುವಾಯ ಅದೇ ಬೆಳಕು ಹರಳಿನ ಮೂಲಕ ಕೆಲವು ದಿಕ್ಕಿನಲ್ಲಿ ಹೊರಬರಲು ಸಾಧ್ಯವಿಲ್ಲ. ಈ ಅಂಶವನ್ನು 1808ರಲ್ಲಿ ಮಾಲಸ್ ಕಂಡುಹಿಡಿದ. ಹೀಗೆ ಪ್ರತಿಫಲನ ಹೊಂದಿದ ಬೆಳಕು ಭಾಗಶಃ ಧ್ರುವೀಕರಣಗೊಂಡ (ಪೋಲರೈಸ್ಡ್) ಬೆಳಕಾಗಿದೆ. ಒಂದು ದಿಕ್ಕಿನಲ್ಲಿ ಹರಳಿನ ಮುಖಾಂತರ ಈ ಬೆಳಕು ಬರದೆ ಇದ್ದರೆ ಹರಳನ್ನು $90^{\circ}$ ತಿರುಗಿಸಿದಾಗ ಬೆಳಕು ಹೊರಗೆ ಬರಲು ಸಾಧ್ಯವಾಗುವುದು. ಈ ತೆರನಾದ ವಿಷಯ ಶಬ್ದಶಾಸ್ತ್ರದಲ್ಲಿ ಬರುವುದೇ ಇಲ್ಲ. ಧ್ರುವೀಕೃತ ಬೆಳಕಿನಲ್ಲಿ ಎರಡು ಅಂಶಗಳಿವೆ: ಬೆಳಕಿನ ಪ್ರಸಾರದ ದಿಕ್ಕು, ಇದಕ್ಕೆ ಲಂಬವಾಗಿ ಧ್ರುವೀಕರಣದ ಮಾರ್ಗ. ಬೆಳಕು ಹರಳಿನ ಮೂಲಕ ಹಾಯುವುದೇ ಅಥವಾ ಇಲ್ಲವೇ ಎಂಬುದು ಧ್ರುವೀಕರಣದ ದಿಕ್ಕನ್ನು ಅವಲಂಬಿಸಿದೆ.

ಈ ಸಮಸ್ಯೆಯ ಪರಿಹಾರವನ್ನು ಯಂಗ್ ಕಂಡುಹಿಡಿದ. ಪರಸ್ಪರ ಲಂಬವಾಗಿರುವ ಎರಡು ದಿಕ್ಕಿನಲ್ಲಿ ಪ್ರಸಾರವಾಗುತ್ತಿರುವ ಧ್ರುವೀಕೃತ ಬೆಳಕು ಸಂಧಿಸುವುದಿಲ್ಲ ಎಂಬ ಅಂಶವನ್ನು ಅರಾಗೊ 1816ರಲ್ಲಿ ತಿಳಿಸಿದ್ದ. ಈ ಆಧಾರದ ಮೇಲೆ ಈಥರ್ ಕಣಗಳು ಶಬ್ದ ತರಂಗದಂತೆ ತರಂಗದ ದಿಕ್ಕಿನಲ್ಲಿ ಓಲಾಡುವುದರ ಬದಲು ತರಂಗದ ದಿಕ್ಕಿಗೆ ಲಂಬವಾಗಿ (ಟ್ರಾನ್ಸ್‌ವರ್ಸ್) ಓಲಾಡುತ್ತವೆ ಎಂಬುದಾಗಿ ಯಂಗ್ ದೃಢಪಡಿಸಿದ. ಈ ಸಿದ್ಧಾಂತದ ರೀತ್ಯಾ ಧ್ರುವೀಕರಣದ ಸಮಸ್ತ ವಿಷಯಗಳೂ ಸ್ಪಷ್ಟವಾದುವಲ್ಲದೆ ಈಥರ್ ಸಿದ್ಧಾಂತಕ್ಕೆ ಸಂಪೂರ್ಣ ಜಯ ಲಭಿಸಿತು.

ಇಲ್ಲಿಯವರೆಗೆ ಈಥರ್ ದ್ರವರೂಪದಲ್ಲಿ ಗಾಳಿಗಿಂತ ತೆಳುವಾದ ಪದಾರ್ಥವೆಂದು ನಂಬಲಾಗಿತ್ತು. ಹಾಗಿಲ್ಲದ ಪಕ್ಷದಲ್ಲಿ ಗ್ರಹಗಳು ಈಥರ್ ಮೂಲಕ ಚಲಿಸುವಾಗ ಘರ್ಷಣೆ ಉಂಟಾಗಿ ಚಲನೆ ನಿಂತೇ ಹೋಗಬೇಕಾಗಿತ್ತು. ಆದರೆ ದ್ರವವಸ್ತುವಿಗೆ ಅಡ್ಡ ತರಂಗಗಳನ್ನು ಪ್ರವಹಿಸಲು ಬೇಕಾಗುವ ದೃಢತೆ (ರಿಜಿಡಿಟಿ) ಇರುವುದಿಲ್ಲ. ಆದ್ದರಿಂದ ಯಂಗ್ ಸಿದ್ಧಾಂತದಿಂದ ಈಥರ್ ಘನರೂಪದಲ್ಲಿ ಇರಲೇಬೇಕಾಯಿತು. ಈ ಘನ ಈಥರಿನಲ್ಲಿ ಗ್ರಹಗಳ ಚಲನೆ ಯಾವ ರೀತಿಯಲ್ಲಿ ಆಗುವುದು? ಬಹಳ ವೇಗದಲ್ಲಿ ವ್ಯತ್ಯಾಸವಾಗುವ ಬಲಗಳಿಗೆ ಈಥರ್ ಅರಗಿನಂತೆ ಆದರೆ ಬಹಳ ಹೊತ್ತು ಒಂದೇ ರೀತಿಯಲ್ಲಿ ಬಲ ಪ್ರಯೋಗವಾದಾಗ ದ್ರವದಂತೆ ಇರಬಹುದೆಂಬ ಅಭಿಪ್ರಾಯವನ್ನು ಸ್ಟೋಕ್ಸ್ ವ್ಯಕ್ತಪಡಿಸಿದ. ಏಕೆಂದರೆ ಬೆಳಕಿನಲ್ಲಿರುವ ಈಥರ್ ಕಣಗಳ ಕಂಪನವೇಗ ಹೆಚ್ಚು; ಗ್ರಹಗಳ ಚಲನೆ ಈ ದೃಷ್ಟಿಯಿಂದ ನಿಧಾನ. ಇದು ಬರೀ ಊಹೆಯಾದ್ದರಿಂದ ಈ ಅಭಿಪ್ರಾಯಕ್ಕೆ ಮನ್ನಣೆ ದೊರೆಯಲಿಲ್ಲ. ಆದರೂ ಈಥರ್ ಘನರೂಪದಲ್ಲಿ ಇರಬೇಕಾದ ಅಂಶ ಎಲ್ಲರಿಗೂ ಮನದಟ್ಟಾಯಿತು. ಇದರ ಮೂಲಕ ಪ್ರಸಾರವಾಗುವ ಅಲೆಯ ವೇಗ ಅತಿ ಹೆಚ್ಚಾಗಿರಲು ಅದರ ದೃಢತೆ ಮತ್ತು ಸಾಂದ್ರತೆ ಬಹಳವಾಗಿರಬೇಕು. ಸಾಂದ್ರತೆಯ ಬೆಲೆ ಒಂದು ಘನ ಮಿ. ಮೀ.ನಲ್ಲಿ 10,16,000 ಕಿಲೋಗ್ರಾಂಗಳಷ್ಟು ಇರಬೇಕೆಂದು ಲೆಕ್ಕ ಹಾಕಲಾಗಿದೆ. ಇಷ್ಟು ಹೆಚ್ಚು ಸಾಂದ್ರತೆಯುಳ್ಳ ಈಥರಿನಲ್ಲಿ ಘರ್ಷಣೆ ಇಲ್ಲದೆ ಚಲಿಸಲು ಹೇಗೆ ಸಾಧ್ಯವೆಂಬ ಗೊಂದಲಕ್ಕೆ ಸರಿಯಾದ ಉತ್ತರ ದೊರೆಯಲಿಲ್ಲ.

ವಿದ್ಯುತ್ಕಾಂತ ತತ್ತ್ವ: ವಿದ್ಯುತ್ ಮತ್ತು ಕಾಂತ ವಿಷಯಗಳಲ್ಲಿ ಬರುವ ಪ್ರಮಾಣಗಳನ್ನು ಅಳೆಯಲು ಬೇರೆ ಬೇರೆ ಮಾನಗಳನ್ನು ಉಪಯೋಗಿಸಬಹುದು. ಒಂದು ತಂತಿಯಲ್ಲಿ ವಿದ್ಯುತ್ ಹರಿದಾಗ ತಂತಿಯ ಸುತ್ತಲಿನ ಕಾಂತ ಪ್ರದೇಶದಲ್ಲಿ ಇದರ ಕಾಂತತೆಯ

ವ್ಯತ್ಯಾಸವಾದರೆ ವಿದ್ಯುತ್ ಪ್ರೇರೇಪಿಸಲ್ಪಡುವುದೆಂದು ಫ್ಯಾರಡೆ 1832ರಲ್ಲಿ ತೋರಿಸಿದ. ಆದ್ದರಿಂದ ಕಾಂತ ಮತ್ತು ವಿದ್ಯುತ್ ಪರಸ್ಪರ ಅವಲಂಬಿಸಿವೆ. ವಿದ್ಯುತ್ ಪ್ರವಾಹವನ್ನು ಕಾಂತಮಾನದಲ್ಲಿ ಅಥವಾ ವಿದ್ಯುನ್ಮಾನದಲ್ಲಿ ಅಳೆಯಬಹುದು. ಇವೆರಡರ ಮಾನದ ಭಾಗಲಬ್ಧ $c=3x10^{10}$. ಈ ನಿಯತಾಂಕದ ಪ್ರಮಾಣದಿಂದ ಅತಿ ಮಹತ್ತರವಾದ ವಿಷಯಗಳು ಹೊರಬರಲು ಸಾಧ್ಯವಾಯಿತು. ಟೆಲಿಗ್ರಾಫ್ ತಂತಿಯಲ್ಲಿ ವಿದ್ಯುತ್ ಸೂಚನೆಗಳು ಹರಿಯುವ ವೇಗ ಮತ್ತು ಬೆಳಕಿನ ಪ್ರಸಾರ ವೇಗ ಒಂದೇ : $c=3x10^{10}$ ಸೆಂ. ಮೀ. ಸೆ. $^{-1}$ ಬೆಳಕು ತಂತಿಯ ಮೂಲಕ ಪ್ರಸಾರವಾಗುವುದಿಲ್ಲ. ವಿದ್ಯುತ್ ಹೊರ ಆವರಣದಲ್ಲಿ ತಂತಿಯ ಸಹಾಯವಿಲ್ಲದೆ ಹರಿಯಬಲ್ಲುದೆ, ಹಾಗಾದರೆ ಅದರ ಚಲನೆಯವೇಗವೆಷ್ಟು, ಈ ವಿಷಯಗಳನ್ನು ಮ್ಯಾಕ್ಸ್‌ವೆಲ್ ಕೂಲಂಕಷವಾಗಿ ವಿಚಾರ ಮಾಡಿ ವಿದ್ಯುತ್ ತರಂಗಗಳು ಹೊರವಲಯದಲ್ಲಿ ಬೆಳಕಿನ ವೇಗದಷ್ಟೇ ವೇಗದಲ್ಲಿ ಪ್ರಸಾರವಾಗುವುವೆಂದು ನಿಯಮಗಳಿಂದ ತೋರಿಸಿದ. ಈ ವಿಷಯವನ್ನು ಪ್ರಾಯೋಗಿಕವಾಗಿ ಹರ್ಟ್ಸ್ ನಿರ್ದರ್ಶಿಸಿದ.

ಈಥರ್ ಸೆಳೆತದ ಪ್ರಯೋಗ: ಭೂಮಿ ಈಥರ್ ಮೂಲಕ ಚಲಿಸುವಾಗ ಈಥರ್ ಸ್ಥಿರವಾಗಿಯೇ ಇರುವುದೆಂದು ತಿಳಿದರೆ ಬೆಳಕಿನ ದಿಕ್ಪಲ್ಲಟವನ್ನು ತರಂಗ ಸಿದ್ಧಾಂತದಿಂದ ಸುಲಭವಾಗಿ ಸಮರ್ಥಿಸಬಹುದೆಂದು ಯಂಗ್ ತೋರಿಸಿದ. ಎಲ್ಲ ವಸ್ತುಗಳನ್ನೂ ಈಥರ್ ಆಕ್ರಮಿಸಿದೆ. ಇಲ್ಲದಿದ್ದಲ್ಲಿ ಪಾರದರ್ಶಕ ವಸ್ತುವಿನಲ್ಲಿ ಬೆಳಕು ಪ್ರಸರಿಸಲು ಸಾಧ್ಯವಾಗಲಾರದು. ಪಾರದರ್ಶಕ ವಸ್ತುವಿನಲ್ಲಿ ಈಥರ್ ಸಾಂದ್ರತೆ ಹೊರವಲಯದಲ್ಲಿನ ಸಾಂದ್ರತೆಗಿಂತ ಹೆಚ್ಚಾಗಿರಬೇಕು. ಇಲ್ಲದಿದ್ದಲ್ಲಿ ಬೆಳಕಿನ ವಕ್ರೀಭವನ ಆಗಲು ಸಾಧ್ಯವಾಗುವುದಿಲ್ಲ. ಚಲಿಸುವ ವಸ್ತುವಿನಲ್ಲಿ ಇರುವ ಈಥರ್ ತಾನೂ ಚಲಿಸುತ್ತ ಇರಬೇಕು. ಇದರ ಚಲನೆಯ ವೇಗ ವಸ್ತುವಿನ ವೇಗಕ್ಕಿಂತ ಕಡಿಮೆಯಾಗಿರಬೇಕು. ವಸ್ತುವಿನ ಮುಂಭಾಗದಿಂದ ಈಥರ್ ಪ್ರವೇಶಿಸಿ ಹಿಂಭಾಗದಿಂದ ಹೊರಬರಬೇಕು. ವಸ್ತುವಿನಲ್ಲಿದ್ದಾಗ ಹೆಚ್ಚು ಸಂಮರ್ದ ಹೊಂದಿರಬೇಕು. ಈಥರ್ ಮತ್ತು ವಸ್ತುವಿನ ಚಲನವೇಗಗಳ ಪ್ರಮಾಣಕ್ಕೆ ಫ್ರೆಸ್ನೆಲ್ ಎಳೆತದ ಗುಣಾಂಕ (ಡ್ರ್ಯಾಗ್ ಕೋಎಫಿಷೆಂಟ್) ಎಂದು ಹೆಸರು. ಇದನ್ನು ವಕ್ರೀಭವನದ (ರಿಫ್ರಾಕ್ಷನ್) ಗುಣಾಂಕದಿಂದ ಕಂಡುಹಿಡಿಯಬಹುದು. ವಸ್ತುವಿನಲ್ಲಿ ಸಂಮರ್ದದಿಂದ ಇರುವ ಈಥರ್ ಇದರ ಮೂಲಕ ಪ್ರಸಾರವಾಗುವ ಬೆಳಕಿನ ವೇಗದ ಪ್ರಮಾಣವನ್ನು ವ್ಯತ್ಯಾಸ ಮಾಡಬಹುದು. ಹರಿಯುವ ನೀರಿನಲ್ಲಿ ಬೆಳಕಿನ ವೇಗವನ್ನು ಫಿಸು ಎಂಬಾತ ಪ್ರಯೋಗದಿಂದ ಕಂಡುಹಿಡಿದು ಈ ವೇಗ ಹೊರವಲಯದಲ್ಲಿನ ಬೆಳಕಿನ ವೇಗಕ್ಕಿಂತ ಕಡಿಮೆಯೆಂದು ತೋರಿಸಿದ. ಆದರೆ ಕಣಸಿದ್ಧಾಂತದ ಪ್ರಕಾರ ನೀರಿನಲ್ಲಿ ಬೆಳಕಿನ ವೇಗ ಹೊರವಲಯದಲ್ಲಿನ ವೇಗಕ್ಕಿಂತ ಹೆಚ್ಚಾಗುವುದೆಂದು ತರ್ಕದಿಂದ ಗೊತ್ತಾಗುತ್ತದೆ. ಇದು ಪ್ರಯೋಗದ ಫಲಿತಾಂಶಕ್ಕೆ ವಿರುದ್ಧವಾಗಿರುವುದರಿಂದ ನ್ಯೂಟನ್ನಿನ ಕಣಸಿದ್ಧಾಂತಕ್ಕೆ ಸಂಪೂರ್ಣ ಸೋಲುಂಟಾಯಿತು.

ಯಂಗನ ಸಿದ್ಧಾಂತ ಸ್ವಲ್ಪ ವರ್ಷಗಳಲ್ಲಿ ಬುಡಮೇಲಾಯಿತು. ಭೂಮಿಯ ಸುತ್ತಲೂ ಇರುವ ಈಥರ್ ಭೂಮಿಯ ಪರಿಭ್ರಮಣದಲ್ಲಿ ಪಾಲ್ಗೊಳ್ಳದಿದ್ದರೆ ಬೆಳಕಿನ ಚಲನವೇಗ ಭೂಮಿಯ ಚಲನ ದಿಕ್ಕನ್ನು ಅವಲಂಬಿಸಿದೆ. ಭೂಮಿಯ ಚಲನ ದಿಕ್ಕಿನಲ್ಲಿ ಬೆಳಕು ಪ್ರಸಾರವಾದರೆ ಭೂಮಿ ಬೆಳಕಿನ ಕಡೆಗೆ ಓಡುವುದರಿಂದ ಬೆಳಕಿನ ಪ್ರಸಾರವೇಗ ಕಡಿಮೆಯಾದಂತೆ ತೋರುವುದು. ಇದಕ್ಕೆ ವಿರುದ್ಧವಾಗಿ ಬೆಳಕು ಪ್ರಸಾರವಾದರೆ ಅದರ ಚಲನವೇಗ ಹೆಚ್ಚಾದಂತೆ ತೋರುವುದು. ಸ್ಥಿರವಾಗಿರುವ ಈಥರಿನಲ್ಲಿ ಭೂಮಿಯ ಚಲನವೇಗ v ಇರಲಿ. ಭೂಮಿಯ ಮೇಲೆ ಸ್ಥಿರವಾಗಿರುವ ಬೆಳಕಿನ ಉಗಮ ಬೆಳಕನ್ನು ಪ್ರಸಾರ ಮಾಡುತ್ತಿದೆಯೆಂದು ಭಾವಿಸೋಣ. ಈಥರ್ ಮುಖಾಂತರ ಪ್ರಸಾರವಾಗುವ ಬೆಳಕಿನ ವೇಗ c ಇರಲಿ. ಭೂಮಿ ಚಲಿಸುತ್ತಿರುವ ದಿಕ್ಕಿನಲ್ಲಿ ಬೆಳಕು ಪ್ರಸಾರವಾಗುತ್ತಿದ್ದರೆ ಬೆಳಕಿನ ಸಾಪೇಕ್ಷ ವೇಗ c−v. ಬೆಳಕು ಇದಕ್ಕೆ ವಿರುದ್ಧವಾಗಿ ಪ್ರಸಾರವಾದರೆ ಸಾಪೇಕ್ಷ ವೇಗ c+v.

ಭೂಮಿಯ ಚಲನೆಯ ದಿಕ್ಕಿನಲ್ಲಿ ಬೆಳಕು L ದೂರ ಹೋಗಲು ಬೇಕಾಗುವ ಕಾಲ L/(c−v). ಇದಕ್ಕೆ ಎದುರು ದಿಕ್ಕಿನಲ್ಲಿ ಅದೇ ದೂರ ಚಲಿಸಲು ಬೆಳಕು ತೆಗೆದುಕೊಳ್ಳುವ ಕಾಲ L/(c+v). ಆದ್ದರಿಂದ ಬೆಳಕು ಭೂಮಿಯ ಚಲನೆಯ ದಿಕ್ಕಿನಲ್ಲಿ L ದೂರ ಹೋಗಿ ಪ್ರತಿಫಲನ ಹೊಂದಿ ಅದೇ L ದೂರ ಹಿಂತಿರುಗಿ ಬರಲು ಬೇಕಾಗುವ ಒಟ್ಟು ಕಾಲ

$$t_{II} = \frac{L}{c-v} + \frac{L}{c+v} = \frac{2cL}{c^2 - v^2}$$

ಈಗ ಭೂಮಿಯ ಚಲನೆಗೆ ಲಂಬವಾಗಿ ಬೆಳಕು ಪ್ರಸಾರವಾಗುತ್ತಿದೆಯೆಂದು ತಿಳಿಯೋಣ. ಬೆಳಕಿನ ಕಿರಣ AB=L ದೂರ ಚಲಿಸಿದಾಗ ಭೂಮಿ A ಯಿಂದ A' ವರೆಗೆ ಚಲಿಸಿರುತ್ತದೆ.




BB'=AA'. ಬೆಳಕು ಚಲಿಸುವ ದಿಕ್ಕು AB' ಆಗುತ್ತದೆ. ಈ ಚಲನೆ t ಕಾಲದಲ್ಲಿ ನಡೆದರೆ AB'=ct ಮತ್ತು AA'=vt.

$$(AB')^2 = (A'B')^2 + (AA')^2$$

$\therefore c^2t^2 = L^2 + v^2t^2$ ಅಥವಾ

ಬೆಳಕು AB' ದೂರ ಹೋಗಿ ಪ್ರತಿಫಲನ ಹೊಂದಿದ ಮೇಲೆ B'A'' ಮಾರ್ಗವಾಗಿ ಹಿಂತಿರುಗುವುದು. ಆದ್ದರಿಂದ ಬೆಳಕು ಭೂಮಿಯ ಚಲನೆಯ ದಿಕ್ಕಿಗೆ ಲಂಬವಾಗಿ L ದೂರ ಹೋಗಿ ಪ್ರತಿಫಲನ ಹೊಂದಿ ಅದೇ ದೂರ ಹಿಂತಿರುಗಿ ಬರಲು ಬೇಕಾಗುವ ಒಟ್ಟು ಕಾಲ

$$t_{\perp} = \frac{2L}{\sqrt{c^2 - v^2}}$$

ಆದ್ದರಿಂದ ಇವೆರಡು ಕಾಲಗಳ ಪ್ರಮಾಣ

$$\frac{t_{II}}{t_{\perp}} = \frac{2cL}{c^2 - v^2} \cdot \frac{\sqrt{c^2 - v^2}}{2L} = \frac{c}{\sqrt{c^2 - v^2}} = \frac{1}{\sqrt{1 - v^2/c^2}}$$

$\therefore$ $t_{II} >$ ಎಂದು ಗೊತ್ತಾಗುತ್ತದೆ.

$$\therefore \quad t_{II} - t_{\perp} = \frac{2L}{c}\left[\frac{1}{1 - v^2/c^2} - \frac{1}{\sqrt{1 - v^2 - c^2}}\right]$$

$$= \frac{2L}{c}\left[1 + \frac{v^2}{c^3} - \left(1 + \frac{1\,v^2}{2\,c^2}\right)\right]$$ ಸುಮಾರಾಗಿ

$$= \frac{L}{c} \quad \frac{v^2}{c^2}$$

ಭೂಮಿಯ ಕಕ್ಷಾವೇಗ 30 ಕಿ.ಮೀ. ಸೆಕೆಂಡ್$^{-1}$. ಬೆಳಕಿನ ವೇಗ $3 \times 10^5$ ಕಿ.ಮೀ. ಸೆಕೆಂಡ್ $^{-1}$

$$\therefore \quad \frac{v}{c} = \frac{30}{3X10^5} = 10^{-4} \qquad \therefore \quad \frac{v^2}{c^2} = 10^{-8}$$

ಮೈಕೆಲ್ಸನ್–ಮಾರ್ಲಿ ಪ್ರಯೋಗ : ಮೇಲಿನ ತರ್ಕದಿಂದ ಬಂದ ಅಂಶವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ಈ ವಿಜ್ಞಾನಿಗಳು ಒಂದು ಉಪಕರಣವನ್ನು ರಚಿಸಿದರು. Q ಬೆಳಕಿಗೆ ಉಗಮ. ಇಲ್ಲಿಂದ ಹೊರಟ ಬೆಳಕು ಅರ್ಧ ಪಾದರಸ ಲೇಪಿತ (ಹಾಫ್




ಸಿಲ್ವರ್ಡ್) P ಗಾಜಿನ ತಟ್ಟೆಯ ಮೇಲೆ ಬಿದ್ದಾಗ ಎರಡು ಭಾಗವಾಗುತ್ತದೆ. ಒಂದು ಭಾಗ P ಮೂಲಕ ಹೊರಗೆ ಬಂದು $S_1$ ಕನ್ನಡಿಯ ಮೇಲೆ ಲಂಬವಾಗಿ ಬಿದ್ದು ಅದೇ ದಿಕ್ಕಿನಲ್ಲಿ ಹಿಂತಿರುಗಿ P ಯಲ್ಲಿ ಪ್ರತಿಫಲನ ಹೊಂದುವುದು. ಇನ್ನೊಂದು ಭಾಗ P ಯ ಮೇಲ್ಮೈನಲ್ಲಿ ಪ್ರತಿಫಲನ ಹೊಂದಿ ಲಂಬವಾಗಿ ತಿರುಗಿ $S_2$ ಕನ್ನಡಿಯ ಮೇಲೆ ಬಿದ್ದು ಅದೇ ದಿಕ್ಕಿನಲ್ಲಿ ಪ್ರತಿಫಲನ ಹೊಂದುವುದು. ಈ ರೀತಿ ಹಿಂತಿರುಗಿ P ಮೂಲಕ ಹೊರಗೆ ಬರುವುದು. ಆದ್ದರಿಂದ OA ದಿಕ್ಕಿನಲ್ಲಿ ಈ ಎರಡು ಭಾಗಗಳೂ ಪ್ರಸಾರವಾಗಿ F ನಲ್ಲಿರುವ ದೂರದರ್ಶಕ

ವನ್ನು ಪ್ರವೇಶಿಸುತ್ತವೆ. ಇಲ್ಲಿ ಪರಸ್ಪರ ಸಂಧಿಸುವಿಕೆಯಿಂದ ವ್ಯತಿಕರಣ ಅಂಚುಗಳು (ಇಂಟರ್‌ಫೆಯರೆನ್ಸ್ ಫ್ರಿಂಜಸ್) ಕಾಣುತ್ತವೆ. $OS_1=OS_2$ ಆಗಿ ಬೆಳಕಿನ ಒಂದು ಭಾಗ ಭೂಮಿಯ ಚಲನೆಯ ದಿಕ್ಕಿನಲ್ಲಿ ಇರುವಂತೆ ಮಾಡಿದರೆ ಬೆಳಕಿನ ಎರಡು ಭಾಗಗಳು F ನ್ನು ತಲಪಲು ಬೇಕಾಗುವ ಕಾಲದಲ್ಲಿ ಸ್ವಲ್ಪ ವ್ಯತ್ಯಾಸವಾಗುವುದರಿಂದ ಈ ರೀತಿ ವ್ಯತಿಕರಣ ಅಂಚುಗಳು ಉಂಟಾಗುವುವು. ಈಗ ಉಪಕರಣವನ್ನು 90° ಯಲ್ಲಿ ತಿರುಗಿಸಿದರೆ ಭೂಮಿಯ ಚಲನೆಯ ದಿಕ್ಕಿನಲ್ಲಿದ್ದ ಬಾಹು ಇದಕ್ಕೆ ಲಂಬವಾಗುತ್ತದೆ. ಆದ್ದರಿಂದ ಅಂಚುಗಳು ಸ್ಥಾನಪಲ್ಲಟ ವನ್ನು ಹೊಂದುತ್ತವೆ. ಈ ಸ್ಥಾನಪಲ್ಲಟವನ್ನು F ನಲ್ಲಿ ನೋಡಬಹುದು.

ಅದರ ಮೊತ್ತ, ಕಾಲದ ಪ್ರಕಾರ $\frac{2Lv^2}{c\,c^2}$ ಬೆಳಕಿನ ಆವರ್ತಸಂಖ್ಯೆ v ಆಗಿದ್ದರೆ,

ಆವರ್ತಕಾಲ . ಈ ಎರಡು

ಕಾಲಗಳ ಪ್ರಮಾಣ $=\frac{2L}{cT}\ \frac{v^2}{c^2}$. ತರಂಗಮಾನ $\lambda = cT$

ಪ್ರಮಾಣ

ಇವರ ಪ್ರಯೋಗದಲ್ಲಿ ಈ ಪ್ರಮಾಣ 0.37. ಇಷ್ಟು ಸ್ವಲ್ಪವಾದರೂ ಇದನ್ನು ನಿಖರವಾಗಿ ಅಳೆಯಲು ಆಗುತ್ತಿತ್ತು. ಆದರೆ ಇವರ ಪ್ರಯೋಗದಲ್ಲಿ ಸ್ಥಾನಪಲ್ಲಟ ಆಗಲೇ ಇಲ್ಲ. ಆದ್ದರಿಂದ ಬೆಳಕಿನ ವೇಗ ಎಲ್ಲ ದಿಕ್ಕಿನಲ್ಲಿಯೂ ಒಂದೇ ಮಾನವುಳ್ಳದ್ದು. ಭೂಮಿಯ ಚಲನೆ ಬೆಳಕಿನ ವೇಗದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಭೂಮಿ ಈಥರನ್ನು ತನ್ನ ಜೊತೆಯಲ್ಲಿಯೇ ಸೇರಿಸಿಕೊಂಡು ಒಂದೇ ವೇಗದಲ್ಲಿ ಒಟ್ಟಿಗೆ ಚಲಿಸುತ್ತದೆಯೆಂದು ನಂಬಬೇಕಾಯಿತು. ಅಂದರೆ ಅವೆರಡರ ಸಾಪೇಕ್ಷ ವೇಗ v=0.

ಮೈಕೆಲ್‌ಸನ್–ಮಾರ್ಲಿ ಪ್ರಯೋಗದ ಅಭಾವರೂಪದ ಫಲಿತಾಂಶವನ್ನು (ನೆಗೆಟಿವ್ ರಿಸಲ್ಟ್) ಫಿಟ್ಸ್‌ಜೆರಲ್ಡ್ ಈ ರೀತಿ ಪ್ರತಿಪಾದಿಸಿದ. ಒಂದು ವಸ್ತು ಭೂಮಿಯ ಚಲನದಿಕ್ಕಿನಲ್ಲಿ ಚಲಿಸುತ್ತಿದ್ದರೆ ಅದರ ಉದ್ದ $\sqrt{I-v^2/c^2}$ ಪ್ರಮಾಣದಲ್ಲಿ ಸಂಕುಚಿತವಾಗುವುದು. ಇದಕ್ಕೆ ಲಂಬವಾದ ದಿಕ್ಕಿನಲ್ಲಿ ಚಲನದಿಂದ ಉದ್ದದಲ್ಲಿ ವ್ಯತ್ಯಾಸವೇನೂ ಆಗುವುದಿಲ್ಲ. ಈ ರೀತಿಯ ಊಹೆಯಿಂದ ಬೆಳಕು ಪರಸ್ಪರ ಲಂಬವಾದ ಈ ಎರಡು ದಿಕ್ಕುಗಳಲ್ಲಿ ಚಲಿಸಲು ಒಂದೇ ಮಾನದ ಕಾಲ ಬೇಕಾಗುವುದು. ಈ ಊಹೆಗೆ ಸರಿಯಾದ ಸಿದ್ಧಾಂತವಿಲ್ಲದ್ದರಿಂದ ಇದಕ್ಕೆ ಪ್ರಾಶಸ್ತ್ಯ ದೊರಕಲ್ಲಿಲ್ಲ.

$T \doteq \frac{2L}{\lambda v}\ \frac{v^2}{c^2}$

ಐನ್‌ಸ್ಟೈನ್ ಸಾಪೇಕ್ಷತಾ ಸಿದ್ಧಾಂತ: ಈಥರ್ ಬಹಳ ತೊಡಕಿನ ವೈಜ್ಞಾನಿಕ ಸಮಸ್ಯೆಗಳನ್ನು ತಂದೊಡ್ಡಿತು. ಈ ಸಮಸ್ಯೆಗಳ ಪರಿಹಾರಕ್ಕಾಗಿ ಐನ್‌ಸ್ಟೈನ್ ಈಥರ್ ಸಿದ್ಧಾಂತವನ್ನು ಸಂಪೂರ್ಣವಾಗಿ ತ್ಯಜಿಸಿದ. ಇದಕ್ಕೆ ಪ್ರತಿಯಾಗಿ ಅತ್ಯಂತ ಹೆಸರುವಾಸಿಯಾದ ಸಾಪೇಕ್ಷ ಸಿದ್ಧಾಂತವನ್ನು ಪ್ರತಿಪಾದಿಸಿದ. ಈ ಸಿದ್ಧಾಂತದ ಮುಖ್ಯಅಂಶಗಳು ಈ ರೀತಿ ಇವೆ: 1 ನಿರಪೇಕ್ಷಚಲನೆಯನ್ನು ಅಳೆಯುವುದು ಅಸಾಧ್ಯ. 2. ಬೆಳಕಿನ ವೇಗ ಯಾವಾಗಲೂ ಎಲ್ಲ ದಿಕ್ಕಿನಲ್ಲೂ ಒಂದೇ. ಬೆಳಕಿನ ಉಗಮದ ಚಲನೆಯಿಂದಾಗಲೀ ಅಥವಾ ಅದನ್ನು ವೀಕ್ಷಿಸುವವನ ಚಲನೆಯಿಂದಾಗಲೀ ಅದರ ಮೌಲ್ಯ ವ್ಯತ್ಯಾಸವಾಗುವುದಿಲ್ಲ. 3. ಬಾಹ್ಯಾಕಾಶಕ್ಕೆ (ಫ್ರೀಸ್ಪೇಸ್) ಈಥರಿಗೆ ಇರುವ ಗುಣಗಳೇ ಇರುವುದರಿಂದ ಈಥರಿನ ಅಸ್ತಿತ್ವವನ್ನು ತ್ಯಜಿಸಬಹುದು. ವಸ್ತು ಒಂದೇ ಆದರೂ ಭಿನ್ನವೇಗಗಳಲ್ಲಿ ಚಲಿಸುತ್ತಿರುವ ಎರಡು ಚೌಕಟ್ಟುಗಳಲ್ಲಿ ಅದರ ಅಳತೆಗಳು ಭಿನ್ನವಾಗಿರುವುವೆಂದು ಈ ಸಿದ್ಧಾಂತಗಳಿಂದ ತಿಳಿಯಿತು. ಫಿಟ್ಸ್‌ಗೆರಾಲ್ಡನ ಸಂಕೋಚವಾದ, ಊಹೆಯ ಬದಲು, ಸಿದ್ಧಾಂತದ ರೀತ್ಯಾ ಸಮರ್ಥಿಸಲ್ಪಟ್ಟಿತು.

ಸಾಪೇಕ್ಷ ಸಿದ್ಧಾಂತದಿಂದ ಬುಧಗ್ರಹದ ಚಲನೆಯನ್ನು ಸಂಪೂರ್ಣವಾಗಿ ವಿವರಿಸಲು ಸಾಧ್ಯವಾಯಿತು. ಅತೀ ದೊಡ್ಡ ವಸ್ತುವಿನ ಸಮೀಪದಲ್ಲಿ ಬೆಳಕು ಪ್ರಸಾರವಾದರೆ ಬೆಳಕಿನ ಕಿರಣ ಬಾಗುವುದೆಂದು ಐನ್‌ಸ್ಟೈನ್ ಭವಿಷ್ಯ ನುಡಿದಿದ್ದ. ಸಂಪೂರ್ಣ ಸೂರ್ಯಗ್ರಹಣ ಕಾಲದಲ್ಲಿ ಬೆಳಕಿನ ಕಿರಣ ಈ ರೀತಿ ಬಾಗುವುದನ್ನು ಖಗೋಳವಿಜ್ಞಾನಿಗಳು ದೂರದರ್ಶಕದಿಂದ ಅವಲೋಕಿಸಿ ಸ್ಥಿರಪಡಿಸಿದರು.

19ನೆಯ ಶತಮಾನದಲ್ಲಿ ಈಥರಿಗೆ ಅತೀ ಮಹತ್ವದ ಸ್ಥಾನವನ್ನು ವಿಜ್ಞಾನಿಗಳು ಕೊಟ್ಟಿದ್ದರು. ಇದರಿಂದ ತರಂಗಸಿದ್ಧಾಂತವನ್ನು ಪ್ರತಿಪಾದಿಸಿ ಅನೇಕ ಬೆಳಕಿನ ಪ್ರಕರಣಗಳನ್ನು ವಿವರಿಸಲು ಸಾಧ್ಯವಾಯಿತು. ನ್ಯೂಟನ್ನನ ಬೆಳಕಿನ ಕಣಸಿದ್ಧಾಂತ ಸಂಪೂರ್ಣವಾಗಿ ಅಳಿಸಿಹೋಗಲು ಕಾರಣವಾಯಿತು. 20ನೇ ಶತಮಾನದಲ್ಲಿ ಇದರ ಪ್ರಾಮುಖ್ಯ ಕಡಿಮೆಯಾಗುತ್ತಾ ಬಂದು ಸಂಪೂರ್ಣವಾಗಿ ನಶಿಸಿಹೋಗಬಹುದಾದ ಪರಿಸ್ಥಿತಿ ಒದಗಿದೆ. ದ್ಯುತಿವಿದ್ಯುತ್ ಪರಿಣಾಮ ಮತ್ತು ಕಾಂಪ್ಟನ್ ಪರಿಣಾಮ ಇವುಗಳಿಂದ ಕಣದ ಸಿದ್ಧಾಂತಕ್ಕೆ ಸ್ವಲ್ಪ ಉತ್ತೇಜನ ದೊರೆಯಿತು. ಏಕೆಂದರೆ ಇವೆರಡನ್ನೂ ತರಂಗ ಸಿದ್ಧಾಂತದ ಮೂಲಕ ವಿವರಣೆ ಕೊಡಲು ಆಗುವುದಿಲ್ಲ. ಆದ್ದರಿಂದ ಈ ಎರಡು ಸಿದ್ಧಾಂತಗಳನ್ನು ಕ್ರೋಡೀಕರಿಸಿ ತರಂಗಬಲವಿಜ್ಞಾನ (ವೇವ್ ಮೆಕ್ಯಾನಿಕ್ಸ್) ಎಂಬ ನೂತನ ಸಿದ್ಧಾಂತಗಳನ್ನು ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ. ಈ ರೀತಿಯಾಗಿ ಭೌತವಿಜ್ಞಾನದಲ್ಲಿ ಹೊಸ ವಿಷಯಗಳು ಗೋಚರವಾದಾಗ ಸಿದ್ಧಾಂತಗಳು ಬದಲಾಯಿಸುತ್ತಾ ಮಾನವನ ಕುತೂಹಲವನ್ನು ಕೆರಳಿಸುತ್ತ ಇರುವಂತೆ ಮಾಡುತ್ತವೆ. (ಎ.ಪಿ.)

**ಈಥರುಗಳು:** ಎರಡು ಹೈಡ್ರೊಕಾರ್ಬನ್ ಗುಂಪುಗಳು (R ಮತ್ತು R') ಒಂದು ಆಕ್ಸಿಜನ್ ಪರಮಾಣುವಿನೊಂದಿಗೆ R-O-R' ಎಂಬ ಸಾಮಾನ್ಯ ಸೂತ್ರಕ್ಕನುಗುಣವಾಗಿ ರಚನೆಗೊಂಡ ಆರ್ಗ್ಯಾನಿಕ್ ಸಂಯುಕ್ತವಸ್ತು. ಇಲ್ಲಿ R ಮತ್ತು R' ಗಳು ಆಲ್ಕೈಲ್, ಅರೈಲ್ ಅಥವಾ ಸೈಕ್ಲೋ ಆಲ್ಕೈಲ್ ಪುಂಜಗಳಾಗಿರಬಹುದು. ಇದನ್ನು ಸಾಮಾನ್ಯವಾಗಿ R, R ಈಥರುಗಳೆಂದು ಕರೆಯುತ್ತಾರೆ. IUPAC (ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಪ್ಯೂರ್ ಅಂಡ್ ಅಪ್ಲೈಡ್ ಕೆಮಿಸ್ಟ್ರಿ) ನಿಯಮದ ಪ್ರಕಾರ R-O ಪುಂಜವನ್ನು ಆಲ್ಕಾಕ್ಸಿ ಅಥವಾ ಅರಾಕ್ಸಿ ಪುಂಜವೆಂದು ಕರೆದು ಈ ಪುಂಜ R'Hನ ಪಲ್ಲಟಿತ ಪುಂಜವೆನ್ನಲಾಗುತ್ತದೆ. ಉದಾಹರಣೆಗೆ, $C\text{-}H_3\text{-}O\text{-}C_2\text{-}H_5$. ಇದರ ಬಳಕೆಯ ಹೆಸರು ಮೀಥೈಲ್ ಈಥೈಲ್ ಈಥರ್; IUPAC. ಹೆಸರು ಮೆಥಾಕ್ಸಿ ಈಥೇನ್.

ಅನೇಕ ಈಥರುಗಳಿಗೆ ನಿಯಮರಹಿತ ಪರಿಚಿತ ಹೆಸರುಗಳು ಬಳಕೆಯಲ್ಲಿವೆ. RR' ಗಳು ಒಂದೇ ಬಗೆಯವಾದರೆ ಸರಳ ಈಥರುಗಳು ಸಾಮಾನ್ಯವಾಗಿ ಹಿತವಾದ ವಾಸನೆಯುಳ್ಳ ದ್ರವ ವಸ್ತುಗಳು. ಹೆಚ್ಚಿನ ಅಣುತೂಕವುಳ್ಳ ಈಥರುಗಳು ಘನವಸ್ತುಗಳು. ಸಾಮಾನ್ಯವಾಗಿ ಇವು ನೀರಿನೊಡನೆ ಅಧಿಕಾಂಶದಲ್ಲಿ ಬೆರೆಯವು. ಆದರೆ ಸಾವಯವ ಲೀನಕಾರಿಗಳಲ್ಲಿ ಪೂರ್ಣವಾಗಿ ಲೀನವಾಗುತ್ತವೆ. ಈಥರ್ ಎಂಬ ಹೆಸರಿನಿಂದ ಹೆಚ್ಚು ಪರಿಚಿತವಾಗಿರುವ ಸಂಯುಕ್ತ ಡೈ ಈಥೈಲ್ ಈಥರ್.

ತಯಾರಿಕೆ: ಇಲ್ಲಿ ತಿಳಿಸಿರುವ ವಿಧಾನಗಳಲ್ಲಿ ಮೊದಲನೆಯ ಎರಡು ವಿಧಾನಗಳು ಬಹು ಮುಖ್ಯವಾದುವು. 1. ಆಲ್ಕೊಹಾಲುಗಳನ್ನು ವಿಶಿಷ್ಟ ವೇಗವರ್ಧಕಗಳ ಸಂಪರ್ಕದಲ್ಲಿ ನಿರ್ಜಲಗೊಳಿಸಿದಾಗ ಈಥರುಗಳು ಉತ್ಪತ್ತಿಯಾಗುತ್ತವೆ. ಈ ಕ್ರಿಯೆಗೆ ಹಲವಾರು ಖನಿಜಾಮ್ಲಗಳನ್ನು (ಮಿನರಲ್ ಆ್ಯಸಿಡ್ಸ್) ವೇಗವರ್ಧಕಗಳಾಗಿ ಉಪಯೋಗಿಸಬಹುದು.

$$2\ ROH \rightarrow R\text{-}O\text{-}R + H_2O$$

ಹಿರಿಯ ತೂಕದ ಆಲ್ಕೊಹಾಲುಗಳಲ್ಲಿ ಜಲನಿವಾರಣೆ ಬೇರೊಂದು ಮಾರ್ಗದಲ್ಲಿ ನಡೆದು ಆಲ್ಕೀನುಗಳ ಸೃಷ್ಟಿಯಾಗುವುದರಿಂದ ಈ ವಿಧಾನ ಕೇವಲ ಕಿರಿಯ ಅಣುತೂಕದ ಈಥರುಗಳ ತಯಾರಿಕೆಗೆ ಮಾತ್ರ ಉಪಯುಕ್ತ. ಮಿಶ್ರ ಈಥರುಗಳನ್ನು ಇಲ್ಲಿ ಶುದ್ಧರೂಪದಲ್ಲಿ ತಯಾರಿಸಲು ಸಾಧ್ಯವಿಲ್ಲ. ಇದನ್ನು ಈ ಗುಂಪಿನ ಮುಖ್ಯ ಸಂಯುಕ್ತವಾದ ಡೈ ಈಥೈಲ್ ಈಥರಿನ ತಯಾರಿಕೆಗೆ ಉಪಯೋಗಿಸಲಾಗುತ್ತಿದೆ.

2. ವಿಲಿಯಂಸನ್ ವಿಧಾನದಲ್ಲಿ ಲೋಹದ ಅಲ್ಕಾಕ್ಸೈಡಿನ (ಅರಾಕ್ಸೈಡ್) ಮೇಲೆ ನಡೆಯುವ ಆಲ್ಕೈಲ್ (ಅರೈಲ್) ಹ್ಯಾಲೈಡಿನ ವರ್ತನೆಯಿಂದ ಈಥರುಗಳ ಉತ್ಪಾದನೆಯಾಗುತ್ತದೆ.

$$R\text{—}ONa + R^{I}X \grave{a} R^{I}\text{-}OR + NaX$$

ಈ ವಿಧಾನವನ್ನು ಸಾರ್ವತ್ರಿಕವಾಗಿ ಎಲ್ಲ ಸರಳ ಮತ್ತು ಮಿಶ್ರ ಈಥರುಗಳ ತಯಾರಿಕೆಗೆ ಉಪಯೋಗಿಸಬಹುದು.

3. ಪಟುವಾದ ಹ್ಯಾಲೈಡುಗಳನ್ನು ಕ್ಷಾರವಸ್ತುಗಳೊಡನೆ ವರ್ತಿಸುವಂತೆ ಮಾಡಿದಾಗ ಈಥರುಗಳು ದೊರೆಯುತ್ತವೆ.

ಕ್ಷಾರ

$CH_2=CH\text{-}CH_2Cl \rightarrow CH_2=CH\text{-}CH_2\text{-}OH$

$\downarrow$

$CH_2=CH\text{-}CH_2\text{-}O\text{-}CH_2\text{-}CH=CH_2$

4. ಆಲ್ಕೈಲ್ ಹ್ಯಾಲೈಡುಗಳು ಬೆಳ್ಳಿಯ ಆಕ್ಸೈಡಿನೊಡನೆ ವರ್ತಿಸಿದಾಗ ಈಥರುಗಳ ಸೃಷ್ಟಿಯಾಗುತ್ತದೆ.

$$2\ RX + Ag_2O \rightarrow R\text{-}O\text{-}R + 2AgX$$

ರಾಸಾಯನಿಕ ಗುಣಲಕ್ಷಣಗಳು: ಈಥರುಗಳ ಪಟುತ್ವ (ಆ್ಯಕ್ಟಿವಿಟಿ) ಕಡಿಮೆ. ಕ್ಷಾರಗಳಾಗಲಿ, ಕ್ಷಾರಲೋಹಗಳಾಗಲಿ ಇವುಗಳ ಮೇಲೆ ವರ್ತಿಸಲಾರವು. ಬಲುಕಾಲ ಗಾಳಿಯಲ್ಲಿ ಇಟ್ಟರೆ ಪರಾಕ್ಸೈಡುಗಳಾಗಿ ಪರಿವರ್ತಿತವಾಗುತ್ತವೆ. ಆದ್ದರಿಂದ ಈಥರುಗಳನ್ನು ಉಪಯೋಗಿಸುವಾಗ ಜಾಗರೂಕತೆ ಅಗತ್ಯ. ಅತಿ ತೀವ್ರ ಉತ್ಕರ್ಷಣಕಾರಿಗಳು ಈಥರ್ ಅಣುವನ್ನು ಛೇದನ ಮಾಡುತ್ತವೆ. ಹಲವು ಆಮ್ಲಗಳು, ಆಮ್ಲ ಹ್ಯಾಲೈಡುಗಳು ಮತ್ತು ಫಾಸ್ಫರಸ್ ಪೆಂಟಕ್ಲೋರೈಡ್ ಸಹ ಈಥರಿನ ಅಣುಛೇದನ ಮಾಡಬಲ್ಲವು. ಈ ಬಗೆಯ ಅಣುಛೇದನ ಕ್ರಿಯೆಗಳನ್ನು ಮುಂದೆ ನಿರ್ದೇಶಿಸಲಾಗಿದೆ.

$ROR' + HI \rightarrow RI + R'OH$

$ROR' + 2HI \rightarrow R'I + RI + H_2O$

$ROR' + CH_3COI \rightarrow RI + CH_3COOR'$

$ROR + PCl_5 \rightarrow 2RCl + POCl_3$

ಮೆಥಾಕ್ಸಿ ಪುಂಜದೊಡನೆ ಹೈಡ್ರೊ ಅಯೊಡಿಕ್ ಆಮ್ಲದ ವರ್ತನೆ ಸಂಯುಕ್ತವೊಂದರಲ್ಲಿ ಇರುವ ಮೆಥಾಕ್ಸಿ ಪುಂಜಗಳ ಜೀಸೆಲ್ ಪರಿಮಾಣಾತ್ಮಕ ವಿಶ್ಲೇಷಣಾ ವಿಧಾನದ ಆಧಾರವಾಗಿದೆ. ನಿರವಯವ ಹ್ಯಾಲೈಡುಗಳು ಮತ್ತು ಗ್ರಿನಾರ್ಡ್ ಸಂಯುಕ್ತಗಳೊಡನೆ ಈಥರುಗಳು ಕೂಡಿ ಸಂಕೀರ್ಣ ಸಂಯುಕ್ತಗಳನ್ನು (ಕಾಂಪ್ಲೆಕ್ಸ್ ಕಾಂಪೌಂಡ್ಸ್ ) ನೀಡುತ್ತವೆ. ಅಲ್ಲದೆ ಪ್ರೋಟಾನ್ ದಾನಿಗಳೊಡನೆ (ಡೋನರ್ಸ್) ವರ್ತಿಸಿ ಅಕ್ಸೋನಿಯಂ ಲವಣಗಳನ್ನು ಕೊಡುತ್ತವೆ.

ಆಕ್ಸೋನಿಯಮ್ ಲವಣ

ಹ್ಯಾಲೋಜನ್ನುಗಳೊಡನೆ ಈಥರುಗಳು ಅತಿನೀಲ ಬೆಳಕಿನಲ್ಲಿ ವರ್ತಿಸಿ ಹ್ಯಾಲೈಡುಗಳನ್ನು ನೀಡುತ್ತವೆ. ಈ ಕ್ರಿಯೆಯಲ್ಲಿ ಆಕ್ಸಿಜನ್ನಿನ ಪಾರ್ಶ್ವದಲ್ಲಿರುವ ಇಂಗಾಲಕ್ಕೆ ಬಂಧಿತವಾಗಿರುವ ಹೈಡ್ರೋಜನ್ ಪಲ್ಲಟಗೊಳ್ಳುತ್ತದೆ.

$$R—CH_2\text{-}O\text{-}R'+Cl_2 \rightarrow R\text{-}\underset{\displaystyle Cl}{\underset{|}{CH}}\text{-}O\text{-}R'+HCl$$

ವಿಶಿಷ್ಟ ಈಥರುಗಳು: ವೃತ್ತ ಈಥರ್ ಅಥವಾ ಎಪಾಕ್ಸೈಡುಗಳನ್ನು ಹೆಟೆರೊಸೈಕ್ಲಿಕ್ ಸಂಯುಕ್ತಗಳ ಗುಂಪಿಗೆ ಸೇರಿಸಬಹುದು. ಈ ಬಗೆಯ ಈಥರುಗಳಲ್ಲಿ ಎಥಿಲೀನ್ ಆಕ್ಸೈಡ್, ಡೈಆಕ್ಸೇನ್ ಮತ್ತು ಫ್ಯೂರಾನ್ ಸಂಯುಕ್ತಗಳು ಮತ್ತು ಅವುಗಳ ಉತ್ಪನ್ನಗಳು ಮುಖ್ಯವಾದವು.



ಎಥಿಲಿನ್ ಆಕ್ಸೈಡ್ ಡೈಆಕ್ಸೇನ್ ಫ್ಯೂರಾನ್

ಎಪಾಕ್ಸೈಡ್ ಪುಂಜಗಳನ್ನುಳ್ಳ ಎಪಾಕ್ಸಿ ಅಂಟು ಮತ್ತು ಪ್ಲಾಸ್ಟಿಕ್ಕುಗಳು ಹಲವು ವರ್ಷಗಳಿಂದೀಚೆಗೆ ತಮ್ಮ ಅತ್ಯುತ್ತಮ ಅಂಟುಗುಣ ಮತ್ತು ತೀವ್ರ ರಾಸಾಯನಿಕ ಜಡತ್ವದಿಂದ ಪ್ರಾಮುಖ್ಯ ಪಡೆಯುತ್ತಿವೆ. ಈಥರ್ ಪುಂಜಗಳನ್ನು ಒಳಗೊಂಡಿರುವ ಆಲ್ಕೋಹಾಲುಗಳಾದ ಸೆಲ್ಲೊಸಾಲ್ವುಗಳು (ಉದಾಹರಣೆಗೆ, ಈಥೈಲ್ ಸೆಲ್ಲೊಸಾಲ್ವ್, $CH_3CH_2O—CH_2CH_2\text{-}OH$), ಪಾಲಿಎಥಿಲೀನ್ ಗ್ಲೈಕಾಲುಗಳು (ಉದಾಹರಣೆಗೆ: ಡೈ ಎಥಿಲೀನ್ ಗ್ಲೈಕಾಲ್ $HOCH_2\text{-}CH_2\text{-}OCH_2CH_2OH$) ಇಂದು ಅನೇಕ ವಿಶಿಷ್ಟ ಸಂದರ್ಭಗಳಲ್ಲಿ ಲೀನಕಾರಿಗಳಾಗಿ ಕೀಲೆಣ್ಣೆಗಳಾಗಿ ಉಪಯೋಗಿಸಲ್ಪಡುತ್ತಿವೆ.

ಈ ವಿಶಿಷ್ಟ ಈಥರುಗಳನ್ನು ತಯಾರಿಸಲು ಮುಖ್ಯವಾಗಿ ವಿಲಿಯಂಸನ್ ವಿಧಾನವನ್ನು ಅನುಸರಿಸಲಾಗುತ್ತದೆ. ಹ್ಯಾಲೈಡ್ ಪುಂಜ ಮತ್ತು ಆಲ್ಕೊಹಾಲ್ ಪುಂಜ ಇವೆರಡೂ ಇರುವ ಸಂಯುಕ್ತವನ್ನು ಅಂತರ್ಗತ (ಇಂಟರ್ನಲ್) ವಿಲಿಯಂಸನ್ ಕ್ರಿಯೆಗೆ ಒಳಪಡಿಸಿದಾಗ ಎಪಾಕ್ಸೈಡುಗಳು ದೊರೆಯುತ್ತವೆ.

$$X\text{-}CH_2\text{-}CH_2\text{-}CH_2\text{-}CH_2\text{-}OH \rightarrow X\text{-}CH_2\text{-}CH_2\text{-}CH_2\text{-}CH_2\text{-}ONa$$



ಟೆಟ್ರಹೈಡ್ರೋಫ್ಯೂರಾನ್ (ಎಪಾಕ್ಸೈಡ್)

ಉಪಯುಕ್ತತೆ: ಅತಿಪರಿಚಿತವಾದ ಡೈ ಈಥೈಲ್ ಮತ್ತು ಇನ್ನೂ ಅನೇಕ ಅಲ್ಪ ಅಣುತೂಕದ ಈಥರುಗಳು ಅಗಾಧ ಪ್ರಮಾಣದಲ್ಲಿ ಕ್ರಿಯಾಲೀನಕಾರಿಗಳಾಗಿ (ರೀ ಆಕ್ಷನ್ ಸಾಲ್ವೆಂಟ್ಸ್), ಸಂಸ್ಕರಣ ಲೀನಕಾರಿಗಳಾಗಿ (ಎಕ್ಸ್‌ಟ್ರಾಕ್ಷನ್ ಸಾಲ್ವೆಂಟ್ಸ್) ಉಪಯೋಗಿಸಲಾಗುತ್ತದೆ. ಈ ಬಗೆಯಾಗಿ ಈಥರುಗಳು ಬಣ್ಣಗಳಲ್ಲಿ, ಔಷಧ ದ್ರವ್ಯಗಳ ತಯಾರಿಕೆಗಳಲ್ಲಿ ಉಪಯೋಗಕ್ಕೆ ಬರುತ್ತವೆ. ಗ್ರಿನಾರ್ಡ್‌ಕ್ರಿಯೆಗೆ ಸಾಮಾನ್ಯವಾಗಿ ಈಥರುಗಳನ್ನು ಡೈ ಈಥೈಲ್ ಈಥರ್ ಲೀನಕಾರಿ. ಡೈ ಫೀನೈಲ್ ಈಥರಿನಂಥ ಹಲವು ಹಿರಿಯ ಅಣುತೂಕದ ಈಥರುಗಳನ್ನು ಶಾಖಪಾತ್ರೆಗಳಲ್ಲಿ ಮಾಧ್ಯಮವಾಗಿ ಉಪಯೋಗಿಸಲಾಗುತ್ತದೆ.

**ವೈದ್ಯದಲ್ಲಿ ಈಥರ್:** ಅರಿವಳಿಕವಾಗಿ (ಅನೀಸ್ಥೆಟಿಕ್) ಬಳಸುವ ಈಥೈಲ್ ಈಥರ್, ಈಥೈಲ್ ಮದ್ಯಸಾರದ ಮೇಲೆ ಸಲ್ಫ್ಯೂರಿಕ್ ಆಮ್ಲ ವರ್ತಿಸುವುದರಿಂದ ದೊರೆಯುತ್ತದೆ. ಸಿಹಿರುಚಿಯ ಗೊತ್ತಾದ ಬಗೆಯ ವಾಸನೆಯ, ಚುರುಕಾಗಿ ಉರಿವ, ಬಣ್ಣವಿರದ, ಆರಿಹೋಗದ ದ್ರವ, ನೀರಿನಲ್ಲಿ ಅಷ್ಟಾಗಿ ಅಲ್ಲದಿದ್ದರೂ ಮದ್ಯಸಾರ, ಕ್ಲೋರೋಫಾರಂ ಮತ್ತು ಎಣ್ಣೆಗಳಲ್ಲಿ ಕರಗುವುದು. ಅರಿವಳಿಕ ಈಥರಿನಲ್ಲಿ ಅಸಿಟಾಲ್ಡಿಹೈಡ್, ಮೀಥೈಲ್ ಮದ್ಯಸಾರ, ಪೆರಾಕ್ಸೈಡುಗಳು ಇರಕೂಡದು. ಶಸ್ತ್ರಕ್ರಿಯೆಗಾಗಿ ಅರಿವಳಿಸಲು ಇದರಷ್ಟು ಸಾಮಾನ್ಯವಾಗಿ ಬಳಸುವ, ಅಪಾಯಕರವಲ್ಲದ ವಸ್ತು ಬೇರೊಂದಿಲ್ಲ ಎನ್ನಬಹುದು. ಶಸ್ತ್ರಕ್ರಿಯೆಗಾಗಿ ಅರಿವಳಿಸುವ, ಮಿದುಳುಕಾಂಡವನ್ನು (ಮೆಡುಲ್ಲ) ಮಾರಕವಾಗಿ ಕುಂದಿಸುವ ಪ್ರಮಾಣಮಟ್ಟಗಳಲ್ಲಿ ಅಪಾರ ವ್ಯತ್ಯಾಸವಿದೆ. ಬೆಂಕಿ ತಗಲಿದರೆ ಉರಿಯುತ್ತದೆ; ಸಿಡಿಯುತ್ತದೆ. ಇದರಿಂದ ಅರಿವಳಿಸಲು ಹೆಚ್ಚು ಹೊತ್ತು ಹಿಡಿಯುವುದಲ್ಲದೆ ಉಸಿರ್ನಾಳದ ಒಳಪೊರೆಯನ್ನು ಸಾಕಷ್ಟು ಕೆರಳಿಸುವುದರಿಂದ ಒಳಗೆ ಲೋಳೆ ಸುರಿಯುತ್ತದೆ. ಈ ಲೋಳೆ ಸುರಿತವನ್ನು ಹಯೊಸೀನ್, ಅಟ್ರೋಪೀನ್ ಮದ್ದುಗಳಿಂದ ತಡೆಯಬಹುದು. ಇದು ಅನುವೇದನಾ (ಸಿಂಪತೆಟಿಕ್) ಕೇಂದ್ರಗಳನ್ನು ಚೋದಿಸುವುದರಿಂದ, ರಕ್ತ ಒತ್ತಡ, ಗುಂಡಿಗೆ ವೇಗ, ರಕ್ತದ ಸಕ್ಕರೆಗಳನ್ನು ಹೆಚ್ಚಿಸುತ್ತದೆ. ಸ್ನಾಯುಗಳನ್ನು ಸಡಿಲಿಸುವ ಗುಣವೂ ತಕ್ಕಮಟ್ಟಿಗಿದೆ. (ನೋಡಿ- ಅರಿವಳಿಕೆ,– ಅರಿವಳಿಕಗಳು) (ಡಿ.ಎಸ್.ಎಸ್.)

**ಈಥೇನ್:** ಪರ್ಯಾಪ್ತ ಆ್ಯಲಿಫ್ಯಾಟಿಕ್ ಹೈಡ್ರೋಕಾರ್ಬನ್ನುಗಳಾದ ಪ್ಯಾರಫಿನ್ ಅಥವಾ ಆಲ್ಕೇನ್ ವರ್ಗಕ್ಕೆ ಸೇರಿದ ಸಂಯುಕ್ತ. ರಚನಾ ಸೂತ್ರ ಕೆಳಕಂಡಂತಿದೆ.



ನೈಸರ್ಗಿಕ ಅನಿಲದಲ್ಲಿ ಶೇ. 5–20 ರಷ್ಟು ಈಥೇನಿರುತ್ತದೆ. ಮೀಥೇನ್ ತಯಾರಿಸಲು ನಾವು ಬಳಸುವ ಸಾರ್ವತ್ರಿಕ ವಿಧಾನಗಳು ಇದಕ್ಕೂ ಅನ್ವಯಿಸುತ್ತವೆ. ಸೋಡಿಯಂ ಪ್ರೊಪಿಯೊನೇಟನ್ನು ಸೋಡಾ ಸುಣ್ಣದೊಡನೆ ಕಾಯಿಸಿ ಈಥೇನ್ ಪಡೆಯಬಹುದು.

$$CH_3 \cdot CH_2 COONa + NaOH \longrightarrow CH_3\text{-}CH_3 + Na_2CO_3$$

ಸೋಡಿಯಂ ಪ್ರೊಪಿಯೊನೇಟ್ ಈಥೇನ್

ಈಥೈಲ್ ಆಲ್ಕೊಹಾಲಿನ ಸಮ್ಮುಖದಲ್ಲಿ ಸತು–ತಾಮ್ರದ ಜೋಡಿಯಿಂದ ಈಥೈಲ್ ಅಯೊಡೈಡನ್ನು ಅಪಕರ್ಷಿಸಿದಾಗ ಪರಿಶುದ್ಧ ಈಥೇನ್ ದೊರೆಯುವುದು.

$$CH_3 \cdot CH_2 . I + 2\ [H] \rightarrow CH_3 - CH_3 + HI$$

ಶುಷ್ಕ ಈಥರ್ ದ್ರಾವಣದಲ್ಲಿ ಮೀಥೈಲ್ ಅಯೊಡೈಡ್ ಮತ್ತು ಶುದ್ಧ ಸೋಡಿಯಂ ಲೋಹ ಪರಸ್ಪರ ವರ್ತಿಸಿದಾಗ ಈಥೇನ್ ಹುಟ್ಟುವುದು.

$$CH_3 I + 2Na + I CH_3 \longrightarrow 2NaI + CH_3\text{-}CH_3$$

ವುರ್ಟ್ಸ್ ಎಂಬ ಫ್ರೆಂಚ್ ರಸಾಯನ ವಿಜ್ಞಾನಿ 1855ರಲ್ಲಿ ಈ ಕ್ರಿಯಾವಿಧಾನವನ್ನು ಕಂಡುಹಿಡಿದ. ಆದ್ದರಿಂದ ಇದಕ್ಕೆ ವುರ್ಟ್ಸ್ ಸಂಯೋಜನೆ ಎಂದು ಹೆಸರಾಗಿದೆ. ಸೋಡಿಯಂ ಅಸಿಟೇಟಿನ ಪ್ರಬಲ ನೀರಿನ ದ್ರಾವಣವನ್ನು ಪ್ಲ್ಯಾಟಿನಂ ಧನಧ್ರುವದ ನೆರವಿನಿಂದ ವಿದ್ಯುದ್ವಿಭಜನೆ ಮಾಡಿದಾಗ ಈಥೇನ್ ಮತ್ತು ಇಂಗಾಲದ ಡೈಆಕ್ಸೈಡುಗಳು ಧನಧ್ರುವದಲ್ಲೂ ಸೋಡಿಯಂ ಹೈಡ್ರಾಕ್ಸೈಡ್ ಮತ್ತು ಹೈಡ್ರೊಜನ್ ಋಣ ಧ್ರುವದಲ್ಲೂ ಬಿಡುಗಡೆಯಾಗುವುವು.



ಸೋಡಿಯಂ ಅಸಿಟೇಟ್

1848ರಲ್ಲಿ ಜರ್ಮನ್ ರಸಾಯನ ವಿಜ್ಞಾನಿ ಎ.ಡಬ್ಲ್ಯು.ಎಚ್.ಕೋಲ್ಬೆ ಈ ಕ್ರಿಯಾವಿಧಾನವನ್ನು ಶೋಧಿಸಿದುದರಿಂದ ಇದಕ್ಕೆ ಕೋಲ್ಬೆ ಸಂಯೋಜನೆ ಎಂಬ ಹೆಸರು ಬಂದಿದೆ. ಎಥಿಲೀನ್ ಮತ್ತು ಹೈಡ್ರೊಜನ್ನುಗಳ ಮಿಶ್ರಣವನ್ನು ಉನ್ನತ ಉಷ್ಣತೆಯಲ್ಲಿ ಸೂಕ್ಷ್ಮಕಣಗಳ ರೂಪದಲ್ಲಿರುವ ನಿಕ್ಕಲ್ ವೇಗವರ್ಧಕದ ಮೇಲೆ ಹಾಯಿಸಿಯೂ ಈಥೇನ್ ತಯಾರಿಸಬಹುದು.

$$CH_2 = CH_2 + H_2 \rightarrow CH_3 - CH_3$$

ಈಥೇನ್ ಭೌತ ಮತ್ತು ರಾಸಾಯನಿಕ ಗುಣಗಳಲ್ಲಿ ಮೀಥೇನನ್ನು ಹೋಲುವುದು. ಇದು ಬಣ್ಣ ವಾಸನೆಗಳಿಲ್ಲದ ಅನಿಲ. 4$^{o}$ ಸೆಂ.ಗ್ರೇ. ಉಷ್ಣತೆ ಮತ್ತು 46 ವಾಯುಭಾರ



ಒತ್ತಡದಲ್ಲಿ ದ್ರವರೂಪ ತಳೆಯುವುದು (ಕುದಿಯುವ ಬಿಂದು –88.6 ಸೆಂ.ಗ್ರೇ.) ನೀರಿನಲ್ಲಿ ಅದ್ರಾವ್ಯವಾದರೂ ಆಲ್ಕೊಹಾಲಿನಲ್ಲಿ ಲೀನವಾಗುವುದು. ರಾಸಾಯನಿಕವಾಗಿ ಮೀಥೇನಿನಂತೆಯೇ ಜಡವಾದ ಅನಿಲ. ಕ್ಲೋರೀನಿನೊಡನೆ ವರ್ತಿಸಿದಾಗ ಈಥೇನಿನ ಅಣುವಿನಲ್ಲಿರುವ ಹೈಡ್ರೋಜನ್ ಪರಮಾಣುಗಳು ಕ್ರಮೇಣ ಪಲ್ಲಟಿತವಾಗುವುವು.

ಸು. $800^\circ$ ಸೆಂ. ಉಷ್ಣತೆಯಲ್ಲಿ ಹೈಡ್ರೋಜನನ್ನು ಕಳೆದುಕೊಂಡು ಎಥಿಲೀನ್ ಆಗುವುದು. ನೈಸರ್ಗಿಕ ಅನಿಲದಲ್ಲಿರುವ ಈಥೇನ್ ಮತ್ತು ಪ್ರೋಪೇನ್ ಭಾಗವನ್ನು ಹೀಗೆ ಲಾಭದಾಯಕವಾಗಿ ಎಥಿಲೀನಿಗೆ ಪರಿವರ್ತಿಸುವರು. ಶೈತ್ಯಕಾರಕ ಯಂತ್ರಗಳಲ್ಲಿ ಈಥೇನನ್ನು ಸಹ ಉಪಯೋಗಿಸುತ್ತಾರೆ. (ಎಚ್.ಜಿ.ಎಸ್.)

**ಈಥೇನ್ ನಿಷ್ಪನ್ನಗಳು:** ಈಥೈಲ್ ಅಕ್ರಿಲೇಟ್: ರಾಸಾಯನಿಕ ಸೂತ್ರ: $C_5H_8O_2$ ರಚನಾಸೂತ್ರ $CH_2{=}CH.CO.O.CH_2.CH_3$. ನಿರ್ವರ್ಣ ದ್ರವ $0^\circ$ ಸೆಂ.ಗ್ರೇ. ನಲ್ಲಿ ಸಾಂದ್ರತೆ 0.9283. ಕುದಿಯುವ ಬಿಂದು $101^\circ$ ಸೆಂ.ಗ್ರೇ. ನೀರಿನಲ್ಲಿ ಅದ್ರಾವ್ಯ. ಅನೇಕ ಸಾವಯವ ಲೀನಕಾರಿಗಳೊಡನೆ ಬೆರೆಯುವುದು. ಎಥಿಲೀನ್ ಕ್ಲೋರೊಹೈಡ್ರಿನನ್ನು ಸೋಡಿಯಂ ಸಯನೈಡಿನೊಡನೆ ಸೇರಿಸಿದಾಗ ಬೀಟಾ ಹೈಡ್ರಾಕ್ಸಿ ಪ್ರೋಪಿಯೊ ನೈಟ್ರೀಲ್ ಉಂಟಾಗುವುದು. ಇದಕ್ಕೆ ಈಥೈಲ್ ಆಲ್ಕೊಹಾಲ್ ಮತ್ತು ಸಲ್ಫ್ಯೂರಿಕ್ ಆಮ್ಲಗಳನ್ನು ಕೂಡಿಸಿ ಕಾಯಿಸಿದರೆ ಈಥೈಲ್ ಅಕ್ರಿಲೇಟ್ ಉತ್ಪತ್ತಿಯಾಗುತ್ತದೆ. ಸಂಯೋಜಿತ ಅಂಟುಗಳ ತಯಾರಿಕೆಯಲ್ಲಿ ಇದರ ಪಾತ್ರವಿದೆ.

ಈಥೈಲ್‌ಅಯೊಡೊ ಅಸಿಟೇಟ್: ಅಯೊಡೊ ಅಸಿಟಿಕ್ ಎಸ್ಟರ್ ಎಂದೂ ಕರೆಯಬಹುದಾದ ಸಾವಯವ ವಸ್ತು. ಅಣುಸೂತ್ರ $I.CH_2.CO.O.CH_2.CH_3$ ಇದೊಂದು ಬಣ್ಣವಿಲ್ಲದ ದ್ರವ. ಸಾಂದ್ರತೆ 1.8173. ಕುದಿಯುವ ಬಿಂದು $178^\circ$–$180^\circ$ ಸೆಂ.ಗ್ರೇ. ನೀರಿನಲ್ಲಿ ಅದ್ರಾವ್ಯ. ಆಲ್ಕೊಹಾಲ್ ಈಥರಿನೊಡನೆ ಸರಾಗವಾಗಿ ಬೆರೆಯುತ್ತದೆ. ಆಲ್ಕೊಹಾಲ್ ದ್ರಾವಣದಲ್ಲಿ ಕ್ಲೋರೊ ಅಸಿಟಿಕ್ ಎಸ್ಟರ್ ($Cl.CH_2.CO.O.CH_2.CH_3$) ಮತ್ತು ಪೊಟ್ಯಾಸಿಯಂ ಅಯೊಡೈಡನ್ನು (KI) ಬಿಸಿಮಾಡಿ ಇದನ್ನು ತಯಾರಿಸುತ್ತಾರೆ. ಇದರ ಆವಿ ತಗುಲಿದಾಗ ಕಣ್ಣಿನ ಒಳಪೊರೆ ಉದ್ರಿಕ್ತವಾಗಿ ಕಣ್ಣೀರು ಹರಿದು ತ್ರಾಸವಾಗುತ್ತದೆ. ಆದ್ದರಿಂದ ಅಶ್ರುವಾಯು ಷೆಲ್ ಮತ್ತು ಗ್ರೆನೇಡುಗಳಲ್ಲಿ ಇದು ವಿಶೇಷವಾಗಿ ಬಳಕೆಯಲ್ಲಿದೆ.

ಈಥೈಲ್ ಅಸಿಟೇಟ್: ಅಸಿಟಿಕ್ ಆಮ್ಲದ ಈಥೈಲ್‌ಎಸ್ಟರು. ಇದರ ರಾಸಾಯನಿಕ ಸೂತ್ರ $CH_3COOC_2H_5$ ಬಣ್ಣವಿಲ್ಲದ, ತಟಸ್ಥ ಸ್ಥಿತಿಯ, ಬಾಷ್ಪಶೀಲ (ವಾಲಟೈಲ್), ಸುಲಭವಾಗಿ ಉರಿಹೊತ್ತಿಕೊಳ್ಳುವ ದ್ರವ. ಕರಗುವ ಬಿಂದು–$83^0$, ಸೆಂ.ಗ್ರೇ.; ಕುದಿಯುವ ಬಿಂದು $77^\circ$ ಸೆಂ.ಗ್ರೇ. ಹಣ್ಣಿನ ವಾಸನೆಯೇ ಇದರ ವೈಲಕ್ಷಣ್ಯ. ಹತ್ತುಭಾಗ ನೀರಿನಲ್ಲಿ ಒಂದು ಭಾಗದಷ್ಟು ಮಾತ್ರ ಈ ದ್ರವ ಲೀನಗೊಳ್ಳುತ್ತದೆ. ನೀರನ್ನು ಹೀರುವ ಗುಣವಿದ್ದು ಜಲವಿಶ್ಲೇಷಣೆಗೆ ಬಲುಬೇಗ ಒಳಗಾಗುವುದರಿಂದ ಇದನ್ನು ಸೀಸೆಗಳಲ್ಲಿ ಭದ್ರವಾಗಿ ಮುಚ್ಚಿಟ್ಟು ತಣ್ಣಗಿರುವ ಜಾಗದಲ್ಲಿಡುವರು. ಈಥೈಲ್ ಅಲ್ಕೊಹಾಲನ್ನು ಅಸಿಟಿಕ್ ಆಮ್ಲ, ಅಸಿಟಿಕ್ ಅನ್ ಹೈಡ್ರೈಡ್ ಅಥವಾ ಕೀಟೋನುಗಳೊಡನೆ ವರ್ತಿಸುವುದರಿಂದ ಈಥೈಲ್ ಅಸಿಟೇಟನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಬಹುದು. ಅಸಿಟಾಲ್ಡಿಹೈಡಿನಿಂದ ಟಿಷೆಂಕೊ ಕ್ರಿಯೆಯ ಮೂಲಕವೂ ಇದನ್ನು ಪಡೆಯಬಹುದು. ನೈಟ್ರೊಸೆಲ್ಯುಲೋಸ್ ಮುಂತಾದ ಮೆರುಗೆಣ್ಣೆಗಳ ಲೀನಕಾರೀ ದ್ರವವಾಗಿ ಇದರ ಉಪಯೋಗ ಹೆಚ್ಚು. ಕೃತಕ ರುಚಿಕಾರಕ ಸುವಾಸನೆಗಳ ತಯಾರಿಕೆಯಲ್ಲಿ, ಅಸಿಟೇಟ್ ರೇಯಾನ್ ತಯಾರಿಕೆಯಲ್ಲಿ ಹೊಗೆ ಆಡದ ಮಡಿ ತಯಾರಿಕೆಯಲ್ಲಿ, ಕೃತಕ ಚರ್ಮದ ತಯಾರಿಕೆಯಲ್ಲಿ ಮತ್ತು ಛಾಯಾಗ್ರಹಣಕ್ಕೆ ಬೇಕಾದ ಫೋಟೊಫಿಲ್ಮಿನ ತಯಾರಿಕೆಯಲ್ಲಿ ಇದನ್ನು ಹೆಚ್ಚಾಗಿ ಉಪಯೋಗಿಸುವರು. *

ಈಥೈಲ್ ಕ್ಲೋರೈಡ್: ಇದನ್ನು ಮಾನೊಕ್ಲೋರೊ ಈಥೇನ್ ಎಂದೂ ಕರೆಯಬಹುದು. ಇದರ ಅಣುಸೂತ್ರ $CH_3CH_2.Cl$. ಬಣ್ಣವಿಲ್ಲದ ದ್ರವ. ಈಥರಿನಂಥ ಮಧುರ ವಾಸನೆ ಇದೆ. ಹಸುರಂಚಿನ ಜ್ವಾಲೆಯಿಂದ ಉರಿಯುವುದು ಇದರ ವೈಶಿಷ್ಟ್ಯ. $0^\circ$ ಸೆಂ. ಗ್ರೇ. ಉಷ್ಣತೆಯಲ್ಲಿ ಸಾಂದ್ರತೆ 0.9214. $12.5^\circ$ ಸೆಂ.ಗ್ರೇ. ಉಷ್ಣತೆಯಲ್ಲಿ ಕುದಿಯುವುದು. ನೀರಿನಲ್ಲಿ ಅಲ್ಪದ್ರಾವ್ಯ. ಆಲ್ಕೊಹಾಲ್ ಮತ್ತು ಈಥರಿನಲ್ಲಿ ಲೀನವಾಗುವುದು. ನಿರ್ಜಲ ಸತುವಿನ ಕ್ಲೋರೈಡಿನ ಸಂಪರ್ಕದಲ್ಲಿ ಬಿಸಿಯಾದ ಈಥೈಲ್ ಆಲ್ಕೊಹಾಲಿಗೆ ಹೈಡ್ರೋಜನ್ ಕ್ಲೋರೈಡ್ ಅನಿಲ ಹಾಯಿಸಿದರೆ ಇದು ದೊರೆಯುವುದು.

$100^\circ$ ಸೆಂ. ಗ್ರೇ. ಉಷ್ಣತೆಯಲ್ಲಿ ಅಮೋನಿಯದೊಡನೆ ವರ್ತಿಸಿ ಈಥೈಲ್ ಅಮೀನ್ ಹೈಡ್ರೊಕ್ಲೋರೈಡ್ ಕೊಡುವುದು. ಪೊಟ್ಯಾಸಿಯಂ ಹೈಡ್ರಾಕ್ಸೈಡಿನೊಡನೆ ಕಾಯಿಸಿದಾಗ ಈಥೈಲ್ ಆಲ್ಕೊಹಾಲ್ ಉತ್ಪತ್ತಿ ಮಾಡುತ್ತದೆ. ಒಟ್ಟಿನಲ್ಲಿ ಆಲ್ಕೈಲ್ ಹ್ಯಾಲೈಡುಗಳು ಸಾರ್ವತ್ರಿಕ ಗುಣಲಕ್ಷಣಗಳನ್ನು ಪ್ರದರ್ಶಿಸುವುದು. ಲೋಹದ ಕ್ಲೋರೈಡುಗಳೊಡನೆ ವರ್ತಿಸಿ ಹರಳು ರೂಪದ ವಸ್ತುಗಳನ್ನು ಉಂಟುಮಾಡುವುದು. ಈಥೈಲ್ ಸೆಲ್ಯುಲೋಸ್ ಪ್ಲಾಸ್ಟಿಕ್ ಮತ್ತು ಪ್ರಸಿದ್ಧ ಪ್ರತ್ಯಾಘಾತವಾದ (ಆ್ಯಂಟಿನಾಕ್) ಟೆಟ್ರ ಈಥೈಲ್ ಲೆಡ್ ತಯಾರಿಕೆಯಲ್ಲಿ ಈಥೈಲ್ ಕ್ಲೋರೈಡಿನ ಬಳಕೆ ಅನಿವಾರ್ಯ. ಇದು ಕಡಿಮೆ ಉಷ್ಣತೆಯಲ್ಲಿ ಆವಿಯಾಗುವುದರಿಂದ ಸ್ಥಳೀಯ ವೇದನಾಹಾರಿಯಾಗಿ (ಲೋಕಲ್ ಅನೇಸ್ತೆಟಿಕ್) ಕಾರ್ಯನಿರ್ವಹಿಸಬಲ್ಲುದು. ದೇಹದ ನಿರ್ದಿಷ್ಟ ಭಾಗಕ್ಕೆ ಇದನ್ನು ಸಿಂಪಡಿಸಿದಾಗ ಆ ಭಾಗದಿಂದ ಉಷ್ಣ ಹೀರಿಕೊಂಡು ಆವಿಯಾಗಿ ಅದನ್ನು ತಾತ್ಕಾಲಿಕವಾಗಿ ಜಡಗೊಳಿಸುವುದು. ಈ ಅಲ್ಪಾವಧಿಯಲ್ಲಿ ಸಣ್ಣ ಶಸ್ತ್ರಕ್ರಿಯೆಗಳನ್ನು ಮಾಡಬಹುದು. ಇದೇ ಈಥೈಲ್ ಕ್ಲೋರೈಡಿನ ಮುಖ್ಯ ವೈದ್ಯಕೀಯ ಉಪಯೋಗ. ಶೈತ್ಯಕಾರಕವಾಗಿಯೂ ಬಳಸುವುದುಂಟು.

ಈಥೈಲ್ ಫಾರ್ಮೇಟ್: ಇದರ ರಚನಾಸೂತ್ರ $H.CO.O.CH_2.CH_3$. ಪೀಚ್ ಹಣ್ಣಿನ ವಾಸನೆ ಹೊಂದಿರುವ, ಬಣ್ಣವಿಲ್ಲದ ದ್ರವ. $20^\circ$ ಸೆಂ.ಗ್ರೇ. ಉಷ್ಣತೆಯಲ್ಲಿ ಇದರ ಸಾಂದ್ರತೆ 0.9168. $54.3^\circ$ ಸೆಂ.ಗ್ರೇ. ಉಷ್ಣತೆಯಲ್ಲಿ ಕುದಿಯುತ್ತದೆ. ನೀರಿನಲ್ಲಿ ಅದ್ರಾವ್ಯ. ಆಲ್ಕೊಹಾಲ್ ಈಥರ್ ಮತ್ತು ಬೆಂಜೀನುಗಳಲ್ಲಿ ಬೆರೆಯುತ್ತದೆ. ಕೊಂಚ ಪ್ರಬಲ ಸಲ್ಫ್ಯೂರಿಕ್ ಆಮ್ಲದ ಸಂಪರ್ಕದಲ್ಲಿ ಈಥೈಲ್ ಆಲ್ಕೊಹಾಲ್ ಮತ್ತು ಫಾರ್ಮಿಕ್ ಆಮ್ಲಗಳನ್ನು ಕುದಿಸಿದರೆ ಈ ಎಸ್ಟರ್ ಬಟ್ಟಿ ಇಳಿಯುವುದು. ಬಂದ ದ್ರವಕ್ಕೆ ನೀರು ಸೇರಿಸಿದಾಗ ಎಸ್ಟರು ಬೇರ್ಪಡುವುದು. ಅದನ್ನು ಪ್ರತ್ಯೇಕಿಸಿ ಪುನಃ ಕುದಿಸಿ ಶುದ್ಧಿಗೊಳಿಸಬಹುದು. ಒಣಗಿದ ಹಣ್ಣುಗಳು ಹೊಗೆಸೊಪ್ಪು ಮತ್ತು ಆಹಾರ ಪದಾರ್ಥಗಳನ್ನು ಕೀಟಗಳಿಂದ ರಕ್ಷಿಸಲು ಇದು ಸಹಾಯಕ. ಅನ್ಯೂರಿನ್ (ಜೀವಾತು–ಬಿ1) ತಯಾರಿಕೆಯಲ್ಲೂ ಇದರ ಉಪಯೋಗವಿದೆ.

ಈಥೈಲ್ ಲ್ಯಾಕ್ಟೇಟ್: ರಾಸಾಯನಿಕ ಸೂತ್ರ $C_5H_{10}O_3$: ರಚನಾ ಸೂತ್ರ ಕೆಳಕಂಡಂತಿದೆ-

$$\begin{array}{l} CO.O.CH_2.CH_3 \\ | \\ CHOH \\ | \\ CH_3 \end{array}$$

ವಾಸನೆ ಮಧುರ. ನಿರ್ವರ್ಣದ್ರವ. ಇದರ ಸಾಂದ್ರತೆ $19^\circ$ ಸೆಂ.ಗ್ರೇ. ಉಷ್ಣತೆಯಲ್ಲಿ 1.0308. $154^\circ$ ಸೆಂ.ಗ್ರೇ. ಉಷ್ಣತೆಯಲ್ಲಿ ಕುದಿಯುವುದು. ನೀರು ಮತ್ತು ಸಾವಯವ ಲೀನಕಾರಿಗಳಲ್ಲಿ ದ್ರಾವ್ಯ. dl – ಲ್ಯಾಕ್ಟಿಕ್ ಆಮ್ಲ ಈಥೈಲ್ ಆಲ್ಕೊಹಾಲ್ ಮತ್ತು ಬೆಂಜೀನುಗಳ ಮಿಶ್ರಣವನ್ನು ನಿರ್ಜಲಕಾರಿಯೊಂದರ ಸಂಪರ್ಕದಲ್ಲಿ ಕಾಯಿಸಿದರೆ ಈಥೈಲ್ ಲ್ಯಾಕ್ಟೇಟ್ ಬಟ್ಟಿ ಇಳಿಯುವುದು. ಜಲಶೋಷಣೆಗಾಗಿ ಪ್ರಬಲ ಸಲ್ಫ್ಯೂರಿಕ್ ಆಮ್ಲ ಅಥವಾ ಬೆಂಜೀನ್ ಸಲ್ಫಾನಿಕ್ ಆಮ್ಲವನ್ನು ಬಳಸುವುದು ವಾಡಿಕೆ. ಸೆಲ್ಯುಲೋಸ್ ನೈಟ್ರೇಟ್ ಮತ್ತು ಅಸಿಟೇಟುಗಳಿಗೂ ಅನೇಕ ಲ್ಯಾಕರ್ ಮತ್ತು ಅಂಟುಗಳಿಗೂ ಇದು ಉತ್ತಮ ಲೀನಕಾರಿ ಎನಿಸಿಕೊಂಡಿದೆ.

ಈಥೈಲ್ ಸಿಲಿಕೇಟ್: ಸಿಲಿಕಾನ್ ಎಸ್ಟರ್ ಎಂದೂ ಹೆಸರುಳ್ಳ ಈ ಸಂಯುಕ್ತದ ಅಣುಸೂತ್ರ $Si(OC_2H_5)$. ಪ್ಯಾರಫಿನ್ ಎಣ್ಣೆಯನ್ನು ಹೋಲುವ ಹಿತಕರವಾದ ವಾಸನೆಯುಳ್ಳ ದ್ರವ. ಘನೀಭವಿಸುವ ಬಿಂದು - $77^\circ$ ಸೆಂ.ಗ್ರೇ.; ಕುದಿಯುವ ಬಿಂದು $168^\circ$ ಸೆಂ.ಗ್ರೇ. ಈಥೈಲ್ ಆಲ್ಕೊಹಾಲ್ ಸಿಲಿಕಾನ್ ಟೆಟ್ರ ಕ್ಲೋರೈಡಿನೊಡನೆ ವರ್ತಿಸಿದಾಗ ಇದು ಉತ್ಪತ್ತಿಯಾಗುತ್ತದೆ. ಪೆಟ್ರೋಲ್, ಆಲ್ಕೊಹಾಲ್, ಬೆಂಜೀನ್ ಮುಂತಾದ ಸಾವಯವ ಲೀನಕಾರಿಗಳೊಡನೆ ಸರಾಗವಾಗಿ ಬೆರೆಯುವುದು. ನೀರಿನೊಡನೆ ಬೆರೆಯುವುದಿಲ್ಲ. ಆದರೆ ನೀರಿನ ಸಂಪರ್ಕದಲ್ಲಿ ವಿಭಜನೆ ಹೊಂದಿ ಈಥೈಲ್ ಆಲ್ಕೊಹಾಲ್ ಮತ್ತು ಸಿಲಿಸಿಕ್ ಆಮ್ಲಗಳನ್ನು ಕೊಡುವುದು. ಸಿಲಿಸಿಕ್ ಆಮ್ಲ ಕ್ರಮೇಣ ನಿರ್ಜಲಗೊಂಡು ಗಟ್ಟಿಯಾದ ಸಿಲಿಕಾನ್ ಡೈ ಆಕ್ಸೈಡ್ ಆಗುವುದು. ಈ ವಿಶಿಷ್ಟ ಗುಣವಿರುವುದರಿಂದ, ಕಲ್ಲುಕಟ್ಟಡಕ್ಕೆ ನೀರು ಕೆಂದದಂತೆ ಮಾಡಲು, ನಿಖರಾಕೃತಿಯನ್ನು ಅಚ್ಚು ಹೊಯ್ಯಲು (ಪ್ರಿಸಿಷನ್ ಕ್ಯಾಸ್ಟಿಂಗ್) ಮತ್ತು ಸಂದುಗಾರೆಯಾಗಿ ಈಥೈಲ್ ಸಿಲಿಕೇಟ್ ಉಪಯೋಗವಾಗುತ್ತಿದೆ. (ಎಚ್.ಜಿ.ಎಸ್.)

**ಈಥೈಲ್ ಅಮೀನುಗಳು:** ಅಮೋನಿಯ ಅಣುವಿನಲ್ಲಿರುವ ಹೈಡ್ರೋಜನ್ ಪರಮಾಣುಗಳು ಈಥೈಲ್ ಗುಂಪುಗಳಿಂದ ಪಲ್ಲಟಿತವಾಗಿ ಹುಟ್ಟಿದ ಸಾವಯವ ಸಂಯುಕ್ತಗಳು. ಬಣ್ಣವಿಲ್ಲದ ದ್ರವಗಳು; ವಾಸನೆ ಅಮೋನಿಯಾದಂತೆ; ದಹ್ಯ ಗುಣವಿದೆ - ಉರಿಯುವಾಗ ಜ್ವಾಲೆಯ ಬಣ್ಣ ಹಳದಿ. ಕಾಯಿಸಿದ ವೇಗವರ್ಧಕಗಳ ಮೇಲೆ ಎಥಿಲೀನನ್ನಾಗಲೀ ಈಥೈಲ್ ಆಲ್ಕೊಹಾಲಿನ ಆವಿಯನ್ನಾಗಲೀ ಅಮೋನಿಯದೊಂದಿಗೆ ಒತ್ತಡದಲ್ಲಿ ಹಾಯಿಸಿದಾಗ ಈಥೈಲ್ ಅಮೀನುಗಳ ಮಿಶ್ರಣ ಉತ್ಪತ್ತಿಯಾಗುವುದು. ಪರಿವರ್ತಕ ವಸ್ತುಗಳ ಪ್ರಮಾಣವನ್ನು ಹೆಚ್ಚು ಕಡಿಮೆ ಮಾಡುವುದರ ಮೂಲಕ ನಮಗೆ ಬೇಕಾದ ಈಥೈಲ್ ಅಮೀನಿನ ಅಂಶ ಹೆಚ್ಚಾಗಿರುವಂತೆ ಮಾಡಿಕೊಳ್ಳಬಹುದು.

ಈಥೈಲ್ ಅಮೀನುಗಳಿಗೆ ಪ್ರತ್ಯಾಮ್ಲೀಯ ಗುಣವೂ ಆಲಿಫ್ಯಾಟಿಕ್ ಅಮೀನುಗಳ ಸಕಲ ಗುಣಲಕ್ಷಣಗಳೂ ಇವೆ. ನೀರು, ಆಲ್ಕೊಹಾಲ್ ಮತ್ತು ಈಥರಿನೊಡನೆ ಸರಾಗವಾಗಿ ಬೆರೆಯುವುವು. ಚಿನ್ನ, ಪ್ಲಾಟಿನಂ ಮೊದಲಾದ ಲೋಹಗಳ ಕ್ಲೋರೈಡುಗಳೊಡನೆ ಕೂಡಿ ಸ್ಫಟಿಕ ರೂಪದ ವಸ್ತುಗಳನ್ನು ಕೊಡುವುವು. ಇತರ ಭೌತ ಗುಣಗಳನ್ನು ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು:

| ಹೆಸರು | ಅಣುಸೂತ್ರ | ಸಾಂದ್ರತೆ | ಕುದಿಯುವ ಬಿಂದು ° ಸೆಂ. ಗ್ರೇ. |
|---|---|---|---|
| ಮಾನೊ ಈಥೈಲ್ ಅಮೀನ್ | $CH_3.CH_2.NH_2$ | 0.6892,15° ಸೆಂ.ಗ್ರೇ. ಉಷ್ಣತೆಯಲ್ಲಿ | 18.7 |
| ಡೈ ಈಥೈಲ್ ಅಮೀನ್ | $(CH_3.CH_2)_2.NH$ | 0.7108,18° ಸೆಂ.ಗ್ರೇ. ಉಷ್ಣತೆಯಲ್ಲಿ | 55.5 |
| ಟ್ರೈ ಈಥೈಲ್ ಅಮೀನ್ | $(CH_3.CH_2.)_3.N$ | 0.7255,25° ಸೆಂ.ಗ್ರೇ. ಉಷ್ಣತೆಯಲ್ಲಿ | 89.4 |

ಅಸಿಟೊ ನೈಟ್ರೀಲ್ ($CH_3.CN$) ಅಥವಾ ಈಥೈಲ್ ಕ್ಲೋರೈಡನ್ನು ($CH_3.CH_2.Cl$) ಅಮೋನಿಯ ಲೀನ ಮಾಡಿಕೊಂಡಿರುವ ಆಲ್ಕೊಹಾಲಿನೊಡನೆ ಒತ್ತಡದಲ್ಲಿ ಕಾಯಿಸಿದರೆ ಮಾನೊ ಈಥೈಲ್ ಅಮೀನ್ ದೊರೆಯುವುದು. ಇದು ಪ್ರಬಲ ಪ್ರತ್ಯಾಮ್ಲಗಳಂತೆ ಅಮೋನಿಯಾ ಲವಣಗಳಿಂದ ಅಮೋನಿಯಾ ಅನಿಲವನ್ನು ಹೊರಡಿಸಬಲ್ಲುದು. ನೈಟ್ರೊಸೊ ಡೈ ಈಥೈಲ್ ಅನಿಲಿನ್ ಮತ್ತು ಸೋಡಿಯಂ ಹೈಡ್ರಾಕ್ಸೈಡ್ ಮಿಶ್ರಣವನ್ನು ಕುದಿಸಿ ಡೈಈಥೈಲ್ ಅಮೀನನ್ನು ಪಡೆಯಬಹುದು. ಸಂಯೋಜಿತ ಜಲವಿರುವ $[(C_2H_5)_2.NH]_2H_2O$ ಎಂಬ ಹರಳುರೂಪದ ವಸ್ತುವನ್ನು ಕೊಡುವುದು ಇದರ ವೈಶಿಷ್ಟ್ಯ. ಟ್ರೈ ಈಥೈಲ್ ಅಮೀನ್ ಎಣ್ಣೆಯಂಥ ದ್ರವ. ಮಾನೊ ಈಥೈಲ್ ಅಮೀನನ್ನು ಈಥೈಲ್ ಕ್ಲೋರೈಡಿನ ಆಲ್ಕೊಹಾಲ್ ದ್ರಾವಣದೊಡನೆ ಒತ್ತಡದಲ್ಲಿ ಕಾಯಿಸಿದಾಗ ಇದು ಉಂಟಾಗುವುದು. ಪೊಟ್ಯಾಸಿಯಂ ಪರ್ಮ್ಯಾಂಗನೇಟಿನಿಂದ ಸುಲಭವಾಗಿ ಉತ್ಕರ್ಷಿತವಾಗುತ್ತದೆ. ಇದಕ್ಕೆ ಕೀಟಗಳನ್ನು ಆಕರ್ಷಿಸುವ ಗುಣವಿರುವುದರಿಂದ ಕೀಟನಾಶಕವಾಗಿ ಉಪಯೋಗವಾಗುತ್ತಿದೆ. ಒತ್ತಡದಲ್ಲಿ ಕೂಡಿಟ್ಟಿರುವ ಅನಿಲಗಳಲ್ಲಿ ಅಪಾಯ ಮುನ್ಸೂಚಕವಾಗಿ (ವಾರ್ನಿಂಗ್ ಏಜೆಂಟ್) ಬಳಸುವುದುಂಟು. (ಎಚ್.ಜಿ.ಎಸ್.)

**ಈಥೈಲ್ ಆಲ್ಕೊಹಾಲ್: ನೋಡಿ–ಆಲ್ಕೊಹಾಲ್**

**ಈನಿಯಡ್:** ಲ್ಯಾಟಿನ್ ಭಾಷೆಯ ಮಹಾಕಾವ್ಯ. ವರ್ಜಿಲ್ (ನೋಡಿ) ಕವಿ ಅದರ ಕರ್ತೃ. ಪುರಾತನ ಭಾರತಕ್ಕೆ ರಾಮಾಯಣ ಮಹಾಭಾರತಗಳು, ಗ್ರೀಸಿಗೆ ಹೋಮರನ ಇಲಿಯಡ್ ಮತ್ತು ಒಡೆಸ್ಸಿ, ಮಧ್ಯಯುಗದ ಇಟಲಿಗೆ ಡಾಂಟೆಯ ಡಿವೈನ್ ಕಾಮೆಡಿ, ಪ್ಯೂರಿಟನ್ ಯುಗದ ಇಂಗ್ಲೆಂಡಿನ ಮಿಲ್ಟನ್ನನ ಪ್ಯಾರಡೈಸ್‌ಲಾಸ್ಟ್ ಇದ್ದಂತೆ ಪ್ರಾಚೀನ ರೋಮಿನ ಸಾಮ್ರಾಜ್ಯವೈಭವದ ಯುಗಕ್ಕೆ ಈ ಕೃತಿ ಕನ್ನಡಿ. ವರ್ಜಿಲನ ಕಾಲ ಪ್ರ.ಶ.ಪೂ. 70–19. ಅಂದಿನ ರೋಮನ್ ಚಕ್ರವರ್ತಿ ಅಗಸ್ಟಸ್ ಸೀಸರ್. ಅಗಸ್ಟಸ್ ಮತ್ತು ಅವನ ಹಿರಿಯ ಬಂಧು ಜ್ಯೂಲಿಯಸ್ ಸೀಸರರು ರೋಮಿನ ಸಂಸ್ಥಾಪಕನೆಂದು ಪ್ರತೀತಿಯಿದ್ದ ಈನಿಯಸನ ವಂಶದವರೆಂದು ನಂಬಿಕೆ ವರ್ಜಿಲ್ ಹುಟ್ಟುವುದಕ್ಕೆ ಎಷ್ಟೋ ತಲೆಮಾರುಗಳ ಹಿಂದಿನಿಂದಲೂ ಇತ್ತು. ಈನಿಯಸ್ ಹೋಮರನ ಟ್ರಾಯ್ ನಗರದ ವೀರರಲ್ಲೊಬ್ಬ. ಅವನ ತಂದೆ ಅಂಖೈಸೀಸ್; ತಾಯಿ ಗ್ರೀಕರ ಪ್ರಮುಖದೇವತೆಗಳಲ್ಲಿ ಒಬ್ಬಳಾದ ವೀನಸ್. ಈನಿಯಸ್ ಮಗ ಆಸ್ಕೇನಿಯಸ್ ಅಥವಾ ಜ್ಯೂಲಸ್. ಈ ಜ್ಯೂಲಸನಿಂದಲೇ ಜ್ಯೂಲಿಯಸ್ ಮತ್ತು ಅಗಸ್ಟರ ಮನೆತನ ಒಗೆದು ಬಂದಿದ್ದುದೆಂಬ ಐತಿಹ್ಯವಿದ್ದಿತಾದ್ದರಿಂದ ವರ್ಜಿಲ್ ಆ ಕಥೆಯನ್ನು ನಿರೂಪಿಸಿದ. ಅಗಸ್ಟಸನ ರಾಜ್ಯವನ್ನೂ ರಾಜ್ಯಾಡಳಿತವನ್ನೂ ಸಮರ್ಥಿಸುವುದೇ ಅವನ ಉದ್ದೇಶವಾಗಿತ್ತು. ತನ್ನನ್ನು ಮತ್ತು ತನ್ನ ಕುಲದವರನ್ನು ಕುರಿತು ಕಾವ್ಯ ಲೇಖನ ಮಾಡಬೇಕೆಂಬ ಅಗಸ್ಟಸನೇ ವರ್ಜಿಲನಿಗೆ ಸಲಹೆ ಮಾಡಿದನೆಂಬ ನಂಬಿಕೆಯೂ ಉಂಟು. ವರ್ಜಿಲ್ ಗತಿಸಿದಾಗ ಕಾವ್ಯವನ್ನು ಇನ್ನೂ ಪೂರ್ತಿಗೊಳಿಸಿರಲಿಲ್ಲ. ಅದನ್ನು ನಾಶಪಡಿಸಬೇಕೆಂಬ ಅಪೇಕ್ಷೆಯನ್ನು ತನ್ನ ಮರಣಕಾಲದಲ್ಲಿ ವ್ಯಕ್ತಪಡಿಸಿದ. ಆದರೆ ಅಗಸ್ಟಸ್ ಅದಕ್ಕೆ ಅವಕಾಶಕೊಡದೆ ಅದನ್ನು ಪ್ರಕಟಿಸಿದ. ಅಪೂರ್ಣಕೃತಿಯಾದರೂ ಅದಕ್ಕೆ ಪ್ರೇರಕವಾಗಿದ್ದ ದೇಶಭಕ್ತಿ ರಾಜಭಕ್ತಿಗಳ ಕಾರಣ ಅದಕ್ಕೆ ವಿದ್ಯಾವಂತರಾದ ಸಮಕಾಲೀನ ರೋಮನರೆಲ್ಲರಿಂದಲೂ ಮೆಚ್ಚಿಗೆ ದೊರೆಯಿತು. ಬಹುಬೇಗ ಅದು ಪ್ರಖ್ಯಾತ ಕೃತಿಯಾಯಿತು. ಚರಿತ್ರೆಯ ಪುಟಗಳಲ್ಲಿ ಹುದುಗಿಹೋಗಿದ್ದ ರೋಮನ್ ಸಾಮ್ರಾಜ್ಯದ ವೈಭವವನ್ನು ಎತ್ತಿತೋರಿ, ವರ್ಣಿಸಿ ಜಗತ್ತಿಗೆ ಸಾರಿದ ಈ ಕಲಾಕೃತಿ ರೋಮಿನ ರಾಷ್ಟ್ರಕಾವ್ಯವಾದುದಲ್ಲದೆ ಪ್ರಪಂಚದ ಅತ್ಯಂತ ಪ್ರಸಿದ್ಧವೂ ಪ್ರಭಾವಶಾಲಿಯೂ ಆದ ರಚನೆಗಳಲ್ಲಿ ಒಂದೆಂದು ಪರಿಗಣಿತವಾಗಿ ಕೀರ್ತಿಪಡೆದಿದೆ.

ಈನಿಯಡ್ 12 ಕಾಂಡಗಳ ಕಾವ್ಯ. ಮೊದಲನೆಯ ಕಾಂಡದಲ್ಲಿ ಈನಿಯಸ್ ಮತ್ತು ಅವನ ಟ್ರೋಜನ್ (ಟ್ರಾಯ್ ನಗರದ) ಅನುಚರರು ಬಿರುಗಾಳಿಯ ಆಘಾತಕ್ಕೆ ಸಿಕ್ಕು ಆಫ್ರಿಕದ ಕಾರ್ಥೇಜಿನ ಕಡಲತೀರಕ್ಕೆ ಬರುತ್ತಾರೆ. ಕಾರ್ಥೇಜಿನ ರಾಣಿ ಡೀಡೊ ವಿಧವೆ. ಅವಳು ಅವರನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸುತ್ತಾಳೆ. ಎರಡನೆಯ ಕಾಂಡದಲ್ಲಿ ಈನಿಯಸ್ ಅವಳಿಗೆ ಟ್ರೋಜನ್ ಯುದ್ಧದ ಸಂಗತಿಗಳನ್ನೂ ಅಲ್ಲಿ ನಡೆದ ಮರದ ಕುದುರೆಯ ಪ್ರಸಂಗವನ್ನೂ ಶತ್ರುಗಳು ಊರಿಗೆ ಬೆಂಕಿಯಿಟ್ಟು ನಾಶಪಡಿಸಿದ್ದನ್ನೂ ತಾನು ವೃದ್ಧ ತಂದೆ ಅಂಖೈಸೀಸನನ್ನು ಹೊತ್ತುಕೊಂಡು ಮಗನೊಡನೆ ಇತರ ಅನುಚರರನೇಕರೊಡನೆಯೂ ಉರಿಯುತ್ತಿದ್ದ ನಗರದಿಂದ ಹೊರಬಿದ್ದುದನ್ನು ವರ್ಣಿಸುತ್ತಾನೆ. ಅವರು ಬೆಂಕಿಬಿದ್ದಿದ್ದ ಪಟ್ಟಣದಿಂದ ತಪ್ಪಿಸಿಕೊಳ್ಳುವ ಗೊಂದಲದಲ್ಲಿ ಅವನ ಹೆಂಡತಿ ಅಗ್ನಿಜ್ವಾಲೆಗೆ ಆಹುತಿಯಾದಳೆಂದು ತಿಳಿದುಬರುತ್ತದೆ. ಮೂರನೆಯ ಕಾಂಡದಲ್ಲಿ ಈನಿಯಸ್ ತಾನು ಮೆಡಿಟರೇನಿಯನ್ ಸಮುದ್ರದ ಮೇಲೆ ಪಶ್ಚಿಮಾಭಿಮುಖಿಯಾಗಿ ನೌಕಾಯಾನ ಮಾಡುತ್ತಿರುವಾಗ ನಡೆದ ಘಟನೆಗಳನ್ನು ಒಂದೊಂದಾಗಿ ವಿವರಿಸುತ್ತಾನೆ. ಅವುಗಳಲ್ಲಿ ಮುಖ್ಯವಾದುದು ಅವನ ತಂದೆ ಅಂಖೈಸೀಸನ ಮರಣ. ನಾಲ್ಕನೆಯ ಮತ್ತು ಐದನೆಯ ಕಾಂಡದಲ್ಲಿ ಡೀಡೊ ಈನಿಯಸ್ಸಿನಲ್ಲಿ ಅನುರಕ್ತಳಾಗಿ ಅವನನ್ನು ತನ್ನ ಬಳಿಯೇ ಉಳಿಸಿಕೊಳ್ಳಲು ಮಾಡುವ ವಿಫಲಪ್ರಯತ್ನದ ಕರುಣಾಜನಕವಾದ ಕಥೆ ನಿರೂಪಿತವಾಗಿದೆ. ದೇವತೆಗಳ ಪ್ರೀತಿಗೂ ಅನುಗ್ರಹಕ್ಕೂ ಪಾತ್ರನಾದ ಈನಿಯಸ್ ಶಾಶ್ವತ ಕೀರ್ತಿಶಾಲಿಯಾಗಬೇಕಾದರೆ ಕಾರ್ಥೇಜನ್ನು ಬಿಟ್ಟು ಇಟಲಿಗೆ ಬರಬೇಕು. ಆದಕಾರಣ ಅವರು ಅವನಲ್ಲಿ ಕರ್ತವ್ಯದ ಅರಿವನ್ನು ಎಚ್ಚರಿಸಿ ಅವನನ್ನು ಅಲ್ಲಿಂದ ಹೊರಡಿಸುತ್ತಾರೆ. ಈನಿಯಸ್ ಕಾರ್ಥೇಜನ್ನು ಬಿಟ್ಟು ಹೊರಡುತ್ತಾನೆ. ಈ ಸಂಗತಿ ತಿಳಿದಾಗ ಡೀಡೊ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಮುದ್ರದ ದಂಡೆಯಲ್ಲೇ ನಿರ್ಮಿತವಾದ ಚಿತೆಯ ಮೇಲೆ ಅವಳ ದೇಹ ದಹನವಾಗುತ್ತದೆ. ಸಾಯುವ ಮೊದಲು ಡೀಡೊ ತನ್ನ ದೇಶದವನೊಬ್ಬನ ಮುಂದೆ ರೋಮಿನ ಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಹೇಳುತ್ತಾಳೆ. ರೋಮಿನ ಚರಿತ್ರೆಯಲ್ಲಿ ಕಾರ್ಥೇಜಿನ ಹ್ಯಾನಿಬಾಲನೊಡನೆ ನಡೆದ ಹೋರಾಟಗಳಿಗೆ ವರ್ಜಿಲ್ ಇಲ್ಲಿ ಚಮತ್ಕಾರವಾಗಿ ತಳಹದಿ ಹಾಕಿದ್ದಾನೆ. ಪೌರಾಣಿಕ ಪ್ರಸಂಗಗಳಿಗೂ ಚಾರಿತ್ರಿಕ ಘಟನೆಗಳಿಗೂ ಹೀಗೆ ಸಂಬಂಧವನ್ನು ಕಲ್ಪಿಸಿ ತನ್ಮೂಲಕ ಕವಿ ತನ್ನ ಕಾವ್ಯದ ಅರ್ಥವನ್ನೂ ಬೆಲೆಯನ್ನೂ ಹೆಚ್ಚಿಸಿದ್ದಾನೆ. ವರ್ಜಿಲ್ ನಿರೂಪಿಸಿರುವ ಈನಿಯಸ್ ಮತ್ತು ಡೀಡೊರ ಪ್ರಣಯ ಕಥೆ ಯುರೋಪಿನ ರಮ್ಯಸಾಹಿತ್ಯದ ಅತ್ಯಂತ ಪ್ರಸಿದ್ಧ ಕಥೆಗಳಲ್ಲಿ ಒಂದು.

ಕಡಲಯಾನ ಮಾಡುತ್ತಿದ್ದಾಗ ಗತಿಸಿದ ತಂದೆಯ ಚರಮ ಸಂಸ್ಕಾರಗಳನ್ನು ನಡೆಸಲು ಈನಿಯಸ್ ಇಟಲಿಯನ್ನು ಸೇರುವವರೆಗೂ ಕಾಯಬೇಕಾಗುತ್ತದೆ. ಅಲ್ಲಿ ಅವನು ಅವನ್ನೆಲ್ಲಾ ಮುಗಿಸಿದ ಮೇಲೆ ತಂದೆಯನ್ನು ಕಂಡುಬರಲು ಅಧೋಲೋಕಕ್ಕೆ ತೆರಳುತ್ತಾನೆ. ಅಲ್ಲಿ ಅವನಿಗೆ ಮುಂದೆ ಬರಲಿರುವ ರೋಮಿನ ವೀರರ ಮುಂಗಾಣ್ಕೆ ಲಭಿಸುತ್ತದೆ. ಅವರು ಸಾಧಿಸಲಿರುವ ಮಹತ್ಕಾರ್ಯಗಳ ಮುನ್ನರಿವೂ ಅವನಿಗುಂಟಾಗುತ್ತದೆ. ಅಂಖೈಸೀಸನ ಬಾಯಿಂದ ಬರುವ ಮಾತುಗಳು ಪ್ರಸಿದ್ಧವಾಗಿವೆ: “ರೋಮನರೇ, ಇದನ್ನು ನೆನಪಿನಲ್ಲಿಟ್ಟುಕೊಳ್ಳಿ. ನೀವು ಇತರ ರಾಷ್ಟ್ರಗಳ ಮೇಲೆ ಅಧಿಕಾರ ನಡೆಸುವಿರಿ. ಶಾಂತಿಸ್ಥಾಪನೆಯೇ ನಿಮಗೆ ವಾಡಿಕೆಯಾಗುವ ಕೆಲಸ. ನೀವು ನಿಮ್ಮನ್ನೆದುರಿಸಿ ಸೋತವರನ್ನು ಕಾಪಾಡುವಿರಿ. ದುರಹಂಕಾರಿಗಳನ್ನು ಬಗ್ಗಿಸಿ ಸದೆಬಡಿವಿರಿ.”

7ನೆಯ ಕಾಂಡದಲ್ಲಿ ಲ್ಯಾಟಿನಿ ಪ್ರದೇಶದ ದೊರೆ ಲ್ಯಾಟಿನಸ್ ಈನಿಯಸ್ಸನನ್ನು ಕರೆಸಿಕೊಂಡು ಸತ್ಕರಿಸಿ ಅವನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡುವುದಾಗಿ ಹೇಳುತ್ತಾನೆ. ಆದರೆ ಹುಡುಗಿಯ ತಾಯಿ ಅವಳನ್ನು ಟರ್‍ನಸ್ ಎಂಬುವನಿಗೆ ಕೊಡುವುದಾಗಿ ವಾಗ್ದಾನ ಮಾಡಿದ್ದಾಳೆ. ಟರ್‍ನಸ್ ದೊಡ್ಡದೊಂದು ಸೇನೆಯನ್ನು ಕಟ್ಟಿ ಈನಿಯಸ್ಸನನ್ನು ವಿರೋಧಿಸುತ್ತಾನೆ. ಇರ್ಕಡೆಯವರೋ ಮಾಡುವ ಸಿದ್ಧತೆ 8ನೆಯ ಕಾಂಡದ ವಸ್ತು. ಸನ್ನಿವೇಶ ಹೀಗಿರುವಾಗ ಈನಿಯಸ್ ಬರುತ್ತಾನೆ. ಈನಿಯಸ್ ಇಲ್ಲದಿರುವ ಸಮಯವನ್ನೇ ಕಾಯುತ್ತಿದ್ದ ಟರ್‍ನಸ್ ಟ್ರೋಜನರ ಶಿಬಿರಕ್ಕೆ ದಾಳಿಯಿಟ್ಟು ಬೆಂಕಿ ಹಚ್ಚುತ್ತಾನೆ. ಇದು ನಡೆವುದು 9ನೆಯ ಕಾಂಡದಲ್ಲಿ. 10–11ನೆಯ ಕಾಂಡಗಳಲ್ಲಿ ಟರ್‍ನಸ್ಸನ ಸೇನೆಗೂ ಈನಿಯಸ್ಸನ ಕಡೆಯುವರೆಗೂ ನಡೆಯುವ ಯುದ್ಧದ ವರ್ಣನೆ ಬರುತ್ತದೆ. 12ನೆಯ ಕಾಂಡ ಈನಿಯಸ್ಸಗೂ ಟರ್‍ನಸ್ಸಿಗೂ ನಡೆಯುವ ದ್ವಂದ್ವಯುದ್ಧದ ವರ್ಣನೆ. ಆ ಯುದ್ಧದಲ್ಲಿ ಟರ್‍ನಸ್ ಮೃತನಾಗುತ್ತಾನೆ. ರೋಮ್ ರಾಜ್ಯದ ಸ್ಥಾಪನೆಗೂ ರೋಮಿನ ಹಿರಿತನಕ್ಕೂ ಹಾದಿ ಸುಗುಮವಾಗುತ್ತದೆ.

ಇದು ಈನಿಯಡಿನ ಕಥಾವಸ್ತು. ಅದರ ಮೊದಲ ಆರು ಕಾಂಡಗಳು ಹೋಮರನ ಒಡಿಸ್ಸಿಯ ಮೊದಲ ಭಾಗದ ಅನುಕರಣೆ. ಅಲ್ಲಿರುವಂತೆಯೇ ಇಲ್ಲೂ ಕಥಾನಾಯಕ ಅನೇಕ ಅಡಚಣೆಗಳನ್ನು ಎದುರಿಸಿ ಗೆದ್ದು ಏಳು ವರ್ಷಗಳ ಅಲೆದಾಟದ ಅನಂತರ ಹತ್ತು ವರ್ಷಗಳಾದ ಮೇಲೆ ಒಡಿಸ್ಸಿಯಸ್ ತನ್ನ ತವರೂರು ಇಥಾಕಕ್ಕೆ ಹಿಂತಿರುಗಿ ಬರುವಂತೆ ಇಟಲಿಗೆ ಬರುತ್ತಾನೆ. ಕೊನೆಯ ಆರು ಕಾಂಡಗಳಲ್ಲಿ ಹೋಮರನ ಇಲಿಯಡ್ ಕಾವ್ಯದ ಯುದ್ಧ ಟ್ರೋಜನರನ್ನು ಸೋಲಿಸಿದ್ದಂತೆ ಲೇಷಿಯಂ ಕದನದಲ್ಲಿ ಟ್ರೋಜನರು ಇಟಲಿಯವರನ್ನು ಸೋಲಿಸುತ್ತಾರೆ. ಹೀಗೆ ಗ್ರೀಕ್ ಕೃತಿಗಳೆರಡರ ಭಾಗಗಳನ್ನು ತೆಗೆದುಕೊಂಡು ಅವುಗಳ ಮಾದರಿಯ ಮೇಲೆ ತನ್ನದೇ ಆದ ಐಕ್ಯವಿರುವ ನೂತನ ಕೃತಿಯೊಂದನ್ನು ರಚಿಸುವ ಪದ್ಧತಿ ಲ್ಯಾಟಿನ್ ಭಾಷೆಯಲ್ಲಿ ವರ್ಜಿಲನಿಗೆ ಮುನ್ನವೇ ಬೆಳೆದಿತ್ತು. ಆದರೆ ಈನಿಯಡ್ ಕೇವಲ ತೇಪೆಯ ಕೆಲಸವೇನೂ ಅಲ್ಲ. ಎಲ್ಲೆಲ್ಲೂ ದೊರೆತ ಮನ್ನಣೆಯೇ ಇದಕ್ಕೆ ಸಾಕ್ಷಿ. ರಚಿತವಾದಂದಿನಿಂದಲೂ ಅದು ಎಲ್ಲ ವರ್ಗದ ಜನರ ಗಮನವನ್ನೂ ಸೆಳೆದು ಎಲ್ಲರ ಮೆಚ್ಚಿಗೆಗೂ ಪಾತ್ರವಾಯಿತು. ಇತರ ರೋಮನ್ ಕವಿಗಳಿಗೆ ಮಾತ್ರವಲ್ಲದೆ ಡಾಂಟೆ, ಸ್ಪೆನ್ಸರ್, ಮಿಲ್ಟನ್ ಮೊದಲಾದ ಬೇರೆಯ ದೇಶಗಳ ಕವಿಗಳಿಗೂ ಮಾದರಿಯಾಯಿತು. ಒಂದು ಕೃತಿ ಪಂಡಿತಪಾಮರರೆಲ್ಲರಿಗೂ ಪ್ರಿಯವಾಗಬೇಕಾದರೆ ಅದರಲ್ಲಿ ನಿಜವಾದ ಸತ್ತ್ವವಿರಲೇಬೇಕು. ಈನಿಯಡಿನಲ್ಲಿ ಹಲವು ದೋಷಗಳನ್ನು ಬೆದಕಿ ತೋರಿಸಲು ಸಾಧ್ಯ. ಆದರೂ ಅದು ಜಗತ್ತಿನ ಅತ್ಯುತ್ತಮ ಮಹಾಕಾವ್ಯಗಳಲ್ಲಿ ಒಂದೆಂಬುದು ನಿಸ್ಸಂದೇಹ.

ಮಹಾಕಾವ್ಯಗಳಲ್ಲಿ ಎರಡು ಬಗೆಯುಂಟು. ಜನತೆಯಿಂದ ಮೂಡಿಬಂದ ಕಾವ್ಯ ಒಂದು, ಕವಿಯೊಬ್ಬನು ಸೃಷ್ಟಿಸಿದ ಕಾವ್ಯ ಇನ್ನೊಂದು. ಸಾಮಾನ್ಯವಾಗಿ ಮೊದಲನೆಯ ವರ್ಗದ ಕಾವ್ಯ ಇಂಥದೇ ಕಾಲದ್ದೆಂದು ನಿಷ್ಕೃಷ್ಟವಾಗಿ ಹೇಳುವುದು ಕಷ್ಟ. ಎರಡನೆಯ ಜಾತಿಯ ಕಾವ್ಯ ಚಾರಿತ್ರಿಕ ಕವಿಯೊಬ್ಬನಿಂದ ಯಾವುದೋ ಒಂದು ಯುಗದಲ್ಲಿ ಯಾವುದೋ ಒಂದು ಉದ್ದೇಶದಿಂದ ರಚಿತವಾಗಿರುತ್ತದೆ. ಮೊದಲನೆಯ ತರದ ಕಾವ್ಯದಲ್ಲಿರುವಂತೆ ಇದರಲ್ಲಿ ಒಂದು ಯುದ್ಧದ ಮತ್ತು ಆ ಯುದ್ಧದಲ್ಲಿ ಪ್ರಸಿದ್ಧರಾದ ವೀರರ ವರ್ಣನೆಯಷ್ಟೇ ಇರುವುದಿಲ್ಲ. ಕವಿಯ ಮನೋಧರ್ಮ, ಆಲೋಚನೆಗಳು ಇದರಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿರುತ್ತವೆ. ಈನಿಯಡ್ ಈ ಎರಡನೆಯ ವರ್ಗಕ್ಕೆ ಸೇರಿದ ಮಹಾಕಾವ್ಯ. ಇದರ ರಚನೆಯಲ್ಲಿ ವರ್ಜಿಲನಿಗಿದ್ದ ಉದ್ದೇಶ ರೋಮಿನ ಹಿರಿಮೆಯನ್ನು ಎತ್ತಿ ಹಿಡಿಯುವುದಾಗಿತ್ತು. ಹಿಂದಿನಿಂದಲೂ ದೇವಾದಿಗಳು ರೋಮಿನ ಔನ್ನತ್ಯಸಾಧನೆಯಲ್ಲಿ ಆಸಕ್ತರಾಗಿದ್ದರೆಂಬುದನ್ನೂ ರೋಮನ್ ಸಮ್ರಾಜ್ಯದ ಹೆಮ್ಮರ ಬಹುಕಾಲದ ಬೆಳವಣಿಗೆಯ ಫಲವೆಂಬುದನ್ನೂ ತೋರಿಸುವುದಾಗಿತ್ತು. ಅದನ್ನು ಬರೆಯುವಾಗ ಅವನು ಹೋಮರನ ಮಹಾಕಾವ್ಯದ ಸಂಗತಿಗಳನ್ನೂ ಲಕ್ಷಣಗಳನ್ನೂ ಬಳಸಿಕೊಂಡದ್ದಲ್ಲದೆ ಜನರಲ್ಲಿ ಪ್ರಚಾರದಲ್ಲಿದ್ದ ಎಷ್ಟೋ ಕಥೆಗಳನ್ನೂ ಐತಿಹ್ಯಗಳನ್ನೂ ವಾಸ್ತವವಾಗಿ ನಡೆದಿದ್ದ ಚಾರಿತ್ರಿಕ ಘಟನೆಗಳನ್ನೂ ಉಪಯೋಗಿಸಿಕೊಂಡಿದ್ದಾನೆ. ಹಿಂದೆ ನಡೆದಿದ್ದುದನ್ನೂ ನಡೆದಿದ್ದಿತೆಂದು ಹೇಳಲಾಗುತ್ತಿದ್ದುದನ್ನೂ ವರ್ಣಿಸಿರುವುದಲ್ಲದೆ ಮುಂದೆ ನಡೆಯಬಹುದಾದುದನ್ನೂ ತನ್ನ ಪಾತ್ರಗಳ ಬಾಯಲ್ಲಿ ಹೇಳಿಸಿದ್ದಾನೆ. ಗ್ರೀಸಿನ ಚರಿತ್ರೆ ಮತ್ತು ಐತಿಹ್ಯಗಳ ಜೊತೆಗೆ ರೋಮಿನ ಜನತೆಯ ಸ್ಮೃತಿಭಂಡಾರದಲ್ಲಿದ್ದ ಕಥೆಗಳನ್ನೂ ನಂಬಿಕೆಗಳನ್ನೂ ಸೇರಿಸಿ ಹೆಣೆದಿದ್ದಾನೆ. ಸಂಪ್ರದಾಯದ ನಂಬಿಕೆಗಳು ನೂತನ ಆಲೋಚನೆಗಳು, ತಲೆತಲಾಂತರವಾಗಿ ಬಂದಿದ್ದ ಮತಧರ್ಮ. ಹೊಸ ತತ್ತ್ವದೃಷ್ಟಿ, ಪ್ರಾಚೀನತೆ, ನವ್ಯತೆ, ರಾಷ್ಟ್ರಚರಿತೆಯ ವೈಭವದ ವರ್ಣನೆ, ವೈಯಕ್ತಿಕ ರಾಗಭಾವಗಳ ನಿರೂಪಣೆ–ಇವೆಲ್ಲವೂ ಅವನ ಕಾವ್ಯದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಇದರ ಪರಿಣಾಮವಾಗಿ ಅದು ಬಣ್ಣಬಣ್ಣದ ಚಿತ್ರಬಾಹುಳ್ಯದಿಂದ ಶೋಭಿಸುವ ಸುಂದರ ಕೃತಿಯಾಗಿದೆ; ಭಿನ್ನ ರುಚಿಗಳಗ ಭಿನ್ನ ಆಸಕ್ತಿಗಳ, ಭಿನ್ನ ದೃಷ್ಟಿಗಳ ಓದುಗರೆಲ್ಲರಿಗೂ ಆಕರ್ಷಕವಾಗಿದೆ. ಅದರ ಕಥನ ಕಲಾವೈಖರಿ, ಚಿತ್ರಣಕೌಶಲ, ವರ್ಣನಾನೈಪುಣ್ಯ, ನಾದಮಾಧುರ್ಯ–ಈ ಆಕರ್ಷಣೆಗೆ ಮುಖ್ಯ ಕಾರಣಗಳು. *

**ಈನಿಯಸ್:** ನೋಡಿ–ಈನಿಯಡ್

**ಈನೋತೀರ:** ಒನಾಗರೇಸೀ ಕುಟುಂಬದ ಒಂದು ಸಸ್ಯ. ಹೂಬಿಡುವ, ಬಹುವಾರ್ಷಿಕ (ಪೆರಿನಿಯಲ್), ದಾಂಗುಡಿ ಇಡುವ (ಟ್ರೈಲಿಂಗ್), ಪರ್ಣಸಸಿ (ಹರ್ಬ್), ಹೂಗಳು ದೊಡ್ಡವು, ಬಟ್ಟಲಿನಾಕಾರ, ಬಲು ಆಕರ್ಷಕ. ಬಣ್ಣಗಳ ವೈವಿಧ್ಯವೂ ಹಾಗೆಯೇ–ಬಿಳಿ, ಹಳದಿ, ಗುಲಾಬಿ, ನಸುಗೆಂಪು. ಹೂಗಳು ಅರಳುವುದು ಸಾಯಂಕಾಲವಾದ್ದರಿಂದ ಇಂಗ್ಲಿಷ್ ಭಾಷೆಯಲ್ಲಿ ಈ ಸಸ್ಯವನ್ನು ಈವ್ನಿಂಗ್ ಪ್ರಿಮ್‍ರೋಸ್ ಎಂದು ಕರೆಯುತ್ತಾರೆ. ಈನೋತೀರ ಜಾತಿಯ (ಜೀನಸ್) ಸಸ್ಯಗಳು ಬಹುರೂಪಿಗಳಾಗಿರುವುದರಿಂದ (ಪಾಲಿಮಾರ್ಫಿಕ್) ಈ ವಂಶದ ಜಾತಿಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇವುಗಳಲ್ಲಿರುವ ಸುಮಾರು 200 ಪ್ರಭೇದಗಳಲ್ಲಿ ಏಕ ಋತು, ದ್ವಿಋತು ಹಾಗೂ ಬಹುವಾರ್ಷಿಕ ಸಸ್ಯಗಳಿವೆ.



ಜಾತಿಗಳು: ಈ. ಬೈನಿಸ್, ಈ. ಗ್ರಾಂಡಿಫ್ಲೋರ, ಈ. ಲೆಮಾರ್ಕಿಯಾನ, ಈ. ಡ್ರಮಂಡೈ, ಈ. ಒಡರೇಟ, ಈ. ಹಿಸ್ಪೊರೇಟ, ಇ. ಟ್ರಿಕೊಕ್ಯಾಲಿಕ್ಸ್; ಈ. ಕ್ಯಾಲಿಫೋರ್ನಿಕ.

ಈನೋತೀರ ಸಸ್ಯಗಳನ್ನು ಬೀಜಗಳಿಂದ ಸುಲಭವಾಗಿ ವೃದ್ಧಿ ಮಾಡಬಹುದು. ಬೀಜಗಳನ್ನು ನೇರವಾಗಿ ಮಡಿ ಅಂಚು ಅಥವಾ ಕುಂಡಗಳಲ್ಲಿ ಹಾಕಿ ಮೊಳಕೆ ಬಂದ ಅನಂತರ ಒತ್ತಾಗಿರುವ ಸಸಿಗಳನ್ನು ತೆಗೆದು ಹಾಕಬೇಕು. ಪಾತಿಯಲ್ಲಿ ಬೆಳೆಸಿದ ಸಸಿಗಳನ್ನು ಕಿತ್ತು ನೆಟ್ಟರೆ ಸಸಿಗಳು ಸತ್ತುಹೋಗುತ್ತವೆ. ಸಮುದ್ರ ಮಟ್ಟದಿಂದ 1000 ಮೀ. ಗಿಂತ ಎತ್ತರ ಪ್ರದೇಶಗಳಲ್ಲಿ ಇವು ಉತ್ಕೃಷ್ಟವಾಗಿ ಬೆಳೆಯುತ್ತವೆ. ಬೀಜ ಬಿತ್ತಿದ 3–4 ತಿಂಗಳುಗಳಲ್ಲಿ ಸಸ್ಯಗಳು ಹೂಬಿಡುತ್ತವೆ. ಮೈದಾನ ಪ್ರದೇಶಗಳಲ್ಲಿ ಬೀಜ ಬಿತ್ತನೆ ಮಾಡಲು ಸೆಪ್ಟೆಂಬರ್ ತಿಂಗಳು ಯೋಗ್ಯವಾದ ಕಾಲ. ಇದೊಂದು ಅಲಂಕಾರ ಸಸ್ಯ. ಇದರ ಬೇಸಾಯ ಜೌಗಿಲ್ಲದ ಫಲವತ್ತಾದ ಮಣ್ಣಿನಲ್ಲಿ ಯಶಸ್ವಿಯಾಗುತ್ತದೆ. ಸಸ್ಯಗಳಿಗೆ ಯಥೇಚ್ಛವಾದ ಗಾಳಿ, ಬೆಳಕು ಮತ್ತು ಬಿಸಿಲು ಅಗತ್ಯ. (ಎಂ.ಎಚ್.ಎಂ.)

**ಚರಿತ್ರೆ:** ಈ ಶತಮಾನದ ಆದಿಯವರೆಗೂ ಸಾಮಾನ್ಯ ಸಸ್ಯವಾಗಿದ್ದ ಈನೋತೀರ ಲೆಮಾರ್ಕಿಯಾನ ಹ್ಯೂಗೊ ಡೆವ್ರಿಸ್ (1848–1935) (ನೋಡಿ–ಡೆವ್ರಿಸ್–ಹ್ಯೂಗೊ) ಎಂಬ ಸುಪ್ರಸಿದ್ಧ (ಅನುವಂಶೀಯತೆ ಶಾಸ್ತ್ರದಲ್ಲಿ) ವಿಜ್ಞಾನಿಯ ಗಮನ ಅದರ ಮೇಲೆ ಬಿದ್ದೊಡನೆ ವಿಜ್ಞಾನಕ್ಷೇತ್ರದಲ್ಲಿ ಬಹಳ ಪ್ರಾಮುಖ್ಯಗಳಿಸಿತು. ಡೆವ್ರಿಸ್ ಇದನ್ನು ಹಾಲೆಂಡ್ ಬಳಿ ಪತ್ತೆಹಚ್ಚಿದ. ವೈಜ್ಞಾನಿಕ ಪರೀಕ್ಷೆಯಲ್ಲಿ ಇದು ಅದರ ಪಿತೃಗಳಿಗಿಂತ ವಿಭಿನ್ನವಾಗಿರುವುದನ್ನು ಗಮನಿಸಿ ತನ್ನ ಉದ್ಯಾನದಲ್ಲಿ ಬೆಳೆಯುತ್ತಿದ್ದ ಅಂಥದೇ ಜಾತಿಯ ಗಿಡದೊಂದಿಗೆ ಹೋಲಿಸಿ, ದೃಗ್ಗೋಚರವಾಗಿ ಕಂಡುಬಂದ ಅನುವಂಶೀಯತೆ ಬದಲಾವಣೆಯನ್ನು ವಿಕೃತಿ ಎಂದು ಹೇಳಿದ. ಆ ಕಾಲಕ್ಕೆ ಅನುವಂಶೀಯತೆ ಅಷ್ಟಾಗಿ ಬೆಳೆದಿರಲಿಲ್ಲವಾದ್ದರಿಂದ ಈ ಹೇಳಿಕೆ ಹೆಚ್ಚು ವೈಜ್ಞಾನಿಕ ಪರೀಕ್ಷೆಗೆ ಒಳಗಾಗಲಿಲ್ಲ. ಕ್ಲೀಲೆಂಡ್, ರೆನ್ನರ್ ಮುಂತಾದವರು ಕ್ರಮೇಣ ಪರೀಕ್ಷೆಗಳನ್ನು ನಡೆಸಿ ಡೆವ್ರಿಸ್ ಸೂಚಿಸಿದ ವಿಕೃತಿ ನಿಜವಾದ ವಿಕೃತಿ ಅಲ್ಲವೆಂದೂ ಅದು ವರ್ಣರೇಖೆಗಳಲ್ಲಿ ಕಂಡುಬರುವ ವಿಷಮ ರೀತಿಯ ಜೀನು ಗುಣವೆಂದು ತಿಳಿಸಿದರು. ಸ್ವಾಭಾವಿಕವಾಗಿ ಈ ದಿಸೆಯಲ್ಲಿ ಆಸಕ್ತಿ ಹೆಚ್ಚಿತು. ಈನೋತೀರ ಜಾತಿಯಲ್ಲಿ ಕಂಡುಬರುವ ಬಹುತೇಕ ಸಸ್ಯಗಳಲ್ಲಿ ಸಂಶೋಧನೆ ನಡೆಸಿದರು. ಅವುಗಳಲ್ಲಿ ಇದೇ ಬಗೆಯ ವಿಷಮರೀತಿಯ ಜೀನು ಗುಣಗಳೇ ಕಂಡುಬಂದರೂ ಈನೋತೀರ ಹುಕರಿ ಎಂಬುದರಲ್ಲಿ ಸಮಾನ ರೀತಿಯ ಜೀನು ಗುಣ ಕಂಡುಬಂದಿತು. ತಳೀಕರಣ ಪ್ರಯೋಗಗಳಿಂದ ಈ ಬಗೆಯ ವ್ಯತ್ಯಾಸ ಹೇಗೆ ಬರುತ್ತದೆ ಎಂಬುದನ್ನು ಈಗ ವೈಜ್ಞಾನಿಕವಾಗಿ ವಿವರಿಸಲಾಗಿದೆ.

ಸಾಮಾನ್ಯ ರೀತಿಯ ಜೀನುಗುಣಗಳುಳ್ಳ ಸಸ್ಯಗಳಿಗೆ ಅಡ್ಡಹಾಯಿಕೆ ನಡೆದು, ಕೆಲವು ವೈಪರೀತ್ಯಗಳಿಂದ ಅಂಟಿಕೊಂಡ ಜೀನುಗಳು ಬೇರ್ಪಟ್ಟು, ಹೊಸ ನಮೂನೆಯ ಗಿಡದ ಉದ್ಭವವೇ ಈ ಲಾಮಾರ್ಕಿಯಾನದಲ್ಲಿ ಡೆವ್ರಿಸ್ ಗಮನಿಸಿದ ವಿಕೃತಿ ಎಂದು ಈಗ ತಿಳಿದಿದೆ. ಇಂಥ ಕ್ರಿಯೆ ನಿಸರ್ಗದಲ್ಲಿ ಅಪೂರ್ವವಾಗಿ ಆಗುತ್ತದೆ. ಡೆವ್ರಿಸ್‍ನಿಂದ ಪುಷ್ಟಿಗೊಂಡ ಈನೋತೀರದ ಅನುವಂಶೀಯತೆ ಪರಿಶೀಲನೆ ತಳಿವಿಜ್ಞಾನಕ್ಷೇತ್ರದಲ್ಲಿ ಬಹುಮುಖ್ಯ ಸಾಧನೆಯೆನಿಸಿದೆ. ಈ ಸಾಧನೆಯ ನೇರವಾದ ಈನೋತೀರ ಸಸ್ಯವೂ ಪ್ರಾಧಾನ್ಯಕ್ಕೆ ಬಂದಿದೆ. (ಎ.ಎನ್.ಎಸ್.)

**ಈಮಿನೆಸ್ಕು ಮಿಹಇಲ್:** 1850–89. ರುಮೇನಿಯಾದ ಕವಿ. 33ನೆಯ ವಯಸ್ಸಿನಲ್ಲಿ ಕೃತಿರಚನೆಯನ್ನು ನಿಲ್ಲಿಸಿದರೂ ರುಮೇನಿಯಾದ ಮತ್ತು /ಯುರೋಪಿನ ಸಾಹಿತ್ಯಚರಿತ್ರೆಯಲ್ಲಿ ಹಿರಿಯ ಸ್ಥಾನ ಗಳಿಸಿಕೊಂಡಿದ್ದಾನೆ. ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಇವನ ಕೆಲವು ಕವನಗಳು ಅಚ್ಚಾದುವು (1865). 16ನೆಯ ವಯಸ್ಸಿನಲ್ಲಿ ಓಡಿಹೋಗಿ, ಸಂಚಾರಿ ನಾಟಕ ಸಂಘವೊಂದನ್ನು ಸೇರಿದ. 1869ರಲ್ಲಿ ವಿಯೆನ್ನ ವಿಶ್ವವಿದ್ಯಾನಿಲಯಕ್ಕೆ ಹೋದ. ಆದರೆ ಪದವೀಧರನಾಗಲಿಲ್ಲ. ಕೆಲವು ಕಾಲ ಪುಸ್ತಕಭಂಡಾರವೊಂದರಲ್ಲಿ ಕೆಲಸಮಾಡಿದ. 1877–83ರವರೆಗೆ ಪತ್ರಿಕಾ ಸಂಪಾದಕನಾಗಿದ್ದ. 1883ರಲ್ಲಿ ಹುಚ್ಚಿನ ಸೋಂಕು ತಲೆದೋರಿ, ಮತ್ತೆ ಮತ್ತೆ ಹುಚ್ಚಿನಿಂದ ನರಳಿ ಸತ್ತ.

ಈತ 1866ರಲ್ಲಿ ಪ್ರಾರಂಭವಾದ ಯೌವನ ಪಂಥಕ್ಕೆ ಸೇರಿದವ. ತೀವ್ರ ಸಂವೇದನೆ ಮತ್ತು ಜೀವನದ ಕಷ್ಟನಿಷ್ಠುರಗಳನ್ನು ಎದುರಿಸಲಾರದ ಚಿತ್ತದೌರ್ಬಲ್ಯ-ಇವು ಎಮಿನೆಸ್ಕೂ ಜೀವನದ ಗತಿಯನ್ನೂ ಬರಹಗಳಲ್ಲಿ ಪ್ರತಿಬಿಂಬಿತವಾಗುವ ಮನೋಧರ್ಮವನ್ನು ರೂಪಿಸಿದುವು. ರೊಮ್ಯಾಂಟಿಕ್ ಕನಸುಗಾರ, ನಿರಾಶಾವಾದಿ. ಸಂಸ್ಕೃತಿ ಮತ್ತು ವೈಚಾರಿಕತೆಗಳನ್ನು ಪಡೆದವ. ಸು.18 ವರ್ಷಗಳಲ್ಲಿ 60 ಕವನಗಳು. ಎರಡು ತಾತ್ತ್ವಿಕ ಕಥೆಗಳು, ಒಂದು ಕಾದಂಬರಿ, ಕಿನ್ನರಿಯರ ಕಥೆಗಳು-ಇಷ್ಟನ್ನೂ ರಚಿಸಿದ. ಹಲವು ಲೇಖನಗಳನ್ನು ಬರೆದ. ಹುಚ್ಚು ಸೋಂಕಿದ ಬಳಿಕವೂ ತಿಳಿವಿನ ದಿನಗಳಲ್ಲಿ ಸಂಸ್ಕೃತವನ್ನು ಅಭ್ಯಾಸಮಾಡಿ, ಸಂಸ್ಕೃತ ವ್ಯಾಕರಣ ಒಂದನ್ನು ಸಿದ್ಧಗೊಳಿಸಿದ.

ಅದ್ವಿತೀಯ ಮಾಧುರ್ಯ ಉಳ್ಳ ಶೈಲಿಯಲ್ಲಿ ಮಾನವೀಯತೆ ಮತ್ತು ವೈಚಾರಿಕತೆಗಳು ಬೆರೆತ ಅದ್ಭುತವಾದ ಭಾವಗೀತೆಗಳನ್ನು ರಚಿಸಿದ. ಮಾರ್ನಿಂಗ್ ಸ್ಟಾರ್ ಇವನ ಅತ್ಯುತ್ತಮ ಕೃತಿ; ಇದರಲ್ಲಿ ಸ್ವರ್ಗದ ಚೇತನವೊಂದು ಮಾನವರೂಪತಾಳಿ ಮನುಷ್ಯಹೃದಯದ ಪ್ರೇಮವನ್ನರಿಯಲು ಪ್ರಯತ್ನಿಸಿ ವಿಫಲವಾಗುವ ಜನಪ್ರಿಯ ಕಥೆಯೊಂದನ್ನು ಬಳಸಿಕೊಂಡು, ಕವಿ ಪ್ರತಿಭಾವಂತ ಸಹಮಾನವರಿಗೆ ತನ್ನ ಭಾವನೆಗಳನ್ನು ತಿಳಿಸಲು ಪ್ರಯತ್ನಿಸಿ ವಿಫಲನಾಗುವ ಅನುಭವವನ್ನು ನಿರೂಪಿಸಿದ್ದಾನೆ. ಅತಿಸೂಕ್ಷ್ಮ ಸ್ವಭಾವದ ವಿಷಾದ ಇವನ ಸಾಹಿತ್ಯವನ್ನೆಲ್ಲ ಆವರಿಸಿದೆ. ಯೂರೋಪಿನಲ್ಲಿನ ರೊಮ್ಯಾಂಟಿಕ್ ಯುಗದ ಕಡೆಯ ಮಜಲಿನ ಕವಿ, ಈತ. ಇಂಗ್ಲಿಷ್, ಜರ್ಮನ್, ಫ್ರೆಂಚ್ ಮತ್ತು ಇಟ್ಯಾಲಿಯನ್ ಭಾಷೆಗಳಿಗೆ ಇವನ ಕೃತಿಗಳು ಭಾಷಾಂತರವಾಗಿವೆ. (ಎಲ್.ಎಸ್.ಎಸ್.)

**ಈಮ್ಯೂ ಹಕ್ಕಿ:** ಕ್ಯಾಜ್ಯುಎರೈಫಾರ್ಮೀಸ್ ಗಣದ ಡ್ರಾಮಿಸಿಯೈಡೀ ಕುಟುಂಬದ ಡ್ರೋಮೇಯಸ್ ಜಾತಿಯ, ಸರಿಸುಮಾರಾಗಿ ಉಷ್ಟ್ರಪಕ್ಷಿಯನ್ನು ಹೋಲುವ, ಆಸ್ಟ್ರೇಲಿಯದ, ಹಾರಲಾರದ ಪಕ್ಷಿ. ಉಷ್ಟ್ರಪಕ್ಷಿಗೂ ಇದಕ್ಕೂ ಸಂಬಂಧವೇನೂ ಇಲ್ಲ. ಅಲ್ಪ ದೂರಗಳನ್ನೂ

ಗಂಟೆಗೆ 48–64 ಕಿ.ಮೀ ಮೈಲಿ ವೇಗದಿಂದ ಧಾವಿಸಬಲ್ಲದು; 1.5–2ಮೀ ಎತ್ತರದ ಅಡಚಣೆಗಳನ್ನು ನೆಗೆದು ದಾಟಬಲ್ಲದು: ಈಜುವ ಸಾಮರ್ಥ್ಯವೂ ಇದೆ. ನಶಿಸಿ ಹೋದ ರೆಕ್ಕೆಗಳು, ನೀಳ ಮತ್ತು ಎರಡು ಸೀಳಾದ ಮೈಗರಿಗಳು, ಉರುಟಾದ ತಲೆ, ಉರುಟು



ಕೊನೆಯ ಕಿರಿಯ ಕೊಕ್ಕು, ಒಂದೊಂದು ಕಾಲಿನಲ್ಲೂ ಉಗುರುಗಳಿಂದ ಕೂಡಿದ ಮೂರು ಬೆರಳುಗಳಿರುವ ಉದ್ದ ಮತ್ತು ಬಲಿಷ್ಠವಾದ ಕಾಲುಗಳು-ಇವು ಈಮ್ಯೂವಿನ ವೈಶಿಷ್ಟ್ಯಗಳು. ಪಕ್ಷಿಯ ಗಾತ್ರಕ್ಕೆ ಹೋಲಿಸಿವಾಗ ಅದರ ಕಾಲುಗಳು ಚಿಕ್ಕವು. ವಾಸ ಹೊರವಲಯದಲ್ಲಿ. ಆಹಾರ ಹಣ್ಣು, ಹಂಪಲು, ಚಿಗುರು, ಬೇರು, ಗೆಡ್ಡೆ ಮುಂತಾದುವು. ಸಂಚಾರ ಚಿಕ್ಕ ಚಿಕ್ಕ ಗುಂಪಿನಲ್ಲಿ. ಹೆಣ್ಣು ಹಕ್ಕಿ ನೆಲದ ತಗ್ಗು ಮತ್ತು ಗುಪ್ತಪ್ರದೇಶಗಳಲ್ಲಿ ಮೊಟ್ಟೆಯಿಟ್ಟು ರಕ್ಷಿಸುತ್ತದೆ. ಒಂದು ಸಲಕ್ಕೆ 12ರ ವರೆಗೆ ನೀಲಿ–ಹಸುರು ಬಣ್ಣದ ಮೊಟ್ಟೆ ಇಡುವುದು. ಮೊದಲ ಹಂತದಲ್ಲಿ ಗಂಡು ಹಕ್ಕಿ ಮೊಟ್ಟೆಗಳಿಗೆ ಕಾವು ಕೊಡುವುದು; ಎರಡನೆಯ ಹಂತದಲ್ಲಿ ಹೆಣ್ಣು ಹಕ್ಕಿ ಈ ಹೊಣೆ ಹೊರುತ್ತದೆ. ಕಾವಿನ ಅವಧಿ ಎರಡು ತಿಂಗಳ ಕಾಲ. ಸಾಮಾನ್ಯವಾಗಿ ಗಂಡು ಒಂದೇ ಹೆಣ್ಣು ಪ್ರಾಣಿಯೊಡನೆ ಕೂಡುತ್ತದೆ. ಗರಿಗಳು ನೋಡಲು ಅಂದವಾಗಿವೆಯಾಗಿ ಅವನ್ನು ಪಾಶ್ಚಾತ್ಯರು ಅಲಂಕರಣ ಸಾಮಗ್ರಿಯಾಗಿ ಉಪಯೋಗಿಸುತ್ತಾರೆ. ಈಗಲೂ ಗರಿಗಳಿಗಾಗಿ ಹೆಚ್ಚಿನ ಬೇಡಿಕೆ ಇದೆ. ಇದರ ಮಾಂಸ ಮತ್ತು ಕೊಬ್ಬು ಆಹಾರ ಪದಾರ್ಥಗಳೂ ಹೌದು. (ಜಿ.ಎಂ.ಬಿ.)

**ಈಯಲು:** ಗರ್ಭಕ್ಕೆ ಅವಧಿ ತುಂಬಿದೊಡನೆ, ಮರಿಯನ್ನೂ ಅದರೊಂದಿಗೆ ಇರುವ ಸೆತ್ತೆ (ಪ್ಲಸೆಂಟ) ಮತ್ತು ಭ್ರೂಣಚೀಲವನ್ನೂ (ಫೀಟಲ್ ಎನ್ವಲಪ್) ಜೀವಂತವಾಗಿ ಮತ್ತು ಕ್ರಮಾಗತವಾಗಿ ಹೊರಗೆಡಹುವ ಕ್ರಿಯೆ; ಇದನ್ನು ಮರಿ ಹಾಕುವುದೆಂದೂ ಹೇಳುತ್ತಾರೆ (ಪಾರ್ಟ್ಯುರಿಷನ್). ಈಲು ಎನ್ನುವುದು ರೂಢಿಯಲ್ಲಿರುವ ಪದ. ಗರ್ಭಕ್ಕೆ ಅವಧಿ ತುಂಬುವ ಮುನ್ನ ನಡೆವ ಸಜೀವ ಈಯುವಿಕೆಯ ಹೆಸರು ಅವಧಿಪೂರ್ವ (ಅಕಾಲ) ಈಯಲು (ಪ್ರಿಮೆಚೂರ್ ಪಾರ್ಟ್ಯುರಿಷನ್); ಅವಧಿ ಮೀರಿ ನಡೆವ ಈ ಕ್ರಿಯೆಯ ಹೆಸರು ಅವಧಿ ದಾಟಿದ ಈಯಲು. ಇವು ಪಶುವೈದ್ಯಶಾಸ್ತ್ರದ ಪದಗಳು. ಅವಧಿಪೂರ್ವ ಜನನ ಪಡೆದ ದನದ ಕರುಗಳಲ್ಲಿ ಕಡಿಯುವ (ಬಾಚಿ) ಹಲ್ಲುಗಳಿರುವುದಿಲ್ಲ; ಮೈಮೇಲೆ ಕೂದಲಿರುವುದಿಲ್ಲ; ಗರ್ಭಕೋಶದ ಶಿಥಿಲತೆ ಇರುವ ನಿತ್ರಾಣಿ ಪ್ರಾಣಿ ಗರ್ಭಾವಧಿ ದಾಟಿದ ಮೇಲೆ ಮರಿಹಾಕುತ್ತದೆ.

ಸಾಮಾನ್ಯವಾಗಿ ಸ್ವಾಭಾವಿಕ ಈಯಲು ಕೆಲವು ದೈಹಿಕ ಬದಲಾವಣೆಗಳ ಸರಣಿಗಳನ್ನೊಳಗೊಂಡಿದೆ: 1. ತಾಯಿಯ ಗರ್ಭಾಂಗಗಳಲ್ಲಿ ಕೆಲವು ಮಾರ್ಪಾಟುಗಳು ತಲೆದೋರುತ್ತವೆ. ಮುಖ್ಯವಾಗಿ ಪ್ರಸವದ್ವಾರ ವಿಕಾಸಗೊಳ್ಳುತ್ತದೆ. 2. ಗರ್ಭದಲ್ಲಿರುವ ಭ್ರೂಣ ಪ್ರಸವಕ್ಕೆ ಅನುಕೂಲಾಸನವನ್ನು ಕ್ರಮಾಗತವಾಗಿ ಧರಿಸಿ ಗರ್ಭದ್ವಾರವನ್ನು ಸೇರುತ್ತದೆ. ಆಗ ಗರ್ಭಕೋಶ ಭ್ರೂಣವನ್ನು ಚಲನವಿಹಿತಗೊಳಿಸಲು ಅದನ್ನು ಬಿಗಿಹಿಡಿದು ಪ್ರಸವ ಕಾಲವನ್ನು ಕಾಯುತ್ತದೆ. 3. ಈ ಕಾರ್ಯಸರಣಿಯ ಕೊನೆಯ ಹಂತವಾಗಿ ಜೀವಂತ ಮರಿ ಅದರ ಪ್ಲಸೆಂಟ ಮತ್ತು ಭ್ರೂಣಚೀಲಗಳ ವಿಸರ್ಜನೆಯಾಗುವುದು.

ಈಯುವುದರ ಪೂರ್ವಭಾವಿಯಾಗಿ ತಾಯಿಯ ಅಂಗಗಳಲ್ಲಿ ಹಲವು ಸೂಚನೆಗಳು ಕಂಡುಬರುತ್ತವೆ. ಗರ್ಭಧರಿಸಿರುವ ಪ್ರಾಣಿಯ ಕೆಚ್ಚಲು ತನ್ನ ಮೃದುಸ್ಥಿತಿಯನ್ನು ಕಳೆದುಕೊಂಡು ಗಟ್ಟಿಯಾಗುತ್ತ ವಿಕಾಸಗೊಳ್ಳುತ್ತ ಬರುವುದು. ಕೆಚ್ಚಲಿನ ಸ್ಪರ್ಶಜ್ಞಾನ ಅಧಿಕಗೊಳ್ಳುವುದು. ಅದರ ಸುತ್ತಮುತ್ತಲಿನ ವಲಯ ಕೊನೆಯ ದಿವಸಗಳಲ್ಲಿ ಬಾತುಕೊಂಡಂತೆ ಕಾಣುವುದು. ಕೆಚ್ಚಲಿನಲ್ಲಿ ಸೊನೆ ಹಾಲು ಕೂಡುವುದು. ಯೋನಿದ್ವಾರ ಅಥವಾ ಭಗೋಷ್ಠಗಳು ಊದಿಕೊಂಡು ಮುಂದೆ ಕ್ರಮಾಗತವಾಗಿ ವಿಕಾಸಗೊಳ್ಳುವುವು. ಭಗೋಷ್ಠಗಳು ಕಪ್ಪು ವರ್ಣ ತಾಳುವುವು. ಯೋನಿದ್ವಾರ ಅರೆ ತೆರೆದಂತೆ ಕಾಣುತ್ತದೆ. ಕರು ಹೊತ್ತ ದನ, ಆಡು, ಕುರಿಗಳ ಯೋನಿದ್ವಾರದಿಂದ ಬಿಳಿಹಳದಿ ವರ್ಣದ ಶ್ಲೇಷ್ಮ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಹೊರಸೂಸುತ್ತದೆ. ನಾಯಿಗಳಲ್ಲಿ ಯೋನಿವಿಸರ್ಜಿತ ಶ್ಲೇಷ್ಮ ಹೆಚ್ಚಾಗಿರುವುದು. ಕುದುರೆಗಳಲ್ಲಿ ಇದು ಬಲು ಶುಷ್ಕವಾಗಿದ್ದು ಯೋನಿಯೊಳಗೇ ಇರುತ್ತದೆ. ಕರು ಹೊತ್ತ ದನಗಳಲ್ಲಿ ಬಾಲ ಯೋನಿದ್ವಾರದ ಒಂದು ಪಕ್ಕಕ್ಕಿರುತ್ತದೆ.

ಪ್ರಸವಕಾಲ ಸನ್ನಿಹಿತವಾದಂತೆ ದನಗಳ ಬಾಲಮೂಲದ ಇಕ್ಕೆಡೆಗಳಲ್ಲೂ ಕ್ರಮವಾಗಿ ಗುಳಿ ಬೀಳುತ್ತದೆ. ಪ್ರಸವಕಾಲ ಸಮೀಪಿಸಿದಂತೆ ಪ್ರಾಣಿ ಬಾಲವನ್ನು ಎತ್ತಿ ಹಿಡಿಯುವುದು. ಈ ಚಿಹ್ನೆಗಳು ದನಗಳಲ್ಲಿ ಗಮನಾರ್ಹವಾಗಿಯೂ ಕುದುರೆಗಳಲ್ಲಿ ಅಸ್ಪಷ್ಟವಾಗಿಯೂ ಕಂಡುಬರುತ್ತವೆ. ಕೊನೆಯ ಹಂತದಲ್ಲಿ ಪ್ರಾಣಿಗಳು ಮಂಕಾಗುತ್ತವೆ. ಮರಿ ಹಾಕುವಾಗ ಭಯಪೂರಿತವಾಗಿಯೂ ಇರುವುದುಂಟು. ಈ ದಿವಸಗಳಲ್ಲಿ ಪ್ರಾಣಿಗಳು ಪ್ರಶಾಂತ ಮತ್ತು ಏಕಾಂತ ಸ್ಥಳಗಳನ್ನರಸುತ್ತ ಆಗಾಗ ಸ್ಥಳ ಬದಲಾವಣೆ ಮಾಡುತ್ತಿರುತ್ತವೆ. ಪ್ರಥಮ ಪ್ರಸವದಲ್ಲಿ ಹೊಟ್ಟೆನೋವು ಹೆಚ್ಚಾಗಿರುವುದು. ಆದ್ದರಿಂದ ಉದ್ದೇಶರಹಿತವಾಗಿ ಆಗಾಗ ಮಲಗಿ ಏಳುತ್ತದೆ. ಬೆನ್ನು ಮುರಿಯುತ್ತವೆ. ಹೊಟ್ಟೆಯ ಕಡೆಗೆ ಭಯಪೂರಿತವಾಗಿ ನೋಡುತ್ತ ಬಾಲವನ್ನು ಎತ್ತಿ ಹಿಡಿದಿರುತ್ತವೆ. ಪ್ರಸವಕ್ಕೆ ಸಾಧಾರಣ 3 ಅಥವಾ 4 ಗಂಟೆಗಳ ಮುಂಚಿತವಾಗಿ ಕುದುರೆಗಳಲ್ಲಿ ಹೆಗಲಸುತ್ತಲೂ ಧಾರಾಳವಾಗಿ ಬೆವರು ಸುರಿಯುವುದನ್ನು ನೋಡಬಹುದು. ನಾಯಿ, ಬೆಕ್ಕು, ಹಂದಿ ಮತ್ತು ಮೊಲ ಇತ್ಯಾದಿ ಪ್ರಾಣಿಗಳಲ್ಲಿ ಮರಿಹಾಕುವ ಸಮಯಬಂದಾಗ ಏಕಾಂತ ಸ್ಥಳಗಳಲ್ಲಿ ಗೂಡುಕಟ್ಟುವ ಕಾತರ ಕಂಡುಬರುತ್ತದೆ. ಅಂದರೆ ಬೈಹುಲ್ಲು ಮತ್ತು ಇತರ ಮೃದುವಾದ ವಸ್ತುಗಳನ್ನೆಲ್ಲ ಕೂಡಿಸಿ ಗೂಡುಮಾಡುತ್ತವೆ. ತುಂಬುಗರ್ಭದ ನಾಯಿಗಳಲ್ಲೂ ಕುದುರೆಗಳಲ್ಲೂ ದೇಹದ ಉಷ್ಣತೆಯ ಇಳಿಮುಖ ( ಯಷ್ಟು) ಶೀಘ್ರ ಪ್ರಸವದ ಸೂಚನೆಯೆನಿಸುತ್ತದೆ.

ಈಯಲನ್ನು ನೈಸರ್ಗಿಕವಾಗಿರಿಸಲು ಭ್ರೂಣ ಪ್ರಸವಕಾಲಕ್ಕೆ ಮುಂಚಿತವಾಗಿ ಗರ್ಭವಿಸರ್ಜನೆಗೆ ಅನುಕೂಲವಾದ ಆಸನ ಪಡೆಯುತ್ತದಷ್ಟೆ. ಈ ರೀತಿಯ ಪರಿವರ್ತನೆಗೆ ಗರ್ಭಕೋಶದ ಮತ್ತು ಭ್ರೂಣದ ಚಲನವಲನಗಳು ಸಹಾಯಕವಾಗಿವೆ. ಆದ್ದರಿಂದ ಮರಿಹೊತ್ತ ಪ್ರಾಣಿಗಳ ಅಸ್ವಾಭಾವಿಕ ಮತ್ತು ಕಟು ತೀಕ್ಷ್ಣ ಚಲನವಲನಗಳನ್ನೂ ಮಿತಿಮೀರಿದ ಆಹಾರ ಸೇವನೆಯನ್ನೂ ತಡೆಗಟ್ಟಿ ಗರ್ಭಕೋಶದಲ್ಲಿನ ಭ್ರೂಣದ ಸ್ವಾಭಾವಿಕ ಚಲನವಲನಗಳಿಗೆ ಅನುಕೂಲ ಮಾಡಿಕೊಡಬೇಕು. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಭ್ರೂಣ ಅನೈಸರ್ಗಿಕ ಆಸನವನ್ನು ತಳೆದು ಸ್ವಾಭಾವಿಕ ಪ್ರಸವಕ್ಕೆ ಅಡ್ಡಿಯಾಗುವುದು.

ಪ್ರಾಣಿಗಳು ಸ್ವಾಭಾವಿಕವಾಗಿ ಮರಿಹಾಕುವಾಗ ಪಡೆಯುವ ಕ್ರಿಯಾಸರಣಿಗಳು ಹೀಗಿವೆ: ಪ್ರಸವವೇದನೆಯ ಪ್ರಾರಂಭ. ಎಂದರೆ ಗರ್ಭಕೋಶದ ಸಂಕೋಚನ ಸರಣಿಯ ಆರಂಭ ಮತ್ತು ಗರ್ಭಕೋಶ ದ್ವಾರದ ತೆರೆಯುವಿಕೆ; ಚೆನ್ನಾಗಿ ವೃದ್ಧಿಯಾದ ಸಜೀವ ಮರಿಯ ನೈಸರ್ಗಿಕ ವಿಸರ್ಜನೆ; ಗರ್ಭಕೋಶದಲ್ಲಿರುವ ಸೆತ್ತೆ ಮತ್ತು ಭ್ರೂಣ ಕವಚಗಳ ಸಹಜ ವಿಸರ್ಜನೆ; ಪ್ರಸವಾನಂತರದ ಬಾಣಂತಿಯ ದೇಹದಲ್ಲಿನ ನೈಸರ್ಗಿಕ ದೈಹಿಕ ಪರಿವರ್ತನೆಗಳು. ಪ್ರಸವವೇದನೆಯೊಂದಿಗೆ ಮರಿ ತೆರೆದ ಗರ್ಭಕೋಶ ದ್ವಾರದ ಮೂಲಕ ಹೊರಗೆ ಬರುವುದು. ಇದಕ್ಕೆ ಬಲವಾದ ಗರ್ಭಕೋಶದ ಸ್ನಾಯುಗಳ ಸಂಕೋಚನ ಅಗತ್ಯ. ಆದ್ದರಿಂದ ಈ ಕಾರ್ಯಸರಣಿ ವೇದನೆಗೆ ಎಡೆಗೊಡುತ್ತದೆ. ಗರ್ಭಕೋಶದ ದ್ವಾರದಿಂದ ಮರಿ ಹೊರಬಂದ ಆನಂತರದ ಪ್ರಸವ ಸುಲಭವಾಗುತ್ತದೆ. ಅಂದರೆ ಯೋನಿ ಮುಂಚಿತವಾಗಿಯೇ ವಿಕಾಸ ಗೊಂಡಿರುತ್ತದೆ. ಅಲ್ಲದೆ ಗರ್ಭಕೋಶದಿಂದ ಮರಿಯ ವಿಸರ್ಜನೆಯ ಮೊದಲೇ ಭ್ರೂಣ ಕವಚದಲ್ಲಿದ್ದ ಅಮ್ನಿಯೋಟಿಕ್ ಮತ್ತು ಅಲಂಟೋಯಿಕ್ ದ್ರವಪಾತದಿಂದ ಯೋನಿದ್ವಾರ ನುಣುಪಾಗಿ ಸರಾಗವಾಗಿ ಮರಿ ಹೊರಬರಲು ನೆರವಾಗುತ್ತದೆ.

ಈಯುವಿಕೆಗೆ ಬೇಕಾದ ಕಾಲ ವಿವಿಧ ಪ್ರಾಣಿಗಳಲ್ಲಿ ವಿವಿಧ. ಕುದುರೆಗಳಲ್ಲಿ ಪ್ರಸವಕ್ಕೆ 15–20 ಮಿನಿಟುಗಳು ಬೇಕು. ದನಗಳಲ್ಲಿ ಅದರಲ್ಲೂ ಪ್ರಥಮ ಪ್ರಸವಕ್ಕೆ, ದೀರ್ಘಕಾಲ (1/2–3ಗಂಟೆ) ಹಿಡಿಯುತ್ತದೆ. ಕುರಿಗಳಲ್ಲಿ ಪ್ರಸವಕಾಲ ಸ್ವಲ್ಪ ಕಡಿಮೆ. ಮರಿಗಳು 10–15 ಮಿನಿಟುಗಳ ಅಂತರದಲ್ಲಿ ಹೊರ ಬರುತ್ತವೆ. ಹಂದಿಗಳಲ್ಲೂ ನಾಯಿ, ಬೆಕ್ಕುಗಳಲ್ಲೂ ಪ್ರಸವಕಾಲ ಬಲು ದೀರ್ಘ (2-8 ಗಂಟೆ) ಅಲ್ಲದೆ ಒಂದು ಮರಿಯನ್ನು ಹೆತ್ತು ಸಾಧಾರಣ 10 ಮಿನಿಟಿನಿಂದ 30 ಮಿನಿಟುಗಳ ಅಂತರದಲ್ಲಿ ಇನ್ನೊಂದು ಮರಿಯನ್ನು ಹೆರುತ್ತದೆ. ಪ್ರಸವ ಕಾಲ ಮೇಲೆ ಸೂಚಿಸಿದ ಕಾಲಕ್ಕಿಂತ ಹೆಚ್ಚಾದರೆ ಒಡನೆಯೇ ಪಶುವೈದ್ಯರ ಸಲಹೆ ಪಡೆಯುವುದು ಒಳ್ಳೆಯದು.

ಸಣ್ಣ ಪ್ರಾಣಿಗಳು ಮಲಗಿಕೊಂಡೇ ಮರಿಯನ್ನು ಈದರೆ ದೊಡ್ಡವು ಅಂದರೆ ದನ ಮತ್ತು ಕುದುರೆಗಳು ಮಲಗಿಕೊಂಡು ಅಥವಾ ನಿಂತುಕೊಂಡು ಮರಿ ಹಾಕುತ್ತವೆ. ಕುದುರೆಗಳು ಈಯುವ ಕಾಲ ಸಾಮಾನ್ಯವಾಗಿ ರಾತ್ರಿ.

ಹೊಕ್ಕುಳು ಬಳ್ಳಿ (ಅಂಬಿಲಿಕಲ್ ಕಾರ್ಡ್): ದನದ ಕರುವಿನ ಹೊಕ್ಕಳು ಬಳ್ಳಿ ಗಿಡ್ಡವಾಗಿದ್ದು ಕರುವಿನ ವಿಸರ್ಜನೆಯೊಂದಿಗೆ ಕಡಿದುಹೋಗುತ್ತದೆ. ಕುದುರೆಗಳಲ್ಲಿ ಇದು ಉದ್ದವಾಗಿದ್ದು ತಾನಾಗಿ ಕಡಿದುಹೋಗುವುದಿಲ್ಲ. ಆನಂತರ ಕಡಿದುಹಾಕಬೇಕಾಗುತ್ತದೆ. ಹಂದಿ, ನಾಯಿ, ಬೆಕ್ಕುಗಳು ಪ್ರಸವಾನಂತರ ತಾವೇ ಕಡಿದುಹಾಕುತ್ತವೆ.

ಸೆತ್ತೆಯ ವಿಸರ್ಜನೆಗೆ ಬೇಕಾದ ಕಾಲದ ಪ್ರಮಾಣದಲ್ಲೂ ವ್ಯತ್ಯಾಸವುಂಟು. ಕುದುರೆಗಳಲ್ಲಿ ಪ್ರಸವಾನಂತರ ಸಾಧಾರಣ ಅರ್ಧ ಗಂಟೆಯಲ್ಲಿ ಸೆತ್ತೆ ನೈಸರ್ಗಿಕವಾಗಿ ಹೊರಬರುತ್ತದೆ. ದನಗಳಲ್ಲಿ ಇದರ ವಿಸರ್ಜನೆಗೆ ಸಾಕಷ್ಟು ಕಾಲ ಬೇಕು-ಇದು 2-8 ಗಂಟೆಗಳಷ್ಟೇ ಇರಬಹುದು. ವಿಸರ್ಜನೆಯ ಕಾಲ ಮೀರಿದಲ್ಲಿ ವೈದ್ಯ ಸಹಾಯ ಅಗತ್ಯ. ಒಂದೇ ಗರ್ಭದಲ್ಲಿ ಅನೇಕ ಮರಿಗಳನ್ನು ಈಯುವ ಪ್ರಾಣಿಗಳಲ್ಲಿ ಎರಡನೆಯ ಮರಿಯ ಪ್ರಸವದ ಮೊದಲು ಒಂದನೆಯ ಮರಿಯ ಸೆತ್ತೆಯು ವಿಸರ್ಜನೆಯಾಗುತ್ತದೆ. ಗರ್ಭಕೋಶದಲ್ಲಿ ಸೆತ್ತೆ ಉಳಿದಲ್ಲಿ ಅದು ಕೊನೆಯ ಮರಿಗೆ ಸಂಬಂಧಪಟ್ಟದ್ದು. ಕುದುರೆ ಜಾತಿ ವಿನಾ ಎಲ್ಲ ಜಾತಿಯ ಪ್ರಾಣಿಗಳಲ್ಲೂ ಪ್ರಸವಾನಂತರ ಸೆತ್ತೆಯನ್ನು ತಿನ್ನುವ ಹಂಬಲವಿದೆ. ಅದನ್ನು ತಿಂದರೆ ಪ್ರಾಣಿಗಳಲ್ಲಿ ಅಜೀರ್ಣ ಇತ್ಯಾದಿ ತೊಡಕುಗಳು ಬಂದು ಹಾಲು ಕಡಿಮೆಯಾಗುತ್ತದೆ. ಆದ್ದರಿಂದ ಆ ಪ್ರಾಣಿಗೆ ಭೇದಿಗೋ ಜೀರ್ಣಕ್ಕೋ ಔಷಧಿಯನ್ನು ಕೊಡಬೇಕಾಗುವುದು.

ಪ್ರಸವಾನಂತರ ಸಾಧಾರಣ ಎರಡು ವಾರಗಳ ಕಾಲದಲ್ಲಿ ಗರ್ಭಕೋಶ ತನ್ನ ಮೊದಲಿನ ಗಾತ್ರಕ್ಕೆ ಮುದುಡಿಕೊಳ್ಳುವುದು. ಅಂದರೆ ಪ್ರಸವಾನಂತರ 4ನೆಯ ದಿವಸ ಮರಿ ತುಂಬಿದ ಗರ್ಭಕೋಶದ ಸಮ ಅರ್ಧಕ್ಕಿಳಿಯುವುದು. 8ನೆಯ ದಿವಸ ಅದರ $\frac{3}{4}$ ಗಾತ್ರಕ್ಕಿಳಿಯುವುದು ಮತ್ತು 15ನೆಯ ದಿವಸ ಗರ್ಭಧಾರಣಾ ಕಾಲದ ಮೊದಲಿನ ಗಾತ್ರಕ್ಕೆ ಇಳಿಯುವುದು. ಆದ್ದರಿಂದ 4ನೆಯ ದಿವಸದವರೆಗೆ ಪ್ರಾಣಿಗಳ ಗರ್ಭಕೋಶ ಹೊರಗೆ ಜಾರಿ ಬರುವ ಸನ್ನಿವೇಶಗಳಿವೆ. ಅದಕ್ಕಾಗಿ ಪ್ರಾಣಿಗಳ ಹಿಂಭಾಗವನ್ನು ಏರಿಕೆಯಲ್ಲಿರುವಂತೆ ಮಾಡುವುದು ಉತ್ತಮ. ಸಾಧಾರಣ 3 ರಿಂದ 4 ವಾರಗಳ ಕಾಲದಲ್ಲಿ ಗರ್ಭಕೋಶ ಸಂಪೂರ್ಣವಾಗಿ ಸ್ವಾಭಾವಿಕಸ್ಥಿತಿಗೆ ಪರಿವರ್ತನೆ ಹೊಂದುವುದು. ಗರ್ಭಕೋಶದ ದ್ವಾರ ಪ್ರಸವಾನಂತರ 24 ಗಂಟೆಗಳಲ್ಲಿ ಮುಚ್ಚಿಕೊಳ್ಳುವುದು. ಆದರೆ ಗರ್ಭಕೋಶದಿಂದ ಶ್ಲೇಷ್ಮ ವಿಸರ್ಜನೆ ಇರುವಷ್ಟು ಸಮಯ ಅದರ ದ್ವಾರ 1–2 ಸೆಂ.ಮೀ.ಗಳಷ್ಟು ತೆರೆದಿರುತ್ತದೆ. ಗರ್ಭಕೋಶದಿಂದ ವಿಸರ್ಜನೆಯಾಗುವ ಶ್ಲೇಷ್ಮ ಗುಲಾಬಿ ಬಣ್ಣದ್ದು. ಆದರೆ ಅದರೊಡನೆ ಗರ್ಭಕೋಶದಲ್ಲಿ ಉಳಿದ ಸೆತ್ತೆಯ ಕಸಗಳಿರಬಹುದು. ನಾಯಿಗಳಲ್ಲಿ ಈ ಶ್ಲೇಷ್ಮ ಬಹಳ ಹೆಚ್ಚಾಗಿಯೂ ರಕ್ತಮಿಶ್ರಿತವಾಗಿಯೂ ಇರುತ್ತದೆ. ಇದರ ವಿಸರ್ಜನೆ 15 ದಿವಸಗಳವರೆಗೂ ಇರಬಹುದು. ಆದರೆ ಪ್ರಸವಾನಂತರ ವಿಸರ್ಜನೆಯಾಗುವ ಶ್ಲೇಷ್ಮ ರಕ್ತಪೂರಿತವಾಗಿಯೂ ಕಪ್ಪಾಗಿಯೂ ಬಹಳ ದುರ್ವಾಸನೆಯಿಂದ ಕೂಡಿದ್ದಾಗಿಯೂ ಇದ್ದರೆ, ಅದು ಗರ್ಭಕೋಶದ ರೋಗವನ್ನು ಸೂಚಿಸುತ್ತದೆ. ಪ್ರಸವಾನಂತರ ಬಾಣಂತಿ ಮತ್ತು ಮರಿಯ ಆರೈಕೆಯ ಕಡೆ ಎಚ್ಚರ ಅಗತ್ಯ. ಕರು ಹಾಕಿದ ಪ್ರಾಣಿಯನ್ನು ಬೆಚ್ಚನೆಯ ಒಣಹುಲ್ಲು ಹರಡಿದ ಸ್ಥಳದಲ್ಲಿ ಚಳಿಗಾಳಿ ಬೀಸದಂತೆ ಅಡ್ಡಿಮಾಡಿ ಇರಿಸಬೇಕು. ಮರಿಯ ನಾಸಿಕ ದ್ವಾರದಿಂದ ಶ್ಲೇಷ್ಮಗಳನ್ನು ತೆಗೆದು ಮರಿಯ ಮೈಯನ್ನು ನೆಕ್ಕಲು ತಾಯಿಯ ಹತ್ತಿರ ಬಿಡಬೇಕು. ಹೊಕ್ಕಳುಬಳ್ಳಿಯನ್ನು ಸ್ವಚ್ಛ ಹಗ್ಗದಿಂದ ಬಿಗಿದು ಟಿಂಕ್ಚರ್ ಅಯೊಡೀನ್ ಹಚ್ಚಬೇಕು. ದನದ ಮೈಯನ್ನು ಹುಲ್ಲಿನ ಉಂಡೆಯಿಂದ ಸವರಿ ಬೆಚ್ಚಗಿರಿಸಬೇಕು. ಪುಷ್ಟಿದಾಯಕವೂ ಬಿಸಿಯಾಗಿಯೂ ವಿರೇಚನಕಾರಿಯಾಗಿಯೂ ಇರುವ, ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಕೊಡಬೇಕು. ಗಂಜಿ ಅಥವಾ ಬಿಸಿಹಾಲು ಉತ್ತಮ. ಕರುಹಾಕಿದ ಪ್ರಾಣಿ ಯೋನಿದ್ವಾರವನ್ನು ಉಗುರು ಬೆಚ್ಚನೆಯ ಉಪ್ಪುನೀರಿನಿಂದ ತೊಳೆದು ಶುಚಿ ಮಾಡಬೇಕು. ಅಲ್ಲಿ ಸಣ್ಣ ಗಾಯಗಳಿದ್ದರೆ ಹೊಂಗೆ ಎಣ್ಣೆ ಅಥವಾ ಕಹಿ ಬೇವಿನ ಎಣ್ಣೆ ಹಚ್ಚಿ ನೊಣಗಳ ಬಾಧೆಯಿಂದ ದೂರವಿಡಬೇಕು. ಮರಿಗೆ ಪ್ರಥಮವಾಗಿ ಮೊಲೆಯುಣಿಸಲು ಸಹಾಯ ಮಾಡಬೇಕು.

(ಕೆ.ವಿ.ಎಂ.)

**ಈರಿನ:** ಪ್ರಶ.ಸು. 4ನೆಯ ಶತಮಾನ. ಒಬ್ಬ ಗ್ರೀಕ್ ಕವಿಯಿತ್ರಿ. ಬರೆದಿರುವುದು ಗಾತ್ರದಲ್ಲಿ ಕಿರಿದಾದರೂ ಗುಣದಲ್ಲಿ ಕಳಪೆಯದೇನಲ್ಲ. ಪ್ರ.ಶ.ಪೂ. 6ನೆಯ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದ ಗ್ರೀಕ್ ಕವಯಿತ್ರಿ ಸ್ಯಾಫೋಳ ಗೆಳತಿಯಾಗಿದ್ದಳು ಎಂದು ಒಂದು ಪ್ರತೀತಿ. ಆದರೆ ಅವಳ ಕಾಲ ನಿರ್ದಿಷ್ಟವಾಗಿ ಗೊತ್ತಾಗಿಲ್ಲ. ಪ್ರ.ಶ. 3ನೆಯ ಶತಮಾನದಲ್ಲಿದ್ದ ಯುಸೆಬಿಯಸ್ ಎಂಬ ಚರಿತ್ರಕಾರನ ಪ್ರಕಾರ ಅವಳ ಕಾಲ ಪ್ರ.ಶ.ಪೂ. 4ನೆಯ ಶತಮಾನದ ಮಧ್ಯ. ಈಗಿನ ಕೆಲವು ವಿದ್ವಾಂಸರು ಅವಳ ಕಾಲ ಪ್ರ.ಶ.ಪೂ. 3ನೆಯ ಶತಮಾನವಿದ್ದಿರಬೇಕೆಂದು ಅಭಿಪ್ರಾಯಪಡುತ್ತಾರೆ. ಹುಟ್ಟಿದ್ದು ಏಷ್ಯಮೈನರ್‌ನ ಕ್ನಿಡುಸ್ ಎಂಬ ಗ್ರೀಕ್ ಪಟ್ಟಣಕ್ಕೆ ಸಮೀಪದ ಟಿಲಾಸ್ ಎಂಬ ದ್ವೀಪದಲ್ಲಿ. ಕೇವಲ 19ನೆಯ ವಯಸ್ಸಿನಲ್ಲೇ ನಿಧನಳಾದಳು. ಅವಳ ಜೀವನದ ಅತಿ ಮುಖ್ಯಸಂಗತಿಯೆಂದರೆ ಬಾಕಿಸ್ ಎಂಬ ಹುಡುಗಿಯೊಡನೆ ಅವಳಿಗಿದ್ದ ಗೆಳೆತನ. ಮದುವೆಯಾಗಿ ಸ್ವಲ್ಪ ಕಾಲದಲ್ಲಿಯೇ ತೀರಿಕೊಂಡಳು. ಈರಿನ ಅವಳ ಚರಮಗೀತೆಯನ್ನು ರಚಿಸಿದಳು. ಅದು ಮತ್ತು ಅವಳ ಕೆಲವು ನಾಡುನುಡಿಗಳು ಈಗಲೂ ದೊರೆಯುತ್ತವೆ.

ಅವಳ ಕವನಗಳು ಅವಳ ಜೀವಿತಕಾಲದಲ್ಲಿ ತುಂಬಾ ಜನಪ್ರಿಯವಾಗಿದ್ದವೆಂದು ತಿಳಿದುಬರುತ್ತದೆ. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ದಿ ಡಿಸ್ಟಾಫ್. ಅದು ಹೆಕ್ಸಾಮೀಟರ್‌ನಲ್ಲಿ ಬರೆಯಲ್ಪಟ್ಟಿದೆ. ಮುನ್ನೂರು ಸಾಲುಗಳ ಆ ಕವನದಲ್ಲಿ ಈಗ ದೊರೆತಿರುವುದು ಕೇವಲ ಕೆಲವು ಸಾಲುಗಳು ಮಾತ್ರ. ಬಾಕಿಸ್ ಸಂಗಡ ತಾನು ಆಡಿದ ಆಟಗಳು ಮತ್ತು ಮಾಡಿದ ಕೆಲಸಗಳನ್ನು ಈರಿನ ಈ ಕವನದಲ್ಲಿ ಹೇಳಿದ್ದಾಳೆ.

ನಮಗೆ ದೊರೆತಿರುವ ಸಾಲುಗಳನ್ನು ಸೂಕ್ಷ್ಮವಾಗಿ ನೋಡಿದರೆ ಈರಿನ ಸ್ಯಾಫೋಳ ಕವನಗಳನ್ನು ಓದಿದ್ದಳು ಮತ್ತು ಅವಳಿಂದ ಪ್ರಭಾವಿತಳಾಗಿದ್ದಳು ಎಂಬುದು ತಿಳಿದುಬರುತ್ತದೆ. ಈರಿನಳ ಸ್ವಂತ ಭಾಷೆ ಡೋರಿಕ್ ಆದರೂ ಅವಳ ಕವನಗಳಲ್ಲಿ ಈಯೊಲಿಕ್ ಮತ್ತು ಡೋರಿಕ್ ಉಪಭಾಷೆಗಳ ಮಿಶ್ರಣ ಕಂಡುಬರುತ್ತದೆ. (ಎಸ್.ಎನ್.ಎಸ್.ವಿ.)

**ಈರುಳ್ಳಿ:** ಆಲಿಯಂ ಜಾತಿಯ ಸೀಪಾ ಪ್ರಭೇದದ ಸಸ್ಯ (ಆನಿಯನ್). ಉಳ್ಳಾಗಡ್ಡೆ ಯೆಂದೂ ನೀರುಳ್ಳಿಯೆಂದೂ ಉಳ್ಳಿ ಎಂದೂ ಕರೆಯುವುದಿದೆ. ಪ್ರಪಂಚದಲ್ಲಿ ಸುಮಾರು ಅಲಿಯಂ ಬಗೆಯ ಈರುಳ್ಳಿಗಳಿವೆಯೆಂದು ತಿಳಿದಿದೆ. ಇದು ಗೆಡ್ಡೆ ಆಕಾರದಲ್ಲಿ ಬೆಳೆದ ಬೆಳೆ. ಬೇರು ಕಾಂಡ ಎಲ್ಲವೂ ಒತ್ತೊತ್ತಿಗಿವೆ. ಸಾಮಾನ್ಯ ಈರುಳ್ಳಿಯ ಬೇರು ಪೊದೆಯಂತಿದೆ. ಉದ್ದ 10–12 ಸೆಂ.ಮೀ ಈರುಳ್ಳಿ ಬೆಳೆಯುವಾಗ ಎರಡು ಬಗೆಯ ಬೇರುಗಳನ್ನು ಗಮನಿಸಬಹುದು. ಮೊದಲನೆಯವು ಬೀಜ ಮೊಳೆಯುವಾಗ ಕಾಣುವ ಬೇರುಗಳು.



ಈರುಳ್ಳಿಯ ವಿವಿಧ ಬಗೆಗಳು

ಇವು ಗೆಡ್ಡೆಕಟ್ಟುವವರೆಗೆ ಜೀವಂತವಾಗಿದ್ದು ತರುವಾಯ ನಶಿಸಿಹೋಗುತ್ತವೆ. ಆ ವೇಳೆಗೆ ಎರಡನೆಯವು ಕಾಣಿಸಿಕೊಂಡಿರುವುವು. ಎಲೆಗಳ ನಿಬಿಡ ಒಕ್ಕೂಟವೇ ಗೆಡ್ಡೆ. ಇದು ಸಾಮಾನ್ಯವಾಗಿ ನೆಲದಡಿಯಲ್ಲಿರುವುದು. ಎಲೆಗಳು ದಪ್ಪವಾಗಿದ್ದು ನಿಬಿಡವಾಗಿ ಹೆಣೆದಂತೆ ಇರುವುವು. ಗೆಡ್ಡೆಯ ಹೊರಭಾಗದ ಪೊರೆ ತೆಳುವಾದ ಕಾಗದದಂತಿದ್ದು ಮಿಕ್ಕೆಲ್ಲ ಸಾರಯುಕ್ತ ಪೊರೆಗಳನ್ನು ಮುಚ್ಚಿ ರಕ್ಷಿಸುತ್ತದೆ. ಗೆಡ್ಡೆಯಂತೆ ಕಂಡರೂ ಈರುಳ್ಳಿ ವಾಸ್ತವಿಕವಾಗಿ ಒಂದು ಎಲೆ ತರಕಾರಿ.

ಈರುಳ್ಳಿಗೆಡ್ಡೆಯ ಕೆಳಗೆ ಚಿಕ್ಕ ಗಾತ್ರದ ಬಿಳುಪಾದ ಕಾಂಡವಿದೆ. ಇದರ ಸುತ್ತ ದಪ್ಪ ಎಲೆಗಳು ಚಿಗುರುತ್ತವೆ. ಪ್ರತಿಯೊಂದು ಎಲೆಯ ಕೆಳಭಾಗ ಕಾಂಡದೊಡನೆ ಸೇರಿದ್ದು ಸಾರಯುಕ್ತವಾಗಿದೆ. ಒಂದರ ಮೇಲೊಂದು ಪೇರಿಸಿದಂತೆ ಇವು ವೃದ್ಧಿಹೊಂದುತ್ತವೆ. ಕಾಂಡದ ಮಧ್ಯ ಪ್ರದೇಶದಲ್ಲಿ ವೃದ್ಧಿಹೊಂದದ ಎಲೆಗಳಿವೆ. ಇವನ್ನು ಭೂಮಿಯಲ್ಲಿ ನೆಟ್ಟಾಗ ಬೆಳೆದು ನಳಿಕೆಯಾಕಾರದಲ್ಲಿ ಹೊರಬಂದು ಛತ್ರಿಯಾಕಾರದ ಹೂ ಬಿಡುತ್ತವೆ.

ಮುಖ್ಯವಾದ ತರಕಾರಿಗಳಲ್ಲಿ ಈರುಳ್ಳಿ ಒಂದು. ಇದಕ್ಕೆ ವಾಣಿಜ್ಯಪ್ರಾಮುಖ್ಯವೂ ಇದೆ. ಇದರ ಉಪಯೋಗ ಅನಾದಿಕಾಲದಿಂದಲೂ ಪ್ರಚಲಿತವಿದೆ. ಈರುಳ್ಳಿ ಉತ್ತಮ ಆಹಾರ ಅಂಶಗಳಿಂದ ಕೂಡಿದ್ದು ರುಚಿಕರವಾದ ಮತ್ತು ಪುಷ್ಟಿಕರವಾದ ಆಹಾರವೆನಿಸಿದೆ. ಇದರಲ್ಲಿ ರಂಜಕದ ಅಂಶ ಹೆಚ್ಚಾಗಿದ್ದು ಸ್ವಲ್ಪಮಟ್ಟಿಗೆ ಸಿ ಜೀವಾತು ಇದೆ. ಅನೇಕ ಔಷಧೀಯ ಗುಣಗಳನ್ನು ಹೊಂದಿರುವುದರಿಂದ ವಿವಿಧ ಸ್ಥಳಗಳಲ್ಲಿ ಸ್ಥಾನೀಯ ಔಷಧಿಗಳಲ್ಲಿ ಉಪಯೋಗ ದಲ್ಲಿದೆ. ಇದು ಸುಲಭವಾಗಿ ಬೆಳೆದು ಹೆಚ್ಚಿನ ಕೀಟರೋಗಗಳಿಗೆ ಬಲಿಯಾಗದೆ ರುಚಿಯಾಗಿರುವ, ಹೆಚ್ಚು ಕಾಲ ಕೆಡದೆ ಇರುವ, ಕಡಿಮೆ ಬೆಲೆಯ ತರಕಾರಿಯಾಗಿರುವುದರಿಂದ ಜನಪ್ರಿಯವಾಗಿದೆ. ಇದರಲ್ಲಿ ಅಲ್ಲೈಲ್ ಪ್ರೊಪೈಲ್ ಡೈಸಲ್ಫೈಡ್ ಎಂಬ ರಾಸಾಯನಿಕ ಮತ್ತು ಹೊಗೆಯಾಗುವ ಎಣ್ಣೆ (ವಾಲಟೈಲ್ ಆಯಿಲ್) ಇರುವುದರಿಂದ ಇದು ಖಾರವಾಗಿದೆ. ಈ ಎಣ್ಣೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಕೆಲವು ಈರುಳ್ಳಿಗಳಲ್ಲಿ ಖಾರ ಅಷ್ಟು ಇರುವುದಿಲ್ಲ. 100 ಗ್ರಾಂ ಈರುಳ್ಳಿ ಗೆಡ್ಡೆಯಲ್ಲಿ ಈ ಕೆಳಕಂಡ ಆಹಾರ ಅಂಶಗಳು ಇವೆ: ತೇವಾಂಶ 86.8: ಜೀವಾತುಗಳು 1.2; ಮೇದಸ್ಸು 0.1; ಪಿಷ್ಟ 11.6; ಲವಣಗಳು 0.4; ಸುಣ್ಣ–ಕ್ಯಾಲ್ಸಿಯಂ 0.18; ರಂಜಕ 0.05; ಶಕ್ತಿ 51 ಕೆಲೊರಿಗಳು; ಬಿ ಜೀವಾತು 120 ಅಂತಾರಾಷ್ಟ್ರೀಯ ಏಕಮಾನಗಳು; ಸಿ ಜೀವಾತು 11 ಮಿಲಿಗ್ರಾಂ; ಸಿಕೊಟಿನಿಕ್ ಆಮ್ಲ 0.4; ರಿಬೊಫ್ಲೆವಿನ್ 10 ಮಿಲಿಗ್ರಾಂ.

ವ್ಯವಸಾಯ: ಭಾರತದ ಪ್ರಮುಖ ವ್ಯವಸಾಯಗಳಲ್ಲಿ ಈರುಳ್ಳಿ ಬೇಸಾಯವೂ ಒಂದು. ಹೆಚ್ಚು ಫಸಲೆತ್ತುವ ರಾಜ್ಯಗಳು ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಬಿಹಾರ್ ಮತ್ತು ಅಸ್ಸಾಂ, ಮೈಸೂರು ರಾಜ್ಯದಲ್ಲಿ ಈರುಳ್ಳಿ ಬೇಸಾಯವಿದ್ದರೂ ಮೇಲೆ ಕಾಣಿಸಿರುವ ರಾಜ್ಯಗಳಿಗಿಂತಲೂ ಕಡಿಮೆ. ಭಾರತದೇಶ ಇತರ ದೇಶಗಳಿಗೆ ಈರುಳ್ಳಿಯನ್ನು ರಫ್ತು ಮಾಡುತ್ತದೆ. ಜಪಾನ್, ಮಲೇಷ್ಯ, ಮಯನ್ಮಾರ್, ಶ್ರೀಲಂಕ, ಇರಾನ್ ಮತ್ತು ಪೂರ್ವ ಆಫ್ರಿಕ ಮುಂತಾದ ರಾಷ್ಟ್ರಗಳಿಂದ ಭಾರತದ ಈರುಳ್ಳಿಗೆ ಬೇಡಿಕೆ ಇದೆ. ಈರುಳ್ಳಿಯನ್ನು ವಿವಿಧ ಹವಾಗುಣಗಳಲ್ಲಿ ಬೆಳೆಸಬಹುದು. ಆದರೆ ಇದು ಅತಿಯಾದ ಉಷ್ಣ ಮತ್ತು

ಶೀತವನ್ನು ಸಹಿಸುವುದಿಲ್ಲ; $15^0$–$25^0$ ಸೆಂ.ಗ್ರೇ ಉಷ್ಣತೆ ಇರುವ ಪ್ರದೇಶದಲ್ಲಿ ಇದನ್ನು ಬೆಳೆಸಬಹುದು. 15–20 ಸೆ. ವರೆಗಿನ ಉಷ್ಣತೆ ಬೇಸಾಯಕ್ಕೆ ಸಮತೂಕವಾದದ್ದು. ಇದು ಉದ್ದ ಹಗಲಿನ ಬೆಳೆ. ಎಂದರೆ ಇದಕ್ಕೆ ಹಗಲಿನ ಉಷ್ಣತೆ ಬಲು ಅಗತ್ಯ. ವರ್ಷಕ್ಕೆ ಸು. 90 ಸೆಂ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಕೆಂಪುಮಣ್ಣಿನಲ್ಲಿ 60–75 ಸೆಂ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಸುಲಭವಾಗಿ ಬೆಳೆಯಬಹುದು. ಅಧಿಕ ಮಳೆ ಬೀಳುವ ಪ್ರದೇಶದಲ್ಲಿ ಇದರ ಬೇಸಾಯ ಕಷ್ಟ. ಈರುಳ್ಳಿಯ ಬೇಸಾಯ ಸಮುದ್ರಮಟ್ಟದಿಂದ 1700 ಮೀ. ಎತ್ತರದವರೆಗೆ ವ್ಯಾಪಿಸಿದೆ. ಜೌಗಿಲ್ಲದ ಎಲ್ಲ ಮಣ್ಣುಗಳೂ ಈರುಳ್ಳಿ ಬೆಳೆಗೆ ಯೋಗ್ಯ. ಮಣ್ಣು ಸಡಿಲವಾಗಿದ್ದು ಗೆಡ್ಡೆ ದಪ್ಪವಾಗುವುದಕ್ಕೆ ಅವಕಾಶವಿರುವ ಫಲವತ್ತಾದ ಮಣ್ಣುಗಳಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಆದರೆ ಫಲವತ್ತಾದ ಮರಳುಗೋಡು, ಕೆಂಪು ಮರಳುಗೋಡು ಮತ್ತು ಮೆಕ್ಕಲು (ಸಿಲ್ಟ್) ಮಣ್ಣುಗಳು ಇನ್ನೂ ಉತ್ತಮ. 5.8–7.8ರ PH ಉಳ್ಳ ಹುಳಿಕ್ಷಾರವುಳ್ಳ ಮಣ್ಣು ಸಹ ಯೋಗ್ಯವೆನಿಸಿದೆ. ಹೆಚ್ಚು ಹುಳಿ ಅಥವಾ ಹೆಚ್ಚು ಕ್ಷಾರತೆ (ಆಲ್ಕಲೈನ್) ಇರುವ ಮಣ್ಣುಗಳಲ್ಲಿ ಇದರ ಬೇಸಾಯ ಸಾಧ್ಯವಿಲ್ಲ. ಸ್ವಲ್ಪ ಹುಳಿ ಇರುವ ಭೂಮಿಯನ್ನು ಸುಣ್ಣ ಮತ್ತು ಮೈಲುತುತ್ತ ಹಾಕಿ ಹದಮಾಡಿ ಈರುಳ್ಳಿ ಬೆಳೆಸಬಹುದು.

ಬೆಳೆ: ಕರ್ನಾಟಕ ರಾಜ್ಯದಲ್ಲಿ ಈರುಳ್ಳಿಯನ್ನು ಎಲ್ಲ ಕಾಲಗಳಲ್ಲೂ ಬೆಳೆಯಬಹುದಾದರೂ ಮುಂಗಾರು ಬೆಳೆ (ಮೇ–ಸೆಪ್ಟೆಂಬರ್), ಹಿಂಗಾರು ಬೆಳೆ (ಅಕ್ಟೋಬರ್–ಫೆಬ್ರವರಿ) ಮುಖ್ಯವಾದವು. ರಾಜ್ಯದ ಉತ್ಪಾದನೆಯ 70% ಹಿಂಗಾರು ಬೆಳೆಯಿಂದ ಬರುತ್ತದೆ. ಉತ್ತರಭಾರತದಲ್ಲಿ ಹಿಂಗಾರು ಬೆಳೆ ಹೆಚ್ಚಿನ ಚಳಿಗೆ ಈಡಾಗುವುದರಿಂದ ಚೆನ್ನಾಗಿ ಬಾರದು.

ಈರುಳ್ಳಿಯನ್ನು ಪರ್ಯಾಯ ಬೆಳೆಯಾಗಿಯೂ ಮಿಶ್ರಬೆಳೆಯಾಗಿಯೂ ಎತ್ತಬಹುದು.

ಪರ್ಯಾಯ ಬೆಳೆ: ಈರುಳ್ಳಿಯನ್ನು ನೀರಾವರಿ ಬೆಳೆಯಾಗಿಯೇ ತೆಗೆಯುವುದು ಸಾಮಾನ್ಯ. ಇದನ್ನು ಸಾಮಾನ್ಯವಾಗಿ ತರಕಾರಿಗಳ ಜೊತೆ ಪರಿವರ್ತಿಸುವುದು ರೂಢಿಯಲ್ಲಿದೆ. ಆಲೂಗಡ್ಡೆ, ಮೆಣಸು, ಟೊಮ್ಯಾಟೊ, ಬದನೆ, ಕೊತ್ತಂಬರಿ, ತಿಂಗಳುಹುರುಳಿ, ಸೌತೆ, ಕಡಲೆ, ಬೀಟ್ ರೂಟ್, ಕೋಸು, ಕ್ಯಾರಟ್, ಹೂಕೋಸು ಮುಂತಾದುವನ್ನು ಅನಂತರ ಬೆಳೆಯುತ್ತಾರೆ. ಬೆಳೆ ಪರಿವರ್ತನೆಗೆ ಯಾವುದೇ ನಿರ್ದಿಷ್ಟವಾದ ನಿಯಮವನ್ನು ಅನುಸರಿಸುವುದು ರೂಢಿಯಲ್ಲಿ ಇಲ್ಲ.

ಮಿಶ್ರ ಬೆಳೆ: ಈರುಳ್ಳಿ ಬೀಜದಿಂದ ಬೆಳೆ ತೆಗೆಯುವಾಗ ಮೊಳೆತು ಸುಮಾರಾಗಿ ಬೆಳೆಯುವ ಹೊತ್ತಿಗೆ ಅದರ ಜೊತೆ ಸೊಪ್ಪು ಕೊಯ್ಲಿಗೆ ಬರುತ್ತದೆ. ಬದುಗಳ ಮೇಲೆ ಮೂಲಂಗಿ, ಕೊತ್ತಂಬರಿ, ಬೆಳ್ಳುಳ್ಳಿ, ಹುರುಳಿಕಾಯಿ ಮುಂತಾದವನ್ನು ಮಿಶ್ರ ಬೆಳೆಯಾಗಿ ಬೆಳೆಸುತ್ತಾರೆ.

ವೃದ್ಧಿ: ಈರುಳ್ಳಿಯನ್ನು ಲಿಂಗ (ಬೀಜ) ನಿರ್ಲಿಂಗ (ಲಶುನ) ರೀತಿಗಳಿಂದ ವೃದ್ಧಿ ಮಾಡಬಹುದು. ಲಿಂಗರೀತಿಯಿಂದ ವೃದ್ಧಿ ಮಾಡಿದ ಬೆಳೆ ಇಳುವರಿ ಕೊಡಲು ಸುಮಾರು 5 ತಿಂಗಳು ಬೇಕು. ಬೀಜಗಳಿಂದ ವೃದ್ಧಿಮಾಡುವುದೇ ಹೆಚ್ಚಿನ ಬಳಕೆಯಲ್ಲಿದೆ. ನಿರ್ಲಿಂಗರೀತಿಯಿಂದ ವೃದ್ಧಿ ಮಾಡಿದ ಬೆಳೆ 3 ತಿಂಗಳಿಗೆ ಇಳುವರಿ ಕೊಡುತ್ತದೆ.

ಒಟ್ಲು ಜಾತಿ: ಈರುಳ್ಳಿಯನ್ನು ಬೀಜಗಳಿಂದ ವೃದ್ಧಿ ಮಾಡುವುದರಿಂದ ಒಟ್ಲು ಜಾತಿಯ ಅಗತ್ಯ ಹೆಚ್ಚು. ಒಟ್ಲು ಪಾತಿಯಲ್ಲಿ ಬೆಳೆಸಿ ನಾಟಿ ಮಾಡುವುದಕ್ಕೆ ಹೆಚ್ಚು ಕಾಲ ಮತ್ತು ಶ್ರಮವಾಗುವುದರಿಂದ ಬೀಜವನ್ನು ನೇರವಾಗಿ ತೋಟದಲ್ಲಿ ಚೆಲ್ಲುವುದು ರೂಢಿಯಲ್ಲಿದೆ. ಆದರೆ ಬೀಜವನ್ನು ತೋಟದಲ್ಲಿ ಸರಿಯಾದ ಅಂತರದಲ್ಲಿ ಮೊಳೆಯುವಂತೆ ಚೆಲ್ಲುವುದು ಸಾಧ್ಯವಿಲ್ಲ. ಆದ್ದರಿಂದ ಒಟ್ಲು ಪಾತಿ ಮಾಡುವ ಭೂಮಿಯನ್ನು ಚೆನ್ನಾಗಿ 4–5 ಸಾರಿ ಅಗತೆ ಮಾಡಿ ಧಾರಾಳವಾಗಿ ಗೊಬ್ಬರಹಾಕಿ ಮಟ್ಟಸ ಮಾಡಬೇಕು. 20 ಸೆಂ.ಮೀ ಎತ್ತರ, 8 ಸೆಂ.ಮೀ. ಅಗಲ, ಅನುಕೂಲಕ್ಕೆ ತಕ್ಕಹಾಗೆ ಉದ್ದದ ಎತ್ತರಿಸಿದ ಪಾತಿ ಮಾಡಿ ತೆಳುವಾದ ಬೀಜ ಚೆಲ್ಲಿ ಅವುಗಳ ಮೇಲೆ 2.5 ಸೆಂಮೀ ನಷ್ಟು ನಯವಾದ ಮಣ್ಣನ್ನು ಹಾಕಬೇಕು. ಒಟ್ಲು ಪಾತಿಗೆ ಕಾಲಕ್ಕೆ ಸರಿಯಾಗಿ ನೀರು ಹಾಕಿದರೆ ಸುಮಾರು 10 ದಿವಸಗಳಲ್ಲಿ ಬೀಜ ಮೊಳೆಯುತ್ತದೆ. ಬಿತ್ತನೆಯ 1 1/2 ತಿಂಗಳ ತರುವಾಯ ಸಸಿಗಳು ನಾಟಿ ಮಾಡಲು ಸಿದ್ಧವಾಗಿರುತ್ತವೆ. ಒಟ್ಲು ಪಾತಿಯಲ್ಲಿ ಕಾಲಕ್ಕೆ ಸರಿಯಾಗಿ ಕಳೆ ತೆಗೆದರೆ ಸಸಿ ದೃಢವಾಗಿ ಬರುತ್ತದೆ. 8–10 ಕಿ.ಗ್ರಾಂ. ಬೀಜದಲ್ಲಿ ಬೆಳೆಸಿದ ಸಸಿ ಒಂದು ಎಕರೆ ತೋಟಕ್ಕೆ ನಾಟಿ ಮಾಡಬಹುದು. ನೇರವಾಗಿ ತೋಟಕ್ಕೆ ಬೀಜ ಚೆಲ್ಲಿದರೆ ಎಕರೆಗೆ ಸುಮಾರು 20 ಕಿ.ಗ್ರಾಂ. ಬೀಜ ಬೇಕಾಗುತ್ತದೆ.

ಈರುಳ್ಳಿ ಬೆಳೆಯುವ ಭೂಮಿಯನ್ನು 3–4 ಸಾರಿ ಚೆನ್ನಾಗಿ ಅಗೆದು ಅಥವಾ ಉಳುಮೆ ಮಾಡಿ, ಕಳೆ, ಕಸ, ಕಡ್ಡಿ ಇತ್ಯಾದಿಗಳನ್ನು ತೆಗೆದು ಶುದ್ಧ ಮಾಡಬೇಕು. ಮೊದಲಸಾರಿ ಅಗೆಯುವಾಗ 45 ಸೆಂ.ಮೀ. ಆಳವಾಗಿ ಅಗೆಯಬೇಕು. ಮುಂದೆ 1 ತಿಂಗಳು ಮಣ್ಣನ್ನು ಬಿಸಿಲಿಗೆ ಒಣಗಲು ಬಿಡಬೇಕು. ಅನಂತರ ಎಕರೆಗೆ 15–20 ಗಾಡಿ ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರ ಹಾಕಿ ಎರಡು ಸಾರಿ 20 ಸೆಂ.ಮೀ ಆಳವಾಗಿ ಅಗತೆಮಾಡಿ ಗೊಬ್ಬರವನ್ನು ಮಣ್ಣಿಗೆ ಮಿಶ್ರಮಾಡಿ ನೀರು ಹರಿಯುವಂತೆ ಮಟ್ಟಸ ಮಾಡಬೇಕು. ತರುವಾಯ 2X1 ಮೀ ಗಾತ್ರದ ಪಾತಿ ಮಾಡಿ ನೀರು ಹರಿಯಲು ಮತ್ತು ಬಸಿದು ಹೋಗಲು ತಕ್ಕ ವ್ಯವಸ್ಥೆ ಮಾಡಬೇಕು.

ಈರುಳ್ಳಿ ಬೇಸಾಯದಲ್ಲಿ ಪಾತಿಗಳ ಅಂತರ ಜಾತಿಯನ್ನು ಅನುಸರಿಸಿದೆ. ಸಸಿಯಾಗಲಿ ಲಶುನವಾಗಲಿ ಸಸಿಯಿಂದ ಸಸಿಗೆ (ಲಶುನದಿಂದ ಲಶುನಕ್ಕೆ) 15 ಸೆಂ.ಮೀ. ಅಂತರವಿರುವಂತೆ ಸಾಲುಗಳಲ್ಲಿ ನೆಡಬೇಕು. ಸಾಲಿನಿಂದ ಸಾಲಿಗೆ 45 ಸೆಂ.ಮೀ. ಅಂತರ ಅಗತ್ಯ. ಬೀಜವನ್ನು ತೋಟಕ್ಕೆ ಬಿತ್ತುವಾಗ ಒಟ್ಲು ಪಾತಿಯಲ್ಲಿ ಅನುಸರಿಸಿದ ವಿಧಾನವನ್ನೇ ಅನುಸರಿಸಬೇಕು.

ಮಧ್ಯವರ್ತಿ ಬೇಸಾಯ (ಇಂಟರ್ ಕಲ್ಟಿವೇಷನ್): 2–3 ಸಾರಿ ಕಳೆತೆಗೆದು ಮಣ್ಣನ್ನು ಬೇಸಾಯಮಾಡಿ ಎರಡು ಕಡೆಗಳಿಂದ ಮಣ್ಣನ್ನು ಸಸ್ಯಗಳ ಬುಡಕ್ಕೆ ಏರು ಹಾಕುವುದು ಅಗತ್ಯ. ಬೀಜವನ್ನು ನೇರವಾಗಿ ತೋಟದಲ್ಲಿ ಬಿತ್ತನೆ ಮಾಡಿದ್ದರೆ ಒತ್ತಾಗಿರುವ ಮೊಳಕೆಗಳನ್ನು ಕಿತ್ತು ತೆಳುವಾಗಿರುವ ಸ್ಥಳಗಳಲ್ಲಿ ಬಿತ್ತನೆ ಮಾಡಿದ ನಾಲ್ಕನೆಯ ವಾರದಲ್ಲಿ ನೆಡಬೇಕು. ಮಳೆ ಇಲ್ಲದ ಸಮಯದಲ್ಲಿ ವಾರಕ್ಕೆ ಎರಡು ಸಾರಿ ನೀರಾವರಿ ಮಾಡಬೇಕು. ಬೆಳೆ ಯಾವುದೇ ಹಂತದಲ್ಲಿ ಒಣಗಬಾರದು. ಕಾಲಕ್ಕೆ ಸರಿಯಾಗಿ ಸಸ್ಯಸಂರಕ್ಷಣೆ ಮಾಡಬೇಕು. ಬೆಳೆಯ ಅವಧಿ ಮತ್ತು ಜಾತಿ ಬೀಜವನ್ನು ಅವಲಂಬಿಸಿದೆ. ಅವಧಿಯ ಪ್ರಕಾರ ಈರುಳ್ಳಿಯಲ್ಲಿ ಮೂರು ಗುಂಪುಗಳಿವೆ. ದೀರ್ಘಾವಧಿ ಬೆಳೆ 90–100 ದಿವಸಗಳದ್ದು, ಹೆಚ್ಚುಬೆಳೆ 130–180 ದಿವಸಗಳದ್ದು, ಮಧ್ಯಾವಧಿ ಬೆಳೆ 100–120 ದಿವಸಗಳದ್ದು, ಲಶುನದಿಂದ ಬಿತ್ತನೆ ಮಾಡಿದರೆ ಸುಮಾರು 90 ದಿವಸಗಳಲ್ಲಿ ಫಸಲು ಸಿಕ್ಕುತ್ತದೆ. ಬೀಜದಿಂದ ಬಿತ್ತನೆ ಮಾಡಿದರೆ 150 ದಿವಸಗಳಲ್ಲಿ ಫಸಲು ಬರುವುದು.

ಎಳೆಯ ಈರುಳ್ಳಿ ಗಿಡಗಳ ಕಂತೆ

ಕೊಯ್ಲು (ಅಗೆಯುವುದು): ಈರುಳ್ಳಿ ಸಸ್ಯ ಹಸಿರು ಬದಲಾಯಿಸಿ ಮಾಸಲು ಬಣ್ಣಕ್ಕೆ ತಿರುಗಿದಾಗ ಬೆಳೆ ಪರಮಾವಧಿ ಮುಟ್ಟಿದೆ ಎಂದು ತಿಳಿಯಬಹುದು. ಬಲಿತ ತರುವಾಯ ಸಸ್ಯದ ಮೇಲುಭಾಗ ಜೋಲು ಬೀಳುತ್ತದೆ. ಆಗ ದಿಂಡು ಸಮೇತ ಕೈಯಿಂದ ಕಿತ್ತು ಹದಮಾಡಿಕೊಳ್ಳಬಹುದು. ಕೆಲವು ಸಾರಿ ಮೇಲುಭಾಗದ ದಿಂಡನ್ನು ಕೊಯ್ದು ಹಾಕಿ ಗುದ್ದಲಿಯಿಂದ 10 ಸೆಂ.ಮೀ ಆಳವಾಗಿ ಕೆದಕಿ ಈರುಳ್ಳಿಯನ್ನು ಆರಿಸಿಕೊಳ್ಳುತ್ತಾರೆ. ಮೇಲುಭಾಗದ ದಿಂಡು, ತಳಭಾಗದ ಕುಚ್ಚು ಬೇರುಗಳನ್ನು ತೆಗೆದುಹಾಕಿ ನೆರಳಿನಲ್ಲಿ ಒಣಗಿಸಿ ಗೆಡ್ಡೆಯನ್ನು ಶೇಖರಿಸುತ್ತಾರೆ.

**ಇಳುವರಿ:** ಜಾತಿ, ಕಾಲ, ಮಿಶ್ರ ಬೆಳೆ ಮತ್ತು ಬೇಸಾಯ ಪದ್ಧತಿಯನ್ನು ಅನುಸರಿಸಿ ಇಳುವರಿಯನ್ನು ಪರಿಶೀಲಿಸಬೇಕು. ಎಕರೆಗೆ 5,000–8,000 ಕಿ.ಗ್ರಾಂಗಳ ಇಳುವರಿ ಅಂತರವಿದೆ. ಎಕರೆಗೆ ಸರಾಸರಿ ಇಳುವರಿ 7,000 ಕಿ.ಗ್ರಾಂ.

**ಶೇಖರಣೆ:** ಈರುಳ್ಳಿ ಒಂದೇ ಸಾರಿಗೆ ಕೊಯ್ಲಿಗೆ ಬರುವುದರಿಂದ ಮಾರುಕಟ್ಟೆಯಲ್ಲಿ ಬೆಲೆ ಕಡಿಮೆಯಾಗುತ್ತದೆ. ಆದ್ದರಿಂದ ಈರುಳ್ಳಿಯನ್ನು ಶೇಖರಿಸುವುದು ಅಗತ್ಯ. ಬಿದಿರುಗಳಿಂದ ಅಟ್ಟ ಕಟ್ಟಿ ಅದರ ಮೇಲೆ ಈರುಳ್ಳಿಯನ್ನು ಹರಡುತ್ತಾರೆ. ಸರಾಗವಾಗಿ ಗಾಳಿಯಾಡುವುದರಿಂದ ಸುಮಾರು 3 ತಿಂಗಳು ಕೆಡದಂತೆ ಶೇಖರಿಸಬಹುದು. ಈರುಳ್ಳಿಯ ಮೇಲ್ಪೊರೆ ದಪ್ಪವಾಗಿದ್ದರೆ ಹೆಚ್ಚು ದಿವಸ ಇಡಬಹುದು.

**ಬೀಜ ಮಾಡುವಿಕೆ:** ಬಿತ್ತನೆಗೆ ಮೊದಲೇ ಯೋಜನೆಮಾಡಿ 30 ಸೆಂ.ಮೀ. ಅಂತರ ಕೊಟ್ಟು ನೆಡಬೇಕು. ದಪ್ಪ ಈರುಳ್ಳಿ ಬೀಜದ ದೃಷ್ಟಿಯಿಂದ ಉಪಯೋಗವಿಲ್ಲದ್ದು. 40 ಗ್ರಾಂ. ತೂಕ 7.5 ಸೆಂ.ಮೀ. ಅಗಲದ ಗೆಡ್ಡೆಗಳು ಬೀಜದ ಬೆಳೆಗೆ ಯೋಗ್ಯವಾದುವು. ಸುಷುಪ್ತಾವಸ್ಥೆಯಲ್ಲಿರುವ ಈರುಳ್ಳಿ ಬೀಜದ ಬೆಳೆಗೆ ಯೋಗ್ಯವಲ್ಲ. ಈರುಳ್ಳಿ ಸಸ್ಯ ನೆಟ್ಟ 3 ತಿಂಗಳಿಗೆ ಹೂ ಬಿಡುತ್ತದೆ. ಹೂ ಬಿಟ್ಟು 1 ½ ತಿಂಗಳಿಗೆ ಬಲಿಯಲು ಪ್ರಾರಂಭಿಸುತ್ತದೆ. ಎಲ್ಲ ಸಸ್ಯಗಳಲ್ಲಿ ಬೀಜ ಒಂದೇ ಸಾರಿ ಬಲಿಯುವುದಿಲ್ಲ. 3–4 ಹಂತಗಳಲ್ಲಿ ಇದು ನಡೆಯುವುದು. ಬೀಜ ಬಲಿಯುವುದಕ್ಕೆ ಮೊದಲು ಗೊಂಚಲನ್ನು ಕೊಯ್ದು ಬೀಜ ಮಾಡಿದರೆ ಬೀಜ ಮೊಳೆಯುವ ಸೇಕಡ ಅಂಶ ಕಡಿಮೆಯಾಗಿ ಇಳುವರಿ ತೀರ

ಕಡಿಮೆಯಾಗುತ್ತದೆ. ಬಲಿತಿರುವ ಗೊಂಚಲು ಕ್ಯಾಪ್‌ಸುಲ್‌ಗಳ ಮೇಲುಕವಚ ಒಡೆದು ಕಪ್ಪಗಿರುವ ಬೀಜ ಕಾಣುತ್ತದೆ. ಬಲಿತಿರುವ ಬೀಜಗಳ ಕೋನಗಳು (ಆಂಗಲ್ಸ್) ಸ್ಪಷ್ಟವಾಗಿರುತ್ತವೆ. ಬಲಿತ ಗೊಂಚಲುಗಳನ್ನು ಕೊಯ್ದು ಒಣಗಿಸಬೇಕು. ಒಣಗಿದ ಗೊಂಚಲುಗಳನ್ನು ಕೈಯಿಂದ ಉಜ್ಜಿ ಬೀಜ ಮಾಡಬೇಕು. ಬೀಜವನ್ನು ನೀರಿನ ಪಾತ್ರೆಯಲ್ಲಿ ಹಾಕಿ ತೇಲುವ ಬೀಜಗಳನ್ನು ನೆರಳಿನಲ್ಲಿ ಒಣಗಿಸಿ ಸೆರೆಸಾನ್ ಪುಡಿಯನ್ನು ಮಿಶ್ರಮಾಡಿ ಡಬ್ಬಗಳಲ್ಲಿ ಶೇಖರಿಸಬೇಕು. ಬೀಜಗಳನ್ನು 1 ವರ್ಷಕ್ಕಿಂತ ಹೆಚ್ಚುಕಾಲ ಶೇಖರಿಸಲು ಸಾಧ್ಯವಿಲ್ಲ. ಒಂದು ಗೊಂಚಲಿನಲ್ಲಿ ಸುಮಾರು 225–500 ಬೀಜಗಳವರೆಗೆ ಇರುತ್ತವೆ. ಒಂದು ಪೌಂಡಿನಲ್ಲಿ ಸುಮಾರು 1,12,900 ಬೀಜಗಳು ಇರಬಹುದು. ಎಕರೆಗೆ 3,000–5,000 ಕಿ.ಗ್ರಾಂ. ಈರುಳ್ಳಿಬೀಜ ಸಿಕ್ಕುತ್ತವೆ.

ಕೀಟಗಳು: ಥ್ರಿಪ್ಸ್ ಎಂಬ ಕೀಟಗಳು ಗುಂಪುಗಳಾಗಿ ಕೊಳವೆ ಎಲೆಗಳ ಮೇಲೆ ಇದ್ದು ಸಸ್ಯರಸವನ್ನು ಹೀರುತ್ತವೆ. ಹೀರಿದ ಭಾಗಗಳು ಬಿಳುಪಾಗಿ ಕಾಣುತ್ತವೆ. 0.05 ಬಿ.ಎಚ್.ಸಿ. ಪುಡಿ ಅಥವಾ ಹೊಗೆಸೊಪ್ಪಿನ ಕಷಾಯ ಸಿಂಪಡಿಸುವುದರಿಂದ ಇದನ್ನು ತಡೆಯಬಹುದು.

ರೋಗಗಳು: ಈರುಳ್ಳಿಗೆ ತಂಪಾದ ಹವಾಗುಣದಲ್ಲಿ ಬೂಷ್ಟು ಅಥವಾ ಶಿಲೀಂಧ್ರ ರೋಗ ಬರುತ್ತದೆ. ಕೊಳವೆ ಎಲೆಗೆ ರೋಗ ಬಂದಾಗ ಮುರಿದು ಜೋಲು ಬೀಳುತ್ತವೆ. ಬೋರ್ಡೋ ದ್ರಾವಣದಿಂದ ಈ ರೋಗವನ್ನು ತಡೆಯಬಹುದು.



1. ಈರುಳ್ಳಿಯ ಉದ್ದಸೀಳಿಕೆ. 2. ಅನೇಕ ಈರುಳ್ಳಿಗಳಿರುವ ಗೆಡ್ಡೆಯ ಅಡ್ಡಸೀಳಿಕೆ

ಸ್ಮಟ್ಸ್: ಈರುಳ್ಳಿಯ ಮೇಲು ಭಾಗದ ಕಂಠ ಕೊಳೆಯುತ್ತದೆ. ಇದು ಬೀಜಗಳಿಂದ ಹರಡುವ ರೋಗ ಬೀಜಕ್ಕೆ ಅರಸಾನ್ ಅಥವಾ ತೆರಸಾನ್ ಚಿಕಿತ್ಸೆ ಮಾಡುವುದರಿಂದ ಈ ರೋಗವನ್ನು ತಡೆಯಬಹುದು.

ವರ್ಗೀಕರಣ: ಈರುಳ್ಳಿಯನ್ನು 5 ಗುಂಪುಗಳಾಗಿ ವಿಂಗಡಿಸಬಹುದು: 1. ಲಶುನ ಈರುಳ್ಳಿ; 2. ಗುಂಪು ಈರುಳ್ಳಿ 3. ಹುಲ್ಲು ಈರುಳ್ಳಿ; ಜಪಾನ್ ಈರುಳ್ಳಿ; 4. ಸೀಮೆ ಈರುಳ್ಳಿ; 5. ದೀರ್ಘಕಾಲ ಈರುಳ್ಳಿ (ಮರದ ಈರುಳ್ಳಿ).

**1. ಲಶುನ ಈರುಳ್ಳಿ:** ಉಪಯೋಗದಲ್ಲಿರುವ ಈರುಳ್ಳಿಯಲ್ಲಿ ಇದರ ಪಾಲು ಶೇ. 80–90ರಷ್ಟು. ಈ ಜಾತಿಯ ಸಸ್ಯದಲ್ಲಿ ಒಂದು ದಪ್ಪ ಲಶುನ (ಗೆಡ್ಡೆ) ಮಾತ್ರ ಸಿಕ್ಕುತ್ತದೆ. ಸಾಮಾನ್ಯವಾಗಿ ಬೀಜಗಳಿಂದ ಕೆಲವೊಮ್ಮೆ ಲಶುನಗಳಿಂದ ಇದರ ವೃದ್ಧಿ ಸಾಧ್ಯ. ಲಾಭದಾಯಕವಲ್ಲ.

2. ಗುಂಪು ಈರುಳ್ಳಿ: ಸಣ್ಣ ಸಣ್ಣ ಲಶುನದ ಸಣ್ಣ ಸಣ್ಣ ಇಲಗು ತಳಭಾಗದ ಕಾಂಡ ಪಕ್ಕ ವೊಸುಗಳನ್ನು ಬಿಟ್ಟು ಲಶುನವಾಗಿ ಗುಂಪಾಗಿರುವುದರಿಂದ ಗುಂಪು ಈರುಳ್ಳಿ ಎಂದು ಹೆಸರು. ಸಣ್ಣ ಇಲಗುಗಳನ್ನು ಗುಂಪಿನಿಂದ ಬೇರ್ಪಡಿಸಿ ನೆಟ್ಟರೆ ಮತ್ತೆ ಗುಂಪಾದ ಈರುಳ್ಳಿಯನ್ನು ಪಡೆಯಬಹುದು. ಬೀಜಗಳಿಂದ ವೃದ್ಧಿ ಮಾಡುವ ಸಾಧ್ಯತೆ ಇದ್ದರೂ ಹೆಚ್ಚು ಕಾಲ ಹಿಡಿಯುವುದರಿಂದ ಇಲಗನ್ನು ನೆಡುವ ರೂಢಿಯೇ ಹೆಚ್ಚು. ಕಡಿಮೆ ಇಳುವರಿ ಕೊಡುವುದರಿಂದ ಇದರ ಬೆಳೆ ಹೆಚ್ಚು ಬಳಕೆಯಲ್ಲಿಲ್ಲ.

3. ಜಪಾನ್ ಈರುಳ್ಳಿ: ದಿಂಡು ಮತ್ತು ಈರುಳ್ಳಿ ಗಾತ್ರದಲ್ಲಿ ಒಂದೇ ಸಮನಾಗಿರುತ್ತವೆ. ಆದ್ದರಿಂದ ದಿಂಡನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಇವು ಗುಂಪು ಈರುಳ್ಳಿಯಂತೆ ಗುಂಪಾಗಿ ಬೆಳೆಯುತ್ತವೆ. ಈರುಳ್ಳಿಯಂತೆ ದಿಂಡನ್ನು ಹೆಚ್ಚು ದಿವಸ ರಕ್ಷಿಸಲು ಸಾಧ್ಯವಾಗದೆ ಇರುವುದರಿಂದ ಇದರ ಪ್ರಾಮುಖ್ಯ ಹಾಗೂ ಬೇಸಾಯ ತೀರ ಕಡಿಮೆ. ಜಪಾನ್ ಗುಂಪು ಈರುಳ್ಳಿಯನ್ನು ಬೀಜ ಮತ್ತು ಲಶುನಗಳಿಂದ ವೃದ್ಧಿ ಮಾಡಬಹುದು. ಭಾರತ ದೇಶದಲ್ಲಿ ಇದನ್ನು ಹೆಚ್ಚಾಗಿ ಬೇಸಾಯ ಮಾಡುತ್ತಿಲ್ಲ ಇಲ್ಲ. ಇದಕ್ಕೆ ಕೀಟ ಮತ್ತು ರೋಗ ಬಾಧೆ ಇಲ್ಲ.

4. ಸೀಮೆ ಈರುಳ್ಳಿ: ಸೀಮೆ ಈರುಳ್ಳಿಯನ್ನು ಅನೇಕ ಸಾರಿ ಜಪಾನ್ ಈರುಳ್ಳಿಯೆಂದು ಭ್ರಮಿಸುವ ಸಾಧ್ಯತೆ ಹೆಚ್ಚು. ಇದು ಕೂಡ ಗುಂಪಾಗಿ ಬೆಳೆಯುತ್ತದೆ. ಆದರೆ ಇದು ದೀರ್ಘಾವಧಿ ಬೆಳೆ. ಗುಂಪಾಗಿ ಬೆಳೆಯುವುದರಿಂದ ಹೆಚ್ಚಿನ ಅಂತರ ಕೊಡಬೇಕು. ಸೀಮೆ ಈರುಳ್ಳಿಯನ್ನು ಬೀಜ ಮತ್ತು ಲಶುನಗಳಿಂದ ವೃದ್ಧಿ ಮಾಡಬಹುದು. ಇತರ ಗುಣಗಳಲ್ಲಿ ಇದು ಬೆಳ್ಳುಳ್ಳಿಯನ್ನು ಹೋಲುತ್ತಾದರೂ ಬೆಳ್ಳುಳ್ಳಿಯಷ್ಟು ಘಾಟು ಅಲ್ಲ.

5. ದೀರ್ಘಕಾಲ ಈರುಳ್ಳಿ (ಮರದ ಈರುಳ್ಳಿ): ಭಾರತ ದೇಶದಲ್ಲಿ ಮರದ ಈರುಳ್ಳಿ ಹೆಚ್ಚಿನ ಪ್ರಾಮುಖ್ಯ ಪಡೆದಿಲ್ಲ. ದೀರ್ಘಾವಧಿ ಮರದ ಕೆಳ ಮತ್ತು ಮೇಲು ಭಾಗದಲ್ಲಿ ಈರುಳ್ಳಿ ಗುಂಪುಗಳು ಬಿಡುತ್ತವೆ. ಮೇಲುಭಾಗದ ಗುಂಪಿನಲ್ಲಿ ಚಿಕ್ಕ ಲಶುನಗಳಿವೆ. ಇವನ್ನು ಗುಂಪಿನಿಂದ ಬೇರ್ಪಡಿಸಿ ವೃದ್ಧಿಮಾಡಬಹುದು. ಈ ಗುಂಪಿನ ಈರುಳ್ಳಿಯನ್ನು ಉಪ್ಪಿನಕಾಯಿಗಾಗಿ ಹೆಚ್ಚಾಗಿ ಬಳಸುತ್ತಾರೆ.

ಈ ಕೆಳಗಿನ ಗುಣಗಳನ್ನು ಅನುಸರಿಸಿ ಜಾತಿ ವಿಂಗಡಣೆ ಮಾಡುತ್ತಾರೆ. ಬಣ್ಣ, ಆಕಾರ, ಗಾತ್ರ, ವೃತ್ತ ಎಲೆಯ ಬಣ್ಣ, ಉಳಿಯುವ ಗುಣ (ಕೀಪಿಂಗ್ ಕ್ವಾಲಿಟಿ). ಬೆಳೆಯ ಅವಧಿ ಮತ್ತು ಇಳುವರಿ, ವಾಸನೆ ಮತ್ತು ಆಕಾರ.

ಬಣ್ಣ: ಕೆಂಪು, ಬಿಳಿ, ಹಳದಿ ಮತ್ತು ಮಧ್ಯವರ್ತಿ. ಆಕಾರ ಗುಂಡು ಬುಗುರಿ, ಆಯತಾಕಾರ ಮತ್ತು ಚಪ್ಪಟೆ ತಳ. ಗಾತ್ರ: ಸಣ್ಣ (2.5–5 ಸೆಂ.ಮೀ.), ಮಧ್ಯಮ (5–7.5 ಸೆಂ.ಮೀ) ದೊಡ್ಡದು (8 ಸೆಂ.ಮೀ. ಮತ್ತು ಹೆಚ್ಚು). ವೃತ್ತ ಎಲೆಯ ಬಣ್ಣ: ಬಿಳುಪು ಮತ್ತು ಇತರವು. ಉಳಿಯುವ ಗುಣ: ಕಡಿಮೆ ದಿನ ಉಳಿಯುವ ಗುಣ: ಹೆಚ್ಚು ದಿನ ಉಳಿಯುವ ಗುಣ ಮಧ್ಯಮ. ಬೆಳೆ ಅವಧಿ: ಶೀಘ್ರಾವಧಿ 90–100 ದಿವಸ; ನಿಧಾನ ಅವಧಿ 130–180 ದಿವಸ. ಮಧ್ಯಮ ಅವಧಿ 100–120 ದಿವಸ. ವಾಸನೆ ಮತ್ತು ಕಾರ: ಸ್ವಲ್ಪ ಮತ್ತು ಹೆಚ್ಚು ಇರುವಂಥವು.

ಈರುಳ್ಳಿ ಜಾತಿಗಳಲ್ಲಿ ಮುಖ್ಯವಾದವು ಗೆಡ್ಡೆ ಈರುಳ್ಳಿ (ಬಲ್ಬ್ ಆನಿಯನ್) ಆಲು ಈರುಳ್ಳಿ (ಮಲ್ಟಿಪ್ಲೈಯರ್ ಅಥವಾ ಪೊಟ್ಯಾಟು), ಷಲಾಟ್, ಸಿಬಾಲ್ ಅಥವಾ ಜಪಾನ್ ಈರುಳ್ಳಿ. ವ್ಯಾಪಾರದೃಷ್ಟಿಯಿಂದ ಗೆಡ್ಡೆ ಈರುಳ್ಳಿ ಮುಖ್ಯವಾದದ್ದು. ಆಲು ಈರುಳ್ಳಿಯಲ್ಲಿ ಒಂದೇ ಗಿಡದಲ್ಲಿ ಸಣ್ಣ ಸಣ್ಣ ಈರುಳ್ಳಿಗಳು ಉದ್ಭವಿಸುತ್ತವೆ. ಹೊರಭಾಗ ಬಿಳುಪು. ಕಡಿಮೆ ಉಷ್ಣವನ್ನು ತಡೆಯುವ ಶಕ್ತಿಯಿದೆ. ಷಲಟ್ ಜಾತಿಗೂ ಆಲು ಈರುಳ್ಳಿಯಂತೆಯೇ ವಾಸನೆ ಹೆಚ್ಚು. ಜಪಾನ್ ಈರುಳ್ಳಿಯನ್ನು ಬೀಜಗಳಿಂದ ಉತ್ಪಾದಿಸಬಹುದು. ಇದರಲ್ಲಿ ಗೆಡ್ಡೆಗಳಿರುವುದಿಲ್ಲ. ಆದರೆ ಕಾಂಡ ಭಾಗವನ್ನು ಗೆಡ್ಡೆಯಂತೆ ಉಪಯೋಗಿಸಬಹುದು. ಭಾರತದಲ್ಲಿ ಇದರ ಬೇಸಾಯವಿಲ್ಲ. ಈ ಜಾತಿಯ ಕಾಂಡ ಭಾಗ ಬಲುಗಟ್ಟಿಯಾಗಿದ್ದು ರೋಗಗಳನ್ನು ತಡೆಯಬಲ್ಲ ಶಕ್ತಿ ಇದಕ್ಕಿದೆ.

ಆಕಾರ, ಬಣ್ಣ, ರುಚಿ ಇವನ್ನು ಅನುಸರಿಸಿ ವ್ಯಾಪಾರದೃಷ್ಟಿಯಿಂದ ಈರುಳ್ಳಿಯನ್ನು ಬೇರೆ ಬೇರೆ ಜಾತಿಗಳಾಗಿ ವಿಭಾಗಿಸಿರುವರು. ಅವುಗಳ ವಿವರ ಹೀಗಿದೆ:

**ಬಳ್ಳಾರಿ ಈರುಳ್ಳಿ:** ಬಣ್ಣ ಮಾಂಸದಂತೆ, ಆಕಾರ ದುಂಡು ಅಥವಾ ಮೊಟ್ಟೆಯಂತೆ 7.5–10 ಸೆಂ.ಮೀ.2 ಉದ್ದ. ಹೆಚ್ಚು ಕಾಲ ಉಳಿಯುತ್ತದೆ. ಕಾರ ಕಡಿಮೆ. ಅಧಿಕ ಇಳುವರಿ ಕೊಡುತ್ತದೆ. ಗೆಡ್ಡೆ ಮೆದು. ಕೆಂಪು ಮತ್ತು ಕಪ್ಪು ಮಣ್ಣಿಗೆ ಹೊಂದಿಕೊಳ್ಳುತ್ತದೆ. ರಾಂಪುರ ಈರುಳ್ಳಿ ಎಂದೂ ಹೆಸರಿದೆ.

ಬೊಂಬಾಯಿ ಈರುಳ್ಳಿ ಅಥವಾ ದುಲಿಯಾ: ಹೊರ ಮೈ ಬಣ್ಣ ಬೆಳ್ಳಿಯಂತೆ. ಆಕಾರ ದುಂಡಗೆ, ಗಾತ್ರ ಮಧ್ಯಮ ಮತ್ತು ದೊಡ್ಡದು. ಹೆಚ್ಚು ಕಾಲ ಉಳಿಯುತ್ತದೆ. ಕಾರ ಕಡಿಮೆ. ಅಧಿಕ ಇಳುವರಿ ಕೊಡುತ್ತದೆ. ಕಪ್ಪು ಮಣ್ಣಿಗೆ ಹೊಂದಿಕೊಳ್ಳುತ್ತದೆ. ಗೆಡ್ಡೆ ಗಟ್ಟಿ ಮತ್ತು ಬಿಗಿ. ದುಲಿಯಾ ಜಾತಿ ದಾವಣಗೆರೆ ಪ್ರದೇಶದಲ್ಲಿ ಬೆಳೆಯುವುದರಿಂದ ದಾವಣಗೆರೆ ಈರುಳ್ಳಿ ಎಂದೂ ಹೆಸರಿದೆ. ಪಾಟ್ನ ಜಾತಿ ಎಂದೂ ಕರೆಯುವುದಿದೆ.

**ಬೆಂಗಳೂರು ಈರುಳ್ಳಿ:** ಬಣ್ಣ ಸಾಮಾನ್ಯವಾಗಿ ಕೆಂಪು. ಬೆಳ್ಳಗೂ ಇದೆ. ಆಕಾರ ದುಂಡಗೆ, ವಾಸನೆ ತೀಕ್ಷ್ಣ. ಹೆಚ್ಚುಕಾಲ ಶೇಖರಿಸಬಹುದು. ಔಷಧಿಗೆ ಇದರ ಉಪಯೋಗ ಹೆಚ್ಚು. ಕೋಲಾರ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಬೆಳೆ ಹುಲುಸಾಗಿ ಎತ್ತುತ್ತಾರೆ.

ಸಣ್ಣ ಜಾತಿಯ ಈರುಳ್ಳಿ: ಇದರಲ್ಲಿ ಮುಖ್ಯವಾಗಿ ಎರಡು ಬಗೆಗಳಿವೆ. ಇನ್ನೊಂದು ದುಂಡಗಿದೆ. ಹಳ್ಳಿ ಜನರು ಹೆಚ್ಚಾಗಿ ಇದನ್ನೇ ಉಪಯೋಗಿಸುತ್ತಾರೆ.

ಈ ಮೇಲೆ ಕಾಣಿಸಿರುವ ನಾಲ್ಕು ಜಾತಿಗಳು ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಬೇಸಾಯದಲ್ಲಿವೆ. ಇನ್ನೂ ಅನೇಕ ಜಾತಿಗಳು ಇವೆಯಾದರೂ ಅವುಗಳ ಬೇಸಾಯ ಕರ್ನಾಟಕ ರಾಜ್ಯದಲ್ಲಿ ತೀರ ಕಡಿಮೆ. (ಎಂ.ಎಚ್.ಎಂ.;ಎ.ಎನ್.ಎಸ್.)

ಕೆಲವರು ತಾಮಸಾಹಾರವೆಂದು ಈರುಳ್ಳಿಯನ್ನು ತ್ಯಾಜ್ಯ ಮಾಡಿದ್ದರೂ ಇದು ಬಹುಜನರ ದಿನನಿತ್ಯದ ಮೇಲೋಗರದ ವಸ್ತುವಾಗಿದೆ. ದಕ್ಷಿಣ ಭಾರತದ ಕೆಲವು ಭಾಗಗಳನ್ನು ಬಿಟ್ಟರೆ ಪ್ರಪಂಚದ ಎಲ್ಲೆಡೆಗಳಲ್ಲೂ ಇದರ ಬಳಕೆಯನ್ನು ಕಾಣಬಹುದು. ಸಾರು, ಸಾಂಬಾರ್, ಚಟ್ನಿ, ಗೊಜ್ಜು, ಪಲ್ಯ, ಚಿತ್ರಾನ್ನ, ಪಲಾವ್‌ಗಳಲ್ಲೂ ವಡೆ ಪಕೋಡಗಳಲ್ಲೂ ಇದನ್ನು ಬಳಸುತ್ತಾರೆ. ಹಸಿಯಾಗಿಯೇ ಮೆಲ್ಲುವುದುಂಟು. ಹೀಗಾಗಿ ಇದು ಬಡವರ ಆಹಾರ ಎನಿಸಿದೆ. ಮೇಲಾಗಿ ಇದು ದೇಹಕ್ಕೆ ಬೇಕಾದ ಅನೇಕ ಪೋಷಕಾಂಶಗಳನ್ನೊದಗಿಸುತ್ತದೆ. ಕಣ್ಣಿನ ರೋಗಗಳಿಗೆ ಇದರ ರಸವನ್ನು ಬಳಸುತ್ತಾರೆ. ಅಜೀರ್ಣಕ್ಕೆ ಇದು ಒಳ್ಳೆಯ ಮದ್ದು. ಸುಟ್ಟು ತಿಂದಲ್ಲಿ ಉಷ್ಣವನ್ನು ನಿವಾರಿಸಿ ಮೃದುವಿರೇಚನ ಮಾಡಿಸುತ್ತದೆ. ಬೆಲ್ಲದೊಂದಿಗೆ ಇದರ ಲೇಹ್ಯವನ್ನು ಮಾಡಿ ಉಪಯೋಗಿಸುತ್ತಾರೆ. ಔಷಧಿಗೆ ಬಿಳಿಯ ಗೆಡ್ಡೆಗಳೇ ಶ್ರೇಷ್ಠವೆಂದು ಪರಿಗಣಿಸಲಾಗಿದೆ. ಗೆಡ್ಡೆಯಂತೆ ಈರುಳ್ಳಿಯ ಕಾವನ್ನೂ ಆಹಾರ ಪದಾರ್ಥವಾಗಿ ಉಪಯೋಗಿಸುವ ವಾಡಿಕೆಯಿದೆ.

*

**ಈರೋಡು:** ತಮಿಳುನಾಡು ರಾಜ್ಯದ ಕೊಯಮತ್ತೂರು ಜಿಲ್ಲೆಯಲ್ಲಿರುವ ಒಂದು ಪಟ್ಟಣ, ರೈಲ್ವೆಜಂಕ್ಷನ್. ಅದೇ ಹೆಸರಿನ ತಾಲ್ಲೂಕಿನ ಆಡಳಿತ ಕೇಂದ್ರ. ಕೊಯಮತ್ತೂರಿನಿಂದ ಈಶಾನ್ಯಕ್ಕೆ 100 ಕಿಮೀ ದೂರದಲ್ಲಿ ಕಾವೇರಿ ನದಿಯ ದಂಡೆಯ ಮೇಲಿದೆ. ಉತ್ತರ ಅಕ್ಷಾಂಶ 11°.21[1] ಮತ್ತು ಪೂರ್ವ ರೇಖಾಂಶ 77°.43[1] ಜನಸಂಖ್ಯೆ 4.5 ಲಕ್ಷ (2001) ಕೊಯಮತ್ತೂರು–ಸೇಲಂ ರೈಲು ಹಾದಿಯ ಮಧ್ಯೆ ಇರುವ ಈರೋಡಿನಿಂದ ತಿರುಚಿರಾಪಳ್ಳಿಗೆ ಒಂದು ಮಾರ್ಗ ಕವಲೊಡೆಯುತ್ತದೆ. ಈರೋಡು ವ್ಯಾಪಾರ ಹಾಗೂ ಕೈಗಾರಿಕಾ ಕೇಂದ್ರ. ನಗರದ ಸುತ್ತಣ ಪ್ರದೇಶದಲ್ಲಿ ಬೆಳೆಯುವ ಹತ್ತಿಯನ್ನು ಹಿಂಜಿ ಬೇಲುಗಳಾಗಿ ಮಾಡುವ ಕೈಗಾರಿಕೆ ಇಲ್ಲಿ ಬಲು ಹಿಂದಿನಿಂದ ಬೆಳೆದು ಬಂದಿದೆ. ಕೈಮಗ್ಗ, ವಿದ್ಯುತ್ ಮಗ್ಗದ ಬಟ್ಟೆಗಳ ಹಾಗೂ ಸಿದ್ಧ ಉಡುಪುಗಳ ತಯಾರಿಕೆಯಲ್ಲಿ ಇದು ವಿಶ್ವವಿಖ್ಯಾತವಾಗಿದೆ. ಇಲ್ಲಿನ ಸೀರೆಗಳು, ಜಮಖಾನಗಳು, ಲುಂಗಿಗಳು ಟವಲ್‌ಗಳು, ಧೋತಿಗಳು, ಮಗ್ಗಲ ಹಾಸುಗಳು ತುಂಬಾ ಪ್ರಸಿದ್ಧವಾಗಿವೆ. ಇಲ್ಲಿ ಒಂದು ತಾಂತ್ರಿಕ ಶಿಕ್ಷಣ ಕಾಲೇಜೂ ಇದೆ. ಈರೋಡಿನ ಸುತ್ತಣ ಪ್ರದೇಶ ಫಲವತ್ತಾದ್ದರಿಂದ ಇದು ನೆರೆಹೊರೆಯವರ ದಾಳಿಗಳಿಗೆ ಪದೇ ಪದೇ ತುತ್ತಾಗುತ್ತಿತ್ತು. *

**ಈರ್ಷೆ:** ಹೊಟ್ಟೆಕಿಚ್ಚು, ಅಸೂಯೆ ಎಂಬ ಹೆಸರನ್ನುಳ್ಳ ಒಂದು ಸಂಕೀರ್ಣ ಮನೋಧರ್ಮ (ಜೆಲಸಿ). ಹುಟ್ಟಿದ ಮಗುವಿನಲ್ಲಿ ಅನೇಕ ತಿಂಗಳವರೆಗೆ ಇದು ಕಾಣಿಸಿಕೊಳ್ಳುವು ದಿಲ್ಲ. ಆಗಿನ ಅದರ ಭಾವಸ್ಥಿತಿ ಎಂದರೆ ಶಾರೀರಿಕ ಉದ್ರೇಕ ಮಾತ್ರ. ಕ್ರಮೇಣ ಅದರಿಂದ ಸಂಕಟ ಮತ್ತು ಆನಂದ ಎಂಬೆರಡು ಭಾವಗಳು ಸುಮಾರು ಮೂರು ತಿಂಗಳು ಹೊತ್ತಿಗೆ ಕವಲೊಡೆದುಕೊಳ್ಳುತ್ತದೆ. ಅನೇಕ ಮನೋವಿಜ್ಞಾನಿಗಳ ಸಂಶೋಧನೆಗಳ ಪ್ರಕಾರ ಈರ್ಷೆ ಮೂಲ ಸಂಕಟಭಾವದಿಂದ ಬೇರ್ಪಟ್ಟು ಸ್ವತಂತ್ರವಾಗುವ ಒಂದು ಅಸಂತುಷ್ಟಭಾವ.

ಈರ್ಷೆ ಯಾವಾಗಲೂ ಸಾಮಾಜಿಕ ಸನ್ನಿವೇಶವನ್ನು ಅವಲಂಬಿಸಿದ್ದು. ಅಂದರೆ ಹೊಟ್ಟೆಕಿಚ್ಚು ಯಾವಾಗಲೂ ಇನ್ನೊಬ್ಬರ ಬಗ್ಗೆ ಹುಟ್ಟುವ ಭಾವ. ಆದ್ದರಿಂದ ಸಾಮಾಜಿಕ ಸನ್ನಿವೇಶಗಳು ಗೊತ್ತಾಗುವವರೆಗೆ. ಅವರ ಆಸೆ, ಭದ್ರತೆಗಳಿಗೆ ಧಕ್ಕೆ ಉಂಟಾಗುವುದು ಅವರಿಗೆ ಗೊತ್ತಾಗುವವರೆಗೆ, ಮಕ್ಕಳಲ್ಲಿ ಹೊಟ್ಟೆಕಿಚ್ಚು ಕಂಡುಬರುವುದಿಲ್ಲ.

ಹೊಟ್ಟೆಕಿಚ್ಚಿನಲ್ಲಿ ಕೋಪ, ಭಯ ಮತ್ತು ಪ್ರೀತಿಯ ಅಂಶಗಳು ಸೇರಿಕೊಂಡಿರಬಹುದು ಎಂಬುದು ಹಲವು ಮನೋವಿಜ್ಞಾನಿಗಳ ಅಭಿಮತ. ಎಲ್ಲ ವಯಸ್ಸಿನಲ್ಲೂ ಹೊಟ್ಟೆಕಿಚ್ಚಿನ ಮೂಲ ಅಭದ್ರತೆ; ತನಗೆ ಬೇಕಾದ್ದು ಸಿಗಲಾರದೆಂಬ ಅಳುಕು. ಯಾರ ಬಗ್ಗೆ ಹೊಟ್ಟೆ ಉರಿಯುತ್ತದೋ ಅವರ ಬಗ್ಗೆ ಕೋಪ, ಭಯ, ನಮ್ಮಲ್ಲಿಲ್ಲದ್ದೇನೋ ಅವರಲ್ಲಿ ಇರುವುದರಿಂದ ಒಂದು ಬಗೆಯ ಹೊಗಳುವ ಮನೋಧರ್ಮ. ಇವೆಲ್ಲ ಈ ಭಾವದಲ್ಲಿ ಬೆರೆತುಕೊಂಡಿರುತ್ತವೆ.

ಬಾಲ್ಯದ ಪ್ರಾರಂಭದ ವರ್ಷಗಳಲ್ಲಿ ಹೊಟ್ಟೆಕಿಚ್ಚು ಹೆಚ್ಚು ಸಾಮಾನ್ಯ; ಮಕ್ಕಳು ಹೆಚ್ಚು ದೊಡ್ಡವರಾಗಿ ಇತರರೊಡನೆ ಬೆರೆಯತೊಡಗಿದಾಗ ಇದು ಸ್ವಲ್ಪ ಕಡಿಮೆ. ಕಿಶೋರಾವಸ್ಥೆಯ ಕೊನೆಯಲ್ಲಿ ಮತ್ತಿದು ಜಾಸ್ತಿಯಾಗುತ್ತದೆ. ಚಿಕ್ಕವಯಸ್ಸಿನಲ್ಲಿ ಹೊಟ್ಟೆಕಿಚ್ಚಿನ ಮೂಲಕಾರಣ ಮಗುವಿಗೆ ತಾನು ತಾಯಿಯ ಪ್ರೀತಿ ವಿಶ್ವಾಸಗಳನ್ನು ಕಳೆದುಕೊಳ್ಳುತ್ತಿದ್ದೇನೆಂಬ ಭಯ. ಅದಕ್ಕೊಂದು ತಮ್ಮನೋ ತಂಗಿಯೋ ಹುಟ್ಟಿದಾಗ ಈ ಹೊಟ್ಟೆಕಿಚ್ಚು ಚೆನ್ನಾಗಿ ವ್ಯಕ್ತವಾಗುತ್ತದೆ. ತಮ್ಮ ತಂಗಿಯರ ಆಗಮನ, ಮಗುವಿನ ದೃಷ್ಟಿಯಲ್ಲಿ, ತಾನು ಮುಖ್ಯವಾಗಿ ತಾಯಿಯ ಪ್ರೀತಿಯಿಂದ ವಂಚಿತವಾಗುವ ಸನ್ನಿವೇಶ. ಹೀಗೆ, ಹೊಟ್ಟೆಕಿಚ್ಚು ಮೂಲಭೂತವಾಗಿ ಮಗು ಪ್ರೀತಿ ವಿಶ್ವಾಸಗಳಿಂದ ವಂಚಿತವಾದಾಗ ಅಥವಾ ಹಾಗೆ ಅನ್ನಿಸಿದಾಗ ಅದು ತೋರಿಸುವ ಪ್ರತಿಕ್ರಿಯೆ. ವಾಸ್ತವವಾಗಿಯೂ ತಾಯಿಗೆ ಹೊಸದೊಂದು ಮಗು ಹುಟ್ಟಿದಾಗ ಮೊದಲಿನ ಮಗುವಿಗೆ ಹಿಂದಿನಂತೆಯೇ ಗಮನಕೊಡುವುದು ಸಾಧ್ಯವಾಗುವುದಿಲ್ಲ. ಆಕೆ ಹೊಸ ಮಗುವಿಗೆ ಹೆಚ್ಚು ಆರೈಕೆ ಮಾಡಬೇಕಾಗುತ್ತದೆ. ಇದುವರೆಗೆ ಅಮ್ಮನ ಪ್ರೀತಿಗೆ ಪೂರ್ತಿ ಪಾತ್ರವಾಗಿದ್ದ ಮಗುವಿಗೆ ಇದ್ದಕ್ಕಿದ್ದಂತೆ ತಾಯಿ ಈ ಹೊಸ ಮಗುವನ್ನು ಎತ್ತಿ ಮುದ್ದಾಡುವುದು, ಮೊಲೆಯೂಡಿಸುವುದು ಹೊಟ್ಟೆಕಿಚ್ಚು ಬರಿಸುತ್ತದೆ. ಹೊಟ್ಟೆಕಿಚ್ಚಿನ ಮೂಲ ಬಹುಶಃ ಇದಿರಬಹುದೆಂಬ ಅಭಿಪ್ರಾಯವನ್ನು ಕೆಲವು ಮನೋವಿಜ್ಞಾನಿಗಳು ವ್ಯಕ್ತಪಡಿಸುತ್ತಾರೆ.

ಹೊಟ್ಟೆಕಿಚ್ಚಿನಿಂದ ತಪ್ತವಾದ ಮಗು ಈ ಎರಡರಲ್ಲಿ ಒಂದು ಪ್ರತಿಕ್ರಿಯೆಯನ್ನು ತೋರಿಸಬಹುದು; 1. ಯಾರ ಬಗ್ಗೆ ಮಗುವಿಗೆ ಹೊಟ್ಟೆಕಿಚ್ಚು ಉಂಟಾಗುತ್ತದೋ ಅವರ ಮೇಲೆ ಎಗರಿಬೀಳಬಹುದು; 2. ಇನ್ನೂ ಚಿಕ್ಕ ವಯಸ್ಸಿನ ಅವಸ್ಥೆಗೆ ಹಿನ್ನಡೆಯಬಹುದು. ಮೊದಲನೆಯ ವಿಧಾನದಿಂದ ಮಗು ತನ್ನ ಕೋಪವನ್ನು ತೀರಿಸಿಕೊಂಡರೆ ಎರಡನೆಯ ವಿಧಾನದಿಂದ ಅದು ತಾನು ಇನ್ನೂ ತುಂಬಾ ಚಿಕ್ಕವನೆಂದು ತೋರಿಸುವುದರ ಮೂಲಕ ತಾಯ್ತಂದೆಯರ ಗಮನವನ್ನು ಸೆಳೆಯಬಹುದು. ಈ ಎರಡನೆಯ ಬಗೆಯ ಪ್ರತಿಕ್ರಿಯೆಯನ್ನು ತೋರಿಸುವ ಮಗು ಸಾಕಷ್ಟು ದೊಡ್ಡದಾಗಿದ್ದರೂ ಮುದ್ದು ಭಾಷೆಯಲ್ಲಿ ಮಾತನಾಡಲು, ಹಾಸಿಗೆಯಲ್ಲಿ ಮೂತ್ರವಿಸರ್ಜನೆ ಮಾಡಲು, ಹಟಮಾಡಲು ಮೊದಲು ಮಾಡಬಹುದು.

ದೊಡ್ಡವರಲ್ಲಿ ಹೊಟ್ಟೆಕಿಚ್ಚಿನ ಮೂಲಕಾರಣ ಬೇರೆಯವರ ಶ್ರೀಮಂತಿಕೆ, ಘನತೆ, ಹಿರಿಮೆಗಳು ಮತ್ತು ಇತರ ಶಕ್ತಿಸಾಮರ್ಥ್ಯಗಳು. ಸೊಸೆಯ ಸುಖದ ನಲಿದಾಟಗಳನ್ನು ಕಂಡು ಅತ್ತೆಗೆ, ಅತ್ತೆಯ ಅಧಿಕಾರವನ್ನು ಕಂಡು ಸೊಸೆಗೆ, ಓರಗಿತ್ತಿಯರ ಉತ್ಕರ್ಷವನ್ನು ಕಂಡು ಹೆಂಗಸಿಗೆ, ನೆಂಟರಿಷ್ಟರ ಅಭಿವೃದ್ಧಿಯನ್ನು ಕಂಡು ಗಂಡಸಿಗೆ ಈರ್ಷೆಯುಂಟಾಗುವುದು ಸಾಮಾನ್ಯ. ಈರ್ಷೆಯಿಂದ ಪ್ರತೀಕಾರ ಬುದ್ಧಿ ಬೆಳೆಯುತ್ತದೆ. ಅವರ ಸುಖ ತನಗೆ ಸಿಕ್ಕರಂತೂ ಪರಮಸಂತೋಷ. ಅದಿಲ್ಲದಲ್ಲಿ ಅವರ ಸುಖ ಕಡಿಮೆಯಾದರೆ ಅಷ್ಟೇ ಸಾಕು ಎಂಬ ಭಾವ ಈರ್ಷಾವಂತರಲ್ಲಿ ಬೆಳೆಯುತ್ತದೆ. ಸಾಹಿತ್ಯದ ಉತ್ಕೃಷ್ಟ ಮಾದರಿಗಳಿಗೆಲ್ಲ ಈ ಭಾವನೆ ಒಂದಲ್ಲ ಒಂದು ರೀತಿಯಲ್ಲಿ ಮೂಲವಸ್ತುವನ್ನೊದಗಿಸಿದೆ. ಎಲ್ಲ ವಯಸ್ಸಿನಲ್ಲೂ ಹೊಟ್ಟೆಕಿಚ್ಚು ಅನಪೇಕ್ಷಣೀಯ ಭಾವ. ಬಾಲ್ಯದಲ್ಲಿ ಅತಿಯಾದ ಹೊಟ್ಟೆಕಿಚ್ಚನ್ನು ಅನುಭವಿಸುವ ಮಕ್ಕಳ ಮಾನಸಿಕ ಬೆಳವಣಿಗೆ ಕುಂಠಿತವಾಗಬಹುದು. ದೊಡ್ಡವರಲ್ಲಿ ಇದು ಮಾನಸಿಕ ಅನಾರೋಗ್ಯದ, ಅಂಜಿಕೆಯ, ಅಪ್ರಬುದ್ಧತೆಯ ಸೂಚನೆಯಾಗಬಹುದು. (ಎಂ.ಎಸ್.ಎಚ್.)

**ಈಲಿ:** ಬೆನ್ನೆಲುಬಿ ಪ್ರಾಣಿಗಳ ಹೊಟ್ಟೆಯಲ್ಲಿ ಮಾತ್ರ ಇರುವ ಬಲು ದೊಡ್ಡ ಗ್ರಂಥಿ (ಕಲಿಜ, ಯಕೃತ್, ಪಿತ್ತಜನಕಾಂಗ, ಲಿವರ್). ಮೈಯ ಅಂಗಗಳಲ್ಲಿ ಇಷ್ಟು ಗಾತ್ರದ್ದು ಇನ್ನಾವುದೂ ಇಲ್ಲ. ಸುಮಾರಾಗಿ ಉಳಿದ ಅಂಗಗಳು ಇದನ್ನು ಒತ್ತುತ್ತಿರುವುವು. ಇದರಿಂದ ಈಲಿಯಲ್ಲಿ ಆಗುವ ನೆಗ್ಗುಗಳನ್ನು ಹೆಣದಲ್ಲಿ ಮಾತ್ರ ಕಾಣಬಹುದಷ್ಟೆ. ಬದುಕಿದಾಗ ಶಸ್ತ್ರಿಯೆಗಾಗಿ ಈಲಿಯನ್ನು ಅದರ ಎಂದಿನ ಜಾಗದಿಂದ ಸರಿಸಿದರೆ ನೆಗ್ಗುಗಳು ತುಂಬಿಕೊಂಡು ಕಾಣದಾಗುತ್ತದೆ. ಪೆಟ್ಟು ತಾಕಿದರೆ, ಗಾಯವಾದರೆ ಸುಲಭವಾಗಿ ಬಿರಿದು ಹರಿಯುತ್ತದೆ. ಗಾಯವಾದರಂತೂ ವಿಪರೀತ ರಕ್ತ ಸುರಿದುಹೋಗುತ್ತದೆ. ಉದರದಲ್ಲಿರುವ ಇತರ ಅಂಗಗಳು ಒತ್ತುತ್ತಿರುವುದರಿಂದಲೇ ಈಲಿ ಅದರ ಜಾಗದಲ್ಲಿ ಇರಲು ಸಾಧ್ಯವಾಗುವುದು. ಇದು ಮೈತೂಕದ ಸುಮಾರು 30–50ರಲ್ಲಿ ಒಂದು ಪಾಲು ತೂಗುತ್ತದೆ. ಅಂದರೆ ಗಂಡಸರಲ್ಲಿ 1.4–1.6 ಕಿ.ಗ್ರಾಂ. ಹೆಂಗಸರಲ್ಲಿ 1.2–1.4 ಕಿ.ಗ್ರಾಂ. ಎಳೆಗೂಸುಗಳಲ್ಲಿ ಮೈತೂಕದ 18–24ರಲ್ಲೊಂದು ಪಾಲು ಇರುವುದರಿಂದ ಹೊಟ್ಟೆಯಲ್ಲಿ ಬಹು ಭಾಗವನ್ನು ತುಂಬಿರುವುದು. ಇದರಿಂದಲೇ ಕೂಸುಗಳಲ್ಲಿ ಈಲಿ ದೊಡ್ಡದಾಗಿರುವಂತೆ ತೋರುವುದು ಹೆಚ್ಚಲ್ಲ.




**ಚಿತ್ರ 1. ಈಲಿಯ ಮೇಲಿನ ತಲ**

**1. ಎಡ ಹಾಲೆ, 2. ಕುಡುಲಾಕಾರಿ ತಂತುಗಟ್ಟು, 3. ಪಿತ್ತಕೋಶ, 4. ಬಲ ಹಾಲೆ, 5. ಎಡ ಮುಮ್ಮೂಲೆ ತಂತುಗಟ್ಟು, 6. ಬಾಲವಿಕ ಹಾಲೆ, 7. ಕೆಳಸಿರ ಕೊಳ್ಳ, 8. ಮುಮ್ಮೂಲೆ ತಂತುಗಟ್ಟು**

ವಿಷಕರವಾದ ವಸ್ತುಗಳು ರಕ್ತದಲ್ಲಿ ಸೇರಿದರೆ ಈಲಿ ಅವನ್ನು ಸೋಸಿ ರಕ್ತವನ್ನು ಚೊಕ್ಕಗೊಳಿಸುತ್ತದೆ. ಸಕ್ಕರೆ, ಜೀವಾತುಗಳ ತೆರನ ಆಹಾರ ವಸ್ತುಗಳಿಗೆ ಇದೊಂದು ಉಗ್ರಾಣ. ಹಲವಾರು ಬಗೆಗಳ ಪ್ರೋಟೀನುಗಳನ್ನೂ ಮುಖ್ಯವಾಗಿ ರೋಗ ಅಂಟುವುದನ್ನು ತಡೆದು ರೋಧವಸ್ತುಗಳನ್ನೂ (ಆ್ಯಂಟಿಬಾಡೀಸ್) ತಯಾರಿಸುವ ಕಾರ್ಖಾನೆಯಿದು. ತಿಂದ ಆಹಾರವನ್ನು ಅರಗಿಸಲು ನೆರವಾಗುತ್ತದೆ. ಕೆಲಸಕ್ಕೆ ಬಾರದ ಕಸರಿನ ವಸ್ತುಗಳನ್ನು ತೆಗೆದು ಹೊರಹಾಕುತ್ತದೆ. ಮಾಂಸಾಹಾರಿಗಳಿಗೆ ಈಲಿಯಿಂದ ಮುಖ್ಯವಾಗಿ ಪ್ರೋಟೀನೂ, ಕೊಬ್ಬೂ ಎ.ಡಿ.ಇ.ಬಿ. ಸಮ್ಮಿಶ್ರ ಜೀವಾತುಗಳೂ ದೊರೆಯುತ್ತವೆ. ಇದರಲ್ಲಿ ಕಬ್ಬಿಣ, ತಾಮ್ರ, ಬಿ 12 ಜೀವಾತು ಇರುವುದರಿಂದ ಕೆಲವು ಬಗೆಯ ರಕ್ತಕೊರೆಯಲ್ಲಿ (ಅನೀಮಿಯ) ಈಲಿಯ ಸಾರವನ್ನು ಆಹಾರವಾಗಿ ಕೊಡಬಹುದು.

**ಅಂಗರಚನೆ:** ಬೇರೆ ಬೇರೆ ಎಷ್ಟೋ ಕೆಲಸಗಳಿಗೂ ಇದೊಂದನ್ನೇ ಹೇಳಿ ಮಾಡಿಸಿ ದಂತಿರುವ ಅಂಗವಿದು. ಇದರ ರಚನೆ ತೀರ ಸರಳವಾದರೂ 1949ರ ಮುನ್ನ ಇದರ ಮೈಕ್ರೋಸ್ಕೋಪಿಕ್ ರಚನೆಗಟ್ಟು (ಸ್ಟ್ರಕ್ಚರ್) ಏನೇನೂ ಗೊತ್ತಿರಲಿಲ್ಲ ಎನ್ನಬಹುದು. ಇದರ ಒಟ್ಟಾರೆ ಅಂಗರಚನೆ ಕೂಡ ಗೊತ್ತಾದದ್ದು ಇತ್ತೀಚೆಗೆ (1952).

ಒಟ್ಟಿನಲ್ಲಿ ಈಲಿ ಜೀವಕಣಗಳ ದೊಡ್ಡ ರಾಶಿಯಂತೆ ಕಾಣುವುದು. ಇದರಲ್ಲಿ ಒಂದಕ್ಕೊಂದು ಸಂಬಂಧಿಸಿರುವ ತೆರಪುಗಳ ಸಿಕ್ಕು (ಮೇಸ್) ಎಲ್ಲೆಲ್ಲೂ ತೂರಿ ಜೊಳ್ಳು ಜೊಳ್ಳಾಗಿಸಿದೆ. ಈ ಜೊಳ್ಳು ತೆರಪುಗಳಲ್ಲಿ ರಕ್ತ ವಿಶೇಷ ರೀತಿಯ ಲೋಮನಾಳಗಳ ಜಾಲರಚನೆಗಳು (ನೆಟ್‌ವರ್ಕ್) ತೂಗುಬಿದ್ದಿವೆ. ಸೊಟ್ಟಾಪಟ್ಟ ಕೋಣೆ ದಾರಿ, ಸಂದು ಗೊಂದು, ನೀಳವಾದ ಇಕ್ಕಟ್ಟಿನ ಸೊಟ್ಟ ಕೋಣೆಗಳು ಇರುವ ಬಲು ದೊಡ್ಡ ಬಂಗಲೆಗೆ ಈಲಿಯನ್ನು ಹೋಲಿಸಿದರೆ ಅದರ ರಚನೆ ಚೆನ್ನಾಗಿ ಗೊತ್ತಾಗುವುದು. ಈಲಿಯ ಬಿಡುತಿಗ

ಳೆಂಬ (ಲ್ಯಾಕ್ಯುನೆ ಹೆಪ್ಯಾಟಿಸ್) ಅಕ್ಕಪಕ್ಕದ ಕೋಣೆಗಳ ನಡುವೆ ಗೋಡೆಗಳೇ ಇಲ್ಲವಾದ್ದರಿಂದ, ಮೂರೂ ದಿಕ್ಕುಗಳಲ್ಲೂ ಹರಡಿರುವ ತೊಳಬಳಸು (ಲ್ಯಾಬ್ರಿಂತ್) ಆಗಿದೆ. ಇವುಗಳ ನಡುವೆ ಈಲಿಯ ಜೀವಕಣಗಳಿಂದಾದ ಗೋಡೆ ಇದೆ. ಸಸ್ತನಿವರ್ಗದಲ್ಲಿ ಕೆಳಹಂತದಲ್ಲಿರುವ ಪ್ರಾಣಿಗಳಲ್ಲಿ ಈಲಿಯ ಪದರವೆಂಬ (ಲೆಮ್ಮೆನ ಹೆಪ್ಯಾಟಿಸ್) ಈ ಗೋಡೆಯಲ್ಲಿ ಜೀವಕಣಗಳ ಎರಡು ಪದರಗಳಿರುವುವು. ಅದೇ ಮಾನವ, ಉಲಿವಕ್ಕಿಗಳು, ಸಸ್ತನಿಗಳಲ್ಲಿ ಮಾತ್ರ ಒಂದೇ ಒಂದು ಪದರವಿರುತ್ತದೆ. ಒಂದರೊಡನೊಂದು ಕ್ರಮವಾಗಿ ಜೋಡಿಸಿರುವ ಈ ಗೋಡೆಗಳ ರಚನೆಗೆ ಗೋಡೆಕಟ್ಟು (ಮ್ಯುರೇಲಿಯಂ) ಎಂದು ಹೆಸರಿದೆ.



ಚಿತ್ರ 2. ಈಲಿಯ ಕೆಳಗಿನ ತಲ

**1. ಚೂಚುಕದ ಚಾಚು (ಪೆಪಿಲರಿ ಪ್ರೋಸೆಸ್), 2. ಈಲಿಯ ನಿಜ ಧಮನಿ, 3. ತೂರುಗೊಂದಿಯ ಸಿರ (ಪೋರ್ಟಲ್ ವೆಯ್ನ್), 4. ಪಿತ್ತ ಸಾಗುನಾಳ, 5. ದೂಡುಕ ತಂತುಗಟ್ಟು, ಎಡಬಲಗಳಲ್ಲಿ ಹಆಲೆಗಳಿವೆ (ಲೋಬ್ಸ್). ನಡುವೆ ಪಿತ್ತಕೋಶವಿದೆ. ನಡುವೆ ಮೇಲುಗಡೆ ಕೆಳ ಸಿರ ಕೊಳ್ಳದ ತುಂಡಿದೆ.**

ಕೆಳ ಹಂತದ ಸಸ್ತನಿಗಳಲ್ಲಿರುವ ಈ ಗೋಡೆ ಜೀವಕಣಗಳ ಎರಡು ಪದರವಾಗಿದ್ದರಿಂದ, ಜೋಡಿ ಗೋಡೆಕಟ್ಟು ಹೊಂದಿದೆ. ಒಂದೇ ಪದರ ಇರುವುದು ಸರಳ ಗೋಡೆ ಕಟ್ಟು. ಅಮುಕಿದರೆ ಸಿಕ್ಕಿಕೊಳ್ಳುವ ಮತ್ತು ಗುಂಡಿಗಳ ಹಾಗೆ, ಅಕ್ಕಪಕ್ಕದ ಜೀವಕಣಗಳಲ್ಲಿನ ಕುಳಿಗಳಿಗೆ ಸರಿಯಾಗಿ ಸಿಕ್ಕಿಸುವ ಸಣ್ಣಗೂಟಗಳು ಈಲಿಗೋಡೆಯ ಜೀವಕಣಗಳಿಗೆ ಇರುವುದನ್ನು ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಲ್ಲಿ ಕಾಣಬಹುದು.

ಈಲಿಯ ಜೀವಕಣಗಳ ನಡುವೆ ಇರುವ ಬಲು ಕಿರಿಯ ಪಿತ್ತದ ಕಿರುನಾಳಗಳು (ಕೆನಾಲಿಕುಲೈ) ಸಾಮಾನ್ಯ ಮೈಕ್ರೋಸ್ಕೋಪಿನಲ್ಲಿ ಕಾಣಿಸುವುದು ಕಷ್ಟ. ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಿಂದ ನೋಡಿದಾಗ ಜೀವರಸದ ಎಳೆಗೊಂಡೆಗಳು (ಮೈಕ್ರೋವಿಲ್ಲೈ) ಪಿತ್ತದ ಕಿರುನಾಳಗಳೊಳಕ್ಕೆ ಚಾಚಿರುವುದು ಗೊತ್ತಾಗುತ್ತದೆ. ಈಲಿಯ ಒಂದೊಂದು ಜೀವಕಣದ



**ಚಿತ್ರ 3. ಈಲಿಯಲ್ಲಿ ರಕ್ತ ಸುತ್ತಾಡುವ ದಾರಿಯನ್ನು ತೋರುವುದು. ರೂರು ಗೊಂದಿಯ ಸಿರ (1) ದಿಂದಲೂ, ಈಲಿಯ ಧಮನಿ (6) ಯಿಂದಲೂ, ಮೊದಲಾಗಿ ನಾಳಗುಳಿ (5)ಗಳ ಮೂಲಕ ಕೇಂದ್ರದ ಸಿರ (4) ದೊಳಕ್ಕೆ ಹರಿಯುತ್ತದೆ. ಪಿತ್ತ ಕಿಗ್ಗಾಲವೆಯ (3) ಮೂಲಕ, ಪಿತ್ತ ಇದರ ಎದುರು ದಿಕ್ಕಿನಲ್ಲಿ, ಪಿತ್ತ ಸಾಗುನಾಳ (2) ದೊಳಕ್ಕೆ ಹರಿವುದನ್ನೂ ಕಾಣಿಸಿದೆ.**

ಸುತ್ತಲೂ ಪಿತ್ತದ ಕಿರುನಾಳಗಳು ಹಲಪಕ್ಕಗಳ ಜಾಲದಂತೆ ಇರುವುವು. ಒಂದೊಂದು ಈಲಿಯ ಜೀವಕಣದಲ್ಲೂ ಒಂದರಿಂದ ಮೂರರ ತನಕ ದುಂಡನೆಯ ನಡುಬೀಜಗಳೂ (ನ್ಯೂಕ್ಲಿಯೈ) ಒಂದೊಂದು ಕಿರುನಡುಬೀಜವೂ (ನ್ಯೂಕ್ಲಿಯೋಲಸ್) ಇರುತ್ತವೆ.

ಆಯಾ ಜೀವಕಣದ ಗಾತ್ರಕ್ಕೆ ತಕ್ಕಂತೆ ಅದರ ನಡುಬೀಜದ ಗಾತ್ರ ಅಂಕಿ ಇರುತ್ತವೆ. ಇರುವ ಜಾಗಕ್ಕೆ ತಕ್ಕ ಹಾಗೆ ಜೀವಕಣದ ಗಾತ್ರ ಇರುವುದು. ಈಲಿಯ ಜೀವಕಣದಲ್ಲಿ ಅನೇಕ ಕಣಕಡ್ಡಿಗಳೂ (ಮೈಟೊಕಾಂಡ್ರಿಯ) ಮುಖ್ಯವಾಗಿ ರೈಬೊನ್ಯೂಕ್ಲೀಯಿಕ್ ಆಮ್ಲದಿಂದಾಗಿ ಜೋಡಿಪೊರೆಗಳ ಪೇರಿಕೆಗಳೂ ಇರುತ್ತವೆ. ತೆರಪುಗಳಿರುವ ಪಕ್ಕದಲ್ಲಿ, ಈಲಿಯ ಜೀವಕಣಗಳ ತುಂಬ ಬೆರಳ ತೆರನ, ಎಲೆ ತೆರನ ಚಾಚುಗಳಿರುವುದು ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಿಂದ ನೋಡಿದಾಗ ಮಾತ್ರ ಕಾಣುತ್ತದೆ.

ಈ ಚಾಚುಗಳು ನಾಳಗುಳಿಗಳೆಂಬ (ಸೈನುಸಾಯ್ಡ್ಸ್) ವಿಶೇಷೀಕೃತ ಲೋಮನಾಳಗಳ ಬಿಡುತಿಗಳಲ್ಲಿ ತೂಗುಬಿದ್ದಿರುವುವು. ಕುಪ್‌ಫರನ ಜೀವಕಣಗಳೆಂಬ ಚಪ್ಪಟೆಯಾಗಿ ತೆಳುವಾದ ಜೀವಕಣಗಳು ಗೋಡೆಗಳಲ್ಲಿದ್ದು ನಳಗುಳಿಗಳಾಗಿವೆ. ಕೊಳೆ, ಕಸ, ಸವೆದುಹೋದ ಕೆಂಪು ರಕ್ತಕಣಗಳು, ಏಕಾಣುಜೀವಿಗಳ ತೆರನ ವಸ್ತುಗಳನ್ನು, ಕುಪ್‌ಫರನ ಜೀವಕಣಗಳು ಸುತ್ತುಗಟ್ಟಿ ಅರಗಿಸಿ ನುಂಗಿಹಾಕುತ್ತವೆ. ಕುಪ್‌ಫರನ ಜೀವಕಣಗಳ ನಡುವೆ ಜಾಗಬಿಟ್ಟಿರುವುದೂ ಅವಲ್ಲೇ ಕಿಂಡಿಗಳಿರುವುದೂ ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಿಂದ ಗೊತ್ತಾಗಿದೆ. ಕುಪ್‌ಫರನ ಜೀವಕಣಗಳು ಈಲಿಯ ಜೀವಕಣಗಳ ಗಟ್ಟಿ ಭಾಗಗಳ ನಡುವೆ ಎಲ್ಲಲ್ಲೂ ಹರಡಿಕೊಂಡಿರುವ ಇಕ್ಕಟ್ಟಾದ ಇರುಕಡೆಯಲ್ಲಿನ (ಡಿಸ್ಸಿ) ಮೈಕ್ರೋಸ್ಕೋಪಿನಲ್ಲಿ ಕೋಟ್ಯಾನುಕೋಟಿ ಸಣ್ಣ ಚಾಚುಗಳನ್ನು ತಾಕುವಂತೆ ದ್ರವ ರಕ್ತದ ಹರಿವಿನಿಂದ ನೇರವಾಗಿ ಈ ಕಿಂಡಿಗಳ ಮೂಲಕ ನುಸುಳಬಹುದು.

ಈಲಿಯ ಬಹುಪಾಲು ಕೆಲಸಗಳಿಗೆ ಕುಪ್‌ಫರನ ಜೀವಕಣಗಳೂ ಈಲಿಯ ಜೀವಕಣಗಳೂ ಕಾರಣ. ಇವುಗಳ ರಚನೆಯ ವಿಚಾರ ಬೇಕಾದಷ್ಟು ಗೊತ್ತಿದೆ. ಆದರೆ ಈ ತೆರನ ವಿವರಗಳು ತಿಳಿದುಬಂದಷ್ಟೂ ತೆರತೆರನಾಗಿರುವ, ಸೋಜಿಗವೆನಿಸುವ ಅವುಗಳ ನಿಜಗೆಲಸಗಳು ಇನ್ನೂ ಏನೇನೂ ಗೊತ್ತಿಲ್ಲ ಎನಿಸುವುದು.

**ಬೇರೆ ಬೇರೆ ಪ್ರಾಣಿಗಳಲ್ಲಿ ಪಿಂಡದ ಬೆಳೆವಣಿಗೆ:** ಕೆಳಮಟ್ಟದ ಬೆನ್ನೆಲುಬಿಗಳಲ್ಲಿ ಬಂಡಾರ ಚೀಲದ (ಯೋಕ್ ಸ್ಯಾಕ್) ಬದಲಾಗಿ ಬೆಳೆದ ಅಂಗ ಈಲಿ. ದ್ವಿಚರಿಗಳಲ್ಲಿ (ಆ್ಯಂಫಿಬಿಯನ್ಸ್) ಇದರ ವಿಕಾಸ ಚೆನ್ನಾಗಿ ತೋರುವುದು. ಹೆಣ್ಣುಕಪ್ಪೆಯ ಅಂಡಾಶಯದಿಂದ ಮೊಟ್ಟೆಗಳು ಹೊರಬೀಳುತ್ತವೆ. ಮೊಟ್ಟೆಗಳೊಳಗೆ, ಬಂಡಾರದಲ್ಲಿ ಕೊಬ್ಬು, ಪ್ರೋಟೀನು, ಸಕ್ಕರೆ ತೆರನ ಪೋಷಕವಸ್ತುಗಳು ಕೂಡಿರುತ್ತವೆ. ನೀರೊಳಕ್ಕೆ ಮೊಟ್ಟೆ ಬೀಳುವುದು. ಆಗ ಎಳೆಯ



**ಚಿತ್ರ 4. ಈಲಿಯ ಕಿರುಹಾಲೆ (ಮೈಕ್ರೋಸ್ಕೋಪ್ ಚಿತ್ರ)**

**1. ಪಿತ್ತ ಸಾಗುನಾಳ, 2. ತೂರುಗೊಂದಿಯ ಸಿರ, 3. ಈಲಿಯ ಧಮನಿ ಇವುಗಳ ಕಿರುಹಾಲೆಗಳ ನಡುವಣ ಕವಲುಗಳು, 4. ಕೇಂದ್ರದ ಸಿರ, 5. ಕಿರುಹಾಲೆಗಳ ನಡುವಣ ಕೂಡಿಸುವ ಊತಕ**

ಮರಿಕಪ್ಪೆ (ಲಾರ್ವ) ಆಗಿರುವ ಪಿಂಡ, ಆಮೇಲೆ ಗೊದಮೊಟ್ಟೆ (ಟ್ಯಾಡ್‌ಪೋಲ್) ಆಗುತ್ತದೆ. ಪಟುಗೊಂಡ ಮೇಲೆ ಬೆಳೆವ ಜೀವಿಗೆ ಬಂಡಾರ ದೊರೆವುದು. ಬಂಡಾರವಿರುವ ಜೀವಕಣಗಳಲ್ಲಿ ಬಹುಪಾಲು ಪಿಂಡದ ಒಡಲಲ್ಲಿ ಹೊಸದಾಗಿ ಬೆಳೆದ ಗುಂಡಿಗೆಯ ಹಿಂದುಗಡೆ ಇರುವುವು. ಈ ಬಂಡಾರ ಜೀವಕಣಗಳ ರಾಶಿಯಲ್ಲಿ ಖಾಲಿ ಜಾಗ ಬಿಡುವುವು. ಖಾಲಿ ಜಾಗಗಳು ದೊಡ್ಡವಾಗಿ, ಗುಂಡಿಯೊಂದಿಗೆ ಒಂದಕ್ಕೊಂದು ಸಂಬಂಧ ಏರ್ಪಟ್ಟು ಅವುಗಳಲ್ಲಿ ರಕ್ತಕಣಗಳು ಹುಟ್ಟಿಕೊಳ್ಳುತ್ತವೆ. ಕೂಡಿಟ್ಟ ಬಂಡಾರದಿಂದ ಹೊರಬಿದ್ದ ಪೋಷಕ ವಸ್ತುಗಳು ಬಂಡಾರ ಚೀಲದಲ್ಲಿನ ಈ ಆದಿಕಾಲದ ರಕ್ತನಾಳಗಳ ಮೂಲಕ ರಕ್ತಕ್ಕೆ ಸೇರಿ, ಗುಂಡಿಗೆಯ ಮೂಲಕ ಮರಿಕಪ್ಪೆಯ ಎಲ್ಲ ಭಾಗಗಳಿಗೂ ಸೇರುತ್ತವೆ. ಇಷ್ಟರೊಳಗೆ ಕರುಳೂ ಬೆಳೆಯುತ್ತಿರುವುದು. ಮೂಲ ಧಮನಿಯಿಂದ ರಕ್ತನಾಳಗಳು ಕರುಳಿನ ಕಡೆಗೂ ಅದರ ಸುತ್ತಲೂ ಅಲ್ಲಿಂದಾಚೆ ಬಂಡಾರ ಚೀಲದ ಕಡೆಗೂ ಬೆಳೆಯುತ್ತವೆ. ಬಂಡಾರ

ಚೀಲದಲ್ಲಿ ರಕ್ತನಾಳಗಳ ಜಾಲರಚನೆಯೊಂದಿಗೆ ಈ ರಕ್ತನಾಳಗಳು ತಗುಲಿಕೊಳ್ಳುತ್ತವೆ. ಜೀವಕಣಗಳಲ್ಲಿನ ಬಂಡಾರ ಬರಬರುತ್ತ ಇಳಿದುಹೋಗುತ್ತದೆ. ಬಂಡಾರ ಮುಗಿವ ಹೊತ್ತಿಗೆ ಎಳೆಯ ಗೊದಮೊಟ್ಟೆ ಬಾಯಿಬಿಟ್ಟು ತಿನ್ನಲು ಮೊದಲಿಡುತ್ತದೆ. ತಿಂದ ಉಣಿಸು ಜೀರ್ಣನಾಳದಲ್ಲಿ ಅರಗಿ, ಅದನ್ನು ತೂರಿ ದಾಟಿ ಹಿಂದಿನ ಬಂಡಾರ ಚೀಲದ ರಕ್ತನಾಳಗಳ



ಚಿತ್ರ 5. ಈಲಿಯ ಗೋಡೆಕಟ್ಟಿನ ಒಂದು ಭಾಗ.
ಕುಪ್‌ಫರನ ಜೀವಕಣಗಳಿಂದಾದ ನಾಳಗುಳಿ ನಡುವೆ ಈಲಿಯ ಗೋಡೆಕಟ್ಟಿನ ಜೀವಕಣಗಳಿವೆ.

ಒಂದಿಗಿರುವ ರಕ್ತನಾಳಗಳೊಳಕ್ಕೆ ಹೋಗುವುದು. ಹಿಂದೆ ಬಂಡಾರವನ್ನೊಳಗೊಂಡಿದ್ದ ಜೀವಕಣಗಳೇ ಈ ರಕ್ತನಾಳಗಳ ಸುತ್ತಲೂ ಇರುವುವು. ಈ ಜೀವಕಣಗಳು ಈಗ ಬರಿದಾಗಿದ್ದು ಮತ್ತೆ ಆಹಾರ ಕೂಡಿಡಲು ತಯಾರಾಗಿದ್ದರೂ ಅವು ಇನ್ನು ಬಂಡಾರ ಜೀವಕಣಗಳಲ್ಲ. ಅವು ಈಗ ಈಲಿಯ ಜೀವಕಣಗಳಾಗಿಬಿಟ್ಟು ಈಲಿಯ ಜೀವಕಣಗಳು ಕೈಗೊಳ್ಳುವ ಎಲ್ಲ ನಿಜಗೆಲಸಗಳನ್ನೂ ಮಾಡುತ್ತವೆ.

ಹೀಗೆ ಬಂಡಾರ ರಕ್ತನಾಳಗಳು ಎನಿಸಿಕೊಂಡಿದ್ದವೇ ಈಗ ಈಲಿಯ ನಾಳಗುಳಿಗಳು. ಬಂಡಾರ ಚೀಲವೇ ಈಲಿ. ಈಲಿಯಲ್ಲಿ ಪಿತ್ತ ತಯಾರಾಗಿ ಕರುಳಿಗೆ ಹೋಗಬೇಕಿರುವುದರಿಂದ ಪಿತ್ತ ಸಾಗುನಾಳಗಳೆಂಬ (ಬೈಲ್ ಡಕ್ಟ್‌ಸ್) ನಾಳಗಳ ಮಂಡಲದ ಗೋಡೆಯಾಗುವಂತೆ ಕೆಲವು ಈಲಿಯ ಜೀವಕಣಗಳು ಸಾಲುಗಟ್ಟುತ್ತವೆ. ಇವೆಲ್ಲ ಬಂದು ಸೇರುವ ಮುಖ್ಯ ಪಿತ್ತ ಸಾಗುನಾಳವೇ ಸಾಮಾನ್ಯ ಪಿತ್ತ ಸಾಗುನಾಳ (ಕಾಮನ್ ಬೈಲ್ ಡಕ್ಟ್). ಈ ಸಾಗುನಾಳ ಬೆಳೆದು ಕರುಳಿಗೆ ಹೋಗಿ ಅದರೊಳಕ್ಕೆ ತೆರೆದುಕೊಳ್ಳುವುದು.

ಮಾನವನಲ್ಲಿನ ಪಿಂಡದ ಬೆಳವಣಿಗೆಯ ಬಗೆಯೇ ಬೇರೆ. ಗರ್ಭಕೋಶದಲ್ಲಿ ಪಿಂಡ ಬೆಳೆಯುತ್ತ ತಾಯಿಯಿಂದ ಪೋಷಣೆ ಪಡೆಯುತ್ತದೆ. ಇದರಿಂದಲೇ ಇದಕ್ಕೆ ಬಂಡಾರ ಬೇಕಿಲ್ಲ. ಆದರೂ ಕೆಳಹಂತದ ಬೆನ್ನಲುಬಿಗಳಿಂದ ವಿಕಾಸವಾದ್ದರಿಂದ ಎಳೆಯ ಮಾನವ ಪಿಂಡದಲ್ಲಿ ಬಂಡಾರ ಚೀಲ ಇರುತ್ತದೆ. ಇದು ಬರಿದಾದರೂ ವಿಕಾಸದ ಹಂತಗಳನ್ನು ನೆನಪಿಸುವಂತೆ ಇದರ ಗೋಡೆಯಲ್ಲಿ ರಕ್ತನಾಳಗಳ ದಟ್ಟ ಜಾಲವಾಗಿ ಜನೆಯ ರಕ್ತನಾಳಗಳು (ವೈಟಲೀನ್ ವೆಸಲ್ಸ್) ಬೆಳೆವುವು. ಆಮೇಲೆ ಗರ್ಭಕೋಶದಿಂದ ಪೋಷಣೆಯನ್ನು ತರುವ ರಕ್ತನಾಳಗಳ (ಹೊಕ್ಕಳಿನವು) ಇನ್ನೊಂದು ಮಂಡಲ ಬೆಳೆಯುತ್ತದೆ. ಜನೆಯ ಸಿರಗಳೂ ಗುಂಡಿಗೆಯ ಸದ್ಯ ಹಿಂದೆ ಒಂದುಗೂಡಿ ಒಟ್ಟಾಗಿ ಗುಂಡಿಗೆಯ ಒಳಹೋಗುತ್ತವೆ. ಇವು ಕೂಡುವ ಕವಲಿಂದ ಲೋಮನಾಳಗಳ ಜಾಲರಚನೆಯೊಂದು ಪಿಂಡದ ಕೂಡಿಸುವ ಅಂಗಾಂಶದ (ಕನೆಕ್ಟಿವ್ ಟಿಷ್ಯು) ರಾಶಿಯೊಳಕ್ಕೆ ಬೆಳೆವುದು. ಈ ಲೋಮನಾಳಗಳ ಜಾಲರಚನೆ ಗುಂಡಿಗೆಯೊಳಕ್ಕೆ ತೆರೆದುಕೊಳ್ಳುತ್ತದೆ.

ಆದಿಕಾಲದ ಜೀರ್ಣನಾಳದ ಮುಂದುಗಡೆ ಬಂಡಾರ ಚೀಲದೊಂದಿಗೆ ಸೇರುವೆಡೆ ಒಡಲಿನ ಕಡೆಯ ಹೊರಚೀಲವಾಗಿ ಉಬ್ಬಿದೆಡೆಯಿಂದ ಅನೇಕ ಜೀವಕಣಗಳು ಬೇರೆಯಾಗುತ್ತವೆ. ಅದೇ ಹೊತ್ತಿನಲ್ಲಿ ಇನ್ನು ಕೆಲವು ಮೈ ಪೊಳ್ಳಿನ ಒಳವರಿಯಾದ ನಡುಪೊರೆಯಿಂದ (ಮೀಸೊತೀಲಿಯಂ) ಬೇರೆಯಾಗುತ್ತವೆ. ಒಳನನೆಚರ್ಮದ (ಎಂಟೊಡರ್ಮಲ್), ನಡುನನೆ ಚರ್ಮದ (ಮೀಸೊಡರ್ಮಲ್) ಇವೆರಡು ಗುಂಪಿನವೂ ಜನೆಯ ಅಲ್ಲದೆ ಹೊಕ್ಕುಳಿನ ಲೋಮನಾಳಗಳ ನಡುವಣ ಜಾಗವನ್ನು ಸೇರಿಕೊಂಡು ಲೋಮನಾಳಗಳನ್ನು ಸುತ್ತುಗಟ್ಟುತ್ತವೆ. ಇವೇ ಈಲಿಯ ಜೀವಕಣಗಳಾಗುವುವು. ಇವು ಕೂಡಲೇ ಹೊಕ್ಕುಳಿನ ಸಿರಗಳ ಮೂಲಕ ಗರ್ಭಕೋಶದಿಂದ ಬಂದ ಆಹಾರವನ್ನು ಕೂಡಿಟ್ಟುಕೊಳ್ಳುವ ಈಲಿಯ ಜೀವಕಣಗಳ ನಿಜಗೆಲಸಕ್ಕೆ ಇಳಿಯುತ್ತವೆ. ಈಲಿಯ ಜೀವಕಣಗಳಿಂದ ಪಿತ್ತ ಸಾಗುನಾಳಗಳು ಬೆಳೆದು, ಕರುಳನ್ನು ಸೇರುವ ಸಾಮಾನ್ಯ ಪಿತ್ತ ಸಾಗುನಾಳವನ್ನು ಸೇರಿಕೊಳ್ಳುವುವು. ಕೋಳಿಮರಿಯಲ್ಲಿ ಮಾತ್ರ (ಮಾನವನಲ್ಲಲ್ಲ) ಕರುಳಿನ ಗೋಡೆಯ ಕೊಳವೆರೂಪದ ಚಾಚುಗಳಿಂದ ಈಲಿ ಆಗುವುದು ದೊಡ್ಡ ವಿಶೇಷ. ಪಿಂಡದಲ್ಲಿ ರಕ್ತಕಣಗಳನ್ನು ಈಲಿಯೇ ತಯಾರಿಸುತ್ತಿರುತ್ತದೆ. ಬೆಳೆದವರಲ್ಲಿ ಈ ತಯಾರಿಕೆ ಮೂಳೆಗಳ ಮಜ್ಜೆಯಲ್ಲಾಗುವುದು. ಬೆನ್ನೆಲುಬಿ ಪ್ರಾಣಿಗಳಲ್ಲಿ ಈಲಿಯ ವಿಕಾಸದಲ್ಲಿ 20 ಬೇರೆ ಬೇರೆ ಬಗೆಗಳಿವೆ. ಯಾವ ರೀತಿಯಲ್ಲೇ ಬೆಳೆಯಲಿ ಕೊನೆಯ ಪರಿಣಾಮ ಒಂದೇ. ಮನೆಯನ್ನು ಕಟ್ಟಲು ಮರಮುಟ್ಟು ಸಾಮಾನುಗಳು ಬೇರೆ ಬೇರೆ ಆಗಿರಬಹುದು. ಆದರೆ ಒಟ್ಟಿನಲ್ಲಿ ಮನೆಯ ಆಕಾರ ರಚನೆ ಎಲ್ಲ ಒಂದೇ ಇದ್ದ ಹಾಗೆ ಇದು. ಬೇರೆ ಬೇರೆ ಪ್ರಾಣಿವರ್ಗಗಳ ಪಿಂಡಗಳ ಈಲಿಗಳು ಬೇರೆ ಬೇರೆ ತೆರನಾಗಿದ್ದರೂ ಬೆಳೆದ ಪ್ರಾಣಿಯಲ್ಲಿನ ಈಲಿಗಳು ಮಾತ್ರ ಬಹುವಾಗಿ ಒಂದೇ ತೆರ. (ಡಿ.ಎಸ್.ಎಸ್.)

ಒಟ್ಟಾರೆ ಅಂಗರಚನೆ: ಕರುಳಿನ ಲೋಮನಾಳಗಳು ಒಂದೆಡೆ ಕೂಡಿ ಆದ ಕರುಳುನಡು ಪೊರೆಯ (ಮೆಸೆಂಟರಿಕ್) ಸಿರಗಳೇ ಮುಖ್ಯವಾಗಿ ಈಲಿಗೆ ರಕ್ತವನ್ನು ಒದಗಿಸುತ್ತವೆ. ತೊರಳೆಯಿಂದ ಬರುವ ಒಂದು ಸಿರ, ಜಠರದಿಂದ ಬರುವ ಕೆಲವು ಸಣ್ಣ ಸಿರಗಳೊಂದಿಗೆ ಇವು ಸೇರಿ ಮೋಟಾದರೂ ದಪ್ಪನೆಯ ತೂರುಗೊಂದಿಯ ಸಿರ (ಪೋರ್ಟಲ್ ವೇನ್ಸ್) ಎಂಬ ರಕ್ತನಾಳವಾಗುತ್ತದೆ.

ತೂರುಗೊಂದಿಯ ಸಿರದ ರಕ್ತದ ಮೇಲೆ ಕೆಲಸ ಮಾಡಲು ಈಲಿಗೆ ಶಕ್ತಿ ಬೇಕು. ಆಹಾರದಲ್ಲಿನ ಇಂಗಾಲದೊಂದಿಗೆ ಆಕ್ಸಿಜನ್ನನ್ನು ಕೂಡಿಸುವುದರಿಂದ ಇದನ್ನು ಪಡೆಯುತ್ತದೆ. ಆಕ್ಸಿಜನ್ನನ್ನು ಒದಗಿಸಲು ಅಷ್ಟೇನೂ ದೊಡ್ಡದಲ್ಲದ ಈಲಿಯ ಧಮನಿ ಒಂದೇ ಇದೆ. ತೂರುಗೊಂದಿಯ ಸಿರ, ಈಲಿಯ ಧಮನಿ ಇವೆರಡರ ಕವಲುಗಳೂ ಕೊನೆಗೆ ನಾಳಗುಳಿಯೊಳಕ್ಕೆ ರಕ್ತ ಸುರಿಸುತ್ತವೆ. ನಾಳಗುಳಿಗಳ ಮೂಲಕ ರಕ್ತ ಈಲಿಯ ಸಿರಗಳ ಶಾಖೆಗಳಿಗೆ ಹರಿಯುತ್ತದೆ. ಅಲ್ಲಿಂದ ಒಟ್ಟುಗೂಡಿ ಕೆಳ ಸಿರಕೊಳ್ವದೊಳಕ್ಕೆ (ಇನ್‌ಫೀರಿಯರ್ ವೀನಕೇವ) ಸುರಿದುದು ಗುಂಡಿಗೆಯ ಬಲಗುಂಡಿಗರೆಯನ್ನು (ಏಟ್ರಿಯಂ) ಸೇರಿಕೊಳ್ಳುತ್ತದೆ.

ತೂರುಗೊಂದಿಯ ಮತ್ತು ಧಮನಿಯ ರಕ್ತ ಒಳಹೋಗುವ ದಾರಿಯೇ ಅಲ್ಲದೆ, ಪಿತ್ತ ಹೊರಸಾಗುವ ಕಂಡಿಯೂ ಈಲಿಯ ತೂರುಗೊಂದಿಯೇ. ಬಲು ಕಿರಿದಾದ ಪಿತ್ತ ಕಿರಿಸಾಗಾಲುವೆಗಳು (ಕೆನಾಲಿಕುಲೈ) ಈಲಿಯೊಳಗೆ ಒಂದುಗೂಡಿ ಕಿರ್ನಾಳಗಳು (ಡಕ್ಟೂಲ್ಸ್),



ಚಿತ್ರ 6. ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಲ್ಲಿ ಕಂಡಂತೆ, ಎರಡು ಈಲಿ ಜೀವಕಣಗಳ ನಡುವಣ ಭಾಗ, ಎರಡು ಈಲಿಯ ಜೀವಕಣಗಳ ನಡುವೆ ಅಡ್ಡಡ್ಡನಾಗಿ ಕೃತಕವಾಗಿ ಬಿಟ್ಟಿರುವ ತೆರಪು (ತೆ). ತೆರಪಿನಲ್ಲಿ ರೂಪಿತವಾಗಿರುವ ಪಿತ್ತ ಕಿರ್ನಾಳ (ಪಿ.ಕಿ), ಇದರೊಳಕ್ಕೆ ಮಿಣಿ ಎಳೆಗೊಂಡೆಗಳು ಚಾಚಿಕೊಂಡಿವೆ. ಬಲಗಡೆಯಲ್ಲಿ, ಒತ್ತುಗುಂಡಿಯ ಹಾಗೆ ಸಣ್ಣ ಗೂಟವೊಂದು (ಗೂ) ಇನ್ನೊಂದರ ಕುಳಿಯೊಳಕ್ಕೆ ಸಿಕ್ಕಿಕೊಂಡಿದೆ.

ಸಣ್ಣ ಸಾಗುನಾಳಗಳು, ದೊಡ್ಡ ಸಾಗುನಾಳಗಳು, ಹಾಗೇ ಕೊನೆಗೆ ಬರಿಯ ಕಣ್ಣಿಗೆ ಕಾಣುವಷ್ಟು ದೊಡ್ಡವಾಗುತ್ತವೆ. ಇವೆಲ್ಲ ಸಾಗುನಾಳಗಳು ತೂರುಗೊಂದಿಯ ಸಿರಗಳ ಕವಲುಗಳೊಂದಿಗೆ ಸಾಗಿದರೂ ಅವಲ್ಲಿನ ಪಿತ್ತ ಮಾತ್ರ ರಕ್ತದ ಹರಿವಿನ ಎದುರುದಿಕ್ಕಿನಲ್ಲಿ ಹರಿಯುತ್ತದೆ. ಬರುಬರುತ್ತ ದೊಡ್ಡದಾಗುವ, ಗಾತ್ರವಿರುವ ಪಿತ್ತ ಸಾಗುನಾಳಗಳು ಕೊನೆಗೆ ಈಲಿಯ ತೂರುಗೊಂದಿಯಲ್ಲಿ ಈಲಿಯ ಸಾಗುನಾಳದಲ್ಲಿ ಕೊನೆಗೊಳ್ಳುತ್ತವೆ.

ಈಲಿಯ ಹೊರಗೆ ಈಲಿಯ ಸಾಗುನಾಳ ಎರಡು ದೊಡ್ಡ ಕವಲುಗಳಾಗುವುದು. ಕವಲುಗಳಲ್ಲಿ ಒಂದಾದ ಪಿತ್ತಕೋಶದ ಒಳಗಿನ ಅಸ್ತರಿ (ಲೈನಿಂಗ್) ಅನೇಕ ಮಡಿಕೆಗಳಲ್ಲಿರುವುದರಿಂದ ಅದರ ಮೇಲುತಳ ಅಗಲವಾಗುವುದು. ಇದರ ಜೀವಕಣಗಳಿಗೆ ಮಿಣಿಎಳೆಗೊಂಡೆಗ

ಳೆಂಬ (ಮೈಕ್ರೊವಿಲ್ಲೈ) ಪುಟಾಣಿ ಚಾಚುಗಳಿರುತ್ತವೆ. ಪಿತ್ತಕೋಶ ತುಸುಕಾಲ ಪಿತ್ತವನ್ನು ಕೂಡಿಟ್ಟುಕೊಳ್ಳುವುದು. ಅದೇ ಹೊತ್ತಿನಲ್ಲಿ ಮಿಣಿಎಳೆಗೊಂಡೆಗಳ ಮೂಲಕ ಪಿತ್ತದಲ್ಲಿನ ನೀರನ್ನು ಹೀರಿಹಾಕಿ ನೀರಾಗಿರುವ ಪಿತ್ತವನ್ನು ಇನ್ನೂ ಗಟ್ಟಿಗೊಳಿಸುವುದು. ಹೀಗೇನಾದರೂ ನೀರು ತೆಗೆತ ಮಿತಿಗೆಟ್ಟರೆ, ಮುಖ್ಯವಾಗಿ ಕಲೆಸ್ಟರಾಲ್ ಇರುವ ಪಿತ್ತಗಲ್ಲುಗಳಾಗುತ್ತವೆ.



ಚಿತ್ರ 7. ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಲ್ಲಿ ಕಂಡಂತೆ, ಈಲಿ ಜೀವಕಣದ ತಲದಲ್ಲಿರುವ ನಾಳಗುಳಿಯ ನಾಳಗಂಡಿ ತೋರಿದೆ. ಇವೆರಡರ ನಡುವೆ ಕುಪ್‌ಫರನ (ಕು) ಜೀವಕಣಗಳು ಸಾಲಾಗಿವೆ. ಈ ಜೀವಕಣಗಳ ಸಾಲಿನಲ್ಲಿ ತೆರಪಾಗಿರುವ ಇರುಕೆಡೆಯೇ ಡಿಸ್ಸಿಯ ಜಾಗ (ಡಿ). ಮಿಣಿಎಳೆಗೊಂಡೆಯ ಚಾಚು (ಚಾ) ವನ್ನೂ ತೋರಿದೆ. ಕೆಳಗಡೆ ಬಿಳಿ ರಕ್ತಕಣದ ಒಂದು ಪಾಲು ಕಾಣುವುದು. 20,000ದಷ್ಟು ದೊಡ್ಡದಾಗಿಸಿದ್ದು.

(ಗಾಲ್ ಸ್ಟೋನ್ಸ್). ಈಲಿಯ ಸಾಗುನಾಳದ ಇನ್ನೊಂದು ಕವಲು ಸಾಮಾನ್ಯ ಪಿತ್ತ ಸಾಗುನಾಳ. ಸಣ್ಣ ಕರುಳಿನ ಮೊದಲ ಭಾಗವಾದ ದುರಾರ್ಗರುಳಿನೊಳಕ್ಕೆ (ಡುಯೋಡಿನಮ್) ಈ ಸಾಗುನಾಳ ಹೋಗುವುದು. ಸಾಮಾನ್ಯ ಪಿತ್ತ ಸಾಗುನಾಳದ ಹೊರ ತುದಿಯಲ್ಲಿ ಅಡಿಯಗೆಂಡೆ (ಸ್ಫಿಂಗ್ಟರ್) ಎಂಬ ಒಂದು ಉಂಗುರ ಸ್ನಾಯು ಕಾವಲಿದೆ. ಕುದುರೆ ತೆರನ ಕೆಲವು ಪ್ರಾಣಿಗಳಲ್ಲಿ ಪಿತ್ತಕೋಶ ಇಲ್ಲದ್ದರಿಂದ ಬದುಕಿರಲು ಅದು ಇರಲೇಬೇಕಿಲ್ಲ.

(ಎನ್.ಟಿ.ಎನ್.)

ನಿಜಗೆಲಸಗಳು: ಕರುಳಿನಿಂದ ಗುಂಡಿಗೆಗೆ ಹಿಂತಿರುಗುವ ಸಿರದ ರಕ್ತ ಅದರ ಮೂಲಕ ಹರಿದು ಸಾಗುವ ಜೀವಕಣಗಳ ರಾಶಿಯೇ ಈಲಿ ಎನ್ನಬಹುದು. ಕರುಳಿನ ಗೋಡೆಯ ಮೂಲಕ ರಕ್ತ ಹರಿವಾಗ ಆಹಾರ ವಸ್ತುಗಳೂ ಆಗಾಗ್ಗೆ ವಿಷಕರ ವಸ್ತುಗಳೂ ಸೇರಿಸಿಕೊಳ್ಳುತ್ತವೆ. ಇವನ್ನೆಲ್ಲ ಹೀರಿಕೊಂಡು ಕೂಡಲೇ ರಕ್ತ ಈಲಿಯ ಮೂಲಕ ಸಾಗುತ್ತದೆ. ಕೆಡಕು ಮಾಡುವ ವಸ್ತುಗಳನ್ನು ತೆಗೆದುಹಾಕುವ ಸೋಸಕವಾಗಿ (ಫಿಲ್ಟರ್) ರಾಸಾಯನಿಕ ವಿಧಾನಗಳಿಂದ ವಿಷಗಳನ್ನು ಕೆಡಿಸಿ ಜಡಗೊಳಿಸಿ ಏಕಾಣುಜೀವಿಗಳನ್ನು ಈಲಿ ತೆಗೆದುಹಾಕುವುದು. ಗ್ಲೈಕುರೋನಿಕಾಮ್ಲ, ಗ್ಲೈಸೀನ್‌ಗಳೊಂದಿಗೋ ಅಸಿಟೈಲ್, ಸಲ್ಫೇಟು ಅಣ್ವಂಶಗಳೊಂದಿಗೋ ಒಂದುಗೂಡಿಸಿ, ಇಲ್ಲವೇ ಆಮ್ಲಜನಕಗೂಡಿಕೆ ಇಳಿಕೆಗಳಿಂದಲೋ ವಿಷಕರ ವಸ್ತುಗಳನ್ನು ನಿರಪಾಯಕರವಾಗಿ ಮಾಡುವುದು.

ರಕ್ತದಿಂದ ಪೋಷಕ ಪದಾರ್ಥಗಳನ್ನು ಎತ್ತಿಕೊಂಡು ಮುಂದಿನ ಬಳಕೆಗಾಗಿ ಕೂಡಿಟ್ಟುಕೊಳ್ಳುವ ಈಲಿ ಉಗ್ರಾಣವಾಗಿಯೂ ಇದೆ. ಪ್ರೋಟೀನು, ಕೊಬ್ಬು, ಹಿಟ್ಟು ಸಕ್ಕರೆಗಳ ಚಯಾಪಚಯ (ಮೆಟಬಾಲಿಸಂ) ಆಗುವ ಕೇಂದ್ರ ಅಂಗವಿದು. ಮಾಂಸಲಿಯಲ್ಲಿ (ಮೇದೋಜೀರಕಾಂಗ) ತಯಾರಾಗುವ ಇನ್ಸುಲಿನ್ ಚಯಾಪಚಯ ಚೋದನಿಕದ (ಹಾರ್ಮೋನ್) ಪ್ರಭಾವದಿಂದ, ರಕ್ತದಿಂದ ಎತ್ತಿಕೊಂಡ ಸಕ್ಕರೆಯೂ ಕೂಡಿಟ್ಟ ವಸ್ತುಗಳಲ್ಲಿ ಒಂದು. ಕೂಡಿಡಬಹುದಾದ ಮಿಗದಿಟ್ಟಿನ (ಗ್ಲೈಕೊಜನ್) ರೂಪದಲ್ಲಿ ಸಕ್ಕರೆ ದಾಸ್ತಾನಾಗಿರುವುದು. ಶಕ್ತಿ ಬೇಕೆನಿಸುವ ತನಕ ಈಲಿಯ ಜೀವಕಣಗಳಲ್ಲಿ ಹಾಗೇ ಉಳಿದಿರುತ್ತದೆ. ಇದನ್ನು ಮತ್ತೆ ದ್ರಾಕ್ಷಿ ಸಕ್ಕರೆಯಾಗಿ (ಗ್ಲೂಕೋಸ್) ಬದಲಿಸುವುದು ಮಾಂಸಲಿಯಲ್ಲಿರುವ ಇನ್ನೊಂದು ಚೋದನಿಕವಾದ ಸಕ್ಕರೆಕರೆಗ (ಗ್ಲೂಕಗಾನ್).

ಈಲಿಯ ಜೀವಕಣಗಳಲ್ಲಿ ಕೊಬ್ಬುಗಳು, ಜೀವಾತುಗಳು ಮತ್ತಿತರ ಆಹಾರವಸ್ತುಗಳೂ ಕೂಡಿರುತ್ತವೆ. ಜೊಕ್ಕಗೊಳಿಕೆ, ಕೂಡಿಡಿಕೆ ಇವೆರಡೇ ಕೆಲಸಗಳಲ್ಲ ಈಲಿಯದು. ಅದರ ಮೂಲಕ ಹರಿವ ರಕ್ತದೊಳಕ್ಕೆ ರಕ್ತರಸದ (ಪ್ಲಾಸ್ಮ) ಪ್ರೋಟೀನುಗಳಲ್ಲಿ ಮುಖ್ಯವಾದ ಕೋಳೆ (ಅಲ್ಬುಮಿನ್), ತಂತುಕಜನಕ (ಫೈಬ್ರಿನೋಜನ್), ಗ್ಲಾಬ್ಯುಲಿನ್ನುಗಳು. ಕೂಡಗರಣೆಜನಕ (ಪ್ರೋತ್ರಾಂಬಿನ್), ಹೆಪಾರಿನ್ನುಗಳನ್ನೂ ಅದು ತಯಾರಿಸಿ ಸೇರಿಸುವುದು. ಏಕಾಣುಜೀವಿಗಳು ತಯಾರಿಸಿ ಬಿಡುವ, ರೋಗ ಬರಿಸುವ ವಿಷಗಳಾದ ಜೀವವಿಷಗಳನ್ನು (ಟಾಕ್ಸಿನ್ಸ್) ಎದುರಿಸುವ ರೋಧವಸ್ತುಗಳನ್ನೂ ರಕ್ತದೊಳಕ್ಕೆ ಈಲಿ ಹಾಕುತ್ತದೆ. ರೋಗಗಳು ಬಾರದಂತೆ ಮೈ ತಡೆವ ಏರ್ಪಾಡುಗಳಲ್ಲಿ ಇದೂ ಒಂದು.

ರಕ್ತ ಹರಿವಿನ ಮೂಲಕ ಕರುಳಿಂದ ಈಲಿ ಹಲಬಗೆಯ ವಸ್ತುಗಳನ್ನು ಪಡೆವುದೇ ಅಲ್ಲದೆ ಈಲಿಯಿಂದ ಕರುಳಿಗೆ ಪಿತ್ತ ಹರಿಸುವ ಕೊಳವೆಗಳ ಮೂಲಕ ಕರುಳಿಗೂ ಈಲಿಗೂ ನೇರ ಸಂಬಂಧವಿದೆ. ಕರುಳೊಳಕ್ಕೆ ಈಲಿ ಸುರಿಸುವ ಪಿತ್ತರಸ ಹಸಿರು ಬಣ್ಣದ ದ್ರವ. ಕೊಬ್ಬನ್ನು ಅರಗಿಸುವುದರಲ್ಲಿ ನೆರವಾಗುವ ಪಿತ್ತದ ಆಮ್ಲಗಳೂ ಕೊಬ್ಬುಗಳು, ಎ.ಡಿ.ಕೆ.ಇ ಜೀವಾತುಗಳು ತೆರನ, ಕೊಬ್ಬಿನಲ್ಲಿ ಕರಗುವ ವಸ್ತುಗಳೂ ಮತ್ತಿತರ ಹಲತೆರನವೂ ಪಿತ್ತದಲ್ಲಿವೆ. ಮೂಳೆಯ ಮಜ್ಜೆ, ತೊರಳೆ, ಈಲಿಗಳಲ್ಲಿ ಕೆಟ್ಟಿರುವ ಅನೇಕ ಕೆಂಪು ರಕ್ತಕಣಗಳು ದಿನವೂ ಹಾಳಾಗುತ್ತಲೇ ಇರುವುವು. ಈಲಿಯ ರಕ್ತನಾಳಗಳ ಹಿಗ್ಗುಕುಗ್ಗುಗಳಿಂದ ಈಲಿಯಲ್ಲಿ ಹೆಚ್ಚು ರಕ್ತ ಕೂಡಿದ್ದು ತುರ್ತಿನ ಹೊತ್ತಿನಲ್ಲಿ ರಕ್ತದ ಹರಿವಿನೊಳಕ್ಕೆ ನುಗ್ಗಿಸಬಹುದು. ರಕ್ತದ ಕೆಂಪುಬಣ್ಣಕ್ಕೆ ಕಾರಣವಾದ ರಕ್ತಬಣ್ಣಕ (ಹೀಮೊಗ್ಲಾಬಿನ್) ಹೀಗೆ ರಕ್ತದೊಳಕ್ಕೆ ಚೆಲ್ಲಿಬೀಳುತ್ತದೆ. ಈಲಿ ಇದನ್ನು ಎತ್ತಿಕೊಂಡು ಕೆಂಪಿತ್ತ (ಬಿಲಿರೂಬಿನ್), ಹಸಿರು ಪಿತ್ತಗಳನ್ನಾಗಿ (ಬಿಲಿವರ್ಡಿನ್) ಮಾರ್ಪಡಿಸಿ ಪಿತ್ತದ ಮೂಲಕ ಕರುಳಿಗೆ ಸಾಗಿಸುತ್ತದೆ. ಮಲದ ಕಂದುಬಣ್ಣಕ್ಕೆ ಇವೇ ಕಾರಣ. ಮೈಯಲ್ಲಿ ಹುಟ್ಟುವ ಕಸರೆ ವಸ್ತುಗಳಾದ ಮೂತ್ರಲವಣ (ಯೂರಿಯ), ಮೂತ್ರಾಮ್ಲ ಗಳನ್ನೂ (ಯೂರಿಕ್ ಆ್ಯಸಿಡ್) ಪಿತ್ತದ ಮೂಲಕ ಈಲಿ ಹೊರದೂಡುತ್ತದೆ. ಪಿತ್ತದ ಮೂಲಕ ಈಲಿ ಕೊಲೆಸ್ಟರಾಲನ್ನು ಸಹ ಹೊರದೂಡಿದರೂ ಅದರ ಬಹು ಪಾಲನ್ನು ಕರುಳು ಮತ್ತೆ ಹೀರಿಕೊಂಡು ಬಿಡುವುದರಿಂದ ಹಾಳಾಗದು.

ಹುಟ್ಟು ವಿಕಾರಗಳು, ಗಂತಿಗಳ (ಟ್ಯೂಮರ್ಸ್) ಬೆಳೆತ, ಪರೋಪಜೀವಿ ವ್ಯಾಪಿಸಿಕೆ (ಪ್ಯಾರಸೈಟ್ ಇನ್‌ಫೆಸ್ಟೇಷನ್) ಹೊರತಾಗಿ ಈಲಿಯ ಸಾಮಾನ್ಯ ರೋಗಗಳಲ್ಲಿ ಬಹು ಪಾಲು ಅದರ ರಚನೆಗಟ್ಟು ಕೆಟ್ಟಿರುವುದು. ಹಾಗೆ ಕೆಡುವುದರಿಂದ ಪ್ರಾಣಕ್ಕೆ ಹಾನಿಯಾಗಿ ಮಾರಕ ಆಗದಿರಲು ಎರಡು ಮುಖ್ಯ ಕಾರಣಗಳಿವೆ. ಎಂದಿನ ಮೂಲ ಬೇಡಿಕೆಗಳಿಗೆ ಯಾವಾಗಲೂ ಬೇಕಿರುವುದಕ್ಕಿಂತಲೂ ಮಿಗಿಲಾಗಿ ಈಲಿಯ ಊತಕವಿರುವುದು. ಅಂದರೆ, ಈಲಿಯಲ್ಲಿ ಬಹುಪಾಲನ್ನು ಏಡಿಗಂತಿ (ಕ್ಯಾನ್ಸರ್) ತುಂಬಿಕೊಂಡಿಟ್ಟಿದ್ದರೂ ಕೆಲಕಾಲವಾದರೂ ಈಲಿಯ ನಿಜಗೆಲಸಗಳಿಗೆ ಆತಂಕವಾಗದು. ಎಷ್ಟೇ ಪೆಟ್ಟಾಗಿ ಹಾಳಾದರೂ ಮತ್ತೆ ಚೇತರಿಸಿ ಕೊಂಡು ಹೆಚ್ಚಾಗಿ ಬೆಳೆದು ವಾಸಿಮಾಡಿಕೊಳ್ಳುವ ಮಹಾಶಕ್ತಿ ಈಲಿಗಿದೆ. ಕೆಡದೆ ಉಳಿದಿರುವ ಜೀವಕಣಗಳು ಬಲುಬೇಗನೆ ಬೆಳೆದು ಗುಣಿತವಾಗಿ ದೊಡ್ಡ ಕಿಗ್ಗಂಟಿನ ಹೇರೂಪ (ನಾಡ್ಯುಲಾರ್ ಹೈಪರ್ ಪ್ಲೇಸಿಯ) ಆಗುವುದರೊಂದಿಗೆ ಪಿತ್ತಸಾಗುನಾಳಗಳ ಜೊತೆಯಲ್ಲಿ ಹೊಸ ಹುಟ್ಟಿನ ಜೀವಕಣಗಳು ಚೆನ್ನಾಗಿ ಹೊಂದಿಕೊಳ್ಳುವುವು.




ಚಿತ್ರ 8. ಪಿತ್ತಸಾಗುನಾಳಗಳು 1. ಪಿತ್ತಕೋಶ, 2. ಸಾಮಾನ್ಯ ಪಿತ್ತ ಸಾಗುನಾಳ, 3. ಅಡಿಯ ಗೆಂಡೆ, 4. ದುರಾರ್ಗರುಳು, 5. ಮಾಂಸಲಿಯ ಸಾಗುನಾಳ

ಈಲಿಯ ನಿಜಕೆಲಸಗಳ ಪರೀಕ್ಷೆಗಳು: ಈಲಿಯ ನಿಜಕೆಲಸಗಳು ಎಷ್ಟೊಂದು ಬಗೆಯವು ಇರುವುದೆಂದರೆ, ಯಾವ ಒಂದು ಪರೀಕ್ಷೆಯಿಂದಲೂ ಉಳಿದೆಲ್ಲ ಕೆಲಸಗಳು ಕೆಟ್ಟಿರುವ ವಿಚಾರ ಇನಿತೂ ಗೊತ್ತಾಗದು. ಬೇಕಿರುವುದಕ್ಕಿಂತಲೂ ಹೆಚ್ಚಿಗಿರುವ ಊತಕವೂ ವಾಸಿಪಡಿಸಿ ಕೊಳ್ಳುವ ಹೆಗ್ಗುಣವೂ ಈ ಪರೀಕ್ಷೆಗಳಿಗೆ ಅಡ್ಡಿಯಾಗುತ್ತವೆ. ಒಟ್ಟಿನಲ್ಲಿ ತೀವ್ರ (ಅಕ್ಯೂಟ್) ಹಾನಿ ರೋಗಗಳು ಇರುವುದನ್ನು ಈಗಿನ ಪರೀಕ್ಷೆಗಳು ಕೂಡಲೇ ತೋರುವುವಾದರೂ ವೈದ್ಯನಿಗೆ ಮುಖ್ಯವಾಗಿ ಬೇಕಿರುವ ವಿಚಾರಗಳನ್ನು ತಿಳಿಸಿಕೊಡವು. ಈಲಿ ಕೆಲಸಗೆಡುವಷ್ಟು ಹಾಳಾಗಿರುವುದೋ ಇಲ್ಲವೋ ಎಂಬುದನ್ನು ಅದರಲ್ಲೂ ಈಲಿಯ ಬೇರೂರಿದ ರೋಗಗಳಲ್ಲಿ ಅನುಮಾನವಿಲ್ಲದಂತೆ ತೋರವು. ಸಾಮಾನ್ಯವಾಗಿ, ನಿಜಗೆಲಸಗಳ ಜೀವವೈಜ್ಞಾನಿಕ ಪರೀಕ್ಷೆಗಳಿಗೂ ಜೀವುಂಡಿಗೆಯಿಂದ (ಬಯಾಪ್ಸಿ) ತೆಗೆದು ಮಾಡಿದ ಊತಕ ಪರೀಕ್ಷೆಗಳಿಗೂ ಹೊಂದಾಣಿಕೆ ಅಷ್ಟಾಗಿಲ್ಲ. ಮೈಕ್ರೋಸ್ಕೋಪಿನಡಿಯಲ್ಲಿ ಈಲಿ ವಿಪರೀತ ಕೆಟ್ಟಿರುವಂತೆ ಕಂಡುಬಂದರೂ ನಿಜಗೆಲಸ ಪರೀಕ್ಷೆಗಳಿಂದ ಯಾವ ಹಾನಿಯೂ ಕಾಣದಿರಬಹುದು. ಯಾವಾಗಲೂ ಯಾವುದೇ ಒಂದು ಜೀವರಾಸಾಯನಿಕ ಪರೀಕ್ಷೆಯನ್ನು ಮಾತ್ರ ನೆಚ್ಚಿಕೊಳ್ಳ ಬಾರದು. ಸಾಧ್ಯವಾದರೆ ಕೆಲ ಕಾಲ ಬಿಟ್ಟು ಬಿಟ್ಟು ಮಾಡುವ ಪರೀಕ್ಷೆಗಳ ಸರಣಿಗಳಿಂದಲೇ ಹೆಚ್ಚಿನ ವಿಚಾರಗಳು ಗೊತ್ತಾಗುವುವು.

ಕಳೆದ ಶತಮಾನದಲ್ಲೇ ಈಲಿಯ ಜೀವುಂಡಿಗೆಯನ್ನು ವಿವರಿಸಿದ್ದರಾದರೂ ಅದನ್ನು ಈಲಿ ಪರೀಕ್ಷೆಯಲ್ಲಿ ಒಂದಾಗಿ ಬಳಸುತ್ತಿರುವುದು ಈಚೆಗೆ. ತೂತಿರುವ ಸೂಜಿಯೊಂದನ್ನು ರೋಗಿಗೆ ನೋವಾಗದಂತೆ ಈಲಿಯೊಳಕ್ಕೆ ಬಲ ಪಕ್ಕದಿಂದ ಚುಚ್ಚಿ ಈಲಿಯ ಬಲು ಸಣ್ಣಚೂರನ್ನು ಹೊರತೆಗೆದು ಅದನ್ನು ಮೈಕ್ರೊಸ್ಕೋಪಿನಲ್ಲಿ ಪರೀಕ್ಷಿಸಲಾಗುತ್ತದೆ. ಆಮೇಲೆ ರೋಗಿ ದಿನವೆಲ್ಲ ಆಸ್ಪತ್ರೆಯಲ್ಲಿ ಇರಬೇಕು. ಹೀಗೆ ಮಾಡಿದಾಗ ಲಕ್ಷ ಮಂದಿಗೊಬ್ಬರು ಸತ್ತಿದ್ದಾರೆ. ಬೇರೂರಿದ ಈಲಿಯುರಿತ (ಹೆಪಟೈಟಿಸ್), ಕಾರಣ ಗೊತ್ತಿಲ್ಲದ ಈಲಿ ಹೆಬ್ಬೆಳೆತ. ಈಲಿಯ ಅರಿಶಿನಾರಿಗೆ (ಸಿರ್ರೋಸಿಸ್) ರೋಗಿಗಳಿಗೆ ಮುಂದೇನಾಗುವುದೆಂಬ ತಿಳಿವ–ಇವನ್ನೆಲ್ಲ ಗುರುತಿಸಲು ಇದರಿಂದ ನೆರವಾಗುತ್ತದೆ. ಇದ್ದಾಗಲೂ ರಕ್ತಸುರಿತ ಹೆಚ್ಚಿರುವವರಲ್ಲೂ ಇದನ್ನು ಮಾಡುವಂತಿಲ್ಲ.

ಹಲವಾರು ಜೀವರಾಸಾಯನಿಕ ಪರೀಕ್ಷೆಗಳಲ್ಲಿ ತೀರ ಮುಖ್ಯವಾದವಿವು : ರಸಿಕೆಯಲ್ಲಿನ (ಸೀರಂ) ಕೋಳೆ, ಕೆಂಪಿತ್ತ, ಟ್ರಾನ್ಸಮಿನೇಸುಗಳು. ಗ್ಲಾಬ್ಯೂಲಿನುಗಳ ಅಳೆತ: ರಸಿಕೆಯ ವಿದ್ಯುಚ್ಚಲಚಿತ್ರಣ (ಎಲೆಕ್ಟ್ರೊಫಾರೆಸಿಸ್), ಕ್ಷಾರಕ ಫಾಸ್ಫೇಟು ದೊಳೆ, ತೈಮಾಲಿನ ಬಗ್ಗಡ (ಟರ್ಬಿಡಿಟಿ), ಬ್ರೋಮ್ ಸಲ್ಫ್‌ತ್ಯಾಲಿಯೀನ್ ಪರೀಕ್ಷೆಗಳು. ಅಂತೂ ಯಾವ ಒಂದೇ ಒಂದು ಪರೀಕ್ಷೆಯೂ ನಿರ್ಧಾರಕವಲ್ಲ. ಒಂದು ದಿನ ಇದ್ದಂತೆ ಮತ್ತೊಂದು ದಿನ ಇರುವುದಿಲ್ಲವಾದ್ದರಿಂದ ಆಗಾಗ್ಗೆ ಹಲವಾರು ಪರೀಕ್ಷೆಗಳನ್ನು ಮಾಡಿದರೇ ಅನುಕೂಲ. ರೋಗಿಯ ಹೇಳಿಕೆ, ಮೈ ಪರೀಕ್ಷೆಗಳೊಂದಿಗೆ ಇವು ವೈದ್ಯನಿಗೆ, ಅದರಲ್ಲೂ ಕಾಮಾಲೆ ಬೇರೂರಿರುವಾಗ ರೋಗ ನಿದಾನಕ್ಕೆ (ಡಯಗ್ನೋಸಿಸ್) ನೆರವಾಗುತ್ತವೆ **(ನೋಡಿ–ಕಾಮಾಲೆ)**.

(ಡಿ.ಎಸ್.ಎಸ್.)

**ಈಲಿನ್–ಪೆಲಿನ್:** 1878–1949. ಡಿಮಿಟ್ರ ಈವನಫ್ ಎನ್ನುವ ಬಲ್ಗೇರಿಯದ ಸಾಹಿತಿಯ ಕಾವ್ಯನಾಮ. ಈತ ಸಣ್ಣ ಕಥೆಗಾರ, ಕಾದಂಬರಿಕಾರ. ತನ್ನ ಕಡೆಯ ವರ್ಷಗಳಲ್ಲಿ ಸೊಗಸಾದ ಶಿಶುಸಾಹಿತ್ಯವನ್ನೂ ರಚಿಸಿದ. ಸಣ್ಣ ಹಳ್ಳಿಯೊಂದರಲ್ಲಿ ಹುಟ್ಟಿ ಬಹು ವರ್ಷಗಳ ಕಾಲ ಉಪಾಧ್ಯಾಯನಾಗಿದ್ದ. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಪ್ರಕಟವಾದ ಈತನ ಸಣ್ಣ ಕಥೆಗಳು ಶೀಘ್ರ ಯಶಸ್ಸನ್ನು ಗಳಿಸಿದುವು. ತನ್ನ ವಿದ್ಯಾರ್ಥಿಗಳಿಗೆ ಮತ್ತು ಸ್ನೇಹಿತರಿಗೆ ತಾನು ಕಥೆಗಳನ್ನು ಬರೆಯುವುದು ತಿಳಿಯಬಾರದೆಂದು ಕಾವ್ಯನಾಮವನ್ನು ಬಳಸಿದ. ಬಲ್ಗೇರಿಯದ ಅತ್ಯಂತ ಹಿರಿಯ ಸಾಹಿತಿ ಎನ್ನಿಸಿಕೊಂಡಿದ್ದ ಈವನ್ ವಜಫನ ನಿಧನದ ಅನಂತರ ಈಲಿನ್–ಪೆಲಿನಿಗೆ ಆ ಗೌರವ ಸಂದಿತು. ಇವನು ಸಣ್ಣ ಕಥೆಯ ಮಾಧ್ಯಮವನ್ನು ಅಸಾಧಾರಣ ಯಶಸ್ಸಿನಿಂದ ಬಳಸಿಕೊಂಡ. ಸಾಮಾನ್ಯ ರೈತರ ಜೀವನವನ್ನು ಈತ ವರ್ಣಿಸುತ್ತಾನೆ. ಅವರಲ್ಲಿ ಇವನಿಗಿರುವ ನೈಜವಾದ ಪ್ರೀತಿ, ಅಭಿಮಾನಗಳಿಂದ ಪಾತ್ರಗಳು ಜೀವಂತವಾಗುತ್ತವೆ. ಕಥೆಗಳಲ್ಲಿ ಹರಿತವಾದ ಕಟಕಿಯನ್ನೂ ಈತ ಬಳಸಬಲ್ಲ. ಭೂಮಿ (1928) ಎನ್ನುವ ಕಾದಂಬರಿಯನ್ನು ಬರೆಯಲು ಇಪ್ಪತ್ತೈದು ವರ್ಷಗಳ ಕಾಲ ಶ್ರಮಿಸಿದ. ಇದರಲ್ಲಿ ರೈತನ ಮನೋಧರ್ಮದ ಸುಂದರ ವಿಶ್ಲೇಷಣೆ ಇದೆ. ನೀತಿಬೋಧೆ ಮತ್ತು ಸಮಾಜಸುಧಾರಣೆಯ ಬಯಕೆಗಳಿಗೆ ಕಲೆ ಸಾಧನವಾಗುವುದನ್ನು ವಿರೋಧಿಸಿದ ಸಾಹಿತಿಗಳ ಗುಂಪಿಗೆ ಸೇರಿದವನೀತ. ಇವನ ಶೈಲಿ ಸರಳವೂ ಲಲಿತವೂ ಆದುದು.

(ಎಲ್.ಎಸ್.ಎಸ್.)

**ಈಲ್ಯಾಂಡ್:** ಅತಿದೊಡ್ಡ (ಆಂಟೆಲೋಪ್) ಚಿಗರಿಜಾತಿಯ ಪ್ರಾಣಿ, ಆಫ್ರಿಕದಲ್ಲಿ ಕಾಣಬರುತ್ತದೆ. ವೈಜ್ಞಾನಿಕ ನಾಮ ಟಾರೊಟ್ರಾಗಸ್. ಈಲ್ಯಾಂಡ್ ಎಂಬ ಪದ ಎಲ್ಕ್ ಎಂಬ ಡಚ್ ಪದದಿಂದ ಬಂದಿದೆ. ಈ ಹೆಸರಿಟ್ಟದ್ದು ಆಫ್ರಿಕದ ಡಚ್ ನೆಲಸಿಗರು. ಎಲ್ಕ್ ಚಿಗರಿ ಅಥವಾ ಇನ್ನಾವುದೇ ಚಿಗರಿಗಳಿಗಿಂತಲೂ ಈಲ್ಯಾಂಡ್ ಭಿನ್ನವಾಗಿದೆ. ಗಾತ್ರದಲ್ಲಿ ಬಲು ದೊಡ್ಡದಿದ್ದು, ತಲೆಯಮೇಲೆ ತಿರುಚಿಕೊಂಡಿರುವ ಎರಡು ಕೊಂಬುಗಳಿವೆ. ಕತ್ತಿನ ಕೆಳಭಾಗದಲ್ಲಿ ದಪ್ಪನೆಯ ಚರ್ಮ ತೂಗಾಡುತ್ತಿರುತ್ತದೆ. ನೋಟಕ್ಕೆ ಎತ್ತಿನಂತೆ ಕಾಣುವ ಮೈಮಾಟ ಇದರದು. ಸದಾ ಸಂಚಾರದಲ್ಲಿರುವ ಈ ಪ್ರಾಣಿ ಸ್ವಲ್ಪ ಶಬ್ದವಾದರೂ ಬಲು ವೇಗದಿಂದ ಧಾವಿಸಿಬಿಡುತ್ತದೆ. ಓಡುವಾಗ ಕ್ಲಿಕ್, ಕ್ಲಿಕ್ ಎಂಬ ಶಬ್ದ ಉತ್ಪತ್ತಿಯಾಗುವುದು. ಗೊರಸಿನ ಈ ಶಬ್ದ ಬಲುದೂರದವರೆಗೂ ಕೇಳಿಸುತ್ತದೆ. ಕುದುರೆ ಇದಕ್ಕೆ ಸರಿಸಮನಾಗಿ ಓಡಲು ಪೂರ್ಣ ನಾಗಾಲೋಟದಿಂದ ಓಡಬೇಕಾಗುತ್ತದೆ. ಅಪಘಾತದ ಸೂಚನೆಗಳೇನಾದರೂ ಕಂಡುಬಂದರೆ ಇದು ಗಾಳಿಗೆ ವಿರುದ್ಧ ದಿಕ್ಕಿನಲ್ಲಿ ಓಡಲಾರಂಭಿಸುತ್ತದೆ. ಅಲ್ಪ ಸ್ವಲ್ಪ ಅಕ್ಕಪಕ್ಕಕ್ಕೆ ತಿರುಗಬಹುದು, ಆದರೆ ಗಾಳಿಯ ದಿಕ್ಕಿನಲ್ಲಿ ಎಂದೂ ಓಡದು. ಕುದುರೆಯ ಮೇಲೆ ಕುಳಿತು ಅಟ್ಟಿಸಿಕೊಂಡು ಬಂದವನನ್ನು ಎದುರಿಸಬಲ್ಲುದಾದರೂ ತಾನೇ ನೇರವಾಗಿ ಮನುಷ್ಯನನ್ನು ಎದುರಿಸುವುದಿಲ್ಲ.

ಸಾಮಾನ್ಯವಾಗಿ ಇವು ಮೈದಾನ ಪ್ರದೇಶ ಮತ್ತ ಕಾಡುಪ್ರದೇಶಗಳ ನಡುವೆ ವಾಸಿಸುತ್ತವೆ. ಆಹಾರಸೇವನೆಗೆಂದು ಬಯಲು ಪ್ರದೇಶಗಳಿಗೆ ಹೋಗುವುದುಂಟು. ಬಿಸಿಲಿನ ಬೇಗೆಯನ್ನು ಸಹಿಸಲು ಮರದ ನೆರಳಿನ ಆಶ್ರಯ ಪಡೆಯುತ್ತವೆ. ಈಲ್ಯಾಂಡುಗಳ ಗುಂಪು ನೋಡಲು ಬಲು ಚೆಂದ. ಇವು ಆಗಾಗ ವಲಸೆ ಹೋಗುವುದೂ ಉಂಟು. ಈ ಕಾಲದಲ್ಲಿ ಗುಂಪಿನಲ್ಲಿನ ಈಲ್ಯಾಂಡುಗಳ ಸಂಖ್ಯೆ ಅಧಿಕವಾಗುತ್ತದೆ. ಇವು ನೀರಿಲ್ಲದೆ ಜೀವಿಸಬಲ್ಲುವಾದರೂ ನೀರು ದೊರಕಿದಾಗ ಬೇಸಗೆಯಲ್ಲಿ ದಿನಕ್ಕೆರಡು ಬಾರಿ ನೀರನ್ನು ಕುಡಿಯುವುದುಂಟು. ಹಸಿಹುಲ್ಲನ್ನು ಮೇಯುವುದಲ್ಲದೆ ಮರದ ಎಲೆ, ಕಡ್ಡಿಗಳನ್ನು ತಿನ್ನುತ್ತವೆ. ಚಿಗರಿಗಳಲ್ಲೆಲ್ಲ ಇವೇ ದನವನ್ನು ಹೆಚ್ಚು ಹೋಲುವ ಪ್ರಾಣಿಗಳು. ಇವನ್ನು ಪಳಗಿಸುವುದು ಸುಲಭವಾದರೂ ಈವರೆಗೆ ಹಾಗೆ ಮಾಡಿದುದರ ವರದಿ ಇಲ್ಲ. ಈಲ್ಯಾಂಡಿನ ಮಾಂಸ ಉತ್ತಮ ಜಾತಿಯದು. ಟಾರೊಟ್ರಾಗಸ್ ಓರಿಕ್ಸ್ ಎಂಬ ಈಲ್ಯಾಂಡ್ ದಕ್ಷಿಣ ಆಫ್ರಿಕದಲ್ಲಿ ಕಂಡುಬರುತ್ತದೆ. ಇದರಲ್ಲಿನ ಗಂಡು 1.5–2 ಮೀ ಎತ್ತರವಿದ್ದು ತೂಕ 55 ಕಿ.ಗ್ರಾಂಗಳಷ್ಟಿರುತ್ತದೆ. ಇದರ ಮೈಚರ್ಮ



ನಸುಬಣ್ಣದಲ್ಲಿದ್ದು, ಅಲ್ಲಲ್ಲೇ ಬಿಳಿಯ ಗೆರೆಗಳಿರುತ್ತವೆ. ಮುದಿ ಈಲ್ಯಾಂಡುಗಳು ನೀಲಿ – ಕಂದು ಬಣ್ಣದವು. ಹೆಣ್ಣಿನ ಕೊಂಬಿನ ಉದ್ದ ಗಂಡಿನ ಕೊಂಬಿಗಿಂತಲೂ ಹೆಚ್ಚು. ಸಾಮಾನ್ಯವಾಗಿ ಮಾರ್ಚಿ ತಿಂಗಳಿನ ಕೊನೆಯಿಂದ ಹಿಡಿದು ಮೇ ತಿಂಗಳಿನ ಅವಧಿ ಗಂಡುಹೆಣ್ಣುಗಳ ಕೂಡಿಕೆಯ ಕಾಲ. ಸುಮಾರು 256 ದಿವಸಗಳ ಬಳಿಕ ಮರಿ ಹುಟ್ಟುತ್ತದೆ. ಇತ್ತೀಚೆಗೆ ಈ ಪ್ರಾಣಿಗಳು ದಕ್ಷಿಣ ಆಫ್ರಿಕದಲ್ಲಿ ಕಡಿಮೆಯಾಗುತ್ತಿವೆ. ಕಾರಣ ಅವುಗಳ ಮಾಂಸ ಮತ್ತು ಗಟ್ಟಿ ಚರ್ಮಕ್ಕಾಗಿ ಮನುಷ್ಯ ನಡೆಸುವ ಬೇಟೆ. ಟಾರೊಟ್ರಾಗಸ್ ಡರ್ಬಿಯಾನಸ್ ಎಂಬುದು ಇವುಗಳಲ್ಲೆಲ್ಲ ಅತ್ಯಂತ ದೊಡ್ಡದು. ಇವುಗಳ ಬಣ್ಣ ಸಾಮಾನ್ಯ ಈಲ್ಯಾಂಡುಗಳ ಬಣ್ಣಕ್ಕಿಂತಲೂ ಸ್ವಲ್ಪ ಕೆಂಪು. ದೇಹದ ಇಕ್ಕೆಲಗಳಲ್ಲಿ ಬಿಳಿಯ ಗೆರೆಗಳಿವೆ.

(ಎಸ್.ಎನ್.ಕೆ.ಯು.)

**ಈವ್‌ಲಿನ್, ಜಾನ್:** (Evelyn John) 1620–1706. ಇಂಗ್ಲಿಷ್ ಗದ್ಯ ಸಾಹಿತಿ, ಶ್ರೀಮಂತ ಮನೆತನದವ. ಆಕ್ಸ್‌ಫರ್ಡಿನಲ್ಲಿ ವಿದ್ಯಾಭ್ಯಾಸ ಮಾಡಿದ. ರಾಯಲ್ ಸೊಸೈಟಿಯ ಸದಸ್ಯನಾಗಿದ್ದ. ಲಂಡನ್ನಿನ ಜೀವನದಲ್ಲಿ ವಿಶೇಷವಾದ ಆಸಕ್ತಿಯನ್ನು ವಹಿಸಿ ಅದರ ಸಮಸ್ಯೆಗಳನ್ನು ಕುರಿತು ಕಿರುಹೊತ್ತಗೆಗಳನ್ನು ಬರೆದು, ಪ್ಲೇಗ್ ಮತ್ತು ಲಂಡನ್ನಿನ ಮಹಾಜ್ವಾಲೆಗಳ ಸಮಯದಲ್ಲಿ ಕರ್ತವ್ಯನಿಷ್ಠನಾಗಿದ್ದು ಲಂಡನ್ನಿನ ಕಟ್ಟಡಗಳ ಪುನರ್ ನಿರ್ಮಾಣದಲ್ಲಿ ಆಸಕ್ತಿ ವಹಿಸಿದ. ಚಿತ್ರಕಲೆ, ಶಿಲ್ಪ, ವರ್ಣಕಲೆ, ಕೆತ್ತನೆ ಕೆಲಸ, ನಾಣ್ಯಶಾಸ್ತ್ರ, ಚರಿತ್ರೆ, ರಾಜ್ಯಶಾಸ್ತ್ರ, ವಿದ್ಯಾಭ್ಯಾಸ, ವ್ಯವಸಾಯ, ತೋಟಗಾರಿಕೆ, ವಾಣಿಜ್ಯ–ಹೀಗೆ ಈತ ಅನೇಕ ವಿಷಯಗಳನ್ನು ಕುರಿತು ಬರೆದಿದ್ದಾನೆ. ಇಂದು ಈವ್‌ಲಿನ್ನನ ಹೆಸರು ಉಳಿದಿರುವುದು ಮುಖ್ಯವಾಗಿ ಈತನ ದಿನಚರಿಯಿಂದ. ಇವನ ಜೀವನದ ಬಹುಭಾಗದ ಅನುಭವಗಳು ಈ ದಿನಚರಿಯಲ್ಲಿ ನಿರೂಪಿತವಾಗಿವೆ. ವಾಟನ್ ಹೌಸಿನ ಪುಸ್ತಕಾಲಯದ ಹಸ್ತಪ್ರತಿಗಳಲ್ಲಿ ಅನಿರೀಕ್ಷಿತವಾಗಿ ದೊರೆತ ಈ ಹಸ್ತಪ್ರತಿ 1818ರಲ್ಲಿ ಮೊದಲು ಪ್ರಕಟವಾಯಿತು. ಫ್ರಾನ್ಸ್, ಇಟಲಿ ಮತ್ತು ಹಾಲೆಂಡುಗಳಲ್ಲಿ ಪ್ರವಾಸಮಾಡಿದ ಈವ್‌ಲಿನ್ನನ ದಿನಚರಿ ವಿಷಯಗಳ ಗಣಿ. ಇದರಲ್ಲಿನ ವೃತ್ತಾಂತಗಳು ವಿವರಗಳಿಂದ ಕೂಡಿದ್ದು ನಿಷ್ಪಕ್ಷವಾಗಿವೆ. ಸಮಕಾಲೀನ ಜನಜೀವನ ಇದರ ಪುಟಗಳಲ್ಲಿ ಸ್ಫುಟವಾಗಿ ಪ್ರತಿಬಿಂಬಿತವಾಗಿದೆ. ವಿದ್ವತ್ಪೂರ್ಣವಾದ, ವಿಚಾರಪೂರ್ಣವಾದ ತಿಳಿವಳಿಕೆಯುಳ್ಳ ಮನಸ್ಸಿನ ಪ್ರತಿಕ್ರಿಯೆಯನ್ನು ಇಲ್ಲಿ ಕಾಣಬಹುದು. ಇವನದು ಸಾಮಾನ್ಯ ಜನತೆಯಿಂದ ಸ್ವಲ್ಪ ದೂರನಿಲ್ಲುವ ಜ್ಞಾನಾರ್ಥಿಯ ಮನೋಭಾವ. ಆದರೆ ಜನಜೀವನದಲ್ಲಿ ತಕ್ಕಷ್ಟು ಆಸಕ್ತಿವಹಿಸುವ ಕರ್ತವ್ಯಶೀಲ ಚೇತನ ಇವನದು. ಚಾರಿತ್ರಿಕ ಮತ್ತು ಸಾಹಿತ್ಯಕ ಮೌಲ್ಯಗಳ ದೃಷ್ಟಿಯಿಂದ ಇವನ ದಿನಚರಿಯನ್ನು ಪೀಪ್ಸನ ದಿನಚರಿ ಮತ್ತು ಬಾಸ್‌ವೆಲ್ಲನ

ಜರ್ನಲ್‌ಗಳೊಂದಿಗೆ ಹೋಲಿಸಬಹುದು. ಈತ ಮೂರು ಡಜನ್ನಿಗಿಂತ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾನೆ. ದಿನಚರಿಯನ್ನು ಬಿಟ್ಟರೆ ಮುಖ್ಯವಾದುವೆಂದರೆ - 1 ಸ್ಕಲ್‌ಪ್ಚೂರ (ಆರ್ ದಿ ಆರ್ಟ್ ಆಫ್ ಎನಗ್ರೇವಿಂಗ್ ಆನ್ ಕಾಪರ್) (1662). 2. ಸಿಲ್ವ (ಎ ಡಿಸ್‌ಕೋರ್ಸ್ ಆಫ್ ಫಾರೆಸ್ಟ್ ಟ್ರೀಸ್) (1664). (ಎಲ್.ಎಸ್.ಎಸ್.)

**ಈಶಾನ:** ರುದ್ರಮೂರ್ತಿಗಳಲ್ಲಿ ಒಬ್ಬ; ಐಶ್ವರ್ಯಶೀಲವುಳ್ಳವ; ರುದ್ರದೇವತಾತ್ಮಕವಾದ ಆರ್ದ್ರಾನಕ್ಷತ್ರ; ಸಂಖ್ಯೆ ಹನ್ನೊಂದು; ಸಾಧ್ಯೆ ಎಂಬುವಳ ಮಗ, ಒಬ್ಬ ದೇವತೆ–ಈ ಎಲ್ಲ ಅರ್ಥಗಳಲ್ಲೂ ಈಶಾನ ಶಬ್ದ ಬಳಕೆಯಲ್ಲಿದೆ.

ಎಲ್ಲ ಇಂದ್ರಿಯ ಗುಣಗಳಿಗೆ ಆವಾಸನೂ ಎಲ್ಲ ಇಂದ್ರಿಯಗಳಿಗೆ ಹೊರತಾದವನೂ ಸರ್ವಶರಣ್ಯನೂ ಸರ್ವಪ್ರಭುವೂ ಬೃಹತ್ತೂ ಆದವನೇ ಈಶಾನ ಎಂದು ಕೃಷ್ಣ ಯಜುರ್ವೇದದಲ್ಲಿದೆ.

ಹರ, ಮೃಡ, ಶರ್ವ, ಶಿವ, ಭವ, ಮಹಾದೇವ, ಉಗ್ರ, ಭೀಮ, ಪಶುಪತಿ, ರುದ್ರ, ಈಶಾನ–ಈ ಹನ್ನೊಂದು ರುದ್ರರುಗಳಲ್ಲಿ ಒಬ್ಬ. ಈತ ಹೊಗೆಬಣ್ಣದ (ಧೂಮ್ರ) ಜಟಾಧಾರಿ ಎಂದು ಮಾರ್ಕಂಡೇಯ ಪುರಾಣದಲ್ಲಿದೆ.

ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ, ಯಜಮಾನ, ಚಂದ್ರ ಮತ್ತು ಸೂರ್ಯ– ಈ ಅಷ್ಟವಿಧ ಮೂರ್ತಿಗಳಾದ, ಶರ್ವ, ಭವ, ರುದ್ರ, ಉಗ್ರ, ಭೀಮ, ಪಶುಪತಿ ಮಹಾದೇವ ಮತ್ತು ಈಶಾನ ಎಂಬ ಶರಭಸ್ವರೂಪಿ ಶಿವನ ಎಂಟು ಪಾದಗಳಲ್ಲಿ ಸೂರ್ಯಮೂರ್ತಿ ಯಾದವನೇ ಈಶಾನ ಎಂದು ಕಾಳಿಕಾಪುರಾಣದಲ್ಲಿದೆ.

ಅಷ್ಟದಿಕ್ಪಾಲಕರಲ್ಲಿ ಪೂರ್ವೋತ್ತರ (ಈಶಾನ್ಯ) ದಿಕ್ಕಿಗೆ ಅಧಿಪತಿ. ಪರಮೇಶ್ವರಸ್ವರೂಪನಾದ ಈತನ ಬಣ್ಣ ಬಿಳುಪು. ಸ್ಫಟಿಕದಂತೆ ಕಾಂತಿಯಿಂದ ಕೂಡಿ ವೃಷಭವಾಹನನಾಗಿ ವರದಾಭಯ ಹಸ್ತಗಳುಳ್ಳವನೂ ಶೂಲ, ಅಕ್ಷಸೂತ್ರಧಾರಿಯೂ ಆಗಿದ್ದಾನೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನವೆಂಬ ಪಂಚಮೂರ್ತಿಗಳಲ್ಲಿ ಒಬ್ಬ.

ಅಂಕುಶ ಪಾಶ ಟಂಕ ಕಪಾಲ ಡಕ್ಕ ಅಕ್ಷ ಶೂಲ ಇವನ್ನು ಕೈಗಳಲ್ಲಿ ಧರಿಸಿರುವ ಬಿಳಿ ಬಣ್ಣದ ಪಂಚಮುಖವುಳ್ಳ ರೂಪದಿಂದ ಕೂಡಿದ ಈಶಾನ ಧ್ಯಾನಯೋಗ್ಯ.

ಜೈನಸಂಪ್ರದಾಯದಂತೆ ಇರುವ ಸೌಧರ್ಮಾದಿ ಹದಿನಾರು ಸ್ವರ್ಗಗಳಲ್ಲಿ ಈಶಾನವೂ ಒಂದು. ಮೇರುತಲದಿಂದ ಒಂದೂವರೆ ಯೋಜನ ಅಂತರದಲ್ಲಿರುವ ಮೊದಲ ಪಟಲದ ಸೌಧರ್ಮೇಶಾನ ಕಲ್ಪಗಳಲ್ಲಿ ಕಲ್ಪ (ಸ್ವರ್ಗ) ಎರಡನೆಯದು. ಈ ಕಲ್ಪಕ್ಕೆ ಒಡೆಯನಾದ ಇಂದ್ರನೇ ಈಶಾನ. ಈತ ತೀರ್ಥಂಕರನಿಗೆ ಛತ್ರಿಯನ್ನು ಹಿಡಿಯುವ ಕಾಯಕದವ. ಇವನ ಎತ್ತರ ಏಳು ಮೊಳ. ಈತನ ಆಯುಸ್ಸಿನ ಪ್ರಮಾಣ ಇಪ್ಪತ್ತು ಲಕ್ಷ ಸಾಗರೋಪಮ ವರ್ಷಗಳು. ಈಶಾನ ಕಲ್ಪದಲ್ಲಿ ಪಂಚವಿಧ ವರ್ಣಗಳಿಂದ ಕೂಡಿದ ಇಪ್ಪತ್ತೆಂಟು ಲಕ್ಷ ವಿಮಾನಗಳಿವೆ. (ಎಸ್.ಎನ್.ಕೆ.)

**ಈಶಾನ್ಯ:** ದಿಕ್ಕುಗಳಲ್ಲೊಂದು. **ನೋಡಿ– ಅಷ್ಟದಿಕ್ಕುಗಳು.**

**ಈಶೋಪನಿಷತ್ತು:** ಪ್ರಮುಖ ಉಪನಿಷತ್ತುಗಳಲ್ಲಿ ಒಂದಾಗಿದ್ದು ಯಜುರ್ವೇದದ ವಾಜಸನೇಯ ಶಾಖೆಗೆ ಸೇರಿದ್ದು ಹದಿನೆಂಟು ಶ್ಲೋಕಗಳಿಂದ ಕೂಡಿದೆ. ಈಶಾವಾಸ್ಯಮ್ ಎಂಬ ಪದದಿಂದ ಪ್ರಾರಂಭವಾಗುವ ಈ ಉಪನಿಷತ್ತು ಈಶಾವಾಸ್ಯೋಪನಿಷತ್ತು ಎಂದೂ ಹೆಸರು ಪಡೆದಿದೆ. ಗಾತ್ರದಲ್ಲಿ ಕಿರಿದಾಗಿದ್ದರೂ ತತ್ತ್ವ ಗಾಂಭೀರ್ಯದಿಂದ ಅರ್ಥಸಂಪತ್ತಿನಿಂದ ಅತಿ ಮಹತ್ತ್ವವುಳ್ಳದ್ದಾಗಿದೆ.

ಮೊದಲ ಎರಡು ಶ್ಲೋಕಗಳಲ್ಲಿ ಅತಿ ಗೂಢವಾದ ಪರಮಾತ್ಮತತ್ತ್ವವೂ ಜೀವನದ ಸಾರ್ಥಕತೆಗೆ ಬೇಕಾದ ಎಲ್ಲ ಧರ್ಮವೂ ಅಡಗಿದೆ ಎನ್ನಬಹುದು. ಅವು ಹೀಗಿವೆ:

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಮ್
ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ
ಏವಂ ತ್ವಯಿ ನಾನ್ಯಥೇತೋsಸ್ತಿ ನಕರ್ಮ ಲಿಪ್ಯತೇ ನರೇ

ಚಲನಾತ್ಮಕ ಜಗತ್ತೆಲ್ಲವೂ ಈಶನಿಂದ ಆವರಿಸಲ್ಪಟ್ಟಿದೆ. ಅದನ್ನು ತ್ಯಾಗಮಾಡಿ ಆತ್ಮರಕ್ಷಣೆಯನ್ನು ಮಾಡಿಕೋ. ಧನದಾಶೆಯನ್ನು ತೊರೆ. ಜಗತ್ತನ್ನು ತ್ಯಾಗ ಮಾಡಿದರೂ ಕರ್ಮವನ್ನು (ಶಾಸ್ತ್ರವಿಹಿತವಾದ) ಭಗವದನುಜ್ಞೆಯೆಂಬ ನಿಷ್ಠೆಯಿಂದ ಮಾಡುತ್ತ ನೂರು ವರ್ಷ ಬಾಳು. ಈ ಮಾರ್ಗವಲ್ಲದೆ ಬೇರೆ ಉಪಾಯವಿಲ್ಲ.

ಆತ್ಮಘಾತಿಗಳು ಮುಂದೆ ಅಸುರಸಂಬಂಧವುಳ್ಳ, ಅಜ್ಞಾನವೆಂಬ ಕತ್ತಲೆಯಿಂದಾವೃತ ವಾದ, ಲೋಕಗಳನ್ನು ಪಡೆಯುತ್ತಾರೆಂಬ ಸಂದೇಶವಿದೆ. ಮುಂದಿನ ಶ್ಲೋಕಗಳಲ್ಲಿ ಆತ್ಮಸ್ವರೂಪವನ್ನೂ ಏಕತ್ವವನ್ನೂ ಅದರ ಜ್ಞಾನದಿಂದ ಒದಗುವ ಶೋಕಮೋಹಗಳ ನಿವೃತ್ತಿಯನ್ನೂ ಹೇಳಲಾಗಿದೆ. ಆ ವಿದ್ಯೆಯಲ್ಲಿ ನಿರತರಾದ ಕರ್ಮೋಪಾಸಕರಿಗೆ, ಕರ್ಮವನ್ನು ತ್ಯಜಿಸಿ ಜ್ಞಾನವನ್ನು ಉಪಾಸಿಸುವವರಿಗೆ, ಬ್ರಹ್ಮವಿದ್ಯೆ ದುರ್ಲಭವೆಂದೂ ವಿದ್ಯೆ ಅವಿದ್ಯೆಗಳೆರಡನ್ನೂ – ಅಂದರೆ ವಿಹಿತ ಕರ್ಮ ಮತ್ತು ಜ್ಞಾನ ಎರಡನ್ನೂ–ಅರಿತವನು ಅವುಗಳ ಮೂಲಕ ಅಮೃತತ್ತ್ವವನ್ನು ಪಡೆಯುತ್ತಾನೆಂದು ತಿಳಿಸಿದೆ. ಯಾವ ಯೋಗಿ ಪರಬ್ರಹ್ಮ ಮತ್ತು ಕರ್ಮ ಇವೆರಡನ್ನು ತಿಳಿದಿರುತ್ತಾನೆಯೋ ಆತ ಜ್ಞಾನೋತ್ಪತ್ತಿಗೆ ಕಾರಣವಾದ ಶಾರೀರಕ ಕರ್ಮಗಳ ಮೂಲಕ ಮೃತ್ಯುವನ್ನು ದಾಟಿ ಬ್ರಹ್ಮಜ್ಞಾನದಿಂದ ಅಮೃತತ್ತ್ವವನ್ನು ಹೊಂದುತ್ತಾನೆಂದು ಮುಂದಿನ ಶ್ಲೋಕಗಳು ಉಪದೇಶಿಸುತ್ತವೆ. ಮರಣಕಾಲ ಸಮೀಪಿಸಿದಾಗ ಸಾಧಕ ಆತ್ಮಪ್ರಾಪ್ತಿಗೋಸ್ಕರ ಸತ್ಯಾತ್ಮನನ್ನೂ ಪೋಷಕನಾದ ಸೂರ್ಯನನ್ನೂ ಅಗ್ನಿಯನ್ನೂ ಕುರಿತು ಮಾಡುವ ಪ್ರಾರ್ಥನೆ, ನಮಸ್ಕಾರಗಳಿಂದ ಈ ಉಪನಿಷತ್ತು ಸಮಾಪ್ತಿಯಾಗುತ್ತದೆ.

ಈ ಉಪನಿಷತ್ತಿನಲ್ಲಿ ಪ್ರಪಂಚಾತೀತ ಬ್ರಹ್ಮವಸ್ತುವಿಗಿಂತಲೂ ಪರಬ್ರಹ್ಮನಿಗೂ ಜಗತ್ತಿಗೂ ಇರುವ ಸಂಬಂಧವಿವರಣೆಗೆ ಹೆಚ್ಚು ಗಮನ ಕೊಡಲಾಗಿದೆ. ಮಾನವನ ಬಾಳಿನ ಅಂತರಾರ್ಥವನ್ನು ಇಲ್ಲಿ ಬಿಡಿಸಲಾಗಿದೆ. ಸಾಮಾಜಿಕ ದೃಷ್ಟಿಯಿಂದಲೂ ಜನ್ಮ ಸಾಫಲ್ಯದ ದೃಷ್ಟಿಯಿಂದಲೂ ಇದರ ತತ್ತ್ವ ಅತ್ಯಂತ ಪರಿಣಾಮಕಾರಿಯಾಗಿದೆ. ಭಗವಂತನೇ ಸೃಷ್ಟಿಕರ್ತನೂ ಪಾಲಕನೂ ಪ್ರಭುವೂ ಆಗಿರುವುದರಿಂದ ನಾವು ಯಾವುದಕ್ಕೂ ಹೊಣೆಗಾರರೂ ಅಲ್ಲ. ಹಕ್ಕುದಾರರೂ ಅಲ್ಲ. ಭಗವದರ್ಪಣಬುದ್ಧಿಯಿಂದ ಕರ್ಮಗಳನ್ನು ಮಾಡಿ ನಾವು ಬಾಳುವೆ ನಡೆಸಬೇಕು. ಹಣದಾಸೆಯನ್ನು ತೊರೆಯಬೇಕು. ಕರ್ಮಯೋಗಿಗಳಾಗಿ ಸೇವೆ ಮಾಡಬೇಕು. ಎಲ್ಲರಲ್ಲೂ ಪರಮಾತ್ಮನನ್ನು ಕಾಣುವವ ಯಾವ ಜೀವಿಯನ್ನೂ ತುಚ್ಛವಾಗಿ ಕಾಣುವುದಿಲ್ಲ, ನಿಸ್ವಾರ್ಥನಾಗಿರುತ್ತಾನೆ. ದ್ವಂದ್ವಭಾವವಿಲ್ಲದಿರುವುದರಿಂದ ಅವನನ್ನು ದುಃಖ ಬಾಧಿಸುವುದಿಲ್ಲ. ಈ ಮೊದಲಾದ ತತ್ತ್ವಗಳೆಲ್ಲ ಇಲ್ಲಿ ಅಡಗಿವೆ.

ಇದರಲ್ಲಿ ಅಧ್ಯಾತ್ಮ ಮತ್ತು ಲೌಕಿಕಗಳ ಸಮನ್ವಯವೂ ಜ್ಞಾನ ಕರ್ಮಗಳ ಸಂಯೋಗವೂ ಆಗಿದೆ. ಅಜ್ಞಾನಿಗಳಾಗಿ ಕರ್ಮದಲ್ಲಿ ತೊಡಗಿರುವವರಿಗಿಂತ, ನಿಷ್ಕ್ರಿಯ ಜ್ಞಾನಿಗಳಿಗೆ ಮತ್ತೂ ಭಯಂಕರವಾದ ಸ್ಥಿತಿ ಪ್ರಾಪ್ತವಾಗುತ್ತದೆ ಎಂದು ತೋರಿಸಲಾಗಿದೆ.

ಗಾಂಧೀಜಿಯವರು ಈ ಉಪನಿಷತ್ತನ್ನು ಹರಿಜನ ಪತ್ರಿಕೆಯಲ್ಲಿ ಮನಮುಟ್ಟುವಂತೆ ಶ್ಲಾಘಿಸಿದ್ದಾರೆ. ಹಿಂದೂಧರ್ಮದ ಸಾರಸರ್ವಸ್ವವೂ ಜೀವನದ ಬೆಳಕೂ ಇದರಲ್ಲಿ ಅಡಗಿರುವು ದೆಂದು ವಿಶದಪಡಿಸಿದ್ದಾರೆ. ಹಿಂದೂಧರ್ಮದ ಸಕಲ ಗ್ರಂಥಗಳು ಭಸ್ಮವಾದರೂ ಈ ಉಪನಿಷತ್ತು, ಅದರಲ್ಲೂ ಒಂದನೆಯ ಮಂತ್ರ ಉಳಿದರೂ ಹಿಂದೂಧರ್ಮ ಚಿರಕಾಲ ಉಳಿಯುವುದು ಎಂದು ತಮ್ಮ ನಂಬುಗೆ ಎಂದು ಹೇಳಿಕೊಂಡಿದ್ದಾರೆ. ಅಹಿಂಸೆ, ಸತ್ಯ, ವಿಶ್ವಪ್ರೇಮ ಈ ಎಲ್ಲ ತತ್ತ್ವಗಳನ್ನೂ ಇದರಲ್ಲಿ ಕಂಡಿದ್ದಾರೆ. ಅವರು ಮೊದಲ ಎರಡು ಶ್ಲೋಕಗಳನ್ನು ನಿತ್ಯವೂ ಪಠನ ಮಾಡುತ್ತ ಅನುಸಂಧಾನ ಮಾಡುತ್ತಿದ್ದರು.

ಕೊನೆಯಲ್ಲಿ ಮರಣೋನ್ಮುಖನಾದವನಿಗೆ ಈ ಜನ್ಮದಲ್ಲಿ ಅಲ್ಲದೆ ಮುಂದಿನ ಜನ್ಮದಲ್ಲೂ ಶಾಂತಿ ಸಮಾಧಾನಗಳನ್ನು ತರುವ ಸಂದೇಶ ಇಲ್ಲಿ ನಮಗೆ ದೊರಕುತ್ತದೆ. ಅಂಥ ಭಗವಂತನನ್ನು ಕಾಣುವ ಹಂಬಲದಿಂದಲೇ ಪ್ರಾಣವನ್ನು ನೀಗುವುದರಿಂದ ಸದ್ಗತಿ ಹೊಂದುವುದರಲ್ಲಿ ಸಂಶಯವೇ ಇಲ್ಲವೆಂದು ಅಭಿಪ್ರಾಯ.

ಈ ಉಪನಿಷತ್ತಿಗೆ ಶಂಕರ, ವೇದಾಂತದೇಶಿಕ ಮತ್ತು ಆನಂದತೀರ್ಥರೇ ಮೊದಲಾದ ಆಚಾರ್ಯರ ಭಾಷ್ಯಗಳಿರುವುದಲ್ಲದೆ, ಅರವಿಂದರು, ಮಹಾತ್ಮಗಾಂಧಿ, ವಿನೋಬಾಭಾವೆ, ಚಕ್ರವರ್ತಿ ರಾಜಗೋಪಾಲಾಚಾರಿ-ಇವರುಗಳ ಆಧುನಿಕ ವ್ಯಾಖ್ಯಾನಗಳಿವೆ. ಸಂಗ್ರಹವೂ ಸಾರತಮಾರ್ಥ ಪ್ರತಿಪಾದಕವೂ ಆದ ಈ ಉಪನಿಷತ್ತಿಗೆ ಅತ್ಯಂತ ಮಹತ್ತ್ವವನ್ನು ಕೊಡಲಾಗಿದೆ. ಇದರಲ್ಲಿ ಬ್ರಹ್ಮತತ್ತ್ವದ ಪ್ರಾಧಾನ್ಯವನ್ನು ಬಿಡದೆ ಜಗತ್ತಿನ ಸತ್ಯಾಂಶವನ್ನು ಮುಂದಿಟ್ಟಿರುವುದಲ್ಲದೆ, ಜ್ಞಾನಕರ್ಮಸಮನ್ವಯವನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಭಗವದ್ಗೀತೆಯ ವಿಸ್ತಾರವಾದ ಉಪದೇಶ ಈ ಉಪನಿಷತ್ತಿನ ಅಧಿಕೃತ ವಿವರಣೆಯಂತಿದೆ. (ಎಸ್.ಎಸ್.ಆರ್.)

**ಈಶ್ವರ[1]: ನೋಡಿ – ಸಂವತ್ಸರಗಳು**

**ಈಶ್ವರ[2]:** ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾದ ಏಕೈಕ ದೈವ. ಭಿನ್ನ ಭಿನ್ನ ಮತ ಧರ್ಮಗಳಲ್ಲಿ ಕಾಲಾನುಕಾಲಕ್ಕೆ ಈ ಭಾವನೆ ಬೆಳೆದು ಬಂದ ಬಗೆಯನ್ನಿಲ್ಲಿ ವಿವರಿಸಿದೆ.

ಹಿಂದೂ ಧರ್ಮದ ವೇದಗಳ ಕಾಲಕ್ಕೆ ಸೂರ್ಯ ಚಂದ್ರಾದಿಗಳ ಆರಾಧನೆ ಇದ್ದು ಬಹುದೇವವಾದ ಪ್ರಚಲಿತವಾಗಿತ್ತು. ಒಬ್ಬನೇ ಸರ್ವೇಶ್ವರನ ಭಾವನೆ ಇರಲಿಲ್ಲ. ಕ್ರಮೇಣ ಏಕದೇವವಾದ ಬೆಳೆಯಿತು. ಉಪನಿಷತ್ತುಗಳಲ್ಲಿ ಪರಬ್ರಹ್ಮತತ್ತ್ವಕ್ಕೆ ವಿಶೇಷ ವಿವರಣೆಗಳಿವೆ. ಪರಬ್ರಹ್ಮನಿಗೂ ಜೀವಾತ್ಮನಿಗೂ ಭೇದ ಮತ್ತು ಐಕ್ಯಭಾವನೆಗಳ ವ್ಯಾಖ್ಯಾನಗಳುಳ್ಳ ತತ್ತ್ವಮಸಿ ಮಹಾವಾಕ್ಯಗಳು ಅಲ್ಲಿ ಸಿಗುತ್ತವೆ.

ಈಶ್ವರವಾದವು ದರ್ಶನಗಳಲ್ಲಿ ಸ್ಪಷ್ಟ ರೂಪವನ್ನು ತಾಳಿತು. ಚಾರ್ವಾಕ, ಬೌದ್ಧ, ಜೈನ ಮತಗಳು ಈಶ್ವರನನ್ನು ಒಪ್ಪಿಕೊಂಡಿಲ್ಲ. ಸಾಂಖ್ಯರು ಪರಮೇಶ್ವರನನ್ನು ಅಂಗೀಕರಿಸದೆ ನಿತ್ಯೇಶ್ವರನಿಲ್ಲವೆಂದೂ ಯಾರು ಬೇಕಾದರೂ ಸಿದ್ಧರಾಗಿ ಈಶ್ವರರಾಗಬಹುದೆಂದೂ ವಾದಿಸಿದರು. ಈಶ್ವರವಾದಿಗಳೆಲ್ಲರೂ ನಿತ್ಯಸರ್ವಜ್ಞನಾದ ಸರ್ವಸ್ವತಂತ್ರನಾದ ಈಶ್ವರ ಅನಂತಕೋಟಿ ಬ್ರಹ್ಮಾಂಡಗಳ ವ್ಯಾಪಾರಗಳನ್ನು, ಅನಂತಕೋಟಿ ಜೀವಾತ್ಮರ ಉದ್ಧಾರಭಾರವನ್ನು ವಹಿಸಿ, ಪ್ರಪಂಚಾನುಗ್ರಹ ನಿರತನಾಗಿರುವನೆಂದು ಅಭಿಪ್ರಾಯಪಟ್ಟಿದ್ದಾರೆ. ಯೋಗದರ್ಶನದಲ್ಲಿ ಶುದ್ಧಸತ್ತ್ವಪ್ರಧಾನವಾದ ನಿರ್ವಾಣಕಾರ್ಯವನ್ನು ಜಗದನುಗ್ರಹೇಚ್ಛಾರ್ಥವಾಗಿ ಬುದ್ಧಿ, ಮನಸ್ಸು, ಇಂದ್ರಿಯಗಳನ್ನೂ ದೋಷರಹಿತವಾದ ಸರ್ವಜ್ಞತ್ವವನ್ನೂ ಈಶ್ವರನಿಗೆ ಕೊಟ್ಟು, ಪರಮಕೃಪೆಯನ್ನೂ ಹೇಳಿ ಕ್ಲೇಶಕರ್ಮವಿಪಾಕ ಸಂಬಂಧವಿಲ್ಲದವನೆಂದು ಅವನನ್ನು ವರ್ಣಿಸಲಾಗಿದೆ. ತಾರ್ಕಿಕರು ವಿಶ್ವಕ್ಕೆ ಈಶ್ವರನೇ ಕರ್ತನೆಂದು ಒಪ್ಪಿದ್ದಾರೆ. ಆದರೆ ಮೋಕ್ಷವೆಂದರೆ ಜೀವನದುಃಖನಿವೃತ್ತಿಯೇ ಹೊರತು ಈಶ್ವರ ಪ್ರಾಪ್ತಿಯಲ್ಲವೆಂದಿದ್ದಾರೆ. ಮೀಮಾಂಸದರ್ಶನದಲ್ಲಿ ವೇದೋಕ್ತ ಕರ್ಮಗಳಿಂದಲೇ

ಮೋಕ್ಷವೆಂದೂ ಫಲಪ್ರಾಪ್ತಿಗೆ ಈಶ್ವರನಿರಬೇಕಾಗಿಲ್ಲವೆಂದೂ ಹೇಳಿದ್ದರೂ ಕುಮಾರಿಲ ಮತ್ತು ಪಾರ್ಥಸಾರಥಿ ಮಿಶ್ರರು ತಮ್ಮ ಮೀಮಾಂಸ ಗ್ರಂಥಗಳಲ್ಲಿ ಪರಮೇಶ್ವರನ ಅನುಗ್ರಹವನ್ನು ಅಂಗೀಕರಿಸಿ ಭಕ್ತಿಮಾರ್ಗಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ, ಅದ್ವೈತದಲ್ಲಿ ಶಂಕರಾಚಾರ್ಯರು ಪ್ರಪಂಚಕ್ಕೆ ಮೂಲಕಾರಣನಾದವ ಮಾಯಾವಿಶಿಷ್ಟ ಪರಬ್ರಹ್ಮನೆಂದೂ ಈಶ್ವರ ಸರ್ವಜ್ಞ, ಸರ್ವಾಂತರ್ಯಾಮಿ, ಜಗತ್ಕಾರಣ ಎಂದೂ ಹೇಳಿದ್ದಾರೆ. ಇದು ವ್ಯಾವಹಾರಿಕ ದೃಷ್ಟಿಯಿಂದ, ಪಾರಮಾರ್ಥಿಕ, ದೃಷ್ಟಿಯಿಂದ, ಪರಬ್ರಹ್ಮ ನಿಷ್ಪ್ರಪಂಚಕನೂ ನಿರ್ಗುಣನೂ ಆದ ಪರವಸ್ತು. ಈ ದೃಷ್ಟಿಯಲ್ಲಿ ಜಗತ್ತೇ ಮಿಥ್ಯೆಯಾದುದರಿಂದ ಜಗತ್ತಿಗೆ ಸ್ವಾಮಿಯಾದ ಈಶ್ವರನ ಪ್ರಸಕ್ತಿಯೇ ತಾತ್ವಿಕವಾಗಿ ಬರುವುದಿಲ್ಲ. ವಿಶಿಷ್ಟಾದ್ವೈತದಲ್ಲಿ ಈಶ್ವರತ್ವವನ್ನು ಲಕ್ಷ್ಮೀನಾರಾಯಣರಿಬ್ಬರಿಗೂ ಹೇಳಿ ಪರಮೇಶ್ವರ, ಪರಬ್ರಹ್ಮಪದಗಳನ್ನು ಇಬ್ಬರಿಗೂ ಪ್ರಯೋಗಿಸಲಾಗಿದೆ. ಈ ಪರಮೇಶ್ವರ ಸಕಲ ತತ್ತ್ವಗಳಿಗೂ ಧಾರಕ, ನಿಯಾಮಕ, ಸರ್ವಶಕ್ತ, ಪರಮಕಾರುಣಿಕ, ಸಕಲ ಕಲ್ಯಾಣಗುಣಪರಿಪೂರ್ಣ, ಸರ್ವವಸ್ತುವಿಲಕ್ಷಣ, ಸರ್ವಶಬ್ದವಾಚ್ಯ, ಅಪ್ರಾಕೃತದಿವ್ಯಮಂಗಳವಿಗ್ರಹ, ಪಿತೃಮಾತೃಸ್ಥಾನೀಯ, ಪರಮಾನಂದ ಸ್ವರೂಪ, ಪರಮಪ್ರಾಪ್ಯ, ಪರಮ ಪ್ರಾಪಕ –ಎಂದು ಶಾಸ್ತ್ರೋಕ್ತವಾಗಿ ವಿವರಿಸಿದೆ. ಅವನಿಗೆ ಸಕಲ ದೋಷರಾಹಿತ್ಯಕ್ಕೆ ಸತ್ಯಸಂಕಲ್ಪವೂ ಸಕಲ ಕಲ್ಯಾಣಗುಣ ಸಾಹಿತ್ಯಕ್ಕೆ ಸತ್ಯಕಾಮತ್ವವೂ ಸರ್ವವಿಲಕ್ಷಣತ್ವಕ್ಕೆ ಪುರುಷೋತ್ತಮತ್ವವೂ ನಿಯಾಮಕವಾಗಿರುವುವು. ಸಕಲವಿಧ ಪರಿಜನ ಪರಿವೃತನಾಗಿ ಲಕ್ಷ್ಮೀದೇವಿಯೊಡನೆ ನಿತ್ಯಾನುಭವದಲ್ಲಿ ಆತನಿರುತ್ತಾನೆ. ಅವನ ಶುದ್ಧ ಸತ್ತ್ವದ್ರವ್ಯಮಯವಾದ ದೇಹಕ್ಕೆ ದಿವ್ಯಮಂಗಳವಿಗ್ರಹವೆಂದು ಹೆಸರಿದೆ. ಲಕ್ಷ್ಮೀನಾರಾಯಣರಿಗೆ ಪುರುಷತ್ವ, ಸ್ತ್ರೀತ್ವ ಭೇದವಿದ್ದರೂ ಗುಣವಿಭೂತಿಗಳು ಇಬ್ಬರಿಗೂ ಸಮ. ಇಬ್ಬರೂ ಆಶ್ರಿತಾನುಗ್ರಹಕ್ಕಾಗಿ ಕೃಷ್ಣ ರುಕ್ಮಿಣಿ, ಸೀತೆ ರಾಮ ಇತ್ಯಾದಿ ಅವತಾರಗಳನ್ನು ಸ್ವೀಕರಿಸಿ ಜಗದುದ್ಧಾರ ಮಾಡುವರು.

ಇಂಥ ಈಶ್ವರನಲ್ಲಿ ಕರ್ಮ ಜ್ಞಾನಗಳ ಮೂಲಕ ಭಕ್ತಿಯನ್ನು ಮಾಡಬೇಕು. ಭಕ್ತಿಗೆ ಪ್ರತಿಬಂಧಕಗಳಿದ್ದವರು ಜಾತಿ ಕುಲ ಗೋತ್ರ ವಿದ್ಯೆ ಇತ್ಯಾದಿ ಯಾವ ಭೇದಗಳನ್ನೂ ಮೀರಿದ ಪರಮಾತ್ಮನಿಗೆ ಜೀವಾತ್ಮ ಶೇಷಭೂತನೆಂಬ ಶೇಷತ್ವಾನುಸಂಧಾನವೆಂಬ ಪ್ರಪತ್ತಿಮಾರ್ಗದಿಂದ ಈ ಜನ್ಮದಲ್ಲಿಯೇ ಮೋಕ್ಷ ಹೊಂದಬಹುದು. ಇದು ಸುಲಭ ಮಾರ್ಗ, ದ್ವೈತ ದರ್ಶನದಲ್ಲಿ ಜಗತ್ಕಾರಣಾದಿ ಸರ್ವ ವ್ಯಾಪಾರವನ್ನೂ ವಿಷ್ಣುವಿಗೇ ಸಮರ್ಥಿಸಿ ವಿಷ್ಣುವನ್ನು ಈಶ್ವರನ ಸ್ಥಾನದಲ್ಲಿಡಲಾಗಿದೆ. ಈ ವಿಷ್ಣುಸರ್ವೋತ್ತಮ ವಾದದಲ್ಲಿ ಲಕ್ಷ್ಮಿ, ಬ್ರಹ್ಮ, ವಾಯು-ಇವರಿಗೂ ವಿಷ್ಣುವಿಗೂ ಕ್ರಮವಾದ ತಾರತಮ್ಯವನ್ನು ಒಪ್ಪಿಕೊಳ್ಳಲಾಗಿದೆ. ಜೀವನಿಗೂ ಈಶ್ವರನಿಗೂ ಇರುವ ಭೇದವನ್ನರಿತು ಪರಮಾತ್ಮನನ್ನು ಭೃತ್ಯಭಾವದಿಂದ ಆರಾಧಿಸಿ ಮೋಕ್ಷವನ್ನು ಪಡೆಯಬೇಕು. ಪರಮಾತ್ಮ ಸರ್ವಜ್ಞ, ಸರ್ವವ್ಯಾಪಕ, ನಿರತಿಶಯ ಜ್ಞಾನಾನಂದ ಕಲ್ಯಾಣಗುಣಪರಿಪೂರ್ಣ, ಭಕ್ತಪರಾಧೀನ, ಅಚಿಂತ್ಯ ಶಕ್ತಿಯಿಂದ ಅಸಂಖ್ಯಾತ ರೂಪಗಳನ್ನು ಧರಿಸುವವ. ಸಾಲಿಗ್ರಾಮ, ಪ್ರತಿಮೆ ಮುಂತಾದ ಅರ್ಚಾರೂಪಗಳು ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮತಗಳಲ್ಲಿ ಉಂಟು. ಇವು ಸಾಕ್ಷಾದ್ರೂಪಗಳಲ್ಲ. ಸಾನ್ನಿಧ್ಯ ರೂಪಗಳು.

ಶಕ್ತಿ ವಿಶಿಷ್ಟಾದ್ವೈತವೆನಿಸಿಕೊಂಡ ವೀರಶೈವ ಮತದಲ್ಲಿ ಈಶ್ವರನನ್ನು ಶಿವನೆಂದೂ ಆತ ಏಕಮೇವಾದ್ವಿತೀಯನೆಂದೂ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ಶಕ್ತಿವಿಶಿಷ್ಟನೆಂದೂ ಹೇಳಲಾಗಿದೆ. ಜಗತ್ತು ಸತ್ಯ; ಅವನ ಶಕ್ತಿಯ ಪರಿಣಾಮವಾಗಿ ಸೃಷ್ಟಿಯಾಗಿ ಮಾಯಾಶಕ್ತಿ ರೂಪದಿಂದ ಜೀವನವನ್ನು ಆವರಿಸುತ್ತದೆ. ಜೀವ ಈಶ್ವರನನ್ನು ಅಥವಾ ಪರಾಶಕ್ತಿ ವಿಶಿಷ್ಟಪರಮಾತ್ಮನನ್ನು ಸೇರಲು ಷಟ್ಸ್ಥಲ ಸಿದ್ಧಾಂತವೆಂಬ ಮಾರ್ಗವನ್ನು ವೀರಶೈವ ಧರ್ಮ ಬೋಧಿಸುತ್ತದೆ. ಶಿವ ಲಿಂಗ, ಜೀವಿಗಳು ಅಂಗ, ಲಿಂಗಾಂಗ ಸಾಮರಸ್ಯವೇ ಶೂನ್ಯಸಂಪಾದನೆಯ ಗುರಿ ಎಂಬುದೇ ಈ ಮತದ ತತ್ತ್ವ. (ಎಸ್.ಎಸ್.ಆರ್.)

**ಈಶ್ವರಕವಿ:** ಸು.1500. ಕವಿಜಿಹ್ವಾಬಂಧನಂ ಎಂಬ ಕನ್ನಡ ಛಂದೋಗ್ರಂಥದ ಕರ್ತೃ. ಈತನ ತಂದೆ ಕಚ್ಚುಟೇಶ. ಕವಿ ತನ್ನನ್ನು ಅಭಿನವಕೇಶಿರಾಜ ಎಂದು ಕರೆದುಕೊಂಡಿರುವುದರಿಂದ ಮತ್ತು ಆಂಧ್ರಕವಿಗಳು ತಮ್ಮ ಕಾವ್ಯಗಳಲ್ಲಿ ಯಥೇಚ್ಛವಾಗಿ ಬಳಕೆಮಾಡಿದ ವಡಿಗಳ ವಿಷಯವನ್ನು ವಿವರಿಸುವುದರಿಂದ ಈತ ಕೇಶಿರಾಜ, ಅಪ್ಪಕವಿಗಳಿಗಿಂತ ಈಚಿನವನಿರಬೇಕೆಂದು ಅಭಿಪ್ರಾಯವಿದೆ. 'ನವಜನರ ಕುರಿತು ಛಂದೋವರ್ಣದೊಳ್ ಕನ್ನಡದ ಪ್ರಾಸವಡಿಭೇದಗಳಂ ವಿವರವಿಡಿದಷ್ಟಭಾಷಾಕವಿವರ ಬಾಣಾಖ್ಯನೊಲಿದು ಪೇಳ್ದಂ ಮುದದಿಂ'; 'ಶ್ರೀಕಾರಗಳಿಲ್ಲದ ಪದ ಲೋಕದೊಳಂ ಸಲ್ಲದೆಂದ ಕವಿ ಫಣಿವರ್ಮಂ'; 'ಇತಿ ಬಾಣಕವಿ ವಿನಿರ್ಮಿತಮಪ್ಪ ಛಂದೋಂಬುರಾಶಿ ಪ್ರಥಮಪರಿಚ್ಛೇದಸಮಾಪ್ತಃ' – ಎಂಬ ಮಾತುಗಳು ಇವನ ಗ್ರಂಥದಲ್ಲಿ ಕಂಡುಬರುವುದರಿಂದ ಇವನಿಗೆ ಬಾಣ, ಫಣಿವರ್ಮ ಎಂಬ ಹೆಸರುಗಳೂ ಅಷ್ಟಭಾಷಾಕವಿವರ ಎಂಬ ಬಿರುದೂ ಗ್ರಂಥಕ್ಕೆ ಛಂದೋಂಬುಧಿ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ.

ಕವಿಜಿಹ್ವಾಬಂಧನದಲ್ಲಿ ನಾಲ್ಕು ಪರಿಚ್ಛೇದಗಳಿವೆ. ಕಂದ ವೃತ್ತಗಳಲ್ಲಿ ಬರೆದಿದೆ. ಒಂದನೆಯ ಪರಿಚ್ಛೇದದಲ್ಲಿ ಗಣಗಳೂ ಅವುಗಳ ವರ್ಣವಾಹನಮೈತ್ರೀವೈರ ಕುಲದೇವತಾಫಲಾದಿಗಳು ಹೇಳಿವೆ. ಎರಡನೆಯದರಲ್ಲಿ ಪ್ರಾಸ ವಡಿಗಳು ವಿಶದವಾಗಿ ನಿರೂಪಿತವಾಗಿವೆ. ಪ್ರಾಸಗಳಲ್ಲಿ ಸಿಂಹ, ಗಜ, ವೃಷಭ ಮುಂತಾದ 28 ಪ್ರಾಸಗಳನ್ನು ಹೇಳಿದ್ದಾನೆ. ವಡಿಗಳಲ್ಲಿ ಪದ್ಮ, ಗರುಡ, ಸಾರಂಗ ಮುಂತಾದ 6 ಭೇದಗಳನ್ನು ಹೇಳಿದ್ದಾನೆ. ಮೂರನೆಯದರಲ್ಲಿ ಅಕ್ಷರಗಳು ಅವುಗಳ ಕುಲ, ಅಧಿದೇವತೆ ಮೊದಲಾದ ವಿಷಯಗಳಿವೆ. ನಾಲ್ಕನೆಯದರಲ್ಲಿ ರಸ, ಭಾವ. ಅಲಂಕಾರ, ಕಂದ, ಷಟ್ಪದಿಗಳ ಲಕ್ಷಣ ಮುಂತಾದ ಅಂಶಗಳನ್ನು ಹೇಳಿದೆ. ಈತ ತನ್ನ ಗ್ರಂಥವನ್ನು ಕಾವ್ಯವೆಂದೂ ತಾನು ಕವೀಶಂ ಎಂದೂ ಹೇಳಿಕೊಂಡಿದ್ದರೂ ಇದೊಂದು ಲಕ್ಷಣಗ್ರಂಥ ಎಂಬುದು ಕೃತಿಯ ಅಭ್ಯಾಸದಿಂದ ತಿಳಿಯುತ್ತದೆ. (ಪಿ.ವಿ.ಸಿ.)

**ಈಶ್ವರಕೃಷ್ಣ:** ಸುವರ್ಣ ಸಪ್ತತಿ ಅಥವಾ ಸಾಂಖ್ಯಕಾರಿಕಾ ಎಂಬ ಗ್ರಂಥದ ಕರ್ತೃ. ಸು. 4ನೆಯ ಶತಮಾನದಲ್ಲಿ ಇದ್ದನೆಂದು ವಿದ್ವಾಂಸರ ಅಭಿಪ್ರಾಯ. ಇವನ ಜೀವನಕ್ಕೆ ಸಂಬಂಧಪಟ್ಟ ಯಾವ ವಿವರಗಳೂ ದೊರೆಯುವುದಿಲ್ಲ. ಪುರಾತನವೂ ವಿಸ್ತಾರವೂ ಆದ ಸಾಂಖ್ಯದರ್ಶನವನ್ನು 70 ಆರ್ಯಗಳಲ್ಲಿ ಬರೆದನೆಂದು ತಾನೇ ಹೇಳಿಕೊಂಡಿರುವುದರಿಂದ ಸಾಂಖ್ಯಕಾರಿಕೆಯ ಕರ್ತೃ ಈತನೆಂದು ತಿಳಿದುಬರುತ್ತದೆ. ನಿರ್ದಿಷ್ಟ ವಿಚಾರಪೂರ್ಣ ಮತ್ತು ಅಧಿಕಾರಯುತವಾದ ಈತನ ಪುಸ್ತಕ ಈಗಲೂ ಸಾಂಖ್ಯಶಾಸ್ತ್ರದ ಮುಖ್ಯ ಪ್ರಮಾಣಗ್ರಂಥವಾಗಿದೆ. (ಕೆ.ಬಿ.ಆರ್.)

**ಈಶ್ವರಚಂದ್ರ ವಿದ್ಯಾಸಾಗರ:** 1820–91. ಬಂಗಾಲದ ಲೇಖಕ, ಸಮಾಜ ಸುಧಾರಕ. ಮಿಡ್ನಾಪುರ ಜಿಲ್ಲೆಯ ಹಳ್ಳಿಯೊಂದರಲ್ಲಿ ಜನಿಸಿದರು. ಒಂಬತ್ತನೆಯ ವಯಸ್ಸಿನಲ್ಲಿ ಇವರನ್ನು ಕಲ್ಕತ್ತೆಗೆ ಕರೆತಂದು ಅಲ್ಲಿನ ಸಂಸ್ಕೃತ ಮಹಾಪಾಠಶಾಲೆಗೆ ಸೇರಿಸಲಾಯಿತು. ಇವರು ಕಷ್ಟಗಳ ನಡುವೆಯೇ ವ್ಯಾಸಂಗ ಮುಂದುವರಿಸಿದರು. 19ನೆಯ ವಯಸ್ಸಿನಲ್ಲಿ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ವಿದ್ಯಾಸಾಗರರೆಂಬ ಪ್ರಶಸ್ತಿ ಗಳಿಸಿದರು. ಮೂವತ್ತನೆಯ ವಯಸ್ಸಿನಲ್ಲಿ ಫೋರ್ಟ್ ವಿಲಿಯಂ ಕಾಲೇಜಿನ ಮುಖ್ಯ ಪಂಡಿತರಾದರು. ಇವರು ಇಂಗ್ಲೀಷ್ ಭಾಷೆಯನ್ನೂ ಕಲಿತಿದ್ದರು.



ಬೇತಾಳ ಪಂಚವಿಂಶತಿ ಎಂಬ ಇವರ ಬಂಗಾಳಿ ಗದ್ಯಕೃತಿ 1846ರಲ್ಲಿ ಪ್ರಕಟವಾಯಿತು. ಶಾಕುಂತಲ 1855ರಲ್ಲೂ ಸೀತಾಪರಿತ್ಯಾಗ 1862ರಲ್ಲೂ ಬೆಳಕಿಗೆ ಬಂದುವು. ಕೊನೆಯ ಪುಸ್ತಕ ಇವರ ಅತ್ಯುತ್ಕೃಷ್ಟ ಕೃತಿಯೆಂದು ಪರಿಗಣಿತವಾಗಿದೆ.

ಈಶ್ವರಚಂದ್ರರು ಆ ಕಾಲಕ್ಕೆ ಕ್ರಾಂತಿಕಾರಿಯೆನಿಸಿದ್ದ ವಿಚಾರ ತಳೆದಿದ್ದರು. ಇವರು ಫೋರ್ಟ್ ವಿಲಿಯಮ್ ಕಾಲೇಜಿನ ಪ್ರಿನ್ಸಿಪಾಲರಾದಾಗ, ಅಲ್ಲಿ ಬ್ರಾಹ್ಮಣೇತರರಿಗೆ ಸಂಸ್ಕೃತ ವಿದ್ಯಾಭ್ಯಾಸದ ಅವಕಾಶವಿರಲಿಲ್ಲ. ಇಲ್ಲಿ ನೆಲೆಸಿದ್ದ ಕೆಲವು ಐರೋಪ್ಯರಿಗೆ ಸಂಸ್ಕೃತ ಪಂಡಿತರು ಖಾಸಗಿಯಾಗಿ ಸಂಸ್ಕೃತ ಪಾಠ ಹೇಳುವ ಪದ್ಧತಿ ಇತ್ತು; ಮತ್ತು ಬಂಗಾಳದ ವೈದ್ಯ (ವೈಶ್ಯ) ಜಾತಿಯವರಿಗೂ ಸಂಸ್ಕೃತ ಕಲಿಯುವ ಅವಕಾಶವಿತ್ತು. ಸರ್ಕಾರ ಸ್ಥಾಪಿಸಿದ ಈ ಕಾಲೇಜಿನಲ್ಲಿ ಬ್ರಾಹ್ಮಣೇತರರಿಗೆ ಸಂಸ್ಕೃತ ಕಲಿಯಲು ಯಾವ ನಿಷೇಧವೂ ಇರಬಾರದೆಂದು ಈಶ್ವರಚಂದ್ರರು ತೀವ್ರವಾಗಿ ವಾದಿಸಿದರು. ತಮ್ಮ ನಿಲುವನ್ನು ಒಪ್ಪದಿದ್ದರೆ ತಮ್ಮ ಹುದ್ದೆ ಬಿಡುವುದಾಗಿಯೂ ಹೇಳಿದರು. ಹಳೆಯ ಕಾಲದ ಸಂಪ್ರದಾಯ ಶರಣರಿಂದ ಇದಕ್ಕೆ ವಿರೋಧವಿದ್ದರೂ ಈಶ್ವರಚಂದ್ರರ ದಿಟ್ಟ ನಿಲುವಿಗೆ ಜಯ ದೊರಕಿತು. ತಾವು ವ್ಯಾಸಂಗ ಮಾಡುತ್ತಿದ್ದ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣ ಪ್ರಾಧ್ಯಾಪಕರ ಜಾಗ ತೆರವಾದಾಗ ಅದಕ್ಕೆ ಈಶ್ವರಚಂದ್ರರೇ ಅರ್ಹರೆಂದು ಕಾಲೇಜಿನ ವ್ಯವಸ್ಥಾಪಕರು ತೀರ್ಮಾನಿಸಿ ಅವರಿಗೆ ಆಮಂತ್ರಣವನ್ನಿತ್ತರು. ಇದರಿಂದ ಮಾಸಿಕ ವೇತನ ರೂ. 50 ರಿಂದ ರೂ. 90ಕ್ಕೆ ವೃದ್ಧಿಯಾಗುವ ಅವಕಾಶವಿತ್ತು. ಆದರೆ ಈಶ್ವರಚಂದ್ರರು ಈ ಹುದ್ದೆಗೆ ತಮಗಿಂತಲೂ ತಾರಾನಾಥ ತರ್ಕವಾಚಸ್ಪತಿಯವರೇ ಹೆಚ್ಚು ಅರ್ಹರೆಂದು ಬಗೆದರು. ತಮಗೆ ಬಂದ ಆಮಂತ್ರಣವನ್ನು ನಮ್ರತೆಯಿಂದ ನಿರಾಕರಿಸಿದ್ದು ಮಾತ್ರವಲ್ಲ, ತಾರಾನಾಥರು ವಾಸಿಸುತ್ತಿದ್ದ, ನೂರು ಮೈಲಿ ದೂರದಲ್ಲಿದ್ದ ಸ್ಥಳಕ್ಕೆ ತಾವೇ ಕಾಲುನಡಿಗೆಯಿಂದ ಹೋಗಿ ಅವರನ್ನು ಈ ಹುದ್ದೆಗೆ ಒಪ್ಪಿಸಿದರು. ಈಶ್ವರಚಂದ್ರರ ನಿಸ್ಪೃಹತೆಗೂ ದೈಹಿಕ ಶ್ರಮಕ್ಕೆ ಹಿಂಜರಿಯದ ಸ್ವಭಾವಕ್ಕೂ ಇದೊಂದು ಉತ್ತಮ ನಿದರ್ಶನ. ತಾರಾನಾಥರೂ ಅವರ ತಂದೆಯವರೂ ಈಶ್ವರಚಂದ್ರರನ್ನು ಮಾನುಷರೂಪಿ ದೈವವೆಂದು ಹೊಗಳಿದರೆಂದು ಹೇಳಲಾಗಿದೆ. ಭಾರತೀಯ ಮಹಿಳೆಯರ ಉದ್ಧಾರಕ್ಕಾಗಿ ಈಶ್ವರಚಂದ್ರರು ಕೈಗೊಂಡ ಕಾರ್ಯಕ್ರಮಗಳು ಅವರನ್ನು ಚಿರಸ್ಮರಣೀಯರನ್ನಾಗಿ ಮಾಡಿವೆ. ಸ್ತ್ರೀವಿದ್ಯಾಭ್ಯಾಸಕ್ಕಾಗಿ ಚಳವಳಿ ನಡೆಸುತ್ತಿದ್ದ ಡ್ರಿಂಕ್ ವಾಟರ್ ಬೆಥೂನ್ ಎಂಬುವರೊಂದಿಗೆ ವಿದ್ಯಾಸಾಗರರೂ ಸೇರಿದ್ದರು. ಬೆಥೂನರ ಹೆಸರಿನಲ್ಲಿ ನಡೆಯುತ್ತಿದ್ದ ಬಾಲಿಕಾಶಾಲೆಯ ವ್ಯವಸ್ಥೆಯ ಹೊಣೆ 1851ರಲ್ಲಿ ಇವರ ಮೇಲೆ ಬಿತ್ತು. ರೊಸೊಮೊಯ್‌ದತ್ತರು ಕಲ್ಕತ್ತೆಯ ಸಂಸ್ಕೃತ ಮಹಾಪಾಠ

ಶಾಲೆಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆಯಿತ್ತಾಗ ಪ್ರಿನ್ಸಿಪಾಲರ ಹುದ್ದೆಯೊಂದು ನಿರ್ಮಿತವಾಗಿ, ಅದಕ್ಕೆ ವಿದ್ಯಾಸಾಗರರ ನೇಮಕವಾಯಿತು. 1854ರ ಕಾಯಿದೆಯನ್ವಯ ಇವರು ಬಂಗಾಳದಲ್ಲಿ ಖಾಸಗಿ ಶಾಲೆಗಳನ್ನು ಸ್ಥಾಪಿಸಿದರು. 1858ರಲ್ಲಿ ವಿದ್ಯಾಸಾಗರರು ಸರ್ಕಾರದಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಕಲ್ಕತ್ತೆಯ ಖಾಸಗಿ ಕಾಲೇಜೊಂದರ ವ್ಯವಸ್ಥಾಪಕರಾದರು.

ಹೆಣ್ಣುಮಕ್ಕಳ ಮತ್ತೊಂದು ಸಮಸ್ಯೆ ಈಶ್ವರಚಂದ್ರರ ಮನಸ್ಸನ್ನು ಬಲವಾಗಿ ಬಾಧಿಸುತ್ತಿತ್ತು. ಬಾಲ್ಯವಿವಾಹ ಪದ್ಧತಿಯಿರುವ ಹಿಂದೂ ಜಾತಿಗಳಲ್ಲಿ ಅನೇಕರು ಎಳೆ ವಯಸ್ಸಿನಲ್ಲೇ ವಿಧವೆಯಾಗುವ ಸಂಭವವಿತ್ತು. ಬಾಲವಿಧವೆಯ ಬಾಳಿನ ನೋವನ್ನು ಈಶ್ವರಚಂದ್ರರು ಮನಗಂಡರು. ವಿಧವಾ ವಿವಾಹದ ಪರವಾಗಿ ಇವರು ತೀವ್ರವಾಗಿ ಪ್ರಚಾರ ಕೈಗೊಂಡರು. ಹಿಂದೂ ಧರ್ಮಶಾಸ್ತ್ರಗಳಲ್ಲಿ ಅಗಾಧ ಪಾಂಡಿತ್ಯ ಪಡೆದ ಈಶ್ವರಚಂದ್ರರು ಇಂಥ ಪುನರ್ವಿವಾಹಕ್ಕೆ ಧರ್ಮಶಾಸ್ತ್ರಗಳಿಂದ ಯಾವ ಅಡ್ಡಿಯೂ ಇಲ್ಲವೆಂದು ಸಾರಿದರು. ಈ ವಿಚಾರವನ್ನು ಪ್ರಚುರಪಡಿಸಲು ಬಂಗಾಳಿ ಭಾಷೆಯಲ್ಲಿ ಸಣ್ಣ ಪುಸ್ತಕಗಳನ್ನು ಬರೆದರು: ಉಪನ್ಯಾಸಗಳನ್ನು ಕೊಟ್ಟರು; ಒಂದು ಆಂದೋಲನವನ್ನೇ ಪ್ರಾರಂಭಿಸಿದರು. ಪ್ರಾಯಶಃ ಈ ಸುಧಾರಣೆಯೇ ಈಶ್ವರಚಂದ್ರರಿಗೆ ಅಖಿಲ ಭಾರತ ಕೀರ್ತಿಯನ್ನು ಸಂಪಾದಿಸಿಕೊಟ್ಟಿತು.

ಮಹರ್ಷಿ ದೇವೇಂದ್ರನಾಥ ಠಾಕೂರರು ಸ್ಥಾಪಿಸಿದ ತತ್ತ್ವಬೋಧಿನಿಪತ್ರಿಕೆಯಲ್ಲಿ ಈಶ್ವರಚಂದ್ರರು 1854ರಲ್ಲಿ ಈ ಸುಧಾರಣೆಯನ್ನು ಸಮರ್ಥಿಸಿ ಒಂದು ಲೇಖನ ಬರೆದರು. 1855 ಜನವರಿಯಲ್ಲಿ ಈ ವಿಷಯವಾಗಿ ಒಂದು ಸಣ್ಣ ಪುಸ್ತಕವನ್ನೇ ಪ್ರಕಟಿಸಿದರು. ಇದೊಂದು ವಾದಗ್ರಸ್ತ ವಿಷಯವೇ ಆಯಿತು. ಅನೇಕ ಪಂಡಿತರು ಇದನ್ನು ವಿರೋಧಿಸಿ ಲೇಖನ ಬರೆದರು. 1855 ಅಕ್ಟೋಬರ್ ತಿಂಗಳಲ್ಲಿ ಈಶ್ವರಚಂದ್ರರು ಈ ಆಕ್ಷೇಪಣೆಗಳಿಗೆಲ್ಲ ಉತ್ತರ ಕೊಟ್ಟು ವಿದ್ವತ್ಪೂರ್ಣವೂ ಗಂಭೀರವೂ ಆದ ಮತ್ತೊಂದು ಸಣ್ಣ ಪುಸ್ತಕವನ್ನು ಪ್ರಕಟಪಡಿಸಿದರು. ಆ ತಿಂಗಳ 4ನೆಯ ದಿನಾಂಕದಂದು ಸುಮಾರು 1,000 ಜನರ ಸಹಿಯಿದ್ದ ಮನವಿಯೊಂದನ್ನು ಸರ್ಕಾರದ ಶಾಸನಸಭೆಯ ಕಾರ್ಯದರ್ಶಿಗಳಿಗೆ ಕಳುಹಿಸಿದರು. ಹಿಂದೂ ವಿಧವೆಯ ವಿವಾಹಕ್ಕೆ ಯಾವ ಅಡಚಣೆಯೂ ಇಲ್ಲದಂತೆ ಹಾಗೂ ವಿವಾಹಿತರ ಸಂತಾನದ ಹಕ್ಕುಬಾಧ್ಯತೆಗೆ ಧಕ್ಕೆ ಒದಗದಂತೆ ಸೂಕ್ತ ಕಾಯಿದೆ ರಚಿಸಬೇಕೆಂದು ಮನವಿಯಲ್ಲಿ ಪ್ರಾರ್ಥಿಸಲಾಗಿತ್ತು. 1855 ನವೆಂಬರ್ 17ರಂದು ಕಲ್ಕತ್ತೆಯ ಶಾಸನಸಭೆಯಲ್ಲಿ ಈ ವಿಷಯವಾಗಿ ಜೆ.ಪಿ.ಗ್ರ್ಯಾಂಟ್ ಒಂದು ವಿಧೇಯಕ ಮಂಡಿಸಿದರು. ಇದು ಇತರ ಪ್ರಾಂತ್ಯಗಳ ಮುಖಂಡರ ಗಮನ ಸೆಳೆಯಿತು. ಪುಣೆ, ಸಿಕಂದರಾಬಾದ್, ಸತಾರಾ, ಧಾರವಾಡ, ಮುಂಬಯಿ, ಅಹಮದಾಬಾದ್, ಸೂರತ್ ಮತ್ತು ಬಂಗಾಲದ ಅನೇಕ ನಗರಗಳಿಂದ ಈ ಮಸೂದೆಯ ಪರವಾಗಿಯೂ ವಿರುದ್ಧವಾಗಿಯೂ ಸರ್ಕಾರಕ್ಕೆ ಪತ್ರಗಳು ಬಂದುವು. ವಿರುದ್ಧವಾದುವೇ ಹೆಚ್ಚು ಸಂಖ್ಯೆಯಲ್ಲಿದ್ದವೆನ್ನಬಹುದು. 1856 ಜುಲೈ 26ರಂದು ಗೌರ್ನರ್ ಜನರಲನ ಅನುಮತಿ ಪಡೆದು ಇದು ಅಧಿನಿಯಮವಾಯಿತು. ಇದಕ್ಕನುಸಾರವಾಗಿ ಮೊದಲನೆಯ ಪುನರ್ವಿವಾಹ ಕಲ್ಕತ್ತೆಯಲ್ಲಿ ಅದೇ ಡಿಸೆಂಬರ್ 7ರಂದು ನೆರವೇರಿತು. ವಿದ್ಯಾಸಾಗರರೂ ಇತರ ಸುಧಾರಕರೂ ಈ ವಿವಾಹದಲ್ಲಿ ಬಹಳ ಆಸಕ್ತಿ ವಹಿಸಿದರು. ಅನಂತರವೂ ಒಂದೆರಡು ವಿವಾಹಗಳು ಜರುಗಿದುವು. ಈ ಸುಧಾರಣೆಯಲ್ಲಿ ನಿರ್ಭೀತರಾಗಿ ಮುಂದುವರಿದವರೆಂದರೆ ಬ್ರಹ್ಮ ಸಮಾಜದವರು. ಹಿಂದೂ ಸಮಾಜದಲ್ಲಿ ಈ ವಿವಾಹಗಳು ಕೋಲಾಹಲವನ್ನೇ ಎಬ್ಬಿಸಿದುವು. ಸುಧಾರಣಾವಾದಿಗಳೂ ವಿರೋಧಿಗಳೂ ಲೇಖನ ಬರೆದು ತೀವ್ರವಾದ ವಾದವಿವಾದಗಳಲ್ಲಿ ತೊಡಗಿದರು. ವಿರೋಧಿಗಳು ಸುಧಾರಕರನ್ನು ಹೆದರಿಸಿ, ಅವರ ಮೇಲೆ ಹಿಂಸಾಕೃತ್ಯ ನಡೆಸುವುದಕ್ಕೂ ಹಿಂಜರಿಯಲಿಲ್ಲ, ಈಶ್ವರಚಂದ್ರರು ಕಲ್ಕತ್ತೆಯಲ್ಲಿ ಸುರಕ್ಷಿತವಾಗಿ ಓಡಾಡುವುದೂ ಕಷ್ಟವಾಗಿತ್ತು. ಆದರೆ ಇದರಿಂದ ಅವರು ಭೀತರಾಗಲಿಲ್ಲ. ಸ್ಥೈರ್ಯದಿಂದ ಈ ಸುಧಾರಣಾ ಕಾರ್ಯವನ್ನು ಮುಂದುವರಿಸಿದರು. ತಮ್ಮ ಆಯುಷ್ಯದಲ್ಲಿ ತಾವು ನಡೆಸಿದ ಕಾರ್ಯಗಳಲ್ಲಿ ಇದೇ ಮಹತ್ತರವಾದದ್ದೆಂದು ಅವರ ಅಭಿಪ್ರಾಯವಾಗಿತ್ತು. ಈ ಸುಧಾರಣೆಯ ಪ್ರಭಾವ ಬಂಗಾಳದಾಚೆಗೂ ಹಬ್ಬಿತು. ಮಹಾರಾಷ್ಟ್ರದಲ್ಲಿ ರಾನಡೆ, ಮಲಬಾರಿ, ವಿಷ್ಣುಶಾಸ್ತ್ರಿ, ಕರ್ವೆ ಮುಂತಾದವರು ಇದಕ್ಕೆ ಬೆಂಬಲ ಕೊಟ್ಟರು. ವಿಧವಾ ವಿವಾಹದ ಪ್ರಚಾರಕ್ಕಾಗಿಯೇ 1861ರಲ್ಲಿ ಒಂದು ಸಂಸ್ಥೆ ಸ್ಥಾಪಿತವಾಯಿತು. 1899ರಲ್ಲಿ ಕರ್ವೆಯವರು ಹಿಂದೂ ವಿಧವೆಯರ ವಸತಿ ಗೃಹವೊಂದನ್ನು ಸ್ಥಾಪಿಸಿದರು. ಆಂಧ್ರದಲ್ಲಿ ಈ ಸುಧಾರಣೆಗಾಗಿ ಬಹಳ ಶ್ರಮಿಸಿದವರೆಂದರೆ ವೀರೇಶಲಿಂಗಂ ಪಂತುಲು. ಇವರೆಲ್ಲರಿಗೂ ಈಶ್ವರಚಂದ್ರರೇ ಸ್ಫೂರ್ತಿ ಕೇಂದ್ರ. ಇಂಥ ವಿವಾಹ ಏರ್ಪಡಿಸುವ ಸಲುವಾಗಿ ಈಶ್ವರಚಂದ್ರರು ಬಹಳ ಕಷ್ಟನಷ್ಟ ಅನುಭವಿಸಿದರು. ತಮ್ಮ ಸ್ವಂತ ಹಣವನ್ನು ಇವುಗಳಿಗಾಗಿ ಒದಗಿಸುತ್ತಿದ್ದು ಕೊನೆಗೆ ಸಾಲದ ಭಾರವನ್ನೂ ಹೊತ್ತರು.

ಬಂಗಾಳದ ಕುಲೀನರೆನ್ನಿಸಿಕೊಂಡವರಲ್ಲಿದ್ದ ಬಹುಪತ್ನೀತ್ವವನ್ನು ತೊಡೆದುಹಾಕುವುದಕ್ಕೂ ಈಶ್ವರಚಂದ್ರರು ಶ್ರಮಿಸಿದರು. ಸಾಮಾನ್ಯ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರು ತಮ್ಮ ಹೆಣ್ಣುಮಕ್ಕಳನ್ನು ಶ್ರೇಷ್ಠ ಕುಲದವರಿಗೆ ಕೊಡಬೇಕೆಂಬ ಹಂಬಲವೂ ಕನ್ಯಾವಿವಾಹ ನಿರ್ಬಂಧವೂ ಇದಕ್ಕೆ ಕಾರಣ. ಕುಲೀನರೆನಿಸಿಕೊಂಡ ಗಂಡಸರು ಎಷ್ಟು ಮದುವೆ ಮಾಡಿಕೊಳ್ಳುವುದಕ್ಕೂ ನಿರ್ಬಂಧವಿರಲಿಲ್ಲವಷ್ಟೇ ಅಲ್ಲ, ಅದೊಂದು ಲಾಭದಾಯಕ ವ್ಯಾಪಾರವೂ ಆಗಿತ್ತು. ಈ ವ್ಯಾಪಾರದಲ್ಲಿ ನಿರತರಾಗಿದ್ದ ದಳ್ಳಾಳಿಗಳಿಗೂ ಹೇರಳ ಲಾಭ ಸಿಗುತ್ತಿತ್ತು. ಈ ಕುಲೀನ ಗಂಡಸರು ಸತ್ತರೆ ಏಕಕಾಲಕ್ಕೆ ಅನೇಕರು ವಿಧವೆಯರಾಗುತ್ತಿದ್ದರು. ಇಂಥವರಲ್ಲಿ ಬಾಲವಿಧವೆಯರೂ ಅನೇಕ. ಆದ್ದರಿಂದ ವಿಧವಾವಿವಾಹದ ಸುಧಾರಣೆಗೂ ಈ ಬಹುಪತ್ನೀತ್ವ ವಿರೋಧಕ್ಕೂ ನಿಕಟ ಸಂಬಂಧವಿತ್ತು.

ಈಶ್ವರಚಂದ್ರರು 25,000 ಜನರ ಸಹಿಯಿದ್ದ ಮನವಿಯೊಂದನ್ನು 1855 ಡಿಸೆಂಬರ್ 27ರಂದು ಸರ್ಕಾರಕ್ಕೆ ಸಲ್ಲಿಸಿದರು. ಇದರ ಬಗೆಗೆ ಸರ್ಕಾರದವರು ಸಹಾನುಭೂತಿಯುಳ್ಳವರಾಗಿದ್ದರು. ಆದರೆ 1857ರಲ್ಲಿ ದೇಶದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಸಂಭವಿಸಿದ್ದರಿಂದ ಸರ್ಕಾರ ಈ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಲಿಲ್ಲ. 21,000 ಜನರ ಸಹಿಯಿದ್ದ ಇನ್ನೊಂದು ಮನವಿಯನ್ನು 1863ರಲ್ಲಿ ಸರ್ಕಾರಕ್ಕೆ ಒಪ್ಪಿಸಲಾಯಿತು. 1866ರಲ್ಲಿ ವಿದ್ಯಾಸಾಗರರು ಮತ್ತೊಂದು ಮನವಿಯನ್ನು ಸಿದ್ಧಗೊಳಿಸಿ, ಅದಕ್ಕೆ 21,000 ಜನರ ಸಹಿ ಸಂಗ್ರಹಿಸಿ 1863ರಲ್ಲಿ ಸರ್ಕಾರಕ್ಕೆ ಕೊಟ್ಟರು. ಆ ವರ್ಷದ ಮಾರ್ಚ್ 19ರಂದು ಈಶ್ವರಚಂದ್ರರು ಇನ್ನು ಕೆಲವು ಪ್ರಮುಖರೊಂದಿಗೆ ಸರ್ಕಾರಕ್ಕೆ ನಿಯೋಗ ಹೋದರು. ಆಗ ಸರ್ಕಾರ ಈ ಬಗ್ಗೆ ಅಭಿಪ್ರಾಯ ಸಂಗ್ರಹಣೆಗಾಗಿ ಒಂದು ಸಮಿತಿ ನೇಮಿಸಿತು. ಬಹುಪತ್ನೀ ವಿವಾಹವನ್ನು ಕಾಯಿದೆಯ ಮೂಲಕ ನಿಷೇಧಿಸುವ ಬಗ್ಗೆ ಭಿನ್ನಾಭಿಪ್ರಾಯವಿತ್ತು. ಈ ವಿಚಾರವಾಗಿ ಕಾಯಿದೆ ಮಾಡುವುದು ಉಚಿತವಲ್ಲವೆಂದು ಇಂಗ್ಲೆಂಡ್ ಸರ್ಕಾರದ ಇಂಡಿಯಾ ಕಾರ್ಯದರ್ಶಿಯ ಅಭಿಪ್ರಾಯವಾಗಿತ್ತು. ಜನರಲ್ಲಿ ವಿದ್ಯಾಪ್ರಸಾರವಾದಂತೆಲ್ಲ ಈ ದುಷ್ಟಪದ್ಧತಿ ತಾನಾಗಿಯೇ ಮಾಯವಾಗುವುದೆಂಬ ವಿಶ್ವಾಸ ಅನೇಕರಲ್ಲಿತ್ತು. ಅಂತೂ ಈ ವಿಷಯದಲ್ಲಿ ಯಾವ ಕಾಯಿದೆ ರಚಿಸಲೂ ಕಾಲ ಒದಗಿಬರಲಿಲ್ಲ. ಈಶ್ವರಚಂದ್ರರು ಮಾತ್ರ ಸುಮ್ಮನಿರಲಿಲ್ಲ. ಮುಂದೆಯೂ ಈ ಬಗ್ಗೆ ಪ್ರಚಾರ ಮಾಡುತ್ತಲೇ ಇದ್ದರು. ಇವರು 1891 ಜುಲೈ 29ರಂದು ನಿಧನರಾದರು.

(ಕೆ.ಎಸ್.ಜಿ.ಆರ್.)

**ಈಶ್ವರವಾದ:** ಈಶ್ವರನ ಅಸ್ತಿತ್ವವನ್ನು ಒಪ್ಪಿದ ಮತಧರ್ಮಗಳು ಈಶ್ವರನಿಗೂ ವಿಶ್ವಕ್ಕೂ ಇರುವ ಸಂಬಂಧ. ಪಾಪಪುಣ್ಯ ಮುಂತಾದ ಪ್ರಶ್ನೆಗಳನ್ನು ಭಿನ್ನ ಭಿನ್ನ ರೀತಿಯಲ್ಲಿ ವಿವರಿಸಿವೆ. ಈಶ್ವರವಾದಿಗಳ ಆ ಎಲ್ಲ ವಿವರಗಳನ್ನಿಲ್ಲಿ ಸಂಗ್ರಹವಾಗಿ ಹೇಳಿದೆ.

ಅವೈದಿಕದ್ವೈವವಾದ (ನೋಡಿ) ಈಶ್ವರನನ್ನು ಒಪ್ಪಿಕೊಂಡರೂ ವಿಶ್ವಕ್ಕೂ ಈಶ್ವರನಿಗೂ ಯಾವ ರೀತಿಯ ಸಂಬಂಧವಿದೆಯೆಂಬುದನ್ನು ಸ್ಪಷ್ಟವಾಗಿ ಹೇಳುವುದಿಲ್ಲ. ಅಲ್ಲದೆ ಈ ವಾದದ ಪ್ರಕಾರ ವಿಶ್ವಕ್ಕೆ ಅತಿದೂರನಾಗಿದ್ದು ಅದರ ವಿಷಯದಲ್ಲಿ ಅತ್ಯಂತ ಉದಾಸೀನನೂ ನಿರಾಸಕ್ತನೂ ಆಗಿರಬಹುದು. ವಿಶ್ವದ ಪಾಲನೆಯ ಹೊಣೆಗಾರಿಕೆ ಅವನ ಮೇಲಿಲ್ಲ. ವಿಶ್ವೈಕ್ಯವಾದ ಈಶ್ವರನನ್ನು ವಿಶ್ವೈಕ್ಯನೆಂದು ಹೇಳುವುದೇ ಹೊರತು ಮಾನವ ಈಶ್ವರನನ್ನು ಕಾಣುವ ಬಗೆಯನ್ನಾಗಲೀ ಆರಾಧಿಸುವ ರೀತಿಯನ್ನಾಗಲೀ ಸ್ಪಷ್ಟಪಡಿಸುವುದಿಲ್ಲ. ಸರ್ವವೂ ಅವನೇ, ಒಳ್ಳೆಯದು ಕೆಟ್ಟದ್ದು ಎಲ್ಲವೂ ಅವನೇ ಎಂದು ಹೇಳಿ ನಿಲ್ಲಿಸುತ್ತದೆ. ಈ ವಾದಗಳೆರಡೂ ಈಶ್ವರನ ಕಲ್ಯಾಣಗುಣಗಳ ಮಾತನ್ನೇ ಎತ್ತುವುದಿಲ್ಲ. ಮೂರನೆಯದಾಗಿ ಮಾನವನ ಅಂತರಂಗಸಮ್ಮತವಾದ ಈಶ್ವರವಾದ ತಲೆಯೆತ್ತಿತ್ತು. ಮಾನವನ ಜೀವನದ ಅರ್ಥವೇನು ? ಅವನ ಅಂತಿಮ ಧ್ಯೇಯವೇನು ? ಅವನ ಉದ್ದೇಶವೇನು ? ಎಂಬ ಪ್ರಶ್ನೆಗಳನ್ನೂ ಅವನಿಗೂ ಈಶ್ವರನಿಗೂ, ವಿಶ್ವಕ್ಕೂ ಈಶ್ವರನಿಗೂ ಇರುವ ಸಂಬಂಧವನ್ನೂ ಈಶ್ವರವಾದ ಪರಿಶೀಲಿಸುತ್ತದೆ. ಇದರಲ್ಲಿ ಮತ ಧರ್ಮದ ಕಲ್ಪನೆ ಬರುತ್ತದೆ. ಮಾನವನ ಎಲ್ಲ ಧಾರ್ಮಿಕ ನಂಬಿಕೆಗಳಿಗೂ ನೈತಿಕ ಜೀವನಕ್ಕೂ ಅಧ್ಯಾತ್ಮವಿಕಾಸಕ್ಕೂ ಈಶ್ವರವಾದ ಪೋಷಕವೂ ದ್ಯೋತಕವೂ ಆಗಿದೆ. ಮಾನವನ ಬಾಳಿಗೆ ಒಂದು ಬೆಲೆಯನ್ನು ಕಟ್ಟಿ ಅವನ ಆತ್ಮೋದ್ಧಾರಕ್ಕೆ ಮಾರ್ಗದೀಪಿಗೆಯಂತಿದೆ.

ಅವೈದಿಕದ್ವೈವವಾದದ ವಿಶ್ವಾತೀತನಾದ ಈಶ್ವರನನ್ನೂ ವಿಶ್ವೈಕ್ಯವಾದದ ವಿಶ್ವೈಕ್ಯನಾದ ಈಶ್ವರನನ್ನೂ ಈಶ್ವರವಾದ ಒಟ್ಟಿಗೆ ಅಂಗೀಕರಿಸುತ್ತದೆ. ವಿಶ್ವಾತೀತನೆಂದರೆ ವಿಶ್ವಕ್ಕೆ ಅಧೀನನಾಗದವ, ಅದನ್ನು ತನ್ನ ಅಧೀನದಲ್ಲಿಟ್ಟುಕೊಂಡು ಪಾಲಿಸುವವ, ಅದರ ಅಳಿವು ಉಳಿವುಗಳಲ್ಲಿ ಪಾತ್ರವಹಿಸುವವ. ವಿಶ್ವೈಕ್ಯನೆಂದರೆ ವಿಶ್ವದಿಂದ ದೂರನಲ್ಲ. ಅದರ ನಿರ್ವಹಣೆ ಅವನಿಗೆ ಸೇರಿದೆ; ಆದರೆ ಆತ ವಿಶ್ವಕ್ಕೆ ನಿಯಮಿತನಾಗಿಲ್ಲ. ಮಾನವನ ಅಂತರಂಗದಲ್ಲಿ ನೆಲಸಿದ್ದರೂ ಅವನ ಕರ್ಮಗಳಿಂದ ಅಸ್ತನಾಗದೆ ಇರುವ ಅಸಂಗಿ, ನಿರ್ವಿಕಾರಿ. ಸರ್ವವ್ಯಾಪಕನಾಗಿದ್ದರೂ ಸರ್ವ ಸ್ವತಂತ್ರ. ಮಾನವನೊಂದಿಗೆ ಧಾರ್ಮಿಕ ಸಂಬಂಧವನ್ನು ಅವನ ಮೇಲ್ಮೆಗಾಗಿಯೇ ಇಟ್ಟುಕೊಂಡವ, ತನ್ನ ಲಾಭಕ್ಕಲ್ಲ. ವಿಶ್ವದ ದೋಷಗಳಲ್ಲಿ ಐಕ್ಯನಲ್ಲ.

ತತ್ತ್ವಜ್ಞರು ಈಶ್ವರನ ಅಸ್ತಿತ್ವವನ್ನು ಪ್ರಮಾಣಪೂರ್ವಕವಾಗಿ ಸಿದ್ಧಾಂತ ಮಾಡಲು ಪ್ರಯತ್ನಿಸಿದ್ದಾರೆ. ಮೊದಲನೆಯದಾಗಿ ವಿಶ್ವದ ಮೂಲವನ್ನು ಕುರಿತು ಪ್ರಶ್ನೆಮಾಡಿ ಈಶ್ವರನೇ ಸೃಷ್ಟಿಕರ್ತನೆಂದು ವಾದಿಸುತ್ತಾರೆ. ಸರ್ವೇಶ್ವರನ ಇಚ್ಛೆಯಿಂದಲೇ ಸಕಲ ಚರಾಚರಜಗತ್ತು (ಅನಂತಕೋಟಿ ಬ್ರಹ್ಮಾಂಡಗಳೂ) ಸೃಷ್ಟಿಸಲ್ಪಟ್ಟಿತು. ಇತರ ಸಾಧನ ಸಾಮಗ್ರಿಗಳೇನೂ ಈಶ್ವರನಿಗೆ ಬೇಕಾಗಿಲ್ಲ. ಅವನೇ ಸೃಷ್ಟಿಸ್ಥಿತಿ ಲಯಗಳಿಗೆ ಉಪಾದಾನ ಮತ್ತು ನಿಮಿತ್ತ ಕಾರಣನೆಂದು ಈಶ್ವರವಾದಿಗಳು ಹೇಳುತ್ತಾರೆ. ಇನ್ನಾವ ರೀತಿಯಿಂದಲೂ ವೈಜ್ಞಾನಿಕ ದೃಷ್ಟಿಯಿಂದಲೂ ಸೃಷ್ಟಿಯನ್ನು ವಿವರಿಸಲು ಸಾಧ್ಯವಿಲ್ಲವಾದ್ದರಿಂದ ಈಶ್ವರನ ಅಸ್ತಿತ್ವವನ್ನು ಒಪ್ಪಿಕೊಳ್ಳಲೇಬೇಕೆಂದು ಇವರ ವಾದ.

# ಈಶ್ವರವಾದ

ಈಶ್ವರನಿರದಿದ್ದರೆ ಈಶ್ವರನ ಕಲ್ಪನೆಯೇ ಬರುತ್ತಿರಲಿಲ್ಲವೆಂಬುದು ಒಂದು ಸಿದ್ಧಾಂತ. ಮಾನವನ ಮನಸ್ಸೇ ಈಶ್ವರನನ್ನು ಸೃಷ್ಟಿಸಲಾರದು. ಅವನಿದ್ದರೆ ಮಾತ್ರ ಮನಸ್ಸಿಗೆ ಗೋಚರನಾಗುತ್ತಾನೆ. ಈ ಸಿದ್ಧಾಂತವನ್ನು ಮೊಟ್ಟಮೊದಲು ಪಾಶ್ಚಾತ್ಯದೇಶದಲ್ಲಿ ಪ್ರಚುರಪಡಿಸಿದವ ಸೇಂಟ್ ಆನ್ಸೆಲ್ಮ್ (1033–1109). ಇವನ ಅನಂತರ 17–18ನೆಯ ಶತಮಾನಗಳಲ್ಲಿ ಡೇಕಾರ್ಟ್, ಲೈಬ್ನಿಟ್ಸ್, ಸ್ಪಿನೋಜ಼ ಎಂಬ ದಾರ್ಶನಿಕರು ಇದನ್ನು ಹೆಚ್ಚು ಪ್ರಚಾರಕ್ಕೆ ತಂದರು. ಸರ್ವತಂತ್ರ ಸ್ವತಂತ್ರನಾದ, ಸ್ವಪರಿಪೂರ್ಣವಾದ, ಸತ್ಯ ಒಂದಿರಲೇಬೇಕೆಂಬ ಭಾವನೆ ಅಲ್ಪನೂ ಅನಿತ್ಯನೂ ಆದ ಮಾನವನಿಗೆ ಬರಬೇಕಾದರೆ ಅಂಥ ಸತ್ಯ ಒಂದು ಇರಲೇಬೇಕೆಂದು ಡೇಕಾರ್ಟ್ ವಾದಿಸಿದ. ಅದನ್ನೇ ಈಶ್ವರ ಎನ್ನಬಹುದು.

ಪ್ಲೇಟೊ ಮತ್ತು ಅರಿಸ್ಟಾಟಲ್ ಎಂಬ ಗ್ರೀಸಿನ ದಾರ್ಶನಿಕರು ಜಗತ್ತು ಯಾವ ಆಧಾರದ ಮೇಲೆ ನಿಂತಿದೆ, ನಡೆಯುತ್ತಿದೆ ಎಂಬ ಪ್ರಶ್ನೆಯನ್ನು ಹಾಕಿ ಅದಕ್ಕೆ ಕಾರಣವನ್ನು ಜಗತ್ತಿನಲ್ಲಿರುವ ಯಾವ ಅಂಶವೂ ಸ್ಪಷ್ಟಪಡಿಸದಿರುವುದರಿಂದ ಎಲ್ಲವೂ ನಶ್ವರವೂ ಬದಲಾವಣೆಯಾಗುತ್ತಿರುವುದೂ ಆಗಿರುವುದರಿಂದ ಇದನ್ನು ಮೀರಿರುವ, ಇದರಿಂದ ಬೇರೆಯಾಗಿರುವ ಅನಂತವಾಗಿರುವ ಒಂದು ಶಕ್ತಿ ಅದಕ್ಕೆ ಕಾರಣವಾಗಿರಬೇಕು ; ಅದೇ ಈಶ್ವರ, ಎಂದು ತರ್ಕಿಸಿದರು. ಈ ವಾದವನ್ನು ಅಕ್ವಿನಸ್ (ನೋಡಿ– ಅಕ್ವಿನಸ್,–ಸೇಂಟ್–ಥಾಮಸ್) ಎಂಬ ತತ್ತ್ವಜ್ಞಾನಿ ಹೆಚ್ಚು ವಿಸ್ತಾರವಾಗಿ ಪ್ರಚಾರಮಾಡಿದ. ಈಶ್ವರನೇ ಆದಿಕಾರಣ ಎಂಬ ಭಾವನೆ ಈ ಸಿದ್ಧಾಂತದಲ್ಲಿ ಮುಖ್ಯವಾದುದು. 20ನೆಯ ಶತಮಾನದಲ್ಲಿ ವೈಟ್‌ಹೆಡ್ ಇದನ್ನು ಅನುಮೋದಿಸಿದ್ದಾನೆ. ನ್ಯಾಯ ವೈಶೇಷಿಕ ಯೋಗದರ್ಶನಗಳು ಈ ಸಿದ್ಧಾಂತವನ್ನೇ ಈಶ್ವರನ ಅಸ್ತಿತ್ವವನ್ನು ಸಾಧಿಸುವಾಗ ಪ್ರಚುರಪಡಿಸಿವೆ.

ಸೃಷ್ಟಿಯಲ್ಲಿ ಒಂದು ಕ್ರಮ ಮತ್ತು ಮಾನವನಿಂದ ನಿರ್ಮಿತವಾಗದ ಸುವ್ಯವಸ್ಥಿತ ರಚನೆ ಇರುವುದರಿಂದ ಇದನ್ನು ನಿರ್ಮಿಸಿದ ಶಿಲ್ಪಿಯೇ ಈಶ್ವರ ಎಂಬುದು ಮತ್ತೊಂದು ಸಿದ್ಧಾಂತ. ಬುದ್ಧಿಶಕ್ತಿ ಇಲ್ಲದೆ ಯಾವುದನ್ನೂ ರಚಿಸಲು ಸಾಧ್ಯವಿಲ್ಲ. ಸೃಷ್ಟಿಯಂಥ ಅದ್ಭುತ ರಚನೆಯನ್ನು ಮಾಡಿರುವ ಬುದ್ಧಿಶಕ್ತಿಯೇ ಈಶ್ವರ. ಸೃಷ್ಟಿಯ ವ್ಯಾಪಾರದಲ್ಲಿ ಉದ್ದೇಶವೂ ಕಂಡುಬರುತ್ತದೆ. ಈ ಉದ್ದೇಶ ಮಾನವನದಲ್ಲ. ಭಗವಂತನೆಂಬುವುದು–ಎಂದು ಈಶ್ವರವಾದಿಗಳು ಹೇಳುತ್ತಾರೆ. ಉಪನಿಷತ್ತುಗಳೂ ಪಾಶ್ಚಾತ್ಯದರ್ಶನಗಳೂ ಈ ಸಿದ್ಧಾಂತವನ್ನು ಇತರ ಸಿದ್ಧಾಂತಗಳಿಗಿಂತ ಹೆಚ್ಚು ಅರ್ಥಪೂರ್ಣವೂ ಆಗಿದೆ ಸಮಂಜಸವೂ ಆಗಿದೆ ಎಂದು ಒಪ್ಪಿಕೊಳ್ಳುತ್ತವೆ.

ಮೇಲಿನ ಯಾವ ಸಿದ್ಧಾಂತದಲ್ಲೂ ಭಗವಂತನಿಗೂ ಮಾನವನಿಗೂ ಇರುವ ನಿಕಟ ಸಂಬಂಧ ವಿಶದವಾಗಿಲ್ಲ. ಈಶ್ವರನ ಆರಾಧನೆಯ ಆವಶ್ಯಕತೆಯನ್ನಾಗಲೀ ಅದರಿಂದ ಆಗುವ ಆತ್ಮವಿಕಾಸ, ಅಧ್ಯಾತ್ಮತೃಪ್ತಿ ಅಥವಾ ಮುಕ್ತಿಗಳನ್ನಾಗಲಿ ಹೇಳಿಲ್ಲ, ಅದಲ್ಲದೆ ಭಗವತ್ಪ್ರೇಮವನ್ನು ಅನುಭವ ಮಾಡದೆ ಇರುವ ನಾಸ್ತಿಕರಿಗೆ ಈಶ್ವರನ ಅಸ್ತಿತ್ವವನ್ನು ಒಪ್ಪಿಕೊಳ್ಳುವುದಕ್ಕೆ ಇದಾವುದೂ ಸಹಾಯಕವಾಗಿರದೆ ಆಸ್ತಿಕರ ನಂಬಿಕೆಯನ್ನು ಸ್ಥಿರಪಡಿಸುವ ಸಾಧನ ಮಾತ್ರ ಆಗಿವೆ.

ಮತಧರ್ಮದ ಇತಿಹಾಸವನ್ನು ಗಮನಿಸಿದರೆ ಮಾನವ ಕಾಲಕಾಲಕ್ಕೂ ಈಶ್ವರನ ಆರಾಧನೆಗೂ ಅವನ ವಿಶ್ವಾಸವನ್ನು ಗಳಿಸುವುದಕ್ಕೂ ಹಾತೊರೆಯುವ ಸ್ವಭಾವವುಳ್ಳವನೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇದು ಸ್ವಯಂಪ್ರೇರಿತವಾದ ಆಕಾಂಕ್ಷೆ. ಈಶ್ವರನೆಂಬುವನಿಲ್ಲದಿದ್ದರೆ ಅವನಿಗೆ ತನ್ನ ದುಃಖಕರವಾದ ನಿಸ್ಸಹಾಯಕತೆಯ ಮತ್ತು ಅದನ್ನು ಈಶ್ವರನಿಂದಲೇ ಪರಿಹರಿಸಿಕೊಳ್ಳುವ ಕಾತರತೆಯ ಅನುಭವಗಳು ಹೇಗೆ ಉಂಟಾಗುತ್ತವೆ? ಅವನು ಸ್ವಪರಿಪೂರ್ಣನಾಗದೆ ಇರುವುದಕ್ಕೆ ಕಾರಣವೇನು? ಅವನ ಸಾಧನೆಗೆ ಬೆಲೆಯೇನು? ಮತಧರ್ಮದಲ್ಲಿ ಏನೂ ತಿರುಳಿಲ್ಲವೆ?–ಎಂಬ ಪ್ರಶ್ನೆಗಳು ವಿಚಾರಪರರನ್ನು ಪದೇಪದೇ ಕಾಡಿಸುತ್ತವೆ. ಅಧ್ಯಾತ್ಮ ಮಾರ್ಗದಲ್ಲಿ ಇದುವರೆಗೂ ಸಾಧಿಸಿರುವುದೆಲ್ಲವೂ ವ್ಯರ್ಥ ಅಥವಾ ಎಲ್ಲವೂ ಭ್ರಾಂತಿ ಎಂದು ಹೇಳುವುದು ಸಮ್ಮತವಲ್ಲ. ಮಾನವನ ನಂಬಿಕೆ ಎಷ್ಟು ದೃಢವಾಗಿದೆ ಎಂದೂ ಅದನ್ನು ಹೇಗಾದರೂ ಸಮರ್ಥಿಸಿಕೊಳ್ಳಬೇಕು ಎಂದೂ ದಾರ್ಶನಿಕರು ಈ ಸಿದ್ಧಾಂತಗಳನ್ನು ಮುಂದೆ ಇಟ್ಟಿರುವುದನ್ನು ಪರಿಶೀಲಿಸಿದರೆ ಈಶ್ವರನ ಅಸ್ತಿತ್ವದ ಪ್ರಶ್ನೆಯನ್ನು ಅಥವಾ ಈಶ್ವರವಾದವನ್ನು ತಳ್ಳಿಹಾಕಲು ಸುಲಭವಲ್ಲ, ಖಂಡಿಸುವುದೂ ನ್ಯಾಯವಲ್ಲ ಎಂದು ಒಪ್ಪಬೇಕಾಗುತ್ತದೆ.

ನೈತಿಕ ಜೀವನಕ್ಕೆ ಬೆಲೆ ಬಂದಿರುವುದು ಈಶ್ವರವಾದದಿಂದ. ನಾಸ್ತಿಕರೂ ನೀತಿವಂತರಾಗಿರಬಹುದು. ಅದು ಬಹು ವಿರಳ ಮತ್ತು ಅವರು ವಿಭೂತಿಪುರುಷರಂತೆ ಮಾನವಕೋಟಿಗೆ ಗಣ್ಯರಾಗಿಲ್ಲ. ಬುದ್ಧ ಈಶ್ವರವಾದಿಯಲ್ಲದಿದ್ದರೂ ನೈತಿಕ ಜೀವನಕ್ಕೆ ಅತಿಯಾದ ಬೆಲೆಯನ್ನು ಕೊಟ್ಟು ಆದರ್ಶಪುರುಷನಾಗಿದ್ದರೂ ಈಶ್ವರನ ಮಾತನ್ನೆತ್ತದೆ, ಅವನನ್ನು ಖಂಡಿಸದೆ ಸುಮ್ಮನಿದ್ದ. ಇದರಿಂದ ಅವನು ಅನುಯಾಯಿಗಳು ಬೌದ್ಧದರ್ಶನವನ್ನು ಒಂದು ಮತದ ರೂಪಕ್ಕೆ ತಂದು ಅವನನ್ನೇ ಈಶ್ವರನ ಸ್ಥಾನಕ್ಕೇರಿಸಿದರು. ಅದರಲ್ಲಿದ್ದ ಲೋಪವನ್ನು ತುಂಬತೊಡಗಿದರು. ಇತರ ಸಿದ್ಧಾಂತಗಳನ್ನು ಕಟುವಾಗಿ ಟೀಕೆ ಮಾಡಿದ ಕ್ಯಾಂಟ್ ಎಂಬ ಪಾಶ್ಚಾತ್ಯ ತತ್ತ್ವಜ್ಞ ನೈತಿಕ ಜೀವನದ ಆವಶ್ಯಕತೆಯನ್ನು ಸಮರ್ಥಿಸುವಾಗ ಈಶ್ವರನ ಅಸ್ತಿತ್ವವನ್ನು ಒಪ್ಪಿಕೊಳ್ಳಲೇಬೇಕಾಯಿತು. ಮಾನವನ ನೈತಿಕ ಹೊಣೆಗಾರಿಕೆಯನ್ನು ಅದರ ಸಾಧನೆಯಿಂದ ಅವನಿಗೆ ಬರುವ ಫಲವನ್ನನುಭವಿಸುವ ಅಗತ್ಯವನ್ನೂ ಒಪ್ಪಿಕೊಂಡರೆ ಈಶ್ವರನೇ ಧರ್ಮಾಧರ್ಮಗಳ ನಿಯಾಮಕನೆಂದೂ ನ್ಯಾಯಮೂರ್ತಿಯೆಂದೂ ಹೇಳಬೇಕಾಗುತ್ತದೆ. ಇದನ್ನು ಹಿಂದೂಗಳ ಕರ್ಮಸಿದ್ಧಾಂತ ಸ್ಪಷ್ಟಪಡಿಸುತ್ತದೆ. ಕರ್ಮಮಾಡುವ ಅಧಿಕಾರ ಮಾತ್ರ ಮಾನವನಿಗುಂಟು, ಅದರ ಫಲಕ್ಕೆ ಅಧಿಕಾರವಿಲ್ಲ. ಭಗವದರ್ಪಣ ಬುದ್ಧಿಯಿಂದ ಮಾಡಿದರೆ ಮಾತ್ರ ಅವನಿಗೆ ಸತ್ಫಲ, ಮತ್ತು ಕರ್ಮಬಂಧನವಿಲ್ಲ. ಕಾಮ್ಯಕರ್ಮಗಳು ಅವನನ್ನು ಸಂಸಾರಚಕ್ರದಲ್ಲಿ ಬಂಧಿಸುತ್ತವೆ. ನಿಷ್ಕಾಮನಾಗಿ ಈಶ್ವರಾರ್ಪಣ ಬುದ್ಧಿಯಿಂದ ಮಾಡಿದ ಕರ್ಮಗಳು ಅವನ ಬಿಡುಗಡೆಗೆ ಕಾರಣವಾಗುತ್ತವೆ. ಆದ್ದರಿಂದ ಆತ ಕರ್ಮದ ಫಲವನ್ನು ಈಶ್ವರನಿಗೇ ವಹಿಸಬೇಕು. ಮಾನವ ಬಯಸಿದ ಫಲಗಳು ಅವನಿಗೆ ದೊರಕದೇ ಇರುವುದಕ್ಕೆ ಕಾರಣವೇನು? ಅವನಿಗೆ ಅಧರ್ಮ ಲಾಭಕರವಾಗಿ ಕಂಡರೂ ಧರ್ಮಮಾರ್ಗಕ್ಕೆ ಅವನನ್ನು ಎಳೆಯುವ ಶಕ್ತಿ ಯಾವುದು? ಈ ಪ್ರೇರಣೆ ಮತ್ತು ಧರ್ಮಕ್ಕೆ ಜಯ ಎಂಬ ನಂಬಿಕೆ ಅವನಿಗೆ ಹೇಗೆ ಉಂಟಾಗುತ್ತದೆ?-ಎಂಬ ಪ್ರಶ್ನೆಗಳಿಗೆ ಈಶ್ವರವಾದದಿಂದ ಸಮರ್ಪಕವಾದ ಉತ್ತರಗಳು ಬರುತ್ತವೆ. ಹಾಗೆಯೇ ನೈತಿಕ ಸಿದ್ಧಾಂತ ಭಗವಂತನನ್ನು ಏಕೆ ಭಜಿಸಬೇಕು, ಅವನ ಪ್ರೀತಿಗೆ ಪಾತ್ರರಾಗಲು ಮಾನವರು ಏಕೆ ತೊಳಲಬೇಕು-ಎಂಬುದನ್ನೂ ಸ್ಪಷ್ಟಪಡಿಸುತ್ತದೆ.

ನಾಗರಿಕತೆಯಲ್ಲಿ ಮಾನವ ಮುಂದುವರಿದಂತೆಲ್ಲ ಭಗವಂತನ ವ್ಯಕ್ತಿತ್ವದ ಸಂಶೋಧನೆಯಲ್ಲಿ ಆಳವಾಗಿ ಪ್ರವೇಶಿಸತೊಡಗಿದ. ಅವನಿಗೂ ಈಶ್ವರನಿಗೂ ಪರಸ್ಪರ ಸಂಬಂಧ ಬೆಳೆಯುವಂತೆ ತೋರಿತು. ಮತಧರ್ಮಗಳು ತಲೆಯೆತ್ತಿ ಸಗುಣಬ್ರಹ್ಮನನ್ನು ಪ್ರತಿಪಾದಿಸಿದವು. ಎಲ್ಲವನ್ನೂ ತೊರೆದು ಭಗವತ್ಪ್ರೇಮದ ಅನುಭವಕ್ಕೆ ಹಾತೊರೆದು ಸಾಕ್ಷಾತ್ಕಾರವನ್ನು ಪಡೆದ ಮಹಾಪುರುಷರ ಮತ್ತು ಜ್ಞಾನಿಗಳ ಪರಂಪರೆ ಮತಗಳಲ್ಲಿ ಕಾಣಿಸಿಕೊಂಡಿತು. ಸಾಕ್ಷಾತ್ಕಾರವನ್ನು ಪಡೆದು ಧನ್ಯರಾದವರು ತಮ್ಮ ಅಪೂರ್ವ ಆನಂದದ ಅನುಭವಗಳನ್ನು ಹಾಡಿಹೊಗಳಿದ್ದಾರೆ. ಅವರು ಅನುಭವಿಸಿದ್ದು ಭ್ರಮೆ ಮಾತ್ರವಲ್ಲ. ಅದಕ್ಕಾಗಿ ಅವರು ಸಾಧನೆ ಮಾಡಿದವರು. ಅಂತರ್ಮುಖರಾಗಿ ಏಕಾಗ್ರಚಿತ್ತರಾಗಿ ಸಮಾಧಿಸ್ಥಿತಿಯಲ್ಲಿ ಈಶ್ವರನನ್ನು ಅವರು ಕಂಡರು. ಇಂಥವರು ಮುಖ್ಯವಾದ ಮತಧರ್ಮಗಳಲ್ಲಿ–ಯೆಹೂದಿಮತ, ಕ್ರೈಸ್ತಮತ, ಹಿಂದೂಮತ ಮುಂತಾದವುಗಳಲ್ಲಿ–ಸುಪ್ರಸಿದ್ಧರಾಗಿದ್ದಾರೆ. ಈ ಸಾಧುಸಂತರನ್ನು ಕಿರಿಯ ಪೀಳಿಗೆಯವರು ದೇವತೆಗಳ ಸ್ಥಾನಕ್ಕೇರಿಸಿರುವುದೂ ಉಂಟು. ಅವರ ಅಮೃತವಾಣಿಯನ್ನು ಪೂಜಿಸುವುದೂ ಉಂಟು.

ಸರ್ವಶಕ್ತಿತ್ವ, ಸರ್ವವ್ಯಾಪಕತ್ವ ಇತ್ಯಾದಿ ಗುಣಗಳನ್ನು ಒಪ್ಪದಿದ್ದರೆ, ಸೃಷ್ಟಿಸ್ಥಿತಿಲಯಗಳನ್ನು ಈಶ್ವರನಿಗೆ ಸೇರಿದ್ದೆಂದು ಹೇಳಲಾಗುವುದಿಲ್ಲ. ಈ ಮೂರು ಗುಣಗಳೂ ಪರಸ್ಪರ ಸಂಬಂಧವುಳ್ಳವಾದ್ದರಿಂದ ಒಂದನ್ನು ಒಪ್ಪಿದರೆ ಮೂರನ್ನೂ ಒಪ್ಪಿಕೊಂಡಂತಾಗುತ್ತದೆ. ಜ್ಞಾನ ಶಕ್ತಿಗಳು ಪರಸ್ಪರಾನುವರ್ತಿಗಳು. ಭೂತಭವಿಷ್ಯದ್ ವರ್ತಮಾನಗಳೆಲ್ಲವೂ ಈಶ್ವರನ ಜ್ಞಾನಾಧೀನ. ಅವನು ಕಾಲನಿಯಾಮಕನಾದ್ದರಿಂದ ಕಾಲಾತೀತನೂ ಅನಾದಿ ಅನಂತನೂ ಎಂದು ಹೇಳಬೇಕಾಗುತ್ತದೆ; ಯಾವುದು ನಶಿಸಿದರೂ ಅವನು ಉಳಿಯುತ್ತಾನೆಂದೂ ಹೇಳಬೇಕಾಗುತ್ತದೆ. ಅವನೇ ಸಾಧನ ಸಾಮಗ್ರಿಗಳನ್ನು ಸೃಷ್ಟಿಸಿಕೊಳ್ಳುವುದರಿಂದ ಅವನ ಶಕ್ತಿಗೆ ಯಾವುದರಿಂದಲೂ ಪರಿಮಿತಿ ಇಲ್ಲವೆನ್ನಬೇಕಾಗುತ್ತದೆ. ಅವನು ಸರ್ವವನ್ನೂ ನೋಡುವ ಸಾಕ್ಷಿಯಾದ್ದರಿಂದ ಅವನಿಲ್ಲದ ಸ್ಥಳವಿಲ್ಲ. ಒಳಗೂ ಹೊರಗೂ ಆತ ವ್ಯಾಪಿಸಿದ್ದಾನೆ. ಹೀಗೆ ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವವ್ಯಾಪಕತ್ವವನ್ನು ಒಪ್ಪಿಕೊಂಡಂತೆ ಆಯಿತು.

ಉಪನಿಷತ್ತುಗಳು ಈಶ್ವರನ ಅಂದರೆ ಬ್ರಹ್ಮನ ಸ್ವರೂಪವನ್ನು ವಿಶದವಾಗಿ ಚರ್ಚಿಸಿವೆ. ಅಣುರೇಣುತೃಣಕಾಷ್ಠದಲ್ಲಿರುವ ಅಣೋರಣೀಯಾನ್ ಎಂದೂ ಮಹತೋಮಹೀಯಾನ್ ಎಂದೂ ನಿರ್ಣಯಿಸುತ್ತವೆ. ಅವನ ಸ್ವರೂಪ ಮಾನವನ ಅಲ್ಪಮತಿಗೆ ನಿಲುಕದುದು. ಆದರೂ ಆ ಪರಬ್ರಹ್ಮನ ಸ್ವರೂಪವನ್ನು ತಿಳಿಯುವ ಮತ್ತು ಕಾಣುವ ಹಂಬಲ ಮಾನವನಿಗೆ ಬಿಟ್ಟಿಲ್ಲವಾದ್ದರಿಂದ ಅವನು ತನ್ನ ಮತಿಗೆ ನಿಲುಕುವ ಶ್ರೇಷ್ಠ ಗುಣಗಳೆಲ್ಲ ಈಶ್ವರನಲ್ಲಿ ಮೂರ್ತಿಮತ್ತಾಗಿವೆ ಎಂದು ಮನಮುಟ್ಟಿ ಭಾವಿಸುತ್ತಾನೆ. ಅವನ ಕಲ್ಯಾಣಗುಣಗಳನ್ನು ನೆನೆನೆನೆದು, ಹಾಡಿ ಹಾಡಿ ತೃಪ್ತನಾಗುತ್ತಾನೆ. ಅವನಿಗೆ ಅತ್ಯಂತ ಆನಂದದಾಯಕವಾದ ಚೆಲುವನ್ನು ಕೊಟ್ಟು ಸಾಕಾರನನ್ನಾಗಿ ಮಾಡುತ್ತಾನೆ. ಅವನ ಕೃಪಾಕಟಾಕ್ಷವನ್ನು ವರ್ಣಿಸುತ್ತಾನೆ. ಹೀಗೆ ಈಶ್ವರವಾದಿಗಳು ಈಶ್ವರನಿಗೆ ಪರಿಪೂರ್ಣ ವ್ಯಕ್ತಿತ್ವವುಂಟು. ಅವನು ನಿರಾಕಾರನಲ್ಲ, ನಿರ್ಗುಣನಲ್ಲ, ನಿಷ್ಪ್ರಪಂಚನಲ್ಲ. ಅಲ್ಪನಾದ ಮಾನವನ ಮೊರೆಯನ್ನು ಲಾಲಿಸುವವನಾದ್ದರಿಂದ ಅವನು ಪ್ರಭುವಿನ ಸ್ಥಾನದಲ್ಲಿದ್ದರೂ ಅತ್ಯಂತ ದಯಾಳುವಾದ ತಂದೆ, ಕರುಣಾಸಾಗರ, ಪ್ರೇಮಮಯ ಮೂರ್ತಿ. ಅವನ ಕೃಪಾಕಟಾಕ್ಷದಿಂದಲೇ ಸರ್ವದುಃಖವೂ ನಾಶವಾಗಿ ಮುಕ್ತನಾಗುತ್ತಾನೆಂದು ಭಕ್ತ ಅವನಿಗೆ ಶರಣು ಹೋಗುತ್ತಾನೆ. ತನ್ನ ಅಂತರಂಗವನ್ನು ಈಶ್ವರನಲ್ಲಿ ತೋಡಿಕೊಳ್ಳುತ್ತಾನೆ. ಶಾಂತಿಯನ್ನು ಹೊಂದುವುದಕ್ಕೆ ಭಗವಂತನೇ ಗತಿ ಎಂದು ನಂಬುತ್ತಾನೆ.

ಇಷ್ಟೆಲ್ಲವನ್ನೂ ಒಪ್ಪಿಕೊಂಡ ಮೇಲೆ ಈಶ್ವರನೊಬ್ಬನೇ ಪರಮದೈವವೆಂದೂ ಉಳಿದುದೆಲ್ಲವೂ ಅವನ ಅಧೀನವೆಂದೂ ಒಪ್ಪಿಕೊಳ್ಳಬೇಕಾಗಿರುವುದರಿಂದ ಈಶ್ವರವಾದದಲ್ಲಿ ಏಕದೇವತಾ ತತ್ತ್ವವೂ ಅಡಗಿದೆ. ಮಾನವರೆಲ್ಲರಿಗೂ ಒಬ್ಬನೇ ದೈವವೆಂದು ಮೋಸೆಸ್, ಕ್ರಿಸ್ತ, ಪೈಗಂಬರರು ಸಾರಿದರು. ಮಾನವ ಕುಲಕ್ಕೆಲ್ಲ ಒಂದೇ ಮತವಿರಬೇಕೆಂದವರು ಪ್ರಚಾರಮಾಡಿದರು. ಅವರ ಅನುಯಾಯಿಗಳು ಇತರ ಮತಗಳನ್ನು ತೊಡೆದು ಹಾಕುವ ಪ್ರಯತ್ನವನ್ನೂ ಮಾಡಿದರು. ಆದರೆ ಈಶ್ವರವಾದ ಯಾವ ಒಂದು ಮತಕ್ಕೂ ಒಳಪಟ್ಟಿಲ್ಲ, ಮೀಸಲಾಗಿಲ್ಲ. ಅದರ ಒಲವು ಮತಸಂಬಂಧವಾದ ನಿರ್ಬಂಧಗಳಲ್ಲಿ, ಸಂಪ್ರದಾಯಗಳಲ್ಲಿ

ಅಡಗಿಲ್ಲ. ಮಾನವನಿಗೂ ಈಶ್ವರನಿಗೂ ಇರುವ ಸಂಬಂಧ ಅತಿ ಗೂಢವಾದುದೂ ಅಂತರಂಗ ಸಂಬಂಧವೂ ಆದ್ದರಿಂದ ಗಾಢವಾದ ಭಕ್ತಿ ಶ್ರದ್ಧೆಗಳಲ್ಲಿ ಅದು ಅಡಗಿದೆ. ಇದನ್ನು ನಿಯಮ ನಿಬಂಧನೆಗಳಿಂದಾಗಲೀ ಆಚಾರ ವ್ಯವಹಾರಗಳಿಂದಾಗಲೀ ಪ್ರಚೋದಿಸಲಾಗುವುದಿಲ್ಲ. ಆದರೂ ಕೆಲವು ಸತ್ಸಂಪ್ರದಾಯಗಳು, ಸದಾಚಾರಗಳು ಮತಶ್ರದ್ಧೆಗೆ ಸಹಾಯಕವಾಗಬಲ್ಲವು. ಅದರಲ್ಲೂ ಮಕ್ಕಳ ಎಳೆಯ ಮನಸ್ಸಿನ ಮೇಲೆ ಪರಿಣಾಮಕಾರಿಯಾಗಬಲ್ಲವು; ಮತಗಳ ಈಶ್ವರನೂ ಒಬ್ಬನೇ ಎಂಬ ಬೋಧನೆಯಿಂದ ಪರಮತ ದ್ವೇಷವನ್ನು ತಡೆಗಟ್ಟಬಹುದು. ಗಾಂಧೀಜಿಯವರು ಪ್ರಾರ್ಥನಾಸಭೆಗಳ ಮೂಲಕ ಈ ಬೋಧನೆಯನ್ನು ಮಾಡಿ ಅದನ್ನು ಲೋಕಕ್ಕೆಲ್ಲ ಮನಗಾಣಿಸಿದರು.

ಅಧರ್ಮಕ್ಕೆ ಈಶ್ವರ ಹೊಣೆಗಾರನೇ, ಪ್ರಕೃತಿಸಹಜವಾದ ಕೆಡಕಿಗೆ ಅವನೇ ಕರ್ತನೇ ಎಂಬ ಪ್ರಶ್ನೆಗಳು ತತ್ತ್ವಜ್ಞರನ್ನು ಬಾಧಿಸುತ್ತವೆ. ಈಶ್ವರವಾದಿಗಳು ಇದಕ್ಕೆ ಉತ್ತರಕೊಡಲು ಸಿದ್ಧರಾಗಲೇಬೇಕು. ಎಲ್ಲವನ್ನೂ ಈಶ್ವರನೇ ಸೃಷ್ಟಿಸಿದನೆಂದು ಹೇಳಿ ನಿಲ್ಲಿಸುವ ಹಾಗಿಲ್ಲ. ಸೃಷ್ಟಿಯ ಅಚಾತುರ್ಯಗಳಿಗೆ ಕಲ್ಯಾಣ-ಗುಣಪರಿಪೂರ್ಣನಾದ ಈಶ್ವರ ಹೇಗೆ ಕಾರಣ? ಉತ್ತರ ಕೊಡುವಾಗ ಈಶ್ವರವಾದಿಗಳು ಹೀಗೆ ಹೇಳುತ್ತಾರೆ. ಮಾನವ ಎಲ್ಲ ನೆಟ್ಟಗಿರುವ ವಿಶ್ವದಲ್ಲಿ ಸಾಧಿಸುವುದಾದರೂ ಏನಿದೆ? ಅವನಿಗೆ ಸಾವುನೋವುಗಳೇ ಇರದಿದ್ದಲ್ಲಿ ಅವನ ಜೀವನಕ್ಕೂ ಅಚೇತನವಸ್ತುವಾದ ಕಲ್ಲುಬಂಡೆಗೂ ವ್ಯತ್ಯಾಸವೇ ಇರಲಾರದು. ಹಾಗಿದ್ದಲ್ಲಿ ಅವನ ಶಕ್ತಿ ಸಾಮರ್ಥ್ಯಗಳೆಲ್ಲ ನಿರರ್ಥಕ. ಪ್ರಕೃತಿಯ ಅಡ್ಡಿ ಆತಂಕಗಳನ್ನು ಎದುರಿಸುವುದೇ ಅವನ ಸಾಹಸ. ಪ್ರಕೃತಿಯಿಂದ ಆಗುವ ವಿಪತ್ತುಗಳು ಅದರ ಸಾಮಾನ್ಯ ನಿಯಮವಲ್ಲ. ಈಶ್ವರಸೃಷ್ಟಿಯಲ್ಲಿ ಕ್ರಮವೇ ನಿಯಮವಾಗಿದೆ. ಪ್ರಕೃತಿಯ ಕುಂದುಕೊರತೆಗಳನ್ನು ಮಾನವನ ಹಿತಕ್ಕಾಗಿಯೇ ಬಿಡಲಾಗಿದೆ. ಸಾವುನೋವುಗಳಿಂದ ಭಗವಂತನ ಕೃಪೆಗೆ ಹೆಚ್ಚು ಪಾತ್ರರಾಗುತ್ತೇವೆ. ಮಾನವನ ಹೃದಯಪರಿಪಾಕಕ್ಕೆ ಅವುಗಳಿಂದ ದಾರಿಯಾಗುತ್ತದೆ. ಕೆಲವು ಮತಗಳು ಭಗವಂತನಿಗೆ ಪ್ರತಿಪಕ್ಷವಾದ ಒಂದು ದುಷ್ಟಶಕ್ತಿಯೇ ಎಲ್ಲ ಕೆಡುಕಿಗೂ, ಅಧರ್ಮಕ್ಕೂ ಕಾರಣ ಎಂದು ಹೇಳುತ್ತವೆ. ಇದು ಈಶ್ವರವಾದಕ್ಕೆ ಸಮಂಜಸವಾದ ವಾದವಲ್ಲ; ಈಶ್ವರನ ಸರ್ವಶಕ್ತಿತ್ವಕ್ಕೆ ಇದು ಭಂಗ ತರುತ್ತದೆ.

ಪ್ರಕೃತಿಯ ಲೋಪದೋಷಗಳ ಪ್ರಶ್ನೆಯನ್ನು ಬಿಡಿಸಿದಷ್ಟು ಸುಲಭವಾಗಿ ಅಧರ್ಮದ ಪ್ರಶ್ನೆಯನ್ನು ಬಿಡಿಸಲಾಗುವುದಿಲ್ಲ. ಈಶ್ವರವಾದದಲ್ಲಿ ಅಧರ್ಮದ ಪ್ರಶ್ನೆಗೆ ಇನ್ನೂ ವಿಸ್ತಾರವಾಗಿ ಉತ್ತರ ಕೊಡಬೇಕಾಗುತ್ತದೆ. ಮಾನವನನ್ನು ಅಧರ್ಮಕ್ಕೆ ಪ್ರೇರಿಸಿ ಅವನ ಮೇಲ್ಮೆಯನ್ನು ಈಶ್ವರ ಹೇಗೆ ಉಂಟುಮಾಡಬಲ್ಲ? ಅಧರ್ಮದಿಂದ ನಿರ್ದೋಷಿಗಳಿಗೂ ಹಾನಿಯಲ್ಲವೇ? ಈ ಪ್ರಶ್ನೆಗಳು ತಲೆ ಎತ್ತುತ್ತವೆ. ಈಶ್ವರ ಮಾನವನನ್ನೇ ಅಧರ್ಮಕ್ಕೆ ಹೊಣೆಗಾರನನ್ನಾಗಿ ಮಾಡಿದ್ದಾನೆ. ಅವನಿಗೆ ಧರ್ಮಾಧರ್ಮಗಳ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ-ಎಂದು ಈಶ್ವರವಾದದ ಉತ್ತರ. ಮಾನವನ ಅಧರ್ಮಕ್ಕೆ ಈಶ್ವರನ ಪ್ರೇರಣೆಯಲ್ಲ ಮಾನವ ಸ್ವಭಾವವೇ ಕಾರಣ. ಅಜ್ಞಾನವೇ ಪಾಪಕ್ಕೆ ಕಾರಣ. ಆದರೂ ಪಾಪವನ್ನು ಮಾಡುವ ಬುದ್ಧಿಯನ್ನೂ ಅದಕ್ಕೆ ಸಾಧನಗಳನ್ನೂ ಭಗವಂತನೇ ಕೊಟ್ಟಿರುವನಲ್ಲವೇ? ಅವನು ಅಪರೋಕ್ಷವಾಗಿಯಾದರೂ ಅಧರ್ಮಕ್ಕೆ ಕಾರಣನಾದಂತಾಗಲಿಲ್ಲವೇ?-ಎಂದು ಪ್ರಶ್ನಿಸಬಹುದು. ಮಾನವನಿಗೆ ಅಧರ್ಮ ಮಾಡುವ ಸ್ವಾತಂತ್ರ್ಯವನ್ನು ಈಶ್ವರ ಕೊಟ್ಟಿರುವುದರಲ್ಲಿ ಒಂದು ರಹಸ್ಯವಿದೆ. ಅವನು ತನ್ನ ಮುಕ್ತಿಯನ್ನು ತಾನೇ ಸಾಧಿಸಲಿ ಎಂದು ಈ ಸ್ವಾತಂತ್ರ್ಯವನ್ನು ಕೊಟ್ಟಿರುವುದರಿಂದ ಭಗವಂತ ಮಾನವನಿಗೆ ಗಣ್ಯಸ್ಥಾನವನ್ನೇ ಕೊಟ್ಟಂತಾಯಿತಲ್ಲದೆ ತನ್ನ ಅಡಿಯಾಳು ಎಂಬ ತುಚ್ಛ ಭಾವನೆಯಿಂದ ಕಾಣುವುದಿಲ್ಲವೆಂದಂತಾಯಿತು. ಮತ್ತೊಂದು ಕಾರಣ, ಮಾನವ ಪಾಪಮಾಡಿ ಪಶ್ಚಾತ್ತಾಪದಿಂದ ಪುಟಕ್ಕೆ ಹಾಕಿದ ಚಿನ್ನದಂತೆ ಪರಿಶುದ್ಧನಾಗುವುದಿಲ್ಲವೇ? ತನಗೆ ಧರ್ಮವನ್ನು ಮಾಡುವುದಕ್ಕೆ ಅವಕಾಶವಿದ್ದರೂ ಅಧರ್ಮದ ದಾರಿಯನ್ನು ಹಿಡಿದುದಕ್ಕೆ ಮಾನವ ನೊಂದು, ಬೆಂದು, ಧರ್ಮದ ಬೆಲೆಯನ್ನು ಮತ್ತೂ ಚೆನ್ನಾಗಿ ಕಂಡುಕೊಳ್ಳುತ್ತಾನೆ. ಇದರಿಂದ ಆತ್ಮೋದ್ಧಾರದ ಮಾರ್ಗದಲ್ಲಿ ಮೇಲು ಮೇಲಕ್ಕೆ ಏರುವಂತಾಗುತ್ತದೆ. ಅವನ ಕಣ್ಣು ತೆರೆದಂತೆ ಆಗುತ್ತದೆ.

ಕರ್ಮಸಿದ್ಧಾಂತ ಮಾನವನ ಜನ್ಮಾಂತರಗಳಿಂದ ಅವನ ಕರ್ಮಗಳನ್ನು ವಿವರಿಸುತ್ತದೆ. ಅವನಿಗೆ ಹಿಂದಿನ ಜನ್ಮಗಳಿಂದ ಈ ಜನ್ಮದ ಸ್ಥಿತಿಗತಿಗಳು ಪ್ರಾಪ್ತವಾಗುತ್ತವೆ. ಆದ್ದರಿಂದ ಅವನು ಮುಂದಿನ ಜನ್ಮ ಉತ್ತಮವಾಗಲೆಂದು ಈ ಜನ್ಮದಲ್ಲಿ ಕರ್ಮವನ್ನು ಎಚ್ಚರಿಕೆಯಿಂದ ಮಾಡಬೇಕು. ಭಗವಂತ ನ್ಯಾಯಪಕ್ಷಪಾತಿ, ಧರ್ಮಪಕ್ಷಪಾತಿ ಎಂಬುದನ್ನು ಮರೆಯಬಾರದು. ಅವನು ಅಧರ್ಮಕ್ಕೆ ತಕ್ಕ ಫಲವನ್ನೇ ಕೊಡುತ್ತಾನೆ. ಅವನ ವಿಶ್ವಾಸಕ್ಕೆ ಪಾತ್ರನಾಗಬೇಕಾದರೆ ಧರ್ಮದ ಮಾರ್ಗವನ್ನೇ ಹಿಡಿಯಬೇಕೆಂದು ಅರಿತು ಎಷ್ಟು ಕಷ್ಟನಷ್ಟಗಳನ್ನಾದರೂ ಸಹಿಸಬೇಕು. ಕರ್ಮಸಿದ್ಧಾಂತ ಮಾನವನ ನೈತಿಕ ಸ್ವಾತಂತ್ರ್ಯವನ್ನು ಈ ರೀತಿ ವಿವರಿಸುತ್ತದೆ. ಭಗವಂತನ ಕೃಪೆಗೆ ಅರ್ಹತೆಯನ್ನು ಪಡೆದುಕೊಳ್ಳುವ ಕೀರ್ತಿ ಮಾನವನಿಗೆ ಸೇರುತ್ತದೆ. ಪಾಪಪರಿಹಾರವಾದ ಮೇಲೆಯೇ ಭಗವಂತ ತನ್ನಲ್ಲಿಗೆ ಬರಮಾಡಿಕೊಳ್ಳುತ್ತಾನೆ. ಅದುವರೆಗೂ ಮಾನವ ತೊಳಲಾಡಬೇಕು. ನಿರಂತರ ಶ್ರಮಿಸಬೇಕು.

ಈ ರೀತಿ, ಈಶ್ವರವಾದದ ಪ್ರಕಾರ ಈಶ್ವರನಿಗೂ ಅಧರ್ಮ, ಅನಿಷ್ಟಗಳಿಗೂ ಸಂಬಂಧವನ್ನು ಕಲ್ಪಿಸಲಾಗುವುದಿಲ್ಲ. ಈಶ್ವರವಾದದ ಈಶ್ವರ ಕಲ್ಯಾಣಗುಣಪರಿಪೂರ್ಣನಾಗಿಯೇ ಉಳಿಯುತ್ತಾನೆ (ನೋಡಿ- ಈಶ್ವರ)[2] (ಎಸ್.ಎಸ್.ಆರ್.)

**ಈಶ್ವರೀ ಕುಟುಂಬದ ಸಸ್ಯಗಳು:** ಹೂತೋಟಗಳಲ್ಲಿ ಇವು ಶೃಂಗಾರ ಮತ್ತು ಅಲಂಕಾರ ಸಸ್ಯಗಳು (ಅರಿಸ್ಟೋಲೋಕಿಯೆಸೀ). ಔಷಧಿ ಗುಣವಿದೆ ಎಂದು ನಂಬಲಾಗಿದೆ. ಇವು ಮೂಲಿಕೆ, ಸಾಮಾನ್ಯ ವಾರ್ಷಿಕ ಬಳ್ಳಿ ಮತ್ತು ದೊಡ್ಡ ಬಹುವಾರ್ಷಿಕ ಬಳ್ಳಿಗಳಾಗಿ ವಿಕಸಿಸಿವೆ. ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ಬೆಳೆವಣಿಗೆ ಸಹಜವಾಗಿ ಆಗುತ್ತದೆ. ಭಾರತದಲ್ಲಿ ಗಂಗಾನದಿಯ ಬಯಲಿನಲ್ಲೂ ದಖನ್ ಪ್ರಸ್ಥಭೂಮಿಯಲ್ಲೂ ವಿಪುಲವಾಗಿ ಹಬ್ಬಿದೆ. ಈ ಸಸ್ಯಗಳು ಸರಳವಾಗಿವೆ; ಜೋಡಣೆ ಪರ್ಯಾಯ. ದ್ವಿಲಿಂಗ ಪುಷ್ಪದ ಅಂಡಾಶಯ ಅಧೋಸ್ಥಿತಿಯಲ್ಲಿದ್ದು, ಸಂಯುಕ್ತ ಪುಷ್ಪಪತ್ರದ ನಾಳ ಕೇಸರ ಸಮೂಹ,



ಚಿತ್ರ 1. ಎಡಗಡೆಯದು: ಅರಿಸ್ಟೊಲೋಕಿಯ ಮ್ಯಾಕ್ರೊಫೈಲ ಸಸ್ಯದ ಪುಷ್ಪ. ಬಲಗಡೆಯದು ಪುಷ್ಪದ ಉದ್ದಸೀಳಿಕೆ

ಶಲಾಕೆ, ಶಲಾಕಾಗ್ರಗಳನ್ನು ಮುಚ್ಚಿಕೊಂಡಿದೆ. ಪುಷ್ಪಪತ್ರದ ನಾಳದ ಕತ್ತಿನ ಒಳಭಾಗದಲ್ಲಿ ಸಣ್ಣ ಎಳೆಗಳು ಒಳಮುಖವಾಗಿ ಬೆಳೆದಿವೆ. ಪತಂಗಾದಿಗಳು ಒಳಗೆ ಹೋದ ಅನಂತರ ಮಧುವೂ ಸಿಕ್ಕದೆ ಹೊರಕ್ಕೂ ಬರಲಾಗದೆ ಸ್ವಲ್ಪಕಾಲ ಅಲ್ಲೇ ಅಲೆದಾಡುತ್ತದೆ. ಹೊರಹೊರಟ ಮೇಲೆ ಆ ಹೂವಿನ ಪರಾಗದಿಂದೊಡಗೂಡಿ ಮತ್ತೊಂದು ಪುಷ್ಪವನ್ನು ಹೊಕ್ಕು ಅನ್ಯಪರಾಗಸ್ಪರ್ಶಕಾರ್ಯಕ್ಕೆ ನೆರವಾಗುತ್ತದೆ. ಫಲ ಶುಷ್ಕಮಾದರಿ; ಬೀಜಕೋಶ ಸಿಡಿದು ಪ್ರಸಾರ ಗಾಳಿಯಿಂದಾಗುತ್ತದೆ.

ಚಿತ್ರ 2. ಅರಿಸ್ಟೊಲೋಕಿಯ ಗ್ರಾಂಡಿಫ್ಲೋರ

ಈ ಕುಟುಂಬದ ಸುಮಾರು 400 ಪ್ರಭೇದಗಳಲ್ಲಿ ಸುಮಾರು 25 ಮುಖ್ಯವಾದವು. ಅರಿಸ್ಟೊಲೋಕಿಯ ಬ್ರಾಕ್ಟಿಯೇಟ (ಸಂಸ್ಕೃತ-ಪತ್ರಭಂಗ; ಕನ್ನಡ-ಈಶ್ವರೀಗಿಡ) ಅರಿಸ್ಟೊಲೋಕಿಯ ಇಂಡಿಕ (ಸಂಸ್ಕೃತ-ರುದ್ರಜಾತ, ಸುನಂದ; ಕನ್ನಡ-ಈಶ್ವರೀಬಳ್ಳಿ) ಈ ಪ್ರಭೇದಗಳು ಮಾನವನ ಆರೋಗ್ಯ ಪಾಲನೆಯಲ್ಲೂ ರೋಗಚಿಕಿತ್ಸೆಯಲ್ಲೂ ಪ್ರಾಮುಖ್ಯ ಪಡೆದಿವೆ. ಈ ಸಸ್ಯಗಳ ಬೇರು, ಕಾಂಡ, ಎಲೆ, ಬೀಜ-ಇವು ವಿರೇಚಕವಾಗಿಯೂ ಉದರಕ್ರಿಮಿ ನಾಶಕವಾಗಿಯೂ ಬಳಕೆಯಲ್ಲಿವೆ. ಸಿಫಿಲಿಸ್, ಗೊನೋರಿಯ ಮತ್ತು ಚರ್ಮರೋಗಗಳಲ್ಲೂ ವಿವಿಧ ರೀತಿಯಲ್ಲಿ ಅವನ್ನು ಉಪಯೋಗಿಸುತ್ತಾರೆ. ಉದರಶೂಲೆ, ಹೊಟ್ಟೆನೋವು, ಭೇದಿ, ಕಾಲರ ಮತ್ತು ಜ್ವರ-ಇವುಗಳಿಗೆ ಈ ಗಿಡದ ಜೊತೆಗೆ ಮೆಣಸು, ಶುಂಠಿ, ಹರಳೆಣ್ಣೆ ಇತ್ಯಾದಿಗಳಿಂದ ತಯಾರಿಸಿದ ಕಷಾಯವನ್ನು ಕುಡಿಸುತ್ತಾರೆ. ಬೇರನ್ನು ತೊನ್ನುರೋಗಕ್ಕೆ ಹಚ್ಚಲು ಉಪಯೋಗಿಸುವರು. ಬೇರಿನ ಕಷಾಯವನ್ನು ಹುಳುಕಡ್ಡಿಗೂ ಎಲೆಯ ಚೂರ್ಣವನ್ನು ಇಸಬು ಮತ್ತು ಗಾಯಗಳಿಗೂ ಬೇರು, ಕಾಂಡ ಮತ್ತು ಎಲೆಗಳ ರಸವನ್ನು ಹಾವು ಕಡಿತಕ್ಕೂ ಬೇರನ್ನು ಮಾತ್ರ ಗರ್ಭಪಾತಕ್ಕೂ ಉಪಯೋಗಿಸುತ್ತಾರೆ. ಶಕ್ತಿವರ್ಧಕವಾಗಿಯೂ

ಬೇರನ್ನು ಉಪಯೋಗಿಸುವುದುಂಟು. ಜೀವರಸಾಯನಶಾಸ್ತ್ರಜ್ಞರು ಅರಿಸ್ಟೊಲೋಕಿಯ ಬ್ರಾಕ್ಟಿಯೇಟ ಗಿಡದ ಬೇರು, ಕಾಂಡ, ಎಲೆ ಮುಂತಾದುವನ್ನು ವಿಶ್ಲೇಷಿಸಿ ಅಚ್ಚ ಹಳದಿಯ ಮತ್ತು ಕಿತ್ತಳೆ ಬಣ್ಣದ ಅರಿಸ್ಟೊನೋಕಿಕ್ ಆಮ್ಲಗಳನ್ನು ಸೂಕ್ಷ್ಮ ಹರಳಿನ ರೂಪದಲ್ಲಿ ಬೇರ್ಪಡಿಸಿರುವರು. ಇದರ ಬೀಜದಿಂದ ಆಮ್ಲಗಳ ಜೊತೆಗೆ ಒಂದು ರೀತಿಯ ಎಣ್ಣೆಯನ್ನು ತಯಾರಿಸಿರುವರು.

ಅರಿಸ್ಟೊಲೋಕಿಯ ಮಾಕ್ರೋಫಿಲ್ಲ (ಅ. ಬ್ರೆಜಿಲೆನ್ಸಿಸ್). ಅ. ಗೋಡ್ಲಿಯಾನ, ಅ. ಗ್ರಾಂಡಿಫ್ಲೋರ ಈ ಪ್ರಭೇದಗಳನ್ನು ಹೂ ಮತ್ತು ಕೈತೋಟಗಳಲ್ಲಿ ಬೆಳೆಸುವರು. ಅ. ಮಾಕ್ರೋಫೈಲ ಬೆಳೆದು ದೊಡ್ಡ ದೊಡ್ಡ ಎಲೆಗಳನ್ನು ತಳೆದು ವಿಸ್ತರಿಸಿಕೊಳ್ಳುವುದರಿಂದ ನೆರಳಿನ ಗಿಡವಾಗಿ ಬೆಳೆಸುವುದುಂಟು. ಅ. ಗ್ರಾಂಡಿಫ್ಲೋರ ಅತಿ ದೊಡ್ಡದಾದ ಪುಷ್ಪಗಳನ್ನು ಬಿಡುವ ಸಸ್ಯಗಳಲ್ಲಿ ಒಂದು. ಈ ಏರುಬಳ್ಳಿಯ ಪುಷ್ಪಪತ್ರನಾಳವೇ ಸುಮಾರು ಮೂರು ಅಡಿಗಳ ಉದ್ದವಿರುವುದರಿಂದಲೂ ಇದರ ಹೂ ಆಶ್ಚರ್ಯಕರವಾಗಿರುವುದರಿಂದಲೂ ಇದನ್ನು ಹೂತೋಟಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುವರು. ಅ. ಬ್ರೆಜಿಲೆನ್ಸಿಸ್ ಅ. ಗೋಡ್ಲಿಯಾನಗಳನ್ನು ಕೊಂಬೆಗಳಿಂದ ಸುಲಭವಾಗಿ ಬೆಳೆಸಬಹುದು. *

**ಈಶ್ವರೀ ಬಳ್ಳಿ:** ಅರಿಸ್ಟೊಲೋಕಿಯೆಸೀ ಕುಟುಂಬದ ಒಂದು ಸಸ್ಯ (ಅರಿಸ್ಟೊಲೋಕಿಯ ಇಂಡಿಕ). ಇದರ ಹೂಗಳು ಬಾತಿನ ಆಕಾರವಾಗಿರುವುದರಿಂದ ಅವಕ್ಕೆ ಪೆಲಿಕನ್ ಹೂಗಳೆಂದೂ ಹೆಸರು. ಕಾಯಿ ತೂಗುಬಿಟ್ಟ ಹೂವಿನ ಬುಟ್ಟಿಯಂತಿರುವುದು ಒಂದು ವೈಶಿಷ್ಟ್ಯ. ಕಾಯಿ ಒಣಗಿ ಬಿರಿದಾಗ ಮತ್ತು ಗಾಳಿಯಲ್ಲಿ ಅತ್ತಿಂದಿತ್ತ ತೂಗಾಡಿದಾಗ ಬೀಜಗಳು ಸ್ವಲ್ಪಸ್ವಲ್ಪವಾಗಿ ಹೊರಬರುವುವು. ಇದರ ಹೂಗಳಲ್ಲಿ ಪರಾಗಸ್ಪರ್ಶಕ್ರಿಯೆಯೇ ಒಂದು ವಿಶೇಷ ರೀತಿಯದು. ಹೂಗಳ ಅಂಡ ಕೋಶ ಮೊದಲು ಪಕ್ವವಾಗುತ್ತದೆ. ಹೂವಿನ ಪುಷ್ಪಾವರಣ ವಿಚಿತ್ರ ಆಕಾರವುಳ್ಳದ್ದಾಗಿದ್ದು ಕೆಳಭಾಗದಲ್ಲಿ ಬುರುಡೆಯಂತೆ ಉಬ್ಬಿಯೂ ಮಧ್ಯ ದಲ್ಲಿ ಕಿರಿದಾಗಿ ಸೂಕ್ಷ್ಮ ಕೊಳವೆಯಾ ಕಾರವಾಗಿಯೂ ಮೇಲ್ಭಾಗದಲ್ಲಿ ಓರೆಯಾಗಿಯೂ ಪಸರಿಸಿ ಎಲೆ ಯಂತೆ ಹರಡಿಕೊಂಡಿರುತ್ತದೆ. ಕೊಳವೆಯೊಳಗೆ ಕೆಳಮುಖವಾಗಿ ಕೂದಲುಗಳು ಜೋತು ಬಿದ್ದಿರುತ್ತವೆ. ಸಣ್ಣ ಕೀಟಾದಿಗಳು ಕೊಳವೆಯೊಳಗೆ ಸುಲಭವಾಗಿ ಹೋಗಿ ಮುಂದೆ ಪುಷ್ಪಾ ವರಣದ ಕೆಳಬುರುಡೆಯನ್ನು ಸೇರುತ್ತವೆ. ಆದರೆ ಒಮ್ಮೆ ಒಳಹೊಕ್ಕ ಕೀಟಾದಿಗಳು ಹೊರಗೆ ಬರದಂತೆ ರೋಮಗಳು ತಾತ್ಕಾಲಿಕ ತಡೆಯುಂಟುಮಾಡುತ್ತವೆ.

ಬುರುಡೆಯಲ್ಲಿ ಕ್ರಮೇಣ ಪರಾಗಕೋಶ ಮಾಗಿ ಪರಾಗರೇಣುಗಳು ಹೊರಬಂದು ಮಧ್ಯಕೊಳವೆಯಲ್ಲಿರುವ ರೋಮಗಳೆಲ್ಲ ಒಣಗಿ ಉದುರಿ ಹೊರಬರಲು ಮಾರ್ಗವುಂಟಾ ದಾಗಲೇ ಪರಾಗರೇಣುವನ್ನು ಹೊತ್ತ ಕೀಟಾದಿಗಳು ಹೊರಬರಬಲ್ಲವು. ಈ ಕೀಟಾದಿಗಳು ಮುಂದೆ ಇನ್ನೊಂದು ಎಳೆಯ ಹೂವನ್ನು ಸಂದರ್ಶಿಸಿದಾಗ, ಅವು ಕೊಳವೆಯ ಮೂಲಕ ಬುರುಡೆಯನ್ನು ಸೇರುತ್ತವೆಯಲ್ಲದೆ ಆ ವೇಳೆಗೆ ಮಾಗಿ ನಿಂತಿರುವ ಶಲಾಕಾಗ್ರದ ಮೇಲೆ ಪರಾಗರೇಣುಗಳನ್ನಿಟ್ಟು, ಪರಾಗಸ್ಪರ್ಶ ಕ್ರಿಯೆಯನ್ನು ಉಂಟುಮಾಡುತ್ತವೆ. ಆದರೆ ಈ ಸನ್ನಿವೇಶದಲ್ಲಿ ಕೀಟಾದಿಗಳೇ ಬುರುಡೆಯಲ್ಲಿ ತಾತ್ಕಾಲಿಕವಾಗಿ ಸಿಕ್ಕಿಬಿದ್ದು, ಮತ್ತೊಮ್ಮೆ ಪರಾಗಕೋಶಗಳು ಬಲಿಯುವುದನ್ನೇ ಕಾಯುತ್ತಿದ್ದು ಕೊಳವೆಯ ಮುಖಾಂತರ ಹೊರಬರ ಲಾರದೆ ಅಸಹಾಯಕ ಸ್ಥಿತಿಯಲ್ಲಿ ಇರುತ್ತವೆ. ಪರಾಗಸ್ಪರ್ಶ ಕ್ರಿಯೆ ಮುಗಿದ ಮೇಲೆ ಹೂವಿನೊಳಗೆ ಮಧುಸಂಗ್ರಹ ನಿಲ್ಲುವುದರಿಂದಲೂ ಪುಷ್ಪಾವರಣದ ತುದಿ ಕೆಳಮುಖವಾಗಿ ಜೋತುಬಿದ್ದು ಕೊಳವೆಯ ಬಾಯಿಗೆ ಮುಚ್ಚಳದಂತೆ ಅಂಟಿಕೊಳ್ಳುವುದರಿಂದಲೂ ಇತರ ಕೀಟಾದಿಗಳು ಒಳಹೋಗಲಾಗುವುದಿಲ್ಲ. ಮತ್ತೊಮ್ಮೆ ಪರಾಗಕೋಶ ಬಿರಿದು ಪರಾಗರೇಣು ಹೊರಬಂದು ರೋಮಗಳೆಲ್ಲ ಉದುರಿದ ಮೇಲೆಯೇ ಕೀಟಾದಿಗಳು ಪರಾಗರೇಣುಗಳನ್ನು ಹೊತ್ತು ಕೊಳವೆಯ ಮೂಲಕ ಹೊರಬರಬಲ್ಲವು. ಹೀಗೆ ಪರಾಗಸ್ಪರ್ಶಕ್ರಿಯೆಯಾಗಿ ಕೀಟಾದಿಗಳನ್ನು ಆಕರ್ಷಿಸುವ ವಿಧಾನಕ್ಕೆ ಗುಂಡಿಯಲ್ಲಿ ಬೀಳಿಸುವ ವ್ಯವಸ್ಥೆ (ಪಿಟ್‌ಫಾಲ್ ಮೆಕ್ಯಾನಿಸಂ) ಎನ್ನುತ್ತಾರೆ. (ಎಂ.ಎಸ್.ಎಸ್.ಆರ್.)

**ಈಸಯ್ಯ:** ಪ್ರಸ್ತುತ ಶಕ ಪೂರ್ವದ ಇಸ್ರೇಲಿನ ಹೀಬ್ರೂ ಮತಧರ್ಮಬೋಧಕರಲ್ಲಿ ಮತ್ತು ಪ್ರವಾದಿಗಳಲ್ಲಿ ಪ್ರಖ್ಯಾತನಾದವ. ಈತ ರಚಿಸಿದ ಪ್ರವಾದ 66 ಅಧ್ಯಾಯಗಳಿಂದ ಕೂಡಿದ್ದು ಇತರ ಪ್ರವಾದಗಳಿಗಿಂತ ಹಲವು ರೀತಿಯಲ್ಲಿ ಶ್ರೇಷ್ಠವಾಗಿವೆ. ಕಾವ್ಯಮಯವಾಗಿದ್ದು ಧಾರ್ಮಿಕ ಮತ್ತು ನೈತಿಕದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಕ್ರಿಸ್ತಪೂರ್ವ ಏಳನೆಯ ಶತಮಾನದಲ್ಲಿ ಇಸ್ರೇಲಿನಲ್ಲಿ ಆಂದೋಳನದ ಬಿರುಗಾಳಿ ಬೀಸುತ್ತಿದ್ದಾಗ ಈತ ತನ್ನ ಪ್ರವಾದಗಳನ್ನು ಘೋಷಿಸಿದ.

ಇತರ ಪ್ರವಾದಿಗಳು ತಮ್ಮ ರಚನೆಗಳನ್ನು ಇತಿಹಾಸದ ಘಟನೆಗಳಿಗನುಸಾರವಾಗಿ ಮಾರ್ಪಡಿಸಿದ್ದಾರೆ. ಆದರೆ ಈಸಯ್ಯ ಹಾಗೆ ಮಾಡಿಲ್ಲ. ಕೆಲವು ವೇಳೆ ಈತನ ನುಡಿಗಳು ಐತಿಹಾಸಿಕ ಸತ್ಯವಾಗಿ ಪರಿಣಮಿಸಿಲ್ಲ; ಆದರೂ ಇವನ ಕೃತಿಗಳಲ್ಲಿನ ಕಾವ್ಯ ಸೌಂದರ್ಯ ಹಾಗೆಯೇ ಉಳಿದಿದೆ. ನಿಜವಾದ ಧರ್ಮಕ್ಕೆ ಎಂದಿಗೂ ಚ್ಯುತಿಬಾರದು ಎಂಬ ಇವನ ಅಚಲವಾದ ನಂಬಿಕೆಯನ್ನು ಇವನ ಮಾತುಗಳಲ್ಲಿ ಉದ್ದಕ್ಕೂ ಕಾಣಬಹುದು. 1–33ನೆಯ ಅಧ್ಯಾಯದವರೆಗೆ ಅಸ್ಸೀರಿಯ, ಈಜಿಪ್ಟ್, ಬ್ಯಾಬಿಲಾನ್, ಅರೇಬಿಯ ಮುಂತಾದ ರಾಜ್ಯಗಳ ಅವನತಿಯನ್ನು ಕುರಿತು ಈತ ಹೇಳಿದ್ದಾನೆ. ಆದರೆ ಅವುಗಳಲ್ಲಿ ಹಿಂದಿನ ಪ್ರವಾದಿಗಳ ಸೇಡಿನ ಮನೋಭಾವ ಕಾಣುವುದಿಲ್ಲ. ಅವು ಜೆರೂಸಲೆಂಗೆ ಮಾಡಿರುವ ಅನ್ಯಾಯದ ಮಾತೂ ಇಲ್ಲ. ಇದೇ ಈಸಯ್ಯನ ಪ್ರವಾದಗಳ ವೈಶಿಷ್ಟ್ಯ. ಈತ ರಾಜ್ಯಗಳ ದೈವದ್ರೋಹವನ್ನು ಕ್ರೌರ್ಯವನ್ನು ಕಟುವಾಗಿ ಖಂಡಿಸಿದ್ದಾನೆ. ಇವೇ ಅವುಗಳ ವಿನಾಶಕ್ಕೆ ಕಾರಣವೆಂದಿದ್ದಾನೆ. ತಮ್ಮ ವೈಭವವನ್ನು ಮೆರೆಯುವುದಕ್ಕಾಗಿಯೇ ಅವು ವಿಗ್ರಹಾರಾಧನೆಯನ್ನು ಕೈಗೊಂಡು ತಮ್ಮ ಐಶ್ವರ್ಯದ ಸಂಕೇತಗಳಂತೆ ದೇವಾಲಯಗಳ ಗೋಪುರಗಳನ್ನು ಕಟ್ಟುತ್ತವೆಂದು ಅವಹೇಳನ ಮಾಡಿದ್ದಾನೆ. ಅಂಥ ಧಾರ್ಮಿಕ ಗೋಪುರಗಳು ಬಿದ್ದಾಗಲೇ ಅವುಗಳ ಪುನರುದ್ಧಾರವಾಗುವುದು ಎಂದು ಘೋಷಿಸಿದ್ದಾನೆ. ಬ್ಯಾಬಿಲಾನನ್ನು ಕುರಿತು ಈಸಯ್ಯ ಹೇಳಿರುವ ಕಟೂಕ್ತಿಗಳು ಅಸ್ಸೀರಿಯಕ್ಕೂ ಅನ್ವಯಿಸುತ್ತವೆ. 21ನೆಯ ಅಧ್ಯಾಯದಲ್ಲಿ ಬ್ಯಾಬಿಲಾನಿನ ದುರ್ಗತಿಯನ್ನು ವರ್ಣಿಸಿ ಅದರ ಸಂಸ್ಕೃತಿ ವಿನಾಶವಾಗುವುದನ್ನು ಕಂಡು ಮರುಗಿದ್ದಾನೆ. ಹೀಗೆ ಇವನ ದೈವಭಕ್ತಿಯೇ ಇವನ ಕ್ರೂರ ಭವಿಷ್ಯಕ್ಕೆ ಸ್ಫೂರ್ತಿಯನ್ನು ಕೊಟ್ಟಿದೆ, ಸೇಡಿನ ಮನೋಭಾವವಲ್ಲ.

ಜೆರೂಸಲಂನಲ್ಲಿ ನಡೆಯುತ್ತಿದ್ದ ಡಾಂಭಿಕ ಮತಾಚರಣೆಗಳನ್ನು ಕಟುವಾಗಿ ಈತ ಖಂಡಿಸಿದ್ದಾನೆ. ದೇವಾಲಯದಲ್ಲಿ ಮೂರ್ತಿಪೂಜಕರು ಮಾಡುತ್ತಿದ್ದ ಕಪಟ ಪ್ರಾರ್ಥನೆಗಳನ್ನು ನಿಷೇಧಿಸಿದ್ದಾನೆ. ಆದರೆ ದೇವಾಲಯವನ್ನು ಖಂಡಿಸಿಲ್ಲ. ಅದು ದೈವಭಕ್ತಿಯ ಕೇಂದ್ರವಾಗ ಬೇಕೆಂದು ನುಡಿದಿದ್ದಾನೆ. ಇಸ್ರೇಲಿನ ಮತಧರ್ಮದಲ್ಲಿ ನವಚೇತನವನ್ನು ತುಂಬಲು ಈತ ಕಾತರಗೊಂಡಿದ್ದ. ಹಿಂದಿನ ಪ್ರವಾದಿಗಳು ವ್ಯಕ್ತಿ ವ್ಯಕ್ತಿಗಳಲ್ಲಿ ಸಾಮಾಜಿಕವಾಗಿ ಇರಬೇಕಾದ ನೀತಿಯನ್ನು ಒತ್ತಿಹೇಳಿದರು. ಆದರೆ ಈತ ರಾಜಕೀಯ ನೀತಿಯನ್ನೂ ವಿಶ್ವಧರ್ಮವನ್ನೂ ಒತ್ತಿ ಹೇಳಿದ. ರಾಷ್ಟ್ರಗಳಲ್ಲಿ ಪರಸ್ಪರ ವೈರದಿಂದಲೂ ದುರಹಂಕಾರದಿಂದಲೂ ಉಂಟಾಗುವ ಯುದ್ಧಗಳು ಕೊಲೆಯಷ್ಟೇ ಪಾಪಕರವೆಂದು ಸಾರಿದ. ಅಂತಾರಾಷ್ಟ್ರೀಯ ಸೌಹಾರ್ದವನ್ನೂ ದೈವಿಕ ವಿಶ್ವರಾಷ್ಟ್ರ ರಚನೆಯನ್ನೂ ತನ್ನ ಅಂತಿಮದರ್ಶನದಲ್ಲಿ ಪ್ರಚುರ ಪಡಿಸಿದ. ಇವನ ದೃಷ್ಟಿ ಇಸ್ರೇಲಿಗೆ ಮಾತ್ರ ಪರಿಮಿತವಾಗಿರಲಿಲ್ಲ. ಕೇವಲ ಇಸ್ರೇಲಿನ ಅಭಿವೃದ್ಧಿಗೆ ಇವನ ಹಾರೈಕೆ ಮಿತಿಗೊಂಡಿರದೆ ಇಡೀ ಮಾನವಕುಲದ ಉದ್ಧಾರವನ್ನು ಹಾರೈಸುವುದಾಗಿತ್ತು. ಇಸ್ರೇಲಿನ ರಾಜಮನೆತನಕ್ಕೆ ಶ್ರೇಷ್ಠತೆ ಏನೂ ಇಲ್ಲ; ಭಗವಂತನೇ ಇಸ್ರೇಲಿನ ಸಿಂಹಾಸನಾರೂಢ ನಾಗಿ ವಿಶ್ವದ ಚಕ್ರಾಧಿಪತ್ಯವನ್ನು ನಡೆಸುತ್ತಾನೆ ಎಂದು ಈತ ನಂಬಿದ್ದ. ಇಸ್ರೇಲ್ ಕೇವಲ ಒಂದು ರಾಜಧಾನಿಯಾಗದೆ ವಿಶ್ವಾಧಿಪತ್ಯದ ಕೇಂದ್ರವಾಗುವುದು ಎಂದು ಈ ಪ್ರವಾದಿಯ ನುಡಿ. ದೇವಾಲಯ ಕೇವಲ ಮತಪ್ರಚಾರ ಪೀಠವಾಗಿರದೆ ವಿಶ್ವದ ನ್ಯಾಯಸ್ಥಾನವಾಗುವುದು. ರಾಷ್ಟ್ರಗಳು ತಮ್ಮ ಕತ್ತಿಗಳನ್ನು ನೇಗಿಲುಗಳಾಗಿ ಭರ್ಜಿಗಳನ್ನು ಕುಡ್ಲುಗಳನ್ನಾಗಿಯೂ ಮಾರ್ಪಡಿಸಿ ಸರಳವಾದ ಕೃಷಿಕ ಜೀವನವನ್ನು ಕೈಗೊಂಡು ಉದ್ಧಾರವಾಗುತ್ತವೆ. ರಾಷ್ಟ್ರಗಳ ಅಧಿಕಾರಲಾಲಸೆ ಕಡಿಮೆಯಾಗಿ ಯುದ್ಧಗಳು ನಿಂತು ಶಾಂತಿ ನೆಲೆಸುತ್ತದೆ-ಎಂಬ ಭವ್ಯಭವಿಷ್ಯವನ್ನು ಈತ ಸಾರಿದ. ಭಗವಂತ ತನ್ನ ಶಾಸನದಿಂದ ಮಾನವಕುಲದ ನೀತಿಯನ್ನು ನೆಲೆಗೊಳಿಸುತ್ತಾನೆ ಎಂಬ ನಂಬಿಕೆಯನ್ನು ಘೋಷಿಸಿದ. ಆದರೆ ಇವನ ಆಕಾಂಕ್ಷೆಯನ್ನು ಸಮಾಜ ಮನ್ನಿಸದೆ ಇರುವುದನ್ನು ಕಂಡು ಹತಾಶನಾಗಿ 40 ವರ್ಷಗಳ ಅನಂತರ ಪುನಃ ಇಸ್ರೇಲಿನ ಶೋಚನೀಯ ಅವಸ್ಥೆಯನ್ನು ಕುರಿತು ಆಗ್ರಹಗೊಂಡ. ಅಸ್ಸೀರಿಯದಂಥ ಅದೈವಿಕವಾದ ರಾಷ್ಟ್ರಗಳು ವಿನಾಶವಾಗುವುದು ಖಂಡಿತ. ಕೆಲವರು ಮಾತ್ರ ದೈವಭಕ್ತಿಯಿಂದ ಭಗವಂತನ ಕೃಪೆಗೆ ಪಾತ್ರರಾಗಿ ಇಸ್ರೇಲನ್ನು ಉಳಿಸಿಕೊಳ್ಳುವರು. ಅಭಿವೃದ್ಧಿಗೆ ಕಾರಣರಾಗುವರು ಎಂಬ ಭವಿಷ್ಯ ನುಡಿದ.

ಹೀಗೆ ಹೀಬ್ರೂ ಮತಕ್ಕೆ ಒಂದು ವಿಶ್ವಧರ್ಮದ ಸ್ಥಾನವನ್ನು ಕಲ್ಪಿಸುವ ಪ್ರತಿಭೆಯಿಂದ ರೂಪುಗೊಂಡ ಇವನ ಜೀವನ ಚಿರಸ್ಮರಣೀಯವಾಯಿತು. ವಿಶ್ವವ್ಯಾಪಕವಾದ ಏಕದೇವತಾವಾದವನ್ನು ಮೊಟ್ಟಮೊದಲು ನಿರೂಪಿಸಿದ ಮಹಾಪುರುಷ ಈತ ಎನ್ನಬಹುದು. (ಎಸ್.ಎಸ್.ಆರ್.)

**ಈಸೂರು:** ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಕಸಬೆಯಿಂದ 10ಕಿಮೀ ದಕ್ಷಿಣಕ್ಕೆ ಕುಮುದ್ವತೀ ನದಿಯ ಬಲದಂಡೆಯ ಮೇಲಿದೆ. ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಿವಮೊಗ್ಗ ಜಿಲ್ಲೆಗೆ ಹೆಸರು ತಂದ ಊರು ಈಸೂರು. ಮಹಾತ್ಮ ಗಾಂಧಿಯವರ ಭಾರತ ಬಿಟ್ಟು ತೊಲಗಿ ಘೋಷಣೆಯೊಂದಿಗೆ ಅಂದಿನ ಬ್ರಿಟಿಷ್ ಸರ್ಕಾರ 1942 ಆಗಸ್ಟ್ 9ರಂದು ಭಾರತ ಸ್ವಾತಂತ್ರ್ಯ ಚಳವಳಿಯ

ನಾಯಕರನ್ನೆಲ್ಲ ಬಂಧಿಸಿತ್ತು. ಈಸೂರಿನ ಜನತೆಯೂ ನಾಯಕನ ಕರೆಗೆ ಓಗೊಟ್ಟು ತಾಳ್ಮೆಯಿಂದಲೇ ಸ್ವಾತಂತ್ರ್ಯ ಚಳವಳಿಯನ್ನು ನಡೆಸುತ್ತಿತ್ತು. 150–200 ಮಂದಿ ಗ್ರಾಮದಲ್ಲಿ ಮೆರವಣಿಗೆ ನಡೆಸಿ ಸರ್ಕಾರಕ್ಕೆ ತೆರಿಗೆಯನ್ನು ಕೊಡದಂತೆ, ಪ್ರತಿಭಟಿಸುವ ಅಧಿಕಾರಿಗಳನ್ನು ಗಮನಿಸದಂತೆ, ಸರ್ಕಾರಿ ಅಧಿಕಾರಿಗಳಿಗೆ, ಶಾಲೆಗೆ, ಕಛೇರಿಗಳಿಗೆ ಧಿಕ್ಕಾರ ಘೋಷಿಸಿದರು. 1942 ಸೆಪ್ಟೆಂಬರ್ 25ರಂದು ಸರ್ಕಾರದ ಅಧಿಕಾರವನ್ನು ಧಿಕ್ಕರಿಸಿ ಈಸೂರನ್ನು ಸ್ವತಂತ್ರ ಗ್ರಾಮ ಎಂಬುದಾಗಿ ಸಾರಿದರು. ತಮ್ಮದೇ ಆದ ಸರ್ಕಾರ ರಚಿಸಿಕೊಂಡು ಗ್ರಾಮದ ಆಡಳಿತ ನಡೆಸತೊಡಗಿದರು. 1942 ಸೆಪ್ಟೆಂಬರ್ 28ರಂದು ಆ ತಾಲ್ಲೂಕಿನ ಅಮಲ್ದಾರರು, ಪೊಲೀಸ್ ಅಧಿಕಾರಿ ಮತ್ತು ಕೆಲವು ಪೊಲೀಸರೊಂದಿಗೆ ಗ್ರಾಮಕ್ಕೆ ಹೋದರು. ಅಲ್ಲಿ ನಡೆದ ಜನರ ಅಲ್ಪ ಪ್ರತಿಭಟನೆಗೆ ಅಧಿಕಾರಿಗಳು ಕೋಪಗೊಂಡು ನಿರಾಯುಧ ಜನತೆಯ ಮೇಲೆ ಮೊದಲು ಲಾಠಿಯಿಂದ ಹೊಡೆದು ಅನಂತರ ಗುಂಡು ಹಾರಿಸಿದರು. ಜನರೂ ಉದ್ರಿಕ್ತರಾದರು. ಗಲಭೆಯಲ್ಲಿ ಅಮಲ್ದಾರ ಚನ್ನಕೃಷ್ಣಪ್ಪ ಮತ್ತು ಪೊಲೀಸ್ ಅಧಿಕಾರಿ ಕೆಂಚೇಗೌಡ ಸತ್ತರು. ಸರ್ಕಾರಕ್ಕೆ ಸುದ್ದಿ ತಿಳಿದು ಸೈನ್ಯ ಮತ್ತು ಪೊಲೀಸ್ ದಳವನ್ನು ಕಳಿಸಿ ಹಳ್ಳಿಯನ್ನು ಲೂಟಿ ಮಾಡಿಸಿತು. ಇದ್ದವರನ್ನೆಲ್ಲ ಹೆಂಗಸರು ಮಕ್ಕಳೆನ್ನದೆ ಚಿತ್ರಹಿಂಸೆಗೆ ಗುರಿ ಮಾಡಿತು. ಸರ್ಕಾರದ ವಿರುದ್ಧ ಬಂಡಾಯವೆದ್ದವರೆಂದು 50 ಮಂದಿಯ ಮೇಲೆ ಆರೋಪ ಹೊರಿಸಿ 41 ಮಂದಿಯನ್ನು ಬಂಧಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿತು. ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು 1943 ಜನವರಿ 9ರಂದು ತೀರ್ಪಿತ್ತು, ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರಿ, ಬಿ. ಹಾಲಪ್ಪ ಮತ್ತು ಜಿ. ಶಂಕರಪ್ಪ ಇವರಿಗೆ ಮರಣದಂಡನೆಯನ್ನೂ ಹಾಲಮ್ಮ ಮತ್ತು ಪಾರ್ವತಮ್ಮ ಇವರಿಗೆ ಜೀವಾವಧಿ ಗಡೀಪಾರು ಶಿಕ್ಷೆಯನ್ನೂ ವಿಧಿಸಿದರು. ಉಳಿದವರಿಗೆ ನಾನಾರೀತಿಯ ವಿವಿಧ ಅವಧಿಯ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಅದರಂತೆ 1943 ಮಾರ್ಚ್ 8ರಂದು ಗುರಪ್ಪ ಮತ್ತು ಮಲ್ಲಪ್ಪ ಇಬ್ಬರನ್ನೂ ಗಲ್ಲಿಗೇರಿಸಲಾಯಿತು. ಮಾರನೆಯ ದಿನ ಸೂರ್ಯನಾರಾಯಣಾಚಾರಿ ಮತ್ತು ಹಾಲಪ್ಪನವನ್ನೂ 10ನೆಯ ತಾರೀಖು ಜಿ. ಶಂಕರಪ್ಪನನ್ನೂ ಅಂದಿನ ಸರ್ಕಾರ ಗಲ್ಲಿಗೇರಿಸಿ ತನ್ನ ಸೇಡನ್ನು ತೀರಿಸಿಕೊಂಡಿತು. ಪಾರ್ವತಮ್ಮ, ಹಾಲಮ್ಮ ಮತ್ತು ಸಿದ್ಧಮ್ಮ ಇವರನ್ನು 1946 ಅಕ್ಟೋಬರ್ 21ರಂದು ಬಿಡುಗಡೆ ಮಾಡಲಾಯಿತು. ಇಡೀ ಕರ್ನಾಟಕದಲ್ಲಿ 'ಸ್ವತಂತ್ರ ಗ್ರಾಮ' ಎಂದು ಘೋಷಿಸಿಕೊಂಡು ಸ್ವಾತಂತ್ರ್ಯಕ್ಕೆ ತಮ್ಮ ಪ್ರಾಣವನ್ನರ್ಪಿಸಿದ ಕಲಿಗಳಿಂದ ಈ ಊರು ಖ್ಯಾತವಾಗಿದೆ. (ವಿ.ಜಿ.ಕೆ.)

**ಈಸೂರು ಚಳವಳಿ:** 1942ರ ಕ್ವಿಟ್ ಇಂಡಿಯ ಚಳವಳಿ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಮಹತ್ತ್ವದ ಚಳವಳಿ. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮ ಜನಸಾಂದ್ರತೆಯಿಂದ ಕೂಡಿದ್ದು ಸಮೃದ್ಧವಾಗಿತ್ತು. ಗಾಂಧೀಜಿಯ ಕರೆಗೆ ಈ ಗ್ರಾಮದ ಜನತೆ ಸ್ಪಂದಿಸಿದ ರೀತಿ ಅನನ್ಯವಾದುದು. ಸ್ವಾತಂತ್ರ್ಯ ಚಳವಳಿ ತೀವ್ರವಾಗಿ ನಡೆಯುತ್ತಿದ್ದ ಹುಬ್ಬಳ್ಳಿ, ದಕ್ಷಿಣ ಧಾರವಾಡ, ಬ್ಯಾಡಗಿ ಮತ್ತು ಹಿರೇಕೆರೂರುಗಳಿಗೆ ಈ ಗ್ರಾಮ ಸಮೀಪದಲ್ಲಿದ್ದು, ಅದರ ಪ್ರಭಾವ ಇಲ್ಲಿ ಆಗಿತ್ತು.

ಕ್ವಿಟ್ ಇಂಡಿಯ ಚಳವಳಿಯ ಆರಂಭಕ್ಕೆ ಮುನ್ನವೇ ಸರ್ಕಾರ ಗಾಂಧೀಜಿಯನ್ನು ಬಂಧಿಸಿದ್ದು ದೇಶವ್ಯಾಪಿ ಪ್ರತಿಭಟನೆಗಳಿಗೆ ಕಾರಣವಾದಂತೆ ಶಿವಮೊಗ್ಗದಲ್ಲೂ ಚಳವಳಿಗೆ ನಾಂದಿ ಹಾಡಿತ್ತು. ಕಾಂಗ್ರೆಸ್ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು ಸರ್ಕಾರಿ ಕಟ್ಟಡಗಳ ಮತ್ತು ಶಾಲೆಗಳ ಪಿಕೆಟಿಂಗ್ ಆರಂಭಿಸಿದರು. ಕಾಂಗ್ರೆಸ್ ಕಂದಾಯವನ್ನು ನಿರಾಕರಿಸಲು ಕರೆ ನೀಡಿತು. ಶಾನುಭೋಗರು ಮತ್ತು ಪಟೇಲರು ತಮ್ಮ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡುವಂತೆ ಕಾಂಗ್ರೆಸ್ ಬಯಸಿತು. ಕಾರ್ಯಕರ್ತರು ನಡೆಸಿದ ರೈಲ್ವೆ ಹಳಿ ನಾಶ, ಟೆಲಿಗ್ರಾಫ್ ತಂತಿ ಕತ್ತರಿಸುವುದು ಮುಂತಾದ ಕಾರ್ಯಗಳಿಂದ ಶಿವಮೊಗ್ಗ ಕೆಲದಿನಗಳ ಕಾಲ ಹೊರಗಿನ ಸಂಪರ್ಕದಿಂದ ಕಡಿತಗೊಂಡಿತ್ತು.

ಆಗಸ್ಟ್ ಎರಡನೆಯ ವಾರದಲ್ಲಿ ಶಾಂತವೀರಯ್ಯ, ಮಲ್ಲೇಶಪ್ಪ ಮತ್ತು ರುದ್ರಪ್ಪ ಎಂಬುವರ ನೇತೃತ್ವದಲ್ಲಿ ಕಾಂಗ್ರೆಸ್ ತನ್ನ ಚಟುವಟಿಕೆಗಳನ್ನು ಆರಂಭಿಸಿತು. ಶಿವಮೊಗ್ಗದಲ್ಲಿ ಓದುತ್ತಿದ್ದ ಈಸೂರಿನ ವಿದ್ಯಾರ್ಥಿಗಳೂ ಈ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಭೆಯೊಂದು ನಡೆದು ಅದರಲ್ಲಿ ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಲೂ ಸರ್ಕಾರಿ ಅಧಿಕಾರಿಗಳಿಗೆ ಯಾವುದೇ ಸಹಕಾರ ನೀಡದಿರಲೂ ಮತ್ತು ಕಂದಾಯವನ್ನು ನಿರಾಕರಿಸಲೂ ತೀರ್ಮಾನಿಸಲಾಗಿತ್ತು. ನಾಗವಾರದ ಭೀಮಪ್ಪ, ರಟ್ಟೀಹಳ್ಳಿಯ ಶಿವರಾಮ ಮೈಲಾರಿ ಜೋಯಿಸ್ ಮತ್ತು ಈಸೂರಿನ ಶಂಕರಪ್ಪ ಮೊದಲಾದ ನಾಯಕರು ಕರ ನಿರಾಕರಣೆಯನ್ನು ಜಾರಿಗೊಳಿಸುವ ಹೊಣೆ ಹೊತ್ತರು.

ಹಳ್ಳಿಗರು ತಮ್ಮ ಹಳ್ಳಿಗಳನ್ನು ಸ್ವತಂತ್ರ ಎಂದು ಘೋಷಿಸಿಕೊಂಡು, ಬೇಜವಾಬ್ದಾರಿ ಸರ್ಕಾರಕ್ಕೆ ಪ್ರತಿಯಾಗಿ ಸಮಾನಾಂತರ ಸರ್ಕಾರಗಳನ್ನು ಸ್ಥಾಪಿಸಿಕೊಂಡರು. ಅವರು 8 ವರ್ಷದ ಹುಡುಗನೊಬ್ಬನನ್ನು ಅಮುಲ್ದಾರ್ ಎಂದು ನೇಮಕ ಮಾಡಿದ್ದಲ್ಲದೆ, ತಮ್ಮ ನಿರ್ಧಾರಗಳನ್ನು ಜಾರಿಗೆ ತರಲು ಸ್ವಯಂಸೇವಕರ ಸಮಿತಿಯೊಂದನ್ನು ರಚಿಸಿದರು. ಶಾನುಭೋಗರು ಮತ್ತು ಪಟೇಲರನ್ನು ರಾಜೀನಾಮೆ ನೀಡುವಂತೆ ಒತ್ತಾಯಿಸಿದರು. ಅವರು ನಿರಾಕರಿಸಿದಾಗ ಅವರ ದಫ್ತರ್‌ಗಳನ್ನು ಸುಟ್ಟು, ಶಿಕ್ಷೆಯರೂಪವಾಗಿ ಅವರಿಬ್ಬರನ್ನು ಸುಡುಬಿಸಿಲಿನಲ್ಲಿ ಒಂಟಿಕಾಲಿನಲ್ಲಿ ನಿಲ್ಲಿಸಿದರು. ಅಂಚೆಕಛೇರಿಯನ್ನು ಸುಟ್ಟಿದ್ದಲ್ಲದೆ ಸರ್ಕಾರಿ ಅಧಿಕಾರಿಗಳನ್ನು ಹತ್ಯೆಮಾಡಲಾಯಿತು. ಹಳ್ಳಿಗೆ ಪೋಲಿಸ್ ಪೇದೆ ಬಂದಾಗ ಆತನ ರುಮಾಲನ್ನು ಕಿತ್ತು ಗಾಂಧಿ ಟೋಪಿಯನ್ನು ಹಾಕಿದರು. ಅಲಕ್ಷ್ಯ ಸರ್ಕಾರಿ ಅಧಿಕಾರಿಗಳು ಊರಿಗೆ ಬಂದರೆ? ಎಂಬ ವಿಚಾರಿಕೆಯನ್ನು ಹಲಗೆಯ ಮೇಲೆ ಬರೆದು ಹೆಬ್ಬಾಗಿಲಿಗೆ ತೂಗು ಹಾಕಲಾಯಿತು. ಮತ್ತೊಮ್ಮೆ ಹಳ್ಳಿಗೆ ಬರದಂತೆ ಎಚ್ಚರಿಕೆ ನೀಡಿ ಕಳುಹಿಸಲಾಯಿತು.

ಸೆಪ್ಟೆಂಬರ್ 27ರಂದು ಪಟೇಲ ಮತ್ತು ಶಾನುಭೋಗರ ಕಛೇರಿಗಳನ್ನು ಸುಡಲಾಯಿತು. ಈ ಹಂತದಲ್ಲಿ ಶಂಕರ ಬಸವಪ್ಪನವರ ಪತ್ನಿ ಹಾಲಮ್ಮನವರ ನೇತೃತ್ವದಲ್ಲಿ ಮಹಿಳೆಯರೂ ಚಳವಳಿಯನ್ನು ಸೇರಿದರು. ಕಾಂಗ್ರೆಸ್ಸಿನ ಎಚ್ಚರಿಕೆಯ ನಡುವೆಯೂ ಸರ್ಕಾರ ಅಧಿಕಾರಿಗಳನ್ನು ಕಳುಹಿಸಿ ಈಸೂರಿನ ಪರಿಸ್ಥಿತಿಯನ್ನು ಅರಿಯುವ ಪ್ರಯತ್ನ ಮಾಡಿತು. ಸೆಪ್ಟೆಂಬರ್ 27ರಂದು ಪೊಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ರೆವಿನ್ಯೂ ಇನ್ಸ್‌ಪೆಕ್ಟರ್‌ರೊಂದಿಗೆ ಮೂರು ಜನ ಪೇದೆಗಳು ಈಸೂರಿಗೆ ಬಂದರು. ಸರ್ಕಾರಿ ಅಧಿಕಾರಿಗಳನ್ನು ಊರಿನ ಬೃಹತ್ ಗುಂಪು ಸುತ್ತುವರೆಯಿತು. ಹಠೋಟಿಗೆ ತರಲಾಗದ ಉದ್ವಿಗ್ನ ಜನ ಸಮುದಾಯವನ್ನು ನೋಡಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ತನ್ನ ರಿವಾಲ್ವರ್‌ನಿಂದ ಗುಂಡು ಹಾರಿಸಲಾಗಿ ಗುರುಶಾಂತಪ್ಪ ಮತ್ತು ಪರಪ್ಪಾಚಾರಿಯವರು ಗಾಯಗೊಂಡರು. ಇದರಿಂದ ರೊಚ್ಚಿಗೆದ್ದ ಹಳ್ಳಿಗರು ಸರ್ಕಾರಿ ಅಧಿಕಾರಿಗಳನ್ನು ಥಳಿಸಿದರು. ಇದರಿಂದ ಸಬ್ ಇನ್ಸ್‌ಪೆಕ್ಟರ್ ಕೆಂಚನಗೌಡ ಸ್ಥಳದಲ್ಲೇ ನಿಧನನಾದರೆ, ಪೊಲೀಸ್ ಇನ್ಸ್‌ಪೆಕ್ಟರ್, ರೆವಿನ್ಯೂ ಇನ್ಸ್‌ಪೆಕ್ಟರ್ ತೀವ್ರವಾಗಿ ಗಾಯಗೊಂಡರು. ಈ ಗಲಭೆಯಲ್ಲಿ ಮಹಿಳೆಯರು ಮತ್ತು ಮಕ್ಕಳೂ ಪಾಲ್ಗೊಂಡಿದ್ದರು. ಸರ್ಕಾರಿ ಅಧಿಕಾರಿಗಳ ಮೇಲಿನ ಈ ತೆರನಾದ ಹಲ್ಲೆ ಸಂಸ್ಥಾನದಲ್ಲಿ ನಡೆದಿದ್ದು ಇದೇ ಮೊದಲಾಗಿತ್ತು. ಅನಂತರ ಮೆರವಣಿಗೆ ಹೊರಟು, ನಿಷೇದಾಜ್ಞೆಯನ್ನು ಧಿಕ್ಕರಿಸಿ ಅಲ್ಲಿನ ವೀರಭದ್ರೇಶ್ವರ ದೇವಾಲಯದ ಮೇಲೆ ಸ್ವತಂತ್ರ್ಯ ಪತಾಕೆಯನ್ನೇ ಹಾರಿಸಿ ಸ್ವತಂತ್ರ್ಯ ಘೋಷಿಸಿಕೊಂಡರು. 1942ರಲ್ಲಿ ಸೆಪ್ಟೆಂಬರ್ 28ರಂದು ಈಸೂರು ಸ್ವಾತಂತ್ರ್ಯ ಘೋಷಿಸಿ ಕೊಂಡ ಕರ್ನಾಟಕದ ಪ್ರಥಮ ಹಳ್ಳಿ ಎನಿಸಿಕೊಂಡಿತು.

ಶಿಕಾರಿಪುರದಲ್ಲಿದ್ದ ಡೆಪ್ಯುಟಿ ಕಮೀಷನರ್‌ಗೆ ಸುದ್ದಿ ಮುಟ್ಟಿತು. ಗಲಭೆಯಲ್ಲಿ ಗಾಯಗೊಂಡಿದ್ದ ಪೊಲೀಸ್ ಪೇದೆ ಗ್ರಾಮಕ್ಕೆ ಹೋಗಬಾರದೆಂದೂ ಗ್ರಾಮಸ್ಥರೂ ಆಕ್ರೋಶಗೊಂಡಿದ್ದಾರೆಂದೂ ಹೇಳಿದ. ಆದರೆ ಹೆಚ್ಚಿನ ಪೊಲೀಸ್ ಪಡೆಯೊಂದಿಗೆ ಈಸೂರನ್ನು ಪ್ರವೇಶಿಸಿದ ಅಧಿಕಾರಿಗಳು ಇಡೀ ಹಳ್ಳಿಯನ್ನು ಸುತ್ತುವರೆದು, ಜನತೆಯನ್ನು ನಿರ್ದಾಕ್ಷಿಣ್ಯವಾಗಿ ಥಳಿಸಿದ್ದಲ್ಲದೆ, ಇಡೀ ಹಳ್ಳಿಯನ್ನು ಲೂಟಿ ಮಾಡಿದರು. ಹಳ್ಳಿಯ ಮಹಿಳೆಯರ ಮೇಲೆ ಅತ್ಯಾಚಾರವೂ ನಡೆಯಿತು.

ಸು.50 ಜನರ ಮೇಲೆ ಪಟೇಲ ಮತ್ತು ಶಾನುಭೋಗರನ್ನು ಹಿಂಸಿಸಿದರೆಂದೂ ಸರ್ಕಾರಿ ಕಡತಗಳನ್ನು ನಾಶಪಡಿಸಿದರೆಂದೂ ಮತ್ತು ಸರ್ಕಾರಿ ಅಧಿಕಾರಿಗಳನ್ನು ಹತ್ಯೆ ಮಾಡಿದರೆಂದೂ ಆರೋಪಪಟ್ಟಿ ದಾಖಲಿಸಲಾಯಿತು. ನ್ಯಾಯಾಧೀಶರು ಕೆಲವರಿಗೆ ಗಲ್ಲು ಶಿಕ್ಷೆಯನ್ನೂ, ಜೀವಾವಧಿ ಶಿಕ್ಷೆಯನ್ನೂ ವಿಧಿಸಲಾಯಿತು.ಈ ಸಂದರ್ಭದಲ್ಲಿ ಈಸೂರಿನ ಜನತೆ ಮೆರೆದ ಎದೆಗಾರಿಕೆ, ದಿಟ್ಟತನ, ತ್ಯಾಗ, ಬಲಿದಾನಗಳು ಪ್ರಶಂಸನೀಯವಾದುದ್ದಾಗಿವೆ. ಈ ಬಗ್ಗೆ ಜಯಪ್ರಕಾಶ ನಾರಾಯಣ ಅವರು ಕರ್ನಾಟಕದ ಮಾದರಿಯನ್ನು ಭಾರತದ ಇತರ ಭಾಗಗಳ ಜನರು ಅನುಸರಿಸಿದ್ದರೆ ಇನ್ನೂ ಉತ್ತಮ ಪರಿಣಾಮಗಳನ್ನು ಗಳಿಸಬಹುದಿತ್ತು ಎಂದಿದ್ದಾರೆ. (ಎಮ್.ಎಸ್.)

**ಈಸೋಪ್:** ತನ್ನ ನೀತಿಕಥೆಗಳಿಂದ ಪ್ರಸಿದ್ಧನಾದವ. ಕಾಲ ಬಹುಶಃ ಪ್ರ.ಶ.ಪೂ. 568. ಸಾಮೋಸಿನ ಇಯಾದ್ಮನ್ನಿನ ಗುಲಾಮನಾಗಿದ್ದನೆಂದೂ ಡೆಲ್ಫಿಯ ಜನ ಸಿಟ್ಟಾಗಿ ಇವನನ್ನು ಕೊಂದರೆಂದೂ ಹೀರಡಟಸ್ (ಪ್ರ.ಶ.ಪೂ. 5ನೆಯ ಶತಮಾನ) ಹೇಳಿದ್ದಾನೆ. ಇವನ ಮೇಲೆ ಒಂದು ಬಟ್ಟಲನ್ನು ಕದ್ದನೆಂಬ ಆರೋಪ ಹೊರಿಸಿದ್ದರೆಂಬ ಅಂಶವನ್ನು ಹಾಸ್ಯನಾಟಕಕಾರ ಅರಿಸ್ಟೊಫೆನೀಸ್ ತಿಳಿಸಿದ್ದಾನೆ. ತನ್ನ ಕಟ್ಟುಕಥೆಗಳಂತೆಯೇ ಈಸೋಪ್ ಕಾಲ್ಪನಿಕ ವ್ಯಕ್ತಿಯೆಂದೂ ಹೇಳಿದವರುಂಟು.

ಈಸೋಪನ ಸಮಯಸ್ಫೂರ್ತಿಗೆ ಅರಿಸ್ಟಾಟಲ್ ಒಂದು ನಿದರ್ಶನ ಕೊಡುತ್ತಾನೆ. ಲಂಚ ತಿಂದು ಶ್ರೀಮಂತನಾದ ಒಬ್ಬ ಅಧಿಕಾರಿಯನ್ನು ತೆಗೆಯಬೇಕೆಂದು ಜನ ಒತ್ತಾಯ ಮಾಡಿದಾಗ ಈಸೋಪ್ ಒಂದು ಕಥೆ ಹೇಳಿದನಂತೆ. ಬೇಲಿಹಂದಿಯೊಂದು ನರಿಯ ಮೈಮೇಲಿನ ಚಿಕ್ಕಾಡುಗಳನ್ನು ತೆಗೆಯಲು ನೋಡಿದಾಗ ನರಿ, ಬೇಡ ಈಗಾಗಲೇ ನನ್ನ ರಕ್ತವನ್ನು ಹೊಟ್ಟೆತುಂಬುವಂತೆ ಹೀರಿದ ಚಿಕ್ಕಾಡುಗಳ ಬದಲಿಗೆ ಹಸಿದ ಚಿಕ್ಕಾಡುಗಳು ಬಂದು ನನ್ನಲ್ಲಿ ಉಳಿದಿರುವ ರಕ್ತ ಹೀರಬಹುದು ಎಂದಿತಂತೆ. ಬಡವನಾಗಿರುವ ಹೊಸ ಅಧಿಕಾರಿಯನ್ನು ತಂದರೆ ಆತ ಮತ್ತೆ ಲಂಚ ತಿನ್ನಲು ಪ್ರಾರಂಭಿಸುತ್ತಾನೆ. ಅವನಿಗಿಂತ ಲಂಚ ತಿಂದು ತೃಪ್ತನಾಗಿರುವ ಹಳೆಯ ಅಧಿಕಾರಿಯೇ ಉತ್ತಮ ಎಂಬ ತಾತ್ಪರ್ಯ ಕಥೆಯಲ್ಲಿ ಚೆನ್ನಾಗಿ ಧ್ವನಿಸುತ್ತದೆ.

ಈಸೋಪ್ ಸಂಗ್ರಹಿಸಿದ ಕಥೆಗಳಲ್ಲಿ (231 ರಿಂದ 250) ಕಾಲುಭಾಗ ಭಾರತದಿಂದ ಬಂದವು. ಹದಿಮೂರು ಬುದ್ಧನ ಜಾತಕ ಕಥೆಗಳಲ್ಲಿವೆ (ತೋಳ ಮತ್ತು ಕುರಿ; ಸಿಂಹದ ಚರ್ಮದಲ್ಲಿದ್ದ ಕತ್ತೆ, ಚಿನ್ನದ ತತ್ತಿ ಇಡುವ ಬಾತುಕೋಳಿ ಇತ್ಯಾದಿ). ರೈತ ಮತ್ತು ಸರ್ಪ, ಬೆಕ್ಕು ಹೆಣ್ಣಾದ ಕಥೆ ಮುಂತಾದವು ಮಹಾಭಾರತದ ದೃಷ್ಟಾಂತ ಕಥೆಗಳಿಗೆ ಹೋಲಿಕೆಯುಳ್ಳವು. ಉಳಿದವು ಗ್ರೀಸಿನಲ್ಲಿ ಬಳಕೆಯಲ್ಲಿದ್ದ ಜಾನಪದ ಕಥೆಗಳೆಂದು ನಂಬಲಾಗಿದೆ. ಎಲ್ಲ ತರದ

ಜನರ ರೀತಿನೀತಿ, ಜೀವನಕ್ರಮ ಆಚರಣೆಗಳನ್ನು ಪಶುಪಕ್ಷಿ ಕ್ರಿಮಿಕೀಟಾದಿಗಳ ಸಂಕೇತದಿಂದ ಈಸೋಪ್ ಬಹಳ ನೈಪುಣ್ಯದಿಂದ ತಿಳಿಸಿ ಮನುಷ್ಯರು ಹೇಗೆ ನಡೆಯಬೇಕೆಂದು ದಾರಿ ತೋರಿಸಿದ್ದಾನೆ–ಎಂದು 1484ರಲ್ಲಿ ಈಸೋಪ್‌ನ ನೀತಿಕಥೆಗಳನ್ನು ಅನುವಾದ ಮಾಡಿದ ವಿಲಿಯಂ ಕ್ಯಾಕ್ಸ್‌ಟನ್ ಹೇಳಿದ್ದಾನೆ. ಬೈಬಲಿನ ಅನಂತರದ ಶ್ರೇಷ್ಠ ಗ್ರಂಥವೆಂದು ಈ ಕಥೆಗಳನ್ನು ಮಾರ್ಟಿನ್ ಲೂಥರ್ ಹೊಗಳಿದ್ದಾನೆ.

ಹುಂಜವೊಂದು ರತ್ನ ನಿರುಪಯೋಗಿಯೆಂದ ಕಥೆ, ಕಪ್ಪೆ ಎತ್ತಿನಂತಾಗಬೇಕೆಂದು ಹೊಟ್ಟೆಯೊಡೆದು ಸತ್ತ ಕಥೆ. ನರಿ ಕಾಗೆಯ ಬಾಯಲ್ಲಿದ್ದ ಮಾಂಸದ ತುಂಡನ್ನು ಲಪಟಾಯಿಸಿದ ಕಥೆ–ಮುಂತಾದವು ಹಾಸ್ಯದೃಷ್ಟಿಯಿಂದ ಚಮತ್ಕಾರವಾಗಿ ಸಾರ್ವಕಾಲಿಕ ಸತ್ಯಗಳನ್ನು ನಿರೂಪಿಸುತ್ತವೆ. ಕಥೆಗಳಲ್ಲಿ ಪ್ರಾಣಿಗಳ ಸ್ವಭಾವ ವೈಶಿಷ್ಟ್ಯಗಳು ಸ್ವಾರಸ್ಯವಾಗಿವೆ. ತೋಳ ಬಂತಲೇ ತೋಳ ಬಂತು, ದ್ರಾಕ್ಷಿಹಣ್ಣು ಹುಳಿ–ಮುಂತಾದ ಮಾತುಗಳು ನಮ್ಮ ಭಾಷಾಸಂಪತ್ತನ್ನು ಹೆಚ್ಚಿಸಿವೆ. ಎಷ್ಟು ಸಂಗ್ರಹವಾಗಿ ಈಸೋಪ್ ಕಥೆ ಹೇಳಬಲ್ಲನೆಂಬುದಕ್ಕೆ ಒಂದು ಉದಾಹರಣೆ ಕೊಡಬಹುದು. ತನ್ನ ಒಂದೇ ಮರಿಯೊಡನೆ ಆಡುತ್ತಿದ್ದ ಸಿಂಹವನ್ನು ಕಂಡು ನರಿ 'ಅಯ್ಯೋ ! ಒಂದೇ ಮರಿ' ಎಂದಿತಂತೆ. ಅದಕ್ಕೆ ಸಿಂಹ ಗಂಭೀರವಾಗಿ 'ಹೌದು, ಸಿಂಹದ ಮರಿ' ಎಂದಿತಂತೆ. ಈಸೋಪನಲ್ಲಿರುವ ಅತಿ ದೊಡ್ಡ ಕಥೆಯೆಂದರೆ ಕಾಡಿಲಿ ಊರಿಲಿಯ ಮನೆಗೂ ಊರಲಿ ಕಾಡಿಲಿಯ ಮನೆಗೂ ಔತಣಕ್ಕೆ ಹೋದ ಕಥೆ. ಇಲ್ಲಿ ನಗರಜೀವನಕ್ಕೂ ಗ್ರಾಮಜೀವನಕ್ಕೂ ಇರುವ ವ್ಯತ್ಯಾಸವನ್ನು ಕವಿ ಹೃದಯಂಗಮವಾಗಿ, ವಿಸ್ತಾರವಾಗಿ ವಿವರಿಸಿದ್ದಾನೆ.

ಈಸೋಪನ ಕಥೆಗಳು ವಿಶ್ವದ ಅನೇಕ ಭಾಷೆಗಳಲ್ಲಿ, ಪದ್ಯಗದ್ಯಗಳಲ್ಲಿ ಅನೇಕ ಬಾರಿ ಅನುವಾದವಾಗಿವೆ. ಕನ್ನಡದಲ್ಲಿ ಜಿ.ಪಿ. ರಾಜರತ್ನಂ ಮತ್ತು ಆನಂದರು ಅನುವಾದಿಸಿದ್ದಾರೆ. ಪೆಂಗ್ವಿನ್ ಗ್ರಂಥಮಾಲೆಯಲ್ಲಿ ಬಂದಿರುವ ಇಂಗ್ಲಿಷ್ ಗದ್ಯಾನುವಾದವಂತೂ ಬಹಳ ಚೆನ್ನಾಗಿದೆ.

(ಎಲ್.ಆರ್.ಎಚ್.)

**ಈಸ್ಕಿನೀಸ್:** ಪ್ರ.ಶ.ಪೂ. ಸು. 389–314. ಗ್ರೀಕ್ ನಗರರಾಜ್ಯವಾದ ಅಥೆನ್ಸಿನ ವಾಗ್ಮಿ, ಡೆಮಾಸ್ತನೀಸನ ಪ್ರಬಲ ವಿರೋಧಿ. ಬಡ ಕುಟುಂಬದಲ್ಲಿ ಜನಿಸಿ ಸ್ವಸಾಮರ್ಥ್ಯದಿಂದಲೇ ಮೇಲೇರಿ ಬಂದವ. ತಂದೆ ಸಾಮಾನ್ಯ ಶಾಲಾ ಉಪಾಧ್ಯಾಯ, ತಾಯಿ ನರ್ತಕಿ ಎಂಬ ವಿಷಯಗಳನ್ನೇ ಮುಂದು ಮಾಡಿ ಡೆಮಾಸ್ತನೀಸ್ ಇವನನ್ನು ಅವಮಾನಪಡಿಸಿದ್ದುಂಟು. ತಂದೆ ಒಬ್ಬ ಬಡ ಅಧ್ಯಾಪಕನೆನ್ನುವುದು ನಿಜವಾದರೂ ಇವನ ಸೋದರರು ಪ್ರಭಾವಶಾಲಿಗಳಾದ ನಾಗರಿಕರಾಗಿದ್ದುದಲ್ಲದೆ, ಅವರಲ್ಲಿ ಒಬ್ಬ ರಾಯಭಾರಿಯಾಗಿದ್ದನೆನ್ನುವುದು ವಾಸ್ತವ. ವ್ಯಾಯಾಮಶಾಲೆಯಲ್ಲಿ ಪಳಗಿದ್ದುದರಿಂದ ಈಸ್ಕಿನೀಸ್ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಹೆಸರುಗಳಿಸಿದ. ಈ ಮಧ್ಯೆ ಒಬ್ಬ ನ್ಯಾಯಾಧೀಶನ ಗುಮಾಸ್ತನಾಗಿ, ಅನಂತರ ಒಬ್ಬ ಸಾಮಾನ್ಯ ನಟನಾಗಿ, ಕೊನೆಗೆ ರಾಜಕೀಯ ಧುರೀಣರಾದ ಅರಿಸ್ಟೋಫೋನ್ ಮತ್ತು ಯೂಬುಲಸರಿಗೆ ಕಾರ್ಯದರ್ಶಿಯಾಗಿ ಚುನಾವಣೆಗೆ ಸ್ಪರ್ಧಿಸಲು ಸಹಾಯ ಮಾಡಿದರು. ಈ ವೇಳೆಗೆ ಇವನಿಗೆ 40 ವರ್ಷ ತುಂಬಿತ್ತು. ಸಾರ್ವಜನಿಕ ಭಾಷಣ ಮಾಡುವ ಅವಕಾಶ ದೊರೆತದ್ದರಿಂದ ಭಾಷಣಕಲೆಗಳಲ್ಲಿದ್ದ ಈತನ ನಿಜವಾದ ಸಾಮರ್ಥ್ಯ ಲೋಕವಿದಿತವಾಗಲು ಅನುಕೂಲವಾಯಿತು. ನ್ಯಾಯಾಂಗ ಮತ್ತು ರಾಜಕೀಯ ವಿಷಯಗಳ ಬಗ್ಗೆ ಈಸ್ಕಿನೀಸ್ ಶರವೇಗದಲ್ಲಿ ಪರಿಣತಿಯನ್ನು ಸಂಪಾದಿಸಿ ತನ್ನ ಮಾತುಗಾರಿಕೆಯನ್ನು ಬೆಳೆಸಿಕೊಂಡ. ಕೋಮಲತೆ, ನವೀನತೆ, ರಮ್ಯತೆ ಮತ್ತು ವಿಶೇಷತೆ ಇದ್ದುದರಿಂದ ಇವನ ಭಾಷಣಗಳು ಮನೋಜ್ಞವಾಗಿರುತ್ತಿದ್ದವು.

ಪ್ರ.ಶ.ಪೂ. 348ರಲ್ಲಿ ಮ್ಯಾಸಿಡೋನಿಯದ ಫಿಲಿಪ್‌ನ ವಿರುದ್ಧ ಸೈನ್ಯ ಸಂಘಟಿಸಲು ಈತನನ್ನು ಪೆಲೊಪೊನಿಸಸ್‌ಗೆ ಕಳುಹಿಸಲಾಯಿತು. ಈ ಯತ್ನದಲ್ಲಿ ವಿಫಲನಾದ ಮೇಲೆ ಮುಂದಿನ ವರ್ಷವೇ ಫಿಲಿಪನ ಜೊತೆಯಲ್ಲಿ ಕೌಲು ಮಾಡಿಕೊಳ್ಳಲು ತೆರಳಿ ಅದರಲ್ಲಿ ಯಶಸ್ವಿಯಾದ. ರಾಷ್ಟ್ರದ ಹಿತದೃಷ್ಟಿಯಿಂದ ಯುದ್ಧಕ್ಕಿಂತ ಶಾಂತಿಯೇ ಮಿಗಿಲೆಂದು ಈತ ಭಾವಿಸಿದ್ದ. ಪ್ರ.ಶ.ಪೂ. 345ರಲ್ಲಿ ಇವನ ವಿರೋಧಿ ಡೆಮಾಸ್ತನೀಸ್ ಇವನನ್ನು ರಾಷ್ಟ್ರದ್ರೋಹಿ ಮತ್ತು ಲಂಚಕೋರನೆಂದು ಆಪಾದಿಸಿದ. ಈ ಆಪಾದನೆಯಿಂದ ಬಹಳ ಕಷ್ಟಪಟ್ಟು ತಪ್ಪಿಸಿಕೊಳ್ಳಬೇಕಾಯಿತು. ಈಸ್ಕನೀಸ್ ಕೂಡ ಡೆಮಾಸ್ತನೀಸನಂತೆ ಶಕ್ತಿಯುತವಾಗಿ ಭಾಷಣ ಮಾಡಿ, ತನ್ನ ವಿರೋಧಿಗಳನ್ನು ಎದುರಿಸಲು ಪ್ರಯತ್ನ ಮಾಡಿದ. ಕೊನೆಗೊಮ್ಮೆ ಡೆಮಾಸ್ತನೀಸನಿಗೆ ಬಂಗಾರದ ಕಿರೀಟವನ್ನು ಹಾಕಬೇಕೆಂದು ಟೆಸಿಫೋನ್ ಸಲಹೆ ಮಾಡಿದಾಗ, ಈಸ್ಕನೀಸ್ ಅದನ್ನು ಪ್ರಬಲವಾಗಿ ವಿರೋಧಿಸಿ ಡೆಮಾಸ್ತನೀಸನ ಸಾರ್ವಜನಿಕ ಜೀವನವನ್ನು ತನ್ನ ಭಾಷಣಗಳಲ್ಲಿ ಹೀಗಳೆದ. ಡೆಮಾಸ್ತನೀಸ್ ಇವನಿಗಿಂತ ಮೇಲ್ಮಟ್ಟದ ವಾಗ್ಮಿಯೂ ಕಾರ್ಯಚತುರನೂ ಆದ್ದರಿಂದ ಈಸ್ಕಿನೀಸನ ಸಂಚು ನಡೆಯಲಿಲ್ಲ. ಅವಮಾನಿತನಾಗಿ ಅಥೆನ್ಸಿನಿಂದ ಓಡಿಹೋದ. ಹೊರನಾಡಿನಲ್ಲಿ ಭಾಷಣಕಲೆಯ ಶಾಲೆಯಲ್ಲಿ ಭಾಷಣಕಲೆಯನ್ನು ಬೋಧಿಸುವ ವೃತ್ತಿಯನ್ನು ಕೆಲಕಾಲ ಅವಲಂಬಿಸಿದ. ತನ್ನ ಜೀವಮಾನದಲ್ಲಿ ಆತ ಮತ್ತೆ ಅಥೆನ್ಸಿಗೆ ಬರಲಾಗಲಿಲ್ಲ.

(ಕೆ.ಎಸ್.ಎನ್.;ಕೆ.ಎ.;ಎಲ್.ಎಸ್.ಎಸ್.)

**ಈಸ್ಕಿಲಸ್:** ಪ್ರ.ಶ.ಪೂ. 525–456. ಪ್ರಾಚೀನ ಗ್ರೀಸಿನ ನಾಟಕ ಸಾಹಿತ್ಯ ಕರ್ತೃತ್ರಯ ಶಿಖಾಮಣಿಗಳಲ್ಲಿ ಒಬ್ಬ. ಈತ ಹುಟ್ಟಿದ್ದು ಅಥೆನ್ಸಿನ ಹತ್ತಿರದಲ್ಲಿದ್ದ ಎಲ್ಯೂಸಿಸ್ ಗ್ರಾಮದಲ್ಲಿ ಇವನು ದೊಡ್ಡ ವಂಶಕ್ಕೆ ಸೇರಿದವ. ಪರ್ಷಿಯೊಡನೆ ಪ್ರ.ಶ.ಪೂ. 480ರಲ್ಲೂ 490ರಲ್ಲೂ ನಡೆದ ಯುದ್ಧಗಳಲ್ಲಿ ಭಾಗವಹಿಸಿದ್ದ. ತನಗಾಗಿ ಅವನೇ ಬರೆದುಕೊಂಡ ಒಂದು ಸಮಾಧಿಲೇಖವಿದೆ. ಅದರಲ್ಲಿ ತನ್ನ ಕಲಿತನವನ್ನು ಹೊಗಳಿಕೊಂಡಿದ್ದಾನೆಯೇ ಹೊರತು ಕವಿತೆಗಳನ್ನು ಪ್ರಸ್ತಾಪಿಸಿಯೇ ಇಲ್ಲ. ಸರ್ವಾಧಿಕಾರಿ ಹೈರಾನನ ಆಹ್ವಾನದ ಮೇಲೆ ಕೆಲವು ಬಾರಿ ಸೈರಕ್ಯೂಸಿಗೆ ಹೋಗಿಬಂದ. ಸಿಸಿಲಿ ದ್ವೀಪದ ಗೆಲ ಎಂಬ ಕಡೆ ಅವನಿಗೆ ಮರಣ ಒದಗಿತು. ದಂತಕಥೆಯೊಂದು ಹೇಳುವಂತೆ, ಹೊರಗಡೆ ಕುಳಿತುಕೊಂಡಿದ್ದಾಗ ಮೇಲೆ ಹಾರುತ್ತಿದ್ದ ಹದ್ದು ಅವನ ಪಟ್ಟು ಹಿಡಿದ ತಲೆಯನ್ನು ಬಂಡೆಯೆಂದು ಬಗೆದು ತಾನು ಹಿಡಿದು ತಂದಿದ್ದ ಆಮೆಯನ್ನು ಅವನ ನೆತ್ತಿಗೆ ಬೀಳಿಸಿತಂತೆ! ಪ್ರಾಯಶಃ ಈಸ್ಕಿಲಸ್ ಪೂಜಾರಿಗಳ ಮನೆತನಕ್ಕೆ ಸೇರಿದವನಿರಬೇಕು. ಒಮ್ಮೆ ಆರಾಧನಾ ರಹಸ್ಯವನ್ನು ರಟ್ಟು ಮಾಡಿದನೆಂಬ ಆಪಾದನೆಯನ್ನು ಹೊರಿಸಿ ಅವನನ್ನು ನ್ಯಾಯಸ್ಥಾನಕ್ಕೆ ಎಳೆದಿದ್ದರಂತೆ, ಆ ಅಪರಾಧ ತನ್ನಿಂದ ಆಗಿಲ್ಲವೆಂದು ಆತ ರುಜುವಾತು ಕೊಟ್ಟು ಬಿಡುಗಡೆ ಹೊಂದಿದನಂತೆ.

ಪ್ರಾಚೀನರ ಅಭಿಮತದಂತೆ, ಈಸ್ಕಿಲಸ್ ರುದ್ರನಾಟಕದ (ಟ್ರ್ಯಾಜೆಡಿ; ಗಂಭೀರ ನಾಟಕ) ಎರಡನೆಯ ಸಂಸ್ಥಾಪಕ, ಥೆಸ್ಪಿಸ್ ಮೊದಲನೆಯವ. ಆದರೆ ಥೆಸ್ಪಿಸ್ ಕಂಡುಹಿಡಿದು ಪ್ರಯೋಗಕ್ಕೆ ತಂದ ಕಲಾಕೃತಿ ಯಥಾರ್ಥವಾಗಿ ಗೀತ–ನಾಟ್ಯ, ನಿಜವಾದ ಅರ್ಥದಲ್ಲಿ ರುದ್ರನಾಟಕವಲ್ಲ. ತರುವಾಯ ಬಂದ ಫ್ರೀನಿಕಸ್ಸನ ಕೈಯಲ್ಲೂ ಕೃತಿ ಮುಖ್ಯವಾಗಿ ಗೀತ–ನಾಟ್ಯವಾಗಿಯೇ ಉಳಿದಿತ್ತು. ವಸ್ತುಸಂವಿಧಾನ, ಪಾತ್ರಕಲ್ಪನೆ, ಭಾವಾರ್ಥ, ಪ್ರದರ್ಶನ ಕ್ರಮವೆಲ್ಲದರಲ್ಲೂ ಬಹಳ ಬದಲಾವಣೆಯನ್ನು ಕೂಡಿಸಿಕೊಟ್ಟು, ಖಚಿತವಾದ ಅರ್ಥದಲ್ಲಿ ರುದ್ರನಾಟಕವನ್ನು ಸೃಷ್ಟಿಸಿದಾತ ಈಸ್ಕಿಲಸ್. ಅವನೂ ಪ್ರಾರಂಭದಲ್ಲಿ ತನ್ನ ಹಿಂದಿನವರ ಹೆಜ್ಜೆಯನ್ನೇ ಅನುಸರಿಸಿದ. ಬರಬರುತ್ತ ನಾಟಕದ ಸ್ವಾರಸ್ಯ ಇರುವುದು ನೇಪಥ್ಯದ ಮೇಲೆ ಜರುಗುವ ಸಂವಾದದಲ್ಲಿ; ನಾಟಕಾಲಯದ ಅಂಗಳದಲ್ಲಿ ನಡೆಯುವ ಸಂಗೀತ ನೃತ್ಯಗಳಲ್ಲಿ ಅಲ್ಲ ಎಂಬುದನ್ನು ಆತ ಚೆನ್ನಾಗಿ ಮನಗಂಡ. ಅವನಿಂದ 90 ನಾಟಕಗಳು ರಚಿತವಾದುವಂತೆ; ಅವುಗಳಲ್ಲಿ ಏಳು ಉಳಿದುಬಂದಿವೆ. ಈ ಏಳರ ಮೂಲಕವೇ ಅವನ ಬೆಳವಣಿಗೆಯನ್ನು ನಾವು ಗ್ರಹಿಸಬಹುದು. ಅವನ ಪ್ರಥಮ ರಚನೆಗಳಲ್ಲಿ ಒಂದಾದ ದಿ ಸಪ್ಲಿಯಾಂಟ್ಸ್ (ಆಶ್ರಮ ಯಾಚಕಿಯರು) (The suppliants) ಎಂಬ ರೂಪಕದಲ್ಲಿ ಸಂಗೀತ ಭಾಗ ಐದನೆಯ ಮೂರರಷ್ಟು. ಮಧ್ಯದ ಕೃತಿಗಳಲ್ಲಿ ಒಂದಾದ ದಿ ಪರ್ಷಿಯನ್ಸ್ (ಪರ್ಷಿಯನ್ನರು) ಎಂಬುದರಲ್ಲಿ ಅರ್ಧದಷ್ಟು; ಕಡೆಯ ಕವಿತೆಯಲ್ಲಿ ಒಂದಾದ ಮಂಗಳದೇವಿಯರು ಎಂಬುದರಲ್ಲಿ ಐದನೆಯ ಎರಡರಷ್ಟು, ಕೋರಸ್ ಎಂಬ ನೃತ್ಯ–ಮೇಳವನ್ನು ಸಂಪೂರ್ಣವಾಗಿ ತೆಗೆದು ಹಾಕಿ ನಾಟಕವನ್ನು ನಾಟಕವಾಗಿಯೇ ನಿರ್ಮಿಸುವ ಧೈರ್ಯ ಯಾವ ಕವಿಗೂ ಬರಲಿಲ್ಲ. ಏತಕ್ಕೆಂದರೆ ನಾಟಕ ಎದ್ದುಬಂದದ್ದು ನೃತ್ಯಮೇಳದಿಂದ. ನೃತ್ಯಮೇಳ ಡಯೊನೀಸಸ್ ದೇವತೆಯ ಆರಾಧನೆಯ ಅಂಗವಾಗಿತ್ತು. ವಿಶೇಷ ಎದೆಗಾರಿಕೆ ಯೂರಿಪಿಡೀಸ್ ಕೂಡ ತನ್ನ ರುದ್ರನಾಟಕದಲ್ಲಿ ಸಂಗೀತ ನಾಟ್ಯಕ್ಕೆ ಹತ್ತನೆಯ ಒಂದರಷ್ಟು ಜಾಗ ಕೊಟ್ಟಿದ್ದಾನೆ.

ಈಸ್ಕಿಲಸ್ ಬರುವವರೆಗೂ ಒಬ್ಬನೇ ನಟ ಇರುತ್ತಿದ್ದ. ನೃತ್ಯಕೂಟದೊಡನೆಯೇ ನಟನ ಸಂಭಾಷಣೆ ಆಗಬೇಕಾಗಿತ್ತು. ಪ್ರೇಕ್ಷಕರ ಲಕ್ಷ್ಯ ನೃತ್ಯವರ್ತುಲ ಮತ್ತು ನೇಪಥ್ಯ ಎರಡರ ಮೇಲೂ ಜೊತೆ ಜೊತೆಯಾಗಿ ಹಾಯಬೇಕಾಗಿತ್ತು. ಎರಡನೆಯ ನಟನನ್ನು ಉಪಯೋಗಿಸಿಕೊಳ್ಳಲಾರಂಭಿಸಿದ. ನಾಟಕದ ಘಟನಾವಳಿಯನ್ನು ಅರುಹುವ ಮತ್ತು ಮುಂದುವರಿಸುವ ಸಂವಾದ ಆ ಎರಡು ಪಾತ್ರಗಳಿಂದಲೇ ಆಗುವ ಅವಕಾಶ ಒದಗಿ ಬಂತು. ನೋಟಕರ ಗಮನವೂ ಹೆಚ್ಚು ಹೆಚ್ಚಾಗಿ ಅವರಿಬ್ಬರ ಕಡೆಗೆ ತಿರುಗಹತ್ತಿದವು. ನಾಟ್ಯರಂಗಕ್ಕಿಂತ ನಾಟಕರಂಗಕ್ಕೆ ಪ್ರಾಧಾನ್ಯ ಅಧಿಕವಾಯ್ತು. ಇನ್ನೊಂದು ಸುಂದರ ಬದಲಾವಣೆಯೂ ಈಸ್ಕಿಲಸ್ಸನಿಂದ ಏರ್ಪಾಟಾಯಿತು. ನೃತ್ಯಮೇಳದ ಸಂಖ್ಯೆಯನ್ನು ಐವತ್ತರಿಂದ ಹನ್ನೆರಡಕ್ಕೆ ಈತ ಇಳಿಸಿದ. ಕಲಾತ್ಮಕವಾದ ಪ್ರಗತಿಯನ್ನು ಸಾಧಿಸುತ್ತ ಹೋಗುವುದೇ ಅವನ ಹೆಬ್ಬಯಕೆಯಾಗಿತ್ತೆಂದು ತೋರುತ್ತದೆ. ಮೊದಮೊದಲು ಅನೇಕ ಯಂತ್ರ ಸೌಕರ್ಯಗಳನ್ನು ತಯಾರಿಸಿಕೊಂಡು ಅವುಗಳ ಸಹಾಯದಿಂದ ಅನುಕಾರ್ಯರನ್ನು ಆಕಾಶದಿಂದ ಕೆಳಕ್ಕೆ ಇಳಿಸುವುದು, ನೃತ್ಯಕೂಟ ನೆಲದಿಂದ ಮೇಲಕ್ಕೆದ್ದು ಈ ಕಡೆಯಿಂದ ಆ ಕಡೆಗೆ ಹಾರಿ ಹೋಗುವಂತೆ ಎಸಗುವುದು, ಗುಡ್ಡದ ಒಂದು ಭಾಗ ಇದ್ದಕ್ಕಿದ್ದಂತೆ ಪಾತಾಳಕ್ಕೆ ಉರುಳಿ ಬೀಳುವಂತೆ ತೋರಿಸುವುದು, ಇತ್ಯಾದಿ ಅದ್ಭುತಗಳನ್ನು ಪ್ರದರ್ಶಿಸಿದರೆ ರುದ್ರನಾಟಕ ಕಳೆಯೇರುವುದೆಂದು ಅವನ ಭಾವನೆ. ಕ್ರಮೇಣ ಅಂಥ ವ್ಯಾಪಾರವೆಲ್ಲ ನಾಟಕಕ್ಕೆ ಕೇವಲ ಬಾಹ್ಯಾಂಶ, ಅಮುಖ್ಯ ಎಂಬ ಸತ್ಯ ಅವನ ಮನಸ್ಸಿಗೆ ಅಂಟಲಾರಂಭಿಸಿತು. ನಾಟಕದ ಅಂತಃಸತ್ತ್ವ ಇರುವುದು ಪಾತ್ರಗಳಲ್ಲಿ, ಘಟನೆಗಳಲ್ಲಿ–ಎಂದು ಅವನು ನಿಶ್ಚಯಿಸಿಕೊಂಡ. ಅಗಾಧ ಸಾಮರ್ಥ್ಯದ ಪ್ರಚಂಡ ವ್ಯಕ್ತಿಗಳನ್ನು ಕಡೆದು ನಿಲ್ಲಿಸಿದ. ಮಾನವ ಜೀವನದ ಹಾಸುಹೊಕ್ಕಾಗಿರುವ ಹೋರಾಟ, ಅಪಘಾತಭೀತಿ, ದುಃಖ, ದೈವಬಲ–ಪುರುಷಪ್ರಯತ್ನಗಳ ರುದ್ರತೋರ್ಕೆಗಳನ್ನು ಎದೆಯಲ್ಲಿ ನಾಟುವಂತೆ ನಿರೂಪಣೆಗೈದ. ಧೈರ್ಯಸ್ಥೈರ್ಯದ ಆಶಾವಾದಿತ್ವವನ್ನು ಬೋಧಿಸುವ ಒಂದು ಘನಗಾಂಭೀರ್ಯವನ್ನು ಪ್ರಚುರಗೊಳಿಸಿದ. ಹೀಗೆ ರುದ್ರನಾಟಕವನ್ನು ಮಹೋನ್ನತಿಗೆ ಏರಿಸಿ, ಆಗ ಜನರಂಜಕವಾಗಿದ್ದ ಭವ್ಯಕಾವ್ಯದೊಂದಿಗೆ (ಎಪಿಕ್ ಪೊಯಟ್ರಿ) ಅದು ಸ್ಪರ್ಧಿಸುವಂತೆ ಚೈತನ್ಯ ತುಂಬಿಕೊಟ್ಟ.

ಸರ್ವಾಧಿಕಾರಿ ಪೈಸಿಸ್ಟ್ರಾಟಸನ ಒತ್ತಾಯದಿಂದಲೂ ಪರಿಪೋಷಣೆಯಿಂದಲೂ ಅಥೆನ್ಸಿನಲ್ಲಿ ಸಾಂಸ್ಕೃತಿಕ ಪುನರುಜ್ಜೀವನ ಉಂಟಾಯಿತು. ಪುರಾತನ ಮಹಾಕವಿಗಳಾದ ಹೋಮರ್ (ಪ್ರ.ಶ.ಪೂ. 8ನೆಯ ಶತಮಾನ) ಮತ್ತು ಹಿಸಿಯಡ್ (ಪ್ರ.ಶ.ಪೂ. 7ನೆಯ

ಶತಮಾನ) ಬಿಟ್ಟುಹೋದ ಕಾವ್ಯಗಳನ್ನು ಗಮಕಿಗಳು ವಾಚನ ಮಾಡತೊಡಗಿದರು. ಜನರು ಉಲ್ಲಾಸದಿಂದ ಕೇಳತೊಡಗಿದರು. ಆದಿಕಾಲದ ಗ್ರೀಕರ ಪುರಾಣ ಕಥಾವಳಿಗಳ ಪರಿಚಯ ಎಲ್ಲರಿಗೂ ಸಿಕ್ಕಿತು. ಆದರೆ ಆ ಕಥಾಸಮೂಹದಲ್ಲಿ ದೇವತೆಗಳ ನಡೆವಳಿಕೆಯಾಗಲಿ ಮನುಷ್ಯರ ವರ್ತನೆಯಾಗಲಿ ದೋಷರಹಿತವಾಗಿರಲಿಲ್ಲ. ದೇವತೆಗಳೂ ವಿಷಯತೃಷ್ಣೆಗಳ ದಾಸರೇ. ಮನುಷ್ಯರಂತೂ ಸ್ವಾರ್ಥ, ಸ್ವೇಚ್ಛೆ, ದುರಂಹಕಾರ, ದುರ್ಬುದ್ಧಿಗಳಿಂದ ಕೂಡಿದವರು. ನರರನ್ನು ಕಾಡಿ ಪೀಡಿಸುತ್ತ ಅವರ ನರಳಾಟವನ್ನು ನೋಡುತ್ತ ನಗುವುದೇ ದೇವತೆಗಳ ಕೆಲಸ. ನರರನ್ನು ಕಂಡು ಅವರಿಗೆ ಅಸೂಯೆ. ನರರು ಎಲ್ಲಿ ಸೌಖ್ಯದಲ್ಲಿದ್ದುಬಿಟ್ಟಾರೊ ಎಂದು ಮತ್ಸರಿಸಿ, ಅವರಿಗೆ ಮದಾಂಧತೆಯನ್ನು ಕೊಟ್ಟು, ಅವರು ದುರ್ಧೈರ್ಯದಿಂದ, ಏನೊಂದನ್ನೂ ಲೆಕ್ಕಿಸದೆ ಅನ್ಯಾಯಗಳನ್ನು ಎಸಗುವಂತೆ ಮಾಡಿ, ಅವರ ಆಕಸ್ಮಿಕ ಪತನಕ್ಕೆ ಕಾರಣರಾಗುತ್ತಾರೆ–ದೇವತೆಗಳು. ಭೂಮಿಯಲ್ಲಿ ಹುಟ್ಟಿ ಬಂದವನಿಗೆ ಕುಗ್ಗದ ಸಂಕಟವೇ ಜೋಡಿ. ಇಂಥ ಅನೇಕ ಮೂಢನಂಬಿಕೆಗಳು ಗ್ರೀಕ್ ಜನತೆಯಲ್ಲಿ ಬೇರೂರಿದ್ದವು. ಕವಿಗಳೆಲ್ಲರೂ ಪುರಾತನ ಕಥೆಗಳನ್ನೇ ಆಧಾರವಾಗಿ ಬಳಸಿಕೊಳ್ಳಬೇಕಾಗಿತ್ತು. ವಾಸ್ತವಿಕವೋ ಸಮಕಾಲೀನವೋ ಆದ ಸಂಗತಿಗಳನ್ನು ಕುರಿತು ರೂಪಕ ರಚಿಸುವುದು ಗ್ರೀಕರಿಗೆ ಹಿಡಿಸುತ್ತಿರಲಿಲ್ಲ. ಆದರೂ ಕವಿಗೆ ಬೇರೊಂದು ವಿಧದಲ್ಲಿ ಅಪಾರ ಸ್ವಾತಂತ್ರ್ಯ ಇರುತ್ತಿತ್ತು. ಅರಿಸಿಕೊಂಡ ಘಟನಾವಳಿಯಲ್ಲಿ ಪ್ರಧಾನ ಅಂಶಗಳಲ್ಲಿ ಪಲ್ಲಟಗೊಳಿಸದೇ ಇಟ್ಟುಕೊಂಡರೆ ಸಾಕು. ವಿವರಗಳಲ್ಲೂ ಅರ್ಥಸರಣಿಯ ವ್ಯವಸ್ಥೆಯಲ್ಲೂ ಸೂಚಿತವಾಗುವ ಸಿದ್ಧಾಂತದಲ್ಲೂ ತನ್ನ ಇಚ್ಛೆಗೆ ಅನುಗುಣವಾಗಿ ಕವಿ ವ್ಯತ್ಯಾಸ ಮಾಡಿಕೊಳ್ಳಬಹುದಾಗಿತ್ತು. ಹಾಗೆ ತನ್ನ ಪಾಲಿಗೆ ಬಂದ ಸ್ವಾತಂತ್ರ್ಯವನ್ನು ಈಸ್ಕಿಲಸ್ ಜವಾಬ್ದಾರಿಯಿಂದ ರೂಢಿಸಿಕೊಂಡ. ಹೇಗೆ ಹೇಗೋ ಹೋಗಿದ್ದ ಉಪಾಖ್ಯಾನಗಳನ್ನು ಕಾರ್ಯಕಾರಣಸಂಬಂಧ ಕೆಡದಂಥ ವಿನ್ಯಾಸಕ್ಕೆ ಅಚ್ಚುಕಟ್ಟಾಗಿ ಹೊಂದಿಸಿ, ಕಟುಕ ಕೃತ್ಯಗಳ ರೌದ್ರತೆಯನ್ನು ಮುಸುಕಿಸಿ ಗಹನ ಗಂಭೀರ ವಿದ್ಯಮಾನಗಳ ಬಣ್ಣವನ್ನು ಅವಕ್ಕೆ ಲೇಪಿಸಿ, ದೇವತೆಗಳು ನಿಷ್ಕಳಂಕಿಗಳೆಂಬ ಮತವನ್ನು ಉಚ್ಚರಿಸುತ್ತ, ದುಗುಡ, ಹತಾಶೆಗಳ ಬದಲು ಹರ್ಷ, ಆಸೆಗಳನ್ನು ಮನುಷ್ಯ ತಾಳುವಂತೆ ಹುರಿದುಂಬಿಸಿದ, ದಾರಿ ತೋರಿಕೊಟ್ಟ.

ಜನಪದಕ್ಕೆ ಪರಿಚಿತವಾಗಿದ್ದ ಈ ಕಥಾವಳಿಯನ್ನು ಭಾವಿಸಿ, ದೇವತೆಗಳನ್ನು ಪರೀಕ್ಷಿಸುವ ದುರ್ಬಯಕೆಯಿಂದ ಟ್ಯಾಂಟಲಸ್ ಅವರನ್ನು ಊಟಕ್ಕೆ ಕರೆದು, ಮಗ ಪೀಲಾಪ್ಸನ ಮಾಂಸವನ್ನು ಬೇಯಿಸಿ ಅವರ ಮುಂದಿಟ್ಟ; ಪಾಪದ ಫಲವನ್ನು ನರಕದಲ್ಲಿ ಉಂಡ ಪೀಲಾಪ್ಸ್ ತನ್ನ ಪ್ರತಿಸ್ಪರ್ಧಿಯ ಸಾರಥಿಯ ಸಹಾಯದಿಂದ ರಾಜಪುತ್ರಿಯನ್ನು ಮದುವೆಯಾಗಿ, ಆ ಸಾರಥಿಗೆ ವಾಗ್ದಾನವಿತ್ತಿದ್ದ ಅರ್ಧ ರಾಜ್ಯವನ್ನು ಕೊಡದೆ, ಅವನನ್ನು ಸಮುದ್ರಕ್ಕೆ ತಳ್ಳಿ ಸಾಯಿಸಿದ; ತಾನೂ ಅಧೋಗತಿಯನ್ನು ಪಡೆದ. ಪೀಲಾಪ್ಸನಿಗೆ ಇಬ್ಬರು ಕುಮಾರರು: ಅಟ್ರಿಯಸ್, ಥಯೆಸ್ಟೀಸ್. ಆರ್ಗಾಸಿನ ಸಿಂಹಾಸನದ ವಿಚಾರವಾಗಿ ಅವರಿಬ್ಬರ ಮಧ್ಯೆ ಇದ್ದ ಘೋರಮ ನಸ್ತಾಪ ಉಲ್ಬಣವಾಯ್ತು. ಅತ್ತಿಗೆಯಾದ ಈರೋಪೆಯನ್ನು ಥಯೆಸ್ಟೀಸ್ ಕೆಡಿಸಿದ. ಅಟ್ರಿಯಸ್ ಅವನನ್ನು ದೇಶದಿಂದ ಹೊರಕ್ಕೋಡಿಸಿ ಈರೋಪೆಯನ್ನು ಕಡಲಿನಲ್ಲಿ ಮುಳುಗಿಸಿದ. ಕಣಿವಾಕ್ಯಕ್ಕೆ ತಲೆಬಾಗಿದಂತೆ ನಟಿಸುತ್ತ ತಮ್ಮನನ್ನು ತನ್ನಲ್ಲಿಗೆ ಕರೆಸಿಕೊಂಡು, ಅವನ ಎರಡು ಕೂಸುಗಳನ್ನು ವಧಿಸಿ, ಆ ಮಾಂಸವನ್ನು ನಿರ್ಭಾಗ್ಯ ಥಯೆಸ್ಟೀಸನಿಗೆ ತಿನ್ನಿಸಿದ. ಥಯೆಸ್ಟೀಸ್ ಪಲಾಯನ ಗೈದು, ಅಟ್ರಿಯಸ್ಸನ ಮಗ ಪ್ಲಿಸ್ತಿನೀಸನ್ನು ತಂದೆಯ ಮೇಲೆ ಎರಗುವಂತೆ ಪ್ರೇರೇಪಿಸಿದ; ಆದರೆ ಅಟ್ರಿಯಸ್ ವೇಷ ಬದಲಾಯಿಸಿ ಕೊಂಡಿದ್ದ ಪ್ಲೀಸ್ತಿನೀಸನ್ನು ಸುತನೆಂದು ತಿಳಿಯದೆ ಕತ್ತಿಗೆ ಅಹುತಿ ಮಾಡಿದ. ಪಾತಕಗಳನ್ನು ನೆನೆಯುತ್ತ, ಎಸಗುತ್ತ ಇಬ್ಬರೂ ಸತ್ತರು. ಅಟ್ರಿಯಸ್ಸನ ತನುಜರೇ ಆಗಮೆಮ್ನಾನ್ ಮತ್ತು ಮೆನಿಲಾಸ್. ಥಯೆಸ್ಟೀಸನ ತನುಜ ಈಜಿಸ್ತಸ್. ಪ್ರಪಂಚದಲ್ಲೆಲ್ಲ ಅತ್ಯಂತ ರೂಪವತಿಯಾಗಿದ್ದ ಹೆಲನ್ ಮನಿಲಾಸನ ಹೆಂಡತಿಯಾದಳು. ಅತಿಥಿಯಾಗಿ ಬಂದ ರಾಜಕುಮಾರ ಪ್ಯಾರಿಸ್ ಅವಳನ್ನು ಒಲಿಸಿಕೊಂಡು ಅವಳೊಡನೆ ತನ್ನ ತಂದೆಯ ರಾಜಧಾನಿ ಟ್ರಾಯ್‌ಗೆ ಹಿಂತಿರುಗಿದ. ಗ್ರೀಸಿನ ಯೋಧರು ಒಟ್ಟುಗೂಡಿ, ಟ್ರಾಯ್‌ಗೆ ಮುತ್ತಿಗೆ ಹಾಕಿ, ಹತ್ತು ವರ್ಷ ಒಂದೇಸಮನೆ ಕಾದಾಡಿ, ಕೊನೆಗೆ ಟ್ರೋಜನರನ್ನೂ ಅವರ ಚಕ್ರಾಧಿಪತ್ಯವನ್ನೂ ಹಾಳು ಮಾಡಿದರು. ಗ್ರೀಕರ ಮಹಾದಂಡನಾಯಕ ಆಗಮೆಮ್ನಾನ್, ಈ ಮಧ್ಯೆ ಈಜಿಸ್ತಸ್ ಸೇಡಿಗಾಗಿ ಸಮಯ ಹೊಂಚುತ್ತಿದ್ದು, ಆರ್ಗಾಸಿಗೆ ಬಂದು, ಅಗಮೆಮ್ನಾನನ ಪತ್ನಿ ಕ್ಲೈಟಮ್ನೆಸ್ಟ್ರಳಿಗೆ ಉಪಪತಿಯಾದ. ಗಂಡನ ಮೇಲೆ ಕ್ಲೈಟಮ್ನೆಸಟ್ರಳಿಗೂ ರೋಷವಿತ್ತು. ಅವಳಿಗೆ ಸುಳ್ಳು ಹೇಳಿ ಮಗಳಾದ ಇಫಿಜೀನಿಯಳನ್ನು ಬರಮಾಡಿಕೊಂಡು ದೇವತೆಯ ಸಿಟ್ಟನ್ನು ಶಮನಗೈಯಲೋಸುಗ ತಾಯ ಕಣ್ಣೆದುರಿಗೇ ಅವಳನ್ನು ಬಲಿಕೊಟ್ಟಿದ್ದ. ಜಗಜ್ಜೇತನಾಗಿ ಆಗಮೆಮ್ನಾನ್ ಹಿಂತಿರುಗಿದ ಕೂಡಲೇ ಅವನ ಭಾರ್ಯೆಯೂ ಅವಳ ನಲ್ಲನೂ ಅವನನ್ನೂ ಸ್ನಾನಗೃಹದಲ್ಲಿ ಉಡುಪಿನಾಕಾರದ ಬಲೆಯಲ್ಲಿ ಸಿಕ್ಕಿಸಿಕೊಂಡು, ಖಡ್ಗದಿಂದ ಇರಿದು ಕೊಂದರು. ಅನೇಕ ಸಂವತ್ಸರಗಳ ತರುವಾಯ ಆಗಮೆಮ್ನಾನನ ಸುತನಾದ ಒರೆಸ್ಟೀಸ್ ಸ್ವದೇಶಕ್ಕೆ ಹಿಂತಿರುಗಿ, ಅಕ್ಕಳಾದ ಎಲೆಕ್ಟ್ರಳ ನೆರವಿನಿಂದ ತಾಯಿಯನ್ನೂ ಅವಳ ಜಾರನನ್ನೂ ಹತ್ಯೆಗೈದ. ಮಾತೃವಧೆಯ ದುಷ್ಕೃತ್ಯಕ್ಕಾಗಿ ಅವನು ಎಷ್ಟೋಕಾಲ ದೇಶಭ್ರಷ್ಟನಾಗಿ ಅಲೆದು, ನರಳಿ, ಕೊನೆಗೆ ಅಥೀನ ದೇವಿಯ ಕೃಪೆಯಿಂದ ಪಾಪಲೇಪನವನ್ನು ಕಳೆದುಕೊಂಡು, ಆರ್ಗಾಸಿಗೆ ಅರಸಾಗಿ ಬಹುಕಾಲ ಬಾಳಿದ.

ವಂಚನೆ, ವಚನಭಂಗ, ದೈವದ್ರೋಹ, ಮತ್ತಗರ್ವ, ವ್ಯಭಿಚಾರ, ಅಕ್ರಮಕೂಟ, ಕ್ರೌರ್ಯ, ಕಗ್ಗೊಲೆ – ಈ ಕುಲದವರಿಗೆ ಇದನ್ನು ಮಾಡಬೇಕು, ಇದನ್ನು ಮಾಡಕೂಡದು ಎಂಬ ಭೇದವೇ ಇಲ್ಲ. ಇದೊಂದು ಪಾಪಿಷ್ಠ ವಂಶ: ಬಾನಿನವರ ಉಗ್ರಶಾಪ ಇವರ ಹೆಡತಲೆಯ ಮೇಲೆ ಕುಳಿತಿರುತ್ತಿತ್ತು. ಹೆಣ್ಣು ಗಂಡುಗಳೆಲ್ಲರೂ ದೌರ್ಜನ್ಯ ಎಸಗಲೇ ಬೇಕು, ದುರ್ಮರಣವನ್ನು ಉಣ್ಣಲೇ ಬೇಕು. ದುರ್ಗತಿಗೆ ಇಳಿಯಲೇ ಬೇಕು.

ಇಂಥ ಮೈನವಿರೇಳಿಸುವ ವೃತ್ತಾಂತವನ್ನು ತೆಗೆದುಕೊಂಡು ಈಸ್ಕಿಲಸ್ ಇಡೀ ಜಗತ್ತಿನ ರಸಜ್ಞರು ಮೆಚ್ಚಿ ತಲೆದೂಗುವಂಥ ರೂಪಕತ್ರಯವನ್ನು (ಟ್ರಿಲೊಜಿ) ನಿರ್ಮಿಸಿದ. ಅದೇ ಒರೆಸ್ಟಿಯ ಎಂಬ ಶಾಶ್ವತ ಸಾಹಿತ್ಯ. ಅಂದಚಂದದ ಮೂಲಕ ಚತುರ ಕಥೆಯನ್ನು ಹೇಳಿ, ಚಿತ್ತಾಹ್ಲಾದ ಕೊಡುವುದೊಂದೇ ಆಗಿರಲಿಲ್ಲ, ಕವಿಯ ಅಭೀಷ್ಟ. ದೇವತೆಗಳಾರು, ಮಾನವನ ಕರ್ತವ್ಯವೇನು, ಕೇಡು ತಟ್ಟುವುದು ವ್ಯಕ್ತಿಯ ಕೆಟ್ಟ ನಡತೆಯಿಂದಲ್ಲವೆ, ಮಿತವನ್ನು ಅರಿತವ ಸುಖದಲ್ಲಿರಲಾರನೆ–ಇತ್ಯಾದಿ ಧಾರ್ಮಿಕ ಮತ್ತು ನೈತಿಕ ತತ್ತ್ವಗಳನ್ನು ಕಾವ್ಯಸಮ್ಮಿತಿಯಿಂದ ಘೋಷಿಸುವುದೇ ಅವನ ಗಾಢಾಪೇಕ್ಷೆ. ಟ್ಯಾಂಟಲಸ್ ಪೀಲಾಪ್ಸರವರಗೆ ಹೋಗುವುದು ಬೇಕಾಗಲಿಲ್ಲ–ಈಸ್ಕಿಲಸ್ಸಿಗೆ. ಅಟ್ರಿಯಸ್ ಥಯೆಸ್ಟೀಸನಿಗೆ ಉಣ್ಣಿಸಿದ ಭಯಂಕರ ಭೋಜನದಿಂದಲೇ ಅವನ ನೋಟಕ್ಕೆ ರುಧಿರೇತಹಾಸದ ಪ್ರಾರಂಭ. ಅಟ್ರಿಯಸ್ಸನ ರಕ್ಕಸತನದ ಫಲವಾಗಿ ಅವನ ಔರಸಪುತ್ರ ಅಗಮೆಮ್ನಾನನ ಆಂತರ್ಯದಲ್ಲಿ ಆನುವಂಶಿಕವಾದ ಪಾಪಬೀಜ ನೆಟ್ಟಿತು, ನಿಜ. ಸಮರದಿಂದ ಹಿಂತಿರುಗಿದ ಕೂಡಲೆ ಮಜ್ಜನದ ಓಡಿನಲ್ಲಿ ಹೆಂಡತಿಯ ಕೈಯಿಂದ ಅಸಹ್ಯ ಪೆಟ್ಟನ್ನು ಅವನು ಪಡೆಯುವುದೇತಕ್ಕೆ ? ತಂದೆ ಹೊತ್ತ ಸಾಲವನ್ನು ಮಗ ತೀರಸಬೇಕಾದ್ದರಿಂದಲೇ ಈಸ್ಕಿಲಸ್ ಹಾಗಲ್ಲ ಎನ್ನುತ್ತಾನೆ, ಅವನ ಹೇಳಿಕೆ ಈ ರೀತಿ ತಂದೆ ತಾಯಿಗಳಿಂದ ಮಕ್ಕಳಿಗೆ ಇಳಿದು ಬರುವುದು ದುರಾಚಾರದ ಪ್ರಚೋದನೆ, ದುರಾಚಾರವಲ್ಲ. ಆ ಪ್ರಚೋದನೆಯನ್ನು ಅವರು ಬೆಳೆಸಿಕೊಂಡು ತಾವೂ ದುರಾಚಾರಿಗಳಾಗಬಹುದು ಅಥವಾ ಅದನ್ನು ವಿರೋಧಿಸಿ ಗೆದ್ದು ಸದಾಚಾರವನ್ನು ಹಿಡಿಯಬಹುದು. ಶಾಪವಿದೆ ನಿಶ್ಚಯ, ಆದರೆ ವ್ಯಕ್ತಿಯ ಸ್ವಂತಸಂಕಲ್ಪವೂ ಅನುಗೂಡದಿದ್ದರೆ ಶಾಪ ಏನನ್ನೂ ಮಾಡಲಾರದು. ಎಂಥ ಪಾತಕ ಕುಲದಲ್ಲಿ ಜನಿಸಿ ಬಂದಿರಲಿ ವ್ಯಕ್ತಿ ಮನಸ್ಸು ಮಾಡಿದರೆ ಪಾಪಾಚರಣೆಯ ಸರಪಣಿಯನ್ನು ತುಂಡರಿಸುವುದು ಸಾಧ್ಯ. ಆಗಮೆಮ್ನಾನ್ ಕೈ ಹಿಡಿದ ಹೆಂಡತಿಗೇ ಸಟೆ ಹೇಳಿದ, ಮೋಸ ಮಾಡಿದ. ಅಕಿಲೀಸನಿಗೆ ಪಾಣಿಗ್ರಹಣ ಮಾಡಿಸುತ್ತೇನೆಂದು ಭರವಸೆ ಕಳಿಸಿದ. ಸತಿಯೂ ಸುತೆಯೂ ಬಂದೊಡನೆ ಆರ್ಟೆಮಿಸ್ ದೇವತೆಗೆ ಕೊಡಗೂಸನ್ನು ಬಲಿಯಿತ್ತ. ಏತಕ್ಕೆ ? ಟ್ರಾಯಿನ ಮೇಲೆ ಯುದ್ಧ ನಡೆಸಬೇಕು, ಮನೆ ಮಠಗಳನ್ನೂ ಮಗು, ವೃದ್ಧ, ಹೆಂಗಸು ಎನ್ನದೆ ಮಂದಿಯೆಲ್ಲರನ್ನೂ ನಾಶಮಾಡಬೇಕು. ರಿಪುಧ್ವಂಸಿಯೆಂಬ ಕೀರ್ತಿಯನ್ನು ಮೆರೆಯಬೇಕು–ಇದೇ ಅವನ ಹಂಬಲಿಕೆ. ಮಗಳ ರಕ್ತವನ್ನು ಚೆಲ್ಲಿದ ಮೇಲೆ ಆಗಮೆಮ್ನಾನನಿಗೆ ರಕ್ತದಾಹ ಉಂಟಾಯಿತು. ಮನುಷ್ಯನ ಶ್ರೇಷ್ಠಧರ್ಮವಾದ ಕನಿಕರವನ್ನು ಕಿತ್ತೊಗೆದ. ಟ್ರಾಯಿಗೆ ನಡೆದು ನೆತ್ತರಿನ ಕಾಲುವೆಗಳನ್ನು ಹರಿಯಿಸಿದ. ಗುಡಿಗೋಪುರಗಳನ್ನು ಈಡಾಡಿ, ವಿಗ್ರಹ ಬಲಿಪೀಠಗಳನ್ನು ನುಚ್ಚುನೂರಾಗಿಸಿ, ದೇವತೆಗಳ ಮುಡಿಪನ್ನು ದರೋಡೆಗೈದು ದೈವಭೀತಿಯೆಂಬುದನ್ನೇ ಕಾಣದಾದ. ಮನೆಗೆ ಹಿಂತಿರುಗಿದಾಗಲೂ ಕೇವಲ ದೇವತೆಗೆ ಮಾತ್ರ ಸಲ್ಲತಕ್ಕ ಊರು ಕಿಂಕಾಪು ಬಟ್ಟೆಯ ನಡೆಮಡಿಯನ್ನು ಕಾಲಿನಿಂದ ತುಳಿಯುತ್ತ ವಿಜೃಂಭಿಸಿದ. ಮರುಗಳಿಗೆಯಲ್ಲೆ ಮಡಿದು ಬಿದ್ದ. ಎಂದಮೇಲೆ, ಆಗಮೆಮ್ನಾನನ ಪತನಕ್ಕೆ ಅಪ್ಪನಿಂದ ಇಳಿದು ಬಂದ ಕೆಟ್ಟ ಚಟವಲ್ಲ ಕಾರಣ, ಅವನ ಸ್ವಕೀಯ ಮದಾಂಧತೆ. ಇದೇ ಈಸ್ಕಿಲಸ್ ಬಹುವಾಗಿ ಬಣ್ಣಿಸಿ ಹಳಿದು ಮುಂದೊಡ್ಡುವ ಗಂಡಗರ್ವ (ಹ್ಯೂಬ್ರಿಸ್). ಗರ್ವಿಷ್ಠ ತಾನು ಮಾಡಿದ್ದನ್ನು ತಾನೇ ಉಣ್ಣುತ್ತಾನೆ.

ಒರೆಸ್ಟಿಯದ ಎರಡನೆಯ ಭಾಗದಲ್ಲಿ ಕ್ಲೈಟಮ್ನೆಸ್ಟ್ರ ಈಜಿಸ್ತಸ್ಸರ ಸಂಹಾರ ಆಗುತ್ತದೆ. ಆಗಮೆಮ್ನಾನನ ಸಂಹಾರಕ್ಕೆ ಅದೊಂದು ಪ್ರತೀಕಾರ. ಹೌದು, ಆದರೆ ಅಷ್ಟಕ್ಕೆ ಮುಗಿಯುವುದಿಲ್ಲ. ಕ್ಲೈಟಮ್ನೆಸ್ಟ್ರ ಈಜಿಸ್ತಸ್ ಇಬ್ಬರೂ ಕಾಮಲಂಪಟರು, ಮರುಕಹೀನರು, ಕಪಟಿಗಳು, ದೈವವಿರೋಧಿಗಳು, ಅವರನ್ನು ಕೊನೆಗಾಣಿಸಬೇಕೆಂದು ದೇವ ದೇವನಾದ ಜ್ಯೂಸನಿಂದ ಒರೆಸ್ಟೀಸನಿಗೆ ಅಪೊಲೊವಿನ ಮೂಲಕ ಸಂದೇಶ ಬರುತ್ತದೆ. ಆ ಕಾರ್ಯ ಕೊಲೆಯಲ್ಲ, ದೇವತೆಗಳನ್ನು ಮೆಚ್ಚಿಸುವ ಯಜ್ಞ–ಎಂಬ ಅವರಣವನ್ನು ಈಸ್ಕಿಲಸ್ ಸೃಜಿಸಿದ್ದಾನೆ, ಎರಡನೆಯ ರೂಪಕದಲ್ಲಿ. ಹಾಗೂ, ಮನುಷ್ಯ ಸ್ವಭಾವವನ್ನೂ ಮನುಷ್ಯನ ಒಳಗಣ ಚಲನವಲನಗಳನ್ನೂ ಬಲ್ಲ ಆತನಿಗೆ ಸೂಕ್ಷ್ಮವಾದ ಅಂಶಗಳನ್ನು ಗ್ರಹಿಸುವುದು ಕಷ್ಟವಾಗಲಿಲ್ಲ. ಎಷ್ಟೇ ಆದರೂ ಕ್ಲೈಟಮ್ನೆಸ್ಟ್ರ ಒರೆಸ್ಟೀಸನನ್ನು ಹೆತ್ತವಳಲ್ಲವೆ? ಒರೆಸ್ಟೀಸ್ ಪಾಪಾತ್ಮರ ತನೂಭವನಾದರೂ ಹಿಂಸ್ರ ಪ್ರವೃತ್ತಿಯನ್ನು ಯೋಚಿಸಲಾರ, ಸಹಿಸಲಾರ. ದೈವನಿರ್ಬಂಧಕ್ಕೆ ಶಿರಬಾಗಿ ಮಾತೆಯ ಎದೆಯನ್ನು ಕಠಾರಿಯಿಂದ ಚುಚ್ಚಿದ್ದಾಯಿತು. ಆದರೆ ತನ್ನ ಹೃದಯದ ಕುದಿಯನ್ನು ತಪ್ಪಿಸುವುದೆಂತು ? ತಳಮಳದಲ್ಲಿ ಬಿದ್ದು ಪ್ರಲಾಪಿಸುತ್ತ ಹೋಗುತ್ತಾನೆ, ನಾಟಕದ ಅಂತ್ಯದಲ್ಲಿ.

ಮೂರನೆಯ ಭಾಗವಾದ ಮಂಗಳದೇವಿಯರು ವಿಶೇಷ ಅರ್ಥವತ್ತಾದ ಮಹೋನ್ನತ ಸಾಹಿತ್ಯ. ಕಥಾವಸ್ತು ಒರೆಸ್ಟೀಸನ ಸಂಕಟ, ಅವನ ಕೃತ್ಯದ ತನಿಖೆ, ಅವನ ವಿಮೋಚನೆ, ಮೃತಳಾದ ಕ್ಲೈಟಮ್ನೆಸ್ಟ್ರಳ ಪ್ರಾರ್ಥನೆಯಂತೆ ಉಗ್ರಪೀಡೆಗಳು (ಫ್ಯೂರೀಸ್) ಎದ್ದು ಬಂದು, ಒರೆಸ್ಟೀಸನನ್ನು ದಿಗಿಲುಗೊಳಿಸಿ ಕಾಡುತ್ತವೆ. ತಾಯಿಯನ್ನು ಕೊಲ್ಲು ಎಂದು ತನಗೆ

ನಿರೂಪವಿತ್ತ ಅಪೊಲೊ ದೇವನೇ ಅವನಿಗೀಗ ಶರಣು. ಹಂತಕ, ಆದ್ದರಿಂದ ಅವನು ನಮ್ಮ ಪಶು ಎನ್ನುತ್ತವೆ, ಫ್ಯೂರಿಗಳು. ಆದದ್ದು ದೇವನಾಜ್ಞೆ; ಒರೆಸ್ಟೀಸ್ ನಿರಪರಾಧಿ–ಎನ್ನುತ್ತಾನೆ ಅಪೊಲೊ. ವ್ಯಾಜ್ಯವನ್ನು ಇತ್ಯರ್ಥಗೊಳಿಸುವುದಕ್ಕಾಗಿ ದೇವಿ ಅಥೀನ ಅಥೆನ್ಸಿನ ಹನ್ನೆರಡು ಮಂದಿ ಜ್ಞಾನವೃದ್ಧರನ್ನು ಜೊತೆಗೂಡಿಸಿ, ನ್ಯಾಯಸ್ಥಾನವನ್ನು ರಚಿಸುತ್ತಾಳೆ. ಆ ಸಮಿತಿಗೆ ಆಕೆಯೇ ಅಧ್ಯಕ್ಷಿಣಿ; ವಿಚಾರಣೆ ನಡೆಯುತ್ತದೆ. ಕಡೆಯಲ್ಲಿ ನ್ಯಾಯಮೂರ್ತಿಗಳು ತೀರ್ಪು ಕೊಡುತ್ತಾರೆ. ಅರ್ಧಮಂದಿ ಒರೆಸ್ಟೀಸ್ ಅಪರಾಧಿ ಎನ್ನುತ್ತಾರೆ. ಮಿಕ್ಕರ್ಧ ಅವನು ನಿರಪರಾಧಿ ಎನ್ನುತ್ತಾರೆ. ಅಥೀನ ಮೊದಲೇ ಅವನಲ್ಲಿ ಅಪರಾಧವಿಲ್ಲವೆಂದು ಘೋಷಿಸಿರುತ್ತಾಳೆ. ಆದ್ದರಿಂದ ಒರೆಸ್ಟೀಸನಿಗೆ ಬಿಡುಗಡೆ ಆಗುತ್ತದೆ. ಅಷ್ಟರಿಂದಲೇ ತೃಪ್ತನಾಗುವುದಿಲ್ಲ, ಕವಿ. ಉಗ್ರಪೀಡೆಗಳೂ ದೇವತೆಗಳೇ. ಬುನಾದಿಪೃಥಿವಿಯ ಮೂಲಶಕ್ತಿಗಳು. ಅವುಗಳದ್ದು ಕಣ್ಣು ಕಿತ್ತವನ ಕಣ್ಣನ್ನು ಕೀಳು, ಹಲ್ಲು ಮುರಿದವನ ಹಲ್ಲನ್ನು ಮುರಿ, ಎಂಬ ಹಳೆಯ ನ್ಯಾಯ. ಅಂಥ ಬೆದರಿಕೆ ಇಲ್ಲದಿದ್ದರೆ ಪ್ರಲೋಭನೆಗಳಿಗೆ ಈಡಾಗಿರುವ ಮನುಜವರ್ಗ ನೀತಿ ಧರ್ಮವನ್ನು ಪರಿಪಾಲಿಸೀತೆ? ಆದರೆ ಹೊಸ ದೇವತೆಗಳಾದ ಒಲಿಂಪಿಯ ವರ್ಗ ಬರಿ ಕಾರ್ಯವನ್ನೇ ಬಗೆಯುವುದಿಲ್ಲ; ಕಾರ್ಯಕರ್ತನ ಮನೋಗತ ಸಮಯ ಸನ್ನಿವೇಶಗಳಿಗೂ ಗಮನವೀಯುತ್ತಾರೆ. ಆದ್ದರಿಂದಲೇ ಒರೆಸ್ಟೀಸ್ ವಧಕಾರನಲ್ಲವೆಂದು ಅವರ ತೀರ್ಮಾನ. ಅಥೀನೆಗೆ ಶಾಂತಿ ಸ್ನೇಹಗಳು ಅಗತ್ಯ. ಉಗ್ರಪೀಡೆಗಳನ್ನು ಒಲಿಸಿಕೊಂಡು ಅಥೆನ್ಸಿನ ಪೌರತ್ವವನ್ನು ಅವಕ್ಕೆ ದಯಪಾಲಿಸಿ ಬೆಟ್ಟದ ಅಡಿಯ ಗುಹೆಯಲ್ಲಿ ನಿವಾಸ ಕಲ್ಪಿಸಿಕೊಡುತ್ತಾಳೆ. ಅಥೆನ್ಸಿನ ಪೌರರು ಅವನ್ನೂ ಪೂಜಿಸಿ ಹರಕೆಯೊಪ್ಪಿಸಿ ಕಂಡು ನಡೆದುಕೊಳ್ಳಬೇಕೆಂದು ಶಾಸನ ವಿಧಿಸುತ್ತಾಳೆ. ಆ ಕರಾಳಶಕ್ತಿಗಳು ಹೀಗೆ 'ಎರಿನೀಸ್' ಎಂಬ ಹೆಸರನ್ನು ಕಳೆದುಕೊಂಡು. 'ಯೂಮೆನೈಡೀಸ್' (ಮಂಗಳದೇವಿಯರು) ಆಗುತ್ತಾರೆ.

ಪ್ರಾಮಿತಿಯಸ್ ಎಂಬ ಅರ್ಧದೇವತೆಯ ದಾರುಣ ವೃತ್ತಾಂತವನ್ನು ಕುರಿತ ಇನ್ನೊಂದು ರೂಪಕತ್ರಯವನ್ನು ಈಸ್ಕಿಲಸ್ ರಚಿಸಿದ. ಅದರ ಮೊದಲನೆಯ ಭಾಗವಾದ ಪ್ರಾಮಿತಿಯಸ್ ಬೌಂಡ್ (ಸೆರೆ ಸಿಕ್ಕಿದ ಪ್ರಮಿತಿಯಸ್) ಮಾತ್ರ ಉಳಿದುಬಂದಿದೆ. ಪೌರಾಣಿಕ ಮೂಲಕಥೆಯಂತೆ, ಹೋರಿಯನ್ನು ಜ್ಯೂಸನಿಗೆ ಬಲಿ ಕೊಡಬೇಕಾದಾಗ ಮನುಷ್ಯರು ಪ್ರಾಮಿತಿಯಸ್ಸನ ಸಲಹೆಯನ್ನು ಪಡೆದು ದೇವ ದೇವನಿಗೆ ಮೋಸ ಮಾಡಿದರು. ಕ್ರುದ್ಧನಾದ ಜ್ಯೂಸ್ ಮನುಜರಿಗೆ ಬೆಂಕಿ ಹೊತ್ತಿಸುವುದನ್ನು ಹೇಳಿಕೊಡದೆ, ಪಶುಗಳಂತೆ ಅವರು ಬಾಳುವುದಕ್ಕೆ ಬಿಟ್ಟುಬಿಟ್ಟ. ಅವರ ಸ್ಥಿತಿಯನ್ನು ಕಂಡು ಪ್ರಾಮಿತಿಯಸ್ಸಿಗೆ ಮರುಕ ಉಂಟಾಯಿತು. ಒಂದು ದಿವಸ ಗುಟ್ಟಾಗಿ ಕೆಂಡವನ್ನು ಕದ್ದು ಭೂಮಿಗೆ ತಂದುಕೊಟ್ಟು ನರರನ್ನು ಉದ್ಧಾರಮಾಡಿದ. ರೋಷಗೊಂಡ ಜ್ಯೂಸ್ ಪ್ರಮಿತಿಯಸ್ಸನ್ನು ಹಿಡಿತರಿಸಿ, ಕಾಕಸಸ್ ಪರ್ವತದ ಮೇಲೆ ಬಂಧಿಸಿ, ಪ್ರತಿ ಹಗಲೂ ಅವನ ಯಕೃತ್ತನ್ನು ಒಂದು ರಣಹದ್ದು ಕಿತ್ತು ತಿನ್ನುವಂತೆಯೂ ರಾತ್ರಿ ಅದು ಪುನಃ ಬೆಳೆದು ಮಾರನೆಯ ದಿನದ ಭಕ್ಷಣೆಗೆ ಸಜ್ಜಾಗುವಂತೆಯೂ ವಿಧಾಯಕಮಾಡಿದ. ಶತಮಾನಗಳ ಅನಂತರ ವೀರವರ ಹೆರಾಕ್ಲೀಸ್ ಅಲ್ಲಿಗೆ ಬಂದು, ಅಂಬನ್ನು ಬಿಟ್ಟು ರಣಹದ್ದನ್ನು ಕೊಂದುಹಾಕಿ, ಪ್ರಾಮಿತಿಯಸ್ಸನ್ನು ಸಂರಕ್ಷಿಸಿದ. ಪ್ರಾಮಿತಿಯಸ್ ಜ್ಯೂಸರ ಕಲಹ ಅರ್ಧನಾಗರಿಕತೆಯ ಅವಧಿಯಲ್ಲಿ ದೇವತೆಯಾದವನಿಗೂ ದೇವತೆಯಾಗಲಿರುವವನಿಗೂ ನಡೆದಿರಬಹುದಾದ ಒರಟು ಮೇಲಾಟ. ಈಸ್ಕಿಲಸ್ಸನ ವಿರಚನೆಯಂತೆ ಅದು ಬಲದಲ್ಲಿ ಕಡಿಮೆಯಾದ ಮನುಜಪ್ರೇಮಿಗೂ ಬಲದಲ್ಲಿ ಅಧಿಕನಾದ ಮನುಜವಿರೋಧಿಗೂ ಆಗುವ ಜಗಳ. ಪ್ರಾಮಿತಿಯಸ್ಸನ ಸಂಕಟವನ್ನು ಹೃದಯವಿದ್ರಾವಕವಾಗುವಂತೆ ಕವಿ ವರ್ಣಿಸಿದ್ದಾನೆ. ಭೂಮಂಡಲದ ಮನುಷ್ಯರು ಹಾಗಿರಲಿ, ಸಾಗರ, ಬೆಟ್ಟ, ನೀಲಾಕಾಶ, ಎಲ್ಲವೂ ಅವನೊಡನೆ ಕೊರಗುತ್ತವೆ, ಕಂಬನಿ ಸುರಿಸುತ್ತವೆ. ವಿಶ್ವವೇ ಅಪಾರ ಸಹಯಾತನೆಯಿಂದ (ಸಿಂಪಥಿಯ) ನರಳುತ್ತದೆ. ಅದೊಂದು ಸಮಾಧಾನ, ಹತಭಾಗ್ಯ ಪ್ರಾಮಿತಿಯಸ್ಸಿಗೆ. ಇನ್ನೆರಡು ಸಮಾಧಾನಗಳೂ ಅವನಲ್ಲಿದ್ದಕೊಂಡು ಸಹಿಷ್ಣುತೆಗೆ ಉಪಷ್ಟಂಭಕವಾಗುತ್ತವೆ. ಚಿರಂಜೀವಿಯಾದುದರಿಂದ ಪ್ರಾಮಿತಿಯಸ್ಸಿಗೆ ಸಾವಿಲ್ಲ. ಮತ್ತು ಜ್ಯೂಸನಿಗೆ ಸಂಬಂಧಿಸಿದ ರಹಸ್ಯವೊಂದು ಪ್ರಾಮಿತಿಯಸ್ಸಿಗೆ ಮಾತ್ರ ಗೊತ್ತು. ಜ್ಯೂಸ್ ಏನಾದರೂ ಥೆಟಿಸಳನ್ನು ಮದುವೆಯಾದರೆ ಆ ಜಲಕನ್ನಿಕೆಯ ಮಗ ಮುಂದೆ ಜ್ಯೂಸನಿಂದ ದೇವರಾಜತ್ವವನ್ನು ಕಿತ್ತುಕೊಳ್ಳುತ್ತಾನೆ. ವಜ್ರಮನಸ್ಸಿನಿಂದ ಪ್ರಾಮಿತಿಯಸ್ ನಿಲ್ಲುತ್ತಾನೆ. ಜ್ಯೂಸನ ದಬ್ಬಾಳಿಕೆಯನ್ನು ಕಣ್ಣಿಗೆ ಕಟ್ಟಿ ತೋರಿಸಲೋಸುಗ ಕವಿ ಅವನಿಂದ ಬಲು ತೊಂದರೆಗೆ ಸಿಕ್ಕಿ ಕಾಡುಪಾಲಾಗಿ ಅಲೆಯುತ್ತಿರುವ ಇಯೊ ಎಂಬ ಹೆಂಗಸನ್ನೂ ತರುತ್ತಾನೆ. ದೇವದೂತ ಹರ್ಮೀಸ್ ಬಂದು ಜ್ಯೂಸನಿಗೆ ವಿಧೇಯನಾಗು ಎಂದು ಬುದ್ಧಿವಾದ ಹೇಳುತ್ತಾನೆ. ಆಲಿಸದೆ ಪ್ರಾಮಿತಿಯಸ್ ಬರಲಿರುವ ವೇದನೆಗೆ ಸಿದ್ಧನಾಗುತ್ತಾನೆ.

ಮುಂದಣ ನಾಟಕಗಳೆರಡೂ ನಷ್ಟವಾಗಿವೆ. ಬಹುಶಃ ಜ್ಯೂಸನ ಅಜ್ಜಿಯ ಮಧ್ಯಸ್ತಿಕೆಯಿಂದ ಇಬ್ಬರಿಗೂ ಒಡಂಬಡಿಕೆ ಏರ್ಪಡುತ್ತದೆ, ಎರಡನೆಯ ನಾಟಕದಲ್ಲಿ. ರಣಹದ್ದಿನ ಹತ್ಯವಾಗಿ ಪ್ರಾಮಿತಿಯಸ್ಸನ ವಿಜಯೋತ್ಸವ ಮೂರನೆಯ ನಾಟಕದಲ್ಲಿ ನಡೆಯುತ್ತದೆ. ಈಸ್ಕಿಲಸ್ಸಿಗೆ ವೈರ ವೈಮನಸ್ಯಗಳು ಸೇರುತ್ತಿರಲಿಲ್ಲ. ಸ್ನೇಹ ಒಪ್ಪಂದಗಳ ಕಡೆಗೇ ಅವನ ಒಲವು. ಹಾಗೂ ಸಂಕಟ ಮನುಷ್ಯನಿಗೆ ಬುದ್ಧಿ ಕಲಿಸುತ್ತದೆ ಎಂಬುದನ್ನೂ ಆತ ಬಲ್ಲ. ಪ್ರಾಮಿತಿಯಸ್ ರೂಪಕದಲ್ಲಿ ಚಿತ್ರಿತವಾಗಿರುವ ಜ್ಯೂಸ್ ಇನ್ನೂ ಯುವಕ, ಅನುಭವಸ್ಥನಲ್ಲ. ತನಗಾಗಿ ಬಂದ ಕಷ್ಟನಷ್ಟಗಳು ಅವನ ಚಿತ್ತವನ್ನು ಇನ್ನೂ ಪರಿವರ್ತನಗೊಳಿಸಿಲ್ಲ.

ಪರ್ಷಿಯನ್ನರು ಎಂಬ ನಾಟಕ ವಿಚಿತ್ರಬಗೆಯ ಕೃತಿ. ಅದರಲ್ಲಿ ಕಥೆ ಕಿರಿದು. ಪಾತ್ರಶಿಲ್ಪಕ್ಕೆ ಅವಕಾಶ ಕಡಿಮೆ. ಆದರೂ ಮಹತ್ವವನ್ನು ತಂದು ಕೂಡಿಸಿದ್ದಾನೆ, ಅದಕ್ಕೆ. ಮೇಲಾಗಿ ಗೆದ್ದ ಗ್ರೀಕರ ಸಾಹಸವನ್ನು ಪ್ರಶಂಸಿಸುವ ಬದಲು ಕವಿ ಸೋತ ಪರ್ಷಿಯನ್ನರ ಸಂತಾಪವನ್ನು ಹೃದಯಂಗಮವಾಗಿ ವರ್ಣಿಸುತ್ತಾನೆ. ಎಂದರೆ, ತನ್ನ ಜನರಿಗೆ ಈ ಎಚ್ಚರಿಕೆ ಈಯುತ್ತಾನೆ: ಜೋಕೆ, ಅಹಂಕಾರದಿಂದ ಹಿಗ್ಗಬೇಡಿ; ನಮ್ರರಾಗಿರಿ. ಜಂಭ ಕೊಚ್ಚಿ ದೈವಾಪರಾಧಮಾಡಿದ ಪರ್ಷಿಯನ್ನರು ಈಗ ಏನಾಗಿದ್ದಾರೆ ನೋಡಿ !

ಥೀಬ್ಸ್‌ದುರಾಗಿ ಏಳು ಮಂದಿ (ಸೆವೆನ್ ಎಗೇನ್ಸ್ಟ್ ಥೀಬ್ಸ್) –ಎಂಬ ರೂಪಕದಲ್ಲಿ ಶತ್ರುಗಳಿಂದ ಥೀಬ್ಸ್ ನಗರದ ಚಿತ್ರಣ ಚೆಲುವಾಗಿದೆ. ಆದರೆ ದೊರೆ ಇಟಿಯೊಕ್ಲೀಸನ ಧೈರ್ಯ, ದೃಢಭಾವ, ಸ್ವಾರ್ಥತ್ಯಾಗಗಳು ಮನೋಹರವಾಗಿವೆ. ಆದರೇನು? ಶಾಪಗ್ರಸ್ತ ವಂಶಕ್ಕೆ ಸೇರಿದವನಾದ್ದರಿಂದ ಆತ ಅಣ್ಣನೊಡನೆ ಕಾದಿ ಕದನ ರಂಗದಲ್ಲಿ ಮಡಿಯಬೇಕು. ಜೊತೆಗೆ ಎರಡು ನಾಟಕಗಳು ನಷ್ಟವಾಗಿರುವುದರಿಂದ ಈಸ್ಕಿಲಸ್ಸನ ಆಶಯವನ್ನು ಗುರುತಿಸುವುದು ಅಸಾಧ್ಯ. ಆತ ಯಾವ ತಾತ್ಪರ್ಯವನ್ನು ಇಟ್ಟಿದ್ದನೊ ಹೇಳಲಾಗದು. ಆಶ್ರಯ ಯಾಚಕಿಯರು ಈಸ್ಕಿಲಸ್ಸನ ಕಲಿಕೆಸಮಯದ ಕೃತಿ. ಅದರದ್ದೇ ಆದ ಸತ್ತ್ವ, ಸ್ವಾರಸ್ಯಗಳು ಅದರಲ್ಲಿ ಕಡಿಮೆ. ಈಸ್ಕಿಲಸ್ಸಿಗಿಂತ ಮುಂಚೆ ಗಂಭೀರ ನಾಟಕಕ್ಕೆ ಇದ್ದ ಸ್ವರೂಪವನ್ನು ಅರಿತುಕೊಳ್ಳುವುದಕ್ಕೆ ಅದರಿಂದ ಹೇರಳ ಸಹಾಯವುಂಟು.

ಮಹಾಘನತೆ: ವಿಭಾವನೆಯ ವೈಭವ. ಭಾವಗಳ ಗಂಭೀರತೆ, ಭಾಷೆಯ ವಿಜೃಂಭಣೆ, ಛಂದಸ್ಸಿನ ಘೋಷ–ಈ ಯಾವ ದೃಷ್ಟಿಯಿಂದ ಅವಲೋಕಿಸಿದರೂ ಈಸ್ಕಿಲಸ್ಸನ ಎತ್ತರ ದೊಡ್ಡದು. ಅವನ ರುದ್ರನಾಟಕಗಳು ಉದಾತ್ತಧ್ಯೇಯಗಳನ್ನು ಎತ್ತಿ ಹಿಡಿಯುತ್ತ, ಇಲ್ಲದ ಸಲ್ಲದ ಭಯಗಳನ್ನು ನಿವಾರಿಸುತ್ತ, 'ದುರ್ಜನರಿಗೆ ದಂಡನೆ, ಸಜ್ಜನರಿಗೆ ಸೌಖ್ಯ' ಎಂಬ ಸಿದ್ಧಾಂತವನ್ನು ಬೋಧಿಸುತ್ತ, ಸಮಾಜ ಪೋಷಣೆಗೆ ಉತ್ತಮ ಉಪಕರಣಗಳಾದವು. ನೈತಿಕಸೂತ್ರಗಳಿಗಾಗಿಯೂ ಜೀವನ ಯೋಜನೆಗಾಗಿಯೂ ಹಾತೊರೆಯುತ್ತಿತ್ತು, ಅಥೆನ್ಸಿನ ಪ್ರಜಾಪ್ರಭುತ್ವ. ದಾರ್ಶನಿಕರ ಕಾಲ ಇನ್ನೂ ಬಂದಿರಲಿಲ್ಲವಾದ್ದರಿಂದ ರುದ್ರನಾಟಕದ ಕವಿಗಳೇ ಉಪದೇಶಕರಾಗಬೇಕಾಯಿತು. ಈಸ್ಕಿಲಸ್ ತಕ್ಕವನಾಗಿದ್ದ, ಆ ಹೊಣೆಗಾರಿಕೆಯ ಗದ್ದುಗೆಗೆ. ಅವನು ಸಾರಿ ಹೇಳಿದ್ದು ಇಷ್ಟೆ. ಮನುಷ್ಯಜೀವನ ಅಸಡ್ಡೆಯಿಂದ ಕಳೆಯಬಹುದಾದ ಲಘುವಿಚಾರವಲ್ಲ. ಗಹನವೂ ಜಟಿಲವೂ ಆದ ಪ್ರಶ್ನೆ ಅದು. ಇದನ್ನು ಮನಗಾಣಬೇಕು, ಮೊದಲು. ಎರಡನೆಯದಾಗಿ, ಬಾಳಿನ ಒಳಗಡೆ ಇದ್ದುಕೊಂಡು ಕೆಲಸ ಮಾಡುತ್ತಿರುವ ಧಾರ್ಮಿಕ ತತ್ತ್ವಗಳನ್ನು ತಪ್ಪೆಸಗದೆ ಅರಿತುಕೊಳ್ಳಬೇಕು. ತನ್ನ ಮಿತಿಯನ್ನು ತಿಳಿದುಕೊಂಡು ಗರ್ವಪಡದೆ ಕರ್ತವ್ಯತತ್ಪರನಾಗಿದ್ದರೆ ಮನುಷ್ಯನಿಗೆ ಕ್ಷೇಮ. ಅಂಥವನಿಗೆ ಜ್ಯೂಸನ ನ್ಯಾಯ ಹೂವಿನ ಹಾರದಂತೆ ಹಗುರವಾಗಿ ಸುವಾಸನೆ ಕೊಡುತ್ತ ಸಂತಸಕರವಾಗುತ್ತದೆ. ಮನುಷ್ಯನೇನಾದರೂ ಮನಸ್ವಿಯಾಗಿ ಬೀಗಿ ಪ್ರಬಲವಾದ ನೀತಿವ್ಯವಸ್ಥೆಯನ್ನು ಎದುರಿಸುವುದಕ್ಕೆ ಹೊರಟರೆ ಅಪಾಯ ಖಂಡಿತ.

ಈಸ್ಕಿಲಸ್ಸನ ಹಿರಿಮೆಯನ್ನು ಸಮರ್ಪಕವಾಗಿ ಬಣ್ಣಿಸುವ ವಾಣಿ ಇಲ್ಲವೆಂದು ಸ್ತುತಿಸಿದ್ದಾರೆ ವಿಮರ್ಶಕರೆಲ್ಲ. ಈಸ್ಕಿಲಸ್ ಸಾಮಾನ್ಯಾರ್ಥದ ಕವಿಯಲ್ಲ, ಲೇಖನಿ ಹಿಡಿದ ಅರ್ಧದೇವತೆ. ಪ್ರಾಮಿತಿಯಸ್ ರೂಪಕವನ್ನು ಪ್ರಾಮಿತಿಯಸ್ಸೇ ಬರೆದನೊ ಏನೊ—ಇಂಥ ಪ್ರಶಂಸೆಯ ವಾಕ್ಯಗಳು ಹೇರಳವಾಗಿವೆ. ದಿಟವಾಗಿಯೂ ಕವಿಯ ವಿಭಾವನೆಗಳೂ ಕಲ್ಪನೆಗಳೂ ಪದಗುಚ್ಛಗಳೂ ಮನುಷ್ಯಮಾತ್ರನಾದವನಿಗೆ ಸಾಧ್ಯವೇ ಎಂಬ ಅಚ್ಚರಿಯನ್ನು ಮೂಡಿಸುತ್ತವೆ.

(ಎಸ್.ವಿ.ಆರ್.)

**ಈಸ್ಕುಲೇಪಿಯಸ್:** ಗ್ರೀಕ್ ಪುರಾಣದಲ್ಲಿ ಉಲ್ಲೇಖವಾಗಿರುವ, ರೋಗಗುಣಪಡಿಸುವ ದೇವತೆ. ಹಾವು ಬಳಸಿ ಸುತ್ತಿರುವ ಒರಟು ಕೋಲು ಈ ದೇವತೆಯ ದಂಡ. ಪ್ರಪಂಚದಲ್ಲಿ ಇಂದು ಎಲ್ಲೆಲ್ಲೂ ವೈದ್ಯಸೇವಾ ಸಂಘಗಳಿಗೆ, ಪತ್ರಿಕೆಗಳಿಗೆ ಇದೇ ಲಾಂಛನ (ನೋಡಿ–ಉರಗದಂಡ). ರೋಮಿನಲ್ಲಿ ಆಗ ಎಲ್ಲೆಲ್ಲೂ ಹಬ್ಬಿದ ಮಹಾ ಮಾರಿಯಿಂದ (ಪ್ಲೇಗು) ಬಿಡುಗಡೆ ಮಾಡುವುದೆಂಬ ಸಿಬಿಲ್ಲ ದಿವ್ಯವಾಣಿಯ ಫಲವಾಗಿ, ಗ್ರೀಕರ ವೈದ್ಯದೇವತೆ ಅಸ್‌ಕ್ಲಿಪಿಯಸ್ಸನ (ಲ್ಯಾಟಿನ್ ಹೆಸರು ಈಸ್ಕುಲೇಪಿಯಸ್) ಪಂಥ ರೋಮನ್ನರ ಮತದಲ್ಲಿ ಪ್ರ.ಶ.ಪೂ.ಸು. 203ರಲ್ಲಿ ಹುಟ್ಟಿಕೊಂಡಿತು. ಪ್ರ.ಶ.ಪೂ. 293ರಲ್ಲಿ ರೋಮಿನಲ್ಲಿ ಮಹಾಮಾರಿ ಸಾಂಕ್ರಾಮಿಕವಾದಾಗ, ಗ್ರೀಕ್ ದೇವತೆಗಳನ್ನು ರೋಮನ್ನರು ಒಪ್ಪಿಕೊಂಡಾಗ ಅಸ್‌ಕ್ಲಿಪಿಯಸ್ಸಿಗೆ ಈಸ್ಕುಲೇಪಿಯಸ್ ಎಂದು ಹೆಸರು ಕೊಟ್ಟರು. ಹೈಜಿಯ ದೇವತೆಗೆ ಸಂಬಂಧಿಸಿದ್ದರಿಂದ, ಈ ದೇವತೆಯ ದೇಗುಲಗಳಿಗೆ ಅಸ್‌ಕ್ಲಿಪಿಯಸ್‌ಗಳೆಂದು (ಆಸ್ಪತ್ರೆಗಳು) ಹೆಸರಾಯಿತು.

ಪುರಾತನ ಗ್ರೀಕ್ ಪುರಾಣದಲ್ಲಿ ಅಪೊಲೊ (ಸೂರ್ಯ) ದೇವತೆ ಮತ್ತು ಅಪ್ಸರೆ ಕಾರೊನಿಸ್ಸರ ಮಗ ಈಸ್ಕುಲೇಪಿಯಸ್. ನರಾಶ್ವ (ಚಿರಾನ್, ಸೆಂಟಾರ್) ಇವನಿಗೆ ವೈದ್ಯ ಹೇಳಿಕೊಟ್ಟಿತಂತೆ. ಯಾವ ಮಾನವನ ಕೈಯಿಂದಲೂ ಆಗದ ರೋಗ ವಾಸಿಮಾಡುವ ಶಕ್ತಿ ಹೊಂದಿದ್ದರಿಂದ ಇವನನ್ನು ವೈದ್ಯದೇವನಾಗಿ ಥೆಸಲೆಯಲ್ಲಿ ಪೂಜಿಸುತ್ತಿದ್ದರು. ರೋಗಗಳನ್ನು ಹೋಗಲಾಡಿಸುವುದರಲ್ಲಿ ಬಹಳ ಹೆಸರಾದುದನ್ನು ಕಂಡ ಪ್ಲೂಟೊ, ಗ್ರೀಕ್ ಪುರಾಣದ ಪಾತಾಳಲೋಕದಲ್ಲಿನ ಭೂತಗಳನ್ನೇ ಕಡಿಮೆ ಮಾಡಿದನೆಂದು ಆಪಾದಿಸಿದ. ಇವನು ಎಲ್ಲರಿಗೂ ಬೇಕಾದವನಾದ್ದರಿಂದ ಇತರ ದೇವತೆಗಳಿಗೆ ಅಸೂಯೆಯಾಯಿತು. ಜ್ಯೂಸ್ ಇವನನ್ನು ಮಿಂಚಿನಿಂದ ಸಿಗಿದುಹಾಕಿದ. ಇವನು ಸತ್ತಮೇಲೆ ಗ್ರೀಸಿನ ಎಷ್ಟೋ

ದೇಗುಲಗಳಲ್ಲಿ ಈಸ್ಕುಲೇಪಿಯಸ್ಸನ ಮೂರ್ತಿಯನ್ನಿರಿಸಿ ಪೂಜಿಸತೊಡಗಿದರು. ರೋಗಿಗಳೂ ಬೇನೆಯಿಂದ ನರಳುವವರೂ ಈ ದೇಗುಲಗಳಿಗೆ ಬರತೊಡಗಿದರು. ಆಗಿನ ಕಾಲದಲ್ಲಿ ಜನಮನ್ನಣೆಗೆ ಪಾತ್ರನಾಗಿ ನಿಜವಾಗಿಯೂ ಬದುಕಿದ್ದ ಯಾರೋ ಒಬ್ಬ ಥೆಸಲೆ ದೇಶದ ವೈದ್ಯನ ಸುತ್ತ ಈ ಕಟ್ಟುಕತೆ ಕಟ್ಟಿರುವಂತೆ ತೋರುತ್ತದೆ. ಈ ವೈದ್ಯ ಬಲು ಚುರುಕಿನ ಮದ್ದುಗಳನ್ನು ಕೊಡದೆ, ಜ್ವರವಿದ್ದಾಗ ಮುಖ್ಯವಾಗಿ ಮೂರೋ ಮತ್ತಷ್ಟು ದಿನಗಳೋ ಉಪವಾಸ ಇರಿಸುತ್ತಿದ್ದ. ನೋವು ಹೆಚ್ಚಿದ್ದರೆ, ರಕ್ತ ತೆಗೆಯ ಬೇಕೆನ್ನುತ್ತಿದ್ದರೂ ಬೇರೂರಿದ ಹಳೆಯ ಕಾಯಿಲೆಗಳಿಗೆ ಉಪವಾಸ, ಅಂಗ ಸಾಧನೆ, ಮಜ್ಜನ, ನೀವುಗೆಗಳನ್ನು ನಿಯಮಿಸುತ್ತಿದ್ದ.

ಹಾವು ಸುತ್ತಿರುವ ದಂಡದೊಂದಿಗೆ ನಿಂತಿರುವ ಈಸ್ಕುಲೇಪಿಯಸ್

ಎಲ್ಲೆಲ್ಲೂ ಇದ್ದ ಈಸ್ಕುಲೇಪಿಯಸ್ಸಿನ ದೇಗುಲಗಳಲ್ಲಿ ಈ ಚಿಕಿತ್ಸೆಗಳೇ ಹೆಚ್ಚಾಗಿ ನಡೆಯುತ್ತಿದ್ದರೂ ಕಾಸ್, ನಿಡಸ್, ಎಪಿಡಾರಸ್, ಪರ್ಗಮಸಿನಲ್ಲಿ ಇದ್ದುದರಲ್ಲೆ ಮುಖ್ಯವಾದವು ನಡೆಯುತ್ತಿದ್ದವು. ಈ ದೇಗುಲಗಳು ಬಹುಮಟ್ಟಿಗೆ ಕಾಡಿನ ಇಳಿಮೇಡುಗಳ, ಗುಣಕಾರಕ ಚಿಲುಮೆಗಳ ಬಳಿ ಇರುತ್ತಿದ್ದವು. ನಿದ್ರಿಸುವಾಗ ದೇವರು ಗುಣಪಡಿಸುವನೆಂದೂ ಕನಸುಬಿದ್ದರಂತೂ ಇನ್ನೂ ಒಳ್ಳೆಯದು ಎಂದಿದ್ದರಿಂದ ರೋಗಿಗಳು ದೇಗುಲಗಳಲ್ಲೇ ಮಲಗಬೇಕಿತ್ತು. ಒಂದು ದೇಗುಲವನ್ನೂ ಅಲ್ಲಿ ಒಪ್ಪಿಸುತ್ತಿದ್ದ ನೈವೇದ್ಯಗಳನ್ನೂ ಹೆರೊಡಟಾಸ್ ಬಣ್ಣಿಸಿದ್ದಾನೆ. ಇಲ್ಲಿ ವಾಸಿಯಾದವರೆಲ್ಲ ಸಾಮಾನ್ಯವಾಗಿ ತಮ್ಮ ಹೆಸರು, ರೋಗ, ಗುಣವಾದ ರೀತಿಗಳನ್ನು ಸೂಚಿಸುವ ನೆನಪಿನ ಫಲಕಗಳನ್ನು ತಗಲಿಹಾಕುತ್ತಿದ್ದರು. ಈಸ್ಕುಲೇಪಿಯಸ್ಸನ ಗ್ರಂಥಗಳು ಸಿಗದಿದ್ದರೂ ಈ ಫಲಕಗಳಾದರೂ ಎಪಿಡಾರಸ್‌ನಲ್ಲಿ ದೊರೆತಿವೆ. ಇಲ್ಲೇ ಅವನ ದೇಗುಲಗಳಿವೆ. ಗುಣವಾದವರು ಪ್ರಾಣಿಬಲಿ (ಮುಖ್ಯವಾಗಿ ಹುಂಜ) ಕೊಡುತ್ತಿದ್ದರು. ಈಗಲೂ ಈಜಿಯನ್ ಕಡಲಲ್ಲಿರುವ ಟೀನೋಸ್ ದ್ವೀಪದಲ್ಲಿ ಈ ಪದ್ಧತಿ ಇದೆ.

ಈಸ್ಕುಲೇಪಿಯಸ್ಸಿನ ಮೂರ್ತಿಯನ್ನು ತರಲು ಎಪಿಡಾರಸ್‌ಗೆ ಹೋದ ದೂತ ಆ ದೇವನೇ ಇರುವನೆಂದುಕೊಂಡಿದ್ದ ಒಂದು ಹಾವನ್ನು ತಂದ. ಇದರಿಂದಾಗಿ ಟೈಬರ್ ನದಿಯ ದ್ವೀಪದ ಮೇಲೆ ಅವನಿಗೊಂದು ದೇಗುಲವಾಯಿತು. ಜೀರ್ಣೋದ್ಧಾರದ ಕುರುಹಾಗಿ ಒಂದು ಹಾವು ಬಳಸಿ ಸುತ್ತಿಕೊಂಡಿರುವ ಕೋಲಿನ (ಉರಗದಂಡ) ಮೇಲೆ ಒರಗಿಕೊಂಡು ತೆರೆದೆದೆಯ ನಿಲುವಂಗಿಯಲ್ಲಿ ಈಸ್ಕುಲೇಪಿಯಸ್ ನಿಂತಿರುವಂತೆ ಪುರಾತನ ಚಿತ್ರಕಾರರು ಶಿಲ್ಪ, ನಾಣ್ಯಗಳಲ್ಲಿ ಚಿತ್ರಿಸಿರುವರು. ಈಸ್ಕುಲೇಪಿಯಸ್ಸನ ಹೆಂಡತಿ ಈಪಿಯೋಳೊಂದಿಗೆ ಇದ್ದ ಮಕ್ಕಳಲ್ಲಿ ಗೊತ್ತಿರುವವರು, ಚುರುಕುಮತಿಯ ಬಾಲವೈದ್ಯ ಟೆಲಿಸ್ಫೋರಸ್, ಆರೋಗ್ಯ ದೇವತೆ ಹೈಜಿಯ, ಪೆನೇಸಿಯ, ಹೋಮರನ ಇಲಿಯಡ್ ಮಹಾಕಾವ್ಯದಲ್ಲಿ ಹೆಸರಿಸಿರುವ ಶಸ್ತ್ರವೈದ್ಯರಾದ ಮಚಾವನ್, ಪಿಷ್ಯ ಮೈನರಿನ ಪೊಡಿಲೇರಿಯಸ್. ಇವನಿಗೆ ಇನ್ನಷ್ಟು ಮಕ್ಕಳಿದ್ದರು. ತೀರ ಮುಪ್ಪಿನಾಚೆಗೂ ಈಸ್ಕುಲೇಪಿಯಸ್ ಬದುಕಿದ್ದು ಎಲ್ಲೋ ಬಿದ್ದು ಸತ್ತನಂತೆ. ತನ್ನ ಕೈಚಳಕದಿಂದ ಎಲ್ಲ ಮಾನವರನ್ನೂ ಚಿರಂಜೀವಿಗಳಾಗಿ ಮಾಡಿಬಿಟ್ಟಾನೆಂದು ರೊಚ್ಚಿಗೆದ್ದು ಜ್ಯೂಸ್ ಇವನ ಮೇಲೆ ಬಿಟ್ಟ ಮಿಂಚಿನ ಪರಿಣಾಮ ಇದು ಎಂದಿದೆ.

ಬರಬರುತ್ತ ಕ್ರಿಸ್ತಮತದ ಪ್ರಭಾವದಿಂದ ಈಸ್ಕುಲೇಪಿಯಸ್‌ನಲ್ಲಿ ಜನರಿಗೆ ಹಿಂದಿದ್ದ ಭಕ್ತಿ ಮಾಸಿಹೋಯಿತು. (ಎಂ.ಡಿ.)

**ಈಸ್ಟ್ ಇಂಡಿಯ ಕಂಪನಿ:** ಇಂಡಿಯ ಮತ್ತು ಇತರ ಪೌರಸ್ತ್ಯ ರಾಷ್ಟ್ರಗಳೊಂದಿಗೆ ವ್ಯಾಪಾರ ಬೆಳೆಸುವ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆ. ಇಂಗ್ಲೆಂಡ್, ಹಾಲೆಂಡ್ (ಡಚ್), ಫ್ರಾನ್ಸ್, ಡೆನ್ಮಾರ್ಕ್, ಸ್ಕಾಟ್ಲೆಂಡ್, ಸ್ಪೇನ್, ಆಸ್ಟ್ರಿಯ, ಮತ್ತು ಸ್ವೀಡನ್ ದೇಶಗಳು 17–18ನೆಯ ಶತಮಾನಗಳಲ್ಲಿ ಈಸ್ಟ್ ಇಂಡಿಯ ಕಂಪನಿಗಳನ್ನು ರಚಿಸಿದುವಾದರೂ ಅವುಗಳ ಪೈಕಿ ಇಂಗ್ಲಿಷ್ ಕಂಪನಿಯೇ ಅತ್ಯಂತ ಪ್ರಮುಖವಾದದ್ದು. ಡಚ್ ಹಾಗೂ ಫ್ರೆಂಚ್ ಕಂಪನಿಗಳೂ ಸ್ವಲ್ಪಕಾಲ ಬಹಳ ಪ್ರಬಲವಾಗಿದ್ದವು. ಪೋರ್ಚುಗೀಸ್ ನಾವಿಕನಾದ ವಾಸ್ಕೊಡಗಾಮ ಆಫ್ರಿಕದ ಗುಡ್‌ಹೋಪ್ ಭೂಶಿರವನ್ನು ಬಳ ಸಿ ಭಾರತಕ್ಕೆ ಬಂದು 1498 ಮೇ 20 ರಂದು ಕಲ್ಲಿಕೋಟೆಯಲ್ಲಿ ಇಳಿದಾಗಲೇ ಪೂರ್ವ ಇಂಡಿಯ ವ್ಯಾಪಾರದ ಅಂಕುರಾರ್ಪಣವಾಯಿತು. ಪೋರ್ಚುಗೀಸರು ಇಲ್ಲಿ ವ್ಯಾಪಾರ ಕಂಪನಿ ಪ್ರಾರಂಭಿಸಲಿಲ್ಲ. ನೆಲ ಗೆದ್ದು ಜನರನ್ನು ಕ್ರೈಸ್ತ ಮತಕ್ಕೆ ಪರಿವರ್ತಿಸುವುದು ಅವರ ಮೂಲೋದ್ದೇಶ. ಮುಂದೆ ಡಚ್ಚರ ಪ್ರಾಮುಖ್ಯ ಹೆಚ್ಚಿತು. ಅವರ ನೌಕೆ ಪ್ರಥಮ ಬಾರಿಗೆ 1596ರಲ್ಲಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಬಂತು. ಅವರು 1602ರಲ್ಲಿ ಈಸ್ಟ್ ಇಂಡಿಯ ಕಂಪನಿ ಸ್ಥಾಪಿಸಿದರು.

ಪ್ರಥಮ ಶಾಸಿತ ಕಂಪನಿಯೆಂದರೆ ಇಂಗ್ಲಿಷರದು. 1600 ರ ಕೊನೆಯ ದಿನದಂದು ಎಲಿಜಬೆತ್ ರಾಣಿ ಲಂಡನ್ನಿನ ಈ ಕಂಪನಿಗೆ ಸನ್ನದು ನೀಡಿದಳು. ಅನಂತರ ಇನ್ನೆರಡು ಕಂಪನಿಗಳು ಹುಟ್ಟಿಕೊಂಡವು. ಮೊದಲ ಕಂಪನಿಯೊಂದಿಗೆ ಪೈಪೋಟಿ ನಡೆಸಿ ಕೊನೆಗೆ ಅದರಲ್ಲಿ ವಿಲೀನ ಹೊಂದಿದವು. ಅದರೊಂದಿಗೆ ತೀವ್ರ ಸ್ಪರ್ಧೆ ಹೂಡಿದ ಇನ್ನೊಂದು ಕಂಪನಿ 1698 ರಿಂದ 1709 ವರೆಗೆ ಬಾಳಿ ಅದೂ ಮೊದಲನೆಯ ಕಂಪನಿಯಲ್ಲಿ ಮಿಳಿತವಾಯಿತು.

1601–18ರವರೆಗೆ ಈ ಕಂಪನಿ 12 ಬಿಡಿ ಯಾನಗಳನ್ನು ಏರ್ಪಡಿಸಿತ್ತು. ಇವು ಬಹು ಯಶಸ್ವಿಯಾದವು. ಇದಕ್ಕೆಂದೇ ಹಣ ಹೂಡಿದ್ದ ಚಂದಾದಾರರಿಗೆ ಲಾಭದ ಕೊಳ್ಳೆ ಸಿಕ್ಕಿತು. ಈ ಯಾನಗಳು ಜಪಾನಿನವರೆಗೂ ಏರ್ಪಟ್ಟಿದ್ದವು. ಜಾವದ ಬಾಂಟಮಿನಲ್ಲೂ ಭಾರತದ ಸೂರತ್ತಿನಲ್ಲೂ ಮಚಲಿಪಟ್ಟಣದಲ್ಲೂ ಪೆಟ್ಟಪೋಲಿಯಲ್ಲೂ (ಬಂಗಾಲ ಕೊಲ್ಲಿ) ಕೋಠಿಗಳು ಸ್ಥಾಪಿತವಾದವು. ಒಂದನೆಯ ಜೇಮ್ಸ್ ದೊರೆ ಈ ಕಂಪನಿಗೆ ಬಹಳ ಪ್ರೋತ್ಸಾಹ ನೀಡಿದ. ಹದಿನೈದು ವರ್ಷಗಳ ಅವಧಿಗೆ ನೀಡಿದ್ದ ಸನ್ನದಿಗೆ ಶಾಶ್ವತ ಜೀವದಾನ ಮಾಡಿದ.

ಭಾರತದೊಂದಿಗೆ ವ್ಯಾಪಾರೋದ್ದೇಶದಿಂದ ಹೊರಟ ಮೊದಲನೆಯ ಹಡಗು 1608ರಲ್ಲಿ ಭಾರತದ ಪಶ್ಚಿಮ ತೀರಪಟ್ಟಣವಾದ ಸೂರತ್ ತಲಪಿತು. ವ್ಯಾಪಾರ ಸೌಲಭ್ಯಗಳನ್ನು ಸಂಪಾದಿಸಲು ಕೆಲವು ಪ್ರಮುಖರು ಮೊಗಲ್ ಚಕ್ರವರ್ತಿ ಜಹಾಂಗೀರನ ಆಸ್ಥಾನಕ್ಕೆ ಹೋದರು. ಭಾರತ ಮತ್ತು ಈಸ್ಟ್ ಇಂಡೀಸ್ ದ್ವೀಪಗಳೊಡನೆ ವ್ಯಾಪಾರ ಸಂಪರ್ಕ ಬೆಳೆಸಲು ಇಂಗ್ಲಿಷರಿಗೆ ಬಹಳ ಆಶೆಯಿದ್ದರೂ ಈ ಭೂಭಾಗದಲ್ಲಿ ಆಗಲೇ ವ್ಯಾಪಾರ ನಡೆಸುತ್ತಿದ್ದ ಡಚ್ಚರಿಗೆ ಇದು ಸರಿಬೀಳಲಿಲ್ಲ. ಈಸ್ಟ್ ಇಂಡೀಸಿನಲ್ಲಿ ವ್ಯಾಪಾರ ಬೆಳೆಸಲು ಬಂದ ಇಂಗ್ಲಿಷರಿಗೆ ಅವರಿಂದ ಪ್ರಬಲ ಪ್ರತಿಭಟನೆಯುಂಟಾಯಿತು. ಆಂಬಾಯ್ನ ದ್ವೀಪದಲ್ಲಿ ನೆಲಸಿದ್ದ ಇಂಗ್ಲಿಷರನ್ನು ಡಚ್ಚರು 1623ರಲ್ಲಿ ಕೊಲೆ ಮಾಡಿದರು. ಇದರ ಪರಿಣಾಮವಾಗಿ ಇಂಗ್ಲಿಷರು ಈಸ್ಟ್ ಇಂಡೀಸಿನೊಂದಿಗೆ ವ್ಯಾಪಾರ ಬೆಳೆಸುವುದನ್ನು ಬಿಟ್ಟು, ಭಾರತದೊಂದಿಗೆ ವ್ಯಾಪಾರವನ್ನಿಟ್ಟುಕೊಳ್ಳಬೇಕಾಯಿತು. ಇದರಿಂದಾಗಿ ಬರಿಯ ಸಾಂಬಾರ ಪದಾರ್ಥಗಳ ವ್ಯಾಪಾರಕ್ಕೇ ಹೆಚ್ಚು ಗಮನ ನೀಡಲಾಗಲಿಲ್ಲ. ನೀಲಿ, ಹತ್ತಿಯ ಬಟ್ಟೆ, ಬಂದೂಕದ ಮದ್ದಿಗೆ ಬೇಕಾಗುವ ಪೆಟ್ಲುಪ್ಪು, ಸಕ್ಕರೆ, ದಾರ ಇತ್ಯಾದಿ ವಸ್ತುಗಳ ವ್ಯಾಪಾರವೂ ಬೆಳೆಯಿತು. ಇಂಗ್ಲಿಷರು ವ್ಯಾಪಾರ ನಿಮಿತ್ತವಾಗಿ ಇಲ್ಲಿನ ಅಧಿಕಾರಿಗಳೊಂದಿಗೂ ವರ್ತಕರೊಂದಿಗೂ ಸಂಪರ್ಕ ಹೊಂದಿದರು. 18ನೆಯ ಶತಮಾನದಲ್ಲಿ ಸ್ಥಳೀಯ ರಾಜಕೀಯದಲ್ಲೂ ಕೈಹಾಕಿದರು. ಪೋರ್ಚುಗೀಸರಿಂದ ಇಂಗ್ಲಿಷರಿಗೆ ತೊಂದರೆಯುಂಟಾಯಿತು. ಸೂರತ್‌ನ ತೀರದಲ್ಲೂ ಪರ್ಷಿಯ ಕೊಲ್ಲಿಯಲ್ಲಿಯೂ ಇಂಗ್ಲಿಷರಿಗೂ ಪೋರ್ಚುಗೀಸರಿಗೂ ನಡೆದ ನೌಕಾಯುದ್ಧದಲ್ಲಿ ಇಂಗ್ಲಿಷರು ಗೆದ್ದರು. ಪೋರ್ಚುಗೀಸರಿಗಿಂತ ಇಂಗ್ಲಿಷರು ನೌಕಾಬಲದಲ್ಲಿ ಪ್ರಬಲರೆಂಬ ವಿಚಾರ ಚಕ್ರವರ್ತಿ ಜಹಾಂಗೀರನಿಗೆ ಮನವರಿಕೆಯಾಯಿತು. ಆತ ವ್ಯಾಪಾರ ಸೌಲಭ್ಯಗಳನ್ನೂ ಒದಗಿಸಿದ. ಸೂರತ್ತನ್ನು ಮುಖ್ಯ ಕೋಠಿಯಾಗಿ ಇಟ್ಟುಕೊಂಡು ಅನಂತರ ಮಚಲೀಪಟ್ಟಣ ಮತ್ತು ಮದ್ರಾಸಿನಲ್ಲಿ (1641) ಕಾರ್ಖಾನೆಗಳನ್ನೂ ಕೋಠಿಗಳನ್ನೂ ಅವರು ಸ್ಥಾಪಿಸಿದರು. ಬಂಗಾಳ ಪ್ರಾಂತ್ಯದೊಂದಿಗೂ ವ್ಯಾಪಾರ ಪ್ರಾರಂಭಿಸಿದರು. ಪ್ರ.ಶ.1691ರಲ್ಲಿ ಕಲ್ಕತ್ತ ಪಟ್ಟಣದ ನಿರ್ಮಾಣವಾಯಿತು. ಪೋರ್ಚುಗೀಸರ ಸ್ವಾಧೀನದಲ್ಲಿದ್ದ ಮುಂಬೈ ಇಂಗ್ಲೆಂಡಿನ ದೊರೆ ಎರಡನೆಯ ಚಾರಲ್ಸ್‌ನ ರಾಣಿಗೆ ಬಳುವಳಿಯಾಗಿ ದೊರೆಯಿತು. ಮೊಗಲ್ ಚಕ್ರವರ್ತಿ ಔರಂಗಜೇಬನಿಗೂ ಇಂಗ್ಲಿಷರಿಗೂ ಕೆಲವು ವಿಷಯಗಳಲ್ಲಿ ವೈಮನಸ್ಯ ಉಂಟಾದರೂ ಅದರಿಂದಾಗಿ ಇಂಗ್ಲಿಷರ ವ್ಯಾಪಾರಕ್ಕೇನೂ ಚ್ಯುತಿ ಬರಲಿಲ್ಲ. ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ವ್ಯಾಪಾರ ಅಭಿವೃದ್ಧಿಯಾದದ್ದನ್ನು ಕಂಡು ಇತರ ಐರೋಪ್ಯ ದೇಶಗಳವರೂ ತಮ್ಮ ವ್ಯಾಪಾರೋದ್ಯಮಗಳನ್ನು ಇಂಡಿಯ ದೇಶದೊಂದಿಗೆ ಬೆಳೆಸಲು ಮನಸ್ಸು ಮಾಡಿದರು. ಮುಖ್ಯವಾಗಿ ಫ್ರೆಂಚರು ಈ ಕೆಲಸಕ್ಕೆ ಹೆಚ್ಚಾಗಿ ಕೈಹಾಕಿದರು. ಈ ಕಂಪನಿಯ ವಸಾಹತುಗಳು ಕೇವಲ ವ್ಯಾಪಾರದ ಕೋಠಿಗಳಾಗಿದ್ದವು. ಕಂಪನಿಯ ವರ್ತಕರು ತಮ್ಮ ಸಂಸ್ಥೆಯ ವ್ಯಾಪಾರದೊಂದಿಗೆ ವೈಯಕ್ತಿಕವಾಗಿಯೂ ವ್ಯಾಪಾರ ನಡೆಸುತ್ತಿದ್ದರು. ಇಂಗ್ಲೆಂಡಿನಲ್ಲೇ 1691ರಲ್ಲಿ ಈ ಕಂಪನಿಯ ಪ್ರತಿಸ್ಪರ್ಧಿಗಳು ಒಂದು ಹೊಸ ಸಂಘ ಸ್ಥಾಪಿಸಿಕೊಂಡು ಅದಕ್ಕೆ ಸನ್ನದು ಪಡೆದರು. ಈ ಸ್ಪರ್ಧೆ ಕೆಲವರ್ಷ ಸಾಗಿದ ಮೇಲೆ ಇವೆರಡನ್ನೂ ಕೂಡಿಸಿ ಒಂದೇ ಕಂಪನಿಯ ರಚನೆಯಾಯಿತು.

ಕಾಲಕ್ರಮೇಣ ಕಂಪನಿಯ ಸರಕುಗಳನ್ನೂ ವ್ಯಾಪಾರವನ್ನೂ ಸುಭದ್ರವಾಗಿಡಲು ವಸಾಹತುಗಳ ಸುತ್ತಲೂ ಕೋಟೆ ಕೊತ್ತಲಗಳನ್ನು ಕಟ್ಟಬೇಕಾಯಿತು. ಈ ಕಾರಣದಿಂದ ಪಶ್ಚಿಮ ತೀರದಲ್ಲಿದ್ದ ಕೋಠಿಯನ್ನು ಸೂರತ್ತಿನಿಂದ ಮುಂಬಯಿಗೆ ವರ್ಗಾಯಿಸಲಾಯಿತು. ಕಲ್ಕತ್ತೆಯ ಕಾರ್ಖಾನೆ ಮತ್ತು ಕೋಠಿಗಳನ್ನು ಫೋರ್ಟ್ ವಿಲಿಯಂ ಕೋಟೆಯಲ್ಲಿ ಸ್ಥಾಪಿಸಲಾಯಿತು. ಮದ್ರಾಸಿನ ಕೋಟೆಗೆ ಫೋರ್ಟ್‌ಸೆಂಟ್ ಜಾರ್ಜ್ ಎಂದೂ ಕಡಲೂರಿನ

ಬಳಿ ಇದ್ದ ಕೋಟೆಗೆ ಫೋರ್ಟ್ ಸೆಂಟ್ ಡೇವಿಡ್ ಎಂದೂ ಹೆಸರಾಯಿತು. ವ್ಯಾಪಾರ ಬೆಳೆದ ಹಾಗೆ ಭಾರತದ ಪಟ್ಟಣಗಳು ವೃದ್ಧಿಯಾದವು. ನೀಲಿ, ಪೆಟ್ಲುಪ್ಪು, ಹತ್ತಿ ಮತ್ತು ರೇಷ್ಮೆಯ ಬಟ್ಟೆ, ಸಾಂಬಾರ ಪದಾರ್ಥ–ಇವು ವ್ಯಾಪಾರದ ಮುಖ್ಯ ಸರಕುಗಳು. ಯುರೋಪಿನಲ್ಲಿ ಇಂಗ್ಲೆಂಡ್ ಫ್ರಾನ್ಸ್‌ಗಳಿಗೆ ವೈಮನಸ್ಯ ಉಂಟಾದಾಗಲೆಲ್ಲ ಭಾರತದಲ್ಲೂ ಇಂಗ್ಲಿಷ್ ಫ್ರೆಂಚ್ ಕಂಪನಿಗಳಿಗೆ ಘರ್ಷಣೆಯುಂಟಾಗುತ್ತಿತ್ತು. ಪ್ರ.ಶ.1746ರಲ್ಲಿ ಫ್ರೆಂಚ್ ನೌಕಾಪಡೆ ಮದರಾಸನ್ನು ಆಕ್ರಮಿಸಿತು. ಎರಡು ವರ್ಷಗಳ ಅನಂತರ ಬ್ರಿಟಿಷ್ ನೌಕಾಪಡೆ ಫ್ರೆಂಚ್ ಈಸ್ಟ್ ಇಂಡಿಯ ಕಂಪನಿಯ ಮುಖ್ಯ ಠಾಣ್ಯವಾದ ಪುದುಚೇರಿಯನ್ನು ಮುತ್ತಿತು. ಯುರೋಪಿನಲ್ಲಿ ಎರಡು ದೇಶಗಳಿಗೂ ಶಾಂತಿಯುಂಟಾದ ಮೇಲೆ ಮದ್ರಾಸು ಇಂಗ್ಲಿಷರ ವಶಕ್ಕೆ ಬಂತು. ಮುಂದೆ ಫ್ರೆಂಚ್ ಈಸ್ಟ್ ಇಂಡಿಯ ಕಂಪನಿಯ ಅಧಿಪತಿಯಾದ ಡೂಪ್ಲೆ ಪ್ರಬಲನಾದ. ಒಂದು ಸ್ಥಳೀಯ ರಾಜ್ಯದೊಡನೆ ಆತ ಸ್ನೇಹ ಬೆಳೆಸಿ, ಇಂಗ್ಲಿಷರನ್ನು ಭಾರತದಿಂದ ಓಡಿಸಬೇಕೆಂದು ಹವಣಿಸುತ್ತಿದ್ದ. ಕರ್ಣಾಟಕದ ನವಾಬಗಿರಿಗೆ ಇಂಗ್ಲಿಷರೂ ಫ್ರೆಂಚರೂ ತಮ್ಮ ತಮ್ಮ ಅನುಯಾಯಿಗಳನ್ನು ನೇಮಿಸಲು ಹವಣಿಸುತ್ತಿದ್ದರು. ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯನ್ನು ಹಾಳುಮಾಡುವ ಉದ್ದೇಶದಿಂದ ಡೂಪ್ಲೆ ಹೈದರಾಬಾದಿನ ನಿಜಾಮನಿಗೆ ಬೆಂಬಲವಾಗಿ ನಿಂತ. ಅಲ್ಲಿ ತನ್ನ ಕಡೆಯ ಅಧಿಕಾರಿಯನ್ನು ನೇಮಿಸಿ ನಿಜಾಮನ ಪದವಿಗೆ ನೆರವಾದ. ಆದರೆ ಈ ಉದ್ಯಮಗಳೆಲ್ಲ ಕೇವಲ ರಾಜಕೀಯವಾದದ್ದರಿಂದ ಅವನ್ನು ನಡೆಸಿಕೊಂಡು ಬರಲು ಬಹಳ ಹಣ ಬೇಕಾಯಿತು. ಆರ್ಥಿಕದೃಷ್ಟಿಯಿಂದ ಯಾವ ಪ್ರಯೋಜನವೂ ಇಲ್ಲದೆ ಕೊನೆಯಲ್ಲಿ ಈ ಪ್ರಯತ್ನಗಳೆಲ್ಲ ವ್ಯರ್ಥವಾದವು. ಡೂಪ್ಲೆಯ ಪ್ರಯತ್ನಗಳನ್ನೆಲ್ಲ ನಿಷ್ಫಲಗೊಳಿಸಿದ ಇಂಗ್ಲಿಷ್ ಅಧಿಕಾರಿ ರಾಬರ್ಟ್ ಕ್ಲೈವ್ ತನ್ನ ರಾಜತಂತ್ರದಿಂದ ಕರ್ನಾಟಕದ ನವಾಬನನ್ನು ತನ್ನ ಕಡೆಗೆ ಒಲಿಸಿಕೊಂಡ. ಕೊನೆಯದಾಗಿ ಇಂಗ್ಲಿಷರು ಪುದುಚೇರಿಯನ್ನೂ ವಶಪಡಿಸಿಕೊಂಡು, ಫ್ರೆಂಚರು ಭಾರತದಲ್ಲಿ ಚಕ್ರಾಧಿಪತ್ಯ ನಿರ್ಮಿಸಬೇಕೆಂದಿದ್ದ ಆಸೆಯನ್ನು ಭಗ್ನಗೊಳಿಸಿದರು.

ದಕ್ಷಿಣ ಭಾರತದಲ್ಲಿ ನಡೆದ ಈ ಇಂಗ್ಲಿಷ್–ಫ್ರೆಂಚ್ ಘರ್ಷಣೆಗಳಿಂದ ಮುಂದೆ ಇಂಗ್ಲಿಷರು ಬಂಗಾಲ ಪ್ರಾಂತ್ಯದ ರಾಜಕೀಯ ವ್ಯವಹಾರದಲ್ಲಿ ಕೈಹಾಕಲು ಬಹಳ ಅನುಕೂಲವಾಯಿತು. ಮದ್ರಾಸಿನಲ್ಲಿ ದೊರೆತ ಅನುಭವದಿಂದ ಇಂಗ್ಲಿಷರಿಗೆ ಬಂಗಾಲದಲ್ಲಿ ಇದೇ ರೀತಿಯ ಕಾರ್ಯಾಚರಣೆ ನಡೆಸಲು ಸಹಾಯವಾಯಿತು. ಬಂಗಾಲ ಮದ್ರಾಸಿಗಿಂತ ಫಲವತ್ತಾದ ಪ್ರದೇಶವಾಗಿದ್ದು, ನೀರಾವರಿ, ಸಂಚಾರ ಮತ್ತು ವ್ಯಾಪಾರಕ್ಕೆ ಅನುಕೂಲ ಇದ್ದದ್ದರಿಂದ, ಕ್ಲೈವನಿಗೆ ಕಂಪನಿಯ ಪರವಾಗಿ ಹೇರಳ ಲಾಭ ಸಂಪಾದಿಸಲು ಸಾಧ್ಯವಾಯಿತು. ಈಸ್ಟ್ ಇಂಡಿಯ ಕಂಪನಿಗೆ ಬಂಗಾಲದಲ್ಲಿ ವ್ಯಾಪಾರಕ್ಕೆ ಯಾವ ವಿಧವಾದ ಅಡಚಣೆಯೂ ಇರಲಿಲ್ಲ. ಸ್ಥಳೀಯ ಸರ್ಕಾರಕ್ಕೆ ವರ್ಷಕ್ಕೆ ಒಂದು ಸಲ ಸ್ವಲ್ಪ ಹಣ ಮಾತ್ರ ಕೊಡುತ್ತಿದ್ದರು. ಸಿರಾಜುದ್ದೌಲ ಬಂಗಾಲದ ನವಾಬನಾದ ಮೇಲೆ ಇಂಗ್ಲಿಷರ ವ್ಯಾಪಾರಕ್ಕೆ ಅಡ್ಡಿಯಾಯಿತು. ತನ್ನ ಅಪ್ಪಣೆಯಿಲ್ಲದೆ ಇಂಗ್ಲಿಷರು ತಮ್ಮ ಕೋಠಿಗಳ ಸುತ್ತಲೂ ಕೊತ್ತಲ ನಿರ್ಮಿಸಕೂಡದೆಂದು ಆತ ವಿಧಿಸಿದ. ಬ್ರಿಟಿಷರು ಈ ಆಜ್ಞೆಯನ್ನು ಪಾಲಿಸಲಿಲ್ಲ. ಇಂಗ್ಲಿಷರ ವಸಾಹತಾದ ಕಲ್ಕತ್ತೆಯನ್ನು ನವಾಬ ವಶಪಡಿಸಿಕೊಂಡ. ಇದೇ ಸಮಯದಲ್ಲಿ ನವಾಬನ ಸೈನ್ಯಕ್ಕೂ ಬ್ರಿಟಿಷರಿಗೂ ಪ್ಲಾಸಿ ಎಂಬಲ್ಲಿ ಯುದ್ಧ ನಡೆದು ಸಿರಾಜುದ್ದೌಲ ಸತ್ತ. ಹಿಂದೆಯೇ ಒಪ್ಪಂದಕ್ಕೆ ಬಂದ ಹಾಗೆ ನವಾಬನ ಸೇನಾಧಿಪತಿಯಾಗಿದ್ದ ಮೀರ್ ಜಾಫರನನ್ನು ಇಂಗ್ಲಿಷರು ನವಾಬಗಿರಿಗೆ ಏರಿಸಿದರು. ಈಸ್ಟ್ ಇಂಡಿಯ ಕಂಪನಿ ಮತ್ತು ಅದರ ನೌಕರರಿಗೆ ಹೊಸ ನವಾಬ ಬಹಳ ರಿಯಾಯಿತಿಗಳನ್ನೂ ಹಣವನ್ನೂ ಕೊಟ್ಟ. ಮೀರ್ ಜಾಫರ್ ಇಂಗ್ಲಿಷರ ಕೈಗೊಂಬೆಯಾದುದರಿಂದ, ಕಂಪನಿಯ ನೌಕರರ ವೈಯಕ್ತಿಕ ವ್ಯಾಪಾರ ವೃದ್ಧಿಯಾಗಿ, ಲಂಚಕೋರತನ ತಾಂಡವವಾಡಿತು. ಕೊನೆಗೆ ನವಾಬ ಆಡಳಿತಕ್ಕೆ ಅರ್ಹನಲ್ಲವೆಂದು ಮೀರ್ ಖಾಸಿಂ ಎಂಬುವವನನ್ನು ನವಾಬನಾಗಿ ನಿಯಮಿಸಿದರು. ಹೊಸ ನವಾಬ ವ್ಯಾಪಾರ ತೆರಿಗೆಯ ವಿಚಾರದಲ್ಲಿ ಇಂಗ್ಲಿಷರಿಗೆ ನೀಡಿದ್ದ ವಿನಾಯಿತಿಯನ್ನು ಇತರ ವರ್ತಕರಿಗೂ ಅನ್ವಯಿಸಿದ. ಈತನ ವರ್ತನೆ ಇಂಗ್ಲಿಷರಿಗೆ ಸರಿಬೀಳಲಿಲ್ಲ. ಅವರು ಬಕ್ಸಾರ್ ಯುದ್ಧದಲ್ಲಿ ಇವನನ್ನು ಸೋಲಿಸಿ, ಮೀರ್ ಜಾಫರನನ್ನು ಪುನಃ ನವಾಬಗಿರಿಗೆ ಏರಿಸಿದರು. ಆಗ ಇಂಗ್ಲಿಷರು ಬಂಗಾಲದ ನಿಜವಾದ ಅಧಿಕಾರಿಗಳಾದರು. ಕಂದಾಯ ಮತ್ತು ತೆರಿಗೆ ವಸೂಲು ಮಾಡುವ ಅಧಿಕಾರವನ್ನು ಇಂಗ್ಲಿಷರೇ ಇಟ್ಟುಕೊಂಡು ರಾಜ್ಯರಕ್ಷಣೆ ಮತ್ತು ನ್ಯಾಯಪರಿಪಾಲನೆಯ ಕಾರ್ಯವನ್ನು ನವಾಬನಿಗೆ ವಹಿಸಿಕೊಟ್ಟರು. ಈ ಏರ್ಪಾಡಿಗೆ ಬಂಗಾಲದ ದ್ವಿಮುಖ ಸರ್ಕಾರವೆಂದು ಹೆಸರಾಯಿತು. ಕ್ಲೈವನ ಕಾರ್ಯಕ್ರಮಗಳಿಂದ ಕಂಪನಿಯ ಆಡಳಿತಕ್ಕೆ ಒಂದು ನ್ಯಾಯಬದ್ಧವಾದ ಸ್ವರೂಪ ಬಂತು. ಮುಂದೆ ಇಂಗ್ಲಿಷ್ ಗೌರ್ನರ್–ಜನರಲ್ ವಾರನ್ ಹೇಸ್ಟಿಂಗ್ಸನ ಅಧಿಕಾರಾವಧಿಯಲ್ಲಿ ಭೂಕಂದಾಯ ಮತ್ತು ತೆರಿಗೆಗಳನ್ನು ಕಂಪನಿಯ ಅಧಿಕಾರಿಗಳೇ ವಸೂಲಿ ಮಾಡುತ್ತಿದ್ದರು. ಮೊಗಲ್ ಚಕ್ರವರ್ತಿಗೆ ಕೊಡುತ್ತಿದ್ದ ಕಪ್ಪದ ಹಣವೂ ನಿಂತುಹೋಯಿತು.

ಕಂಪನಿ ರಾಜ್ಯಾಡಳಿತ ವಹಿಸಿಕೊಂಡ ಮೇಲೆ ಹಣದ ಅಭಾವದಿಂದ ಸಾಲ ಮಾಡಬೇಕಾಯಿತು. ಈ ಸಾಲ ತೀರಿಸಲು ಇಂಗ್ಲೆಂಡಿನ ಸರ್ಕಾರಕ್ಕೆ ಸಹಾಯಕ್ಕಾಗಿ ಮನವಿ ಮಾಡಿಕೊಳ್ಳಬೇಕಾಯಿತು. ಈ ಸಂದರ್ಭದಲ್ಲಿ ಆ ಸರ್ಕಾರ ಕಂಪನಿಯ ಆಡಳಿತ ಸೂತ್ರಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳುವ ಉದ್ದೇಶದಿಂದ ರೆಗ್ಯುಲೇಟಿಂಗ್ ಆಕ್ಟ್ ಎಂಬ ಅಧಿನಿಯಮವನ್ನು ಜಾರಿಗೆ ತಂದಿತು (1773). ಕಂಪನಿಯ ಎಲ್ಲ ಆಧಿಪತ್ಯಗಳ ಮೇಲೂ ಮೇಲ್ವಿಚಾರಣೆಯ ಅಧಿಕಾರವುಳ್ಳ ಗೌರ್ನರ್ ಜನರಲ್ ಎಂಬ ಅಧಿಕಾರಿಯನ್ನು ಕಲ್ಕತ್ತೆಯಲ್ಲಿ ನೇಮಿಸಲಾಯಿತು. ಈ ಅಧಿಕಾರಿಯ ಸಹಾಯಕ್ಕಾಗಿ ನಾಲ್ಕು ಸದಸ್ಯರನ್ನುಳ್ಳ ಒಂದು ಸಮಿತಿಯೂ ಏರ್ಪಾಡಾಯಿತು. ಕಲ್ಕತ್ತೆಯಲ್ಲಿ ಒಂದು ಪರಮಾಧಿಕಾರವುಳ್ಳ ನ್ಯಾಯಸ್ಥಾನ ರೂಪಗೊಂಡಿತು. ಈ ಏರ್ಪಾಡುಗಳಿಂದ ಕಂಪನಿಯ ಆಡಳಿತ ಬ್ರಿಟಿಷ್ ಪಾರ್ಲಿಮೆಂಟಿನ ಹತೋಟಿಗೆ ಒಳಪಟ್ಟಂತಾಯಿತು. ಆದರೆ ಗೌರ್ನರ್–ಜನರಲನಿಗೆ ಇತರ ಆಧಿಪತ್ಯಗಳ ಆಡಳಿತದ ಮೇಲೆ ತನ್ನ ಅಧಿಕಾರವನ್ನು ಒತ್ತಾಯಪಡಿಸುವ ಅನುಕೂಲತೆಗಳಿಲ್ಲದ್ದರಿಂದ, ಮದ್ರಾಸು ಮತ್ತು ಬೊಂಬಾಯಿಯಲ್ಲಿದ್ದ ಕಂಪನಿಯ ಆಧಿಪತ್ಯಗಳು ಸ್ವತಂತ್ರವಾಗಿ ವ್ಯವಹಾರಗಳಲ್ಲಿ ತೊಡಗಲು ಸಾಧ್ಯವಾಯಿತು. ಗೌರ್ನರ್–ಜನರಲನ ಸಹಾಯ ಸಮಿತಿಯ ಸದಸ್ಯರುಗಳು ಕೂಡ ಐಕ್ಯಮತ್ಯದಿಂದ ಕೆಲಸ ನಿರ್ವಹಿಸದೆ ಇದ್ದುದರಿಂದ ಅನೇಕ ಸಲ ರಾಜಕೀಯ ವ್ಯವಹಾರದಲ್ಲಿ ಕಾರ್ಯನಿರ್ವಾಹಕರಿಗೆ ತೊಂದರೆಯಾಯಿತು. ಆದ್ದರಿಂದ ರೆಗ್ಯುಲೇಟಿಂಗ್ ಆ್ಯಕ್ಟ್‌ನಲ್ಲಿದ್ದ ಲೋಪದೋಷಗಳನ್ನು ಸರಿಪಡಿಸುವುದಕ್ಕಾಗಿ ಪಿಟ್ಸ್ ಇಂಡಿಯ ಆ್ಯಕ್ಟ್ ಎಂಬ ಅಧಿನಿಯಮವನ್ನು ಇಂಗ್ಲೆಂಡಿನ ಪಾರ್ಲಿಮೆಂಟು ಅನುಮೋದಿಸಿತು. ಪ್ರ.ಶ. 1857ವರೆಗೂ ಭಾರತದ ಆಡಳಿತ ನಡೆಯುತ್ತಿದ್ದುದು ಇದಕ್ಕೆ ಅನುಸಾರವಾಗಿಯೇ. ಬ್ರಿಟಿಷ್ ಮಂತ್ರಿಮಂಡಲದ ಒಬ್ಬ ಸದಸ್ಯನನ್ನು ಅಧ್ಯಕ್ಷನಾಗಿ ಉಳ್ಳ ಬೋರ್ಡ್ ಆಫ್ ಕಂಟ್ರೋಲ್ ಎಂಬ ಆಲೋಚನಾ ಸಭೆಯ ನೇಮಕವಾಯಿತು. ಕಂಪನಿಯ ಎಲ್ಲ ಬಗೆಯ ರಾಜಕೀಯ ವ್ಯವಹಾರಗಳು, ಕಾಯಿದೆಗಳು ಮತ್ತು ಆಜ್ಞೆಗಳ ವಿಮರ್ಶೆಯ ತಿದ್ದುಪಡಿ ಮುಂತಾದ ಅಧಿಕಾರಗಳೆಲ್ಲ ಈ ಸಭೆಗೆ ಸಂಬಂಧಪಟ್ಟಿತ್ತು. ಕಂಪನಿಯ ಸರ್ಕಾರದ ನೀತಿಯ ವಿಚಾರದಲ್ಲಿ ಪರಮಾಧಿಕಾರ ಈ ಸಮಿತಿಯದೇ ಆಯಿತು. ಗೌರ್ನರ್–ಜನರಲನ ಅಧಿಕಾರವನ್ನು ವಿಸ್ತರಿಸಲಾಯಿತು. ಹತ್ತೊಂಬತ್ತನೆಯ ಶತಮಾನದ ವೇಳೆಗೆ ಈಸ್ಟ್ ಇಂಡಿಯ ಕಂಪನಿಯಿಂದ ಭಾರತದಲ್ಲಿ ಚಕ್ರಾಧಿಪತ್ಯ ನಿರ್ಮಾಣಕಾರ್ಯ ಪೂರೈಸುವುದರಲ್ಲಿತ್ತು. ದೇಶೀಯ ರಾಜರೂ ಇದರ ಅಧೀನಕ್ಕೊಳಪಟ್ಟಿದ್ದರು. ಕಂಪನಿಯ ಇಂಡಿಯ ರಾಜ್ಯಾಂಗ ಲಂಡನ್ನಿನ ಬ್ರಿಟಿಷ್ ಸರ್ಕಾರಕ್ಕೆ ಅಧೀನವಾಯಿತು. ಭಾರತದ ಆಡಳಿತ ಏಕರೀತಿಯಾಗಬೇಕೆಂಬುದು ಗೌರ್ನರ್–ಜನರಲ್ ಲಾರ್ಡ್ ಡಾಲ್ ಹೌಸಿಯ ಇಚ್ಛೆಯಾಗಿತ್ತು. ಆಶ್ರಿತ ಸಂಸ್ಥಾನಗಳ ರಾಜರಿಗೆ ಸ್ವಂತ ಸಂತತಿ ಇಲ್ಲದಾಗ ಅಥವಾ ರಾಜ್ಯಗಳಲ್ಲಿ ಆಡಳಿತ ಕೆಟ್ಟುಹೋದಾಗ ಅಂಥ ರಾಜ್ಯಗಳನ್ನು ಕಂಪನಿಯ ನೇರ ಆಳ್ವಿಕೆಗೆ ಸೇರಿಸುವ ನೀತಿಯನ್ನು ಈತ ಅನುಸರಿಸಿದ. ಮುಂದೆ ಸಂಭವಿಸಿದ 1857ರ ಸ್ವಾತಂತ್ರ್ಯ ಸಂಗ್ರಾಮಕ್ಕೆ ಈ ನೀತಿಯೂ ಒಂದು ಕಾರಣವಾಯಿತು. ಭಾರತ ದೇಶದ ಪುರಾತನ ಸಂಪ್ರದಾಯಗಳಿಗೂ ಆಧುನಿಕ ತತ್ತ್ವಗಳಿಗೂ ಘರ್ಷಣೆಯುಂಟಾಗಿ ನವಯುಗದ ಪ್ರಾರಂಭವಾಯಿತು. ಬ್ರಿಟಿಷ್ ಚಕ್ರವರ್ತಿನಿ ವಿಕ್ಟೋರಿಯ ರಾಣಿಯ ಪ್ರಭುತ್ವದ ಆಜ್ಞೆಯ ಪ್ರಕಾರ, ಭಾರತ ದೇಶದ ಆಡಳಿತ ಈಸ್ಟ್ ಇಂಡಿಯ ಕಂಪನಿಯ ಕೈತಪ್ಪಿ ಬ್ರಿಟಿಷ್ ಸಾರ್ವಭೌಮರ ಅಧಿಕಾರಕ್ಕೆ ಸೇರಿತು (1858). ಅದುವರೆಗೆ ಕಂಪನಿಯ ನೌಕರರಾಗಿದ್ದವರನೇಕರು ಬ್ರಿಟಿಷ್ ಚಕ್ರವರ್ತಿಯ ಅಧಿಕಾರದಲ್ಲಿ ಮುಂದುವರಿದರು. ಭಾರತದ ವ್ಯವಹಾರಗಳನ್ನು ನಿರ್ವಹಿಸಲು ಲಂಡನ್ನಿನಲ್ಲಿ ಇಂಡಿಯಾ ಕಾರ್ಯದರ್ಶಿ (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ) ಎಂಬ ಹುದ್ದೆಯ ನಿರ್ಮಾಣವಾಯಿತು.(ಕೆ.ಎನ್.ಐ.)

**ಈಸ್ಟ್ ಇಂಡಿಯ ಕಂಪನಿ ನಾಣ್ಯಗಳು:** ಪ್ರ.ಶ.ಸು. 1600ರಿಂದ ಕಂಪನಿ ತನ್ನದೇ ಆದ ನಾಣ್ಯಗಳನ್ನು ಚಲಾವಣೆಗೆ ತಂದಿತು. ಅಲ್ಲಿಂದ ಮುಂದೆ ಅವು ವ್ಯಾಪಕವಾಗಿಯೂ ವೈವಿಧ್ಯಮಯವಾಗಿಯೂ ಬೆಳೆದುಬಂದವು. ಕೇವಲ ಕಂಪನಿಯ ವ್ಯಾಪಾರಕ್ಕಾಗಿ ಸ್ಪೇನ್ ನಾಣ್ಯಗಳ ಮಾದರಿಯಲ್ಲಿ ಪ್ರತ್ಯೇಕ ಬೆಳ್ಳಿ ನಾಣ್ಯಗಳನ್ನು ಮೊದಲು ಟಂಕಿಸಲಾಯಿತು. ಆದರೆ ಇದು ಭಾರತದಲ್ಲಿ ಹೆಚ್ಚು ಚಲಾವಣೆಗೆ ಬರಲಿಲ್ಲ. ಮುಂದೆ ಎರಡು ಶತಮಾನಗಳ ಕಾಲ ಕಂಪನಿಯ ಪ್ರಾಬಲ್ಯವಿದ್ದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಟಂಕಸಾಲೆಗಳಿದ್ದು ಅವುಗಳೆಲ್ಲ ಸ್ಥಳೀಯ ನಾಣ್ಯಗಳನ್ನನುಕರಿಸಿ ಬೇರೆ ಬೇರೆ ರೀತಿಯ ನಾಣ್ಯಗಳನ್ನು ಅಚ್ಚುಹಾಕಿದವು. ಹೀಗೆ ಕಲ್ಕತ್ತ, ಮಚಲೀಪಟ್ಟಣ ಮತ್ತು ಸೂರತ್‌ಗಳಲ್ಲಿ ಟಂಕಸಾಲೆಗಳೇರ್ಪಟ್ಟವು. ಕೆಲಕಾಲದ ಅನಂತರ ಮಚಲಿಪಟ್ಟಣ ಮತ್ತು ಸೂರತ್‌ಗಳ ಟಂಕಸಾಲೆಗಳು ಕ್ರಮವಾಗಿ ಮದರಾಸು ಮತ್ತು ಬೊಂಬಾಯಿಗಳಿಗೆ ವರ್ಗಾವಣೆಯಾದವು. ಮುಂದೆ ವಾರಾಣಸಿಯಲ್ಲೂ ಒಂದು ಟಂಕಸಾಲೆ ಏರ್ಪಟ್ಟಿತು.

ಚಿನ್ನದ ಪಗೋಡ ಮತ್ತು ಬೆಳ್ಳಿಯ ಹಣ ಹದಿನೇಳನೆಯ ಶತಮಾನದ ಮಧ್ಯ ಭಾಗದಿಂದಲೇ ಮದ್ರಾಸಿನಿಂದ ಪ್ರಚುರವಾದಂತೆ ತಿಳಿದುಬರುತ್ತದೆ. ಮುಮ್ಮುಖದಲ್ಲಿ ದೇವರ ಒಂದು ಮೂರ್ತಿ ಅಥವಾ ಮೂರ್ತಿಗಳಿದ್ದು ಹಿಮ್ಮುಖದಲ್ಲಿ ಚುಕ್ಕೆಗಳ ಮಧ್ಯೆ ನಕ್ಷತ್ರಗಳಿರುವ ಚಿನ್ನದ ಪಗೋಡಗಳು ಹದಿನೆಂಟನೆಯ ಶತಮಾನದಲ್ಲೂ ಮುಂದುವರಿದಿವೆ. ಬೊಂಬಾಯಲ್ಲಿ ಸ್ವಲ್ಪ ತಡವಾಗಿ ಆರಂಭವಾದ ಈ ನಾಣ್ಯಗಳ ಹಿಂಭಾಗದಲ್ಲಿ ಐದು ಪಂಕ್ತಿಯ ಅಂಕನ (ಉಲ್ಲೇಖ)ವಿದೆ. ಅಲ್ಲದೆ ಇದೇ ರೀತಿಯ ತಾಮ್ರದ ನಾಣ್ಯಗಳೂ ಅಚ್ಚಾಗಿವೆ. ಕಿರೀಟ, ಅದರ ಮೇಲೆ ಜಿ.ಆರ್.ಎಂಬ ಅಕ್ಷರಗಳು ಮುಮ್ಮುಖದಲ್ಲೂ Auspicio Regiset Senatus ಎಂಬ ಅಂಕನ ಹಿಮ್ಮುಖದಲ್ಲೂ ಇರುವ ಒರಟು ತಾಮ್ರದ ನಾಣ್ಯಗಳು ಮುಂದೆ ಚಲಾವಣೆಗೆ ಬಂದವು. ಇವುಗಳಲ್ಲಿ ಕಾಲವನ್ನು ಸೂಚಿಸಿರುವವು ಕೆಲವು, ಇಲ್ಲದವು ಕೆಲವು. ಹದಿನೆಂಟನೆಯ ಶತಮಾನದ ಕಡೆಯಲ್ಲಿ ಈ ನಾಣ್ಯಗಳ ಹಿಂಭಾಗದಲ್ಲಿ

ಹೃದಯಾಕಾರವಿದ್ದು ಅದರ ಮೇಲೆ ಇ.ಜಿ.ಸಿ. ಎಂಬ ಕಂಪನಿಯ ಗುರುತು ಮತ್ತು ಮೇಲ್ಭಾಗದಲ್ಲಿ 4 ಎಂಬ ಚಿಹ್ನೆಯೂ ಕಾಣಿಸಿಕೊಂಡವು. ಅಲ್ಲಿಂದ ಮುಂದೆ ತಕಡಿಯ ಕಾಸು ಪ್ರಚಾರಕ್ಕೆ ಬಂತು.

ಈ ನಾಣ್ಯಗಳ ಜೊತೆಯಲ್ಲೇ ಮೊಗಲ್ ನಾಣ್ಯಗಳನ್ನನುಕರಿಸಿದ ಬೆಳ್ಳಿ ರೂಪಾಯಿಗಳು ಹೇರಳವಾಗಿ ಪ್ರಚುರವಾದವು. ಚನ್ನಪಟ್ಟಣದ (ಮದರಾಸು) ಹೆಸರುಳ್ಳ ಔರಂಗಜೇಬನ ರೂಪಾಯಿಗಳ ಮತ್ತು ಚಿನ್ನದ ಪಗೋಡಗಳ ಮಾದರಿ ಮೊದಲು ಆರಂಭವಾಗಿ ಮುಂದೆ ಬಹದ್ದೂರ್ ಷಾಹನ ನಾಣ್ಯಗಳ ಅನುಕರಣೆಯಲ್ಲಿ ಹಿಮ್ಮುಖದಲ್ಲಿ ಚಿಕ್ಕ ನಕ್ಷತ್ರಾಕಾರವೂ ಸೇರಿಕೊಂಡಿರುತ್ತದೆ. ಎರಡನೆಯ ಆಲಂಗೀರನ ನಾಣ್ಯಗಳನ್ನನುಕರಿಸಿದ ಕೆಲವು ಬೆಳ್ಳಿ ರೂಪಾಯಿಗಳ ಹಿಂಭಾಗದಲ್ಲಿ ತ್ರಿಶೂಲದ ಚಿಹ್ನೆಯಿದ್ದು ಆರ್ಕಾಟಿನ ಹೆಸರನ್ನು ಹೊಂದಿದ್ದರೂ ಅವು ಮದರಾಸಿನಲ್ಲೇ ಅಚ್ಚಾದವು. ಇವುಗಳಲ್ಲಿ ರಾಜನ ಆಳ್ವಿಕೆಯ ವರ್ಷವನ್ನು ಬದಲಾಯಿಸದೆ ಹಿಜಿರ ಸಂವತ್ಸರವನ್ನು ಮಾತ್ರ ಬೇರೆ ಬೇರೆಯಾಗಿ ಕೊಟ್ಟಿದೆ. ಬೊಂಬಾಯಿಯಿಂದ ಅಚ್ಚಾದ ರೂಪಾಯಿಗಳಲ್ಲಿ ಫರೂಕ್ ಸಿಯಾರ್ ಮತ್ತು ಷಾ ಆಲಮನವರೆಗೆ ಇದ್ದ ಚಕ್ರವರ್ತಿಗಳ ನಾಣ್ಯಗಳ ಅನುಕರಣೆಯನ್ನೂ ಕಾಣಬಹುದು. ಕಲ್ಕತ್ತ ಟಂಕಸಾಲೆಯಲ್ಲಿ ಮೊಗಲಾಯರ ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ಅನುಕರಿಸಿ 18ನೆಯ ಶತಮಾನದ ಮಧ್ಯಭಾಗದಿಂದೀಚೆಗೆ ಅಚ್ಚು ಹಾಕಿಸಲಾಗಿದೆ. ಇವುಗಳಲ್ಲಿ ಷಾ ಆಲಮನ ನಾಣ್ಯಗಳ ಅನುಕರಣೆಯೇ ಹೆಚ್ಚು. ವಾರಾಣಸಿಯಿಂದ ಹೊರಟ ಇಂಥ ನಾಣ್ಯಗಳಲ್ಲಿ ಆರ್ಕಾಟ್ ನಾಣ್ಯಗಳಂತೆಯೇ ರಾಜನ ಆಳ್ವಿಕೆಯ ವರ್ಷದ ಬದಲಾವಣೆಯಿಲ್ಲ.

19ನೆಯ ಶತಮಾನದಿಂದೀಚೆಗೆ ಮೊಗಲ್ ನಾಣ್ಯಗಳನ್ನೇ ಅನುಕರಿಸಿದ್ದರೂ ಹೆಚ್ಚು ನಾಣ್ಯಗಳು ಯಂತ್ರಮುದ್ರಿತವಾಗಿ ಯುರೋಪಿನ ನಾಣ್ಯಗಳ ಮಾದರಿಯಲ್ಲಿ ಹೊರಬಂದವು. ಬೇರೆ ಬೇರೆ ಟಂಕಸಾಲೆಗಳಲ್ಲಿ ಒಂದೇ ರೀತಿಯ ನಾಣ್ಯಗಳು ಬರಲಾರಂಭಿಸಿದರೂ ಒಂದೊಂದು ಟಂಕಸಾಲೆಯ ಗುರುತೂ ಪ್ರತ್ಯೇಕವಾಗಿ ಉಳಿದಿದೆ. ಹೀಗೆ ಆರ್ಕಾಟ್ ನಾಣ್ಯಗಳ ಮೇಲೆ ತ್ರಿಶೂಲ, ಕಲ್ಕತ್ತ ನಾಣ್ಯಗಳ ಮೇಲೆ ಗುಲಾಬಿ, ಬೊಂಬಾಯಿ ನಾಣ್ಯಗಳ ಮೇಲೆ ಮೊದಲು ಕಿರೀಟ, ಅನಂತರ ನಾಲ್ಕು ಚುಕ್ಕೆಗಳನ್ನು ಕಾಣಬಹುದು.

ಈ ಕಾಲದಲ್ಲಿ ಮದ್ರಾಸಿನಿಂದ ಪಗೋಡಗಳು ಇನ್ನೂ ಅಚ್ಚಾಗುತ್ತಿದ್ದವು. ಇವುಗಳ ಮೇಲೆ ಮತ್ತು ಇವುಗಳ ಅಂಶಗಳಾದ ಬೆಳ್ಳಿ ನಾಣ್ಯಗಳ ಮೇಲೆ ಗೋಪುರಾಕೃತಿಗಳು ಕಾಣಿಸಿಕೊಂಡವು. ಇವುಗಳ ಬೆಲೆಯನ್ನು ಇಂಗ್ಲಿಷ್‌ನಲ್ಲಿ ಗೋಪುರದ ಕೆಳಗೂ ಹಿಮ್ಮುಖದಲ್ಲಿ ತೆಲುಗು ಅಥವಾ ತಮಿಳಿನಲ್ಲೂ ಅಂಕನಗಳಲ್ಲಿ ಹಾಕಿದ್ದಾರೆ. ಈ ಕಾಲದಲ್ಲಿ ಹಲವು ರೀತಿಯ ಬೆಳ್ಳಿಯ ಹಣಗಳೂ ತಾಮ್ರದ ಕಾಸುಗಳೂ ಚಲಾವಣೆಗೆ ಬಂದವು.

ಪ್ರ.ಶ. 1835ರಿಂದೀಚೆಗೆ ಇಡೀ ದೇಶಕ್ಕೆಲ್ಲ ಅನ್ವಯಿಸುವಂತೆ ಒಂದೇ ರೀತಿಯ ನಾಣ್ಯಗಳನ್ನು ಎಂದರೆ ರೂಪಾಯಿ ಮತ್ತು ಅದರ ಭಾಗಗಳನ್ನು ಈಸ್ಟ್ ಇಂಡಿಯ ಕಂಪನಿ ಜಾರಿಗೆ ತಂದಿತು. ಅವುಗಳ ಮೇಲೆ ಮೊದಲು ನಾಲ್ಕನೆಯ ವಿಲಿಯಂನ, ಅನಂತರ ವಿಕ್ಟೋರಿಯ ರಾಣಿಯ ಮೂರ್ತಿಗಳು ಮುಮ್ಮುಖದಲ್ಲೂ ಬೆಲೆ ಮತ್ತು ಕಂಪನಿಯ ಹೆಸರುಗಳು ಹಿಮ್ಮುಖದಲ್ಲೂ ಇವೆ. 1857ರ ಕ್ರಾಂತಿಯ ಅನಂತರ ಕಂಪನಿಯ ಹೆಸರು ನಿಂತುಹೋಗಿ ಚಕ್ರವರ್ತಿಗಳ ಹೆಸರಿನಲ್ಲಿಯೇ ನಾಣ್ಯಗಳು ಚಲಾವಣೆಗೆ ಬಂದವು.(ಎಂ.ಎಚ್.)

**ಈಸ್ಟ್ ಇಂಡೀಸ್:** ಆಗ್ನೇಯ ಏಷ್ಯದ ಖಂಡಪ್ರದೇಶಕ್ಕೂ ಉತ್ತರ ಆಸ್ಟ್ರೇಲಿಯಕ್ಕೂ ನಡುವೆ ಭೂಮಧ್ಯರೇಖೆಯ ಆಚೀಚೆ ವಿಸ್ತಾರ ಪ್ರದೇಶದಲ್ಲಿರುವ ದ್ವೀಪಗಳ ಸ್ತೋಮ. ಮಲಯ ದ್ವೀಪಸ್ತೋಮ, ಮಲೇಷ್ಯ, ಇಂಡೋನೇಷ್ಯ ಎಂದೂ ಇದನ್ನು ಕರೆಯುವುದುಂಟು. ಇವುಗಳಲ್ಲಿ ಮೊದಲನೆಯ ಎರಡು ಹೆಸರುಗಳ ಮಲಯ ಪರ್ಯಾಯದ್ವೀಪವನ್ನೂ ಫಿಲಿಪೀನ್ಸ್ ದ್ವೀಪಗಳನ್ನೂ ಸೇರಿಸಬೇಕಾಗುತ್ತದೆ; ನ್ಯೂ ಗಿನಿಯನ್ನು ಬಿಡಬೇಕಾಗುತ್ತದೆ. ನೆದರ್‌ಲೆಂಡ್ಸ್ ಈಸ್ಟ್ ಇಂಡೀಸ್ ಅಥವಾ ಡಚ್ ಈಸ್ಟ್ ಇಂಡೀಸ್ ಎನಿಸಿಕೊಂಡಿದ್ದ ಭಾಗವನ್ನು ಮಾತ್ರ ಈ ಪ್ರದೇಶ ಒಳಗೊಳ್ಳುತ್ತದೆ. ಆದರೆ ಫಿಲಿಪೀನ್ಸ್ ಇದರಲ್ಲಿ ಸೇರತಕ್ಕದ್ದಲ್ಲ.

ಈ ದ್ವೀಪಸ್ತೋಮಕ್ಕೆ ಈಸ್ಟ್ ಇಂಡೀಸ್ ಅಥವಾ ಪೂರ್ವ ಇಂಡಿಯ ದ್ವೀಪಗಳು ಎಂದು ಹೆಸರಿರುವುದಾದರೂ ಇಲ್ಲಿ ಭಾರತದ ಬುಡಕಟ್ಟಿನ ಜನರಿಲ್ಲ. ಇಲ್ಲಿನ ಜನರ ಸಂಸ್ಕೃತಿಯ ಮೇಲೆ ಭಾರತದ ಪ್ರಭಾವ ಬಹಳ ಮಟ್ಟಿಗೆ ಬಿದ್ದಿರುವುದರಿಂದ ಇದಕ್ಕೆ ಈ ಹೆಸರು ಸಾರ್ಥಕ. ಈ ದ್ವೀಪಗಳ ಪೈಕಿ ಜಾವಾದಲ್ಲಿ ಈ ಪ್ರಭಾವ ಅತ್ಯಂತ ಹೆಚ್ಚು. ಗಾತ್ರದಲ್ಲೂ ಆರ್ಥಿಕದೃಷ್ಟಿಯಿಂದಲೂ ಇದು ಈಸ್ಟ್ ಇಂಡೀಸಿನ ಪ್ರಮುಖ ದ್ವೀಪ. ಜನಸಂಖ್ಯೆಯೂ ಹೆಚ್ಚು ಇಂಡೋನೇಷಿಯದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಈ ದ್ವೀಪ ಹೊಂದಿದೆ.

ನ್ಯೂ ಗಿನಿಯ ಜನರದು ಪ್ರತ್ಯೇಕ ಬುಡಕಟ್ಟು. ಇವರ ಸಂಸ್ಕೃತಿ ಭಾರತದಿಂದ ಪ್ರಭಾವಿತವಾಗಿಲ್ಲ. ಇವರು ಬಹಳ ಹಿಂದುಳಿದಿದ್ದಾರೆ. ಈ ಪ್ರದೇಶದ ಆಗ್ನೇಯ ದಿಕ್ಕಿನಲ್ಲಿರುವ ಪ್ರದೇಶದ ಜನರನ್ನು, ಆಸ್ಟ್ರೇಲಿಯದ ಆದಿವಾಸಿಗಳನ್ನು, ಇವರು ಹೆಚ್ಚು ಹೋಲುತ್ತಾರೆ.

ಈ ದ್ವೀಪಸ್ತೋಮದ ಬಹುಭಾಗ ಇಂಡೋನೇಷ್ಯಕ್ಕೆ ಸೇರಿದ್ದು. ಆದರೆ ಟಿಮರ್ ದ್ವೀಪದ ಪೂರ್ವಾರ್ಧವೂ ಪಶ್ಚಿಮಾರ್ಧದ ಉತ್ತರದಲ್ಲಿರುವ ಒಂದು ತುಣುಕೂ ಪೋರ್ಚುಗೀಸರ ಅಧೀನದಲ್ಲಿತ್ತು. 2002ರಲ್ಲಿ ಸ್ವತಂತ್ರವಾಯಿತು. ಇದನ್ನು ಈಗ ಪೂರ್ವ ಟಿಮರ್ ಜನತಾಂತ್ರಿಕ ಗಣರಾಜ್ಯ ಎಂದು ಕರೆಯಲಾಗಿದೆ. ಉತ್ತರ ಹಾಗೂ ಬೋರ್ನಿಯೊ ಮತ್ತು ಸರಾವಕ್ ಹಾಗೂ ಬ್ರೂನೈ ಎಂಬ ರಕ್ಷಿತ ರಾಜ್ಯಗಳು ಇವೆ. ನ್ಯೂಗಿನಿಯ ಪೂರ್ವಾರ್ಧ ಆಸ್ಟ್ರೇಲಿಯದ ಅಧೀನದಲ್ಲಿದೆ.

ಈ ದ್ವೀಪಸ್ತೋಮದ ವಿಸ್ತಾರ ಪೂರ್ವ ಪಶ್ಚಿಮವಾಗಿ 5,600 ಕಿ.ಮೀ. ದಕ್ಷಿಣೋತ್ತರವಾಗಿ 2,080 ಕಿ.ಮೀ. ಇಲ್ಲಿ ಚಿಕ್ಕ ದೊಡ್ಡ ಗಾತ್ರಗಳ ಸು. 2,000 ದ್ವೀಪಗಳಿವೆ. ಜನಸಂಖ್ಯೆ, ನಾಗರಿಕತೆ, ಸಂಸ್ಕೃತಿ, ಆರ್ಥಿಕ ಬೆಳವಣಿಗೆ-ಇವು ದ್ವೀಪದಿಂದ ದ್ವೀಪಕ್ಕೆ ವ್ಯತ್ಯಾಸಗೊಳ್ಳುತ್ತವೆ.

ಭೂರಚನೆ: ಈಸ್ಟ್ ಇಂಡೀಸ್ ಭೂರಚನೆ ತುಂಬ ಸ್ವಾರಸ್ಯಕರ. ಏಕೆಂದರೆ ಇಲ್ಲಿ ಭೂಮಿಯ ಹೊರ ಪದರ ಇನ್ನೂ ಬಹಳ ಕ್ರಿಯಾತ್ಮಕ ಸ್ಥಿತಿಯಲ್ಲಿದೆ. ಆಲ್ಪ್ಸ್ ಹಿಮಾಲಯ ಶ್ರೇಣಿಯ ಪರ್ವತ ಮಡಿಕೆಯ ಎರಡು ವಕ್ರರೇಖೆಗಳು ಈ ಪ್ರದೇಶದ ಸನಿಹದಲ್ಲಿವೆ. ಆಲ್ಪ್ಸ್ ಮತ್ತು ಹಿಮಾಲಯಗಳಲ್ಲಿ ಪರ್ವತ ರಚನೆಯ ಕಾರ್ಯ ಪೂರೈಸಿದೆ. ಇಲ್ಲಿಯಾದರೋ ಅದಕ್ಕೆ ಇನ್ನೂ ಯುವಾವಸ್ಥೆ. ಬೋರ್ನಿಯೊ, ಮಲಯ, ಜಾವಾ, ಸುಮಾತ್ರಗಳ ಈಶಾನ್ಯ ಭಾಗ, ಇವುಗಳ ನಡುವಣ ಕಿರಿ ಆಳದ ಸಮುದ್ರ ಪ್ರದೇಶ-ಇವು ಹೆಚ್ಚು ಕಡಿಮೆ ಸ್ಥಿರವಾಗಿವೆ. ಈಚೆಗೆ ಇಲ್ಲಿ ಭೂಕಂಪವೇನೂ ಆಗಿಲ್ಲ; ಆದರೆ ಇದರ ಅಂಚಿನಲ್ಲಿ ಮಾತ್ರ ಆಗಾಗ ಲಘುವಾಗಿ ಅದುರುವುದು ಉಂಟು. ಆಸ್ಟ್ರೇಲಿಯ, ನ್ಯೂ ಗಿನಿಯ ನೈರುತ್ಯಭಾಗ ಹಾಗೂ ಇವುಗಳ ನಡುವಣ ಕಿರಿ ಆಳದ ಕಡಲ ತಳ-ಇವೂ ಪುರಾತನವಾದ ಸ್ಥಿರಭೂಮಿ. ಈ ಎರಡು ಸ್ಥಿರ ಪ್ರದೇಶಗಳ ಸೆರಗಿನ ಉದ್ದಕ್ಕೂ ಬಿಲ್ಲಿನಂತೆ ಒಂದು ದ್ವೀಪವೂ ಆಳ ಕಡಲ ಗ್ರಂಥಿಯೂ ಇವೆ. ಇದೇ ಉತ್ಕರ್ಷದ ತಾಣ. ಜ್ವಾಲಾಮುಖಿಯ ವ್ಯಾಪಾರಗಳಿಗೂ ಭೂಕಂಪಗಳಿಗೂ ಇದು ಕೇಂದ್ರ. ದ್ವೀಪಗಳು ಪರ್ವತಮಯವಾಗಿ ಎತ್ತರವಾಗಿರುವುದೂ ಇವುಗಳ ನಡುವಣ ಕಡಲು ಆಳವಾಗಿರುವುದೂ ಈ ಅಸ್ಥಿರತೆಗೆ ಕಾರಣ. ಟೈಮರ್‌ನಲ್ಲಿ 1379 ಮೀ. ಎತ್ತರವಿರುವ ಪ್ಲಿಸ್ಟೊಸೀನ್ ಹವಳಬಂಡೆಗಳ ಸಾಲಿದೆ. ಎತ್ತರವಾದ ಪರ್ವತದ ತುದಿಗೂ ಆಳವಾದ ಕಡಲ ತಳಕ್ಕೂ ನಡುವಣ ಇಳಿಜಾರು ಹೆಚ್ಚು ಕಡಿದಾಗಿರುವ ಈ ದ್ವೀಪದ ದಕ್ಷಿಣ ಪಾರ್ಶ್ವದಲ್ಲಿ ಭೂಕಂಪದ ಬಿರುಸು ಹೆಚ್ಚು.

ಬೋರ್ನಿಯೋದ ಮೂಲನಿವಾಸಿ

ಇಲ್ಲಿ 95 ಜೀವಂತ ಜ್ವಾಲಾಮುಖಿಗಳಿವೆ. ಇವುಗಳ ಬಗ್ಗೆ ಸದಾ ಕಣ್ಗಾವಲಿಡ ಬೇಕಾಗುತ್ತದೆ. ಸುಮಾತ್ರದಿಂದ ಆರಂಭಿಸಿ ಜಾವಾ ಮೂಲಕವಾಗಿ ಸುಂಡ ದ್ವೀಪಗಳವರೆಗೆ ಬಂದರೆ ಉದ್ದಕ್ಕೂ ಕ್ಲುಪ್ತದೂರಗಳಲ್ಲಿ ಅಗ್ನಿಪರ್ವತಗಳಿವೆ. ಇವು ಹಾಲ್ಮಹೇರ, ಸುಲವೇಸಿ ಮುಂತಾದ ದ್ವೀಪಗಳಲ್ಲೂ ಅಲ್ಲಲ್ಲಿ ಇವೆ. ಈ ಅಗ್ನಿಪರ್ವತಗಳು ಸ್ಫೋಟಿಸುವ ಗುಣವುಳ್ಳವು. ಲಾವ ಹರಿಯುವುದಿಲ್ಲ. ಆದ್ದರಿಂದ ಇವುಗಳ ಶಿರೋಭಾಗ ಬೆಳೆಯುವುದು ನಿಧಾನ. ಇವುಗಳಿಂದ ಹೊರಬರುವ ವಸ್ತುಗಳಲ್ಲಿ ಬೂದಿಯೇ ಹೆಚ್ಚು. ಸುಮಾತ್ರ, ಜಾವಾಗಳಲ್ಲಿ ಈ ಬೂದಿಯೂ ಲಾವಾರಸವೂ ಗಾಳಿನೀರುಗಳ ಸಹಾಯದಿಂದ ದೂರ ಸಾಗಿ ಸಮುದ್ರದಲ್ಲಿ ಶೇಖರವಾಗುತ್ತಿವೆ. ಆದ್ದರಿಂದ ಈ ದ್ವೀಪಗಳ ತೀರದಲ್ಲಿ ಜವುಗು ನೆಲ ಇದೆ. ಈ ದ್ವೀಪಗಳ ಮುಖ್ಯ ಲೋಹ ತವರ. ಪೆಟ್ರೋಲಿಯಂ, ಬಾಕ್ಸೈಟ್, ಚಿನ್ನ, ಕಲ್ಲಿದ್ದಲು-ಇವು ಇಲ್ಲಿನ ಇತರ ಖನಿಜಗಳು ಕಬ್ಬಿಣ, ತಾಮ್ರ, ನಿಕ್ಕಲ್, ಸೀಸ, ಮ್ಯಾಂಗನೀಸ್, ಮೊನಜೈಟ್, ಪ್ಲಾಟಿನಂ, ಟಂಗ್‌ಸ್ಟನ್, ಆಸ್ಫಾಲ್ಟ್, ಫಾಸ್ಫೇಟ್, ಗಂಧಕ, ಅಯೊಡೀನ್, ವಜ್ರ-ಇವೂ ಅಲ್ಪ ಪ್ರಮಾಣದಲ್ಲಿ ಸಿಗುತ್ತವೆ.

**ಮೇಲ್ಮೈಲಕ್ಷಣ:** ಈ ದ್ವೀಪಗಳು ಮುಖ್ಯವಾಗಿ ಪರ್ವತಮಯ. ಇಲ್ಲಿ ಉದ್ದನೆಯ ನದಿಗಳು ಇಲ್ಲವೇ ಇಲ್ಲವೆನ್ನಬಹುದು. ಸುಮಾತ್ರದ ಇಂದರಗಿರಿ, ಬೋರ್ನಿಯೊವಿನ ಕಪೋವೀಸ್, ನ್ಯೂ ಗಿನಿಯ ಡಿಗೋಯೆಲ್-ಇವು ಈ ಪೈಕಿ ದೊಡ್ಡ ನದಿಗಳು. ಇವುಗಳ ಉದ್ದ ಕಡಿಮೆಯಾದರೂ ಮಳೆಗಾಲದಲ್ಲಿ ಇವು ಹೆಚ್ಚು ನೀರನ್ನು ಹೊತ್ತು ಸಾಗುತ್ತವೆ. ಇವುಗಳ ಬಿರುಸಿನಹರಿವು ಅಗ್ನಿಪರ್ವತಗಳ ಕ್ರಿಯೆಯಿಂದಲೂ ನೆಲದ ನಗ್ನೀಕರಣದ ವೇಗ ಹೆಚ್ಚು. ಇವು ಮುಖಜಭೂಮಿಗಳನ್ನೂ ರಚಿಸಿಕೊಂಡಿವೆ, ಕೆಲವಂತೂ ವರ್ಷಕ್ಕೆ 90 ಮೀ.ದಷ್ಟು ನೆಲ ನಿರ್ಮಾಣ ಮಾಡುತ್ತವೆ.

ವಾಯುಗುಣ: ಅತಿಶಾಖ, ಆರ್ದ್ರತೆ ತುಂಬಿದ, ಭೂಮಧ್ಯರೇಖೆಯ ಪ್ರದೇಶದ ವಾಯುಗುಣ ಇಲ್ಲಿನದು. ಮಾನ್ಸೂನ್ ಪ್ರಭಾವದಿಂದ ಇದು ಅಲ್ಪಸ್ವಲ್ಪ ವ್ಯತ್ಯಾಸಗೊಳ್ಳುತ್ತದೆ. ಬೇಸಗೆಯಲ್ಲಿ-ಜೂನ್‌ನಿಂದ ಸೆಪ್ಟೆಂಬರ್‌ವರೆಗೆ-ಆಗ್ನೇಯ ದಿಕ್ಕಿನಿಂದಲೂ ನವೆಂಬರ್‌ನಿಂದ ಫೆಬ್ರುವರಿವರೆಗೆ ವಾಯವ್ಯದಿಂದಲೂ ಮಾರುತಗಳು ಬೀಸುತ್ತವೆ. ಎತ್ತರಕ್ಕೆ ಅನುಸಾರವಾಗಿ ಮಳೆಯ ಪ್ರಮಾಣ ವ್ಯತ್ಯಾಸಗೊಳ್ಳುತ್ತದೆ.

ಸಸ್ಯ, ಪ್ರಾಣಿವರ್ಗ: ಈ ದ್ವೀಪಗಳ ಸಸ್ಯ, ಪ್ರಾಣಿವರ್ಗಗಳ ವೈವಿಧ್ಯ ಅಸಾಧಾರಣ. ಒಂದೇ ವಾಯುಗುಣ ಪ್ರದೇಶದಲ್ಲಿರುವ ಈ ಅನೇಕ ದ್ವೀಪಗಳ ಏಕತೆಯಲ್ಲಿ ಅನೇಕತೆಯಿದೆ. ಜೊತೆಗೆ ಏಷ್ಯ–ಆಸ್ಟ್ರೇಲಿಯಗಳ ಪ್ರಾಣಿ, ಸಸ್ಯವರ್ಗಗಳನ್ನು ಪ್ರತ್ಯೇಕಿಸುವ ನಡುರೇಖೆಯ ಮೇಲೆ ಈ ದ್ವೀಪಗಳು ಹಬ್ಬಿರುವುದೂ ಈ ವೈವಿಧ್ಯ ವೈಭವಕ್ಕೆ ಕಾರಣ. ಬೋರ್ನಿಯೊ ಜಾವಾಗಳಲ್ಲಿ ಇವಕ್ಕೆ ಏಷ್ಯನ್ ಲಕ್ಷಣ; ನ್ಯೂ ಗಿನಿಯಲ್ಲಿ ಆಸ್ಟ್ರೇಲಿಯನ್ ಲಕ್ಷಣ. ಗಿಡಮರಗಳು ಸಾಮಾನ್ಯವಾಗಿ ನಿತ್ಯ ಹರಿದ್ವರ್ಣ. ಮಳೆ ಕಡಿಮೆಯಾಗಿರುವಲ್ಲಿ ಪರ್ಣಪಾತಿ ಸಸ್ಯಗಳಿವೆ.

ಅನೇಕ ಜಾತಿಯ ಪ್ರಾಣಿಗಳು ಇಲ್ಲಿವೆಯಾದರೂ ಇವುಗಳಲ್ಲಿ ದೊಡ್ಡವು ವಿರಳ. ಜಾವಾ, ಸುಮಾತ್ರ, ಬೋರ್ನಿಯೊಗಳ ತೀರಪ್ರದೇಶಗಳಲ್ಲಿರುವ ಆನೆ, ಹುಲಿ, ಖಡ್ಗಮೃಗ, ಒರಾಂಗ್ ಒಟಾಂಗುಗಳು ಏಷ್ಯದ ಜಾತಿ. ಪೂರ್ವದ ಕಡೆಗಳಲ್ಲಿ ಆಸ್ಟ್ರೇಲಿಯದ ಕಾಂಗರೂ ಜಾತಿಯ ಪ್ರಾಣಿಗಳಿವೆ. ಹಕ್ಕಿಗಳು ವಿವಿಧ ವರ್ಣಮಯ; ನೋಡಲು ಬಲು ಸುಂದರ. ನ್ಯೂ ಗಿನಿಯ ದಿವ್ಯಪಕ್ಷಿಗೆ (ಬರ್ಡ್ ಆಫ್ ಪ್ಯಾರಡೈಸ್) ಸೌಂದರ್ಯದಲ್ಲಿ ಪ್ರಥಮಸ್ಥಾನ. ಹಲಗಣ್ಣು ಹಕ್ಕಿ (ಆರ್ಗಸ್), ಜೀವಂಜೀವ (ಫೆಸಂಟ್), ಕೊಂಬುಕೊಕ್ಕಿನ ಹಕ್ಕಿ (ಹಾರ್ನ್‌ಬಿಲ್), ಕ್ಯಾಸೊವೆರಿ–ಇವು ಇತರ ಕೆಲವು ಪಕ್ಷಿಗಳು. ಜಾವಾ, ಸುಮಾತ್ರ, ಬೋರ್ನಿಯೊಗಳಲ್ಲಿ ಹಾವುಗಳು ಸಾಮಾನ್ಯ. ಇಲ್ಲಿನ ಮೊಸಳೆ ಬಹು ಅಪಾಯಕಾರಿ ಪ್ರಾಣಿ. ಕೊಮೊಡೊ ಪೆಡಂಭೂತ ಎಂಬ ಹೆಸರಿನ ಭಾರಿ ಹಲ್ಲಿಗಳು ಕೊಮೊಡೊ ದ್ವೀಪದಲ್ಲಿವೆ. ಸೊಳ್ಳೆ, ಇರುವೆ, ಜೇಡ, ಸಾವಿರ ಕಾಲು ಚೇಳು –ಇವು ಹೆಚ್ಚಾಗಿವೆ.

ಜನಜೀವನ: ಇಲ್ಲಿನ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಜಾವಾದಲ್ಲೂ ನೆರೆಯ ಮದುರದಲ್ಲೂ ವಾಸಿಸುತ್ತಾರೆ. ಅನೇಕ ದ್ವೀಪಗಳಲ್ಲಿ ನೆಲ ಗಟ್ಟಿಯಿಲ್ಲ. ಬೇಸಾಯ ಸ್ಥಿರವಿಲ್ಲ. ಅಗ್ನಿಪರ್ವತಗಳ ಉಗುಳುವಿಕೆಯಿಂದ ಮತ್ತೆ ಮತ್ತೆ ಫಲವತ್ತಾಗುವ ದ್ವೀಪಗಳಲ್ಲಿ ಬೇಸಾಯ ಹೆಚ್ಚು. ಈ ದ್ವೀಪದ ಮೂಲನಿವಾಸಿಗಳಾದ ಕಾಡುಜನರು ಮುಖ್ಯವಾಗಿ ಬೇಟೆಯಿಂದಲೇ ಜೀವಿಸುತ್ತಿದ್ದರು. ಕೆಲವು ದ್ವೀಪಗಳಲ್ಲಿ ಇವರು ಈಗಲೂ ಹಿಂದುಳಿದೇ ಇದ್ದಾರೆ. ಕಾಡು ಸುಟ್ಟು, ನೆಲದ ಮೇಲೆ ಕಾಳು ಚೆಲ್ಲಿ ಬೇಸಾಯ ಮಾಡುವುದೂ ನೆಲದ ಫಲಸಾರ ಕಡಿಮೆಯಾದಾಗ ಆ ಸ್ಥಳ ಬಿಟ್ಟು ಬೇರೆಡೆಗೆ ಹೋಗಿ ಅಲ್ಲೂ ಅದೇ ಕ್ರಮ ಅನುಸರಿಸುವುದೂ ಈ ಹಿಂದುಳಿದ ಜನರ ಬೇಸಾಯ ಪದ್ಧತಿ. ದೊಡ್ಡ ದ್ವೀಪಗಳ ಪೂರ್ವಭಾಗಗಳಲ್ಲಿ ವ್ಯವಸ್ಥಿತ ಬೇಸಾಯ ಅನುಸರಿಸಲಾಗುತ್ತದೆ. **(ನೋಡಿ– ಇಂಡೋನೇಷ್ಯ)**

ಈಸ್ಟ್ ಇಂಡೀಸಿನ ಇತಿಹಾಸ: ಈಸ್ಟ್ ಇಂಡೀಸ್ ದ್ವೀಪಸ್ತೋಮದ ಮೂಲನಿವಾಸಿಗಳು ಸ್ಥೂಲವಾದ ಮಂಗೋಲಿಯನ್ ಲಕ್ಷಣವುಳ್ಳವರು. ಆದರೆ ಪ್ರಸಕ್ತಶಕೆಯ ಆರಂಭದಲ್ಲಿ ಇಲ್ಲಿಗೆ ಬಂದು ನೆಲೆಸಿದ ಭಾರತೀಯ ಸಂಸ್ಕೃತಿಯ ಪ್ರಭಾವ ಇವರ ಮೇಲೆ ಬಹಳವಾಗಿ ಬಿದ್ದಿದೆ. ಈ ವಲಸೆಗಾರರು ಇಲ್ಲಿಗೆ ತಮ್ಮೊಡನೆ ಹಿಂದೂ ಧರ್ಮವನ್ನೂ ಹೀನಯಾನ ಮತ್ತು ಮಹಾಯಾನ ಬೌದ್ಧ ಧರ್ಮವನ್ನೂ ತಂದು ಸಂಲಗ್ನ ಗೊಳಿಸಿದರು ಜಾವಾದಲ್ಲೂ ಇತರ ಕಡೆಯ ತೀರಪ್ರದೇಶಗಳಲ್ಲೂ ಇವರ ಪ್ರಭಾವ ಹೆಚ್ಚಾಗಿತ್ತು. ಮುಂದೆ ಈ ಪ್ರದೇಶಗಳ ಜನ ಇಸ್ಲಾಂ ಧರ್ಮವನ್ನಪ್ಪಿದರು. ಒಳನಾಡಿನ ಜನ ಮಾತ್ರ ಮೊದಲಿನಿಂದಲೂ ಅನಾಗರಿಕರಾಗಿಯೇ ಉಳಿದರು.

ಚೀನೀಯರ ಆಗಮನ 19ನೆಯ ಶತಮಾನದಲ್ಲಿ ಅಧಿಕವಾಗಿತ್ತು. ಐರೋಪ್ಯ ರಕ್ತವೂ ಹೆಚ್ಚಾಗಿ ಬೆರೆಯಿತು. 20ನೆಯ ಶತಮಾನದಲ್ಲೂ ಈ ಎರಡು ಅಂಶಗಳು ಅಧಿಕವಾಗಿ ಬೆಳೆಯುತ್ತಿವೆ.

ಟಾಲಮಿ ಮುಂತಾದ ಪ್ರಾಚೀನ ಭೂಗೋಳಶಾಸ್ತ್ರಜ್ಞರಿಗೆ ಈ ಪ್ರದೇಶ ಅಸ್ಪಷ್ಟವಾಗಿ ಗೊತ್ತಿತ್ತು. ಆದರೆ ಇದರ ಪ್ರಾಚೀನ ಚರಿತ್ರೆಗೆ ಆ ಕಾಲದ ಶಾಸನಗಳೂ, ಸ್ಮಾರಕಗಳೂ, ಚೀನೀ ಲೇಖನಗಳೂ ಮುಖ್ಯ ಆಧಾರ. ಭಾರತೀಯ ವಸತಿಗಳು ಕ್ರಮೇಣ ಸಣ್ಣ ರಾಜ್ಯಗಳಾಗಿ ಮಾರ್ಪಟ್ಟವು. ಶ್ರೀವಿಜಯ (ಪಾಲೆಂಬಾಂಗ್) ಎಂಬಲ್ಲಿ ಸ್ಥಾಪಿತವಾದದ್ದು ಮೊದಲ ಮುಖ್ಯ ರಾಜ್ಯ. ಶೈಲೇಂದ್ರ ವಂಶದ ರಾಜರ ಆಡಳಿತ (700–1300) ಇಡೀ ದ್ವೀಪಸ್ತೋಮದ ಮೇಲೆ ಅಧಿಕಾರ ಹೊಂದಿತ್ತು. ಮುಂದೆ ದಕ್ಷಿಣ ಭಾರತೀಯರ ದಂಡಯಾತ್ರೆಯೂ, ಜಾವಾದಲ್ಲಿದ್ದ ರಾಜ್ಯಗಳೂ, ಇಸ್ಲಾಂ ಪ್ರಸಾರವೂ ಇದರ ಹಿರಿಮೆಯನ್ನು ಮುರಿದುವು. ಮಂಗೋಲರ ಪ್ರತಿನಿಧಿಯಾಗಿ ಮಾರ್ಕೊ ಪೋಲೊ ಇಲ್ಲಿಗೆ ಬಂದಿದ್ದಾಗ ಆತ ಇಲ್ಲಿ ಮುಸ್ಲಿಂ ರಾಜ್ಯಭಾರ ಜಾವಾದ ಮಜಪಹಿತ್ ಆಳ್ವಿಕೆ ಇದ್ದದ್ದನ್ನು ಕಂಡ. 1292ರಲ್ಲಿ ಮಂಗೋಲರು ಜಾವಾದ ಮೇಲೆ ಏರಿಬಂದರು. ಮಂಗೋಲರನ್ನು ಓಡಿಸಿದ ಮೇಲೆ ಜಾವಾದ ಪೂರ್ವ ಭಾಗದಲ್ಲಿ ಸ್ಥಾಪನೆಯಾದ ಮಜಕುಹಿತ್ ವಂಶ ಪ್ರಬಲವಾಗಿ ಹೆಚ್ಚು ಕಡಿಮೆ ಇಡೀ ದ್ವೀಪಸ್ತೋಮದ ಮೇಲೆ ಪ್ರಭುತ್ವಗಳಿಸಿಕೊಂಡಿತು. ಪಶ್ಚಿಮ ಜಾವಾದಲ್ಲಿ ಮಾತ್ರ ಸುಂಡ ರಾಜ್ಯದ ಪಾರಮ್ಯ ಉಳಿದುಕೊಂಡಿತ್ತು. 1400ರ ವೇಳೆಗೆ ಮುಸ್ಲೀಮರು ಮಲಕ್ಕವನ್ನು ಗೆದ್ದು ಕರಾವಳಿಯಲ್ಲೇ ಪೂರ್ವಾಭಿಮುಖವಾಗಿ ತೆರಳಿ ಸಾಗಿದರು. ಮುಂದಿನ ನೂರು ವರ್ಷಗಳ ಕೊನೆಯ ವೇಳೆಗೆ ಮಜಪಹಿತ್ ಮತ್ತು ಸುಂಡರಿಗೂ ಸಿಂಹಸ್ವಪ್ನವಾದರು. ಅಷ್ಟರಲ್ಲಿ ಪೋರ್ಚುಗೀಸರು ಬಂದದ್ದರಿಂದ ಇವರ ಮುನ್ನಡೆಗೆ ತಡೆಯಾಯಿತು.

ಐರೋಪ್ಯರ ಪ್ರಭಾವ: ಪೋರ್ಚುಗೀಸರು 1511ರಲ್ಲಿ ಮಲಕ್ಕವನ್ನು ಹಿಡಿದುಕೊಂಡರು. ಮುಂದೆ ಕೆಲವು ವರ್ಷಗಳಲ್ಲಿ ಸ್ಪೇನಿನವರೂ ಇಲ್ಲಿ ಕಾಲಿಟ್ಟರು. ಇವರೂ ಪೋರ್ಚುಗೀಸರೂ ಸ್ಥಳೀಯ ಗುಂಪುಗಳೆರಡರ ಬೆಂಗಡೆಗೆ ನಿಂತು ಅವುಗಳ ನಡುವೆ ವೈರ ಬೆಳೆಯಲು ಪ್ರೋತ್ಸಾಹ ನೀಡಿದರು. ಮುಸ್ಲಿಮರು ಸುಮಾತ್ರದ ಉತ್ತರ ಭಾಗಕ್ಕೆ ಸರಿದು ಅಲ್ಲಿಂದಲೇ ಸಂಬಾರಪದಾರ್ಥ ವ್ಯಾಪಾರ ಮುಂದುವರಿಸಿದರು. ಜಾವಾ, ಬಾಲಿಗಳ ಅತ್ಯಂತ ಪೂರ್ವ ಭಾಗದಲ್ಲಿ ಮಾತ್ರ ಹಿಂದೂಧರ್ಮ ಉಳಿಯಿತು. ಸೇಂಟ್ ಸೇವಿಯರ್ ಮುಂತಾದ ಪಾದ್ರಿಗಳ ಮೂಲಕ ಇಲ್ಲಿನ ಜನರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಿ ಗೆಲ್ಲಬೇಕೆಂದು ಪೋರ್ಚುಗೀಸರು ಪ್ರಯತ್ನಿಸಿದರು. ಆದರೆ ಅಧಿಕಾರಿಗಳ ದೌರ್ಜನ್ಯಗಳಿಂದ ವಿಪರೀತ ಫಲಗಳುಂಟಾದವು. 1570ರಲ್ಲಿ ಟೆನುಟೆಯ ದೊರೆಯ ಕೊಲೆಯಿಂದ ಪೋರ್ಚುಗೀಸರ ವಿರುದ್ಧ ಬಂಡಾಯ ವೆದ್ದಿತು. ಆಂಬೊಯಿನ ಒಂದು ಬಿಟ್ಟು ಉಳಿದ ಸ್ಥಳಗಳಿಂದ ಅವರು ಕಾಲು ಕೀಳಬೇಕಾಯಿತು. 1580ರ ಸ್ಪೇನ್, ಪೋರ್ಚುಗಲ್ ಒಕ್ಕೂಟವಾದ್ದರಿಂದ ಅವರು ಬದುಕಿದರು; ಅವರಿಗೆ ಸ್ಪೇನಿನ ಪಡೆಯ ನೆರವು ದೊರಕಿತು. 16ನೆಯ ಶತಮಾನದ ಕೊನೆಯ ವೇಳೆಗೆ ಪರಿಸ್ಥಿತಿ ಮತ್ತೆ ಹದಗೆಟ್ಟಿತು. ಈ ದ್ವೀಪಸ್ತೋಮದ ಹತೋಟಿ ಮುಸ್ಲಿಮರ ಕೈಗೆ ಹೋಗುವ ಸಂಭವವುಂಟಾಯಿತು.

ಬಾಲಿ ನೃತ್ಯದ ಒಂದು ಭಂಗಿ

ಪೋರ್ಚುಗೀಸರು ಹೊರಗಡೆಯ ಇತರ ಸ್ಪರ್ಧಿಗಳನ್ನೂ ಎದುರಿಸಬೇಕಾಯಿತು. ಇಂಗ್ಲಿಷರೂ ಫ್ರೆಂಚರೂ ಇಲ್ಲಿಗೆ ಬಂದರು. ಸಂಬಾರ ಪದಾರ್ಥಗಳ ವ್ಯಾಪಾರದಲ್ಲಿ ಪೋರ್ಚುಗೀಸರ ಏಕಸ್ವಾಮ್ಯವನ್ನು ಮುರಿಯಬೇಕೆಂಬುದೇ ಇವರ ಉದ್ದೇಶ. ಮೆಣಸಿನ ಪೇಟೆ ಇಂಗ್ಲಿಷರ ಕೈಗೆ ಬಂತು. ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ಸ್ಥಾಪನೆಯಾಯಿತು. ಡಚ್ಚರೂ ಫ್ರೆಂಚರೂ ತಂತಮ್ಮ ಕಂಪನಿಗಳನ್ನು ಕಟ್ಟಿದರು. ಡಚ್ಚರು ಇತರರಿಗಿಂತ ಪ್ರಬಲರಾದರು. ಬಂಡವಾಳ ಹಾಗೂ ಸ್ವಸರಕಾರ ಬಲದಿಂದ ಅವರು ಪೋರ್ಚುಗೀಸರನ್ನು ಆಂಬೊಯಿನ ದಿಂದ ಓಡಿಸಿದರು: ಇಂಗ್ಲಿಷರು ಅನೇಕ ಕಡೆಗಳಲ್ಲಿ ಕಾರ್ಖಾನೆ ಸ್ಥಾಪಿಸಿದರು. ಡಚ್ಚರ ಮುಂದೆ ಇವರು ನಿಲ್ಲಲಾರದೆ ಹೋದರು. ಆಂಬೊಯಿನದಲ್ಲಿ ಇವರು ಡಚ್ಚರ ಆಶ್ರಯದಲ್ಲೇ ವ್ಯಾಪಾರ ಮಾಡುತ್ತಿದ್ದಾಗ ಜಪಾನೀಯರೊಂದಿಗೆ ಸಂಚು ಹೂಡಿದರೆಂಬ ಕಾರಣದಿಂದ ಅಲ್ಲಿನ ಗೌರ್ನರ್ ಇಂಗ್ಲಿಷ್ ವ್ಯಾಪಾರಿಗಳನ್ನು ವಿಚಾರಣೆಗೆ ಗುರಿಪಡಿಸಿ ಅವರಲ್ಲಿ ಇಬ್ಬರು ವಿನಾ ಉಳಿದವರನ್ನು ಮರಣದಂಡನೆಗೆ ಗುರಿಪಡಿಸಿದರು. ಆಂಬೊಯಿನದಲ್ಲಿನ ಈ ಸಾಲುಕೊಲೆಯಿಂದ ಇಂಗ್ಲಿಷರ ಧೈರ್ಯ ಉಡುಗಿತು. ಸಣ್ಣ ದ್ವೀಪವೊಂದರಲ್ಲಿ ಇವರು ತಲೆಮರಿಸಿಕೊಂಡರು. 1682ರಲ್ಲಿ ಡಚ್ಚರು ಅದನ್ನೂ ಗೆದ್ದಾಗ ಅಲ್ಲಿಂದಲೂ ನಡೆದರು. ಅಲ್ಲಿಗೆ ಇಂಗ್ಲಿಷರೂ ಈ ದ್ವೀಪಸ್ತೋಮದಿಂದ ಸಂಪೂರ್ಣವಾಗಿ ನಿರ್ಗಮಿಸಿದಂತಾಯಿತು.

1708ರಲ್ಲಿ ಡಚ್ ಈಸ್ಟ್ ಇಂಡಿಯ ಕಂಪನಿಯ ಆಡಳಿತ ಕೊನೆಗೊಂಡು ಈಸ್ಟ್ ಇಂಡೀಸ್ ದ್ವೀಪಗಳು ಡಚ್ ಸರ್ಕಾರದ ಸಂಪೂರ್ಣ ಅಧಿಕಾರಕ್ಕೊಳಗಾದವು. ಡಚ್ಚರು ತಮ್ಮ ದೀರ್ಘ ಆಳ್ವಿಕೆಯ ಕಾಲದಲ್ಲಿ ಅಲ್ಲಿನ ಜನರ ಮೇಲ್ಮೆಗಾಗಿ ಯಾವ ಸುಧಾರಣೆಯನ್ನೂ ಕೈಗೊಳ್ಳಲಿಲ್ಲ. ಡಚ್ ಸರ್ಕಾರದಿಂದ ನೇಮಿಸಲ್ಪಟ್ಟ ಗೌರ್ನರ್ ಜನರಲ್ ಈಸ್ಟ್ ಇಂಡೀಸ್ ದ್ವೀಪಗಳ ಆಡಳಿತದ ಮುಖ್ಯಾಧಿಕಾರಿಯಾಗಿದ್ದ. ಅವನ ಸಹಾಯಕ್ಕೆ ಸಜ್ಜಾದ ಡಚ್ ಸೈನ್ಯವೊಂದಿತ್ತು. ಸರ್ಕಾರದ ಉನ್ನತ ಹುದ್ದೆಗಳೆಲ್ಲ ಡಚ್ಚರಿಗೇ ಮೀಸಲಾಗಿದ್ದುವು. ಕೆಲವು

ರಸ್ತೆಗಳನ್ನೂ, ಪಾಠಶಾಲೆಗಳನ್ನೂ, ಆಸ್ಪತ್ರೆಗಳನ್ನೂ ತೆರೆದಾಗ್ಯೂ ಅವುಗಳ ಉಪಯೋಗ ಆಳುವ ಜನಾಂಗದವರಿಗೆ ಮಾತ್ರ ಸೀಮಿತವಾಗಿತ್ತು. ಒಟ್ಟಿನಲ್ಲಿ ಡಚ್ಚರ ಆಳ್ವಿಕೆ ವಸಾಹತು ನೀತಿಯಿಂದ ಕೂಡಿತ್ತು. ಈ ದ್ವೀಪಗಳ ಹೇರಳವಾದ ಖನಿಜಸಂಪತ್ತನ್ನೂ ವ್ಯವಸಾಯೋತ್ಪನ್ನಗಳನ್ನೂ ಡಚ್ಚರು ಶೋಷಿಸಿದರು. ಈಸ್ಟ್ ಇಂಡೀಸ್ ದ್ವೀಪಗಳ ನಿವಾಸಿಗಳು ರಾಜಕೀಯ ಮತ್ತು ಆರ್ಥಿಕ ಸಂಕಷ್ಟಗಳನ್ನನುಭವಿಸಬೇಕಾಗಿ ಬಂತು. 19ನೆಯ ಶತಮಾನದಲ್ಲಿ ಈಸ್ಟ್ ಇಂಡೀಸ್ ದ್ವೀಪಗಳಲ್ಲಿ ಡಚ್ಚರ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ನೀತಿ ಪರಮಾವಧಿಯನ್ನು ತಲುಪಿ ಅಲ್ಲಿನ ನಿವಾಸಿಗಳ ಜೀವನ ಅಧೋಗತಿಯನ್ನು ಮುಟ್ಟಿತು.

20ನೆಯ ಶತಮಾನದಲ್ಲಿ ಜನರಲ್ಲಿ ಜಾಗೃತಿ ಉಂಟಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ಸಾಗಿತು. ಡಚ್ ಈಸ್ಟ್ ಇಂಡೀಸ್ ಪ್ರದೇಶದಲ್ಲಿ ಸ್ವತಂತ್ರ ಇಂಡೊನೇಷ್ಯ 1949ರಲ್ಲಿ ಉದಯಮಾಯಿತು. (ನೋಡಿ– ಇಂಡೋನೇಷ್ಯದ–ಚರಿತ್ರೆ) *

ಈಸ್ಟ್ ಇಂಡೀಸಿನ ಭೂ ಇತಿಹಾಸ: ಈಸ್ಟ್ ಇಂಡೀಸಿನ ಮುಖ್ಯ ಭಾಗಗಳಲ್ಲಿ ಭೂಮಿಯ ಹೊರಪದರ ಇನ್ನೂ ಜಾಗೃತಸ್ಥಿತಿಯಲ್ಲಿರುವುದರಿಂದ ಭೂವಿಜ್ಞಾನ ದೃಷ್ಟಿಯಲ್ಲಿ ಇದು ಒಂದು ಮುಖ್ಯ ಪ್ರದೇಶವಾಗಿದೆ. ಈ ಪ್ರದೇಶ ಆಲ್ಪೈನ್–ಹಿಮಾಲಯ ಪರ್ವತ ಮಡಿಕೆಗಳ ವಲಯಗಳು ಸಂಧಿಸಿ ಮುಂದುವರಿಯುವ ಸ್ಥಳದಲ್ಲಿದೆ. ಆಲ್ಪ್ಸ್ ಮತ್ತು ಹಿಮಾಲಯ ಪ್ರದೇಶಗಳಲ್ಲಿ ಪರ್ವತ ಉಗಮ ಕಾರ್ಯ ಮುಗಿದಿದೆ; ಆದರೆ ಈಸ್ಟ್ ಇಂಡೀಸ್ ಭಾಗದಲ್ಲಿ ಈ ಕಾರ್ಯಾಚರಣೆ ಇನ್ನೂ ಯೌವನಾವಸ್ಥೆಯಲ್ಲಿದೆ. ಬೋರ್ನಿಯೊ, ಮಲಯ ಮತ್ತು ಜಾವಾ ಸುಮಾತ್ರಗಳ ಹೊರ ಅಂಚುಗಳನ್ನು ಹೊರತುಪಡಿಸಿ ಈಶಾನ್ಯ ಭಾಗಗಳು ಹಾಗೂ ಈಗ ಆವರಿಸಲ್ಪಟ್ಟಿರುವ ಆಳವಲ್ಲದ ಸಮುದ್ರದ ನಿಕ್ಷೇಪ ಭಾಗಗಳು ಸ್ಥಿರಭೂಪ್ರದೇಶಗಳಾಗಿದ್ದು ಈ ಭಾಗಗಳಲ್ಲಿ ಅಗ್ನಿಪರ್ವತ ಕಾರ್ಯಾಚರಣೆಗಳ ಕುರುಹಿಲ್ಲ. ಭೂಕಂಪಗಳೂ ಇಲ್ಲ. ಆಸ್ಟ್ರೇಲಿಯ, ನ್ಯೂ ಗಿನಿಯ ನೈಋತ್ಯ ಹೊರವಲಯಗಳು ಮತ್ತು ಇವುಗಳ ಮಧ್ಯದ ಆಳವಿಲ್ಲದ ಸಮುದ್ರ ಭಾಗಗಳು ಪುರಾತನ ಸ್ಥಿರ ಭೂಭಾಗಗಳಾಗಿವೆ. ಈ ಎರಡೂ ಭೂಭಾಗಗಳ ಅಂಚುಗಳು ಹಾಗೂ ಅವು ಪರಸ್ಪರ ಕಮಾನಿನಾಕಾರದ ದ್ವೀಪ ಮತ್ತು ಆಳವಾದ ಸಮುದ್ರದ ಜಟಿಲ ಭಾಗ ಮೇಲೆತ್ತಲ್ಪಟ್ಟ ಪ್ರದೇಶ. ಈ ಭಾಗ ತೀವ್ರವಾದ ಅಗ್ನಿಪರ್ವತಗಳ ಮತ್ತು ಭೂಕಂಪಗಳ ಕಾರ್ಯಾಚರಣೆಗೆ ಒಳಪಟ್ಟಿರುತ್ತದೆ. ಗುರುತ್ವಾಕರ್ಷಣೆ ಅಳತೆಗಳಿಂದ ಈ ಪ್ರದೇಶ ಬಲು ಅಸ್ಥಿರವೆಂದು ತಿಳಿದುಬಂದಿದೆ. ದ್ವೀಪಗಳ ಹೊರವಲಯದಲ್ಲಿ ಸುಮಾತ್ರದ ನೈಋತ್ಯ ಭಾಗ ಪಶ್ಚಿಮ ಜಾವಾ ಮತ್ತು ಕೆಳಸುಂಡಾ ದ್ವೀಪಗಳನ್ನೊಳಗೊಂಡ ಪ್ರದೇಶ ಒಂದು ಕಡೆಯೂ ಮತ್ತೊಂದು ಕಡೆ ಫಿಲಿಪೀನ್ಸ್, ನ್ಯೂ ಗಿನಿಯ ಈಶಾನ್ಯ ಭಾಗವೂ ಇದ್ದು ಇದು ಬಹುಶಃ ದಕ್ಷಿಣಕ್ಕೆ ಮತ್ತು ಪೂರ್ವಕ್ಕೆ ಚಲಿಸುತ್ತಿರುವ ಎರಡು ಪ್ರಧಾನ ಭೂಭಾಗಗಳೆಂದು ಪರಿಗಣಿತವಾಗಿದೆ. ಸೆಲೆಬೆಸ್ (ಸುಲವೇಸಿ) ಮತ್ತು ಹಲ್ಮಹೇರದ ಅತಿ ಡೊಂಕಾದ ಆಕಾರ ಎರಡು ಸ್ಥಿರ ಭೂಭಾಗಗಳ ನಡುವೆ ಮೇಲೆತ್ತಲ್ಪಟ್ಟಿರುವ ಎರಡು ಪ್ರಧಾನ ಮಡಿಕೆಗಳು ಸೇರುವ ಕಡೆ ಇರುವುದರಿಂದ ರಚನೆ ಕ್ಲಿಷ್ಟವಾಗಿದೆ. ಹೀಗಾಗಿ ಈ ದ್ವೀಪಗಳ ಮಧ್ಯಭಾಗದಲ್ಲಿ ಕಡಿದಾದ ಪರ್ವತಗಳೂ ಆಳವಾದ ಸಮುದ್ರಗಳೂ ಇವೆ. ಇಲ್ಲಿ ನಡೆದ ಭೂಕಾರ್ಯಗಳ ತೀವ್ರಗತಿಗೆ ಸಾಕ್ಷಿಯಾಗಿ ಟೈಮರಿನಲ್ಲಿರುವ ಪ್ಲೀಸ್ಟೊಸೀನ್ ಯುಗ (1 ದಶಲಕ್ಷವರ್ಷ ಪ್ರಾಚೀನದವರೆಗಿನ ಅವಧಿ) ಹವಳ ದಿಬ್ಬಗಳು ಸಮುದ್ರ ಮಟ್ಟದಿಂದ ಸು. 1370 ಮೀ. ಎತ್ತರಕ್ಕೆ ಒಯ್ಯಲ್ಪಟ್ಟಿವೆ. ಅಲ್ಲದೆ ದ್ವೀಪದ ದಕ್ಷಿಣ ಭಾಗದಲ್ಲಿ ಎತ್ತರದ ಪರ್ವತಗಳಿಂದ ಆಳವಾದ ಸಮುದ್ರದತ್ತ ಇರುವ ತೀವ್ರಗತಿಯ ಇಳಿಜಾರು ಪ್ರದೇಶದಲ್ಲಿ ಅಸಂಖ್ಯಾತ ಭೂಕಂಪಗಳು ತಲೆದೋರುತ್ತಿರುತ್ತವೆ.

ಈ ಪ್ರದೇಶದ ನ್ಯೂ ಗಿನಿಯಲ್ಲಿ ಅತಿಪುರಾತನ ಶಿಲೆಗಳೆಂದರೆ ಡಿವೋನಿಯನ್ ಯುಗ. (350–400 ದ.ಲ. ವರ್ಷ ಪ್ರಾಚೀನ ಕಾಲ). ಕಾರ್ಬೊನಿಫೆರಸ್ ಮತ್ತು ಪರ್ಮಿಯನ್ ಯುಗ (225–350 ದ.ಲ.ವರ್ಷ ಪ್ರಾಚೀನ ಕಾಲ)ಶಿಲೆಗಳೂ ಸಾಕಷ್ಟು ವಿಸ್ತಾರವಾಗಿ ಹರಡಿದ್ದು ಈಗ ಅಲ್ಲಲ್ಲೆ ಚದುರಿಹೋದಂತೆ ಕಾಣುತ್ತಿವೆ. ಇವುಗಳ ಮೇಲ್ಭಾಗದಲ್ಲಿ ಇತರ ಭೂಕಲ್ಪಗಳ ಶಿಲೆಗಳು ನಿಕ್ಷೇಪಗೊಂಡಿವೆ. ಅವುಗಳಲ್ಲಿ ತೃತೀಯ ಜೀವಿಯುಗ ಮತ್ತು ಪ್ಲಿಸ್ಟೊಸೀನ್ ಯುಗ ನಿಕ್ಷೇಪಗಳು ಹೆಚ್ಚು ಪ್ರದೇಶವನ್ನು ಆವರಿಸಿವೆ.

ಟೈಮರ್ ಎಂಬಲ್ಲಿ ಮೇಲಣ ಕ್ರಿಟೇಷಯಸ್ ಕಲ್ಪದ (65–135 ದ.ಲ.ವರ್ಷ ಪ್ರಾಚೀನ ಕಾಲ) ಶಿಲೆಗಳಿವೆ. ಇವು ಸಮುದ್ರದ ಆಳವಾದ ಭಾಗಗಳಲ್ಲಿ ಶೇಖರವಾಗುವ ಕೆಂಪು ಸುದ್ದೆಮಣ್ಣಿನಿಂದ ಕೂಡಿದ್ದು ಮ್ಯಾಂಗನೀಸ್ ಉಂಡೆಗಳು, ಷಾರ್ಕ್ ಮೀನಿನ ಹಲ್ಲುಗಳು ಮತ್ತು ರೇಡಿಯೋಲೇರಿಯ ಮುಂತಾದ ಜೀವಾವಶೇಷಗಳನ್ನೊಳಗೊಂಡಿವೆ.

ಡಿವೋನಿಯನ್ ಯುಗದಿಂದ (350–400 ದ.ಲ. ವರ್ಷ ಪ್ರಾಚೀನ ಕಾಲ) ಇತ್ತೀಚಿನ ಕಾಲದವರೆಗಿನ ಅಂತಸ್ಸರಣ ಶಿಲೆಗಳು ಮತ್ತು ಜ್ವಾಲಾಮುಖಿಜ್ಯ ಶಿಲೆಗಳು ಇಡೀ ದ್ವೀಪಸ್ತೋಮವನ್ನೆಲ್ಲ ಆವರಿಸಿವೆ. ಇವುಗಳಲ್ಲಿ ಸ್ಥೂಲವಾದ ಗ್ರ್ಯಾನೈಟ್ ಶಿಲೆಯಿಂದ ಪುಡಿಯಾದ ಜ್ವಾಲಾಮುಖಿಜ್ಯ ಬೂದಿಯವರೆಗೂ ಎಲ್ಲ ಬಗೆಯ ಶಿಲೆಗಳಿವೆ. ಪ್ರಾಚೀನ ಜೀವಿಯುಗದ ರೂಪಾಂತರ ಪದರು ಶಿಲೆಗಳು ಮುಖ್ಯವಾಗಿ ಸುಮಾತ್ರ, ಬೋರ್ನಿಯೊ, ಸೆಲೆಬೆಸ್, ಟೈಮರ್–ಸೆರಾಮ್ ದ್ವೀಪಸ್ತೋಮ, ಹಲ್ಮಹೆರ, ನ್ಯೂಗಿನಿಗಳಲ್ಲಿವೆ.

ಈಸ್ಟ್ ಇಂಡೀಸಿನಲ್ಲಿ ಸದಾ ಗಮನಿಸುತ್ತಿರಬೇಕಾದ 95 ಜಾಗೃತ ಜ್ವಾಲಾಮುಖಿಗಳಿವೆ. ಇವುಗಳ ಜಾಡು ಮುಖ್ಯವಾಗಿ ಉತ್ತರ ಸುಮಾತ್ರದಿಂದ ಜಾವಾ ಕೆಳಸುಂಡಾ ದ್ವೀಪಗಳನ್ನು ಹಾದು ಬಂಡಾ ದ್ವೀಪಸ್ತೋಮದವರೆಗೂ ಹಬ್ಬಿದೆ. ಈ ಜಾಡಿನಲ್ಲಿ ಜ್ವಾಲಾಮುಖಿಗಳು ಸಮದೂರದಲ್ಲಿ ಒಂದಾದಮೇಲೊಂದು ಕಂಡುಬರುತ್ತವೆ. ಆದರೆ ಹಲ್ಮಹೆರ ಮತ್ತು ಅಕ್ಕಪಕ್ಕದ ದ್ವೀಪಗಳಲ್ಲಿ ಈ ಬಗೆಯ ಹರಡುವಿಕೆ ಇಲ್ಲ. ಮತ್ತೊಂದು ಸಾಲು ಉತ್ತರ ಸೆಲೆಬೆಸಿನಿಂದ ಸಾಂಘಿಹೆ ದ್ವೀಪಗಳ ಮೇಲೆ ಹಾದು ಮಿಂಡನೋವದ ವರೆಗೆ ಹಬ್ಬಿದೆ. ಈ ಜ್ವಾಲಾಮುಖಿಗಳ ಕಾರ್ಯಾಚರಣೆ ಸ್ಫೋಟಕ ರೀತಿಯದಾಗಿದ್ದು ಸ್ವಲ್ಪ ಶಿಲಾರಸ ಹೊರಹೊಮ್ಮುತ್ತದೆ. ಇದರಲ್ಲಿನ ಮುಖ್ಯ ಕ್ರಿಯೆ ಎಂದರೆ ನಿಧಾನವಾಗಿ ತಲೆದೋರುವ ಜಿಗುಟು ಶಿಲಾರಸದ ಗುಮ್ಮಟಾಕಾರಗಳು. ಜಾವಾ ಮತ್ತು ಸುಮಾತ್ರಗಳ ಭೂಸಂಧಿಯಲ್ಲಿರುವ ಕ್ರಕಟೋವ (ನೋಡಿ) ಎಂಬ ಜ್ವಾಲಾಮುಖಿಯ 1893ರ ಸ್ಫೋಟನೆ ಅತಿ ಭಯಂಕರವಾದುದು. ಈ ಸ್ಫೋಟನೆಯಲ್ಲಿ 30,000 ಜನರ ಪ್ರಾಣಹಾನಿಯಾಯಿತು ಮತ್ತು ಸಮುದ್ರ ತಳದಲ್ಲಿ ಕಾಲ್ಡೆರಾ (ಜ್ವಾಲಾಮುಖಿ ಮಹಾಕುಂಡ) ಏರ್ಪಟ್ಟಿತು. ಇತ್ತೀಚೆಗೆ ಆದ ಸ್ಫೋಟನೆಯಿಂದ ಹೊರ ಅನಕ್ ಕ್ರಕಟೋವ ದ್ವೀಪದಲ್ಲಿ ಒಂದು ಹೊಸ ಬೆಟ್ಟವೇ ಉಂಟಾಯಿತು. ಈ ಸ್ಫೋಟನೆಯಿಂದ ಹೊರ ಬಂದ ಉರಿಯುವ ಬಿಸಿ ಬೂದಿ ಮಧ್ಯ ಜಾವಾದಲ್ಲಿರುವ ಮೆರಾಪಿ ಜ್ವಾಲಾಮುಖಿಯ ಮೇಲೆ ಶೇಖರವಾಗಿದೆ.

ಜ್ವಾಲಾಮುಖಿಗಳಿಂದ ಹೊರಬಂದ ವಸ್ತುಗಳಲ್ಲಿ ಬೂದಿಯೇ ಅಧಿಕ. ಜಾವಾ ಜ್ವಾಲಾಮುಖಿಗಳ ಬೂದಿ ಹೆಚ್ಚು ಕ್ಷಾರಯುಕ್ತ. ಸುಮಾತ್ರದವು ಹೆಚ್ಚು ಆಮ್ಲಯುಕ್ತ. ಈ ದ್ವೀಪಗಳ ಅನೇಕ ಭಾಗಗಳಲ್ಲಿ ಸಸ್ಯವರ್ಗ ಮತ್ತು ಜನಜೀವನದ ಮೇಲೆ ಇವುಗಳ ಪ್ರಭಾವ ಸಾಕಷ್ಟಿದೆ. ಸುಮಾತ್ರ ಮತ್ತು ಜಾವಾಗಳಲ್ಲಿ ವಿಸ್ತಾರವಾದ ಪುರಾತನ ಶಿಲೆಗಳ ಮೇಲೆ ಜ್ವಾಲಾಮುಖಿಗಳ ಬೂದಿ ಮತ್ತು ಶಿಲಾರಸ ಹೇರಳವಾದ ಮಳೆಯೊಂದಿಗೆ ಸೇರಿ ಸುರಿದಾಗ ಹೊಸ ಶಿಲೆಗಳು ರೂಪುಗೊಂಡಿವೆ. ಅನೇಕ ಜ್ವಾಲಾಮುಖಿಗಳಿಂದ ಶಿಲಾಕಣಗಳು ಗಾಳಿ ಮತ್ತು ನೀರಿನಿಂದ ಸಾಗಿಸಲ್ಪಟ್ಟು ಪುರಾತನ ಶಿಲಾಸಮುದಾಯಗಳ ಮೇಲೆ ಹರಡಿವೆ. ಇದರೊಂದಿಗೆ ಸುಮಾತ್ರದ ಪಶ್ಚಿಮ ತೀರದ ಪರ್ವತಸಾಲುಗಳಿಂದ ಸಾಗಿಸಲ್ಪಟ್ಟ ಮೆಕ್ಕಲುಮಣ್ಣು ಪೂರ್ವಭಾಗದ ಕಡಿಮೆ ಆಳದ ಸಮುದ್ರಭಾಗಗಳಲ್ಲಿ ಸಂಚಯನಗೊಂಡಿದೆ. ಇದರಿಂದಾಗಿ ವಿಶಾಲ ಸ್ಥಳಗಳಲ್ಲಿ ಜೌಗು ಮತ್ತು ತಗ್ಗು ಪ್ರದೇಶಗಳುಂಟಾಗಿವೆ. ಈ ದ್ವೀಪದ 1/3 ಭಾಗ ಇಂಥ ಪ್ರದೇಶ. ಇದೇ ರೀತಿಯ ಕಾರ್ಯ ಸಣ್ಣ ಪ್ರಮಾಣದಲ್ಲಿ ಜಾವಾದ ಉತ್ತರ ತೀರಪ್ರದೇಶದ ಮತ್ತಿತರ ಕಡೆಗಳಲ್ಲೂ ಕಾಣಬರುತ್ತದೆ.

ಈ ದ್ವೀಪಗಳ ಅತಿ ಮುಖ್ಯವಾದ ಅದಿರು ತವರ. ಇದು ಹೆಚ್ಚಾಗಿ ಸುಮಾತ್ರದ ಪೂರ್ವತೀರದಾಚೆಗಿರುವ ಬಾಂಗ್ಕ, ಬಿಲಿಟನ್ ಮತ್ತು ಸಿಂಗ್ ಕೆಪ್ ದ್ವೀಪಗಳಲ್ಲಿ ದೊರೆಯುತ್ತದೆ. ಖನಿಜ ಜಾಡು ಮಲಯ ಪರ್ಯಾಯದ್ವೀಪದ ಪರ್ವತ ಸಾಲಿನ ವಿಸ್ತರಣೆ. ಈ ದ್ವೀಪಗಳ ಇತರ ಖನಿಜಗಳು ಪೆಟ್ರೋಲಿಯಂ, ಬಾಕ್ಸೈಟ್ (ಅಲ್ಯುಮಿನಂ ಅದಿರು), ಚಿನ್ನ, ಬೆಳ್ಳಿ ಮತ್ತು ಕಲ್ಲಿದ್ದಲು. ಬೋರ್ನಿಯೊದ ವಾಯವ್ಯ ಮತ್ತು ಪೂರ್ವತೀರ ಭಾಗಗಳಲ್ಲಿನ ಮೇಲಣ ತೃತೀಯ ಜೀವಿಯುಗದ ಶಿಲೆಗಳ ಮೇಲ್ಮಡಿಕೆಗಳಲ್ಲಿ ಪೆಟ್ರೋಲಿಯಂ ಶೇಖರವಾಗಿದೆ. ಕಬ್ಬಿಣ, ತಾಮ್ರ, ನಿಕ್ಕಲ್, ಸೀಸ, ಮ್ಯಾಂಗನೀಸ್, ಮೊನಜೈಟ್, ಪ್ಲಾಟಿನಂ, ಟಂಗ್‌ಸ್ಟನ್, ಆಸ್ಫಾಲ್ಟ್, ಫಾಸ್‌ಫೇಟ್, ಗಂಧಕ, ಅಯೊಡಿನ್ ಮತ್ತು ವಜ್ರಗಳೇ ಮುಂತಾದ ಖನಿಜಗಳ ಗಣಿಕೆಲಸ ಅಲ್ಪ ಪ್ರಮಾಣದಲ್ಲಿ ನಡೆಯುತ್ತಿದೆ. (ಎಂ.ಎಸ್.ಎಂ.)

**ಈಸ್ಟ್‌ಮನ್, ಜಾರ್ಜ್:** 1854–1932. ಪ್ರಸಿದ್ಧ ಪರಿಶೋಧಕ, ಕೈಗಾರಿಕೋದ್ಯಮಿ ಮತ್ತು ದಾನಿ. ಛಾಯಾಚಿತ್ರಗ್ರಹಣವನ್ನು (ಫೋಟೋಗ್ರಫಿ) ಕುರಿತು ಇವನು ಹಾಕಿಕೊಟ್ಟ ದಾರಿ ಅದರ ಸರ್ವತೋಮುಖ ವಿಕಾಸಕ್ಕೆ ನಾಂದಿಯಾಯಿತು. ಈತ ಅಮೆರಿಕದ ನಾಗರಿಕ. ಕಡುಬಡತನದ ಮನೆಯಲ್ಲಿ ಜನಿಸಿದಾಗ ಸಾಂಪ್ರದಾಯಿಕ ವಿದ್ಯಾಭ್ಯಾಸದ ಸೌಲಭ್ಯ ದೊರೆಯಲಿಲ್ಲ. ಕೆಲಸಮಾಡಿ ಹೊಟ್ಟೆಹೊರೆದು ಕೊಳ್ಳಬೇಕಾದ ದುಃಸ್ಥಿತಿ ಬಂತು. ಈತನ ಸುಪ್ತಪರಿಶೋಧಕ ಪ್ರವೃತ್ತಿ ಛಾಯಾಗ್ರಹಣ ಕ್ಷೇತ್ರದಲ್ಲಿ ಕ್ರಮೇಣ ಪ್ರಕಟವಾಗತೊಡಗಿತು. ಅಲ್ಲಿ ಇವನಿನ್ನೂ ಕೇವಲ ಹೊಸಬ. ಚಿತ್ರಗ್ರಹಣವಾದರೋ ಒಂದು ಯಜ್ಞದಷ್ಟೇ ಕಠಿಣವೂ ಸಹನೆಯನ್ನು ಬೇಡುವುದೂ ಆಗಿದ್ದ ಕ್ರಿಯೆ ಕ್ಯಾಮರದೊಳಗೆ ಅಳವಡಿಸಬೇಕಾಗಿದ್ದ ರಾಸಾಯನಿಕ ಲೇಪಿತ ಫಲಕ, ಚಿತ್ರ ತೆಗೆದ ತರುವಾಯದ ಸಂಸ್ಕರಣ ಕ್ರಿಯೆ–ಇವು ಒಂದೊಂದೂ ಸಾಕಷ್ಟು ಸಂಕೀರ್ಣವಾಗಿತ್ತು. ತಜ್ಞ ರಸಾಯನಶಾಸ್ತ್ರಜ್ಞರ ಹೊರತು ಮಿಕ್ಕವರಿಗೆ ಆಗ್ಗೆ ಅಲ್ಲಿ ಪ್ರವೇಶವಿರಲಿಲ್ಲ. ಚಿತ್ರಗ್ರಹಣ ಕ್ರಿಯೆಯನ್ನು ಸರಳೀಕರಿಸಿ ಅದು ಸಾಮಾನ್ಯ ಜನರಲ್ಲಿ ಒಂದು ಹವ್ಯಾಸವಾಗಿ ವಿಕಸಿಸುವಂತೆ ಮಾಡಿದರೆ ಇದಕ್ಕೆ ಉಜ್ವಲ ಭವಿಷ್ಯವಿದೆ. ಒಂದು ಕೈಗಾರಿಕೋದ್ಯಮವಾಗಿ ಇದು ತುಂಬಾ ಲಾಭದಾಯಕವಾಗಬಲ್ಲದು ಎಂಬುದನ್ನು ಈಸ್ಟ್‌ಮನ್ ಕಂಡುಕೊಂಡ. ಅಂದು ರಾಸಾಯನಿಕ ಲೇಪಿತ ಫಲಕವನ್ನು ಚಿತ್ರತೆಗೆದು ಮೊದಲು ಸಿದ್ಧಪಡಿಸಿ (ಇಂಥ ಫಲಕದ ಹೆಸರು ಚಂಡಿಫಲಕ ಎಂದರೆ ವೆಟ್ ಪ್ಲೇಟ್) ಒಡನೆ ಚಿತ್ರ ತೆಗೆಯಬೇಕಾಗಿತ್ತು. ಚಂಡಿಫಲಕ ಹೆಚ್ಚುಕಾಲ ಉಳಿಯುತ್ತಿರಲಿಲ್ಲ. ಇದರ ಬದಲು ಒಣಫಲಕವನ್ನು ಸಿದ್ಧಪಡಿಸಿ ಗ್ರಾಹಕರಿಗೆ ಪೂರೈಸುವುದು ಸಾಧ್ಯವಾದರೆ ಆಗ ಛಾಯಾಚಿತ್ರಗ್ರಹಣ ಜನ ಸಾಮಾನ್ಯರ ವ್ಯಾಪ್ತಿಗೆ ಒಳಪಡುವುದು ಖಂಡಿತ ಎಂದು ಈಸ್ಟ್‌ಮನ್ ಮುನ್ನೋಡಿದ. 1878ರಲ್ಲಿ ಇಂಥ ರಾಸಾಯನಿಕ ಒಣಫಲಕ ನಿರ್ಮಾಣದಲ್ಲಿ ಅವನಿಗೆ ಯಶಸ್ಸು ಲಭಿಸಿತು. ಒಣಫಲಕವೇನೋ ಆದರೂ ಅದು ಗಾಜಿನದಾದ್ದರಿಂದ ಸಾಕಷ್ಟು ಆಕಾರ ವಿಕಾರವಾಗಿತ್ತು. ಬಳಸುವಾಗ ಕೊಂಚ ಅಜಾಗರೂಕತೆಯೂ ಅದಕ್ಕೆ ಮಾರಕವೇ ಆಗುತ್ತಿತ್ತು. ಆದ್ದರಿಂದ ಮುಂದಿನ ಸುಧಾರಣೆ ಸಹಜವಾಗಿ ಫಿಲ್ಮ್ ನಿರ್ಮಾಣದ

ದಾರಿಯಲ್ಲಿ ನಡೆಯಿತು. 1884ರಲ್ಲಿ ಈಸ್ಟ್‌ಮನ್ ತಾನು ನಿರ್ಮಿಸಿದ ಚಿತ್ರಗ್ರಾಹಿ ಫಿಲ್ಮಿಗೆ ಏಕಸ್ವವನ್ನು (ಪೇಟೆಂಟ್) ಪಡೆದ. ಅದೇ ವರ್ಷ ಈಸ್ಟ್‌ಮನ್ ಡ್ರೈಪ್ಲೇಟ್ ಅಂಡ್ ಫಿಲ್ಮ್ ಕಂಪನಿಯನ್ನು ಸ್ಥಾಪಿಸಿದ. ಜೆಲ್ ಲೇಪಿತ ಕಾಗದವೇ ಈ ಫಿಲ್ಮ್. ಇನ್ನುಳಿದದ್ದು ಪ್ರಚಾರ. ಫಿಲ್ಮಿನಿಂದ ಕೂಡಿದ್ದ ಕ್ಯಾಮರಾವನ್ನು ಈಸ್ಟ್‌ಮನ್ ಜನರಿಗೆ ಮಾರಲು ತೊಡಗಿದ. ಇಂಥ ಕ್ಯಾಮರಾಕ್ಕೆ ವ್ಯಾಪಾರ ದೃಷ್ಟಿಯಿಂದ ಜನರ ಗಮನ ಸೆಳೆದ ಒಂದು ವಿನೂತನ ಹೆಸರು ಆವಶ್ಯಕವೆಂದು ಅವನು ಮನಗಂಡು ಕೊಡಾಕ್ ಕ್ಯಾಮರಾ (ಕೊಡಾಕ್ ಪದಕ್ಕೆ ಬೇರೆ ಯಾವ ಅರ್ಥವೂ ವೈಶಿಷ್ಟ್ಯವೂ ಇಲ್ಲ) ಎಂಬ ಪದವನ್ನು ಸೃಷ್ಟಿಸಿದ. "ನೀವು ಗುಂಡಿಯನ್ನು ಒತ್ತಿ–ಮಿಕ್ಕುದನ್ನು ನಮಗೆ ಬಿಡಿ." ಇದು ಕೊಡಾಕ್ ಕ್ಯಾಮರಾ ಕಂಪನಿಯ ವ್ಯಾಪಾರದ ಯಶಸ್ವೀ ಘೋಷಣೆ ಯಾಗಿತ್ತು. ಫಿಲ್ಮ್ ಅಳವಡಿಕೆಗೊಂಡಿದ್ದ ಕ್ಯಾಮರಾವನ್ನು ಗ್ರಾಹಕ ಪಡೆಯುತ್ತಿದ್ದ; ಗುಂಡಿ ಒತ್ತಿ ಬೇಕಾದ ಚಿತ್ರಗಳನ್ನು ತೆಗೆದ ತರುವಾಯ ಅಷ್ಟನ್ನೂ ಕಂಪನಿಗೆ ಕಳಿಸುತ್ತಿದ್ದ; ಅಲ್ಲಿ ಅವರು ಚಿತ್ರಗಳನ್ನು ಮುದ್ರಿಸಿ ಅವುಗಳ ಪ್ರತಿಗಳನ್ನೂ ಫಿಲ್ಮ್ ಅಳವಡಿಸಿದ ಕ್ಯಾಮರಾವನ್ನೂ ಗ್ರಾಹಕನಿಗೆ ಹಿಂತಿರುಗಿಸುತ್ತಿದ್ದರು. ಈ ಪ್ರಕಾರ ಛಾಯಾಚಿತ್ರಗ್ರಹಣ ಒಂದು ಜನಪ್ರಿಯ ಹವ್ಯಾಸವಾಗಿ ಬಲುದೊಡ್ಡ ಕೈಗಾರಿಕೋದ್ಯಮವಾಗಿ ವೃದ್ಧಿಯಾಯಿತು. ಕ್ಯಾಮರಾದಲ್ಲಿ ಫಿಲ್ಮನ್ನು ಹಗಲು ಹೊತ್ತಿನಲ್ಲಿಯೇ ಅಳವಡಿಸುವ ಆವಿಷ್ಕಾರವನ್ನು 1891ರಲ್ಲಿ ಆರಂಭಿಸಿದ. 1893ರಲ್ಲಿ ಕಂಪನಿಯ ಹೆಸರನ್ನು ಈಸ್ಟ್‌ಮನ್ ಕೊಡಾಕ್ ಕಂಪನಿ ಎಂದು ಪರಿವರ್ತಿಸಿ ತಾನೇ ಅದರ ಅಧ್ಯಕ್ಷನಾದ. ಕಾಗದದ ಫಿಲ್ಮಿನ ಬದಲು ಸೆಲ್ಯುಲಾಯಿಡ್ ಹೆಚ್ಚು ಉಪಯುಕ್ತವೆಂದು ತಿಳಿದುದರಿಂದ ಕೊಡಾಕ್ ಕಂಪನಿಯವರು ಅದನ್ನು 1889ರಿಂದ ಬಳಕೆಗೆ ತಂದರು. ಇಷ್ಟಾಗುವಾಗ ಈಸ್ಟ್‌ಮನ್ 1877ರಲ್ಲಿ ಕಂಡಿದ್ದ ಕನಸು ನನಸಾಗಿತ್ತು. ಜನಸಾಮಾನ್ಯರಿಗೆ ಛಾಯಾಚಿತ್ರಗ್ರಹಣ ಬಲುಪ್ರಿಯ ಹವ್ಯಾಸವಾಗಿ ಈ ವ್ಯಾಪಾರ ಬಹಳ ಕುದುರಿತ್ತು. ಆದ್ದರಿಂದ ಅಮೆರಿಕದಲ್ಲಿ



ಈಸ್ಟ್‌ಮನ್ ಜಾರ್ಜ್ ಮ್ಯೂಸಿಯಂ

(ಸಾಧ್ಯವಾದರೆ ಪ್ರಪಂಚದಲ್ಲಿ) ತನಗೆ ಏಕಸ್ವಾಮ್ಯವಿರಬೇಕೆಂದು ದೈತ್ಯ ಬಲದಿಂದ ಅಧ್ಯಕ್ಷ ಈಸ್ಟ್‌ಮನ್ ದುಡಿದ. 1927ರ ಸುಮಾರಿಗೆ ಈ ಎಲ್ಲವನ್ನೂ ಪೂರ್ಣವಾಗಿ ಸಾಧಿಸಿದ್ದ. ನಿರ್ಮಾಪಕಶಕ್ತಿಯಂತೆಯೇ ವ್ಯಾಪಾರ ಧರ್ಮವೂ ಈತನಲ್ಲಿ ಅಸಾಮಾನ್ಯ ಮಟ್ಟದಲ್ಲಿತ್ತು. ಹಾಗೆಯೆ ಈತ ಚಲನಚಿತ್ರಗಳ ರಂಗವನ್ನು ಪ್ರವೇಶಿಸಿದ. ಸೆಲ್ಯುಲಾಯಿಡ್ ಫಿಲ್ಮುಗಳು ಅಲ್ಲೊಂದು ಕ್ರಾಂತಿಯನ್ನೇ ನಡೆಸಿದವು. ಈ ಫಿಲ್ಮುಗಳು ತೀವ್ರ ದಹ್ಯವಸ್ತುಗಳಾಗಿದ್ದುದರಿಂದ ಇವುಗಳ ದಾಸ್ತಾನು ಬಳಕೆ ಬಲು ಅಪಾಯಕಾರಿಯಾಗಿತ್ತು. 1924ರ ಸುಮಾರಿಗೆ ಅಗ್ನಿ ಅಪಾಯದಿಂದ ಹೆಚ್ಚು ಬಾಧೆ ತಟ್ಟದಂಥ ಫಿಲ್ಮ್‌ಗಳನ್ನು ನಿರ್ಮಿಸುವುದರಲ್ಲೂ ಈಸ್ಟ್‌ಮನ್ ಯಶಸ್ವಿಯಾದ. ಹೀಗೆ ಈಸ್ಟ್‌ಮನ್ ಜೀವನ ಚರಿತ್ರೆಯೆಂದರೆ ಛಾಯಾಚಿತ್ರಗ್ರಹಣ ವಿಕಾಸವೇ ಆಗಿದೆ.

ವ್ಯಾಪಾರ ಮಾರ್ಗದಲ್ಲಿ ಈತನದು ಬಲು ಕಟ್ಟುನಿಟ್ಟಿನ ಶಿಸ್ತಿನ ದಾರಿ. ಸಮರ್ಥರ ಆಯ್ಕೆ, ಪ್ರೋತ್ಸಾಹ, ಅನುಕಂಪದಿಂದ ಅವರನ್ನು ನಡೆಸಿಕೊಳ್ಳುವುದು. ಸದಾ ಶಿಷ್ಟಮಾರ್ಗಾನುಸರಣೆ, ಕೆಲಸಗಾರರ ಯೋಗಕ್ಷೇಮಗಳೆಡೆಗೆ ಸಹಾನುಭೂತಿಯ ವಿವೇಚನೆ–ಇವೆಲ್ಲ ಈಸ್ಟ್‌ಮನ್ನನ ಕಂಪನಿಯ ಸೂತ್ರಗಳಾಗಿದ್ದವು. ಅವನು ಒಂದು ನೂರು ಕೋಟಿ (1,000,000,000) ಡಾಲರುಗಳಷ್ಟನ್ನು ವಿವಿಧ ವಿದ್ಯಾಸಂಸ್ಥೆಗಳಿಗೆ ದಾನವಾಗಿ ನೀಡಿದ. ಆದರೆ ಎಂದೂ ತೃಪ್ತಿ ಅರಿಯದ ಜೀವ ಇವನದು. 1932ರ ಸುಮಾರಿಗೆ ಯಶಸ್ಸಿನ ಶಿಖರ ಏರಿದ್ದಾಗ, ಕಟ್ಟಿದ ಕನಸುಗಳೆಲ್ಲವನ್ನೂ ವಾಸ್ತವಿಕವಾಗಿ ನೋಡಿ ಸಂತೋಷಿಸಿದಾಗ, ಹೊಸತೇನನ್ನೂ ಮಾಡಲು ಸಾಧ್ಯವಿಲ್ಲವಾದಾಗ, ದೀರ್ಘ ಏಕಾಂತವನ್ನು ಸಹಿಸದಾದಾಗ ಆತ್ಮಹತ್ಯೆ ಮಾಡಿಕೊಂಡು ಅಸುನೀಗಿದ.

*

**ಈಸ್ಟರ್:** ಕ್ರೈಸ್ತಧರ್ಮೀಯರ ಮುಖ್ಯ ಹಬ್ಬ. ಕ್ರಿಸ್ತನ ಪುನರುತ್ಥಾನದ ವಾರ್ಷಿಕ ಸ್ಮರಣೆಗಾಗಿ ಇದನ್ನು ಆಚರಿಸುತ್ತಾರೆ. ಹಬ್ಬ ಸಾಮಾನ್ಯವಾಗಿ ಪ್ರತಿ ವರ್ಷ ಮಾರ್ಚ್ 22 – ಏಪ್ರಿಲ್ 25ರ ಒಳಗೆ ಬರುತ್ತದೆ. ಹಬ್ಬಕ್ಕೆ ಮುನ್ನ 40 ದಿನಗಳು ಉಪವಾಸ ಮಾಡುತ್ತಾರೆ. ಶುಭ ಶುಕ್ರವಾರದ ಅನಂತರ ಬರುವ ಭಾನುವಾರವೇ ಈಸ್ಟರ್ ಹಬ್ಬ. ಆ ದಿನ ಮೇಣದ ಬತ್ತಿಗಳನ್ನು ಹಚ್ಚಿ, ಸಂತೋಷದಿಂದ ನಲಿಯುತ್ತಾರೆ. ವಿವಿಧ ರೀತಿಯಲ್ಲಿ ಅಲಂಕರಣಗೊಂಡ ಮೊಟ್ಟೆಗಳನ್ನು ಪರಸ್ಪರ ವಿನಿಮಯ ಮಾಡುವುದು ಒಂದು ರೂಢಿ. (ಎನ್.ಎಸ್.ಎಚ್.ಎ.)

ಈಸ್ಟರ್ ಹಬ್ಬ ಪೂರ್ವದ ಉಪವಾಸ: ಹಬ್ಬಕ್ಕೆ ಹಿಂದಿನ ನಲವತ್ತು ದಿನಗಳ ವ್ರತೋಪವಾಸಗಳಿಗೆ (ಲೆಂಟ್) ಕ್ರೈಸ್ತರಲ್ಲಿ ಹೆಚ್ಚಿನ ಪ್ರಾಮುಖ್ಯವಿದೆ. ಲೆಂಟ್ ಎಂದರೆ ಇಂಗ್ಲಿಷ್‌ನಲ್ಲಿ ವಸಂತವೆಂದು ಅರ್ಥ. ಈ ಕಟ್ಟಳೆ ಅದೇ ಋತುವಿನಲ್ಲಿ ಬರುತ್ತದೆ. ಈ ವ್ರತ ಬಹಳ ಪ್ರಾಚೀನವಾದುದು. ಕ್ರಿಸ್ತ ತನ್ನ ಬಹಿರಂಗ ಜೀವನವನ್ನು ಆರಂಭಿಸುವುದಕ್ಕೆ ಮುನ್ನ ನಲವತ್ತು ದಿನಗಳು ಜಪ, ಧ್ಯಾನ, ಉಪವಾಸಗಳಲ್ಲಿ ಕಳೆದಿದ್ದನೆಂಬ ಹೊಸ ಒಡಂಬಡಿಕೆಯ ವರದಿಯೇ ಈ ಸಂಪ್ರದಾಯಕ್ಕೆ ಮುಖ್ಯ ಹಿನ್ನೆಲೆ. ಈ ಅವಧಿಯಲ್ಲಿ ಕ್ರೈಸ್ತರು ಪ್ರಾಯಶ್ಚಿತ್ತ ಮನೋಭಾವದಿಂದ ಉಪವಾಸ, ದೇಹದಂಡನೆ, ಮಾಂಸಾಹಾರ ವರ್ಜನೆ ಇತ್ಯಾದಿಗಳನ್ನು ಕೈಕೊಳ್ಳಬೇಕೆಂದು ರೋಮನ್ ಚರ್ಚ್ ಬೋಧಿಸುತ್ತದೆ. ಪ್ರಾಚೀನ ಕಾಲದಲ್ಲಿ ಈ ವ್ರತದ ವಿಧಿಗಳು ತುಂಬ ಕಟ್ಟುನಿಟ್ಟಾಗಿದ್ದವು; ಇತ್ತೀಚೆಗೆ ಆಧುನಿಕ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ, ಅವನ್ನು ಸಡಿಲಿಸಲಾಗಿದೆ. ಈಗ ಉಪವಾಸ ಕೇವಲ ಬೂದಿ ಬುಧವಾರ (ಆ್ಯಷ್ ವೆಡ್‌ನೆಸ್‌ಡೆ) ಮತ್ತು ಶುಭ ಶುಕ್ರವಾರಗಳಿಗಷ್ಟೇ (ಗುಡ್‌ಫ್ರೈಡೆ) ಸೀಮಿತವಾಗಿದೆ. ಈ ವ್ರತದ ಅವಧಿಯ ಕೊನೆಯ ವಾರವನ್ನು ಪವಿತ್ರವಾರವೆಂದು ಪರಿಗಣಿಸಲಾಗಿದೆ.(ಡಿ.ಎ.ಪಿ.)

**ಈಸ್ಟರ್ ದ್ವೀಪ:** ದಕ್ಷಿಣ ಪೆಸಿಫಿಕ್ ಸಾಗರದಲ್ಲಿ ದಕ್ಷಿಣ ಅಕ್ಷಾಂಶ 27° 10' ಹಾಗೂ ಪಶ್ಚಿಮ ರೇಖಾಂಶ 109° 20' ರಲ್ಲಿರುವ ಒಂದು ಪುಟ್ಟ ಒಂಟಿದ್ವೀಪ. ಇದರ ಒಡೆತನ ಹೊಂದಿರುವ ಚಿಲಿ ದೇಶಕ್ಕೂ ಇದಕ್ಕೂ 3600 ಕಿಮೀ ದೂರ. ಇದಕ್ಕೆ ಅತ್ಯಂತ ಹತ್ತಿರವಿರುವ ಜನವಸತಿಯ ಪ್ರದೇಶವೆಂದರೆ 1760 ಕಿಮೀ ದೂರದಲ್ಲಿರುವ ಪಿಟ್‌ಕೇರ್ನ್ ದ್ವೀಪ. ಟೆರೆವಾಕ, ರಾನೊಕಾವೊ ಮತ್ತ ಪೊಯಿಕೆ ಎಂಬ ಮೂರು ನಂದಿಹೋದ ಜ್ವಾಲಾಮುಖಿಗಳು ಕೂಡಿ ಈ ದ್ವೀಪ ಸಂಭವಿಸಿರುವುದರಿಂದ ಇದರದು ತ್ರಿಭುಜಾಕಾರ. ಪರಮಾವಧಿ ಎತ್ತರ 538 ಮೀ.; 18 ಕಿಮೀ ಉದ್ದ; 24 ಕಿಮೀ ಅಗಲ: 127 ಚ.ಕಿಮೀ ಬೂದಿ ನೆಲದ ಒಡಲ ಮೇಲೆ ಜ್ವಾಲಾಮುಖಿ ಶಿಲೆಗಳಿಂದಾದ ಸಣ್ಣ ಸಣ್ಣ ಕೊಳ್ಳಗಳಿವೆ. ವಾತಾವರಣ ಹಿತಕರ. ಬಿದ್ದ ಮಳೆಯ ನೀರನ್ನು ಒತ್ತುಕಾಗದದ ಗುಣ ಹೊಂದಿರುವ ಬಂಡೆಗಳು ಹೀರಿಕೊಳ್ಳುತ್ತವೆ. ಆದ್ದರಿಂದ ಝರಿಗಳು ವಿರಳ. ಊಟೆ, ಬಾವಿ, ಜ್ವಾಲಾಮುಖಿಯ ಹಳ್ಳಗಳಿಂದಾದ ಸರೋವರಗಳು–ಇವೇ ನೀರಿನ ಮೂಲ. ದ್ವೀಪಕ್ಕೆ ತೊಡಿಸಿದಂತಿರುವ ಹುಲ್ಲಿನ ಕವಚ ನೋಡಲು ರಮ್ಯ. ಅಲ್ಲಲ್ಲಿರುವ ಹಳ್ಳಿಗಳ ಸುತ್ತಮುತ್ತ ಇರುವ ಮರಗಳನ್ನು ಬಿಟ್ಟರೆ ಅವೂ ವಿರಳ. ಡಚ್ ಅಡ್ಮಿರಲ್ ಜೇಕಬ್ ರಾಗೆವೀನ್ 1722ರಲ್ಲಿ ಈಸ್ಟರ್ ಭಾನುವಾರದಂದು ಈ ದ್ವೀಪವನ್ನು ಕಂಡುಹಿಡಿದಿದ್ದರಿಂದ ಇದಕ್ಕೆ ಈ ಹೆಸರು ಬಂತು. ಅದಕ್ಕೆ ಮುಂಚೆ ಈ ದ್ವೀಪದ ಜನಸಂಖ್ಯೆ ಎಷ್ಟಿತ್ತೆಂಬುದು ಗೊತ್ತಿಲ್ಲ. ಆದರೆ ಎಂದೂ ಇದು 4,000 ಕ್ಕಿಂತ ಹೆಚ್ಚಾಗಿರಲಿಲ್ಲ. ಜನಸಂಖ್ಯೆ 3,791 (2002). ಹೊರಗಿನವರು ತಂದ ವ್ಯಾಧಿಗಳಿಂದಲೂ ಗುಲಾಮ ವ್ಯಾಪಾರಿಗಳ ಕೈಗೆ ಇಲ್ಲಿನ ಜನರು ಸಿಕ್ಕಿದ್ದರಿಂದಲೂ ತಮ್ಮತಮ್ಮಲ್ಲೇ ಇವರು ಹೋರಾಡುತ್ತಿದ್ದರಿಂದಲೂ ಇವರೆಲ್ಲನೇಕರು ಬೇರೆ ಕಡೆಗೆ ವಲಸೆ ಹೋದದ್ದರಿಂದಲೂ ಈ ದ್ವೀಪದ ಜನಸಂಖ್ಯೆ 1872ರ ವೇಳೆಗೆ 175ಕ್ಕೆ ಇಳಿಯಿತು. ಇಲ್ಲಿನ ಕೃಷಿಕರ ಮೂಲ ಸಂಸ್ಕೃತಿ ಬಹುತೇಕ ನಾಶಗೊಂಡಿತು. 1864ರಲ್ಲಿ ಇಲ್ಲಿಗೆ ಬಂದ ಕ್ರೈಸ್ತ ಪಾದ್ರಿಗಳು ಈ ಜನರನ್ನು ತಮ್ಮ ಮತಕ್ಕೆ ಪರಿವರ್ತಿಸಿದರು. 1888ರಲ್ಲಿ ಇದು ಚಿಲಿಗೆ ಸೇರಿತು. ಚಿಲಿಯನರ ಆಡಳಿತದಲ್ಲಿ ಇಲ್ಲಿನ ಸ್ಥಳೀಯ ಜನರೆಲ್ಲ ದ್ವೀಪದ ಪಶ್ಚಿಮ ಭಾಗದಲ್ಲಿರುವ ಹಂಗ–ರೋವ

ಹಳ್ಳಿಯಲ್ಲಿ ನೆಲೆಸಿದರು. ಇವರ ಬೇಸಾಯಕ್ಕಾಗಿ ಮೀಸಲಿರಿಸಿ ಉಳಿದ ನೆಲವನ್ನು ಕುರಿ ದನಗಳ ಮೇವಿಗಾಗಿ ದೊಡ್ಡ ಕಂಪನಿಯೊಂದಕ್ಕೆ ಗುತ್ತಿಗೆಗೆ ಕೊಟ್ಟಿದೆ. 1889ರಿಂದ ಈ ದ್ವೀಪದಲ್ಲಿ ಸ್ಥಳಿಕವಾಗಿ ಕುಷ್ಠರೋಗವಿದೆಯಾದರೂ ಒಟ್ಟಿನಲ್ಲಿ ಇಲ್ಲಿನವರ ಆರೋಗ್ಯ ಚೆನ್ನಾಗಿದೆ.

ಗೋರಿ ಜಗುಲಿಯ ಅಖಂಡ ಶಿಲಾವಿಗ್ರಹಗಳು

ಈ ದ್ವೀಪದ ಆದ್ಯ ನೆಲೆಸಿಗರು ಯಾರೆಂಬುದು ಖಚಿತವಾಗಿಲ್ಲ. ಇಲ್ಲಿನವರ ಮೂಲ ಪುರುಷರು ಹೋಟುಮಾಟುವ ಎಂಬವನ ನಾಯಕತ್ವದಲ್ಲಿ ಪಶ್ಚಿಮದಿಂದ ಎರಡು ದೋಣಿಗಳಲ್ಲಿ ಬಂದರೆಂದು ಪ್ರತೀತಿ ಇದೆ. ಆದರೆ ಅದಕ್ಕೆ ಮುಂಚೆ ಇಲ್ಲಿದ್ದವರು ಯಾರು, ಅನಂತರ ಬಂದವರು ಯಾರು–ಎಂಬುದೇನೂ ಗೊತ್ತಿಲ್ಲ. ಮೋಟುಕಿವಿಗರಿಗೂ ಲಂಬಕರ್ಣಿಯರಿಗೂ ನಡುವೆ ನಡೆದ ಯುದ್ಧವೊಂದರ ಕತೆ ಇಲ್ಲಿನವರಲ್ಲಿ ಕರ್ಣಾಕರ್ಣಿಕೆಯಾಗಿ ಬೆಳೆದಿದೆ. ಮುಂಚೆ ಬಂದು ಇಲ್ಲಿ ನೆಲೆಸಿದವರಿಗೂ ಅನಂತರ ಇಲ್ಲಿಗೆ ಬಂದ ವಲಸೆಗಾರರಿಗೂ ನಡುವೆ ನಡೆದ ಕಾಳಗದ ಕಥೆ ಇದಾಗಿರಬಹುದು. ಲಂಬಕರ್ಣಿಗಳ ನಾಶಕ್ಕೆ ಕಾರಣವಾಯಿತೆಂಬ ಮಣ್ಣಿನ ಒಲೆ ವಾಸ್ತವವಾಗಿ ರಕ್ಷಣಾ ಕಂಬಕವಾಗಿತ್ತೆಂದು 1956–57ರಲ್ಲಿ ನಡೆಸಿದ ಶೋಧನೆಗಳಿಂದ ವ್ಯಕ್ತವಾಗಿದೆ.

ಭಾಷೆ ಬುಡಕಟ್ಟುಗಳ ದೃಷ್ಟಿಯಿಂದ ಈ ದ್ವೀಪವಾಸಿಗಳು ಪಾಲಿನೀಜ಼ನರು. ಆದರೆ ಇವರ ತಲೆ ಹೆಚ್ಚು ಉದ್ದ. ಮೆಲನೀಜ಼ನರ ಮಿಶ್ರಣದ ಫಲವೇ ಈ ವ್ಯತ್ಯಾಸ. ಇತರ ಪಾಲಿನೀಜ಼ನ್ ದ್ವೀಪಗಳಲ್ಲಿರುವವರಿಗಿಂತ ಇಲ್ಲಿನವರಲ್ಲಿ ನೀಗ್ರೋ ಮಾದರಿಯ ಲಕ್ಷಣಗಳು ಕಡಿಮೆ. ಪಾಲಿನೀಜ಼ನ್ ರಕ್ತಗುಣವೇ ಜಾಸ್ತಿ. ಈಚೀಚೆಗೆ ಇಲ್ಲಿ ಸಂಕರವಾಗಿದೆ. ಮೂಲನಿವಾಸಿಗಳ ಸಂಸ್ಕೃತಿಯ ಪಳೆಯುಳಿಕೆಗಳಾಗಿ ಭೂತಾಕಾರದ ನೂರಾರು ಶಿಲಾಪ್ರತಿಮೆಗಳೂ ಕಲ್ಲಿನ ಮನೆಗಳೂ ಬಂಡೆಗಳ ಮೇಲೆ ಕೊರೆದಿರುವ ಚಿತ್ರಗಳೂ ಮರದ ವಿಗ್ರಹಗಳೂ ಇನ್ನೂ ಓದಲು ಸಾಧ್ಯವಾಗದಿರುವ ಲಿಪಿಯುಕ್ತ ಮರದ ಹಲಗೆಗಳೂ ಕಾಣಸಿಗುತ್ತವೆ. ಈ ಲಿಪಿಗಳು ಮನುಷ್ಯರ ಹಾಗೂ ಹಕ್ಕಿ, ಮೀನು, ಗಿಡವೇ ಮುಂತಾದವುಗಳ ಪ್ರತೀಕ. ಎಲ್ಲವೂ ಒಂದೇ ಎತ್ತರ, ಹಲಗೆಗಳ ಎರಡು ಬದಿಯಲ್ಲೂ ಕೆತ್ತಿರುವ ಈ ಲಿಪಿಗಳು ಮನುಷ್ಯರ ಹಾಗೂ ಹಕ್ಕಿ, ಮೀನು, ಗಿಡವೇ ಮುಂತಾದವುಗಳ ಪ್ರತೀಕ. ಎಲ್ಲವೂ ಒಂದೇ ಎತ್ತರ; ಹಲಗೆಗಳ ಎರಡು ಬದಿಯಲ್ಲೂ ಕೆತ್ತಿರುವ ಈ ಲಿಪಿಗಳ ಒಂದೊಂದು ಸಾಲು ಮುಗಿದ ಮೇಲೂ ಅದರ ಮುಂದಿನ ಸಾಲು ಆ ಕೊನೆಯಿಂದ ಹಿಂದಕ್ಕೆ ಸಾಗುತ್ತದೆ. ಆದ್ದರಿಂದ ಒಂದು ಸಾಲು ಮುಗಿದ ಮೇಲೆ ಮುಂದಿನ ಸಾಲನ್ನು ಸರಿಯಾಗಿ ಅನುಸರಿಸಬೇಕಾದರೆ ಹಲಗೆಯನ್ನು ಸಂಪೂರ್ಣವಾಗಿ ತಿರುಗಿಸಬೇಕು. ಈ ಹಲಗೆಗಳಲ್ಲಿರುವ ಹಾಡುಗಳನ್ನೂ ಕತೆಗಳನ್ನೂ ಅಲ್ಲಿನ ಮೂಲವಾಸಿಗಳು ಹೇಳುತ್ತಾರೆ. ಆದರೆ ಅವುಗಳ ನೆರವಿನಿಂದ ಈ ಲಿಪಿಗಳನ್ನು ಅರ್ಥೈಸುವುದು ಇದುವರೆಗೂ ಅಸಾಧ್ಯವಾಗಿದೆ. ಇವು ಕೇವಲ ನೆನಪಿನ ಗುರುತುಗಳಾಗಿರಬಹುದು. ಆದರೆ ಇದು ಒಂದು ಸುಸಂಬದ್ಧ ಲಿಪಿವ್ಯವಸ್ಥೆಯೆಂದು ಕೆಲವು ವಿದ್ವಾಂಸರ ಅಭಿಪ್ರಾಯ. *

**ಪುರಾತತ್ತ್ವ:** ಈಸ್ಟರ್ ದ್ವೀಪದಲ್ಲಿ ಲೋಹವಸ್ತುಗಳೂ ಮಡಕೆ ಕುಡಿಕೆಗಳೂ ಇಲ್ಲವೇ ಇಲ್ಲ. ಜ್ವಾಲಾಮುಖಿಯ ಗುಂಡಿಗಳಲ್ಲಿ ಮಡಕೆಯ ಮಣ್ಣೇನೋ ಧಾರಾಳವಾಗಿದೆ. ಮನೆ, ಜಗಲಿ, ಅರೆಪಿರಮಿಡ್ಡಿನಾಕೃತಿ, ದುಂಡುಗೋಪುರ, ವಿಗ್ರಹ, ಈಟಿಮೊನೆ, ಮೀನುಗಾಳ ಮುಂತಾದ ಶಿಲಾವಸ್ತುಗಳ ಪಳೆಯುಳಿಕೆಗಳಿವೆ. ಚಿಪ್ಪು ಮೂಳೆಗಳಲ್ಲಿ ಕೊರೆದ ಕೆಲ ಚಿಕ್ಕ ವಸ್ತುಗಳೂ ದೊರಕಿವೆ. ಗೋರಿಗಳಲ್ಲಿ ಸಿಕ್ಕಿರುವ ತಲೆಬುರುಡೆಗಳು ಪುರಾತನವೇನೂ ಅಲ್ಲ. ವಿಗ್ರಹಗಳು ಬಳಸಿ ನಿಂತಿರುವ ಗೋರಿ ಜಗಲಿಗಳು ಇಲ್ಲಿನ ವಿಶೇಷ. ಕರಾವಳಿಯ ಉದ್ದಕ್ಕೂ ಸು.260 ಇಂಥ ಜಗಲಿಗಳು ದೊರಕಿವೆ. ಕೆಲವು ಒಳನಾಡಿನಲ್ಲೂ ಇವೆ. ಅಹು ಎಂದು ಕರೆಯಲಾಗಿರುವ ಈ ವೇದಿಕೆಗಳ ವಿಗ್ರಹಗಳನ್ನೆಲ್ಲ ಉರುಳಿಸಲಾಗಿದೆ. ಇವುಗಳಲ್ಲಿ ಎಷ್ಟೋ ಒಡೆದುಹೋಗಿವೆ. ಈ ವಿಗ್ರಹಗಳೆಲ್ಲ ಹೆಚ್ಚು ಕಡಿಮೆ ಒಂದೇ ಮಾದರಿಯವು. ಈ ವಿಗ್ರಹಗಳಲ್ಲಿ ಮನುಷ್ಯ ದೇಹದ ಮೇಲ್ಭಾಗವನ್ನು ಮಾತ್ರ ಕೊರೆಯಲಾಗಿದೆ. ವಿಗ್ರಹಗಳ ಸಾಮಾನ್ಯ ಎತ್ತರ 3.7–6.1 ಮೀ. ಕೆಲವು ಭಾರಿ ಆಕಾರದವು. ಒಂದು ಅಪೂರ್ವ ವಿಗ್ರಹವಂತೂ 18.9 ಮೀ ಎತ್ತರವಿದೆ. ಲೋಹಗಳ ಉಪಯೋಗವೇ ತಿಳಿಯದಿದ್ದ ಜನ ಎಷ್ಟು ದೊಡ್ಡ ವಿಗ್ರಹಗಳನ್ನು ಕೆತ್ತಿ, ದೂರ ದೂರಕ್ಕೆ ಸಾಗಿಸಿ, ಕಟ್ಟೆಗಳ ಮೇಲೆ ಸ್ಥಾಪಿಸಿರುವುದು ಆಶ್ಚರ್ಯಕರವಾಗಿದೆ. (ಎಸ್.ಎನ್.)

**ಈಸ್ಟರ್ನ್ ಎಕಾನಮಿಸ್ಟ್:** ಆರ್ಥಿಕ ವಿಷಯಗಳಿಗೆ ಮೀಸಲಾದ ಇಂಗ್ಲಿಷ್ ವಾರಪತ್ರಿಕೆ. 1943ರಲ್ಲಿ ನವದೆಹಲಿಯಲ್ಲಿ ಪ್ರಾರಂಭವಾಯಿತು. ಭಾರತದಲ್ಲಿ ಪ್ರಕಟವಾಗುವ ಉತ್ತಮ ದರ್ಜೆಯ ವಾರಪತ್ರಿಕೆಯೆಂಬ ಹೆಸರುಗಳಿಸಿದೆ. ಈ ಪತ್ರಿಕೆ ಪ್ರತಿವರ್ಷವೂ ರಾಷ್ಟ್ರದ ಆಯವ್ಯಯ ಅಂದಾಜು ಪಟ್ಟಿಯ ವಿವೇಚನೆಗಾಗಿ ವಿಶೇಷಾಂಕವನ್ನೂ ವಾರ್ಷಿಕ ಸಂಚಿಕೆಯನ್ನೂ ಹೊರಡಿಸುತ್ತದೆ. ಪ್ರಚಲಿತ ಆರ್ಥಿಕ ಹಾಗೂ ವಾಣಿಜ್ಯ ಸಮಸ್ಯೆಗಳನ್ನು ಕುರಿತು ವಿಶೇಷಾಧ್ಯಯನ ನಡೆಸಿ ಅವುಗಳ ಬಗ್ಗೆ ಪುರವಣಿಗಳನ್ನು ಪ್ರಕಟಿಸುವುದಲ್ಲದೆ ಆಗಿಂದಾಗ್ಗೆ ಕೈಹೊತ್ತಿಗೆಗಳನ್ನೂ ಹೊರತರುತ್ತದೆ. ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲು ತೊಡಗಿರುವವರಿಗೆ ಇದು ಮಾರ್ಗದರ್ಶಕ. (ಎನ್.ಕೆ.)

**ಈಹಾಮೃಗ:** ನೋಡಿ–ದಶರೂಪಕಗಳು

**ಈಳಂ:** ಪ್ರ.ಶ.ಪೂ.2700–539 ಅವಧಿಯಲ್ಲಿದ್ದ ಪ್ರಾಚೀನ ನಾಗರಿಕತೆ. ಇದು ಇಂದಿನ ಇರಾನಿನ ಪಶ್ಚಿಮಕ್ಕೆ ಮತ್ತು ನೈರುತ್ಯ ಭಾಗದಲ್ಲಿ (ಖುಜ಼ೆಸ್ತಾನ್ ಮತ್ತು ಎಲಂ ಪ್ರಾಂತ) ದಕ್ಷಿಣ ಇರಾಕ್ ಪ್ರದೇಶದಲ್ಲಿ (ಸುಮೇರ್ ಮತ್ತು ಅಕ್ಕಡ್) ಬೆಳೆಯಿತು. ಇದರ ಬಗ್ಗೆ ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖವಿರುವುದು ಗಮನಾರ್ಹ. ಈ ಸಂಸ್ಕೃತಿಯ ಹಿಂದಿನ ಹಂತವನ್ನು ಪೂರ್ವಭಾವಿ ಎಲಮೈಟ್ ಎಂದು ಕರೆಯಲಾಗಿದೆ. ಇದು ಪ್ರ.ಶ.ಪೂ.ಸು. 3200ರಲ್ಲಿ ಆರಂಭವಾಯಿತು. ಸೂಸನಗರದ ಮೇಲೆ ಇರಾನ್ ಪ್ರಸ್ಥಭೂಮಿಯ ಪೂರ್ವ ಬದಿಯ ಸಂಸ್ಕೃತಿ ಪ್ರಭಾವ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ.

ಎಲಮೈಟ್ ಜನಸಮುದಾಯ ತಮ್ಮ ದೇಶವನ್ನು ಹಲ್ತಂತಿ (ಅಂತ್ಯಕಾಲೀನ ಎಲಮೈಟ್ ಭಾಷೆಯಲ್ಲಿ, ಅತಂತಿ) ಎಂದು ಕರೆಯುತ್ತಿದ್ದರು. ನೆರೆ ರಾಜ್ಯವಾದ ಅಕ್ಕಡಿಯನ್ನರ ಮಾತಿನಲ್ಲಿ ಈಳಂ (ಎತ್ತರವಾದ ಭೂಮಿ) ಆಯಿತು. ಹೀಬ್ರೂ ಭಾಷೆಯ ಹಳೆ ಒಡಂಬಡಿಕೆಯಲ್ಲೂ ಈಳಂ ಎಂದು ಉಲ್ಲೇಖಿಸಲಾಗಿದೆ. ಇದರ ರಾಜಧಾನಿ ಸೂಸ. ಟಾಲಮಿಯ ಅನಂತರದ ಭೂಗೋಳ ಶಾಸ್ತ್ರಜ್ಞರು ಇದನ್ನು ಸೂಸಿಯನ ಎಂದು ಕರೆದರು. ಈ ನಾಗರಿಕತೆಯ ಕೇಂದ್ರ ಪ್ರದೇಶ ಇಂದಿನ ಖುಜ಼ೆಸ್ತಾನ್. ಇದನ್ನು ಪ್ರಾಚೀನ ಪರ್ಷಿಯದಲ್ಲಿ ಊವ್ವ ಎಂದು ಕರೆಯಲಾಗಿದೆ. ಇದರ ಅರ್ಥ ಈಳಂ.

ಎಲಮೈಟ್ ಇತಿಹಾಸ ಅಪೂರ್ಣ, ಮೆಸಪೊಟೇಮಿಯದ ಬರೆವಣಿಗೆಗಳ ಆಧಾರಗಳಿಂದ ಇತಿಹಾಸವನ್ನು ಪುನರ್ರಚಿಸಿರಬಹುದು. ಸೂಸ ನಗರವನ್ನು ಪ್ರ.ಶ.ಪೂ.4000ದಲ್ಲಿ ಸ್ಥಾಪಿಸ ಲಾಯಿತು. ಈ ನೆಲೆಯ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಹಂತ ಸುಮೇರ್ ಸಂಸ್ಕೃತಿಯ ಉರುಕ್ ಹಂತಕ್ಕೆ ಸಮಾನವಾಗಿದೆ. ಇಲ್ಲಿ ಪ್ರ.ಶ.ಪೂ.ಸು.3200ರಿಂದ ಪೂರ್ವ ಪರ್ಷಿಯ ಪ್ರಸ್ಥಭೂಮಿಯ ಪೂರ್ವಭಾವಿ ಎಲಮೈಟ್ ಪ್ರಭಾವವನ್ನು ಕಾಣಬಹುದು. ಪ್ರ.ಶ.ಪೂ. ಸು.2700ರ ತನಕ ಪೂರ್ವಭಾವಿ ಎಲಮೈಟ್ ಲಿಪಿ ಬಳಕೆಯಲ್ಲಿತ್ತು. ಆದರೆ ಈ ಲಿಪಿಯನ್ನು ಓದಲಾಗುತ್ತಿಲ್ಲ. ಇದುವರೆಗೂ ತಿಳಿದಮಟ್ಟಿಗೆ ಪೂರ್ವಭಾವಿ ಎಲಮೈಟ್‌ನ ಅಂತಿಮ ಹಂತದಲ್ಲಿ ಕಾಣಿಸಿಕೊಂಡ ಅವನ್ ವಂಶದ ಕಿಷ್‌ನ ದೊರೆ ಎನ್ಮೆಬರಗೆಸಿ ಮೊದಲನೆಯ ಅರಸ.

ಎಲಮೈಟ್ ನಾಗರಿಕತೆ ಟೈಗ್ರಿಸ್ ಮತ್ತು ಯೂಫ್ರೆಟಿಸ್ ನದಿಗಳ ಪೂರ್ವಕ್ಕೆ ಕರುನ್ ನದಿಯ ಜಲಾನಯನ ಪ್ರದೇಶದಲ್ಲಿ ಬೆಳೆಯಿತು. ಈ ರಾಜ್ಯ ತನ್ನ ಸುತ್ತಮುತ್ತಲಿನ ಪ್ರದೇಶಗಳೊಡನೆ ಆಡಳಿತಾತ್ಮಕವಾಗಿ ಸಮನ್ವಯತೆ ಮಾಡಿಕೊಂಡು ಆಯಾಯ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದುದು ಒಂದು ವಿಶೇಷ ಎನ್ನಬಹುದು. ಇಲ್ಲಿ ಒಂದು ರೀತಿಯ ಸಂಯುಕ್ತ ಆಡಳಿತ ರಚನೆಯನ್ನು ಕಾಣಬಹುದು. ಇದರ ಇತಿಹಾಸವನ್ನು ಅನುಕ್ರಮವಾಗಿ 4 ಹಂತಗಳಾಗಿ ವಿಂಗಡಿಸಬಹುದು: ಪೂರ್ವಭಾವಿ ಎಲಮೈಟ್: ಪ್ರ.ಶ.ಪೂ.ಸು.3200–2700 (ಸೂಸದಲ್ಲಿ ಲಿಪಿ ಬಳಕೆ); ಪ್ರಾಚೀನ ಎಲಮೈಟ್: ಪ್ರ.ಶ.ಪೂ. ಸು.2700–1600 (ಎಪರ್ತಿ ಅರಸು ಮನೆತನದವರೆಗಿನ ಲಿಖಿತ ದಾಖಲೆಗಳು); ಮಧ್ಯ ಎಲಮೈಟ್: ಪ್ರ.ಶ.ಪೂ.ಸು.1500–1100 (ಅಂಜ಼ನೈಟ್ ವಂಶ, ಬ್ಯಾಬಿಲೋನಿಯನ್ನರು ಸೂಸವನ್ನು ಆಕ್ರಮಿಸುವವರೆಗೆ); ನೂತನ ಎಲಮೈಟ್: ಪ್ರ.ಶ.ಪೂ.ಸು.1100–539 (ಇರಾನ್ ಮತ್ತು ಸಿರಿಯದ ಪ್ರಭಾವ, ಪ್ರಶ.ಪೂ. 539ರಿಂದ ಅಕೆಮಿನಿಡ್‌ರ ಆಳಿಕೆ ಪ್ರಾರಂಭವಾಯಿತು).

ಪ್ರಾಚೀನ ಎಲಮೈಟ್ ಅವಧಿ (ಪ್ರ.ಶ.ಪೂ.ಸು.2700–1600): ಲಿಖಿತ ದಾಖಲೆಗಳಲ್ಲಿ ಉಲ್ಲೇಖಿಸಿರುವಂತೆ ಕಿಷ್‌ನ ಎನ್ಮೆಬರಗೆಸಿಯು ಈಳಂ ಪ್ರದೇಶವನ್ನು ಜಯಿಸಿದ. ಈ ಅವಧಿಯಲ್ಲಿ ಮೂರು ವಂಶಗಳು ಆಡಳಿತ ನಡೆಸಿವೆ. ಮೊದಲು ಎರಡು ಮನೆತನಗಳಲ್ಲಿ ಒಟ್ಟು 12 ಅರಸರು ಆಳಿದರು. ಅವಾನ್ ಅಥವಾ ಅವ್ವಾನ್ (ಸು.2400–2100) ಮತ್ತು ಸಿಮಾಷ್ (ಸು.2100–1970), ಸೂಸ ಪಟ್ಟಿಯಿಂದ ಪ್ರಾಚೀನ ಬ್ಯಾಬಿಲೋನಿಯ ಅವಧಿಯಲ್ಲಿ ಎಲಮೈಟ್‌ನ ಎರಡು ಅರಸು ಮನೆತನಗಳು ಅಲ್ಪಕಾಲ ಸುಮೇರು ಮೇಲೆ ಆಳಿಕೆ ನಡೆಸಿದರೆಂದು ಕಾಣುತ್ತದೆ. ಸುಮೇರ್ ಮತ್ತು ಈಳಂ ರಾಜ್ಯಗಳ ನಡುವೆ ಆಗಾಗ ಘರ್ಷಣೆ ಉಂಟಾಗುತ್ತಿತ್ತು.

ಒಂದನ್ನೊಂದು ತಾತ್ಕಾಲಿಕವಾಗಿ ಗೆದ್ದುಕೊಳ್ಳುತ್ತಿದ್ದವು. ಈಳಂ ರಾಜ್ಯದ ಅವಾನ್ ಮತ್ತು ಹಮಜ಼ಿ; ಅದೇ ರೀತಿ ಸುಮೇರಿಯದ ಲಗಷ್‌ನ ಎನ್ನತುಮ್ ಮತ್ತು ಅದಬ್‌ನ ಲುಗಲ್–ಅನ್ನೆ–ಮುಂಡು ಒಂದನ್ನೊಂದು ಆಕ್ರಮಿಸುತ್ತಿದ್ದರು. ಅಕ್ಕಡ್‌ನಸರ್ಗೊನ್, ಈಳಂನ ಅವಾನ್ ವಂಶದ ಅರಸ ಲುಹಿ–ಇಷನ್‌ನನ್ನು ಸೋಲಿಸಿದ. ಮುಂದೆ ಈ ಪ್ರದೇಶದ ಅಳಿದುಳಿದ ವಸ್ತುಗಳನ್ನು ಪಡೆಯಲು ಮೆಸಪೊಟೇಮಿಯನ್ನರು ಪದೇ ಪದೇ ಧಾಳಿ ಮಾಡುತ್ತಿದ್ದರು. ಆದರೆ ಸರ್ಗೊನ್‌ನ ಮರಿಮೊಮ್ಮಗ ಷರ್–ಕಲಿ–ಷರ್ರಿ ಕಾಲದಲ್ಲಿ ಅಕ್ಕಡ್ ರಾಜ್ಯ ಕುಸಿಯಿತು. ಈಳಂ ರಾಜ್ಯದ ಅವಾನ್ ಅರಸ ಕುತಿಕ್–ಇನ್‌ಷುಶಿನಕ್ (ಸು.2240–2220) ಕಾಲದಲ್ಲಿ ಸ್ವತಂತ್ರವಾಗಿ ರಾಜಕೀಯ ಸಂಘಟನೆ ಉತ್ತಮವಾಯಿತು. ಅವಾನ್ ಅರಸರ ಆಳಿಕೆಯ ಅನಂತರ ಈಳಂ ಹಲವಾರು ಧಾಳಿಗಳನ್ನು ಕಂಡಿತು. ತರುವಾಯ ಬಂದ ಒಂದನೆಯ ಎಪರ್ತಿಯ (ಪ್ರ.ಶ.ಪೂ.ಸು.1970–1770) ಅವಧಿಯಲ್ಲಿ ಆಳಿಕೆ ಆರಂಭವಾಯಿತು. ಈ ಸಮಯದಲ್ಲಿ ಸೂಸ ಎಲಮೈಟ್‌ರ ಹತೋಟಿಯಲ್ಲಿತ್ತು. ಈ ವಂಶದ ಪ್ರಮುಖ ಅರಸ ಸಿರುಕ್‌ದುಖ್ (ಪ್ರ.ಶ.ಪೂ.ಸು.1850), ಇವನು ನೆರೆಹೊರೆಯವ ರೊಡನೆ ಸೈನಿಕ ಒಪ್ಪಂದ ಮಾಡಿಕೊಂಡು, ಬ್ಯಾಬಿಲೋನ್ ಧಾಳಿ ಮಾಡದಂತೆ ನೋಡಿಕೊಳ್ಳುವುದರ ಜೊತೆಗೆ ಸಾಮ್ರಾಜ್ಯವನ್ನು ಪ್ರವರ್ಧಮಾನಕ್ಕೇರಿಸಿದ. ಸಿವೆ–ಪಲರ್–ಖುಪಕ್ ಶಕ್ತಿಶಾಲಿ ಗೌರವಾನ್ವಿತ ರಾಜ. ಮೆಸಪೊಟೇಮಿಯ ರಾಜರು ಜ಼ಿಮ್‌ರಿಲಿಮ್ ಮತ್ತು ಹಮುರಬಿ ಇವನನ್ನು ಗೌರವದಿಂದ ಕಾಣುತ್ತಿದ್ದರು. ಕುದುರ್–ನಹ್ಹುಂತೆ ಅಕ್ಕಡ್ ದೇವಾಲಯಗಳನ್ನು ಕೊಳ್ಳೆ ಹೊಡೆದ. ಆದರೆ ಪ್ರ.ಶ.ಪೂ.1760ರಲ್ಲಿ ಹಮುರಬಿ ಎಲಮೈಟ್‌ರನ್ನು ಹೊರ ಓಡಿಸಿ ಮೆಸಪೊಟೇಮಿಯ ಪ್ರದೇಶದಲ್ಲಿ ಬ್ಯಾಬಿಲೋನಿಯದ ಅಧಿಕಾರ ಸ್ಥಾಪಿಸಿದ. ಬ್ಯಾಬಿಲೋನಿಯದ ಕಸ್ಸಿಟೆ ಆಳಿಕೆಯ ಕಾಲದಿಂದ ಎಲಮೈಟ್ ರಾಜವಂಶಾವಳಿಯ ಬಗ್ಗೆ ದಾಖಲೆಗಳು ಅಷ್ಟಾಗಿ ಕಂಡುಬರುವುದಿಲ್ಲ.

ಮಧ್ಯ ಎಲಮೈಟ್ ಅವಧಿ (ಪ್ರ.ಶ.ಪೂ.ಸು.1500–1100): ಪ್ರ.ಶ.ಪೂ.ಸು.1500ರ ಹೊತ್ತಿಗೆ ಅನ್‌ಶನೈಟ್ ಅರಸು ಮನೆತನದವರು ಪ್ರಬಲರಾಗಿ ತಮ್ಮ ಆಳಿಕೆ ಆರಂಭಿಸಿದರು. ಇವರ ಕಾಲದಲ್ಲಿ ಸೂಸ ಪ್ರದೇಶವನ್ನು ಎಲಮೈಟ್ ಸಂಸ್ಕೃತಿಮಯವಾಗಿ ಮಾಡಿದುದು ಒಂದು ವೈಶಿಷ್ಟ್ಯ. ತಮ್ಮನ್ನು ಅನ್‌ಶನ್ ಮತ್ತು ಸೂಸ ರಾಜರೆಂದು ಕರೆದುಕೊಂಡಿದ್ದಾರೆ. ಈ ಪ್ರದೇಶವನ್ನಾಳಿದ ಮೊದಲನೆಯ ಅರಸು ಮನೆತನ ಕಿದಿನುಯಿಡ್. ಇವರು ಅಕ್ಕಡ್ ಭಾಷೆಯಲ್ಲಿ ತಮ್ಮ ಶಾಸನಗಳನ್ನು ಬರೆಸಿಕೊಂಡಿದ್ದಾರೆ. ಅನಂತರ ಬಂದ ಇಗಿಹಲ್‌ಕಿಡ್ ಮತ್ತು ಶುತ್ರುಕಿಡ್‌ರು ಎಲಮೈಟ್ ಭಾಷೆಯನ್ನು ಬಳಸಿದರು. ಎಲಮೈಟ್ ಭಾಷೆ ಮತ್ತು ಸಂಸ್ಕೃತಿ ಸೂಸಿಯಾನದಲ್ಲಿ ಬೆಳೆಯಲಾರಂಭಿಸಿತು.

ಕಿದಿನುಯಿಡ್‌ರು (ಪ್ರ.ಶ.ಪೂ.ಸು.1500–1400) ಅರಸು ಮನೆತನದಲ್ಲಿ ಐವರು ಅರಸರು ಆಗಿಹೋದರು. ಇವರ ಪರಸ್ಪರ ಸಂಬಂಧ ಅಸ್ಪಷ್ಟ. ಆದರೆ ತಮ್ಮನ್ನು ಸೂಸ ಮತ್ತು ಅನ್‌ಶನ್ ಪ್ರದೇಶದ ರಾಜರೆಂದು, ಕಿರ್‌ವಶಿರ್ ದೇವರ ಸೇವಕರೆಂದು ಕರೆದು ಕೊಂಡಿದ್ದಾರೆ. ಕಿರ್‌ವಶಿರ್ ಎಲಮೈಟ್ ಸಂಸ್ಕೃತಿಯ ಎತ್ತರ ಪ್ರದೇಶದ ಒಂದು ದೇವತೆ. ಇಗಿಹಲ್‌ಕಿಡರ (ಪ್ರ.ಶ.ಪೂ.1400–1210) ಅರಸು ಮನೆತನದ ಹತ್ತು ರಾಜರ ಬಗ್ಗೆ ತಿಳಿದುಬಂದಿದೆ. ಇವರಲ್ಲಿ ಕೆಲವರು ಕಸ್ಸಿಟೆ ರಾಜಕುಮಾರಿಯರನ್ನು ವಿವಾಹವಾಗಿದ್ದರು. ಕಸ್ಸಿಟೆ ರಾಜ ಎರಡನೆಯ ಕುರಿಗಲ್‌ಜು಼ ಪ್ರ.ಶ.ಪೂ.ಸು.1320ರಲ್ಲಿ ಈಳಂ ಪ್ರದೇಶವನ್ನು ಅಲ್ಪಕಾಲ ಸ್ವಾಧೀನಪಡಿಸಿಕೊಂಡಿದ್ದ. ಅನಂತರ (ಪ್ರ.ಶ.ಪೂ.ಸು.1230) ನಾಲ್ಕನೆಯ ಕಶ್ತಿಲಿಯಶ್ ಈಳಂ ವಿರುದ್ಧ ಯುದ್ಧಮಾಡಿ ಸೋತ. ಹೀಗೆ ಇವರ ನಡುವೆ ಆಗಾಗ್ಗೆ ಯುದ್ಧಗಳಾಗುತ್ತಿದ್ದವು. ಇವರ ಕಾಲದಲ್ಲಿ ಅಕ್ಕಡ್ ಭಾಷೆಯ ಶಾಸನಗಳು ತೀರ ಅಪರೂಪವಾದುವು. ಸೂಸದಲ್ಲಿ ಎಲಮೈಟ್‌ನ ಎತ್ತರ ಪ್ರದೇಶದ ದೇವತೆಗಳನ್ನು ಶಾಶ್ವತವಾಗಿ ಸ್ಥಾಪಿಸಿದರು. ಶುತ್ರುಕಿಡ್‌ರ (ಪ್ರ.ಶ.ಪೂ.ಸು.1210–1100) ಆಡಳಿತದಲ್ಲಿ ಎಲಮೈಟ್ ರಾಜ್ಯ ಉತ್ತುಂಗಕ್ಕೇರಿತು. ಶುತ್ರುಕ್–ನಖ್ಖುಂತೆ ಮತ್ತು ಅವನ ಮೂವರು ಮಕ್ಕಳಾದ ಎರಡನೆಯ ಕುತಿರ್–ನಖ್ಖುಂತೆ, ಶಿಲ್ಹಕ್–ಇನ್–ಶುಶಿನಕ್ ಮತ್ತು ಖುತೆಲುತುಶ್–ಇನ್–ಶುಶಿನಕ್, ಕಸ್ಸಿಟೆ ಮೇಲೆ ಸಮರ್ಥವಾಗಿ ದಂಡಯಾತ್ರೆ ನಡೆಸಿದರು. ತಮ್ಮ ರಾಜ್ಯದ ಅನೇಕ ಕಡೆ ಭವ್ಯವಾದ ದೇವಾಲಯಗಳನ್ನು ಕಟ್ಟಿಸಿದರು. ಶುತ್ರುಕ್–ನಖ್ಖುಂತೆಯು ಅಕ್ಕಡ್, ಬ್ಯಾಬಿಲೋನಿಯ ಮತ್ತು ಇಶ್‌ನುನ್ನ ಮೇಲೆ ಧಾಳಿಮಾಡಿ ಆ ಪ್ರದೇಶಗಳಿಂದ ವಿಜಯದ ಸಂಕೇತವಾಗಿ ಸೂಸದಿಂದ ಮರ್ದುಕ್, ಮನಿಶ್‌ಟುಶು ವಿಗ್ರಹಗಳನ್ನು, ಹಮುರಬಿಯ ಕಾನೂನು ಪ್ರತಿ ಮತ್ತು ನರಂಸಿನ್ ಶಾಸನವಿರುವ ಸ್ಮಾರಕ ಸ್ತಂಭವನ್ನು ತಮ್ಮ ರಾಜ್ಯಕ್ಕೆ ಸಾಗಿಸಿದರು. ಪ್ರ.ಶ.ಪೂ.1158ರಲ್ಲಿ ಇವನು ಕಸ್ಸಿಟರನ್ನು ಸಂಪೂರ್ಣವಾಗಿ ಸೋಲಿಸಿ ಬ್ಯಾಬಿಲೋನಿಯ ರಾಜನಾದ ಜ಼ಬಬ–ಶುಮ–ಇದ್ದಿನನನ್ನು ಕೊಂದು, ತನ್ನ ಹಿರಿಯ ಮಗ ಕುತಿರ್–ನಖ್ಖುಂತೆಯನ್ನು ರಾಜನಾಗಿ ಮಾಡಿದ. ಈ ರಾಜನ ಮಗ ಖುತೆಲುತುಶ್–ಇನ್–ಶುಶಿನಕ್. ಇವನು ಬ್ಯಾಬಿಲೋನಿಯದ ಒಂದನೆಯ ನೆಬೂಚಡ್ನೆಸರ್‌ನಿಗೆ ಅಲ್ಪಕಾಲ ಶರಣಾಗಿ ಮರ್ದುಕ್ ವಿಗ್ರಹ ಹಿಂತಿರುಗಿಸಿ ಅನ್‌ಶನ್‌ಗೆ ಓಡಿಹೋದ. ಆದರೆ ಅನಂತರ ಸೂಸಕ್ಕೆ ಹಿಂತಿರುಗಿದ. ಇವನ ಸಹೋದರ ಶಿಲ್ಹನ–ಹಂರು–ಲಗಮರ್‌ನು ಶುತ್ರುಕಿಡ್ ಮನೆತನದ ಕೊನೆಯ ರಾಜ. ಇಲ್ಲಿಂದ ಮುಂದೆ 3 ಶತಮಾನಗಳ ಕಾಲ ಇದು ಅಜ್ಞಾತವಾಯಿತು.

ನೂತನ ಎಲಮೈಟ್ ಅವಧಿ (ಪ್ರ.ಶ.ಪೂ.ಸು.1100–539): ಪ್ರ.ಶ.ಪೂ.ಸು.1100–770. ಅನ್‌ಶನ್ ಪ್ರದೇಶ ಎಲಮೈಟ್ ರಾಜ್ಯದ ಭಾಗವಾಗಿ ಉಳಿದುಕೊಂಡಿತ್ತು. ಬ್ಯಾಬಿಲೋನಿಯಾದ ರಾಜ ಮರ್–ಬಿತಿ–ಅಪ್ಲ–ಉಶುರ್ (ಪ್ರ.ಶ.ಪೂ.984–979) ಎಲಮೈಟ್ ಮೂಲದವನು. ಈಳಂ ಮತ್ತು ಬ್ಯಾಬಿಲೋನಿಯ ನಡುವೆ ಸ್ನೇಹ ಏರ್ಪಟ್ಟು, ಬ್ಯಾಬಿಲೋನಿಯ ರಾಜ ಮರ್ದುಕ್–ಬಲಸ್ಸು–ಇಕ್ಬಿ ಸೇರಿ ಅಸ್ಸೀರಿಯದ ರಾಜ ಐದನೆಯ ಶಂಶಿ–ಅದದ್ (ಪ್ರ.ಶ.ಪೂ. 823–11)ನ ವಿರುದ್ಧವಾಗಿ ಯುದ್ಧ ಮಾಡಿದರು.

ಪ್ರ.ಶ.ಪೂ.ಸು.770–646 ಅಸ್ಸೀರಿಯದ ರಾಜ ಸುರಬಿನ್‌ವಾಲ್ ಸೂಸವನ್ನು ಪ್ರ.ಶ.ಪೂ.ಸು.647ರಲ್ಲಿ ಗೆದ್ದು ಲೂಟಿ ಮಾಡಿ ನಗರವನ್ನು ಸುಟ್ಟ. ಇವನ ಸೈನಿಕರು ಹಾರೆ, ಪಿಕಾಸಿಗಳಿಂದ ಕಟ್ಟಡಗಳನ್ನು ಧ್ವಂಸ ಮಾಡಿ ಐಶ್ವರ್ಯವನ್ನು ದೋಚಿದರು. ಅನಂತರ ಇರಾನಿಯನರು ಇರಾನ್ ಪ್ರಸ್ಥಭೂಮಿಗೆ ವಲಸೆ ಹೋದರು. ಪ್ರ.ಶ.ಪೂ.800ರಿಂದ ಅಸ್ಸೀರಿಯ ಮೂಲಗಳು ಸ್ಪಷ್ಟವಾಗಿ ಬಲಿಷ್ಠ ಮೆಡೆಸ್‌ರನ್ನು ಉಲ್ಲೇಖಿಸುತ್ತದೆ. ತರುವಾಯ ಇವರನ್ನು ಪಾರ್ಥಿಯನ್ನರು, ಸರ್ಗತಿಯನ್ನರು, ಮರ್ಗಿಯನ್ನರು, ಬ್ಯಾಕ್ಟ್ರಿಯನ್ನರು, ಸೊಗ್‌ಡಿಯನ್ನರು ಎಂಬ ಅನ್ವರ್ಥ ನಾಮಗಳಿಂದ ಗುರುತಿಸಲಾಗಿದೆ. ಇವರುಗಳಲ್ಲಿ ಪರ್ಶು ಬುಡಕಟ್ಟಿನವರೆಂದು ಉರ್‌ಮಿಯಹ್ ಸರೋವರದ ಆಗ್ನೇಯ ದಂಡೆಯ ಮೇಲೆ ವಾಸಿಸುತ್ತಿದ್ದರು. ಇವರೇ ಎಲಿಮೈಟ್ ಜನರ ಮೂಲ ಪ್ರದೇಶವನ್ನು ಪರ್ಷಿಯ ಎಂದು ಕರೆದರು.

ಎಲಮೈಟ್‌ರ ರಾಜ ಖುಂಬನಿಗಶ್ (ಪ್ರ.ಶ.ಪೂ.743–717) ಬ್ಯಾಬಿಲೋನಿಯದ ಮೆರೊದಚ್–ಬಲದನ್‌ಗೆ ಅಸ್ಸೀರಿಯ ವಿರುದ್ಧ ಯುದ್ಧ ಮಾಡಲು ಸಹಾಯ ಮಾಡಿದ. ಇವನ ಅನಂತರ ಎರಡನೆಯ ಶುತ್ರುಕ್–ನಖ್ಖುಂತೆ (ಪ್ರ.ಶ.ಪೂ.716–699). 710ರಲ್ಲಿ ಅಸ್ಸೀರಿಯದ ರಾಜ ಸರ್‌ಗೊನ್ ಸೈನ್ಯದಿಂದಲೂ 708ರಲ್ಲಿ ಎಲಮೈಟ್ ಸರ್ಗೊನ್ ಸೈನ್ಯದಿಂದಲೂ ಸೋಲಿಸಲ್ಪಟ್ಟ. ಅಸ್ಸೀರಿಯದ ಸರ್ಗೊನ್ ಮಗ ಸೆನ್ನಚೆರಿಬ್ ಬ್ಯಾಬಿಲೋನಿಯ ಮೇಲೆ ವಿಜಯವನ್ನು ಪೂರ್ಣವಾಗಿ ಸಾಧಿಸಿದ. ಇವನು ಮೆರೊದಚ್–ಬಲದನ್‌ನನ್ನು ಎರಡನೆಯ ಬಾರಿ ಸಿಂಹಾಸನದಿಂದ ಉರುಳಿಸಿ, ತನ್ನ ಮಗ ಅಸುರ್–ನದಿನ್–ಶುಮಿಯನ್ನು ಪ್ರ.ಶ.ಪೂ.700ರಲ್ಲಿ ಬ್ಯಾಬಿಲೋನಿಯ ಸಿಂಹಾಸನದ ಮೇಲೆ ಕೂರಿಸಿದ. ಎಲಮೈಟ್‌ರ ಶುತ್ತಿರ್–ನಖ್ಖುಂತೆಯನ್ನು ಅವನ ಸಹೋದರ ಖಲ್ಲುಶು ಕೊಂದ. ಇವನು ಪ್ರ.ಶ.ಪೂ. 694ರಲ್ಲಿ ಬ್ಯಾಬಿಲೋನ್‌ನನ್ನು ವಶಪಡಿಸಿ ಕೊಂಡು ಅಶುರ್–ನದಿನ್–ಶುಮಿಯನ್ನು ಸೆರೆಹಿಡಿದ. ಇವನನ್ನು ಕುತಿರ್–ನಖ್ಖುಂತೆಕೊಂದು ಉತ್ತರಾಧಿಕಾರಿಯಾದ. ಆದರೆ ಮೂರನೆಯ ಖುಮ್ಮ–ಮೆನನ್‌ಗೋಸ್ಕರ (ಪ್ರ.ಶ.ಪೂ.692–89) ಸಿಂಹಾಸನ ತ್ಯಜಿಸಿದ. ಖುಮ್ಮ–ಮೆನನ್ ಹೊಸದೊಂದು ಸೈನ್ಯವನ್ನು ಕಟ್ಟಿ ಅಸ್ಸೀರಿಯ ವಿರುದ್ಧ ಹಲುಲೆಯಲ್ಲಿ ಪ್ರ.ಶ.ಪೂ.691ರಲ್ಲಿ ಯುದ್ಧಮಾಡಲು ಬ್ಯಾಬಿಲೋನಿಯರಿಗೆ ಸಹಾಯ ಮಾಡಿದ. ಈ ಯುದ್ಧದಲ್ಲಿ ಏನೂ ನಿರ್ಧಾರವಾಗಲಿಲ್ಲ. ಆದರೆ ಎರಡು ವರ್ಷದ ಅನಂತರ ಅಸ್ಸೀರಿಯದ ರಾಜ ಸೆನ್ನಚೆರಿಬ್ ಬ್ಯಾಬಿಲೋನಿಯವನ್ನು ನಾಶ ಮಾಡಿದ. ಮುಂದೆ ಬಂದ ಇಬ್ಬರು ಎಲಮೈಟ್ ರಾಜರ ಕಾಲದಲ್ಲಿ ಬ್ಯಾಬಿಲೋನಿಯರೊಡನೆ ಸಂಬಂಧ ಕುಸಿಯಿತು. ಎಲಮೈಟ್‌ರ ಕೊನೆಯ ರಾಜ ಮೂರನೆಯ ಖುಮ್ಮ–ಖಲ್‌ದಶ್ ಇವನನ್ನು ಅಸ್ಸೀರಿಯ ರಾಜ ಅಸುರ ಬಿನಿಪಾಲ್ ಪ್ರ.ಶ.ಪೂ.640ರಲ್ಲಿ ಸೆರೆಹಿಡಿದು ದೇಶವನ್ನು ಧೂಳಿಪಟ ಮಾಡಿದ. ಇವನು ತನ್ನ ಶಾಸನದಲ್ಲಿ ಸೂಸವನ್ನು ಘನಘೋರವಾಗಿ ನಾಶಮಾಡಿದೆ ನೆಂದು ಹೇಳಿಕೊಂಡಿದ್ದಾನೆ.

ಅಸುರ ಬಿನಿಪಾಲ್ (ಪ್ರ.ಶ.ಪೂ.646–539) ಹೇಳಿಕೊಂಡಷ್ಟು ಸೂಸ ನಾಶವಾಗಿರಲಿಲ್ಲ. ಮೂರನೆಯ ಖುಮ್ಮ–ಖಲ್‌ದಶ್ ಮಗ ಶುತ್ತಿರ್–ನಖ್ಖುಂತೆ ಸ್ವಲ್ಪಮಟ್ಟಿಗೆ ಸೂಸವನ್ನು ಪುನರುಜ್ಜೀವನಗೊಳಿಸಿದನಾದರೂ ಈ ಅರಸು ಮನೆತನ ಛಿದ್ರಗೊಂಡು ಸಣ್ಣ ರಾಜ್ಯಗಳಾದವು. ಆದರೂ 7ನೆಯ ಶತಮಾನದ ಕೊನೆಯಲ್ಲಿ ಶುತ್ತಿರ್–ನಖ್ಖುಂತೆ, ಖಲ್ಲುತುಶ್–ಇನ್–ಶುಶಿನಕ್ ಮತ್ತು ಅತ್ತ–ಖುಮ್ಮ–ಇನ್ನ–ಶುಶಿನಕ್– ಈ ಮೂವರು ರಾಜರು ತಮ್ಮನ್ನು ಸೂಸ ಮತ್ತು ಅಂಜ಼ನ್ ರಾಜರೆಂದು ಕರೆದುಕೊಳ್ಳುತ್ತಿದ್ದರು. ಆದರೆ ಅಷ್ಟೊತ್ತಿಗಾಗಲೇ ಅಕೆಮೆನಿಡರು ಅಂಶನ್ ಆಳಲು ಪ್ರಾರಂಭಿಸಿದ್ದರು. ಎಲಮೈಟ್‌ರ ಕೊನೆಯ ರಾಜ ತೆಂಪ್ಟಿ–ಖುಮ್ಮ–ಇನ್–ಶುಶಿನಕ್ ಯಾವುದೇ ರಾಜಬಿರುದಾವಳಿಯನ್ನು ಧರಿಸಿರಲಿಲ್ಲ. ಪ್ರ.ಶ.ಪೂ.539ರಲ್ಲಿ ಸೂಸದಲ್ಲಿ ಅಕೆಮೆನಿಡ್‌ರ ಆಳಿಕೆ ಆರಂಭವಾಗಿತ್ತು. ಆದರೂ ಪಾರ್ಥಿಯನರ ಕಾಲದಲ್ಲಿ ಎಲಿಮೈಸ್ ರಾಜ್ಯ ಉಳಿದುಕೊಂಡಿತ್ತು. ಇದು 3ನೆಯ ಶತಮಾನದಲ್ಲಿ ಸಸ್ಸಾನಿಯರ ಧಾಳಿಯಲ್ಲಿ ಕೊನೆಗೊಂಡಿತು. ಎಲಿಮೈಸ್ ಈಳಂ ಕೇಂದ್ರ ಭಾಗವಾಗಿದ್ದರಿಂದ ಇದನ್ನು ಆಳುತ್ತಿದ್ದವರು ಎಲಮೈಟ್ ವಂಶದವರು ಆಗಿರಬೇಕು.

ಎಲಮೈಟ್‌ರು ವಿಗ್ರಹಾರಾಧಕರು ಹಾಗೂ ಬಹುದೇವತಾರಾಧಕರೂ ಆಗಿದ್ದರು. ಕಿರಿರಿಶ ಎಂಬ ಸ್ತ್ರೀ ದೇವತೆಯನ್ನು ಆ ಪ್ರದೇಶದಲ್ಲಿ ಬಹಳಷ್ಟು ಜನಸಮುದಾಯಗಳು ಪೂಜಿಸುತ್ತಿದ್ದವು. ಇವರ ಭಾಷೆ ಸೆಮಿಟಿಕ್, ಸುಮೇರಿಯನ್ ಮತ್ತು ಇಂಡೊ–ಯುರೋಪಿಯನ್ ಭಾಷೆಗಳಿಗೆ ಸಂಬಂಧಿಸಿಲ್ಲ. ಅಕ್ಕಡಿಯನ್ನರ ಬೆಣೆಯಾಕಾರದ ಲಿಪಿಯನ್ನು ತಮ್ಮ ಭಾಷೆಗೆ ಬಳಸುತ್ತಿದ್ದರು. ಆದರೆ ಇವರ ಆದಿಹಂತದ ಬರವಣಿಗೆ ಲೀನಿಯರ್ ಎಲಮೈಟ್ ಲಿಪಿಗಿಂತಲೂ ಪೂರ್ವದ ಸ್ವಲ್ಪ ಹೆಚ್ಚು ಕಡಿಮೆ ಇದೇ ಮಾದರಿಯಲ್ಲಿ ಬರೆದ 2 ಶಾಸನಗಳು 2006ರಲ್ಲಿ ಜಿರಾಫ್ಟ್‌ನಲ್ಲಿ ದೂರೆತಿವೆ. ಕೆಲವು ಭಾಷಾವಿದ್ವಾಂಸರು ಈ ಭಾಷೆ ದಕ್ಷಿಣ ಭಾರತದ ದ್ರಾವಿಡ ಭಾಷೆಗಳು ಮತ್ತು ಪಾಕಿಸ್ತಾನದ ಬ್ರಾಹೂ ಈ ಭಾಷೆಗೆ ಸಂಬಂಧಿಸಿದ್ದೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಎಲಮೊ–ದ್ರಾವಿಡ ಭಾಷೆಗಳೆಂಬ ಪ್ರಭೇದ ಸಿಂಧು ಕಣಿವೆ ನಾಗರಿಕತೆ ಭಾಷೆಗೂ ಸಂಬಂಧಿಸಿದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ. ಸಿಂಧೂ–ಸರಸ್ವತಿ ಭಾಷೆಯನ್ನು ಸುಮೇರಿಯನರ ಭಾಷೆಯಲ್ಲಿ ಮೆಲುಹ್ಹ ಎಂದು

ಕರೆಯಲಾಗಿದೆ. ಎಲಮೈಟ್ ಜನರ ಭಾಷೆಯಲ್ಲಿ ಹಲವಾರು ಹಂತಗಳನ್ನು ಗುರುತಿಸಲಾಗಿದೆ. ಕೊನೆಯ ಹಂತವೇ ಅಕೆಮೆನಿಡ್ ಸಾಮ್ರಾಜ್ಯದಲ್ಲಿ ಬಳಕೆಯಲ್ಲಿತ್ತು. ಪ್ರಾಯಶಃ ಇದು ಇಸ್ಲಾಂ ಧರ್ಮ ಹರಡುವವರೆಗೂ ಉಳಿದುಕೊಂಡಿರಬಹುದು. ಮಧ್ಯಕಾಲೀನ ಅರಬ್ ಇತಿಹಾಸಕಾರನಾದ ಇಬನ್–ಅಲ್–ನದಿಮ್ ಇರಾನಿನ ಫಹ್ಲವಿ (ಪಹ್ಲವಿ), ದರಿ, ಕುಜ಼ಿ, ಪರ್ಷಿಯ ಮತ್ತು ಸುರ್ಯನಿ ಮುಂತಾದವು ಇರಾನಿನ ಭಾಷೆಗಳಾಗಿದ್ದವು ಎಂದಿದ್ದಾನೆ. ಇಬನ್ ಮೊಕ್ಕಫ್ಫನು ಪರ್ಷಿಯ ದೇಶದ ಅರಸರ ಖಾಸಗೀ ಭಾಷೆ ಖುಜ಼್ ಆಗಿತ್ತೆಂದು ಉಲ್ಲೇಖಿಸಿದ್ದಾನೆ. ಖುಜ಼್ ಈಳಂ ಪದದ ತದ್ಭವ ಆಗಿದೆ.

ಈ ಸಂಸ್ಕೃತಿ ನೆಲೆಗಳ ವಿಸ್ತಾರವನ್ನು ನೋಡಿದರೆ ಇವುಗಳ ಜನಸಮುದಾಯಗಳು ಭೌಗೋಳಿಕವಾಗಿ ಇರಾನಿನ ಪ್ರಥಮ ಸಾಮ್ರಾಜ್ಯದ ಮೂಲ ಪುರುಷರೆನ್ನಬಹುದೆಂದು ಆಧುನಿಕ ಇತಿಹಾಸಕಾರರ ಅಭಿಪ್ರಾಯ. ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳಲ್ಲಿ ಎಲಮೈಟ್‍ನ ಉಲ್ಲೇಖವಿದೆ. ಡಾನಿಯಲ್ ಪಾಟ್ಸ್ ಪ್ರಕಾರ ಹೊಸ ಒಡಂಬಡಿಕೆಯಲ್ಲಿ ಎಲಮೈಟ್ ಭಾಷೆ ಪೆಂಟಿಕೊಸ್ಟ್‍ನಲ್ಲಿ ಮಾತನಾಡುತ್ತಿದ್ದ ಭಾಷೆಗಳಲ್ಲಿ ಒಂದಾಗಿತ್ತು ಮತ್ತು ನೆಸ್ಟೋರಿಯನ್ ಕ್ರೈಸ್ತರ ದಾಖಲೆಗಳಲ್ಲಿ ಈಳಂ ಹೆಸರು 1300ರಲ್ಲಿ ಇದ್ದುದ್ದನ್ನು ಉಲ್ಲೇಖಿಸಿದೆ.

(ಎ.ಎಸ್.;ಎನ್.ಎಲ್.)

* * * * *

**ಉ** ಕನ್ನಡ ವರ್ಣಮಾಲೆಯ ಐದನೆಯ ಅಕ್ಷರ. ಅಶೋಕನ ಶಾಸನಗಳಲ್ಲಿನ ಇದರ ರೂಪ ಅತಿ ಪ್ರಾಚೀನವಾದುದು. ಎರಡು ನೇರಗೆರೆಗಳು ಸುಮಾರು 120° ಕೋನದಲ್ಲಿ ಸಂಧಿಸಿದಂತೆ ಕಾಣುವ ಈ ರೂಪ ಸು. 300 ವರ್ಷಗಳ ಕಾಲ ಯಾವ ಬದಲಾವಣೆಯೂ ಇಲ್ಲದೆ ಮುಂದುವರಿದಂತೆ ಕಾಣುತ್ತದೆ. ಕದಂಬರ ಕಾಲದಲ್ಲಿ ಗುಂಡಗಾಗುವ ಪ್ರವೃತ್ತಿಯನ್ನು ತೋರುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಅಕ್ಷರದ ಕೆಳಭಾಗ ಅಗಲವಾಗುತ್ತದೆ. ಪ್ರ.ಶ. 13ನೆಯ ಶತಮಾನದ ಹೊತ್ತಿಗೆ ಕೆಳಭಾಗ ಎರಡು ಕೊಂಡಿಗಳಂತೆ ಆಗಿ, ಅದೇ ರೂಪ ವಿಜಯ ನಗರದ ಕಾಲದಲ್ಲೂ ಮುಂದುವರಿಯು ತ್ತದೆ. ಪ್ರ.ಶ. 16ನೆಯ ಶತಮಾನದ ಅನಂತರ ಗಮನಾರ್ಹವಾದ ಬದಲಾವಣೆಗಳುಂಟಾಗಿ ಪ್ರ.ಶ. 18ನೆಯ ಶತಮಾನದಲ್ಲಿ, ಈಗಿನ ರೂಪಕ್ಕೆ ಸಮೀಪವಾಗಿರುವಂತೆ ತೋರುತ್ತದೆ. ಆದರೆ ಮೇಲಿರುವ ತಲೆಕಟ್ಟಿನ ಮಾದರಿಯ ರೇಖೆ ಮಾತ್ರ ಉಳಿದುಬರುತ್ತದೆ. ಅನಂತರ ಅದು ಮಾಯವಾಗಿ, ಈಗಿನ ರೂಪವನ್ನು ತಾಳುತ್ತದೆ.



ಈ ಅಕ್ಷರ ಪಶ್ಚ ಸಂವೃತ ಗೋಲ ಹ್ರಸ್ವಸ್ವರ ಧ್ವನಿಯನ್ನು ಸೂಚಿಸುತ್ತದೆ. (ಎ.ವಿ.ಎನ್.)

**ಉಂಗುರ ನೆಬ್ಯುಲ:** ಲೈರಾ ನಕ್ಷತ್ರ ಪುಂಜದಲ್ಲಿರುವ ಗ್ರಹಾತ್ಮಕ ನೀಹಾರಿಕೆ (ಪ್ಲಾನೆಟರಿ ನೆಬ್ಯುಲ) (M 57 ಅಥವಾ NGC 6720). ನಮ್ಮ ದೃಷ್ಟಿರೇಖೆಗೆ ಲಂಬತಳದಲ್ಲಿ ವಿಕ್ಷೇಪ ಗೊಳ್ಳುವ ಈ ನೆಬ್ಯುಲದ ಆಕಾರ ಉಂಗುರದಂತೆಯೇ ಕಾಣುತ್ತದೆ. ಕೇಂದ್ರದಲ್ಲಿ ಪ್ರಖರ ನಕ್ಷತ್ರದಿಂದ ವಿಸರಣೆಗೊಳ್ಳುವ ಅತಿನೇರಿಳೆ ರಶ್ಮಿಪುಂಜ ಉಂಗುರಭಾಗದಲ್ಲಿ ಅತ್ಯಧಿಕ ಪ್ರಮಾಣದಲ್ಲಿರುವ ಆಕ್ಸಿಜನ್ ಮೇಲೆ ಪತನವಾಗಿ ಅದನ್ನು ಹೊಳೆಯುವಂತೆ ಮಾಡುವುದು. ಸಾಪೇಕ್ಷವಾಗಿ ಉಂಗುರದ ಒಳಭಾಗ ಮಸಕು. ಸೂರ್ಯಸಂಥ ನಕ್ಷತ್ರದ ಅವಸಾನದ ಸ್ಥಿತಿಯನ್ನು ಈ ನೀಹಾರಿಕೆ ಕಾಯ ಸೂಚಿಸುತ್ತದೆ. ಅರ್ಧಕ್ಕಿಂತಲೂ ಹೆಚ್ಚು ವಸ್ತು ಸಿಡಿದು ಈ ವರ್ಣಮಯ ನೀಹಾರಿಕೆಯನ್ನು ಸೃಷ್ಟಿಸಿದೆ. ಉಳಿದ ಭಾಗ ಕೇಂದ್ರದಲ್ಲಿ ಶ್ವೇತಕುಬ್ಜವಾಗಿದೆ. *

**ಉಂಗುರಮಾಪಕಗಳು:** ಎಂಜಿನಿಯರಿಂಗಿನಲ್ಲಿ ಅಲ್ಪ ವ್ಯಾಸದ ಕಂಬ ಅಥವಾ ಉರುಳೆಯ ವ್ಯಾಸ ನಿಯಮಿತ ಮಿತಿಗಳ ನಡುವೆ ಇದೆಯೇ ಇಲ್ಲವೇ ಎಂದು ಪರೀಕ್ಷಿಸಲು ಬಳಸುವ ಹತ್ಯಾರುಗಳು (ರಿಂಗ್ ಗೇಜಸ್). ಒಂದು ಕಂಬದ ವ್ಯಾಸ 1 ಸೆಂಮೀ ಇರಬೇಕಾಗಿದೆ ಎಂದು ಭಾವಿಸೋಣ. ಅದರ ಉದ್ದಕ್ಕೂ ವ್ಯಾಸ ನಿಷ್ಕೃಷ್ಟವಾಗಿ ಅಷ್ಟೇ ಇರುವುದು ಸಾಮಾನ್ಯ ಕೈಗಾರಿಕೆಗಳಲ್ಲಿ ಪ್ರಾಯೋಗಿಕವಾಗಿ ಸಾಧ್ಯವೆನಿಸುವುದಿಲ್ಲ. ಆವಶ್ಯಕವೂ ಇಲ್ಲ. ಇಂಥಲ್ಲಿ ಕೆಲಸಗಾರನಿಗೆ ಪ್ರಾಯೋಗಿಕ ವಿಚಲನೆ (ಡೀವಿಯೇಷನ್) ಎಂದು ಒಂದಿಷ್ಟು ರಿಯಾಯಿತಿ ನೀಡುವುದಿದೆ. ಎಂದರೆ, ಕಂಬದ ಉದ್ದಕ್ಕೂ ಅಳತೆಮಾಡಿದಾಗ ಅದರ ವ್ಯಾಸ 1 ಸೆಂಮೀಗಿಂತ ಅತ್ಯಲ್ಪ ಪ್ರಮಾಣ ಹೆಚ್ಚು ಇರಬಹುದು, ಕಡಿಮೆ ಇರಬಹುದು. ವಿಚಲನೆಯ ಮಿತಿಗಳು ಮೊದಲೇ ಗೊತ್ತುಮಾಡಿರುವ ಬೆಲೆಗಳ (ಇವು ಎರಡು–ಒಂದು ಗರಿಷ್ಠ ಮಿತಿ ಮತ್ತೊಂದು ಕನಿಷ್ಠ ಮಿತಿ) ಅಂತರದಲ್ಲಿ ಇದ್ದರೆ ಇಂಥ ರಚನೆ ಸ್ವೀಕಾರಾರ್ಹವೆನ್ನಿಸುವುದು. ಆದ್ದರಿಂದ ಕಂಬದ ನಿಷ್ಕೃಷ್ಟ ವ್ಯಾಸವನ್ನು ಅಳೆಯುವುದರ ಬದಲು ಎರಡು ಉಂಗುರಮಾಪಕಗಳನ್ನು ರಚಿಸುತ್ತಾರೆ. ಒಂದರ ವ್ಯಾಸ ಗರಿಷ್ಠ ಮಿತಿ, ಇನ್ನೊಂದರ ವ್ಯಾಸ ಕನಿಷ್ಠಮಿತಿ. ಮೊದಲಿನದು ಇಡೀ ಕಂಬದ ಹೊರಗೆ ಸರಕ್ಕನೆ ಸರಿದರೆ ಕಂಬದ ವ್ಯಾಸ ಈ ಮಿತಿಗಿಂತ ಎಲ್ಲೂ ಹೆಚ್ಚಾಗಿಲ್ಲವೆಂದು ಸಿದ್ಧವಾಗುತ್ತದೆ. ಈ



ಮಾಪಕದ ಹೆಸರು ಹೋಗು (ಗೋ) ಮಾಪಕ. ಎರಡನೆಯ ಕಂಬದ ಹೊರಗೆ ಸರಿಯದಿದ್ದರೆ ಕಂಬದ ವ್ಯಾಸ ಕನಿಷ್ಠ ಮಿತಿಗಿಂತ ಕಡಿಮೆಯಾಗಿಲ್ಲವೆಂದು ಹೇಳಬಹುದು. ಈ ಮಾಪಕದ ಹೆಸರು ಹೋಗದಿರು (ನಾಟ್ ಗೋ) ಮಾಪಕ. ಆಯಾ ಮಾಪಕದ ಮೇಲೆ ಆಯಾ ಹೆಸರನ್ನು ಕೆತ್ತಿರುತ್ತಾರೆ. ಪರಿಶೀಲನೆಗೆ ಆರಿಸಿದ ಕಂಬ ಹೋಗುಮಾಪಕದ ಒಳಗೆ ಸರಿದು, ಹೋಗದಿರುಮಾಪಕದ ಒಳಗೆ ಸರಿಯದಿದ್ದಾಗ ಅದು ಸ್ವೀಕೃತವಾಗುವುದು; ಮಿಕ್ಕ ಎಲ್ಲ ಸಂದರ್ಭಗಳಲ್ಲೂ ಅದು ತಿರಸ್ಕೃತವಾಗುವುದು. (ಎಂ.ಎನ್.ಸಿ.)

**ಉಂಡವಳ್ಳಿ:** ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯಲ್ಲಿರುವ ಒಂದು ಊರು. ಕಲ್ಲಿನಿಂದ ಕೊರೆದ ಇಲ್ಲಿನ ಗುಹಾಂತರ್ದೇವಾಲಯ ಅನಂತಶಯನ ವಿಷ್ಣುವಿನದು. ಈ ದೇವಸ್ಥಾನ ವಿಷ್ಣುಕುಂಡಿನ್ ರಾಜರ ಕಾಲಕ್ಕೆ ಸೇರಿದ್ದೆಂಬ ಭಾವನೆಯಿತ್ತು. ಆದರೆ ಇದು ಪಲ್ಲವ ರಾಜನಾದ ಮೊದಲ ಮಹೇಂದ್ರವರ್ಮನ (600–630) ಕಾಲಕ್ಕೆ ಸೇರಿದ್ದೆಂದು ಈಗ ಚರಿತ್ರಕಾರರು ನಿರ್ಧರಿಸಿದ್ದಾರೆ. ಇದು ಇಲ್ಲಿಯ ಬೌದ್ಧ ವಿಹಾರವನ್ನು ಬಹುವಾಗಿ ಹೋಲುತ್ತದೆ. ಇಲ್ಲಿ ಕಂಬಗಳಿಂದ ಕೂಡಿದ ನಾಲ್ಕು ಅಂತಸ್ತಿನ ಮಂಟಪವಿದೆ. 27.4 ಮೀ. ಅಗಲ 15.2 ಮೀ. ಎತ್ತರವಿರುವ ಈ ಗುಹಾದೇವಾಲಯದಲ್ಲಿ ಮೇಲಿನ ಮತ್ತು ಕೆಳಗಿನ ಅಂತಸ್ತಿನ ಮಂಟಪ ಅಪೂರ್ಣ. ಎರಡನೆಯ ಅಂತಸ್ತಿನ ಚೌಕವಾದ ಹಜಾರದಲ್ಲಿ ದಪ್ಪನೆಯ ಚೌಕಕಂಬಗಳೂ ವಿಷ್ಣುವಿನ ವಿವಿಧ ಅವತಾರಗಳನ್ನು ತೋರಿಸುವ ಶಿಲಾಕೃತಿಗಳೂ ಇವೆ. ಮೂರನೆಯ ಅಂತಸ್ತಿನ ಹಜಾರದಲ್ಲಿ ಅನಂತಶಾಯಿ ವಿಷ್ಣುವಿನ ಬೃಹತ್ ಶಿಲ್ಪವಿದೆ. ಇಲ್ಲಿಯ ಕಂಬಗಳ ಕೆಳಭಾಗಗಳು ಸಿಂಹದ ಶಿಲ್ಪಗಳಿಂದ ಅಲಂಕೃತವಾಗಿವೆ. ಆಂಧ್ರ ಪ್ರದೇಶದಲ್ಲಿರುವ ಪ್ರಾಚೀನ ಕಾಲದ ಗುಹಾದೇವಾಲಯಗಳ ಶಿಲ್ಪಶೈಲಿಯ ದೃಷ್ಟಿಯಿಂದ ಉಂಡವಳ್ಳಿ ಮುಖ್ಯವಾದದ್ದು. (ಎ.ವಿ.ಎನ್.)

**ಉಂಡಿಗೆ:** ಹಿಂದೆ ಈ ಪದಕ್ಕೆ ರಾಜ ತನ್ನ ರಾಜ್ಯದಲ್ಲಿ ಬಳಸುತ್ತಿದ್ದ ವಿಶಿಷ್ಟವಾದ ಮುದ್ರೆ, ಚಿಹ್ನೆ, ತೆರಪುಗೊಡುವ ಹಾಗೂ ಆಜ್ಞಾಪಿದಿತ ಪತ್ರ ಎಂಬೀ ಅರ್ಥಗಳಿದ್ದವು. ಮನೆತನದ, ವಂಶಗಳ ಗೌರವಸೂಚಿಯಾಗಿ ಒಂದೊಂದು ಚಿಹ್ನೆಯನ್ನು ಬಳಸುವ ಪದ್ಧತಿ ಇತ್ತು. ಸೋತ ರಾಜ್ಯ ಗೆದ್ದ ರಾಜ್ಯದ ಉಂಡಿಗೆಯನ್ನು ಬಳಸಬೇಕಾಗಿತ್ತು. ಇದನ್ನೇ

ಉಂಡಿಗೇರಿಸು (ಗುಬ್ಬಿಶಾಸನ ಪ್ರ.ಶ.1134) ಎಂದು ಕರೆಯುತ್ತಿದ್ದರು. ಸೋತ ರಾಜ್ಯದ ರಾಜನ ಆಜ್ಞಾವಳಿಗಳಿಗೆ ಅನಂತರ ಬೆಲೆ ಇರುತ್ತಿರಲಿಲ್ಲ. ಯುದ್ಧಮಾಡಿ ಜಯಿಸಿದ ಅನಂತರವೇ ಉಂಡಿಗೆಯನ್ನು ಜಾರಿಗೆ ತರುವುದು ಒಂದು ಮಾರ್ಗ. ಕಲಹವಾಡದೆಯೇ ಕೇವಲ ಒಂದು ಓಲೆಗೆ ತನ್ನ ರಾಜ್ಯದ ಉಂಡಿಗೆಯನ್ನೊತ್ತಿ ಪರರಾಜ್ಯಕ್ಕೆ ಕಳುಹಿಸಿದಾಗ, ಆ ಉಂಡಿಗೆಗೆ ಮಹತ್ತ್ವ ದೊರಕುವುದಾದರೆ ಉಂಡಿಗೆ ಬಂದ ರಾಜ್ಯಕ್ಕೆ ಪರರಾಜ್ಯ ಅಧೀನವಾದಂತೆಯೇ. ತನ್ನೋಲೆ ತನ್ನುಂಡಿಗೆಯನೆ ವಿದಿತಾಜ್ಞಾನ್ವಿತಂ ಮಾಡಿದಂ-ಎಂಬಲ್ಲಿ ಉಂಡಿಗೆಯನ್ನೇ ಆಜ್ಞೆಯಂತೆ ಬಳಸಿದೆ. ಈ ಅಂಶಗಳಿಗೆ ಶಾಸನಾಧಾರವಿದೆ.

ಇನ್ನು ಕಾವ್ಯಗಳಲ್ಲಿ ಉದ್ಧೃತವಾಗಿರುವ ಒಂದೆರಡು ಪ್ರಸಂಗಗಳನ್ನು ನೋಡಬಹುದು. ಉಂಡಿಗೆ ಪದಪ್ರಯೋಗ ಪ್ರಥಮವಾಗಿ ಪಂಪನ ವಿಕ್ರಮಾರ್ಜುನ ವಿಜಯ (ಪಂಪಭಾರತ) ಕಾವ್ಯದಲ್ಲಿ 'ಅರಿಕೇಸರಿ ತೆಂಕನಾಡಂ ನಾಡಾಡಿಯಲ್ಲದೆ ಮೆಚ್ಚುತ್ತುಮಾನಾಡನೊಂದೆ ಬಿಲ್ಲೊಳುಂಡಿಗೆ ಸಾಧ್ಯಂಮಾಡಿ' ಎಂದು ಬಂದಿದೆ. ಇದರ ಅರ್ಥ ಒಂದು ರಾಜ್ಯವನ್ನು ಅರಿಕೇಸರಿ ತನ್ನ ಬಿಲ್ಬಲ್ಮೆಯಿಂದ ಅಧೀನತ್ವಕ್ಕೆ ಒಳಪಡಿಸಿಕೊಂಡನೆಂದು.

ಆದರೆ ಇದೇ ಉಂಡಿಗೆ ಪದ ಬಸವಣ್ಣನವರ ವಚನಗಳಲ್ಲಿ ಹೀಗೆ ಪ್ರಯೋಗವಾಗಿದೆ: 'ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ', 'ಲಿಂಗದ ಉಂಡಿಗೆಯ ಪಶುವಾನಯ್ಯ', 'ಎನ್ನ ಉರದ ಉಂಡಿಗೆ' 'ಎನ್ನ ಹೃದಯದಲ್ಲಿ ನಿಮ್ಮ ಚರಣ ದುಂಡಿಗೆಯನೊತ್ತಯ್ಯ'. ಪಾದಮುದ್ರೆ, ಚಿಹ್ನೆ, ಲಿಂಗಮುದ್ರೆ ಎಂಬ ಅರ್ಥಗಳಲ್ಲಿ ಉಂಡಿಗೆ ಪದವನ್ನು ಇಲ್ಲಿ ಬಳಸಲಾಗಿದೆ. ಬಸವದೇವರಾಜ ರಗಳೆಯಲ್ಲೂ ಇಂಥ ಪ್ರಯೋಗಗಳಿವೆ. ಶಿವ ಬಸವಣ್ಣನವರ ಮುಂದೆ ಮುತ್ತು ನವರತ್ನಗಳ, ಚಿನ್ನ, ಬೆಳ್ಳಿ ನಾಣ್ಯಗಳ ಮಳೆಗರೆದಂತೆ; ಮಾಣಿಕದ ಮಳೆ ಮುತ್ತಿನ ಮಳೆ ಮೊದಲಾದ ನವರತ್ನ ದೃಷ್ಟಿಯಂ (ಶಿವಂ) ಕಱೆದನೆಂಬಂತೆ, ರೋಹಣಾಚಲದ ಮಾಣಿಕಂಗಳು ತಾಮ್ರಪರ್ಣಿಯ ಮುತ್ತುಗಳುಂ ನಂದಿಯುಂಡಿಗೆಯ ಮಿಸುನಿಯ ಪೊಂಗಳುಂ'-ಎಂಬುದರ ಅರ್ಥ ನಂದಿಯ ಮುದ್ರೆಯುಳ್ಳಂಥ ಚಿನ್ನದ ನಾಣ್ಯಗಳ ಮಳೆಗರೆದನೆಂದು. ಪಶುಪ್ರಾಣಿಗಳ ಮೇಲೆ ತನ್ನದೆನ್ನುವುದಕ್ಕೆ ಒಂದು ಚಿಹ್ನೆಯನ್ನು ಒತ್ತುವುದರ ಪ್ರಸಂಗವೊಂದು ಬಸವಪುರಾಣದಲ್ಲಿದೆ. ಕಿನ್ನರಯ್ಯ ಪ್ರಾಣಿವಧೆಯನ್ನು ಸಹಿಸದವ. ಸಾವಿನ ದವಡೆಯಲ್ಲಿರುವ ಪ್ರತಿಯೊಂದು ಕುರಿಯನ್ನೂ ಒಂದೊಂದು ಸಾವಿರ ಹೊನ್ನನ್ನಿತ್ತು ಬಿಡಿಸಿ ತಂದು ಅವುಗಳಿಗೆ ಲಿಂಗಮುದ್ರೆಯನ್ನು ಒತ್ತಿದ್ದ. ಲಿಂಗಮುದ್ರೆಯಿದ್ದ ಕುರಿಯನ್ನು ಪುನಃ ಬಂಧಿಸಿದಾಗ ಕಿನ್ನರಯ್ಯ ಪ್ರತಿಭಟಿಸಿದ. 'ಅವಗೆ ಸಾವಿರ ಹೊಂಗಳಂ ಚೌಕವನೆಣಿಸಿ ಕೊಟ್ಟೆನ್ನೆಳುಪಿ ಬಂದ ವಗಡಿಸಿದೊಡೆ ಬಿಡೆನೆನುತ ನಾಂ ಹೇಳಿ ಈ ಕುಱಿಯ ಶಿವನ ಮುಂದುಂಡಿಗೆಯನೊತ್ತಿದೆ ಶಿವನ ಲಾಂಛನವಿದು' ಎಂದೆನ್ನುತ್ತ ಲಿಂಗಮುದ್ರೆಯನ್ನು ತೋರಿಸಿಕೊಟ್ಟ.

ಕಾಲಕ್ರಮೇಣ ಉಂಡಿಗೆ ಪದದ ಅರ್ಥ ಬೇರೆ ರೂಪವನ್ನು ತಾಳಲಾರಂಭಿಸಿತು. 'ಕಲಿದಲಿವಂ ಜವನಲ್ಲಿಯುಂಡಿಗೆದಂದನೋ' ಯಮನಲ್ಲಿಯೇ ಸೆಣಸಿ ತೆರಪು ಪಡೆದನೇ? ನಿಜವಾಗಿಯೂ ಶೂರನೇ ಹೌದು ಎಂದು ಶಬ್ದಮಣಿದರ್ಪಣದಲ್ಲಿ ಉದಾಹರಿಸಿದೆ. ಉಂಡಿಗೆಯನ್ನು ಹಾಕುವುದು ಒಂದು ಕ್ರಿಯೆಯಾದರೆ ಉಂಡಿಗೆಯನ್ನು ಪಡೆಯುವುದು ಇನ್ನೊಂದು ಕ್ರಿಯೆ.

ಇತ್ತೀಚೆಗೆ ಉಂಡಿಗೆ ಪದದ ಅರ್ಥವ್ಯಾಪ್ತಿ ಇನ್ನೂ ಹೆಚ್ಚಿದಂತಿದೆ. ಹಿಂದೆ ಸಣ್ಣಪುಟ್ಟ ರಾಜ್ಯಗಳಿಗೆ ಮಾತ್ರ ಅನ್ವಯವಾಗುತ್ತಿದ್ದ ಈ ಪದ ಈಗ ಇಡೀ ರಾಷ್ಟ್ರಕ್ಕೇ ಅನ್ವಯಿಸುವಂತಾಗಿದೆ. ಪ್ರತಿಯೊಂದು ರಾಷ್ಟ್ರಕ್ಕೂ ತನ್ನತನವನ್ನು ಪ್ರತಿನಿಧಿಸುವ ಅಂಕಿತವೊಂದಿರುತ್ತದೆ. ಪರದೇಶ ಪ್ರವಾಸಹೋಗುವ ವ್ಯಕ್ತಿಗಳಿಗೆ ಒಂದು ಗುರುತು ಚೀಟಿ (ಉಂಡಿಗೆ) ಬೇಕಷ್ಟೆ; ಅದನ್ನೇ ಈಗ ರಹದಾರಿ ಎಂದು ಕರೆಯುತ್ತಿದ್ದೇವೆ. (ಕೆ.ಆರ್.ಎಸ್.ಜಿ.)

**ಉಂಡೆಮೀನು:** ದೊಡ್ಡ ಮೂಳೆಮೀನು; ಬೆಲೂನಿನಂತೆ ದೇಹವನ್ನು ಉಬ್ಬಿಸಿಕೊಳ್ಳಬಲ್ಲುದು; ಉಬ್ಬುಮೀನು ಪರ್ಯಾಯನಾಮ (ಗ್ಲೋಬ್ ಫಿಶ್; ಡಿಯೊಡಾನ್ ಹಿಸ್ಟ್ರಿಕ್ಸ್).



ಟೆಟ್ರೊಡಾನ್ ಪಟೋಕ

ಉಷ್ಣ ವಲಯಗಳ ಕರೆನೀರುವಾಸಿ; ಉರುಳೆ ಆಕಾರದ ದೇಹ 30–45ಸೆಂಮೀ. ಉದ್ದ. ಮೈ ತುಂಬ ಉದ್ದನೆಯ ಮೊನಚು ಮುಳ್ಳುಗಳಿವೆ. ದಪ್ಪತಲೆ ಮತ್ತು ಉಬ್ಬು ಹಲ್ಲುಗಳು ಇದರ ವೈಶಿಷ್ಟ್ಯ. ಸಾಧಾರಣ ಮೀನಿನಂತೆಯೇ ಇದು ಸಹ ಜೀವಿಸುತ್ತದೆ. ಆದರೆ ಸ್ವಲ್ಪ ಕೆಣಕಿದಾಗ ಅಥವಾ ಕೆರಳಿಸಿದಾಗ ಗಾಳಿಯಿಂದ ಅಥವಾ ನೀರಿನಿಂದ ತನ್ನ ಹೊಟ್ಟೆ ಅಥವಾ ದೇಹದಲ್ಲಿ ಚೀಲದಂಥ ಒಂದು ಭಾಗವನ್ನು ಉಬ್ಬಿಸಿಕೊಂಡು ಉಂಡೆಯಾಕಾರದಲ್ಲಿ ಅಧೋಭಾಗ ಕಾಣುವಂತೆ ನೀರಿನ ಮೇಲೆ ತೇಲುತ್ತದೆ. ಆಗ ನೇರವಾಗಿ ಎದ್ದುನಿಲ್ಲುವ ಮುಳ್ಳುಗಳು ಇದಕ್ಕೆ ಶತ್ರುವಿನ ವಿರುದ್ಧ ರಕ್ಷಣೆ ನೀಡುತ್ತವೆ.

ಈ ಗುಂಪಿಗೆ ಸೇರಿದ ನಾಲ್ಕು ಹಲ್ಲುಗಳುಳ್ಳ ಟೆಟ್ರೋಡಾನ್ ಮತ್ತು ಎರಡು ಹಲ್ಲುಗಳುಳ್ಳ ಡಿಯೊಡಾನ್ ಭಾರತದ ಸುತ್ತಲ ಸಮುದ್ರಗಳಲ್ಲಿ ವಾಸಿಸುವುವು. ಇವನ್ನು ವಸ್ತು ಸಂಗ್ರಹಾಲಯಗಳಲ್ಲಿ ಕಾಣಬಹುದು. ಉಂಡೆಮೀನುಗಳು ವಿಷಪೂರಿತವಾದ್ದರಿಂದ ಆಹಾರಯೋಗ್ಯವಲ್ಲ. (ಆರ್.ಎಲ್.)

**ಉಂಚಳ್ಳಿ ಜಲಪಾತ:** ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರದ ವಾಯುವ್ಯಕ್ಕೆ ಸು.19ಕಿಮೀ ದೂರದಲ್ಲಿ ಉಂಚಳ್ಳಿ ಗ್ರಾಮದ ಬಳಿ ಇರುವ ಒಂದು ಸುಂದರ ಜಲಪಾತ. ಅಘನಾಶಿನಿ ನದಿ ಇಲ್ಲಿ ಅಡಿ ಕೆಳಗೆ ದುಮುಕುತ್ತದೆ. ಕರಿಬಂಡೆಗಳ ಮೇಲೆ ಹಾಲುನೊರೆಯಂತೆ ಇಳಿದು ಬರುವ ನೀರಿನ ಧಾರೆಯ ಸೊಬಗು ಚೇತೋಹಾರಿಯಾದುದು. ಜಲಪಾತದ ಸುತ್ತಲಿನ ಕಂದರ, ಅಡಕೆ ತೋಟಗಳು, ಸಮೃದ್ಧ ಅಡವಿಗಳು, ಇಕ್ಕೆಲಗಳಲ್ಲಿಯೂ ಎದ್ದಿರುವ ಕರಿಕಲ್ಲಿನ ಅಖಂಡ ಗೋಡೆಗಳು, ಈ ಜಲಪಾತಕ್ಕೆ ವಿಶೇಷ ಶೋಭೆಯನ್ನು ಕೊಟ್ಟಿವೆ. ಧೈರ್ಯಶಾಲಿಗಳು ಮಾತ್ರ ಜಲಪಾತದ ಕೆಳಗೆ ಇಳಿಯಬಹುದು. ಜಲಪಾತದ ಶಬ್ದ ಸು.13ಕಿಮೀ ದೂರದಲ್ಲಿರುವ ಬಿಳಗಿಯವರೆಗೂ ಕೇಳುವುದಂತೆ. ಕಿವಿಗಡಚಿಕ್ಕುವ ಅಗಾಧ ಶಬ್ದದಿಂದಾಗಿ ಇದಕ್ಕೆ ಕೆಪ್ಪಜೋಗ ಎಂಬ ಹೆಸರೂ ಸ್ಥಳೀಯರಲ್ಲಿ ಪ್ರಚಲಿತವಾಗಿದೆ. ಈ ಜಿಲ್ಲೆಯ ಕಲೆಕ್ಟರ್ ಆಗಿದ್ದ ಟಿ.ಡಿ. ಲುಸಿಂಗ್‍ಟನ್ ಅವರು 1843ರಲ್ಲಿ ಈ ಜಲಪಾತವನ್ನು ಕಂಡು ಹೊರ ಜಗತ್ತಿಗೆ ಪರಿಚಯ ಮಾಡಿಕೊಟ್ಟದ್ದರಿಂದ ಇದಕ್ಕೆ ಲುಸಿಂಗ್‍ಟನ್ ಫಾಲ್ಸ್ ಎಂದೂ ಹೆಸರು ಬಂದಿದೆ. ಈ ಜಲಪಾತದಿಂದ ಸುಮಾರು ಒಂದು ಕಿಮೀ ಮುಂದೆ ಬುರುಡೆಜೋಗ ಇದೆ. ಅಲ್ಲಿ ಇದೇ ನದಿ ಸು.300' ಕೆಳಗುರುಳಿ ಅನಂತರ ಎರಡು ಟಿಸಿಲುಗಳಾಗಿ 150' ಹಾರಿ ಸ್ವಲ್ಪ ದೂರ ಹರಿದು ಇನ್ನೊಂದು ಜಲಪಾತವನ್ನುಂಟು ಮಾಡಿದೆ. ಉಂಚಳ್ಳಿ ಜಲಪಾತಕ್ಕೆ ಸಿದ್ದಾಪುರದಿಂದ ರಸ್ತೆ ಇದೆ. ಬಸ್ ಸೌಕರ್ಯವೂ ಉಂಟು. (ಆರ್.ಜಿ.ಆರ್.)



**ಉಂಡಿಗನಾಳು:** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಕಸಬೆಯಿಂದ ಸು.19ಕಿಮೀ ನೈರುತ್ಯಕ್ಕಿರುವ ಗ್ರಾಮ. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಜಟ್ಟಿ ಕುಲದವರು ಗುಜರಾತಿನೆಡೆಯಿಂದ ಬಂದು ಮೊದಲು ಇಲ್ಲಿ ನೆಲೆಸಿದರೆಂದು ಕೆಲವು ಐತಿಹಾಸಿಕ ಆಧಾರಗಳಿಂದ ಊಹಿಸಲಾಗಿದೆ. ಈ ಕುಲದ ಕೆಲವರು ಈ ಗ್ರಾಮ ಮತ್ತು ಸುತ್ತಣ ಪ್ರದೇಶವನ್ನು ಹೊಯ್ಸಳ ಸಾಮಂತರಾಗಿ ಆಳುತ್ತಿದ್ದರೆಂಬುದಕ್ಕೆ ಶಾಸನಾಧಾರಗಳಿವೆ. ಕೆಲವು ಶಾಸನಗಳಲ್ಲಿ ಜಟ್ಟಿಗಳ ಕುಲದೇವರಾದ ನಿಂಬಜಾದೇವಿಯ ಪ್ರಸ್ತಾಪ ಸಹ ಇದೆ.

ಇಲ್ಲಿರುವ ಚಾಮುಂಡೇಶ್ವರಿ ದೇವಾಲಯ ಮೂಲತಃ ಹೊಯ್ಸಳರ ಕಾಲದ್ದು. 1140ರ ರಚನೆ. ಆದರೆ ಈಗ ಅದರಲ್ಲಿ ಅನೇಕ ಅನಂತರಕಾಲದ ಸೇರ್ಪಡೆಗಳಿವೆ. ದೇವಾಲಯ ತ್ರಿಕೂಟಾಚಲ, ಮೂರು ಗರ್ಭಗುಡಿಗಳು, ಒಂದು ಸುಕನಾಸಿ, ಒಂದು ನವರಂಗ ಮತ್ತು ಒಂದು ಮುಖ ಮಂಟಪ ಇವೆ. ಬಾಗಿಲಿನ ನೇರ ಎದುರಿನ ಗರ್ಭಗುಡಿಯಲ್ಲಿ ಲಿಂಗ, ಉತ್ತರದ ಗರ್ಭಗುಡಿಯಲ್ಲಿ ಕೇಶವ ಮತ್ತು ದಕ್ಷಿಣದ ಗರ್ಭಗುಡಿಯಲ್ಲಿ ಮಹಿಷಾಸುರಮರ್ದಿನಿ ವಿಗ್ರಹಗಳಿವೆ. ನವರಂಗದಲ್ಲಿರುವ ಕಂಬಗಳು ಹೊಯ್ಸಳ ರೀತಿಯವು. ಇತರ ಭಾಗಗಳು ಬಹುಮಟ್ಟಿಗೆ ಈಚಿನವು. ಒಂದು ಮದನಿಕೆ ವಿಗ್ರಹ ಮುಂತಾದ ಹೊಯ್ಸಳರ ಕಾಲದ ಬಿಡಿ ಶಿಲ್ಪಗಳು ಇಲ್ಲಿವೆ. ದೇವಾಲಯದ ದಕ್ಷಿಣ ಭಾಗಗಳಲ್ಲಿ ಒಂದು ದೊಡ್ಡ ಉಯ್ಯಾಲೆ ಕಂಬವೂ ಅದರ ಎದುರು ಮೂರು ಅಂಕಣಗಳುಳ್ಳ ಒಂದು ಮಂಟಪವೂ ಇವೆ. ಮಂಟಪದಲ್ಲಿ ಹೊಯ್ಸಳ ಶೈಲಿಯ ಕಂಬಗಳಿವೆ. ಈ ಮಂಟಪದ ಹಿಂಭಾಗದಲ್ಲಿರುವ ಚಿಕ್ಕ ಗರ್ಭಗುಡಿಯಲ್ಲಿ ಅಕ್ಷಮಾಲೆ ತ್ರಿಶೂಲ ಚಕ್ರ ಶಂಖ ಡಮರು ಕುಂಭಗಳನ್ನು ಹಿಡಿದ, ನವಿಲಿನ ಮೇಲೆ ನಿಂತಿರುವ ದೇವಿ ಶಿಲ್ಪವಿದೆ. ಈ ಗುಡಿಯ ಎರಡು ಪಕ್ಕಗಳಲ್ಲಿ ಮತ್ತು ಕಂಬಗಳ ಮೇಲೆ ಜಟ್ಟಿಗಳ ಶಿಲ್ಪಗಳಿವೆ. *

**ಉಂಬಳಿ:** ರಾಜರು ಮತ್ತು ಶ್ರೀಮಂತರು ದೇವಸ್ಥಾನ, ಮಠಗಳಂಥ ಧಾರ್ಮಿಕ ಸಂಸ್ಥೆಗಳಿಗೆ, ವಿದ್ವಾಂಸರಿಗೆ, ಗಮನಾರ್ಹವಾದ ಸೇವೆಯನ್ನು ಸಲ್ಲಿಸಿದವರಿಗೆ, ಯುದ್ಧದಲ್ಲಿ ನೆರವಾದವರಿಗೆ, ಅಧಿಕಾರಿಗಳಿಗೆ ಜಮೀನುಗಳನ್ನು ದತ್ತಿಗಳಾಗಿ ಬಿಟ್ಟುಕೊಟ್ಟು ಅವುಗಳ ಕಂದಾಯವನ್ನು ಮಾಫಿ ಮಾಡುತ್ತಿದ್ದರು. ಇಂಥ ಹೊಲಗಳೇ ಉಂಬಳಿ ಜಮೀನುಗಳು. ಉಂಬಳಿ ಎನ್ನುವುದು ತೆರಿಗೆಯನ್ನು ತೆಗೆದುಹಾಕಿದ್ದನ್ನು ಸೂಚಿಸುತ್ತದೆ.

ಉಂಬಳಿ ಎನ್ನುವ ಪದ ವಾಸ್ತವವಾಗಿ ಪ್ರಾಕೃತದ ಮೂಲಕ ಕನ್ನಡಕ್ಕೆ ಬಂದಿದೆ. ಅಶೋಕನ ರುಮ್ಮಿಂದೈ ಸ್ತಂಭಶಾಸನದಲ್ಲಿ ಬರುವ ಉಬಲಿಕೆ ಎಂಬ ಮಾತಿಗೆ ತೆರಿಗೆಯಿಂದ ಮುಕ್ತವಾದದ್ದು ಎಂದರ್ಥ. ಇದರ ಸಂಸ್ಕೃತ ರೂಪ ಉದ್ಬಲಿಕ. ಇದಕ್ಕೂ ಇದೇ ರೀತಿಯ ಇನ್ನೊಂದು ಪದವಾದ ಉಚ್ಛುಲ್ಕಕ್ಕೂ (ಉತ್+ಶುಲ್ಕ) ಒಂದೇ ಅರ್ಥ. ಬುದ್ಧನ ಜನ್ಮಸ್ಥಳವಾದ ರುಮಿಂದೈ (ಲುಮ್ಮಿನಿ, ಲುಂಬಿಣಿ) ಗ್ರಾಮದ ತೆರಿಗೆಗಳನ್ನು ಅಶೋಕ ತೆಗೆದುಹಾಕಿದನೆಂದು ಆ ಶಾಸನದಲ್ಲಿದೆ. ಸಂಸ್ಕೃತ ಉದ್ಬಲಿ ಪ್ರಾಕೃತ ಉಬ್ಬಲಿ > (ಕ)>ಕನ್ನಡ ಉಂಬಳಿ. ಈ ಪದ ತಮಿಳಿನಲ್ಲೂ (ಉಂಬಳಂ ಉಂಬಳಿಕ್ಕೈ), ತೆಲುಗಿನಲ್ಲೂ (ಉಂಬಳಮು) ಇದೇ ಅರ್ಥದಲ್ಲಿ ಬಳಕೆಯಲ್ಲಿದೆ. ಕನ್ನಡದಲ್ಲಿ ಉಂಬಳಿ ಜಮೀನು ಎಂಬುದು ಈಗಲೂ ಜೀವಂತವಾಗಿರುವ ಉಕ್ತಿಯಾಗಿದೆ.

ಉಂಬಳಿ ಎನ್ನುವ ಮಾತು ಹಿಂದಿನ ಅನೇಕ ಕನ್ನಡ ಶಾಸನಗಳಲ್ಲಿ ಕಂಡುಬರುತ್ತದೆ. ಇದೇ ಅರ್ಥದಲ್ಲಿ ಬಳಕೆಯಾಗಿರುವ ಬೇರೆ ಬೇರೆ ಪದಗಳು ಹೀಗಿವೆ; ಮಾನ್ಯ, ಸರ್ವ–ಮಾನ್ಯ, ಸರ್ವ–ನಮಸ್ಯ, ನಮಸ್ಯ–ವೃತ್ತಿ. ಹಲ್ಮಿಡಿ ಶಾಸನದಲ್ಲಿ ಬರುವ ಅ–ಕರ ಎಂಬುದು ತೆರಿಗೆಗಳನ್ನು ತೆಗೆದುಹಾಕಿದ್ದನ್ನು ಸೂಚಿಸುತ್ತದೆ. ತಮಿಳಿನ ಸಂಗಂ ಸಾಹಿತ್ಯದಲ್ಲಿ ತೆರಿಗೆಗಳನ್ನು ತೆಗೆದುಹಾಕಿದ ಭೂಮಿಗಳನ್ನು ಪುರವು, ಇಱೈಯಿಲಿ ನಿಲಂ ಎಂದು ಕರೆದಿದೆ. (ಇಱೈ–ನೆಲಗಂದಾಯ).

ಉಂಬಳಿಗಳನ್ನು ಸಾಮಾನ್ಯವಾಗಿ ದೇವಸ್ಥಾನಗಳಿಗೆ, ಮಠಗಳಿಗೆ, ಸತ್ರಗಳಿಗೆ, ಸನ್ಯಾಸಿಗಳಿಗೆ, ವಿದ್ವಾಂಸರಾದ ಬ್ರಾಹ್ಮಣರಿಗೆ ಬಿಟ್ಟುಕೊಡುತ್ತಿದ್ದರು. ರಾಜನ ಪರವಾಗಿ, ಊರಿನ ಪರವಾಗಿ ಹೋರಾಡಿ ಮಡಿದ ಅಥವಾ ಗೆದ್ದು ಬಂದ ಶೂರರಿಗೂ ಉಂಬಳಿಗಳನ್ನು ಬಿಟ್ಟುಕೊಡುತ್ತಿದ್ದುದುಂಟು; ಅಥವಾ ಗಣನೀಯವಾದ ಸೇವೆಯನ್ನು ಸಲ್ಲಿಸಿದ ರಾಜ್ಯಾಧಿಕಾರಿಗಳಿಗೂ ಉಂಬಳಿಗಳನ್ನು ಬಿಟ್ಟುಕೊಡುತ್ತಿದ್ದರು. ಆಗಲೇ ಸೂಚಿಸಿದಂತೆ ಉಂಬಳಿ ಜಮೀನುಗಳಿಗೆ ಕಂದಾಯವಿರುತ್ತಿರಲಿಲ್ಲ; ಮತ್ತು ಅವುಗಳನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರಲಿ ಎಂದು ಶಾಸನಗಳನ್ನು ಹಾಕಿಸಿಕೊಡುತ್ತಿದ್ದರು. (ಕೆಲವು ಸಾರಿ ಅರುವಣವೆಂಬ ಸಾಂಕೇತಿಕ ಅಲ್ಪ ತೆರಿಗೆಯನ್ನು ಹಾಕಿದ ದತ್ತಿಗಳನ್ನು ಕೊಡುತ್ತಿದ್ದರು). ಈ ಕೆಳಗಿನ ಎರಡು ಶಾಸನಗಳು ಉಂಬಳಿ ಜಮೀನುಗಳ ವಿಷಯವನ್ನು ಹೇಳುತ್ತವೆ :

"ಶುಭಮಸ್ತು ॥ ನಂದನ ಸಂವತ್ಸರದ ಕಾರ್ತೀಕ ಶು. 5 ರಲ್ಲೂ ಶ್ರೀಮತು ಅಚುತುರಾಯ ಮಹಾರಾಯರ ಕಾರ್ಯಕೆ ಕರ್ತರಾದ ಬಾಚರಸಯನವರ ಕುಮಾರ ರಾಮಪಯನವರೂ ಸಿಂಗಟಿಗೆಱೆಯ ಲಿಂಗಣ ಗಡಗೆ ದಂಡಿಗೆಯ ಉಂಬಳಿಗೆ ಹೆರಡಿಗಟದ ಗ್ರಾಮವನ್ನೂ ಚತುಸೀಮೆವೊಳಗಾದ ಗದ್ದೆ ಹೊಲ ಸುವರ್ನಾದಾಯ ಸಹವಾಗಿ ಪಾಲಿಸದೆಲು ನಂಮ ಬೂದಿಹಾಳ ಸೀಮೆಯ ಪಾರುಪತ್ಯಗಾಱ ಲಖರಾಜನ ತಿಂಮಪಯನ ಕಳುಹಿ...ದ ಶಾಸನದ ಕೊಡಗಿಯ ಕಲನೂ...ನೆಟಿಸಿ ಕೋಟಿ ಉ ಯೀ ಗ್ರಾಮವನೂ ಆಗುಮಾಡಿಕೊಂಡು ಸುಖದಲುಯಿಹುದು ಶ್ರೀ ಶ್ರೀ ಶ್ರೀ " (ಕಡೂರು ತಾಲೂಕಿನ ಹೇರಳಗಟ್ಟದ ಶಾಸನ).

ತುಮಕೂರು ತಾಲೂಕಿನ ಕರಿಕೆರೆ ಗ್ರಾಮದ ಶಾಸನದ ಕೆಲವು ಭಾಗಗಳು ಹೀಗಿವೆ: "ಶ್ರೀಮನುಮಹಾನಾಡಪ್ರಭು ಬಿಡ್ಡವರದ ಮುಂಮಡಿ ಚಿಕ್ಕಪ್ಪಗೌಡ ರೈಯನವರು ನಂಮ ಅಳಿಯ .......ಕೆರೆಯಪಗೌಡ ನಂಮ ಹೆಣುಮಗಳ ಕ...ಯಮಗೆ ಕೊಟ ಗ್ರಾಮ ಉಂಬಳಿಯ ಕ್ರಮವೆಂತೆಂದರೆ ಕೋರಯ ಮಾಗಣಿಗೆ ಸಲುವ ಬ್ರಂಹ್ಮ ಸಮುದ್ರದ ಕಾಲುವಳಿ ಕರಿಕೆರೆ ಗ್ರಾಮವನು ಉಂಬಳಿಯಾಗಿ ಕೊಟ್ಟೆವಾ....ಆಚಂದ್ರಾರ್ಕಸ್ಥಾಯಿಯಾಗಿ....ತ್ರ ಪೌತ್ರ ಪಾರಂಪರ್ಯವಾಗಿ ಅನುಭವಿಸಿ..."

ಹೀಗೆ ರಾಜನೂ ಇತರರೂ ತಾವು ಕೊಟ್ಟ ಉಂಬಳಿ ಜಮೀನುಗಳಿಗೆ ಶಾಸನವನ್ನು ಬರೆಯಿಸಿಕೊಟ್ಟು, ಆ ಜಮೀನುಗಳು ತೆರಿಗೆಗಳಿಂದ ವಿಮುಕ್ತವಾಗಿವೆಯೆಂಬ ಸಂಗತಿಯನ್ನು ಇತರ ಅಧಿಕಾರಿಗಳಿಗೆ ತಿಳಿಸುತ್ತಿದ್ದರು. ಉದಾಹರಣೆಗೆ, ಹಿರೇಹಡಗಲಿ ತಾಮ್ರಪಟಗಳಲ್ಲಿ ಪಲ್ಲವದೊರೆ ಶಿವಸ್ಕಂದವರ್ಮ ತಾನು ಬ್ರಾಹ್ಮಣರಿಗೆ ಕೊಟ್ಟಿರುವ ದತ್ತಿಯ ವಿಷಯವನ್ನು ರಾಜಕುಮಾರ, ಸೇನಾಪತಿ, ರಾಷ್ಟ್ರಿಕ, ದೇಶಾಧಿಕೃತ, ಅಮಾತ್ಯ ಮುಂತಾದ ಅಧಿಕಾರಿಗಳಿಗೆ ತಿಳಿಸಿದ್ದಾನೆ. ತಮ್ಮ ದತ್ತಿಗಳನ್ನು ಮುಂದಿನ ದೊರೆಗಳು ಪಾಲಿಸಿಕೊಂಡು ಬರಬೇಕೆಂದು ದಾನಿಗಳು ನಿರೀಕ್ಷಿಸುತ್ತಿದ್ದರು. ಒಮ್ಮೊಮ್ಮೆ ಅಪಹೃತವಾದ ದತ್ತಿಗಳನ್ನು ಮುಂದಿನ ದೊರೆಗಳು ಮತ್ತೆ ಹಿಂದಕ್ಕೆ ಕೊಡಿಸಿರುವ ಉದಾಹರಣೆಗಳೂ ಶಾಸನಗಳಲ್ಲಿ ದೊರಕುತ್ತವೆ. ಉದಾಹರಣೆಗೆ, ಶಿವಮೊಗ್ಗ ಜಿಲ್ಲೆಯ ಮಳವಳ್ಳಿಯ ಪ್ರಾಕೃತ ಶಾಸನದಲ್ಲಿ ಕದಂಬರ ದೊರೆಯೊಬ್ಬ ಹಿಂದಿನ ದತ್ತಿಯನ್ನು ಪುನರ್ಭರಣ ಮಾಡಿಕೊಟ್ಟಿರುವ ಸಂಗತಿ ಉಕ್ತವಾಗಿದೆ.

ಬ್ರಿಟಿಷರು ಭಾರತದ ಆಡಳಿತವನ್ನು ವಹಿಸಿಕೊಂಡಾಗ ಎದುರಿಸಬೇಕಾದ ಸಮಸ್ಯೆಗಳಲ್ಲಿ ಉಂಬಳಿ ಅಥವಾ ಇನಾಂ ಜಮೀನುಗಳಿಗೆ ಸಂಬಂಧಿಸಿದ ಸಮಸ್ಯೆಯೂ ಒಂದಾಗಿತ್ತು. ಅನೇಕರು ಸಣ್ಣ, ದೊಡ್ಡ ಜಮೀನುಗಳನ್ನೋ ಅಥವಾ ಇಡೀ ಗ್ರಾಮಗಳನ್ನೋ ಉಂಬಳಿಯನ್ನಾಗಿ ಅನುಭವಿಸುತ್ತಿದ್ದುದ್ದು ಅವರ ಗಮನಕ್ಕೆ ಬಂದಿತು. ಕೆಲವು ಬಾರಿ ದುರ್ಬಲ ಆಡಳಿತ, ರಾಜಕೀಯ ಅಸ್ಥಿರತೆಗಳನ್ನುಪಯೋಗಿಸಿಕೊಂಡು ಇನಾಂ ದಾಖಲೆಗಳನ್ನು ಕೃತಕವಾಗಿ ಸೃಷ್ಟಿಸಿರುವ ನಿದರ್ಶನಗಳೂ ಇದ್ದುವು. ಇಂಥ ಕ್ರಮಬದ್ಧವಲ್ಲದ ಜಮೀನುಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಅವರು ಆತುರ ತೋರಿದರು. ಇದರಿಂದ ಕ್ರಮಬದ್ಧ ಇನಾಂದಾರರು ಕೂಡ ಸರಿಯಾದ ದಾಖಲೆಗಳನ್ನು ತೋರಿಸಲು ಅಸಮರ್ಥರಾದಾಗ ಕಿರುಕುಳವನ್ನು ಅನುಭವಿಸಬೇಕಾಯಿತು. ಬಹುಸಂಖ್ಯೆಯ ಇನಾಮುಗಳನ್ನು ಇದ್ದಕ್ಕಿದಂತೆ ರದ್ದು ಪಡಿಸಿದಾಗ ದೇಶದಲ್ಲಿ ಅಶಾಂತಿ ಮೂಡಿತು. 1822ರಲ್ಲಿ ಭಾರತ ಸರ್ಕಾರ ಹೊರಡಿಸಿದ ಘೋಷಣೆಯಲ್ಲಿ ಇನಾಂ ರದ್ದಿಯಾಯ್ತಿಯ ಬಗ್ಗೆ ನಿಧಾನವಾಗಿ ಮುಂದುವರಿಯಲಾಗುವುದೆಂದು ಭರವಸೆ ನೀಡಲಾಯಿತು. ಸ್ವಾತಂತ್ರ್ಯಾನಂತರ ಮೈಸೂರು ದೇಶದಲ್ಲಿ 1954ರ ಇನಾಂ ರದ್ದು ಕಾಯಿದೆಯ ಪ್ರಕಾರ ಇನಾಂ ಮತ್ತು ಜೋಡಿಗಳನ್ನು (ಜೋಡಿ = ಕಡಿಮೆ ಕಂದಾಯದ ದತ್ತಿಗಳು) ರದ್ದುಪಡಿಸಲಾಯಿತು. (ಎಂ.ಸಿ.)

ಉತ್ತರಾಧಿಕಾರಕ್ಕೆ ಕೆಲವು ನಿರ್ಬಂಧಗಳನ್ನು ಕಲ್ಪಿಸಿ ನೀಡಿದ ಉಂಬಳಿಗಳಿಗೂ ಇಂಗ್ಲಿಷ್ ನ್ಯಾಯದಲ್ಲಿ ಪುರಸ್ಕಾರವುಂಟು. ಆ ಆಸ್ತಿ ಕೆಲವು ನಿರ್ದಿಷ್ಟ ಕರಾರುಗಳಿಗೆ ಒಳಪಟ್ಟು ಉತ್ತರಾಧಿಕಾರಿಗಳಿಗೆ ಸಲ್ಲಬೇಕೆಂದಾಗಲಿ, ಕೆಲವು ನಿರ್ದಿಷ್ಟ ಉತ್ತರಾಧಿಕಾರಿಗಳಿಗೆ ಮಾತ್ರ ಅದು ಸಲ್ಲತಕ್ಕದ್ದೆಂದಾಗಲಿ ಉಂಬಳಿ ನೀಡಿದವ ವಿಧಿಸಬಹುದಾಗಿದೆ. ಊಳಿಗಮಾನ್ಯ ವ್ಯವಸ್ಥೆಯ ಕಾಲದಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ಈ ಪದ್ಧತಿ ಜಾರಿಯಲ್ಲಿತ್ತು **(ನೋಡಿ– ಇನಾಂಗಳು, ಊಳಿಗಮಾನ್ಯ–ವ್ಯವಸ್ಥೆ).** (ಎಸ್.ಎಸ್.ಡಿ.)

**ಉಕ್ಕಿನ ಆಧಾರ:** ಸುರಂಗ, ನೆಲದಡಿ ರಚನೆ, ಕಟ್ಟಡ, ಸೇತುವೆ ಮುಂತಾದ ಸಕಲ ರಚನೆಗಳಲ್ಲೂ ಭದ್ರತೆಕೋಸ್ಕರ ಅಳವಡಿಸಿರುವ ಚೌಕಟ್ಟು (ಸ್ಟೀಲ್ ಸಪೋರ್ಟ್: ಸ್ಟೀಲ್ ಗರ್ಡರ್). ಉಕ್ಕಿನ ದೂಲ ಪ್ರಯೋಗವೂ ರೂಢಿಯಲ್ಲಿದೆ. ಇಂಥ ಆಧಾರಗಳು



ಉಕ್ಕಿನ ಆಧಾರದ ಎರಡು ಮಾದರಿಗಳು

ಕಟ್ಟಡದ ಮೇಲ್ಚಾವಣಿ, ರಸ್ತೆಸೇತುವೆ ಇತ್ಯಾದಿಗಳ ತೂಕಗಳನ್ನು ಹೊರುತ್ತವೆ. ಇವನ್ನು ಅಡ್ಡಲಾಗಿಟ್ಟು ಮೇಲೆ ತೀರುಗಳನ್ನು ನಿಲ್ಲಿಸಿ ಮುಂದಿನ ರಚನೆಗೆ ತೊಡಗುತ್ತಾರೆ. ಉಕ್ಕಿನ ಆಧಾರಗಳ ರಚನೆಗಳು ಅವುಗಳ ಮೇಲೆ ಓಡಾಡುವ ಜನಗಳ ಮತ್ತು ವಾಹನಗಳ ತೂಕ. ಒತ್ತಡಗಳನ್ನು ಸಹ ತಡೆಯುತ್ತವೆ.

ತಾಂತ್ರಿಕ ಸಮಸ್ಯೆಯನ್ನು ಅನುಸರಿಸಿ ಉಕ್ಕಿನ ಆಧಾರದ ಆಲೇಖ್ಯ ಸಿದ್ಧಪಡಿಸಬೇಕು. ಇಂಥ ಆಧಾರಗಳ ಅಡ್ಡಕೊಯ್ತಗಳು (O. I. T. Ā) ಮುಂತಾದ ಆಕಾರಗಳಲ್ಲಿರುತ್ತವೆ. ಕೋಲಾರದ ಚಿನ್ನದ ಗಣಿಗಳಲ್ಲಿ (υ) ಆಕಾರದ ಆಧಾರಗಳನ್ನು ನೋಡಬಹುದು.

ಉಕ್ಕಿನ ಆಧಾರಗಳನ್ನು ಮರದ ಆಧಾರಕ್ಕೆ ಹೋಲಿಸಿದಾಗ ಇರುವ ಅನುಕೂಲತೆಗಳು: 1. ಆಗಾಗ್ಗೆ ಬಣ್ಣವನ್ನು ಬಳಿಯುತ್ತಿದ್ದರೆ ಬಹುಕಾಲದವರೆಗೆ ಬಳಸಬಹುದು; 2. ಬಲು ಹಗುರ 3. ಅಗಾಧ ಗಾತ್ರವಿಲ್ಲ 4. ಆಧಾರಗಳನ್ನು ಕಳಚಿ ಬೇರೆ ಬೇರೆ ಸುರಂಗಮಾರ್ಗಗಳ ರಕ್ಷಣೆಗೆ ಬಳಸಬಹುದು. (ಜಿ.ಟಿ.ಜಿ.)

**ಉಕ್ಕಿನ ತೆರೆ:** ಎರಡನೆಯ ಮಹಾಯುದ್ಧ ಕಾಲದಲ್ಲಿ ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ ಮುಂತಾದವುಗಳ ಮಿತ್ರ ರಾಷ್ಟ್ರವಾಗಿ ಹಿಟ್ಲರ್ ಮುಸ್ಸೋಲಿನಿಯರ ವಿರುದ್ಧ ಹೋರಾಡಿದ ಸೋವಿಯತ್ ಒಕ್ಕೂಟ ಆ ಯುದ್ಧಾನಂತರ ಕಾಲದಲ್ಲಿ ತನಗೂ ತನ್ನ ಅಧೀನದ ಪೂರ್ವ, ಪಶ್ಚಿಮ ಐರೋಪ್ಯ ಮತ್ತು ಇತರ ಕಮ್ಯೂನಿಸ್ಟೇತರ ರಾಷ್ಟ್ರಗಳಿಗೂ ನಡುವಣ ಸಾಮಾನ್ಯ ಸಂಪರ್ಕಗಳನ್ನೆಲ್ಲ ಕಡಿದುಕೊಂಡು, ತನ್ನ ವಲಯದ ಸುತ್ತಲೂ ಭೇದಿಸಲಶಕ್ಯವಾದ ದಿಗ್ಬಂದನ ನಿರ್ಮಿಸಿಕೊಂಡಾಗ ಈ ಪರಿಸ್ಥಿತಿಯನ್ನು ವಿವರಿಸಲು ಪ್ರಚಾರಕ್ಕೆ ಬಂದ ಆಲಂಕಾರಿಕ ಪ್ರಯೋಗವಾದ ಐರನ್ ಕರ್ಟನ್ ಎಂಬುದಕ್ಕೆ ಕನ್ನಡದ ಪರ್ಯಾಯಪದ. ಅಲ್ಲಿ ಕಬ್ಬಿಣ ಪರದೆಯಾದದ್ದು ಕನ್ನಡದಲ್ಲಿ ಉಕ್ಕಿನ ತೆರೆ. 1946 ಮಾರ್ಚ್ 5 ರಂದು ಬ್ರಿಟನ್ನಿನ ಯುದ್ಧಕಾಲದ ಪ್ರಧಾನಿಯಾಗಿದ್ದ ವಿನ್ಸ್‌ಟನ್ ಚರ್ಚಿಲ್ ಭಾಷಣಮಾಡುತ್ತ, ಪೂರ್ವ ಯುರೋಪಿಗೆ ಅಡ್ಡಲಾಗಿ ಸೋವಿಯತ್ ಒಕ್ಕೂಟ ಕಬ್ಬಿಣದ ಪರದೆಯೊಂದನ್ನು ಇಳಿಯಬಿಟ್ಟಿದೆಯೆಂದು ವರ್ಣಿಸಿದರು. ಮುಂದೆ ಪೂರ್ವಪಶ್ಚಿಮ ರಾಷ್ಟ್ರಗಳು ಪರಸ್ಪರವಾಗಿ ಸೆಟೆದು ಪ್ರತ್ಯೇಕವಾದಾಗ ಚರ್ಚಿಲರ ಈ ಪ್ರಯೋಗ ಹೆಚ್ಚು ಬಳಕೆಗೆ ಬಂತು. ಮುಂದೆ 1949ರಲ್ಲಿ ಕಮ್ಯೂನಿಸ್ಟ್ ಚೀನವೂ ಇದೇ ಬಗೆಯ ಪ್ರತ್ಯೇಕತಾ ಧೋರಣೆ ತಳೆದಾಗ ಇದರ ನೀತಿ ವಿವರಿಸಲು ಬಿದಿರು ತೆರೆ (ಬ್ಯಾಂಬೂ ಕರ್ಟನ್) ಎಂಬ ಪದ ಜನಸಾಮಾನ್ಯವಾಯಿತು. ಚೀನ, ಸೋವಿಯತ್ ರಾಷ್ಟ್ರಗಳಲ್ಲಿನ ವ್ಯವಹಾರಗಳು ಸುಲಭವೇದ್ಯವಲ್ಲವೆಂಬುದನ್ನು ಸೂಚಿಸಲು ಈ ಎರಡೂ ಪದಗಳು ಈಗಲೂ ಬಳಕೆಯಲ್ಲಿವೆ. (ಸಿ.ಪಿ.)

**ಉಕ್ಕು:** ಕಬ್ಬಿಣ ಮತ್ತು ಶೇ. 2ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಬನ್ ಇವೆರಡು ಧಾತುಗಳ ಸಂಯೋಜನೆಯಿಂದ ದೊರೆಯುವ ಮಿಶ್ರಲೋಹ (ಸ್ಟೀಲ್). ಮ್ಯಾಂಗನೀಸ್, ಸಿಲಿಕಾನ್, ರಂಜಕ ಮತ್ತ ಗಂಧಕ ಇವು ವಿವಿಧ ಪ್ರಮಾಣಗಳಲ್ಲಿ ಉಕ್ಕಿನಲ್ಲಿ ಇರಬಹುದಾದ ಇತರ ಧಾತುಗಳು. ಈ ತರದ ಉಕ್ಕುಗಳ ಒಟ್ಟು ಹೆಸರು ಸರಳ ಇಂಗಾಲ ಉಕ್ಕುಗಳು ಅಥವಾ ಅಲೋಹಮಿಶ್ರ ಉಕ್ಕುಗಳು (ಅನ್‌ಅಲಾಯ್ಡ್ ಸ್ಟೀಲ್ಸ್), ಲೋಹಮಿಶ್ರ ಉಕ್ಕುಗಳಲ್ಲಿ (ಅಲಾಯ್ಡ್ ಸ್ಟೀಲ್ಸ್) ಇಂಗಾಲ ಪ್ರಮಾಣ ಕಡಿಮೆಯಾಗಿದ್ದು ಮೇಲೆ ಹೇಳಿರುವ ಲೋಹ ಧಾತುಗಳು ಅಲ್ಲದೆ ನಿಕ್ಕಲ್, ಕ್ರೋಮಿಯಂ, ಮಲಿಬ್ಡನಂ, ಟಂಗ್‌ಸ್ಟನ್ ಮತ್ತು ವೆನೇಡಿಯಂ ಲೋಹಧಾತುಗಳು ಸಹ ಇರುತ್ತವೆ.

ಕೈಗಾರಿಕೆಗಳಲ್ಲಿ ಮತ್ತು ದೈನಂದಿನ ಚಟುವಟಿಕೆಗಳಲ್ಲಿ ಬಳಸುವ ಕಬ್ಬಿಣವನ್ನು ಮೂರು ವಿಧವಾಗಿ ವಿಂಗಡಿಸಬಹುದು. ಮೊದಲನೆಯದು ಎರಕದ ಕಬ್ಬಿಣ ಅಥವಾ ತಾಂಡವಾಳ (ಕ್ಯಾಸ್ಟ್ ಐರನ್, ಪಿಗ್ ಐರನ್ ಎಂದೂ ಕರೆಯುವುದಿದೆ). ಇದರಲ್ಲಿ ಇಂಗಾಲಾಂಶ 3%–4% ಇದ್ದು ಗಣನೀಯ ಪ್ರಮಾಣದಲ್ಲಿ ರಂಜಕ, ಸಿಲಿಕಾನ್ ಇತ್ಯಾದಿ ಅಪದ್ರವ್ಯಗಳಿವೆ. ತಾಂಡವಾಳದ ಕರಗುವ ಉಷ್ಣತೆ ಶುದ್ಧ ಕಬ್ಬಿಣದ ಕರಗುವ ಉಷ್ಣತೆಗಿಂತ ಕಡಿಮೆ (ಶುದ್ಧ ಕಬ್ಬಿಣದ ಕ.ಉ. 1.530° ಸೆ; ತಾಂಡವಾಳದ ಕ.ಉ. 1.100° ಸೆ.) ಆದ್ದರಿಂದ ಕರಗಿದ ತಾಂಡವಾಳ ಎರಕ ಹೊಯ್ಯಲು ತಕ್ಕುದಾಗಿದೆ. ಆದರೆ ತಾಂಡವಾಳ ಗಡಸು (ಹಾರ್ಡ್) ಮತ್ತು ಪೆಡಸು (ಬ್ರಿಟಲ್). ಹೀಗಾಗಿ ಇದನ್ನು ಬೆಸೆಯುವುದಾಗಲಿ ತಗಡಾಗಿ ತಟ್ಟುವುದಾಗಲಿ ಸಾಧ್ಯವಿಲ್ಲ. ಇದರಲ್ಲಿನ ಇಂಗಾಲಾಂಶ 0.1 % ಮಾತ್ರ. ಇದರ ಬಿಗಿತ (ಟೆನಾಬಿದುರಸಿಟಿ) ಹೆಚ್ಚು. ಆದರೆ ಇದು ಬಲು ಮೆದುವಾಗಿದ್ದು ಒತ್ತಡಕ್ಕೆ ಈಡಾದಾಗ ಬಗ್ಗಿಹೋಗುತ್ತದೆ; ತುಲನಾತ್ಮಕವಾಗಿ ಬಲುಬೇಗನೆ ಸವೆದುಹೋಗುತ್ತದೆ. ಆದ್ದರಿಂದ ಇದು ಕಟ್ಟಡಗಳ ನಿರ್ಮಾಣ, ಯಂತ್ರರಚನೆ ಮುಂತಾದವಲ್ಲಿ ಉಪಯೋಗಕ್ಕೆ ತಕ್ಕುದಲ್ಲ. ಮೂರನೆಯದು ಉಕ್ಕು (ಸ್ಟೀಲ್). ಇದರಲ್ಲಿ ಇಂಗಾಲಾಂಶ 0.1%–1.5% ರಷ್ಟಿರಬಹುದು. ಬೇರೆ ಧಾತುಗಳೂ ಆವಶ್ಯಕತೆಗೆ ಅನುಗುಣವಾಗಿ ಯುಕ್ತ ಪ್ರಮಾಣಗಳಲ್ಲಿ ಇರುತ್ತವೆ.

ಉಕ್ಕಿನ ಬಿಗಿತ, ಗಡಸುತನ ಮತ್ತು ಸಾಮರ್ಥ್ಯಗಳು (ಸ್ಟ್ರೆಂಗ್ತ್) ಅದರಲ್ಲಿರುವ ಇಂಗಾಲಾಂಶವನ್ನವಲಂಬಿಸಿವೆ. ಆದ್ದರಿಂದ ಯುಕ್ತ ಸಮಪ್ರಮಾಣದಲ್ಲಿ ಇಂಗಾಲವನ್ನು ಮಿಶ್ರಿಸುವುದರ ಮೂಲಕ ನಾವು ಬಯಸುವ ಬಿಗಿತ, ಗಡಸುತನ, ಸಾಮರ್ಥ್ಯಗಳಿರುವ ಉಕ್ಕಿನ ನಿರ್ಮಾಣ ತಾತ್ತ್ವಿಕವಾಗಿ ಸಾಧ್ಯ. ಅಲ್ಪ ಪ್ರಮಾಣದಲ್ಲಿ ಕ್ರೋಮಿಯಂ, ನಿಕ್ಕಲ್, ಟಂಗ್‌ಸ್ಟನ್, ವೆನೇಡಿಯಂ ಇತ್ಯಾದಿ ಲೋಹಗಳನ್ನು ಮಿಶ್ರಿಸುವುದರಿಂದಲೂ ಉಕ್ಕಿನ ವಿವಿಧ ಗುಣಗಳನ್ನು ವರ್ಧಿಸಬಹುದು. ಇಂಥ ಸಂಸ್ಕರಣೆಗಳಿಂದ ಉಕ್ಕಿನ ರಾಸಾಯನಿಕ ನಿರೋಧಕತ್ವ ಮುಂತಾದ ಗುಣಗಳನ್ನು ವೃದ್ಧಿಸುವುದು ಸಾಧ್ಯವಿದೆ. ಇಷ್ಟು ಮಾತ್ರವಲ್ಲ-ಉಕ್ಕನ್ನು ಹದಮಾಡಿ ಅದರ ಗುಣಗಳಲ್ಲಿ ವಿಶೇಷ ರೀತಿಯ ವ್ಯತ್ಯಾಸವನ್ನು ಉಂಟುಮಾಡ ಬಹುದು. ಹೀಗೆ ವಿವಿಧ ರೀತಿಗಳಲ್ಲಿ ಉಕ್ಕಿನ ಗುಣಗಳನ್ನು ನಿಯಂತ್ರಿಸಬಹುದಾದ್ದರಿಂದ ಅದು ನಮ್ಮ ಬಳಕೆಯ ಲೋಹ ಪದಾರ್ಥಗಳ ಪೈಕಿ ಅಗ್ರಸ್ಥಾನ ಪಡೆದಿದೆ. ದಿನಂಪ್ರತಿ ಉಪಯೋಗಿಸುವ ವಿವಿಧ ಹತ್ಯಾರುಗಳು, ಉಪಕರಣಗಳು, ಯಂತ್ರಗಳು, ವಾಹನ ಭಾಗಗಳು, ಕಟ್ಟಡ ಪಂಜರಗಳು ಮೊದಲಾದುವುಗಳೆಲ್ಲ ಉಕ್ಕಿನಿಂದಲೇ ರಚಿತವಾದವು ಎನ್ನುವುದು ಸರ್ವವಿದಿತ.

**ಉಕ್ಕಿನ ತಯಾರಿಕೆ:** ಹಿಂದಿನ ಕಾಲದಲ್ಲಿ ಕಲ್ಲಿನಿಂದ ಕಟ್ಟಿದ ಸಣ್ಣ ಕುಲುಮೆಗಳ ಒಳಗೆ ಕಬ್ಬಿಣದ ಅದಿರು ಮತ್ತು ಇದ್ದಲಿನ ಪುಡಿ ಇವುಗಳ ಮಿಶ್ರಣವನ್ನು ಇಟ್ಟು ಅದಕ್ಕೆ ಬೆಂಕಿಹಚ್ಚಿ ತಿದಿಯಿಂದ ಗಾಳಿ ಒತ್ತುತ್ತಿದ್ದರು. ತಿದಿ ಒತ್ತಲು ಜಾನುವಾರುಗಳನ್ನು ಉಪಯೋಗಿಸುತ್ತಿದ್ದುದೂ ಇತ್ತು. ಇಂಥ ಕುಲುಮೆಗಳಲ್ಲಿ ದ್ರವಕಬ್ಬಿಣ ದೊರೆಯುತ್ತಿರಲಿಲ್ಲ. ಬದಲು 4ಹಿ–8" ದಪ್ಪದ ಸ್ಪಂಜಿನಂತೆ ಇರುವ ಕಬ್ಬಿಣದ ಕಾದ ತುಂಡೊಂದು ಸಿಕ್ಕುತ್ತಿತ್ತು. ಇದರಲ್ಲಿ ಕಿಟ್ಟವೂ ಹಾಸುಹೊಕ್ಕಾಗಿ ಬೆರೆತಿರುತ್ತಿತ್ತು. ಈ ತುಂಡನ್ನು ಸುತ್ತಿಗೆಯಿಂದ ಹೊಡೆದು ಕಿಟ್ಟವನ್ನು ಬೇರ್ಪಡಿಸಿ ತಮಗೆ ಬೇಕಾದ ಆಯುಧಗಳನ್ನು ತಯಾರಿಸುತ್ತಿದ್ದರು. ಆವಶ್ಯಕತೆ ಬೆಳೆದಂತೆ ಸಣ್ಣ ಕುಲುಮೆಗಳನ್ನೇ ದೊಡ್ಡದಾಗಿ ಕಟ್ಟತೊಡಗಿದರು. ಇವುಗಳಿಗೆ ಗಾಳಿ ಒದಗಿಸಲು ನೀರಿನಿಂದ ಓಡುವ ಚಕ್ರಗಳ ಬಳಕೆ ಜರ್ಮನಿಯಲ್ಲಿ ಆರಂಭವಾಯಿತು (15ನೆಯ ಶತಮಾನ). ಇದರಿಂದ ಕುಲುಮೆಯ ಒಳಗೆ ಅಧಿಕ ಉಷ್ಣತೆ ಉಂಟಾಗಿ ದ್ರವ ಕಬ್ಬಿಣವನ್ನು ಪಡೆಯುವುದು ಸಾಧ್ಯವಾಯಿತು. ಕುಲುಮೆಯ ಕೆಳಭಾಗದಲ್ಲಿ ರಂಧ್ರ ಕೊರೆದು ದ್ರವವನ್ನು ಹೊರಗೆ ತೆಗೆಯತೊಡಗಿದರು. ಜೊತೆಯಲ್ಲಿ ಕಿಟ್ಟವೂ ಬರುತ್ತಿತ್ತು. ಆದರೆ ಕಬ್ಬಿಣದ ಸಾಂದ್ರತೆಗಿಂತ ಕಿಟ್ಟದ ಸಾಂದ್ರತೆ ಬಲುಕಡಿಮೆಯಾದ್ದರಿಂದ ಅದು ಕಬ್ಬಿಣದ ಪಾಕದ ಮೇಲೆ ತೇಲುತ್ತಿತ್ತು. ಅದನ್ನು ಬೇರೆ ಕಡೆ ಹರಿಸಿ ಬೇರ್ಪಡಿಸುತ್ತಿದ್ದರು. ಈ ರೀತಿಯಾದ ಕುಲುಮೆಗಳಲ್ಲಿ ದೊರೆಯುತ್ತಿದ್ದ ಕಬ್ಬಿಣ ದಿನಕ್ಕೆ 100–220 ಪೌಂಡ್, ಇದರಲ್ಲಿ ಕಿಟ್ಟವಿಲ್ಲದಿದ್ದರೂ ಇಂಗಾಲದ ಪ್ರಮಾಣ ಬಹಳ ಜಾಸ್ತಿಯಾಗಿತ್ತು. ಆದ್ದರಿಂದ ಅದು ಸುತ್ತಿಗೆಯಿಂದ ಹೊಡೆದು ಮಾಡುವಷ್ಟು ಮೆದುವಾಗಿರಲಿಲ್ಲ. ಅದನ್ನು ಮೆದು ಮಾಡಲು ಸಣ್ಣ ಇದ್ದಲಿನ ಕುಲುಮೆಗಳಲ್ಲಿ ಹಾಕಿ ಹೆಚ್ಚಿನ ಗಾಳಿಯನ್ನು ಅದರ ಮೂಲಕ ಹಾಯಿಸುತ್ತಿದ್ದರು. ಗಾಳಿಯಲ್ಲಿರುವ ಆಕ್ಸಿಜನ್ನಿನಿಂದ ಆ ಕಬ್ಬಿಣದಲ್ಲಿರುವ ಹೆಚ್ಚಿನ ಇಂಗಾಲ ಮತ್ತು ಇತರ ವಸ್ತುಗಳು ಉತ್ಕರ್ಷಣ ಹೊಂದಿ ಕಬ್ಬಿಣ ಉಕ್ಕಾಗಿ ಪರಿಣಮಿಸುತ್ತಿತ್ತು. ಈ ವಿಧಾನ ಅನುಸರಿಸುತ್ತಿದ್ದ ಅಂದಿನ ಜನರಿಗೆ ಇದರ ಕಾರಣ ಮಾತ್ರ ತಿಳಿದಿರಲಿಲ್ಲ. ಹೀಗೆ ಮಾಡಿದರೆ ಮೆದುವಾಗುತ್ತದೆಂದು ಮಾತ್ರ ಅವರಿಗೆ ಗೊತ್ತಿತ್ತು.

ಇದೇ ರೀತಿ ಕಬ್ಬಿಣದ ಕುಲುಮೆಗಳು ದೊಡ್ಡವಾದಂತೆ ಮತ್ತು ಅದರೊಳಗಿನ ಉಷ್ಣತೆ ಹೆಚ್ಚಿದಂತೆ ಅವನ್ನು ತಡೆಯುವ ಕುಲುಮೆಯ ಕಟ್ಟಡಗಳನ್ನು ಕಟ್ಟಬೇಕಾಯಿತು. ಇದೇ ತಾಪನಿರೋಧಕ ಇಟ್ಟಿಗೆಗಳ (ರಿಫ್ರಾಕ್ಟರಿ ಬ್ರಿಕ್ಸ್) ತಯಾರಿಕೆಯ ಮೂಲ. ಕುಲುಮೆಗಳು ದೊಡ್ಡವಾದಂತೆ ಅವುಗಳಿಗೆ ಗಾಳಿಯನ್ನು ಒದಗಿಸಲು ದೊಡ್ಡ ದೊಡ್ಡ ಯಂತ್ರಗಳು ತಯಾರಾಗಬೇಕಾಯಿತು. ಊದುಕುಲುಮೆಯ (ಬ್ಲಾಸ್ಟ್ ಫರ್ನೇಸ್) ಇತಿಹಾಸ ಇಲ್ಲಿ ಆರಂಭವಾಯಿತು. ಇಂಥ ಕುಲುಮೆಗಳಿಗೆ ಹೆಚ್ಚು ಆವಶ್ಯಕತೆ ಏರತೊಡಗಿತು. ಕಾಡುಗಳು ಕಡಿಮೆಯಾಗಿದ್ದ ಪಾಶ್ಚಾತ್ಯ ದೇಶಗಳಲ್ಲಿ ಉದ್ಯಮಕ್ಕೆ ಬೇಕಾಗುವಷ್ಟು ಇದ್ದಲು ದೊರೆಯುತ್ತಿರಲಿಲ್ಲ. ಇದ್ದಲಿಗೆ ಬದಲು ಕಲ್ಲಿದ್ದಲನ್ನೇ ಉಪಯೋಗಿಸುವ ಪ್ರಯತ್ನಗಳು (18ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ) ನಡೆದು ವಿಫಲವಾಗಿ ಅಮೇಲೆ ಕಲ್ಲಿದ್ದಲಿನಿಂದ ಮಾಡಿದ ಕೋಕನ್ನು ಯಶಸ್ವಿಯಾಗಿ ಉಪಯೋಗಿಸಲು ಆರಂಭವಾಗಿ ಇವತ್ತಿಗೂ ಅದೇ ಮುಖ್ಯ ಸಾಧನವಾಗಿ ಉಳಿದುಕೊಂಡಿದೆ. ಗಾಳಿಯನ್ನು ಒದಗಿಸಲು ಉಗಿಯಂತ್ರಗಳು ತಯಾರಾದುವು. ಹೀಗೆ ಸುಧಾರಣೆಗೊಂಡ ಕುಲುಮೆಗಳಿಂದ ದಿನವೊಂದಕ್ಕೆ 3 ಟನ್ನಿನಷ್ಟು ಕಬ್ಬಿಣ ಉತ್ಪಾದನೆಯಾಗುತ್ತಿತ್ತು. 1829ರಲ್ಲಿ ನೀಲ್ಸನ್ ಎಂಬಾತ ತಣ್ಣಗಿನ ಗಾಳಿಯನ್ನು ಕುಲುಮೆಗೆ ಊದುವುದರ ಬದಲಾಗಿ ಕಾಯಿಸಿದ ಗಾಳಿ ಹಾಯಿಸುವುದನ್ನು ಕಂಡುಹಿಡಿದ. ಇದರಿಂದ ಕುಲುಮೆಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚು ಮಾಡಲು ಅನುಕೂಲವಾಯಿತು. ಇದೇ ಆಧಾರದ ಮೇಲೆ ರಚಿಸಿದ ದೊಡ್ಡ ದೊಡ್ಡ ಕುಲುಮೆಗಳು ಒಂದೊಂದು ಈಗ ದಿನವೊಂದಕ್ಕೆ 1,000–2,000 ಟನ್ನುಗಳಷ್ಟು ಉತ್ಪಾದಿಸುವ ಸಾಮರ್ಥ್ಯ ಪಡೆದಿವೆ. ಕುಲುಮೆಯಿಂದ ದೊರೆತ ಕಬ್ಬಿಣವನ್ನೇ ಮೊದಮೊದಲು ಇದ್ದಲಿನ ಜೊತೆಯಲ್ಲಿ ಪುನಃ




**ಚಿತ್ರ 1. ಊದುಕುಲುಮೆ: 1. ತಂಪು ಮಾಡುವ ಒಲೆ, 2. ತಣ್ಣನೆಯ ಊದುಗಾಳಿ 3. ಬಿಸಿಯಾದ ಊದುಗಾಳಿ, 4. ಕುಲುಮೆಯ ಮಧ್ಯಭಾಗ, 5. ಶಂಕ್ವಾಕೃತಿಯ ಬಟ್ಟಲು 6. ವಾಷರ್, 7. ಧೂಳು ತಡೆ, 8. ದುಂಡನೆಯ ಗಾಳಿ ಕೊಳವೆ, 9. ಟ್ಯುಯರ್ 10. ಒಲೆ (ಬೆಂಕಿಗೂಡು), 11. ಬಿಸಿ ಮಾಡುವ ಒಲೆ, 12. ಚಿಮ್ನಿಗೆ**

ಕಾಯಿಸಿ ಶುದ್ಧಿಗೊಳಿಸಿ ಉಕ್ಕನ್ನು ತಯಾರಿಸುತ್ತಿದ್ದರು. ಕ್ರಮೇಣ ಇಲ್ಲಿಯೂ ಇದ್ದಲಿಗೆ ಬದಲಾಗಿ ಕಲ್ಲಿದ್ದಲಿನ ಉಪಯೋಗ ಆರಂಭವಾಯಿತು. ಆದರೆ ಅದರಲ್ಲಿದ್ದ ಗಂಧಕದ ಸಂಪರ್ಕದಿಂದ ತಯಾರಾದ ಉಕ್ಕಿನ ದರ್ಜೆ ಪೂರಾ ಕೆಳಗಿನಮಟ್ಟದ್ದಾಗಿತ್ತು. ಇದನ್ನು ತಪ್ಪಿಸಲು ಪ್ರಯತ್ನಗಳು ನಡೆದು 1784ರಲ್ಲಿ ಹೆನ್ರಿ ಕೋರ್ಟ್ ಎಂಬಾತ ಒಂದು ಶುದ್ಧೀಕರಣ ಕುಲುಮೆಯನ್ನು ಕಂಡುಹಿಡಿದ. ಇದರಲ್ಲಿ ಕಬ್ಬಿಣವನ್ನು ನೇರವಾಗಿ ಕಲ್ಲಿದ್ದಲಿನೊಡನೆ ಕಾಯಿಸುವುದರ ಬದಲು ಕಲ್ಲಿದ್ದಲಿನ ಉರಿ ಮಾತ್ರ ಕಬ್ಬಿಣಕ್ಕೆ ತಾಗುವಂತೆ ಮಾಡಲಾಗಿತ್ತು. ಉರಿಯ ಉತ್ಕರ್ಷಣ ಗುಣದಿಂದ ಕಬ್ಬಿಣದಲ್ಲಿರುವ ಇಂಗಾಲ ಉಚ್ಚಾಟನೆಯಾಗುತ್ತಿತ್ತು. ಈ ರಾಸಾಯನಿಕ ಕ್ರಿಯೆಯನ್ನು ಉದ್ದೀಪನಗೊಳಿಸಲು ಕಬ್ಬಿಣವನ್ನು ದೊಡ್ಡ ದೊಡ್ಡ ಕಬ್ಬಿಣದ ಕೋಲುಗಳ ಸಹಾಯದಿಂದ ಬುಡಮೇಲು ಮಾಡಿ ಕುಲುಕುತ್ತಿದ್ದರು. ಕೊನೆಯಲ್ಲಿ ಒಂದು ದೊಡ್ಡ ಉಕ್ಕಿನ ಉಂಡೆ (ಪಡಲ್ಡ್ ಐರನ್) ತಯಾರಾಗುತ್ತಿತ್ತು. ಇದನ್ನು ಸುತ್ತಿಗೆಯಿಂದ ಬಡಿದು ಕಿಟ್ಟವನ್ನು ಬೇರ್ಪಡಿಸಿಬೇಕಾದ ಪದಾರ್ಥಗಳನ್ನು ಮಾಡಿಕೊಳ್ಳುತ್ತಿದ್ದರು. ಹೀಗೆ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೋದ್ಯಮಕ್ಕೆ ಮೂಲಭೂತವಾದದ್ದು ಊದುಕುಲುಮೆ. ಇದನ್ನು ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ತಾಯಿ ಅಥವಾ ರಾಣಿ ಎಂಬುದಾಗಿ

ಹೇಳುವ ಪದ್ಧತಿಯುಂಟು. ಅದಕ್ಕೆ ಸ್ತ್ರೀಲಿಂಗವನ್ನು ಬಳಸುವುದು ಅನ್ವರ್ಥಕವೆಂದು ಹೇಳಬಹುದು. ಸ್ತ್ರೀಯ ಮನಸ್ಸನ್ನು ತಿಳಿದುಕೊಳ್ಳುವುದು ಎಷ್ಟು ಕಠಿಣವೋ ಊದುಕುಲುಮೆಯ ಒಳಗಿನ ವಿದ್ಯಮಾನ ಮತ್ತು ರಾಸಾಯನಿಕ ಕ್ರಿಯೆಗಳನ್ನು ತಿಳಿದುಕೊಳ್ಳುವುದೂ ಅಷ್ಟೇ ಕಠಿಣ. ಇದು ನವೀನಯುಗದ ಅತ್ಯಾಧುನಿಕ ಯಂತ್ರೋಪಕರಣಗಳಿಂದಲೂ ಭೇದಿಸಲಾಗದ ಒಂದು ಒಗಟು.

ಆಧುನಿಕ ಊದುಕುಲುಮೆಯ ಎತ್ತರ ಸರಿಸುಮಾರು 70'-90'. ಇದರ ರಚನೆ ಉಕ್ಕಿನ ದಪ್ಪ ದಪ್ಪವಾದ ಹಲಗೆಗಳಿಂದ ಮತ್ತು ಕುಲುಮೆಯ ಉತ್ಪಾದನ ಪ್ರಮಾಣಕ್ಕೆ ಸರಿಯಾಗಿ ಉಚ್ಚತಾಪ ಇಟ್ಟಿಗೆಗಳ ಬಿಗಿಯಾದ ಅಳವಡಿಕೆಯಿಂದ, ಕಬ್ಬಿಣದ ಅದಿರು, ಕೋಕ್ ಮತ್ತು ಸುಣ್ಣಕಲ್ಲು ಇವನ್ನು ಆಧುನಿಕ ಯಂತ್ರೋಪಕರಣಗಳ ಸಹಾಯದಿಂದ ತೂಗಿ ಕುಲುಮೆಯೊಳಗೆ ಸುರಿಯಲಾಗುವುದು.

ಇದರಿಂದ ಕೆಳಗಿರುವ ಉಷ್ಣತಾಮಾನ ಹೆಚ್ಚುತ್ತ ಹೋಗುತ್ತದೆ. ಕೆಳಭಾಗದಲ್ಲಿ ಯಾವಾಗಲೂ ಹರಿಯುತ್ತಿರುವ ನೀರಿನಿಂದ ತಣ್ಣಗೆ ಮಾಡಲ್ಪಟ್ಟಿರುವ ತಾಮ್ರಮಯವಾದ ಟ್ಯುಯರ್ಸ್ ಎಂಬ ನಳಿಕೆಗಳ ಮೂಲಕ ಗಾಳಿಯನ್ನು ನಿಯಮಿತ ಒತ್ತಡದಲ್ಲಿ ಊದುತ್ತಾರೆ. ಗಾಳಿಯಲ್ಲಿರುವ ಆಮ್ಲಜನಕದಿಂದ ಕೋಕ್ ಉರಿದು ಅದರಲ್ಲಿರುವ ಇಂಗಾಲ ಕಬ್ಬಿಣದ ಅದಿರನ್ನು ಕಬ್ಬಿಣವನ್ನಾಗಿ ಅಪಕರ್ಷಿಸುತ್ತದೆ. ಅದಿರಿನಲ್ಲಿರುವ ಬೇರೆ ಕಿಟ್ಟ ಪದಾರ್ಥಗಳು ಸುಣ್ಣಕಲ್ಲು ಮತ್ತು ಕೋಕಿನಲ್ಲಿರುವ ಬೂದಿಯೊಡನೆ ಸೇರಿ ಕಿಟ್ಟವಾಗುತ್ತದೆ. ಗಾಳಿಯನ್ನು ಊದುವ ಭಾಗದಲ್ಲಿ ಉತ್ಪತ್ತಿಯಾಗುವ ಉಷ್ಣತಾಮಾನ ಬಹಳ ಹೆಚ್ಚು. ಕಬ್ಬಿಣ ಮತ್ತು ಕಿಟ್ಟ ಎರಡೂ ಕರಗಿ ಉಂಟಾದ ದ್ರವ ಇನ್ನೂ ಕೆಳಗಿನ ಭಾಗದಲ್ಲಿ ಶೇಖರವಾಗುತ್ತದೆ. ಇದನ್ನು ಉಚ್ಚತಾಪ ಇಟ್ಟಿಗೆಗಳಿಂದ ಕಟ್ಟಿದ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಒಯ್ದು ನೇರವಾಗಿ ಉಕ್ಕನ್ನು ತಯಾರಿಸುವಲ್ಲಿಗೆ ರವಾನಿಸುತ್ತಾರೆ; ಅಥವಾ ಅಚ್ಚು ಎರಕದ ಯಂತ್ರಕ್ಕೆ ತೆಗೆದುಕೊಂಡು ಹೋಗಿ ಅಚ್ಚುಗಳನ್ನಾಗಿ ಒತ್ತುತ್ತಾರೆ. ಗಾಳಿಯನ್ನು ಊದುವ ತಾಮ್ರದ ನಳಿಗೆಗಳು ಕುಲುಮೆಯ ಪರಿಮಾಣವನ್ನು ಅವಲಂಬಿಸಿ 6–18ರವರೆಗೂ ಇರುತ್ತದೆ. ಗಾಳಿಯ ಉಷ್ಣತಾಮಾನ ಈಗಿನ ದೊಡ್ಡ ಕುಲುಮೆಗಳಲ್ಲಿ 700–800° ಸೆ.ವರೆಗೂ ಇದೆ. ಊದುಕುಲುಮೆಯಿಂದ ಬಂದ ಕಬ್ಬಿಣವನ್ನು ಅಚ್ಚುಗಳನ್ನಾಗಿ ಹೊಯ್ದು ಆಮೇಲೆ ಪುನಃ ಸಣ್ಣ ಸಣ್ಣ ಕ್ಯುಪೋಲ ಎಂಬ ಕುಲುಮೆಗಳಲ್ಲಿ ಕರಗಿಸಿ ತಾಂಡವಾಳವಾಗಿ ಮಾಡಿ ಹಲವು ವಿವಿಧ ಅಚ್ಚುಗಳಲ್ಲಿ ಸುರಿಯುತ್ತಾರೆ. ನಮ್ಮ ನಿತ್ಯೋಪಯೋಗದ ದೋಸೆಯ ಕಾವಲಿ, ಶಾಲೆಗಳಲ್ಲಿರುವ ಇಳಿಜಾರು ಮೇಜಿನ ಸ್ಟ್ಯಾಂಡುಗಳು, ಬೀದಿಯಲ್ಲಿ ಉರಿಯುವ ಆಲಂಕಾರಿಕ ದೀಪದ ಕಂಬಗಳು, ರೈಲುಕಂಬಿಗಳು ಕೆಳಗೆ ಹಾಕಿರುವ ಕಬ್ಬಿಣದ ಸ್ಲೀಪರುಗಳು, ಪಟ್ಟಣದಲ್ಲಿ ಕುಡಿಯುವ ನೀರನ್ನು ಸಾಗಿಸಲು ಉಪಯೋಗಿಸುವ ದೊಡ್ಡ ದೊಡ್ಡ ನಳಿಗೆಗಳು, ಅನೇಕ ಯಂತ್ರಗಳಿಗೆ ಬೇಕಾದ ಕರಡು ಸಾಮಾನುಗಳು (ರಫ್ ಕ್ಯಾಸ್ಟಿಂಗ್ಸ್) ಇವೆಲ್ಲವೂ ತಾಡವಾಳ ದಿಂದಲೇ ತಯಾರಾಗುತ್ತವೆ. ಇದನ್ನು ತಯಾರುಮಾಡುವ ಶಾಖೆಗೆ ಫೌಂಡ್ರಿ ಎಂದು ಹೆಸರು.

ಊದುಕುಲುಮೆಯಿಂದ ದೊರೆತ ಕಬ್ಬಿಣ ಅದೇ ರೂಪದಲ್ಲಿ ಉಪಯೋಗಕ್ಕೆ ಅನರ್ಹವಾದ್ದರಿಂದ ಅದನ್ನು ಉಕ್ಕಾಗಿ ಮಾಡಲು ಪ್ರಯತ್ನಗಳು ನಡೆದುವು. ಇಲ್ಲಿ ಮುಖ್ಯ ಮಾರ್ಗಗಳು ಮೂರು: 1. ಬೆಸ್ಸಮರ್ ಪರಿವರ್ತಕಗಳು 2. ತೆರೆದ ಒಲೆಯ ವಿಧಾನ 3. ವಿದ್ಯುತ್ಕುಲುಮೆಗಳು.



ಚಿತ್ರ 2. ಬೆಸ್ಸೆಮರ್ ಪರಿವರ್ತಕ

**ಬೆಸ್ಸೆಮರ್ ವಿಧಾನ:** ಮೆದು ಉಕ್ಕಿನಿಂದ ಮಾಡಿದ ಅಂಡಾಕಾರದ ಬೆಸ್ಸಮರ್ ಪರಿವರ್ತಕ (ಕನ್ವರ್ಟರ್) ಎಂಬ ದೊಡ್ಡಗುಡಾಣ ಇಲ್ಲಿನ ಮುಖ್ಯ ಭಾಗ. ದ್ರವಕಬ್ಬಿಣವನ್ನು ಇದರೊಳಗೆ ಸುರಿಯಲು ಮತ್ತು ದ್ರವ ಉಕ್ಕನ್ನು ಹೊರ ತೆಗೆಯಲು ಅನುಕೂಲವಾಗುವಂತೆ ತಿರುಗಣೆಗಳ ಸಹಾಯದಿಂದ ತಿರುಗಿಸಲು ಸಾಧ್ಯವಾಗುವ ರೀತಿಯಲ್ಲಿ ಇದನ್ನು ಒಂದು ನಿಲುವಿಗೆ ಜೋಡಿಸಿದೆ. ಕಬ್ಬಿಣದಲ್ಲಿರುವ ಅಪದ್ರವ್ಯಗಳೊಡನೆ ವರ್ತಿಸಿ ಧಾತುಮಲವನ್ನು (ಸ್ಲ್ಯಾಗ್) ಉಂಟುಮಾಡಲು ಪರಿವರ್ತಕದ ಒಳಪಾರ್ಶ್ವಕ್ಕೆ ಸಿಲಿಕದ (ಅಪದ್ರವ್ಯಗಳು ಪ್ರತ್ಯಾಮ್ಲೀಯವಾಗಿದ್ದರೆ) ಅಥವಾ ಮ್ಯಾಗ್ನಸೈಟಿನ (ಅಪದ್ರವ್ಯಗಳು ಆಮ್ಲೀಯವಾಗಿದ್ದರೆ) ಅಸ್ತರಿ ಕೊಟ್ಟಿರುವರು.

ಪ್ರಾರಂಭದಲ್ಲಿ 15–20 ಟನ್ನುಗಳಷ್ಟು ದ್ರವ ತಾಂಡವಾಳವನ್ನು ಬೆಸ್ಸಮರ್ ಪರಿವರ್ತಕಕ್ಕೆ ಸುರಿದು ಇದರ ಮೂಲಕ ಗಾಳಿಯನ್ನು ಸ್ವಲ್ಪ ಹೆಚ್ಚಿನ ಒತ್ತಡದಲ್ಲಿ (30 ಪಿ.ಎಸ್.ಐ.) ಯಂತ್ರಗಳ ಸಹಾಯದಿಂದ ಪರಿವರ್ತಕದ ತಳದಲ್ಲಿರುವ ರಂಧ್ರಗಳ ಮೂಲಕ ಹಾಯಿಸುವರು. ಪರಿಣಾಮವಾಗಿ ಲೋಹದ ಉಷ್ಣತೆ ಉನ್ನತ ಮಟ್ಟಕ್ಕೇರಿ ಅದರಲ್ಲಿರುವ ಇಂಗಾಲದ ಭಾಗ ಉರಿದುಹೋಗುವುದು. ಇತರ ಅಪದ್ರವ್ಯ ಉತ್ಕರ್ಷಿತವಾಗಿ ಅಸ್ತರಿಯ ವಸ್ತುವಿನೊಡನೆ ಸಂಯೋಗಗೊಂಡು ಧಾತುಮಯವಾಗಿ ಪರಿಣಮಿಸುವುವು. ಪರಿವರ್ತಕದಲ್ಲಿ ಉದ್ಭವಿಸುತ್ತ ಮತ್ತು ತಳಮಳಿಸುತ್ತ ಇರುವ ದ್ರವ ಹೊಂಬಣ್ಣ, ನೀಲಿಬಣ್ಣ, ಕೆಂಪುಬಣ್ಣ ಮೊದಲಾದ ವರ್ಣವೈವಿಧ್ಯದಿಂದ ಮನೋಹರವಾಗಿ ಕಾಣುವುದು. ಹತ್ತಿರದಲ್ಲಿಯೇ ಕಣ್ಣುಕುರುಡುಮಾಡುವ ಜ್ವಾಲೆಯ ಪ್ರಭೆಯಲ್ಲಿ ಕೆಲಸಗಾರರು ಗಾಳಿಯನ್ನು ಯಾವ ಕ್ಷಣದಲ್ಲಿ ನಿಲ್ಲಿಸಬೇಕೆಂದು ಎದುರು ನೋಡುತ್ತಿರುವರು. ಗಾಳಿ ಹಾಯಿಕೆ ಹೆಚ್ಚಾದರೂ ಕಡಿಮೆಯಾದರೂ ಉತ್ತಮ ಉಕ್ಕು ಉಂಟಾಗುವುದಿಲ್ಲ. ಜ್ವಾಲೆ ಶಮನವಾಗಲು ಆರಂಭವಾಗುತ್ತಲೇ ಯಾವ ಗುಣವುಳ್ಳ ಉಕ್ಕನ್ನು ಬಯಸುತ್ತೇವೋ ಅದಕ್ಕೆ ಅನುಗುಣವಾದಷ್ಟು ಇಂಗಾಲ ಮತ್ತು ಇತರ ಲೋಹಗಳ ಮಿಶ್ರಣವನ್ನು ಪರಿವರ್ತಕದೊಳಕ್ಕೆ ಹಾಕಿ ನಿಮಿಷಗಳ ತರುವಾಯ ಗಾಳಿಯನ್ನು ನಿಲ್ಲಿಸಬೇಕು. ಈ ಮಿಶ್ರಣ ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸುವುದು. ಆಗ ಪರಿವರ್ತಕವನ್ನು ತಿರುಗಣೆಯ ಸಹಾಯದಿಂದ ತಿರುಗಿಸಿ ಕರಗಿದ ಉಕ್ಕನ್ನು ಸುರಿಯುವರು. ಇದು ಬೆಳ್ಳಿಯಂತೆ ಹೊಳೆಯುತ್ತಿರುತ್ತದೆ. ಇದನ್ನೇ ಆಯಾಕಾರದ ಗಟ್ಟಿಗಳಾಗಿ ಅಚ್ಚು ಹಾಕುವರು. ಇಂಥ ಉಕ್ಕಿನ ಗಟ್ಟಿಗಳನ್ನು ಹೊಗೆ ಬಂಡಿಯ ಕಂಬಿಗಳು ತೊಲೆಗಳು, ಚಕ್ರಗಳು, ನೀರು ಕುದಿಸುವ ಕೊಳವೆಗಳು ಇತ್ಯಾದಿ ಅನೇಕ ತರಹ ಕೈಗಾರಿಕೆಯ ಮತ್ತು ಮನೆಗೆಲಸದ ಸಾಮಾನುಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಈ ವಿಧಾನದಲ್ಲಿ ರಾಸಾಯನಿಕ ಕ್ರಿಯೆಗಳ ಅಂತ್ಯವನ್ನು ನಿರ್ಣಯಿಸುವುದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಲಭಿಸಿದ ಉಕ್ಕು ಉಪಯೋಗಕ್ಕೆ ಬಾರದಾಗುತ್ತದೆ. ಆದ್ದರಿಂದ ಈ ವಿಧಾನ ಈಚೆಗೆ ಪ್ರಚಾರದಲ್ಲಿಲ್ಲ. ಎಲ್.ಡಿ., ಎಲ್.ಡಿ., ಎ.ಸಿ. ಮತ್ತು ಕಾಲ್ಡೋ ವಿಧಾನಗಳು ಬೆಸ್ಸೆಮರ್ ಪರಿವರ್ತಕದ ಈಚಿನ ಸುಧಾರಣೆಗಳು.

ಸೀಮೆನ್–ಮಾರ್ಟಿನ್ ಅವರ ತೆರೆದ ಒಲೆಯ ಕುಲುಮೆ (ಓಪನ್ ಹಾರ್ತ್ ಫರ್ನೇಸ್): ಉಷ್ಣನಿರೋಧಕ ಇಟ್ಟಿಗೆಗಳಿಂದ ಭಾಂಡವನ್ನು ರಚಿಸುತ್ತಾರೆ: ಕಬ್ಬಿಣದಲ್ಲಿರುವ ಅಪದ್ರವ್ಯಗಳೊಡನೆ ವರ್ತಿಸಿ ಧಾತುಮಲ ಉಂಟುಮಾಡಲು ಇದಕ್ಕೂ ಸಿಲಿಕದ (ಪ್ರತ್ಯಾಮ್ಲೀಯ ಅಪದ್ರವ್ಯಗಳು ಹೆಚ್ಚಾಗಿದ್ದರೆ) ಅಸ್ತರಿ ಕೊಟ್ಟಿರುತ್ತಾರೆ. ತಾಂಡವಾಳವನ್ನು ಹೆಚ್ಚು ಆಳವಿಲ್ಲದ




ಚಿತ್ರ 3. ತೆರೆದ ಒಲೆಯ ಕುಲುಮೆ: 1. ಕುಲುಮೆಯ ಒಲೆ, 2. ಉಷ್ಣನಿರೋಧಕ ಇಟ್ಟಿಗೆ 3. ಅನಿಲ ಹೊರಹೋಗುವ ದ್ವಾರ, 4. ಕಾದ ಅನಿಲದ ಕುಲುಮೆ ಪ್ರವೇಶ 5. ಕಾದ ಗಾಳಿಯ ಕುಲುಮೆ ಪ್ರವೇಶ

ದೊಡ್ಡ ಬಾಣಲೆಯ ಆಕಾರದ ಒಂದು ದೊಡ್ಡ ಭಾಂಡಕ್ಕೆ ಸುರಿಯುವರು. ತಾಂಡವಾಳದ ಮೇಲೆ ಸ್ವಲ್ಪ ಹೆಮಟೈಟಿನ ಪುಡಿಯನ್ನುದುರಿಸಿ ಜೊತೆಗೆ ಗಣನೀಯ ಪ್ರಮಾಣದಲ್ಲಿ ಕಳಪೆ ಉಕ್ಕನ್ನೂ (ಸ್ಕ್ರ್ಯಾಪ್ ಸ್ಟೀಲ್) ಹಾಕುವರು. ಅನಂತರ ಪ್ರೊಡ್ಯೂಸರ್ ಅನಿಲವೆಂಬ ದಹ್ಯಾನಿಲವನ್ನು ಅದು ಉರಿಯಲು ಅವಶ್ಯವಾದುದಕ್ಕಿಂತ ಹೆಚ್ಚಿನ ಪ್ರಮಾಣದ ಗಾಳಿಯೊಡನೆ ಒಲೆಯ ಒಂದು ಕಡೆಯಿಂದ ಹಾಯಿಸುವರು.

ಇದು ದ್ರವ ಕಬ್ಬಿಣದ ಮೇಲೆ ಉರಿದು ಕಬ್ಬಿಣವನ್ನು ಹೆಚ್ಚಿನ ಉಷ್ಣತೆಗೆ ಏರಿಸುವುದು. ದಹನಜನ್ಯ ಅನಿಲಗಳು ಒಲೆಯ ಇನ್ನೊಂದು ಭಾಗದಿಂದ ಹೊರಸೂಸುವುವು, ಕಬ್ಬಿಣದಲ್ಲಿರುವ ಅಪದ್ರವ್ಯಗಳು ಭಾಗಶಃ ಹಿಮಟೈಟಿನಿಂದಲೂ ಉತ್ಕರ್ಷಿತಗೊಳ್ಳುತ್ತವೆ. ಇಂಗಾಲದ ಮಾನಾಕ್ಸೈಡ್ ಆಗಿ ಇಂಗಾಲ ಹೊರಸೂಸುವುದು. ಆಗ ದ್ರವಕಬ್ಬಿಣ ಕುದಿಯುತ್ತಿರುವಂತೆ ಭಾಸವಾಗುವುದು. ಉತ್ಕರ್ಷಿತವಾದ ಇತರ ಅಪದ್ರವ್ಯಗಳು, ಅಸ್ತರಿಯ ವಸ್ತುವಿನೊಡನೆ ವರ್ತಿಸಿ ಧಾತುಮಲವನ್ನುಂಟುಮಾಡುತ್ತವೆ. ಆಗಾಗ್ಗೆ ಒಲೆಯಿಂದ ಸ್ವಲ್ಪಭಾಗ ಕಬ್ಬಿಣವನ್ನು ಒಂದು ಸೌಟಿನಿಂದ ಈಚೆಗೆ ತೆಗೆದು ಅದರಲ್ಲಿರುವ ಇಂಗಾಲ ಮತ್ತು ಅಪದ್ರವ್ಯಗಳ ಪ್ರಮಾಣವನ್ನು ರಾಸಾಯನಿಕ ಪ್ರಯೋಗ ಶಾಲೆಯಲ್ಲಿ ವಿಶ್ಲೇಷಿಸಿ ನಿರ್ಣಯಿಸುತ್ತಾರೆ. ಇಂಗಾಲದ ಪ್ರಮಾಣ ಅವಶ್ಯಮಟ್ಟಕ್ಕೆ ಬಂದಾಗ ಉತ್ಕರ್ಷಣೆ ಮುಂದುವರಿಯದಿರಲು

ಹಿಮಟೈಟ್ ಹಾಕುವುದನ್ನು ನಿಲ್ಲಿಸಿ ಅದರೊಳಗೆ ಅಪೇಕ್ಷಿತ ಉಕ್ಕಿನ ಗುಣಕ್ಕೆ ಅನುಸಾರವಾಗಿ ವಿಶೇಷ ಲೋಹಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಹಾಕುವರು. ಕರಗಿದ ಉಕ್ಕನ್ನು ಕುಲುಮೆಯಿಂದ ಸುರಿದು (ಬೆಸ್ಸೆಮರ್ ವಿಧಾನದಲ್ಲಿ ವಿವರಿಸಿದಂತೆ) ಅದನ್ನು ಉಕ್ಕಿನ ಗಟ್ಟಿಗಳನ್ನಾಗಿ ಅಚ್ಚೊತ್ತುತ್ತಾರೆ. ಸೈಮನ್ಸ್ ಉಕ್ಕು ಎಂದೇ ಇದು ಇಂದು ಪ್ರಸಿದ್ಧವಾಗಿದೆ. ಮೋಟಾರುಬಂಡಿ, ವಿಮಾನ ಭಾಗಗಳು, ಯುದ್ಧನೌಕೆಗಳು ಮುಂತಾದುವುಗಳ ತಯಾರಿಕೆಯಲ್ಲಿ ಉಪಯೋಗಿಸುವ ಅತ್ಯುತ್ಕೃಷ್ಟವಾದ ಉಕ್ಕಿನ ತಯಾರಿಕೆಯಾಗುವುದು ಈ ವಿಧಾನದಿಂದ.

ಬೆಸ್ಸೆಮರ್ ವಿಧಾನದಲ್ಲಿ ತಾಂಡವಾಳದಲ್ಲಿರುವ ಇಂಗಾಲವನ್ನು ಪೂರ್ತಿಯಾಗಿ ಉರಿಸಿ ಅನಂತರ ಆವಶ್ಯವಾದಷ್ಟು ಇಂಗಾಲವನ್ನು ಅದಕ್ಕೆ ಪುನಃ ಹಾಕುವರು. ತೆರೆದ ಒಲೆಯ ವಿಧಾನದಲ್ಲಿ ಲೋಹದಲ್ಲಿರುವ ಇಂಗಾಲದ ಪ್ರಮಾಣ ಆವಶ್ಯ ಪ್ರಮಾಣಕ್ಕೆ ಇಳಿಯುವಷ್ಟು ಮಾತ್ರ ಉರಿಸುವರು.

**ವಿದ್ಯುತ್ಕುಲುಮೆಗಳು**: ಇವು ಸ್ಥೂಲವಾಗಿ ತೆರೆದ ಕುಲುಮೆಯ ವಿಧಾನವನ್ನೇ ಹೋಲುತ್ತವೆ. ಆದರೆ ಇಲ್ಲಿ ಪರಿವರ್ತಕಗಳನ್ನೇ ವಿದ್ಯುಚ್ಛಕ್ತಿಯಿಂದ ಕಾಯಿಸುತ್ತಾರೆ. ಉತ್ಕರ್ಷಣಕ್ಕೆ ಆವಶ್ಯವಾದ ಆಮ್ಲಜನಕವನ್ನು ಹಿಮಟೈಟ್ ಒದಗಿಸುವುದು. ಬೇರೆ ಉರುವಲಿನ ಸಂಪರ್ಕಕ್ಕೆ ಪರಿವರ್ತಕಗಳು ಬಾರದಿರುವುದರಿಂದ ವಿದ್ಯುತ್ಕುಲುಮೆಯಲ್ಲಿ ತಯಾರಿಸಿದ ಉಕ್ಕು ಹೆಚ್ಚು ಉತ್ಕೃಷ್ಟವಾಗಿರುವುದು.

ನಾಲ್ಕನೆಯ ವಿಧಾನ ಅದು ಮೂಸೆಯ ಉಕ್ಕು(ಕ್ರೂಸಿಬಲ್ ಸ್ಟೀಲ್). ಈ ವಿಧಾನದಿಂದ 1.5% ಭಾಗದಷ್ಟು ಇಂಗಾಲವಿರುವ ಅತ್ಯುತ್ಕೃಷ್ಟ ಉಕ್ಕನ್ನು ತಯಾರಿಸುವರು. ಮೆದು ಕಬ್ಬಿಣ ಮತ್ತ ಅವಶ್ಯ ಪ್ರಮಾಣದಲ್ಲಿ ಇಂಗಾಲ ಮತ್ತು ಇತರ ಲೋಹಗಳನ್ನು ಅಪೇಕ್ಷಿತ ಗುಣಗಳಿಗನುಸಾರವಾಗಿ ಹಾಕಿ ಇವೆಲ್ಲವನ್ನೂ ಕರಗಿಸುವುದು. ಕಬ್ಬಿಣ ಮತ್ತು ಇತರ ಲೋಹಗಳು ಕಬ್ಬಿಣದಲ್ಲಿ ವಿಲೀನಗೊಂಡು ಏಕರೂಪದ ಅತ್ಯುತ್ಕೃಷ್ಟವಾದ ಉಕ್ಕು ಉಂಟಾಗುವುದು. ಇದನ್ನು ಅನೇಕ ವಿಶೇಷ ತರಹದ ಹತ್ಯಾರುಗಳು, ಸ್ಪ್ರಿಂಗುಗಳು, ಅರಗಳು, ರೇಜ಼ರ್ ಬ್ಲೇಡುಗಳು, ಚಾಕುಗಳು ಮುಂತಾದುವುಗಳ ತಯಾರಿಕೆಯಲ್ಲಿ ಉಪಯೋಗಿಸುವರು.

**ಉಕ್ಕನ್ನು ಹದಮಾಡುವುದು**: ಉಕ್ಕಿನ ಗುಣಗಳು ಅದರಲ್ಲಿ ಕಬ್ಬಿಣ ಯಾವ ಭೌತ ಸ್ಥಿತಿಯಲ್ಲಿದೆ ಮತ್ತು ಇಂಗಾಲ ಯಾವ ರೂಪದಲ್ಲಿದೆ ಎನ್ನುವುದನ್ನು ಅವಲಂಬಿಸಿವೆ. ಕಬ್ಬಿಣದ ಭೌತರೂಪಗಳು ಮುಖ್ಯವಾಗಿ ಎರಡು – ಕಬ್ಬಿಣ (ಅಥವಾ ಫೆರೈಟ್) ಮತ್ತು –ಕಬ್ಬಿಣ. ಕಬ್ಬಿಣದಲ್ಲಿ ಇಂಗಾಲ ಕಬ್ಬಿಣದ ಕಾರ್ಬೈಡಾದ ಸಿಮೆಂಟೈಟ್ ($Fe_3C$) ರೂಪದಲ್ಲಿರಬಹುದು. 900° ಸೆ. ವರೆಗಿನ ಉಷ್ಣತೆಯಲ್ಲಿ ಫೆರೈಟ್ ಸ್ಥಿರವಾಗಿ ಉಳಿದಿರುತ್ತದೆ. ಅದಕ್ಕಿಂತ ಮೇಲಿನ ಉಷ್ಣತೆಯಲ್ಲಿ –ಕಬ್ಬಿಣ ಸ್ಥಿರರೂಪ. –ಕಬ್ಬಿಣದಲ್ಲಿ ಇಂಗಾಲ ಅದ್ರಾವ್ಯ. ಹೀಗೆ ದ್ರಾವಣದಲ್ಲಿರುವ ಇಂಗಾಲ ಸಿಮೆಂಟೈಟ್ ತೂಪದಲ್ಲಿದೆ. 900° ಸೆ. ಮೀರಿದ ಉಷ್ಣತೆಯಲ್ಲಿ ವಿಲೀನವಾದ ಇಂಗಾಲವನ್ನೊಳಗೊಂಡ –ಕಬ್ಬಿಣವನ್ನು ಥಟ್ಟನೆ ಶೀತಲೀಕರಿಸಿದರೆ ಕಬ್ಬಿಣದ ರಚನೆಯಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಏಕೆಂದರೆ –ಕಬ್ಬಿಣ –ಕಬ್ಬಿಣವಾಗಿ ಪರಿವರ್ತನೆಯಾಗುವ ಕ್ರಿಯಾಗತಿ ಬಲು ನಿಧಾನ. ಆದ್ದರಿಂದ ಥಟ್ಟನೆ ಶೀತಲೀಕರಿಸಿದಾಗ ಕಬ್ಬಿಣ –ಕಬ್ಬಿಣಕ್ಕೆ ಪರಿವರ್ತಿತವಾಗುವುದಿಲ್ಲ. ಆದ್ದರಿಂದ ಕಬ್ಬಿಣ ಸಿಮೆಂಟೈಟ್ ($Fe_3C$) ವಿಲೀನಗೊಂಡ –ಕಬ್ಬಿಣವಾಗಿರುವುದು. ಇಂಥ ಕಬ್ಬಿಣ ಅತಿ ಗಡಸು. ಇದರ ಬದಲು ಮೇಲಿನ ಉಷ್ಣತೆಯಲ್ಲಿರುವ ಇಂಗಾಲವಿಲೀನವಾದ ಕಬ್ಬಿಣವನ್ನು ನಿಧಾನವಾಗಿ ಶೀತಲೀಕರಿಸಿದರೆ –ಕಬ್ಬಿಣ –ಕಬ್ಬಿಣವಾಗುವುದು: ಮತ್ತು ಇಂಗಾಲ ಗ್ರಾಫೈಟ್ ರೂಪದಲ್ಲಿ ಕಬ್ಬಿಣದಿಂದ ಹೊರಬರುವುದು. ಇಂಥ ರಚನೆಯ ಕಬ್ಬಿಣ ಮೆದುವಾದುದು. ಥಟ್ಟನೆ ಶೀತಲೀಕರಿಸಿದ ಕಬ್ಬಿಣವನ್ನು 900° ಸೆ. ಉಷ್ಣತೆಗಿಂತ ಮೇಲಿನ ಉಷ್ಣತೆಗೆ ಶೀತಲೀಕರಣ ವೇಗವನ್ನು ನಿಯಂತ್ರಿಸಿ ಯಾವ ಮಟ್ಟದ ಗಡಸನ್ನು ಬೇಕಾದರೂ ಪಡೆಯಬಹುದು.

ಥಟ್ಟನೆ ಶೀತಲೀಕರಿಸಿದ ಉಕ್ಕನ್ನು 200°-600° ಸೆ. ಒಳಗಿನ ಯಾವುದಾದರೊಂದು ನಿರ್ದಿಷ್ಟ ಉಷ್ಣತೆಯಲ್ಲಿ ಕೆಲವು ಕಾಲ ಇಟ್ಟರೆ –ಕಬ್ಬಿಣದಲ್ಲಿ ಸಿಮೆಂಟೈಟಿನ ವಿಲೀನದಿಂದ ಉಂಟಾದ ಘನ ದ್ರಾವಣದಿಂದ ಸಿಮೆಂಟೈಟ್ ಬೇರೆಯಾಗಿ ಸಿಮೆಂಟೈಟಿನ ಮತ್ತು ಕಬ್ಬಿಣದ ಸ್ಫಟಿಕಗಳು ಬೇರೆ ಬೇರೆಯಾಗುತ್ತವೆ. ಅಲ್ಲದೆ ಥಟ್ಟನೆ ಶೀತಲೀಕರಣದಲ್ಲಿ ಉಂಟಾದ ಸೆಳೆತಗಳು (ಸ್ಟ್ರೈನ್ಸ್) ಶಿಥಿಲಗೊಳ್ಳುವುವು. ಇವುಗಳಿಂದ ಕಬ್ಬಿಣದ ಗಡಸುತನ, ಬಿಗಿತ ಮತ್ತು ಸಾಮರ್ಥ್ಯಗಳಲ್ಲಿ ವ್ಯತ್ಯಾಸವುಂಟಾಗುವುದು. ಕಾಯಿಸುವ ಉಷ್ಣತೆಯ ಮಟ್ಟ ಮತ್ತು ಶೀತಲೀಕರಣ ವೇಗಗಳನ್ನು ನಿಯಂತ್ರಿಸಿ ಬಯಸುವ ಗಡುಸುತನ, ಬಿಗಿತ, ಸಾಮರ್ಥ್ಯವಿರುವ ಉಕ್ಕನ್ನು ಪಡೆಯಬಹುದು. ಉಕ್ಕು ಹದ ಮಾಡುವುದು ಎಂದು ಈ ಕ್ರಿಯೆಯ ಹೆಸರು. ಹೀಗೆ ಹದಮಾಡಿ ಅಪೇಕ್ಷಿತ ಗುಣಗಳಿರುವಂತೆ ಮಾಡುವ ಸಾಧ್ಯತೆಯೇ ಉಕ್ಕಿಗೆ ವಿಶೇಷ ಪ್ರಾಶಸ್ತ್ಯ ಬರಲು ಕಾರಣ.

**ಮೇಲ್ಮೈ ಗಡುಸಾದ ಉಕ್ಕು**: ರೈಲು ಗಾಲಿಯ ಅಚ್ಚುಗಳು (ಆಕ್ಸಲ್ಸ್) ಮತ್ತು ವಾಹನಗಳ ಚಕ್ರಗಳು ಮುಂತಾದುವುಗಳ ತಯಾರಿಕೆಯಲ್ಲಿ ಉಪಯೋಗಿಸುವ ಉಕ್ಕಿನ ಹೊರಪಾರ್ಶ್ವ ಗಡುಸಾಗಿರಬೇಕು; ಸವೆತವನ್ನು ತಡೆಯುವಂತಿರಬೇಕು; ಒಳದಿಂಡು ಗಡುಸಾಗಿರದೆ ಹಠಾತ್ ಆಘಾತಗಳಿಂದ ಮುರಿಯದಂತೆ ಇರುವುದು ಅವಶ್ಯ. ಈ ರೀತಿಯಾಗಿ ಮೇಲ್ಮೈಯನ್ನು ಮಾತ್ರ ಹೆಚ್ಚು ಗಡುಸುಮಾಡಿ ಒಳಭಾಗ ಮೆದುವಾಗಿರುವಂತೆ ಮಾಡಲು ಅನೇಕ ವಿಧಾನಗಳನ್ನು ಉಪಯೋಗಿಸುವರು. ಇವುಗಳ ಪೈಕಿ ಒಂದು ವಿಧಾನ ಹೀಗಿದೆ: ಮೇಲ್ಮೈ ಗಡುಸು ಮಾಡಬೇಕಾದ ಉಕ್ಕಿನ ವಸ್ತುವನ್ನು ಪುಡಿ ಮಾಡಿದ ಇಂಗಾಲದಿಂದ ತುಂಬಿದ ಒಂದು ಕೋಶದೊಳಗಿಟ್ಟು ಕೆಲವು ದಿವಸಗಳವರೆಗೆ ಕಾಯಿಸಿದ ತರುವಾಯ ಹೊರಕ್ಕೆ ತೆಗೆದು ಎಣ್ಣೆಯಲ್ಲಿ ಅದ್ದಿ ಶೀತಲೀಕರಿಸುವರು. ಆಗ ಕಡಿಮೆ ಇಂಗಾಲವಿರುವ ಒಳದಿಂಡಿಗಿಂತ ಹೆಚ್ಚು ಇಂಗಾಲವಿರುವ ಹೊರಭಾಗ ಥಟ್ಟನೆ ಶೀತಲಗೊಂಡು ಹೆಚ್ಚು ಗಡುಸಾಗಿರುವುದಲ್ಲದೇ ಹೆಚ್ಚು ಆಘಾತವನ್ನೂ ತಡೆಯಬಲ್ಲದಾಗಿರುತ್ತದೆ.

**ಉಕ್ಕಿನ ಲೋಹಮಿಶ್ರಣಗಳು**: ಇವು ಕಬ್ಬಿಣ ಮತ್ತು ಇಂಗಾಲಗಳನ್ನಲ್ಲದೆ ಬೇರೆಯಾದ ಒಂದು ಅಥವಾ ಹೆಚ್ಚಿನ ಲೋಹಗಳನ್ನು ಒಳಗೊಂಡ ಉಕ್ಕುಗಳು. ಉಕ್ಕಿನ ಲೋಹಮಿಶ್ರಣಗಳ ತಯಾರಿಕೆಯಲ್ಲಿ ಉಪಯೋಗಿಸುವ ಇತರ ಲೋಹಗಳು ಉಕ್ಕಿನಲ್ಲಿ ನಾವು ಬಯಸುವ ಗುಣಗಳನ್ನು ಅವಲಂಬಿಸಿವೆ. ಟಂಗ್‌ಸ್ಟನ್, ಮೊಲಿಬ್ಡಿನಂ, ಮ್ಯಾಂಗನೀಸ್, ಕ್ರೋಮಿಯಂ, ನಿಕ್ಕಲ್, ವೆನೇಡಿಯಂ ಮತ್ತು ಕೋಬಾಲ್ಟುಗಳು ಉಕ್ಕಿನ ಲೋಹಮಿಶ್ರಣಗಳ ತಯಾರಿಕೆಯಲ್ಲಿ ಉಪಯೋಗಿಸುವ ಇತರ ಲೋಹಗಳು. ಇಂಥ ಲೋಹಮಿಶ್ರಣಗಳ ಪೈಕಿ ಕೆಲವನ್ನು ಕೆಳಗೆ ವಿವರಿಸಿದೆ.

**ಟಂಗ್‌ಸ್ಟನ್ ಉಕ್ಕು**: ಇದನ್ನು ಅತಿ ವೇಗವಾಗಿ ಚಲಿಸುವ ಆಯುಧಗಳು, ಯಂತ್ರಗಳ ಭಾಗಗಳು ಇತ್ಯಾದಿಗಳ ತಯಾರಿಕೆಯಲ್ಲಿ ಉಪಯೋಗಿಸುವರು. ವೇಗವಾಗಿ ಚಲಿಸುವ ಆಯುಧಗಳ ಅಥವಾ ಯಂತ್ರ ಭಾಗಗಳ ಉಷ್ಣತೆ ಬಲುಬೇಗನೆ ಉನ್ನತಮಟ್ಟಕ್ಕೆ ಏರುವುದು. ಆಗ ಲೋಹ ಸಾಮಾನ್ಯವಾಗಿ ಮೆದುವಾಗುವುದು. ಇಂಥ ಲೋಹ ನಾವು ಉದ್ದೇಶಿಸಿದ ಕಾರ್ಯಕ್ಕೆ ಅನರ್ಹವಾಗುತ್ತದೆ. ಟಂಗ್‌ಸ್ಟನ್ ಉಕ್ಕಿನ ಗಡುಸುತನ ಉನ್ನತಮಟ್ಟದ ಉಷ್ಣತೆಯಲ್ಲಿಯೂ ಕಡಿಮೆಯಾಗುವುದಿಲ್ಲ. ಆದ್ದರಿಂದ ಅದನ್ನು ಬೈರಿಗೆಗಳು (ಡ್ರಿಲ್ಸ್), ಲೇತ್‌ಗಳು, ಚಕ್ರಗಳ ಸನ್ನೆಕೋಲುಗಳು ಮುಂತಾದುವುಗಳ ತಯಾರಿಕೆಯಲ್ಲಿ ಉಪಯೋಗಿಸುವರು.

**ಮೊಲಿಬ್ಡಿನಂ ಉಕ್ಕು**: ಇದು ಬಲುಗಡುಸು ಮತ್ತು ಬಿಗಿ. ಇಂಥ ಉಕ್ಕನ್ನು ಬೈರಿಗೆಗಳಿಂದ ಕೊರೆಯಲಾಗುವುದಿಲ್ಲ. ಕೊಡತಿಯಿಂದ ಒಡೆಯಲಾಗುವುದಿಲ್ಲ. ಸುರಕ್ಷಿತ ಪೆಟ್ಟಿಗೆಗಳು, ನೆಲಮಾಳಿಗೆಗಳು, ಸುರಕ್ಷಿತ ಕೋಷ್ಠಗಳು ಮುಂತಾದುವುಗಳ ತಯಾರಿಕೆಯಲ್ಲಿ ಇದನ್ನು ಉಪಯೋಗಿಸುವರು.

**ಮ್ಯಾಂಗನೀಸ್ ಉಕ್ಕು**: ಇದಕ್ಕೆ ಹಠಾತ್ತನೆಯ ಆಘಾತವನ್ನು ತಡೆದುಕೊಳ್ಳುವ ಹೆಚ್ಚಿನ ಸಾಮರ್ಥ್ಯವಿದೆ. ರೈಲ್ವೆ ಪಾಯಿಂಟುಗಳಲ್ಲಿ ಅಂದರೆ ರೈಲ್ವೆ ರಸ್ತೆ ಕವಲು ಒಡೆಯುವ ಜಾಗಗಳಲ್ಲಿ ಇದರಿಂದ ಮಾಡಿದ ಕಂಬಿಗಳನ್ನು ಉಪಯೋಗಿಸುವರು.

**ಕ್ರೋಂ ನಿಕ್ಕಲ್ ಉಕ್ಕು**: ತುಕ್ಕು ಹಿಡಿಯದ ಉಕ್ಕಿನಲ್ಲಿ ಕ್ರೋಮಿಯಂ ಮತ್ತು ನಿಕ್ಕಲುಗಳು ಇರುವುವು. ಇದೇ ದಿನಬಳಕೆಯ ಸ್ಟೇನ್‌ಲೆಸ್‌ಸ್ಟೀಲ್. 18% ಕ್ರೋಮಿಯಂ ಮತ್ತು 8% ನಿಕ್ಕಲ್ ಇರುವ ಸ್ಟೇನ್‌ಲೆಸ್ ಸ್ಟೀಲನ್ನು ವಿಶೇಷವಾಗಿ ಮನೆಬಳಕೆಯ ಸಾಮಾನುಗಳ ತಯಾರಿಕೆಯಲ್ಲಿ ಉಪಯೋಗಿಸುವರು.

**ವೆನೇಡಿಯಂ ಉಕ್ಕು**: 0.1%–0.2% ಭಾಗ ವೆನೇಡಿಯಂ ಇರುವ ಉಕ್ಕು ಬಹಳ ಬಿಗಿಯಾಗಿರುತ್ತದೆ ಮತ್ತು ಅದಕ್ಕೆ ಆಘಾತವನ್ನು ತಡೆಯುವ ಸಾಮರ್ಥ್ಯ ಇದೆ. ಅಲ್ಲದೆ ಕುಲಕಾಟ ಮತ್ತು ಎತ್ತಿಹಾಕುವಿಕೆಗಳಿಂದ ಯಾವ ಪರಿಣಾಮವೂ ಇದರ ಮೇಲೆ ಆಗುವುದಿಲ್ಲ. ಆದ್ದರಿಂದ ಇದನ್ನು ಸ್ವಯಂಚಾಲಿತ ವಾಹನಗಳ ಚಕ್ರಗಳ ಸನ್ನೆಕೋಲುಗಳು ಮುಂತಾದುವುಗಳ ತಯಾರಿಕೆಯಲ್ಲಿ ವಿಶೇಷವಾಗಿ ಉಪಯೋಗಿಸುವರು.

**ಕೋಬಾಲ್ಟ್ ಉಕ್ಕು**: ಇದನ್ನು ವಿಶೇಷವಾಗಿ ಅಯಸ್ಕಾಂತಗಳ ತಯಾರಿಕೆಯಲ್ಲಿ ಉಪಯೋಗಿಸುವರು.

ಇದಿಷ್ಟು ಕಬ್ಬಿಣದ ಅದಿರು ವಿವಿಧ ಘಟ್ಟಗಳ ಮೂಲಕ ವಿವಿಧ ಉಕ್ಕುಗಳಾಗಿ ರೂಪಾಂತರಗೊಳ್ಳುವುದರ ಸ್ಥೂಲ ವಿವರಣೆ. ಮನುಷ್ಯಜೀವನದಲ್ಲಿ ಗಾಳಿ, ನೀರು, ಆಹಾರ, ವಸನ, ವಸತಿ ಆದ ಮೇಲೆ ಉಕ್ಕಿನದೇ ಮುಖ್ಯಸ್ಥಾನ. **(ಕೆ.ಎಸ್.ಬಿ.; ಆರ್.ಕೆ.ಎಸ್.)**

**ಭಾರತದಲ್ಲಿ ಉಕ್ಕು**: ಆಧುನಿಕ ವಿಧಾನದಲ್ಲಿ ಇದರ ಉತ್ಪನ್ನದ ಮೊದಲ ಪ್ರಯತ್ನ ನಡೆದದ್ದು 1874ರಲ್ಲಿ, ಬರಾಕರ್ ಐರನ್‌ವರ್ಕ್ಸ್ ಕಂಪನಿಯಿಂದ; ಝರಿಯ ಕಲ್ಲಿದ್ದಲು ಗಣಿಗಳ ಸನಿಹದಲ್ಲಿ ಇದನ್ನು ಸ್ಥಾಪಿಸಿದರು. ಬೆಂಗಾಲ್ ಐರನ್ ಅಂಡ್ ಸ್ಟೀಲ್ ಕಂಪನಿ ಬರಾಕರ್ ಕಂಪನಿಯ ಸ್ವಾಮ್ಯವನ್ನು 1889ರಲ್ಲಿ ಪಡೆದುಕೊಂಡಿತು. 1900ರಲ್ಲಿ ಇಲ್ಲಿ ಉತ್ಪಾದಿಸಿದ ಉಕ್ಕು 35,500 ಮೆಟ್ರಿಕ್ ಟನ್ನುಗಳು, ಭಾರತದ ಉಕ್ಕಿನ ಉತ್ಪಾದನೆ 2010ರಲ್ಲಿ ಸು. 66.8 ಮಿಲಿಯನ್ ಟನ್ನುಗಳು.

ಎರಡನೆಯ ಘಟ್ಟ ತಾತಾ ಕಂಪನಿಯ ಅಸ್ತಿತ್ವದಿಂದ ತೊಡಗುತ್ತದೆ. ತಾತಾ ಐರನ್ ಅಂಡ್ ಸ್ಟೀಲ್ ಕಂಪನಿಯನ್ನು ಜೆಮ್‌ಷಡ್‌ಜೀ ತಾತಾರವರು 1907ರಲ್ಲಿ ಬಿಹಾರಿನ ಸಾಕ್ಚಿ ಎಂಬಲ್ಲಿ ಸ್ಥಾಪಿಸಿದರು. ಇದರ ಮೊದಲ ತಯಾರಿಕೆ ತಾಂಡವಾಳ (1911), ತರುವಾಯ ಉಕ್ಕು (1912).

ಮುಂದಿನ ಘಟ್ಟಗಳಲ್ಲಿ ಬಂಗಾಳದ ಹಿರಾಪುರದ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿ (ಸ್ಥಾಪನೆ 1908) ಮತ್ತು ಮೈಸೂರು ರಾಜ್ಯದ ಭದ್ರಾವತಿಯ ಮೈಸೂರು ಸ್ಟೇಟ್ ಐರನ್ ವರ್ಕ್ಸ್ (ಸ್ಥಾಪನೆ 1923. ಈಗಿನ ಹೆಸರು ಮೈಸೂರು ಐರನ್ ಅಂಡ್ ಸ್ಟೀಲ್ ಲಿಮಿಟೆಡ್, 1962) ಇವನ್ನು ಹೆಸರಿಸಬೇಕು.

1939ರ ಸುಮಾರಿಗೆ ಭಾರತದಲ್ಲಿ ತಾಂಡವಾಳ ಮತ್ತು ಉಕ್ಕಿನ ವಾರ್ಷಿಕ ಉತ್ಪಾದನೆ ಕ್ರಮವಾಗಿ 18 ಲಕ್ಷ ಮೆ.ಟ. ಮತ್ತು 8 ಲಕ್ಷ ಮೆ.ಟ. ಆಗಿದ್ದುವು. ಯುದ್ಧೋದ್ಯಮಗಳ ತೀವ್ರ ಬೇಡಿಕೆಯಿಂದ ಉಕ್ಕಿನ ಉತ್ಪಾದನೆ ಬಹಳವಾಗಿ ಏರಲಾರಂಭಿಸಿತು. 1950ರಲ್ಲಿ

ವಾರ್ಷಿಕ ಉತ್ಪಾದನೆ ತಾಂಡವಾಳ 15 ಲಕ್ಷ ಮೆ.ಟ. ಮತ್ತು ಉಕ್ಕು 15 ಲಕ್ಷ ಮೆ.ಟ. ಮಟ್ಟವನ್ನು ಮೀರಿತು. ಪಂಚವಾರ್ಷಿಕ ಯೋಜನೆಗಳಲ್ಲಿ (ಮುಖ್ಯವಾಗಿ ಎರಡನೆಯದರಲ್ಲಿ) ಉಕ್ಕಿನ ಉತ್ಪಾದನೆಗೆ ವಿಶೇಷ ಗಮನ ನೀಡಲಾಗಿದೆ. ಒರಿಸ್ಸದ ರೂರ್ಕೆಲ (ಜರ್ಮನ್ ತಾಂತ್ರಿಕ ಸಹಕಾರ), ಮಧ್ಯಪ್ರದೇಶದ ಭಿಲೈ (ರಷ್ಯನ್ ತಾಂತ್ರಿಕ ಸಹಕಾರ) ಮತ್ತು ಪಶ್ಚಿಮ ಬಂಗಾಳದ ದುರ್ಗಾಪುರ (ಬ್ರಿಟಿಷ್ ತಾಂತ್ರಿಕ ಸಹಕಾರ) ಈ ಮೂರು ಸ್ಥಳಗಳಲ್ಲಿ ಸರ್ಕಾರೀ ಕ್ಷೇತ್ರದಲ್ಲಿ ಸ್ಥಾಪಿಸಿರುವ ಕಾರ್ಖಾನೆಗಳನ್ನು ಇಲ್ಲಿ ಹೆಸರಿಸಬಹುದು. ಈ ನೂತನ ಸ್ಥಾಪನೆಗಳ ಜೊತೆಯಲ್ಲೇ ಹಳೆಯ ಕಾರ್ಖಾನೆಗಳ ಉತ್ಪಾದನಾಸಾಮರ್ಥ್ಯವನ್ನು ಹೆಚ್ಚಿಸಲಾಯಿತು. ಕರ್ನಾಟಕ ರಾಜ್ಯದ ಹೊಸಪೇಟೆ–ಇಲ್ಲಿ 2010ರಲ್ಲಿ ಜಗತ್ತಿನ ಉಕ್ಕಿನ ಉತ್ಪಾದನೆ 1,413.6 ಮಿಲಿಯನ್ ಮೆಟ್ರಿಕ್ ಟನ್ನುಗಳು. ಇಂದು ಪ್ರಂಪಚದ ಒಟ್ಟು ಉಕ್ಕಿನ ಉತ್ಪಾದನೆಯ ಶೇ. 44ರಷ್ಟನ್ನು ಚೀನ ಉತ್ಪಾದಿಸುತ್ತದೆ. *

**ಉಕ್ರೇನ್:** ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟದ 15 ರಾಜ್ಯಗಳ ಲ್ಲೊಂದ್ದಾಗಿದ್ದು 1991 ರಂದು ಸ್ವತಂತ್ರ ಗಣರಾಜ್ಯವಾಯಿತು. ಉಕ್ರೇನಿಯನ್ ಸೋವಿಯತ್ ಸಮಾಜವಾದಿ ಗಣರಾಜ್ಯವೆಂಬುದು ಪೂರ್ಣನಾಮ. 1922ರ ಡಿಸಂಬರ್ 30ರಂದು ಸೋವಿಯತ್ ಒಕ್ಕೂಟ ರಾಷ್ಟ್ರ ಸ್ಥಾಪಿಸಿದ ನಾಲ್ಕು ರಾಜ್ಯಗಳಲ್ಲೊಂದ್ದಾಗಿತ್ತು. ವಿಸ್ತೀರ್ಣ 6.03,700 ಚ.ಕಿ.ಮೀ. ಉ.ಅ. 48°–54', ಪೂ.ರೇ. 25°–41' ನಡುವಿನಲ್ಲಿದೆ. ಜನಸಂಖ್ಯೆ 48,396,470 (2002). ಒಕ್ಕೂಟದ ರಾಜ್ಯಗಳ ಪೈಕಿ ವಿಸ್ತೀರ್ಣದಲ್ಲಿ ಇದಕ್ಕೆ ಮೂರನೆಯ

ಸ್ಥಾನ. ಜನಸಂಖ್ಯೆಯಲ್ಲಿ ಇದು ಎರಡನೆಯದು. ಸೋವಿಯತ್ ಒಕ್ಕೂಟದ ಐರೋಪ್ಯ ವಿಭಾಗದ ದಕ್ಷಿಣ ಪ್ರದೇಶವೆಲ್ಲ ಬಹುತೇಕ ಈ ರಾಜ್ಯಕ್ಕೆ ಸೇರಿದೆ. ಇದರ ಉತ್ತರ ಪೂರ್ವಗಳಲ್ಲಿ ಬೈಲೊರಷ್ಯನ್ ಸೋವಿಯತ್ ಗಣರಾಜ್ಯ ಹಾಗೂ ರಷ್ಯನ್ ಗಣರಾಜ್ಯ, ಪಶ್ಚಿಮದಲ್ಲಿ ಪೋಲೆಂಡ್, ನೈರುತ್ಯದಲ್ಲಿ ಜೆಕೊಸ್ಲೋವಾಕಿಯ, ಹಂಗೆರಿ, ರೊಮೇನಿಯ, ಮಾಲ್ಡೇವಿಯನ್ ಸೋವಿಯತ್ ಗಣರಾಜ್ಯ ಮತ್ತು ದಕ್ಷಿಣದಲ್ಲಿ ಕಪ್ಪುಸಮುದ್ರ ಹಾಗೂ ಆಜೋವ್ ಸಮುದ್ರ ಇವೆ. ರಾಜಧಾನಿ ಕೀವ್. ಜನಸಂಖ್ಯೆ 26,37,000 (2002).

ಮೇಲ್ಮೈ ಲಕ್ಷಣ: ಈ ರಾಜ್ಯವನ್ನು ಆರು ಭಾಗಗಳಾಗಿ ವಿಂಗಡಿಸಬಹುದು. 1. ಉತ್ತರ ಹಾಗೂ ಮಧ್ಯ ಭಾಗದ ನೀಪರ್ ನದಿಯ ತಗ್ಗು ನೆಲ. ಇಲ್ಲಿ ನೀಪರ್ ಹಾಗೂ ಅದರ ಉಪನದಿಗಳಾದ ಪ್ರಿಪೆಟ್, ಡಿಸ್ನ ಹರಿಯುತ್ತವೆ. 2. ಈಶಾನ್ಯದ ಎತ್ತರದ ನೆಲ–ಮಧ್ಯ ರಷ್ಯನ್ ಪ್ರಸ್ಥಭೂಮಿಯ ಅಂಚು. ಈ ಬಂಡೆಯಂಚುಗಳನ್ನು ಅಲ್ಲಲ್ಲಿ ಹೊಳೆತೊರೆಗಳು ಕೊರೆದು ಹಾಕಿ ನೀಪರನ್ನು ಸಂಗಮಿಸಲು ಧಾವಿಸುತ್ತವೆ. 3. ಮಧ್ಯನೀಪರ್ ತಗ್ಗುನೆಲದ ದಕ್ಷಿಣಕ್ಕೆ ಪಶ್ಚಿಮದಿಂದ ಪೂರ್ವಕ್ಕೆ ಸರಪಳಿಯಾಗಿ ಹಬ್ಬಿರುವ ಬೆಟ್ಟಸಮೂಹ ಹಾಗೂ ನೀಪರಿನ ಪೂರ್ವದಲ್ಲಿ ಆಜೋವ್ ಪ್ರಸ್ಥಭೂಮಿ. 4. ಈ ಬೆಟ್ಟಸಮೂಹಕ್ಕೆ ದಕ್ಷಿಣದಲ್ಲಿ ಕಪ್ಪುಸಮುದ್ರ ಹಾಗೂ ಅಜೋವ್ ಸಮುದ್ರಗಳ ಕಡೆಗೆ ತಗ್ಗಿ ಸಾಗುವ ವಿಶಾಲ ಬಯಲು. 5. ನೈರುತ್ಯ ಭಾಗದಲ್ಲಿರುವ ಕಾರ್ಪೇಥಿಯನ್ ಪರ್ವತಶ್ರೇಣಿ. 6. ಕ್ರಿಮಿಯನ್ ಪರ್ವತ ಶ್ರೇಣಿ.

**ವಾಯುಗುಣ:** ಉಕ್ರೇನಿನದು ಖಂಡಾಂತರ ವಾಯುಗುಣ. ಆದರೆ ಕಪ್ಪು ಸಮುದ್ರದ ಸನಿಯದಿಂದಾಗಿ ಇದು ತೀವ್ರವಲ್ಲ. ಜನವರಿಯಲ್ಲಿನ ಉಷ್ಣತೆ 7° ಸೆಂ.ಗ್ರೇ.–3° ಸೆಂ.ಗ್ರೇ. ವರೆಗೆ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಉತ್ತರದ ಬೀಸುಗಾಳಿಯಿಂದ ಉಷ್ಣತೆ ಥಟ್ಟನೆ ಕೆಳಗೆ ಬೀಳುವುದು ಸಾಮಾನ್ಯ. ಆದರೆ ಚಳಿಗಾಲದಲ್ಲೂ ದಕ್ಷಿಣದ ಸಮುದ್ರದೆಡೆಯ ಬಿಸಿಗಾಳಿಗಳು ಬೀಸಿ ಹಿಮಗಡ್ಡೆಗಳನ್ನು ಕರಗಿಸುತ್ತವೆ. ಮಳೆ ಕಡಿಮೆ, ಕಾರ್ಪೇಥಿಯನ್ ಮತ್ತು ಕ್ರಿಮಿಯನ್ ಪರ್ವತ ಪ್ರದೇಶಗಳಲ್ಲಿ ಮಾತ್ರ ವರ್ಷಕ್ಕೆ 100–116ಸೆಂ.ಮೀ ಮಳೆ ಬೀಳುತ್ತದೆ. ಉಳಿದ ಕಡೆಗಳಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಂದಂತೆ ಮಳೆ ಕಡಿಮೆಯಾಗುತ್ತ ಬರುತ್ತದೆ. ಬೇಸಗೆಯ ಮಳೆ ಗುಡುಗು ಮಿಂಚುಗಳಿಂದ ಕೂಡಿರುತ್ತದೆ.

**ಸಸ್ಯಸಂಪತ್ತು:** ಉಕ್ರೇನು ಮುಖ್ಯ ಸಸ್ಯ ವಲಯಗಳ ಕೂಡು ನೆಲ. ಉತ್ತರದ ತಗ್ಗುಭೂಮಿಯಲ್ಲಿ ಓಕ್, ಹಾರ್ನ್‌ಬೀಮ್, ಪೈನುಗಳಿವೆ. ಆಷ್, ಮೇಪಲ್ ಸಾಮಾನ್ಯ, ಮರಳುಮಿಶ್ರಿತ ನೆಲವಿದ್ದಲ್ಲಿ ಪೀತದಾರು ಬೆಳೆಯುತ್ತದೆ. ಜವುಗುನೆಲದಲ್ಲಿ ಆಲ್ಡರ್, ವಿಲೊ ಪ್ರಧಾನ. ಈ ಪ್ರದೇಶದಲ್ಲಿ ಜೊಂಡೂ ಸಾಮಾನ್ಯ.

ದಕ್ಷಿಣಕ್ಕೆ ಸಾಗಿದಂತೆ ಓಕ್ ಹಾಗೂ ಇತರ ಪರ್ಣಪಾತೀವೃಕ್ಷಗಳಿಂದ ಕೂಡಿದ ಹುಲ್ಲು ಬಯಲು ಕಾಣಸಿಗುತ್ತದೆ. ಇನ್ನೂ ದಕ್ಷಿಣದಲ್ಲಿ ಹುಲ್ಲು ತೆಳುವಾಗುತ್ತದೆ. ಇಲ್ಲೆಲ್ಲ ಹಿಂದೆ ಇದ್ದ ಸ್ವಾಭಾವಿಕ ಸಸ್ಯಗಳು ಬಹುತೇಕ ಇಂದು ಇಲ್ಲ. ಹುಲ್ಲು ಕೆತ್ತಿ ಮರ ಕಡಿದು ಸಾಗುವಳಿ ಮಾಡುವ ಕ್ರಮಗಳಿಂದ ಭೂಸಗ್ನೀಕರಣದ ಅಪಾಯ ಹೆಚ್ಚಾಗಿದೆ.

ಪರ್ವತಗಳ ಮೇಲೆ ಅವುಗಳವೇ ಆದ ಸಸ್ಯವಲಯಗಳಿವೆ. ಕಾರ್ಪೇಥಿಯನುಗಳ ಕೆಳಭಾಗ ಬೀಚ್ ಕಾಡುಗಳಿಂದ ಅಚ್ಛಾದಿತವಾಗಿದೆ. ಮೇಲೇರಿದಂತೆ ಶಂಕುಧಾರಿ ಮರಗಳ ಕಾಡು. ಇನ್ನೂ ಮೇಲೆ ಆಲ್ಪ್ಸ್‌ನಲ್ಲಿರುವಂಥ ಹುಲ್ಲುಗಾವಲು. ಕಾರ್ಪೇಥಿಯನ್ ಪರ್ವತಗಳಲ್ಲಿನ ವಿವಿಧ ಸಸ್ಯವರ್ಗಗಳನ್ನಲ್ಲದೆ ಮೆಡಿಟರೇನಿಯನ್ ಮಾದರಿಯ ಸಸ್ಯಗಳನ್ನೂ ಇಲ್ಲಿ ಕಾಣಬಹುದು.

**ವ್ಯವಸಾಯ; ಕೈಗಾರಿಕೆ:** ಉಕ್ರೇನಿನಲ್ಲಿ ಬೇಸಾಯ ಚೆನ್ನಾಗಿ ಅಭಿವೃದ್ಧಿ ಹೊಂದಿದೆ. ಒಟ್ಟು ಪ್ರದೇಶದಲ್ಲಿ ಶೇ.60 ಭಾಗ ವ್ಯವಸಾಯಯೋಗ್ಯ. ಇದರ ಮೂರರಲ್ಲೆರಡು ಪಾಲು ನೆಲದಲ್ಲಿ ಸಾಗುವಳಿಯಾಗುತ್ತಿದೆ. ಮುಖ್ಯಬೆಳೆ ಚಳಿಗಾಲದ ಗೋಧಿ. ಕಪ್ಪು ಸಮುದ್ರದ ತಗ್ಗುನೆಲದಲ್ಲೂ ಉತ್ತರ ಕ್ರಿಮಿಯದಲ್ಲೂ ಇದು ಪ್ರಧಾನ. ಎರಡನೆಯ ಮೆಕ್ಕೆಜೋಳ. ಸೋವಿಯತ್ ರಾಜ್ಯದಲ್ಲಿ ಚೆನ್ನಾಗಿ ಮಾಗಿದ ಮೆಕ್ಕೆಜೋಳ ಬೆಳೆಯುವ ಕೆಲವೇ ಪ್ರದೇಶಗಳಲ್ಲಿ ಉಕ್ರೇನ್ ಒಂದು. ಚಳಿಗಾಲದ ರೈ, ವಸಂತದ ಯವೆ (ಬಾರ್ಲಿ), ಮಿಲೆಟ್, ಕಪ್ಪುಗೋದಿ ಇತರ ಬೆಳೆಗಳು. ಎತ್ತರ ಪ್ರದೇಶಗಳಲ್ಲಿ ಸಕ್ಕರೆ ಬೀಟ್ ಮುಖ್ಯ. ಇದು ಸೋವಿಯತ್ ಒಕ್ಕೂಟ ಪ್ರಧಾನ ಸಕ್ಕರೆ ಉತ್ಪಾದಕ ರಾಜ್ಯ. ಸೂರ್ಯಕಾಂತಿ, ರೇಪ್, ಅಗಸೆ, ಹೊಗೆಸೊಪ್ಪು, ಆಲೂಗೆಡ್ಡೆ, ಕಲ್ಲಂಗಡಿ, ಕರಬೂಜ ಇವೂ ಬೆಳೆಯುತ್ತವೆ. ವ್ಯವಸಾಯದ ಉಪಚಟುವಟಿಕೆಯಾಗಿರುವ ಪಶುಪಾಲನೆಯೂ ಮುಖ್ಯ. ದನ, ಹಂದಿ, ಕುರಿ, ಕೋಳಿ ಮುಂತಾದುವನ್ನು ಸಾಕಲಾಗುತ್ತಿದೆ. ಸೋವಿಯತ್ ಒಕ್ಕೂಟದ ಆಹಾರದ ಬುಟ್ಟಿಯೆಂದು ಈ ರಾಜ್ಯ ಹಿಂದಿನಿಂದಲೂ ಖ್ಯಾತಿ ಪಡೆದಿದೆ. ಈಚೆಗೆ ಪೂರ್ವ ರಾಜ್ಯಗಳು ವ್ಯವಸಾಯ ಕ್ಷೇತ್ರದಲ್ಲಿ ಪ್ರಾಮುಖ್ಯ ಗಳಿಸುತ್ತಿರುವುದರಿಂದ ಸಾಪೇಕ್ಷವಾಗಿ ಈ ರಾಜ್ಯದ ಪ್ರಾಮುಖ್ಯ ಸ್ವಲ್ಪ ಕಡಿಮೆಯಾಗಿದೆ ಎನ್ನಬಹುದು.

ಎರಡನೆಯ ಮಹಾಯುದ್ಧಕ್ಕೆ ಹಿಂದಿನಿಂದಲೂ ಸೋವಿಯತ್ ಒಕ್ಕೂಟದ ಅರ್ಥ ವ್ಯವಸ್ಥೆಯಲ್ಲಿ ಉಕ್ರೇನಿನ ಕೈಗಾರಿಕೆಗಳೂ ವ್ಯವಸಾಯದಂತೆಯೇ ಪ್ರಮುಖವಾಗಿವೆ. ಕಬ್ಬಿಣ, ಮ್ಯಾಂಗನೀಸ್, ಕಲ್ಲಿದ್ದಲು, ಆಂಥ್ರಸೈಟ್, ಸುಣ್ಣಕಲ್ಲು, ಲವಣ, ಫಾಸ್ಫೇಟುಗಳು, ಪಾದರಸ ಇಲ್ಲಿನ ಖನಿಜಗಳು. ಇವುಗಳ ತಳಹದಿಯ ಮೇಲೆ ಕೈಗಾರಿಕೆಗಳು ಬೆಳೆದಿವೆ. ವಿದ್ಯುತ್ ರೈಲು, ಜಲಮಾರ್ಗಗಳೂ ಈ ಬೆಳವಣಿಗೆಗೆ ಸಹಾಯಕವಾಗಿವೆ. ಬೃಹತ್ ರಸಾಯನ ಕೈಗಾರಿಗೆ, ಸೂಪರ್ ಫಾಸ್ಫೇಟುಗಳು, ಬಣ್ಣಗಳು, ಹಡಗುನಿರ್ಮಾಣ–ಇವು ಮುಖ್ಯ. ಯುದ್ಧಾನಂತರ ಕಾಲದಲ್ಲಿ ಉಕ್ರೇನಿನ ಅರ್ಥವ್ಯವಸ್ಥೆಯ ಪುನರ್ನಿರ್ಮಾಣವಾಗಿ ಕೈಗಾರಿಕೆಗಳು ಬೆಳೆಯುತ್ತಿದ್ದರೂ ಸೋವಿಯತ್ ಒಕ್ಕೂಟದ ಇತರ ಪ್ರದೇಶಗಳೂ ಅಭಿವೃದ್ಧಿ ಹೊಂದುತ್ತಿರುವುದರಿಂದ ಸಾಪೇಕ್ಷವಾಗಿ ಈ ರಾಜ್ಯದ ಪ್ರಾಮುಖ್ಯ ಹಿಂದಿದ್ದಷ್ಟಿಲ್ಲವೆನ್ನಬಹುದು.

ರೈಲ್ವೆ ವ್ಯವಸ್ಥೆ ತುಂಬ ದಟ್ಟವಾಗಿ ಅಭಿವೃದ್ಧಿ ಹೊಂದಿದೆ. ಒಡೆಸ, ನಿಕಲೈಯಫ್, ಟಗನ್‌ರಾಕ್, ಮಾರಿಯೂಪಾಲ್ ಈ ರಾಜ್ಯದ ಸುಸಜ್ಜಿತ ಬಂದರುಗಳು. ಪುರಾತನ ನಗರವಾದ ಕೀವ್ ರಾಜ್ಯದ ರಾಜಧಾನಿಯಾದರೂ ಖಾರ್ಕಾಫ್ ಪ್ರಮುಖ ಕೈಗಾರಿಕಾ ಕೇಂದ್ರ. ರಾಜ್ಯದಲ್ಲಿ ನಗರಾಂತರವಾಸಿಗಳ ಪ್ರಮಾಣ ವೇಗವಾಗಿ ಅಧಿಕವಾಗುತ್ತಿದೆ. *

**ಚರಿತ್ರೆ:** ಉಕ್ರೇನು ಇತಿಹಾಸದುದ್ದಕ್ಕೂ ಪರಾಕ್ರಮಣಕ್ಕೊಳಪಟ್ಟ ದೇಶ. ಪ್ರಾಚೀನ ಕಾಲದಲ್ಲಿ ಉಕ್ರೇನು ಸಿತಿಯನರು ವಾಸಿಸುತ್ತಿದ್ದ ಪ್ರದೇಶ. ಪ್ರ.ಶ. ಪೂ. 8–7ನೆಯ ಶತಮಾನಗಳಲ್ಲಿ ಇದು ಗ್ರೀಕರ ವಸಾಹತು. ಮುಂದೆ ಇದನ್ನು ಆಕ್ರಮಿಸಿಕೊಂಡವರು ರೋಮನ್ನರು. ಪ್ರ.ಶ. 4ನೆಯ ಶತಮಾನದಲ್ಲಿ ಗಾಥರೂ ಅನಂತರ ಹೂಣರೂ ಈ ನೆಲವನ್ನು ಆಳಿದರು. ಪೂರ್ವ ಮಧ್ಯ ಯುಗದಿಂದ ಇಲ್ಲಿನ ವನಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದವರು ಪೂರ್ವ ಸ್ಲಾವ್ (ರಷ್ಯನ್) ಬುಡಕಟ್ಟಿನ ಜನ. ಮುಂದೆ ಸ್ವಲ್ಪ ಕಾಲ ಇದು ಕಾಜಾರರ ವಶದಲ್ಲಿತ್ತು. 9ನೆಯ ಶತಮಾನದಲ್ಲಿ ಇದು ಕೀಫನ್ ರಷ್ಯದ ಆಡಳಿತದಲ್ಲಿ ಸೇರಿಹೋಯಿತು. ಆಗಲೂ ಇಲ್ಲಿನ ಮೈದಾನ ಪ್ರದೇಶಗಳಲ್ಲಿ ಅನೇಕ ಅಲೆಮಾರಿ ಜನಾಂಗಗಳಿದ್ದುವು. ಕೀಫನ್ ರಷ್ಯದ ಪ್ರಭುತ್ವವೂ ಕ್ಷೀಣದೆಸೆಗೆ ಬಂದಾಗ, 13ನೆಯ ಶತಮಾನದಲ್ಲಿ, ಈ ಸುತ್ತಣ ಪ್ರದೇಶವೆಲ್ಲ ಟಾರ್ಟರರ ವಶವಾಯಿತು. ಆಗ ಆಡಳಿತದ ಶಕ್ತಿಕೇಂದ್ರ ಪಶ್ಚಿಮದತ್ತ ಚಲಿಸಿತು. 15ನೆಯ ಶತಮಾನದಲ್ಲಿ ಉಕ್ರೇನಿನ ಬಹುಭಾಗ ಲಿಥೂವೇನಿಯದ ಅಧೀನಕ್ಕೆ ಬಂದು, ಆಗ್ನೇಯಭಾಗ ಖಾನರ ಆಳ್ವಿಕೆಗೊಳಗಾಯಿತು.

ಲಿಥೂವೇನಿಯದ ಅಧೀನದಲ್ಲಿದ್ದ ರಾಜ್ಯ 1569ರಲ್ಲಿ ಪೋಲಿಷ್ ಪ್ರಭುತ್ವದ ಅಡಿಯಲ್ಲಿ ಬಂತು. ಆಗ ಪೋಲಿಷ್ ಕೆಥೊಲಿಕರ ಮತೀಯ ಸಾಂಸ್ಕೃತಿಕ ಸಾಮಾಜಿಕ ಆರ್ಥಿಕ ಪ್ರಭಾವಗಳನ್ನು ಇಲ್ಲಿನ ರಷ್ಯನ್ ಆಚಾರಶೀಲರು ಪ್ರತಿಭಟಿಸಿದರು. ಇವರ ಪೈಕಿ ತುಂಬ ಉಗ್ರವಾಗಿದ್ದವರೆಂದರೆ ಕಾಸ್ಯಾಕರು. ಕೊನೆಗೂ 17ನೆಯ ಶತಮಾನದ ನಡುಗಾಲದಲ್ಲಿ ಮಧ್ಯ ಉಕ್ರೇನು ಪೋಲೆಂಡಿನ ಹಿಡಿತದಿಂದ ತಪ್ಪಿಸಿಕೊಂಡಿತು.

ಆಗಲೂ ಇದು ಪ್ರತ್ಯೇಕವಾಗಿ ಉಳಿಯಲಿಲ್ಲ. 1653ರಲ್ಲಿ ಮಸ್ಕವಿಯೊಂದಿಗೆ (ಮಾಸ್ಕೋ ಸಾಮ್ರಾಜ್ಯ) ಕೂಡಿಕೊಂಡಿತು. ನೀಪರ್ ನದಿಯ ಪಶ್ಚಿಮ ಭಾಗ ಮಾತ್ರ 1790ರಲ್ಲಿ ಪೋಲೆಂಡಿನ ವಿಭಜನೆಯಾಗುವವರೆಗೂ ಆ ದೇಶದ ಅಧೀನದಲ್ಲೇ ಮುಂದುವರಿಯಿತು. 18ನೆಯ ಶತಮಾನದಲ್ಲಿ ಕಪ್ಪುಸಮುದ್ರದ ತೀರಪ್ರದೇಶವನ್ನು ತುರ್ಕಿಯಿಂದ ರಷ್ಯನರು ಗೆದ್ದುಕೊಂಡರು.

ಉಕ್ರೇನ್ ಜನ ಮಸ್ಕವಿಯ ರಷ್ಯನ್ನರಿಗಿಂತ ಭಿನ್ನವಾದ ವಿಶಿಷ್ಟ ಜನಾಂಗವಾಗಿ ಬೆಳೆದು ಬಂದದ್ದು 14–16ನೆಯ ಶತಮಾನಗಳಲ್ಲಿ. ತಮ್ಮತನದ ಈ ಅರಿವಿನ ಫಲವೆಂದರೆ 19ನೆಯ ಶತಮಾನದ ಆದಿಕಾಲದಲ್ಲಿ ಬೆಳೆಯಲಾರಂಭವಾದ ಉಕ್ರೇನಿಯನ್ ರಮ್ಯ ಸಾಹಿತ್ಯ. ಟಿ.ಜಿ. ಷೆವ್ಚೆಂಕೊ ಈ ಕಾಲದ ಪ್ರಸಿದ್ಧ ಕವಿ.

ಆದರೆ ಉಕ್ರೇನಿಯನ್ನರ ಈ ಚಳವಳಿಯನ್ನು ರಷ್ಯನ್ ಸರ್ಕಾರ ಸಹಿಸಲಿಲ್ಲ. 1863ರಲ್ಲಿ ಪೋಲಿಷ್ ಬಂಡಾಯದ ಅನಂತರ ಉಕ್ರೇನಿಯನ್ ಭಾಷೆಯ ಕೃತಿಗಳನ್ನೂ ನಿಷೇಧಿಸಲಾಯಿತು. ಈ ಅಜ್ಞೆಯನ್ನು ತೆಗೆದುಹಾಕಿದ್ದು 1905ರಲ್ಲಿ ರಷ್ಯದಲ್ಲಿ ಕ್ರಾಂತಿ ಸಂಭವಿಸಿದಾಗಲೇ. ಉಕ್ರೇನಿಗೆ ಸ್ವಯಾಡಳಿತಾಧಿಕಾರ ನೀಡಬೇಕೆಂಬ ಚಳುವಳಿಗೆ ಮನ್ನಣೆ ದೊರಕಿದ್ದು 1917ರ ಫೆಬ್ರವರಿಯ ಕ್ರಾಂತಿಯ ಅನಂತರ. ಆಗ ರಷ್ಯದಲ್ಲಿದ್ದ ತಾತ್ಕಾಲಿಕ ಸರ್ಕಾರ ಉಕ್ರೇನಿಯನ್ ಕೇಂದ್ರೀಯ ಮಂಡಲಿಗೆ ಪುರಸ್ಕಾರ ನೀಡಿತು. ಅಕ್ಟೋಬರ್ ಕ್ರಾಂತಿಯಲ್ಲಿ ಬಾಲ್ಷೆವಿಕರು ಅಧಿಕಾರ ಪಡೆದುಕೊಂಡ ಮೇಲೆ ಉಕ್ರೇನ್ ಸ್ವತಂತ್ರ ಗಣರಾಜ್ಯವೆಂದು ಸಾರಿಕೊಂಡಿತು. ಮುಂದಿನ ಅಂತರ್ಯುದ್ಧದಲ್ಲೂ ಒಂದನೆಯ ಮಹಾಯುದ್ಧ ದಲ್ಲೂ ಉಕ್ರೇನಿಗೆ ಪೆಟ್ಟು ತಪ್ಪಲಿಲ್ಲ.

ಉಕ್ರೇನು 1917ರ ಡಿಸೆಂಬರಿನಲ್ಲಿ ಸೋವಿಯತ್ ಗಣರಾಜ್ಯವೆಂದು ಘೋಷಿಸಿಕೊಂಡಿತು. 1922ರಲ್ಲಿ ಸೋವಿಯತ್ ಸಮಾಜವಾದೀ ಗಣರಾಜ್ಯ ಒಕ್ಕೂಟದ ರಚನೆಯಾದಾಗ ಈ ಒಕ್ಕೂಟಕ್ಕೆ ಸೇರಿದ ನಾಲ್ಕು ಅಂಗ ಗಣರಾಜ್ಯಗಳಲ್ಲಿ ಉಕ್ರೇನೂ ಒಂದು. 1939ರಲ್ಲಿ ಉಕ್ರೇನಿನ ಪಶ್ಚಿಮ ಭಾಗವನ್ನು ಪೋಲೆಂಡಿನಿಂದ ಕಸಿದುಕೊಳ್ಳಲಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಉಕ್ರೇನ್ ಜರ್ಮನ್ ಆಕ್ರಮಣಕ್ಕೆ ತುತ್ತಾಗಿತ್ತು.

ವಿಶ್ವಸಂಸ್ಥೆಯಲ್ಲಿ ಉಕ್ರೇನ್ ಗಣರಾಜ್ಯ 1991ರಲ್ಲಿ ಸ್ವತಂತ್ರ ಗಣರಾಜ್ಯವಾಯಿತು. ಪ್ರತ್ಯೇಕ ಸದಸ್ಯತ್ವ ಪಡೆದಿದೆ. (ಬಿ.ಸಿ.ಪಿ.)

**ಉಕ್ರೇನಿಯನ್ ಭಾಷೆ, ಸಾಹಿತ್ಯ:** ಉಕ್ರೇನಿಯನ್ ಭಾಷೆ ವಂಶಪರಂಪರಾಗತವಾದ ಕೀವನ್‍ರಸ್‍ನ ಆಡುನುಡಿ. ಇದು ರಷ್ಯನ್‍ಗಿಂತ ಬಿಳಿರಷ್ಯನ್ನನ್ನೇ (ಬೈಲೊ ರಷ್ಯನ್) ಹೋಲುತ್ತದೆ. ಬಿಳಿರಷ್ಯನ್ ಭಾಷೆಗೆ ಉಕ್ರೇನಿಯನ್ ಮತ್ತು ರಷ್ಯನ್ ಭಾಷೆಗಳೊಡನೆ ಒಳಭೇದಗಳಿರುವುದರಿಂದ ಬಿಳಿರಷ್ಯನ್ ಭಾಷೆ ಇವೆರಡು ಭಾಷೆಗಳಿಗೂ ಸಂಬಂಧ ಕಲ್ಪಿಸುತ್ತದೆ. ಆದರೆ ಉಕ್ರೇನಿಯನ್ ಮತ್ತು ರಷ್ಯನ್ ಭಾಷೆಗಳಿಗೆ ಬದಲಾವಣೆಯ ಒಳಭೇದಗಳಿರುವುದಿಲ್ಲ. ಉಕ್ರೇನಿಯನ್ ಉಪಭಾಷೆಯ ಲಕ್ಷಣಗಳು 12ನೆಯ ಶತಮಾನದ ಮಧ್ಯಯುಗದ ಹಸ್ತಪ್ರತಿಗಳಲ್ಲಿದೆ. ಅದರಲ್ಲೂ ಪಶ್ಚಿಮ ಭಾಗದಲ್ಲಿ ಕೀವ್ ನಗರ ನಾಶವಾದಾಗ, ಲಿಥುವೇನಿಯದ ಗ್ರಾಂಡ್ ಡಚಿಯಲ್ಲಿ ಉಕ್ರೇನಿನ ಅಧೀನಪ್ರಾಂತ್ಯದ ಕೆಲವು ಭಾಗಗಳನ್ನು ಕ್ರಮಕ್ರಮವಾಗಿ ವಿಲೀನಗೊಳಿಸಿದ ಅನಂತರ ಮೂಲರೂಪವಿದ್ದೆಡೆಗಳಲ್ಲಿ ಉಕ್ರೇನಿಯನ್ ಭಾಷೆಯ ಒಳಭೇದದ ಲಕ್ಷಣಗಳನ್ನು ಹೆಚ್ಚು ಹೆಚ್ಚಾಗಿ ಗುರುತಿಸಲಾಯಿತು.

ಈ ರಾಜ್ಯದ ಆಡಳಿತ ಭಾಷೆ ಬಿಳಿರಷ್ಯನ್ ಆಗಿತ್ತು. ಅನಂತರ 16ನೆಯ ಶತಮಾನದಲ್ಲಿ ಪೋಲಿಷ್ ಆಡಳಿತ ಭಾಷೆಯಾಯಿತು. ಬಿಳಿರಷ್ಯನ್ ಮತ್ತು ಪೋಲಿಷ್ ಭಾಷೆಗಳನ್ನು ಆ ಕಾಲದಲ್ಲಿ ಕೇವಲ ಕಾನೂನಿನ ದಸ್ತಾವೇಜುಗಳಿಗಷ್ಟೇ ಮೀಸಲಿಡಲಾಗಿತ್ತು. 14ನೆಯ ಶತಮಾನದಿಂದಲೂ ಉಕ್ರೇನಿಯನ್ ಭಾಷೆ ಆಜ್ಞಾಪತ್ರಗಳಲ್ಲಿ ಹಾಗೂ ಖಾಸಗಿ ಬಳಕೆಯಲ್ಲಿ ಇತ್ತು. 16ನೆಯ ಶತಮಾನದಲ್ಲಿನ ಸುಧಾರಣೆಗಳು ಉಕ್ರೇನಿಯನ್, ಬಿಳಿರಷ್ಯನ್ ಹಾಗೂ ಪೋಲಿಷ್ ಧಾರ್ಮಿಕ ಸಾಹಿತ್ಯಕ್ಕೆ ಆಘಾತ ಉಂಟುಮಾಡಿತು. 17ನೆಯ ಶತಮಾನದಲ್ಲಿ ಉಕ್ರೇನಿಯನ್ ರೂಪದ ಚರ್ಚ್ ಸ್ಲವೋನಿಕರನ್ನು ರಾಷ್ಟ್ರೀಯ ಭಾವನೆ ಹೊಂದಿದ್ದ ಉಕ್ರೇನಿನ ಬುದ್ಧಿಜೀವಿಗಳು ಹೆಚ್ಚಾಗಿ ಬಳಸುತ್ತಿದ್ದರು. ಆದರೆ ಸಮಕಾಲೀನವಾಗಿಯೇ ಈ ಭಾಷೆಯ ಆಡುನುಡಿಯ ರೂಪವನ್ನು ವಿದ್ವತ್ಪೂರ್ಣ ಕವನ ಹಾಗೂ ವಿಡಂಬನ ದೃಶ್ಯಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಇವಾನ್ ಕೋತ್ಲ್ಯಾರೇವ್‍ಸ್ಕಿಯ ಎನೆಇಡಾದ ಜೊತೆಗೆ 18ನೆಯ ಶತಮಾನದ ಅಂತ್ಯದಲ್ಲಿ ಉಕ್ರೇನಿಯನ್ ಭಾಷೆಯ ನೂತನ ರೂಪ ಈ ಆಡುನುಡಿಯ ವಿನ್ಯಾಸದಿಂದ ಹೊರಹೊಮ್ಮಿತು. ಅಂದಿನಿಂದೀಚೆಗೆ ನೂತನ ರೂಪದ ಬಿಳಿರಷ್ಯನ್ ಭಾಷೆಯನ್ನು ಸಾಹಿತ್ಯ ಮತ್ತು ಇತರ ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಲ್ಲೂ ಬಳಸಲಾಗುತ್ತಿದೆ. ಬಿಳಿರಷ್ಯನ್ ಭಾಷೆಯಂತೆಯೇ ಪ್ರಾಥಮಿಕ ಭಾಷಾ ಲಕ್ಷಣಗಳು ಸ್ವತಂತ್ರವಾಗಿ ಅಭಿವೃದ್ಧಿಯಾಗುವಂಥವಾದರೂ ಉಕ್ರೇನಿಯನ್ ಭಾಷೆ ಪೋಲಿಷ್ ಭಾಷೆಯ ಅನೇಕ ಪದಗುಚ್ಛಗಳನ್ನೇ ಅಲ್ಲದೆ ಅಭಿವ್ಯಕ್ತಿಗಳನ್ನೂ ಒಳಗೊಂಡಿದೆ.

11ನೆಯ ಶತಮಾನದಿಂದ ಮಂಗೋಲ್–ಟಾರ್ಟರ್ ಅತಿಕ್ರಮಣವಾದ 13ನೆಯ ಶತಮಾನದವರೆಗಿನ ಕಾಲದಲ್ಲಿ ಉಕ್ರೇನಿಯನ್ ಜನಾಂಗದ ಸಾಹಿತ್ಯ ಪರಂಪರೆ ರಷ್ಯನ್ ಹಾಗೂ ಬಿಳಿರಷ್ಯನ್ ಸಾಹಿತ್ಯ ಪರಂಪರೆಯಂತೆಯೇ (ಅಂದರೆ, ಕೀವನ್‍ರಸ್‍ನ ಸಾಹಿತ್ಯ) ಇತ್ತು. ಕೀವನ್‍ರಸ್‍ನ ಪತನದಿಂದಾಗಿ 13–16ನೆಯ ಶತಮಾನದವರೆಗಿನ ಅದರ ಸಾಹಿತ್ಯ ಇಳಿಮುಖಗೊಂಡಿತು. ಅನಂತರ ಸಾಮಾಜಿಕ ಹಾಗೂ ವಿದೇಶೀಯ ದಬ್ಬಾಳಿಕೆಯ ವಿರುದ್ಧ ಹೋರಾಟ ಹಾಗೂ ಶಿಕ್ಷಣ, ಮುದ್ರಣಗಳಲ್ಲಿ ಪ್ರಗತಿ ಸಾಧಿಸಲು ಪಟ್ಟ ಶ್ರಮ- ಇವುಗಳಿಂದ ಸಾಹಿತ್ಯ ಪುನಶ್ಚೇತನಗೊಂಡಿತು. ಅನೇಕ ಹೊಸ ಬರೆಹಗಾರರು ಹುಟ್ಟಿಕೊಂಡರು. ಅವರಲ್ಲಿ ಪ್ರಸಿದ್ಧಿ ಪಡೆದವ ಇವಾನ್ ವಿಶೆನ್‍ಸ್ಕಿ (ನಿ. 1925). 15– 17ನೆಯ ಶತಮಾನದವರೆಗಿನ ಸಾಹಿತ್ಯದ ಗುಣವಿಶೇಷವೆಂದರೆ ವೀರಗೀತೆಗಳು (ಮಹಾಕಾವ್ಯ). ಚಾರಿತ್ರಿಕ ಹಾಡುಗಳು ಹಾಗೂ ಲಾವಣಿಗಳು. 17ನೆಯ ಮತ್ತು 18ನೆಯ ಶತಮಾನಗಳಲ್ಲಿ ಧರ್ಮೋಪದೇಶ, ಚಾರಿತ್ರಿಕ ಗದ್ಯ, ಶಾಲಾ ನಾಟಕಗಳು, ಭಾವಗೀತೆ ಹಾಗೂ ವಿಡಂಬನ ಕಾವ್ಯಗಳು ಅಭಿವೃದ್ಧಿಹೊಂದಿದವು. ಹ್ರಿಹೋರಿ ಸ್ಕವರದಾ (1722–94)ಎಂಬ ಪ್ರಜಾಪ್ರಭುತ್ವ ಪ್ರಬೋಧಕ ಸಾಮಾಜಿಕ ನ್ಯಾಯದ ವಿಚಾರವನ್ನು ತನ್ನ ವೇದಾಂತ ಪ್ರಕರಣಗ್ರಂಥ, ಕಾಲ್ಪನಿಕ ಕಥೆ ಮತ್ತು ಕವನಗಳ ಮೂಲಕ ಪ್ರತಿಪಾದಿಸಿದ್ದಾನೆ.

ಚರ್ಚ್‍ಸ್ಲವೋನಿಕ್ ಹಳೆಯ ಕಾಲದ ಸಾಹಿತ್ಯ ಭಾಷೆಯ ಅಡಿಗಲ್ಲಾಗಿತ್ತು. ಹೆಜ್ಜೆ ಹೆಜ್ಜೆಯಾಗಿ ದೇಶೀಯ ಭಾಷೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. 18ನೆಯ ಶತಮಾನದ ಅಂತ್ಯದಲ್ಲಿ ಹಾಗೂ 19ನೆಯ ಶತಮಾನದ ಆರಂಭದಲ್ಲಿ ದೇಶೀಯ ಭಾಷೆ ನಿಜವಾಗಿಯೂ ಸುಸ್ಥಿತಿಯಲ್ಲಿತ್ತು. ಈ ಹೋರಾಟದಲ್ಲಿ ಇವಾನ್ ಕೋತ್ಲ್ಯಾರೇವ್‍ಸ್ಕಿಯ ಪಾತ್ರ ಪ್ರಮುಖವಾಗಿತ್ತು. ಇವನ ಕೃತಿಗಳು ವರ್ಜಿಲನ ಪ್ರಹಸನ ಮತ್ತು ಎನೆಇಡ, ಎನೆಇಡ ದೇಶೀಯ ಭಾಷೆಯಲ್ಲಿನ ಪ್ರಥಮ ಗ್ರಂಥ. ನಿತ್ಯಜೀವನಕ್ಕೆ ಸಂಬಂಧಿಸಿದ ಏಕಾಂತ ಸಂಗೀತ ನಾಟಕ. ನಾಟಲ್ಕ ಪೊಲ್ತಾವ್ಕ ಈತನ ಮತ್ತೊಂದು ಕೃತಿ.

19ನೆಯ ಶತಮಾನದ ಸಾಹಿತ್ಯದಲ್ಲಿ ವಾಸ್ತವಿಕತೆಗೆ ಜಯ ದೊರಕಿತು. ನಿಯತಕಾಲಿಕಗಳು, ಇತಿಹಾಸ ಲೇಖನಗಳು, ಉತ್ತಮ ನಾಟಕಗಳು, ಜಾನಪದ ಸಂಗ್ರಹಗಳು ಪ್ರಕಟಗೊಂಡುವು. ಪೆತ್ರೊ ಗುಲಾಕ್ ಅರ್ತೆಮೋವೆಸ್ಕಿ (1790–1865) ಪ್ರಹಸನಗಳನ್ನೂ ರಮ್ಯಸಾಹಿತ್ಯಗಳನ್ನೂ ಅದರಲ್ಲೂ ಕಾಲ್ಪನಿಕ ಕಥೆಗಳನ್ನು ರಚಿಸಿದ. ಇವ್ಹೆನ್ ಗ್ರಿಬಿಂಕ (1812–48) ನೈಜ ಕಥೆಗಳನ್ನು, ಭಾವಗೀತೆಗಳನ್ನು ರಚಿಸಿದ. ಈತ ಲಾಸ್ತಿವ್ಕ ಅಲ್‍ಮಾನಾಕ್‍ನ (1841) ಸಂಪಾದಕನಾಗಿದ್ದ. ಗ್ರಿಗೋರಿಕ್ವೀತ್ಕ (1778–1843) ಒಬ್ಬ ಅಸಾಮಾನ್ಯ ಗದ್ಯ ಲೇಖಕ. ಈತ ನಿತ್ಯಜೀವನವನ್ನು ಕುರಿತ ಕಾದಂಬರಿಗಳ ಕರ್ತೃ. ಅವುಗಳಲ್ಲಿ ಮಾರುಸ್ಯ ಹಾಗೂ ಸೆರ್ದೇಚ್ನ ಅಕ್ಸಾನಗಳೂ ಸೇರಿವೆ. ಪಶ್ಚಿಮ ಉಕ್ರೇನಿನಲ್ಲಿ ಮತ್ತು ಅನಂತರ ಆಸ್ಟ್ರಿಯನ್ ಆಳ್ವಿಕೆಯಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಪ್ರಚೋದಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದವರಿವರು: ಮಾರ್ಕಿಯಾನ್ ಷಷ್ಕೆವಿಚ್ (1811–43) ಮತ್ತು ಯಾಕಿಫ್ ಗಲೋವಾತ್ಸ್ಕಿ (1814–88), ಇವಾನ್ ವಹಿಲೇವಿಚ್ (1811–66). ಗಹನವಾದ ಅನುಭವ ದರ್ಶನಗಳಲ್ಲಿ ಅಲೆಕ್ಸಾಂಡರ್ ದುಕ್ನೊವಿಚ್ ಅಸಾಮಾನ್ಯನಾಗಿದ್ದ.

ಆಧುನಿಕ ಉಕ್ರೇನಿಯನ್ ಭಾಷೆಯ ಸಂಸ್ಥಾಪಕನೆಂದರೆ ತರಾಸ್ ಷೆವ್‍ಚೆಂಕೊ (1814–61). ಈತ ಬುದ್ಧಿಜೀವಿ, ಕವಿ, ಗದ್ಯಲೇಖಕ, ನಾಟಕಕಾರ, ದಾರ್ಶನಿಕ. ಕಲೆಗಾರ, ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿ, ಸಾಮಾಜಿಕ, ರಾಷ್ಟ್ರೀಯ ದಬ್ಬಾಳಿಕೆಯ ವಿರುದ್ಧ ಹೋರಾಟಗಾರ–ಈ ಎಲ್ಲವೂ ಆಗಿದ್ದ. ಇವನ ಮೊದಲ ಕವನ ಸಂಕಲನ ಕೊಬ್ಜಾರ್ (1840). ಇದು ಉಕ್ರೇನಿಯನ್ ಪ್ರಜೆಗಳ ಆಧ್ಯಾತ್ಮಿಕ ಜೀವನದ ಮೇಲೆ ಅಗಾಧ ಪರಿಣಾಮವನ್ನು ಬೀರಿತು. ಷೆವ್‍ಚೆಂಕೊವಿನ ಗದ್ಯ ಬರಹದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದವಳೆಂದರೆ ಮಾರ್ಯ ವಿಲಿನ್‍ಸ್ಕಾಯ (1833–1907). ಇವಳು ಓ.ಮಾರ್ಕೊವಿಚ್‍ನ ಪತ್ನಿ. ಇವಳ ಅತ್ಯುತ್ತಮ ಕೃತಿಯೆಂದರೆ ನರೋದ್ನಿ ಒಪವಿದಾನ್ಯ (ಜಾನಪದ ಕಥೆಗಳು, 1857). ನೈಜಕವನಗಳನ್ನು ಅಭಿವೃದ್ಧಿಪಡಿಸಿದವರೆಂದರೆ ಲಿಯೋನಿಡ್ ಗ್ಲಿಬೋಯ್ (1827–93), ಸ್ಟಿಪಾನ್ ರುದಾನ್‍ಸ್ಕಿ (1834–73) ಇವಾನ್ ಮನ್‍ಝೂರ (1851–93), ಪಾವ್ಲೊ ಗ್ರಬೊವ್‍ಸ್ಕಿ (1864–1902) ಹಾಗೂ ಮತ್ತಿತರರು. ಷೆವ್‍ಚೆಂಕೊ ಹಾಗೂ ಮಾರ್ಕೊವೊವ್ ಚೊಕ್‍ರ ಗದ್ಯರೀತಿಯ ಅನುಯಾಯಿಗಳೆಂದರೆ ಯೂರಿಫೆಡ್ ಕೊವಿಚ್ (1834–88), ಅನತೋಲ್ ಸ್ವಿದ್ನಿತ್‍ಸ್ಕಿ (1834–71). ಇವಾನ್ ಲೆವಿತ್‍ಸ್ಕಿ (1838–1918). ಇವಾನ್ ಲೆವಿತ್‍ಸ್ಕಿಯ ಉತ್ತಮ ಕೃತಿಗಳೆಂದರೆ ಮಿಕೋಲ ಜೇರ್ಯ ಹಾಗೂ ಕಯದಾಷವ ಸೀಮ್ಯ. 19ನೆಯ ಶತಮಾನದ ಅಂತ್ಯ ಭಾಗದಲ್ಲಿನ ಅತ್ಯುತ್ತಮವಾದ ನೈಜ ನಾಟಕಕಾರರೆಂದರೆ ಮಿಹೈಲೋಸ್ತರೀಸ್ಕಿ (1840–1904). ಮಾರ್ಕೋ ಕ್ರಪಿವ್ನಿತ್ ಸ್ಕಿ (1840–1910) ಹಾಗೂ ಇವಾನ್ ತೊಬಿಲೆವಿಚ್ (1845–1907). ಇವನ ಕಾವ್ಯನಾಮ ಕರ್ಪೆಂಕಕಾರಿ. ಇವರು ಬಹಳ ಕಾರ್ಯಶೀಲ ಲೇಖಕರಾಗಿದ್ದರು. ಉತ್ತಮ ವಿಮರ್ಶಕ ಹಾಗೂ ಪ್ರಕಾಶಕನಾಗಿದ್ದ ಮಿಹೈಲ ದ್ರಗಮಾನಫ್ (1841–95) ಸಾಮಾಜಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಲ್ಲಿ ನಿರ್ವಹಿಸಿದ ಪಾತ್ರ ಪ್ರಮುಖವಾದದ್ದು.

ಉಕ್ರೇನಿಯನ್ ಸಾಹಿತ್ಯದ ಅಭಿವೃದ್ಧಿಯ ಒಂದು ಹೊಸಮಜಲು ಮತ್ತು ಇವಾನ್ ಫ್ರಾಂಕೋನ (1856–1919) ಹೆಸರು ಎರಡೂ ಅವಿಭಾಜ್ಯವಾಗಿವೆ. ಈತ ಗಾಲ್ ದೇಶದ ಕ್ರಾಂತಿಕಾರಿ ಬರೆಹಗಾರ ಹಾಗೂ ಬುದ್ಧಿಜೀವಿ. ಇವನು ವಿಮರ್ಶಾತ್ಮಕ ವಾಸ್ತವಿಕತೆಯನ್ನು

ಉನ್ನತಮಟ್ಟಕ್ಕೆ ಏರಿಸಿದ. ದುಡಿಮೆಗಾರರ ಬದುಕು, ಹೋರಾಟಗಳನ್ನು ಬೋ–ಕನ್‌ಸ್ಟ್ರಿಕ್ಟರ್, ಬಾರಿಸ್ಲಾವ್ ಸ್ಮಿಯೇತ್ಸ್ಯಗಳಲ್ಲಿ ಚಿತ್ರಿಸಿದ್ದಾನೆ. 1880ನೆಯ ದಶವರ್ಷ ಮಿಹೈಲೋ ಪಾವ್ಲಿಕ್ (1853–1915), ಸ್ತಿಪಾನ್ ಕವಾಲಿಫ್ (1848–1920), ನತಾಲ್ಯ ಕಬ್ರೀನ್ಸ್ಕ (18512–1920) ಚಿಮುಫೈಬರ್ದ್ಲ್ಯಾಕ್ (1863–1936) ಓಸಿಪ್‌ಮಕವ್ವೆ (1867–1925) ಅಗತಾಂಗಿಲ್‌ಕ್ರಿಮ್‌ಸ್ಕಿ (1871–1941) ಹಾಗೂ ಇನ್ನಿತರರು ನೀಡಿದ ಸಮೃದ್ಧ ಸಾಹಿತ್ಯದಿಂದ ಮೈತುಂಬಿಕೊಂಡಿತು.

ಹಿಂದಿನವರು ನಡೆದು ಬಂದ ದಾರಿಯಲ್ಲಿ ಹೆಜ್ಜೆಯಿಟ್ಟವರಲ್ಲಿ ನೈಜ ಗದ್ಯಸಾಹಿತ್ಯ ಪ್ರವೀಣರಾದ ವಸೀಲ್ ಸ್ಟಿಫಾನಿಕ್(1874–1936). ಇವಾನ್ ಸಿಮನ್ಯೂಕ್ (1871–1927), ಲೆಸ್ ಮರ್ತೋವಿಚ್ (1871–1919) ಓಲ್ಗಕಬಿಲ್ಯಾನ್ಸ್ಕ (1865–1942). ಅರ್ಖಿಪ್ ಚಿಸ್ಲೆಂಕ (1882–1911), ಸ್ತಿಪಾನ್ ಪನಾಸೆಂಕ (1871–1932) ಮತ್ತು ಕವಿಗಳಾದ ಓಲೋಜಿಮಿರಿ ಸಮೋಯ್ಲೆಂಕ (1864–1925), ಮಿಕೋಲ ವರೋನಿ (1871–1942), ಅಲೆಸ್ ಇವರು ಮುಖ್ಯರು.

20ನೆಯ ಶತಮಾನದ ಅತ್ಯಂತ ಪ್ರಸಿದ್ಧ ಲೇಖಕರೆಂದರೆ ಲೇಸ್ಯ ಉಕ್ರಾಯಾಕ (1871–1913) ಹಾಗೂ ಮಿಹೈಲೋ ಕುತ್ಸುಉಬಿನ್‌ಸ್ಕಿ (1864–1913) ಲೇಸ್ಯ ಉಕ್ರಾಯಾಕನ ಕೃತಿಗಳು ಅನೇಕ ಭಾವಗೀತೆಗಳು ಪದ್ಯರೂಪಕಗಳು ಹಾಗೂ ಸಂವಾದಗಳನ್ನೊಳಗೊಳ್ಳುತ್ತವೆ. ಕುತ್ಸುಉಬಿನ್‌ಸ್ಕಿ ನೈಜ ಗದ್ಯಸಾಹಿತ್ಯದ ಹಾಗೂ ನಾಡಿನ ಸ್ವಾತಂತ್ರ್ಯ ಪ್ರೇಮಿಗಳ ವಕ್ತಾರ ಕವಿಯಾಗಿದ್ದ. 1917ನೆಯ ಇಸವಿಯಲ್ಲಿ ನಡೆದ ಕ್ರಾಂತಿಗೆ ಮುಂಚಿನ ಉಕ್ರೇನಿಯನ್ ಸಾಹಿತ್ಯ ಫ್ರಾಂಕೋ ಹಾಗೂ ಇವರಿಬ್ಬರ ಸಾಹಿತ್ಯ ಕೊಡುಗೆಯಿಂದಾಗಿ ಸಮೃದ್ಧಿಗೊಂಡಿತು.

ಕ್ರಾಂತಿಯಾದನಂತರ ಉಕ್ರೇನಿಯನ್ ಸಾಹಿತ್ಯದ ನವಯುಗ ಆರಂಭವಾಯಿತು. ಜನತೆಯ ಹಿತವನ್ನು ಕಾಯ್ದುಕೊಳ್ಳುವ ಆದರ್ಶ ಹಾಗೂ ಸಮಾಜವಾದದ ನಿರ್ಮಾಣಗಳು ಹೊಸ ಸೌಂದರ್ಯೋಪಾಸನೆಯ ಮೌಲ್ಯಗಳನ್ನು ಎತ್ತಿಹಿಡಿದವು. ಇದು ವಾಸ್ತವಿಕ ಸಮಾಜವಾದದ ವಿಧಾನ. ನವ್ಯಕವಿಗಳು, ಕ್ರಾಂತಿಕಾರಿ ಕವಿಗಳು, ಸಮಷ್ಟಿವಾದಿಗಳು, ಮಾನವತಾವಾದಿಗಳು ಇವರು: ಪಾವ್ಲೊ ತಿಚೀನಾ (1891– ) ವಸೀಲ್ ಎಲಾಂಸ್ಕಿ (1893–1923), ಓಲಜಿಮಿರ್ ಸಸ್ಯೂರ (1898–1965) ಮಿಕೋಲ ಬಷಾನ್ (1904–1969) ಹಾಗೂ ಮಾಕ್ಸಿಮ್‌ರಿಲ್‌ಸ್ಕಿ (1895–1964), 1920ರ ಅನಂತರದ ತರುಣದಲ್ಲಿ ಮಹಾಗದ್ಯದ ಕ್ಷೇತ್ರದಲ್ಲಿ ಉನ್ನತ ಬೆಳವಣಿಗೆಯುಂಟಾಯಿತು. ಆಂದ್ರೀ ಗಲೋಫ್‌ಕ (1897– ), ಪೆತ್ರೋ ಪಾಂಚೆಂಕ (1891– ), ಯೂರಿಯನೋಫ್‌ಸ್ಕಿ (1902–1954) ಹಾಗೂ ಪಾವ್ಲೊ ಗುಬ್ಯೆಂಕೊ (ಕಾವ್ಯನಾಮ ಅಸ್ತಾಪ್ ವೀಷ್ನ್ಯ). (1889–1956) ಇವರೆಲ್ಲರೂ ಸಾಮಾಜಿಕ ಕಾದಂಬರಿಗಳ ಪ್ರತಿಪಾದಕರಾಗಿ, ರಾಷ್ಟ್ರೀಯ ವಿನೋದ ಹಾಗೂ ವಿಡಂಬನೆಯ ಶಾಲೆಯನ್ನು ನಿರ್ಮಿಸಿ, ಅದಕ್ಕೆ ತಕ್ಕ ಅನುಯಾಯಿಗಳನ್ನು ದೊರಕಿಸಿದರು. ನಾಟಕಗಳು ಜಯಭೇರಿ ಹೊಡೆದು ವೃತ್ತಿನಾಟಕಸಂಸ್ಥೆ ಹಾಗೂ ಹವ್ಯಾಸಿ ನಾಟಕಸಂಸ್ಥೆಗಳು ಉತ್ತಮರೀತಿಯಲ್ಲಿ ಅಭಿಮಾನಿಗಳನ್ನು ಆಕರ್ಷಿಸಿದುವು. ಅದರಲ್ಲಿ ಉತ್ತಮವಾದ ನಾಟಕಕರ್ತೃಗಳು: ಯಕೀಫ್ ಮಮಂತೋಫ್ (1888–1940) ಹಾಗೂ ಇವಾನ್ ದ್ನಿಪ್ರೋವ್‌ಸ್ಕಿ (1895–1934) , ಮಿಕೋಲ ಕೂಲಿಷ್ (1881–1952) ಎಂ.ಇರ್ಚನ್. ಐ. ಮಿಕಿಟ್ಯಂಕ ಹಾಗೂ ಅಲೆಕ್ಸಾಂಡರ್ ಕೋರ್ನೀಚುಕ್ (1905– ) ಮೊದಲಾದವರು. 1939ರವರೆಗೆ ಪೋಲೆಂಡಿನ ಒಂದು ಭಾಗವಾಗಿದ್ದ ಪಶ್ಚಿಮ ಉಕ್ರೇನಿನಲ್ಲಿ ಕ್ರಾಂತಿಕಾರಿ ಸಾಹಿತ್ಯದ ಅಭಿವೃದ್ಧಿಯಾಯಿತು. ಅದಕ್ಕೆ ಮುಖ್ಯ ಕಾರಣಕರ್ತೃಗ ಳೆಂದರೆ ಅಲೆಕ್ಸಾಂಡರ್ ಗವ್ರಿಲ್ಯೂಕ್ (1911–1941), ಸ್ಟಿಫಾನ್ ಅಲೆಕ್ಸ್ಯೂಕ್ (1892–1941) ಪೆತ್ರೊ ಕಸ್ಲಾನ್ಯೂಕ್ (1904–1965) ಮತ್ತು ಯರಾಸ್ಲಾಫ್ ಗಲಾನ್ (1902–49).

1920ರ ಮತ್ತು 1930ರ ನಡುವಣ ಸಾಹಿತ್ಯದ ಮುಖ್ಯ ಲಕ್ಷಣವೆಂದರೆ ಪ್ರಧಾನಸ್ವರಗತಿಯ ಎಲ್ಲೆಯ ವಿಸ್ತರಣೆ, ಜೀವನದ ಕ್ರಾಂತಿಕಾರಿ ಬದಲಾವಣೆಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳ ಉದ್ಭವ, ನೂತನ ರೂಪದ ನಾಯಕನ ಅವತಾರ, ಎಲ್ಲ ರೀತಿಯ ಸಾಹಿತ್ಯಶೈಲಿಯ—ಅದರಲ್ಲೂ ಸಾಮಾಜಿಕ ಹಾಗೂ ಐತಿಹಾಸಿಕ ಕಾದಂಬರಿಗಳು, ವಿಜ್ಞಾನ ಕಾಲ್ಪನಿಕ ಮತ್ತು ಸಾಹಸ ಕಾದಂಬರಿಗಳು, ಪುರಾಣ ಕಾವ್ಯಗಳು ಮತ್ತು ಯುವಜನಾಂಗದ ಹಾಗೂ ಎಳೆಯರ ಸಾಹಿತ್ಯ ಶೈಲಿಗಳ—ಅಭಿವೃದ್ಧಿ.

ಎರಡನೆಯ ಮಹಾಯುದ್ಧವಾದ ಅನಂತರ ರಾಷ್ಟ್ರಪ್ರೇಮ, ಸಮರವಿರೋಧಿ ಮತ್ತು ಮಾನವೀಯ ಮೌಲ್ಯಗಳು ಸಾಹಿತ್ಯವನ್ನು ಪ್ರವೇಶಿಸಿದವು. ಅಲೆಕ್ಸಾಂಡರ್ ಗೊಂಚಾರ್ (1918– ) ಪ್ರಪರನೋಸ್‌ತ್ಸಿಯಲ್ಲಿ ಮತ್ತು ಮಿಹೈಲ ಸ್ಟೇಲ್ ಮಹ್ (1912– ) ಅನೇಕ ಕಾದಂಬರಿಗಳ ಸರಣಿಯಲ್ಲಿ ಹಾಗೂ ವೈಲಿಕರಿದ್ನ್ಯದಲ್ಲಿ ರಾಷ್ಟ್ರೀಯ ಜೀವನದ ವಿಶಾಲ ಕಾವ್ಯರೂಪಕವನ್ನು ನೀಡಿದರು. ಯೂರಿಸ್ಮೋಲಿಚ್ (1900– ), ನತಾನ್ ರಿಬಾಕ್ (1913– ), ಸಿವ್ಯೋನ್ ಸ್ಕ್ಲಾರ್‌ಯಂಕ (1901–1962) ಹಾಗೂ ಅಲೆಕ್ಸಾಂಡರ್ ಇಲ್‌ಚೆಂಕ ಇವರು ಐತಿಹಾಸಿಕ ಕಾದಂಬರಿಗಳನ್ನು ಪ್ರಕಟಿಸಿದರು.

ಆಂದ್ರೀ ಮಾಲಿಷ್ಕ (1912– ), ಸ್ಟಿಫಾನ್ ಅಲೀಯ್ ನ್ಯೂಕ್ (1908– ), ಎಲ್. ಪಿರ್ವಮಾಯ್‌ಸ್ಕೆ (1908– ), ಪಿ.ವೊರಂಕೊ ಮತ್ತು ಡಿ. ಪವ್ಲೀಚ್ಕ ಮೊದಲಾದವರು ಕಾವ್ಯ ಪ್ರಪಂಚಕ್ಕೆ ಗಮನಾರ್ಹವಾದ ಕೊಡುಗೆಗಳನ್ನು ನೀಡಿದವರು.

ಅಲೆಕ್ಸಾಂಡರ್ ದೆದವ್‌ಷೆಂಕ (1894–1956) ಅಸಾಮಾನ್ಯ ಬುದ್ಧಿಯುಳ್ಳ ವ್ಯಕ್ತಿಯೆಂದು ಹೆಸರುಗಳಿಸಿ, ಕಲೆಗಾರನಾಗಿ ಯಶಸ್ಸುಗಳಿಸಿ, ಚಲನಚಿತ್ರ ನಿರ್ಮಾಪಕನೂ ನಾಟಕಕಾರನೂ ಕಾದಂಬರಿಕಾರನೂ ಪ್ರಕಾಶಕನೂ ಆಗಿದ್ದ.

ಒಟ್ಟಿನಲ್ಲಿ ಹೇಳುವುದಾದರೆ ಉಕ್ರೇನಿಯನ್ ಸಾಹಿತ್ಯ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದೊಡನೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದೆ. ಅದಕ್ಕೆ ತಾರಾಸ್‌ಷೆವ್ ಚೆಂಕೂ ನೀಡಿರುವ ಕೊಡುಗೆ ಅತ್ಯಂತ ಗಮನೀಯವಾದುದಾಗಿಯೂ ಅಗಾಧವಾಗಿಯೂ ಇದೆ. ಇಂದಿಗೂ ರಾಷ್ಟ್ರದ ಅತ್ಯುತ್ತಮ ಬರೆಹಗಾರರು ಹಾಗೂ ಕವಿಗಳಿಗೆ ಈತನ ಹೆಸರಿನಲ್ಲಿ ಬಹುಮಾನ ನೀಡಲಾಗುತ್ತಿದೆ.

ಇಂದಿನ ಆಧುನಿಕ ಉಕ್ರೇನಿಯನ್ ಸಾಹಿತಿಗಳು ಹಿಂದಿನವರ ಕೃತಿಘನತೆ ಹಾಗೂ ಉನ್ನತಗುಣ ಮೌಲ್ಯಗಳನ್ನು ಗೌರವಿಸಿ ಅವರ ಪರಂಪರೆಯ ಹಾದಿಯಲ್ಲಿಯೇ ಮುನ್ನಡೆದು ಕೃತಿರಚನೆ ಮಾಡುತ್ತಿರುವರು. (ಕೆ.ಬಿ.ಎಂ.)

**ಉಗನಿಬಳ್ಳಿ:** ಕನ್ವಾಲ್ವುಲೇಸೀ ಕುಟುಂಬಕ್ಕೆ ಸೇರಿದ ಅಡರುಬಳ್ಳಿ. ಆರ್ಗೈರಿಯ ಎಲಿಪ್ಟಿಕ, ಮತ್ತು ಆರ್ಗೈರಿಯ ಇಂಬ್ರಿಕೇಟ ಎಂಬ ಎರಡು ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಏಷ್ಯಖಂಡದ ಉಷ್ಣ ಪ್ರದೇಶಗಳಲ್ಲಿ ಮತ್ತು ಮಲೇಷ್ಯಗಳಲ್ಲಿ ಬೆಳೆಯುವುದು.

ಪಶ್ಚಿಮಘಟ್ಟಗಳು, ಕರ್ನಾಟಕ, ಕೇರಳ ಹಾಗೂ ಪಳನಿ ಬೆಟ್ಟಗಳಲ್ಲಿ ಬಲು ಸಾಮಾನ್ಯ ಬಳ್ಳಿ ಹರಡಿಕೊಂಡು ಬೆಳೆಯುತ್ತದೆ. ಎಲೆಗಳ ಜೋಡಣೆ ಪರ್ಯಾಯ, ಆಕಾರ ಅಂಡ ಅಥವಾ ಕೊಂಚ ಉದ್ದುದ್ದ. ಹೂಗಳು ಗೊಂಚಲು ಗೊಂಚಲಾಗಿರುತ್ತದೆ. ಅವುಗಳ ಬಣ್ಣ ಗುಲಾಬಿ ನಸುನೇರಳೆ ಅಥವಾ ಬಿಳಿ. ಕಾಯಿಗಳು ಸಣ್ಣಗೆ ಗುಂಡಗೆ ಇರುತ್ತದೆ. ಬಣ್ಣ ಕಿತ್ತಳೆ ಅಥವಾ ಕೆಂಪು.

ಉಗನಿಬಳ್ಳಿಯ ಕಾಂಡ ಉದ್ದವಾಗಿದ್ದು ಬಲು ಗಟ್ಟಿಯಾಗಿರುತ್ತದೆ. ಆದ್ದರಿಂದ ಇದನ್ನು ಹುಲ್ಲಿನ ಕಂತೆಗಳನ್ನು ಕಟ್ಟಲು ಹಗ್ಗದಂತೆ ಉಪಯೋಗಿಸುತ್ತಾರೆ. ಲೆ. ಎಲಿಪ್ಟಿಕದ ಎಲೆಗಳನ್ನು ಮೈಸೂರಿನ ಕೆಲವು ಭಾಗಗಳಲ್ಲಿ ಹಸಿರುಗೊಬ್ಬರವಾಗಿ ಉಪಯೋಗಿಸುವುದುಂಟು. ಲೆ. ಅಗ್ರಿಗೇಟ ಎಂಬುದರ ಎಲೆಗಳನ್ನು ಅರೆದು ತಯಾರಿಸಿದ ಲೇಪವನ್ನು ಕೆಮ್ಮು, ಗಂಟಲಿನ ಉರಿಯೂತಗಳ ಚಿಕಿತ್ಸೆಯಲ್ಲಿ ಗಂಟಲಿನ ಹೊರಭಾಗಕ್ಕೆ ಹಚ್ಚುತ್ತಾರೆ. ಲೆ. ಸಿಟೋಸ ಎಂಬ ಬಗೆಯ ಎಲೆಗಳನ್ನು ತರಕಾರಿಯಾಗಿಯೂ ಉಪಯೋಗಿಸುತ್ತಾರೆ. (ಕೆ.ಬಿ.ಎಸ್.)

**ಉಗಾಂಡ:** ಮಧ್ಯ ಆಫ್ರಿಕದ ಪೂರ್ವದಲ್ಲಿರುವ ಒಂದು ಗಣರಾಜ್ಯ. ದಕ್ಷಿಣ ಅಕ್ಷಾಂಶ $1^0$ ಯಿಂದ ಉತ್ತರ ಅಕ್ಷಾಂಶ $4^0$ ಮತ್ತು ಪೂ.ರೇ. $29^0$–$35^0$ ಗಳ ನಡುವೆ ಇರುವ ದೇಶ. ಉತ್ತರದಲ್ಲಿ ಸೂಡಾನ್, ಪೂರ್ವದಲ್ಲಿ ಕೀನ್ಯ, ದಕ್ಷಿಣದಲ್ಲಿ ಟಾಂಜಾನಿಯ (ತಾನ್ಜನಿಯ) ಮತ್ತು ರುವಾಂಡ, ಪಶ್ಚಿಮದಲ್ಲಿ ಕಾಂಗೋ ಗಣರಾಜ್ಯ ಇವುಗಳ ನಡುವೆ ಇರುವ ಈ ದೇಶದ ಒಟ್ಟು ವಿಸ್ತೀರ್ಣ 2,36,037 ಚಕಿಮೀ. ಜನಸಂಖ್ಯೆ 22,824,000

(2002). ರಾಜಧಾನಿ ಕಂಪಾಲ ಜನಸಂಖ್ಯೆ 7,73,463 (2002). ಈ ರಾಷ್ಟ್ರದ ಮಧ್ಯದಲ್ಲಿನ ಆಧಿಪತ್ಯದ ಹೆಸರಾದ ಬುಗಾಂಡವೇ 19ನೆಯ ಶತಮಾನದಲ್ಲಿ ಸ್ವಾಹಿಲಿ ಭಾಷೆ ಆಡುವವರ ಬಾಯಲ್ಲಿ ಉಗಾಂಡ ಆಯಿತು.

**ಮೇಲ್ಮೈ ಲಕ್ಷಣ:** ಪೂರ್ವ ಪಶ್ಚಿಮ ಅಂಚುಗಳಲ್ಲಿ ಪರ್ವತ, ನಡುವೆ 1,300 ಮೀ ಎತ್ತರದ ಪ್ರಸ್ಥಭೂಮಿ. ದಕ್ಷಿಣದ ವಿಕ್ಟೋರಿಯ ಸರೋವರ ಈ ವಿಶಾಲ ಪ್ರಸ್ಥಭೂಮಿಯ ಅಂಚಿಗೆ ತಾಕಿ, ಈ ದೇಶದ ಗಡಿಯನ್ನೂ ದಾಟಿ ದಕ್ಷಿಣಕ್ಕೆ ವಿಸ್ತರಿಸಿದೆ. ಆಲ್ಬರ್ಟ್, ಎಡ್ವರ್ಡ್ ಮತ್ತು ಜಾರ್ಜ್ ಇಲ್ಲಿರುವ ಇತರೆ ಸರೋವರಗಳು. ಪರ್ವತಶಿಖರಗಳ ಪೈಕಿ ಎಲ್ಗನ್ (4321.ಮೀ) ಮಾರ್ಗೊರಿಟ ಪರ್ವತ (5,109.ಮೀ) ಎತ್ತರವಿದೆ. ಪೂರ್ವದಲ್ಲೂ ರೂವಂಜೋರಿ ಪಶ್ಚಿಮದಲ್ಲೂ ಇವೆ. ರೂವಂಜೋರಿ ಹಿಮಾಚ್ಛಾದಿತವಾದದ್ದು. ನೈಲ್ ನದಿಯ ಉಗಮ ಈ ದೇಶದಲ್ಲೇ ಅನೇಕ ನದಿಗಳು ಇಲ್ಲಿ ಆಳವಾದ ಕಣಿವೆ ಕೊರೆದಿವೆ.

**ವಾಯುಗುಣ, ಸಸ್ಯವರ್ಗ:** ಸಮಭಾಜಕವೃತ್ತದ ಆಚೀಚೆ ಹಬ್ಬಿರುವ ಈ ದೇಶದ ಬಹು ಭಾಗ ಎತ್ತರ. ಆದ್ದರಿಂದ ಒಟ್ಟಿನಲ್ಲಿ ವಾಯುಗುಣ ಹಿತಕರ. ವಿಕ್ಟೋರಿಯ ಸರೋವರದ ಬಳಿಯಲ್ಲಿ ಮಳೆ ಧಾರಾಳ ವರ್ಷವಿಡೀ 116 ಸೆಂಮೀ ಮಳೆ ಆಗುತ್ತದೆ. ಇಲ್ಲಿನ ಉಷ್ಣತೆ ಎಲ್ಲ ತಿಂಗಳೂ ಹೆಚ್ಚುಕಡಿಮೆ ಒಂದೇ ಮಟ್ಟ. (23° ಸೆ.) ಉಳಿದ ಕಡೆಗಳಲ್ಲಿ ಮಳೆ ವರ್ಷಕ್ಕೆ 100 ಸೆಂಮೀ.ಗಳಿಗಿಂತ ಕಡಿಮೆ.

ಹೆಚ್ಚು ನೀರು ಸರಬರಾಜಿರುವ ಉಗಾಂಡ ಪ್ರಸ್ಥಭೂಮಿಯಲ್ಲಿ ಸವನ್ನ ಮಾದರಿಯ ಹುಲ್ಲುಗಾವಲಿದೆ. ಈಗ ಇಲ್ಲಿ ಮಾನವನಿರ್ಮಿತ ಬಾಳೆತೋಟ ಹಬ್ಬುತ್ತಿದೆ. ಪಶ್ಚಿಮದ ಎತ್ತರ ನೆಲದಲ್ಲಿ ತುಂಡು ಹುಲ್ಲು ಒತ್ತಾಗಿ ಬೆಳೆದಿದೆ. ಪರ್ವತದ ಇಳಿಜಾರಿನಲ್ಲಿ ಕಾಡುಗಳಿವೆ. ಈಶಾನ್ಯ ಭಾಗದಲ್ಲಿ ಜಾಲಿ ಮರಗಳ ಬುಡದಲ್ಲಿ ಹುಲ್ಲು ಬೆಳೆಯುತ್ತದೆ.

**ಜನಸಾಂದ್ರತೆ, ಉದ್ಯೋಗ:** ಉತ್ತರದ ಪ್ರಾಂತ್ಯ ಬಹಳ ಹಿಂದುಳಿದಿದೆ. ಸಂಚಾರ ಸಂಪರ್ಕವಿಲ್ಲದೆ ಮರುಭೂಮಿಯ ವಾತಾವರಣದಿಂದ ಕೂಡಿರುವ ಈ ಭಾಗದ ಜನ ದನಕರು ಮತ್ತು ಕುರಿಗಳನ್ನು ಸಾಕುತ್ತಾರೆ. ಪೂರ್ವ ಪ್ರಾಂತ್ಯ ಜನಭರಿತ. ಜನಸಾಂದ್ರತೆ ಚ.ಕೀ.ಗೆ 200ಕ್ಕೂ ಹೆಚ್ಚು. ಬುಗಾಂಡ ಪ್ರಾಂತ್ಯ ಹೆಚ್ಚು ಮುಂದುವರಿದಿದೆ. ವ್ಯವಸಾಯವೂ ದನಕರು ಕುರಿಗಳ ಪೋಷಣೆಯೂ ಇಲ್ಲಿನ ಜನರ ಮುಖ್ಯ ಕಸಬು. ಬಾಳೆಹಣ್ಣು, ನೆಲಗಡಲೆ ಮತ್ತು ಜೋಳ ಮುಖ್ಯ ಆಹಾರ ಬೆಳೆಗಳು.

ಕಾಫಿ, ಹತ್ತಿ ಮತ್ತು ಹೊಗೆಸೊಪ್ಪು ಉಗಾಂಡದ ವಾಣಿಜ್ಯ ಬೆಳೆಗಳು. ಹತ್ತಿ, ಕಾಫಿ ಇವು ಮುಖ್ಯವಾದ ವಿದೇಶಿ ವಿನಿಮಯ ಸಂಪಾದಕ ವಸ್ತುಗಳು. ಕಾಫಿ ತೋಟಗಳು ಎಲ್ಗನ್ ಪರ್ವತಗಳ ಇಳಿಜಾರುಗಳಲ್ಲಿವೆ. ದಕ್ಷಿಣ ಮತ್ತು ಪೂರ್ವಭಾಗಗಳಲ್ಲಿ ಉತ್ತಮ ದರ್ಜೆಯ ಉದ್ದ ಎಳೆಯ ಹತ್ತಿ ಬೆಳೆಯುತ್ತದೆ. ರೂವಂಜೋರಿಯ ತಪ್ಪಲು ಪ್ರದೇಶದಲ್ಲಿ ಟೀ ತೋಟಗಳಿವೆ. ಹೆಚ್ಚಾಗಿ ಮಳೆ ಬೀಳುವ ವಿಕ್ಟೋರಿಯ ಸರೋವರದ ಸುತ್ತಮುತ್ತ ಕಬ್ಬು, ಗೆಣಸು, ಅವರೆ ಮತ್ತು ಬಟಾಣಿ ಬೆಳೆಯುತ್ತಾರೆ. ಸಿಮ್‌ಸಿಮ್ ಎಂಬುದು ಮತ್ತೊಂದು ಪ್ರಮುಖ ಬೆಳೆ. ಮೀನುಗಾರಿಕೆಯೂ ಒಂದು ಮುಖ್ಯ ಉದ್ಯೋಗ. ರೂವಂಜೋರಿ ಪ್ರದೇಶದಲ್ಲಿ ತಾಮ್ರ, ಕೋಬಾಲ್ಟ್, ಯುರೇನಿಯಂಗಳೂ ರೆಲೆಂಬಿಯ ಮತ್ತು ಟೋರೋರೋದಲ್ಲಿ ಕಬ್ಬಿಣದ ಅದಿರೂ ಫಾಸ್ಫೇಟುಗಳೂ ದೊರಕುತ್ತವೆ.

ಜಿಂಜ ಉಗಾಂಡದ ಪ್ರಮುಖ ಕೈಗಾರಿಕಾಕೇಂದ್ರ. ಕೀನ್ಯ–ಉಗಾಂಡ ರೈಲುಮಾರ್ಗಗಳು ಇಲ್ಲಿ ಕೂಡುತ್ತವೆ. ಹತ್ತಿರದಲ್ಲಿರುವ ಓಪಿನ್ ಜಲಪಾತದಿಂದ ಹೇರಳವಾದ ವಿದ್ಯುತ್ತನ್ನು ತಯಾರಿಸುವುದರಿಂದ ಇಲ್ಲಿ ಈಚೆಗೆ ಕೈಗಾರಿಕೆ ಬೆಳೆದಿದೆ. ಸಿಮೆಂಟ್, ಹತ್ತಿ, ಜವಳಿ, ಸಕ್ಕರೆ, ತಾಮ್ರ ಕೈಗಾರಿಕೆಗಳು ಮುಖ್ಯ. ಅನುಭೋಗ ವಸ್ತುಗಳ ಕೈಗಾರಿಕೆಗಳೂ ಅಲ್ಪ ಪ್ರಮಾಣದಲ್ಲಿ ಸ್ಥಾಪಿತವಾಗಿವೆ. ಪೋರ್ಟ್‌ಬೆಲ್, ಟರವಾರೋ ಮತ್ತು ಬಾಲೆ ಈ ಕಾರ್ಖಾನೆಗಳ ಕೇಂದ್ರಗಳು.

ವಿಕ್ಟೋರಿಯ ಸರೋವರದ ದಡದಲ್ಲಿರುವ ಎನ್‌ಟಿಬ್ಬೆ ಉಗಾಂಡದ ಪ್ರಮುಖ ನಗರ. ಇದು ವಿಮಾನ ನಿಲ್ದಾಣ ಮತ್ತು ಪಾಶ್ಚಾತ್ಯ ರಾಷ್ಟ್ರಗಳೊಂದಿಗೆ ವಾಯುಮಾರ್ಗ ಸಂಪರ್ಕ ಕಲ್ಪಿಸಿದೆ.

ಕಂಪಾಲ ಮುಖ್ಯ ವಾಣಿಜ್ಯ ಕೇಂದ್ರ. ಮೊಂಬಾಸದೊಂದಿಗೆ ಇದಕ್ಕೆ ರೈಲ್ವೆ ಸಂಪರ್ಕ ವುಂಟು. ಕಂಪಾಲದ ಬಳಿ ಇರುವ ಮತಾತಿರೆ ಎಂಬುದು ಪೂರ್ವ ಆಫ್ರಿಕ ವಿಶ್ವವಿದ್ಯಾನಿಲಯ ಕೇಂದ್ರ. (ಎಸ್.ಎಲ್.ಎಂ.; ಎಚ್.ಆರ್.ಡಿ.)

**ಆಡಳಿತ ವ್ಯವಸ್ಥೆ:** ಉಗಾಂಡ ಸ್ವತಂತ್ರ ಸಾರ್ವಭೌಮ ರಾಜ್ಯ. ಬ್ರಿಟಿಷ್ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರ. ಐದು ವರ್ಷಾವಧಿಗೆ ಆಯ್ಕೆಯಾಗುವ ಅಧ್ಯಕ್ಷನೇ ರಾಷ್ಟ್ರದ ಅಧಿಪತಿ. ಇಂದು ರಾಷ್ಟ್ರೀಯ ಸಭೆಯಲ್ಲಿ ಸಭಾಪತಿಯೂ 332 ಮಂದಿ ಚುನಾಯಿತ ಸದಸ್ಯರೂ ವಿಶೇಷ ರೀತಿಯಲ್ಲಿ ಆಯ್ಕೆಯಾದ 9 ಸದಸ್ಯರೂ ಇದ್ದಾರೆ. ಆಯ್ಕೆಯಾದ ಸದಸ್ಯರ ಪೈಕಿ 21 ಜನ ಉಗಾಂಡದ ಪ್ರತಿನಿಧಿಗಳು. ಈ ಸಭೆಯ ಅಧಿಕಾರಾವಧಿ ಐದು ವರ್ಷ. ರಾಷ್ಟ್ರದ ಅಧ್ಯಕ್ಷ ಅಲ್ಲಿನ ಮಂತ್ರಿಸಂಪುಟದ ಸಲಹೆಯಂತೆ ನಡೆಯುತ್ತಾನೆ. ಸಂಸತ್ತಿಗೆ ಈ ಸಂಪುಟದ ಸಾಮೂಹಿಕ ಹೊಣೆಗಾರಿಕೆಯಿರುತ್ತದೆ. ರಾಷ್ಟ್ರೀಯ ಸಭೆಯಲ್ಲಿ ಬಹುಮತ ಪಡೆದಿರುವಂತೆ ಕಂಡುಬರುವವನನ್ನು ಪ್ರಧಾನ ಮಂತ್ರಿಯನ್ನಾಗಿ ಅಧ್ಯಕ್ಷ ನೇಮಿಸುತ್ತಾನೆ. ರಾಜಕೀಯವಾಗಿ ಉಗಾಂಡವನ್ನು ನಾಲ್ಕು ಆಧಿಪತ್ಯಗಳನ್ನಾಗಿ (ಉಗಾಂಡ, ಅಂಕೋಲೆ, ಬುನ್ಯೋರೊ ಮತ್ತು ಟೋರೊ) ವಿಂಗಡಿಸಲಾಗಿದೆ. ಪ್ರತಿಯೊಂದು ಆಧಿಪತ್ಯವೂ ತನ್ನದೇ ಆದ ಶಾಸನಸಭೆಯನ್ನೂ ಮಂತ್ರಿ ಸಂಪುಟವನ್ನೂ ಹೊಂದಿದೆ. ಜಿಲ್ಲೆಗಳ ಆಡಳಿತ ನೋಡಿಕೊಳ್ಳಲು ಜಿಲ್ಲಾ ಮಂಡಲಿಗಳಿವೆ. ಉಗಾಂಡದ ಉಚ್ಚ ನ್ಯಾಯಾಲಯದ ಕ್ಷೇತ್ರಾಧಿಕಾರ ಇಡೀ ದೇಶಕ್ಕೆ ವ್ಯಾಪಿಸಿದ್ದು. ಬುಗಾಂಡದಲ್ಲಿನ ಉಚ್ಚ ನ್ಯಾಯಾಲಯಕ್ಕೆ ಆ ಆಧಿಪತ್ಯದೊಳಗೆ ಉಗಾಂಡದ ಉಚ್ಚ ನ್ಯಾಯಾಲಯದಷ್ಟೇ ಕ್ಷೇತ್ರಾಧಿಕಾರವುಂಟು. ಉಳಿದ ಆಧಿಪತ್ಯಗಳ ನ್ಯಾಯಾಲಯಗಳಿಗೆ ಇಷ್ಟು ಅಧಿಕಾರವಿಲ್ಲ. ಸಂಪ್ರದಾಯ ನ್ಯಾಯಕ್ಕೆ ಬದಲಾಗಿ ಲಿಖಿತನ್ಯಾಯ ಸ್ಥಾಪಿಸಲು ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. *

**ಉಗಾಂಡದ ಇತಿಹಾಸ:** 1850ರ ಹಿಂದಿನ ಉಗಾಂಡದ ಇತಿಹಾಸದ ಬಗ್ಗೆ ಲಿಖಿತ ದಾಖಲೆಗಳೇನೂ ಇಲ್ಲ. ವಿಕ್ಟೋರಿಯ ಸರೋವರದ ಉತ್ತರ ಭಾಗದಲ್ಲಿ ಬಲು ಹಿಂದಿನಿಂದಲೂ ಬ್ಯಾಂಟುಗಳು ವಾಸಿಸುತ್ತಿದ್ದಿರಬೇಕು. ನೈಲ್ ಪ್ರದೇಶವಾಸಿಗಳು (ನೈಲೋಟಿಕ್) ಇಲ್ಲಿಗೆ ಬಂದು ಬ್ಯಾಂಟುಗಳೊಂದಿಗೆ ಬೆರೆತರು. ಬಹುಶಃ 15ನೆಯ ಶತಮಾನದಲ್ಲಿ ಪಶ್ಚಿಮ ಉಗಾಂಡಕ್ಕೆ ಹಿಮ ಬುಡಕಟ್ಟಿನ ಜನ ಬಂದರು. ಈ ಜನರದ್ದು ಎತ್ತರ ನಿಲುವು. ಬಿಳಿಯ ತೊಗಲು, ಆಕರ್ಷಕ ರೂಪು. ಈ ದನಗಾಹಿಗಳು ಇಲ್ಲಿಗೆ ಬಂದೊಡನೆಯೆ ಒಡೆಯರಂತೆ ವರ್ತಿಸಿ ಇಲ್ಲಿನ ಮೂಲನಿವಾಸಿ ರೈತ ಜನರನ್ನು ಆಳುಗಳಂತೆ ಕಂಡರು. ಅನಂತರ ಬಂದ ನೈಲ್ ವಾಸಿಗಳಿಗೂ ಇವರಿಗೂ ಆಗಾಗ ಜಗಳವಾಗುತ್ತಿದ್ದುವು.

19ನೆಯ ಶತಮಾನದವರೆಗೆ ಬುನ್ಯೋರೊ–ಕಿಟಾರ ರಾಜ್ಯ ದಕ್ಷಿಣದ ಉಳಿದೆಲ್ಲ ರಾಜ್ಯಗಳಿಗಿಂತ ಅತ್ಯಂತ ಪ್ರಬಲವಾಗಿತ್ತು. ಅದು ತೀರ ಬೆಳೆದು, ಕೊನೆಗೆ ತನ್ನ ಭಾರದಿಂದ ತಾನೇ ಕುಸಿಯಿತು. ಬುನ್ಯೋರೋ–ಕಿಟಾರದ ಆಗ್ನೇಯಕ್ಕಿದ್ದ ಪುಟ್ಟ ರಾಜ್ಯ ಉಗಾಂಡ ಕ್ರಮೇಣ ಪ್ರಬಲವಾಗಿ ನೆರೆ ಪ್ರದೇಶಗಳನ್ನು ಆಕ್ರಮಿಸಿಕೊಂಡಿತು. ಉಗಾಂಡದ ಉಚ್ಛ್ರಾಯ ಕಾಲದಲ್ಲಿ ಇಲ್ಲಿಗೆ ಬಂದವರು ಅರಬ್ಬೀ ಜನ ದಂತ ಹಾಗೂ ಗುಲಾಮೀ ವ್ಯಾಪಾರ ಇವರ ಪ್ರಧಾನ ಉದ್ದೇಶ. ಐರೋಪ್ಯ ಸಾಹಸಿಗಳೂ ಸಂಶೋಧಕರೂ ಅನಂತರ ಬಂದರು. ಈ ವೇಳೆಗೆ ಈಜಿಪ್ಟ್ ನೈಲ್‌ನದಿಯ ಉದ್ದಕ್ಕೂ ತನ್ನ ಪ್ರಾಬಲ್ಯ ಬೆಳೆಸಿಕೊಂಡಿತ್ತು.

ಐರೋಪ್ಯ ಕ್ರೈಸ್ತ ಪಾದ್ರಿಗಳ ಮೊದಲ ತಂಡ ಉಗಾಂಡಕ್ಕೆ ಬಂದದ್ದು 1877ರಲ್ಲಿ. ಇವರು ಇಲ್ಲಿನ ರಾಜಕೀಯದಲ್ಲೂ ಕೈಹಾಕಲಾರಂಭಿಸಿದರು. ಸಾಮ್ರಾಜ್ಯಷಾಹಿ ಜರ್ಮನ್ನರಿಗೂ ಇಂಗ್ಲಿಷರಿಗೂ ನಡುವೆ ಸ್ಪರ್ಧೆ ಏರ್ಪಟ್ಟಿತು. 1890ರಲ್ಲಿ ಇವರ ನಡುವೆ ಏರ್ಪಟ್ಟ ಒಪ್ಪಂದದ ಪ್ರಕಾರ ದಕ್ಷಿಣ ಅಕ್ಷಾಂಶ 1°. ಯ ಉತ್ತರಕ್ಕಿರುವ ಪ್ರದೇಶದಲ್ಲಿ ಬ್ರಿಟಿಷ್ ಪ್ರಭಾವವಲಯದೊಳಕ್ಕೆ ಬರತಕ್ಕದ್ದೆಂದಾಯಿತು. ಬ್ರಿಟಿಷ್ ಸರ್ಕಾರದ ಪರವಾಗಿ ಈ ಪ್ರದೇಶದ ಆಡಳಿತ ನಿರ್ವಹಿಸುವ ಹೊಣೆ ಹೊತ್ತ ಸಂಸ್ಥೆಯೇ ಬ್ರಿಟಿಷ್ ಈಸ್ಟ್ ಆಫ್ರಿಕ ಕಂಪನಿ. ಈ ಕಂಪನಿಯ ಪ್ರತಿನಿಧಿಯಾದ ಕ್ಯಾಪ್ಟನ್ ಲೂಗಾರ್ಡ್ ಈ ಪ್ರದೇಶದ ಮುಖಂಡರುಗಳೊಡನೆ ಕ್ರಮೇಣ ಒಪ್ಪಂದಮಾಡಿ ಕೊಂಡು ಇವನ್ನೆಲ್ಲ ತನ್ನ ಕಂಪನಿಯ ರಕ್ಷಣೆಯ ಕಕ್ಷೆಯೊಳಕ್ಕೆ ಸೇರಿಸಿಕೊಂಡ. ಆದರೆ ಹಣದ ಅಭಾವದಿಂದ ಈ ಕಂಪನಿ ತನ್ನ ಹೊಣೆ ನಿರ್ವಹಿಸಲಾರದೆ ಹೋಯಿತು. ಬ್ರಿಟಿಷ್ ಸರ್ಕಾರ ಈ ಆಯಕಟ್ಟಿನ ಪ್ರದೇಶವನ್ನು ಬಿಟ್ಟುಕೊಡಲೊಲ್ಲದೆ 1894ರಲ್ಲಿ ತಾನೇ ಇದರ ರಕ್ಷಣೆಯ ಭಾರ ಹೊತ್ತುಕೊಂಡಿತು.

ಈ ಪ್ರದೇಶದಲ್ಲಿ ಆಗ ಅನೇಕ ಛಿದ್ರಕಾರಕ ಪ್ರವೃತ್ತಿಗಳಿದ್ದುವು. ಅಲ್ಲದೆ ಬ್ರಿಟಿಷ್ ಆಡಳಿತಗಾರರ ವಿರುದ್ಧ ಇದ್ದ ಅಸಮಾಧಾನವೂ ವಿಪರೀತ. ದಂಗೆಗಳು ಸಾಮಾನ್ಯವಾಗಿದ್ದುವು. 20ನೆಯ ಶತಮಾನದ ಆದಿಯಲ್ಲಿ ಬ್ರಿಟಿಷ್ ಸರ್ಕಾರ ಈ ಪ್ರದೇಶದ ಮುಖ್ಯ ವಿಭಾಗಗಳ ನಾಯಕರೊಂದಿಗೆ ಕರಾರು ಮಾಡಿಕೊಂಡಿತು. ಅವರು ಬ್ರಿಟಿಷರಲ್ಲಿ ನಿಷ್ಠೆ ತೋರುತ್ತಿರುವ

ವರೆಗೂ ಅಧಿಕಾರ ರಕ್ಷಿಸುವುದಾಗಿ ಬ್ರಿಟಿಷ್ ಸರ್ಕಾರ ಭರವಸೆ ನೀಡಲಾಗಿ ಇಲ್ಲಿ ವಾತಾವರಣ ಸ್ವಲ್ಪ ಸುಧಾರಿಸಿತು. 20ನೆಯ ಶತಮಾನದಲ್ಲಿ ಉಗಾಂಡದ ಆರ್ಥಿಕ ಬೆಳೆವಣಿಗೆ ಸಾಧ್ಯವಾದದ್ದು ತೋಟದ ಉದ್ಯಮದಿಂದ. ಅನೇಕ ಮಂದಿ ಐರೋಪ್ಯರು ಇಲ್ಲಿಗೆ ಬಂದು ನೆಲ ಪಡೆದು ಬೆಳೆ ತೆಗೆಯಲಾರಂಭಿಸಿದರು. ಈ ಕಾಲದ ಒಂದು ಮುಖ್ಯ ರಾಜಕೀಯ ಪ್ರಗತಿಯೆಂದರೆ 1921ರಲ್ಲಿ ಇಲ್ಲಿ ಸ್ಥಾಪಿತವಾದ ವಿಧಾನಪರಿಷತ್ತು. ಆದರೆ ಇದರ ಪ್ರಾತಿನಿಧ್ಯ ತೀರ ಸಂಕುಚಿತವಾಗಿದ್ದರಿಂದ ಇದು ದೇಶದ ಮೇಲೆ ಬೀರಿದ ಪ್ರಭಾವ ಅತ್ಯಲ್ಪ. ಇಲ್ಲಿನ ವಾಣಿಜ್ಯ ಜೀವನದಲ್ಲಿ ಬಹು ಮುಖ್ಯ ಪಾತ್ರವಹಿಸುತ್ತಿದ್ದವರೆಂದರೆ ಭಾರತೀಯರು. ಐರೋಪ್ಯರಿಗಿದ್ದಷ್ಟೇ ಪ್ರಾತಿನಿಧ್ಯ ಇವರಿಗೆ ದೊರಕಿರಲಿಲ್ಲ. ಆದ್ದರಿಂದ ಇವರು ಅಸಮಾಧಾನಗೊಂಡರು. ಆಫ್ರಿಕನ್ನರಲ್ಲಿ ಮಾತ್ರ ಸಾಕಷ್ಟು ಜಾಗ್ರತೆಯೇ ಇನ್ನೂ ಉದ್ಭವಿಸಿರಲಿಲ್ಲ. ಬುಗಾಂಡದ ಜನ ರಾಜಕೀಯವಾಗಿ ಸ್ವಲ್ಪ ಮುಂದುವರೆದಿದ್ದರಾದರೂ ಅವರಿಗೆ ಅವರದೇ ಆದ ಸಭೆ ಇದ್ದದ್ದರಿಂದ ಇಡೀ ಉಗಾಂಡದ ವಿಧಾನ ಪರಿಷತ್ತಿನಲ್ಲಿ ಅವರಿಗೆ ಆಸಕ್ತಿಯಿರಲಿಲ್ಲ. ಈ ಪ್ರದೇಶದ ನಾನಾ ಭಾಗಗಳನ್ನು ಒಂದುಗೂಡಿಸುವ ಪ್ರಯತ್ನವನ್ನು ಅವರು ಸ್ವಾಗತಿಸಲಿಲ್ಲ.

ಎರಡನೆಯ ಮಹಾಯುದ್ಧಕಾಲದಲ್ಲಿ ಹೊರನಾಡಿಗಳೊಂದಿಗೆ ವ್ಯಾಪಾರಕ್ಕೆ ತಡೆಬಿದ್ದದ್ದರಿಂದ ಉಗಾಂಡ ಸ್ವಯಂಪೂರ್ಣತೆ ಸಾಧಿಸಲು ಕ್ರಮಕೈಕೊಳ್ಳಬೇಕಾಯಿತು. ದೇಶದಲ್ಲಿ ಹೆಚ್ಚುತ್ತಿದ್ದ ಜಾಗೃತಿಗೆ ಅನುಸಾರವಾಗಿ 1945ರಲ್ಲಿ ಪ್ರಥಮ ಬಾರಿಗೆ ಇಲ್ಲಿನ ದೇಶೀಯರು ವಿಧಾನಪರಿಷತ್ತಿಗೆ ನಾಮಕರಣ ಪಡೆದರು. ಇವರ ಸಂಖ್ಯೆ ಕ್ರಮೇಣ ಹೆಚ್ಚಿತು. 1955ರಲ್ಲಿ ಮಂತ್ರಿಮಂಡಳಿಗೆ ಖಾಸಗಿ ಪ್ರತಿನಿಧಿಗಳನ್ನೂ ಸೇರಿಸಿಕೊಂಡಿದ್ದು ಈ ದೇಶದ ರಾಜಕೀಯ ಬೆಳವಣಿಗೆಯ ಇತಿಹಾಸದಲ್ಲಿ ಇನ್ನೊಂದು ಮುಖ್ಯ ಘಟನೆ.

ಕ್ರಮೇಣ ಉಗಾಂಡದ ಜನರಲ್ಲಿ ಸ್ವಾತಂತ್ರ್ಯಪ್ರೇಮ ಬೆಳೆಯಿತು. ಕೆಲವು ರಾಜಕೀಯ ಪಕ್ಷಗಳು ಹುಟ್ಟಿಕೊಂಡವು. 1962ರ ಅಕ್ಟೋಬರ್ 9ರಂದು ಉಗಾಂಡ ಸ್ವತಂತ್ರವಾಯಿತು. ಕಬಕ ಮುಟೇಸ ಉಗಾಂಡದ ಪ್ರಥಮ ಅಧ್ಯಕ್ಷ; ಮಿಲ್ಟನ್ ಓಬೋಟೆ ಪ್ರಧಾನಮಂತ್ರಿ.

1966ರ ಫೆಬ್ರವರಿಯಲ್ಲಿ ಓಬೋಟೆ ಸಂವಿಧಾನವನ್ನು ರದ್ದುಗೊಳಿಸಿ ಸಂಪೂರ್ಣ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡ. ಕಬಕ ಮುಟೇಸ ಇಂಗ್ಲೆಂಡಿಗೆ ಓಡಿಹೋದ. ಉಗಾಂಡದಲ್ಲಿ ದಂಗೆ ಉಂಟಾದಾಗ ಓಬೋಟೆ ಅದನ್ನು ಹತ್ತಿಕ್ಕಿ, ಒಂದು ಹೊಸ ಸಂವಿಧಾನವನ್ನು ಜಾರಿಗೆ ತಂದು, ಹಿಂದಿದ್ದ ಸಂಯುಕ್ತ ರಾಷ್ಟ್ರ ಸಂವಿಧಾನವನ್ನು ಸಂಪೂರ್ಣವಾಗಿ ರದ್ದುಗೊಳಿಸಿದ. 1967ರಲ್ಲಿ ಅದರ ಸ್ಥಾನದಲ್ಲಿ ಹೊಸ ಸಂವಿಧಾನ ಜಾರಿಗೆ ಬಂತು. ಈ ಸಂವಿಧಾನದ ಪ್ರಕಾರ ಓಬೋಟೆ ಉಗಾಂಡದ ಅಧ್ಯಕ್ಷನಾದ. ಉಗಾಂಡದಲ್ಲಿದ್ದ ಪಾಳೆಗಾರರ ಅಧಿಕಾರವನ್ನೆಲ್ಲ ರದ್ದುಪಡಿಸಲಾಯಿತು. (ಎಸ್.ಕೆ.ಎಸ್.)

1971 ರಲ್ಲಿ ಓಬೋಟೆಯನ್ನು ಪದಚ್ಯುತಗೊಳಿಸಿದ ದೇಶದ ಸೇನಾಧಿಪತಿ ಮೇಜರ್ ಜನರಲ್ ಇದಿ ಅಮಿನ್ ಅಧ್ಯಕ್ಷನಾಗಿ ಸೇನಾಡಳಿತ ತಂದ. 1972ರಲ್ಲಿ ಸು. 40,000–50,000 ದವರೆಗಿನ ಏಷ್ಯ ಸಂಜಾತರನ್ನು ದೇಶದಿಂದ ಹೊರಹಾಕಿದ. ಇವನ ವಿರುದ್ಧವಾಗಿ ನಡೆದ ಸಾವಿರಾರು ಮಂದಿ ದೇಶೀಯರನ್ನು ಕೊಲ್ಲಿಸಿದ. 1978ರಲ್ಲಿ ತಾಂಜೇನಿಯದ ಜೊತೆ ದೇಶದ ಎಲ್ಲೆಯ ಬಗ್ಗೆ ಯುದ್ಧ ಮಾಡಬೇಕಾಗಿ ಬಂತು. 1980 ಡಿಸೆಂಬರ್‌ನ ಚುನಾವಣೆಯಲ್ಲಿ ಓಬೋಟೆಯ ಪಕ್ಷ ಜಯಗಳಿಸಿ ಓಬೋಟೆ ಮತ್ತೆ ಅಧ್ಯಕ್ಷರಾದರು. 1985 ಜುಲೈನಲ್ಲಿ ಜನರಲ್ ಟಿಟೊ ಒಕೆಲ್ಲೊ ಅಧ್ಯಕ್ಷರಾದರು. 1986ರಲ್ಲಿ ಮುಸೇವೆನಿ ಅಧ್ಯಕ್ಷರಾಗಿ ಉಗಾಂಡದಲ್ಲಿ ಶಾಂತಿ ಸ್ಥಾಪಿಸಿದರು. 1996ರ ಚುನಾವಣೆಯಲ್ಲಿ ಮತ್ತೆ ಮುಸೇವೆನಿ ಅಧ್ಯಕ್ಷರಾಗಿ ಚುನಾಯಿತರಾದರು. 2001 ಮಾರ್ಚ್‌ನಲ್ಲಿ ಯೊವೆರಿ ಕಗುಟ ಮುಸೇವೆನಿ ಚುನಾವಣೆಯಲ್ಲಿ ಜಯಗಳಿಸಿದರು. 2011 ಫೆಬ್ರವರಿ 18ರಂದು ನಡೆದ ಚುನಾವಣೆಯಲ್ಲಿ ಹೆಚ್ಚು ಮತಗಳಿಂದ ಮುಸೇವೆನಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. *

**ಉಗಾಂಡದ ಪುರಾತತ್ತ್ವ:** ಆದಿಮಾನವ ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ಇಲ್ಲಿ ಅತ್ಯಂತ ಪುರಾತನ ಆಧಾರಗಳು ದೊರಕಿವೆ. ಪ್ರಾಣಿ ಮಾನವನಾಗಿ ವಿಕಾಸಗೊಂಡ ಹೊಸದರಲ್ಲಿ ಅವನಿಂದ ನಿರ್ಮಿತವಾದ ಕಫೂವನ್ ಮತ್ತು ಓಲ್ಡೊವನ್ ಸಂಸ್ಕೃತಿಯ ಉಂಡೆಕಲ್ಲಿನಾಯುಧಗಳು ಇಲ್ಲಿ ದೊರಕಿವೆ. ಪೂರ್ವಶಿಲಾಯುಗದಲ್ಲಿ ಓಲ್ಡೊವನ್ ಸಂಸ್ಕೃತಿಯಿಂದ ಉಗಮಿಸಿದ ಅಬೆವಿಲಿಯನ್ ಅಷೂಲಿಯನ್ ಕೈಗೊಡಲಿ ಮತ್ತು ಚಕ್ಕೆಕಲ್ಲಿನಾಯುಧಗಳು ದೊರಕಿವೆ. ಕೈಕೊಡಲಿ ಸಂಸ್ಕೃತಿಯ ಉತ್ತರಾರ್ಧ ಕಾಲದಲ್ಲಿ ಕ್ಲೀವರ್ ಎಂಬ ಕೊಡಲಿಗಳೂ ಲೆವಾಲ್ವ ರೀತಿಯ ಚಕ್ಕೆಕಲ್ಲಿನಾಯುಧಗಳೂ ಬಳಕೆಗೆ ಬಂದುವು. ಅನಂತರ ಸಣ್ಣ ಅಥವಾ ಮಧ್ಯ ಗಾತ್ರದ, ದ್ವಿಮುಖವಾಗಿ ಚಕ್ಕೆಗಳನ್ನು ತೆಗೆದು ತಯಾರಿಸಿದ ಮೊನಚಾದ ಸಣ್ಣ ಕೈಕೊಡಲಿಗಳನ್ನು ಉಪಯೋಗಿಸುತ್ತಿದ್ದ, ಸ್ಟಿಲ್ ಬೇ ಮತ್ತು ಅಷೂಲಿಯನ್ ಸಂಸ್ಕೃತಿಯಿಂದ ಹುಟ್ಟಿ ಬಂದ, ಸಂಗೋವನ್ ಸಂಸ್ಕೃತಿಗಳು ರೂಢಿಯಲ್ಲಿದ್ದುವು. ಪೂರ್ವಶಿಲಾಯುಗದ ಅಂತ್ಯದಲ್ಲಿ ಮುಗೋಸಿಯನ್ ಸಂಸ್ಕೃತಿ ತಲೆದೋರಿ ಸೂಕ್ಷ್ಮ ಶಿಲಾಯುಧಗಳು ಬಳಕೆಗೆ ಬಂದುವು. ಅನಂತರದ ವಿಲ್ಟನ್ ಮತ್ತು ಲಂಪೆಂಬಾನ್ ಸಂಸ್ಕೃತಿಗಳಲ್ಲಿ ಸೂಕ್ಷ್ಮ ಶಿಲಾಯುಧಗಳನ್ನು ಹೆಚ್ಚಾಗಿ ಉಪಯೋಗಿಸಲಾಗುತ್ತಿದ್ದದ್ದಲ್ಲದೆ ಇವು ನವಶಿಲಾಯುಗದ ಸಂಸ್ಕೃತಿಯತ್ತ ಮುನ್ನಡೆಯುವ ಪ್ರವೃತ್ತಿ ವ್ಯಕ್ತಪಡಿಸಿದುವು. ನವಶಿಲಾಯುಗದಲ್ಲಿ ಮುಖ್ಯ ಸಂಸ್ಕೃತಿಗಳಾದ ಗುಂಬಾನ್ ಎ ಮತ್ತು ಬಿ ಸಂಸ್ಕೃತಿಗಳಲ್ಲಿ ಕಲ್ಲಿನ ಪಾತ್ರೆ, ಮಡಕೆ, ನಾನಾವಿಧ ಫಲಕ, ಚಾಕು, ಒರೆಯುವ ಆಯುಧ, ಅರ್ಧ ಚಂದ್ರಾಕೃತಿಯ ಆಯುಧ ಮುಂತಾದ ಸೂಕ್ಷ್ಮಶಿಲಾಯುಧಗಳು ಬಳಕೆಯಲ್ಲಿದ್ದುವು. ಪ್ರ.ಶ. ಪೂ. ಮೊದಲನೆಯ ಸಹಸ್ರಮಾನದ ಪ್ರಾರಂಭದಲ್ಲಿ ಬಳಕೆಗೆ ಬಂದ ನ್ಜೊರೋನದಿಯ ಮತ್ತು ಅದರ ಹಿಂದಿನ ಗುಂಬಾನ್ ಸಂಸ್ಕೃತಿಗಳ ಕಾಲದಲ್ಲಿ ಈ ಪ್ರದೇಶ ಹಿಂದಿಳಿದಿತ್ತು. ಈಜಿಪ್ಟ್ ಮಾರ್ಗವಾಗಿ ಇಲ್ಲಿಗೂ ಪಶುಪಾಲನೆ ಹಾಗೂ ವ್ಯವಸಾಯ ಪದ್ಧತಿಗಳು ಕ್ರಮೇಣ ಹಬ್ಬಿರಬಹುದೆಂದು ಹೇಳಲಾಗಿದೆ. ಕಬ್ಬಿಣದ ಉಪಯೋಗ ಸು.ಪ್ರ.ಶ. 3ನೆಯ ಶತಮಾನದ ಅನಂತರ ಬಂದಿರಬಹುದು. ನವಶಿಲಾಯುಗ ಮತ್ತು ಕಬ್ಬಿಣ ಯುಗಗಳಲ್ಲೂ ಬೇಟೆ ಜನರ ಮುಖ್ಯ ಕಸುಬುಗಳಲ್ಲೊಂದಾಗಿತ್ತು. ಅವರು ಕಾಡುಗಳಲ್ಲೂ ಗುಹೆಗಳಲ್ಲೂ ವಾಸಿಸುತ್ತಿದ್ದರು. ಇಲ್ಲಿನ ನಾನಾ ಬುಡಕಟ್ಟುಗಳು ಅಲೆಮಾರಿ ಜೀವನ ನಡೆಸುತ್ತಿದ್ದು 18–19ನೆಯ ಶತಮಾಗಳಲ್ಲಿ ಐರೋಪ್ಯರು ಇಲ್ಲಿ ಕಾಲಿಟ್ಟ ಅನಂತರ ಆಧುನಿಕ ನಾಗರಿಕತೆಯ ಪ್ರವೇಶವಾಯಿತು. (ಬಿ.ಕೆ.ಜಿ.)

**ಉಗಾದಿ:** ವರ್ಷಾರಂಭ. ಯುಗಾದಿ ಎಂಬ ಸಂಸ್ಕೃತ ಪದದ ತದ್ಭವ. ಈ ಹಬ್ಬ ಎಲ್ಲರಿಗೂ ಒಂದೇ ದಿವಸ ಬರುವುದಿಲ್ಲ. ಕಾಲ ದೇಶ ಮತ್ತು ಸಂಪ್ರದಾಯಾನುಗುಣವಾಗಿ ಇದರಲ್ಲಿ ವ್ಯತ್ಯಾಸಗಳಾಗಿವೆ. ಹಿಂದೂಗಳಲ್ಲಿ ವಾಡಿಕೆಯಲ್ಲಿರುವ ವರ್ಷಮಾನಗಳು ಮೂರು: ಬಾರ್ಹಸ್ಪತ್ಯಮಾನ, ಚಾಂದ್ರಮಾನ ಮತ್ತು ಸೌರಮಾನ (ಆಯಾ ಶೀರ್ಷಿಕೆಗಳನ್ನು ನೋಡಿ). ವಿಂಧ್ಯಪರ್ವತಕ್ಕೆ ಉತ್ತರದಲ್ಲಿರುವ ಜನ ಬಾರ್ಹಸ್ಪತ್ಯಮಾನವನ್ನೂ ದಕ್ಷಿಣಕ್ಕಿರುವವರು ಚಾಂದ್ರ ಅಥವಾ ಸೌರಮಾನವನ್ನೂ ಸಾಮಾನ್ಯವಾಗಿ ಅನುಸರಿಸುತ್ತಾರೆ. ತಮಿಳುನಾಡಿನಲ್ಲಿ ಸೌರಮಾನವೂ, ಕರ್ನಾಟಕ ಆಂಧ್ರಗಳಲ್ಲಿ ಚಾಂದ್ರಮಾನವೂ ಆಚರಣೆಯಲ್ಲಿವೆ.

ಪದ್ಧತಿ ಯಾವುದೇ ಇರಲಿ, ಉಗಾದಿ ಎಲ್ಲರಿಗೂ ದೊಡ್ಡ ಹಬ್ಬ. ಬಂಧುಮಿತ್ರರನ್ನು ಕಂಡು ಶುಭ ಕೋರುವುದು ಎಲ್ಲರಲ್ಲೂ ವಾಡಿಕೆ. ಅಂದು ಬೆಳಗ್ಗೆ ತೈಲಾಭ್ಯಂಗನ ಮಾಡಿ, ಹೊಸ ಬಟ್ಟೆ ಉಟ್ಟು ವಜ್ರಕಾಯವನ್ನೂ ದೀರ್ಘಾಯುಸ್ಸನ್ನೂ ಪಡೆಯಲು ಬೇವುಬೆಲ್ಲ ಸವಿಯುವ ರೂಢಿ ಕನ್ನಡನಾಡಿನಲ್ಲಿರುವ ಸಂಪ್ರದಾಯ. ಇದರ ಹಿಂದೆ ಜೀವನದ ಕಹಿ–ಸಿಹಿಗಳನ್ನು ಏಕರೀತಿಯಾಗಿ ಕಾಣಬೇಕೆಂಬ ತತ್ತ್ವದ ಸೂಚನೆಯಿದೆಯೆಂದು ತೋರುತ್ತದೆ. ಆ ವರ್ಷದ ಪಂಚಾಂಗವನ್ನು ಅಂದು ಪೂಜಿಸುವುದೂ ವಾಡಿಕೆ. ಹಬ್ಬದ ಊಟ ಮಾಡಿ ಮಧ್ಯಾಹ್ನ ಪಂಚಾಂಗವನ್ನು ಓದಿ ಅಥವಾ ಓದಿಸಿ, ವರ್ಷದ ಫಲವನ್ನು ಅಂದರೆ ಮಳೆ, ಬೆಳೆ, ಆರೋಗ್ಯ, ಆದಾಯ, ರಾಜ್ಯದ ಶಾಂತಿ ಇತ್ಯಾದಿಗಳನ್ನೂ ತಮಗೆ ವರ್ಷದಲ್ಲಿ ಗ್ರಹಗತಿಗಳು ಯಾವ ಬಗೆಯಾಗಿವೆ ಎಂಬುದನ್ನೂ ತಿಳಿದುಕೊಳ್ಳುತ್ತಾರೆ. ಸಂಜೆ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನ ಮಾಡುತ್ತಾರೆ. (ಜಿ.ಎಚ್.)

ಯುಗಾದಿ ಆಚರಣೆಯ ಇತಿಹಾಸ ಬಹಳ ಪ್ರಾಚೀನವಾದದ್ದು. ಮೊಟ್ಟಮೊದಲು ದಾಖಲೆಯ ಪ್ರಕಾರ, ಪ್ರ.ಶ.ಪೂ. 2000ದಲ್ಲಿ ಮೆಸಪೊಟೇಮಿಯದಲ್ಲಿ ಉಗಾದಿಯ ಆಚರಣೆ ಇತ್ತೆಂದು ತಿಳಿದುಬರುತ್ತದೆ. ಮೇಷ ಸಂಕ್ರಾಂತಿ ಸಮಯದ ಅಮಾವಾಸ್ಯೆಯ ದಿನದಂದು ಬ್ಯಾಬಿಲೋನಿಯದಲ್ಲೂ ತುಲಾ ಸಂಕ್ರಾಂತಿಯ ಸಮಯದ ಅಮಾವಾಸ್ಯೆಯ ದಿನದಂದು ಅಸ್ಸೀರಿಯದಲ್ಲೂ ಹೊಸವರ್ಷ ಆರಂಭವಾಗುತ್ತದೆ ಎಂಬುದಾಗಿ ತಿಳಿಯಲಾಗಿತ್ತು. ಈಜಿಪ್ಷಿಯನ್ನರಿಗೆ, ಫೋನಿಷಿಯನ್ನರಿಗೆ, ಮತ್ತು ಪರ್ಷಿಯನ್ನರಿಗೆ ತುಲಾ ಸಂಕ್ರಾಂತಿಯಂದೂ ಗ್ರೀಕರಿಗೆ (5ನೆಯ ಶತಮಾನದವರೆಗೆ) ಮಕರ ಸಂಕ್ರಾಂತಿಯಂದೂ ಉಗಾದಿ ಪ್ರಾರಂಭವಾಗುತ್ತಿತ್ತೆಂದು ದಾಖಲೆಗಳಿಂದ ತಿಳಿದು ಬಂದಿದೆ. ರೋಮನ್ ಗಣರಾಜ್ಯದ ತಾರೀಖು ಪಟ್ಟಿಯ ಪ್ರಕಾರ ವರ್ಷಾರಂಭ ಮಾರ್ಚ್ 9ರಂದು, ಪ್ರ.ಶ.ಪೂ.153ರ ಅನಂತರ ಜನವರಿ 1ನೆಯ ತಾರೀಖನ್ನು ವರ್ಷಾರಂಭದ ದಿನವೆಂದು ಪರಿಗಣಿಸಲಾಗಿದ್ದು, ಜೂಲಿಯನ್ ತಾರೀಖು ಪಟ್ಟಿ ಇದನ್ನು ಸ್ಥಿರಪಡಿಸಿದೆ.

ಯೆಹೂದ್ಯರ ಧಾರ್ಮಿಕ ತಾರೀಖು ಪಟ್ಟಿಯ ಪ್ರಕಾರ ವರ್ಷಾರಂಭ ಟಿಷ್ರಿ ತಿಂಗಳ (ಸೆಪ್ಟೆಂಬರ್ 6–ಅಕ್ಟೋಬರ್ 5) ಮೊದಲನೆಯ ದಿನದಂದು ಆಗುತ್ತದೆ. ಮಧ್ಯಯುಗದ ಪ್ರಾರಂಭದಲ್ಲಿ ಕ್ರೈಸ್ತಧರ್ಮ ಪ್ರಬಲವಾಗಿದ್ದ ಯುರೋಪಿನಲ್ಲೆಲ್ಲ ಮಾರ್ಚ್ 25ನೆಯ ದಿನವನ್ನು ವರ್ಷಾರಂಭದ ದಿನವೆಂದು ಪರಿಗಣಿಸಲಾಗಿತ್ತು. ಮುಂದೆ ಅದೇ ರಾಷ್ಟ್ರಗಳು ಡಿಸೆಂಬರ್ 25ನ್ನು ವರ್ಷಾರಂಭದ ದಿನವೆಂದು ಪರಿಗಣಿಸಿದಾಗ ಇಂಗ್ಲೆಂಡೂ ಅದನ್ನನುಸರಿಸಿತು.

ಜನವರಿ 1ನೆಯ ತಾರೀಖು ವರ್ಷಾರಂಭದ ದಿನವೆಂದು ಗ್ರಿಗೋರಿಯನ್ ತಾರೀಖು ಪಟ್ಟಿಯಿಂದ ಸ್ಥಿರೀಕರಿಸಲ್ಪಟ್ಟು, ರೋಮನ್ ಕೆಥೊಲಿಕ್ ರಾಷ್ಟ್ರಗಳೆಲ್ಲವೂ ಇದನ್ನೇ ವರ್ಷಾರಂಭದ ದಿನವೆಂದು ಸ್ವೀಕಾರ ಮಾಡಿದವು. ಆದರೆ ಸ್ಕಾಟ್ಲೆಂಡು 1660ರಲ್ಲೂ ಜರ್ಮನಿ ಮತ್ತು ಡೆನ್ಮಾರ್ಕು ಸು. 1700ರಲ್ಲೂ ರಷ್ಯ 1706ರಲ್ಲೂ ಇಂಗ್ಲೆಂಡು 1752ರಲ್ಲೂ ಮತ್ತು ಸ್ವೀಡನ್ 1753ರಲ್ಲೂ ಇದನ್ನು ವಿರೋಧಿಸಿದುವು.

ಯುಗಾದಿಯ ಆಚರಣೆಯ ಉದ್ದೇಶ ಅನೇಕ. ಮುಖ್ಯವಾಗಿ ಅದು ಮತಾಚರಣೆಯ ಒಂದು ಕ್ರಿಯೆ. ಜೀವನದ ಪುನಶ್ಚೈತನ್ಯಕ್ಕೆ ಸಂಬಂಧಿಸಿದಂತೆ ರಾಗ ದ್ವೇಷಗಳ ದಮನ, ದೇಹಶುದ್ಧೀಕರಣ, ಇತ್ಯಾದಿಗಳನ್ನದು ಸೂಚಿಸುತ್ತದೆ (**ನೋಡಿ– ತಾರೀಕುಪಟ್ಟಿ**). *

**ಉಗಾಭೋಗ:** ಭಾರತೀಯ ಸಂಗೀತಕ್ಕೆ ಕರ್ನಾಟಕದ ಹರಿದಾಸರು ನೀಡಿದ ಒಂದು ವಿಶಿಷ್ಟ ಕಾಣಿಕೆ. ಭಾರತೀಯ ಹಾಗೂ ಜನಪದ ಸಂಗೀತಗಳು ತಮ್ಮ ನಡುವೆ ರಚಿಸಿಕೊಂಡಿರುವ ಹಲವು ಸೇತುವೆಗಳಲ್ಲಿ ಇದೂ ಒಂದು. ಉಗಾಭೋಗವೆಂಬ ಶಬ್ದವೂ ಪ್ರಬಂಧ ಪ್ರಕಾರವೂ ಹೇಗೆ ಮತ್ತು ಯಾವಾಗ ಹುಟ್ಟಿದುವು ಎಂದು ನಿಷ್ಕೃಷ್ಟವಾಗಿ ನಿರ್ಧರಿಸಲು ಆಧಾರ ಸಾಲದು. ಈ ಪದದ ರೂಪನಿಷ್ಪತ್ತಿಯನ್ನು ಹಲವರು ಹಲವು

ವಿಧವಾಗಿ ಕೊಡುತ್ತಾರೆ: ಉಕ್ + ಆಭೋಗ, ಎಂದರೆ ಮಾನವನ ಅನುಭವ ಸಮಷ್ಟಿಯ ವಾಗಭಿವ್ಯಕ್ತಿ, ಎನ್ನುವುದು ಒಂದು ಪಂಥ; ಯುಗಾಭೋಗ, ಎಂದರೆ ಪರಮಾತ್ಮನಲ್ಲಿ ಲೀನವಾಗಿಬಿಡುವುದರ ಆನಂದಾನುಭವ, ಎನ್ನುವುದು ಎರಡನೆಯದು. ಉದ್ಗ್ರಾಹ + ಆಭೋಗ ಎಂಬ ಸಂಧಿಯಲ್ಲಿ ಕಠಿಣೋಚ್ಚರಿತಗಳಾದ ದ್, ರ್, ಹ್ ಗಳ ಲೋಪದಿಂದ ಈ ಪದ ಹುಟ್ಟಿದೆ–ಎನ್ನುವುದು ಹೆಚ್ಚು ಪ್ರಚಾರದಲ್ಲಿರುವ ಮತ. ಸಂಗೀತ ಪ್ರಬಂಧವೊಂದನ್ನು ಮೊದಲು ಮಾಡುವ ಧಾತುಭಾಗಕ್ಕೆ ಉದ್ಗ್ರಾಹವೆಂದೂ ಮುಗಿಸುವ ಧಾತುಭಾಗಕ್ಕೆ ಆಭೋಗವೆಂದೂ ಸಂಗೀತಶಾಸ್ತ್ರದ ಪರಿಭಾಷೆ. ಈ ಮೂರು ಮತಗಳೂ ಕೇವಲ ಕಲ್ಪನೆಯಿಂದ ಹುಟ್ಟಿವೆ. ಭಾಷಾತ್ಮಕ, ಚಾರಿತ್ರಿಕ ಅಥವಾ ಇತರ ಯಾವ ಆಧಾರಗಳೂ ಇವಕ್ಕೆ ಇಲ್ಲ. ಕಡೆಯದು ಸಂಗೀತಶಾಸ್ತ್ರ ಪ್ರಕ್ರಿಯೆಗೆ ವಿರುದ್ಧವಾದುದು. ಏಕೆಂದರೆ ಸಂಗೀತ ಪ್ರಬಂಧಧ್ರುವವೆಂಬ ಅನಿವಾರ್ಯ ಧಾತುಭಾಗದಿಂದ ಆಗತಕ್ಕದ್ದು. ಉದ್ಗ್ರಾಹ, ಆಭೋಗಗಳಿಂದಲೇ ಯಾವ ಹಾಡೂ ಆಗಲಾರದೆಂಬುದನ್ನು ಸಂಗೀತಶಾಸ್ತ್ರ ಹೇಳುತ್ತದೆ. ಇವುಗಳಲ್ಲಿ ಯಾವುದೂ ಸಮರ್ಪಕವಾಗಿ ಕಾಣುವುದಿಲ್ಲ. ಸೂಡಾದಿ ಎಂಬುದು ದೇಶೀ ಶಬ್ದವೆಂದೂ ಆದುದರಿಂದ ಸಂಸ್ಕೃತ ನಿಷ್ಪತ್ತಿಸಿದ್ಧಿ ಅದಕ್ಕಿಲ್ಲವೆಂದೂ ಸಂಗೀತರತ್ನಾಕರದಿಂದ ಕಂಡುಬರುತ್ತದೆ. ಉಗಾಭೋಗವೂ ಅಂಥದೇ ಒಂದು ಗೀತಪ್ರಕಾರಸಂಜ್ಞಕವಾಗಿರುವ ರೂಢನಾಮವಾಗಿರಬಹುದೆಂಬುದು ಹೆಚ್ಚು ಸಂಭಾವ್ಯವಾಗಿದೆ. ಪುರಂದರದಾಸರೂ ಅವರಿಗೆ ಪ್ರಾಚೀನರಾದ ಹರಿದಾಸರೂ ಉಗಾಭೋಗಗಳನ್ನು ರಚಿಸಿದ್ದರು. ಆದರೂ ಅವರು ಉಗಾಭೋಗವೆಂಬ ಹೆಸರನ್ನು ಹೇಳಿರುವುದು ಎಲ್ಲೂ ಕಂಡುಬಂದಿಲ್ಲ. ಪುರಂದರದಾಸರೇ ಕೃತಿ, ಕೀರ್ತನೆ, ಸುಳಾದಿ, ಗೀತ, ಪ್ರಬಂಧ, ನಾಮಾವಳಿ ಮುಂತಾದ ಹಾಡಿನ ರೀತಿಗಳನ್ನು ಹೆಸರಿಸಿದ್ದಾರೆ. ಆದರೆ ಪುರಂದರದಾಸ ವಿರಚಿತ ಕೃತಿಗಳ ಮೊತ್ತವನ್ನು ವರ್ಣಿಸುವ ತಮ್ಮ ಒಂದು ಸುಳಾದಿಯಲ್ಲಿ ವಿಜಯದಾಸರು ಇದನ್ನೂ ಹೆಸರಿಸಿದ್ದಾರೆ. ಹೀಗಾದರೂ ಈ ಹೆಸರು ಇನ್ನೂ ಪ್ರಾಚೀನವಾಗಿದ್ದಿರಬೇಕೆಂಬುದು ನಿಸ್ಸಂದೇಹ.

ಉಗಾಭೋಗದ ಹುಟ್ಟನ್ನು ಪ್ರಾಚೀನ, ಗೌರವಾನ್ವಿತ ಸಾಲಗಸೂಡ ಪ್ರಬಂಧಗಳಲ್ಲಿ ನಿಸ್ಸಂದಿಗ್ಧವಾಗಿ ಕಾಣಬಹುದು. ಈ ಪ್ರಬಂಧಗಳೇ ಸುಳಾದಿಗಳಿಗೆ ಮಾತೃಸ್ಥಾನದಲ್ಲಿದ್ದವು. ಇವುಗಳಲ್ಲಿ ರಾಸಕ ಪ್ರಬಂಧದಲ್ಲಿ ಮಾತುಧಾತುಗಳ ಸ್ವಕಪೋಲ ಕಲ್ಪಿತ, ಕಲ್ಪನಾಜನಿತ ನಿರ್ಮಾಣವನ್ನು ಶಾಸ್ತ್ರ ವಿಧಿಸುತ್ತದೆ. ಇದರಲ್ಲಿ ಉದ್ಗ್ರಾಹದಲ್ಲಿ ಎರಡು ಖಂಡಗಳು: ಮೊದಲ ಖಂಡದಲ್ಲಿ ಮೇಲಿನ ರೀತಿಯಲ್ಲಿ ಮಾತುಸಹಿತವಾದ ಆಲಾಪನೆಯಿದ್ದರೆ ಅಂಥ ಪ್ರಬಂಧವನ್ನು ನಂದರಾಸಕವೆಂದು ಕರೆಯಲಾಗುತ್ತಿತ್ತು. ಧ್ರುವದ ಯಾವ ಭಾಗದಲ್ಲಿ ಇಂಥ ಆಲಾಪನೆಯಿರುತ್ತಿದ್ದರೆ ಅದನ್ನು ಅನುಸರಿಸಿ ಬೇರೆ ಬೇರೆ ಅವಾಂತರ ಪ್ರಭೇದಗಳನ್ನು ರಾಸಕದಲ್ಲಿ ರಚಿಸಲಾಗುತ್ತಿತ್ತು. ಈ ಸಾಕ್ಷರ ಆಲಾಪನೆಯೇ ಅಲ್ಲದೆ ಕೆಲವು ವೇಳೆ ಅಕ್ಷರವರ್ಜ್ಯವಾದ ಕೇವಲ ರಾಗಾಲಾಪ್ತಿಯೂ ಏಕತಾಲೀಯಂಥ ಸಾಲಗಸೂಡಪ್ರಬಂಧಗಳಲ್ಲಿ ಇರುತ್ತಿತ್ತು. ಇದಕ್ಕೆ ಪ್ರಯೋಗವೆಂದು ಹೆಸರು. ಸುಳಾದಿಗಳು ನಿರ್ದಿಷ್ಟರೂಪನ್ನು ಪಡೆದು ಸಾಲಗಸೂಡಗಳಿಂದ ಹೊರಬಂದಾಗ ಈ ಬಗೆಯ ಸಾಕ್ಷರಾಲಪ್ತಿ ಪ್ರತ್ಯೇಕ ಸ್ಥಾನವನ್ನು ಪಡೆದು ಬೇರೆಯ ಹಾಡಿನ ರೀತಿಯೇ ಆಯಿತು. ಇದೇ ಉಗಾಭೋಗ. ಈ ಸ್ವಾಭಾವಿಕ ಪೃಥಕ್ಕರಣವನ್ನು ತಾರ್ಕಿಕವಾಗಿ ಸಾಧಿಸಿ ಲಕ್ಷ್ಯದಲ್ಲಿ ಅಚಲವಾಗಿ, ಸ್ವತಂತ್ರವಾಗಿ ನಿಲ್ಲಿಸಿದವರು ಕರ್ಣಾಟಕದ ಹರಿದಾಸರು. ವಿವಿಧ ಲಲಿತಕಲೆಗಳಲ್ಲೂ ಒಂದು ಕೃತಿಪ್ರಕಾರ ಒಡೆದು ಎರಡು ಸ್ವತಂತ್ರಕೃತಿಪ್ರಕಾರಗಳಾಗಿ ನಿಲ್ಲುವುದು ಬೇರೆ ಬೇರೆ ಕಾಲಗಳಲ್ಲಿ ಕಂಡುಬರುತ್ತದೆ. ಭರತನಾಟ್ಯದಲ್ಲಿ ಪುಷ್ಪಾಂಜಲಿ ಅಲರಿಪು ಮತ್ತು ಜತಿಸ್ವರಗಳಾಗಿ ರೂಢಿಸಿದುದನ್ನು ಇಲ್ಲಿ ನಿದರ್ಶನವಾಗಿ ಕೊಡಬಹುದು. ನಿಸರ್ಗದಲ್ಲೂ ಈ ಬಗೆಯ ವಿದಳನಸೃಷ್ಟಿ ಸಿದ್ಧವಾಗಿಯೇ ಇದೆಯಷ್ಟೆ.

ಉಗಾಭೋಗ ರಾಗಸಹಿತವಾದ ಮತ್ತು ತಾಳರಹಿತವಾದ, ಎಂದರೆ ಅನಿಬದ್ಧವಾದ, ರಚನೆ. ತಾಳದಿಂದ ಬದ್ಧವಲ್ಲದಿದ್ದರೂ ಅದು ಛಂದೋಪ್ರಾಸಾದಿ ಕಾವ್ಯ ಲಕ್ಷಣಗಳಿಂದ ಕೂಡಿದೆ. ಇದು ಮಾತು ಪ್ರಧಾನವಾದುದು, ಎಂದರೆ ಸಾಹಿತ್ಯಾರ್ಥದ ರಂಜನಾಸ್ಪದ, ಭಾವಾತ್ಮಕ ಅಭಿವ್ಯಕ್ತಿಗಾಗಿ ರಾಗದಲ್ಲಿ ಅಳವಡಿಸಿ ಹಾಡುವಂಥದು. ಗದ್ಯ ದಂಡಕ, ಚೂರ್ಣಿಕೆ ಮೊದಲಾದ ಗದ್ಯಪ್ರಧಾನ ಗೇಯಪ್ರಕಾರಗಳಿಗೂ ಗಮಕದಂಥ (ಭಾರತವಾಚನ ಇತ್ಯಾದಿ) ಪದ್ಯಪ್ರಧಾನ ಗೇಯ ಪ್ರಕಾರಗಳಿಗೂ ಇದು ಮಧ್ಯದಲ್ಲಿದೆ. ಎಂದೇ ಇದರ ರಚನೆಯಲ್ಲಿ ಸ್ವಲ್ಪ ಶೈಥಿಲ್ಯವೂ ಕಾಮಚಾರವೂ ಕಂಡುಬರುತ್ತವೆ. ಉಗಾಭೋಗಕ್ಕೆ ನಿರ್ದಿಷ್ಟವಾದ ರಾಗಗಳನ್ನು ವಿಧಿಸಿರುವುದಾಗಲೀ ಇಂತಿಂಥ ಉಗಾಭೋಗವನ್ನು ಇಂತಿಂಥದೇ ರಾಗದಲ್ಲಿ ಹಾಡಬೇಕೆಂದು ವಿಧಿಸಿರುವುದಾಗಲೀ ಶಾಸ್ತ್ರದಲ್ಲೂ ಸಂಪ್ರದಾಯದಲ್ಲೂ ಕಂಠಪರಂಪರೆಯಲ್ಲೂ ಹಸ್ತಪ್ರತಿ ಆಕರಗಳಲ್ಲೂ ಕಂಡುಬರುವುದಿಲ್ಲ. ಇದರಿಂದಾಗಿ ಉಗಾಭೋಗವನ್ನು ಹಾಡಬಯಸುವವರಿಗೆ ತಮ್ಮ ಮನೋಧರ್ಮ, ಸಾಹಿತ್ಯಾನುಗುಣ್ಯತೆ, ರಸೌಚಿತ್ಯ ಮುಂತಾದವನ್ನು ದೃಷ್ಟಿಯಲ್ಲಿಟ್ಟುಕೊಂಡು ತಮಗೆ ಬೇಕೆನಿಸುವ ಯಾವುದೇ ರಾಗದಲ್ಲಿ ಅದನ್ನು ಹಾಡುವ ಸ್ವಾತಂತ್ರ್ಯವಿದೆ. ಕಠಿಣನಿಯಮಗಳಿಂದ ಛಂದೋಪ್ರಾಸಾದಿ ಲಕ್ಷಣಗಳು ನಿರ್ಬಂಧಿತವಲ್ಲವಾದರೂ ಅವು ಸ್ಪಷ್ಟವಾಗಿ ರಚನೆಯ ಅವಿಭಾಜ್ಯ ಅಂಗಗಳೇ ಆಗಿವೆ. ಆದ್ದರಿಂದಲೇ ಈ ಲಕ್ಷಣಗಳಿಲ್ಲದ ವಚನಗಳು ಉತ್ಸಾಹೀ ಆಸಕ್ತರ ಬೃಹತ್ಪ್ರಯತ್ನವನ್ನು ಮೀರಿಯೂ ಯಶಸ್ವಿಯಾಗಿಯೇ ಉಳಿದವು. ಉಗಾಭೋಗವೋ ಯಶಸ್ವಿಯಾಗಿ ಶಾಸ್ತ್ರೀಯಸಂಗೀತದ ಒಳಾಂಗಣವನ್ನು ಪ್ರವೇಶಿಸಿ ಪ್ರಯೋಗ ಪ್ರಾಚುರ್ಯವನ್ನು ಪಡೆಯಿತು. ಉಗಾಭೋಗವನ್ನು ಹಾಡುವವರು ಸಾಮಾನ್ಯವಾಗಿ ದೇವರನಾಮವೊಂದರ ಪೀಠಿಕಾರೂಪದಲ್ಲಿ ಹಾಡುತ್ತಾರೆ. ಉಗಾಭೋಗಗಳಲ್ಲಿ ಹೆಚ್ಚಿನ ಪಾಲು ಪುರಂದರದಾಸರೂ ವಿಜಯದಾಸರೂ ರಚಿಸಿದವೇ ಆಗಿವೆ. ಇವುಗಳಲ್ಲಿ ನಾಲ್ಕು ಸಾಲುಗಳಿಗಿಂತ ಕಡಿಮೆಯಾಗಿಯೂ ಹನ್ನೆರಡು ಸಾಲುಗಳಿಗಿಂತ ಹೆಚ್ಚಾಗಿಯೂ ಇರುವುದು ಎಲ್ಲೂ ಕಾಣಬರುವುದಿಲ್ಲ. ಸಾಮಾನ್ಯವಾಗಿ ಸಾಲುಗಳ ಉದ್ದ ಸ್ಥೂಲವಾಗಿ ಒಂದೇ ಆಗಿದ್ದರೂ ಅಪವಾದಗಳು ಬಹುವಾಗಿ ದೊರೆಯುತ್ತವೆ. ಇವುಗಳಲ್ಲೆಲ್ಲ ದ್ವಿತೀಯಪ್ರಾಸದ ರಚನೆಗಳೇ ಅತ್ಯಧಿಕ. ಉಳಿದ ಅಕ್ಷರಗಳ ಪ್ರಾಸಸಂಯೋಜನೆ ಬಹುಶಃ ಇಲ್ಲವೆಂದರೂ ಸಲ್ಲುತ್ತದೆ. ಕೆಲವು ವೇಳೆ ಪ್ರಾಸಸೌಕರ್ಯಕ್ಕಾಗಿ ಸಾಲುಗಳ ಉದ್ದವನ್ನು ಹೆಚ್ಚುಕಡಿಮೆ ಮಾಡುವ ಆವಶ್ಯಕತೆಯೂ ಬರುತ್ತದೆ. ಇದರಿಂದ ಗೇಯ ಸ್ವರೂಪಕ್ಕೆ, ತಾಳವಿಲ್ಲದುದರಿಂದ, ಬಾಧೆಯೇನೂ ಇಲ್ಲ. ಇಷ್ಟಾದರೂ ಕೆಲವು ವೇಳೆ–ವಿಶೇಷವಾಗಿ ಕಡೆಯ ಸಾಲಿನಲ್ಲಿ–ಪ್ರಾಸ ಸಂಪೂರ್ಣವಾಗಿ ಮಾಯವೇ ಆಗಿಬಿಡುವುದೂ ಉಂಟು. ಕೃತಿಕಾರನ ಅಂಕಿತ ಅತ್ಯಧಿಕವಾಗಿ ಕಡೆಯ ಸಾಲಿನಲ್ಲೂ ವಿರಳವಾಗಿ ಅದರ ಹಿಂದಿನ ಸಾಲಿನಲ್ಲೂ ಬರುತ್ತದೆ. ತಾಳವಿಲ್ಲದಿದ್ದರೂ ಖಚಿತವಾಗಿ ಹೇಳಬಹುದಾದ ಮಾತ್ರಾಗಣ ಅಕ್ಷರಗಣಾದಿ ಛಂದೋವಿನ್ಯಾಸಗಳು ಇಲ್ಲದಿದ್ದರೂ ಪ್ರಾಸವೂ ಅನಿರ್ಬಂಧಿತ ಪುರೋಗಾಮಿ ಛಂದೋ ಪ್ರವೃತ್ತಿಯೂ ಇರುವುದರಿಂದ ಒಂದು ಬಗೆಯ ಸ್ಥೂಲ ಲಯಪ್ರಕಾರ ಇದಕ್ಕೆ ಅನ್ವಯವಾಗುತ್ತದೆ. ಸಾಹಿತ್ಯ ಮತ್ತು ರಾಗಭಾಗಗಳಲ್ಲಿನ ರಸಪ್ರತೀತಿ ಈ ಲಯವನ್ನು ಸಾಕಷ್ಟು ನಿರ್ಧರಿಸುತ್ತದೆ. ಆದ್ದರಿಂದ ಉಗಾಭೋಗವನ್ನು ಸ್ವೇಚ್ಛೆಯಾಗಿ ಕಾಮಚಾರದಿಂದ ಹಾಡಿಕೊಳ್ಳಬಹುದು. ಇದನ್ನು ನಿರ್ದಿಷ್ಟಸ್ವರೂಪವಿಲ್ಲದ ಹಾಡೆಂದು ತಿಳಿಯಲಾಗದು. ಇದರಲ್ಲಿ ಸಮಸಂಖ್ಯೆಯ–4,6,8,10,12 ಸಾಲುಗಳ ಪ್ರಯೋಗವೇ ಸಾಮಾನ್ಯವಾಗಿ ಕಂಡುಬರುತ್ತದೆ. ಐದು ಸಾಲುಗಳಿರುವ ಅತ್ಯಲ್ಪ ಸಂಖ್ಯೆಯ ಉಗಾಭೋಗಗಳಲ್ಲಿ ಪ್ರಾಸದೃಷ್ಟಿಯಿಂದ ಸಾಲುಗಳ ಉದ್ದವನ್ನು ವ್ಯತ್ಯಾಸಮಾಡಿಕೊಂಡು ನಾಲ್ಕು ಅಥವಾ ಆರು ಸಾಲುಗಳಾಗಿ ಮಾಡಿಕೊಳ್ಳಬಹುದು. ಬಹುಶಃ ಇದೇ ಸರಿಯೆಂದೂ ಕಾಣುತ್ತದೆ. ಇಡೀ ರಚನೆಯನ್ನು ಒಂದಾಗಿ, ಎಂದರೆ ಅಖಂಡವಾಗಿ ಹಾಡಲಾಗುತ್ತದೆ. ಎಂದರೆ ಪಲ್ಲವಿ, ಅನುಪಲ್ಲವಿ, ಚರಣಗಳಂಥ ವಿಭಜನೆ ಇದರಲ್ಲಿಲ್ಲ. ಸಾಹಿತ್ಯಭಾವದ ವಿಸ್ತಾರಕ್ಕೆ ಬೇಕಾದರೆ ವಿವಿಧ ಭಾಗಗಳ ಪುನರುಕ್ತಿ, ಭಿನ್ನರೀತಿಯ ಜೋಡಣೆ ಮುಂತಾದವನ್ನು ಮಾಡಿಕೊಳ್ಳಬಹುದು. ಇದನ್ನು ಸಾಮಾನ್ಯವಾಗಿ ಒಂದೇ ರಾಗದಲ್ಲಿ ಹಾಡಲಾಗುತ್ತದೆ.

ಉದಾಹರಣೆಗಾಗಿ ಪುರಂದರದಾಸರ ಕೆಲವು ಉಗಾಭೋಗಗಳನ್ನಿಲ್ಲಿ ಕೊಡಲಾಗಿದೆ:

ಕ್ರಿಮಿಕೀಟನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಹಕ್ಕಿ ಹರಿಣನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಕತ್ತೆ ಕರಡಿಯಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಹಂದಿ ಶುನಕವಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಮರೆತೀಯೆ ಮಾನವ ನಿನ್ನ ಹಿಂದಿನ ಭವಗಳನೊಂದು
ಮಾನುಷ ದೇಹ ಬಂದಿತೊ ನಿನಗೀಗ
ಬೇಗ ನೆನೆಯಲೊ ಪುರಂದರವಿಟ್ಠಲರಾಯನ ॥ಶ್ರೀ॥

ಒಂದು ಕಾಲದಲ್ಲಿ ಆನೆ ಕುದುರೆ ಮೇಲ್ಮೆರೆಸುವೆ
ಒಂದು ಕಾಲದಲ್ಲಿ ಬರಿಗಾಲಲ್ಲಿ ನಡೆಸುವೆ
ಒಂದು ಕಾಲದಲ್ಲಿ ಮೃಷ್ಟಾನ್ನ ಉಣಿಸುವೆ
ಒಂದು ಕಾಲದಲ್ಲಿ ಉಪವಾಸವಿರಿಸುವೆ
ಪನ್ನಗಶಯನ ಶ್ರೀ ಪುರಂದರವಿಟ್ಠಲ ॥ಶ್ರೀ॥

ಮಲಗಿ ಪಾಡಿದರೆ ಕುಳಿತು ಕೇಳುವನು
ಕುಳಿತು ಪಾಡಿದರೆ ನಿಂತು ಕೇಳುವನು
ನಿಂತು ಪಾಡಿದರೆ ನಲಿದು ಕೇಳುವನು
ನಲಿದು ಪಾಡಿದರೆ ಸ್ವರ್ಗ ಸೂರೆಬಿಟ್ಟೆನೆಂಬ ಪುರಂದರವಿಟ್ಠಲ ॥ಶ್ರೀ॥

ನಿನ್ನ ಕಾಲ್ಗೆಜ್ಜೆಯ ಪಿಡಿದು ನಾ ನಿಲ್ಲುವೆ
ನಿನ್ನ ಪಂಜು ಹಿಡಿದು ಒಡ್ಡಿ ಬೊಬ್ಬಿಡುವೆ
ನಿನ್ನ ಛತ್ರಚಾಮರ ಪಿಡಿದೇಳುವೆ
ನೀರು ನಿವಾಳಿಸಿಕೊಂಡು ಕೊಬ್ಬುವೆನು
ಬಿಡೆನು ಬಿಡೆನು ನಿನ್ನ ಚರಣಕಮಲವ
ಪುರಂದರವಿಟ್ಠಲ ನಿನ್ನ ಪಾದವ ಬಿಡೆನು ॥ಶ್ರೀ॥

ಏನು ಓದಿದರೇನು ಏನು ಕೇಳಿದರೇನು
ಹೀನ ಗುಣಗಳ ಹಿಂಗದ ಜನರು
ಮಾನಾಭಿಮಾನವ ನಿನಗೊಪ್ಪಿಸಿದ ಮೇಲೆ
ನೀನೆ ಸಲಹಬೇಕೊ ಪುರಂದರವಿಟ್ಠಲ ॥ಶ್ರೀ॥

ತಾಯಿ ಗೋಪಿಯಂತೆ ನಿನ್ನ ಒರಳನೆಳಸಲಿಲ್ಲ
ವಾಲಿಯಂತೆ ನಿನ್ನ ವಾದಿಸುತಿರಲಿಲ್ಲ

ಭೃಗುಮುನಿಯಂತೆ ನಿನ್ನ ಎದೆಯ ತುಳಿಯಲಿಲ್ಲ
ಭೀಷ್ಮನಂತೆ ನಿನ್ನ ಹಣೆ ಒಡೆಯಲಿಲ್ಲ
ಕೊಂಕಣಿಗರ ಎಮ್ಮೆಗೆ ಕೊಡತಿಯೆ ಮದ್ದೆಂದು
ಅವರಿವರೆ ಮದ್ದು ಪುರಂದರವಿಟ್ಠಲಾ ॥ಶ್ರೀ॥

ಉಗಾಭೋಗದ ಸಾಹಿತ್ಯ ಮುಖ್ಯವಾಗಿ ಧಾರ್ಮಿಕವಾದದ್ದು. ವಚನಗಳು ವೀರಶೈವ ಮತದ ಪ್ರಮೇಯ ಸಾಮಗ್ರಿಯನ್ನು ಒಳಗೊಂಡರೂ ಸಾರ್ವಕಾಲಿಕ ಮೌಲ್ಯಗಳನ್ನು ಹೊಂದಿರುವಂತೆ ಉಗಾಭೋಗಗಳೂ ಪ್ರಧಾನವಾಗಿ ಮಧ್ವಮತದ ದ್ವೈತತತ್ತ್ವ ಪ್ರಕ್ರಿಯೆಗಳನ್ನೇ ವಿಶೇಷವಾಗಿ ಆಶ್ರಯಿಸಿದರೂ ಇತರ ಚಿರಂತನ ಮೌಲ್ಯ ಸಾಮಗ್ರಿಯನ್ನೂ ಒಳಗೊಂಡಿವೆ. ಆಚಾರ, ಲೋಕನೀತಿ, ಧ್ಯಾನ, ಧರ್ಮ, ಅಧ್ಯಾತ್ಮಚಿಂತನೆ, ನೀತಿ, ಕರ್ತವ್ಯಪರಾಯಣತೆ, ಹರಿಮಾಹಾತ್ಮ್ಯ, ಭಕ್ತನ ಲಕ್ಷಣ ಹಾಗೂ ಮಹಿಮೆ, ಪ್ರಾರ್ಥನೆ, ನಾಮಮಹಿಮೆ, ಪೂಜಾವಿಧಾನ -ಇಂಥ ಎಷ್ಟೋ ವಿಷಯಗಳ ಗಣಿಯೇ ಉಗಾಭೋಗಗಳಲ್ಲಿ ದೊರೆಯುತ್ತದೆ. ಸಾಹಿತ್ಯಶೈಲಿ, ವಿನ್ಯಾಸ, ಪದಶಯ್ಯೆ ಮುಂತಾದವು ಆಯಾ ವಾಗ್ಗೇಯಕಾರನ ಪ್ರತಿಭೆಯನ್ನು ಅವಲಂಬಿಸಿದರೂ ನಿರೂಪಣೆ ತಿಳಿಯಾಗಿಯೂ ಸ್ವಾರಸ್ಯವಾಗಿಯೂ ನೇರವಾಗಿಯೂ ಇದೆ. ಇವುಗಳಲ್ಲದೆ ಹಲವು ಕಾವ್ಯ ಸಂದರ್ಭಗಳೂ ರಮಣೀಯ ಸನ್ನಿವೇಶಗಳೂ ವೇದ, ಉಪನಿಷತ್ತು, ಇತಿಹಾಸ, ಪುರಾಣ ಸ್ಮೃತಿಗಳ ಸಾರಗ್ರಹಣವೂ ಉತ್ಕಟವಾದ ಆತ್ಮೀಯತೆ, ಪ್ರಾಮಾಣಿಕತೆ, ಜೀವನದರ್ಶನ ಇವುಗಳೂ ಉಗಾಭೋಗಗಳನ್ನು ರಸಿಕ ರಂಜನಕ್ಕೂ ಸಂಸ್ಕೃತಿ ಪ್ರಸಾರಕ್ಕೂ ಆತ್ಮಬೋಧೆಗೂ ಉತ್ಕೃಷ್ಟಸಾಧನಗಳನ್ನಾಗಿ ಮಾಡಿವೆ. ಆದ್ದರಿಂದ ನಮ್ಮ ಸಂಸ್ಕೃತಿ, ಸಮಾಜ, ಸಾಹಿತ್ಯ ಮತ್ತು ಸಂಗೀತಗಳಲ್ಲಿ ಉಗಾಭೋಗ ಒಂದು ವಿಶಿಷ್ಟಸ್ಥಾನವನ್ನು ಗಳಿಸಿಕೊಂಡಿದೆ.

(ಆರ್.ಎಸ್.ಎನ್.)

**ಉಗಿ:** ನೀರಿನ ಬಾಷ್ಪ (ವೇಪರ್) ಅಥವಾ ಅನಿಲರೂಪದಲ್ಲಿರುವ ನೀರು (ಸ್ಟೀಂ) ಯಂತ್ರಚಾಲನದಲ್ಲಿಯೂ ಉಷ್ಣಪೂರೈಕೆಯಲ್ಲಿಯೂ ಇದರ ಬಳಕೆ ಸಾರ್ವತ್ರಿಕವಾಗಿದೆ. ನೀರು ಉಗಿಯಾಗಿ ಪರಿವರ್ತನೆಗೊಳ್ಳುವ ಉಷ್ಣತೆ ಉಗಿ ಆವಿಗೆಯ (ಬಾಯ್ಲರ್ ಅಥವಾ ಕುದಿಪಾತ್ರೆ) ಅಥವಾ ಉತ್ಪಾದಕದ (ಜನರೇಟರ್) ಒಳಗಿನ ಸಂಮರ್ದವನ್ನು ಅವಲಂಬಿಸಿದೆ. ಉತ್ಪಾದಕದ ಒಳಗೆ ಉತ್ಪನ್ನವಾಗುವ ಉಗಿಯ ಉಷ್ಣತೆಯೂ ಅಲ್ಲಿನ ನೀರಿನ ಉಷ್ಣತೆಯೂ ಸಮತೋಲದಲ್ಲಿರುತ್ತವೆ. ಇಂಥ ಪರಿಸ್ಥಿತಿಯಲ್ಲಿ (ಉಗಿಯ ಉಷ್ಣತೆ = ನೀರಿನ ಉಷ್ಣತೆ) ಉಗಿ ಪರ್ಯಾಪ್ತವಾಗಿದೆ (ಸ್ಯಾಚುರೇಟೆಡ್) ಎನ್ನುತ್ತೇವೆ. ಉಗಿ ಸಂಪೂರ್ಣವಾಗಿ ಬಾಷ್ಪವೇ ಆಗಿರಬಹುದು—ಇದು ಒಣ ಉಗಿ (ಡ್ರೈ ಸ್ಟೀಮ್) ಅಥವಾ ತೇವಪೂರಿತವಾಗಿರಬಹುದು—ಇದು ಆರ್ದ್ರ ಉಗಿ(ವೆಟ್ ಸ್ಟೀಮ್): ಉಗಿಯೊಂದಿಗೆ ಇತರ ಅನಿಲಗಳು ಮಿಶ್ರಗೊಂಡಿರುವುದುಂಟು—ಆಗ ಇದೊಂದು ಮಿಶ್ರಣ. ಸಂಮರ್ದವನ್ನು ವ್ಯತ್ಯಸ್ತಗೊಳಿಸದೆ ಉಗಿಯನ್ನು ನೀರಿನ ಸಂಪರ್ಕದಿಂದ ಬೇರ್ಪಡಿಸಿದ ತರುವಾಯ ಅದನ್ನು ಮತ್ತಷ್ಟು ಕಾಯಿಸಬಹುದು. ಇದು ಅತಿ ತಪ್ತಉಗಿ (ಸೂಪರ್ ಹೀಟೆಡ್ ಸ್ಟೀಂ).

ಉಗಿಯಲ್ಲಿರುವ ಶಕ್ತಿಯನ್ನು (ಎನರ್ಜಿ) ಮೂರು ಭಾಗಗಳಾಗಿ ವಿಂಗಡಿಸಿದೆ: 1.ನೀರನ್ನು ಅದರ ಪ್ರಾರಂಭದ ತಾಪಮಾನದಿಂದ (ಸಾಮಾನ್ಯವಾಗಿ $0^0$ ಸೆ. ಎಂದು ಅಂಗೀಕರಿಸುತ್ತೇವೆ) ಕುದಿಯುವ ತಾಪಮಾನಕ್ಕೆ ಏರಿಸಲು ಬೇಕಾಗುವ ದ್ರವದ ಎಂಥಾಲ್ಪಿ. 2. ನೀರನ್ನು ಕುದಿಯುವ ತಾಪಮಾನದಲ್ಲಿ ಉಗಿಯಾಗಿ ಪರಿವರ್ತಿಸಲು ಬೇಕಾಗುವ ಬಾಷ್ಪೀಕರಣದ ಎಂಥಾಲ್ಪಿ. 3. ಉಗಿಯನ್ನು ಅದರ ಅಂತಿಮ ತಾಪಮಾನಕ್ಕೆ ಏರಿಸುವ ಅಧಿಕೋಷ್ಣದ (ಸೂಪರ್ ಹೀಟ್) ಎಂಥಾಲ್ಪಿ (**ನೋಡಿ– ಎಂಥಾಲ್ಪಿ**).

ಉಷ್ಣ ಶಕ್ತಿಯನ್ನು ಕಳಕೊಂಡಂತೆ ಅತಿತಪ್ತ ಉಗಿ ಆರ್ದ್ರವಾಗಿ ಕ್ರಮೇಣ ಬಿಸಿನೀರಾಗಿ ದ್ರವೀಕರಿಸುತ್ತದೆ. ಉಗಿಯ ತಯಾರಿ ಬಲು ಸುಲಭ; ಜನಾರೋಗ್ಯಕ್ಕೆ ಇದರಿಂದ ಹಾನಿ ಇಲ್ಲ: ಮತ್ತು ಬಳಸುವ ಪಾತ್ರೆ ಪದಾರ್ಥಗಳನ್ನು ನಾಶಗೊಳಿಸುವುದಿಲ್ಲ. ಈ ಕಾರಣಗಳಿಂದ ಶಕ್ತಿಯ ಸುಲಭ ಆಕರವಾಗಿ ಇದು ವಿಪುಲವಾಗಿ ಬಳಕೆಯಲ್ಲಿದೆ. *

**ಉಗಿ ಉತ್ಪಾದಕಗಳು:** ಅಧಿಕ ಸಂಮರ್ದ ಮತ್ತು ಅಧಿಕೋಷ್ಣತೆಯಲ್ಲಿರುವ ಉಗಿಯನ್ನು ಉತ್ಪನ್ನಮಾಡುವ ಸಮಗ್ರ ಯಾಂತ್ರಿಕ ವ್ಯವಸ್ಥೆ (ಸ್ಟೀಂ ಜನರೇಟರ್ಸ್). ಇಂಧನ ದಹನದಿಂದ ಅಧಿಕೋಷ್ಣವಿರುವ ಮೂಲವನ್ನು ಏರ್ಪಡಿಸಿ ಅದರಿಂದ ಉಷ್ಣಶಕ್ತಿಯನ್ನು ನೀರಿಗೆ ವರ್ಗಾಯಿಸಿ ನೀರನ್ನು ಬಾಷ್ಪೀಕರಿಸಲು ಬಳಸುವ ಒಂದು ಸಂಮರ್ದಪೂರಿತ ವ್ಯವಸ್ಥೆಯ ಹೆಸರು ಉಗಿಆವಿಗೆ (ಸ್ಟೀಂ ಬಾಯ್ಲರ್). ಇಲ್ಲಿ ಉಗಿಯನ್ನು ಪಡೆಯುವುದೂ ಅದರಲ್ಲಿ ಸುಪ್ತವಾಗಿರುವ (ಲೇಟೆಂಟ್) ಶಕ್ತಿಯನ್ನು ಯಾಂತ್ರಿಕ ಶಕ್ತಿಯಾಗಿ ಉಪಯೋಗಿಸಿಕೊಳ್ಳುವುದೂ ಮುಖ್ಯ ಉದ್ದೇಶಗಳು. ಆದ್ದರಿಂದ ಉಷ್ಣಯಂತ್ರಗಳಲ್ಲಿ ಉಗಿಆವಿಗೆ ಒಂದು ಪ್ರಧಾನವಿಭಾಗ. ಶಕ್ತ್ಯುತ್ಪಾದನೆಗೆ ಮಾತ್ರವಲ್ಲ, ಕೈಗಾರಿಕೆಗಳಲ್ಲಿನ ಕೆಲವು ಪ್ರಕ್ರಿಯೆಗಳಲೂ ಬಿಸಿಮಾಡುವ ಕ್ರಿಯೆಯಲ್ಲೂ (ನೋಡಿ– ಉಗಿತಾಪನ) ನೀರಿನ ಉಗಿಯ ವಿನಿಯೋಗವಿರುವುದರಿಂದ ಆವಿಗೆಗಳ ಬಳಕೆ ಬಲು ಹಿಂದಿನ ಕಾಲದಿಂದಲೂ ನಡೆದು ಬಂದಿದೆ. ಈ ಕಾರಣದಿಂದ ಅವುಗಳ ಅಲೇಖ್ಯದಲ್ಲೂ (ಡಿಸೈನ್) ರಚನೆಯಲ್ಲೂ ರಚನೆಗೆ ಉಪಯೋಗಿಸುವ ಪದಾರ್ಥ ಹಾಗೂ ವಿಧಾನಗಳಲ್ಲೂ ಹೆಚ್ಚಿನ ಸುಧಾರಣೆ ಸಾಧ್ಯವಾಗಿದೆ. ಆದ್ದರಿಂದ ಇಂದು ಆವಿಗೆ (ಬಾಯ್ಲರ್) ಪದದ ಅರ್ಥವ್ಯಾಪ್ತಿ ವಿಶಾಲವಾಗಿ ಅದೊಂದು ಉಗಿ ಉತ್ಪಾದಕ ವ್ಯವಸ್ಥೆ (ಸ್ಟೀಂ ಜನರೇಟಿಂಗ್ ಯೂನಿಟ್) ಎಂದೇ ಪರಿಗಣಿಸಲಾಗಿದೆ. ಪ್ರಸಕ್ತ ಲೇಖನದಲ್ಲಿ ಉಗಿ, ಆವಿಗೆ ಪದಗಳನ್ನು ಈ ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಇಂಧನದಹನದಿಂದ ಉತ್ಪತ್ತಿಯಾದ ಉಷ್ಣವನ್ನು, ಅದನ್ನು ಒಳಗೊಂಡಿರುವ ನೀರಿಗೆ ಹಾಯಿಸುವುದರ ಮೂಲಕ, ಮೊದಲೇ ನಿಗದಿಸಿರುವ ಸಂಮರ್ದ ಮತ್ತು ಉಷ್ಣತೆಗಳ ಮಟ್ಟದ ಉಗಿಯಾಗಿ ನೀರನ್ನು ಪರಿವರ್ತಿಸುವುದೇ ಆವಿಗೆಯ ಕೆಲಸ. ಇದು ತೃಪ್ತಿಕರವಾಗಿ ನೆರವೇರಿಸಲು ಕೆಳಗಿನ ಅಂಶಗಳಿಗೆ ಗಮನವೀಯಬೇಕು. ದಹನಜನ್ಯ ಅನಿಲಗಳು ಲೋಹಮಧ್ಯಸ್ಥವಾಗಿ ನೀರನ್ನು ಸಂಧಿಸುವ ಪ್ರದೇಶ ಆದಷ್ಟು ಹೆಚ್ಚು ವಿಸ್ತಾರವಾಗಿರಬೇಕು; ಉಷ್ಣ ಸಲೀಸಾಗಿ ಪ್ರವಹಿಸುವಂತೆ ಆವಿಗೆಯ ಲೋಹ ಸಾಧ್ಯವಾದಷ್ಟು ತೆಳುವಾಗಿಯೂ ಉತ್ತಮ ಉಷ್ಣವಾಹಕವಾಗಿಯೂ ಇರಬೇಕು; ಇಂಥ ರಚನೆಯಲ್ಲಿ ಆವಿಗೆ ಸುಭದ್ರವಾಗಿರಬೇಕು. ರಚನೆಯ ಖರ್ಚು ಮಿತಿಯಲ್ಲಿರಬೇಕು: ಲೋಹದ ಎರಡೂ ಮಗ್ಗುಲುಗಳಲ್ಲಿರುವ ನೀರು (ಅಥವಾ ಉಗಿ) ಮತ್ತು ದಹನಜನ್ಯ ಅನಿಲಗಳು ಸದಾ ಚಲಿಸುತ್ತಿರಬೇಕು: ಆ ನೀರು ಸಹ ಶುಭ್ರ ಮಾತ್ರವಲ್ಲದೆ ಶುದ್ಧವಾಗಿಯೂ ಇರಬೇಕು.

ವಿಂಗಡಣೆ: ಆವಿಗೆಗಳನ್ನು ಹಲವಾರು ರೀತಿಗಳಲ್ಲಿ ವಿಂಗಡಿಸಬಹುದು. ಒಂದು ವಿಂಗಡಣೆಯದರಲ್ಲಿನ ಬೆಳವಣಿಗೆ ಇನ್ನೊಂದರ ವ್ಯಾಪ್ತಿಯನ್ನು ಅತಿಕ್ರಮಿಸುವುದರಿಂದ ವಿಂಗಡಣೆಯ ನಿಖರತೆ ಅಸ್ಪಷ್ಟವಾಗಬಹುದಾದರೂ ಈ ಕೆಳಗಿನ ಯಾದಿಯನ್ನು ಗಮನಿಸಬಹುದು.

1. ನೀರು ಹಾಗೂ ದಹನಜನ್ಯ ಅನಿಲಗಳ ಪರಸ್ಪರ ಸ್ಥಾನ ನಿರ್ದೇಶಕವಾಗಿ, ಜಲ–ನಾಳಿ ಆವಿಗೆಗಳು ಮತ್ತ ಧೂಮ–ನಾಳಿ ಆವಿಗೆಗಳು.
2. ಆವಿಗೆಯಲ್ಲಿ ಅಗ್ನಿಕುಲುಮೆಯ ಸ್ಥಳ ಸೂಚಕವಾಗಿ ಹೊರಬೆಂಕಿ ಆವಿಗೆಗಳು, ಒಳಬೆಂಕಿ ಆವಿಗೆಗಳು.
3. ಅವುಗಳ ಪ್ರಧಾನ ಅಕ್ಷದ ದಿಕ್–ಸೂಚಿಯಾಗಿ, ಮಟ್ಟವಾಗಿರುವ ಆವಿಗೆಗಳು, ನೆಟ್ಟಗಿರುವ ಆವಿಗೆಗಳು, ಓರೆಯಾದ ಆವಿಗೆಗಳು.
4. ಅವುಗಳ ಸೇವಾಕ್ಷೇತ್ರಕ್ಕೆ ಅನುಗುಣವಾಗಿ ಸ್ಥಿರ ಆವಿಗೆಗಳು, ಒಯ್ಯಲಾಗುವ ಆವಿಗೆಗಳು, ಸ್ವಯಂಚಲಿ (ಅಥವಾ ಉಗಿ ಬಂಡಿಗ) ಆವಿಗೆಗಳು ಮತ್ತು ನೌಕಾ ಆವಿಗೆಗಳು.
5. ನೇರ ಕೊಳವೆಯ ಆವಿಗೆಗಳು ಮತ್ತು ಬಾಗು ಕೊಳವೆಯ ಆವಿಗೆಗಳು.
6. ಕಡಾಯಿ ಆವಿಗೆಗಳು ಮತ್ತು ಕೊಲವಿ ಆವಿಗೆಗಳು, ಇತ್ಯಾದಿ.

ಚ.ಅಂ.ಕ್ಕೆ 25 ಪೌಂಡ್ ಗೇಜ್ ಅಥವಾ ಕಡಿಮೆ ಸಂಮರ್ದದಲ್ಲಿ ಕೆಲಸಮಾಡುವ ಆವಿಗೆಗಳನ್ನು ಉಷ್ಣವಿಗೆಗಳೆಂದೂ ಅದಕ್ಕಿಂತ ಹೆಚ್ಚು ಸಂಮರ್ದದಲ್ಲಿ ಕೆಲಸ ಮಾಡುವವನ್ನು ಶಕ್ತಿ ಆವಿಗೆಗಳೆಂದೂ ಕರೆಯುವುದುಂಟು. ಕೆಲವು ವರ್ಷಗಳ ಹಿಂದೆ ಶಕ್ತಿ ಆವಿಗೆಗಳ ಸಂಮರ್ದ ಚ.ಅ.ಕ್ಕೆ 100 ಪೌಂಡ್ ಗೇಜ್ ಎಂಬುದು ಬಲು ಸಾಧಾರಣವಾಗಿತ್ತು. ಆದರೆ ಈಚೆಗೆ 400–600 ಪೌಂಡ್ ಶಕ್ತಿ ಉತ್ಪಾದಕ ಕೇಂದ್ರಗಳಲ್ಲಿ ಬಲು ಸಾಮಾನ್ಯ. ನಿರ್ವಹಣೆಯಲ್ಲಿ ಯಾವ ಹೆಚ್ಚಳವೂ ಕಾಣದೆ 1,470 ಪೌಂಡ್ ಗೇಜ್ ಇರುವಂಥವನ್ನು ಭಾರತದಲ್ಲೇ ಹೊಸದಾಗಿ ನಿರ್ಮಿತವಾಗಿರುವ ಕೇಂದ್ರಗಳಲ್ಲಿ ಕಾಣಬಹುದು. ಉಗಿಯ ಅವಧಿಕ (ಕ್ರಿಟಿಕಲ್) ಸಂಮರ್ದವಾದ 3,206 ಪೌಂಡುಗಳು ಮತ್ತು ಇನ್ನೂ ಹೆಚ್ಚಿನ ಸಂಮರ್ದಗಳಲ್ಲಿ ಉಗಿ ಉತ್ಪಾದಿಸುವ ಆವಿಗೆಗಳೂ ಬಳಕೆಗೆ ಬಂದಿವೆ.

ಸಾಧಾರಣವಾಗಿ ಪ್ರತಿ ಆವಿಗೆಯಲ್ಲೂ ಇರುವ ಕೆಲವು ಪ್ರಮುಖಭಾಗಗಳು ಹೀಗಿವೆ: ಸಂಮರ್ದಭಾಗಗಳು, ಬೆಂಕಿ ಏರ್ಪಾಡು, ಆವರಣ, ಉಪಕರಣಗಳು.

ಆವಿಗೆಯ ಉತ್ಪಾದನ ಸಾಮರ್ಥ್ಯ: ಆವಿಗೆ ಒಂದು ಗಂಟೆಯಲ್ಲಿ ಉತ್ಪಾದಿಸುವ ಆವಿಯ ತೂಕದಿಂದ ಇದನ್ನು ಅಳೆಯಲಾಗುವುದು. ಆದರೆ ಬೇರೆ ಬೇರೆ ಸಂಮರ್ದಗಳಲ್ಲಿ ಮತ್ತು/ಅಥವಾ ಉಷ್ಣತೆಗಳಲ್ಲಿ ತಯಾರಾದ ಒಂದೇ ತೂಕದ ಆವಿ ಒಳಗೊಂಡಿರುವ ಶಕ್ತಿಯ ಪ್ರಮಾಣ ಭಿನ್ನವಾಗಿರುವುದರಿಂದ ಈ ಕ್ರಮ ಸಾಮರ್ಥ್ಯದ ಸರಿಯಾದ ಅಳತೆಯಾಗಲಾರದು. ಆವಿಗೆಯ ಉಷ್ಣ ಪ್ರವಹಿಸುವ ಕ್ಷೇತ್ರದಲ್ಲಿ ಒಂದು ಗಂಟೆಗೆ ಪ್ರವಹಿಸುವ ಉಷ್ಣದ ಪ್ರಮಾಣ ಹೆಚ್ಚು ನಿಖರವಾದ ಅಳತೆಯಾದೀತು. ಇದನ್ನೇ ಗಂಟೆಗೆ ಸಹಸ್ರ–ಬ್ರಿಟಿಷ್ ಉಷ್ಣಮಾನದಲ್ಲಾಗಲೀ (ಕಿಲೊ ಬಿಟಿಯು) ದಶ ಲಕ್ಷ –ಬ್ರಿಟಿಷ್ ಉಷ್ಣಮಾನದಲ್ಲಾಗಲೀ (ಮೆಗಾ ಬಿಟಿಯು) ಹೇಳಿದರೆ ಸಂಖ್ಯೆ ಮಿತಿಯಲ್ಲಿರುತ್ತದೆ.

ಬಹಳ ಹಿಂದಿನಿಂದಲೂ ಬಳಕೆಯಲ್ಲಿರುವ ಒಂದು ಮಾನ ಆವಿಗೆಯ ಅಶ್ವ ಸಾಮರ್ಥ್ಯ. ಹಿಂದಿನ ಸ್ಥಿತಿಯಲ್ಲಿ ಇದು ಸಮಂಜಸವೇ. ಆದರೆ ಇಂದು ಆವಿಗೆಯ ಅಶ್ವಸಾಮರ್ಥ್ಯಕ್ಕೂ ಅದು ಉತ್ಪಾದಿಸುವ ಉಗಿಯನ್ನೇ ಉಪಯೋಗಿಸಿ ನಡೆಯುವ ಯಂತ್ರದ ಅಶ್ವಸಾಮರ್ಥ್ಯಕ್ಕೂ ತಾಳೆಯಾಗುವುದಿಲ್ಲ. ಆದರೂ ಬಳಕೆಯಲ್ಲಿರುವ ಅದನ್ನೇ ಒಂದು ಪ್ರಮಾಣದ ಮಾನವಾಗಿ ಉಳಿಸಿಕೊಂಡಿರಲು ಅದನ್ನು $100^0$ ಸೆಂ. ಗ್ರೇಡಿನಲ್ಲಿರುವ ಒಂದು ಪೌಂಡ್ ನೀರನ್ನು $100^0$ ಸೆಂ. ಗ್ರೇಡಿನಲ್ಲಿರುವ ಉಗಿಯಾಗಿ ಪರಿವರ್ತಿಸಲು ಬೇಕಾಗುವ ಉಷ್ಣದ 34 1/2 ದಷ್ಟು ಎಂದು ವಿಧಾಯಕಗೊಳಿಸಿದ್ದಾರೆ.

ಸಮಾನ ಬಾಷ್ಪೀಕರಣ (ಈಕ್ವಿವಲೆಂಟ್ ಇವಾಪೊರೇಷನ್) ಎಂಬುದು ಹೆಚ್ಚು ಅರ್ಥವತ್ತಾದ ಅಳತೆ. ಯಾವ ಸಂಮರ್ದ, ಉಷ್ಣತೆಗಳಲ್ಲಿ ಉಗಿ ಉತ್ಪತ್ತಿಯಾಗಿರಲಿ ಒಂದು ಗಂಟೆಗೆ ಅಷ್ಟೇ ಉಷ್ಣವನ್ನು ಉಪಯೋಗಿಸಿಕೊಂಡು $100^0$ ಸೆಂ. ಗ್ರೇಡಿನಲ್ಲಿರುವ ನೀರನ್ನು $100^0$ ಸೆಂ. ಗ್ರೇಡಿನ ಉಗಿಯಾಗಿ (ಎಂದರೆ ಬರಿಯ ಸುಪ್ತೋಷ್ಣವನ್ನು ಬಳಸಿ) ಎಷ್ಟು ಪೌಂಡ್ ಪರಿವರ್ತಿಸಬಹುದು ಎಂಬುದು ಇದರ ಪ್ರಮಾಣ.

ಸಣ್ಣ ಆವಿಗೆಗಳ ಬಗ್ಗೆ ಬಳಕೆಯಲ್ಲಿರುವ ಇನ್ನೊಂದು ಪದ ನಿಗದಿ ಮಾಡಿದ ಅಶ್ವ ಸಾಮರ್ಥ್ಯ (ರೇಟೆಡ್ ಎಚ್.ಪಿ.). ಆವಿಗೆಯಲ್ಲಿ ಉಷ್ಣ ಪ್ರವಹಿಸುವ ಪ್ರತಿ 10 ಚದರ ಅಡಿ ವಿಸ್ತಾರಕ್ಕೆ ಒಂದು ಅಶ್ವಸಾಮರ್ಥ್ಯ ಎಂದು ಇದರ ಅಳತೆ. ಇದು ಅಂದಾಜಿನ ಅಳತೆಯೇ ಹೊರತು ನಿಖರವಾದುದೇನೂ ಅಲ್ಲ.

ಕೆಲವು ಪ್ರಮುಖ ಅವಿಗೆಗಳ ವಿವರಣೆ ಮುಂದೆ ಕೊಟ್ಟಿದೆ.

ಧೂಮನಾಳಿ ಹಾಗೂ ಜಲನಾಳಿ ಆವಿಗೆಗಳು (ಫೈರ್ ಟ್ಯೂಬ್ ವಾಟರ್ ಟ್ಯೂಬ್ ಬಾಯ್ಲರ್ಸ್): ಅವಿಗೆ ಮೊಟ್ಟಮೊದಲು ಬಳಕೆಗೆ ಬಂದಾಗ (ರೋಮನರ ಕಾಲದಲ್ಲಿ) ಅದು ಒಂದು ಕಡಾಯಿಯ ಆಕಾರದಲ್ಲಿತ್ತು. ಸಮರ್ಪಕವಾಗಿ ಅಳವಡಿಸಿದ್ದ ಒಲೆಯ ಉರಿಯಿಂದ ಸುತ್ತಲೂ ನೀರು ಕಾಯುವಂತೆ ಏರ್ಪಡಿಸಲಾಗಿತ್ತು. ಇದರಲ್ಲಿ ಉಗಿ ಉತ್ಪಾದನೆಯಾಗುತ್ತಿದ್ದುದು ವಾತಾವರಣದ ಸಂಮರ್ದದಲ್ಲಿ ಮಾತ್ರ. 1080ರಲ್ಲಿ ಪೇಪಿನ್ ಎಂಬಾತ ಸನ್ನೆ ರಕ್ಷಾಕವಾಟವನ್ನು ಬಳಕೆಗೆ ತಂದ. ವಾತಾವರಣಕ್ಕಿಂತ ಹೆಚ್ಚು ಸಂಮರ್ದದಲ್ಲಿ ಉಗಿ ಉತ್ಪಾದನೆಯನ್ನು ಇದರೊಳಗೆ ಸುರಕ್ಷಿತವಾಗಿ ಸಾಧಿಸಿದ. ಅಲ್ಲದೆ ಕಡಾಯಿಯ ಒಳಗೆ ಮಾತ್ರ ಉರಿ ತಾಕಿದರೆ ಹೆಚ್ಚು ಉತ್ಪಾದನೆಗೆ ಬೇಕಾದ ಉಷ್ಣದ ಪ್ರವಾಹಕ್ಕೆ ಜಾಗ ಸಾಲದೆಂಬುದನ್ನು ಮನಗಂಡು ನೀರಿನೊಳಗೆ ತೂರುವಂತೆ ಇನ್ನೂ ಕೆಲವು ಕೊಳವೆಗಳನ್ನು ಅಳವಡಿಸಿ ಅವುಗಳ ಮುಖಾಂತರವೂ ಉರಿಯ ಅನಿಲಗಳು ಹಾಯುವಂತೆ ಮಾಡಿದ. ಹೀಗೆ ಧೂಮನಾಳಿ ಆವಿಗೆಯ ಉಗಮವಾಗಿ ಉತ್ಪಾದನೆ ಹಾಗೂ ಮಿತವ್ಯಯ ಎರಡರಲ್ಲೂ ಹೆಚ್ಚಳ ಸಾಧ್ಯವಾಯಿತು. ಕಾರ್ನಿಷ್ ಆವಿಗೆ, ಲ್ಯಾಂಕಷೈರ್ ಆವಿಗೆ, ಸ್ಕಾಚ್ ನೌಕಾ ಆವಿಗೆ, ಉಗಿಬಂಡಿಯ ಆವಿಗೆ–ಇವೆಲ್ಲ ಈ ಬಗೆಯವಕ್ಕೆ ಉದಾಹರಣೆಗಳು. ಸಾಧಾರಣ ಸಂಮರ್ದದಲ್ಲಿ, ಎಂದರೆ ಚ.ಅಂ.ಕ್ಕೆ ಸುಮಾರು 300 ಪೌಂಡಿಗೆ ಮೀರದಂತೆ ಮತ್ತು ಉಗಿ ಉತ್ಪಾದನಾ ಪ್ರಮಾಣ ಗಂಟೆಗೆ ಸುಮಾರು 5 ಟನ್ನಿಗಿಂತ ಹೆಚ್ಚಿಲ್ಲದಿರುವಂಥ ಕಡೆಗಳಲ್ಲಿ (ಉದಾಹರಣೆಗೆ ಕಾರ್ಖಾನೆಗಳಲ್ಲಿ ನೌಕಾ, ಸಾರಿಗೆ, ಉಗಿಬಂಡಿ, ಗಣಿ ಕೆಲಸ ಇಂಥಲ್ಲಿ) ಈ ಬಗೆಯ ಆವಿಗೆಗಳ ಬಳಕೆ ಅನುಕೂಲಕರ. ಸಂಮರ್ದ ಇನ್ನೂ ಹೆಚ್ಚಿದಂತೆ ಉತ್ಪಾದನಾ ಪ್ರಮಾಣವೂ ಏರಿದಂತೆ ಕಡಾಯಿ ಹಾಗೂ ಧೂಮನಾಳಿ ಆವಿಗೆಗಳು ಅತಿ ಭಾರವೂ ವಿಪರೀತ ದೊಡ್ಡವೂ ಆದುವು. ಕಡಾಯಿಯ ಪ್ರಮಾಣವನ್ನು ಒಂದು ಮಿತಿಯಲ್ಲಿಡನೋಸುಗ ಒಳಗಿದ್ದ ಒಲೆಯನ್ನು ಆವಿಗೆಯ ಕಡಾಯಿಯ ಹೊರಗಿಟ್ಟು, ದಹನಜನ್ಯ ಅನಿಲಗಳನ್ನು ಕೊಳವೆಗಳ ಮುಖಾಂತರ ನೀರಿನಲ್ಲಿ ಹಾಯಿಸುವುದನ್ನು ಬಿಟ್ಟು ಕಡಾಯಿಯ ನೀರನ್ನೇ ಅನೇಕ ಕೊಳವೆಗಳಲ್ಲಿ ಹಾಯಿಸಿ ಉರಿಯ ಅನಿಲಗಳು ಇವನ್ನು ಸುತ್ತುವರಿದು ಕಾಯಿಸುವಂತೆ ಮಾಡಲಾಯಿತು. ಅಲ್ಲದೆ ನೀರಿನ ಸಹಜವಾದ ಸುತ್ತುವಿಕೆಯನ್ನು ಉಂಟುಮಾಡಲೋಸ್ಕರ ಕೊಳವೆಗಳನ್ನು ಇಳಿಜಾರಾಗಿ ಇಡಲಾಯಿತು. ಈ ಬದಲಾವಣೆಯಿಂದ ರೂಪುಗೊಂಡವು ಜಲನಾಳಿ ಆವಿಗೆಗಳು. ಇವುಗಳ ವಿಶೇಷ ಸುಭದ್ರತೆ ಹಾಗೂ ಕಡಿಮೆ ತೂಕದ ಕಾರಣ ಮಿತವಾದ ಸ್ಥಳದಲ್ಲಿ ಹೆಚ್ಚಿನ ಶಕ್ತಿ ಉತ್ಪಾದನೆ ಬೇಕಾದಂಥ ಕಡೆಗಳಲ್ಲೆಲ್ಲ ಇವುಗಳ ಉಪಯೋಗ ಅನಿವಾರ್ಯವಾಗಿದೆ. ಈ ಬಗೆಯ ಆವಿಗೆಗಳು ಬೆಳವಣಿಗೆಯ ಶಿಖರವನ್ನು ಏಕನಾಳಿ ಆವಿಗೆಗಳಲ್ಲಿ ಕಾಣಬಹುದು. ಇಲ್ಲಿ ಆವಿಗೆಯೆಂದರೆ ಅತಿ ಕಿರಿದಾದ ಸ್ಥಳದಲ್ಲಿ ಅತಿ ಹೆಚ್ಚಿನ ಉಷ್ಣಪ್ರವಾಹ ಪ್ರದೇಶವನ್ನು ಹೊಂದಿರುವ, ಉದ್ದವಾದ ಆದರೆ ಸುರುಳಿ ಸುತ್ತಿದ್ದ, ಒಂದೇ ಕೊಳವಿ. ಆವಿ ತಯಾರಾಗುವ ವೇಗವನ್ನು ಸೂಚಿಸುವುದಕ್ಕಾಗಿ ಇವನ್ನು ಮಿಂಚಿನ ಆವಿಗೆಗಳೆಂದು (ಫ್ಲಾಶ್ ಬಾಯ್ಲರ್ಸ್) ಕರೆಯುತ್ತಾರೆ.

ಬ್ಯಾಬ್‌ಕಾಕ್ ವಿಲ್‌ಕಾಕ್ಸ್, ಯಾರೋ ಮತ್ತು ಸ್ಟರ್ಲಿಂಗ್ ಆವಿಗೆಗಳನ್ನು ಜಲನಾಳಿ ಅವಿಗೆಗಳಿಗೆ ಉದಾಹರಣೆಯಾಗಿ ಹೆಸರಿಸಬಹುದು.



ಚಿತ್ರ–ಲ್ಯಾಂಕಷೈರ್–ಆವಿಗೆ

**ಲ್ಯಾಂಕಷೈರ್ ಆವಿಗೆ:** ಒಳಬೆಂಕಿಯ ಕಡಾಯಿ ಮಾದರಿಯ ಉತ್ತಮ ಉದಾಹರಣೆಯಾದ ಲ್ಯಾಂಕಷೈರ್ ಆವಿಗೆ ಕಳೆದ ಶತಮಾನದ ಮಧ್ಯಭಾಗದಲ್ಲಿ ಬಳಕೆಗೆ ಬಂದು ಈಗ ಶತಮಾನೋತ್ಸವವನ್ನು ಆಚರಿಸಿ ಜನಪ್ರಿಯವಾದ ಉಗಿ ಉತ್ಪಾದಕ ವೆನಿಸಿಕೊಂಡಿದೆ. ಇದು ಸುಮಾರು 25"–30" ಉದ್ದ ಮತ್ತು 6 1/2"–9" ವ್ಯಾಸವುಳ್ಳ ಉಕ್ಕಿನ ದೊಡ್ಡ ಪಿಪಾಯಿಯಂತಿದೆ. ಇದನ್ನು ಸೂಕ್ತ ರಚನೆಯ ಇಟ್ಟಿಗೆಯ ಕಟ್ಟಡದ ಮೇಲೆ ಅಳವಡಿಸಿದೆ. 4"–5" ಅಗಲವಿರುವ ಮಂದವಾದ ಉಕ್ಕಿನ ತಗಡುಗಳನ್ನು ದುಂಡಗೆ ಬಾಗಿಸಿ ಉಂಗುರದಂತೆ ಬೆಸೆದು ಅಥವಾ ಕೀಲಿಗಳಿಂದ (ರಿವೆಟ್) ಬಿಗಿದು ಇಂಥ ಐದಾರು ಉಂಗುರಗಳನ್ನು ಸಾಲಾಗಿ ಒಂದು ಒಳಗೆ ಮತ್ತೊಂದು ಹೊರಗೆ ಬರುವಂತೆ ಅದೇ ರೀತಿ ಕೂಡಿಸಿ ಎರಡು ತುದಿಗಳ ಬಾಯಿಗೂ ದುಂಡನೆಯ ಫಲಕಗಳನ್ನು ಬೆಸೆದು ಅಥವಾ ಕೀಲಿಗಳಿಂದ ಬಿಗಿದು ಮುಚ್ಚಿ ಈ ಪಿಪಾಯಿಯನ್ನು ಮಾಡಿದೆ. ಎರಡೂ ತುದಿಯ ಈ ದುಂಡು ಬಿಲ್ಲೆಗಳ ಕೆಳಪಾರ್ಶ್ವದಲ್ಲಿ ಸುಮಾರು 2 1/2'–3 1/2' ವ್ಯಾಸದ ಎರಡು ರಂಧ್ರಗಳನ್ನು ಕೊರೆದಿದೆ. ಪಿಪಾಯಿಯ ಮುಂತುದಿಯಿಂದ ಹಿಂತುದಿಯವರೆಗೂ ಎರಡು ಕುಲುಮೆಯ ಕೊಳವೆಗಳು ಹಾಯುತ್ತವೆ. ಇವನ್ನು ಸಹ ಹೊರಗಿನ ಪಿಪಾಯಿಯಂತೆಯೇ ಹಲವಾರು ಉಂಗುರಗಳಿಂದಲೇ ಮಾಡಲಾಗಿದೆ. ಆದರೆ ಒಂದಕ್ಕೊಂದು ಸೇರಿಸುವಾಗ ಅವುಗಳ ಅಂಚುಗಳನ್ನು ಹೊರಗೆತ್ತಿ ನಡುವೆ ಒಂದು ಬಳೆ ಇಟ್ಟು ಅಲ್ಲಿ ಕೀಲಿಗಳಿಂದ ಬಿಗಿದಿರುತ್ತಾರೆ. ಕೊಳವೆಗಳೊಳಗಿನ ಉರಿಯ ಅತಿ ಉಷ್ಣದಿಂದ ಕೀಲಿಗಳು ದುರ್ಬಲಗೊಳ್ಳದಿರಲೆಂದೇ ಈ ಏರ್ಪಾಡು. ಕೊಳವೆಯ ಉಂಗುರಗಳು ಮುಂತುದಿಯಿಂದ ಹಿಂತುದಿಗೆ ಕ್ರಮೇಣ ಸಣ್ಣದಾಗುತ್ತ ಹೋಗಿವೆ. ಅವನ್ನು ಪಿಪಾಯಿಯ ಎರಡೂ ಕಡೆಯ ದುಂಡು ಬಿಲ್ಲೆಗಳ ರಂಧ್ರಗಳ ಅಂಚಿಗೆ (ಮುಂದೆ ಹೊರ ಮುಗ್ಗುಲಿಗೂ ಹಿಂದೆ ಒಳ ಮಗ್ಗುಲಿಗೂ) ಸೂಕ್ತವಾಗಿ ಕೀಲಿಸಲಾಗಿದೆ. ಈಚಿನ ಮಾದರಿಗಳಲ್ಲಿ ಈ ಒಳ ಕೊಳವೆಗಳನ್ನು ಮಾಡಲು ಉಪಯೋಗಿಸುವ ಫಲಕದ ಉಂಗುರಗಳ ಸಂಖ್ಯೆಯನ್ನು ಕಡಿಮೆ ಮಾಡಿ ಭದ್ರತೆಗೆ ಲೋಪಬಾರದಿರಲು ನಿರಿಗೆಯ ಉಂಗುರಗಳನ್ನು ಉಪಯೋಗಿಸುತ್ತಾರೆ. ಹಾಗೆಯೇ ಹಿಂದಿನ ಮಾದರಿಗಳಲ್ಲಿ ಪಿಪಾಯಿಯ ತುದಿಗಳಾದ ದುಂಡು ಬಿಲ್ಲೆಗಳು ಚಪ್ಪಟೆಯಾಗಿದ್ದು ಒಳಗಿನ ಸಂಮರ್ದವನ್ನು ತಡೆದುಕೊಳ್ಳಲಾಗುವಂತೆ ಅವನ್ನು ಸುತ್ತಲೂ ತ್ರಿಕೋನ ಪಟ್ಟಿಗಳಿಂದ ಸುತ್ತು ಫಲಕಕ್ಕೆ ಬಿಗಿದು ಭದ್ರಪಡಿಸಿ ಎರಡೂ ತುದಿ ಬಿಲ್ಲೆಗಳನ್ನು ಸಲಾಕೆಗಳಿಂದ ಒಂದಕ್ಕೊಂದು ಬಿಗಿದಿರುತ್ತಿದ್ದರು. ಈಚಿನ ಮಾದರಿಗಳಲ್ಲಿ ತುದಿಬಿಲ್ಲಗಳಿಗೆ ಚಪ್ಪಟೆ ಫಲಕಗಳ ಬದಲು ಉಬ್ಬಿದವನ್ನು ಉಪಯೋಗಿಸಿ ಈ ಬಿಗಿಪಟ್ಟಿಗಳ ಅವಶ್ಯಕತೆ ಇಲ್ಲದಂತೆ ಮಾಡಿರುತ್ತಾರೆ.

ಲ್ಯಾಂಕಷೈರ್ ಆವಿಗೆ ಬಲು ಜನಪ್ರಿಯವಾಗಿದೆ. ಇದರ ಕಾರಣಗಳು ಸ್ಥೂಲವಾಗಿ– 1. ರಚನೆಯಲ್ಲಿ ಸರಳತೆ; ತಪ್ಪು ಮಾಡಲು ಅಷ್ಟು ಇಲ್ಲದಿರುವುದು. 2. ನಿರ್ವಹಣೆಯಲ್ಲಿನ ಸುಲಭತೆ; ಒರಟುತನವನ್ನು ಅದು ತಡೆದುಕೊಳ್ಳಬಲ್ಲುದು. 3. ನಿಗದಿ ಮಾಡಿದ ಸಾಮರ್ಥ್ಯಕ್ಕೆ ಹೋಲಿಸಿದರೆ ಅದರ ಗಾತ್ರ ಹೆಚ್ಚಿದ್ದು ಪರಮಾವಧಿ ಹೊರೆ ಬಂದ ಸಮಯದಲ್ಲಿ ಸಂಮರ್ದದಲ್ಲಿ ಹೆಚ್ಚಿನ ಇಳಿತವಿಲ್ಲದೆ ಆವಿಯೊದಗಿಸುವ ಅದರ ಸಾಧ್ಯತೆ. ಆದರೆ ಈ ಆವಿಗೆ ಒಳಗೊಂಡಿರುವ ನೀರಿನ ಹೆಚ್ಚಿನ ಪ್ರಮಾಣದಿಂದ, ಒಲೆಗಳ ವಿಸ್ತಾರಕ್ಕಿರುವ ಮಿತಿಯಿಂದ ಮತ್ತು ಸುತ್ತುವಿಕೆಯ ನಿಧಾನದಿಂದ ಉಗಿಉತ್ಪಾದನವೇಗ ನಿಧಾನವಾಗುತ್ತದೆ. ಒಂದು ನಿರ್ದಿಷ್ಟ ಸಾಮರ್ಥ್ಯಕ್ಕೆ ಆವಿಗೆ ಆಕ್ರಮಿಸುವ ನೆಲ ವಿಸ್ತಾರವೂ ಹೆಚ್ಚು, ಅಲ್ಲದೆ ಇದರ ಇಟ್ಟಿಗೆ ಆವರಣದ ರಚನೆ ದುಬಾರಿಯಾಗಿದ್ದು ಅದನ್ನು ಸರಿಯಾದ ದುರಸ್ತಿಯಲ್ಲಿಟ್ಟಿರುವುದು ಕಷ್ಟಸಾಧ್ಯವೇ. ಸಾಗಣೆಗೆ ಇದರ ವಿಶೇಷಗಾತ್ರ ತೊಂದರೆಯೇ ಸರಿ. ಇಷ್ಟಾದರೂ ಎಂಥೆಂಥ ಅಗಮ್ಯ ಪ್ರದೇಶಗಳಲ್ಲೂ ಲ್ಯಾಂಕಷೈರ್ ಆವಿಗೆಗಳನ್ನು ಕಾಣಬಹುದು.

**ಕಾರ್ನಿಶ್ ಆವಿಗೆ:** ಇದು ಲ್ಯಾಂಕಷೈರ್ ಆವಿಗೆಯದೇ ಚಿಕ್ಕದಾದ ಸ್ವರೂಪ. ಒಂದು ವ್ಯತ್ಯಾಸವೆಂದರೆ ಎರಡು ಕುಲುಮೆ ಕೊಳವೆಗಳಿಗೆ ಬದಲಾಗಿ ನಡು ಮಧ್ಯದಲ್ಲಿ ಅಂಥ ಒಂದೇ ಕೊಳವೆಯಿರುವುದು. ಕೆಲವೊಮ್ಮೆ ನಡುನೇರದಲ್ಲಿಡುವ ಬದಲು ಒಂದೆರಡು ಅಂಗುಲಗಳಷ್ಟು ಪಕ್ಕಕ್ಕೆ ಜರುಗಿಸಿ ಒಳಗೆ ಚೊಕ್ಕಟ ಮಾಡುವುದಕ್ಕೆ ಸೌಲಭ್ಯ ಕಲ್ಪಿಸುತ್ತಾರೆ. ನೀರಿನ ಸುತ್ತುವಿಕೆಗೂ ಇದರಿಂದ ಪ್ರಚೋದನೆಯುಂಟಾಗುತ್ತದೆಂದೂ ಹೇಳುವುದುಂಟು. ಆವರಣದ ಒಳರಚನೆಯಲ್ಲೂ ಒಂದು ವ್ಯತ್ಯಾಸವನ್ನು ಗಮನಿಸಬಹುದು. ಕುಲುಮೆ ಕೊಳವೆಯಿಂದ ಹೊರಬಿದ್ದ ಅನಿಲಗಳು ಮೊದಲು ಪಿಪಾಯಿಯ ಎರಡೂ ಪಕ್ಕಗಳಲ್ಲಿ ಮುಂತುದಿಗೆ ಪ್ರವಹಿಸಿ ಅಲ್ಲಿ ಒಟ್ಟು ಸೇರಿ ಕೆಳಗಿನ ಮಾರ್ಗದಲ್ಲಿ ಹಿಂತಿರುಗುವುವು. ಈ ರೀತಿಯ ರಚನೆಯನ್ನೇ ಲ್ಯಾಂಕಷೈರ್ ಆವಿಗೆಗಳಿಗೆ ಉಪಯೋಗಿಸುವ ಪರಿಪಾಠ ಜರ್ಮನಿಯಲ್ಲಿದೆ.

ಮಟ್ಟಸನಾಳ ಪ್ರತಿವಾಹಿ ಆವಿಗೆ (ಹಾರಿಝಾಂಟಲ್ ರಿಟರ್ನ್ ಟ್ಯೂಬ್ ಬಾಯ್ಲರ್: ಸರಳ ರಚನೆ, ಪ್ರಥಮತಃ ಸುಲಭವಾದ ಬೆಲೆ, ಹೆಚ್ಚಿನ ಬಾಷ್ಪೀಕರಣ ಸಾಮರ್ಥ್ಯ ಮತ್ತು ಅಡಕವಾಗಿರುವಿಕೆ ಈ ಕಾರಣಗಳಿಂದ ಸಣ್ಣ ಶಕ್ತ್ಯಾಗಾರಗಳಲ್ಲಿ ಸಾಮಾನ್ಯವಾಗಿ ಇದು ಬಳಕೆಯಲ್ಲಿದೆ. ಕುಲುಮೆ ಕಡಾಯಿಯ ಹೊರಗಿರುವುದರಿಂದ ಯಾವ ಬಗೆಯ ಕಿಚ್ಚಿನ ಸಜ್ಜನ್ನಾದರೂ ಇಲ್ಲಿ ಸರಿಹೊಂದಿಸಿಕೊಳ್ಳಬಹುದು. ಉಕ್ಕಿನ ತಗಡುಗಳಿಂದ ಮಾಡಿದ ಉದ್ದವಾದ ಪಿಪಾಯಿ ಇದೆ. ಅದರ ಚಪ್ಪಟೆಯಾದ ದುಂಡು ಫಲಕಗಳಲ್ಲಿ ರಂಧ್ರಗಳನ್ನು ಮಾಡಿ ಅವುಗಳ ಮೂಲಕ ಸಣ್ಣ ನಾಳಗಳನ್ನು ಹಾಯಿಸಿದೆ. ತುದಿ ಫಲಕಗಳನ್ನು ಬಿಗಿಪಡಿಸುವ ಕೆಲಸವೂ ನಾಳಗಳದ್ದೇ ಆಗಿದ್ದು ಅವಿಲ್ಲದ ಮೇಲ್ಭಾಗದಲ್ಲಿ ಮಾತ್ರ ಆವಿಯ ಒತ್ತಡವನ್ನು ತಡೆದುಕೊಳ್ಳಲಾಗುವಂತೆ ಬಿಗಿಪಟ್ಟಿಗಳನ್ನು ಸೇರಿಸಬಹುದು. ಇಡೀ ಪೀಪಾಯಿಯನ್ನು

ಮೇಲೆ ಎತ್ತರದಲ್ಲಿರುವ ತೊಲೆಗಳಿಂದ ಸರಳುಗಳ ಮೂಲಕ ಇಳಿಬಿಟ್ಟು ಕೆಳಭಾಗದಲ್ಲಿ ಅದರ ಸುತ್ತಲೂ ಇಟ್ಟಿಗೆಯ ಕಟ್ಟಡವನ್ನು ರಚಿಸಿರುತ್ತಾರೆ. ಪಿಪಾಯಿಗಳೊಳಗೆ ನೀರು ಅತಿ ಎತ್ತರದಲ್ಲಿರುವ ನಾಳಕ್ಕಿಂತ 3ಹಿ–4" ಮೇಲ್ಮಟ್ಟದಲ್ಲಿರುತ್ತದೆ.

**ಸ್ವಯಂಚಲನ ಆವಿಗೆ (ಲೋಕೊಮೋಟಿವ್ ಬಾಯ್ಲರ್)**: ಇದು ನೇರ ಧೂಮನಾಳಿ ಮಾದರಿಯ ಒಳಗೆ ಉರಿ ಪೆಟ್ಟಿಗೆಯುಳ್ಳ ಆವಿಗೆ, ಹೆಚ್ಚಿನ ಉಷ್ಣಪ್ರವಾಹ ಕ್ಷೇತ್ರವೂ ಕಲ್ಲಿದ್ದಲನ್ನು ಅತ್ಯಂತ ರಭಸದಿಂದ ಉರಿಸಬಲ್ಲ ಕುಲುಮೆಯೂ ಇಲ್ಲಿ ಆವಶ್ಯಕ ಅಂಶಗಳು. ಅನೇಕ ನಾಳಿಗಳನ್ನು ಕ್ರಮರಹಿತ ರೀತಿಯಲ್ಲೋ ಎಂಬಂತೆ ಇದರಲ್ಲಿ ಜೋಡಿಸಿದೆ. 130 ವರ್ಷಗಳಿಗಿಂತಲೂ ಹಳೆಯದಾದ ಸ್ಟೀಫನ್ ಸನ್ನನ ಕಲ್ಪನೆಯಾದ ಈ ಆವಿಗೆ ಒಂದು ದಕ್ಷ ಸಾಧನೆ.



ಸ್ವಯಂಚಲನ–ಆವಿಗೆ
**1. ನಿಯಂತ್ರಕ 2. ಹೊಗೆಪೆಟ್ಟಿಗೆ 3. ಪಿಪಾಯಿ 4. ಉರಿಪೆಟ್ಟಿಗೆ 5. ಕೆಸರುಬಳೆ 6. ಬೂದಿತಟ್ಟೆ**

ಸಾಮಾನ್ಯ ಮಾದರಿಯೊಂದರ ರೂಪ ವಿವರ ಹೀಗಿದೆ: ಉಕ್ಕಿನ ತಗಡುಗಳಿಂದ ರಚಿತವಾದ ಕೊಳವೆಗಳನ್ನು ಜೋಡಿಸಿ ಮಾಡಿದ ಸುಮಾರು 5' ವ್ಯಾಸದ ದೊಡ್ಡ ಪಿಪಾಯಿ, ಇದರೊಳಗೆ ಮುಂಭಾಗದಲ್ಲಿ ಹೊಗೆ ಪೆಟ್ಟಿಗೆಯನ್ನೂ ಹಿಂಭಾಗದಲ್ಲಿ ಉರಿ ಪೆಟ್ಟಿಗೆಯನ್ನೂ ಬೇರ್ಪಡಿಸುವಂತೆ ಎರಡು ನಾಳ ಫಲಕಗಳು, ಇವುಗಳಲ್ಲಿ ನೂರಾರು ನಾಳ ರಂಧ್ರಗಳು, ಈ ರಂಧ್ರಗಳ ಮುಖಾಂತರ ತೂರಿಸಿ ಎರಡೂ ಅಂಚುಗಳಲ್ಲಿ ಫಲಕದೊಡನೆ ಬಿಗಿದ ಅಷ್ಟೇ ಸಂಖ್ಯೆಯ ಮತ್ತು 1 1/4"–3 1/2" ವ್ಯಾಸದ 12'–19' ಉದ್ದದ ಸಣ್ಣ ಕೊಳವೆಗಳು. ಇವು ಸಂಖ್ಯೆಯಲ್ಲಿ 120–500ರ ವರೆಗೂ ಇರಬಹುದು. ಉರಿ ಪೆಟ್ಟಿಗೆಗಳನ್ನು ಒಳಗೊಂಡಿರುವ ಆವಿಗೆಯ ಹಿಂಭಾಗವನ್ನು ಒಂದು ಸುತ್ತುಫಲಕ. ತುದಿಫಲಕ ಹಾಗೂ ಕಂಠಫಲಕಗಳಿಂದ ಮಾಡಿದೆ. ಇದನ್ನು ಆವಿಗೆಯ ಉಳಿದ ಪಿಪಾಯಿ ಭಾಗಕ್ಕೆ ಬೆಸೆಯಲಾಗಿದೆ. ಉರಿಪೆಟ್ಟಿಗೆಯನ್ನು ಮೊದಲು ಸಾಮಾನ್ಯವಾಗಿ ತಾಮ್ರದಿಂದ ರಚಿಸುತ್ತಿದ್ದರು. ಈಗ ಉಕ್ಕಿನಿಂದ ಪ್ರತ್ಯೇಕವಾಗಿ ತಯಾರಿಸಲಾಗುತ್ತಿದೆ. ಇದು ಆಯಾಕಾರದ ಅಷ್ಟು ಎತ್ತರವಲ್ಲದ ಒಂದು ಪೆಟ್ಟಿಗೆ, ಇದರ ನೆತ್ತಿ, ಸುತ್ತು ಹಾಗೂ ಫಲಕಗಳನ್ನು ಸುತ್ತುವರಿದಿರುವ ಆವಿಗೆಯ ಫಲಕಗಳೊಡನೆ ಅನೇಕ ಆಧಾರಬಂಧನಗಳಿಂದ ಬಿಗಿಪಡಿಸಿರುತ್ತಾರೆ. ಒಳಗಿನ ಫಲಕಗಳಿಗೂ ಹೊರಗಿನದಕ್ಕೂ ನಡುವಿನ ಜಾಗ ನೀರಿನಿಂದ ತುಂಬಿದೆ. ಕೆಳಭಾಗದಲ್ಲಿ ಕೆಸರು ಬಳೆ ಅಥವಾ ಪಾಯದ ಬಳೆಯೆಂದು ಕರೆಯುವ ಉಕ್ಕಿನ ಬಳೆಯೊಂದು ಮುಚ್ಚಿದೆ. ಇದರ ಮೇಲೆ ಒಂದು ರಂಧ್ರವನ್ನೂ ನೆತ್ತಿ ಫಲಕದ ಸಮಕ್ಕೆ ಇನ್ನೊಂದು ರಂಧ್ರವನ್ನೂ ಹೊರಗಿನ ಫಲಕಗಳಲ್ಲಿ ಮಾಡಿ ಮುಚ್ಚಿರುತ್ತಾರೆ. ಒಳಗೆ ಚೊಕ್ಕಟಗೊಳಿಸಬೇಕಾದಾಗ ಇವುಗಳ ಉಪಯೋಗವಿದೆ. ಉರಿ ಪೆಟ್ಟಿಗೆಯ ಮುಂಭಾಗದ ಹಿಂದಿನ ಫಲಕ ಹಾಗೂ ಆವಿಗೆಯ ತುದಿ ಫಲಕಗಳೆರಡರಲ್ಲೂ ಸೇರಿಸಿದಂತೆ ಮಾಡಿರುವ ದುಂಡು ರಂಧ್ರವೇ ಕುಲುಮೆಯ ಬಾಗಿಲು. ಉರಿ ಪೆಟ್ಟಿಗೆಯ ಒಳಗೆ ಕಬ್ಬಿಣದ ಪಟ್ಟಿಗಳಿಂದ ಮಾಡಿದ ಕುಲುಮೆಯೂ ಅದಕ್ಕೆ ಸ್ವಲ್ಪ ಮೇಲೆ ಕಾವಿಟ್ಟಿಗೆಯೂ ಕಮಾನೂ ಕುಲುಮೆಯ ಕೆಳಗೆ ಬೇಕಾದಾಗ ತೆಗೆಯಲಾಗುವಂತೆ ಕೀಲು ಬಾಗಿಲುಗಳಿರುವ ಬೂದಿ ಸಂಗ್ರಾಹಿಯೂ ಇವೆ.

**ಸ್ಕಾಚ್ ನೌಕಾ ಆವಿಗೆ (ಸ್ಕಾಚ್ ಮರೀನ್ ಬಾಯ್ಲರ್)** : ಇದು ವ್ಯಾಪಾರೀ ನೌಕೆಗಳಲ್ಲಿ ಸಾಧಾರಣವಾಗಿ ಯಾವಾಗಲೂ ಬಳಕೆಯಲ್ಲಿರುವ ಆವಿಗೆ. ಆಕ್ರಮಿಸಿಕೊಳ್ಳುವ ಜಾಗಕ್ಕೆ ಹೋಲಿಸಿದಾಗ ಉಷ್ಣಪ್ರವಾಹ, ವಿಸ್ತಾರ ಹೆಚ್ಚಾಗಿರುವುದೂ ಯಾವ ಬಗೆಯ ಇಟ್ಟಿಗೆಯ ಆವರಣವೂ ಬೇಕಿಲ್ಲದೆ ಸ್ವಯಂಪೂರ್ಣವಾಗಿರುವುದೂ ಇದರ ಗುಣವಿಶೇಷಗಳು.

**ಲಂಬಸನಾಳಿ ಆವಿಗೆಗಳು (ವರ್ಟಿಕಲ್ ಟ್ಯೂಬ್ಯುಲರ್ ಬಾಯ್ಲರ್ಸ್)**: ಈ ಬಗೆಯ ಆವಿಗೆಗಳು ತಮ್ಮ ಅಶ್ವಸಾಮರ್ಥ್ಯದ ಪ್ರಮಾಣಕ್ಕೆ ವ್ಯಾಪಿಸುವ ಜಾಗ ಬಲುಕಡಿಮೆ. ಕೇವಲ 3ಅಶ್ವ ಸಾಮರ್ಥ್ಯದ ಹೊರಗೆಲಸಕ್ಕೆ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಅನುಕೂಲವಾದ ಸಣ್ಣ ಮಾದರಿಗಳಿರುವಂತೆಯೇ 500ಅಶ್ವ ಸಾಮರ್ಥ್ಯವುಳ್ಳವು ಇರುತ್ತದೆ. ಅಧಿಕೋಷ್ಣದ ಉಗಿಯನ್ನು ಪಡೆಯುವ ಸೌಕರ್ಯವಿದ್ದರೂ ಸಾಮಾನ್ಯವಾಗಿ ಇವು ಅಲ್ಪ ದಕ್ಷತೆಯವು. ಮ್ಯಾನಿಂಗ್ ಮಾದರಿಯ ಇಂಥ ಒಂದು ಆವಿಗೆಯ ಚಿತ್ರ ಇಲ್ಲಿ ಕೊಟ್ಟಿದೆ. ಮೂರು ವರಸೆಯ ಲಂಬವಾದ ಪಿಪಾಯಿಯಲ್ಲಿ ಕೆಳಗಿನದರ ಒಳಗೆ ಉರಿಪೆಟ್ಟಿಗೆ ಅಡಕವಾಗಿದೆ. ಮೇಲಿನ ವರಸೆಗೆ ಒಂದು ಹೊಗೆಪೆಟ್ಟಿಗೆಯನ್ನು ಸೇರಿಸಿ ಅಲ್ಲಿಂದ ಹೊಗೆ ಕೊಳವೆಗೆ ಮಾರ್ಗವನ್ನು ರಚಿಸಿದೆ. ಉರಿಪೆಟ್ಟಿಗೆಯ ಸುತ್ತಿನ ದುಂಡು ಫಲಕವನ್ನು ಅದರ ಹೊರಗಿನ ಪಿಪಾಯಿಗಳ ಫಲಕಕ್ಕೆ ಆಧಾರ ಬಂಧನಗಳಿಂದ ಬಿಗಿದಿರುತ್ತದೆ. ಇಲ್ಲಿ ಮೇಲಿನವಕ್ಕಿಂತ ಕೆಳಗಿನ ವರಸೆ ಕೊಂಚ ದೊಡ್ಡದಾಗಿದ್ದರೂ ಸರಳತೆಗಾಗಿ ಸಮವ್ಯಾಸದ ಪಿಪಾಯಿಯನ್ನೂ ಉಪಯೋಗಿಸುವುದುಂಟು. ಉರಿ ಪೆಟ್ಟಿಗೆಯ ಸುತ್ತ ಇರುವ ನೀರುಜಾಚಿನ ಕೆಳಭಾಗವನ್ನು ಪಾಯದ ಬಳೆಯೊಂದು ಮುಚ್ಚಿರುತ್ತದೆ. ಇದರ ಮೇಲೆ ಮುಚ್ಚಿರುವ ಒಂದು ಕೆಸರು–ಗಂಡಿ ಇದೆ. ಹೊಗೆ ಪೆಟ್ಟಿಗೆಯ ತಳ ಫಲಕಕ್ಕೂ ಉರಿಪೆಟ್ಟಿಗೆಯ ನೆತ್ತಿ ಫಲಕಕ್ಕೂ ನಡುವೆ ಹಲವಾರು ಧೂಮನಾಳಗಳಿದ್ದು ಇವೇ ಅವೆರಡನ್ನೂ ಬಿಗಿದಿರುತ್ತವೆ. ಉರಿ ಪೆಟ್ಟಿಗೆಯೊಳಗಣ ಕುಲುಮೆಯಿಂದ ಹೊರಟ ಅನಿಲಗಳು ಈ ಕೊಳವೆಗಳ ಮುಖಾಂತರ ಹಾದು ಹೊಗೆ ಪೆಟ್ಟಿಗೆಯನ್ನು ತಲುಪುತ್ತದೆ. ಪಿಪಾಯಿಯ ಮುಕ್ಕಾಲು ಮಟ್ಟದವರೆಗೂ ನೀರಿದ್ದು, ನಾಳಗಳ ಅಲ್ಲಿಯವರೆಗಿನ ಮೇಲ್ಮೈ ವಿಸ್ತಾರ ಆವಿ–ಉತ್ಪಾದಕವಾಗಿಯೂ ಅದರಿಂದ ಮೇಲಿನದು ಅಧಿಕೋಷ್ಣಕವಾಗಿಯೂ ಕಾರ್ಯ ನಿರ್ವಹಿಸುತ್ತವೆ. ವಾಡಿಕೆಯ ಆವರಣವೇನೂ ಈ ಬಗೆಯ ಆವಿಗೆಗಳಿಗೆ ಬೇಕಿಲ್ಲ: ಸಿಮೆಂಟ್ ಕಾಂಕ್ರೀಟ್ ಪಾಯದ ಮೇಲೆ ಎರಕದ ಕಬ್ಬಿಣದ ಪೀಠವೊಂದನ್ನಿಟ್ಟು ಅದರ ಮೇಲೆ ಇದನ್ನು ನಿಲ್ಲಿಸಿರುತ್ತಾರೆ. ಆ ಪೀಠವೇ ಕುಲುಮೆಗೆ ಆಧಾರವನ್ನೂ ಕೆಳಗೆ ಬೂದಿ ಗುಂಡಿಯನ್ನೂ ಒದಗಿಸುತ್ತದೆ.



ಮ್ಯಾನಿಂಗ್ ಲಂಬಸನಾಳಿ ಆವಿಗೆ
**1. ಹೊಗೆಪೆಟ್ಟಿಗೆ ಮುಚ್ಚಳ, 2. ಮೇಲಿನ ಆಸರೆ, 3. ಸೂಸುಬಾಯಿ, 4. ಮೇಲಿನ ವರಿಸೆ, 5. ಮಧ್ಯದ ವರಿಸೆ, 6. ಕೆಳಗಿನ ಆಸರೆ, 7. ಉರಿಪೆಟ್ಟಿಗೆ, 8. ಬೂದಿಪೆಟ್ಟಿಗೆ, 9. ಉರಿಕ್ರಮಕಾರಿ, 10. ಹೊಗೆಪೆಟ್ಟಿಗೆ, 11. ನೀರಿನ ಸ್ತಂಭ, 12. ನೀರು ಒಳಬರುವ ಮಾರ್ಗ, 13. "ಓಗೀ" ಬಳೆ, 14. ಕೈರಂಧ್ರ, 15. ಮೊದಲ ವರಿಸೆ, 16. ಬೀಡು ಕಬ್ಬಿಣದ ಆಧಾರ.**

ಲಂಬಸನಾಳಿ ಆವಿಗೆಗಳಲ್ಲಿ ಕಾಕ್ರೇನ್ ಆವಿಗೆ ಎಂಬುದೂ ಹೆಚ್ಚು ಬಳಕೆಯಲ್ಲಿದೆ. ಇದರಲ್ಲಿ ಧೂಮನಾಳಗಳು ಲಂಬವಾಗಿರದೆ ಮಟ್ಟವಾಗಿದ್ದು, ದಹನಕೋಶಕ್ಕೂ ಹೊಗೆಪೆಟ್ಟಿಗೆಗೂ ಸಂಪರ್ಕವೇರ್ಪಡಿಸಿವೆ. ಈ ವಿವರದಲ್ಲಿ ಸ್ಕಾಚ್ ನೌಕಾ ಆವಿಗೆಯ ರಚನೆಯನ್ನು ಇದು ಹೋಲುತ್ತದೆ.

ಏಕ ಕೊಪ್ಪರಿಗೆಯ ನೇರನಾಳದ ಆವಿಗೆಗಳು (ಸಿಂಗಲ್ ಡ್ರಂ ಸ್ಟ್ರೇಟ್ ಟ್ಯೂಬ್ ಬಾಯ್ಲರ್ಸ್): ಇದುವರೆಗೆ ಆವಿಗೆಗಳು ಬೆಳೆದುಬಂದ ಬಗೆ ಹೀಗಿದೆ. ಉಗಿಸಂಮರ್ದ, ಉಷ್ಣತೆ ಏರಿ ಯಾಂತ್ರಿಕ ಬಲೋತ್ಪಾದನೆ ವೃದ್ಧಿಯಾಯಿತು: ಇದರೊಂದಿಗೆ ಕಡಾಯಿ, ನಳಿಗೆ ಮುಂತಾದುವು ಸರಿಯಾಗಿ ಬೆಳೆಯದೆ ತಪ್ಪುಗ್ಗಾಲಿಕ್ಕಿದಾಗ ಅಪಾಯ, ಅಸಾಮರ್ಥ್ಯ ತಲೆದೋರಿದುವು. ಈ ನ್ಯೂನತೆಗಳನ್ನು ಮನಗಂಡ ವಿಲ್‌ಕಾಕ್ಸ್ ಎಂಬಾತ 1850ರಲ್ಲಿ ಬಳಕೆಗೆ ತಂದು ಮುಂದೆ ಬ್ಯಾಬ್‌ಕಾಕ್ ಎಂಬಾತನೊಡನೆ ಸಹಕರಿಸಿ ನೂತನ ಪರಿಷ್ಕೃತ ಸಾಧನವೇ ಏಕಕೊಪ್ಪರಿಗೆಯ ನೇರನಾಳದ ಆವಿಗೆ.

ಬಹುಕೊಪ್ಪರಿಗೆಯ ಬಾಗು ನಾಳದ ಆವಿಗೆಗಳು (ಮಲ್ಟಿಪಲ್ ಡ್ರಮ್ ಬೆಂಟ್ ಟ್ಯೂಬ್ ಬಾಯ್ಲರ್ಸ್): ನೇರನಾಳದ ಆವಿಗೆಗಳನ್ನು ಸುಲಭವಾಗಿ ಪರೀಕ್ಷಿಸುವ ಮತ್ತು ಚೊಕ್ಕಟಗೊಳಿಸುವ ಸೌಲಭ್ಯವೇನೋ ಇದೆ. ಆದರೆ ಇದೇ ಕಾರಣದಿಂದ ಆವಿಗಳಲ್ಲಿ ಒಂದು ಕೊರತೆ ತಲೆದೋರಿದೆ-ನಾಳಗಳ ತುದಿಗಳಲ್ಲಿ ತಲೆಪೆಟ್ಟಿಗೆಗಳನ್ನು ಅಳವಡಿಸಬೇಕು. ಬಾಗಿರುವ ನಾಳಗಳನ್ನು ಉಪಯೋಗಿಸುವುದರಿಂದ ನೇರನಾಳದ ಆವಿಗೆಯ ಅನುಕೂಲತೆಗಳು ಮೊಟಕಾಗುವುವಾದರೂ ತಲೆಪೆಟ್ಟಿಗೆಗಳ ಅಗತ್ಯವಿರುವುದಿಲ್ಲ: ಕೊಳವೆಗಳನ್ನು ಕೊಪ್ಪರಿಗೆಗಳಿಗೆ ಸೇರಿಸುವಲ್ಲಿ ಸಿಕ್ಕುವ ಹೆಚ್ಚಿನ ಸ್ವಾತಂತ್ರ್ಯ, ಕೊಳವೆಗಳ ಗಾತ್ರವನ್ನು ಕಡಿಮೆ ಮಾಡಿ ಸಂಖ್ಯೆಯನ್ನು ಹೆಚ್ಚಿಸಬಹುದಾದ ಸಾಧ್ಯತೆ ಇದೆ; ಅಲ್ಲದೆ ಹೆಚ್ಚು ಪ್ರಯೋಜನಕರವಾಗಿ ಉಷ್ಣಪ್ರವಾಹ ವಿಸ್ತಾರವನ್ನು ಬಳಸಲು ನಾಳ ಸಮೂಹದ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಬಹುದು. ಅತ್ಯಧಿಕ ಸಂಮರ್ದ ಹಾಗೂ ಉತ್ಪಾದನೆಯ ಆಧುನಿಕ ಆವಿಗೆಗಳೆಲ್ಲ ಈ ದಿಕ್ಕಿನಲ್ಲೇ ಮುಂದುವರಿಯುತ್ತಿರುವುದನ್ನು ನಾವು ಕಾಣಬಹುದು.

ಅನುಭವ ಹೆಚ್ಚಿದಂತೆಲ್ಲ ಕಟ್ಟುಪಾಡುಗಳಿಂದ ಬಂಧಿತವಾಗದೆ ಪ್ರಯೋಜನ ದೃಷ್ಟಿಯೊಂದರಿಂದಲೇ ರೂಪಗೊಂಡ ನಾಳ ಸಮೂಹದ ವ್ಯವಸ್ಥೆಗಳಿಂದ ವಿವಿಧ ಮಾದರಿಗಳು ಹೊರಬರುತ್ತಿವೆ. ಕಾವಿಟ್ಟಿಗೆಯ ಆವರಣದೊಳಗೆಲ್ಲ ಹಲವು ಹೆಸರುಗಳಿಂದ ವಿನ್ಯಾಸಗೊಂಡ ಕೊಳವೆಗಳ ಪಾತ್ರವೇ ಹಿರಿದಾದದ್ದು ಕೊಪ್ಪರಿಗೆಗಳ ಸಂಖ್ಯೆ ಜಾಸ್ತಿಯಾಗಿರಬಹುದಾದರೂ ಅವುಗಳ ಗಾತ್ರ ಕಡಿಮೆಯಾಗುತ್ತಿರುವುದನ್ನು ಕಾಣಬಹುದು.

1888ರಲ್ಲಿ ಬಳಕೆಗೆ ಬಂದ ಸ್ಟರ್ಲಿಂಗ್ ಆವಿಗೆ ಬಾಗುನಾಳದ ಆವಿಗೆಗಳಲ್ಲಿ ಮೊಟ್ಟಮೊದಲನೆಯದೂ ಪ್ರತಿನಿಧಿಕವೂ ಆಗಿದೆ. ಅದರ ಈಚಿನ ಒಂದು ಮಾದರಿತ ಸ್ಥೂಲ ವಿವರಗಳು ಹೀಗಿವೆ: ಒಟ್ಟು 3, 4 ಅಥವಾ 5 ಕೊಪ್ಪರಿಗೆಗಳುಳ್ಳಂತೆ ಮೂರುದರ್ಜೆಯ ಆವಿಗೆಗಳು ಇದರಲ್ಲಿವೆ. ಈ ಆವಿಗೆಯಲ್ಲಿ ಮೂರು ಆವಿ ಕೊಪ್ಪರಿಗೆಗಳೂ ಎರಡು ಕೆಸರು ಕೊಪ್ಪರಿಗೆಗಳೂ ಇವೆ. ಇಟ್ಟಿಗೆಯ ಆವರಣದಿಂದ ಪ್ರತ್ಯೇಕವಾದಂತೆ ಉಕ್ಕಿನ ಕಂಬಗಳ ಮೇಲೆ ನಿಂತ ತೊಲೆಗಳಿಂದ ಆವಿ ಕೊಪ್ಪರಿಗೆಗಳು ಆಸರೆ ಪಡೆದಿರುತ್ತವೆ. ಕೆಸರು ಕೊಪ್ಪರಿಗೆಗಳನ್ನು ಆವಿಕೊಪ್ಪರಿಗೆಗಳಿಂದ ನಾಲ್ಕು ನಾಳ ಸಮೂಹಗಳ ನೆರವಿನಿಂದ ತೂಗುಬಿಟ್ಟಿದೆ. ಇವುಗಳಿಗೆ ಆವರಣದ ಗೋಡೆಗಳ ಸಂಪರ್ಕವಿಲ್ಲದಿರುವುದರಿಂದ ಉಷ್ಣದ ಹಿಗ್ಗು ಕುಗ್ಗುಗಳಿಗೆ ತಾವೇ ಸರಿಹೊಂದಿಸಕೊಳ್ಳಬಲ್ಲವು. ಆವರಣದೊಳಗೆ ರಚಿತವಾದ ಕಾವಿಟ್ಟಿಗೆಯ ತಡೆ ಗೋಡೆಗಳು ಕುಲುವೆಯ ಅನಿಲಗಳು ನಾಳಸಮೂಹಗಳ ಮೇಲೆ ಸರಿಯಾದ ಮಾರ್ಗದಲ್ಲಿ ಪ್ರವಹಿಸುವಂತೆ ಮಾಡುತ್ತವೆ. ಮುಂದಿನ ಹಾಗೂ ಮೊದಲನೆಯ ನಾಳಸಮೂಹದ ಮುಂಬದಿಯಲ್ಲಿ ಹಾಗೂ ಕುಲುಮೆಯ ಮೇಲುಗಡೆ ಒಂದು ಕಾವಿಟ್ಟಿಗೆಯ ಕಮಾನು ರಚಿತವಾಗಿದ್ದು ಅದರ ಮೇಲಿನ ತ್ರಿಕೋನಾಕಾರದ ಪ್ರದೇಶವೆಲ್ಲ ದಹನ ಕೋಣೆಯಾಗಿ ಪರಿಣಮಿಸುತ್ತದೆ. ಈ ಕಮಾನು ಕುಲುಮೆಯ ಉಷ್ಣದಿಂದ ಕಾವೇರಿ ಪ್ರಜ್ವಲಿಸುತ್ತ ದಹನ ಕ್ರಿಯೆಗೆ ಬೇಕಾದ ಗಾಳಿಯನ್ನು ಕಾಯಿಸುತ್ತಲೂ ಇಂಧನದಿಂದ ಒಸರುವ ಅನಿಲಗಳನ್ನು ಹೊತ್ತಿಸುತ್ತಲೂ ಕುಲುಮೆಯ ಬಾಗಿಲನ್ನು ತೆರೆದಾಗ ಒಳನುಗ್ಗುವ ತಣ್ಣನೆಯ ಗಾಳಿಯಿಂದ ಆವಿಗೆಗೆ ಶೈತ್ಯವಾಗದಂತೆ ತಡೆಯುತ್ತಲೂ ಒಂದು ಉಷ್ಣ ಪ್ರಸಾರಕವಾಗಿ ಕೆಲಸ ಮಾಡುತ್ತದೆ. ಹಿಂಬದಿಯ ಉಗಿ ಕೊಪ್ಪರಿಗೆಗೆ ಬಿಡಲಾಗುವ ಆವಿಗೆಯ ಕುಡಿನೀರು ಕೊಪ್ಪರಿಗೆಯ ಉದ್ದಕ್ಕೂ ಇರುವ ನಾಳಗಳಿಗೆಲ್ಲ ಹಂಚಲ್ಪಟ್ಟು ಹಿಂಬದಿಯ ನಾಳ ಸಮೂಹದಿಂದಿಳಿದು ಮೂರನೆಯದಲ್ಲೇರಿ ಎರಡನೆಯದರಲ್ಲಿಳಿದು ಮತ್ತೆ ಮೊದಲನೆಯದರಿಂದ ಮುಂಬದಿಯ ಉಗಿ ಕೊಪ್ಪರಿಗೆಗೆ ಸೇರುತ್ತದೆ. ಈ ಮಾರ್ಗದಲ್ಲಿ ಉತ್ಪತ್ತಿಯಾದ ಉಗಿ ಇಲ್ಲಿ ಬಿಡುಗಡೆ ಹೊಂದಿ ಉಗಿಸಂಪರ್ಕನಾಳಗಳಿಂದ ನಡುವಿನ ಕೊಪ್ಪರಿಗೆಗೆ ತಲಪುತ್ತದೆ. ಇನ್ನೂ ಉಗಿಯಾಗದ ನೀರು ಜಲಸಂಪರ್ಕ ನಾಳಗಳಿಂದ ನಡುವಿನ ಕೊಪ್ಪರಿಗೆಗೆ ಬಂದು ಎರಡನೆಯ ನಾಳ ಸಮೂಹದಲ್ಲಿಳಿಯುತ್ತ ಮೂಲಪ್ರವಾಹದೊಡನೆ ಸೇರಿಕೊಂಡು ಪೂರ್ತಿ ಉಗಿ ಆಗುವವರೆಗೂ ಸುತ್ತುತ್ತಿರುತ್ತದೆ. ಕುಲುಮೆಯಿಂದ ಹೊರಟ ಬಿಸಿ ಅನಿಲಗಳ ಪ್ರವಾಹಮಾರ್ಗ ಇದಕ್ಕೆ ವ್ಯತಿರಿಕ್ತವಾಗಿದ್ದು ಮೊದಲು ಮುಂದಿನ ನಾಳಸಮೂಹದ ಮೇಲೇರಿ ಎರಡನೆಯದರ ಮೇಲಿಳಿದು ಮೂರನೆಯದರಲ್ಲೇರಿ ಕಡೆಗೆ ಹಿಂದಿನ ನಾಳ ಸಮೂಹಗಳ ಮೇಲಿನಿಂದ ಹೊಗೆ ಕೊಳವೆಯ ಮಾರ್ಗವನ್ನು ಹಿಡಿಯುತ್ತದೆ. ನಡುವಿನ ಉಗಿ ಕೊಪ್ಪರಿಗೆಯ ಮೇಲಿನ ನಡುಭಾಗದಲ್ಲಿ ರಚಿತವಾದೊಂದು ಕೋಣೆಯಿಂದ ಹೊರಟ ಉಗಿ ಮೊದಲಿನ ಎರಡು ನಾಳಸಮೂಹಗಳ ಮಧ್ಯ ಪ್ರದೇಶದಲ್ಲಿ ಇಟ್ಟಿರುವ ಅಧಿಕೋಷ್ಣಕಗಳ ಮೂಲಕ ಹಾದು ಒಂದು ಬಿಡುಕವಾಟದಿಂದ ಪ್ರಧಾನ ಉಗಿ ಕೊಳವೆಗೆ ಸೇರುತ್ತದೆ. ಒಂದೊಂದು ನಾಳಸಮೂಹಕ್ಕೆದುರಾಗಿಯೂ ಪಕ್ಕದ ಆವರಣ ಗೋಡೆಗಳಲ್ಲಿ ಮಸಿ ಬಾಗಿಲುಗಳಿದ್ದು, ಅಲ್ಲಿಂದ ಉಗಿಧಾರೆಯನ್ನು ಬಿಟ್ಟು ನಾಳಗಳ ಹೊರಗೆ ಕಟ್ಟಿರುವ ಮಸಿಯನ್ನು ತೊಳೆದು ಶುದ್ಧಿ ಮಾಡಲು ಸೌಕರ್ಯವಿದೆ. ಇವಲ್ಲದೆ ಒಳಗೆ ಪರೀಕ್ಷಿಸಲೂ ರಿಪೇರಿ ಕೆಲಸ ಮಾಡಲೂ ಚೊಕ್ಕಟಗೊಳಿಸಲೂ ಆಗುವಂತೆ ಇನ್ನೂ ಕೆಲವು ಬಾಗಿಲುಗಳೂ ಆವರಣದಲ್ಲಿರುತ್ತದೆ.

ವಿದ್ಯುದಾವಿಗೆ (ಎಲೆಕ್ಟ್ರಿಕ್ ಬಾಯ್ಲರ್): ವಿದ್ಯುದುತ್ಪಾದನೆಗಾಗಿಯೇ ಆವಿಗೆಯ ಬಳಕೆ ಹೆಚ್ಚಾಗಿರುವಲ್ಲಿ ವಿದ್ಯುತ್ತಿನಿಂದ ಉಗಿ ಉತ್ಪಾದಿಸುವ ಆವಿಗೆಯೆಂದರೆ ಒಂದು ವಿಶೇಷವೇ ಸರಿ. ಜಲವಿದ್ಯುತ್ ಅಧಿಕವಾಗಿ ದೊರೆಯುವ ಕಡೆಗಳಲ್ಲಿ ಪರೀಕ್ಷಣ ಹಾಗೂ ಸಂಶೋಧನ ಕಾರ್ಯಗಳಿಗಾಗಿ ಒಮ್ಮೊಮ್ಮೆ ಇಂಥ ವಿದ್ಯುದಾವಿಗೆಗಳನ್ನು ಉಪಯೋಗಿಸುವುದುಂಟು. ದೊಡ್ಡ ಗಾತ್ರದ ವಿದ್ಯುದಾವಿಗೆಗಳು ಸಾಮಾನ್ಯವಾಗಿ ವಿದ್ಯದ್ಧ್ರುವ ಮಾದರಿಯವಾಗಿವೆ. ಇವುಗಳಲ್ಲಿ ನೀರಿನಲ್ಲಿ ಮುಳುಗಿಸಿದ ಎರಡು ವಿದ್ಯುದ್ಧ್ರುವಗಳ ಮೂಲಕ ವಿದ್ಯುತ್ತನ್ನು ಹರಿಸುವುದರಿಂದ ಉಷ್ಣ ಉತ್ಪತ್ತಿಯಾಗುತ್ತದೆ.

ಪ್ರೇರಿತ ಪರಿಚಲನೆಯ ಆವಿಗೆಗಳು (ಫೋರ್ಸ್ಡ್ ಸರ್ಕ್ಯುಲೇಶನ್ ಬಾಯ್ಲರ್ಸ್) : ಈವರೆಗೆ ಪರಿಶೀಲಿಸಿದ ಆವಿಗೆಗಳಲ್ಲೆಲ್ಲ ನೀರಿನ ಹಾಗೂ ನೀರು ಉಗಿ ಮಿಶ್ರಣದ ಸಾಂದ್ರತೆಯ ವ್ಯತ್ಯಾಸವೇ ಕಾರಣವಾಗಿ ನೀರಿನ ಪರಿಚಲನೆ ಸ್ವಾಭಾವಿಕವಾಗಿಯೇ ಆಗುತ್ತಿದ್ದು ಯಾವ ಬಗೆಯ ರೇಚಕದ ಉಪಯೋಗವೂ ಇರುವುದಿಲ್ಲ. ಆದರೆ ಸಂಮರ್ದ ಏರಿದಂತೆಲ್ಲ ಈ ಸಾಂದ್ರತೆಯ ವ್ಯತ್ಯಾಸ ಕಡಿಮೆಯಾಗುತ್ತ ಹೋಗಿ ಉಗಿಯ ಅವಧಿಕ ಸಂಮರ್ದವಾದ ಚ.ಅಂ.ಕ್ಕೆ ಸುಮಾರು 3,206 ಪೌಂಡಿನಲ್ಲಿ ಶೂನ್ಯವಾಗುತ್ತದೆ. ಈ ಅಂಶ ಒಂದು ಕಾಲದಲ್ಲಿ ಸಹಜ ಪರಿಚಲನೆಯ ಆವಿಗೆಗಳ ಮುನ್ನಡೆಗೆ ಬಲು ದೊಡ್ಡ ಆತಂಕವೆನಿಸಿತ್ತು. 1930ರಲ್ಲಿ ಪ್ರಕಾಶಕ್ಕೆ ಬಂದ ಆವರ್ತ ಉಗಿ ಪ್ರತ್ಯೇಕಕದ (ಸೈಕ್ಲೋನ್ ಸ್ಟೀಂ ಸೆಪರೇಟರ್) ಬಳಕೆಯಿಂದ ಇದು ಸ್ವಲ್ಪಮಟ್ಟಿಗೆ ನಿವಾರಣೆಗೊಂಡಿತು. ಇದನ್ನು ಉಗಿಕೊಪ್ಪರಿಗೆಯ ಒಳಗೆ ಇಟ್ಟಿದೆ. ಅಲ್ಲಿ ಇದು ನೀರು ಮತ್ತು ಉಗಿ ಮಿಶ್ರಣವನ್ನು ಸುಂಟರಗಾಳಿಯಂತೆ ಸುತ್ತಿ ಸುತ್ತ ಪರಿಚಲನೆಗೆ ಸಹಾಯಕವಾಗಿ ನೀರನ್ನು ಕೆಳಗಡೆಗೆ ನೂಕುತ್ತ ಉಗಿ ಮೇಲೇರಿ ಅಧಿಕೋಷ್ಣಕಕ್ಕೆ ಹೋಗುವಂತೆ ಮಾಡುತ್ತದೆ. ಈ ಸಾಧನದ ಬಳಕೆಯಿಂದ ಚ.ಅಂ.ಕ್ಕೆ 2,800 ಪೌಂಡಿನಷ್ಟು ಸಂಮರ್ದದವರೆಗೂ ಸಹಜ ಪರಿಚಲನೆಯ ಆವಿಗೆಗಳನ್ನು ರಚಿಸುವುದು ಸಾಧ್ಯವಾಗಿದೆ. ರೇಚಕದ ಬಳಕೆಯಿಂದ ನೀರಿನ ಪರಿಚಲನೆಯನ್ನು ಪ್ರೇರಿಸಿದಾಗ ನಾಳದ ಮೂಲಕ ಹರಿಯುವ ನೀರಿನ ವೇಗದಲ್ಲಾಗುವ ಹೆಚ್ಚಳದಿಂದ ನಾಳದ ಗಾತ್ರವನ್ನು ಕಡಿಮೆ ಮಾಡಬಹುದು. ಉಗಿಯ ಒಂದು ನಿರ್ದಿಷ್ಟ ಸಂಮರ್ದಕ್ಕೆ ನಾಳದ ದಪ್ಪವನ್ನು ಕಡಿಮೆ ಮಾಡಿ ಉದ್ದವನ್ನು ಹೆಚ್ಚಿಸಿ ಉಷ್ಣಪ್ರವಾಹದ ವಿಸ್ತಾರವನ್ನು ಹೆಚ್ಚು ಅನುಕೂಲಕರವಾಗಿ ನಿಯೋಜಿಸಬಹುದಲ್ಲದೆ ಈ ಏರ್ಪಾಡಿನಿಂದ ಉಷ್ಣಪ್ರವಾಹದ ವೇಗವೂ ತ್ವರಿತಗೊಳ್ಳುವುದರಿಂದ ಕಡಿಮೆ ಪ್ರದೇಶದಲ್ಲಿ ಆವಿಗೆಯನ್ನು ಅಳವಡಿಸಬಹುದು. ಯಾವ ಉತ್ಪಾದನ ಪ್ರಮಾಣಕ್ಕಾದರೂ ಸರಿಹೊಂದಿಸಿಕೊಳ್ಳಲಾಗುವಂತೆ ಪರಿಚಲನೆಯ ವೇಗವೂ ಸಂಪೂರ್ಣ ಹಿಡಿತದಲ್ಲಿರುವುದು ಇದರ ಇನ್ನೊಂದು ಉಪಯುಕ್ತ ಅಂಶ. ಆದರೆ ಇವುಗಳಲ್ಲಿ ಉಪಯೋಗಿಸುವ ನೀರು ಮಾತ್ರ ಅತ್ಯಂತ ಶುದ್ಧವಾಗಿರಬೇಕು. ಇಂಥ ಆವಿಗೆಯನ್ನು ಮೊದಲು ರಚಿಸಿದವ ಮಾರ್ಟಿನ್ ಬೆನ್ಸನ್ (1856).

ಪ್ರೇರಿತ ಪರಿಚಲನೆಯ ಆವಿಗೆಗಳಲ್ಲಿ ಎರಡು ಬಗೆಗಳುಂಟು. 1. ಗೊತ್ತಾದ ವೇಳೆಯಲ್ಲಿ ಅದು ಉಗಿಯಾಗಿಸುವುದಕ್ಕಿಂತ ಮೂರು ನಾಲ್ಕು ಪಟ್ಟು ಹೆಚ್ಚಿನ ಪ್ರಮಾಣದ ನೀರನ್ನು ಪರಿಚಲಿಸುತ್ತಿದ್ದು ನೀರು ಮತ್ತು ಉಗಿಯ ಬೇರ್ಪಡೆಗಾಗಿ ಒಂದು ಕೊಪ್ಪರಿಗೆಯನ್ನು ಅಗತ್ಯವಾಗಿ ಹೊಂದಿರುವ ಆವಿಗೆ. ಇದನ್ನು ಸಂತತ ಪ್ರವಾಹಿ ಆವಿಗೆಯಿಂದ ಕರೆದಿದೆ. ಅವಧಿಕ ಸಂಮರ್ದಕ್ಕಿಂತ ಕಡಿಮೆ ಸಂಮರ್ದಗಳಲ್ಲಿ ಈ ಬಗೆಯ ಆವಿಗೆಗಳನ್ನು ಉಪಯೋಗಿಸುತ್ತಾರೆ. 2. ಏಕವಾಗಿ ಎಂದು ಕರೆಯುವ ಇನ್ನೊಂದು ಬಗೆಯಲ್ಲಿ ಒಂದೇ ಅಥವಾ ಸಮಾನಾಂತರದ ಹಲವು ನಾಳ ಮಾರ್ಗಗಳಿದ್ದು ಒಂದು ತುದಿಯಲ್ಲಿ ಒಳಹೊಕ್ಕು ಕುಡಿನೀರು ಕ್ರಮಕ್ರಮವಾಗಿ ಮುನ್–ಉಷ್ಣಗೊಂಡು ಉಗಿಯಾಗಿ ಅಧಿಕೋಷ್ಣಿತಗೊಂಡು ಇನ್ನೊಂದು ತುದಿಯಲ್ಲಿ ಹೊರಬರುತ್ತದೆ. ಕುಡಿನೀರು ಅಷ್ಟೂ ಉಗಿಯಾಗಿ ಹೆಚ್ಚಿನ ನೀರಿನ ಪುನಃ ಪರಿಚಲನೆಯ ಪ್ರಶ್ನೆ ಇರುವುದಿಲ್ಲವಾದ್ದರಿಂದ ಕೊಪ್ಪರಿಗೆಯ ಅವಶ್ಯಕತೆ ಇಲ್ಲ. ಯುದ್ಧಕಾಲದಲ್ಲಿ ಸೈನ್ಯದ ಅಗತ್ಯತೆಯನ್ನು ಪೂರೈಸಲು ಬೇಕಾದ ಉಕ್ಕಿನ ಉಳಿತಾಯ ಮಾಡುವ ದೃಷ್ಟಿಯಿಂದ ಒಂದು ಉಪಯುಕ್ತ ವಿಶೇಷವೆಂದು ಇದನ್ನು ಪರಿಗಣಿಸಿದ್ದರು. ಇಂಥ ಆವಿಗೆಗಳನ್ನು ಅವಧಿಕ ಸಂಮರ್ದದ ಮೇಲ್ಪಟ್ಟು ಅಥವಾ ಕಡಿಮೆಯೂ ಸಂಮರ್ದಗಳಲ್ಲೂ ಉಪಯೋಗಿಸಲಾಗುವುದು. ಸಾಮಾನ್ಯವಾಗಿ ಪರಿಚಲನೆಯನ್ನು ಪ್ರೇರಿಸಲು ಬಳಸುವ ರೇಚಕಕ್ಕಾಗಿ ಆವಿಗೆಯ ಉತ್ಪಾದನ ಸಾಮರ್ಥ್ಯದ 3% ಖರ್ಚಾಗುತ್ತದೆಂದು ಹೇಳಬಹುದು. ಈ ಮಾದರಿಯವಕ್ಕೆ ಮುಂದಿನ ಮೂರು ಆವಿಗೆಗಳನ್ನು ಪ್ರಮುಖ ಉದಾಹರಣೆಗಳೆಂದು ಪರಿಗಣಿಸಬಹುದು.

**ಬೆನ್ಸನ್ ಆವಿಗೆ:** ಆವಿಗೆಯ ಜಲಪ್ರದೇಶದಲ್ಲಿ ಗುಳ್ಳೆಗಳು ಉತ್ಪತ್ತಿಯಾಗಿ ಲೋಹದ ಗೋಡೆಗೆ ಅಂಟಿಕೊಳ್ಳುವುದರಿಂದ ಕುಲುಮೆಯ ಬಿಸಿ ಅನಿಲಗಳಿಂದ ನೀರಿಗೆ ತಟ್ಟುವ ಉಷ್ಣ ಪ್ರವಾಹಕ್ಕೆ ಅಡ್ಡಿಯಾಗುವುದೆಂದೂ ಆದ್ದರಿಂದ ಆವಿಗೆಯ ಸಂಮರ್ದ ಅವಧಿಕ ಸಂಮರ್ದಕ್ಕಿಂತ ಮೇಲಿದ್ದರೆ ನೀರು ಮತ್ತು ಉಗಿ ಸಮಾನ ಸಾಂದ್ರತೆಯವಾಗಿ ಗುಳ್ಳೆಗಳ ಉತ್ಪತ್ತಿಗೇ ಅವಕಾಶವಿರುವುದಿಲ್ಲವೆಂದೂ ತರ್ಕಿಸಿ ಮಾರ್ಕ್ ಬೆನ್ಸನ್ ತನ್ನ ಹೆಸರಿನ ಆವಿಗೆಯನ್ನು 1922ರಲ್ಲಿ ಹೊರತಂದ. ಇದು ಒಂದು ಪ್ರೇರಿತ ಪ್ರವಾಹದ ಏಕವಾಹಿ ಜಲನಾಳಿ ಆವಿಗೆ ಮೊದಲೇ ಕುಡಿನೀರನ್ನು ಅವಧಿಕಸಂಮರ್ದಕ್ಕೆ ಪ್ರೇರಿಸಿ ಕಾಯಿಸುವುದರಿಂದ ಅದರ ಸುಪ್ತೋಷ್ಣ ಶೂನ್ಯವಾಗಿ ನೀರು ದ್ರವರೂಪದಿಂದ ಅಧಿಕೋಷ್ಣಿತ ಆವಿಯಾಗಿ ಸೀದಾ ರೂಪಾಂತರಗೊಳ್ಳುತ್ತದೆ.

ಇದೇ ಮಾದರಿಯ ಇನ್ನೊಂದು ಆವಿಗೆ ಸುಲ್ಜರ್ ಎಂಬುವನದು. ಇಂಥ ಆವಿಗೆಗಳಲ್ಲಿ ನಿರ್ಧಾರಿತ ಅಧಿಕೋಷ್ಣ ಹೊಂದಿದ ಉಗಿಯನ್ನು ಎಲ್ಲ ಸಂದರ್ಭಗಳಲ್ಲೂ ಪಡೆಯಲಾಗುವಂತೆ ಇಂಧನ ದಹನವೇಗವನ್ನೂ ನೀರಿನ ಪರಿಚಲನೆಯ ವೇಗವನ್ನೂ ಸರಿಯಾಗಿ ನಿಯಂತ್ರಿಸಲು ನಿಖರ ಹಾಗೂ ಸೂಕ್ಷ್ಮಗ್ರಾಹಿಗಳಾದ ಏರ್ಪಾಡುಗಳು ಅಗತ್ಯ.

ಅವಧಿಕ ಸಂಮರ್ಧಾತೀತ ಸಂಮರ್ದಗಳಲ್ಲಿ (3,640 ಪೌಂಡಿಗಿಂತ ಹೆಚ್ಚು) $565^{\circ}$ ಸೆಂ.ಗ್ರೇ. ಉಷ್ಣತೆಯಲ್ಲಿ ಗಂಟೆಗೆ 30,00,000 ಪೌಂಡುಗಳಷ್ಟು ಅಧಿಕ ಪ್ರಮಾಣದ ಉತ್ಪತ್ತಿಯ ಏಕವಾಹಿ ಆವಿಗೆಗಳು ಬಳಕೆಗೆ ಬಂದಿರುವುದನ್ನು ಈ ಮಾರ್ಗದಲ್ಲಿನ ಮುನ್ನಡೆಗೆ ಉದಾಹರಣೆಯಾಗಿ ಕೊಡಬಹುದು.

**ಲ್ಯಾಫ್ಲರ್ ಆವಿಗೆ:** ಇದು ಪುನಃಪರಿಶೀಲನೆಯ ಎಂದರೆ ಸಂತತಪ್ರವಾಹಿ ವರ್ಗಕ್ಕೆ ಸೇರಿದ ಪ್ರೇರಿತ ಪರಿಚಲನೆಯ ಆವಿಗೆ. ನೀರನ್ನು ಉಗಿಯಾಗಿಸುವುದಕ್ಕೆ ಅಧಿಕೋಷ್ಣಿತ ಉಗಿಯನ್ನು ಬಳಸುವುದು ಇದರ ಇನ್ನೊಂದು ವೈಶಿಷ್ಟ್ಯ. ಆದ್ದರಿಂದ ಕುಲುಮೆಯ ಬಿಸಿ ಅನಿಲಗಳ ಮುಖ್ಯ ಕಾರ್ಯ ಉತ್ಪಾದಿತ ಉಗಿಯನ್ನು ಅಧಿಕೋಷ್ಣಿತಗೊಳಿಸುವುದೇ ಆಗಿದೆ. ಉಷ್ಣವಾಹಕ ವಸ್ತು ಸಹ ಉಗಿಯೇ ಆಗಿದ್ದು ಇಲ್ಲಿ ಪರೋಕ್ಷ ಕಾಯಿಸುವಿಕೆಯ ಅನುಕೂಲಗಳೂ ಸಿದ್ಧಿಸಿವೆ. ಭೂಮಿ ಅಥವಾ ಸಮುದ್ರದ ಮೇಲಿನ ಸಾರಿಗೆಯಲ್ಲಿ ಶಕ್ತ್ಯುತ್ಪಾದನೆಗೆ ಬಲು ಸಮರ್ಥ ಸಾಧನ.

**ವೀಲಕ್ಸ್ ಆವಿಗೆ:** ಇದರಲ್ಲಿ ನೀರಿನ ಪರಿಚಲನೆ ಮಾತ್ರವಲ್ಲದೆ ದಹನಕ್ರಿಯೆ ಸಹ ಪ್ರೇರಿತವಾಗಿದೆ. ಒಂದು ಅನಿಲ ತನ್ನಲ್ಲಿನ ಶಬ್ದವೇಗಕ್ಕಿಂತ ಮೀರಿದ ವೇಗದಲ್ಲಿ ಒಂದು ನಾಳದೊಳಗೆ ಚಲಿಸುತ್ತಿದ್ದರೆ ಅದರಿಂದ ನಾಳದ ಗೋಡೆಗಳಿಗೆ ಉಷ್ಣಪ್ರವಹಿಸುವ ವೇಗ ಅತಿ ಶೀಘ್ರವಾಗಿರುತ್ತದೆಂದು ಕಂಡುಬಂದಿದ್ದು ಅದರ ಪ್ರಯೋಜನವನ್ನು ಇಲ್ಲಿ ಪಡೆದಿದೆ. ಸಾಮಾನ್ಯವಾಗಿ ದ್ರವ ಅಥವಾ ಅನಿಲರೂಪದ ಇಂಧನವನ್ನು ಉಪಯೋಗಿಸುವ ಈ ಆವಿಗೆಯಲ್ಲಿ ದಹನಕ್ರಿಯೆಗೆ ಬೇಕಾದ ಗಾಳಿಯನ್ನು ವಾಯು ಸಂಕೋಚಕವೊಂದರಿಂದ ಸುಮಾರು 50 ಪೌಂ. ಸಂಮರ್ದದಲ್ಲಿ ಜ್ವಾಲಕಕ್ಕೆ ಒದಗಿಸುವುದರಿಂದ ದಹನೋತ್ಪನ್ನ ಅನಿಲಗಳ ವೇಗ ಶಬ್ದಾತೀತವಾಗಿರುತ್ತದೆ.



ವೀಲಕ್ಸ್ ಆವಿಗೆ

ದಹನಕೋಣೆಯ ಒಳಸುತ್ತಲೂ ಇರುವ ನೀರಿನ ಕೊಳವೆಯೊಳಗೆ ಹಾದಿರುವ ಧೂಮನಾಳಗಳ ಮೂಲಕ ಬಿಸಿ ಅನಿಲಗಳು ಆ ಗತಿಯಲ್ಲಿ ಪ್ರವಹಿಸಿ ನೀರನ್ನು ಉಗಿಯಾಗಿ ಸುತ್ತವೆ. ಅಲ್ಲಿಂದ ಮುಂದೆ ಅವು ಅಧಿಕೋಷ್ಣಕಕ್ಕೆ ಹೋಗಿ ಉಗಿಯನ್ನು ಅಧಿಕೋಷ್ಣಗೊಳಿಸಿ ಅನಂತರ ಅನಿಲ ತಿರುಬಾನಿಯೊಂದರಲ್ಲಿ ವಿಸ್ತರಿಸಿ ವಾಯು ಸಂಕೋಚವನ್ನು ತಿರುಗಿಸಲು ಬೇಕಾದ ಶಕ್ತಿಯನ್ನು ಉತ್ಪಾದಿಸುತ್ತವೆ. ತಿರುಬಾನಿಯಿಂದ ಬಿಡಲ್ಪಟ್ಟ ಅನಿಲಗಳು ಮಿತವ್ಯಯಿ ಯೊಂದರ ಮೂಲಕ ಹಾದು ತಮ್ಮ ಉಳಿಕೆಯ ಉಷ್ಣದಿಂದ ಕುಡಿನೀರನ್ನು ಕಾಯಿಸುತ್ತವೆ.

ಮಿತವ್ಯಯಿಯಿಂದ ಬರುವ ಕಾದು ಕುದಿನೀರು ಪರಿಚಲನಾ ರೇಚಕವೊಂದರಿಂದ ದಹನಕೋಣೆ ಒಳಗಿನ ನೀರು ಕೊಳವೆಗಳ ಮೂಲಕ ಹಾದು ಅಲ್ಲಿ ಭಾಗಶಃ ಉಗಿಯಾಗಿ ಈ ನೀರು ಮತ್ತು ಉಗಿ ಮಿಶ್ರಣ ಒಂದು ಪ್ರತ್ಯೇಕಕ್ಕೆ ಬರುತ್ತವೆ. ಇಲ್ಲಿ ಪ್ರತ್ಯೇಕಿಸಲ್ಪಟ್ಟ ಒಣ ಉಗಿ ಅಧಿಕೋಷ್ಣಕಕ್ಕೆ ಸಾಗಿ ಉಳಿದ ನೀರು ಪುನಃ ಅದೇ ಕೊಳವೆಗಳಿಗೆ ಕಳುಹಿಸಲ್ಪಡುತ್ತದೆ. ಈ ರೀತಿ ಉತ್ಪತ್ತಿಯಾಗುವ ಉಗಿಯ 10–20 ರಷ್ಟು ಪ್ರಮಾಣದ ನೀರು ಹೆಚ್ಚಿನ ವೇಗದಲ್ಲಿ ದಹನಕೋಣೆಯ ಕೊಳವೆಗಳ ಮೂಲಕ ಪರಿಚಲಿಸುತ್ತಲಿದ್ದು ಲೋಹ ಅತಿಯಾಗಿ ಕಾದುಬಿಡದಂತೆ ತಡೆಯುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ ಅಧಿಕೋಷ್ಣಕದ ಕೆಳಗಿನಿಂದ ಆವಿ ಉಗಿತಿರುಬಾನಿಗೆ ಸಾಗುತ್ತದೆ. ಆವಿಗೆಯನ್ನು ಮೊದಲು ಹೊತ್ತಿಸುವಾಗ ವಾಯು ಸಂಕೋಚಕಗಳನ್ನು ತಿರುಗಿಸಲು ನಿಷ್ಕಾಸಾನಿಲತಿರುಬಾನಿಯ ಬದಲಿಗೆ ಒಂದು ವಿದ್ಯುತ್ ಮೋಟಾರನ್ನು ಜೋಡಿಸಿರುತ್ತದೆ. ಒಂದು ನಿರ್ದಿಷ್ಟ ಉತ್ಪಾದನೆಗೆ ವೀಲಕ್ಸ್ ಆವಿಗೆ ಅಡಕವಾದುದು; ಸಂದರ್ಭೋಚಿತವಾಗಿ ಹೊಂದಿಸಲು ಅನುಕೂಲತೆಯುಳ್ಳದ್ದು: ಶೀಘ್ರವಾಗಿ ಆರಂಭಿಸಬಹುದಾದದ್ದು (ಹೊತ್ತಿಸಿ 5–8 ಮಿನಿಟುಗಳಲ್ಲಿ ಪೂರ್ಣ ಸಾಮರ್ಥ್ಯಕ್ಕೆ ತರಬಲ್ಲ ಉದಾಹರಣೆಗಳುಂಟು). ಆದ್ದರಿಂದ ಇದು ಶಕ್ತ್ಯಾಗಾರಗಳಲ್ಲಿ ಸಹಾಯಕ ಅಥವಾ ಅವಲಂಬಿ (ಸ್ಟ್ಯಾಂಡ್‌ಬೈ) ಉತ್ಪಾದಕವಾಗಿ ಬಹಳ ಉಪಯುಕ್ತವಾಗಿದೆ.

ಉಳಿಕೆಯ ಕಾವಿನ ಅವಿಗೆಗಳು (ವೇಸ್ಟ್ ಹೀಟ್ ಬಾಯ್ಲರ್ಸ್): ಎಷ್ಟೋ ಸ್ಥಾವರಗಳಲ್ಲಿ ಕೈಗಾರಿಕಾ ಕುಲುಮೆಗಳಿಂದಲೊ ಬಲೋತ್ಪಾದಕಗಳಿಂದಲೊ ಇತರ ಪ್ರಕ್ರಿಯೆಗಳಿಂದಲೊ ಅವುಗಳ ಮೂಲೋದ್ದೇಶ ಸಾಧಿತವಾದ ಮೇಲೆ ಹೊರಬರುವ ದಹನಜನ್ಯ ಅನಿಲಗಳಲ್ಲಿ ಉಳಿದಿರುವ ಉಷ್ಣದಿಂದಲೇ ಅಲ್ಲಿಗೆ ಬೇಕಾಗುವ ಉಗಿಯಷ್ಟನ್ನೂ ಒದಗಿಸುವ ಸಾಧ್ಯತೆಯಿದೆ. ಉದಾಹರಣೆಗೆ, ಆಂತರ್ದಹನ ಯಂತ್ರಗಳ ನಿಷ್ಕಾಸದ ಉಷ್ಣತೆ ಅವುಗಳ ನಿರ್ವಹಣಾ ಭಾರ ಮತ್ತು ಯಂತ್ರದ ಬಗೆಗಳನ್ನು ಅವಲಂಬಿಸಿ $150^{o}$–$425^{o}$ ಸೆಂ.ಗ್ರೇ. ಇರಬಹುದು; ತೈಲ ಶುದ್ಧೀಕರಣ ಬಟ್ಟಿಗಳಿಂದ $480^{o}$–$540^{o}$ ಸೆಂ.ಗ್ರೇಡಿನಲ್ಲಿ ಅನಿಲಗಳ ಸಂತತ ನಿರ್ಗಮನವಾಗುತ್ತಿರಬಹುದು

ತೆರೆದ ಒಲೆ (ಓಪನ್ ಹಾರ್ತ್) ಮಾದರಿಯ ಉಕ್ಕಿನ ಕುಲುಮೆಗಳಿಂದ ಹೊರಬರುವ ಅನಿಲಗಳು $650^{0}$–$705^{0}$ ಸೆಂ.ಗ್ರೇ.ವರೆಗೂ ಇದ್ದಿರಬಹುದು. ಈ ಅನಿಲಗಳಲ್ಲಿರುವ ಉಷ್ಣಶಕ್ತಿಯನ್ನು ಅವುಗಳ ನಿರ್ಗಮನ ಮಾರ್ಗದಲ್ಲಿ ಸೂಕ್ತ ಮಾದರಿಯ ಉಷ್ಣವಿನಿಮಯ ಸಾಧನಗಳನ್ನು ಅಳವಡಿಸುವುದರಿಂದ ಹೀರಿಕೊಳ್ಳಬಹುದು. ಇಷ್ಟು ಪ್ರಮಾಣದ ಉಷ್ಣ ಹೊರಹೋಗುತ್ತಿದೆ ಎಂಬುದರಿಂದಲೇ ಮೂಲ ಸಾಧನ ದಕ್ಷತೆಯಿಂದ ಕೆಲಸಮಾಡಿತ್ತಿಲ್ಲ ವೆಂದಾಗಲೀ ಅದರ ಕ್ಷೀಣದಕ್ಷತೆಯನ್ನು ಮರಿಮಾಚಲು ಇದರ ಉಪಯೋಗವೆಂದಾಗಲೀ ಭಾವಿಸಬಾರದು. ಏಕೆಂದರೆ ಪ್ರಕ್ರಿಯೆಯಲ್ಲಿ ಉಷ್ಣ ಹೀರುತ್ತಿರುವ ಪದಾರ್ಥದ ಉಷ್ಣತೆಯ ಮೇಲೂ ಇದು ಅವಲಂಬಿಸಿದೆ. ಅಲ್ಲದೆ ಹೀಗೆ ಉಳಿಕೆಯ ಉಷ್ಣವನ್ನು ಉಪಯೋಗಿಸು ವಾಗಲೂ ಮೂಲಸಾಧನದ ದಕ್ಷತೆಗೆ ಭಂಗ ಬರದಂತೆ ಎಚ್ಚರಿಕೆ ವಹಿಸಬೇಕಾದದ್ದು ಅಗತ್ಯ. ಈ ಉಳಿಕೆಯ ಉಷ್ಣದ ಅವಿಗೆಗಳಲ್ಲಿ ಜಲನಾಳಿ ಹಾಗೂ ಧೂಮನಾಳಿ ಯಾವ ಮಾದರಿಯಾದರೂ ಇರಬಹುದು. ಮೊದಮೊದಲು ಬಳಕೆಗೆ ಬಂದ ಇಂಥ ಆವಿಗೆಗಳು ಮಿಕ್ಕವುಗಳಂತೆಯೇ ಇದ್ದು ಅನಿಲಗಳ ಉಷ್ಣತೆ ಅಧಿಕವಾಗಿದ್ದವರೆಗೂ ಚೆನ್ನಾಗಿಯೇ ಕೆಲಸ ಮಾಡುತ್ತಿದ್ದವು. ಅನಿಲದ ವೇಗಗಳನ್ನು ಹೆಚ್ಚು ಮಾಡುವುದುರಿಂದ ಉಷ್ಣಪ್ರವಾಹ ಅಧಿಕಗೊಳ್ಳುವುದೆಂಬ ಅಂಶ ಗೋಚರವಾದ ಮೇಲೆ ಇವುಗಳ ರಚನೆಯ ರೀತಿಯೇ ಬದಲಾಯಿತು. ಉಷ್ಣಪ್ರವಹನಕ್ಕೆ ಪ್ರಸರಣಕ್ಕಿಂತ (ಕನ್ವೆಕ್ಷನ್) ವಹನವನ್ನು (ಕಂಡಕ್ಷನ್) ಅವಲಂಬಿಸಬೇಕು. ಅಡಕವಾದ ವಿನ್ಯಾಸದಲ್ಲಿ 1½ಅ–2" ವ್ಯಾಸವುಳ್ಳ ಕೊಳವೆಗಳೂ ಅನಿಲದ ಶೀಘ್ರ ವೇಗವೂ ಅಪೇಕ್ಷಣೀಯ. ತಡೆಯಿಂದ ಹರಿವು ಕ್ಷೀಣವಾಗುವುದನ್ನು ತಪ್ಪಿಸಲೂ ಕೊಳವೆಗಳ ಮೂಲಕ ವೇಗದ ಅಧಿಕ್ಯ ನಿರಂತರವಾಗಿರುವುದಕ್ಕೂ ಪ್ರಚೋದಿತ ಹರಿವಿನ ಪಂಖಾಗಳನ್ನು ಉಪಯೋಗಿಸಬೇಕು. ಇಟ್ಟಿಗೆಯ ಕಟ್ಟಡ ಸಾಧ್ಯವಾದಷ್ಟು ಕಡಿಮೆಯಿದ್ದು ಆಧುನಿಕವಾದ ಇಂಥ ಅವಿಗೆಗಳಲ್ಲಿ ಒಳಮಾರ್ಗಕ್ಕೆ ಕಾವಿಟ್ಟಿಗೆಯ ಅಂಚು ಕಟ್ಟಿರುವುದನ್ನು ಬಿಟ್ಟರೆ ಬೇರೆ ಕಟ್ಟಡವೇ ಇರುವುದಿಲ್ಲ. ಅಧಿಕೋಷ್ಣಿತ ಉಗಿ ಬೇಕಾದಲ್ಲಿ ಅಧಿಕೋಷ್ಣಕ ನಾಳಗಳನ್ನು ಈ ಒಳ ಮಾರ್ಗದಲ್ಲಿ ನಿಯಂತ್ರಕ ಬಾಗಿಲುಗಳ ಅನಂತರದಲ್ಲಿ ಇಟ್ಟಿರುತ್ತದೆಯೇ ಹೊರತು ಉಷ್ಣತೆ ಕಡಿಮೆಯಿರುವ ಹೊರಮಾರ್ಗದಲ್ಲಲ್ಲ. (ಕೆ.ವಿ.ಎಸ್.)

**ಉಗಿತಾಪನ:** ಆವಿಗೆ ಉತ್ಪಾದಿಸುವ ಉಗಿಯನ್ನು ಬಳಸಿಕೊಳ್ಳುವ ತಾಪನ ವ್ಯವಸ್ಥೆ (ಸ್ಟೀಂ ಹೀಟಿಂಗ್). ಇದರಲ್ಲಿ ನಳಿಗೆಗಳ ಮೂಲಕ ಉಗಿ ಉಷ್ಣ ವಿನಿಮಯಿಗಳಿಗೆ (ರೇಡಿಯೇಟರುಗಳು, ಕನೆಕ್ಟರುಗಳು ಮುಂತಾದ ಸಾಧನಗಳು) ಸಾಗಿ ಉಷ್ಣವಿನಿಮಯಾ ನಂತರ ದೊರೆಯುವ ನೀರು ಆವಿಗೆಗೆ (ಬಾಯ್ಲರ್) ಮರಳುತ್ತದೆ. ಇಂಥ ವ್ಯವಸ್ಥೆಗಳ ಕ್ರಿಯೆಯಲ್ಲಿ ಸಂಮರ್ದ ಸಾಧಾರಣವಾಗಿ ಒಂದು ಚದರ ಅಂಗುಲ ವ್ಯಾಪ್ತಿಯಲ್ಲಿ (psig) 15 ಪೌಂಡುಗಳನ್ನು ಮೀರಬಾರದು. ಉಗಿತಾಪನದಲ್ಲಿ ಒಂದು ನಳಿಗೆ ವ್ಯವಸ್ಥೆ (ಒನ್ ಪೈಪ್ ಸಿಸ್ಟಂ), ಎರಡು ನಳಿಗೆ ವ್ಯವಸ್ಥೆ ಎಂಬ ಎರಡು ವರ್ಗಗಳಿವೆ. *

**ಉಗಿಯಂತ್ರ (ಉಗಿಎಂಜಿನ್):** ಉಗಿಯಲ್ಲಿರುವ ಉಷ್ಣಶಕ್ತಿಯನ್ನು ಯಾಂತ್ರಿಕಶಕ್ತಿಯನ್ನಾಗಿ ಪರಿವರ್ತಿಸುವ ಸಾಧನ (ಸ್ಟೀಂ ಎಂಜಿನ್). ಇದರ ಪ್ರಮುಖ ಬಿಡಿಭಾಗಗಳು ಉರುಳೆ (ಸಿಲಿಂಡರ್) ಮತ್ತು ಅದರೊಳಗೆ ಹಿಂದಕ್ಕೂ ಮುಂದಕ್ಕೂ ಚಲಿಸುವ ಒಂದು ಆಡುಬೆಣೆ ಕೊಂತ (ಪಿಸ್ಟನ್). ಈ ಹಿಂದು–ಮುಂದು ವಿಚ್ಛಿನ್ನ ಚಲನೆಯನ್ನು ವೃತ್ತಾಕಾರದ ಅವಿಚ್ಛಿನ್ನ ಚಲನೆಯನ್ನಾಗಿ ಮಾರ್ಪಡಿಸಲು ಆಡುಬೆಣೆಯ ದಂಡವನ್ನು ವೃತ್ತಾಕಾರದಲ್ಲಿ ತಿರುಗುವ ಒಂದು ಗಾಲಿಯ ಮಗ್ಗುಲಿಗೆ ವಕ್ರದಂಡದ (ಕ್ರಾಂಕ್ ಷಾಫ್ಟ್) ಸಹಾಯದಿಂದ ಜೋಡಿಸಿದೆ.




ಮಟ್ಟದ ಉಗಿಯಂತ್ರದ ಪ್ರಮುಖ ಬಿಡಿಭಾಗಗಳು
1. ಆಡುಬೆಣೆ 2. ನಾಳಿ 3. ಜೋಡಿಸುವ ದಂಡ 4. ಗತಿನಿಯಂತ್ರಕ ಗಾಲಿ 5. ವಕ್ರದಂಡ 6. ಚೌಕಟ್ಟು

ಇನ್ನು ಆಡುಬೆಣೆಯ ಮೇಲೆ ಪತನವಾಗುವ ಸಂಮರ್ದ ಸಮಪ್ರಮಾಣದಲ್ಲಿ ಇರುವುದಿಲ್ಲವಾದ್ದರಿಂದ ಅದರ ಹಿಂದು–ಮುಂದು ಚಲನೆಯಲ್ಲಿ ತತ್ಪರಿಣಾಮವಾಗಿ ಗಾಲಿಯ ವೃತ್ತಾಕಾರದ ಚಲನೆಯಲ್ಲಿ ಏರಿಳಿತಗಳು ತಲೆದೋರುತ್ತವೆ. ಎಂದರೆ ಗಾಲಿಯ ಚಲನೆ ಒಂದು ನಿಯತ ದರದಲ್ಲಿ ಇರುವುದಿಲ್ಲ. ಇದನ್ನೇ ನಿಯಂತ್ರಿಸಿ, ಗಾಲಿಯ ಉರುಳಾಟವನ್ನು

ಸಮವೇಗದಲ್ಲಿಡಲು ಒಂದು ಗತಿನಿಯಂತ್ರಕ ಗಾಲಿಯನ್ನು (ಫ್ಲೈವೀಲ್) ಯಂತ್ರಕ್ಕೆ ಅಳವಡಿಸಿದೆ. ಗರಿಷ್ಠ ಸಂಮರ್ದದಲ್ಲಿರುವ ಉಗಿಯನ್ನು ಉರುಳೆಯೊಳಗೆ ಬಿಡಲು ಮತ್ತು ಕಾರ್ಯವೆಸಗಿದ ಉಗಿಯನ್ನು ಹೊರಹಾಕಲು ಒಂದೊಂದು ಕವಾಟ ಇದೆ.

ಉಗಿ ಯಂತ್ರಗಳನ್ನು ಏಕಮಾರ್ಗ–ಅಥವಾ–ದ್ವಿಮಾರ್ಗ–ಕ್ರಿಯೆಯ (ಸಿಂಗಲ್–ಆರ್ ಡಬಲ್–ಆ್ಯಕ್ಟಿಂಗ್) ರೀತಿಯವೆಂದೂ ಹಾರಿಜ ಅಥವಾ ಲಂಬ (ಹಾರಿಸಾಂಟಲ್ ಆರ್ ವರ್ಟಿಕಲ್) ರೀತಿಯವೆಂದೂ ಸ್ಥೂಲವಾಗಿ ವಿಂಗಡಿಸಬಹುದು.

ಅವು ಪೂರೈಸುವ ಉದ್ದೇಶವನ್ನು ಅನುಸರಿಸಿಯೂ ಉಗಿಯಂತ್ರಗಳ ವಿಂಗಡಣೆ ಮಾಡುವುದಿದೆ.

ಶಕ್ತಿ ಉತ್ಪಾದನಯಂತ್ರಗಳಲ್ಲಿ ಮೊದಲಿನದಾದ ಉಗಿಯಂತ್ರ ಇಂದಿಗೂ ಅತ್ಯಂತ ವಿಶ್ವಾಸಾರ್ಹವಾದ ಮತ್ತು ಸರಳವಾದ ಏಕೈಕ ಯಂತ್ರ, ಅಂತರ್ದಹನ, ಉಗಿಟಿರುಬಾನಿ ಮುಂತಾದ ಯಂತ್ರಗಳ ಉದಯದಿಂದ ಉಗಿಯಂತ್ರದ ಬಳಕೆ ಗಮನಾರ್ಹವಾಗಿ ಕಡಿಮೆಯಾಗಿದೆ. ಆದರೆ ಅಗ್ಗದ ಉರುವಲು ಲಭಿಸುವಲ್ಲಿ ಉಗಿ ಯಂತ್ರವೇ ಹೆಚ್ಚು ಉಪಯುಕ್ತ ಮತ್ತು ಲಾಭದಾಯಕ. (ಎಚ್.ಎಲ್.ಕೆ.)

**ಉಗಿಸಾಂದ್ರಕಾರಿ:** ಉಗಿಯನ್ನು ನೀರಾಗಿ ಸಾಂದ್ರೀಕರಿಸುವ ಉಷ್ಣ ವರ್ಗಾವಣೆ ಉಪಕರಣ (ಸ್ಟೀಮ್ ಕಂಡೆನ್ಸರ್). ಇದು ಉಗಿಯಲ್ಲಿರುವ ಗುಪ್ತೋಷ್ಣವನ್ನು (ಲೇಟೆಂಟ್ ಹೀಟ್) ತೆಗೆದು ನೀರಿನಂಥ ಒಂದು ದ್ರವ ಅದನ್ನು ಹೀರಿಕೊಳ್ಳುವಂತೆ ಮಾಡುತ್ತದೆ. ಉಗಿಸಾಂದ್ರಕದಲ್ಲಿ ಎರಡು ವರ್ಗಗಳಿವೆ ಸ್ಪರ್ಶ (ಕಾಂಟ್ಯಾಕ್ಟ್) ಮತ್ತು ಮೇಲ್ಮೈ (ಸರ್ಫೇಸ್). ಮೊದಲಿನದರಲ್ಲಿ ಉಗಿಯೂ ತಣಿಸುವ ನೀರೂ ಒಂದು ಸಂಪುಟದಲ್ಲಿ ಮಿಶ್ರವಾಗಿ ಉಗಿ ಸಾಂದ್ರೀಕರಿಸುತ್ತದೆ. ಎರಡನೆಯದರಲ್ಲಿ ಉಗಿ ಮತ್ತು ತಣಿಸುವ ನೀರು ಇವನ್ನು ಪ್ರತ್ಯೇಕಿಸುವ ಒಂದು ಲೋಹದ ತೆರೆ ಇದೆ; ತೆರೆಯೇ ಸಾಂದ್ರಕದ ಮೇಲ್ಮೈ. ಇವೆರಡು ವರ್ಗದ ಸಾಂದ್ರಕಾರಿಗಳೂ ಯಂತ್ರೋದ್ಯಮದ ಸೌಕರ್ಯವನ್ನು ಅವಲಂಬಿಸಿ ಬಳಕೆಯಲ್ಲಿವೆ. ಒಂದೇ ಕವಚದೊಳಗಿನ ಒಂದು ದೊಡ್ಡ ಸಾಂದ್ರಕಾರಿಯಲ್ಲಿ ಉಗಿ 30,000 ಘ. ಅಡಿಗಳಷ್ಟು ಪ್ರದೇಶವನ್ನು ವ್ಯಾಪಿಸಲು ಅವಕಾಶವಿದೆ. ಇನ್ನಷ್ಟು ಅವಕಾಶ ಬೇಕೆಂದೆನ್ನಿಸಿದಾಗ ಅದನ್ನು ರಚಿಸಿಕೊಳ್ಳಬಹುದು. ಆದರೆ ಆಗ ಕವಚವನ್ನು ಸಮದ್ವಿಭಾಗಿಸುತ್ತಾರೆ. 1 ಪೌಂಡ್ ಉಗಿಯನ್ನು ಸಾಂದ್ರೀಕರಿಸಲು ಬೇಕಾಗುವ ತಣ್ಣೀರು ಸು. 70–100 ಪೌಂಡು. *

**ಉಗುರು ಸಿಂಗಾರ: (ನೋಡಿ– ಅಂಗರಾಗಗಳು,–ಅಂಗರಾಗಶಾಸ್ತ್ರ)**

**ಉಗುರುಸುತ್ತು:** ಉಗುರಿನ ಸುತ್ತಲ ಮೆತ್ತನೆಯ ಭಾಗದಲ್ಲಿ ಸೋಂಕಿನಿಂದ ಏಳುವ ಕೀವು ಕುರು (ಪ್ಯಾರೋನೈಕಿಯ) (ವಿಟ್ಲೊ, ರನರೌಂಡ್). ಕಾಲುಬೆರಳುಗಳಲ್ಲಿ ಏಳಬಹುದಾದರೂ ಕೈ ಬೆರಳುಗಳ ಸುತ್ತ ಏಳುವುದೇ ಹೆಚ್ಚು. ಉಗುರಿನ ಸುತ್ತಲಿನ ಚರ್ಮವು ಕೆಂಪಾಗಿ, ಊದಿಕೊಂಡು, ಕೀವಿನಿಂದ ತುಂಬಿಕೊಳ್ಳುತ್ತದೆ ಹಾಗೂ ನೋವಿನಿಂದ ಕೂಡಿರುತ್ತದೆ.

ಉಗುರುಸುತ್ತು ತೀವ್ರ ಅಥವಾ ದೀರ್ಘಾವಧಿಯದ್ದಾಗಿರಬಹುದು. ಮುಳ್ಳು ತಾಗಿ, ಅಥವಾ ಗಾಯವಾಗುವುದರಿಂದ ಬ್ಯಾಕ್ಟೀರಿಯ ರೋಗಾಣುಗಳ ಸೋಂಕಾಗಿ ತೀವ್ರ ಉಗುರುಸುತ್ತು ಕಾಣಿಸಿಕೊಳ್ಳುತ್ತದೆ. ದೀರ್ಘಾವಧಿಯ ಉಗುರುಸುತ್ತು, ಸಾಮಾನ್ಯವಾಗಿ ಅಣಬೆರೋಗದಿಂದ ಉಂಟಾಗುತ್ತದೆ. ಹೆಚ್ಚು ಕಾಲ ನೀರಲ್ಲಿ ಕೆಲಸ ಮಾಡುವುದು ಈ ತೊಂದರೆಯಾಗಲು ಕಾರಣವಾಗುತ್ತದೆ; ಉಗುರು ಒಳಗೊಳಗೇ ಬೆಳೆದುಕೊಳ್ಳುವುದು, ಉಗುರಿನ ತಳಭಾಗ, ಬಹುಕಾಲದ ನೀರು, ಸಾಬೂನುಗಳ ಸ್ಪರ್ಶದಿಂದ ನಾಶವಾಗುವುದು, ಮೊದಲಾದ ಉಗುರಿನ ರಚನೆಯ ತೊಂದರೆಗಳಿಂದ ದೀರ್ಘಕಾಲದ ಉಗುರುಸುತ್ತು ಬರುತ್ತದೆ.

ಉಗುರುಸುತ್ತು ತೀವ್ರವಾಗಿದ್ದರೆ, ಊದಿಕೊಂಡ ಸ್ಥಳದಲ್ಲಿ ಶುದ್ಧ ಸೂಜಿಯಿಂದ ಚುಚ್ಚಿ, ಶಸ್ತ್ರವೈದ್ಯರು ಕೀವನ್ನು ಹೊರತೆಗೆಯಬಹುದು. ಅನಂತರ, ಜೀವನಿರೋಧಕ ಔಷಧಿಗಳಿಂದ ಚಿಕಿತ್ಸೆ ಮಾಡುತ್ತಾರೆ. ಅದು ದೀರ್ಘಕಾಲದ್ದಾದರೆ, ಸೂಕ್ತ ಅಣಬೆನಾಶಕ ಚಿಕಿತ್ಸೆ ಹಾಗೂ ಇತರ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಬೆರಳಿಗೆ ಎಲ್ಲಾದರೂ ಮುಳ್ಳು ತಗಲಿದರೆ ಅಥವಾ ಗಾಯವಾದರೆ, ಸೋಂಕುಗಳು ಸೇರದಂತೆ ಮುಂಜಾಗ್ರತೆಯಿಂದ ಸೋಂಕುನಿರೋಧಕ ಮದ್ದು ಹಚ್ಚಿ ಉಗುರುಸುತ್ತು ಏಳದಂತೆ ನೋಡಿಕೊಳ್ಳುವುದು ಬಹುಮುಖ್ಯ. ಅಲ್ಲಿಗೂ ಸೋಂಕು ನೆಲೆಯೂರಿ ಕೀವು ಸೇರುವ ಲಕ್ಷಣ ಕಂಡರೆ ಕೂಡಲೇ ವೈದ್ಯರ ಸಲಹೆ ಪಡೆಯಲೇಬೇಕು **(ನೋಡಿ– ಕೈಯ–ರೋಗಗಳು,–ಊನಗಳು)**. (ಡಿ.ಎಸ್.ಎಸ್.)

**ಉಗುರುಳಿ:** ನಿಮ್ನ (ಕಾನ್ ಕೇವ್) ಅಥವಾ ಹಳ್ಳದಂತೆ ಬಾಗಿರುವ ಅಲಗು ಇರುವ ಹತ್ಯಾರು (ಗೌಜ್). ಇದರಿಂದ ದುಂಡಗಿರುವ (ವೃತ್ತಾಕಾರದ) ರಂಧ್ರಗಳನ್ನು ಕೆತ್ತಲು ಅಥವಾ ಕೊರೆಯಲು ಸಾಧ್ಯ. ಈ ಹತ್ಯಾರಿನಲ್ಲಿ ಎರಡು ವಿಧ. ಕತ್ತರಿಸುವ ತುದಿಯ ಒಳಭಾಗದಲ್ಲಿ ಜಾರಾಗಿರುವುದು ಒಂದು; ಹೊರಭಾಗದಲ್ಲಿ ಜಾರಾಗಿರುವುದು ಇನ್ನೊಂದು. ಮರವನ್ನು ಕೊರೆಯಲು ಇದನ್ನು ಬಹಳವಾಗಿ ಉಪಯೋಗಿಸುವರು. ಉಗುರುಳಿಯ

ವಿವಿಧ ರೂಪಗಳು ಪುಸ್ತಕ ರಟ್ಟುಹಾಕುವವರ, ವೈದ್ಯರ, ಭೂವಿಜ್ಞಾನಿಗಳ ಉಪಕರಣಗಳಾಗಿಯೂ ಬಳಕೆಯಲ್ಲಿವೆ. (ಎಸ್.ಕೆ.ಎಸ್.ಎಚ್.)

**ಉಗ್ಗು:** ಮಾತಿನ ದೋಷಗಳಲ್ಲಿ ಒಂದು (ಸ್ಟಟರಿಂಗ್, ಸ್ಟ್ಯಾಮರಿಂಗ್). ಮಾತಿನ ದೋಷಗಳಲ್ಲೇ ಬಹುಶಃ, ಹೆಚ್ಚು ಪರಿಚಿತವಾದದ್ದು, ಗಮನ ಸೆಳೆಯುವಂಥದು. ಬಿಕ್ಕಲು ಎಂದೂ ಇದನ್ನು ಕರೆಯುತ್ತಾರೆ. ಕೆಲವು ಕಡೆ ತೊದಲು ಎಂಬ ಶಬ್ದವೂ ವಾಡಿಕೆಯಲ್ಲಿದೆ. ಆದರೆ ತೊದಲು ಶಬ್ದವನ್ನು ಅಕ್ಷರಗಳನ್ನು ಅಸ್ಪಷ್ಟವಾಗಿ ಉಚ್ಚರಿಸುವ ಅಥವಾ ಒಂದು ಅಕ್ಷರದ ಬದಲು ಇನ್ನೊಂದನ್ನು ಉಚ್ಚರಿಸುವ ದೋಷಕ್ಕೆ ಮಾತ್ರ ಬಳಸುವುದು ಯುಕ್ತ.

ಉಗ್ಗು ಪ್ರಾಚೀನ ಕಾಲದಿಂದಲೂ ಜನರಿಗೆ ಗೊತ್ತಿರುವ ಮಾತಿನ ದೋಷ. ಆದರೆ ಇದರ ವೈಜ್ಞಾನಿಕ ಅಧ್ಯಯನ ಮಾತ್ರ ಇತ್ತೀಚಿನದು. ಈಗಲೂ ಉಗ್ಗು ಎಂದರೇನು ಎಂಬ ಪ್ರಶ್ನೆಗೆ ಸೂತ್ರರೂಪದಲ್ಲಿ ಉತ್ತರಕೊಡುವುದು ಕಷ್ಟ. ಒಟ್ಟಿನಲ್ಲಿ ಉಗ್ಗಿನ ಮುಖ್ಯಲಕ್ಷಣ ಮಾತಿನಲ್ಲಿ ಸಹಜವಾದ ನಿರರ್ಗಳತೆ ಇಲ್ಲದೆ ಮಾತಿನ ಪ್ರವಾಹ ತುಂಡು ತುಂಡಾಗಿ ಹರಿಯುವುದೇ ಆಗಿದೆ; ಬಿಕ್ಕಲು ಎಂಬ ಶಬ್ದ ಇದನ್ನು ಚೆನ್ನಾಗಿ ವ್ಯಕ್ತಪಡಿಸುತ್ತದೆ ಬಿಕ್ಕಿ ಬಿಕ್ಕಿ ಅಳುತ್ತಿರುವವರು ಅದೇ ವೇಳೆ ಮಾತನಾಡಲೂ ಪ್ರಯತ್ನಿಸಿದರೆ ಏನಾಗುತ್ತದೆಂಬುದು ಬಹುಶಃ ಎಲ್ಲರಿಗೂ ಗೊತ್ತು. ಉಗ್ಗಿನ ಲಕ್ಷಣಗಳಲ್ಲಿ ಅನೇಕ ಬಗೆ. ಯಾವೊಬ್ಬ ರೋಗಿಯಲ್ಲೂ ಎಲ್ಲ ಲಕ್ಷಣಗಳೂ ಕಾಣಿಸದೆ ಇರಬಹುದು. ಆದರೆ ಉಗ್ಗಿನ ಸರ್ವಸಾಮಾನ್ಯ ಲಕ್ಷಣವೆಂದರೆ ಶಬ್ದಗಳ ಮೊದಲ ಅಕ್ಷರವನ್ನು ಪುನರುಚ್ಚರಿಸುವುದು: ಬರುತ್ತೇನೆ ಎಂದು ಹೇಳಹೊರಟ ವ್ಯಕ್ತಿಯೊಬ್ಬ ಬ–ಬ–ಬ–ಬರುತ್ತೇನೆ ಎನ್ನಬಹುದು; ಅಷ್ಟೇ ಸಾಮಾನ್ಯವಾದ ಇನ್ನೊಂದು ಲಕ್ಷಣವೆಂದರೆ ಅಕ್ಷರವನ್ನು (ಹೆಚ್ಚುಬಾರಿ ಶಬ್ದದ ಮೊದಲ ಅಕ್ಷರವನ್ನು) ಅನಾವಶ್ಯಕವಾಗಿ ದೀರ್ಘಗೊಳಿಸುವುದು: ವ್ಯಕ್ತಿಯೊಬ್ಬ ಬಅಅಅಅರುತ್ತೇನೆ ಎನ್ನಬಹುದು. ಶಬ್ದಗಳ, ವಾಕ್ಯಗಳ ಯಾವುದೇ ಭಾಗವನ್ನು ಹೀಗೆ ಎಳೆದೆಳೆದು ಹೇಳಬಹುದು. ಮಾತನ್ನು ಪ್ರಾರಂಭಿಸಲು ಕಷ್ಟವಾಗುವುದು ಇನ್ನೊಂದು ಲಕ್ಷಣ; ಪ್ರಾರಂಭಿಸಿದ ಮೇಲೆ ಕೆಲವು ಉಗ್ಗರಂತೂ ಚೆನ್ನಾಗಿಯೇ ಮಾತನಾಡಿಕೊಂಡು ಹೋಗಬಲ್ಲರು. ಮಧ್ಯೆ ಮಧ್ಯೆ ಶಬ್ದಗಳು ಹಿಡಿದುಕೊಂಡು ಮಾತೇ ಇಲ್ಲದೆ ಮೌನ ಉಂಟಾಗುವುದು ಮತ್ತೊಂದು ಲಕ್ಷಣ. ಹಲವು ವರ್ಷಗಳಿಂದ ಉಗ್ಗುತ್ತಿದ್ದು ಈ ದೋಷ ಹೆಚ್ಚಾಗಿರುವವರಲ್ಲಿ ಇನ್ನೂ ಕೆಲವು ಲಕ್ಷಣಗಳನ್ನು ಕಾಣಬಹುದು. ಶಬ್ದವೊಂದು ಗಂಟಲಲ್ಲಿ ಸಿಕ್ಕಿಹಾಕಿಕೊಂಡಾಗ ಅವರು ಹುಬ್ಬು ಗಂಟಿಕ್ಕಬಹುದು, ಹುಬ್ಬನ್ನು ಮೇಲೇರಿಸಬಹುದು; ಕಣ್ಣಗಳನ್ನು ಮಿಟಿಮಿಟಿ ಮಿಟಕಿಸಬಹುದು; ತುಟಿಗಳನ್ನು ಅಸಹಾಯಕವಾಗಿ ನಡುಗಿಸಬಹುದು; ನಾಲಗೆ ಹೊರಚಾಚಬಹುದು; ಬಾಯಿ ದೊಡ್ಡದಾಗಿ ತೆರೆಯಬಹುದು; ಕೆಲವೊಮ್ಮೆ ಬಾಯಿಂದ ತರತರದ ಶಬ್ದಗಳನ್ನು ಹೊರಡಿಸಬಹುದು; ಮುಖದಲ್ಲಿ ನಾನಾ ಬಗೆಯ ಹಾವಭಾವಗಳನ್ನು ತೋರಿಸಬಹುದು; ಅಂಗೈಯನ್ನು ಹಿಸುಕಿಕೊಳ್ಳಬಹುದು; ಪಾದದಿಂದ ನೆಲವನ್ನು ಕುಟ್ಟಬಹುದು ಮತ್ತು ಮೈ ಎಲ್ಲ ಬೆವರಬಹುದು. ಕೆಲವು ಉಗ್ಗರಲ್ಲಿ ಕಾಣಬಹುದಾದ ಇನ್ನೂ ಒಂದು ಲಕ್ಷಣವೆಂದರೆ ಕಷ್ಟದ ಶಬ್ದವೊಂದನ್ನು ಹೇಳುವಾಗ ಅದರ ಹಿಂದೆ ಯಾವುದೋ ಒಂದು ಅಕ್ಷರವನ್ನು ಸೇರಿಸಿಬಿಡುವುದು; ಬರುತ್ತೇನೆ ಎನ್ನುವುದು ಹಿಡಿದುಕೊಳ್ಳುವ ಶಬ್ದವಾದರೆ ಅ, ಬರುತ್ತೇನೆ ಎನ್ನಬಹುದು. ಮಾತನಾಡುವಾಗ ಉಸಿರನ್ನು ಜೋರಾಗಿ ಎಳೆದುಕೊಳ್ಳಲು ಪ್ರಯತ್ನಿಸಬಹುದು ಅಥವಾ ಉಸಿರನ್ನು ಬಿಗಿಹಿಡಿದು ಕೊಳ್ಳುವುದು ಕೂಡ ಆಗಾಗ ಕಂಡುಬರುವ ಒಂದು ಲಕ್ಷಣ. ಅಕ್ಷರಗಳನ್ನು ಎಳೆಯುವುದು ಮತ್ತು ಪುನರುಚ್ಚರಿಸುವುದು–ಇವೆರಡನ್ನು ಉಗ್ಗಿನ ಸರ್ವಸಾಮಾನ್ಯ ಲಕ್ಷಣಗಳೆಂದು ಇತ್ತೀಚೆಗೆ ಪರಿಗಣಿಸಲಾಗಿದೆ.

ಉಗ್ಗು ಪ್ರಾರಂಭವಾಗುವುದು ಸಾಮಾನ್ಯವಾಗಿ ಚಿಕ್ಕವಯಸ್ಸಿನಲ್ಲಿ 4–7 ವರ್ಷಗಳ ಒಳಗೆ. ಅಪರೂಪವಾಗಿ ಇದು ದೊಡ್ಡವರಲ್ಲಿ (ಪ್ರಥಮ ಬಾರಿಗೆ) ಕಾಣಿಸಿಕೊಳ್ಳಬಹುದು. ಉಗ್ಗುವವರಲ್ಲಿ ಎಲ್ಲ ಸಾಮಾಜಿಕ ವರ್ಗದವರನ್ನೂ ಎಲ್ಲ ಮಟ್ಟದ ಬುದ್ಧಿಶಕ್ತಿಯವರನ್ನೂ ಕಾಣಬಹುದು. ಆದರೆ ಈ ದೋಷ ಹೆಂಗಸರಿಗಿಂತ ಗಂಡಸರಲ್ಲಿ ಹೆಚ್ಚು. ಮಕ್ಕಳಲ್ಲಾಗಲಿ, ದೊಡ್ಡವರಲ್ಲಾಗಲಿ ಉಗ್ಗು ಎಲ್ಲ ಸನ್ನಿವೇಶಗಳಲ್ಲೂ ಎಲ್ಲ ಶಬ್ದಗಳ ವಿಷಯದಲ್ಲೂ ಕಾಣಿಸಿಕೊಳ್ಳದು. ಉಗ್ಗರು ಸಾಮಾನ್ಯವಾಗಿ ಹೊಸಬರೊಡನೆ, ದೊಡ್ಡವರೊಡನೆ, ಮೇಲಧಿಕಾರಿಗಳೊಡನೆ, ಅಧ್ಯಾಪಕರೊಡನೆ ಮತ್ತು ಒಂದಲ್ಲ ಒಂದು ರೀತಿಯಲ್ಲಿ ಹಿರಿಯರು ಎನಿಸಿಕೊಂಡವರೊಡನೆ ಮಾತನಾಡುವಾಗ ಹೆಚ್ಚು ಕಷ್ಟಪಡುತ್ತಾರೆ. ಹಾಗೆಯೇ ಉದ್ವಿಗ್ನತೆಯನ್ನು ಕೆರಳಿಸುವ, ಭಯ ಹುಟ್ಟಿಸುವ ಸನ್ನಿವೇಶದಲ್ಲೂ ಉಗ್ಗು ಜಾಸ್ತಿಯಾಗುತ್ತದೆ. ಉಗ್ಗುವವರೆಲ್ಲರೂ ಅಷ್ಟೇಮಟ್ಟಿಗೆ, ಮಕ್ಕಳೊಡನೆ, ತಮ್ಮ ಕೈ ಕೆಳಗಿನವರೊಡನೆ, ಆತ್ಮೀಯರಾದವರೊಡನೆ ಮಾತನಾಡುವಾಗ ತುಂಬ ಕಡಿಮೆ ಉಗ್ಗುತ್ತಾರೆ. ಉಗ್ಗಲು ತೊಡಗಿದ ಮಕ್ಕಳೆಲ್ಲರೂ ಜೀವಮಾನವಿಡೀ ಹಾಗೇ ಉಳಿಯಬೇಕಾಗಿಲ್ಲ. ಚಿಕ್ಕವಯಸ್ಸಿನಲ್ಲಿ ಉಗ್ಗಲು ಬಂದವರಲ್ಲಿ

ಬಹುಮಂದಿ ಕ್ರಮೇಣ ಈ ದೋಷವನ್ನು ತಾವಾಗಿಯೇ ಕಳೆದುಕೊಳ್ಳುತ್ತಾರೆ. ಆದರೆ ಕೆಲವರಲ್ಲಿ ಮಾತ್ರ ಇದು ಕೊನೆಯವರೆಗೂ ಉಳಿಯಬಹುದು. ಹಾಗೆ ಉಳಿದು ಅತಿ ಹೆಚ್ಚು ಉಗ್ಗುವವರ ವರ್ತನೆಯಲ್ಲಿ ಕೆಲವೊಂದು ಬದಲಾವಣೆಗಳಾಗಬಹುದು. ಕೆಲವರು ಸಾಧ್ಯವಾದಷ್ಟೂ ಮಾತನ್ನು ಕಡಿಮೆ ಮಾಡಬಹುದು. ಹೊಸಬರ ಭೇಟಿ, ದೊಡ್ಡವರೊಡನೆ ಮಾತು ಮತ್ತು ಹೊಸ ಸನ್ನಿವೇಶಗಳಿಂದ ವಿಶೇಷವಾಗಿ ದೂರವಿರಬಹುದು. ಈ ದೋಷ ದಿಂದಾಗಿ ಕೀಳರಿಮೆ, ಸಂಕೋಚ ಮತ್ತು ನಿರುತ್ಸಾಹವನ್ನು ಕೆಲವರು ಅನುಭವಿಸಬಹುದು. ಮೇಲೆ ವಿವರಿಸಿದ ಕೈಕಾಲು ಮುಖಗಳ ಚೇಷ್ಟೆಗಳು ಈ ವ್ಯಕ್ತಿಗಳಲ್ಲಿ ಹೆಚ್ಚಿನಮಟ್ಟಿಗೆ ಕಾಣಿಸಿಕೊಳ್ಳುತ್ತವೆ. ಅಕ್ಷರಗಳನ್ನು ಎಳೆಯುವುದು ಮತ್ತು ಪುನರುಚ್ಚರಿಸುವುದು ಉಗ್ಗಿನ ಪ್ರಧಾನಲಕ್ಷಣಗಳಾದರೆ, ಮಾತಿನ ಸನ್ನಿವೇಶಗಳಿಂದ ದೂರ ಸರಿಯುವುದು ಮತ್ತು ಅಂಗಚೇಷ್ಟೆಗಳನ್ನು ಮಾಡುವುದು ಉಗ್ಗು ಉಲ್ಬಣಿಸಿದ್ದರ ಸೂಚನೆಯೆಂದು ಅನೇಕ ಸಂಶೋಧಕರು ಹೇಳುತ್ತಾರೆ.

ಉಗ್ಗು ಏಕೆ ಮತ್ತು ಹೇಗೆ ಹುಟ್ಟಿಕೊಳ್ಳುತ್ತದೆ ಎಂಬ ಬಗ್ಗೆ ಒಮ್ಮತಕ್ಕಿಂತ ಭಿನ್ನಾಭಿಪ್ರಾಯ ಗಳೇ ಹೆಚ್ಚು. ಹಾಗಿದ್ದರೂ ವೈಜ್ಞಾನಿಕ ಸಿದ್ಧಾಂತಗಳನ್ನು ಎರಡು ಪಂಗಡಗಳಾಗಿ ವಿಂಗಡಿಸ ಬಹುದು. ಒಂದು ಪಂಗಡದ ತಜ್ಞರು ಉಗ್ಗು ಒಂದು ಶಾರೀರಿಕ ರೋಗದ ಬಾಹ್ಯ ಚಿಹ್ನೆ ಎಂದೂ ಇನ್ನೊಂದು ಪಂಗಡದವರು ಉಗ್ಗು ಮುಖ್ಯವಾಗಿ ಮಾನಸಿಕ ಸಮಸ್ಯೆ ಎಂದೂ ವಾದಿಸಿದ್ದಾರೆ. ಉಗ್ಗು ಯಾವ ದೈಹಿಕ ದೋಷದಿಂದ ಬರುತ್ತದೆಂಬುದನ್ನು ಕಂಡುಹಿಡಿಯಲು ಅನೇಕ ಪ್ರಯೋಗಗಳನ್ನು ಮಾಡಲಾಗಿದೆ. ಬಹುತೇಕ ಉಗ್ಗರಲ್ಲಿ ಗಂಟಲು, ನಾಲಗೆ, ಧ್ವನಿಪೆಟ್ಟಿಗೆ, ಅಂಗುಳ ಇವೆಲ್ಲ ಚೆನ್ನಾಗಿಯೇ ಇರುವುದನ್ನು ನೋಡಿದರೆ ಆಂಗಿಕ ದೋಷ ಉಗ್ಗಿಗೆ ಕಾರಣವೆನ್ನುವಂತಿಲ್ಲ. ಉಗ್ಗು ಮಾನಸಿಕ ತೊಂದರೆ ಎಂಬ ದೃಷ್ಟಿಕೋನವನ್ನೇ ಅನೇಕ ತಜ್ಞರು ಅನುಮೋದಿಸುತ್ತಾರೆ.

ಉಗ್ಗು ಮಾನಸಿಕವೇ ಆದರೂ ಅದು ಆರಂಭವಾಗುವುದು ಹೇಗೆ ಎಂಬ ಬಗ್ಗೆ ಮತ್ತೆ ಭಿನ್ನಾಭಿಪ್ರಾಯಗಳಿವೆ. ಚಿಕ್ಕವಯಸ್ಸಿನ ಎಲ್ಲ ಮಕ್ಕಳ ಮಾತಿನಲ್ಲೂ ಅಕ್ಷರಗಳನ್ನು ಎಳೆಯುವುದು, ಪುನರುಚ್ಚರಿಸುವುದು, ಆ ಊ ಎನ್ನುವುದು ಇತ್ಯಾದಿ ದೋಷಗಳು ಇದ್ದೇ ಇರುತ್ತವೆ: ವಾಸ್ತವವಾಗಿ ಇವು ದೋಷಗಳೇ ಅಲ್ಲ: ಆದರೆ ಈ ದೋಷಗಳಿಂದ ಗಾಬರಿಗೊಂಡು ಹಲವು ತಂದೆ ತಾಯಿಯರು ಮಗುವಿನ ಮಾತನ್ನು ತಿದ್ದಲು ಹೋಗುತ್ತಾರೆ; ಮಗು ಉಗ್ಗುತ್ತದೆ ಎಂಬ ಹಣೆಪಟ್ಟಿ ಹಚ್ಚಿ ಮಗುವಿನಲ್ಲೂ ಭಯವನ್ನು ಹುಟ್ಟಿಸುತ್ತಾರೆ; ಕ್ರಮೇಣ ಮಗು ತನ್ನ ಮಾತಿನಲ್ಲಿ ಏನೋ ತೊಂದರೆ ಇದೆ ಎಂದು ನಂಬಿಕೊಂಡು ಆ ತೊಂದರೆಯಿಂದ ತಪ್ಪಿಸಿಕೊಳ್ಳಲು ಮಾತನಾಡುವಾಗ ಹೆಣಗತೊಡಗುತ್ತದೆ; ಈ ಹೆಣಗಾಟವೇ ಉಗ್ಗು ಎಂಬುದು ಒಂದು ಸಿದ್ಧಾಂತದ ತಿರುಳು. ಉದ್ವಿಗ್ನತೆ ಮತ್ತು ಈ ರೀತಿಯ ಅಹಿತಕರವಾದ ತೀವ್ರಭಾವಗಳು ಸಾಮಾನ್ಯವಾಗಿ ಮಾತಿನ ನಿರರ್ಗಳತೆಯನ್ನು ಕೆಡಿಸುತ್ತವೆ (ವಿಪರೀತ ಭಯದಲ್ಲಿ, ಕೋಪದಲ್ಲಿ ಮಾತನಾಡಲು ಹೊರಟರೆ ಎಲ್ಲರೂ ಉಗ್ಗುತ್ತಾರೆ). ಕೆಲವು ವ್ಯಕ್ತಿಗಳು ಕೆಲವೊಂದು ಸನ್ನಿವೇಶಗಳಲ್ಲಿ ಉದ್ವಿಗ್ನತೆಯನ್ನು ಅನುಭವಿಸಿ ಆಮೇಲೆ ಅದೇ ಮತ್ತು ಅಂಥದೇ ಸನ್ನಿವೇಶಗಳಲ್ಲಿ ಉದ್ವಿಗ್ನರಾಗಲು ಕಲಿತುಕೊಂಡುಬಿಡುತ್ತಾರೆ; ಈ ಕಲಿತ ಉದ್ವಿಗ್ನತೆಯ ಪರಿಣಾಮವಾಗಿ ಅವರು ಆಯಾ ಸನ್ನಿವೇಶಗಳಲ್ಲಿ ಮಾತಿನ ನಿರರ್ಗಳತೆಯನ್ನು ಕಳೆದುಕೊಳ್ಳುತ್ತಾರೆ, ಉಗ್ಗುತ್ತಾರೆ - ಎಂಬುದು ಇನ್ನೊಂದು ಸಿದ್ಧಾಂತದ ತಿರುಳು. ಈ ದೃಷ್ಟಿಯಿಂದ ಉಗ್ಗು ಕೆಲವೊಂದು ಅಹಿತಕರ ಸನ್ನಿವೇಶಗಳಲ್ಲಿ ವ್ಯಕ್ತಿ ಕಲಿತುಕೊಂಡ ಅನನುಕೂಲಕರವಾದ ಅಭ್ಯಾಸ. ಇದನ್ನು ಪುಷ್ಟೀಕರಿಸುವ ಹಲವು ಪ್ರಾಯೋಗಿಕ ನಿದರ್ಶನಗಳಿವೆ.

ಉಗ್ಗು ಒಂದು ರೋಗವಲ್ಲ; ಆದ್ದರಿಂದ ಇದಕ್ಕೆ ಔಷಧಿ ಅಥವಾ ಶಸ್ತ್ರಕ್ರಿಯೆಗಳಿಲ್ಲ; ಹಾಗೆಯೇ ಜನಬಳಕೆಯಲ್ಲಿರುವ ಕೆಲವು ಕ್ರಮಗಳಿಂದ–ಉದಾಹರಣೆಗೆ, ಬಾಯಲ್ಲಿ ಬೆಣಚುಕಲ್ಲಿಟ್ಟುಕೊಂಡು ಮಾತಾಡಲು ಪ್ರಯತ್ನಿಸುವುದು, ನಾಲಗೆಯನ್ನು ಜೇನುತುಪ್ಪ ಹಾಕಿ ಉಜ್ಜುವುದು, ಬಯಲು ಅಥವಾ ಸಮುದ್ರ ತೀರಕ್ಕೆ ಹೋಗಿ ಅರಚುವುದು - ಇತ್ಯಾದಿ ಕ್ರಮಗಳಿಂದ ಯಾವುದೇ ಪ್ರಯೋಜನವಿಲ್ಲವೆಂಬುದು ಸ್ಪಷ್ಟವಾಗಿದೆ. ಇದನ್ನು ಈಗ ಮಾನಸಿಕ ವಿಧಾನಗಳಿಂದ ನಿವಾರಿಸುವುದು ಸಾಧ್ಯವಿದೆ. ಕ್ರಮೇಣ ತಾವಾಗಿ ಗುಣಹೊಂದಬಹುದಾದವರೂ ಕೂಡ ಚಿಕಿತ್ಸೆ ಪಡೆದು ಮೊದಲೇ ಇದರಿಂದ ಮುಕ್ತರಾಗ ಬಹುದು. ಚಿಕಿತ್ಸೆಯಲ್ಲಿ ಮುಖ್ಯವಾಗಿ ಬೇರೆ ಬೇರೆ ಸನ್ನಿವೇಶಗಳಲ್ಲಿ ವ್ಯಕ್ತಿ ಉದ್ವಿಗ್ನನಾಗದೆ ಪ್ರಶಾಂತವಾಗಿರುವುದನ್ನು ವಿಶೇಷ ವಿಧಾನಗಳ ಮೂಲಕ ಕಲಿಸಬೇಕಾಗುತ್ತದೆ. ಹಾಗೆಯೇ ಕಲಿಕೆಯ ಸೂತ್ರಗಳನ್ನು ಉಪಯೋಗಿಸಿ ಅಂಗಚೇಷ್ಟೆಗಳನ್ನು ನಿಲ್ಲಿಸಬಹುದು. ಇತ್ತೀಚೆಗೆ ಕಲಿಕೆಯ ಸೂತ್ರಗಳನ್ನು (ಪ್ರಿನ್ಸಿಪಲ್ಸ್ ಆಫ್ ಲರ್ನಿಂಗ್) ಆಧರಿಸಿದ ವರ್ತನೆ ಚಿಕಿತ್ಸೆಯ (ಬಿಹೇವಿಯರ್ ಥೆರಪಿ) ಕ್ರಮಗಳು ಉಗ್ಗನ್ನು ಹತೋಟಿಗೆ ತರುವುದರಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ವಾಕ್ ಮತ್ತು ಶ್ರವಣ ತಜ್ಞರನ್ನು ಕಾಣಬೇಕು. ಇದಕ್ಕೆ ಅಗತ್ಯ ಬಿದ್ದರೆ ಮನೋವೈದ್ಯರ ನೆರವೂ ಬೇಕಾದೀತು.

ಉಗ್ಗಿನ ಬಗೆಗಿನ ಹೆಚ್ಚಿನ ವಿವರಗಳೂ ಮಾತಿನ ಇತರ ದೋಷಗಳಿಗೂ **(ನೋಡಿ – ಮಾತಿನ ತೊಡಕುಗಳು)**. (ಎಂ.ಎನ್.ಎಚ್.;ಆರ್.ಎ.ಎನ್.)

**ಉಗ್ರರಾಷ್ಟ್ರಾಭಿಮಾನ:** ಅತಿಯೂ ವಿವೇಚನಾರಹಿತವೂ ಅನ್ಯಾಕ್ರಮಣ ಶೀಲವೂ ಆದ ಸ್ವದೇಶಪ್ರೇಮ (ಷೋವಿನಿಸಂ), ಫ್ರೆಂಚ್ ಯೋಧ ನಿಕೊಲಸ್ ಷೋವಿನ್ ಎಂಬವನ ಹೆಸರಿನಿಂದ ಷೋವಿನಿಸಂ ಎಂಬ ಆಂಗ್ಲಪದ ಬಂತು. ಫ್ರೆಂಚ್ ಮಹಾಕ್ರಾಂತಿಯ ಕದನಗಳಲ್ಲೂ ನೆಪೊಲಿಯಾನಿಕ್ ಯುದ್ಧಗಳಲ್ಲೂ ಈತ ಭಾಗವಹಿಸಿ ಪದೇ ಪದೇ ಗಾಯಗೊಂಡು ಕೊನೆಗೆ ನಿವೃತ್ತನಾದ. ಈತನಿಗೆ ನೆಪೋಲಿಯನ್ನನಲ್ಲಿ ತೀವ್ರ ಭಕ್ತಿ. 1815ರ ಅನಂತರ ಫ್ರಾನ್ಸಿನಲ್ಲಿ ಅನೇಕರಿಗೆ ಸೈನ್ಯ ಶಕ್ತಿಯಲ್ಲಿ ಅಗಾಧವಾದ ವಿಶ್ವಾಸ ಬೆಳೆದಿತ್ತು. ನೆಪೋಲಿಯನ್ನನ ನಾಯಕತ್ವದಲ್ಲಿ ಆ ದೇಶ ಸಾಧಿಸಿದ ವಿಜಯಗಳಿಂದ ಸೈನಿಕ ನಾಯಕರನೇಕರು ಉನ್ನತ್ತರಾಗಿದ್ದರು. ದೇಶೋನ್ನತಿಗಾಗಿ ಏನು ಬೇಕಾದರೂ ಮಾಡಬಹುದು: ತಪ್ಪಿನ ಪ್ರಶ್ನೆಯೇ ಉದ್ಭವಿಸುವುದಿಲ್ಲ–ಎಂಬ ಧೋರಣೆ ಇವರಲ್ಲಿ ಬೆಳೆಯಿತು. ಇಂಥ ಪಂಥಕ್ಕೆ ಆದರ್ಶ ಪುರುಷನಾದ ಷೋವಿನ್ನನ ಹೆಸರೇ ಈ ಪಂಥಕ್ಕೂ ಬಂತು. (ಎಸ್.ಎ.ಆರ್.)

ಮುಂದೆ 1830ರ ದಶಕದಲ್ಲಿ ಈ ಬಗೆಯ ಆಕ್ರಮಣಶೀಲ ಸೈನಿಕರಶೌರ್ಯ ಫ್ರಾನ್ಸಿನಲ್ಲಿ ಬಹಳ ಲೇವಡಿಗೆ ಗುರಿಯಾಯಿತು. ಇದರ ಬಗ್ಗೆ ಟೀಕೆ, ವಿಡಂಬನೆ, ವ್ಯಂಗ್ಯಚಿತ್ರಗಳು ಪುಂಖಾನುಪುಂಖವಾಗಿ ಬಂದುವು. ಈ ಸೈನಿಕರು ಇಡೀ ದೇಶವನ್ನೆ ಸೈನಿಕ ಪಾಳೆಯನ್ನಾಗಿ ಪರಿವರ್ತಿಸುತ್ತಿದ್ದಾರೆಂದು ನಾಗರಿಕ ನಾಯಕರನೇಕರು ಈ ಮನೋಭಾವವನ್ನು ಪ್ರತಿಭಟಿಸಿದರು.

ಮುಂದೆ ಇತರ ದೇಶಗಳಲ್ಲೂ ಈ ಪದ ಬಳಕೆಗೆ ಬಂತು, ಸ್ವಜನಾಂಗಾಭಿಮಾನ, ವಂಶಾಭಿಮಾನ - ಮುಂತಾದವು ಅತಿಯಾದರೆ ಅವನ್ನೂ ಷೋವಿನಿಸಂ ಎಂದು ಕರೆಯುವುದು ರೂಢಿಗೆ ಬಂದಿದೆ. ಜಿಂಗೋಯಿಸಂ ಎಂಬುದನ್ನು ಅನೇಕ ವೇಳೆ ಷೋವಿನಿಸಂಗೆ ಸಮಾನಪದವಾಗಿ ಬಳಸಲಾಗುತ್ತಿದೆ. *

**ಉಗ್ರಾಣ:** ಭವಿಷ್ಯದಲ್ಲಿ ಉಪಯೋಗಿಸುವ ಉದ್ದೇಶದಿಂದ ಸಂಗ್ರಹಿಸಿದ ಸಾಮಗ್ರಿ ಗಳನ್ನು ವ್ಯವಸ್ಥಿತವಾಗಿ ಶೇಖರಿಸಿಡುವ ಸ್ಥಳ, ಕೊಠಡಿ, ಕಟ್ಟಡ (ಸ್ಟೋರ್ಸ್, ಸ್ಟೋರ್–ರೂಂ, ಸ್ಟೋರ್–ಹೌಸ್).

ವ್ಯವಸಾಯೋತ್ಪನ್ನಗಳನ್ನೂ ಮಾರಾಟದ ಉದ್ದೇಶದಿಂದ ಸಂಗ್ರಹಿಸಿದ ಸರಕುಗಳನ್ನೂ ಕೆಡದಂತೆ ಭದ್ರವಾಗಿ ದಾಸ್ತಾನು ಮಾಡುವ ಕ್ರಮ ಇಂದಿನ ವಾಣಿಜ್ಯ ವ್ಯವಸ್ಥೆಯಲ್ಲಿ ಬಲು ಅಗತ್ಯ. ದಾಸ್ತಾನಾಗುವ ಸರಕುಗಳ ಉಗಮ, ಸ್ವರೂಪ, ಉಪಯೋಗ, ದಾಸ್ತಾನಿನ ಉದ್ದೇಶ ಮುಂತಾದವುಗಳ ದೃಷ್ಟಿಯಿಂದ ದಾಸ್ತಾನು ಕೇಂದ್ರಗಳನ್ನು ವಿಂಗಡಿಸುವುದು ಸಾಧ್ಯ. ರೈತರೂ ಜಮೀನಿನ ಒಡೆಯರೂ ಇತರರೂ ಮಾರಾಟಕ್ಕೂ ಸ್ವಂತ ಉಪಯೋಗಕ್ಕೂ ದವಸಧಾನ್ಯ ಸಂಗ್ರಹಿಸಿಡಲು (ಸಾಮಾನ್ಯವಾಗಿ ಖಾಸಗಿಯಾಗಿ) ಏರ್ಪಡಿಸಿಕೊಂಡ ವಿಶಿಷ್ಟ ರಚನೆಯೇ ಕಣಜ, ಪಣತ ಅಥವಾ ಹಗೇವು (ಗ್ರ್ಯಾನರಿ). ರೈತ, ವರ್ತಕ ಮುಂತಾದವರ ಉಪಯೋಗಕ್ಕಾಗಿ ಸರ್ಕಾರವಾಗಲಿ ಖಾಸಗಿಯವರಾಗಲಿ ಸಂಘ ಸಂಸ್ಥೆಗಳಾಗಲಿ ನಿರ್ಮಿಸಿ ನಿರ್ವಹಿಸುವ ಸಾರ್ವಜನಿಕ ಕೇಂದ್ರಗಳು ದಾಸ್ತಾನುಮಳಿಗೆಗಳೆನ್ನಿಸಿಕೊಳ್ಳುತ್ತವೆ. (ವೇರ್ ಹೌಸ್). ಗಿರಣಿ, ಕಾರ್ಖಾನೆ ಹಾಗೂ ವ್ಯಾಪಾರಿಗಳು ಮಾರಾಟದ ಸರಕನ್ನು ಅಧಿಕ ಪ್ರಮಾಣದಲ್ಲಿ ದಾಸ್ತಾನು ಮಾಡುವ ಆಲಯ ಅಥವಾ ಮಳಿಗೆಯೇ ಗಡಂಗು ಅಥವಾ ಗೋದಾಮು (ಗೋಡೌನ್, ವೇರ್ ಹೌಸ್). ನೇರ ಮಾರಾಟದ ಸಲುವಾಗಿ ವ್ಯಾಪಾರ ಸ್ಥಳದಲ್ಲೇ ಸರಕು ಶೇಖರಿಸಿಟ್ಟಿದ್ದರೆ ಅದು ಕೋಠಿ, ಮಂಡಿ ಅಥವಾ ಭಂಡಾರ (ಡಿಪೊ). ಕಾರ್ಖಾನೆಯವರು ಕೊಂಡ ಸರಕನ್ನು ಉಗ್ರಾಣಕ್ಕೆ ಸೇರಿಸುವ ಮುನ್ನ ಸ್ವೀಕರಿಸಿಡುವ ಸ್ಥಳವನ್ನೂ ಕೋಠಿಯೆಂದು ಕರೆಯುವ ವಾಡಿಕೆ ಇದೆ.

ಈ ಲೇಖನದಲ್ಲಿ ಉಗ್ರಾಣವನ್ನು ಕುರಿತು ಪ್ರಸ್ತಾವ ಮಾಡಲಾಗಿದೆ. ಕಣಜ ದಾಸ್ತಾನುಮಳಿಗೆ, ಗಡಂಗು ಮತ್ತು ಕೋಠಿಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ.

ಚಿಕ್ಕ ದೊಡ್ಡ ಸಂಸಾರಗಳಿಗೂ ಛತ್ರ ಹೋಟಲುಗಳಿಗೂ ವಿದ್ಯಾರ್ಥಿನಿಲಯ ಸೈನಿಕಠಾಣ್ಯಗಳಿಗೂ ಗಿರಣಿ ಕಾರ್ಖಾನೆಗಳಿಗೂ ಉಗ್ರಾಣ ಆವಶ್ಯಕ. ಕೊಂಡ ಸಾಮಗ್ರಿಗಳನ್ನು ಜೋಡಿಸಿಟ್ಟು ಅಗತ್ಯಕ್ಕೆ ತಕ್ಕಂತೆ ಅವನ್ನು ಅನುಕ್ರಮವಾಗಿ ಬಳಕೆಗೆ ಕೊಡುವುದೂ ಬರುವ ಹೋಗುವ ಸಾಮಗ್ರಿಗಳ ಲೆಕ್ಕ ಇಡುವುದೂ ಇಂದು ಎಲ್ಲ ಉದ್ಯಮಗಳಲ್ಲೂ ಸಾಮಾನ್ಯ.

ಸರಕು ಉತ್ಪಾದನೆಯಲ್ಲಿ ಅಂದಂದಿನ ಅಗತ್ಯಕ್ಕೆ ತಕ್ಕಂತೆ ಅಂದಂದೇ ನೇರವಾಗಿ ಕಚ್ಚಾ ಸಾಮಗ್ರಿ ತರಿಸಿ ಬಳಸುವುದು ಆದರ್ಶ ವ್ಯವಸ್ಥೆ. ಆದರೆ ವಾಸ್ತವವಾಗಿ ಹೀಗೆ ಮಾಡುವುದು ಸಾಧ್ಯವಿಲ್ಲ. ಉತ್ಪಾದನೆಯ ಕಾರ್ಯ ಸರಳವೂ ಅವಿಚ್ಛಿನ್ನವೂ ಅಲ್ಪಗಾತ್ರದ್ದೂ ಆಗಿರುವ ಕೈಗಾರಿಕೆಗಳಲ್ಲಿ ಮಾತ್ರ ಇಂಥ ಆದರ್ಶಸ್ಥಿತಿ ಮುಟ್ಟಲು ಯತ್ನಿಸಬಹುದು. ಅನೇಕ ಕೈಗಾರಿಕೆಗಳಲ್ಲಿ ಪದಾರ್ಥೋತ್ಪಾದನೆಗಾಗಿ ದಿನದಿನವೂ ಬಳಸುವ ಸಾಮಗ್ರಿಗಳ ಪರಿಮಾಣ ಹೆಚ್ಚುಕಡಿಮೆ ಆಗುತ್ತಿರುತ್ತದೆ. ಉತ್ಪಾದಿತ ವಸ್ತುಗಳ ಮಾರಾಟವೂ ಏರಿಳಿಯುತ್ತಿರುತ್ತದೆ. ಆದ್ದರಿಂದ ಅಂದಂದಿಗೆ ಎಷ್ಟೆಷ್ಟು ಬೇಕೋ ಅಷ್ಟಷ್ಟೇ ಸಾಮಗ್ರಿ ತರಿಸಿ ನೇರವಾಗಿ ಉತ್ಪಾದನೆಯಲ್ಲಿ ತೊಡಗಿಸುವುದು ಸಾಧ್ಯವಿಲ್ಲ. ಇಂದಿನ ಕೈಗಾರಿಕೆಗಳಿಗೆ ಅಗತ್ಯವಾದ ಸಾಮಗ್ರಿಗಳ ಸರಬರಾಯಿ ಕೂಡ ಎಲ್ಲ ಕಾಲದಲ್ಲೂ ಏಕಪ್ರಕಾರವಾಗಿರುವುದಿಲ್ಲ. ಇವುಗಳ ಬೆಲೆ ಏರಿಳಿಯುತ್ತಿರುತ್ತವೆ. ವ್ಯವಸಾಯೋತ್ಪನ್ನಗಳ ಧಾರಣೆವಾಸಿಯೂ ಸರಬರಾಯಿಯೂ ಋತುಮಾನಕ್ಕೆ ಅಧೀನ. ಇವನ್ನು ದೂರ ದೂರದ ಸ್ಥಳಗಳಿಂದ ತರಿಸಬೇಕಾಗಬಹುದು. ಪೇಟೆಯಲ್ಲಿ ಸರಬರಾಯಿ ಅಧಿಕವಾಗಿದ್ದು ಧಾರಣೆವಾಸಿ

ಅನುಕೂಲಕರವಾಗಿರುವಾಗ ಇವನ್ನು ಒಟ್ಟೊಟ್ಟಿಗೆ ಕೊಳ್ಳುವುದು ಯುಕ್ತ. ಹೆಚ್ಚು ಮೊತ್ತದಲ್ಲಿ ಸಾಮಗ್ರಿ ಕೊಂಡಷ್ಟು ಬೆಲೆಯಲ್ಲೂ ಸಾಗಿಗೆ ವೆಚ್ಚದಲ್ಲೂ ಉಳಿತಾಯ ಸಾಧ್ಯ. ಎರಡನೆಯದಾಗಿ, ಈ ವ್ಯವಸ್ಥೆಯಿಂದ ಉತ್ಪಾದನಾಲಯಕ್ಕೆ ಸಾಮಗ್ರಿಯ ಆವಶ್ಯಕತೆಯಿದ್ದಾಗ ಅದು ಸಾಕಷ್ಟು ಪ್ರಮಾಣದಲ್ಲಿ ಒದಗುವುದೆಂಬ ಭರವಸೆ ಇರುತ್ತದೆ. ಮೂರನೆಯದಾಗಿ, ಉದ್ಯಮದ ಆರ್ಥಿಕಸ್ಥಿತಿಯ ಮೇಲೆ ಕಣ್ಣಿಟ್ಟು ಉತ್ಪಾದನೆಯನ್ನು ನಿಯಂತ್ರಣಗೊಳಿಸುವುದಕ್ಕೂ ಒಳ್ಳೆಯ ಉಗ್ರಾಣ ವ್ಯವಸ್ಥೆ ಸಹಾಯಕ. ಹೀಗೆ ಯುಕ್ತ ಪರಿಮಾಣಗಳಲ್ಲಿ ಸಕಾಲದಲ್ಲಿ ಸಾಮಗ್ರಿಯ ಸರಬರಾಯಿ, ಉತ್ಪಾದನೆಯ ವೆಚ್ಚದ ಉಳಿತಾಯ ಹತೋಟಿ ಇವು ಉಗ್ರಾಣ ವ್ಯವಸ್ಥೆಯ ಉದ್ದೇಶ,

ಒಂದು ಉತ್ಪಾದನಾಲಯದಲ್ಲಿ ದಾಸ್ತಾನು ಮಾಡಲಾಗುವ ಸಾಮಗ್ರಿ ಸ್ಥೂಲವಾಗಿ ನಾಲ್ಕು ವಿಧ: 1. ಉತ್ಪಾದನೆಯಲ್ಲಿ ಪ್ರತ್ಯೇಕವಾಗಿ ಬಳಕೆಯಾಗಿ, ಸಿದ್ಧವಸ್ತುವಾಗಿ ಮಾರ್ಪಡುವ ಕಚ್ಚಾಸಾಮಗ್ರಿ, ಪ್ರತ್ಯಕ್ಷ ಸಾಮಗ್ರಿ (ಉದಾ: ಗಿರಣಿಯಲ್ಲಿ ಬಳಸಲಾಗುವ ಹತ್ತಿ, ದಾರ); 2.ಉತ್ಪಾದನೆಗೆ ಅವಶ್ಯವಾದರೂ ಸಿದ್ಧವಸ್ತುವಿನಲ್ಲಿ ಸೇರದೆ ನಾಶಹೊಂದುವ (ಜೀರ್ಣವಾಗಿ ಹೋಗುವ) ಸರಬರಾಯಿ, ಪರೋಕ್ಷ ಸಾಮಗ್ರಿ (ಉದಾ: ಇಂಧನ, ಚರಬಿ, ಹತ್ತಿ): 3.ಸಲಕರಣೆ (ಟೂಲ್ಸ್), ಸರಂಜಾಮು (ಎಕ್ವಿಪ್‍ಮೆಂಟ್): 4. ಮಾರಾಟಕ್ಕೆ ಸಿದ್ಧವಾದ ಪದಾರ್ಥ (ಉತ್ಪಾದಿತ ವಸ್ತು). ಪ್ರತ್ಯಕ್ಷ ಪರೋಕ್ಷ ಸಾಮಗ್ರಿಗಳನ್ನು, ಸಲಕರಣೆ ಸರಂಜಾಮುಗಳನ್ನು ದಾಸ್ತಾನು ಮಾಡುವ ಸ್ಥಳ ಉಗ್ರಾಣ. ಉತ್ಪಾದಿತ ವಸ್ತುವನ್ನು (ಸರಕು ಅಥವಾ ಮಾಲು) ಇಡುವ ಸ್ಥಳ ಗಡಂಗು. ಇದನ್ನು ದಾಸ್ತಾನು ಕೊಠಡಿ ಅಥವಾ ದಾಸ್ತಾನು ಮಳಿಗೆ ಎನ್ನಲೂಬಹುದು. ಒಳಕ್ಕೆ ಬರುವ ಸಾಮಗ್ರಿ ಸರಬರಾಯಿಗಳಿಗೂ ಕಾರ್ಖಾನೆಗೂ ನಡುವಣ ಆಶ್ರಯವೇ ಉಗ್ರಾಣ; ಕಾರ್ಖಾನೆಗೂ ಮಾರಾಟ ಕೋಠಿಗೂ ನಡುವಿನದು ದಾಸ್ತಾನು ಕೊಠಡಿ.

ಉಗ್ರಾಣವನ್ನು ಹೇಗೆ ನಿರ್ವಹಿಸಬೇಕು, ಸಂಘಟಿಸಬೇಕು ಎಂಬ ವಿಚಾರವಾಗಿ ಎಲ್ಲ ಕಾರ್ಖಾನೆಗಳಿಗೂ ಅನ್ವಯವಾಗುವ ಸೂತ್ರ ರಚಿಸುವುದು ಸಾಧ್ಯವಿಲ್ಲ. ಪದಾರ್ಥ ಕೆಡದಂತೆ ರಕ್ಷಿಸುವುದಂತೂ ಅವಶ್ಯ. ಇದಕ್ಕಾಗಿ ಭದ್ರ ಕಟ್ಟಡ ಬೇಕಾಗುತ್ತದೆ. ಆದರೆ ಎಂಜಿನಿಯರಿಂಗ್ ಉದ್ಯಮ ಸಾಮಗ್ರಿಗಳಾದ ಬೀಡು ಕಬ್ಬಿಣ, ಉಕ್ಕಿನ ಕಂಬಿ ಮುಂತಾದವನ್ನು ಹೊರಾಂಗಣದಲ್ಲಿ ದಾಸ್ತಾನು ಮಾಡಬಹುದು. ಪ್ರತ್ಯಕ್ಷ ಸಾಮಗ್ರಿಗಳಿಗೆ ಬೇರೆ ಬೇರೆ ಕೊಠಡಿಗಳಿರುವುದು ಸೂಕ್ತ. ಏಕೆಂದರೆ ಪರೋಕ್ಷ ಸಾಮಗ್ರಿಗಳಾದ ತೈಲ, ಚರಬಿ, (ಗ್ರೀಸ್), ಬಣ್ಣ, ಹತ್ತಿ ರದ್ದಿ, (ಕಾಟನ್ ವೇಸ್ಟ್) ಮುಂತಾದವುಗಳಿಂದ ಉಗ್ರಾಣವೆಲ್ಲ ಕಶ್ಮಲವಾಗುವುದಲ್ಲದೆ ಇತರ ಸಾಮಗ್ರಿಗಳೂ ಕೆಡುತ್ತವೆ. ಉತ್ಪಾದನಾಲಯಕ್ಕೆ ಉಗ್ರಾಣ ಆದಷ್ಟು ಹತ್ತಿರದಲ್ಲಿ, ಕೇಂದ್ರ ಸ್ಥಳದಲ್ಲಿದ್ದರೆ ಶ್ರಮ, ಹಣ, ಸಮಯಗಳ ಉಳಿತಾಯ ಸಾಧ್ಯ. ಇದು ಉತ್ಪಾದನೆಯ ಸರಪಳಿ ಸುಸೂತ್ರವಾಗಿ ಮುಂದುವರಿಯಲು ಸಹಾಯಕ.

ಉಗ್ರಾಣ ವ್ಯವಸ್ಥೆಯ ಕಾರ್ಯಭಾರಗಳು ಇತರ ಇಲಾಖೆಗಳಷ್ಟೇ ಗುರುತರವಾದವು. ಇವನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು: 1. ಸಾಮಗ್ರಿಗಳ ಸ್ವೀಕಾರ, ದಾಸ್ತಾನು, ರಕ್ಷಣೆ; 2. ಉತ್ಪಾದನ ಇಲಾಖೆಯ ಬೇಡಿಕೆಗೆ ಅನುಸಾರವಾಗಿ ನಿಖರ ಪರಿಮಾಣದಲ್ಲಿ ಸಾಮಗ್ರಿ ನೀಡಿಕೆ; 3. ಉಗ್ರಾಣದಲ್ಲಿರುವ ಸಾಮಗ್ರಿಯೆಷ್ಟು, ಉಗ್ರಾಣಕ್ಕೆ ಬರಲಿರುವುದೆಷ್ಟು, ಅಲ್ಲಿಂದ ಕೊಟ್ಟಿರುವುದೆಷ್ಟು, ಮೀಸಲಾಗಿಟ್ಟಿರುವುದೆಷ್ಟು ಎಂಬುದರ ತಪಶೀಲಾದ ದಾಖಲೆ; 4. ಪ್ರತಿ ಸಾಮಗ್ರಿಯ ಕನಿಷ್ಠಾವಶ್ಯಕತೆಯೆಷ್ಟೆಂಬುದನ್ನು ಖಚಿತಪಡಿಸಿಕೊಂಡು, ಅದು ಖರ್ಚಾದಂತೆ ಅದರ ಸರಬರಾಯಿಗಾಗಿ ಕ್ರಯಾಧಿಕಾರಿಗಳಿಗೆ ಸಕಾಲಿಕ ಕೋರಿಕೆಯ ಸಲ್ಲಿಕೆ.

ಆಧುನಿಕ ಉತ್ಪಾದನಾಲಯಗಳಲ್ಲಿ ಉತ್ತಮ ಉಗ್ರಾಣ ವ್ಯವಸ್ಥೆಗೂ ದಾಖಲೆಗೂ ಹೆಚ್ಚಿನ ಗಮನ ನೀಡಲಾಗುತ್ತಿದೆ. ಉತ್ಪಾದನೆಯ ಒಟ್ಟು ವೆಚ್ಚವನ್ನು ನಿಖರವಾಗಿ ಕಂಡು ಹಿಡಿಯುವ ಯತ್ನವಾದ ಪರಿವ್ಯಯ ಲೆಕ್ಕ ವ್ಯವಸ್ಥೆಯ ಯಶಸ್ಸಿಗೆ ಉತ್ತಮ ಉಗ್ರಾಣ ವ್ಯವಸ್ಥೆಯೂ ಮುಖ್ಯ. *

**ಉಚ್ಚಂಗಿ:** ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ತುಂಗಭದ್ರಾ ನದಿಯ ದಕ್ಷಿಣಕ್ಕಿರುವ ಒಂದು ಗ್ರಾಮ. ಇಲ್ಲಿ ಇತಿಹಾಸ ಪ್ರಸಿದ್ಧವಾದೊಂದು ದುರ್ಗವಿದೆ. ಈ ದುರ್ಗದ ಮೇಲೆ ಉತ್ಸವಾಂಬ (ಉಚ್ಚಂಗಮ್ಮ) ದೇವತೆಯಿರುವುದರಿಂದ ಈ ಸ್ಥಳಕ್ಕೆ ಉಚ್ಚಂಗಿಯೆಂಬ ಹೆಸರು ಬಂತೆಂದು ಹೇಳಲಾಗಿದೆ. ಅಷ್ಟೇನೂ ಎತ್ತರವಲ್ಲದ ಈ ದುರ್ಗ ಉತ್ತರ–ದಕ್ಷಿಣವಾಗಿ ಸು. 3.22 ಕಿಮೀ, ನೈಋತ್ಯಕ್ಕೆ ಸು. 3.22 ಕಿಮೀ ದೂರದಲ್ಲಿ ಕರಡಿ ಬೆಟ್ಟವೂ ದಕ್ಷಿಣಕ್ಕೆ ಸು. 8. ಕಿಮೀ ದೂರದಲ್ಲಿ ಪ್ರಸಿದ್ಧವಾದ ಅಣಜಿ ಕೆರೆಯೂ ಇವೆ. ಗುಡ್ಡಕ್ಕೆ ಹೊಂದಿಕೊಂಡಂತೆ ಪೂರ್ವ ದಿಕ್ಕಿನಲ್ಲಿರುವುದೇ ಉಚ್ಚಂಗಿ ಗ್ರಾಮ.

11, 12ನೆಯ ಶತಮಾನಗಳಲ್ಲಿ ಇದು ಪಾಂಡ್ಯ ಮನೆತನದರಸರ ರಾಜಧಾನಿಯಾಗಿತ್ತು. ಪಾಂಡ್ಯರ ರಾಜ್ಯವನ್ನು ನೊಳಂಬವಾಡಿ 32,000 ಎಂದು ಕರೆಯಲಾಗಿತ್ತು. ಉಚ್ಚಂಗಿ ಪಾಂಡ್ಯರು ಕಲ್ಯಾಣಿ ಚಾಳುಕ್ಯರ ಅಧೀನರಾಗಿ ವೈಭವದಿಂದ ರಾಜ್ಯವಾಳಿದರು. ಚೋಳವಂಶದ ಪ್ರಸಿದ್ಧ ರಾಜನಾದ ಮೊದಲನೆಯ ರಾಜೇಂದ್ರ ಚಾಳುಕ್ಯ ದೊರೆಯಾದ ಎರಡನೆಯ ಜಯಸಿಂಹ ಜಗದೇಕಮಲ್ಲನೊಡನೆ (1015–1042) ಮುಸಂಗಿ ಅಥವಾ ಮುಯಂಗಿ ಎಂಬಲ್ಲಿ ಯುದ್ಧಮಾಡಿ ಅವನನ್ನು ಸೋಲಿಸಿದನೆಂದು ಚೋಳರ ಗ್ರಂಥಗಳೂ ಆತ ಸೋಲಲಿಲ್ಲವೆಂದು ಚಾಳುಕ್ಯರ ಶಿಲಾಲೇಖನಗಳೂ ತಿಳಿಸುತ್ತವೆ. ಈ ಮುಸಂಗಿಯೇ ಉಚ್ಚಂಗಿಯೆಂದು ಇತಿಹಾಸಕಾರರ ಅಭಿಪ್ರಾಯ. ಚಾಳುಕ್ಯವಂಶದ ಒಂದನೆಯ ಸೋಮೇಶ್ವರ ಆಹವಮಲ್ಲನ ಮಗನಾದ ಇಮ್ಮಡಿ ಸೋಮೇಶ್ವರನ ಬಲ ಮುರಿದು ರಾಜ್ಯ ಕಸಿದುಕೊಳ್ಳುವ ಉದ್ದೇಶದಿಂದ ಅವನ ತಮ್ಮನಾದ ಆರನೆಯ ವಿಕ್ರಮಾದಿತ್ಯ ತ್ರಿಭುವನ ಮಲ್ಲ (1076–1127) ಆ ಸುತ್ತಿನ ಅನೇಕ ಸಾಮಂತರಾಜರನ್ನು ಪುಸಲಾಯಿಸಿ ಎಬ್ಬಿಸಿದನೆಂದೂ ಇಂಥವರ ಪೈಕಿ ಉಚ್ಚಂಗಿಯ ಪಾಂಡ್ಯರಾಜ ಇರುಕ್ಕವೇಲನೂ ಒಬ್ಬನೆಂದೂ ಹೇಳಲಾಗಿದೆ. ಉಚ್ಚಂಗಿ ಪಾಂಡ್ಯರಾಜರಲ್ಲಿ, ಇರುಕ್ಕವೇಲ ಪಾಂಡ್ಯ, ವೀರಪಾಂಡ್ಯ, ಮತ್ತು ವಿಜಯಪಾಂಡ್ಯ (ಕಾಮದೇವ) ಪ್ರಸಿದ್ಧರು. ಇವರು ಉಚ್ಚಂಗಿಯ ಕೋಟೆಯನ್ನೂ ಅನೇಕ ಶೈವ, ಜೈನ ದೇವಾಲಯಗಳನ್ನೂ ಕಟ್ಟಿಸಿದರು. ಉಚ್ಚಂಗಿ ಆ ಕಾಲದಲ್ಲಿ ಅಭೇದ್ಯ ದುರ್ಗವಾಗಿತ್ತೆಂಬುದು ಹೊಯ್ಸಳರ ಶಾಸನಗ ಳಿಂದ ತಿಳಿದುಬರುವ ವಿಷಯ. 1173ರಲ್ಲೂ 1187ರಲ್ಲೂ ಹೊಯ್ಸಳರಾಜ ಎರಡನೆಯ ವೀರಬಲ್ಲಾಳ ಇದನ್ನು ಆಕ್ರಮಿಸಿದ್ದ. ಎರಡನೆಯ ಮುತ್ತಿಗೆಯಲ್ಲಿ ಉಚ್ಚಂಗಿಯ ಪಾಂಡ್ಯರಾಜ ಸತ್ತು ಇದು ಹೊಯ್ಸಳರ ವಶವಾಯಿತು. ವಿಜಯನಗರದ ಸಾಮ್ರಾಜ್ಯದ ಪತನಾನಂತರ ಇಲ್ಲಿ ಅನೇಕ ಹಿಂದೂ ಮತ್ತು ಮುಸ್ಲಿಂ ಪಾಳೆಯಗಾರರು ಆಡಳಿತ ನಡೆಸಿದರೆಂಬುದಕ್ಕೆ ಆಧಾರಗಳಿವೆ.

ದುರ್ಗದಲ್ಲಿ ಕಲ್ಲಿನಿಂದ ಕಟ್ಟಿದ ಕೋಟೆಕೊತ್ತಲಗಳ, ದೇವಾಲಯಗಳ ಮತ್ತು ಪಾಳುಕೊಳಗಳ ಅನೇಕ ಭಗ್ನಾವಶೇಷಗಳನ್ನು ಕಾಣಬಹುದು. ದುರ್ಗದ ಪ್ರವೇಶದ್ವಾರದಲ್ಲಿ ಪಾದದೇವರ ಗುಡಿಯಿದೆ. ಈ ದೇವಾಲಯದ ಎದುರಿನಲ್ಲಿ 15 ಮೀ ಎತ್ತರದ ದೀಪಸ್ತಂಭ. ಶಿಥಿಲ ಕೋಟೆಗೆ ಕೋಟೆಬಾಗಿಲು, ಮಳೆಬಾಗಿಲು, ಅಗಸೆಬಾಗಿಲು, ಹರಿಹರೇಶ್ವರ ಬಾಗಿಲು, ಅಣಜಿ ಬಾಗಿಲು ಎಂಬ ನಾಲ್ಕು ಹೆಬ್ಬಾಗಿಲುಗಳಿದ್ದುವು. ದುರ್ಗದ ಪಾದದಿಂದ ತುದಿಯ ವರೆಗೂ ಪಾಂಡ್ಯರ ಕಾಲದಲ್ಲಿ ನಿರ್ಮಿತವಾದ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಹನುಮಂತ, ಬನಶಂಕರಿ, ವೀರಭದ್ರ, ತವಕೇಶ್ವರ, ಹೊನ್ನೆತ್ತಮ್ಮ ಇವರ ಗುಡಿಗಳು ಮುಖ್ಯ. ಪಾಳು ಬಿದ್ದ ಅನೇಕ ಜೈನ ಬಸದಿಗಳೂ ಉಂಟು. ಹಲವಾರು ಚಿಕ್ಕ ಕೊಳಗಳನ್ನೂ ಹೊಂಡಗಳನ್ನೂ ಕಾಣಬಹುದು. ಇವುಗಳಲ್ಲಿ ಹಿರೇ ಹೊಂಡ, ಚಿಗೆ ಹೊಂಡ, ಹೊನ್ನೆ ಝರಿ, ಆನೆ ಹೊಂಡ, ಸಗಣಿ ಹೊಂಡ, ಅರಿಶಿನ ಹೊಂಡಗಳು ಮುಖ್ಯ. ಅರಿಶಿನ ಹೊಂಡದ ನೀರನ್ನು ಇಂದಿಗೂ ಉಪಯೋಗಿಸುತ್ತಾರೆ. ಬೆಟ್ಟದ ಮೇಲಿರುವ ಬಾವಿಗಳಲ್ಲಿ ತೊಟ್ಟಿಲು ಬಾವಿ, ಬಟ್ಟಲು ಬಾವಿ ಪ್ರಸಿದ್ಧ. ದುರ್ಗದ ಮೇಲಿರುವ ಉತ್ಸವಾಂಬ ದೇವಾಲಯ ಕಲೆಯ ದೃಷ್ಟಿಯಿಂದ ಮುಖ್ಯವಲ್ಲದಿದ್ದರೂ ಪ್ರಾಚೀನವಾದದ್ದೆಂದು ಹೇಳಲಾಗಿದೆ. ಇಂದಿಗೂ ಈ ದೇವಾಲಯಕ್ಕೆ ಭಕ್ತರು ಹೆಚ್ಚು ಸಂಖ್ಯೆಯಲ್ಲಿ ಬರುತ್ತಾರೆ. (ಜಿ.ಆರ್.ಆರ್.;ಸಿ.ವಿ.ಆರ್.)

**ಉಚ್ಚಂಗಿ ಪಾಂಡ್ಯರು:** 11, 12ನೆಯ ಶತಮಾನಗಳಲ್ಲಿ ಕಲ್ಯಾಣಿ ಚಾಳುಕ್ಯರ ಅಧೀನದಲ್ಲಿ ಸಣ್ಣಪುಟ್ಟ ನಾಡುಗಳನ್ನಾಳುತ್ತಿದ್ದ ಹನ್ನೆರಡು ಸಾಮಂತ ಮನೆತನಗಳಲ್ಲಿ ಒಂದರ ವಂಶಜರು. ಈ ಕಾಲದಲ್ಲಿ ಕನ್ನಡ ನಾಡಿನಲ್ಲಿ ಆಳುತ್ತಿದ್ದ ಇತರ ರಾಜಮನೆತನಗಳವರಂತೆ ಉಚ್ಚಂಗಿ ಪಾಂಡ್ಯರಿಗೂ ತಾವು ಯದುವಂಶದವರೆಂಬ ನಂಬಿಕೆಯಿತ್ತು. ಇಂದಿನ ಚಿತ್ರದುರ್ಗ ಜಿಲ್ಲೆಯನ್ನೂ ಅದರ ಸುತ್ತಣ ಪ್ರದೇಶಗಳನ್ನೂ ಒಳಗೊಂಡ ರಾಜ್ಯಕ್ಕೆ ನೊಳಂಬವಾಡಿ 32,000 ಎಂಬುದು ಆಗಿದ್ದ ಹೆಸರು. ನೊಳಂಬವಾಡಿಯ ಮಹಾ ಸಾಮಂತರೆಂದು ಈ ಕನ್ನಡ ಅರಸರ ರಾಜಧಾನಿ ಪ್ರಾರಂಭದಲ್ಲಿ ಚಿತ್ರದುರ್ಗ ಜಿಲ್ಲೆಯ ಬೆಳ್ತೂರು ಗ್ರಾಮ ; ಮುಂದೆ ಬಳ್ಳಾರಿಯ ಉಚ್ಚಂಗಿ. ಇಲ್ಲಿ ಅವರು ಬಲವಾದ ಕೋಟೆ ಕಟ್ಟಿಕೊಂಡರಲ್ಲದೆ ಅನೇಕ ದೇವಾಲಯಗಳನ್ನೂ ನಿರ್ಮಿಸಿದರು.

ಆ ಕಾಲದ ಅನೇಕ ಶಾಸನಗಳಲ್ಲಿ ಉಚ್ಚಂಗಿಯ ಪಾಂಡ್ಯರ ವಂಶಾವಳಿಯ ಕಥನವಿದೆ. ಮರಿಗಯ್ಯ (ಮಂಗರಸ) ಈ ಸಂತತಿಯ ಸ್ಥಾಪಕ. ಇವನ ಮಗ ಚೇದಿ ರಾಜ. ಅನಂತರ ಅನುಕ್ರಮವಾಗಿ ಆಳಿದವರು ಪಲಮಂಡ, ಇರುಕ್ಕವೇಲ, ಇರುಕ್ಕವೇಲನ ಮಗ ರಾಜಪಾಂಡ್ಯ; ಮಗಳು ಮಹಾದೇವಿ. ಇವಳನ್ನು ಹೊಯ್ಸಳ ರಾಜಕುಮಾರ ಎರಯಂಗನಿಗೆ ಕೊಟ್ಟು ವಿವಾಹ ಬೆಳೆಸಿದ್ದರಿಂದ ಈ ಎರಡು ಮನೆತನಗಳ ಸ್ನೇಹವೇರ್ಪಟ್ಟಿತು. ಕಲ್ಯಾಣಿ ಚಾಳುಕ್ಯ ಸಾರ್ವಭೌಮ 6ನೆಯ ವಿಕ್ರಮಾದಿತ್ಯನ (1075–1127) ರಾಜ್ಯ ವಿಸ್ತರಣೆಯ ಕಾರ್ಯದಲ್ಲಿ ಇರುಕ್ಕವೇಲ ಅವನಿಗೆ ಬಹಳ ಸಹಕಾರ ನೀಡಿದ. ಈತನಿಗೆ ತ್ರಿಭುವನಮಲ್ಲನೆಂಬ ಬಿರುದಿತ್ತು. ವಿಕ್ರಮಾದಿತ್ಯನ ಬಲಭುಜವೆಂದು ಶಾಸನಗಳಲ್ಲಿ ಈತ ವರ್ಣಿತನಾಗಿದ್ದಾನೆ. ಇರುಕ್ಕವೇಲ ಪಾಂಡ್ಯ 1124ರವರೆಗೂ ಆಳಿದ. ಅನಂತರ ರಾಜಪಾಂಡ್ಯ ಉಚ್ಚಂಗಿಯ ಸಿಂಹಾಸನಕ್ಕೆ ಬಂದ. ರಾಜಪಾಂಡ್ಯ ದಕ್ಷ, ಸಾಹಸಿ. ಈತನ ರಾಣಿ ಸೋಮಲದೇವಿ. ಕಲೆ ಸಾಹಿತ್ಯಗಳಿಗೆ ಇವಳಿಂದ ಸಾಕಷ್ಟು ಪ್ರೋತ್ಸಾಹ ದೊರೆಯಿತು. ಇವರಿಗೆ ಪಂಡಿತಪಾಂಡ್ಯ, ವೀರಪಾಂಡ್ಯ, ವಿಜಯಪಾಂಡ್ಯ ಮತ್ತು ಪಲಂತ (ಒಡೆಯ) ಎಂದು ನಾಲ್ವರು ಗಂಡು ಮಕ್ಕಳು. ಪಂಡಿತಪಾಂಡ್ಯ ಹೆಸರಿಗೆ ತಕ್ಕಂತೆ ವಿಶೇಷ ಜ್ಞಾನಿ. 1140ರಲ್ಲಿ ರಾಜಪಾಂಡ್ಯ ಸತ್ತಾಗ ಸಿಂಹಾಸನವನ್ನೇರಲು ಪಂಡಿತಪಾಂಡ್ಯ ಒಪ್ಪಲಿಲ್ಲವಾದ್ದರಿಂದ ವೀರಪಾಂಡ್ಯ ರಾಜನಾದ.

ಆ ವೇಳೆಗೆ ಕಲ್ಯಾಣಿಯ ಚಾಳುಕ್ಯರ ಸಾಮ್ರಾಜ್ಯ ವಿಪ್ಲವಕ್ಕೆ ಬಲಿಯಾಯಿತು. ಕಳಚೂರಿ ಬಿಜ್ಜಳ ಆ ಸಿಂಹಾಸನವನ್ನಾಕ್ರಮಿಸಿಕೊಂಡು ಚಾಳುಕ್ಯರ ಸಾಮಂತ ರಾಜರನ್ನೆಲ್ಲ ಸೋಲಿಸಿದ. ಆದರೆ ವೀರಪಾಂಡ್ಯ ಮಾತ್ರ ತಾನು ಬದುಕಿರುವವರೆಗೂ ಬಿಜ್ಜಳನ ಸಾರ್ವಭೌಮತ್ವವ ನ್ನೊಪ್ಪಲಿಲ್ಲ. ಈತನ ಮರಣಾನಂತರ ಇವನ ತಮ್ಮ ವಿಜಯಪಾಂಡ್ಯ(ಕಾಮದೇವ) ಉಚ್ಚಂಗಿಯ ರಾಜನಾದ (1160). 1162ರಲ್ಲಿ ವಿಜಯಪಾಂಡ್ಯನನ್ನು ಬಿಜ್ಜಳ ಸೋಲಿಸಿದ. ಆದರೂ ವಿಜಯಪಾಂಡ್ಯ ತನ್ನ ಪೂರ್ವಿಕರಂತೆ ಚಾಳುಕ್ಯರಲ್ಲಿ ನಿಷ್ಠೆ ಹೊಂದಿದ್ದು ಆ

ಮನೆತನವನ್ನು ಪುನಃ ಸ್ಥಾಪಿಸಲು ಪ್ರಯತ್ನಿಸಿದ. 1173ರಲ್ಲಿ 2ನೆಯ ವೀರಬಲ್ಲಾಳನ ಕಾಲದಲ್ಲಿ ಹೊಯ್ಸಳರು ಪ್ರಬಲರಾದರು. ಈತ 1177ರಲ್ಲಿ ಪಾಂಡ್ಯರ ಮೇಲೆ ದಂಡೆತ್ತಿ ಹೋಗಿ ವಿಜಯಪಾಂಡ್ಯನನ್ನು ಸೋಲಿಸಿ ಉಚ್ಚಂಗಿ ದುರ್ಗವನ್ನಾಕ್ರಮಿಸಿಕೊಂಡ. ಶರಣಾಗತನಾದ ವಿಜಯಪಾಂಡ್ಯನ ರಾಜ್ಯವನ್ನು ಹಿಂದಕ್ಕೆ ಕೊಟ್ಟು ಅವನಿಂದ ಕಪ್ಪಕಾಣಿಕೆ ಪಡೆದು ತನ್ನ ರಾಜಧಾನಿಯಾದ ದೋರಸಮುದ್ರಕ್ಕೆ ಹಿಂತಿರುಗಿದ.

ಆದರೆ ವಿಜಯಪಾಂಡ್ಯ ಮತ್ತೆ ಕುದುರಿಕೊಂಡು ಹೊಯ್ಸಳರ ಅಧಿಕಾರದಿಂದ ಹೊರಬಂದು, ಆ ವೇಳೆಗೆ ಚಾಳುಕ್ಯರ ಅಧಿಕಾರವನ್ನು ಪುನಃ ಸ್ಥಾಪಿಸುವ ಯತ್ನದಲ್ಲಿ ಯಶಸ್ಸು ಹೊಂದುತ್ತಿದ್ದ ನಾಲ್ಮಡಿ ವೀರಸೋಮೇಶ್ವರನ ಪಕ್ಷವನ್ನು ವಹಿಸಿದಾಗ ವೀರಬಲ್ಲಾಳ ದೊರೆ ಕೋಪಗೊಂಡು 1187ರಲ್ಲಿ ಪುನಃ ಉಚ್ಚಂಗಿಯನ್ನು ಮುತ್ತಿ ಕಾಮದೇವ ಪಾಂಡ್ಯನನ್ನು ಸೋಲಿಸಿ ಕೊಂದ. ಉಚ್ಚಂಗಿ ಪಾಂಡ್ಯರ ಮನೆತನ ಇತಿಹಾಸದಿಂದ ಕಣ್ಮರೆಯಾಗಿ, ನೊಳಂಬವಾಡಿ ಹೊಯ್ಸಳ ಸಾಮ್ರಾಜ್ಯದ ಭಾಗವಾಯಿತು.

ಉಚ್ಚಂಗಿ ಪಾಂಡ್ಯರು ಎರಡು ನೂರು ವರ್ಷಕಾಲ ಜನಪ್ರಿಯರಾಗಿ ಆಡಳಿತ ನಡೆಸಿ ಕಲೆ ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡಿದ್ದರು. ಪಾಂಡ್ಯರ ಆಸ್ಥಾನದಲ್ಲಿದ್ದ ಮಧುಸೂದನದೇವ ಕವಿಯೂ ಜ್ಞಾನಿಯೂ ಆಗಿದ್ದ. ಜಗನ್ನಾಥವಿಜಯದ ಕರ್ತೃವಾದ ರುದ್ರಭಟ್ಟನೂ ಪಾಂಡ್ಯರ ಆಸ್ಥಾನದಲ್ಲಿದ್ದಂತೆ ತೋರುತ್ತದೆ. ವೀರಬಲ್ಲಾಳ ಉಚ್ಚಂಗಿಯನ್ನು ಮುತ್ತಿ ಕಾಮದೇವನನ್ನು ಸೋಲಿಸಿದ್ದನ್ನು ಈತ ತನ್ನ ಕಾವ್ಯದಲ್ಲಿ ಪ್ರಸ್ತಾಪಿಸಿದ್ದಾನೆ. ಪಾಂಡ್ಯರಾಜರು ತಮ್ಮ ನಾಡಿನಲ್ಲಿ ಅನೇಕ ದೇವಾಲಯಗಳನ್ನೂ ಕೆರೆಗಳನ್ನೂ ಕಟ್ಟಿಸಿದ್ದರು. ಆಗ ಪ್ರಬಲವಾಗಿದ್ದ ಪಾಶುಪತ ಶೈವಮತಕ್ಕೆ ಇವರಿಂದ ವಿಶೇಷ ಪ್ರೋತ್ಸಾಹ ದೊರಕಿತ್ತು. (ಜಿ.ಆರ್.ಆರ್.)

**ಉಚ್ಚ, ನೀಚ ಸ್ಥಾನಗಳು:** ಸಾಮಾನ್ಯವಾಗಿ ಖಗೋಳವಿಜ್ಞಾನದಲ್ಲಿ ಬಳಸುವ ಪದಗಳು. ಒಂದು ಆಕಾಶಕಾಯವನ್ನು ಕುರಿತು (ಇದರ ಹೆಸರು ಸ್ಥಿರ ಆಕಾಶಕಾಯ) ಇನ್ನೊಂದು ಆಕಾಶಕಾಯದ (ಇದರ ಹೆಸರು ಚರ ಆಕಾಶಕಾಯ) ಕಕ್ಷೆಯಲ್ಲಿ ಅತಿದೂರದ ಬಿಂದು ಚರ ಆಕಾಶಕಾಯದ ಉಚ್ಚಸ್ಥಾನ: ಅತಿ ಸಮೀಪದ ಬಿಂದು ಅದರ ನೀಚಸ್ಥಾನ. ಸೂರ್ಯನ ಸುತ್ತಲೂ ಪರಿಭ್ರಮಿಸುತ್ತಿರುವ ಭೂಮಿಯ ಕಕ್ಷೆ (ಆರ್ಬಿಟ್) ದೀರ್ಘ ವೃತ್ತಾಕಾರವಾಗಿದೆ.




ಇದರ ಮೇಲೆ ಭೂಮಿ ಜುಲೈ 2ರ ಸುಮಾರಿಗೆ ಉಚ್ಚ ಬಿಂದುವಿನಲ್ಲಿಯೂ (A) ಜನವರಿ 2ರ ಸುಮಾರಿಗೆ ನೀಚ ಬಿಂದುವಿನಲ್ಲಿಯೂ (P) ಇರುವುದು. ಈ ಬಿಂದುಗಳ ಹೆಸರು ಕ್ರಮವಾಗಿ ಸೂರ್ಯೋಚ್ಚಬಿಂದು (ಅಪ್ಹೇಲಿಯನ್ ಪಾಯಿಂಟ್) ಮತ್ತು ಸೂರ್ಯನೀಚಬಿಂದು (ಪೆರಿಹೀಲಿಯನ್ ಪಾಯಿಂಟ್). ಅವರವಿ ಪುರರವಿ ಪರ್ಯಾಯ ಪದಗಳು ಇದೇ ಪ್ರಕಾರ ಪ್ರತಿಯೊಂದು ಗ್ರಹದ ಕಕ್ಷೆಯ ಮೇಲೂ ಇಂಥ ಎರಡು ಬಿಂದುಗಳಿವೆ. ಭೂಮಿಯನ್ನು ಕುರಿತು ಚಂದ್ರ ರೇಖಿಸುವ ಕಕ್ಷೆಯ ಮೇಲೆ ಭೂಮಿಯಿಂದ ಅತಿದೂರದ ಬಿಂದುವಿನ ಹೆಸರು ಅಪಭೂಮಿ (ಅಪೋಜೀ), ಅತಿ ಸಮೀಪದ ಬಿಂದು ಪುರಭೂಮಿ (ಪೆರಿಜೀ). ಭೂಮಿಯನ್ನು ಕುರಿತು ಸೂರ್ಯನ ಸಾಪೇಕ್ಷ ಕಕ್ಷೆಯಲ್ಲಿಯೂ ಅಪಭೂಮಿ ಮತ್ತು ಪುರಭೂಮಿ ಬಿಂದುಗಳು ಇವೆ.

ಉಚ್ಚ, ನೀಚ (ಅಪ–ಪುರ) ಬಿಂದುಗಳನ್ನು ಜೋಡಿಸುವ ರೇಖೆ (AP) ದೀರ್ಘವೃತ್ತ ಕಕ್ಷೆಯ ಪ್ರಧಾನಾಕ್ಷ. ಇದರ ಮೇಲೆ ಕೇಂದ್ರಬಿಂದುವಿನಿಂದ (C) ಸ್ವಲ್ಪ ವಿಚಲಿತವಾಗಿ ಸ್ಥಿರ ಆಕಾಶಕಾಯ (S) ಇದೆ. ಈ ವಿಚಲನೆಯನ್ನು ಅಳೆಯುವ ಪ್ರಮಾಣದ ಹೆಸರು ಕಕ್ಷೆಯ ಉತ್ಕೇಂದ್ರತೆ (ಎಕ್ಸೆಂಟ್ರಿಸಿಟಿ). ಇದನ್ನು $e$ ಪ್ರತೀಕದಿಂದ ಸೂಚಿಸಿದರೆ

$$e = \frac{SA - SP}{SA + SP}$$

SA, SP ಬೆಲೆಗಳನ್ನು ಪ್ರಾಯೋಗಿಕವಾಗಿ ಅಳೆದು $e$ಯ ಬೆಲೆ ನಿರ್ಧರಿಸಬಹುದು. ಸೂರ್ಯನನ್ನು ಕುರಿತು ಭೂಕಕ್ಷೆಯ ಉತ್ಕೇಂದ್ರತೆ ಸು. 1/60. (ಸಿ.ಎನ್.ಎಸ್.)

**ಉಚ್ಚಲುಪುರುಕು:** ಮಕ್ಕಳು ಹಾಸಿಗೆಯಲ್ಲಿ ಮೂತ್ರವಿಸರ್ಜಿಸುವುದಕ್ಕೆ ಇನ್ನೊಂದು ಹೆಸರು (ಎನ್ಯೂರೆಸಿಸ್). ಮಗು ಎಲ್ಲೆಂದರಲ್ಲಿ ಮೂತ್ರ ಸುರಿಸದಂತೆ ತಡೆದಿಟ್ಟುಕೊಳ್ಳಬೇಕಾದ ವಯಸ್ಸು ದಾಟಿದಮೇಲೂ ತಡೆಯಲಾಗದೆ ತಾನೇತಾನಾಗಿ ಸುರಿದುಹೋಗುವ ತೊಂದರೆಗೆ ಹೀಗೆನ್ನುವುದುಂಟು. ಹೆತ್ತವರಿಗೆ ಇದು ಫಜೀತಿಯಾದರೆ ಅನುಭವಿಸುವ ಮಗುವಿಗೆ ಬಲು ಪೇಚಿನದು. ಸುಮಾರು ಮೂರು ವರ್ಷ ತುಂಬಿದ ಮೇಲಾದರೂ ಇದು ಹತೋಟಿಗೆ ಬರಬೇಕೆಂಬುದು ಕೆಲವರ ಅಭಿಪ್ರಾಯ. ಆದರೆ ಎಷ್ಟೋ ಮಕ್ಕಳು ನಾಲ್ಕಾರು ವರ್ಷಗಳ ತನಕ ಇದನ್ನು ತಡೆಯಲಾರವು. ಐದು ದಾಟಿದವರಲ್ಲಿ ಉಚ್ಚಲುಪುರುಕರ ಸಂಖ್ಯೆ ಸುಮಾರು ಶೇ.5. ನೆರೆವ ವಯಸ್ಸಿಗೆ ಬರಬರುತ್ತ ನಿಂತು ಹೋಗುವುದು. ಕೆಲವರಿಗೆ ಅಲ್ಲಿಗೂ ನಿಲ್ಲದು. ಹುಡುಗರಲ್ಲಿ ಹುಡುಗಿಯರ ಎರಡರಷ್ಟಿರುವುದು. ಒಂದು ಮಗು ಉಚ್ಚಲುಪುರುಕು ಆಗಲು ಕಾರಣಗಳನ್ನು ಅರಸಿ ಈ ಕೆಳಗಿನವನ್ನು ಸೂಚಿಸಲಾಗಿದೆ: ಅಂಗರಚನೆಯಲ್ಲಿ ದೋಷ ಅಥವಾ ರೋಗ: ಬೇಕೆಂದೇ ರೂಢಿಸಿಕೊಂಡ ದುರಭ್ಯಾಸ; ತರಬೇತು ಸಾಲದೆ ಅಥವಾ ಸರಿಯಾಗಿಲ್ಲದೆ ಎಳೆತನದ ಉಚ್ಚಲುಪುರುಕುತನ ಉಳಿದುಕೊಂಡಿರುವುದು; ನರಮಂಡಲ ಬೆಳೆಯದೇ ವಿಕಾಸ ಆಗದಿರುವುದು; ಮನೋವಿಕಾರ; ಎಚ್ಚರದ ಹೊತ್ತಿನಲ್ಲಿ ತಣಿಸಲಾಗದ ಆಸೆ ಭಾವನೆಗಳು ಮಗುವಿಗಿರುವುದು; ಅಂಗಸಂಗದ ಆಸೆ ಪೂರೈಸುವ ಒಂದು ದಾರಿ; ಆಳದಲ್ಲಿ ಹುದುಗಿರುವ ಕಳವಳ, ದಿಗಿಲುಗಳ ಹೊರತೋರಿಕೆ, ಹೆತ್ತವರ ಮೇಲೆ ಹೊರಗಡೆ ತೋರಿಸಲಾಗದ ಅವಿತಿಟ್ಟ ಹಗೆತನ, ಇತ್ಯಾದಿ. ಉಚ್ಚಲುಪುರುಕಿನ ಚಿಕಿತ್ಸೆಯಲ್ಲೂ ಒಮ್ಮತವಿಲ್ಲ. ನಿರ್ದಿಷ್ಟ ವಿಧಾನವಿಲ್ಲ. ಹಲವಾರು ವಿಧಾನಗಳು, ಮದ್ದುಗಳು, ಕೈಸರಿಪಡಿಕೆಗಳಿಂದ (ಮ್ಯಾನಿಪ್ಯುಲೇಷನ್ಸ್) ಗುಣ ಕಂಡರೂ ಯಾವುದಾದರೂ ಒಂದು ಚಿಕಿತ್ಸೆಯಿಂದ ಎಲ್ಲರಿಗೂ ಪೂರ್ತಿ ವಾಸಿ ಆದಂತಿಲ್ಲ. ರೋಗಿಯ ಮೈ, ಮನ, ಪರಿಸರಗಳನ್ನು ಚೆನ್ನಾಗಿ ತಿಳಿದು ಚಿಕಿತ್ಸೆ ಕೈಗೊಳ್ಳಬೇಕು. ಮನೋಭಾವಗಳಿಂದ ಉಚ್ಚಲುಪುರುಕಾಯಿತೋ ಇದರಿಂದ ಅದಾಯಿತೋ ಅಂತೂ ರೋಗಿಯನ್ನು ಬಲು ತಾಳ್ಮೆಯಿಂದ ಕಾಣಬೇಕು. ಸರಿಯಾದ ತರಬೇತನ್ನು ಕೊಡುವುದರಿಂದ ಈ ತೊಂದರೆಯನ್ನು ತಪ್ಪಿಸಬಹುದು. ಎರಡು ವರ್ಷಗಳಾದರೂ ತುಂಬುವ ತನಕ ತರಬೇತು ಕೊಡುವುದರಿಂದ ಏನೂ ಅನುಕೂಲವಾಗದು. ಉಚ್ಚಲುಪುರುಕನಾಗಿ ಇರುವುದರಿಂದ ಒಳಗಿನ ಹಿಂಜರಿಕೆ (ಇನ್‌ಹಿಬಿಷನ್ಸ್) ಹುಟ್ಟಿಕೊಳ್ಳಲು ಆಸ್ಪದವಾಗುತ್ತದೆ. ರಾತ್ರಿ ಹೊತ್ತು ಆಗಾಗ್ಗೆ ಮೂತ್ರ ಸುರಿಸಲೆಂದು ಏಳಿಸಿ ಹೊರಕ್ಕೆ ಕರೆದುಕೊಂಡು ಹೋಗಿ ಬರುವುದರಿಂದ ತನ್ನ ಬಟ್ಟೆಬರೆ ನೆನೆಸಿಕೊಳ್ಳದಿರುವುದು ಅನುಕೂಲವೇ ಆದರೂ ನಿದ್ರೆಯಲ್ಲೇ ಮೂತ್ರ ಸುರಿಸುವ ಅಭ್ಯಾಸ ಹತ್ತಿಬಿಡುವುದು. (ಎಂ.ಎಸ್.ಎನ್.)

**ಉಚ್ಚಾಟ:** ನೋಡಿ- ಅತಿಸಾರ

**ಉಚ್ಚಾಟನೆ:** ಸ್ವಾಮ್ಯದ ಹಕ್ಕು ಚಲಾಯಿಸಿ ಒಂದು ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವ ನ್ಯಾಯಬದ್ಧ ಕ್ರಮ (ಇಜೆಕ್ಟ್‌ಮೆಂಟ್). ಗೇಣಿದಾರನನ್ನು (ಲೆಸೀ) ಗೇಣಿದಾತನೋ (ಲೆಸರ್) ಆತನಿಂದ ಸ್ವತ್ತಿನ ಹಕ್ಕಿನ ವರ್ಗಾವಣೆ ಪಡೆದವನೋ ಗೇಣಿದಾರಿಯಿಂದ (ಲೀಸ್) ಬಿಡುಗಡೆ ಮಾಡಿ ಸ್ವತ್ತು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಉಚ್ಚಾಟನೆಯೆಂಬ ಶಬ್ದ ಬಳಸಲಾಗಿದೆ. ಭಾರತದಲ್ಲಿ ಸ್ವತ್ತು ವರ್ಗಾವಣೆ ಕಾಯಿದೆಯಲ್ಲೂ ಮನೆ ಬಾಡಿಗೆ ನಿಯಂತ್ರಣ ಕಾಯಿದೆಗಳಲ್ಲೂ ಭೂ ಹಿಡುವಳಿಯ ಕಾಯಿದೆಗಳಲ್ಲೂ ವಿವಿಧ ಉಚ್ಚನ್ಯಾಯಾಲಯಗಳ ನಾನಾ ತೀರ್ಪುಗಳಲ್ಲೂ ಉಚ್ಚಾಟನೆಗೆ ಸಂಬಂಧಿಸಿದ ನ್ಯಾಯ ಅಂತರ್ಗತವಾಗಿದೆ.

**ಸ್ವತ್ತು ವರ್ಗಾವಣೆ ಕಾಯಿದೆ:** ಸ್ವತ್ತು ವರ್ಗಾವಣೆ ಕಾಯಿದೆ 1882ರ ಜುಲೈ 1ರಿಂದ, ಅಲ್ಲಿಂದಾಚೆಗೆ ಆಗಿಂದಾಗ್ಗೆ ಮಾಡಲಾದ ಅನೇಕ ತಿದ್ದುಪಡಿಗಳನ್ನು ಕೂಡಿಸಿಕೊಂಡು ಜಾರಿಯಲ್ಲಿದೆ. ಈ ಕಾಯಿದೆ ಸಮಗ್ರವಲ್ಲ. ಇದರಲ್ಲಿ ಹೇಳದ ವಿಚಾರಗಳಲ್ಲಿ ನ್ಯಾಯಾಲಯಗಳಿಗೆ ಸಾಮ್ಯನ್ಯಾಯವನ್ನು ಪರಾಮರ್ಶಿಸಿ ತೀರ್ಪು ಕೊಡುವ ಹಕ್ಕಿದೆ. ಈ ಕಾಯಿದೆಯ ಐದನೆಯ ಅಧ್ಯಾಯದಲ್ಲಿ ಉಚ್ಚಾಟನೆಗೆ ಸಂಬಂಧಿಸಿದ ಅನೇಕ ಕಲಮುಗಳಿವೆ. ಸಂಬಂಧಪಟ್ಟ ರಾಜ್ಯಗಳು ತಮ್ಮ ಗೆಜೆಟ್ಟುಗಳಲ್ಲಿ ಕೃಷಿ ಭೂಮಿಗಳಿಗೆ ಅನ್ವಯಿಸುವಂತೆ ಪ್ರಕಟಣೆ ನೀಡಿದ ಹೊರತು ಈ ಅಧ್ಯಾಯ ಆ ಭೂಮಿಗಳಿಗೆ ಅನ್ವಯವಾಗತಕ್ಕದ್ದಲ್ಲ. ಆದರೆ ನ್ಯಾಯಾಲಯಗಳು ಈ ಅಧ್ಯಾಯದಲ್ಲಿರುವ ಕಲಮುಗಳ ತತ್ತ್ವಗಳನ್ನು ಕೃಷಿಸಂಬಂಧವಾದ ಒಕ್ಕಲುತನಕ್ಕೂ ಸಾಮ್ಯನ್ಯಾಯದ ದೃಷ್ಟಿಯಿಂದ ಅನ್ವಯಿಸಿವೆ.

ಕೃಷಿ ಅಥವಾ ಉತ್ಪಾದನೆಯ ಉದ್ದೇಶಕ್ಕಾಗಿ ಸ್ಥಿರ ಸ್ವತ್ತೊಂದನ್ನು ಗೇಣಿಗೆ ಕೊಟ್ಟಿದ್ದ ಪಕ್ಷದಲ್ಲಿ, ತದ್ವಿರುದ್ಧವಾದ ಯಾವ ಕರಾರಾಗಲಿ ಸ್ಥಳೀಯ ಕಾಯಿದೆಯಾಗಲಿ ರೂಢಿಯಾಗಲಿ (ಯೂಸೆಜ್) ಇಲ್ಲದಿದ್ದ ಸಂದರ್ಭದಲ್ಲಿ, ಅದು ವರ್ಷದಿಂದ ವರ್ಷಕ್ಕೆ ಮುಂದುವರಿಯುವ ಗೇಣಿದಾರಿಯೆನಿಸಿಕೊಳ್ಳುತ್ತದೆ. ಗೇಣಿದಾತನಾಗಲಿ ಗೇಣಿದಾರನಾಗಲಿ ಆ ಗೇಣಿದಾರಿ ವರ್ಷದೊಂದಿಗೆ ಮುಗಿಯುವಂತೆ ಆರು ತಿಂಗಳ ನೋಟೀಸು ಕೊಡುವುದರ ಮೂಲಕ ಕೊನೆಗಾಣಿಸಬಹುದು. ಬೇರೆ ಯಾವ ಉದ್ದೇಶದಿಂದ ಕೊಡಲಾದ ಸ್ಥಿರಸ್ವತ್ತಿನ ಗೇಣಿದಾರಿಯಾಗಿದ್ದರೂ ಅದು ತಿಂಗಳಿಂದ ತಿಂಗಳಿಗೆ ಮುಂದುವರಿಯುವ ಗೇಣಿದಾರಿಯೆಂದು ತಿಳಿಯಬೇಕು. ಅದನ್ನು ಕೊನೆಗಾಣಿಸಲು ಈ ಇಬ್ಬರಲ್ಲಿ ಯಾರಾದರೂ ಆ ಗೇಣಿದಾರಿಯ ತಿಂಗಳ ಅಂತ್ಯದೊಂದಿಗೆ ಮುಗಿಯುವಂತೆ ಹದಿನೈದು ದಿನಗಳ ನೋಟೀಸು ಕೊಡಬೇಕು (ಸ್ವತ್ತು ವರ್ಗಾವಣೆ ಕಾಯಿದೆ, ಕಲಂ 106). ಉಚ್ಚಾಟನೆಗೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳಿಗೂ ನೋಟೀಸೇ ಬುನಾದಿ. ಇದು ಸರಿಯಿಲ್ಲದಿದ್ದರೆ ಉಚ್ಚಾಟನೆಗೆ ಸಂಬಂಧಿಸಿದ ಯಾವುದೊಂದು ವ್ಯವಹಾರವೂ ನಿಲ್ಲಲಾರದು.

ಮೇಲೆ ಸೂಚಿಸಿದಂತೆ ಗೇಣಿದಾತನಾಗಲಿ ಗೇಣಿದಾರನಾಗಲಿ ಕೊಟ್ಟ ನೋಟೀಸಿನ ಅವಧಿ ತೀರಿದ ಅನಂತರವೇ ಅಲ್ಲದೆ ಇನ್ನೂ ಹಲವು ಸಂದರ್ಭಗಳಲ್ಲಿ ಗೇಣಿದಾರಿ ಅಂತ್ಯವಾಗಬಹುದು (ಕಲಂ 111): 1 ಗೇಣಿ ಕರಾರಿನಲ್ಲಿ ಕ್ಲುಪ್ತ ಮಾಡಲಾದ ಕಾಲ ಸಂದುಹೋದಾಗ (ಎಫ್ಲಕ್ಸ್ ಆಫ್ ಟೈಂ): 2. ಯಾವುದೋ ಒಂದು ಘಟನೆಯ ಸಂಭವಕ್ಕೆ ಅನುಗುಣವಾಗಿ ಈ ಕಾಲವನ್ನು ಕ್ಲುಪ್ತಗೊಳಿಸಬೇಕೆಂಬ ಷರತ್ತಿದ್ದರೆ ಆ ಘಟನೆ ಸಂಭವಿಸಿದಾಗ: 3. ಯಾವುದೋ ಒಂದು ಘಟನೆಯ ಸಂಭವದಿಂದ ಈ ಸ್ವತ್ತಿನಲ್ಲಿ ಗೇಣಿದಾರನ ಹಿತಾಸಕ್ತಿ ಅಂತ್ಯವಾಗುವುದಿದ್ದರೆ ಅಥವಾ ಇದನ್ನು ಹಸ್ತಾಂತರ ಮಾಡುವ ಅಧಿಕಾರ ಆ ಘಟನೆಯ ಸಂಭವದವರೆಗೆ ಮಾತ್ರ ಮುಂದುವರಿಯತಕ್ಕದ್ದಾಗಿದ್ದರೆ ಆ ಘಟನೆ ಸಂಭವಿಸಿದಾಗ; 4. ಗೇಣಿದಾರ–ಗೇಣಿದಾತರಿಬ್ಬರ ಹಿತಾಸಕ್ತಿಗಳೂ ಏಕಕಾಲದಲ್ಲಿ ಏಕವ್ಯಕ್ತಿಯಲ್ಲಿ ಏಕಪಾತ್ರದಲ್ಲಿ (ಸೇಮ್ ರೈಟ್ಸ್) ನಿಹಿತಗೊಂಡಾಗ (ವೆಸ್ಟೆಡ್); 5. ಗೇಣಿದಾರ ವ್ಯಕ್ತವಾಗಿಯೋ (ಎಕ್ಸ್‌ಪ್ರೆಸ್)

ಧ್ವನಿತವಾಗಿಯೋ (ಇಂಪ್ಲೈಡ್) ತನ್ನ ಗೇಣಿದಾರಿ ಹಿತಾಸಕ್ತಿಯನ್ನು ಗೇಣಿದಾತನಿಗೆ ಅಧ್ಯರ್ಪಣ (ಸರೆಂಡರ್) ಮಾಡಿದಾಗ ಮತ್ತು 6 ಕರಾರಿನ ಯಾವುದೊಂದು ಷರತ್ತನ್ನು ಉಲ್ಲಂಘಿಸಿದ ಪಕ್ಷದಲ್ಲಿ ಗೇಣಿದಾತ ಪುನಃ ಪ್ರವೇಶಿಸಬಹುದೆಂದು ಅಥವಾ ಗೇಣಿದಾರಿಯೇ ಶೂನ್ಯವಾಗುವುದೆಂದು (ವಾಯ್ಡ್) ನಮೂದಿಸಿದ್ದು, ಈ ಷರತ್ತನ್ನು ಗೇಣಿದಾರ ಮುರಿದರೆ ಅಥವಾ ಗೇಣಿದಾರ ತನ್ನ ಆ ಸ್ವರೂಪವನ್ನು (ಕ್ಯಾರೆಕ್ಟರ್) ಬಿಟ್ಟುಕೊಟ್ಟರೆ; ಗೇಣಿದಾರ ತನ್ನ ಗೇಣಿದಾರತನವನ್ನು ನಿರಾಕರಿಸಿ ತನ್ನಲ್ಲಿ ಅಥವಾ ಬೇರೆಯವರಲ್ಲಿ ಸ್ವತ್ತಿನ ಹಕ್ಕನ್ನು ಆರೋಪಿಸಿದರೆ; ಗೇಣಿದಾರ ದಿವಾಳಿಯಾದರೆ ಮತ್ತು ದಿವಾಳಿಯಾದಂದು ಗೇಣಿದಾತನಿಗೆ ಸ್ವತ್ತಿನ ಪ್ರವೇಶದ ಹಕ್ಕು ಇರತಕ್ಕದ್ದೆಂದು ಕರಾರಿನಲ್ಲಿ ನಮೂದಿಸಿದ್ದರೆ–ಈ ಯಾವ ಕಾರಣಕ್ಕಾಗಿಯಾದರೂ ಗೇಣಿದಾರಿಯನ್ನು ರದ್ದುಪಡಿಸಿ ಗೇಣಿದಾತ ನೋಟೀಸು ಕೊಟ್ಟ ಪರಿಣಾಮವಾಗಿ ಗೇಣಿದಾರನ ಗೇಣಿದಾರಿ ಹಕ್ಕಿನ ಮುಟ್ಟುಗೋಲಾದಾಗ (ಫಾರ್‌ಫಿಚರ್)– ಗೇಣಿದಾರಿ ಅಂತ್ಯಗೊಳ್ಳುತ್ತದೆ.

**ಉಚ್ಚಾಟನೆಯ ಷರತ್ತುಗಳು:** ಕಾನೂನು ರೀತ್ಯಾ ಯಾವುದಾದರೂ ಒಂದು ಕಾರಣ ದಿಂದ ಗೇಣಿದಾರಿ ರದ್ದಾಗದಿದ್ದಲ್ಲಿ ಗೇಣಿದಾರನನ್ನು ಅಕ್ರಮ ಪ್ರವೇಶದ ಕಾರಣದಿಂದ ಸ್ವತ್ತಿನಿಂದ ಹೊರಹಾಕಲು ಅಸಾಧ್ಯ. ಆದರೆ ಗೇಣಿದಾತ ಕೇವಲ ಹಕ್ಕಿನ ಮೇಲೆ ಮಾಡಬಹುದಾದ ವ್ಯವಹಾರ ನಿಲ್ಲಲಾರದು. ಗೇಣಿದಾರನಿಂದ ಬೇರೆಯವರು ಪಡೆದ ಹಕ್ಕುಗಳೂ (ಉಪಗೇಣಿದಾರಿ, ಒಳಗೇಣಿದಾರಿ) ಗೇಣಿದಾರಿಯ ರದ್ದಿನೊಂದಿಗೇ ರದ್ದಾಗುತ್ತವೆ. ಆದರೆ ಗೇಣಿದಾರ ಸ್ವಂತ ಇಚ್ಛೆಯಿಂದ ತನ್ನ ಗೇಣಿದಾರಿ ಹಕ್ಕನ್ನು ಗೇಣಿದಾತನಿಗೆ ಬಿಟ್ಟುಕೊಟ್ಟಾಗ ಮೂರನೆಯವರಿಗೆ ಇರುವ ಹಕ್ಕು ನಶಿಸಿಹೋಗುವುದಿಲ್ಲ. ಗೇಣಿದಾರ ಕರಾರಿನ ಷರತ್ತು ಮುರಿದಾಗ ಗೇಣಿದಾತ ಸ್ವತ್ತನ್ನು ಸ್ವಾಧೀನಪಡಿಸಿಕೊಂಡು ಪ್ರವೇಶಿಸುವ ಅವಕಾಶವಿರಬೇಕಾದರೆ ಹೀಗೆಂದು ಕರಾರಿನಲ್ಲಿ ನಮೂದಿಸಿರಬೇಕೆಂಬುದಾಗಿ ಭಾರತದ ಕಾಯಿದೆಯಲ್ಲಿ ವಿಧಿಸಲಾಗಿದೆ. (ಇಂಗ್ಲಿಷ್ ನ್ಯಾಯದಲ್ಲಿ ಈ ವಿಧಿಯಿಲ್ಲ). ಅಲ್ಲದೆ ಗೇಣಿದಾತನಿಗೆ ಸ್ವತ್ತು ಸ್ವಾಧೀನ ಪಡಿಸಿಕೊಳ್ಳುವ ಹಕ್ಕನ್ನು ಕೊಡುವ ಷರತ್ತು ಊರ್ಜಿತವಾಗುವಂಥದಾಗಿರಬೇಕು. ಉದಾಹರಣೆಗಾಗಿ, ಗೇಣಿದಾತ ಏರ್ಪಡಿಸುವ ವಿಶೇಷ ಸಮಾರಂಭಗಳಲ್ಲಿ ಗೇಣಿದಾರ ಹಾಜರಿರಬೇಕೆಂಬ ಷರತ್ತು ಊರ್ಜಿತವಲ್ಲವೆಂದು ಪ್ರಿವಿ ಕೌನ್ಸಿಲ್ ಹೇಳಿದೆ. ಗೇಣಿದಾರನ ಹಕ್ಕಿನ ಮುಟ್ಟುಗೋಲಾದಾಗ ಗೇಣಿದಾತ ಸಾಧ್ಯವಿದ್ದಲ್ಲಿ ನೇರವಾಗಿ ಶಾಂತರೀತಿಯಿಂದ ಸ್ವತ್ತು ಸ್ವಾಧೀನ ಪಡೆಯಬಹುದು; ವ್ಯವಹರಣೆ ನಡೆಯಿಸಿಯೇ ಸ್ವಾಧೀನ ಹೊಂದಬೇಕೆಂದಿಲ್ಲ. ಬಲಪ್ರಯೋಗದಿಂದ ಗೇಣಿದಾರನನ್ನು ತಳ್ಳಿಹಾಕುವ ಷರತ್ತು ಊರ್ಜಿತವಾಗದು. ಗೇಣಿದಾರ ಬೇಕೆಂದೇ ತಪ್ಪು ಮಾಡಿ ಗೇಣಿದಾರಿ ಹಕ್ಕು ಕಳೆದುಕೊಳ್ಳಲು ಸಾಧ್ಯವಿಲ್ಲ. ಜೀತದ ಹಿಡುವಳಿ ಕರಾರಿನಂತೆ ಗೇಣಿದಾತ ಜೀತಮಾಡದೆ ಹೋದರೆ ಆತನ ಗೇಣಿದಾರಿ ಹಕ್ಕು ಕಳೆದುಹೋಗುತ್ತದೆ. ಜೀತಮಾಡಲು ಆತ ನಿರಾಕರಿಸಿದಾಗ ಗೇಣಿದಾರಿಯನ್ನು ಅಂತ್ಯಗೊಳಿಸಿ ನೋಟೀಸು ಕೊಡುವ ಅಗತ್ಯವಿಲ್ಲ. ಗೇಣಿದಾರನ ಹಕ್ಕಿನ ಮುಟ್ಟುಗೋಲಾದಾಗ ಗೇಣಿದಾರಿಯನ್ನು ಅಂತ್ಯಗೊಳಿಸಿ ನೋಟೀಸು ಕೊಡುವುದು ಅವಶ್ಯ. ಸ್ವತ್ತು ವರ್ಗಾವಣೆ ಕಾಯಿದೆಯಲ್ಲಿ ಹೇಳಲಾದ ಗೇಣಿದಾರ–ಗೇಣಿದಾತರ ಕರಾರುಗಳಿಗೆ ಮಾತ್ರ ಕ್ರಮಪ್ರಕಾರದ ನೋಟೀಸು ಅಗತ್ಯ. ಬೇರೆ ಕರಾರುಗಳಲ್ಲಿ ಸಾಮ್ಯನ್ಯಾಯಿಕ್ಕನುಗುಣವಾಗಿ ಗೇಣಿದಾರಿ ರದ್ದುಪಡಿಸುವ ನೋಟೀಸು ಸಾಕು. ನೋಟೀಸಿನಲ್ಲಿ ಹೇಳಿದ ಅವಧಿಯ ಬಳಿಕವೂ ಗೇಣಿದಾರ ಆ ಸ್ವತ್ತಿನ ಸ್ವಾಧೀನ ಹೊಂದಿದ್ದರೆ ಅದು ಅಕ್ರಮವಾಗುತ್ತದೆ. ಒಂದು ಸ್ವತ್ತಿಗೆ ಅನೇಕ ಒಡೆಯರಿದ್ದರೆ ಒಬ್ಬ ತನ್ನ ಹಕ್ಕಿನ ಭಾಗದ ಗೇಣಿದಾರಿ ರದ್ದುಪಡಿಸಿ ನೋಟೀಸು ಕೊಡುವುದು ಇಂಗ್ಲಿಷ್ ನ್ಯಾಯದ ಪ್ರಕಾರ ಸಾಧ್ಯ. ಆದರೆ ಭಾರತದಲ್ಲಿ ಎಲ್ಲರೂ ಸೇರಿ ನೋಟೀಸು ಕೊಡಬೇಕು. ಆದರೆ ಈ ಅನೇಕ ಒಡೆಯರು ಗೇಣಿ ಕರಾರಿನ ಬಳಿಕ ಪಾಲಾದರೆ ಇವರಲ್ಲಿ ಯಾರಾದರೊಬ್ಬ ತನ್ನ ಪಾಲಿಗೆ ಬಾಕಿ ಇರುವ ಗೇಣಿಯ (ಬಾಡಿಗೆ) ವಿಚಾರದಲ್ಲಿ ಗೇಣಿದಾರನ ಹಕ್ಕು ರದ್ದುಪಡಿಸಬಹುದು. ನ್ಯಾಯಪ್ರಕಾರ ಗೇಣಿದಾರಿ ಹಕ್ಕು ರದ್ದು ಮಾಡಿದ ಮೇಲೆ ಆ ಗೇಣಿದಾತ ಬೇರೆಯವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಆಸ್ತಿ ಸ್ವಾಧೀನಕ್ಕೆ ವ್ಯವಹರಣೆ ಮಾಡಬಹುದು. ಒಮ್ಮೆ ಗೇಣಿದಾರಿ ರದ್ದುಪಡಿಸಿಯಾದ ಮೇಲೆ ಮುಂದಿನ ಅವಧಿಗೆ ಗೇಣಿ (ಬಾಡಿಗೆ) ಪಡೆದುಕೊಂಡರೆ ಅಥವಾ ಅದರ ವಸೂಲಿಗಾಗಿ ನ್ಯಾಯಾಲಯದ ನೆರವು ಪಡೆದುಕೊಂಡರೆ ಅಥವಾ ಗೇಣಿ ಕರಾರು ಇನ್ನೂ ಜಾರಿಯಲ್ಲಿದೆಯೆಂಬ ಭಾವನೆ ಮೂಡಿಸುವ ಯಾವ ಕೃತಿಯನ್ನಾದರೂ ಗೇಣಿದಾತ ಮಾಡಿದರೆ ಆಗ ಗೇಣಿದಾರಿ ರದ್ದಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಗೇಣಿ ಕರಾರು ರದ್ದಾಗಿದೆಯೆಂಬ ಅರಿವು ಸ್ವತ್ತಿನ ಒಡೆಯನಿಗಿರಬೇಕು. ಗೇಣಿದಾರನನ್ನು ಉಚ್ಚಾಟನೆಗೊಳಿಸಲು ಮೊಕದ್ದಮೆ ಹೂಡಿದ ಮೇಲೆ ಗೇಣಿಯನ್ನು (ಬಾಡಿಗೆ) ಪಡೆದುಕೊಂಡಲ್ಲಿ ಗೇಣಿದಾರಿ ರದ್ದಾಗುವುದಿಲ್ಲ. (ಕಲಂ 112). 111ನೆಯ ಕಲಮಿನಂತೆ ಉಚ್ಚಾಟನೆಯ ನೋಟೀಸುಕೊಟ್ಟ ಮೇಲೂ ಇದನ್ನು ಮನ್ನಾ (ವೇವ್) ಮಾಡುವುದು ಕೆಲವು ಸಂದರ್ಭಗಳಲ್ಲಿ ಸಾಧ್ಯ. ಹೀಗೆ ಮಾಡಬೇಕಾದರೆ ಈ ನೋಟೀಸು ಯಾರಿಗೆ ಕೊಡಲಾಗಿದೆಯೋ ಆತನ ವ್ಯಕ್ತ ಅಥವಾ ಧ್ವನಿತ ಅನುಮತಿ ಪಡೆಯಬೇಕು. ಗೇಣಿದಾರಿ ಅಸ್ತಿತ್ವದಲ್ಲಿದೆಯೆಂದು (ಸಬ್ಸಿಸ್ಟಿಂಗ್) ಭಾವಿಸುವ ಉದ್ದೇಶವಿದೆಯೆಂದು ನೋಟೀಸು ಕೊಟ್ಟಾತ ತನ್ನ ಯಾವುದಾದರೂ ಕೃತಿಯಿಂದ ತೋರಿಸಬೇಕು (ಕಲಂ 113). ಉದಾಹರಣೆ: 1. ಕೊಟ್ಟ ನೋಟೀಸಿನ ಅವಧಿ ತೀರಿದ ಅನಂತರದ ಕಾಲಕ್ಕೆ ಗೇಣಿದಾರನಿಂದ ಗೇಣಿದಾತ ಶುಲ್ಕ ಸ್ವೀಕಾರ ಮಾಡಿದರೆ ಉಚ್ಚಾಟನೆಯ ನೋಟೀಸು ಮನ್ನಾ ಆಗುತ್ತದೆ. 2. ಗೇಣಿಯ ಸ್ವತ್ತು ಬಿಡಬೇಕೆಂದು ಗೇಣಿದಾರನಿಗೆ ಗೇಣಿದಾತ ಕೊಟ್ಟ ನೋಟೀಸಿನ ಅವಧಿ ತೀರಿದ ಮೇಲೂ ಗೇಣಿದಾರ ಆ ಸ್ವತ್ತಿನ ಸ್ವಾಧೀನ ಹೊಂದಿದ್ದು, ಆತನನ್ನು ಗೇಣಿದಾರನೆಂದೇ ಭಾವಿಸಿ ಸ್ವತ್ತಿನ ಒಡೆಯ ಆತನಿಗೆ ಇನ್ನೊಂದು ಬಿಡುಗಡೆ ನೋಟೀಸು ಕೊಟ್ಟರೆ ಆಗ ಮೊದಲನೆಯ ನೋಟೀಸು ಮನ್ನಾ ಆಗುತ್ತದೆ.

ಗೇಣಿ (ಬಾಡಿಗೆ) ಬಾಕಿಯ ಕಾರಣದಿಂದ ಸ್ಥಿರ ಸ್ವತ್ತಿನ ಗೇಣಿದಾರಿ ಮುಟ್ಟುಗೋಲಾಗಿ ಗೇಣಿದಾರನನ್ನು ಉಚ್ಚಾಟನೆಗೊಳಿಸಲು ಗೇಣಿದಾತ ನ್ಯಾಯಾಲಯದಲ್ಲಿ ದಾವಾ ಹೂಡಿದ್ದು, ವಿಚಾರಣೆಯ ಸಮಯದಲ್ಲಿ ಗೇಣಿದಾತನಿಗೆ ಗೇಣಿ (ಬಾಡಿಗೆ) ಬಾಕಿಯನ್ನೂ ಅದರ ಮೇಲಣ ಬಡ್ಡಿಯನ್ನೂ ಆತನ ಪೂರ್ತಿ ವೆಚ್ಚಗಳನ್ನೂ ಗೇಣಿದಾರ ಕೊಟ್ಟಲ್ಲಿ ಅಥವಾ ಒಪ್ಪಿಸಿದ್ದಲ್ಲಿ ಅಥವಾ ಹದಿನೈದು ದಿನಗಳೊಳಗೆ ಪಾವತಿ ಮಾಡಲು ನ್ಯಾಯಾಲಯದ ದೃಷ್ಟಿಯಿಂದ ಸೂಕ್ತವೆನಿಸಿದ ಜಾಮೀನು ಕೊಟ್ಟಲ್ಲಿ, ಉಚ್ಚಾಟನೆಯ ತೀರ್ಪು (ಡಿಕ್ರೀ) ಕೊಡುವ ಬದಲು ಗೇಣಿದಾರಿ ಮುಟ್ಟುಗೋಲಿನಿಂದ ಗೇಣಿದಾರನನ್ನು ವಿಮೋಚನೆಗೊಳಿಸಿ ನ್ಯಾಯಾಲಯ ಆಜ್ಞೆ ಜಾರಿಮಾಡಬಹುದು (ಇದು ಹಕ್ಕಲ್ಲ; ನ್ಯಾಯಾಲಯದ ವಿವೇಚನೆಗೆ ಒಳಪಟ್ಟ ವಿಚಾರ). ಮುಟ್ಟುಗೋಲು ಆಗದಿದ್ದರೆ ಹೇಗೋ ಹಾಗೆ ಗೇಣಿದಾರ ಆಗ ಸ್ವತ್ತನ್ನು ಹಿಡಿದಿರತಕ್ಕದ್ದು (114). ಸ್ವತ್ತಿಗೆ ಸಂಬಂಧಿಸಿದಂತೆ ಯಾವುದಾದರೂ ಒಳಗೇಣಿದಾರಿ ಇದ್ದಲ್ಲಿ ಗೇಣಿದಾರಿಯ ಮುಟ್ಟುಗೋಲಿನೊಂದಿಗೆ ಒಳಗೇಣಿದಾರಿಯೂ ಅನೂರ್ಜಿತವಾಗುತ್ತದೆ(ಅನಲ್); ಆದರೆ ಇಂಥ ಒಳಗೇಣಿದಾರರನ್ನು ವಂಚಿಸಿ ಗೇಣಿದಾತ ಮುಟ್ಟುಗೋಲು ಆಜ್ಞೆ ಪಡೆದಿದ್ದ ಪಕ್ಷದಲ್ಲಿ ಅಥವಾ ಮುಟ್ಟುಗೋಲಿನ ವಿರುದ್ಧ (114ನೆಯ ಕಲಮಿನಲ್ಲಿ ಹೇಳಿರುವಂತೆ) ವಿಮೋಚನೆಯನ್ನು ನೀಡಲಾಗಿದ್ದಲ್ಲಿ ಒಳಗೇಣಿದಾರಿ ಅನೂರ್ಜಿತವಾಗುವುದಿಲ್ಲ. ಗೇಣಿದಾರನೇ ಗೇಣಿದಾರಿಯನ್ನು ಅಧ್ಯರ್ಪಣ ಮಾಡಿದಲ್ಲಿ ಒಳಗೇಣಿದಾರಿಗೆ ಸಾಮಾನ್ಯವಾಗಿ ಯಾವ ಕುಂದೂ (ಪ್ರೆಜುಡಿಸ್) ಉಂಟಾಗುವುದಿಲ್ಲ.

ಗೇಣಿ ಕರಾರು ರದ್ದಾದಲ್ಲಿ ಸ್ವತ್ತನ್ನು ಬಿಡುವ ಮೊದಲು ಗೇಣಿದಾರ ಅದರಲ್ಲಿರುವ ತನ್ನೆಲ್ಲ ಅನುವಂಶಿಕ ವಸ್ತುಗಳನ್ನು (ಫಿಕ್ಸ್‌ಚರ್ಸ್) ಬೇರ್ಪಡಿಸಿ ತೆಗೆದುಕೊಂಡು ಹೋಗಬಹುದು. ಆದರೆ ಆತ ಸ್ವತ್ತು ಸ್ವಾಧೀನಕ್ಕೆ ತೆಗೆದುಕೊಂಡಾಗ ಅದು ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಅದನ್ನು ಬಿಟ್ಟುಕೊಡಬೇಕು. ಆತ ಗೇಣಿ ಬಿಟ್ಟು ಕೊಡುತ್ತಿರುವುದು ತನ್ನ ತಪ್ಪಿನಿಂದಾಗಿಯೇ ಅಲ್ಲದಿದ್ದ ಪಕ್ಷದಲ್ಲಿ ತಾನು ನೆಟ್ಟ ಅಥವಾ ಬಿತ್ತಿದ ಬೆಳೆಯನ್ನೂ ತಾನೇ ತೆಗೆದುಕೊಂಡು ಹೋಗಬಹುದು. ಅದನ್ನು ಶೇಖರಿಸಿ ಸಾಗಿಸಲು ಸ್ವತ್ತನ್ನು ಪ್ರವೇಶಿಸುವ ಅಧಿಕಾರವೂ ಆತನಿಗುಂಟು. ಸ್ವತ್ತಿನ ಗೇಣಿದಾರ ಏನಾದರೂ ಮೇಲ್ಪಾಟು ಮಾಡಿದ್ದರೆ, ತನ್ನನ್ನು ಉಚ್ಚಾಟನೆ ಮಾಡುತ್ತಿರುವವನಿಂದ ಅಂಥ ಮೇಲ್ಪಾಟಿಗಾಗಿ ಪರಿಹಾರ ಕೇಳಿ ಪಡೆಯಬಹುದು; ಅಥವಾ ಅದನ್ನು ಆತನಿಗೆ ಮಾರಬಹುದು (51 ಮತ್ತು 108).

**ಇತರ ಕಾಯಿದೆಗಳು:** ಮನೆಬಾಡಿಗೆ ನಿಯಂತ್ರಣ ಕಾಯಿದೆಗಳು ಮತ್ತು ಭೂ ಹಿಡುವಳಿ ಕಾಯಿದೆಗಳು ರಾಜ್ಯಗಳಲ್ಲಿ ಬಾಡಿಗೆದಾರರನ್ನು ಅಥವಾ ಗೇಣಿದಾರರನ್ನು ಸ್ವತ್ತುಗಳಿಂದ ಉಚ್ಚಾಟನೆ ಮಾಡುವುದನ್ನು ನಿಯಂತ್ರಿಸಿವೆ. ಈ ಕಾಯಿದೆಗಳು ಒಂದೊಂದು ರಾಜ್ಯದಲ್ಲಿ ಒಂದೊಂದು ಬಗೆಯಾಗಿವೆ. ಮನೆಬಾಡಿಗೆ ನಿಯಂತ್ರಣ ಕಾಯಿದೆಗಳಲ್ಲಿ ಸಾಮಾನ್ಯವಾಗಿ ಬಾಡಿಗೆ ಬಾಕಿ ಮಾಡಿದರೆ, ಕಟ್ಟಡವನ್ನು ಹಾಳು ಮಾಡಿದರೆ ಅಥವಾ ವಿರೂಪಗೊಳಿಸಿದರೆ, ಆ ಕಟ್ಟಡ ಇರುವ ಸ್ಥಳದಲ್ಲಿ ಹೊಸ ಕಟ್ಟಡ ನಿರ್ಮಿಸಬೇಕಿದ್ದರೆ, ಬಾಡಿಗೆದಾರ ಇರುವ ಕಟ್ಟಡ ಮಾಲೀಕನ ಉಪಯೋಗಕ್ಕೆ ನ್ಯಾಯವಾಗಿ ಬೇಕಿದ್ದರೆ ಬಾಡಿಗೆದಾರನನ್ನು ಮಾಲೀಕ ಉಚ್ಚಾಟಿಸಿ ಸ್ವತ್ತು ಸ್ವಾಧೀನ ಪಡೆಯಬಹುದು. ಗೇಣಿದಾರ ಹಾಗೂ ಭೂಮಾಲೀಕರ ಸಂಬಂಧವನ್ನೇ ತೊಡೆದುಹಾಕುವುದು ಭೂ ಹಿಡುವಳಿ ಕಾಯಿದೆಗಳ ಅಂತಿಮ ಧ್ಯೇಯ. ಆದ್ದರಿಂದ ಅಲ್ಲಿ ಗೇಣಿದಾರಿಯನ್ನು ರದ್ದುಪಡಿಸಲು ಆಸ್ಪದ ಕಡಿಮೆ. ಗೇಣಿದಾರ ಗೇಣಿ ಬಾಕಿ ಮಾಡಿದರೆ ಅಥವಾ ಅಲ್ಲಿ ನಿರೂಪಿಸಿರುವ ಇತರ ಕೆಲವು ಸಂದರ್ಭಗಳಲ್ಲಿ ಗೇಣಿದಾರಿ ರದ್ದುಗೊಳಿಸಿ ಗೇಣಿದಾರನನ್ನು ಉಚ್ಚಾಟನೆ ಮಾಡಬಹುದು. ಈ ಕಾಯಿದೆಗಳ ನಿರ್ವಹಣೆಗಾಗಿ ನಿಯುಕ್ತವಾದ ನ್ಯಾಯ ಮಂಡಲಗಳಿಗೆ ಈ ಅಧಿಕಾರವನ್ನು ಕೊಡಲಾಗಿದೆ. ಇಂಥ ಕಾಯಿದೆಗಳಿಂದಾಗಿ ಉಚ್ಚಾಟನೆಯ ಕಾನೂನು ತನ್ನ ಪ್ರಾಮುಖ್ಯವನ್ನು ಕ್ರಮೇಣ ಕಳೆದುಕೊಳ್ಳುತ್ತಿದೆ.

(ಕೆ.ಜಿ.ಬಿ.)

**ಉಚ್ಚಾರಣಾತ್ಮಕ ಧ್ವನಿವಿಜ್ಞಾನ:** ಭಾಷೆಯ ರಚನಾ ವ್ಯವಸ್ಥೆಯನ್ನು ಕುರಿತ ಐದು ಭಾಗಗಳಲ್ಲೊಂದಾದ ಧ್ವನಿವಿಜ್ಞಾನದ ಒಂದು ಅಂಗ. ಭಾಷೆಯ ರಚನಾ ವ್ಯವಸ್ಥೆಯ ಉಳಿದ ಭಾಗಗಳೆಂದರೆ - ಧ್ವನಿಮಾವಿಜ್ಞಾನ ಮತ್ತು ಆಕೃತಿಮಾವಿಜ್ಞಾನ, ವಾಕ್ಯರಚನಾವಿಜ್ಞಾನ, ಪದಾರ್ಥ ವಿಜ್ಞಾನ. ಧ್ವನಿಯನ್ನು ಕುರಿತು ಅಭ್ಯಸಿಸುವ ಧ್ವನಿವಿಜ್ಞಾನದಲ್ಲಿ ಮೂರು ಮುಖ್ಯ ಅಂಶಗಳಿವೆ: 1. ಮಾತನಾಡುವಾಗ ಹುಟ್ಟುವ ಧ್ವನಿತರಂಗಗಳು ಹಾಗೂ ಗಾಳಿಯ ಮೂಲಕ ಅವುಗಳ ಪ್ರಸಾರ–ಇವನ್ನು ಕುರಿತ ಅಭ್ಯಾಸ ತರಂಗಾತ್ಮಕವಿಜ್ಞಾನ (ಅಕೂಸ್ಟಿಕ್ ಫೊನೆಟಿಕ್ಸ್). 2. ಕರಣ ಹಾಗೂ ಇತರ ಶ್ರವಣೇಂದ್ರಿಯಗಳ ರಚನೆ, ಮಾತಿನ ಗ್ರಹಣ ಶಕ್ತಿಯಲ್ಲಿ ಅಡಕವಾದ ಮಾನಸಿಕ ಕ್ರಿಯೆ–ಇವನ್ನೊಳಗೊಂಡು ಕೇಳುವವನ ಶ್ರವಣೇಂದ್ರಿಯ ದ್ವಾರಾ ಈ ಧ್ವನಿತರಂಗಗಳ ಗ್ರಹಣಕ್ಕೆ ಸಂಬಂಧಿಸಿದ್ದು ಶ್ರವಣಾತ್ಮಕ ಧ್ವನಿವಿಜ್ಞಾನ (ಆಡಿಟರಿ ಫೊನೆಟಿಕ್ಸ್). 3. ಭಾಷಾ ಚಟುವಟಿಕೆಯನ್ನು ಧ್ವನ್ಯಂಗಗಳು ಹಾಗೂ ಅದರಲ್ಲಡಕವಾದ

ಪ್ರಕ್ರಿಯೆಗಳ ಮೂಲಕ ಅಭ್ಯಸಿಸುವ ವಿಭಾಗವೇ ಉಚ್ಚಾರಣಾತ್ಮಕ ಧ್ವನಿವಿಜ್ಞಾನ (ಆರ್ಟಿಕ್ಯುಲೇಟರಿ ಫೊನೆಟಿಕ್ಸ್). ಇವುಗಳಲ್ಲಿ ತರಂಗ ಧ್ವನಿವಿಜ್ಞಾನ. ಭೌತವಿಜ್ಞಾನಕ್ಕೆ ಸಂಬಂಧಿಸಿದ ವಿಷಯ. ಅದು ಮಾನವ ಧ್ವನಿಗಳನ್ನಷ್ಟೇ ಅಲ್ಲದೆ, ಒಟ್ಟು ಧ್ವನಿಗಳು, ಅವುಗಳ ಕಂಪನ, ಉತ್ಕಟತೆ ಇತ್ಯಾದಿ ಸೂಕ್ಷ್ಮ ವಿವರಗಳನ್ನು ಅಭ್ಯಸಿಸುತ್ತದೆ. ಎರಡನೆಯದಾದ ಶ್ರವಣಾತ್ಮಕ ಧ್ವನಿವಿಜ್ಞಾನ ಶ್ರವಣೇಂದ್ರಿಯದ ವಿವಿಧ ಅಂಗಗಳ ಸಂಕೀರ್ಣತೆಯ ಮೂಲಕ ಹೆಚ್ಚಿನ ಅಭ್ಯಾಸಕ್ಕೆ ನಿಲುಕಿಲ್ಲ. ಆದ್ದರಿಂದ ಮೂರನೆಯದು ಖಚಿತವಾದ ಅಭ್ಯಾಸಕ್ಕೆ ತಕ್ಕದ್ದಾಗಿದೆ. ಧ್ವನ್ಯುತ್ಪಾದನೆ ಹಾಗೂ ಧ್ವನಿ ವೈವಿಧ್ಯಕ್ಕೆ ಕಾರಣವಾದ ಅಂಗಗಳು, ಮುಖಭಾಗಗಳು ನಮ್ಮ ದೃಷ್ಟಿಗೆ ಕೆಲ ಸಾಧನಗಳ ಮೂಲಕ ಸ್ಪಷ್ಟವಾಗಿ ಗೋಚರವಾಗುತ್ತದೆ. ಓಷ್ಠ್ಯ, ದಂತ್ಯ, ಜಿಹ್ವೆ ಮುಂತಾದವು ಸಕಲರಿಗೂ ಪರಿಚಿತ ಅಂಗಗಳು. ಧ್ವನಿ ಉತ್ಪಾದನೆಯಲ್ಲಿ ಅವುಗಳ ಪಾತ್ರವನ್ನು ಸಾಮಾನ್ಯರು ತಿಳಿಯುವಂತೆ ವಿವರಿಸಬಹುದು.




**ಉಚ್ಚಾರಾತ್ಮಕ ಧ್ವನಿಶಾಸ್ತ್ರ**
**1. ಓಷ್ಠ, 2. ದಂತ, 3. ದಂತಮೂಲ (ವರ್ತ್ಸ), 4. ಕಠಿನ ತಾಲು, 5. ಮೃದುತಾಲು, 6. ಜಿಹ್ವಾಗ್ರ, 7. ಜಿಹ್ವಾಫಲಕ, 8. ಪೂರ್ವ ಜಿಹ್ವಾ, 9. ಪಶ್ಚ ಜಿಹ್ವಾ, 10. ಜಿಹ್ವಾಮೂಲ, 11. ಅಲಿಜಿಹ್ವಾ, 12. (ಗಲಕುಹರ, ಗಲನಾಳ, ಗಲಮುಖ, ಕಂಠಾಗ್ರ), 13. ಉಪಜಿಹ್ವಾ, 14. ಘೋಷತಂತು, ಸ್ವರತಂತ್ರಿ, 15. ಶ್ವಾಸನಾಳ, 16. ಅನ್ನನಾಳ**

ಉಚ್ಚಾರಣಾತ್ಮಕ ಧ್ವನಿವಿಜ್ಞಾನ ಪ್ರಧಾನವಾಗಿ ಧ್ವನ್ಯುತ್ಪಾದನೆಗೆ ಕಾರಣವಾದ ಮಾನವ ಶರೀರದಲ್ಲಿಯ ಧ್ವನ್ಯಂಗಗಳ ವಿವರಣೆ ಮತ್ತು ವರ್ಗೀಕರಣವನ್ನೊಳಗೊಂಡಿದೆ. ಧ್ವನಿಗಳನ್ನು ಹೊರಡಿಸುವ ಧ್ವನ್ಯಂಗಗಳನ್ನು ಕುರಿತು ಅಭ್ಯಸಿಸುವುದು ಧ್ವನಿವಿಜ್ಞಾನದ ಮೊದಲ ಕೆಲಸ. ಪುಪ್ಪುಸಗಳಿಂದ ಹೊರಟ ಗಾಳಿ ಶ್ವಾಸಮಾರ್ಗದ ಕಡೆಗೆ ಬರುತ್ತಿರುವಾಗ ವಿವಿಧ ಸ್ಥಾನಗಳಲ್ಲಿ ವಿವಿಧ ರೀತಿಯ ತಡೆ. ಸಂಪರ್ಕಗಳಿಂದಾಗಿ ಧ್ವನಿ ಉತ್ಪನ್ನವಾಗುವುದು. ಇಂಥ ಧ್ವನಿ ಉತ್ಪಾದನೆಯ ಸ್ಥಾನ, ಕರಣ ಮತ್ತು ಪ್ರಯತ್ನ – ಇವು ಪ್ರಮುಖ ಪಾತ್ರ ವಹಿಸುವುವು. ಸ್ಥಾನಗಳೆಂದರೆ, ಮುಖವಿವರದ ಮೇಲ್ಭಾಗದಲ್ಲಿರುವ ಧ್ವನಿಉತ್ಪಾದನೆಗೆ ಸಹಾಯ ಮಾಡುವ ಅವಿಚಲಿತ ಸ್ಥಾನಗಳು. ಕರಣಗಳೆಂದರೆ ಸ್ಥಾನಗಳನ್ನು ಸಂಪರ್ಕಿಸಿ, ಇಲ್ಲವೆ ಸಮೀಪಿಸಿ, ಧ್ವನಿಉತ್ಪಾದನೆಗೆ ಕಾರಣವಾಗುವ ಮುಖವಿವರದ ಕೆಳಭಾಗದ ಚಲಿಸುವ ಅಂಗಗಳು. ಉಭಯೋಷ್ಠ, ದಂತ್ಯ, ವರ್ತ್ಸ್ಯ, ತಾಲು, ಕಂಠ ಮುಂತಾದವು ಸ್ಥಾನಗಳು; ಕೆಳದುಟಿ ಮತ್ತು ಜಿಹ್ವೆ ಕರಣಗಳು. ಪ್ರಯತ್ನ ಎಂದರೆ ಧ್ವನಿತಂತುಗಳು ಹಾಗೂ ಇತರೆಡೆಗಳಲ್ಲಿ ನಡೆಯುವ ವಿಶೇಷ ಕ್ರಿಯೆ. ಘೋಷ, ಮಹಾಪ್ರಾಣ, ಅನುನಾಸಿಕ ಮುಂತಾದ ಅಂಶಗಳು ಈ ಪ್ರಯತ್ನದ ಫಲ.

ಇಂಥ ಸ್ಥಾನ, ಕರಣ ಹಾಗೂ ಪ್ರಯತ್ನಗಳಿಂದ ಉತ್ಪನ್ನವಾಗುವ ಧ್ವನಿಗಳಲ್ಲಿ ಎರಡು ರೀತಿ: ಸ್ವರ ಮತ್ತು ವ್ಯಂಜನ. ಪುಪ್ಪುಸಗಳಿಂದ ಹೊರಟ ಗಾಳಿ, ಶ್ವಾಸನಾಳದ ಮೂಲಕ, ಮುಖವಿವರದಲ್ಲಿ ಹಾಯ್ದು ಬರುವಾಗ ಅದಕ್ಕೆ ಯಾವುದೇ ತಡೆ ಉಂಟಾಗದೆ ಹುಟ್ಟುವ ಧ್ವನಿಗಳು ಸ್ವರಗಳು; ಆ ಶ್ವಾಸಪ್ರವಾಹಕ್ಕೆ ಸಂಪೂರ್ಣ ತಡೆ ಅಥವಾ ಸಂಪರ್ಕ ಉಂಟಾದರೆ ಹೊರಡುವ ಧ್ವನಿಗಳು ವ್ಯಂಜನಗಳು. ಶ್ವಾಸಪ್ರವಾಹದ ಸಂಪೂರ್ಣ ತಡೆಯಿಂದ ಉತ್ಪನ್ನವಾದ ವ್ಯಂಜನಗಳು ಸ್ಪರ್ಶವ್ಯಂಜನಗಳು. ಪ್, ತ್, ಟ್, ಚ್, ಕ್ ವರ್ಗದ ಎಲ್ಲ ಧ್ವನಿಗಳು ಸ್ಪರ್ಶಗಳು. ಇಲ್ಲಿ ಶ್ವಾಸಪ್ರವಾಹಕ್ಕೆ ಒಮ್ಮೆಲೆ ತಡೆಯುಂಟಾಗಿ ಮುಖವಿವರದ ಮುಖ ಮಾತ್ರ ಒಮ್ಮೆಲೆ ತೆರೆದುಬಿಡುತ್ತದೆ. ಅದೇ ಮುಖವಿವರದೊಡನೆ ನಾಸಿಕ ವಿವರವೂ ತೆರೆದರೆ ಅಲ್ಲಿ ಹುಟ್ಟುವ ವ್ಯಂಜನಗಳು ಅನುನಾಸಿಕ ವ್ಯಂಜನಗಳು. ಇನ್ನು ಕೆಲ ವ್ಯಂಜನಗಳಲ್ಲಿ ಈ ರೀತಿಯ ತಡೆಯಿರದೆ ಶ್ವಾಸಮಾರ್ಗದ ಸಂಕುಚಿತದಿಂದ ಒಂದು ಬಗೆಯ ಘರ್ಷಣೆ ಉಂಟಾಗುತ್ತದೆ. ಕನ್ನಡದ ಹ್, ಇಂಗ್ಲಿಷಿನ think, they ಪದಗಳಲ್ಲಿರುವ ಮೊದಲನೆಯ ಧ್ವನಿ ಇಂಥ ಘರ್ಷಣೆಯಿಂದ ಉತ್ಪನ್ನವಾದ ವ್ಯಂಜನಗಳು. ಇದಕ್ಕೆ ಘರ್ಷ ಎನ್ನುತ್ತಾರೆ. ಇದೇ ರೀತಿ, ವಿವಿಧ ವ್ಯತ್ಯಾಸದ ಮೂಲಕ ಪಾರ್ಶ್ವಿಕ, ಕಂಪಿತ ಮುಂತಾದ ವ್ಯಂಜನ ವರ್ಗಗಳು ಸಾಧ್ಯವಾಗುತ್ತವೆ.

ಸ್ವರಗಳಲ್ಲಿ ಯಾವುದೇ ನಿರೋಧವಿರದೆ ಕರಣದ ಸ್ಥಾನ ಅಥವಾ ಸ್ಥಿತಿಯಲ್ಲಿಯ ಸ್ವಲ್ಪ ವ್ಯತ್ಯಾಸದಿಂದ ಮಾತ್ರ ಅವುಗಳಲ್ಲಿ ವೈವಿಧ್ಯವುಂಟಾಗುತ್ತದೆ. ಇಂಥ ವೈವಿಧ್ಯಕ್ಕೆ ಕಾರಣವಾಗುವ ಅಂಶಗಳು ಮೂರು : 1 ಜಿಹ್ವಾ ಸ್ಥಿತಿ – ಉಚ್ಚ, ಮಧ್ಯ, ನಿಮ್ನ ಇತ್ಯಾದಿ 2 ಜಿಹ್ವಾಪ್ರಗತಿ– ಪುರೋಗತ, ಮಧ್ಯ ಮತ್ತು ಅಪಗತ. 3 ಓಷ್ಠ್ಯಸ್ಥಿತಿ – ವರ್ತುಳ ಮತ್ತು ಅವರ್ತುಳ. ಒಂದನೆಯ ಕಾರಣದಿಂದ ಏಳು ಸ್ವರಗಳು, ಎರಡನೆಯದರಿಂದ ಮೂರು ಸ್ವರಗಳು, ಕೊನೆಯದರಿಂದ ಎರಡು ಸ್ವರಗಳು ಉತ್ಪತ್ತಿಯಾಗುತ್ತವೆ. ಈ ರೀತಿ ಮಾನವನ ಧ್ವನ್ಯಂಗಗಳು ಅವು ಹೊರಡಿಸುವ ಧ್ವನಿಗಳು, ಅವುಗಳ ವರ್ಗೀಕರಣ-ಮುಂತಾದವುಗಳ ಅಭ್ಯಾಸ, ಈ ವಿಜ್ಞಾನದ ಪರಿಮಿತಿಗೆ ಬರುತ್ತದೆ.

(ಆರ್.ಸಿ.ಎಚ್.)

**ಉಚ್ಚೈಶ್ರವಸ್ಸು:** 1. ದೇವಾಸುರರು ಅಮೃತ ಪ್ರಾಪ್ತಿಗಾಗಿ ಕ್ಷೀರ ಸಮುದ್ರವನ್ನು ಕಡೆದಾಗ ಉದ್ಭವಿಸಿದ ಕುದುರೆ. ಇಂದ್ರನಿಗೆ ಇದು ಪಟ್ಟದ ಕುದುರೆ. ಭಗವಂತನ ವಿಭೂತಿಗಳಲ್ಲಿ ಇದೂ ಒಂದು ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಈ ಕುದುರೆಗೆ ಏಳು ಮುಖಗಳೆಂದು ಶ್ರೀಮದ್ಭಾಗವತ ತಿಳಿಸುತ್ತದೆ. ಕಿವಿಗಳು ನೆಟ್ಟಗೆ ನಿಂತು ಉದ್ದವಾಗಿವೆಯಾದ್ದರಿಂದ ಈ ಹೆಸರು. ಬಣ್ಣ ಬಿಳುಪು. ಒಮ್ಮೆ ಕದ್ರು, ವಿನತೆಯರೆಂಬ ಸವತಿಯರಲ್ಲಿ ಕುದುರೆಯ ಬಾಲದ ಬಣ್ಣದ ವಿಚಾರವಾಗಿ ಚರ್ಚೆ ಸಂಭವಿಸಿತು. ಅದು ಕಪ್ಪಾಗಿದೆ ಎಂದು ಕದ್ರುವೂ ಬೆಳ್ಳಗಿದೆ ಎಂದು ವಿನತೆಯೂ ಸಾಧಿಸ ಹೊರಟರು. ಕೊನೆಗೆ ಸಾಕ್ಷಾತ್ತಾಗಿ ಈ ಕುದುರೆಯನ್ನು ನೋಡಿಯೇ ಬಣ್ಣವನ್ನು ನಿಷ್ಕರ್ಷಿಸಬೇಕೆಂದೂ ಸೋತವರು ಮತ್ತೊಬ್ಬರ ತೊತ್ತಾಗಬೇಕೆಂದೂ ಪಂಥ ಕಟ್ಟಿದರು. ಕೂಡಲೇ ಕದ್ರು ತನ್ನ ಮಗನಾದ ಕರ್ಕೋಟಕನನ್ನು ಬಾಲದಲ್ಲಿ ಸೇರಿಕೊಂಡು ಬಾಲ ಕಪ್ಪಾಗಿ ಕಾಣುವಂತೆ ಮಾಡಲು ತಿಳಿಸಿದರು. ಕರ್ಕೋಟಕ ಬಾಲದಲ್ಲಿ ಕೂಡಿಕೊಂಡಿದ್ದುದರಿಂದ ದೂರಕ್ಕೆ ಅದು ಕಪ್ಪಾಗಿ ಕಾಣುತ್ತಿತ್ತು. ಕದ್ರು ಉಚ್ಚೈಶ್ರವಸ್ಸಿನ ಬಾಲ ಕಪ್ಪಾಗಿರುವುದನ್ನು ವಿನತೆಗೆ ತೋರಿಸಿ ಮೋಸದಿಂದ ಆಕೆಯನ್ನು ತನ್ನ ತೊತ್ತನ್ನಾಗಿ ಮಾಡಿಕೊಂಡಳು. ಕದ್ರುವಿನ ಮಕ್ಕಳಾದ ಸರ್ಪಗಳಿಗೂ ವಿನತೆಯ ಮಗನಾದ ಗರುಡನಿಗೂ ಬದ್ಧದ್ವೇಷ ಉಂಟಾಗಲು ಇದೇ ಕಾರಣವಾಯಿತು.

2. ಸೂರ್ಯನ ರಥವನ್ನು ಎಳೆಯುವ ಕುದುರೆ.
3. ಶಂತನು ಚಕ್ರವರ್ತಿಯ ಹೆಂಡತಿಯಾದ ಸತ್ಯವತಿಯ ಸಾಕುತಂದೆ, ಬೆಸ್ತರ ಒಡೆಯ.
4. ಅವಿಕ್ಷಿತನೆಂಬ ಚಂದ್ರವಂಶದ ರಾಜನ ಏಳು ಮಂದಿ ಮಕ್ಕಳಲ್ಲಿ ಒಬ್ಬ.

(ಎಸ್.ಎನ್.ಕೆ.)

**ಉಚ್ಛೇದವಾದ :** ಆತ್ಮನ ವಿಷಯವಾಗಿ ಬುದ್ಧನ ಕಾಲದಲ್ಲಿದ್ದ ಪರಸ್ಪರ ವಿರುದ್ಧವಾದ ಎರಡು ಮತಗಳಲ್ಲೊಂದು. ಆತ್ಮ ಎಂಬ ಪದಾರ್ಥವೇ ಇಲ್ಲ. ಅದು ಭೌತಿಕವಾದ ಶರೀರದ ಒಂದು ಅವಸ್ಥೆ ಅಥವಾ ಧರ್ಮ. ಅದೇ ಚೈತನ್ಯ. ಶರೀರ ನಾಶವಾದ ಮೇಲೆ ವ್ಯಕ್ತಿಯ ಯಾವ ಅಂಶವೂ ಉಳಿಯುವುದಿಲ್ಲ. ಮರಣವೇ ಪೂರ್ಣ ಉಚ್ಛೇದ ಎಂಬುದು ಈ ವಾದದ ಸಾರ. ಇದಕ್ಕೆ ವಿರುದ್ಧವಾದದ್ದು ಪುದ್ಗಲವಾದ, ಉಪನಿಷತ್ ಸಂಪ್ರದಾಯದಿಂದ ಬಂದದ್ದು. ಆತ್ಮ ಅವಿನಾಶಿ, ಸ್ಥಿರ, ಅಖಂಡ ಎನ್ನುವುದು ಈ ವಾದದ ತಿರುಳು. ಪ್ರಾಚೀನ ಬೌದ್ಧಗ್ರಂಥಗಳಲ್ಲಿ ಇವುಗಳ ಉಲ್ಲೇಖವಿದೆ. ಬುದ್ಧ ಈ ಎರಡು ಪಂಥಗಳನ್ನೂ ಬಿಟ್ಟು ಒಂದು ಹೊಸ, ಮಧ್ಯಮ ದೃಷ್ಟಿಯನ್ನು ಉಪದೇಶಿಸುತ್ತಾನೆ. ಸ್ಥಿರವಾದ, ಅಖಂಡವಾದ ಆತ್ಮ ವಸ್ತುವಿಲ್ಲ. ಪಂಚಸ್ಕಂದವೆಂಬ ಐದು ಅಂಶಗಳ ಸಮುದಾಯವೇ ಆತ್ಮ. ಮರಣಾನಂತರವೂ ಈ ಸಮುದಾಯ ಪ್ರವಾಹರೂಪೇಣ ಇರುತ್ತದೆ. ಈ ಪ್ರವಾಹ ಪೂರ್ತಿಯಾಗಿ ಕೊನೆಗಾಣುವುದು ನಿರ್ವಾಣ ಅಥವಾ ಮೋಕ್ಷ ಪ್ರಾಪ್ತವಾದಾಗ. ಬೌದ್ಧ ಧರ್ಮದಲ್ಲಿ ಪುನರ್ಜನ್ಮವನ್ನು ಒಪ್ಪಿಕೊಂಡಿರುವುದು ಈ ಕಾರಣದಿಂದಲೇ.

ಬೌದ್ಧರ ಉಚ್ಛೇದವಾದವೇ ಮುಂದಿನ ಚಾರ್ವಾಕಮತಕ್ಕೆ ಆಧಾರವಾಯಿತು **(ನೋಡಿ– ಪುದ್ಗಲವಾದ; ಚಾರ್ವಾಕ–ಸಿದ್ಧಾಂತ)**.

(ಎಸ್.ಎಸ್.ಆರ್.)

**ಉಜ್ಜಯಿನಿ[1]:** ಭಾರತದ ಮಧ್ಯ ಪ್ರದೇಶ ರಾಜ್ಯದ ಒಂದು ಜಿಲ್ಲೆ ಹಾಗೂ ಜಿಲ್ಲಾ ಆಡಳಿತ ಕೇಂದ್ರ ನಗರ. ಅವಂತಿ ಎಂದೂ ಕರೆಯುವ ಇದು ಚಂಬಲ್ ನದಿಯ ಉಪನದಿಯಾದ ಶಿಪ್ರಾ ನದಿ (ಉತ್ತರ ವಾಹಿನಿ)ಯ ದಂಡೆಯಲ್ಲಿದೆ. ಇದರ ಉತ್ತರದಲ್ಲಿ ಚಂಬಲ್ (ಚರ್ಮಣವತೀ) ನದಿ ಮತ್ತು ಅರಾವಳಿ (ಪಾರಿಯಾತ್ರ) ಪರ್ವತ ಶ್ರೇಣಿ, ದಕ್ಷಿಣದಲ್ಲಿ ನರ್ಮದಾ ನದಿ, ಪೂರ್ವದಲ್ಲಿ ವಿಂಧ್ಯಾಚಲ ಮತ್ತು ಪಶ್ಚಿಮದಲ್ಲಿ ಸೌರಾಷ್ಟ್ರ ಇವೆ. ಈ ನಗರ ಇಂದೋರಿನಿಂದ ಸು.55ಕಿಮೀ ಮತ್ತು ಭೋಪಾಲಿನಿಂದ 180ಕಿಮೀ ದೂರದಲ್ಲಿದೆ. ಸಮುದ್ರ ಮಟ್ಟದಿಂದ ಸು. 517ಮೀ. ಎತ್ತರದಲ್ಲಿದೆ. 6,091. ಚ.ಕಿಮೀ ವಿಸ್ತೀರ್ಣವಿದ್ದು ಜನಸಂಖ್ಯೆ 17,09,885 (2001) ಹೊಂದಿದೆ.

ಉಜ್ಜಯಿನಿಗೆ ಪ್ರತಿ ಕಲ್ಪದಲ್ಲೂ ಬೇರೆ ಬೇರೆ ಹೆಸರುಗಳಿದ್ದವೆಂದು ತಿಳಿದುಬರುತ್ತದೆ. ಮೊದಲ ಕಲ್ಪದಲ್ಲಿ ಸ್ವರ್ಣಶೃಂಗಾ (ಕನಕಶೃಂಗಾ), ಎರಡನೇ ಕಲ್ಪದಲ್ಲಿ ಕುಶಸ್ಥಲೀ, ಮೂರನೆಯ ಕಲ್ಪದಲ್ಲಿ ಅವಂತಿಕಾ, ನಾಲ್ಕನೆಯ ಕಲ್ಪದಲ್ಲಿ ಅಮರಾವತೀ, ಐದನೆಯ ಕಲ್ಪದಲ್ಲಿ ಚೂಡಾಮಣಿ ಮತ್ತು ಆರನೆಯ ಕಲ್ಪದಲ್ಲಿ ಪದ್ಮಾವತೀ ಎಂದಿತ್ತು. ಸೋಮದೇವನು ತನ್ನ ಕಥಾಸರಿತ್ಸಾಗರದಲ್ಲಿ ಈ ನಗರವನ್ನು ಭೋಗವತಿ, ಹಿರಣ್ಯಾವತಿ ಎಂದು ಕರೆಯುತ್ತಾನೆ. ಕವಿ ಕಾಳಿದಾಸನಂತೂ ಉಜ್ಜಯಿನಿಯನ್ನು ವಿಶಾಲಾ ಎಂದೇ ಕರೆದು ಇದರ ಸಮೃದ್ಧಿಯನ್ನು ಸೂಚಿಸುತ್ತಾನೆ. ಪ್ರತಿಕಲ್ಪ, ಕುಮುದ್ವತಿ ಮತ್ತು ಶಿವಪುರಿ ಇವು ಉಜ್ಜಯಿನಿಯ ಇತರ ಹೆಸರುಗಳು.

ಪ್ರಸಿದ್ಧವಾದ ಪುರಾತನ ಸಪ್ತ ಪುರಿಗಳಲ್ಲಿ ಉಜ್ಜಯಿನಿ ಒಂದು ಮುಖ್ಯ ನಗರವಾಗಿದ್ದು ಇಂದಿಗೂ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದೆ. ಇದಕ್ಕೆ ಹಲವು ಧಾರ್ಮಿಕ ಹಾಗೂ ಪೌರಾಣಿಕ ಹಿನ್ನೆಲೆಗಳಿವೆ. ಸ್ಕಾಂದಪುರಾಣದ ಪ್ರಕಾರ ಅವಂತಿ ರಾಜ್ಯದ ರಾಜಧಾನಿ

ಅವಂತೀಪುರವಾಗಿತ್ತು. ಇಲ್ಲಿ ತ್ರಿಪುರಾಸುರನ ಸಂಹಾರವಾದ ಮೇಲೆ, ಶಿವನ ವಿಜಯದಿಂದ ಇದಕ್ಕೆ ಉಜ್ಜಯಿನಿ (ಉತ್+ಜಯಿನಿ, ಶ್ರೇಷ್ಠ ರೀತಿಯಲ್ಲಿ ಜಯ ಗಳಿಸುವಂಥದು) ಎಂಬ ಹೆಸರು ಬಂದಿತು. ಅನಂತರ ಶಿವನು ಇಲ್ಲಿ ವಾಸಿಸುತ್ತಿದ್ದನೆಂದು ಕಥೆ. ಮತ್ಸ್ಯಪುರಾಣದಲ್ಲಿ ಶಿವ ಮತ್ತು ಅಂಧಕನ (ಪಾರ್ವತಿಯಲ್ಲಿ ಆಸಕ್ತನಾಗಿ ಅಂಧಕಾರದಲ್ಲಿ ಮುಳುಗಿದ್ದ ದಾನವನ) ನಡುವೆ ಇಲ್ಲಿಯೇ ಯುದ್ಧವಾಯಿತೆಂದಿದೆ. ಪ್ರಹ್ಲಾದನೂ ಇಲ್ಲಿಯೇ ವಿಷ್ಣು ಮತ್ತು ಮಹಾಕಾಲೇಶ್ವರನ ದರ್ಶನ ಪಡೆದನೆಂದು ವಾಮನ ಪುರಾಣ ತಿಳಿಸುತ್ತದೆ. ಅವಂತೀಪುರಿಯು ಪಾಪಗಳನ್ನು ನಾಶಮಾಡಿ ಮುಕ್ತಿಯನ್ನು ಕೊಡುತ್ತದೆಂದು ಗರುಡ, ಅಗ್ನಿ ಮತ್ತು ಸೌರ ಪುರಾಣಗಳು ತಿಳಿಸುತ್ತವೆ. ಇಲ್ಲಿಯ ಮಹರ್ಷಿ ಸಾಂದೀಪನಿ ಆಶ್ರಮದಲ್ಲಿ ಕೃಷ್ಣ ಮತ್ತು ಬಲರಾಮರು 14 ವಿದ್ಯೆ ಮತ್ತು 64 ಕಲೆಗಳನ್ನು ಅಭ್ಯಾಸ ಮಾಡಿದರೆಂದು ವಿಷ್ಣು, ಪದ್ಮ, ಆದಿ, ಬ್ರಹ್ಮಾಂಡ, ಬ್ರಹ್ಮವೈವರ್ತ ಪುರಾಣಗಳು ಹಾಗೂ ಭಾಗವತ ತಿಳಿಸುತ್ತವೆ. ಶಿವಪುರಾಣವು ಅವಂತಿಕಾ ನಗರ ಹಾಗೂ ಮಹಾಕಾಲೇಶ್ವರನ ಮಾಹಾತ್ಮ್ಯೆಯನ್ನು ವರ್ಣಿಸಿದೆ. ಲಿಂಗಪುರಾಣವು ಮಹಾಕಾಲನನ್ನು ಸಮಸ್ತ ಮೃತ್ಯುಲೋಕದ ಸ್ವಾಮಿಯೆಂದು ತಿಳಿಸುತ್ತದೆ. ಇಡೀ ದೇಶವನ್ನೇ ದೇಹಾಕಾರದಲ್ಲಿ ನೋಡಿದರೆ, ಉಜ್ಜಯಿನಿ ಅದರ ನಾಭಿಯ ಪ್ರದೇಶವಾಗಿದೆ. ನಾಭಿಪ್ರದೇಶದಲ್ಲಿ ಮಹಾಕಾಲೇಶ್ವರ ನೆಲೆಸಿದ್ದಾನೆಂದು ವರಾಹಪುರಾಣ ಹೇಳುತ್ತದೆ. ಆದ್ದರಿಂದ ಇದಕ್ಕೆ ವೇದಾಂತದಲ್ಲಿ ಅಮೃತಸ್ಯ ನಾಭಿ, ಯೋಗದಲ್ಲಿ ಮಣಿಪೂರ ಚಕ್ರ ಹಾಗೂ ಬೇರೆಡೆ ಮಾತೃ ಸ್ಥಾನ, ಜಗದ್ಧಾತ್ರಿ ಸ್ಥಾನ ಎಂದೂ ಕರೆಯುತ್ತಾರೆ. ಇಲ್ಲಿಯ ಮಹಾಕಾಲೇಶ್ವರ ಲಿಂಗವು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಪರಿಗಣಿಸಿರುವುದರಿಂದಲೂ, ದಕ್ಷಿಣಾಮೂರ್ತಿಯೂ ಆದ್ದರಿಂದಲೂ, ಉಜ್ಜಯಿನಿ ಪುಣ್ಯಕ್ಷೇತ್ರವಾಗಿದೆ.

ಋಗ್ವೇದ ಸಂಹಿತೆಯಲ್ಲಿ ಐದು ಸಲ ಅವಂತಿ ಎಂಬ ಶಬ್ದ ಬಂದಿದ್ದರೂ ಅದು ಅವಂತಿ ನಗರ ಅಥವಾ ಅವಂತಿ ಪ್ರದೇಶವನ್ನು ಸೂಚಿಸುವುದಿಲ್ಲ. ಇದೇ ರೀತಿ ಯಜುರ್ವೇದ ಸಂಹಿತೆಗಳಲ್ಲೂ ಪ್ರಮುಖ ಬ್ರಾಹ್ಮಣ ಹಾಗೂ ಉಪನಿಷತ್ತುಗಳಲ್ಲೂ ಈ ಪದ ಅನೇಕ ಬಾರಿ ಬಂದರೂ ಅದರ ಅರ್ಥ ನಗರ/ಪ್ರದೇಶವನ್ನು ಸೂಚಿಸುವುದಿಲ್ಲ. ರಾಮಾಯಣದ ಕಿಷ್ಕಿಂಧಾ ಕಾಂಡದಲ್ಲಿ ರಾಮನು ದೂತರನ್ನು (ಸೀತೆಯನ್ನು ಹುಡುಕಲು) ಅವಂತಿಗೂ ಕಳಿಸಿದನೆಂದು ಹೇಳಿದೆ. ಭಾರತದ ವನಪರ್ವದಲ್ಲಿ ಉಜ್ಜಯಿನಿಯ ಮಹಾಕಾಲ ತೀರ್ಥ ಹಾಗೂ ಕೋಟಿತೀರ್ಥದ ಉಲ್ಲೇಖವಿದೆ. ಉದ್ಯೋಗ ಪರ್ವದಲ್ಲಿ ಅವಂತಿಯ ರಾಜರಾದ ವಿಂದ ಮತ್ತು ಅನುವಿಂದರ ತಂಗಿ ಮಿತ್ರವಿಂದಾ ಕೃಷ್ಣನೊಡನೆ ವಿವಾಹವಾಗಿದ್ದ ಹಾಗೂ ಇಬ್ಬರೂ ರಾಜರು ಕೌರವರ ಪರವಾಗಿ ಯುದ್ಧದಲ್ಲಿ ಕಾದಿದ್ದ ವಿಚಾರ ಬರುತ್ತದೆ. ಮಹಾಭಾರತದ ಯುದ್ಧಾನಂತರ ಹೈಹಯ ವಂಶದ ಶಾಖೆಗಳಲ್ಲಿ ಒಂದಾದ ವೀರಹೋತ್ರ ಮನೆತನದ 20 ರಾಜರು ಉಜ್ಜಯಿನಿಯಲ್ಲಿ ಆಳಿದರೆಂದು ಹೇಳುತ್ತಾರೆ.

ಸಂಸ್ಕೃತದ ಕವಿಗಳಾದ ಭಾಸ, ಶೂದ್ರಕ, ಭವಭೂತಿ, ಬಿಲ್ಹಣ, ಕಲ್ಹಣ, ಅಮರಸಿಂಹ, ಪದ್ಮಗುಪ್ತ, ಸೋಮದತ್ತ, ಕಾಳಿದಾಸ, ಬಾಣ ಮುಂತಾದವರು ತಮ್ಮ ಕೃತಿಗಳಲ್ಲಿ ಅವಂತಿಯ ವರ್ಣನೆಯನ್ನು ವಿಪುಲವಾಗಿ ಮಾಡಿದ್ದಾರೆ. ಕಾಳಿದಾಸನಂತೂ ತನ್ನ ಮೇಘಸಂದೇಶದಲ್ಲಿ ಉಜ್ಜಯಿನಿಯ ಬಹಳ ಸುಂದರ ವರ್ಣನೆಯನ್ನು ಕೊಟ್ಟಿದ್ದಾನೆ. ಸ್ವರ್ಗವಾಸದಲ್ಲಿ ಪುಣ್ಯ ಪೂರ್ತಿಕ್ಷಯವಾದ ಅನಂತರ ಭೂಮಿಯಲ್ಲಿ ಹುಟ್ಟಲೇಬೇಕಲ್ಲವೇ? ಅದಕ್ಕಾಗಿ ಸ್ವರ್ಗವಾಸಿಗಳು ತಮ್ಮ ಉಳಿದ ಪುಣ್ಯವನ್ನೆಲ್ಲಾ ಒಟ್ಟುಗೂಡಿಸಿ ಭೂಮಿಯ ಮೇಲೊಂದು ಸ್ವರ್ಗವಿರಲೆಂದು ನಿರ್ಧರಿಸಿ ಉಜ್ಜಯಿನಿಯನ್ನು ಸ್ಥಾಪಿಸಿದರೆನ್ನುತ್ತಾನೆ, ಕಾಳಿದಾಸ. ವಿದೇಶೀ ಪ್ರವಾಸಿಗಳಾದ ಯುವಾನ್‌ಚಾಂಗ್, ಟಾಲಮಿ, ಪೆರಿಪ್ಲಸ್, ಬರ್ನಿಯರ್, ಆಲ್ಬೆರೂನಿ ಮತ್ತು ವಿದೇಶಿ ಲೇಖಕರು ಉಜ್ಜಯಿನಿಯ ಬಗ್ಗೆ ಬರೆದಿದ್ದಾರೆ.

ಭಾರತೀಯ ಜ್ಯೋತಿಶ್ಶಾಸ್ತ್ರದ ಪ್ರಕಾರವೂ ಉಜ್ಜಯಿನಿಗೆ ಮಹತ್ತ್ವವಿದೆ. ಭೂಮಧ್ಯರೇಖೆ ಉಜ್ಜಯಿನಿಯ ಮೂಲಕವೇ ಹಾದು ಹೋಗುತ್ತದೆ, ಇದು ಕರ್ಕಾಟಕ ವೃತ್ತದ ಮೇಲೆಯೇ ಇದೆ. ಇದರ ಉತ್ತರ ಅಕ್ಷಾಂಶ 23.11 ಇದ್ದು ಪೂರ್ವ ರೇಖಾಂಶ 75.45 ಇದೆ. ಅಂದರೆ ಭೂಮಧ್ಯ ರೇಖೆ (ವಿಷುವತ್ ರೇಖಾ) ಲಂಕಾ, ಉಜ್ಜಯಿನಿಯಿಂದ ಮೇಲೆ ಹಾದು ಕುರುಕ್ಷೇತ್ರ ಮತ್ತು ಮೇರು ಪರ್ವತಕ್ಕೆ ಹೋಗುತ್ತದೆ. ಇನ್ನೊಂದು ರೀತಿಯಲ್ಲಿ ನೋಡಿದರೆ, ಸೂರ್ಯ ಮಾರ್ಚ್ 21ಕ್ಕೆ ಸರಿಯಾಗಿ ಉತ್ತರ ಧ್ರುವದ (ಮೇರು ಪರ್ವತದ) ನೆತ್ತಿಯ ಮೇಲಿದ್ದರೆ, ಮೂರು ತಿಂಗಳ ಅನಂತರ ಸರಿಯಾಗಿ ಉಜ್ಜಯಿನಿಯ ತಲೆಯ ಮೇಲೆ ಉರಿಯುತ್ತಾನೆ. ಇದರಿಂದ ಕಾಲಗಣನೆಯನ್ನು ಉಜ್ಜಯಿನಿಯಿಂದ ಶುರುಮಾಡಿದರೇ ಅದು ಸಮರ್ಪಕವಾಗಿರುವುದೆಂದು ಅಭಿಮತ. ಇದನ್ನು ಗ್ರೀನಿಜ್ ಎಂದೂ ಕರೆಯುತ್ತಾರೆ. ಕಾಲಜ್ಞಾನದ ಈ ಅದ್ಭುತ ವಿಶೇಷತೆಯಿಂದಾಗಿ ಇಲ್ಲಿಯ ಪ್ರಧಾನ ದೇವತೆ ಕಾಲವನ್ನೇ ಮೀರಿನಿಂತ ಮಹಾಕಾಲ. ಉಜ್ಜಯಿನಿ ಚಂದ್ರ ಮತ್ತು ಅಂಗಾರಕರ ಜನ್ಮಭೂಮಿ ಎಂಬ ನಂಬಿಕೆ ಇರುವುದರಿಂದ, ಭಾರತದ ತೀರ್ಥಯಾತ್ರೆಯೂ ಇಲ್ಲಿಂದಲೇ ಆರಂಭ. ಜಯಪುರದ ಜಯಸಿಂಹ (1728–34) ಇಲ್ಲಿ ಜಂತರ್ ಮಂತರ್ ಅಥವಾ ವೇದಶಾಲಾ ಎಂಬ ಖಗೋಳ ವೀಕ್ಷಣಾಲಯ ಕಟ್ಟಿಸಿದ.

ಐತಿಹಾಸಿಕವಾಗಿಯೂ ಉಜ್ಜಯಿನಿ ಎಂದಿನಿಂದಲೂ ಪ್ರಾಮುಖ್ಯವಾಗಿಯೇ ಇದೆ. ಉಜ್ಜಯಿನಿಯಲ್ಲಿ ಅನೇಕ ವಂಶೀಯರು ರಾಜ್ಯಭಾರ ಮಾಡಿದ್ದಾರೆ. ಕೆಲವೊಮ್ಮೆ ಉಜ್ಜಯಿನಿಗೆ ರಾಜಧಾನಿ ಪಟ್ಟವೂ ತಪ್ಪಿತ್ತು. ಬುದ್ಧನ ಕಾಲದಲ್ಲಿ (ಪ್ರ.ಶ.ಪೂ. ಸು. 6–5ನೆಯ ಶತಮಾನ) ಉಜ್ಜಯಿನಿಯನ್ನು ಚಂಡ ಪ್ರದ್ಯೋತನೆಂಬ ಪ್ರತಾಪಿ ರಾಜ ಆಳುತ್ತಿದ್ದ. ಪ್ರ.ಶ. ಪೂ. 273ರಲ್ಲಿ ಮಗಧರಾಜ ಬಿಂದುಸಾರನ ಆಳ್ವಿಕೆಗೆ ಉಜ್ಜಯಿನಿ ಸೇರಿತು. ಆಗ ಅವನ ಮಗ ಅಶೋಕ ಇಲ್ಲಿಯ ಪ್ರಶಾಸಕನಾಗಿದ್ದ. ಮೌರ್ಯರ ನಂತರ ಉಜ್ಜಯಿನಿ ಪ್ರ.ಶ. ಪೂ. 63ರ ವರೆಗೆ ಶುಂಗರ ಅಧೀನದಲ್ಲಿತ್ತು. ಅನಂತರ ಕಣ್ವರು (ಪ್ರ.ಶ. ಪೂ.63–27), ಆಂಧ್ರ ಸಾತವಾಹನರು (ಪ್ರ.ಶ.ಪೂ. 27–19), ಶಕ–ಕ್ಷತ್ರಪರು (ಪ್ರ.ಶ.ಪೂ.19–ಪ್ರ.ಶ.119), ಗುಪ್ತರು (ಪ್ರ.ಶ. ಸು 400–477), ಹೂಣರ ಆಕ್ರಮಣ (ಪ್ರ.ಶ.ಶ.5ನೆಯ ಶತಮಾನ), ಹೂಣರ ಮಿಹಿರಕುಲನ ಸೋಲು (ಪ್ರ.ಶ. 528), ಉಪಗುಪ್ತರು (ಪ್ರ.ಶ.ಶ.603–), ಥಾಣೇಶ್ವರ ಹರ್ಷವರ್ಧನನ ಅಧೀನದಲ್ಲಿ (ಪ್ರ.ಶ.648ರ ವರೆಗೆ), ಅನಂತರ ಪ್ರತಿಹಾರರು, ಗಹಲ್ವಾಡರು, ರಾಷ್ಟ್ರಕೂಟರು, ಪರಮಾರರು (ಪ್ರ.ಶ. 825–1235) ಉಜ್ಜಯಿನಿಯನ್ನು ಆಳಿದರು. ಮೇಲ್ಕಾಣಿಸಿದ ಕಾಲಮಾನದಲ್ಲಿ ಕೆಲವು ಗೊಂದಲಗಳಿದ್ದು, ವಿಕ್ರಮಾದಿತ್ಯನ ಕಾಲದ ಬಗ್ಗೆ ವಾದವಿವಾದಗಳಿಗೆ ಎಡೆಮಾಡಿಕೊಟ್ಟಿವೆ. ಆದರೂ ಹೆಚ್ಚು ಪ್ರಚಲಿತವಾಗಿ, ಒಪ್ಪಿಕೊಂಡಿರುವ ಬಹು ಮುಖ್ಯಸಂಗತಿಯೆಂದರೆ ವಿಕ್ರಮಾದಿತ್ಯನು ಪ್ರ.ಶ. ಪೂ. 57 ರಲ್ಲಿ ಶಕರನ್ನು ಗೆದ್ದು ಓಡಿಸಿ, ಹೊಸ ವಿಕ್ರಮ ಶಕೆಯನ್ನು ಶುರುಮಾಡಿದ್ದು. ವಿಕ್ರಮ ಶಕೆಯ ಆರಂಭ ಪ್ರ.ಶ. ಪೂ. 58 ಎಂದೇ ಆಗಿದೆ. ಶೌರಿಯೂ ಉದಾರಿಯೂ ವಿದ್ವಾಂಸನೂ ನೀತಿಪರಾಯಣನೂ ವಿದ್ವಜ್ಜನ ಮಂಡಲಿಮಂಡಿತನೂ ಆದ ಇವನ ರಾಜ್ಯದಲ್ಲೇ ಕಾಳಿದಾಸನೂ ಸೇರಿದಂತೆ ನವರತ್ನಗಳಿದ್ದುದು. ಇನ್ನೊಬ್ಬ ಪ್ರಸಿದ್ಧ ರಾಜನೆಂದರೆ ಪರಮಾರ ವಂಶದ ಭೋಜ ರಾಜ (ಪ್ರ.ಶ. 1010–1055). ಇವನು ಮಹಾಕಾಲೇಶ್ವರ ಮಂದಿರದ ಜೀರ್ಣೋದ್ಧಾರ ಮಾಡಿದ ಹಾಗೂ ರಾಜಧಾನಿಯನ್ನು ಉಜ್ಜಯಿನಿಯಿಂದ ಧಾರ್‌ಗೆ ಸ್ಥಳಾಂತರಿಸಿದ.

ಮುಂದಿನ 5 ಶತಕಗಳಲ್ಲಿ, ಅಂದರೆ ಪ್ರ.ಶ. 1235–1741ರ ವರೆಗೆ, ಉಜ್ಜಯಿನಿಯು ಅರಾಜಕತೆ ಮತ್ತು ಅಂಧಕಾರದಲ್ಲಿ ಮುಳುಗಿತ್ತು ಎನ್ನಬಹುದು. ಈ ಕಾಲ ಪ್ರಾರಂಭವಾದದ್ದು 1235ರಲ್ಲಿ ಶಮ್ಸುದ್ದೀನ್ ಅಲ್ತಮಷ್‌ನ ದಾಳಿ, ಲೂಟಿ ಮತ್ತು ಮಹಾಕಾಲ ಮಂದಿರವನ್ನು ಧ್ವಂಸ ಮಾಡುವುದರಿಂದ. ಅನಂತರ ಮುಸ್ಲಿಮರ ದಾಳಿ ಮತ್ತು ದಬ್ಬಾಳಿಕೆ ಒಂದಲ್ಲಾ ಒಂದು ರೀತಿ ನಡೆದೇ ಇತ್ತು. 1235–1290ರ ವರೆಗೆ ಅರಾಜಕತೆ ತಾಂಡವವಾಡುತ್ತಿದ್ದರೆ, 1293 ಮತ್ತು 1291ರಲ್ಲಿ ಎರಡು ಸಲ ಜಲಾಲುದ್ದೀನ್ ಖಿಲ್ಜಿ ದಾಳಿ ಮಾಡಿದ. 1322ರಲ್ಲಿ ಉಜ್ಜಯಿನಿಯು ತುಘಲಕ್ ರಾಜ್ಯದ ಸುಬಾ ಆಯಿತು. 1390ರಲ್ಲಿ (ದೆಹಲಿಯ ಮೇಲೆ ತೈಮೂರ್ ಲಂಗ್ ದಾಳಿ ಮಾಡಿದಾಗ) ಇಲ್ಲಿಯ ಸುಬೇದಾರ ಸ್ವತಂತ್ರನಾದ. 1405ರಲ್ಲಿ ಹೋಶಂಗ್‌ಶಾ ರಾಜಧಾನಿಯನ್ನು ಉಜ್ಜಯಿನಿಯಿಂದ ಮಾಂಡವ್‌ಗೆ ವರ್ಗಾಯಿಸಿದ ಮೇಲೆ ಉಜ್ಜಯಿನಿಯ ಪ್ರಾಮುಖ್ಯ ಕಡಿಮೆಯಾಯಿತಾದರೂ ಪರಕೀಯತೆಯ ಸೋಂಕು ಮತ್ತು ದಬ್ಬಾಳಿಕೆಯ ಧೂಳು ಕಡಿಮೆಯಾಗಲಿಲ್ಲ. ಹೋಶಂಗ್‌ಶಾನ ಮಗ ಮಹಮ್ಮದ್ ಘೋರಿಯನ್ನು ಮಂತ್ರಿ ಮಹಮ್ಮದ್ ಖಿಲ್ಜಿ ಕೊಂದ, ಅವನ ಮಗ ಗಿಯಾಸುದ್ದೀನನಿಗೆ ಅವನ ಮಗ ನಾಸಿರುದ್ದೀನನೇ ವಿಷ ಕೊಟ್ಟ. ಈ ನಾಸಿರುದ್ದೀನನೋ ಕುಡುಕ, ಇಲ್ಲಿಯ ಕಾಲಿಯಾದಹ ಮಹಲ್‌ನ ಜಲಕುಂಡಗಳಲ್ಲಿ ಕೂತು ತನ್ನ ಬೇಗೆಯನ್ನು ಪರಿಹರಿಸಿಕೊಳ್ಳುತ್ತಿದ್ದ. ಇವನ ಅನಂತರ ಸುಲ್ತಾನ್ ಮಹಮ್ಮದ್‌ನ (ದ್ವಿತೀಯ) ಕಾಲದಲ್ಲಿ ಅರಾಜಕತೆ ವಿಪರೀತವಾಗಿದ್ದನ್ನು ನೋಡಿ ಮಾಲ್ವಾ ಪ್ರದೇಶವನ್ನು ಗುಜರಾತಿನ ಬಹದ್ದೂರ್ ಶಾ ಗೆದ್ದುಕೊಂಡ (1510ರ ಅನಂತರ). ಇವನಿಂದ ದೆಹಲಿಯ ಹುಮಾಯೂನ್‌ನ ಕೈಗೆ ಹೋಯಿತು. ಅವನಿಂದ ಶೇರ್ ಶಾ (1543) ಉಜ್ಜಯಿನಿಯನ್ನು ತನ್ನ ಅಧೀನದಲ್ಲಿ ತೆಗೆದುಕೊಂಡು ಇಲ್ಲಿ ಬಾಜಬಹದ್ದೂರ್‌ನ್ನು ಸುಬಾದಾರನನ್ನಾಗಿ ನೇಮಿಸಿದ. ಈತನು ಗಾಯಿಕಾ ರೂಪಮತಿಯನ್ನು ಪ್ರೇಮಿಸಿ, ಅವಳನ್ನು ತನ್ನ ರಾಣಿಯಾಗಿ ಮಾಂಡೂವಿನಲ್ಲಿ ನೆಲೆಸಿದ್ದು ಒಂದು ರೋಚಕವಾದ ಪ್ರಣಯ ಕಥೆ. 1562ರಲ್ಲಿ ಅಕ್ಬರನ ವಶಕ್ಕೆ ಬಂದ ಮೇಲೆ, 1564ರಲ್ಲಿ ಅವನು ಉಜ್ಜಯಿನಿಯ ಕಾಲಿಯಾದಹ ಮಹಲ್‌ನಲ್ಲಿ ಕೆಲ ದಿನ ನೆಲಸಿದ್ದ. ಜಹಾಂಗೀರನೂ ಉಜ್ಜಯಿನಿಗೆ ಬಂದು ಇಲ್ಲಿಯ ಯೋಗಿ ಜದರೂಪ್‌ನ ದರ್ಶನ ಪಡೆದಿದ್ದ. 1720ರಲ್ಲಿ ಮೊಹಮ್ಮದ್ ಷಾ ಜಯಪುರದ ಜಯಸಿಂಹನಿಗೆ ಉಜ್ಜಯಿನಿಯ ಸುಬಾ ಒಪ್ಪಿಸಿದ. ಇವನ ಮೇಲೆ ಮರಾಠರ ಆಕ್ರಮಣ ಶುರುವಾಗಿ, 1737ರಲ್ಲಿ ಬಾಜೀರಾವ್ ಪೇಶ್ವೆ ಮಾಲ್ವಾದ ಶಾಸಕನಾದ.

ಮುಸ್ಲಿಮರ ದಾಳಿಗಳಿಂದ ಶುರುವಾದ ಈ ಗೊಂದಲಮಯ ವಾತಾವರಣ ಕೊನೆಯಾಗಿ, ಮಾಲ್ವಾದಲ್ಲಿ ರಾಜಕತೆಯ ಮತ್ತು ನೆಮ್ಮದಿ ನೆಲೆಸಿದ್ದು 1741ರ ಅನಂತರ ಜಯಸಿಂಹ ಮತ್ತು ಮರಾಠರೊಂದಿಗೆ ಸಂಧಿಯಾಗಿ ಮಾಲ್ವವನ್ನು ಸಿಂಧಿಯಗೆ ಒಪ್ಪಿಸಿದ ಮೇಲೆಯೇ. ಸಿಂಧಿಯ ರಾಜ್ಯದ ಪ್ರಥಮ ಸಂಸ್ಥಾಪಕ ರಾಣೋಜಿ ಸಿಂಧಿಯ ಆಳಿದಾಗ ಅವನ ಮಂತ್ರಿ ರಾಮಚಂದ್ರ ರಾವ್ ಸುಕ್ತಂಕರ್ ಉಜ್ಜಯಿನಿಯ ಮಂದಿರಗಳ ಜೀರ್ಣೋದ್ಧಾರ ಮಾಡಿದ. 1810ರಲ್ಲಿ, ದೌಲತ್‌ರಾವ್ ಸಿಂದಿಯನ ಕಾಲದಲ್ಲಿ, ರಾಜಧಾನಿಯನ್ನು ಉಜ್ಜಯಿನಿಯಿಂದ ಗ್ವಾಲಿಯರ್‌ಗೆ ವರ್ಗಾಯಿಸಲಾಯಿತು. ರಾಣೋಜಿಯ ಅನಂತರ ಮಹಾದಜಿ (1761–94), ದೌಲತ್‌ರಾವ್ (1794–1827), ದತ್ತಕ ಪುತ್ರ ಜನಕೋಜಿ (ತಾಯಿ ಬೈಜಾಬಾಯಿಯ ಆಡಳಿತದಲ್ಲಿ, 1827–1843), ದತ್ತಕ ಜಿಯಾಜಿರಾವ್ (1843–86), ಮಾಧವರಾವ್ (1886–1925) ಮತ್ತು ಕೊನೆಯಲ್ಲಿ ಜೀವಾಜಿರಾವ್ ಸಿಂಧಿಯಾ (1925–48) ಗ್ವಾಲಿಯರ್‌ನಿಂದ ಆಳಿದರು. 1948ರಲ್ಲಿ ಸೃಷ್ಟಿಯಾದ ಮಧ್ಯ ಭಾರತ ರಾಜ್ಯದಲ್ಲಿ ಗ್ವಾಲಿಯರ್ ವಿಲೀನವಾಯಿತು.

ವ್ಯಾಪಾರೋದ್ದಿಮೆಗಳಲ್ಲೂ ಉಜ್ಜಯಿನಿ ಹಿಂದಿನಿಂದಲೂ ಪ್ರಸಿದ್ಧಿಯಾಗಿತ್ತು. ಬೌದ್ಧ ಕಾಲದಲ್ಲಿ ಮಗಧದ ರಾಜಗೃಹದಿಂದ ಗೋದಾವರೀ ಹತ್ತಿರವಿರುವ ಪ್ರತಿಷ್ಠಾನದ (ಪೈಠನ್) ವರೆಗೂ ಇದ್ದ ದಕ್ಷಿಣಾಪಥವೆಂಬ ವ್ಯಾಪಾರ ಮಾರ್ಗದಲ್ಲಿ ಉಜ್ಜಯಿನಿ ಒಂದು ಪ್ರಮುಖ ತಂಗುದಾಣವಾಗಿತ್ತು. ಇಲ್ಲಿಂದ ಗೋಮೇಧಿಕ ಕಲ್ಲು, ಪಿಂಗಾಣಿ ಸಾಮಾನು, ನಾಜೂಕಾದ ಮಲ್‌ಮಲ್, ಒಳ್ಳೆಯ ಹತ್ತಿ ಮುಂತಾದ ಅನೇಕ ವಸ್ತುಗಳನ್ನು ರಫ್ತು ಮಾಡಲು ಬೇರೀಗಾಜ್‌ಗೆ (ಭರುಕಚ್ಛ) ಸಾಗಿಸಲಾಗುತ್ತಿತ್ತು. ಇಲ್ಲಿ ಗೋಮೇಧಿಕದ ಗಣಿಗಳಿದ್ದುವು. 2ನೆಯ ಶತಮಾನದಿಂದ 4ನೆಯ ಶತಮಾನದವರೆಗೆ ಶಕ ರಾಜ್ಯಭಾರದಲ್ಲಿ, ಅದರಲ್ಲೂ ಚಷ್ಟ ಮತ್ತು ರುದ್ರದಾಮರ ಆಳ್ವಿಕೆಯ ಕಾಲದಲ್ಲಿ, ಉಜ್ಜಯಿನಿ ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿದ್ದುರಿಂದಲೇ ಇದನ್ನು ಸಾರ್ವಭೌಮ ಎಂದೂ ಕರೆಯಲಾಗಿದೆ. ಈಗ ಬಟ್ಟೆಯ ಗಿರಣಿಗಳೂ, ಕಾರ್ಖಾನೆಗಳೂ ಇಲ್ಲಿ ಸ್ಥಾಪಿತವಾಗಿವೆ.

ಧಾರ್ಮಿಕವಾಗಿ ನೋಡಿದರೆ ಉಜ್ಜಯಿನಿಯಲ್ಲಿ ಹಿಂದೂ, ಬೌದ್ಧ, ಜೈನ ಹಾಗೂ ಮುಸ್ಲಿಂ ಧರ್ಮಗಳು ಸಾಕಷ್ಟು ಮಾರ್ಪಾಡಾಗುತ್ತಾ ಬೆಳೆದು ಬಂದವು. ಉಜ್ಜಯಿನಿಯನ್ನು ಚಂಡ ಪ್ರದ್ಯೋತನೆಂಬ ಪ್ರತಾಪಿ ರಾಜ (ಪ್ರ.ಶ.ಪೂ.ಸು. 6–5ನೆಯ ಶತಮಾನ) ಆಳುತ್ತಿದ್ದಾಗಲೇ ಬುದ್ಧನ ಪ್ರಸಿದ್ಧಿ ಇಲ್ಲಿಯವರೆಗೂ ಹರಡಿತ್ತು. ಬುದ್ಧನನ್ನು ತನ್ನ ರಾಜ್ಯಕ್ಕೆ ಕರೆತರಲು ರಾಜ ತನ್ನ ಪುರೋಹಿತನಾಗಿದ್ದ ಮಹಾಕಾತ್ಯಾಯನನನ್ನು ಕಳುಹಿಸಿದ. ಮಹಾಕಾತ್ಯಾಯನನೋ ಮೂರು ವೇದಗಳಲ್ಲಿ ಪಾರಂಗತ, ಮಹಾ ಪಂಡಿತ. ಅವನು ಬುದ್ಧನಿಂದ ಪ್ರಭಾವಿತನಾಗಿ, ತನ್ನ ಏಳು ಸಂಗಾತಿಗಳೊಂದಿಗೆ ಬೌದ್ಧಮತಾವಲಂಬಿಯಾದ. ವಾಪಸ್ಸು ಬರುವಾಗ ಶ್ರೇಷ್ಠಿಯ ಮಗಳೊಬ್ಬಳು ತನ್ನ ನೀಳವಾದ ಕೂದಲನ್ನೇ ಮಾರಿ ಈ ಭಿಕ್ಷುಗಳಿಗೆ ಊಟ ನೀಡಿದ್ದಳು. ಈ ಕಥೆಯನ್ನು ಕೇಳಿ, ರಾಜ ಅವಳನ್ನು ಮದುವೆಯಾದ, ತಾನೂ ಬೌದ್ಧನಾದ. ಅವರ ಮಗಳೆ ಮುಂದೆ ಕಾವ್ಯಗಳಲ್ಲಿ ಪ್ರಸಿದ್ಧಿಯಾದ ವಾಸವದತ್ತಾ. ಮಹಾಕಾತ್ಯಾಯನ ಬುದ್ಧನ ನೆಚ್ಚಿನ ಶಿಷ್ಯನಾಗಿ, ಬೌದ್ಧಗ್ರಂಥಗಳ ಪ್ರಸಿದ್ಧ ಭಾಷ್ಯಕಾರನಾದ. ಅಶೋಕನು ಉಜ್ಜಯಿನಿಯ ಪ್ರಶಾಸಕನಾಗಿದ್ದಾಗ ವಿದಿಶೆಯ ಕನ್ಯೆಯೊಬ್ಬಳನ್ನು ಮದುವೆಯಾಗಿ ಅವಳಿಂದ ಮಹೇಂದ್ರ ಮತ್ತು ಸಂಘಮಿತ್ರ ಎಂಬ ಮಕ್ಕಳನ್ನು ಪಡೆದ. ಕಾಲಾಂತರದಲ್ಲಿ ಬೌದ್ಧಧರ್ಮ ಪ್ರಚಾರಕ್ಕೆ ಇವರನ್ನೇ ಶ್ರೀಲಂಕಕ್ಕೆ ಕಳಿಸಲಾಯಿತು. ಉಜ್ಜಯಿನಿಯ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಪರಮಾರ್ಥ (499–569) ಬೌದ್ಧಧರ್ಮ ಪಾರಂಗತನಾಗಿ ಮತ ಪ್ರಚಾರಕ್ಕಾಗಿ ಚೀನ ದೇಶದ ಕ್ಯಾಂಟನ್‌ನಲ್ಲಿ 23ವರ್ಷ ಕಾಲವಿದ್ದ. ಇವನು ಅನೇಕ ಸಂಸ್ಕೃತ ಗ್ರಂಥಗಳನ್ನು ಚೀನಿ ಭಾಷೆಗೆ ಅನುವಾದ ಮಾಡಿದನಲ್ಲದೆ ಬೌದ್ಧ ದಾರ್ಶನಿಕ ವಸುಬಂಧನ ಚರಿತ್ರೆಯನ್ನು ಚೀನಿ ಭಾಷೆಯಲ್ಲಿ ಬರೆದ. ಇವನು ಚೀನಿ ಭಾಷೆಗೆ ಅನುವಾದಿಸಿದ (ಸು.560) ಸಾಂಖ್ಯಕಾರಿಕ ವೃತ್ತಿಯು ಶಂಕರಾಚಾರ್ಯರ ಪರಮ ಗುರುಗಳಾದ ಗೌಡಪಾದರು ಬರೆದಿದ್ದುದೆಂದು ಹೇಳಲಾಗಿದೆ. ಅನಂತರ ಉಜ್ಜಯಿನಿಯ ಅನೇಕ ಬೌದ್ಧ ಭಿಕ್ಷುಗಳು ಮಧ್ಯ ಏಷ್ಯಾಕ್ಕೆ ಪ್ರಚಾರಕ್ಕಾಗಿ ಹೋಗಿದ್ದರು. ಭಿಕ್ಷುಗಳಾದ ಲುಯಿಪ, ಜಂಟುಪ ಮೊದಲಾದವರು ಉಜ್ಜಯಿನಿಯಲ್ಲಿ ನೆಲೆಸಿದ್ದರು. ಉಜ್ಜಯಿನಿಯ ಸೇಠ್‌ನ ಮಗಳು ಈಸಿದಾಸಿ (ರಿಸೀದಾಸಿ)ಗೆ ತಂದೆಯು ಮಾಡಿದ ಮೂರು ಮದುವೆಗಳೂ ಸಫಲವಾಗಲಿಲ್ಲ. ಕೊನೆಗೆ ಈಕೆ ಸಂನ್ಯಾಸಿನಿಯಾಗಿ (ಥೇರಿಯಾಗಿ), ಸಕಲ ವಿದ್ಯಾ ಪಾರಂಗತಳಾಗಿ, ಬೌದ್ಧರಲ್ಲಿ ಒಬ್ಬ ಗಣನೀಯ ಥೇರಿಯಾಗಿ ಉಳಿದಳು. ಉಜ್ಜಯಿನಿಯ ವೇಶ್ಯೆ ಅಭಯಮಾತಾ, ತನ್ನ ಸಖಿ ಅಭಯಥೇರೀಯ ಜೊತೆ ಮಗ ಅಭಯನನ್ನು ಅನುಸರಿಸಿ ಬೌದ್ಧ ಸಂನ್ಯಾಸಿಯಾದ ಪ್ರಸಂಗವೂ ಬರುತ್ತದೆ. 7ನೆಯ ಶತಮಾನದಲ್ಲಿ ಭಿಕ್ಷು ಧರ್ಮರಕ್ಷಿತ ಇಲ್ಲಿಂದ ಚೀನಕ್ಕೆ ಬುದ್ಧನ ಸಂದೇಶ ತಲುಪಿಸಲು ಹೋಗಿದ್ದ. ಹೀಗಾಗಿ, ಬೌದ್ಧಧರ್ಮದ ಮೊದಲ ನೆಲಗಟ್ಟು, ತಿಳಿವಳಿಕೆ ಹಾಗೂ ಪ್ರಚಾರ ಕಾರ್ಯಗಳಲ್ಲಿ ಉಜ್ಜಯಿನಿಯ ಪಾತ್ರ ಮಹತ್ತ್ವದ್ದಾಗಿದೆ. ಹೀನಯಾನ 7ನೆಯ ಶತಮಾನದ ವರೆಗೂ ಇಲ್ಲಿ ಜನಪ್ರಿಯವಾಗಿತ್ತು. ಮಹಾಯಾನವು ವಜ್ರಾಯಾನ, ಸಿದ್ಧ ಮತ್ತು ತಾಂತ್ರಿಕ ಶೈವ ಸಂಪ್ರದಾಯಗಳಲ್ಲಿ ವಿಲೀನವಾಗಿತ್ತು. ಬೌದ್ಧಧರ್ಮ 12ನೆಯ ಶತಮಾನದವರೆಗೂ ಇಲ್ಲಿ ಪ್ರಚಲಿತವಾಗಿತ್ತು.

24ನೆಯ ತೀರ್ಥಂಕರ ಮಹಾವೀರ ಉಜ್ಜಯಿನಿಯಲ್ಲಿ ಕೆಲ ಸಮಯ ತಪಸ್ಸು ಮಾಡಿದ್ದ. ಬಟ್ಟೆಯನ್ನೇ ಉಡದ ನಿರ್ಗ್ರಂಥ ಜೈನಿಗಳು ಕ್ರಮೇಣ ಒಂದು ತುಂಡು ಬಟ್ಟೆ ಉಟ್ಟು ಅರ್ಧ ಫಲಕರೆನಿಸಿಕೊಂಡುದು ಉಜ್ಜಯಿನಿಯಲ್ಲಿ. ಅಶೋಕನ ಮೊಮ್ಮಗ ಸಂಪ್ರತಿ ಜೈನ ಧರ್ಮ ಪ್ರಚಾರಕ್ಕಾಗಿ ಸೈನಿಕರನ್ನು ವೇಷ ಮರೆಸಿ ಕಳಿಸುತ್ತಿದ್ದ. ಜೈನ ಸಾಹಿತ್ಯದಲ್ಲಿ ಮಹತ್ವಪೂರ್ಣ ಕೃತಿ ಭದ್ರಬಾಹು ಚರಿತ್ರ. ಅದರಲ್ಲಿ ಆಚಾರ್ಯ ಭದ್ರಬಾಹು ಉಜ್ಜಯಿನಿಗೆ ಚಂದ್ರಗುಪ್ತನ (ಮೌರ್ಯ ಚಂದ್ರಗುಪ್ತನೊ ಅಥವಾ ದ್ವಿತೀಯ ಚಂದ್ರಗುಪ್ತನೊ?) ದರ್ಬಾರಿಗೆ ಬಂದಾಗ ರಾಜನು ಜೈನಧರ್ಮವನ್ನು ಸ್ವೀಕರಿಸಿದ ವಿಷಯ ಬಂದಿದೆ. ತೀವ್ರ ಬರಗಾಲದ ಮುನ್ಸೂಚನೆಯಿಂದ ಭದ್ರಬಾಹುವು ತನ್ನ ಐನೂರು ಮುನಿಗಳೊಂದಿಗೆ ಶ್ರವಣಬೆಳಗೊಳಕ್ಕೆ ಬಂದುದು, ಬೇಡವೆಂದರೂ ಅಲ್ಲಿಯ ಗಿರಿಗೃಹದಲ್ಲಿ ಚಂದ್ರಗುಪ್ತನೂ ವಾಸಿಸತೊಡಗಿ ಅಲ್ಲೇ ಪ್ರಾಣ ಬಿಟ್ಟುದೂ ಈ ಚರಿತ್ರೆಯಲ್ಲಿ ಬಂದಿದೆ. ಮಾಣಿಕ್ಯನಾಥ, ನಯನಾಥ, ಪ್ರಭಾಚಂದ್ರ, ಅಮಿತಗಲಿ, ಅಶ್ತಾರ, ಶೋಭನ, ಧನಪಾಲ ಮುಂತಾದ ಜೈನ ಸಾಧುಗಳು ಮತ್ತು ಪಂಡಿತರು ಧಾರಾ ನಗರದಿಂದ ಉಜ್ಜಯಿನಿಗೆ ಆಗಾಗ್ಗೆ ಬರುತ್ತಿದ್ದರು. ಶ್ವೇತಾಂಬರ ಪಂಥ ಇಲ್ಲಿ ಹೆಚ್ಚು ಪ್ರಚಲಿತವಾಗಿತ್ತು, ಅದರಲ್ಲೂ 12–16ನೆಯ ಶತಮಾನದವರೆಗೆ.

ಇಲ್ಲಿಯ ಜ್ಯೋತಿರ್ಲಿಂಗ, ಮಹಾಕಾಲೇಶ್ವರ, ಮಹಾಕಾಳೀ, ಶಿವನ ಅಂಬುಮಯಿ ಮೂರ್ತಿ ಅಥವಾ ಪಂಚ ಗಂಗೆಗಳಲ್ಲಿ ಒಂದೆನಿಸಿದ ಶಿಪ್ರಾ ನದಿ, ಕಾಲ ಭೈರವ ಇವುಗಳಿಂದಾಗಿ ಅತ್ಯಂತ ಪ್ರಾಚೀನ ಕಾಲದಿಂದಲೂ ಉಜ್ಜಯಿನಿ ಹಿಂದೂಗಳ ಒಂದು ಪುಣ್ಯಕ್ಷೇತ್ರವೆನಿಸಿದೆ. ರಾಜಾ ಭರ್ತಹರಿ ತನ್ನ ರಾಜ್ಯವನ್ನೇ ತೊರೆದು ಅವಧೂತನಾಗಿ ನವನಾಥರ ವಜ್ರಯಾನ ಸಿದ್ಧ ಪಂಥವನ್ನು ಸೇರಿದ್ದು ಉಜ್ಜಯಿನಿಯಲ್ಲೆ. ಆದಿ ಶಂಕರಾಚಾರ್ಯರು (788–820) ಉಜ್ಜಯಿನಿಗೆ ಬಂದಿದ್ದರೆಂದೂ, ಇಲ್ಲಿಯ ದತ್ತ ಅಖಾಡಾದಲ್ಲಿರುವ ಲಿಂಗವನ್ನು ಅವರೇ ಪ್ರತಿಷ್ಠಾಪಿಸಿದರೆಂದು ಹೇಳುತ್ತಾರೆ. ಇಲ್ಲಿಯ ಪಾಶುಪತಾಚಾರ್ಯರನ್ನು ಸೋಲಿಸಿ ಆ ಮತದಲ್ಲಿನ ಬದಲಾವಣೆಗಳಿಗೆ ಆಚಾರ್ಯರೇ ಕಾರಣರಾದರೆಂದು ತಿಳಿದುಬರುತ್ತದೆ. ಮಾಧವಾಚಾರ್ಯನ (ವಿಜಯನಗರದ ಸಾಯಣಾಚಾರ್ಯನ ಸಹೋದರ) ಶಂಕರ ದಿಗ್ವಿಜಯದಲ್ಲಿ ಶಂಕರಾಚಾರ್ಯರು ಅವಂತಿ ದೇಶದಲ್ಲಿ ಭಟ್ಟ ಭಾಸ್ಕರನ ಅನಂತರ ಬಾಣ, ಮಯೂರ ಮತ್ತು ದಂಡಿಯನ್ನು ವಾಕ್ಯಾರ್ಥದಲ್ಲಿ ಸೋಲಿಸಿದ್ದರೆಂದು ನಿರೂಪಿಸ ಲಾಗಿದೆ. ಪಾಶುಪತರ ನಂಬಿಕೆ ಮತ್ತು ಆಚರಣೆಗಳಲ್ಲಿನ ಉಗ್ರತೆ ಕಡಿಮೆಯಾದುದು ಅನೇಕ ಕಾರಣಗಳಿಂದ–ಇಲ್ಲಿಯ ಹರಸಿದ್ಧಮಾತೆಯನ್ನು 33ನೆಯ ಶಕ್ತಿಪೀಠವಾಗಿ ಪರಿಗಣಿಸಿದ್ದು, ಗಢಕಾಳಿಕಾವನ್ನು ಕಾಮಕಲಾ ಕಾಳೀ ಎಂದೂ ಮಹಾಕಾಲ ಭೈರವನ ಸಂಗಾತಿಯೆಂದೂ ಗುರುತಿಸಿದ್ದು, ಗಢದ ಹಿಂದೆ ವಿಂಧ್ಯವಾಸಿನಿಯನ್ನು (ನಗರ ಕೋಟ್ ರಾಣಿ) ಸ್ಥಾಪಿಸಿದ್ದು, ಇವು ಕೆಲ ಕಾರಣಗಳು. ಕಾಳಿದಾಸ ಹೇಳಿದಂತೆ, ಉಜ್ಜಯಿನಿ ಮಹಾಕಾಲ ಮತ್ತು ವಿಷ್ಣುವಿನ ಸಂಗಮ ಸ್ಥಳ. ಇದೇ ವಿಷಯ ಮಹಾಕಾಲ ಮಂದಿರದ ಹಿಂದಿರುವ ನಾಗಬಂಧ ಶಾಸನದಲ್ಲಿ (11–12ನೆಯ ಶತಮಾನ) ಬಂದಿದೆ. ಅದರ ಪ್ರಕಾರ ವಿಷ್ಣುವಿನ ಹೃದಯ ಕಮಲದಂತಿರುವ ವಿಶ್ವದ ಮಧ್ಯದಲ್ಲಿ ಮಹಾಕಾಲ ಶಿವನು ನೆಲೆಸಿದ್ದಾನೆ. ಹಾಗೂ ಸ್ಕಾಂದ ಪುರಾಣದಲ್ಲಿ ಹೇಳಿರುವಂತೆ ಶಿಪ್ರಾ ನದಿಯಲ್ಲಿ ವೈಷ್ಣವ ಮತ್ತು ಮಹೇಶ್ವರ ಜ್ವರಗಳು ಒಂದಾಗಿರುವ ವಿಷಯವೂ ಇದನ್ನೇ ಪ್ರತಿನಿಧಿಸುತ್ತದೆ. ನಾಥ ಸಂಪ್ರದಾಯದ ಪ್ರವರ್ತಕನೂ ಗೋರಖನಾಥನ ಗುರುವೂ ಆದ ಮತ್ಸೇಂದ್ರನಾಥ ಇಲ್ಲಿದ್ದನೆಂದು ಹೇಳುತ್ತಾರೆ. 16ನೆಯ ಶತಮಾನದಲ್ಲಿ ಪುಷ್ಟಿಮಾರ್ಗ ಪ್ರವರ್ತಕರಾದ ವಲ್ಲಭಾಚಾರ್ಯರು ಇಲ್ಲಿಯ ಸಾಂದೀಪನಿ ಆಶ್ರಮದಲ್ಲಿ ತಮ್ಮ ಬೈಠಕ್ಕನ್ನು ಸ್ಥಾಪಿಸಿದ್ದರು. ಶ್ರೀನಾಥ್‌ಜೀ ಕಿ ಹವೇಲಿ, ಗೋವರ್ಧನನಾಥ್‌ಜೀ ಕಿ ಹವೇಲೀ, ಗೋಪಾಲ ಮಂದಿರಗಳು ಇಲ್ಲಿಯ ವೈಷ್ಣವ ಸಂಪ್ರದಾಯದ ನೆಲೆಯನ್ನು ತೋರಿಸುತ್ತವೆ. ಇವೇ ಅಲ್ಲದೆ, ಈಚೆಗಿನ ಆರ್ಯ ಸಮಾಜ, ರಾಧಾಸ್ವಾಮಿ ಸತ್ಸಂಗ, ರಾಮಕೃಷ್ಣ ಮಿಷನ್, ಥಿಯೊಸಾಫಿಕಲ್ ಸೊಸೈಟಿ, ಅರವಿಂದ ಸೊಸೈಟಿ, ಮುಕ್ತಾನಂದ ಮಿಷನ್ ಮುಂತಾದ ಅನೇಕ ಧರ್ಮ ಸಂಸ್ಥೆಗಳು ಉಜ್ಜಯಿನಿಯಲ್ಲಿ ಕಾರ್ಯನಿರತವಾಗಿವೆ. ಆದರೂ ಇಲ್ಲಿಯ ಮಹಾಕಾಲ, ಚೌರಾಸೀ (84) ಸಿದ್ಧ ಅಥವಾ ಯೋಗ ಲಿಂಗಗಳು, ಪಂಚಕ್ರೋಶಿ ಯಾತ್ರಾ, ನಾಗ ಪಂಚಮಿಯಲ್ಲಿ ಮಹಾಕಾಲ ಮಂದಿರದ 2ನೆಯ ಮಹಡಿಯ ಮೇಲಿರುವ ನಾಗ ಸಂಧ್ಯೇಶ್ವರನ (ಕೇವಲ ವರ್ಷಕ್ಕೊಮ್ಮೆ) ದರ್ಶನ, ಕುಂಭಮೇಳ, ಹರಸಿದ್ಧಿ ಮಾತಾ ಎಲ್ಲವೂ ಉಜ್ಜಯಿನಿಯನ್ನು ಒಂದು ಮುಖ್ಯ ಶೈವ ಕ್ಷೇತ್ರವಾಗಿಸುತ್ತವೆ.

ಉಜ್ಜಯಿನಿಯಲ್ಲಿ ಮುಸ್ಲಿಮ್ ಧರ್ಮವೂ ಬೆಳೆದಿದೆ. ಬೋಹ್ರಾಗಳು ಮೊಗಲರ ಕಾಲದಿಂದಲೂ ಇಲ್ಲಿ ನೆಲಸತೊಡಗಿದರು. ಸಂಗಮವರಿ ಕಲ್ಲಿನ ರೋಜಾ ಮಸೀದಿ ಇವರ ಕೇಂದ್ರವಾಗಿದೆ. ಹಿಂದೂಗಳ ನಂತರ ಮುಸ್ಲಿಮರದೇ (ಶಿಯ ಮತ್ತು ಸುನ್ನಿ) ಜನಸಂಖ್ಯೆಯಲ್ಲಿ ಅತಿ ದೊಡ್ಡ ಗುಂಪು.

ಪುರಾತತ್ತ್ವ ಇಲಾಖೆಯ ಉತ್ಖನನಗಳ ಪ್ರಕಾರ ಉಜ್ಜಯಿನಿಯ ಗಢಕಾಳಿಕಾ ಪ್ರದೇಶದಲ್ಲಿ ಪ್ರ.ಶ.ಪೂ. 8ನೆಯ ಶತಮಾನದ ಅವಶೇಷಗಳು ದೊರಕಿವೆ. ಐದು ಮೈಲಿ ಉದ್ದದ ದಿಬ್ಬವನ್ನು ಮರ ಮತ್ತು ಮಣ್ಣುಗಳಿಂದ ನದಿಯ ದಂಡೆಯಲ್ಲಿ ಕಟ್ಟಿ ಪ್ರವಾಹದಿಂದ ರಕ್ಷಣೆ ಪಡೆಯುತ್ತಿದ್ದರೆಂದು ಪ್ರ.ಶ. ಪೂ. 5ನೆಯ ಶತಮಾನದ ಅವಶೇಷಗಳಿಂದ ತಿಳಿದುಬರುತ್ತದೆ. ಕಲ್ಲು, ಇಟ್ಟಿಗೆಗಳು, ಚಕ್ರ ಮತ್ತು ಕೈಯಿಂದ ತಯಾರಿಸಿದ ಮಡಕೆಗಳು, ಬೀಸುವ ಕಲ್ಲು, ಕಬ್ಬಿಣ ಮತ್ತು ದಂತದ ಮೊನೆಗಳಿರುವ ಬಾಣ, ದಂತ ಮುದ್ರೆಗಳು (ಪ್ರ.ಶ.ಪೂ. 3–2ನೆಯ ಶತಮಾನ) ಉತ್ಖನನಗಳಲ್ಲಿ ಸಿಕ್ಕಿವೆ.

ಸಾಂಸ್ಕೃತಿಕವಾಗಿ ಉಜ್ಜಯಿನಿ ಎಂದಿನಿಂದಲೂ ಉಚ್ಛ್ರಾಯ ಸ್ಥಿತಿಯಲ್ಲೇ ಇದ್ದಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕಾಶಿ ಮತ್ತು ಉಜ್ಜಯಿನಿ ನಾಗರಿಕತೆಯ ತೊಟ್ಟಿಲಾಗಿದ್ದುವು ಎನ್ನಬಹುದು. ಮಹಾಭಾರತದ ಕಾಲದಲ್ಲಿ ಸಾಂದೀಪನಿ ಆಶ್ರಮ ದೂರದ ದ್ವಾರಕ ಮತ್ತು ಮಥುರಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿತ್ತು. ಮೊದಲೇ ಹೇಳಿದಂತೆ, ಬುದ್ಧನ ಕಾಲದಲ್ಲಿ ರಾಜ ಚಂಡಪ್ರದ್ಯೋತ ಪ್ರಖ್ಯಾತನಾಗಿದ್ದ. ಅಶೋಕ ಇಲ್ಲಿ ಪ್ರಶಾಸಕನಾಗಿದ್ದ, ಮತ್ತು ಎರಡು ಸಾವಿರ ವರ್ಷಗಳಿಗೂ ಹಿಂದೆಯೇ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ದನ್ವಂತರಿಯೇ ಮೊದಲಾದ ನವರತ್ನಗಳು ಪ್ರಸಿದ್ಧರಾಗಿದ್ದರು. ಇವೆಲ್ಲದರಿಂದ ಉಜ್ಜಯಿನಿಯ ಸಾಂಸ್ಕೃತಿಕ ನೆಲೆಯನ್ನು ಕಾಣಬಹುದು. ಕಾಶಿ ಶಾಸ್ತ್ರೀಯವಿದ್ಯೆಗಳ ತವರಾಗಿದ್ದರೆ ಉಜ್ಜಯಿನಿ ಸೃಜನಾತ್ಮಕ ಕಲೆಗಳ ಬೀಡಾಗಿ ಬೆಳಗಿತು. ಉಜ್ಜಯಿನಿಯ ಅನೇಕ ಹೆಸರುಗಳನ್ನೇ ನೋಡಿದರೆ, ಅವುಗಳಲ್ಲಿ ಐತಿಹಾಸಿಕ ಮೂಲಕ್ಕಿಂತಲೂ ಕಾವ್ಯಾತ್ಮಕ ಭಾವನೆಗಳೇ ಹೆಚ್ಚು ಅನಿಸುತ್ತದೆ. ಭಾಸ, ಶೂದ್ರಕ, ಕಾಳಿದಾಸ, ರಾಜಶೇಖರ, ಭಾರವಿ,

ಸುಬಂಧು, ದಂಡಿ, ಬಾಣ, ಭವಭೂತಿ, ಭರ್ತೃಹರಿ, ರಾಜ ಭೋಜ, ಪದ್ಮಗುಪ್ತ–ಪರಿಮಲ್ ಮುಂತಾದ ದೇಶದ ಅತ್ಯಂತ ಪ್ರಮುಖ ಸಂಸ್ಕೃತ ಕವಿ/ನಾಟಕಕಾರರುಗಳೆಲ್ಲಾ ಉಜ್ಜಯಿನಿಯವರೇ.

ಸಾಹಿತ್ಯ ಪ್ರಪಂಚದಲ್ಲಿ ರಾಮಾಯಣ ಮತ್ತು ಮಹಾಭಾರತಗಳ ನಂತರ ಗುಣಾಢ್ಯನ ಬೃಹತ್ ಕಥಾ ಸಾಕಷ್ಟು ಕಲಾತ್ಮಕವಿದ್ದಿರಬೇಕು. ಈಗ ಬೃಹತ್ ಕಥಾ ಉಪಲಬ್ಧವಿಲ್ಲದಿದ್ದರೂ ಅದನ್ನೇ ಅನುಸರಿಸಿ ಬರೆದ ಕ್ಷೇಮೇಂದ್ರನ ಬೃಹತ್ ಕಥಾಸರಿತ್ಸಾಗರ, ಸೋಮದೇವನ ಕಥಾಸರಿತ್ಸಾಗರ ಮತ್ತು ಜಯರಥನ ಹರಿಚರಿತ ಚಿಂತಾಮಣಿ ಜನಪ್ರಿಯವಾಗಿವೆ. ಗುಣಾಢ್ಯ ಉಜ್ಜಯಿನಿಯ ರಾಜನಾಗಿದ್ದ ಎನ್ನುತ್ತಾರೆ. ಐತಿಹಾಸಿಕ ಸತ್ಯ ಏನೇ ಇರಲಿ, ಬೃಹತ್ ಕಥೆಯಲ್ಲಿ ಬಂದಿರುವ ಉಜ್ಜಯಿನಿಯ ಪ್ರಣಯ ಕಥೆಗಳ ವಿವರಣೆಯನ್ನು ಭಾಸನ ಸ್ವಪ್ನ ವಾಸವದತ್ತ, ಹರ್ಷನ ರತ್ನಾವಳಿ ಮುಂತಾದ ನಾಟಕಗಳಲ್ಲಿ ನೋಡಬಹುದು. ಭರ್ತೃಹರಿಯು ಮಾಲ್ವಾ ದೇಶದ ಗಣಾಧಿಪತಿಯಾಗಿ 12 ವರ್ಷ ಆಳಿದ. ತಮ್ಮ ವಿಕ್ರಮಾದಿತ್ಯನ ಮೇಲೆ ಅಸಾಧ್ಯ ಪ್ರೀತಿ ವಿಶ್ವಾಸಗಳಿದ್ದರೂ, ಹೆಂಡತಿ ಪಿಂಗಳಾಳ ಮಾಯಾಬಲೆಗೆ ಸಿಕ್ಕು ತಮ್ಮನನ್ನೇ ದೂರ ಮಾಡಿದ. ಹೆಂಡತಿಯ ಅನೈತಿಕತೆ ಬೆಳಕಿಗೆ ಬಂದಮೇಲೆ, ವೈರಾಗ್ಯ ತಾಳಿ ವಿಕ್ರಮಾದಿತ್ಯನಿಗೆ ರಾಜ್ಯ ಒಪ್ಪಿಸಿ, ತಾನು ಸಂನ್ಯಾಸಿಯಾಗಿ ಉಜ್ಜಯಿನಿಯ ಹತ್ತಿರದ 'ಭರ್ತಹರಿ ಗುಹೆ'ಯೊಳಗೆ ನೆಲಸಿದ. ಇವನ ಶೃಂಗಾರ ಶತಕ, ವೈರಾಗ್ಯ ಶತಕ ಮತ್ತು ನೀತಿ ಶತಕ ಮಧುರವೂ, ಅನುಭವಪೂರ್ಣವೂ, ಅಮೂಲ್ಯವೂ ಆಗಿವೆ. ಜನಪ್ರಿಯವಾಗಿರುವ ಪಂಚತಂತ್ರದ ಕಥೆಗಳು ಶುರುವಾಗುವುದೂ ಉಜ್ಜಯಿನಿಯಿಂದಲೇ. ವೇತಾಲ ಪಂಚವಿಂಶತಿ, ದ್ವಾತ್ರಿಂಶತಿಪುತ್ತಲಿಕ ಮತ್ತು ಶುಕಸಪ್ತತಿ ಮೊದಲಾದ ಭ್ರಮಾಲೋಕದ ಅದ್ಭುತ ಕಥೆಗಳು ಹುಟ್ಟಿದ್ದೂ ಉಜ್ಜಯಿನಿಯಲ್ಲೇ. ಬಾಣಭಟ್ಟನ ಕಾದಂಬರಿ ಗದ್ಯಕಾವ್ಯದ ಉತ್ಕೃಷ್ಟ ಉದಾಹರಣೆ. ಇದು ಹಾಗೂ ಹರ್ಷಚರಿತ ಅಪೂರ್ಣವಾಗಿವೆ. ಬಾಣನಿಗೆ ಉಜ್ಜಯಿನಿಯ ಮೇಲಿದ್ದ ಪ್ರೇಮವನ್ನು ಅವನ ಕಾದಂಬರಿಯಲ್ಲಿ ನೋಡಬಹುದು. ಕಿರಾತಾರ್ಜುನೀಯ ಎಂಬ ಮಹಾಕಾವ್ಯ ಬರೆದ ಭಾರವಿ ಉಜ್ಜಯಿನಿಯವನೆಂದೂ, ಕಾಳಿದಾಸನ ಸಮಕಾಲೀನನೆಂದೂ ಹೇಳುತ್ತಾರೆ. ಅವನು 500–550ರಲ್ಲಿ ಇದ್ದನೆಂದು ಇನ್ನೊಂದು ಮತ. ಕಾಳಿದಾಸ ಉಪಮೆಗೆ ಪ್ರಸಿದ್ಧಿಯಾದರೆ, ದಂಡಿಯು ಪದಲಾಲಿತ್ಯಕ್ಕೆ. ಇವನು ಶಂಕರಾಚಾರ್ಯರೊಡನೆ ವಾಕ್ಯಾರ್ಥ ಮಾಡಿದ್ದನೆಂದು ಹೇಳಿರುವುದರಿಂದ ಇವನ ಕಾಲ ಎಂಟನೆಯ ಶತಮಾನ ಎನ್ನಬಹುದು. ಆದರೆ ಇವನು ಭಾಮಹನಿಗಿಂತ (700) ಹಿಂದಿದ್ದನೆಂದೂ ಸಿದ್ಧಪಡಿಸುತ್ತಾರೆ. ಇವನ ದಶಕುಮಾರಚರಿತ ಮತ್ತು ಕಾವ್ಯಾದರ್ಶ ಎಂಬ ಎರಡು ಗ್ರಂಥಗಳು ಉಪಲಬ್ಧವಿವೆ. ಕಾವ್ಯಾದರ್ಶ ಒಂದು ಉತ್ತಮ ಅಲಂಕಾರ ಗ್ರಂಥವೆಂದು ಪರಿಗಣಿಸಲಾಗಿದೆ. ಇವರುಗಳೇ ಅಲ್ಲದೆ, ಸುಬಂಧು (ವಿಕ್ರಮಾದಿತ್ಯನ ಸಮಕಾಲೀನ, ವಾಸವದತ್ತ ಎಂಬ ಗದ್ಯಕಾವ್ಯ), ಮಹಾಕವಿ ಧನಪಾಲ (ರಾಜಾ ಭೋಜನ ಅಥವಾ ರಾಜ ಮುಂಜನ ಆಸ್ಥಾನ ಪಂಡಿತ, ತಿಲಕಮಂಜರಿ ಕಾವ್ಯ, ಕೊನೆಗೆ ಶೋಭನ ಜೊತೆಗೆ ಜೈನಧರ್ಮಿಯಾದ), ಆರ್ಯಸೂರ್ (5ನೆಯ ಶತಮಾನ, ಬೋಧಿಸತ್ವನ ಪೂರ್ವಜನ್ಮದ ವೃತ್ತಾಂತ ತಿಳಿಸುವ ಜಾತಕಮಲ ಎಂಬ ಗ್ರಂಥ), ಮಯೂರ ಕವಿ (ಬಾಣಭಟ್ಟನ ಸಮಕಾಲೀನ, ಜಟಿಲ ಕಾವ್ಯ ಮಯೂರಾಷ್ಟಕ), ವಾಲ್ಮೀಕಿಯ ಅಪರಾವತಾರ ಎನಿಸದ ಭರ್ತಮೆಂಠ್ (6ನೆಯ ಶತಮಾನ, ಕಾವ್ಯ ಹಯಗ್ರೀವವಧ), ಸಿದ್ಧಸೇನ್ ದಿವಾಕರ್ (ಜೈನ ಸಾಹಿತ್ಯಕಾರ) ಮುಂತಾದ ಅನೇಕ ಕವಿಗಳು ಉಜ್ಜಯಿನಿಯಲ್ಲಿ ಬಾಳಿ ಬೆಳಗಿದರು.

ಕವಿಗಳೇ ಅಲ್ಲದೆ, ಉಜ್ಜಯಿನಿಯಲ್ಲಿ ಪ್ರಕಾಂಡ ಪಂಡಿತರೂ ಅನೇಕರಿದ್ದರು. ಉವಟನು (10–11ನೇ ಶತಮಾನ) ಶುಕ್ಲ ಯಜುರ್ವೇದೀಯ ಮಾಧ್ಯಂದಿನ (ವಾಜಸನೇಯಿ) ಸಂಹಿತದ ಭಾಷ್ಯ ಬರೆದು ಸುಪ್ರಸಿದ್ಧನಾದ. ಇದೇ ಶಾಖೆಯ ಶತಪಥ ಬ್ರಾಹ್ಮಣದ ಮೇಲೆ ಇಲ್ಲಿಯ ಹರಿಸ್ವಾಮಿ (ವಿಕ್ರಮಾದಿತ್ಯನ ಕಾಲ) ಭಾಷ್ಯ ಬರೆದಿದ್ದ. ಇವನ ಗುರು ಸ್ಕಂಧಸ್ವಾಮಿಯು ಋಗ್ವೇದ ಸಂಹಿತೆಯ ಮೇಲೆ ಬರೆದ ಭಾಷ್ಯವೂ ಪಾಂಡಿತ್ಯ ಪೂರ್ಣವಾದುದು. ಇವರುಗಳ ಜೊತೆಗೆ ಬೌದ್ಧ ಧರ್ಮದ ಮಹಾಕಾತ್ಯಾಯನನ ಭಾಷ್ಯ, ಧರ್ಮಪಾಲನ ಜೈನ ಧರ್ಮಸಾಹಿತ್ಯ ಮುಂತಾದವುಗಳನ್ನೂ ನೆನಪಿಸಿಕೊಳ್ಳಬಹುದು. ರಸಾಯನ ಶಾಸ್ತ್ರ ಪಂಡಿತ ವ್ಯಾಡಿ ಉಜ್ಜಯಿನಿಯವನು. ವಿಕ್ರಮಾದಿತ್ಯನ ರಾಜಸಭೆಯಲ್ಲಂತೂ ನವರತ್ನಗಳೇ ಇದ್ದರೆಂದು ಜನಜನಿತವಾಗಿದೆ. ಇವರುಗಳು– ಧನ್ವಂತರಿ (ಆಯುರ್ವೇದ), ಕ್ಷಪಣಕ (ಜೈನ ಯತಿ), ಅಮರಸಿಂಹ (ಅಮರಕೋಶದ ಕರ್ತೃ), ಶಂಕುಕ (ಶಿಕ್ಷಾಚಾರ್ಯ, ಅಲಂಕಾರ ಶಾಸ್ತ್ರ), ವೇತಾಲಭಟ್ಟ (ಮಂತ್ರವಿದ್ಯಾ ಪ್ರವೀಣ, ನೀತಿಜ್ಞ), ಘಟಖರ್ಪರ (ಧನಶಾಸ್ತ್ರ), ಕಾಳಿದಾಸ (ಕವಿ), ವರಹಾಮಿಹಿರ (ಜ್ಯೋತಿರ್ವಿದ್ಯಾ) ಮತ್ತು ವರರುಚಿ (ವ್ಯಾಕರಣ). ವಿಕ್ರಮಾದಿತ್ಯನ ತರಹ ಚಂಡಪ್ರದ್ಯೋತ, ರುದ್ರದಾಮನ್, ವಾಕ್ಪತಿರಾಜ ಮುಂಜ, ರಾಜಾ ಭೋಜ ಮುಂತಾದ ಅನೇಕ ರಾಜರು ಈ ಎಲ್ಲಾ ಕವಿ, ಪಂಡಿತ ಮತ್ತು ವಿಶೇಷಜ್ಞರನ್ನು ಪ್ರೋತ್ಸಾಹಿಸಿ, ಗೌರವಿಸಿ ಬೆಳೆಸಿದರು.

ಕೊನೆಗೆ ಉಜ್ಜಯಿನಿಯ ನೆಲದ ಗುಣವೇನು ಎಂಬ ಪ್ರಶ್ನೆ ಏಳುವುದು ಸಹಜ. ಗುಣಾಢ್ಯನ ಬೃಹತ್ ಕಥಾದಿಂದ ಹಿಡಿದು ಮುಂದೆ ಬಂದಿರುವ ಅನೇಕ ಕಾವ್ಯ, ಕಥೆ, ನಾಟಕಗಳಿಗೆ, ಉಜ್ಜಯಿನಿಯ ಸೃಜನಾತ್ಮಕತೆಗೆ ಏನಾದರೂ ಮೂಲಭೂತವಾದ ಸ್ಫೂರ್ತಿ–ನೆಲೆ ಇದೆಯೇ ಎಂಬ ಪ್ರಶ್ನೆ ಏಳುವುದು ಸಹಜ. ಇಲ್ಲಿಯ ಪ್ರಣಯ ಕಥೆಗಳು ಇಲ್ಲಿಯ ಸಾಹಸ ಕಥೆಗಳನ್ನೂ ಮೀರಿಸಿ ರೋಚಕವಾಗಿವೆ. ಇಲ್ಲಿಯ ಸಾಹಸ ಕಥೆಗಳನ್ನು ಬದಿಗಿಡಬಹುದು, ಸ್ಥಳ ಪುರಾಣ ಇತಿಹಾಸಗಳನ್ನು ಜನ ಮರೆಯಬಹುದು. ಆದರೆ ಇಲ್ಲಿಯ ಪ್ರಣಯ ಕಥೆಗಳನ್ನು ಮರೆಯುವುದು ಸಾಧ್ಯವೇ ಇಲ್ಲ. ಉಜ್ಜಯಿನಿಯ ಪ್ರಣಯ ಕಥೆಗಳು ಒಂದೇ ಎರಡೇ. ಇಲ್ಲಿಯ ಮಹಾಕಾಲವನದ ಅಪ್ಸರ ತೀರ್ಥದಲ್ಲಿ ಊರ್ವಶಿಯೇ ಬಂದು ರಾಜ ಪುರೂರವನ ಕೈ ಹಿಡಿದಳು; ತನ್ನ ನೀಳವಾದ ಕೂದಲನ್ನೇ ಮಾರಿ ಭಿಕ್ಷುಗಳಿಗೆ ಊಟ ಹಾಕಿದ್ದನ್ನು ಕೇಳಿ ಮನಸೋತ ರಾಜ ಆಕೆಯನ್ನು ಪಟ್ಟದ ರಾಣಿ ಮಾಡಿಕೊಂಡ; ಆ ಪ್ರಣಯದ ಕುವರಿ ವಾಸವದತ್ತಾ ರಾಜ ಉದಯನ ಜೊತೆ ಓಡಿದಳು; ಇದೇ ರೀತಿ ವೇಶ್ಯೆಯ ಮಗಳು ವಸಂತಸೇನಾ–ಚಾರುದತ್ತರ ಪ್ರಣಯ, ಪದ್ಮಾವತಿ–ಬಿಂಬಸಾರರ ಪ್ರಣಯ; ರಾಜ ಚಂಡಪ್ರದ್ಯೋತ ಹಾಗೂ ಅಶೋಕ ಇವರ ಪ್ರಣಯ ಸಂಗಾತಿಗಳಾದ ವಿದಿಶಾ, ತೆಲಪ್ರಾಲಿಯ ವೈಶ್ಯ ಕನ್ಯೆಯರು; ರಾಜ ಗರ್ಧವಿಲ್ಲ ಪ್ರೇಮಕ್ಕಾಗಿ ರಾಜ್ಯವನ್ನೇ ಪಣವಾಗಿಡಲು ತಯಾರಾಗಿದ್ದುದು; ಪರಮಾರ ರಾಜ ಮುಂಜ ಚಾಳುಕ್ಯ ರಾಜಕುವರಿ ಮೃಣಾಲವತಿಯ ಪ್ರೇಮ ಬಲೆಯಲ್ಲಿ ಸಿಕ್ಕಿ ಮೋಸಹೋದದ್ದು; ರಾಜ ಸಿಂಧುರಾಜ ಮತ್ತು ನಾಗ ಶಶಿಪ್ರಭಾ ಇವರ ಪ್ರಣಯ; ರಾಜ ಭರ್ತೃಹರಿ ತನ್ನ ರಾಣಿ ಪಿಂಗಳಾ ಜೊತೆಯ ಪ್ರೇಮೋನ್ಮಾದದಲ್ಲಿ ಮೋಸ ಹೋಗಿ ಸಂನ್ಯಾಸಿಯಾದದ್ದು; ಇವಲ್ಲದೆ ಇನ್ನೂ ಅನೇಕಾನೇಕ ಪ್ರಣಯ ಕಥೆಗಳ ರೋಮಾಂಚನದ ಸುಖ, ವಿರಹದ ವ್ಯಥೆಯಿಂದ ಪುಳಕಿತವಾದ ಗಾಳಿಯೂ ಉಸಿರುತ್ತದೆ. ಇವೆಲ್ಲಾ ಇತಿಹಾಸ ತೆಗೆದಿಟ್ಟಿರುವ ಕಥೆಗಳು. ಇನ್ನು ಜನಪದದಲ್ಲಿ ಹಾಡಿರುವುವೆಷ್ಟೋ, ಜನಮನದಲ್ಲಿ ಕಾಡಿರುವುವೆಷ್ಟೋ, ಹಾಗೇ ಬಾಡಿರುವುವೆಷ್ಟೋ! ಮಾಲ್ವಾದ ವಾತಾವರಣವೋ, ಶಿಪ್ರಾ ನದಿಯ ಮೇಲೆ ಬೀಸುವ ಗಾಳಿಯೋ, ಅದರಲ್ಲಿ ಸೂಸಿರುವ ರಸಿಕತೆಯೋ, ಇಲ್ಲಿ ತೂರಿಬಂದ ಮೇಘದೂತನ ಕಪ್ಪು ಛಾಯೆಯೋ, ವಿರಹ ವೇದನೆಯೋ, ಹಗಲುಗನಸುಗಳೋ, ಇನ್ನೇನೋ ಒಟ್ಟಿನಲ್ಲಿ ಇಲ್ಲಿಯ ಇತಿಹಾಸದಲ್ಲಿ ಸಾಹಸವಿದೆ, ರೋಮಾಂಚನವಿದೆ, ಕಥೆಗಳಲ್ಲಿ ಪ್ರಣಯ ಕೇಳಿ ಇದೆ, ಇಲ್ಲಿಯ ಜಾನಪದದಲ್ಲಿ ಭಾವನೆಯಿದೆ, ಕಲ್ಪನೆಯಿದೆ, ಗೀತೆಯಲ್ಲಿ, ಮಾತಿನಲ್ಲಿ ಮಾಧುರ್ಯವಿದೆ, ಕುಡಿನೋಟದಲ್ಲಿ ಮಾದಕತೆಯಿದೆ, ಚಂಚಲತೆಯಿದೆ. ಎಲ್ಲವೂ ಉಜ್ಜಯಿನಿ ಎಂಬ ಪುಷ್ಪ ಕರಂಡಿಕಾದಲ್ಲಿ ಒಟ್ಟು ಸೇರಿ ರಸಿಕತೆಯ ನಿತ್ಯ ನೂತನ ಘಮವನ್ನು ಸೂಸುತ್ತಲೇ ಇರುತ್ತವೆ! ಮೇಘದೂತದಲ್ಲಿ ಕಾಳಿದಾಸನೇ ಹೇಳಿರುವಂತೆ "ಓ, ಮೇಘವೇ! ಉಜ್ಜಯಿನಿಯ ರಮಣಿಯರ ನೋಟದಿಂದ ಪುಳಕಿತನಾಗದಿರೆ, ಆ ಮಿಂಚಿನ ಸೆಳೆತಕೆ ನಿನ್ನೆದೆ ಮಿಡಿಯದಿರೆ, ನಿನ್ನ ಬಾಳೇ ಬರಿದು!". (ಕೆ.ಪಿ.)

**ಉಜ್ಜಯಿನಿ²**: ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿರುವ ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠ ಇರುವ ಸ್ಥಳ. ಇಲ್ಲಿಯ ಮರುಳಸಿದ್ಧ ದೇವಾಲಯದ ವಿಶಾಲ ಸಂಕೀರ್ಣದಲ್ಲಿ ಗೌರಮ್ಮ, ವೀರಭದ್ರ, ಚೌಡೇಶ್ವರಿ, ಅರಕೆ ಬಸವಣ್ಣ, ಬಂಗಾರ ಬಸವಣ್ಣ, ಮುದ್ದಿರಾಮ, ಗುಂಡ ಬ್ರಹ್ಮಯ್ಯರ ಕಿರು ದೇವಾಲಯಗಳಿವೆ ಮತ್ತು ಸಿದ್ಧಲಿಂಗ ಶಿವಚಾರ್ಯರ ಗದ್ದುಗೆ ಇದೆ. ಮರುಳಸಿದ್ಧ ದೇವಾಲಯದ ಶಿಖರದಲ್ಲಿ ಶ್ರೀಪೀಠದ ಮೂಲಗೋತ್ರ ಪುರುಷನಾದ ನಿಂತ ನಂದಿ ವಿಗ್ರಹವಿದೆ. ಪೀಠದ ಮಠ ಮತ್ತು ದೇವಾಲಯಗಳು ಗೋಡೆಗಳಿಂದ ಆವೃತಗೊಂಡಿವೆ. ಪೀಠದ ವಿಶಾಲ ವಾಸ್ತು–ಶಿಲ್ಪಕಲೆ ಹಾಗೂ ಅದರ ಸಾಂಸ್ಕೃತಿಕ ವೈವಿಧ್ಯತೆಯನ್ನು ನೋಡಿ ಹಂಪಿಯನ್ನು ಹೊರನೋಡು, ಉಜ್ಜಯಿನಿಯನ್ನು ಒಳನೋಡು ಎಂಬ ನಾಣ್ನುಡಿ ಹುಟ್ಟುಕೊಂಡಿದೆ.

ಮಹಾದ್ವಾರಗಳು: ಉಜ್ಜಯಿನಿ ಸದ್ಧರ್ಮ ಪೀಠಸ್ಥಳದ ಸುತ್ತಲೂ ಪ್ರಾಕಾರವಿದ್ದು ಉತ್ತರ ದಕ್ಷಿಣ ದಿಕ್ಕಿನ ಗೋಡೆಗಳಲ್ಲಿ ಗೋಪುರ ಸಹಿತ ಮಹಾದ್ವಾರಗಳಿವೆ. ತಂಗಾಳಿ ಗೋಪುರವೆಂದು ಕರೆಯುವ ಉತ್ತರ ದ್ವಾರ, ದಕ್ಷಿಣ ದ್ವಾರ–ಕೈಲಾಸ ದ್ವಾರವೆಂದು ಕರೆಯುವ ಈ ಎರಡು ಮಹಾದ್ವಾರಗಳು ಇತ್ತೀಚಿನ ವರ್ಷಗಳಲ್ಲಿ ಜೀರ್ಣೋದ್ಧಾರಗೊಂಡಿವೆ. ದಕ್ಷಿಣ ಮಹಾದ್ವಾರದ ಮೇಲೆ ವರ್ಣಮಯ ಶಿವಪಾರ್ವತಿಯರ ವಿಗ್ರಹವನ್ನು ಪ್ರತಿಷ್ಠಾಪಿಸಿದೆ. ಬದಿಗಳಲ್ಲಿ ಶ್ರೀಪೀಠದ ಲಿಂಗೈಕ್ಯ ಜಗದ್ಗುರುಗಳಾದ ಸಿದ್ಧಲಿಂಗಶಿವಚಾರ್ಯರ ಮತ್ತು ಸಿದ್ದೇಶ್ವರ ಶಿವಾಚಾರ್ಯರ ಗಾರೆ ವಿಗ್ರಹಗಳಿವೆ. ಅಧಿಷ್ಠಾನದಲ್ಲಿ ಭಕ್ತರ ಹಾಗೂ ಇನ್ನಿತರ ಶಿಲ್ಪಗಳಿವೆ.

ಉತ್ತರದ ಮಹಾದ್ವಾರಕ್ಕೆ ಎತ್ತರವಾದ ಗೋಪುರವಿದ್ದು ಅದರಲ್ಲಿ ನಾಲ್ಕು ಅಂತಸ್ತುಗಳಿವೆ. ದ್ವಾರ ಬಂಧದಲ್ಲಿ ನಾಲ್ಕು ಶಾಖೆಗಳಿವೆ. ಇವುಗಳ ಪಕ್ಕದಲ್ಲಿ ಶೈವದ್ವಾರಪಾಲಕರ ಮತ್ತು ದ್ವಾರ ಕಂಬದ ಬದಿಗಳಲ್ಲಿ ಪುಷ್ಪಧಾರಣೆಯ ಶಿಲ್ಪಗಳಿವೆ. ಲಲಾಟ ಬಿಂಬದಲ್ಲಿ ನಂದಿ ಸಮೇತ ಶಿವಪಾರ್ವತಿಯರ ಬಿಂಬವಿದೆ. ಅದರ ಬದಿಗಿನ ಒಳಮುಖಿ ಪಟ್ಟಿಕೆಯಲ್ಲಿ ಶೈವ ದ್ವಾರಪಾಲಕ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಉತ್ತರದ ಮಹಾದ್ವಾರದ ಒಳಗಡೆ ಪ್ರವೇಶದ ಪಾರ್ಶ್ವಗಳಲ್ಲಿನ ಎತ್ತರದ ಅಧಿಷ್ಠಾನದಲ್ಲಿ ಸಿಂಹ, ಆಂಜನೇಯ ಮತ್ತು ನಾಗರಹಾವಿನ ಉಬ್ಬುಶಿಲ್ಪಗಳಿದ್ದು ಛತ್ತಿನಲ್ಲಿ ಕಮಲದ ಅಲಂಕರಣವಿದೆ. ಉತ್ತರದ ಮಹಾದ್ವಾರದ ಎದುರಿಗೆ ಭವ್ಯವಾದ ಸ್ತಂಭಗಳುಳ್ಳ ಒಂದು ಉಯ್ಯಾಲೆ ಮಂಟಪವಿದೆ. ಈ ಮಂಟಪದ ಕಂಬಗಳ ಮೇಲೆ ಅಲ್ಲಲ್ಲಿ ಉಬ್ಬು ಶಿಲ್ಪಗಳಿದ್ದು ಅವು ಆನೆ, ದ್ವಾರಪಾಲಕ, ಹಂಸ, ಬಾಳೆಯ ಗಿಡ, ಶಿವಲಿಂಗವನ್ನು ಪೂಜಿಸುವ ಕಿನ್ನರ, ಬೇಡರ ಕಣ್ಣಪ್ಪ, ನೃತ್ಯಗಾರರು, ನಟರಾಜ, ನೃತ್ಯಗಾರ್ತಿ, ಕೈಮುಗಿದು ಕುಳಿತ ಟಗರು ತಲೆಯುಳ್ಳ ದಕ್ಷಬ್ರಹ್ಮ ಮುಂತಾದ ಉಬ್ಬುಶಿಲ್ಪಗಳಿವೆ.

ಮರುಳಸಿದ್ಧ ದೇವರ ದೊಡ್ಡ ದೇವಾಲಯ ಉತ್ತರಾಭಿಮುಖವಾಗಿದೆ. ಇದರಲ್ಲಿ ಐದು ಗರ್ಭಗೃಹಗಳು, ಒಂದು ಅಂತರಾಳ ಮಹಾಮಂಟಪ ಮತ್ತು ಮೂರು ಮುಖಮಂಟಪಗಳಿವೆ. ಗರ್ಭಗೃಹದಲ್ಲೂ ಸಿದ್ದೇಶ್ವರ ಅಥವಾ ಜಗದ್ಗುರು ಮರುಳಸಿದ್ದಸ್ವಾಮಿ ಶಿವಲಿಂಗವಿದೆ.

ಶಿವಲಿಂಗಕ್ಕೆ ಸ್ವಾಮಿಯ ಮುಖವಾಡವನ್ನು ಧರಿಸುವರು. ಸಭಾಮಂಟಪದಲ್ಲಿ ನಾಲ್ಕು ಕೇಂದ್ರ ಸ್ತಂಭಗಳುಳ್ಳ ರಂಗಮಂಟಪವಿದೆ. ಇದರ ಮಧ್ಯ ಛತ್ತಿನಲ್ಲಿ ಗೋಲಾಕಾರದ ಸಹಸ್ರದಳವುಳ್ಳ ಕಮಲದ ಭುವನೇಶ್ವರಿ ಕೆತ್ತನೆ ವೈಶಿಷ್ಟ್ಯಪೂರ್ಣವಾಗಿದೆ. ಕಂಬಗಳ ಬೋದುಗೆಯ ಮೇಲೆ ಛತ್ತಿನಲ್ಲಿ ಚೌಕಾದ ಪಟ್ಟಿಕೆಗಳಿದ್ದು ಅವುಗಳಲ್ಲಿ ಪತ್ನಿಯರ ಸಮೇತ ವಾಹನರೂಢರಾದ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಭುವನೇಶ್ವರಿಯ ಮೂರನೆಯ ಮತ್ತು ಆರನೆಯ ಸುತ್ತುಗಳಲ್ಲಿ ಕ್ರಮವಾಗಿ 126 ಮತ್ತು 32 ಚೆಲುವಿನ ಸ್ತ್ರೀ ವಿಗ್ರಹಗಳಿವೆ. ಇದರ ಮಧ್ಯಭಾಗದಲ್ಲಿ ನಕ್ಷತ್ರಾಕಾರದ ಮೂರು ವೃತ್ತಾಕಾರ ಪಟ್ಟಿಕೆಗಳಿವೆ. ಈ ಪಟ್ಟಿಕೆಗಳ ಒಳಮುಖದಲ್ಲಿ ಕಿರು ಕಮಲಗಳಿವೆ. ಈ ಕಮಲ ಪೀಠಗಳ ಮೇಲೆ ಸುತ್ತಲೂ 174 ಯತಿವರ್ಯರ


ಶಾಲಿಮರಳಸಿದ್ಧ ದೇವಾಲಯದ ಗರ್ಭಗೃಹ

ಶಿಲ್ಪಗಳಿರುವುದು ಒಂದು ಅಪರೂಪದ ವಿಶಿಷ್ಟ ಲಕ್ಷಣ. ಸಭಾಮಂಟಪವೂ 15 ಅಂಕಣಗಳಷ್ಟು ವಿಸ್ತಾರವಾಗಿದ್ದು ಮಧ್ಯದಲ್ಲಿ ಐದೈದು ಕಂಬಗಳ ಎರಡು ಸಾಲುಗಳಿವೆ. ಇದರ ಒಂದೊಂದು ಬದಿಯಲ್ಲಿ ಎರಡೆರಡು ಗರ್ಭಗೃಹಗಳಿವೆ. ಅಂತರಾಳದ ಹೊರಗಿನ ಎರಡು ಬದಿಗಳಲ್ಲಿ ಮತ್ತು ಸಭಾ ಮಂಟಪದ ಎರಡು ಬದಿಗಳಲ್ಲಿ ಎರಡೆರಡು, ಒಟ್ಟು ಹತ್ತು ದೇವಕೋಷ್ಠಗಳಿವೆ. ಅಂತರಾಳದ ಬದಿಗಳಲ್ಲಿಯ ದೇವಕೋಷ್ಠಗಳಲ್ಲಿ ಗಣೇಶ ಮತ್ತು ವಸ್ತ್ರಾಭರಣಗಳಿಂದ ಅಲಂಕೃತನಾಗಿ ಪದ್ಮಾಸನದಲ್ಲಿರುವ ಒಬ್ಬ ಯತಿಯ ಶಿಲ್ಪವಿದೆ. ಹಸ್ತಗಳ ಯೋಗಮುದ್ರೆಯಲ್ಲಿವೆ. ಇದು ಪಂಚಾಚಾರ್ಯರಲ್ಲಿ ಒಬ್ಬರಾದ ಪಂಡಿತಾರಾಧ್ಯರನ್ನೂ ಪ್ರತಿನಿಧಿಸುತ್ತದೆಯೆಂದು ಹೇಳಿಕೆ.

ಸಭಾಮಂಟಪ ಮತ್ತು ಉತ್ಸವ ಮಂಟಪಗಳ ಬದಿಗೆ ನಂದಿಯ ವಿಗ್ರಹವಿದೆ. ನಂದಿಯನ್ನು ಮರುಳಸಿದ್ಧ ಸ್ವಾಮಿಯ ಕಡೆಗೆ ಮುಖಮಾಡಿ ಕೂಡಿಸಲಾಗಿದೆ. ಸಭಾಮಂಟಪದ ಬಲಗಡೆ ಎರಡನೆಯ ಗರ್ಭಗೃಹದಲ್ಲಿ ಭವ್ಯವಾದ ಗೋಪಾಲಕೃಷ್ಣನ ವಿಗ್ರಹವನ್ನು ಅಲಂಕೃತ ಆಯತಾಕಾರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದ ಎಡಬದಿಯ ಎರಡನೆಯ ಗರ್ಭಗೃಹ ಚಚ್ಚೌಕಾಗಿದ್ದು ಅದರ ಮಧ್ಯದಲ್ಲಿ ಎತ್ತರ ಆಯತಾಕಾರ ಪೀಠದ ಮೇಲೆ ದ್ವಿಭುಜ ವೀರಭದ್ರನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ವೀರಭದ್ರನಿಗೆ ವಸ್ತ್ರಾಭರಣದ ಜೊತೆ ರುಂಡಮಾಲೆಯನ್ನು ಧರಿಸಲಾಗಿದೆ. ಬಾಗಿಲು ಚೌಕಟ್ಟಿನಲ್ಲಿರುವ ಶೈವ ದ್ವಾರಪಾಲಕರ ಕೈಗಳಲ್ಲಿ ಕತ್ತಿ, ಡಮರು, ತ್ರಿಶೂಲ ಮತ್ತು ನಾಗಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ವೀರಭದ್ರನ ಗರ್ಭಗೃಹದ ಉತ್ತರ ಮುಖದ ಹೊರಗೋಡೆಯ ಗೂಡಿನಲ್ಲಿ ಯೋಗಮುದ್ರೆಯಲ್ಲಿ ಕುಳಿತ ಯತಿಯ ವಿಗ್ರಹವಿದೆ. ಬದಿಗಳಲ್ಲಿ ಹಣ್ಣಿನ ತಾಟುಹಿಡಿದ ಸೇವಕಿಯರು, ಇಬ್ಬರು ವಾದ್ಯಮೇಳದವರೂ ಇದ್ದಾರೆ. ಸಭಾಮಂಟಪದ ಎಡಗಡೆ ಮತ್ತು ಗೋಪಾಲಕೃಷ್ಣನ ಗರ್ಭಗುಡಿಯ ಮುಂದೆ ಇರುವ ಮಂಟಪದಲ್ಲಿ ಶ್ರೀಮರುಳಸಿದ್ಧಸ್ವಾಮಿಯ ಮತ್ತು ಗೌರಮ್ಮರುಳ್ಳ ವಿಗ್ರಹಗಳಿವೆ. ಶಿವ-ಪಾರ್ವತಿಯರ ಪ್ರತಿರೂಪದಲ್ಲಿ ಬೆಳ್ಳಿ ಲೋಹದ ಈ ವಿಗ್ರಹವನ್ನು ಉತ್ಸವಮೂರ್ತಿಯನ್ನಾಗಿ ಬಳಸುವರು. ಈ ಸಭಾಮಂಟಪದ ಮುಂದಿನ ಕಂಬದಲ್ಲಿ ಸೇವುಣರ ಕಾಲದ (1268) ಒಂದು ಶಾಸನವೂ ಸಭಾಮಂಟಪದ ಮುಂದಿನ ಅಂಕಣದ ತೊಲೆಯಲ್ಲಿ ಒಂದು ಶಾಸನವೂ ಇದೆ. ಇಲ್ಲಿರುವ ಎರಡು ಲೋಹದ ಗಂಟೆಗಳ ಮೇಲೂ ಶಾಸನಗಳಿವೆ. ಹಾಗೇ ಸಭಾಮಂಟಪದ ಪೂರ್ವ-ಪಶ್ಚಿಮದಲ್ಲಿ ಇರುವ ಎರಡು ಮುಖಮಂಟಪಗಳಿವೆ. ಪಶ್ಚಿಮ ಮುಖಮಂಟಪದ ಎಡಭಾಗದ ಕಟ್ಟೆಯ ಮೇಲೆ ಕತ್ತಿಯನ್ನು ಕೆಳಗಡೆ ಇಟ್ಟು ನಿಂತಿರುವ ಭಕ್ತನೊಬ್ಬನ ಶಿಲ್ಪವಿದೆ. ಆತನ ಬಲಗಡೆಯ ಕಟ್ಟೆಯ ಮೇಲೆ ವಿಜಯನಗರ ಅರಸ ಸದಾಶಿವರಾಯನ ಕಾಲದ ಶಾಸನವಿದೆ.

ಮಹಾಮಂಟಪದಲ್ಲಿ ಬೃಹದಾಕಾರದ ವೀರಭದ್ರನ ವಿಗ್ರಹವಿದೆ. ವೀರಭದ್ರ ಚತುರ್ಭುಜಧಾರಿ, ಕೈಗಳಲ್ಲಿ ಕತ್ತಿ, ಬಾಣ, ಬಿಲ್ಲು ಮತ್ತು ಗುರಾಣಿಗಳಿವೆ. ಕಿರೀಟದಲ್ಲಿ ಚಿಕ್ಕ ಶಿವಲಿಂಗವಿದೆ. ಹಣೆಯ ಮಧ್ಯ ಮೂರನೆಯ ಕಣ್ಣಿದೆ. ಆತನು ಕಿರೀಟಮುಕುಟ, ಕುಂಡಲ, ಹಾರ ರುಂಡಮಾಲ, ಪಟ್ಟಿ, ಕಡಗ, ಬಳೆ ಇತ್ಯಾದಿ ಆಭರಣಗಳನ್ನು ಧರಿಸಿದ್ದಾನೆ. ಸೊಂಟಪಟ್ಟಿಯಲ್ಲಿ ಕಠಾರಿಯನ್ನು ಕಟ್ಟಿದ್ದಾನೆ. ಕೆಳಗಡೆ ಬಲಕ್ಕೆ ದಕನು ಕೈಮುಗಿದು ನಿಂತಿದ್ದಾನೆ.

ಅರಿಕೆಗುಡಿ: ಮರುಳಸಿದ್ಧ ದೇವಾಲಯದ ಮಹಾಮಂಟಪಕ್ಕೆ ಹೊಂದಿದ ನಂದಿ ದೇವಾಲಯದ ಹಿಂದುಗಡೆ ಇರುವ ದೇವಾಲಯವನ್ನು ಅರಿಕೆಗುಡಿ ಎಂದು ಕರೆಯುವರು. ಭಿತ್ತಿಯ ಮೂರು ಮುಖಗಳ ಮಧ್ಯಭಾಗದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಶಿವನ ವಿಗ್ರಹವಿದ್ದು ಪೀಠದಲ್ಲಿ ನಂದಿಯಿದೆ. ನೃತ್ಯ ಗಣೇಶ, ಗೋಪಾಲಕೃಷ್ಣ ವೀರಭದ್ರ ಮುಂತಾದ ವಿಗ್ರಹಗಳಿವೆ. ಮರಳಸಿದ್ಧ ದೇವಾಲಯದ ಗರ್ಭಗೃಹದ ಪಶ್ಚಿಮ ಗೋಡೆಯ ಪ್ರನಾಳ ಪಟ್ಟಿಕೆಯನ್ನು ಬದಿಯ ಮಜ್ಜನ ಕುಂಡ ತೀರ್ಥಕ್ಕೆ ಸೇರಿಸಲಾಗಿದ್ದು ದೇವರ ಅಭಿಷೇಕದ ನೀರು ಪೀಠದ ಜಲಹರಿಯ ಮೂಲಕ ಮಜ್ಜನ ಕುಂಡವನ್ನು ಸೇರುವುದು. ಈ ಕುಂಡಕ್ಕೆ ಒಂದು ತೆರೆದ ಸ್ತಂಭ ಮಂಟಪವಿದ್ದು ಅದಕ್ಕೆ ಎತ್ತರದ ಅಧಿಷ್ಠಾನ ಮತ್ತು ದ್ರಾವಿಡ ಮಾದರಿಯ ಶಿಖರವಿದೆ. ಈ ದೇವಾಲಯದ ಸಭಾಮಂಟಪ ಮತ್ತು ಮಹಾಮಂಟಪಗಳ ಮಾಳಿಗೆ ಅಂಚಿನ ಸುತ್ತಲೂ ಇಟ್ಟಿಗೆ-ಗಾರೆಯ ಗೋಡೆಯಿದ್ದು ಅದರಲ್ಲಿ ಸಾಲಾಗಿ ಗೂಡುಗಳಿವೆ. ಈ ಗೂಡುಗಳಲ್ಲಿ ಗಾರೆಯ ದೇವತೆಗಳ ಬಣ್ಣದ ವಿಗ್ರಹಗಳಿವೆ. ಈ ದೇವಾಲಯದ ಎಡಬದಿಯಲ್ಲಿ ಅದಕ್ಕೆ ಸಮಾನಾಂತರವಾಗಿ ಪೂರ್ವಾಭಿಮುಖವಾದ ಗೌರಮ್ಮ ದೇವಾಲಯವಿದೆ. ಇಲ್ಲಿರುವ ಪಾರ್ವತಿಯ ವಿಗ್ರಹವನ್ನೆ ಗೌರಮ್ಮನೆಂದು ಕರೆಯುವರು. ಈ ದೇವಿಯು ದ್ವಿಭುಜಳಾಗಿ, ಕೈಗಳಲ್ಲಿ ಕಮಲಗಳನ್ನು ಎತ್ತಿ ಹಿಡಿದಿದ್ದು, ವಸ್ತ್ರಾಭರಣಭೂಷಿತಳಾಗಿದ್ದಾಳೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಶಿಖರವಿದ್ದು ಅದರ ಮುಂದೆ ದೇವಕೋಷ್ಠವುಳ್ಳ ಅರ್ಧವೃತ್ತಾಕಾರದ ಶುಕನಾಸಿಯಿದೆ.

ಮರುಳಸಿದ್ಧ ದೇವಾಲಯದ ಹಿಂಭಾಗದಲ್ಲಿ ಒಂದು ಶಿಲಾಸ್ತಂಭ ಮತ್ತೆರಡು ಕಬ್ಬಿಣದ ದೀಪಸ್ತಂಭಗಳು ಇದರ ಮುಂಭಾಗದಲ್ಲಿವೆ. ಒಂದು ದೀಪಸ್ತಂಭದಲ್ಲಿ ಕೈಮುಗಿದು ಕುಳಿತ ಭಕ್ತ, ನಂದಿ, ಗಣೇಶ ಹಾಗೂ ನಟರಾಜನ ಚಿತ್ರಗಳಿವೆ. ನಟರಾಜನು ನಾಗರ ಹಾವಿನ ಮೇಲೆ ನೃತ್ಯ ಮಾಡುತ್ತಿದ್ದು ಬಲಗೈಯಲ್ಲಿ ಫಲ ಮತ್ತು ಎಡಗೈಯಲ್ಲಿ ನಾಗರಹಾವಿನ ಬಾಲವನ್ನು ಹಿಡಿದಿರುವ ಚಿತ್ರವಿದೆ. ಇವುಗಳ ಜೊತೆಗೆ ಈ ದೇವಾಲಯ ಬದಿಗಳಲ್ಲಿ ಏಕಶಿಲೆಯ ಎರಡು ನಂದಿಕಂಬಗಳನ್ನು ನಿಲ್ಲಿಸಲಾಗಿದೆ. ಈ ದೇವಾಲಯದ ಎದುರಿಗೆ ನಂದಿ ಮಂಟಪವಿದೆ. ಇಲ್ಲಿ ಯತಿಗಳುಳ್ಳ ತೋರಣದ ಮಧ್ಯಭಾಗದಲ್ಲಿ ನವಗ್ರಹ ಪೀಠವಿದ್ದು ಅದನ್ನು ಎತ್ತರದ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲಾಗಿದೆ. ಮಧ್ಯದಲ್ಲಿ ಜೋಡುಪಾದಗಳ ಉಬ್ಬುಶಿಲ್ಪವಿದೆ. ಈ ಪಾದಗಳ ಸುತ್ತಲೂ ಕಮಲಗಳ ಅಲಂಕರಣವಿದೆ.

ಬಸವಣ್ಣನ ದೇವಾಲಯ ಬಂಗಾರ ಬಸವಣ್ಣನ (ನಂದಿ) ದೇವಾಲಯದ ಪೂರ್ವಕ್ಕಿದ್ದು ದಕ್ಷಿಣಕ್ಕೆ ಮುಖಮಾಡಿದೆ. ಇದನ್ನು ಬಂಗಾರದ ಕಾಳಮ್ಮ ದೇವಾಲಯವೆಂದೂ ಕರೆಯುವರು. ಇದು ಏಕಕೂಟ ಮಾದರಿಯ ದೇವಾಲಯವಾಗಿದ್ದು ಇದರ ನಾಲ್ಕು ಮೂಲೆಗಳಲ್ಲಿ ನಾಲ್ಕು ಅರ್ಧಗಂಬಗಳಿವೆ. ಇದರ ಮಧ್ಯದಲ್ಲಿ ನಂದಿಯ ವಿಗ್ರಹವಿದೆ. ಬದಿಗಳಲ್ಲಿ ಶ್ರವಣಕುಮಾರ ಮತ್ತು ಗುಂಡ ಬ್ರಹ್ಮಯ್ಯರ ವಿಗ್ರಹಗಳಿವೆ. ಇಲ್ಲಿ ಶ್ರವಣಕುಮಾರ ತನ್ನ ತಂದೆ-ತಾಯಿಗಳನ್ನು ಕಾವಡಿಯಲ್ಲಿ ಹೊತ್ತುಕೊಂಡು ನಡೆಯುವ ದೃಶ್ಯವಿದೆ. ಹಾಗೂ ಇಲ್ಲಿ ಗುಂಡಬ್ರಹ್ಮಯ್ಯರಿಬ್ಬರು ಶಿವಲಿಂಗವನ್ನು ತಮ್ಮ ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯನ್ನು ಅದರ ಮೇಲಿಟ್ಟು ನಿಂತಿರುವರು. ಈರ್ವರ ಮಧ್ಯ ಎರಡು ಈಟಿಗಳನ್ನು ಸಮಾಂತರದಲ್ಲಿ ಮೇಲಕ್ಕೆ ಮುಖಮಾಡಿ ನಿಲ್ಲಿಸಲಾಗಿದೆ. ಇಬ್ಬರ ಮೇಲಿರುವ ಮಕರ ತೋರಣದ ಮಧ್ಯದಲ್ಲಿ ಕೀರ್ತಿಮುಖವನ್ನು ಚಿತ್ರಿಸಲಾಗಿದೆ.

ಗೌರಮ್ಮ ದೇವಾಲಯ, ಅದರ ಮಜ್ಜನ ಕುಂಡದ ಮಂಟಪ, ಬಂಗಾರ ಬಸವಣ್ಣನ ದೇವಾಲಯ, ದೀಪಸ್ತಂಭಗಳು, ನಂದಿಸ್ತಂಭಗಳು, ನವಗ್ರಹ ಪೀಠ, ನಂದಿ ದೇವಾಲಯ ಪ್ರಾಕಾರ ಗೋಡೆ-ಮಹಾದ್ವಾರ-ಗೋಪುರ, ಉಯ್ಯಾಲೆ ಕಂಬ, ಶ್ರವಣಕುಮಾರನ ಶಿಲ್ಪ ಇವುಗಳು ವಿಜಯನಗರ ಕಾಲದ ಶೈಲಿಯಲ್ಲಿವೆ. ಕಾಲ ಸು. 15-18ನೆಯ ಶತಮಾನ. ಉಳಿದವುಗಳು ಸು. 12-13ನೆಯ ಶತಮಾನ.

ಮರುಳಸಿದ್ಧ ದೇವಾಲಯದ ಎಡಬದಿಗೆ ಪಶ್ಚಿಮದ ಪ್ರಾಕಾರ ಗೋಡೆಗೆ ಹೊಂದಿಕೊಂಡು ಉಜ್ಜಯಿನಿ ಸದ್ಧರ್ಮ ಸಿಂಹಾಸನ ಪೀಠದ ಭವ್ಯ ಮಠವಿದೆ. ಈ ಮಠವನ್ನು ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಿದ್ದು ಇದರ ಮೇಲೆ ಮಂಟಪ ಮತ್ತು ಬದಿಗಳಲ್ಲಿ ಕೋಣೆಗಳನ್ನು

ನಿರ್ಮಿಸಲಾಗಿದೆ. ಪ್ರವೇಶದ್ವಾರದ ಮೇಲೆ ಶಿವ–ಪಾರ್ವತಿಯರು ನಂದಿಯ ಮೇಲೆ ಆಸೀನರಾ ಗಿರುವ ಬೃಹತ್ ವರ್ಣಮಯ ಗೊಂಬೆಗಳಿವೆ. ಪ್ರವೇಶದ್ವಾರದ ಮುಖಮಂಟಪದ ಮೊದಲ ಕಂಬದ ಮೇಲೆ ಕಮಲವಿಡಿದ ಆನೆಗಳ ಸಾಲು, ಹಾರ–ಹೂ ಬಳ್ಳಿಗಳ ಅಲಂಕರಣಗಳಿವೆ. ಈ ಕಂಬದ ದಕ್ಷಿಣ ಮುಖದ ಒಂದನೆಯ ಪಟ್ಟಿಕೆಯಲ್ಲಿ ಶಿವನು ಪಾರ್ವತಿಯ ಗಲ್ಲವನ್ನು ಹಿಡಿದಿರುವ ಚಿತ್ರವಿದೆ. ಬದಿಗಳಲ್ಲಿ ಸೇವಕಿಯರು ಕಮಲಗಳನ್ನು ಹಿಡಿದು ನಿಂತಿರುವರು. ಎರಡನೆಯ ಪಟ್ಟಿಕೆಯಲ್ಲಿ ನೃತ್ಯಗಾರ್ತಿಯರಿದ್ದಾರೆ. ಮೂರರಲ್ಲಿ ಹಾರ ಮತ್ತು ಗಿಳಿಗಳ ಚಿತ್ರಗಳಿವೆ. ಎರಡನೆಯ ಕಂಬದ ಪಶ್ಚಿಮ ಮುಖದ ಮೊದಲನೆಯ ಪಟ್ಟಿಕೆಯಲ್ಲಿ ಷಣ್ಮುಖನು ನವಿಲನ್ನೇರಿ ಕುಳಿತಿದ್ದಾನೆ. ಎರಡನೆಯ ಫಲಕದಲ್ಲಿ ಭಕ್ತರು ನಂದಿ ಮುಖವುಳ್ಳ ಮಾನವನನ್ನು ತಮ್ಮ ಮೇಲೆ ಕೂಡಿಸಿಕೊಂಡಿರುವ ಇನ್ನೂ ಕೆಲವು ಚಿತ್ರಗಳಿವೆ. ಈ ಕಂಬದ ಉತ್ತರ ಮುಖದ ಪಟ್ಟಿಕೆಯಲ್ಲಿ ಯತಿವರ್ಯರ ಮಧ್ಯ ಲಕ್ಷ್ಮಿ ಯಿರುವಳು. ನಾಲ್ಕನೆಯ ಪಟ್ಟಿಕೆಯಲ್ಲಿ ಹಂಸ, ನವಿಲು, ಸೇವಕಿಯರಿದ್ದಾರೆ. ಅವರ ಮೇಲೆ ರೆಕ್ಕೆಯುಳ್ಳ ಅಪ್ಸರೆಯರು ಯತಿಯನ್ನು ಒಯ್ಯುತ್ತಿರುವ ದೃಶ್ಯವಿದೆ. ಮಠದ ಮಹಾದ್ವಾರದ ಬಾಗಿಲಲ್ಲಿರುವ ಕುಸುರಿ ಕೆತ್ತನೆಯ ಅಲಂಕರಣ ಹೊಯ್ಸಳ ಮಾದರಿಯನ್ನು ನೆನಪು ಮಾಡುತ್ತದೆ. ಇತರೆ ತೋರಣಗಳ ಮಧ್ಯೆ ದೇವತೆಗಳ ತೋರಣದಲ್ಲಿ ಒಂದೇ ಸಾಲಿನಲ್ಲಿ ಅಷ್ಟದಿಕ್ಪಾಲರನ್ನು ತೋರಿಸಲಾಗಿದೆ. ಮಠದ ಕಟ್ಟಿಗೆಯ ಕಂಬಗಳು, ಬಾಗಿಲ ಚೌಕಟ್ಟು ಇತ್ಯಾದಿಗಳ ಕಾಲ 19ನೆಯ ಶತಮಾನದ ಅಂತ್ಯಭಾಗದ್ದೆನ್ನುವರು. ಈ ಮಠದ ಒಳಗಡೆ ಒಂದು ವಿಶಾಲವಾದ ಕಟ್ಟಿಗೆಯ ಸ್ತಂಭ ಮಂಟಪವಿದ್ದು ಅದನ್ನು ದಾರುಕ ಮಂಟಪವೆಂದು ಕರೆಯುವರು. ಅಲ್ಲಿ ಧಾರ್ಮಿಕ ಕ್ರಿಯೆಗಳು ಜರುಗುತ್ತವೆ. ಅವು ವಟುಗಳಿಗೆ ಅಯ್ಯಾಚಾರ, ಅಶುದ್ಧರಾದವರನ್ನು ಶುದ್ಧಗೊಳಿಸುವುದು ಇತ್ಯಾದಿಗಳಾಗಿವೆ. ದಾರುಕ ಮಂಟಪ ಪಕ್ಕದಲ್ಲಿ ಪಶ್ಚಿಮಕ್ಕೆ ಪೀಠದ ಪೂರ್ವ ಜಗದ್ಗುರುಗಳ ಶಿವಪೂಜಾ ಮಂದಿರವಿದೆ ಹಾಗೂ ಶಿಲೆಯ ಗಣೇಶ ಮತ್ತು ನಾಗ ವಿಗ್ರಹಗಳಿವೆ. ದಾರುಕ ಮಂಟಪಕ್ಕೆ ಹೊಂದಿ ಉತ್ತರಕ್ಕೆ ನ್ಯಾಯಾಲಯದ ಕೊಠಡಿಯಿದೆ. ಅಲ್ಲಿ ಪೀಠದ ಜಗದ್ಗುರುಗಳ ನ್ಯಾಯ ಕಟ್ಟೆಯಿದೆ. ಅಲ್ಲಿ ಮಠದಯ್ಯಗಳ ಮತ್ತು ಇನ್ನಿತರರ ಜಗಳ, ವ್ಯಾಜ್ಯಗಳನ್ನು ಇತ್ಯರ್ಥ ಮಾಡಲಾಗುತ್ತಿತ್ತು. ಈ ಕೊಠಡಿಯ ಒಂದು ಕಂಬದಲ್ಲಿ ಮಲೆನಾಡಿನ ದುರ್ಗಮ್ಮನ ಲೋಹದ ವಿಗ್ರಹವಿರುವುದು ವಿಶಿಷ್ಟ. ಈ ಕೋಣೆಯ ಹಿಂಬದಿಯಲ್ಲಿ ಖಜಾನೆ ಮತ್ತು ಸ್ನಾನದ ಕೊಠಡಿಗಳಿವೆ. ದಾರುಕ ಮಂಟಪ, ಶಿವಪೂಜಾ ಮಂದಿರ, ನ್ಯಾಯಾಲಯ ಈ ಭಾಗಗಳೆಲ್ಲ ಸುಮಾರು ಇನ್ನೂರು ವರ್ಷ ಪ್ರಾಚೀನದ್ದಾಗಿವೆ. ಇಲ್ಲಿ ವಿಶಾಲವಾದ ಶಿಲಾಸ್ತಂಭ ಗಳುಳ್ಳ ಪಂಚಾಚಾರ್ಯರ ಮಂಟಪವಿದ್ದು ಏಕಸಾಲಿನಲ್ಲಿ ಐದು ಎತ್ತರದ ಆಸನ ಕಟ್ಟೆಗಳಿವೆ. ಪಂಚಾಚಾರ್ಯರು ಈ ಪೀಠಗಳಲ್ಲಿ ಕುಳಿತು ಭಕ್ತರಿಗೆ ಧರ್ಮೋಪದೇಶ ಮಾಡುತ್ತಿದ್ದರೆನ್ನುವರು.

ಪಂಚಾಚಾರ್ಯರ ಮಂಟಪಕ್ಕೆ ಹೊಂದಿ ಉತ್ತರಕ್ಕೆ ಒಂದು ವಿಶಾಲವಾದ ಗೋಶಾಲೆಯಿದೆ. ಹಿಂದೆ ಇಲ್ಲಿ 108 ಗೋವುಗಳನ್ನು ಕಟ್ಟಿ ಅವುಗಳ ಸಗಣಿಯಿಂದ ಬೆರಣಿ ಮಾಡಿ ಸುಟ್ಟು ವಿಭೂತಿ ಮಾಡಿಕೊಳ್ಳುತ್ತಿದ್ದರು. ಈಗ ಇವೆಲ್ಲ ಸ್ಥಗಿತಗೊಂಡಿದೆ. ಗೋಶಾಲೆಯ ಪೂರ್ವಕ್ಕೆ ದಾಸೋಹ ಮಂದಿರವಿದೆ.

ಪೀಠದ ಪೂರ್ವ ಗೋಡೆಯ ಒಳಭಾಗದಲ್ಲಿ ಹಲವಾರು ಉಬ್ಬು ಶಿಲ್ಪಗಳಿದ್ದು ಅವುಗಳಲ್ಲಿ ಹಾವು–ಸೂರ್ಯನನ್ನು ನುಂಗಲು ಹೊರಟಿರುವ, ಜೋಡು ಮೀನುಗಳು ಒಂದನ್ನೊಂದು ಮುದ್ದು ಮಾಡುತ್ತಿರುವ, ಬೇಡರ ಕಣ್ಣಪ್ಪ ಮತ್ತು ಬತ್ತಲೆಯಲ್ಲಿ ಕುಳಿತ ಮಹಿಳೆ ಮುಖ್ಯವೆನಿಸಿವೆ. ಇವು ವಿಜಯನಗರ ಕಾಲದ್ದಾಗಿವೆ.

ಉಜ್ಜಯನಿ ಸದ್ಧರ್ಮ ಪೀಠದ ದಕ್ಷಿಣ ಪ್ರವೇಶ ದ್ವಾರಕ್ಕೆ ಹೊಂದಿ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಯ ಗದ್ದುಗೆಯನ್ನು ನಿರ್ಮಿಸಲಾಗಿದೆ. ಈ ಗದ್ದುಗೆಯ ತಳಪಾಯ ಆಯತಾಕಾರದ ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸಿದ್ಧಲಿಂಗಶಿವಾಚಾರ್ಯರ ಅಮೃತ ಶಿಲಾವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹದ ಗದ್ದುಗೆಯ ಮೇಲೆ ಸಿದ್ಧಲಿಂಗಶಿವಚಾರ್ಯರು ಲಿಂಗೈಕ್ಯರಾದ ದಿನಾಂಕ ಗುರುತಿಸಿದೆ.

ಇಲ್ಲಿರುವ ಇನ್ನಿತರ ಮುಖ್ಯ ದೇವಾಲಯಗಳಲ್ಲಿ ರಾಮಲಿಂಗ ದೇವಾಲಯ ಒಂದು. ಇದನ್ನು ರಾಮಿ ತಂದೆಯ ದೇವಸ್ಥಾನ ಎನ್ನುವರು. ಇಲ್ಲಿನ ನವರಂಗದಲ್ಲಿ ಆರು ವೀರ ಗಲ್ಲುಗಳಿವೆ. ತಲೆಬೋಳು ಸಿದ್ಧಪ್ಪನ ದೇವಾಲಯ, ಹರಿಜನಕೇರಿಯ ಮರುಳಸಿದ್ಧ ದೇವಾಲಯ ಮತ್ತು ಜಟ್ಟೆಪ್ಪನ ದೇವಾಲಯಗಳು ಮುಖ್ಯವಾದವು.

ನಂದಿಕಂಬ: ವಿವಿಧ ಎತ್ತರದ ಕಂಬಗಳ ತುದಿಯಲ್ಲಿ ಕುಳಿತ ನಂದಿಗಳುಳ್ಳ ನಂದಿ ಕಂಬಗಳು ಸಾಮಾನ್ಯವಾಗಿ ವೀರಶೈವ ಧಾರ್ಮಿಕ ಸ್ಥಳಗಳಲ್ಲಿ ಕಂಡುಬರುತ್ತವೆ. ಈ ಕಂಬಗಳಲ್ಲಿ ಭಕ್ತರ ಚಿತ್ರಗಳೂ ಇರುತ್ತವೆ. ಈ ರೀತಿಯ ನಂದಿ ಕಂಬಗಳು ಉಜ್ಜಯಿನಿ ಸದ್ಧರ್ಮ ಪೀಠದ ಸಂಕಿರಣದಲ್ಲಿ ಈ ಗ್ರಾಮದ ಸಾಂತನಳ್ಳಿ ಕೊಡದಪ್ಪನ ಮನೆಯ ಮುಂದೆ, ಸಿದ್ಧಲಿಂಗಯ್ಯನವರ ಮನೆಯ ಮುಂದೆ ಮತ್ತು ಜಟ್ಟೆಪ್ಪನ ಗುಡಿಯ ಮುಂದೆ ಇರುತ್ತವೆ. ಹನುಮಂತನ ಗುಡಿಗೆ ಹೋಗುವ ದಾರಿಯ ಬದಿಗಿರುವ ಸಿದ್ಧಲಿಂಗಯ್ಯನವರ ಮನೆ ಮುಂದೆ ಒಂದು ನಂದಿ ಕಂಬ ಇದೆ. ಅದರ ಮೇಲೆ ಕುಳಿತ ಭಂಗಿಯ ನಂದಿಯಿದ್ದು ಅದರ ಒಂದು ಮುಖದಲ್ಲಿ ಭಕ್ತನೊಬ್ಬ ಕೈಮುಗಿದು ನಿಂತಿದ್ದಾನೆ. ಇನ್ನೊಂದು ಮುಖದಲ್ಲಿ ವೀರನೊಬ್ಬ ಕುದುರೆ ಸವಾರಿ ಮಾಡುತ್ತಿರುವನು. ಈ ಕಾಲದ ಒಂದು ನಂದಿಕಂಬ ಮತ್ತು ಅದರ ಮುಂದೆ ಒಂದು ಕಿರು ಶಾಸನಫಲಕ ಸಾಂತನಳ್ಳಿ ಕೊಡದಪ್ಪನ ಮನೆ ಮುಂದಿದೆ. ಇಲ್ಲಿಯ ನಂದಿಕಂಬದ ಶಾಸನದಲ್ಲಿ ಉಜ್ಜಯಿನಿ ಸಿದ್ಧೇಶ್ವರಸ್ವಾಮಿಯ ಪೂಜಾರಿಯ ಹೆಂಡತಿ ಸಮಾಧಿ ಕೂತಳೆಂಬ ವಿವರವಿದೆ.

ಉಜ್ಜಯನಿಯಿಂದ ಸು.2ಕಿಮೀ ಅಂತರದಲ್ಲಿ ಭೈರವ ದೇವರ ಗುಡ್ಡವಿದೆ. ಆ ಗುಡ್ಡದಲ್ಲಿ ಕೋಟೆ ಗೋಡೆಗಳು ಇತ್ಯಾದಿ ಸಾಂಸ್ಕೃತಿಕ ಅವಶೇಷಗಳಿವೆ. ಅವುಗಳಲ್ಲಿ ಭೈರಸಿದ್ಧನ ವಿಗ್ರಹ ಮಹತ್ತ್ವದ್ದು. ಆ ವಿಗ್ರಹ ಮೂಲತಃ ಭೈರವನದು. ಅದರಲ್ಲಿ ಭೈರವನಿಗೆ ನಾಲ್ಕು ಕೈಗಳಿದ್ದು ಅವುಗಳಲ್ಲಿ ಕತ್ತಿ, ತ್ರಿಶೂಲ, ಡಮರು ಮತ್ತು ಕಪಾಲಗಳಿವೆ. ದೇಹದ ವಿವಿಧ ಭಾಗಗಳಲ್ಲಿ ನಾಗಗಳನ್ನು ಆಭರಣಗಳನ್ನಾಗಿ ಧರಿಸಿದ್ದು ಬತ್ತಲೆಯಾಗಿ ತ್ರಿಭಂಗಿಯಲ್ಲಿ ನಿಂತಿರುವನು. ಬದಿಗಳಲ್ಲಿ ಪ್ರೇತಗಳಿವೆ. ಈ ಶಿಲ್ಪದ ಕಾಲ ಸು.13ನೆಯ ಶತಮಾನ. ಚೌಕಿಮಠ, ಹಂಚಿನಮಠ, ಮಸ್ಲಟ್ಟಿ ಬಸಪ್ಪನ ಗುಡಿ, ಮಾಗಣ್ಣನ ಗುಡಿ, ಮಾರುತಿ ಗುಡಿ, ವನಿತಾದೇವಿ ಗುಡಿ, ಮಾರೆವ್ವನ ಗುಡಿ, ಬೀರೇಶ್ವರ ದೇವರ ಗುಡಿ, ಬ್ರಹ್ಮದೇವರ ಗುಡಿ, ಹುಣ್ಣಿ ಬಸಪ್ಪನ ಕಟ್ಟಿ ಮತ್ತು ಮೈಲಾರಲಿಂಗ–ಉಜ್ಜಯಿನಿ ಗ್ರಾಮದ ಇನ್ನಿತರ ವೀರಶೈವ ಮಠಗಳು ಮತ್ತು ಗ್ರಾಮದೇವತೆಗಳ ದೇಗುಲಗಳು. ಇವು ಸು.100 ವರ್ಷ ಪ್ರಾಚೀನವಾದವು. ಶ್ರೀ ಪೀಠದ ಮಠದ ಕಣದಲ್ಲಿ ಕೇದಾರಸ್ವಾಮಿ ಗದ್ದುಗೆ, ಮಳೆಸ್ವಾಮಿ ಗದ್ದುಗೆ, ಚೆನ್ನಬಸವಸ್ವಾಮಿ ಗದ್ದುಗೆ ಇವೆ.

ಇಲ್ಲಿಯ 1268ರ ಶಾಸನದಲ್ಲಿ ಮರುಳಸಿದ್ಧ ದೇವಾಲಯದ ದೇವರಿಗೆ ಮಲ್ಲಿಕಾರ್ಜುನ ನೆಂದು ಹೇಳಲಾಗಿದೆ. 1600ರ ವರೆಗಿನ ಎರಡು ಶಾಸನಗಳಲ್ಲಿ ಇದೇ ಹೆಸರಿದೆ. ತದನಂತರದ ಶಾಸನಗಳಲ್ಲಿ ಈ ದೇವಾಲಯದ ಹೆಸರು ಸಿದ್ದೇಶ್ವರ ಎಂದು ಉಲ್ಲೇಖವಾಗಿರುವುದು ಗಮನೀಯ.

(ಆರ್.ಎಂ.ಎಸ್.)

**ಉಜ್ಜಯಿನಿಯ ಭೂಶೋಧನೆ:** ಭಾರತೀಯ ಹಾಗೂ ಅನ್ಯದೇಶೀಯ ಗ್ರಂಥಗಳಲ್ಲಿಯೂ ಅಶೋಕನ ಶಿಲಾಶಾಸನದಲ್ಲಿಯೂ (ಮೈನರ್ ರಾಕ್ ಎಡಿಕ್ಟ್ 11) ಉಲ್ಲೇಖಿತವಾಗಿದ್ದು ಪ್ರಾಚೀನ ಶೂರ್ಪಾರಕ, ಶ್ರಾವಸ್ತಿ ಮತ್ತು ಭರುಕಚ್ಛಗಳ ವಾಣಿಜ್ಯಮಾರ್ಗಗಳ ಕೇಂದ್ರವಾಗಿದ್ದ ಗತ ಉಜ್ಜಯಿನಿ ಕ್ಷೇತ್ರದ ವೈಶ್ಯರ ಟೇಕ್ಡೀ, ಕುಮಾರ್ ಟೇಕ್ಡೀ, ಮತ್ತು ಘರ್ ಕಾಳಿಕಾ ಭಾಗಗಳಲ್ಲಿ ಹಿಂದಿನ ಗ್ವಾಲಿಯರ್ ಸಂಸ್ಥಾನದ ಪ್ರಾಚ್ಯವಸ್ತು ಸಂಶೋಧನ ಇಲಾಖೆಯವರು 1927, 1935, 1936 ಮತ್ತು 1939ರಲ್ಲಿ ನಡೆಸಿದ ಭೂಶೋಧನೆಯಿಂದ ಈ ಪ್ರದೇಶಗಳಲ್ಲಿ ಬೌದ್ಧ ಸ್ತೂಪಾವಶೇಷಗಳೂ ಅಸ್ಥಿಪಂಜರ, ಚಿತಾಭಸ್ಮಪಾತ್ರೆ ಮಣ್ಣಿನ ಪಾತ್ರೆ ಇವುಗಳನ್ನೊಳಗೊಂಡಿದ್ದ ಶ್ಮಶಾನ ಭೂಮಿಯೂ ಮೌರ್ಯರ ಕಾಲಕ್ಕೆ ಸೇರಿದ, ಹೊಳಪು ಕೊಟ್ಟ ಉತ್ಕೃಷ್ಟ ಶಿಲೆಗಳೇ ಮುಂತಾದ ಜನವಸತಿಯ ಕುರುಹುಗಳೂ ಕೋಟೆಯೂ ಕ್ರಮವಾಗಿ ದೊರೆತವು. ಈ ಮೂರು ಕಡೆಗಳಲ್ಲಿಯೂ ಪ್ರ.ಶ.ಪೂ. 2–3 ಶತಮಾನಗಳಲ್ಲಿ ಚಲಾವಣೆಯಲ್ಲಿದ್ದ, ರಂಧ್ರವಿರುವ ಮತ್ತು ಎರಕದ ನಾಣ್ಯಗಳೂ ಇದ್ದವು.

ಇತ್ತೀಚೆಗೆ (1955–58) ಭಾರತೀಯ ಪುರಾತತ್ತ್ವ ಪರಿಶೀಲನ ತಂಡದವರು ಘರ್ ಕಾಳಿಕಾದಲ್ಲಿ ಕೂಲಂಕಷವಾಗಿ ಶೋಧಮಾಡಿ ಅಲ್ಲಿನ ಅವಶೇಷಗಳ ಅನುಕ್ರಮ ಸಾಂಸ್ಕೃತಿಕ ಪದರಗಳು ವಿಶಿಷ್ಟ ಲಕ್ಷಣಗಳ ಆಧಾರದ ಮೇಲೆ ಆದ್ಯಂತವಾಗಿ ಅಲ್ಲಿನ ಜನಜೀವನದ ನಾಲ್ಕು ಕಾಲಗಳನ್ನು ತಾತ್ಕಾಲಿಕವಾಗಿ ಗುರುತಿಸಿದ್ದಾರೆ. ಕೆಲವು ನೀಳ್ಗಲ್ಲು ಚಕ್ಕೆಗಳೂ ಗುಂಡುಗಳೂ ಕಪ್ಪು ಕೆಂಬಣ್ಣದ ಮಣ್ಣಿನ ಪಾತ್ರೆಯ ಚೂರುಗಳೂ ಕಂದಕಗಳೂ ಮರದ ತೊಲೆಗಳಿಂದ ಭದ್ರಪಡಿಸಿದ ಮಣ್ಣಿನ ಪ್ರಾಕಾರಗಳೂ ಇವನ್ನು ಕಟ್ಟಲು ಉಪಯೋಗಿಸಿದ್ದಿರಬಹುದಾದ ಬಿದಿರು ಬುಟ್ಟಿ, ಕಬ್ಬಿಣದ ಸಲಿಕೆ, ಬಣ್ಣ ಹಚ್ಚಿದ ಬೂದು ಮೃತ್ಪಾತ್ರೆಯ ಚೂರು, ಇವೂ ಈ ಮೊದಲನೆಯ ಕಾಲಕ್ಕೆ ಸಂಬಂಧಿಸಿದ ಪಳೆಯುಳಿಕೆಗಳು. ಮೆರಗು ಕೊಟ್ಟ ಕರಿಬಣ್ಣದ ಕಪ್ಪು ಮಡಕೆ, ಪ್ರ.ಶ.ಪೂ. ಸು. 3–2ನೆಯ ಶತಮಾನದ ಕಾಲದ ಬ್ರಾಹ್ಮೀಲಿಪಿಯಿರುವ ದಂತವಸ್ತು, ಆನೆಯ ಹಿಂಭಾಗದ ಆಕೃತಿಯಿರುವ ಕಲ್ಲುಕಂಬದ ಕಟ್ಟಡ, ಕಮ್ಮಾರನ ಕುಲುಮೆ, ಕಲ್ಲಿನ ಮಣಿ, ಕಸೂತಿ ಕಡ್ಡಿಯೇ ಮುಂತಾದವು ಇರುವ ಕೈಗಾರಿಕಾಮನೆ–ಇವು ಎರಡನೆಯ ಕಾಲಕ್ಕೆ ಸಂಬಂಧಿಸಿದಂತೆ ಕಂಡುಬಂದಿರುವುವು. ಮೂರನೆಯ ಕಾಲದಲ್ಲಿ ಇಲ್ಲಿ ಶ್ರೇಷ್ಠವಾದ ಕಲ್ಲುಮಣಿಗಳ ಕೈಗಾರಿಕೆ ಇತ್ತು. ಇವನ್ನು ಭರುಕಚ್ಛದ ಮೂಲಕ ಪಾಶ್ಚಾತ್ಯ ದೇಶಗಳಿಗೆ ಕಳಿಸಲಾಗುತ್ತಿತ್ತು ಎನ್ನುವುದಕ್ಕೆ ಆಧಾರವಾಗಿ ಇಲ್ಲಿ ಅಧಿಕ ಸಂಖ್ಯೆಯಲ್ಲಿ ಅಪೂರ್ಣ ಕಲ್ಲುಮಣಿಗಳೂ ಇವುಗಳನ್ನು ತಯಾರಿಸುವ ಸಾಧನಗಳಾದ ಕಲ್ಲುಪಡಿಗಳೂ ಕುಲುಮೆಗಳೂ ದೊರಕಿವೆ. ತಾಯಿ–ಮಗು ಹಾಗೂ ರೋಮನ್ ಚಕ್ರವರ್ತಿ ಆಗಸ್ಟಸ್ ಹೇಡ್ರಿಯನಸ್ ಚಿತ್ರದ ನಾಣ್ಯದ ಅಚ್ಚು, 2ನೆಯ ಶತಮಾನದ ಬ್ರಾಹ್ಮೀಲಿಪಿಯಿಂದಲೂ ಉಜ್ಜಯಿನಿಯ ಚಿಹ್ನೆಯಿಂದಲೂ ಕೂಡಿರುವ ದಂತ ವಸ್ತು–ಇವೂ ಈ ಕಾಲದ ಜನಜೀವನದ ಇಣುಕುನೋಟವನ್ನು ನಮಗೆ ದೊರಕಿಸಿಕೊಡುತ್ತವೆ. ನಾಲ್ಕನೆಯ ಕಾಲಕ್ಕೆ ಸಂಬಂಧಿಸಿದಂತೆ ನಸು ಬೂದುಬಣ್ಣದ ಮೆರುಗಿನ ಮಣ್ಣಿನಪಾತ್ರೆಗಳು ಹೇರಳವಾಗಿ ಲಭ್ಯವಾಗಿವೆ. ಈ ಎಲ್ಲ ಪಳೆಯುಳಿಕೆಗಳೂ ಉಜ್ಜಯಿನಿಯ ನಾಗರಿಕತೆಯ ವೈಶಿಷ್ಟ್ಯವನ್ನೂ ಬೆಳೆವಣಿಗೆಯನ್ನೂ ಅನ್ಯದೇಶಗಳೊಂದಿಗೆ ಅದು ಹೊಂದಿದ್ದ ಸಂಪರ್ಕದ ಸ್ವರೂಪವನ್ನೂ ತಿಳಿಯಲು ಸಹಾಯಕವಾಗಿವೆ. ಉಜ್ಜಯಿನಿ ಯಲ್ಲಿ ನೋಡಬೇಕಾದ ಅನೇಕ ಸ್ಥಳಗಳಿವೆ. ಇವುಗಳಲ್ಲಿ ಮುಖ್ಯವಾದವು– ಮಹಾಕಾಲೇಶ್ವರ, ಅದರ ಮೇಲಿನ ಅಂತಸ್ತಿನಲ್ಲಿರುವ ಓಂಕಾರೇಶ್ವರ, ಅದಕ್ಕೂ ಮೇಲಿರುವ ನಾಗ ಸಂಧ್ಯೇಶ್ವರ

(ವರ್ಷಕ್ಕೊಮ್ಮೆ ಮಾತ್ರ), ಜೂನಾ ಮಹಾಕಾಲ, ಹರಸಿದ್ಧಿ ಮಾತಾ, ಬಡೇ ಗಣೇಶ್, ಶಿಪ್ರಾ ತಟ, ದತ್ತ ಅಖಾಡಾ, ಗೋಪಾಲ ಮಂದಿರ, ಗಢಕಾಳಿಕಾ, ಭರ್ತೃಹರಿ ಗುಹೆ, ಕಾಲಭೈರವ, ಸಿದ್ಧವಟ್, ಮಂಗಲನಾಥ್, ಚೌಬೀಸ್‌ಖಂಬಾ ದ್ವಾರ್, ಕಾಲಿಯಾದಹ್, ಅಂಕಪಾತ್ ಮತ್ತು ವೇದಶಾಲಾ. ಇಲ್ಲಿಯ ಕೆಲವು ಪ್ರಮುಖ ಸಾಂಸ್ಕೃತಿಕ/ವಿದ್ಯಾ ಸಂಸ್ಥೆಗಳಲ್ಲಿ ವಿಕ್ರಮ ವಿಶ್ವವಿದ್ಯಾಲಯ, ಸಿಂಧಿಯಾ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಕಾಳಿದಾಸ ಅಕಾಡಮಿ, ರಾಷ್ಟ್ರೀಯ ವೇದವಿದ್ಯಾ ಪ್ರತಿಷ್ಠಾನ, ಕಾವೇರಿ ಶೋಧ ಸಂಸ್ಥಾನ್ ಮುಂತಾದವನ್ನು ಹೆಸರಿಸಬಹುದು. (ಎ.ಎಸ್.ಯು.)

**ಉಜ್ಜುವುದು:** ವಸ್ತುವಿನ ಹೊರಮೈಯನ್ನು ನಯಗೊಳಿಸಲು ಅಥವಾ ಸ್ವಲ್ಪಭಾಗವನ್ನು ಕತ್ತರಿಸಿ ತೆಗೆಯಲು ಅನುಸರಿಸುವ ಒಂದು ವಿಧಾನ (ಗ್ರೈಂಡಿಂಗ್). ಲೋಹವಸ್ತುಗಳನ್ನು ಕುರಿತು ಹೇಳುವಾಗ ಸಾಮಾನ್ಯವಾಗಿ ಗ್ರೈಂಡಿಂಗ್ ಪದದ ಬಳಕೆ. ಈ ಪದವನ್ನು ಮರಮುಟ್ಟುಗಳನ್ನು ಒಪ್ಪಮಾಡುವ ಕ್ರಿಯೆಗೂ ಬಳಸುವುದುಂಟು. ಕ್ರಿಯೆ ಯಾವುದೇ ಇರಲಿ ಅದರ ಸೂತ್ರವಿಷ್ಟು: ದೊರಗು ಮತ್ತು ಗಡಸಾದ (ರಫ್ ಅಂಡ್ ಹಾರ್ಡ್) ವಸ್ತು ಮತ್ತು ನಯಗೊಳಿಸಬೇಕಾದ ವಸ್ತು ಇವೆರಡರ ಉಜ್ಜುವಿಕೆ. ಮೊದಲಿನದರ ಹೆಸರು ಘರ್ಷಕ (ಅಬ್ರೇಸಿವ್). ಈ ಎರಡು ವಸ್ತುಗಳ ಪೈಕಿ ಒಂದು ನಿಶ್ಚಲವಾಗಿಯೂ ಇನ್ನೊಂದು ಚಲಿಸುತ್ತಲೂ ಇರಬೇಕು. ಉಜ್ಜುವ ಯಂತ್ರಕ್ಕೆ ಸಾಣೆಯಂತ್ರ (ಗ್ರೈಂಡಿಂಗ್ ಮೆಷೀನ್) ಒಂದು ಉದಾಹರಣೆ. ಅದರ ಚಕ್ರ ತಿರುಗುವಾಗ ಘರ್ಷಕ ವಸ್ತುವನ್ನು ಹೊದಿಸಿರುವ ಅಥವಾ ಘರ್ಷಕದಿಂದಲೇ ಮಾಡಿರುವ ಅದರ ಹೊರಮೈ ನಯಗೊಳಿಸಬೇಕಾದ ವಸ್ತುವಿಗೆ ಬೇಕಾದ ಒಪ್ಪವನ್ನು ನೀಡಬಲ್ಲುದು. ನೆರವೇರಬೇಕಾದ ಕಾರ್ಯ ಅದರ ನಿಖರತೆ, ಸೂಕ್ಷ್ಮತೆ ಮುಂತಾದುವನ್ನು ಅನುಸರಿಸಿ ಚಕ್ರದ ರಚನೆ ಇದೆ; ಅಲ್ಲದೆ ಕೆಲಸಗಾರನ ಕೌಶಲ್ಯವೂ ಇಲ್ಲಿ ಪ್ರಧಾನಪಾತ್ರ ವಹಿಸುತ್ತದೆ. ಉಜ್ಜುಕಾಗದ ಮರಳು ಅಂಟಿಸಿದಂತೆ ದೊರಗುಮೈ ಇರುವ ಇದನ್ನು ಸ್ಯಾಂಡ್ ಪೇಪರ್ ಎಂದು ಕರೆಯುತ್ತಾರೆ. ಅರ, ಸಾರಣಿಕಲ್ಲು, ಕೀಸುಳಿ ಇವೆಲ್ಲ ಬಳಕೆಯಲ್ಲಿರುವ ಘರ್ಷಕಗಳು. (ಎಂ.ಎನ್.ಸಿ.)

**ಉಜ್ಬೆಕಿಸ್ತಾನ್:** ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟದ ಒಂದು ರಾಜ್ಯ. ಅಧಿಕೃತ ಹೆಸರು ಉಜ್ಬೆಕ್ ಸೋವಿಯತ್ ಸಮಾಜವಾದಿ ಗಣರಾಜ್ಯ. ಆಗ್ನೇಯದಲ್ಲಿ ಆಫ್ಘಾನಿಸ್ತಾನ, ದಕ್ಷಿಣದಲ್ಲಿ ತುರ್ಕ್‌ಮೆನಿಸ್ತಾನ, ಪಶ್ಚಿಮ ಮತ್ತು ಉತ್ತರದಲ್ಲಿ ಕಾಜಾಕ್‌ಸ್ತಾನ್ ಪೂರ್ವಕ್ಕೆ ಕಿರ್ಗಿಷ್, ತಾಜಿಕಿಸ್ತಾನ್, ಸುತ್ತುವರಿದಿರುವ ಈ ರಾಜ್ಯ $38^{\circ}$ ಉ.–$45^{\circ}$ ಉ. ಹಾಗೂ $36^{\circ}$ ಪೂ.–$72^{\circ}$ ಪೂ. ನಡುವೆ, ಸೋವಿಯತ್ ಮಧ್ಯ ಏಷ್ಯದ ಆಗ್ನೇಯ ಭಾಗದಲ್ಲಿ. ಹಬ್ಬಿದೆ. ಉಜ್ಬೆಕ್ ಜನರಿರುವ ಭಾಗಗಳನ್ನೆಲ್ಲ ಒಳಗೊಂಡಿರುವ ಈ ರಾಜ್ಯದ ಎಲ್ಲೆ ಅಂಕುಡೊಂಕು. 1924ರಲ್ಲಿ ಸ್ಥಾಪಿತವಾದ ಈ ಒಕ್ಕೂಟ ಗಣರಾಜ್ಯದ ವಿಸ್ತೀರ್ಣ 4,47,400 ಚ.ಕಿಮೀ ಜನಸಂಖ್ಯೆ 25,484,000 (2002) ರಾಜಧಾನಿ ತಾಷ್ಕೆಂಟ್.

**ಭೂವಿವರಣೆ:** ಈ ಪ್ರದೇಶದ ಪೂರ್ವಭಾಗದಲ್ಲಿ ಟಯನ್ಷಾನ್ ಪರ್ವತದ ಕವಲುಗಳು ಒಳನುಗ್ಗಿವೆ. ಈ ರಾಜ್ಯದ ಬಹುಭಾಗ ಬೆಟ್ಟಗುಡ್ಡಗಳಿಂದ ಕೂಡಿದ ಮೈದಾನ; ನೆಲದ ಬಹುಭಾಗ ಮರುಭೂಮಿಮಯ. ನಡುನಡುವೆ ಇರುವ ಓಯಸಿಸ್ಸುಗಳ ಪೈಕಿ ಫರ್ಗನ್ ಕಣಿವೆಯದು ಅತಿ ದೊಡ್ಡದು. ಇದರ ಸುತ್ತ ಎತ್ತರ ಪರ್ವತಗಳಿವೆ. ಅನೇಕ ಸಣ್ಣ ನದಿ ತೊರೆಗಳು ಇಲ್ಲಿನ ಪರ್ವತ ಪ್ರದೇಶಗಳನ್ನು ಸುತ್ತುವರಿದು ಹರಿಯುತ್ತವೆ. ಉತ್ತರದಲ್ಲಿರುವ ಆರಲ್ ಸಮುದ್ರದ ಪಶ್ಚಿಮ ತೀರದ ಉದ್ದಕ್ಕೂ ಹಬ್ಬಿರುವ ಊಸ್ಟ್ಯೂರ್ಟ್ ಪ್ರಸ್ಥಭೂಮಿ ಸಮುದ್ರಮಟ್ಟಕ್ಕಿಂತ 180–273 ಮೀ ಎತ್ತರವಾಗಿದೆ. ಸಮುದ್ರದ ಕಡೆಗೆ ಇದು ಹೆಚ್ಚು ಇಳಿಜಾರಾಗಿದೆ. ಖನಿಜ ಸಂಬಂಧಿ ಲವಣಗಳಿರುವ ಆರಲ್ ಸಮುದ್ರ ಎಲ್ಲೂ 18ಮೀ.ಗಿಂತ ಹೆಚ್ಚು ಆಳವಿಲ್ಲ.

ಆರಲ್ ಸಮುದ್ರಕ್ಕೂ ಪರ್ವತ ತಪ್ಪಲುಗಳಿಗೂ ಮಧ್ಯ 480 ಕಿಮೀ ವಿಸ್ತಾರದ ಪ್ರದೇಶ ಕಿಜ಼ಿಲ್‌ಕುಂ. ಮರಳು ತುಂಬಿದ ಈ ಪ್ರದೇಶದಲ್ಲಿ ಸಣ್ಣ ಸಣ್ಣ ಹುಲ್ಲುಜಾತಿಯ ಸಸ್ಯಗಳಿವೆ. ಅಲ್ಲಲ್ಲಿ ಎತ್ತರದ ಮರಳುದಿಣ್ಣೆಗಳಿವೆ. ಈ ಪ್ರದೇಶದ ಎತ್ತರ ಸಾಮಾನ್ಯವಾಗಿ 181 ಮೀ. ಗಳಿಗಿಂತ ಕಡಿಮೆ, ಆಮೂದಾರ್ಯ ಈ ಪ್ರದೇಶದ ಪ್ರಮುಖ ನದಿ. ಇದು ಕಸಕಡ್ಡಿ ಶೇಖರಿಸುತ್ತಿದ್ದು ವರ್ಷವರ್ಷವೂ ತನ್ನ ಪಾತ್ರವನ್ನು ಬದಲಾಯಿಸುತ್ತಿರುತ್ತದೆ. ಈ ನದಿಯಲ್ಲಿನ ಪ್ರವಾಹ ಋತುಮಾನಾನುಸಾರವಾದದ್ದು.

ಕಿಜ಼ಿಲ್‌ಕುಂ ದಕ್ಷಿಣಕ್ಕೆ ಫಲವತ್ತಾದ ಮೆಕ್ಕಲುಮಣ್ಣಿನಿಂದ ಕೂಡಿದ ಒಂದು ಮೈದಾನ ಪ್ರದೇಶವಿದೆ. ಟಾಷ್ಕೆಂಟಿನ ಆಗ್ನೇಯಭಾಗಕ್ಕಿರುವ ಚಟ್‌ಕಲ್ ಶ್ರೇಣಿಯಲ್ಲಿ ಹುಟ್ಟಿ ಈ ನಗರದ ಸುತ್ತಣ ಓಯಸಿಸ್ಸುಗಳಿಗೆ ನೀರುಣಿಸುವ ಚಿರ್‌ಚಿಕ್, ಆಂಗ್ರೆನ್‌ಗಳು ಸೀರ್ ಧಾರ್‍ಯಾ ನದಿಯ ಉಪನದಿಗಳು. ಫರ್ಗನ್ ಕಣಿವೆಯನ್ನು ಸುತ್ತುವರಿದಿರುವ ಇತರ ಪರ್ವತಶ್ರೇಣಿಗಳಲ್ಲೂ ಅನೇಕ ಸಣ್ಣಪುಟ್ಟ ನದಿಗಳು ಹರಿದು ಬಂದು ಮುಖ್ಯ ನದಿಯಾದ ಅಮೂದಾರ್ಯವನ್ನು ಸೇರುತ್ತವೆ.

ಉಜ್ಬೆಕಿಸ್ತಾನದ ಮೇಲ್ಮೈ ಒಂದೇ ಸಮನಾಗಿಲ್ಲವಾದ್ದರಿಂದ ಈ ರಾಜ್ಯದ ವಾಯುಗುಣದಲ್ಲಿ ಪ್ರಾದೇಶಿಕ ಭಿನ್ನತೆ ಬಹಳ. ಚಳಿಗಾಲದಲ್ಲಿ ಉಷ್ಣತೆಯ ವ್ಯತ್ಯಾಸದ ಗತಿ ತೀವ್ರ. ಫೆಬ್ರವರಿಯಲ್ಲಿ ಒಂದು ದಿನ ಹಿಮಪಾತವಾದರೆ ಇನ್ನೊಂದು ದಿನವಿಡೀ ಮಳೆ, ಮತ್ತೊಂದು ದಿನ ಹಿತಕರ ಹವಾಗುಣ, ಶಾಖ ಹೆಚ್ಚು, ಇರಾನ್ ಮತ್ತು ಆಫ್ಘಾನಿಸ್ತಾನದ ಕಡೆಯಿಂದ ಬೀಸುವ ಅವರ್ತಮಾರುತಗಳು ಇದಕ್ಕೆ ಕಾರಣ. ಉತ್ತರ ಧ್ರುವಪ್ರದೇಶದಿಂದ ಕುಳಿರ್ಗಾಳಿ ಬೀಸಿದಾಗ ಚಳಿಗಾಲದಲ್ಲಿ ತಾಷ್ಕೆಂಟಿನ ಉಷ್ಣಾಂಶ $10^{\circ}$ ಸೆ.ಗೆ ಇಳಿಯುತ್ತದೆ. ಆದರೆ ಆಫ್ಘಾನಿಸ್ತಾನದಿಂದ ಉಷ್ಣಮಾರುತ ಬೀಸಿದಾಗ $20^{\circ}$ ಸೆ. ಇರುತ್ತದೆ. ಚಳಿಗಾಲ ಮೋಡರಹಿತ ಹಿಮ ಬೀಳುವುದು ಚಳಿಗಾಲದಲ್ಲಿ ಐದು ದಿನ ಮಾತ್ರ..

ವಸಂತಋತುವಿನಲ್ಲಿ ಆಕಾಶ ಸ್ವಚ್ಛ. ದಿನಗಳು ಹೆಚ್ಚು ಪ್ರಕಾಶಮಾನ. ವಾಯುಶುಷ್ಕ, ಶಾಖ ಹೆಚ್ಚು. ಏಪ್ರಿಲ್ ತಿಂಗಳಿನಲ್ಲಿ ವಾಯುವಿನ ತೇವಾಂಶ ಶೇ.30 ಜುಲೈ ತಿಂಗಳಿನ ಸಾಧಾರಣ ಬೇಸಗೆಯಲ್ಲಿ ಇಡೀ ಸೋವಿಯತ್ ಒಕ್ಕೂಟದಲ್ಲಿ ಉಜ್ಬೆಕಿಸ್ತಾನದಲ್ಲೇ ಹೆಚ್ಚು ಶಾಖ. ಆಗ ಇದರ ಉಷ್ಣತೆಯ ವ್ಯಾಪ್ತಿ $310^{\circ}$ – $450^{\circ}$ ಸೆಂ. ತಾಷ್ಕೆಂಟಿನ ಉಷ್ಣತೆ 405 ಸೆ. ಮರುಭೂಮಿಯಲ್ಲಿ ಜುಲೈ ಉಷ್ಣತೆ $26^{\circ}$–$40^{\circ}$ ಸೆ. ದೂಳಿನಿಂದ ಕೂಡಿದ ಸುಂಟರಗಾಳಿ ಏಳುವುದುಂಟು. ಆದರೆ ಈ ಗಾಳಿ ಶುಷ್ಕವಾದ್ದರಿಂದ ಮಳೆ ಇಲ್ಲ. ವರ್ಷಕ್ಕೆ 5ಸೆಂಮೀ.ಕ್ಕೂ ಕಡಿಮೆ ಮಳೆ. ಶರದೃತುವಿನಲ್ಲಿ ಉಷ್ಣತೆ ಕಡಿಮೆಯಾಗಿ ಮಳೆ ಬೀಳಲುಪಕ್ರಮಿಸುತ್ತದೆ. ಅವರ್ತಮಾರುತಗಳು ಮಳೆ ತರುತ್ತವೆ. ಈ ಪರ್ವತ ಪ್ರದೇಶಗಳಲ್ಲಿ ಮಳೆ ಹೆಚ್ಚು (50–60ಸೆಂಮೀ).

ಇಲ್ಲಿ ತಂಡ್ರ ಸಸ್ಯದಿಂದ ಮರುಭೂಮಿ ಸಸ್ಯದವರೆಗೆ ವಿವಿಧ ಜಾತಿಯ ವನಸ್ಪತಿಯುಂಟು. ಉಸ್ಟ್ಯೂರ್ಟ್ ಮತ್ತು ಕಿಜ಼ಿಲ್‌ಕುಂನಲ್ಲಿ ತೆಳ್ಳನೆಯ ಮರುಭೂಮಿ ಸಸ್ಯವಿದೆ. ಕಿಜ಼ಿಲ್‌ಕುಂಗೂ ಆಮೂದಾರ್ಯಾಕ್ಕೂ ನಡುನೆಲದಲ್ಲೂ ಇತರ ತಗ್ಗು ಪ್ರದೇಶಗಳಲ್ಲೂ ಹುಲ್ಲುಗಾವಲು ಧಾರಾಳವಾಗಿದೆ. ದಕ್ಷಿಣದ ಹುಲ್ಲು ಪೊದೆಗಳ ನಡುವೆ ಬಗೆ ಬಗೆ ಹೂ ಬಿಡುವ ಗಿಡಮೂಲಿಕೆಗಳಿವೆ. ಪೂರ್ವ ಉತ್ತರಗಳಲ್ಲಿರುವ ಪರ್ವತ ಸಾನುಪ್ರದೇಶದಲ್ಲಿ ಪಾಪ್ಲರ್, ಆಲಿವ್, ವಿಲ್ಲೂ ಮರಗಿಡಗಳು ಕಾಣಬರುತ್ತವೆ. ನೆಲದ ಎತ್ತರ ಹೆಚ್ಚಿದಂತೆ ಮರ ಕಡಿಮೆ, ಹುಲ್ಲು ಹೆಚ್ಚು; ತುತ್ತತುದಿಯಲ್ಲಿ ತಂಡ್ರ.

ಹಲ್ಲಿ, ಜೆರ್ಬೋವ (ದಂಶಕ ಜಾತಿ), ಕಿರುಬ ಮತ್ತ ಗುಳ್ಳೆ ನರಿಗಳೂ ವಿರಳವಾಗಿ ಸಿಕ್ಕುವ ಕಾಡುಕತ್ತೆ, ಚಿಗರಿ ಮತ್ತು ಹುಲಿಗಳೂ ಪರ್ವತ ಪ್ರದೇಶಗಳಲ್ಲಿ ಕಾಡುಮೇಕೆ, ಕುರಿ ಮತ್ತು ಚಿರತೆಗಳೂ ಇಲ್ಲಿನ ಪ್ರಾಣಿಗಳು.

ಪೆಟ್ರೋಲಿಯಂ, ಸ್ವಾಭಾವಿಕ ಅನಿಲ, ತವರ, ಕಲ್ಲಿದ್ದಲು, ಲಿಗ್ನೈಟ್, ತಾಮ್ರ, ಲವಣ, ಗಂಧಕ ಟಂಗ್‌ಸ್ಟನ್, ಮಾಲಿಬ್ಡಿನಂ–ಇವು ಮುಖ್ಯ ಖನಿಜಗಳು.

**ವ್ಯವಸಾಯ, ಕೈಗಾರಿಕೆ, ಜನವಸತಿ:** ಕೃಷಿಗೆ ನೀರಾವರಿ ಸೌಲಭ್ಯ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಅದನ್ನೊದಗಿಸಲಾಗಿದೆ. ಹೆಚ್ಚು ಮಳೆಯಾಗುವ ಎತ್ತರ ಪ್ರದೇಶದಲ್ಲಿ ಒಣ ಬೇಸಾಯ. ಕಾಳು, ಮೆಕ್ಕೆಜೋಳ, ಆಲೂಗೆಡ್ಡೆ ಇವು ಇಲ್ಲಿನ ಉತ್ಪನ್ನ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಮುಖ್ಯ ಕಸಬು. ದನಕರು, ಕುರಿ, ಕುದುರೆ ಸಾಕುಪ್ರಾಣಿಗಳು. ನದೀಬಯಲುಗಳ ನೀರಾವರಿ ಪ್ರದೇಶದಲ್ಲಿ ಗೋಧಿ, ಬತ್ತ, ಬಾರ್ಲಿ, ಹೊಗೆಸೊಪ್ಪು, ಹಣ್ಣು, ದ್ರಾಕ್ಷಿ, ಹತ್ತಿ, ತರಕಾರಿ, ಬೀಟ್ರೂಟ್ ಮುಖ್ಯ ಬೆಳೆ. ಸೋವಿಯತ್ ಒಕ್ಕೂಟದಲ್ಲಿ ಹೆಚ್ಚು ಹತ್ತಿ ಬೆಳೆಯುವ ರಾಜ್ಯ ಇದೇ. 1930ರಿಂದೀಚೆಗೆ ಇಲ್ಲಿ ನೀರಾವರಿ ಹೆಚ್ಚು ವಿಸ್ತರಿಸಿದೆ.

ತಾಷ್ಕೆಂಟ್–ಸೈಬೀರಿಯ ರೈಲುಮಾರ್ಗದ ನಿರ್ಮಾಣದಿಂದ ಕೈಗಾರಿಕೆಯ ಬೆಳೆವಣಿಗೆಯಾಗಿದೆ. ಸೈಬೀರಿಯದಿಂದ ಗೋದಿ, ಮರ, ಅರಣ್ಯವಸ್ತುಗಳು ಮತ್ತು ಇತರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲು ಈಗ ಹೆಚ್ಚು ಅನುಕೂಲಗಳನ್ನು ಕಲ್ಪಿಸಲಾಗಿದೆ. ಆಹಾರ ಕೈಗಾರಿಕೆ ಮತ್ತ ಜವಳಿ ಕೈಗಾರಿಕೆಗಳಿಗೆ ಪ್ರಥಮ ಸ್ಥಾನ ದೊರಕಿದೆ. ಕಬ್ಬಿಣ, ಉಕ್ಕು, ತೈಲ ಮತ್ತು ತಾಮ್ರ ಶುದ್ಧೀಕರಣ, ರಾಸಾಯನಿಕ ಗೊಬ್ಬರ ಹಾಗೂ ವ್ಯವಸಾಯೋಪಕರಣ ತಯಾರಿಕೆಗಳೂ ಮುಖ್ಯವಾಗುತ್ತಿವೆ. ಕೈಗಾರಿಕೆಗೆ ಅಗತ್ಯವಾದ ಶಕ್ತಿಯಲ್ಲಿ ಶೇ. ಭಾಗ ವಿದ್ಯುತ್ತು. ಇತ್ತೀಚೆಗೆ ಕೆಲವು ಕೈಗಾರಿಕೆಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲಗಳ ಉಪಯೋಗವೂ ಆಗುತ್ತಿದೆ.



ಬುಖಾರದ ಸುಪ್ರಸಿದ್ಧ ಕಲಿಯಾನ್ ಮಸೀದಿ

ಸೋವಿಯತ್ ಮಧ್ಯ ಏಷ್ಯನ್ ಗಣರಾಜ್ಯಗಳ 1/3ರಷ್ಟಿರುವ ಉಜ್ಬೆಕಿಸ್ತಾನದಲ್ಲಿ ಅವುಗಳ ಒಟ್ಟು ಜನಸಂಖ್ಯೆಯ 2/3ರಷ್ಟು ಮಂದಿ ಇದ್ದಾರೆ. ಉಳಿದವಕ್ಕಿಂತ ಇದು ಆರ್ಥಿಕವಾಗಿ ಹೆಚ್ಚು ಮುಂದುವರಿದಿರುವುದೇ ಇದಕ್ಕೆ ಮುಖ್ಯ ಕಾರಣ.

ಜನಸಂಖ್ಯೆ 81.05 ಲಕ್ಷದಲ್ಲಿ (2002) ಉಜ್ಬೆಕ್ ಜನರೇ ಹೆಚ್ಚು (ಶೇ.62.2) ಉಳಿದವರಲ್ಲಿ ರಷ್ಯನರು (ಶೇ.13.5) ಟಾರ್ಟರರು (ಶೇ.5.5), ಕಾಜ಼ಾಕರು (ಶೇ.4.1) ಕಾಲಿಕರು (ಶೇ.3.8) ಮತ್ತು ಕಾರಕಲ್ಪಾಕರು (ಶೇ.2.1). ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ 40ರಷ್ಟು ಮಂದಿ ನಗರ ಮತ್ತು ಕೈಗಾರಿಗಾ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಉಳಿದವರು

ಉಜ್ಬೆಕ್ ಜನರ ಪ್ರಿಯವಾದ್ಯ

ಕೃಷಿ, ಪಶುಪಾಲನೆ ಮುಂತಾದ ಕಸಬುಗಳಲ್ಲಿ ತೊಡಗಿ ಹಳ್ಳಿಗಳಲ್ಲಿ ಜೀವಿಸುತ್ತಾರೆ. 1914ಕ್ಕೆ ಮೊದಲು ಶೇ.97ರಷ್ಟು ಜನ ಅನಕ್ಷರಸ್ಥರಾಗಿದ್ದರು. 1965ರ ವೇಳೆಗೆ ಅನಕ್ಷರಸ್ಥರ ಪ್ರಮಾಣ ಶೇ.22ಕ್ಕೆ ಇಳಿಯಿತು. ಶಾಲಾ ಕಾಲೇಜುಗಳಲ್ಲಿ ರಷ್ಯನ್ ಮತ್ತು ಉಜ್ಬೆಕ್ ಭಾಷೆಗಳು ಪ್ರಮುಖವಾದವುಗಳು. ತಾಷ್ಕೆಂಟ್, ಸಮರ್ ಕಂಡ್ ಗಳಲ್ಲಿ ವಿಶ್ವವಿದ್ಯಾನಿಲಯಗಳಿವೆ.

ತಾಷ್ಕೆಂಟ್ ರಾಜಧಾನಿ, ಅತಿ ದೊಡ್ಡ ನಗರ, ಕೈಗಾರಿಗೆ ಮತ್ತು ವಾಣಿಜ್ಯ ಕೇಂದ್ರ. ಚಿರ್‌ಚಿಕ್ ನದಿಯ ದಡದಲ್ಲಿರುವ ಈ ನಗರ ಸಮುದ್ರಮಟ್ಟದಿಂದ 333ಮೀ. ಎತ್ತರದಲ್ಲಿದೆ. ಇದೊಂದು ಪ್ರಮುಖ ರೈಲು ನಿಲ್ದಾಣ. ಜನಸಂಖ್ಯೆ 21,24,000 (2002). ಸಮರ್ ಕಂಡ್ ಉಜ್ಬೆಕಿಸ್ತಾನದ ಹಳೆಯ ರಾಜಧಾನಿ. ಈ ಐತಿಹಾಸಿಕ ನಗರವೀಗ ಹೊಸ ರೂಪು ತಳೆದಿದೆ. ಹತ್ತಿ, ಉಣ್ಣೆ ಮತ್ತು ಯಂತ್ರೋಪಕರಣ ಕೈಗಾರಿಕೆಗಳ ಜೊತೆಜೊತೆಗೆ ಮುಸ್ಲಿಮರ ಪುರಾತನ ಮಸೀದಿಗಳೂ ಪ್ರ.ಶ.ಪೂ. 5ನೆಯ ಶತಮಾನಕ್ಕೆ ಸೇರಿದ ವೀಕ್ಷಣಾಲಯವೂ ಇವೆ.

ಬುಖಾರ ಪುರಾತನ ನಾಗರಿಕತೆಯ ಕೇಂದ್ರ. ಹಳೆಯ ನಗರದ ಸುತ್ತಲೂ ಇಟ್ಟಿಗೆಗಳಿಂದ ಕಟ್ಟಿದ ಕೋಟೆಯೂ ಹತ್ತಿ, ಉಣ್ಣೆ ಮತ್ತ ರೇಷ್ಮೆ ಗಿರಣಿಗಳೂ ಇವೆ. ಸ್ವಾಭಾವಿಕ ಅನಿಲಗಳ ದೊಡ್ಡ ನಿಕ್ಷೇಪವಿರುವುದು ಈ ನಗರದ ಸಮೀಪದಲ್ಲೇ. (ಜಿ.ಆರ್.ಆರ್.)

**ಇತಿಹಾಸ** : 13ನೆಯ ಶತಮಾನದಲ್ಲಿ ಸ್ಥಾಪಿತವಾಗಿ, ರಷ್ಯದ ಬಹು ಭಾಗವನ್ನೂ ಒಳಗೊಂಡು, ಗೋಲ್ಡನ್‌ಹೋರ್ಡ್ ಅಥವಾ ಸ್ವರ್ಣದಳವೆಂದು ಪ್ರಸಿದ್ಧವಾಗಿದ್ದ ಪಶ್ಚಿಮ ಮಂಗೋಲ್ ಚಕ್ರಾಧಿಪತ್ಯದ ಮುಖ್ಯನಾಗಿದ್ದ ಖಾನ್‌ಉಜ್ಬೆಕ್‌ನಿಂದ (1312–42) ಉಜ್ಬೆಕರಿಗೆ ಈ ಹೆಸರು ಬಂದಿದೆ. ಉಜ್ಬೆಕರ ಪೂರ್ವ ಚರಿತ್ರೆಗೆ (**ನೋಡಿ – ಗೋಲ್ಡನ್‌ಹೋರ್ಡ್: ತುರ್ಕಿಸ್ತಾನ**).

1917ರಲ್ಲಿ ರಷ್ಯನ್ ಕ್ರಾಂತಿ ಸಂಭವಿಸಿದಾಗ ಉಜ್ಬೆಕ್ ಜನ ರಷ್ಯನ್ ತುರ್ಕಿಸ್ತಾನದ ಸೀರ್ ದಾರ್‍ಯಾ, ಸಮರ್‌ಕಂಡ್, ಫರ್ಗನ, ಬುಖಾರ, ಚೀನಗಳಲ್ಲಿ ಹಂಚಿಹೋಗಿದ್ದರು. ಅವರದೂ ಒಂದು ರಾಷ್ಟ್ರವೆಂಬ ಕಲ್ಪನೆಯಿರಲಿಲ್ಲ; ತಾಷ್ಕೆಂಟಿನಲ್ಲಿ ತುರ್ಕಿಸ್ತಾನದ ತಾತ್ಕಾಲಿಕ ಸರ್ಕಾರ ಸಮಿತಿಯೂ ಕಮ್ಯೂನಿಸ್ಟ್ ಹತೋಟಿಗೊಳಪಟ್ಟ ಕಾರ್ಮಿಕ ಸೈನಿಕ ರೈತ ಪ್ರತಿನಿಧಿ ಸಭೆಯೂ ಸ್ಥಾಪಿತವಾದುವು. 1917ರ ಡಿಸೆಂಬರಿನಲ್ಲಿ ಮುಸ್ಲಿಮರು ಕಾಕಾಂಟ್‌ನಲ್ಲಿ ರಾಷ್ಟ್ರೀಯ ಸಮ್ಮೇಳನವೊಂದನ್ನು ನಡೆಸಿ ಸ್ಥಾಪಿಸಿದ ಮುಸ್ಲಿಂ ಸರ್ಕಾರ 1918ರ ಫೆಬ್ರವರಿಯಲ್ಲಿ ತಾಷ್ಕೆಂಟಿನಿಂದ ಬಂದ ಸೈನ್ಯದಿಂದ ಉರುಳಿಬಿತ್ತು. ಆಗ ಆ ಸುತ್ತಿನಲ್ಲಿ ಪ್ರಬಲನಾಗಿದ್ದ ರಷ್ಯನ್



ಸಮರ್‌ಕಂಡ್‌ನಲ್ಲಿರುವ ಷಾಕಿ-ಜಿದ್ ಸಮಾಧಿ

ಪ್ರತಿಕ್ರಾಂತಿ ವೀರ ಅಡ್ಮಿರಲ್ ಕಾಲ್ಚಾಕನ ಸೈನಿಕ ಕಾರ್ಯಾಚರಣೆಯಿಂದಾಗಿ ತುರ್ಕಿಸ್ತಾನದ ಮೇಲೆ ರಷ್ಯನ್ ಹತೋಟಿಯಿರಲಿಲ್ಲ. 1919ರ ವಸಂತಕಾಲದಲ್ಲಿ ರಷ್ಯದ ಕೆಂಪುಸೇನೆ ಕಾಲ್ಚಾಕನನ್ನು ಸೋಲಿಸಿದ ಫಲವಾಗಿ ಆ ವರ್ಷದ ಕೊನೆಯ ವೇಳೆಗೆ ಇಡೀ ತುರ್ಕಿಸ್ತಾನ ಸೋವಿಯತ್ ಒಕ್ಕೂಟದ ವ್ಯಾಪ್ತಿಗೆ ಒಳಪಟ್ಟಿತು.

ಆದರೆ ತುರ್ಕಿಸ್ತಾನದ ಜನಕ್ಕೂ ರಷ್ಯಕ್ಕೂ ನಡುವಣ ಸಂಬಂಧ ಸೌಹಾರ್ದಯುತವಾಗಿರಲಿಲ್ಲ. ಇದರಿಂದ ಲೆನಿನ್ ಕಳವಳಗೊಂಡ. ತಾಷ್ಕೆಂಟಿನಲ್ಲಿ ಅಧಿಕಾರ ವಹಿಸಿಕೊಳ್ಳಲು ತುರ್ಕಿಸ್ತಾನ ನಿಯೋಗವೊಂದನ್ನು ಕಳಿಸಿದ. ಇದು ನಾನಾ ಸುಧಾರಣೆಗಳನ್ನು ಜಾರಿಗೆ ತಂದು ಮುಸ್ಲಿಮರ ಮನವೊಲಿಸಿಕೊಳ್ಳಲು ಯತ್ನಿಸಿತು. ಮೊದಮೊದಲು ಈ ಹೊಸ ಆಡಳಿತದ ವಿರುದ್ಧವಾಗಿ ಬಂಡಾಯವೆದ್ದಿತ್ತಾದರೂ ಕ್ರಮೇಣ ಎಲ್ಲವೂ ಶಾಂತವಾಯಿತು. ಬುಖಾರ, ಖೀವಾ ರಾಜ್ಯಗಳು ಕ್ರಮೇಣ ಸಮಾಜವಾದಿ ಗಣರಾಜ್ಯಗಳಾದುವು (1924).

1924ರಲ್ಲಿ ತುರ್ಕಿಸ್ತಾನ, ಖೀವಾ, ಬುಖಾರ ಗಣರಾಜ್ಯಗಳು ರದ್ದಾಗಿ ಅವುಗಳ ಸ್ಥಾನದಲ್ಲಿ ಸ್ಥಾಪಿತವಾದ ಗಣರಾಜ್ಯಗಳು ಐದು: ಉಜ್ಬೆಕಿಸ್ತಾನ್, ತಾಜಿಕಿಸ್ತಾನ್, ಕಿರ್ಗಿಷ, ಟರ್ಕ್‌ಮೆನಿಸ್ತಾನ್ ಮತ್ತ ಕಾಜಾಕ್‌ಸ್ತಾನ್. 1936ರಲ್ಲಿ ಉಜ್ಬೆಕಿಸ್ತಾನಕ್ಕೆ ಕಾರಕಲ್ಪಾಕ್ ಪ್ರದೇಶವನ್ನೂ 1956ರಲ್ಲಿ ಕಾಜ಼ಾಕಿಸ್ತಾನದ ಕೆಲವು ಪ್ರದೇಶಗಳನ್ನೂ ಸೇರಿಸಿದ್ದರಿಂದ ಇದರ ವಿಸ್ತೀರ್ಣ ಹೆಚ್ಚಿತು. 1937–38ರಲ್ಲಿ ಇಲ್ಲಿ ನಡೆದಿತ್ತೆಂದು ಹೇಳಲಾದ ಒಳಸಂಚೊಂದು ಬಯಲಾಗಿ ಈ ರಾಜ್ಯದ ಮುಖ್ಯಮಂತ್ರಿಯೂ ಉಜ್ಬೆಕ್ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯೂ ಸೇರಿ ಅನೇಕರು ಮರಣದಂಡನೆಗೆ ಗುರಿಯಾದರು.

ಉಜ್ಬೆಕಿಸ್ತಾನದ ಸಂಸ್ಕೃತಿ ಪುರಾತನವಾದದ್ದು. ಸಮರಖಂಡ್, ಬುಖಾರಗಳಲ್ಲಿ ಅನೇಕ ಇಸ್ಲಾಮೀ ಶಿಲ್ಪಗಳಿವೆ. ಈಚೆಗೆ ಪಾಶ್ಚಾತ್ಯ ಶೈಲಿಗೆ ಹಳೆಯ ಸಂಪ್ರದಾಯದ ಶೈಲಿ ಬೆರೆಸುವ ಪ್ರಯತ್ನ ಸಾಗಿದೆ. ಅನೇಕ ಭವ್ಯ ಭವನಗಳ ನಿರ್ಮಾಣವಾಗುತ್ತಿದೆ.

ಸೋವಿಯತ್ ಆಡಳಿತ ಬರುವ ಮುನ್ನ ಉಜ್ಬೆಕ್ ಸಾಹಿತ್ಯವೇ ಇರಲಿಲ್ಲ. ಆಗ ಅರಬ್ಬೀ ಹಾಗೂ ಪರ್ಷಿಯನ್ ಭಾಷೆಗಳೇ ಪ್ರಧಾನವಾಗಿದ್ದುವು. ಇವುಗಳ ಜೊತೆಗೆ ಪ್ರಚಾರದಲ್ಲಿದ್ದ ಚಾಗಟೈಯಿಂದ (ಮಧ್ಯಕಾಲೀನ ಮಧ್ಯ ಏಷ್ಯನ್ ಸಾಹಿತ್ಯಕ ಭಾಷೆ) 19ನೆಯ ಶತಮಾನದಲ್ಲಿ ಲಿಖಿತ ಉಜ್ಬೆಕ್ ಭಾಷೆ ಹುಟ್ಟಿತು. ಆಲಿಷೇರ್ ನವಾಯ್ (1441–1501) ಉಜ್ಬೆಕ್ ಮಹಾಸಾಹಿತಿ. 1990ರಲ್ಲಿ ಉಜ್ಬೆಕಿಸ್ತಾನ ತನ್ನದೆ ಆದ ಕಾನೂನು ಕಟ್ಟಳೆಗಳನ್ನು ಜಾರಿಗೆ ತಂದು 1991ರಲ್ಲಿ ತನ್ನ ಸ್ವಾತಂತ್ರ್ಯವನ್ನು ಸಾರಿತು. 1991 ಡಿಸೆಂಬರ್ 29 ರಂದು ಅಧ್ಯಕ್ಷ ಚುನಾವಣೆಯನ್ನೂ ನಡೆಸಿತು. (ಎಸ್.ಎಸ್.ಐ.)

**ಉಡ:** ರೆಪ್ಟೀಲಿಯ ವರ್ಗದ ವೆರಾನಿಡೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಪ್ರಾಣಿ (ಮಾನಿಟರ್ ಲಿಸರ್ಡ್) ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುವ ಇದರ ಹೆಸರು ವೆರಾನಸ್ ಬೆಂಗಾಲೆನ್ಸಿಸ್ ಇದರ ಶಾಸ್ತ್ರೀಯ ಹೆಸರು. ಭಾರತದಲ್ಲಿ ಎಲ್ಲ ಬಗೆಯ ಕಾಡು ಹಾಗೂ ಮರುಭೂಮಿಯಲ್ಲಿ ಕಂಡುಬರುತ್ತದೆ. ಸು. 1.75 ಮೀ. ಉದ್ದ ಬೆಳೆಯುತ್ತದೆ. ಬಾಲವೇ ಸುಮಾರು ಒಂದು ಮೀ. ಉದ್ದ ಬೆಳೆಯುತ್ತದೆ. ಹಸಿರು ಅಥವಾ ಕಂದು ಬಣ್ಣದ ಈ ಉಡಕ್ಕೆ ಅಲ್ಲಲ್ಲಿ ಕಪ್ಪು ಚುಕ್ಕೆಗಳಿರುತ್ತವೆ. ಸರೀಸೃಪ ಸುಲಭವಾಗಿ ಮರಹತ್ತಬಲ್ಲುದು



ಮತ್ತು ಈಜಬಲ್ಲುದು. ಮಾಂಸಾಹಾರಿ ಸರಿಸೃಪ. ತಾನು ಹಿಡಿಯ ಬಲ್ಲ ಯಾವ ಬಗೆಯ ಪ್ರಾಣಿಯನ್ನಾದರೂ ತಿನ್ನುತ್ತದೆ. ಪಕ್ಷಿಗಳ ಮತ್ತು ಮೊಸಳೆಗಳ ಮೊಟ್ಟೆ, ಏಡಿ, ಸಣ್ಣ ಆಮೆ, ಕೀಟಗಳು ಹಾಗೂ ಪ್ರಾಣಿಗಳ ಅವಶೇಷ ಸಹ ಇದರ ಆಹಾರ ಪಟ್ಟಿಯಲ್ಲಿ ಸೇರಿದೆ. ಸಂತಾನೋತ್ಪತ್ತಿ ಸಮಯ ಏಪ್ರಿಲ್‌ನಿಂದ ಅಕ್ಟೋಬರ್. ಹೆಣ್ಣು ಗುಳಿ ತೋಡಿ ಮೊಟ್ಟೆ ಇಡುವುದಾದರೂ ಕೆಲವೊಮ್ಮೆ ಗೆದ್ದಲಿನ ಹುತ್ತದಲ್ಲೂ ಮೊಟ್ಟೆ ಇಡುತ್ತದೆ. ಮರಿಯಾಗಲು ಇವು 8 ರಿಂದ 9 ತಿಂಗಳುಗಳ ಕಾಲ ತೆಗೆದುಕೊಳ್ಳುತ್ತದೆ. ಹೆಣ್ಣಿನ ದೇಹಗಾತ್ರವನ್ನು ಅವಲಂಬಿಸಿ 8–30 ಮೊಟ್ಟೆಗಳನ್ನು ಇಡುತ್ತದೆ.

**ಮರುಭೂಮಿ ಉಡ:** ಭಾರತದ ಮರುಭೂಮಿಯಲ್ಲಿ ಕಂಡುಬರುವ ಮರಳು ಬೂದು ಬಣ್ಣದ ಉಡ. ವೆರಾನಸ್ ಗ್ರಿಸಿಯಸ್ ಶಾಸ್ತ್ರೀಯ ಹೆಸರು. ಬಾಲ ದುಂಡಾಗಿರುವುದು ಇದರ ವಿಶೇಷ.

**ಹಳದಿ ಉಡ:** ಪಂಜಾಬಿನಿಂದ ಬಿಹಾರವೂ ಸೇರಿದಂತೆ ಪಶ್ಚಿಮ ಬಂಗಾಳದ ವರೆಗೆ ಕಂಡುಬರುವ ಉಡ. ವೆರಾನಸ್ ಫ್ಲಾವೆಸ್ಸೆನ್ಸ್ ಶಾಸ್ತ್ರೀಯ ನಾಮ. ಹಳದಿ ಅಥವಾ ಹಳದಿ ಮಿಶ್ರಿತ ಕಂದು ಬಣ್ಣದ ಉಡ. ಮಳೆಗಾಲದಲ್ಲಿ ಇದರ ಮೈಮೇಲಿನ ಪಟ್ಟೆಗಳು ನಿಚ್ಚಳವಾಗಿ ಕಾಣುತ್ತದೆ. ಇದರ ಕಡಿತ ವಿಷಕಾರಿ ಎಂದು ಹೇಳಲಾಗುತ್ತದೆ.

**ನೀರಿನ ಉಡ:** ಭಾರತದ ಉಡಗಳಲ್ಲೇ ದೊಡ್ಡದಾದ ನೀರಿನ ಉಡ; ಸುಮಾರು 2.5 ಮೀ. ಉದ್ದ ಬೆಳೆಯುತ್ತದೆ. ವೆರಾನಸ್ ಸಾಲ್ವೇಟರ್ ಶಾಸ್ತ್ರೀಯ ಹೆಸರು. ಒಡಿಶಾ, ಪಶ್ಚಿಮ ಬಂಗಾಲ, ಅಸ್ಸಾಂ, ಮೇಘಾಲಯ ಹಾಗೂ ಅಂಡಮಾನ್ ದ್ವೀಪಗಳಲ್ಲಿ ಕಂಡುಬರುತ್ತದೆ. ಭಾರತವಲ್ಲದೆ ಶ್ರೀಲಂಕದಲ್ಲೂ ಕಂಡುಬರುತ್ತದೆ. ಕಪ್ಪೆ ಹಾಗೂ ಮೊಟ್ಟೆಗಳು ಇದರ ಮೆಚ್ಚಿನ ಆಹಾರ. ನೀರಿನ ಉಡವಾದರೂ ಸುಲಭವಾಗಿ ಮರ ಹತ್ತುತ್ತದೆ. ದಡದಲ್ಲಿ, ಮರದ ಪೊಟರೆ ಅಥವಾ ಹುತ್ತದಲ್ಲಿ 25–30 ಮೊಟ್ಟೆಗಳನ್ನು ಇಡುತ್ತದೆ. (ಎಚ್.ಬಿ.ಡಿ.)

**ಉಡುಗೆ:** ಮಾನವ ಶರೀರವನ್ನು ಮುಚ್ಚುವ ಸಾಧನ; ಉಡುಪು, ಶರೀರವನ್ನು ಮುಚ್ಚುವುದರೊಂದಿಗೆ ರಕ್ಷಿಸುತ್ತದೆ ಮತ್ತು ಅಲಂಕರಿಸುತ್ತದೆ. ಮಾನವರಿಗೂ ಪ್ರಾಣಿಗಳಿಗೂ ಇರುವ ಒಂದು ಮುಖ್ಯ ವ್ಯತ್ಯಾಸವೆಂದರೆ ಅವರು ಧರಿಸುವ ಉಡುಪು.

ಮಾನವರು ಉಡುಪನ್ನೇಕೆ ಧರಿಸುವರೆಂಬುದರ ವಿಚಾರವಾಗಿ ತತ್ತ್ವಜ್ಞರೂ ಸಾಹಿತಿಗಳೂ, ಮಾನವಶಾಸ್ತ್ರಜ್ಞರೂ ಮನಶ್ಶಾಸ್ತ್ರಜ್ಞರೂ ಹೀಗೆ ಎಲ್ಲ ಬಗೆಯ ಚಿಂತಕರೂ ವಿಭಿನ್ನ ಚಿಂತನೆಗಳನ್ನು ನಡೆಸಿದ್ದಾರೆ.

ಸಭ್ಯರೆನಿಸಿಕೊಳ್ಳಬೇಕೆಂಬ ಹಠಾತ್ ಪ್ರೇರಣೆಯಿಂದ ಮಾನವರು ಮೊದಮೊದಲು ಉಡುಪು ಧರಿಸತೊಡಗಿದರೆಂಬ ವಾದವನ್ನು ಆಧುನಿಕ ಮಾನವಶಾಸ್ತ್ರಜ್ಞರು ತಳ್ಳಿಹಾಕಿದ್ದಾರೆ. ಏಕೆಂದರೆ ಮಾನರಕ್ಷಣೆಯ ಅರ್ಥವೇ ಕಾಲದಿಂದ ಕಾಲಕ್ಕೆ ಬಹಳ ಮಟ್ಟಿಗೆ ವ್ಯತ್ಯಾಸಗೊಂಡಿದೆ. ಇದನ್ನು ಕುರಿತ ಭಾವನೆಯೆಲ್ಲ ಬಹುತೇಕ ಕೇವಲ ಅವಿಚಾರಕ ಸಂಪ್ರದಾಯಗಳ ಸಮುದಾಯ ಫಲ. ಅರಬ್ಬೀ ಹೆಂಗಸು ಬುರುಕಿ ಧರಿಸದಿದ್ದಾಗ ಆಕೆಯನ್ನು ಅಪರಚಿತರು ಕಂಡರೆ ಆಕೆ ಒಡನೆಯೇ ಉಟ್ಟ ಲಂಗದಿಂದ ಮುಖ ಮುಚ್ಚಿಕೊಳ್ಳುತ್ತಾಳೆ. ಕಾಲುಗಳನ್ನು ತೋರಗೊಡುವುದು ಅಸಭ್ಯವೆಂಬುದು ಚೀನಿಯರ ನಂಬಿಕೆಯಾಗಿತ್ತು. ಐರೋಪ್ಯ ಸ್ತ್ರೀಯರು ತಮ್ಮ ಎದೆಯ ಭಾಗದ ಪ್ರದರ್ಶನವಾಗುವಂತೆ ಉಡುಪು ಧರಿಸಿದ್ದರೂ ಕಾಲಿನ ಹರಡುಕಾಣಿಸಿಕೊಂಡಾಗ ನಾಚಿಕೆಯಿಂದ ಮುದುಡಿಕೊಳ್ಳುವುದನ್ನು 20ನೆಯ ಶತಮಾನದ ಆದಿಕಾಲದವರೆಗೂ ಕಾಣಬಹುದಾಗಿತ್ತು.

ಚಳಿ, ಗಾಳಿ, ಹಿಮ ಮುಂತಾದ ಪ್ರಾಕೃತಿಕ ವ್ಯಾಪಾರಗಳಿಂದ ದೇಹ ರಕ್ಷಿಸಿಕೊಳ್ಳುವ ಉದ್ದೇಶದಿಂದ ಉಡುಪಿನ ಸೃಷ್ಟಿಯಾಯಿತೆನ್ನುವ ವಾದವೂ ಉಂಟು. ಆದರೆ ಪ್ರಪಂಚದ ಪುರಾತನ ನಾಗರಿಕತೆಗಳೆಲ್ಲ ವಿಕಾಸ ಹೊಂದಿದ್ದು ಉಷ್ಣ ದೇಶಗಳಲ್ಲಿ. ಕಚ್ಚುವ ಹುಳುಹುಪ್ಪಟೆಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಮನುಷ್ಯ ಉಡುಪನ್ನು ಸೃಷ್ಟಿಸಿದನೆಂಬುದು ಬಹುಶಃ ಹೆಚ್ಚು ಸಮಂಜಸ. ಬೇಟೆಯ ಅಸ್ತ್ರಗಳನ್ನೂ ಬಲಿಬಿದ್ದ ಪ್ರಾಣಿಗಳನ್ನೂ ಕೈಯಿಂದ ಹೊರುವುದಕ್ಕಿಂತ ಮೈಗೆ ಕಟ್ಟಿಕೊಳ್ಳುವುದೂ ನಡುವಿಗೆ ಬಿಗಿದ ಒರೆಯಲ್ಲೊ ಚೀಲದಲ್ಲೊ ಅವನ್ನು ಹಾಕಿಕೊಳ್ಳುವುದೂ ಹೆಚ್ಚು ಸರಾಗವೆಂದು ಆತನಿಗೆ ಎನಿಸಿರಬೇಕು.

ಮನುಷ್ಯ ತನ್ನ ಪ್ರತಿಷ್ಠೆ ಬೆಳೆಸಿಕೊಳ್ಳುವ ಉದ್ದೇಶದಿಂದಲೂ ಉಡುಪಿಗೆ ಮಾರು ಹೋಗಿದ್ದಿರಬಹುದು. ಉಡುಪೂ ಆಭರಣಗಳೂ ಪ್ರಾಣಿಗಳ ಪಾಲಿಗೆ ಸಾಧ್ಯವಿಲ್ಲದ ಒಂದು ಪರಿಕರ. ತಲೆಯ ಟೊಪ್ಪಿಗೆಯಲ್ಲಿ ಗರಿಯೊಂದನ್ನು ಸಿಕ್ಕಿಸಿಕೊಂಡರೆ ಅವನ ನಿಲುವೂ ಆತ್ಮವಿಶ್ವಾಸವೂ ಬೆಳೆದಂತೆ. ಹೆಚ್ಚು ಗರಿಗಳನ್ನು ಸಿಕ್ಕಿಸಿಕೊಂಡಷ್ಟೂ ಅವು ಇತರರ ಅಸೂಯೆಗೆ ಕಾರಣ. ಇವನ್ನು ಧರಿಸಲು ಹೋರಾಟ ಅನಿವಾರ್ಯವೇ ಆದೀತು. ಈ ಹೋರಾಟದಲ್ಲಿ ಗೆದ್ದವರಿಗೆ ಮಾತ್ರ ಹೆಚ್ಚು ಮುಕ್ಕ ಧರಿಸುವ ಅಧಿಕಾರ. ಇಂದಿಗೂ ಸೈನ್ಯದಲ್ಲೂ ಸಾರ್ವಜನಿಕ ಜೀವನದಲ್ಲೂ ಪ್ರಭಾವ ಬೀರುವ ಪದಕಗಳೂ ಬಗೆ ಬಗೆಯ ಉಡುಪುಗಳೂ ಆಯಾ ಅಂತಸ್ತುಗಳ ಸಂಕೇತ.

ಹೆಣ್ಣಿನ ಉಡುಪು ಅನುಸರಿಸುವ ಧರ್ಮವೇ ಬೇರೆ. ಸ್ತ್ರೀದೇಹದ ಬೇರೆ ಬೇರೆ ಭಾಗಗಳೂ ವಸ್ತ್ರ ರಹಿತವಾಗುವುದು ಗಂಡಸಿನ ಗಮನ ಸೆಳೆಯುವ ಸಾಧನಗಳೆಂದು ಫ್ಲೂಗೆಲ್ ಮುಂತಾದ ಮನೋವಿಜ್ಞಾನಿಗಳು ನೀಡಿರುವ ವಿವರಣೆ. ಉಡುಪು ತಯಾರಿಸುವವರು ಆಗಿಂದಾಗ್ಗೆ ಬಳಕೆಗೆ ತರುವ ಹೊಸ ಹೊಸ ಫ್ಯಾಷನ್ನುಗಳು ಈ ಗಮನ ಕೇಂದ್ರದ ಬದಲಾವಣೆಗಾಗಿ ಅನುಸರಿಸುವ ಹವಣರಿತ ವಿಧಾನಗಳೆಂಬುದಾಗಿ ಅವರ ವಿಶ್ಲೇಷಣೆ. ಆದರೆ ಹೆಂಗಸರ ಉಡುಪಿನ ಹಿಂದೆ ಫ್ಯಾಷನ್ನಿನ ದೃಷ್ಟಿಯೇ ಎಂದೆಂದೂ ಇರಲಿಲ್ಲ. ಸಾಮಾನ್ಯ ಸ್ತ್ರೀಪುರುಷರ ಹಿಂದೆ ಇರುವ ಮುಖ್ಯ ಉದ್ದೇಶವೆಂದರೆ ಸಂಸಾರದ ಬೆಳವಣಿಗೆ. ಗೃಹಕೃತ್ಯದ ನಿತ್ಯಕೆಲಸಗಳಲ್ಲಿ ತೊಡಗುವ ದೈಹಿಕ ಮಾನಸಿಕ ಸಾಮರ್ಥ್ಯ, ಸಾಮರಸ್ಯ. ಇಂಥ ಸನ್ನಿವೇಶಗಳಲ್ಲಿ ಉಡುಪು ಎಂದೂ ಪ್ರಧಾನವಾಗಿಲ್ಲ. ಗ್ರೀಕ್ ನಾಗರಿಕತೆಯ ಔನ್ನತ್ಯದ ಕಾಲದಲ್ಲೂ ಸಂಭಾವಿತ ಸಂಸಾರಗಳಲ್ಲಿ ಫ್ಯಾಷನ್‌ಗಳು ಸುಳಿದಿರಲಿಲ್ಲ. ಮುಂದೆ ಸಾಮ್ರಾಜ್ಯಗಳು ಬೆಳೆದು ರಾಜವೈಭವದ ದಿನಗಳು ಬಂದಾಗ ರಾಜರ, ಶ್ರೀಮಂತರ ಗಮನ ಸೆಳೆಯುವ ಉದ್ದೇಶದಿಂದ ಫ್ಯಾಷನ್ನುಗಳು ಬೆಳೆದುವೆಂಬುದು ಇತಿಹಾಸಕಾರ ಕಂಡಿರುವ ಸತ್ಯ. ಅಂತೂ ಒಟ್ಟಿನಲ್ಲಿ ಅಂತಸ್ತಿನ ಹಮ್ಮು, ಮನ ಸೆಳೆಯುವ ಬಿನ್ನಾಣ, ಉಪಯುಕ್ತತೆ- ಇವೇ ಫ್ಯಾಷನ್ನುಗಳ ಮೂಲ. ಗಂಡಿನ ಉಡುಪಿಗೆ ಮೊದಲನೆಯದೂ ಕೊನೆಯದೂ ಹೆಣ್ಣಿನ ಉಡುಪಿಗೆ ಕೊನೆಯ ಎರಡೂ ಬಹುತೇಕ ಉದ್ದೇಶ. ಫ್ಯಾಷನ್ನುಗಳಿಗೆ ಅಸ್ತಿಭಾರವಾಗಿರುವ ಇನ್ನೊಂದು ಪ್ರವೃತ್ತಿಯೆಂದರೆ ರಾಷ್ಟ್ರ ವೈಶಿಷ್ಟ್ಯ. ಹಿಂದಿನ ಕಾಲದಲ್ಲಿ ಉಡುಗೆ ತೊಡುಗೆಗಳು ಬೇಗ ಬದಲಾಗುತ್ತಿರಲಿಲ್ಲ. ಆದರೆ ಜನಸಂಪರ್ಕ ಬೆಳೆದಂತೆ, ಸಂಚಾರಸಾಧನಗಳಲ್ಲಿ ಕ್ರಾಂತಿಯಾದಂತೆ, ರಾಷ್ಟ್ರಪ್ರಜ್ಞೆ ಮೂಡಿದಂತೆ ಒಂದೊಂದು ರಾಷ್ಟ್ರದ ವೈಶಿಷ್ಟ್ಯವಾಗಿ ಅಲ್ಲಲ್ಲಿನ ಜನರ ಉಡುಗೆ ತೊಡುಗೆಗಳು ಏಕರೀತಿಯವಾಗತೊಡಗಿದುವು. 18ನೆಯ ಶತಮಾನದ ಅಂತ್ಯದವರೆಗೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೆಂಗಸಿನ ಉಡುಗೆ ತೊಡುಗೆಗಳು ಆಕೆಯ ವರ್ಗವನ್ನೆತ್ತಿ ಸಾರುತ್ತಿದ್ದುವು. ಆದರೆ ಮನ ಸೆಳೆಯುವುದು ಮುಖ್ಯ ಗುರಿಯಾದ ಮೇಲೆ ಈ ಪ್ರವೃತ್ತಿ ಕಡಿಮೆಯಾಗುತ್ತಿದೆ.

ಮಧ್ಯಯುಗದ ಕಾಲದಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಉಡುಪುಗಳ ರೀತಿನೀತಿಗಳು ಬಹು ಬೇಗ ಬೇಗ ಬದಲಾಗಿವೆ. ಉಡುಗೆತೊಡುಗೆ ಧರಿಸುತ್ತಿದ್ದವರ ಕಾಲವನ್ನು ಅವರ ಉಡುಗೆತೊಡುಗೆಗಳಿಂದಲೇ ನಿರ್ಣಯ ಮಾಡುವುದು ಸಾಧ್ಯ. ಆದರೆ 19ನೆಯ ಶತಮಾನಕ್ಕಿಂತ ಹಿಂದಿನ ಕಾಲದ ಉಡುಪುಗಳು ಈಗ ಲಭ್ಯವಿಲ್ಲ. ಈಚೆಗೆ ಉಡುಪುಗಳ ತಯಾರಿಕೆಯಲ್ಲಿ ಯಂತ್ರಗಳ ಆಗಮನವಾಗಿ ಅವುಗಳ ಉತ್ಪನ್ನದ ಪ್ರಮಾಣ ಹೆಚ್ಚಿರುವುದರಿಂದ ಅವುಗಳಲ್ಲಿ ಈಗ ಹೆಚ್ಚು ಹೆಚ್ಚು ಏಕರೂಪತೆ ಬರುತ್ತಿದೆ.

**ಉಡುಗೆಯ ವಿಕಾಸ:** ಮೊದಮೊದಲು ಮಾನವನ ಉಡುಪು ಸಸ್ಯಮೂಲವಾದದ್ದಾಗಿರಲಿಲ್ಲ, ಪ್ರಾಣಿಮೂಲವಾದದ್ದಾಗಿತ್ತು - ಎಂದು ಊಹಿಸಬಹುದು. ಹುಲ್ಲು–ತೊಗಟೆಗಳನ್ನೂ ಹೆಣೆದ ನಾರುಗಳನ್ನೂ ತೊಡುವ ಮುನ್ನ ಅವನು ಪ್ರಾಣಿಯ ಚರ್ಮವನ್ನುಡುತ್ತಿದ್ದ. ಶಿಲಾಯುಗಕ್ಕೆ ಬರುವ ವೇಳೆಗೆ ಅವನು ನೇಯ್ಗೆ ಕಲಿತಿದ್ದ. ಆ ಕಾಲದ ಬಟ್ಟೆಗಳು ನಮಗೆ ದೊರಕುವುದಿಲ್ಲವಾದರೂ ಅಂದಿನವಾಗಿ ಸಿಕ್ಕಿರುವ ಕುಡಿಕೆ ಮಡಿಕೆಗಳ ಮೇಲಣ ಚಿತ್ರದಿಂದ ಇದು ವ್ಯಕ್ತ. ಕಂಚಿನ ಯುಗದಲ್ಲಿ ನಾರಗಸೆ ಹಾಗೂ ಉಣ್ಣೆಯ ಬಟ್ಟೆಗಳು ಬಳಕೆಯಲ್ಲಿದ್ದವು. ಈ ಕಾಲದ ಗಂಡಸರು ಅಂಡಾಕಾರದ ವಸ್ತ್ರವನ್ನು ನಡುವೆ ಅಡ್ಡಡ್ಡಲಾಗಿ ಮಡಿಸಿ ಉಡುತ್ತಿದ್ದರು; ಅಥವಾ ವಸ್ತ್ರ ಹೊದೆದು ಪಕ್ಕಕ್ಕೆ ಬಿಗಿಯುತ್ತಿದ್ದರು. ಹೆಂಗಸರು ತುಂಡುತೋಳಿನ ಕುಪ್ಪಸವನ್ನು ಧರಿಸಿ ನಡುವಿಗೆ ಹುರಿಯಿಂದ ಹೆಣೆದ ಲಂಗ ಸುತ್ತುತ್ತಿದ್ದರು. ಕಾಲಿಗೆ ಮೆಟ್ಟು ಧರಿಸುತ್ತಿದ್ದರೇ ಎಂಬುದು ತಿಳಿದು ಬಂದಿಲ್ಲ.

ಈಜಿಪ್ಷಿಯನ್ನರ ಹಾಗೂ ಅಸ್ಸೀರಿಯನ್ನರ ಉಡುಪು ಮುಖ್ಯವಾಗಿ ನಾರಗಸೆಯದು. ಅವರಿಗೆ ಉಣ್ಣೆಯ ಬಟ್ಟೆ ಗೊತ್ತಿತ್ತು. ಆದರೆ ಮೇಲಣ ವರ್ಗದವರಲ್ಲಿ ಅದರ ಬಗ್ಗೆ ತಾತ್ಸಾರವಿತ್ತು. ಮೊಳಕಾಲವರೆಗೂ ಹರಿಯುತ್ತಿದ್ದ ಮೋಟುತೋಳಿನ ಕಪಣಿಗಳಲ್ಲಿ ವೈವಿಧ್ಯವಿರಲಿಲ್ಲ. ಆದರೆ ಬಗೆಬಗೆಯ ನೆರಿಗೆಗಳಿಂದಲೂ ಬಣ್ಣ ಸಂಯೋಜನೆಯಿಂದಲೂ ಒಡವೆಗಳಿಂದೂ ಅವರು ವೈಶಿಷ್ಟ್ಯ ಸಾಧಿಸುತ್ತಿದ್ದರು. ಗುಲಾಮರ ಉಡುಪು ತುಂಡು ದಟ್ಟಿ. ಮೆಸೊಪೋಟೇಮಿಯ ಮತ್ತು ನೈಲ್ ನದೀ ಕಣಿವೆಯ ಜನರ ಉಡಿ ಸಡಿಲ. ಇವುಗಳ ಜೊತೆಗೆ ಪುರಾತನ ಪರ್ಷಿಯನ್ನರು ಕೋಟು ಷರಾಯಿ ಮಾದರಿಯ ಬಿಗಿಯುಡುಪನ್ನೂ ಧರಿಸುತ್ತಿದ್ದರು. ಈಜಿಪ್ಷಿಯನ್ನರಲ್ಲೂ ಅಸ್ಸೀರಿಯನ್ನರಲ್ಲೂ ಚಪ್ಪಲಿ ಬಳಕೆಗೆ ಬಂದಿತ್ತು. ಮಿನೋವನ್ನರು ಚೂಪು ತುದಿಯ ಬೂಟುಗಳನ್ನು ಹಾಕಿ ಕೊಳ್ಳುತ್ತಿದ್ದರು. ಅಸ್ಸೀರಿಯನ್ನರ ಟೋಪಿ ಶಂಕುವಿನಾಕಾರ.

ಅಭಿಜಾತ ಕಾಲದ ಗ್ರೀಕರ ಮುಖ್ಯ ಉಡುಗೆಯೆಂದರೆ ದೀರ್ಘಚತುರಸ್ರಾಕಾರದ ಉಣ್ಣೆಯ ಬಟ್ಟೆ (ಹಿಮೇಟಿಯನ್). ಹೆಗಲ ಮೇಲಿಂದ ಶಾಲಿನಂತೆ ಇಡೀ ದೇಹವನ್ನು ಬಳಸುತ್ತಿದ್ದ ಇದೊಂದೇ ಸಾಮಾನ್ಯವಾಗಿ ಅವರ ವಸ್ತ್ರ. ಹಿರಿಯರು ಇದರ ಅಡಿಯಲ್ಲಿ ಉದ್ದನೆಯ ಒಳ ಅಂಗಿ (ಕೈಟನ್) ಧರಿಸುತ್ತಿದ್ದರು. ಇದು ಕೊಳವೆಯಂತಿರುತ್ತಿತ್ತು; ನಡುವಣ ಮೇಲ್ಭಾಗದಿಂದ ತಲೆ ಹೊಗಿಸುವಂತೆ ಇತ್ತು. ಹೆಂಗಸಿನ ಉಡುಗೆಯಾದ ಪಿಪ್ಲಾಸ್ ಕೂಡ ಸ್ಥೂಲವಾಗಿ ಹಿಮೇಟಿಯನ್‌ನಂತೆಯೇ ಇದ್ದಿತಾದರೂ ಇದರ ಮಡಿಕೆಯೂ ನಿರಿಗೆಯೂ ಹೆಚ್ಚು.

ರೋಮನ್ನರ ಉಡುಗೆಯ ವೈಶಿಷ್ಟ್ಯವೆಂದರೆ ಟೋಗ. ಇದು ತುಂಡು ವೃತ್ತದ ಆಕಾರದಲ್ಲಿದ್ದರೂ ಇದರ ನೆರಿಗೆಯೂ ಹಿಮೇಟಿಯನ್ನಿನಂತೆ. ಎಡಹೆಗಲ ಮೇಲಿಂದ ಸೊಂಟದ ಬಲಗಡೆಯ ದಿಕ್ಕಿನಲ್ಲಿ ಎದೆಯ ನಡುಭಾಗದ ಮೂಲಕ ಹರಿಯುತ್ತಿದ್ದ ಈ ಉಡುಪಿನ ಅಡಿಯಲ್ಲಿ ಗ್ರೀಕರಂತೆ ಒಳ ಅಂಗಿ ಧರಿಸುತ್ತಿದ್ದದ್ದೂ ಉಂಟು.

ಗ್ರೀಕರೂ ರೋಮನ್ನರೂ ವಿರಳವಾಗಿ ಹ್ಯಾಟು ಧರಿಸುತ್ತಿದ್ದರು. ಗ್ರೀಕರಿಗಿಂತ ರೋಮನ್ನರಲ್ಲಿ ಚಪ್ಪಲಿ ಹಾಗೂ ಬೂಟುಗಳ ಬಳಕೆ ಸ್ವಲ್ಪ ಹೆಚ್ಚು. ಮನೆಯಿಂದ ಹೊರಗೆ ಹೋದಾಗ ಬೂಟುಗಳನ್ನು ಬಳಸುತ್ತಿದ್ದರು.

ಮುಂದೆ 12ನೆಯ ಶತಮಾನದವರೆಗೆ ಗಂಡಸರು ಷರಟು ತೊಟ್ಟು ಅದರ ಮೇಲೆ ತೋಳಿರುವ ಗೌನು ಧರಿಸಿ ಬಲದೋಳಿನ ಮೇಲೆ ಬ್ರೂಚ್ ಸಿಕ್ಕಿಸಿಕೊಳ್ಳುವುದು ಅಥವಾ ಅರ್ಧವೃತ್ತಾಕಾರದ, ನಿಲುವಂಗಿಯ ರೂಪದ ಉಡುಗೆ ಧರಿಸಿ ಎದೆಯ ಮೇಲೆ ಅದನ್ನು ಹುರಿಯಿಂದ ಬಿಗಿದು ಕಟ್ಟುವುದು ವಾಡಿಕೆಯಾಯಿತು. ಮಂಡಿಯವರೆಗೆ ಇರುತ್ತಿದ್ದ ಒಳ ಅಂಗಿಯ ಮೇಲೆ ನಡುಪಟ್ಟಿ ಕಟ್ಟುವುದೂ ಸಾಮಾನ್ಯವಾಗಿತ್ತು. ಕಾಲುಗಳನ್ನು ಕೊಳವೆಯಾಕಾರದ ಬಟ್ಟೆಯಿಂದಲೋ ಸುತ್ತುಪಟ್ಟಿಯಿಂದಲೋ ಮುಚ್ಚಿಕೊಳ್ಳುತ್ತಿದ್ದರು. ತಲೆಯುಡುಗೆಗಳು ಬೋಗುಣಿಯಂತೆಯೋ ಶಂಕುವಿನಂತೆಯೋ ಇರುತ್ತಿದ್ದವು.

12ನೆಯ ಶತಮಾನದ ವೇಳೆಗೆ ದೇಹದ ಆಕಾರಕ್ಕೆ ತಕ್ಕಂತೆ ಉಡುಪು ರಚಿಸುವ (ದರ್ಜಿಯ) ಕ್ರಮ ಬೆಳೆಯಲಾರಂಭಿಸಿತು. ಉಡುಗೆಗಳಲ್ಲಿ ತೀವ್ರ ಮಾರ್ಪಾಟುಗಳಾದದ್ದು 14ನೆಯ ಶತಮಾನದಲ್ಲಿ. ಆ ವೇಳೆಗೆ ಹೆಂಗಸಿನ ಉಡುಪು ಗಂಡಸಿನದಕ್ಕಿಂತ ತೀರ ಭಿನ್ನವಾಗಿತ್ತು. ಆಕೆಯ ಉಡುಪಿಗೆ ಗುಂಡಿಗಳು ಬಂದಿದ್ದವು; ನಡುವಿನ ಅಳತೆಗೆ ತಕ್ಕಂತೆ ಹೊಲಿದ ಈ ಉಡುಪುಗಳು ಮಾಟವಾಗಿದ್ದು, ಬಣ್ಣ ಬೆಡಗುಗಳು ಎದ್ದು ಕಾಣತೊಡಗಿದವು. ಇಟ್ಯಾಲಿಯನ್ ರೇಷ್ಮೆ ಅಥವಾ ಮಖಮಲ್ಲಿನಲ್ಲಿ ಕತ್ತರಿಸಿ ಹೊಲಿದ ಈ ಉಡುಪುಗಳ ತೋಳುಗಳದೊಂದು ಚೆಂದ. ಮುಂದಿನ ಎರಡು ಶತಮಾನಗಳಲ್ಲಿ ಯುರೋಪಿನ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಬಗೆಯ ಉಡುಪುಗಳು ಕವಲೊಡೆದವು. ಗಂಡಸರ ಗೌನು ಬಿದ್ದು ಹೋಯಿತು. ಹೆಂಗಸರ ಉಡುಪಿನ ಕತ್ತು ಕೆಳಸರಿದು ಅಗಲವಾಯಿತು. ತುಪ್ಪಳ ಚರ್ಮದ ಅಂಚು ಬಂತು. ಜ್ಞಾನ ಪುನರುಜ್ಜೀವನ ಕಾಲದಿಂದ 17ನೆಯ ಶತಮಾನದ ನಡುಗಾಲದವರೆಗೆ ಶೈಲಿಗಳು ಬಹಳ ಮಟ್ಟಿಗೆ ಸುಧಾರಿಸಿದವಾದರೂ ಒಟ್ಟಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳೇನೂ ಆಗಲಿಲ್ಲ. ರಾಣಿ ಎಲಿಜ಼ಬೆತಳ ಕಾಲದಲ್ಲಿ ಗಂಡಸರು ತುಂಡಂಗಿಯನ್ನೂ (ಡಬ್ಲೆಟ್) ಮೊಣಕಾಲವರೆಗಿನ ಚಲ್ಲಣವನ್ನೂ (ಬ್ರೀಚಸ್) ಧರಿಸುವ ವಾಡಿಕೆ ಬೆಳೆಯಿತು. ಜೋಲು ತೋಳಿನ ಜರ್ಕಿನ್ (ಗುತ್ತನಾದ ನಡುವಂಗಿ), ಮೇಲಂಗಿ, ಗೌನು ಇವು ಫ್ಯಾಷನ್ನುಗಳು. ಗಂಜಿ ಹಾಕಿ ಬಿರುಸು ಮಾಡಿ, ನಿರಿಯಾಗಿ ಸುತ್ತ ಚಾಚಿ ನಿಲ್ಲುವಂತೆ ಅಳವಡಿಸಿದ ಮಡಿಕೆಗಳಿದ್ದ ಕೊರಲು ಸುತ್ತುಗಳು ಸಾಮಾನ್ಯವಾಗಿದ್ದವು. ಇವನ್ನು ಹೆಂಗಸರೂ ಧರಿಸುತ್ತಿದ್ದರು. ಅಲ್ಲದೆ ಬಗೆಬಗೆಯ ಕುಪ್ಪಸ ಜಾಕೀಟುಗಳೂ ಲಂಗ, ಪಾವಡೆಗಳೂ ಚಾಲ್ತಿಗೆ ಬಂದವು. ಗಂಡಸರೂ ವಿರಳವಾಗಿ ಹೆಂಗಸರೂ ಕಪ್ಪು ಹ್ಯಾಟು ಧರಿಸಲಾರಂಭಿಸಿದರು.

17–18ನೆಯ ಶತಮಾನಗಳಲ್ಲಿ ಮೇಲಣ ವರ್ಗದ ಜನರಲ್ಲಿ ಬದಲಾವಣೆ ಯಾದದ್ದನ್ನು ಕಾಣಬಹುದು. ತುಂಡಂಗಿ (ಡಬ್ಲೆಟ್) ತುಂಬ ತುಂಡಾಗಿ ಈಟನ್ ಜಾಕೆಟ್ (ಗಿಡ್ಡಂಗಿ) ಆಗಿ ಪರಿಣಮಿಸಿ ಅದಕ್ಕಿದ್ದ ಪ್ರಾಮುಖ್ಯ ಹೋಯಿತು. ಈಗಿನ ಕೋಟಿನ ಮುತ್ತಜ್ಜನ ಅವತಾರವಾದದ್ದು ಆಗಲೇ. ಉದ್ದ ಮಂಡಿಯವರೆಗೆ, ಕತ್ತಿನಿಂದ ಕೆಳತುದಿಯವರೆಗೆ ಗುಂಡಿಗಳ ಸಾಲು-ಇವು ಇದರ ಲಕ್ಷಣ. ಫ್ಯಾಷನ್ನುಗಳ ವಿಚಾರದಲ್ಲಿ ಅದುವರೆಗೂ ಸ್ಪೇನ್ ಮುಂದಾಗಿದ್ದದ್ದು, ಅಲ್ಲಿಂದೀಚೆಗೆ ಫ್ರಾನ್ಸು ಇತರ ದೇಶಗಳಿಗೆ ಮೇಲ್ಪಂಕ್ತಿಯಾಯಿತು. ಹೆಂಗಸಿನ ಉಡುಪಿನಲ್ಲೂ ಬದಲಾವಣೆಯಾದದ್ದನ್ನು ಕಾಣಬಹುದು. 1690ರ ಸುಮಾರಿನ ಉಡುಪುಗಳನ್ನು ಅಡ್ಡ ಗೆರೆಗಳ ಬದಲು ಉದ್ದ ಗೆರೆಗಳು ಎದ್ದು ಕಾಣುವಂತೆ ಹೊಲಿಯಲಾಗುತ್ತಿತ್ತು. ಅವನ್ನು ಧರಿಸುವವರು ವಾಸ್ತವವಾಗಿದ್ದಕ್ಕಿಂತ ಹೆಚ್ಚು ಎತ್ತರವಾಗಿ ಕಾಣುವಂತೆ ಮಾಡುವುದೇ ಈ ವ್ಯತ್ಯಾಸದ ಉದ್ದೇಶ. ವಿಶೇಷ ಉಡುಗೆಗಳೇ 8ನೆಯ ಶತಮಾನದ ಒಂದು ಮುಖ್ಯ ಬೆಳವಣಿಗೆ. ಸೈನಿಕರ ಸಮವಸ್ತ್ರವೂ ಹೆಂಗಸರ ಆಸ್ಥಾನಿಕ ಉಡುಗೆ ಹಾಗೂ ವಿವಾಹದ ಉಡುಪು ಸಾಮಾನ್ಯ ಉಡುಗೆಗಳಿಗಿಂತ ಭಿನ್ನವಾದದ್ದು ಈ ಕಾಲದಲ್ಲಿ. ಸ್ವಸ್ವರೂಪ ಮರೆಮಾಚುವಂಥ ಉಡುಪುಗಳು (ಮಾಸ್ಕರೇಡ್ ಡ್ರೆಸ್) ಗಂಡಸು–ಹೆಂಗಸರಿಬ್ಬರಿಗೂ ಪ್ರಿಯವಾದವು. ಬೇಟೆಗೆ ಉಚಿತವಾದ ಉಡುಗೆ ಬಂದದ್ದೂ ಆಗಲೇ. ಆಟಗಾರರ ವಿಶಿಷ್ಟ ಉಡುಗೆಗೆ ಇದೇ ಪ್ರಥಮ ಹಂತ.

18ನೆಯ ಶತಮಾನದ ಆಸ್ಥಾನವೈಭವದ ಉಡುಪುಗಳ ಮೋಹ ಮುಂದಿನ ಶತಮಾನದಲ್ಲಿ ಕ್ರಮೇಣ ಕಡಿಮೆಯಾಯಿತು. ಫ್ರೆಂಚ್ ಮಹಾಕ್ರಾಂತಿ ಹಾಗೂ ನೆಪೋಲಿಯಾನಿಕ್ ಯುದ್ಧಗಳಿಗಿಂತ ಹೆಚ್ಚಾಗಿ, ಅವುಗಳ ಫಲವಾದ ಆರ್ಥಿಕ ಬದಲಾವಣೆಗಳೇ ಇದಕ್ಕೆ ಕಾರಣ. 18ನೆಯ ಶತಮಾನದಲ್ಲಿ ಉಡುಪಿನ ವೈಶಿಷ್ಟ್ಯ ಸಾಧಿಸಿದವರು ಶ್ರೀಮಂತರು; 19ನೆಯ ಶತಮಾನದಲ್ಲಿಯಾದರೋ ಉಚ್ಚ ಮಧ್ಯಮ ವರ್ಗದ. ಗಂಡಸರ ಉಡುಪಿನ ಬಣ್ಣ ಬೆಡಗುಗಳು ಮಾಯವಾದವು. ಆಕರ್ಷಣೆಗಿಂತ ಕಾರ್ಯಾನುಕೂಲವೇ ಇದರ ಉದ್ದೇಶ. ಕಳೆದ 150 ವರ್ಷಗಳಲ್ಲಿ ಪುರುಷರ ಉಡುಪು ಬಹಳ ಹೆಚ್ಚಾಗಿ ಬದಲಾಗಿಲ್ಲ. ಆದರೆ ಸ್ತ್ರೀಯರದು ಹೀಗಲ್ಲ; ವರ್ಷೇ ವರ್ಷೇ ಬದಲಾಗಿದೆ. ಅಭಿಜಾತ ಶೈಲಿ, ಊರ್ಧ್ವ ರೇಖೆ, ತೆಳು ಬಣ್ಣ – ಇವು 19ನೆಯ ಶತಮಾನದ ಆದಿಕಾಲದ ಹೆಣ್ಣುಡಿಗೆಯ ಲಕ್ಷಣ. ಮುಂದಿನ ಎರಡು ದಶಕಗಳಲ್ಲಿ ಅಗಲ ತೋಳು, ಗಿಡ್ಡ ಲಂಗ ಬಂದವು. ಅನಂತರದ 20ವರ್ಷಗಳಲ್ಲಿ ಲಂಗದ ಅಗಲದಲ್ಲಿ ಇನ್ನೂ ಹೆಚ್ಚಳವಾದರೂ ತೋಳಿನ ಉಬ್ಬು ಮಾಯವಾಯಿತು. ಅಗಲ ಹ್ಯಾಟಿನ ಬದಲು ಹೊಗೆಕೊಳವೆಯಂಥ, ಚಾಚಂಚಿಲ್ಲದ ಟೋಪಿ ಬಂತು. ಆಮೇಲೆ 20ವರ್ಷಕಾಲ ಹೆಂಗಸರ ಉಡುಪು ರೈಲನ್ನು ಹೋಲುತ್ತಿತ್ತು. ಅದುವರೆಗೂ ತಮ್ಮ ಉಡುಗೆ ನಡುವೆ ಇದ್ದವರು ಆಗ ತಮ್ಮ ಉಡುಗೆಯ ಮುಂದಿನ ಸ್ಥಾನ ಪಡೆದರು. 1880ರ ದಶಕದಲ್ಲಿ ಈ ಹನುಮಂತ ಬಾಲ ಮತ್ತೆ ತುಂಡಾಗತೊಡಗಿತು. ಆ ಶತಮಾನದ ಕೊನೆಯ ವೇಳೆಗೆ ನಿಡುದೋಳಿನ ತುದಿಯಗಲದ ಉಡುಪು ಸಾಮಾನ್ಯವಾಯಿತು. ಒಂದನೆಯ ಮಹಾಯುದ್ಧದ ವೇಳೆಗೆ ಲಂಗದ ಅಗಲ ಕಿರಿದಾಯಿತು. 20ನೆಯ ಶತಮಾನದ 23ನೆಯ ದಶಕದಲ್ಲಿ ತುಂಡು ಲಂಗವೂ ಗಂಟೆಯಾಕಾರದ ತಲೆಯುಡುಗೆಯೂ ಬಂದವು. ಅಲ್ಲಿಂದ ಮುಂದೆಯೂ ಅನೇಕ ಬದಲಾವಣೆ ಗಳಾಗುತ್ತಲೇ ಇದೆ.

**ಏಷ್ಯದಲ್ಲಿ ಉಡುಗೆಗಳು:** ಪಶ್ಚಿಮ ಏಷ್ಯದಲ್ಲಿ ವೈವಿಧ್ಯಮಯ ಉಡುಗೆಗಳನ್ನು ಕಾಣಬಹುದು. ಅನೇಕ ಬಗೆಯ ಜನ ಇಲ್ಲಿ ವಾಸಿಸುವುದೇ ಈ ವೈವಿಧ್ಯಕ್ಕೆ ಕಾರಣ. ಆರ್ಮೀನಿಯನ್ ಹೆಂಗಸರ ಉದ್ದನೆಯ ನಿಲುಲಂಗವನ್ನೂ ಸಾಮಾನ್ಯ ಜನರ ಕುಳ್ಳನೆಯ ದೊಗಳೆ ಷರಾಯಿ ಫೆಜ಼್ ಟೋಪಿ ಪೇಟಗಳನ್ನೂ ಗ್ರೀಕರ ಐರೋಪ್ಯ ಶೈಲಿಯ ಉಡುಗೆಯನ್ನೂ ತುರ್ಕಿ ಜನರ ಗುಂಡಿ ತುಂಬಿದ ಬಿಗಿಯಂಗಿ ಟೋಪಿಗಳನ್ನೂ ರಬ್ಬಿಗಳ ಗ್ಯಾಬರ್ಡೀನುಗಳನ್ನೂ (ಒರಟು ಬಟ್ಟೆಯ ದೊಗಲೆ ಉಡುಪು) ಕುರ್ದಿ ರೈತರ ಕುರಿಚರ್ಮದ ಉಡುಪನ್ನೂ ಡ್ರೂಸ್ ಜನರ ನಿಲುವಂಗಿ ತಲೆಯುಡುಗೆಗಳನ್ನೂ ಇರಾಕಿಗಳ ಉದ್ದನೆಯುಡುಪು ನಡುಪಟ್ಟಿಗಳನ್ನೂ ಇಲ್ಲಿ ಕಾಣಬಹುದು. ಅರಬ್ಬೀ ಜನರು ಹತ್ತಿ ಅಥವಾ ರೇಷ್ಮೆಯ ಉದ್ದುಡುಗೆಯ ಮೇಲೆ ತೋಳಿಲ್ಲದ ಕೋಟು (ಅಬ್ಬ) ಧರಿಸಿ, ತಲೆಯ ಮೇಲೆ ಹೊದೆದ ಬಣ್ಣದ ವಸ್ತ್ರವನ್ನು (ಕಿಫಿಯೆ) ಒಂಟೆಯ ಕೂದಲಿನ ಹುರಿಯಿಂದ ಕಟ್ಟಿಕೊಳ್ಳುತ್ತಾರೆ. ಇರಾನಿನಲ್ಲಿ ಪುರೋಹಿತ ವರ್ಗವನ್ನು ಉಳಿದು ಎಲ್ಲರೂ ಐರೋಪ್ಯ ಉಡುಗೆ ಧರಿಸುತ್ತಾರೆ. ಆದರೆ ಮಾತ್ರೆಯ ಡಬ್ಬಿಯಂತೆ ಕಾಣುವ, ಬಣ್ಣಬಣ್ಣಗಳ ಪಾಲವಿ ಹ್ಯಾಟು ಮಾತ್ರ

ಕಡ್ಡಾಯ. ಹೆಂಗಸರು ಮನೆಯಿಂದ ಹೊರಬರುವಾಗ ಚದರ್ (ಅರೆಮೊಗವಾಡದ ಸಡಿಲ ದಗಲ) ಧರಿಸಿ, ಕಣ್ಣನ್ನು ಬಿಸಿಲಿನಿಂದ ರಕ್ಷಿಸುವ ಸಲುವಾಗಿ ಬಚೆ ಎಂಬ ಶಿರಸ್ತ್ರಾಣ ತೊಡುತ್ತಾರೆ.

ಚೀನಿ ಉಡುಗೆಯಲ್ಲಿ ಪ್ರಾಂತೀಯ ಭಿನ್ನತೆ ಬಹಳ. ಆದರೆ ದೊಗಳೆ ಅಂಗಿ, ರೇಷ್ಮೆ ಅಥವಾ ಹತ್ತಿಯ ಷರಾಯಿ ಸಾಮಾನ್ಯ. ಅನೇಕ ಏಷ್ಯನ್ ರಾಷ್ಟ್ರಗಳ ಉಡುಪು ಇದೇ ತರಹ. ದೊಡ್ಡ ಮನುಷ್ಯರು ಈ ಅಂಗಿಯ ಮೇಲೆ ತೋಳಿಲ್ಲದ ಜಾಕೆಟ್ ಧರಿಸುವುದುಂಟು. ಗಂಡಸರು ಪಾಶ್ಚಾತ್ಯ ವಿಧಾನಕ್ಕೆ ಪರಿವರ್ತನೆ ಹೊಂದುತ್ತಿದ್ದಾರಾದರೂ ಹೆಂಗಸರು ಸಾಮಾನ್ಯವಾಗಿ ಪಡುವಣ ಶೈಲಿಯನ್ನೊಪ್ಪುವುದಿಲ್ಲ. ಅವರ ಉದ್ದನೆಯ ಉಡುಗೆ ಆಕರ್ಷಕ. ಮಂಚೂರಿಯನ್ ಹಾಗೂ ಮಂಗೋಲಿಯನ್ ಉಡುಗೆ ಚೀನಿಯರ ಉಡುಪಿನ ಅನುಕರಣೆ. ಸೈಬೀರಿಯದ ಜನದ್ದು ತುಪ್ಪಳ ಚರ್ಮದ ಪದರವಿರುವ ಉಡುಪು. ಸಿಂಕಿಯಾಂಗಿನ ಜನರ ಉಡುಪು ಮುಸ್ಲಿಂ ಮಾದರಿಯದು.

19ನೆಯ ಶತಮಾನದಲ್ಲಿ ಜಪಾನೀಯರು ಪಾಶ್ಚಾತ್ಯ ಶೈಲಿಯನ್ನನುಕರಿಸಿದರು. ಸರ್ಕಾರಿ ನೌಕರರಿಗೆ ಇದು ಆಗ ಕಡ್ಡಾಯವಾಯಿತು. ಸ್ತ್ರೀಪುರುಷರಿಬ್ಬರೂ ಧರಿಸುವ ಕಿಮೋನೊ ಹೊರ ಉಡುಪು. ಇದು ಚೀನಿಯರ ಉಡುಪಿನ ಅನುಕರಣೆ. ಹೆಂಗಸರ ಕಿಮೋನೊಗಳು ವರ್ಣರಂಜಿತ, ಚಿತ್ರಮಯ. ಇದರ ನಡುವಿಗೆ ರಂಗು ರೇಷ್ಮೆಯ ಕಟ್ಟುಪಟ್ಟಿ, ಅವರಿಗೆ ಪಾಶ್ಚಾತ್ಯ ಉಡುಗೆಯಲ್ಲಿ ಹೆಚ್ಚು ಪ್ರೀತಿ.

ಕೊರಿಯದವರಲ್ಲಿ ಬಿಳಿಯುಡುಗೆ ಸಾಮಾನ್ಯ ಹಿಂದೊಮ್ಮೆ ಅನುಭವಿಸಿದ ದುಃಖ ದಿನಗಳ ಕಾಲದಿಂದ ಉಳಿದುಕೊಂಡು ಬಂದಿರುವ ಸಂಪ್ರದಾಯ. ಷರಾಯಿ ಅಥವಾ ಉದ್ದಲಂಗದ ಮೇಲೆ ಕೋಟು.

ಟಿಬೆಟಿನವರು ಉದ್ದನೆಯ ಉಡುಪು ಧರಿಸಿ ನಡು ಬಿಗಿಯುತ್ತಾರೆ.

ಬರ್ಮೀಯರಲ್ಲಿ ಸ್ತ್ರೀಪುರುಷರ ಉಡುಗೆ ಒಂದೇ ಆದರೂ ಅದನ್ನು ಉಡುವ ವಿಧಾನ ಬೇರೆ ಬೇರೆ. ನಡುವಿಗೆ ಸುತ್ತಿದ ರಂಗುರಂಗಿನ ಲುಂಗಿ, ಬಿಳಿಯ ಅಂಗಿ ಇವು ಇಲ್ಲಿನವರ ವೈಶಿಷ್ಟ್ಯ. ಗಂಡಸರು ತಮ್ಮ ತಲೆಯ ಸುತ್ತ ಗಾಂಗ್‌ವಾಂಗ್ ಎಂಬ ವಸ್ತ್ರ ಕಟ್ಟುತ್ತಾರೆ.

**ಸಯಾಮಿಗಳ ಉಡುಗೆ ಪಾನುಂಗ್**: ಆರು ಮೊಳದ ಧೋತಿಯ ಕಚ್ಚೆ, ಮೇಲುದು, ಇಂಡೋ-ಚೀನದ ಉಡುಪು ಚೀನೀ ತರಹ. ಮಲೆಯನ್ನರು ಉದ್ದನೆಯ ಸಡಿಲ ಲುಂಗಿಯುಟ್ಟು ಕಸೂತಿಯ ಬಿಳಿಕವಚ ತೊಡುತ್ತಾರೆ. ಫಿಲಿಪೀನಿನ ಉಡುಗೆಯ ಮೇಲೆ ಸ್ಪೇನ್ ಪ್ರಭಾವ. ಹೆಂಗಸರ ಉಡುಪಿನ ತೋಳು ದೊಗಳೆ. ಉಡುಪಿನ ಮೇಲಿನ ಕಸೂತಿ. ಆಕರ್ಷಕ ಗಂಡಸರಿಗೆ ಷರಟೂ ಷರಾಯಿಯೂ ಪ್ರಿಯ.

**ಭಾರತೀಯರ ಉಡುಗೆ**: ಹರಪ್ಪ ಸಂಸ್ಕೃತಿಯ ಕಾಲದ ಪ್ರಾಗ್ಭಾರತೀಯರಿಗೆ ಹತ್ತಿ, ಸೆಣಬು ಮತ್ತು ನಾರು ಉಡುಗೆ ಗೊತ್ತಿತ್ತು. ನಿವೀತಿ ಮತ್ತು ಉಪವೀತಿ ವಿಧಾನಗಳಲ್ಲಿ ಅವರು ಬಟ್ಟೆ ಧರಿಸುತ್ತಿದ್ದರು. ಹೆಂಗಸರ ಉಡುಪು ನಡುವಿನಿಂದ ಕೆಳಕ್ಕೆ ಮಾತ್ರ. ಪುರುಷರೂ ಸ್ತ್ರೀಯರೂ ಅಲಂಕಾರಪ್ರಿಯರು. ಜಡೆಗಂಟು, ಡಾಬು, ಕರ್ಣಾಭರಣ, ಬಳೆ, ಅಂದಿಗೆ, ತೋಡಹಾರ, ಮೂಗುಬೊಟ್ಟು, ಹೇರ್‌ಪಿನ್, ಕರಿಮಣಿ ಸರ ಇತ್ಯಾದಿ ಅಲಂಕಾರಗಳ ಜೊತೆಗೆ ಅನೇಕ ವಿಧವಾದ ರುಮಾಲುಗಳು ಆಗಿನ ಹೆಂಗಸರಿಗೆ ಭೂಷಣಪ್ರಾಯ.

ವೇದಕಾಲದ ಆರ್ಯರು ಹತ್ತಿ, ಉಣ್ಣೆ, ಸೆಣಬು, ನಾರು ಬಟ್ಟೆಗಳನ್ನು ತ್ರಸರದ ಸಹಾಯದಿಂದ ನೇಯುತ್ತಿದ್ದರು. ಅವರು ಧರಿಸುತ್ತಿದ್ದದ್ದು ಮೂರು ವಸ್ತ್ರ: ಮೊದಲು ನೀವಿ, ಅದರ ಮೇಲೆ ವಾಮ, ಇವುಗಳ ಮೇಲೆ ಅಧಿವಾಮ. ಮೇಲಣ ವಸ್ತ್ರ ಧರಿಸುವುದರಲ್ಲಿ ಮೂರು ವಿಧ: ಎಡಭುಜದ ಮೇಲೂ ಬಲಗೈ ಕೆಳಗೂ ಹಾಕಿಕೊಳ್ಳುವುದು ಉಪವೀತಿ ಕ್ರಮ. ಬಲಭುಜದ ಮೇಲೂ ಎಡತೋಳಿನ ಕೆಳಗೂ ಹಾಕಿಕೊಳ್ಳುವುದು ಪ್ರಾಚೀನಾವೀತಿ. ಗಂಟಲಿನಿಂದ ಜೋಲಾಡುವಂತೆ ಹಾಕಿಕೊಳ್ಳುವುದು ನಿವೀತಿ. ಮೊದಲನೆಯದು ಮನುಷ್ಯರ ರೀತಿ, ಎರಡನೆಯದು ಪಿತೃಗಳ ಕ್ರಮ, ಮೂರನೆಯದು ದೇವತೆಗಳ ವಿಧಾನ. ಪ್ರಜಾಪತಿಗೆ ಯಜ್ಞೋಪವೀತ ಸಹಜವಾದದ್ದೆಂದು ಹೇಳಿದೆಯಾದ್ದರಿಂದ ಇದು ಮೃಗಶಿರಾ ನಕ್ಷತ್ರದ ಅನುಕರಣೆ ಇರಬಹುದೆಂದು ತಿಲಕರ ಊಹೆ. ಯಜ್ಞೋಪವೀತವನ್ನು ಯಾವಾಗಲೂ ದೇಹದ ಮೇಲೆ ಧರಿಸತಕ್ಕದ್ದೆಂಬ ನಿಯಮವಿದ್ದಂತಿಲ್ಲ. ಮೊದಲು ಕೃಷ್ಣಾಜಿನ ಅಥವಾ ವಸ್ತ್ರವೇ ಉಪವೀತ. ದೇವಭಾಗನಿಗೆ ವಾಗ್ದೇವಿ ಪ್ರತ್ಯಕ್ಷಳಾದಾಗ ಆತ ತನ್ನ ವಸ್ತ್ರವನ್ನೇ ಯಜ್ಞೋಪವೀತದಂತೆ ಹಾಕಿಕೊಂಡು ಆಕೆಗೆ ನಮಸ್ಕರಿಸಿದನೆಂದು ತೈತ್ತಿರೀಯ ಬ್ರಾಹ್ಮಣದಲ್ಲಿ ಹೇಳಿದೆ. ಅಭಿಚಾರಕ್ರಮದಲ್ಲಿ ಕೆಂಪುಬಟ್ಟೆಯನ್ನೂ ಉಷ್ಣೀಷವನ್ನೂ ಧರಿಸುವ ರೂಢಿಯಿತ್ತು. ವೇದಕಾಲದ ಯೋಧರು ಚಿನ್ನ, ತಾಮ್ರ ಮುಂತಾದ ಲೋಹಗಳ ಕವಚ, ತಲೆಪಾಗು ಧರಿಸುತ್ತಿದ್ದರು. ಸ್ತ್ರೀಯರ ಪರದಾ ಪದ್ಧತಿ ಬಹುಶಃ ಐಚ್ಛಿಕ.

ಶಿಲಾಯುಗದಲ್ಲೇ ಭಾರತೀಯರಿಗೆ ಸೂಜಿ ತಕಲಿಗಳ ಪರಿಚಯವಿತ್ತು. ಆದರೆ ಹೊಲಿದ ಬಟ್ಟೆ ಕಲಾತ್ಮಕವಲ್ಲ: ಆರೋಗ್ಯದೃಷ್ಟಿಯಿಂದಲೂ ಇದು ಅನುಚಿತ ಎಂಬುದು ಅವರ ಭಾವನೆ. ಆದ್ದರಿಂದ ಹೊಲಿಯದ ಬಟ್ಟೆಗಳೇ ಅವರ ದೃಷ್ಟಿಯಲ್ಲಿ ಪ್ರಶಸ್ತ. ಮೈಮೇಲೆ ಎರಡು ಬಟ್ಟೆ (ದ್ವಿಪಟ) ಇರಬೇಕಾದ್ದು ಕಡ್ಡಾಯ. ಲುಂಗಿ ವರ್ಜ್ಯ. ಕಚ್ಚೆಪಂಚೆ ವಿಹಿತ. ಕಚ್ಚೆಯ ಅಂಚು ಹಿಂದೆ ಜೋಲಾಡಬಾರದು. ಹೊಕ್ಕಳ ಹತ್ತಿರವೂ ಎಡಭಾಗ ಹಿಂಭಾಗಗಳಲ್ಲೂ ಒಟ್ಟು ಮೂರು ಗಂಟು ಹಾಕಬೇಕು. ನಡುವಿಗೆ ಉಡುವ ಬಟ್ಟೆಯಿಂದ ದೇಹದ ಮೇಲ್ಭಾಗ ಮುಚ್ಚಿಕೊಳ್ಳಬಾರದು. ಹೆಂಗಸರು ಉದ್ದನೆಯ ಒಂದೇ ಬಟ್ಟೆಯಿಂದ ಭುಜ ಮುಚ್ಚಿ ಕೆಳಗಿನ ವರೆಗೂ ಜೋಲಾಡುವಂತೆ ಧರಿಸುತ್ತಿದ್ದರೆಂದು ಯುವಾನ್ ಚಾಂಗ್ ಹೇಳಿದ್ದಾನಾದರೂ ಪ್ರಾಚೀನ ಶಿಲ್ಪಗಳಲ್ಲಿ ಈ ರೀತಿ ಕಂಡುಬರುವುದಿಲ್ಲ: ನಡುವಿನ ಕೆಳಗೆ ಒಂದು ವಸ್ತ್ರ, ಎದೆಕಟ್ಟು ಇವು ಸಾಮಾನ್ಯ ಉಡುಗೆ. ದಕ್ಷಿಣದವರಲ್ಲಿ ಚೋಳಿ (ರವಿಕೆ) ಪ್ರಚಾರದಲ್ಲಿತ್ತು.

ಹೊಯ್ಸಳ ವಿಜಯನಗರದ ಕಾಲದಲ್ಲಿ ಮಹಾಕೂರ್ಪಾಸ (ನಿಲುವಂಗಿ), ಕುಲಾವಿ, ಕೋಕು (ರುಮಾಲು), ಪಾದಯಾಮ ಅಥವಾ ಪಾಯ್ಜಾಮ (ಷರಾಯಿ), ಉತ್ತರೀಯ, ನಡುಕಟ್ಟು – ಇದು ರಾಜಸಭೆಯ ಉಡುಪು. ಕ್ಷತ್ರಿಯರೂ ಸೈನಿಕರೂ ಧರ್ಮ ಮತ್ತು ಲೋಹ ನಿರ್ಮಿತ ತನುತ್ರಾಣವನ್ನೂ ಶಿರಸ್ತ್ರಾಣವನ್ನೂ ಧರಿಸುತ್ತಿದ್ದರು.

ಉತ್ತರ ಭಾರತದಲ್ಲಿ ಪರಕೀಯರ ಆಗಮನದ ಪರಿಣಾಮ ಅಲ್ಲಿಯ ಜನರ ಉಡಿಗೆ ತೊಡಿಗೆಗಳ ಮೇಲೂ ಆಯಿತು. ಮೊಗಲ ದರ್ಬಾರಿಗೆ ಹೋಗುತ್ತಿದ್ದ ಪುರುಷರೆಲ್ಲ ಮೊಗಲರಂತೆ ಸಲ್ವಾರ್, ಉದ್ದನೆಯ ನಿಲುವಂಗಿ, ಜರಿಯ ಪೇಟಗಳನ್ನು ಧರಿಸತೊಡಗಿದರು. ಪಂಜಾಬ್, ದೆಹಲಿ, ಕಾಶ್ಮೀರಗಳ ಮಹಿಳೆಯರೂ ಸಲ್ವಾರ್ ಖಮೀಜ್ ಧರಿಸಿ ಮೇಲೊಂದು ದುಪ್ಪಟಿ ಹೊದ್ದುಕೊಳ್ಳುವುದು ಸಾಮಾನ್ಯವಾಯಿತು. ಪುರುಷರು ಬಣ್ಣ ಬಣ್ಣದ ರುಮಾಲನ್ನು ಸುತ್ತಿಕೊಂಡು ಬಣ್ಣದ ಅಂಗಿ ಧರಿಸುವುದುಂಟು. ಅಲ್ಲಿಯ ಸ್ತ್ರೀಯರು ಬಣ್ಣದ ಲಂಗ ಧರಿಸಿ ಕುಪ್ಪಸ ತೊಟ್ಟುಕೊಂಡು ತಲೆತುಂಬ ಮುಸುಕು ಹೊದಿಯುತ್ತಾರೆ. ಬಂಗಾಲಿ ಮಹಿಳೆಯರು ಸೀರೆ ಉಡುವ ಪದ್ಧತಿಯೇ ಬೇರೆ. ಬಿಹಾರ, ಗುಜರಾತುಗಳ ಜನ ಎಡಗಡೆ ಸೆರಗು ಹೊದೆಯುತ್ತಾರೆ. ದಕ್ಷಿಣದವರು ಸೀರೆ ಉಟ್ಟುಕೊಂಡು ತಲೆಯ ಮೇಲೆ, ಇಲ್ಲವೆ ಹೆಗಲಮೇಲೆ ಸೆರಗು ಹೊದೆಯುತ್ತಾರೆ. ಮಹಾರಾಷ್ಟ್ರದವರು ಕಚ್ಚೆ ಹಾಕಿ ಸೀರೆ ಉಡುವುದುಂಟು. ಪುರುಷರು ಧೋತ್ರ, ಷರ್ಟು, ಕೋಟುಗಳನ್ನೂ ರುಮಾಲು ಇಲ್ಲವೆ ಟೊಪ್ಪಿಗೆಯನ್ನೂ ಧರಿಸುತ್ತಿದ್ದರು. ಇಂದಿಗೂ ಕೇರಳ ಹಾಗೂ ಅಸ್ಸಾಮಿನ ಕೆಲವರ್ಗದ ಸ್ತ್ರೀಯರು ರಟ್ಟೆಯ ಕೆಳಭಾಗದಿಂದ ಪಾದದವರೆಗೆ ಲುಂಗಿಯಂತೆ ಬಟ್ಟೆ ಸುತ್ತಿಕೊಳ್ಳುತ್ತಾರೆ; ಕುಪ್ಪಸ ತೊಡುವುದೇ ಇಲ್ಲ.

ಭಾರತದ ಬನಾರಸ್ ಜರಿಯ ಬಟ್ಟೆ ಮುರ್ಷಿದಾಬಾದ್ ಸಿಲ್ಕ್, ಗುಜರಾತಿನ ಬಾಂಧಣಿ, ಪಟೋಲಾಗಳು, ಮಧುರೆಯ ನೂಲಿನ ಸೀರೆಗಳು, ಧರ್ಮಾವರಂ ರೇಷ್ಮೆ ಸೀರೆಗಳು, ಕರ್ನಾಟಕದ ಇಳಕಲ್ ಸೀರೆ, ರೇಷ್ಮೆ ಬಟ್ಟೆಗಳು ಜಗತ್ಪ್ರಸಿದ್ಧ.

**ಆದಿವಾಸಿ ಜನರ ಉಡುಗೆ**: ಉಡುಗೆ ತೊಡುಗೆಗಳ ಆವಶ್ಯಕತೆ ಮಾನವರು ಕಾಡುಸ್ಥಿತಿಯಲ್ಲಿದ್ದಾಗಲೇ ತೋರಿಬಂತು. ಆಹಾರಕ್ಕಾಗಿ ಬೇಟೆಯಾಡಿದ ಪ್ರಾಣಿಗಳ ಚರ್ಮಗಳನ್ನೇ ದೇಹರಕ್ಷಣೆಗಾಗಿ ಧರಿಸುತ್ತಿದ್ದರು. ಅನಂತರ ನಾರಿನ ಬಟ್ಟೆಗಳನ್ನು ನೇಯ್ದು ಧರಿಸುತ್ತಿದ್ದರು. ಮಾನವನಲ್ಲಿ ಕಲಾದೃಷ್ಟಿ ಬೆಳೆದಂತೆ, ಸಭ್ಯತೆಯ ಕಲ್ಪನೆ ಬೆಳೆದಂತೆ, ಉಡುಗೆಯಲ್ಲಿ ಮಾರ್ಪಾಟು ಆಗುತ್ತಿತು. ಕಮಲದ ದೇಟಿನ ನಾರಿನಿಂದ, ಗಿಡದ ತೊಗಟೆಯಿಂದ ಹಂಸದ ತುಪ್ಪಳದಿಂದ ದುಕೂಲಗಳನ್ನು ನೇಯಹತ್ತಿದರು.

ಅನೇಕ ದೇಶಗಳ ಕಾಡುಜನರೂ ಅಂಡಮಾನ್ ದ್ವೀಪದ ಜನರೂ ಮೊದಲಿಗೆ ಬಟ್ಟೆಯ ಬದಲು ದೇಹಕ್ಕೆ ಬಣ್ಣವನ್ನು ಲೇಪಿಸಿಕೊಳ್ಳುತ್ತಿದ್ದರು. ಆ ಬಣ್ಣ ಬಿಸಿಲು, ಮಳೆ, ಚಳಿಗಳಿಂದ ದೇಹವನ್ನು ರಕ್ಷಿಸುವುದೆಂಬ ಭಾವನೆ ಆ ಜನರಿಗಿತ್ತು.

ಅಮೆರಿಕದ ರೆಡ್ ಇಂಡಿಯನ್ನರೂ ಆಫ್ರಿಕದ ನೀಗ್ರೊ ಜನರೂ ಸೊಂಟದಿಂದ ಮೊಣಕಾಲವರೆಗೆ ದೇಹದ ಸುತ್ತಲೂ ಚರ್ಮದ ಪಟ್ಟಿ ಧರಿಸುತ್ತಾರೆ. ಕೆಲವು ಅರಬ್ಬೀ ಜನಾಂಗದ ಪುರುಷರು ಒಂದೇ ಬಟ್ಟೆಯನ್ನುಡುತ್ತಾರೆ. ಮಹಿಳೆಯರು ಒಂದೇ ಬಟ್ಟೆಯಿಂದ ತಲೆ, ದೇಹ ಮುಚ್ಚುವಂತೆ ಸೀರೆಯನ್ನುಟ್ಟುಕೊಳ್ಳುವರು. ಝೂಲ್ ಕಾಡುಜನ ಸೊಂಟದಿಂದ ಮೊಣಕಾಲವರೆಗೆ ಚರ್ಮದ ಪಟ್ಟಿಗಳನ್ನು ಇಳಿಬಿಡುತ್ತಾರೆ.

ಎಸ್ಕಿಮೊ ಜನಕ್ಕೆ ಅಡಿಯಿಂದ ಮುಡಿಯವರೆಗೆ ಚರ್ಮದ ಬಟ್ಟೆಯಿರುತ್ತದೆ. ನಾಗಾಲ್ಯಾಂಡಿನ ಜನ ಸೊಂಟದಿಂದ ಮೊಣಕಾಲವರೆಗೆ ಬಟ್ಟೆ ಧರಿಸುವರು. ಅಸ್ಸಾಮಿನ ಕಾಡುಜನಾಂಗದ ಮಹಿಳೆಯರು ರಟ್ಟೆಯ ಕೆಳಭಾಗದಿಂದ ಮೊಣಕಾಲವರೆಗೆ ಬಿಗಿಯಾಗಿ ಬಟ್ಟೆ ಧರಿಸುತ್ತಾರೆ. ಪುರುಷರು ಕೊಂಬು ಗರಿಗಳಿಂದ ಅಲಂಕರಿಸಿಕೊಳ್ಳುತ್ತಾರೆ. ನೀಲಗಿರಿಯ ತೋಡಮಹಿಳೆಯರೂ ಘಟ್ಟದ ಕೆಳಗಿನ ಸ್ತ್ರೀಯರೂ ಕೇರಳದವರೂ ಕುಪ್ಪಸ ತೊಡುವುದಿಲ್ಲ. ಒಂದೇ ಬಟ್ಟೆಯನ್ನು ರಟ್ಟೆಯ ಕೆಳಭಾಗದಿಂದ ಪಾದದವರೆಗೆ ಉಟ್ಟುಕೊಳ್ಳುತ್ತಾರೆ.

ಪ್ರಾಚೀನಕಾಲದಿಂದ ಜಗತ್ತಿನ ಶಿರೋಭೂಷಣಗಳಲ್ಲಿ ಅನೇಕ ಬದಲಾವಣೆಗಳಾಗುತ್ತ ಬಂದಿವೆ. ಶಿಲಾಯುಗದ ಮಾನವ ಬೇಟೆಯಾಡಿದ ಪ್ರಾಣಿಗಳ ಚರ್ಮದಿಂದ, ಪಕ್ಷಿಗಳ ಗರಿಗಳಿಂದ ನಾನಾ ಬಗೆಯ ಶಿರೋಭೂಷಣಗಳನ್ನು ಸಿದ್ಧಗೊಳಿಸಿ ಧರಿಸುತ್ತಿದ್ದ. ಇಂದಿಗೂ ಅಮೆರಿಕದ ರೆಡ್ ಇಂಡಿಯನ್ನರು, ಆಫ್ರಿಕದ ಕೆಲ ಜನಾಂಗದವರು, ಭಾರತದ ಆದಿವಾಸಿಗಳು ಪ್ರಾಣಿಗಳ ಕೊಂಬು, ಪಕ್ಷಿಗಳ ಗರಿಗಳಿಂದ ಸಿದ್ಧವಾದ ಶಿರೋಭೂಷಣಗಳನ್ನು ಧರಿಸುವುದುಂಟು. ಎಸ್ಕಿಮೊ ಜನ ಚರ್ಮದ ಟೊಪ್ಪಿಗೆ ಧರಿಸುತ್ತಾರೆ. ಟಿಬೆಟಿನ ಜನರಿಗೆ ಗೋಪುರಗಳಂತೆ ಎತ್ತರವಾದ ಟೊಪ್ಪಿಗೆ ಸಾಮಾನ್ಯ.

**ತಲೆಯುಡುಗೆ**: ಪ್ರಾಚೀನಕಾಲದಲ್ಲಿ ಸ್ತ್ರೀಪುರುಷರಿಬ್ಬರೂ ತಲೆಕೂದಲು ಬೆಳೆಸುತ್ತಿದ್ದರು. ಇಂದಿಗೂ ಕೆಲಪ್ರದೇಶಗಳಲ್ಲಿ ಪುರುಷರು ಕೂದಲು ಬೆಳೆಸುವುದುಂಟು. ಭಾರತದಲ್ಲಿ ಶಿರೋವಸ್ತ್ರಕ್ಕೆ ಪ್ರಾಧಾನ್ಯ ಇತ್ತು. ವೇದಗಳ ಕಾಲದಲ್ಲಿ ಹೆಂಗಸರು ಕುರೀರ, ಕುಮ್ಬ,

ಓಪಶಗಳೆಂಬ ಶಿರೋಭೂಷಣ ಧರಿಸುತ್ತಿದ್ದರು. ಗಂಡಸರು ಶಿರಸ್ತ್ರಾಣ ಶಿರೋವೇಷ್ಟಗಳನ್ನು ಹಾಕಿಕೊಳ್ಳುವ ಪದ್ಧತಿಯಿತ್ತು. ಶುಭಕಾರ್ಯಗಳಲ್ಲಿ ಭಾರತೀಯರು ಶಿರೋವಸ್ತ್ರ ಧರಿಸಲೇ ಬೇಕೆಂಬ ಸಂಪ್ರದಾಯವಿದೆ. 8ನೆಯ ಶತಮಾನದವರೆಗೆ ಸ್ತ್ರೀಪುರುಷರಿಬ್ಬರೂ ಉದ್ದನೆಯ ಟೊಪ್ಪಿಗೆ ಧರಿಸುತ್ತಿದ್ದರೆಂದು ಕಾವ್ಯ ಶಿಲ್ಪಗಳಿಂದ ತಿಳಿದು ಬರುತ್ತದೆ. ಮೌರ್ಯರ ಕಾಲದಲ್ಲಿ ಅರಸರೂ ಮಂತ್ರಿ ಮಾನ್ಯರೂ ಕಿರೀಟ ಧರಿಸಿದರೆ ಸೈನಿಕರು ರುಮಾಲು ಸುತ್ತಿಕೊಳ್ಳುತ್ತಿದ್ದರು. ಗುಪ್ತರ ಕಾಲದಲ್ಲಿ ಸೈನಿಕರಿಗೆ ಕಂಚಿನ ಶಿರಸ್ತ್ರಾಣ ಬಂತು. ಪ್ರಾಚೀನಕಾಲದಿಂದಲೂ ರಾಜರಾಣಿಯರ ವಜ್ರ ವೈಡೂರ್ಯ ಬಂಗಾರ ಮುತ್ತುಗಳ ಕಿರೀಟವನ್ನೂ ಮಂತ್ರಿಮಾನ್ಯರು ತಮ್ಮ ಯೋಗ್ಯತೆಗೆ ತಕ್ಕ ಶಿರೋವಸ್ತ್ರಗಳನ್ನೂ ಧರಿಸುವುದು ವಾಡಿಕೆಯಾಗಿತ್ತು.

ಜನಸಾಮಾನ್ಯರು ತಮ್ಮ ಸ್ಥಾನಮಾನಗಳಿಗೆ ತಕ್ಕಂತೆ ಜರಿಬಟ್ಟೆ ರೇಷ್ಮೆ ನೂಲುಗಳ ಶಿರೋವಸ್ತ್ರ ಧರಿಸುತ್ತಿದ್ದರು. ಭಾರತದಲ್ಲಿ ಒಂದೊಂದು ಪ್ರಾಂತ್ಯದ ಜನರದು ಒಂದೊಂದು ಬಗೆಯ ತಲೆಯುಡುಗೆ, ಮೈಸೂರಿನ ಪೇಟ, ಕೇರಳದ ಬಿಳಿ ರುಮಾಲು, ಉತ್ತರ ಕರ್ನಾಟಕದ ರುಮಾಲು, ಮಹಾರಾಷ್ಟ್ರದ ಪಗಡಿ, ಮಾರವಾಡಿಗಳ ಹಳದಿ ಬಣ್ಣದ ರುಮಾಲು, ಮುಸ್ಲಿಮರ ಕೆಂಪು ಬಣ್ಣದ ಟೊಪ್ಪಿಗೆ, ಪಠಾಣರ ದೊಡ್ಡ ಪೇಟ, ಉತ್ತರ ಭಾರತದ ಭಯ್ಯಾಗಳ ಟೊಪ್ಪಿಗೆ, ಮುಂಡಾಸು, ಕಾಶ್ಮೀರಿ ಟೊಪ್ಪಿಗೆ, ಪಾರ್ಸಿ ಜನರ ಹೆಣಿಕೆಯ ಟೊಪ್ಪಿಗೆ ಮೊದಲಾದವು ಭಾರತದಲ್ಲಿ ಪ್ರಚಲಿತವಾಗಿದ್ದವು. ಪಾಶ್ಚಾತ್ಯರ ಪ್ರಭಾವದಿಂದ ವಿವಿಧ ಬಗೆಯ ಹ್ಯಾಟುಗಳು ರೂಢಿಗೆ ಬಂದವು. ಟೊಪ್ಪಿಗೆಯೂ ಮಾನ್ಯತೆ ಪಡೆದಿದೆ.

ಪಾಶ್ಚಾತ್ಯ ದೇಶಗಳ ಸ್ತ್ರೀಪುರುಷರು ಬೆಳಗು ಬೈಗುಗಳಲ್ಲಿ, ಸಮಾರಂಭಗಳಲ್ಲಿ ಧರಿಸುವ ಟೊಪ್ಪಿಗೆಗಳು ವಿಧವಿಧವಾಗಿವೆ. ಫ್ರಾನ್ಸ್ ಜರ್ಮನಿಗಳ ಮಹಿಳೆಯರು ಗರಿಯ ಹ್ಯಾಟು ಪ್ರೀತಿಸುತ್ತಾರೆ. ದಕ್ಷಿಣ ಅಮೆರಿಕದಲ್ಲಿ ಹುಲ್ಲಿನಿಂದ ಮಾಡಿದ ಪನಾಮ ಹ್ಯಾಟುಗಳು ಜನಪ್ರಿಯ. ತುರ್ಕಿಸ್ತಾನದವರು ಎತ್ತರವಾದ ಚರ್ಮದ ಟೊಪ್ಪಿಗೆ ಧರಿಸುತ್ತಾರೆ. ಚೆಕೊಸ್ಲೊವಾಕಿಯದವರು ಹೆಣಿಗೆಯ ಟೊಪ್ಪಿಗೆಗಳನ್ನೂ ಬಣ್ಣಬಣ್ಣದ ಬಟ್ಟೆಯ ಶಿರೋವಸ್ತ್ರಗಳನ್ನೂ ಉಪಯೋಗಿಸುತ್ತಾರೆ. ಅರಬ್ಬರು ಬಿಳಿಬಟ್ಟೆಯನ್ನು ತಲೆಯಿಂದ ಪಾದದವರೆಗೆ ಹೊದಿಯುತ್ತಾರೆ. ಮಧ್ಯಭಾಗದಲ್ಲಿ ಟೊಪ್ಪಿಗೆಯಿಟ್ಟು ಸುತ್ತಲೂ ಬಟ್ಟೆಯನ್ನು ಸುತ್ತಿ ಹಿಂಬದಿಗೆ ಒಂದಿಷ್ಟು ಬಟ್ಟೆಯನ್ನು ಇಳಿಬಿಡುವುದು ಅಫ್ಘಾನಿಸ್ತಾನದ ರುಮಾಲಿನ ವೈಖರಿ. ರಷ್ಯದ ಸ್ತ್ರೀಪುರುಷರು ಉದ್ದ ಟೊಪ್ಪಿಗೆಯನ್ನೂ ರೇಷ್ಮೆಯ ವಸ್ತ್ರವನ್ನೂ ಧರಿಸುತ್ತಾರೆ. ಜಪಾನೀ ಮಹಿಳೆಯರು ಹ್ಯಾಟಿನಾಕಾರದಲ್ಲಿ ಕೇಶಾಲಂಕಾರ ಮಾಡಿಕೊಳ್ಳುವರು. ಪುರುಷರದು ಹುಲ್ಲಿನ ಬುಟ್ಟಿಯಾಕಾರದ ಹ್ಯಾಟು. 19ನೆಯ ಶತಮಾನದಿಂದ ಪಾಶ್ಚಾತ್ಯ ಮಾದರಿಯ ಹ್ಯಾಟುಗಳು ಹೆಚ್ಚಾಗಿ ರೂಢಿಯಲ್ಲಿವೆ. ಇದುವರೆಗೆ ಶಿರೋವಸ್ತ್ರ, ಶಿರೋಭೂಷಣಗಳಿಗೆ ಎಲ್ಲ ರಾಷ್ಟ್ರಗಳಲ್ಲಿ ಹೆಚ್ಚಿನ ಗೌರವವಿತ್ತು. ಇತ್ತೀಚೆಗೆ ಶಿರೋವಸ್ತ್ರದ ಬಗೆಗೆ ಜನರಲ್ಲಿ ಹಿಂದಿನಷ್ಟು ಆಸ್ಥೆ ಇಲ್ಲ. ಬರಿದಲೆಯಿಂದ ತಿರುಗಾಡುವುದೇ ಹೆಚ್ಚಾಗಿ ರೂಢಿಗೆ ಬರುತ್ತಿದೆ. ಟೊಪ್ಪಿಗೆಯೂ ಹ್ಯಾಟುಗಳೂ ಇನ್ನಿತರ ಬಗೆಯ ತಲೆಯುಡುಗೆಗಳೂ ಮಹತ್ತ್ವದ ಸಮಾರಂಭಗಳಿಗೆ ಸೀಮಿತವಾಗಿವೆ.(ಎಸ್.ಎಚ್.ಎಂ.)

**ಉಡುತಡಿ:** ಶಿವಮೊಗ್ಗ ಜಿಲ್ಲೆಯಲ್ಲಿರುವ ಊರು. 12ನೆಯ ಶತಮಾನದ ಪ್ರಸಿದ್ಧ ಶಿವಶರಣೆ ಅಕ್ಕಮಹಾದೇವಿಯ ಜನ್ಮಸ್ಥಳ. ಶಾಸನಗಳಲ್ಲಿ ಈ ಪ್ರದೇಶವನ್ನು ತಡಗಣಿ ಸೀಮೆ ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಈಗ ಪ್ರಸಿದ್ಧವಾಗಿರುವ ಉಡುಗಣಿ–ತಡಗಣಿ ಪ್ರದೇಶವನ್ನೇ ಹಿಂದೆ ಉಡುತಡಿ ಎಂದು ಕರೆಯುತ್ತಿದ್ದಂತೆ ಕಾಣುತ್ತದೆ. ಇದು ಬಳ್ಳಿಗಾವೆ–ಶಿರಾಳಕೊಪ್ಪಗಳಿಂದ ಸು. 7–8 ಕಿಮೀ ದೂರ ಅಂತರದಲ್ಲಿದೆ. ಶಿಕಾರಿಪುರಕ್ಕೆ 6–7 ಕಿಮೀಗಳಾಗಬಹುದು.

ಪಿಡುಪರ್ತಿ ಸೋಮನಾಥ ಇದನ್ನು ಉದತಡಿ ಎಂದು ಕರೆದಿದ್ದಾನೆ. ಉದ ಎಂದರೆ ಉದಕ ಅಥವಾ ನೀರು ಎಂದರ್ಥವಾಗುತ್ತದೆ. ಆದ್ದರಿಂದ ಉದತಡಿ (ಜಲಾಶಯದ ಸನಿಹದ ಊರು) ಉಡುತಡಿ ಎಂದಾಗಿರುವ ಸಂಭವವಿದೆ. ಬಳ್ಳಿಗಾವೆಯ ಬಳಿ (ಮೂರು ಮೈಲಿ) 5 ಕಿಮೀ ಗಳ ಅಂತರದಲ್ಲಿ ಒಂದು ವಿಶಾಲವಾದ ಕೆರೆಯಿದೆ. ಈ ಜಲಾಶಯದಿಂದಾಗಿ ಈ ಪ್ರದೇಶಕ್ಕೆ ಉಡುತಡಿ ಎಂಬ ಹೆಸರು ಬಂದಿರಬೇಕು. ಈ ಕೆರೆಯ ದಂಡೆಯಲ್ಲಿಯೇ ಕಲ್ಲಿನಲ್ಲಿ ಕೆತ್ತಿದ ಕಮಲ ಗಂಗವ್ವನ ವಿಗ್ರಹವಿದೆ. ಈ ಮೂರ್ತಿಯ ಶಿರೋಭಾಗವನ್ನು ಕಮಲಾಕೃತಿಯಲ್ಲಿ ಕೆತ್ತಲಾಗಿದೆ. ಕಂಠದಿಂದ ಕೆಳಗಿನ ಭಾಗ ನಗ್ನವಾಗಿದೆ. ಇದನ್ನೇ ಮಹಾದೇವಿಯ ಮೂರ್ತಿ ಎಂದು ಕರೆಯುತ್ತಾರೆ. ಈ ಅಭಿಪ್ರಾಯವನ್ನು ವಿರೋಧಿಸುವವರೂ ಇದ್ದಾರೆ. ಇದರ ಸಮೀಪದಲ್ಲಿಯೇ ತಡಗಣಿ ಎಂಬ ಇನ್ನೊಂದು ಊರುಂಟು. ಉಡುಗಣಿ–ತಡಗಣಿ ಎಂಬ ಎರಡು ಊರುಗಳೂ ಆ ಕೆರೆಯ ಇಕ್ಕೆಡೆಗಳಲ್ಲಿ ಇವೆ. ಇವೆರಡೂ ಹಿಂದಿನ ಕಾಲದಲ್ಲಿ ಒಂದೇ ಆಗಿದ್ದು ಉಡುತಡಿ ಎಂಬ ಊರಾಗಿತ್ತೆಂದು ಮತ್ತೆ ಕೆಲವರ ಊಹೆ. ಗಣಿ ಉಡು + ತಡ = ಉಡುತಡ> ಉಡುತಡಿ ಆಗಿರಬೇಕು.

ಉಡುತಡಿಯಲ್ಲಿ ಮಲ್ಲಿಕಾರ್ಜುನ ದೇವಾಲಯವೊಂದಿದೆ. ಮಹಾದೇವಿಯಕ್ಕ ತನ್ನ ವಚನಗಳಲ್ಲಿ ಅಂಕಿತವಾಗಿ ಹೆಸರಿಸುವ ಚೆನ್ನಮಲ್ಲಿಕಾರ್ಜುನ ದೇವರು ಇದೇ ಇರಬೇಕೆಂದು ಹೇಳುತ್ತಾರೆ. ಇದನ್ನು ಜನ ಈಗ ಪರದೇಶಿ ಮಲ್ಲಪ್ಪನ ಗುಡಿ ಎಂದು ಕರೆಯುತ್ತಾರೆ. ಇದರ ಸಮೀಪದಲ್ಲಿಯೇ ಹಿರೇಕಸವಿ, ಚಿಕ್ಕಕಸವಿ ಎಂಬ ಎರಡು ಗ್ರಾಮಗಳಿವೆ. ಇವು ಮಹಾದೇವಿಯನ್ನು ಮದುವೆಯಾದನೆಂದು ಹೇಳಲಾಗಿರುವ ಕೌಶಿಕನ ಹೆಸರಿನಲ್ಲಿ ಕರೆದ ಊರುಗಳೋ ಏನೋ ಎನ್ನುವಂತೆ ಭಾಸವಾಗುತ್ತದೆ. ಈ ಊರಿನ ಹತ್ತಿರವಿರುವ ಬಳ್ಳಿಗಾವೆಯೇ (ನೋಡಿ) ಅಲ್ಲಮಪ್ರಭು ಜನಿಸಿದ ಊರು. ಉಡುತಡಿಯಲ್ಲಿ ಇತ್ತೀಚೆಗೆ ಒಂದು ಹೆಣ್ಣುವಿಗ್ರಹ ಸಿಕ್ಕಿದ್ದು ಅದನ್ನು ಮಹಾದೇವಿಯಕ್ಕನ ವಿಗ್ರಹವೆಂದು ಪೂಜಿಸುತ್ತಿದ್ದಾರೆ. ಇಲ್ಲಿ ರಾಮೇಶ್ವರ ದೇವಾಲಯವೊಂದಿದೆ.

ಈ ಪ್ರಾಂತ್ಯ ವೀರಶೈವ ಆಧ್ಯಾತ್ಮಿಕ ಕೇಂದ್ರಗಳಲ್ಲಿ ಒಂದಾಗಿದ್ದುದರಿಂದ ಈ ಭಾಗದಲ್ಲಿ ಶಿವಶರಣರ ಸಂಸ್ಮರಣೆಯ ಸ್ಥಳಗಳು ಇಂದಿಗೂ ಕಂಡುಬರುತ್ತವೆ. ಇಲ್ಲಿರುವ ಹಳೆಯ ಕೋಟೆಯೊಂದನ್ನು ಕೌಶಿಕನ ಕೋಟೆಯೆಂದು ಅಲ್ಲಿನ ಜನ ತೋರಿಸುತ್ತಾರೆ. (ಬಿ.ಎನ್.ಪಿ.)

**ಉಡುಪಿ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಆಡಳಿತಕೇಂದ್ರ. **ಜಿಲ್ಲೆ:** ಉಡುಪಿ ಜಿಲ್ಲೆ ಕರ್ನಾಟಕದ ನೈಋತ್ಯ ಭಾಗದಲ್ಲಿದೆ. 1997ಕ್ಕೂ ಮುಂಚೆ ಈ ಜಿಲ್ಲೆಯ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು.ಆ ವರ್ಷ ಜಿಲ್ಲಾ ಪುನರ್ವಿಂಗಡಣೆಯ ಯೋಜನೆಯನ್ನು ಜಾರಿಗೆ ತಂದು ಉಡುಪಿಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ರಚಿಸಲಾಯಿತು. ಈ ಜಿಲ್ಲೆಯ ಉತ್ತರದಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳು, ಪೂರ್ವದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ದಕ್ಷಿಣಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಅರಬ್ಬೀ ಸಮುದ್ರ ಇವೆ. ವಿಸ್ತೀರ್ಣ 3880 ಚ.ಕಿ.ಮೀ.. ಜನಸಂಖ್ಯೆ 1112243. ಈ ಜಿಲ್ಲೆಯಲ್ಲಿರುವ

ತಾಲ್ಲೂಕುಗಳ ಸಂಖ್ಯೆ ಮೂರು. ಉಡುಪಿ, ಕುಂದಾಪುರ ಮತ್ತು ಕಾರ್ಕಳ (ಆಯಾ ಸ್ಥಳಗಳ ಶೀರ್ಷಿಕೆಗಳನ್ನು ನೋಡಿ). ಈ ಜಿಲ್ಲೆಯಲ್ಲಿ 9 ಹೋಬಳಿ, 248 ಜನವಸತಿಯಿರುವ ಹಳ್ಳಿಗಳು, 146ಗ್ರಾಮ ಪಂಚಾಯಿತಿ, 6 ಪಟ್ಟಣ ಮತ್ತು ನಗರ ಸಭೆ ಇವೆ. ಜಿಲ್ಲೆಯ ಪಶ್ಚಿಮದಲ್ಲಿ ಉದ್ದಕ್ಕೂ ಅರಬ್ಬೀ ಸಮುದ್ರವಿದೆ. ಪೂರ್ವದಲ್ಲಿ ಎತ್ತರವಾದ ಪಶ್ಚಿಮಘಟ್ಟದ ಶ್ರೇಣಿಗಳಿವೆ. ದಕ್ಷಿಣದಿಂದ ಉತ್ತರಕ್ಕೆ ಹೋದಂತೆಲ್ಲಾ ಜಿಲ್ಲೆಯ ಅಗಲ ಕಿರಿದಾಗುತ್ತದೆ.

**ಮೇಲ್ಮೈಲಕ್ಷಣ:** ಈ ಜಿಲ್ಲೆಯ ಪೂರ್ವ ಗಡಿಯುದ್ದಕ್ಕೂ ಎತ್ತರವಾದ ಮತ್ತು ದಟ್ಟವಾದ ಕಾಡಿನಿಂದ ಕೂಡಿದ ಪಶ್ಚಿಮ ಘಟ್ಟದ ಶ್ರೇಣಿಗಳಿವೆ. ಅಲ್ಲಲ್ಲಿ ಎತ್ತರವಾದ ಗಿರಿಶಿಖರಗಳು ಮತ್ತು ಮಧ್ಯೆ ಮಧ್ಯೆ ಕಂದರಗಳಿಂದ ಕೂಡಿರುವ ಭೂದೃಶ್ಯ ರುದ್ರರಮಣೀಯವಾಗಿವೆ. ಸಹ್ಯಾದ್ರಿ ಘಟ್ಟಗಳ ಶ್ರೇಣಿಗಳ ನಡುವೆ ಇರುವ ಆಗುಂಬೆ ಘಾಟ್ ರಸ್ತೆಯು ಕರ್ನಾಟಕದ ಮೈದಾನ ಪ್ರದೇಶದೊಂದಿಗೆ ಸಂಪರ್ಕಮಾರ್ಗವಾಗಿದೆ. ಕಾರ್ಕಳದ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಗಡಿಯನ್ನು ಸೇರಿ ಮುಂದೆ ಶೃಂಗೇರಿ ಮತ್ತು ಕುದುರೆಮುಖಗಳತ್ತ ಕವಲಾಗಿ ಹೋಗುವ ಹೆದ್ದಾರಿ ಈ ಪ್ರದೇಶದ ಇನ್ನೊಂದು ಪ್ರಮುಖ ಮಾರ್ಗ. ಆಗುಂಬೆಗೆ ಉತ್ತರದಲ್ಲಿರುವ ಕೊಡಚಾದ್ರಿ ಬೆಟ್ಟ ಈ ಜಿಲ್ಲೆಯ ಅತ್ಯಂತ ಎತ್ತರದ ಶಿಖರ (1341ಮೀ) ಇದು ಪ್ರವಾಸಿಗಳ ಆಕರ್ಷಣೀಯ ತಾಣವೂ ಹೌದು. ನದಿಗಳು ತೊರೆಗಳು ಮತ್ತು ನಿತ್ಯಹಸಿರು ಕಾಡುಗಳಿಂದ ಕೂಡಿರುವ ಈ ಭಾಗದ ಪ್ರಕೃತಿ ತುಂಬಾ ರಮ್ಯವಾಗಿದೆ.

ಘಟ್ಟದಿಂದ ಕೆಳಗೆ ಪಶ್ಚಿಮಾಭಿಮುಖವಾಗಿ ಬಂದಂತೆಲ್ಲಾ ಮೈದಾನ ಪ್ರದೇಶ ತೆರೆದುಕೊಳ್ಳುತ್ತದೆ. ಅಷ್ಟೇನೂ ಕಡಿದಾಗಿರದ ಇಳಿಜಾರಿನ ಪ್ರದೇಶದಲ್ಲಿ ಅಲ್ಲಲ್ಲಿ ಎತ್ತರದ ಗುಡ್ಡಬೆಟ್ಟಗಳುಂಟು. ವ್ಯವಸಾಯದ ಜಮೀನಿನಲ್ಲಿ ಗದ್ದೆಗಳು, ತೆಂಗು, ಅಡಕೆ, ಗೋಡಂಬಿ ತೋಟಗಳಿವೆ. ಕೆಲವೆಡೆ ಕೆಮ್ಮಣ್ಣಿನಿಂದ ಕೂಡಿದ ಬರಡು ದಿಣ್ಣೆಗಳಿವೆ. ಈ ಜಿಲ್ಲೆಯಲ್ಲಿ ಸಮತಟ್ಟಾದ ನೆಲ ಕಡಿಮೆಯೇ.

ಜಿಲ್ಲೆಯ ತೀರಪ್ರದೇಶ ಅತ್ಯಂತ ಮುಖ್ಯವಾದ ಭಾಗ. ಇಲ್ಲಿಯ ಜನಸಾಂದ್ರತೆ ಅಧಿಕ. ಇದು ಆರ್ಥಿಕ ಚಟುವಟಿಕೆಗಳಿಂದ ಕೂಡಿದ ಪ್ರದೇಶ. ಇಲ್ಲಿಯ ತೀರ ಪ್ರದೇಶದ ಅಂಚು ಸಾಮಾನ್ಯವಾಗಿ ನೇರವಾಗಿದೆ. ನದಿಗಳು ಸಮುದ್ರ ಸೇರುವ ಎಡೆಗಳಲ್ಲಿ ಕೊಲ್ಲಿಗಳುಂಟಾಗಿವೆ. ಸಮುದ್ರದ ಹಿನ್ನೀರಿನ ಪ್ರದೇಶಗಳು ಮೀನುಗಾರಿಕೆಗೆ ಮತ್ತು ದೋಣಿಗಳ ಸಂಚಾರಕ್ಕೆ ಉಪಯುಕ್ತವಾಗಿವೆ. ಬೈಂದೂರು, ಗಂಗೊಳ್ಳಿ, ಕುಂದಾಪುರ, ಮಲ್ಪೆ, ಪಡುಬಿದರೆ ಮೊದಲಾದ

ಪಟ್ಟಣಗಳು ಮೀನುಗಾರಿಕೆಗೆ ಮತ್ತು ವ್ಯಾಪಾರದಿಂದಾಗಿ ಅಭಿವೃದ್ಧಿಗೆ ಬಂದಿವೆ. ಮಲ್ಪೆ ಬಳಿ ಸಂತ ಮೇರಿ ದ್ವೀಪ ಸಮೂಹವಿದೆ. ತೀರದಲ್ಲಿ ವಿರಳವಾಗಿರುವ ದ್ವೀಪಗಳಲ್ಲಿ ಈ ದ್ವೀಪಸಮೂಹ ಪ್ರಮುಖವಾದದ್ದು.

ಜಿಲ್ಲೆಯ ಭೂಶಿಲಾರಚನೆಯನ್ನು ಮುಖ್ಯವಾಗಿ ಧಾರವಾಡ ಶಿಲಾವರ್ಗ, ಮಧ್ಯಂತರ ಸೇರ್ಪಡೆಗಳು ಮತ್ತು ಈಚಿನ ರಚನೆಗಳು ಎಂದು ವಿಂಗಡಿಸಬಹುದು. ಧಾರವಾಡ ಶಿಲಾವರ್ಗದಲ್ಲಿ ರೂಪಾಂತರಗೊಂಡ ಅನೇಕ ಪ್ರಾಚೀನ ಶಿಲೆಗಳಿವೆ. ಇವುಗಳಲ್ಲಿ ಮುಖ್ಯವಾಗಿ ಪದರ ಪದರವಾದ ಕಬ್ಬಿಣ ಮಿಶ್ರಿತವಾದ ಕ್ವಾರ್ಟ್‌ಸೈಟ್ ಮತ್ತು ಟಾಲ್ಕ್ ಹಾಗೂ ಹಾರ್ನ್‌ಬ್ಲೆಂಡ್ ಶಿಷ್ಟ್‌ಗಳು ಕಂಡುಬರುತ್ತವೆ. ಹಾರ್ನ್‌ಬ್ಲೆಂಡ್ ಹೊಡೆಪೊರೆಗಳು ಅಲ್ಲಲ್ಲಿ ವಿರಳವಾಗಿ ಕಾಣಸಿಗುತ್ತವೆ. ಜಂಬುಕಲ್ಲು ಕರಾವಳಿ ಪ್ರದೇಶದಲ್ಲಿ ಬಹುಮಟ್ಟಿಗೂ ಒಳಭಾಗದಲ್ಲಿ ಸ್ವಲ್ಪಮಟ್ಟಿಗೂ ಇದೆ. ಕರಾವಳಿಯಲ್ಲಿ ಕಂಡುಬರುವ ಮೆಕ್ಕಲು, ಜೇಡಿ ಮತ್ತು ಸುಣ್ಣಕಲ್ಲು ಪದರಗಳು ಈಚಿನ ರಚನೆಗಳಾಗಿವೆ.

ದೀಪಸ್ತಂಭ, ಕಾಪು

**ಜಲಸಂಪತ್ತು:** ಇಲ್ಲಿಯ ಭೌಗೋಳಿಕ ಸನ್ನಿವೇಶ ಹಾಗೂ ವಾಯುಗುಣದಿಂದಾಗಿ ಇಲ್ಲಿ ಹೆಚ್ಚಿನ ಜಲಸಂಪನ್ಮೂಲವಿದೆ. ನೈರುತ್ಯ ಮಾರುತಗಳು ಇಲ್ಲಿನ ತೀರ ಮತ್ತು ಘಟ್ಟ ಪ್ರದೇಶದಲ್ಲಿ ಹೇರಳವಾಗಿ ಮಳೆ ಸುರಿಸುತ್ತವೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಮುಂಗಾರಿನ ಕಾಲದಲ್ಲಿ ಬರುವ ಮಳೆಯಿಂದಾಗಿ ಪಶ್ಚಿಮ ಘಟ್ಟಗಳಲ್ಲಿ ಅನೇಕ ನದಿತೊರೆಗಳು ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದುಬರುತ್ತವೆ. ಇವುಗಳ ಉದ್ದ ಕಡಿಮೆಯಾದರೂ ನೀರು ಅಧಿಕವಾಗಿರುತ್ತದೆ. ಗಂಗೊಳ್ಳಿ ನದಿಯು (ಕುಂದಾಪುರದ ಬಳಿ) ಐದು ಉಪ ಹೊಳೆಗಳನ್ನು ಕೂಡಿಕೊಂಡು ಸಮುದ್ರಸೇರುವುದರಿಂದ ಈ ಸ್ಥಳವನ್ನು ಪಂಚಗಂಗಾವಳಿ ಎಂದು ಕರೆಯುತ್ತಾರೆ. ಇಲ್ಲಿ ವಿಸ್ತಾರವಾದ ಅಳಿವೆ ಇದೆ. ಇಲ್ಲಿ ಬಂದರು ಇದೆ. ಗುರುಪುರ, ಸ್ವರ್ಣ, ಸೀತಾ, ಹಳದಿ, ಚಕ್ರಾ ಮತ್ತು ಕೊಲ್ಲೂರು ನದಿಗಳು ಮುಖ್ಯವಾದವು. ಸೀತಾನದಿ ಮತ್ತು ಸ್ವರ್ಣನದಿಗಳು ಬಾರಕೂರು ಬಳಿ ಒಟ್ಟುಗೂಡಿ ಸಮುದ್ರ ಸೇರುತ್ತವೆ. ಈ ಎಲ್ಲ ನದಿಗಳು ಸೇರುವ ಹಿನ್ನೀರು ಪ್ರದೇಶ ದೋಣಿಗಳ ಸಂಚಾರಕ್ಕೆ ಅನುಕೂಲಕರವಾಗಿದೆ. ಜಿಲ್ಲೆಯಲ್ಲಿ ಜಲಸಂಪತ್ತು ಹೇರಳವಾಗಿದ್ದರೂ ಅದು ವ್ಯವಸಾಯಕ್ಕೆ ಉಪಯೋಗವಾಗುವು ದಕ್ಕಿಂತ ಸಮುದ್ರಕ್ಕೆ ಹರಿದುಹೋಗುವುದೇ ಹೆಚ್ಚು. ಕಾರ್ಕಳ ತಾಲ್ಲೂಕಿನ ಭಂಡಾಜಿ ಜಲಪಾತದಲ್ಲಿ ನೀರು 700ಮೀ ಗಳ ಎತ್ತರದಿಂದ ದುಮುಕುತ್ತದೆ. ಇದರೊಂದಿಗೆ ತಾಲ್ಲೂಕಿನ ರಾಮಸಾಗರ ಸರೋವರ ಮುಖ್ಯ ಆಕರ್ಷಣೆಯಾಗಿವೆ.

**ಅರಣ್ಯಸಂಪತ್ತು :** ಪಶ್ಚಿಮ ಘಟ್ಟದ ಕಾಡುಗಳಲ್ಲಿ ನಿತ್ಯಹರಿದ್ವರ್ಣ ಮತ್ತು ಎಲೆ ಉದುರುವ ಸಸ್ಯವರ್ಗಗಳಿವೆ. ಇಲ್ಲಿನ ಅರಣ್ಯಗಳು ಪ್ರಪಂಚದಲ್ಲಿ ಅತ್ಯಂತ ವೈವಿಧ್ಯಮಯ ಸಸ್ಯಗಳನ್ನು ಹೊಂದಿರುವ ವಿರಳ ಅರಣ್ಯಗಳ ಸಾಲಿಗೆ ಸೇರುತ್ತವೆ. ಒಟ್ಟು 99439 ಹೆಕ್ಟೇರುಗಳ ಅರಣ್ಯ ಪ್ರದೇಶವಿದೆ. ಶ್ರೀಗಂಧ, ತೇಗ, ನಂದಿ, ಮತ್ತಿ, ಬೀಟೆ, ಸಿರಿಹೊನ್ನೆ, ದಬ್ಬೆ, ಕೋಗಿಲೆ, ಹಲಸು ಮೊದಲಾದ ಮೌಲ್ಯಯುತವಾದ ಮರಗಳು ಇಲ್ಲಿಯ ಕಾಡುಗಳಲ್ಲಿವೆ. ಆಲ, ಅತ್ತಿ, ಸಂಪಿಗೆ, ಅರಳೆ, ಮಾವು, ಹೊಂಗೆ ಮರಗಿಡಗಳು ಇವೆ. ಕೆಲವೆಡೆ ಬಿದಿರು, ಬೆತ್ತ, ವಾಟೆ, ಕೇದಿಗೆ, ಈಚಲು, ಬಗನಿ ಮುಂತಾದವು ಇವೆ. ಏಲಕ್ಕಿ, ಕಾಡುಮೆಣಸು, ಸೀಗೆ, ಗೇರು, ಅಂಟುವಾಳ, ಚಕ್ಕೆ ಮೊದಲಾದವು ಇಲ್ಲಿಯ ಅರಣ್ಯೋತ್ಪನ್ನಗಳು. ನಿಂಬೆ, ಕಾಡು, ಕಂಚಿ, ದೊಡ್ಡಳ್ಳಿಕಾಯಿ, ಕಾಡುಕಿತ್ತಳೆ, ಚಕ್ಕೋತ, ನೆಲ್ಲಿಕಾಯಿ ಮುಂತಾದವೂ ಇವೆ.

ಇಲ್ಲಿ ದಕ್ಷಿಣ ಭಾರತದ ಎಲ್ಲ ಪ್ರಾಣಿವರ್ಗವಿದೆ. ಹುಲಿ, ಚಿರತೆ, ಆನೆ, ಕಾಟಿ, ಕಡವೆ, ಕಾಡುಹಂದಿಗಳಂತಹ ದೊಡ್ಡ ಪ್ರಾಣಿಗಳಿಂದ ಹಿಡಿದು ಮೊಲ, ಕೆಂಜಳಿಲು, ಮುಸಿಯ, ಮಂಗಗಳಂತಹ ಬಗೆಬಗೆಯ ಪ್ರಾಣಿಗಳಿವೆ. ಉರಗ ಮತ್ತು ಪಕ್ಷಿ ಜಾತಿಗಳು ಸಮೃದ್ಧವಾಗಿವೆ. ಇಲ್ಲಿಯ ಸಮುದ್ರಕ್ಕಿಂತಲೂ ಕೆರೆಗಳೇ ಮೀನು ಅಭಿವೃದ್ಧಿಗೆ ಅನುಕೂಲವಾಗಿವೆ.

**ವಾಯುಗುಣ:** ಈ ಜಿಲ್ಲೆಯು ಪಶ್ಚಿಮ ಕರಾವಳಿ ವಾಯುಗುಣದ ಲಕ್ಷಣಗಳನ್ನು ಪಡೆದಿದೆ. ಸಮುದ್ರ ಮಟ್ಟದಿಂದ ಹೆಚ್ಚು ಎತ್ತರವಲ್ಲದ ಭೂಪ್ರದೇಶವೇ ಇಲ್ಲಿ ಅಧಿಕ ಇರುವುದರಿಂದಾಗಿ ವರ್ಷದ ಬಹುಭಾಗ ಮೈಯಲ್ಲಿ ಬೆವರು ಬರಿಸುವ ಉಷ್ಣಾಂಶ ಮತ್ತು ತೇವಾಂಶದಿಂದ ಕೂಡಿದ ಸೆಕೆ ಇರುತ್ತದೆ. ಹಗಲು ರಾತ್ರಿ ಉಷ್ಣಾಂಶ ಏರಿಕೆಯಲ್ಲೇ ಇರುತ್ತದೆ. ಚಳಿಗಾಲದಲ್ಲಿ ಗರಿಷ್ಠ ಉಷ್ಣಾಂಶ ಅಪರೂಪಕ್ಕೆ $38^{o}$ ಸೆಲ್ಸಿಯಸ್‌ಗೆ ಹೋದರೆ ಕನಿಷ್ಠ ಉಷ್ಣಾಂಶ $17^{o}$ ಸೆಲ್ಸಿಯಸ್‌ಗೆ ಇಳಿಯುವುದುಂಟು. ಮಾರ್ಚ್‌ನಿಂದ ಮೇ ತಿಂಗಳ ಅಂತ್ಯದವರೆಗೆ ಕಡುಬೇಸಿಗೆಯಿದ್ದು, ವಿರಳವಾಗಿ ಬಿರುಮಳೆಗಳಾಗುತ್ತವೆ. ಪಶ್ಚಿಮ ಘಟ್ಟದತ್ತ ಹೋದಂತೆಲ್ಲಾ ತಂಪು ಹವೆ ಕಂಡುಬರುತ್ತದೆ.

ಜೂನ್‌ನಿಂದ ಆರಂಭವಾಗುವ ನೈರುತ್ಯ ಮಾರುತದ ಮುಂಗಾರು ಮಳೆಯು ಸೆಪ್ಟೆಂಬರ್ ಅಂತ್ಯದವರೆಗೆ ತೀಕ್ಷ್ಣವಾಗಿರುತ್ತದೆ. ಈ ಅವಧಿಯಲ್ಲಿ ಭಾರಿ ಮಳೆಯಾಗುತ್ತದೆ. ರಾಜ್ಯದ ಹೆಚ್ಚು ಮಳೆ ಬೀಳುವ ಜಿಲ್ಲೆಗಳಲ್ಲಿ ಉಡುಪಿ ಜಿಲ್ಲೆಯೂ ಒಂದು. ವಾರ್ಷಿಕವಾಗಿ ಸರಾಸರಿ 3500–4000ಮಿಮೀ ಮಳೆಯಾಗುವ ಸಂಭವವಿದೆ. ಅಕ್ಟೋಬರ್‌ನಿಂದ ಮಳೆ ವಿರಳವಾಗುತ್ತಾ ಬರುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿಯವರೆಗಿನ ಚಳಿಗಾಲದ ತಿಂಗಳುಗಳಲ್ಲಿ ಉಷ್ಣಾಂಶ ಕಡಿಮೆ ಕೆಲವು ವರ್ಷಗಳಲ್ಲಿ ಅತ್ಯಧಿಕ ಮಳೆಯಾದ ದಾಖಲೆ ಈ ಜಿಲ್ಲೆಗಿದೆ. 1961ರಲ್ಲಿ ಉಡುಪಿ ಮತ್ತು ಕಾರ್ಕಳ ಪಟ್ಟಣಗಳಲ್ಲಿ ಅನುಕ್ರಮವಾಗಿ 6335 ಮತ್ತು 6464 ಮಿಮೀ. ಅಧಿಕ ಮಳೆಯಾದ ದಾಖಲೆ ಇದೆ.

**ವ್ಯವಸಾಯ:** ಕರ್ನಾಟಕದ ಇತರ ಜಿಲ್ಲೆಗಳಂತೆಯೇ ಇಲ್ಲಿಯೂ ವ್ಯವಸಾಯವೇ ಆರ್ಥಿಕತೆಯ ಬೆನ್ನೆಲುಬು. ಸು. 1,22,132 ಹೆಕ್ಟೇರು ಬಿತ್ತನೆ ಪ್ರದೇಶವಿದೆ. ಇದು ವರ್ಷದಲ್ಲಿ ನಾಲ್ಕು ತಿಂಗಳು ಅಧಿಕ ಮಳೆ ಬೀಳುವ ಪ್ರದೇಶವಾಗಿರುವುದರಿಂದ ಇಲ್ಲಿ ನೀರಾವರಿ ಬೆಳೆಗಳೇ ಹೆಚ್ಚು. ಒಟ್ಟು 11,178 ಹೆಕ್ಟೇರುಗಳಿಗೆ ನೀರಾವರಿ ಪೂರೈಕೆಯಿದೆ. ಕಾಲುವೆ ನೀರಾವರಿಯಿಲ್ಲ. ಏತ ನೀರಾವರಿ (3717 ಹೆ) ಮತ್ತು ಬಾವಿ ನೀರಾವರಿ (4514ಹೆ.) ವಿಧಗಳು ಪ್ರಮುಖ, ಇವು ಶೇ.75 ಭಾಗ ನೀರಾವರಿ ಸೌಲಭ್ಯ ಕಲ್ಪಿಸುತ್ತವೆ. ಅಲ್ಲದೆ ಕೆರೆ ನೀರಾವರಿ (1532ಹೆ.) ಹಾಗೂ ಇತರೆ (1201ಹೆ.) ನೀರಾವರಿ ವಿಧಾನಗಳಿಂದಲೂ ಸೌಕರ್ಯ ಪಡೆಯಲಾಗುವುದು. ಭತ್ತ ಪ್ರಮುಖ ಆಹಾರ ಬೆಳೆ. ಇಲ್ಲಿ ಬತ್ತದ ಗದ್ದೆಗಳನ್ನು ಅವುಗಳ ಸನ್ನಿವೇಶಕ್ಕನುಗುಣವಾಗಿ ವಿಂಗಡಿಸುತ್ತಾರೆ. ಕೊಳಕ ಗದ್ದೆ, ಬೈಲು ಗದ್ದೆ ಮತ್ತು ಪಟ್ಲ್ ಗದ್ದೆಗಳೆಂದು ಅವನ್ನು ಕರೆಯಲಾಗುತ್ತದೆ. ಕೆಲವೆಡೆ ಬೇಸಿಗೆ ಬೆಳೆ ಬೆಳೆಯುವುದುಂಟು. ವಾಣಿಜ್ಯ ಬೆಳೆಗಳಲ್ಲಿ ತೆಂಗು ಮುಖ್ಯವಾದುದು. ಸಮುದ್ರತೀರದಲ್ಲಿ ಮತ್ತು ಒಳನಾಡಿನಲ್ಲಿ ವ್ಯಾಪಕವಾಗಿ ತೆಂಗಿನಮರಗಳಿವೆ. ಬೆಟ್ಟದ ತಪ್ಪಲಲ್ಲಿ ಮೆಣಸು ಮತ್ತು ಏಲಕ್ಕಿ ವಾಣಿಜ್ಯ ಬೆಳೆಗಳು. ನೀರಾವರಿ ಅನುಕೂಲವಿರುವ ಹೆಚ್ಚಿನ ಭಾಗಗಳಲ್ಲಿ ಅಡಕೆ ತೋಟಗಳಿವೆ.

ಹೊಸ ಹೊಸ ಬೇಸಾಯ ವಿಧಾನಗಳಿಂದ ಮತ್ತು ಹೊಸ ತಳಿಗಳ ಹಾಗೂ ಬೆಳೆಗಳ ಪ್ರಯೋಗದಿಂದ ಇಂದು ಇಲ್ಲಿನ ವ್ಯವಸಾಯಕ್ಷೇತ್ರ ವೈವಿಧ್ಯಮಯವಾಗಿದೆ. ಅಲ್ಲಲ್ಲಿ ರಾಗಿ, ಉದ್ದು, ಹೆಸರು, ಹುರುಳಿ, ಅವರೆ, ಗೆಣಸು, ಪರಂಗಿ ಬೆಳೆಯಲಾಗುತ್ತದೆ. ಕಬ್ಬು, ಗೋಡಂಬಿ, ಮೆಣಸಿನಕಾಯಿ, ಸಪೋಟ, ಮಾವು, ಹಲಸು, ಬಾಳೆಗಳ ಸಾಗುವಳಿಯೂ ಉಂಟು. ಈಚಿನ ದಶಕಗಳಲ್ಲಿ ತಾಳೆ ಮರಗಳನ್ನು ಬೆಳೆಯುವುದು ಪ್ರಾರಂಭವಾಗಿದೆ. ಈ ಜಿಲ್ಲೆಯಲ್ಲಿ ಕೆರೆ ನೀರಾವರಿ ಕಡಿಮೆ. ಇಲ್ಲಿ ಅನೇಕ ಸಣ್ಣ ದೊಡ್ಡ ಕೆರೆಗಳಿವೆ. ಕುಂದಾಪುರ ತಾಲ್ಲೂಕಿನ ಚಂತರ ಮಡಗ ಮತ್ತು ಮರನಾಡ ಮಡಗ ಎಂಬ ಕೆರೆಗಳು ನೀರಾವರಿಗೆ ಹೆಚ್ಚು ಉಪಯುಕ್ತ ವಾಗಿವೆ. ಕಾರ್ಕಳದ ಬಳಿಯ ರಾಮಸಾಗರ ದೊಡ್ಡದು. ಜಿಲ್ಲೆಯಲ್ಲಿ ಒಟ್ಟು 97,258 ಜನ ಸಾಗುವಳಿದಾರರಿದ್ದಾರೆ. 87,761 ಕೃಷಿಕಾರ್ಮಿಕರಿದ್ದಾರೆ (2001). ಭತ್ತ ಅತಿ ವಿಸ್ತಾರ ಪ್ರದೇಶದಲ್ಲಿ ಬೆಳೆಯುವ ಬೆಳೆ (62,290 ಹೆ). ಗೇರು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, 20557 ಹೆಕ್ಟೇರುಗಳಲ್ಲಿ ಬೆಳೆಯುತ್ತಾರೆ. ತರುವಾಯದ ಸ್ಥಾನವನ್ನು ತೆಂಗು (14844 ಹೆ), ದ್ವಿದಳ ಧಾನ್ಯ (7684 ಹೆ) ಮತ್ತು ಅಡಕೆ (8419 ಹೆ), ಮೆಣಸು (232 ಹೆ) ಬೆಳೆಗಳು ಪಡೆದಿವೆ.

**ಮೀನುಗಾರಿಕೆ:** ಉಡುಪಿ ಜಿಲ್ಲೆಯ ಆರ್ಥಿಕ ಚಟುವಟಿಕೆಗಳಲ್ಲಿ ಮೀನುಗಾರಿಕೆ ಗಮನಾರ್ಹ ಸ್ಥಾನ ಪಡೆದಿದೆ. ಈ ಜಿಲ್ಲೆ ಪಾರಂಪರಿಕವಾಗಿ ಮೀನುಗಾರಿಕೆಗೆ ಹೆಸರಾದುದು. ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 141ಕಿಮೀ ತೀರಪ್ರದೇಶವಿತ್ತು. ಈಗ ಉಡುಪಿ ಜಿಲ್ಲೆಯಲ್ಲಿ ಹಿಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಶೇ.60ರಷ್ಟು ಉದ್ದದ ಕರಾವಳಿ ಈ ಜಿಲ್ಲೆಗೆ ಸೇರಿದೆ. ದಕ್ಷಿಣದ ಯರಮಾಲುವಿನಿಂದ ಉತ್ತರದ ಬೈಂದೂರಿನವರೆಗೂ ಅನೇಕ ಮೀನುಗಾರಿಕೆ ಕೇಂದ್ರಗಳಿವೆ. ಅವುಗಳಲ್ಲಿ ಉಡುಪಿ ಬಳಿ ಇರುವ ಮಲ್ಪೆಯಲ್ಲಿ ಮತ್ತು ಕುಂದಾಪುರದ ದಡಗಳಲ್ಲಿ ಮತ್ಸ್ಯೋದ್ಯಮ ಹೆಚ್ಚಾಗಿ ಬೆಳೆದಿದೆ.

ಹಿಂದೆ ಸಮುದ್ರದಲ್ಲಿ ಮೀನು ಹಿಡಿಯುವುದು ಒಂದು ಉಪಜೀವನ ವೃತ್ತಿಯಾಗಿತ್ತು. ಮೀನುಗಾರರು ತಮ್ಮ ಸೀಮಿತ ಸಾಮಗ್ರಿ ಸಲಕರಣೆಗಳ ನೆರವಿನಿಂದ ದೋಣಿಗಳಲ್ಲಿ ಹೋಗಿ ಮೀನುಗಳನ್ನು ಹಿಡಿಯುತ್ತಿದ್ದರು. ಈಗ ಆಧುನಿಕ ಯಂತ್ರಚಾಲಿತ ಮೋಟರು ದೋಣಿಗಳು ಮತ್ತು ಸುಧಾರಿತ ಬಲೆಗಳು ಲಭ್ಯವಿವೆ. ಮೀನುಗಾರಿಕೆಯ ವಿಧಾನ ಹೆಚ್ಚು ವೈಜ್ಞಾನಿಕವಾಗಿದೆ. ಆದ್ದರಿಂದ ಸಮುದ್ರದಲ್ಲಿ ದೂರದ ಆಳ ಕಡಲಿನಲ್ಲಿ ಸಾಗಿ ಮೀನನ್ನು ಹಿಡಿದು ತರುತ್ತಾರೆ. ಇಂದು ಮೀನು ಮಾತ್ರವಲ್ಲದೆ ಏಡಿ, ಸೀಗಡಿ ಚಿಪ್ಪು ಹಾಗೂ ಹವಳ ಸಂಗ್ರಹಣೆಯೂ ಮೀನುಗಾರಿಕೆಯ ಅಂಗವಾಗಿ ಬೆಳೆದಿದೆ.

ಇಲ್ಲಿ ಹಿಡಿಯುವ ಮೀನುಗಳಲ್ಲಿ ಬಂಗಡೆ ಅಥವಾ ಬಗ್ಗಡೆ ಪ್ರಸಿದ್ಧವಾದುದು. ಅದು ಈ ತೀರದಲ್ಲಿ ಯಥೇಚ್ಛವಾಗಿ ದೊರಕುತ್ತದೆ. ಮಾಂಸ ಹಾಗೂ ರುಚಿಯ ದೃಷ್ಟಿಯಿಂದ ಇದು ಜನಪ್ರಿಯ. ಇದಲ್ಲದೆ ಭೂತಾಯಿ ಎಂಬ ಚಿಕ್ಕಮೀನು ಇಲ್ಲಿ ಹೆಚ್ಚಾಗಿ ಸಿಗುತ್ತದೆ.

ಸಾರ್ಡಿೀಶ್ ಮೀನುಗಳನ್ನು ಹೆಚ್ಚಾಗಿ ಎಣ್ಣೆ ತೆಗೆಯಲು ಬಳಸುತ್ತಾರೆ. ನದಿ ಮುಖದ ಹಿನ್ನೀರಿನಲ್ಲೂ ಒಳನಾಡಿನ ನದಿ ಕೆರೆಗಳಲ್ಲೂ ಸಾಕಷ್ಟು ಮೀನು ಲಭ್ಯವಿದೆ. ಈಗ ಮೀನುಸಾಕಣೆ ಒಂದು ಮುಖ್ಯ ಉದ್ಯಮ. ಮೀನನ್ನು ಸಂಸ್ಕರಿಸುವ, ಒಣಗಿಸುವ, ಡಬ್ಬಕ್ಕೆ ತುಂಬುವ ಮತ್ತು ಕೆಡದಂತೆ ರಕ್ಷಿಸುವ ಉದ್ಯಮಗಳೂ ಇಲ್ಲಿ ಬೆಳೆದಿವೆ. ಇದರಿಂದ ಅನೇಕರಿಗೆ ಉದ್ಯೋಗ ದೊರಕಿದೆ. ಮೀನುಗಾರಿಕೆ ವರ್ಷಪೂರ್ತಿ ನಡೆಯುವ ಉದ್ಯೋಗವಲ್ಲ. ಸೆಪ್ಟೆಂಬರ್ ತಿಂಗಳಿನಿಂದ ಫೆಬ್ರವರಿಯವರೆಗೂ ಚಟುವಟಿಕೆ ಚುರುಕಾಗಿರುತ್ತದೆ. ಮುಂದೆ ಏಪ್ರಿಲ್‌ವರೆಗೂ ಕಡಿಮೆ. ಮೇ–ಆಗಸ್ಟ್‌ವರೆಗೆ ಸಮುದ್ರದಲ್ಲಿ ಮೀನು ಹಿಡಿಯಲಾಗುವುದಿಲ್ಲ. ಮುಂಗಾರಿನ ತೀವ್ರತೆಯ ಕಾರಣ ಈ ಅವಧಿಯಲ್ಲಿ ಮೀನುಗಾರರು ಬಹುತೇಕ ನಿರುದ್ಯೋಗಿಗಳಾಗಿರುತ್ತಾರೆ. ಈಗ ಸೀಗಡಿಗಳಿಗೆ ವಿಶ್ವ ಮಾರುಕಟ್ಟೆ ಯಲ್ಲಿ ಬೇಡಿಕೆ ಹೆಚ್ಚಿದೆ. ಸೀಗಡಿಗಳನ್ನು ಹಿಡಿಯುವ, ಸಾಕಿ ಬೆಳೆಸುವ ಕಾಯಕಕ್ಕೆ ಈಗ ಪ್ರಾಮುಖ್ಯತೆ ಬಂದಿದೆ. ವಾರ್ಷಿಕವಾಗಿ ಸಾಗರೋತ್ಪನ್ನವಾಗಿ ಹಿಡಿದ ಮೀನಿನ ಪ್ರಮಾಣ 70388 (2006) ಟನ್‌ಗಳು. ಸಿಹಿ ನೀರು ಮೀನು 82.68 ಟನ್‌ಗಳು (2006).

**ಖನಿಜ ಸಂಪತ್ತು:** ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಕಬ್ಬಿಣದ ಅದಿರು ಹೇರಳವಾಗಿದೆ. ಕೊಡಚಾದ್ರಿಯ ಬಳಿ ಈ ಅದಿರನ್ನು ತೆಗೆಯಲಾಗುತ್ತದೆ. ಕುಂದಾಪುರ ತಾಲ್ಲೂಕಿನಲ್ಲಿ ಉತ್ತಮ ದರ್ಜೆಯ ಬಾಕ್ಸೈಟ್ ಇದೆ. ಸುಣ್ಣದ ಚಿಪ್ಪು, ಸಿಲಿಕ ಮರಳು, ಸಿಲಿಮನೈಟ್, ಸೋಪುಕಲ್ಲು, ಹೆಂಚಿನ ತಯಾರಿಕೆಯ ಮಣ್ಣು–ಇವು ಜಿಲ್ಲೆಯ ವಿವಿಧ ಭಾಗಗಳಲ್ಲಿ ದೊರೆಯುತ್ತವೆ. ಕಾಪು, ಪಡುಬಿದರೆ, ಉದ್ಯಾವರ ಮೊದಲಾದೆಡೆಗಳಲ್ಲಿ ಅಭ್ರಕದಿಂದ ಕೂಡಿದ ಬೆಣಚುಕಲ್ಲಿನ ಶಿಲೆಗಳಿವೆ. ಮಲ್ಪೆ ಬಳಿ ಹೆಂಚು ತಯಾರಿಕೆಗೆ ಉಪಯುಕ್ತವಾದ ಮಣ್ಣು ದೊರೆಯುತ್ತದೆ.

**ಕೈಗಾರಿಕೆ:** ಉಡುಪಿ ಜಿಲ್ಲೆ ಕೈಗಾರಿಕಾಪ್ರಧಾನ ಜಿಲ್ಲೆಯಲ್ಲ. ಸಣ್ಣ ಕೈಗಾರಿಕೆ, ವ್ಯಾಪಾರ ಮತ್ತು ಇತರ ವ್ಯವಸಾಯೇತರ ಚಟುವಟಿಕೆಗಳಲ್ಲಿ ತೊಡಗಿರುವವರ ಪ್ರಮಾಣ ಜಿಲ್ಲೆಯ ಒಟ್ಟು ಜನಸಂಖ್ಯೆಯ ಸುಮಾರು ಶೇ.40 ರಷ್ಟು. ಮೀನುಗಳ ಸಂಸ್ಕರಣೆ, ವ್ಯಾಪಾರ, ವಿದೇಶಗಳಿಗೆ ರಫ್ತು ಮಾಡುವುದು ಮುಂತಾದ ಕಾರ್ಯಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ತೊಡಗಿದ್ದಾರೆ. ಮಲ್ಪೆ, ಕುಂದಾಪುರ, ಕೋಡಿ ಮೊದಲಾದವು ಈ ಚಟುವಟಿಕೆಗಳ ಕೇಂದ್ರಗಳಾಗಿವೆ. ನಿಸರ್ಗಸಂಪನ್ಮೂಲಗಳನ್ನು ಬಳಸಿಕೊಂಡು ಅನೇಕ ಉದ್ಯಮಗಳು ತಲೆ ಎತ್ತಿವೆ. ಅವುಗಳಲ್ಲಿ ಹೆಂಚಿನ ಕಾರ್ಖಾನೆಗಳು ಮುಖ್ಯವಾದವು. ಕುಂದಾಪುರ ಮತ್ತು ಉಡುಪಿಯಲ್ಲಿ ಈ ಕಾರ್ಖಾನೆಗಳು ಹೆಚ್ಚಾಗಿ ನೆಲೆಸಿವೆ. ವಿಶ್ವಪ್ರಸಿದ್ಧವಾದ ಮಂಗಳೂರು ಹೆಂಚುಗಳು ಇಲ್ಲಿಂದ ರಫ್ತಾಗುತ್ತವೆ. ಮನೆಗಳಲ್ಲಿ ಮತ್ತು ಕಟ್ಟಡಗಳಲ್ಲಿ ಬಳಸುವ ಮೊಸಾಯಿಕ್ ಹೆಂಚುಗಳು ಈಗೀಗ ಹೆಚ್ಚಾಗಿ ತಯಾರಾಗುತ್ತವೆ. ಮನೆಗಳ ಗೋಡೆಗಳನ್ನು ಕಟ್ಟಲು ಬಳಸುವ ಜಂಬಿಟ್ಟಿಗೆ ಕಲ್ಲು ಜಿಲ್ಲೆಯಲ್ಲಿ ಹೇರಳವಾಗಿ ಸಿಗುತ್ತವೆ. ಇದನ್ನು ಇಟ್ಟಿಗೆ ಮಾಡಿ ಘಟ್ಟದ ಮೇಲಿನ ಪಟ್ಟಣಗಳಿಗೆ ಮತ್ತು ಗ್ರಾಮಗಳಿಗೆ ಕಳುಹಿಸಲಾಗುತ್ತದೆ. ಇತ್ತೀಚೆಗೆ ಹೆಚ್ಚಾಗಿ ತೆಂಗಿನ ನಾರಿನಿಂದ ಹಗ್ಗ, ಜಮಖಾನೆ, ಕಾಲೊರೆಸುವ ತಾಟು ಮೊದಲಾದವನ್ನು ತಯಾರಿಸಲಾಗುತ್ತಿದೆ. ಇದೊಂದು ಮುಖ್ಯ ಗೃಹಕೈಗಾರಿಕೆಯಾಗಿ ಬೆಳೆದಿದೆ. ಉದ್ಯಾವರ, ಪಡುಬಿದ್ರಿ, ಕಲ್ಯಾಣಪುರಗಳಲ್ಲಿ ಈ ಚಟುವಟಿಕೆಗಳು ಹೆಚ್ಚು.

ಇಲ್ಲಿ ಅರಣ್ಯ ಪ್ರದೇಶ ಸಾಕಷ್ಟಿರುವುದರಿಂದ ಮರ, ಬೆತ್ತ, ಬಿದಿರುಗಳನ್ನು ಬಳಸಿ ವಿವಿಧ ಪೀಠೋಪಕರಣಗಳು, ಕುಕ್ಕೆಗಳು, ಚಾಟುಗಳು, ಮಳೆಗಾಲದಲ್ಲಿ ತಲೆಯ ಮೇಲೆ ಹಾಕಿಕೊಳ್ಳುವ ಗೊರಗಗಳು, ಗೋಡೆಗಳ ನಿರ್ಮಾಣಕ್ಕೆ ಬಳಸುವ ಬಿದಿರಿನ ತಡಿಕೆಗಳು ಮೊದಲಾದವನ್ನು ತಯಾರಿಸಲಾಗುತ್ತದೆ. ಕಾಡಿನಲ್ಲಿ ದೊರೆಯುವ ಈಚಲಿನಿಂದ ಮತ್ತು ದೊಡ್ಡ ಹುಲ್ಲಿನಿಂದ ಚಾಪೆ ತಯಾರು ಮಾಡುತ್ತಾರೆ.

ವ್ಯವಸಾಯ ಸಂಬಂಧವಾದ ಇನ್ನೂ ಹಲವಾರು ಉದ್ಯಮಗಳು ಜಿಲ್ಲೆಯಲ್ಲಿವೆ. ಕೊಬ್ಬರಿ ಯಿಂದ ಎಣ್ಣೆತೆಗೆಯುವ ಗಿರಣಿಗಳು, ಅಕ್ಕಿಗಿರಣಿಗಳು, ಗೋಡಂಬಿ ಸಂಸ್ಕರಣ ಘಟಕಗಳು, ಗೋಡಂಬಿಯ ಓಟೆಯಿಂದ ಎಣ್ಣೆ ತಯಾರಿಸುವ ಗಿರಣಿಗಳು, ಬೆಲ್ಲ ತಯಾರಿಕೆಯ ಘಟಕಗಳು–ಇವು ಮುಖ್ಯವಾದವು. ಬೀಡಿಕಟ್ಟುವುದು ಒಂದು ಹಳೆಯ ಉದ್ಯಮ. ಇದು ಕರಾವಳಿಯ ಊರುಗಳಲ್ಲಿ ಅಭಿವೃದ್ಧಿ ಹೊಂದಿದೆ. ಕಾರ್ಕಳ ಉಡುಪಿಗಳಲ್ಲಿ ಬೀಡಿ ತಯಾರಿಕೆ ಕಾರ್ಖಾನೆಗಳಿವೆ. ಕೈ ಮಗ್ಗದ ಬಟ್ಟೆಗಳು,ಲುಂಗಿಗಳು ಚೌಕಗಳು ಮೊದಲಾದ ವನ್ನು ತಯಾರಿಸುವ ಉದ್ಯಮಗಳು ಉಡುಪಿ, ಬ್ರಹ್ಮಾವರ ಮುಂತಾದ ಕಡೆಗಳಲ್ಲಿವೆ.

ಮಣಿಪಾಲ, ಉಡುಪಿ, ಕುಂದಾಪುರ, ಪಟ್ಟಣಗಳು ಆಧುನಿಕ ಕೈಗಾರಿಕೆಗಳಲ್ಲಿ ಮುಂದುವರೆ ದಿವೆ. ಉಕ್ಕಿನ ಉಪಕರಣಗಳು ಮೋಟಾರುವಾಹನದ ಬಿಡಿಭಾಗಗಳು, ಲೋಹದ ಪಾತ್ರೆಗಳು ಮುಂತಾದವುಗಳ ತಯಾರಿಕೆ, ತಂತಿ ತಯಾರಿಕೆ ಮತ್ತು ವಿದ್ಯುತ್ ಉಪಕರಣಗಳ ತಯಾರಿಕೆಗೆ ಸಂಬಂಧಿಸಿದ ಕಾರ್ಖಾನೆಗಳು ಇಲ್ಲಿವೆ. ಮುದ್ರಣ, ಪತ್ರಿಕೋದ್ಯಮಗಳಿಗೆ ಮಣಿಪಾಲ ಎತ್ತಿದ ಕೈ, ಉದಯವಾಣಿ ಪತ್ರಿಕೆ, ರೂಪತಾರ, ತರಂಗ ಎಂಬ ನಿಯತಕಾಲಿಕ ಗಳು ಇಲ್ಲಿಂದ ಮುದ್ರಿತವಾಗಿ ಹೊರಬರುತ್ತವೆ. ಮಣಿಪಾಲದ ಮುದ್ರಣಾಲಯ ವಿಶ್ವವಿಖ್ಯಾತ ವಾದುದು. ಮರಗೆಲಸ, ಕಬ್ಬಿಣದ ಕೆಲಸ. ಚಿನ್ನದ ಕೆಲಸ, ಚರ್ಮ ಕೈಗಾರಿಕೆ, ರಬ್ಬರ್ ಸಂಸ್ಕರಣ ಮುಂತಾದವುಗಳಲ್ಲಿ ಸಾವಿರಾರು ಜನ ದುಡಿಯುತ್ತಿದ್ದಾರೆ. ಗಂಗೊಳ್ಳಿ, ಬೈಂದೂರು, ಮಲ್ಪೆ, ಹಂಗಾರಕಟ್ಟೆ ಬಂದರುಗಳು ಜನರಿಗೆ ಉದ್ಯೋಗ ಒದಗಿಸಿವೆ. ಜಿಲ್ಲೆಯಲ್ಲಿ ಒಟ್ಟು 6772 ವಿವಿಧ ಬಗೆಯ ಮಧ್ಯಮ ಮತ್ತು ಸಣ್ಣ ಪ್ರಮಾಣದ ಉದ್ಯಮಗಳು ಸ್ಥಾಪನೆಗೊಂಡಿದ್ದು ಅವುಗಳಲ್ಲಿ 43375 ಉದ್ಯೋಗಿಗಳು ಕೆಲಸ ಮಾಡುತ್ತಾರೆ. ಮಧ್ಯಮ ಪ್ರಮಾಣದ ಉದ್ಯಮಗಳ ಸಂಖ್ಯೆ 270 (2006). ಎರಡು ಜವಳಿ ಉದ್ದಿಮೆ, 3 ರಾಸಾಯನಿಕ ಕೈಗಾರಿಕೆ ಮತ್ತು 2 ಸಕ್ಕರೆ ಕಾರ್ಖಾನೆಗಳಿವೆ.

**ಸಾರಿಗೆಸಂಪರ್ಕ:** ಉಡುಪಿ ಜಿಲ್ಲೆಯ ಒಂದು ಬದಿಯಲ್ಲಿ ಸಮುದ್ರವೂ ಇನ್ನೊಂದು ಬದಿಯಲ್ಲಿ ಎತ್ತರದ ಘಟ್ಟಗಳೂ ಇವೆ. ಒಳನಾಡು ಚಿಕ್ಕ ದೊಡ್ಡ ಅಸಂಖ್ಯಾತ ನದಿಕೊಳ್ಳಗಳಿಂದ ಕೂಡಿದ ಭೌಗೋಳಿಕ ಸನ್ನಿವೇಶವು ಭೂಸಾರಿಗೆಗೆ ಅಷ್ಟೇನೂ ಅನುಕೂಲಕರವಾಗಿಲ್ಲ. ಹಿಂದೆ ಗಾಡಿ ರಸ್ತೆಗಳು ಹೆಚ್ಚಾಗಿದ್ದವು. ಆಧುನಿಕವಾದ ರಸ್ತೆಗಳು ಹೆಚ್ಚಾಗಿರಲಿಲ್ಲ. ಅವು ಮಳೆಗಾಲದಲ್ಲಿ ಬಹುತೇಕ ಸಂಚಾರಕ್ಕೆ ನಿರುಪಯುಕ್ತವಾಗಿರುತ್ತಿದ್ದವು. ಜಿಲ್ಲೆಯ ಭೌಗೋಳಿಕ ಮಹತ್ತ್ವ ಮತ್ತು ಬಂದರುಗಳಿಂದಾಗಿ ಬ್ರಿಟಿಷ್ ಸರ್ಕಾರ ಕೆಲವು ಘಾಟಿ ಮಾರ್ಗಗಳನ್ನು ಅಭಿವೃದ್ಧಿಪಡಿಸಿತು. ಇದರಿಂದ ಜಿಲ್ಲೆಯೊಂದಿಗೆ ಒಳನಾಡಿನ ಸಂಪರ್ಕ ಬೆಳೆಯಲು ಸಹಾಯವಾಯಿತು.


ಶ್ರೀಕೃಷ್ಣ ದೇವಾಲಯ

ಕೊಲ್ಲೂರು ಸಮೀಪದಲ್ಲಿ ಹಾದು ಹೋಗುವ ಉಡುಪಿ–ಸಾಗರ ರಸ್ತೆ ಶಿವಮೊಗ್ಗ ಜಿಲ್ಲೆಯ ಮೂಲಕ ಉತ್ತರ ಕರ್ನಾಟಕ ಭಾಗಕ್ಕೆ ಸಂಪರ್ಕ ಕಲ್ಪಿಸುವ ಘಾಟಿ ರಸ್ತೆ, ಉಡುಪಿ–ಆಗುಂಬೆ–ಶಿವಮೊಗ್ಗ ರಸ್ತೆ ಇತ್ತೀಚಿನವರೆಗೂ ದೊಡ್ಡ ವಾಹನಗಳ ಸಂಚಾರಕ್ಕೆ ಅನುಕೂಲಕರ ವಾಗಿರಲಿಲ್ಲ. ಉಡುಪಿ–ಕಾರ್ಕಳ–ದಕ್ಷಿಣಕನ್ನಡದ ಎಲ್ಲೆ ಮತ್ತು ಶೃಂಗೇರಿ ರಸ್ತೆ ಉತ್ತಮ ಸ್ಥಿತಿಯಲ್ಲಿ ರುವ ಘಾಟಿಮಾರ್ಗ; ಇದು ಕುದುರೆ ಮುಖ ಗಣಿ ಪ್ರದೇಶಕ್ಕೂ ಸಂಪರ್ಕ ಕಲ್ಪಿಸುತ್ತದೆ. ಉಡುಪಿ–ಶಂಕರ ನಾರಾಯಣ–ಹೊಸಂಗಡಿ–ಹುಲಿಕಲ್ ಮೂಲಕ ಇನ್ನೊಂದು ಘಾಟಿ ಮಾರ್ಗ ಶಿವಮೊಗ್ಗ ಜಿಲ್ಲೆ ತಲುಪುತ್ತದೆ. ಉಡುಪಿ, ಭಟ್ಕಳ ರಸ್ತೆಯು ರಾಷ್ಟ್ರೀಯ ಹೆದ್ದಾರಿ. ಇದು ಉತ್ತರ ಕನ್ನಡ ಜಿಲ್ಲೆಯ ಮೂಲಕ ಹಾದು ಹೋಗುತ್ತದೆ. ಉಡುಪಿ–ಮಂಗಳೂರು ಮಾರ್ಗವೂ ರಾಷ್ಟ್ರೀಯ ಹೆದ್ದಾರಿಯ ಭಾಗವಾಗಿದೆ. 143ಕಿಮೀ ರಾಷ್ಟ್ರೀಯ ಹೆದ್ದಾರಿ, 353 ಕಿಮೀ ರಾಜ್ಯ ಹೆದ್ದಾರಿ, 735 ಕಿಮೀ ಮುಖ್ಯ ಜಿಲ್ಲಾರಸ್ತೆಗಳು. ಒಟ್ಟು 1230 ಕಿಮೀಗಳ ರಸ್ತೆಗಳ ಉದ್ದವಿದೆ. ಇದರಲ್ಲಿ 1209 ಪಕ್ಕರಸ್ತೆ, 24 ದೊಡ್ಡ ಸೇತುವೆಗಳಿವೆ.

ಈಚಿನ ದಶಕಗಳಲ್ಲಿ ಇಲ್ಲಿನ ನದಿಗಳು ಮತ್ತು ಉಪನದಿಗಳಿಗೆ ಅನೇಕ ಸೇತುವೆಗಳನ್ನು ಕಟ್ಟಿದ್ದರಿಂದ ಒಳನಾಡಿನ ಸಂಪರ್ಕ ವ್ಯವಸ್ಥೆ ಉತ್ತಮಗೊಂಡಿದೆ. ಉಡುಪಿ–ಕಾರ್ಕಳ–ಬೆಳ್ತಂಗಡಿ ರಸ್ತೆ ಚಾರ್ಮಾಡಿ ಘಾಟ್ ರಸ್ತೆಗೆ ಸಂಪರ್ಕ ಕಲ್ಪಿಸುತ್ತವೆ.

ತಿರುವನಂತಪುರ ಮುಂಬೈ–ಕೊಂಕಣ ರೈಲು ಮಾರ್ಗ ಇಲ್ಲಿಯ ಏಕೈಕ ರೈಲ್ವೆ ಸಂಪರ್ಕವ್ಯವಸ್ಥೆ ಇದರಿಂದ ಬೈಂದೂರು, ಕುಂದಾಪುರ, ಉಡುಪಿ, ಹಂಗಾರಕಟ್ಟೆ ಮೊದಲಾದ ತೀರದ ಪಟ್ಟಣಗಳಿಂದ ಭಾರತದ ಇತರ ಭಾಗಗಳಿಗೆ ರೈಲು ಸಂಪರ್ಕ ಒದಗಿಬಂದಿದೆ. ಜಿಲ್ಲೆಯ ಒಟ್ಟು ರೈಲು ಮಾರ್ಗದ ಉದ್ದ 49 ಕಿಮೀಗಳು.

ಜಲಸಾರಿಗೆಗೆ ಜಿಲ್ಲೆಯಲ್ಲಿ ಹೆಚ್ಚಿನ ಪ್ರಾಮುಖ್ಯ. ಕರಾವಳಿಯ ಬಂದರುಗಳಿಗೆ ಮತ್ತು ಪಟ್ಟಣಗಳಿಗೆ ದೋಣಿಗಳು ಸ್ಟೀಮರ್‌ಗಳು ಮತ್ತು ಸಣ್ಣ ಹಡಗುಗಳ ಮೂಲಕ ಜನ ಸಂಚಾರ ಮತ್ತು ಸಾಮಗ್ರಿಗಳ ಸಾಗಣೆ ನಡೆಯುತ್ತದೆ. ನದೀ ಮುಖಗಳು ಹಿನ್ನೀರು ದೋಣಿ ಸಂಚಾರಕ್ಕೆ ಅನುಕೂಲವಾಗಿವೆ. ಆಧುನಿಕ ದೂರಸಂಪರ್ಕ ವ್ಯವಸ್ಥೆ ಬಳಕೆಯಲ್ಲಿದೆ.

ಉಡುಪಿ ಜಿಲ್ಲೆ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯ ತವರು. ಇಲ್ಲಿ 20ನೆಯ ಶತಮಾನದಲ್ಲಿ ಸ್ಥಾಪಿತವಾದ ಬ್ಯಾಂಕಿಂಗ್ ಸಂಸ್ಥೆಗಳು ಹಲವು. 1906ರಷ್ಟು ಹಿಂದೆಯೇ ಕೆನರಾಬ್ಯಾಂಕ್ ಅಸ್ತಿತ್ವಕ್ಕೆ ಬಂದಿತು. ಅನಂತರ ಬಂದ ಹಲವಾರು ಬ್ಯಾಂಕ್‌ಗಳಲ್ಲಿ ಕೆಲವು ಉಳಿದಿವೆ. ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ಬ್ಯಾಂಕ್‌ಗಳು ಉಡುಪಿ ಮತ್ತು ಮಂಗಳೂರು ಮೂಲದವು. ಅವುಗಳಲ್ಲಿ ಕೆನರಾಬ್ಯಾಂಕಲ್ಲದೆ ಸಿಂಡಿಕೇಟ್ ಬ್ಯಾಂಕ್, ವಿಜಯಾ ಬ್ಯಾಂಕ್ (1931), ಕರ್ನಾಟಕ ಬ್ಯಾಂಕ್ (1924), ಕಾರ್ಪೊರೇಷನ್ ಬ್ಯಾಂಕ್–ಇವು ಪ್ರಮುಖವಾದವು. ಜಿಲ್ಲೆಯಲ್ಲಿ 217 ವಾಣಿಜ್ಯ ಬ್ಯಾಂಕುಗಳು, 11 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, 30 ನಗರ ಸಹಕಾರಿಬ್ಯಾಂಕುಗಳು, 7 ವ್ಯವಸಾಯ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಮತ್ತು 893 ಕೃಷಿ ಸಾಲ ಹಾಗೂ ಇತರೆ ಸಹಕಾರ ಸಂಘಗಳಿವೆ (2006).

**ಶಿಕ್ಷಣ ಮತ್ತು ಸಂಸ್ಕೃತಿ:** ಶಿಕ್ಷಣದ ಅಭಿವೃದ್ಧಿಯಲ್ಲಿ ಉಡುಪಿ ರಾಜ್ಯದ ಪ್ರಥಮ ಪಂಕ್ತಿಯಲ್ಲಿರುವ ಜಿಲ್ಲೆ. ಇಲ್ಲಿನ ಮಠಗಳೂ ಅಗ್ರಹಾರಗಳೂ ಮೊದಲಿನಿಂದಲೂ ವೈದಿಕ ಅಧ್ಯಯನಕ್ಕೆ ಆಶ್ರಯನೀಡುತ್ತಾ ಬಂದವು. ಕೆಲವು ಆಂಗ್ಲ ಮಿಷನರಿಗಳು ಈ ಭಾಗದಲ್ಲಿ ಶಾಲೆಗಳನ್ನು ಸ್ಥಾಪಿಸಿ ಪತ್ರಿಕೆಗಳನ್ನು ಪ್ರಕಟಿಸಿ ಸಾಕ್ಷರತೆ ಹೆಚ್ಚುವಂತೆ ಮಾಡಿದವು. ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ ಉಡುಪಿಯಿಂದ ನಾನಾ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಆಧುನಿಕ ಶಿಕ್ಷಣದ ಸೌಲಭ್ಯಗಳನ್ನು ಈ ಜಿಲ್ಲೆ ಬೇಗ ಬಳಸಿಕೊಂಡಿತು. ಪೈ ಮನೆತನದವರು ಮಣಿಪಾಲದಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿ ದೇಶಕ್ಕೇ ಮಾದರಿಯಾದರು. ಮುಂದೆ ಹಲವಾರು ಕಾಲೇಜುಗಳು ಜಿಲ್ಲೆಯಲ್ಲಿ ಅಸ್ತಿತ್ವಕ್ಕೆ ಬಂದುವು. ಅವುಗಳಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜು ಅತ್ಯಂತ ಮುಖ್ಯವಾದುದು. ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಸಂಸ್ಥೆ ಹಲವು ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದೆ. ಮಹಾತ್ಮಗಾಂಧಿ ಸ್ಮಾರಕ ಕಾಲೇಜು, ಕಾನೂನು ಕಾಲೇಜು, ಆಯುರ್ವೇದ ಕಾಲೇಜುಗಳಿವೆ. ಜಿಲ್ಲೆಯಲ್ಲಿ 70 ಪದವಿಪೂರ್ವ ಕಾಲೇಜುಗಳು, 21 ಪದವಿ ಕಾಲೇಜುಗಳು, 2 ಎಂಜಿನಿಯರಿಂಗ್ ಕಾಲೇಜುಗಳು, 4 ಭಾರತೀ ವೈದ್ಯ, 2 ಕಾನೂನು ಕಾಲೇಜುಗಳು, 3 ಪಾಲಿಟೆಕ್ನಿಕ್‌ಗಳು ಕಾಲೇಜುಗಳು ಇವೆ. ಒಟ್ಟು 59 ಗ್ರಾಮಪಂಚಾಯಿತಿ ಗ್ರಂಥಾಲಯಗಳಿವೆ. ಈ ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ.79.87 ಪುರುಷರು ಶೇ.86.59ರಷ್ಟು ಮತ್ತು ಮಹಿಳೆಯರು ಶೇ. 74.02ರಷ್ಟು ಸಾಕ್ಷರರಾಗಿದ್ದಾರೆ.

ಪಾರಂಪರಿಕವಾದ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ನಡೆದಿವೆ. ಕೆರೋಡಿಸುಬ್ಬರಾವ್, ಮುದ್ದಣ, ಎಂ. ಗೋವಿಂದಪೈ, ಪಂಜೆ ಮಂಗೇಶರಾವ್, ಕಡೇಕಾರು ರಾಜಗೋಪಾಲ, ಕೃಷ್ಣರಾಯ, ಎಂ.ಎನ್. ಕಾಮತ್, ಉಗ್ರಾಣ, ಮಂಗೇಶರಾವ್, ಉಲ್ಲಾಳ ಮಂಗೇಶ್‌ರಾವ್, ಪೇಜಾವರ ಸದಾಶಿವರಾವ್, ಶಿವರಾಮ ಕಾರಂತ, ಸೇಡಿಯಾಪು ಕೃಷ್ಣಭಟ್ಟ, ಎಂ. ಮರಿಯಪ್ಪ ಭಟ್ಟ ಮೊದಲಾದ ಸಾಹಿತ್ಯ ಶ್ರೇಷ್ಠರ ಕಾರ್ಯಕ್ಷೇತ್ರ ಇದು. ಕೆ.ಕೆ. ಹೆಬ್ಬಾರರಂತಹ ಮಹಾಚಿತಕಲಾವಿದರ ಮೂಲ ಇಲ್ಲಿಯದು. ರಂಜಾಲ ಗೋಪಾಲಶೆಣೈರ ಶಿಷ್ಯರ ವಿಕ್ರಮಶಿಲ್ಪ ಕಾರ್ಯಾಗಾರವಿದೆ. ಭರತನಾಟ್ಯ, ಯಕ್ಷಗಾನ ಹಾಗೂ ವಿವಿಧ ನೃತ್ಯಗಳನ್ನು ಕಲಿಸುವ ಮತ್ತು ಕಲಾವಿದರ ಸಂಸ್ಥೆಗಳು ಇಲ್ಲಿ ಬೇರುಬಿಟ್ಟಿವೆ. ಫೋಕಲ್ ಫೋಟೋಕ್ಲಬ್‌ನಂತಹ ಛಾಯಾಗ್ರಹಣ ಕಲೆ ರೂಢಿಸುವ ಸಂಸ್ಥೆಗಳಿವೆ. ಉಡುಪಿ ಜಿಲ್ಲೆ ಮತ್ತು ಪಟ್ಟಣ ಇಂತಹ ಕಲಾಸಂಪತ್ತು ಜೀವಂತ ವಾಗಿರಲು ಸಾಕಷ್ಟು ಕಾಣಿಕೆ ಸಲ್ಲಿಸಿವೆ. ಕೋಳಿಅಂಕ, ಕಂಬಳ ಮೊದಲಾದ ಗ್ರಾಮೀಣ ಪಂದ್ಯಗಳು ಇಂದಿಗೂ ನಡೆದುಬಂದಿವೆ.

**ಇತಿಹಾಸ:** ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಇತಿಹಾಸ ಪರಂಪರೆಯು ಹೆಚ್ಚು ಸಮಾನ ಸ್ವರೂಪದ್ದು. ಇಡೀ ಕರ್ನಾಟಕದ ಕರಾವಳಿ ಪ್ರದೇಶ ಪರಶುರಾಮ ಸೃಷ್ಟಿಯೆಂದು ಪ್ರತೀತಿಯುಂಟು. ಮಾರ್ಕಂಡೇಯ, ವಾಯು ಮತ್ತು ಭವಿಷ್ಯೋತ್ತರ ಪುರಾಣಗಳು ಇಲ್ಲಿನ ಕೆಲವು ನದಿಗಳ ಮತ್ತು ಪರ್ವತಗಳ ಹೆಸರುಗಳನ್ನು ಉಲ್ಲೇಖಿಸುತ್ತವೆ. ತಮಿಳಿನ 'ಸಂಗಂ' ಕಾಲದ ಸಾಹಿತ್ಯದಲ್ಲಿ ತುಳುನಾಡಿನ ಪ್ರಸ್ತಾಪ ಬರುತ್ತದೆ. ಅಶೋಕನ ಶಾಸನಗಳಲ್ಲಿ ಬರುವ ಸಾತಿಯಪುತ್ರ ಅಥವಾ ಸತ್ಯಪುತ್ರರೆಂಬ ಸಮುದಾಯದ ಉಲ್ಲೇಖ ಈ ಪ್ರದೇಶದ ಜನರನ್ನು ಕುರಿತದ್ದೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಉಡುಪಿ ಜಿಲ್ಲೆ ತೀರಪ್ರದೇಶದಲ್ಲಿ ರುವುದರಿಂದ ಇದು ಹೊರಗಿನ ಪ್ರಪಂಚದ ಸಂಪರ್ಕವನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಪ್ರಸಕ್ತ ಶಕೆಯ ಆಚೀಚೆಗಿನ ಶತಮಾನಗಳಿಗೆ ಸೇರಿದ ಗ್ರೀಕ್ ಮತ್ತು ರೋಮನ್ನರ ಪ್ರವಾಸಿ ಕಥನಗಳಲ್ಲಿ ಈ ತೀರದ ಅನೇಕ ಸ್ಥಳಗಳ ಉಲ್ಲೇಖಗಳಿವೆ. ಅವುಗಳಲ್ಲಿ ನೇತ್ರಾವತಿ, ಮಂಗಳೂರು, ಬಸರೂರುಗಳು ಸೇರಿವೆ. ಪ್ರಾಚೀನಕಾಲದಿಂದಲೂ ಹೊರದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಬೆಳೆದುಬಂದದ್ದು ನಿಸ್ಸಂದೇಹ. ಗ್ರೀಕ್ ನಾಟಕವೊಂದರಲ್ಲಿ ಬರುವ ಪಾತ್ರಗಳ ಸನ್ನಿವೇಶ ಈ ಕಡಲತೀರದ್ದೆಂದು ಮತ್ತು ಅಲ್ಲಿನ ಸಂಭಾಷಣೆಯಲ್ಲಿ ಬಳಸಿರುವ ಕೆಲವು ಪದಗಳು ತುಳು ಹಾಗೂ ಕನ್ನಡ ಪದಗಳೆಂದು ಗೋವಿಂದ ಪೈಗಳು ಅಭಿಪ್ರಾಯ ಪಟ್ಟಿದ್ದಾರೆ. ಇವು ಹಳಗನ್ನಡ ಪದಗಳೆಂದು ಪ್ರತಿಪಾದಿಸುವವರೂ ಇದ್ದಾರೆ. ಒಟ್ಟಿನಲ್ಲಿ ಈ ಜಿಲ್ಲೆ ಪ್ರಶ.ಪೂರ್ವ ಕಾಲದಿಂದಲೂ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಹೊಂದಿದ್ದ ಪ್ರದೇಶವೆಂಬುದು ದೃಢಪಡುತ್ತದೆ.

ಈ ಜಿಲ್ಲೆಯ ಇತಿಹಾಸ ಕಾಲದ ಸ್ಪಷ್ಟ ಪುರಾವೆಗಳು ದೊರಕುವುದು ಆಳುಪರ ಕಾಲದಲ್ಲಿ. ಆಳುಪರ ಆಳ್ವಿಕೆ ಪ್ರಶಕ್ತಶಕಾರಂಭದ ಕಾಲಕ್ಕೇ ಪ್ರಾರಂಭವಾಗುತ್ತದೆಂದು ತಿಳಿದು ಬರುತ್ತದೆ. ಅವರು ನಾಗಾರಾಧಕರಾಗಿದ್ದರು ಮತ್ತು ಶೈವ ಪಂಥೀಯರಾಗಿದ್ದರು. ಕದಂಬರು ನೆರೆಯ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ರಾಜ್ಯ ಸ್ಥಾಪಿಸಿದ ಮೇಲೆ ಈ ಪ್ರದೇಶವೂ ಅವರ ಸಾರ್ವಭೌಮತ್ವಕ್ಕೆ ಒಳಪಟ್ಟಿತ್ತು. ಆಗ ಅವರು ಇಲ್ಲಿ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆಸಿ ಇಲ್ಲಿನ ಮಠ ಮತ್ತು ಅಗ್ರಹಾರ ಪರಂಪರೆಗೆ ಬುನಾದಿ ಹಾಕಿದರೆಂದು ಹೇಳಲಾಗಿದೆ. ಜಮೀನು ಸಾಗುವಳಿ ಮತ್ತು ನಿರ್ವಹಣೆಯಲ್ಲಿ ಅನೇಕ ಕಟ್ಟುಪಾಡುಗಳನ್ನು ಕದಂಬರು ತಂದರೆಂಬ ನಂಬಿಕೆಯಿದೆ.

ಕದಂಬರ ಪ್ರಾಬಲ್ಯ ಕಡಿಮೆಯಾಗಿ ಬಾದಾಮಿ ಚಾಳುಕ್ಯರು ಮತ್ತು ತಲಕಾಡಿನ ಗಂಗರು ಈ ಪ್ರದೇಶದ ಮೇಲೆ ನಿಯಂತ್ರಣ ಸಾಧಿಸಿದಾಗ ಆಳುಪರು ಅವರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡು ತಮ್ಮ ರಾಜ್ಯವನ್ನು ವಿಸ್ತರಿಸಿದರು. ಆಳುಪರನ್ನು ಸೋಮ ಕುಲದವರೆಂದೂ ಮೀನ ಲಾಂಛನದವರೆಂದೂ ಹೇಳಲಾಗಿದೆ. ಇವರು 6ನೆಯ ಶತಮಾನದ ಹೊತ್ತಿಗೆ ಉಡುಪಿ ಜಿಲ್ಲೆಯ ಉದಯಪುರ (ಉದ್ಯಾವರ) ಮಂಗಳಪುರ (ಮಂಗಳೂರು)ಗಳಲ್ಲಿ ರಾಜಧಾನಿಗಳನ್ನು ಸ್ಥಾಪಿಸಿ ಆಳಿದ್ದರಲ್ಲದೆ ಘಟ್ಟದ ಮೇಲಿನ ಕೆಲವು ಭಾಗಗಳ ಮೇಲೂ ಆಳ್ವಿಕೆ ಸ್ಥಾಪಿಸಿದರು. ಪಶ್ಚಿಮ ಚಾಳುಕ್ಯರ ಬೆಂಬಲದೊಂದಿಗೆ ಅವರು 8ನೆಯ ಶತಮಾನದವರೆಗೂ ಆಳ್ವಖೇಡ, ಬನವಾಸಿ ಮಂಡಲ ಮತ್ತು ಹೊಂಬುರ್ಚ್ಚ (ಹೊಸನಗರ ತಾಲ್ಲೂಕು) ಪ್ರಾಂತ್ಯಗಳನ್ನು ಆಳಿದರೆಂದು ಹೇಳಬಹುದು. ಉಡುಪಿ ಜಿಲ್ಲೆಯ ಬಾರಹಕನ್ಯಾಪುರ ಅಥವಾ ಬಾರಕೂರು ಇವರ ರಾಜಧಾನಿಗಳಲ್ಲೊಂದಾಗಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಇವರ ಪ್ರಭಾವ ತಗ್ಗಿತ್ತು. ಗಂಗರಿಗೆ ಇವರು ನಾಮಮಾತ್ರ ಅಧೀನತೆ ತೋರಿಸಿ ಅವರೊಂದಿಗೆ ರಕ್ತಸಂಬಂಧ ಮಾಡುವ ಮೂಲಕ ಸೌಹಾರ್ದ ಬಾಂಧವ್ಯ ಹೊಂದಿದ್ದರು. ಇವರು ಕೆಲವೆಡೆ ತಮ್ಮನ್ನು ಪಾಂಡ್ಯರೆಂದು ಕರೆದುಕೊಂಡಿದ್ದಾರೆ. ಮೀನು ಇವರ ಲಾಂಛನವಾಗಿತ್ತು. ಹೊಯ್ಸಳರು ಪ್ರಾರಂಭದಲ್ಲಿ ಆಳುಪರ ಮೇಲೆ ಸಾಂಕೇತಿಕ ಆಧಿಪತ್ಯ ಹೊಂದಿದ್ದರೂ ಮೂರನೆಯ ಬಲ್ಲಾಳನ ಕಾಲದಲ್ಲಿ ಈ ಪ್ರದೇಶದ ಆಗುಹೋಗುಗಳಲ್ಲಿ ಅವರು ಹೆಚ್ಚಾಗಿ ಭಾಗವಹಿಸಿದ್ದು ಕಂಡುಬರುತ್ತದೆ.



ಶ್ರೀಕೃಷ್ಣ ರಥೋತ್ಸವ

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮುಖ್ಯವಾಗಿ ಶೈವ ಪರಂಪರೆ ಹೊಂದಿದ್ದ ಪ್ರದೇಶಗಳು. ನಾಗಾರಾಧನೆ ಮತ್ತು ಶಿವ ಪೂಜೆ ಇಲ್ಲಿನ ಮೂಲ ಧಾರ್ಮಿಕ ಪರಂಪರೆಯ ಸ್ವರೂಪವಾಗಿತ್ತು. ತರುವಾಯ ವೈಷ್ಣವ ಪಂಥ ಪ್ರವೇಶಿಸಿತು. ಮಧ್ವಚಾರ್ಯರು 13ನೆಯ ಶತಮಾನದಲ್ಲಿ ಉಡುಪಿಯಲ್ಲಿ ಅಷ್ಟವಿಮಠಗಳನ್ನು ಸ್ಥಾಪನೆ ಮಾಡಿದ ಮೇಲೆ ಮಾಧ್ವ ವೈಷ್ಣವಮತ ಪ್ರಬಲವಾಯಿತು. ಜೈನಧರ್ಮ ಪ್ರಾರಂಭದಿಂದಲೂ ರಾಜಾಶ್ರಯ ಪಡೆದಿದ್ದು 18ನೆಯ ಶತಮಾನದವರೆಗೂ ಕ್ರಿಯಾಶೀಲ ಧರ್ಮವಾಗಿ ಬೆಳೆಯಿತು. ಸ್ಥಳೀಯ ಪಂಜರವಳ್ಳಿ, ಭೂತ ಮೊದಲಾದ ಶಕ್ತಿಗಳ ಆರಾಧನೆ ಪ್ರಾರಂಭದಿಂದಲೂ ನಡೆದುಬಂದಿದೆ. ಪಾರ್ವತಿಯ ಅವತಾರವಾದ ಶಕ್ತಿ ದೇವತೆಗಳ ಆರಾಧನೆ (ಉದಾ: ಕೊಲ್ಲೂರು ಮೂಕಾಂಬಿಕೆ) ಜನಪ್ರಿಯವಾಗಿದೆ. ಈ ಪ್ರಾಂತದ ಜನರಿಗೆ ಧರ್ಮಶ್ರದ್ಧೆ ಹೆಚ್ಚು. ಭೂತಾರಾಧನೆಯಾಗಲೀ ಕೃಷ್ಣಪೂಜೆಯಾಗಲೀ ಹೋಮ ಹವನಗಳಾಗಲೀ ಎಲ್ಲದರಲ್ಲೂ ಇವರಿಗೆ ಹೆಚ್ಚಿನ ನಿಷ್ಠೆ. ವಿಜಯನಗರದ ಆಳ್ವಿಕೆ ಪ್ರಾರಂಭವಾದಾಗ ಹಿಂದಿನ ಪಾಳೆಯಗಾರರ ಅಥವಾ ಸ್ಥಾನಿಕ ರಾಜರ ಆಳ್ವಿಕೆಯ ಪ್ರಭಾವ ತಗ್ಗಿತು. ಆ ಕಾಲದಲ್ಲಿ ವಿಜಯನಗರದ ಸಾಮ್ರಾಟರು ನೇರವಾಗಿ ತಮ್ಮ ಪ್ರಾಂತಾಧಿಕಾರಿಗಳ ಮೂಲಕ ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಬಾರಕೂರು ಮತ್ತು ಮಂಗಳೂರು ಈ ಆಡಳಿತ ಕೇಂದ್ರಗಳಾಗಿದ್ದವು. ಮಂಗಳೂರು ರಾಜ್ಯವೆಂದೇ ಈ ಪ್ರಾಂತ್ಯವನ್ನು ಕರೆಯುತ್ತಿದ್ದರು. 1342ರಲ್ಲಿ ಈ ಮಾರ್ಗವಾಗಿ ಹಾದುಹೋದ ಇಬ್ನಬೂತೂತ ರಾಜ್ಯಾಧಿಕಾರಿಗಳು ಆಗಾಗ ಬದಲಾಗುತ್ತಿದ್ದುದರ ಬಗ್ಗೆ ತಿಳಿಸಿದ್ದಾನೆ. ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮ ಉಡುಪಿಯ ಬಳಿಯ ದ್ವೀಪಗಳಿಗೆ ಭೇಟಿ ಕೊಟ್ಟಿದ್ದನೆಂದು ತಿಳಿದುಬರುತ್ತದೆ. ಈಗ ಆ ದ್ವೀಪಗಳು ಸಂತಮೇರಿ ದ್ವೀಪಗಳೆಂದು ಹೆಸರುಪಡೆದಿವೆ.

ವಿಜಯನಗರದ ಕೃಷ್ಣದೇವರಾಯ ಪೋರ್ಚುಗೀಸರೊಂದಿಗೆ ಹೆಚ್ಚಿನ ಸ್ನೇಹದಿಂದ ನಡೆದುಕೊಂಡ. ಆಗ ಪೋರ್ಚುಗೀಸರು ಕರಾವಳಿಯ ಬಂದರುಗಳಲ್ಲಿ ವ್ಯಾಪಾರದ ನೆಪದಲ್ಲಿ ಬಲವಾಗಿ ನೆಲೆಗೊಂಡರು. ಉಳ್ಳಾಲದ ರಾಣಿ ಅಬ್ಬಕ್ಕ ದೇವಿ ಮತ್ತು ಬಿದನೂರಿನ ನಾಯಕರು ವಿಜಯನಗರದ ಪತನದ ಅನಂತರ ಪೋರ್ಚುಗೀಸ್‌ರನ್ನು ಹತೋಟಿಯಲ್ಲಿಡಲು ಅನೇಕ ಕಾರ್ಯಾಚರಣೆಗಳನ್ನು ನಡೆಸಿದರು. ಬಿದನೂರ ನಾಯಕರು ಮಲ್ಪೆ ಮತ್ತು ಕುಂದಾಪುರಗಳಲ್ಲಿ ಕೋಟೆಗಳನ್ನು ನಿರ್ಮಿಸಿದರು.

ಅನೇಕ ದಂಡರಸರು ವಿಜಯನಗರ ಕಾಲದಲ್ಲಿ ಮುಂದುವರೆದಿದ್ದು ಅನಂತರ ಪ್ರಬಲರಾಗಿ ಈ ಪ್ರದೇಶದಲ್ಲಿ ಆಳಿದರು. ಅವರಲ್ಲಿ ಕಾರ್ಕಳದ ಭೈರರಸರು ಮತ್ತು ವೇಣೂರಿನ ಅಜಿಲರು ಪ್ರಮುಖರು. ಇವರ ಕಾಲದಲ್ಲಿ ಈ ಊರುಗಳಲ್ಲಿ ಅನೇಕ ಜೈನ ಬಸದಿಗಳು ವಿಶ್ವವಿಖ್ಯಾತ ಗೊಮ್ಮಟವಿಗ್ರಹಗಳು ನಿರ್ಮಾಣವಾದವು. ಉಡುಪಿಯ ಬಳಿ ಸುರಳದಲ್ಲಿ ತೊಳಹಾರರು ಮತ್ತು ಹೊನ್ನಕಂಬಳಿ ಅರಸರು ಆಳುತ್ತಿದ್ದರು. ಉತ್ತರಕನ್ನಡ ಜಿಲ್ಲೆಯ ಹಾಡುವಳ್ಳಿಯಿಂದ ಆಳುತ್ತಿದ್ದ ಅರಸರು ಉಡುಪಿ ಜಿಲ್ಲೆಯ ಉತ್ತರದ ಕೆಲವು ಭಾಗಗಳಲ್ಲಿ ಆಡಳಿತ ನಡೆಸಿದರು. ಮೈಸೂರು ರಾಜ್ಯದ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರು ಈ

ಇಡೀ ಕರಾವಳಿ ಭಾಗವನ್ನು ಗೆದ್ದುಕೊಂಡರು. ಆದರೆ ಇಂಗ್ಲಿಷರ ಪ್ರಬಲ ಪ್ರತಿರೋಧದಿಂದಾಗಿ 1792ರ ಯುದ್ಧದಲ್ಲಿ ಅನಂತರದ ಒಪ್ಪಂದದ ಮೇರೆಗೆ ಈ ಭಾಗ ಬ್ರಿಟಿಷರ ವಶವಾಯಿತು. ಟಿಪ್ಪುಸುಲ್ತಾನನು ಇಲ್ಲಿನ ಅನೇಕ ಸ್ಥಳೀಯ ರಾಜರನ್ನು ಪದಚ್ಯುತಿಗೊಳಿಸಿದ್ದ. 1837ರಲ್ಲಿ ಕಲ್ಯಾಣಸ್ವಾಮಿ ಮತ್ತು ಲಕ್ಷಪ್ಪ ಬಂಗೇಶ ಎಂಬ ಅರಸುಗಳು ಬ್ರಿಟಿಷರ ವಿರುದ್ಧ ದಂಗೆಯೆದ್ದರು. ಬ್ರಿಟಿಷರು ಈ ದಂಗೆಯನ್ನು ಅಡಗಿಸಿದರು. 1860ರಲ್ಲಿ ಕನ್ನಡ ಜನರಿದ್ದ ಕರಾವಳಿ ಪ್ರದೇಶವನ್ನು ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆಂದು ವಿಭಜಿಸಲಾಯಿತು. 1867ರಲ್ಲಿ ಮೊದಲನೆಯದನ್ನು ಮುಂಬಯಿ ಪ್ರಾಂತ್ಯಕ್ಕೂ ಎರಡನೆಯದನ್ನು ಮದರಾಸು ಪ್ರಾಂತ್ಯಕ್ಕೂ ಸೇರಿಸಲಾಯಿತು.

ಬ್ರಿಟಿಷ್ ಭಾರತದ ಭಾಗವಾಗಿದ್ದ ಈ ಕರಾವಳಿ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಮುಂದಿತ್ತು. ಸತ್ಯಾಗ್ರಹಿಗಳು ಸ್ವತಂತ್ರ್ಯವಾಗಿ ಪತ್ರಿಕೆಗಳನ್ನು ಹೊರಡಿಸಿ ಜನತೆಯನ್ನು ಜಾಗೃತಿಗೊಳಿಸಿದರು. ಸ್ವದೇಶಾಭಿಮಾನಿ, ತಿಲಕ ಸಂದೇಶ (1919), ಸತ್ಯಾಗ್ರಹಿ (1921), ಸ್ವದೇಶಿ ಪ್ರಚಾರಕ (1940) ಮೊದಲಾದ ದೇಶಪ್ರೇಮಿ ಪತ್ರಿಕೆಗಳು ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದವು. ಕಾರ್ನಾಡು ಸದಾಶಿವರಾವ್, ಯು.ಎಸ್.ಮಲ್ಯ, ಕಮಲಾದೇವಿಚಟ್ಟೋಪಾಧ್ಯಾಯ, ಎಚ್.ವಿ.ಕಾಮತ್ ಮೊದಲಾದವರು ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿದ್ದರು. ಎ.ಬಿ.ಶೆಟ್ಟಿ, ಮೋನಪ್ಪ ತಿಂಗಳಾಯ, ಬಿ.ವಿ.ಬಾಳಿಗರಂತಹ ಸಮಾಜ ಸೇವಾಕರ್ತರು ಜನರನ್ನು ಸಂಘಟಿಸಿದರು. 1920ರಲ್ಲಿ ಗಾಂಧೀಜಿ ಮತ್ತು ಶೌಕತ್ ಅಲಿಯವರು ಜಿಲ್ಲೆಗೆ ಭೇಟಿ ನೀಡಿದ್ದರು. 1922ರಲ್ಲಿ ಸರೋಜಿನಿನಾಯ್ಡು ಅವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನ ನಡೆಯಿತು. 1934ರಲ್ಲಿ ಮತ್ತೆ ಗಾಂಧೀಜಿಯವರು ಈ ಪ್ರದೇಶಕ್ಕೆ ಭೇಟಿ ನೀಡಿದರು. ಮಾರನೆಯ ವರ್ಷ ರಾಜೇಂದ್ರಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಇನ್ನೊಂದು ರಾಜಕೀಯ ಸಮ್ಮೇಳನ ಇಲ್ಲಿ ಏರ್ಪಟ್ಟಿತು. 1937ರಲ್ಲಿ ಪಂಡಿತ ಜವಾಹರಲಾಲ್ ನೆಹರು ಅವರು ಜಿಲ್ಲೆಯನ್ನು ಸಂದರ್ಶಿಸಿ ಭಾಷಣ ಮಾಡಿದರು. 1942ರ ಚಲೇಜಾವ್ ಚಳವಳಿಯು ಇಲ್ಲಿ ಬಿರುಸಾಗಿ ನಡೆಯಿತು. ಆಗ ನೇತೃತ್ವ ವಹಿಸಿದ್ದ ಪ್ರಮುಖರಲ್ಲಿ ಕೆ.ಆರ್.ಕಾರಂತ, ವಿಠಲದಾಸಶೆಟ್ಟಿ, ಶ್ರೀನಿವಾಸಮಲ್ಯ, ನಾಗಪ್ಪಆಳ್ವ, ಎಂ.ಡಿ.ಅಧಿಕಾರಿ, ಶಂಕರಆಳ್ವ ಮುಂತಾದವರಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಹಾಲಿ ಉಡುಪಿ ಜಿಲ್ಲೆಯು ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆ ಮದರಾಸು ರಾಜ್ಯದಲ್ಲೇ ಮುಂದುವರಿಯಿತು. 1956ರ ನವೆಂಬರ್ 1ರಂದು ಅಸ್ತಿತ್ವಕ್ಕೆ ಬಂದ ಭಾಷಾವಾರು ಪ್ರಾಂತ್ಯದ ರಚನೆಯಲ್ಲಿ ಇದು ವಿಶಾಲ ಮೈಸೂರು ರಾಜ್ಯದ ಭಾಗವಾಯಿತು. (ಡಿ.ಎಸ್.ಜೆ.)


ವೇಣುಗೋಪಾಲ ದೇವಾಲಯ, ಮಣಿಪಾಲ

**ತಾಲ್ಲೂಕು:** ವಿಸ್ತೀರ್ಣ 929ಚ.ಕಿಮೀ. ಜನಸಂಖ್ಯೆ 529225 (2001). ಉತ್ತರದಲ್ಲಿ ಕುಂದಾಪುರ, ದಕ್ಷಿಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆ. ಪೂರ್ವದಲ್ಲಿ ಕಾರ್ಕಳ ತಾಲ್ಲೂಕುಗಳಿಂದಲೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದಲೂ ಸುತ್ತುವರೆದಿದೆ. ಕಾಪು, ಕೋಟ, ಉಡುಪಿ ಮತ್ತು ಬ್ರಹ್ಮಾವರ ಹೋಬಳಿಗಳು. ಈ ತಾಲ್ಲೂಕಿನಲ್ಲಿ 4 ಪಟ್ಟಣಗಳು ಮತ್ತು 99 ಗ್ರಾಮಗಳು ಇವೆ.

ಪಶ್ಚಿಮ ಕರಾವಳಿಯಲ್ಲಿದ್ದು ಸಸ್ಯಸಮೃದ್ಧವಾಗಿರುವ ಈ ತಾಲ್ಲೂಕಿನಲ್ಲಿ ಸಾಗರಿಕ ವಾಯುಗುಣವಿದೆ. ನೈರುತ್ಯ ಮಾರುತಗಳಿಂದ ಸಾಕಷ್ಟು ಮಳೆ ಬೀಳುತ್ತದೆ. ವಾರ್ಷಿಕ ಸರಾಸರಿ 4188ಮಿಮೀ. ಪಶ್ಚಿಮ ಘಟ್ಟದಲ್ಲಿ ಹುಟ್ಟುವ ಅನೇಕ ತೊರೆಗಳು ಹಾಗೂ ಸೀತಾ ಮತ್ತು ಸ್ವರ್ಣ ನದಿಗಳು ಪಶ್ಚಿಮಾಭಿಮುಖವಾಗಿ ಹರಿಯುತ್ತವೆ. ಈ ತಾಲ್ಲೂಕಿನಲ್ಲಿ 4686 ಹೆಕ್ಟೇರ್‌ಗಳಷ್ಟು ಕಾಡು ಪ್ರದೇಶವಿದೆ. ಕಾಡಿನಲ್ಲಿ ಕರಿಮರ, ಮಾವು, ಮತ್ತಿ, ಕಿರಲಬೋಗಿ ಮತ್ತು ಬೆನ್ ಟೀಕ್ ಮುಂತಾದ ಮರಗಳು ಬೆಳೆಯುವುದಲ್ಲದೆ ಹುಣಸೆ, ಸೀಗೆಕಾಯಿ, ಬಿದಿರು ಈ ಉಪಯುಕ್ತ ವಸ್ತುಗಳೂ ದೊರೆಯುತ್ತವೆ. ಸ್ವಲ್ಪ ಮೆಣಸಿನ ಬೆಳೆಯೂ ಇದೆ.

ಉಡುಪಿ ತಾಲ್ಲೂಕಿನಲ್ಲಿ ದೊಡ್ಡ ನೀರಾವರಿ ಯೋಜನೆಗಳಿಲ್ಲ. ಆದರೆ ಸಾಕಷ್ಟು ಮಳೆ ಬೀಳುವುದರಿಂದ ನದಿ-ತೊರೆಗಳು ಇದ್ದು ಜಲಾಭಾವವಿಲ್ಲ. ಈ ತಾಲ್ಲೂಕಿನ ಚಂತರ ಮಡಗ ಮತ್ತು ಮರನಾಡ ಮಡಗ ಕೆರೆಗಳಿಂದ 370 ಎಕರೆಗಳಿಗೆ ನೀರೊದಗುತ್ತದೆ. ತಾಲ್ಲೂಕಿನಲ್ಲಿ ಪರ್ಷಿಯನ್ ಚಕ್ರ ಅಥವಾ ಪಂಪ್‌ಸೆಟ್ ಇರುವ, ಕಪಿಲೆ ಮತ್ತು ಇನ್ನಿತರ ನೀರಾವರಿ ಬಾವಿಗಳಿವೆ. ತಾಲ್ಲೂಕಿನ ತೀರದ ಉದ್ದಕ್ಕೂ ಮತ್ತು ಸ್ವಲ್ಪ ಒಳಭಾಗದಲ್ಲೂ ಜಂಬು ಮಣ್ಣನ್ನು (ಲ್ಯಾಟರೈಟ್) ಕಾಣಬಹುದು. ಇಲ್ಲಿನ ಕಲ್ಲುಗಳು ಹೆಚ್ಚು ಒತ್ತಾಗಿದ್ದು ಪುಡಿಪುಡಿಯಾಗುವ ಕೆಂಪು ಜೇಡಿ ಮಣ್ಣನ್ನು ಒಳಗೊಂಡಿದೆ. ಚಿಪ್ಪು ಸುಣ್ಣ ಕಲ್ಲಿನ ಮತ್ತು ಜೇಡಿಮಣ್ಣಿನ ಸಂಗ್ರಹವೂ ಇದೆ. ನದಿ ಕಣಿವೆಗಳ ಉದ್ದಕ್ಕೂ ನಾನಾ ಬಣ್ಣದ ಜೇಡಿಮಣ್ಣು ಮೆಕ್ಕಲು ಮಣ್ಣಿನೊಡನೆ ಇರುವುದನ್ನು ಕಾಣಬಹುದು. ಕಟ್ಟಡ ಕಲ್ಲುಗಳು ಇದ್ದು-ಅಲಿಯೂರು, ಶಿರ, ಪಾಡು, ಕಡವೂರು ಮತ್ತು ಹರಡಿಯಲ್ಲಿ ಕಲ್ಲುಚಪ್ಪಡಿ ತೆಗೆಯುತ್ತಾರೆ. ಈ ತಾಲ್ಲೂಕಿನ

ಚತುರ್ಮುಖ ಬಸದಿ, ಕಾರ್ಕಳ

59.34 ಹೆಕ್ಟೇರುಗಳಲ್ಲಿ ಚಿಪ್ಪು ಸುಣ್ಣವನ್ನು ಸಂಗ್ರಹಿಸುತ್ತಾರೆ. ಶುದ್ಧ ಬಿಳುಪಿನಿಂದ ಬೂದ ಮಿಶ್ರಿತ ಬಿಳಿ ರೀತಿಗಳ ಸಿಲಿಕ ಮರಳು ಹರಹುಗಳು ತೀರದ ಉದ್ದಕ್ಕೂ ಮುಳೂರು, ಕಾಪು, ಹೆಜ್ಜಾಡಿ, ತೋನ್ಸೆ ಮತ್ತು ಉಲಿಯಾರ್ಗೋಳಿ ಮುಂತಾದೆಡೆಗಳಲ್ಲಿ 30ಸೆ.ಮೀ. ನಿಂದ 1ಮೀ ಮಂದದಲ್ಲಿ ಹರಡಿವೆ. 12,000 ಟನ್ ಸಿಲಿಕ ಮರಳನ್ನು ಪ್ರತಿವರ್ಷ ಈ ಪ್ರದೇಶದಿಂದ ತೆಗೆದು ಬಳಸಿಕೊಳ್ಳಲಾಗುತ್ತಿದೆ. ಅಭ್ರಕದಿಂದ ಕೂಡಿದ ಬೆಣಚುಕಲ್ಲಿನ ಶಿಲೆಯನ್ನು ಈ ತಾಲ್ಲೂಕಿನ ಕಾಪು, ಪಡು, ಮುಳೂರು, ಉಲಿಯಾರ್ಗೋಳಿ, ಉದ್ಯಾವರ, ನದಿಸಲ ಮತ್ತು ಹೆಜ್ಜಾಡಿಗಳಲ್ಲಿ ಕಾಣಬಹುದು. ಹೆಂಚು ತಯಾರಿಕೆಗೆ ಬೇಕಾದಂಥ ವಿಶಿಷ್ಟವಾದ ಮಣ್ಣು ಈ ತಾಲ್ಲೂಕಿನ ಮಲ್ಪೆ ಮುಂತಾದೆಡೆ ದೊರೆಯುತ್ತದೆ.

ಬತ್ತ, ಕಬ್ಬು ಮತ್ತು ನೆಲಗಡಲೆ ಮುಖ್ಯ ವ್ಯವಸಾಯ ಬೆಳೆಗಳು. ತೆಂಗು, ಅಡಕೆ, ಗೇರು ಮುಖ್ಯ ತೋಟಗಾರಿಕೆ ಬೆಳೆಗಳು 2004-05 ಅಂಕಿ ಅಂಶಗಳ ಪ್ರಕಾರ ಹಣ್ಣುಗಳು 5989 ಹೆ., ಕರಿಮೆಣಸು 50 ಹೆ., ರಬ್ಬರ್ 33, ಹಲಸು 394, ತೆಂಗು (5857), ಕಬ್ಬು (110), ಬತ್ತ (25562), ಗೇರು (4168), ನೆಲಗಡಲೆ (1506), ದ್ವಿದಳ ಧಾನ್ಯಗಳು (5318), ಅಡಕೆ (586), ಬಾಳೆ (338), ಮಾವು (618), ಸಿಹಿ ಗೆಣಸು (217), ಮೊದಲಾದ ಬೆಳೆಗಳು ಬೆಳೆಯುತ್ತಿವೆ.

ಇಲ್ಲಿಯ ಜನರ ಮುಖ್ಯ ಕಸುಬು ವ್ಯವಸಾಯವಾದರೂ ಇತರ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದುತ್ತಿದ್ದಾರೆ. ಸ್ವರ್ಣ ನದಿ ಮತ್ತು ಸೀತಾ ನದಿಗಳಲ್ಲಿ ಹಾಗೂ ಸಮುದ್ರದಲ್ಲಿ ಮೀನು ಹಿಡಿದು ಮತ್ಸ್ಯೋದ್ಯಮವನ್ನೇ ಮುಖ್ಯ ಕಸಬನ್ನಾಗಿ ಮಾಡಿಕೊಂಡಿರುವವರೂ ಇದ್ದಾರೆ. ಈ ತಾಲ್ಲೂಕಿನಲ್ಲಿ ಕೋಳಿಸಾಕಣೆ ಮತ್ತು ಪಶುಪಾಲನೆ ಕೇಂದ್ರಗಳೂ ಇವೆ. ಜಿಲ್ಲೆಯ ಎಲ್ಲ ಕಡೆಗೂ ಉತ್ತಮ ರಸ್ತೆ ಸಂಪರ್ಕವಿದೆ. ಒಟ್ಟು 343 ಪ್ರಾಥಮಿಕ ಶಾಲೆಗಳು 100 ಪ್ರೌಢ ಶಾಲೆಗಳು ಮತ್ತು ಕಾಲೇಜುಗಳೂ ಇವೆ. ಉಡುಪಿಗೆ ಉತ್ತರದಲ್ಲಿ 3 ಕಿಮೀ ದೂರದಲ್ಲಿರುವ ಮಣಿಪಾಲದಲ್ಲಿ ಮಣಿಪಾಲ ಮುದ್ರಣಾಲಯ, ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಶಿಕ್ಷಣ ತರಬೇತಿ ಕಾಲೇಜುಗಳಿವೆ. ಸಿಂಡಿಕೇಟ್ ಬ್ಯಾಂಕ್‌ನ ಕೇಂದ್ರ ಕಚೇರಿ ಇದೆ. ಇಲ್ಲಿ ಸ್ಥಾಪಿತವಾಗಿರುವ ದಿ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಸಂಸ್ಥೆ ವಿದ್ಯಾಪ್ರಸಾರಣಾ ಕಾರ್ಯದಲ್ಲಿ ವಿಶೇಷ ರೀತಿಯ ಸೇವೆ ಸಲ್ಲಿಸುತ್ತಿದೆ. 35 ಪದವಿ ಪೂರ್ವ ಕಾಲೇಜುಗಳು, 4 ಸರ್ಕಾರಿ ಕಾಲೇಜುಗಳೂ ಇವೆ. ಖಾಸಗಿ ಕಾಲೇಜುಗಳು 5, ಮಣಿಪಾಲದಲ್ಲಿ ವೈದ್ಯಕೀಯ 2 ಮತ್ತು ಎಂಜಿನಿಯರಿಂಗ್ 2 ಕಾಲೇಜುಗಳಿವೆ. ಪಾಲಿಟೆಕ್ನಿಕ್ ಕಾಲೇಜು, 1 ದಂತ ಕಾಲೇಜು

ಉದ್ಯಾವರ, ಕಲ್ಯಾಣಪುರ, ತೋನ್ಸೆ, ಪೆರ್ಡೂರು, ಬ್ರಹ್ಮಾವರ, ಬಾರಕೂರು, ಮಂದರ್ತಿ – ಇವು ತಾಲ್ಲೂಕಿನ ಕೆಲವು ಮುಖ್ಯ ಸ್ಥಳಗಳು (ಇವುಗಳಿಗೆ ಪ್ರತ್ಯೇಕ ಲೇಖನಗಳಿವೆ). ಉಡುಪಿಗೆ ಹತ್ತಿರವಿರುವ ಕರಂಕರಪಾಡಿಯಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಕೆಲವು ಕುರುಹುಗಳು ಸಿಕ್ಕಿವೆ. ಎಣ್ಣೆ ಹೊಳೆ ಮತ್ತು ಸ್ವರ್ಣನದಿ ಸಂಗಮದಲ್ಲಿರುವ ಭದ್ರಗಿರಿಯಲ್ಲಿ ವಿಠ್ಠಲ ದೇವಾಲಯವಿದೆ. ಕಟಪಾಡಿಯಲ್ಲಿ ಪುರಾತನ ದೇವಾಲಯಗಳಿವೆ. ಕಾಪುವಿನಲ್ಲಿ ಜೈನಬಸದಿ ಮತ್ತು ಮಾರಿಯಮ್ಮನ ಗುಡಿಗಳೂ ಕೋಟದಲ್ಲಿ ನರಸಿಂಹ, ಮಹಾದೇವ ಮತ್ತು ಅಮೃತೇಶ್ವರಿ ದೇವಾಲಯಗಳೂ ಇವೆ. ನಂದಿಕೂರಿನ ಅಮೃತೇಶ್ವರ, ಬಂಟ ಕಲ್ಲಿನಲ್ಲಿ ದುರ್ಗಾಪರಮೇಶ್ವರಿ, ನಾಯಂಪಳ್ಳಿಯ ಗೋಪಾಲಕೃಷ್ಣ, ನೀಲಾವರದ ದುರ್ಗಾ ಭಗವತಿ, ಸಾಲಿಗ್ರಾಮದ ಯೋಗನರಸಿಂಹ ಹೆಸರಿಸಬೇಕಾದ ಇತರ ದೇವಾಲಯಗಳು.

ಸುರುಳುವಿನ ಮಹಾದೇವ ದೇವಾಲಯ ಪೂರ್ಣ ಕಪ್ಪು ಶಿಲೆಯಲ್ಲಿ ನಿರ್ಮಿತವಾದುದು. ಅಲೆಮೂರಿನಲ್ಲಿ ದುರ್ಗಾ ಮತ್ತು ಜನಾರ್ದನ ದೇವಾಲಯಗಳಿವೆ. ಈ ಜನಾರ್ದನ ದೇವಾಲಯ ಕದಂಬ ಮಯೂರವರ್ಮ ಕಟ್ಟಿಸಿದ್ದೆಂದು ಪ್ರತೀತಿ. ಚಿತ್ರಪದಿ ದಕ್ಷಿಣ ಕನ್ನಡ ಜಿಲ್ಲೆಯ ಬಲ್ಲಾಳವಂಶದವರ ಮೂಲಸ್ಥಾನ. ಕುಂಜಾರು ಮಧ್ವಾಚಾರ್ಯರು ಹುಟ್ಟಿದ ಸ್ಥಳ. ಇಲ್ಲಿ ಮಹಿಷಾಸುರಮರ್ಧಿನಿ ದೇವಾಲಯವೂ ನಾಲ್ಕು ಪುಷ್ಕರಣಿಗಳೂ ಇವೆ. ಹತ್ತಿರದಲ್ಲಿ ಕುಂಜಾರುಗಿರಿ ಮತ್ತು ಪರಶುರಾಮಗಿರಿ ಎಂಬ ಎರಡು ಚಿಕ್ಕ ಬೆಟ್ಟಗಳಿವೆ. ಪರಶುರಾಮಗಿರಿಯ ಮೇಲೆ ಪರಶುರಾಮ ವಿಗ್ರಹವಿದೆ. ಎರ್ಮಾಳಿನಲ್ಲಿ ಒಂದು ಚಂದ್ರನಾಥ ಬಸದಿ ಮತ್ತು ಮಧ್ವಾಚಾರ್ಯರು ಸ್ಥಾಪಿಸಿದ ಜನಾರ್ದನ ದೇವಾಲಯ ಇವೆ. ನಿಡಂಬೂರಿನಲ್ಲಿ ಆಂಜನೇಯ ದೇವಾಲಯವಿದೆ. ಇಲ್ಲಿ ಪ್ರಥಮವಾಗಿ ಪೂಜೆ ಸಲ್ಲಿಸಿದ ಅನಂತರವೇ ಉಡುಪಿಯ ಪರ್ಯಾಯ ಮಠಾಧಿಪತಿಗಳು ತಮ್ಮ ಪೂಜೆಯನ್ನು ಆರಂಭಿಸುವುದು ಪದ್ಧತಿ. ಪಡುಬಿದ್ರಿ ಒಂದು ದೊಡ್ಡ ಊರು, ಮೀನು ವ್ಯಾಪಾರಕ್ಕೆ ಪ್ರಸಿದ್ಧಿ, ಇಲ್ಲಿ ಕೆಲವು ದೇವಾಲಯಗಳೂ ಎರಡು ಪ್ರೌಢಶಾಲೆಗಳೂ ಇವೆ.

**ಪಟ್ಟಣ:** ಉಡುಪಿ ಈ ತಾಲ್ಲೂಕಿನಲ್ಲಿ ಆಡಳಿತ ಕೇಂದ್ರ. ಜಿಲ್ಲೆಯ ದೊಡ್ಡ ನಗರ. ಜನಸಂಖ್ಯೆ 113112 (2001). ಮಂಗಳೂರಿಗೆ ಉತ್ತರದಲ್ಲಿ 58 ಕಿಮೀ ದೂರದಲ್ಲಿದ್ದು ಮಂಗಳೂರು, ಕಾರ್ಕಳ, ಕುಂದಾಪುರ ಮುಂತಾದೆಡೆಗಳೊಡನೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿದೆ.  ಉಡುಪಿಯ ಪಶ್ಚಿಮಕ್ಕೆ 5 ಕಿಮೀ ದೂರದಲ್ಲೇ ಮಲ್ಪೆ ಬಂದರಿದೆ.

ಉಡುಪಿ ಪ್ರಸಿದ್ಧ ಧಾರ್ಮಿಕ ಕೇಂದ್ರ ಹಾಗೂ ಯಾತ್ರಾಸ್ಥಳ. ಶಿಕ್ಷಣ, ಕೈಗಾರಿಕೆಗಳಲ್ಲಿ ಸಹ ಪ್ರಗತಿಪಥದಲ್ಲಿರುವ ಊರು. ಲಾ ಕಾಲೇಜು, ಆಯುರ್ವೇದ ಕಾಲೇಜು, ಪೂರ್ಣಪ್ರಜ್ಞಾ ಕಾಲೇಜು, ಮಹಾತ್ಮ ಗಾಂಧೀ ಸ್ಮಾರಕ ಕಾಲೇಜು, ಸಂಗೀತ, ಯಕ್ಷಗಾನ ಇತ್ಯಾದಿಗಳನ್ನು ಕಲಿಸುವ ಲಲಿತಕಲಾ ಕಾಲೇಜು ಮತ್ತು ವೇದ ವೇದಾಂತ ತರ್ಕ ವ್ಯಾಕರಣ ಇತ್ಯಾದಿಗಳನ್ನು ಕಲಿಸುವ ಸಂಸ್ಕೃತ ಮಹಾವಿದ್ಯಾಲಯ, ಎಂ. ಗೋವಿಂದ ಪೈ ಸಂಶೋಧನ ಕೇಂದ್ರ, ಸರ್ಕಾರಿ ಗ್ರಂಥಾಲಯ ಮುಂತಾದವು ಇಲ್ಲಿವೆ. ಏಳು ಪ್ರೌಢ ಶಾಲೆಗಳೂ ಹಲವಾರು ಮಾಧ್ಯಮಿಕ ಪ್ರಾಥಮಿಕ ಶಾಲೆಗಳೂ ಇವೆ. ಒಂದು ಹೆಂಚು ಕಾರ್ಖಾನೆ ಮತ್ತು ಕೊಬ್ಬರಿ ಎಣ್ಣೆ ಕಾರ್ಖಾನೆಗಳು ಇವೆ. ಮ್ಯಾಜಿಸ್ಟ್ರೇಟ್ ಮತ್ತು ಮುನ್ಸಿಫ್ ನ್ಯಾಯಾಲಯಗಳುಂಟು. ವ್ಯಾಪಾರೋದ್ಯಮಕ್ಕೆ ಅನುಕೂಲವಾಗುವ ಬಂಡವಾಳವನ್ನೊದಗಿಸುವ ಬ್ಯಾಂಕುಗಳು, ಹಣಕಾಸು, ಸಂಸ್ಥೆಗಳು, ಇಲ್ಲಿವೆ. ಭಾರತ ಜೀವವಿಮಾ ಸಂಸ್ಥೆಯ ವಿಭಾಗ ಕೇಂದ್ರ ಕಚೇರಿ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಇವೆ. ಅನೇಕ ಸಾಂಸ್ಕೃತಿಕ ಸಂಘ ಸಂಸ್ಥೆಗಳಿವೆ. ಉಡುಪಿಯಲ್ಲಿ ಪುರಸಭೆ ಇದೆ. ನದಿ ನೀರನ್ನು ಕುಡಿಯಲು ಬಳಸಿಕೊಳ್ಳುತ್ತಿದೆ.

14ನೆಯ ಶತಮಾನದ ತನಕ ಉಡುಪಿ ಎಂಬ ಹೆಸರು ಇಲ್ಲಿನ ಅನಂತೇಶ್ವರ ದೇವಾಲಯದ ಪರಿಸರದಲ್ಲಿ ಒಂದು ಅಗಲ ಕಿರಿದಾದ ಸ್ಥಳಕ್ಕೆ ಮಾತ್ರ ಅನ್ವಯಿಸಿತ್ತು. ಕಾಲಕ್ರಮೇಣ ಈ ಹೆಸರು ವೈಶಾಲ್ಯವನ್ನು ಪಡೆಯಿತು. ಉಡುಪಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಕ್ಕೆ ಶಿವಳ್ಳಿ ಎಂಬ ಹೆಸರು 8ನೆಯ ಶತಮಾನದಿಂದಲೇ ಇತ್ತು. ಇದರ ಸಮೀಪವೇ ಕಕ್ಕುಂಜೆ ಎಂಬಲ್ಲಿ ಬಹು ಪ್ರಾಚೀನವಾದ ಒಂದು ಜನಾರ್ದನ ಬಿಂಬ ಚಿಕ್ಕದಾದೊಂದು ಗುಡಿಯಲ್ಲಿದೆ. ಇತಿಹಾಸ ಕಾಲದಲ್ಲಿ ಉಡುಪಿ–ಶಿವಳ್ಳಿ–ನಿಡಂಬೂರು ಮತ್ತು ಬೆಟ್ಟುಪಾಡಿ ಬೀಡುಗಳು ಎಂಬ ಎರಡು ಪ್ರಮುಖ ವಿಭಾಗಗಳಿಂದ ಕೂಡಿತ್ತು. ಈ ಬೀಡುಗಳ ಅಧಿಕಾರಿಗಳು ಬ್ರಾಹ್ಮಣರಾಗಿದ್ದರು.

ಆನಂದಗಿರಿ ವಿರಚಿತ ಶಂಕರ ವಿಜಯದಲ್ಲೂ ಉಡುಪಿ ಮಹಾತ್ಮ್ಯದಲ್ಲೂ ಉಡುಪಿಗೆ ರಜತಪೀಠಪುರವೆಂಬ ಹೆಸರಿದೆ. ಸು.10ನೆಯ ಶತಮಾನದಲ್ಲಿ ಈ ಹೆಸರು ಬಳಕೆಯಲ್ಲಿತ್ತು. ತುಳು ನಾಡಿನ ಸಪ್ತಕ್ಷೇತ್ರಗಳಲ್ಲಿ ರೌಪ್ಯಪೀಠ ಅಥವಾ ರಜತಪೀಠಪುರ ಒಂದಾಗಿದೆ. ಚಂದ್ರ (ಉಡು+ಪಿ) ಶಾಪದಿಂದ ವಿಮೋಚನೆಯನ್ನು ಪಡೆಯುವುದಕ್ಕೋಸ್ಕರ ಶಿವನನ್ನು ಕುರಿತು ತಪಸ್ಸು ಮಾಡಿದಾಗ ಶಿವನು ಪ್ರತ್ಯಕ್ಷನಾದ ಸ್ಥಳ ಉಡುಪಿ ಎಂದು ಸ್ಥಳಪುರಾಣದ ಹೇಳಿಕೆ. ಉಡುಪಿ ಶಬ್ದ ನಾಗ ಸಂಬಂಧಿಯೂ ಆಗಿದ್ದುದರಿಂದ ಉಡುಪಿ ನಾಗಾರಾಧನೆಗೆ ಹೆಸರುವಾಸಿಯಾದ ಸ್ಥಳವೆನ್ನಬಹುದು.

ಇಲ್ಲಿಯ ಬಹು ಪ್ರಾಚೀನ ಚಾರಿತ್ರಿಕ ಅವಶೇಷ ಶ್ರೀ ಅನಂತೇಶ್ವರ ದೇವಾಲಯ, ಸು.8–9ನೆಯ ಶತಮಾನದ್ದು. ಇದು ಗಜಪೃಷಾಕಾರವಾಗಿದ್ದು ಕರ್ನಾಟಕದ ಹಿರಿಯ ದೇವಾಲಯಗಳಲ್ಲಿ ಒಂದೆನ್ನಬಹುದು. ಈ ದೇವಾಲಯದ ಎದುರು ತಗ್ಗಾದ ಸ್ಥಳದಲ್ಲಿ ಚಂದ್ರಮೌಳೀಶ್ವರವೆಂಬ ದೇವಾಲಯವಿದೆ. ಇದು ಸಹ ಸು.9–10ನೆಯ ಶತಮಾನದ ದೇಗುಲ. ಈ ದೇವಾಲಯದ ನಿರ್ಮಾಣಕ್ಕಿಂತ ಮೊದಲು ಇದು ಕೆರೆಯಾಗಿರಬೇಕು.

ಇಲ್ಲಿನ ಕೃಷ್ಣದೇವಾಲಯ ಅಖಿಲ ಭಾರತದಲ್ಲೇ ಸಾಕಷ್ಟು ಖ್ಯಾತಿ ಪಡೆದಿದೆ. ಶ್ರೀ ಕೃಷ್ಣಮಠವೆಂದು ಕರೆಯಲ್ಪಡುವ ಈ ದೇವಾಲಯ ಅನಂತೇಶ್ವರ ದೇವಾಲಯದ ಪರಿಸರದಲ್ಲಿ ಈಶಾನ್ಯ ದಿಕ್ಕಿಗಿದೆ. ಈ ಮಠದ ರಚನೆ ಸರಳವಾಗಿದ್ದರೂ ಇದೊಂದು ಆಯುತಾಕಾರದ ಕಟ್ಟಡವಾಗಿದ್ದು ಉತ್ತರ ಭಾಗದಲ್ಲಿ ಒಳಗೆ ಪ್ರವೇಶವಿದ್ದು ಪಶ್ಚಿಮ ಭಾಗದ ಕಿಂಡಿಯಿಂದ (ಕನಕನ ಕಿಂಡಿ) ಶ್ರೀಕೃಷ್ಣನ ದರ್ಶನವನ್ನು ಮಾಡುವ ವ್ಯವಸ್ಥೆಯಿಂದ ಕೂಡಿದೆ. ಈ ಮೂರ್ತಿಯನ್ನು ಮಧ್ವಾಚಾರ್ಯರು 13ನೆಯ ಶತಮಾನದ ಅಂತ್ಯ ಭಾಗದಲ್ಲಿ ಪ್ರತಿಷ್ಠಾಪಿಸಿದರು. ಕೃಷ್ಣನ ಮೂರ್ತಿ ಉಡುಪಿಗೆ ಹಡಗಿನ ಮೂಲಕ ಬಂದ ವಿಚಾರದಲ್ಲಿ ಸಾಂಪ್ರದಾಯಿಕವಾದ ಒಂದು ಹೇಳಿಕೆ ಇದ್ದರೂ ಇದನ್ನು ಮಧ್ವಾಚಾರ್ಯರು ತಮ್ಮ ಔತ್ತರೇಯ ಪರ್ಯಟನ ಸಮಯದಲ್ಲಿ ತಂದು ಉಡುಪಿಯಲ್ಲಿ ಸ್ಥಾಪಿಸಿದರೆನ್ನಬಹುದು. ಬಲ ಕೈಯಲ್ಲಿ ದಂಡ ಹಿಡಿದಿರುವ 15" ಎತ್ತರದ ಈ ಮೂರ್ತಿ ಬಹು ಪ್ರಾಚೀನವೂ ಮಹತ್ವವುಳ್ಳದ್ದೂ ಆಗಿದೆ. ಶ್ರೀ ಕೃಷ್ಣಮಠದಲ್ಲೇ ಶಂಕರಾಚಾರ್ಯರ ಶಿಷ್ಯರಾದ ಹಸ್ತಾಮಲಕಾಚಾರ್ಯರಿಂದ ಪ್ರತಿಷ್ಠಿತವಾದದ್ದೆನ್ನಲಾದ ತೈಲಕೃಷ್ಣ ಎಂಬ ವ್ಯಾವಹಾರಿಕ ಹೆಸರನ್ನು ಪಡೆದಿರುವ ಇನ್ನೊಂದು ಸುಂದರ ಮೂರ್ತಿ ಇದೆ. ಇದು ಸು.9ನೆಯ ಶತಮಾನದ ವೇಣುಗೋಪಾಲ ಕೃಷ್ಣಮೂರ್ತಿ, ಶ್ರೀ ಕೃಷ್ಣಮಠದ ಒಂದು ಭಾಗದಲ್ಲಿ ಮಧ್ವಪುಷ್ಕರಿಣಿ ಇದೆ.

ಉಡುಪಿಯಲ್ಲಿ ಸೋದೆ, ಶಿರೂರು, ಕಾಣಿಯೂರು, ಕೃಷ್ಣಾಪುರ, ಆದಮಾರು, ಪಲಿಮಾರು, ಪೇಜಾವರ, ಪುತ್ತಿಗೆ ಎಂಬ ಅಷ್ಟ ಮಠಗಳಿವೆ. ಈ ಮಠಗಳ ಯತಿಗಳು ಶ್ರೀಕೃಷ್ಣನ ಪೂಜೆಯನ್ನು ಪರ್ಯಾಯ ಕ್ರಮದಲ್ಲಿ ಎರಡೆರಡು ವರ್ಷಗಳ ಕಾಲ ಮಾಡುತ್ತಾರೆ. ಅಷ್ಟಯತಿಗಳ ಪರಂಪರೆಯನ್ನು ಸ್ಥಾಪಿಸಿದುದು ಮಧ್ವಾಚಾರ್ಯರಾದರೂ ಪರ್ಯಾಯ ಕ್ರಮವನ್ನು ಅನುಷ್ಠಾನಕ್ಕೆ ತಂದುದು ಸೋದೆ ಮಠದ ಯತಿವರ್ಯರಾದ ಶ್ರೀ ವಾದಿರಾಜರು. ಅನುಕ್ರಮವಾಗಿ ಒಂದು ಮಠದ ಸ್ವಾಮಿಗಳಿಂದ ಇನ್ನೊಂದು ಮಠದ ಸ್ವಾಮಿಗಳು ಶ್ರೀ ಕೃಷ್ಣಮಠದ ಪೂಜಾಧಿಕಾರ ವಹಿಸಿಕೊಳ್ಳುವ ಸಮಾರಂಭವೇ ಪರ್ಯಾಯ ಮಹೋತ್ಸವ. ಇದು ಉಡುಪಿಯ ಅತ್ಯಂತ ದೊಡ್ಡ ಉತ್ಸವ, ಈ ಸಂದರ್ಭದಲ್ಲಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಉಡುಪಿಗೆ ಬರುತ್ತಾರೆ. ಉಡುಪಿಯಲ್ಲಿ ನಡೆಯುವ ಲಕ್ಷದೀಪೋತ್ಸವ, ಮಕರ ಸಂಕ್ರಮಣೋತ್ಸವ, ಶ್ರೀಕೃಷ್ಣ ಜಯಂತಿ ಇತರ ಪ್ರಮುಖ ಉತ್ಸವಗಳು. (ಪಿ.ಜಿ.ಬಿ.)

**ಉಡುಪಿನ ಉದ್ಯಮ, ಮಾರಾಟ:** ಉಡುಪು ತಯಾರಿಕೆಯಲ್ಲಿ ಮೊದಲು ಬಂದಿದ್ದ ದೇಶಗಳೆಂದರೆ ಅಮೆರಿಕ ಸಂಯುಕ್ತಸಂಸ್ಥಾನ ಹಾಗೂ ಬ್ರಿಟನ್ನು, 20ನೆಯ ಶತಮಾನದಲ್ಲಿ ತಾಂತ್ರಿಕ ಮುನ್ನಡೆ ಸಾಧಿಸಿದ ರಾಷ್ಟ್ರ ಅಮೆರಿಕ ಸಂಯುಕ್ತಸಂಸ್ಥಾನ. ಗುಣಮಟ್ಟಕ್ಕೆ ಹೆಸರಾದ್ದು ಬ್ರಿಟನ್ನು, ಒಂದನೆಯ ಮಹಾಯುದ್ಧಾನಂತರ ಕಾಲದಲ್ಲಿ ಉಡುಪು ತಯಾರಿಕೆಯ ಹೊಸ ಹೊಸ ವಿಧಾನಗಳು ಜಾರಿಗೆ ಬಂದುವು. ಸ್ತ್ರೀಯರ ಉಡುಪು ಹೆಚ್ಚು ಸರಳವಾಯಿತು. ಇದರಿಂದ ಈ ಉದ್ಯಮಕ್ಕೆ ದೊರಕಿದ ಉತ್ತೇಜನ ಅಸಾಧಾರಣ. ಕ್ರಮೇಣ ಡೆನ್ಮಾರ್ಕ್, ನಾರ್ವೆ, ಸ್ವೀಡನ್, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಕೆನಡ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ನ್ಯೂಜೀಲೆಂಡ್‌ಗಳೂ ಈ ಕ್ಷೇತ್ರ ಪ್ರವೇಶ ಮಾಡಿದ್ದರಿಂದ ಈ ಕ್ಷೇತ್ರದಲ್ಲಿ ಸ್ಪರ್ಧೆ ಹೆಚ್ಚಿತು. ಮಹಾಯುದ್ಧದಿಂದೀಚೆಗೆ ಸಾರಿಗೆಯಲ್ಲಾಗಿರುವ ಪ್ರಗತಿಯೂ ಆಧುನಿಕ ಯಂತ್ರ ತಂತ್ರ ಬಳಕೆಯೂ ಈ ಉದ್ಯಮದ ಬೆಳೆವಣಿಗೆಗೆ ಪ್ರೇರಕವಾಗಿವೆ. ಇಟಲಿ, ಹಾಂಗ್‌ಕಾಂಗ್‌ಗಳು ಈಚೆಗೆ ದೊಡ್ಡ ಪ್ರಮಾಣದಲ್ಲಿ ಇದರಲ್ಲಿ ತೊಡಗಿದುವಲ್ಲದೆ, ಜರ್ಮನಿಯಲ್ಲಿ ಈ ಕೈಗಾರಿಕೆ ಪುನಾರಚನೆಗೊಂಡಿತು. ಬ್ರಿಟನ್ನನ್ನುಳಿದ ಯುರೋಪಿನಲ್ಲಿ ಜರ್ಮನಿಯದು ಪ್ರಥಮಸ್ಥಾನ. ಬಟ್ಟೆ ತಯಾರಿಕೆಯಿಂದ ಹಿಡಿದು, ಉಡುಪು ಸಿದ್ಧಗೊಳಿಸಿ, ಅದನ್ನು ಸರಪಳಿ ಅಂಗಡಿಗಳಲ್ಲಿಟ್ಟು (ಚೇನ್ ಸ್ಟೋರ್ಸ್) ಮಾರಾಟ ಮಾಡುವವರೆಗಿನ ನಾನಾ ಹಂತಗಳನ್ನೊಳಗೊಂಡ ಬೃಹತ್ ಉದ್ಯಮ ಕೂಟಗಳು, ಉದಗ್ರಕೂಟಗಳು (ವರ್ಟಿಕಲ್ ಕಾಂಬಿನೇಷನ್ಸ್) ಈಗ ಪಾಶ್ಚಾತ್ಯ ಲೋಕದಲ್ಲಿ ಸಾಮಾನ್ಯ. ಕೆಲವು ಕಡೆಗಳಲ್ಲಿ ಗ್ರಾಹಕರೊಂದಿಗೆ ನೇರ ಸಂಪರ್ಕ ಇಟ್ಟುಕೊಂಡಿರುವ ಸಂಸ್ಥೆಗಳೂ ಉಂಟು. ಇಲ್ಲಿ ಪರಿಣತ ಸಿಬ್ಬಂದಿಯವರು ಗ್ರಾಹಕರ ಅಳತೆ ಪಡೆದು ಅವನ್ನು ಕಾರ್ಖಾನೆಗಳಿಗೆ ಕಳಿಸಿಕೊಟ್ಟು ಉಡುಪು ಹೊಲಿಸುತ್ತಾರೆ. ಭಾರತದಲ್ಲೂ ಈಚೆಗೆ ಮುಂಗಯಿ, ಕೊಲ್ಕತ್ತ, ಚೆನ್ನೈ, ಪುಣೆ ಬೆಂಗಳೂರು, ದೆಹಲಿಗಳಂಥ ಬೃಹನ್ನಗರಗಳಲ್ಲಿ ಈ ಉದ್ಯಮ ತ್ವರೆಯಿಂದ ಬೆಳೆಯುತ್ತಿದೆ.

**ಉಡುಪು ಸಾಮಗ್ರಿ**: ಕೃತಕ ದಾರಗಳ ಬಟ್ಟೆ ಈಚೆಗೆ ಹೆಚ್ಚುತ್ತಿದೆಯಾದರೂ ಹತ್ತಿ ಉಣ್ಣೆಗಳೇ ಇಂದಿಗೂ ವಸ್ತ್ರೋತ್ಪಾದನೆಯ ಮುಖ್ಯ ಸಾಮಗ್ರಿ. 1960ರ ದಶಕದ ಮೊದಲ ಭಾಗದಲ್ಲಿ ಜಗತ್ತಿನ ಒಟ್ಟು ವಸ್ತ್ರದಲ್ಲಿ ಮೂರರಲ್ಲೆರಡು ಪಾಲು ಹತ್ತಿಯದು. ಶೇ. 11ರಷ್ಟು ಉಣ್ಣೆಯ ಪಾಲು. ಸೆಲ್ಯುಲೋಸಿನ ಸರಿಯನ್ನು (ವಿಸ್ಕೋಸ್) 1892ರಲ್ಲಿ ಕಂಡು ಹಿಡಿದ ಅನಂತರ, 20ನೆಯ ಶತಮಾನದ ಎರಡನೆಯ ದಶಕದ ಉತ್ತರಾರ್ಧದಿಂದ ರೇಯಾನಿನ ಪ್ರಾಮುಖ್ಯ ಹೆಚ್ಚಿತು. 1960ರ ದಶಕದ ಪೂರ್ವಾರ್ಧ ಕಾಲದಲ್ಲಿ ಇದರ ಬಳಕೆ ವಿಶ್ವದ ಒಟ್ಟು ಬಳಕೆಯ ಶೇ. 16ರಷ್ಟಿತ್ತು. ಪಾಲಿಯಮೈಡು, ಪಾಲಿಯೆಸ್ಟರ್, ಅಕ್ರಲಿಕ್ ವಸ್ತ್ರಗಳೂ ಜನಪ್ರಿಯವಾಗುತ್ತಿವೆ. ನೈಲಾನ್ ಮುಂತಾದ ಹೆಸರುಗಳಲ್ಲಿ ಪಾಲಿಯಮೈಡು ಹೆಚ್ಚು ಪರಿಚಿತ. ಪಾಲಿಯೆಸ್ಟರ್ ಎಳೆಯಿರುವ ಬಟ್ಟೆಗಳಿಗೆ ಟೆರಿಲೀನ್, ಡೆಕ್ರಾನ್ ಎಂಬುವು ಬ್ರಿಟಿಷ್, ಅಮೆರಿಕನ್ ವ್ಯಾಪಾರನಾಮಗಳು. ಟೆರೀನ್ ಎಂಬುದೂ ಭಾರತದಲ್ಲಿ ಪ್ರಚಾರವಾಗುತ್ತದೆ. ಕೋರ್ಟೆಲ್, ಆರ್ಲಾನ್, ಆಕ್ರಿಲಾನ್‌ಗಳು ಅಕ್ರಲಿಕ್ ಉಡುಪುಗಳ ವ್ಯಾಪಾರನಾಮಗಳು. ನುಣುಪು, ಹೊಳಪು, ಬಾಳಿಕೆ, ಸುಕ್ಕಾಗದಿರುವಿಕೆ ಮುಂತಾದ ನಾನಾ ಗುಣಗಳುಳ್ಳ ಈ ಜವಳಿಗಳು ನಿಸರ್ಗದತ್ತ ತಂತುನಿರ್ಮಿತ ವಸನಗಳೊಂದಿಗೆ ಸ್ಪರ್ಧೆ ಹೂಡಿವೆ. ಕೃತಕ ಹಾಗೂ ನೈಸರ್ಗಿಕ ಎಳೆಗಳೆರಡೂ ಇರುವ, ಇವೆರಡರ ಗುಣಗಳನ್ನೂ ಒಳಗೊಂಡಿರುವ ವಸ್ತ್ರಗಳೂ ಉಡುಪಿಗೆ ಒದಗಿ ಬರುತ್ತಿವೆ. *

**ಉಡುಪು ತಯಾರಿಕೆ:** ಬಟ್ಟೆ ಅಥವಾ ಇತರ ಸಾಮಗ್ರಿಗಳಿಂದ ಉಡುಪಿನ ರಚನೆ, ರಚನೆಯ ವಿಧಾನ, ಕೈಗಾರಿಕೆ (ಕ್ಲೋದಿಂಗ್ ಮ್ಯಾನುಫ್ಯಾಕ್ಚರ್). ಚರ್ಮಗಳಲ್ಲಿ ರಂಧ್ರಮಾಡಿ, ಕೊಕ್ಕೆ ಮೊನೆಗಳ ಸಹಾಯದಿಂದ ಚರ್ಮದ ಮಿಣಿಗಳನ್ನು ಅವುಗಳಲ್ಲಿ ಹೊಗಿಸಿ ಉಡುಪು

ಹೊಲಿಯುವ ವಿಧಾನ ಪ್ರಾಚೀನ ಶಿಲಾಯುಗದಲ್ಲಿ ಉತ್ತರ ಯುರೋಪಿನ ಜನಕ್ಕೆ ಗೊತ್ತಿತ್ತು. ಅದೇ ಕಾಲಕ್ಕೆ ಸಂಬಂಧಿಸಿದ ಅಸ್ಥಿಸೂಜಿಗಳು ದಕ್ಷಿಣ ಯುರೋಪಿನಲ್ಲೂ ಭಾರತದಲ್ಲೂ ಸಿಕ್ಕಿವೆ. ಆದ್ದರಿಂದ ಆ ವೇಳೆಗೆ ದಾರದಿಂದ ನೇಯ್ದ ಬಟ್ಟೆ ಉಡಲು ಜನ ಉಪಕ್ರಮಿಸಿದ್ದರೆನ್ನ ಬಹುದು. ಪುರಾತನ ನಾಗರಿಕತೆಗಳ ಕಾಲದಲ್ಲಿ ನೇಯ್ಗೆ ಕಸೂತಿಗಳು ಬೆಳೆದುವಾದರೂ ಉಡುಪು ತಯಾರಿಕೆ ಉಪಕರಣಗಳು ಮಾತ್ರ ಸರಳವಾಗಿಯೇ ಇದ್ದುವು. ನೂಲ್ಕೆ, ನೇಯ್ಗೆಗಳ ಬೆಳವಣಿಗೆಗೆ ಹೋಲಿಸಿದರೆ ಹೊಲಿಗೆ ಯಂತ್ರದ ಬೆಳವಣಿಗೆ ಯಾವಾಗಲೂ ಹಿಂದೆಯೇ ಉಳಿದಿದೆ.

ಮಧ್ಯಯುಗದಲ್ಲಿ ಈ ನಿಟ್ಟಿನಲ್ಲಿ ಇನ್ನಷ್ಟು ಪ್ರಗತಿಯಾಯಿತು. ಕಬ್ಬಿಣದ ಸೂಜಿಗಳ ಬಳಕೆ ಆರಂಭವಾಯಿತು. 18ನೆಯ ಶತಮಾನದಲ್ಲಿ ನೂಲುವ ಗಿರಣಿಗಳು ಬಂದಾಗ ಜವಳಿ ಉತ್ಪಾದನೆ ಹೆಚ್ಚಿತು. ಉಡುಪಿಗೆ ಬೇಡಿಕೆಯೂ ಹೆಚ್ಚಿತು. ಅದುವರೆಗೂ ಕೈಯಿಂದಲೇ ನಡೆಯುತ್ತಿದ್ದ ಹೊಲಿಗೆ ಕೆಲಸಕ್ಕೆ ಯಂತ್ರದ ನೆರವು ಅನಿವಾರ್ಯವಾಯಿತು. ಸಂಶೋಧನೆ ಸಾಗಿತು.

ಕಾರ್ಖಾನೆಯಲ್ಲಿ ಬಟ್ಟೆ ಹೊಲಿಯುತ್ತಿರುವ ಮಹಿಳೆಯರು

ಹೊಲಿಗೆ ಯಂತ್ರ ನಿರ್ಮಿಸುವ ಪ್ರಯತ್ನ ಆರಂಭವಾದದ್ದು 18ನೆಯ ಶತಮಾನದಲ್ಲಿ. ಇದನ್ನು ಕಂಡುಹಿಡಿದು, ವಾಣಿಜ್ಯಕ್ಷೇತ್ರದಲ್ಲಿ ಮೊಟ್ಟಮೊದಲು ತೊಡಗಿಸಿದವನು ಒಬ್ಬ ಫ್ರೆಂಚ್ ಪ್ರಜೆ. ಪ್ಯಾರಿಸಿನಲ್ಲಿ ಸೈನಿಕ ಸಮವಸ್ತ್ರ ತಯಾರಿಕೆಯಲ್ಲಿ ನಿರತನಾಗಿದ್ದ ಬಾರ್ತೆಲ್‌ಮೀ ಟೀಮಾನ್ಯೆ. ಆದರೆ ಆ ವೇಳೆಗೆ ತೀವ್ರವಾಗಿದ್ದ ಸಮಸ್ಯೆ ಈ ಯಂತ್ರಗಳ ಆಗಮನದಿಂದ ಇನ್ನೂ ಉಲ್ಬಣಿಸುವುದೆಂದು ಕಳವಳಗೊಂಡ ಉದ್ರಿಕ್ತ ಜನರ ಗುಂಪು ಇವನ್ನೆಲ್ಲ ನಾಶಗೊಳಿಸಿತು. ಯಂತ್ರ ಪ್ರಯೋಗ ಅಷ್ಟಕ್ಕೇ ನಿಂತಿತು. ಮುಂದೆ ಸೂಜಿ, ಹಿಡಿಕೆಗಳಿರುವ (ಷಟ್ಲ್) ಎರಡು ಎಳೆ ದಾರಗಳ ಹೊಲಿಗೆ ಯಂತ್ರವೊಂದು ಬಂತು. ಇದನ್ನು ಕಂಡುಹಿಡಿದ ಎಲಿಯಾಸ್ ಹೌ ಅಮೆರಿಕನ್ ಪ್ರಜೆ. ಈತ ಅಮೆರಿಕದಲ್ಲಿ ಈ ಯಂತ್ರದ ಏಕಸ್ವ (ಪೇಟೆಂಟ್) ಪಡೆದ. ಆದರೆ ಇದಕ್ಕೆ ಅಲ್ಲಿ ಮಾನ್ಯತೆ ದೊರಕಲಿಲ್ಲವಾದ್ದರಿಂದ ಇಂಗ್ಲೆಂಡಿಗೆ ಹೋಗಿ ತನ್ನ ಏಕಸ್ವಾಧಿಕಾರದಲ್ಲಿ ಒಂದು ಭಾಗವನ್ನು ಅಲ್ಲಿ ಮಾರಿದ. ಮುಂದೆ ಐಸಾಕ್ ಎಂ. ಸಿಂಗರ್ 1851ರಲ್ಲಿ ಸುಧಾರಿತ ಯಂತ್ರವೊಂದರ ವಿನ್ಯಾಸ (ಡಿಸೈನ್) ರಚಿಸಿ ಅದನ್ನು ಚಾಲ್ತಿಗೆ ತಂದಾಗ ಅಮೆರಿಕನ್ ಚಿಪ್ಪಿಗರ ಪ್ರತಿಭಟನೆ ಕ್ರಮೇಣ ಅಡಗಿಹೋಯಿತು. **(ನೋಡಿ-ಸಿಂಗರ್, ಐಸಾಕ್ ಎಂ; ಹೊಲಿಗೆ ಯಂತ್ರ)**

ಹೊಲಿಗೆ ಯಂತ್ರ ಬಂದ ಮೇಲೆ ದೀರ್ಘಕಾಲ ಈ ಕ್ಷೇತ್ರದಲ್ಲಿ ಹೆಚ್ಚು ಮುನ್ನಡೆಯೇನೂ ಆಗಲಿಲ್ಲ. ಬಟ್ಟೆ ಕತ್ತರಿಸುವ ಯಂತ್ರವಿಲ್ಲದ್ದರಿಂದ ಹೊಲಿಯುವವನ ಕೆಲಸ ನಿಧಾನವಾಗಿತ್ತು. 1860ರಲ್ಲಿ ಪಟ್ಟಿ ಅಲಗಿನ (ಬ್ಯಾಂಡ್ ನೈಫ್) ಯಂತ್ರ ಬಂತು. ಹಲವು ಮಡಿಕೆ ಬಟ್ಟೆಯನ್ನು ಒಮ್ಮೆಗೇ ಕತ್ತರಿಸುವ ಈ ಯಂತ್ರವನ್ನು ಇಂಗ್ಲೆಂಡಿನ ಲೀಡ್ಸ್ ನಗರದ ಜಾನ್ ಬಾರಾನ್ ಕಂಡುಹಿಡಿದ. ಈ ಯಂತ್ರಕ್ಕೆ ಅಮೆರಿಕದಲ್ಲಿ ನಾನಾ ಬಗೆಯ ಪರಿಷ್ಕಾರಗಳಾದವು. ಕಾಜ ಮಾಡುವುದಕ್ಕೂ ಗುಂಡಿ ಹೊಲಿಯುವುದಕ್ಕೂ ಇಸ್ತ್ರಿ ಮಾಡುವುದಕ್ಕೂ ಯಂತ್ರಗಳು ಬಂದಾಗ ಉಡುಪು ತಯಾರಿಕೆಯಲ್ಲಿ ಕ್ರಾಂತಿ ಸಂಭವಿಸಿತೆನ್ನಬಹುದು. ಮೊದಮೊದಲು ಬಂದ ಸಿದ್ಧ ಉಡುಪುಗಳು ಅಷ್ಟೇನೂ ಅಚ್ಚುಕಟ್ಟಾಗಿರಲಿಲ್ಲ. ಆದರೆ ತಮ್ಮ ಬಟ್ಟೆ ತಾವೇ ಹೊಲಿದುಕೊಳ್ಳಬೇಕಾಗಿದ್ದ ಬಡ ಜನ ಇವನ್ನು ಸ್ವಾಗತಿಸಿದರು. ಕ್ರಮೇಣ ಇವುಗಳ ಗುಣಮಟ್ಟ ಹೆಚ್ಚಿದಂತೆ ಹೆಚ್ಚು ಅನುಕೂಲಸ್ಥರೂ ಇದನ್ನು ಕೊಂಡು ಧರಿಸುವ ಅಭ್ಯಾಸ ಬೆಳೆಯಿತು. ಮಧ್ಯಯುಗದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಕೈ ಹೊಲಿಗೆ ಕೈಗಾರಿಕೆಯಿತ್ತಾದರೂ ಮುಖ್ಯವಾಗಿ ಶ್ರೀಮಂತ ಪುರುಷಗ್ರಾಹಕರ ಬೇಡಿಕೆಯ ಪೂರೈಕೆಯೇ ಇದರ ಉದ್ದೇಶ. ಶ್ರೀಮಂತ ಮಹಿಳೆಯರು ತಮ್ಮ ಉಡುಪು ತಯಾರಿಕೆಗಾಗಿ ಸ್ತ್ರೀ ದರ್ಜಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದುದುಂಟು. 17ನೆಯ ಶತಮಾನದ ನಡುಗಾಲದವರೆಗೂ ದರ್ಜಿಗಳಿಗೆ ಬಟ್ಟೆ ಕತ್ತರಿಸುವ ಹಾಗೂ ಹೊಲಿಯುವ ವಿದ್ಯೆಗಳೆರಡೂ ಬರುತ್ತಿದ್ದುವು. ಮುಂದೆ ಈ ಹೊಲಿಗೆ ಕಸುಬಿನ ಯಜಮಾನರು ತಮ್ಮ ಕೈಕೆಳಗಿನ ಅಭ್ಯಾಸಿಗಳಿಗೂ ಕಾರ್ಮಿಕರಿಗೂ ಹೊಲಿಯುವ ಕೆಲಸ ಮಾತ್ರ ಕೊಡತೊಡಗಿದರು. ಇದರಿಂದ ಮುಂದೆ ಹೊಲಿಯುವ ವಿದ್ಯೆಯನ್ನು ಮಾತ್ರ ಬಲ್ಲ ಕಾರ್ಮಿಕರ ಸಂಖ್ಯೆ ಬೆಳೆಯಿತು. ಇವರ ಹಿತರಕ್ಷಣೆಗಾಗಿ ನಾನಾ ಕಾಯಿದೆಗಳು ಬಂದವು. ಯಂತ್ರಗಳ ಆಗಮನದಿಂದ ಸಿದ್ಧಪಡಿಸಿದ ಉಡುಪು ಕೈಗಾರಿಕೆ ಹಾಗೂ ವ್ಯಾಪಾರ ಈಚೆಗೆ ಅಭಿವೃದ್ಧಿ ಹೊಂದುತ್ತಿವೆ.

ಭಾರತದಲ್ಲಿ ಉಡುಪು ತಯಾರಿಕೆ: ಭಾರತದಲ್ಲಿ ಉಡುಪು ತಯಾರಿಕೆ ಈಚೆಗೆ ಶೀಘ್ರವಾಗಿ ಬೆಳೆಯುತ್ತಿದೆ. ದೇಶದ ನಾನಾ ಗಿರಣಿಗಳಲ್ಲಿ ತಯಾರಾಗುವ ವಿಧ ವಿಧ ಬಟ್ಟೆಗಳಲ್ಲಿ ಹೆಚ್ಚು ಭಾಗ ಉಡುಪಿಗಾಗಿ ಮೀಸಲು. ಉಡುಪು ತಯಾರಕರು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಉಡುಪಿನಲ್ಲಿ ತೀವ್ರವಾಗಿ ಸಂಭವಿಸುತ್ತಿರುವ ಮಾರ್ಪಾಟು. ಪಾಶ್ಚಾತ್ಯ ದೇಶಗಳಲ್ಲಿ ಈ ಮಾರ್ಪಾಟಿನ ವೇಗ ಹೆಚ್ಚು. ಭಾರತದಲ್ಲೂ ಈಚೆಗೆ ಈ ಪ್ರವೃತ್ತಿ ಬೆಳೆಯುತ್ತಿದೆ. ಅಲ್ಲದೆ ಈಗಿನ ದಿನಗಳಲ್ಲಿ ಷರಟು, ಬುಷ್ ಷರಟು, ಷರಾಯಿಗಳಲ್ಲಿ ಬಗೆಬಗೆಯ ನಮೂನೆಗಳು ಬಂದು ಹೋಗುತ್ತಿವೆ. ಹೆಂಗಸರ ರವಿಕೆಗಳಲ್ಲಿ ನಮೂನೆಗಳು ಅಧಿಕ. ಆದ್ದರಿಂದ ಅವನ್ನು ಅಧಿಕ ಸಂಖ್ಯೆಯಲ್ಲಿ ಒಟ್ಟೊಟ್ಟಿಗೆ ತಯಾರಿಸುವ ಪದ್ಧತಿ ಬೆಳೆದಿಲ್ಲ. ಆದರೆ ಮಕ್ಕಳ ಉಡುಪುಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸುವ ಅವಕಾಶವಿದೆ. ಈ ಎಲ್ಲ ಅಂಶಗಳ ಜೊತೆಗೆ ಉಡುಪು ತಯಾರಕರು ಮುಖ್ಯವಾಗಿ ಗಮನಿಸಬೇಕಾದ್ದೆಂದರೆ ಬೇರೆ ಬೇರೆ ದೇಶಗಳಲ್ಲಿನ ಮತ್ತು ಒಂದೇ ದೇಶದ ಬೇರೆ ಬೇರೆ ಭಾಗಗಳಲ್ಲಿನ ಜನ ಬೇರೆ ಬೇರೆ ಬಗೆಯ ಉಡುಪು ಧರಿಸುತ್ತಾರೆಂಬ ಅಂಶ. ಈ ಭಿನ್ನತೆಗಳನ್ನೂ ಬದಲಾವಣೆಗಳನ್ನೂ ಉಡುಪು ತಯಾರಕರು ಸದಾ ಗಮನಿಸುತ್ತಿರಬೇಕಾದ್ದು ಅನಿವಾರ್ಯ. ಉಡುಪು ತಯಾರಿಕೆ ಕಾರ್ಖಾನೆಗಳಲ್ಲಿ ಷರಟು, ಬುಷ್ ಷರಟು, ನಿಕ್ಕರ್, ಷರಾಯಿ, ಪಾಯ್ಜಾಮ, ಕೋಟು, ನಾನಾ ಬಗೆಯ ಲಂಗ ಮತ್ತು ಮಕ್ಕಳ ಉಡುಪುಗಳು ತಯಾರಾಗುತ್ತವೆ.

ಉಡುಪು ತಯಾರಿಕೆಯಲ್ಲಿ ಸಾಧಾರಣವಾಗಿ ಮೂರು ಮುಖ್ಯ ಘಟ್ಟಗಳುಂಟು: 1. ಬಟ್ಟೆಯ ಕತ್ತರಿಸುವಿಕೆ, 2. ಹೊಲಿಗೆ, 3. ಸಂಸ್ಕರಣ. ಗೊತ್ತಾದ ಅಳತೆಗನುಗುಣವಾಗಿ ಬಟ್ಟೆ ಪೋಲಾಗದಂತೆ ಅದರ ಮೇಲೆ ಗುರುತು ಮಾಡುವುದು ಮೊದಲನೆಯ ಕೆಲಸ. ಕಾರ್ಖಾನೆಗಳಲ್ಲಿ ದೊಡ್ಡ ಉಡುಪುಗಳಿಗಾಗಿ ಕತ್ತರಿಸಿ ಉಳಿದ ದೊಡ್ಡ ಚೂರುಗಳನ್ನು ಚಿಕ್ಕ ಉಡುಪುಗಳ ಭಾಗಗಳಿಗೆ ಉಪಯೋಗಿಸುತ್ತಾರೆ. ಚಿಕ್ಕ ಬಟ್ಟೆಗಳಿಂದ ಉಳಿದ ಅತಿ ಚಿಕ್ಕ ಚೂರುಗಳಿಂದಲೂ ಜಮಖಾನೆ ಮುಂತಾದವನ್ನು ತಯಾರಿಸುವುದರಿಂದ ಬಟ್ಟೆ ವ್ಯರ್ಥವಾಗುವುದಿಲ್ಲ. 500-700 ಪದರಗಳಷ್ಟು ಬಟ್ಟೆಯನ್ನು ಒಂದರ ಮೇಲೊಂದರಂತೆ ಪೇರಿ, ತೀರ ಮೇಲ್ಗಡೆ ಇರುವ ಪದರದ ಮೇಲೆ ಸೂಕ್ತವಾದ ರೀತಿ ಗೆರೆ ಎಳೆದು ಗುರುತಿಸಿದ ಮೇಲೆ ಈಸ್ಟ್‌ಮನ್ ಕತ್ತರಿಸುವ ಯಂತ್ರದಿಂದ ಎಲ್ಲ ಪದರಗಳನ್ನೂ ಒಂದೇ ಬಾರಿಗೆ ಕತ್ತರಿಸಲಾಗುತ್ತದೆ. ಈ ಯಂತ್ರದಲ್ಲಿನ ಅಲಗು ಬಲು ವೇಗವಾಗಿ ಮೇಲೆ-ಕೆಳಗೆ ಚಲಿಸುವುದರಿಂದ ಸಡಿಲವಾದ ಕೆಲವು ದಾರದ ಎಳೆಗಳು ಬಟ್ಟೆಯಿಂದ ಬಿಟ್ಟುಕೊಳ್ಳುತ್ತವೆ. ಕೆಲವು ಯಂತ್ರಗಳಲ್ಲಿ ಸತತವಾಗಿ ಕೊಯ್ಯುವ ಚಕ್ರಾಕಾರದ ಗುಂಡನೆಯ ಅಲಗುಗಳಿವೆ. ಇವು ಬಟ್ಟೆಯ ಪದರಗಳನ್ನು ಏಕಪ್ರಕಾರವಾಗಿ ಕತ್ತರಿಸುತ್ತವೆ. ಆದರೆ ಹೆಚ್ಚು ತಿರುವುಗಳಿರುವ ಗುರುತುಗಳಿದ್ದರೆ ಈ ಬಗೆಯ ಯಂತ್ರ ಸರಿಯಾಗಿ ಕತ್ತರಿಸಲಾರದು. ಈ ಎರಡು ಬಗೆಯ ಕತ್ತರಿಸುವಿಕೆಯಲ್ಲೂ ಯಂತ್ರವನ್ನೇ ಬೇಕಾದ ರೀತಿ ಚಲಿಸುವಂತೆಮಾಡಬೇಕು. ಹೆಚ್ಚು ಅಂಕುಡೊಂಕು ಗುರುತುಗಳಿಗನುಸಾರವಾಗಿ ಬಟ್ಟೆ ಕತ್ತರಿಸುವುದಕ್ಕೆ ವಿಶಿಷ್ಟವಾದ ಯಂತ್ರವುಂಟು. ಇಲ್ಲಿ ಬಟ್ಟೆಯನ್ನೇ ತಿರುಗಿಸಬೇಕು.

ಈ ರೀತಿ ಅಂಗಿಯ ವಿವಿಧ ಅಂಗಗಳಾದ ಬೆನ್ನು, ಮುಂಭಾಗ, ತೋಳು, ಜೇಬುಗಳನ್ನು ಕತ್ತರಿಸಿಯಾದ ಮೇಲೆ, ಇವುಗಳನ್ನೆಲ್ಲ ಬೇರೆ ಬೇರೆ ಕಟ್ಟುಗಳಾಗಿ ಕಟ್ಟಿ ಹೊಲಿಯುವ ಇಲಾಖೆಗೆ ರವಾನಿಸಲಾಗುತ್ತದೆ.

ಈ ಇಲಾಖೆಯಲ್ಲಿ ಆವಶ್ಯಕತೆಗೆ ತಕ್ಕಂತೆ ಬೇರೆ ಬೇರೆ ಬಗೆಯ ಹೊಲಿಗೆ ಯಂತ್ರಗಳಿವೆ. ಉದಾ: ಸಾದಾ ಹೊಲಿಗೆ, ಸರಪಳಿ ಹೊಲಿಗೆ, ಕಸೂತಿ ಹೊಲಿಗೆ, ಟಬ್ಬಿ (ಹೆಮಿಂಗ್) ಇತ್ಯಾದಿ.

ಸಾದಾ ಹೊಲಿಗೆ ಯಂತ್ರ ಅತಿ ವೇಗವಾಗಿ ಕೆಲಸ ಮಾಡುತ್ತದೆ. ಅದು ಮಿನಿಟಿಗೆ ಸು. 6000-7000 ಹೊಲಿಗೆ ಹಾಕಬಲ್ಲದು. ಬಟ್ಟೆಯ ಹೆಚ್ಚುಭಾಗ ಹೊಲಿಯಲು ಉಪಯೋಗಕ್ಕೆ ಬರುವ ಯಂತ್ರ ಇದೇ. ಕೆಲವು ಯಂತ್ರಗಳಲ್ಲಿ ಮಡಿಸುವ ಸಾಧನವೂ ಎರಡು ಸೂಜಿಗಳೂ ಇರುವುದರಿಂದ, ಸೇರಿಸಬೇಕಾದ ಎರಡು ಭಾಗಗಳಲ್ಲಿ ಯಂತ್ರವೇ ಮಡಿಸಿ, ಒಂದೇ ಕಾಲಕ್ಕೆ ಸಮಾನಾಂತರವಾಗಿ ಪಕ್ಕಪಕ್ಕದಲ್ಲಿ ಎರಡು ಹೊಲಿಗೆ ಹಾಕುತ್ತದೆ.

ಷರಾಯಿಯಂಥ ಕೊಳವೆ ಉಡುಪು ಹೊಲಿಯಲು ಸರಪಳಿ ಹೊಲಿಗೆ ಯಂತ್ರ ಉಪಯೋಗಕ್ಕೆ ಬರುತ್ತದೆ. ಇದರಲ್ಲಿ ಎರಡು ಸೂಜಿಗಳಿವೆ; ಉರುಳೆ (ಬಾಬಿನ್) ಇಲ್ಲ. ಅದರ ಬದಲು ಏಕಪ್ರಕಾರವಾಗಿ ನಾಲ್ಕು ದಾರ ತುಂಬುತ್ತಿರುತ್ತದೆ. ಇದರಿಂದ ಎಂಥ ದಪ್ಪ ಬಟ್ಟೆಯನ್ನಾದರೂ ಹೊಲಿಯಬಹುದು.

ರಚಿಸುವವರು ಹೊಲಿಗೆಗಳಿಗೆ ಕಸೂತಿ ಯಂತ್ರಗಳಿವೆ. ಮಣಿ ಹೊಲಿಗೆ (ಬೀಡಿಂಗ್), ವಂಕಿ ಹೊಲಿಗೆ (ಜಿಗ್‌ಜ್ಯಾಗ್), ಮಳಿಚಿಪ್ಪಿನ ಕರೆ ಹೊಲಿಗೆ (ಸ್ಕ್ಯಾಲಪಿಂಗ್). ಕೂಡಿಕೆ (ಗ್ಯಾದರಿಂಗ್) ಇವೆಲ್ಲಕ್ಕೂ ಪ್ರತ್ಯೇಕ ಯಂತ್ರಗಳುಂಟು. ಮಕ್ಕಳ ಉಡುಪು ತಯಾರಿಕೆಯಲ್ಲಿ ಇವು ಹೆಚ್ಚು ಉಪಯುಕ್ತ.

ಷರಟು ಹೊಲಿಯುವಾಗ ಮುಖ್ಯವಾಗಿ ಅದರ ಕತ್ತುಪಟ್ಟಿ (ಕಾಲರ್) ಮತ್ತು ಮಣಿಕಟ್ಟುಗಳಿಗೆ (ಕಫ್) ಹೆಚ್ಚು ಗಮನ ಕೊಡಲಾಗುತ್ತದೆ. ಏಕೆಂದರೆ ಷರಟಿನ ಅಂದಕ್ಕೆ ಇವು ಮುಖ್ಯ ಕಾರಣ. ಇದಕ್ಕಾಗಿಯೇ ಪ್ರತ್ಯೇಕ ಯಂತ್ರಗಳಿವೆ. ಪಟ್ಟಿ ಹೊಲಿಯುವಾಗಲೇ ಹೆಚ್ಚು ಬಟ್ಟೆ ಕತ್ತರಿಸಿ ಹಾಕಿ, ಅನಂತರ ಪಟ್ಟಿಯನ್ನು ತಿರುಗಿಸಿ ಹೊಲಿದು ಒತ್ತುವ ಯಂತ್ರದಿಂದ ಪರಿಷ್ಕರಿಸಲಾಗುತ್ತದೆ.

ಬಟ್ಟೆಯ ಮೇಲೆ ಕಸೂತಿ ಹಾಕುತ್ತಿರುವ ಮಹಿಳೆ

ಉಡುಪಿನ ದೇಹಭಾಗ ಹೊಲಿಯಲು ಮುಂಡಾ ಯಂತ್ರವೂ ಭುಜ ಭಾಗದ ಹೊಲಿಗೆಗೆ ಸ್ಕಂಧ (ಷೋಲ್ಡರ್) ಯಂತ್ರವೂ ಸಹಾಯಕ. ಷರಾಯಿಯನ್ನು ಟಿಬ್ಬಿ (ಹೆಮಿಂಗ್) ಯಂತ್ರದಿಂದ ಹೊಲಿದು ಕೊನೆಗೆ ಎಳೆಗಳು ಜಾರದಂತೆ ಬಟ್ಟೆಯ ಪಕ್ಕಗಳನ್ನು ಮೇಲ್ಸೇರಿಕೆ (ಓವರ್ ಲಾಕಿಂಗ್) ಯಂತ್ರದಿಂದ ಹೊಲಿಯುತ್ತಾರೆ.

ಈ ರೀತಿ ಸಿದ್ಧಪಡಿಸಿದ ಉಡುಪುಗಳನ್ನು ಮುಂದೆ ಕಾಜ–ಗುಂಡಿ ಇಲಾಖೆಗೆ ಕಳುಹಿಸಲಾಗುತ್ತದೆ. ಕೈಯಿಂದ ಗುಂಡಿ ಇಟ್ಟಾಗ ಅದನ್ನು ಹೊಲಿಯುವ ಯಂತ್ರ $7^1/_2$ ಗಂಟೆಗಳ ಒಂದು ದಿನಕ್ಕೆ ಸು. 5,000 ಗುಂಡಿ ಹೊಲಿಯಬಲ್ಲದು. ಸ್ವಯಂಚಾಲಿತ ಯಂತ್ರವಾದರೆ ಅದೇ ಕಾಲದಲ್ಲಿ 12,000 ಗುಂಡಿ ಹಾಕುತ್ತದೆ. ಈ ಕಾಲದಲ್ಲಿ ಕಾಜ ಯಂತ್ರ 4,000 ಕಾಜ ತಯಾರಿಸುತ್ತದೆ.

ಒಪ್ಪ ಮಾಡುವ (ಟ್ರಿಮಿಂಗ್) ಇಲಾಖೆಯಲ್ಲಿ ಉಡುಪಿನ ಮುಂದಿನ ಅವಸ್ಥೆ. ಉಡುಪಿನ ಹೊಲಿಗೆಗಳಿಂದ ಹೊರಬಂದಿರುವ ದಾರದ ಎಳೆಗಳನ್ನು ಕತ್ತರಿಸಿ ಹಾಕಿ ದೂಳು, ಎಣ್ಣೆಯ ಕರೆ ಮುಂತಾದುವುವನ್ನು ತೆಗೆದು ಹಾಕುವುದು ಈ ಘಟ್ಟದಲ್ಲಿನ ಕೆಲಸ.

ಹೀಗೆ ತಯಾರಾಗಿ ಬಂದ ಉಡುಪನ್ನು ಮಡಿಸಿ ಇಸ್ತ್ರಿ ಮಾಡುವುದಕ್ಕೂ ಒಂದು ಪತ್ರ್ಯೇಕ ಇಲಾಖೆಯೇ ಉಂಟು. ಭಾರತದಲ್ಲಿ ಕೈಯಿಂದ ಇಸ್ತ್ರಿ ಮಾಡುವುದೇ ಹೆಚ್ಚು ವಾಡಿಕೆ. ವೇಗವಾಗಿ ಇಸ್ತ್ರಿ ಮಾಡಬಲ್ಲ ಸ್ವಯಂಚಾಲಿತ ಇಸ್ತ್ರಿ ಪೆಟ್ಟಿಗೆ ಬಳಸುವುದರಿಂದ ಶ್ರಮವೆಷ್ಟೋ ನಿವಾರಣೆಯಾಗುವುದು ಸಾಧ್ಯ.

ಷರಟಿಗೆ ಕತ್ತುಪಟ್ಟಿ, ತಗಲುಪಟ್ಟಿಗಳನ್ನು (ಟ್ಯಾಗ್) ಷರಾಯಿಗಳಿಗೆ ಸೊಂಟಪಟ್ಟಿಯನ್ನೂ ಹಿಡಿಕೆ (ಕ್ಲಿಪ್), ಗುಂಡಿಪಟ್ಟಿ ಮುಂತಾದವುಗಳನ್ನೂ ಲಗತ್ತಿಸಿದ ಮೇಲೆ ಈ ಉಡುಪುಗಳು ಗ್ರಾಹಕನ ಬಳಿಗೆ ಪ್ರಯಾಣ ಹೊರಡಲು ಸುಸಜ್ಜಿತವಾದುವೆಂದು ಅರ್ಥ. ಇವನ್ನು ಪಾಲಿಥೀನ್ ಚೀಲಗಳಲ್ಲಿ ಇಟ್ಟು, ಪೆಟ್ಟಿಗೆಗಳಲ್ಲಿ ತುಂಬಿ ಮಾರಾಟಗಾರರಿಗೆ ರವಾನಿಸಲು ಸಿದ್ಧವಾದಾಗ ಅವು ಹೊಲಿದು ಸಿದ್ಧಪಡಿಸಿದ ಉಡುಪುಗಳೆಂದು ಹೇಳಿಸಿಕೊಳ್ಳಲು ಅರ್ಹ. (ಕೆ.ಬಿ.ಪಿ.)

**ಉಡ್ಡಯನ (ಕೃತಕ):** ಗಾಳಿಯ ಮೂಲಕ ಸಾಗಿಸುವ ಕ್ರಿಯೆ (ಫ್ಲೈಟ್ ಆರ್ಟಿಫಿಷಲ್), ಪ್ರಕ್ಷೇಪಣ (ಪ್ರೊಜೆಕ್ಷನ್), ಉಡಾವಣೆ ಪರ್ಯಾಯ ಪದಗಳು. ಕಲ್ಲನ್ನು ಬೀರುವುದು, ಬಾಣವನ್ನು ಎಸೆಯುವುದು. ಕೃತಕ ಉಪಗ್ರಹವನ್ನು ಉಡಾಯಿಸುವುದು ಎಲ್ಲವೂ ಕೃತಕ ಉಡ್ಡಯನಗಳೇ. ಕೀಟ ನೆಗೆಯುವುದು, ಮೀನು ಚಿಮ್ಮುವುದು, ಹಕ್ಕಿ ಹಾರುವುದು ಸ್ವಾಭಾವಿಕ ಉಡ್ಡಯನಗಳು. ನೈಸರ್ಗಿಕ ಬಲಗಳನ್ನು ಅನುಸರಿಸಿ ಗಾಳಿಯಲ್ಲಿ ವಸ್ತುವಿನ ಚಲನೆಯ ಏರ್ಪಾಡು–ಇದು ಕೃತಕ ಉಡ್ಡಯನದ ಮೂಲ ಸೂತ್ರ. ಭೂಮಿಯ ಗುರುತ್ವಾಕರ್ಷಣ ಬಲ, ವಸ್ತುವಿನ ತೂಕ, ವಾಯುಮಂಡಲದಲ್ಲಿ ಎದುರಾಗುವ ಘರ್ಷಣೆ–ಇವು ಮುಖ್ಯವಾದ ನೈಸರ್ಗಿಕ ಬಲಗಳು. ಉದಾಹರಣೆಗೆ m ದ್ರವ್ಯರಾಶಿ (ಮಾಸ್) ಇರುವ ಒಂದು ಕಣವನ್ನು ವಾಯುಮಂಡಲದಲ್ಲಿ ಪ್ರಕ್ಷೇಪಿಸಿದ್ದೇವೆಂದೂ ಕಣದ ಮೇಲೆ ಪ್ರಯುಕ್ತವಾಗುವ ವಾಯು ಮಂಡಲದ ವಿರುದ್ಧ ಬಲಗಳ ಮೊತ್ತ R ಎಂದೂ ಇದು ಕಣದ ವೇಗದ ದಿಕ್ಕಿನ ವಿರುದ್ಧವಾಗಿ ವರ್ತಿಸುತ್ತಿದೆಯೆಂದೂ ಭಾವಿಸೋಣ. ಸೂಕ್ತ ಲಂಬನಿರ್ದೇಶಕ ವ್ಯವಸ್ಥೆಯಲ್ಲಿ ಕಣದ ಪಥವನ್ನು ನಿರ್ಧರಿಸುವ ಸಮೀಕರಣಗಳು ಹೀಗಿವೆ:

$$m\ddot{x} = -R\cos\theta$$

$$m\ddot{y} = -R\sin\theta - mg$$

$$mv\frac{d\dot{v}}{ds} = -R - mg\sin\theta$$

$$m\frac{v^2}{\rho} = mg\cos\theta$$





ಇಲ್ಲಿ (x,y) ಕಣದ ಕಾರ್ಟೀಸಿಯನ್ ನಿರ್ದೇಶಕಗಳು; v ಅದರ ವೇಗ ; ds ಕಂಸದ ತುಣುಕು $\rho$ ವಕ್ರತೆಯ ತ್ರಿಜ್ಯ (ರೇಡಿಯಸ್ ಆಫ್ ಕರ್ವೆಚರ್) $\theta$ ಪಥಕ್ಕೆ (ಕಣವಿರುವಲ್ಲಿ) ಎಳೆದ ಸ್ಪರ್ಶಕದ ಬಾಗು (ಇನ್‌ಕ್ಲಿನೇಷನ್). ವಿರುದ್ಧ ಬಲ Rನ್ನು y ಮತ್ತು v ಗಳಲ್ಲಿ (ಲಂಬೋನ್ನತಿ ಮತ್ತು ವೇಗ) ಒಂದು ಉತ್ಪನ್ನವೆಂದು ಭಾವಿಸಿ R=R(x,y) ಎಂದು ಬರೆಯಬಹುದು.

$$\cos\theta = \frac{\dot{x}}{v}, \quad \sin\theta = \frac{\dot{y}}{v}$$

ಆಗಿರುವುದರಿಂದ

$$\ddot{x} = -\phi\,\dot{x}, \quad \ddot{y} = -\phi\,\dot{y} - g$$

ಇಲ್ಲಿ $\phi(x,y) = \frac{R(x,y)}{mv}$ ಸಂಬಂಧ $\phi$ ಯನ್ನು ನಿರ್ಧರಿಸುತ್ತದೆ. ಈ ಸಮೀಕರಣಗಳ ನೆರವಿನಿಂದ ಕಣದ ವಿವಿಧ ಅವಸ್ಥೆಗಳನ್ನು ಅರಿಯಬಹುದು.

R=0 ಎಂದು ಭಾವಿಸಿದರೆ, ಎಂದರೆ ವಾಯುಮಂಡಲ ವಿರುದ್ಧಬಲವನ್ನು ಪ್ರಯುಕ್ತಿಸುವು ದಿಲ್ಲವೆಂದು ತಿಳಿದರೆ, ಆಗ ಮೊದಲಿನ ಸಮೀಕರಣಗಳು

$$m\ddot{x} = 0$$

$$m\ddot{y} = -mg$$

$$mv\frac{dv}{ds} = -mg\sin\theta$$

$$m\frac{v^2}{\rho} = mg\cos\theta$$

ಎಂದಾಗುವುವು. ಇವುಗಳಲ್ಲಿ ಮೊದಲಿನ ಎರಡನ್ನು ಬಿಡಿಸಿದರೆ

$$\dot{x} = u\cos\alpha$$

$$\dot{y} = u\sin\alpha - gt$$

$$x = u\cos\alpha\, t$$

$$y = u\sin\alpha\, t - \tfrac{1}{2}gt^2$$

ಇಲ್ಲಿ ನಿರ್ದೇಶಕಾಕ್ಷಗಳ ಮೂಲಬಿಂದುವನ್ನು ಉಡ್ಡಯನ ಬಿಂದುವಾಗಿಯೂ ಉಡ್ಡಯನವೇಗ (ಎಂದರೆ ಮೂಲವೇಗ) u ಎಂದೂ ಉಡ್ಡಯನ ಕೋನ $\alpha$ ಎಂದೂ ಭಾವಿಸಲಾಗಿದೆ. ಈ ಕೊನೆಯ ಎರಡು ಸಮೀಕರಣಗಳಿಂದ t ಯನ್ನು ವಿಸರ್ಜಿಸಿದರೆ

$$y = x\tan\alpha - \frac{gx^2}{2u^2\cos^2\alpha}$$

ದೊರೆಯುವುದು. ಇದು ಕಣಪಥದ ಕಾರ್ಟೀಸಿಯನ್ ಸಮೀಕರಣ. ಈ ವಕ್ರ ರೇಖೆಯ ಹೆಸರು ಪ್ಯಾರಬೋಲ. ಇದು u ಮತ್ತು $\alpha$ ಎಂದರೆ ಉಡ್ಡಯನ ವೇಗ ಮತ್ತು ಉಡ್ಡಯನ ಕೋನಗಳನ್ನು ಮಾತ್ರ ಅವಲಂಬಿಸಿದೆ. ಆದ್ದರಿಂದ ತಾತ್ತ್ವಿಕವಾಗಿ (ನಾವು

ವಿಧಿಸಿಕೊಂಡಿರುವ ನಿರ್ಬಂಧಗಳ ಮಿತಿಯಲ್ಲಿ) u ಮತ್ತು $\alpha$ ಗಳ ಯುಕ್ತ ಹೊಂದಾಣಿಕೆಯಿಂದ ಒಂದು ಕಣವನ್ನು ಯಾವುದೇ ಸ್ಥಳದಿಂದ ಯಾವುದೇ ಗುರಿಗೆ ಉಡಾಯಿಸುವುದು ಸಾಧ್ಯ. ಸಾಂಪ್ರದಾಯಿಕ ಯುದ್ಧ ಕ್ರಮದಲ್ಲಿ ಬಳಕೆಯಲ್ಲಿರುವ ಮಾರ್ಟರ್




ಅಗ್ನಿಶಸ್ತ್ರದ, ಈಚೆಗೆ ಪರಿಷ್ಕರಣಗೊಳ್ಳುತ್ತಿರುವ ಖಂಡಾಂತರ ಕ್ಷಿಪಣಿಯ (ಇಂಟರ್ ಕಾಂಟಿನೆಂಟಲ್ ಬ್ಯಾಲಿಸ್ಟಿಕ್ ಮಿಸ್ಸೈಲ್–ಐಸಿಬಿಎಂ) ಉಡ್ಡಯನಗಳ ಹಿನ್ನೆಲೆಯಲ್ಲಿರುವ ತತ್ತ್ವ ಇದೇ. *

**ಉಡ್ಡಯನ (ಪ್ರಾಣಿಗಳಲ್ಲಿ):** ಗಾಳಿಯಲ್ಲಿ ಹಾರುವುದು. ಹಾರುವ ಪ್ರಾಣಿಗಳ ಜೀವನಕ್ರಮವನ್ನು ಗಮನಿಸಿದರೆ ಎರಡು ರೀತಿಯನ್ನು ನೋಡಬಹುದು.

**1. ಗಾಳಿಯಲ್ಲಿ ತೇಲಿ ಜಾರುವ ಪ್ರಾಣಿಗಳು:** ಇವು ಪಕ್ಷಿಗಳಂತೆ ನಿರಂತರವಾಗಿ ಚಲಿಸಲಾರವು. ಎತ್ತರ ಪ್ರದೇಶದಿಂದ ತಗ್ಗು ಪ್ರದೇಶಕ್ಕೆ ಚಲಿಸುವಾಗ ಗಾಳಿಯಲ್ಲಿ ಧುಮುಕಿ, ತೇಲಿ, ತಮ್ಮ ದೇಹದ ಮಾರ್ಪಾಡುಗಳ ಸಹಾಯದಿಂದ ಜಾರಿಕೊಂಡು, ಯಾವ ಅಪಾಯವೂ ಇಲ್ಲದೆ ಗುರಿ ತಲುಪುತ್ತವೆ. ಈ ಚಲನೆ ಪ್ಯಾರಾಶೂಟ್ ಸಹಾಯದಿಂದ ಧುಮುಕುವವರ ಇಳಿತದಂತಿದೆ. ಇಂಥವನ್ನು ಒಂದು ವಿಧದಲ್ಲಿ ಹಾರುವ ಪ್ರಾಣಿಗಳು ಎನ್ನಬಹುದು. ಉದಾಹರಣೆಗೆ ಹಾರುಮೀನು, ಹಾರುಗಪ್ಪೆ, ಹಾರುಹಲ್ಲಿ, ಹಾರುಬೆಕ್ಕು, ಹಾರುಅಳಿಲು ಇತ್ಯಾದಿ. ಇವುಗಳ ದೇಹಗಳು ಹಾರುವುದಕ್ಕೆ ಪೂರಕವಾಗಿ ರಚಿತವಾಗಿವೆ.

**ಹಾರುಮೀನುಗಳು:** ಇವು ಎಕ್ಸೋಸಿಟಿಸ್ ಜಾತಿಗೆ ಸೇರಿದವು. ಇವುಗಳಲ್ಲಿ ಭುಜದ ಈಜುರೆಕ್ಕೆಗಳು ಅಗಲವಾಗಿ ಬೆಳೆದಿವೆ; ಹರಡಿದಾಗ ಸುಮಾರು 14'' ಅಗಲವಿರುತ್ತವೆ. ನೀರಿನ ಮೇಲಂಚಿನಲ್ಲಿ ವೇಗದಿಂದ ಈಜಿ ಕೊಂಡು ಬಂದು ಬಾಲದ ಸಹಾಯ ದಿಂದ ನೀರನ್ನು ತಳ್ಳಿ ಗಾಳಿಗೆ ಜಿಗಿಯು ತ್ತವೆ. ಉಯ್ಯಾಲೆ ಆಡುವವರು ಕಾಲಿ ನಿಂದ ನೆಲವನ್ನು ಮೀಟಿ ತೂಗಿಕೊಳ್ಳಲು ವೇಗವನ್ನು ಪಡೆಯುವಂತೆ ಇವು ಬಾಲದ ನೆರವಿನಿಂದ ಜಿಗಿಯುತ್ತವೆ.



ಹಾರುಮೀನು

ಗಾಳಿಗೆ ಜಿಗಿದ ಅನಂತರ ತಮ್ಮ ಭುಜದ ಈಜುರೆಕ್ಕೆಗಳನ್ನು ಹರಡಿಕೊಂಡು ಗಾಳಿಯಲ್ಲಿ ಜಾರಿಕೊಂಡು ಪುನಃ ನೀರಿಗೆ ಇಳಿಯುತ್ತವೆ. ಪುನಃ ಬಾಲದ ಸಹಾಯದಿಂದ ಗಾಳಿಗೆ ಜಿಗಿಯಬಹುದು. ಹೀಗೆ ಇವು ನೂರಾರು ಗಜಗಳ ದೂರ ಗಾಳಿಯಲ್ಲಿ ಚಲಿಸಬಲ್ಲವು.

**ಹಾರುಗಪ್ಪೆ:** ರೆಕೋಫೋರಸ್ ರೈನ್ವಾರಿಡಿ ಹೆಸರಿನ ಮರಕಪ್ಪೆ, ಬೋರ್ನಿಯೋ ದ್ವೀಪವಾಸಿ. ಕಾಲುಬೆರಳುಗಳ ನಡುವೆ ಇರುವ ಜಾಲಪಾದದ ನೆರವಿನಿಂದ ಗಾಳಿಯಲ್ಲಿ ಜಿಗಿದು ಚಲಿಸುತ್ತದೆ. ಬೆರಳುಗಳಲ್ಲಿರುವ ಅಂಟುಮೆತ್ತೆಗಳ ಸಹಾಯದಿಂದ ಮರ ಹತ್ತಬಲ್ಲದು.

**ಹಾರುಹಲ್ಲಿ:** (*ಡ್ರಾಕೋ ವೊಲಾನ್ಸ್*): ಮಲಯ ದ್ವೀಪದ ಕಾಡುಗಳಲ್ಲಿ ವಾಸ. ಚಿಟ್ಟೆಗಳಂತೆ ವರ್ಣರಂಜಿತ ದೇಹ, ಸಾಮಾನ್ಯವಾಗಿ ಇದು ಹೂಗಳ ಹತ್ತಿರದಲ್ಲಿ ಜೀವಿಸುವುದರಿಂದ ಚಿಟ್ಟೆಗಳಂತೆಯೇ ಕಾಣಿಸುತ್ತದೆ. ಇದರ ಎದೆಯ ಪಕ್ಕೆಲುಬುಗಳು ನೇರವಾಗಿ ಪಕ್ಕಕ್ಕೆ ಬೆಳೆದಿವೆ. ಇವುಗಳ ನಡುವೆ ಚರ್ಮದ ಪದರ ಬೆಳೆದು ಒಂದು ರೀತಿಯ ರೆಕ್ಕೆಯಂತಿರುವ ರಚನೆ ಉಂಟಾಗಿದೆ. ಇದಕ್ಕೆ ಪೆಟೆಜಿಯಂ ಎಂದು ಹೆಸರು. ಇದನ್ನು ಹರಡಿಕೊಂಡು ಎತ್ತರದಿಂದ ತಗ್ಗಿಗೆ ಗಾಳಿಯಲ್ಲಿ ಜಾರಿ ಇಳಿಯುತ್ತದೆ. ಆಗ ರೆಕ್ಕೆ ಪ್ಯಾರಶೂಟಿನಂತೆ ಸಹಾಯ ಮಾಡುತ್ತದೆ. ವಿಶ್ರಾಂತಿಸ್ಥಿತಿಯಲ್ಲಿ ರೆಕ್ಕೆ ಮಡಿಸಿಕೊಂಡಿರುತ್ತದೆ.

**ಹಾರುಬೆಕ್ಕು: (ಡರ್ಮಾಪ್ಟೆರ):** ಮಡಗಾಸ್ಕರ್ ದ್ವೀಪವಾಸಿ ಸ್ತನಿ. ಅಲ್ಲಿಯ ಜನರ ಭಾಷೆಯಲ್ಲಿ ಇದರ ಹೆಸರು ಕೊಬೆಗಾಸ್ ಕಗುಆನ. ಗಾತ್ರ ಮನೆ ಬೆಕ್ಕಿನಷ್ಟೇ. ನಿಶಾಚರಿ. ಚರ್ಮದಿಂದ ರಚಿತವಾದ ಪೆಟಿಜಿಯಂ ರೆಕ್ಕೆ ಇದೆ. ಇದು ಕುತ್ತಿಗೆಗೂ ಮುಂಗಾಲುಗಳಿಗೂ ನಡುವೆ, ಮುಂಗಾಲು ಹಿಂಗಾಲುಗಳ ನಡುವೆ, ಹಿಂಗಾಲುಗಳಿಗೂ ಬಾಲಕ್ಕೂ ನಡುವೆ ಹರಡಿದೆ. ಇದರ ಸಹಾಯದಿಂದ ಹಾರುಬೆಕ್ಕು ಎತ್ತರದಿಂದ ತಗ್ಗಿಗೆ ಜಾರಬಲ್ಲದು.

**ಹಾರುಅಳಿಲು:** ಸೈಯುರಾಪ್ಟೆರಸ್, ಟಿರಾಮಿಸ್, ಯುಪೆಟಾರಸ್ ಮತ್ತು ಅನುಮಾಲುರಿಡೆ ಜಾತಿಗೆ ಸೇರಿದೆ, ಭಾರತ, ಮಲೇಷಿಯ, ಆಫ್ಘಾನಿಸ್ತಾನ, ಯುರೋಪ್, ಉತ್ತರ ಅಮೆರಿಕಗಳಲ್ಲಿ ಕಾಣಬಹುದು. ಹಾರುಬೆಕ್ಕಿನಂತೆ ಇದರಲ್ಲಿಯೂ ಪೆಟೆಜಿಯಂ ಬೆಳೆದಿದೆ. ಆದರೆ ಅದರಷ್ಟು ರೂಪಗೊಂಡಿಲ್ಲ. ಅರಣ್ಯವಾಸಿ, ನಿಶಾಚರಿ, ಹಾರುವಾಗ ರೆಕ್ಕೆಯ ಉಪಯೋಗವಿದೆ.



ಹಾರುಕಪ್ಪೆ



ಹಾರುಹಲ್ಲಿ



ಹಾರುಅಳಿಲು

**2. ನೈಜವಾಗಿ ಹಾರುವ ಪ್ರಾಣಿಗಳು:** ಕೇವಲ ನಾಲ್ಕು ರೀತಿಯ ಪ್ರಾಣಿಗಳಿಗೆ ಈ ಗುಣವಿದೆ ಪಕ್ಷಿಗಳು, ಬಾವಲಿಗಳು, ಕೀಟಗಳು, ಮತ್ತು ಟೀರೋಡ್ಯಾಕ್ಟೈಲಗಳು (ಪಕ್ಷಾಂಗುಲಿಗಳು). ಇವುಗಳಲ್ಲಿ ಮೊದಲಿನ ಮೂರು ಇಂದಿಗೂ ಬದುಕಿವೆ; ಕೊನೆಯದು ಬದುಕಿಲ್ಲ. ಇವು ಗಾಳಿಯಲ್ಲಿ ಸ್ವಶಕ್ತಿಯಿಂದ ಚಲಿಸುತ್ತವೆ. ಎಂದರೆ ಹಾರುತ್ತವೆ. ಈ ಪ್ರಾಣಿಗಳಲ್ಲಿ ಹಾರಲು ನೆರವಾಗುವಂತೆ ರೆಕ್ಕೆಗಳು ಅಥವಾ ರೆಕ್ಕೆಗಳಂತಿರುವ ರಚನೆಗಳು ಬೆಳೆದಿವೆ. ಟೀರೋಡ್ಯಾಕ್ಟೈಲದಲ್ಲಿ ನಾಲ್ಕನೆಯ ಕೈಬೆರಳು ದೊಡ್ಡದು. ಇದು ಚರ್ಮದ ರೆಕ್ಕೆಗೆ ಆಧಾರ. ಬಾವಲಿಗಳಲ್ಲಿ ಕೈಬೆರಳುಗಳ ನಡುವೆ, ಕೈಕಾಲುಗಳ ನಡುವೆ ಮತ್ತು ಬಾಲಕ್ಕೂ ಕಾಲುಗಳಿಗೂ ನಡುವೆ ಚರ್ಮದ ಪಟಲವೊಂದು ಹರಡಿ ರೆಕ್ಕೆಯ ರಚನೆ ಉಂಟಾಗಿದೆ. ಕೀಟಗಳಲ್ಲಿ ಕ್ಯೂಟಿಕಲ್ ರೆಕ್ಕೆಯಾಗಿ ರೂಪಿತವಾಗಿದೆ. ಪ್ರಾಣಿಗಳಲ್ಲಿ ಹಾರುವಿಕೆಯ ವಿಕಾಸ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಂಡಿದೆ. ಈ ಗುಣ ಕಾಣಿಸಿಕೊಳ್ಳಲು ಕಾರಣಗಳು ಬೇರೆ ಬೇರೆಯಾದರೂ ಎಲ್ಲೆಂದರಲ್ಲಿಯೂ ಹಾರಲು ಪ್ರೇರಕವಾದ ಕಾರಣ, ಅದರ ಗುರಿ, ದೇಹದ ಮಾರ್ಪಾಡುಗಳು ಮುಂತಾದವುಗಳಲ್ಲಿ ಒಂದಕ್ಕೊಂದು ಹೋಲಿಕೆ ಕಾಣಬರುತ್ತದೆ.

**ಟೀರೋಡ್ಯಾಕ್ಟೈಲ:** ಇವು ಮಿಸೋಜೋಯಿಕ್ ಕಲ್ಪದಲ್ಲಿ ಎಂದರೆ ಸರೀಸೃಪಗಳ ಸುವರ್ಣಯುಗದಲ್ಲಿ ಬಾಳಿ, ಆಳಿ, ಅಳಿದ ಪ್ರಾಣಿಗಳು. ಇಂದಿನ ಗುಬ್ಬಚ್ಚಿಗಳ ಗಾತ್ರದಷ್ಟು ಚಿಕ್ಕವೂ ಸಾಮಾನ್ಯ ವಿಮಾನಗಳಷ್ಟು ಗಾತ್ರದ ಪ್ರಾಣಿಗಳೂ ಅಂದು ಬದುಕಿದ್ದುವು. ಇವುಗಳ ಕೈಯ ನಾಲ್ಕನೆಯ ಬೆರಳು ಉದ್ದವಾಗಿ ಬೆಳೆದು ಹರಡಿದ ಚರ್ಮದ ಪಟಲಕ್ಕೆ ಆಧಾರವಾದ ರೆಕ್ಕೆಗಳು ರೂಪಿತವಾಗಿದ್ದವು. ಇವುಗಳ ಅವಶೇಷಗಳು ಬವೇರಿಯ, ಕನ್ಸಾಸ್ ದೇಶಗಳ ಸುಣ್ಣಶಿಲಾ ಪದರಗಳೊಂದಿಗೆ ದೊರಕಿವೆ. ಯೇಲ್ ನಗರದ ವಸ್ತುಸಂಗ್ರಹಾಲಯದಲ್ಲಿ ಇವನ್ನು ಜೋಡಿಸಿಟ್ಟಿದ್ದಾರೆ.

**ಬಾವಲಿ:** ಇವುಗಳ ಕೈಬೆರಳುಗಳು ಉದ್ದವಾಗಿ ಬೆಳೆದಿವೆ; ಈ ನಡುವೆ ಚರ್ಮದ ಪದರ ಹರಡಿದೆ. ಪದರ ಕೈಕಾಲುಗಳ ನಡುವೆ ಹಾಗೂ ಹಿಂಗಾಲುಗಳೆರಡರ ನಡುವೆಯೂ ಉಂಟು. ಇದರಲ್ಲಿ ಬಾಲ ಸೇರಿರಬಹುದು ಸೇರದೆಯೂ ಇರಬಹುದು. ಈ ರಚನೆಯೇ ಬಾವಲಿಯ ರೆಕ್ಕೆ. ರೆಕ್ಕೆಗಳ ಬಡಿತದಿಂದ ಬಾವಲಿ ಗಾಳಿಯಲ್ಲಿ ಹಾರುತ್ತದೆ.

**ಕೀಟಗಳು:** ಇವುಗಳ ಹೊರ ಚರ್ಮವೇ ರೆಕ್ಕೆಗಳಾಗಿ ಬೆಳೆದಿವೆ. ಇವುಗಳಲ್ಲಿ ಜಿರಲೆ, ಮುಂತಾದುವುಗಳಲ್ಲಿರುವಂತೆ ಎರಡು ಜೊತೆ ರೆಕ್ಕೆಗಳಿರಬಹುದು ಅಥವಾ ನೊಣ ಮುಂತಾದುವುಗಳಲ್ಲಿರುವಂತೆ ಒಂದೇ ಜೊತೆ ಇರಬಹುದು.

**ಪಕ್ಷಿಗಳು:** ಇವುಗಳಲ್ಲಿ ಮುಂಗಾಲುಗಳು ರೆಕ್ಕೆಗಳಾಗಿ ಮಾರ್ಪಟ್ಟು ಕೈ ಬೆರಳುಗಳ ಸಂಖ್ಯೆ ಕ್ಷೀಣವಾಗಿ ಹೋಗಿವೆ. ರೆಕ್ಕೆಗಳ ಮೇಲೆ ಗರಿಗಳು ಹರಡಿವೆ. ಚರ್ಮದ ಹೊರ ಪದರದಿಂದ ಇವುಗಳ ಬೆಳೆವಣಿಗೆ. ಗರಿಗಳು ಹಗುರವಾಗಿದ್ದು ಹಕ್ಕಿಗೆ ಗಾಳಿಯಲ್ಲಿ ತೇಲಲು ಅನುಕೂಲ. ಮೇಲಾಗಿ ದೇಹದ ಶಾಖವನ್ನು ಕಾಯ್ದಿಡಲು ಇವು ಸಹಕಾರಿಗಳು. ದೇಹ ದೋಣಿಯಾಕಾರದಲ್ಲಿದೆ. ಗರಿಗಳು ಹಿಂದಕ್ಕೆ ಬಾಗಿವೆ. ರೆಕ್ಕೆಗಳ ಬಡಿತಕ್ಕೆ ಸಹಕಾರಿಯಾಗಲು ಬಲಯುತವಾದ ಮಾಂಸಖಂಡಗಳು ಬೆಳೆದಿವೆ. ದೇಹದ ಮೂಳೆಗಳಲ್ಲಿ ಗಾಳಿ ತುಂಬಿಕೊಂಡು ಹಗುರವಾಗಿದೆ. ಶ್ವಾಸನಾಳಗಳು ಶ್ವಾಸಕೋಶಗಳಿಂದ ಮುಂದಕ್ಕೆ ಗಾಳಿಯ ಚೀಲಗಳಾಗಿ ಮಾರ್ಪಾಟಾಗಿ ದೇಹದ ಅಂಗಾಂಗಗಳ ನಡುವೆ ಹರಡಿವೆ. ಉಸಿರಾಡಲು ಬಂದ ಗಾಳಿ ಇವುಗಳಲ್ಲಿ ಸದಾ ತುಂಬಿರುತ್ತದೆ. ಮುಂಗಾಲುಗಳು ರೆಕ್ಕೆಗಳಾಗಿ ಮಾರ್ಪಟ್ಟ ಕಾರಣದಿಂದ ಆಹಾರಾನ್ವೇಷಣೆಯಲ್ಲಿ ನೆರವಾಗಲು ಕೊಕ್ಕುಗಳು ಬೆಳೆದಿವೆ. ಆಹಾರದ ಗುಣವನ್ನು ಅನುಸರಿಸಿ ಕಾಳು ಬಿಡಿಸಲು, ಕಡಿಯಲು, ಮಾಂಸ ಸಿಗಿಯಲು, ಹುಳು ಹುಪ್ಪಟೆ ಹಿಡಿಯಲು ಇವುಗಳ ಕೊಕ್ಕು ಮಾರ್ಪಟ್ಟಿದೆ. ಮುಂಗಾಲುಗಳು ಹಾರಲು ರೆಕ್ಕೆಗಳಾಗಿ ಪರಿವರ್ತನೆಗೊಂಡಿರುವುದರಿಂದ ಹಿಂಗಾಲುಗಳು ಉಳಿದ ಕ್ರಿಯೆಗೆ ಹೊಂದಿಕೊಂಡಿವೆ. ಆಯಾ ಹಕ್ಕಿಯ ಜೀವನದ ಕ್ರಮ ಅನುಸರಿಸಿ ಮರಗಿಡಗಳ ಕೊಂಬೆಗಳನ್ನು ಹತ್ತಲು ಹಿಡಿಯಲು, ನೆಲದ ಮೇಲೆ ಓಡಲು, ಕುಪ್ಪಳಿಸಲು, ನೀರಿನಲ್ಲಿ ಈಜಲು ಇತ್ಯಾದಿಯಾಗಿ ಇವುಗಳ ರಚನೆ ಇದೆ. ಹಾರಲು ಮುಖ್ಯ ಅಂಗಗಳಾದ ರೆಕ್ಕೆಗಳ ರಚನೆಯಲ್ಲಿ ನಿಜವಾದ ಎಂಜಿನಿಯರಿಂಗ್ ಕುಶಲತೆಯನ್ನು ತೋರಿಸುತ್ತವೆ. ಇದು ಮೇಲ್ಭಾಗಕ್ಕೆ ಉಬ್ಬಿಕೊಂಡಿದೆ. ರೆಕ್ಕೆಯನ್ನು ಮೇಲೆತ್ತುವಾಗ ಗಾಳಿಯ ಒತ್ತಡ ಯಾವ ಒಂದೆಡೆಯೂ ಕೇಂದ್ರೀಕೃತವಾಗದೆ ಹರಡಲು ಸಹಾಯಕವಾಗಿದೆ. ಇದರ ಜೊತೆಗೆ ಪಕ್ಷಿ ರೆಕ್ಕೆಗಳನ್ನು ಮೇಲೆತ್ತುವಾಗ ಗರಿಗಳೆಲ್ಲವೂ ಸಡಿಲವಾಗಿ ಗಾಳಿ ಇವುಗಳ ಸಂದಿಯಲ್ಲಿ ಹಾದು ಹೋಗುವುದರಿಂದ ಹೆಚ್ಚು ಘರ್ಷಣೆ ಇಲ್ಲದೆ ಸುಲಭವಾಗಿ ಮೇಲೆ ಹೋಗುತ್ತದೆ. ಆದರೆ ರೆಕ್ಕೆಗಳನ್ನು ಕೆಳಕ್ಕೆ ಬಡಿಯುವಾಗ ಗರಿಗಳೆಲ್ಲವೂ ಒತ್ತಾಗಿ ಜೋಡಿಸಿಕೊಂಡು ಗಾಳಿಯನ್ನು ಹಿಂದಕ್ಕೂ ಕೆಳಕ್ಕೂ ಅದುಮುತ್ತವೆ. ಅಲ್ಲದೆ ಇವು ರೆಕ್ಕೆಗಳನ್ನು ಮೇಲೆ ಕೆಳಕ್ಕೆ ಬಡಿಯುವುದಿಲ್ಲ. ಮೇಲೆ ಮುಂಭಾಗದಿಂದ, ಕೆಳಗೆ ಹಿಂಭಾಗಕ್ಕೆ ಬಡಿಯುತ್ತದೆ. ಇದರಿಂದ ಅವು ಗಾಳಿಯಲ್ಲಿ ಮುಂದೆ ಚಲಿಸುವುದು. ಗಾಳಿಯನ್ನು ತಳ್ಳಲು ಅನುಕೂಲವಾಗುವಂತೆ ರೆಕ್ಕೆಯ ತಳಭಾಗ ನಿಮ್ನವಾಗಿದೆ. ಬಾಲದ ಮೇಲೆ ಬೀಸಣಿಗೆಯಂತೆ ಹರಡಿರುವ ಗರಿಗಳಿವೆ. ದಿಕ್ಕನ್ನು ಬದಲಿಸಲು ಮತ್ತು ವೇಗವನ್ನು ಕಡಿಮೆ ಮಾಡಲು ಇವುಗಳು ಸಹಾಯಕ. ಹಕ್ಕಿ ಇಳಿಯುವಾಗ ಬಾಲದ ಗರಿಗಳನ್ನು ಬೀಸಣಿಗೆಯಂತೆ ಹರಡಿ ಕೆಳಗಡೆಗೆ ಬಾಗಿಸುತ್ತದೆ. ಇದನ್ನು ವೇಗವಾಗಿ ಧಾವಿಸುವ ವಾಹನಕ್ಕೆ ಬ್ರೇಕ್ ಹಾಕುವುದಕ್ಕೆ ಹೋಲಿಸಬಹುದು. ಗರಿಗಳಿಗೆ ಒಂದು ಬಗೆಯ ತೈಲ ಲೇಪಿತವಾಗಿರುವುದರಿಂದ ಅವು ಮಳೆ ನೀರಿನಲ್ಲಿ ನೆನೆದು ಮುದ್ದೆಯಾಗುವುದಿಲ್ಲ. ಬಾಲದ ಕೆಳಗೆ ತೈಲಗ್ರಂಥಿಗಳಿವೆ. ಹಾರುವಾಗ ಆಹಾರವನ್ನು ಹುಡುಕಲು, ಶತ್ರು ಮಿತ್ರರನ್ನು ಗುರುತಿಸಲು ಸಹಾಯಕವಾಗಿ ಬಲು ಸೂಕ್ಷ್ಮ ಕಣ್ಣುಗಳಿವೆ. ಹೊರ ಕಿವಿಗಳಿಲ್ಲದಿದ್ದರೂ ಶ್ರವಣಶಕ್ತಿ ಚುರುಕಾಗಿದೆ. ಹೀಗೆ ಹಾರುವ ಪರಿಸರವನ್ನು ಹೊಂದಿದಂತೆ ಹಕ್ಕಿಯ ದೇಹರಚನೆಯಿದೆ. **(ಎಚ್.ಬಿ.ಡಿ.)**

**ಉಣಿಸು, ಉಣಿಸುಶಾಸ್ತ್ರ:** ವ್ಯಕ್ತಿಯೋ ಜನರೋ ಬದುಕಿ ಬಾಳಲು ಸೇವಿಸುವ ಆಹಾರ, ಉಣಿಸು (ಡಯಟ್), ಆಹಾರವಿಜ್ಞಾನದ ತಿಳಿವಳಿಕೆಯಿಂದ ಜನರ ಆರೋಗ್ಯದಲ್ಲಾಗಲೀ ರೋಗಚಿಕಿತ್ಸೆಯಲ್ಲಾಗಲೀ ಬೇಕು, ಬೇಡವೆಂಬ ಸೂಚನೆಗಳೊಂದಿಗೆ ಆಹಾರವನ್ನು ನಿಯಮಿಸುವುದು ಉಣಿಸುಶಾಸ್ತ್ರ (ಡಯೆಟೆಟಿಕ್ಸ್), ಪಥ್ಯಶಾಸ್ತ್ರ ಎಂದೂ ಹೇಳುವುದಿದೆ. ಪಥ್ಯ ಹೇಳಬೇಕಾದರೆ ಉಣಿಸು, ತಿಂಡಿ ತಿನಿಸುಗಳು, ಅವುಗಳ ರಚನೆ, ತಯಾರಿಕೆ; ಊತಕಗಳ (ಟಿಷ್ಯೂಸ್) ಸವೆತ, ಬೆಳೆತ, ನಿಜಗೆಲಸಗಳಿಗೆ ಬೇಕೇಬೇಕಿರುವ ಪುಷ್ಟಿವಸ್ತುಗಳು, ಶಕ್ತಿಗಳು ಇವುಗಳ ಪಾತ್ರಗಳನ್ನು ತಿಳಿದಿರಬೇಕು. ಉಣಿಸುಶಾಸ್ತ್ರದ ಯಾವುದಾದರೂ ಒಂದು ವಿಭಾಗದಲ್ಲಿ ಚೆನ್ನಾಗಿ ನುರಿತವನೇ ಉಣಿಸುಗಾರ (ಡಯಟೆಟಿಸ್ಟ್/ಡಯೆಟೀಷಿಯನ್). ಇವನ ಕೆಲಸ, ತರಬೇತು, ಜವಾಬ್ದಾರಿ ಒಂದೊಂದು ದೇಶದಲ್ಲಿ ಒಂದೊಂದು ಬಗೆ. ಉಣಿಸುಶಾಸ್ತ್ರ ಬಹುವಾಗಿ ರೋಗಚಿಕಿತ್ಸೆಯಾಗಿ ಮೊದಲಾಗಿದ್ದರೂ ಪುಷ್ಟಿಕರ ಆಹಾರ ಮುಖ್ಯವೆಂದು ಮನದಟ್ಟಾದಮೇಲೆ ಆಹಾರವನ್ನು ಒದಗಿಸುವುದು, ಪೂರೈಸುವುದು, ಅವನ್ನು ಕುರಿತ ಶಿಕ್ಷಣ, ಜನಾರೋಗ್ಯ, ಸಂಶೋಧನೆಗಳಿಗೂ ಇದು ವ್ಯಾಪಿಸಿತು.

**ಆಹಾರದ ಉಪಯುಕ್ತತೆ:** ಆಹಾರಗಳನ್ನು ಹಿಟ್ಟಿನ ಕಾಳುಗಳು, ಬೇಳೆಗಳು, ಎಣ್ಣೆಬೀಜಗಳು, ಕಾಯಿಗಳು, ತರಕಾರಿ, ಸೊಪ್ಪುಗಳು, ಗೆಡ್ಡೆಗಳು, ಹಣ್ಣುಗಳು, ಹಾಲು, ಹಾಲಿನ ತಯಾರಿಕೆಗಳು, ಮಾಂಸಗಳೆಂದು ವಿಂಗಡಿಸಬಹುದು. ಸಾಮಾನ್ಯವಾಗಿ ಇವುಗಳಲ್ಲಿ ಪ್ರೋಟೀನುಗಳು, ಹಿಟ್ಟು ಸಕ್ಕರೆಗಳು, ಖನಿಜಗಳು, ಜೀವಾತುಗಳು (ವಿಟಮಿನ್ಸ್), ನೀರೂ ಇರುತ್ತವೆ. ತುಪ್ಪ, ಬೆಣ್ಣೆಗಳ ತೆರನ ಕೆಲವು ಆಹಾರಗಳಲ್ಲಿ ಕೇವಲ ಕೊಬ್ಬುಗಳೇ ಇದ್ದರೆ, ಇನ್ನು ಹಲವು ಆಹಾರಗಳಲ್ಲಿ ಬರೀ ಸಕ್ಕರೆಯೇ ಇರುವುದು. ಬಹುವಾಗಿರುವ ಆಹಾರ ವಸ್ತುವನ್ನು ಕುರಿತು ಇದರ ಹೆಸರಾಗಿರುವುದುಂಟು; ಪ್ರೋಟೀನ್ ಹೆಚ್ಚಳದ್ದು, ಜೀವಾತು ಹೆಚ್ಚಳದ್ದು ಇತ್ಯಾದಿ.

ಮೈಯ ರಚನೆ (ಸ್ಟ್ರಕ್ಚರ್) ಊತಕಗಳ ನಿರ್ಮಾಣ ಮತ್ತು ಕೆಲಸ, ಚಟುವಟಿಕೆಗಳಿಗೆ ಆಹಾರ ಬೇಕೇಬೇಕು. ಚಟುವಟಿಕೆಗಳಿಗೆ ಶಕ್ತಿ ಪೂರೈಕೆಯಾಗಲು ಆಹಾರ ಮತ್ತು ಆಕ್ಸಿಜನ್ ಒಂದುಗೂಡಬೇಕಾಗುವುದು. ಪುಷ್ಟಿಗೊಳಿಸುವ ಅಂಥ ವಸ್ತುಗಳಿಗೆ ಪುಷ್ಟಿಕಾರಿಗಳೆಂದು (ನ್ಯೂಟ್ರಿಯೆಂಟ್ಸ್) ಹೆಸರಿದೆ. ಮೈ ಊತಕಗಳ ರಚನೆಗೆ ಮತ್ತು ಅವನ್ನು ಚೆನ್ನಾಗಿ ಇರಿಸಿಕೊಳ್ಳಲು ಮುಖ್ಯವಾಗಿ ಬೇಕೇಬೇಕಿರುವ ಆಹಾರ ವಸ್ತುಗಳು: ಪ್ರೋಟೀನಲ್ಲಿರುವ ಸುಣ್ಣ, ರಂಜಕಗಳು, ಕಬ್ಬಿಣದ ತೆರನ ಖನಿಜ ಧಾತುಗಳು ಇತ್ಯಾದಿ. ಶಕ್ತಿಯನ್ನು ಒದಗಿಸಲು ಆಕ್ಸಿಜನ್ನಿನೊಡನೆ ಕೂಡುವಂಥವು ಹಿಟ್ಟು ಸಕ್ಕರೆಗಳು, ಕೊಬ್ಬುಗಳು, ತುಸುಮಟ್ಟಿಗೆ ಪ್ರೋಟೀನುಗಳು. ಮದ್ಯಸಾರವೂ ಒಂದಿಷ್ಟು ಶಕ್ತಿ ಒದಗಿಸುತ್ತದೆ. ಮೈಯಲ್ಲಿನ ಕ್ರಮಗತಿಗಳನ್ನು ಚೆನ್ನಾಗಿ ಇರಿಸಿಕೊಂಡಿರಲು ಜೀವಾತುಗಳೂ, ಅಯೋಡೀನ್, ಕ್ಲೋರೀನುಗಳೂ ಬೇಕಾಗುತ್ತದೆ. ಒಂದೊಂದಕ್ಕೂ ಗೊತ್ತಾದ ಕೆಲಸಗಳಿರುತ್ತವೆ. ರಾಸಾಯನಿಕವಾಗಿ ಒಂದಕ್ಕೊಂದು ಸಂಬಂಧವಿರದ ಪದಾರ್ಥಗಳು ಜೀವಾತುಗಳು. ಗುರಾಣಿಕ (ಥೈರಾಯ್ಡ್) ಗ್ರಂಥಿ ಸರಿಯಾಗಿ ಕೆಲಸ ಮಾಡಲು ಅಯೊಡೀನ್ ಬೇಕೇ ಬೇಕು. ಊತಕಗಳ ಒಳಕ್ಕೂ ಹೊರಕ್ಕೂ ನೀರಿನ ಸಾಗಣೆಯಲ್ಲೂ ಮುಖ್ಯವಾಗಿದ್ದರೂ, ಮೈಯಲ್ಲಿ ಎಂದಿನ ಸ್ಥಿತಿಗಳನ್ನು ಇದ್ದಂತಿರಿಸಲು ಕ್ಲೋರೀನ್ನಿನ ಲವಣವಾದ ಕ್ಲೋರೈಡುಗಳು ಇರಲೇಬೇಕು. ಆಹಾರದಿಂದ ಪಡೆದ ಒಟ್ಟು 19 ಮುಖ್ಯ ಖನಿಜ ಧಾತುಗಳು ಮೈಯಲ್ಲಿವೆ. ಮೇಲಿನ ಲಕ್ಷಣಗಳಂತೆ ನೀರೂ ಆಕ್ಸಿಜನ್ನೂ ಪುಷ್ಟಿಕರ ವಸ್ತುಗಳಾದರೂ ಅವನ್ನು ಉಣಿಸಿನಲ್ಲಿ ಸೇರಿಸದಿರುವುದೇ ವಾಡಿಕೆ. ಮೈ ಪುಷ್ಟಿಗೆ ಆರೋಗ್ಯಕ್ಕೆ ಇವೆಲ್ಲ ಸರಿಯಾದ ಪ್ರಮಾಣಗಳಲ್ಲಿದ್ದು, ಉಣಿಸು ಸಮತೋಲದಲ್ಲಿರಬೇಕು.

**ಪ್ರೋಟೀನುಗಳು:** ನಿಸರ್ಗದಲ್ಲಿ ಇವು ಎಲ್ಲೆಲ್ಲೂ ಇವೆ. ಇವಿಲ್ಲದೆ ಯಾವ ಜೀವಿಯೂ ಬದುಕುವಂತಿಲ್ಲ. ಇವು ಬಹುವಾಗಿ ಸರಳ ಜೈವಿಕ ಸಂಯುಕ್ತಗಳಾದ ಅಮೈನೋ ಆಮ್ಲಗಳಿಂದಾಗಿವೆ. ಅಮೈನೋ ಆಮ್ಲಗಳನ್ನು ಮೈ ಕಟ್ಟಡದ ಇಟ್ಟಿಗೆಗಳು ಎನ್ನಬಹುದು. ಇವುಗಳಲ್ಲಿ ಸಾರಜನಕ ಇದ್ದೇ ಇರುವುದು. ಕೆಲವಲ್ಲಿ ಗಂಧಕವೂ ಇದೆ. ಊತಕಗಳ ಬೆಳೆವಣಿಗೆ ದುರಸ್ತುಗಳಿಗೆ ಬೇಕಿರುವ ಪ್ರೋಟೀನುಗಳನ್ನು ಪ್ರಾಣಿಗಳೂ ಮಾನವರೂ ಪಡೆಯಲು ಆಹಾರದಲ್ಲಿ ದೊರೆವ ಪ್ರೋಟೀನುಗಳನ್ನು ಒಡೆದು ಅಮೈನೋ ಆಮ್ಲಗಳ ಚೂರುಗಳಾಗಿ ಮಾಡಿ ತಮಗೆ ಬೇಕಿರುವ ತೆರನ ಪ್ರೋಟೀನುಗಳಾಗಿ ಮರುಜೋಡಿಸಿ ಕಟ್ಟಿ ತಯಾರಿಸಿಕೊಳ್ಳುತ್ತವೆ. ಗಿಡಮರಗಳಾದರೋ ಮಣ್ಣು, ಗಾಳಿಗಳಲ್ಲಿರುವ ಸರಳ ಅಜೈವಿಕ ವಸ್ತುಗಳಿಂದ ಅವುಗಳ ಪ್ರೋಟೀನುಗಳನ್ನು ತಯಾರಿಸಿಕೊಳ್ಳುತ್ತವೆ. ಆಹಾರದ ಪ್ರೋಟೀನುಗಳಲ್ಲಿ ಸು.18 ಬಗೆಗಳ ಅಮೈನೋ ಆಮ್ಲಗಳಿವೆ. ಅಂತೂ ಹೇಗಾದರೂ ಸರಿಯೆ, ಮಾನವನಿಗೆ ಪ್ರೋಟೀನುಗಳು ಸಿಗುವುದು ಕೊನೆಗೆ ಗಿಡಮರಗಳಿಂದಲೇ. ತರಕಾರಿ, ಹಣ್ಣು, ಕಾಳುಕಡ್ಡಿಗಳಿಂದ ಇವನ್ನು ನೇರವಾಗಿ ಪಡೆಯಬಹುದು. ಇಲ್ಲವೇ ಇವನ್ನೇ ತಿಂದು ಬದುಕುವ ಪ್ರಾಣಿಗಳು, ಹಕ್ಕಿಗಳು, ಮೀನುಗಳ ಮಾಂಸ, ಹಾಲು, ಮೊಟ್ಟೆಗಳ ಮೂಲಕ ಪಡೆಯಲೂಬಹುದು. ಪ್ರಾಣಿಗಳಿಂದ ಬಂದ ಆಹಾರದಲ್ಲಿ ಪೂರ್ಣ ಪ್ರೋಟೀನುಗಳು ಇರುವುದರಿಂದ ಮಾನವನಿಗೆ ಬೇಕಿರುವ ಎಲ್ಲ ಅಮೈನೋ ಆಮ್ಲಗಳೂ ಸಿಗುತ್ತವೆ. ಬೇಕೇ ಬೇಕಿರುವ ಅಮೈನೋ ಆಮ್ಲಗಳು ಒಂದೊಂದು ಶಾಖಾಹಾರದಲ್ಲೂ ಒಂದೊಂದು ತೆರನಾಗಿ ಇರುವುದರಿಂದ ಪುಷ್ಟಿ ಕಡಿಮೆ. ಇದರಿಂದಲೇ ಶಾಖಾಹಾರದೊಂದಿಗೆ ಒಂದಿಷ್ಟು ಪ್ರಾಣಿಗಳಿಂದ ಬಂದವನ್ನೂ ಸೇರಿಸಿಕೊಂಡರೆ ಒಳ್ಳೆಯದು. ನೀರಿನ ಅಂಶ ಸಾಕಷ್ಟು ಇದ್ದರೂ ಹಾಲಿನಲ್ಲಿ ಬಲು ಒಳ್ಳೆ ಪ್ರೋಟೀನು ವಸ್ತುಗಳಿವೆ. ಶಾಖಾಹಾರದ ಪ್ರೋಟೀನುಗಳು ಮುಖ್ಯವಾಗಿ ಕಾಳುಗಳಲ್ಲಿರುತ್ತವೆ: ಸೋಯ ಅವರೆ (ಬೀನ್ಸ್), ಬಟಾಣಿ, ಬೀಜಗಳು, ಬೇಳೆಗಳು, ಕಡಲೆಕಾಯಿಗಳಲ್ಲಿ ಹೆಚ್ಚು. ಕೆಲವೇಳೆ ಮಾಂಸಾಹಾರದಲ್ಲಿ ಇರುವುದಕ್ಕಿಂತಲೂ ಮಿಗಿಲಾಗಿ ಇರುವುದುಂಟು. ಎಣ್ಣೆ ಬೀಜಗಳ ಹಿಂಡಿ ಇದಕ್ಕೆ ಉದಾಹರಣೆ. ಹಣ್ಣು, ತರಕಾರಿಗಳಿಂದ ಪ್ರೋಟೀನುಗಳು ಅಷ್ಟಾಗಿ ದೊರೆಯವು.

ಒಬ್ಬ ಆರೋಗ್ಯವಂತನಿಗೆ ದಿನವೂ ಅವನ ಮೈ ತೂಕದ ಪ್ರತಿ ಕಿಲೋಗ್ರಾಮಿಗೆ ಒಂದು ಗ್ರಾಮಿನಷ್ಟಾದರೂ ಪ್ರೋಟೀನ್ ಬೇಕೆಂಬ ಅಭಿಪ್ರಾಯವಿದೆ. ಒಬ್ಬ ಸೇವಿಸಲೇ ಬೇಕಿರುವ ಪ್ರೋಟೀನುಗಳಲ್ಲಿ ಬೇರೆ ಬೇರೆ ಅಮೈನೋ ಆಮ್ಲಗಳ ಪ್ರಮಾಣವನ್ನು ನಿರ್ಧರಿಸಲು ಆಹಾರ ಮತ್ತು ಬೇಸಾಯದ ಸಂಸ್ಥೆ (ಎಫ್.ಎ.ಒ.) ಯತ್ನಿಸಿತು. ಇದರ ಸೂತ್ರದಂತೆ ಮೊಟ್ಟೆ, ಹಾಲು, ಮಾಂಸ, ಮೀನು ಇತ್ಯಾದಿಗಳಲ್ಲಿ ಬಹುಮಟ್ಟಿಗೆ ಈ ಅಮೈನೋ ಆಮ್ಲಗಳೆಲ್ಲ ಇರುವುದರಿಂದ ಇಂಥ ಉಣಿಸುಗಳನ್ನು ಪೂರ್ಣ ಪ್ರೋಟೀನುಗಳು ಎನ್ನಬಹುದು. ಆದರೆ ಹಿಟ್ಟುಗಳು, ಕಾಳುಗಳು, ಬೇಳೆಗಳು, ಎಣ್ಣೆ ಬೀಜಗಳಲ್ಲಿನ ಅಮೈನೋ ಆಮ್ಲಗಳ ಸಮತೋಲ ಸರಿಯಾಗಿಲ್ಲ. ಹಿಟ್ಟಿನಲ್ಲಿರುವ ಪ್ರೋಟೀನುಗಳಲ್ಲಿ ಅಮೈನೋ ಆಮ್ಲ ಲೈಸೀನ್ ಇಲ್ಲ. ಹಾಗೆಯೇ ಬೇಳೆಗಳಲ್ಲಿರುವ ಪ್ರೋಟೀನುಗಳಲ್ಲಿ ಈಲಿಯಯಕೃತ್ತನ್ನು ಕಾಪಾಡುವ ಅಮೈನೋ ಆಮ್ಲ, ಮೆತಿಯೊನೀನ್ ಇಲ್ಲ. ಇವು ಅಪೂರ್ವ ಪ್ರೋಟೀನುಗಳು. ಆದರೆ ಶಾಖಾಹಾರದಲ್ಲಿ ಬೇರೆ ಬೇರೆ ಬೆರೆಸುವುದರಿಂದ ಬೇಕಿರುವ ಶಿಷ್ಟ ಪ್ರೋಟೀನ್ ಮಟ್ಟಕ್ಕೆ ತರಬಹುದು. ಪುಷ್ಟಿಯ ಬೆಲೆಯಲ್ಲಿ ಕಡಿಮೆ ಇರುವುದಕ್ಕಿಂತ ಪೂರ್ಣ ಪ್ರೋಟೀನುಗಳು ಇರುವವನ್ನು ತುಸು ಸೇವಿಸಿದರೂ ಸಾಕು. ಈ ಲೆಕ್ಕದಂತೆ ಮಾಂಸಾಹಾರಿಗಳಿಗೆ, ಮೈ ತೂಕದ ಕಿಲೋಗ್ರಾಂ ತೂಕಕ್ಕೆ ದಿನಕ್ಕೆ ಒಂದು ಗ್ರಾಂ ಪ್ರೋಟೀನು ಸಾಕಷ್ಟಾಗುತ್ತದೆ. ಶಾಖಾಹಾರದಲ್ಲಿನ ಪ್ರೋಟೀನುಗಳನ್ನು ಚೆನ್ನಾಗಿ ಬೇಯಿಸಿದ ಹೊರತು ಮಾಂಸಾಹಾರದಷ್ಟು ಚೆನ್ನಾಗಿ ಅರಗವು. ಬೇಯಿಸುವುದರಿಂದ ಮಾಂಸಾಹಾರ ಇನ್ನೂ ಚೆನ್ನಾಗಿ ಅರಗುತ್ತದೆ. (**ನೋಡಿ– ಪ್ರೋಟೀನುಗಳು**).

**ಹಿಟ್ಟು ಸಕ್ಕರೆಗಳು:** ಮೈಯಲ್ಲಿ ಕಾವು, ಶಕ್ತಿಗಳನ್ನು ಹುಟ್ಟಿಸಲು ಎಲ್ಲೆಲ್ಲೂ ದೊರೆವ ಆಹಾರ ಮೂಲಗಳಿವು. ಇವುಗಳಲ್ಲಿ ಹಲವಾರು ಬಗೆಗಳಿವೆ. ಹಿಟ್ಟು ಮತ್ತು ಸಕ್ಕರೆಗಳಲ್ಲಿ ಮುಖ್ಯವಾದವಿವು; ಗಿಡಮರಗಳಲ್ಲೂ ಮೈಯಲ್ಲೂ ಬಳಕೆಗೆ ಬರುವಂತೆ ಬದಲಾಗಬಹುದಾದ ಹಿಟ್ಟುಗಳು (ಗೋದಿ, ಬತ್ತ, ಜೋಳ, ನವಣೆ, ತೋಕೆಗೋದಿ, ಚಿಟ್ಟಗೋದಿ ಇತ್ಯಾದಿ), ಕಾಳುಗಳು (ಅವರೆ, ಕಡಲೆ, ಉದ್ದು, ಹೆಸರುಗಳ ತೆರನವು), ಬೇಳೆಗಳು, ಆಲೂಗೆಡ್ಡೆ, ಗೆಣಸುಗಳ ಬಗೆಯ ಗೆಡ್ಡೆಗಳು, ಕೆಲವು ಬೇರುಗೆಡ್ಡೆಗಳು (ರೈಜ಼ೋಮ್ಸ್), ಬೇರುಗಳಲ್ಲಿಯೂ ಸಿಗುತ್ತವೆ.

ಹಾಲುಸಕ್ಕರೆ (ಲ್ಯಾಕ್ಟೋಸ್), ಕಬ್ಬುಸಕ್ಕರೆ (ಸೂಕ್ರೋಸ್), ದ್ರಾಕ್ಷಿ ಸಕ್ಕರೆಗಳು (ಗ್ಲೂಕೋಸ್) ಹಣ್ಣುಗಳಲ್ಲೂ ಕಬ್ಬು, ಬೀಟ್ ಗೆಡ್ಡೆಗಳಲ್ಲೂ ದೊರೆಯುವುವು. ಕಬ್ಬಿನಿಂದ ಇಲ್ಲವೇ ಬೀಟ್ ಗೆಡ್ಡೆಯಿಂದ ತೆಗೆದ ಸಕ್ಕರೆ ಪಟ್ಟಣಿಗರ ಆಹಾರಗಳಲ್ಲಿ ಹೆಚ್ಚಿನ ಬಳಕೆಯಲ್ಲಿದೆ. ಕಬ್ಬಿನಿಂದ ತೆಗೆದ ಪುಷ್ಟಿವಸ್ತು, ಅಪ್ಪಟ ಸಕ್ಕರೆಯಾದ ಕಬ್ಬು ಸಕ್ಕರೆಯೇ. ಆಕ್ಸಿಜನ್ ಒಡಗೂಡಿದರೆ ಮೈಗೆ ಶಕ್ತಿಯನ್ನು ಒದಗಿಸಿದಂತಾಗುವುದೇ ಹೊರತು ಬೇರಾವ ಪುಷ್ಟಿಕಾರಿಗಳೂ ದೊರೆಯವು. ಜನಸಾಮಾನ್ಯರ ಉಣಿಸಿನ ತುಂಬ ಹಿಟ್ಟು ಸಕ್ಕರೆಗಳೇ ತುಂಬಿದ್ದರಂತೂ ಅವರ ಆರೋಗ್ಯದ ಸಮತೋಲನ ಕೆಡುವುದು. ಕೆಲವು ಆಹಾರಗಳಲ್ಲಿ ಹಿಟ್ಟು ಸಕ್ಕರೆಗಳೊಂದಿಗೆ ನಾರಿನ ತೆರನ ಹುರುಬುರುಕೂ (ರಫೇಜ್) ಇರುತ್ತದೆ. ಇದು ಮುಖ್ಯವಾಗಿ ಮರದೆಳೆ (ಸೆಲ್ಯುಲೋಸ್). ಇನ್ನಾವ ಪುಷ್ಟಿ ಕೊಡದಿದ್ದರೂ ದಿನವೂ ತಪ್ಪದೆ ಮಲ ಕಳೆಯಲು ಇದರಿಂದ ಅನುಕೂಲ. ತಿಂದು ಅರಗಿ ಉಳಿದರೆ ಉಣಿಸನ್ನು ಕರುಳು ಮುಂದೂಡಲು ಇದು ಗಾತ್ರವನ್ನು ಕೊಡುವುದು. ಕಾಯಿ ಮಾಗಿದಂತೆಲ್ಲ ಅದರಲ್ಲಿರುವ ಹಿಟ್ಟುಗಳು ಸಕ್ಕರೆಗಳಾಗಿ ಬದಲಾಗುತ್ತವೆ. ಬಾಳೆಕಾಯಿಯಲ್ಲಿ ಮೊದಲಿದ್ದ ಹಿಟ್ಟುಗಳು ಹಣ್ಣಾಗುವ ವೇಳೆಗೆ ಸಕ್ಕರೆಗಳಾಗಿಬಿಟ್ಟಿರುತ್ತವೆ. **(ನೋಡಿ – ಹಿಟ್ಟು, ಸಕ್ಕರೆಗಳು)**

**ಕೊಬ್ಬುಗಳು:** ನಿಸರ್ಗದಲ್ಲಿ ಎಲ್ಲೆಲ್ಲೂ ಸಿಗುವ ಮೈಗೆ, ಕಾವು, ಶಕ್ತಿಗಳನ್ನು ಒದಗಿಸುವ ಕೊಬ್ಬುಗಳು ಸಾಂದ್ರೀಕರಿಸಿದ ಆಹಾರಗಳು. ತೂಕಕ್ಕೆ ತೂಕವಾಗಿ, ಹಿಟ್ಟು, ಪ್ರೋಟೀನುಗಳಿಂದ ದೊರೆಯುವುದರ ಎರಡರಷ್ಟಕ್ಕೂ ಮಿಗಿಲಾದ ಶಕ್ತಿಯನ್ನು ಇವು ಒದಗಿಸುತ್ತವೆ. ಮುಖ್ಯವಾಗಿ ಇವು ಕೊಬ್ಬಿನಾಮ್ಲಗಳ ಗ್ಲಿಸರೈಲ್ ಎಸ್ಟರ್‌ಗಳು. ನೀರಿಂದೊಡೆದಾಗ ಕೊಬ್ಬುಗಳಿಂದ ಅನೇಕ ಬೇರೆ ಬೇರೆ ಕೊಬ್ಬಿನಾಮ್ಲಗಳೂ ಗ್ಲಿಸರಾಲೂ ಬರುತ್ತವೆ. ಬಹುಪಾಲು ಗಿಡಮರಗಳ ಕೊಬ್ಬುಗಳಿಂದ ಬಂದವಕ್ಕೆ ಜಲಜನಕೀಕರಿಸದಿರುವ ಅಗತ್ಯ (ಎಸೆನ್‌ಷಿಯಲ್) ಕೊಬ್ಬಿನಾಮ್ಲಗಳೆಂದು ಹೆಸರಿದೆ. ರಕ್ತಗತವಾದ ಮೇಲೆ, ಕೊಬ್ಬುಗಳು ಮೈಯಲ್ಲಿ ಕಾವು, ಶಕ್ತಿಗಳನ್ನು ಹುಟ್ಟಿಸಲೂ ಕೂಡಿಡಲೂ ಬಳಕೆಯಾಗಬಹುದು. ಕೊಬ್ಬು ಇಲ್ಲದ ಉಣಿಸಿನಲ್ಲಿ ಎ.ಡಿ.ಇ.ಕೆ. ಜೀವಾತುಗಳೇ ಇಲ್ಲದಿರುವುದರಿಂದ ಇವುಗಳ ಕೊರೆಯಾಗುವುದು. ಹೊರಗಿಂದ ಸೇರಿಸಿದ ಹೊರತು ವನಸ್ಪತಿಗಳಲ್ಲಿ ಈ ಜೀವಾತುಗಳಿರವು. ಮಿತಿಗೆಟ್ಟು ಸೇವಿಸಿದ ಹಿಟ್ಟು ಸಕ್ಕರೆಗಳೂ ಕೊಬ್ಬುಗಳಾಗಿ ಬದಲಾಗಿ, ಹೀಗೇ ಮೈಯಲ್ಲಿ ಕೊಬ್ಬು ಸೇರಿದಂತಾಗಬಹುದು. ಬೆಣ್ಣೆ, ತುಪ್ಪ, ವನಸ್ಪತಿ ಮೊದಲಾದ ಕೊಬ್ಬುಗಳ ಜೊತೆಗೆ, ಹಾಲು, ಕೊಬ್ಬಿದ ಮೀನುಗಳು, ಮೊಟ್ಟೆಗಳು, ಎಣ್ಣೆ ಬೀಜಗಳು, ಕಾಳುಗಳು, ಕೆಲವು ಹಣ್ಣುಗಳೂ ಕೊಬ್ಬನ್ನೂ ದೊರಕಿಸುತ್ತವೆ.

ಜನರ ಜೀವನ ಮಟ್ಟ ಏರಿದಂತೆಲ್ಲ ಹಿಟ್ಟು ಸಕ್ಕರೆಗಳು, ಪ್ರೋಟೀನುಗಳಿಗಿಂತಲೂ ಕೊಬ್ಬುಗಳ ಸೇವನೆ ಹೆಚ್ಚುತ್ತ ಹೋಗುವುದು. ಆಹಾರದಲ್ಲಿ ಸುಮಾರು ಕೊಬ್ಬು ಸೇರುವುದು ತೀರ ಹೆಚ್ಚು; ಇದು ಒಳ್ಳೆಯದಲ್ಲವೆಂದು ಕೆಲವು ಪರಿಣತರ ಅಭಿಪ್ರಾಯ. ಇದರಿಂದ ರಕ್ತಗುಂದಿದ ಗುಂಡಿಗೆಯ ರೋಗ ಮತ್ತಿತರ ಅನುವಳಿಕ (ಡೀಜನರೇಟಿವ್) ರೋಗಗಳಿಗೆ ಈಡಾಗುವರು.

ಗುಂಡಿಗೆಯ ರಕ್ತನಾಳಗಳು, ಈ ರೋಗಗಳಲ್ಲಿ, ಕೊಬ್ಬಿನ ವಸ್ತುವಾದ ಕೊಲೆಸ್ಟರಾಲಿನ ಪ್ರಮಾಣ ರಕ್ತದಲ್ಲಿ ಎಂದಿಗಿಂತಲೂ ಹೆಚ್ಚಾಗಿ ರಕ್ತನಾಳಗಳ ಒಳಪದರಗಳಲ್ಲಿ ಸೇರಿಬಿಟ್ಟು ಧಮನಿಗಳನ್ನು ಗಡುಸಾಗಿಸಿ ನಾಳದಗಲ ಕಿರಿದಾಗುವಂತೆ ಮಾಡುವುದು. ಗುಂಡಿಗೆಯ ಧಮನಿಗಳಲ್ಲಿ ಹೀಗಾಗುವುದೇ ವಯಸ್ಸಾದವರ ಗುಂಡಿಗೆ ರೋಗಗಳಿಗೆ ಈಗ ಸಾಮಾನ್ಯ ಕಾರಣವಾಗುತ್ತಿದೆ. ಒಂದೇ ಕಡೆ ಕುಳಿತು ಕೆಲಸ ಮಾಡುವವರಲ್ಲಿ ಹೀಗಿದ್ದರೂ ಬೆವರು ಸುರಿವಂತೆ ದುಡಿವ ಕೆಲಸಗಾರನಲ್ಲಿ ಹೀಗಾಗದೆಂದೂ ಗೊತ್ತಿದೆ. ಕೊಬ್ಬಿನ ಪ್ರಮಾಣವೇ ಅಲ್ಲದೆ ಅದರ ಗುಣವೂ ಈ ರೋಗಕ್ಕೆ ಕಾರಣ. ಅಪರ್ಯಾಪ್ತ (ಅನ್‌ಸ್ಯಾಚುರೇಟೆಡ್) ಕೊಬ್ಬಿನಾಮ್ಲಗಳಿರುವ ಕಡಲೆಕಾಯಿ, ಕುಸುಬೆ ಬೀಜಗಳ ಎಣ್ಣೆಗಳು ರಕ್ತದಲ್ಲಿನ ಕೊಲೆಸ್ಟರಾಲ್ ಪ್ರಮಾಣವನ್ನು ಹಾಗೆ ಏರಿಸವು. ಆದರೆ ಕೊಬ್ಬರಿ ಎಣ್ಣೆ, ತುಪ್ಪ, ಬೆಣ್ಣೆ, ವನಸ್ಪತಿಗಳಲ್ಲಿ ಪರ್ಯಾಪ್ತವಾದವೇ (ಸ್ಯಾಚುರೇಟೆಡ್) ಹೆಚ್ಚಿರುವುದರಿಂದ, ಇವನ್ನೇ ಯಾವಾಗಲೂ ಬಳಸುತ್ತಿದ್ದರೆ, ರಕ್ತದ ಕೊಲೆಸ್ಟರಾಲಿನ ಪ್ರಮಾಣವನ್ನು ಏರಿಸುತ್ತವೆ. **(ನೋಡಿ– ಕೊಲೆಸ್ಟರಾಲ್)**

**ಖನಿಜಗಳು:** ಮೈಯಲ್ಲಿ ಅನೇಕ ತೆರನ ಖನಿಜ ಧಾತುಗಳಿವೆ. ಬೆಳೆದಿರುವವನೊಬ್ಬ ಸಾಮಾನ್ಯವಾಗಿ ದಿನವೂ 20–30 ಗ್ರಾಂಗಳಷ್ಟನ್ನೂ (ಸೋಡಿಯಂ, ಪೊಟ್ಯಾಸಿಯಂ, ಮ್ಯಾಗ್ನಿಷಿಯಂ, ಸುಣ್ಣಗಳ ಕ್ಲೋರೈಡು, ಸಲ್ಫೇಟು, ಫಾಸ್ಫೇಟುಗಳು) ಹೊರದೂಡುವನು. ದಿನವೂ ಇಷ್ಟನ್ನೂ ಕೂಡಿಸಿ ಕೊಡುತ್ತಿರಬೇಕು. ಬೆಳೆಯುತ್ತಿರುವವರಿಗೆ, ಹಾಲೂಡಿಸುವವರಿಗೆ ಇನ್ನಷ್ಟು ಕೊಡಬೇಕು.

ಆಹಾರದಲ್ಲಿ ಸುಣ್ಣ, ಕಬ್ಬಿಣಗಳು ಸಾಕಷ್ಟಿದ್ದರೆ, ಮೆಗ್ನೀಷಿಯಂ, ತಾಮ್ರ, ಗಂಧಕಗಳ ತೆರನ ಉಳಿದ ಖನಿಜ ಧಾತುಗಳೂ ಬೇಕಿರುವಷ್ಟು ಇರುತ್ತವೆ. ಹೀಗೆ ಮೂಳೆಗಳು, ಹಲ್ಲುಗಳ ಮುಖ್ಯ ಭಾಗವಾದ ಸುಣ್ಣದೊಂದಿಗೆ ಸೇರಿರುವ ರಂಜಕ ಸುಣ್ಣಕ್ಕಿಂತಲೂ ಹೆಚ್ಚಾಗಿ ಹರಡಿರುವುದರಿಂದ ಆಹಾರದಲ್ಲಿ ಇದರ ಕೊರತೆ ಆಗಲಾರದು. ಗುಂಡಿಗೆ ಬಡಿತ, ಸ್ನಾಯು ಕುಗ್ಗುವಿಕೆ, ರಕ್ತ ಹೆಪ್ಪುಗಟ್ಟುವಿಕೆ, ಜೀವಕಣಗಳ ಚಟುವಟಿಕೆ–ಇವೆಲ್ಲಕ್ಕೂ ಸುಣ್ಣ ಬೇಕೇಬೇಕು. ಶ್ರೀಮಂತರ ಉಣಿಸಿನಲ್ಲಿ ಮುಖ್ಯವಾಗಿ ಹಾಲು ಮತ್ತದರ ತಯಾರಿಕೆಗಳಿಂದ ಸುಣ್ಣ ದೊರಕುವುದು. ಉಳಿದವರಲ್ಲಿ ರಾಗಿ, ಕೆಲವು ಸಣ್ಣ ಮೀನು ಮೂಳೆಗಳು, ಕೆಲವು ತರಕಾರಿಗಳು, ಕಚ್ಚಾ ಅಡುಗೆ ಉಪ್ಪು–ಇವೇ ಮುಖ್ಯ ಮೂಲಗಳು. ಎಲ್ಲೆಲ್ಲೂ ಅನೇಕ ಉಣಿಸುಗಳಿಂದ ಕಬ್ಬಿಣ ದೊರೆತರೂ ಕೆಲವರಿಗೆ ಸಾಲದಾಗಬಹುದು. ಮಾಂಸ, ಮೊಟ್ಟೆಯ ಬಂಡಾರ (ಯೋಕ್), ತರಕಾರಿಗಳಲ್ಲಿ ಕಬ್ಬಿಣ ದೊರೆಯುತ್ತದೆ. ಕುಡಿಯುವ ನೀರನ್ನು ತಾಮ್ರದ ಪಾತ್ರೆಗಳಲ್ಲಿಟ್ಟು ಬಳಸುತ್ತಿದ್ದರೆ ಮೈಗೆ ಬೇಕಿರುವ ತುಸು ತಾಮ್ರ ಒಳಸೇರುತ್ತದೆ. ಕಡಲ ಆಹಾರಗಳನ್ನೂ ಅಯೊಡೀನಿರುವ ನೆಲದಲ್ಲಿ ಬೆಳೆದ ತರಕಾರಿಗಳನ್ನೂ, ಕಚ್ಚ ಉಪ್ಪನ್ನೂ, ಸೇವಿಸಿದರೆ ಅಯೋಡೀನ್ ಸಿಗುವುದು. ಊಟದ ತಿಂಡಿ ಪದಾರ್ಥಗಳು, ಉಪ್ಪಿನ ಕಾಯಿಗಳಿಂದ ಮೈಗೆ ಬೇಕಿರುವಷ್ಟು ಅಡುಗೆ ಉಪ್ಪು (ಸೋಡಿಯಂ ಕ್ಲೋರೈಡು) ದೊರೆಯುತ್ತದೆ. ಆಂಧ್ರಪ್ರದೇಶ ಮತ್ತಿತರೆಡೆಗಳಲ್ಲಿ ಕುಡಿಯುವ ನೀರಲ್ಲಿ ಫ್ಲೋರೀನ್ ಹೆಚ್ಚಿರುವುದರಿಂದ ಹಲ್ಲು, ಮೂಳೆಗಳ ರೋಗ ಕಾಣಿಸಿಕೊಂಡಿದೆ. ಆದರೆ ಕುಡಿವ ನೀರಲ್ಲಿ ದಶಲಕ್ಷದಲ್ಲಿ ಒಂದು ಪಾಲಿನಷ್ಟಾದರೂ ಇದ್ದರೆ ಹಲ್ಲು ಹುಳುಕಾಗುವುದು ತಪ್ಪುತ್ತದೆ. ಪ್ರಗತಿಪರ ರಾಷ್ಟ್ರಗಳಲ್ಲಿ ಇದನ್ನು ಸೇರಿಸುವುದು ವಾಡಿಕೆ.

**ಜೀವಾತುಗಳು:** ಮೈಯಲ್ಲಿನ ಹಲವಾರು ಜೀವಾಳದ ಕೆಲಸಗಳಿಗೆ ತೀರ ತುಸು ಪ್ರಮಾಣದಲ್ಲಿ ಬೇಕೇಬೇಕಿರುವ ಆಹಾರ ವಸ್ತುಗಳಿವು. ಇವು ಮೈಗೆ ಶಕ್ತಿಯನ್ನು ಒದಗಿಸವು. ಜೀವಾತುಗಳು ಇರುವವನ್ನು ಕಾಪಾಡುವ (ಪ್ರೊಟೆಕ್ಟಿವ್) ಆಹಾರಗಳು ಎನ್ನುವುದುಂಟು. ಮೆಕ್ಕಾಲಂ ಮೊದಲು ಈ ಹೆಸರನ್ನು ಸೂಚಿಸಿದಾಗ ಹಾಲು, ಸೊಪ್ಪಿನ ಪಲ್ಲೆಗಳಿಗೆ ಈ ಹೆಸರಿತ್ತು. ಆಗಿನ ಕಾಲದ ಅಮೆರಿಕದ ಉಣಿಸಿನಲ್ಲಿ ಸುಣ್ಣ, ಎ ಜೀವಾತುಗಳು ಕೊರೆ ಇದ್ದುದರಿಂದ ಅವೆರಡನ್ನು ಸೇವಿಸಲು ಈ ಹೆಸರು ಸೂಚನೆಯಾಗಿತ್ತು. ಇನ್ನಷ್ಟು ಸಂಶೋಧನೆಗಳು ನಡೆದಾಗ ಈ ಕಾಪಾಡುವ ಆಹಾರದಲ್ಲಿ ಇತರ ಪುಷ್ಟಿಕರ ವಸ್ತುಗಳೂ ಇರಬೇಕೆಂದು ಗೊತ್ತಾಯಿತು. ಈ ಹೆಸರು ಈಗ ಬಳಕೆಯಲ್ಲಿಲ್ಲ.

ಜೀವಾತುಗಳಲ್ಲಿ ಎರಡು ಗುಂಪುಗಳಿವೆ. ಒಂದರವು ನೀರಲ್ಲಿ ವಿಲೀನವಾದರೆ, ಇನ್ನೊಂದರವು ಕೊಬ್ಬು, ಎಣ್ಣೆಗಳಲ್ಲಿ ವಿಲೀನವಾಗುತ್ತವೆ. ಎ.ಡಿ.ಇ.ಕೆ. ಜೀವಾತುಗಳು ನೀರಲ್ಲಿ ವಿಲೀನವಾಗದೆ ಕೊಬ್ಬಿನಲ್ಲಿ ಕರಗುವುದರಿಂದ ಕೊಬ್ಬುಗಳಲ್ಲಿ ಸಿಗುವುವು. ಬೆಣ್ಣೆಯಲ್ಲಿ ಎ ಜೀವಾತು ಹೆಚ್ಚಾಗಿರುವುದು: ಒಂದಿಷ್ಟು ಡಿ ಜೀವಾತೂ ಇರುತ್ತದೆ. ಮೊಟ್ಟೆಯ ಬಂಡಾರದಲ್ಲಿ ಎರಡೂ ಸಾಕಷ್ಟಿವೆ. ಮೀನಿನಲ್ಲಿ ಕೊಬ್ಬು, ಪ್ರಾಣಿಗಳ ಅಲ್ಲದೆ ಮೀನುಗಳ ಈಲಿಯ ಎಣ್ಣೆಗಳಲ್ಲಿ (ಲಿವರ್ ಆಯಿಲ್ಸ್) ಎರಡೂ ಹೆಚ್ಚಾಗಿರುವುವು. ಭಾರತದ ಪಶ್ಚಿಮ ತೀರದ ಚೊರಮೀನಿನಲ್ಲಿ (ಷಾರ್ಕ್) ಎ ಜೀವಾತು ವಿಪರೀತವಾಗಿರುವುದು. ಬೀಜಗಳಿಂದ ತೆಗೆದ ಎಣ್ಣೆಗಳಲ್ಲಿ ಇ ಜೀವಾತು ಇರುವುದಾದರೂ ಎ.ಡಿ. ಜೀವಾತುಗಳು ಇಲ್ಲದ್ದರಿಂದಲೇ ವನಸ್ಪತಿ ತಯಾರಿಕೆಯಲ್ಲಿ ಇವನ್ನು ಸೇರಿಸಬೇಕಾಗುತ್ತದೆ. ಇ.ಕೆ. ಜೀವಾತುಗಳು ಹಸಿರುಸೊಪ್ಪುಗಳಲ್ಲಿರುತ್ತವೆ. ಗಜ್ಜರಿ (ಕ್ಯಾರೆಟ್), ತಕ್ಕಾಳಿ (ಟೊಮ್ಯಾಟೊ) ತೆರನವಲ್ಲಿರುವ ಹಳದಿ ಬಣ್ಣ ವಸ್ತುವಾದ ಗಜ್ಜರಿಕದಿಂದಲೂ (ಕೆರೊಟೀನ್) ಎ ಜೀವಾತನ್ನು ಪಡೆಯಬಹುದು. ಬೆಣ್ಣೆ, ಮೊಟ್ಟೆಯ ಬಂಡಾರಗಳಲ್ಲಿ ಎ ಜೀವಾತಿನೊಂದಿಗೆ ಗಜ್ಜರಿಕವೂ ಇರುತ್ತದೆ. ಡಿ ಜೀವಾತು ನಿಸರ್ಗದಲ್ಲಿ ಹಾಗೇ ಬಹಳವಾಗಿ ಸಿಗದಿದ್ದರೂ ಮೈ ಚರ್ಮದಡಿಯಲ್ಲಿರುವ ಎರ್ಗೊಸ್ಟಿರಾಲಿನ ಮೇಲೆ ಬಿಸಿಲು ತಾಕಿದಾಗ ತಯಾರಾಗುತ್ತದೆ.

ಬಿ ಸಮ್ಮಿಶ್ರ (ಕಾಂಪ್ಲೆಕ್ಸ್), ಸಿ ಜೀವಾತುಗಳು ನೀರಲ್ಲಿ ವಿಲೀನವಾಗುವುದರಿಂದ ಆಹಾರಗಳನ್ನು ನೆನೆಹಾಕಿದಾಗ, ತೊಳೆದಾಗ, ಬೇಯಿಸಿದಾಗ ನೀರಲ್ಲಿ ಹೋಗಿಬಿಡುತ್ತವೆ. ಅಲ್ಲದೆ ಅನ್ಯೂರಿನ್ (ಬಿ ಜೀವಾತು), ಸ್ಕರ್ವಿರೋಧಕಾಮ್ಲಗಳು (ಸಿ ಜೀವಾತು) ತೊಳೆದು ಜಾಲಿಸಿ ಬೇಯಿಸಿದಾಗ ಸುಲಭವಾಗಿ ಹಾಳಾಗುತ್ತವೆ. ದಪ್ಪನೆಲ್ಲಿಕಾಯಲ್ಲಿ ಯಾವಾಗಲೂ ಇರುವಷ್ಟು ಸಿ ಜೀವಾತು ಇನ್ನಾವುದರಲ್ಲೂ ಇಲ್ಲ. ಕಿತ್ತಳೆ ರಸದಲ್ಲಿ ಇರುವುದರ ಸುಮಾರು ಇಪ್ಪತ್ತರಷ್ಟು ಸಿ ಜೀವಾತು ಹಸಿಯ ನೆಲ್ಲಿಕಾಯಿ ರಸದಲ್ಲಿ ಇದೆ. ಒಂದು ನೆಲ್ಲಿಕಾಯಿ ಎರಡು ಕಿತ್ತಳೆ ಹಣ್ಣುಗಳಿಗೆ ಸಮ ಎನ್ನಬಹುದು. ಒಣಗಿಸಿದರೆ, ಬೇಯಿಸಿದರೆ ಹಣ್ಣು, ಹುಳಿಗಾಯಿಗಳಲ್ಲಿನ ಸಿ ಜೀವಾತು ಹಾಳಾಗುತ್ತದೆ. ನೆಲ್ಲಿಕಾಯಿಯಲ್ಲಿ ಹೀಗಾಗದು. ಇದರ ರಸ ಬಲು ಆಮ್ಲವಾದ್ದರಿಂದ ಹೀಗೆ ಮಾಡಿದರೂ ಅಷ್ಟಾಗಿ ಹಾಳಾಗದು. ಆದ್ದರಿಂದ ಬೇಯಿಸಿದ ಉಪ್ಪಿನಕಾಯಿ ತಯಾರಿಸಲು ನೆಲ್ಲಿಕಾಯಿಗೆ ಸಮನಾದ ವಸ್ತು ಇನ್ನೊಂದಿಲ್ಲ. ಬಿ ಸಮ್ಮಿಶ್ರ ಜೀವಾತುಗಳು ಆಹಾರ ವಸ್ತುಗಳಲ್ಲಿ ಹೇರಳವಾಗಿ ಸಿಗುತ್ತವೆ. ನಮ್ಮಲ್ಲಿ ಅನ್ಯೂರಿನ್ ಜೀವಾತು ಚೆನ್ನಾಗಿ ದೊರೆವುದು ಬತ್ತದ ಕಾಳಿನ ಮೊಳಕೆಯಲ್ಲಿ (ಜರ್ಮ್). ಇದರಿಂದಾಗಿಯೇ ಬತ್ತ ಕುಟ್ಟಿ, ಅಕ್ಕಿಯನ್ನು ಹೊಳಪು ಮಾಡುವಾಗ ತವುಡೊಂದಿಗೆ ಇದು ಪೂರಾಹೋಗಿಬಿಡುವುದು. ಕೊಟ್ಟಣದ ಅಕ್ಕಿಯನ್ನೋ ಗಿರಣಿಯಲ್ಲಿ ಅಕ್ಕಿಗೆ

ಹೊಳಪಿಡದೆಯೋ ಬಳಸಿದರೆ, ಅನ್ಯೂರಿನ್ ಕಳೆವುದು ತಪ್ಪುತ್ತದೆ. ಬತ್ತವನ್ನೇ ಬೇಯಿಸಿ ಕುಸುಬಲಕ್ಕಿ ತಯಾರಿಸುವಾಗ ಈ ಜೀವಾತು ಅಕ್ಕಿ ಕಾಳಿನೊಳಗೆಲ್ಲ ತೂರಿಬಿಡುವುದರಿಂದ ಆಮೇಲೆ ಅಕ್ಕಿಗೆ ಎಷ್ಟು ಹೊಳಪುಕೊಟ್ಟರೂ ಜೀವಾತು ಕಳೆಯದು. ಹಾಗೇ ಗೋದಿಯೇ ಮುಖ್ಯ ಆಹಾರವಾಗಿರುವ ನಾಡುಗಳಲ್ಲಿ ಅದನ್ನು ಹಿಟ್ಟಾಗಿ ಬೀಸಿದಾಗ ಕಳೆವ ಅನ್ಯೂರಿನನ್ನು ಆಮೇಲೆ ಕಾಯಿದೆಬದ್ಧವಾಗಿ ಕಡ್ಡಾಯವಾಗಿ ಮತ್ತೆ ಅದರಲ್ಲಿ ಸೇರಿಸುವುದುಂಟು. ಹಾಲು, ಹಾಲಿನ ತಯಾರಿಕೆಗಳು, ಮಾಂಸ, ಉರುಳು ಗೆಡ್ಡೆ, ಮತ್ತಿತರ ತರಕಾರಿಗಳಲ್ಲೂ ಇದೇ ಜೀವಾತಿನೊಂದಿಗೆ ಬಿ ಸಂಮಿಶ್ರ ಜೀವಾತಿನ ಹಲವಾರು ಇತರ ಅಂಶಗಳೂ ದೊರೆಯುತ್ತವೆ. ರೈಬೊಫ್ಲೇವಿನ್ ಮುಖ್ಯವಾಗಿ ಹಾಲಿನಲ್ಲಿ ಹಳದಿ ಬಣ್ಣವಾಗಿರುವುದು. ಮಾಂಸ, ತವುಡುಗಳಲ್ಲಿ ನಿಕೋಟಿನಿಕಾಮ್ಲ (ನಿಯಾಸಿಸ್) ಜೀವಾತು ಇದೆ. ಮುಖ್ಯವಾಗಿ ಈಳೆಯ (ಸಿಟ್ರಿಕ್) ಜಾತಿಗೆ ಸೇರಿದ, ಆಗತಾನೇ ಕಿತ್ತ ಹಣ್ಣುಗಳೂ ತಕ್ಕಾಳಿ, ಹಸಿರು ತರಕಾರಿಗಳು, ಆಲೂಗೆಡ್ಡೆ, ಸಿ ಜೀವಾತನ್ನು ಒದಗಿಸುವುವು. ಹಸಿಯ ಹಾಲಲ್ಲೂ ಪ್ರಾಣಿಯ ಈಲಿಯ ಹಸಿಮಾಂಸದಲ್ಲೂ ಇದು ತುಸು ಸಿಗುವುದು **(ನೋಡಿ–ಜೀವಾತುಗಳು)**.

**ಮೈಪುಷ್ಟಿಗಾಗಿ ಬೇಡಿಕೆ:** ಒಬ್ಬನ ಪುಷ್ಟಿಗಾಗಿ ಬೇಕಿರುವುದಕ್ಕೆ ತಕ್ಕಂತೆ ಮಾತ್ರ ಆಹಾರ ವಸ್ತುಗಳ ಪುಷ್ಟಿಗುಣವನ್ನು ನಿರ್ಧರಿಸಬೇಕು. ಇಂದಿನ ಹೆಚ್ಚಿನ ತಿಳಿವಳಿಕೆಯಂತೆ, ಊಟಿಸು ಆರೋಗ್ಯಕರವಾಗಿಯೂ ಪುಷ್ಟಿಕರವಾಗಿಯೂ ಇರಲು ನಮ್ಮ ಹಸಿವು ಒಂದೇ ನಿಜವಾದ ಸೂಚಕವಲ್ಲ. ಒಂದು ನಾಡಿನ ಬೇಸಾಯ ಇಲ್ಲವೇ ಆಹಾರ ನೀತಿಯನ್ನು ರೂಪಿಸುವಾಗ, ಬಹಳ ಮಂದಿಗೆ ದೊರೆವ ಆಹಾರವಸ್ತುಗಳನ್ನು ಕಂಡುಕೊಂಡು, ಅಲ್ಲಿನ ಜನರ ಪುಷ್ಟಿಯ ಬೇಡಿಕೆಗಳನ್ನು ಗಮನಿಸಬೇಕು. ಆಹಾರ ನಿಯಂತ್ರಣ ಇದ್ದರಂತೂ ಇನ್ನೂ ಮುಖ್ಯ. ಪುಷ್ಟಿಕರ ಊಟಿಸುಗಳ ಪಟ್ಟಿಗಳು ಹಲವಾರು ಹೆಸರಾಗಿವೆ. ಸಮತೋಲ ಊಟಿಸನ್ನು ಯೋಜಿಸುವಾಗ ಪ್ರೋಟೀನುಗಳು, ಕೊಬ್ಬುಗಳು, ಖನಿಜಗಳು, ಜೀವಾತುಗಳಿಗೆ ಮೊದಲು ಗಮನ ಕೊಟ್ಟು ಉಳಿದ ಪಾಲಿನಲ್ಲಿ ಹಿಟ್ಟು, ಸಕ್ಕರೆಗಳನ್ನು ತುಂಬಬೇಕು. ಸಂಸ್ಥೆಗಳಲ್ಲಿ, ನಿಲಯಗಳಲ್ಲಿ ತಮಗಾಗಿ ಸಮತೋಲ ಆಹಾರವನ್ನು ಲೆಕ್ಕ ಹಾಕುವವರಿಗೆ ಭಾರತೀಯ ವೈದ್ಯ ಸಂಶೋಧನೆಯ ಮಂಡಲಿ (ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್) 1963ರಲ್ಲಿ ಕನ್ನಡದಲ್ಲಿ ಪ್ರಕಟಿಸಿರುವ ಪುಸ್ತಕದಲ್ಲಿ, ಭಾರತೀಯ ಆಹಾರಗಳ ಪುಷ್ಟಿಯ ಬೆಲೆ ಮತ್ತು ತೃಪ್ತಿಕರ ಊಟಿಸುಗಳ ಯೋಜನೆಯಲ್ಲಿ ಹೆಚ್ಚಿನ ವಿವರಗಳು ಸಿಗುತ್ತವೆ.

**ಮೈ ಶಕ್ತಿಗಾಗಿ ಬೇಡಿಕೆ:** ಒಬ್ಬನ ಮೈ ತೂಕವನ್ನು ಬಹಳ ಕಾಲ ಒಂದೇ ಸಮನಾಗಿ ಇರಿಸುವಷ್ಟೇ ಅವನಿಗೆ ಯಾವಾಗಲೂ ಬೇಕಾಗುವ ಶಕ್ತಿ ಎಂದು ಪರಿಗಣಿಸಬಹುದು. ಬೆಳೆವ ಮಕ್ಕಳಲ್ಲಾದರೆ, ಬೆಳೆವಣಿಗೆ ಒಂದೇ ಸಮನಾಗಿ ಇರಿಸುವಷ್ಟೇ ಎನ್ನಬಹುದು. ಸಾಮಾನ್ಯವಾಗಿ ಊಟಿಸಲ್ಲಿನ ಹಿಟ್ಟು, ಸಕ್ಕರೆಯಿಂದಲೇ ಇದು ಒದಗುವುದಾದರೂ ಮಿಗಿಲಾದ ವೇಳೆಯಲ್ಲಿ ಕೊಬ್ಬುಗಳು, ಪ್ರೋಟೀನುಗಳಿಂದಲೂ (ಮದ್ಯಸಾರದಿಂದಲೂ) ದೊರೆಯುವುದು.

ಕಂಡಂತೆ ಯಾವ ಕೆಲಸವನ್ನು ಮಾಡದೆ ಸುಮ್ಮನೆ ಒಂದೆಡೆ ಬಿದ್ದಿರುವವನಿಗೂ ಅವನ ಉಸಿರಾಟ, ರಕ್ತಪರಿಚಲನೆ ಮೈಕಾವು ಇತ್ಯಾದಿಗಳಿಗೂ ಶಕ್ತಿ ಒದಗಿಸಬೇಕು. ದುಡಿವವರಿಗಂತೂ ತಕ್ಕಷ್ಟು ಶಕ್ತಿಕೊಡುವ ಊಟಿಸು ಒದಗಬೇಕು. ಊಟಿಸಿನ ಪ್ರಮಾಣವನ್ನು ನಿರ್ಧರಿಸುವಾಗ ಹಸಿವು ನೀಗುವಷ್ಟು ಎನ್ನುವ ಹಾಗಿಲ್ಲ. ಏಕೆಂದರೆ ಬಹು ಕಾಲ ಕಡಿಮೆ ತಿನ್ನುವ ಅಭ್ಯಾಸ ಆಗಿಬಿಟ್ಟರೆ ಅಷ್ಟಕ್ಕೇ ಮೈ ಒಗ್ಗಿಬಿಡುತ್ತದೆ. ಭಾರತೀಯರಲ್ಲಿ ಶಕ್ತಿ ಒದಗಿಸುವ ಕ್ಯಾಲೊರಿ (ಉಷ್ಣಮಾನ) ಬೇಡಿಕೆಗಳನ್ನು ಪುಷ್ಟಿ ಆಹಾರ ಸಲಹಾಮಂಡಲಿ ನಿರ್ಧರಿಸಿದೆ. ಇದರಲ್ಲಿ, ಹರೆಯಕ್ಕೆ ಬಂದ ಗಂಡಸಿಗೆ ಬೇಕಾದದ್ದನ್ನು ಒಂದು ಎಂದಿಟ್ಟುಕೊಂಡರೆ, ಹೆಂಗಸಿಗೆ 0.9, 9–12 ವರುಷಗಳ ಮಕ್ಕಳಿಗೆ 0.8, 7–9 ವರುಷದವರೆಗೆ 0.7 ಇತ್ಯಾದಿ ಆಗುತ್ತವೆ. ಈ ಲೆಕ್ಕ ಕೇವಲ ಶಕ್ತಿ ಒದಗಿಸುವುದರದೇ ಹೊರತು ಪುಷ್ಟಿಗೆ ಸಂಬಂಧಿಸಿಲ್ಲ. ಅಲ್ಲದೆ ಕೆಲಸದ ದುಡಿಮೆ, ಚಟುವಟಿಕೆ, ವಯಸ್ಸು, ಹವಾಗುಣ ಇವನ್ನೂ ಗಮನಿಸಬೇಕು. ಬಿಸಿಲುಗಾಲಕ್ಕಿಂತಲೂ ಚಳಿಗಾಲದಲ್ಲಿ ಹೆಚ್ಚು ಬೇಕಾಗುವುದು.

**ಬಸಿರು, ಹಾಲೂಡಿಕೆ:** ಎಳೆಗೂಸುಗಳಿಗೆ ತಾಯ ಹಾಲಿಗಿಂತ ಮಿಗಿಲಾದ ಊಟಿಸು ಇನ್ನಿಲ್ಲ. ಆದರೆ ಕೂಸು ಬೆಳೆಯಲೂ ಏಳಿಗೆಯಾಗಲೂ ಎಷ್ಟೋ ವೇಳೆ ಇದೊಂದೇ ಸಾಕಾಗದು. ಹಾಗಾಗಬೇಕಾದರೆ ಬಸಿರಲ್ಲೇ ಒಳ್ಳೆಯ ಆಹಾರ, ಆರೋಗ್ಯ ಪಾಲನೆ ತಾಯಿಗೆ ಸಿಗುತ್ತಿರಬೇಕು. ತಾಯಿಯ ಪಾಲನೆ ಚೆನ್ನಾಗಿಲ್ಲವಾದರೂ ಹಾಲೂಡಿಸಲು ಅಡ್ಡಿಯಾಗದು. ಕೂಸು ತನಗೆ ಬೇಕಿರುವ ಪುಷ್ಟಿಕರ ವಸ್ತುಗಳಷ್ಟನ್ನೂ ತಾಯಿಂದ ಹೀರಿಬಿಡುವುದರಿಂದ ಅವಳ ಆರೋಗ್ಯ ಕೆಡುತ್ತದೆ. ತಾಯ ಆಹಾರದಲ್ಲಿ ಸುಣ್ಣ ಸಾಲದಿದ್ದರಂತೂ ಕೂಸು ತನಗೆ ಬೇಕಾದಷ್ಟನ್ನೂ ತಾಯಿಯಿಂದ ಎತ್ತಿಕೊಳ್ಳುವುದರಿಂದ ತಾಯಿಗೇ ಕೊರೆಯಾಗುವುದು. ತಾಂಬೂಲದೊಂದಿಗೆ ಸುಣ್ಣ ಬೇಕಾದಷ್ಟು ಮೈಗೆ ಸೇರುವುದು. ಬಸುರಿಯರು, ಬಾಣಂತಿಯರಿಗೆ ಎಂದಿಗಿಂತಲೂ ತುಸು ಹೆಚ್ಚು ಊಟಿಸು ಬೇಕಿರುವುದು. ಮುಖ್ಯವಾಗಿ ಪೂರ್ಣ ಪ್ರೋಟೀನುಗಳು, ಜೀವಾತುಗಳು, ಖನಿಜಗಳಂತೂ ಹೆಚ್ಚಿರಬೇಕು. ಉದಾಹರಣೆಗೆ ಸುಣ್ಣ ಒಂದಕ್ಕೆ ಒಂದೂವರೆ ಎರಡರಷ್ಟೂ ಕಬ್ಬಿಣ ಒಂದಕ್ಕೆ ಒಂದೂ ಕಾಲರಷ್ಟೂ ಮಿಗಿಲಾಗಿರಬೇಕು. ಜೀವಾತುಗಳಂತೂ ಹೆಚ್ಚಾಗಿರಲೇಬೇಕು.

**ಎಳೆಗೂಸುಗಳು:** ಮೈಯ ಇತರ ಬೇಡಿಕೆಗಳೊಂದಿಗೆ ಎಳೆಗೂಸುಗಳ ಹೆಚ್ಚಿನ ಬೆಳೆವಣಿಗೆಗಾಗಿ ಊಟಿಸು ಬೇಕು. ಅವುಗಳ ತೂಕದಂತೆ ಬೆಳೆದವರ ಅಗತ್ಯಕ್ಕಿಂತ ನಾಲ್ಕರಷ್ಟು ಪ್ರೋಟೀನುಗಳನ್ನು ಸೇವಿಸಲು ನೀಡಬೇಕು. ಮೊದಲ ಒಂದು ವರ್ಷ ಹಾಲೇ ಮುಖ್ಯ ಊಟಿಸು. ಆದರೆ ಇದನ್ನು ಒದಗಿಸುವ ರೂಪಗಳು ಬೇರೆ ಬೇರೆ. ಚೆನ್ನಾಗಿ ಬೆಳೆಯುತ್ತಿರುವ ಕೂಸಿಗೆ ಆರು ತಿಂಗಳ ಮೇಲೆ ತಾಯ ಹಾಲು ಸಾಕಾಗದು. ತಾಯಿಯ ಹಾಲು ಕುಡಿಯುತ್ತಿದ್ದರೆ, ಬೇರಾವ ಊಟಿಸೂ ಬೇಕಿಲ್ಲ ಎನ್ನುವುದು ಸರಿಯಲ್ಲ. ಬೇರೆ ಸಸ್ತನಿ ಹಾಲಿಗಿಂತ ತಾಯ ಹಾಲಲ್ಲಿ ಸಕ್ಕರೆ ಹೆಚ್ಚು. ತಾಯ ಹಾಲು ಸಾಲದಾದಾಗ, ಇಲ್ಲವಾದಾಗ, ಸಾಮಾನ್ಯವಾಗಿ ಇಂಗಿಸಿ ಒಣಗಿಸಿದ ಹಾಲಿನ ಡಬ್ಬದ ಪುಡಿಯನ್ನು ಕೊಡಬೇಕಾಗುವುದು. ಹಸು, ಆಡು, ಕತ್ತೆಗಳ, ಸೋಯಾ ಅವರೆಯ ಹಾಲುಗಳನ್ನೂ ಕೆಲವೆಡೆ ಕೂಡುವುದು ರೂಢಿ. ಶಕ್ತಿ ಕೊಡಲು ಸಕ್ಕರೆ ಸೇರಿಸಬಹುದು. ನೆಲ್ಲಿಕಾಯಿ ರಸ, ಕಿತ್ತಳೆ, ಮೂಸಂಬಿಗಳ ರಸಗಳನ್ನು ಸ್ಕರ್ವಿರೋಧಕಾಮ್ಲಕ್ಕಾಗಿ (ಅಸ್ಕಾರ್ಬಿಕ್ ಆಮ್ಲ, ಸಿ ಜೀವಾತು) ಎಳೆಯದರಲ್ಲೇ ತುಸು ಕೊಡುತ್ತ ಬರಬುಹುದು. ಎಲುಮುರುಟು (ರಿಕೆಟ್ಸ್) ಆಗುವುದನ್ನು ತಪ್ಪಿಸಲೂ ಮೂಳೆಗಳು ಸರಿಯಾಗಿ ಬೆಳೆಯುವುದಕ್ಕೂ ದಿನವೂ 500 ಅಂತಾರಾಷ್ಟ್ರೀಯ ಏಕಮಾನಗಳಷ್ಟು ಡಿ ಜೀವಾತನ್ನು ಒದಗಿಸಬೇಕು. ಎ ಜೀವಾತನ್ನೂ ಹೀಗೇ ಸೇರಿಸಬೇಕು. ಆರು ತಿಂಗಳು ತುಂಬುವ ತನಕ ಹಿಟ್ಟಿನ ಗಂಜಿಯನ್ನು ಕೂಸು ಅರಗಿಸಿಕೊಳ್ಳದು. ಕೂಸು ಬೆಳೆದಂತೆಲ್ಲ ಹೆಚ್ಚಿನ ಶಕ್ತಿ ನೀಡಲು ಖನಿಜಗಳು, ಜೀವಾತುಗಳನ್ನು ಹಿಟ್ಟಿನ ಸರಿ (ಗಟ್ಟಿ ಗಂಜಿ), ಸಜ್ಜಿಗೆಗಳನ್ನೂ ಬೇಯಿಸಿ ಕಿವುಚಿದ ಹಣ್ಣು, ತರಕಾರಿಗಳನ್ನೂ ಕೊಡುತ್ತ ಬರಬೇಕಾಗುವುದು. ಮಾಂಸಾಹಾರಿಗಳಲ್ಲಿ ಮುಖ್ಯವಾಗಿ ಕಬ್ಬಿಣ ಇರುವುದರಿಂದ, ಹಾಲು ಬಿಡಿಸಲು, ಮೊಟ್ಟೆಗಳನ್ನೋ, ನುಣ್ಣಗೆ ಬೇಯಿಸಿದ ಮಾಂಸವನ್ನೋ ಅದರ ರಸವನ್ನೋ ಇತರ ಗಟ್ಟಿ ಊಟಿಸಿನೊಂದಿಗೆ ಕೊಡಬಹುದು. ಮಾಂಸದಿಂದ ಪ್ರೋಟೀನು, ಕಬ್ಬಿಣದ ತೆರನ ಖನಿಜಗಳು, ಬಿ ಸಂಮಿಶ್ರ ಜೀವಾತುಗಳು ದೊರೆಯುವುವು.

ಹಾಲು ಬಿಡಿಸಿದ ಮೇಲೆ, ಕೂಸಿನ ಊಟಿಸಿನಲ್ಲಿ ಪ್ರೋಟೀನುಗಳು ಅದರ ಆರೋಗ್ಯಕ್ಕಾಗಿ ಬಲು ಮುಖ್ಯ. ಹಾಲು ಸಿಗದಿರುವ, ಸಾಕಾದಷ್ಟು ದೊರೆಯದ ನಾಡುಗಳಲ್ಲಿ ಹಾಲು ಬಿಡಿಸಿ ಗಂಜಿ, ಅಂಬಲಿಗಳನ್ನು ಕೊಡುವ ವೇಳೆಗೆ ಕ್ವಾಷಿಯಾರ್ಕರ್ ಎಂಬ ಪುಷ್ಟಿಗೊರೆಯ ಬೇನೆ ಎಳೆಗೂಸುಗಳಲ್ಲಿ ತೋರುವುದು. ಈ ಬೇನೆ ಮೇಲ್ಮೇಲೇ ತೋರಿಯೂ ತೋರದಂತೆ ಇರಬಹುದು; ಇಲ್ಲವೇ ಅದು ವಿಪರೀತ ಆಗಿಬಿಟ್ಟು ಕೂಸು ಅದಕ್ಕೆ ಬಲಿಯಾಗಬಹುದು. ಇದರ ಚಿಕಿತ್ಸೆಗೆ ಹಾಲೇ ಒಳ್ಳೆಯದಾದರೂ ಕಾಳುಗಳಿಂದ ತೆಗೆದ ಪ್ರೋಟೀನು ಮಿಶ್ರಣಗಳಿಂದಲೂ ಗುಣ ಕಂಡಿದೆ. ಮೈಸೂರಿನಲ್ಲಿರುವ ಕೇಂದ್ರ ಆಹಾರ ತಾಂತ್ರಿಕ ಸಂಶೋಧಕ ಸಂಸ್ಥೆ ತಯಾರಿಸಿರುವ ಹಲಉದ್ದೇಶ ಆಹಾರ (ಮಲ್ಟಿಪರ್ಪಸ್ ಫುಡ್) ಈ ಬಗೆಯದೇ.

ಮಕ್ಕಳಿಗೆ ಊಟಿಸುವಾಗ ನೈರ್ಮಲ್ಯ ಬಲು ಮುಖ್ಯ. ಏಕೆಂದರೆ ಸೋಂಕುಗಳನ್ನು ಎದುರಿಸುವ ಬಲ ಕೂಸುಗಳಲ್ಲಿ ಆಗ ತಾನೇ ಬೆಳೆಯುತ್ತಿರುವುದು. ಕೂಸಿನ ಊಟಿಸು, ಅದರಲ್ಲೂ ಹಾಲು, ಏಕಾಣುಜೀವಿಗಳು (ಬ್ಯಾಕ್ಟೀರಿಯ) ಬೆಳೆಯಲು ಬಲು ಒಳ್ಳೆಯ ನಡುವರ್ತಿ. ಇದರಿಂದಲೇ ಹಾಲನ್ನು ಉಕ್ಕಾರಿಸಬೇಕು. ಕುದಿಸಿ ಜೋಪಾನಿಸಿ ಇಟ್ಟಿರಬೇಕು. **(ನೋಡಿ– ಎಳೆಗೂಸುಗಳ–ಪಾಲನೆ)**

**ಬೆಳೆದವರು:** ಬೆಳೆದ ಮಕ್ಕಳ ಬೇಕುಗಳು ಹೆಚ್ಚುತ್ತ ಹೋಗುತ್ತವೆ. ಆರೋಗ್ಯದಿಂದಿರುವ ಮಕ್ಕಳಿಗೆ ತಿನ್ನಲು ಬಲವಂತ ಮಾಡಬೇಕಾಗೇ ಇಲ್ಲ. ಗಾತ್ರದಲ್ಲಿ ಕಿರಿದಾದರೂ ಪುಷ್ಟಿಕರ ಊಟಿಸನ್ನು ಹಸಿದ ಮಗುವಿನ ಮುಂದಿರಿಸಿದರೆ ತನಗೆ ತಾನೇ ತಿನ್ನುವುದು. ಯಾವ ಒತ್ತಾಸೆ, ನೆರವುಗಳೂ ಬೇಕಿಲ್ಲ. ಮಕ್ಕಳಿಗೆ ಬೇಕಿರುವುದು ಸಾಂದ್ರೀಕರಿಸಿದ ಪುಷ್ಟಿಕರ ಊಟಿಸು. ಹರೆತನದಲ್ಲಿ ಮೈ, ಮನಗಳು ಎರಡರಲ್ಲೂ ಬಲು ಬೇಗನೆ ಬೆಳೆದು ಪರಿಸರ, ಒಂದಿಗರೊಂದಿಗೆ ಹೊಂದಿಕೊಳ್ಳಲೋಸುಗ ಸಾಮಾನ್ಯ ಹರೆಯದವನಿಗಿಂತಲೂ ಹೆಚ್ಚು ಆಹಾರ ಬೇಕು. ಹರೆಯ ದಾಟಿ ಬೆಳೆದಿರುವವರಿಗೆ ಅವರ ಮೈಗಾತ್ರ, ವಯಸ್ಸು, ಚಟುವಟಿಕೆಗಳಿಗೆ ತಕ್ಕನಾಗಿ ಪುಷ್ಟಿಕರ ಊಟಿಸನ್ನು ಒದಗಿಸಬೇಕು. ವಯಸ್ಸಾದಂತೆಲ್ಲ ಶಕ್ತಿಗಾಗಿ ಬೇಡಿಕೆಗಳು ಕಡಿಮೆ ಆಗುವುದರಿಂದ ಅದಕ್ಕೆ ಸರಿಯಾದ ಆಹಾರವನ್ನೂ ತಗ್ಗಿಸುತ್ತ ಹೋಗದಿದ್ದಲ್ಲಿ ಮೈ ತೂಕ ಬರಿದೇ ಏರುತ್ತದೆ. ವಯಸ್ಸಾದ ಹಾಗೆಲ್ಲ ಯಾವಾಗಲೂ ಹಸಿವನ್ನು ನೆಚ್ಚಿಕೊಂಡು ಊಟಿಸನ್ನು ತುಂಬಿಕೊಳ್ಳಬಾರದು. ದೊಡ್ಡವರು ಊಟಿಸಿನ ವಿಚಾರ ಇನ್ನೂ ಚೆನ್ನಾಗಿ ತಿಳಿಯಬೇಕು. ಮೈ ಶಕ್ತಿಗಾಗಿ ಅಷ್ಟಾಗಿ ಬೇಕಿಲ್ಲವಾದರೂ ಅವರ ಪ್ರೋಟೀನು, ಖನಿಜಗಳು, ಜೀವಾತುಗಳ ಬೇಡಿಕೆಗಳು ಚಿಕ್ಕವರಷ್ಟೇ ಇರುವಂತೆ ತೋರುವುವು. ಅಂತೂ ವಯಸ್ಸಾದಂತೆಲ್ಲ ಊಟಿಸನ್ನೂ ಬದಲಾಯಿಸುತ್ತ ಹೋಗಬೇಕು. ಇದರೊಂದಿಗೆ ಹಲ್ಲು ಉದುರಿಕೆ, ಮತ್ತಿತರ ತೊಂದರೆಗಳಿದ್ದರೆ, ಅವಕ್ಕೆ ತಕ್ಕ ಹಾಗೆ ಊಟಿಸಿನ ರೂಪವನ್ನೂ ಮಾರ್ಪಡಿಸಿಕೊಳ್ಳಬೇಕು.

**ಕಾಯಿಲೆಯವರು:** ಆರೋಗ್ಯವಾಗಿರಲು ಇನ್ನೂ ಹೆಚ್ಚಾಗಿ ಕಾಯಿಲೆಯವರಿಗೆ ಊಟಿಸಿನ ಪಥ್ಯ ಬಹಳ ಹಿಂದಿನ ಕಾಲದಿಂದಲೂ ಮುಖ್ಯ ಎನಿಸಿದೆ. ಆದರ್ಶವಾದಿ ಎನಿಸಿಕೊಂಡ ಫ್ಲಾರೆನ್ಸ್ ನೈಟಿಂಗೇಲ್ (1860) ಕೂಡ ಪಥ್ಯದತ್ತ ವೈದ್ಯರ ಗಮನ ಸೆಳೆದಿದ್ದಳು. ಕಾಯಿಲೆ ಬಿದ್ದಿರುವವರಿಗೆ ತಿನ್ನಬೇಕೆನಿಸುವ, ಹಸಿವು ಹುಟ್ಟಿಸಿ ಸುಲಭವಾಗಿ ಅರಗಿ, ಪುಷ್ಟಿಕರವಾಗುವ ಊಟಿಸಿನ ಹೆಚ್ಚಳಿಕೆಯನ್ನು ಒತ್ತಿ ಹೇಳಿದ್ದಳು. ಅಂದಿನಿಂದೀಚೆಗೆ ಕಾಯಿಲೆ ಬಿದ್ದವರಿಗೆ ಪುಷ್ಟಿಕರವಾದ, ಕೆಲವು ರೋಗಗಳಿಗೆ ತಕ್ಕನಾದ, ಪಥ್ಯದ ಊಟಿಸನ್ನು ತಯಾರಿಸುವುದು ಆಸ್ಪತ್ರೆಗಳಲ್ಲಿರುವ ಊಟಿಸುಗಾರನ ಕೆಲಸ. ಕಟ್ಟುನಿಟ್ಟಾದ ಪಥ್ಯಗಳನ್ನು ಮಾಡುವಾಗಲಂತೂ ಬೇಕೇಬೇಕಿರುವ ಪುಷ್ಟಿಕರ ವಸ್ತುಗಳ ಕೊರೆ ಆಗದ ಹಾಗೆ ನೋಡಿಕೊಳ್ಳಬೇಕು.

ಪಟ್ಟಿ 1
ದಿನದಿನದ ಆಹಾರ ಕೈಪಿಡಿ

| | ಹಾಲಿನ ಗುಂಪು | ಮಾಂಸದ ಗುಂಪು (8 ಔನ್ಸುಗಳ ಬಟ್ಟಲುಗಳ ಅಳತೆಯಲ್ಲಿ) | ತರಕಾರಿ ಹಣ್ಣುಗಳ ಗುಂಪು | ರೊಟ್ಟಿ, ಹಿಟ್ಟುಗಳ ಗುಂಪು |
|---|---|---|---|---|
| ಮಕ್ಕಳು<br>ಹರೆಯ ತುಂಬದವರು<br>ಹರೆಯದವರು<br>ಬಸುರಿಯರು<br>ಹಾಲೂಡಿಸುವ ಹೆಂಗಸರು | 3–4<br>4 ಇಲ್ಲವೇ ಇನ್ನಷ್ಟು<br>2 ಇಲ್ಲವೇ ಇನ್ನಷ್ಟು<br>4 ಇಲ್ಲವೇ ಇನ್ನಷ್ಟು<br>6 ಇಲ್ಲವೇ ಇನ್ನಷ್ಟು<br>ಕಿಲಾಟ (ಚೀಸ್). ಐಸ್ ಕ್ರೀಮ್ ಕೊಟ್ಟಷ್ಟು ಹಾಲನ್ನು ಕಡಿಮೆ ಮಾಡಬೇಕು. | 2 ಇಲ್ಲವೇ ಮತ್ತಷ್ಟು ದನಕರು, ಹಂದಿ, ಕುರಿಮರಿ, ಕೋಳಿ, ಬಾತುಗಳ ಮಾಂಸ, ಮೀನು, ಇಲ್ಲವೇ ಮೊಟ್ಟೆ, ಇವುಗಳ ಬದಲಾಗಿ ಕಾಳು, ಬೇಳೆ, ಬೀಜಗಳು | 4 ಇಲ್ಲವೇ ಹೆಚ್ಚಿದಷ್ಟು ಸಿ ಜೀವಾತಿಗಾಗಿ ಈಳೆಜಾತಿಯ ಹಣ್ಣು, ತರಕಾರಿ; ಎ ಜೀವಾತಿಗಾಗಿ ಅಚ್ಚಸುರಿನ ಇಲ್ಲವೇ ಅಚ್ಚಹಳದಿಯ ತರಕಾರಿ; ಕೊನೆಯ ಪಕ್ಷ ದಿನ ಬಿಟ್ಟು ದಿನ | 4 ಇಲ್ಲವೇ ಇನ್ನಷ್ಟು<br>ಇಡೀ ಕಾಳಿನಿಂದ ತೆಗದದ್ದು |

ಪಟ್ಟಿ–2
ಕೆಲೊರಿಗಳು, ಕೆಲವು ಅಗತ್ಯ ಪುಷ್ಟಿ ವಸ್ತುಗಳ ದಿನದ ಬೇಡಿಕೆಗಳು

| | | ನಿವ್ವಳ ಕೆಲೊರಿಗಳು | ಪ್ರೊಟೀನ್ (ಗ್ರಾಂ) | ಸುಣ್ಣ (ಗ್ರಾಂ) | ಕಬ್ಬಿಣ (ಮಿ.ಗ್ರಾಂ) | ಎ. ಜೀವಾತು ಅಂ.ಏ. | ಅನ್ಯೂರಿನ್ (ಮಿ.ಗ್ರಾಂ) | ಸಿ. ಜೀವಾತು (ಮಿ.ಗ್ರಾಂ) | ಡಿ. ಜೀವಾತು (ಮಿ.ಗ್ರಾಂ) |
|---|---|---|---|---|---|---|---|---|---|
| ಗಂಡಸು (55.ಕಿ.ಲೊ. ತೂಕ) | ಕೂತಲ್ಲೆ ಕೆಲಸ<br>ಸಾಮನ್ಯ ಕೆಲಸ<br>ಹೆಚ್ಚು ದುಡಿತ | 2400<br>2800<br>3900 | 55 | 1.0 | | | | | |
| ಹೆಂಗಸು (45.ಕಿ.ಲೊ. ತೂಕ) | ಕೂತಲ್ಲೆ ಕೆಲಸ<br>ಸಾಮನ್ಯ ಕೆಲಸ<br>ಹೆಚ್ಚು ದುಡಿತ<br>ಬಸಿರು (ಕೊನೆಯ 5 ತಿಂಗಳು)<br>ಹಾಲೂಡಿಕೆ | 2000<br>2300<br>3000<br>2300<br>2700 | 45<br>100<br>110 | 1.5<br>2.0 | 20–30 | 3000–4000 | 1.0–2.0 | 50 | 400–800 |
| ಮಕ್ಕಳು | 0–6 ತಿಂಗಳುಗಳು<br>7–12 ತಿಂಗಳುಗಳು<br>1–3 ವರ್ಷಗಳು<br>4–5 ವರ್ಷಗಳು<br>5–6 ವರ್ಷಗಳು<br>6–7 ವರ್ಷಗಳು<br>7–9 ವರ್ಷಗಳು<br>10–12 ವರ್ಷಗಳು | 120/ಕಿ.ಗ್ರಾಂ<br>100/ಕಿ.ಗ್ರಾಂ<br>1200<br>1500<br>1000<br>1800<br>1800<br>2100 | 3.5/ ಕಿ.ಗ್ರಾಂ<br>3.0/ ಕಿ.ಗ್ರಾಂ | 1.0– 1.5 | 10–20 | 3000–4000 | 0.5–1.0 | 30–50 ಇನ್ನಷ್ಟು | 400–800 |
| ಹರೆಯದವರು | 13–15 ವರ್ಷಗಳು<br>ಹುಡುಗರು<br>ಹುಡುಗಿಯರು<br>16–19 ವರ್ಷಗಳು<br>ಹುಡುಗರು<br>ಹುಡುಗಿಯರು | 2100<br>2500<br>2100<br>3150 | 2.5/ಕಿ.ಗ್ರಾಂ<br>2.0/ಕಿ.ಗ್ರಾಂ | | | | | | |

**ಆಹಾರ ತಿಳಿವಳಿಕೆ:** ನಿಜವಾದ ಹಸಿವಿಗೆ ತಕ್ಕಂತೆ ಎಲ್ಲ ಬಗೆಗಳ ಆಹಾರಗಳನ್ನೂ ತೆಗೆದುಕೊಳ್ಳುತ್ತಿದ್ದರೆ, ಯಾರಿಗಾದರೂ ಸರಿಯೆ ಆರೋಗ್ಯವನ್ನು ಸಾಕಷ್ಟು ಚೆನ್ನಾಗಿ ಇರಿಸಿ ಕೊಂಡಿರಲು ಸಾಧ್ಯ. ಯಾರೊಬ್ಬರಾಗಲಿ ಇಡೀ ಕುಟುಂಬವಾಗಲಿ ಪುಷ್ಟಿಗೆಟ್ಟ ಉಣಿಸನ್ನು ಸೇವಿಸಲು ನಾಡಿನ ಇಲ್ಲವೇ ವ್ಯಕ್ತಿಯ ಬಡತನವೂ ತಿಳಿಗೇಡಿತನವೂ ಕಾರಣ ಎನ್ನಬಹುದು. ಆರೋಗ್ಯವಾಗಿರಲು ಪುಷ್ಟಿಕರ ಆಹಾರ ಬೇಕೆನ್ನುವುದರಲ್ಲಿ ಅನುಮಾನವೇ ಇಲ್ಲ. ಎಳೆತನದಲ್ಲಿ ಸರಿಯಾದ ಉಣಿಸಿನಿಂದ ಚೆನ್ನಾದ ಅಡಿಗಟ್ಟು ಹಾಕಿದರೆ, ಮುಂದೆ ಚಟುವಟಿಕೆಯ ತುಂಬು ಬಾಳಿಗೆ ದಾರಿ. ಸಮತೋಲನ ಉಣಿಸು ಯಾವುದೆಂದು ಎಲ್ಲರಿಗೂ ಗೊತ್ತಿರದು. ಹಾಗೇ ಉಣಿಸಾಗುವ ಮೊದಲು, ತಯಾರಿಕೆಯಲ್ಲಿ ಆಹಾರ ಎಷ್ಟು ಬದಲಾಗುವುದೆಂದೂ ಅನೇಕ ಬಳಕೆದಾರರಿಗೆ ತಿಳಿದಿಲ್ಲ. ಇದರಿಂದಲೇ ಪ್ರಪಂಚದ ಎಲ್ಲೆಡೆಗಳಲ್ಲೂ ಪುಷ್ಟಿಕರ ಆಹಾರ ಸೇವನೆಯ ತಿಳಿವಳಿಕೆ ಜನರ ಶಿಕ್ಷಣದಲ್ಲಿ ಸೇರಿರಬೇಕು ಎನ್ನುವುದು ಮನವರಿಕೆ ಆಗುತ್ತಿದೆ. ಆದರೆ, ಈ ತಿಳಿವಳಿಕೆಯನ್ನು ಎಷ್ಟು ಚೆನ್ನಾಗಿ ಕೊಡಬೇಕೆಂಬುದು ಒಂದು ಪ್ರಶ್ನೆಯಾಗಿದೆ.

ಜನರಿಗೆ ದೊರೆವ ಆಹಾರ ಪೂರೈಕೆಗಳ ಪುಷ್ಟಿಗುಣವನ್ನೂ ತಿಳಿವಳಿಕೆ ಕೊಡಬೇಕಿರುವ ಜನರ ತಂಡಗಳಿಗೆ ಬೇಕಿರುವ ಪೌಷ್ಟಿಕ ವಸ್ತುಗಳನ್ನೂ ಅರಿವ ತನಕ, ಪೌಷ್ಟಿಕ ಆಹಾರ ವಿಚಾರವಾಗಿನ ಶಿಕ್ಷಣಕ್ರಮ ಯಾವುದನ್ನೂ ಆರಂಭಿಸಬಾರದೆಂದು ಸಾಮಾನ್ಯವಾಗಿ ಒಪ್ಪಿಗೆಯಿದೆ. ಒಂದು ನಾಡಿನಲ್ಲಿ ಕೈಗೂಡಿದ ಒಂದು ಶಿಕ್ಷಣ ಪದ್ಧತಿಯೇ ಬೇರೆ ಬಗೆಗಳ ಆಹಾರ ತೊಡಕುಗಳಿರುವ ಇನ್ನೊಂದು ನಾಡಿಗೂ ಚೆನ್ನಾಗುವುದು ಎಂದುಕೊಂಡರೆ ತಪ್ಪಾಗುವುದು.

ಸಾಕಷ್ಟು ವಿಜ್ಞಾನ ತಿಳಿದವರಿಗೆ ಪೌಷ್ಟಿಕ ಆಹಾರದ ವಿಚಾರಗಳನ್ನು ರಾಸಾಯನಿಕ ಅಲ್ಲದೆ ಅಂಗಕೆಲಸದ ಮಾತುಗಳಲ್ಲಿ ಹೇಳಿಕೊಡಬಹುದು. ಆದರೆ ನಮ್ಮಲ್ಲಿ ಈ ಮಟ್ಟದ ಜನರು ತೀರ ಕಡಿಮೆ. ಇವರಿಗೆ ಸುಮ್ಮನೆ ಹೇಳುವುದಕ್ಕಿಂತಲೂ ಸಮತೋಲದ ಪುಷ್ಟಿಕರವಾದ, ತಿನ್ನಲು ಚೆನ್ನಾಗಿರುವ, ಸರಿಯಾಗಿ ಅಡುಗೆ ಮಾಡಿದ ಊಟವನ್ನೇ ತೋರಿಸುವುದೇ ಒಳ್ಳೆಯದು. ನಮ್ಮ ಕೆಲವು ಮಕ್ಕಳ ಶಾಲೆಗಳಲ್ಲಿ ನಡುಹಗಲಿನ ತಿನಿಸಾಗಿ ತಯಾರಿಸಿ ಕೊಡುತ್ತಿರುವುದು ಈ ಬಗೆಯ ಒಂದು ಒಳ್ಳೆಯ ಉದಾಹರಣೆ.

ಸರಳ ಪುಷ್ಟಿಕರ ಆಹಾರಶಿಕ್ಷಣದ ಎರಡು ಬೇರೆಬೇರೆ ಪದ್ಧತಿಗಳು ಅನೇಕ ದೇಶಗಳಲ್ಲಿ ಜಾರಿಯಲ್ಲಿವೆ. ಹೆಚ್ಚು ವಿಚಾರಗಳನ್ನು ತಿಳಿಸಿಕೊಡುವ ಒಂದರಲ್ಲಿ, ಆಹಾರಗಳ ಕೆಲಸಗಳನ್ನು ಹೇಳಿಕೊಟ್ಟು, ಯಾವ ಆಹಾರವಸ್ತುಗಳನ್ನು ಆರಿಸಿಕೊಳ್ಳಬೇಕೆಂದು ವಿವರವಾಗಿ ಹೇಳದೆಯೇ ಅವರೇ ಸಮತೋಲದ ಉಣಿಸನ್ನು ಆಯ್ದುಕೊಳ್ಳಲು ನೆರವು ನೀಡುವಂತೆ ಪೌಷ್ಟಿಕ ಆಹಾರದಲ್ಲಿ ಸಾಕಷ್ಟು ತಿಳಿವಳಿಕೆ ನೀಡುತ್ತದೆ. ಇಂಗ್ಲೆಂಡಿನಲ್ಲಿ ಕಳೆದ ಮಹಾಯುದ್ಧದ ಕಾಲದಲ್ಲಿ ಈ ಪದ್ಧತಿ ಜಾರಿಯಲ್ಲಿತ್ತು. ಆಹಾರಗಳು ಮೂರು ಗುಂಪುಗಳಲ್ಲಿ ವಿಂಗಡವಾಗಿದ್ದವು: ಮೈ ಬೆಳವಣಿಗೆಯ ಆಹಾರ; ನಿಯಂತ್ರಿಸುವ, ಕಾಪಾಡುವ ಆಹಾರ; ಉರುವಲು, ಶಕ್ತಿಗಳಿಗಾಗಿ ಆಹಾರ. ಆಹಾರ ವಸ್ತುಗಳ ಅಭಾವ, ತೀವ್ರವಾಗಿ ಶಕ್ತಿ ನೀಡಲೂ ಸಾಕಷ್ಟಿರದ ನಾಡುಗಳಲ್ಲಿನ ಆಹಾರವನ್ನು ಎರಡೇ ಗುಂಪುಗಳಾಗಿ ವಿಂಗಡಿಸಿದರೆ ಸಾಕಾಗಬಹುದು: ಶಕ್ತಿ ನೀಡುವವು; ಕಾಪಾಡುವವು.

ವಿವರಗಳಲ್ಲಿ ಬೇರೆ ಆಗಿದ್ದರೂ ಒಂದಕ್ಕೊಂದು ಬಲುಮಟ್ಟಿಗೆ ಹೋಲುವ ಪದ್ಧತಿಗಳನ್ನು ಇತರ ದೇಶಗಳು ಜಾರಿಯಲ್ಲಿ ತಂದಿವೆ. ಇಲ್ಲಿ ಆಹಾರಗಳು ಅವುಗಳ ಪುಷ್ಟಿಗುಣಗಳಿಗೆ ತಕ್ಕಂತೆ ವಿಂಗಡವಾಗುತ್ತವೆ. ಆದರೆ ಕಲಿವವರ ಉಣಿಸುಗಳಲ್ಲಿ ಕೊರೆಯಾಗಿರುವುದೆಂದು ಗೊತ್ತಾಗಿರುವ ಪುಷ್ಟಿಕರ ಅಂಶಗಳು ಹೆಚ್ಚು ಒದಗುವಂತೆ ಗುಂಪುಗಳ ವಿಂಗಡಣೆ ಇರುತ್ತದೆ. ಅಮೆರಿಕ ದೇಶದಲ್ಲಿ ಕಳೆದ ಮಹಾಯುದ್ಧದ ಕಾಲದಲ್ಲಿ ಕಾಪಾಡುವ ಆಹಾರಗಳನ್ನು ಆರಿಸಿಕೊಳ್ಳುವ ಕೈಪಿಡಿಯಾಗಿದ್ದ ಮೂಲ ಏಳು ಆಹಾರ ಗುಂಪುಗಳು ಈ ಬಗೆಯವಲ್ಲಿ ಬಲು ಹೆಸರಾದುವು. ಆಮೇಲೆ ಇದೇ ಇನ್ನೂ ಸರಳವಾಗಿ, ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿರುವಂತೆ ದಿನದಿನದ ಆಹಾರ ಕೈಪಿಡಿಯಾಯಿತು. ಪುಷ್ಟಿ, ಶಕ್ತಿಗಳನ್ನು ಒದಗಿಸುವ ಇತರ ಆಹಾರಗಳನ್ನೂ ಇದರೊಂದಿಗೆ ಸೇರಿಸಿಕೊಳ್ಳಬೇಕು. (ಮುಂದೆ ಪಟ್ಟಿ 1 ನೋಡಿ)

ಆಹಾರ ಬೇಡಿಕೆಗಳ ಲೆಕ್ಕಹಾಕಲು ಭಾರತೀಯ ವೈದ್ಯ ಸಂಶೋಧನಾಲಯ ಮಂಡಲಿಯ ಪುಷ್ಟಿ ಸಲಹಾಸಮಿತಿ 1958 ಒಂದು ಪಟ್ಟಿ ತಯಾರಿಸಿದೆ. ಕೊನೆಗೆ ದಕ್ಕುವ ಕ್ಯಾಲೊರಿಗಳನ್ನೂ ಕೆಲವು ಬೇಕೇಬೇಕಿರುವ ಪುಷ್ಟಿವಸ್ತುಗಳನ್ನೂ ಇದರಲ್ಲಿ ಸೂಚಿಸಿದೆ. ಕೊಬ್ಬನ್ನು ಹೇಳದಿದ್ದರೂ ಕ್ಯಾಲೊರಿಗಳಲ್ಲಿ ಶೇ. 15 ಕ್ಕಿಂತಲೂ ಮೀರಬೇಕಿಲ್ಲ. ಪುಷ್ಟಿ ವಸ್ತುಗಳು ಸಾಕಷ್ಟು ಇರುವಂತೆ ನೋಡಿಕೊಂಡರೆ ಹಿಟ್ಟು ಸಕ್ಕರೆಗಳು ಕೂಡಿರುವುವು. ಬೇಕಿರುವ ಖನಿಜಗಳೆಲ್ಲ ಸಮತೋಲ ಆಹಾರದಲ್ಲಿ ಇರುತ್ತವೆ ಮಕ್ಕಳ, ಹರೆಯದವರ ತೂಕಗಳು ಬೇರೆ ಬೇರೆ ಆಗಿರುವುದರಿಂದ ಅವರ ಪ್ರೋಟೀನು ಬೇಡಿಕೆಗಳನ್ನು ಮೈತೂಕದಂತೆ ಲೆಕ್ಕಹಾಕಲು ಸೂಚಿಸಿದೆ. **(ಪಟ್ಟಿ 2 ನೋಡಿ)**

**ಆಹಾರಗಳ ಗುಣಗಳು:** ತಿಂದ ಆಹಾರದ ರಚನೆ, ಸ್ಥಿತಿ, ತಿನ್ನುವವರ ಪ್ರತಿಕ್ರಿಯೆಗಳಿಗೆ ತಕ್ಕಂತೆ ಆಹಾರದ ಗುಣಗಳಿರುವುವು. ಆದರೆ ರುಚಿ, ವಾಸನೆಗಳಿಂದ ಆಹಾರದ ಗುಣ ಗೊತ್ತಾಗದ್ದರಿಂದ ಅವಕ್ಕೂ ಪುಷ್ಟಿಗೂ ನೇರ ಸಂಬಂಧವಿಲ್ಲ. ಆಹಾರ ಗುಣಕ್ಕೂ ಪುಷ್ಟಿಗೂ ಕೆಲ ವೇಳೆ ಸಂಬಂಧವಿರುತ್ತದೆ. ಆಗತಾನೆ ಕಿತ್ತಿರುವ ಹಣ್ಣುಗಳು, ತರಕಾರಿಗಳು ಬಲುಪುಷ್ಟಿಕರ. ಅಲ್ಲದೆ ಅವುಗಳ ಕಂಪೂ ರುಚಿಯೂ ಬಲು ಚೆನ್ನಾಗಿರುತ್ತವೆ. ಒಳ್ಳೆಯ ಬೀಜಗಳಿಂದ ಫಲವಂತ ಗಿಡಮರಗಳನ್ನೂ ಉತ್ತಮ ತಳಿಗಳಿಂದ ಪ್ರಾಣಿಗಳನ್ನೂ ಇನ್ನಷ್ಟು ಪುಷ್ಟಿಕರವಾಗಿ ಪಡೆಯಲು ಎಲ್ಲೆಲ್ಲೂ ಯತ್ನಗಳಾಗಿವೆ. ಆಹಾರ ತಯಾರಿಕೆ, ಜೋಪಾನ, ಸಾಗಣೆಗಳೂ ಚೆನ್ನಾಗುತ್ತಿವೆ. ಪ್ರಪಂಚದಲ್ಲಿ ಬೇಗಬೇಗನೆ ಹೆಚ್ಚುತ್ತಿರುವ ಪಟ್ಟಣವಾಸಿಗಳ ಅಗತ್ಯಗಳನ್ನು ಪೂರೈಸಲು ಆದಷ್ಟು ಮಟ್ಟಿಗೆ ಹೆಚ್ಚು ಹಸಿಯದಾಗಿರುವ ಸ್ಥಿತಿಯಲ್ಲೇ ಜೋಪಾನಿಸಿಡಬೇಕು. ತಯಾರಾದ ಎಡೆಗಳಿಂದ ಪಟ್ಟಣಗಳಿಗೆ ಸಾಗಿಸುವಾಗಲೂ ದಾಸ್ತಾನು ಮಾಡುವಾಗಲೂ ಅಷ್ಟೇ ಚೆನ್ನಾಗಿ ಕೆಡದಂತಿರಿಸಬೇಕು.

ಹೆಚ್ಚಿನ ಕಾವಿಗೊಡ್ಡಿದರೆ ಪುಷ್ಟಿಗುಣ ಇನ್ನಷ್ಟು ಬೇಗನೆ ಕಳೆದು ಆಹಾರದ ಗುಣವೂ ಕೆಡುವುದರಿಂದ, ಹಸಿಯದಾಗಿ ಮಾರಾಟವಾಗುವ ಆಹಾರಗಳ ವಿಚಾರದಲ್ಲಿ ತಂಪಿನಲ್ಲಿ ದಾಸ್ತಾನೂ ಸಾಗಿಸುವಾಗಿನ ಕಾವೂ ಮುಖ್ಯ. ಇಂದಿನ ಆಹಾರ ತಯಾರಿಕೆಯ ವಿಧಾನಗಳಲ್ಲಿ ಆಹಾರದ ಪುಷ್ಟಿ, ರುಚಿ, ವಾಸನೆಗಳು ಬಹುಮಟ್ಟಿಗೆ ಕೆಡದಂತೆ ಇರುತ್ತವೆ.

ತಿನ್ನುವ ಯಾವ ಉಣಿಸೇ ಆಗಲಿ ಚೊಕ್ಕವಾಗಿರಬೇಕು. ಕಸ, ಕೊಳೆ ಕೂಡಿರಬಾರದು. ಹಾಗೆ ಕೂಡಿದ್ದರೆ, ಬಳಕೆದಾರನಿಗೆ ಅನೇಕವೇಳೆ ಗೊತ್ತೇ ಆಗದು. ಇದರಿಂದಲೇ ಹೆಸರಾದ ಆಹಾರ ತಯಾರಕರ, ಸರ್ಕಾರಿ ಪರೀಕ್ಷಕರ ತಾಂತ್ರಿಕ ಅಳವು ಎಚ್ಚರಿಕೆಗಳನ್ನು ಬಳಕೆದಾರ ನೆಚ್ಚಿಕೊಳ್ಳಬೇಕಾಗುತ್ತದೆ. ಕೆಡುಕು ಮಾಡುವ ಏಕಾಣುಜೀವಿಗಳು ಉಣಿಸಿನಲ್ಲಿ ಸೇರಿರಲೇ ಬಾರದು. ಸರಿಯಾದ ಮುನ್ನೆಚ್ಚರಿಕೆ ಇಲ್ಲವಾದರೆ, ಅದರಲ್ಲೂ ಹಾಲಿನಲ್ಲಿ ಹಾನಿಕರ ಜೀವಾಣುಗಳು ಸೇರಿಕೊಂಡುಬಿಡಬಹುದು. ಹಾಲಿಂದ ತಯಾರಿಸಿವ ಪದಾರ್ಥಗಳನ್ನು ಪಾಶ್ಚರೀಕರಿಸಿದ ಹಾಲಿಂದಲೇ ಮಾಡಬೇಕೆಂಬ ಕಡ್ಡಾಯ ಕೆಲವು ನಾಡುಗಳಲ್ಲಿವೆ. ಮಣ್ಣಿನಲ್ಲಿ ಕರುಳು ಹುಳುಗಳ ಮೊಟ್ಟೆಗಳು ಹೆಚ್ಚಿರುವ ಕೆಲವು ನಾಡುಗಳಲ್ಲಿ, ಅವು ಜನರಿಗೆ ಅಂಟದಿರುವಂತೆ ತರಕಾರಿ, ಗೆಡ್ಡೆ, ಸೊಪ್ಪುಗಳನ್ನು ಚೆನ್ನಾಗಿ ತಿಕ್ಕಿ ತೊಳೆದು, ಸಿಪ್ಪೆ ತೆಗೆದು ಇಲ್ಲವೇ ಬೇಯಿಸಿ ಬಳಸಬೇಕು.

ಹಣ್ಣುಗಳು, ಹಲವು ಸೊಪ್ಪುಗಳು, ನೆನೆಹಾಕಿದ ಬೇಳೆಗಳು, ತರಕಾರಿ, ಚಟ್ನಿಗಳು, ಕೋಸುಂಬರಿಗಳನ್ನು ಬಿಟ್ಟರೆ, ಬಹುಪಾಲು ಆಹಾರವೆಲ್ಲ ಬೇಯಿಸಿದ್ದೇ ನಮ್ಮಲ್ಲಿ ಹೆಚ್ಚು ಬಳಕೆಯಲ್ಲಿವೆ. ಬೇಯಿಸುವುದರ ಮಟ್ಟ, ರೀತಿಗಳು ಕೂಡ ಒಂದೆಡೆಯಲ್ಲಿ ಇದ್ದಂತೆ ಇನ್ನೊಂದೆಡೆ ಇರದು. ಬೇಯಿಸುವುದರಲ್ಲಿ ಮುಖ್ಯವಾಗಿ ಎರಡು ಬಗೆಗಳಿವೆ: ನೀರಲ್ಲೋ, ಆವಿಯಲ್ಲೋ ಬೇಯಿಸುವುದು, ಇಲ್ಲವೆ ಕೆಂಡ, ಕಾವುಗಳಲ್ಲಿ ಸುಡುವುದು, ಕರಿಯುವುದು. ನೀರಲ್ಲಿ ಬೇಯಿಸಿದಾಗಲೇ ಹೆಚ್ಚು ಹಾನಿ. ಬೇಯಿಸಿದ ನೀರನ್ನು ಚೆಲ್ಲಿದರಂತೂ ಖನಿಜ ಲವಣಗಳ ನಾಶ ಇನ್ನೂ ಹೆಚ್ಚು. ಆದ್ದರಿಂದ, ತೀರ ಕಡಿಮೆ ನೀರನ್ನು ಹಾಕಿ, ಅದನ್ನು ಚೆಲ್ಲದೆ ಬಳಸಬೇಕು. ಬೇಯಿಸಿದರೆ ಗೆಡ್ಡೆಗೆಣಸುಗಳು ಕೆಡವು. ಬೇಯಿಸುವುದಕ್ಕೆ ಬಲು ಮುಂಚೆ ತರಕಾರಿಗಳನ್ನು ಹೆಚ್ಚಿಡಬಾರದು, ಸಿಪ್ಪೆ ತೆಗೆಯಬಾರದು. ಸಾಧ್ಯವಾಗುವ ಮಟ್ಟಿಗೆ ದೊಡ್ಡ ಹೋಳುಗಳಾಗಿ ಕತ್ತರಿಸಿಕೊಂಡು ಕುದಿವ ನೀರಿಗೆ ಹಾಕಿ ಬೇಗನೆ ಬೇಯಿಸಿ ಕೆಳಗಿಳಿಸಬೇಕು. ಒತ್ತಡದ ಆವಿಯಲ್ಲಿ ಮುಚ್ಚಿದ ಪಾತ್ರೆಯಲ್ಲಿ ಬೇಯಿಸುವುದರ ಸಮನಿಲ್ಲ. ಬೇಯಿಸುವ ಮುಂಚೆ ಅಕ್ಕಿಯನ್ನು ಒಂದು ಬಾರಿ ತೊಳೆದರೇ ಶೇಕಡ ಸುಮಾರು 40ರಷ್ಟು ಅನ್ಯೂರಿನ್, ನಿಕೋಟಿನಿಕ್ ಆಮ್ಲಗಳು ಕಳೆದುಹೋಗುತ್ತವೆ. ಅಕ್ಕಿಗಂಜಿ ಬಸಿದು ಚೆಲ್ಲಿದರೂ ನಷ್ಟವೇ.

ಬೇಯಿಸುವಾಗ, ಖನಿಜ ಲವಣಗಳಿಗಿಂತ, ನೀರಲ್ಲಿ ವಿಲೀನವಾಗುವ ಜೀವಾತುಗಳು ಕಳೆವುದೇ ಹೆಚ್ಚು. ಎ ಜೀವಾತು ಇಲ್ಲವೇ ಗಜ್ಜನಿಕ ನೀರಲ್ಲಿ ಬೇಯಿಸಿದರೆ ಹಾಳಾಗದು. ಆದರೆ, ಕರಿದರೆ, ಸುಟ್ಟರೆ ಒಂದಿಷ್ಟು ಕೆಡಬಹುದು. ಉಪ್ಪೇರಿ ಮಾಡಿದರೆ ಕಡಿಮೆ ಹಾನಿ. ತರಕಾರಿ ಬೇಳೆಗಳು ಬಣ್ಣಕೆಡದೆ ಬೇಗನೆ ಬೇಯಲೆಂದು ಅಡಿಗೆ ಸೋಡದ ಪುಡಿ ಸೇರಿಸಿದರೆ, ಅನ್ಯೂರಿನ್ ಜೀವಾತು ಬಹುಮಟ್ಟಿಗೆ ಹಾಳಾಗುತ್ತದೆ. ಹುಣಸೇಹಣ್ಣಿನ ಹುಳಿಯಲ್ಲಿರುವ ಚಿಂಬಾಮ್ಲ (ಟಾರ್ಟಾರಿಕ್ ಆ್ಯಸಿಡ್) ಜೀವಾತುಗಳನ್ನು ಕೆಡದಂತಿರಿಸುವುದು, ಮೊಟ್ಟೆಯನ್ನು ಬೇಯಿಸಿದರೆ ಪುಷ್ಟಿ ಕೆಡದು.

ಬೇಯಿಸುವುದರಿಂದ ಹಲವಾರು ಅನುಕೂಲಗಳಿವೆ. ಉಣಿಸು ನೋಡಲು, ಕಣ್ಣುಸೆಳೆವಂತೆ ಬಾಯಲ್ಲಿ ನೀರೂರಿಸುವಂತೆ ಒಳ್ಳೆಯ ವಾಸನೆಗಳಿಂದ ಕೂಡಿದ್ದರೆ ರುಚಿಕರ. ರೋಗ ತರುವ ಜೀವಾಣುಗಳು ಬೇಯಿಸುವ ಕಾವಿನಲ್ಲಿ ಸಾಯುತ್ತವೆ. ಹಿಟ್ಟುಗಳನ್ನು ಬೇಯಿಸಿದರೆ, ಗಡುಸಾದ ಮರದೆಲೆಯ ಗೋಡೆಯೊಳಗಿರುವುದು ಒಡೆದು ಈಚೆಗೆ ಬರುತ್ತದೆ. ಅರಗುವುದು ಆಗ ಸುಲಭ. ಮಾಂಸವನ್ನು ಬೇಯಿಸಿದರೆ, ಸುಟ್ಟರೆ ಅಗಿವಷ್ಟು ಮೆತ್ತಗಾಗುವುದು. ಮೊಟ್ಟೆಯನ್ನು ಬೇಯಿಸಿದರೆ, ಅದರಲ್ಲಿರುವ ಬಯೋಟಿನ್ ಜೀವಾತನ್ನು ಹಾಳುಮಾಡುವ, ಅದರಲ್ಲೇ ಇರುವ ಅವಿಡಿನ್ ಕೆಡುತ್ತದೆ. ಅರೆಬೆಂದ ಮೊಟ್ಟೆ ಚೆನ್ನಾಗಿ ಅರಗುತ್ತದೆ. ಕೆಲವು ಪ್ರೋಟೀನುಗಳನ್ನು ಬೇಯಿಸಿದರೆ ಚೆನ್ನಾಗುತ್ತದೆ.

ತಿಂಡಿ ತಿನಿಸು, ಉಣಿಸುಗಳಿಗೆ ಬೇಕಾಗೋ, ಅಕಸ್ಮಾತ್ತಾಗೋ, ರಾಸಾಯನಿಕಗಳು ಸೇರಿಬಿಡಬಹುದು. ಕಳೆದ ಎರಡನೆಯ ಮಹಾಯುದ್ಧದ ಕಾಲದಲ್ಲೂ, ಆಮೇಲೂ ಬೇಸಾಯ, ತೋಟಗಾರಿಕೆ ಕಸುಬಿನವರಿಗಾಗಿ ಬೇಕಾದಷ್ಟು ಕೀಟನಾಶಕಗಳು, ಮತ್ತಿತರ ರಾಸಾಯನಿಕಗಳು ಹುಟ್ಟಿಕೊಂಡವು. ಇದೇ ತೆರನಾಗಿ, ಚೆನ್ನಾಗಿ ಹಾಲು ಕರೆವಂತೆ, ಮಾಂಸ, ಚೆನ್ನಾಗಿ ಬೆಳೆವಂತೆ ಮಾಡಲು ಪ್ರಾಣಿಗಳಿಗೆ ಎಷ್ಟೋ ಜೀವಿರೋಧಕಗಳು (ಆ್ಯಂಟಿಬಯೋಟಿಕ್ಸ್) ಚೋದನಿಕಗಳನ್ನು (ಹಾರ್ಮೋನ್ಸ್) ಕೊಟ್ಟು ನೋಡಿದ್ದಾಗಿದೆ. ಆಹಾರಗಳಲ್ಲೇ ಈ ಪದಾರ್ಥಗಳ ಉಳಿಕೆಯಿಂದ ಏಳುವ ಕೆಡುಕುಗಳ ಶೋಧನೆಗಳಾಗಿ

ಅನೇಕ ಹತೋಟಿಗಳು ಜಾರಿಗೆ ಬರುತ್ತಿವೆ. ಆಹಾರದ ಬಗೆಗಿನ ಅನೇಕಾನೇಕ ವಿಷಯಗಳನ್ನು ತಿಳಿಯಲು ಆಹಾರದ ಮೇಲಿನ ಇತರ ಲೇಖನಗಳನ್ನು ನೋಡಿ.

(ಡಿ.ಎಸ್.ಎಸ್.;ಸಿ.ಎಸ್.ಎನ್.)

**ಉಣ್ಣಾಯಿ ವಾರ್ಯರ್:** ಅಭಿನಯ ಸಾಹಿತ್ಯ ಮತ್ತು ಸಂಗೀತಗುಣಗಳನ್ನೆಲ್ಲ ಒಳಗೊಂಡಂತೆ ಕಥಕ್ಕಳಿ ಸಾಹಿತ್ಯರಚನೆ ಮಾಡಿದವರಲ್ಲಿ ಅಗ್ರಗಣ್ಯರು. ಕೋಟ್ಟಯತ್ತು ತಂಬರಾನ್ ಅವರ ಬಳಿಕ ಮಲೆಯಾಳಂನಲ್ಲಿ ಕಥಕ್ಕಳಿ ಸಾಹಿತ್ಯ ವಿಪುಲವಾಗಿ ಬೆಳೆಯಿತಾದರೂ ಕೆಲವು ಕೃತಿಗಳು ಅಭಿನಯ ಯೋಗ್ಯವಾಗಿದ್ದರೂ ಸಾಹಿತ್ಯಗುಣಕ್ಕೆ ಎರವಾಗಿದ್ದವು. ಅಂಥ ಕೊರೆಯನ್ನು ತುಂಬಿಸಿದ ಕೀರ್ತಿ ವಾರ್ಯರಿಗೆ ಸೇರಬೇಕು. ಇವರು ಬರೆದ ನಳಚರಿತಂ ಸರ್ವೋತ್ಕೃಷ್ಟ ಕೃತಿಯೆಂದು ಮನ್ನಣೆಗಳಿಸಿದೆ. ವಾರ್ಯರ್ ಇನ್ನೂ ಅನೇಕ ಕವಿತೆಗಳನ್ನು ರಚಿಸಿದ್ದರೂ ನಳಚರಿತಂನಿಂದ ಇವರ ಹೆಸರು ಮಲೆಯಾಳ ಕವಿಗಳ ಅಗ್ರಪಂಕ್ತಿಯಲ್ಲಿ ಸೇರಿಹೋಯಿತು.

ಇವರ ಕಾಲದ ಬಗೆಗೆ ಕೆಲವಾರು ತೊಡಕುಗಳಿವೆ. 17ನೆಯ ಶತಮಾನದ ಕೊನೆಯಲ್ಲಿ, ಇಲ್ಲವೇ 18ನೆಯ ಶತಮಾನದ ಆರಂಭದಲ್ಲಿ ಇವರು ಜೀವಿಸಿದ್ದಿರಬಹುದೆಂದು ಸಾಹಿತ್ಯಚರಿತ್ರಕಾರರಾದ ಪಿ.ಕೆ. ಪರಮೇಶ್ವರನ್ ನಾಯರ್ ಅಭಿಪ್ರಾಯಪಟ್ಟಿದ್ದಾರೆ. ಹಿಂದಿನ ಕೊಚ್ಚಿ ಸಂಸ್ಥಾನದಲ್ಲಿದ್ದ ಎಂಬ ಊರು ಉಣ್ಣಾಯಿ ವಾರ್ಯರ ಜನ್ಮಸ್ಥಳ. ಕುಂಜನ್ ನಂಬಿಯಾರ್ ಮೊದಲಾದ ಸರಸಕವಿಗಳ ಒಡನಾಡಿತನದಿಂದ ಇವರಲ್ಲಿ ಕವಿತಾಶಕ್ತಿ ಪ್ರಬುದ್ಧಮಾನವಾಗಿ ಬೆಳೆದು ಬಂದಿತು. ವಾರ್ಯರ್ ನಾಟಕಗಳನ್ನೇನಾದರೂ ಬರೆದಿದ್ದರೆ ಪಾಶ್ಚಾತ್ಯ ನಾಟಕಗಳಿಗೆ ಸರಿಸಮಾನಾದ ನಾಟಕಗಳು ಮಲೆಯಾಳ ಭಾಷೆಗೆ ಲಭಿಸುತ್ತಿದ್ದವು ಎಂದು ಅಭಿಪ್ರಾಯಪಡುವ ವಿಮರ್ಶಕರೂ ಇದ್ದಾರೆ.

ಆಟ್ಟಕ್ಕಥೆಗಳ ನಡುವಿನಲ್ಲಿ ನಳಚರಿತಂನಂತೆ ಜೀವನಸ್ಪರ್ಶಿಯಾದ ಮತ್ತೊಂದು ಕೃತಿ ಮಲೆಯಾಳ ಭಾಷೆಗೆ ಲಭ್ಯವಾಗಿಲ್ಲ. ದಮಯಂತಿಯನ್ನು ತೊರೆದು ನಳ ಕಾಡಿನಲ್ಲಿ ಅಲೆದಾಡುತ್ತಿರುವಾಗ ಅವನ ಮನಸ್ಸಿನಲ್ಲಿ ಉಂಟಾಗುವ ತುಮುಲವೇ ಮೊದಲಾದ ಸನ್ನಿವೇಶಗಳಲ್ಲಿ ಕವಿ ತನ್ನ ಸಾಮರ್ಥ್ಯವೆಲ್ಲವನ್ನೂ ಅತ್ಯಮೋಘವಾಗಿ ವ್ಯಯಿಸಿರುವುದು ಕಂಡುಬರುತ್ತದೆ. ಕಥಕ್ಕಳಿಯ ಪೋಷಕನಾಗಿದ್ದ ಕಾರ್ತಿಕ ತಿರುನಾಳ್ ಮಹಾರಾಜನ ಆಶ್ರಯದಲ್ಲಿದ್ದ ಉಣ್ಣಾಯಿ ವಾರ್ಯರ ಪ್ರಭಾವ ಅಮಿತವಾಗಿತ್ತು. ಮಹಾರಾಜನೇ ಆಟ್ಟಕ್ಕಥೆಗಳನ್ನು ರಚಿಸುವಷ್ಟರಮಟ್ಟಿಗೆ ಈ ಪ್ರಭಾವ ವರ್ಧಿಸಿತೆನ್ನಬಹುದು. (ಕೆ.ಕೆ.ಎಸ್.)

**ಉಣ್ಣೆ:** ಸಂಧಿಪದಿ ವಂಶದ ಅರಾಕ್ನಿಡಾ ವರ್ಗದ ಪರೋಪಜೀವಿ. ದನಕರುಗಳು, ಎಮ್ಮೆ, ಕುರಿ, ನಾಯಿ, ಕೋಳಿ ಮುಂತಾದ ಸಾಕುಪ್ರಾಣಿಗಳ ರೋಮ, ಗರಿಗಳಿಗೆ ಕಚ್ಚಿಕೊಂಡಿದ್ದು ಅವುಗಳ ರಕ್ತಹೀರಿ ಬದುಕುತ್ತದೆ. ಉಣ್ಣೆಯ ಚಟುವಟಿಕೆಯಿಂದ ರೋಗಗಳು ಹರಡುತ್ತವೆ. ಹೀಗಾಗಿ ಇದು ಮನುಷ್ಯರ ಮತ್ತು ಪ್ರಾಣಿಗಳ ವೈರಿ. ಇದರ ಚರ್ಮದ ಮೇಲೆ ರಕ್ಷಣಾಪೊರೆ (ಕ್ಯೂಟಿಕಲ್) ಇದೆ. ಈ ಪೊರೆಗೆ ಹಿಗ್ಗುವ ಮತ್ತು ಕುಗ್ಗುವ ಶಕ್ತಿಯಿದೆ. ಗಂಡಿಗಿಂತ ಹೆಣ್ಣಿಗೆ ಶಕ್ತಿ ಹೆಚ್ಚು. ಆಶ್ರಯದಾತ ಜೀವಿಯ ರಕ್ತಹೀರಿ ಅದನ್ನು ಶೇಖರಿಸಿಟ್ಟು ಕೊಳ್ಳಲು ಹೆಣ್ಣು ಉಣ್ಣೆಯ ಜೀರ್ಣಾಂಗದಲ್ಲಿ ವಿಚಿತ್ರ ರೀತಿಯ ಚೀಲಗಳಿವೆ. ಚೆನ್ನಾಗಿ ರಕ್ತ ಕುಡಿದಾಗ ಹೆಣ್ಣು ದುಂಡಗೆ ಕಾಳಿನಂತಾಗುತ್ತದೆ. ಉಣ್ಣೆಯ ಶರೀರದಲ್ಲಿ ಶಿರ ಮತ್ತು ಎದೆಗಳೆರಡೂ ಒಂದುಗೂಡಿದಂತಿದ್ದು ಒಂದೇ ಭಾಗದಂತಿದೆ. ಇದರ ಹೆಸರು ಎದೆಶಿರ



(ಸೆಫಾಲೊತೊರಾಕ್ಸ್). ಉಳಿದ ಭಾಗವೇ ಉದರ. ಇದು ಎದೆಶಿರದಿಂದ ಬೇರೆ. ಎದೆಶಿರದಲ್ಲಿ ಚಲಿಸಬಲ್ಲ ಶಿರದ ಮುಂಭಾಗ ಉಂಟು. ಇಲ್ಲಿ ಒಂದು ಜೊತೆ ಹರಿತವಾದ ದವಡೆಗಳು ಇರುವ ವದನಾಂಗಗಳಿವೆ. ದವಡೆಗಳ ಪಕ್ಕದಲ್ಲಿ ಗಟ್ಟಿಯಾದ ಕಾಲಿನಂತಿರುವ ಒಂದು ಜೊತೆ ಸ್ಪರ್ಶೇಂದ್ರಿಯಗಳಿವೆ. ಇವನ್ನು ಪ್ಯಾಲ್ಪಿಗಳೆನ್ನುತ್ತಾರೆ. ಬಾಯ ಮುಂಭಾಗದಲ್ಲಿ ಚೂಪಾದ ಹೈಪೊಸ್ಟೋಮ್ ಎಂಬ ಅಂಗವಿದೆ. ಇದರಲ್ಲಿ ನಾನಾ ವೃತ್ತಗಳಲ್ಲಿ ಒಂದರ ಹಿಂದೆ ಒಂದರಂತೆ ಜೋಡಿಸಿಕೊಂಡಿರುವ ಸೂಕ್ಷ್ಮವಾದ ಮೊನೆಯಾದ ಮುಳ್ಳುಗಳಿವೆ. ಇವು ಹಿಂದಕ್ಕೆ ಬಾಗಿದಂತಿದ್ದು ಆಶ್ರಯದಾತ ಜೀವಿಯ ಮಾಂಸಖಂಡವನ್ನು ಕೊರೆಯಲು ಮತ್ತು ಅದನ್ನು ಭದ್ರವಾಗಿ ಹಿಡಿಯಲು ಅನುಕೂಲತೆ ಕಲ್ಪಿಸುತ್ತವೆ. ಆದ್ದರಿಂದ ದನಕರುಗಳನ್ನು ಕಚ್ಚಿಕೊಂಡಿರುವ ಉಣ್ಣೆಯನ್ನು ಬಲವಾಗಿ ಎಳೆದರೆ ಅದರ ಹೈಪೊಸ್ಟೋಮ್ ಭಾಗ ಮಾಂಸಖಂಡವನ್ನು ತೀವ್ರವಾಗಿ ಗಾಯಗೊಳಿಸುತ್ತದೆ. ಅಲ್ಲದೆ ಇದು ಮುರಿದುಹೋಗಿ ಅಲ್ಲಿಯೇ ಉಳಿದು ಮುಂದೆ ಆ ಭಾಗದಲ್ಲಿ ದೊಡ್ಡ ವ್ರಣವಾಗುತ್ತದೆ.

ಉಣ್ಣೆಗೆ ಎಂಟು ಕಾಲುಗಳಿವೆ. ಅವೆಲ್ಲವೂ ಸಂದಿಪಾದಗಳಾಗಿವೆ. ಎದೆಶಿರ ಮತ್ತು ಉದರದ ಸ್ವಲ್ಪಭಾಗದಲ್ಲಿ ಗಟ್ಟಿಯಾದ ಕವಚದಂತಿರುವ ಮುಚ್ಚಳ ಇದೆ. ದೇಹದ ತಳಭಾಗದಲ್ಲಿ ಜನನೇಂದ್ರಿಯ ರಂಧ್ರ ಮತ್ತು ಗುದದ್ವಾರ ಇವೆ. ರಂಧ್ರದ ಸ್ಥಾನ ಶಿರದ ಹಿಂತುದಿಯಲ್ಲಿ, ದ್ವಾರದ ಸ್ಥಾನ ಹಿಂತುದಿಯಿಂದ ಸ್ವಲ್ಪ ಮುಂದಕ್ಕೆ ಉದರ ಭಾಗದಲ್ಲಿ. ಉಸಿರಾಟಕ್ಕೆ ಬೇಕಾದ ರಂಧ್ರಗಳು ನಾಲ್ಕನೆಯ ಪಾದದ ಬುಡದ ಹತ್ತಿರದಲ್ಲಿನ ತಟ್ಟೆಗಳಂಥ ರಚನೆಗಳಲ್ಲಿವೆ. ಶಿರದ ಮೇಲುಗಡೆ ಚಿಕ್ಕ ಚಿಕ್ಕ ಗಟ್ಟಿಯಾದ ರೋಮಗಳಂಥ ರಚನೆಯನ್ನಾಗಲೀ ತಟ್ಟೆಗಳಂಥ ಕವಚಗಳನ್ನಾಗಲೀ ಕಾಣಬಹುದು. ಪ್ರಾಣಿಯ ತಳಭಾಗದಲ್ಲಿಯೂ ಇಂಥ ತಟ್ಟೆಗಳು ಮತ್ತು ಸೂಕ್ಷ್ಮ ಕಾಲುವೆಗಳಂಥ ರಚನೆಗಳು ಕಂಡುಬರುತ್ತವೆ. ಈ ರೀತಿಯ ರಚನೆಗಳು ಉಣ್ಣೆಗಳ ವರ್ಗೀಕರಣಕ್ಕೆ ಬಲು ಸಹಾಯಕ.

**ನಿವಾಸ ಮತ್ತು ಜೀವನಚರಿತ್ರೆ:** ಎಲ್ಲ ಉಣ್ಣೆಗಳೂ ತಮ್ಮ ಜೀವಮಾನದ ಕೆಲವು ಭಾಗವನ್ನು ಪರಾಶ್ರಯದಲ್ಲಿಯೇ ಕಳೆಯುತ್ತವೆ. ಸಾಮಾನ್ಯವಾಗಿ ಬಹಳ ಪ್ರಭೇದಗಳು ಸ್ತನಿಗಳಲ್ಲಿ ಪರೋಪಜೀವಿಗಳಾಗಿ ವಾಸಿಸುವುದುಂಟು. ಆದರೆ ಕೆಲವು ಪ್ರಭೇದಗಳು ಪಕ್ಷಿಗಳು, ಬಾವಲಿ, ಹಾವು, ಹಲ್ಲಿ ಮುಂತಾದ ಪ್ರಾಣಿಗಳನ್ನು ಆಶ್ರಯಿಸಿ ಜೀವನ ನಡೆಸುತ್ತವೆ. ಕೆಲವು ನಿರ್ದಿಷ್ಟವಾಗಿ ಒಂದೇ ರೀತಿಯ ಆಶ್ರಯದಾತನನ್ನು ಹೊಂದಿದ್ದರೆ ಮತ್ತೆ ಕೆಲವಕ್ಕೆ ಆ ರೀತಿಯ ಕಟ್ಟುಪಾಡುಗಳು ಕಂಡುಬರುವುದಿಲ್ಲ. ಉಣ್ಣೆಗಳಲ್ಲಿ ಎರಡು ಕುಟುಂಬಗಳಿವೆ. ಮೊದಲನೆಯದು ಇಕ್ಸೊಡಿಡೆ, ಎರಡನೆಯದು ಅರ್ಗಾಸಿಡೆ.

ಇಕ್ಸೊಡಿಡೆ ಕುಟುಂಬದ ಇಲ್ಲ ಉಣ್ಣೆಗಳ ಜೀವನಚರಿತ್ರೆಯೂ ಸಾಮಾನ್ಯವಾಗಿ ಒಂದೇ ತೆರ. ಸಂಭೋಗಕ್ರಿಯೆಯಾದ ಕೆಲವು ದಿವಸಗಳ ಮೇಲೆ ಹೆಣ್ಣು ಉಣ್ಣೆ ಆಶ್ರಯದಾತನ ಶರೀರದಿಂದ ಬೇಕಾದಷ್ಟು ರಕ್ತಹೀರಿ ಭೂಮಿಗೆ ಬಿದ್ದು ಮೊಟ್ಟೆಯಿಡಲು ಉಪಕ್ರಮಿಸುತ್ತದೆ. ಮೊಟ್ಟೆಗಳನ್ನು ಭೂಮಿಯ ಮೇಲಾಗಲೀ ಒಂದು ಚಿಕ್ಕಗುಂಡಿ ತೋಡಿ ಅದರೊಳಗಾಗಲೀ ಇಡುತ್ತದೆ. ಒಂದು ಸಲಕ್ಕೆ ಇಡುವ ಮೊಟ್ಟೆಗಳ ಸಂಖ್ಯೆ ನೂರರಿಂದ ಹತ್ತು ಸಾವಿರದವರೆಗೆ. ಸೂರ್ಯನ ಶಾಖದಿಂದ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ. ಇದಕ್ಕೆ ಬೇಕಾದ ಕಾಲಾವಕಾಶ 2–3 ವಾರಗಳು. ಆದರೆ ಚಳಿಗಾಲದಲ್ಲಿಟ್ಟ ಮೊಟ್ಟೆಗಳು ಬೇಸಗೆ ಕಾಲದ ವರೆಗೂ ಒಡೆಯುವುದೇ ಇಲ್ಲ. ಮೊಟ್ಟೆಯೊಡೆದು ಹುಟ್ಟಿ ಬಂದ ಎಳೆಯ ಜೀವಿಗಳ ಹೆಸರು ಲಾರ್ವಾಗಳು. ಇವನ್ನು ಸುಲಭವಾಗಿ ಗುರುತಿಸಬಹುದು. ಇವಕ್ಕೆ ಕೇವಲ ಆರು ಕಾಲುಗಳಿದ್ದರೆ ವಯಸ್ಕ ಉಣ್ಣೆಗೆ ಎಂಟು ಕಾಲುಗಳಿವೆ. ಲಾರ್ವಾಗಳು ಹುಲ್ಲಿನ ಎಸಳುಗಳ ಮೇಲೆ ಕುಳಿತುಕೊಂಡು ಆಶ್ರಯದಾತ ಜೀವಿಯ ಬರುವಿಕೆಗೆ ಕಾಯುತ್ತವೆ. ಬಂದರೆ ಮುಂದಿನ ಕ್ರಿಯೆ ಆರಂಭ. ಇಲ್ಲವಾದರೆ ಸಾಯುತ್ತವೆ. ಹೀಗೆ ಕಾಯುತ್ತಿರುವಾಗ ಕುಳಿತಿರುವ ಹುಲ್ಲಿನ ಎಸಳುಗಳೇನಾದರೂ ಅಲುಗಾಡಿದರೆ ಕೂಡಲೇ ಅವು ನಿಮಿರಿ ಬೇಕಾದ ಆಶ್ರಯದಾತನ ಶರೀರಕ್ಕೆ ಫಕ್ಕನೆ ಅಂಟಿಕೊಂಡುಬಿಡುತ್ತವೆ. ಅಲ್ಲಿಂದ ರಕ್ತಹೀರಿ ಆ ಮರಿಗಳು ಬೆಳೆಯುತ್ತವೆ. ಚೆನ್ನಾಗಿ ರಕ್ತಕುಡಿದು ಆಶ್ರಯದಾತನ ಶರೀರದಿಂದ ಇವು ಕೆಳಗೆ ಬಿದ್ದುಹೋಗುತ್ತವೆ. ಅಲ್ಲಿ ಯಾವುದಾದರೊಂದು ಕಲ್ಲಿನ ಅಥವಾ ಇತರ ವಸ್ತುವಿನ ಮರೆಯಲ್ಲಿ ಅಡಗಿ ಕುಳಿತುಕೊಳ್ಳುತ್ತವೆ. ಒಂದೆರಡು ವಾರ ಹೀಗೆ ಕಳೆದು ಮುಂದೆ ಪೊರೆ ಬಿಡಲಾರಂಭಿಸುತ್ತವೆ. ಆಗ ಹೊಸ ಚರ್ಮ ಬೆಳೆಯುತ್ತದೆ. ಈ ಮಧ್ಯೆ ಶರೀರದೊಳಗೆ ಅಂಗಗಳಲ್ಲಿ ಪರಿವರ್ತನೆಗಳು ನಡೆಯುತ್ತವೆ. ಕಡೆಯಲ್ಲಿ ಈ ಜೀವಿಗಳಿಗೆ ಇನ್ನೊಂದು ಜೊತೆ ಕಾಲುಗಳು ಹುಟ್ಟಿ ಒಟ್ಟು ಎಂಟುಕಾಲುಗಳಾಗುತ್ತವೆ. ಆದರೂ ಜನನೇಂದ್ರಿಯಗಳು ಬೆಳೆದಿರುವುದಿಲ್ಲ. ಈ ರೀತಿಯ ಅಪ್ರೌಢ ಜೀವಿಯ ಹೆಸರು ನಿಂಫ್. ಇವು ಮತ್ತೆ ಹುಲ್ಲು ಮತ್ತು ಗಿಡಬಳ್ಳಿಗಳನ್ನು ಹತ್ತಿ ತಮಗೆ ಆಶ್ರಯ ಕೊಡಬಲ್ಲ ಜೀವಿಗಳನ್ನು ಕಾಯುತ್ತ ಕುಳಿತುಕೊಳ್ಳುತ್ತವೆ. ಇದು ಎರಡನೆಯ ನಿರಶನವ್ರತ. ಆಶ್ರಯದಾತ ಆ ಕಡೆ ಬಂದಾಗ ಅದರ ಮೈಗೆ ಅಂಟಿಕೊಂಡು ಮತ್ತೆ ಆಹಾರಸೇವನೆ ಪ್ರಾರಂಭಿಸುತ್ತವೆ. ಚೆನ್ನಾಗಿ ರಕ್ತಕುಡಿದು ಕೆಲಕಾಲದಲ್ಲಿಯೇ ಮತ್ತೆ ನೆಲಕ್ಕೆ ಬಿದ್ದು ಹೋಗುತ್ತವೆ. ಕೆಲವು ವಾರಗಳನ್ನು ಕಳೆದು ಪೊರೆ ಬಿಡುತ್ತವೆ. ಇಷ್ಟರಲ್ಲಿ ಇವುಗಳ ಶರೀರದೊಳಗೆ ಜನನೇಂದ್ರಿಯಗಳು ಬೆಳೆದಿರುತ್ತವೆ. ಇಲ್ಲಿಗೆ ಉಣ್ಣೆ ಪ್ರೌಢಾವಸ್ಥೆಗೆ ತಲುಪುತ್ತದೆ. ಇಂಥ ಉಣ್ಣೆಗಳು ಮತ್ತೆ ಆಶ್ರಯದಾತನನ್ನು ಕಾಯುತ್ತ ಕುಳಿತುಕೊಳ್ಳುತ್ತವೆ. ಈ ಗುಂಪಿನಲ್ಲಿ ಹೆಣ್ಣು ಗಂಡುಗಳೆರಡೂ ಇರುತ್ತವೆ. ಕಾಯುವ ಕಾಲದಲ್ಲಿಯೇ ಸಂಭೋಗ ಕ್ರಿಯೆಯೂ ನಡೆದುಹೋಗುತ್ತದೆ. ಹೀಗೆ ಬೆಳೆದ ಉಣ್ಣೆಗಳು ಆಶ್ರಯ ಕೊಡುವವರ ಶರೀರವನ್ನು ತಲುಪಿ ಅದರ ಚರ್ಮಕ್ಕೆ ನೇತುಬೀಳುತ್ತವೆ. ಈಗ ರಾಕ್ಷಸಿಯಂತೆ ಹೆಣ್ಣು ರಕ್ತಹೀರಲಾರಂಭಿಸುತ್ತದೆ. ಚೆನ್ನಾಗಿ ಕುಡಿದ ಒಂದು ಹೆಣ್ಣು ಒಂದು ಗಜ್ಜುಗದ ಗಾತ್ರಕ್ಕಿರುವುದೂ ಉಂಟು.

ಉಣ್ಣೆಯ ಕೆಲವು ಪ್ರಭೇದಗಳಲ್ಲಿ ಗಂಡು ಪರೋಪಜೀವಿಯಲ್ಲ ಜೊತೆಗೆ ಗಂಡಿಗೆ ಹೆಣ್ಣಿಗಿಂತ ಚಿಕ್ಕದಾದ ಮತ್ತು ವಿಭಿನ್ನ ರೀತಿಯ ವದನಾಂಗಗಳಿವೆ. ಉಣ್ಣೆಗಳ ಎಲ್ಲ ಪ್ರಭೇದಗಳಲ್ಲೂ ಗಂಡು ಸಂಭೋಗ ಕ್ರಿಯೆಯಾದ ಸ್ವಲ್ಪಕಾಲದಲ್ಲಿಯೇ ಸತ್ತುಹೋಗುತ್ತದೆ. ಲಾರ್ವಾಗಳು ಆಹಾರವಿಲ್ಲದೆ ಆರು ತಿಂಗಳವರೆಗೂ ಬದುಕಬಲವು. ಮುಚ್ಚಳ ಹಾಕಿದ ಸೀಸೆಯೊಳಗಿದ್ದ ವಯಸ್ಕ ಉಣ್ಣೆಗಳು ಐದು ವರ್ಷಗಳವರೆಗೆ ಆಹಾರವಿಲ್ಲದೆ ಉಳಿದಿವೆ. ಆದರೆ ಪ್ರತಿಯೊಂದು ಉಣ್ಣೆಯ ಪ್ರಭೇದದಲ್ಲೂ ಜೀವನಚರಿತ್ರೆ ಮೇಲೆ ಹೇಳಿದ ರೀತಿಯಲ್ಲಿಯೇ ನಡೆಯುವುದಿಲ್ಲ. ಕೆಲವಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದೇ ಇರುತ್ತವೆ.

ಆರ್ಗಾಸಿಡೆ ಕುಟುಂಬಕ್ಕೆ ಸೇರಿದ ಉಣ್ಣೆಗಳ ಜೀವನಚರಿತ್ರೆಯೇ ಮತ್ತೊಂದು ಬಗೆ. ಇವು ಆಶ್ರಯದಾತ ಜೀವಿಯ ಶರೀರದ ಬದಲು ಆ ಜೀವಿ ವಾಸಿಸುವ ಗೂಡುಗಳಲ್ಲಿನ ಬಿಲಗಳಲ್ಲಿ ಇರುತ್ತವೆ. ಇಲಿಯ ಬಿಲ, ಮೊಲದ ಗೂಡು, ಕೋಳಿಯ ಗೂಡುಗಳಲ್ಲಿ ಇವು

ಹೆಚ್ಚು. ಆಶ್ರಯದಾತ ಗೂಡು ಸೇರಿದಾಗ ಅದರ ಮೈಗಂಟಿ ರಕ್ತ ಹೀರುವುದು ಇವುಗಳ ಗುಣ. ರಕ್ತಹೀರಿ ಕೇವಲ ಹತ್ತು ಮಿನಿಟುಗಳಲ್ಲಿ ಕೆಳಗೆ ಬೀಳುತ್ತವೆ. ಆದರೆ ಕೆಲವು ಜೀವಿಗಳಲ್ಲಿ ಕೆಳಗೆ ಬೀಳಲು ಹಲವು ದಿವಸಗಳೇ ಬೇಕು. ಆದ್ದರಿಂದ ಇವು ಆಶ್ರಯದಾತರಿಂದ ದೂರ ಹೋಗಲು ಸಾಧ್ಯವೇ ಇಲ್ಲ. ಹೆಣ್ಣು ಆರ್ಗಾಸಿಡೆ ಸಾಮಾನ್ಯವಾಗಿ ಸಂಭೋಗಾನಂತರ ಒಂದು ವಾರದಲ್ಲಿ ಮೊಟ್ಟೆಗಳನ್ನು ಗುಂಪು ಗುಂಪಾಗಿ ಇಡಲು ತೊಡಗುವುದು. ಅವು ಐವತ್ತರಿಂದ ನೂರಾರು ಇರಬಹುದು. ಒಂದು ಗುಂಪಿನ ಮೊಟ್ಟೆಗಳಿಗೂ ಮತ್ತೊಂದು ಗುಂಪಿನ ಮೊಟ್ಟೆಗಳಿಗೂ ಎರಡರಿಂದ ನಾಲ್ಕು ತಿಂಗಳ ಅಂತರವಿರುವುದು. ಅಥವಾ ಕೆಲವು ಪ್ರಭೇದಗಳಲ್ಲಿ ಹೆಣ್ಣು ಕೆಲವು ತಿಂಗಳುಗಳು ಕಳೆದಮೇಲೆ ಮೊಟ್ಟೆಯಿಡಲು ಪ್ರಾರಂಭಿಸುತ್ತದೆ. ಮೊಟ್ಟೆಗಳು ಆಶ್ರಯದಾತನ ವಾಸಸ್ಥಾನದಲ್ಲಿ ಅಥವಾ ಓಡಾಡುವೆಡೆಗಳಲ್ಲಿ ಇರುತ್ತವೆ. ಮೊಟ್ಟೆಯೊಡೆದು ಹೊರಬಂದ ಮರಿಗಳಿಗೆ ಆಶ್ರಯ ಕೊಡುವ ಜೀವಿ ಸುಲಭವಾಗಿ ಸಿಕ್ಕುತ್ತದೆ. ಕೆಲವು ಪ್ರಭೇದಗಳ ಲಾರ್ವಾಗಳು ಪೊರೆ ಬಿಡುವುದಕ್ಕೆ ಮುಂಚೆಯೂ ಪೊರೆ ಬಿಟ್ಟಮೇಲೆಯೂ ಚೆನ್ನಾಗಿ ರಕ್ತ ಹೀರುತ್ತವೆ. ಮತ್ತ ಕೆಲವು ಲಾರ್ವಾಗಳು ಆಹಾರ ಸೇವನೆಯಿಲ್ಲದೇ ಪೊರೆಬಿಟ್ಟು ನಿಂಫ್‌ಗಳಾಗಿ ಆಹಾರ ಸೇವಿಸಲುಪಕ್ರಮಿಸುತ್ತವೆ. ಇವು 2–5 ಬಾರಿ ಪೊರೆ ಬಿಡುವುದುಂಟು. ಮರಿ ಹೊರ ಬಂದಂದಿನಿಂದ ವಯಸ್ಕ ಜೀವಿಯಾಗಲು 3–12 ತಿಂಗಳುಗಳಾಗಬೇಕು. ಇಂಥವು ಆಹಾರ ತೆಗೆದುಕೊಳ್ಳದೆ 5–7 ವರ್ಷಗಳವರೆಗೆ ಬುದುಕುತ್ತವೆ.

**ಉಣ್ಣಿಗಳು ತರುವ ರೋಗಗಳು**: ದನಕರುಗಳಲ್ಲಿ ಸಾಕುಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ಉಣ್ಣಿಗಳು ರೋಗಗಳನ್ನು ಹರಡುತ್ತವೆ. ಮರುಕಲಿಜ್ವರ ತರುವ ಸ್ಪೈರೊಖೀಟ ಜೀವಾಣುಗಳು, ಚುಕ್ಕೆ ಜ್ವರ ಮುಂತಾದ ರೋಗಗಳನ್ನು ತರುವ ರಿಕೆಟ್ಸಿಯ ಜೀವಿಗಳು ಹರಡುವುದು ಮುಖ್ಯವಾಗಿ ಉಣ್ಣಿಗಳಿಂದಲೇ. ಇದಲ್ಲದೆ ಬಾಬೆಸ್ಸಿಡೆ ಮತ್ತು ಅನಪ್ಲಾಸ್ಮ ಮತ್ತು ಟುಲರೋಮಿಯ ಮುಂತಾದ ಕಾಯಿಲೆಗಳನ್ನು ತರುವ ಬ್ಯಾಕ್ಟೀರಿಯಗಳು ಹರಡುವುದು ಸಹ ಉಣ್ಣಿಗಳಿಂದಲೇ. ಕೆಲವು ಜೀವಾಣುಗಳೂ ಉಣ್ಣಿಗಳಿಂದಾಗಿ ಒಂದು ಪ್ರಾಣಿಯಿಂದ ಮತ್ತೊಂದಕ್ಕೆ ಹರಡುತ್ತವೆಂದು ಇತ್ತೀಚೆಗೆ ತಿಳಿದುಬಂದಿದೆ. ಕುರಿಗಳಿಗೆ ಬರುವ ಲ್ಯೂಪಿಂಗ್ ರೋಗಕ್ಕೆ ಕಾರಣವಾದ ವೈರಸ್ಸುಗಳು ಉಣ್ಣಿಗಳಿಂದಲೇ ಹರಡುತ್ತವೆ.

ಉಣ್ಣಿ ರಕ್ತಹೀರುವುದರಿಂದಾಗುವ ಅನಾಹುತವೇನೂ ಕಡಿಮೆಯಿಲ್ಲ. ಮಿತಿಮೀರಿದಾಗ ಆಶ್ರಯ ನೀಡಿದ ಪ್ರಾಣಿ ಬದುಕುವುದೇ ಅಸಾಧ್ಯವಾಗಬಹುದು. ಕಾರಣ ರಕ್ತಹೀನತೆ. **ಜೆಲ್ಲಿಸನ್ಸ್** ಮತ್ತು **ಖೋಸ್** ಹೇಳಿರುವ ಪ್ರಕಾರ 60–80 ಹೆಣ್ಣು ಉಣ್ಣಿಗಳು ಒಂದು ಮೊಲವನ್ನು 5–7 ದಿನಗಳ ಅವಧಿಯಲ್ಲಿ ಕೊಂದವು (1938). ರಕ್ತಹೀರುವುದರ ಜೊತೆಗೆ ಉಣ್ಣಿ ಬಿಡುವ ವಿಷ ಪದಾರ್ಥವೂ ಇದಕ್ಕೆ ಕಾರಣ. **ಶ್ಯೂಹಾರ್ಡ್** ಎಂಬ ವಿಜ್ಞಾನಿ 1950ರಲ್ಲಿ ತಾನು ಸಾಕಿದ್ದ ಉಣ್ಣಿಗಳ ಪಂಜರದೊಳಕ್ಕೆ ಇಲಿಗಳನ್ನು ಬಿಟ್ಟ. ಇಲಿಗಳು ಕೇವಲ ಮೂರು ಗಂಟೆಗಳಲ್ಲಿಯೇ ಸತ್ತುಬಿದ್ದವು. ಉಣ್ಣಿ ಎಲ್ಲಿಯೇ ಇದ್ದರೂ ಅದರ ಆಹಾರ ರಕ್ತ. ಹಸುವಿನ ಕೆಚ್ಚಲಿನ ಮೇಲಿದ್ದರೂ ಅದು ಹೀರುವುದು ರಕ್ತವನ್ನೇ. ಸರ್ವಜ್ಞಕವಿ "ಉಣ್ಣಿ ಕೆಚ್ಚಲೊಳಿದ್ದು ಉಣ್ಣದದು ನೊರೆಹಾಲು" ಎಂದು ಸುಂದರವಾಗಿ ಉಣ್ಣಿಯ ಚಿತ್ರಣ ನೀಡಿದ್ದಾನೆ.

1950ರ ದಶಕದಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಸೊರಬ ತಾಲ್ಲೂಕುಗಳಲ್ಲಿ ಕಾಣಿಸಿಕೊಂಡ ಮಂಗನ ಕಾಯಿಲೆ ಅಥವಾ ಕ್ಯಾಸನೂರು ಅರಣ್ಯ ಕಾಯಿಲೆ ಉಣ್ಣಿಗಳಿಂದ ಹರಡಿತು. ರೋಗಕಾರಕ ವೈರಸ್ಸನ್ನು ಹರಡಲು ಉಣ್ಣಿಗಳು ಮಧ್ಯವರ್ತಿಗಳ ಪಾತ್ರ ವಹಿಸುವುವು.

(ಎಲ್.ಎಸ್.ಜಿ.)

**ಉಣ್ಣೆ:** ಸಾಮಾನ್ಯವಾಗಿ ಕುರಿಯ ಚರ್ಮದ ಮೇಲೆ ಬೆಳೆದ ತುಪ್ಪಟದಿಂದ ಕತ್ತರಿಸಿ ತೆಗೆಯುವ ನಯವಾದ ಮತ್ತು ಕೂದಲಿನಂತೆ ಇರುವ ವಸ್ತು (ವೂಲ್). ಕುರಿಯ ಹಾಗಿರುವ ಕೆಲವು ಪ್ರಾಣಿಗಳಾದ ಮೇಕೆ, ಲಾಮ ಮುಂತಾದುವುಗಳಿಂದಲೂ ಉಣ್ಣೆಯಂಥ ಕೂದಲನ್ನು ಪಡೆಯಬಹುದು. ಪುರಾಣ ಮತ್ತು ಇತಿಹಾಸಗಳಲ್ಲಿ ಕುರಿ ಉಣ್ಣೆಯನ್ನು ಕುರಿತ ಪ್ರಸ್ತಾಪಗಳಿವೆ. ಮೊದಲು ಒಂದು ಪ್ರಾಣಿಯ ಕೂದಲು ಮಾತ್ರವಾಗಿದ್ದ ಉಣ್ಣೆಯ ವಿಶಿಷ್ಟ ಗುಣ. ಉಪಯುಕ್ತೆಗಳನ್ನು ಮನುಷ್ಯ ಅರಿತು ಅವನ್ನು ಬಳಸಿಕೊಂಡ. ಹೀಗೆ ನಾಗರಿಕತೆ ಮುಂದುವರಿದಂತೆ ಕುರಿಯ ಸಾಕಣೆ ಮತ್ತು ಉಣ್ಣೆಯ ಪೋಷಣೆಗಳ ಕಡೆಗೆ ವಿಶೇಷ ಗಮನವೀಯಲಾಯಿತು. ಇದರಿಂದ ಉಣ್ಣೆಯ ಉದ್ಯಮ ಬೆಳೆಯಿತು. ಈಗ ಪ್ರಪಂಚದಲ್ಲಿ ಸು. 70 ಕೋಟಿಗಿಂತಲೂ ಮಿಗಿಲಾಗಿ, ಅನೇಕ ಬಗೆಯ ಕುರಿಗಳಿವೆಯೆಂದು ಅಂದಾಜು ಮಾಡಲಾಗಿದೆ.

ಕುರಿಗಳನ್ನು ಸಾಮಾನ್ಯವಾಗಿ ಎರಡು ಬಗೆಯಾಗಿ ವಿಂಗಡಿಸಿದೆ. ಮೊದಲನೆಯದು ಮಾಂಸಕ್ಕಾಗಿಯೇ ಬೆಳೆಸಿದ ಕುರಿಗಳು, ಎರಡನೆಯದು ಉಣ್ಣೆಯ ಉತ್ಪತ್ತಿಗಾಗಿ ಬೆಳೆಸಿದವು.

ಅನೇಕ ದೇಶಗಳಲ್ಲಿ ಉಣ್ಣೆಗಾಗಿ ಕುರಿಗಳನ್ನು ಬೆಳೆಸುವುದೇ ಒಂದು ಮುಖ್ಯ ಕೈಗಾರಿಕೆ. ಚೀನ, ತುರ್ಕಿ ಮತ್ತು ಸೈಬೀರಿಯ ದೇಶಗಳಿಂದ ದೊರಕುವ ಉಣ್ಣೆ ಸ್ವಲ್ಪ ದಪ್ಪವಾಗಿಯೂ ಉದ್ದವಾಗಿಯೂ ಇರುತ್ತದೆ. ಇದರಿಂದ ವಿಧವಿಧವಾದ ಜಮಖಾನಗಳನ್ನು ತಯಾರಿಸಬಹುದು. ಆಸ್ಟ್ರೇಲಿಯ, ಇಂಗ್ಲೆಂಡ್, ಸ್ಪೇನ್, ಅಮೆರಿಕ ಸಂಯುಕ್ತಸಂಸ್ಥಾನ, ಜರ್ಮನಿ, ಆಫ್ರಿಕ ಮತ್ತು ದಕ್ಷಿಣ ಅಮೆರಿಕ ದೇಶದವರು ಬೆಳೆಸುವ ಒಳ್ಳೆ ಜಾತಿಯ ಕುರಿಗಳಿಂದ ಮೃದುವಾದ ಮತ್ತು ನಯವಾದ ಉಣ್ಣೆ ಸಿಗುತ್ತದೆ. ಈ ತರಹ ಉತ್ತಮವಾದ ಉಣ್ಣೆಯನ್ನು ಮೆರಿನೋ ಜಾತಿಗೆ ಸೇರಿದ ಕುರಿಗಳಿಂದಲೂ ಮತ್ತು ಮೆರಿನೋ ಮಿಶ್ರ ತಳಿಗಳಿಂದಲೂ ಪಡೆಯುತ್ತಾರೆ. ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ನ್ಯೂಜ಼ೀಲೆಂಡ್ ದೇಶಗಳು ಮೆರಿನೋ ಜಾತಿಯ ಉಣ್ಣೆಗೆ ಪ್ರಸಿದ್ಧವಾಗಿವೆ. ಜರ್ಮನಿ ಸ್ಯಾಕ್ಸೊನಿ ಜಾತಿಗೂ ಬ್ರಾನ್ಸ್ ರ್‍ಯಾಮ್ ಬುಲೆಟ್ ಜಾತಿಗೂ ಇಂಗ್ಲೆಂಡ್ ಮಾಂಸ ಮತ್ತು ಉದ್ದವಾದ ಉಣ್ಣೆಯನ್ನು ಕೊಡುವ ಜಾತಿಗೂ ಹೆಸರುವಾಸಿಯಾಗಿವೆ.

ಕೈಕತ್ತರಿ ಅಥವಾ ಯಂತ್ರದ ಸಹಾಯದಿಂದ ವರ್ಷಕ್ಕೆ ಒಂದು ಅಥವಾ ಎರಡು ಸಲ ಕುರಿಯ ಉಣ್ಣೆಯನ್ನು ಕತ್ತರಿಸಿ ತೆಗೆಯುತ್ತಾರೆ. ಕೊಂದ ಕುರಿಯಿಂದ ತೆಗೆದ ಉಣ್ಣೆಗೆ ಕಿತ್ತ ಉಣ್ಣೆ ಎಂದು ಹೆಸರು. ಎರಡು ತಿಂಗಳ ಕುರಿಮರಿಯಿಂದ ಪಡೆದ ಉಣ್ಣೆಗೆ ಮರಿಯ ಉಣ್ಣೆಯೆಂದು ಹೆಸರು. ಹಾಗ್ ಎನ್ನುವ ಉಣ್ಣೆ ಸುಮಾರು 11–14 ತಿಂಗಳವರೆಗಿನ ಕುರಮರಿಗಳಿಂದ ದೊರಕುತ್ತದೆ.

ಉಣ್ಣೆಯ ಗುಣವನ್ನು ಮುಖ್ಯವಾಗಿ ಕುರಿಯ ಜಾತಿಯಿಂದ ನಿರ್ಧರಿಸಬಹುದು. ಕೆಲವು ವೇಳೆ, ಒಂದೇ ಜಾತಿಯ ಕುರಿಗಳಲ್ಲೂ ಉಣ್ಣೆಯ ಗುಣದಲ್ಲಿ ವ್ಯತ್ಯಾಸವಿರುತ್ತದೆ. ಮಾರುವ ಮೊದಲು ಉಣ್ಣೆಯ ವ್ಯವಹಾರದಲ್ಲಿ ನುರಿತವರು ಉಣ್ಣೆಯನ್ನು ಅದರ ಉದ್ದ, ಗಾತ್ರ ಮತ್ತು ನಯಕ್ಕನುಗುಣವಾಗಿ ವಿಂಗಡಿಸುತ್ತಾರೆ (ಗ್ರೇಡಿಂಗ್ ಅಂಡ್ ಕ್ಲಾಸಿಂಗ್).

ಉಣ್ಣೆಯ ವಿಚಿತ್ರವಾದ ಮಾಟ ದೇಹದ ಶಾಖವನ್ನು ಸದಾ ಸಾಮಾನ್ಯ ಸ್ಥಿತಿಯಲ್ಲಿಡಲು ಸಹಾಯಕವಾಗಿದೆ. ಅದು ಚಳಿಗಾಲದಲ್ಲಿ ದೇಹಶಾಖವನ್ನು ಕಾದಿಡುತ್ತದೆ ಮತ್ತು ಬಿಸಿಲು ಕಾಲದಲ್ಲಿ ಬೇಗೆಯಿಂದ ದೇಹವನ್ನು ಕಾಪಾಡುತ್ತದೆ. ಕ್ಷಾರಗಳು ಉಣ್ಣೆಯನ್ನು ದುರ್ಬಲಗೊಳಿಸುವುವು. ತಣ್ಣೀರು ಅಥವಾ ಬಿಸಿನೀರಿನಲ್ಲಿ ನೆನೆಹಾಕಿ ಉಜ್ಜಿದರೆ ಅದು ಜಡೆಕಟ್ಟಿಕೊಳ್ಳುತ್ತದೆ. ಉಣ್ಣೆ ಬಗೆಬಗೆಯ ಆಕರ್ಷಕ ಬಣ್ಣಗಳನ್ನು ಪಡೆಯಬಲ್ಲದು.

**ಉಣ್ಣೆಯ ತಯಾರಿಕೆ:** ಹಿಂದಿನ ಕಾಲದಲ್ಲಿ ನಾಗರಿಕತೆ ಸುಪ್ತಾವಸ್ಥೆಯಲ್ಲಿದ್ದಾಗ ನೆಯ್ದ ಉಡುಪುಗಳ ಸೃಷ್ಟಿ ಆಗಿರಲಿಲ್ಲ. ಅಂದು ಕಾಡುಜನ ತಮ್ಮ ದೇಹಗಳನ್ನು ಚಳಿ ಮತ್ತು ಗಾಳಿಯಿಂದ ಸಂರಕ್ಷಿಸಲು ಕಾಡುಕುರಿಗಳ ಮತ್ತು ಮೇಕೆಗಳ ಕೂದಲಿನ ಚರ್ಮವನ್ನು ಉಪಯೋಗಿಸುತ್ತಿದ್ದರು. ಆದರೆ ನಾಗರಿಕತೆ ಬೆಳೆದಂತೆ ಕುರಿ ಸಾಕಣೆಯ ಪ್ರಾಮುಖ್ಯ. ಯುರೋಪು ಖಂಡದಲ್ಲಿ ಅದರಲ್ಲಿಯೂ ಮುಖ್ಯವಾಗಿ ಸ್ಪೇನ್ ಮತ್ತು ಬ್ರಿಟನ್ನುಗಳಲ್ಲಿ ಉನ್ನತಮಟ್ಟಕ್ಕೇರಿತು. ಆಗ ಉಣ್ಣೆ ತಯಾರಿಕೆ ಒಂದು ಮುಖ್ಯ ಪ್ರಮುಖ ಕೈಗಾರಿಕೆಯಾಗಿ ಪರಿಣಮಿಸಿತು.

ಪ್ರಪಂಚದಲ್ಲಿ ಉಣ್ಣೆಯ ಉತ್ಪತ್ತಿಯಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ದೇಶಗಳು ಆಸ್ಟ್ರೇಲಿಯ, ನ್ಯೂಜ಼ಿಲೆಂಡ್, ತಾಸ್ಮೇನಿಯ, ಬ್ರಿಟನ್, ದಕ್ಷಿಣ ಆಫ್ರಿಕ ಮತ್ತು ಅರ್ಜೆಂಟೀನ. ಇವುಗಳ ಜೊತೆಗೆ ಚೀನ, ಏಷ್ಯಮೈನರ್, ಭಾರತ ಮತ್ತು ದಕ್ಷಿಣ ಅಮೆರಿಕ ದೇಶಗಳು ಜಮಖಾನ ಮತ್ತು ಕಂಬಳಿಗಳನ್ನು ತಯಾರಿಸುವ ಉಣ್ಣೆಗೆ ಪ್ರಸಿದ್ಧಿಯಾಗಿವೆ.

ಕುರಿಗಳ ಜಾತಿಗೆ ತಕ್ಕಂತೆ ಶೇಖರಿಸಿದ ಉಣ್ಣೆಯನ್ನು ಅದರ ಗುಣಕ್ಕನುಗುಣವಾಗಿ ಉತ್ತಮ ತರಗತಿಯದು, ಮಧ್ಯಮ ತರಗತಿಯದು ಮತ್ತು ಇತರ ವರ್ಗಕ್ಕೆ ಸೇರಿದುದೆಂದು ಅನುಭವಿಗಳು ಬೇರ್ಪಡಿಸುತ್ತಾರೆ. ಉತ್ತಮ ವರ್ಗದ ಉಣ್ಣೆ ಉದ್ದದಲ್ಲಿ ಸ್ವಲ್ಪ ಚಿಕ್ಕದು 1 ½"–5", ಆದರೆ ಅದು ಬಲು ಮೃದು. ಅದರಲ್ಲಿ ಹುರುಪೆಗಳಿರುತ್ತವೆ. ಉದ್ದ ಹೆಚ್ಚಿದಂತೆಲ್ಲ ಅದರ ನಯ ಲಕ್ಷಣ ಮತ್ತು ಹುರುಪೆಗಳು ಕಡಿಮೆಯಾಗುತ್ತವೆ.

**ಬೇರ್ಪಡಿಸುವುದು ಮತ್ತು ವಿಂಗಡಿಸುವುದು**: ಬೇರೆ ಬೇರೆ ಜಾತಿಯ ಕುರಿಗಳಿಂದ ಶೇಖರಿಸಿದ ಉಣ್ಣೆಯನ್ನು ಬೇರ್ಪಡಿಸುವುದಷ್ಟೇ ಅಲ್ಲದೆ ಒಂದೇ ಜಾತಿಯ ಕುರಿಗಳ ಉಣ್ಣೆಯನ್ನು ಕೂಡ ಅವುಗಳ ದೇಹದ ಭಾಗಕ್ಕೆ ಅನುಗುಣವಾಗಿ ಹದಿನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಬಹಳ ಉತ್ತಮವಾದ ಉಣ್ಣೆ ಕುರಿಯ ಭುಜಗಳಿಂದ ಮತ್ತು ದೇಹದ ಬಲಭಾಗ ಮತ್ತು ಎಡಭಾಗದಿಂದ ಸಿಗುತ್ತದೆ. ಉಳಿದ ಭಾಗದಿಂದ ಕತ್ತರಿಸಿ ಪಡೆದ ಉಣ್ಣೆಯನ್ನು ಅದರ ಯೋಗ್ಯತಾನುಸಾರ ವಿಂಗಡಿಸುತ್ತಾರೆ. ಇದೇ ಉಣ್ಣೆಯ ತಯಾರಿಕೆಯ ಬಲು ಮುಖ್ಯವಾದ ಮೊದಲನೆಯ ಘಟ್ಟ.

**ದೂಳು ತೆಗೆಯುವುದು ಮತ್ತು ಶುದ್ಧಿಮಾಡುವುದು**: ಕತ್ತರಿಸಿದ ಉಣ್ಣೆಯಲ್ಲಿ ಅಡಗಿರುವ ಎಣ್ಣೆ, ಒಣಗಿದ ಬೆವರು, ಕೊಳೆ ಮತ್ತು ಕಸಕಡ್ಡಿಗಳು ಮುಂತಾದ ಅನೇಕ ವಿಧವಾದ ಕಶ್ಮಲಗಳನ್ನು ಮೊದಲು ತೆಗೆಯಬೇಕು. ಕೆಲವು ಸಂದರ್ಭಗಳಲ್ಲಿ ಉಣ್ಣೆಯ ತೂಕದ 50% ಇವು ಇರುವುದಿದೆ. ಬಿಡಿಸುವ ಮತ್ತು ದೂಳನ್ನು ತೆಗೆಯುವ ಯಂತ್ರಕ್ಕೆ ಉಣ್ಣೆಯನ್ನು ಮೊದಲು ಹಾಕುತ್ತಾರೆ. ಅಲ್ಲಿ ಅದು ಸ್ವಚ್ಛವಾಗಿಯೂ ಬಿಡಿ ಬಿಡಿಯಾಗಿಯೂ ಹೊರಬರುತ್ತದೆ. ಆಮೇಲೆ ಅದನ್ನು ಸಾಬೂನು ಮತ್ತು ಕ್ಷಾರಗಳ ಸಹಾಯದಿಂದ ಅಥವಾ ಬೇರೆ ವಿಧಾನದಿಂದ ಶುದ್ಧಿಮಾಡುತ್ತಾರೆ. ಉಳಿದಿರುವ ಸಸ್ಯಸಂಬಂಧ ವಸ್ತುಗಳನ್ನು ಇನ್ನೊಂದು ವಿಧವಾದ ಯಂತ್ರದಿಂದ ಬೇರ್ಪಡಿಸಲಾಗುತ್ತದೆ.

**ಕಚ್ಚಾ ಉಣ್ಣೆಗೆ ಬಣ್ಣ ಹಾಕುವುದು**: ಕೆಲವು ಸಲ ಮೇಲೆ ಹೇಳಿದ ರೀತಿಯಲ್ಲಿ ಶುದ್ಧಿಯಾದ ಉಣ್ಣೆಗೆ ವಿಧ ವಿಧವಾದ ಬಣ್ಣಹಾಕಿ ಸೊಗಸಾದ ಮತ್ತು ಬಣ್ಣಬಣ್ಣದ ಉಣ್ಣೆಯ ಬಟ್ಟೆಯನ್ನು ನೇಯುತ್ತಾರೆ.

**ಉಣ್ಣೆಯನ್ನು ಬೆರೆಸುವುದು**: ಮುಂದೆ ನೇಯುವ ಬಟ್ಟೆಯ ಯೋಗ್ಯತೆಗೆ ಅನುಗುಣವಾಗಿ ಬೇರೆ ಬೇರೆ ವಿಧವಾದ ಉಣ್ಣೆಯನ್ನು ತಕ್ಕ ಪ್ರಮಾಣದಲ್ಲಿ ಬೆರೆಸಿ ಹದವಾದ ದಾರವನ್ನು ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಉಣ್ಣೆಯ ಜೊತೆಗೆ ಹತ್ತಿಯನ್ನೋ ಕೃತಕ ರೇಷ್ಮೆಯನ್ನೋ ಮಿಶ್ರಮಾಡಿ ಇನ್ನೂ ನಯವಾದ ಬಟ್ಟೆಗಳನ್ನು ಮಾಡುತ್ತಾರೆ. ಉಣ್ಣೆಯ ಎಳೆಗಳು ಯಂತ್ರದಲ್ಲಿ

ಸುಲಭವಾಗಿ ಸಾಗಲು ಸ್ವಲ್ಪ ಪ್ರಮಾಣದಲ್ಲಿ ಉಣ್ಣೆಯನ್ನು ತುಂತುರು ಹನಿಯ ರೂಪದಲ್ಲಿ ಬೆರೆಸುತ್ತಾರೆ. ಈ ರೀತಿ ತಯಾರಾದ ಉಣ್ಣೆಯನ್ನು ಎಳೆಗೈವ (ಕಾರ್ಡಿಂಗ್) ಯಂತ್ರಗಳಲ್ಲಿ ಎಳೆ ಎಳೆಯಾಗಿ ಬೇರ್ಪಡಿಸಿ ಕಡೆಗೆ ಮೃದುವಾದ ಹಗ್ಗದೋಪಾದಿಯಲ್ಲಿ ಹೊರತೆಗೆಯುತ್ತಾರೆ. ಇದನ್ನು ಉಣ್ಣೆದಾರ ತಯಾರುಮಾಡುವ ಮ್ಯೂಲ್ ಎಂಬ ಯಂತ್ರದಿಂದ ದಾರವಾಗಿ ಪರಿವರ್ತಿಸಲಾಗುವುದು.


ಉಣ್ಣೆಯ ರೋಮಕೂಪ (ನೇರಸೀಳಿಕೆ)

ಉಣ್ಣೆಯಿಂದ ತಯಾರಾದ ದಾರವನ್ನು ಎರಡು ವಿಭಾಗವಾಗಿ ಅದರ ಗುಣಕ್ಕೆ ತಕ್ಕಂತೆ ವಿಂಗಡಿಸ ಬಹುದು. ಒಂದು ಸಾಧಾರಣ ಮಟ್ಟದ ಮತ್ತು ಮೇಲೆ ಹೇಳಿದ ವಿಧಾನದಲ್ಲಿ ತಯಾರಾದ ಉಣ್ಣೆಯ ದಾರ. ಇದರಿಂದ ಮಧ್ಯಮವರ್ಗದ ಬಟ್ಟೆಗಳನ್ನು ತಯಾರಿಸಬಹುದು. ಮತ್ತೊಂದು ಉತ್ತಮಮಟ್ಟದ ವರ್ಸ್ಟೆಡ್ ದಾರ. ಇದರಿಂದ ಅತಿ ನಯವಾದ ಮತ್ತು ನಾಜೂಕಾದ ಬೆಲೆ ಬಾಳುವ ಬಟ್ಟೆಗಳನ್ನು ತಯಾರಿಸಬಹುದು. ವರ್ಸ್ಟೆಡ್ ದಾರ ತಯಾರಿಸುವ ಮೊದಲು ಉತ್ತಮ ದರ್ಜೆಯ ಉಣ್ಣೆಯಲ್ಲಿರತಕ್ಕ ಚಿಕ್ಕ ಎಳೆಗಳನ್ನು ಬಾಚುವ ಯಂತ್ರದಿಂದ ಬೇರ್ಪಡಿಸಲಾಗುವುದು. ಉಳಿದ ಉದ್ದವಾದ ಎಳೆಗಳನ್ನು ಹೆಚ್ಚಿನ ಯಂತ್ರಗಳ ಮೂಲಕ ಎಲ್ಲ ಎಳೆಗಳು ನೇರವಾಗಿರುವಂತೆ ಮಾಡಿ ಅದರಿಂದ ಹೊಳಪಾದ ಮತ್ತು ಬಲವಾದ ವರ್ಸ್ಟೆಡ್ ದಾರವನ್ನು ಪಡೆಯಬಹುದು.

**ಬಟ್ಟೆ ತಯಾರಿಕೆ:** ಸಾಮಾನ್ಯವಾಗಿ ಉಣ್ಣೆಯ ನೂಲಿನಿಂದ ತಯಾರುಮಾಡುವ ಬಟ್ಟೆಯನ್ನು ಎರಡು ರೀತಿಯಿಂದ ಪಡೆಯಬಹುದು. 1. ದಾರಗಳನ್ನು ಹೆಣೆದು ಬಟ್ಟೆಯನ್ನು ತಯಾರಿಸುವುದು. ಇವು ಹೆಚ್ಚು ಪದರ ಪದರವಾಗಿರುತ್ತವೆ. 2 ಮಗ್ಗಗಳಿಗೆ ದಾರವನ್ನು ಹಾಸು ಹೊಕ್ಕಾಗಿ ಹೊಂದಿಸಿ ವಿಧ ವಿಧವಾದ ನೇಯ್ಗೆಗಳನ್ನು ಅಳವಡಿಸಿ ಬಟ್ಟೆಗಳನ್ನು ಪಡೆಯುವುದು. ಕೆಲವು ವೇಳೆ ಎಳೆಗಳನ್ನು ತೆಗೆಯದೆಯೇ ಒತ್ತಡವನ್ನು ಪ್ರಯೋಗಿಸಿ ಫೆಲ್ಟ್ ಎಂಬ ಬಟ್ಟೆಯನ್ನು ಕೂಡ ಮಾಡುವರು.


ಉಣ್ಣೆ ಎಳೆದು ಅಡ್ಡಸೀಳಿಕೆ

ಫ್ಲಾನೆಲ್, ಟ್ವೀಡ್, ಜೆರ್ಸಿ, ಸರ್ಜ್, ಗ್ಯಾಬರ್ಡೀನ್ ಇತ್ಯಾದಿಗಳು ಉಣ್ಣೆ ಬಟ್ಟೆಗಳ ಕೆಲವು ವಿಧಗಳು. ಸಾಮಾನ್ಯವಾಗಿ ಉಣ್ಣೆಯ ಬಟ್ಟೆಗಳು ಗಟ್ಟಿ ಮತ್ತು ಬಾಳಿಕೆಯುಳ್ಳವಾಗಿ ಇರುತ್ತದೆ. ಉಣ್ಣೆಯ ಸ್ಥಿತಿಸ್ಥಾಪಕ ಶಕ್ತಿಯ ಗುಣ ದಿಂದ ಅದರ ಬಟ್ಟೆಗಳು ಹೆಚ್ಚು ಮುದುಡಿಕೊಳ್ಳುವುದಿಲ್ಲ. ಉಣ್ಣೆ ಬಟ್ಟೆಗಳಿಂದ ಶಾಖ ಪ್ರವಹಿಸದ ಕಾರಣ ಚಳಿಗಾಲದಲ್ಲಿ ಮೈಯನ್ನು ಬೆಚ್ಚಗಿಡಲು ಅವು ಬಹಳ ಉಪಯುಕ್ತವಾಗಿವೆ. ಉಣ್ಣೆಗೆ ಕುಗ್ಗುವ ಗುಣವಿರುವುದರಿಂದ ಉಣ್ಣೆ ಬಟ್ಟೆಗಳನ್ನು ಒಗೆಯುವಾಗ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಸಾಮಾನ್ಯವಾಗಿ ತಣ್ಣೀರನ್ನೇ ಉಪಯೋಗಿಸಬೇಕು; ಮತ್ತು ಒದ್ದೆಯಾಗಿದ್ದಾಗಲೇ ಉಡುಪನ್ನು ಅದರ ಮೊದಲ ಬಟ್ಟೆಯ ಆಕಾರಕ್ಕೆ ತರುವುದು ಒಳ್ಳೆಯದು. ಹೆಚ್ಚು ಕಾಯ್ದ ಇಸ್ತ್ರಿಪೆಟ್ಟಿಗೆಗಳಿಂದ ಇಸ್ತ್ರಿ ಮಾಡಿದರೆ ಸತ್ತ್ವ ಕಳೆದುಹೋಗುತ್ತದೆ.

(ಬಿ.ಬಿ.ಆರ್.)

**ಸ್ವರೂಪ:** ಉಣ್ಣೆಎಳೆ ಒಂದು ಸಂಕೀರ್ಣ ಮತ್ತು ವ್ಯವಸ್ಥಿತ ರಚನೆ. ಇದರ ಮೂಲ ಚರ್ಮದ ಹೊರ ಪದರದಲ್ಲಿದೆ (ಎಪಿಡರ್ಮಿಸ್). ಬೆಳೆವಣಿಗೆಯನ್ನು ಪ್ರೇರಿಸುವ ಗ್ರಂಥಿಗಳು ಚರ್ಮದ ಕೆಳ ಪದರದಲ್ಲಿ (ಡರ್ಮಿಸ್) ಹುದುಗಿವೆ. ಇವು ಎರಡು: ಸಿಬಾಶಿಯಸ್ ಮತ್ತು ಸ್ಯೂಡಿಫೆರಸ್.

ಮೊದಲಿನದು ಉಣ್ಣೆಕೊಬ್ಬನ್ನು (ವುಲ್‌ಗ್ರೀಸ್) ಸ್ರವಿಸುತ್ತದೆ. ಇದನ್ನು ಶುದ್ಧೀಕರಿಸಿದಾಗ ಲ್ಯಾನೊಲಿನ್ ದೊರೆಯುವುದು. ಎರಡನೆಯದು ಸ್ವೇದವನ್ನು(ಸ್ಯೂಯಿಂಟ್) ಸ್ರವಿಸುತ್ತದೆ. ಕಚ್ಚಾ ಉಣ್ಣೆಯಲ್ಲಿರುವ ಕೊಬ್ಬು ಮತ್ತು ಸ್ವೇದಸ್ರಾವಗಳ ಒಟ್ಟು ಹೆಸರು ಯೋಕ್. ಇದನ್ನು ಮನುಷ್ಯಚರ್ಮ ಹೀರಿಕೊಳ್ಳುವುದರಿಂದ ಅಂಗರಾಗಗಳ (ಕಾಸ್ಮೆಟಿಕ್) ತಯಾರಿಕೆಯಲ್ಲಿ ಇದರ ಉಪಯೋಗ ಹೆಚ್ಚು. ಬೆಳೆಯುವ ಉಣ್ಣೆಯ ಎಳೆಗಳಿಗೆ ಗ್ರಂಥಿ ಸ್ರಾವಗಳು ಮೃದುಚಾಲಕಗಳಾಗಿಯೂ (ಲ್ಯೂಬ್ರಿಕೆಂಟ್ಸ್) ರಕ್ಷಕಗಳಾಗಿಯೂ ವರ್ತಿಸುವುವು.

ಉಣ್ಣೆ ಮೂಲತಃ ಕೆರಾಟಿನ್ ಎಂಬ ಒಂದು ಪ್ರೋಟೀನ್. ಹ್ಯಾಲೋಜನ್ನುಗಳೊಂದಿಗೆ ರಾಸಾಯನಿಕ ವ್ಯತ್ಯಾಸ ಹೊಂದುತ್ತವೆ. ಸು. 40° ಸೆಂ. ಗ್ರೇ. ಉಷ್ಣತೆಗೆ ಕಾಯಿಸಿದಾಗ ಗಡಸಾಗಿ ಸಾಮರ್ಥ್ಯವನ್ನೂ ತೇವವನ್ನು ಕಳೆದುಕೊಂಡು, ತಣ್ಣಗಾಗಿಸಿದಾಗ ಮೊದಲಿನ ಗುಣಗಳನ್ನು ಪುನಃ ಪಡೆಯುತ್ತದೆ. ಅತಿಶೀತ ಪರಿಸ್ಥಿತಿಯಲ್ಲೂ ಗಮನಾರ್ಹ ಬದಲಾವಣೆ ಏನೂ ಕಂಡಿಲ್ಲ. ನೀರಿನಲ್ಲಿ ಕರಗದು, ಆದರೆ ಸಾಕಷ್ಟು ನೀರನ್ನು ಹೀರಿಕೊಳ್ಳಬಲ್ಲದು. *

**ಉಣ್ಣೆ ಜಂಗು:** ಉಣ್ಣೆನೂಲುವ ಕ್ರಮದಂತೆ ನೂತ ಉಣ್ಣೆಯಿಂದ ರಚಿತವಾದ, ಪುನರುತ್ಪಾದಿತ ಹಿಂಜುದಾರ (ಷಾಡಿ). ಒಂದು ಸಲ ತಯಾರಾದ ಬಟ್ಟೆ ಹರಿದು ತುಣುಕು ಗಳಾದಾಗ ಅವನ್ನು ಪುನಃ ನೂತು ನೇಯ್ದು ಮಾಡಿದ ವಿಶಿಷ್ಟ ಮಾದರಿಯ ಬಟ್ಟೆ ಇದು. ಹೆಣಿಗೆ ಬಟ್ಟೆಗಳು (ನಿಟೆಡ್ ಫ್ಯಾಬ್ರಿಕ್ಸ್), ಬಿರುನೂತ ಬೀಳು (ಹಾರ್ಡ್ ಸ್ಪಿನಿಂಗ್ಸ್ ವೇಸ್ಟ್ಸ್). ಶಾಲುಗಳೇ ಮುಂತಾದುವುಗಳಿಂದ ಇದನ್ನು ತಯಾರಿಸುವರು. ಇವುಗಳ ಜೊತೆಗೆ ಹೊಸ ಉಣ್ಣೆಯನ್ನು ಸೇರಿಸಿ ಸರಾಸರಿ ಮಟ್ಟದ ನೂಲನ್ನು ಸಿದ್ಧಪಡಿಸುತ್ತಾರೆ. ಷಾಡಿಯ ಗುಣಲಕ್ಷಣ ಗಳು ಅದನ್ನು ತಯಾರಿಸುವಾಗ ಉಪಯೋಗಿಸುವ ಕಚ್ಚಾವಸ್ತುವಿನ ವೈವಿಧ್ಯವನ್ನು ಅವಲಂಬಿಸಿವೆ. ಚಿಂದಿಗಳನ್ನು ಎಳೆಗಳಾಗಿ ಬಿಡಿಸುವಾಗ ಅತ್ಯಂತ ಬಿರುಸಾದ ಕ್ರಮಗಳಿಗೆ ಒಳಗಾಗಿಸುವುದರಿಂದ ಅವು ಬಲು ಚಿಕ್ಕ ಎಳೆಗಳಾಗಿ ಪರಿಣಮಿಸುತ್ತವೆ. ಆದ್ದರಿಂದ ಸಾಮಾನ್ಯ ವಾಗಿ ಅವನ್ನು ನೂಲುವಾಗ ಸಹಾಯಕವಾಗಲು ಹಾಗೂ ಮತ್ತಷ್ಟು ಬರಲು ಹತ್ತಿಯೊಡನೆ ಬೆರೆಸುತ್ತಾರೆ.

(ವಿ.ಎಸ್.ವಿ.)

**ಉತ್ತಂಗಿಚನ್ನಪ್ಪ:** 1881–1962. ಅಸ್ತವ್ಯಸ್ತಗೊಂಡು ತಾರುಮಾರಾಗಿದ್ದ ಸರ್ವಜ್ಞನ ವಚನಗಳನ್ನು ಶಾಸ್ತ್ರೀಯವಾಗಿ ಅಣಿಗೊಳಿಸಿ, ಅವನ ವಾಣಿಯನ್ನು ಮನೆ ಮನೆಗೆ ತಲುಪಿಸಿ ಅವನ ಸಮಗ್ರ ದರ್ಶನವನ್ನು ಮಾಡಿಸಿದ ಕೀರ್ತಿವಂತರು. ಕ್ರೈಸ್ತಧರ್ಮದ ಉಪದೇಶಕರು. ಇವರ ಪೂರ್ಣ ಹೆಸರು ರೆವರೆಂಡ್ ಚನ್ನಪ್ಪ ದಾನಿಯೇಲಪ್ಪ ಉತ್ತಂಗಿ. ಇವರ ಕಾವ್ಯನಾಮ ತಿರುಳ್ಗನ್ನಡ ತಿರುಕ. ಇವರ ಹಿರಿಯರು ಬಳ್ಳಾರಿ ಜಿಲ್ಲೆಯ ಉತ್ತಂಗಿಯಲ್ಲಿದ್ದರು. ಕಾರಣಾಂತರದಿಂದ ವೀರಶೈವ ಧರ್ಮದಿಂದ ಕ್ರೈಸ್ತಧರ್ಮಕ್ಕೆ ಮತಾಂತರಗೊಂಡು ಕಾಲ ಕ್ರಮೇಣ ಧಾರವಾಡದಲ್ಲಿ ನೆಲಸಿದರು. ಚನ್ನಪ್ಪನವರು 1881 ಡಿಸೆಂಬರ್ 9ರಂದು ಧಾರವಾಡದಲ್ಲಿ ಜನಿಸಿದರು. ತಂದೆ ದಾನಿಯೇಲಪ್ಪನವರು ಅಲ್ಲಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ರಾಗಿದ್ದರು. ಧಾರವಾಡ, ಗದಗ, ಬೆಟಗೇರಿಗಳಲ್ಲಿ ಚನ್ನಪ್ಪನವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ನಡೆಯಿತು. ಇವರು ಬುದ್ಧಿವಂತ ರಾಗಿದ್ದರೂ ವ್ಯಾಸಂಗದಲ್ಲಿ ಆಸಕ್ತಿ ವಹಿಸಲಿಲ್ಲವಾಗಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲ. ಯಂತ್ರವಿಜ್ಞಾನ ವನ್ನು ಕಲಿಯಬೇಕೆಂದು ಆಶಿಸಿದರು. ಬಡತನದಿಂದ ಅದು ಸಾಧ್ಯವಾಗಲಿಲ್ಲ. ಕೊನೆಗೆ ತಾಯಿಯ ಅಪೇಕ್ಷೆಯಂತೆ ತಮ್ಮ 21ನೆಯ ವಯಸ್ಸಿನಲ್ಲಿ ಮಂಗಳೂರಿಗೆ ಹೋಗಿ ಅಲ್ಲಿಯ ಕ್ರೈಸ್ತಧರ್ಮ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿದರು. ಅನಂತರ ಅಲ್ಲಿಯ ಬಾಸೆಲ್ ಸಂಸ್ಥೆಯಲ್ಲಿ ಉಪದೇಶಕ ವೃತ್ತಿಯನ್ನು ಕೈಗೊಂಡರು (1908). ಮುಂದೆ ಧಾರವಾಡ, ಹುಬ್ಬಳ್ಳಿ, ಹಾವೇರಿ, ಗದಗ ಮುಂತಾದ ಸ್ಥಳಗಳಲ್ಲಿ ಉಪದೇಶಕರಾಗಿ ಸು.33 ವರ್ಷಗಳ ಕಾಲ ಸೇವೆಸಲ್ಲಿಸಿ 1942ರಲ್ಲಿ ನಿವೃತ್ತರಾದರು.

ಚಿಕ್ಕಂದಿನಿಂದಲೂ ಧಾರ್ಮಿಕ ಒಲವಿನವರಾಗಿದ್ದ ಇವರು ತತ್ತ್ವಜ್ಞಾನದಲ್ಲಿ ಆಸಕ್ತಿವಹಿಸಿ, ಅನೇಕ ತಾತ್ವಿಕ ಗ್ರಂಥಗಳನ್ನು ಸ್ವತಂತ್ರವಾಗಿ ವ್ಯಾಸಂಗಮಾಡಿದರು. ಉಪದೇಶಕ ವೃತ್ತಿಯನ್ನು ಕೈಗೊಂಡ ಮೇಲೂ ತಮ್ಮ ಈ ಅಧ್ಯಯನವನ್ನು ಮುಂದುವರೆಸಿ ಕ್ರೈಸ್ತಧರ್ಮದ ಜತೆಗೆ ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ತ್ವದರ್ಶನಗಳ ವ್ಯಾಸಂಗ ಮಾಡಿದರಲ್ಲದೆ ಅನುಭವದ ಆಗರಗಳಾದ ಉಪನಿಷತ್ತು, ಭಗವದ್ಗೀತೆಗಳ ಜತೆಗೆ ಪ್ಲೇಟೋ. ಕಾಂಟ್, ಬ್ರಾಡ್ಲೆ, ವಿಲಿಯಂಜೇಮ್ಸ್ ಮುಂತಾದವರ ಗ್ರಂಥಗಳನ್ನು ಓದಿ ವಿಚಾರ ಶಕ್ತಿಯನ್ನು ಬೆಳೆಸಿಕೊಂಡರು.

ಕ್ರೈಸ್ತಧರ್ಮದ ಉಪದೇಶಕರಾಗಿದ್ದ ಚನ್ನಪ್ಪನವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. 1915ರಲ್ಲಿ ಬರೆವಣಿಗೆಯನ್ನು ಆರಂಭಿಸಿದ ಇವರು ಒಟ್ಟು 18 ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ಎರಡು ವಿಭಾಗ ಮಾಡಬಹುದು. 1. ಕ್ರೈಸ್ತಧರ್ಮಕ್ಕೆ ಸಂಬಂಧಿಸಿದುದು. 2. ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಗಳಿಗೆ ಸಂಬಂಧಿಸಿದುದು. ಸಾಹಿತ್ಯಾರಾಧನೆಯೇ ಈ ಎಲ್ಲದರ ಘನ ಉದ್ದೇಶ.

ಚನ್ನಪ್ಪನವರ ಮೊದಲ ಕೃತಿ ಬನಾರಸಕ್ಕೆ ಬೆತ್ಲೆಹೇಮಿನ ವಿನಂತಿ (1921). ಯೇಸುಕ್ರಿಸ್ತನ ಜೀವನವನ್ನು ತುಲನಾತ್ಮಕವಾಗಿ ಅಧ್ಯಯನಮಾಡಿ ಶಾಸ್ತ್ರೀಯ ದೃಷ್ಟಿಯಿಂದ ಬರೆದದ್ದು. ಅನಂತರ ಹಿಂದೂ ಸಮಾಜದ ಹಿತಚಿಂತಕ (1921) ಎಂಬ ಗ್ರಂಥವನ್ನು ಪ್ರಕಟಿಸಿದರು. ಭಾರತದಲ್ಲಿರುವ ಜಾತಿಭೇದದ ಬಗ್ಗೆ ಶಾಸ್ತ್ರೀಯ ವಿವೇಚನೆಯನ್ನು ಈ ಗ್ರಂಥದಲ್ಲಿ ಮಾಡಿದ್ದಾರೆ. ಮಕ್ಕಳ ಶಿಕ್ಷಣಪಟ (1923) ಎಂಬುದು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಗ್ರಂಥ.

ಸಾಹಿತ್ಯ ರಂಗದಲ್ಲಿ ಚನ್ನಪ್ಪನವರಿಗೆ ಶಾಶ್ವತವಾದ ಕೀರ್ತಿಯನ್ನು ತಂದುಕೊಟ್ಟದ್ದು, ಸರ್ವಜ್ಞ ವಚನಗಳು (1924) ಎಂಬ ಇವರ ಸಂಪಾದಿತ ಗ್ರಂಥ. ಸುಮಾರು 9 ವರ್ಷಗಳ ದೀರ್ಘಕಾಲ ಈ ಗ್ರಂಥದ ಸಂಪಾದನೆಯ ಕಾರ್ಯಕ್ಕೆ ದುಡಿದ ಇವರು 2000 ವಚನಗಳನ್ನು ಪರಿಷ್ಕರಿಸಿದ್ದಾರೆ. ಈ ಗ್ರಂಥಕ್ಕೆ ಬರೆದಿರುವ 108 ಪುಟಗಳ ಉಪೋದ್ಘಾತದಲ್ಲಿ ಸರ್ವಜ್ಞನ ಪೂರ್ವೋತ್ತರ ಮತ್ತು ಅವನ ವ್ಯಕ್ತಿತ್ವ ಕುರಿತು ಮನಮುಟ್ಟುವಂತೆ ವಿವರಿಸಿದ್ದಾರೆ. ಸರ್ವಜ್ಞ ವಚನಗಳನ್ನು ಪಾರಮಾರ್ಥಿಕ ಮತ್ತು ಲೌಕಿಕ ವಿಚಾರಗಳೆಂದು ವಿಭಾಗಿಸಿ ಅಣಿಗೊಳಿಸಿದ್ದಾರೆ. ಈ ಕೃತಿ ಬಹು ಬೇಗ ಜನಪ್ರಿಯವಾಯಿತು. ಆಗಿನ ಮೈಸೂರು ಸರ್ಕಾರ ಈ ಗ್ರಂಥದ ಸ್ವಾಮ್ಯವನ್ನು ಚನ್ನಪ್ಪನವರಿಂದ ಪಡೆದು, ಸುಲಭ ಬೆಲೆಯ ಆವೃತ್ತಿಗಳ ಮಾಲೆಯಲ್ಲಿ ಪ್ರಕಟಿಸಿತು. ಈ ಗಂಥ ಸರ್ವಜ್ಞ ವಚನಗಳ ಅಕಾರಾದಿಯನ್ನು ಒಳಗೊಂಡಿದೆ. ಸಾಹಿತ್ಯಆವೃತ್ತಿ (1924), ಜೇಬಿನಆವೃತ್ತಿ (1935), ಜನಪದಆವೃತ್ತಿ (1935) ಮತ್ತು ಅಗ್ಗದಆವೃತ್ತಿ (1941)–ಹೀಗೆ ನಾಲ್ಕು ಆವೃತ್ತಿಗಳಲ್ಲಿ ಪ್ರಕಟಗೊಂಡಿರುವ ಏಕೈಕ ಗ್ರಂಥವಿದು.

ಭಾರತೀಯ ಕ್ರೈಸ್ತ ಹಾಗೂ ದೇಶಪ್ರೇಮಿಯಾಗಿದ್ದ ಮಹಾರಾಷ್ಟ್ರದ ಪ್ರಸಿದ್ಧ ಕವಿ ನಾರಾಯಣ ವಾಮನ ತಿಲಕರನ್ನು ಕುರಿತು ಜೆ.ಸಿ.ವಿನ್ಸೊ ಅವರು ಇಂಗ್ಲಿಷಿನಲ್ಲಿ ಬರೆದಿದ್ದ ಗ್ರಂಥವನ್ನು ಚನ್ನಪ್ಪನವರು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ (1927). ಇವರ ಇನ್ನೊಂದು ಅನುವಾದ ದೃಷ್ಟಾಂತದರ್ಪಣ (1939); 500 ದೃಷ್ಟಾಂತಗಳ ಸಂಗ್ರಹ.

ವೀರಶೈವಧರ್ಮ ಮತ್ತು ಸಿದ್ಧಾಂತಗಳಲ್ಲಿ ಪರಿಶ್ರಮ ಪಡೆದಿದ್ದ ಚನ್ನಪ್ಪನವರು ಮೋಳಿಗೆ ಮಾರಯ್ಯ ಮತ್ತು ರಾಣಿಮಹಾದೇವಿಯವರ ವಚನಗಳು (1950), ಆದಯ್ಯನ ವಚನಗಳು (1957) ಎಂಬ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಸಿದ್ಧರಾಮ ಸಾಹಿತ್ಯ ಸಂಗ್ರಹ (1955) ಇವರ ಇನ್ನೊಂದು ಸಂಪಾದಿತ ಗ್ರಂಥ, ದೀರ್ಘವಾದ ಉಪೋದ್ಘಾತ ಮತ್ತು ವಿಮರ್ಶೆಗಳನ್ನು ಒಳಗೊಂಡಿದ್ದು ವಚನ ಸಾಹಿತ್ಯದಲ್ಲಿ ಇವರು ನಡೆಸಿದ ಸಂಶೋಧನೆಗೆ ಸಾಕ್ಷಿಯಂತಿದೆ. ಅನುಭವಮಂಟಪ : ಹಾರ್ಟ್ ಆಫ್ ಲಿಂಗಾಯಿತ್ ರಿಲಿಜಿನ್ ಎಂಬುದು ಇವರ ಒಂದು ಇಂಗ್ಲಿಷ್ ಗ್ರಂಥ.

ಹೀಗೆ ನಾನಾ ವಿಧದಲ್ಲಿ ಕ್ರೈಸ್ತಧರ್ಮ, ನಾಡು ಮತ್ತು ನುಡಿಗಳ ಸೇವೆಯನ್ನು ಮಾಡಿದ ಚನ್ನಪ್ಪನವರನ್ನು 1949ರಲ್ಲಿ ಗುಲ್ಬರ್ಗದಲ್ಲಿ ನಡೆದ 32ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಲಾಯಿತು. ಇವರ ಸಂಪಾದಿತ ಕೃತಿ ಸಿದ್ಧರಾಮ ಸಾಹಿತ್ಯ ಸಂಗ್ರಹಕ್ಕೆ ದೇವರಾಜ ಬಹದ್ದೂರ್ ದತ್ತಿ ಬಹುಮಾನ ಲಭಿಸಿದೆ. ಚನ್ನಪ್ಪನವರು 1962 ಆಗಸ್ಟ್ 28ರಂದು ನಿಧನರಾದರು. ಇವರ ನಿಧನಾನಂತರ ಮೃತ್ಯುಂಜಯ (1963), ಲಿಂಗಾಯಿತ ಧರ್ಮ ಮತ್ತು ಕ್ರೈಸ್ತಧರ್ಮ (1969) ಎಂಬ ಎರಡು ಗ್ರಂಥಗಳು ಪ್ರಕಟವಾದವು.

*

**ಉತ್ಕಲ:** ಉತ್ಕಲಜನ ವಾಸಿಸುತ್ತಿದ್ದ ಕಾರಣದಿಂದ ಅದೇ ಹೆಸರಿನಿಂದ ಪ್ರಸಿದ್ಧವಾಗಿದ್ದ ದೇಶ. ಓಢ್ರ (ಒರಿಸ್ಸ), ಕಲಿಂಗ ದೇಶಗಳಿಗೆ ಹೊಂದಿಕೊಂಡಿದ್ದು ಈ ದೇಶಕ್ಕೆ ರಾಂಜಿಯ ಬಳಿಯ ಬಲಸೋರ, ಮೋಹರ್ದಗಾ ಮತ್ತು ಮಧ್ಯಪ್ರದೇಶದ ಸುಗರಜ ಸೇರಿದ್ದುವು. ದುರ್ಯೋಧನನ ಆಜ್ಞಾನುಸಾರವಾಗಿ ಕರ್ಣ ಈ ದೇಶವನ್ನೂ ಓಢ್ರವನ್ನೂ ಗೆದ್ದನೆಂದು ಹೇಳಿದೆ. ಅನೇಕ ಸಂಸ್ಕೃತ ಗ್ರಂಥಗಳಲ್ಲಿ ಓಢ್ರವೂ ಉತ್ಕಲವೂ ಒಂದೇ ಎಂಬ ಭಾವನೆ ಯುಂಟು. ಅವರ ದೃಷ್ಟಿಯಲ್ಲಿ ಉತ್ಕಲವೆಂಬುದು ಉತ್ಕಲಿಂಗದ, ಅಥವಾ ಕಲಿಂಗದ ಉತ್ತರ (ಉತ್) ಭಾಗದ (ಈಗಿನ ಛೋಟಾ ನಾಗಪುರದ ದಕ್ಷಿಣ ಭಾಗ) ಅಪಭ್ರಂಶ. ಕರ್ನಾಟಕದ ಹೊಲ ಉಳುವ ಕುಟುಂಬಗಳ (ಒಕ್ಕಲಿಗರು) ಒಕ್ಕಲ್ (ಒಕ್ಕಲು) ಪ್ರಾಚೀನ ಕಾಲದಲ್ಲಿ ಉತ್ಕಲವೆಂಬ ಸಂಸ್ಕೃತರೂಪ ತಳೆದಿರಬೇಕೆಂದು ಕೆಲವು ಸಂಶೋಧಕರ (ಉದಾ: ಹಿಸ್ಟರಿ ಆಫ್ ಒರಿಯನ್ ಲ್ಯಾಂಗ್ವೇಜ್ ಗ್ರಂಥದ ಕರ್ತೃ ಪಂಡಿತ ವಿನಾಯಕ ಶರ್ಮ) ಅಭಿಪ್ರಾಯ. ಕನ್ನಡ ದೇಶದ ಒಕ್ಕಲಿಗರೇ ಒಕ್ಕಲಿಗರು ಅಥವಾ ಉತ್ಕಲರೆಂಬ ಊಹೆ ನಿಜವಾದರೆ ಕನ್ನಡ ಭಾಷೆ ಸಂಸ್ಕೃತಿಗಳು ಪ್ರಾಚೀನಕಾಲದಲ್ಲಿ ಇಲ್ಲಿಯವರೆಗೂ ವ್ಯಾಪಿಸಿದ್ದುವೆನ್ನಬಹುದು. ಅನೇಕ ಮನೆತನದ ಅರಸರು ಇಲ್ಲಿ ರಾಜ್ಯವಾಳುತ್ತಿದ್ದರಾದರೂ ಇವರ ಆಳ್ವಿಕೆಗಳ ಅನುಕ್ರಮಣಿಕೆಯಾಗಲಿ ಇವರ ರಾಜ್ಯಗಳ ಎಲ್ಲೆಗಳಾಗಲಿ, ಈ ನಾನಾ ಅರಸರ ಪರಸ್ಪರ ಸಂಬಂಧ ಸ್ವರೂಪವಾಗಲಿ ಸರಿಯಾಗಿ ಗೊತ್ತಿಲ್ಲ. 8ನೆಯ ಶತಮಾನದ ಮಧ್ಯಕಾಲದಿಂದ 10ನೆಯ ಶತಮಾನದ ಅಂತ್ಯದವರೆಗೆ ಇಲ್ಲಿ ಆಳುತ್ತಿದ್ದ ಕರ ಅಥವಾ ಭೌಮರು ಶಕ್ತರು, ಪ್ರಸಿದ್ಧರು. 12ನೆಯ ಶತಮಾನದಲ್ಲಿ ಸೋಮವಂಶಿ ಸುವರ್ಣಕೇಸರಿ ರಾಜನನ್ನು ಚೋಡಗಂಗ ದೇವ ಸೋಲಿಸಿ ಉತ್ಕಲದೇಶವನ್ನು ವಶಪಡಿಸಿಕೊಂಡನೆಂದು ಕೂರ್ನಿ ತಾಮ್ರಶಾಸನದಿಂದ ಗೊತ್ತಾಗುತ್ತದೆ. ಪೂರ್ವದ ಚಾಲುಕ್ಯರು, ಚೋಳರು, ಯಾದವರು, ವಿಜಯನಗರದ ಅರಸರು ಮತ್ತು ಗಜಪತಿ ಅರಸರು ಅನುಕ್ರಮವಾಗಿ ಉತ್ಕಲವನ್ನಾಳುತ್ತಿದ್ದರು. ಇದು ಮುಂದೆ ಮೊಗಲರ, ಅನಂತರ ಬ್ರಿಟಿಷರ ವಶದಲ್ಲಿತ್ತು. (ಆರ್.ಎಸ್.ಪಿ.)

**ಉತ್ಕರ್ಷಣ – ಅಪಕರ್ಷಣ:** ರಾಸಾಯನಿಕ ಕ್ರಿಯೆಗಳಲ್ಲಿ ಒಂದು ಪ್ರಮುಖ ಭಾವನೆ (ಆಕ್ಸಿಡೇಷನ್–ರಿಡಕ್ಷನ್). ಹಲವಾರು ವಸ್ತುಗಳ ರಸಾಯನ ವಿಜ್ಞಾನವನ್ನು ವ್ಯವಸ್ಥೆಗೊಳಿಸಲು ಇದು ಬಲು ಸಹಾಯಕಾರಿ. ಈ ಪದಗಳನ್ನು ಬಳಸಲು ಆರಂಭಿಸಿದ ದಿವಸಗಳಲ್ಲಿ ಇವು ಪ್ರತಿನಿಧಿಸಿದ ಭಾವನೆ ಇಷ್ಟು: ವಸ್ತುವಿಗೆ ಆಕ್ಸಿಜನ್ ಅಥವಾ ತತ್ಸಮವಾದ ಮೂಲವಸ್ತುವನ್ನು ಅಥವಾ ರ್‍ಯಾಡಿಕಲ್ಲನ್ನು ಸೇರಿಸುವುದು; ಅಥವಾ ವಸ್ತುವಿನಿಂದ ಹೈಡ್ರೋಜನ್ ಅಥವಾ ತತ್ಸಮವಾದ ವಿದ್ಯುದ್ಧನ ಮೂಲವಸ್ತುವನ್ನು ಅಥವಾ ರ್‍ಯಾಡಿಕಲ್ಲನ್ನು ತೆಗೆಯುವುದು–ಈ ರಾಸಾಯನಿಕ ಕ್ರಿಯೆ ಉತ್ಕರ್ಷಣ (ಆಕ್ಸಿಡೇಷನ್). ಇದರ ವಿರುದ್ಧಕ್ರಿಯೆ ಅಪಕರ್ಷಣ (ರಿಡಕ್ಷನ್). ಆದರೆ ಇಂದು ಉತ್ಕರ್ಷಣ–ಅಪಕರ್ಷಣ ಪದಗಳ ಅರ್ಥವ್ಯಾಪ್ತಿ ವಿಶಾಲವಾಗಿದೆ. ಎಲೆಕ್ಟ್ರಾನುಗಳು ವಿನಿಮಯವಾಗುವ ಎಲ್ಲ ಕ್ರಿಯೆಗಳನ್ನೂ ಉತ್ಕರ್ಷಣ–ಅಪಕರ್ಷಣವೆಂದು ಕರೆಯುತ್ತೇವೆ. ಏಕಕಾಲದಲ್ಲಿ ನಡೆಯುವ ಈ ಕ್ರಿಯೆಗಳು ಪರಸ್ಪರ ಪೂರಕಗಳು. ಯಾವುದೇ ಒಂದು ರಾಸಾಯನಿಕ ಕ್ರಿಯೆಯಲ್ಲಿ ಎಲೆಕ್ಟ್ರಾನುಗಳನ್ನು ಸ್ವೀಕರಿಸಬಲ್ಲ ವಸ್ತುವನ್ನು ಉತ್ಕರ್ಷಣ ಕಾರಿ ಎಂದೂ, ಅವನ್ನು ಕಳೆದುಕೊಳ್ಳಬಲ್ಲ ವಸ್ತುವನ್ನು ಅಪಕರ್ಷಣಕಾರಿ ಎಂದೂ ಕರೆಯುತ್ತೇವೆ. ಕ್ಲೋರೀನ್, ಬ್ರೋಮೀನ್, ಅಯೊಡೀನ್ ಮತ್ತು ಆಕ್ಸಿಜನ್ ಮೂಲವಸ್ತುಗಳನ್ನು ಮತ್ತು ನೈಟ್ರಿಕ್ ಆಮ್ಲ, ಪೊಟ್ಯಾಸಿಯಂ ಪರ್ಮಾಂಗನೇಟ್, ಡೈಕ್ರೊಮೇಟ್ ಮತ್ತು ಕ್ಲೋರೇಟ್ ಮುಂತಾದ ಸಂಯುಕ್ತ ವಸ್ತುಗಳನ್ನು ಉತ್ಕರ್ಷಣಕಾರಿಗಳೆಂದು ಪರಿಗಣಿಸಲಾಗಿದೆ. ಹೈಡ್ರೋಜನ್, ಕಾರ್ಬನ್, ಸೋಡಿಯಂ, ಪೊಟ್ಯಾಸಿಯಂ ಮತ್ತು ಕ್ಯಾಲ್ಸಿಯಂ ಮೂಲವಸ್ತುಗಳನ್ನು ಮತ್ತು ಹೈಡ್ರೋಜನ್ ಸಲ್ಫೈಟ್, ಹೈಡ್ರೋಜನ್ ಅಯೊಡೈಡ್, ಕಾರ್ಬನ್ ಮಾನಾಕ್ಸೈಡ್, ಸ್ಟ್ಯಾನಸ್ ಕ್ಲೋರೈಡ್ ಮತ್ತು ಫೆರಸ್ ಸಲ್ಫೇಟ್ ಸಂಯುಕ್ತಗಳನ್ನು ಅಪಕರ್ಷಣಕಾರಿಗಳೆಂದು ಪರಿಗಣಿಸಲಾಗಿದೆ. ಕಬ್ಬಿಣಕ್ಕೆ ತುಕ್ಕುಹಿಡಿಯುವುದು, ಗಾಳಿಯಲ್ಲಿ ಮೆಗ್ನೀಸಿಯಂ ತಂತಿ ಪ್ರಕಾಶಮಾನವಾಗಿ ಉರಿದು ಬೂದಿಯಾಗುವುದು, ಹೈಡ್ರೊಕಾರ್ಬನ್ನುಗಳ ದಹನ ಮತ್ತು ಜೀವಕೋಶಗಳಲ್ಲಿ ಶರ್ಕರಪಿಷ್ಟಾದಿಗಳು ಆಕ್ಸಿಜನ್ನಿನೊಡನೆ ಸಂಯೋಜಿಸು ವುದು–ಇವು ಉತ್ಕರ್ಷಣ ಕ್ರಿಯೆಗಳು. ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ಇಂಗಾಲಾಮ್ಲ ಶರ್ಕರಪಿಷ್ಟಾದಿಗಳಿಗೆ ಪರಿವರ್ತಿತವಾಗುವಿಕೆ, ಆಕ್ಸೈಡ್, ಸಲ್ಫೈಡ್ ಮತ್ತು ಹ್ಯಾಲೈಡ್ ಅದುರುಗಳಿಂದ ಆಯಾ ಲೋಹಗಳನ್ನು ಪಡೆಯುವುದು, ಲೋಹಗಳ ವಿದ್ಯುಲ್ಲೇಪನ ಮತ್ತು ಸೂಕ್ಷ್ಮಕಣಗಳ ರೂಪದಲ್ಲಿರುವ ನಿಕಲ್ ವೇಗವರ್ಧಕದ ಸಂಪರ್ಕದಲ್ಲಿ ವನಸ್ಪತಿ ತೈಲಗಳು ಹೈಡ್ರೋಜನ್ ಹೀರಿಕೊಂಡು ವನಸ್ಪತಿ ತುಪ್ಪವಾಗುವುದು–ಇವೆಲ್ಲ ಅಪಕರ್ಷಣ ಕ್ರಿಯೆಗಳು.

ಮೈಲುತುತ್ತದ (ತಾಮ್ರದ ಸಲ್ಫೇಟ್) ದ್ರಾವಣದಲ್ಲಿ ಕ್ಯುಪ್ರಿಕ್ (Cu++) ಅಯಾನುಗಳಿವೆ. ದ್ರಾವಣಕ್ಕೆ ಕಬ್ಬಿಣದ ತುರಿಯನ್ನು ಸೇರಿಸಿದರೆ ಅದು ವಿಲೀನವಾಗಿ ತಾಮ್ರ ಒತ್ತರಿಸುವುದು. ಈ ರಾಸಾಯನಿಕ ಕ್ರಿಯೆಯನ್ನು ಕೆಳಕಂಡ ಸಮೀಕರಣದಿಂದ ಸೂಚಿಸಬಹುದು.

$$Cu^{++} + Fe \longrightarrow Fe^{++} + Cu$$

(ಲೋಹ) (ಲೋಹ)

ಮೇಲಿನ ಸಂದರ್ಭದಲ್ಲಿ ಕ್ಯುಪ್ರಿಕ್ ಅಯಾನುಗಳು ಕಬ್ಬಿಣದ ಪರಮಾಣುವಿನಿಂದ ತಲಾ ಎರಡು ಎಲೆಕ್ಟ್ರಾನುಗಳನ್ನು ಸ್ವೀಕರಿಸಿ ತಾಮ್ರದ ಪರಮಾಣುಗಳಾಗಿ ಪರಿವರ್ತಿತವಾಗಿವೆ. ಆದ್ದರಿಂದ ಕ್ಯುಪ್ರಿಕ್ ಅಯಾನು ಉತ್ಕರ್ಷಣಕಾರಿ ಎಂದಾಯಿತು. ಹಾಗೆಯೇ ಕಬ್ಬಿಣದ ಪರಮಾಣು ತನ್ನಲ್ಲಿದ್ದ ಎರಡು ಎಲೆಕ್ಟ್ರಾನುಗಳನ್ನು ಕಳೆದುಕೊಂಡಿರುವುದರಿಂದ ಅದು ಅಪಕರ್ಷಣಕಾರಿ ಎನಿಸಿಕೊಳ್ಳುವುದು. ಒಂದು ವಸ್ತು ಉತ್ಕರ್ಷಿತವಾದರೆ ಏಕಕಾಲದಲ್ಲಿ ಮತ್ತೊಂದು ಅಪಕರ್ಷಿತವಾಗಿರಲೇಬೇಕೆಂಬ ನಿಯಮವು ಈ ಉದಾಹರಣೆಯಿಂದ ವ್ಯಕ್ತವಾಗುವುದು.

ಸ್ವಯಂ ಉತ್ಕರ್ಷಣ (ಆಟೋ ಆಕ್ಸಿಡೇಷನ್): ಏಕಕಾಲದಲ್ಲಿ ಒಂದೇ ವಸ್ತು ಉತ್ಕರ್ಷಣ ಮತ್ತು ಅಪಕರ್ಷಣ ಹೊಂದಬಹುದು. ಅಂಥ ವಿಶಿಷ್ಟ ಕ್ರಿಯೆಗಳಲ್ಲಿ ಕೆಲವನ್ನು ಮಾತ್ರ ಮುಂದೆ ಸೂಚಿಸಲಾಗಿದೆ :

1. ಹೈಪೊ ಕ್ಲೋರೈಟ್ ದ್ರಾವಣಗಳನ್ನು ಕುದಿಸಿದಾಗ ಕ್ಲೋರೇಟು ಮತ್ತು ಕ್ಲೋರೈಡುಗಳಾಗುವಿಕೆ.

$$3NaClO \longrightarrow NaClO_3 + 2NaCl$$

2. ನೈಟ್ರಸ್ ಆಮ್ಲ ಕ್ರಮೇಣ ನೈಟ್ರಿಕ್ ಆಮ್ಲ ಮತ್ತು ನೈಟ್ರಿಕ್ ಆಕ್ಸೈಡ್ ಆಗುವುದು.

$$3HNO_2 \longrightarrow HNO_3 + 2NO + H_2O$$

3. ಆರ್ಥೋಫಾಸ್ಫರಸ್ ಆಮ್ಲವನ್ನು ಕಾಯಿಸಿದಾಗ ಉತ್ಕರ್ಷಿತವಾಗಿ ಅರ್ಥೋಪಾಸ್ಫಾರಿಕ್ ಆಮ್ಲ ಮತ್ತು ಅಪಕರ್ಷಿತವಾಗಿ ಫಾಸ್ಫೀನ್ ಆಗುವುದು.

$$4H_3PO_3 \rightarrow 3\,H_3PO_4 + PH^3$$

4. ಎಚ್ಚರಿಕೆಯಿಂದ ಕಾಯಿಸಿದಾಗ ಪೊಟ್ಯಾಸಿಯಂ ಕ್ಲೋರೇಟ್ ಉತ್ಕರ್ಷಿತವಾಗಿ ಪೊಟ್ಯಾಸಿಯಂ ಪರ್‌ಕ್ಲೋರೇಟನ್ನೂ ಅಪಕರ್ಷಿತವಾಗಿ ಪೊಟ್ಯಾಸಿಯಂ ಕ್ಲೋರೈಡನ್ನೂ ಕೊಡುವುದು.

$$4KClO_3 \rightarrow 3KClO_4 + KCl$$

ಜೈವಿಕ ಕ್ರಿಯೆಗಳಲ್ಲಿ ಸ್ವಯಂ ಉತ್ಕರ್ಷಣದ ಪಾತ್ರ ಹಿರಿದು.

ಪರಸ್ಪರ ಅಪಕರ್ಷಣ: ಇದೊಂದು ವಿಚಿತ್ರ ಸನ್ನಿವೇಶ. ಕೆಲವು ಉತ್ಕರ್ಷಣಕಾರಿಗಳು ಪರಸ್ಪರ ಸಂಪರ್ಕದಲ್ಲಿ ಹೀಗಾಗುವುದುಂಟು. ಕೆಳಕಂಡ ಉದಾಹರಣೆಗಳಿಂದ ಇದು ವೇದ್ಯವಾಗುತ್ತದೆ.

1. ಹೈಡ್ರೋಜನ್ ಪರಾಕ್ಸೈಡ್ ಮತ್ತು ಬೆಳ್ಳಿಯ ಆಕ್ಸೈಡುಗಳು ಪರಸ್ಪರ ಅಪಕರ್ಷಿತವಾಗಿ ಬೆಳ್ಳಿ, ನೀರು ಮತ್ತು ಆಕ್ಸಿಜನ್ ಉತ್ಪತ್ತಿಯಾಗುವುವು.

$Ag_2O+H_2O_2 \rightarrow 2Ag+H_2O+O_2$

2. ಆಮ್ಲ ಮಿಶ್ರಿತ ಪೊಟ್ಯಾಸಿಯಂ ಪರ್ಮ್ಯಾಂಗನೇಟು ದ್ರಾವಣ ಹೈಡ್ರೋಜನ್ ಪರಾಕ್ಸೈಡಿನ ಸಂಪರ್ಕದಲ್ಲಿ ತನ್ನ ಊದಾಬಣ್ಣವನ್ನು ಕಳೆದುಕೊಂಡು ನಿರ್ವರ್ಣ ವಸ್ತುಗಳಿಗೆ ಅಪಕರ್ಷಿತವಾಗುವುದು. ಹೈಡ್ರೋಜನ್ ಪರಾಕ್ಸೈಡ್ ಸಹ ಅಪಕರ್ಷಿತವಾಗಿ ನೀರು ಮತ್ತು ಆಕ್ಸಿಜನ್ ಕೊಡುವುದು.

$2KMnO_4+3H_2SO_4+5H_2O_2 \rightarrow K_2SO_4+2MnSO_2+8H_2O+5O_2$

3. ಓಝೋನ್ ಅನಿಲ ಬೇರಿಯಂ ಪರಾಕ್ಸೈಡನ್ನು ಮಾನಾಕ್ಸೈಡಿಗೆ ಅಪಕರ್ಷಿಸುವುದು. ತಾನು ಆಕ್ಸಿಜನ್ನಾಗಿ ಅಪಕರ್ಷಣ ಹೊಂದುವುದು.

$BaO_2+O_3 \rightarrow BaO+2O_2$

ಉತ್ಕರ್ಷಣಾಂಕ (ಆಕ್ಸಿಡೇಷನ್ ನಂಬರ್): ಎಲ್ಲ ಮೂಲವಸ್ತುಗಳ ಪರಮಾಣುಗಳು ಸ್ವತಂತ್ರ ಸ್ಥಿತಿಯಲ್ಲಿದ್ದಾಗ ವಿದ್ಯುದ್ರಹಿತವಾಗಿರುತ್ತವೆ (ನ್ಯೂಟ್ರಲ್). ರಾಸಾಯನಿಕ ಸಂಯೋಜನೆಯಾದಾಗ ಪರಸ್ಪರ ಎಲೆಕ್ಟ್ರಾನುಗಳ ವಿನಿಮಯವಾಗುತ್ತದೆ. ಫಲಿತ ಸಂಯುಕ್ತಗಳು ಕೆಲವು ಸಂದರ್ಭಗಳಲ್ಲಿ ವಿದ್ಯುತ್‍ಪೂರಿತವಾಗುವುವು. ಇಂಥ ಕಣಗಳಿಗೆ ಅಯಾನುಗಳೆಂದೂ, ಈ ರೀತಿಯ ಸಂಯೋಜನೆಗೆ ಅಯಾನುಬಂಧ (ಅಯಾನಿಕ್ ಬಾಂಡ್) ಎಂದೂ ಹೆಸರು. ಆದ್ದರಿಂದ ಸಂಯುಕ್ತ ಸ್ಥಿತಿಯಲ್ಲಿರುವ ಪರಮಾಣುವೊಂದನ್ನು ಅದರ ಮೂಲಸ್ಥಿತಿಗೆ ತರಬೇಕಾದರೆ ಅದಕ್ಕೆ ಕೂಡಿಸಬೇಕಾದ ಅಥವಾ ಅದರಿಂದ ಕಳೆಯಬೇಕಾದ ಎಲೆಕ್ಟ್ರಾನುಗಳ ಸಂಖ್ಯೆಗೆ ಆ ಮೂಲವಸ್ತುವಿನ ಉತ್ಕರ್ಷಣಾಂಕ ಎಂದು ಹೆಸರು. ಉದಾಹರಣೆಗೆ, ಬೇರಿಯಂ ಕ್ಲೋರೈಡಿನಲ್ಲಿ ($BaCl_2$) ಬೇರಿಯಂ ಅಯಾನಿಗೆ (Ba++) ಎರಡು ಎಲೆಕ್ಟ್ರಾನುಗಳನ್ನು ಸೇರಿಸಿದರೆ ಮಾತ್ರ (Ba) ಮೂಲ ಪರಮಾಣುವಾಗುವುದು. ಆದ್ದರಿಂದ ಅದರ ಉತ್ಕರ್ಷಣಾಂಕ +2. ಕ್ಲೋರೀನ್ ಅಯಾನಿನಿಂದ (Cl–) ತಲಾ ಒಂದು ಎಲೆಕ್ಟ್ರಾನ್ ತೆಗೆದರೆ ಮಾತ್ರ ಅದು (Cl) ಮೂಲ ಪರಮಾಣುವಾಗುವುದು. ಆದ್ದರಿಂದ ಅದರ ಉತ್ಕರ್ಷಣಾಂಕ–1. ಫ್ಲೂರಿನ್ ಹೊರತು ಉಳಿದ ಎಲ್ಲ ಮೂಲವಸ್ತುಗಳ ಬಗ್ಗೆ ಆಕ್ಸಿಜನ್ ವಿದ್ಯುದೃಣವಾಗಿ (ಎಲಕ್ಟ್ರೋನೆಗೆಟಿವ್) ವರ್ತಿಸುತ್ತದೆ. ಅಂದರೆ ಇತರ ಮೂಲವಸ್ತುಗಳೊಡನೆ ಕ್ರಿಯೆಗೆ ಒಳಗಾಗುವ ಆಕ್ಸಿಜನ್ನಿನ ಪ್ರತಿ ಒಂದು ಪರಮಾಣವೂ ಅದರ ಎಲೆಕ್ಟ್ರಾನುಗಳೊಂದಿಗೆ ಮತ್ತೆ ಎರಡು ಎಲೆಕ್ಟ್ರಾನುಗಳನ್ನು ಹೊಂದಿ ಎಂಟು ಎಲೆಕ್ಟ್ರಾನುಗಳಿರುವ ಒಂದು ಸ್ಥಿರ ವೇಲೆನ್ಸ್ ಹೊರಕವಚವನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತದೆ. ಇದನ್ನು ತನ್ನಲ್ಲಿರುವ ಎಲೆಕ್ಟ್ರಾನುಗಳನ್ನು ಪಾಲುಮಾಡಿಕೊಳ್ಳುವುದರ ಮೂಲಕ ಅಥವಾ ಅವುಗಳ ವರ್ಗಾವಣೆಯಿಂದ ಸಾಧಿಸಿಕೊಳ್ಳುವುದು.

ಆದ್ದರಿಂದ ತಾತ್ತ್ವಿಕವಾಗಿ ಇತರ ಮೂಲವಸ್ತುಗಳ ಜೊತೆಯಲ್ಲಿನ ಸಂಯೋಜಿತ ಸ್ಥಿತಿಯಲ್ಲಿ ಆಕ್ಸಿಜನ್ನಿನ ಉತ್ಕರ್ಷಣಾಂಕ–2 ಎಂದು ಪರಿಗಣಿಸಲಾಗಿದೆ. (ಸೂಪರ್ ಆಕ್ಸೈಡುಗಳು ಮತ್ತು ಪರಾಕ್ಸಿ ಸಂಯುಕ್ತಗಳಿಗೆ ಇದು ಅನ್ವಯಿಸುವುದಿಲ್ಲ). ಒಂದು ಸಂಯುಕ್ತ ವಸ್ತುವಿನಲ್ಲಿರುವ ಪರಮಾಣುಗಳ ಉತ್ಕರ್ಷಣಾಂಕಗಳ ಮೊತ್ತ ಸೊನ್ನೆಯಾಗಿರಬೇಕು. ಉದಾಹರಣೆಗೆ, ಪೊಟ್ಯಾಸಿಯಂ ಪರ್ಮಾಂಗನೇಟಿನಲ್ಲಿ ($KMnO_4$) ಮ್ಯಾಂಗನೀಸ್ ಪರಮಾಣವಿಗೆ +7, ಪೊಟ್ಯಾಸಿಯಂ ಪರಮಾಣುವಿಗೆ+1 ಮತ್ತು ನಾಲ್ಕು ಆಕ್ಸಿಜನ್ ಪರಮಾಣುಗಳಿಗೆ ತಲಾ –2 ರಂತೆ ಒಟ್ಟು –8 ಅಂಕಗಳಾಗುವುದರಿಂದ ಇವುಗಳ ಬೀಜಮೊತ್ತ (ಆಲ್ಜಿಬ್ರೇಯಿಕ್ ಸಮ್) ಸೊನ್ನೆಯಾಗುತ್ತದೆ. ರಾಸಾಯನಿಕ ಸಮೀಕರಣವನ್ನು ಸರಿದೂಗಿಸುವಾಗ ಈ ತತ್ತ್ವವನ್ನು ಗಮನಿಸಬೇಕು. ಉತ್ಕರ್ಷಣಕಾರಿ ಎಂಬುವು ಸಾಪೇಕ್ಷ ಪದಗಳು. ಒಂದು ವಸ್ತು ಹೇಗೆ ವರ್ತಿಸುವುದೆಂಬುದು ಅದು ಸಂಪರ್ಕಹೊಂದುವ ವಸ್ತುವಿನ ಗುಣ, ಪ್ರಾಬಲ್ಯಗಳನ್ನು ಅವಲಂಬಿಸಿದೆ. ಆದ್ದರಿಂದ ಸಾರ (ಕಾನ್ಸನ್‍ಟ್ರೇಷನ್) ವ್ಯತ್ಯಾಸದಿಂದ ಒಂದು ವಸ್ತು ಉತ್ಕರ್ಷಣಕಾರಿಯಾಗಿಯೋ ಅಪಕರ್ಷಣಕಾರಿಯಾಗಿಯೋ ವರ್ತಿಸುವಂತೆ ನಿರ್ದೇಶಿಸಬಹುದು.

ಉದ್ಯಮ ರಸಾಯನವಿಜ್ಞಾನದಲ್ಲಿ ಗಾಳಿ ಅಥವಾ ಆಕ್ಸಿಜನ್ನನ್ನೇ ಉತ್ಕರ್ಷಣಕಾರಿಯಾಗಿ ಬಳಸುವುದು ಹೆಚ್ಚು. ಇದಕ್ಕೆ ಹಲವು ನಿದರ್ಶನಗಳಿವೆ. ಪರಿಶುದ್ಧಗೊಳಿಸಿದ ಸಲ್ಫರ್ ಡೈಆಕ್ಸೈಡ್ ಮತ್ತು ಗಾಳಿಯ ಮಿಶ್ರಣವನ್ನು $450^0–550^0$ ಸೆ. ಉಷ್ಣತಾಮಿತಿಯಲ್ಲಿರುವ ಪ್ಲಾಟಿನಂ ವೆನೇಡಿಯಂ ಪೆಂಟಾಕ್ಸೈಡ್ ವೇಗವರ್ಧಕದ ಮೇಲೆ ಹಾಯಿಸಿದರೆ ಸಲ್ಫರ್ ಟ್ರೈಆಕ್ಸೈಡಾಗಿ ಉತ್ಕರ್ಷಿತವಾಗುವುದು. ಇದನ್ನು 98% ಸಲ್ಫ್ಯೂರಿಕ್ ಆಮ್ಲದಲ್ಲಿ ವಿಲೀನ ಮಾಡುವರು. ಇದೇ ಸಂಪರ್ಕ ವಿಧಾನ. 1:9 ಪ್ರಮಾಣದ ಅಮೋನಿಯ ಮತ್ತು ಗಾಳಿಗೆ ಮಿಶ್ರಣವನ್ನು $700^0$ ಸೆ. ನಲ್ಲಿರುವ ಪ್ಲಾಟಿನಂ ಬಲೆಯ ಮೂಲಕ ವೇಗವಾಗಿ ಹಾಯಿಸಿದರೆ ನೈಟ್ರಿಕ್ ಆಕ್ಸೈಡಾಗಿ ಉತ್ಕರ್ಷಿತವಾಗುವುದು. ಇದು ಗಾಳಿಯಲ್ಲಿರುವ ಆಕ್ಸಿಜನ್ನಿನೊಡನೆ ಸಂಯೋಜಿಸಿ ನೈಟ್ರೋಜನ್ ಡೈಆಕ್ಸೈಡನ್ನು ಕೊಡುವುದು. ಇದನ್ನು ನೀರಿನಲ್ಲಿ ವಿಲೀನ ಮಾಡಿದರೆ ನೈಟ್ರಿಕ್ ಆಮ್ಲವಾಗುವುದು. ಇದೇ ಆಸ್ಟ್‍ವಾಲ್ಟ್ ವಿಧಾನ **(ನೋಡಿ– ಆಸ್ಟ್‍ವಾಲ್ಟ್,–ಫ್ರೀಡ್‍ರಿಶ್–ವಿಲ್‍ಹೆಲ್ಮ್).**

ದ್ರವಿತ ಕಬ್ಬಿಣದ ಮೂಲಕ ಗಾಳಿಯನ್ನು ಹಾಯಿಸಿದರೆ ಆಕ್ಸಿಜನ್ ಕಬ್ಬಿಣದಲ್ಲಿರುವ ಇಂಗಾಲ, ಸಲ್ಫರ್ ಮತ್ತು ಫಾಸ್ಫರಸ್ಸನ್ನು ಆಕ್ಸೈಡುಗಳ ರೂಪಕ್ಕೆ ತಂದು ನಿವಾರಿಸುವುದು. ಅನಂತರ ಅಪೇಕ್ಷಿತ ಇಂಗಾಲವನ್ನು ಸೇರಿಸಿದರೆ ಉಕ್ಕಾಗುವುದು. ಕುಲುಮೆಯಲ್ಲಿ ಪೊಟ್ಯಸಿಯಂ ಹೈಡ್ರಾಕ್ಸೈಡ್ ಮತ್ತು ಮ್ಯಾಂಗನೀಸ್ ಡೈಆಕ್ಸೈಡ್ ಮಿಶ್ರಣವನ್ನು ಅಥವಾ ಕ್ರೋಮೈಟ್ ಅದಿರು ಮತ್ತು ಸೋಡಿಯಂ ಕಾರ್ಬೊನೇಟಿನ ಮಿಶ್ರಣವನ್ನು ಗಾಳಿಯ ಸಂಪರ್ಕದಲ್ಲಿ ಹುರಿಯುವುದರಿಂದ ಕ್ರಮವಾಗಿ ಪೊಟ್ಯಾಸಿಯಂ ಪರ್ಮಾಂಗನೇಟ್ ಮತ್ತು ಪೊಟಾಸಿಯಂ ಡೆಕ್ರೊಮೇಟುಗಳನ್ನು ತಯಾರಿಸಬಹುದು. ಸೂಕ್ತವೇಗವರ್ಧಕಗಳ ನೆರವಿದ್ದರೆ ಗಾಳಿಯಲ್ಲಿರುವ ಆಕ್ಸಿಜನ್ ನ್ಯಾಪ್ತಲೀನನ್ನು ಥ್ಯಾಲಿಕ್ ಅನ್‍ಹೈಡ್ರೈಡಿಗೂ, ಐಸೊಪ್ರೋಪೈಲ್ ಆಲ್ಕೊಹಾಲನ್ನು ಅಸಿಟೋನಿಗೂ, ಟಾಲೀನನ್ನು ಬೆಂಝಾಲ್ಡಿಹೈಡಿಗೂ ಮತ್ತು ಅಸಿಟಾಲ್ಡಿಹೈಡನ್ನು ಅಸಿಟಿಕ್ ಆಮ್ಲಕ್ಕೂ ಉತ್ಕರ್ಷಿಸುವುದು. (ಎಚ್.ಜಿ.ಎಸ್.)

**ಜೀವರಸಾಯನವಿಜ್ಞಾನದಲ್ಲಿ:** ಪ್ರಾಣಿಗಳ ಕೋಶಗಳಲ್ಲಿ ನಿರಂತರವಾಗಿ ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳು ನಡೆಯುತ್ತವೆ. ಗ್ಲೂಕೋಸ್ ಮತ್ತು ತೈಲಾಮ್ಲಗಳು ಆಕ್ಸಿಜನ್ನಿನ ನೆರವಿನಿಂದ ಉತ್ಕರ್ಷಣೆಗೊಂಡು ಇಂಗಾಲದ ಡೈಆಕ್ಸೈಡಿಗೆ ಪರಿವರ್ತನೆ ಆಗುವುವು. ಆಗ ಅವುಗಳಲ್ಲಿ ಅಡಕವಾಗಿರುವ ಶಕ್ತಿ ಬಿಡುಗಡೆಯಾಗಿ ಕೋಶಗಳಲ್ಲೆ ಅಡಿನೋಸಿನ್ ಟ್ರೈಫಾಸ್ಫೇಟ್ ರೂಪದಲ್ಲಿ (ATP) ಶೇಖರಗೊಳ್ಳುತ್ತದೆ. ಕೋಶಗಳಲ್ಲಿ ನಡೆಯುವ ಉತ್ಕರ್ಷಣ ಮೈಟೋಕಾಂಡ್ರಿಯ ಕಣದಲ್ಲಿ ಜರಗುವುದು. ಇದು ಅನೇಕ ಕಿಣ್ವಗಳ ಮತ್ತು ಸಹವರ್ತಿಗಳ ಸಮುದಾಯ. ಇವು ಉತ್ಕರ್ಷಣಗೊಳ್ಳುವ ವಸ್ತುವಿಗೂ (ಎಂದರೆ ಅಪಕರ್ಷಣಕಾರಿಗೂ) ಆಕ್ಸಿಜನ್ನಿಗೂ ಮಧ್ಯವರ್ತಿಗಳಾಗಿ ಮೊದಲನೆಯ ವಸ್ತುವಿನಿಂದ ಪ್ರೋಟಾನ್ ಮತ್ತು ಎಲೆಕ್ಟ್ರಾನುಗಳನ್ನು ಆಕ್ಸಿಜನ್ನಿಗೆ ವರ್ಗಾಯಿಸುತ್ತವೆ. ವರ್ಗಾವಣೆ ಮೈಟೋಕಾಂಡ್ರಿಯದ ವಸ್ತುಗಳ ಮೂಲಕ ಹಂತಹಂತವಾಗಿ ನಡೆಯುವುದೆಂದು ಗೊತ್ತಾಗಿದೆ. ಇದನ್ನು ಉಚ್ಛ್ವಾಸನಿಶ್ವಾಸ ಶ್ರೇಣಿಯೆಂದು ಕರೆಯಬಹುದು. ಈ ಶ್ರೇಣಿಯಲ್ಲಿ ಮುಂದೆ ತೋರಿಸಿರುವ ವಸ್ತುಗಳಿವೆಯೆಂದು ತಿಳಿದಿದೆ: 1 ನಿಕೊಟೀನ್ ಅಡಿನೈನ್ ಮಾನೋಫಾಸ್ಫೇಟ್ ಮತ್ತು ಡೈಫಾಸ್ಫೇಟ್ (NAD or NADP). 2 ಫ್ಲೇವಿನ್ ಮಾನೋ ನ್ಯೂಕ್ಲಿಯೋಟೈಡ್ ಮತ್ತು ಡೈನ್ಯೂಕ್ಲಿಯೋಟೈಡ್ (FMN,FAD) 3 ಸಹ ಕಿಣ್ವ Q, ಜೀವಾತು K. 4 ಸೈಟೋಕ್ರೋ B, C, ಮತ್ತು A. ಉತ್ಕರ್ಷಿತ ವಸ್ತುವಿನಿಂದ (ಎಂದರೆ ಅಪಕರ್ಷಣಕಾರಿಯಿಂದ) ಹೈಡ್ರೊಜನ್ನಿನ ಅಂಶಗಳು ಮೇಲಿನ ವಸ್ತುಗಳ ಮೂಲಕ ಅನುಕ್ರಮವಾಗಿ ವರ್ಗಾವಣೆಗೊಂಡು ಅಂತಿಮವಾಗಿ ಆಕ್ಸಿಜನ್ನಿನೊಡನೆ ಸಂಯೋಗವಾಗಿ ನೀರನ್ನು ಉತ್ಪತ್ತಿ ಮಾಡುತ್ತವೆ. (ವೈ.ಎಸ್.ಎಲ್.)

**ಉತ್ಕಾಂಕ್ಷೆ:** ಬಾಳನ್ನು ಇನ್ನಷ್ಟು ಹಸನಾಗಿ ಮಾಡಿಕೊಳ್ಳಬೇಕೆಂಬ ತೀವ್ರ ಅಭಿಲಾಷೆ ಉತ್ಕೃಷ್ಟಾಕಾಂಕ್ಷೆ, ಮೇಲ್ಬಯಕೆ, ಹೆಗ್ಗುರಿ (ಆಸ್ಪಿರೇಷನ್). ನಾವಿರುವ ಸ್ಥಿತಿಗೂ ನಾವಿರಬೇಕಾದ ಸ್ಥಿತಿಗೂ ಮಧ್ಯೆ ಇರುವ ಅಂತರವನ್ನು ನಾವರಿಯುವುದು ಈ ಭವದ ಪೂರ್ವ ಪೀಠಿಕೆ. ಅರಿತಮೇಲೆ ಲೌಕಿಕವಾಗಿಯೂ ಪಾರಮಾರ್ಥಿಕವಾಗಿಯೂ ಅದನ್ನು ಉತ್ತಮಪಡಿಸಲು ಪ್ರಯತ್ನಿಸುವ ಕೆಲಸ ಪ್ರಾರಂಭವಾಗುತ್ತದೆ. ಇಲ್ಲಿ ನಾವು ಸಂಪಾದಿಸಲಿಚ್ಛಿಸುವ ಉನ್ನತಸ್ಥಿತಿ ಆತ್ಮವಿಕಾಸಕ್ಕೆ ಸಂಬಂಧಪಟ್ಟದ್ದು. ಈ ಉನ್ನತಸ್ಥಿತಿಯನ್ನು ಮುಟ್ಟಲು ಇದಕ್ಕಾಗಿ ತೀವ್ರ ಬಯಕೆ ನಮ್ಮಲ್ಲಿ ಮೂಡಬೇಕು. ಈ ಬಯಕೆ ನಮ್ಮ ಉನ್ನತಿಗಾಗಿ ನಾವು ಮಾಡುವ ಪರಿಶ್ರಮಕ್ಕೆ ಹಾದಿಮಾಡಿಕೊಡುತ್ತದೆ. ನಾವಿನ್ನೂ ಉತ್ತಮ ಸ್ಥಿತಿಯನ್ನು ಮುಟ್ಟಬೇಕೆಂದು ತೀವ್ರವಾಗಿ ಬಯಸಿ ನಮ್ಮ ಆತ್ಮಶಕ್ತಿಯನ್ನು ಅದಕ್ಕಾಗಿ ಬೆಳೆಸಿಕೊಳ್ಳಬೇಕೆಂಬ ಉತ್ಕಟ ವಾಂಛೆ ನಮ್ಮ ಪ್ರಾರ್ಥನೆಗೂ ಕಾರಣವಾಗುತ್ತದೆ. ಪ್ರಾರ್ಥನೆಯಲ್ಲಿ ಎರಡು ವಿಧ ಉಂಟು. ಒಂದು 'ದೇಹಿಮೇ ದದಾಮಿತೇ' ನನಗೆ ಕೊಡು ನಿನಗೆ ಕೊಡುತ್ತೇನೆ ಎಂದು ದೇವ ದೇವತೆಗಳೊಡನೆ ನಾವು ನಡೆಸುವ ವ್ಯವಹಾರ. ಇದು ಅರ್ಥಾರ್ಥಿಯಾದವ ದೇವರಲ್ಲಿ ಮಾಡುವ ಪ್ರಾರ್ಥನೆ. ಜ್ಞಾನಿ ಮಾಡುವ ಪ್ರಾರ್ಥನೆ ಈ ರೀತಿಯದಲ್ಲ. ತನ್ನಲ್ಲಿ ಜ್ಞಾನಭಕ್ತಿವೈರಾಗ್ಯಗಳು ಬೆಳೆಯಲಿ ಎಂದು ಅಂತರಂಗದಿಂದ ಮಾಡಿಕೊಳ್ಳುವ ಪ್ರಾರ್ಥನೆ ಉತ್ಕೃಷ್ಟಾಕಾಂಕ್ಷೆಯ ಪ್ರಾರ್ಥನೆ ಎನಿಸಿಕೊಳ್ಳುತ್ತದೆ. ಇದರ ವಿವರಗಳನ್ನು ಮತಧರ್ಮದರ್ಶನ ಗಳಲ್ಲಿ ಕಾಣುತ್ತೇವೆ. ಜಗತ್ತಿನ ಸಾಧುಸಂತರೆಲ್ಲರೂ ಉತ್ಕಾಂಕ್ಷೆಯ ಮಹತ್ತನ್ನು ತಿಳಿದವರು; ತಮ್ಮ ಜೀವನದ ಮೇಲ್ಮೆಗಾಗಿ ಸತತ ಪ್ರಾರ್ಥನೆಯಲ್ಲಿ ತೊಡಗಿದವರು. ಆತ್ಮೋತ್ಕರ್ಷದ ಬಯಕೆ ಪ್ರತಿ ಮಾನವನಿಗೂ ಇರಬೇಕೆಂದು ಜಗತ್ತಿನ ಧರ್ಮಗಳೆಲ್ಲವೂ ಬೋಧಿಸಿವೆ. (ಎಂ.ಪಿ.)

**ಉತ್ಕಾಂಕ್ಷೆಯ ಮಟ್ಟ:** ಒಬ್ಬ ವ್ಯಕ್ತಿ ಯಾವ ವಿಧವಾಗಿ ಒಂದು ಗುರಿಯನ್ನು ಸ್ಥಾಪಿಸಿಕೊಂಡು ಅದನ್ನು ಸಿದ್ಧಗೊಳಿಸಲು ಹೇಗೆ ವರ್ತಿಸುತ್ತಾನೆ. ಎಂಬುದನ್ನು ಕಂಡುಹಿಡಿಯುವುದು ಬಹಳ ಮುಖ್ಯವಾದ ಅಂಶ. ಉತ್ಕಾಂಕ್ಷೆಯ ಮಟ್ಟವನ್ನು ಅಳೆಯುವ ಬಗ್ಗೆ ನಡೆಸಿರುವ ಮನಶ್ಶಾಸ್ತ್ರೀಯ ಪ್ರಯೋಗಗಳು ಅನೇಕವಿಷಯಗಳನ್ನು ವಿಶದಮಾಡಿವೆ.

ಗುರಿಗೂ ಸಾಧಿಸುವವನ ಮಟ್ಟಕ್ಕೂ ಆವರಣದ (ಪ್ರಾಕೃತಿಕ ಮತ್ತು ಸಾಮಾಜಿಕ) ಲಕ್ಷಣಗಳಿಗೂ ನಿಕಟ ಸಂಬಂಧವಿದೆ. ಸಾಧಾರಣವಾಗಿ ಗುರಿಗೆ ಸಂಬಂಧಪಟ್ಟ ಕೆಲಸ ಅತಿ ಕಷ್ಟವಾಗಿರಬಹುದು ಅಥವಾ ಅತಿ ಸುಲಭವಾಗಿರಬಹುದು ಅಥವಾ ಮಧ್ಯವರ್ತಿಯಾಗಿರಬಹುದು. ಸಾಮಾನ್ಯವಾಗಿ ವ್ಯಕ್ತಿ ತನ್ನ ಶಕ್ತ್ಯಾನುಸಾರ ಕುಟುಂಬ ಮತ್ತು ನೆರೆಹೊರೆಯ ಆವರಣಕ್ಕನುಸಾರವಾಗಿ ತನ್ನ ಉದ್ದೇಶ ಸಾಧನೆಗೆ ಯತ್ನಿಸುತ್ತಾನೆ. ಉದ್ದೇಶ ತೀರ ಸಣ್ಣದಾದರೆ

ಅದರ ಸಾಧನೆ ಏನೂ ಕಷ್ಟದ್ದಾಗುವುದಿಲ್ಲ. ಸಾಧಿಸದಿದ್ದರೆ ಆಶಾಭಂಗವಾಗುತ್ತದೆಂಬ ಹೆದರಿಕೆ ಇರುವುದು ಸಹಜವಾದ್ದರಿಂದ ತೀರ ಹಿರಿಯ ಉದ್ದೇಶವನ್ನು ಸಾಧಿಸಲೂ ಆತ ಪ್ರಯತ್ನಿಸುವುದಿಲ್ಲ; ಅವನ ಗುರಿ ಸಾಮಾನ್ಯವಾಗಿ ಕಷ್ಟಸಾಧ್ಯವಾದುದಾಗಿರುತ್ತದೆ.

ಈ ಬಗ್ಗೆ ನಡೆದ ಪ್ರಯೋಗಗಳು ಒಂದು ಕೆಲಸದ ಕಷ್ಟದ ಮಟ್ಟಕ್ಕೂ ಆ ವ್ಯಕ್ತಿಯ ಜಯ, ಅಪಜಯಗಳ ಮನೋಭಾವಕ್ಕೂ ಸಂಬಂಧವಿರುವುದನ್ನು ತೋರಿಸಿಕೊಟ್ಟಿದೆ.

ಒಂದು ಕೆಲಸವನ್ನು ಸಾಧಿಸಿದರೆ ಅದರಿಂದ ಒದಗುವ ಸಂತೋಷ ಆತನ ಉತ್ಕಾಂಕ್ಷೆಯ ಅಂತಸ್ತನ್ನು ಏರಿಸಿ ಇನ್ನೂ ಹೆಚ್ಚು ಕೆಲಸಗಳನ್ನು ಸಾಧಿಸಲು ಉತ್ಸಾಹವನ್ನು ಕೊಡುವುದು. ಆದರೆ ತಾನು ಮಾಡುವ ಕೆಲಸಗಳಲ್ಲೆ ಪದೇ ಪದೇ ಅಪಜಯಗಳನ್ನು ಹೊಂದಿದರೆ ಮನಸ್ಸು ಕುಗ್ಗಿ ಉತ್ಕಾಂಕ್ಷೆಯ ಅಂತಸ್ತು ಕಡಿಮೆಯಾಗುವುದು. ಅಂದರೆ ನಿರಾಸೆ ಕಷ್ಟವಾದ ಕೆಲಸಗಳನ್ನು ದೂರಮಾಡುವ ಹಾಗೆ ಮಾಡುವುದು. ಅದಕ್ಕೇ ವ್ಯಕ್ತಿ ತನ್ನ ಶಕ್ತಿಯ ಮಟ್ಟಕ್ಕೆ ಅನುಗುಣವಾದ ತೂಕದ ಕೆಲಸವನ್ನು ಆರಿಸುವಲ್ಲಿ ಹಿಂದೇಟು ಹಾಕುತ್ತಾನೆ. ಅಷ್ಟೇ ಅಲ್ಲ, ತಾನು ಅಪ್ರಯೋಜಕನೆಂದೂ ತನ್ನ ಕೈಯಲ್ಲಿ ಯಾವ ವಿಧವಾದ ಕೆಲಸವೂ ಆಗುವುದಿಲ್ಲವೆಂದೂ ವಿಫಲ ಮನೋಭಾವವನ್ನು ಹೊಂದಿದರೂ ಆಶ್ಚರ್ಯಪಡ ಬೇಕಾದುದಿಲ್ಲ. ಇದನ್ನು ಮಕ್ಕಳಲ್ಲೂ ವಯಸ್ಕರಲ್ಲೂ ಕಾಣಬಹುದು. ಸಾಧಾರಣ ಬುದ್ಧಿ ಶಕ್ತಿಯುಳ್ಳ ಒಬ್ಬ ಹುಡುಗನನ್ನು ತಂದೆತಾಯಿಗಳು ಕಷ್ಟಪಟ್ಟು ಕೆಲಸಮಾಡಿ ಮೊದಲನೆಯ ದರ್ಜೆಯಲ್ಲಿ ತೇರ್ಗಡೆಯಾಗಲು ಪ್ರೋತ್ಸಾಹಿಸಬಹುದು. ಆದರೆ ಆ ಹುಡುಗನಿಗೆ ಅದು ಅಸಾಧ್ಯವಾದ ಕೆಲಸ. ಆದ್ದರಿಂದ ಹುಡುಗ ತಾನು ಅಪ್ರಯೋಜಕನೆಂದು ಭಾವಿಸಿ ತನ್ನ ಕೈಯಲ್ಲಿ ಆಗುವ ಕೆಲಸಗಳನ್ನೂ ಮಾಡದೆ ಹಿಂದುಳಿಯಬಹುದು.

ಆದರೆ ಹೆಚ್ಚು ಬುದ್ಧಿ ಶಕ್ತಿಯನ್ನು ಪಡೆದಿರುವ ಹುಡುಗ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಲು ಯತ್ನಿಸಿ ಸಫಲನಾಗಿ, ಉತ್ಸಾಹದಿಂದ ಮತ್ತಷ್ಟು ಕಷ್ಟವಾದ ಕೆಲಸಗಳನ್ನು ಸಾಧಿಸಲು ಪ್ರಯತ್ನಿಸುತ್ತಾನೆ.

ಆದ್ದರಿಂದ ತಂದೆತಾಯಿಗಳು, ಶಾಲೆಯ ಉಪಾಧ್ಯಾಯರು, ಕಾರ್ಖಾನೆ ಕಚೇರಿಗಳಲ್ಲಿರುವ ಅಧಿಕಾರಿಗಳು, ವ್ಯಕ್ತಿಗೆ ಸಾಧ್ಯವಾಗುವ ಕೆಲಸಗಳನ್ನು ಮೊದಲು ಕೊಟ್ಟು ಅವುಗಳಲ್ಲಿ ಉತ್ತೀರ್ಣನಾಗಿ ಉತ್ಸಾಹಭರಿತನಾಗಿ ಇರುವ ಹಾಗೆ ಮಾಡಿದರೆ ಆ ವ್ಯಕ್ತಿ ತನ್ನ ಶಕ್ತಿಯ ಮಟ್ಟಕ್ಕೆ ಸರಿಯಾಗಿ ಬೆಳೆಯುವುದು ಮಾತ್ರವಲ್ಲ ಶಕ್ತಿಯ ಮಟ್ಟವನ್ನು ಹೆಚ್ಚಿಸಿಕೊಳ್ಳಬಲ್ಲ. ಅದಕ್ಕೆ ಬದಲು ಶಕ್ತಿಗೆ ಮೀರಿದ ಕೆಲಸಗಳನ್ನು ಕೊಟ್ಟರೆ ನಿರಾಸೆ ಹೊಂದಿ ತಾನು ಕೀಳೆಂಬ ಮನೋಭಾವವನ್ನು ಹೊಂದುತ್ತಾನೆ. (ಬಿ.ಕೆ.)

ಮಾನವ ಇತಿಹಾಸವನ್ನು ಪರಿಶೀಲಿಸಿದರೆ ಕಾಲಕಾಲಕ್ಕೆ ಉದಿಸಿ ಬಂದ ವಿಭೂತಿ ಪುರುಷರು ತಮ್ಮ ಜೀವಿತಕಾಲದಲ್ಲಿ ಸಾಧಾರಣವಾದ ಮಹತ್ಕಾಂಕ್ಷೆಗಳನ್ನು ಮುಂದಿಟ್ಟುಕೊಂಡು ಶಕ್ತಿಮೀರಿ ದುಡಿದು ತಮ್ಮ ಮತ್ತು ತಮ್ಮ ನಾಡಿನ ಉತ್ಕರ್ಷಕ್ಕೆ ಕಾರಣರಾಗಿದ್ದಾರೆ. ಗಾಂಧೀಜಿ, ಪಂಡಿತ ಜವಾಹರಲಾಲ್ ನೆಹರು, ಐಸ್ಯಾಕ್ ನ್ಯೂಟನ್, ಐನ್‌ಸ್ಟೀನ್, ತೇನ್‌ಸಿಂಗ್– ಈ ಮುಂತಾದ ಪ್ರಭೃತಿಗಳ ಜೀವನಾದರ್ಶಗಳ ವ್ಯಾಪ್ತಿಯನ್ನೂ ಸಾಧಿಸಿದ ಅವರ ಶಕ್ತಿಸಾಮರ್ಥ್ಯಗಳ ತೂಕವನ್ನೂ ಹೋಲಿಸಿ ನೋಡುವುದು ಉತ್ತಮ. ಆದ್ದರಿಂದ ಉತ್ಕಾಂಕ್ಷೆ ಕೈಗೆ ಎಟುಕುವಂತಿರಬೇಕಾದ್ದು ಬಹುತೇಕ ಸರಿಯಾದರೂ ಅದು ಎಟುಕದಂತೆ ಸ್ವಲ್ಪ ಎತ್ತರವಾಗಿರಬೇಕಾದುದರ ಅಗತ್ಯವನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೆ ಉತ್ಕಾಂಕ್ಷೆಯ ಆದರ್ಶಗಳೆಲ್ಲ ಅಂಥವೇ ಆಗಿರುತ್ತವೆ. *

**ಉತ್ಖನನ:** ಭೂಮಿಯಲ್ಲಿ ಹುದುಗಿಹೋಗಿರುವ ಮಾನವ ನಾಗರಿಕತೆಗೆ ಸಂಬಂಧಿಸಿದ ಅವಶೇಷಗಳನ್ನು ಭೂಮಿಯಿಂದ ಅಗೆಯುವುದಕ್ಕೆ ಪುರಾತತ್ತ್ವ ಶೋಧನೆಯಲ್ಲಿ ಬಳಸುವ ಪದ (ಎಕ್ಸ್‌ಕವೇಷನ್). ಉತ್ಖನನವೂ ಪುರಾತತ್ತ್ವಶೋಧನೆಯಷ್ಟೇ ಹಳೆಯದು. ಆದರೆ ವೈಜ್ಞಾನಿಕ ಉತ್ಖನನ ಪ್ರಾರಂಭವಾದದ್ದು ಈ ಶತಮಾನದಲ್ಲಿ ಮಾತ್ರ. ಅದಕ್ಕೆ ಮುಂಚೆ ಪುರಾತತ್ತ್ವಶೋಧನೆಯೇ ಇನ್ನೂ ವೈಜ್ಞಾನಿಕವಾಗಿರಲಿಲ್ಲ. ಸಾಹಿತ್ಯಗ್ರಂಥಗಳ ಆಧಾರದಿಂದ ರಾಜ ಮಹಾರಾಜರ ಅರಮನೆಯ ನಿವೇಶನಗಳನ್ನು ಪತ್ತೆ ಹಚ್ಚಿ, ಅವುಗಳಲ್ಲಿ ದೊರಕಬಹುದಾದ ಚಿನ್ನ, ಬೆಳ್ಳಿ ಮುಂತಾದವುಗಳಿಂದ ಮಾಡಿದ ಅಮೂಲ್ಯ ವಸ್ತುಗಳನ್ನು ಯಾವ ವಿಧಾನದಿಂದಲಾದರೂ ಕೊಳ್ಳೆ ಹೊಡೆಯುವ ಹವ್ಯಾಸವೇ ಇತ್ತು. 19ನೆಯ ಶತಮಾನದ ಇಂಗ್ಲೆಂಡಿನಲ್ಲೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿಯಿತ್ತು. ಪ್ರಾಚೀನ ಅವಶೇಷಗಳನ್ನು ಅಡ್ಡಾದಿಡ್ಡಿ ಅಗೆದು ಹೊರತೆಗೆದು ಸಂಗ್ರಹಮಾಡುವ ಮನೋಭಾವ ಬೆಳೆದು ಬಂದಿತ್ತು. ಈ ಶತಮಾನದ ಪ್ರಾರಂಭದಲ್ಲಿ ಈ ಭಾವನೆ ಕಡಿಮೆಯಾಗಲಾರಂಭಿಸಿತು. ಉತ್ಖನನ ನಿರ್ಜೀವ ಅವಶೇಷಗಳಿಗಾಗಲ್ಲ, ಅವುಗಳ ಕರ್ತೃವಾದ ಮಾನವನನ್ನು ತಿಳಿಯುವುದಕ್ಕಾಗಿ ಎಂಬ ಭಾವನೆ ಬೆಳೆದು ಬಂತು. ಅಷ್ಟೇ ಅಲ್ಲದೆ ಉತ್ಖನನದಿಂದ ಮಾಹಿತಿಯ ನಾಶವಾಗುವುದೆಂದು ಕೆಲವರು ಭಾವಿಸಿದರು. ಭೂಮಿಯಲ್ಲಿ ಅಡಗಿರುವ ಅವಶೇಷಗಳು ಹಾಗೆಯೇ ಇನ್ನೂ ಸ್ವಲ್ಪಕಾಲ ಉಳಿದರೆ ಯಾವ ನಷ್ಟವೂ ಆಗುವುದಿಲ್ಲ. ಅವುಗಳನ್ನು ಭೂಮಿಯಿಂದ ಹೊರತೆಗೆಯುವಾಗ ಸಾಕಷ್ಟು ಗಮನ ಕೊಡದೇ ಇದ್ದರೆ, ಅವು ನಾಶವಾದಂತೆಯೇ ಸರಿ. ಏಕೆಂದರೆ ಅವನ್ನು ಮೊದಲಿದ್ದಂತೆ ಕೂಡಿಸಲು ಯಾರಿಂದಲೂ ಸಾಧ್ಯವಿಲ್ಲ. ಭಾರತದಲ್ಲಿ ಪ್ರಚಲಿತವಾಗಿರುವ ಕಾನೂನಿನ ಪ್ರಕಾರ ಉತ್ಖನನಗಳನ್ನು ನಡೆಸಲು ಸರ್ಕಾರದಿಂದ ಅನುಮತಿ ಪಡೆಯಬೇಕು. ಉತ್ಖನನದ ನಿರ್ದೇಶಕರ ಅರ್ಹತೆ, ಅವರಲ್ಲಿರುವ ವೈಜ್ಞಾನಿಕ ಸಾಮಗ್ರಿಗಳು, ಹಣ, ಉತ್ಖನನ ಮಾಡುವ ಸ್ಥಳದ ಪ್ರಾಮುಖ್ಯ – ಇವುಗಳ ಆಧಾರದ ಮೇಲೆ ಮಾತ್ರ ಅನುಮತಿ ಸಿಕ್ಕುತ್ತದೆ. ಪುರಾತತ್ತ್ವ ಶೋಧನೆಯಲ್ಲಿ ಉತ್ಖನನಕ್ಕೆ ಇಷ್ಟೊಂದು ಪ್ರಾಮುಖ್ಯವಿದೆ.

ಉತ್ಖನನಕ್ಕೆ ಪೂರ್ವಭಾವಿಯಾಗಿ ನಿವೇಶನಾನ್ವೇಷಣೆ, ನಿವೇಶನ ನಿಶ್ಚಯಗಳಾಗಬೇಕು. ಪ್ರಾಚೀನ ಕಾಲದ ಅವಶೇಷಗಳು ನೆಲದಲ್ಲಿ ಹೂತುಹೋಗಿದ್ದರೂ ಕೆಲವು ಲಕ್ಷಣಗಳಿಂದ ಅವನ್ನು ಪತ್ತೆ ಹಚ್ಚಬಹುದು. ಭೂಮಿಯ ಮೇಲ್ಮೈಲಕ್ಷಣಗಳಿಂದ ನಿವೇಶನಗಳನ್ನು ಕಂಡುಹಿಡಿಯಬಹುದು. ಸಾಮಾನ್ಯವಾಗಿ ಅವಶೇಷಗಳು ಇರುವ ಸ್ಥಳಗಳು ಸಣ್ಣ ಸಣ್ಣ ದಿಬ್ಬಗಳಾಗಿರುತ್ತವೆ. ಈ ದಿಬ್ಬಗಳ ಮೇಲೆ ಬಿದ್ದ ಮಳೆಯ ನೀರು ಅಲ್ಲಿಂದ ಕೆಳಕ್ಕೆ ಹರಿಯುವಾಗ ದಿಬ್ಬದ ಮೇಲ್ಮೈಯನ್ನು ಕೊರೆದು, ಒಳಗಿರುವ ಅವಶೇಷಗಳನ್ನು ನಮ್ಮ ಗಮನಕ್ಕೆ ತರುತ್ತದೆ. ಇಲ್ಲವೇ ಇನ್ನಾವ ರೀತಿಯಿಂದಲಾದರೂ ದಿಬ್ಬ ನಾಶವಾದಾಗ, ಅದರ ಒಳಗಿನ ಅವಶೇಷಗಳು, ಮಣ್ಣಿನ ಮಡಕೆಯ ಚೂರುಗಳು ಸುತ್ತಮುತ್ತಲೂ ಬಿದ್ದಿರುತ್ತವೆ. ಇವುಗಳಿಂದ ನಿವೇಶನವನ್ನು ಗುರುತಿಸಬಹುದು. ಇತ್ತೀಚೆಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಿವೇಶನಗಳನ್ನು ಗುರುತಿಸಲು ವೈಜ್ಞಾನಿಕ ಉಪಕರಣಗಳನ್ನು ಬಳಸಲಾಗುತ್ತಿದೆ. ಚೂಪಾದ ಕಬ್ಬಿಣದ ಆಯುಧಗಳನ್ನು ಭೂಮಿಯೊಳಕ್ಕೆ ಚುಚ್ಚಿ ಅದರಿಂದ ಭೂಮಿಯೊಳಗಿರುವ ಗೋಡೆಗಳು, ಮನೆಗಳು, ಕಲ್ಲಿನ ಕಟ್ಟಡಗಳು ಮುಂತಾದವನ್ನು ಗುರುತಿಸಬಹುದು. ಕಲ್ಲಿನಿಂದ ಆವೃತವಾದ ಕಡೆಗಳಲ್ಲಿ ಮೇಲ್ಭಾಗದಲ್ಲಿ ಸುತ್ತಿಗೆಯಿಂದ ಕುಟ್ಟುವುದರಿಂದ, ಅವಶೇಷಗಳಿರುವ ಮತ್ತು ಇಲ್ಲದೇ ಇರುವ ಸ್ಥಳಗಳಲ್ಲಿ ಭಿನ್ನ ಶಬ್ದಗಳು ಬರುತ್ತವೆ. ಲೋಹದ ಆಯುಧ, ಉಪಕರಣ, ನಾಣ್ಯ ಮುಂತಾದುವು ಇರುವ ಸ್ಥಳಗಳನ್ನು ವಿದ್ಯುತ್ ಸಾಧನಗಳಿಂದ ಗುರುತಿಸಬಹುದು. ಚಾರಿತ್ರಿಕ ಗ್ರಂಥಗಳಲ್ಲಿ ದೊರಕುವ ವರ್ಣನೆಗಳಿಂದಲೂ ಪುರಾತನ ನಿವೇಶನಗಳನ್ನು ಪತ್ತೆ ಹಚ್ಚಬಹುದು. ಟ್ರಾಯ್, ಮೈಸಿನಿ, ಬ್ಯಾಬಿಲೋನ್ ಮುಂತಾದವು ಪ್ರಾಚೀನಗ್ರಂಥಗಳಲ್ಲಿ ದೊರಕಿರುವ ಮಾಹಿತಿಗಳಿಂದ ಪತ್ತೆಹಚ್ಚಲಾದವು. ಇದೇ ರೀತಿ ಭಾರತದಲ್ಲಿ ರಾಮಾಯಣ, ಮಹಾಭಾರತ ಮತ್ತು ಬೌದ್ಧ ಸಾಹಿತ್ಯ ಗ್ರಂಥಗಳಿಂದ ಅನೇಕ ಪುರಾತನ ನಿವೇಶನಗಳನ್ನು ಕನಿಂಗ್‌ಹ್ಯಾಮ್ ಗುರುತಿಸಿದ್ದಾನೆ. ಇತ್ತೀಚೆಗೆ ಬಳಕೆಗೆ ಬಂದಿರುವ ಆಕಾಶಛಾಯಾ ಚಿತ್ರಗ್ರಹಣ ಪುರಾತನ ನಿವೇಶನಗಳನ್ನು ಗುರುತಿಸಿವುದರಲ್ಲಿ ಬಹು ಸಹಕಾರಿಯಾಗಿದೆ. ಸಮತಲದಿಂದ ಕಾಣದೆ ಇರುವ ಮೇಲ್ಮೈಲಕ್ಷಣಗಳು ಆಕಾಶದಿಂದ ಬಹು ಚೆನ್ನಾಗಿ ಕಾಣುವುದರಿಂದ, ಈ ಪದ್ಧತಿ ಅನುಕೂಲವಾಗಿದೆ. ಆಕಸ್ಮಿಕವಾಗಿ ಪ್ರಾಚೀನ ನಿವೇಶನಗಳು ಬೆಳಕಿಗೆ ಬರುತ್ತಿರುತ್ತವೆ. ಅಯಸ್ಕಾಂತದ ಆಕರ್ಷಣೆಯ ತತ್ತ್ವದ ಆಧಾರದ ಮೇಲೆ ರೂಪಿತವಾಗಿರುವ ಪ್ರೋಟಾನ್ ಮ್ಯಾಗ್ನೆಟೋಮೀಟರ್ ಯಂತ್ರದ ಸಹಾಯದಿಂದ ಭೂಮಿಯೊಳಗೆ ಹುದುಗಿರುವ ಕಟ್ಟಡ ಮುಂತಾದ ಯಂತ್ರದ ಸಹಾಯದಿಂದ ಘನವಸ್ತುಗಳ ಇರುವಿಕೆಯನ್ನು ಗುರುತಿಸಿ ಪುರಾತನ ನೆಲೆಗಳನ್ನು ಶೋಧಿಸಬಹುದು. ಲೋಹಗಳಿಗಾಗಿ ಗಣಿಯನ್ನು ತೋಡುವಾಗ, ರೈಲು ಹಳಿಯನ್ನು ಹಾಕಲು ಅಗೆಯುತ್ತಿರುವಾಗ, ಭೂಮಿಯನ್ನು ವ್ಯವಸಾಯಕ್ಕೋಸ್ಕರ ಅಗೆಯುವಾಗ, ಇಲ್ಲವೆ ಕಟ್ಟಡಗಳನ್ನು ಕಟ್ಟಲು ಭೂಮಿಯನ್ನು ಅಗೆಯುವಾಗ ಅವಶೇಷಗಳು ಬೆಳಕಿಗೆ ಬಂದ ಸಂದರ್ಭಗಳು ಬೇಕಾದಷ್ಟಿವೆ. ಇಷ್ಟಾದರೂ ಅವಶೇಷಗಳನ್ನು ಗುರುತಿಸಲು ಮೂರನೆಯ ಕಣ್ಣೊಂದು ಬಹಳ ಆವಶ್ಯಕವಾದದ್ದೆಂದು ಎಲ್ಲ ಪುರಾತತ್ತ್ವ ಶಾಸ್ತ್ರಜ್ಞರೂ ಒಪ್ಪಿಕೊಂಡಿದ್ದಾರೆ. ಸಮರ್ಪಕವಾದ ಮತ್ತು ತೀಕ್ಷ್ಣವಾದ ಅವಲೋಕನ ಅಥವಾ ಸಮೀಕ್ಷಣ ಶಕ್ತಿ ಅತ್ಯವಶ್ಯಕವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಉತ್ಖನನಕ್ಕೆ ಬೇಕಾದ ಸಲಕರಣೆಗಳಿಗೆ ಗಮನ ಕೊಡಬೇಕಾದದ್ದು ಅತ್ಯಾವಶ್ಯಕ. ವೀಲರ್ ಹೇಳುವಂತೆ ಸಮರ್ಪಕವಾದ ಸಲಕರಣೆಗಳಿಲ್ಲದೆ ಉತ್ಖನನವನ್ನು ಪ್ರಾರಂಭಿಸುವುದು ಬೇಜವಾಬ್ದಾರಿಯ ಕೆಲಸ. ಮೋಜಣಿ ಕೆಲಸದಲ್ಲಿ ಉಪಯೋಗಿಸಬೇಕಾದ ಅಂತರಕೋನ ಮಾಪಕ (ಥಿಯೋಡೊಲೈಟ್), ಪ್ಲೇನ್ ಟೇಬಲ್, ಅಳೆಯುವ ಪಟ್ಟಿಗಳು, ಪ್ರಿಸ್ಮ್ಯಾಟಿಕ್ ಕಂಪಾಸ್, ತೂಗು ಗುಂಡು, ಮಟ್ಟಗೋಲು, ಕೋನಮಾಪಕ ಮುಂತಾದವು ಅತ್ಯಾವಶ್ಯಕವಾಗಿರುವ ಸಲಕರಣೆಗಳು. ಅಗೆತದಲ್ಲಿ ಬಳಸಲು ಪಿಕಾಸಿ, ಗುದ್ದಲಿ, ಸಲಿಕೆ, ಚಾಕು, ಹಾರೆ, ಮಂಕರಿ, ಮೊರ, ವಿವಿಧ ರೀತಿಯ ಕುಚ್ಚುಮೊಟ್ಟೆ, ಎರಡು ಅಥವಾ ಮೂರು ಚಕ್ರಗಳ ನೂಕುವ ಗಾಡಿಗಳು ಮುಂತಾದವು ಧಾರಾಳ ಪ್ರಮಾಣದಲ್ಲಿರಬೇಕು. ಇಷ್ಟೇ ಅಲ್ಲದೆ, ಅಗೆಯುವ ಸ್ಥಳಕ್ಕೆ ಪ್ರತ್ಯೇಕವಾಗಿ ಬೇಕಾದ ಇನ್ನಿತರ ಸಲಕರಣೆಗಳೂ ಬೇಕಾಗಬಹುದು.

ಭೂಮಿಯಲ್ಲಿರುವ ಪದರಗಳ ಆಧಾರದ ಮೇಲೆ ಉತ್ಖನನ ನಡೆಸುವುದು ಅತ್ಯಂತ ಮುಖ್ಯವಾದ ವಿಧಾನ. ಪುರಾತತ್ತ್ವ ಇನ್ನೂ ಶೈಶವಾವಸ್ಥೆಯಲ್ಲಿದ್ದಾಗ ಈ ವಿಧಾನ ತಿಳಿದಿರಲಿಲ್ಲ. ಆಗ ಬೆಂಚ್ ಲೆವೆಲ್ ಆಧಾರದ ಮೇಲೆ ಉತ್ಖನನಗಳು ನಡೆಯುತ್ತಿದ್ದುವು. ಮಾರ್ಷಲ್ ಮ್ಯಾಕೆ ಎಂಬ ಪುರಾತತ್ತ್ವಜ್ಞ ಸಹ ಈ ವಿಧಾನದಿಂದಲೇ ಭಾರತದಲ್ಲಿ ಉತ್ಖನನಗಳನ್ನು ನಡೆಸಿದ. ಈ ವಿಧಾನ ಅವೈಜ್ಞಾನಿಕವಾದದ್ದೆಂದೂ ಅನೇಕ ಲೋಪದೋಷಗಳಿಂದ ಕೂಡಿದ್ದೆಂದೂ ಪುರಾತತ್ತ್ವಜ್ಞರು ತೀರ್ಮಾನಿಸಿ ಕ್ರಮೇಣ ಯುರೋಪಿನಲ್ಲಿ ಬಳಕೆಯಲ್ಲಿದ್ದ ಪದರವಿನ್ಯಾಸ ವಿಧಾನವನ್ನು ಭಾರತದಲ್ಲೂ ಬಳಕೆಗೆ ತಂದರು. ಬೆಂಚ್ ಲೆವೆಲ್ ವಿಧಾನದಲ್ಲಿ ಸಮುದ್ರಮಟ್ಟವನ್ನು ಆಧಾರವಾಗಿಟ್ಟುಕೊಂಡು ಉತ್ಖನನವನ್ನು ನಡೆಸಲಾಗುತ್ತಿತ್ತು. ಉತ್ಖನನವನ್ನು ನಡೆಸಬೇಕಾದ ದಿಬ್ಬದಲ್ಲಿ ಯಾವುದಾದರೂ ಒಂದು ಮಟ್ಟವನ್ನು ನಿರ್ಧರಿಸಿಕೊಂಡು ಆ ಮಟ್ಟದ ಮೇಲಿಂದ ಮತ್ತೊಂದು ಮಟ್ಟದವರೆಗೆ ದೊರಕುವ ಅವಶೇಷಗಳನ್ನೆಲ್ಲ

ಯಾವುದಾದರೂ ಒಂದು ಕಾಲಕ್ಕೆ ಸೇರಿಸುವುದು ಇದರ ಕ್ರಮ. ಪದರವಿನ್ಯಾಸ ವಿಧಾನವನ್ನು ಬಳಕೆಗೆ ತಂದದ್ದು ಭಾರತೀಯ ಪುರಾತತ್ತ್ವದಲ್ಲಿ ಅತ್ಯಂತ ಪ್ರಮುಖ ಘಟ್ಟ. ಪ್ರಾಚೀನಕಾಲದ ಒಂದು ನಗರ ಕಾಲಕ್ರಮೇಣ ಯಾವುದೋ ಕಾರಣದಿಂದಾಗಿ ನಾಶವಾದಾಗ ಆ ಕಾಲದ ಮನೆಗಳು, ಇತರ ಸಲಕರಣೆಗಳು, ಮಡಕೆಗಳು, ಪಾತ್ರಗಳು ಮೊದಲಾದುವೆಲ್ಲವೂ ಹಾಗೆಯೇ ಇದ್ದು ನೆಲಸಮವಾಗುತ್ತವೆ.



ಪ್ರವೇಶಕಿಂಡಿಯಿರುವ ಕಲ್ಲಿನ ಶವಪೆಟ್ಟಿಗೆ

ಇದಾದ ಅನಂತರ ಇದೇ ಸ್ಥಳದಲ್ಲಿ ಮತ್ತೊಂದು ಹೊಸ ನಗರ ಬೆಳೆಯುತ್ತದೆ. ಇದೂ ಇದೇ ರೀತಿ ನಾಶವಾದಾಗ ಈ ಕಾಲದ ವಸ್ತುಗಳು ಮೊದಲಿನ ಪದರದ ಮೇಲೆ ನಿಲ್ಲುತ್ತವೆ. ಇದೇ ರೀತಿ ಪ್ರತಿಯೊಂದು ಕಾಲಕ್ಕೂ ಸೇರಿದಂತೆ ಮಣ್ಣಿನ ಪದರಗಳು ಉಂಟಾಗಿ ಭೂಮಿಯ ಮೇಲೆ ಒಂದು ಸಣ್ಣ ದಿಬ್ಬ ಬೆಳೆಯುತ್ತದೆ. ಅಂದರೆ ಮೇಲ್ಗಡೆಯ ಪದರ ಇತ್ತೀಚಿನದಾಗಿಯೂ ಅದರ ಕೆಳಗಿನದು ಅದಕ್ಕಿಂತ ಹಿಂದಿನದಾಗಿಯೂ ಅದಕ್ಕೂ ಕೆಳಗಿನ ಪದರ ಇನ್ನೂ ಪ್ರಾಚೀನವಾಗಿಯೂ ಅತ್ಯಂತ ಕೆಳಗಿನ ಪದರ ಪ್ರಾಚೀನತಮವಾಗಿಯೂ ಇರುತ್ತವೆ. ಒಂದು ಕಾಲದಲ್ಲಿ ಕಟ್ಟಡಗಳನ್ನು ಬಹಳ ಶೀಘ್ರವಾಗಿ ಕಟ್ಟಿದ್ದರೆ ಅದರಿಂದ ಉಂಟಾದ ಪದರ ಹೆಚ್ಚು ದಪ್ಪವಾಗಿರುತ್ತದೆ. ಅಂದರೆ ಪದರದ ದಪ್ಪ ಕಾಲಸೂಚಕವಲ್ಲವೆಂದೂ ಅದು ಆ ಕಾಲದ ನಾಗರಿಕತೆಯ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಯೆಂದೂ ಇದರಿಂದ ಹೇಳಬಹುದು.

ಪದರ ವಿನ್ಯಾಸ ವಿಧಾನ

ಪದರಗಳು ಉಂಟಾಗುವಾಗ ಅನೇಕ ಆಂತರಿಕ ಬದಲಾವಣೆಗಳೂ ಆಗುವುದುಂಟು. ಅವುಗಳಲ್ಲಿ ಹಳ್ಳಗಳು ಅಥವಾ ಕುಳಿಗಳು ಬಹು ಮುಖ್ಯ. ಒಂದು ಪದರದಲ್ಲಿ ಮರದ ಅಗಲವಾದ ಬೇರಿದ್ದರೆ ಕಾಲಕ್ರಮದಲ್ಲಿ ಆ ಬೇರು ನಾಶವಾಗಿ ಅಲ್ಲಿ ಪೊಟರೆಯಾಗುತ್ತದೆ. ಕಾರಣಾಂತರಗಳಿಂದ ಆ ಕಾಲದ ಜನರೂ ನಿವೇಶನದಲ್ಲಿ ಹಳ್ಳಗಳನ್ನು ತೋಡಿದ್ದಿರಬಹುದು. ಉದಾಹರಣೆಗೆ, ಕಸದ ತೊಟ್ಟಿ, ಗಿಡನೆಡಲು ಮಾಡಿದ ಹಳ್ಳ. ಕಾಲಕ್ರಮೇಣ ಅಂಥ ಹಳ್ಳಗಳಲ್ಲಿ ಅನಂತರ ಕಾಲದ ಅವಶೇಷಗಳು ಬೀಳುವುದರಿಂದ ಅವು ತಮ್ಮ ಕಾಲದ್ದಕ್ಕಿಂತ ಹೆಚ್ಚಿನ ಆಳದಲ್ಲಿ ಹೂತು ಹೋಗುತ್ತವೆ. ಈ ಹಳ್ಳ ಪ್ರಾರಂಭವಾಗುವ ಪದರದ ಅವಶೇಷಗಳು, ಆ ಹಳ್ಳದೊಳಕ್ಕೆ ಬೀಳುತ್ತವೆ. ಹಳ್ಳದ ಕೆಳಭಾಗ ಇತರ ಪದರಗಳಿಗಿಂತ ಕೆಳಗಿದ್ದರೂ ಅಲ್ಲಿ ಆಮೇಲಿನ ಮಟ್ಟದ ಅವಶೇಷಗಳು ದೊರಕುವುದಿಲ್ಲ. ಏಕೆಂದರೆ ಅಲ್ಲಿ ದೊರಕುವ ಅವಶೇಷಗಳು ಮೇಲಿನ ಪದರಕ್ಕೆ ಸೇರಿದವು. ಆದ್ದರಿಂದ ಪದರಗಳನ್ನು ಮತ್ತು ಹಳ್ಳಗಳನ್ನು ಅವುಗಳ ಆಕಾರರೇಖೆಯಿಂದ ಗುರುತಿಸಿ ಬೇರ್ಪಡಿಸಬೇಕು. ಸಾಮಾನ್ಯವಾಗಿ ಒಂದು ಪದರ ಮತ್ತೊಂದು ಪದರದಿಂದ ಭಿನ್ನವಾಗಿರುವುದರಿಂದ, ಅಲ್ಲಿರುವ ಮಣ್ಣಿನ ಗುಣ, ಬಣ್ಣ, ಅವಶೇಷ ಮುಂತಾದವುಗಳಿಗನುಗುಣವಾಗಿ ಪದರಗಳನ್ನು ಬೇರ್ಪಡಿಸಬಹುದು. ಹಾಗೆ ಬೇರ್ಪಡಿಸಿದ ಪ್ರತಿಯೊಂದು ಪದರವೂ ಭಿನ್ನಸಂಸ್ಕೃತಿಗೆ ಸೇರಿದ್ದಾಗಿರುತ್ತದೆ. ಈ ಕೆಳಗಿನ ಚಿತ್ರಗಳಿಂದ ಬೆಂಚ್ ಲೆವೆಲ್ ಮತ್ತು ಪದರವಿನ್ಯಾಸ ವಿಧಾನಗಳಿಗಿರುವ ವ್ಯತ್ಯಾಸಗಳು ವ್ಯಕ್ತವಾಗುತ್ತದೆ.

ಬೆಂಚ್ ಲೆವೆಲ್ ವಿಧಾನವನ್ನು ತೋರಿಸುವ ಚಿತ್ರದಲ್ಲಿ ಒಂದೇ ಮಟ್ಟದಲ್ಲಿ ಪ್ರ.ಶ.ಪೂ. 3000 ವರ್ಷಗಳ ಹರಪ್ಪ ಸಂಸ್ಕೃತಿಯ ಮಡಕೆಯೂ ಅಕ್ಬರನ ನಾಣ್ಯವೂ 20ನೆಯ ಶತಮಾನದ ನಾಣ್ಯವೂ ದೊರಕಿರುವುದು ತಿಳಿದು ಬರುತ್ತದೆ. ಇದು ಅಸಂಭವವೆನಿಸುತ್ತದೆ.



ಮೂರು ಆಯಾಮದ ಅಳತೆಗಾಗಿ ಗೂಟಗಳನ್ನು ನೆಟ್ಟಿರುವುದು

ಎರಡನೆಯ ಚಿತ್ರವನ್ನು ಗಮನಿಸಿದರೆ ಒಂದನೆಯ ಪದರದಲ್ಲಿ ಒಂದು ಹಳ್ಳವಿದ್ದುದರಿಂದ 20ನೆಯ ಶತಮಾನದ ನಾಣ್ಯವೊಂದು ಜಾರಿ 6ನೆಯ ಪದರಕ್ಕೆ ಅಂದರೆ ಹರಪ್ಪ ಸಂಸ್ಕೃತಿಯ ಪದರಕ್ಕೆ ಸೇರಿತೆಂದು ಗೊತ್ತಾಗುತ್ತದೆ. ಅದೇ ರೀತಿ 3ನೆಯ ಪದರದಲ್ಲಿ ಇನ್ನೊಂದು ಹಳ್ಳವಿದ್ದದ್ದರಿಂದ ಅಕ್ಬರನ ಕಾಲದ ನಾಣ್ಯವೊಂದು 6ನೆಯ ಪದರಕ್ಕೆ ಸೇರಿತೆಂದು ಗೊತ್ತಾಗುತ್ತದೆ.

ಆದ್ದರಿಂದ ಈ ಮೂರು ಅವಶೇಷಗಳೂ ಒಂದೇ ಪದರದಲ್ಲಿ ಮತ್ತು ಒಂದೇ ಮಟ್ಟದಲ್ಲಿ ದೊರಕಿದರೂ ಅವು ಬೇರೆ ಬೇರೆ ಸಂಸ್ಕೃತಿಗಳಿಗೆ ಸೇರಿದವು ಎಂದೂ ಪದರವಿನ್ಯಾಸ ವಿಧಾನ ಎಷ್ಟೊಂದು ಉಪಯುಕ್ತವಾಗಿದೆಯೆಂದೂ ತಿಳಿಯಬಹುದು.

ಉತ್ಖನನಗಳನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ಮಾಡಬಹುದು. ಲಂಬಮಾನ ಉತ್ಖನನ ಮತ್ತು ಸಮತಲ ಉತ್ಖನನ. ಅವಶೇಷರಹಿತ ಪದರದಿಂದ ಅಥವಾ ಭೂಮಿಯ ಬರಡು ಪದರದಿಂದ ಹಿಡಿದು, ದಿಬ್ಬದ ಈಗಿನ ಮೇಲ್ಮೈವರೆಗೆ ಇರುವ ಪದರಗಳನ್ನು ಉದ್ದುದ್ದವಾಗಿ ಬೇರ್ಪಡಿಸುವುದೇ ಲಂಬಮಾನ ಉತ್ಖನನ. ಒಂದು ನಿವೇಶನದ ಸಾಂಸ್ಕೃತಿಕ ಪರಿಚಯವನ್ನು ಮಾಡಿಕೊಳ್ಳಬೇಕಾದರೆ ಲಂಬಮಾನ ಉತ್ಖನನವನ್ನು ನಡೆಸಬೇಕು. ಇದರಿಂದ ಆ ಸ್ಥಳ ಯಾವ ಕಾಲಗಳಲ್ಲಿ ಯಾವ ಯಾವ ರೀತಿಯ ಸಂಸ್ಕೃತಿ ಹೊಂದಿತ್ತೆಂಬುದರ ಪರಿಚಯವಾಗುತ್ತದೆ: ಅದು ಒಂದು ಸಾಂಸ್ಕೃತಿಕ ನಮೂನೆಯನ್ನು ಒದಗಿಸುತ್ತದೆ. ಅದರಲ್ಲೂ ನದೀ ತೀರದಲ್ಲಿ ನಮಗೆ ಬೇಕಾದ ಸಾಂಸ್ಕೃತಿಕ ನಮೂನೆಯನ್ನು ತಿಳಿಯಲು

ಲಂಬಮಾನ ಉತ್ಖನನ ಉತ್ತಮವಾದ ಮಾರ್ಗ. ಉತ್ಖನನ ನಡೆಸಬೇಕಾದ ನಿವೇಶನ ಬಹಳ ವಿಸ್ತಾರವಾಗಿದ್ದು, ನಿವೇಶನದಲ್ಲಿ ಅನೇಕಾನೇಕ ದೇವಾಲಯಗಳು, ಗೋಡೆಗಳು, ಕಟ್ಟಡಗಳು ಮುಂತಾದುವಿದ್ದರೆ, ಆಗ ಸಮತಲ ಉತ್ಖನನವನ್ನು ಮಾಡಬೇಕು. ಅಡ್ಡಕೊಯ್ತ



ಉತ್ಖನನ ಕುಳಿಯ ಒಂದು ದೃಶ್ಯ

ದಿಂದ ಈ ಕಟ್ಟಡಗಳು ಪೂರ್ಣವಾಗಿ ನಮಗೆ ಗೋಚರವಾಗುವುದಿಲ್ಲ. ಅವುಗಳ ಪೂರ್ಣಸ್ವರೂಪವನ್ನು ತಿಳಿಯಬೇಕಾದರೆ, ಅವನ್ನು ಭೂಮಿಯಲ್ಲಿದ್ದ ಹಾಗೆಯೇ ಮಣ್ಣಿನಿಂದ ಬೇರ್ಪಡಿಸಬೇಕು. ಇಂಥ ಸಮತಲ ಉತ್ಖನನಗಳನ್ನು ಪ್ರಾರಂಭಿಸುವುದಕ್ಕೆ ಮೊದಲು, ಅವಶೇಷಗಳ ಸ್ವರೂಪ, ಪದರಗಳ ಸ್ವರೂಪ, ಅವಶೇಷಯುತ ಪದರಗಳ ಆಳ ಮುಂತಾದವನ್ನು ತಿಳಿಯಲು ಲಂಬಮಾನ ಉತ್ಖನನ ಮಾಡಬೇಕಾಗುತ್ತದೆ.

ಸಮತಲ ಉತ್ಖನನವನ್ನು ಸಾಮಾನ್ಯವಾಗಿ ತೋಡು ಅಥವಾ ಕಂದಕ (ಟ್ರೆಂಚ್) ವಿಧಾನದಿಂದ ಮಾಡುವುದೇ ಹೆಚ್ಚು ಸುಲಭವೂ ವೈಜ್ಞಾನಿಕವೂ ಆಗಿದೆ. ಉತ್ಖನನವನ್ನು ನಡೆಸಬೇಕಾದ ನಿವೇಶನದಲ್ಲಿ ಪ್ರಾಯೋಗಿಕ ಲಂಬಮಾನ ಉತ್ಖನನದಿಂದ ಪದರಗಳ ವಿನ್ಯಾಸವನ್ನು ತಿಳಿದ ಅನಂತರ, ಎಲ್ಲಿ ಅವಶೇಷಗಳು ಸಿಕ್ಕುವ ಸೂಚನೆಗಳು ಇರುತ್ತವೆಯೊ ಅಲ್ಲಿ ಸಾಮಾನ್ಯವಾಗಿ 1.8 x 1.2ಮೀ ಅಳತೆಯ ತೋಡುಗಳನ್ನು ಅಗೆಯಬೇಕು. ಅದಕ್ಕೆ ಮುಂಚೆ ನೆಲದ ಮೇಲೆ ಅಳತೆಯನ್ನು ಗುರುತಿಸಿಕೊಂಡು, ಅನಂತರ ಕಂದಕದ ಎರಡು ಕಡೆಗಳಲ್ಲೂ ಗುಳಿಯ ಹೊರ ಅಳತೆಗಿಂತ ಸ್ವಲ್ಪ ದೂರದಲ್ಲಿ ಗೂಟಗಳನ್ನು ಸಮಾನಾಂತರದಲ್ಲಿ



ಉತ್ಖನನದ ವಿಧಾನ

ಭೂಮಿಯೊಳಗೆ ನೆಡಬೇಕು. ಈ ಕಂದಕದಲ್ಲಿ ಅಗೆತ ಮುಗಿದ ಅನಂತರ ಅದರ ಪಕ್ಕದಲ್ಲಿ ಇದೇ ರೀತಿ ಗುಳಿಯನ್ನು ತೋಡಿ ಉತ್ಖನನವನ್ನು ಮುಂದುವರಿಸಿಕೊಂಡು ಹೋಗಬೇಕು. ನಿವೇಶನದ ಎಲ್ಲ ಕಡೆಯಲ್ಲೂ ಅಲ್ಲಲ್ಲಿ ಈ ರೀತಿ ತೋಡುಗಳನ್ನು ತೆಗೆಯುವುದರಿಂದ ಎಲ್ಲಿಯಾದರೂ ಅವಶೇಷಗಳಲ್ಲಿ ಬದಲಾವಣೆಯಿದ್ದರೆ ಅದು ಒಂದಲ್ಲ ಒಂದು ಗುಳಿಯಿಂದ ಹೊರಬರುತ್ತದೆ. ಸಾಮಾನ್ಯವಾಗಿ ಒಂದೊಂದು ತೋಡಿಗೆ ಒಬ್ಬೊಬ್ಬ ಉತ್ಖನನ ಸಹಾಯಕಾಧಿಕಾರಿಯಿರಬೇಕು. ಪ್ರತಿಯೊಂದು ತೋಡನ್ನು ಗುರುತಿಸುವುದಕ್ಕೂ ಅದಕ್ಕೆ ಒಂದು ಸಂಖ್ಯೆ ಕೊಡಬೇಕು. ಪ್ರತಿಯೊಂದು ತೋಡಿನಲ್ಲಿ ದೊರಕುವ ಅವಶೇಷಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಬೇಕು.

ಉತ್ಖನನದಲ್ಲಿ ಅಗೆಯುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದದ್ದು ಅವಶೇಷಗಳ ಕರಾರುವಾಕ್ಕು ದಾಖಲೆ. ಒಂದು ಅವಶೇಷವನ್ನು ಮಣ್ಣಿನ ಪದರದಿಂದ ಹೊರತೆಗೆದ ಮೇಲೆ ಆ ದಾಖಲೆ ಎಲ್ಲಿ, ಹೇಗೆ, ಎಷ್ಟು ಆಳದಲ್ಲಿತ್ತು ಎಂಬುದು ಮರೆತುಹೋಗುತ್ತದೆ. ವೈಜ್ಞಾನಿಕವಾಗಿ ತ್ರಿವಿ ಮಿತೀಯ (ಗಾತ್ರ) ದಾಖಲೆಗಳು ಈಗ ಹೆಚ್ಚಾಗಿ ಬಳಕೆಯಲ್ಲಿವೆ. ಒಂದು ಅವಶೇಷ ಖಚಿತವಾಗಿ ಎಲ್ಲಿ ದೊರೆಯಿತು ಎಂಬುದನ್ನು ತಿಳಿಯಲು ಇದು ಅತ್ಯಂತ ಉಪಯುಕ್ತವಾಗುತ್ತದೆ. ಕಂದಕಗಳ ಎರಡು ಭಾಗಗಳಲ್ಲಿ ಗೂಟಗಳನ್ನು ನೆಟ್ಟಿರಬೇಕೆಂದು ಆಗಲೇ ಸೂಚಿಸಿದ್ದಾಗಿದೆ. ಒಂದು ಅವಶೇಷ ದೊರಕಿದ ಸ್ಥಳದಿಂದ, ಯಾವುದಾದರೂ ಒಂದು ಗೂಟಕ್ಕೆ ಇರುವ ಉದ್ದ ಮತ್ತು ಅಗಲಗಳೆಷ್ಟು ಎಂಬುದನ್ನು ಅಳೆಯಬೇಕು. ಅನಂತರ ಆ ತೋಡಿನ ಒಳಕ್ಕೆ ತೂಗುಗುಂಡನ್ನು ಬಿಟ್ಟು, ಅದರ ಮೇಲ್ಭಾಗದಿಂದ ವಸ್ತು ಎಷ್ಟು ಆಳದಲ್ಲಿದೆಯೆಂಬುದನ್ನು ನೋಡಬೇಕು. ಇದಕ್ಕೆ ಕೋನಮಾಪಕವನ್ನು ಬಳಸಬೇಕು. ಇದರಿಂದ ಉದ್ದ ಅಗಲ ಮತ್ತು ಆಳ ಈ ಮೂರು ಅಳತೆಗಳೂ ದೊರಕುತ್ತವೆ. ದಾಖಲೆಗಳಲ್ಲಿ ಪ್ರತಿಯೊಂದು ವಸ್ತುವಿಗೂ ಒಂದು ಕ್ರಮ, ತ್ರಿಗಾತ್ರ ಅಳತೆಗಳು, ಮಣ್ಣಿನ ಪದರ, ಅನಂತರ ವಸ್ತುವಿನ ವರ್ಣನೆ, ಕೊನೆಯದಾಗಿ ನಕ್ಷೆಗಳು – ಇವಿಷ್ಟನ್ನೂ ಬರೆದಿಡಬೇಕು.

ಉತ್ಖನನಗಳಲ್ಲಿ ಸಾಮಾನ್ಯವಾಗಿ ಮಡಕೆಯ ಚೂರುಗಳು ಹೇರಳವಾಗಿ ದೊರೆಯುತ್ತವೆ. ಇವುಗಳನ್ನು ಅವುಗಳ ಪದರಕ್ರಮದಂತೆ ಸರಿಯಾಗಿ ಜೋಡಿಸಿ, ಚೆನ್ನಾಗಿ ತೊಳೆದು, ಅವುಗಳ ಮೇಲೆ ಗುರುತು ಮಾಡಿ ಅನಂತರ ಚೀಲಗಳಲ್ಲಿ ಹಾಕಿಡಬೇಕು. ನಾಣ್ಯ, ಮೂಳೆ ಮುಂತಾದ ಬಹಳ ಸೂಕ್ಷ್ಮವಸ್ತುಗಳು ದೊರಕಿದ ಕೂಡಲೆ ನಾಣ್ಯಗಳನ್ನು ಉತ್ಖನನ ಸ್ಥಳದ ಪ್ರಯೋಗಶಾಲೆಯಲ್ಲಿ ರಾಸಾಯನಿಕ ವಸ್ತುಗಳಿಂದ ಶುಚಿಮಾಡಿ ಅನಂತರ ಕಾಗದದ



ಅರೆಗಳುಳ್ಳ ಕಲ್ಲಿನ ಶವಪೆಟ್ಟಿಗೆ

ಚೀಲಗಳಲ್ಲಿ ಹಾಕಿ, ಅವು ದೊರಕಿದ ಸ್ಥಳ ಮುಂತಾದ ವಿವರಗಳನ್ನು ಬರೆಯಬೇಕು. ಬಹು ಪ್ರಾಚೀನಕಾಲದ ಮೂಳೆಗಳು ಬಹು ಸೂಕ್ಷ್ಮ: ಗಾಳಿ ಸೋಕಿದರೆ ಪುಡಿಯಾಗುವ ಸಂಭವವುಂಟು. ಅಂಥ ಮೂಳೆಗಳಿಗೆ ಮೇಣದ ದ್ರವ ಹಚ್ಚಿ ಗಾಳಿ ಸೋಕದಂತೆ ಮಾಡಿ, ಅನಂತರ ಭದ್ರವಾಗಿಟ್ಟು. ರಾಸಾಯನಿಕವಿಧಾನದಿಂದ ಶುಚಿಮಾಡಬೇಕು. ಇದೇ ರೀತಿ ಪ್ರತಿಯೊಂದು ವಸ್ತುವನ್ನೂ ಬಹು ಜಾಗ್ರತೆಯಿಂದ ಹೊರತೆಗೆಯಬೇಕು.

ಉತ್ಖನನದಲ್ಲಿ ಛಾಯಾಗ್ರಹಣದ ಪಾತ್ರ ಅತ್ಯಂತ ಮಹತ್ತ್ವದ್ದು. ಸಾಧ್ಯವಾದಷ್ಟು ಧಾರಾಳವಾಗಿ ಛಾಯಾಚಿತ್ರಗಳನ್ನು ತೆಗೆಯಬೇಕಾದುದು ಬಹು ಮುಖ್ಯ. ಮೊದಲೇ ಸೂಚಿಸಿದಂತೆ ಉತ್ಖನನ ಭೂಮಿಯೊಳಗಿರುವ ಪದರವನ್ನು ಅಸ್ತವ್ಯಸ್ತಗೊಳಿಸುತ್ತದೆ. ಉತ್ಖನನಪೂರ್ವ ಪರಿಸ್ಥಿತಿಯನ್ನು ಮತ್ತೆ ನೋಡಲು ಅವಕಾಶವೇ ಇರುವುದಿಲ್ಲ. ವಸ್ತುಗಳು ಮಣ್ಣಿನ ಪದರಗಳಲ್ಲಿ ಅಂಟಿಕೊಂಡಂತೆ ಚಿತ್ರಗಳನ್ನು ತೆಗೆಯುವುದರಿಂದ ಅನೇಕ ವಿಷಯಗಳು ಹೊರಬೀಳುತ್ತವೆ. ಪದರವಿನ್ಯಾಸಗಳು, ಕಂದಕಗಳು ಮುಂತಾದವನ್ನು ವಿವರವಾಗಿ ಅಧ್ಯಯನಮಾಡಲು ಛಾಯಾಚಿತ್ರಗಳು ಸಹಾಯಕವಾಗುತ್ತವೆ. ಅದರಲ್ಲೂ ಸ್ಮಶಾನದಲ್ಲಿ ಹೆಣಗಳನ್ನು ಹೂಳುವ ದಿಕ್ಕು, ಸುತ್ತಮುತ್ತಲೂ ಇಡುವ ಪದಾರ್ಥಗಳ ದಿಕ್ಕು ಮುಂತಾದವನ್ನು ಅಧ್ಯಯನ ಮಾಡಲು ಛಾಯಾಚಿತ್ರಗಳು ಬಹು ಆವಶ್ಯಕವಾದುವು. ಪುರಾತತ್ತ್ವ ಛಾಯಾಗ್ರಹಣ ಒಂದು ವಿಶಿಷ್ಟ ಕಲೆ. ಇದು ಕೇವಲ ಛಾಯಾಗ್ರಹಣ ಮಾತ್ರವಲ್ಲ. ಆದ್ದರಿಂದ ಅವಶೇಷಗಳು, ಪದರಗಳು ಮುಂತಾದುವು ಸಮರ್ಪಕವಾಗಿ ದಾಖಲೆಯಾಗಲು ಬೇಕಾದ ಎಲ್ಲ ಗುಣಗಳಿಂದಲೂ ಕೂಡಿರುವ ಛಾಯಾಚಿತ್ರಗಳು ಪುರಾತತ್ತ್ವಕ್ಕೆ ಆವಶ್ಯಕ. ಅಳತೆಕೋಲಿಲ್ಲದೆ ಛಾಯಾಚಿತ್ರವನ್ನು ತೆಗೆಯಲೇಬಾರದು ಎಂಬ ನಿಯಮವನ್ನು ಗಮನಿಸಬೇಕು. ಒಂದು ವಸ್ತು ಎಷ್ಟು ದೊಡ್ಡದಾಗಿದೆಯೆಂಬುದು ಆ ವಸ್ತುವಿನ ಪಕ್ಕದಲ್ಲಿ ಅಳತೆಕೋಲನ್ನು ಇಟ್ಟು ಛಾಯಾಚಿತ್ರ ತೆಗೆಯುವುದರಿಂದ ಗೊತ್ತಾಗುತ್ತದೆ. ಛಾಯಾಚಿತ್ರಕ್ಕೆ ಪ್ರತ್ಯೇಕವಾಗಿ ಒಂದು ದಾಖಲೆಯನ್ನು ಬರೆದಿಡಬೇಕು. ಅಲ್ಲಿ ಚಿತ್ರ ತೆಗೆದ ವಸ್ತುವಿನ ಪ್ರತಿಯೊಂದು ವಿಚಾರವನ್ನೂ

ದಿಕ್ಕುಗಳನ್ನೂ ಬರೆದಿಡಬೇಕು. ಇತ್ತೀಚೆಗೆ ಉತ್ಖನನಗಳಲ್ಲಿ ಛಾಯಾಚಿತ್ರಗ್ರಹಣದ ಉಪಯೋಗಗಳು ವಿಶೇಷವಾಗುತ್ತಿವೆ. ಉತ್ಖನನದ ವರದಿಯನ್ನು ಪ್ರಕಾಶಪಡಿಸಿದ ದಿನವೇ ಉತ್ಖನನದ ಕಾಲ ಎಂದು ಶ್ರೇಷ್ಠ ಪುರಾತತ್ತ್ವಜ್ಞ ಪಿಟ್ ರಿವರ್ಸ್ ಹೇಳಿದ್ದಾನೆ. ವರದಿಯ ಪ್ರಕಾಶನ ಎಷ್ಟು ಮುಖ್ಯವಾದ ದ್ದೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ಉತ್ಖನನ ಮಾಡಿದವರಿಗೆ ಮಾತ್ರ ಅದರ ವಿವರ ತಿಳಿಯುತ್ತದೆ. ಮಿಕ್ಕ ಚರಿತ್ರಕಾರರಿಗೆ ಅದರ ವಿಚಾರವೇ ತಿಳಿದಿರುವುದಿಲ್ಲ. ಅಧಿಕೃತ ವರದಿಯಿಂದ ಮಾತ್ರ ಅದನ್ನು ತಿಳಿಯಲು ಇತರರಿಗೆ ಸಾಧ್ಯ. ಉತ್ಖನನದ ಮುಖ್ಯ ಉದ್ದೇಶ ಮಾನವನ ಚರಿತ್ರೆಯನ್ನು ತಿಳಿಯುವುದಾದ್ದರಿಂದ ಉತ್ಖನನವನ್ನು




**ಬೆಂಚ್‌ಲೆವೆಲ್ ವಿಧಾನ**

ಮಾಡಿ ಅದರ ವರದಿಯನ್ನು ಪ್ರಕಾಶಪಡಿಸದೆ ಇದ್ದರೆ ಚರಿತ್ರೆಗೆ ನಷ್ಟ ಮಾತ್ರವಲ್ಲ, ಅಪಚಾರ ಮಾಡಿದಂತೆಯೂ ಆಗುತ್ತದೆ. ಆದ್ದರಿಂದ ಪ್ರಕಾಶನದ ವ್ಯವಸ್ಥೆಯನ್ನು ಮೊದಲು ಕೈಗೊಂಡು, ಅನಂತರ ಉತ್ಖನನ ನಡೆಸಬೇಕೆಂದು ವೀಲರ್ ಹೇಳಿದ್ದಾನೆ. ವರದಿಯ ಪ್ರಕಟಣೆಯಲ್ಲಿ ಅವಶೇಷಗಳೂ ಇತರ ವಸ್ತುಗಳ, ದಾಖಲೆಗಳ ಪೂರ್ಣವಿವರಗಳೂ ಇರಬೇಕು. ಚಿತ್ರಗಳೂ ರೇಖಾಚಿತ್ರಗಳೂ ವಿಶೇಷವಾಗಿರಬೇಕು. ಒಟ್ಟಿನಲ್ಲಿ ಉತ್ಖನನದಿಂದ ಬಯಲಾದ ಸಂಗತಿಗಳಿಗೂ ಚರಿತ್ರಕಾರನಿಗೂ ಅಧಿಕೃತ ವರದಿಯೇ ಸಂಪರ್ಕ ಮಾಧ್ಯಮವಾಗಿರುವುದರಿಂದ ಅದರ ರಚನೆಯಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಬೇಕು.

ಉತ್ಖನನಗಳನ್ನು ಇದೇ ರೀತಿ ನಡೆಸಬೇಕೆಂಬ ಖಚಿತವಾದ ನಿರ್ಣಯಗಳನ್ನು ಮಾಡಲಾಗುವುದಿಲ್ಲ. ಏಕೆಂದರೆ ಅದು ಪರಿಸ್ಥಿತಿಗನುಗುಣವಾಗಿ ನಡೆಸಬೇಕಾದ ಕೆಲಸ. ಸ್ಮಶಾನದ ಉತ್ಖನನ ವಿಧಾನದಿಂದ ಕೋಟೆಯನ್ನು ಅಗೆಯಲಾಗುವುದಿಲ್ಲ. ಮರಳಿನಲ್ಲಿ ಅನುಸರಿಸಬೇಕಾದ ವಿಧಾನಗಳನ್ನು ಗಟ್ಟಿಮಣ್ಣಿನ ಪ್ರದೇಶದಲ್ಲಿ ಅನುಸರಿಸಲಾಗುವುದಿಲ್ಲ. ಪ್ರತಿಯೊಂದು ಸನ್ನಿವೇಶಕ್ಕೂ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು. ಆದ್ದರಿಂದ ಉತ್ಖನನ ಮಾಡುವ ನಿರ್ದೇಶಕನ ಜವಾಬ್ದಾರಿ ಅತಿ ಹೆಚ್ಚಿನದು. ಈ ವಿಷಯದಲ್ಲಿ ಅವನ ಜ್ಞಾನದ ಜೊತೆಗೆ ಉತ್ಖನನದ ಅನುಭವ ಜ್ಞಾನವೂ ಬಹು ಮುಖ್ಯವಾದದ್ದು. ಇದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು. ಇವೆರಡೂ ಕೂಡಿದಾಗ ಮಾತ್ರ ಉತ್ಖನನಗಳು ಚರಿತ್ರೆಯ ಸಾಧನಗಳಾಗುತ್ತವೆ.

ಭಾರತದ ಅನೇಕ ಸ್ಥಳಗಳಲ್ಲಿ ಸರ್ಕಾರದ ಪುರಾತತ್ತ್ವ ಶಾಖೆ, ವಿವಿಧ ರಾಜ್ಯಗಳ ಪುರಾತತ್ತ್ವ ಇಲಾಖೆಗಳು ಮತ್ತು ವಿಶ್ವವಿದ್ಯಾನಿಲಯಗಳಿಂದ ಉತ್ಖನನಗಳು ನಡೆದಿವೆ. ಈ ವಿಶ್ವಕೋಶದಲ್ಲಿ ಆಯಾ ಖಂಡ ಮತ್ತು ದೇಶಗಳಿಗೆ ಸಂಬಂಧಪಟ್ಟ ಪುರಾತತ್ತ್ವ ವಿವರಗಳು ಆಯಾ ಶೀರ್ಷಿಕೆಗಳಲ್ಲಿ ಬಂದಿವೆ. ಇವಲ್ಲದೆ ಉತ್ಖನನಗಳಿಂದ ಪ್ರಸಿದ್ಧವೆನಿಸಿರುವ ಅರ್, ಅರಿಕಮೇಡು, ಹಸ್ತಿನಾಪುರ, ಚಂದ್ರವಳ್ಳಿ ಮೊದಲಾದ ಸ್ಥಳಗಳ ಬಗ್ಗೆ ವಿಶೇಷ ಲೇಖನಗಳು ಆಯಾ ಶೀರ್ಷಿಕೆಗಳಲ್ಲಿ ಬಂದಿವೆ. (ಎ.ವಿ.ಎನ್.)

**ಉತ್ತರ:** ನೋಡಿ– ದಿಕ್ಕು.

**ಉತ್ತರ ಅಟ್ಲಾಂಟಿಕ್ ಕೌಲು ಸಂಸ್ಥೆ:** ಅಮೆರಿಕ ಸಂಯುಕ್ತ ಸಂಸ್ಥಾನ. ಕೆನಡ ಹಾಗೂ ಪಶ್ಚಿಮ ಐರೋಪ್ಯ ರಾಷ್ಟ್ರಗಳನೇಕವನ್ನೊಳಗೊಂಡ ಸಾಮೂಹಿಕ ರಕ್ಷಣಾ ವ್ಯವಸ್ಥೆ; ಅಂತಾರಾಷ್ಟ್ರೀಯ ಕೂಟ (ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಷನ್ – ನ್ಯಾಟೊ). ಉತ್ತರ ಅಟ್ಲಾಂಟಿಕ್ ಸಾಗರದ ಆಚೀಚೆ ದಡಗಳಲ್ಲಿರುವ ರಾಷ್ಟ್ರಗಳು ಈ ಕೂಟಕ್ಕೆ ಸೇರಿರುವುದರಿಂದ ಇದಕ್ಕೆ ಈ ಹೆಸರು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಜರ್ಮನಿಯ ವಿರುದ್ಧ ಕಾದಾಡುತ್ತಿದ್ದ ಸೋವಿಯತ್ ಹಾಗೂ ಪಶ್ಚಿಮ ರಾಷ್ಟ್ರಗಳ ನಡುವೆ ಮೈತ್ರಿಯೇರ್ಪಟ್ಟಿತ್ತಾದರೂ ಅನಂತರದ ಕಾಲದಲ್ಲಿ ಇದು ಮುರಿದು ಬಿದ್ದ ಫಲವಾಗಿ ಪೂರ್ವ– ಪಶ್ಚಿಮ ರಾಷ್ಟ್ರಗಳ ನಡುವೆ ವಿರಸ ಬೆಳೆದದ್ದರಿಂದ ಪಶ್ಚಿಮದ ರಾಷ್ಟ್ರಗಳು ತಮ್ಮ ರಾಜನೀತಿಯನ್ನೂ ಯುದ್ಧತಂತ್ರವನ್ನೂ ಪುನರ್ವಿಮರ್ಶಿಸುವುದು ಅನಿವಾರ್ಯವಾಯಿತು. ವಿಶ್ವಸಂಸ್ಥೆಯ ಭದ್ರತಾಸಮಿತಿಯ ಕಲಾಪಗಳಲ್ಲಿ ಸೋವಿಯತ್ ರಾಜ್ಯ ಪದೇ ಪದೇ ನಿರಾಕರಣಾಧಿಕಾರ (ವೀಟೊ) ಚಲಾಯಿಸಲಾರಂಭಿಸಿದ್ದರಿಂದ ಈ ಬೃಹದ್ರಾಷ್ಟ್ರಗಳಲ್ಲಿ ಒಮ್ಮತ ಅಸಾಧ್ಯವೆನಿಸಿತು. ಈ ಸಂಸ್ಥೆಯಿಂದ ಶಾಂತಿಪಾಲನೆ ಸಾಧ್ಯವಿಲ್ಲವೆಂಬುದು ಸ್ಥಿರಪಟ್ಟಾಗ ಅಮೆರಿಕ ಸಂಯುಕ್ತಸಂಸ್ಥಾನ ಹಾಗೂ ಕೆನಡಗಳೂ ಬೆಲ್ಜಿಯಂ, ಡೆನ್ಮಾರ್ಕ್, ಫ್ರಾನ್ಸ್, ಐಸ್ಲೆಂಡ್, ಇಟಲಿ, ಲಕ್ಸಂಬರ್ಗ್, ನೆದರ್ಲೆಂಡ್ಸ್, ನಾರ್ವೆ, ಪೋರ್ಚುಗಲ್, ಸಂಯುಕ್ತ ರಾಜ್ಯ (ಬ್ರಿಟನ್)ಗಳೂ ಸೇರಿ 1949ರಲ್ಲಿ ಈ ಕೌಲಿಗೆ ಸಹಿಹಾಕಿದುವು. ಮುಂದೆ ಗ್ರೀಸ್, ತುರ್ಕಿಗಳಿಗೂ (1952) ಪಶ್ಚಿಮ ಜರ್ಮನಿಗೂ (1955) ಈ ವ್ಯವಸ್ಥೆಯ ಸದಸ್ಯತ್ವ ದೊರಕಿತು.

ಈ ವ್ಯವಸ್ಥೆ ಸ್ಥಾಪಿತವಾದಾಗ ಪ್ಯಾರಿಸಿನಲ್ಲಿ ಇದರ ಮುಖ್ಯ ಕಚೇರಿಯಿತ್ತು. ಸದಸ್ಯರಾಷ್ಟ್ರಗಳು ಕಳಿಸಿಕೊಟ್ಟ ಸೈನಿಕದಳಗಳನ್ನೆಲ್ಲ ಒಂದುಗೂಡಿಸಿ ಸಂಯುಕ್ತ ಭೂ ವಾಯು ಜಲ ಸೇನಾ ವ್ಯವಸ್ಥೆಯೊಂದನ್ನು ನಿರ್ಮಿಸಿ ಸತತ ಅಭ್ಯಾಸ ನಡೆಸಿ ಇದನ್ನು ದಕ್ಷ ರಕ್ಷಣಾ ಬಲವನ್ನಾಗಿ ಪರಿವರ್ತಿಸುವುದು ಈ ಸಂಸ್ಥೆಯ ಮುಖ್ಯೋದ್ದೇಶ. ಈ ಕೌಲಿನ ರಾಷ್ಟ್ರಗಳಲ್ಲಿ ಯಾವುದರ ಮೇಲೆ ಆಕ್ರಮಣ ನಡೆದರೂ ಅದು ಎಲ್ಲ ಸದಸ್ಯ ರಾಷ್ಟ್ರಗಳ ಮೇಲೂ ನಡೆದ ಆಕ್ರಮಣವೆಂದು ಪರಿಭಾವಿಸಿ ಇತರ ರಾಷ್ಟ್ರಗಳು ಆ ರಾಷ್ಟ್ರಕ್ಕೆ ಅಗತ್ಯವೆನಿಸಿದ ಎಲ್ಲ ನೆರವನ್ನೂ ನೀಡಬೇಕೆಂಬುದು ಈ ಕೌಲಿನ ವಿಧಿಗಳಲ್ಲೊಂದು.

1950ರಿಂದೀಚೆಗೆ ಈ ಸಂಸ್ಥೆಯಲ್ಲಿ ಆಂತರಿಕ ತಿಕ್ಕಾಟ ವ್ಯಕ್ತವಾಗಿದೆ. ಜರ್ಮನಿಯೂ ಈ ವ್ಯವಸ್ಥೆಯಲ್ಲಿ ಸೇರಿರುವುದರಿಂದ ಆ ದೇಶದ ಸೈನ್ಯಶಕ್ತಿ ಮತ್ತೆ ಅತಿಯಾಗಿ ಬೆಳೆದೀತೆಂಬ ಭಯ ಉದ್ಭವಿಸಿರುವುದೂ ಈ ಸಂಸ್ಥೆಯ ಎರಡು ಸದಸ್ಯ ರಾಷ್ಟ್ರಗಳಾದ ಗ್ರೀಸ್ ತುರ್ಕಿಗಳು ಸೈಪ್ರಸ್ಸಿನ ಮೇಲಣ ಸ್ವಾಮ್ಯಕ್ಕಾಗಿ ಪರಸ್ಪರವಾಗಿ ಬಡಿದಾಡುತ್ತಿರುವುದೂ ಫ್ರಾನ್ಸಿನ ಅಧ್ಯಕ್ಷರಾಗಿದ್ದ ಡಿಗಾಲೆ ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಬ್ರಿಟನ್ನಿನ ಬಗ್ಗೆ ವೈರಭಾವ ತಳೆದದ್ದೂ ಈ ಸಂಸ್ಥೆಯ ದೌರ್ಬಲ್ಯಕ್ಕೆ ಕೆಲವು ಕಾರಣಗಳು.

ಫ್ರಾನ್ಸ್ ಕೂಡ ಈ ಸಂಸ್ಥೆಯನ್ನು ತ್ಯಜಿಸುವುದಾಗಿ ಆಗಿನ ಫ್ರೆಂಚ್ ಅಧ್ಯಕ್ಷ ಡಿಗಾಲೆ 1966ರಲ್ಲಿ ಸಾರಿದರು. ಈ ವ್ಯವಸ್ಥೆಗೆ ಸೇರಿದ ಎಲ್ಲ ವಿದೇಶೀ ಸೈನ್ಯಗಳೂ 1967ರೊಳಗೆ ಪ್ಯಾರಿಸ್ಸಿನಿಂದ ಹೊರ ಹೋಗಬೇಕಲ್ಲದೆ ಇದರ ಮುಖ್ಯ ಕಚೇರಿಯನ್ನು ಇಲ್ಲಿಂದ ವರ್ಗಾಯಿಸಬೇಕೆಂದು ಅವರು ಹೇಳಿದ್ದರಿಂದ ಇದರ ಕಾರ್ಯಾಲಯವೀಗ ಬ್ರಸಲ್ಸ್ (ಬೆಲ್ಜಿಯಂ) ನಲ್ಲಿದೆ. *

**ಉತ್ತರ ಅಮೆರಿಕ:** ಪಶ್ಚಿಮಾರ್ಧಗೋಳದಲ್ಲಿ ಉತ್ತರ–ದಕ್ಷಿಣವಾಗಿ ಉದ್ದಕ್ಕೆ ಚಾಚಿ, ಪನಾಮ ಭೂಕಂಠ (ಇಸ್ತಮಸ್) ದಿಂದ ಪರಸ್ಪರ ಕೂಡಿಕೊಂಡಿದ್ದು ಈಚೆಗೆ (1904–14) ಪನಾಮ ಕಾಲುವೆಯಿಂದ ಬೇರ್ಪಟ್ಟಿರುವ ಜೋಡಿ ಖಂಡಗಳಲ್ಲಿ ಉತ್ತರದ ಭಾಗ. ಕೆನಡ, ಅಲಾಸ್ಕವೂ ಸೇರಿದ ಅಮೆರಿಕ ಸಂಯುಕ್ತ ಸಂಸ್ಥಾನ ಮೆಕ್ಸಿಕೋಗಳನ್ನು ಈ ಖಂಡ ಒಳಗೊಂಡಿದೆ. ಭೌಗೋಳಿಕವಾಗಿ ಗ್ರೀನ್‌ಲೆಂಡೂ ಉತ್ತರ ಅಮೆರಿಕಕ್ಕೇ ಸೇರಿದೆಯೆನ್ನಬಹುದಾದರೂ ಅದು ಡೆನ್ಮಾರ್ಕಿನ ಅಧೀನರಾಜ್ಯ. ಮಧ್ಯ ಅಮೆರಿಕದ ಪ್ರದೇಶವನ್ನು ಉತ್ತರ ಅಮೆರಿಕದ ದಕ್ಷಿಣಭಾಗವೆಂದು ಪರಿಗಣಿಸುವುದು ರೂಢಿ. ವಿಸ್ತೀರ್ಣದಲ್ಲಿ ಜಗತ್ತಿನ ಮೂರನೆಯ ಖಂಡವಾಗಿರುವ ಉತ್ತರ ಅಮೆರಿಕ ಸ್ಥೂಲವಾಗಿ ತ್ರಿಕೋನದ ಹಾಗೆ ಕಾಣುತ್ತದೆ. 24,247,039 ಚ.ಕಿ.ಮೀ. ಎಂದರೆ ಭೂಮಿಯ 16.4ರಷ್ಟು–ಇದರ ವಿಸ್ತೀರ್ಣ. ಜನಸಂಖ್ಯೆ 454,225,000 ಈ ಖಂಡದ ಪೂರ್ವದಲ್ಲಿ ಉತ್ತರ ಅಟ್ಲಾಂಟಿಕ್ ಸಾಗರ, ಆಗ್ನೇಯದಲ್ಲಿ ಮೆಕ್ಸಿಕೊ ಖಾರಿ ಮತ್ತು ಕೆರಿಬಿಯನ್ ಸಮುದ್ರ; ಪಶ್ಚಿಮದಲ್ಲಿ ಉತ್ತರ ಪೆಸಿಫಿಕ್ ಸಾಗರ ಮತ್ತು ಬೇರಿಂಗ್ ಸಮುದ್ರ; ಉತ್ತರದಲ್ಲಿ ಆರ್ಕ್‌ಟಿಕ್ ಸಾಗರಗಳಿವೆ. ಈ ಖಂಡವನ್ನು ಏಷ್ಯಖಂಡದಿಂದ ಬೇರಿಂಗ್ ಜಲಸಂಧಿ ಬೇರ್ಪಡಿಸುತ್ತದೆ.

**ಮೇಲ್ಮೈಲಕ್ಷಣ:** ಉತ್ತರ ಅಮೆರಿಕವನ್ನು 1 ಪೂರ್ವದ ಎತ್ತರದ ಪ್ರದೇಶಗಳು, 2 ಪಶ್ಚಿಮದ ಸಮಾನಾಂತರ ಪರ್ವತಶ್ರೇಣಿಗಳು, 3 ಮಧ್ಯದ ತಗ್ಗು ಬಯಲು ಮತ್ತು 4 ಮಧ್ಯ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳ ಎತ್ತರ ಪ್ರದೇಶಗಳು ಎಂದು ವಿಭಾಗಿಸಬಹುದು.

ಮೊದಲು ಮೂರು ವಿಭಾಗಗಳೂ ಖಂಡ ಪೂರ್ತಿ ಉತ್ತರ ದಕ್ಷಿಣವಾಗಿ, ಸಮಾನಾಂತರವಾಗಿ ಹರಡಿವೆ. ನಾಲ್ಕನೆಯದು ಮೊದಲ ರೂಪಕ್ಕೆ ಲಂಬವಾಗಿ ಪೂರ್ವದಿಂದ ಪಶ್ಚಿಮಕ್ಕೆ ಹರಡಿದೆ.

1. ಪೂರ್ವದ ಎತ್ತರ ಪ್ರದೇಶಗಳು: ಅಪಲೇಷಿಯನ್ ಪರ್ವತಗಳು, ಲ್ಯಾಬ್ರಡಾರ್ ಮತ್ತು ನ್ಯೂಫೌಂಡ್‌ಲೆಂಡ್ ಪ್ರಸ್ಥಭೂಮಿಗಳು ಇದರಲ್ಲಿವೆ. ಪಶ್ಚಿಮದ ಪರ್ವತ ಶ್ರೇಣಿಗಳು ಸಮುದ್ರತಳದಲ್ಲಿದ್ದಾಗಲೇ ಈ ಪ್ರದೇಶ ಪರ್ವತಮಯವಾಗಿತ್ತು. ಜಲಪ್ರವಾಹಗಳಿಂದ ಭೂಮಿ ಸವೆದು ಅನೇಕ ಆಳವಾದ ಕಣಿವೆಗಳು ನಿರ್ಮಾಣವಾದುವು. ನದಿ, ವಾಯುಗಳ ನಗ್ನೀಕರಣದ ಪರಿಣಾಮವಾಗಿ ಎತ್ತರದ ಪ್ರದೇಶಗಳು ಮಟ್ಟಸವಾದುವು. ಇವು 2130 ಮೀ ಗಳಿಗಿಂತಲೂ ಎತ್ತರವಾಗಿಲ್ಲವಾದರೂ ಮಧ್ಯದ ತಗ್ಗು ಬಯಲಿಗೂ ಮತ್ತು ಅಟ್ಲಾಂಟಿಕ್ ಸಾಗರಕ್ಕೂ ಹಿಂದೆ ಅಡ್ಡಿಯಾಗಿ ನಿಂತಿದ್ದುವು. ಆದರೆ ಇವುಗಳಲ್ಲೂ ಕಣಿವೆ ಮಾರ್ಗಗಳಿವೆ. ಇವು ತೀರಪ್ರದೇಶಕ್ಕೂ ಒಳನಾಡಿಗೂ ಸಂಬಂಧ ಕಲ್ಪಿಸುತ್ತವೆ. ಪರ್ವತಗಳ ಪಶ್ಚಿಮಭಾಗದಲ್ಲಿ ಹುಟ್ಟುವ ಸಸ್ಕ್ವಿಹನ, ಪಟೋಮಕ್, ಜೇಮ್ಸ್ ಮುಂತಾದ ನದಿಗಳು ಬೆಟ್ಟಗಳನ್ನು ಭೇದಿಸಿ, ಕಣಿವೆಗಳನ್ನು ನಿರ್ಮಿಸಿ ಪೂರ್ವದ ಕಡೆ ಹರಿಯುತ್ತವೆ.

ಅಪಲೇಷಿಯನ್ ಪರ್ವತಗಳ ಪೂರ್ವಕ್ಕೆ ಸಮಾನಾಂತರವಾಗಿ ಪುರಾತನ ಶಿಲೆಗಳಿಂದ ಕೂಡಿದ ಪ್ರಸ್ಥಭೂಮಿ ಇದೆ. ಇದಕ್ಕೂ ಸಮುದ್ರತೀರಕ್ಕೂ ಮಧ್ಯೆ ಇಳಿಜಾರು ಪ್ರದೇಶವಿದೆ. ಇಲ್ಲಿ ಹರಿಯುವ ನದಿಗಳಲ್ಲಿ ಅನೇಕ ಜಲಪಾತಗಳಿವೆ. ಅಲ್ಲಿಂದ ಮುಂದೆ ತೀರದಲ್ಲಿ ಎಲ್ಲ ನದಿಗಳೂ ಆಳವಾಗಿ ಹರಿಯುತ್ತವೆ. ಆದ್ದರಿಂದ ಸಮುದ್ರದಿಂದ ಬರುವ ಹಡಗುಗಳು ಇವುಗಳಲ್ಲೆಲ್ಲ ಓಡಾಡಬಹುದು.

2. ಪಶ್ಚಿಮದ ಸಮಾನಾಂತರ ಪರ್ವತಶ್ರೇಣಿಗಳು: ಈ ಪರ್ವತ ಸಾಲುಗಳು ಇತ್ತೀಚೆಗೆ ನಿರ್ಮಿತವಾದವು. ಆದ್ದರಿಂದ ಇವು ಎತ್ತರವಾಗಿಯೂ ವಿಶಾಲವಾಗಿಯೂ ಇವೆ. ಶ್ರೇಣಿಗಳ ಮಧ್ಯದಲ್ಲಿ ಪ್ರಸ್ಥಭೂಮಿಗಳೂ ನದೀಬಯಲುಗಳೂ ಇವೆ. ಪೂರ್ವದಲ್ಲಿ ರಾಕಿ ಪರ್ವತಗಳು ಮತ್ತು ಪೂರ್ವ ಸಿಯೆರ ಮಾದ್ರೆ ಪರ್ವತಶ್ರೇಣಿಗಳಿವೆ. ಪಶ್ಚಿಮದಲ್ಲಿ ತೀರಪರ್ವತಗಳು, ಸಿಯೆರ ನವಾಡ, ಪಶ್ಚಿಮ ಸಿಯೆರ ನವಾಡ, ಪಶ್ಚಿಮ ಮಾದ್ರೆ ಶ್ರೇಣಿಗಳಿವೆ. ಈ ಹೊಸ ಶ್ರೇಣಿಗಳಲ್ಲಿ ಅನೇಕ ಜೀವಂತ ಜ್ವಾಲಾಮುಖಿಗಳು ಲಾವಾರಸವನ್ನು ಸುತ್ತ ಹರಡಿದವು. ಈಗಲೂ ಅಲ್ಲಲ್ಲಿ ಸುಪ್ತ ಜ್ವಾಲಾಮುಖಿಗಳನ್ನು ಕಾಣಬಹುದು. ಚಿನ್ನ, ಬೆಳ್ಳಿ, ತಾಮ್ರ ಇತ್ಯಾದಿ ಅಮೂಲ್ಯ ಖನಿಜಗಳು ಇಲ್ಲಿ ದೊರಕುವಂತೆ ಆದದ್ದು ಈ ಜ್ವಾಲಾಮುಖಿಗಳ ಕಾರ್ಯದಿಂದ.

ಮಧ್ಯದ ಪ್ರಸ್ಥಭೂಮಿಗಳಲ್ಲಿ ಕೊಲರಾಡೊ ಪ್ರಸ್ಥಭೂಮಿ 1828ಮೀ ಎತ್ತರವಾಗಿದೆ; ಬ್ರಿಟಿಷ್ ಕೊಲಂಬಿಯ ಮತ್ತು ಅಲಾಸ್ಕ ಪ್ರಸ್ಥಭೂಮಿಗಳ ಎತ್ತರ ಕಡಿಮೆ. ಮಧ್ಯದ ಪ್ರದೇಶ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ವಿಶಾಲವಾಗಿದೆ. ಅವುಗಳ ನಿರ್ಮಾಣದ ಶಿಲಾಪದರಗಳು ಅನೇಕ ಅಚ್ಚುಗಳಾಗಿ ವಿಭಾಗವಾಗಿವೆ. ಅವುಗಳಲ್ಲಿ ಅತ್ಯಂತ ವಿಶಾಲವಾದದ್ದು 5,43,900 ದ.ಕಿ.ಮೀ. ವಿಸ್ತಾರದ ಗ್ರೇಟ್ ಬೇಸನ್ ಎಂಬುದು. ಇದರ ದಕ್ಷಿಣದಲ್ಲಿನ ಕೊಲರಾಡೊ ನದಿ ಕೆಲವು ಕಡೆ 1525–1830ಮೀ. ಆಳದ ಭವ್ಯವಾದ ಪಾತ್ರವನ್ನು ಕೊರೆದುಕೊಂಡು ಹರಿಯುತ್ತದೆ.

3. ಮಧ್ಯದ ತಗ್ಗು ಬಯಲುಗಳು: ಧ್ರುವಪ್ರದೇಶದಿಂದ ದಕ್ಷಿಣದ ಮೆಕ್ಸಿಕೊವರೆಗೂ ಈ ವಿಶಾಲಪ್ರದೇಶ ಹಬ್ಬಿದೆ. ಉತ್ತರ ಅಮೆರಿಕದ 3/5 ಭಾಗವನ್ನು ಈ ಪ್ರದೇಶ ಆಕ್ರಮಿಸಿದೆ. ಇದರ ನಿರ್ಮಾಣ ಈಚಿನದು. ಆದರೆ ಕೆನಡಿಯನ್ ಶಿಲಾಫಲಕದ (ಷೀಲ್ಡ್) ಭಾಗ ಅಮೆರಿಕದಲ್ಲೇ ಅತ್ಯಂತ ಪ್ರಾಚೀನವಾದ, ಗಟ್ಟಿ ಶಿಲೆಗಳಿಂದ ಕೂಡಿದ ಪ್ರದೇಶ. ಇದು ಅನೇಕ ಶತಮಾನಗಳಿಂದ ನಗ್ನೀಕರಣಕ್ಕೆ ತುತ್ತಾಗಿರುವುದರಿಂದ ಸಮಮಟ್ಟ ಮೈದಾನವಾಗಿ ಉತ್ತರ ಧ್ರುವಪ್ರದೇಶದ ಕಡೆಗೆ ಇಳಿಜಾರಾಗಿದೆ. ಅನೇಕ ಸರೋವರಗಳೂ ಉತ್ತರದ ಕಡೆಗೆ ಹರಿಯುವ ಸಣ್ಣ ನದಿಗಳೂ ಇಲ್ಲಿವೆ. ಇಲ್ಲಿಂದ ದಕ್ಷಿಣದ ಕಡೆಗೆ ಹರಿದು ಸೇಂಟ್ ಲಾರೆನ್ಸನ್ನು ಸೇರುವ ನದಿಗಳಲ್ಲಿ ಅನೇಕ ಜಲಪಾತಗಳಿವೆ. ಕೆನಡಿಯನ್ ಶಿಲಾಫಲಕಕ್ಕೆ ಪಶ್ಚಿಮ ಮತ್ತು ದಕ್ಷಿಣದಲ್ಲಿ, ಜಲಜಶಿಲೆಗಳನ್ನೊಳಗೊಂಡ ಸಮಾನಾಂತರ ಪದರಗಳಿಂದ ಕೂಡಿದ ವಿಶಾಲ ಬಯಲುಗಳಿವೆ. ಆದರೆ ಅಲ್ಲಲ್ಲಿ ಪುರಾತನ ಶಿಲೆಗಳಿಂದಾದ ದ್ವೀಪಗಳೂ ಇವೆ. ಆರ್ಕ್‌ಟಿಕ್ ಮಹಾಸಾಗರದಿಂದ ಮೆಕ್ಸಿಕೊ ಕೊಲ್ಲಿಯವರೆಗೆ ಪ್ರಯಾಣ ಮಾಡುವವರು 305 ಮೀ.ಗಳಿಗಿಂತ ಹೆಚ್ಚು ಎತ್ತರದ ಪ್ರದೇಶವನ್ನು ಕಾಣಲಾರರು. ಅಲ್ಲಲ್ಲೆ ಕಂಡುಬರುವ ಎತ್ತರದ ಪ್ರದೇಶಗಳು ಡಕೋಟ ಸಂಸ್ಥಾನದ ಬ್ಲ್ಯಾಕ್‌ಹಿಲ್ಸ್, ಮಿಸ್ಸೂರಿ ಮತ್ತು ಅರಕಾನ್ಸಸ್ ನದಿಗಳ ಮಧ್ಯ ಭಾಗದ ಓಝಾರ್ಕ್ ಬೆಟ್ಟಗಳು.

ಈ ಬಯಲನ್ನು ಹೀಗೆ ವಿಂಗಡಿಸಬಹುದು: 1 ಮೆಕೆಂಜಿ ನದಿಯ ಉತ್ತರದ ತಗ್ಗು ಬಯಲು, 2 ಸೇಂಟ್ ಲಾರೆನ್ಸ್ ಪಂಚಮಹಾಸರೋವರಗಳ ತಗ್ಗುಬಯಲು. 3 ಮಿಸಿಸಿಪಿ ನದಿಯ ತಗ್ಗು ಬಯಲು. 4 ಆಗ್ನೇಯದ ತಗ್ಗು ಬಯಲು, 5 ರಾಕಿ ಪರ್ವತಗಳ ಕಡೆ ಹೋದಂತೆಲ್ಲ ಏರುವ ಎತ್ತರದ ಬಯಲುಗಳು.

4. ಮಧ್ಯ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಎತ್ತರ ಪ್ರದೇಶಗಳು: ಇಲ್ಲಿ ತೀರದ ಮೈದಾನಗಳಿಂದ ಆವೃತವಾದ ಮಡಿಕೆ ಪರ್ವತಗಳಿಂದ ಕೂಡಿದ ಎತ್ತರ ಪ್ರದೇಶಗಳಿವೆ.

ಉತ್ತರ ಅಮೆರಿಕದಲ್ಲಿ ಹಿಮಶಿಲೆಯ ಪ್ರಭಾವ: ಹಿಮ ಶಿಲಾಯುಗದಲ್ಲಿ ಉ. ಅ. 40° ಯಿಂದ ಉತ್ತರಕ್ಕಿರುವ ಗ್ರೀನ್‌ಲೆಂಡ್‌ನ್ನೊಳಗೊಂಡ ಖಂಡಭಾಗವೆಲ್ಲ ನೀರ್ಗಲ್ಲು ಪದರಗಳಿಂದ ಮುಚ್ಚಿತ್ತು. ಇಂದಿಗೂ ಈ ಪದರಗಳು ಪೂರ್ತಿಯಾಗಿ ಕಣ್ಮರೆಯಾಗಿಲ್ಲ. ಗ್ರೀನ್‌ಲೆಂಡಿನ ಹೆಚ್ಚು ಭಾಗ, ಬ್ಯಾಫಿನ್, ಡೆವಾನ್ ಮತ್ತು ಎಲ್ಲೆಸ್ ಮೆರೆ ದ್ವೀಪಗಳು ಅದರಡಿಯಲ್ಲಿವೆ. ಮಧ್ಯದ ತಗ್ಗು ಬಯಲಿನ ಉತ್ತರಾರ್ಧ ಭಾಗದ ಭೂಲಕ್ಷಣಗಳು ಹಿಮಶಿಲೆಯ ಪ್ರಭಾವದಿಂದ ರೂಪುಗೊಂಡಿವೆ. ಹಿಮಕರಗಿದ ಮೇಲೆ ಮರಳು, ಗಡುಸುಶಿಲೆ ಮತ್ತು ಕಲ್ಲುಗುಂಡುಗಳು ಅಧಿಕ ಪ್ರಮಾಣದಲ್ಲಿ ದೇಶದ ಎಲ್ಲ ಕಡೆಗಳಲ್ಲೂ ಸಂಚಿತವಾಗಿವೆ. ಹೆಚ್ಚು ಮರಳೂ ಕಲ್ಲೂ ಇಲ್ಲದ ಕಡೆಗಳಲ್ಲಿ ಇವುಗಳ ಸಂಚಯನದಿಂದ ಫಲವತ್ತಾದ ವ್ಯವಸಾಯ ಪ್ರದೇಶಗಳು ಏರ್ಪಟ್ಟಿವೆ. ಪರ್ವತಪ್ರದೇಶಗಳಲ್ಲಿ ಹಿಮನದಿಗಳು U ಆಕಾರದ ಕಣಿವೆಗಳನ್ನು ನಿರ್ಮಿಸಿವೆ, ಮತ್ತು ಪೆಸಿಫಿಕ್ ತೀರದಲ್ಲಿ ಕಡಲತೋಳುಗಳನ್ನು ಕತ್ತರಿಸಿವೆ. ಕೆನಡದ ಅಟ್ಲಾಂಟಿಕ್ ಪ್ರಾಂತ್ಯಗಳಲ್ಲಿ ಮತ್ತು ನ್ಯೂ ಇಂಗ್ಲೆಂಡಿನಲ್ಲಿ ಇರುವ ದೊಡ್ಡ ದೊಡ್ಡ ಕಲ್ಲುಗುಂಡುಗಳು ವ್ಯವಸಾಯಕ್ಕೆ ತುಂಬ ಅಡ್ಡಿಯಾಗಿವೆ. ಹಿಮದ ಕಾರ್ಯದಿಂದ, ಭೂರಚನೆಯಲ್ಲಿ ಅನೇಕ ಏರುಪೇರುಗಳಾಗಿ, ಜಲ ಪ್ರವಾಹಕ್ಕೆ ಅನೇಕ ಕಡೆ ಅಡ್ಡಿಯುಂಟಾಗಿ, ಇಂದಿನ ಅನೇಕ ಸರೋವರ ಮತ್ತು ನದಿಗಳು ನಿರ್ಮಿತವಾದವು. ಮೊದಲು ಸೇಂಟ್ ಲಾರೆನ್ಸ್ ನದಿಗೆ ಅಡ್ಡವಾಗಿ ಹಿಮಬಂಡೆಗಳು ಇದ್ದದ್ದರಿಂದ ಮಹಾಸರೋವರಗಳ ನೀರು ಮೊದಲು ಮಿಸಿಸಿಪ್ಪಿಯ ಮುಖಾಂತರವೂ ಅನಂತರ ಮೊಹಾಕ್, ಹಡ್ಸನ್‌ಗಳ ಮುಖಾಂತರವೂ ಹಿಮಶಿಲಾ ಯುಗದ ಅಂತ್ಯದಲ್ಲಿ ಸೇಂಟ್‌ಲಾರೆನ್ಸ್ ನ ಮೂಲಕವೂ ಹರಿಯತೊಡಗಿತು.

**ನದಿಗಳು:** ಏಕರೀತಿಯ ಒಳಪದರದ ಚಲನೆಗಳು ಉತ್ತರ ಅಮೆರಿಕದ ನದೀವ್ಯವಸ್ಥೆಯನ್ನು ರೂಪಿಸಿವೆ. ನದಿಗಳ ಚಲನೆಯಲ್ಲೂ ವ್ಯತ್ಯಾಸವಾಗಿದೆ. ಮಿಸಿಸಿಪಿ ನದೀವ್ಯೂಹ ಮೀಸೊಝೋಯಿಕ್ ಕಾಲದಲ್ಲಿ ಪೂರ್ವದಿಂದ ಹರಿದು ಬರುವ ಉಪನದಿಗಳನ್ನು ಹೊಂದಿದ್ದದು, ಟರ್ಷಿಯರಿ ಕಾಲದಲ್ಲಿ ಪಶ್ಚಿಮದಿಂದ ಹರಿದು ಬರುವ ಉಪನದಿಗಳಿಂದ ಪ್ರಭಾವಿತವಾಯಿತು. ಉತ್ತರ ಮಿನ್ನೆಸೋಟದ ಹಿಮನದಿಯ ಸಂಚಯನಗಳಿಂದ ಈ ನದೀವ್ಯೂಹ ತನ್ನ ಪಥವನ್ನೇ ಬದಲಾಯಿಸಿದೆ.

ಮೆಕೆಂಜಿ ನದಿಯೂ ಇದೇ ರೀತಿ ವಿಕಾಸಗೊಂಡಿದೆ. ಹಿಮನದಿಯ ಸವೆತ ಮತ್ತು ಸಂಚಯನಗಳ ಪರಿಣಾಮವಾಗಿ ಸೇಂಟ್ ಲಾರೆನ್ಸ್ ನದಿಯಂತೆ ಇದರ ಪಾತ್ರದಲ್ಲೂ ಅನೇಕ ಸರೋವರಗಳುಂಟಾಗಿವೆ.

ಬೇಸಗೆಯಲ್ಲಿ ಹಿಮ ಕರಗುವುದರಿಂದ ಉತ್ತರ ಹಾಗೂ ದಕ್ಷಿಣದ ಕಡೆಗಳಿಗೆ ಹರಿಯುವ ನದಿಗಳಲ್ಲಿ ಪ್ರವಾಹಗಳಿರುತ್ತವೆ. ಅಟ್ಲಾಂಟಿಕ್ ಸಾಗರಕ್ಕೆ ಹರಿಯುವ ಒಟ್ಟು ಜಲಪ್ರವಾಹಕ್ಕಿಂತ ಪೆಸಿಫಿಕ್ ಸಾಗರಕ್ಕೆ ಹರಿಯುವ ಜಲಪ್ರವಾಹ ಹೆಚ್ಚು.

ಪೆಸಿಫಿಕ್ ಸಾಗರವನ್ನು ಸೇರುವ ನದಿಗಳ ಪೈಕಿ ಉತ್ತರ ಕೆನಡ ಮತ್ತು ಅಲಾಸ್ಕಗಳಲ್ಲಿ ಹರಿಯುವ 3200 ಕಿಮೀ ಉದ್ದದ ಯೂಕಾನ್ ನದಿ ಜಗತ್ತಿನ ದೊಡ್ಡ ನದಿಗಳಲ್ಲೊಂದು; ಅಷ್ಟು ದೊಡ್ಡದಾದರೂ ಅದಕ್ಕೆ ಪ್ರಾಮುಖ್ಯ ಕಡಿಮೆ. ವರ್ಷದಲ್ಲಿ ಎಂಟು ತಿಂಗಳು ಹೆಪ್ಪುಗಟ್ಟಿರುವುದೂ ಮುಕ್ಕಾಲುಪಾಲು ಜನರಹಿತ ಪ್ರದೇಶಗಳಲ್ಲಿ ಹರಿಯುವುದೂ ಇದಕ್ಕೆ ಕಾರಣ. ಇನ್ನೂ ದಕ್ಷಿಣಕ್ಕೆ ಸ್ಕೀನಾ, ಫ್ರೇಸರ್, ಕೊಲಂಬಿಯ (2,240 ಕಿಮೀ) ಮತ್ತು ಅದರ ಉಪನದಿ ಸ್ನೇಕ್ (1670 ಕಿಮೀ) ನದಿಗಳೂ ಜಗತ್ಪ್ರಸಿದ್ಧ ಕಂದರಹಳ್ಳಗಳನ್ನು (ಕ್ಯಾನಿಯನ್‌ನ್ಯಾನ್) ಹೊಂದಿರುವ ಕೊಲರಾಡೂ ನದಿಯೂ ಇವೆ.

ಆರ್ಕ್‌ಟಿಕ್ ಮತ್ತು ಹಡ್ಸನ್ ಕೊಲ್ಲಿಯನ್ನು ಸೇರುವ ನದಿಗಳಲ್ಲಿ ಮೆಕೆಂಜಿ ಮತ್ತು ಸಸ್ಕ್ಯಾಚವನ್, ನೆಲ್ಸನ್‌ಗಳು ಮುಖ್ಯವಾದವು. ಅಥಬಾಸ್ಕ ಮತ್ತು ಗ್ರೇಟ್‌ಸ್ಲೇವ್ ಸರೋವರಗಳ ಮುಖಾಂತರ 4241 ಕಿಮೀ ದೂರ ಮೆಕೆಂಜಿ ನದಿ ಹರಿಯುತ್ತದೆ. ಇಲ್ಲಿ ನಾವೆ ಪ್ರಯಾಣ ವರ್ಷದಲ್ಲಿ 4 ತಿಂಗಳು ಮಾತ್ರ. ಸಸ್ಕ್ಯಾಚವನ್ ನದಿ ವಿನಿಪೆಗ್ ಸರೋವರ ಸೇರುತ್ತದೆ. ನೆಲ್ಸನ್ ನದಿಯ ಮುಖಾಂತರ ಅದರ ನೀರು ಹಡ್ಸನ್ ಕೊಲ್ಲಿ ಸೇರುತ್ತದೆ. ಅಟ್ಲಾಂಟಿಕ್ ಸಾಗರವನ್ನು ಸೇರುವ ನದಿಗಳಲ್ಲಿ ಸೇಂಟ್ಸ್ ಲಾರೆನ್ಸ್ ಬಹು ಮುಖ್ಯವಾದದ್ದು. ಐದು

# ಉತ್ತರ ಅಮೆರಿಕ

ಮಹಾಸರೋವರಗಳೊಡನೆ ಸಂಪರ್ಕ ಹೊಂದಿರುವ ಈ ನದಿ ಖಂಡದ ಒಳಭಾಗಕ್ಕೆ 4000 ಕಿಮೀ ಜಲಮಾರ್ಗವನ್ನೊದಗಿಸಿದೆ. ಇನ್ನೂ ದಕ್ಷಿಣದ ಕಡೆ ಇರುವ ನದಿಗಳು ಚಿಕ್ಕವಾದರೂ ಒಳನಾಡಿಗೆ ಜಲಮಾರ್ಗಗಳನ್ನು ನಿರ್ಮಿಸಿ, ಅವುಗಳ ಅಳಿವೆಗಳಲ್ಲಿ ಪ್ರಮುಖ ಬಂದರುಗಳನ್ನು ಹೊಂದಿವೆ. ಹಡ್ಸನ್, ಡೆಲೆವೇರ್, ಸಸ್ಕೆಹಾನ್ ಮುಂತಾದ ನದಿಗಳೂ ಮುಖ್ಯವಾದುವು.

ಮೆಕ್ಸಿಕೊ ಕೊಲ್ಲಿಯನ್ನು ಸೇರುವ ನದಿಗಳಲ್ಲಿ 5971 ಕಿಮೀ ಉದ್ದದ ಮಿಸಿಸಿಪ್ಪಿ ಮುಖ್ಯವಾದದ್ದು. ಇದರ ಜಲಾನಯನ ಪ್ರದೇಶ ಅಮೆರಿಕ ಸಂಯುಕ್ತ ಸಂಸ್ಥಾನದ $^1/_3$ ಭಾಗವನ್ನು ಆಕ್ರಮಿಸಿದೆ. ಪ್ರಾರಂಭದಲ್ಲಿ ಇದು ಅನೇಕ ಜಲಪಾತಗಳನ್ನು ಹೊಂದಿದ್ದು, ಸರೋವರಗಳ ಮುಖಾಂತರ ಹಾದು ಹೋಗುತ್ತದೆ. ಸೇಂಟ್ ಲೂಯಿ ಬಳಿಯಲ್ಲಿ ರಾಕಿ ಪರ್ವತಗಳಿಂದ ಹರಿದು ಬರುವ 3,780 ಕಿಮೀ ಉದ್ದದ ಮಿಸ್ಸೂರಿ ನದಿ ಸೇರುತ್ತದೆ. ಇಲ್ಲಿಂದ ಮುಂದಿನ ಉಪನದಿಗಳು–ರೆಡ್ ರಿವರ್, ಒಹಾಯೊ, ಅರಕಾನ್ಸಾಸ್.

ಸೇಂಟ್ ಲೂಯಿ ಬಳಿ ಮಿಸಿಸಿಪ್ಪಿಯ ಪ್ರವಾಹ ಮೈದಾನವನ್ನು ತಲಪುತ್ತದೆ. ಇದು ಸು. 40 ರಿಂದ 130ಕಿಮೀ ಗಳಷ್ಟು ಅಗಲವಾಗಿದೆ. ಅನೇಕ ಕಡೆ ಇದರ ಎರಡು ಪಾರ್ಶ್ವಗಳಲ್ಲೂ 60–90 ಮೀ ಅಡಿಗಳಷ್ಟು ಎತ್ತರದ ಕಡಿದಾದ ಬಂಡೆಗಳಿವೆ. ಮೆಕ್ಕಲುಮಣ್ಣು ತಳದಲ್ಲಿ ಸಂಚಿತವಾದಂತೆ ಅದರ ಆಳ ಕಡಿಮೆಯಾಗುತ್ತ ಹೋಗುತ್ತದೆ; ಇದರಿಂದ ನೀರು ಎರಡು ಕಡೆಗಳಲ್ಲೂ ಹರಡಲಾರಂಭಿಸುತ್ತದೆ. ಇಕ್ಕೆಡೆಯ ಫಲವತ್ತಾದ ಲೋಯೆಸ್ ಎಂಬ ಮಣ್ಣನ್ನು ಹೊಂದಿರುವ ಭೂಮಿಯನ್ನು ಪ್ರವಾಹದಿಂದ ರಕ್ಷಿಸುವುದಕ್ಕೆ ನದಿಯ ಎರಡು ಪಾರ್ಶ್ವಗಳಲ್ಲೂ ಏರಿಗಳನ್ನು ಕಟ್ಟಿದ್ದಾರೆ. ಪ್ರವಾಹದ ಹೆಚ್ಚು ನೀರನ್ನು ತಡೆಗಟ್ಟುವ ಸರೋವರಗಳಿಲ್ಲದಿರುವುದೇ ಈ ಏರ್ಪಾಡಿಗೆ ಕಾರಣ: ಮಿಸ್ಸೂರಿ, ಮಿಸಿಸಿಪ್ಪಿ ನದಿಗಳಲ್ಲಿ ಪ್ರವಾಹಗಳ ಹಾವಳಿ ಹೆಚ್ಚು. 3018 ಕಿಮೀ ಉದ್ದ ರಿಯೋ ಗ್ರ್ಯಾಂಡಿ ಎಂಬುದು ಮೆಕ್ಸಿಕೊ ಕೊಲ್ಲಿಯನ್ನು ಸೇರುವ ಮತ್ತೊಂದು ದೊಡ್ಡ ನದಿ.

**ವಾಯುಗುಣ**: ಉತ್ತರ ದಕ್ಷಿಣವಾಗಿ ಹರಡಿರುವ ಪಶ್ಚಿಮದ ರಾಕಿ ಪರ್ವತಗಳು ಮತ್ತು ಪೂರ್ವದ ಅಪಲೇಷಿಯನ್ ಪರ್ವತಗಳು, ಮಧ್ಯದ ತಗ್ಗುಬಯಲನ್ನು ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳ ಪ್ರಭಾವದಿಂದ ದೂರಮಾಡಿವೆ. ಇದೊಂದು ಮೊಗಸಾಲೆ ಯಂತಿದೆ. ಉತ್ತರದ ಅಂಚಿನಲ್ಲಿ ಪರ್ವತಗಳು ಇಲ್ಲದಿರುವುದರಿಂದ ಉತ್ತರದ ಶೀತ ಮಾರುತಗಳು ಚಳಿಗಾಲದಲ್ಲಿ ದಕ್ಷಿಣಕ್ಕೆ ನ್ಯೂ ಆರ್ಲಿಯನ್ಸ್‌ವರೆಗೂ ಬೀಸುತ್ತವೆ. ಇದನ್ನು ಸರಿದೂಗಿಸಲೆಂಬಂತೆ, ದಕ್ಷಿಣದಲ್ಲಿ ಪರ್ವತಗಳು ಇಲ್ಲದಿರುವುದರಿಂದ, ಬೇಸಗೆಯಲ್ಲಿ ಗಲ್ಫ್‌ಸ್ಟ್ರೀಂ ಎಂಬ ಉಷ್ಣ ಪ್ರವಾಹದ ಮೇಲಿಂದ ಬೀಸುವ ಉಷ್ಣಮಾರುತಗಳು ಮೆಕ್ಸಿಕೊ ಕೊಲ್ಲಿಯಿಂದ ಮಧ್ಯ ಮಿಸಿಸಿಪ್ಪಿಯವರೆಗೂ ಬೀಸುತ್ತವೆ; ಈ ಖಂಡ ವಿಶಾಲವಾಗಿದ್ದು ಆರ್ಕ್‌ಟಿಕ್ ಸಾಗರದಿಂದ ಉಷ್ಣವಲಯದವರೆಗೂ ಹರಡಿರುವುದರಿಂದ, ವಾಯುಗುಣದಲ್ಲಿ ಅನೇಕ ವ್ಯತ್ಯಾಸಗಳಿವೆ. ಉತ್ತರ ದಕ್ಷಿಣಗಳಿಗೆ ಉಷ್ಣಾಂಶದ ವ್ಯತ್ಯಾಸವೂ ಇದೆ; ಸಾಗರ ಪ್ರವಾಹಗಳು ಮತ್ತು ಬೀಸುವ ಮಾರುತಗಳು ಕೂಡ ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ.

**ಉಷ್ಣಾಂಶ:** ಚಳಿಗಾಲದ ಸಮತಾಪ ರೇಖೆಗಳು ಪೂರ್ವ ಪಶ್ಚಿಮವಾಗಿದ್ದರೂ ಮಧ್ಯದಲ್ಲಿ ದಕ್ಷಿಣದ ಕಡೆಗೆ ಬಾಗಿವೆ: ಅಂದರೆ ತೀರ ಪ್ರದೇಶಗಳು ಬೆಚ್ಚಗಿದ್ದು, ಒಳಭಾಗ ಚಳಿಯಿಂದ ಕೂಡಿದೆ. $17.8^o$ ಸೆ. ಸಮತಾಪ ರೇಖೆ ಮಹಾಸರೋವರಗಳ ದಕ್ಷಿಣಕ್ಕೂ ಹಬ್ಬಿದೆ. ಅಂದರೆ ಉತ್ತರಾರ್ಧ ಖಂಡ ಘನೀಭವನ ಉಷ್ಣತೆಗಿಂತಲೂ ಕಡಿಮೆ ಉಷ್ಣತೆ ಹೊಂದಿದೆ. ಪೆಸಿಫಿಕ್ ಉಷ್ಣಸಾಗರ ಶೀತಸಾಗರ ಪ್ರವಾಹ ಪಶ್ಚಿಮ ಕೆನಡ ತೀರದ ಬಳಿ ಹರಿಯುವುದರಿಂದ ಅದು ಪೂರ್ವ ತೀರಕ್ಕಿಂತಲೂ ಬೆಚ್ಚಗಿದೆ. ಪೂರ್ವ ತೀರದಲ್ಲಿ ಲ್ಯಾಬ್ರಡಾರ್ ಶೀತಸಾಗರ ಪ್ರವಾಹ ಹರಿಯುವುದರಿಂದ, ಆರ್ಕ್‌ಟಿಕ್ ಸಾಗರದ ತೀರಗಳು $-11^o$ ಸೆ. ಯಿಂದ $-16.7^o$ ಸೆ. ಉಷ್ಣಾಂಶ ಹೊಂದಿವೆ. ಅಂದರೆ ಹಿಮಾಚ್ಛಾದಿತವಾಗಿರುತ್ತವೆ. ಕ್ಯಾಲಿಫೋರ್ನಿಯ ಶೀತಸಾಗರ ಪ್ರವಾಹ ಪಶ್ಚಿಮ ತೀರದುದ್ದಕ್ಕೂ ಹರಿದು ಉಷ್ಣಾಂಶವನ್ನು ಕಡಿಮೆ ಮಾಡುತ್ತದೆ. ಚಿನೂಕ್ ಎಂಬ ಬಿಸಿಗಾಳಿ ಆಲ್ಬರ್ಟ್ ಪ್ರಾಂತ್ಯದಲ್ಲಿ ಬೀಸುತ್ತದೆ. ಮಹಾಸಾರೋವರಗಳು ಪೂರ್ವತೀರಗಳನ್ನು ಬೆಚ್ಚಗಿಟ್ಟಿರುತ್ತವೆ.

ಬೇಸಗೆಯಲ್ಲಿ ಖಂಡಾಂತರ ಪ್ರದೇಶ ಹೆಚ್ಚು ಉಷ್ಣತೆಯಿಂದ ಕೂಡಿರುತ್ತದೆ. ಪಶ್ಚಿಮದ ಪರ್ವತಾವಳಿ ಸಾಗರ ಪ್ರಭಾವದಿಂದ ಈ ಪ್ರದೇಶವನ್ನು ದೂರಮಾಡಿದೆ. ತೀರಪ್ರದೇಶಗಳು ಒಳಭಾಗಕ್ಕಿಂತ ತಂಪಾಗಿವೆ ಮಹಾಸರೋವರಗಳು ಸ್ವಲ್ಪಮಟ್ಟಿಗೆ ತಂಪು ಬೀರುತ್ತವೆ. ದಕ್ಷಿಣಾರ್ಧ ಖಂಡ ಹಾಗೂ ವೆಸ್ಟ್ ಇಂಡೀಸ್ ದ್ವೀಪಗಳು $44^o$ ಗಿಂತ ಹೆಚ್ಚು ಜುಲೈ ಉಷ್ಣಾಂಶ ಹೊಂದಿರುತ್ತವೆ. ನೈರುತ್ಯದ ಒಳನಾಡಿನಲ್ಲಿ $50^o$ ಗಿಂತಲೂ ಹೆಚ್ಚು ಉಷ್ಣಾಂಶವಿರುತ್ತದೆ.

ಮಾರುತಗಳು ಮತ್ತು ಮಳೆ: ಬ್ರಿಟಿಷ್ ಕೊಲಂಬಿಯ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಆಗ್ನೇಯ ಪ್ರದೇಶದಲ್ಲಿ ಉಷ್ಣಸಾಗರ ಪ್ರವಾಹದಿಂದುಂಟಾದ ಮಾರುತಗಳಿಂದ ಮಳೆಯಾಗುತ್ತದೆ. ಪರ್ವತಗಳ ಇನ್ನೊಂದು ಕಡೆಯಲ್ಲಿ ಮಳೆ ಇಲ್ಲದೆ, ಮಳೆ ನೆರಳಿನ ಪ್ರದೇಶ ನಿರ್ಮಾಣವಾಗುತ್ತದೆ. ಉತ್ತರ ಅಮೆರಿಕದ ಪರ್ವತಮಯ ಪ್ರಸ್ಥಭೂಮಿಯ ದಕ್ಷಿಣಕ್ಕಿರುವ ಪ್ರದೇಶ ಇಂಥ ಮಳೆನೆರಳುನಾಡು. ಪೂರ್ವ ಕೆನಡ ಮತ್ತು ನ್ಯೂಫೌಂಡ್‌ಲೆಂಡ್ ಗಳಲ್ಲಿ ಸಾಮಾನ್ಯ ಮಳೆ ಮತ್ತು ಹಿಮ ಬೀಳುತ್ತವೆ. ಇದು ಆವರ್ತಮಾರುತಗಳ ಪ್ರಭಾವ. ಮಿಸಿಸಿಪ್ಪಿ ಕಣಿವೆಯ ವಿನಾಶಕರ ಬಿರುಗಾಳಿಗಳು ವೆಸ್ಟ್ ಇಂಡೀಸ್ ದ್ವೀಪಗಳು ಮತ್ತು ಗಲ್ಫ್ ಕೋಸ್ಟ್‌ಗಳಲ್ಲಿ ಹೆಚ್ಚು ಹಾನಿಯನ್ನು ಉಂಟುಮಾಡುತ್ತವೆ.

**ಸ್ವಾಭಾವಿಕ ಸಸ್ಯವರ್ಗ**: ವಾಯುಗುಣ ಮತ್ತು ಭೂಸ್ಥಿತಿಯನ್ನವಲಂಬಿಸಿರುತ್ತದಾದರೂ ಉತ್ತರ ಅಮೆರಿಕದ ಸಸ್ಯವರ್ಗ ಮನುಷ್ಯ ಪ್ರಯತ್ನದಿಂದ ಬದಲಾವಣೆ ಹೊಂದಿದೆ. ಎತ್ತರ ಮತ್ತು ವಾಯುಗುಣಕ್ಕೆ ಅನುಸಾರವಾಗಿ ವಿವಿಧ ರೀತಿಯ ಸಸ್ಯವರ್ಗಗಳನ್ನು ಈ ಖಂಡದಲ್ಲಿ ಕಾಣಬಹುದು.

**ಕಾಡುಗಳು**: ಉಷ್ಣತೆ ಮತ್ತು ಮಳೆ ಹೆಚ್ಚಾಗಿರುವ ಮೆಕ್ಸಿಕೊ, ಮಧ್ಯ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ನಿತ್ಯಹರಿದ್ವರ್ಣದ ಕಾಡುಗಳಿವೆ. ಹೆಚ್ಚು ಸೆಕೆ ಮತ್ತು ತೇವದಿಂದ ಕೂಡಿರುವ ತೀರಪ್ರದೇಶಗಳಲ್ಲಿ ಈ ಕಾಡುಗಳು ಒತ್ತೊತ್ತಾಗಿವೆ. ತಾಳೆಯ ಜಾತಿಯ ಮರ, ಮಹೋಗನಿ, ಲಾಗ್‌ವುಡ್ ಇತ್ಯಾದಿ ಮರಗಳು ಇಲ್ಲಿ ಬೆಳೆಯುತ್ತವೆ. ತಗ್ಗು ಬಯಲು ಮತ್ತು ಇಳಿಜಾರು ಪ್ರದೇಶಗಳಲ್ಲಿ ತೀವ್ರತರ ವ್ಯವಸಾಯ ರೂಢಿಯಲ್ಲಿದೆ. ಬಾಳೆಹಣ್ಣು, ಕಿತ್ತಲೆ, ಕಬ್ಬು, ಹೊಗೆಸೊಪ್ಪು, ಕಾಫಿ ಮತ್ತು ಕೋಕೋಗಳನ್ನು ಬೆಳೆಸುತ್ತಾರೆ.

ಆಗ್ನೇಯ ಅಮೆರಿಕದ ಸಂಸ್ಥಾನಗಳಾದ ಫ್ಲಾರಿಡ ಮತ್ತು ಗಲ್ಫ್ ಕೋಸ್ಟ್‌ಗಳಲ್ಲಿ ಅರ್ಧೋಷ್ಣ ವಲಯದ ನಿತ್ಯಹರಿದ್ವರ್ಣದ ಕಾಡುಗಳಿವೆ. ಕಡಿಮೆ ಉಷ್ಣಾಂಶದ ಚಳಿಗಾಲ ಮತ್ತು ಹೆಚ್ಚು ಬೇಸಗೆ ಕಾಲ ಇರುವುದಲ್ಲದೆ ವರ್ಷಪೂರ್ತಿ ಮಳೆಯಾಗುವುದರಿಂದ ಉದ್ದನೆಯ ಎಲೆಗಳ ಪೀತದಾರು ಮತ್ತು ತಾಳೆ ಮರಗಳು ಹೆಚ್ಚಾಗಿವೆ. ಜೌಗು ಪ್ರದೇಶದಲ್ಲಿ ಸೈಪ್ರಸ್‌ಗಳಿವೆ. ಪೀತದಾರುವನ್ನು ಹಲಗೆ, ಬಾಗಿಲು ಮತ್ತು ಅಣೆಕಟ್ಟು ತಯಾರಿಕೆಗೆ ಉಪಯೋಗಿಸುತ್ತಾರೆ.

ಪೂರ್ವ ಅಮೆರಿಕ ಸಂಸ್ಥಾನಗಳು ಮತ್ತು ಆಗ್ನೇಯ ಕೆನಡದಲ್ಲಿ ಚಳಿಗಾಲದಲ್ಲಿ ಎಲೆಗಳುದುರುವ ಮತ್ತು ಎಲೆ ಮೊನಚಾದ ಕಾಡುಗಳಿಂದ ಕೂಡಿದ ಮಿಶ್ರ ಕಾಡುಗಳಿವೆ. ದಕ್ಷಿಣಾರ್ಧ ಭಾಗದಲ್ಲಿ ಓಕ್, ಗಟ್ಟಿದಾರು ಮರ, ಸಂಪಿಗೆ ಜಾತಿಯ ಎಲೆಯುದುರುವ ಮರಗಳ ಕಾಡುಗಳಿವೆ. ಅಪಲೇಷಿಯನ್ ಪರ್ವತಗಳ ವಿನಾ ಉಳಿದೆಲ್ಲವೂ ವ್ಯವಸಾಯ ಪ್ರದೇಶ. ಚಳಿಗಾಲದ ಗೋದಿ, ಹೊಗೆಸೊಪ್ಪು, ಜೋಳ ಮತ್ತು ಹತ್ತಿ–ಇಲ್ಲಿನ ಮುಖ್ಯ ಬೆಳೆಗಳು. ಮೇಪಲ್ ಮತ್ತು ಮೊನಚು ಎಲೆಯ ಕಾಡುಗಳು ಇಲ್ಲಿವೆ. ಮರಗಳ ತಿರುಳಿನಿಂದ ಕಾಗದದ ತಯಾರಿಕೆಯಾಗುತ್ತದೆ. ಮಿಶ್ರ ವ್ಯವಸಾಯ, ಪಶುಪಾಲನೆ ಮತ್ತು ತೋಟಗಾರಿಕೆ ಇಲ್ಲಿನ ಜನರ ಮುಖ್ಯ ಕಸಬುಗಳು. ಕೆನಡದ ಹೆಚ್ಚು ಭಾಗ ಮೊನಚು ಎಲೆಯ ಕಾಡುಗಳಿಂದ ತುಂಬಿದೆ. ಈ ಕಾಡು ಅಟ್ಲಾಂಟಿಕ್‌ನಿಂದ ಪೆಸಿಫಿಕ್ ಸಾಗರದ ವರೆಗೆ 4,800 ಕಿಮೀ

ಉದ್ದ ಹರಡಿದೆ. ಸರಾಸರಿ ಅಗಲ 950 ಕಿಮೀ. ಪೀತದಾರು, ಸ್ಪ್ರೂಸ್, ಭೂರ್ಜ, ಗುಗ್ಗಲ ಮರಗಳು ದಟ್ಟವಾಗಿ ಹರಡಿವೆ. ಬ್ರಿಟಿಷ್ ಕೊಲಂಬಿಯದ ಕಾಡುಗಳಲ್ಲಿ ಭವ್ಯವಾದ ಡಗ್ಲಾಸ್ ಫರ್ ಮರಗಳಿವೆ. ಇದು ಟಂಡ್ರ ಪ್ರದೇಶದ ದಕ್ಷಿಣದಲ್ಲಿದೆ.

**ಹುಲ್ಲುಗಾವಲು:** ಉತ್ತರ ಅಮೆರಿಕದ ಮಧ್ಯಭಾಗದಲ್ಲಿ ಪ್ರೈರಿ ಹುಲ್ಲುಗಾವಲಿದೆ. ಇದು ಮಧ್ಯಮ ಬಯಲಿನಿಂದ ಮೆಕ್ಸಿಕೊ ಕೊಲ್ಲಿಯವರೆಗೂ ಹರಡಿದೆ. ಪ್ರೈರಿಯ ಹೆಚ್ಚು ಭಾಗವನ್ನು ವ್ಯವಸಾಯ ಪ್ರದೇಶಗಳನ್ನಾಗಿ ಪರಿವರ್ತಿಸಿದ್ದಾರೆ. ಒಣ ಹವೆ ಇರುವ ಪ್ರದೇಶಗಳಲ್ಲಿ ಹೊಲದ ಬೆಳೆ ಹೆಚ್ಚಾಗಿರುತ್ತದೆ. ಅದಕ್ಕೆ ನೀರಾವರಿ ಆವಶ್ಯಕ. ಮಣ್ಣಿನ ಸವೆತದಿಂದ ಅನೇಕ ಪ್ರದೇಶಗಳು ಬಂಜರುಬಿದ್ದಿವೆ.

ಮರುಭೂಮಿ ಮತ್ತು ಅರೆ ಮರುಭೂಮಿ ಪ್ರದೇಶಗಳು: ಇವು ಕ್ಯಾಲಿಫೋರ್ನಿಯ ಕೊಲ್ಲಿಯಿಂದ ಉತ್ತರದ ಕಡೆಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಪ್ರಸ್ಥಭೂಮಿಗಳ ಮುಖಾಂತರ ಮಧ್ಯ ಹಾಗೂ ಮುಖ್ಯ ರಾಕಿ ಪರ್ವತಶ್ರೇಣಿಗಳ ಮಧ್ಯದಲ್ಲಿ ದಕ್ಷಿಣಕ್ಕೆ ಮೆಕ್ಸಿಕೊವರೆಗೆ ಹರಡಿ ಪಶ್ಚಿಮ ಸಮಾನಾಂತರ ಶ್ರೇಣಿಗಳ ಮಧ್ಯದಲ್ಲಿರುವ ಬಯಲುಗಳನ್ನೂ ಒಳಗೊಂಡಿದೆ. ಮಳೆ ಅಪರೂಪವಾಗಿ ಬಿದ್ದರೂ ಬಿದ್ದ ಮಳೆ ಭಾರಿ ಸುಂಟರಗಾಳಿಗಳಲ್ಲಿ ಪರ್ಯವಸಾನವಾಗುತ್ತದೆ. ಇಬ್ಬನಿಯಿಂದ ಪಾಪಾಸುಕಳ್ಳಿ ಮತ್ತು ಜೋಷುವಾ ಮರಗಳು ಬೆಳೆಯುತ್ತವೆ. ನೀರಾವರಿ ಅನುಕೂಲ ಒದಗಿದರೆ ಇಲ್ಲಿ ಹಣ್ಣುಗಳನ್ನು ಬೆಳೆಯಬಹುದು.

**ತಂಡ್ರ ಭಾಗ:** ಖಂಡದ ಉತ್ತರದ ಅಂಚಿನಲ್ಲಿ ಉದ್ದಕ್ಕೂ ಚಳಿ ಬಹಳ ಹೆಚ್ಚು. ಇದು ಬಂಜರುಭೂಮಿ. ತೀಕ್ಷ್ಣವಾದ ಹಿಮದ ಬಿರುಗಾಳಿ ಬೀಸುತ್ತವೆ. ಇಂಥ ಪರಿಸ್ಥಿತಿಯಲ್ಲಿ ಕೇವಲ ಗಿಡ್ಡವಾಗಿ ಬೆಳೆಯುವ ಸಸ್ಯಗಳು ಬದುಕಿ ಉಳಿಯುತ್ತದೆ. ಪಾಚಿ, ಶಿಲಾವಲ್ಕ ಮತ್ತು ನೀರು ಹಬ್ಬೆ ಗಿಡಗಳು ಅನುಕೂಲವಾದ ಸ್ಥಳದಲ್ಲಿ ಬೆಳೆಯುತ್ತವೆ. ಕಿರುಬೇಸುಗೆಯಲ್ಲಿ ಸಸಿ, ಪೊದೆಗಳಲ್ಲೆಲ್ಲ ಆಕರ್ಷಕ ಹೂಗಳು ಮತ್ತು ವಲಸೆಗಾರ ಹಕ್ಕಿಗಳು ತುಂಬಿಕೊಂಡಿರುತ್ತವೆ. ಕೆಲವು ಕಡೆ ಜಿಂಕೆ ಮತ್ತು ಹಿಮಸಾರಂಗಗಳು ಇರುತ್ತವೆ.

ಮೆಡಿಟರೇನಿಯನ್ ವಾಯುಗುಣದ ಸಸ್ಯವರ್ಗ: ನಿತ್ಯ ಹರಿದ್ವರ್ಣದ ಕಾಡುಗಳು ಮತ್ತು ಕುರುಚಲು ಗಿಡಗಳು ಬೇಸಿಗೆ ಕಾಲದ ಹೆಚ್ಚು ಉಷ್ಣತೆಯನ್ನು ಸಹಿಸಿಕೊಳ್ಳುವ ಶಕ್ತಿ ಪಡೆದಿವೆ. ಈ ರೀತಿಯ ಸಸ್ಯವರ್ಗ ಮಧ್ಯ ಕ್ಯಾಲಿಫೋರ್ನಿಯದಲ್ಲಿದೆ. ಇದೇ ಮೆಡಿಟರೇನಿಯನ್ ಮಾದರಿಯ ಸಸ್ಯವರ್ಗ.

**ನೈಸರ್ಗಿಕ ಸಂಪತ್ತು:** ಐರೋಪ್ಯರು ಈ ಖಂಡವನ್ನು ಆಕ್ರಮಿಸಿದಾಗ ನೈಸರ್ಗಿಕ ಸಂಪತ್ತು ಹೇರಳವಾಗಿತ್ತು. ನೆಲಸಿಗರು ಅದರ ಶೋಷಣೆಗೆ ಕೈಹಾಕಿದರು. ಅದನ್ನು ತಡೆಗಟ್ಟಲು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ತೋಪುಗಳು, ಕಾಡುಗಳ ವಿಶಾಲ ಭಾಗಗಳು ಕ್ರಮೇಣ ನಾಶವಾದುವು. ಕಾಡು ಪ್ರಾಣಿಗಳ ಬೇಟೆ ಮತ್ತು ಮಣ್ಣು ಸವೆತಕ್ಕೆ ಒಳಗಾಗಿ ನಾಡಿಗೆ ಹೀನಸ್ಥಿತಿ ಉಂಟಾಯಿತು. 1930ರಲ್ಲಿ ಉಂಟಾದ ತೀವ್ರಕ್ಷಾಮಗಳಿಂದ ಪರಿಸ್ಥಿತಿ ಇನ್ನೂ ಉದ್ರೇಕಗೊಂಡಿತು. 20ನೆಯ ಶತಮಾನದ ಮೊದಲಲ್ಲಿ ಮೃಗಸಸ್ಯಸಂರಕ್ಷಣೆಯ ಕಾರ್ಯಕ್ರಮಗಳನ್ನು ಕೈಗೊಳ್ಳುವ ಪ್ರಯತ್ನಗಳು ನಡೆದು, ಈಗ ಪರಿಸ್ಥಿತಿ ಹತೋಟಿಗೆ ಬಂದಿದೆ.

**ಜಲಶಕ್ತಿ:** ಗೃಹೋಪಯೋಗ, ನೀರಾವರಿ, ಕೈಗಾರಿಕೆ, ವಾಹನ ಸಂಚಾರ, ಜಲವಿದ್ಯುತ್ ಶಕ್ತಿ, ವ್ಯರ್ಥ ಬಿಡುಗಡೆ–ಹೀಗೆ ಅಮೆರಿಕದ ಜಲಸಂಪತ್ತಿನದು ಆರು ದಾರಿ. ಜನಸಂಖ್ಯೆ ಮತ್ತು ಕೈಗಾರಿಕೆಗಳು ಹೆಚ್ಚಿದಂತೆ ಜಲಶಕ್ತಿಯ ಉಪಯೋಗವೂ ಹೆಚ್ಚಿದೆ. ಇದರ ಪರಿಣಾಮವಾಗಿ ಕಡಿಮೆ ಮಳೆ ಬಿದ್ದು ಒತ್ತಾದ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ನೀರಿನ ಕೊರತೆ ಇದ್ದೇ ಇರುತ್ತದೆ.

ಉತ್ತರ ಅಮೆರಿಕದ ಜಲಮೂಲಗಳು ಮೂರು : ಮಳೆ ಅಥವಾ ಹಿಮಪತನ: ನದಿ, ಸರೋವರ ಮತ್ತು ಸಮುದ್ರಗಳಿಂದ ಕೂಡಿದ ಭೂಮಿಯ ಮೇಲಿನ ನೀರು: ಚಿಲುಮೆ ಮತ್ತು ಬಾವಿಗಳಿಂದ ಮೇಲಕ್ಕೆ ಬರುವ ಅಂತರ್ಜಲ ಮೊದಲನೆಯ ಜಲಮೂಲದ ಹತೋಟಿ ಅಸಾಧ್ಯ. ಆದರೆ ಎರಡನೆಯ ರೀತಿಯ ಜಲವನ್ನು ಅಣೆಕಟ್ಟು ಮತ್ತಿತರ ವಿಧಾನಗಳಿಂದ ಸಂಗ್ರಹಿಸಲಾಗುತ್ತಿದೆ. ಸರೋವರ, ನದಿ ಮತ್ತಿತರ ಸ್ವಾಭಾವಿಕ ಜಲಾಶಯಗಳ ನೀರನ್ನು ಜನತೆಗೆ ಒದಗಿಸುತ್ತಿದೆ. ಸೂಕ್ತ ವಾಯುಗುಣ ಮತ್ತು ಇತರ ಅನುಕೂಲ ಪರಿಸ್ಥಿತಿಗಳು ಇರುವ ಕಡೆ ಅಂತರ್ಜಲವನ್ನು ಬಾವಿ ಮತ್ತು ಚಿಲುಮೆಗಳ ಮುಖಾಂತರ ಒದಗಿಸಲಾಗುತ್ತಿದೆ.

ಜನಸಾಂದ್ರತೆಯಿಂದ ತುಂಬಿರುವ ಈಶಾನ್ಯ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಆಗ್ನೇಯ ಕೆನಡ ಮತ್ತು ಮೆಕ್ಸಿಕೊವಿನ ಮಧ್ಯದ ಪ್ರಸ್ಥಭೂಮಿಗಳಲ್ಲಿ ನಗರ ನೈರ್ಮಲ್ಯ ಮತ್ತು ಕೈಗಾರಿಕೆಗಳಿಗಾಗಿ ಬಹಳ ನೀರನ್ನು ವ್ಯರ್ಥ ಮಾಡುವುದರಿಂದ, ಬೇಕಾದಷ್ಟು ಜಲಸಂಗ್ರಹಣೆ ಅಸಾಧ್ಯ. ಹೆಚ್ಚು ಮಳೆ ಇದ್ದರೂ ಗೃಹೋಪಯೋಗಕ್ಕಾಗಿ ನೀರು ಒದಗಿಸುವುದೂ ಕಷ್ಟಸಾಧ್ಯವಾಗುತ್ತಿದೆ. ಅನೇಕ ಕಡೆಗಳಲ್ಲಿ ಗಡುಸು ನೀರೇ (ಹಾರ್ಡ್ ವಾಟರ್) ದೊರೆಯುತ್ತದೆ.

ನಗರಗಳು ಬೆಳೆದಿರುವ ಶುಷ್ಕಪ್ರದೇಶಗಳಲ್ಲಿನ ನೀರಿನ ಕೊರತೆ ಒಂದು ದೊಡ್ಡ ಸಮಸ್ಯೆ. ದಕ್ಷಿಣ ಕ್ಯಾಲಿಫೋರ್ನಿಯ ಇದಕ್ಕೊಂದು ನಿದರ್ಶನ. ಇಲ್ಲಿ ವ್ಯವಸಾಯಕ್ಕೂ ನಗರ ಕೆಲಸಗಳಿಗೂ ನೀರು ಒದಗಿಸಬೇಕಾಗಿದೆ. ಆದ್ದರಿಂದ ಕೊಲರಾಡೊ ನದಿಯಿಂದ, ಕಲ್ಲಿನಿಂದ ಎತ್ತರದಲ್ಲಿ ಕಟ್ಟಿರುವ ಕಾಲುವೆಗಳ ಮುಖಾಂತರ ನೀರನ್ನು ಸಾಗಿಸುವುದಲ್ಲದೆ, ಸಮುದ್ರಜಲವನ್ನು ಶುದ್ಧಿಮಾಡಿ ಒದಗಿಸುತ್ತಾರೆ. ಎತ್ತರದ ಪ್ರದೇಶಗಳಿಂದ ದೂರ ದೂರದ ನಗರಗಳಿವೆ. ಕೈಗಾರಿಕಾ ಕೇಂದ್ರಗಳಿಗೆ ಜಲಸಾರಿಗೆ ವ್ಯವಸ್ಥೆ ಇದೆ. ಇದೇ ರೀತಿ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳ ಹೆಚ್ಚುವರಿ ನೀರನ್ನು ನೀರಿನ ಅನುಕೂಲವಿಲ್ಲದ ರಾಜಧಾನಿಗಳಿಗೆ ಒದಗಿಸುತ್ತಾರೆ.

ಉತ್ತರ ಮೆಕ್ಸಿಕೊ, ಅಮೆರಿಕ ಸಂಯುಕ್ತ ಸಂಸ್ಥಾನಗಳ ಪಶ್ಚಿಮ ಭಾಗ ಮತ್ತು ಪಶ್ಚಿಮ ಕೆನಡಗಳಂಥ ಶುಷ್ಕ ಪ್ರದೇಶಗಳಲ್ಲಿ ನೀರಾವರಿ ಕಾರ್ಯ ಬಹು ಮುಖ್ಯ. ಆದ್ದರಿಂದ ಚಳಿಗಾಲದ ಮಳೆಯನ್ನು ಹಿಡಿದಿಟ್ಟಿರುವ ಜಲಾಶಯಗಳ ನೀರನ್ನು ಬೇಸಿಗೆ ಬೆಳೆಗಳಿಗಾಗಿ ಉಪಯೋಗಿಸುತ್ತಾರೆ. ನದಿಗಳ ನೀರು ತಡೆದು ನಿರ್ಮಿಸಿದ ಅನೇಕ ಜಲಾಶಯಗಳು ಎತ್ತರದ ಪ್ರದೇಶಗಳಲ್ಲಿವೆ. ಆದ್ದರಿಂದ ವಿದ್ಯುತ್ ಉತ್ಪಾದನೆ ಕಡಿಮೆ ಖರ್ಚಿನಲ್ಲಿ ಸಾಕಾಗುವಷ್ಟು ಸಾಧ್ಯವಾಗಿದೆ.

**ಖನಿಜಗಳು:** ಪ್ರಾಚೀನ ಭೂ ಯುಗದ ಕಾಲದಲ್ಲಿ ಉತ್ತರ ಅಮೆರಿಕದ ವಿಶಾಲ ಪ್ರದೇಶಗಳನ್ನು ಸಮುದ್ರ ಮುಚ್ಚಿತ್ತು. ಜಲಶಿಲೆಗಳಲ್ಲಿ ಆಗ ಖನಿಜಾತ್ಮಕ ಇಂಧನಗಳು ಉಂಟಾದವು. ಇದು ಉತ್ತರ ಅಮೆರಿಕದ ಹೆಚ್ಚು ಕಡಿಮೆ ಎಲ್ಲ ಪ್ರದೇಶಗಳನ್ನೂ ಆಕ್ರಮಿಸಿದೆ. ಪಶ್ಚಿಮದಲ್ಲಿ ರಾಕಿ ಪರ್ವತಗಳು ಮೇಲೆದ್ದು ಭೂಪದರಗಳಲ್ಲಿ ಅನೇಕ ಬದಲಾವಣೆಗಳಾದವು. ಜಲಜಶಿಲೆಗಳಲ್ಲಿದ್ದ ದೊಡ್ಡ ಪ್ರಮಾಣದ ಇಂಧನಗಳನ್ನು ಅಗ್ನಿಪರ್ವತಗಳ ಬೆಂಕಿ ನಾಶಗೊಳಿಸಿತಾದರೂ ಆಗ ಉಂಟಾದ ಮಹತ್ತರ ಒತ್ತಡದ ಪರಿಣಾಮವಾಗಿ ಭೂ ಮತ್ತಿತರ ಶಿಲಾಸ್ತರಗಳಲ್ಲಿ ಲೋಹ ಖನಿಜಗಳು ಸೇರಿದುವು. ನೂತನವಾಗಿ ನಿರ್ಮಿತವಾದ ಶಿಲೆಗಳ ಮುಖಾಂತರ ನೀರು ಜಿನುಗಿ ಈ ಕಾರ್ಯಗತಿ ತೀವ್ರವಾಯಿತು. ಈ ಬದಲಾವಣೆಗಳಿಂದಲೇ ಉತ್ತರ ಅಮೆರಿಕದ ಪಶ್ಚಿಮ ಭಾಗಗಳಲ್ಲಿ ಶ್ರೇಷ್ಠ ಖನಿಜಗಳು ದೊರೆಯುವಂತಾಯಿತು.

ಕೈಗಾರಿಕೆಗಳ ಮೂಲಖನಿಜಗಳಾದ ಕಲ್ಲಿದ್ದಲು, ಪೆಟ್ರೋಲಿಯಂ, ಕಬ್ಬಿಣಗಳು ಉತ್ತರ ಅಮೆರಿಕದಲ್ಲಿ ಹೇರಳವಾಗಿ ದೊರೆಯುತ್ತವೆ.

ಪ್ರಪಂಚದ ಕಲ್ಲಿದ್ದಲು ನಿಕ್ಷೇಪಗಳಲ್ಲಿ ಶೇ.55 ಭಾಗ ಉತ್ತರ ಅಮೆರಿಕದಲ್ಲಿದೆ. 1900–59ರವರೆಗೆ ಅಮೆರಿಕ ಸಂಯುಕ್ತ ಸಂಸ್ಥಾನ ಪ್ರಪಂಚದ ಪ್ರಮುಖ ಕಲ್ಲಿದ್ದಲು ಉತ್ಪಾದನೆಯ ದೇಶವಾಗಿತ್ತು. ಶ್ರೇಷ್ಠಮಟ್ಟದ ಕಲ್ಲಿದ್ದಲು, ಆ್ಯಂಥ್ರಸೈಟ್‍ಗಳು ಜಗತ್ತಿನಲ್ಲಿ ಪೆನ್ಸಿಲ್ವೇನಿಯದಲ್ಲಿ ಮಾತ್ರ ದೊರೆಯುತ್ತವೆ. ಬಿಟುಮಿನಸ್ ಕಲ್ಲಿದ್ದಲು ಕಂಬರ್‍ಲೆಂಡ್, ಅಲಿಘನಿ ಪ್ರಸ್ಥಭೂಮಿಗಳಿರುವ ಅಪಲೇಷಿಯನ್ ಪ್ರದೇಶಗಳು, ಪೂರ್ವ ಒಳನಾಡು, ಪಶ್ಚಿಮ ಒಳನಾಡು ಮತ್ತು ಟೆಕ್ಸಸ್, ಮಿಚಿಗನ್‍ಗಳ ಒಳನಾಡು ಪ್ರದೇಶಗಳಲ್ಲಿ ದೊರೆಯುತ್ತವೆ.

ಕೆನಡದ ಕಲ್ಲಿದ್ದಲು ನಿಕ್ಷೇಪಗಳು ಮುಖ್ಯವಾಗಿ ನೋವಾಸ್ಕೋಷಿಯ, ಆಲ್‍ಬರ್ಟ್, ಬ್ರಿಟಿಷ್ ಕೊಲಂಬಿಯಗಳಲ್ಲಿವೆ. ನೋವಾದಲ್ಲಿನ ಕಲ್ಲಿದ್ದಲು ಉತ್ತಮ ಮಟ್ಟದ್ದು.

ಪೆಟ್ರೋಲಿಯಂ ನಿಕ್ಷೇಪಗಳ ಬಗ್ಗೆ ಹೆಚ್ಚು ವಿವರಗಳು ದೊರೆಯದಿದ್ದರೂ, ಒಳ್ಳೆ ದರ್ಜೆಯ ನಿಕ್ಷೇಪಗಳು ಇವೆಯೆಂದು ತಿಳಿದುಬಂದಿದೆ. ಸಂಯುಕ್ತ ಸಂಸ್ಥಾನ ಪ್ರಮುಖ ಎಣ್ಣೆ ಉತ್ಪಾದನಾ ದೇಶ; ಅಲ್ಲಿ ಪ್ರಪಂಚದ ಶೇ.40 ಭಾಗವನ್ನು ಉತ್ಪಾದಿಸುತ್ತಾರೆ. ಪೆನ್ಸಿಲ್ವೇನಿಯ, ಕೆಂಟಕಿ, ಇಂಡಿಯಾನ, ಇಲಿನಾಯ್‍ಗಳಿಂದ ಕೂಡಿದ ಪೂರ್ವ ಪ್ರದೇಶ ಪ್ರಮುಖ ಎಣ್ಣೆ ಉತ್ಪಾದನಾ ವಿಭಾಗ. ಕಾನ್ಸಾಸ್, ಟೆಕ್ಸಸ್‍ಗಳ ಖಂಡಾಂತರ ಪ್ರದೇಶ ಜಗತ್ತಿನಲ್ಲೇ ಎಣ್ಣೆಗೆ ಪ್ರಸಿದ್ಧ ಸ್ಥಳವಾಗಿದೆ. ಕ್ಯಾಲಿಫೋರ್ನಿಯ ಮತ್ತು ಗಲ್ಫ್‍ಕೋಸ್ಟ್ 2ನೆಯ ಹಾಗೂ 3ನೆಯ ಸ್ಥಾನ ಪಡೆದಿವೆ. ಎರಡನೆಯ ಮಹಾಯುದ್ಧದ ಅನಂತರ ಕೆನಡ ಮತ್ತು ಅಲಾಸ್ಕಗಳು ಎಣ್ಣೆ ಉತ್ಪಾದಿಸಲಾರಂಭಿಸಿವೆ. 1910ರಿಂದ 1919ರ ವರೆಗೆ ಮೆಕ್ಸಿಕೊ ಪ್ರಪಂಚದ ಪೆಟ್ರೋಲಿಯಂ ತಯಾರಿಕೆಯಲ್ಲಿ ಎರಡನೆಯ ಸ್ಥಾನ ಪಡೆದಿತ್ತು. ಗಲ್ಫ್‍ಕೋಸ್ಟ್‍ನಲ್ಲಿ ಕೆಲವು ಮುಖ್ಯ ಎಣ್ಣೆ ಮೂಲಗಳಿವೆ.

ಪ್ರಪಂಚದ ಕಬ್ಬಿಣದ ಅದಿರಿನ ನಿಕ್ಷೇಪಗಳಲ್ಲಿ ಶೇ. 12 ಭಾಗ ಉತ್ತರ ಅಮೆರಿಕದಲ್ಲಿದೆ. ಸುಪೀರಿಯರ್ ಸರೋವರ ಪ್ರದೇಶ ಜಗತ್ತಿನ ¼ ಭಾಗದ ಕಬ್ಬಿಣದ ಅದಿರು ಒದಗಿಸುತ್ತದೆ. ಇದು ಉತ್ತಮ ಅದಿರು. ಪಂಚ ಮಹಾಸರೋವರಗಳು ಈ ಪ್ರದೇಶವನ್ನು ಅಪಲೇಷಿಯನ್ ಪ್ರದೇಶಗಳೊಂದಿಗೆ ಸೇರಿಸಿವೆ. ಪ್ರಪಂಚದ ಉತ್ತಮ ಮಟ್ಟದ ನಿಕ್ಷೇಪಗಳು ನ್ಯೂಫೌಂಡ್‍ಲೆಂಡ್ ಬಳಿಯ ಬೆಲ್ ದ್ವೀಪ, ಬರ್ನ್ಟ್ ಕ್ರೀಕ್ ಮತ್ತು ಸುಪೀರಿಯರ್ ಸರೋವರಕ್ಕೆ ವಾಯವ್ಯದ ಪ್ರದೇಶಗಳಲ್ಲಿವೆ. ಕೋಬಾಲ್ಟ್, ಮಾಲಿಬ್ಡಿನಂ, ನಿಕ್ಕಲ್, ಟಂಗ್‍ಸ್ಟನ್‍ಗಳು ಸಂಯುಕ್ತ ಸಂಸ್ಥಾನ ಮತ್ತು ಮೆಕ್ಸಿಕೊಗಳಲ್ಲಿ ದೊರೆಯುತ್ತವೆ. ಗ್ರೇಟ್ ಬೇರ್ ಸರೋವರದ ತೀರಗಳಲ್ಲಿ ಜಗತ್ತಿನ ಶ್ರೇಷ್ಠ ಯುರೇನಿಯಂ ನಿಕ್ಷೇಪಗಳು ಹೇರಳವಾಗಿವೆ ಎಂದು ತಿಳಿದುಬಂದಿದೆ.

**ವ್ಯವಸಾಯ ಮತ್ತು ಪಶುಪಾಲನೆ:** ವಸಂತ ಋತುವಿನ ಗೋದಿಯನ್ನು ಮಧ್ಯ ಕೆನಡದಿಂದ ಮಧ್ಯ ಮಿಸಿಸಿಪ್ಪಿವರೆಗೂ ಬೆಳೆಯುತ್ತಾರೆ. ಇದರ ದಕ್ಷಿಣಕ್ಕೆ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದರ ದಕ್ಷಿಣದ ಪ್ರದೇಶಗಳಲ್ಲಿ ಜೋಳ ಮತ್ತು ಚಳಿಗಾಲದ ಗೋದಿ ಬೆಳೆಯಲು ಅನುಕೂಲವಿದೆ. ಇನ್ನೂ ದಕ್ಷಿಣಕ್ಕೆ ವಿಶಾಲವಾದ ಹತ್ತಿ ಬೆಳೆಯುವ ಪ್ರದೇಶವಿದೆ. ಅರ್ಧೋಷ್ಣವಲಯ ಪ್ರದೇಶ ಮೆಕ್ಸಿಕೊ ಕೊಲ್ಲಿಯ ಉದ್ದಕ್ಕೂ ಇದೆ; ಫ್ಲಾರಿಡ ಇದಕ್ಕೆ ಸೇರಿದೆ. ಇಲ್ಲಿ ಕಬ್ಬು, ಬತ್ತ, ಹಣ್ಣುಗಳನ್ನು ಬೆಳೆಯುತ್ತಾರೆ. 100° ಪಶ್ಚಿಮ ರೇಖಾಂಶದ ಪಶ್ಚಿಮಕ್ಕೆ ರಾಕಿ ಪರ್ವತಗಳವರೆಗೆ ಕುದುರೆ ಸಾಕುವುದೂ ಶುಷ್ಕ ವ್ಯವಸಾಯವೂ ಹೆಚ್ಚು. ಪಶುಪಾಲನೆ ಮಹಾಸರೋವರಗಳ ಸುತ್ತಮುತ್ತಣ ಪ್ರದೇಶ ಮತ್ತು ಸೇಂಟ್‍ಲಾರೆನ್ಸ್ ತಗ್ಗು ಬಯಲುಗಳಲ್ಲಿ ವಿಶೇಷವಾಗಿದೆ. ಮಧ್ಯ ಕ್ಯಾಲಿಫೋರ್ನಿಯದಲ್ಲಿ ಬೆಚ್ಚಗಿರುವ ಸಮಶೀತೋಷ್ಣ ವಲಯದ ಹಣ್ಣು ತರಕಾರಿಗಳನ್ನು ಬೆಳೆಯುತ್ತಾರೆ.

**ಜನಸಂಖ್ಯೆ:** ಈ ಖಂಡದಲ್ಲಿ ಪ್ರಪಂಚದ ಶೇ. 8 ರಷ್ಟು ಜನಸಂಖ್ಯೆ ಇದೆ. ಜನಸಂಖ್ಯೆಯ ಒತ್ತಡ ಯುರೋಪ್ ಮತ್ತು ಪೂರ್ವ ಏಷ್ಯಗಳಿಗಿಂತಲೂ ಕಡಿಮೆ. ಆದರೂ ಉತ್ತರ ಅಮೆರಿಕದ ಈಶಾನ್ಯ ಭಾಗ ಜಗತ್ತಿನ ನಾಲ್ಕು ಹೆಚ್ಚು ಜನಸಾಂದ್ರತೆ ಪ್ರದೇಶಗಳಲ್ಲಿ ಒಂದು. ಈ ಖಂಡ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀಗೆ 15 ಜನರು ಅ.ಸಂ.ಸಂ.ದಲ್ಲಿ ಇದು 28 ಮತ್ತು ಕೆನಡದಲ್ಲಿ 3 ಜನರು ಮಾತ್ರ.

ಸಂಯುಕ್ತ ಸಂಸ್ಥಾನದ ಈಶಾನ್ಯದಲ್ಲೂ ಕೆನಡದ ಆಗ್ನೇಯ ಭಾಗಗಳಲ್ಲೂ ಜನಸಾಂದ್ರತೆ ಹೆಚ್ಚು. ಇಲ್ಲಿಂದ ಒಳಗಡೆಗೆ ಮಹಾ ಮೈದಾನಗಳಲ್ಲಿ ದಕ್ಷಿಣದಲ್ಲಿ ಗಲ್ಫ್‌ಕೋಸ್ಟ್‌ವರೆಗೂ ಉತ್ತರದ ಆಂಟೇರಿಯೋದವರೆಗೂ ಇದು ಸಾಮಾನ್ಯ. ಮೆಕ್ಸಿಕೊ ನಗರದ ಸುತ್ತಣ ಪ್ರದೇಶದಲ್ಲೂ ತಕ್ಕಮಟ್ಟಿಗೆ ಜನಸಾಂದ್ರತೆಯಿದೆ. ವಾಷಿಂಗ್‌ಟನ್, ಒರೆಗಾನ್ ಸುತ್ತಣಪ್ರದೇಶ, ಸ್ಯಾನ್‌ಫ್ರಾನ್ಸಿಸ್ಕೊ ಕೊಲ್ಲಿಯ ಸುತ್ತಣ ಪ್ರದೇಶ ಹಾಗೂ ಲಾಸ್ ಏಂಜಲ್ಸ್ ಸುತ್ತಣ ಪ್ರದೇಶಗಳಲ್ಲಿ ಜನಸಾಂದ್ರತೆ ಬಹಳ ಕಡಿಮೆ. ಈ ಪ್ರದೇಶಗಳನ್ನು ಬಿಟ್ಟರೆ ಉಳಿದಿರುವ ಖಂಡವೆಲ್ಲ ಜನರಹಿತ ಪ್ರದೇಶವೆಂದೇ ಹೇಳಬೇಕು.

ಮೂಲನಿವಾಸಿಗಳು ಕೆನಡ ಮತ್ತು ಸಂಯುಕ್ತ ಸಂಸ್ಥಾನಗಳಲ್ಲಿ ಇದ್ದಾರೆ. ಉಳಿದವರೆಲ್ಲ ಪಶ್ಚಿಮ ಮತ್ತು ಉತ್ತರ ಐರೋಪ್ಯರು. ಸಂಯುಕ್ತ ಸಂಸ್ಥಾನದಲ್ಲಿ ಶೇ. 10 ರಷ್ಟು ನೀಗ್ರೋಗಳು. ಇಲ್ಲಿ ಜನರಲ್ಲಿ ಶೇ. 63 ರಷ್ಟು ಮಂದಿ ನಗರಗಳಲ್ಲೂ ಉಳಿದ ಶೇ. 20 ಮಂದಿ ಗ್ರಾಮೀಣ ಕೈಗಾರಿಕೆಗಳಲ್ಲೂ ನಿರತರಾಗಿದ್ದಾರೆ. (ಕೆ.ಆರ್.ಆರ್.)

**ಉತ್ತರ ಅಮೆರಿಕದ ಅವಿಷ್ಕಾರ, ಪರಿಶೋಧನೆ ಮತ್ತು ವಸತಿ ಚರಿತ್ರೆ:** ಉತ್ತರ ಅಮೆರಿಕದಲ್ಲಿ ಈಗ ಮೂಲನಿವಾಸಿಗಳು ಅಲ್ಪಸಂಖ್ಯಾತರು; ಅಲ್ಲಿ ವಾಸಿಸುತ್ತಿರುವವರಲ್ಲಿ ಐರೋಪ್ಯ ಮೂಲದವರೇ ಅಧಿಕ; ನೀಗ್ರೋಗಳೂ ಯಥೇಚ್ಛ.

ಉತ್ತರ ಅಮೆರಿಕವನ್ನು ಮೊಟ್ಟ ಮೊದಲಿಗೆ ಕಂಡ ಐರೋಪ್ಯರೆಂದರೆ ಬಹುಶಃ ಸ್ಕಾಂಡಿನೇವಿಯದ ನಾರ್ಸ್ ಜನ. ಆ ದೇಶದಲ್ಲಿ ಒಮ್ಮೆ ಥಟ್ಟನೆ ಜನಸಂಖ್ಯೆಯ ಸ್ಫೋಟವಾದಾಗ, ಅಲ್ಲಿನ ಒಂದನೆಯ ಹ್ಯಾರೋಲ್ಡ್ ದೊರೆ ತನ್ನ ನಾಡಿನ ಶ್ರೀಮಂತರ ಮೇಲೆ ದಬ್ಬಾಳಿಕೆ ನಡೆಸಿದಾಗ ಆ ಜನ ಹೊರಬಿದ್ದರು. ನೆರೆದೇಶಗಳ ತೀರಪ್ರದೇಶಗಳ ಮೇಲೆ ದಾಳಿ ಮಾಡಿದರು. 9–10ನೆಯ ಶತಮಾನಗಳಲ್ಲಿ ಇಂಗ್ಲೆಂಡಿಗೆ ನುಗ್ಗಿದ ಡೇನರೂ ಫ್ರೆಂಚ್ ನದಿಗಳಲ್ಲಿ ಯಾನ ಮಾಡಿ ಫ್ರೆಂಚರನ್ನು ಥಳಿಸಿ ಅವರನ್ನು ಮತ್ತೆ ಅನಾಗರಿಕ ಸ್ಥಿತಿಗೆ ತಳ್ಳಿದವರೂ ರಷ್ಯಕ್ಕೂ ಏರಿ ಹೋಗಿ ಹಾವಳಿ ಮಾಡಿದ ವೆರಾಂಗಿಯನ್ನರೂ ಇವರೇ. 700–1100ರ ಅವಧಿಯಲ್ಲಿ ಇವರು ಉತ್ತರ ಅಮೆರಿಕದಲ್ಲೂ ಕಾಲಿಕ್ಕಿದ್ದಿರಬೇಕು. ಐಸ್ಲೆಂಡ್ ಇತಿವೃತ್ತಗಳಲ್ಲಿ ಇವರ ಈ ಪ್ರವಾಸಗಳ ಉಲ್ಲೇಖವಿದೆ. ಜಾರ್ನಿ ಹೆರ್ಜಾಫ್‌ಸನ್ ಐಸ್‌ಲೆಂಡಿನಿಂದ ಗ್ರೀನ್ಲೆಂಡ್ ಯಾನ ಮಾಡುತ್ತಿದ್ದಾಗ ಗಾಳಿ ಅವನ ನೌಕೆಯನ್ನು ಅಮೆರಿಕದ ತೀರಕ್ಕೆ ಹೊಡೆದುಕೊಂಡು ಹೋಗಿರಬೇಕು (985–6). ಮುಂದೆ (1002–3ರಲ್ಲಿ) ಲೀಫ್‌ಎರಿಕ್ಸನ್ ಗ್ರೀನ್ಲೆಂಡ್‌ನಿಂದ ಅಲ್ಲಿಗೆ ಹೋದ; ಸಮುದ್ರ ಕರೆಯ ಬಳಿಯಲ್ಲೇ ದಕ್ಷಿಣಾಮುಖವಾಗಿ ಸಾಗಿದ. ತಾರ್ಫಿನ್ ಕಾರ್ಲ್‌ಸೆಪ್ನಿ ಮೂರು ಹಡಗುಗಳಲ್ಲಿ ಸಾಮಗ್ರಿಯನ್ನೂ ಪ್ರಾಣಿಗಳನ್ನೂ ತುಂಬಿಕೊಂಡು ಅಲ್ಲಿಗೆ ಹೋಗಿದ್ದ. ಅವನೊಂದಿಗೆ ಹೆಂಗಸರೂ ಹೋಗಿದ್ದರೆಂದು ಹೇಳಲಾಗಿದೆ.

ನಾರ್ಸ್ ಜನ ಎಲ್ಲೆಲ್ಲಿ ಸಂಚರಿಸಿದರೆಂಬ ಬಗ್ಗೆ ನಿರ್ದಿಷ್ಟವಾದ ದಾಖಲೆಗಳು ಹೆಚ್ಚಾಗಿ ದೊರಕಿಲ್ಲ. 15ನೆಯ ಶತಮಾನದಲ್ಲಿ ರಚಿತವಾದುದೆನ್ನಲಾದ ಈ ಪ್ರದೇಶದ ಭೂಪಟವೊಂದು ಸಿಕ್ಕಿದೆ. ಅಂತೂ ಕೊಲಂಬಸನ ಪೀಳಿಗೆಯ ಜನ ಇಲ್ಲಿಗೆ ಬರುವುದಕ್ಕೂ ಎಷ್ಟೋ ಮುಂಚೆಯೇ ಐರೋಪ್ಯರು ಇಲ್ಲಿ ಕಾಲಿಟ್ಟಿದ್ದರೆಂಬುದು ನಿಜ. ಆದ್ದರಿಂದ ವಾಸ್ತವವಾಗಿ ಹೇಳುವುದಾದರೆ 15ನೆಯ ಶತಮಾನದ ಪರಿಶೋಧಕರು ಉತ್ತರ ಅಮೆರಿಕವನ್ನು ತಲಪಿದಾಗ ಅವರು ಮಾಡಿದ್ದು ಅಮೆರಿಕದ ದರ್ಶನವಲ್ಲ, ಪುನರ್ದರ್ಶನವನ್ನು ಮಾತ್ರ.

15ನೆಯ ಶತಮಾನದಲ್ಲಿ ಐರೋಪ್ಯರು ಹೊಸ ಹೊಸ ಪ್ರದೇಶಗಳ ಅವಿಷ್ಕಾರ, ಪರಿಶೋಧನೆ ಹಾಗೂ ನೆಲಸಿಕೆಯಲ್ಲಿ ತೊಡಗಿದರು. ಹಿಂದಿನ ಕೆಲವು ಶತಮಾನಗಳಲ್ಲಿ ಐರೋಪ್ಯ ದೇಶಗಳಲ್ಲಿ ಸಂಭವಿಸಿದ್ದ ಅರ್ಥಿಕ ಬೆಳೆವಣಿಗೆಗಳಿಂದಾಗಿ ಅಲ್ಲಿ ಸಾಹಸ ಪವೃತ್ತಿ ಬೆಳೆದುಬಂದಿತ್ತು. ರಾಷ್ಟ್ರೀಯತೆಯ ಜಾಗೃತಿಯೊಂದಿಗೆ ಆಕಾಂಕ್ಷೆ ಹೆಚ್ಚಿತ್ತು. ಹೊಸ ನೆಲ, ಹೆಚ್ಚು ಸಂಪತ್ತು ದೊರಕೀತೆಂಬ ಆಸೆಯಿಂದ ಆ ದೇಶಗಳು ಜನರನ್ನು ಪರಿಶೋಧನೆಯಲ್ಲಿ ಪ್ರೋತ್ಸಾಹಿಸಿದರು. ಇದರ ಜೊತೆಗೆ ಕ್ರೈಸ್ತಧರ್ಮ ಪ್ರಚಾರದ ಹುಮ್ಮಸ್ಸೂ ಸೇರಿತು. ಪ್ರಾಟೆಸ್ಟಂಟ್ ಮತ್ತು ರೋಮನ್ ಕೆಥೊಲಿಕ್ ರಾಷ್ಟ್ರಗಳಲ್ಲೆ ಈ ವಿಚಾರದಲ್ಲಿ ಸ್ಪರ್ಧೆ ಹೆಚ್ಚಿತು.

1462ರಲ್ಲಿ ಇಟಲಿಯ ಕ್ರಿಸ್ಟೋಫರ್ ಕೊಲಂಬಸ್ ಸ್ಪೇನಿನಿಂದ ಯಾತ್ರೆ ಹೊರಟು ಉತ್ತರ ಅಮೆರಿಕದ ಪೂರ್ವ ದ್ವೀಪಗಳನ್ನು ತಲಪಿದಾಗ ಈ ಖಂಡದ ಹೊಸ ಯುಗದ ಬಾಗಿಲು ದೊಡ್ಡದಾಗಿ ತೆರೆಯಿತು. ಸ್ಪ್ಯಾನಿಷ್ ಸಾಹಸಿಗಳು ಕೆರಿಬಿಯನ್, ಮೆಕ್ಸಿಕೊ ಖಾರಿ ಮತ್ತು ಸುತ್ತಣಮುತ್ತಣ ಪ್ರದೇಶಗಳ ಒಳಹೊಕ್ಕರು. ಅಲ್ಲಲ್ಲಿ ವಲಸೆಗಳು ಏರ್ಪಟ್ಟುವು. ಮೊದಮೊದಲು ವಲಸೆಗಾರರು ರೋಗದ ಉಪದ್ರವವನ್ನೂ ಮೂಲನಿವಾಸಿಗಳ ವಿರೋಧವನ್ನೂ ಎದುರಿಸಬೇಕಾಯಿತು. 1513ರಲ್ಲಿ ಬಾಲ್ಬೋವಾ ಯೋಧರ ಪಡೆಯೊಂದಿಗೆ ಪನಾಮ ಭೂಕಂಠವನ್ನು ತಲುಪಿ ಪೆಸಿಫಿಕ್ ದಂಡೆಯ ಮೇಲೆ ಉತ್ತರಾಭಿಮುಖವಾಗಿ ನಡೆದ. 1516ರಲ್ಲಿ ಡೈಗೋ ಎಂಬಾತನಿಗೆ ಕ್ಯೂಬ ಮಣಿಯಿತು. 1519ರಲ್ಲಿ ಎರ್ನಾಸ್ ಕೋರ್ಟೇಸ್ ಮೆಕ್ಸಿಕೊವಿನ ಒಳಹೊಕ್ಕ. ಮುಂದೆ ಅನೇಕ ಸ್ಪ್ಯಾನಿಷ್ ಸಾಹಸಿಗಳು ತಮ್ಮ ಹಿಂದಿನ ಪರಿಶೋಧಕರು ಹೋದ ದಿಕ್ಕುಗಳಲ್ಲೇ ನಡೆದು ಈ ಖಂಡದ ಒಳಭಾಗದಲ್ಲಿ ಸಂಚರಿಸಿದರು. ಇಂಕದ ಚಿನ್ನದ ಆಸೆಯೂ ಸಿಬೋಲದ ಸಪ್ತ ಸುವರ್ಣದ ನಗರಗಳ ಬಗ್ಗೆ ಅಲ್ಲಿನ ಇಂಡಿಯನ್ನರು ಹೇಳುತ್ತಿದ್ದ ಮೋಹಕ ಕಥೆಗಳೂ ಈ ಸಾಹಸಿಗಳನ್ನು ಹುರಿದುಂಬಿಸಿದುವು.

ಸ್ಪೇನಿನ ಜನ ಉತ್ತರ ಅಮೆರಿಕದ ದಕ್ಷಿಣಭಾಗದ ಪರಿಶೋಧನೆಯಲ್ಲಿ ತೊಡಗಿದ್ದಾಗ ಫ್ರೆಂಚರು, ಡಚ್ಚರು, ಇಂಗ್ಲಿಷರು ಮೂಂತಾದವರು ಉತ್ತರದ ಭಾಗಗಳಲ್ಲಿ ಕಾರ್ಯನಿರತರಾಗಿದ್ದರು. ಜಾನ್ ಕ್ಯಾಬಟ್ (ಇಂಗ್ಲಿಷ್), ಕಾರ್ತ್ಯೆ (ಫ್ರೆಂಚ್), ಸರ್ ಫ್ರಾನ್ಸಿಸ್ ಡ್ರೇಕ್ (ಇಂಗ್ಲಿಷ್) ಇವರು ಮುಖ್ಯರು. ಪೆಸಿಫಿಕ್ ತೀರ, ಸೇಂಟ್ ಲಾರೆನ್ಸ್ ಪ್ರದೇಶ ಇವುಗಳಲ್ಲಿ ಕ್ರಮೇಣ ತಮ್ಮ ದೀರ್ಘಕಾಲದ ಮುಸುಕು ತೆರೆದು ಮೊಗ ತೋರಿಸಿದುವು.

ಫ್ರೆಂಚ್ ವ್ಯಾಪಾರಿಗಳು ಪೋರ್ಟ್ ರಾಯಲನ್ನು ಕಂಡುಹಿಡಿದದ್ದು 1605ರಲ್ಲಿ. ಮೂರು ವರ್ಷಗಳ ಅನಂತರ ಕ್ವಿಬೆಕ್ ಪ್ರಾಮುಖ್ಯಕ್ಕೆ ಬಂತು. ಫ್ರೆಂಚ್ ಕೆನಡ ಬೆಳೆಯಿತು. ತುಪ್ಪಳು ವ್ಯಾಪಾರ ಪ್ರಧಾನವಾಗಿತ್ತು. ಮೂಲನಿವಾಸಿಗಳನ್ನು ಕ್ರೈಸ್ತಧರ್ಮಕ್ಕೆ ಪರಿವರ್ತನೆ ಮಾಡುವ ಉದ್ದೇಶದಿಂದ ಬಂದವರೂ ದೇಶ ಪರ್ಯಟನೆಯಲ್ಲಿ ತೊಡಗಿದರು. ಆದರೆ ಇವರಿಗೆ ಪರಿವರ್ತನೆ ಕಾರ್ಯದಲ್ಲಿ ಅನೇಕ ಬಗೆಯ ವಿರೋಧಗಳು ಒದಗಿ ಬಂದುವು.

ಫ್ರೆಂಚರು ತಮ್ಮ ವ್ಯಾಪಾರ ಬೆಳೆವಣಿಗೆಗಾಗಿ ಇಂಗ್ಲಿಷರ ಸಹಕಾರ ಕೋರಿದರು. ಇಂಗ್ಲಿಷರಿಂದ ಹಡ್ಸನ್ ಬೇ ಕಂಪನಿ ಎಂಬ ಸಂಸ್ಥೆಯ ಸ್ಥಾಪನೆಯಾಯಿತು. ಈ ಪ್ರದೇಶದಲ್ಲಿ ಇಂಗ್ಲಿಷರು ಕ್ರಮೇಣ ತಮ್ಮ ಪ್ರಭಾವ ಬೆಳೆಸಿಕೊಂಡರು.

ಫ್ರೆಂಚರ ಆಸೆಯೂ ಬೆಳೆಯಿತು. ಉತ್ತರ ಅಮೆರಿಕದಲ್ಲಿ ತಮ್ಮ ಪ್ರಭುತ್ವ ಬೆಳೆಯಬೇಕೆಂಬ ಉದ್ದೇಶದಿಂದ ಅವರು ಮಿನೆಸೋಟಕ್ಕೆ ಬಂದು ಅಲ್ಲಿಂದ ಮಿಸಿಸಿಪ್ಪಿಯ ಮಾರ್ಗವಾಗಿ ವಿಸ್ಕಾನ್ಸಿನ್‌ಗೆ ಪ್ರಯಾಣ ಮಾಡಿದರು. ದಕ್ಷಿಣದಲ್ಲಿಂದ ಸ್ಪ್ಯಾನಿಷ್ ಪ್ರದೇಶದವರೆಗೂ ಮುಂದುವರಿದು ಇಂಗ್ಲಿಷರನ್ನು ಅಟ್ಲಾಂಟಿಕ್ ಕಡಲ ತೀರದ ಪ್ರದೇಶಕ್ಕೆ ಒತ್ತರಿಸಬೇಕೆಂಬುದು ಅವರ ಉದ್ದೇಶವಾಗಿತ್ತು. ಅವರು ಸ್ಪೇನ್ ವಸಾಹತುಗಳೊಂದಿಗೆ ವ್ಯಾಪಾರ ಬಲಗೊಳಿಸಲು ಯತ್ನಿಸಿದರು.

ಇಂಗ್ಲಿಷರ ಹಡ್ಸನ್ ಬೇ ಕಂಪನಿ ಮೊದಮೊದಲು ಅಷ್ಟೇನೂ ಚುರುಕಾಗಿರಲಿಲ್ಲ. ಆದರೆ ಫ್ರೆಂಚರ ಚಟುವಟಿಕೆಗಳನ್ನು ನೋಡಿದ ಮೇಲೆ ಅದಕ್ಕೂ ಹುರುಪು ಬಂತು. ರಷ್ಯನ್ ವರ್ತಕರೂ 18ನೆಯ ಶತಮಾನದ ವೇಳೆಗೆ ಉತ್ತರ ಅಮೆರಿಕದ ಪಶ್ಚಿಮ ಕರಾವಳಿಯಲ್ಲಿ ವ್ಯಾಪಾರದಲ್ಲಿ ತೊಡಗಿದ್ದರು.

**ಐರೋಪ್ಯ ವಸಾಹತು ಸ್ಥಾಪನೆ:** ಉತ್ತರ ಅಮೆರಿಕದಲ್ಲಿ ವಸಾಹತು ಸ್ಥಾಪಿಸುವ ಯತ್ನವನ್ನು ಮೊಟ್ಟಮೊದಲಿಗೆ ಮಾಡಿದವರೆಂದರೆ ಸ್ಪೇನಿಗರು. ತಾಯ್ನಾಡಿನಲ್ಲಿ ಹೆಚ್ಚು ಅವಕಾಶಗಳಿಲ್ಲದ್ದರಿಂದಲೋ ಸಾಹಸಪ್ರಿಯತೆಯಿಂದಲೋ ಐರೋಪ್ಯ ಸಂಸ್ಕೃತಿಯನ್ನೂ ಕ್ರೈಸ್ತಧರ್ಮವನ್ನೂ ಹರಡುವ ಉದ್ದೇಶದಿಂದಲೋ ಇವರು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬಂದರು. ಇವರು ಇಲ್ಲಿದ್ದ ಇಂಡಿಯನ್ ಗುಲಾಮರಿಂದ ದುಡಿಸಿಕೊಳ್ಳುತ್ತಿದ್ದರು. ಸ್ಪೇನ್ ಸರಕಾರ ಇದನ್ನು ನಿಷೇಧಿಸಿತಾದರೂ ಈ ಪದ್ಧತಿ ಉಳಿದುಕೊಂಡು ಬಂತು. ಆದರೆ ಮುಂದೆ ಅವರ ಜನಸಂಖ್ಯೆ ಕ್ಷೀಣಿಸತೊಡಗಿದಾಗ ಸ್ಪೇನಿಗರು ಆಫ್ರಿಕನ್ ಗುಲಾಮರನ್ನು ತಂದರು. 1570ರ ವೇಳೆಗೆ ಇಲ್ಲಿ 94,000 ಗುಲಾಮರಿದ್ದರು. 17ನೆಯ ಶತಮಾನದ ಅಂತ್ಯದ ವೇಳೆಗೆ ಮೆಕ್ಸಿಕೊ ಪ್ರದೇಶ ಇದರ ಅಧೀನಕ್ಕೆ ಬಂದಿತು. 18ನೆಯ ಶತಮಾನದಲ್ಲಿ ಇವರು ಪೆಸಿಫಿಕ್ ತೀರದಲ್ಲಿ ಉತ್ತರದ ಕಡೆಗೆ ಒತ್ತಿ ಸಾಗಿದರು.

**ಬ್ರಿಟಿಷ್ ವಸಾಹತು ಬೆಳೆವಣಿಗೆ:** ಉತ್ತರ ಅಮೆರಿಕದ ಪೂರ್ವ ಕರಾವಳಿಯ ಉದ್ದಕ್ಕೂ ಉತ್ತರ ಮೇನ್‌ನಿಂದ ಜಾರ್ಜಿಯದವರೆಗೂ ವೆಸ್ಟ್ ಇಂಡೀಸ್ ದ್ವೀಪಗಳಲ್ಲೂ ಬ್ರಿಟಿಷರು ತಮ್ಮ ವಸಾಹತಗಳನ್ನು ಸ್ಥಾಪಿಸಿದರು. ವ್ಯಕ್ತಿಗಳೂ ಗುಂಪುಗಳೂ ಬ್ರಿಟಿಷ್ ದೊರೆಯಿಂದ ಹಕ್ಕು ಪಡೆದು ವಸಾಹತು ನಿರ್ಮಿಸಿಕೊಂಡು ಆಡಳಿತ ನಡೆಸಲು ಆರಂಭಿಸಿದರು. ಸಂಪತ್ತು ಗಳಿಸುವವರಿಗೂ ಸಾಹಸಪ್ರಿಯರಿಗೂ ಅಲ್ಲಿ ಸುವರ್ಣಾವಕಾಶವಿತ್ತು. ವ್ಯವಸಾಯ, ಮೀನುಗಾರಿಕೆ, ಹಡಗು ನಿರ್ಮಾಣ, ಹೊಗೆಸೊಪ್ಪು, ಅಕ್ಕಿ, ನೀಲಿ ಮುಂತಾದ ಪದಾರ್ಥಗಳ ವ್ಯಾಪಾರ ಈ ಮುಂತಾದುವು ಇವರ ಕೆಲಸ.

ವಲಸೆ ಹೊರಟ ಜನಸಮುದಾಯ ವಿಶಾಲ ಸಾಗರವನ್ನು ದಾಟಿ ಹೋಗಬೇಕಾಗಿತ್ತು. ಪಾತ್ರೆ, ಕಟ್ಟಡ ಸಾಮಗ್ರಿ, ದನಕರು, ಶಸ್ತ್ರಾಸ್ತ್ರಗಳೇ ಮೊದಲಾದ ಸಕಲ ರೀತಿಯ ಜೀವನ ಪರಿಕರಗಳನ್ನೂ ಜೊತೆಯಲ್ಲೇ ಒಯ್ಯಬೇಕಾಗಿತ್ತು. ಖಾಸಗಿ ಸಂಸ್ಥೆಗಳೇ ಈ ಮಹಾವಲಸೆಗಳಿಗೆ ಮುಂದಾಳುಗಳಾಗಿ ನಿಂತಿದ್ದುವು. ವರ್ಜೀನಿಯ, ಮ್ಯಾಸಚೂಸೆಟ್ಸ್ ವಸಾಹತಗಳೆರಡೂ ನಿರ್ಮಿತವಾದದ್ದು ಸನ್ನದು ಕಂಪನಿಗಳಿಂದ. ಕನೆಕ್ಟಿಕಟ್ ಪ್ರಾಂತ್ಯದ ಭಾಗವಾಗಿ ಏರ್ಪಟ್ಟ ನ್ಯೂಹೇವನ್ ಎಂಬ ವಸಾಹತನ್ನು ಸ್ಥಾಪಿಸಲು ಧನಿಕ ವಲಸೆಗಾರರು ತಾವೇ ಧನಸಹಾಯ ಒದಗಿಸಿದರು. ನ್ಯೂ ಹ್ಯಾಂಪ್‌ಷೈರ್, ಮಿಯಾಮಿ, ಮೇರಿಲೆಂಡ್ ಮುಂತಾದ ಬೇರೆ ವಸಾಹತುಗಳಿಗೆ ಧನಿಕ ಜಮೀನ್‌ದಾರರು ತಾವೇ ಹಣಕೊಟ್ಟು ಒಕ್ಕಲುಗಳನ್ನೂ ಪರಿಚಾರಕರನ್ನೂ ಕಳುಹಿಸಿದರು. ಹೀಗೆ ಸ್ಥಾಪಿತವಾದ ನೆಲಸುನಾಡುಗಳಿಂದ ಕವಲೊಡೆದು, ಹಲವಾರು ವಸಾಹತುಗಳು ಕಾಲಾಂತರದಲ್ಲಿ ಹುಟ್ಟಿಕೊಂಡುವು. ಮತ್ತೆ ಕೆಲಕಾಲದಲ್ಲಿ ಯುರೋಪಿನ ಬೇರೆ ದೇಶಗಳಿಂದಲೂ ಅದೇ ಬಗೆಯ ವಲಸೆಗಳು ಅಮೆರಿಕಕ್ಕೆ ಬಂದವು. 1624ರಲ್ಲಿ ಡಚ್ಚರು ನ್ಯೂ ನೆದರ್ಲೆಂಡ್ ಎಂಬ ವಸಾಹತನ್ನು ನಿರ್ಮಿಸಿದರು.

ವರ್ಜೀನಿಯದಂತೆ ಮೇರಿಲೆಂಡ್ ವಸಾಹತು ಸಹ ಮುಖ್ಯವಾಗಿ ಕೃಷಿಪ್ರಧಾನ ಪ್ರದೇಶ. ಆದರೆ 18ನೆಯ ಶತಮಾನದ ಮಧ್ಯಭಾಗದೊಳಗೆ ಇವೆರಡೂ ವಸಾಹತುಗಳ ಜೀವನದಲ್ಲಿ ನೀಗ್ರೋ ಗುಲಾಮಗಿರಿ ಮಹತ್ತರ ಪರಿಣಾಮ ಬೀರಿತು. ಧನಿಕ ತೋಟಗಾರರು ನ್ಯಾಯ ಪರಿಪಾಲಕರಾಗಿ, ಸೇನಾನಿಗಳಾಗಿ, ವಿಧಾನಸಭೆಗಳ ಸದಸ್ಯರಾಗಿ ನಿರಂಕುಶಾಧಿಕಾರ ಚಾಲನೆಗೆ ತೊಡಗಿದರು. ಆದರೆ ರೈತ ಮುಂದಾಳುಗಳೂ ರಾಜಕೀಯ ಕ್ಷೇತ್ರಕ್ಕೆ ಕಾಲಿಕ್ಕಿದರು. ದಾಸ್ಯಮುಕ್ತರ ಅಧಿಕಾರ ಕರ್ತವ್ಯಗಳು ತೋಟದ ಮಾಲೀಕರ ಅಲ್ಪಜನಾಧಿಪತ್ಯದಿಂದ ಭಂಗವಾಗದಂತೆ ರೈತರ ಜಾಗೃತ ಚೇತನ ಎಚ್ಚರ ವಹಿಸುತ್ತಿತ್ತು. ದಕ್ಷಿಣದಲ್ಲಿ ಕೆರೋಲಿನ ದೊಡ್ಡ ರೇವು ಪಟ್ಟಣವಾಗಿ ಬೆಳೆಯಿತು. ಕೃಷಿ ವಾಣಿಜ್ಯಗಳೆರಡೂ ಅಲ್ಲಿ ಅಭಿವೃದ್ಧಿಗೆ ಬಂದವು.

ವಸಾಹತುಗಳ ರಾಜಕೀಯ ವಿಚಾರದಲ್ಲಿ ಇಂಗ್ಲಿಷ್ ಸರ್ಕಾರ ಕೈಹಾಕಿದ್ದು ಕೊಂಚ ಕಾಲ. ಕಳೆದ ಮೇಲೆ, ವಸಾಹತುಗಳ ಪರಮಾಧಿಕಾರವೆಲ್ಲ ಸ್ಥಾಪಕ ಕಂಪನಿಗಳಲ್ಲಿ ನಿಹಿತವಾಗಿತ್ತು. ಈ ಕಂಪನಿಗಳು ಇಂಗ್ಲೆಂಡಿನಲ್ಲೇ ನೆಲಸಿದ್ದವು. ಆದರೂ ಒಂದಲ್ಲ ಒಂದು ರೀತಿಯಲ್ಲಿ ನಿರುಪಾಧಿಕವಾಗಿ ನಡೆದುಬಂದ ಬಾಹ್ಯಾಡಳಿತ ಕ್ರಮೇಣ ಕುಸಿಯಿತು. ವರ್ಜೀನಿಯ ವಸಾಹತುಗಾರರಿಗೆ ಆಡಳಿತದಲ್ಲಿ ಪಾಲು ನೀಡಲು ಲಂಡನ್ (ವರ್ಜೀನಿಯ) ಕಂಪನಿ ತೀರ್ಮಾನಿಸಿತು. ತೋಟಗಳ ದಾಸ್ಯಮುಕ್ತ ನಿವಾಸಿಗಳು ಗವರ್ನರೊಡನೆ ಸಹಭಾಗಿಯಾಗಲು ಪ್ರತಿನಿಧಿಗಳನ್ನು ನೇಮಿಸುವಂತೆ 1919ರಲ್ಲಿ ಗವರ್ನರಿಗೆ ಆದೇಶ ನೀಡಿತು. ವಸಾಹತುಗಾರರಿಗೆ ರಾಜ್ಯಭಾರದಲ್ಲಿ ಭಾಗಿಗಳಾಗಲು ಅಧಿಕಾರವಿದೆಯೆಂಬ ವಾದಕ್ಕೆ ಕ್ರಮೇಣ ಒಪ್ಪಿಗೆ ದೊರೆಯ ತೊಡಗಿತು. ವಸಾಹತುಗಾರರು ರಾಜಶಾಸನ ಪೂರ್ವಕವಾಗಿ ಪಡೆದ ಈ ಪ್ರಾತಿನಿಧ್ಯಾಧಿಕಾರಕ್ಕೆ ಹೆಚ್ಚಿನ ಪ್ರಾಧಾನ್ಯವಿರಲಿಲ್ಲ. ಆದರೆ ವಸಾಹತುಗಾರರ ಪರಮಾಧಿಕಾರ ಸ್ಥಾಪನೆಗೆ ಕ್ರಮೇಣ ದಾನಶಾಸನಗಳೇ ಅಡಿಗಲ್ಲಾದುವು. ಇದರಿಂದ ಆರ್ಥಿಕ ವಿಚಾರಗಳು ಅವುಗಳ ಹಿಡಿತಕ್ಕೆ ಬಂದವು. ಕೊನೆಕೊನೆಗೆ ಆರ್ಥಿಕ ವಿಚಾರಗಳಲ್ಲಿ ಅಂತಿಮ ನಿಯಂತ್ರಣ ಈ ಸಭೆಗಳಲ್ಲೇ ಉಳಿಯುವಂತಾಯಿತು. ಇದರಿಂದ ಗವರ್ನರರ ಮತ್ತು ನಿಯುಕ್ತಾಧಿಕಾರಿಗಳ ವೇತನಕ್ಕೂ ಕಂದಾಯವನ್ನು ಬಳಸಕೂಡದೆಂದಾಯಿತು. ಜನಸಭೆಯ ಅಭಿಪ್ರಾಯಕ್ಕೆ ಅನುಗುಣವಾಗಿ ಈ ಅಧಿಕಾರಿಗಳು ನಡೆಯದೆ ಹೋದರೆ, ಆಡಳಿತ ವೆಚ್ಚಕ್ಕೆ ಒಪ್ಪಿಗೆ ನೀಡಲು ಜನಸಭೆ ನಿರಾಕರಿಸತೊಡಗಿತು. ಇದರಿಂದ ಗವರ್ನರುಗಳೂ ನಿಯುಕ್ತಾಧಿಕಾರಿಗಳೂ ಕ್ರಮೇಣ ಜನಸಭೆಯ ಅಭಿಪ್ರಾಯಕ್ಕೆ ತಲೆಬಾಗತೊಡಗಿದರು.

**ಫ್ರೆಂಚರ ಪಾತ್ರ:** ಕೆನಡದ ನ್ಯೂ ಫ್ರಾನ್ಸಿನಲ್ಲೂ ನೊವಸ್ಕಾಷದಲ್ಲಿನ ಅಕಾಡಿಯದಲ್ಲೂ ಫ್ರೆಂಚ್ ವಸಾಹತುಗಳ ನಿರ್ಮಾಣವಾಯಿತು. ಇದನ್ನು ಆಳುತ್ತಿದ್ದ ಫರ್ ವ್ಯಾಪಾರ ಕಂಪನಿಯ ಆಡಳಿತ ಅಸಮರ್ಪಕವಾಗಿದ್ದುದರಿಂದ ಫ್ರೆಂಚ್ ಸರಕಾರವೇ ಇದನ್ನು ವಹಿಸಿಕೊಂಡಿತು (1663). ಇಲ್ಲಿಗೆ ವಲಸೆ ಬರಲೊಪ್ಪಿದ ಫ್ರೆಂಚರಿಗೆ ನಾನಾ ಸವಲತ್ತುಗಳು ದೊರೆತವು. ಇಲ್ಲಿ ವಲಸೆ ಬಂದವರ ಮಡದಿಯರಾಗುವ ಮಹಿಳೆಯರನ್ನೊದಗಿಸುವ ಹೊಣೆಯನ್ನೂ ಸರಕಾರವೇ ವಹಿಸಿಕೊಂಡಿತು. 18ನೆಯ ಶತಮಾನದಲ್ಲಿ ಸ್ವಲ್ಪಕಾಲ ಫ್ರೆಂಚ್ ಅಪರಾಧಿಗಳನ್ನೂ ಇಲ್ಲಿಗೆ ರವಾನಿಸಲಾಗುತ್ತಿತ್ತು. 17ನೆಯ ಶತಮಾನದ ಅಂತ್ಯಕಾಲದಿಂದ ಮುಂದೆ ಇಲ್ಲಿ ಜನಸಂಖ್ಯೆ ಬೆಳೆಯಿತು. ಲವೀಜಿಯಾನ 1969ರಲ್ಲಿ ಸ್ಥಾಪಿತವಾಗಿ ಫ್ರೆಂಚ್ ವ್ಯಾಪಾರಿಯೊಬ್ಬನ ಮಾಲೀಕತ್ವದಲ್ಲಿ ಬೆಳೆದು ಕೊನೆಗೆ ಫ್ರೆಂಚ್ ಪ್ರಭುತ್ವಕ್ಕೆ ಸೇರಿತು. 1760ರ ವೇಳೆಗೆ ಉತ್ತರ ಅಮೆರಿಕದ ಫ್ರೆಂಚ್ ವಸಾಹತುಗಳಲ್ಲಿ ಸುಮಾರು 80,000 ಮಂದಿ ಐರೋಪ್ಯರಿದ್ದರು.

**ವಸಾಹತು ರಾಷ್ಟ್ರಗಳ ಮೇಲಾಟ:** ತಮ್ಮ ರಾಷ್ಟ್ರೀಯರು ಎಲ್ಲೆಲ್ಲಿ ಹೋಗಿ ನೆಲಸುವರೋ ಅದೆಲ್ಲ ತಮ್ಮ ಅಧೀನ ಪ್ರದೇಶಗಳೊಂಬುದು ಯುರೋಪಿನ ಆಗಿನ ರಾಜರ ಭಾವನೆಯಾಗಿತ್ತು. ಇದರಿಂದ ನಾನಾ ಸಮಸ್ಯೆಗಳು ಉದ್ಭವಿಸಿದುವು. ಯುರೋಪಿನಲ್ಲಿ ಸಂಭವಿಸಿದ ಯುದ್ಧಗಳಿಂದಲೂ ಅಮೆರಿಕದಲ್ಲಿದ್ದವರ ಪರಸ್ಪರ ಮೇಲಾಟಗಳಿಂದಲೂ ನಾನಾ ಬಗೆಯ ಬದಲಾವಣೆಗಳಾದವು.

17ನೆಯ ಶತಮಾನದಲ್ಲಿ ಸ್ಪೇನಿಗರು ಉತ್ತರ ಅಮೆರಿಕದ ಮುಖ್ಯ ಭೂ ಪ್ರದೇಶದಲ್ಲಿ ಸಾಮ್ರಾಜ್ಯ ನಿರ್ಮಾಣ ಕಾರ್ಯದಲ್ಲಿ ನಿರತರಾಗಿದ್ದಾಗ ಇಂಗ್ಲಿಷರೂ ಫ್ರೆಂಚರೂ ಡಚ್ಚರೂ ಡೇನರೂ ಕೆರಿಬಿಯನ್ ದ್ವೀಪಗಳಲ್ಲಿ ಆಸಕ್ತರಾಗಿದ್ದರು. 1655ರಲ್ಲಿ ಬ್ರಿಟಿಷರು ಸ್ಪೇನಿಗೆ ಸೇರಿದ್ದ ಜಮೈಕವನ್ನು ಹಿಡಿದುಕೊಂಡರು. ಮುಂದೆ ಹಾಂಡುರಾಸೂ ಇವರ ವಶವಾಯಿತು. ಹೈಟಿಯ ನಿರ್ಜನ ಪ್ರದೇಶ ಫ್ರೆಂಚರ ಕೈಸೇರಿತು.

1664ರಲ್ಲಿ ಇಂಗ್ಲೆಂಡು ನ್ಯೂಇಂಗ್ಲೆಂಡನ್ನು ವಶಪಡಿಸಿಕೊಂಡಿತು. ಅಕಾಡಿಯ, ನ್ಯೂಫೌಂಡ್‌ಲೆಂಡ್, ಹಡ್ಸನ್ ಕೊಲ್ಲಿಯ ಬಳಿಯ ರೂಪರ್ಟ್ಸ್‌ಲೆಂಡ್ ಇವುಗಳ ಮೇಲಣ ಸ್ವಾಮ್ಯವನ್ನು ಫ್ರೆಂಚರಿಂದ ಪಡೆದುಕೊಂಡಿತು. 1763ರಲ್ಲಿ ಫ್ರೆಂಚರು ಮಿಸಿಸಿಪ್ಪಿ ನದಿಯ ಪೂರ್ವದ ಪ್ರದೇಶವನ್ನು ಇಂಗ್ಲಿಷರಿಗೂ ಪಶ್ಚಿಮದ್ದನ್ನು ಸ್ಪೇನಿಗೂ ಬಿಟ್ಟುಕೊಟ್ಟರು. ಬ್ರಿಟಿಷರು ಫ್ಲಾರಿಡವನ್ನು ಸ್ಪೇನಿನಿಂದ ಕಿತ್ತುಕೊಂಡರು. ಅಮೆರಿಕನ್ ಕ್ರಾಂತಿಯಾದ ಮೇಲೆ 1783ರಲ್ಲಿ ಕೆನಡದ ದಕ್ಷಿಣಕ್ಕೂ ಮಿಸಿಸಿಪ್ಪಿಯ ಪೂರ್ವಕ್ಕೂ ಇದ್ದ ಪ್ರದೇಶ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿತು. ಸ್ಪೇನು ಫ್ಲಾರಿಡವನ್ನು ಮತ್ತೆ ಗೆದ್ದಿತು. ಫ್ರಾನ್ಸಿನ ನೆಪೋಲಿಯನ್ 1800ರಲ್ಲಿ ಲವೀಜಿಯಾನವನ್ನು ಫ್ರೆಂಚರಿಂದ ಗೆದ್ದುಕೊಂಡ. ಆದರೆ ಹೈಟಿಯಲ್ಲೆದ್ದ ದಂಗೆಯಿಂದ ಅಮೆರಿಕದಲ್ಲಿ ವಸಾಹತು ಕಟ್ಟುವ ಕನಸಿಗೆ ಕಲ್ಲು ಬಿತ್ತು. ಕೊನೆಗೆ ಹೈಟಿ ಹಾಗೂ ಡಾಮಿನಿಕನ್ ಗಣರಾಜ್ಯಗಳು ಹುಟ್ಟಿದವು. ಅಮೆರಿಕ ಸಂಯುಕ್ತ ಸಂಸ್ಥಾನ 1803ರಲ್ಲಿ ಲವೀಸಿಯಾನವನ್ನು ಫ್ರಾನ್ಸಿನಿಂದ ಕೊಂಡುಕೊಂಡಿತು. ಟೆಕ್ಸಸ್ ಮಾತ್ರ ಸ್ಪೇನಿನವರ ವಶದಲ್ಲೇ ಇತ್ತು.

1810ರಿಂದ ಮುಂದೆ ಕ್ರಾಂತಿಯ ಫಲವಾಗಿ ಸ್ಪೇನಿನ ಅಮೆರಿಕನ್ ವಸಾಹತುಗಳು ಒಂದೊಂದಾಗಿ ಕೈಬಿಟ್ಟುವು. ಮೆಕ್ಸಿಕೊ, ಗ್ವಾಟೆಮಾಲ, ಎಲ್ ಸಾಲ್ವಡಾರ್, ಹಾಂಡುರಾಸ್, ನಿಕರಾಗ್ವ, ಕಾಸ್ಟರೀಕಗಳು ಉದ್ಭವಿಸಿದುವು.

1835ರಲ್ಲಿ ಟೆಕ್ಸಸಿನ ವಲಸೆಗಾರರು ಬಂಡಾಯವೆದ್ದು, ಸ್ವತಂತ್ರ್ಯರಾಗಿ 1845ರಲ್ಲಿ ಸಂಯುಕ್ತ ಸಂಸ್ಥಾನವನ್ನು ಸೇರಿದರು. ಅಮೆರಿಕ ಸಂಯುಕ್ತ ಸಂಸ್ಥಾನಕ್ಕೂ ಮೆಕ್ಸಿಕೊವಿಗೂ ನಡೆದ ಯುದ್ಧದ ಪರಿಣಾಮವಾಗಿ ಟೆಕ್ಸಸ್ ಮೇಲಣ ಅಧಿಕಾರವನ್ನು ಮೆಕ್ಸಿಕೊ ಬಿಟ್ಟುಕೊಟ್ಟದ್ದಲ್ಲದೆ ನ್ಯೂ ಮೆಕ್ಸಿಕೊವನ್ನೂ ಉತ್ತರ ಕ್ಯಾಲಿಫೋರ್ನಿಯವನ್ನೂ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಬಿಟ್ಟುಕೊಟ್ಟಿತು. ಗಿಲಾ ನದಿಯ ದಕ್ಷಿಣಕ್ಕಿರುವ ಗ್ಯಾಡ್ಸ್‌ಡನ್‌ನನ್ನು 1853ರಲ್ಲಿ ಸಂಯುಕ್ತ ಸಂಸ್ಥಾನ ಪಡೆದುಕೊಂಡಿತು.

ಅಮೆರಿಕ ಸಂಯುಕ್ತ ಸಂಸ್ಥಾನಕ್ಕೂ ಉತ್ತರದ ಬ್ರಿಟಿಷ್ ಪ್ರಾಂತ್ಯಗಳಿಗೂ ನಡುವಣ ಗಡಿರೇಖೆಯನ್ನು 49ನೆಯ ಅಕ್ಷಾಂಶದ ಉದ್ದಕ್ಕೂ ಎಳೆಯಲಾಯಿತು (1846). ಅಲಾಸ್ಕದ ಗಡಿಯ ಬಗ್ಗೆ ರಷ್ಯಕ್ಕೂ ಬ್ರಿಟನ್ನಿಗೂ 1825ರಲ್ಲಿ ಒಪ್ಪಂದವಾಗಿತ್ತು. 1867ರಲ್ಲಿ ರಷ್ಯ ಅಲಾಸ್ಕವನ್ನು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಮಾರಿತು.

1860ರಿಂದ ಮುಂದಕ್ಕೆ ಬ್ರಿಟನ್ ಪ್ರಾಂತ್ಯಗಳಲ್ಲೂ ಬದಲಾವಣೆಗಳಾದವು. ನೊವಸ್ಕಾಷವೂ ನ್ಯೂಬನ್ಸ್‌ವಿಕ್ಕೂ ಕೆನಡವನ್ನು ಸೇರಿದುವು. ಹಡ್ಸನ್ ಬೇ ಕಂಪನಿಗೆ ಸೇರಿದ್ದ ರೂಪರ್ಟ್ಸ್‌ಲೆಂಡ್, ಬ್ರಿಟಿಷ್ ಕೊಲಂಬಿಯ, ಪ್ರಿನ್ಸ್ ಎಡ್ವರ್ಡ್ ದ್ವೀಪ, ನ್ಯೂಫೌಂಡ್‌ಲೆಂಡ್, ಲಾಬ್ರಡಾರ್ ಇವೂ ಕೆನಡ ಒಕ್ಕೂಟಕ್ಕೆ ಸೇರಿದವು.

1898ರಲ್ಲಿ ಸ್ಪೇನಿಗೂ ಅಮೆರಿಕಕ್ಕೂ ಯುದ್ಧ ನಡೆದಾಗ ಕ್ಯೂಬ ಸ್ಪೇನಿನಿಂದ ಸ್ವತಂತ್ರ್ಯ ಗೊಂಡಿತು. ಪೋರ್ಟೊರಿಕೊವೂ ಗ್ವಾಮ್, ಫಿಲಿಪೀನ್‌ಗಳೂ ಅಮೆರಿಕ ಸಂಯುಕ್ತ ಸಂಸ್ಥಾನದ ವಶವಾದವು. ಪನಾಮ ಕೊಲಂಬಿಯದಿಂದ ಬೇರ್ಪಟ್ಟು ಸ್ವಾತಂತ್ರ್ಯ ಘೋಷಿಸಿಕೊಂಡಿತು. 1917ರಲ್ಲಿ ಡೆನ್ಮಾರ್ಕಿನಿಂದ ವರ್ಜಿನ್ ದ್ವೀಪಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಕೊಂಡುಕೊಂಡಿತು. ಕಾಮನ್‌ವೆಲ್ತ್ ರಾಷ್ಟ್ರಕೂಟದೊಳಗೆ ವೆಸ್ಟ್ ಇಂಡೀಸ್ ಸಂಯುಕ್ತರಾಷ್ಟ್ರ 1958ರಲ್ಲಿ ಸ್ಥಾಪಿತವಾಗಿದ್ದು, 1962ರಲ್ಲಿ ಇದು ಮುರಿದುಹೋಯಿತು.

ಬಹುತೇಕ ಐರೋಪ್ಯರಿಂದಲೇ ಕೂಡಿರುವ ಉತ್ತರ ಅಮೆರಿಕದ ಹಿರಿಯ ದೇಶಗಳ ಜೀವನವಿಧಾನ ಹಾಗೂ ಸಂಸ್ಕೃತಿಗಳು ಐರೋಪ್ಯರ ವಿಧಾನ ಹಾಗೂ ಸಂಸ್ಕೃತಿಗಳಿಂದಲೇ ಬಂದಿದ್ದರೂ ಈಗ ಅವು ವಿಶಿಷ್ಟರೀತಿಯಲ್ಲಿ ಬೆಳೆಯುತ್ತಿವೆ.

ಉತ್ತರ ಅಮೆರಿಕ ದೇಶಗಳ ಇತಿಹಾಸದ ವಿವರಗಳ ಬಗ್ಗೆ ಆಯಾ ದೇಶಗಳ ಶೀರ್ಷಿಕೆಗಳನ್ನು ನೋಡಿ. (ಎಂ.ಕೆ.ಬಿ.)

**ಉತ್ತರ ಅಮೆರಿಕದ ಪುರಾತತ್ತ್ವ:** 1936ರಲ್ಲಿ ಪ್ರಾಕ್ತನ ಶಾಸ್ತ್ರಜ್ಞರು ನ್ಯೂ ಮೆಕ್ಸಿಕೊ ಪ್ರಾಂತ್ಯದ ಫಲ್ಸಮ್ ಎಂಬಲ್ಲಿ ಅಳಿದ ಕಾಡೆಮ್ಮೆಗಳ ಅವಶೇಷಗಳೊಂದಿಗೆ ಕಲ್ಲಿನ ಆಯುಧಗಳನ್ನು ಕಂಡುಹಿಡಿಯುವವರೆಗೂ ಅಮೆರಿಕದಲ್ಲಿ ಮಾನವ ಕೇವಲ ಕೆಲವು ಸಹಸ್ರ ವರ್ಷಗಳಿಂದ ಮಾತ್ರ ವಾಸಿಸುತ್ತಿದ್ದನೆಂದು ನಂಬಲಾಗಿತ್ತು. ಈ ಸಂಶೋಧನೆಯಿಂದ ದೊರಕಿದ ಮಾಹಿತಿಗಳು ಅತ್ಯಂತ ನೂತನ (ಪ್ಲೈಸ್ಟೊಸೀನ್) ಯುಗದ ಅಂತ್ಯಕಾಲದಿಂದ ಮಾನವರು ಇಲ್ಲಿ ಬೇಟೆಯಾಡಿ ಆಹಾರ ಸಂಗ್ರಹಿಸುವ ಹಂತದಲ್ಲಿದ್ದರೆಂದೂ ಮುಂದೆ ಕೆಲವರು ಏಷ್ಯದ ಸೈಬೀರಿಯದಿಂದ ಬೆರಿಂಗ್ ಜಲಸಂಧಿ ಮತ್ತು ಅಲಾಸ್ಕ ಮಾರ್ಗವಾಗಿ ಅಮೆರಿಕಕ್ಕೆ ಬಂದರೆಂದೂ ನಿರೂಪಿಸಿದೆ. ಆ ವೇಳೆಗೆ ಯುರೇಷ್ಯದಲ್ಲಿ ಆಧುನಿಕ ಮಾನವ (ಹೋಮೋಸೇಪಿಯನ್) ನೆಲೆಸಿದ್ದು ಪೂರ್ವಶಿಲಾಯುಗದ ಅಂತ್ಯಕಾಲದಲ್ಲಿ ಮುಂದುವರಿದಿದ್ದ ಸಂಸ್ಕೃತಿಯನ್ನನುಸರಿಸುತ್ತಿದ್ದುದ ರಿಂದ ಉತ್ತರ ಅಮೆರಿಕದಲ್ಲೂ ಮೊದಲಿನ ಕೈಗೊಡಲಿಯ ಅಥವಾ ತತ್ಸಮಾನಕಾಲದ ಇತರ ಸಂಸ್ಕೃತಿ ಕಂಡುಬರದಿರುವುದು ಸಹಜವಾಗಿದೆ. ಏಷ್ಯ, ಅಮೆರಿಕ ಖಂಡಗಳ ಮಧ್ಯೆ ಇರುವ ಬೆರಿಂಗ್ ಜಲಸಂಧಿಯ ಅಗಲ 90 ಕಿಮೀ. ಹಿಮಯುಗದಲ್ಲಿ ಸಮುದ್ರಮಟ್ಟ ತಗ್ಗಿದಾಗ ಇವುಗಳ ಮಧ್ಯೆ ಭೂಸೇತುವೆ ಏರ್ಪಟ್ಟು ಏಷ್ಯದ ಮಾನವನ ಮತ್ತು ಪ್ರಾಣಿಗಳ ಸಂತತಿಗಳು ಈ ಹೊಸ ಭೂ ಭಾಗವನ್ನು ಪ್ರವೇಶಿಸಿರಬಹುದೆಂದು ತಿಳಿದುಬಂದಿದೆ.

ಉತ್ತರ ಅಮೆರಿಕದಲ್ಲಿತ್ತೆಂದು ಈವರೆಗೆ ತಿಳಿದುಬಂದಿರುವ ಅತ್ಯಂತ ಪ್ರಾಚೀನ ಸಂಸ್ಕೃತಿಯ ಜನರು ಆಹಾರ ಸಂಗ್ರಹಣೆಯ ಹಂತದಲ್ಲಿದ್ದವರು. ಇವರು ಚಕಮಕಿಕಲ್ಲಿನ ತುಂಡು ಕತ್ತಿಗಳನ್ನೂ ಬರೆಯುವ ಆಯುಧಗಳನ್ನೂ ಚಾಕು ಮೊನೆಗಳನ್ನೂ ಬಳಸುತ್ತಿದ್ದರು. ಆ ಸಂಸ್ಕೃತಿಯ ಮಾಹಿತಿಗಳು ನವಾಡದ ತ್ರುಲಿಸ್ಪ್ರಿಂಗ್ ಮತ್ತು ಟೆಕ್ಸಾಸ್ ಫ್ರೀಸೆನ್‌ಹ್ಯಾನ್ ಗುಹೆಯಲ್ಲಿ ಅತ್ಯಂತ ನೂತನ ಯುಗದ ಪ್ರಾಣಿಗಳ ಅವಶೇಷಗಳೊಂದಿಗೆ ದೊರಕಿವೆ. ಈ ಆಯುಧಗಳು ಯಾವುದೇ ನಿರ್ದಿಷ್ಟ ಉಪಯೋಗಕ್ಕೂ ಮಾಡಿದವುಗಳಾಗಿರಲಿಲ್ಲ.

ಅನಂತರ ವಿಸ್ಕಾನ್ಸಿನ್ ಹಿಮಯುಗ ಕಾಲದಲ್ಲಿ ಉತ್ತರ ಅಮೆರಿಕದ ಆದಿಮಾನವರು ದೊಡ್ಡ ಪ್ರಾಣಿಗಳ ಬೇಟೆಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಹಿಮಯುಗದ ಆನೆ, ಒಂಟೆ ಮತ್ತು ಕಾಡುಕೋಣಗಳನ್ನು ಕೊಂದು ಜೀವಿಸುತ್ತಿದ್ದರು. ಆ ಜನರ ಆಯುಧಗಳಲ್ಲಿ ವಿಶಿಷ್ಟವಾದುವೆಂದರೆ 2–3 ಅಂಗುಲ ಉದ್ದದ ಈಟಿಯಾಕಾರದಲ್ಲಿದ್ದು ಮುಂಚಾಚಿ

ಕೊಂಡಿರುತ್ತಿದ್ದ ಮೊನೆಗಳು ಮತ್ತು ಒರೆಯುವ ಆಯುಧಗಳು. ಕ್ಯಾಲರಾಡೊ, ಟೆಕ್ಸಾಸ್ ಮತ್ತು ನ್ಯೂ ಮೆಕ್ಸಿಕೊ ಪ್ರದೇಶಗಳಲ್ಲಿ ಬಹುವಾಗಿ ದೊರಕಿರುವ ಈ ಅವಶೇಷಗಳು ಸಾಂಡಿಯ ಗುಹೆಯಲ್ಲಿ ವಿಶೇಷವಾಗಿರುವುದರಿಂದ ಈ ಸಂಸ್ಕೃತಿಯನ್ನು ಸಾಂಡಿಯ ಸಂಸ್ಕೃತಿಯೆಂದೂ ಈ ಮೊನೆಗಳನ್ನು ಸಾಂಡಿಯ ಮೊನೆಗಳೆಂದೂ ಕರೆಯಲಾಗಿದೆ. ಈ ಸಂಸ್ಕೃತಿ ಬಹುಶಃ ಪ್ರ.ಶ.ಪೂ. 15,000 ವರ್ಷಗಳಷ್ಟು ಹಳೆಯದು.

ಅನಂತರದ ಸಂಸ್ಕೃತಿಗಳಲ್ಲಿ ಕ್ಲೋವಿಸ್ ಮೊನೆಗಳು ವಿಶಿಷ್ಟವಾಗಿರುವ ಕ್ಲೋವಿಸ್ ಸಂಸ್ಕೃತಿಯ ಅವಶೇಷಗಳು ರಾಕಿ ಪರ್ವತದ ಪೂರ್ವದಲ್ಲಿ ಎಲ್ಲ ಪ್ರದೇಶಗಳಲ್ಲೂ ಮೈದಾನ ಪ್ರದೇಶಗಳಲ್ಲೂ ಕಂಡುಬಂದಿವೆ. ಈಟಿಯಾಕಾರದ ಈ ಮೊನೆಗಳ ಉದ್ದ 76ಮಿಮೀ. ಅಥವಾ ಅದಕ್ಕೂ ಹೆಚ್ಚು. ಇವುಗಳ ಪಾರ್ಶ್ವಗಳೆರಡೂ ಸಮಾನಾಂತರವಾಗಿಯೋ ಅಲ್ಪಸ್ವಲ್ಪ ಬಾಗಿದಂತೆಯೋ ಇರುತ್ತಿದ್ದುವು. ಈ ಸಂಸ್ಕೃತಿಯ ಕಾಲವನ್ನು ನಿರ್ಣಯಿಸಲಾಗಿಲ್ಲ. ಆದರೆ ಇದರ ಅನಂತರದ ಫಾಲ್ಸಮ್ ಸಂಸ್ಕೃತಿ ಸು. 10,000 ವರ್ಷ ಹಳತೆಂದು ಇಂಗಾಲ–14 ಕಾಲನಿರ್ಧರಣ ರೀತಿಯಿಂದ ತಿಳಿದುಬಂದಿರುವುದರಿಂದ ಈ ಸಂಸ್ಕೃತಿ ಅದಕ್ಕೂ ಹಳತೆಂದು ಖಂಡಿತವಾಗಿ ಹೇಳಬಹುದು.

ಫಾಲ್ಸಮ್ ಸಂಸ್ಕೃತಿ ಉತ್ತರ ಅಮೆರಿಕದ ಪ್ರಾಕ್ತನ ಸಂಸ್ಕೃತಿಗಳಲ್ಲೆಲ್ಲ ಹೆಚ್ಚು ಪ್ರಸಿದ್ಧ. ನ್ಯೂ ಮೆಕ್ಸಿಕೊದಲ್ಲಿರುವ ಈ ನೆಲೆಯಲ್ಲಿನ ಅವಶೇಷಗಳ ಪೈಕಿ ಈಟಿಯಾಕಾರದ ಸುಂದರ ಮೊನೆಗಳು ಸಿಕ್ಕಿವೆ. ಈ ಮೊನೆಗಳ ಅಡಿಭಾಗ ಅರ್ಧನಿಮ್ನ ರೇಖೆ (ಕಾನ್‌ಕೇವ್) ಅಂದರೆ ಆಚೀಚೆ ಕಿವಿಯನ್ನು ಹೋಲುವ ಉಬ್ಬು, ಇವುಗಳ ಉದ್ದ ಸು. 50ಮಿಮೀ. ಇವುಗಳ ಉದ್ದಕ್ಕೂ ಅರೆಗೊಳವೆಯಾಕಾರದ ತಗ್ಗುಗಳಿರುವುದರಿಂದ ನೋಡಲು ಹೆಚ್ಚು ಸುಂದರ. ಬೇಟೆಯ ಭರ್ಜಿ ಮೊನೆಗಳಾಗಿ ಇವುಗಳ ಉಪಯೋಗ. ಅಳಿದುಹೋದ ಪ್ಲಿಸ್ಟೋಸೀನ್ ಯುಗದ ಪ್ರಾಣಿಗಳ ಅವಶೇಷಗಳೊಂದಿಗೆ ದೊರಕಿರುವುದರಿಂದಲೂ ಇಂಗಾಲ–14 ರೀತಿಯಿಂದ ಕಾಲನಿರ್ಣಯ ಮಾಡಿರುವುದರಿಂದಲೂ ಈ ಸಂಸ್ಕೃತಿ ಪ್ರ.ಶ.ಪೂ. 10,000ದ್ದು ಅಥವಾ ಇನ್ನೂ ಮೊದಲಿನದು ಎಂಬುದು ನಿಸ್ಸಂದೇಹ. ಈ ಸಂಸ್ಕೃತಿಯ ಅವಶೇಷಗಳು ಉತ್ತರ ಅಮೆರಿಕದ ದೊಡ್ಡ ಮೈದಾನ ಪ್ರದೇಶಗಳಲ್ಲಿ ಮಾತ್ರ ಕಂಡುಬಂದಿವೆ.

ಫಾಲ್ಸಮ್ ಸಂಸ್ಕೃತಿಯ ಅನಂತರದ ಅದೇ ಬಗೆಯ ಆದರೆ ಅಷ್ಟು ಸುಂದರವಲ್ಲದ ಮೊನೆಗಳನ್ನುಪಯೋಗಿಸುತ್ತಿದ್ದ ಸಂಸ್ಕೃತಿಯ ಅವಶೇಷಗಳು ಇನ್ನೂ ಹಲವೆಡೆಗಳಲ್ಲಿ ದೊರಕಿವೆ. ಇವುಗಳಲ್ಲಿ ಅಂಗೊಸ್ಟುರ, ಸ್ಕಾಟ್ಸ್‌ಬಫ್, ಪ್ಲೇನ್‌ವ್ಯೂ ಮತ್ತು ಈಡನ್ ಸಂಸ್ಕೃತಿಗಳು ಗಮನಾರ್ಹ, ಇವುಗಳ ಕಾಲ ಸ್ಥೂಲವಾಗಿ ಪ್ರ.ಶ.ಪೂ. 4000–2000. ಪ್ಲೇನ್ ವ್ಯೂ ಸಂಸ್ಕೃತಿಗೆ ಸೇರಿದ ಮೊನೆಗಳು ಕ್ಲೋವಿಸ್ ಮೊನೆಗಳನ್ನೇ ಹೋಲುತ್ತವೆ. ಆದರೆ ಅವುಗಳ ಮೇಲೆ ಅರ್ಧ ನಿಮ್ನರೇಖೆಯ ತಗ್ಗುಗಳಿಲ್ಲ. ಸ್ಕಾಟ್ಸ್‌ಬಫ್ ಮೊನೆಗಳಲ್ಲಿ ಸಮಾನಾಂತರದ ಚಕ್ಕೆಗಳನ್ನು ತೆಗೆದಿದೆ. ಅವುಗಳಲ್ಲಿ ಅಗಲವಾದ ಅಡಿ ಭಾಗಗಳಿವೆ. ಈಡನ್ ಮೊನೆಗಳು ಹೆಚ್ಚು ಉದ್ದ. ಅವುಗಳ ಒಂದು ಪಾರ್ಶ್ವ ಭುಜಾಕಾರ. ಚಾಕುಗಳಂತೆ ಅವುಗಳ ಉಪಯೋಗ.

ಕ್ರಮೇಣ ಹಿಮಗಡ್ಡೆ ಕರಗಿದಾಗ ತೆರವಾದ ಮಾರ್ಗವನ್ನನುಸರಿಸಿದ ಈ ಜನ ಉತ್ತರ ಅಮೆರಿಕದ ಪೂರ್ವ ದಕ್ಷಿಣ ಭಾಗಗಳಲ್ಲಿ ಹರಡಿದರು. ಉತ್ತರ ಅಮೆರಿಕದ ಪೂರ್ವ ಪ್ರದೇಶಗಳಲ್ಲಿ ಹರಡಿದ ಸಂಸ್ಕೃತಿಯನ್ನು ಪುರಾ ಸಂಸ್ಕೃತಿ (ಆರ್ಕೇಯಿಕ್)ಯೆಂದು ಹೆಸರಿಸಲಾಗಿದೆ. ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ. 1ನೆಯ ಸಹಸ್ರಮಾನವೆಂಬುದು ಪುರಾತತ್ತ್ವಜ್ಞರ ನಿರ್ಣಯ. ನಿಸರ್ಗ ಸಹಜವಾದ ಸಸ್ಯಮೂಲ ಆಹಾರ ಸಂಗ್ರಹಣೆ, ಬೇಟೆ ಮತ್ತು ಮೀನುಗಾರಿಕೆಗಳಿಂದ ಈ ಜನರ ಜೀವನ ಸಾಗುತ್ತಿತ್ತು. ಕೆಲವಾರು ಆಯುಧಗಳನ್ನು ನುಣುಪು ಮಾಡಲಾಗುತ್ತಿತ್ತು. ತಾಮ್ರದಿಂದ ಮಾಡಿದ್ದ ಕೊರೆಯುವ ಆಯುಧಗಳನ್ನು ಇವರು ವಿರಳವಾಗಿ ಬಳಸುತ್ತಿದ್ದರು. ಚಾಕು ಮತ್ತು ಮುಂಚಾಚಿದ ಭರ್ಜಿ ಮೊನೆಗಳನ್ನೂ ಹರಿತವಾದ ಆಯುಧಗಳನ್ನೂ ಇವರು ಬಳಸುತ್ತಿದ್ದರೆಂಬುದೂ ಕಂಡುಬಂದಿದೆ. ಈ ಜನರ ಆಯುಧಗಳ ಮೊನೆಗಳು ದೊಡ್ಡವು. ಅಡಿಯಲ್ಲಿ ಹಿಡಿ. ಇವರು ನಾಯಿ ಸಾಕುತ್ತಿದ್ದರು. ವ್ಯಾಪಾರವೂ ತಕ್ಕಮಟ್ಟಿಗೆ ರೂಢಿಯಲ್ಲಿತ್ತು. ಸತ್ತವರ ದೇಹಗಳಿಗೆ ಕೆಮ್ಮಣ್ಣು ಲೇಪಿಸಿ, ಈ ಹೆಣಗಳನ್ನು ಗುಂಡಿಗಳಲ್ಲಿ ಕೂರಿಸಿಯೊ ಮಡಿಸಿಟ್ಟೊ ಹೂಳುವುದು ಇವರ ಪದ್ಧತಿ.

ರಾಕಿ ಪರ್ವತಗಳ ಪಶ್ಚಿಮದ ಮೈದಾನ ಪ್ರದೇಶಗಳಲ್ಲೂ ನೈರುತ್ಯ ಭಾಗಗಳಲ್ಲೂ ಇದ್ದ ಜನಕ್ಕೆ ವ್ಯವಸಾಯ ಗೊತ್ತಿರಲಿಲ್ಲ. ಕಾಡಿನ ಗಿಡಮರಗಳಿಂದ ಆಹಾರ ಸಂಗ್ರಹಿಸಿಯೂ ಆಗಾಗ ಕಾಡುಕೋಣ, ಜಿಂಕೆ, ಕಾಡುಕುರಿ, ತೋಳ, ಇಲಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡಿಯೂ ಬದುಕುತ್ತಿದ್ದರು. ಬೇಟೆಗೆ ಭರ್ಜಿಗಳನ್ನೂ ಬಲೆಗಳನ್ನೂ ಬಳಸುವುದು ರೂಢಿ. ಇವರಲ್ಲಿ ಕಲ್ಲಿನ ಮೊನೆಗಳಿಗೆ ಪ್ರಾಮುಖ್ಯವಿರಲಿಲ್ಲ. ತುಂಡು ಕತ್ತಿ, ಒರೆಯುವ ಆಯುಧ, ಅರೆಯುವ ಕಲ್ಲು, ಇವು ಪ್ರಮುಖ ಉಪಕರಣಗಳು. ವಾಸ ಸಾಮಾನ್ಯವಾಗಿ ಗುಹೆಗಳಲ್ಲಿ–ಆದ್ದರಿಂದ ಇವರ ಅವಶೇಷಗಳು ಸುರಕ್ಷಿತವಾಗಿ ದೊರಕಿವೆ. ಈ ಜನರ ಸಂಸ್ಕೃತಿಗಳನ್ನು ಮರುಭೂಮಿ (ಡೆಸರ್ಟ್) ಸಂಸ್ಕೃತಿಗಳೆಂದು ಕರೆಯಲಾಗಿದೆ. ಪ್ರ.ಶ. ಪೂ.2000ದಲ್ಲಿ ಪ್ರಾರಂಭವಾಗಿ ಇತ್ತೀಚಿನವರೆಗೂ ಇವು ರೂಢಿಯಲ್ಲಿದ್ದವು.

ನವಾಡದ ತ್ವುಲಿಸ್ಪ್ರಿಂಗ್ ಎಂಬಲ್ಲಿ ಸತ್ತ ಪ್ರಾಣಿಗಳ ಅವಶೇಷಗಳೊಂದಿಗೆ ಚಕ್ಕೆ ಕಲ್ಲಿನ ಮತ್ತು ಕೆಲವು ಒರಟು ಕಲ್ಲಿನ ಆಯುಧಗಳೂ ದೊರಕಿವೆ. ಅದೇ ಪ್ರದೇಶದ ಜಿಪ್ಸಮ್ ಗುಹೆಯಲ್ಲಿ ದೊರಕಿದ ಆಯುಧಗಳೂ ಉಪಕರಣಗಳೂ ಸತ್ತ ಪ್ರಾಣಿಗಳ ಅವಶೇಷಗಳೂ ಇಂಗಾಲ–14 ಕಾಲಗಣನೆಯ ರೀತ್ಯಾ 10,455–8,533 ವರ್ಷಗಳಷ್ಟು ಪುರಾತನವೆನಿಸಿದೆ. ಯೂಟಾ ಪ್ರಾಂತ್ಯದ ಡೇಂಜರ್ ಗುಹೆಯಲ್ಲಿ ದೊರಕಿದ ಮೊನೆಗಳೂ ಅರೆಯುವ ಕಲ್ಲುಗಳೂ ಪ್ರ.ಶ.ಪೂ. 9,000 ವರ್ಷಗಳಷ್ಟು ಹಳೆಯವು. ಅರಿಜೋನ ಮತ್ತು ನ್ಯೂ ಮೆಕ್ಸಿಕೊಗಳಲ್ಲಿನ ಕೊಚೀಸ್ ಸಂಸ್ಕೃತಿಯಲ್ಲಿ ಅರೆಯುವ ಕಲ್ಲುಗಳು ಪ್ರಮುಖವಾದವು. ಅಳಿದ ಜಾತಿಯ ಆನೆ, ಕುದುರೆ ಮತ್ತು ಕಾಡೆಮ್ಮೆಗಳ ಅವಶೇಷಗಳೂ ದೊರಕಿವೆ.

ಉತ್ತರ ಅಮೆರಿಕದ ವಾಯವ್ಯ ಪ್ರದೇಶಗಳಲ್ಲಿ ಬೇಟೆಯೇ ಮುಖ್ಯ ಕಸುಬಾಗಿದ್ದ ಹಾಗೂ ಮೀನುಗಾರಿಕೆಯಲ್ಲೂ ಪರಿಶ್ರಮ ಪಡೆದಿದ್ದು, ಜಿಂಕೆ ಕೊಂಬಿನ ಮತ್ತು ಕಲ್ಲಿನ ಆಯುಧಗಳನ್ನು ಉಪಯೋಗಿಸುತ್ತಿದ್ದ ಸಂಸ್ಕೃತಿಗಳ ಅವಶೇಷಗಳು ಸಿಕ್ಕಿವೆ. ವಾಷಿಂಗ್ಟನ್ ಮತ್ತು ಒರೆಗಾನ್ ಪ್ರದೇಶಗಳಲ್ಲಿ ದೊರಕಿರುವ ಮಾಹಿತಿಗಳ ಕಾಲ ಪ್ರ.ಶ. ಪೂ. 8,000.

ಅಲಾಸ್ಕ ಮತ್ತು ಕೆನಡದ ಉತ್ತರ ಭಾಗಗಳಲ್ಲಿ ಡೆನ್‌ಬಿಗ್ ಎಂದು ಹೆಸರಾದ ಸಂಸ್ಕೃತಿಯ ಮಾಹಿತಿಗಳು ವಿಶೇಷವಾಗಿ ಕಂಡುಬಂದಿವೆ. ಈ ಸಂಸ್ಕೃತಿಯಲ್ಲಿ ವಿಶಿಷ್ಟ ರೀತಿಯ ಆಯುಧಗಳೂ ಅಶ್ರಗ್ರಾಕಾರದ ಚಕ್ಕೆ ಕಲ್ಲಿನಾಯುಧಗಳೂ ಕೊರೆಯುವ ಆಯುಧಗಳೂ ಮುಖ್ಯ. ಪ್ರ.ಶ.ಪೂ. 6,500 ರಷ್ಟು ಇವು ಪುರಾತನ.

ಪಶ್ಚಿಮ ಭಾಗಗಳಲ್ಲಿ ಪ್ರಸಕ್ತಶಕನ ಆದಿಯ ವೇಳೆಗೆ ಮರುಭೂಮಿಯ ಸಂಸ್ಕೃತಿಯ ಪ್ರಭಾವದಿಂದ ಜೋಳದ ವ್ಯವಸಾಯವೇ ಮುಖ್ಯ ಕಸಬಾಗಿದ್ದ ಹಲವಾರು ಪಂಗಡಗಳು ಹುಟ್ಟಿಕೊಂಡುವು. ಈ ಪಂಗಡಗಳಲ್ಲಿ ಆನಸಾಜಿ ಜನ ಎತ್ತರವಾದ ಪ್ರಸ್ಥಭೂಮಿ ಪ್ರದೇಶಗಳಲ್ಲೂ ನೀರಾವರಿಯಿಂದ ಜೋಳದ ವ್ಯವಸಾಯ ಮಾಡುತ್ತಿದ್ದ ಹಹೋಕಮ್ ಜನ ಮರಳ್ಗಾಡು ಪ್ರದೇಶಗಳಲ್ಲೂ ಸಸ್ಯಾಹಾರ ಸಂಗ್ರಹಿಸಿ ಜೀವನ ನಡೆಸುತ್ತಿದ್ದ ಮೊಗೊಲಾನ್–ಮಿಂಬ್ರೆಸ್ ಜನ ಬೆಟ್ಟಗುಡ್ಡ ಪ್ರದೇಶಗಳಲ್ಲೂ ನೆಲೆಸಿದ್ದರು. ಆನಸಾಜಿ ಜನ ಪ್ರ.ಶ. 2ನೆಯ ಶತಮಾನದಿಂದ ಭೂಮಿ ಅಗೆದು ಜೋಳಬೆಳೆದು ಅರೆದು ತಿನ್ನುತ್ತಿದ್ದರು. ಕಾಡಿನಲ್ಲಿ ಬೆಳೆದ ಸಸ್ಯ, ಕುಂಬಳಕಾಯಿ, ಬೇಟೆಯಲ್ಲಿ ಕೊಂದ ಸಣ್ಣ ಕಾಡುಪ್ರಾಣಿಗಳು ಇವರ ಆಹಾರ. ಜೇಡಿಮಣ್ಣಿನ ಕೊಳವೆಗಳಲ್ಲಿ ಹೊಗೆಸೊಪ್ಪು ಸೇದುವುದುವರ ಚಟ. ಇವರಿಗೆ ಮಣ್ಣಿನ ಪಾತ್ರೆಗಳ ಉಪಯೋಗ ಗೊತ್ತಿರಲಿಲ್ಲ. ಗುಹೆಗಳಲ್ಲಿ ಚರ್ಮದ ಅರಿವೆಗಳಿಂದ ಶವಗಳನ್ನು ಸುತ್ತಿ ಹೂಳುವುದು ಇವರ ಪದ್ಧತಿ. ಸಣ್ಣ ಗ್ರಾಮಗಳಲ್ಲಿ ವರ್ತುಲಾಕಾರದ ಗುಡಿಸಲುಗಳಲ್ಲಿ ಇವರ ವಾಸ. ಪ್ರ. ಶ. 500–700ರ ಸುಮಾರಿನಲ್ಲಿ ಹುರುಳಿ ವ್ಯವಸಾಯವೂ ಬಾತುಕೋಳಿ ಸಾಕಣೆಯೂ ಬಳಕೆಗೆ ಬಂದವು. ಬಿಲ್ಲುಬಾಣಗಳ ಉಪಯೋಗ ಆರಂಭವಾಯಿತು. ಕೊನೆಗೆ ಮಣ್ಣಿನ ಪಾತ್ರೆಗಳೂ ಬಳಕೆಗೆ ಬಂದವು. ಪ್ವೆಬ್ಲೊ ಸಂಸ್ಕೃತಿ ಕಾಲದಲ್ಲಿನ (700–1300) ಗ್ರಾಮಗಳು ಹೆಚ್ಚು ವಿಶಾಲ. ಬೆಟ್ಟಗಳ ತಪ್ಪಲುಗಳಂತೂ ಜನಭರಿತ. ಒಂದರಿಂದ ನಾಲ್ಕು ಅಂತಸ್ತುಗಳ ಸುಮಾರು ಒಂದು ಸಾವಿರ ಕೋಣೆಗಳಿರುತ್ತಿದ್ದ ವಿಶಾಲ ಭವನಗಳಿದ್ದವು. ಪ್ವೆಬ್ಲೊ ಸಂಸ್ಕೃತಿಯ ಅಂತ್ಯಕಾಲದಲ್ಲಿ (ಪ್ರ.ಶ. 1300–1700) ಆನಸಾಜಿ ಜನರಿನ್ನೂ ಶಿಲಾಯುಗ ಸಂಸ್ಕೃತಿ ಮಟ್ಟದಲ್ಲೇ ಇದ್ದರೂ ಸ್ಪೇನಿನ ಜನರ ಪ್ರವೇಶದಿಂದ ಇಲ್ಲಿ ಐರೋಪ್ಯ ಸಂಸ್ಕೃತಿಯ ಪ್ರಭಾವ ಕ್ರಮೇಣ ಹರಡಿತು.

ಪೂರ್ವದ ಪ್ರದೇಶಗಳಲ್ಲಿ ಪುರಾ ಸಂಸ್ಕೃತಿ ಕ್ರಮೇಣ ಕೊನೆಗೊಂಡು ಬಹುಶಃ ಪ್ರ.ಶ.ಪೂ 500ರ ಮಧ್ಯಕಾಲದಲ್ಲಿ ಮನ್ನ (ಮುಡ್‌ಲ್ಯಾಂಡ್) ಸಂಸ್ಕೃತಿ ಬೆಳೆಯಿತು. ಉತ್ತರ ದಿಕ್ಕಿನಿಂದ ಮಣ್ಣಿನ ಪಾತ್ರೆಗಳ ತಯಾರಿಕೆಯನ್ನೂ ಸಮಾಧಿ ದಿಬ್ಬ ನಿರ್ಮಿಸುವ ವಿಧಾನವನ್ನು ನೈರುತ್ಯ ಪ್ರದೇಶಗಳಿಂದ ಜೋಳದ ವ್ಯವಸಾಯವನ್ನೂ ಈ ಕಾಲದ ಜನ ಕಲಿತರು. ಧೂಮಪಾನವೂ ನೇಯ್ಗೆಯೂ ಇವರಿಗೆ ಗೊತ್ತಿದ್ದವು. ಈ ಗುಂಪಿಗೆ ಸೇರಿದ ಅಡೆನಾ ಸಂಸ್ಕೃತಿ ಒಹಾಯೊ, ಇಂಡಿಯಾನ, ಕೆಂಟಕಿ, ವರ್ಜೀನಿಯ ಮತ್ತು ಪೆನ್ಸಿಲ್ವೇನಿಯದ ಹಲವಾರು ಪ್ರದೇಶಗಳಲ್ಲೂ ಇಲಿನಾಯ್, ಮಿಸಿಸಿಪ್ಪಿ, ಲವೀಸಿಯಾನ, ಫ್ಲಾರಿಡ, ಓಕ್ಲಹಾಮ ಮತ್ತು ನ್ಯೂಯಾರ್ಕ್ ಪ್ರಾಂತ್ಯಗಳಲ್ಲೂ ಹಬ್ಬಿತ್ತು.

ಈ ಪ್ರದೇಶಗಳಲ್ಲಿ ಸು.ಪ್ರ.ಶ. 1000 ದರಲ್ಲಿ ಕಾಡುಪ್ರದೇಶ ಸಂಸ್ಕೃತಿಗಳು ಕೊನೆಗೊಂಡು ಮಧ್ಯ ಸಂಸ್ಕೃತಿ ತಲೆದೋರಿತು. ಈ ಸಂಸ್ಕೃತಿಯಲ್ಲಿ ಅಂಥ ಮುನ್ನಡೆಯೇನೂ ಕಂಡುಬರದಿದ್ದರೂ ಸಾಮಾಜಿಕ ಜೀವನರಂಗದಲ್ಲಿ ಸಾಂಪ್ರದಾಯಿಕತೆ ಬೆಳೆಯಿತು. ಈ ಕಾಲಕ್ಕೆ ಸಂಬಂಧಿಸಿದ ಚಚ್ಚೌಕ ದೇವಾಲಯಗಳ ಹಾಗೂ ಸಾಮೂಹಿಕ ಭವನಗಳ ಅವಶೇಷಗಳು ಹೆಚ್ಚಾಗಿ ಕಂಡುಬಂದಿವೆ. ಈ ರೀತಿಯ ಕಟ್ಟಡದ ಅವಶೇಷವೊಂದು 16 ಎಕರೆ ಭೂಮಿಯನ್ನಾಕ್ರಮಿಸಿಕೊಂಡಿದೆ. ಇದು 330ಮೀ ಉದ್ದ, 216 ಮೀ ಅಗಲ, ಸು. 30ಮೀ ಎತ್ತರ. ಜೇಡಿಮಣ್ಣು, ಕಲ್ಲು, ಶಂಖ, ತಾಮ್ರಗಳ ರೆಕ್ಕೆಯಿರುವ ಸರ್ಪದ ಹಾಗೂ ನೃತ್ಯನಿರತ ಪಕ್ಷಿಮಾನವನ ಶಿಲ್ಪಗಳು ಹೇರಳ.

ಉತ್ತರ ಅಮೆರಿಕದ ಇತರ ಪ್ರದೇಶಗಳಲ್ಲಿ ಬೇಟೆ, ಮೀನುಗಾರಿಕೆ ಮತ್ತು ಆಹಾರ ಸಂಗ್ರಹಣೆಯಿಂದ ಜೀವಿಸುತ್ತಿದ್ದ ಹಿಂದುಳಿದ ಜನಾಂಗಗಳು ಇತ್ತೀಚಿನವರೆಗೂ ಉಳಿದು ಬಂದಿದ್ದವು. ಭಿನ್ನವಾದ ವಾಯುಗುಣವೇ ಮುಂತಾದ ನಾನಾ ಭೌತಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದುದರ ಫಲವಾಗಿ ಈ ವಿವಿಧ ಪ್ರದೇಶಗಳ ಸಂಸ್ಕೃತಿಗಳಲ್ಲಿ ವೈವಿಧ್ಯ ಬೆಳೆಯಿತು. ಇತ್ತೀಚಿನವರೆಗೂ ಇವು ಶಿಲಾಯುಗದ ಹಂತದಲ್ಲೇ ಉಳಿದು ಬಂದಿದ್ದವು. ಸಾಮಾಜಿಕ ವ್ಯವಸ್ಥೆ ಮಾತ್ರ ಸಂಕೀರ್ಣವಾಯಿತು. ಸಮಾಜದಲ್ಲಿ ನಾಯಕ ಮತ್ತು ಶ್ರೀಮಂತ, ಜನಸಾಮಾನ್ಯ ಮತ್ತು ದಾಸ್ಯವರ್ಗಗಳು ರೂಢಿಯಲ್ಲಿದ್ದವು. ಸಾಂಪ್ರದಾಯಿಕ ಆಚರಣೆ ಮತ್ತು ವೈಭವ ಪ್ರದರ್ಶನಗಳಿಗಾಗಿ ಹೆಚ್ಚು ಐಶ್ವರ್ಯದ ಪೋಲಾಗುತ್ತಿತ್ತು. (ಬಿ.ಕೆ.ಜಿ.)

**ಉತ್ತರ ಅಮೆರಿಕದ ಭೂ ವಿನ್ಯಾಸ:** ಶಿಲೆಗಳ ರಚನೆ, ಸಂಯೋಜನೆ ಅವಿತಿರುವ ಭೂಭಾಗದ ಇತಿಹಾಸ ಮತ್ತು ಅವುಗಳ ಪ್ರಸಕ್ತಸ್ಥಿತಿ ಈ ಅಂಶಗಳನ್ನನುಸರಿಸಿ ಉತ್ತರ ಅಮೆರಿಕವನ್ನು ಐದು ವಿಭಾಗಗಳಾಗಿ ವಿಂಗಡಿಸಬಹುದು.

ಕೆನಡಿಯನ್ ಶಾಶ್ವತ ಭೂಖಂಡ: ಈ ಭಾಗದಲ್ಲಿ ಪ್ರಪಂಚದಲ್ಲೇ ಅತ್ಯಂತ ಪುರಾತನ ವೆನಿಸಿದ ಶಿಲೆಗಳನ್ನು ಕಾಣಬಹುದು. ಇವುಗಳಲ್ಲಿ ಬಹುಪಾಲು ಕಣ ಶಿಲೆಗಳ ಸಮುದಾಯ, ರಚನೆಯೂ ಬಹುಕ್ಲಿಷ್ಟ. ಈ ಆಧಾರದ ಮೇಲೆ ಈ ಭೂಭಾಗ ಹಲವಾರು ಬಾರಿ ತೀವ್ರ ತೆರನಾದ ಭೂ ಚಟುವಟಿಕೆಗಳಿಗೆ ಒಳಗಾಗಿತ್ತೆಂದು ಊಹಿಸಬಹುದು. ಪ್ರಸ್ತುತ ಮೇಲ್ಮೈಲಕ್ಷಣ ಭೂಚರಿತ್ರೆಯ ಆದಿಯುಗಗಳಲ್ಲಿ ಉಂಟಾದ ಪರ್ವತಜನ್ಯಶಕ್ತಿಗಳಿಂದಲೇ ಆದುದೆಂದು ಭಾವಿಸಲು ಸಾಧ್ಯವಿಲ್ಲ. ಅದು ಇತ್ತೀಚಿನ ಯುಗಗಳಲ್ಲಿ ಕಂಡುಬಂದ ಹಿಮನದಿಗಳ ಕಾರ್ಯಾಚರಣೆಯಿಂದಾದುದು. ಪ್ಲಿಸ್ಟೊಸೀನ್ ಕಾಲದಲ್ಲಿ ಉತ್ತರ ಅಮೆರಿಕದ ಇಡೀ ಉತ್ತರ ಭಾಗಗಳನ್ನೆಲ್ಲ ಆವರಿಸಿದ್ದ ಖಂಡಾಂತರ ವರ್ಗದ ಹಿಮಗಳಿಗೆ ಈ ಭಾಗವೇ ಕೇಂದ್ರವಾಗಿತ್ತು. ಇಲ್ಲಿಂದ ಹಿಮನದಿಗಳು ದಕ್ಷಿಣದತ್ತ ಚಲಿಸಿದವು. ಹೀಗೆ ಮಂದಗತಿಯಲ್ಲಿ ಚಲಿಸುವಾಗ ಬೀಳುಬಿದ್ದ ಭೂಮಿಯ ಹೊರಮೈಯ ಶಿಲಾವಶೇಷಗಳನ್ನು ತಮ್ಮೊಡನೆ ಹೊತ್ತು ಮುಂದುವರಿದವು. ಕ್ರಮೇಣ ಹಿಮನದಿಗಳು ಕರಗಿದಾಗ ಅವುಗಳೊಡನೆ ಸಾಗುತ್ತಿದ್ದ ಶಿಲಾಕಳಪೆಯ ಬಹುಭಾಗ ದೂರದ ಕೇಂದ್ರದ ತಗ್ಗು ಪ್ರದೇಶಗಳಲ್ಲೂ ಅಲ್ಪಸ್ವಲ್ಪ ಭಾಗ ಕೆನಡಿಯನ್ ಭೂಖಂಡದಲ್ಲೂ ಸಂಚಿತವಾಯಿತು.

ಶಾಶ್ವತ ಭೂಖಂಡದ ಬಹುಭಾಗ ಹಿಮನದಿಗಳಿಂದ ತೇಯಲ್ಪಟ್ಟು ಅಷ್ಟು ಕಡಿದಾಗಿರದ ಬೆಟ್ಟಗಳಿಂದ ಕೂಡಿದೆ. ಇವುಗಳ ಸಾಮಾನ್ಯ ಎತ್ತರ ನೂರು ಅಡಿಗಳು. ಈ ಭೂಭಾಗದಲ್ಲಿ ಅನೇಕ ಕಡೆ ಹಿಮನದಿಗಳ ಕೊರೆತದಿಂದುಂಟಾದ ಸರೋವರಗಳು, ಕಮರಿಗಳು ಮತ್ತು ಜೌಗುಪ್ರದೇಶಗಳನ್ನು ನೋಡಬಹುದು. ಹಲವು ಭಾಗಗಳಲ್ಲಿ ಬಹು ಎತ್ತರವಾದ ಮತ್ತು ಅಷ್ಟೇ ಕಡಿದಾದ ಪರ್ವತ ಸಾಲುಗಳೂ ಇವೆ. ಇವು ಅಷ್ಟಾಗಿ ಹಿಮನದಿಯ ಹಾವಳಿಗೆ ಒಳಗಾಗಿಲ್ಲ. ಅಂದರೆ ಹಿಮನದಿಗಳು ಇವುಗಳಿಗಿಂತ ಕೆಳಮಟ್ಟದಲ್ಲಿದ್ದು ಇವುಗಳನ್ನು ಸಂಪೂರ್ಣವಾಗಿ ಆವರಿಸಲು ಸಾಧ್ಯವಾಗಲಿಲ್ಲ.

ಕೇಂದ್ರದ ತಗ್ಗು ಪ್ರದೇಶ: ಇದು ಕೆನಡಿಯನ್ ಶಾಶ್ವತ ಭೂಖಂಡದ ದಕ್ಷಿಣ ಮತ್ತು ಪಶ್ಚಿಮದತ್ತ ಹರಡಿದೆ. ಇಲ್ಲಿ ಕಣಶಿಲೆಗಳಿಂದ ಕೂಡಿದ ತಳದ ಶಿಲಾ ಸಮುದಾಯದ ಮೇಲೆ ಜಲಜಶಿಲಾ ಪ್ರಸ್ತರಗಳು ಕಂಡುಬರುತ್ತವೆ. ಪಶ್ಚಿಮ ಮತ್ತು ಪೂರ್ವ ವಲಯಗಳ ಪರ್ವತ ಶ್ರೇಣಿಗಳು ಮತ್ತು ಶಾಶ್ವತ ಭೂಖಂಡ ಪ್ರದೇಶಗಳ ಸವೆತದಿಂದ ಬಂದ ಶಿಲಾಭಿದ್ರಗಳ ಸಂಚಯನದಿಂದ ಉಂಟಾದುದೇ ಈ ಶಿಲಾಪ್ರಸ್ತರ ಸಮೂಹ. ಭೂಮಿಯ ಇತರ ಭಾಗಗಳನ್ನು ಮಡಿಸಿ ಸುಕ್ಕುಮಾಡಿದ ಭೂಚಟುವಟಿಕೆಗಳ ಪ್ರಭಾವಕ್ಕೆ ಈ ಪ್ರದೇಶ ಒಳಗಾಗಿಲ್ಲವೆಂದೇ ಹೇಳಬೇಕು. ಇಲ್ಲಿಯ ಪೆಲಿಯೋಜೋಯಿಕ್ ಯುಗದ ಜಲಜಶಿಲೆಗಳು ಬೃಹದಾಕಾರದ ಗುಮ್ಮಟಗಳಾಗಿ, ಕಮಾನುಗಳಾಗಿ, ಬಾಣಲೆಯಂತೆ ಕುಳಿಬಿದ್ದು ಕಮರಿಗಳಾಗಿ ಮಾರ್ಪಟ್ಟಿದ್ದರೂ ಅವುಗಳ ಮಟ್ಟಸವಾದ ವಿನ್ಯಾಸ ಎಲ್ಲೆಲ್ಲೂ ಎದ್ದು ಕಾಣುತ್ತದೆ. ತಗ್ಗುಪ್ರದೇಶದ ಪಶ್ಚಿಮ ಭಾಗದಲ್ಲಿ ಮೀಸೊಜೋಯಿಕ್ ಮತ್ತು ಟರ್ಷಿಯರಿ ಯುಗಗಳ ಜಲಜಶಿಲೆಗಳ ಸಮುದಾಯವಿದೆ. ಈ ಪ್ರಸ್ತರಶಿಲೆಗಳು ರಾಕಿ ಪರ್ವತಗಳ ಭೂಸವೆತದಿಂದ ಉಂಟಾದ ಶಿಲಾಬೀಳಿನ ಶೇಖರಣೆಯಿಂದಾದುವು. ಕ್ರಮೇಣ ಈ ಭೂಭಾಗದ ನದಿಗಳ ಕಾರ್ಯಾಚರಣೆ ನಡೆದಾಗ ಕಡಿದಾದ ಕಣಿವೆಗಳೂ ಕಂದರಗಳೂ ನಿರ್ಮಿತವಾದುವು.

ಪ್ಲಿಸ್ಟೊಸೀನ್ ಹಿಮನದಿಗಳು ತಾವು ಸಾಗಿಸುತ್ತಿದ್ದ ಶಿಲಾಕಣಗಳನ್ನು ಈಗಿನ ಮಿಸ್ಸೋರಿ ನದಿಯ ಪೂರ್ವ ಭಾಗದಲ್ಲೂ ಒಹಾಯೊ ನದಿಯ ಉತ್ತರ ಭಾಗದಲ್ಲೂ ಶೇಖರಿಸಿದವು. ಅಲ್ಲದೆ ಕೆಲವು ಕಡೆ ಹಿಮನದಿಗಳು ಹೊರಚಾಚುಗಳು ಕರಗಿ ತಾವು ತರುತ್ತಿದ್ದ ಶಿಲಾ ಬೀಳನ್ನು ಹಿಂದೆ ಬಿಟ್ಟ ಕಾರಣ ಸುಮಾರು ನೂರಿನ್ನೂರು ಅಡಿ ಎತ್ತರದ ಬೆಟ್ಟಗಳ ಸಾಲು ಮತ್ತು ಶಿಲಾ ಶ್ರೇಣಿಗಳು ಮೈವೆತ್ತವು; ಮತ್ತೆ ಕೆಲವು ವೇಳೆ ಹಿಮನದಿಗಳು ಸಾಗಿಸುತ್ತಿದ್ದ ಶಿಲಾ ಮುರಕಲು ಚೆಲ್ಲಾಪಿಲ್ಲಿಯಾಗಿ ಹರಡಿ ಕರಗಿದ ಹಿಮಗೆಡ್ಡೆಗಳ ನೀರಿಗೆ ಅಡ್ಡಗಟ್ಟಿದಂತಾಗಿ ಸಣ್ಣ ಪುಟ್ಟ ಸರೋವರಗಳೂ ಜೌಗು ಪ್ರದೇಶಗಳೂ ಉಂಟಾದವು.

ಈ ಭೂಪ್ರದೇಶದ ದಕ್ಷಿಣದ ಭಾಗದಲ್ಲಿನ ಜಲಜಶಿಲಾ ಸಮುದಾಯವನ್ನು ದಾಟಿ ಹೋದಲ್ಲಿ ಅಪಲೇಷಿಯನ್ ಪ್ರಸ್ಥಭೂಮಿ ಮತ್ತು ಓಝಾರ್ಕ್ ಔಷಿಟಾ ಪ್ರಸ್ಥಭೂಮಿಗಳನ್ನು ನೋಡಬಹುದು. ಇಲ್ಲಿ ನೂರಾರು ಅಡಿ ಎತ್ತರದ ಕಡಿದಾದ ಬೆಟ್ಟಗಳೂ ಅತ್ಯಂತ ಆಳವಾದ ನದಿ ಕಣಿವೆಗಳೂ ಇವೆ.

**ಅಪಲೇಷಿಯನ್ ಪ್ರಸ್ಥಭೂಮಿ :** ಪೆಲಿಯೋಜೋಯಿಕ್ ಯುಗದ ಶಿಲಾಪ್ರಸ್ತರಗಳು, ತೀವ್ರಗತಿಯ ಭೂಚಟುವಟಿಕೆಗಳಿಗೊಳಗಾದ ಕಾರಣ ಹೆಚ್ಚಿನ ರೀತಿಯಲ್ಲಿ ಮಡಿಕೆಬಿದ್ದು ಮೇಲಕ್ಕೆ ಒಯ್ಯಲ್ಪಟ್ಟು ಪರ್ವತಪಂಕ್ತಿಗಳಾಗಿವೆ. ಅನೇಕ ಕಡೆ ಸ್ತರಭಂಗಗಳನ್ನೂ ಗುರುತಿಸ ಬಹುದು. ಪೀಡ್‌ಮಾಂಟ್ ಮತ್ತು ಬ್ಲೂರಿಜ್ ಪರ್ವತಪ್ರದೇಶಗಳ ಶಿಲಾಸಮುದಾಯ ತೀವ್ರಗತಿಯ ಪರ್ವತಜನ್ಯ ಶಕ್ತಿಗಳಿಗೆ ಸಿಕ್ಕಿ ಕಣಶಿಲೆಗಳಾಗಿ ಮಾರ್ಪಟ್ಟಿವೆ.

ಈ ಕಣಶಿಲಾ ಸಮುದಾಯದ ಪಶ್ಚಿಮಕ್ಕೆ ಬೆಟ್ಟಗಳೂ ಕಣಿವೆಗಳೂ ಹರಡಿವೆ. ಭೂಶಕ್ತಿಗಳೂ ಪೂರ್ವದ ಕಡೆಯಿಂದ ಉದ್ಭವವಾದುವೆಂದು ಇವುಗಳ ಹರವು ಸೂಚಿಸುತ್ತದೆ. ಮುಂದೆ ತಲೆದೋರಿದ ಭೂ ಉತ್ಕರ್ಷ, ಮಡಿಕೆ ಬೀಳುವಿಕೆ, ಸ್ತರಭಂಗ ಮತ್ತು ಭೂಸವೆತಗಳೂ ಈ ಶಿಲೆಗಳ ರಚನೆಯನ್ನು ಕ್ಲಿಷ್ಟಗೊಳಿಸಿವೆ. ಇದನ್ನನುಸರಿಸಿಯೇ ಈ ಭೂಭಾಗದ ಇಂದಿನ ಮೈಲ್ಮೈಲಕ್ಷಣ ರೂಪುಗೊಂಡಿದೆ. ಭೂಶಕ್ತಿಗಳು ಪಶ್ಚಿಮದತ್ತ ಸರಿದು ಕ್ರಮೇಣ ಶಕ್ತಿಹೀನಗೊಂಡು ಕಟ್ಟಕಡೆಗೆ ಹೇಳಹೆಸರಿಲ್ಲದಂತಾದವು. ಹೀಗಾಗಿ ಪಶ್ಚಿಮ ಪ್ರದೇಶದ ಭೂಭಾಗಗಳ ಮೇಲ್ಮೈಲಕ್ಷಣ ನಿಖರವಾಗಿ ರೂಪುಗೊಂಡಿದ್ದರೂ ಶಿಲಾರಚನೆಯಲ್ಲಿ ಮೂಲಭೂತ ಬದಲಾವಣೆಗಳನ್ನು ಗುರುತಿಸಲು ಬಹು ಕಷ್ಟ. ಇವುಗಳ ಮತ್ತು ಪೂರ್ವ ಭಾಗಗಳ ಶಿಲಾಸಮುದಾಯಗಳ ರಚನೆಯಲ್ಲಿ ಸಾಮ್ಯತೆ ಕಂಡುಬಂದಿದೆ. ಇಲ್ಲಿಯೂ ಬೆಟ್ಟಗಳ ಸಾಲು ಮತ್ತು ಕಣಿವೆಗಳಿವೆ. ಇವು ಸಮುದ್ರಮಟ್ಟದಿಂದ ಬಹುತೇಕ 90–450ಮೀ ಗಳಷ್ಟು ಎತ್ತರವಾಗಿದೆ.

**ತೀರ ಪ್ರದೇಶ:** ಈ ಭಾಗದ ಶಿಲೆಗಳ ರಚನೆ ಬಹು ಸರಳ. ಇಡೀ ಉತ್ತರ ಅಮೆರಿಕದ ಬೇರೆಲ್ಲೂ ಇಷ್ಟು ಸರಳವಾದ ರಚನೆಯನ್ನು ನೋಡಲಾರೆವು. ಪೂರ್ವಕ್ಕೆ ಪೀಡ್‌ಮಾಂಟ್ ಕಣಶಿಲೆಗಳು. ಪಶ್ಚಿಮದತ್ತ ಕೇಂದ್ರ ತಗ್ಗುಪ್ರದೇಶ, ದಕ್ಷಿಣದ ಕಡೆ ಯುಕಟಾನ್ ಪರ್ಯಾಯದ್ವೀಪ– ಈ ಭೂಭಾಗದ ಮೇಲೆ ಹೆಚ್ಚು ಗಡುಸಲ್ಲದ ಮೀಸೋಜೋಯಿಕ್ ಮತ್ತು ಟರ್ಷಿಯರಿ ಜಲಜಶಿಲಾನಿಕ್ಷೇಪಗಳನ್ನು ಗುರುತಿಸಬಹುದು. ಪ್ರಸ್ತರಗಳೂ ಸಾಮಾನ್ಯವಾಗಿ ಸಮುದ್ರದತ್ತ ವಾಲಿವೆ. ಸಮುದ್ರದ ಕರೆಯುದ್ದಕ್ಕೂ ಜೌಗುಪ್ರದೇಶವಿದ್ದು ಅದು ಈಚಿನ ವರ್ಷಗಳಲ್ಲಿ ಉಂಟಾದ ಭೂಭಾಗವೆಂದು ಮನಗಾಣಬಹುದು. ಅಲ್ಲಲ್ಲಿ ಭೂ ಸವೆತದಿಂದಾಗಿ ಸಣ್ಣಪುಟ್ಟ ಗುಡ್ಡಗಳೂ ಅಷ್ಟು ಕಡಿದಾಗಿರದ ಅಗಲವಾದ ಕಣಿವೆಗಳೂ ಇವೆ.

**ಪಶ್ಚಿಮ ಪರ್ವತಶ್ರೇಣಿ (ಕಾರ್ಡಿಲೆರ):** ಇವು ಕೆನಡಿಯನ್ ಶಾಶ್ವತ ಭೂಖಂಡದ ಮತ್ತು ಅಪಲೇಷಿಯನ್ ಪರ್ವತಗಳಿಗಿಂತಲೂ ವಯಸ್ಸಿನಲ್ಲಿ ಕಿರಿಯವು. ಬಹು ಎತ್ತರವಾಗಿಯೂ ಕಡಿದಾಗಿಯೂ ಇದ್ದು ಇಡೀ ಉತ್ತರ ಅಮೆರಿಕದ ಮೇಲ್ಮೈ ಲಕ್ಷಣದಲ್ಲಿ ಪ್ರಮುಖ ಸ್ಥಾನವನ್ನಾಕ್ರಮಿಸಿವೆ. ಶಿಲೆಗಳ ಹರವು ಉತ್ತರ–ದಕ್ಷಿಣಾಭಿಮುಖವಾಗಿದ್ದು ಅದನ್ನನುಸರಿಸಿ ಕಣಿವೆಗಳೂ ಕಂದರಗಳೂ ಮೈದೋರಿವೆ. ಈ ಶ್ರೇಣಿಯ ಉತ್ತರದ ಮತ್ತು ದಕ್ಷಿಣದ ಅತ್ಯುನ್ನತ ಶಿಖರಗಳು ಹಿಮನದಿಗಳಿಂದ ತೇಯಲ್ಪಟ್ಟು ಬಹು ಮೊನಚಾಗಿವೆ. ಈ ಕಾರ್ಯಾಚರಣೆಯಲ್ಲಿ ಬೀಳುಬಿದ್ದ ಶಿಲಾವಶೇಷಗಳು ಕಣಿವೆಗಳಲ್ಲಿ ಶೇಖರವಾಗಿವೆ. ಹಲವು ಶಿಖರಗಳ ತುದಿಯಲ್ಲಿ ಲುಪ್ತ ಮತ್ತು ಜಾಗೃತ ಜ್ವಾಲಾಮುಖಿಗಳಿವೆ. ಇವುಗಳಿಂದ ಹೊರಹೊಮ್ಮಿದ ಲಾವಾ ಪ್ರವಾಹಗಳು ಪ್ರಸ್ತರಗಳೋಪಾದಿಯಲ್ಲಿ ಶೇಖರಗೊಂಡಿವೆ. ಅಲ್ಲದೆ ಇವುಗಳೊಡನಿರುವ ಜಲಜ ಶಿಲೆಗಳು ಮಡಿಕೆ ಬೀಳದೆ, ತಮ್ಮ ಪ್ರಸ್ತರೀ ಸ್ವರೂಪವನ್ನು ಕಳೆದುಕೊಳ್ಳದೆ, ಭೂ ಉತ್ಕರ್ಷಗಳಿಗೊಳಗಾಗಿ ಸಹಸ್ರಾರು ಅಡಿಗಳ ಎತ್ತರಕ್ಕೆ ಒಯ್ಯಲ್ಪಟ್ಟು ವಿಶಾಲವಾದ ಪ್ರಸ್ಥಭೂಮಿಗಳಾಗಿ ಕಂಗೊಳಿಸುತ್ತವೆ. (ಬಿ.ವಿ.ಜಿ.)

**ಉತ್ತರ ಆಸ್ಟ್ರೇಲಿಯ:** ಆಸ್ಟ್ರೇಲಿಯದ ಆರು ರಾಜಕೀಯ ವಿಭಾಗಗಳಲ್ಲಿ ಒಂದಾದ ಉತ್ತರ ಸೀಮೆ (ನಾರ್ದರ್ನ್ ಟೆರಿಟರಿ). ಆಸ್ಟ್ರೇಲಿಯದ ಸಂಯುಕ್ತ ಸರ್ಕಾರದ ಆಳ್ವಿಕೆಗೆ ಒಳಪಟ್ಟ ಎರಡು ಪ್ರದೇಶಗಳಲ್ಲಿ ಒಂದು. (ಇನ್ನೊಂದು ಆಸ್ಟ್ರೇಲಿಯದ ರಾಜಧಾನಿಯ ಪ್ರದೇಶ.) ಆಸ್ಟ್ರೇಲಿಯದ ಉತ್ತರ ಭಾಗದ ಮಧ್ಯದಲ್ಲಿರುವ ಈ ಪ್ರಾಂತ್ಯವು ದ. ಅ. 26$^{\circ}$ ಯಿಂದ ಆಸ್ಟ್ರೇಲಿಯದ ಉತ್ತರ ತೀರದವರೆಗೂ ಪೂ.ರೇ. 129$^{\circ}$ ಸೆ.=138$^{\circ}$ಸೆ.ಯ ವರೆಗೂ ಹಬ್ಬಿದೆ. ದಕ್ಷಿಣ ಪಾರ್ಶ್ವದಲ್ಲಿ ಮಕರಸಂಕ್ರಾಂತಿ ವೃತ್ತ ಹಾದು ಹೋಗುತ್ತದೆಯಾದ್ದರಿಂದ ಇದು ಬಹುಮಟ್ಟಿಗೆ ಉಷ್ಣವಲಯದಲ್ಲೇ ನೆಲಸಿರುವ ಪ್ರದೇಶ.

**ವಿಸ್ತೀರ್ಣ:** 1,349,130 ಚ.ಕಿಮೀ. ಜನಸಂಖ್ಯೆ : 200,019 (2001) ಟಿಮಾರ್ ಸಮುದ್ರದ ಮೇಲಿರುವ ಡಾರ್ವಿನ್ ಮುಖ್ಯ ಬಂದರು, ರಾಜಧಾನಿ. ದಕ್ಷಿಣ ಭಾಗದಲ್ಲಿನ ಆಲಿಸ್ ಸ್ಪ್ರಿಂಗ್ಸ್ ಮುಖ್ಯಪಟ್ಟಣ.

**ಮೇಲ್ಮೈಲಕ್ಷಣ:** ಈ ಪ್ರದೇಶದ ಬಹುಭಾಗ ಬರಡು. ವರ್ಣರಹಿತ, ಸುಮಾರು ಒಂದು ಸಾವಿರ ಮೈಲಿ ಉದ್ದವಿರುವ ಕರಾವಳಿ ಅಂಕು ಡೊಂಕಾಗಿರುವುದಾದರೂ ಅದು ತಗ್ಗಾಗಿಯೂ ಚಪ್ಪಟೆಯಾಗಿಯೂ ಇದೆ. ಸೆರಗಿನಂತೆ ಉದ್ದಕ್ಕೂ ಗುಲ್ಮ ವೃಕ್ಷಗಳು ದಟ್ಟೈಸಿವೆ. ಮರಳು ತುಂಬಿದ ಕಡಲುದಂಡೆಗಳಿಗೂ ಮಣ್ಣಿನ ಜಗತಿಗಳಂತಿರುವ ನದೀ ಮುಖಗಳಿಗೂ ನಡುನಡುವೆ ವಿರಳವಾಗಿ ಮರಳುಗಲ್ಲುಗಳಿಂದೊಡಗೂಡಿದ ಸುಣ್ಣ ಜೇಡಿ ಹಾಗೂ ಕಬ್ಬಿಣದ ಗಟ್ಟಿ ಅದಿರುಗಳಿರುವ ಭೂಶಿರಗಳಿವೆ. ವಿಕ್ಟೋರಿಯ, ಡಾಲಿ, ರೋಪರ್, ಮೆಕಾರ್ಥರ್ ಮುಖ್ಯ ನದಿಗಳು. ಇವೆಲ್ಲ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹುಟ್ಟಿ ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ಹರಿಯುತ್ತವೆ. ಮಳೆಗಾಲದಲ್ಲಿ ಇವುಗಳಲ್ಲಿ ತುಂಬು ಪ್ರವಾಹ; ಒಣಋತುವಿನಲ್ಲಿ ಇವು ಸಣ್ಣ ಸಣ್ಣ ಮಡುಗಳ ಸಾಲುಗಳಂತಾಗುತ್ತವೆ. ಇವಕ್ಕೆ ನೀರು ಒದಗಿಸುವ ಒಂದು ಮುಖ್ಯ ಪ್ರದೇಶವೆಂದರೆ ಬಾರ್ಕ್ಲಿ ಪ್ರಸ್ಥಭೂಮಿ. ಇದು ಪಶ್ಚಿಮ ಆಸ್ಟ್ರೇಲಿಯದ ಪ್ರಸ್ಥಭೂಮಿಯ ವಿಸ್ತರಣೆ. ಸಮುದ್ರದಂಡೆಗೆ ಸಮಾನಾಂತರದಲ್ಲಿ ವಾಯವ್ಯ–ಆಗ್ನೇಯವಾಗಿ ಹಬ್ಬಿದೆ. ಇಲ್ಲೂ ವಿಕ್ಟೋರಿಯ ನದೀ ಜಿಲ್ಲೆಯಲ್ಲೂ ಸೊಂಪಾದ ಹುಲ್ಲುಗಾವಲುಗಳಿವೆ. ಈ ಪ್ರಸ್ಥಭೂಮಿಯ, ನೈರುತ್ಯದಲ್ಲಿ ನೆಲ ಇಳಿಜಾರು; ಇದಕ್ಕೆ ದಕ್ಷಿಣದಲ್ಲಿರುವುದೇ ವುಡ್ಸ್ ಸರೋವರ. ದಕ್ಷಿಣದಲ್ಲಿ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಮ್ಯಾಕ್ ಡಾನೆಲ್ ಪರ್ವತಶ್ರೇಣಿಯಲ್ಲಿ 1525 ಮಿ. ಎತ್ತರದ ಶಿಖರಗಳುಂಟು. ಇದರ ದಕ್ಷಿಣಕ್ಕೆ ಅಮೆಡ್ಯೂಸ್ ಸರೋವರ. ಈಶಾನ್ಯದಲ್ಲಿ ಹಾರ್ಟ್ಸ್ ಪರ್ವತಶ್ರೇಣಿ. ದಕ್ಷಿಣದ ಪಶ್ಚಿಮಾಗ್ರದಲ್ಲಿ ಪೀಟರ್‌ಮನ್ ಪರ್ವತಶ್ರೇಣಿಯೂ ಪೂರ್ವದಲ್ಲಿ ಸಿಂಪ್ಸನ್ ಮರುಭೂಮಿಯೂ ಇವೆ.

**ವಾಯುಗುಣ**: ತೀರಪ್ರದೇಶ ಭಾರತದ ದಖನ್ ಪ್ರಸ್ಥಭೂಮಿಯಂತೆ ಮಾನ್ಸೂನ್ ಮಾದರಿಯ ವಾಯುಗುಣ ಹೊಂದಿದೆ. ಇಲ್ಲಿ ಮಾನ್ಸೂನ್ ಮಾರುತಗಳು ವಾಯವ್ಯ ದಿಕ್ಕಿನಿಂದ ಬೀಸುತ್ತವೆ. ನವೆಂಬರಿನಿಂದ ಏಪ್ರಿಲ್ ತಿಂಗಳವರೆಗೆ ಬೇಸಗೆ. ಆಗ ತೀರ ಪ್ರದೇಶದಲ್ಲಿ ಹೆಚ್ಚು ಮಳೆ. ಜನವರಿ ತಿಂಗಳು ಹೆಚ್ಚು ಶಾಖ. $50^\circ$ಸೆ. ಉಷ್ಣತೆ. ಮೇ–ಅಕ್ಟೋಬರ್ ಚಳಿಗಾಲ, $33.3^\circ$ ಸೆ. ಉಷ್ಣತೆ.

ಈ ಪ್ರದೇಶ ಉಷ್ಣವಲಯದ ವಾಯುಗುಣದಿಂದ ಕೂಡಿರುವುದರಿಂದ ಇಲ್ಲಿ ಮಾನ್ಸೂನ್ ಕಾಡುಗಳೂ ಗುಲ್ಮವೃಕ್ಷದ ಕಾಡುಗಳೂ ಕಂಡುಬರುತ್ತವೆ. ಉತ್ತರದ ತೀರಪ್ರದೇಶದಲ್ಲಿ ಸವನ್ನ ಮಾದರಿಯ ಹುಲ್ಲುಗಾವಲಿಂದ ಕೂಡಿದ ಕಾಡುಗಳಿವೆ. ನೀಲಗಿರಿ ಮರ ಧಾರಾಳ. ಆಸ್ಟ್ರೇಲಿಯದ ಇತರ ಕಡೆಗಳಲ್ಲಿರುವಂತೆ ಇಲ್ಲೂ ಕಾಂಗರೂ, ಮೊಸಳೆ, ಹಾವು, ಮೊಲ, ಬಗೆಬಗೆಯ ಪಕ್ಷಿಗಳು, ಕಪ್ಪೆ, ಮೀನು ಇವೆ. ಹಿಂದೆ ಟಿಮಾರ್‌ನಿಂದ ಇಲ್ಲಿಗೆ ತಂದ ಕಾಡೆಮ್ಮೆಗಳನ್ನು ಚರ್ಮಕ್ಕಾಗಿ ಬೇಟೆಯಾಡಲಾಗಿದೆ. ಮಳೆಗಾಲದಲ್ಲಿ ಸೊಳ್ಳೆ ವಿಪರೀತ. ಗೆದ್ದಲಿನ ಹಾವಳಿಯೂ ಬಹಳ.

ಮಳೆ ಕಡಿಮೆಯಾಗಿದ್ದು ಮಣ್ಣೂ ಫಲವತ್ತಾಗಿಲ್ಲದಿರುವುದರಿಂದ ಹೆಚ್ಚು ವ್ಯವಸಾಯ ಸಾಧ್ಯವಿಲ್ಲ. ಸವನ್ನ ಹುಲ್ಲುಗಾವಲಿನ ಪ್ರದೇಶಗಳಲ್ಲಿ ದನ ಕುರಿಗಳನ್ನು ಸಾಕುವುದು ಜನರ ಮುಖ್ಯ ಕಸುಬು. ಗಣಿಗಾರಿಕೆಯೂ ತೀರಪ್ರದೇಶದಲ್ಲಿ ಮೀನುಗಾರಿಕೆಯೂ ಈ ಪ್ರದೇಶದ ಜನರ ಇತರ ಕಸುಬು.

**ಖನಿಜೋತ್ಪತ್ತಿ, ಕೈಗಾರಿಕೆ**: ಡಾರ್ವಿನ್ನಿಗೆ 80 ಕಿಮೀ ದಕ್ಷಿಣಕ್ಕಿರುವ ರಂಜಂಗಲ್‌ನಲ್ಲಿ 1949ರಲ್ಲಿ ಯುರೇನಿಯಂ ಪತ್ತೆಯಾಗಿ 1954ರಲ್ಲಿ ಇದರ ಪರಿಷ್ಕರಣ ಕೈಗಾರಿಕೆ ಆರಂಭವಾದಂದಿನಿಂದ ಇಲ್ಲಿ ಗಣಿ ಉದ್ಯಮ ಬೆಳೆದಿದೆ. ಆದರೆ ಇದರ ಪ್ರಮಾಣ ಹಾಗೂ ಮೌಲ್ಯ ಎಷ್ಟೆಂಬುದು ಕಾಯ್ದಿಟ್ಟ ರಹಸ್ಯ. ಉಳಿದ ಖನಿಜಗಳ ಮೌಲ್ಯದಲ್ಲಿ ಅರ್ಧಪಾಲು ತಾಮ್ರದ್ದು; 3ನೆಯ ಒಂದು ಭಾಗ ಚಿನ್ನ. ಇವೆರಡನ್ನೂ ಟೆನ್ನಾಂಟ್ ಕ್ರೀಕ್ ಎಂಬಲ್ಲಿ ತೆಗೆಯಲಾಗುತ್ತಿದೆ. ಹಾಟ್ಸ್ ಪರ್ವತ ಶ್ರೇಣಿಯಲ್ಲಿ ಮ್ಯಾಂಗನೀಸ್ ಮತ್ತು ಅಭ್ರಕ ದೊರಕುತ್ತವೆ. ತವರ, ಬೆಳ್ಳಿ ಇಲ್ಲಿ ಸಿಗುವ ಇತರ ಎರಡು ಲೋಹಗಳು.

**ವ್ಯಾಪಾರ**: ಈ ಪ್ರದೇಶದ ಉತ್ಪನ್ನಗಳು ಇತರ ರಾಜ್ಯಗಳಿಗೆ ಸಾಗುತ್ತವೆ. ಇಲ್ಲಿಯವರು ತಮಗೆ ಬೇಕಾದ ಸಿದ್ಧವಸ್ತುಗಳನ್ನೂ ಆಹಾರವನ್ನೂ ಆ ರಾಜ್ಯಗಳಿಂದ ತರಿಸಿಕೊಳ್ಳುತ್ತಾರೆ. ಇಲ್ಲಿ ಸರ್ಕಾರದ ವರಮಾನಕ್ಕಿಂತ ವೆಚ್ಚ ಆರು ಪಾಲು ಹೆಚ್ಚು.

ಡಾರ್ವಿನ್ ಪಟ್ಟಣದಿಂದ ಬಿರ್ಡುಂವರೆಗೆ ಮಾತ್ರ ಸಂಪರ್ಕವುಂಟು. ಉತ್ತರ ದಕ್ಷಿಣವಾಗಿ ಹೆದ್ದಾರಿಯಿದೆ. ದಕ್ಷಿಣದ ಆಲಿಸ್ ಸ್ಪ್ರಿಂಗ್ಸ್‌ನಿಂದ ದಕ್ಷಿಣ ಆಸ್ಟ್ರೇಲಿಯಕ್ಕೆ ಇನ್ನೊಂದು ರೈಲುಮಾರ್ಗವುಂಟು. ಡಾರ್ವಿನ್ ಬಂದರಿನಿಂದ ಹಡಗುಗಳು ಆಸ್ಟ್ರೇಲಿಯದ ಇತರ ಭಾಗಗಳೊಂದಿಗೆ ಸಂಪರ್ಕ ಕಲ್ಪಿಸಿದೆ. ವಿದೇಶೀ ಹಡಗು ಸಂಚಾರವೂ ಉಂಟು. ಇಲ್ಲಿ ಮೂಲ ನಿವಾಸಿಗಳಲ್ಲದವರ ಸಂಖ್ಯೆ 27,095. ಶುದ್ಧ ಮೂಲನಿವಾಸಿಗಳ ಸಂಖ್ಯೆ ಕ್ರಮವಾಗಿ ಏರುತ್ತಿದೆ. ಒಟ್ಟು ಸುಮಾರು 1,73,530 ಚ.ಕಿಮೀ ವಿಸ್ತೀರ್ಣದ ಹದಿನೇಳು ಪ್ರದೇಶಗಳು ಮೂಲನಿವಾಸಿಗಳಿಗಾಗಿ ಮೀಸಲಾಗಿವೆ. (ಪಿ.ಎಚ್.)

**ಇತಿಹಾಸ**: 16ನೆಯ ಶತಮಾನದಲ್ಲಿ ಉತ್ತರ ಆಸ್ಟ್ರೇಲಿಯ ಮೊದಲ ಬಾರಿಗೆ ಪಾಶ್ಚಾತ್ಯರ ಕಣ್ಣಿಗೆ ಬಿತ್ತು. ಆಬೆಲ್ ಟಾಸ್ಮನ್ ಇದರ ತೀರದ ಗುಂಟ ಸಮುದ್ರಯಾನ ಮಾಡಿದ. ಮಲೆಯರೂ ಇಂಡೊನೇಷ್ಯನ್ನರೂ ಮುತ್ತಿನ ಆಸೆಗಾಗಿ ಈ ಪ್ರದೇಶದ ಅಂಚಿನ ಕಡಲ ಅಡಿಯಲ್ಲಿ ಮುಳುಗುತ್ತಿದ್ದರು. ಮಾಥ್ಯು ಫ್ಲಿಂಡರ್ಸ್ 1803ರಲ್ಲಿ ಪ್ರಥಮವಾಗಿ ಇದರ ತೀರದ ನಕ್ಷೆ ರಚಿಸಿದ. 1818ರಲ್ಲಿ ಫಿಲಿಪ್ ಕಿಂಗ್‌ನ ನೇತೃತ್ವದಲ್ಲಿ ಬಂದ ಪರಿಶೋಧಕರು ಇಲ್ಲಿನ ನದೀಮುಖಗಳ ಹಾಗೂ ಕೊಲ್ಲಿಗಳ ನಕ್ಷೆ ರಚಿಸಿದರಲ್ಲದೆ, ಈಗ ಡಾರ್ವಿನ್ ಬಂದರು ರೇವಿನ ಪ್ರದೇಶವನ್ನು ಗುರುತಿಸಿದರು. ಈ ಪ್ರದೇಶದಲ್ಲಿ ಸೈನಿಕ ನೆಲೆಗಳನ್ನೇರ್ಪಡಿಸುವ ಪ್ರಯತ್ನಗಳೂ ನಡೆದವು. ಡಚ್ಚರು ಈ ಭಾಗದಲ್ಲೂ ಕಾಲೂರದಂತೆ ಮಾಡುವುದೇ ಈ ಎಲ್ಲ ಚಟುವಟಿಕೆಗಳ ಉದ್ದೇಶವಾಗಿತ್ತು.

1862ರ ವರ್ಷ ಈ ಪ್ರದೇಶದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಆಗ ಮೆಕ್ ಡೂವಲ್ ದಕ್ಷಿಣ ಆಸ್ಟ್ರೇಲಿಯದಿಂದ ಅಡಿಲೇಡ್ ನದೀಮುಖದವರೆಗೆ ಪ್ರಯಾಣ ಮಾಡಿದ. ದಕ್ಷಿಣೋತ್ತರವಾಗಿ ಆಸ್ಟ್ರೇಲಿಯವನ್ನು ದಾಟಿದವರಲ್ಲಿ ಇವನೇ ಮೊದಲಿಗ. ಈ ಕಾರಣದಿಂದ ಉತ್ತರ ಆಸ್ಟ್ರೇಲಿಯ ತನಗೆ ಸೇರಿದ್ದೆಂದು ದಕ್ಷಿಣ ಆಸ್ಟ್ರೇಲಿಯ ವಾದ ಹೂಡಿತು. ದಕ್ಷಿಣ ಆಸ್ಟ್ರೇಲಿಯವೇ ಈ ಭಾಗದ ಆಡಳಿತ ನಡೆಸತಕ್ಕದ್ದೆಂದು ಇಂಗ್ಲೆಂಡಿನ ವಸಾಹತು ಕಾರ್ಯದರ್ಶಿ ಆಜ್ಞಾಪಿಸಿದ. ಈ ಪ್ರದೇಶದ ಆಡಳಿತ ಸಂಪರ್ಕವನ್ನು ಸಮುದ್ರದ ಮೂಲಕವೇ ಇಟ್ಟುಕೊಳ್ಳಬೇಕಾಗಿತ್ತು. ಮೊದಲು ಅಡಿಲೇಡ್ ನದಿಯ ಬಳಿಯ ಪ್ರದೇಶದಿಂದಲೂ ಅನಂತರ ಡಾರ್ವಿನ್ನಿನಿಂದಲೂ ಆಡಳಿತ ನಡೆಸಲಾಗುತ್ತಿತ್ತು. ಅಡಿಲೇಡಿನಿಂದ ಡಾರ್ವಿನ್ನಿಗೆ 1872ರಲ್ಲಿ ತಂತಿವ್ಯವಸ್ಥೆ ಏರ್ಪಟ್ಟಿತು. ಕೇವಲ ಎರಡೇ ವರ್ಷಗಳಲ್ಲಿ ನಿರ್ಮಿಸಲಾದ ಸುಮಾರು 3200 ಕಿಮೀ ದೂರದ ಈ ವ್ಯವಸ್ಥೆ ಒಂದು ದೊಡ್ಡ ಸಾಧನೆ. 1940ರ ವರೆಗೂ ಈ ಪ್ರದೇಶದಲ್ಲಿದ್ದ ತಂತಿವ್ಯವಸ್ಥೆ ಇದೊಂದೇ.

ಕಬ್ಬು, ರಬ್ಬರ್, ಕಾಫಿ ಮುಂತಾದ ಹಣದ ಬೆಳೆ ಬೆಳೆಯಲು ಪ್ರಯತ್ನಗಳು ನಡೆದವು. ಆದರೆ ಪ್ರತಿಕೂಲ ವಾಯುಗುಣ, ದೂರ ಹಾಗೂ ಪ್ರತಿಕೂಲವಾದ ಜಮೀನು ಹಿಡುವಳಿ ಪದ್ಧತಿ ಇವುಗಳಿಂದಾಗಿ ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಈ ತೋಟಗಳನ್ನು ಬೆಳೆಸಲೂ ಲೋಕೋಪಯೋಗಿ ಕಾಮಗಾರಿಗಾಗಿಯೂ ಚೀನಿಯರನ್ನು ಕರೆಸಲಾಗಿತ್ತು. ಅವರು ಚಿನ್ನದ ಆಸೆಗೆ ಬಲಿ ಬಿದ್ದು ಆ ಲೋಹದ ಅನ್ವೇಷಣೆಯಲ್ಲಿ ತೊಡಗಿ ಭಗ್ನಮನೋರಥರಾದರು. ಡಾರ್ವಿನ್ನಿನಿಂದ ದಕ್ಷಿಣಕ್ಕೆ ಪೈನ್‌ಕ್ರೀಕ್‌ವರೆಗೆ ಸುಮಾರು 200 ಕಿಮೀ. ದೂರ ದಕ್ಷಿಣ ಆಸ್ಟ್ರೇಲಿಯದ ಪೋರ್ಟ್ ಆಗಸ್ಟದಿಂದ ಆಲಿಸ್ ಸ್ಪ್ರಿಂಗ್ಸ್‌ಗೂ ರೈಲು ಮಾರ್ಗಗಳು ನಿರ್ಮಾಣವಾದವು.

1911ರಲ್ಲಿ ಆಸ್ಟ್ರೇಲಿಯ ಸರ್ಕಾರ ಈ ಪ್ರದೇಶದ ಆಡಳಿತವನ್ನು ದಕ್ಷಿಣ ಆಸ್ಟ್ರೇಲಿಯದಿಂದ ತೆಗೆದುಕೊಂಡಿತು. ಉತ್ತರ ಸೀಮೆಯ ನಾನಾ ಸಮಸ್ಯೆಗಳ ಬಗ್ಗೆ ಆಯೋಗಗಳು ವರದಿ ಸಲ್ಲಿಸಿದವು. ಇದರ ಆಡಳಿತದಲ್ಲಿ ನಾನಾ ಸುಧಾರಣೆಗಳಾದವು. 20ನೆಯ ಶತಮಾನದ 2ನೆಯ ದಶಕದಲ್ಲಿ ಇದನ್ನು ಮಧ್ಯ ಆಸ್ಟ್ರೇಲಿಯ ಮತ್ತು ಉತ್ತರ ಆಸ್ಟ್ರೇಲಿಯ ಎಂದು ಎರಡು ಭಾಗ ಮಾಡಲಾಯಿತು. ಆದರೆ 1931ರಲ್ಲಿ ಇವನ್ನು ಮತ್ತೆ ಒಂದುಗೂಡಿಸಲಾಯಿತು. ಅಂತೂ ಈ ಪ್ರದೇಶ ಸಮಸ್ಯೆಗಳಿಂದ ತುಂಬಿದೆ. ಪ್ರಗತಿ ನಿಧಾನ. ಡಾರ್ವಿನ್ನಿನಲ್ಲಿ ಕಾರ್ಮಿಕ ತೊಂದರೆಗಳು ಹೆಚ್ಚು.

20ನೆಯ ಶತಮಾನದ 3ನೆಯ ದಶಕದಲ್ಲಿ ವಿಮಾನ ಸೌಲಭ್ಯ ಬೆಳೆದಾಗ ಡಾರ್ವಿನ್ ಹೆಚ್ಚು ಪ್ರಾಮುಖ್ಯಕ್ಕೆ ಬಂತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನೀಯರು ಇದರ ಮೇಲೆ ಕಣ್ಣುಹಾಕಿದರು. 1942ರಲ್ಲಿ ಡಾರ್ವಿನ್ ಜಪಾನಿಗಳ ಬಾಂಬಿಗೆ ಗುರಿಯಾಗಲಾಗಿ ಉತ್ತರ ಆಸ್ಟ್ರೇಲಿಯದಲ್ಲೇ ಸೈನಿಕ ನೆಲೆಗಳನ್ನು ಸ್ಥಾಪಿಸಲಾಯಿತು. ಆಸ್ಟ್ರೇಲಿಯ ಸರ್ಕಾರಕ್ಕೆ ಈ ಪ್ರದೇಶದಲ್ಲಿ ಆಸಕ್ತಿ ಹೆಚ್ಚಿತು. ಯುದ್ಧಾನಂತರ ಇಲ್ಲಿ ಗಣಿಗಾರಿಕೆಯನ್ನು ಬೆಳೆಸಲಾಗುತ್ತಿದೆ. ಮೂಲನಿವಾಸಿಗಳ ಹಿತರಕ್ಷಣೆಯ ಕಾರ್ಯ ಸಾಗಿದೆ. 1962ರಲ್ಲಿ ಅವರಿಗೆ ಮತದಾನದ ಹಕ್ಕು ಲಭಿಸಿತು. ಅವರಿಗಾಗಿ ಅನೇಕ ಶಾಲೆಗಳನ್ನು ತೆರೆಯಲಾಯಿತು. *

**ಉತ್ತರ ಕನ್ನಡ ಜಿಲ್ಲೆ**: ಕರ್ನಾಟಕದ ಪಶ್ಚಿಮ ಕರಾವಳಿಯ ಒಂದು ಜಿಲ್ಲೆ. ಈ ಜಿಲ್ಲೆಯ ಪೂರ್ವದಲ್ಲಿ ಧಾರವಾಡ, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳು, ಪಶ್ಚಿಮದಲ್ಲಿ ಅರಬ್ಬೀಸಮುದ್ರ, ಉತ್ತರದಲ್ಲಿ ಗೋವಾ ಮತ್ತು ಬೆಳಗಾಂವಿ ಜಿಲ್ಲೆ, ದಕ್ಷಿಣದಲ್ಲಿ ಉಡುಪಿ ಜಿಲ್ಲೆ ಇವೆ. ವಿಸ್ತೀರ್ಣ 10,291ಚಕಿಮೀ. ಜನಸಂಖ್ಯೆ 13,53,644 (2001). ಈ ಜಿಲ್ಲೆಯ ಕೇಂದ್ರಸ್ಥಳ ಕಾರವಾರ. ಜಿಲ್ಲೆಯಲ್ಲಿ 11 ತಾಲ್ಲೂಕು, 35 ಹೋಬಳಿ ಮತ್ತು 1246 ಜನವಸತಿಯಿರುವ ಹಳ್ಳಿಗಳಿವೆ. 206 ಗ್ರಾಮ ಪಂಚಾಯಿತಿಗಳು ಮತ್ತು 13 ಪುರಸಭೆಗಳಿವೆ.

ಈ ಜಿಲ್ಲೆಯನ್ನು ಎರಡು ಭೌಗೋಳಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು. ಸಮುದ್ರದಂಚಿನಿಂದ 10–15ಕಿಮೀ ಅಗಲ ಮತ್ತು ಸು.130ಕಿಮೀ ಉದ್ದವಾಗಿರುವ ಕರಾವಳಿ ಘಟ್ಟದ ಕೆಳಗಿನ ಭಾಗ. ಅದರ ಪೂರ್ವ ದಿಕ್ಕಿಗೆ ಗೋಡೆಯಂತೆ ದಕ್ಷಿಣೋತ್ತರವಾಗಿ ಹಬ್ಬಿದ ಜಂಜುಕಲ್ಲಿನ ಸಹ್ಯಾದ್ರಿ ಶ್ರೇಣಿ. ಬೆಟ್ಟದ ತಪ್ಪಲಿನಿಂದ ಹರಿದು ಸಮುದ್ರ ಸೇರುವ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ ನದಿಗಳು ಸುತ್ತಲೂ ಹಸುರು ಹಾಸಿ ಸೌಂದರ್ಯ ಬೆಳೆಸಿವೆ. ಶಿವಮೊಗ್ಗ ಮತ್ತು ಉತ್ತರ ಕನ್ನಡದ ಗಡಿಯಲ್ಲಿ ಹರಿಯುವ ಶರಾವತಿ, ಗೇರುಸೊಪ್ಪೆಯ ಬಳಿ 252ಮೀ ಕೆಳಗೆ ದುಮುಕಿ ಜಗತ್‌ಪ್ರಸಿದ್ಧ ಜೋಗ್ ಜಲಪಾತವನ್ನು ನಿರ್ಮಿಸಿದೆ. ಅಘನಾಶಿನಿ ನದಿಯ ಉಂಚಳ್ಳಿ, ಗಂಗಾವಳಿ ನದಿಯ ಮಾಗೋಡು, ಕಾಳಿನದಿಯ ಲಾಲಗುಳಿ, ಗಣೇಶಪಾಲ ಹೊಳೆಯ ಶಿವಗಂಗಾ ಜಲಪಾತಗಳೂ ನಿಸರ್ಗ ಸೌಂದರ್ಯದಿಂದ ಕೂಡಿವೆ. ಇವಲ್ಲದೆ ಸುಸುಬ್ಬಿಯಂಥ ಅನೇಕ ಚಿಕ್ಕಪುಟ್ಟ ಜಲಪಾತಗಳಿವೆ. ಜೋಗದ ಶರಾವತಿ ಕಮರಿಯಲ್ಲಿ ಕಟ್ಟಲಾದ ಮಹಾತ್ಮಗಾಂಧಿ ವಿದ್ಯುತ್ ಉತ್ಪಾದನಾ ಕೇಂದ್ರವಿದೆ (1948). ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಶರಾವತಿ ವಿದ್ಯುತ್ ಉತ್ಪಾದನಾ ಕೇಂದ್ರ (1965) ಏಷ್ಯದಲ್ಲಿ ಅತ್ಯಂತ ದೊಡ್ಡ ವಿದ್ಯುತ್ ಉತ್ಪಾದನಾ ಕೇಂದ್ರ.

ಕಾರವಾರದಿಂದ ಭಟ್ಕಳದವರೆಗೆ ಚಾಚಿಕೊಂಡ ಕರಾವಳಿ ಮರಳುಮಯವಾಗಿದೆ. ಘಟ್ಟದ ಕೆಳಗೆ ಕಾರವಾರ, ಅಂಕೋಲ, ಕುಮಟ, ಹೊನ್ನಾವರ, ಭಟ್ಕಳ ತಾಲ್ಲೂಕುಗಳಿವೆ. ಘಟ್ಟದ ಮೇಲೆ ಶಿರಸಿ, ಯಲ್ಲಾಪುರ, ಸಿದ್ಧಾಪುರ, ಹಳಿಯಾಳ, ಜೊಯ್ಡ (ಸುಪ), ಮುಂಡಗೋಡ ತಾಲ್ಲೂಕುಗಳಿವೆ. ಕರಾವಳಿಯ ತಾಲ್ಲೂಕುಗಳಲ್ಲಿ ತೆಂಗು ವಿಪುಲವಾಗಿ ಬೆಳೆದರೆ ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಅಡಕೆ ಬೆಳೆಯುತ್ತದೆ.

ಇಲ್ಲಿಯ ಹವಾಮಾನ ಹಿತಕರ. ಕರಾವಳಿ ತಾಲ್ಲೂಕುಗಳಲ್ಲಿ ಸೆಖೆ ಹೆಚ್ಚು. ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಹೆಚ್ಚು ತಂಪಾದ ವಾಯುಗುಣವಿದೆ. ಮಳೆಗಾಲ ಜೂನ್‌ನಲ್ಲಿ ಆರಂಭಗೊಂಡು ಅಕ್ಟೋಬರ್‌ವರೆಗೂ ಇರುತ್ತದೆ. ವಾರ್ಷಿಕ ಸರಾಸರಿ ಮಳೆ 2836 ಮಿಮೀ. ಕರಾವಳಿಯಲ್ಲಿ ಸಹ್ಯಾದ್ರಿಯ ಅಂಚಿನಲ್ಲಿ ಮಳೆ ಹೆಚ್ಚು. ಪೂರ್ವಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ.

ಜಿಲ್ಲೆಯ ಶೇ.80ರಷ್ಟು ನೆಲ ಅರಣ್ಯಾವೃತ. ಅರಣ್ಯದ ವಿಸ್ತೀರ್ಣ 8,15,057 ಹೆಕ್ಟೇರ್. 10325 ಹೆಕ್ಟೇರುಗಳಲ್ಲಿ ತಾಳೆ ಬೆಳೆಯುತ್ತಾರೆ. ಸಾಗವಾನಿ, ಮತ್ತಿ, ಹೊನ್ನೆ, ನಂದಿ ಮೊದಲಾದ ಗಟ್ಟಿ ಮರಗಳಲ್ಲದೆ ಬೆಂಕಿಪೆಟ್ಟಿಗೆಯ ತಯಾರಿಕೆಗೆ ಉಪಯುಕ್ತವಾದ ಮೃದು ಮರಗಳೂ ಶ್ರೀಗಂಧದ ಮರವೂ ಇವೆ. ಬಿದಿರು ಹೇರಳವಾಗಿದೆ. ತೈಲಯುತ ಸಸ್ಯಜಾತಿಗಳೂ ಇವೆ. ಅಳಲೆ, ಸೀಗೆ, ಜೇನು, ಅರಗು, ಗೋಂದು, ಹಾಲ್ಮಡ್ಡಿ ಇವು ಅರಣ್ಯೋತ್ಪನ್ನಗಳು. ರಾಜ್ಯದ ಅರಣ್ಯೋತ್ಪನ್ನದಲ್ಲಿ ಶೇ.65 ಭಾಗ ಈ ಜಿಲ್ಲೆಯಿಂದ ದೊರೆಯುತ್ತದೆ. ಮ್ಯಾಂಗನೀಸ್, ಕಬ್ಬಿಣ, ಸುಣ್ಣದಶಿಲೆ ಜೇಡಿಮಣ್ಣು, ಇಲ್ಮನೈಟ್, ಗಾಜು, ಸಾಬೂನು, ಅಭ್ರಕ, ಬಾಕ್ಸೈಟ್


ಉತ್ತರ ಕನ್ನಡ ಜಿಲ್ಲೆ
ಬೆಳಗಾವಿ ಜಿಲ್ಲೆ
0 10 20 30
ಉಡುಪಿ ಜಿಲ್ಲೆ

# ಉತ್ತರ ಕನ್ನಡ ಜಿಲ್ಲೆ

ಈ ಜಿಲ್ಲೆಯ ಖನಿಜಗಳು. ಜಿಲ್ಲೆಯಲ್ಲಿ ಅನೇಕ ಕಡೆ ಮ್ಯಾಂಗನೀಸ್ ದೊರೆಯುತ್ತದೆ. ಜೋಯ್ಡ ತಾಲ್ಲೂಕಿನ ಕೊಡ್ಲಿಗವಿಗಳು ಮ್ಯಾಂಗನೀಸ್‌ಗೆ ಪ್ರಸಿದ್ಧವಾಗಿದ್ದರೆ ಹೊನ್ನಾವರ ತಾಲ್ಲೂಕಿನ ಅಪ್ಪರಕೊಂಡದಲ್ಲು, ಕುಮಟ ತಾಲ್ಲೂಕಿನ ಯಾಣದಲ್ಲೂ ಕಬ್ಬಿಣದ ಅದಿರಿನ ನಿಕ್ಷೇಪವಿದೆ. ಸಹ್ಯಾದ್ರಿ ಪಾದಭಾಗಗಳಲ್ಲಿ ಕಬ್ಬಿಣವಲ್ಲದೆ ಇತರ ಲೋಹನಿಕ್ಷೇಪಗಳುಂಟು. ಯಾಣ ಮತ್ತಿತರ ಕಡೆಗಳಲ್ಲಿ ಸುಣ್ಣಶಿಲೆದೊರೆಯುತ್ತದೆ. ಹಲವೆಡೆ ಸ್ವರ್ಣಮಕ್ಷಿಕೆ ಬಿಳಿ ಜೇಡು ಇವೆ.

ಮಧುಕೇಶ್ವರ ದೇವಾಲಯ, ಬನವಾಸಿ

ಜಿಲ್ಲೆಯಲ್ಲಿ ಕೃಷಿ ವೃತ್ತಿ ಮುಖ್ಯ. ಒಟ್ಟು 118996 ಹೆ. ನಿವ್ವಳ ಬಿತ್ತನೆ ಪ್ರದೇಶವಿದೆ. ಇದರಲ್ಲಿ 22,421 ಹೆ. ಗಳಿಗೆ ನೀರಾವರಿ ಸೌಲಭ್ಯವಿದೆ. ಬತ್ತ, ತೆಂಗು, ಕಬ್ಬು, ಅಡಕೆ, ಮೆಣಸು, ಏಲಕ್ಕಿ, ಬಾಳೆ ಮುಖ್ಯವಾದ ಬೆಳೆಗಳು. ಇವಲ್ಲದೆ ಜಿಲ್ಲೆಯಲ್ಲಿ ಗೋಡಂಬಿ, ಮಾವು, ಹುಣಸೆ, ನಿಂಬೆ, ಅನಾನಸು, ಹಲಸು, ಪಪ್ಪಾಯಿ, ಬಟಾಟೆ, ಬದನೆ, ಕಲ್ಲಂಗಡಿ, ಹೈಬ್ರಿಡ್‌ಜೋಳ, ರಾಗಿ, ಶೇಂಗಾ ಇತ್ಯಾದಿಗಳನ್ನು ಬೆಳೆಯುತ್ತಾರೆ. ಬತ್ತ 82197 ಹೆ, ಜೋಳ 290 ಹೆ, ಕಬ್ಬು 872 ಹೆ, ಅಡಕೆ 11160 ಹೆ, ತೆಂಗು 5907 ಹೆ, ಗೋಡಂಬಿ 1827 ಹೆ, ಮೆಣಸು 135 ಹೆ, ಮಾವು 1140 ಹೆ, ಬಾಳೆ 7245 ಹೆ, ಏಲಕ್ಕಿ 369ಹೆ, ಅನಾನಸ್ 315 ಹೆ, ಹಲಸು 206 ಹೆ, ಪರಂಗಿ 114.9 ಹೆ, ಹತ್ತಿ 7245 ಹೆನಲ್ಲಿ ಬೆಳೆಸುತ್ತಾರೆ. ಅಡಕೆಯ ತೋಟದಲ್ಲಿ ಏಲಕ್ಕಿ, ಕಾಳುಮೆಣಸು, ಬಾಳೆ ಬೆಳೆಸುತ್ತಾರೆ. ಗದ್ದೆಯಲ್ಲಿ ರಾಗಿ, ಕಡಲೆ, ತೊಗರಿ ಮೊದಲಾದ ಧಾನ್ಯಗಳನ್ನೂ ಬೆಳೆಯುತ್ತಾರೆ. ಪಶುಪಾಲನೆಯೂ ರೂಢಿಯಲ್ಲಿದೆ.

ಈ ಜಿಲ್ಲೆಯಲ್ಲಿ ಮೀನುಗಾರಿಕೆ ಒಂದು ಮುಖ್ಯ ಉದ್ಯೋಗ. ಒಂದು ಕಾಲದಲ್ಲಿ ಹರಿಕಾಂತ, ತಾಂಡೇಲ, ಖಾರ್ವಿ, ಗಾಬಿತ, ಅಂಬಿಗ, ಮೊಗೇರ, ಆಗೇರ, ಕ್ರಿಶ್ಚಿಯನ್ ದಾಲಜಿಗಳಷ್ಟೇ ಈ ವೃತ್ತಿಯನ್ನವಲಂಬಿಸಿದ್ದರೆ ಇತ್ತೀಚೆಗೆ ಸಾಮಾನ್ಯವಾಗಿ ಎಲ್ಲ ಜಾತಿಯವರೂ ಮೀನು ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಇವರು ಕರಾವಳಿ ಪ್ರದೇಶದ 118 ಹಳ್ಳಿಗಳಲ್ಲಿದ್ದಾರೆ. ಸಮುದ್ರದಿಂದ ಮೀನು ಹಿಡಿಯುವ ಕೇಂದ್ರಗಳೆಂದರೆ ಅರ್ಗಾ, ಭಟ್ಕಳ, ಬಿಣಗಾ, ಚೆಂಡಿಯೆ, ಗಂಗಾವಳಿ, ಕಾರವಾರ, ಹೊನ್ನಾವರ, ಖಾರವಿ, ಕೇಣಿ, ಕೋಡಾರ್, ಕುಮಟ, ಮಾಜಾಳಿ, ಮಂಕಿ, ಮುರ್ಡೇಶ್ವರ, ಶಿರಾಲಿ, ತದಡಿ. ಸಾಗರ ಮೀನುಗಾರಿಕೆಯಲ್ಲಿ 30094 ಟನ್ ಹಿಡಿದರೆ, ಸಿಹಿನೀರಿನಲ್ಲಿ 249ಟನ್ ಮೀನು ಹಿಡಿಯಲಾಗಿದೆ (2001).

ಮರ ಕೊಯ್ಯುವ ಗಿರಣಿ, ಹೆಂಚಿನ ಕಾರ್ಖಾನೆ, ನೇಯ್ಗೆ, ಮೇಣದಬತ್ತಿಯ ಉತ್ಪಾದನೆ, ಸಾಬೂನು ತಯಾರಿಕೆ, ವಾಹನ ದುರಸ್ತಿ, ಮುದ್ರಣ, ಕೆತ್ತನೆಯ ಕೆಲಸ, ಚಿನ್ನ ಬೆಳ್ಳಿಯ ಕೆಲಸ, ಬುಟ್ಟಿ, ಚಾಪೆ ಹೆಣೆಯುವಿಕೆ, ಬೆತ್ತದ ಹೆಣಿಗೆ, ಜೇನು ಸಾಕಣೆ, ಕೋಳಿ ಕುರಿ ಸಾಕಣೆ, ರೇಷ್ಮೆ, ಚರ್ಮದ ಉದ್ಯೋಗ, ವ್ಯಾಪಾರ, ಏಜೆನ್ಸಿಗಳಲ್ಲಿ ಜನ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ಮಂಜುಗೆಡ್ಡೆ ತಯಾರಿಕಾ ಕಾರ್ಖಾನೆಗಳು 52 ಇವೆ. ದಾಂಡೇಲಿಯಲ್ಲಿಯೂ ಕಾಗದದ ಕಾರ್ಖಾನೆ ದೊಡ್ಡ ಉದ್ದಿಮೆ. ಅಲ್ಲದೆ ಪ್ಲೈವುಡ್, ಫೆರೋಮ್ಯಾಂಗನೀಸ್ ಉದ್ದಿಮೆಗಳೂ ಇವೆ. ಕಾರವಾರ, ಬೆಲೆಕೇರಿ, ತದಡಿ, ಕುಮಟ, ಹೊನ್ನಾವರ, ಭಟ್ಕಳ– ಇವು ಮುಖ್ಯ ಬಂದರುಗಳು.

ಕಾರವಾರದಲ್ಲಿ ಸರ್ವಋತು ಬಂದರನ್ನು ಬೃಹತ್ತಾಗಿ ಕಟ್ಟಲಾಗಿದೆ. ಬಳ್ಳಾರಿ ಪ್ರದೇಶದ ಕಬ್ಬಿಣದ ಅದಿರನ್ನು ಸಾಗಿಸಲು ಕಾರವಾರ ಬಂದರು ಉಪಯುಕ್ತವಾಗುತ್ತದೆ.

ಜಿಲ್ಲೆಯಲ್ಲಿ 329ಕಿಮೀಗಳ ರಾಷ್ಟ್ರೀಯ ಹೆದ್ದಾರಿ, 863ಕಿಮೀಗಳ ರಾಜ್ಯ ಹೆದ್ದಾರಿ ಮಾರ್ಗಗಳಿವೆ. ಜಿಲ್ಲಾ ಮುಖ್ಯ ರಸ್ತೆಗಳು 1039ಕಿಮೀ. 24 ಭಾರೀ ಸೇತುವೆಗಳಿವೆ. ಪಶ್ಚಿಮ ಕರಾವಳಿಯ ಹೆದ್ದಾರಿ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ, ಉತ್ತರಕ್ಕೆ ಕಾಶ್ಮೀರದವರೆಗೆ ಸಂಪರ್ಕ ಕಲ್ಪಿಸುತ್ತದೆ. ಕಾರವಾರದಿಂದ ಹುಬ್ಬಳ್ಳಿಯ ಕಡೆಗೆ ಹೋಗುವ ಹೆದ್ದಾರಿ ಅನೇಕ ನಗರಗಳ ಸಂಪರ್ಕ ಕಲ್ಪಿಸುತ್ತದೆ. ನಗರಗಳೊಂದಿಗೆ ಹಳ್ಳಿಗಳ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳೂ ಇವೆ. ಘಟ್ಟದ ಮೇಲೆ ಸಿದ್ದಾಪುರದಿಂದ ಹುಬ್ಬಳ್ಳಿಗೆ, ಕಾರವಾರಕ್ಕೆ, ದಾಂಡೆಲಿಗೆ, ಯಲ್ಲಾಪುರಕ್ಕೆ ಸಂಪರ್ಕ ದೊರಕಿಸುವ ರಸ್ತೆಗಳಿವೆ. ಇತ್ತೀಚೆಗೆ ಕೊಚ್ಚಿ ಮುಂಬೈಗಳಿಗೆ ಹೋಗುವ ಕೊಂಕಣ ರೈಲ್ವೆ ಈ ಜಿಲ್ಲೆಯ ಮೂಲಕ ಹೋಗುತ್ತದೆ. ಜಿಲ್ಲೆಯಲ್ಲಿ 179ಕಿಮೀ ಉದ್ದದ ರೈಲು ಮಾರ್ಗವಿದೆ. 16 ರೈಲು ನಿಲ್ದಾಣಗಳಿವೆ. ಇವುಗಳಲ್ಲಿ ಮುಖ್ಯವಾದವು– ಭಟ್ಕಳ, ಹೊನ್ನಾವರ, ಕುಮಟ, ಗೋಕರ್ಣ, ಅಂಕೋಲ, ಕಾರವಾರ. ಜಿಲ್ಲೆಯಲ್ಲಿ 497 ಅಂಚೆ ಕಚೇರಿಗಳು 152 ದೂರವಾಣಿ ವಿನಿಮಯ ಕೇಂದ್ರಗಳು ಮತ್ತು 90,234 (2006) ದೂರವಾಣಿ ಸಂಪರ್ಕಗಳಿವೆ. ಇದಲ್ಲದೆ ಜಲಮಾರ್ಗದ ಸಂಪರ್ಕವೂ ಇದೆ.

ಜಿಲ್ಲೆಯ ಒಟ್ಟು ಜನಸಂಖ್ಯೆ 13,53,644 ಇದರಲ್ಲಿ 9,65,731 ಜನ ಹಳ್ಳಿಯಲ್ಲಿ ವಾಸಿಸುತ್ತಾರೆ. ಇವರಲ್ಲಿ 4,89,908 ಗಂಡಸರು, 4,75,823 ಹೆಂಗಸರು. ಜನಸಾಂದ್ರತೆ ಪ್ರತಿ ಚ.ಕಿಮೀ.ಗೆ 132 ಜನರು, ಲಿಂಗಾನುಪಾತ ಸಾವಿರ ಪುರುಷರಿಗೆ 970 ಮಹಿಳೆಯರು ಈ ಜಿಲ್ಲೆಯಲ್ಲಿ ಹಿಂದುಗಳೂ (ಶೇ. 83.6) ಮುಸಲ್ಮಾನರೂ (ಶೇ.11.9) ಕ್ರೈಸ್ತರೂ (ಶೇ.3.3) ಇದ್ದಾರೆ. ಬಹುಸಂಖ್ಯಾತರು ಹಿಂದುಗಳು. ಈ ಜಿಲ್ಲೆಯಲ್ಲಿ ಬೌದ್ಧ, ಜೈನ ಧರ್ಮಗಳೂ ಪ್ರಚಾರವಾದವು. 10–12ನೆಯ ಶತಮಾನಗಳಲ್ಲಿ ನಾಥಪಂಥವೂ 16–18ನೆಯ ಶತಮಾನಗಳಲ್ಲಿ ವೀರಶೈವ ಪಂಥದ ಪ್ರಚಾರವೂ ನಡೆದವು. ಜಿಲ್ಲೆಯಲ್ಲಿ ಕ್ರೈಸ್ತ ಮಂದಿರಗಳೂ ಮಸೀದಿಗಳೂ ಸ್ಮಾರ್ತ, ಜೈನ, ವೀರಶೈವ, ವೈಷ್ಣವ ಮಠಗಳೂ ಇವೆ. ಹಿಂದುಧರ್ಮದ ಹಲವು ಪಂಗಡಗಳಿಗೆ ಸೇರಿದ ನೂರಾರು ದೇವಾಲಯಗಳು ಇವೆ. ನಾಥಪಂಥದ ಅವಶೇಷಗಳು ಅಂಕೋಲ, ಬೆಳಂಬರ್, ಹೊನ್ನೆಬೈಲ, ಅಘನಾಶಿನಿ, ಲಿಂಗೆ, ಮಾಜಾಳಿ, ಯಾಣ, ಕವಳೆಯಲ್ಲಿವೆ.

**ಸಹಕಾರ:** 1904ರಲ್ಲಿ ಸಹಕಾರಿಸಂಘಗಳ ನೋಂದಣಿ ಕಾಯಿದೆ ಜಾರಿಗೆ ಬಂದಿತು. 1912ರಲ್ಲಿ ಅದಕ್ಕೆ ತಿದ್ದುಪಡಿ ಬಂತು. 1912ರ ಕಾಯಿದೆಯಂತೆ ಕೃಷಿ, ಕೃಷಿಯೇತರ ಸಾಲ ಸಂಘಗಳು ಅಸ್ತಿತ್ವಕ್ಕೆ ಬಂದವು. 1905ರಲ್ಲಿ ಶಿರಸಿ ಗ್ರಾಮೀಣ ಸಹಕಾರಿ ಸಂಘ, 1912ರಲ್ಲಿ ಹಳಿಯಾಳದ ಸಂಘ, 1913ರಲ್ಲಿ ಪಾಳಾದಲ್ಲಿ ಕೃಷಿೇತರ ಸಾಲ ಸಂಘ ಪ್ರಾರಂಭವಾದುವು. 1911ರಲ್ಲಿ ಶಿರಸಿ ಚರ್ಮಕಾರರ ಪರಸ್ಪರ ಪತ್ತಿನ ಸಂಘ, 1917ರಲ್ಲಿ ಹೊನ್ನಾವರ ಹವ್ಯಕ ಕೊ–ಆಪರೇಟಿವ್ ಸೊಸೈಟಿ, 1918ರಲ್ಲಿ ಕಾರವಾರ ಕೆನರಾ ಕೆಥೊಲಿಕ್ ಕ್ರೆಡಿಟ್ ಸೊಸೈಟಿ, 1915ರಲ್ಲಿ ಮೀನುಗಾರರ ಸಹಕಾರಿ ಸಂಘವಾದ ಹರಿತಂತ್ರ ಖಾರವಿ ಫಿಷರೀಸ್ ಸೊಸೈಟಿ ಕಾರವಾರದಲ್ಲಿ ಪ್ರಾರಂಭವಾದವು.

1912ರಲ್ಲಿ ಕಾರವಾರ ಮತ್ತು ಕುಮಟ ಪಟ್ಟಣ ಬ್ಯಾಂಕುಗಳು ಮತ್ತು ಶಿರಸಿ ಅರ್ಬನ್ ಬ್ಯಾಂಕ್ ಆರಂಭವಾದವು. 1920ರಲ್ಲಿ ಜಿಲ್ಲಾ ಮಧ್ಯವರ್ತಿ ಸಹಕಾರಿಬ್ಯಾಂಕ್, 1922ರಲ್ಲಿ ಕುಮಟದಲ್ಲಿ ತೋಟಗಾರ್ಸ್ ಕೊ–ಆಪರೇಟಿವ್ ಸೇಲ್ಸ್ ಸೊಸೈಟಿ, ಅರೆಕಾನೆಟ್ ಕೊ–ಆಪರೇಟಿವ್–ಸೊಸೈಟಿ, ಕಾರವಾರದಲ್ಲಿ 1935ರಲ್ಲಿ ಆರಂಭವಾದ ಭೂ ಅಡಮಾನಬ್ಯಾಂಕ್,

ಕಲ್ಲಿನ ಮಂಚ, ಸೊಂದ

1913ರಲ್ಲಿ ಸ್ಥಾಪನೆಯಾದ ಶಿರಸಿ ತೋಟಗಾರ್ಸ್ ಸಹಕಾರಿ ಖರೀದಿ ವಿತರಣ ಮತ್ತು ಸಾಲ ಸಂಘ 1962ರ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಗಿ ಪರಿವರ್ತನೆಯಾಯಿತು. 1950ರಲ್ಲಿ ತಾಲ್ಲೂಕು ಕೃಷಿ ಹುಟ್ಟುವಳಿ ಮಾರಾಟ ಸಂಘಗಳು, ಕೂಲಿಕಾರರ ಸಹಕಾರಿ ಸಂಘಗಳು, ಮಹಿಳಾ ಸಹಕಾರಿ ಸಂಘಗಳು ಹುಟ್ಟಿದ್ದವು. ಈಗ ಎಲ್ಲ ತಾಲ್ಲೂಕುಗಳಲ್ಲೂ ಭೂ ಅಭಿವೃದ್ಧಿ ಬ್ಯಾಂಕುಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು, ಕೃಷಿ ಹುಟ್ಟುವಳಿ ಮಾರಾಟ ಸಂಘಗಳು, ನೌಕರರ ಸಹಕಾರಿ ಸಂಘಗಳು, ಸಂಸ್ಕರಣ ಸಹಕಾರಿ ಸಂಘಗಳು, ಮೀನುಗಾರಿಕೆ ಸಹಕಾರಿ ಸಂಘಗಳು, ಸ್ಥಳೀಯ ಅರ್ಬನ್ ಬ್ಯಾಂಕುಗಳು, ಚೇತನಾ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತವೆ. ಇವಲ್ಲದೆ ಕೂಲಿಕಾರರ ಅನೇಕ ಸಂಘಗಳಿವೆ. ಜಿಲ್ಲೆಯಲ್ಲಿ 175 ವ್ಯವಸಾಯ ಸಹಕಾರಿ ಸಂಘಗಳೂ 26 ಗೃಹ ನಿರ್ಮಾಣ ಸಹಕಾರ ಸಂಘಗಳೂ 13 ವ್ಯವಸಾಯೋತ್ಪನ್ನ ಮಾರಾಟ ಸಂಘಗಳೂ 32 ನಿಯಂತ್ರಿತ ಮಾರುಕಟ್ಟೆಗಳು ಇವೆ. 136 ಹಾಲು ಉತ್ಪಾದಕರ ಮಾರಾಟ ಸಂಘಗಳು, 12 ಸಹಕಾರ ಬ್ಯಾಂಕುಗಳು.

**ಉದ್ದಿಮೆಗಳು:** ಎಂಜಿನಿಯರಿಂಗ್ ಉದ್ಯಮ 15, ರಾಸಾಯನಿಕ ಕಾರ್ಖಾನೆಗಳು 3, ಬಟ್ಟೆ ಕಾರ್ಖಾನೆ 2, ಇತರೆ ಸಣ್ಣ ಪ್ರಮಾಣದ ಕಾರ್ಖಾನೆಗಳು 66, ಈ ಕಾರ್ಖಾನೆಗಳಲ್ಲಿ ಉದ್ಯೋಗಿಗಳು 13,243. ಜಿಲ್ಲೆಯಲ್ಲಿ ಕೆಲವು ಬೃಹತ್ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿವೆ.

ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್, ದಾಂಡೇಲಿಯ ಇಂಡಿಯನ್ ಪ್ಲೈವುಡ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ, ಜೈಹಿಂದ್ ಸಾಮಿಲ್, ಬಳ್ಳಾಪುರ ಇಂಡಸ್ಟ್ರೀಸ್ ಲಿ, ಬಿಣಗಾದ, ದಾಂಡೇಲಿ ಫೆರೊ ಅಲಾಯ್ಸ್ ಪ್ರೈ.ಲಿ. ಇವು ಮುಖ್ಯ ಉದ್ದಿಮೆಗಳು. ಇವಲ್ಲದೆ ಸಣ್ಣ ಕೈಗಾರಿಕಾ ಘಟಕಗಳು, ಖಾದಿ ಗ್ರಾಮೋದ್ಯೋಗ ಕರಕುಶಲ ಘಟಕಗಳು ಹಾಗೂ ಕೈಮಗ್ಗದ ಘಟಕಗಳು ಜಿಲ್ಲೆಯಲ್ಲಿವೆ, ಹೆಂಚು ಕಾರ್ಖಾನೆಗಳಿವೆ. ಮೀನುಗಾರಿಕೆ ಘಟಕಗಳು, ದೋಣಿ ಕಟ್ಟುವ ಘಟಕಗಳು,

ಸಹಸ್ರಲಿಂಗ

ಆಹಾರ ಸಂಸ್ಕರಣ ಘಟಕಗಳು, ರಾಸಾಯನಿಕ ಘಟಕಗಳು ಚರ್ಮ ಮತ್ತು ರಬ್ಬರ್ ಘಟಕಗಳು, ಗಂಧ ಚಂದನ ಕೆತ್ತನೆಯ ಘಟಕಗಳು, ಮುದ್ರಣ ಘಟಕಗಳು, ನೂಲುವ ನೇಯುವ ಘಟಕಗಳು, ಜೇನು ಸಾಕಣೆ, ಬೆತ್ತ ಬಿದಿರುಗಳಿಂದ ವಸ್ತುಗಳನ್ನು ತಯಾರಿಸುವ ಘಟಕಗಳು, ಎಣ್ಣೆ ತಯಾರಿಕಾ ಘಟಕಗಳು, ಕುಂಬಾರಿಕೆ ಮುಂತಾದ ಅನೇಕ ಉದ್ಯಮಗಳಿವೆ. ಇವುಗಳಲ್ಲಿ ಕೆಲವು ಗುಡಿ ಕೈಗಾರಿಕೆಗಳು.

**ಶಿಕ್ಷಣ:** ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ. 76.59, ಪುರುಷರು ಶೇ. 84.48, ಮಹಿಳೆಯರು ಶೇ. 68.48. ಜಿಲ್ಲೆಯಲ್ಲಿ ಮೊದಲು ಜೈನ, ವೀರಶೈವ, ಬ್ರಾಹ್ಮಣ ಸಂಪ್ರದಾಯದ ಪಾಠಶಾಲೆಗಳು ನಡೆಯುತ್ತಿದ್ದವು. ಅದಕ್ಕೆ ಅನೇಕ ಅಗ್ರಹಾರಗಳು ಪ್ರಚಲಿತವಿದ್ದವು. ಅವುಗಳೆಲ್ಲ ಬ್ರಿಟಿಷರ ಆಳಿಕೆಯಲ್ಲಿ ಕೊನೆಗೊಳ್ಳುತ್ತ ಬಂದು 1866 ಸುಮಾರಿಗೆ ಸರ್ಕಾರಿ ಶಾಲೆಗಳು ಆರಂಭವಾದವು. ಹಳಿಯಾಳ, ಕುಮಟ, ಶಿರಸಿಗಳಲ್ಲಿ ಆ್ಯಂಗ್ಲೊವರ್ನಾಕ್ಯುಲರ್ ಶಾಲೆಗಳಿದ್ದವು. 1866ರಲ್ಲಿ ಒಂದು ಉರ್ದು ಶಾಲೆ ಹಳಿಯಾಳದಲ್ಲಿ ಆರಂಭವಾಯಿತು.

1864ರಲ್ಲಿ ಕಾರವಾರದಲ್ಲಿ ಮೊದಲ ಹೈಸ್ಕೂಲು ಪ್ರಾರಂಭವಾಯಿತು. 1935–36ರಲ್ಲಿ 853 ಪ್ರಾಥಮಿಕ ಶಾಲೆಗಳಿದ್ದವು. 23,465 ಮಂದಿ ಶಿಕ್ಷಣ ಪಡೆಯುತ್ತಿದ್ದರು. ಇವರಲ್ಲಿ 5776 ವಿದ್ಯಾರ್ಥಿನಿಯರು. ಆ ವರ್ಷದಿಂದ ಪರಿಶಿಷ್ಟ ಜಾತಿಯ, ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಲು ವಿಶೇಷ ಗಮನ ಕೊಡಲಾಯಿತು. ಜಿಲ್ಲಾ ಸ್ಕೂಲ್ ಬೋರ್ಡ್ 1944ರಲ್ಲಿ ಆರಂಭವಾಗಿ ಎಲ್ಲ ಶಾಲೆಗಳು ಸ್ಕೂಲ್ ಬೋರ್ಡ್ ಅಧೀನಕ್ಕೆ ಬಂದು ಶಿಕ್ಷಣದಲ್ಲಿ ಒಂದು ಬಗೆಯ ಶಿಸ್ತು ಬಂತು. ಸ್ಕೂಲ್‌ಬೋರ್ಡಿನಿಂದ ನಿಯಂತ್ರಣಗೊಂಡ ಶಿಕ್ಷಣ ಇಲಾಖೆಯ ಖರ್ಚು ಪೂರೈಸಲು ಸ್ಥಳೀಯ ಆಡಳಿತಗಳು ವಿದ್ಯಾ ಕರ ಸಂಗ್ರಹಿಸತೊಡಗಿದವು.

ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನು (1918) ಜಾರಿಗೆ ಬಂದಾಗ ಹಳಿಯಾಳ ಮತ್ತು ಹೊನ್ನಾವರ ಪುರಸಭೆಗಳು ಈ ಯೋಜನೆಯನ್ನು ಜಾರಿಗೆ ತಂದವು. 1947ರಲ್ಲಿ ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮದಂತೆ 7–11 ವರ್ಷದ ಮಕ್ಕಳು ಶಾಲೆಗೆ ಹೋಗುವುದು ಕಡ್ಡಾಯವಾಯಿತು. ರಾಜ್ಯ ಪುನಾರಚನೆಯ ಕಾಲದಲ್ಲಿ 969 ಪ್ರಾಥಮಿಕ ಶಾಲೆಗಳೂ 71779 ವಿದ್ಯಾರ್ಥಿಗಳೂ 1759 ಶಿಕ್ಷಕರೂ ಇದ್ದರು. 1900ರ ವೇಳೆಗೆ ಘಟ್ಟದ ಕೆಳಗೆ ಐದು ಪ್ರೌಢಶಾಲೆಗಳೂ ಘಟ್ಟದ ಮೇಲೆ ಶಿರಸಿಯಲ್ಲಿ ಒಂದೇ ಒಂದು ಪ್ರೌಢಶಾಲೆಯೂ ಇದ್ದವು. 1947ರ ವರೆಗೂ ಶಿಕ್ಷಣ ಒಂದು ತೀವ್ರ ಆಸಕ್ತಿಯ ವಿಷಯವಾಗಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅದುವರೆಗೆ ಜಿಲ್ಲೆಯಲ್ಲಿ ಪದವಿಯ ಮಟ್ಟದ ಉನ್ನತ ಶಿಕ್ಷಣದ ಸೌಲಭ್ಯಗಳಿರಲಿಲ್ಲ. ಸರ್ಕಾರದಿಂದ ಎಲ್ಲವನ್ನೂ ಅಪೇಕ್ಷಿಸುವುದು ಸಾಧ್ಯವಿಲ್ಲವೆಂದು ಮನಗಂಡ ಸಾರ್ವಜನಿಕರು 1947ರಲ್ಲಿ ಕುಮಟದಲ್ಲಿ ಕೆನರಾ ಎಜುಕೇಶನ್ ಸೊಸೈಟಿಯನ್ನು ಆರಂಭಿಸಿದರು. 1919ರಲ್ಲಿ ಭಟ್ಕಳದಲ್ಲಿ ಆರಂಭವಾದ ಅಂಜುಮನ್ ಎಜುಕೇಶನ್ ಟ್ರಸ್ಟ್, 1952ರಲ್ಲಿ ಸಿದ್ದಾಪುರದಲ್ಲಿ ಸ್ಥಾಪಿಸಿದ ಸಹಕಾರಿ ಶಿಕ್ಷಣ ಪ್ರಸಾರ ಸಮಿತಿ, 1954ರಲ್ಲಿ ಯಲ್ಲಾಪುರದಲ್ಲಿ ಆರಂಭವಾದ ಶಿವಾಜಿ ಎಜುಕೇಶನ್ ಸೊಸೈಟಿ, 1961ರಲ್ಲಿ ಶಿರಸಿಯಲ್ಲಿ ಆರಂಭಿಸಲಾದ ಮಾಡರ್ನ್ ಎಜುಕೇಶನ್ ಸೊಸೈಟಿ, 1962ರಲ್ಲಿ ಅಂಕೋಲದಲ್ಲಿ ಆರಂಭಿಸಲಾದ ನೂತನ ಶಿಕ್ಷಣ ಸಭಾ ಟ್ರಸ್ಟ್, 1970ರಲ್ಲಿ ದಾಂಡೇಲಿಯಲ್ಲಿ ಆರಂಭಿಸಿದ ದಾಂಡೇಲಿ ಎಜುಕೇಶನ್ ಸೊಸೈಟಿ, 1964ರಲ್ಲಿ ಹೊನ್ನಾವರದಲ್ಲಿ ಮಹಾವಿದ್ಯಾಲಯ ಸ್ಥಾಪಿಸಿದ ಮಲ್ನಾಡ್ ಪ್ರೋಗ್ರೆಸ್ಸಿವ್ ಎಜುಕೇಶನ್ ಸೊಸೈಟಿ, 1953ರಲ್ಲಿ ದಿನಕರದೇಸಾಯಿ ನೇತೃತ್ವದಲ್ಲಿ ಸ್ಥಾಪಿತವಾದ ಕೆನರ ವೆಲ್‌ಫೇರ್ ಟ್ರಸ್ಟ್ ಮೊದಲಾದ ಅನೇಕ ಶಿಕ್ಷಣ ಸಂಸ್ಥೆಗಳು ಜಿಲ್ಲೆಯ ಶೈಕ್ಷಣಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಿದವು.

1949ರಲ್ಲಿ ಕುಮಟದಲ್ಲಿ ಕೆನರಾ ಕಾಲೇಜು ಆರಂಭವಾಗಿ ಅನಂತರ ಅದು ಎ.ವಿ.ಬಾಳಿಗಾ ಕಾಲೇಜ್ ಎಂದು ನಾಮಕರಣ ಗೊಂಡಿತು. 1961ರಲ್ಲಿ ಕಾರವಾರದಲ್ಲಿ ಕಾಲೇಜು ಆರಂಭವಾಯಿತು. ಮುಂದಿನ ಹದಿನೈದು ವರ್ಷಗಳಲ್ಲಿ 13 ಪದವಿ ಮಹಾವಿದ್ಯಾಲಯಗಳು, 3 ವೃತ್ತಿಪರ ಮಹಾವಿದ್ಯಾಲಯಗಳು, 3 ಬಿ.ಇಡಿ. ಮಹಾ ವಿದ್ಯಾಲಯಗಳು, ಒಂದು ಕಾನೂನು ಮಹಾವಿದ್ಯಾಲಯ ಆರಂಭವಾದವು. 1984–85ರಿಂದ ಶಿರಸಿ ಕುಮಟ ಮತ್ತು ದಾಂಡೇಲಿಯಲ್ಲಿ ಪಾಲಿಟೆಕ್ನಿಕ್‌ಗಳು ನಡೆಯುತ್ತಿವೆ. 1958ರಲ್ಲಿ ಕಾರವಾರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಆರಂಭವಾಯಿತು. ಈಗ ಈ ಜಿಲ್ಲೆಯ ಭಟ್ಕಳದಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜ್ ಇದೆ. ಸಿದ್ದಾಪುರದಲ್ಲೊಂದು ಆಯುರ್ವೇದ ಮಹಾವಿದ್ಯಾಲಯ ವಿದೆ. ಶಿರಸಿಯಲ್ಲಿ ಅರಣ್ಯ ವಿಜ್ಞಾನ ಕಾಲೇಜು ಇದೆ.

1937ರಲ್ಲಿ ಮುಂಬಯಿ ಸರ್ಕಾರದಿಂದ ಅನುದಾನಿತವಾದ ವಯಸ್ಕರ ಶಿಕ್ಷಣ ಸಮಿತಿಯ ರಚನೆಯಾಗಿತ್ತು. 1947–56ರ ಅವಧಿಯಲ್ಲಿ ಸಮುದಾಯ ಶಿಕ್ಷಣಕ್ಕೆ ಆದ್ಯತೆ ನೀಡಿದ್ದರಿಂದ 4 ತಿಂಗಳ ಮತ್ತು ಆರು ತಿಂಗಳ ಅವಧಿಗಳ ಸಾಕ್ಷರತಾ ವರ್ಗಗಳು ಆರಂಭವಾದವು. 1980ರಲ್ಲಿ ಶಿರಸಿಯಲ್ಲಿ ವಯಸ್ಕರ ಶಿಕ್ಷಣಕ್ಕೆ ಯೋಜನಾ ಕಚೇರಿ ತೆರೆದ ಅನಂತರ ವಯಸ್ಕರ ಶಿಕ್ಷಣದತ್ತ ಹೆಚ್ಚಿನ ಗಮನ ಹರಿಯಿತು. ಈಗ 150 ವಯಸ್ಕರ

ಸಾತೊಡ್ಡಿ ಜಲಪಾತ

ಶಿಕ್ಷಣ ಕೇಂದ್ರಗಳೂ 150 ಸಾಕ್ಷರೋತ್ತರ ತರಬೇತಿ ಕೇಂದ್ರಗಳೂ ಕೆಲಸ ಮಾಡುತ್ತಿವೆ. ಕೇಂದ್ರ ಸರ್ಕಾರದ ಯೋಜನೆಯಡಿ ನವೋದಯ ಶಾಲೆಯೂ ನಡೆಯುತ್ತಿವೆ.

ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಸಿಗುವ ನಿಟ್ಟಿನಲ್ಲಿ ಶಿಕ್ಷಣ ಖಾತೆ 1981–82ರಲ್ಲಿ ಪ್ರೌಢಶಾಲೆಯ 65 ಶಿಕ್ಷಕರಿಗೆ ತರಬೇತು ನೀಡಿ ಅವರನ್ನು ಕೆರಿಯರ್ ಮಾಸ್ಟರ್ಸ್ ಎಂದು ಕರೆದುದಲ್ಲದೆ ಬಿ.ಎಡ್. ವಿದ್ಯಾರ್ಥಿಗಳಿಗೂ ಈ ವಿಷಯ ಪರಿಚಯಿಸಿತು. ಜಿಲ್ಲೆಯಲ್ಲಿ

2292 ಪ್ರಾಥಮಿಕ ಶಾಲೆಗಳು, 231 ಪ್ರೌಢಶಾಲೆಗಳೂ 63 ಪದವಿಪೂರ್ವ ಕಾಲೇಜುಗಳೂ 28 ಸಾಮಾನ್ಯ ಶಿಕ್ಷಣ ಕಾಲೇಜುಗಳು, 5 ಪಾಲಿಟೆಕ್ನಿಕ್‍ಗಳು, 168 ಗ್ರಂಥಾಲಯಗಳು ಇವೆ (2000). ಜಿಲ್ಲೆಯಲ್ಲಿ 11 ಅಲೋಪತಿ ಆಸ್ಪತ್ರೆಗಳು, 3ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆಗಳು, 61 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 120 ಕುಟುಂಬ ಕಲ್ಯಾಣ ಕೇಂದ್ರಗಳು ಇವೆ.

ಜೈನಬಸದಿ, ಹಾಡುವಳ್ಳಿ

**ಇತಿಹಾಸ:** ಇಲ್ಲಿನ ಇತಿಹಾಸ ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ (ಪ್ರ.ಶ.ಪೂ.4–3ನೆಯ ಶತಮಾನ). ಈ ಪ್ರದೇಶ ಮೌರ್ಯ ಸಾಮ್ರಾಜ್ಯದಲ್ಲಿತ್ತೆಂದೂ ವನವಾಸಿ ಅಥವಾ ಇಂದಿನ ಬನವಾಸಿ ಮುಖ್ಯ ಸ್ಥಳವಾಗಿತ್ತೆಂದೂ ಈ ಪ್ರದೇಶಕ್ಕೆ ಬೌದ್ಧ ಭಿಕ್ಷುಗಳನ್ನು ಧರ್ಮಪ್ರಸಾರಕ್ಕಾಗಿ ಅಶೋಕನ ಕಾಲದಲ್ಲಿ ಕಳಿಸಲಾಗಿತ್ತೆಂದೂ ಮಹಾವಂಶ, ದೀಪವಂಶ ಮೊದಲಾದ ಧರ್ಮಗ್ರಂಥಗಳಿಂದ ತಿಳಿಯುತ್ತದೆ. ಮುಂದೆ ಪ್ರ.ಶ.ಪೂ. 2 ರಿಂದ ಪ್ರ.ಶ.3ನೆಯ ಶತಮಾನದಲ್ಲಿ ಸಾತವಾಹನರ ಆಳ್ವಿಕೆಯಲ್ಲಿ ಇತ್ತೆಂದು ಬನವಾಸಿಯ ಉತ್ಖನನಗಳಿಂದ ತಿಳಿಯುತ್ತದೆ. ಇಲ್ಲಿ ಯಜ್ಞಶಾತಕರ್ಣಿಯ ಕೆಲವು ನಾಣ್ಯಗಳು ದೊರಕಿವೆ. 2 ಮತ್ತು 3ನೆಯ ಶತಮಾನದಲ್ಲಿ ಸಾತವಾಹನರ ಸಂಬಂಧಿಗಳಾದ ಚಟುಕುಲದವರು ಇಲ್ಲಿ ಆಳುತ್ತಿದ್ದರು. 4 ರಿಂದ 6ನೆಯ ಶತಮಾನದವರೆಗೆ ಈ ಪ್ರದೇಶ ಕದಂಬರ ಆಳ್ವಿಕೆಯಲ್ಲಿತ್ತು. ಕದಂಬರ ಅನಂತರ ಬಾದಾಮಿಯ ಚಳುಕ್ಯರು (6–8ನೆಯ ಶತಮಾನ), ರಾಷ್ಟ್ರಕೂಟರೂ (8–10ನೆಯ ಶತಮಾನ) ಆಳಿದರು. ರಾಷ್ಟ್ರಕೂಟರ ಮತ್ತು ಅನಂತರ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಜಿಲ್ಲೆಯ ಬಹುಭಾಗ ಬನವಾಸಿ 12000 ಎಂಬ ಪ್ರಮುಖ ಪ್ರಾಂತ್ಯದ ಭಾಗವಾಗಿತ್ತು. ಅಂದಿನ ಆಳರಸರ ಪ್ರತಿನಿಧಿಗಳು ಬನವಾಸಿಯನ್ನು ತಮ್ಮ ಪ್ರಾಂತೀಯ

ಶ್ರೀ ಮಾರಿಕಾಂಬಾ ದೇವಾಲಯ, ಶಿರಸಿ

ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. 11 ಮತ್ತು 13ನೆಯ ಶತಮಾನಗಳಲ್ಲಿ ಹಾನಗಲ್ಲು ಮತ್ತು ಗೋವೆಯ ಕದಂಬರು ಚಾಳುಕ್ಯ ಸಾಮಂತರಾಗಿ ಹೆಚ್ಚುಮಟ್ಟಿಗೆ ಈ ಪ್ರದೇಶವನ್ನು ಆಳುತ್ತಿದ್ದರು. 14ನೆಯ ಶತಮಾನದಾರಭ್ಯ ಸು.16ನೆಯ ಶತಮಾನದವರೆಗೆ ಈ ಜಿಲ್ಲೆಯ ಬಹುಭಾಗ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿತ್ತು. 17–18ನೆಯ ಶತಮಾನಗಳಲ್ಲಿ ಕೆಳದಿಯ ನಾಯಕರು ಮತ್ತು ಬಿಳಗಿ, ಸ್ವಾದಿ, ಗೇರುಸೊಪ್ಪೆ ಮೊದಲಾದ ಪಾಳೆಗಾರ ವಂಶದವರು ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಆಳುತ್ತಿದ್ದರು. 18ನೆಯ ಶತಮಾನದ ಉತ್ತರಾರ್ಧದಲ್ಲಿ, ಉತ್ತರ ಕನ್ನಡ ಜಿಲ್ಲೆ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನದ ಭಾಗವಾಯಿತು. 1799ರಲ್ಲಿ ಶ್ರೀರಂಗಪಟ್ಟಣದ ಪತನವಾದ ಅನಂತರ ಇದು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟು ಮುಂಬಯಿ ಪ್ರಾಂತ್ಯಕ್ಕೆ ಸೇರಿತು. ಸು.150 ವರ್ಷ ಆ ಪ್ರಾಂತ್ಯದಲ್ಲಿದ್ದ ಈ ಜಿಲ್ಲೆ ಭಾಷಾನುಗುಣ ಪ್ರಾಂತರಚನೆಯ ಅನಂತರ (1956) ಕರ್ನಾಟಕ ರಾಜ್ಯಕ್ಕೆ ಸೇರಿತು.

**ಸ್ವಾತಂತ್ರ್ಯಸಮರ:** 1862ಕ್ಕಿಂತ ಮೊದಲು ದಕ್ಷಿಣೋತ್ತರ ಜಿಲ್ಲೆಗಳು ಬೇರೆ ಬೇರೆಯಾಗಿರಲಿಲ್ಲ. ಆಗ ಈ ಇಡೀ ಜಿಲ್ಲೆಗೆ ಕನ್ನಡ ಜಿಲ್ಲೆ ಎಂಬ ಹೆಸರಿತ್ತು. ಈ ಜಿಲ್ಲೆಯ ಒಗ್ಗಟ್ಟು ಮುಂದೆ ಬ್ರಿಟಿಷ್ ಸರ್ಕಾರಕ್ಕೆ ಮುಳುವಾಗಬಹುದೆಂಬ ಶಂಕೆಯಿಂದ ಆಗಿನ ಜಿಲ್ಲಾ ಕಲೆಕ್ಟರ್ ಮುನ್ರೊ ಎಂಬಾತ ಈ ಜಿಲ್ಲೆಯನ್ನು ಎರಡಾಗಿ ಒಡೆಯಬೇಕೆಂದು ಸಲಹೆ ಮಾಡಿದ. ಅದರಂತೆ ಉತ್ತರ ಭಾಗವನ್ನು ಉತ್ತರ ಕನ್ನಡ ಎಂದು ಹೆಸರಿಸಿ ಮುಂಬಯಿ ಪ್ರಾಂತ್ಯಕ್ಕೂ ದಕ್ಷಿಣ ಭಾಗವನ್ನು ದಕ್ಷಿಣ ಕನ್ನಡ ಜಿಲ್ಲೆ ಎಂದು ಕರೆದು ಅದನ್ನು ಮದರಾಸು ಪ್ರಾಂತ್ಯಕ್ಕೂ ಸೇರಿಸಲಾಯಿತು. 1890ರಲ್ಲಿ ಜಿಲ್ಲೆಯ ಜನರಿಂದ ಜಂಗಲ್ ಸವಲತ್ತುಗಳನ್ನು ಕಸಿದುಕೊಳ್ಳಲಾ

ಮುರುಡೇಶ್ವರ ದೇವಾಲಯದ ಗೋಪುರ

ಯಿತು. 1914–15ರಲ್ಲಿ ರೈತರ ಮೇಲೆ ವಿಪರೀತ ಕರ ಹೇರಲಾಯಿತು. ಮಾರಕ ರೋಗಗಳಾದ ಮಲೇರಿಯ, ಪ್ಲೇಗು ಹಬ್ಬಿ ಜನಸಂಖ್ಯೆ ಗಣನೀಯವಾಗಿ ಇಳಿಯಿತು. 1901ರಲ್ಲಿ 53,071 ಇದ್ದ ಜನಸಂಖ್ಯೆ 1931ರ ವೇಳೆಗೆ 37,000ಕ್ಕೆ ಇಳಿದಿತ್ತು. ಬ್ರಿಟಿಷ್ ಆಡಳಿತದಿಂದ ಜನ ಬೇಸರಗೊಂಡಿದ್ದರು.

ಮೂಲತಃ ಲೋಕಮಾನ್ಯ ಟಿಳಕರ ಕೇಸರಿಯ ಅಗ್ರಲೇಖದಿಂದ ಇಲ್ಲಿಯ ಜನ ಸ್ಫೂರ್ತಿ ಪಡೆದರು. ಕನ್ನಡ ಸುವಾರ್ತೆ (1882), ಹವ್ಯಕ ಸುಬೋಧ (1895), ಸಂಯುಕ್ತ ಕರ್ನಾಟಕ, ಕಾನಡಾವೃತ್ತ (1916), ಕಾನಡಾ ಧುರೀಣ, ಬಾಂಬೆಕ್ರಾನಿಕಲ್ ಪತ್ರಿಕೆಗಳಿಂದ ಜನರು ದೇಶವಿದೇಶದ ಸುದ್ದಿಗಳನ್ನು ತಿಳಿದುಕೊಂಡು ಬ್ರಿಟಿಷ್ ಆಡಳಿತದ ವಿರುದ್ಧ ಸಿಡಿದೆದ್ದರು. ಮೊದಲು ಟಿಳಕರ ವಿಚಾರಗಳನ್ನು ಬೆಂಬಲಿಸಿದ ಉತ್ತರ ಕನ್ನಡದ ಜನ ಟಿಳಕರ ಮರಣಾನಂತರ (1920) ಗಾಂಧೀಜಿಯವರು ನೇತೃತ್ವವಹಿಸಿದಾಗ ಅವರ ನಾಯಕತ್ವದಲ್ಲಿ ಹೋರಾಟ ಮುಂದುವರಿಸಿದರು.

ಸ್ವದೇಶಿ ಚಳವಳಿ (1906), ಅಸಹಕಾರ ಆಂದೋಲನ, ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ, ವೈಯಕ್ತಿಕ ಸತ್ಯಾಗ್ರಹ ಇವುಗಳಲ್ಲೆಲ್ಲಾ ಜಾತಿಮತಗಳನ್ನೆಣಿಸದೆ ಸಾವಿರಾರು ಜನ ಬೀದಿಗಿಳಿದು ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ನಿರತರಾದರು. ಅನೇಕರು ಶಾಲೆ ಕಾಲೇಜು ಕಚೇರಿಗಳನ್ನು ಬಿಟ್ಟು, ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ಜೈಲು ಸೇರಿದರು, ಕಠಿಣ ಶಿಕ್ಷೆ ಅನುಭವಿಸಿದರು. ಶಿರಸಿ, ಸಿದ್ದಾಪುರ, ಅಂಕೋಲ ಹೋರಾಟದ ಕೇಂದ್ರಗಳಾಗಿದ್ದವು. ನಾರಾಯಣ ಚಂದಾವರಕರ, ತಿಪ್ಪಯ್ಯ ಮಾಸ್ತರ, ಕಡವೆ ರಾಮಕೃಷ್ಣ ಹೆಗಡೆ, ವಾಮನ ಹೊರಿಕೆ, ಶಂಕರರಾವ್ ಗುಲ್ವಾಡಿ, ತಿಮ್ಮಪ್ಪ ನಾಯಕ, ನಾರಾಯಣ ಮರಾಠೆ, ಶಿರಳಗಿ ಸುಬ್ರಾಯಭಟ್ಟ, ಎಸ್.ಎನ್. ಕೇಶವೈನ್ ಮೋಟೆನ್ಸರ್, ತಿಮ್ಮಪ್ಪ ಹೆಗಡೆ, ದೊಡ್ಮನೆ ನಾಗೇಶ ಹೆಗಡೆ, ಭವಾನಿಬಾಯಿ ಕಾನಗೋಡು, ಸೀತಾಬಾಯಿ ಮಡಗಾಂವಕರ,



ಕಾಳಿ ಸೇತುವೆ, ಕಾರವಾರ

ಜೋಗಿ ಬೀರಣ್ಣ ನಾಯಕ, ಎನ್.ಜಿ.ಪೈ., ನಾರಾಯಣ ಪಿ ಭಟ್ಟ ಮೊದಲಾದವರು ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡು ಉತ್ತರ ಕನ್ನಡ ಜಿಲ್ಲೆಯ ಸಾಧನೆಗೆ ಚರಿತ್ರೆಯ ಪುಟಗಳಲ್ಲಿ ಶಾಶ್ವತ ಸ್ಥಾನ ದೊರಕಿಸಿಕೊಟ್ಟಿದ್ದಾರೆ. ಈ ಜಿಲ್ಲೆಯ ಜನ ಮಾಡಿದ ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ ಚಳವಳಿ ಇವು ಹೊಸ ಇತಿಹಾಸ ನಿರ್ಮಿಸಿದವು.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೂ ಕರ್ನಾಟಕ ಏಕೀಕರಣ ಚಳವಳಿ ಮುಂದುವರಿಯಿತು. 1954ರಲ್ಲಿ ದಿನಕರ ದೇಸಾಯಿ ಮತ್ತು ಪಿ.ಎಸ್.ಕಾಮತರು ಮನವಿಯೊಂದನ್ನು ತಯಾರಿಸಿ ರಾಜ್ಯ ಮರುವಿಂಗಡಣೆ ಆಯೋಗಕ್ಕೆ ಒಪ್ಪಿಸಿದ್ದರು.

1940ರ ಸುಮಾರಿನಲ್ಲಿ ಉಳುವವನೆ ಭೂಮಿಯ ಒಡೆಯ ಎಂಬ ಘೋಷಣೆಯೊಂದಿಗೆ ಚುಟುಕು ಬ್ರಹ್ಮ ದಿನಕರ ದೇಸಾಯಿ ಅವರ ಧುರೀಣತ್ವದಲ್ಲಿ ನಡೆದ ಚಳವಳಿಯಲ್ಲಿ ಜಿಲ್ಲೆಯ ಜನ ಪಾಲ್ಗೊಂಡು ಅದನ್ನು ಒಂದು ಬಲಿಷ್ಠ ಸಂಘಟನೆಯನ್ನಾಗಿ ರೂಪಿಸಿದರು. ಸರ್ಕಾರ ಗಾಬರಿಗೊಂಡು 1940ರಿಂದ ದಿನಕರ ದೇಸಾಯಿಯವರು ಉತ್ತರ ಕನ್ನಡ ಗಡಿಯನ್ನು ಪ್ರವೇಶಿಸದಂತೆ ಆಜ್ಞೆ ಹೊರಡಿಸಿತು. ಆಗ ದಿನಕರ ದೇಸಾಯಿಯವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರಾಗಿ ಮುಂಬಯಿಯಲ್ಲಿದ್ದರು. ಆಗ ಶೇಷಗಿರಿ ಪಿಕಳೆ ಮತ್ತು ದಯಾನಂದ ನಾಡಕರ್ಣಿಯವರು ರೈತಕೂಟದ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡರು. ದಿನಕರ ದೇಸಾಯಿಯವರ ಮಾರ್ಗದರ್ಶನದಲ್ಲಿ ಚಳವಳಿ ನಡೆಯುತ್ತಿತ್ತು. ರೈತರು ಬಲಿಷ್ಠಗೊಳ್ಳಲೂ ಸ್ವತಂತ್ರ್ಯರಾಗಲೂ ಇದು ಕುಮ್ಮಕ್ಕು ನೀಡಿತು. ಈ ಚಳವಳಿಯಲ್ಲಿ ಉತ್ತರ ಕನ್ನಡದ ಸಾವಿರಾರು ರೈತರು ರಾಜಕೀಯ ಪಕ್ಷಗಳ ಕಾರ್ಯಕರ್ತರು ಒಮ್ಮನಸ್ಸಿನಿಂದ ದುಡಿದು ಒಂದು ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು.

**ಪ್ರೇಕ್ಷಣೀಯ ಸ್ಥಳಗಳು:** ಈ ಜಿಲ್ಲೆಯ ದಟ್ಟವಾದ ಕಾಡು, ಕಾಡಿನಲ್ಲಿ ಭೋರ್ಗರೆಯುವ ಜಲಪಾತಗಳು, ವಿಶಾಲವಾದ ಕಡಲ ದಂಡೆಗಳು ಪಯಣಿಗರ ಹೃದಯಗಳನ್ನು ಸೂರೆಗೊಳ್ಳುತ್ತವೆ. ಕಾರವಾರದ ಹತ್ತಿರದ ಅಂಜದೀವ ನಡುಗಡ್ಡೆ, ಕಣಿವೆ ಮಾರ್ಗವಾದ ಅಣಿಘಟ್ಟ, ಶಿರಸಿಯ ಪಡುವಣಕ್ಕಿರುವ ಬೆಡಸಗಾಂವ್ ಗುಡ್ಡ, ಹೊನ್ನಾವರದ ಬಳಿಯ ಬಸವರಾಜದುರ್ಗ, ಜಿಲ್ಲೆಯ ಉತ್ತರ ಭಾಗದ ದರ್ಶನಗುಡ್ಡ, ಭಟ್ಕಳ ಸಮೀಪದ ನೇತ್ರಾಣಿ ಗುಡ್ಡ –ಇವು ಸುಂದರವಾಗಿವೆ. ಹೊನ್ನಾವರ ತಾಲ್ಲೂಕಿನ ಇಡಗುಂಜಿ, ಗೋಕರ್ಣ, ಬನವಾಸಿ, ಉಳವಿ, ಮಂಜುಗುಣಿ, ಸೋದೆ – ಇವು ಪುಣ್ಯ ಕ್ಷೇತ್ರಗಳೆಂದು ಪರಿಗಣಿತವಾಗಿವೆ. ಮುಂಡಗೋಡ ತಾಲ್ಲೂಕಿನ ತಟ್ಟಿಹಳ್ಳಿಯಲ್ಲಿ ಟಿಬೆಟನರ ಬೃಹತ್ ವಸತಿ ಇದೆ. 1966ರಿಂದ ಟಿಬೆಟನ್‍ರು ಕೃಷಿ, ಕರಕುಶಲ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಇವರು ಇಲ್ಲೊಂದು ಬೃಹತ್ ಬುದ್ಧಮಂದಿರ ಕಟ್ಟಿಸಿದ್ದಾರೆ. ಇದೊಂದು ಪ್ರೇಕ್ಷಣೀಯ ಪುಣ್ಯ ಕ್ಷೇತ್ರ. ಕಾಳಿ ನದಿಗೆ ಸೂಪದಲ್ಲಿ ಜಲಾಶಯ ಕಟ್ಟಿದ್ದರಿಂದ ಆ ಪಟ್ಟಣ ಜಲಾವೃತವಾಯಿತು. ಈಗ ಜೋಯಿಡಾ ತಾಲ್ಲೂಕು ಕೇಂದ್ರವಾಗಿದೆ. ಲಂಬಿಕಾ ನಗರದಿಂದ ಮೂರು ಕಿಮೀ ದೂರದಲ್ಲಿರುವ ಸೈಕ್ಸ್ ಪಾಯಿಂಟ್, ಕಾಳಿ ನದಿಯ ವಿಹಂಗಮ ನೋಟ ಸುಂದರವಾಗಿವೆ. ಇದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಈ ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯ ಜನ ಕನ್ನಡ ಮಾತನಾಡುವವರು. ಕೊಂಕಣಿ, ಉರ್ದು, ಮರಾಠಿ ಮಾತನಾಡುವವರೂ ಗಣನೀಯ ಸಂಖ್ಯೆಯಲ್ಲಿದ್ದಾರೆ. ತೆಲುಗು, ತಮಿಳು, ಮಲಯಾಳಂ, ತುಳು, ರಾಜಸ್ಥಾನಿ, ಕೊಡವ, ಹಿಂದಿ, ಗುಜರಾತಿ, ಸಿಂಧಿ, ನೇಪಾಳಿ, ಬಂಗಾಳಿ, ಪಂಜಾಬಿ, ಒರಿಯ, ಪರ್ಷಿಯನ್ ಭಾಷೆ ಮಾತನಾಡುವವರನ್ನೂ ಕಾಣಬಹುದು.

**ಕಲೆ ಮತ್ತು ಸಂಸ್ಕೃತಿ:** ಉತ್ತರ ಕನ್ನಡ ಜಿಲ್ಲೆ ಜನಪದ ಸಂಸ್ಕೃತಿಯ ಬೀಡಾಗಿದೆ. ಹಾಲಕ್ಕಿ, ಹಸಲರು, ನಾಮಧಾರಿ, ನವಾಯತರು, ಸಿದ್ಧಿ, ಹವ್ಯಕ, ಗೊಂಡರು, ಮುಕ್ರಿ, ಸಾರಸ್ವತ, ಪಟಗಾರ, ಭಜಂತ್ರಿ, ದೈವಜ್ಞ (ಜನಿವಾರರು), ಗವಳಿ, ಮೀನುಗಾರರ ಉಪಸಂಸ್ಕೃತಿಗಳು ಇವೆ. ಇವರ ಹಾಡು–ಕುಣಿತ–ಹಬ್ಬಗಳು ಮನಮೋಹಕ. ಇಲ್ಲಿ ಜನಪದ ಗೀತೆಗಳನ್ನು ಸಂಗ್ರಹಿಸಿದ ಪ್ರಮುಖರಲ್ಲಿ ವಿ.ವೆ.ತೋರ್ಕೆ, ಮ.ಗ.ಶೆಟ್ಟಿ, ಜಿ.ಆರ್.ಹೆಗಡೆ, ಎಲ್.ಆರ್.ಹೆಗಡೆ, ಎನ್.ಆರ್.ನಾಯಕ, ಫಾದರ್‍ಸಿ.ಸಿ.ಎ.ಪೈ, ಎಲ್.ಜಿ.ಭಟ್ಟ, ಶಾಂತಿನಾಯಕ, ವಿ.ಗ.ನಾಯಕ ಮೊದಲಾದವರು ಪ್ರಮುಖರು.

ಈ ಜಿಲ್ಲೆಯ ರಂಗಕಲೆಗಳಲ್ಲಿ ಯಕ್ಷಗಾನ ವಿಶಿಷ್ಟ ಸ್ಥಾನ ಗಳಿಸಿದೆ. ಕರ್ಕಿ ಪರಮಯ್ಯ ಹಾಸ್ಯಗಾರ, ಕೆರೆಮನೆ ಶಿವರಾಮ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ ಚಿಟ್ಟಾಣಿ ರಾಮಚಂದ್ರ ಹೆಗಡೆ, ಎಕ್ಟರ್ ಜೋಶಿ, ಕೆರೆಮನೆ ಗಜಾನನ ಹೆಗಡೆ, ಪಿ.ವಿ.ಹಾಸ್ಯಗಾರ, ನಾರಾಯಣ ಹಾಸ್ಯಗಾರ, ಕೃಷ್ಣ ಹಾಸ್ಯಗಾರ, ಕೊಂಡದಕುಳಿ ರಾಮ ಹೆಗಡೆ, ಲಕ್ಷ್ಮಣ ಹೆಗಡೆ, ಮುರೂರು ದೇವರು ಹೆಗಡೆ, ಗೋಡೆ ನಾರಾಯಣ ಹೆಗಡೆ, ಡಿ.ಜಿ.ಹೆಗಡೆ, ಶಿರಳಗಿ ಭಾಸ್ಕರ ಜೋಶಿ, ಬಳ್ಕೂರ ಕೃಷ್ಣಯಾಜಿ, ವೆಂಕಟೇಶ ಜಲವಳ್ಳಿ, ಕಡತೋಕ ಮಂಜುನಾಥ ಭಾಗವತ, ನೆಬ್ಬೂರು ನಾರಾಯಣ ಭಾಗವತ ಪ್ರಮುಖ ಕಲಾವಿದರು. ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಗೆ ಜಾನಪದ ಶ್ರೀ ಪ್ರಶಸ್ತಿ ಬಂದಿದೆ (2004). ತಾಳಮದ್ದಳೆಯ ಕಲಾವಿದರು ಅನೇಕರಿದ್ದಾರೆ. ನಾಟಕ ಕ್ಷೇತ್ರದಲ್ಲಿ ಹುಲಿಮನೆ ಸೀತಾರಾಮ ಶಾಸ್ತ್ರೀ ಜಯಕರ್ನಾಟಕ ನಾಟಕ ಮಂಡಳಿ ಸ್ಥಾಪಿಸಿ ನಡೆಸಿದರು. ಸುಗ್ಗಿಕುಣಿತ, ಗುಮಟೆಯ ಪಾಂಡು, ದೋಣಿಯ ಹಾಡು, ಬೆಸ್ತರ ಪದ, ಜನಪದ ಗೀತೆಗಳು, ಸಿದ್ಧಿಯರ ಕುಣಿತ– ಹಾಡುಗಳೂ ಜಿಲ್ಲೆಯ ಜನರನ್ನು ಮನರಂಜಿಸುತ್ತ ಬಂದಿವೆ.

ಸಾಹಿತ್ಯ ಕ್ಷೇತವನ್ನು ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ, ಜಿ.ಆರ್.ಪಾಂಡೇಶ್ವರ, ಗೌರೀಶ ಕಾಯ್ಕಿಣಿ, ಯಶವಂತ ಚಿತ್ತಾಲ, ಬಿ.ಎಚ್. ಶ್ರೀಧರ, ಶಾಂತಿನಾಥ ದೇಸಾಯಿ, ಸು.ರಂ.ಎಕ್ಕುಂಡಿ, ಅರವಿಂದ ನಾಡಕರ್ಣಿ, ಸ.ಪ.ಗಾಂವಕರ್, ಕೃಷ್ಣಾನಂದ ಕಾಮತ್, ಪ.ಸು.ಭಟ್ಟ, ಸುಂದರ ನಾಡಕರ್ಣಿ, ವಿ.ಜಿ.ಭಟ್ಟ, ದಿನಕರ ದೇಸಾಯಿ, ವಿ.ಜಿ.ಶಾನಭಾಗ, ಶಾ.ಮಂ.ಕೃಷ್ಣರಾಯ, ಗಂಗಾಧರ ಚಿತ್ತಾಲ, ಜಿ.ಜಿ.ಹೆಗಡೆ, ಜಿ.ಎಸ್.ಭಟ್ಟ, ಜಯಂತ ಕಾಯ್ಕಿಣಿ, ನಿರಂಜನ ವಾನಳ್ಳಿ, ರಾಜೀವ ಅಜ್ಜಿಬಳ ಇವರು ಸಮೃದ್ಧಗೊಳಿಸಿದ್ದಾರೆ. ಹೊಸ ತಲೆಮಾರಿನ ಅನೇಕ ಕವಿಗಳೂ ಲೇಖಕರೂ ಭರವಸೆ ಮೂಡಿಸುತ್ತಿದ್ದಾರೆ.

ಈ ಜಿಲ್ಲೆಯ ಪತ್ರಿಕೆಗಳಲ್ಲಿ ಹವ್ಯಕ ಸುಬೋಧ (1885), ಕಾರವಾರ ಚಂದಿಕೆ (1885), ಮಕ್ಕಳ ಪತ್ರಿಕೆ ಹಿತೋಪದೇಶ (1888), ಸರಸ್ವತಿ (1900), ವಿನೋದಿನಿ (1904)– ಇವು ಮಾಸಪತ್ರಿಕೆಗಳು. 1919ರಲ್ಲಿ ಕುಮಟದಿಂದ ಕಾನಡಾ ಧುರೀಣ (1922), ನಂದಿನಿ (1925) ಮಾಸ ಪತ್ರಿಕೆ ಮೊದಲು ಗೋಕರ್ಣದಿಂದ ಪ್ರಕಟಿಸಲಾಗುತ್ತಿದ್ದು ಕೆಲಕಾಲ ನಿಂತು 1937 ರಿಂದ ಶಿರಸಿಯಿಂದ ಪ್ರಕಟವಾಗತೊಡಗಿತು. ಶರಣ ಸಂದೇಶ (1931), ನವಚೇತನ (1941), ಸಾಧನ (1949) ಹೊನ್ನಾವರದಿಂದ ಪ್ರಕಟವಾಗುತ್ತಿತ್ತು. ಮಲಯವಾಣಿ (1955) ವಾರ್ಷಿಕ ಪತ್ರಿಕೆ. 1956ರಲ್ಲಿ ಭಾಮಾ ಮಾಸ ಪತ್ರಿಕೆ ಶಿರಸಿಯಿಂದ ಪ್ರಕಟವಾಗತೊಡಗಿತು. 1957ರಲ್ಲಿ ಶಿರಸಿಯಿಂದ ಪ್ರಕಟವಾಗುತ್ತಿದ್ದ ನಗರವಾಣಿ ಅಲ್ಪಾಯುವಾಯಿತು. ಸಹಕಾರಿ ಸಮಾಜ (1979), ಯಕ್ಷಗಾನ (1959), ಗೋಕರ್ಣ ಗೋಷಿವಿ (1959), ಸ್ವತಂತ್ರವಾಣಿ (1960), ಮಧುವನ (1960), ಗ್ರಾಮಜೀವನ, ಸಮಾಜ (1965), ಸಂಘಟನೆ, ರಮಣ ಸಂದೇಶ, (1971), ಶಿರಸಿ ಸಮಾಚಾರ, ಸಹಚರ, ಸಮನ್ವಯ (1975) ಇವಲ್ಲದೆ ಕಡಲಧ್ವನಿ (1983), ಆಚಾರ (1980), ಕರಾವಳಿ ಗ್ರಾಮ ವಿಕಾಸ (1987), ಗ್ರಾಮ ಭಾರತಿ ಅಭಯ (1965), ನುಡಿಜೇನು (1968), ಗಿರಿಘರ್ಜನೆ, ಯುಗವಾಣಿ (1964), ಸಮಾಜವಾಣಿ (1965), ಚುನಾವಣೆ, ಆಧ್ಯಾತ್ಮಿಕ ಪತ್ರಿಕೆ ಜೀವೋತ್ತಮ ಉಲ್ಲೇಖನೀಯ. ಮುನ್ನಡೆ (1988) ದಿನಪತ್ರಿಕೆಯಾಗಿ 2000ದಲ್ಲಿ ನಿಂತುಹೋಯಿತು. ಜಿಲ್ಲೆಯ ಮೊದಲ ದೈನಿಕ ಲೋಕಧ್ವನಿ (1983), ಜನಮಾಧ್ಯಮ (1988), ಧ್ಯೇಯನಿಷ್ಠ ಪತ್ರಕರ್ತ (1991), ಕರಾವಳಿಯ ಮುಂಜಾವು (1994) – ಇವು ಇಂದಿನ ಪ್ರಮುಖ ಪತ್ರಿಕೆಗಳು.

ದೀರ್ಘಕಾಲ ನಡೆದ ಪತ್ರಿಕೆಗಳಲ್ಲಿ ಕಾನಡಾವೃತ್ತದ ಸ್ಥಾನ ಅದ್ವಿತೀಯ. ಇದು 1916ರಲ್ಲಿ ಪ್ರಾರಂಭವಾಗಿ ಈಗಲೂ ನಡೆಯುತ್ತಿದೆ. 1946ರಲ್ಲಿ ಆರಂಭವಾದ ನಾಗರಿಕ ಈಗಲೂ ಪ್ರಕಟವಾಗುತ್ತಿದೆ. 1960ರಲ್ಲಿ ಜನತಾ, 1955ರಲ್ಲಿ ದಿನಕರ ದೇಸಾಯಿ ಪ್ರಾರಂಭಿಸಿದ ಜನಸೇವಕ 1972ರ ವರೆಗೆ ನಡೆದು ಅನಂತರ ನಿಂತಿತು. ಶೃಂಗಾರ ಹೊನ್ನಾವರದಿಂದ ಪ್ರಕಟವಾಗುತ್ತಿತ್ತು.

*

**ಉತ್ತರಕರ್ಮ:** ಸತ್ತ ಮೇಲೆ ಮಾಡುವ ಕರ್ಮ. ಉತ್ತರಕ್ರಿಯೆ, ಅಂತ್ಯಕ್ರಿಯೆ ಅಂತ್ಯೇಷ್ಟಿ ಎಂದೂ ಕರೆಯುತ್ತಾರೆ. ಮನುಷ್ಯ ಜೀವಂತನಾಗಿರುವಾಗ ಮಾಡತಕ್ಕ ಜಾತಕರ್ಮಾದಿ ಸಂಸ್ಕಾರಗಳು ಪೂರ್ವಕ್ರಿಯೆಗಳಾದರೆ ಮರಣೋತ್ತರ ಕಾಲದಲ್ಲಿ ಮಾಡುವ ಶರೀರದಹನ

ಅಸ್ಥಿಸಂಚಯನ, ಪಿಂಡದಾನ, ಉದಕದಾನ, ಏಕೋದ್ದಿಷ್ಟ ಶ್ರಾದ್ಧ. ಸಪಿಂಡೀಕರಣಶ್ರಾದ್ಧ ಮೊದಲಾದವು ಅಪರಕ್ರಿಯೆ ಅಥವಾ ಉತ್ತರಕರ್ಮಗಳು. ಇದನ್ನು ಮಾಡುವಾಗ ಕರ್ತೃವಿಗೆ ಆಶೌಚವಿರುತ್ತದೆ.

ಜೀವಿತಕಾಲದಲ್ಲಿ ಯಾಗ ಮಾಡಿದವ ಸತ್ತರೆ ಅವನಿಗೆ ಮಾಡುವ ಉತ್ತರಕರ್ಮ ವಿಧಿಯ ಕ್ರಮದಲ್ಲಿ ವ್ಯತ್ಯಾಸಗಳಿವೆ. ಆತ ಇಟ್ಟುಕೊಂಡಿದ್ದ ಧಾರಾಗ್ನಿ, ಹೋಮ ಸಾಧನ ಪದಾರ್ಥಗಳು–ಇವೆಲ್ಲ ಅವನೊಡನೆಯೇ ನಷ್ಟವಾಗುತ್ತವೆ.

ಪ್ರಾಣ ಹೋದ ಮೇಲೆ ನಿರ್ಜೀವವಾದ ಪಾರ್ಥಿವ ಶರೀರವನ್ನು, ಹೋಮಮಾಡಿ ಸಿದ್ಧಪಡಿಸಿದ ಅಗ್ನಿಯಲ್ಲಿ ಸುಡುವ ವರ್ಗ ಒಂದು. ಅದನ್ನು ಭೂಮಿಯಲ್ಲಿ ಸಮಾಧಿ ಮಾಡುವ ವರ್ಗ ಮತ್ತೊಂದು.

ಸಂನ್ಯಾಸಿಗಳು ಸತ್ತರೆ ಅವರ ಶರೀರವನ್ನು ಉದ್ದಿಷ್ಟ ಸ್ಥಳದಲ್ಲಿ ಸಮಾಧಿ ಮಾಡುತ್ತಾರೆ.

ಹಿಂದುಗಳಲ್ಲಿ ಯಾವ ವರ್ಗದವರೇ ಆಗಲಿ ಹೆಣವನ್ನು ಬಿದಿರಿನಿಂದ ತಯಾರಿಸಿದ ಚಟ್ಟದಲ್ಲಿಟ್ಟು, ನಾಲ್ಕು ಮಂದಿ ಹೊತ್ತು ಊರಿನ ಹೊರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅದಕ್ಕೆ ಸಂಸ್ಕಾರಗಳನ್ನು ನಡೆಸುತ್ತಾರೆ. ಶವವನ್ನು ಸಾಗಿಸುವಾಗ ಶವದ ಮುಖ ಊರನ್ನು ನೋಡುವಂತಿರಬಾರದು.

ಸುಡುವ ಅಥವಾ ಹೂಳುವ ನಿವೇಶನಕ್ಕೆ ಶ್ಮಶಾನವೆಂದು ಹೆಸರು. ಊರ ಹೊರಗಿನ ಈ ನಿರ್ದಿಷ್ಟ ನಿವೇಶನ ಈ ಉತ್ತರಕರ್ಮಕ್ಕಾಗಿಯೇ ಮೀಸಲಾದ ಜಾಗ. ಸತ್ತ ಮಾರನೆಯ ದಿನ ಅಥವಾ ಮೂರನೆಯ ದಿನ ಸುಟ್ಟ ಅಥವಾ ಹೂಳಿರುವ ಸ್ಥಳಕ್ಕೆ ಮತ್ತೆ ಹೋಗಿ ಸತ್ತ ಆ ಚೇತನವನ್ನು ಉದ್ದೇಶಿಸಿ ಹಾಲು ತುಪ್ಪ ಮೊದಲಾದವನ್ನು ಅಲ್ಲಿ ಹಾಕುತ್ತಾರೆ.

ಶರೀರವನ್ನು ಬಿಟ್ಟು ಹೋದ ಚೇತನ ಪ್ರೇತವಾಗುತ್ತದೆಯೆಂಬುದು ವೈದಿಕ ನಂಬಿಕೆ. ಆ ಪ್ರೇತತ್ವವನ್ನು ನಿವೃತ್ತಿಗೊಳಿಸಿ ಪಿತೃತ್ವವನ್ನು ಪಡೆಯುವಂತೆ ಮಾಡುವ ಕ್ರಿಯೆಯೇ ಉತ್ತರಕ್ರಿಯೆ.

ಶರೀರವನ್ನು ಸುಟ್ಟ ಮಾರನೆಯ ದಿನ ಅಸ್ಥಿಸಂಚಯನ ಎಂದರೆ ಮೂಳೆ ಮೊದಲಾದವನ್ನು ಸಂಗ್ರಹಿಸಿ ಪವಿತ್ರವಾದ ತೀರ್ಥ ಅಥವಾ ನದಿಯಲ್ಲಿ ಮಂತ್ರಪೂರ್ವಕ ವಿಸರ್ಜಿಸುವುದು. ಅಂದೇ ಉತ್ತರಕ್ರಿಯೆಗೆ ಪ್ರಾರಂಭ. ಸತ್ತ ಪ್ರೇತರೂಪಿಯಾದ ಚೇತನವನ್ನು ಪಾಷಾಣದಲ್ಲಿ (ಕಲ್ಲಿನಲ್ಲಿ) ಆವಾಹನೆ ಮಾಡಿ ಅದನ್ನು ಒಂದು ಗುಳಿಯಲ್ಲಿಟ್ಟು ಅದಕ್ಕೆ ಪ್ರತಿ ನಿತ್ಯವೂ ಪಿಂಡ (ಅನ್ನದ ಉಂಡೆ), ತಿಲೋದಕಗಳನ್ನು (ಎಳ್ಳು ನೀರು) ಮಂತ್ರಪೂರ್ವಕ ಬಿಟ್ಟು ತೃಪ್ತಿಪಡಿಸುತ್ತಾರೆ. ಹತ್ತನೆಯ ದಿನದಲ್ಲಿ ಅದಕ್ಕೆ ಪ್ರಭೂತ ಬಲಿಯನ್ನು ಕೊಟ್ಟು ಕಲ್ಲನ್ನು ವಿಸರ್ಜನೆ ಮಾಡುತ್ತಾರೆ. ಅಲ್ಲಿಂದ ಮುಂದೆ ಅದಕ್ಕೆ ಪಿತೃತ್ವ ಪ್ರಾಪ್ತಿ. ಆ ಬಳಿಕ ಹನ್ನೊಂದನೆಯ ದಿನ ಆ ಚೇತನವನ್ನು ಮಾತ್ರ ಉದ್ದೇಶಿಸಿ ಮಾಡುವ ಶ್ರಾದ್ಧಕ್ಕೆ ಏಕೋದ್ದಿಷ್ಟ ಶ್ರಾದ್ಧವೆಂದು ಹೆಸರು. ಈ ಶ್ರಾದ್ಧವನ್ನು ಮಾಡಿದ ಮೇಲೆ ಸಪಿಂಡೀಕರಣ ಶ್ರಾದ್ಧವನ್ನು ಮಾಡಿ ಆ ಚೇತನವನ್ನು ಪಿತೃಗಳ ವರ್ಗಕ್ಕೆ (ಗುಂಪಿಗೆ) ಸೇರಿಸುತ್ತಾರೆ. ಈ ಸಪಿಂಡೀಕರಣ ಶ್ರಾದ್ಧವನ್ನು ಹನ್ನೆರಡನೆಯ ದಿನದಲ್ಲಾಗಲೀ ಅಥವಾ ವರ್ಷಾಂತ್ಯದೊಳಗೆ ಶಾಸ್ತ್ರದಲ್ಲಿ ತಿಳಿಸಿರುವ ನಿಯಮದಂತೆ ಗೊತ್ತಾದ ದಿನದಲ್ಲಾಗಲೀ ಮಾಡಬಹುದು. ಹೀಗೆ, ಸತ್ತ ಬಳಿಕ ಪಾರ್ಥಿವ ಶರೀರವನ್ನು ಸಂಸ್ಕರಿಸಿ ಪ್ರೇತತ್ವವನ್ನು ನೀಗಿಸಿ ಪಿತೃವರ್ಗಕ್ಕೆ ಸೇರಿಸುವವರೆಗಿನ ಕರ್ಮವೇ ಉತ್ತರಕರ್ಮ. ಈ ಕರ್ಮಗಳನ್ನು ಮಾಡುವಾತ ಅನೇಕ ನಿಯಮಗಳಿಗೆ ಬದ್ಧನಾಗಿರಬೇಕು. ಇದು ನಡೆಯುವವರೆಗೂ ಸಪಿಂಡ ಬಂಧುವರ್ಗದಲ್ಲಿ ಯಾವ ಶುಭಕಾರ್ಯವೂ ನಡೆಯುವಂತಿಲ್ಲ.

ಉತ್ತರಕ್ರಿಯೆ ನಡೆಸುವುದರಲ್ಲಿ ಮೊದಲನೆಯ ಹಕ್ಕು ಹಿರಿಯ ಮಗನದು. ಅವನು ಆ ವೇಳೆಯಲ್ಲಿಲ್ಲದೆ ಉಳಿದ ಮಕ್ಕಳಲ್ಲಿ ಯಾರು ಕ್ರಿಯೆ ಮಾಡಿದ್ದರೂ ಹಿರಿಯನ ಕರ್ತವ್ಯ ತಪ್ಪುವಂತಿಲ್ಲ. ಗಂಡುಮಕ್ಕಳಿಲ್ಲದಿದ್ದಾಗ ಸ್ಮೃತಿಗ್ರಂಥಗಳಲ್ಲಿ ತಿಳಿಸಿರುವ ಕ್ರಮದಂತೆ ಇತರ ಬಂಧುವರ್ಗದಲ್ಲಿ ಮತ್ತೆ ಯಾರಾದರೂ ಈ ಕರ್ಮವನ್ನು ಮಾಡಬಹುದು. (ಎಸ್.ಎನ್.ಕೆ.)

**ಉತ್ತರ ಕುಮಾರ:** ಮಹಾಭಾರತದ ಒಂದು ಪಾತ್ರ. ಈತನ ಪ್ರಸಂಗ ಜನತೆಯ ನೆನಪಿನಲ್ಲಿ ಅಚ್ಚಳಿಯದೆ ನಿಂತಿದೆ. ಈತ ಮತ್ಸ್ಯದೇಶದ ರಾಜನಾದ ವಿರಾಟ, ಸುದೇಷ್ಣೆಯರ ಮಗ. ದ್ರೌಪದೀ ಸ್ವಯಂವರ ಕಾಲದಲ್ಲಿ ಈತ ಪಾಂಚಾಲ ದೇಶಕ್ಕೂ ಹೋಗಿದ್ದ. ಭೂಮಿಂಜಯ, ವಿರಾಟಪುತ್ರ, ಮತ್ಸ್ಯಪುತ್ರ ಎಂಬ ಹೆಸರುಗಳೂ ಈತನಿಗೆ ಇದ್ದವು.

ಕೌರವರು ಉತ್ತರದ ದಿಕ್ಕಿನಲ್ಲಿ ಗೋಹರಣ ಮಾಡಿದ್ದನ್ನು ತಿಳಿದ ಉತ್ತರ ಕುಮಾರ ಅವರ ಮೇಲೆ ಯುದ್ಧಕ್ಕೆ ಹೋಗಲು ತನಗೆ ಸರಿಯಾದ ಸಾರಥಿಯಿಲ್ಲವೆಂದು ಚಡಪಡಿಸುತ್ತಾನೆ. ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನನನ್ನು ಸಾರಥಿಯನ್ನಾಗಿ ನೇಮಿಸಿಕೊಳ್ಳಬೇಕೆಂದು ಸೈರಂಧ್ರಿ ಸೂಚಿಸುತ್ತಾಳೆ. ಬೃಹನ್ನಳೆಯನ್ನು ಸಾರಥಿಯಾಗೆಂದು ಕೇಳಿದಾಗ ಬೇಕೆಂದೇ ಬೃಹನ್ನಳೆ ಯುದ್ಧಭೂಮಿಯಲ್ಲಿ ಸಾರಥಿಯಾಗಲು ತನ್ನ ಅಸಮರ್ಥತೆಯನ್ನು ಹೇಳಿಕೊಂಡಾಗ ಉತ್ತರ ಕುಮಾರ ತನ್ನಲ್ಲಿ ಇಲ್ಲದ ಪೌರುಷವನ್ನು ಅರಮನೆಯ ಹೆಂಗೆಳೆಯರ ಮುಂದೆ ಕೊಚ್ಚಿಕೊಳ್ಳುವುದು ಮಹಾಭಾರತದಲ್ಲಿ ಒಂದು ಸ್ವಾರಸ್ಯ ಪ್ರಸಂಗ. ಈ ಪ್ರಸಂಗವನ್ನು ಕುಮಾರವ್ಯಾಸ ತನ್ನ ಗದುಗಿನ ಭಾರತದಲ್ಲಿ ರಸಪೂರ್ಣವಾಗಿ ಚಿತ್ರಿಸಿದ್ದಾನೆ. ಅನಂತರ ಬೃಹನ್ನಳೆಯ ಸಾರಥ್ಯವನ್ನು ಪಡೆದ ಉತ್ತರ ಕುಮಾರ ಯುದ್ಧ ಭೂಮಿಯನ್ನು ನೋಡಿದ ಕೂಡಲೇ ಹೆದರಿ ನಿಲ್ಲುತ್ತಾನೆ. ಆತನಿಗೆ ಧೈರ್ಯ ತುಂಬಿ ಅರ್ಜುನ ತಾನೇ ಯುದ್ಧ ಮಾಡುತ್ತಾನೆ. ಆ ಸಮಯದಲ್ಲಿ ಉತ್ತರಕುಮಾರ ಅರ್ಜುನನ ಸಾರಥಿಯಾಗಿ ರಥವನ್ನು ನಡೆಸುತ್ತಾನೆ. ಮುಂದೆ ಮಹಾಭಾರತ ಯುದ್ಧದಲ್ಲಿ ಶಲ್ಯನಿಂದ ಹತನಾಗುತ್ತಾನೆ. ಶೌರ್ಯವಿಲ್ಲದೆ ಬಡಾಯ ಕೊಚ್ಚುವವರನ್ನು ಸಾಮಾನ್ಯವಾಗಿ ಉತ್ತರಕುಮಾರನೆನ್ನುವುದು ರೂಢಿ. ಉತ್ತರನ ಪೌರುಷ ಒಲೆಯ ಮುಂದೆ, ನಿನ್ನ ಪೌರುಷ ಎಲೆಯ ಮುಂದೆ ಎನ್ನುವುದು ಗಾದೆ ಮಾತಾಗಿದೆ. *

**ಉತ್ತರ ಕೆರೊಲೀನ:** ಅಮೆರಿಕ ಸಂಯುಕ್ತಸಂಸ್ಥಾನದ ಆಗ್ನೇಯ ಭಾಗದಲ್ಲಿರುವ ಒಂದು ರಾಜ್ಯ. ಮೊಟ್ಟಮೊದಲು ಆ ಒಕ್ಕೂಟ ಸೇರಿದ 13 ರಾಜ್ಯಗಳಲ್ಲಿ ಇದೂ ಒಂದು; ಒಕ್ಕೂಟ ಸಂವಿಧಾನವನ್ನು ಸ್ಥಿರೀಕರಿಸಿದವುಗಳಲ್ಲಿ ಹನ್ನೆರಡನೆಯದು. ಉತ್ತರದಲ್ಲಿ ವರ್ಜೀನಿಯ, ಪೂರ್ವ ಆಗ್ನೇಯಗಳಲ್ಲಿ ಅಟ್ಲಾಂಟಿಕ್ ಸಾಗರ, ದಕ್ಷಿಣದಲ್ಲಿ ದಕ್ಷಿಣ ಕೆರೊಲೀನ ಮತ್ತು ಜಾರ್ಜಿಯ, ಪಶ್ಚಿಮ ವಾಯವ್ಯಗಳಲ್ಲಿ ಟೆನಿಸಿ ಇವೆ. ಉ.ಅ. 30° 52' ಮತ್ತು 26° 34' ಹಾಗೂ ಪ.ರೇ. 75° 27' ಮತ್ತು 84° 20' ನಡುವೆ ಇರುವ ಈ ರಾಜ್ಯದ ಪೂರ್ವ ಪಶ್ಚಿಮ ಪರಮಾವಧಿ ಉದ್ದ 805 ಕಿಮೀ. ವಿಸ್ತೀರ್ಣ 136420 ಚ.ಕಿಮೀ. ಜನಸಂಖ್ಯೆ : 8,049,313 (2000) ವಿಸ್ತಾರದಲ್ಲಿ ಇದು ಸಂಯುಕ್ತ ಸಂಸ್ಥಾನದಲ್ಲಿ 28ನೆಯದು. ಕೆರೊಲೀನ ಎಂದರೆ ಚಾರ್ಲ್ಸ್‌ನ ದೇಶ. ಇಂಗ್ಲೆಂಡಿನ ದೊರೆ ಒಂದನೆಯ ಚಾರ್ಲ್ಸ್‌ನ ಗೌರವಾರ್ಥವಾಗಿ ಈ ಹೆಸರನ್ನು 1629ರಲ್ಲಿ ಮೊದಲು ಬಳಸಲಾಯಿತು, ರಾಜಧಾನಿಯ ಹೆಸರು ರ್‍ಯಾಲಿ–ಸರ್ ವಾಲ್ಟರ್ ರ್‍ಯಾಲಿಯ ಜ್ಞಾಪಕಾರ್ಥ.




**ಮೇಲ್ಮೈ ಲಕ್ಷಣ:** ಈ ರಾಜ್ಯದ ಪೂರ್ವಾರ್ಧ ಭಾಗ ಕರಾವಳಿಯ ಬಯಲು. ಮಧ್ಯದಲ್ಲಿ ಪೀಡ್‌ಮಾಂಟ್ ಪ್ರಸ್ಥಭೂಮಿ. ಪಶ್ಚಿಮದಲ್ಲಿ ಅಪಲೇಷಿಯನ್ ಪರ್ವತ. ಸಮುದ್ರತೀರದ ಬಳಿಯ ನೆಲ ತಗ್ಗು, ಜೌಗು; ಮೈದಾನದ ಪಶ್ಚಿಮ ಭಾಗ ಫಲವತ್ತು; ಇಲ್ಲಿನ ಕೊಳೆತ ಸಸ್ಯಪದಾರ್ಥ ಮಿಶ್ರಿತವಾದ ಮರಳುಜೇಡಿಮಣ್ಣು ಹೊಗೆಸೊಪ್ಪಿನ ಬೆಳೆಗೆ ಪ್ರಶಸ್ತ. ಇದು ರಾಜ್ಯದ ಮುಖ್ಯ ಕೃಷಿ ಪ್ರದೇಶ, ಬಯಲಿನ ಮುಖ್ಯ ನದಿಗಳೆಂದರೆ ರೋವನೋಕ್, ಚೌವಾನ್, ಟಾರ್–ಪಾಮ್ಲಿಕೊ, ನೂಸ್–ಟ್ರೆಂಟ್ ಮತ್ತು ಕೇಪ್ ಫೀರ್. ಇವುಗಳ ಪೈಕಿ ಕೇಪ್ ಫೀರ್ ಒಂದೇ ಹಡಗು ಸಂಚಾರಕ್ಕೆ ಯೋಗ್ಯ. ಈ ನದಿಯ ಮುಖದ ಮೇಲಿರುವ ವಿಲ್ಮಿಂಗ್ಟನ್ ರಾಜ್ಯದ ಮುಖ್ಯ ಆಳನೀರಿನ ಬಂದರು.

ಪೀಡ್‌ಮಾಂಟ್ ಪ್ರಸ್ಥಭೂಮಿಯ ಪರಮಾವಧಿ ಎತ್ತರ 457 ಮೀ., ಕನಿಷ್ಠ 122ಮೀ. ಆಗ್ನೇಯಾಭಿಮುಖವಾಗಿ ಇಳಿಜಾರಾಗಿರುವ ಈ ಪ್ರಸ್ಥಭೂಮಿಯ ಮುಖ್ಯ ನದಿಗಳು ಯಾಡ್ಕಿನ್, ಕೆಟಾಬ ಮತ್ತು ಬ್ರಾಡ್. ಇವುಗಳ ಆಳ ಕಡಿಮೆ, ವೇಗ ಹೆಚ್ಚು; ಅಬ್ಬಿಗಳು ಅನೇಕ. ಆದ್ದರಿಂದ ಹಡಗು ಸಂಚಾರಕ್ಕೆ ಯೋಗ್ಯವಲ್ಲ. ರಾಜ್ಯದ ಜವಳಿ, ಹೊಗೆಸೊಪ್ಪು, ಅಣೆಕಟ್ಟು ಕೈಗಾರಿಕೆಗಳು ಬೆಳೆದಿರುವುದು ಈ ಪ್ರದೇಶದಲ್ಲಿ.

ಪಶ್ಚಿಮದ ಅಪಲೇಷಿಯನ್ ಪರ್ವತ ಪ್ರದೇಶದಲ್ಲಿ ಎರಡು ದೊಡ್ಡ ಶ್ರೇಣಿಗಳಿವೆ. ಇವುಗಳಲ್ಲಿ ಪೂರ್ವದ್ದು ಬ್ಲೂರಿಜ್; ಪಶ್ಚಿಮದ್ದು ಗ್ರೇಟ್ ಸ್ಮೋಕಿ. ಇವೆರಡನ್ನೂ ಕೂಡಿಸುವ ಅಡ್ಡ ಶ್ರೇಣಿಗಳು ಅನೇಕ. ಅವುಗಳ ಪೈಕಿ ಬ್ಲ್ಯಾಕ್ ಪರ್ವತದಲ್ಲಿರುವ ಮಿಚೆಲ್. 2035ಮೀ. ಅಮೆರಿಕ ಸಂಯುಕ್ತ ಸಂಸ್ಥಾನದ ಪೂರ್ವದಲ್ಲೇ ಅತ್ಯಂತ ಎತ್ತರದ ಶಿಖರ. ಪೂರ್ವ ಅಮೆರಿಕದಲ್ಲಿ ಅತ್ಯಂತ ಹೆಚ್ಚಿನ ಪರ್ವತ ಪ್ರದೇಶ ಇರುವುದು ಈ ರಾಜ್ಯದಲ್ಲೇ. ಆಕಾಶರಾಜ್ಯವೆಂದು ವರ್ಣಿತವಾಗಿರುವ ಈ ಸುಂದರ ಪ್ರದೇಶದಲ್ಲಿ 1827ಮೀ. ಗಳಿಗಿಂತ ಹೆಚ್ಚಿನ ಎತ್ತರದ 43 ಶಿಖರಗಳೂ 1525–1830 ಮೀ. ಗಳ ವರೆಗಿನ ಎತ್ತರದ 125 ಶಿಖರಗಳೂ ಇವೆ. ಪರ್ವತ ಕಣಿವೆಗಳು ಇಕ್ಕಟ್ಟಾಗಿ, ಕಡಿದಾಗಿವೆ. ಇಲ್ಲಿನ ನಿಸರ್ಗ ಸೌಂದರ್ಯ, ಆಹ್ಲಾದಕರ ವಾಯುಗುಣಗಳ ಜೊತೆಗೆ ಮಾನವನಿರ್ಮಿತವಾದ ಒಳ್ಳೆಯ ರಸ್ತೆಗಳೂ

ಇರುವುದರಿಂದ ಇದು ಈ ರಾಷ್ಟ್ರದ ಪ್ರಮುಖ ಬೇಸಿಗೆತಾಣಗಳಲ್ಲೊಂದು. ಬ್ಲ್ಯಾಕ್ ಪರ್ವತಗಳ ತಲೆಯ ಮೇಲಿಂದ ಹಲವಾರು ತೊರೆಗಳು ಜಿಗಿದು ಹೊಳೆಗಳಾಗಿ ಸಂಭವಿಸಿ, ಕೆಲವು ಮಿಸಿಸಿಪಿಯನ್ನೂ ಕೆಲವು ಅಟ್ಲಾಂಟಿಕ್ ಸಾಗರವನ್ನೂ ಸೇರುತ್ತವೆ. ಬ್ಲೂರಿಜ್‌ನ ಪಶ್ಚಿಮದಲ್ಲಿ ಹಿವಾಸಿ, ಲಿಟ್ಲ್ ಟೆನಿಸಿ ಮತ್ತು ಫ್ರೆಂಚ್ ಬ್ರಾಡ್ ನದಿಗಳು ಹುಟ್ಟಿ ಟೆನಿಸಿಯನ್ನು ಸೇರುತ್ತವೆ. ಇನ್ನೂ ಉತ್ತರಕ್ಕೆ ನ್ಯೂ ನದಿ ಉದ್ಭವಿಸಿ ಒಹಾಯೊವಿನತ್ತ ಸಾಗುತ್ತದೆ. ಬ್ಲೂ ರಿಜ್‌ನ ಆಗ್ನೇಯ ಭಾಗದಲ್ಲಿ ಉಗಮಿಸುವ ಬ್ರಾಡ್, ಕೆಟಾಬ, ಯಾಡ್ಕಿನ್ ಸ್ವಲ್ಪದೂರ ಈಶಾನ್ಯಾಭಿಮುಖವಾಗಿ ಹರಿದು, ಪೀಡ್ ಮಾಂಟ್ ಪ್ರಸ್ಥಭೂಮಿಯ ಬೆನ್ನೇಣಿನ ಸಂದಿಯಿಂದ ಆಗ್ನೇಯ ದಿಕ್ಕಿಗೆ ತಿರುಗಿ, ರಾಜ್ಯದ ಗಡಿ ದಾಟಿ ದಕ್ಷಿಣ ಕೆರೊಲೀನದಲ್ಲಿ ಧಾವಿಸಿ ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ.

**ವಾಯುಗುಣ, ಸಸ್ಯ ಪ್ರಾಣಿ ಸಂಪತ್ತು:** ರಾಜ್ಯದ ಆಗ್ನೇಯದಂಚಿನಲ್ಲಿ ಉಪೋಷ್ಣ (ಸಬ್‌ಟ್ರಾಪಿಕಲ್) ವಾಯುಗುಣವಿದೆ. ಪರ್ವತ ಪ್ರದೇಶದಲ್ಲಿ ಸ್ಥೂಲವಾಗಿ ಮಧ್ಯಮ ಖಂಡಾಂತರ ವಾಯುಗುಣ. ರಾಜ್ಯದ ಸರಾಸರಿ ವಾರ್ಷಿಕ ಮಳೆ 130 ಸೆಂಮೀ. ಪರ್ವತದ ಮೇಲೆ ಹೆಚ್ಚು (140 ಸೆಂಮೀ).

ವೈವಿಧ್ಯಮಯ ವಾಯುಗುಣ ಹಾಗೂ ಮಣ್ಣಿನಿಂದಾಗಿ ಇಲ್ಲಿನ ಸಸ್ಯ ಸಂಪತ್ತೂ ವೈವಿಧ್ಯಪೂರಿತ. ಶೀತವಲಯದ ನೆರೆಪ್ರದೇಶದ ಸಸ್ಯಗಳಿಂದ ಹಿಡಿದು ಉಪೋಷ್ಣವಲಯದ ಕಿರುತಾಳೆಯವರೆಗೆ ನಾನಾ ಜಾತಿ ಇಲ್ಲಿವೆ. ಮರದ ದಿಮ್ಮಿ ಉತ್ಪಾದನೆಯಲ್ಲಿ ಇದು ರಾಷ್ಟ್ರದಲ್ಲಿ ಐದನೆಯ ರಾಜ್ಯ. ಪೀತದಾರು ಮರ ಎಲ್ಲೆಲ್ಲೂ ಬೆಳೆಯುತ್ತದೆ. ಸಮುದ್ರತೀರದ ಬಳಿಯಲ್ಲಿ ವೀನಸ್ ಫ್ಲೈ–ಟ್ರ್ಯಾಪ್ ಎಂಬ ನೊಣಹಿಡುಕ ಮಾಂಸಾಹಾರಿ ಸಸ್ಯವೂ ಉಂಟು.

ವನ್ಯಪ್ರಾಣಿಗಳಲ್ಲಿ ಕುಂದಿಲಿ, ಅಳಿಲು, ತುಪ್ಪಳುಮ್ಮೈ, ಪೊದೆಬಾಲ, ಮೊನೆ ಮುಸುಡಿಯ ರ‍್ಯಾಕೂನ್, ಹೆಬ್ಬೆಟ್ಟುಳ್ಳ ಹಿಂಗಾಲಿರುವ ವೃಕ್ಷವಾಸಿ ಜಲವಾಸಿ ನಿಶಾಚರ ಪ್ರಾಣಿ ಒಪಾಸಮ್, ಜಿಂಕೆ, ಕರಡಿ, ನರಿ, ಕಾಡುಬೆಕ್ಕು ಸಾಮಾನ್ಯ, ಕೆಂಬಕ್ಕಿ (ಕಾರ್ಡಿನಲ್), ಮೊಂಡು ಪುಕ್ಕಿ (ರೆನ್), ಅಣಕ ಹಕ್ಕಿ (ಮಾಕಿಂಗ್ ಬರ್ಡ್), ಚಿಕಡಿ, ಮರಕುಟಿಗ, ಕೋಗಿಲೆ, ಬೆಳವ, ಲಾವಕ್ಕಿ, ಪಾರಿವಾಳ, ರಾಬಿನ್, ಬಾತು ಕೋಳಿ ಮುಂತಾದ ಹಕ್ಕಿಗಳಿವೆ. ಮೀನುಗಾರಿಕೆಯಲ್ಲೂ ಈ ಪ್ರಾಂತ್ಯ ಪ್ರಗತಿಗೊಂಡಿದೆ.

**ವ್ಯವಸಾಯ, ಖನಿಜ, ಕೈಗಾರಿಕೆ:** ವಾಣಿಜ್ಯದೃಷ್ಟಿಯಿಂದ ಹತ್ತಿ, ಹೊಗೆಸೊಪ್ಪು ಇಲ್ಲಿನ ಮುಖ್ಯ ಬೆಳೆಗಳು. ಹತ್ತಿ ಬೆಳೆಯಲು ಹಿತಕರವಾದ ವಾಯುಗುಣ ಈ ದೇಶದ ಮೂರರಲ್ಲೆರಡು ಭಾಗದಷ್ಟು ಪ್ರದೇಶದಲ್ಲಿದೆ. ಮೆಕ್ಕೆಜೋಳ ಸರ್ವವ್ಯಾಪಿ. ಗೆಣಸು, ನೆಲಗಡಲೆ, ಸೋಯ ಬೀನ್ಸ್, ಪೀಚ್ ಹಣ್ಣು–ಇತರ ಬೆಳಸು. ವಾಯವ್ಯದಲ್ಲಿ ಗೋದಿಯನ್ನು ತಕ್ಕ ಮಟ್ಟಿಗೆ ಬೆಳೆಯುತ್ತಾರೆ. ರೈ, ಓಟ್ಸ್, ಗೋದಿ ಪರ್ವತಪ್ರದೇಶದ ಬೆಳೆಗಳು. ಹಸು, ಹಂದಿ ಮುಖ್ಯ ಸಾಕುಪ್ರಾಣಿಗಳು.

ಖನಿಜಗಳಲ್ಲಿ ಫೆಲ್‌ಸ್ಪಾರ್ ಮತ್ತು ಅಭ್ರಕ ಮುಖ್ಯ. ಇವು ರಾಜ್ಯದ ಪಶ್ಚಿಮ ಭಾಗದಲ್ಲಿ ದೊರಕುತ್ತವೆ. ಕಲ್ನಾರು, ಬಿಳಿಯ ಜೇಡಿ ಮಣ್ಣು (ಕಾಯೊಲಿನ್) ನಿಕಲ್ ಇತರ ಖನಿಜಗಳು. ವಿಲ್ಮಿಂಗ್ಟನ್ನಿನಲ್ಲಿ ಸಮುದ್ರಜಲದಿಂದ ಬ್ರೋಮೀನ್ ತಯಾರಿಸುತ್ತಾರೆ.

ಹತ್ತಿ ಜವಳಿ, ಹೊಗೆಸೊಪ್ಪು, ಅಣಿಕಟ್ಟು ತಯಾರಿಕೆ ಮುಖ್ಯ ಕೈಗಾರಿಕೆಗಳು. ಈ ರಾಜ್ಯದಲ್ಲಿ ಕಲ್ಲಿದ್ದಲಿಲ್ಲ. ಪೀಡ್‌ಮಾಂಟ್ ಪ್ರದೇಶದಲ್ಲಿ ಜಲವಿದ್ಯುತ್ ಉತ್ಪಾದನೆ ಆಗುತ್ತದೆ. ಷಾರ್ಲಟ್, ಗ್ರೀನ್ಸ್‌ಬರೊ, ರ‍್ಯಾಲಿ ಮುಖ್ಯ ಜವಳಿ ಉತ್ಪಾದನ ಕೇಂದ್ರಗಳು. ಡರೆಂ, ವಿನ್ಸ್‌ಟನ್–ಸೇಲಂಗಳು ಹೊಗೆಸೊಪ್ಪಿನ ಕೈಗಾರಿಕೆಯಲ್ಲಿ ಮುಂದಾಗಿವೆ. (ಸಿ.ಎಂ.; ಜೆ.ಇ.ಸಿ.)

ಸಾರಿಗೆ–ಸಂಪರ್ಕಮಾಧ್ಯಮವೂ ಉತ್ತಮವಾಗಿದೆ. ಸು. 1.45,280 ಕಿಮೀ ರಸ್ತೆಗಳು, 6600 ಕಿಮೀ ಉದ್ದದ ರೈಲುಮಾರ್ಗಗಳಿವೆ. 250ಕ್ಕಿಂತಲೂ ಹೆಚ್ಚು ವಿಮಾನ ನಿಲ್ದಾಣಗಳಿವೆ ಮತ್ತು 1500 ಕಿಮೀ ಉದ್ದದ ಕೊಳವೆ ಮಾರ್ಗಗಳಿವೆ.

**ಇತಿಹಾಸ:** ಈ ರಾಜ್ಯದ ಇತಿಹಾಸವನ್ನು ಸ್ಥೂಲವಾಗಿ ನಾಲ್ಕು ಕಾಲಗಳಾಗಿ ವಿಂಗಡಿಸಬಹುದು. ಮೊದಲನೆಯದು ವಸಾಹತು ನಿರ್ಮಾಣಕಾಲ (1524–1663). ಖಾಸಗಿ ಮಾಲೀಕರ ಆಡಳಿತದ ಕಾಲವೇ ಎರಡನೆಯದು (1663–1729). ಮೂರನೆಯ ಕಾಲದಲ್ಲಿ ಈ ಪ್ರದೇಶದ ಆಡಳಿತ ಇಂಗ್ಲೆಂಡ್ ದೊರೆಗಳ ಕೈಯಲ್ಲಿತ್ತು (1729–76). ಅಲ್ಲಿಂದೀಚೆಗೆ ಇದು ಅಮೆರಿಕ ಸಂಯುಕ್ತ ಸಂಸ್ಥಾನದ ರಾಜ್ಯಗಳಲ್ಲಿ ಒಂದಾಗಿ ಮುಂದುವರಿಯುತ್ತಿದೆ.

ತೀರಪ್ರದೇಶವನ್ನು ಪರಿಶೋಧಿಸಿದ ಪ್ರಥಮ ಐರೋಪ್ಯರೆಂದರೆ ಫ್ರೆಂಚರು (1524). ಎರಡು ವರ್ಷಗಳ ಅನಂತರ ಸ್ಪೇನಿಗರು ಇಲ್ಲೊಂದು ತಾತ್ಕಾಲಿಕ ವಸಾಹತು ಹೂಡಿದರು. ಆದರೆ ಇವರಿಬ್ಬರಲ್ಲಿ ಯಾರೂ ಇಲ್ಲಿ ಶಾಶ್ವತವಾಗಿ ಆಡಳಿತ ಸ್ಥಾಪಿಸಲು ಸಾಧ್ಯವಾಗಲಿಲ್ಲ.

1584ರಲ್ಲಿ ಬ್ರಿಟನ್ನಿನ ರಾಣಿ ಎಲಿಜಬೆತಳಿಂದ ಏಕಸ್ವ (ಪೇಟೆಂಟ್) ಪಡೆದು ಸರ್ ವಾಲ್ಟರ್ ರ‍್ಯಾಲಿ ಇಲ್ಲಿಗೆ ಫಿಲಿಪ್ ಆಮಿಡಾಸನನ್ನು ಕಳಿಸಿದ. 1585ರಲ್ಲಿ ಇಲ್ಲಿ ಒಂದು ಬ್ರಿಟಿಷ್ ವಸಾಹತು ಸ್ಥಾಪಿತವಾಯಿತು. ಆದರೆ ಕ್ಷಾಮ ಹಾಗೂ ಸ್ಥಳೀಯ ಇಂಡಿಯನ್ನರ ವಿರೋಧದಿಂದ ವಲಸೆಗಾರರು ಮುಂದುವರಿಯಲಿಲ್ಲ. ಕೆಲವರು ಸತ್ತರು. ಹಲವರು ನಾಪತ್ತೆಯಾದರು. ಇದರ ವಿಚಿತ್ರ ಭೌಗೋಳಿಕ ಪರಿಸ್ಥಿತಿಯಿಂದಾಗಿ ಈ ವಸಾಹತಿನ ಬೆಳವಣಿಗೆ ವರ್ಜೀನಿಯದ ಮೂಲಕವಾಗಿಯೇ ಸಾಧ್ಯವಾಯಿತು. 1663ರಲ್ಲಿ ಎರಡನೆಯ ಚಾರ್ಲ್ಸ್ ತನ್ನ ಕಡೆಯ ಕೆಲವರಿಗೆ ಈ ಪ್ರದೇಶವನ್ನು ಧಾರೆಯೆರೆದ. ಇವರು ಇದರ ಮಾಲೀಕರಾಗಿ ಇಲ್ಲಿಗೆ ರಾಜ್ಯಪಾಲನೊಬ್ಬನನ್ನು ನೇಮಿಸಿದರು. ಆತ ಇದಕ್ಕಾಗಿ ಊಳಿಗಮಾನ್ಯ ರೀತಿಯ ಸಂವಿಧಾನವೊಂದನ್ನು ರಚಿಸಿದ. ಆದರೆ ಇದು ವ್ಯಾವಹಾರಿಕವೆನಿಸಲಿಲ್ಲ. ಅಟ್ಲಾಂಟಿಕ್ ಸಾಗರದಾಚೆಗಿನ ಮಾಲೀಕರ ಆಜ್ಞಾನುವರ್ತಿಗಳು ಇಲ್ಲಿದ್ದ ಸಾಹಸಪ್ರಿಯ ಕಷ್ಟಸಹಿಷ್ಣು ವಲಸೆಗಾರರನ್ನಾಳುವುದು ಅಷ್ಟು ಸುಲಭವಾಗಲಿಲ್ಲ. 1670ರಲ್ಲಿ ಇದು ದಕ್ಷಿಣ ಕೆರೊಲಿನದಿಂದ ಪ್ರತ್ಯೇಕವಾಯಿತು. 1729ರಲ್ಲಿ ಇಂಗ್ಲೆಂಡಿನ ದೊರೆ ಈ ವಸಾಹತಿನ ಎಂಟು ಮಂದಿ ಮಾಲೀಕರ ಪೈಕಿ ಏಳು ಮಂದಿಯ ಷೇರುಗಳನ್ನು ಕೊಂಡಾಗ ಇದರ ಆಡಳಿತ ಇಂಗ್ಲೆಂಡ್ ದೊರೆಗಳ ವಶವಾಯಿತು. 1670ರಲ್ಲಿ ಪ್ರಥಮವಾಗಿ ದಕ್ಷಿಣ ಕೆರೊಲೀನದಿಂದ ಪ್ರತ್ಯೇಕವಾಗಿ ಇದರ ಆಡಳಿತ ಆರಂಭವಾಯಿತು. ವಸಾಹತು ಕಾಲದಲ್ಲಿ ಈ ರಾಜ್ಯ ಗಳಿಸಿದ್ದ ಪ್ರಾಮುಖ್ಯಕ್ಕೆ ಹೊಗೆಸೊಪ್ಪಿನ ಉತ್ಪಾದನೆಯೇ ಕಾರಣ. ಇದರ ಅರಣ್ಯೋತ್ಪಾದನೆಯ ಮೇಲೂ ಆಳರಸರ ಕಣ್ಣಿತ್ತು. ದೇಶದ ಆಡಳಿತದಲ್ಲಿ ಹೆಚ್ಚು ಪ್ರಭಾವ ಗಳಿಸಿದ್ದ ಪೂರ್ವಪ್ರದೇಶದ ಜನರ ವಿರುದ್ಧವಾಗಿ 1760ರ ದಶಕದ ಉತ್ತರಾರ್ಧದಲ್ಲಿ ಈ ಪ್ರದೇಶದ ಜನರಲ್ಲಿ ಅಸಮಾಧಾನ ಹಬ್ಬಿ, ಇವರು ಬಂಡಾಯವೆಬ್ಬಿಸಿದರು. 1771ರಲ್ಲಿ ಈ ಬಂಡಾಯವನ್ನಡಗಿಸಲಾಯಿತು. 1860ರ ಅಮೆರಿಕನ್ ಸ್ವಾತಂತ್ರ್ಯ ಯುದ್ಧದಲ್ಲಿ ಇದೂ ಭಾಗವಹಿಸಿ ಕೊನೆಗೆ ಅದರ ಅಂಗರಾಜ್ಯವಾಗಿ ಸೇರಿತು. ಅಂತರ್ಯುದ್ಧದ ಸಮಯದಲ್ಲಿ ಇದು ಉತ್ತರ ದಕ್ಷಿಣಗಳ ನಡುವೆ ಒಪ್ಪಂದವೇರ್ಪಡಿಸಲು ಹೆಣಗಿತು. ಕೊನೆಗೆ ಇಲ್ಲೂ ಪ್ರತ್ಯೇಕತೆಯ ಭಾವನೆ ಹಬ್ಬಿದಾಗ ಸಂಯುಕ್ತಸಂಸ್ಥಾನ ಪಡೆಗಳು ಇದರ ಉತ್ತರದ ಪ್ರದೇಶವನ್ನು ಹಿಡಿದುಕೊಂಡಿದ್ದವು. ಈ ರಾಜ್ಯದ ಪ್ರದೇಶದಲ್ಲೇ ಅನೇಕ ಕದನಗಳು ನಡೆದವು. ವಿಲ್ಮಿಂಗ್ಟನ್ ಬಂದರು ಕೇಂದ್ರ ಸರ್ಕಾರದ ಪಡೆಗಳ ವಶವಾದಾಗ, ಬಾಹ್ಯ ಪ್ರಪಂಚದೊಂದಿಗೆ ದಕ್ಷಿಣ ರಾಜ್ಯಗಳವರು ಹೊಂದಿದ್ದ ಕೊನೆಯ ಕೊಂಡಿಯೂ ಮುರಿದುಬಿದ್ದು, ಅವರ ಪ್ರತ್ಯೇಕತೆಯ ಕನಸು ಕೊನೆಗೊಂಡಿತು. ಮುಂದೆ 1870ರ ವರೆಗೂ ಈ ರಾಜ್ಯ ಪುನಾರಚನೆಯ ಸಮಸ್ಯೆಗಳನ್ನೆದುರಿಸಬೇಕಾಗಿ ಬಂತು. ಅಲ್ಲಿಂದೀಚೆಗೆ ಇದು ಶೀಘ್ರವಾಗಿ ಮುನ್ನಡೆಯುತ್ತಿದೆ. *

**ಉತ್ತರ ಕೊರಿಯ:** ಉತ್ತರ ಚೀನದಿಂದ ಹೊರಕ್ಕೆ, ಹಳದಿ ಸಮುದ್ರ ಹಾಗೂ ಜಪಾನ್ ಸಮುದ್ರಗಳ ನಡುವೆ, ಚಾಚಿಕೊಂಡಿರುವ ಪರ್ಯಾಯ ದ್ವೀಪದಲ್ಲಿ ಉ.ಅ. 38° ಯಿಂದ ಉತ್ತರಕ್ಕಿರುವ ರಾಜ್ಯ. ಕೊರಿಯದ ಪ್ರಜಾಪ್ರಭುತ್ವವಾದಿ ಜನತಾ ಗಣರಾಜ್ಯ (ಡೆಮೊಕ್ರ್ಯಾಟಿಕ್ ಪೀಪಲ್ಸ್ ರಿಪಬ್ಲಿಕ್ ಆಫ್ ಕೊರಿಯ). ಇದಕ್ಕೆ ದಕ್ಷಿಣದಲ್ಲಿ ದಕ್ಷಿಣ ಕೊರಿಯ (ಕೊರಿಯ ಗಣರಾಜ್ಯ) ಇದೆ. **(ನೋಡಿ– ದಕ್ಷಿಣ–ಕೊರಿಯ)** ವಿಸ್ತೀರ್ಣ 77,000 ಕಿಮೀ. ಜನಸಂಖ್ಯೆ 22,224000 (2002). ಒಟ್ಟು ಕೊರಿಯದ ಶೇ.56ರಷ್ಟು ಭಾಗವನ್ನು ಈ ರಾಜ್ಯ ಆಕ್ರಮಿಸಿದೆ.

**ಮೇಲ್ಮೈಲಕ್ಷಣ:** ಉತ್ತರ ದಕ್ಷಿಣವಾಗಿ ಹಬ್ಬಿರುವ ಈ ರಾಜ್ಯ ಬಹುಪಾಲು ಪರ್ವತಮಯ. ಆದರೆ ಜಪಾನ್ ದ್ವೀಪಗಳಲ್ಲಿರುವಂತೆ ಇಲ್ಲಿ ಜ್ವಾಲಾಮುಖಿಗಳಿಲ್ಲ. ವ್ಯವಸಾಯಯೋಗ್ಯ ಭೂಮಿ ಕಡಿಮೆ. ಉತ್ತರ ಕೊರಿಯವನ್ನು ಅಲ್ಲಿನ ಮೇಲ್ಮೈಲಕ್ಷಣಗಳಿಗನುಗುಣವಾಗಿ ಮೂರು ಭಾಗಗಳನ್ನಾಗಿ ವಿಂಗಡಿಸಬಹುದು : 1. ಮಧ್ಯದ ಹಾಗೂ ಉತ್ತರದ ಪರ್ವತ ಪ್ರದೇಶ: ಪೂರ್ತಿಯಾಗಿ ಪರ್ವತಗಳಿಂದ ಆವೃತವಾಗಿರುವುದರಿಂದ ಜನಸಾಂದ್ರತೆ ತೀರ ವಿರಳ. ಅನೇಕ ಶಿಖರಗಳು 2435 ಮೀ ಗಳಿಗಿಂತಲೂ ಎತ್ತರ. ಈ ಪರ್ವತಗಳ ದಕ್ಷಿಣಕ್ಕೆ ವಿಶಾಲವಾದ ಪ್ರಸ್ಥಭೂಮಿಯಿದೆ. ಅತಿ ಎತ್ತರದ ಶಿಖರ ಪಾಯೆಕ್ಟು (2744 ಮೀ). ಇಲ್ಲಿ ವಾಸಮಾಡುವ ಗುಡ್ಡಗಾಡಿನ ಕಣಿವೆಗಳಲ್ಲಿ ಸ್ವಲ್ಪ ಮಟ್ಟಿನ ವ್ಯವಸಾಯ ಮಾಡುತ್ತಾರೆ. ಉತ್ತರದಲ್ಲಿ ಯಾಲೂ ಹಾಗೂ ಟೇಡಾಂಗ್ ನದಿಗಳು ಮುಖ್ಯ. 2. ಪೂರ್ವದ ಕರಾವಳಿ ಪ್ರದೇಶ : ಈ ಕಿರಿದಾದ ಕರಾವಳಿಯಲ್ಲಿ ಅನೇಕ ಮೀನುಗಾರರ ಹಳ್ಳಿಗಳಿವೆ. ನದೀಮುಖಗಳಲ್ಲಿ ಸ್ವಲ್ಪಮಟ್ಟಿನ ವ್ಯವಸಾಯ ಸಾಧ್ಯ. ಬತ್ತ ಮತ್ತು ದ್ವಿದಳ ಧಾನ್ಯ ಇಲ್ಲಿನ ಬೆಳೆ. ಅಲೆಗಳ ಹಾವಳಿ ಕಡಿಮೆ. 3. ವಾಯವ್ಯ ಪ್ರದೇಶ: ಪ್ರಮುಖ ವ್ಯವಸಾಯ ಪ್ರದೇಶ. ಆದರೆ ಚಳಿಗಾಲದಲ್ಲಿ ಬೇಸಾಯಕ್ಕೆ ಅನೇಕ ಅಡಚಣೆಗಳಿರುವುದರಿಂದ ವರ್ಷಕ್ಕೆ ಒಂದು ಬೆಳೆ ಮಾತ್ರ ಸಾಧ್ಯ. ಗೋಧಿ, ಮೆಕ್ಕೆಜೋಳ ಮುಖ್ಯ ಬೆಳೆಗಳು, ಖನಿಜಗಳು ಹೇರಳವಾಗಿ ದೊರೆಯುವುದರಿಂದ ಕೈಗಾರಿಕೆಗಳು ಬೆಳೆದಿವೆ. ಯಾಲು ಮತ್ತು ಟುಮೆನ್ ಪ್ರಮುಖ ನದಿಗಳು

**ವಾಯುಗುಣ:** ಉತ್ತರ ಕೊರಿಯದ್ದು ಪೂರ್ವ ಏಷ್ಯನ್ ರೀತಿಯ ಮಾನ್ಸೂನ್ ವಾಯುಗುಣ. ಬೇಸಿಗೆಯಲ್ಲಿ ಹೆಚ್ಚು ಉಷ್ಣತೆ, ಹೆಚ್ಚು ಮಳೆ. ಚಳಿಗಾಲದಲ್ಲಿ ನೀರು ಗಡ್ಡೆ ಕಟ್ಟುವ ಮಟ್ಟಕ್ಕಿಂತಲೂ ಕಡಿಮೆ ಉಷ್ಣತೆ. (–$8^{o}$ ಸೆ.) ವಾರ್ಷಿಕ ಸರಾಸರಿಮಳೆ 150 ಸೆಂಮೀ. ಉತ್ತರ ಮತ್ತು ಪಶ್ಚಿಮಕ್ಕೆ ಹೋದಂತೆ ಮಳೆ ಪ್ರಮಾಣ ಕಡಿಮೆಯಾಗುತ್ತದೆ.

**ಸ್ವಾಭಾವಿಕ ಸಸ್ಯ, ಪ್ರಾಣಿವರ್ಗ:** ಉತ್ತರ ಕೊರಿಯದಲ್ಲಿ ಅನೇಕ ಬಗೆಯ ಸಸ್ಯಗಳಿವೆ. ಒಟ್ಟು ಭೂಮಿಯ ಶೇ.70 ಭಾಗ ಕಾಡು. ಲಾರ್ಜ್, ಸ್ಪ್ರೂಸ್, ಫರ್, ಬರ್ಚ್‌ಗಳು ಉತ್ತರದಲ್ಲಿ ಹೆಚ್ಚು. ಯಾಲೂ ಕಣಿವೆಯಲ್ಲೂ ದಕ್ಷಿಣದಲ್ಲೂ ಮೇಪ್ಲ್, ಬಾಸ್‌ವುಡ್, ಬರ್ಚ್, ಪಾಪ್ಲರ್, ಓಕ್, ಆಷ್, ಹಾರ್ನ್‌ಬೀಮ್, ಎಲ್ಮ್ ಚೆಸ್‌ನಟ್, ಹ್ಯಾಕ್‌ಟೆರಿ, ಮ್ಯಾಗ್ನೋಲಿಯ ಮತ್ತು ಜಪಾನೀ ಹೂಗಳಿವೆ. ಲಿಲಿ ಇತರ ಕಾಡು ಹೂಗಳು ಗ್ರಾಮಾಂತರ ಪ್ರದೇಶದ ಸೌಂದರ್ಯ ಹೆಚ್ಚಿಸಿವೆ.

ಇಲ್ಲಿನ ಪ್ರಾಣಿಗಳು ಏಷ್ಯದ ಪ್ರಾಣಿಗಳಿಗಿಂತ ಯುರೋಪಿನವನ್ನೇ ಹೆಚ್ಚಾಗಿ ಹೋಲುತ್ತವೆ. ಇದೊಂದು ವೈಚಿತ್ರ್ಯ. ಇಂಥ ಪ್ರಾಣಿಗಳ ಜೊತೆಗೆ ಹುಲಿ, ಹಿಮಚಿರತೆ, ಕಸ್ತೂರಿಮೃಗಗಳಿವೆ. ತೋಳ, ಕರಡಿ, ಕಾಡುಹಂದಿ, ಜಿಂಕೆ, ಕಪ್ಪೆ, ಹಲ್ಲಿ, ಹಾವು ಇವು ಸಾಮಾನ್ಯ.

**ಖನಿಜ ಸಂಪತ್ತು:** ಉತ್ತರ ಕೊರಿಯದಲ್ಲಿ ಹೇರಳವಾದ ಖನಿಜ ಸಂಪತ್ತಿದೆ. ಕಬ್ಬಿಣದ ಅದಿರು, ತಾಮ್ರ, ಸೀಸ, ಸತು, ಸ್ವರ್ಣ ಮಕ್ಷಿಕ, ಟಂಗ್ ಸ್ಟನ್, ಕಲ್ಲಿದ್ದಲು, ಚಿನ್ನ ಮುಖ್ಯ.

**ವ್ಯವಸಾಯ, ಕೈಗಾರಿಕೆ, ಸಾರಿಗೆ ವ್ಯವಸ್ಥೆ:** ಉತ್ತರ ಕೊರಿಯದ ಒಟ್ಟು ಭೂಮಿಯ $^1/_5$ ಭಾಗ ಮಾತ್ರ ವ್ಯವಸಾಯ ಯೋಗ್ಯ. ಬತ್ತ, ಗೋದಿ, ಬಾರ್ಲಿ, ಮೆಕ್ಕೆಜೋಳ ಮತ್ತು ಸೋಯ ಬೀನುಗಳು ಇಲ್ಲಿನ ಮುಖ್ಯ ಬೆಳೆ. ಹತ್ತಿ, ಹೊಗೆಸೊಪ್ಪು, ನಾರು, ಹಣ್ಣುಗಳನ್ನು ಬೆಳೆಯುತ್ತಾರೆ. ಜಪಾನ್ ಮಾದರಿಯ ಬತ್ತದ ಬೇಸಾಯದಿಂದಾಗಿ ಅಕ್ಕಿಯ ಉತ್ಪಾದನೆ




ಹೆಚ್ಚಾಗಿದೆ. 1905ರಲ್ಲಿ ಮೊಟ್ಟ ಮೊದಲ ಬಾರಿಗೆ ಜಪಾನೀಯರ ಪ್ರೋತ್ಸಾಹದಿಂದ ಇಲ್ಲಿ ಹತ್ತಿ ಬೆಳೆಯಲಾಯಿತು. ಈಗ ಹತ್ತಿಯೂ ಇಲ್ಲಿನ ಒಂದು ಮುಖ್ಯ ವಾಣಿಜ್ಯ ಬೆಳೆ.

ಉತ್ತರ ಕೊರಿಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಖನಿಜಸಂಪತ್ತಿರುವುದರಿಂದ ಕೈಗಾರಿಕೆಗಳು ಬೆಳೆದಿವೆ. ಜಪಾನೀಯರ ಆಕ್ರಮಣ ಕಾಲದಲ್ಲಿ ರಸಾಯನವಸ್ತು, ಸಿಮೆಂಟ್, ಕಬ್ಬಿಣ, ಉಕ್ಕು, ವಿದ್ಯುತ್ತು ಮತ್ತು ಯಂತ್ರ ಕೈಗಾರಿಕೆಗಳು ಸ್ಥಾಪಿತವಾಗಿದ್ದವು. ದ್ವಿತೀಯ ಯುದ್ಧ ಮುಗಿದು ಜಪಾನೀಯರು ಹಿನ್ನಡೆಯುವಾಗ ಇಲ್ಲಿನ ಅನೇಕ ಕೈಗಾರಿಕೆಗಳನ್ನು ನಾಶ ಮಾಡಿದರು. ಕಮ್ಯುನಿಸ್ಟರ ಆಡಳಿತದಲ್ಲಿ ಕೈಗಾರಿಕೀಕರಣವಾಗುತ್ತಿದೆ. ಇಲ್ಲಿ ಪ್ರಜಾಪ್ರಭುತ್ವವಾದಿ ಗಣರಾಜ್ಯದ ಸ್ಥಾಪನೆಯಾದಾಗ ಎಲ್ಲ ಕೈಗಾರಿಕೆಗಳೂ ರಾಷ್ಟ್ರೀಕರಣಗೊಂಡವು. ಉತ್ತರ ದಕ್ಷಿಣ ಕೊರಿಯ ಯುದ್ಧದಿಂದ ಮತ್ತೆ ಇಲ್ಲಿನ ಅನೇಕ ಕೈಗಾರಿಕೆಗಳ ನಾಶವಾಯಿತು. ಯೋಜನಾತ್ಮಕ ಆರ್ಥಿಕ ಪ್ರಗತಿಗಾಗಿ ಇಲ್ಲಿನ ಸರ್ಕಾರ ಶ್ರಮಿಸುತ್ತಿದೆ. ವಿದ್ಯುತ್, ಧಾತು ಕೈಗಾರಿಕೆ, ಯಂತ್ರರಚನೆ, ರಸಾಯನವಸ್ತು, ಜವಳಿ ಕೈಗಾರಿಕೆಗಳು ಮುಖ್ಯ. ಸುಮಾರು ಅರ್ಧದಷ್ಟು ಜನ ಈಗಲೂ ವ್ಯವಸಾಯ ನಿರತರು.

ಕೊರಿಯ ಯುದ್ಧಕಾಲದಲ್ಲಿ ಇಲ್ಲಿನ ರಸ್ತೆ ಹಾಗೂ ರೈಲು ವ್ಯವಸ್ಥೆಗಳು ಬಹುತೇಕ ನಾಶ ಹೊಂದಿದವು. ಪುನರ್ನಿರ್ಮಿತ ರೈಲು ವ್ಯವಸ್ಥೆಯಲ್ಲಿ ಒಂದು ಭಾಗ (21%) ವಿದ್ಯುತ್‌ಚಾಲಿತ. ಮಾಸ್ಕೊ ಬೀಜಿಂಗ್‌ಗಳೊಂದಿಗೆ ರೈಲ್ವೆ ಸಂಪರ್ಕವಿದೆ. ಕೆಲವು ನದಿಗಳು ನೌಕಾಸಂಚಾರಯೋಗ್ಯವಾದವು. ಪಿಯಂಗ್ ಯಾಂಗಿನಿಂದ ಮಾಸ್ಕೊ ಪೀಕಿಂಗುಗಳಿಗೆ ವಿಮಾನ ವ್ಯವಸ್ಥೆಯುಂಟು. (ಕೆ.ಎಸ್.ಸಿ.)

**ಆಡಳಿತ, ರಕ್ಷಣಾವ್ಯವಸ್ಥೆ:** ಉತ್ತರ ಕೊರಿಯದ ಈಗಿನ ಸಂವಿಧಾನದ (1948) ಪ್ರಕಾರ ಇದು ಜನತಾ ಪ್ರಜಾಪ್ರಭುತ್ವ (ಪೀಪಲ್ಸ್ ಡೆಮಾಕ್ರಸಿ). ಅಧಿಕಾರ ಜನತೆಗೆ ಸೇರಿದ್ದು. ಸಾರ್ವತ್ರಿಕ, ಸಮಾನ, ಹಾಗೂ ರಹಸ್ಯ ಮತದಾನದ ಮೂಲಕ ಜನತೆ ಅಧಿಕಾರ ಚಲಾಯಿಸುತ್ತದೆ. ಪರಮೋನ್ನತ ಜನತಾ ಸಭೆಯಲ್ಲಿ ರಾಷ್ಟ್ರದ ಅಧಿಕಾರ ನಿಯುಕ್ತವಾಗಿದೆ. ಇದರ ಅಧಿವೇಶನ ಸಾಮಾನ್ಯವಾಗಿ ವರ್ಷಕ್ಕೆರಡು ಬಾರಿ. ಈ ಸಭೆ ಸಮಾವೇಶಗೊಂಡಿಲ್ಲದಾಗ ಇದಕ್ಕೆ ಉತ್ತರವಾದಿಯಾಗಿ ನಿರೂಪ ಹೊರಡಿಸುವ ಹೊಣೆ ಅಧ್ಯಕ್ಷಮಂಡಲಿಯದು (ಪ್ರಿಸಿಡಿಯಂ). ಸಂಪುಟವೂ ಅದರ ಅಧೀನದಲ್ಲಿ ವ್ಯವಹರಿಸುವ ಮಂತ್ರಾಲಯಗಳೂ ಕೇಂದ್ರೀಯ ಆಡಳಿತಾಂಗಗಳು. ಪ್ರಧಾನಿಯೂ ಉಪಪ್ರಧಾನಿಗಳೂ ಮಂತ್ರಿಗಳೂ ಆಯೋಗಗಳ (ಮಂತ್ರಾಲಯಗಳ) ಅಧ್ಯಕ್ಷರೂ ಇನ್ನು ಕೆಲವರೂ ಸಂಪುಟ ಸದಸ್ಯರು. ಸಂಪುಟವನ್ನು ನೇಮಿಸುವ ಹೊಣೆ ಪರಮೋನ್ನತ ಜನತಾ ಸಭೆಯದು. ಇದು ಈ ಸಭೆಯ ಹಾಗೂ ಅಧ್ಯಕ್ಷಮಂಡಲಿಯೂ ಹೊಣೆ.

ಉತ್ತರ ಕೊರಿಯ ರಕ್ಷಣೆಗಾಗಿ ಸೋವಿಯತ್ ಒಕ್ಕೂಟದೊಂದಿಗೂ ಜನತಾ ಚೀನದೊಂದಿಗೂ ಕರಾರಿಗೆ ಸಹಿಹಾಕಿದೆ. ಪ್ರತಿಯೊಬ್ಬನಿಗೂ 18ನೆಯ ವಯಸ್ಸಿನಲ್ಲಿ ಸೈನಿಕ ಸೇವೆ ಕಡ್ಡಾಯ. (ಸೈನ್ಯಬಲ 4,00,000. ಚಾಲ್ತಿ ಆಯವ್ಯಯದ ಶೇ. 30.2 ರಕ್ಷಣೆಗಾಗಿ ವೆಚ್ಚವಾಗುತ್ತಿದೆ.)

**ಇತಿಹಾಸ:** ಎರಡನೆಯ ಮಹಾಯುದ್ಧಪೂರ್ವಕಾಲದಲ್ಲಿ ಉತ್ತರ ಕೊರಿಯ ಪ್ರತ್ಯೇಕ ರಾಜ್ಯವಾಗಿರಲಿಲ್ಲ. ಆದ್ದರಿಂದ ಇದರ ಹಿಂದಿನ ಚರಿತ್ರೆಗೆ (**ನೋಡಿ– ಕೊರಿಯ**) 1910ರಿಂದ ಜಪಾನಿನ ನೇರ ಆಡಳಿತಕ್ಕೊಳಪಟ್ಟಿದ್ದ ಅಖಂಡ ಕೊರಿಯ ಬಿಡುಗಡೆ ಪಡೆದದ್ದು 1945ರಲ್ಲಿ. ಇದಕ್ಕೂ ಹಿಂದೆ 1943 ಡಿಸೆಂಬರಿನಲ್ಲಿ ಚೀನ, ಬ್ರಿಟನ್ ಹಾಗೂ ಅಮೆರಿಕ ಸಂಯುಕ್ತಸಂಸ್ಥಾನಗಳು ಹೊರಡಿಸಿದ ಕೈರೊ ಘೋಷಣೆಯಲ್ಲಿ ಕೊರಿಯದ ಪ್ರಸ್ತಾಪವೂ ಇತ್ತು. ಕ್ರಮೇಣ ಈ ರಾಜ್ಯಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವುದಾಗಿ ಈ ರಾಷ್ಟ್ರಗಳು ಆಗ ಸಾರಿದ್ದುವು. 1945ರಲ್ಲಿ ಪಾಟ್ಸ್‌ಡಾಂನಲ್ಲಿ ಸೇರಿದ್ದ ಮಿತ್ರರಾಷ್ಟ್ರ ಸಮ್ಮೇಳನದಲ್ಲಿ ಮತ್ತೆ ಈ ವಿಚಾರ ಪ್ರಸ್ತಾಪಿಸಲಾಯಿತು. 1945ರ ಆಗಸ್ಟ್ 8ರಂದು ಸೋವಿಯತ್ ಒಕ್ಕೂಟ ಜಪಾನ್ ವಿರುದ್ಧ ಯುದ್ಧದಲ್ಲಿ ತೊಡಗಿದಾಗ ಅದು ಕೊರಿಯ ಸ್ವಾತಂತ್ರ್ಯಕ್ಕೆ ಬೆಂಬಲ ನೀಡುವುದಾಗಿ ಘೋಷಿಸಿತು. ಆಗಸ್ಟ್ 12ರಂದು ಸೋವಿಯತ್ ಸೇನೆಗಳು ಉತ್ತರ ಕೊರಿಯವನ್ನು ಪ್ರವೇಶಿಸಿದವು. ಅಮೆರಿಕ ಸಂಯುಕ್ತಸಂಸ್ಥಾನ ದಕ್ಷಿಣ ಕೊರಿಯ ಪ್ರದೇಶವನ್ನು ಪ್ರವೇಶ ಮಾಡಿದ್ದು ಸೆಪ್ಟೆಂಬರ್ 8ರಂದು. ಜಪಾನ್ ಶರಣಾಗತಿಯನ್ನು ನಿರ್ವಹಿಸುವ ಸಲುವಾಗಿ ಕೊರಿಯವನ್ನು 38ನೆಯ ಅಕ್ಷಾಂಶದಲ್ಲಿ ಎರಡು ಭಾಗ ಮಾಡಲಾಯಿತು. ಉತ್ತರ ದಕ್ಷಿಣ ಭಾಗಗಳು ಅನುಕ್ರಮವಾಗಿ ಸೋವಿಯತ್ ಹಾಗೂ ಅಮೆರಿಕ ಸಂಯುಕ್ತಸಂಸ್ಥಾನ ಸೇನೆಗಳ ಅಧೀನಕ್ಕೆ ಬಂದವು.

ಜಪಾನೀಯರ ಆಡಳಿತ ಕೊನೆಗೊಂಡಾಗ ರಾಜಕೀಯವಾಗಿ ಇಲ್ಲಿ ಒಂದು ಬಗೆಯ ಶೂನ್ಯಸ್ಥಿತಿ ಏರ್ಪಟ್ಟಿತ್ತು. ದಕ್ಷಿಣೋತ್ತರಗಳು ಪ್ರತ್ಯೇಕವಾಗಿಯೇ ಆಡಳಿತ ವ್ಯವಸ್ಥೆ ರಚಿಸಿಕೊಂಡುವು.

ಕೊರಿಯದ ಏಕೀಕರಣಕ್ಕಾಗಿ ಸೋವಿಯತ್ ಹಾಗೂ ಅಮೆರಿಕನ್ ಸೇನಾಧಿಪತಿಗಳು ಸಂಯುಕ್ತ ಆಯೋಗ ರಚಿಸಬೇಕೆಂದೂ ಇದು ಕೊರಿಯದ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ಇಲ್ಲಿ ಪ್ರಜಾಪ್ರಭುತ್ವ ಸರ್ಕಾರವೊಂದನ್ನು ತಾತ್ಕಾಲಿಕವಾಗಿ ಏರ್ಪಡಿಸಬೇಕೆಂದೂ ಡಿಸೆಂಬರ್ 1945ರಲ್ಲಿ ಮಾಸ್ಕೊನಲ್ಲಿ ಸಮಾವೇಶಗೊಂಡಿದ್ದ ನಾಲ್ಕು ಬೃಹದ್ರಾಷ್ಟ್ರಗಳು (ಸೋವಿಯತ್ ಒಕ್ಕೂಟ, ಬ್ರಿಟನ್, ಅಮೆರಿಕ, ಚೀನ) ತೀರ್ಮಾನಿಸಿದುವಾದರೂ ಈ ತೀರ್ಮಾನವನ್ನು ಕಾರ್ಯರೂಪಕ್ಕೆ ತರುವುದು ಅಸಾಧ್ಯವಾಯಿತು. ಇಡೀ ಕೊರಿಯದಲ್ಲಿ ಚುನಾವಣೆಯಾಗಬೇಕೆಂದು 1947ರಲ್ಲಿ ವಿಶ್ವಸಂಸ್ಥೆಯ ಮಹಾಸಭೆ ನಿರ್ಣಯಿಸಿತಾದರೂ ಇದರಲ್ಲಿ ಪಶ್ಚಿಮದ ಕೈವಾಡವಿದೆಯೆಂಬ ಸಂಶಯದಿಂದ ಈ ಸಂಸ್ಥೆಯ ಆಯೋಗಕ್ಕೆ ಉತ್ತರ ಕೊರಿಯನ್ ಪ್ರದೇಶವನ್ನು ಪ್ರವೇಶಿಸಲು ಸೋವಿಯತ್ ಸೈನ್ಯಾಧಿಕಾರಿಗಳು ಅವಕಾಶ ಕೊಡಲಿಲ್ಲ. ಉತ್ತರ ಕೊರಿಯಕ್ಕೆ ಪ್ರತ್ಯೇಕವಾದ ಸಂವಿಧಾನವೊಂದು 1948ರಲ್ಲಿ ರಚಿತವಾಗಿ ಪ್ರತ್ಯೇಕ ಚುನಾವಣೆಗಳು ನಡೆದವು (ಆಗಸ್ಟ್ 25). ಸೆಪ್ಟೆಂಬರ್ 28ರಂದು ಉತ್ತರ ಕೊರಿಯದ ಪ್ರಥಮ ಪರಮೋನ್ನತ ಜನತಾ ಸಭೆ ಸಮಾವೇಶಗೊಂಡು ನೂತನ ಸಂವಿಧಾನವನ್ನು ಸ್ವೀಕರಿಸಿತು. ಪ್ರಜಾಪ್ರಭುತ್ವವಾದಿ ಜನತಾ ಗಣರಾಜ್ಯ ಅಸ್ತಿತ್ವಕ್ಕೆ ಬಂದದ್ದು ಅಂದು.

38ನೆಯ ಅಕ್ಷಾಂಶದ ಆಚೀಚಿನಿಂದ ಉತ್ತರ ದಕ್ಷಿಣ ಕೊರಿಯಗಳ ತಿಕ್ಕಾಟ ಬಿರುಸಾಗಿ ಕೊನೆಗೆ 1950 ಜೂನ್ 25ರಂದು ಯುದ್ಧ ಆಸ್ಫೋಟನೆಯಾದಾಗ ದಕ್ಷಿಣ ಕೊರಿಯದ ನೆರವಿಗೆ ವಿಶ್ವಸಂಸ್ಥೆಯ ಅನೇಕ ಸದಸ್ಯ ರಾಷ್ಟ್ರಗಳ ಸೈನ್ಯಗಳು ಬಂದವು. ಮೂರು ವರ್ಷ ನಡೆದ ಈ ಯುದ್ಧದ ಅಂತ್ಯವಾದದ್ದು 1952 ಜುಲೈ 27ರಂದು–ಪಾನ್‌ಮುಂಜಾನ್‌ನಲ್ಲಿ ಕದನ ವಿರಾಮಕ್ಕೆ ಸಹಿ ಬಿದ್ದಾಗ.

ಕೊರಿಯದ ಐಕ್ಯಸ್ಥಾಪನೆಯಾಗಬೇಕೆಂದು ಈ ಕಾಲಿನಲ್ಲಿ ಮತ್ತೆ ಆಶಯ ವ್ಯಕ್ತಪಟ್ಟಿತ್ತಾದರೂ ಈ ಬಗ್ಗೆ ವಿಶ್ವಸಂಸ್ಥೆಯ ಯತ್ನ ಫಲಿಸಲಿಲ್ಲ. 1954ರಲ್ಲಿ ಜಿನೀವದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನ ವಿಫಲಗೊಂಡಿತು. ಅಲ್ಲಿಂದೀಚೆಗೆ ಉತ್ತರ ಕೊರಿಯ ಪ್ರತ್ಯೇಕವಾಗಿಯೇ ಮುಂದುವರಿಯುತ್ತಿದೆ. ಉತ್ತರ ದಕ್ಷಿಣ ಕೊರಿಯಗಳೆರಡಕ್ಕೂ ಪ್ರತ್ಯೇಕವಾಗಿ ವಿಶ್ವಸಂಸ್ಥೆಯ ಸದಸ್ಯತ್ವ ದೊರಕಿಸಿಕೊಡಬೇಕೆಂದು 1962ರಲ್ಲಿ ನಡೆದ ಪ್ರಯತ್ನವೂ ಫಲಿಸಲಿಲ್ಲ. (ಬಿ.ಕೆ.ಜಿ.)

**ಉತ್ತರ ಡಕೋಟ:** ಅಮೆರಿಕ ಸಂಯುಕ್ತಸಂಸ್ಥಾನದ ಉತ್ತರ ಮಧ್ಯ ಗುಂಪಿನ ರಾಜ್ಯಗಳಲ್ಲೊಂದು. ಉ.ಅ. 45° 55'–49° ಹಾಗೂ ಪ. ರೇ. 96° 25'–104° 3' ನಡುವೆ ಹಬ್ಬಿರುವ ಈ ರಾಜ್ಯ ಉತ್ತರ ಅಮೆರಿಕ ಖಂಡ ಪ್ರದೇಶದ ನಟ್ಟನಡುವಿನಲ್ಲಿದೆ. ಉತ್ತರಕ್ಕೆ ಕೆನಡದ ಪ್ರಾಂತ್ಯಗಳಾದ ಮ್ಯಾನಿಟೋಬ ಮತ್ತು ಸಸ್ಕ್ಯಾಚವನ್. ಪೂರ್ವದಲ್ಲಿ

ಕೆಂಪು ನದಿಯಾಚೆಗೆ ಮಿನಿಸೋಟ, ದಕ್ಷಿಣಕ್ಕೆ ದಕ್ಷಿಣ ಡಕೋಟ ಹಾಗೂ ಪಶ್ಚಿಮಕ್ಕೆ ಮಾಂಟ್ಯಾನ. ಪೂರ್ವಪಶ್ಚಿಮವಾಗಿ ಪರಮಾವಧಿ ಉದ್ದ 545 ಕಿಮೀ.; ದಕ್ಷಿಣೋತ್ತರವಾಗಿ ಗರಿಷ್ಠ ಅಗಲ 340 ಕಿಮೀ. ವಿಸ್ತೀರ್ಣ 1,83,022 ಚಕಿಮೀ. ಪೂರ್ವಭಾಗದ ಗಡಿಯಾದ ಕೆಂಪುನದಿಯನ್ನು ಬಿಟ್ಟರೆ ಉಳಿದ ಮೂರು ಕಡೆಯೂ ಇದರ ಎಲ್ಲೆ ಕೃತಕ. ರಾಜ್ಯಕ್ಕೆ ಈ ಹೆಸರು ಬಂದಿರುವುದು ಅಲ್ಲಿನ ಆದಿವಾಸಿಗಳಾದ ಡಕೋಟ ಅಥವಾ ನ್ಯೂ ಇಂಡಿಯನರಿಂದ, ಡಕೋಟ ಎಂದರೆ ಮಿತ್ರರೆಂದು ಅರ್ಥ. ಅಲುಗು ಬಾಲದ ರಾಜ್ಯ ಅಥವಾ ಫ್ಲಿಕರ್ ಟೇಲ್ ಸ್ಟೇಟ್ ಎಂಬ ಅಡ್ಡಹೆಸರು ಇದಕ್ಕೆ ಬಂದಿರುವುದಕ್ಕೆ ಇಲ್ಲಿ ಸಾಮಾನ್ಯವಾಗಿರುವ ಪುಟ್ಟ ಅಳಿಲು ಕಾರಣ.




**ಮೇಲ್ಮೈ ಲಕ್ಷಣ:** ಉತ್ತರ ಡಕೋಟವನ್ನು ಪೂರ್ವಪಶ್ಚಿಮವಾಗಿ ಮೂರು ಮುಖ್ಯ ಮೈದಾನಪ್ರದೇಶಗಳಾಗಿ ವಿಭಾಗಿಸಬಹುದು. ಇದರಲ್ಲಿ ಅತ್ಯಂತ ಪೂರ್ವಕ್ಕಿರುವ ಬಯಲು ಕೆಂಪು ನದಿಯ ಕಣಿವೆಯ ಪ್ರದೇಶ. ಇದು ಪುರಾತನ ಭೂಕಲ್ಪದಲ್ಲಿ ಒಂದು ಹಿಮನದೀಪಾತ್ರ. ಈ ಕಣಿವೆಯ ಪಶ್ಚಿಮಕ್ಕೆ ಮಿಸೂರಿ ಪ್ರಸ್ಥಭೂಮಿಯ ಒಳಭಾಗಕ್ಕಿರುವ ಮೈದಾನ ಪ್ರದೇಶ ಸಮುದ್ರಮಟ್ಟಕ್ಕಿಂತ 395–490ಮೀ. ಗಳಷ್ಟು ಎತ್ತರವಿದೆ. ಇದರ ವಿಸ್ತಾರ ಪೂರ್ವ ಪಶ್ಚಿಮವಾಗಿ 112 ಕಿಮೀ.; ದಕ್ಷಿಣೋತ್ತರವಾಗಿ 320 ಕಿಮೀ. ಅಲ್ಲಲ್ಲಿರುವ ಸರೋವರಗಳ ಪೈಕಿ ದೆವ್ವಗಳ ಸರೋವರ (ಡೆವಿಲ್ಸ್ ಲೇಕ್) ಅತಿ ದೊಡ್ಡದು. ಟರ್ಟ್ಲ್ ಪರ್ವತಗಳು ಈ ಪ್ರದೇಶದ ಉತ್ತರದ ಕಿರೀಟ.

ಈ ರಾಜ್ಯದ 3ನೆಯ ಹಾಗೂ ಅತಿ ಎತ್ತರದ ಮೆಟ್ಟಿಲಿನಂತಿದ್ದು ವಾಯವ್ಯ ಈಶಾನ್ಯವಾಗಿ ಹಬ್ಬಿರುವ ಪ್ರದೇಶವೇ ಮಿಸೂರಿ ಪ್ರಸ್ಥಭೂಮಿ. ಇಲ್ಲಿ ಮಿಸೂರಿ, ಚಿಕ್ಕ ಮಿಸೂರಿ, ಹಾರ್ಟ್, ಕ್ಯಾನನ್ ಬಾಲ್ ಮತ್ತು ನೈಫ್ ನದಿಗಳು ಮುಖ್ಯ. ಇವೇ ಅಲ್ಲದೆ ಅನೇಕ ಚಿಕ್ಕಪುಟ್ಟ ತೊರೆಗಳು ಪ್ರದೇಶದ ಎಲ್ಲ ದಿಕ್ಕುಗಳಲ್ಲೂ ಹರಡಿವೆ. ಎದ್ದು ನಿಂತಂತೆ ತೋರುವ ಕೋಡುಗಲ್ಲುಗಳ ಶಿಖರಗಳೂ ಶಿಲಾಪೀಠಗಳೂ ಇಲ್ಲಿನ ವೈಶಿಷ್ಟ್ಯ. ಮಳೆಯ ಹೊಡೆತ, ನದಿಗಳ ಕೊರೆತಗಳಿಂದಾಗಿ ಇಲ್ಲಿನ ನೆಲ ತುಂಡು ತುಂಡಾಗಿದೆ. ಇದರಿಂದಾಗಿ ಈ ನೆಲ ಬೇಸಾಯಕ್ಕೆ ನಿರುಪಯುಕ್ತ. ಆದರೆ ಇಲ್ಲಿ ಸೋಡಿಯಂ ಸಲ್ಫೇಟ್, ಕಲ್ಲಿದ್ದಲು ಮುಂತಾದ ಖನಿಜಗಳು ಹೇರಳ. ಈ ರಾಜ್ಯದ ಅತ್ಯುನ್ನತ ಪ್ರದೇಶವೆಂದರೆ ಸಮುದ್ರ ಮಟ್ಟದಿಂದ 1057ಮೀ ಎತ್ತರವಿರುವ ಬ್ಲ್ಯಾಕ್ ಬ್ಯೂಟ್ ಎಂಬ ಒಂಟಿ ಗುಡ್ಡ.

**ವಾಯುಗುಣ:** ಉತ್ತರ ಡಕೋಟದ್ದು ಖಂಡಾಂತರ ವಾಯುಗುಣ. ಉಷ್ಣತೆಯ ಏರಿಳಿತದ ವ್ಯಾಪ್ತಿ ಬಲು ಹೆಚ್ಚು. ಬೇಸಿಗೆಯಲ್ಲಿ 56°ಸೆ. ಗೆ ಏರುವ ಪಾದರಸ, ಚಳಿಗಾಲದಲ್ಲಿ ತಳಕ್ಕಿಳಿದು–17°ಸೆ. ಮುಟ್ಟುತ್ತದೆ. ಮಳೆ ಆಗ್ನೇಯದಲ್ಲಿ 56 ಸೆಂಮೀ. ನೈರುತ್ಯದಲ್ಲಿ 36 ಸೆಮೀ. ಇದರಲ್ಲಿ ಹೆಚ್ಚು ಪಾಲು ವಸಂತಕಾಲದ ಉತ್ತರಾರ್ಧದಲ್ಲೂ ಬೇಸಗೆಯಲ್ಲೂ ಬೀಳುತ್ತದೆ. ಒಂದು ವರ್ಷ ಸುವೃಷ್ಟಿಯಾದರೆ ಇನ್ನೊಂದು ವರ್ಷ ಅನಾವೃಷ್ಟಿ.

**ಸ್ವಾಭಾವಿಕ ಸಸ್ಯವರ್ಗ:** ಹೆಚ್ಚಿನ ಸಂಖ್ಯೆಯಲ್ಲಿ ಗಿಡಮರಗಳು ಕೆಂಪು ನದೀ ಕಣಿವೆಯಲ್ಲೂ ಟರ್ಟ್ಲ್ ಪರ್ವತ ಪ್ರದೇಶಗಳಲ್ಲೂ ಕೆನಡದ ಎಲ್ಲೆಯ ಬೆಟ್ಟಗುಡ್ಡಗಳಲ್ಲೂ ಕಂಡುಬರುತ್ತವೆ. ದೆವ್ವಗಳ ಸರೋವರ ಹಾಗೂ ಇತರ ಸರೋವರಗಳ ಸುತ್ತಮುತ್ತ ಸ್ವಾಭಾವಿಕ ಸಸ್ಯವರ್ಗವುಂಟು. ಇಲ್ಲಿ ಪಾಪ್ಲರ್, ಕಾಟನ್‌ವುಡ್ ಸಾಮಾನ್ಯ. ಮಿಸೂರಿ ನದಿಯ ದಡಗಳಲ್ಲೂ ಬ್ಯಾಡ್‌ಲ್ಯಾಂಡ್ ಪ್ರದೇಶದಲ್ಲೂ ಪೊದೆ ಮತ್ತು ಕುರುಚಲು ವಿಶೇಷ.

**ಖನಿಜಸಂಪತ್ತು:** ಉತ್ತರ ಡಕೋಟದಲ್ಲಿ ಹೆಚ್ಚಿನ ಪ್ರಮಾಣದ ಲಿಗ್ನೈಟ್ ಕಲ್ಲಿದ್ದಲು ಮತ್ತು ಸ್ಲೇಟುಶಿಲೆ ಗಣಿಗಳಿವೆ. ಇಲ್ಲಿ ಹೇರಳವಾಗಿ ದೊರಕುವ ಸ್ಲೇಟುಶಿಲೆ ಮತ್ತು ಜೇಡಿಮಣ್ಣುಗಳು ಇಟ್ಟಿಗೆ, ಹೆಂಚು ಮತ್ತು ಪಿಂಗಾಣಿ ಕೈಗಾರಿಕೆಗಳ ಸ್ಥಾಪನೆಗೆ ಸಹಾಯಕ. ಈ ರಾಜ್ಯದ ಉತ್ತರ ಭಾಗದಲ್ಲಿ ದೊರಕುವ ಬೆಣಚುಶಿಲೆ ಇನ್ನೊಂದು ಮುಖ್ಯ ಖನಿಜ. ಇತ್ತೀಚೆಗೆ ಪೆಟ್ರೋಲಿಯಂ ಉತ್ಪಾದನಾ ಮೊತ್ತ ಹೆಚ್ಚಾಗಿದೆ.

**ವ್ಯವಸಾಯ ಮತ್ತು ಪಶುಪಾಲನೆ:** ಈ ರಾಜ್ಯ ವ್ಯವಸಾಯವನ್ನೇ ಹೆಚ್ಚಾಗಿ ಅವಲಂಬಿಸಿದೆ. ಸಾಗುವಳಿ ಕ್ಷೇತ್ರಗಳ ವಿಸ್ತರಣೆಯಿಂದ ಬೇಸಾಯದಲ್ಲಿ ಯಂತ್ರದ ಪಾತ್ರ ಹೆಚ್ಚುತ್ತಿದೆ. ಈ ಕೃಷಿ ಕ್ಷೇತ್ರಗಳ ಸರಾಸರಿ ವಿಸ್ತೀರ್ಣ ಸು. 325 ಹೆಕ್ಟೇರು. ಒಟ್ಟು ಫಸಲಿನ ಮೌಲ್ಯದಲ್ಲಿ ಅರ್ಧಪಾಲು ವಸಂತಗೋದಿಯದು. ಬಾರ್ಲಿ ಫ್ಲಾಕ್ಸ್ ಸೀಡ್, ಡುರಂ ಗೋದಿ, ತೊಕೆ ಗೋದಿ (ಓಟ್ಸ್), ಆಲೂಗಡ್ಡೆ, ಸೋಯಬೀನ್ಸ್, ಸಕ್ಕರೆಬೀಟ್, ಮೆಕ್ಕೆಜೋಳ, ಹುಲ್ಲು–ಇತರ ಫಸಲು.

ಪಶುಪಾಲನೆ ಇನ್ನೊಂದು ಕಸುಬು. ದನಕರು, ಹಂದಿ, ಕುರಿಗಳ ಪೋಷಣೆಯಲ್ಲದೆ ಕೋಳಿ ಸಾಕಣೆಯೂ ಹೆಚ್ಚುತ್ತಿದೆ. ಹೈನುಗಾರಿಕೆಯೂ ಲಾಭಕರ. ಸಹಕಾರಿ ಕ್ರಯ–ವಿಕ್ರಯಗಳಲ್ಲಿ ಇಲ್ಲಿನ ರೈತರಿಗೆ ಹೆಚ್ಚಿನ ಆಸಕ್ತಿ. ಸಹಕಾರಿ ಮಾರಾಟ ಹಾಗೂ ಬಳಕೆದಾರರ ಸಹಕಾರ ಸಂಸ್ಥೆಗಳು ಎರಡನೆಯ ಯುದ್ಧಾನಂತರದ ಕಾಲದಲ್ಲಿ ಹೆಚ್ಚಾಗಿ ಬೆಳೆದಿವೆ.

ಮಿಸೂರಿ ಜಲಾನಯನ ಪ್ರದೇಶದಲ್ಲಿ ಸಂಯುಕ್ತ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಕೈಗೊಂಡಿರುವ ಜಲಾಭಿವೃದ್ಧಿ ಯೋಜನೆಗಳಿಂದ ನೀರಾವರಿ ಸೌಲಭ್ಯವೇ ಅಲ್ಲದೆ ವಿದ್ಯುತ್ತಿನ ಉತ್ಪತ್ತಿಯೂ ಸಾಧ್ಯವಾಯಿತು. ಮಿಸೂರಿಗೆ ಅಡ್ಡಲಾಗಿ ಕಟ್ಟಿದ ಗ್ಯಾರಿಸನ್ ಕಟ್ಟೆ, ಹಾರ್ಟ್ ನದಿಗೆ ಅಡ್ಡಲಾಗಿರುವ ಡಿಕಿನ್ಸನ್ ಮತ್ತು ಹಾರ್ಟ್ ಬ್ಯೂಟ್ ಕಟ್ಟೆ, ಜೇಮ್ಸ್ ನದಿಗೆ ಅಡ್ಡಲಾದ ಜೇಮ್ಸ್ ಟೌನ್ ಕಟ್ಟೆ, ಷಿಯೆನ್ ನದಿಯ ಮೇಲಣ ಬಾಲ್ಡ್‌ಹಿಲ್ ಕಟ್ಟೆ, ಫಾರ್ಕ್ ನದಿಯ ದಕ್ಷಿಣ ಕವಲಿನ ಹಮ್ಮೆ ಕಟ್ಟೆಗಳು ಮುಖ್ಯ.

**ಕೈಗಾರಿಕೆಗಳು:** ಉತ್ತರ ಡಕೋಟದಲ್ಲಿ ಕೈಗಾರಿಕೆಗಳು ಬಹಳ ತಡವಾಗಿ ಪ್ರಾರಂಭವಾದುವು. ಇಲ್ಲಿನ ವಾಯುಗುಣ ಸಮರ್ಪಕವಾಗಿಲ್ಲದ್ದೂ ಜನಭರಿತ ಪೇಟೆಗಳಿಂದ ಈ ರಾಜ್ಯ ದೂರದಲ್ಲಿರುವುದೂ ಕೈಗಾರಿಕೆಗೆ ಒದಗಿ ಬರುವ ಸಾಮಗ್ರಿ ಇಲ್ಲಿ ಹೆಚ್ಚಾಗಿ ಉತ್ಪಾದನೆಯಾಗದಿದ್ದದ್ದೂ ಇದಕ್ಕೆ ಕಾರಣ. ಇಲ್ಲಿನ ಕೈಗಾರಿಕೆಗಳು ಮುಖ್ಯವಾಗಿ ಕೃಷಿ ಮತ್ತು ಪಶುಪಾಲನೆಗೆ ಸಂಬಂಧಪಟ್ಟಂಥವು. ಬೆಣ್ಣೆ, ಗಿಣ್ಣು, ಹಾಲಿನ ಪುಡಿ ಇವೇ ಮುಂತಾದ ಹೈನು ವಸ್ತುಗಳ ಉತ್ಪಾದನೆಯಾಗುತ್ತಿದೆ. ಹಿಟ್ಟಿನ ಗಿರಣಿಗಳು ರಾಜ್ಯಾದ್ಯಂತ ಹರಡಿವೆ. ಮಾಂಸ ಸಂವೇಷ್ಟನ ಕೈಗಾರಿಕೆಗಳೂ ಅಲ್ಲಲ್ಲಿ ಉಂಟು. ಆಲೂಗೆಡ್ಡೆಯ ಆಹಾರ ತಯಾರಿಕೆ, ಕೃಷಿ ಉಪಕರಣ ಕೈಗಾರಿಕೆ, ಕಟ್ಟಡ ವಸ್ತು ತಯಾರಿಕೆ ಇವೂ ಮುಖ್ಯ. ಇಲ್ಲಿನ ಉದ್ಯಮಗಳು ಸಾಮಾನ್ಯವಾಗಿ ಸಣ್ಣ ಪ್ರಮಾಣದವು.

**ಜನಸಂಖ್ಯೆ, ಮುಖ್ಯಪಟ್ಟಣ :** ಉತ್ತರ ಡಕೋಟದ ಜನಸಂಖ್ಯೆ 642200 (2002). ಜನಸಾಂದ್ರತೆ ಚ.ಕಿ.ಮೀ.ಗೆ 91 (ಇಡೀ ಸಂಯುಕ್ತಸಂಸ್ಥಾನದಲ್ಲಿ 49.6) ಗ್ರಾಮಾಂತರ ವಾಸಿಗಳದೇ ಅಧಿಕ ಪ್ರಮಾಣ (64.8%). ರಾಜಧಾನಿ ಬಿಸ್ಮಾರ್ಕ್. ಜನಸಂಖ್ಯೆ 50,000 (2000). ಇತರ ನಗರಗಳು ಫಾರ್ಗೊ (70.500), ಗ್ರಾಂಡ್ ಫೋರ್ಕ್ಸ್ (46,000), ಮಿನಟ್ (36,650). ಜೇಮ್ಸ್‌ಟೌನ್ (16,280) ಡಿಕಿನ್ ಸನ್ (15,924) ಇತ್ಯಾದಿ.(ಕೆ.ಎನ್.ಪಿ.)

**ಇತಿಹಾಸ:** ಇಲ್ಲಿನ ವನ್ಯಮೃಗಸಂಪತ್ತೂ ಆರೋಗ್ಯಕರ ವಾಯುಗುಣವೂ ಇಂಡಿಯನ್ನರ ಅನೇಕ ಬುಡಕಟ್ಟುಗಳನ್ನು ಬಹು ಹಿಂದೆಯೇ ಇಲ್ಲಿಗೆ ಆಕರ್ಷಿಸಿದುವು. ಡಕೋಟರು ಯುದ್ಧಪ್ರಿಯರು, ಬಿಳಿಯರ ದ್ವೇಷಿಗಳು. ಸಿಟಿಂಗ್ ಬುಲ್ ಇವರ ನಾಯಕ.

ಉತ್ತರ ಡಕೋಟದ ನೆಲದ ಮೇಲೆ ಮೊಟ್ಟಮೊದಲು ಕಾಲಿಟ್ಟ ಬಿಳಿಯರು ಫ್ರೆಂಚರು (1738). ಇವರಲ್ಲೊಬ್ಬನ ಇಬ್ಬರು ಮಕ್ಕಳು ನಾಲ್ಕು ವರ್ಷಗಳ ಅನಂತರ ಇಲ್ಲಿಗೆ ಬಂದು ಇಲ್ಲಿಂದ ಪಶ್ಚಿಮದ ಸಮುದ್ರತೀರಕ್ಕೆ ಹಾದಿಯ ಅನ್ವೇಷಣೆಯಲ್ಲಿ ತೊಡಗಿ ವಿಫಲರಾದರು. ಹಡ್ಸನ್ ಕೊಲ್ಲಿಯ ಬಳಿಯ ಪ್ರದೇಶವನ್ನು ಬಿಟ್ಟು ಉಳಿದ ಉತ್ತರ ಡಕೋಟದ ನೆಲವನ್ನೆಲ್ಲ ಒಳಗೊಂಡಿದ್ದ ಲವೀಸಿಯಾನದ ಮೇಲಣ ಒಡೆತನವನ್ನು ಮೊದಲು ಫ್ರೆಂಚರೂ ಅನಂತರ ಸ್ಪೇನಿಗರೂ ಸಾಧಿಸಿದರು. ಸ್ಪೇನಿಗರ ಆಳ್ವಿಕೆಯ ಕಾಲದಲ್ಲಿ ಬ್ರಿಟಿಷರಿಗೆ ಇಲ್ಲಿನ ಮಿಸೂರಿ ನದೀ ತೀರದ ಇಂಡಿಯನ್ನರೊಂದಿಗೆ ತುಪ್ಪುಳು ವ್ಯಾಪಾರ ಮಾಡಲು ಅಪ್ಪಣೆ ದೊರಕಿತ್ತು. ಲವೀಸಿಯಾನ ಪ್ರದೇಶವನ್ನು ಅಮೆರಿಕ ಸಂಯುಕ್ತ ಸಂಸ್ಥಾನ 1803ರಲ್ಲಿ ಕೊಂಡುಕೊಂಡ ಮೇಲೆ ಈ ಪ್ರದೇಶದ ತುಪ್ಪುಳ ವ್ಯಾಪಾರ ಬೆಳೆಯಿತು. ಅಮೆರಿಕನ್ ತುಪ್ಪುಳು ಕಂಪನಿಯವರು ಇಲ್ಲಿ ಕೆಲವು ಕೋಟೆ ಕಟ್ಟಿಕೊಂಡರು. 1812ರಲ್ಲಿ ನಡೆದ ಯುದ್ಧದಿಂದಾಗಿ ಬ್ರಿಟಿಷರು ತಮ್ಮ ಕೆನೆಡಿಯನ್ ವಸಾಹತನ್ನು ದಕ್ಷಿಣಾಭಿಮುಖವಾಗಿ ಈ ಪ್ರದೇಶದಲ್ಲೂ ಬೆಳೆಸುವ ಆಶೆ ತೊರೆಯಬೇಕಾಯಿತು. 49ನೆಯ ರೇಖಾಂಶದ ಉದ್ದಕ್ಕೂ ರಾಕಿ ಪರ್ವತಗಳವರೆಗೆ ಗಡಿ ನಿರ್ಧಾರವಾದದ್ದು 1878ರ ಪ್ಯಾರಿಸ್ ಕೌಲಿನ ಪರಿಣಾಮವಾಗಿ.

ಉತ್ತರ ಡಕೋಟದಲ್ಲಿ ಬಿಳಿಯರ ವಸತಿ ಸ್ಥಾಪನೆಯಾದದ್ದು 1812ರಲ್ಲಿ. 1823ರ ವೇಳೆಗೆ ಇಲ್ಲಿ 350 ಮಂದಿ ಬಿಳಿಯರಿದ್ದರು. ಇಂಡಿಯನ್ನರ ನೆಲವನ್ನೆಲ್ಲ ಬಿಳಿಯರು ಆಕ್ರಮಿಸಿಕೊಂಡು ಅವರ ಪಶುಸಂಪತ್ತಿಯ ನಾಶಕ್ಕೆ ಕಾರಣರಾದ್ದರಿಂದ 1850 ರಿಂದ ಮುಂದೆ 20 ವರ್ಷಕಾಲ ಇಲ್ಲಿನ ಬಿಳಿಯರಿಗೂ ಇಂಡಿಯನ್ನರಿಗೂ ಕದನಗಳು ನಡೆದವು. ಕ್ರಮೇಣ ಬಿಳಿಯರು ಈ ಮೂಲವಾಸಿಗಳನ್ನು ಮಿಸೂರಿಯ ಪಶ್ಚಿಮದ ಬ್ಯಾಡ್‌ಲ್ಯಾಂಡಿಗೆ ಒತ್ತರಿಸಿದರು. ಉತ್ತರ ಡಕೋಟದ ಪೂರ್ವಭಾಗವೆಲ್ಲ ಬಿಳಿಯರ ಕೈವಶವಾಗಿ, ಈ ರಾಜ್ಯದ ಪೂರ್ವಗಡಿಗೆ ರೈಲುರಸ್ತೆ ನಿರ್ಮಾಣವಾದಾಗ (1871) ಇಲ್ಲಿನ ಚಟುವಟಿಕೆಗೆ ಹೊಸ ಹುರುಪು ಬಂತು. ಮುಂದಿನ ಹತ್ತು ವರ್ಷ ಕೆಂಪು ನದೀಕಣಿವೆಯ ಅಭಿವೃದ್ಧಿಯ ಕಾಲ. ಪಶ್ಚಿಮಾಭಿಮುಖವಾಗಿ ರೈಲು ವ್ಯವಸ್ಥೆ ವಿಸ್ತರಿಸಿದಂತೆಲ್ಲ ಈ ರಾಜ್ಯ ಬೆಳೆಯಿತು.

1861–89ರ ವರೆಗೂ ಉತ್ತರ–ದಕ್ಷಿಣ ಡಕೋಟಗಳು ಪ್ರತ್ಯೇಕವಾಗಿರಲಿಲ್ಲ. ಡಕೋಟ ಪ್ರದೇಶವೆಂದೇ ಕರೆಯಲಾಗುತ್ತಿದ್ದ ಈ ನೆಲವನ್ನು 1889ರಲ್ಲಿ ಒಡೆದು ಎರಡು ರಾಜ್ಯ ಸೃಷ್ಟಿಸಿದಾಗ ಉತ್ತರ ಡಕೋಟಕ್ಕೊಂದು ಪ್ರತ್ಯೇಕ ಸಂವಿಧಾನ ರಚನೆಯಾಯಿತಲ್ಲದೆ ಆ ವರ್ಷದ ನವಂಬರ್ 2ರಂದು ಈ ರಾಜ್ಯ ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಸೇರಿತು. ಆಗಿನ ಜನಸಂಖ್ಯೆ 1,75,000.

1890 – 1915ರ ವರೆಗಿನ ಕಾಲದಲ್ಲಿ ರಾಜ್ಯ ಬೆಳೆಯಿತು. ಹೊಸ ಹೊಸ ಧಾನ್ಯ ಪ್ರದೇಶಗಳ ದ್ವಾರ ತೆರೆಯುವುದಕ್ಕೆ ಇಲ್ಲಿನ ರೈಲು ಕಂಪನಿಗಳ ತೀವ್ರ ಸ್ಪರ್ಧೆ ಬಹುಮಟ್ಟಿಗೆ ಕಾರಣ. ವಲಸೆಗಾರರು ಗುಂಪುಗುಂಪಾಗಿ ಬಂದರು. ವರ್ಷಕ್ಕೆ ಸುಮಾರು 18,000 ವಲಸೆಗಾರ ಕುಟುಂಬಗಳು ಇಲ್ಲಿ ನೆಲಸಿದವು. ಮಿಸೂರಿ ನದಿಯಾಚೆಗೂ ವಲಸೆಗಾರರ ದಂಡು ದಾಳಿಯಿಟ್ಟಿತು. ಒಂದನೆಯ ಮಹಾಯುದ್ಧಾನಂತರ ಕಾಲದವರೆಗೂ ಇದಕ್ಕೆ ತಡೆಯೇ ಇರಲಿಲ್ಲ.

ಅಲ್ಲಿಂದೀಚೆಗೆ ಸಂಭವಿಸಿದ ಮುಗ್ಗಟ್ಟೂ ಅನಾವೃಷ್ಟಿಯೂ ದೂಳಿನ ಬಿರುಗಾಳಿಯೂ ಇಲ್ಲಿನ ಆರ್ಥಿಕ ವ್ಯವಸ್ಥೆಯ ಮೇಲೆ ಬಲವಾದ ಪೆಟ್ಟು ಹಾಕಿದವು. ಎರಡನೆಯ ಯುದ್ಧಕಾಲದಲ್ಲಿ ಮತ್ತೆ ಪರಿಸ್ಥಿತಿ ಸುಧಾರಿಸಿತೆನ್ನಬಹುದು.

ಉತ್ತರ ಡಕೋಟದ ಜನ ಸಾಮಾನ್ಯವಾಗಿ ರಿಪಬ್ಲಿಕನ್ ಪಕ್ಷದವರು. ಬೇಸಾಯದ ಮುಗ್ಗಟ್ಟಿನ ಕಾಲದಲ್ಲಿ ಇಲ್ಲಿನ ರೈತರೂ ಇತರ ಅತೃಪ್ತ ಜನರೂ ಸ್ವತಂತ್ರ್ಯ ಸಂಸ್ಥೆ ಕಟ್ಟಿಕೊಂಡಿದ್ದ ರಾದರೂ ಈ ತೀವ್ರಗಾಮಿಗಳ ಪ್ರಭಾವ ದೀರ್ಘಕಾಲ ಉಳಿಯಲಿಲ್ಲ. *

**ಉತ್ತರದೇಶದಬಸವಲಿಂಗದೇವ:** ಸು.1600. ವೀರಶೈವ ಕವಿ. ಬಸವೇಶ್ವರಪುರಾಣದ ಕಥಾಸಾಗರ, ಭೈರವೇಶ್ವರಕಾವ್ಯದ ಕಥಾಸಾಗರ, ಉಚಿತ ಕಥೆಗಳು ಎಂಬ ಗ್ರಂಥಗಳನ್ನು ಗದ್ಯದಲ್ಲಿ ಬರೆದಿದ್ದಾನೆ. ಇವುಗಳಲ್ಲಿ ತಾನು ಷಟ್‌ಸ್ಥಲಚಕ್ರವರ್ತಿ ಚೆನ್ನಬಸವದೇವನ ಕಾರುಣ್ಯದ ಶಿಶುವೆಂದೂ ಬಸವಣ್ಣನ ಕಥೆಗಳನ್ನು ಭಕ್ತಮಾಹೇಶ್ವರರು ಸುಲಭದಲ್ಲಿ ತಿಳಿಯುವಂತೆ ಹೇಳಹೊರಟಿರುವೆನೆಂದೂ ಕವಿ ಹೇಳಿಕೊಂಡಿದ್ದಾನೆ. ಈತನ ಭಾಷಾ ಸ್ವರೂಪವನ್ನು ನೋಡಿದರೆ ಸುಮಾರು 17ನೆಯ ಶತಮಾನದವನೆಂದೂ ಹೇಳಬಹುದು.

ಬಸವೇಶ್ವರಪುರಾಣದ ಕಥಾಸಾಗರದಲ್ಲಿ 464 ಕಥೆಗಳಿವೆ. ಈ ಕಥೆಗಳಲ್ಲಿ ಅಷ್ಟಾದಶ ಪುರಾಣಗಳು, ರಾಮಾಯಣ, ಮಹಾಭಾರತ ಮೊದಲಾದ ಸಂಸ್ಕೃತ ಗ್ರಂಥಗಳಿಂದ ಆಯ್ದುಕೊಂಡ ಕೆಲವು ಕಥೆಗಳು ಕಂಡುಬರುತ್ತವೆಯಾದರೂ ಬಸವಣ್ಣನವರನ್ನು ಕುರಿತ ಕಥೆಗಳನ್ನು ನಿರೂಪಿಸುವುದು ಇಲ್ಲಿನ ಮುಖ್ಯ ಗುರಿ. ಆದ್ದರಿಂದ ಈತ ಹರಿಹರ, ರಾಘವಾಂಕ, ಲಕ್ಕಣ್ಣ ದಂಡೇಶ, ನೀಲಕಂಠಾಚಾರ್ಯ, ಸಿಂಗಿರಾಜ, ಗುಬ್ಬಿಯ ಮಲ್ಲಣಾರ್ಯ ಮೊದಲಾದ ಪ್ರಸಿದ್ಧ ವೀರಶೈವ ಕವಿಗಳ ಕಾವ್ಯಗಳಿಂದ ತನ್ನ ಕತೆಗಳನ್ನು ಆಯ್ದುಕೊಂಡಿದ್ದಾನೆ. ಈ ಮೂಲ ಕಾವ್ಯಗಳ ಪದಗಳನ್ನೂ ಪದಪುಂಜಗಳನ್ನೂ ಸಂಗ್ರಹಕಾರನು ತನ್ನ ನಿರೂಪಣೆಯಲ್ಲಿ ಬಳಸಿರುವುದರಿಂದ, ಹಿಂದಿನ ಕವಿಕಾವ್ಯಗಳ ಕರ್ತೃತ್ವವನ್ನು ನಿರ್ಧರಿಸುವಲ್ಲಿ ಈ ಕಥೆಗಳು ಬಹು ಉಪಯುಕ್ತವಾಗಿವೆ.

'ಭೈರವೇಶ್ವರಕಾವ್ಯದ ಕಥಾಸಾಗರ' ಕಿಕ್ಕೇರಿಯಾರಾಧ್ಯ ನಂಜುಂಡ ಕವಿಯ (ಸು.1550) ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರದಿಂದ ಎತ್ತಿಕೊಂಡ 316 ಕಥೆಗಳನ್ನು ಒಳಗೊಂಡಿದೆ. 'ಉಚಿತ ಕಥೆಗಳು' ಬೇರೆ ಬೇರೆ ಕಡೆಗಳಿಂದ ಸಂಗ್ರಹಿಸಿರುವ 74 ಕಥೆಗಳನ್ನು ಒಳಗೊಂಡಿದೆ. (ಟಿ.ಎಸ್.ಎಸ್.)

**ಉತ್ತರದೇವಿ:** ಕನ್ನಡ ಜನಪದ ಕಥನಗೀತೆಗಳಲ್ಲೊಂದು. ಬೀಸುವಾಗ, ಹೊಲಗಳಲ್ಲಿ ಕಳೆ ಕೀಳುವಾಗ, ನಾಟಿ ಹಾಕುವಾಗ, ಹೀಗೆ ಇತರ ಹಲವಾರು ಸಂದರ್ಭಗಳಲ್ಲಿ ಹಾಡುವ ಚಿಕ್ಕ ಹಾಡುಗಬ್ಬಗಳಲ್ಲಿ ಇದು ಬಹಳ ಮುಖ್ಯವಾದದ್ದು. ಇಂಥ ಹಾಡುಗಳನ್ನು ಪುರುಷರಿಗಿಂತ ಸ್ತ್ರೀಯರೇ ಹೆಚ್ಚು ಸಂಖ್ಯೆಯಲ್ಲಿ ಹಾಡುತ್ತಾರೆ. ವಾದ್ಯವಿಶೇಷಗಳೊಡನೆ ಹಾಡುವ ವೃತ್ತಿಗಾಯಕರ ಕಥನಗೀತಗಳು ವ್ಯಾಪ್ತಿಯಲ್ಲಿ ದೊಡ್ಡವು; ಇಡೀ ರಾತ್ರಿ ಹಾಡಬಹುದಾದಂಥವು. ಪಿರಿಯಾಪಟ್ಟಣದ ಲಾವಣಿ, ಸಾರಂಗಧರನ ಕಥೆ, ಘನಪತಿರಾಯನ ಕಥೆ, ಕರಿರಾಯನ ಕಥೆ ಇವು ವಿಸ್ತಾರವಾದ ಜನಪದ ಖಂಡಕಾವ್ಯಗಳು. ಇವಕ್ಕಿಂತ ಅಡಕವಾಗಿ, ಭಾವಗರ್ಭಿತವಾಗಿ ಒಂದೋ ಎರಡೋ ಘಟನೆಗಳ ಆಧಾರದ ಮೇಲೆ ರಚಿತವಾದ ಅನೇಕ ಕಥನಗೀತೆಗಳು ಹಳ್ಳಿಯ ಗರತಿಯರ ಬಾಯಲ್ಲಿ ಪರಂಪರಾನುಗತವಾಗಿ ಉಳಿದು ಬಂದಿವೆ. ಸುದೀರ್ಘವಾದ ಕಥನಗೀತೆಗಳನ್ನು ಸ್ತ್ರೀಯರೂ ವಿಶೇಷವಾದ ಸಂದರ್ಭಗಳಲ್ಲಿ ಹಾಡುತ್ತಾರೆ. ಗುಣಸಾಗರಿ, ಕಾಳಿಂಗರಾಯ, ಅಣಜಿ ಹೊನ್ನಮ್ಮ ಇಂಥವೂ ಕಥನಗೀತೆಗಳೇ. ಆದರೆ ಉತ್ತರದೇವಿಯ ಕಥೆ ಗಾತ್ರದಿಂದಲೂ ಉದ್ದೇಶ ಮತ್ತು ಬಳಕೆಯ ದೃಷ್ಟಿಯಿಂದಲೂ ಇವೆಲ್ಲಕ್ಕಿಂತ ಬೇರೆಯದಾಗಿದೆ.

ಹೆಣ್ಣುಮಕ್ಕಳ ಗೀತೆ, ಕಥನಗೀತೆಗಳಲ್ಲಿ ವಿಷಯದ ಗಾಂಭೀರ್ಯ ಗಮನಾರ್ಹವಾದದ್ದು. ಗರತಿ ಬಹಳಮಟ್ಟಿಗೆ ತನ್ನ ದಿನನಿತ್ಯದ ಸಮಸ್ಯೆಗಳನ್ನೇ ತನ್ನ ಹಾಡುಗಳಲ್ಲೂ ತೋಡಿಕೊಂಡಿದ್ದಾಳೆ. ತಾನು, ತನ್ನ ಕುಟುಂಬ, ತನ್ನ ತೌರು, ತನ್ನ ದೈವ, ಪತಿ, ತ್ಯಾಗ ಬಲಿದಾನಗಳಿಂದ ಪುಣ್ಯಸ್ಮರಣೀಯರಾದ ವ್ಯಕ್ತಿಗಳು, ಕಷ್ಟನಷ್ಟಗಳಿಗೊಳಗಾಗಿ ಅಸುವನ್ನೀಗಿದ ನತದೃಷ್ಟ ಹೆಣ್ಣುಮಕ್ಕಳು–ಇಂಥ ವಸ್ತುವಿನ್ಯಾಸದ ಹಿನ್ನೆಲೆಯಲ್ಲಿಯೇ ಅವರ ಸಾಹಿತ್ಯ ಮೈದುಂಬಿಕೊಂಡಿರುತ್ತದೆ. ಇದು ಅವರದೇ ಹಾಡು; ಅಥವಾ ಅವರಂತೆಯೇ ನೋವನ್ನುಂಡ ಅಸಹಾಯಕ ಜೀವಿಗಳ ಹಾಡು. ಇಂಥ ಅಸಹಾಯಕ ಜೀವಿಗಳ ಸಾಲಿಗೆ ಸೇರಿದ ಉತ್ತರದೇವಿ, ಈರೋಬಿ, ನಾಗವ್ವ, ಹುಳಿಯೂರು ಕೆಂಚಮ್ಮ, ಹಿರಿದಿಮ್ಮವ್ವ ಮುಂತಾದ ಅಪೂರ್ವ ತ್ಯಾಗಪೂರ್ಣ ಸ್ತ್ರೀರತ್ನಗಳನ್ನು ಕುರಿತ ಕಥೆಗಳು ಕನ್ನಡ ಜನಪದ ಸಾಹಿತ್ಯ ಭಂಡಾರದಲ್ಲಿ ಅಪಾರವಾಗಿವೆ.

ಉತ್ತರದೇವಿಯ ಕಥೆ ಕರ್ನಾಟಕದಲ್ಲಿ ಎಲ್ಲ ಕಡೆಗಳಲ್ಲೂ ದೊರೆಯುತ್ತದೆ. 1933ರ ವೇಳೆಗೇ ಅರ್ಚಕ ಬಿ. ರಂಗಸ್ವಾಮಿಯವರು ತಮ್ಮ "ಹುಟ್ಟಿದ ಹಳ್ಳಿ ಹಳ್ಳಿಯ ಹಾಡು" ಎಂಬ ಸುಂದರ ಜಾನಪದ ಗ್ರಂಥದಲ್ಲಿ ಉತ್ತರ ದೇವಿಯ ಕಥೆಯನ್ನು ಸಂಗ್ರಹಿಸಿ ಅದರ ಬಗ್ಗೆ ಹೀಗೆ ಬರೆದಿದ್ದಾರೆ:

ಉತ್ತರೆಗೂ ಅತ್ತೆಗೂ ಸರಿಬೀಳಲಿಲ್ಲ. ಆದ್ದರಿಂದ ಅತ್ತೆ ತನ್ನ ಮಗನನ್ನು ತನ್ನ ಕಡೆಗೆ ಒಲಿಸಿಕೊಂಡು ಸೊಸೆಯನ್ನು ಮನೆಬಿಟ್ಟು ಹೊರಡಿಸಿದಳು. ಉತ್ತರೆ ಗಂಡನ ಮನೆಯನ್ನು ಬಲು ಕಷ್ಟದಿಂದ ಬಿಟ್ಟು ತನ್ನ ಎಳೆಯ ಮಕ್ಕಳನ್ನು ಕಟ್ಟಿಕೊಂಡು ತಂದೆಯ ಮನೆಗೆ ಹೊರಟಳು. ಹೋಗುವ ದಾರಿಯಲ್ಲಿ ಅನೇಕರು ಅವಳನ್ನು ಅಡ್ಡಕಟ್ಟಿ ತಮ್ಮವಳನ್ನಾಗಿ ಮಾಡಿಕೊಳ್ಳಬೇಕೆಂಬ ಆಶೆಗಳನ್ನು ತೋರಿಸಿದರು. ಉತ್ತರೆ ಅವುಗಳೆಲ್ಲಕ್ಕೂ ಬಲಿಯಾಗದೆ ತನ್ನ ನಿಜವೊಂದನ್ನೇ ನಂಬಿಕೊಂಡು ತಂದೆಯ ಮನೆಗೆ ಬಂದಳು. ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ, ಅಜ್ಜಿ, ಅಜ್ಜ ಒಬ್ಬರೂ ಅವಳಿಗೆ ಇರಲು ಆಶ್ರಯ ಕೊಡಲಿಲ್ಲ. ಕೊನೆಗೆ ಅಜ್ಜಿ ಅತಿ ದುಃಖದಿಂದ ಹೇಳಿದ ಮಾತನ್ನೇ ಗತಿಯೆಂದು ನಂಬಿ ಹೋಗಿ ಹಂಪೆಯ ಹೊಳೆಯಲ್ಲಿ ಬಿದ್ದು ಮಕ್ಕಳ ಸಹಿತ ಪ್ರಾಣತ್ಯಾಗ ಮಾಡಿದಳು. ಈ ತಾಯಿ ಮಕ್ಕಳೇ ಆ ಹೊಳೆಯ ನಾಲ್ಕು ಕವಲುಗಳೆಂದು ಜನರ ನಂಬಿಕೆ.

ಅರ್ಚಕ ರಂಗಸ್ವಾಮಿಯವರು ಗದ್ಯದಲ್ಲಿ ಕಥಾ ಪರಿಚಯ ಮಾಡಿಕೊಟ್ಟು ಪದ್ಯರೂಪದ ಕಥನಗೀತೆಯನ್ನೂ ನೀಡಿದ್ದಾರೆ. ಈ ಕಥಾಸ್ವರೂಪವೇ ಈವರೆಗೆ ಸಂಗ್ರಹಿತವಾಗಿರುವ ಹದಿನೈದಕ್ಕೂ ಹೆಚ್ಚು ರೂಪಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಉಳಿದು ಬಂದಿದೆ. ಮತಿಘಟ್ಟ ಕೃಷ್ಣಮೂರ್ತಿ, ಕರೀಂಖಾನ್, ಕರಾಕೃ, ಜೀ.ಶಂ. ಪರಮಶಿವಯ್ಯ. ಕೆ.ವಿ. ಲಿಂಗಪ್ಪ. ಎಲ್. ಆರ್. ಹೆಗಡೆ. ಡಿ. ಲಿಂಗಯ್ಯ, ಚಂದ್ರಶೇಖರ ಐತಾಳ, ಕಾಳೇಗೌಡ, ನಾಗವಾರ, ಕೆ. ನಾರಾಯಣ. ಎ.ಎನ್. ಲಕ್ಷ್ಮೀ ನಾರಾಯಣ ಹಾಗೂ ಅನೇಕ ಸಂಗ್ರಾಹಕರು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿನ ಈ ಕಥನ ಗೀತೆಯನ್ನು ಗುರುತಿಸಿ ಸಂಗ್ರಹಿಸಿದ್ದಾರೆ. ಕೆಲವು ಪ್ರಕಟವಾಗಿವೆ. ಪ್ರಕಟಿತ ರೂಪಗಳಲ್ಲಿ ಮುಖ್ಯವಾದವನ್ನು ಆಧರಿಸಿ ದೇ. ಜವರೇಗೌಡರು ಕನ್ನಡದಲ್ಲಿ ಉತ್ತರ ದೇವಿಯ ಕಥೆಯ ಒಂದು ವಿವೇಚನೆಯನ್ನು ನಡೆಸಿದ್ದಾರೆ. ಈ ಕಥನಗೀತೆಯ ವಸ್ತುವನ್ನು ಕುರಿತು ಅವರು ಹೀಗೆ ಹೇಳಿದ್ದಾರೆ:

ಜನಪದ ಸಾಹಿತ್ಯವೆಲ್ಲ ಒಂದರ್ಥದಲ್ಲಿ ಸಂಸಾರ ಸಂಹಿತೆಯೆಂದು ಕರೆಯಬಹುದು. ಅದರಲ್ಲಿ ಮೈಗೊಂಡಿರುವ ವಿಷಯ ಭಾವಾಲೋಚನೆಗಳೆಲ್ಲ ಹಳ್ಳಿಯ ಒಗತನಕ್ಕೆ ಸಂಭವಿಸಿದುವು. ಆ ಒಗತನದ ಸುಖದುಃಖಗಳಿಗೆ ಕಾರಣವಾದ ವ್ಯಕ್ತಿಗಳೂ ಅವರ ಕ್ರಿಯೆ ಪ್ರತಿಕ್ರಿಯೆಗಳೂ ಆ ಸಾಹಿತ್ಯದಲ್ಲಿ ಕಂಡುಬರುವ ಪ್ರಧಾನ ವಿಷಯ...ಅದು ನೆಲದಿಂದ ದೂರವಾದ, ಕೈಗೆಟುಕದ, ಕಲ್ಪನೆಗೆ ಸಿಗದ ಇಂದ್ರ ನಂದನವಲ್ಲ; ಅದರಲ್ಲಿ ನೆಲದ ಸೊಗಡು ಮೂಗಿಗಡರುತ್ತದೆ; ಅದು ಮುಷ್ಟಿಗ್ರಾಹ್ಯವೆನ್ನುವಷ್ಟರಮಟ್ಟಿಗೆ ಮೂರ್ತಿಮತ್ತಾಗಿದೆ. ಆ ಬದುಕು ಪರಿಮಿತವಾದ ವ್ಯಾಪ್ತಿಯುಳ್ಳದ್ದಾದರೂ ಅದರಲ್ಲಿ ಏಳುಬೀಳುಗಳಿವೆ, ಕೋಪತಾಪಗಳಿವೆ, ಸುಖದುಃಖಗಳಿವೆ. ಕಷ್ಟಕ್ಲೇಶಗಳಿವೆ. ಅದನ್ನು ಕಹಿಗೊಳಿಸುವ ಮುಖ್ಯ ಸಂಗತಿಗಳಲ್ಲಿ ಅತ್ತೆ ಸೊಸೆಯರ ಕಲಹ ವೊಂದು. ಈ ಕಲಹವಿಲ್ಲದ ಸಂಸಾರಗಳು ವಿರಳ. ಅತ್ತೆಯ ಅಟ್ಟಹಾಸ, ಸೊಸೆಯ ಗೋಳು ಜಾನಪದ ಸಾಹಿತ್ಯದಲ್ಲಿ ಸಾಕಷ್ಟು ಮೂಡಿದ್ದರೂ ಎಲ್ಲ ಸೊಸೆಯರಿಗೆ ಪ್ರಾತಿನಿಧಿಕವೆಂಬಂತೆ ಉತ್ತರದೇವಿಯ ಕಥೆ ಮಾತ್ರ ಕರ್ನಾಟಕದಲ್ಲೆಲ್ಲ ಪ್ರಚಲಿತವಾಗಿದೆ.

ದೇ. ಜವರೇಗೌಡರು ಉತ್ತರದೇವಿಗೆ ಸಂಬಂಧಿಸಿದ ಕಥೆಗಳನ್ನು ಉತ್ತರ, ಮಧ್ಯ ಮತ್ತು ದಕ್ಷಿಣ ಸಂಪ್ರದಾಯಗಳೆಂದು ವಿಂಗಡಿಸಿಕೊಂಡು ಅವುಗಳಲ್ಲಿ ಅತ್ಯುತ್ತಮ ಕಥೆ ಯಾವುದು ಎಂದು ನಿರ್ಧರಿಸಿದ್ದಾರೆ. ಈ ಎಲ್ಲ ಕಥೆಗಳ ಆಧಾರದ ಮೇಲೆ ಉತ್ತರದೇವಿಯ ಮೂಲಕಥೆಯನ್ನು ಕಟ್ಟಲು ಐತಿಹಾಸಿಕ ಭೌಗೋಳಿಕ ಕ್ರಮವನ್ನು ಅನುಸರಿಸಬೇಕಾಗುತ್ತದೆ. ಇದು ಅಪಾರ ಸಂಖ್ಯೆಯ ಪಾಠಗಳು ಲಭ್ಯವಾದಾಗ ಮಾತ್ರ ಸಾಧ್ಯ. ಈಗ ದೊರೆತಷ್ಟೆ

ಕಥೆಗಳ ಹಿನ್ನೆಲೆಯಲ್ಲಿ ಅದನ್ನು ಪರಿಶೀಲಿಸಬಹುದು. ಅತ್ತೆ ಸೊಸೆಯರ ಜಗಳ ಯಾವ ಕಾಲಕ್ಕೂ ತಪ್ಪಿದ್ದಲ್ಲ. ಈ ಸಮಸ್ಯೆ ಹಿಂದೂ ಇಂದೂ ಮುಂದೂ ಇದ್ದದ್ದೇ, ಇರುವುದೇ. ಆದ್ದರಿಂದ ಈ ಕಥೆ ನಾಡಿನ ಸ್ತ್ರೀ ಹೃದಯದಲ್ಲಿ ಸ್ಥಿರವಾಗಿ ನಿಂತಿದೆ. ಪ್ರತಿಯೊಬ್ಬ ಸೊಸೆಯೂ ತನ್ನ ಅತ್ತೆಯಿಂದ ದೊರೆಯಬಹುದಾದ ಕಿರುಕುಳಕ್ಕೆ ಕಣ್ಣೀರು ಮಿಡಿಯುವಾಗ ಉತ್ತರದೇವಿಯನ್ನು ನೆನೆಯದಿರಳು. ಅವಳ ಬದುಕಿನೊಡನೆ ತನ್ನ ಬದುಕನ್ನು ಹೋಲಿಸದಿರಳು. ಉತ್ತರದೇವಿಯ ಕಡುಕಷ್ಟವನ್ನು ಸ್ಮರಿಸಿಕೊಂಡಾಗ ತನ್ನ ಕಷ್ಟ ಅಲ್ಪವೆನಿಸಬಹುದು. ಏನೋ ನೆಮ್ಮದಿ ಶಾಂತಿ ದೊರೆಯಬಹುದು. ಅಸಹಾಯಕಳಾದ ಉತ್ತರದೇವಿ ಎಲ್ಲರಿಂದಲೂ ನಿರ್ಲಕ್ಷಿತಳಾಗಿ ಹರಿಸಿದ ಕಣ್ಣೀರು ಅನಂತವಾದದ್ದು. ಅವಳ ಗೋಳು ಮುಗಿಲನ್ನೂ ತಟ್ಟದಿಲ್ಲ. ಆಶ್ವಯುಜ ಮಾಸದಲ್ಲಿ ಅನಿರೀಕ್ಷಿತವಾಗಿ ಅಪಾರ ಮಳೆಯಾಗುವುದುಂಟು. ಕೆರೆಕಟ್ಟೆಗಳೊಡೆದು, ನದಿಗಳು ಉಕ್ಕಿ ಹರಿಯುತ್ತವೆ. ಭೂಮಿ ತಾಯಿ ಸುಯ್ಯೋ ಎಂದು ನಿಟ್ಟುಸಿರು ಬಿಡುತ್ತಾಳೆ. ಉತ್ತರದೇವಿಯ ಅಂತ್ಯಕ್ಕೂ ಉತ್ತರೆ ಮಳೆಯ ನೈಸರ್ಗಿಕ ಕ್ರಿಯೆಗೂ ಸಂಬಂಧ ಏರ್ಪಟ್ಟಿರುವುದು ಇಂಥ ಸಾಂಕೇತಿಕ ಹಿನ್ನೆಲೆಯಲ್ಲಿಯೇ ಇರಬೇಕು. ಉತ್ತರದೇವಿಯ ಕಥೆಯನ್ನು ಹಾಡುವಾಗ ಕೆಲವು ಕಡೆ ಸುಯ್ಯೋ ಎಂಬ ಪಲ್ಲವಿಯನ್ನು ಸೇರಿಸಿಕೊಂಡಿರುತ್ತಾರೆ.

ಈವರೆಗೆ ಲಭ್ಯವಾಗಿರುವ ಉತ್ತರದೇವಿಯ ಹಾಡ್ಗತೆಗಳಲ್ಲಿ, ಆರಂಭ ಹಾಗೂ ಅಂತ್ಯ ಎರಡರಲ್ಲೂ ಅಸ್ಪಷ್ಟತೆಯಿದೆ. ನಡುವಿನ ಕಥಾಸೂತ್ರವೂ ಅಲ್ಲಲ್ಲಿ ಕಡಿದು ಬೀಳುತ್ತದೆ. ಯಾವುದೇ ಒಂದು ಕೃತಿಯನ್ನು ಆಧರಿಸಿ ಇದೇ ಕಥೆಯೆಂದು ಸ್ಪಷ್ಟವಾಗಿ ಹೇಳುವುದು ಕಷ್ಟವಾಗುತ್ತದೆ. ಮಲೆನಾಡಿನ ವಿಭಿನ್ನ ರಚನೆಗಳನ್ನು ಬಿಟ್ಟರೆ ಉಳಿದ ಹತ್ತು ಪಾಠಗಳನ್ನು ಪರೀಕ್ಷಿಸಿ ಸ್ಥೂಲವಾಗಿ ಮೂಲಕಥೆಯನ್ನು ಕಲ್ಪಿಸಿಕೊಳ್ಳಬಹುದು. ಕಥೆಯಲ್ಲಿ ಏರುಪೇರುಗಳಿದ್ದರೂ ಆದಿ ಅಂತ್ಯಗಳಲ್ಲಿ ಕ್ಲಿಷ್ಟತೆ ಕಂಡರೂ ಕಥೆಯ ಉದ್ದಕ್ಕೂ ಹರಿಯುವ ಒಂದು ರೀತಿಯ ಶೋಕದ ಧ್ವನಿ ಎಲ್ಲ ಕಥೆಗಳ ಅಂತಸ್ಸತ್ವವಾಗಿದೆ. ಹೃದಯವನ್ನು ಹಿಂಡುವಂಥದಾಗಿದೆ. ಉತ್ತರದೇವಿ ಇದ್ದ ನಾಡು ಸುಖಸಂಪತ್ತಿನ ಆಗರ. ಆಲೂರು ಬೇಲೂರು ಕುಣಿಗಲುಗಳನ್ನು ಒಳಗೊಳ್ಳುವ ನೆಲೆ.

ಸುವ್ವಿ ಆಲೂರು ಸುವ್ವಿ ಬೇಲೂರು
ಸುವ್ವಿ ಶಂಕುರನ ಕುಣಿಗ್ಯಲ-ಏರಿಮೇಲೆ
ಕಂಚಿನ ಕಹಳೆ ನುಡಿದ್ಯವು
ಕಂಚಿನ ಕಹಳೆ ನುಡಿದು ಬಿಟ್ಟಿತ್ತಾವು
ಬಿಚ್ಚಿ ಮಾತ್ಯಾವೊ ಬಿಳಿಯೆಲೆ ಒತ್ತಿನಲಿ
ಕತ್ತರಿಸಿ ಮಾರ್ಯಾವೊ ಕಳಿಯಡಕೆ
ಕತ್ತರಿಸಿ ಮಾರ್ಯಾವೊ ಕಳಿಯಡಕೆ ಒತ್ತಿನಲಿ
ಬೇಸಿ ಮಾರ್ಯಾವೊ ಕೆನಿಸುಣ್ಣ

(ಜೀಶಂಪ: ಜಾನಪದ ಖಂಡ ಕಾವ್ಯಗಳು)

ಒಮ್ಮೆ ಉತ್ತರದೇವಿ ಬಾವಿಯಿಂದ ನೀರು ತರಲು ಹೊರಟಳು. ಅತ್ತೆಯನ್ನು ಕೇಳಿದಳು-

ನೀರಿಗೋಯ್ತಿನತ್ತೆ ನಿಜಗಲ್ಲದುರುಗಕೆ
ತಡವಾದರತ್ತೆ ಬೈಬೇಡ

(ಡಿ. ಲಿಂಗಯ್ಯ: ಅಪ್ರಕಟಿತ ಹಸ್ತಪ್ರತಿ)

ಆದರೆ ಮರಳುವುದು ತಡವಾಯಿತು. ಬಾವಿಯ ಬಳಿ ಆಗಂತುಕನೊಬ್ಬನ ಕೈಗೆ ಸಿಕ್ಕಿ ಪಾರಾಗಿ ಬರುವುದು ಕಷ್ಟವೇ ಆಯಿತು. ಆ ಆಗಂತುಕ ಬಲವಂತಪಡಿಸಿದ್ದ.

ಅರಗಳಿಗಿ ನೀರ ಮೊಗೆಯೋಳೆ ಉತ್ತರದೇವಿ
ಬಾಯಾರಿಕೆಗೆ ನೀರ ಕೊಡು ಬಾರೆಹಿ
ಉದಕ ಕೊಡುವೋಕೆ ಪದಕ ನಾ ತೊಡಲಿಲ್ಲ
ಹೋಗಯ್ಯ ಹರಿಯೋ ಜಲಧೀಗೆಹಿ

(ಕರಾಕೃ: ಜನಪದ ಕಥನಗೀತೆಗಳು)

ಇತ್ತ ಅತ್ತೆಯ ಆತಂಕ ಹೆಚ್ಚಿತು-

ಉತ್ತರದೇವಿ ನೀರಿಗ್ಹೋಗಿ ಮತ್ಯಾಕೆ ಬರಲಿಲ್ಲ !
ಉತ್ತರದೇಶದ ಮಳೆ ಹೂದು । ಅತ್ತೆಮ್ಮ
ಕೆರೆ ತುಂಬಿ ನೀರು ತಿಳಿತ್ಯವೆ

(ಕೆ. ನಾರಾಯಣ, ಎ. ಎನ್. ಲಕ್ಷ್ಮಿನಾರಾಯಣ: ಆಪ್ತರ ಹಿತಸಾಹಿತ್ಯ)

ಉತ್ತರದೇವಿಯ ಮಾತು ನಂಬಲಾಗಲಿಲ್ಲ, ಅತ್ತೆಗೆ, ಸಿಡಿಮಿಡಿಗೊಂಡಳು. ಉತ್ತರೆ ಮತ್ತೆ ನಡುಗುತ್ತ ಉತ್ತರವಿತ್ತಳು.

ನೀರಿಗ್ಹೋದೇವು ನಿಜಗಲ್ಲದುರುಗಕೆ
ತಡವಾದರತ್ತೆ ಬೈಬೇಡಿ ! ಪಟ್ಟಣದ
ಗಿಣಿ ಬಂದು ನೀರ ಕಲಕಿದೆ
ಕಲಕಿದರೆ ಕಲಕಲಿ ನೆರಿಯಾಕೆ ಕಲಕ್ಯಾವ
ಮಾವಯ್ಯ ತ್ವಾಟದ ಮರಗನ । ಕುಯ್ಯೋಕ್ಹೋಗಿ
ಬಾಳೆಯ ಮುಳ್ಳು ಸೆಣೆದವು

(ನಾಗವಾರ ಕಾಳೇಗೌಡ: ಅಪ್ರಕಟಿತ ಪ್ರತಿ)

ಅತ್ತೆಗೂ ಸೊಸೆಗೂ ಈ ಕಾರಣಕ್ಕಾಗಿ ಜಗಳ ಹತ್ತಿತು. ಬಾಳೆಗೆ ಮುಳ್ಳುಂಟು ಎಂದ ಸೊಸೆಯ ಶೀಲದ ಬಗ್ಗೆ ಅತ್ತೆಗೆ ಶಂಕೆ. ತಾನು ಶುದ್ಧವಾಗಿದ್ದರೂ ರಾಚುತ್ತಿರುವ ಅತ್ತೆಯ ಬಗ್ಗೆ ಇನ್ನಿಲ್ಲದ ಕೋಪ ಸೊಸೆಗೆ.

ಅತ್ತೆಗೂ ಸೊಸೆಗೂ ಹತ್ತಿತು ಕಾಳಗ
ಅತ್ತೆಸೊಸೇರು ಒತ್ತಿ ಜಗಳಾಡಿದರು

(ಕರೀಂಖಾನ್: ಜನಪದ ಗೀತೆ)

ಉತ್ತರದೇವಿಯ ಕಥೆಯ ಆರಂಭ, ಅತ್ತೆ ಸೊಸೆಯರ ಜಗಳದ ಮೂಲ, ಇಲ್ಲಿ ಸ್ಪಷ್ಟವಾಗುತ್ತದೆ. ಉತ್ತು ಬಂದ ಮಗನಿಗೆ ತಾಯಿ ದೂರನ್ನು ಹೇಳುತ್ತಾಳೆ. ಉತ್ತುರ ದೇವೆಂಬೊ ಸೊಸೆ ಬೇಡ-ಬಿಟ್ಟು ಬಿಡವಳ ಬಸವೀಯಹಿ ಎಂದು ಒತ್ತಾಯಪಡಿಸುತ್ತಾಳೆ. ಉತ್ತರೆಯ ಪತಿ ಒಪ್ಪಲಿಲ್ಲ. ಆದರೂ ತಾಯ ಒತ್ತಾಯಕ್ಕೆ ಮೌನ ಧರಿಸುತ್ತಾನೆ. ಬೇರೊಂದು ಹೆಣ್ಣನ್ನು ತಂದು ಲಗ್ನಮಾಡುವ ಭರವಸೆಯನ್ನು ತಾಯಿ ನೀಡುತ್ತಾಳೆ.

ಉತ್ತರೆ ತನ್ನ ಮಕ್ಕಳೊಡನೆ, ಒಡವೆ ವಸ್ತುಗಳೊಡನೆ ಬೆಳ್ಳಿಚುಕ್ಕಿಯ ಬೆಳಕಿನಲ್ಲಿ ತೌರಿಗೆ ಹೊರಡುವ ಸನ್ನಿವೇಶ ಕರುಣಾಜನಕವಾದದ್ದು. ಅಟ್ಟದ ಮೇಲಿನ ಕುಂಬಳವನ್ನು ಅಟ್ಟುಂಡು ಹೋಗಲಿ, ಪೆಟ್ಟಿಗೆಯಲ್ಲಿರುವ ಪಟ್ಟೆ ಸೀರೆಯನ್ನು ಉಟ್ಟಾದರು ಹೋಗಲಿ ಎಂದು ಅತ್ತೆ ಹಂಗಿಸುತ್ತಾಳೆ. ಉತ್ತರೆಯ ದುಃಖ ಉಕ್ಕಿ ಬಂತು. ಕುಂಬಳವನ್ನು ನೀನಾದರು ಉಣ್ಣು, ನಿನ್ನ ಮಗನಿಗಾದರೂ ಇಕ್ಕು ಎನ್ನುತ್ತಾಳೆ. ಅದನ್ನು ಮುಂದೆ ಬರುವ ಸೊಸೆಗೆ ಮಡಗಿಕ್ಕು ಎನ್ನುತ್ತಾಳೆ. ತಾನು ಹಾಕಿ ಬೆಳೆಸಿದ ಅಡಕೆ, ಬಾಳೆ ಎಲ್ಲವೂ ಉರಿದು ಹೋಗುವಂತೆ ಶಾಪ ಹಾಕುತ್ತಾಳೆ.

ಒಂದನೆತ್ತಿಕೊಂಡು ಕಂದನ ಕೈಲ್ಹಿಡಕೊಂಡು
ಗೆಜ್ಜೆ ಒಜ್ಜುರನ ನಡೆಸೂತ-ಉತ್ತರದೇವಿ
ಹೋದಳು ತೌರ ಹಾದಿಗೊಂಡು.

ದಾರಿಯಲ್ಲಿ ತಿಪ್ಪೂರಗೌಡ ತಡೆದು ತನ್ನ ಮನೆಯಲ್ಲಿ ಇರು ಬಾರೆ ಎಂದು ಕರೆಯುತ್ತಾನೆ. ಎಲ್ಲೂ ನಿಲ್ಲದೆ ಉತ್ತರದೇವಿ ತೌರಿಗೆ ಮರಳುತ್ತಾಳೆ. ಅಲ್ಲೋ ಅವಳ ತಾಯಿಯನ್ನು ಬಿಟ್ಟು ಬೇರೊಬ್ಬಳನ್ನು ಲಗ್ನವಾಗಿದ್ದ ತಂದೆ ಮನೆಯಲ್ಲಿ ಚಿಕ್ಕಮ್ಮನೊಡನೆ ಮಲಗಿದ್ದಾನೆ. ಮುಚ್ಚಿದ ಬಾಗಿಲು ತೆರೆಯಲಿಲ್ಲ. ಯಾವ ಬಂಧುಗಳೂ ಅವಳನ್ನು ಕರೆದು ಆದರಿಸಲಿಲ್ಲ. ಕೊನೆಗೆ ತನ್ನ ತಾಯಿಯ ತೌರಿಗೇ ಅವಳು ಹೋಗುತ್ತಾಳೆ.

ಶಿಶುವನೆತ್ತಿಕೊಂಡು ನಾರಿ ಕೈಲಿಡಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು-ಉತ್ತರದೇವಿ
ಹೋದಳವ್ವನ ಅರಮನೆಗೆ-ಉತ್ತರದೇವಿ
ನನ್ನವ್ವ ನನಗೆ ಕದ ತೆಗೆಯೆ ?
ಒಂದರಿಬೆ ಹಾಸಿದ್ದೆ ಒಂದರಿಬೆ ಚೆಲ್ಲಿದ್ದೆ
ಒಂದೊರುಷ ನಿನ್ನ ಸಲವಿದ್ದೆ-ಕಂದಮ್ಮ
ನನ್ನಾಡು ನಿನಗೆ ಮಡಗಿತ್ತೆ-ನನ ಮಗಳೆ
ನೀನುತ್ತರೆ ಮಳೆಯಾಗಿ ಹೊರಡವ್ವ

(ಜೀಶಂಪ: ಖಂಡಕಾವ್ಯಗಳು)

ಉತ್ತರದೇವಿ ಮುಂದೆ ಏನಾದಳು ಎನ್ನುವುದು ಅಸ್ಪಷ್ಟ. ಅವಳ ಬದುಕು ದುರಂತದಲ್ಲಿ ಕೊನೆಗೊಳ್ಳುತ್ತದೆ.

ಗಂಗೆಯ ಬಳಿಗೆ ನಡೆದಾಳು । ನುಡಿದಳು
ಗಂಗಮ್ಮ ನನ್ನ ಎಳಕೊಳ್ಳೆ
ತಾವರೆ ಎಲೆ ಮೇಲೆ ತಾನಾಗಿ ಕೂತುಗಂಡು
ತಪಸು ಗೈದಾಳು ಶಿವನಿಗೆ । ಉತ್ತರದೇವಿ
ಉತ್ತರ ಮಳೆಯಾಗಿ ಹರಿದಾಳು

(ಕರೀಂಖಾನ್: ಜನಪದ ಗೀತೆ)

ಆಕೆಯ ಅಂತ್ಯದ ಬಗ್ಗೆ ಹೀಗೆ ಸ್ಪಷ್ಟತೆ ಕೆಲವು ಕಡೆ ಇದ್ದರೂ ಅನೇಕ ಕಡೆ ಈ ಅಂಶ ಅನಿಶ್ಚಯದ ಮಬ್ಬಿನಲ್ಲೇ ನಿಂತು ಬಿಡುತ್ತದೆ.

ಉತ್ತರೆಯ ಪತಿ ತಾಯಿಯ ಮಾತಿಗೆ ಕಟ್ಟುಬಿದ್ದರೂ ಪತ್ನಿಯಲ್ಲಿ ಅಪಾರ ಪ್ರೇಮವನ್ನೇ ತುಂಬಿಕೊಂಡ ವ್ಯಕ್ತಿಯಾಗಿ ಕೆಲವು ಕೃತಿಗಳಲ್ಲಿ ಗೋಚರವಾಗುತ್ತಾನೆ. ಉತ್ತರೆ ಮನೆಯನ್ನು ಬಿಟ್ಟ ಮೇಲೆ ಬಾಗಿಲಿಗೆ ಬಂದ ಬಳೆಗಾರನಿಗೆ ಆತ ಹೇಳುವ ನುಡಿ ಮಾರ್ಮಿಕವಾದುದು.

ಬಳೆಗಾರ ಶೆಟ್ಟಿ ಬಳೆಯ ಯಾರಿಗೆ ತಂದೆ
ಬಳೆ ತೊಡೊ ನಾರಿ ಒಳಗಿಲ್ಲ-ಬಳೆಗಾರ
ನನ್ನವ್ವ ನನಗೆ ಹಗೆಯಾದಳು

ಮಲೆನಾಡಿನ ಒಂದು ಕೃತಿಯಲ್ಲಿ ಆದರ್ಶಪ್ರೇಮದ ಅಪೂರ್ವ ಚಿತ್ರಣ ಲಭ್ಯವಾಗುತ್ತದೆ. ತನ್ನ ಮಡದಿಯ ಅಗಲಿಕೆಯ ನೋವನ್ನು ತಾಳಲಾರದೆ ಅರಸಿಕೊಂಡು ಪತಿ ಅವಳ ತೌರಿಗೆ ಬರುತ್ತಾನೆ. ದಾರಿಯಲ್ಲಿ ದನ ಕಾಯುವ ಹುಡುಗರು-

ಮೊಸರು ಅನ್ನ ಉಂಟು ಪಟ್ಟೆಜೋತರ ಹೊದ್ದು
ಇನ್ನೊಬ್ಬರ ಕೈಯ್ಯಾಗೆ ಒರಗ್ಯಾಳೆ

(ಕೆ.ವಿ.ಲಿಂಗಪ್ಪ: ಮಲೆನಾಡ ಮಡಿಲಲ್ಲಿ)

ಎಂದು ನುಡಿದಾಗ ಸಂಪಿಗೆ ಹೂವನ್ನು ಕೊಯ್ದು, ಉತ್ತರದೇವಿಗೆ ಕಳಿಸಿ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ಇದನ್ನು ಕೇಳಿದ ಉತ್ತರೆ ಸಂಕಟವನ್ನು ತಾಳಲಾರದೆ ಕೆಂಡಕೊಂಡವಾಗುತ್ತಾಳೆ.

ಎಲ್.ಆರ್. ಹೆಗಡೆಯವರು ಸಂಗ್ರಹಿಸಿರುವ ಉತ್ತರ ಕನ್ನಡ ಜಿಲ್ಲೆಯ ಕಥೆಯ ಅಂತ್ಯ ಇನ್ನೂ ಘೋರವಾದುದು. ತನ್ನೊಡನೆ ಮತ್ತೆ ಬದುಕಲು ಬಾರದ ಮಡದಿಯನ್ನು ಕಡಿದು ಅವಳ ತಲೆಯನ್ನು ಕೊಂಡೊಯ್ದು ತನ್ನ ಬಚ್ಚಲ ಬಳಿಯಲ್ಲಿ ಹೂತು ಕಣ್ಣೀರಿಡುವ ಪತಿಯ ಹೃದಯವಿದ್ರಾವಕ ಚಿತ್ರ ಅಲ್ಲಿ ಬರುತ್ತದೆ.

ಉತ್ತರೆಯ ಕಥೆ ಹತ್ತು ಕಡೆ ಹತ್ತು ರೂಪಾಂತರವನ್ನು ಪಡೆದರೂ ಅವಳ ದಿವ್ಯವಾದ, ಉಜ್ಜ್ವಲವಾದ ಪಾತ್ರ ಮಾತ್ರ ಎಲ್ಲೂ ಮಸುಕಾಗುವುದಿಲ್ಲ. ತಾನು ಪತಿವ್ರತೆ ನಿಜ. ತನ್ನನ್ನು ಶಂಕಿಸಿದ ಅತ್ತೆಯ ಮೇಲೆ ಅವಳಿಗೆ ಇನ್ನಿಲ್ಲದ ಕೋಪ. ತಾನು ಸಾಕಿ ಸಲಹಿದ ಗಿಡಬಳ್ಳಿಗಳೊಡನೆ ಅವಳು ನುಡಿಯುವ ರೀತಿ ಅವಳ ದುಃಖದ ತೀವ್ರತೆಯನ್ನು ಪರಿಚಯಿಸುತ್ತದೆ. ಕತ್ತಲಲ್ಲಿ ಪತಿಯ ಮನೆಯನ್ನು ಬಿಟ್ಟು ತನ್ನದಾದ ಎಲ್ಲ ವಸ್ತುಗಳನ್ನು ಬಿಡದೆ ತೆಗೆದುಕೊಂಡು, ದಾರಿಯಲ್ಲಿ ಯಾರಿಗೂ ಸೋಲದೆ ಛಲದಿಂದ ತೌರ ದಾರಿಯನ್ನು ತುಳಿದ ಅವಳ ನಿಲುವು ಅವಳ ಆತ್ಮಾಭಿಮಾನದ, ಛಲದ, ನಿಷ್ಠೆಯ ಸಂಕೇತ. ಆದರೆ ತೌರವರು ತೋರಿದ ತಾತ್ಸಾರಕ್ಕೆ ಅವಳು ಕುಸಿದು ಬೀಳುತ್ತಾಳೆ. ಜಿಗುಪ್ಸೆಗೊಳ್ಳುತ್ತಾಳೆ. ಅವಳ ಪವಿತ್ರ ಬದುಕು ಗಂಗೆಯ ಪಾಲಾಗುತ್ತದೆ. ಹೆಣ್ಣಿನ ಈ ಅನಂತ ದುಃಖವನ್ನು ಉತ್ತರದೇವಿಯ ಕಥೆ ಅತ್ಯಂತ ಸಮರ್ಥವಾಗಿ ಚಿತ್ರಿಸಿದೆ. ಕಥೆಯ ಅಂಶಕ್ಕಿಂತ ಅವಳ ದುಃಖವನ್ನೆ ಬೆಳೆಸುವ ಸನ್ನಿವೇಶಗಳು ಹೆಚ್ಚು. ಮನಸ್ಸನ್ನು ಕಲಕುವ ಈ ಕಥೆ ಮತ್ತೊಮ್ಮೆ ನಮ್ಮ ಕಣ್ಣೆದುರಿಗೆ ಪುರಾಣ ಪ್ರಪಂಚದ ಸೀತೆ, ಸಾವಿತ್ರಿ, ದ್ರೌಪದಿಯರ ಚಿತ್ರವನ್ನು ತಂದು ನಿಲ್ಲಿಸುತ್ತದೆ. ಕನ್ನಡ ಜನಪದ ಕಥೆಗಳಲ್ಲಿ ಇದೊಂದು ಅನರ್ಘ್ಯರತ್ನ. (ಜಿ.ಎಸ್.ಪಿ.)

**ಉತ್ತರ ಪಕ್ಷ:** 1. ವಾದದಲ್ಲಿ ಒಂದು ವಿಷಯವನ್ನು ಕುರಿತು ಪ್ರತಿಪಕ್ಷೀಯನಿಂದ ಮಂಡಿತವಾದ, ನೈಜವಲ್ಲದ, ಪೂರ್ವಪಕ್ಷರೂಪವಾದ ವಿಚಾರ ಪರಂಪರೆಯನ್ನು ಯುಕ್ತಿ ಪ್ರಮಾಣಾದಿಗಳಿಂದ ಸಕಾರಣವಾಗಿ ಖಂಡಿಸಿ ನೈಜವಾದ ಸಿದ್ಧಾಂತವನ್ನು ಪ್ರತಿಪಾದಿಸಿ ಸ್ಥಾಪಿಸುವುದು.

2. ಮೀಮಾಂಸಾಶಾಸ್ತ್ರದಲ್ಲಿ ಐದು ಅಂಗಗಳಿಂದ ಕೂಡಿದ ವಾಕ್ಯಸಮುದಾಯ. ರೂಪ ಅಧಿಕರಣಗಳಲ್ಲಿ ಬರುವ ವಿಷಯ, ವಿಶಯ (ಸಂಶಯ), ಪೂರ್ವಪಕ್ಷ, ಉತ್ತರ, ನಿರ್ಣಯಗಳೆಂಬ ಐದು ಅವಯವಗಳಲ್ಲಿ ನಾಲ್ಕನೆಯದು.

3. ಚಾಂದ್ರಮಾನ ತಿಂಗಳುಗಳನ್ನು ಶುಕ್ಲಪಕ್ಷ ಕೃಷ್ಣಪಕ್ಷ ಎಂದು ಎರಡಾಗಿ ವಿಭಾಗ ಮಾಡಿದ್ದಾರೆ. ಇದರಲ್ಲಿ ಕೃಷ್ಣಪಕ್ಷದ ಪ್ರಥಮ ತಿಥಿಯಿಂದ ಅಮಾವಾಸ್ಯೆ ತಿಥಿ ಪೂರ್ತಿ ಇರುವ ಉತ್ತರ ಮಾಸಾರ್ಧ ರೂಪ ಪಕ್ಷ. (ಎಸ್.ಎನ್.ಕೆ.)

**ಉತ್ತರ ಪಿನಾಕಿನಿ:** ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಚನ್ನಕೇಶವ ಬೆಟ್ಟದಲ್ಲಿ ಹುಟ್ಟುವ ಒಂದು ನದಿ ಉದ್ದ 597 ಕಿಮೀ ಅದರಲ್ಲಿ 61 ಕಿಮೀ ದೂರ ಕರ್ನಾಟಕದಲ್ಲಿ ಹರಿಯುತ್ತದೆ. ವಾಯವ್ಯದಲ್ಲಿರುವ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ 48 ಕಿಮೀ ದೂರ ಹರಿದು ಅನಂತರ ಆಂಧ್ರ ಪ್ರದೇಶವನ್ನು ಪ್ರವೇಶಿಸುತ್ತದೆ. ಅಲ್ಲಿ ಹಿಂದುಪುರ ಮತ್ತು ಪಾವಗಡ ತಾಲ್ಲೂಕಿನಲ್ಲಿ ಹರಿದು ನೆಲ್ಲೂರು ಜಿಲ್ಲೆಯಲ್ಲಿ ಬಂಗಾಲಕೊಲ್ಲಿಯನ್ನು ಸೇರುತ್ತದೆ. ಜಯಮಂಗಲಿ, ಚಿತ್ರಾವತಿ ಮತ್ತು ಪಾಪಾಗ್ನಿ ಎಂಬುವವು ಇದರ ಉಪನದಿಗಳು. ಕೋಲಾರ ಜಿಲ್ಲೆಯ ಎರಡು ಪಟ್ಟಣಗಳಾದ ಮಂಚೇನಹಳ್ಳಿ ಮತ್ತು ಗೌರಿಬಿದನೂರು ಈ ನದಿಯ ದಡದ ಮೇಲಿವೆ. ಇದು ಧನುಸ್ಸಿನಾಕಾರದಲ್ಲಿರುವುದರಿಂದ ಇದಕ್ಕೆ ಪಿನಾಕಿನಿ ಎಂಬ ಹೆಸರು ಬಂದಿರಬಹುದು. ಇದನ್ನು ಉತ್ತರ ಪೆನ್ನಾರ್ ಎಂದು ಕರೆಯುತ್ತಾರೆ. ಹೆಚ್ಚು ಮರಳನ್ನು ಹೊತ್ತು ತರುವ ಈ ನದಿ ವರ್ಷದಲ್ಲಿ ಹೆಚ್ಚುಕಾಲ ನೆಲದ ಅಡಿಯಲ್ಲಿ ಹರಿಯುತ್ತದೆ.

ಈ ನದಿಯ ಕರ್ನಾಟಕ ರಾಜ್ಯದ ಜಲಾನಯನ ಪ್ರದೇಶದಲ್ಲಿ ಸು. 116 ಕೆರೆಗಳಿವೆ. ಜಕ್ಕಲಮಡಗು ಮತ್ತು ಶ್ರೀನಿವಾಸ ಸಾಗರಗಳು ಇದರ ಎರಡು ಮುಖ್ಯ ಅಣೆಕಟ್ಟುಗಳು.

ವಿದುರಾಶ್ವತ್ಥ ಪುಣ್ಯಕ್ಷೇತ್ರ ಇರುವುದು ಇದರ ದಡದಲ್ಲೇ. ಇಲ್ಲಿನ ಪವಿತ್ರ ಅಶ್ವತ್ಥಮರವನ್ನು ಮಹಾಭಾರತದ ವಿದುರನೇ ನೆಟ್ಟನೆಂದು ನಂಬಿಕೆ. *

**ಉತ್ತರ ಪ್ರದೇಶ:** ಭಾರತದ ಒಂದು ರಾಜ್ಯ. ಉತ್ತರಭಾರತದ ವಿಶಾಲ ಬಯಲಿನ ನಡುಭಾಗದಲ್ಲಿದೆ. ಹಿಂದಿನ ಬ್ರಿಟಿಷ್ ಭಾರತದಲ್ಲಿ 1902ರವರೆಗೆ ವಾಯವ್ಯ ಪ್ರಾಂತ್ಯಗಳೆಂದೂ 1902–5ರವರೆಗೆ ಆಗ್ರ–ಔಧ್ ಸಂಯುಕ್ತ ಪ್ರಾಂತ್ಯಗಳೆಂದೂ ಅಲ್ಲಿಂದೀಚೆಗೆ ಸಂಯುಕ್ತ ಪ್ರಾಂತ್ಯಗಳೆಂದೂ ಕರೆಯಲಾಗುತ್ತಿದ್ದ ಪ್ರದೇಶವೇ ಸ್ಥೂಲವಾಗಿ ಈ ರಾಜ್ಯದ ವ್ಯಾಪ್ತಿ. ಹಿಂದಿನ ದೇಶೀಯ ಸಂಸ್ಥಾನಗಳಾದ ಬನಾರಸ್, ತೆಹರೀ–ಘರ್‌ವಾಲ್ ಮತ್ತು ರಾಂಪುರಗಳನ್ನೂ ಈ ರಾಜ್ಯಕ್ಕೆ ಸೇರಿಸಲಾಗಿದೆ. ವಿಸ್ತೀರ್ಣ 2,38,566 ಚ.ಕಿಮೀ. ಜನಸಂಖ್ಯೆ 16,60,52,859 (2001). ರಾಜಧಾನಿ ಲಖನೌ. 9 ನವಂಬರ್ 2000 ದಿಂದ ಅಸ್ತಿತ್ವಕ್ಕೆ ಬಂದ ಉತ್ತರಾಂಚಲ್ ರಾಜ್ಯ ಉತ್ತರ ಪ್ರದೇಶದಿಂದಲೇ ರೂಪಿಸಿದ್ದಾಗಿದೆ. ಇದರಿಂದಾಗಿ ಉತ್ತರ ಪ್ರದೇಶದ 53,484 ಚ.ಕಿಮೀ ಪ್ರದೇಶ ಹಾಗೂ 84,79,562 (2001) ಪ್ರಜಾ ಸಂಖ್ಯೆ ಉತ್ತರಾಂಚಲ್ ರಾಜ್ಯಕ್ಕೆ ಸೇರಿ ಹೋಗಿದೆ.

ಯಮುನಾ ನದಿಯೇ ಪಶ್ಚಿಮ ಗಡಿಯಾಗಿರುವ ಉತ್ತರ ಪ್ರದೇಶ ಹೈಮಾಚಲ ಸಾನ್ನಿಧ್ಯದಲ್ಲಿದೆಯೆನ್ನಬಹುದು. ಉತ್ತರದ ಎಲ್ಲೆಯೊಳಗೆ ಹಿಮಾಲಯದ ಕಾಲುಚಾಚಿದೆ. ಹಿಮವಂತನ ಶಿಖೆಯೇ ಭಾರತ–ಟಿಬೆಟ್ ಮೇರೆ. ಸ್ವಲ್ಪ ಪೂರ್ವಕ್ಕೆ ಸಾಗಿದರೆ ಸಿಗುವುದೇ ನೇಪಾಲ. ಉತ್ತರ ಪ್ರದೇಶದ ದಕ್ಷಿಣ ಗಡಿಯಲ್ಲಿ ಗಂಗೆಯ ಬಯಲೂ ವಿಂಧ್ಯ ಪ್ರಸ್ಥಭೂಮಿಯೂ ಒಂದನ್ನೊಂದು ಅಪ್ಪುತ್ತವೆ. ಭಾರತದ ರಾಜಧಾನಿಯಾದ ದೆಹಲಿ ಇದರ ಪಶ್ಚಿಮ ಗಡಿಯಂಚು. ಭಾರತ ಪರ್ಯಾಯದ್ವೀಪದ ಕಂಠದಂತಿರುವ ಉತ್ತರ ಪ್ರದೇಶವನ್ನು ಹಾರದ ಮಣಿಗಳಂತೆ ಬಳಸಿರುವ ರಾಜ್ಯಗಳೆಂದರೆ ವಾಯವ್ಯದಲ್ಲಿ ಹಿಮಾಚಲ್ ಪ್ರದೇಶ, ಉತ್ತರದಲ್ಲಿ ಉತ್ತರಾಂಚಲ್ ಮತ್ತು ನೇಪಾಲ, ಪೂರ್ವದಲ್ಲಿ ಬಿಹಾರ, ಆಗ್ನೇಯದಲ್ಲಿ ಝಾರ್ಖಂಡ್ ಮತ್ತು ಚತ್ತೀಸ್‌ಗರ್, ದಕ್ಷಿಣದಲ್ಲಿ ಮಧ್ಯಪ್ರದೇಶ ನೈರುತ್ಯದಲ್ಲಿ ರಾಜಸ್ಥಾನ ಮತ್ತು ಪಶ್ಚಿಮದಲ್ಲಿ ಹರಿಯಾಣ.

**ಮೇಲ್ಮೈಲಕ್ಷಣ:** ಭೌಗೋಳಿಕವಾಗಿ ಈ ರಾಜ್ಯವನ್ನು ಹಿಮಾಲಯ ಪ್ರದೇಶ, ವಿಶಾಲ ಬಯಲು, ಬುಂದೇಲ್ ಖಂಡ (ವಿಂಧ್ಯ ಪ್ರಸ್ಥಭೂಮಿಯ ಅಂಚು) ಎಂದು ಮೂರು ವಿಭಾಗ ಮಾಡಬಹುದು. 6,100 ಮೀ ಗಳಿಗಿಂತಲೂ ಎತ್ತರದ ಹಿಮಾಲಯ ಶಿಖರಗಳು ಉತ್ತರ ಪ್ರದೇಶದ ಎಲ್ಲೆಯೊಳಗಿವೆ. ಗಂಗೆಯಮುನೆಯರ ಮೇಲ್ದೊರೆಗಳಿಗೆ ಈ ಪರ್ವತ ಶ್ರೇಣಿಯೇ ಉಗಮಸ್ಥಾನ. ಉತ್ತರ ಪ್ರದೇಶದ ಅತ್ಯಂತ ಎತ್ತರದ ಉತ್ತರಭಾಗ ಹಾಗೂ ಪರ್ವತ, ಕಣಿವೆಗಳು ಈಗ ಉತ್ತರಾಂಚಲ್ ರಾಜ್ಯಕ್ಕೆ ಸೇರಿವೆ. ಹಾಗೇ ಕೆಲವು ಖನಿಜ ನಿಕ್ಷೇಪ ಪ್ರದೇಶಗಳೂ ಸೇರಿ ಹೋಗಿವೆ.

ದಕ್ಷಿಣಕ್ಕಿರುವುದೇ ಗಂಗಾಯಮುನಾ ನದಿಗಳ ವಿಶಾಲಬಯಲು. ರಾಜ್ಯದ ಪಶ್ಚಿಮ ಗಡಿಯಲ್ಲಿ ಹರಿಯುವ ಯಮುನೆ ಮುಂದೆ ರಾಜ್ಯದೊಳಗೆ ಸಾಗಿ ಅಲಹಾಬಾದಿನ (ಇಲಾಹಾಬಾದ್) ಬಳಿ ಗಂಗೆಯಲ್ಲಿ ಸಂಗಮವಾಗುತ್ತದೆ. ರಾಮಗಂಗಾ, ಗೋಮತಿ, ಘಾಘ್ರಾ ಇವು ಗಂಗೆ ಯಮುನೆಯರ ಉಪನದಿಗಳು. ಹಿಮಾಲಯದ ಹಿಮ ಕರಗುವುದರಿಂದ ಮತ್ತು ಮಳೆಯಿಂದ ತುಂಬಿ ಹರಿಯುವ ನದಿಗಳು ಸ್ವಲ್ಪ ದೂರ ಹಿಮಾಲಯದ ಮುಖ್ಯ ಶ್ರೇಣಿಗಳ ಗುಂಟ ಕಣಿವೆಯಲ್ಲಿ ಸಾಗಿ ಆಳ ಕಮರಿಗಳನ್ನು ತೋಡಿರುವುದರಿಂದ ಇಲ್ಲಿ ಅಣೆಕಟ್ಟೆ ಕಟ್ಟಲು ಪ್ರಶಸ್ತವಾದ ಅನೇಕ ಸ್ಥಳಗಳುಂಟು.

ನದಿಗಳು ತಂದು ತುಂಬಿದ ಮೆಕ್ಕಲುಮಣ್ಣಿನಿಂದ ಫಲವತ್ತಾದ ಬಯಲು ಹೆಚ್ಚೇನೂ ಎತ್ತರವಿಲ್ಲ. ಪಶ್ಚಿಮದಿಂದ ಪೂರ್ವಕ್ಕೆ–ಬಂಗಾಲ ಕೊಲ್ಲಿಯೆಡೆಗೆ–ಸ್ವಲ್ಪ ಸ್ವಲ್ಪವಾಗಿ ತಗ್ಗಿ ಸಾಗುವ ಈ ಬಯಲಿನ ಪಶ್ಚಿಮದ ಅಂಚು ಸಮುದ್ರಕ್ಕಿಂತ 1,600 ಕಿಮೀ ದೂರವಿದ್ದರೂ ಇದು ಸಮುದ್ರ ಮಟ್ಟಕ್ಕಿಂತ ಕೇವಲ 210 ಮೀ ಎತ್ತರವಿದೆ. ಮೈದಾನದ ಉತ್ತರ ಭಾಗದಲ್ಲಿ ಥಟ್ಟನೆ ಬರುವ ಪ್ರವಾಹಗಳಿಂದ ನದಿಗಳ ಪಾತ್ರ ಬದಲಾಗುವುದರಿಂದ ಸಂಭವಿಸುವ ಕಷ್ಟನಷ್ಟ ಅಧಿಕ.

ದಕ್ಷಿಣದ ಎಲ್ಲೆಯಲ್ಲಿರುವ ಎತ್ತರ ನೆಲ ಬಲು ಕಿರಿದು. ಬುಂದೇಲ್‌ಖಂಡವೆಂದು ಪ್ರಸಿದ್ಧವಾದ ಝಾನ್ಸಿ ಜಿಲ್ಲಾಪ್ರದೇಶವನ್ನು ಬಿಟ್ಟರೆ ಉಳಿದ ಭಾಗ ಅಷ್ಟೇನೂ ಫಲವತ್ತಲ್ಲ.

**ವಾಯುಗುಣ:** ಕರ್ಕಾಟಕ ಸಂಕ್ರಾಂತಿ ವೃತ್ತಕ್ಕೆ ಉತ್ತರದಲ್ಲಿದ್ದರೂ ರಾಜ್ಯದಲ್ಲಿ ಉಷ್ಣವಲಯದ ವಾಯುಗುಣ ಕಂಡುಬರುತ್ತದೆ. ಉತ್ತರದಲ್ಲಿರುವ ಎತ್ತರ ಪರ್ವತಗಳನ್ನುಳಿದು ಇತರ ಭಾಗಗಳಲ್ಲಿ ಮಾನ್ ಸೂನ್ ಮಾದರಿಯ ವಾಯುಗುಣವಿದೆ. ಬೇಸಗೆಯಲ್ಲಿ ಮಧ್ಯದ ಮೈದಾನದ ಉಷ್ಣತೆ 44°-45° ಸೆ. ಜನವರಿಯ ಉಷ್ಣತೆ 25°–30° ಫ್ಯಾ. ಆಗಾಗ್ಗೆ ಶೀತಮಾರುತಗಳೂ ಬೀಸುವುದುಂಟು. ಮಾರ್ಚಿ ತಿಂಗಳ ಮಧ್ಯದಲ್ಲಿ ಚಳಿಗಾಲ ಅಂತ್ಯವಾಗುತ್ತದೆ. ಜೂನ್ ತಿಂಗಳ ಅಂತ್ಯದಿಂದ ಸೆಪ್ಟೆಂಬರ್ ವರೆಗೆ ಮಳೆಗಾಲ. ಪಶ್ಚಿಮದಿಂದ ಪೂರ್ವದ ಕಡೆಗೆ ಸಾಗಿದಂತೆ ಮಳೆ ಅಧಿಕ. ದೆಹಲಿಯ ಸಮೀಪ 635 ಮಿಮೀ.; ಆದರೆ

ಅಲಹಾಬಾದಿನಲ್ಲಿ 1015 ಮಿಮೀ. ರಾಜ್ಯ ಫಲವತ್ತಾದ ಮೆಕ್ಕಲುಮಣ್ಣಿನಿಂದ ಕೂಡಿದೆ. ನದಿಗಳ ಕೆಳಕಣಿವೆಗಳಲ್ಲಿ ಹೊಸ ಮೆಕ್ಕಲೂ ಮೇಲ್ಕಣಿವೆಗಳಲ್ಲಿ ಹಳೆ ಮೆಕ್ಕಲೂ ಸಾಮಾನ್ಯ. ಮೇಲ್ಕಣಿವೆಯ ಹುಡಿಮಣ್ಣು ಅಷ್ಟೇನೂ ಫಲವತ್ತಲ್ಲ. ಕೆಳಮೈದಾನದ ಕಪ್ಪು ಬಣ್ಣದ ಜಿಗಟು ಮಣ್ಣು ಸಾರಮಯ. ಉತ್ತರದ ಪರ್ವತಗಳ ಮೇಲೆ ಸಮಶೀತೋಷ್ಣ ಪ್ರದೇಶದ ಮಣ್ಣೂ ದಕ್ಷಿಣದ ಬೆಟ್ಟಗಳಲ್ಲಿ ಸಾಧಾರಣ ಫಲವತ್ತಾದ ಕೆಂಪು ಮಣ್ಣೂ ಸಾಮಾನ್ಯ.



ಆಗ್ರದ ಕೆಂಪುಕೋಟೆ

**ಖನಿಜಗಳು:** ರಾಜ್ಯದ ಬಹುಭಾಗ ಇತ್ತೀಚಿನ ಶಿಲಾಸ್ತರಗಳಿಂದ ಕೂಡಿರುವುದರಿಂದ ಹೆಚ್ಚು ಖನಿಜಗಳಿಲ್ಲ. ಉತ್ತರದ ಪರ್ವತ ಪ್ರದೇಶದಲ್ಲೂ ದಕ್ಷಿಣದ ಬೆಟ್ಟಗಾಡುಗಳಲ್ಲೂ ಕೆಲವು ಖನಿಜ ನಿಕ್ಷೇಪಗಳುಂಟು. ಮಿರ್ಜ಼ಾಪುರ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಸಿಗುತ್ತದೆ. ಕುಮಾವ್, ಉತ್ತರ ಖಂಡಗಳ ನದೀಮರಳುಗಳಲ್ಲಿ ಚಿನ್ನದ ಕಣಗಳಿದ್ದರೂ ಈ ರಾಜ್ಯದಲ್ಲಿ ಚಿನ್ನದ ಗಣಿಗಳು ಯಾವುವೂ ಇಲ್ಲ.

ಟೈಟೇನಿಯಂ ಮಿರ್ಜ಼ಾಪುರದ ದಕ್ಷಿಣ ಭಾಗದಲ್ಲೂ ಹಮೀರ್‌ಪುರ, ಝಾನ್ಸಿಗಳಲ್ಲೂ ಗಾಜಿನ ತಯಾರಿಕೆಗೆ ಉಪಯುಕ್ತವಾದ ಉತ್ತಮ ಮರಳು ಅಲಹಾಬಾದ್, ವಾರಾಣಸಿ, ಬಂಡ ಜಿಲ್ಲೆಗಳಲ್ಲೂ ದೊರಕುತ್ತವೆ. ಸಿಮೆಂಟಿನ ತಯಾರಿಕೆಗೆ ಒದಗುವಂಥ ಸುಣ್ಣಶಿಲೆ ಕಟ್ಟಡ ಶಿಲೆ, ಸಾಲ್ಟ್ ಪೀಟರ್, ಬಣ್ಣದ ಮಣ್ಣು ಮುಂತಾದವೂ ರಾಜ್ಯದ ಕೆಲವೆಡೆ ಉಂಟು. ಮ್ಯಾಗ್ನಸೈಟ್, ಸುಣ್ಣಶಿಲೆ ಬಣ್ಣಬಣ್ಣದ ಜೇಡಿಮಣ್ಣು ಇತರ ಖನಿಜಗಳು.

**ಸಸ್ಯವರ್ಗ:** ಈ ರಾಜ್ಯದ ಉತ್ತರ ಹಾಗೂ ದಕ್ಷಿಣದ ಜಿಲ್ಲೆಗಳಲ್ಲಿ ಕಾಡುಗಳು ಹೆಚ್ಚು. ಜನಸಂಖ್ಯೆ ಹೆಚ್ಚಿದಂತೆ ಮರಗಳನ್ನು ಕಡಿಯಲಾಗಿದೆ. ಉತ್ತರದಲ್ಲಿ 1525 ಮೀ ಗಳ ಎತ್ತರದವರೆಗೆ ಉಷ್ಣವಲಯದ ಕಾಡು ಹರಡಿದೆ. ಅಲ್ಲಿಂದ ಮೇಲಕ್ಕೆ ಸುಮಾರು 3000–

ಫತೇಪುರ್–ಸಿಕ್ರಿ, ಆಗ್ರ

3600ಮೀ ಎತ್ತರದ ವರೆಗೆ ನಿತ್ಯ ಹರಿದ್ವರ್ಣದ ಓಕ್ ಅರಣ್ಯ. ಅಲ್ಲಿಂದೆತ್ತರಕ್ಕೆ ಆಲ್ಪೈನ್ ಸಸ್ಯಗಳಿವೆ. ಸುಮಾರು 4545ಮೀ ಸು. 487 ಮೀ. ಅಡಿಗಳಿಗಿಂತ ಮೇಲೆ ನಿರಂತರವಾಗಿ ಕಾಣುವುದು ಹಿಮದ ಕವಚವಷ್ಟೇ.

**ಬೆಳೆ:** ಪೂರ್ವ ಭಾಗದಲ್ಲಿ ಮಳೆಯ ಪ್ರಮಾಣ ವ್ಯವಸಾಯಕ್ಕೆ ಸಾಕು. 100 ಸೆಂ.ಮೀ. ಗಿಂತ ಕಡಿಮೆ ಮಳೆ ಬೀಳುವ ಪಶ್ಚಿಮದಲ್ಲಿ ತರಿ ಬೇಸಾಯಕ್ಕೆ ನೀರಾವರಿ ಆವಶ್ಯಕ. ಬತ್ತ, ಗೋದಿ, ಬಾರ್ಲಿ ಮೆಕ್ಕೆಜೋಳ, ಜೋಳ, ತೊಗರಿ ಮತ್ತು ಕಡಲೆಗಳು ಈ ರಾಜ್ಯದ ಮುಖ್ಯ ಆಹಾರ ಬೆಳೆಗಳು. ಎಳ್ಳು, ಸಾಸಿವೆ, ಅಗಸೆ, ನೆಲಗಡಲೆ, ಕಬ್ಬು, ಹತ್ತಿ, ಹೊಗೆಸೊಪ್ಪು, ಸೆಣಬು ಮತ್ತು ಚಹ ರಾಜ್ಯದ ಇತರ ವಾಣಿಜ್ಯ ಬೆಳೆಗಳು. ಈ ರಾಜ್ಯದ ಶೇ.73 ಮಂದಿ ವ್ಯವಸಾಯಾವಲಂಬಿಗಳು. ಒಟ್ಟು 168.19 ಲಕ್ಷ ಹೆಕ್ಟೇರ್ ಪ್ರದೇಶ ಕೃಷಿಗೆ ಒಳಪಟ್ಟಿದೆ. 2003–04 ನೇ ಸಾಲಿನಲ್ಲಿ 91.5 ಲಕ್ಷ ಮೆಟ್ರಿಕ್ ಟನ್ನುಗಳ ಗೋದಿಯನ್ನು 59.5 ಲಕ್ಷ ಮೆಟ್ರಿಕ್ ಟನ್ನು ಬತ್ತವನ್ನು 27.1 ಲಕ್ಷ ಮೆಟ್ರಿಕ್ ಟನ್ನುಗಳ ದ್ವಿದಳ ಧಾನ್ಯಗಳನ್ನೂ 11.40 ಲಕ್ಷ ಮೆಟ್ರಿಕ್ ಟನ್ನುಗಳ ಎಣ್ಣೆ ಬೀಜಗಳನ್ನು 20.30 ಲಕ್ಷ ಟನ್ನುಗಳ ಕಬ್ಬನ್ನೂ ಬೆಳೆಯಲಾಗಿತ್ತು. ಜೋಳ, ಬಾಜ್ರ, ಮೆಕ್ಕೆಜೋಳ, ಬಾರ್ಲಿ, ತೊಗರಿ, ಹತ್ತಿ ಮತ್ತು ಆಲೂಗೆಡ್ಡೆ ಇತರ ಬೆಳೆಗಳು.

**ನೀರಾವರಿ:** ಉತ್ತರ ಪ್ರದೇಶದ ನೀರಾವರಿ ವ್ಯವಸ್ಥೆ ವ್ಯಾಪಕವಾಗಿ ಬೆಳೆದಿದೆ. ಬಾವಿ, ಕಾಲುವೆಗಳು ಮುಖ್ಯ. ವಿದ್ಯುತ್ತಿನ ಆಗಮನದಿಂದೀಚೆಗೆ ಕೊಳವೆ ಬಾವಿಗಳೂ ಹೇರಳವಾಗಿ ಉಂಟು. ಸುಮಾರು 3.47 ಲಕ್ಷ ಹೆಕ್ಟೇರು ಜಮೀನು ನೀರಾವರಿಗೊಳಪಟ್ಟಿದೆ. ಗಂಗೆ ಯಮುನೆಯರ ನಡುವಣ ನೆಲಕ್ಕೆ ಪೂರ್ವಯಮುನಾ ಮತ್ತು ಗಂಗಾ ಮೇಲ್ಕಣಿವೆ ಕಾಲುವೆಯ ವ್ಯವಸ್ಥೆಗಳಿವೆ. ಅಲ್ಲಿಂದ ಮುಂದೆ ಗಂಗಾ, ಕೆಳಕಣಿವೆ ಕಾಲುವೆ ವ್ಯವಸ್ಥೆ ಮುಖ್ಯ. ಯಮುನಾ ನದಿಯ ದಕ್ಷಿಣದಲ್ಲಿ ಪ್ರಸ್ಥಭೂಮಿಯ ಅಂಚಿನ ವರೆಗೆ ಹಬ್ಬಿರುವ ಮೈದಾನಕ್ಕೆ ಆಗ್ರ, ಬೇಟ್ವ ಕಾಲುವೆಗಳು ನೀರುಣಿಸುತ್ತವೆ. ಗಂಗಾ ಘಾಘ್ರಾ ನದಿಗಳ ನಡುವೆ ಶಾರದಾ ಕಾಲುವೆ ಇನ್ನೊಂದು ಮುಖ್ಯ ನೀರಾವರಿ ವ್ಯವಸ್ಥೆ. ಈ ಹಳೆಯ ವ್ಯವಸ್ಥೆಗಳ ಜೊತೆಗೆ ಈಚೆಗೆ ಸ್ವತಂತ್ರ್ಯ ಭಾರತದಲ್ಲಿ ನೇಪಾಲದ ಸಹಯೋಗದಿಂದ ಘಾಘ್ರಾ ನದಿಯ ಮೇಲ್ಕಣಿವೆಯಲ್ಲಿ ನೀರಾವರಿ ವ್ಯವಸ್ಥೆ ನಿರ್ಮಿತವಾಗಿದೆ.

**ಪ್ರಾಣಿಗಳು:** ಭಾರತದ ಇತರೆಡೆಗಳಂತೆ ಉತ್ತರ ಪ್ರದೇಶದಲ್ಲೂ ವ್ಯವಸಾಯಕ್ಕೆ ಉಪಯುಕ್ತ ವಾದ ಅನೇಕ ಪ್ರಾಣಿಗಳನ್ನು ಸಾಕುತ್ತಾರೆ. ಎತ್ತು, ಹಸು, ಎಮ್ಮೆ, ಕುರಿ ಮತ್ತು ಮೇಕೆಗಳು ಅಧಿಕ ಸಂಖ್ಯೆಯಲ್ಲಿವೆ. ಕುದುರೆ, ಹೇಸರಗತ್ತೆಗಳ ಜೊತೆಗೆ ಒಂಟೆ, ಆನೆಗಳನ್ನೂ ಸಾಮಗ್ರಿ



ಭರತಪುರದ ಕೋಟೆ

ಸಾಗಿಸಲು ಬಳಸಲಾಗುತ್ತದೆ. ಕಾಡು ಕಡಿಯುವ ಕ್ರಮಗಳ ಫಲವಾಗಿ ವನ್ಯಮೃಗಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆನೆ, ಸಿಂಹ, ಕೋತಿಗಳು ಈಗಲೂ ಅನೇಕ ಕಡೆಗಳಲ್ಲಿವೆ. ಒಂದು ಕಾಲಕ್ಕೆ ದೇಶದ ಉತ್ತರ ಭಾಗ ವನ್ಯಮೃಗಗಳಿಗೆ ಹೆಸರಾಗಿತ್ತು. ಅಲ್ಲಿದ್ದ ನರಭಕ್ಷಕ ಹುಲಿ ಮತ್ತು ಚಿರತೆಗಳ ಬೇಟೆಯ ಪ್ರಸಂಗಗಳನ್ನು ಜಿಮ್ ಕಾರ್ಬೆಟ್ ಮನೋಹರವಾಗಿ ತನ್ನ ಪುಸ್ತಕಗಳಲ್ಲಿ ವರ್ಣಿಸಿದ್ದಾನೆ.

**ವಿದ್ಯುತ್:** ಅನೇಕ ನಗರಗಳಲ್ಲಿ ತಾಪವಿದ್ಯುತ್ಕೇಂದ್ರಗಳಿವೆ. ಕಾನ್ಪುರದ್ದು ಅತ್ಯಂತ ದೊಡ್ಡದು. ಈಚೆಗೆ ಅಲೀಗಢ ಜಿಲ್ಲೆಯ ಹರ್ದ್ವಾಗಂಜಿನಲ್ಲಿ ಒಂದು ದೊಡ್ಡ ಉಷ್ಣ ವಿದ್ಯುಜ್ಜನಕಾಲಯ ಸ್ಥಾಪಿಸಲಾಗಿದೆ. ಈ ರಾಜ್ಯದಲ್ಲಿ ಅನೇಕ ಜಲವಿದ್ಯುತ್‌ಗಾರಗಳು ಕಾರ್ಯರೂಪಕ್ಕೆ ಬಂದಿವೆ. ಇವುಗಳಲ್ಲಿ ಹಲವು ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಆರಂಭವಾದವು.

**ಸಾರಿಗೆ:** ರಾಜ್ಯದಲ್ಲಿ 3869 ಕಿಮೀ ರಾಷ್ಟ್ರೀಯ ಹೆದ್ದಾರಿ, 9098 ಕಿಮೀ ರಾಜ್ಯ ಹೆದ್ದಾರಿ 105,980 ಕಿಮೀ ಮುಖ್ಯ ಜಿಲ್ಲಾ ಹೆದ್ದಾರಿ ಮತ್ತು 72,931 ಕಿಮೀ ಇತರೇ ಮಾರ್ಗ ಸಂಪರ್ಕವಿದ್ದು ಒಟ್ಟು 118940 ಕಿಮೀ ಮಾರ್ಗ ಸೌಲಭ್ಯವಿದೆ ಜೊತೆಗೆ ರೈಲು, ವಿಮಾನ ಇವುಗಳ ಸಂಪರ್ಕ ಸೌಲಭ್ಯಗಳಿವೆ.

**ವಾಣಿಜ್ಯ:** ಉತ್ತರ ಪ್ರದೇಶ ವ್ಯವಸಾಯ ಪ್ರಧಾನ ರಾಜ್ಯ. ಇಲ್ಲಿಂದ ಹೊರಕ್ಕೆ ಹೋಗುವ ಸಾಮಗ್ರಿಗಳಲ್ಲಿ ವ್ಯವಸಾಯೋತ್ಪನ್ನಗಳೇ ಅಧಿಕ. ಆಹಾರ ಧಾನ್ಯ, ಸಕ್ಕರೆ, ಸಾಸಿವೆ, ಎಣ್ಣೆ, ಚರ್ಮದ ಸಾಮಾನು, ಗಾಜಿನ ಸಾಮಾನು ಮುಖ್ಯ ನಿರ್ಯಾತಗಳು. ಕಲ್ಲಿದ್ದಲು,

ಪೆಟ್ರೋಲಿಯಂ, ಚಹ, ರಾಸಾಯನಿಕ ವಸ್ತುಗಳು, ಜವಳಿ, ಹತ್ತಿ, ತುಪ್ಪ, ಕಬ್ಬಿಣ ಮತ್ತು ಉಕ್ಕಿನ ವಿವಿಧ ಯಂತ್ರೋಪಕರಣಗಳು, ಗಟ್ಟಿ ಶಿಲೆಗಳು ಆಮದಾಗುತ್ತವೆ. ಜನಸಂಖ್ಯೆಯ ಆಧಿಕ್ಯದ ಕಾರಣದಿಂದ ಆಹಾರ ಧಾನ್ಯಗಳೂ ಈಚೆಗೆ ಆಮದಾಗುತ್ತಿವೆ.

**ಜನಸಾಂದ್ರತೆ, ಶಿಕ್ಷಣ:** ಭಾರತದಲ್ಲಿನ ರಾಜ್ಯಗಳ ಪೈಕಿ ಉತ್ತರ ಪ್ರದೇಶ ಅತ್ಯಧಿಕ ಜನಸಂಖ್ಯೆ ಹೊಂದಿದೆ. ಉತ್ತರ ಪ್ರದೇಶದಲ್ಲಿ ನಗರಗಳ ಸಂಖ್ಯೆ ಹೆಚ್ಚು. ಈ ನಗರಗಳು ರಾಜ್ಯದ ಸಾಂಸ್ಕೃತಿಕ ಹಾಗೂ ಔದ್ಯಮಿಕ ಚಟುವಟಿಕೆಗಳ ಕೇಂದ್ರಗಳು. ಅನೇಕ ಆಧುನಿಕ ಕೈಗಾರಿಕೆಗಳು ಇಲ್ಲಿ ಸ್ಥಾಪಿತವಾಗಿವೆ. ಇವು ಉನ್ನತ ವಿದ್ಯಾಕೇಂದ್ರಗಳೂ ಆಡಳಿತ ಹಾಗೂ ನ್ಯಾಯಕೇಂದ್ರಗಳೂ ಆಗಿ ನಾಡಿನ ಜನಜೀವನದ ಮೇಲೆ ಪ್ರಭಾವ ಬೀರಿವೆ.



ಲಕ್ಷ್ಮಣಝೂಲ, ಹೃಷೀಕೇಶ

ಗೋರಖ್‌ಪುರದಂಥ ದೊಡ್ಡ ನಗರಗಳು ವ್ಯಾಪಾರ ಕೇಂದ್ರಗಳು. ಗಂಗಾನದಿಯ ದಡದಲ್ಲಿರುವ ಹೃಷಿಕೇಶ, ಹರಿದ್ವಾರ, ವಾರಾಣಸಿಗಳೂ ಗಂಗಾಯಮುನಾ ಸಂಗಮದಲ್ಲಿರುವ ಅಲಹಾಬಾದೂ ಹಿಂದೂಗಳ ಪವಿತ್ರ ಯಾತ್ರಾಸ್ಥಳಗಳು. ಆಗ್ರದಲ್ಲಿನ ಪ್ರಪಂಚಪ್ರಸಿದ್ಧ ತಾಜ್‌ಮಹಲ್, ಇದರ ಬಳಿಯ ಫತೇಪುರ ಸಿಕ್ರಿಯಲ್ಲಿನ ಅಕ್ಬರನ ಕೋಟೆ ಇವು ಈ ರಾಜ್ಯಕ್ಕೆ ಅಸಂಖ್ಯಾತ ಪ್ರವಾಸಿಗಳನ್ನಾಕರ್ಷಿಸಿವೆ. (ಆರ್.ಎನ್.ಟಿ.)

**ಆಡಳಿತ:** ಉತ್ತರ ಪ್ರದೇಶ ಸರ್ಕಾರ ಕಾರ್ಯಾಂಗ, ಶಾಸನಾಂಗ ಮತ್ತು ನ್ಯಾಯಾಂಗಗಳಿಂದ ಕೂಡಿ ರಾಜ್ಯದ ಸಾಮಾನ್ಯ ಆಡಳಿತ ಕಾರ್ಯನಿರ್ವಹಣೆ ನಡೆಸುತ್ತದೆ. ಇಲ್ಲಿನ ವಿಧಾನ ಮಂಡಲದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತುಗಳೆಂಬ ಎರಡು ಸದನಗಳಿವೆ. ಭಾರತದ ಇತರ ರಾಜ್ಯಗಳಲ್ಲಿರುವಂತೆ ಇಲ್ಲಿಯೂ ರಾಜ್ಯಪಾಲರ ಅಧೀನಕ್ಕೆ ಒಳಪಟ್ಟು ಮಂತ್ರಿಮಂಡಲದ ಸಹಾಯ ಮತ್ತು ಸಲಹೆಗಳ ಮೇರೆಗೆ ಆಡಳಿತ ನಡೆಯುತ್ತದೆ. ವಿಧಾನಸಭೆಯ ಬಹುಮತ ಬೆಂಬಲ ಪಡೆದ ಸಂಪುಟ ಆಡಳಿತ ನಡೆಸುತ್ತದೆ. ರಾಜ್ಯಕ್ಕೆ ಒಂದು ಉಚ್ಚ ನ್ಯಾಯಾಲಯವೂ (ಹೈಕೋರ್ಟ್) ಲೋಕಸೇವಾ ಆಯೋಗವೂ (ಪಬ್ಲಿಕ್ ಸರ್ವಿಸ್ ಕಮಿಷನ್) ಉಂಟು.

70 ಜಿಲ್ಲೆಗಳೂ 231 ತಹಸೀಲುಗಳೂ ಇರುವ ಈ ರಾಜ್ಯದಲ್ಲಿ 70 ಅಂತರಿಮ ಜಿಲ್ಲಾ ಪರಿಷತ್ತುಗಳೂ ಇವೆ. ಉತ್ತರ ಪ್ರದೇಶದ 70 ಜಿಲ್ಲೆಗಳನ್ನು ಆಡಳಿತಾನುಕೂಲಕ್ಕಾಗಿ ಕಂದಾಯ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ : 1. ಮೀರತ್, (ಮೇರಠ್) ವಿಭಾಗಕ್ಕೆ ಸೇರಿದ ಜಿಲ್ಲೆಗಳು : ಡೆಹರಾಡೂನ್, ಸಹಾರನ್‌ಪುರ, ಮುಜ಼ಫ್ಫರ್‌ನಗರ, ಮೀರತ್, ಬುಲಂದ್ ಶಹರ್; ಮುಖ್ಯಕಚೇರಿ ಮೀರತ್. 2. ಆಗ್ರ ವಿಭಾಗದ ಜಿಲ್ಲೆಗಳು : ಅಲೀಗಢ, ಆಗ್ರ, ಮೈನ್‌ಪುರಿ, ಏಟಾ, ಮಥುರಾ; ಮುಖ್ಯಕಛೇರಿ ಆಗ್ರ. 3. ಅಲಹಾಬಾದ್ : ಫರೂಕಾಬಾದ್ (ಫತೇಘರ್), ಇಟಾವಾ, ಕಾನ್‌ಪುರ, ಫತೇಪುರ, ಅಲಹಾಬಾದ್; ಮುಖ್ಯಕಚೇರಿ ಅಲಹಾಬಾದ್. 4. ರೋಹಿಲ್ ಖಚಿಡ : ಬರೇಲೀ, ಬಿಜ್ ನೌರ್, ಬುಡ್ವಾನ್, ಮುರಾದಾಬಾದ್, ರಾಂಪುರ, ಷಾಹಜಹಾನ್‌ಪುರ, ಪೀಲೀಭೀತ್; ಮುಖ್ಯಕಚೇರಿ ಬರೇಲಿ. 5. ಝಾನ್ಸಿ : ಝಾನ್ಸಿ, ಜಾಲೌನ್, ಹಮೀರಪುರ, ಬಾಚಿದಾ; ಮುಖ್ಯ ಕಚೇರಿ ಝಾನ್ಸಿ. 6. ವಾರಾಣಸಿ : ವಾರಾಣಸಿ, ಮಿರ್ಜ಼ಾಪುರ, ಜಾನ್‌ಪುರ, ಗಾಜ಼ೀಪುರ, ಬಲಿಯ; ಮುಖ್ಯಕಚೇರಿ ವಾರಾಣಸಿ. 7. ಗೋರಖ್‌ಪುರ; ದೇವ್‌ರಿಯ, ಬಸ್ತಿ, ಅಜ಼ಮ್‌ಗಡ್; ಮುಖ್ಯಕಚೇರಿ ಗೋರಖ್‌ಪುರ. 8. ಲಖನೌ, ಉನ್ನಾವ್, ರಾಯ್ ಬರೇಲಿ, ಸೀತಾಪುರ, ಹರದೋಯಿ, ಖೇರಿ: ಮುಖ್ಯಕಚೇರಿ ಲಖನೌ. 9. ಫೈಜ಼ಾಬಾದ್: ಫೈಜ಼ಾಬಾದ್, ಗೋಂಡಾ, ಬಹ್‌ರಾಯಿಚ್, ಸುಲ್ತಾನ್‌ಪುರ, ಪ್ರತಾಪ್‌ಗಢ, ಬಾರಾಬಂಕಿ; ಮುಖ್ಯಕಚೇರಿ ಫೈಜ಼ಾಬಾದ್. ಒಂದೊಂದು ವಿಭಾಗಕ್ಕೂ ಒಬ್ಬೊಬ್ಬ ವಿಭಾಗಾಧಿಕಾರಿ ಇರುವಂತೆ ಒಂದೊಂದು ಜಿಲ್ಲೆಗೂ ಒಬ್ಬೊಬ್ಬ ಅಧಿಕಾರಿಯೂ ತಾಲ್ಲೂಕುಗಳಿಗೆ ತಹಸೀಲ್ದಾರರೂ ಇದ್ದು ಆಯಾ ಕ್ಷೇತ್ರಗಳ ಆಡಳಿತ ಅವರವರ ಹೊಣೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ನೀತಿಗನುಗುಣವಾಗಿ ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮಸಭೆ, ಕ್ಷೇತ್ರ ಸಭೆ ಮತ್ತು ಜಿಲ್ಲಾಪರಿಷತ್ತುಗಳೆಂದು ಮೂರು ಶ್ರೇಣಿಗಳುಂಟು. ಗ್ರಾಮ ಸಭೆಗಳು 1947ರಿಂದಲೂ ಕ್ಷೇತ್ರ ಸಭೆಗಳು 1961ರಿಂದಲೂ ಜಿಲ್ಲಾ ಪರಿಷತ್ತುಗಳು 1963ರಿಂದಲೂ ಕಾರ್ಯ ನಡೆಸುತ್ತಿವೆ. ತಂತಮ್ಮ ಕ್ಷೇತ್ರಗಳ ಆಡಳಿತ ನಿರ್ವಹಣೆಯ ಜೊತೆಗೆ ಆಯಾ ಕ್ಷೇತ್ರದ ಅಭಿವೃದ್ಧಿ ಯೋಜನೆ ತಯಾರಿಸಿ ಕಾರ್ಯಗತಗೊಳಿಸುವ ಹೊಣೆಯೂ ಈ ಸ್ಥಳೀಯ ಸಂಸ್ಥೆಗಳಿಗೆ ಸೇರಿದ್ದು. (ಎಂ.ಕೆ.ಎಸ್.)

**ಉತ್ತರ ಪ್ರದೇಶದ ಅರ್ಥವ್ಯವಸ್ಥೆ:** ಈ ರಾಜ್ಯದ ಅರ್ಥವ್ಯವಸ್ಥೆ ವ್ಯವಸಾಯ ಪ್ರಧಾನವಾಗಿದೆ. ಈ ವಿಚಾರದಲ್ಲಿ ಈ ರಾಜ್ಯಕ್ಕೂ ಭಾರತದ ಇತರ ರಾಜ್ಯಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ಇಲ್ಲಿನ ನೆಲ ಫಲಭರಿತವಾದದ್ದರಿಂದಲೂ ನೀರಾವರಿ ಸೌಲಭ್ಯ ಧಾರಾಳವಾಗಿರುವುದರಿಂದಲೂ ಇಲ್ಲಿನ ಕೃಷಿ ಉದ್ಯಮ ವೈವಿಧ್ಯಮಯ: ಇದು ಸಾಕಷ್ಟು ಪ್ರಗತಿಪರವಾಗಿಯೂ ಇದೆಯೆನ್ನಬಹುದು. ವರ್ಷಕ್ಕೆ ಇಲ್ಲಿ ಎರಡು ಫಸಲು. ಖರೀಫ್ ಅಥವಾ ಶರತ್ ಬೆಳೆಯ ಬಿತ್ತನೆ ಜುಲೈ ತಿಂಗಳಲ್ಲಿ; ಅಕ್ಟೋಬರ್–ನವೆಂಬರಿನಲ್ಲಿ ಸುಗ್ಗಿ. ಮಾರ್ಚ್–ಏಪ್ರಿಲ್‌ಗಳಲ್ಲಿ ಫಸಲು ಬರುವ ರಾಬಿ (ವಸಂತ) ಬೆಳೆಯ ಬಿತ್ತನೆಯ ಕಾಲ ನವೆಂಬರ್. ಹೆಚ್ಚು ಮಳೆ ಬೀಳುವ ಪೂರ್ವದಲ್ಲಿ ಬತ್ತದ ಬೆಳಸು. ಮಳೆ ಕಡಿಮೆಯಿರುವ ಪಶ್ಚಿಮದಲ್ಲೂ ನೀರಾವರಿ ಸೌಲಭ್ಯವಿದ್ದ ಕಡೆಗಳಲ್ಲೂ ಬತ್ತವುಂಟು. ನೀರಾವರಿಯ ಸೌಲಭ್ಯದಿಂದ ವರ್ಷಕ್ಕೆರಡು ಬೆಳೆ ತೆಗೆಯುವುದೂ ಸಾಮಾನ್ಯ. ಹೈನು ಉತ್ಪಾದನೆಯಲ್ಲಿ ಉತ್ತರ ಪ್ರದೇಶ ಮುಂದು. ಅಲೀಗಢದ ಬೆಣ್ಣೆ ಪ್ರಸಿದ್ಧ.

ಬ್ರಿಟಿಷ್ ಆಡಳಿತಕಾಲದಲ್ಲಿ ಇಲ್ಲಿನ ಜಮೀನು ಹಿಡುವಳಿ ಪದ್ಧತಿ ಬಹುವಿಧವೂ ತೊಡಕಿನದೂ ಆಗಿತ್ತು. 1952 ಜುಲೈ ತಿಂಗಳಿಂದ ವ್ಯವಸಾಯ ಭೂಮಿಯನ್ನೆಲ್ಲ ರೈತರೇ ಸರ್ಕಾರದಿಂದ ನೇರವಾಗಿ ಹಿಡುವಳಿ ಪಡೆದಿದ್ದಾರೆ. ಜಮೀನ್ದಾರಿ ಪದ್ಧತಿ ರದ್ದು ಮಾಡುವ ಮುನ್ನ ಇಲ್ಲಿದ್ದ 20,00,000 ಜಮೀನ್ದಾರರಿಗೆ ಅವರ ವಾರ್ಷಿಕ ವರಮಾನದ ಎಂಟರಷ್ಟು ಪರಿಹಾರ ಕೊಡಲಾಯಿತು. ಗ್ರಾಮಗಳು ಬಹಳಮಟ್ಟಿಗೆ ಸ್ವಾವಲಂಬಿ. ಇವು ಹೊರಗಿನಿಂದ ಆಹಾರಧಾನ್ಯ ಕೊಳ್ಳುತ್ತಲೂ ಇರಲಿಲ್ಲ; ಮಾರಲು ಉಳಿಯುವಷ್ಟು ಬೆಳೆಯುತ್ತಲೂ ಇರಲಿಲ್ಲ. ಈಚೆಗೆ ಜಾರಿಗೆ ತರಲಾಗಿರುವ ಅಭಿವೃದ್ಧಿ ಕಾರ್ಯಗಳಿಂದ ಹಳ್ಳಿಗಳ ಸ್ಥಿತಿ ಸುಧಾರಿಸುತ್ತಿದೆ.

ಉತ್ತಮ ವ್ಯವಸಾಯ ವಿಧಾನಗಳಿಂದ ಜಮೀನುಗಳ ಇಳುವರಿ ಅಧಿಕವಾಗುತ್ತಿದೆಯಲ್ಲದೆ, ಇದುವರೆಗೂ ನೆಲವನ್ನೇ ನಂಬಿದ್ದ ಅಧಿಕ ಸಂಖ್ಯೆಯ ದುಡಿಮೆಗಾರರು ಈಗ ಹೊರ ಬಂದು ಪಟ್ಟಣಗಳಲ್ಲಿ ವಾಸಿಸುತ್ತಿದ್ದಾರೆ. ಅನೇಕ ನಗರಗಳು ಆಧುನಿಕ ಕೈಗಾರಿಕಾ ಕೇಂದ್ರಗಳಾಗಿ ಪರಿಣಮಿಸಿವೆ.

**ಕೈಗಾರಿಕೆಗಳು:** ಇಲ್ಲಿನ ಮುಖ್ಯ ಕೈಗಾರಿಕೆಗಳನ್ನು ದೊಡ್ಡ ಪ್ರಮಾಣದ ಕೈಗಾರಿಕೆಗಳು, ಸಣ್ಣ ಅಥವಾ ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಗೃಹ ಕೈಗಾರಿಕೆಗಳೆಂದು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು.

ದೊಡ್ಡ ಪ್ರಮಾಣದ ಕೈಗಾರಿಕೆಗಳು ಖಾಸಗಿ ಮತ್ತು ಸರ್ಕಾರಿ ವಲಯಗಳೆರಡರಲ್ಲೂ ಸ್ಥಾಪಿತವಾಗಿವೆ. ಉತ್ತರ ಪ್ರದೇಶದ ಖಾಸಗಿ ವಲಯದಲ್ಲಿ ಸುಮಾರು ಹದಿನಾರು ದೊಡ್ಡ ಪ್ರಮಾಣದ ಕೈಗಾರಿಕೆಗಳಿದ್ದು ಅವುಗಳನ್ನು ಬಂಡವಾಳದ ಹೂಡಿಕೆಯ ಆಧಾರದ ಮೇಲೆ ಮತ್ತೆ ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. ತಲಾ ಒಂದು ಕೋಟಿ ರೂ.ಗಳಿಗಿಂತಲೂ ಅಧಿಕ ಬಂಡವಾಳ ಇರುವ ಐದು ಕೈಗಾರಿಕೆಗಳು ಮೊದಲನೆಯ ಗುಂಪು: ಸಕ್ಕರೆ, ಹತ್ತಿಜವಳಿ, ವನಸ್ಪತಿ, ರಾಸಾಯನಿಕವಸ್ತುಗಳು, ಯಂತ್ರೋಪಕರಣಗಳು ಹಾಗೂ ವಿದ್ಯುಚ್ಛಕ್ತಿ ಸಲಕರಣೆಗಳ ಕೈಗಾರಿಕೆಗಳು. ಈ ಐದು ಅತಿ ದೊಡ್ಡ ಕೈಗಾರಿಕೆಗಳಲ್ಲಿ ಸಕ್ಕರೆ ತಯಾರಿಕೆ ಅತ್ಯಂತ ಪ್ರಮುಖವಾದದ್ದು.

ಉತ್ತರ ಪ್ರದೇಶದಲ್ಲಿ ಸು. 98 ಸಕ್ಕರೆ ಕಾರ್ಖಾನೆಗಳಿದ್ದು ಇವುಗಳಲ್ಲಿ ಸು. 71 ಸಾವಿರ ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ. ಈ ಉದ್ಯಮದಲ್ಲಿನ ಒಟ್ಟು ಬಂಡವಾಳ ಸು. 50 ಕೋಟಿ ರೂಪಾಯಿ. ವಾರ್ಷಿಕ ಸಕ್ಕರೆ ಉತ್ಪನ್ನದ ಮೌಲ್ಯ 15 ಕೋಟಿ ರೂಪಾಯಿ. ಸಕ್ಕರೆ ಕೈಗಾರಿಕೆಯಲ್ಲಿ ಇಡೀ ರಾಷ್ಟ್ರದಲ್ಲಿ ಉತ್ತರ ಪ್ರದೇಶವೇ ಪ್ರಥಮ.

ಸಕ್ಕರೆ ತಯಾರಿಕೆಯನ್ನು ಬಿಟ್ಟರೆ ರಾಜ್ಯದಲ್ಲಿ ಹತ್ತಿಜವಳಿ ಕೈಗಾರಿಕೆಗಳ ದ್ವಿತೀಯ ಸ್ಥಾನ. ಇಲ್ಲಿ ಸು. 27 ಹತ್ತಿಜವಳಿ ಗಿರಣಿಗಳಿದ್ದು ಇವು ಸರಾಸರಿ 50,000 ಜನಕ್ಕೆ ಉದ್ಯೋಗ ಒದಗಿಸುತ್ತವೆ. ಈ ಉದ್ಯಮದಲ್ಲಿ ತೊಡಗಿಸಿದ ಬಂಡವಾಳ ಸುಮಾರು 22 ಕೋಟಿ ರೂ;

ವಾರ್ಷಿಕ ಉತ್ಪಾದನೆಯ ಮೌಲ್ಯ 8 ಕೋಟಿ ರೂ. ಕಾನ್ಪುರವೇ ರಾಜ್ಯದ ಹತ್ತಿಜವಳಿ ಕೈಗಾರಿಕೆಯ ಕೇಂದ್ರ. ವನಸ್ಪತಿ ಮತ್ತು ಸಸ್ಯಜನಿತ ಎಣ್ಣೆಯ ಉತ್ಪಾದನೆ ಉತ್ತರ ಪ್ರದೇಶದ ಇನ್ನೊಂದು ಮುಖ್ಯ ಕೈಗಾರಿಕೆ. ಇಲ್ಲಿ ಸು. 63 ಎಣ್ಣೆ ಕಾರ್ಖಾನೆಗಳಿವೆ. ವನಸ್ಪತಿ ವಸ್ತುತಯಾರಿಕೆಯಲ್ಲಿ ನಿರತವಾದ ಕಾರ್ಖಾನೆಗಳು ನಾಲ್ಕು. ಈ ಎರಡು ಉದ್ಯಮಗಳೂ 59,000 ಜನಕ್ಕೆ ಉದ್ಯೋಗ ಕಲ್ಪಿಸಿಕೊಟ್ಟಿವೆ. ಈ ಉದ್ಯಮಗಳಲ್ಲಿ ಸು. 4.67 ಕೋಟಿ ರೂ. ತೊಡಗಿಸಲಾಗಿದೆ. ನಾಲ್ಕು ವನಸ್ಪತಿ ಕಾರ್ಖಾನೆಗಳಲ್ಲಿ ಮೂರನ್ನು ಮೀರತ್ ಜಿಲ್ಲೆಯಲ್ಲಿಯೇ ಸ್ಥಾಪಿಸಲಾಗಿದೆ.

ರಾಸಾಯನಿಕ ವಸ್ತುಗಳ ಉತ್ಪಾದನೆ ರಾಜ್ಯದ ಮತ್ತೊಂದು ಮುಖ್ಯ ಕೈಗಾರಿಕೆ. ಈ ರಾಜ್ಯದಲ್ಲಿ 27 ರಾಸಾಯನಿಕ ವಸ್ತುಗಳ ಕಾರ್ಖಾನೆಗಳಿದ್ದು ಇವು ಪ್ರತಿನಿತ್ಯವೂ 2,800 ಕೆಲಸಗಾರರಿಗೆ ಕೆಲಸ ಒದಗಿಸಿವೆ. ಈ ಉದ್ಯಮದಲ್ಲಿ ತೊಡಗಿಸಲಾದ ಬಂಡವಾಳ 3.11 ಕೋಟಿ ರೂ. ವಾರ್ಷಿಕ ಉತ್ಪನ್ನ ಮೌಲ್ಯ 1.58 ಕೋಟಿ ರೂ.

151 ಸಾಮಾನ್ಯ ಮತ್ತು ವಿದ್ಯುತ್ ಯಂತ್ರೋಪಕರಣ ಕಾರ್ಖಾನೆಗಳು ಉತ್ತರ ಪ್ರದೇಶದಲ್ಲಿ ಸ್ಥಾಪಿತವಾಗಿವೆ. ಇವುಗಳಲ್ಲಿ ಪ್ರತಿನಿತ್ಯವೂ ಸರಾಸರಿ 11,000 ಕಾರ್ಮಿಕರು ಕೆಲಸ ಮಾಡುತ್ತಾರೆ. ಕಾರ್ಖಾನೆಗಳಲ್ಲಿ ಹೂಡಲಾದ ಒಟ್ಟು ಬಂಡವಾಳ 3.32 ಕೋಟಿ ರೂ. ವಾರ್ಷಿಕ ಉತ್ಪನ್ನ ಮೌಲ್ಯ 1.39 ಲಕ್ಷ ರೂ.

ತಲಾ ಒಂದು ಕೋಟಿಗಿಂತ ಕಡಿಮೆ, ಆದರೆ ಐವತ್ತು ಲಕ್ಷಕ್ಕಿಂತ ಹೆಚ್ಚು, ಬಂಡವಾಳ ಹೂಡಲಾಗಿರುವ ಕೈಗಾರಿಕೆಗಳದು ಎರಡನೆಯ ಗುಂಪು. ಕಬ್ಬಿಣ ಉಕ್ಕು, ಉಣ್ಣೆ, ಬಟ್ಟೆ, ಕಾಗದ ಮತ್ತು ಸೆಣಬು ಕೈಗಾರಿಕೆಗಳು ಇವುಗಳಲ್ಲಿ ಮುಖ್ಯ. ಚರ್ಮ ಹದಮಾಡುವಿಕೆ, ಗಾಜು ಮತ್ತು ಗಾಜಿನ ಸಾಮಾನುಗಳ ತಯಾರಿಕೆ, ಬೈಸಿಕಲ್ ಕೈಗಾರಿಕೆ, ಅಕ್ಕಿಗಿರಣಿಗಳು, ಬಣ್ಣ ಮತ್ತು ವಾರ್ನಿಷ್ ತಯಾರಿಕೆ, ಮದ್ಯಸಾರ ತಯಾರಿಕೆ ಇವು ತಲಾ 10–50 ಲಕ್ಷ ರೂ. ವರೆಗೆ ಬಂಡವಾಳ ಹೊಂದಿವೆ. ಇವುಗಳದು ಮೂರನೆಯ ಗುಂಪು.

ಸರ್ಕಾರಿ ವಲಯದಲ್ಲಿನ ಎರಡು ಮುಖ್ಯ ಕೈಗಾರಿಕೆಗಳಾದ ಸೂಕ್ಷ್ಮ ಸಲಕರಣೆಗಳ ಕಾರ್ಖಾನೆ ಹಾಗೂ ಸಿಮೆಂಟ್ ಕಾರ್ಖಾನೆ ರಾಜ್ಯಸರ್ಕಾರದ ನೇರ ಆಡಳಿತಕ್ಕೊಳಪಟ್ಟಿವೆ. ಮತ್ತೆ ಕೆಲವು ಕೈಗಾರಿಕೆಗಳಲ್ಲಿ ಸರ್ಕಾರದ ಹತೋಟಿಯುಂಟು. ಮೊದಲನೆಯದು 1950ರಲ್ಲಿ ಉತ್ಪಾದನೆ ಪ್ರಾರಂಭಿಸಿತು. ಇದರಲ್ಲಿ ರಾಜ್ಯಸರ್ಕಾರ ಹೂಡಿರುವ ಬಂಡವಾಳ 41 ಲಕ್ಷ ರೂಪಾಯಿ. ಸುಮಾರು 400 ಮಂದಿ ನಿಪುಣ ಕೆಲಸಗಾರರಿಗೆ ಉದ್ಯೋಗ ಒದಗಿಸಿರುವ ಈ ಕಾರ್ಖಾನೆಯ ಮುಖ್ಯ ತಯಾರಿಕೆಗಳೆಂದರೆ ನೀರಿನ ಮೀಟರ್ ಮತ್ತು ಸೂಕ್ಷ್ಮದರ್ಶಕ ಯಂತ್ರ.

ಸರ್ಕಾರಿ ಸಿಮೆಂಟ್ ಕಾರ್ಖಾನೆಯಲ್ಲಿ ಉತ್ಪಾದನೆ ಆರಂಭವಾದದ್ದು 1954ರಲ್ಲಿ. 800 ಮಂದಿ ಮಾಜಿ ಕೈದಿಗಳು ಇಲ್ಲಿ ಕಾರ್ಮಿಕರಾಗಿರುವುದು ಈ ಕಾರ್ಖಾನೆಯ ಒಂದು ವೈಶಿಷ್ಟ್ಯ.

ರಾಂಪುರದಲ್ಲಿ ಸ್ಥಾಪಿತವಾಗಿರುವ ಮೂರು ಕೈಗಾರಿಕೆಗಳಲ್ಲಿ ರಾಜ್ಯಸರ್ಕಾರ ಷೇರು ಬಂಡವಾಳ ಹೊಂದಿರುವುದರಿಂದ ಇವು ಸರ್ಕಾರದ ಹತೋಟಿಗೊಳಪಟ್ಟಿವೆ.

ಇಲ್ಲಿನ ಆ್ಯಂಟಿಬಯೊಟಿಕ್ಸ್, ರಾಸಾಯನಿಕ ಗೊಬ್ಬರ (ಗೋರಖ್‌ಪುರ) ಹೆವಿ ಎಲೆಕ್ಟ್ರಿಕಲ್ (ಹರಿದ್ವಾರ) ಮತ್ತು ಡೀಸೆಲ್ ಎಲೆಕ್ಟ್ರಿಕಲ್ ಎಂಜಿನ್ ಕಾರ್ಖಾನೆ (ವಾರಾಣಸಿ)–ಇವು ಕೇಂದ್ರ ಸರ್ಕಾರದವು.

ಉತ್ತರ ಪ್ರದೇಶದಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳು ಅನೇಕ. ರಾಜ್ಯದ ಅರ್ಥ ವ್ಯವಸ್ಥೆಯಲ್ಲಿ ಈ ಕೈಗಾರಿಕೆಗಳದು ಮುಖ್ಯ ಪಾತ್ರ. ಆರ್ಥಿಕವಾಗಿ ಹಿಂದುಳಿದ ಉತ್ತರ ಪ್ರದೇಶ ರಾಜ್ಯದಲ್ಲಿ ಜನರಿಗೆ ಉದ್ಯೋಗ ಒದಗಿಸಿಕೊಟ್ಟು ಅವರ ಬಡತನವನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸುವುದರಲ್ಲಿ ಈ ಸಣ್ಣ ಪ್ರಮಾಣದ ಕೈಗಾರಿಕೆಗಳು ಸಹಾಯಕ. ಸುಮಾರು 1,700 ಸಣ್ಣ ಪ್ರಮಾಣದ ಕೈಗಾರಿಕಾಸಂಸ್ಥೆಗಳು ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದು 51 ಸಾವಿರ ಜನರಿಗೆ ಉದ್ಯೋಗ ಒದಗಿಸಿಕೊಟ್ಟಿವೆ. ಅಲಹಾಬಾದಿನ ಉಕ್ಕಿನ ಟ್ರಂಕು ತಯಾರಿಕೆ, ಫಿರೋಜ಼ಾಬಾದಿನ ದೇಶಪ್ರಸಿದ್ಧ ಗಾಜಿನ ಬಳೆಗಳ ಉತ್ಪಾದನೆ, ಮುರಾದಾಬಾದಿನ ಸ್ಟೇನ್‌ಲೆಸ್ ಸ್ಟೀಲ್, ಕಂಚಿನ ಸಾಮಾನು ತಯಾರಿಕೆ–ಇವು ಮುಖ್ಯ. ಸೋಪು, ಕ್ರೀಡಾವಸ್ತು, ರಬ್ಬರ್ ಸಾಮಾನು, ಬೀಗ, ಸೈಕಲ್ ಸಾಮಾನು ಸಂಗೀತ ಸಲಕರಣೆ, ಚರ್ಮವಸ್ತು–ಇವುಗಳೆಲ್ಲವೂ ಸಣ್ಣ ಪ್ರಮಾಣದ (50 ಅಥವಾ ಕಡಿಮೆ ಸಂಖ್ಯೆಯ ಕೆಲಸಗಾರರನ್ನುಳ್ಳ) ಕೈಗಾರಿಕೆಗಳು.

ಉತ್ತರ ಪ್ರದೇಶ ಅನೇಕ ಗೃಹ ಕೈಗಾರಿಕೆಗಳಿಗೂ ಪ್ರಸಿದ್ಧ. ಇವು ಸಾಮಾನ್ಯವಾಗಿ ವಂಶಪಾರಂಪರ್ಯ. ಇವುಗಳಲ್ಲಿ ಎಷ್ಟೋ ವಿದೇಶಿ ವಿನಿಮಯ ಸಂಪಾದನೆಗೆ ಕಾರಣ. ಮಥುರಾ, ಫರೂಕಾಬಾದ್‌ಗಳ ಕ್ಯಾಲಿಕೋ ಪ್ರಿಂಟಿಂಗ್, ಮಿರ್ಜಾ಼ಪುರ ಮತ್ತು ಬದೋಹಿಯ ಜಗದ್ವಿಖ್ಯಾತ ಜಮಖಾನೆ ತಯಾರಿಕೆ, ವಾರಾಣಸಿಯ ರೇಷ್ಮೆ ಬಟ್ಟೆ ಮತ್ತು ರೇಷ್ಮೆ ಜರತಾರಿ ನೇಯ್ಗೆ, ಲಖನೌದ ದಂತದ ಕೆಲಸ–ಇವು ಮುಖ್ಯ.

ಈ ರಾಜ್ಯದ ಕೈಗಾರಿಕಾ ರಚನೆಯಲ್ಲಿ ಇಲ್ಲಿಯವರೆಗೆ ಗ್ರಾಮ ಮತ್ತು ಗೃಹ ಕೈಗಾರಿಕೆಗಳೇ ಪ್ರಧಾನವಾಗಿದ್ದುವು. ಸಕ್ಕರೆ ಮತ್ತು ಬಟ್ಟೆ ತಯಾರಿಕೆಗಳು ಮಾತ್ರ ರಾಜ್ಯದ ಅತಿ ಮುಖ್ಯ ದೊಡ್ಡ ಕೈಗಾರಿಕೆಗಳು. ಆಗ್ರ ಅಲೀಗಢ ವಾರಾಣಸಿ ಮತ್ತು ಲಖನೌ ಪಟ್ಟಣಗಳು ಕೈಗಾರಿಕಾ ಕ್ಷೇತ್ರದಲ್ಲಿ ಈಚೆಗೆ ಪ್ರಗತಿ ಹೊಂದಲು ಪ್ರಾರಂಭಿಸಿದ್ದರೂ ಕಾನ್ಪುರ ಮಾತ್ರವೇ ದೊಡ್ಡ ಕೈಗಾರಿಕಾ ಕೇಂದ್ರ. ಈ ರಾಜ್ಯ ಹಿಂದೆ ಹೆಚ್ಚು ಪ್ರಗತಿ ಹೊಂದದಿರಲು ಕಚ್ಚಾ ಸಾಮಗ್ರಿಯ ಅಭಾವ, ವಿದ್ಯುಚ್ಛಕ್ತಿಯ ಕೊರತೆ, ಸ್ಥಳೀಯ ಬೇಡಿಕೆಯ ಮತ್ತು ಶ್ರಮ ಕೌಶಲಗಳ ಅಭಾವವೇ ಮುಖ್ಯ ಕಾರಣ. ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ಈ ರಾಜ್ಯ ಗಣನೀಯ ಪ್ರಮಾಣದಲ್ಲಿ ಕೈಗಾರಿಕಾಭಿವೃದ್ಧಿ ಹೊಂದುತ್ತಿದೆ.

ಈ ರಾಜ್ಯದಲ್ಲಿ 1998 ಮಾರ್ಚ್ ತಿಂಗಳ ಕೊನೆಯಲ್ಲಿ ಒಟ್ಟು ರೂ.41,266.20 ಕೋಟಿ ಬಂಡವಾಳದ 2616 ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕಾ ಘಟಕಗಳಿದ್ದವು. ಇವುಗಳಲ್ಲಿ 7,38,582 ಮಂದಿಗೆ ಉದ್ಯೋಗಾವಕಾಶವಾಗಿತ್ತು. ಹಾಗೆಯೇ ರೂ. 5131 (2004–05) ಕೋಟಿ ಬಂಡವಾಳದ 521835 ಸಣ್ಣ ಕೈಗಾರಿಕೆಗಳಿದ್ದು 2001000 ಮಂದಿಗೆ ಉದ್ಯೋಗ ದೊರಕಿತ್ತು. 2004–05 ರ ಸಾಲಿನಲ್ಲಿ ಸು. 45.51 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿತ್ತು. 68 ಜವಳಿ ಕಾರ್ಖಾನೆಗಳೂ 32 ಆಟೊಮೊಬೈಲ್ ಕಾರ್ಖಾನೆಗಳೂ ಇದ್ದು ಒಟ್ಟು ರೂ. 5740 ಕೋಟಿ ಬಂಡವಾಳ ಹೂಡಲಾಗಿದ್ದು 20,280 ಮಂದಿಗೆ ಉದ್ಯೋಗ ನೀಡಲಾಗಿತ್ತು. ನ್ಯೂ ಓಕ್ಲ ಕೈಗಾರಿಕಾಭಿವೃದ್ಧಿ ನಿಗಮದ ಯೋಜನೆಯಂತೆ 2011 ರ ಹೊತ್ತಿಗೆ 102 ಕೈಗಾರಿಕಾ ಘಟಕಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯವೂ ಸಾಗಿದೆ. (ಎಸ್.ಎನ್.ಎ.)

**ಉತ್ತರ ಪ್ರದೇಶದ ಚರಿತ್ರೆ:** ಉತ್ತರ ಭಾರತದ ಗಂಗಾ ಯಮುನಾ ಬಯಲಿನ ಒಂದು ಭಾಗವಾಗಿರುವ ಉತ್ತರ ಪ್ರದೇಶದ ಇತಿಹಾಸ ಬಲು ದೊಡ್ಡದು. ವಾಯವ್ಯ ಗಡಿಯಿಂದ ಧಾರಾಕಾರವಾಗಿ ಭಾರತಕ್ಕೆ ಹರಿದು ಬಂದ ಆಕ್ರಮಣಕಾರರ ಹಾದಿಗೆ ಇದು ಅಡ್ಡಲಾಗಿದ್ದದ್ದರಿಂದ ಈ ಪ್ರದೇಶದ ಇತಿಹಾಸದ ಬಹಳ ಭಾಗ ಸೃಷ್ಟಿಯಾದದ್ದು ಇಲ್ಲಿ. ಸನಾತನ ಭಾರತದ ಪವಿತ್ರಗ್ರಂಥಗಳಲ್ಲಿ ಮಧ್ಯದೇಶವೆಂದು ಪ್ರಸಿದ್ಧವಾದ ನಾಡು ಇದೇ. ರಾಮಾಯಣ–ಮಹಾಭಾರತಗಳ ರಾಮ, ಕೃಷ್ಣ ಮುಂತಾದವರು ನಡೆದಾಡಿದ್ದೂ ವಾಸಮಾಡಿದ್ದೂ ಇಲ್ಲಿನ ನೆಲದ ಮೇಲೆ, ಎಂದು ನಂಬಿಕೆ.

ಈ ನಾಡು ಅನೇಕ ಮತೀಯ ಹಾಗೂ ಸಾಮಾಜಿಕ ಕ್ರಾಂತಿಗಳಿಗೂ ತವರು. ವೈದಿಕ ಧರ್ಮದ ಹೊಸತನ ಹೋಗಿ ಸಾಂಪ್ರದಾಯಿಕವಾದಾಗ ಅವತರಿಸಿದ ಬುದ್ಧ ಇಲ್ಲೇ ಬದುಕಿದ್ದ. ಅವನ ಧರ್ಮಬೋಧೆ ಆರಂಭವಾದದ್ದು ಇಲ್ಲೇ–ಕಾಶಿಯ ಬಳಿ. ಬುದ್ಧನ ಪ್ರಥಮ ಬೋಧನೆಯ ಸ್ಥಳದಲ್ಲೊಂದು ಹಳೆಯ ಸ್ತೂಪವಿದೆ. ಅಶೋಕನ ಕಾಲದ ಶಾಸನಗಳನ್ನೂ ನಾನಾ ಸ್ಮಾರಕಗಳನ್ನೂ ಈ ರಾಜ್ಯದಲ್ಲಿ ಕಾಣಬಹುದು.

ಉತ್ತರ ಭಾರತದ ಕೇಂದ್ರಪ್ರದೇಶವಾದ ಈ ನಾಡು ಎಲ್ಲ ಮುಖ್ಯ ಚಕ್ರಾಧಿಪತ್ಯಗಳ ಆಳ್ವಿಕೆಗಳಿಗೂ ಒಳಪಟ್ಟಿತ್ತು. ಮೌರ್ಯರೂ ಕುಶಾನರೂ ಗುಪ್ತರೂ ಇದನ್ನಾಳಿದರು.

12ನೆಯ ಶತಮಾನದಲ್ಲಿ ಇದು ಮುಸ್ಲಿಮರ ಆಕ್ರಮಣಕ್ಕೆ ತುತ್ತಾಗಿ ದೆಹಲಿ ಸುಲ್ತಾನರ ಆಳ್ವಿಕೆಯಡಿಗೆ ಬಂತು. 14ನೆಯ ಶತಮಾನದ ಅಂತ್ಯಭಾಗದಲ್ಲಿ ಈ ರಾಜ್ಯದ ಪೂರ್ವಭಾಗವಾದ ಅಯೋಧ್ಯೆ ಜಾನ್‌ಪುರದ ಆಡಳಿತಕ್ಕೊಳಪಟ್ಟಿತ್ತು. ಇದನ್ನು ಲೋದಿ ಸುಲ್ತಾನರು ಗೆದ್ದಾಗಲೇ ಇದು ಮತ್ತೆ ದೆಹಲಿಯ ಆಡಳಿತಕ್ಕೆ ಬಂದದ್ದು. ಅಕ್ಬರನಿಂದ ಔರಂಗಜೇಬನವರೆಗಿನ ಮೊದಲ ಚಕ್ರಾಧಿಪತ್ಯದ ಕಾಲದಲ್ಲಿ ಆಗ್ರ ಅಯೋಧ್ಯಾ ಪ್ರಾಂತ್ಯಗಳೆರಡೂ ಅದರ ಆಳ್ವಿಕೆಗೆ ಒಳಪಟ್ಟಿದ್ದವು. ಅನಂತರ (1707) ಅಯೋಧ್ಯೆ ಸ್ವತಂತ್ರವಾಯಿತು. ಅಯೋಧ್ಯೆಯ ಸುಲ್ತಾನ ವಂಶದ ಮೂಲಪುರುಷನಾದ ಸಾದತ್ ಆಲಿಖಾನ್ (1722–39) ನೆರೆಹೊರೆ ಪ್ರದೇಶಗಳನ್ನೆಲ್ಲ ಗೆದ್ದ. ವಾರಾಣಸಿ, ಗಾಜಿ಼ಪುರ, ಜಾನ್‌ಪುರ, ಚುನಾರ್‌ಗಳೂ ಈತನ ಆಡಳಿತಕ್ಕೊಳಪಟ್ಟುವು. (ಎಂ.ವಿ.ಕೆ.)

ಇಂಗ್ಲಿಷರ ಆಗಮನವಾದಾಗ ಅಯೋಧ್ಯೆಯ ಸುಲ್ತಾನನಾಗಿದ್ದ ಷೂಜಾ–ಉದ್–ದೌಲನಿಗೂ ಇಂಗ್ಲಿಷರಿಗೂ ಘರ್ಷಣೆ ಆರಂಭವಾಯಿತು. 1764ರ ಬಕ್ಸಾರ್ ಕದನದಲ್ಲಿ ಈತ ಸೋತು, ಇವನ ರಾಜ್ಯ ಇಂಗ್ಲಿಷ್ ಕಂಪನಿಯ ವಶಕ್ಕೆ ಬಂತು. 1765ರ ಕೌಲಿಗೆ ಅನುಸಾರವಾಗಿ ಷೂಜಾ–ಉದ್–ದೌಲನನ್ನು ಇಂಗ್ಲಿಷರು ಮತ್ತೆ ಗಾದಿಯ ಮೇಲೆ ಕೂರಿಸಿದರಾದರೂ ಈ ರಾಜ್ಯದ ಎರಡು ಜಿಲ್ಲೆಗಳಾಗಿದ್ದ ಕೋರ, ಅಲಹಾಬಾದ್‌ಗಳನ್ನು ಮೊಗಲ್ ಚಕ್ರವರ್ತಿಗೆ ಕೊಟ್ಟರು. ಪಶ್ಚಿಮದಿಂದ ಒತ್ತರಿಸಲು ಯತ್ನಿಸುತ್ತಿದ್ದ ಮರಾಠರಿಗೂ ಬ್ರಿಟಿಷರ ಬಂಗಾಲಕ್ಕೂ ನಡುವೆ ಅಯೋಧ್ಯೆಯೇ ತಡೆಯಾಗಿ ಪರಿಣಮಿಸಿತು. 1773ರಲ್ಲಿ ಆದ ಬನಾರಸ್ ಒಪ್ಪಂದಕ್ಕೆ ಅನುಸಾರವಾಗಿ ಅಯೋಧ್ಯೆಯ ನವಾಬನ ರಕ್ಷಣೆಗೆಂದಿಟ್ಟಿದ್ದ ಪಡೆಯ ವೆಚ್ಚದ ಒಂದು ಭಾಗವನ್ನು ಈ ನವಾಬ ಕೊಡಬೇಕೆಂದು ವಾರನ್ ಹೇಸ್ಟಿಂಗ್ಸ್ ಸೂಚಿಸಿದ. ಈ ವೇಳೆಗೆ ದುರ್ಬಲನಾಗಿದ್ದ ಮೊಗಲ್ ಚಕ್ರವರ್ತಿಯಿಂದ ಬ್ರಿಟಿಷರು ಕೋರ, ಅಲಹಾಬಾದ್ ಜಿಲ್ಲೆಗಳನ್ನು ಕಿತ್ತುಕೊಂಡು ಅವನ್ನು ಷೂಜಾ–ಉದ್–ದೌಲನಿಗೆ ಮಾರಿದರು.

ಅಯೋಧ್ಯೆಯ ಆಯಕಟ್ಟಿನ ಸ್ಥಿತಿಯಿಂದಾಗಿ ಇದನ್ನು ಬ್ರಿಟಿಷರು ಹಾಗೆಯೇ ಇರಗೊಡಲಿಲ್ಲ. 1801ರಲ್ಲಿ ಲಾರ್ಡ್‌ವೆಲ್ಲೆಸ್ಲಿ ಅಯೋಧ್ಯೆಯ ನವಾಬನಿಂದ ರೋಹಿಲ್‌ಖಂಡ, ಕೆಳ ದೋಆಬ್ ಮತ್ತು ಗೋರಖಪುರ ಪ್ರದೇಶಗಳನ್ನು ಕಿತ್ತುಕೊಂಡ. 1804ರಲ್ಲಿ ಮರಾಠರು ಬ್ರಿಟಿಷರಿಗೆ ಸೋತರು. ಮೇಲಣ ದೋಆಬ್, ಬುಂದೇಲ್‌ಖಂಡದ ಭಾಗ ಮತ್ತು ಆಗ್ರ ಇವರ ಕೈ ಸೇರಿದ್ದು ಆಗ. 1816ರಲ್ಲಿ ಗೂರ್ಖ ಯುದ್ಧದ ಫಲವಾಗಿ ಕುಮಾವ್ ಇವರಿಗೆ ಬಂತು. ಮರಾಠರಿಂದ ಬುಂದೇಲ್ ಖಂಡದ ಇನ್ನೊಂದು ಭಾಗವೂ ದಕ್ಕಿತು. ಆಗ ಬಂಗಾಲದ ಒಂದು ಭಾಗವಾಗಿದ್ದ ಈ ಪ್ರದೇಶವನ್ನೆಲ್ಲ ಗವರ್ನರ್ ಜನರಲ್ ಆಳುತ್ತಿದ್ದ.

ವಾಯವ್ಯ ಪ್ರಾಂತ್ಯಗಳೆಂದು ಆಗ ಕರೆಯಲಾಗುತ್ತಿದ್ದ ಈ ಭಾಗಕ್ಕೆ ಲೆಫ್ಟಿನೆಂಟ್ ಗವರ್ನರ್ ಒಬ್ಬರ ನೇಮಕವಾದದ್ದು 1835ರಲ್ಲಿ ಇದರಲ್ಲಿ ದೆಹಲಿಯ ಪ್ರದೇಶವೂ ಮುಂದೆ ಮಧ್ಯಪ್ರಾಂತ್ಯಗಳಿಗೆ ಸೇರಿಸಲಾದ ಕೆಲವು ಪ್ರದೇಶಗಳೂ ಸೇರಿದ್ದವು. 1856ರಲ್ಲಿ ಇಂಗ್ಲಿಷರು ಅಯೋಧ್ಯೆಯ ಆಡಳಿತವನ್ನು ತಾವೇ ತೆಗೆದುಕೊಳ್ಳುವವರೆಗೂ ಇದು ನವಾಬನ ಆಳ್ವಿಕೆಗೆ ಒಳಪಟ್ಟಿತ್ತು.

1857ರ ಬಂಡಾಯದಲ್ಲಿ ಉತ್ತರ ಪ್ರದೇಶದ್ದೂ ಮುಖ್ಯ ಪಾತ್ರವೇ ಎನ್ನಬಹುದು. ಬಂಡಾಯದ ಅನಂತರ ಈ ಪ್ರದೇಶದ ಆಂತರಿಕ ಆಡಳಿತಕ್ಕೆ ಬ್ರಿಟಿಷರು ಹೆಚ್ಚು ಗಮನ ನೀಡಿದರು. 1920ರಲ್ಲಿ ಇದಕ್ಕೆ ಗವರ್ನರ ಪ್ರಾಂತ್ಯದ ಸ್ಥಾನ ಕೊಡಲಾಯಿತು. 1947ರಲ್ಲಿ ಸ್ವತಂತ್ರ ಭಾರತದ ರಾಜ್ಯವಾದ ಇದು ಉತ್ತರ ಪ್ರದೇಶವಾದದ್ದು 1950ರಲ್ಲಿ.

ಭಾರತದ ಸಾಂಸ್ಕೃತಿಕ ರಾಜಕೀಯ ಜೀವನದಲ್ಲಿ ಉತ್ತರ ಪ್ರದೇಶದ ಪಾತ್ರ ಹಿರಿದು. ಹಿಂದೂ ಮುಸ್ಲಿಂ ಸಂಸ್ಕೃತಿಗಳೆರಡೂ ಇಲ್ಲಿ ಬೆಳೆದಿದೆ. ವಾರಾಣಸಿಯಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯವಿರುವಂತೆ ಅಲೀಗಢದಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಿದೆ **(ನೋಡಿ– ಅಲಿಘರ್–ಮುಸ್ಲಿಂ–ವಿಶ್ವವಿದ್ಯಾಲಯ)**. ವಾರಾಣಸಿ ಹಿಂದೂ ಸಂಸ್ಕೃತಿಯ ಕೇಂದ್ರವಾಗಿ ಬೆಳೆಯಿತು. ಲಖನೌ ಮುಂತಾದ ದೊಡ್ಡ ನಗರಗಳಲ್ಲಿ ಉರ್ದು ಭಾಷೆಯ ಜೀವನಾಡಿ ಇಂದಿಗೂ ಮಿಡಿಯುತ್ತದೆ. ಹಿಂದೂ ಮುಸ್ಲಿಮರಿಬ್ಬರೂ ಕೂಡಿ ಈ ಭಾಷೆ ಬೆಳೆಸಿದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉತ್ತರಪ್ರದೇಶದ ಕೊಡುಗೆ ಗಮನಾರ್ಹ. ಸ್ವತಂತ್ರ ಭಾರತದ ಅನೇಕ ನಾಯಕರು ಇಲ್ಲಿಂದ ಬಂದವರು. ಅಲಹಾಬಾದಿನ ನೆಹರೂ ಮನೆತನದ ಆನಂದಭವನವೀಗ ರಾಷ್ಟ್ರದ ಸ್ವತ್ತು.

1951ರಲ್ಲಿ ಜಾರಿಗೆ ಬಂದ ಜಮೀನ್ದಾರಿ ರದ್ದು ಕಾಯಿದೆ ಇಲ್ಲಿನ ಆಧುನಿಕ ಸಾಮಾಜಿಕ ಇತಿಹಾಸದಲ್ಲಿ ಒಂದು ಮುಖ್ಯ ಘಟ್ಟ. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಿರ್ಮಿಸಲಾಗಿರುವ ಕಟ್ಟೆಗಳು ಮಿರ್ಝಾಪುರ, ವಾರಾಣಸಿ, ಬುಂದೇಲ್‌ಖಂಡಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ದೊಡ್ಡ ಕಾಮಗಾರಿಗಳು. 1959ರಿಂದ ಸಹಕಾರ ಕ್ಷೇತ್ರದಲ್ಲೂ ಈ ರಾಜ್ಯ ಸಾಕಷ್ಟು ಮುನ್ನಡೆ ಸಾಧಿಸಿದೆ. 1960ರಲ್ಲಿ ರುದ್ರಪುರದಲ್ಲೊಂದು ವ್ಯವಸಾಯ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಬನಾರಸ್ ಅಲೀಗಢಗಳಲ್ಲದೆ ಅಲಹಾಬಾದ್, ಆಗ್ರ, ಲಖನೌಗಳಲ್ಲೂ ವಿಶ್ವವಿದ್ಯಾಲಯಗಳು ಬೆಳೆದಿವೆ.

ಚೀನ–ಭಾರತ ಗಡಿ ಘರ್ಷಣೆಗೆ ಉತ್ತರ ಪ್ರದೇಶಕ್ಕೂ ಟಿಬೆಟ್ಟಿಗೂ ನಡುವೆ ಇರುವ ಗಡಿಗೆರೆಯೇ ನಿಮಿತ್ತ. ಹಿಮಾಲಯ ಪ್ರದೇಶದಲ್ಲಿ ಭಾರತಕ್ಕೆ ಸೇರಿದ ಬಾರಾಹೋತಿ ಹಳ್ಳಿಯ ಸ್ವಾಮ್ಯದ ಬಗ್ಗೆ ಚೀನದ ಕಲಹ ಆರಂಭವಾಯಿತು. ತೆಹರೀಘರ್‌ವಾಲಿನ ಕೆಲವು ಭಾಗಗಳು ತನಗೆ ಸೇರಿದವೆಂದು ಚೀನದ ವಾದ. ಚೀನದ ಭೂಪಟಗಳಲ್ಲಿ ಈ ಭಾಗಗಳನ್ನು ಅದು ತನ್ನ ಸೀಮೆಯೊಳಗೆ ತೋರಿಸಿಕೊಂಡಿದೆ. ಈಗ ಈ ಭಾಗಗಳು ಉತ್ತರಾಂಚಲ ರಾಜ್ಯಕ್ಕೆ ಸೇರಿವೆ.

*

**ಉತ್ತರ ಪ್ರದೇಶದ ಪ್ರಾಗಿತಿಹಾಸ:** ರಾಜ್ಯದ ದಕ್ಷಿಣ ಭಾಗದಲ್ಲಿ ವಿಶಾಲ ಬಯಲೂ ಅದರ ಅಂಚಿನಲ್ಲಿ ಪುರಾತನ ಯುಗಕ್ಕೆ ಸೇರಿದ ಶಿಲಾಪದರಗಳನ್ನೊಳಗೊಂಡ ಬೆಟ್ಟಗಳ ಸಾಲೂ ಇರುವ ಪ್ರದೇಶದಲ್ಲಿ ಪ್ರಾಚೀನ ಶಿಲಾಯುಗಕ್ಕೆ ಸೇರಿದ ಕೆಲವು ಆಯುಧಗಳನ್ನು ಮೊಟ್ಟಮೊದಲಿಗೆ (1883) ಸಂಗ್ರಹಿಸಿದವ ಕಾಕ್ ಬರ್ನ್. 1949ರಲ್ಲಿ ಝಾಯಿನರ್ ಮತ್ತು ಕೃಷ್ಣಸ್ವಾಮಿ ಈ ಪ್ರದೇಶದ ಸಿಂಗ್ರಾಲಿ ನದಿ ಕಣಿವೆಯನ್ನು ಶೋಧಿಸಿದಾಗ ಅತ್ಯಂತ ನೂತನ (ಪ್ಲಿಸ್ಟೋಸೀನ್) ಯುಗಕ್ಕೆ ಸೇರಿದ ಅವಶೇಷಗಳನ್ನೊಳಗೊಂಡ ಎರಡು ಪದರಗಳು ರಿಹಾಂದ್ ಮತ್ತು ಬೀಚಿನಾಲ ನದೀತೀರಗಳಲ್ಲಿ ಕಂಡುಬಂದವು. ಕಂಕರ್ ಇಲ್ಲವೆ ಸುಣ್ಣಶಿಲೆ ಪದರಗಳಿರುವ ಈ ಪ್ರದೇಶಗಳ ಪೈಕಿ ಮೊದಲನೆಯದರಲ್ಲಿ ಸಿಕ್ಕಿರುವ ವಸ್ತುಗಳಲ್ಲಿ ಒರಟು ಉಂಡೆಕಲ್ಲಿನ ಕೈಕೊಡಲಿಗಳೂ ಚಕ್ಕೆಕಲ್ಲುಗಳ ಸುಧಾರಿತ ಕೈಕೊಡಲಿಗಳೂ ಮೊಂಡು ಹಿಡಿಯ ಉದ್ದಲಗಿನ ಚೂರಿಗಳೂ (ಕ್ಲೀವರ್) ಮಚ್ಚುಗತ್ತಿಗಳೂ ಚಕ್ಕೆ ಕಲ್ಲಿನಾಯುಧಗಳೂ ಇವೆ. ವಿವಿಧ ಕಾಲದ ಪದ್ಧತಿಗಳ ಆಯುಧಗಳು ಒಟ್ಟಾಗಿ ಇಲ್ಲಿ ದೊರಕಿರುವುದರಿಂದ ಇಲ್ಲಿನದನ್ನು ಮಿಶ್ರಸಂಸ್ಕೃತಿಯೆಂದು ಪರಿಗಣಿಸಬಹುದು. ಪೂರ್ವಶಿಲಾಯುಗಕ್ಕೆ ಸೇರಿದ ಅವಶೇಷಗಳು ಈಚೆಗೆ ಬಂಡ, ಝೂನ್ಸಿ, ಡೆಹರಾಡೂನ್, ಅಲಹಾಬಾದ್, ಮಿರ್ಝಾಪುರ, ಮತ್ತು ವಾರಾಣಸಿ ಜಿಲ್ಲೆಗಳ ಹಲವೆಡೆಗಳಲ್ಲಿ ದೊರಕಿವೆ. ಝೂನ್ಸಿ ಜಿಲ್ಲೆಯ ಲಲಿತಪುರ ಮತ್ತು ದೇವಗಢ ನೆಲೆಗಳಲ್ಲಿ ಈ ಆಯುಧಗಳ ತಯಾರಿಕಾ ಕೇಂದ್ರಗಳ ಪತ್ತೆಯಾಗಿರುವುದರಿಂದ ಇವುಗಳ ತಯಾರಿಕೆಯ ವಿಧಾನಗಳನ್ನು ಅಭ್ಯಾಸ ಮಾಡಲು ಅಗತ್ಯವಾದ ಮಾಹಿತಿಗಳು ದೊರಕಿದಂತಾಗಿದೆ. ಯಮುನಾ ತೀರದ ಬಂಡ ಜಿಲ್ಲೆಯ ಬರಿಯಾರಿಯಲ್ಲೂ ಆ ಕಾಲಕ್ಕೆ ಸೇರಿದ ಕೈಕೊಡಲಿಗಳೂ ಮೊಂಡು ಹಿಡಿಯ ಉದ್ದಲಗಿನ ಚೂರಿಗಳೂ ನಿಮ್ನಪುರಾಶಿಲಾಯುಗದಲ್ಲಿದ್ದ (ಕ್ಲಾಕ್ಟೋನಿಯನ್) ರೀತಿಯ ಕಲ್ಲುಚಕ್ಕೆಗಳೂ ಹೇರಳವಾಗಿ ದೊರಕಿರುವುದರಿಂದ ಈ ಪ್ರದೇಶ ಪೂರ್ವಶಿಲಾಯುಗದ ಸಂಸ್ಕೃತಿಯ ಮುಖ್ಯ ಕೇಂದ್ರಗಳಲ್ಲೊಂದಾಗಿತ್ತೆಂಬುದು ಖಚಿತವಾಗಿದೆಯಷ್ಟೇ ಅಲ್ಲ; ಇಲ್ಲಿನ ವಿವಿಧ ನದೀಪದರಗಳಲ್ಲಿ ದೊರಕಿರುವ ಮಧ್ಯಶಿಲಾಯುಗದ ಕೊನೆಯ ಹಾಗೂ ಅಂತ್ಯ ಶಿಲಾಯುಗಕ್ಕೆ ಸೇರಿದ ಆಯುಧಗಳು ನಾನಾ ಶಿಲಾಯುಗ ಸಂಸ್ಕೃತಿಗಳ ಪರಸ್ಪರ ಸಂಬಂಧಗಳನ್ನರಿಯಲು ಸಹಾಯಕ. ಡೆಹರಾಡೂನ್, ಸೇರಿದಂತೆ ಕೆಲವು ಜಿಲ್ಲೆಗಳು ಈಗ ಉತ್ತರಾಂಚಲ ರಾಜ್ಯಕ್ಕೆ ಸೇರಿವೆ.

ಮಧ್ಯಶಿಲಾಯುಗದ ಅವಶೇಷಗಳು ಬರಿಯಾರಿಯ ಬಳಿಯಲ್ಲೂ ಬಂಡಜಿಲ್ಲೆಯ ಇತರೆಡೆಗಳಲ್ಲೂ ಅಲಹಾಬಾದ್, ಝೂನ್ಸಿ, ಮಿರ್ಜಾಪುರ ಮತ್ತು ವಾರಾಣಸಿ ಜಿಲ್ಲೆಗಳ ಹಲವೆಡೆಗಳಲ್ಲೂ ದೊರಕಿವೆ. ಆದರೂ ಈ ನೆಲೆಗಳಲ್ಲಿ ದೊರಕಿರುವ ಅವಶೇಷಗಳನ್ನು ಪರೀಕ್ಷಿಸಿ ಹೆಚ್ಚಿನ ಮಾಹಿತಿಗಳನ್ನು ಇನ್ನೂ ಪಡೆಯಬೇಕಾಗಿದೆ.

19ನೆಯ ಶತಮಾನದ ಅಂತ್ಯಭಾಗದಿಂದ ಅನೇಕ ಪ್ರಾಚೀನ ಸಂಶೋಧಕರು ಸೂಕ್ಷ್ಮಶಿಲಾಯುಧಗಳನ್ನು ಸಂಗ್ರಹಿಸಿದ್ದರಾದರೂ ಇವುಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ವಿಷಯಗಳೇನೂ ತಿಳಿದುಬಂದಿರಲಿಲ್ಲ. 20ನೆಯ ಶತಮಾನದ ಆರು ಏಳನೆಯ ದಶಕಗಳಲ್ಲಿ ಇತರ ಕೆಲವು ಪ್ರದೇಶಗಳಲ್ಲೂ ಬೆಟ್ಟಗಳ ಗುಹೆಗಳು ಮುಂತಾದ ಎಡೆಗಳಲ್ಲೂ ಹೆಚ್ಚು ಸಂಖ್ಯೆಯಲ್ಲಿ ಸೂಕ್ಷ್ಮ ಶಿಲಾಯುಧಗಳನ್ನು ಸಂಗ್ರಹಿಸಲಾಗಿದೆ. ಕೆಲವು ನೆಲೆಗಳಲ್ಲಿ ಅವು ಇತಿಹಾಸ ಕಾಲದ ಅವಶೇಷಗಳೊಡನೆ ಮಿಳಿತವಾಗಿರುವುದು ಗಮನಾರ್ಹ. ಆದರೆ ಕೆಲವೆಡೆಗಳಲ್ಲಿನ ಸೂಕ್ಷ್ಮ ಶಿಲಾಯುಧ ಸಂಸ್ಕೃತಿ ಬಹಳ ಪ್ರಾಚೀನವಾದದ್ದೆಂಬುದೂ ಪ್ರ.ಶ.ಪೂ. 5,000ದ ಸಮಯಕ್ಕೆ ಸೇರಿದ್ದೆಂಬುದೂ ನಿಸ್ಸಂದೇಹ. ಈ ಸಂಸ್ಕೃತಿಯ ಕಾಲದಲ್ಲಿ ಗುಹೆಗಳ ಗೋಡೆಗಳ ಮೇಲೆ ವರ್ಣಚಿತ್ರಗಳನ್ನು ರೂಪಿಸುತ್ತಿದ್ದದ್ದು ಲೇಖಾನಿಯ ಹಾಗೂ ಬಸೌಲಿಯಲ್ಲಿನ ಗುಹೆಗಳಲ್ಲಿ ವ್ಯಕ್ತವಾಗಿದೆ. ಮಿರ್ಜಾಪುರ ಜಿಲ್ಲೆಯ ನೆಲೆಗಳಲ್ಲಿ ವಾಸಿಸುತ್ತಿದ್ದ ಆ ಕಾಲದ ಜನಕ್ಕೆ ಬೇಟೆಯೇ ಜೀವನೋಪಾಯ. ಅವರ ಕಾಲಕ್ಕೆ ಸಂಬಂಧಿಸಿದಂತೆ ಮಾನವನ ಮತ್ತು ಹಂದಿಯ ಚಿತ್ರಗಳು ಸಿಕ್ಕಿವೆ. ಮಿರ್ಜಾಪುರ ಜಿಲ್ಲೆಯ ರಾಬರ್ಟ್ಸ್‌ಗಂಜ್ ಮತ್ತು ದಘೋಬಿಗಳಲ್ಲೂ ಬಂಡ ಜಿಲ್ಲೆಯ ಸಿದ್ಧಾಪುರದಲ್ಲೂ ಗಾಜೀಪುರ, ಬಸ್ತಿ, ಅಲಹಾಬಾದ್ ಮತ್ತು ವಾರಾಣಸಿ ಜಿಲ್ಲೆಗಳ ಹಲವೆಡೆಗಳಲ್ಲೂ ಈ ಸಂಸ್ಕೃತಿಯ ಅವಶೇಷಗಳನ್ನು ಕಾಣಬಹುದು.

ಬಂಡ ಜಿಲ್ಲೆಯ ಬರಿಯಾರಿಯಲ್ಲಿ ಈ ಸಂಸ್ಕೃತಿಗೆ ಸೇರಿದ ಚಕ್ಕೆಕಲ್ಲಿನ ಚಾಕುಗಳೂ ಒರೆಯುವ ಕೊರೆಯುವ ಆಯುಧಗಳೂ ದೊರಕಿವೆ.

ಬಂಡ ಜಿಲ್ಲೆಯ ಖೋ, ಅಗರ್ಹುಂಡ, ಮರ್ಝಾದ್‌ಪುರ ಮತ್ತು ಚಕೊಂಡ್‌ಗಳಲ್ಲೂ ಕಾನ್ಪುರ ಜಿಲ್ಲೆಯ ಮೂನ ನಗರದಲ್ಲೂ ಝೂನ್ಸಿ ಜಿಲ್ಲೆಯ ಹಲವೆಡೆಗಳಲ್ಲೂ ನವಶಿಲಾಯುಗ ಸಂಸ್ಕೃತಿಯ ಅವಶೇಷಗಳಿವೆ. ಇದೇ ಕಾಲದ್ದೋ ಇನ್ನೂ ಸ್ವಲ್ಪ ಮುಂಚಿನದೋ ಎನ್ನಬಹುದಾದ ಹರಪ್ಪ ಸಂಸ್ಕೃತಿಯ ಅವಶೇಷಗಳೂ ಹಲವೆಡೆಗಳಲ್ಲಿ ಕಂಡುಬಂದಿವೆ. ಅಲಹಾಬಾದ್ ಬಳಿಯ ಕೌಶಾಂಬಿ, ಮುಝಫರ್ ನಗರ ಮತ್ತು ಸಹಾರನ್‌ಪುರ ಜಿಲ್ಲೆಯ ಅಂಬಾಖೇರಿ, ಬುಲಂದ್‌ಶಹರ್ ಜಿಲ್ಲೆಯ ಗುಲಿಸ್ತಾನ್‌ಪುರ ಮುಂತಾದೆಡೆಗಳ ಈ ಸಂಸ್ಕೃತಿಯು ಅಂತ್ಯಕಾಲದ್ದೆಂದು ಹೇಳಬಹುದಾದ ಮಾಹಿತಿಗಳು ದೊರಕಿದ್ದರೂ ಈ ಪ್ರದೇಶದಲ್ಲೂ ಹರಪ್ಪ ಸಂಸ್ಕೃತಿ ನೆಲೆಸಿತ್ತೆಂಬ ಅಂಶ ಖಚಿತವಾದದ್ದು ಮೀರತ್ ಜಿಲ್ಲೆಯ ಅಲಂಗೀರ್‌ಪುರದ ಬಳಿ ಯಮುನಾ ದಂಡೆಯಲ್ಲಿ ನಡೆಸಿದ ಉತ್ಖನನಗಳಿಂದ. ಪ್ರಾಯಶಃ ಆರ್ಯಭಾಷೆಗಳನ್ನು ಬಳಸುತ್ತಿದ್ದ ಜನರ ಸಂಸ್ಕೃತಿಯ ಅವಶೇಷಗಳೆಂದು ಹೇಳಲಾಗಿರುವ, ವರ್ಣಚಿತ್ರಿತವಾದ ಬೂದುಬಣ್ಣದ ಮಡಕೆಬಳಕೆಯ ಸಂಸ್ಕೃತಿಯೊಂದರ ಮಾಹಿತಿಗಳು ಅನಂತರ ಅನೇಕ ಕಡೆಗಳಲ್ಲಿ ಕಂಡುಬಂದವು. ಈ ಸಂಸ್ಕೃತಿಯ ಅವಶೇಷಗಳು ಉತ್ತರ ಪ್ರದೇಶದಲ್ಲಿ ವ್ಯಾಪಕವಾಗಿವೆಯೆನ್ನಬಹುದು. ಮಹಾಭಾರತ ಕಾಲದ ನಗರಗಳಾಗಿದ್ದ ಅಹಿಚ್ಛತ್ರ, ಹಸ್ತಿನಾಪುರ, ಶ್ರಾವಸ್ತಿ, ಕನೂಜ್, ಕೌಶಾಂಬಿ, ಮಥುರಾಗಳಲ್ಲೂ ಅಲಂಗೀರ್‌ಪುರ, ಸೊಹಗೌರ, ರಾಜಘಾಟ್ ಮುಂತಾದ ಇತರ ನೆಲೆಗಳಲ್ಲೂ ಈ ಅವಶೇಷಗಳು ಧಾರಾಳವಾಗಿವೆ. ಹರಪ್ಪ ಸಂಸ್ಕೃತಿ ಅಳಿದ ಕೆಲಕಾಲಾನಂತರ ರೂಢಿಗೆ ಬಂದಿರಬಹುದಾದ ಈ ಸಂಸ್ಕೃತಿಯ ಕಾಲದಲ್ಲಿ ತಾಮ್ರದ ಆಯುಧೋಪಕರಣಗಳನ್ನೂ ಬೂದು ಮತ್ತು ಕಂದುಬಣ್ಣದ ವರ್ಣಚಿತ್ರಿತ ಮಡಕೆಗಳನ್ನೂ ಬಳಸುತ್ತಿದ್ದರು. ಆಗ ವ್ಯವಸಾಯ ಜನರ ಮುಖ್ಯ ಕಸಬು. ಮಣ್ಣಿನ ಅಥವಾ ತಡಿಕೆಯ ಗೋಡೆಗಳ ಮನೆಗಳಲ್ಲಿ ಇವರ ವಾಸ. ಅಕ್ಕಿಯೂ ದನ ಹಂದಿ ಜಿಂಕೆಗಳ ಮಾಂಸವೂ ಇವರ ಆಹಾರ. ಇವರು ಕುದುರೆ ಪಳಗಿಸಿಕೊಂಡಿದ್ದರು. ಈ ಸಂಸ್ಕೃತಿಯ ಕೊನೆಯ ಘಟ್ಟದಲ್ಲಿ ಕಬ್ಬಿಣವೂ ಬಳಕೆಗೆ ಬಂದಿತ್ತು.

ಇದರ ಅನಂತರ ಕಬ್ಬಿಣ ಯುಗ ಸಂಸ್ಕೃತಿಯ ಪ್ರಾರಂಭ. ಕಬ್ಬಿಣದ ಬಳಕೆ ಶೀಘ್ರವಾಗಿ ಪ್ರಚಾರಕ್ಕೆ ಬಂದದ್ದರಿಂದ ಜನರ ಆರ್ಥಿಕ ಸಾಮಾಜಿಕ ಅಭಿವೃದ್ಧಿ ಸಾಧ್ಯವಾಗಿ ಸಂಪತ್ತು ಬೆಳೆಯಿತು: ನಗರೀಕರಣವೂ ಸಂಭವಿಸಿತು. ಗಂಗಾನದಿಯ ಬಯಲಿನಲ್ಲಿ ಪ್ರಪ್ರಥಮ ರಾಜ್ಯಗಳು ಉದಯಿಸಿದ್ದೂ ಅಕ್ಷರಜ್ಞಾನ ಸಂಪನ್ನವಾದ ನಾಗರಿಕತೆ ಬೆಳೆದು ಮಹಾಜನಪದಗಳ ಕಾಲವೆಂದು ಪ್ರಸಿದ್ಧವಾಗಿರುವ ಚಾರಿತ್ರಿಕ ಯುಗದ ಮೊದಲ ಅಧ್ಯಾಯ ಪ್ರಾರಂಭವಾದದ್ದೂ ಆಗಲೇ. (ಬಿ.ಕೆ.ಜಿ.)

**ಉತ್ತರ ಪ್ರದೇಶದ ವಾಸ್ತುಶಿಲ್ಪ, ಶಾಸನಗಳು, ನಾಣ್ಯಗಳು:** ಈ ರಾಜ್ಯ ಬೌದ್ಧ, ಹಿಂದೂ ಮತ್ತು ಮಹಮದೀಯ ವಾಸ್ತುಶಿಲ್ಪ ಕೃತಿಗಳಿಗೆ ಹೆಸರಾದುದು. ಬುದ್ಧನ ಜೀವನಕ್ಕೆ ಸಂಬಂಧಿಸಿದ ಅನೇಕ ಸ್ಥಳಗಳು ಇಲ್ಲಿವೆ. ಬಸ್ತಿ ಜಿಲ್ಲೆಯ ಪಿಪ್ರಾವ ಎಂಬಲ್ಲಿ ಅಶೋಕನ ಕಾಲಕ್ಕಿಂತಲೂ ಹಿಂದಿನದೆಂದು ಹೇಳಬಹುದಾದ ಇಟ್ಟಿಗೆಯ ಸ್ತೂಪ ದೊರಕಿದೆ. ಇಲ್ಲಿನ ಕರಂಡಾವಶೇಷ ಒಂದರಲ್ಲಿ ಶಾಸನವೊಂದಿದೆ. ಕೌಶಾಂಬಿಯಲ್ಲಿ ನಡೆದ ಭೂಶೋಧನೆಗಳಿಂದ ಬುದ್ಧನ ನಿಕಟಸಂಪರ್ಕ ಹೊಂದಿದ್ದ ಘೋಷಿತಾರಾಮ ವಿಹಾರ ಬೆಳಕಿಗೆ ಬಂದಿದೆ. ಸಹೇತ್–ಮಹೇತ್ (ಶ್ರಾವಸ್ತಿ) ಗಳಲ್ಲಿ ಜೇತವನ ವಿಹಾರ, ಅನೇಕ ಸ್ತೂಪಗಳು ಮೊದಲಾದುವು

ಗಳ ಅವಶೇಷಗಳು ದೊರಕಿವೆ. ಮಹೇತ್‌ನಲ್ಲಿ ಮುನ್ನೂರಕ್ಕೂ ಹೆಚ್ಚು ಜೇಡಿಮಣ್ಣಿನ ಫಲಕಗಳು ಸಿಕ್ಕಿವೆ. ಇವುಗಳ ಮೇಲೆ ರಾಮಾಯಣದ ವಿವಿಧ ಕಥೆಗಳು ಚಿತ್ರಿತವಾಗಿವೆ. ಇವು ಗುಪ್ತರ ಕಾಲದವು. ಅಲಹಾಬಾದ್ ಜಿಲ್ಲೆಯ ಭೀಟಾ ಎಂಬಲ್ಲಿ ಮೌರ್ಯರ ಕಾಲಕ್ಕಿಂತಲೂ ಹಿಂದಿನವೆಂದು ಹೇಳಬಹುದಾದ ಇಟ್ಟಿಗೆಯ ಕಟ್ಟಡಗಳು ದೊರಕಿವೆ. ವಾರಾಣಸಿ ನಗರಕ್ಕೆ ಸೇರಿಕೊಂಡಂತೆ ಇರುವ ರಾಜಘಾಟ್ ಎಂಬಲ್ಲಿ ಇಟ್ಟಿಗೆಯ ಕಟ್ಟಡಗಳೂ ದೇವಾಲಯಗಳ ಅವಶೇಷಗಳೂ ದೊರಕಿವೆ. ಇವು ವಿವಿಧ ಕಾಲಕ್ಕೆ ಸೇರಿದವು. ಇವೆಲ್ಲಕ್ಕಿಂತ ಹೆಚ್ಚು ಪ್ರಸಿದ್ಧವಾಗಿರುವ ಸಾರಾನಾಥ ವಾರಾಣಾಸಿಗೆ ಬಹು ಸಮೀಪದಲ್ಲಿದೆ. ಇದು ಬುದ್ಧದೇವ ಧರ್ಮಬೋಧೆಯನ್ನು ಪ್ರಾರಂಭಿಸಿದ ಸ್ಥಳ. ಇಲ್ಲಿನ ಧರ್ಮರಾಜಿಕ ಸ್ತೂಪ ಅಶೋಕನಿಂದ ನಿರ್ಮಿತವಾದದ್ದೆಂದು ಹೇಳಬಹುದು. ಮೌರ್ಯರ ಕಾಲದ ಶಾಸನವುಳ್ಳ, ಮತ್ತು ಹೊಳಪುಳ್ಳ ಕಲ್ಲಿನ ಹರ್ಮ್ಯಕದ ಅವಶೇಷಗಳು, ಸಿಂಹದ ಶಿಲ್ಪವಿರುವ ಸ್ತಂಭದ ಶಿರೋಭಾಗ-ಇವುಗಳು ಈ ಸ್ತೂಪದ ಸಮೀಪದಲ್ಲಿಯೇ ದೊರಕಿವೆ. 93' ಅಡ್ಡ ಮತ್ತು 143' ಎತ್ತರದ ಧಮೇಕ್ ಸ್ತೂಪ ಗುಪ್ತರ ಕಾಲಕ್ಕೆ ಸೇರಿದ್ದು. ಇದು ಕಲ್ಲು ಮತ್ತು ಇಟ್ಟಿಗೆಗಳಿಂದಾದದ್ದು. ಹುಯೆನ್‌ತ್ಸಾಂಗನ ಕಾಲದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿದ್ದ ಮೂಲಗಂಧಕುಟೀರ ಮತ್ತು ಇತರ ವಿಹಾರಗಳೂ ಸ್ತೂಪಗಳೂ ದೊರಕಿವೆ. ಮೌರ್ಯರ ಕಾಲದಿಂದ ಗುಪ್ತರ ಕಾಲದವರೆಗಿನ ಶಿಲ್ಪಗಳು ಸಾರಾನಾಥದಲ್ಲಿ ದೊರಕಿವೆ. ಬುದ್ಧ ಧರ್ಮಬೋಧೆ ಮಾಡುತ್ತಿರುವುದು, ಸಿಂಹಗಳ ಶಿಲ್ಪವಿರುವ ಅಶೋಕ ಸ್ತಂಭದ ಶಿರೋಭಾಗಗಳು ಬಹು ಪ್ರಖ್ಯಾತವಾಗಿವೆ. ಸಾರಾನಾಥದಲ್ಲಿರುವ ಪುರಾತತ್ತ್ವ ವಸ್ತುಸಂಗ್ರಹಾಲಯದಲ್ಲಿ ಗಮನಾರ್ಹವಾದ ಶಿಲ್ಪಗಳಿವೆ.

ಭೀತರ್‌ಗಾಂವ್‌ನಲ್ಲಿರುವ ಇಟ್ಟಿಗೆಯ ದೇವಾಲಯ ಗುಪ್ತರ ಕಾಲಕ್ಕೆ ಸೇರಿದುದು. ಇದು ಈಗ ಬಹುಪಾಲು ಹಾಳಾಗಿಹೋಗಿದ್ದರೂ ಆ ಕಾಲದ ಶಿಖರವಿನ್ಯಾಸಕ್ಕೆ ಇದೊಂದು ಉತ್ತಮ ನಿದರ್ಶನವಾಗಿ ಉಳಿದಿದೆ. ಆದ್ದರಿಂದ ಇದಕ್ಕೆ ವಿಶಿಷ್ಟ ಸ್ಥಾನವಿದೆ.

ಭಾರತೀಯ ಶಿಲ್ಪದಲ್ಲಿ ಮಥುರಾ ಬಹು ಪ್ರಾಮುಖ್ಯವಾದುದು. ಮಥುರಾದಲ್ಲಿ ಒಂದು ಶಿಲ್ಪಕಲೆಯ ಕೇಂದ್ರವೇ ಇತ್ತು. ಇಲ್ಲಿಂದ ಶ್ರಾವಸ್ತಿ, ಪ್ರಯಾಗ, ಸಾರಾನಾಥ ಮುಂತಾದ ಕಡೆಗಳಿಗೆ ಬುದ್ಧನ ಶಿಲ್ಪಗಳು ಹೋದುವು. ಕುಶಾನರ ಕಾಲದಿಂದ ಗುಪ್ತರ ಕಾಲದವರೆಗೆ ಉಚ್ಛ್ರಾಯಸ್ಥಿತಿಯಲ್ಲಿದ್ದ ಮಥುರಾ ಶಿಲ್ಪಶೈಲಿ ವಿಶೇಷವಾಗಿ ಭಾರತೀಯ ಸಂಪ್ರದಾಯಗಳನ್ನೇ ಅಳವಡಿಸಿಕೊಂಡಿತ್ತು. ಇದಕ್ಕೆ ವಿರುದ್ಧವಾದ ಗಾಂಧಾರಶೈಲಿಯಲ್ಲಿ ಹೊರದೇಶದ ಪ್ರಭಾವಗಳೇ ಹೆಚ್ಚಾಗಿದ್ದುವು. ಗುಪ್ತರ ಕಾಲದಲ್ಲಿ ಮಥುರಾ ಶೈಲಿ ಪರಿಪೂರ್ಣತೆಯನ್ನು ಪಡೆಯಿತು. ಮಥುರಾದ ಬುದ್ಧನ ಶಿಲ್ಪಗಳು ವಿಶ್ವವಿಖ್ಯಾತವಾಗಿವೆ.

ಮಥುರಾಕ್ಕೆ ಸಮೀಪದಲ್ಲಿರುವ ಬೃಂದಾವನದಲ್ಲಿ ಪ್ರಶ. 1590ರಲ್ಲಿ ಗೋವಿಂದದೇವ ನಿರ್ಮಿಸಿದ ದೇವಾಲಯವಿದೆ. ಇದೊಂದು ಬಹು ವಿಸ್ತಾರವಾದ ಕೆಂಪು ಕಲ್ಲಿನ ದೇವಾಲಯ. ಮಥುರಾದಲ್ಲಿರುದ ದ್ವಾರಕಾಧೀಶ ದೇವಾಲಯ 1814ರಲ್ಲಿ ನಿರ್ಮಿತವಾದದ್ದು. ಅಲ್ಲಿ ಕೆಲವು ಸಮಕಾಲೀನ ವರ್ಣಚಿತ್ರಗಳಿವೆ.

ಭಾರತೀಯರ ಧಾರ್ಮಿಕ ಜೀವನದಲ್ಲಿ ಉನ್ನತಸ್ಥಾನ ಪಡೆದಿರುವ ಕಾಶಿಯ ವಿಶ್ವೇಶ್ವರ ದೇವಾಲಯ ವಾಸ್ತುಶಿಲ್ಪದೃಷ್ಟಿಯಿಂದ ಅಷ್ಟೇನೂ ಮಹತ್ತರವಾದುದಲ್ಲ. ವಿಶ್ವೇಶ್ವರನ ದೇವಾಲಯ ಪ್ರಶ. 7ನೆಯ ಶತಮಾನದಲ್ಲಿಯೇ ಇತ್ತೆಂದು ಹ್ಯುಯೆನ್‌ತ್ಸಾಂಗನ ಬರವಣಿಗೆ ಯಿಂದ ತಿಳಿದರೂ ಮಹಮದೀಯರ ದಾಳಿಗಳಿಂದ ಅದು ನಾಶವಾಗಿ ಹೋಯಿತು. ಅಕ್ಬರನ ಕಾಲದಲ್ಲಿ ಅದು ಪುನರುದ್ಧಾರವಾದರೂ ಔರಂಗಜೇಬ ಅದನ್ನು ಪೂರ್ಣವಾಗಿ ನಾಶಗೊಳಿಸಿದ. ಕೊನೆಗೆ 1777ರಲ್ಲಿ ಅಹಲ್ಯಾಬಾಯಿಯ ದಾನದಿಂದಾಗಿ ಈಗಿರುವ ವಿಶ್ವೇಶ್ವರ ದೇವಾಲಯ ನಿರ್ಮಾಣವಾಯಿತು. ಇಲ್ಲಿಯ ಗರ್ಭಗೃಹ ಕೇವಲ 3ಮೀ ಗಳ ಚಚ್ಚೌಕವಾಗಿಯೂ ಶಿಖರ ಕೇವಲ 9ಮೀ ಎತ್ತರವಾಗಿಯೂ ಇವೆ. ರಣಜಿತ್‌ಸಿಂಗನ ಕಾಲದಲ್ಲಿ ದೇವಾಲಯದ ಶಿಖರಕ್ಕೆ ಚಿನ್ನದ ತಗಡುಗಳನ್ನು ಹಾಕಿಸಲಾಯಿತು. ಕಾಶಿಯಲ್ಲಿರುವ ಇತರ ದೇವಾಲಯಗಳೂ ಪ್ರಸಿದ್ಧವಾಗಿರುವ, ಹರಿದ್ವಾರ, ಹೃಷೀಕೇಶ, ಕೇದಾರನಾಥ ದೇವಾಲಯಗಳೂ ವಾಸ್ತುಶಿಲ್ಪದೃಷ್ಟಿಯಿಂದ ಗಮನಾರ್ಹವಾದುವೇನೂ ಅಲ್ಲ.

ಉತ್ತರ ಪ್ರದೇಶದ ಮುಸ್ಲಿಂ ವಾಸ್ತುಶಿಲ್ಪಗಳನ್ನು ಮುಖ್ಯವಾಗಿ ಫತೇಪುರ್ ಸಿಕ್ರಿ ಸಿಕಂದರ್ ಮತ್ತು ಆಗ್ರಗಳಲ್ಲಿ ಕಾಣುವೆವು. ಅಕ್ಬರನ ಕಾಲದಲ್ಲಿ ರಾಜಧಾನಿಯಾಗಿದ್ದ ಫತೇಪುರ್ ಸಿಕ್ರಿ ಈಗ ಹಾಳುಬಿದ್ದಿದ್ದರೂ ಮೊಗಲರ ಕಾಲದ ಕಟ್ಟಡಗಳು ಇಂದಿಗೂ ಅಚ್ಚಳಿಯದೆ ಇವೆ. ಜಾಮಿ ಮಸೀದಿ, ಬುಲಂದ್ ದರ್ವಾಜ, ಷೇಕ್ ಸಲೀಂ ಚಿಸ್ತಿಯ ಸಮಾಧಿ, ದಿವಾನ್-ಇ-ಖಾಸ್, ದಿವಾನ್-ಇ-ಆಮ್, ಜೋಧಬಾಯಿಯ ಅರಮನೆ, ಬೀರಬಲ್ಲನ ಮನೆ, ಪಂಚಮಹಲ್ ಮೊದಲಾದ ಅನೇಕ ಕಟ್ಟಡಗಳಿವೆ. ಇವೆಲ್ಲವೂ ವಿವಿಧ ವಾಸ್ತುಶೈಲಿಗಳಲ್ಲಿವೆ. ದಿವಾನ್-ಇ-ಖಾಸ್ ಒಂದು ವಿಶಿಷ್ಟರೂಪದ ಕಟ್ಟಡ. ಹೊರಗಡೆಯಿಂದ ಮಹಡಿಯನ್ನುಳ್ಳ ಕಟ್ಟಡದಂತೆ ಕಾಣುವ ಇದು ಅನೇಕ ಸ್ತಂಭಗಳಿಂದ ಕೂಡಿದೆ. ಪ್ರತಿಯೊಂದು ಕಂಬದಲ್ಲೂ ಉತ್ತಮ ಕೆತ್ತನೆಯ ಕೆಲಸವನ್ನು ಕಾಣಬಹುದು. ಒಳಗಿರುವ ವೃತ್ತಾಕಾರದ ಜಗಲಿಯ ಮೇಲೆ ಅಕ್ಬರ್ ಕುಳಿತುಕೊಂಡು ಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ. ಇದರ ಸಮೀಪದಲ್ಲಿ ಜ್ಯೋತಿಷಿಯ ಪೀಠ ಎಂದು ಪ್ರಸಿದ್ಧವಾಗಿರುವ ಕಟ್ಟಡ ಜೈನದೇವಾಲಯದ ಮಾದರಿಯಲ್ಲಿ ನಿರ್ಮಿತವಾಗಿದೆ. ಪಂಚಮಹಲ್ ಕಟ್ಟಡ ಪಿರಮಿಡ್ ಆಕಾರದ ಐದು ಅಂತಸ್ತುಗಳ ಸೌಧ. ಇದು ಬೌದ್ಧವಿಹಾರವನ್ನು ಹೋಲುತ್ತದೆ. ಈ ಕಟ್ಟಡದ ಒಳಭಾಗ ಉತ್ತಮ ಶಿಲ್ಪಗಳಿಂದ ಕೂಡಿದೆ. ಜೋಧಬಾಯಿಯ ಅರಮನೆಯಲ್ಲಿ ಹಿಂದೂ ಮತ್ತು ಮುಸ್ಲಿಂ ವಾಸ್ತುಶೈಲಿಗಳು ಮಿಳಿತವಾಗಿವೆ. ಇದೇ ರೀತಿಯಲ್ಲಿರುವ ಇನ್ನೊಂದು ಕಟ್ಟಡವೆಂದರೆ ಎರಡು ಅಂತಸ್ತಿನ ಬೀರಬಲನ ಮನೆ.

ಜಾಮಿ ಮಸೀದಿ ಫತೇಪುರ್ ಸಿಕ್ರಿಯ ಮನೋಹರ ಕಟ್ಟಡಗಳಲ್ಲೊಂದು. ಜನಗಳು ಸಭೆ ಸೇರುವ ಅವಕಾಶವುಳ್ಳ ಮಸೀದಿಗಳಲ್ಲಿ ಮೊಟ್ಟಮೊದಲನೆಯದಾಗಿ ನಿರ್ಮಿತವಾದ ಇದು ಮುಂದೆ ಮಾದರಿಯಾಗಿ ಪರಿಣಮಿಸಿತು. ಉತ್ತರದ ಪಕ್ಕದಲ್ಲಿಯೇ ಇರುವ ಸಾಧು ಷೇಕ್ ಸಲೀಂ ಚಿಸ್ತಿಯ ಗೋರಿ ಸಾತ್ತ್ವಿಕ ಪ್ರತೀಕಗಳೇ ಮೂರ್ತಿವೆತ್ತಂತೆ ಇದೆ. ಇದು ಅಮೃತಶಿಲೆಯ ಕಟ್ಟಡ. ಮಧ್ಯದಲ್ಲಿ ಒಂದು ವಿಶಾಲವಾದ ಗುಮ್ಮಟವೂ ಕೆಳಭಾಗದಲ್ಲಿ ಸುತ್ತಲೂ ಚಾವಣಿಯ ಎತ್ತರದಲ್ಲಿ ಹೊರಚಾಚಿರುವ ಚಜ್ಜವೂ ಈ ಕಟ್ಟಡಕ್ಕೆ ಒಂದು ಮನೋಹರತೆಯನ್ನು ತಂದುಕೊಟ್ಟಿವೆ. ಕಟ್ಟಡದ ಜಗಲಿಗಳು ಬಣ್ಣದ ಕಲ್ಲುಗಳಿಂದ ಮಾಡಲಾದ ಲತಾಲಂಕಾರಗಳಿಂದ ಕೂಡಿವೆ. ಇನ್ನೊಂದು ಪಕ್ಕದಲ್ಲಿರುವ ಬುಲಂದ್ ದರ್ವಾಜ ಕೆಂಪುಕಲ್ಲಿನಿಂದ ಕಟ್ಟಲಾದ ವಿಜಯದ್ವಾರ. ತನ್ನ ದಕ್ಷಿಣಾಪಥದ ವಿಜಯಗಳ ಜ್ಞಾಪಕಾರ್ಥವಾಗಿ ಅಕ್ಬರ್ ಇದನ್ನು ಕಟ್ಟಿಸಿದ. ಇದು 54ಮೀ. ಎತ್ತರದ ಕಟ್ಟಡ. ಮೆಟ್ಟಲಿನಿಂದ ಜಗತಿಯ ಮೇಲ್ಭಾಗದ ವರೆಗೆ 13ಮೀ. ಎತ್ತರವಿದೆ. ಇದು ಅಕ್ಬರನ ಶಕ್ತಿ, ಸಾಮರ್ಥ್ಯ ಮತ್ತು ವೈಭವಗಳ ಪ್ರತೀಕವಾಗಿದೆ. ತಾಜ್‌ಮಹಲಿನ ನಗರ ಎಂದು ಹೆಸರಾಗಿರುವ ಆಗ್ರ ನಗರ ಅಕ್ಬರನ ಕಾಲದಿಂದ ಪ್ರಾರಂಭವಾಗಿ ಷಾಜಹಾನನ ಕಟ್ಟಡಗಳಿಗೆ ಪ್ರಸಿದ್ಧ (**ನೋಡಿ- ಆಗ್ರ**). ಆಗ್ರಕ್ಕೆ ಸೇರಿಕೊಂಡಂತೆ ಇರುವ ಸಿಕಂದರದಲ್ಲಿರುವ ಅಕ್ಬರನ ಸಮಾಧಿ ಒಂದು ಉತ್ತಮ ಕಟ್ಟಡ. ಅಕ್ಬರನ ಕಾಲದಲ್ಲಿ ಯೋಜಿತವಾದ ಇದನ್ನು ಜಹಾಂಗೀರನ ಕಾಲದಲ್ಲಿ ಕಟ್ಟಲಾಯಿತು (1605-1613). ಇದರಲ್ಲಿ ಬೌದ್ಧವಿಹಾರಗಳ ಮತ್ತು ಕಾಂಬೋಡಿಯದ ವಾಸ್ತುಶಿಲ್ಪಗಳ ಪ್ರಭಾವ ಕಾಣಬಹುದು. ಲಖನೌ ನಗರದಲ್ಲಿ ಇರುವ ಕಟ್ಟಡಗಳಲ್ಲಿ ಛೋಟಾ ಇಮಾಮ್‌ಬಾರಾ, ಬಡಾ ಇಮಾಮ್‌ಬಾರಾ ಮತ್ತು ರೂಮಿ ದರ್ವಾಜಗಳು ಮುಖ್ಯವಾದುವು. ಇವು ನವಾಬನಾಗಿದ್ದ ಆಸಫ್-ಉದ್-ದೌಲನಿಂದ 1784ರಲ್ಲಿ ನಿರ್ಮಿತವಾದುವು. ಛೋಟಾ ಇಮಾಮ್‌ಬಾರಾದ ಗೋಡೆಯ ಒಳ ಭಾಗಗಳಲ್ಲಿ ಅರಬ್ಬೀ ಭಾಷೆಯಲ್ಲಿ ಬರೆದ ಪದ್ಯಗಳನ್ನು ಕೆತ್ತಿದೆ. ರೂಮಿ ದರ್ವಾಜ ಎತ್ತರದ ಗೋಪುರ. ನೋಡಲು ಬಹಳ ಸುಂದರವಾಗಿರುವ ಈ ಗೋಪುರದಲ್ಲಿ ಗಾರೆಯ ಕೆಲಸ ಬಹಳ ನಾಜೂಕಾಗಿದೆ.

ಅಲಹಾಬಾದಿನಲ್ಲಿ ಯಮುನಾನದಿಯ ತೀರದಲ್ಲಿರುವ ಅಕ್ಬರನ ಕಾಲದ ಕೋಟೆಯ ಕಟ್ಟಡಗಳು ಶಿಥಿಲವಾಗಿದ್ದರೂ ಕೆಲಭಾಗಗಳು ಹಾಗೆಯೇ ಉಳಿದುಕೊಂಡಿವೆ. ನಗರ ಮಧ್ಯದಲ್ಲಿ ಖುಸ್ರುಬಾಗ್ ಎಂದು ಪ್ರಸಿದ್ಧವಾಗಿರುವ ತೋಟದಲ್ಲಿ ಜಹಾಂಗೀರನ ಮಗನಾದ ಖುಸ್ರುವಿನ ಗೋರಿಯಿದೆ. ಎರಡು ಅಂತಸ್ತಿನ ಚಚ್ಚೌಕ ಕಟ್ಟಡದ ಮೇಲೆ ಎತ್ತರವಾದ ಗುಮ್ಮಟವಿದೆ. ಇದರ ಪಕ್ಕಗಳಲ್ಲಿ ಅವನ ತಾಯಿ ಮತ್ತು ತಂಗಿಯ ಗೋರಿಗಳೂ ಇವೆ. ಈ ರೀತಿ ಉತ್ತರ ಪ್ರದೇಶ ಹಿಂದೂ ಬೌದ್ಧ ಮತ್ತು ಮುಸ್ಲಿಂ ಶೈಲಿಗಳ ವಾಸ್ತುಶಿಲ್ಪಗಳ ಕಲಾಕೌಶಲ್ಯಕ್ಕೆ ಹೆಸರಾದ ಪ್ರಾಂತ್ಯ.

ಉತ್ತರ ಪ್ರದೇಶ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಗಳಲ್ಲಿ ಆಳಿದ ಉತ್ತರ ಭಾರತದ ಪ್ರಮುಖ ರಾಜ್ಯಗಳ ಭಾಗವಾಗಿತ್ತು. ಆದ್ದರಿಂದ ಇಲ್ಲಿ ಸಾಮಾನ್ಯವಾಗಿ ಆಳಿದ ಎಲ್ಲ ರಾಜಮನೆತನಗಳ ಶಾಸನಗಳೂ ದೊರಕಿವೆ. ಅವುಗಳಲ್ಲಿ ಮುಖ್ಯವಾದವನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಇಲ್ಲಿ ದೊರಕಿರುವ ಮುಖ್ಯ ಶಾಸನಗಳೆಂದರೆ ಅಶೋಕನ ಧರ್ಮಲಿಪಿಗಳು. ಇವಕ್ಕಿಂತಲೂ ಪ್ರಾಚೀನವಾದ ಶಾಸನ ಪಿಪ್ರಾವದ ಕರಂಡದ ಮೇಲಿದೆ. ಇದು ಅಶೋಕನ ಕಾಲಕ್ಕಿಂತಲೂ ಹಿಂದಿನದೆಂದು ಹೇಳಬಹುದು. ಮಿರ್ಜಾಪುರ ಜಿಲ್ಲೆಯ ಅಹ್ರೌರ ಎಂಬಲ್ಲಿ ಲಘು ಪ್ರಸ್ತರ ಲೇಖವೂ ಡೆಹರಾಡೂನ್ ಜಿಲ್ಲೆಯ ಕಲ್ಸಿ ಎಂಬಲ್ಲಿ ಪ್ರಸ್ತರಲೇಖವೂ ಅಲಹಾಬಾದ್ ಮತ್ತು ಸಾರಾನಾಥ್ ಮೀರತ್‌ಗಳಲ್ಲಿ ಸ್ತಂಭ ಶಾಸನಗಳೂ ದೊರಕಿವೆ. ಅಲಹಾಬಾದಿನ ಸ್ತಂಭಶಾಸನ ಮೊದಲು ಕೌಶಾಂಬಿಯಲ್ಲಿತ್ತು. ಉತ್ತರ ಪ್ರದೇಶದ ಸರಹದ್ದಿನಿಂದ ಬಹು ಸಮೀಪದಲ್ಲಿರುವ ರೂಮಿಂದೈ ಮತ್ತು ನಿಗ್ಲೀವ ಎಂಬಲ್ಲೂ ಅಶೋಕನ ಶಾಸನಗಳು ದೊರಕಿವೆ. ಅಶೋಕನ ಇಷ್ಟೊಂದು ಶಾಸನಗಳು ಉತ್ತರ ಪ್ರದೇಶದಲ್ಲಿ ದೊರಕಿರುವುದು ಗಮನಾರ್ಹವಾದುದು. ಅದು ಅವನ ರಾಜ್ಯದ ಮುಖ್ಯಭಾಗವಾಗಿತ್ತೆಂಬುದನ್ನು ಸೂಚಿಸುತ್ತದೆ. ಈ ಶಾಸನಗಳು ಆಶೋಕನ ಧರ್ಮ, ಮಹಾಮಾತ್ರರಿಗೆ ಆತ ಕೊಟ್ಟ ಆಜ್ಞೆಗಳು, ಬೌದ್ಧಧರ್ಮದ ಪಾಲನೆಗೆ ಅನುಸರಿಸಬೇಕಾದ ನಿಯಮಗಳು-ಮುಂತಾದುವನ್ನು ತಿಳಿಸುತ್ತವೆ. ಕಲ್ಸಿ ಎಂಬಲ್ಲಿ ಕಲ್ಲಿನ ಮೇಲೆ ಆನೆಯ ರೇಖಾಚಿತ್ರವೂ ಅದರ ಕೆಳಗೆ ಬ್ರಾಹ್ಮೀ ಲಿಪಿಯಲ್ಲಿ ಗಜತಮಃ (ಗಜೋತ್ತಮ) ಎಂಬ ಬರವಣಿಗೆಯೂ ಇದೆ. ಉತ್ತರ ಪ್ರದೇಶದಲ್ಲಿ ದೊರಕಿರುವ ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನ ಭಾರತದ ಅತಿಮುಖ್ಯ ಶಾಸನಗಳಲ್ಲೊಂದು. ಈ ಶಾಸನ ದೊರಕದೇ ಇದ್ದಿದ್ದರೆ ಸಮುದ್ರಗುಪ್ತನ ವಿಜಯಗಳ ವಿಚಾರವಾಗಿ ನಮಗೆ ಏನೂ ತಿಳಿಯುತ್ತಿರಲಿಲ್ಲ. ಈ ಶಾಸನದ ಕರ್ತೃ ಹರಿಷೇಣ. ಇದರ ಭಾಷೆ ಸಂಸ್ಕೃತ. ಲಿಪಿ ಬ್ರಾಹ್ಮೀ. ಇತರ ರಾಜಮನೆತನಗಳಾದ ಕುಶಾನರು, ಶುಂಗರು, ಪ್ರತೀಹಾರರು ಮತ್ತು ಮುಸ್ಲಿಂ ದೊರೆಗಳ ಶಾಸನಗಳೂ ಇಲ್ಲಿ ದೊರಕಿವೆ.

ಉತ್ತರ ಭಾರತದಲ್ಲಿ ಆಳಿದ ಅನೇಕ ರಾಜರ ನಾಣ್ಯಗಳು ಉತ್ತರ ಪ್ರದೇಶದಲ್ಲಿ ದೊರೆಕಿವೆ. ಪ್ರಶ.ಪೂ. 2ನೆಯ ಶತಮಾನದ ಮುದ್ರಾಂಕಿತ (ಪಂಚ್‌ಮಾರ್ಕ್ಡ್) ನಾಣ್ಯಗಳಿಂದ ಪ್ರಾರಂಭವಾಗಿ ಬ್ರಿಟಿಷರ ನಾಣ್ಯಗಳೂ ಇಲ್ಲಿ ದೊರಕಿವೆ. ಈ ನಾಣ್ಯಗಳನ್ನು ತಯಾರಿಸುವ

ಮಣ್ಣಿನ ಅಚ್ಚುಗಳು ಅಲಹಾಬಾದ್ ಜಿಲ್ಲೆಯ ಝೂನ್ಸಿ ಎಂಬಲ್ಲಿ ದೊರಕಿವೆ. ಅಹಿಚ್ಛತ್ರದಲ್ಲಿ ಪಾಂಚಾಲರಾಜರ ಪ್ರಶ.ಶ. ಒಂದನೆಯ ಶತಮಾನದ ನಾಣ್ಯಗಳು ದೊರಕಿವೆ. ಉತ್ತರ ಪ್ರದೇಶದ ಅನೇಕ ಕಡೆಗಳಲ್ಲಿ ಗುಪ್ತ ರಾಜರ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಸಿಕ್ಕಿವೆ. ಇಲ್ಲಿ ಕುಶಾನರ ನಾಣ್ಯಗಳೂ ದೊರಕಿವೆ. ಶಿವ ಮತ್ತು ಪಾರ್ವತಿಯರ ಚಿತ್ರವಿರುವ ಚಿನ್ನದ ನಾಣ್ಯವೊಂದು ಇಲ್ಲಿ ದೊರಕಿದೆ. ಇದು ಸ್ಥಾಣೇಶ್ವರದ ರಾಜನಾದ ಹರ್ಷವರ್ಧನನ ನಾಣ್ಯವಿರಬೇಕೆಂದು ಹೇಳಲಾಗಿದೆ. ಭರತಪುರದಲ್ಲಿ ಆಳಿದ ಶೂರಸೇನ ರಾಜರ ನಾಣ್ಯಗಳೂ ದೊರಕಿವೆ. ಇಂಡೋ ಸಸ್ಸಾನಿಯನ್ ನಾಣ್ಯಗಳೂ, ಶ್ರೀ ವಿಗ್ರ ಎಂಬ ಶಾಸನವುಳ್ಳ ನಾಣ್ಯಗಳೂ ಉತ್ತರಪ್ರದೇಶದಲ್ಲಿ ವಿಶೇಷವಾಗಿ ದೊರಕಿವೆ. ಮುಸ್ಲಿಂ ದೊರೆಗಳ ನಾಣ್ಯಗಳು ಹೇರಳವಾಗಿ ಅನೇಕ ಕಡೆಗಳಲ್ಲಿ ಸಿಕ್ಕಿವೆ. ಷೇರ್‌ಷಹನ ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ಆಗ್ರದಲ್ಲಿದ್ದ ಟಂಕಸಾಲೆಯಲ್ಲಿ ಮುದ್ರಿತವಾದವು. ಅಕ್ಬರನ ಕಾಲದಲ್ಲೂ ಆಗ್ರ ಟಂಕಸಾಲೆಯಾಗಿ ಮುಂದುವರಿಯಿತು. ಅನಂತರ ಜಹಾಂಗೀರ್ ಮತ್ತು ಔರಂಗಜೇಬರು ಆಗ್ರದಿಂದ ನಾಣ್ಯಗಳನ್ನು ಮುದ್ರಿಸಿದರು. ಅವಧ (ಔಧ್) ಸಂಸ್ಥಾನದ ನಾಣ್ಯಗಳು ಅಲ್ಲಲ್ಲಿ ಸಿಕ್ಕಿವೆ. ಈಸ್ಟ್ ಇಂಡಿಯ ಕಂಪನಿಯ ಕಾಲದಲ್ಲಿ ಬನಾರಸ್ ನಗರದಲ್ಲಿ ಟಂಕಸಾಲೆಯಿತ್ತು. ಜೈತ್‌ಸಿಂಗನ ಆಳ್ವಿಕೆಗೆ ಈ ಟಂಕಸಾಲೆ ಸೇರಿಸಲ್ಪಟ್ಟಿತು. ಅಲಹಾಬಾದ್‌ನಲ್ಲಿ ಬ್ರಿಟಿಷರು ತಾತ್ಕಾಲಿಕವಾಗಿ ಒಂದು ಟಂಕಸಾಲೆಯನ್ನು ಸ್ಥಾಪಿಸಿದರು. ಈ ಟಂಕಸಾಲೆಗಳಲ್ಲಿ ಮುದ್ರಿತವಾದ ನಾಣ್ಯಗಳು ಉತ್ತರ ಪ್ರದೇಶದಲ್ಲೆಲ್ಲ ವಿಶೇಷವಾಗಿ ದೊರೆತಿವೆ. (ಎ.ವಿ.ಎನ್.)

**ಉತ್ತರ ಫಲ್ಗುನೀ:** ಚಂದ್ರಪತ್ನಿಯರಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಅಶ್ವಿನ್ಯಾದಿ ಗಣನಾಕ್ರಮದಲ್ಲಿ ಹನ್ನೆರಡನೆಯ ನಕ್ಷತ್ರ. ಇದರಲ್ಲಿ ಹಾಸಿಗೆಯ ಆಕಾರವನ್ನು ನೆನಪಿಗೆ ತರುವ ಎರಡು ತಾರೆಗಳಿವೆ. ಈ ತಾರೆಗಳ ಬಣ್ಣ ಸ್ವಲ್ಪ ಕೆಂಪು. ನಾಮಾಕ್ಷರಗಳು ಟೆ.ಟೋ.ಪ.ಪಿ. ಇದರಲ್ಲಿ ಹದಿನೆಂಟು ಗಳಿಗೆ ಮೇಲೆ ನಾಲ್ಕು ಗಳಿಗೆಗಳ ಕಾಲ ಶುಭಕಾರ್ಯಗಳಿಗೆ ತ್ಯಾಜ್ಯಕಾಲ. ಕ್ಷತ್ರಿಯ ಜಾತಿವಿಭಾಗಕ್ಕೆ ಸೇರಿದೆ. ಗೋ ಯೋನಿ ಉಳ್ಳದ್ದು. ಈ ನಕ್ಷತ್ರ ಇರುವ ದಿವಸ ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಿಗೆ ಪ್ರಯಾಣ ಮಾಡಬಹುದು. ಕಮಲಧಾರಿಯಾದ ಪದ್ಮವರ್ಣದ ಅರ್ಯಮನ್ ಇದಕ್ಕೆ ದೇವತೆ. ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ಸೂರ್ಯದೆಶೆ ಪ್ರಾರಂಭವಾಗುತ್ತದೆ. ಮದುವೆ ಮುಂಜಿ ಮುಂತಾದ ಎಲ್ಲ ಮಂಗಳಕಾರ್ಯಗಳನ್ನೂ ಮಾಡಲು ಇದು ಪ್ರಶಸ್ತವಾದ ನಕ್ಷತ್ರ. ಇದು ಇರುವ ಕಾಲದಲ್ಲಿ ಮರಣವಾದರೆ ಪ್ರಾಣ ಹೋದ ಜಾಗವನ್ನು ಮೂರು ತಿಂಗಳ ಕಾಲ ಯಾವ ಕಾರ್ಯಕ್ಕೂ ಉಪಯೋಗಿಸದೆ ಬಿಟ್ಟುಬಿಡಬೇಕು. ಇದರ ನಾಲ್ಕು ಪಾದಗಳಲ್ಲಿ ಮೊದಲನೆಯದು ಸಿಂಹರಾಶಿಗೂ ಉಳಿದ ಮೂರು ಪಾದಗಳು ಕನ್ಯಾರಾಶಿಗೂ ಸೇರಿವೆ. ಇದಕ್ಕಾಗಿ ತ್ರಿಪಾದಿ ನಕ್ಷತ್ರ ಎಂದು ಇದನ್ನು ಕರೆಯುತ್ತಾರೆ. ಇದರಲ್ಲಿ ಹುಟ್ಟಿದವ ದಾನಶೀಲ, ದಯಾಳು, ಕೀರ್ತಿವಂತ, ಸುಮತಿ, ಧೀರ ಮತ್ತು ಮೃದು ಸ್ವಭಾವ ಉಳ್ಳವನಾಗುತ್ತಾನೆ. (ಎಸ್.ಎನ್.ಕೆ.)

ಖಗೋಳಶಾಸ್ತ್ರದಲ್ಲಿ ಉತ್ತರಾನಕ್ಷತ್ರವೆಂದು ಇದರ ಹೆಸರು. ಶಾಸ್ತ್ರನಾಮ $\zeta$—ವಿರ್ಗೋ. ವಿಂಡ್‌ಮೀಟ್ರಿಕ್ಸ್ ಪರ್ಯಾಯನಾಮ. ಕನ್ಯಾರಾಶಿಯ ಐದನೆಯ ನಕ್ಷತ್ರ. ಕಾಂತಿವರ್ಗ 3.0. *

**ಉತ್ತರ ಭಾರತದ ಬೃಹತ್ ಶಿಲಾಸಂಸ್ಕೃತಿ:** ಉತ್ತರ ಪ್ರದೇಶದ ಪೂರ್ವಭಾಗ, ರಾಜಸ್ತಾನ ಪ್ರದೇಶಗಳಲ್ಲಿ ಹಲವಾರು ಕಡೆಗಳಲ್ಲಿ ಕಲ್ಲುಪ್ಪೆ ಮಾದರಿಯ ಕಲ್ಗೋರಿಗಳಿವೆ. ಉತ್ತರ ಪ್ರದೇಶದ ವಾರಾಣಸಿ, ಮಿರ್ಜಾಪುರ, ಅಲಹಾಬಾದ್, ಬಾಂದಾ, ಆಗ್ರ, ರಾಜಸ್ತಾನದ ದೌಸ (ಜೈಪುರ ಜಿಲ್ಲೆ) ಈ ಪ್ರದೇಶಗಳಲ್ಲಿ ನೂರಾರು ತುಂಡುಕಲ್ಲುಗಳ ಗುಪ್ಪೆ ಮಾದರಿಯ ಕಲ್ಗೋರಿ ನೆಲೆಗಳಿವೆ. ಉತ್ತರಾಂಚಲದ ಆಲ್ಮೋರದ ದೇವದೂರದಲ್ಲಿ ನೆಲಕೋಣೆ ಗೋರಿಗಳನ್ನು ಹಿಂದೆಯೆ ಕಾರ್ಕ್‌ಬರ್ನ್, ಕಾರ್ಲೈಲ್ ಮೊದಲಾದವರು ಪತ್ತೆ ಮಾಡಿದ್ದರು. ಕಾಶ್ಮೀರ ಕಣಿವೆಯಲ್ಲಿಯ ಬೂರ್ಝಹೋಮ್, ಗುಫ್‌ಕ್ರಾಲ್, ಲಡಾಕ್‌ದಲ್ಲಿಯ ಲೇಹ್, ಪಾಕಿಸ್ತಾನದ ವಾಯವ್ಯ ಸರಹದ್ದು, ಸಿಂಧದಲ್ಲಿಯ ಕರಾಚಿ ಸಮೀಪ ಬೃಹತ್ ಶಿಲಾಗೋರಿಗಳು ಕಂಡುಬಂದಿವೆ. ಬೂರ್ಜಹಾಮ್ ಮತ್ತು ಪಾಕಿಸ್ತಾನದ ವಾಯವ್ಯ ಸರಹದ್ದಿನ ಅಸೋಟದಲ್ಲಿ ನಿಲಸುಕಲ್ಲುಗಳಿದ್ದರೆ ಲೇಹ್ ಕರಾಚಿ ಸಮೀಪ ನೆಲದಡಿಯ ಚಪ್ಪಡಿ ಕಲ್ಲಿನ ಗೋರಿಗಳಿವೆ. ಇವುಗಳಲ್ಲಿ ಜಿ.ಆರ್.ಶರ್ಮ ವಾರಾಣಸಿ ಜಿಲ್ಲೆಯ ಕಕೋರಿಯ, ಅಲಹಾಬಾದ್ ಜಿಲ್ಲೆಯ ಕೋಟಿಯ, ಎ.ಕೆ.ನಾರಾಯಣ್ ಮಿರ್ಜಾಪುರದಲ್ಲಿಯ ಬನಿಮಿಲಿಯ–ಬಹೇರದಲ್ಲಿ ಕಲ್ಗೋರಿ ನೆಲೆಗಳನ್ನು ಉತ್ಖನನ ಮಾಡಿದರು. ಕಕೋರಿಯದಲ್ಲಿ ಒಂದು ಜನ ವಾಸ್ತವ್ಯದ ನೆಲೆಯನ್ನು ಮತ್ತು 12 ಕಲ್ಗೋರಿಗಳನ್ನು ಉತ್ಖನನ ಮಾಡಲಾಗಿದೆ. ಕಬ್ಬಿಣದ ಯಾವುದೇ ಅವಶೇಷಗಳಿಲ್ಲದೆ, ಸೂಕ್ಷ್ಮ ಶಿಲಾ ಉಪಕರಣಗಳು ಮಾಳವ, ಸೋನ್‌ಪುರ–ಚಿರಂದ್, ತಾಮ್ರ–ಶಿಲಾ ಸಂಸ್ಕೃತಿಯ ಪಾತ್ರೆಗಳಿಗೆ ಹೋಲುವ ಕೆಂಪು, ಕಪ್ಪು ಮತ್ತು ಕಪ್ಪು–ಕೆಂಪು ವರ್ಣದ ಮಣ್ಪಾತ್ರೆಗಳು, ಮಣ್ಣಿನ ಮನೆಯ ಭಾಗಗಳು ಅಂತ್ಯ ಹಂತದಲ್ಲಿ ತಾಮ್ರದ ಚೂರುಗಳು ಸಿಕ್ಕಿವೆ. ಆದ್ದರಿಂದ ಇದನ್ನು ನವ–ತಾಮ್ರ–ಶಿಲಾ ಸಂಸ್ಕೃತಿಯೆಂದು ಗುರುತಿಸಲಾಗಿದೆ. ಇದರ ಕಾಲಮಾನ ಪ್ರ.ಶ.ಪೂ.ಸು.1500–700 ಆಗಿದ್ದಿರಬಹುದೆಂದು ತರ್ಕಿಸಲಾಗಿದೆ.

ಸಮೀಪದಲ್ಲಿಯ ಶವ–ಸಂಸ್ಕಾರದ ನೆಲೆಯಲ್ಲಿ 12 ಕಲ್ಲುಪ್ಪೆಗಳನ್ನು ಉತ್ಖನನ ಮಾಡಲಾಯಿತು. ಇವುಗಳಲ್ಲಿ ಎರಡು ಪ್ರಕಾರಗಳಿದ್ದುವು; ಶವಕುಣಿ ಮತ್ತು ನೆಲದಡಿಯ ಕುಣಿಯಲ್ಲಿ ಕಲ್ಲುಚಪ್ಪಡಿಗಳ ಕೋಣೆ. ಮೊದಲನೆಯ ಪ್ರಕಾರದಲ್ಲಿ ಸು.1–2 ಮೀ ಆಳದ ಆಯತಾಕಾರದ ಗುಂಡಿಯಲ್ಲಿ ಹೊರಗಿಟ್ಟ ಶವದ ಕೆಲವೇ ಅಸ್ಥಿ ಚೂರುಗಳು, ಸೂಕ್ಷ್ಮ ಶಿಲಾ ಉಪಕರಣಗಳು ಒಂದೆರಡು ಚಿನ್ನದ ಚೂರುಗಳು, ಅರೆ ಪ್ರಶಸ್ತ ಕಲ್ಲಿನ ಮಣಿಗಳು ಮತ್ತು ಮಣ್ಪಾತ್ರೆಗಳು. ಎರಡನೆಯ ಪ್ರಕಾರದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಮಣ್ಪಾತ್ರೆ ಚೂರುಗಳು, ಅಸ್ಥಿ ಅವಶೇಷಗಳು ತೀರ ಅಪರೂಪವಾಗಿ ಚಿನ್ನದುಂಗುರ, ಸೂಕ್ಷ್ಮ ಶಿಲಾ ಉಪಕರಣಗಳಿದ್ದುವು. ಪ್ರತಿಯೊಂದು ಬದಿಯಲ್ಲಿ ನಿಸರ್ಗ ಲಭ್ಯ ಒಂದಕ್ಕಿಂತ ಹೆಚ್ಚು ಕಲ್ಲುಚಪ್ಪಡಿಗಳನ್ನು ನಿಲ್ಲಿಸಲಾಗಿತ್ತು.

ಬನಿಮಿಲಿಯ–ಬಹೇರದ ಜನವಾಸ್ತವ್ಯದ ನೆಲೆಯ ಉತ್ಖನನದಲ್ಲಿ ಎರಡು ಉಪ ಹಂತಗಳನ್ನು ಗುರುತಿಸಿದ್ದು ಆದಿ ಉಪಹಂತದಲ್ಲಿ ಅಷ್ಟಾಗಿ ಸರಿಯಾಗಿ ಸುಡದ ಕೆಂಪುಬಣ್ಣದ ಮಣ್ಪಾತ್ರೆ ಚೂರುಗಳು, ಅಂತಿಮ ಉಪಹಂತದಲ್ಲಿ ಕಪ್ಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಚೂರುಗಳಿದ್ದುವು. ಈ ನೆಲೆಯಲ್ಲಿಯೂ ಕೂಡ ಶವಕುಣಿ ಮತ್ತು ನೆಲ ಕೋಣೆಯಿದ್ದು ಇದನ್ನು ಒಂದಕ್ಕಿಂತ ಹೆಚ್ಚು ಚಪ್ಪಡಿಗಳಿಂದ ಮುಚ್ಚಲಾಗುತ್ತಿತ್ತು. ಒಟ್ಟು 5 ಕಲ್ಲುಗ್ಪೆಗಳನ್ನು ಉತ್ಖನನ ಮಾಡಲಾಯಿತು. ಕಲ್ಲುಕೋಣೆಗಳು ಪೂರ್ವ–ಪಶ್ಚಿಮಾಭಿಮುಖವಾಗಿದ್ದು ಇದರ ಪಶ್ಚಿಮ ಭಾಗ ಸ್ವಲ್ಪ ಹೆಚ್ಚು ಅಗಲ–ಎತ್ತರವಾಗಿರುತ್ತದೆ. ಇವುಗಳಲ್ಲಿ ಒಂದನ್ನು ಬಿಟ್ಟು ಯಾವುದರಲ್ಲೂ ಅಸ್ಥಿ ಅವಶೇಷಗಳಿರದೆ ಕೆಲವು ಮಣ್ಪಾತ್ರೆ ಚೂರುಗಳಿದ್ದುವು. 5ನೆಯ ಕಲ್ಲಿನ ಕೋಣೆ ಬಂಡೆಯ ಮೇಲೆ ಇದೆ. ಇದರ ಸುತ್ತಲೂ ಕಲ್ಲುತುಂಡುಗಳ ರಾಶಿ ಇದ್ದಿತ್ತು. ಚುನಾರ್ ಮತ್ತು ಕೋಟಿಯದಲ್ಲಿ ಕಲ್ಲುಗ್ಪೆ ನೆಲೆಗಳು ಇದ್ದು ಇವುಗಳಲ್ಲಿಯೂ ಸ್ವಲ್ಪ ಹೆಚ್ಚು–ಕಡಿಮೆ

ಅರೆಯುವ ಕಲ್ಲು, ಅದ್ವ

ಇದೇ ಪ್ರಕಾರದ ಅವಶೇಷಗಳು ತೀರ ಕಡಿಮೆ ಪ್ರಮಾಣದಲ್ಲಿದ್ದುವು. ಆದರೆ ಹಂದಿ, ಹೋತ, ಎತ್ತು–ದನಗಳ ಎಲುಬುಗಳಿದ್ದುದು ಕುತೂಹಲಕಾರಿಯಾಗಿದೆ. ಇಲ್ಲಿಯ ಮಣ್ಪಾತ್ರೆ ಪ್ರಕಾರಗಳು ಬನಿಮಿಲಿಯ–ಬಹೇರ ಕಕೋರಿಯದಲ್ಲಿ ಕಂಡುಬಂದಿಲ್ಲ. ವಿಶಿಷ್ಟವಾಗಿದ್ದ 1ನೆಯ ನೆಲ ಕೋಣೆಯನ್ನು ಇದರ ಮಧ್ಯದಲ್ಲಿ ಒಂದು ಕಲ್ಲುಚಪ್ಪಡಿಯಿಂದ ಎರಡು ಭಾಗಗಳನ್ನಾಗಿ ಮಾಡಿದೆ. ಒಂದು ಭಾಗದಲ್ಲಿ ಬಹಳ ಪ್ರಾಣಿಗಳ ಎಲುಬುಗಳು ಮತ್ತು ಕಬ್ಬಿಣದ ಉಪಕರಣಗಳಿದ್ದುವು. ಇನ್ನೊಂದು ಭಾಗದಲ್ಲಿ ಮನುಷ್ಯನ ಅಸ್ಥಿ ಚೂರು ಗಳಿದ್ದುವು. 5ನೆಯದು ಒಂದು ಶವಕುಣಿ ಕಲ್ಲುಪ್ಪೆಯಾಗಿದ್ದು ಇದರಲ್ಲಿ 38 ಸೆಂಮೀ ದಪ್ಪದಷ್ಟು ಬೂದಿಯಿದ್ದಿತ್ತು. ಇದರೊಳಗೆ ಕಬ್ಬಿಣದ ಬಾಣದ ಮೊನೆ, ಮಡಕೆಗಳು ಮತ್ತು ಕೆಲವು ಅಸ್ಥಿ ಚೂರುಗಳಿದ್ದುವು. ಇಲ್ಲಿಯ ಕಲ್ಗೋರಿಗಳು ಮತ್ತು ಅಲಹಾಬಾದ್ ಜಿಲ್ಲೆಯ ಸಿಯೋತಿ (ಕೋರೆಗಾಂವ್ ತಾಲ್ಲೂಕು) ಮೊದಲಾದೆಡೆಗಳಲ್ಲಿ ಆದಿ ಕಬ್ಬಿಣಯುಗದ ಕಲ್ಲುಗ್ಪೆಗಳಿವೆ.

ಖೇಡ (ಆಗ್ರ)ದಲ್ಲಿ ಅರ್ಧಗೋಲಾಕೃತಿಯ ಹಾಗೂ ಮೇಲ್ಭಾಗ ಸಮತಟ್ಟಾದ ಕಲ್ಲುಪ್ಪೆಗಳಿವೆ. ಪರೀಕ್ಷಿಸಿದ ಇವುಗಳಡಿಯಲ್ಲಿ ಬಂಡೆಕಲ್ಲಿನಲ್ಲಿ ಕೊರೆದ ಆಯತಾಕಾರದ ಮೊಟ್ಟೆಯಾಕಾರದ ತಗ್ಗುಗಳಿದ್ದು ಇವುಗಳಲ್ಲಿ ಸುಟ್ಟ ಅಸ್ಥಿ ಚೂರುಗಳು ಮತ್ತು ಬೂದಿ ಇದ್ದುವು. ಆದರೆ ಈಚಿನ ಅಧ್ಯಯನದಲ್ಲಿ ಇವುಗಳ ಪ್ರಾಚೀನತೆ ಬಗ್ಗೆ ಅನುಮಾನಪಡಲಾಗಿದೆ. ಮೇಲ್ಭಾಗ ಸಮತಟ್ಟಿನ ಕಲ್ಲುಪ್ಪೆಗಳಡಿಯಲ್ಲಿ ತುಂಡು ಚಪ್ಪಡಿಕಲ್ಲುಗಳಿಂದ ಮಾಡಿದ ಸಣ್ಣ ಕೋಣೆಯಿದ್ದಿತು. ಈ ಪ್ರಕಾರದ ಕಲ್ಲುಪ್ಪೆಗಳು ಇದೇ ಪ್ರದೇಶದ ಸತ್ಮಸ್‌ನಲ್ಲಿಯೂ ಇವೆ.

ಜೈಪುರ–ಆಗ್ರ ಹಾದಿಯಲ್ಲಿರುವ ದೌಸದಲ್ಲಿ ಖೇಡ, ಸತ್ಮಸ್ ತರಹದ ಕಲ್ಲುಪ್ಪೆಗಳಲ್ಲದೆ ನಿಲಸುಗಲ್ಲು ಮತ್ತು ಕಲ್ಲುಪ್ಪೆ ಮಧ್ಯದಲ್ಲಿ ನಿಲಸುಗಲ್ಲುಗಳೂ ಇವೆ. ಲೇಹ್‌ಕೊಳ್ಳ (ಲಡಾಕ್)ದಲ್ಲಿ ನೆಲದಡಿಯ ಕಲ್ಲು ಕೋಣೆಗಳಿದ್ದು ಇವುಗಳ ಕೆಲವೊಂದರಲ್ಲಿ ಹಲವಾರು ತಲೆಬುರುಡೆಗಳು, ಕೆಂಪು ಬಣ್ಣ ಹಚ್ಚಿದ ಮಣ್ಪಾತ್ರೆ ಕಂಚಿನ ಪಾತ್ರೆ, ಉಪಕರಣಗಳು, ಉದ್ದನೆ ಮಣಿ, ಕಬ್ಬಿಣದ ಉಪಕರಣಗಳಿದ್ದುವು. 1857ರಲ್ಲಿ ಕ್ಯಾಪ್ಟನ್ ಪ್ರೀಡಿ ಕರಾಚಿ ಹತ್ತಿರ ವಘೂದರ್‌ನಲ್ಲಿ ನೆಲದಡಿಯ ಕಂಡಿಯಿಲ್ಲದ ಚಪ್ಪಡಿ ನೆಲ, ಕೋಣೆಗೋರಿಗಳನ್ನು ಪ್ರೆರ್ ಅವರು ಕರಾಚಿ ಕೊಕ್ರಿ ರಸ್ತೆ ಮತ್ತು ಕೊಕ್ರಿ–ಶಹಬಲವಲ್ ರಸ್ತೆ ಪ್ರದೇಶದಲ್ಲಿ ಇಂಥ ಕಲ್ಮನೆಗಳನ್ನು ಶೋಧಿಸಿದ್ದರು. ಕರಾಚಿಯಲ್ಲಿಯ ಕಲ್ಮನೆಗಳ ಒಂದರಲ್ಲಿ ಕಂಡಿಯಿದೆಯೆಂದು ಫೇರ್ ಸರ್ವಿಸ್ ಅವರು ವರದಿ ಮಾಡಿದ್ದಾರೆ. ಇವುಗಳಿಗೂ ದಕ್ಷಿಣ ಭಾರತದ ಕಂಡಿಕೋಣೆಗೋರಿಗಳಿಗೂ ಸಂಬಂಧವಿದ್ದಿರಬಹುದೆಂಬ ಅನುಮಾನವಿದೆ. (ಎ.ಎಸ್.)

**ಅದ್ವ ಬಯಲು:** ಮಧ್ಯಪ್ರದೇಶದ ರೇವ ಮತ್ತು ಉತ್ತರಪ್ರದೇಶದ ಮಿರ್ಜಾಪುರ ಜಿಲ್ಲೆಗಳಲ್ಲಿ ಹರಿಯುವ ಬೇಲನ್ ನದಿಯ ಉಪನದಿಯಾದ ಅದ್ವ ನದಿ ಬಯಲಿನಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯ 1979–81ರಲ್ಲಿ ನಡೆಸಿದ ಕ್ರಮಬದ್ಧ ಸರ್ವೇಕ್ಷಣೆಯಲ್ಲಿ 67 ಬೃಹತ್ ಶಿಲಾಯುಗ ಗೋರಿನೆಲೆಗಳೂ 41 ಸಮಕಾಲೀನ ವಸತಿನೆಲೆಗಳೂ ಬೆಳಕಿಗೆ ಬಂದವು. ಈ ಸಂಶೋಧನೆಯಿಂದ ಉತ್ತರ–ಮಧ್ಯ ವಿಂಧ್ಯ ಪ್ರಾಂತಕ್ಕೆ ಸೇರುವ ಅದ್ವ ಬಯಲಿನ ಬೃಹತ್ ಶಿಲಾ ಸಂಸ್ಕೃತಿಯ ಗುಣಲಕ್ಷಣಗಳನ್ನು ತಿಳಿಯುವುದು ಸಾಧ್ಯವಾಗಿದೆ.

ಅದ್ವ ಬಯಲಿನಲ್ಲಿ ಮುಖ್ಯವಾಗಿ 3 ನಮೂನೆಯ ಬೃಹತ್‌ಶಿಲಾ ಸಮಾಧಿಗಳಿವೆ. ಇವು ಕಲ್ಲುಗ್ಪೆ ವೃತ್ತ (ಕೇರ್ನ್ ಸರ್ಕಲ್), ನೆಲಕೋಣೆ ಸಹಿತವಾದ ಕಲ್ಲುಗ್ಪೆ (ಸಿಸ್ಟ್ ವಿತ್ ಇನ್ ಕೇರ್ನ್) ಮತ್ತು ಕಲ್ಲುವೃತ್ತ (ಸ್ಟೋನ್ ಸರ್ಕಲ್). 51 ಸಮಾಧಿನೆಲೆಗಳಲ್ಲಿ ಮೊದಲೆರಡು

ಮನೆಯ ನೆಲಗಟ್ಟು, ಅದ್ವ

ಪ್ರಕಾರಗಳ ಗೋರಿಗಳಿದ್ದರೆ ಉಳಿದ 12 ನೆಲೆಗಳಲ್ಲಿ ಕಲ್ಲುಗ್ಪೆ ವೃತ್ತಗಳು ಮಾತ್ರ ಇದ್ದವು. ಕವಲಿಝುರ್‌ನಲ್ಲಿ ಮಾತ್ರ ಕಲ್ಲುವೃತ್ತಗಳು ಕಂಡುಬಂದವು. ಈ 3 ಪ್ರಕಾರಗಳಲ್ಲಿ ಕಲ್ಲುಗ್ಪೆ ವೃತ್ತಗಳ ಸಂಖ್ಯೆ ಅತ್ಯಧಿಕ; ಈ ಪ್ರಕಾರದ ಸಮಾಧಿಗಳಲ್ಲಿ ವೃತ್ತದ ವ್ಯಾಸ 3.55ಮೀ–14.15ಮೀ ಇದೆ. ಇದರ ಕೇಂದ್ರದಲ್ಲಿ ನೆಲದಡಿಯಲ್ಲಿ ಪೂರ್ವ–ಪಶ್ಚಿಮಾಭಿಮುಖವಾಗಿರುವ ಕಲ್ಲುಚಪ್ಪಡಿಯ ಕೋಣೆಯಿದ್ದು ಇದರ ಮೇಲ್ಭಾಗ ಮತ್ತೊಂದು ಕಲ್ಲುಚಪ್ಪಡಿಯಿಂದ ಮುಚ್ಚಲ್ಪಟ್ಟಿರುತ್ತದೆ. ಭೂಮಟ್ಟದಲ್ಲಿ ವೃತ್ತದ ಒಳಗಿನ ಭಾಗವನ್ನು ವಿವಿಧ ಗಾತ್ರ–ಆಕಾರದ ಕಲ್ಲುಗಳ ಗುಪ್ಪೆಯಿಂದ ತುಂಬಲಾಗಿರುತ್ತದೆ.

ಅದ್ವ ಮತ್ತು ಅದರ ಉಪನದಿಗಳ ದಂಡೆಯ ಮೇಲೆ ಸು.45 ವಸತಿನೆಲೆಗಳಿವೆ. ಹೆಚ್ಚಾಗಿ ಇವು ಸಮಾಧಿನೆಲೆಗಳ ಸಮೀಪದಲ್ಲಿಯೇ ಇವೆ. ಕೆಲವೊಂದು ವಸತಿನೆಲೆಗಳು ವಿಸ್ತಾರವಾಗಿದ್ದರೂ ದಿಬ್ಬದ ರೂಪದಲ್ಲಿಲ್ಲ. ಹೀಗಾಗಿ ಈ ಜನರು ಹೆಚ್ಚು ಸಮಯ ಒಂದೇ ಕಡೆ ನೆಲೆನಿಂತಂತೆ ತೋರುವುದಿಲ್ಲ. ಮಣ್ಪಾತ್ರೆ ಹಾಗೂ ಇತರ ಅವಶೇಷಗಳ ಆಧಾರಗಳ ಮೇಲೆ ವಸತಿನೆಲೆಗಳನ್ನು 2 ಗುಂಪುಗಳಾಗಿ ವಿಂಗಡಿಸಲಾಗಿದೆ. ಇವೆಂದರೆ ಕಕೋರಿಯ (ತಾಮ್ರ–ಶಿಲಾಯುಗ) ಮತ್ತು ಕೋಟಿಯ (ಕಬ್ಬಿಣಯುಗ). ಕೆಲವು ನೆಲೆಗಳಲ್ಲಿ ಈ ಎರಡೂ ಪ್ರಾದೇಶಿಕ ಸಂಸ್ಕೃತಿಗಳ ಮಿಶ್ರ ಲಕ್ಷಣಗಳಿವೆ. ಕಕೋರಿಯ (ಚಂದೌಲಿ ಜಿಲ್ಲೆ) ಹಾಗೂ ಕೋಟಿಯ (ಅಲಹಾಬಾದ್ ಜಿಲ್ಲೆ) ಉತ್ತರಪ್ರದೇಶದ ಮಾದರಿ ನೆಲೆಗಳು.

ಕಕೋರಿಯ ವರ್ಗಕ್ಕೆ ಸೇರುವ 17 ವಸತಿನೆಲೆಗಳಲ್ಲಿ ಮುಖ್ಯವಾದುವು ಮಾಘ, ಇಂದಾರಿ ಮತ್ತು ಬರೌನ್ದ. ಅಂಡಾಕಾರದ ನೆಲಗಟ್ಟುಗಳು, ಅರೆಯುವ ಕಲ್ಲು, ತ್ರಪೀಜ್, ಅರ್ಧಚಂದ್ರಾಕೃತಿ, ಅಲಗು ಮುಂತಾದ ಸೂಕ್ಷ್ಮಶಿಲೋಪಕರಣಗಳು ಹಾಗೂ ತಿರುಳುಗಲ್ಲು, ಉಂಗುರಕಲ್ಲು, ಮಣಿಗಳು, ಕವಣೆಕಲ್ಲು, ಬೊಂಬಿನ ಗುರುತುಳ್ಳ ಸುಟ್ಟಮಣ್ಣಿನುಂಡೆಗಳು ಇವು ಈ ನೆಲೆಗಳಲ್ಲಿ ಸಿಕ್ಕಿರುವ ಸಾಂಸ್ಕೃತಿಕ ಅವಶೇಷಗಳು. ಈ ಜನರು ಉಪಯೋಗಿಸುತ್ತಿದ್ದ ಪಾತ್ರೆಗಳು ಕಪ್ಪು–ಕೆಂಪು ದ್ವಿವರ್ಣ, ಕೆಂಪು ಹಾಗೂ ಕಪ್ಪು ಬಣ್ಣದ್ದಾಗಿವೆ. ಸಾಮಾನ್ಯ ಆಕಾರಗಳೆಂದರೆ ಬಟ್ಟಲು, ರಂಧ್ರವಿರುವ ಬೋಗುಣಿಗಳು, ಪುಟ್ಟ ತಳದ ದಾನಿ, ಶೇಖರಣಾ ಜಾಡಿ, ಪುಟ್ಟ ದಾನಿಗಳು ಇತ್ಯಾದಿ. ಕೋಟಿಯ ಮಾದರಿಯ ಪಾತ್ರೆಗಳಾದ ದಪ್ಪ ಬೂದುಬಣ್ಣದ ಪಾತ್ರೆ, ಕಪ್ಪು–ಕೆಂಪು ದ್ವಿವರ್ಣ ಪಾತ್ರೆ, ಕಪ್ಪು ಹಾಗೂ ಕೆಂಪು ಪಾತ್ರೆಗಳು 35 ವಸತಿನೆಲೆಗಳಲ್ಲಿ ದೊರೆತಿವೆ. ಅದೈಪುರ್, ಸರ್ದಮನ್, ಜೋಗಿಬೀರ್, ಬೀರದೇಯಿ (ರೇವ ಜಿಲ್ಲೆ), ಪಿಪರಹಿ, ಕವಲಿಝುರ್, ಸೋನಗರ, ಬೈದ, ಮಧೋರ್, ದೇವ್ರಿ ಮತ್ತು ಚೌರ (ಮಿರ್ಜಾಪುರ ಜಿಲ್ಲೆ) ಇವು ಉಲ್ಲೇಖಾರ್ಹ ನೆಲೆಗಳು. ಅರೆಪ್ರಶಸ್ತ ಶಿಲೆಗಳ ಮಣಿಗಳು, ಸುಡಾವೆ ಮಣ್ಣು–ಶಂಖ–ಗಾಜಿನ ಬಳೆಗಳು, ಕದಿರಣಿಗೆ ಗುಂಡಿ, ಕಬ್ಬಿಣದ ಉಪಕರಣಗಳು ಮತ್ತು ಕಿಟ್ಟ, ಬೊಂಬಿನ ಗುರುತುಳ್ಳ ಸುಟ್ಟಮಣ್ಣಿನುಂಡೆ ಇವೇ ಮೊದಲಾದ ಅವಶೇಷಗಳನ್ನು ಈ ನೆಲೆಗಳಿಂದ ಸಂಗ್ರಹಿಸಲಾಗಿದೆ. ಅಮಹತ, ಮುನ್ಯೆ, ನಕ್ವಲ್ (ರೇವ ಜಿಲ್ಲೆ), ಪರ್ಸಿಯ, ರಾಮ್‌ಪುರ್, ಗೌರ್ವ (ಮಿರ್ಜಾಪುರ ಜಿಲ್ಲೆ) ಮೊದಲಾದ 20 ನೆಲೆಗಳಲ್ಲಿ ಕೋಟಿಯ ಹಾಗೂ ಕಕೋರಿಯ ಮಾದರಿಯ ಪಾತ್ರೆಗಳು ಮಿಶ್ರವಾಗಿದ್ದು ಈ ನೆಲೆಗಳು ಸ್ಥಿತ್ಯಂತರ ಹಂತಕ್ಕೆ ಸೇರುತ್ತವೆ. ಸಮಾಧಿಯ ರಚನೆ ಹಾಗೂ ವಸತಿನೆಲೆಗಳ ವಿಶೇಷ ಲಕ್ಷಣಗಳನ್ನು ತಿಳಿಯುವ ಉದ್ದೇಶದಿಂದ ಅಮಹತ, ಮುನ್ಯೆ ಮತ್ತು ಮಾಘ– ಈ 3 ನೆಲೆಗಳಲ್ಲಿ ಉತ್ಖನನವನ್ನು ನಡೆಸಲಾಯಿತು.

ಸುಮಾರು 200 ಸಮಾಧಿಗಳಿರುವ ಅಮಹತದಲ್ಲಿ (ರೇವ ಜಿಲ್ಲೆ) ಕಲ್ಲುಗ್ಪೆವೃತ್ತವೊಂದನ್ನು ಅನಾವರಣಗೊಳಿಸಲಾಯಿತು. ಈ ಸಮಾಧಿಯಲ್ಲಿ ತಳಬಂಡೆಯ ವರೆಗೆ ಗೋಲ ಗುಂಡಿಯನ್ನು ಅಗೆದು ಅದರೊಳಗೆ 4–ಚಪ್ಪಡಿಗಳಿಂದ ಆಯತಾಕಾರದ ನೆಲಕೋಣೆಯನ್ನು ನಿರ್ಮಿಸಲಾಗಿತ್ತು. ನೆಲಕೋಣೆ ಪೂರ್ವ–ಪಶ್ಚಿಮಾಭಿಮುಖವಾಗಿತ್ತು. ಕೋಣೆಯ ಹೊರಗಿನ ಭಾಗವನ್ನು (ಚಪ್ಪಡಿ ಹಾಗೂ ಗುಂಡಿಯ ಗೋಡೆಯ ನಡುವಿನ ಭಾಗ) ಮಣ್ಣು ಹಾಗೂ ವಿವಿಧ ಗಾತ್ರದ ಕಲ್ಲುಗಳಿಂದ ಒತ್ತಿ ತುಂಬಲಾಗಿತ್ತು. ಕೋಣೆಯೊಳಗಿನ ಭಾಗವನ್ನು ಪೂರ್ಣವಾಗಿ ಮಣ್ಣಿನಿಂದ ತುಂಬಿ ಮೇಲೆ ಮತ್ತೊಂದು ಚಪ್ಪಡಿಕಲ್ಲನ್ನು ಹಾಸಲಾಗಿತ್ತು. ಈ ಸಮಾಧಿಯೊಳಗೆ ಮಣ್ಪಾತ್ರೆಯ ಚೂರುಗಳು, ಸೂಕ್ಷ್ಮಶಿಲೋಪಕರಣಗಳು ಮತ್ತು ಕಾವಿಕಲ್ಲಿನ 1 ಚೂರು ದೊರೆತವು.

ಅದ್ವ ನದಿಯ ಎಡದಂಡೆಯ ಮೇಲಿರುವ 2 ನೆಲೆಗಳಲ್ಲೊಂದಾದ ಮುನ್ಯೆನಲ್ಲಿ ಒಟ್ಟು 35 ಕಲ್ಲುಗ್ಪೆವೃತ್ತಗಳಿದ್ದು ಇವುಗಳಲ್ಲಿ ಎರಡನ್ನು ಉತ್ಖನನಕ್ಕೆ ಒಳಪಡಿಸಲಾಯಿತು. ಎರಡೂ ಗೋರಿಗಳಲ್ಲಿ ಪೂರ್ವ–ಪಶ್ಚಿಮವಾಗಿ ಅಂಡಾಕಾರದ ಗುಳಿಯನ್ನು ತಳಬಂಡೆಯ ವರೆಗೆ ತೋಡಿ ಅದರೊಳಗೆ ಶವಸಂಸ್ಕಾರ ಮಾಡಲಾಗಿತ್ತು. ಏರುಪೇರಾಗಿದ್ದ ಗುಳಿಗಳ ತಳವನ್ನು ಕೆಮ್ಮಣ್ಣಿನ ಹಾಸಿನಿಂದ ಮಟ್ಟ ಮಾಡಿದ್ದುದು ಗಮನಕ್ಕೆ ಬಂದಿತು. ಗುಳಿಗಳಿಂದ ಅಗೆದು ತೆಗೆದ ಮಣ್ಣಿನಿಂದಲೇ ಮತ್ತೆ ಅವನ್ನು ಮುಚ್ಚಿದ್ದರು. ಪ್ರಾಣಿಮೂಳೆಗಳು, ಬೂದು ಹಾಗೂ ಕೆಂಪುಪಾತ್ರೆಗಳ ಚೂರುಗಳು, ಸೂಕ್ಷ್ಮಶಿಲೋಪಕರಣಗಳು ಗುಳಿಯ ತಳದಲ್ಲಿ ಕಂಡುಬಂದವು. ಇವು ಕಕೋರಿಯ ಹಾಗೂ ಕೋಟಿಯ ಸಂಸ್ಕೃತಿಗಳ ನಡು ವಿನ ಸ್ಥಿತ್ಯಂತರ ಹಂತವನ್ನು ಸೂಚಿಸುತ್ತವೆ. ಸಮೀಪದ ವಸತಿನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ಕಕೋರಿಯ ಸಂಸ್ಕೃತಿ ಕೋಟಿಯ ಸಂಸ್ಕೃತಿಗಿಂತ ಮುಂಚಿನದು ಎಂಬ ಅಂಶ ಸ್ತರಕ್ರಮದಿಂದ ಸಾಬೀತಾಯಿತು.

ಮಿರ್ಜಾಪುರ ಜಿಲ್ಲೆಯಲ್ಲಿರುವ ಮಾಘ ನೆಲೆಯಲ್ಲಿ ಒಟ್ಟು 159 ಗೋರಿಗಳಿವೆ. ಇವುಗಳಲ್ಲಿ 2 ಕಲ್ಲುಗ್ಪೆವೃತ್ತ ಹಾಗೂ 3 ನೆಲಕೋಣೆ ಸಹಿತ ಕಲ್ಲುಗ್ಪೆಗಳಲ್ಲಿ ಉತ್ಖನನ ನಡೆಸಲಾಯಿತು. ಈ ಎಲ್ಲ ಗೋರಿಗಳು ರಚನೆಯಲ್ಲಿ ಮುನ್ಯೆ–ಅಮಹತದ ಗೋರಿಗಳನ್ನು ಹೋಲುತ್ತವೆ. ಕಲ್ಲುಗ್ಪೆ ವೃತ್ತಗಳಲ್ಲಿ ಮಣ್ಪಾತ್ರೆಗಳೊಂದಿಗೆ ಅಲಗು, ಅರ್ಧಚಂದ್ರಾಕೃತಿ, ತ್ರಿಕೋಣ ಮುಂತಾದ ಕ್ಯಾಲ್ಸೆಡನಿಯಿಂದ ತಯಾರಿಸಿದ ಸೂಕ್ಷ್ಮಶಿಲೋಪಕರಣಗಳಿದ್ದವು. ನೆಲಕೋಣೆ ಸಹಿತ ಕಲ್ಲುಗ್ಪೆಗಳಲ್ಲಿ ತಾಮ್ರದ ಚೂರುಗಳು, ಸೂಕ್ಷ್ಮಶಿಲೋಪಕರಣಗಳು, ಪ್ರಾಣಿಗಳ ಮೂಳೆಯ ತುಣುಕುಗಳು ಮತ್ತು ಮಣ್ಪಾತ್ರೆಯ ಚೂರುಗಳು ಸಿಕ್ಕವು. ಒಂದು ಸಮಾಧಿಯಲ್ಲಿ ಮಾತ್ರ ಅವಶೇಷಗಳು 2 ಸ್ತರಗಳಲ್ಲಿದ್ದವು. ತಳದಲ್ಲಿ ಸುಟ್ಟಮಣ್ಣಿನುಂಡೆಗಳು, ಪ್ರಾಣಿಮೂಳೆ ಹಾಗೂ

ಬೃಹತ್ ಶಿಲಾಗೋರಿಯ ಉತ್ಖನನ, ಅದ್ವ

ಮಣ್ಪಾತ್ರೆಗಳನ್ನು ಇಟ್ಟು ಇವುಗಳ ಸುತ್ತಲೂ ಚಿಕ್ಕ ಕಲ್ಲುಗಳನ್ನು ಅಂಡಾಕಾರದಲ್ಲಿ ಇಡಲಾಗಿತ್ತು. ಇದಕ್ಕೆ 30 ಸೆಂಮೀ ಮೇಲೆ ಉಂಗುರಕಲ್ಲು, ಮಣ್ಪಾತ್ರೆ ಹಾಗೂ ಸಣ್ಣಸಣ್ಣ ಕಲ್ಲುಗಳನ್ನು ಇಟ್ಟು ಇವುಗಳ ಸುತ್ತಲೂ ಮತ್ತೆ ಚಿಕ್ಕ ಕಲ್ಲಿನ ಅಂಡಾಕಾರದ ವೃತ್ತ ರಚಿಸಲಾಗಿತ್ತು. ಈ ಪ್ರಕಾರದ ಮತ್ತೊಂದು ಸಮಾಧಿಯಲ್ಲಿ ಕರ್ನಾಟಕದ ಬ್ರಹ್ಮಗಿರಿ ಯಲ್ಲಿರುವಂತೆ ನೆಲಕೋಣೆಯ ಸುತ್ತ ಸೈಜುಗಲ್ಲಿನ ಗೋಡೆಯನ್ನು ಕೋಣೆಗೆ ಆಧಾರವಾಗಿ ಕಟ್ಟಲಾಗಿತ್ತು. ಇಲ್ಲಿನ ವಸತಿನೆಲೆ ಯಲ್ಲಿ ಕೈಗೊಂಡ ಉತ್ಖನನದಲ್ಲಿ ವೃತ್ತ–ಗೋಲಾಕಾರದ ಮಣ್ಣಿನ ನೆಲಗಟ್ಟುಗಳು–ಅವುಗಳ ಸುತ್ತ ಆಧಾರಕಂಬದ ಗುಳಿಗಳು, ಉಂಗುರಕಲ್ಲು, ಸುತ್ತಿಗೆಕಲ್ಲು, ಅರೆಯುವ ಕಲ್ಲು, ಅರೆಪ್ರಶಸ್ತ ಕಲ್ಲಿನ ಮಣಿಗಳು, ಪ್ರಾಣಿಮೂಳೆಗಳು, ಕ್ಯಾಲ್ಸೆಡನಿ–ಅಗೇಟ್ ಮತ್ತು ಚರ್ಟ್ ಶಿಲೆಯ ಸೂಕ್ಷ್ಮಶಿಲೋಪಕರಣಗಳು, ಸುಟ್ಟಮಣ್ಣಿನ ಉಂಡೆಗಳು ಕಂಡುಬಂದವು. ಒಂದು ನೆಲಗಟ್ಟಿನ ಮೇಲೆ ಮಣ್ಣಿನ ಒಲೆಯ ಅವಶೇಷಗಳಿದ್ದವು. ಮಣ್ಪಾತ್ರೆ ಗಳಲ್ಲಿ ಹೆಚ್ಚಿನವು ಚಕ್ರದ ಮೇಲೆ ತಯಾರಾದುವು. ಕೆಲವೇ ಕೆಲವನ್ನು ಕೈಯಿಂದ ಮಾಡಲಾಗಿದೆ. ಇಲ್ಲಿಯ ಕೆಂಪು, ಕಪ್ಪು ಹಾಗೂ ಕಪ್ಪು–ಕೆಂಪು ದ್ವಿವರ್ಣ ಪಾತ್ರೆಗಳು ಈ ವಸತಿ ಒಂದೇ ಸಂಸ್ಕೃತಿಗೆ ಸೇರಿದ್ದೆಂಬುದನ್ನು ತಿಳಿಸುತ್ತವೆ.

ಸರ್ವೇಕ್ಷಣೆ ಹಾಗೂ ಉತ್ಖನನಗಳಿಂದ ತಿಳಿದುಬಂದ ಮುಖ್ಯ ಅಂಶಗಳೆಂದರೆ ದಕ್ಷಿಣ ಭಾರತದಲ್ಲಿರುವಂತೆ ಅದ್ವ ಬಯಲಿನ ನೆಲಕೋಣೆಗಳಲ್ಲಿ ಕಂಡಿಗಳಿಲ್ಲ. ಅಲ್ಲದೆ ಇವುಗಳನ್ನು 'ಸ್ವಸ್ತಿಕ' ವಿನ್ಯಾಸದಲ್ಲಿ ನಿರ್ಮಿಸಿಲ್ಲ. ನೆಲಕೋಣೆಯ ತಳದಲ್ಲಿ ಚಪ್ಪಡಿಕಲ್ಲನ್ನು ಹಾಸದಿರುವುದು ಮತ್ತೊಂದು ಗಮನಾರ್ಹ ವ್ಯತ್ಯಾಸ. ಪರೀಕ್ಷಿಸಲಾದ ಯಾವ ಸಮಾಧಿಯಲ್ಲಿಯೂ ಮಾನವನ ಅಸ್ಥಿ ಅವಶೇಷಗಳಿರಲಿಲ್ಲ. ದಕ್ಷಿಣ ಭಾರತದ ಬೃಹತ್ ಶಿಲಾಯುಗ ಸಮಾಧಿಗಳು ಕಬ್ಬಿಣ ಯುಗಕ್ಕೆ ಮಾತ್ರ ಸೇರಿದವಾದರೆ ಅದ್ವ ಬಯಲಿನ ಗೋರಿಗಳು ತಾಮ್ರ–ಶಿಲಾಯುಗದಿಂದ ಕಬ್ಬಿಣಯುಗದ ಅವಧಿಗೆ ಸೇರಿದವು.

ವಿಂಧ್ಯ ಪ್ರದೇಶದ ಇತರ ನೆಲೆಗಳಲ್ಲಿ ದೊರೆತಿರುವ ಕಾಲಮಾನಗಳ ಆಧಾರದ ಮೇಲೆ ಅದ್ವ ಬಯಲಿನ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಮಾನವನ್ನು ಪ್ರ.ಶ.ಪೂ. 2ನೆಯ ಸಹಸ್ರಮಾನದ ಪೂರ್ವಾರ್ಧದಿಂದ ಪ್ರಶ.ಪೂ. 3ನೆಯ ಶತಮಾನ ಎಂದು ನಿರ್ಧರಿಸಲಾಗಿದೆ.

*

**ಉತ್ತರ ಭೂಕಾಂತ ಧ್ರುವಪ್ರಭೆ: ನೋಡಿ– ಅರೋರಾ–ಬೆಳಕು.**

**ಉತ್ತರ ಮೀಮಾಂಸಾ:** ಬ್ರಹ್ಮಸ್ವರೂಪ ವಿಚಾರಶಾಸ್ತ್ರ. ವೇದಾರ್ಥ ವಿಚಾರ ಪೂರ್ವೋತ್ತರ ಭೇದಗಳೆಂದು ಎರಡು ವಿಧ. ಮೊದಲನೆಯದು ಪೂರ್ವಮೀಮಾಂಸಾ. ಎರಡನೆಯದು ಉತ್ತರಮೀಮಾಂಸಾ. ಗೃಹಸ್ಥಾಶ್ರಮಿ ಪತ್ನೀಸಮೇತನಾಗಿ ಮಾಡುವ ವೈದಿಕಕರ್ಮಗಳ ವಿಚಾರಮಾಡುವ ಶಾಸ್ತ್ರ ಪೂರ್ವಮೀಮಾಂಸಾ. ಮೋಕ್ಷವಿಚಾರಮಾಡುವ ಶಾಸ್ತ್ರ ಉತ್ತರಮೀಮಾಂಸಾ. ಪತ್ನಿಯ ಸಹಾಯವಿಲ್ಲದೆ ಮೋಕ್ಷಪ್ರದ ಮಾರ್ಗವನ್ನು ಇದು ವಿಚಾರಮಾಡುತ್ತದೆ. ಈ ವಿಚಾರಕ್ಕೆ ವ್ಯಾಸಮಹರ್ಷಿ ರಚಿಸಿರುವ ಬ್ರಹ್ಮಸೂತ್ರಗಳೇ ತಳಹದಿ. ಈ ಸೂತ್ರಗಳು ಅನೇಕಾರ್ಥಗಳಿಂದ ಗರ್ಭಿತವಾಗಿವೆ. ಬುದ್ಧಿಕೌಶಲ್ಯದಿಂದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮೊದಲಾದ ರೂಪಗಳನ್ನು ತಳೆದ ವ್ಯಾಖ್ಯಾನಗಳು ಹೊರಟಿವೆ. ಈ ಎಲ್ಲದರ ಶಾಸ್ತ್ರರೂಪ ವಿಚಾರಪರಂಪರೆಯೇ ಉತ್ತರಮೀಮಾಂಸಾ. (ಎಸ್.ಎನ್.ಕೆ.)

**ಉತ್ತರಮುಖಿ:** ನಾವಿಕರು ನೌಕೆಯ ಚಲನೆಯ ದಿಕ್ಕನ್ನು ಅರಿಯಲು ಮತ್ತು ಕಣ್ಣಿಗೆ ಕಾಣುವ ಯಾವುದೇ ವಸ್ತುವಿನ ದಿಙ್ಮಾನ ಅಳೆಯಲು ಉಪಯೋಗಿಸುವ ಉಪಕರಣ (ಕಾಂಪಾಸ್); ದಿಕ್ಸೂಚಿ ಪರ್ಯಾಯ ಪದ. ಉತ್ತರಮುಖಿ ಮೂಲತಃ ಒಂದು ಅಯಸ್ಕಾಂತ. ಭೂಮಿಯ ಕಾಂತತೆಯ ಪರಿಣಾಮವಾಗಿ ಸಜಾತೀಯ ಧ್ರುವಗಳು ಪರಸ್ಪರ ಅಪಕರ್ಷಿಸುತ್ತವೆ. ವಿಜಾತೀಯ ಧ್ರುವಗಳು ಪರಸ್ಪರ ಆಕರ್ಷಿಸುತ್ತವೆ–ಎಂಬ ನಿಯಮಾನುಸಾರ ಇದರ ನಿಲುವು. ಸದಾ ಭೂಮಿಯ ಕಾಂತ ಉತ್ತರ–ದಕ್ಷಿಣ ದಿಕ್ಕಿನಲ್ಲಿರುವುದು. ಉತ್ತರಮುಖಿಯ ರಚನೆಯಲ್ಲಿರುವ ಮೂಲಸೂತ್ರ ಇದೇ.

**ಇತಿಹಾಸ**: ಉತ್ತರಮುಖಿಯನ್ನು ನಿರ್ಮಿಸಿ ಅದನ್ನು ಸಮುದ್ರಯಾನದಲ್ಲಿ ಮೊದಲು ಉಪಯೋಗಿಸಿದವರು ತಾವೆಂದು ಚೀನ, ಅರೇಬಿಯ, ಗ್ರೀಸ್, ಫಿನ್ಲೆಂಡ್ ಮತ್ತು ಇಟಲಿ ದೇಶಗಳ ಜನ ಹೇಳಿಕೊಳ್ಳುತ್ತಾರೆ. ಈ ಯಾದಿಯಲ್ಲಿ ಈಜಿಪ್ಟ್ ಮತ್ತು ಭಾರತ ದೇಶಗಳ ಜನ ಏಕೆ ಸೇರಲಿಲ್ಲವೋ ತಿಳಿಯದು. ಇದರ ಉಪಯೋಗ ತಿಳಿಯುವ ಮೊದಲೇ ಪ್ರಪಂಚದ ನಾನಾ ಭಾಗದ ಜನ ಸಮುದ್ರಯಾನ ಮಾಡುತ್ತಿದ್ದರು. ಆಗ ಅವರಿಗೆ ದಿಕ್ಕನ್ನು ತಿಳಿಯಲು ಸಹಾಯಕವಾಗುತ್ತಿದ್ದ ವಸ್ತುಗಳೆಂದರೆ ಸೂರ್ಯ, ಧ್ರುವನಕ್ಷತ್ರ ಮತ್ತು ತಾರಾಗುಚ್ಛಗಳು. ಉತ್ತರಮುಖಿಯನ್ನು ಮೊದಲು ಬಳಸಿದಾಗ ನೌಕೆ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ ಎಂಬುದನ್ನು ತಿಳಿಯಲು ಮಾತ್ರ ಅದು ನೆರವಾಗುತ್ತಿತ್ತು. ಅಂದು ಗಾಳಿ ಬೀಸಿದ ದಿಕ್ಕಿನಲ್ಲಿ ನಾವೆ ಚಲಿಸಬೇಕಾಗಿದ್ದುದರಿಂದ ಚಲನದಿಕ್ಕನ್ನು ಬದಲಾಯಿಸಲು ಪ್ರಾಯಶಃ ಸಾಧ್ಯವಾಗುತ್ತಿರಲಿಲ್ಲ.

ಚೀನೀಯರೇ ಉತ್ತರಮುಖಿಯನ್ನು ನಿರ್ಮಿಸಿ ಮೊದಲು ಉಪಯೋಗಿಸಿದರೆಂಬುದಕ್ಕೆ ಆಧಾರ ದಂತಕಥೆಗಳು. ಈ ಕಥೆಗಳಲ್ಲಿ ಒಂದು ಹೀಗಿದೆ: ಪ್ರ.ಶ.ಪೂ. 2634ರಲ್ಲಿ ಬಂಡಾಯವೆದ್ದ ಅರಸುಕುಮಾರ ಚ್ ಇ–ಯುವನ್ನು ಹತ್ತಿಕ್ಕಲು ಚಕ್ರವರ್ತಿ ಹುವಾಂಗ್ ಟಿ ದಂಡು ಕಳುಹಿಸಿದ. ಅದರ ದಿಕ್ಕುಗೆಡಿಸಲು ಅರಸುಕುಮಾರ ಮಾಯೆಯಿಂದ ಕಾವಳವನ್ನು ಏಳಿಸಿದ. ಆಗ ಚಕ್ರವರ್ತಿ ತನ್ನ ದಂಡನಾಯಕನ ನೆರವಿಗೆ ದಕ್ಷಿಣ ದಿಕ್ಕನ್ನು ಸೂಚಿಸುವ ಮಾನವಾಕೃತಿಯುಳ್ಳ ಒಂದು ರಥವನ್ನು ಕಳುಹಿಸಿದ. ಇದರಿಂದ ಕಾವಳದಲ್ಲಿ ಸೈನ್ಯವನ್ನು ನಡೆಸುವುದು ಸುಲಭವಾಯಿತು. ಯುದ್ಧದಲ್ಲಿ ಅರಸುಕುಮಾರ ಸೆರೆಸಿಕ್ಕಿ ಮರಣದಂಡನೆಗೆ ಗುರಿಯಾದ. ಈ ರಥದಲ್ಲಾಗಲಿ ಇಲ್ಲ ಇಂಥದೇ ಮಾನವಾಕೃತಿಯನ್ನು ಹೊಂದಿದ್ದ ಬೇರೆ ರಥಗಳಲ್ಲಾಗಲಿ ಕಾಂತಸ್ವಭಾವವುಳ್ಳ ದಿಕ್ಸೂಚಿಗಳು ಇದ್ದುವೆಂಬುದಕ್ಕೆ ಸ್ಪಷ್ಟ ಆಧಾರವಿಲ್ಲದಿದ್ದರೂ ಹಾಗೆ ಊಹೆಮಾಡಲು ಪ್ರಬಲ ಕಾರಣವಿದೆ. ಚೀನೀಯರ ಹಡಗುಗಳು ಪ್ರಶ. 9ನೆಯ ಶತಮಾನದಲ್ಲಿ ಪರ್ಷಿಯ ಆಖಾತ ಮತ್ತು ಕೆಂಪುಸಮುದ್ರಗಳ ಬಂದರುಗಳಿಗೆ ಹೋಗುತ್ತಿದ್ದುವು. ಆದರೆ ಅವುಗಳಲ್ಲಿ ಉತ್ತರಮುಖಿಗಳು ಇದ್ದುವೆಂದು ನಂಬುವಂತಿಲ್ಲ. ಇವರು ಉತ್ತರಮುಖಿಯ ಉಪಯೋಗವನ್ನು ಬಲ್ಲವರಾಗಿದ್ದರೆಂಬ ಅಂಶವನ್ನು ಖಚಿತವಾಗಿ ತಿಳಿಸುವ ಪಿಂಗ್ ಚೊ ಕೊ ಟಾನ್ ಎಂಬ ಗ್ರಂಥ ರಚಿತವಾದದ್ದು (11ನೆಯ ಶತಮಾನದಲ್ಲಿ). ಯುರೋಪಿನ ನಾವಿಕರು ಪೂರ್ವ ಸಮುದ್ರವನ್ನು ಪ್ರವೇಶಿಸಿ ಚೀನೀ ನಾವಿಕರನ್ನು ಕಂಡಾಗ ಅವರಲ್ಲಿದ್ದ ಉತ್ತರಮುಖಿಗಳು ತೀರಾ ಕೀಳುದರ್ಜೆಯವಾಗಿದ್ದುವೆಂದು ಹೇಳಿದ್ದಾರೆ.

ಅರಬರು ಸಮುದ್ರಯಾನದಲ್ಲಿ ಮುಂದಾಳುಗಳೇ. ಆದ್ದರಿಂದ ಅವರೇ ಉತ್ತರಮುಖಿಯನ್ನು ಮೊದಲು ನಿರ್ಮಿಸಿ ಉಪಯೋಗಿಸಿದವರೆಂಬ ನಂಬಿಕೆ ಬೆಳೆದಿದೆ. ಆದರೆ ಈ ಉಪಕರಣಕ್ಕೆ ಅವರು ತಮ್ಮದೇ ಆದ ಹೆಸರು ಕೊಡದೆ ಇಟಲಿ ಭಾಷೆಯ ಬೊಸ್ಸೋಲ ಎಂಬ ಪದವನ್ನು ಬಳಸುತ್ತಿದ್ದರು. ಇದರಿಂದ ಅವರು ಉತ್ತರಮುಖಿಯ ಮೊದಲ ನಿರ್ಮಾತೃಗಳೆಂಬ ನಂಬಿಕೆ ಶಿಥಿಲಗೊಂಡಿದೆ. ಅವರು ಉತ್ತರಮುಖಿಯನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಒಂದು ಪರ್ಷಿಯನ್ ಆಖ್ಯಾನಕದಲ್ಲಿ (1232ರಲ್ಲಿ ಪ್ರಕಟಿತ). ಆಧಾರ ದೊರೆತಿದೆ. 1282ರಲ್ಲಿ ಪ್ರಕಟವಾದ ಬೈಲಾಕ್ ಕಿಬ್ಜ್ ಜಾಕಿ ಬರೆದ ಮರ್ಚೆಂಟ್ಸ್ ಟ್ರೆಷರ್ ಪುಸ್ತಕದಲ್ಲಿ ಸಿರಿಯನ್ ಸಮುದ್ರದ ನಾವಿಕರು ಉಪಯೋಗಿಸುತ್ತಿದ್ದ ಉತ್ತರಮುಖಿಯ ಸ್ಥೂಲಪರಿಚಯವಿದೆ. ಮರದ ತುಂಡಿಗೋ ಅಥವಾ ದಬ್ಬೆಗೋ ಒಂದು ಕಾಂತಸೂಚಿಯನ್ನು ಸಿಕ್ಕಿಸಿ ಅದನ್ನು ನೀರಿನ ಮೇಲೆ ತೇಲಿಬಿಟ್ಟು ಆ ನಾವಿಕರು ದಿಕ್ಕನ್ನು ಗೊತ್ತುಮಾಡಿಕೊಳ್ಳುತ್ತಿದ್ದರು.

ಪಶ್ಚಿಮ ಯುರೋಪಿನ ನಾವಿಕರು ಉತ್ತರಮುಖಿಯನ್ನು ಉಪಯೋಗಿಸುತ್ತಿದ್ದರೆಂಬ ವಿಷಯ ತಿಳಿದಿರುವುದು ಅಲೆಕ್ಸಾಂಡರ್ ನೆಕಮ್ (1187) ಎಂಬ ಬರೆಹಗಾರನ ಗ್ರಂಥದ ಮೂಲಕ. ಆಕಾಶದಲ್ಲಿ ಮೋಡಗಳು ಕವಿದು ದಿಕ್ಕುತಪ್ಪಿದಾಗ ನಾವಿಕರು ಕಾಂತದಂಡದಿಂದ ಒಂದು ಸೂಜಿಯನ್ನು ಮುಟ್ಟುತ್ತಾರೆ. ಅದು ತಿರುಗಿ ಸ್ಥಿರಸ್ಥಿತಿಗೆ ಬಂದಾಗ ಉತ್ತರ–ದಕ್ಷಿಣಕ್ಕೆ ನಿಲ್ಲುತ್ತದೆ ಎಂದು ಆತ ಬಣ್ಣಿಸಿದ್ದಾನೆ. 13ನೆಯ ಶತಮಾನದ ಕೊನೆಯಲ್ಲಿ ಸ್ಕಾಂಡಿನೇವಿಯದ ನಾವಿಕರು ಉತ್ತರಮುಖಿಯನ್ನು ಉಪಯೋಗಿಸುತ್ತಿದ್ದರು.

ಮೊದಲು ನಾವಿಕರು ಒಂದು ಸೂಜಿಗಲ್ಲನ್ನು ಮರದ ತುಂಡಿಗೆ ಸಿಕ್ಕಿಸಿ ಅದನ್ನು ನೀರು ತುಂಬಿದ ಬೋಗುಣಿಗಳಲ್ಲಿ ತೇಲಿಬಿಟ್ಟು ದಿಕ್ಸೂಚಿಯಂತೆ ಉಪಯೋಗಿಸಿರಬೇಕು. ತೇಲುವ ಮರದ ತುಂಡು ಸೂಜಿಗಲ್ಲಿನ ಗುಣದಿಂದ ಯಾವಾಗಲೂ ಉತ್ತರ–ದಕ್ಷಿಣ ದಿಕ್ಕಿಗೆ ನಿಲ್ಲುತ್ತದೆ. ಉತ್ತರ–ದಕ್ಷಿಣ ದಿಕ್ಕನ್ನು ಸೂಚಿಸಲು ಒಂದು ಬಣ್ಣದ ಪ್ರಮಾಣರೇಖೆಯನ್ನು ತಳದಲ್ಲಿ ಎಳೆದು ಬೋಗುಣಿಯನ್ನು ಬೇಕಾದ ಹಾಗೆ ತಿರುಗಿಸಿ ನಾವೆ ಚಲಿಸುವ ದಿಕ್ಕನ್ನು ತಿಳಿಯಬಹುದು. ಎರಡನೆಯ ಹಂತದಲ್ಲಿ ದಿಕ್ಕುಗಳನ್ನು ಗುರುತುಮಾಡಿದ ದುಂಡಾದ ರಟ್ಟುಬಿಲ್ಲೆಯ ಹಿಂಭಾಗಕ್ಕೆ ಕಾಂತ ಸೂಚಿಗಳನ್ನು ಅಂಟಿಸಿ ಅದನ್ನು ನೀರಿನಲ್ಲಿ ತೇಲಿಬಿಟ್ಟು ಉಪಯೋಗಿಸಿರಬೇಕು. ತಿರುಗಣೆಯ ಉಪಯೋಗ ಬಹಳ ಕಾಲ ಕಳೆದ ಮೇಲೆ ಬಂದಿರಬೇಕು.

ಅಮಾಲ್ಫಿ ಬಂದರಿನಿಂದ ನಾವಿಕರು ಮೊದಲು ಮೆಡಿಟರೇನಿಯನ್ ಸಮುದ್ರಕ್ಕೆ ಉತ್ತರಮುಖಿಯನ್ನು ತಂದರೆಂಬ ಪರಂಪರಾಗತ ಐತಿಹ್ಯವೂ ಉಂಟು. ಇದರ ಜೊತೆಗೆ ಅಮಾಲ್ಫಿಯ ಫ್ಲಾವಿಪೊ ಗಿಪೋಯಿಯ ಎಂಬ ನಾವಿಕನೇ ಉತ್ತರಮುಖಿಯ ನಿರ್ಮಾತೃವೆಂಬ ಕಥೆಯೂ ಬೆರೆತುಕೊಂಡಿದೆ.

ಉತ್ತರಮುಖಿಯ ಮೊದಲ ನಿರ್ಮಾಣ ಮತ್ತು ಉಪಯೋಗದ ಬಗ್ಗೆ ಇಷ್ಟು ಗೊಂದಲವಿದ್ದರೂ 11ನೆಯ ಶತಮಾನದಲ್ಲಿ ಚೀನೀಯರು, 12ನೆಯ ಶತಮಾನದಲ್ಲಿ ಅರಬರು, ಸ್ಕ್ಯಾಂಡಿನೇವಿಯನ್ನರು ಮತ್ತು ಪೂರ್ವ ಯೂರೋಪೀಯನ್ನರು ಅದರ ಉಪಯೋಗವನ್ನು ತಿಳಿದಿದ್ದರೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಈ ಯಾವುದೇ ದೇಶದಲ್ಲಾದರೂ ಲಿಖಿತ ಆಧಾರಗಳು ಸಿಕ್ಕುವ ಕಾಲಕ್ಕಿಂತ ಹಿಂದೆಯೇ ಉತ್ತರಮುಖಿಯ ನಿರ್ಮಾಣ ಮತ್ತು ಉಪಯೋಗವಾಗಿರಬಹುದು; ಅದರ ನಿರ್ಮಾಣ ಕಲೆ ಮತ್ತು ಉಪಯೋಗದ ವಿಚಾರ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಕಾಲಕಳೆದಂತೆ ಮುಟ್ಟಿರಲೂಬಹುದು.

ಉತ್ತರಮುಖಿಯ ರಚನೆ ಮತ್ತು ಉಪಯೋಗದಲ್ಲಿ ಸುಧಾರಣೆ ಫಕ್ಕನೆ ಆಗಲಿಲ್ಲ. ಹದಿನೆಂಟನೆಯ ಶತಮಾನದ ಆದಿಭಾಗದವರೆಗೆ ಮೆಚ್ಚುವಂಥ ಯಾವ ಕೆಲಸವೂ ನಡೆದಿರಲಿಲ್ಲ. ಕಾಂತಸೂಚಿಗಳಿಗೆ ಬಳಸುತ್ತಿದ್ದ ಕಬ್ಬಿಣ ಉತ್ತಮ ಮಟ್ಟದ್ದಲ್ಲವಾದ್ದರಿಂದ ಅವು ಕಾಂತಗುಣವನ್ನು ಬೇಗ ಕಳೆದುಕೊಂಡುಬಿಡುತ್ತಿದ್ದುವು; ಅವುಗಳ ಕಾಂತ ಮಹತ್ತ್ವದಲ್ಲಿ ಸಮಾನತೆ ಇರುತ್ತಿರಲಿಲ್ಲ. ಆದ್ದರಿಂದ ಅವು ತೋರಿಸುತ್ತಿದ್ದ ದಿಕ್ಕಿನಲ್ಲಿ ಲೋಪವಿರುತ್ತಿತ್ತು. 1766ರಲ್ಲಿ ಗೋವಿನ್ ನೈಟ್ ಎಂಬ ತಂತ್ರಜ್ಞ ಉತ್ತರಮುಖಿಗಳ ತಯಾರಿಕೆಯ ಬ್ರಿಟಿಷ್ ಏಕಸ್ವಾಮ್ಯ ಪಡೆದುಕೊಂಡು ಒಳ್ಳೆಯ ಮಾದರಿಗಳನ್ನು ಮಾರುಕಟ್ಟೆಗೆ ತಂದ. ಉತ್ತಮ ಉಕ್ಕನ್ನು ಕಾಂತಸೂಚಿಗಳಿಗೋಸ್ಕರ ಆತ ಬಳಸಿದ್ದ; ಮತ್ತು ಮಧ್ಯೆ ಟೊಪ್ಪಿಗೆ ಹಾಕಿ ಅವನ್ನು ತಿರುಗಣೆಗಳ ಮೇಲೆ ಅಳವಡಿಸಿದ್ದ. ಹಿಂದಿನ ಯಾವುದೇ ಉತ್ತರಮುಖಿಯಾದರೂ ಇಷ್ಟು ಸುಧಾರಿಸಿದುದಾಗಿರಲಿಲ್ಲ. ರಾಯಲ್ ನೌಕಾಪಡೆಯವರು ಮತ್ತು ಜರ್ಮನ್ ನಾವಿಕರು ಇದರ ಉಪಯೋಗ ತೃಪ್ತಿಕರವಾಗಿದೆ ಎಂದು ಒಪ್ಪಿಕೊಂಡರು.

ಒಂದೇ ಸೂಜಿಯ ಉತ್ತರಮುಖಿಯೇ 1840ರ ವರೆಗೆ ಉಪಯೋಗದಲ್ಲಿತ್ತು. ಆದರೆ 1837ರಲ್ಲಿ ರಾಯಲ್ ನೌಕಾಪಡೆಯವರು ನಾಲ್ಕು ಸೂಜಿಗಳ ಉತ್ತರಮುಖಿಯನ್ನು ಉಪಯೋಗಕ್ಕೆ ತಂದರು. ಇವರ ಮುಖ್ಯ ಉದ್ದೇಶವಾದರೂ ನಾಲ್ಕು ದಿಕ್ಕಿನಲ್ಲಿ ಸಮವಾಗಿ ಜಡಮಾನವನ್ನು ಹಂಚುವುದೇ ಆಗಿತ್ತು. ಇಷ್ಟಾದರೂ ಯಾವ ಉತ್ತರಮುಖಿಯೂ ದೋಷಮುಕ್ತವಾಗಿರಲಿಲ್ಲ. ಹಬೆ ಹಡಗುಗಳ ತಾಕಲಾಟದಲ್ಲಿ ಅವು ಹಾಳಾಗುತ್ತಿದ್ದುವು. 1862ರಲ್ಲಿ ಇ.ಎಸ್.ರಿಚಿ ಮತ್ತು 1866ರಲ್ಲಿ ಡಬ್ಲ್ಯೂ. ಆರ್. ಹ್ಯಾಮರ್ಸ್ಲಿ ಅವರು ಹಡಗುಗಳ ತಾಕಲಾಟದಿಂದ ಉಂಟಾಗುವ ಅಪಾಯವನ್ನು ತಪ್ಪಿಸಲು ಮತ್ತು ತಿರುಗಣೆಯ ಮೇಲೆ ಬೀಳುವ ತೂಕವನ್ನು ಕಡಿಮೆ ಮಾಡಲು ಕಾಂತವನ್ನು ಹೊತ್ತ ಸೂಜಿ ಬಿಲ್ಲೆ ಭಾಗಶಃ ನೀರಿನಲ್ಲಿ ತೇಲುವಂತೆ ಮಾಡಿದರು. ಈ ರೀತಿ ದ್ರವ ಉತ್ತರಮುಖಿ ಅಸ್ತಿತ್ವಕ್ಕೆ ಬಂದಿತು.

ರಿಚಿ ರಚಿಸಿದ ಉತ್ತರ ಮುಖಿಯನ್ನು ಅಮೆರಿಕದ ಮತ್ತು ರಾಯಲ್ ನೌಕಾಪಡೆಗಳು ಒಪ್ಪಿಕೊಂಡುವು. ಈ ಮಧ್ಯೆ ಲಾರ್ಡ್ ಕೆಲ್ವಿನ್ ನಿರ್ಮಿಸಿದ ಹೊಸತೊಂದು ಉತ್ತರಮುಖಿ ದ್ರವ ಉತ್ತರಮುಖಿಯ ಪ್ರಾಮುಖ್ಯವನ್ನು ಸ್ವಲ್ಪ ಕಾಲ ತಗ್ಗಿಸಿತು. ಆದರೂ 1906ರಲ್ಲಿ ದ್ರವ ಉತ್ತರಮುಖಿಯನ್ನು ಎಲ್ಲರೂ ಒಪ್ಪಿಕೊಂಡು ಉಪಯೋಗಿಸತೊಡಗಿದರು.

ಉತ್ತರಮುಖಿಗಿರುವ ದಿಕ್ಸೂಚಕಶಕ್ತಿ ಭೂಮಿಯ ಕಾಂತತ್ವದಿಂದ ಉಂಟಾದುದೆಂದು ತಿಳಿಸಿದವ ವಿಲಿಯಂ ಗಿಲ್ಬರ್ಟ್. ಭೂಮಿಯನ್ನು ಒಂದು ದೊಡ್ಡ ಅಯಸ್ಕಾಂತವೆಂದು ಭಾವಿಸಬಹುದು. ಇದರ ಅಕ್ಷ ಭೂಮಿಯ ಆವರ್ತನಾಕ್ಷಕ್ಕೆ $17^{o}$ಯಷ್ಟು ವಾಲಿಕೊಂಡಿದೆ.




**ಚಿತ್ರ 1. ಭೂಮಿಯ ಕಾಂತ ಅಕ್ಷ ಮತ್ತು ಭ್ರಮಣ ಅಕ್ಷಗಳ ನಿರೂಪಣೆ. ದಿಕ್ಪಾತ ರಿವನ್ನು ತೋರಿಸಿದೆ.**

$\theta$ $H\cos\theta$ $\sin\theta$ $\frac{1}{2}H\sin 2\theta$

ಕೇಂದ್ರದಲ್ಲಿ ಕಾಂತಾಕ್ಷ ಆವರ್ತನಾಕ್ಷದಿಂದ ಸು. 1125 ಕಿ.ಮೀ. ದೂರದಲ್ಲಿ ಹಾದುಹೋಗುತ್ತದೆ (ಚಿತ್ರ 1). ಉತ್ತರಮುಖಿಯ ಕಾಂತಸೂಚಕದ ಅಕ್ಷ ಭೂಕಾಂತ ಮಟ್ಟಬಲಕ್ಕೆ ಸಮಾನಾಂತರವಾಗಿ ನಿಲ್ಲುತ್ತದೆ. ಆ ಸ್ಥಳದಲ್ಲಿ ಕಾಂತಧ್ರುವಗಳ ಮತ್ತು ಭೌಗೋಳಿಕ ಧ್ರುವಗಳ ಮೂಲಕ ಹಾಯುವ ಎರಡು ಲಂಬ ಸಮತಲಗಳನ್ನು ಊಹಿಸಿಕೊಂಡಾಗ ಅವುಗಳ ಮಧ್ಯೆ ಏರ್ಪಡುವ ಕೋನದ ಹೆಸರು ದಿಕ್ಪಾತ ಅಥವಾ ವಿಚಲನೆ (ಡೆಕ್ಲಿನೇಷನ್ ಆರ್ ವೇರಿಯೇಷನ್). ಉತ್ತರಮುಖಿ ತೋರಿಸುವ ದಿಕ್ಕು ಕಾಂತೀಯ ಉತ್ತರ. ಸ್ಥಳದ ವಿಚಲನೆ ಗೊತ್ತಿದ್ದರೆ ಭೌಗೋಳಿಕ ಉತ್ತರವನ್ನು ನಿರ್ಧರಿಸುವುದು ಸುಲಭ. 1700ರ ಸುಮಾರಿಗೆ ನಾವಿಕರಿಗೆ ಸಹಾಯಕವಾಗುವಂಥ ವಿಚಲನೆ ಕೋಷ್ಟಕಗಳು ಸಿಕ್ಕುತ್ತಿದ್ದುವು.

ಉತ್ತರಮುಖಿ ತೋರಿಸುವ ದಿಕ್ಕು ಭೌಗೋಳಿಕ ಉತ್ತರವಲ್ಲವೆಂಬ ತಿಳಿವಳಿಕೆ ಚೀನೀಯರಿಗೆ 11ನೆಯ ಶತಮಾನದಲ್ಲೇ ಇದ್ದಿತೆಂಬ ಕಥೆಗಳೂ ಇವೆ. ಪ್ರಪಂಚದ ಯಾವ ಭಾಗದ ನಾವಿಕರಿಗೇ ಆಗಲಿ ಇಂಥ ತಿಳಿವಳಿಕೆ ಇದ್ದಿತೆಂಬ ವಿಷಯ ಗೊತ್ತಾಗುದು 1544ರಲ್ಲಿ ಜಾರ್ಜ್ ಹಾರ್ಟ್‌ಮನ್ ಎಂಬ ನಾವಿಕ ಬರೆದ ಪತ್ರದಿಂದ. ವಿಚಲನೆಯನ್ನು ಪತ್ತೆಹಚ್ಚಿದವ ಕೊಲಂಬಸ್ ಎಂದು ಹೇಳುವವರೂ ಇದ್ದಾರೆ. ಆದರೆ ಆತ ತನ್ನ ಮೊದಲ ಸಮುದ್ರಯಾನದಲ್ಲಿ ತೊಡಗುವುದಕ್ಕೆ ಮುಂಚೆಯೇ ಅವನಿಗೆ ಇದರ ವಿಚಾರ ಗೊತ್ತಿದ್ದಿತೆಂಬುದಕ್ಕೆ ಅನೇಕ ಆಧಾರಗಳಿವೆ.

ಹಡಗಿನ ಉತ್ತರಮುಖಿಯ ಲೋಪಗಳು: ಹಡಗಿನ ನಿರ್ಮಾಣದಲ್ಲಿ ಉಕ್ಕು ಮತ್ತು ಮೆದುಕಬ್ಬಿಣವನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸುತ್ತಾರೆ. ನಿರ್ಮಾಣದ ಸ್ಥಳ, ನಿರ್ಮಾಣದಲ್ಲಿ ಕಳೆದ ಕಾಲ ಮತ್ತು ಸಮುದ್ರಯಾನದ ಇತಿಹಾಸಕ್ಕನುಗುಣವಾಗಿ ಉಕ್ಕು ಸ್ಥಿರಕಾಂತತೆಯನ್ನು ಪಡೆಯುತ್ತದೆ.

ಭೂಮಿಯ ಕಾಂತಕ್ಷೇತ್ರದ ಪ್ರೇರಣೆಯಿಂದ ಮೆದು ಕಬ್ಬಿಣ ಅಸ್ಥಿರ ಕಾಂತತೆಯನ್ನು ಪಡೆಯುತ್ತದೆ. ಈ ಕಾರಣಗಳಿಂದ ಉತ್ತರ ಮುಖಿಯ ವಾಚನದಲ್ಲಿ ಲೋಪ ಉಂಟಾಗುತ್ತದೆ. ಇದರ ಪರಿಮಾಣವನ್ನು ಚಿತ್ರ 2ರ ನೆರವಿನಿಂದ ಅಂದಾಜು ಮಾಡಬಹುದು. ಹಡಗಿನ ಸ್ಥಿರಕಾಂತ ಮಹತ್ತ್ವ M ಆಗಿರಲಿ. ಇದಕ್ಕೂ ಭೂ ಕಾಂತ ಮಟ್ಟಬಲಕ್ಕೂ ಮಧ್ಯೆ ಇರುವ ಕೋನ ಎಂದಿಟ್ಟು ಕೊಳ್ಳೋಣ. ಆಗ ಉತ್ತರ ಮುಖಿಯ ಸೂಜಿಯನ್ನು ತಿರುಗಿಸುವ ಬಲ $M\sin\theta$ ವನ್ನು ಅನುಸರಿಸಿ ಹೆಚ್ಚು ಕಡಿಮೆಯಾಗುತ್ತದೆ. ಇದು 0'–180' ಒಳಗೆ ಇರುವಾಗ ಒಂದು ದಿಕ್ಕಿನಲ್ಲೂ 180'–360' ಒಳಗೆ ಇರುವಾಗ ಮತ್ತೊಂದು ದಿಕ್ಕಿನಲ್ಲೂ ವರ್ತಿಸುತ್ತದೆ. ಇದರಿಂದ ಈ ದೋಷದ ಹೆಸರು ಅರ್ಧವೃತ್ತದೋಷ (ಸೆಮಿಸರ್ಕ್ಯುಲರ್ ಎರರ್). ಹಡಗು ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಚಲಿಸುವಾಗ ಅರ್ಧವೃತ್ತದೋಷದ ಪರಿಮಾಣ ಕಡಿಮೆ. ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಚಲಿಸುವಾಗ ಇದು ಅಧಿಕ.




**ಚಿತ್ರ 2.**

ಭೂಕಾಂತ ಕ್ಷೇತ್ರದ ಪ್ರೇರಣೆಯಿಂದ ಮೆದುಕಬ್ಬಿಣ ಪಡೆಯುವ ಕಾಂತ ಮಹತ್ತ್ವ ವನ್ನು ಅನುಸರಿಸಿ ಹೆಚ್ಚು ಕಡಿಮೆಯಾಗುತ್ತದೆ. ಉತ್ತರ ಮುಖಿಯ ಸೂಜಿಯನ್ನು ತಿರುಗಿಸುವ ಬಲ ಆಗುತ್ತದೆ. ಇದನ್ನು ಎಂದು ಬರೆಯಬಹುದು. $180^{o}$ಯ ಮೂಲಕ $2\theta$ ಬದಲಾಗುವಾಗ ಇದರ ಚಿಹ್ನೆ ಬದಲಾಗುತ್ತದೆ. ಅಂದರೆ $90^{o}$ ಯ ಮೂಲಕ ಬದಲಾದರೆ ಉತ್ತರ ಮುಖಿಯ ವಾಚನದ ಲೋಪದ ಚಿಹ್ನೆ ಬದಲಾಗುತ್ತದೆ ಎಂದ ಹಾಗಾಯಿತು. ಇದಕ್ಕಾಗಿ ಈ ದೋಷ ದೋಷ ಪಾದಲೋಪ (ಕ್ವಾಡ್ರಂಟಲ್ ಎರರ್) ಎಂದು ಕರೆಯುತ್ತಾರೆ. ಹಡಗು ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಚಲಿಸುವಾಗ ಪಾದದೋಷ ಪರಿಮಾಣ ಕಡಿಮೆ. ವಾಯವ್ಯ, ಈಶಾನ್ಯ, ಆಗ್ನೇಯ ಮತ್ತು ನೈಋತ್ಯ ದಿಕ್ಕಿನಲ್ಲಿ ಹಡಗು ಚಲಿಸುತ್ತಿದ್ದರೆ ಇದು ಅಧಿಕ. ಅರ್ಧವೃತ್ತ ಮತ್ತು ಪಾದದೋಷಗಳನ್ನು ನಿವಾರಿಸಲು ದಂಡಕಾಂತಗಳನ್ನೂ ಮೆದುಕಬ್ಬಿಣದ ಗೋಳಗಳನ್ನೂ ಉಪಯೋಗಿಸುತ್ತಾರೆ.

**ನವೀನ ಉತ್ತರಮುಖಿ:** ಇದರ ರಚನೆ ಚಿತ್ರ 3ರಲ್ಲಿದೆ. ಅಭ್ರಕದ ಸೂಚಿ ಬಿಲ್ಲೆಯ ಕೆಳಗೆ ಕಾಂತ ಸೂಜಿಗಳ ಕಟ್ಟುಗಳಿವೆ. ಇವನ್ನು ವಿವಿಧ ರೀತಿಯಲ್ಲಿ ಅಳವಡಿಸುವುದುಂಟು. ಯಾವುದೇ ರೀತಿಯ ರಚನೆಯಾದರೂ ಅದು ದಿಕ್ಸೂಚನ ಬಲದ ಪ್ರಭಾವಕ್ಕೆ ಅತಿನಿಕಟವಾಗಿ



**ಚಿತ್ರ 3.**

ಒಳಗಾಗುವಂತಿರಬೇಕು. ಬೋಗುಣಿಯ ಮಧ್ಯೆ ಲಂಬವಾಗಿ ನಿಂತಿರುವ ಜ್ಯೂಯಲ್ ಇರುವ ತಿರುಗಣೆಯ ಮೇಲೆ ಗುರುತ್ವ ಕೇಂದ್ರ ಸರಿಯಾಗಿ ಬರುವಂತೆ ಸೂಚಿಬಿಲ್ಲೆ ಇದೆ. ಬೋಗುಣಿಯಲ್ಲಿ ತುಂಬಿರುವ ನೀರು ಮತ್ತು ಆಲ್ಕೊಹಾಲ್ ಮಿಶ್ರಣದಲ್ಲಿ ಸೂಚಿಬಿಲ್ಲೆ ಭಾಗಶಃ ತೇಲುತ್ತದೆ. ಇದರಿಂದ ತಿರುಗಣೆಯ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಬೋಗುಣಿ ಜಿಂಬಾಲುಗಳ ಮೇಲೆ ನಿಂತಿದೆ. ಹಡಗು ಹೇಗೆ ಓಲಾಡಿದರೂ ಸೂಚಿಬಿಲ್ಲೆ ಮಾತ್ರ ಮಟ್ಟತಲದಲ್ಲಿರುತ್ತದೆ. ಬೋಗುಣಿಯಲ್ಲಿರುವ ದ್ರವ ಸೂಚಿಬಿಲ್ಲೆಯ ಕಂಪನಗಳನ್ನು ಶಮನಗೊಳಿಸುತ್ತದೆ.

ಆದ್ದರಿಂದ ದಿಕ್ಸೂಚನೆಯಲ್ಲಿ ವಿಳಂಬವಾಗುವುದಿಲ್ಲ. ಹಡಗಿನ ಚಲನದಿಕ್ಕನ್ನು ಬೋಗುಣಿಯ ಒಳಮೈಯಿಂದ ಹೊರಗೆ ಚಾಚಿರುವ ದಾಂಡಿಗ ವಾಚಕ (L) ತಿಳಿಸುತ್ತದೆ. ಇದು ಹಡಗಿನ ಮಧ್ಯರೇಖೆಗೆ ಸಮಾನಾಂತರವಾಗಿದೆ. ಜಿಂಬಾಲುಗಳಿರುವ ಪೀಠದ ಹೆಸರು ಬಿನಕಲ್. ಹಡಗಿನ ಕಾಂತತೆಯಿಂದ ಉತ್ತರಮುಖಿಯ ವಾಚನದಲ್ಲಿ ಕಾಣುವ ಲೋಪಗಳನ್ನು ನಿವಾರಿಸಲು ಉಪಯೋಗಿಸುವ ಕಾಂತದಂಡಗಳನ್ನು ಮತ್ತು ಮೆದುಕಬ್ಬಿಣದ

ಗೋಳಗಳನ್ನು ಜೋಡಿಸಲು ಅನುಕೂಲವಾಗುವಂತೆ ಇದರಲ್ಲಿ ತಕ್ಕ ಜಾಗಗಳಿವೆ. ಸೂಚಿಬಿಲ್ಲೆಯ ವೃತ್ತಪಟ್ಟಿಯಲ್ಲಿ 360 ಸಮಭಾಗಗಳಿವೆ. ಹಡಗಿನ ಚಲನ ದಿಕ್ಕಿನಲ್ಲಿ ಸೂಕ್ಷ್ಮ ಬದಲಾವಣೆ ಮಾಡುವುದು ಈಗ ಸಾಧ್ಯ. ಹಿಂದೆ ಯಾನ ಕೌಶಲ ಇಷ್ಟು ಸುಧಾರಿಸಿರಲಿಲ್ಲ. ಆದ್ದರಿಂದ ಆಗ ಸೂಚಿಬಿಲ್ಲೆಯಲ್ಲಿ ನಾಲ್ಕು ದಿಕ್ಕುಗಳನ್ನು ಮಾತ್ರ ತೋರಿಸಿರುತ್ತಿದ್ದರು. ಯಾನಕೌಶಲ ಸುಧಾರಿಸದೆ ಪಟ್ಟಿಯ ದಿಕ್ಕುಗಳ ಸಂಖ್ಯೆ ಹೆಚ್ಚಿದರೆ ಅದು ಅರ್ಥಪೂರ್ಣವಾಗಿರುವುದಿಲ್ಲ. ಎಂಟು ಮತ್ತು ಮೂವತ್ತೆರಡು ದಿಕ್ಕುಗಳನ್ನು ತೋರಿಸುವುದು ಮಧ್ಯಕಾಲದಲ್ಲಿ ವಾಡಿಕೆಗೆ ಬಂತು. ಇವುಗಳಿಗೆ ಸೂಚಿಬಿಂದುಗಳೆಂದು (ಕಾಂಪಸ್ ಪಾಯಿಂಟ್ಸ್) ಹೆಸರು. (ಚಿತ್ರ 4,5)



ಚಿತ್ರ 4.

ಉತ್ತರಮುಖಿಯ ಬೋಗುಣಿಯ ತಳ ತೂಕವಾಗಿದೆ. ಹೀಗಿರುವುದು ಆವಶ್ಯಕವೂ ಆಗಿದೆ. ಆದರೆ ಹಡಗು ವೇಗೋತ್ಕರ್ಷಗೊಂಡು ಚಲಿಸಲಾರಂಭಿಸಿದರೆ ಬೋಗುಣಿ ನಿಜವಾದ ಲಂಬದಲ್ಲಿ ನಿಲ್ಲುವುದಿಲ್ಲ. ಅದು ಗುರುತ್ವ ಮತ್ತು ಹಡಗಿನ ವೇಗೋತ್ಕರ್ಷಗಳ ಫಲಿತದ ಜಾಡಿನಲ್ಲಿ ನಿಲ್ಲುತ್ತದೆ. ಆಗ ಉತ್ತರಮುಖಿಯ ವಾಚನದಲ್ಲಿ ಲೋಪ ಉಂಟಾಗುತ್ತದೆ. ಸಾಧಾರಣ ವೇಗದಲ್ಲಿ ಚಲಿಸುವ ಹಡಗುಗಳಲ್ಲಿ ವೇಗೋತ್ಕರ್ಷದಿಂದ ವಾಚನದಲ್ಲಿ ಉಂಟಾಗುವ ಲೋಪ ಅಂಥ ಅಪಾಯಕ್ಕೇನೂ ದಾರಿ ಮಾಡಿಕೊಡುವುದಿಲ್ಲ. ಆದರೆ ವೇಗದಿಂದ ಚಲಿಸುವ ಹಡಗುಗಳಲ್ಲಿ ಇದನ್ನು ಕಡೆಗಣಿಸುವಂತಿಲ್ಲ. ಇದರ ನಿವಾರಣೆಗಾಗಿ ಗೈರೊಸ್ಕೋಪಿನ ನೆರವಿನಿಂದ ಯಾವಾಗಲೂ ಮಟ್ಟಸವಾಗಿಯೇ ನಿಲ್ಲುವ ಅಟ್ಟಣೆಯ ಮೇಲೆ ಜಿಂಬಾಲುಗಳನ್ನು ಜೋಡಿಸುತ್ತಾರೆ. ಇಂಥ ವ್ಯವಸ್ಥೆಯುಳ್ಳ ಉತ್ತರ ಮುಖಿಗಳ ಹೆಸರು ಗೈರೊಕಾಂತ ದಿಕ್ಸೂಚಿಗಳು.

ಚಿತ್ರ 5.

**ವಿಮಾನಗಳ ಉತ್ತರಮುಖಿ:** ವಿಮಾನಗಳು ಅತಿವೇಗದಿಂದ ಚಲಿಸುತ್ತವೆ, ಮತ್ತು ಉರುಟಣೆ ಹೊಡೆಯುತ್ತವೆ. ಆದ್ದರಿಂದ ಸಾಮಾನ್ಯ ಉತ್ತರಮುಖಿಗಳನ್ನು ಇಲ್ಲಿ ಉಪಯೋಗಿಸುವುದಕ್ಕಾಗುವುದಿಲ್ಲ. ಗೈರೊಕಾಂತ ದಿಕ್ಸೂಚಿಗಳನ್ನು ಉಪಯೋಗಿಸಬಹುದು. ಆದರೆ ಅವುಗಳ ಗಾತ್ರ ಮತ್ತು ತೂಕ ಹೆಚ್ಚು. ಅವುಗಳ ಸೂಚಿಬಿಲ್ಲೆಯ ಆವರ್ತಕಾಲವೂ ತಕ್ಕುದಾಗಿರುವುದಿಲ್ಲ. ಕಾಂತಸೂಜಿಗಳ ಕಟ್ಟಿಗೆ ಬದಲಾಗಿ ಹೆಚ್ಚು ಕಾಂತಮಹತ್ತ್ವವುಳ್ಳ ಗಿಡ್ಡಕಾಂತದಂಡಗಳನ್ನು ಸೂಚಿಬಿಲ್ಲೆಯಿಂದ ದ್ರವದಲ್ಲಿ ನೇತು ಹಾಕಿದರೆ ಆವರ್ತಕಾಲ ತಗ್ಗುತ್ತದೆ. ನೇತುಹಾಕಲು ಬಳಸುವ ಕಾಂತತೆಯಿಲ್ಲದ ತಂತಿಗಳಲ್ಲಿ ಹರಿಯುವ ಸುರುಳಿ (ಎಡ್ಡಿ) ವಿದ್ಯುತ್ ಪ್ರವಾಹದಿಂದ ಕಂಪನಗಳು ಅತಿಬೇಗ ಶಮನಗೊಳ್ಳುತ್ತವೆ. ಹೀಗಿದ್ದರೆ ವಿಮಾನ ಉರುಟಣೆ ಹೊಡೆದರೂ ಸೂಚಿಬಿಲ್ಲೆ ಕ್ಷಣಾರ್ಧದಲ್ಲಿ ತಿರುಗಿ ಸಮಸ್ಥಿತಿಗೆ ಬರುತ್ತದೆ. ಇಂಥ ಉತ್ತರಮುಖಿಗಳ ಹೆಸರು ಅನಿಯತಕಾಲಿಕ (ಎಪೀರಿಯಾಡಿಕ್) ಉತ್ತರಮುಖಿಗಳು. ವಿಮಾನ ಚಲನವೇಗ ಮತ್ತು ಉರುಟಣ ಸಾಮರ್ಥ್ಯ ಹೆಚ್ಚುತ್ತಲೇ ಹೋಗಿವೆ. ಗೈರೊಕಾಂತ ದಿಕ್ಸೂಚಿಯಾಗಲೀ ಅನಿಯತಕಾಲಿಕ ಉತ್ತರಮುಖಿಯಾಗಲೀ ಚಲನವೇಗ ಮತ್ತು ಉರುಟಣೆಯಲ್ಲಿ ಹೆಚ್ಚಳಿಕೆ ಇರುವ ವಿಮಾನಗಳಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಇಲ್ಲಿ ಉಪಯೋಗಿಸುವ ಉತ್ತರಮುಖಿಯ ಹೆಸರು ಗೈರೊಫ್ಲಕ್ಸ್ ಗೇಟ್ ದಿಕ್ಸೂಚಿ. ಇದು ಗೈರೊಕಾಂತ ದಿಕ್ಸೂಚಿಯ ಅತಿ ಸುಧಾರಿತ ಮಾದರಿ. ಇದರಲ್ಲಿ ದಿಕ್ಸೂಚಕ ರಚನೆ ಸ್ಥಾಯೀ ಗೈರೊಸ್ಕೋಪಿನ ನೆರವಿನಿಂದ ಯಾವಾಗಲೂ ಮಟ್ಟಸವಾಗಿಯೇ ನಿಲ್ಲುತ್ತದೆ. ಉರುಟಣೆಯಿಂದ ಇದರ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ಒಂದು ಎಲೆಕ್ಟ್ರಾನಿಕ್ ಉತ್ತೇಜಕ ದಿಕ್ಸೂಚಕ ರಚನೆಯ ಆವರಣದಲ್ಲಿ ಭೂಕಾಂತಮಟ್ಟ ಬಲವನ್ನು ವಿಶೇಷವಾಗಿ ಹೆಚ್ಚಿಸುತ್ತದೆ. ಆದ್ದರಿಂದ ದಿಕ್ಸೂಚಿಯ ಕೆಲಸ ಸಮರ್ಪಕವಾಗಿ ನಡೆಯುತ್ತದೆ. ಈ ಉಪಕರಣವನ್ನು ಭೂಕಾಂತ ಧ್ರುವಗಳಿಗೆ 320 ಕಿ.ಮೀ. ಸಮೀಪವಿರುವಾಗಲೂ ನಿಶ್ಚಿಂತೆಯಿಂದ ಉಪಯೋಗಿಸಬಹುದು. ಬೇರೆ ಉತ್ತರಮುಖಿಗಳ ವಾಚಕಗಳಾದರೋ ಧ್ರುವಗಳಿಗೆ 1,920 ಕಿಮೀ. ಒಳಗೆ ಕರಾರುವಾಕ್ಕಾಗಿರುವುದಿಲ್ಲ. (ಎಸ್.ಎ.ಎಚ್.)

**ಭೂವಿಜ್ಞಾನದಲ್ಲಿ:** ಉತ್ತರಮುಖಿಯಲ್ಲಿ ಎರಡು ವಿಧ: 1 ಮೋಜಣಿಗೆ (ಸರ್ವೆ) ಉಪಯೋಗಿಸುವ ಉತ್ತರಮುಖಿ. 2 ಮುಪ್ಪಟ್ಟಿಯ ಉತ್ತರಮುಖಿ (ಅಶ್ರಗ ಕಂಪಾಸ್). ಮೋಜಣಿಗಾರರ ಉತ್ತರಮುಖಿಯನ್ನು ಸಾಮಾನ್ಯವಾಗಿ ಗಣಿಮೊದಲಾದುವನ್ನು ಮೋಜಣಿ ಮಾಡುವಾಗ, ಕೆಲವುವೇಳೆ ಶೃಂಗಕೋನ ಮತ್ತು ಸಮತಲಕೋನಗಳನ್ನು ಅಳೆಯಲು ಉಪಯೋಗಿಸುತ್ತಾರೆ. (ಕೆ.ಸಿ.ಆರ್.)

**ಸೈನ್ಯಖಾತೆಯಲ್ಲಿ:** ನೆಲ ಪಡೆಯ ಸೈನಿಕನ ಶಿಕ್ಷಣವಿಭಾಗಗಳಲ್ಲಿ ಭೂಪಟವೀಕ್ಷಣೆ ಒಂದು ಮುಖ್ಯಾಂಶ. ಹೊಸನೆಲದಲ್ಲಿ ತನ್ನ ಇರವನ್ನು ದೃಢಪಡಿಸಿಕೊಳ್ಳಲು ತಾನು ಕಂಡ ಭಾಗದ ಸೈನಿಕಮಾಹಿತಿಗಳನ್ನು ವರಿಷ್ಠಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಯಪಡಿಸಲು ಈ ಶಿಕ್ಷಣ ಬಲು ಅವಶ್ಯ. ಇದರಲ್ಲಿ ಭೂಪಟದೊಡನೆ ಸೈನಿಕ ಬಳಸುವ ಇನ್ನೊಂದು ಅತಿಮುಖ್ಯ ಉಪಕರಣ ಉತ್ತರಮುಖಿ (ಪ್ರಿಸ್ಮ್ಯಾಟಿಕ್ ಕಂಪಾಸ್). ಉಪಕರಣಕ್ಕೆ ಆಳವಡಿಸಿರುವ ಅಶ್ರಗ ಆಕಾರದ ಚೌಕಟ್ಟಿನೊಳಗೆ ಭೂತಕನ್ನಡಿ ಇದೆ. ನೋಡಬೇಕೆಂದಿರುವ ವಸ್ತುವನ್ನು ಈ ಭೂತಕನ್ನಡಿ ಮೂಲಕ ದೃಷ್ಟಿಸಿದಾಗ ವಸ್ತುವಿನ ಕಾಂತ ದಿಙ್ಮಾನ ಅದರೊಂದಿಗೇ ಕಾಣುತ್ತದೆ–ಆದ ಕಾರಣ ಉಪಕರಣದ ರಚನೆಯಲ್ಲಿನ ವೈಶಿಷ್ಟ್ಯ. ಹೀಗೆ ವಸ್ತು ಎಲ್ಲೇ ಇದ್ದರೂ ಅದರ ಕಾಂತ ದಿಙ್ಮಾನವನ್ನು ಸೈನಿಕ ತನ್ನ ನೆಲೆಯಿಂದಲೇ ಅಳೆಯಬಲ್ಲ. ಇದನ್ನು ಮುಂದೆ ಕೆಲವು ಸುಲಭ ಗಣನೆಗಳಿಂದ ಬೇಕಾದಂತೆ ಪರಿವರ್ತಿಸಿಕೊಂಡು ಭೂಪಟದ ಮೇಲೆ ತನ್ನ ಇರವನ್ನು ಕಂಡುಕೊಳ್ಳಬಹುದು. ಇದರ ವಿಪರ್ಯಯಕ್ರಮವೂ ಬೇಕಾಗುತ್ತದೆ. ಎಂದರೆ, ಸೈನಿಕನ ನೆಲೆ ಮತ್ತು ಉದ್ದೇಶಿತ ಗುರಿಯ ನೆಲೆ ಭೂಪಟದ ಮೇಲೆ ಗೊತ್ತಿದೆ. ಆದರೆ ನೆಲದ ಮೇಲೆ ಗುರಿಗೆ ಸಾಗುವುದು ಹೇಗೆ? ಆಗ ಭೂಪಟದಲ್ಲಿ ಗುರಿಯ ದಿಙ್ಮಾನವನ್ನು ಅಳೆದು ಅದನ್ನು ಕಾಂತ ದಿಙ್ಮಾನಕ್ಕೆ ಸುಲಭ ಗಣನೆಗಳಿಂದ ಪರಿವರ್ತಿಸಿ ದೊರೆಯುವ ಬೆಲೆಗೆ ಉತ್ತರಮುಖಿಯನ್ನು ಅಳವಡಿಸಿ ಅದು ತೋರುವ ದಿಕ್ಕಿಗೆ ಗಮಿಸಬೇಕು. ಮೊದಲಿನ ಕ್ರಮದ ಹೆಸರು ನೆಲದಿಂದ ಭೂಪಟಕ್ಕೆ; ಎರಡನೆಯದರ ಹೆಸರು ಭೂಪಟದಿಂದ ನೆಲಕ್ಕೆ.*

**ಉತ್ತರಮೇರು ವಲಯ:** ಸ್ಥೂಲವಾಗಿ ಉತ್ತರ ಅಕ್ಷಾಂಶ $66^{o}33^{1}$ ಗೆ ಉತ್ತರದಲ್ಲಿ, ಉತ್ತರಮೇರುವಿನ ಮೇಲೆ ಹಾಗೂ ಅದರ ಸುತ್ತಮುತ್ತ ಇರುವ ಪ್ರದೇಶ (ಆರ್ಕ್‌ಟಿಕ್ ರೀಜನ್ಸ್). ಉತ್ತರ ಶೀತವಲಯವೆಂದೂ ಕರೆಯುವುದಿದೆ. $66^{o}33^{1}$ ಉತ್ತರ ಅಕ್ಷಾಂಶವಾದ ಉತ್ತರಮೇರು ವೃತ್ತ ಇದರ ಭೌಗೋಳಿಕ ಮೇರೆಯೇನೂ ಅಲ್ಲ. ಉತ್ತರಮೇರುವಿನಿಂದ ಹಿಡಿದು ವೃಕ್ಷಬೆಳೆವಣಿಗೆಯ ಉತ್ತರದ ಅಂಚಿನವರೆಗೆ, ಒಂದೇ ಬಗೆಯ ಸ್ವಾಭಾವಿಕ ಲಕ್ಷಣಗಳಿರುವ ಪ್ರದೇಶಗಳಾದ ಗ್ರೀನ್ ಲೆಂಡ್, ಸ್ಪಿಟ್ಸ್‌ಬರ್ಗನ್, ಇತರ ಉತ್ತರಮೇರು ದ್ವೀಪಗಳು, ಸೈಬೀರಿಯದ ಉತ್ತರದ ಸಮುದ್ರತೀರ, ಅಲಾಸ್ಕ ಹಾಗೂ ಕೆನಡಗಳ ಉತ್ತರದ ಅಂಚು, ಲ್ಯಾಬ್ರಡಾರ್ ತೀರ, ಐಸ್‌ಲೆಂಡಿನ ಉತ್ತರಾರ್ಧ, ಯುರೋಪಿನ ಆರ್ಕ್‌ಟಿಕ್ ಸಮುದ್ರತೀರ–ಇಷ್ಟು ಇದರ ವ್ಯಾಪ್ತಿ.

ಈ ಭೂಪ್ರದೇಶಗಳ ನಡುವೆ ಇರುವ ಖಂಡಾಂತರ ದಿಣ್ಣೆಯ ಮೇಲೆ ಅನೇಕ ದ್ವೀಪಗಳಿವೆಯಾದರೂ ಉತ್ತರಮೇರು ಬೋಗುಣಿಯಲ್ಲಿ ಯಾವ ದ್ವೀಪಗಳೂ ಕಂಡುಬಂದಿಲ್ಲ.

ಉತ್ತರಮೇರುವಿನ ಭೂಪ್ರದೇಶಗಳು ಬೆಟ್ಟಗುಡ್ಡಮಯವಾಗಿವೆ. ಇವುಗಳ ಮೈಮೇಲೆಲ್ಲ ಕಿಗ್ಗಲ್ಲು ರಾಶಿರಾಶಿಯಾಗಿ ಹರಡಿದೆ. ಛಿದ್ರ ಸಮುದ್ರತೀರಗಳಲ್ಲಿ ಅಲ್ಲಲ್ಲಿ ಮುಖಜಭೂಮಿಗಳೇರ್ಪಟ್ಟಿವೆ.

**ವಾಯುಗುಣ:** ಉತ್ತರಮೇರು ವೃತ್ತವನ್ನು ಸಾಮಾನ್ಯವಾಗಿ ಸಮಶೀತೋಷ್ಣ ಹಾಗೂ ಶೀತಾವಲಯಗಳ ಎಲ್ಲೆಯ ರೇಖೆಯನ್ನಾಗಿ ಪರಿಗಣಿಸಬಹುದಾದರೂ ಬೇಸಿಗೆಯಲ್ಲಿ 27° ಫ್ಯಾ. ಗಿಂತಲೂ ಚಳಿಗಾಲದಲ್ಲಿ 0° ಸೆ. ಗಿಂತಲೂ ಕಡಿಮೆ ಉಷ್ಣತೆಯಿರುವ ಭಾಗಗಳು ವೈಜ್ಞಾನಿಕ ಹಾಗೂ ಸೈನಿಕ ಕಾರ್ಯಾಚರಣೆ ನಡೆಸುವವರ ದೃಷ್ಟಿಯಿಂದ ಶೀತಪ್ರದೇಶ. ನಾಲ್ಕು ತಿಂಗಳ ಬೇಸಗೆ ಹೊಂದಿದ್ದು $27^{o}$ ಸೆ. (50° ಫ್ಯಾ.) ಉಷ್ಣತೆಯಿದ್ದರೆ ಅಂಥ ಪ್ರದೇಶ ಉಪಮೇರು (ಸಬ್'–ಆರ್ಕ್‌ಟಿಕ್) ವಲಯವೆನಿಸುತ್ತದೆ.

ಉತ್ತರ ಅಲಾಸ್ಕ, ಯೂಕಾನ್, ಸೈಬೀರಿಯದಲ್ಲಿನ ಯಕೂಟ್ ಅತ್ಯಂತ ಚಳಿಪ್ರದೇಶಗಳು. ಉತ್ತರಾರ್ಧಗೋಳದಲ್ಲೇ ಪರಮಾವಧಿ ಚಳಿ ಇರುವುದು ಯಕೂಟ್‍ನಲ್ಲಿ. ಉತ್ತರಮೇರುವೃತ್ತ ದಿಂದ 320 ಕಿ.ಮೀ. ಮೈಲಿ ದಕ್ಷಿಣಕ್ಕಿರುವ ಈ ಪ್ರದೇಶದಲ್ಲಿ ಬೇಸಿಗೆಯಲ್ಲಿ (ನೆರಳಿನಲ್ಲಿ) 56$^{o}$ ಸೆ. ಉಷ್ಣತೆ: ಆದರೆ ಚಳಿಗಾಲದಲ್ಲಿ ಆಗಾಗ್ಗೆ –56$^{o}$ ಸೆ. ನಷ್ಟು ಕಡಿಮೆ. ಇದನ್ನುಳಿದು ಬೇರೆ ಯಾವ ಉತ್ತರಮೇರು ಪ್ರದೇಶದಲ್ಲೂ–33$^{o}$ ಸೆ. ಗಿಂತ ಕಡಿಮೆ ಉಷ್ಣತೆ ಇರುವುದಿಲ್ಲ. ಉತ್ತರಮೇರುವಿನಲ್ಲಿ–56$^{o}$ ಸೆ. ಕನಿಷ್ಠ ಗೆರೆ. ಉತ್ತರಮೇರುವಿನ ಭೂಪ್ರದೇಶದಲ್ಲಿ ಬೇಸಿಗೆಯಲ್ಲಿ ಉಷ್ಣತೆ ಯಾವಾಗಲಾದರೊಮ್ಮೆ 47$^{o}$ ಸೆ. ಇರುವುದುಂಟು. ಯೂಕಾನಿನಲ್ಲಿ 56$^{o}$ ಸೆ. (ನೆರಳಿನಲ್ಲಿ) ಬೇಸಗೆ ಉಷ್ಣತೆ. ಇಷ್ಟೊಂದು ಉಷ್ಣತೆ ಶೀತವಲಯ ಪ್ರದೇಶದಲ್ಲಿ ಕಂಡುಬರುವುದು ಆಶ್ಚರ್ಯವೆನಿಸಬಹುದಾದರೂ ಇದು ಸತ್ಯ. ಇಲ್ಲಿನ ತಗ್ಗು ಪ್ರದೇಶಗಳಲ್ಲಿ ಬೇಸಗೆಯಲ್ಲಿ ಕೆಲವು ಸಮಯದಲ್ಲಿ ಸೂರ್ಯಕಿರಣ ಬಲು ಪ್ರಖರ. ಈ ಪ್ರದೇಶ ಸಮುದ್ರಮಾರುತಗಳ ಹಾಗೂ ಮಂಜುಮುಸುಕಿನ ಪರ್ವತಾವಳಿಗಳಿಂದ ಬೀಸಿಬರುವ ಮಾರುತಗಳ ಪ್ರಭಾವದಿಂದ ದೂರವಿರುವುದೇ ಇದಕ್ಕೆ ಕಾರಣ.

ಈ ಪ್ರದೇಶದ ಅನೇಕ ಕಡೆಗಳಲ್ಲಿ ಬಿರುಗಾಳಿಗಳಿಲ್ಲ. ಚಂಡಮಾರುತಗಳಂತೂ ಇಲ್ಲವೇ ಇಲ್ಲ. ಪ್ರಸ್ಥಭೂಮಿ, ಪರ್ವತ ಪ್ರದೇಶ ಹಾಗೂ ಸಮುದ್ರತೀರಗಳಲ್ಲಿ ಮಾತ್ರ ಕೊಂಚ ಬಿರುಸಾಗಿ ಗಾಳಿ ಬೀಸುವುದುಂಟು.

ಇಲ್ಲಿನ ಹಿಮವೃಷ್ಟಿವನ್ನು ಅಳೆಯುವುದು ಕಷ್ಟ ಮಳೆಯೂ ಕಡಿಮೆ. ಕೆನಡ, ಅಲಾಸ್ಕಗಳಲ್ಲಿ ಬೀಳುವ ಬೇಸಿಗೆ ಮಳೆಯನ್ನೂ ಚಳಿಗಾಲದ ಹಿಮವೃಷ್ಟಿವನ್ನೂ ಸೇರಿಸಿದರೂ ವರ್ಷಕ್ಕೆ 25 ಸೆಂ.ಮೀ.ಗಳಿಗಿಂತ ಹೆಚ್ಚೇನೂ ಆಗುವುದಿಲ್ಲ. ಸೈಬೀರಿಯದ ತಗ್ಗು ಪ್ರದೇಶಗಳಲ್ಲಿ ಇವು ಇನ್ನೂ ಕಡಿಮೆ.

ಉತ್ತರಮೇರು ಪ್ರದೇಶಗಳಲ್ಲಿ ಹಿಮನದಿಗಳು ಕಡಿಮೆ. 3050ಮೀ ಎತ್ತರದ ಪ್ರದೇಶಗಳಲ್ಲಿ ಕೆಲವು ಹಿಮನದಿಗಳಿವೆ.

ಉತ್ತರಮೇರು ದ್ವೀಪಗಳಲ್ಲೂ ತೀರಪ್ರದೇಶಗಳಲ್ಲಿ ಆಗಾಗ್ಗೆ ಮಂಜುಕವಿಯುವುದುಂಟು. ಬೇಸಿಗೆಯಲ್ಲಿ ನೆಲದ ಉಷ್ಣತೆ 44.4$^{o}$ ಸೆ. ಇದ್ದರೆ, ಹತ್ತಿರದ ಸಮುದ್ರದ್ದು 16.7$^{o}$ ಸೆ. ಉಷ್ಣತೆಯಲ್ಲಿನ ಈ ವ್ಯತ್ಯಾಸದ ಪರಿಣಾಮವೇ ಸಮುದ್ರದ ಮಂಜು. ಇದು ಸಮುದ್ರತೀರದಲ್ಲಿ ದಟ್ಟ ಹಾಗೂ ಸಾಮಾನ್ಯ.

ಇಲ್ಲಿನ ಚಳಿಗಾಲಗಳು ದೀರ್ಘ ಅತಿಶೀತಕರ. ಬೇಸಗೆ ಕಿರುದಾಗಿದ್ದರೂ ಹೆಚ್ಚು ಸೆಕೆ. ಬೇಸಗೆಯಲ್ಲಿ ಸೈಬೀರಿಯದ ತೀರಗಳು ಸಾಮಾನ್ಯವಾಗಿ ನದಿಗಳಿಂದ ಬೆಚ್ಚನೆಯ ನೀರು ಪಡೆಯುವುದರಿಂದ ಅಲ್ಲಿ ಹಿಮ ಇರುವುದಿಲ್ಲ. ವರ್ಷದಲ್ಲಿ ಹೆಚ್ಚು ಕಾಲ ಕಡಲಿನ ಮೇಲ್ಭಾಗ ಹಿಮಾಚ್ಛಾದಿತವಾಗಿರುವುದರಿಂದಲೂ ನೀರು ಆವಿಯಾಗುವುದು ಕಡಿಮೆಯಾದ್ದ ರಿಂದಲೂ ನದಿಗಳಿಂದ ವರ್ಷೇ ವರ್ಷೇ ಹೊಸ ನೀರು ಬಂದು ಸೇರುವುದರಿಂದಲೂ ಆರ್ಕ್‍ಟಿಕ್ ಸಾಗರದ ನೀರಿನ ಲವಣತೆ ಕಡಿಮೆ. ಪರಿಣಾಮವಾಗಿ ನೀರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತದೆ. ಅಲಾಸ್ಕ ಹಾಗೂ ಸೈಬೀರಿಯಗಳ ಬಳಿಯ ನೀರು ಸ್ಪಿಟ್ಸ್‍ಬರ್ಗನ್ ಮತ್ತು ಗ್ರೀನ್‍ಲೆಂಡ್ ಕಡೆಗೆ ಹರಿದು, ಅಲ್ಲಿ ಹಿಮದಿಂದ ಒಡಗೂಡಿ ದಕ್ಷಿಣದ ಕಡೆಗೆ ಶೀತಸಾಗರ ಪ್ರವಾಹಗಳಾಗಿ ಹರಿಯುತ್ತದೆ.

ಇಲ್ಲಿನ ವಿಚಿತ್ರ ವಾಯುಗುಣದಿಂದಾಗಿ ಮಾನವ ಇಲ್ಲಿ ಬಲು ಎಚ್ಚರಿಕೆಯಿಂದ ವಾಸಮಾಡಬೇಕು. ವಸಂತ ಋತುವಿನ ಆವಿರ್ಭಾವ ನಿಧಾನವಾದರೂ ಅದು ಬಂದ ಕೂಡಲೆ ಎಲ್ಲೆಲ್ಲೂ ಬಿಳುಪೇ ಕಂಡು ಬರುವುದರಿಂದ ಮಂಜಿನ ಕುರುಡು ಸಂಭವಿಸಬಹುದು. ಇಲ್ಲಿ ಕ್ರಿಮಿಗಳದೂ ಒಂದು ಕಾಟ. ಇದರಿಂದ ತಪ್ಪಿಸಿಕೊಳ್ಳಲು ತಲೆಯ ಬಲೆ ಉಪಯೋಗಿಸ ಬೇಕು.

**ಸಸ್ಯವರ್ಗ:** ಮೇರುವಿನ ಹಿಮಾಚ್ಛಾದಿತ ಪ್ರದೇಶ ವಿನಾ ಉಳಿದ ಕಡೆಗಳಲ್ಲಿರುವುದು ಹಲಬಗೆಯ ತೆಳುವಾದ ಸಮುದ್ರ ಸಸ್ಯ.

ಇಲ್ಲಿನ ಸಸ್ಯಗಳ ಬೆಳವಣಿಗೆ ಶೀಘ್ರ. ಹೂ, ಬೀಜಗಳು ಬಿಡುವುದು ಬೇಗ. ಈ ಸಸ್ಯಗಳ ಎತ್ತರ 1 ಮೀ. ಗಿಂತ ಹೆಚ್ಚಿಲ್ಲ. ಆದರೂ ಹೂಗಳು ಆಕರ್ಷಕ. ಹಣ್ಣುಗಳು ಚಿಕ್ಕವು, ಮೃದು. ಓಟೆಯಿಲ್ಲ. ಅನೇಕ ಸಸ್ಯಗಳ ಮೆದು ತಿರುಳಿನ ಎಲೆಗಳನ್ನು ಬೇಸಗೆಯಲ್ಲಿ ಆಹಾರವಾಗಿ ಬಳಸಬಹುದು.

ಶೀತವಲಯದ ಬಯಲುಗಳಲ್ಲಿ (ತಂಡ್ರ) 30% ಶಿಲಾವಲ್ಕ, 25% ತೃಣವರ್ಗದ ಸಸ್ಯ, 25% ಕುರುಚಲು, 20% ಹುಲ್ಲು ಮತ್ತು ಹೂಗಿಡಗಳಿವೆ. ದಕ್ಷಿಣಕ್ಕಿರುವ ಉಪಮೇರು ಪ್ರದೇಶದ ಉತ್ತರದ ಸೆರಗಿನಲ್ಲಿ ತೂಲಕಾಷ್ಠವೃಕ್ಷಗಳನ್ನು (ಕಾಟನ್‍ವುಡ್) ಕಾಣಬಹುದು. ಈ ಅಂಚಿನ ದಕ್ಷಿಣಕ್ಕೆ ಸರಲ (ಪೈನ್), ವೃಕ್ಷದಂಥ ಅನೇಕ ಶಂಕುಧಾರಿ ಮರಗಳಿರುವ ಪ್ರದೇಶವಿದೆ (ಟೈಗ). ಈ ಪ್ರದೇಶದಲ್ಲಿ ಅಲ್ಲಲ್ಲಿ ಸರಲ (ಪೈನ್), ಭೂರ್ಜ (ಬರ್ಚ್) ಮುಂತಾದ ಮರಗಳೂ ಬೆರೆತಿವೆ. ದಕ್ಷಿಣಕ್ಕೆ ಸಾಗಿದಂತೆ ಇವೇ ಹೆಚ್ಚು.

**ಪ್ರಾಣಿವರ್ಗ:** ಖಂಡಗಳ ನೆರೆಯ ಕಡಲಿನಲ್ಲಿ ಬಗೆ ಬಗೆಯ ಮೀನುಗಳುಂಟು. ಸೀಲ್‍ಗಳು ಹೇರಳ. ವಿರಳವಾಗಿ ತಿಮಿಂಗಿಲಗಳೂ ಇವೆ. ಭೂಪ್ರದೇಶದಲ್ಲಿ ಪರಿಸರಕ್ಕೆ ಬಲು ಚೆನ್ನಾಗಿ ಹೊಂದಿಕೊಳ್ಳುವ ಪ್ರಾಣಿಯೆಂದರೆ ಹಿಮಸಾರಂಗ. ಹಿಮಕರಡಿಯಂತೂ ಪ್ರಸಿದ್ಧ. ದನಕರು, ಕುರಿ, ಕುದುರೆ ಮತ್ತು ಮೇಕೆಗಳನ್ನು ಸಾಕಬಹುದಾದರೂ ಲಾಭದಾಯಕವಲ್ಲ. ಹಿಮಸಾರಂಗ ತಿನ್ನದಿರುವ ಸಸ್ಯಗಳು ಕಸ್ತೂರಿ ಮೃಗದ ಆಹಾರ. ಹಿಮಸಾರಂಗದಂತೆ ಇದೂ ಮಾಂಸ, ಚರ್ಮಗಳೊಂದಿಗೆ ಉಣ್ಣೆಯನ್ನೂ ಒದಗಿಸುತ್ತದೆ. ಇಲ್ಲಿರುವ ಕೀಟಗಳಲ್ಲಿ ಅನೇಕ ಬಗೆ. ಹಲವು ಮಾರಕ. ಸೊಳ್ಳೆ ಸಾಮಾನ್ಯ. ಮರಳುನೊಣ, ಕಪ್ಪುನೊಣ ಮತ್ತು ಜಿಂಕೆನೊಣಗಳೂ ಇವೆ. ಹೆಜ್ಜೇನು ವಿರಳ. ಬಗೆ ಬಗೆಯ ಚಿಟ್ಟೆಗಳೂ ಪತಂಗಗಳೂ ಧಾರಾಳ. ಕೆಲವು ಕಡೆ ಮಿಡತೆಗಳೂ ಜೀರುಂಡೆಗಳೂ ಉಂಟು. ವಿಷ್ಯದ ಮೇರುಪ್ರದೇಶದಲ್ಲಿ ಹಿಮಸಾರಂಗ, ಮೊಲ, ನರಿ, ತೋಳಗಳು ಬೇಸಗೆಯಲ್ಲಿದ್ದು, ಚಳಿಗಾಲದಲ್ಲಿ ನಿರ್ಗಮಿಸುತ್ತವೆ. ದಂಶಕ ಜಾತಿಯ ಸಂಯಾತಿಗೆ (ಲೆಮಿಂಗ್) ಹಿಮದಡಿಯ ಸಸ್ಯವೇ ಆಹಾರ. ಸೊಳ್ಳೆ, ಮೀನು ಮುಂತಾದುವನ್ನು ತಿಂದು ಬದುಕುವ ಪೆಂಗ್ವಿನ್, ಪೆಲಿಕನ್ ಇತ್ಯಾದಿ ನೀರ ಹಕ್ಕಿಗಳು ಹೆಚ್ಚು.

**ಜನಜೀವನ:** ಉತ್ತರ–ಪಶ್ಚಿಮ ಯುರೋಪಿನ ಮೂಲವಾಸಿಗಳಾದ ಲ್ಯಾಪ್ ಜನಕ್ಕೆ ಮೀನು ಹಿಡಿಯುವುದೂ ಹಿಮಸಾರಂಗ ಸಾಕುವುದೂ ಮುಖ್ಯೋದ್ಯೋಗ. ಉತ್ತರ–ಪೂರ್ವ ಯೂರೋಪ್ ಹಾಗೂ ಪಶ್ಚಿಮ ಸೈಬೀರಿಯದ ಮೂಲವಾಸಿಗಳಾದ ಸ್ಯಾಮೊಯೆಡ್‍ಗಳದೂ ಇದೇ ಬಗೆಯ ಜೀವನ. ಪೂರ್ವ ಸೈಬೀರಿಯದ ಮೂಲವಾಸಿಗಳು ಚೂಕ್‍ಚೀಗಳು. ಇವರಲ್ಲಿ ಒಂದು ಪಂಗಡದವರಿಗೆ ಹಿಮಸಾರಂಗದ ಹಾಲೂ ಮಾಂಸವೂ ಆಹಾರ. ಇನ್ನೊಂದು ಪಂಗಡದವರಿಗೆ ಬೇಟೆ ಹಾಗೂ ಮೀನುಗಾರಿಕೆಯಿಂದ ಜೀವನ. ಯಕೂಡ್ ಜನ ಕುದುರೆ, ಹಿಮಸಾರಂಗ ಸಾಕುತ್ತಾರೆ. ಕೆನಡದ ಉತ್ತರದ ಅಂಚಿನಲ್ಲಿರುವ ಇಂಡಿಯನ್ನರು ಅಲೆಮಾರಿಜನ. ಎಸ್ಕಿಮೋಗಳು ಪೂರ್ವ ಸೈಬೀರಿಯ, ಅಲಾಸ್ಕ, ಲ್ಯಾಬ್ರಡಾರ್ ಮತ್ತು ಗ್ರೀನ್‍ಲ್ಯಾಂಡ್‍ಗಳಲ್ಲಿ ಹರಡಿದ್ದಾರೆ. ನಾಯಿ ಇವರ ಸಾಕುಪ್ರಾಣಿ.

ಸೈಬೀರಿಯ, ಕೆನಡ ಮತ್ತು ಅಲಾಸ್ಕಗಳಲ್ಲಿ ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲ ದೊರೆಯುತ್ತವೆ. ಸೋವಿಯತ್ ಮೇರುಪ್ರದೇಶದಲ್ಲಿ ಕಲ್ಲಿದ್ದಲು, ತಾಮ್ರ, ಚಿನ್ನ, ಯುರೇನಿಯಂ ಸಿಗುವುದರಿಂದ ಗಣಿಗಾರಿಕೆ ಒಂದು ಮುಖ್ಯ ಕಸಬು.

ಅನೇಕ ಕಡೆಗಳಲ್ಲಿ ಪಶುಪಾಲನೆ ರೂಢಿಯಲ್ಲಿದೆ. ಹೈನು ತಯಾರಿಕೆ ಒಂದು ಉದ್ಯೋಗ. ಅನುಕೂಲವಿರುವ ಕಡೆಗಳಲ್ಲಿ ವ್ಯವಸಾಯ ರೂಢಿಯಲ್ಲುಂಟು. ಗ್ರೀನ್‍ಲ್ಯಾಂಡಿನಿಂದ ತಿಮಿಂಗಿಲ ತೈಲ, ಉಪ್ಪು ತುಂಬಿದ ಮೀನು, ಮಾಂಸ–ಇವು ನಿರ್ಯಾತವಾಗುತ್ತವೆ. (ಕೆ.ಆರ್.ಆರ್.)

**ಉತ್ತರಮೇರು ವಲಯದ ಪ್ರಾಮುಖ್ಯ, ಅಭಿವೃದ್ಧಿ :** ಪ್ರಪಂಚದಲ್ಲಿ ಶೇ.90ರಷ್ಟು ಜನ ಉತ್ತರಾರ್ಧಗೋಳದಲ್ಲಿ ವಾಸಿಸುತ್ತಾರಷ್ಟೇ ಅಲ್ಲ, ಭಾರತ ಚೀನಗಳನ್ನುಳಿದು ಉತ್ತರದ ಎಲ್ಲ ಮುಖ್ಯ ರಾಷ್ಟ್ರಗಳ ರಾಜಧಾನಿಗಳೂ ಭೂಮಧ್ಯ ರೇಖೆಗಿಂತ ಉತ್ತರ ಮೇರುವೃತ್ತಕ್ಕೆ ಹೆಚ್ಚು ಸಮೀಪವಾಗಿವೆಯೆಂಬುದು ಗಮನಾರ್ಹ. ಆಯಕಟ್ಟಿನ ದೃಷ್ಟಿಯಿಂದ ಈ ಪ್ರದೇಶಕ್ಕೆ ಹೆಚ್ಚಿನ ಪ್ರಾಮುಖ್ಯ. ವಾಣಿಜ್ಯ ದೃಷ್ಟಿಯಿಂದಲೂ ಇಲ್ಲಿನ ಸಂಚಾರಮಾರ್ಗಗಳು ಮುಖ್ಯವಾಗಿವೆ.

ಈ ಪ್ರದೇಶದ ಸಂಪತ್ತಿನ ಉಪಯೋಗ ಎರಡು ಬಗೆ: ಒಂದು ಪುರಾತನವಾದರೆ ಇನ್ನೊಂದು ಅಧುನಾತನ. ಕೆಲವು ಜನಾಂಗಗಳು ಈಗಲೂ ಪ್ರಾಚೀನ ರೀತಿಯ ಕೃಷಿ, ಬೇಟೆ, ಮೀನುಗಾರಿಕೆಗಳನ್ನವಲಂಬಿಸಿವೆ. ಈಚೆಗೆ ಇಲ್ಲಿ ಖನಿಜೋದ್ಯಮಗಳೂ ನಿರ್ಯಾತಾವ ಲಂಬಿ ಉದ್ಯಮಗಳೂ ಬೆಳೆಯುತ್ತಿವೆ. ತುಪ್ಪಳ ವ್ಯಾಪಾರ, ಗಣಿಗಾರಿಕೆ, ವಿದ್ಯುತ್ ಉತ್ಪತ್ತಿ, ಮರದ ತಿರುಳು (ಪಲ್ಪ್) ತಯಾರಿಕೆಗಳು ಮುಖ್ಯ. ದೊಡ್ಡ ಉದ್ಯಮಗಳು ಬಹುತೇಕ ಸರ್ಕಾರದ ವಶಕ್ಕೆ ಅಥವಾ ಹತೋಟಿಗೊಳಪಟ್ಟಿರುವುದು ಗಮನಾರ್ಹ. ಸೋವಿಯತ್ ಒಕ್ಕೂಟ ಪ್ರದೇಶದಲ್ಲಿ ಇವು ಸಂಪೂರ್ಣವಾಗಿ ಸರ್ಕಾರದ ವಶ. ಗ್ರೀನ್‍ಲೆಂಡಿನ ದೊಡ್ಡ ಉದ್ಯಮಗಳೂ ಸರ್ಕಾರದ ಏಕಸ್ವಾಮ್ಯಕ್ಕೊಳಪಟ್ಟಿವೆ. ಪಶ್ಚಿಮ ಯೂರೋಪು, ಕೆನಡ, ಅಲಾಸ್ಕಗಳಲ್ಲಿ ಖಾಸಗಿ ಉದ್ಯಮ ಸಂಸ್ಥೆಗಳಿಗೆ ಸರ್ಕಾರಗಳ ಸಹಾಯಧನ ಹೆಚ್ಚಾಗಿ ದೊರಕುತ್ತಿದೆ.

ಭೌಗೋಳಿಕ ಕಾರಣಗಳಿಂದಾಗಿ ಈ ಪ್ರದೇಶದಲ್ಲಿ ರಸ್ತೆ ಸಾರಿಗೆಗಿಂತ ವಿಮಾನ ಹಾಗೂ ಹಡಗುಸಾರಿಗೆ ವ್ಯವಸ್ಥೆಗಳು ಹೆಚ್ಚು ಪ್ರಗತಿ ಹೊಂದಿವೆ. ಉತ್ತರಮೇರು ಪ್ರದೇಶದ ಮೂಲಕ ಪೂರ್ವದ ರಾಷ್ಟ್ರಗಳಿಗೆ ಹಾದಿ ಕಂಡುಹಿಡಿಯುವ ಯತ್ನ ಹಿಂದಿನಿಂದಲೂ ನಡೆಯುತ್ತಿತ್ತು. **(ನೋಡಿ– ಉತ್ತರಮೇರು–ಶೋಧನೆ)**. ಅಲಾಸ್ಕವನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಕೊಂಡದ್ದು ಬಹುಮಟ್ಟಿಗೆ ಈ ಉದ್ದೇಶದಿಂದಾಗಿಯೆ. ಈಚೆಗೆ ಪೂರ್ವ ಪಶ್ಚಿಮ ಗೋಳಗಳ ಕೆಲವು ವಿಮಾನ ಮಾರ್ಗಗಳು ಈ ಮೂಲಕ ಹಾದು ಹೋಗುತ್ತವೆ.

ಉತ್ತರಮೇರು ವಲಯದ ಎಲ್ಲ ಪ್ರದೇಶಗಳ ಮೇಲೂ ಒಂದಿಲ್ಲೊಂದು ರಾಷ್ಟ್ರದ ಒಡೆತನ ಇದ್ದೇ ಇದೆ. ಗ್ರೀನ್‍ಲೆಂಡ್‍ನ ಮೇಲೆ ಡೆನ್ಮಾರ್ಕಿನ್ ಒಡೆತನ ನಡೆದುಕೊಂಡು ಬಂದಿದ್ದು ನಾರ್ಸ್ ವಸತಿಯ ಕಾಲದಿಂದ. ಸ್ಪಿಟ್ಸ್ ಬರ್ಗನ್ ದ್ವೀಪಸ್ತೋಮದ ಭಾಗವಾದ ಸ್ವಾಲ್ ಬಾರ್ ದ್ವೀಪಾವಳಿ 1920ರ ಒಪ್ಪಂದ ಪ್ರಕಾರ ನಾರ್ವೆಗೆ ಸೇರಿತು. ಸೋವಿಯತ್ ಪ್ರದೇಶದ ಉತ್ತರಕ್ಕಿರುವ ದ್ವೀಪಗಳು ರಷ್ಯಕ್ಕೆ ಸೇರಿದವೆಂದು ಸಾರಲಾದದ್ದು 1916ರಲ್ಲಿ. ಮುಂದೆ 1926ರಲ್ಲಿ ಸೋವಿಯತ್ ಒಕ್ಕೂಟ ಮತ್ತೆ ಈ ದ್ವೀಪಗಳ ಮೇಲೆ ತನ್ನ ಹಕ್ಕು ಘೋಷಿಸಿತು. ಕೆನಡದ ಕಡೆಯ ಉತ್ತರ ಮೇರು ಪ್ರದೇಶವನ್ನು ಬ್ರಿಟನ್ನು 1880ರಲ್ಲೇ ಕೆನಡಕ್ಕೆ ಬಿಟ್ಟುಕೊಟ್ಟಿತ್ತಾದರೂ ಆ ಪ್ರದೇಶ ತನ್ನದೇ ಎಂದು ಕೆನಡ ಬಹಿರಂಗವಾಗಿ ಸಾರಿದ್ದು 1908ರಷ್ಟು ಈಚೆಗೆ. ಅಮೆರಿಕ ಸಂಯುಕ್ತಸಂಸ್ಥಾನ ಅಲಾಸ್ಕವನ್ನು ಕೊಂಡದ್ದು 1867ರಲ್ಲಿ.

ಉತ್ತರಮೇರುವಿನ ಮೇಲೆ ಮಾತ್ರ ಯಾರ ಒಡೆತನವೂ ಇಲ್ಲ. ಇದು ವಿಶಾಲ ಸಮುದ್ರದ ನಡುವೆ ಇರುವುದರಿಂದ ಅಂತರರಾಷ್ಟ್ರೀಯ ಒಡಂಬಡಿಕೆಯ ಪ್ರಕಾರ ಯಾವ ರಾಷ್ಟ್ರವೂ ಇದರ ಮೇಲೆ ಹಕ್ಕು ಸ್ಥಾಪಿಸುವಂತಿಲ್ಲ. (ಸಿ.ಕೆ.ಆರ್.)

# ಉತ್ತರ ಮೇರುವಲಯ

**ಉತ್ತರ ಮೇರು ವಲಯದ ಭೂವಿನ್ಯಾಸ:** ಇಲ್ಲಿನ ಭೂಭಾಗಗಳು ಮುಖ್ಯವಾಗಿ ಅತಿಪುರಾತನ ಶಿಲೆಗಳಿರುವ ನಾಲ್ಕು ಕೇಂದ್ರಗಳ ಸುತ್ತ ಶೇಖರಗೊಂಡು ಕ್ರಮೇಣ ಈಗಿನ ಪರಿಸ್ಥಿತಿ ತಲೆದೋರಿತು. ಇವುಗಳಲ್ಲಿ ಅತಿದೊಡ್ಡದು ಕೆನಡಿಯನ್ ಶಾಶ್ವತಭೂಖಂಡ. ಇದರಮೇಲೆ ಕೆನಡಿಯನ್ ಮೇರು ಪ್ರದೇಶದ ಬಹುಭಾಗ ಹರಡಿದೆ. ಅಲ್ಲದೆ ಪೂರ್ವದತ್ತ ಬ್ಯಾಫಿನ್ ಕೊಲ್ಲಿಯ ಅಡಿಯಲ್ಲಿ ಹರಡಿ ಗ್ರೀನ್ಲೆಂಡಿನ ಬಹುತೇಕ ಭಾಗವನ್ನೂ ಒಳಗೊಂಡಿದೆ. ಬಾಲ್ಟಿಕ್ ಶಾಶ್ವತಭೂಭಾಗ ಫಿನ್ಲೆಂಡನ್ನು ಕೇಂದ್ರಭಾಗದಲ್ಲಿ ಅಳವಡಿಸಿಕೊಂಡಿದೆ ಮತ್ತು ಇಡೀ ಉತ್ತರಸ್ಕಾಂಡಿನೇವಿಯ ಮತ್ತು ವಾಯವ್ಯ ರಷ್ಯವನ್ನು ಒಳಗೊಂಡಿದೆ. ಇತರ ಎರಡು ಶಾಶ್ವತ ಭೂಖಂಡಗಳು ವಿಸ್ತೀರ್ಣದಲ್ಲಿ ಕಿರಿಯವು. ಇವುಗಳಲ್ಲೊಂದಾದ ಅಂಗಾರ ಖಂಡಕೇಂದ್ರ ಸೈಬೀರಿಯದ ಉತ್ತರಭಾಗದಲ್ಲಿನ ಖಟಾಂಗಾ ಮತ್ತು ಲೇನಾ ನದಿಗಳ ನಡುವೆಯೂ ಮತ್ತೊಂದು ಶಾಶ್ವತ ಭೂಖಂಡವಾದ ಕೊಲಿಮಾ ನೈರುತ್ಯ ಸೈಬೀರಿಯ ಪ್ರಾಂತ್ಯದಲ್ಲೂ ಕಂಡುಬಂದಿವೆ.

ಶಾಶ್ವತ ಭೂಭಾಗಗಳ ನಡುವೆ ಅದರಲ್ಲೂ ಅವುಗಳ ಅಂಚಿನುದ್ದಕ್ಕೂ ದೀರ್ಘ ಕಾಲದ ಸ್ತರ ಸಂಗ್ರಹಣಕಾರ್ಯ ನಡೆದ ಆಧಾರಗಳಿವೆ. ಹೀಗಾಗಿ ಹಲವು ಕಡೆ ಶಾಶ್ವತ ಭೂಭಾಗಗಳು ಜಲಜಶಿಲಾಸ್ತರಗಳಿಂದ ಮುಚ್ಚಿಹೋಗಿರುವುದೂ ಉಂಟು. ಇನ್ನು ಕೆಲವು ಪ್ರದೇಶಗಳಲ್ಲಿ ಹೀಗೆ ಶೇಖರವಾದ ಶಿಲಾಪ್ರಸ್ತರಗಳು ಮಡಿಕೆಬಿದ್ದು ಪರ್ವತಗಳಾಗಿ ರೂಪುಗೊಂಡು ಕ್ರಮೇಣ ಭೂಸವೆತಕ್ಕೊಳಗಾಗಿ ನಶಿಸಿಹೋಗಿರುವುದೂ ಉಂಟು. ಉತ್ತರಮೇರು ಪ್ರದೇಶದಲ್ಲಿ ಎರಡು ಪ್ರಮುಖ ಪರ್ವತಗಳು ಜನಿಸಿದ ಕಾಲಗಳನ್ನು ಗುರುತಿಸಿದ್ದಾರೆ. ಪೆಲಿಯೊಜೋಯಿಕ್ ಕಲ್ಪದಲ್ಲಿ (600 ದ.ಲ.ವ. ಪ್ರಾಚೀನದಿಂದ 225 ದ.ಲ.ವ ಪ್ರಾಚೀನದವರೆಗೆ) ಕ್ಲಿಷ್ಟರಚನೆಯ ಪರ್ವತಗಳು ಮೈವೆತ್ತವು. ಇವುಗಳಲ್ಲಿ ಕೆಲೆಡೋನಿಯನ್ ಮತ್ತು ಹರ್ಸಿನಿಯನ್ ಪರ್ವತಗಳು ಜನಿಸಿದ ಯುಗಗಳ ಕುರುಹುಗಳನ್ನು ಗುರುತಿಸಬಹುದು. ಈ ಪ್ರರ್ವತ ಶ್ರೇಣಿ ಕ್ವೀನ್ ಎಲಿಜಬೆತ್ ದ್ವೀಪಗಳಿಂದ ಮೊದಲಾಗಿ ಪೀರಿಲ್ಯಾಂಡಿನಲ್ಲಿ ಹಾದು ದಕ್ಷಿಣಕ್ಕೆ ಗ್ರೀನ್‌ಲೆಂಡಿನ ಪೂರ್ವತೀರದುದ್ದಕ್ಕೂ ವಿಸ್ತರಿಸಿದೆ. ಇದೇ ಭೂಕಾಲದಲ್ಲಿ ಸ್ವಾಲ್‌ಬಾರ್ಡ್, ನಾವಯ ಜೆಂಲ್ಯಾ ಉತ್ತರಯೂರಲ್, ಟೆಮೀರ್ ಪ್ರಸ್ಥಭೂಮಿ, ಸ್ವೆವಿರ್‌ನಯ ಜೆಂಲ್ಯಾ–ಈ ಪ್ರದೇಶಗಳಲ್ಲಿ ಪರ್ವತಜನ್ಯಕ್ರಿಯೆ ತಲೆದೋರಿತು. ಈ ಎಲ್ಲ ಪರ್ವತಪಂಕ್ತಿಗಳೂ ಸಮುದ್ರದ ಅಡಿಯಲ್ಲಿ ಹೇಗೆ ಪರಸ್ಪರ ಅನುಸರಿಸಿ ಮಿಳಿತವಾಗಿವೆ ಎಂಬುದು ಬಿಡಿಸಲಾಗದ ಒಗಟು.

ಎರಡನೆಯ ಪರ್ವತಗಳ ಜನನಕ್ರಿಯೆ ಮೀಸೊಜೋಯಿಕ್ (225 ದ.ಲ.ವ. ಪ್ರಾಚೀನದಿಂದ 65 ದ.ಲ.ವ. ಪ್ರಾಚೀನದವರೆಗೆ) ಮತ್ತು ಸೀನೋಜೋಯಿಕ್ ಕಲ್ಪಗಳಲ್ಲಿ (65 ದ.ಲ.ವ. ಪ್ರಾಚೀನದಿಂದ ಇಂದಿನವರೆಗೆ) ತಲೆದೋರಿತು. ಇದಕ್ಕೆ ಸಂಬಂಧಿಸಿದ ಪರ್ವತಗಳು ನೈರುತ್ಯ ಸೈಬೀರಿಯ ಮತ್ತು ಅಲಾಸ್ಕಗಳಲ್ಲಿವೆ. ಮಟ್ಟವಾದ ಅಥವಾ ಅಷ್ಟಾಗಿ ಮಡಿಕೆಬಿದ್ದಿರದ ಶಿಲಾಪ್ರಸ್ತರಗಳು ಉತ್ತರ ಕೆನಡ ಶಾಶ್ವತ ಭೂಭಾಗದ ತಗ್ಗು ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಕಂಡುಬಂದಿವೆ. ಉತ್ತರ ರಷ್ಯ ಪಶ್ಚಿಮ ಮತ್ತು ಕೇಂದ್ರ ಸೈಬೀರಿಯಗಳಲ್ಲಿ ಜಲಜಶಿಲಾನಿಕ್ಷೇಪಗಳು ಹೇರಳವಾಗಿವೆ. ಇವುಗಳ ವಯಸ್ಸು ಪೇಲಿಯೊಜೋಯಿಕ್ ಕಲ್ಪದಿಂದ ಕ್ವಾಟರ್ನರಿ ಕಲ್ಪದವರೆಗೆ.

ಟರ್ಷಿಯರಿ ಕಲ್ಪದಲ್ಲಿ (65 ದ.ಲ.ವ. ಪ್ರಾಚೀನದಿಂದ 11 ದ.ಲ.ವ. ಪ್ರಾಚೀನದವರೆಗೆ) ಉತ್ತರ ಮೇರುವಿನ ಎರಡು ಪ್ರದೇಶಗಳಲ್ಲಿ ಅಗ್ನಿಶಿಲೆಗಳಿಗೆ ಸಂಬಂಧಿಸಿದ ಚಟುವಟಿಕೆ ಕಾಣಬಂತು, ಒಂದು ಪ್ರದೇಶದಲ್ಲಿ ಈ ಚಟುವಟಿಕೆ ಉತ್ತರ ಪೆಸಿಫಿಕ್ಕಿನ ಪರ್ವತಜನನ ಕಾರ್ಯಾಚರಣೆಗೆ ಸಂಬಂಧಿಸಿದೆ. ಈ ವಲಯದ ಜ್ವಾಲಾಮುಖಿಗಳನ್ನು ಇಂದಿಗೂ ಎರಡು ಮುಖ್ಯ ಜಾಡುಗಳಲ್ಲಿ ಕಾಣಬಹುದು. ಮೊದಲನೆಯ ಜಾಡು ಕಾಮ್‌ಚಾಟ್ಕ, ಅಲ್ಯೂಷಿಯನ್ ದ್ವೀಪಗಳು ಮತ್ತು ಅಲಾಸ್ಕ ದ್ವೀಪಗಳನ್ನೊಳಗೊಂಡಿದೆ. ಮತ್ತೊಂದು ಜಾಡು ಉತ್ತರ ಅಟ್ಲಾಂಟಿಕ್ ಸಾಗರವನ್ನು ಹಾದು ಇಡೀ ಐಸ್ಲೆಂಡ್, ಜಾನ್ ಮೆಯಿನ್ ದ್ವೀಪ ಮತ್ತು ಗ್ರೀನ್‌ಲೆಂಡುಗಳನ್ನೊಳಗೊಂಡಿದೆ. ಇಂದಿಗೂ ಈ ಜಾಡುಗಳಲ್ಲಿ ಹಲವಾರು ಜಾಗೃತ ಜ್ವಾಲಾಮುಖಿಗಳೂ ನೂರಾರು ಬಿಸಿನೀರಿನ ಚಿಲುಮೆಗಳೂ ಇವೆ.

ಸು. 7,50,000 ವರ್ಷಗಳ ಹಿಂದೆ ಈಗಿನ ಮೇರು ಪ್ರದೇಶಗಳ ವಾಯುಗುಣದಲ್ಲಿ ತೀವ್ರ ಬದಲಾವಣೆಗಳು ತಲೆದೋರಿ ಹವಾಗುಣವು ಅತಿ ಶೀತಗೊಂಡು ಇಡೀ ಭೂಭಾಗ ನೀರ್ಗಲ್ಲ ಹಾಳೆಗಳಿಂದ ಮುಚ್ಚಿಹೋಯಿತು. ಹೀಗಾಗಿ ಹಿಮಯುಗವೇ ಪ್ರಾರಂಭವಾಯಿತು. ಉತ್ತರ ಅಮೆರಿಕದಲ್ಲಿ ನೀರ್ಗಲ್ಲ ಹಾಳೆ ಬ್ಯಾಫಿನ್ ದ್ವೀಪದಲ್ಲಿ ಮೊದಲಾಗಿ ಕ್ರಮೇಣ ದಕ್ಷಿಣ ಮತ್ತು ಪಶ್ಚಿಮದತ್ತ ವರ್ಧಿಸುತ್ತ ಹಲವಾರು ಸಣ್ಣಪುಟ್ಟ ಹಿಮನದಿಗಳನ್ನೂ ಅಳವಡಿಸಿಕೊಂಡು ವಿಸ್ತಾರವಾಗಿ ಬೆಳೆದು ಬೃಹದಾಕಾರದ ಲಾರೆಂಟೈಡ್ ನೀರ್ಗಲ್ಲ ಹಾಳೆ ಎನಿಸಿತು. ಪಶ್ಚಿಮ ಭಾಗದಲ್ಲಿ ಕಿರಿದಾದ ನೀರ್ಗಲ್ಲ ಹಾಳೆ ತಲೆದೋರಿತು. ಹೀಗಾಗಿ ಅಟ್ಲಾಂಟಿಕ್ ಸಾಗರದ ಮೇರು ವಲಯದ ದ್ವೀಪಗಳೆಲ್ಲ ನೀರ್ಗಲ್ಲಿನಿಂದ ಮುಚ್ಚಿಹೋಗಿದ್ದುವು. ಐಸ್ಲೆಂಡಿನ ಹಲಕೆಲವು ಪರ್ವತ ಶಿಖರಗಳು ಮಾತ್ರ ತಲೆ ಎತ್ತಿ ನಿಂತಿದ್ದುವು. ಯುರೋಪಿನಲ್ಲಿ ಸ್ಕಾಂಡಿನೇವಿಯನ್ ನೀರ್ಗಲ್ಲಿನ ಹಾಳೆ ರಷ್ಯದ ಇಡೀ ಉತ್ತರ ಭಾಗವನ್ನೆಲ್ಲ ಆವರಿಸಿತು. ಪೂರ್ವ ಸೈಬೀರಿಯ ಈ ಹಿಮಯುಗದ ಪ್ರಭಾವಕ್ಕೆ ಅಷ್ಟಾಗಿ ಒಳಪಟ್ಟಿರಲಿಲ್ಲ. ಆದರೆ ಇಲ್ಲಿ ಇನ್ನೂ ಹಳೆಯ ಭೂಯುಗದಲ್ಲಾದ ನೀರ್ಗಲ್ಲಿನ ಪ್ರಭಾವದ ಗುರುತುಗಳನ್ನು ಕಾಣಬಹುದು.

ಕ್ರಮೇಣ ನೀರ್ಗಲ್ಲು ಕರಗಲು ಪ್ರಾರಂಭವಾಗಿ ವಿಶಾಲವಾದ ನೀರ್ಗಲ್ಲಿನ ಪ್ರಸ್ತರಗಳು ಗಾತ್ರದಲ್ಲಿ ಕುಗ್ಗಿ ಅವುಗಳಿಂದ ಮುಚ್ಚಿಹೋಗಿದ್ದ ಪ್ರದೇಶಗಳಲ್ಲಿ ಹೊಸರೀತಿಯ ಭೂವಿನ್ಯಾಸವೇ ತಲೆದೋರಿತು. ಮೇರು ಪ್ರದೇಶದಲ್ಲಿ ಅಷ್ಟಾಗಿ ಸಸ್ಯಸಮೃದ್ಧಿಯಿಲ್ಲದ ಕಾರಣ ಹೀಗೆ ಉಂಟಾದ ಭೂ ರಚನೆಯ ವಿವರಗಳು ಬಲು ಸ್ಪಷ್ಟವಾಗಿ ಗೋಚರವಾಗುತ್ತವೆ. ನೀರ್ಗಲ್ಲ ಪ್ರವಾಹಗಳು ಉತ್ತರ ಕೆನಡ ಮತ್ತು ಫಿನ್ಲೆಂಡ್ ದೇಶಗಳ ಅಗ್ನಿಶಿಲಾಪ್ರಾಂತ್ಯದಲ್ಲಿ ಅಸಂಖ್ಯಾತ ಹಳ್ಳಕೊಳ್ಳಗಳನ್ನೂ ನೂರಾರು ಸಣ್ಣಪುಟ್ಟ ಸರೋವರಗಳನ್ನೂ ನಿರ್ಮಿಸಿವೆ. ತಗ್ಗುಪ್ರದೇಶಗಳಲ್ಲಿ ಗಡುಸಾಗಿರುವ ಶಿಲೆಗಳಿರುವ ಕಡೆ ಅಷ್ಟು ಹೆಚ್ಚಿನ ಏರುಪೇರುಗಳಿರದ ಭೂವಿನ್ಯಾಸವನ್ನು ಕಾಣಬಹುದು. ಅಲ್ಲಲ್ಲೇ ಏಣುಗಳೂ ನೀರ್ಗಲ್ಲ ನಿಕ್ಷೇಪಗಳ ಗುಡ್ಡಗಳೂ ಕಾಣಸಿಗುತ್ತವೆ. ಎತ್ತರ ಭೂಪ್ರದೇಶಗಳಲ್ಲಿ ಹೀಗೆ ಉಂಟಾದ ವಿಶಾಲವಾದ ಆಕೃತಿಯ ಕಣಿವೆಗಳನ್ನೂ ನೋಡಬಹುದು. ಸಮುದ್ರ ತೀರಗಳಲ್ಲಿ ಕಚ್ಚು ಕಚ್ಚಾದ ಫಿಯರ್ಡ್ ಎಂಬ ವಿಶಿಷ್ಟರೀತಿಯ ಭೂವಿನ್ಯಾಸವನ್ನೂ ನೋಡಬಹುದು. ಈ ತೆರನಾದ ವಿನ್ಯಾಸ ದಕ್ಷಿಣ ಅಲಾಸ್ಕ, ಪೂರ್ವಕೆನಡ, ಗ್ರೀನ್‌ಲೆಂಡ್, ನಾರ್ವೆ, ಐಸ್ಲೆಂಡ್ ಮತ್ತು ಹಲವಾರು ಸಣ್ಣಸಣ್ಣ ದ್ವೀಪಗಳ ತೀರಗಳಲ್ಲಿ ಕಾಣಬಹುದು.

ಪ್ಲಿಸ್ಟೊಸೀನ್ ಪರ್ವದಲ್ಲಿ (1 ದ.ಲ.ವ. ಪ್ರಾಚೀನದಿಂದ ಇಂದಿನವರೆಗೆ) ನೀರ್ಗಲ್ಲಿನ ಹಾಳೆಗಳು ಕರಗಿದ ಕಾರಣ ಮೇರು ಪ್ರದೇಶದ ತಗ್ಗು ಭೂಭಾಗಗಳನ್ನು ಸಮುದ್ರ ಅತಿಕ್ರಮಿಸಿ ವಿಸ್ತಾರವಾದ ಪ್ರದೇಶಗಳು ಮುಳುಗಡೆಯಾದುವು. ಕಾಲಕ್ರಮೇಣ ಹಲವು ಭೂಚಟುವಟಿಕೆಗಳಿಗೊಳಗಾಗಿ ಮತ್ತೆ ಮೇಲಕ್ಕೆ ಎದ್ದುವು. ಸಮುದ್ರಮಟ್ಟದಿಂದ ಎತ್ತರದಲ್ಲಿರುವ ಕರಾವಳಿ ನಿಕ್ಷೇಪಗಳು ಮತ್ತು ಸಮುದ್ರ ನಿಕ್ಷೇಪಗಳಿಂದ ಈ ಬಗೆಯ ಭೂ ಪ್ರದೇಶಗಳನ್ನು ಗುರುತಿಸಬಹುದು. ಪಶ್ಚಿಮ ಮತ್ತು ಮದ್ಯ ಕೆನಡ ಪ್ರದೇಶಗಳಲ್ಲಿ ಈ ಬಗೆಯ ನಿಕ್ಷೇಪಗಳು ಪ್ರಸ್ತುತ ಸಮುದ್ರ ಮಟ್ಟದಿಂದ 152[1]–215[1] ಎತ್ತರದಲ್ಲೂ ಪೂರ್ವ ಭಾಗದಲ್ಲಿ ಸು. 90ಮೀ. ಎತ್ತರದಲ್ಲೂ ಕಂಡುಬಂದಿವೆ. ಅಲ್ಲದೆ ಯೂರೇಷಿಯದ ಮೇರು ಪ್ರದೇಶದ ಅನೇಕ ಕಡೆ ಈ ಭೂಕುರುಹುಗಳನ್ನು ಗುರುತಿಸಬಹುದು. ಇದೂ ಅಲ್ಲದೆ ಸ್ವಾಲ್‌ಬಾರ್ಡ್, ಎಲ್ಲೆಸ್‌ಮಿಯರ್ ದ್ವೀಪ, ಉತ್ತರ ಯೂರಲ್, ಫ್ರಾನ್ಸ್ ಜೋಸೆಫ್ ಪರ್ಯಾಯದ್ವೀಪ ಭಾಗಗಳಲ್ಲೂ ಈ ವಿಶಿಷ್ಟ ಭೂಲಕ್ಷಣಗಳನ್ನು ಸಮುದ್ರಮಟ್ಟದಿಂದ 456 ಮೀ. ಎತ್ತರದಲ್ಲಿ ಕಾಣಲು ಸಾಧ್ಯ. ಕೆನಡದ ಅನೇಕ ಕಡೆ ಇದಕ್ಕೆ ಸಂಬಂಧಿಸಿದ ಭೂಚಟುವಟಿಕೆ ಇನ್ನೂ ನಡೆಯುತ್ತಿದೆ ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆತಿವೆ. ಅಲ್ಲದೆ ಪ್ರತಿ ನೂರು ವರ್ಷಕ್ಕೆ 1ಮೀ.ಗಳಷ್ಟು ಮೇಲಕ್ಕೆ ಭೂಭಾಗಗಳು ಏಳುತ್ತಿವೆ ಎಂದೂ ಅಭಿಪ್ರಾಯ ಪಡಲಾಗಿದೆ. ಹೀಗೆಯೇ ಹಲವು ಕಡೆ ಭೂಕುಸಿತಗಳೂ ಆಗುತ್ತಿವೆ.

ಮೇರು ಪ್ರದೇಶದ ಭೂವಿನ್ಯಾಸ ಬಲುಮಟ್ಟಿಗೆ ಪ್ಲಿಸ್ಟೊಸೀನ್ ಪರ್ವದ ನೀರ್ಗಲ್ಲ ಪ್ರವಾಹಗಳಿಗೆ ಸಂಬಂಧಿಸಿದ್ದರೂ ಮುಖ್ಯ ಭೂಲಕ್ಷಣಗಳು ಕೇವಲ ಇದನ್ನೇ ಅನುಸರಿಸದೆ ಮೂಲ ಭೂರಚನೆಯನ್ನೂ ಅವಲಂಬಿಸಿವೆ. ಶಾಶ್ವತ ಭೂಖಂಡಗಳಾದ ಕೆನಡಿಯನ್ ಮತ್ತು ಬಾಲ್ಟಿಕ್ ಪ್ರದೇಶಗಳಿಗೆ ಏಕರೀತಿಯ ಮೇಲ್ಮೈಲಕ್ಷಣಗಳಿವೆ. ಹಡ್ಸನ್ ಕೊಲ್ಲಿಯ ಪಶ್ಚಿಮಭಾಗ, ಬ್ಯಾಫಿನ್ ದ್ವೀಪದ ಈಶಾನ್ಯಭಾಗ ಮತ್ತು ಕರೇಲಿಯಗಳಲ್ಲಿ ಭೂಮಿ ತಗ್ಗು ಮತ್ತು ಕಡಿದಾಗಿದೆ. ಸಣ್ಣಪುಟ್ಟ ಹಳ್ಳಕೊಳ್ಳಗಳೂ ಸಣ್ಣಸಣ್ಣ ಸರೋವರಗಳೂ ತುಂಬಿವೆ. ಅಲ್ಲಲ್ಲೇ ನೀರ್ಗಲ್ಲಿನ ಪ್ರವಾಹ ನಿಕ್ಷೇಪಗಳಿಂದ ಕೂಡಿದ 300–600ಮೀ. ಎತ್ತರದ ಪ್ರಸ್ಥಭೂಮಿಗಳಿವೆ. ಮುಖ್ಯವಾಗಿ ಇವು ಕ್ವಿಬೆಕ್–ಲ್ಯಾಬ್ರಡಾರ್, ಕೆನಡದ ಪಶ್ಚಿಮ ಕೀವಾಟಿನ್ ಮತ್ತು ಪೂರ್ವ ಮೆಕೆನ್‌ಜಿ ಜಿಲ್ಲೆಗಳಲ್ಲೂ ಉತ್ತರ ಸ್ಕ್ಯಾಂಡಿನೇವಿಯದ ಲ್ಯಾಪ್ಲ್ಯಾಂಡ್ ಪ್ರಸ್ಥಭೂಮಿಯಲ್ಲೂ ಕಾಣಬರುತ್ತವೆ. ಕೆನಡಿಯನ್ ಶಾಶ್ವತಭೂಖಂಡದ ಪೂರ್ವ ಅಂಚಿನುದ್ದಕ್ಕೂ–ಲ್ಯಾಬ್ರಡಾರಿನಿಂದ ಎಲ್ಲೆಸ್‌ಮಿಯರ್ ದ್ವೀಪದವರೆಗೆ–ಕಡಿದಾದ ಫಿಯರ್ಡ್ ರಚನೆಯನ್ನೂ 1825ಮೀ. ಗಳಿಗೂ ಮೀರಿ ಎತ್ತರವಾಗಿರುವ ಪರ್ವತಶಿಖರಗಳನ್ನೂ ನೋಡಬಹುದು. ಗ್ರೀನ್‌ಲೆಂಡ್ ಶಾಶ್ವತ ಭೂಖಂಡದ ಪೂರ್ವ ಮತ್ತು ಪಶ್ಚಿಮ ತೀರಗಳಲ್ಲಿ ಇದೇ ರೀತಿಯ ಭೂಲಕ್ಷಣಗಳಿವೆ. ಜಲಜಶಿಲಾ ನಿಕ್ಷೇಪಗಳಿರುವ ಕಡೆ (ಉದಾ: ಉತ್ತರ ಸೈಬೀರಿಯ ಮತ್ತು ಹಡ್ಸನ್ ಕೊಲ್ಲಿಯ ಉತ್ತರಕ್ಕಿರುವ ಮೈದಾನ ಪ್ರದೇಶ) ಬೆಟ್ಟಗಳು, ಪ್ರಸ್ಥಭೂಮಿಗಳು ಮತ್ತು ಮೈದಾನಗಳು ಆವಿರ್ಭವಿಸುತ್ತವೆ. ಅಲ್ಲಲ್ಲೇ ಆಳವಾದ ಮತ್ತು ಕಿರಿದಾದ ಕಣಿವೆಗಳೂ ರೂಪಿತವಾಗುವುದುಂಟು. ಕೆನಡದಲ್ಲಿ ಬಲುಮಟ್ಟಿಗೆ ಮೈದಾನಗಳು ಮತ್ತು ಪ್ರಸ್ಥಭೂಮಿಗಳೂ ಅಂಗಾರ ಶಾಶ್ವತಭೂಖಂಡದ ಸುತ್ತ ಬೆಟ್ಟಗಳೂ ಪರ್ವತಶ್ರೇಣಿಗಳೂ ಎದ್ದುಕಾಣುತ್ತವೆ.

ಶಾಶ್ವತ ಭೂಖಂಡಗಳಿಂದ ಬಲುದೂರದಲ್ಲಿ ಹರಡಿರುವ ಜಲಜಶಿಲಾ ಪ್ರಸ್ತರಗಳಿಂದ ಕೂಡಿದ ಭೂಪ್ರದೇಶಗಳಲ್ಲಿ ವಿಶಾಲವಾದ ಮೈದಾನಗಳು ರೂಪುಗೊಂಡಿವೆ. ಉತ್ತರ ಅಮೆರಿಕದ ಮೆಕೆನ್‌ಜಿ ತಗ್ಗು ಪ್ರದೇಶಗಳು ಬ್ಯಾಂಕ್ಸ್ ಮತ್ತು ಪ್ರಿನ್ಸ್‌ಪ್ಯಾಟ್ರಿಕ್ ದ್ವೀಪಗಳು, ಉತ್ತರ ಅಲಾಸ್ಕಾದ ಮೈದಾನ, ಉತ್ತರ ಯುರೋಪಿನ ಸೆವರ್ ನಾಯಾಡ್ವಿನ ಮತ್ತು ಪೆಕೋರ ಮೈದಾನಗಳು ಹೀಗೆ ರೂಪುಗೊಂಡುವು. ಇವಲ್ಲದೆ ಸೈಬೀರಿಯದ ಓಬ್ ನದೀಮುಖಜಭೂಮಿ ಮತ್ತು ಅದರ ನೈಋತ್ಯ ಭಾಗ, ಉತ್ತರ ಸೈಬೀರಿಯದ ಮೈದಾನ ಪ್ರದೇಶಗಳು, ಪಶ್ಚಿಮ ಸೈಬೀರಿಯದ ತಗ್ಗುಪ್ರದೇಶಗಳು ಮತ್ತು ಲೇನಾ–ಕೊಲಿಮಾ ಮೈದಾನ ಪ್ರದೇಶಗಳು ಹೀಗೆಯೇ ರೂಪುತಳೆದುವು. ಈ ಪ್ರದೇಶಗಳಲ್ಲೆಲ್ಲ ಸರ್ವಸಾಮಾನ್ಯವಾಗಿ

ಮಟ್ಟಸವಾಗಿದ್ದು ಎಲ್ಲೊ ಅಲ್ಲೊಂದು ಇಲ್ಲೊಂದು ಕಡಿದಾದ ಗುಡ್ಡಗಳು ಮತ್ತು ಅಸಂಖ್ಯಾತ ಚಿಕ್ಕ ಚಿಕ್ಕ ಸರೋವರಗಳು ಇವೆ. ಮೈದಾನ ಪ್ರದೇಶಗಳಲ್ಲಿ ದೊಡ್ಡ ನದಿಗಳು ಹರಿಯುತ್ತಿದ್ದು ಆಳವಾದ ಮೆಕ್ಕಲು ನಿಕ್ಷೇಪಗಳನ್ನು ಶೇಖರಿಸಿವೆ.

ಮೇರುಪ್ರದೇಶದಲ್ಲಿ ಎರಡು ಬೇರೆ ಬೇರೆ ಪರ್ವತಜನನ ಕಲ್ಪಗಳಿಗೆ ಸಂಬಂಧಿಸಿದ ತೀವ್ರ ತೆರನಾಗಿ ಮಡಿಕೆಬಿದ್ದಿರುವ ಪರ್ವತಪ್ರದೇಶಗಳಿವೆ. ವಿಶಿಷ್ಟರೀತಿಯ ಮೇಲ್ಮೈಲಕ್ಷಣಗಳಿಂದ ಇವನ್ನು ಸುಲಭವಾಗಿ ಬೇರ್ಪಡಿಸಿ ಗುರುತಿಸಬಹುದು. ಹಳೆಯ ಪೇಲಿಯೋಜ಼ೋಯಿಕ್ ಯುಗಕ್ಕೆ ಸಂಬಂಧಿಸಿದ ಪರ್ವತಗಳ ಬಲುಭಾಗ ಭೂಸವೆತಕ್ಕೊಳಗಾಗಿ ನಶಿಸಿಹೋಗಿವೆ. ಅಳಿದುಳಿದ ಶಿಲೆಗಳು ಈಚಿನ ಭೂಚಟುವಟಿಕೆಗಳಿಗೆ ಮತ್ತೆ ಒಳಗಾಗಿ ಮೇಲಕ್ಕೆ ಎತ್ತಲ್ಪಟ್ಟಿವೆ. ಕ್ರಮೇಣ ಇವು ನೀರ್ಗಲ್ಲಿನ ಪ್ರವಾಹಗಳ ಪ್ರಭಾವಕ್ಕೊಳಗಾಗಿ ವಿಶಿಷ್ಟ ಭೂವಿನ್ಯಾಸವನ್ನು ತಳೆದಿವೆ. ಈ ವರ್ಗದ ಪರ್ವತಗಳು ಪೀರಿಲ್ಯಾಂಡ್ ಮತ್ತು ವೆಸ್ಟ್ ಸ್ಪಿಟ್ಸ್‌ಬರ್ಗನ್ ಪ್ರದೇಶಗಳಲ್ಲಿ 1825ಮೀ, ಎಲ್ಸ್‌ಮಿಯರ್ ದ್ವೀಪದಲ್ಲಿ ಸುಮಾರು 3050ಮೀ. ಗಳಷ್ಟೂ ಪ್ರಸ್ಥಭೂಮಿಗಳು ಈಸ್ಟ್ ಸ್ಪಿಟ್ಸ್ ಬರ್ಗನ್, ನಾವಯ ಜ಼ೆಂಲ್ಯಾ ಮತ್ತು ಸ್ವೆವಿರ್ ನಯ ಜ಼ೆಂಲ್ಯಾ ಪ್ರಾಂತ್ಯಗಳಲ್ಲಿ ಸುಮಾರು 600ಮೀ. ಗಳಷ್ಟೂ ಎತ್ತರವನ್ನು ಮುಟ್ಟಿವೆ.

ಕಿರಿಯ ವರ್ಗದ ಪರ್ವತಗಳು ನೈರುತ್ಯ ಸೈಬೀರಿಯ ಮತ್ತು ಅಲಾಸ್ಕಗಳಲ್ಲಿ ಇನ್ನೂ ಹೆಚ್ಚಿನ ಎತ್ತರವಾಗಿವೆ. ಜೆರ್ಸ್ಕಿ ಶ್ರೇಣಿಯ ಶಿಖರಗಳು 3050ಮೀ. ಕಾಮ್‌ಚಾಟ್ಕ ಶಿಖರಗಳು 4570 ಮೀ. ಎತ್ತರ ಇವೆ. ದಕ್ಷಿಣ ಅಲಾಸ್ಕದಲ್ಲಿ ಇನ್ನೂ ಉನ್ನತಶಿಖರಗಳಿವೆ. ಈ ಪ್ರದೇಶದ ವಿಶಾಲ ತಗ್ಗುಗಳಲ್ಲಿ ಯುಕಾಸ್, ಕೋಲಿಮಾ ಮುಂತಾದ ದೊಡ್ಡ ನದಿಗಳು ಪ್ರವಹಿಸುತ್ತವೆ.

ಮೇರುಪ್ರದೇಶದ ಸಾಕಷ್ಟು ಭಾಗವನ್ನು ಮಂದವಾದ ಸ್ಥಾಯೀ ನೀರ್ಗಲ್ಲು (ಪರ್ಮಾ ಫ್ರಾಸ್ಟ್) ಅವರಿಸಿದೆ. ವರ್ಷಗಳುರುಳಿದರೂ ಇದು ಕರಗುವುದು ಅಪೂರ್ವ. ಆದರೆ ಬೇಸಿಗೆಯಲ್ಲಿ ಮಾತ್ರ ಇದರ ಮೇಲಿನ ತೆಳು ಪದರ ಸುಮಾರಾಗಿ ಕರಗುವುದುಂಟು. ಈ ಶಾಶ್ವತ ನೀರ್ಗಲ್ಲಿನ ಪದರವೇ ಸ್ಥಾಯೀನೀರ್ಗಲ್ಲು (ಪರ್ಮಾ ಫ್ರಾಸ್ಟ್). ಬೇಸಿಗೆಯಲ್ಲಿ ಕರಗುವ ತೆಳುವಾದ ಹೊರಮೈ ಕ್ರಿಯಾಪದರ (ಆಕ್ಟಿವ್ ಲೇಯರ್). ಉತ್ತರ ಅಲಾಸ್ಕ ಮತ್ತು ಕೆನಡದಲ್ಲಿ ಸ್ಥಾಯೀನೀರ್ಗಲ್ಲವಲಯದ ಆಳ ನೆಲಮಟ್ಟದಿಂದ 250–500ಮೀ. ಉತ್ತರ ಸೈಬೀರಿಯಾದ ನಾರ್ಡ್ವಿಕಿನಲ್ಲಿ ಈ ವಲಯ ಬಲು ಮಂದವಾಗಿದ್ದು ಸುಮಾರು 600ಮೀ. ಗಳಷ್ಟಿರಬಹುದೆಂದು ಅಂದಾಜುಮಾಡಲಾಗಿದೆ. ಸಾಮಾನ್ಯವಾಗಿ ಈ ವಲಯದ ಮಂದ ಆಯಾ ಪ್ರದೇಶದ ಭೂಲಕ್ಷಣ, ಅಲ್ಲಿಯ ಹವಾಮಾನ, ಸಸ್ಯವರ್ಗ ಮುಂತಾದುವನ್ನು ಅವಲಂಬಿಸಿದೆ. ಅತ್ಯಂತ ದಪ್ಪನೆಯ ಸ್ಥಾಯೀನೀರ್ಗಲ್ಲ ಪದರಗಳು ಹಿಮಯುಗದಲ್ಲಿ ಅಲ್ಲಿಯ ತನಕ ನೀರ್ಗಲ್ಲಿನ ಪ್ರಸ್ತರಗಳಿಂದ ಆವೃತವಾಗಿರದ ಭೂಪ್ರದೇಶಗಳಲ್ಲಿ ಉಂಟಾದುವೆಂದು ಅಭಿಪ್ರಾಯಪಡಲಾಗಿದೆ. ದಕ್ಷಿಣಕ್ಕೆ ಸರಿದಂತೆಲ್ಲ ಇವು ಕ್ರಮೇಣ ತೆಳುವಾಗುತ್ತ ಹರಿದು ಹಂಚಿಹೋಗಿವೆ. ಕೆಲವು ಕಡೆ ಈ ತೆಳುಪದರಗಳ ಮೇಲೆ ಸಸ್ಯಾಗಾರದ ನಿಕ್ಷೇಪಗಳನ್ನು ಅಥವಾ ಜವುಗುಪ್ರದೇಶಗಳನ್ನು ಗುರುತಿಸಬಹುದು. ಇಂಥ ಕಡೆ ಅವು 15 ಸೆ.ಮೀ. ಗೂ ಹೆಚ್ಚು ಮಂದವಿರಲಾರವು.

ಸ್ಥಾಯೀ ನೀರ್ಗಲ್ಲ ಪದರಗಳು ಮೂಲ ಮತ್ತು ಆನುಷಂಗಿಕ ಶಿಲೆಗಳ ಮೇಲೆ ಕಂಡುಬರುತ್ತವೆ. ಸಾಮಾನ್ಯವಾಗಿ ಈ ಶಿಲೆಗಳ ಮೇಲೆ ಇದರ ಪ್ರಭಾವ ಅಷ್ಟಾಗಿರುವುದಿಲ್ಲ. ಆದರೆ ಸೂಕ್ಷ್ಮ ಕಣರಚನೆಯ ಜಲಜಶಿಲಾ ನಿಕ್ಷೇಪಗಳಲ್ಲಿ ಮಂಜಿನ ಕಣಗಳು ಕ್ರಮೇಣ ಪ್ರಸರಿಸಿ ಅಲ್ಲಲ್ಲೇ ಶೇಖರಗೊಂಡು ಮಂಜುಗಡ್ಡೆಯ ಸಣ್ಣಪುಟ್ಟ ಪದರಗಳು ತಲೆದೋರಬಹುದು. ಇವನ್ನು ನೆಲಹಿಮ (ಗ್ರೌಂಡ್ ಐಸ್) ಎನ್ನುತ್ತಾರೆ. ನದೀತೀರಗಳಲ್ಲಿ ಮತ್ತು ಸಮುದ್ರ ಕರಾವಳಿಯ ಬಂಡೆಗಳ ಮೇಲೆ ಹಲವು ವೇಳೆ 50–70 ಸೆಂಮೀ ಸುಂದರವಿರುವ ನೆಲ ಹಿಮದ ನಿಕ್ಷೇಪಗಳನ್ನು ಕಾಣಬಹುದು.

ಉತ್ತರ ಸೈಬೀರಿಯದಲ್ಲಿ 60 ಮೀಗೂ ಮೀರಿದ ಅತಿಪುರಾತನ ನೀರ್ಗಲ್ಲ ಪ್ರಸ್ತರಗಳಿವೆ. ಬಹುಶಃ ನೀರ್ಗಲ್ಲ ಪ್ರವಾಹ ಅಥವಾ ಘನೀಭೂತವಾದ ಸರೋವರ ಭಾಗ ನದೀಮೆಕ್ಕಲಿನಿಂದ ಸಂಪೂರ್ಣ ಮುಚ್ಚಿಹೋಗಿ ಇದಕ್ಕೆ ಮೂಲ ಕಾರಣವೆನಿಸಿರಬಹುದು. ಹಲವು ಸಂದರ್ಭಗಳಲ್ಲಿ ನೆಲದೊಳಗೆ ಹುದುಗಿರುವ ನೀರ್ಗಲ್ಲಿನ ಹಾಳೆಯಲ್ಲಿ ಅಲ್ಲಲ್ಲೆ ಗುಳಿಬಿದ್ದು ಕ್ರಮೇಣ ಈ ಗುಳಿಗಳೇ ವಿಸ್ತಾರಗೊಂಡು ನೀರು ಶೇಖರವಾಗಿ ಸರೋವರಗಳೂ ಉಂಟಾಗಬಹುದು. ಸಾಮಾನ್ಯವಾಗಿ ಜೇಡಿನೊಡನೆ ನೀರ್ಗಲ್ಲು ಬೆರೆತು ಉಂಟಾಗಿರುವ ಪ್ರಸ್ತರ ಗಡುಸಾಗಿರುತ್ತದೆ. ಆದರೆ ನೀರ್ಗಲ್ಲು ಕರಗಲು ಪ್ರಾರಂಭವಾದಾಗ ಈ ಗಡುಸುತನವೆಲ್ಲ ಮಾಯವಾಗಿ ಪ್ರಸ್ತರ ಕೆಸರಿನ ಮುದ್ದೆಯಾಗುತ್ತದೆ. ಈ ಬಗೆಯ ಬದಲಾವಣೆಗಳ ಅಧ್ಯಯನ ಶೀತಪ್ರದೇಶಗಳ ಇತಿಹಾಸದಲ್ಲಿ ಸಾಕಷ್ಟು ಪ್ರಾಮುಖ್ಯವನ್ನು ಪಡೆದಿದೆ.

ಸ್ಥಾಯೀನೀರ್ಗಲ್ಲು ಅಂತರ್ಜಲ ಪಸರಿಸುವುದನ್ನು ಸಂಪೂರ್ಣವಾಗಿ ತಡೆಗಟ್ಟುತ್ತದೆ. ಹೀಗಾಗಿ ಬೇಸಗೆಯಲ್ಲಿ ಮೇರುಪ್ರದೇಶಗಳಲ್ಲಿ ನೂರಾರು ಸಣ್ಣಪುಟ್ಟ ಸರೋವರಗಳು ಕಾಣಸಿಕೊಳ್ಳುತ್ತವೆ. ಇಳಿಜಾರು ಪ್ರದೇಶಗಳಲ್ಲಿ ಶಿಲಾಚೂರು ಮತ್ತು ಮಣ್ಣಿನೊಡನೆ ಬೆರೆತಿರುವ ನೀರ್ಗಲ್ಲು ಕರಗಲು ಪ್ರಾರಂಭವಾಗಿ ಇಡೀ ಭೂಭಾಗವೇ ಜರುಗಿ ಜಾರಿ ಭೂಪಾತಗಳಾಗುವುದೂ ಉಂಟು. ಇದನ್ನು ಸಾಲಿಫ್ಲಕ್ಷನ್ ಎನ್ನುತ್ತಾರೆ. ಮೇರುಪ್ರದೇಶದಲ್ಲಿ ಇದು ಸಾಮಾನ್ಯ. ಉತ್ತರ ಅಲಾಸ್ಕದ ಕಡಲುತೀರ, ನಾರ್ವೆ ಸಮುದ್ರದ ಬೇರ್ ದ್ವೀಪ ಮುಂತಾದ ನಯಮಣ್ಣಿನ ಭೂಪ್ರದೇಶಗಳಲ್ಲಿ ಈ ಬಗೆಯ ಭೂಪಾತಗಳು ಅಸಂಖ್ಯಾತ.

ಮೇರು ಪ್ರದೇಶದ ಅಂಚಿನಭಾಗಗಳಲ್ಲಿ ಮಂಜುಗಡ್ಡೆ ಕಟ್ಟುವುದು (ಫ್ರೀಸಿಂಗ್) ಮತ್ತು ಕರಗುವ (ತಾಯಿಂಗ್) ಕ್ರಿಯೆಗಳಿಂದ ವಿಶಿಷ್ಟ ಭೂರಚನೆಗಳು ತಲೆದೋರಿವೆ. ಉದಾ : ನುರುಜುಗಲ್ಲು, ಗುಂಡುಕಲ್ಲು ಮುಂತಾದ ದಪ್ಪದಪ್ಪ ಶಿಲಾಕಣಗಳು ವಿಶಿಷ್ಟ ರೀತಿಯಲ್ಲಿ ಶೇಖರವಾಗಿ ಬಹುಭುಜಾಕೃತಿಯ ಹೊರವಲಯಗಳನ್ನುಂಟುಮಾಡಿ ಅವುಗಳ ಮಧ್ಯೆ ನಯವಾದ ಧೂಳು ಶೇಖರವಾಗುತ್ತದೆ. ವೃತ್ತಾಕಾರಗಳೂ ಮಣ್ಣುಗುಡ್ಡೆಗಳೂ ಹೀಗೆಯೇ ತಲೆದೋರುವುದುಂಟು.

ನೀರ್ಗಲ್ಲುಗಳಿಗೆ ದೊಡ್ಡ ದೊಡ್ಡ ಬಂಡೆಗಳನ್ನು ಚೂರಾಗಿಸಬಲ್ಲ ವಿಶೇಷ ಶಕ್ತಿ ಇದೆ. ಈ ಕಾರಣ ಬಂಡೆಗಳ ಮೇಲೆಲ್ಲ ಚೂಪಾದ ಕಲ್ಲಿನ ಚೂರುಗಳು ಹರಡಿರುವುದನ್ನು ಗುರುತಿಸಬಹುದು. ಇವನ್ನು ಶಿಲಾಸಮುದ್ರ (ಫ್ಲೆಸನ್ ಮಿಯರ್) ಎಂದು ಹೆಸರಿಸಿದ್ದಾರೆ. ಕೆಲವು ಕಡೆ ಈ ಶಿಲಾಚೂರಿನ ಮೇಲ್ಪದರ 3.6ಮೀಗೂ ಮೀರಿ ಮಂದವಾಗಿರುತ್ತದೆ. ಬೆಸಾಲ್ಟ್ ಮುಂತಾದ ಜ್ವಾಲಾಮುಖಿಜನ್ಯ ಶಿಲಾಭೂ ಪ್ರದೇಶಗಳಲ್ಲಿ ಈ ತೆರನಾದ ಭೂವಿನ್ಯಾಸ ಬಲು ಉತ್ತಮ ರೀತಿಯಲ್ಲಿ ಕಂಡುಬರುತ್ತದೆ. ಉದಾ : ಐಸ್ಲೆಂಡ್. ಹೀಗೆಯೇ ಈ ವಿನ್ಯಾಸವನ್ನು ಜಲಜಶಿಲಾಪ್ರದೇಶದಲ್ಲೂ ನೋಡಲು ಸಾಧ್ಯ. ಉದಾ : ಕೆನಡದ ಮೇರುಪ್ರದೇಶ.

ನೀರ್ಗಲ್ಲಿನ ಪ್ರವಾಹಗಳು: ಮೇರುಪ್ರದೇಶವೆಲ್ಲ ನೀರ್ಗಲ್ಲಿನ ಪ್ರಸ್ತರಗಳಿಂದ ಆವೃತವಾಗಿದೆ ಎಂದು ತಿಳಿದಲ್ಲಿ ಅದು ತೀರ ತಪ್ಪು. ಇಲ್ಲಿಯ ಒಟ್ಟು ವಿಸ್ತೀರ್ಣದ ಕೇವಲ 2/5 ಭಾಗ ಮಾತ್ರ ವರ್ಷದುದ್ದಕ್ಕೂ ನೀರ್ಗಲ್ಲಿನ ಹಾಳೆಗಳಿಂದ ಆವೃತವಾಗಿರುವುದನ್ನು ಗಮನಿಸಬಹುದು. ಅತ್ಯಧಿಕ ಪ್ರಮಾಣದಲ್ಲಿ ಸತತವಾಗಿ ಹಿಮ ಶೇಖರವಾದಾಗ ಮಾತ್ರ ಅದು ಕ್ರಮೇಣ ಮಂಜುಗಡ್ಡೆಯಾಗಿ ಮಾರ್ಪಟ್ಟು ನೀರ್ಗಲ್ಲ ಹಾಳೆಯಾಗಿಯೊ ನೀರ್ಗಲ್ಲನದಿಯಾಗಿಯೊ ರೂಪುಗೊಳ್ಳುತ್ತದೆ. ಮಂಜು ನೀರ್ಗಲ್ಲಾಗಿ ಮಾರ್ಪಡುವುದೂ ಬಲು ನಿಧಾನ. ಅದಕ್ಕೆ ವರ್ಷಗಳೇ ಬೇಕು. ಉದಾ : ವಾಯವ್ಯ ಗ್ರೀನ್‌ಲೆಂಡಿನ ಹಿಮಾಚ್ಛಾದಿತ ಪ್ರದೇಶವೊಂದರಲ್ಲಿ ರಂಧ್ರವನ್ನು ಕೊರೆದಾಗ 425ಮೀ ಆಳದವರೆಗೆ ಹಿಮನದಿಯೇ ಕಾಣಸಿಗಲಿಲ್ಲ. ಅಲ್ಲದೆ ಸುಮಾರು 800 ವಾರ್ಷಿಕ ಮಂಜಿನ ಪದರಗಳಿರುವುದೂ ವ್ಯಕ್ತವಾಯಿತು. ಇದರ ಸಹಾಯದಿಂದ ಅಲ್ಲಿನ 800 ವರ್ಷಗಳ ಹಿಮದ ಇತಿಹಾಸವನ್ನು ಅರಿಯಲು ಸಾಧ್ಯವಾಯಿತು.

ಉತ್ತರಮೇರು ಪ್ರದೇಶ ಹಿಮನದಿ ಪ್ರವಾಹಗಳನ್ನು (ಗ್ಲೇಷಿಯರ್ಸ್) ಅವುಗಳಿಗೆ ಹಿಮ ಒದಗಿ ಬರುವ ಪ್ರದೇಶಗಳನ್ನು ಅನುಸರಿಸಿ ಎರಡು ಗುಂಪುಗಳಾಗಿ ವಿಭಜಿಸಲಾಗಿದೆ. ಇವುಗಳಲ್ಲಿ ದೊಡ್ಡದು ಅಟ್ಲಾಂಟಿಕ್ ಸಾಗರ ಪ್ರದೇಶಕ್ಕೂ ಚಿಕ್ಕದು ಪೆಸಿಫಿಕ್ ಸಾಗರಕ್ಕೂ ಸೀಮಿತವಾಗಿವೆ. ಅತಿದೊಡ್ಡ ನೀರ್ಗಲ್ಲಹಾಳೆ ಎಂದರೆ ಗ್ರೀನ್ಲೆಂಡಿನ ಇನ್‌ಲ್ಯಾಂಡ್ ಐಸ್ ಎಂಬುದು. ಉತ್ತರಾರ್ಧಗೋಳದಲ್ಲೆಲ್ಲ ಇದು ಅತ್ಯಂತ ದೊಡ್ಡ ನೀರ್ಗಲ್ಲಹಾಳೆ. ಉತ್ತರ ದಕ್ಷಿಣ 2512 ಕಿಮೀ ಉದ್ದವಿದ್ದು ಸುಮಾರು 960 ಕಿಮೀ ದಪ್ಪನಾಗಿಯೂ ಇದೆ. ಇದು 18,1300 ಚಕಿಮೀ ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿದೆ. ಗ್ರೀನ್ಲೆಂಡಿನ ಸುಮಾರು 85ರಷ್ಟು ಭಾಗ ಹಾಳೆಯಿಂದ ಆವೃತವಾಗಿದೆ. ಇದು ವಿಶಾಲ ಮತ್ತು ನೀಳವಾದ ಭೂತಗ್ಗಿನಲ್ಲಿದ್ದು ಇದರ ಇಕ್ಕೆಲಗಳಲ್ಲಿ ಕಡಿದಾದ ಪರ್ವತ ಶ್ರೇಣಿಗಳಿವೆ. ತಗ್ಗಿನ ಕೇಂದ್ರಭಾಗದಲ್ಲಿ ನೀರ್ಗಲ್ಲು 300 ಮೀ. ಮಂದವಾಗಿದ್ದು ಹಲವೆಡೆ ಸಮುದ್ರಮಟ್ಟದಿಂದ 1.6 ಕಿ.ಮೀ.ಗ್ರೀನ್ಲೆಂಡ್ ಮೀರಿದ ಆಳವನ್ನು ಮುಟ್ಟುತ್ತದೆಂದು ತಜ್ಞರ ಅಭಿಪ್ರಾಯ. ಈ ಆಧಾರವನ್ನನುಸರಿಸಿ ಗ್ರೀನ್ಲೆಂಡ್ ದ್ವೀಪವಲ್ಲವೆಂದೂ ಅದನ್ನು ಪರ್ಯಾಯದ್ವೀಪವೆಂದು ಪರಿಗಣಿಸಬೇಕೆಂದೂ ಹಲವರ ಅಭಿಪ್ರಾಯ. ಈ ನೀರ್ಗಲ್ಲಿನ ಹಾಳೆ ಕರಗಿದಲ್ಲಿ ಅದು ಆವೃತವಾಗಿರುವ ಭೂಪ್ರದೇಶ 915ಮೀ. ಎತ್ತರದ ಪ್ರಸ್ಥಭೂಮಿಯಾಗಿ ಮಾರ್ಪಡುತ್ತದೆ. ಈ ಬೃಹತ್ ನೀರ್ಗಲ್ಲಿನ ಹಾಳೆಯ ಅತ್ಯಂತ ಎತ್ತರವಾದ ಭಾಗ ಸಮುದ್ರಮಟ್ಟದಿಂದ 3050ಮೀ ಎತ್ತರದಲ್ಲಿದೆ. ಅದು ದ್ವೀಪದ ಉತ್ತರ ಭಾಗದಲ್ಲಿದೆ. ಮಧ್ಯ ಭಾಗದಲ್ಲಿ ನೀರ್ಗಲ್ಲ ಹಾಳೆಯ ಮೇಲು ಮೈ ಮಟ್ಟಸವಾಗಿರದೆ ಏರುತಗ್ಗಾಗಿದೆ. ತಗ್ಗುಗಳಲ್ಲಿ ಸಾಸ್‌ಟ್ರುಗಿ ಎಂಬ ವಾಯು ನಿಕ್ಷೇಪಗಳೂ ಇವೆ. ಅನೇಕ ಕಡೆ ನಿಧಾನವಾಗಿ ಪ್ರವಹಿಸುತ್ತ ಸಾಗರಗತವಾಗುವ ಅಸಂಖ್ಯಾತ ಹಿಮನದಿಗಳನ್ನೂ ನೋಡಬಹುದು. ಕೆಲವು ಕಡೆ ಸಾಗರವನ್ನು ಹಿಮನದಿ ಸೇರುವೆಡೆ ಅಸಂಖ್ಯಾತ ಹಿಮಗಡ್ಡೆಗಳಾಗಿ ಒಡೆದು ಛಿದ್ರವಾಗುವುದೂ ಉಂಟು. ಈ ಗಡ್ಡೆಗಳು (ಐಸ್‌ಬರ್ಗ್) ಸಮುದ್ರದಲ್ಲಿ ತೇಲುತ್ತಿರುತ್ತವೆ. ಇವೇ ನೀರ್ಗಲ್ಲ ದಿಬ್ಬಗಳು. ಇವು ಲ್ಯಾಬ್ರಡಾರ್ ಶೀತಪ್ರವಾಹದಲ್ಲಿ ತೇಲಿಕೊಂಡು ದಕ್ಷಿಣ ಅಟ್ಲಾಂಟಿಕ್ ಸಾಗರವನ್ನು ಮುಟ್ಟುವುದೂ ಉಂಟು.

ಕೆನಡದ ಮೇರು ಪ್ರದೇಶದಲ್ಲಿ ಸ್ಥಾಯೀನೀರ್ಗಲ್ಲಿನ ಸ್ತರಗಳು ಅಷ್ಟು ವಿಶಾಲವಾಗಿಲ್ಲ. ಇರುವ ಹಾಳೆಗಳು ದೇಶದ ಈಶಾನ್ಯ ಭಾಗದಲ್ಲಿ ಕಂಡುಬರುತ್ತವೆ. ಇವುಗಳಲ್ಲೆಲ್ಲ ಮೈಫನ್ ಐಲೆಂಡಿನ ನೀರ್ಗಲ್ಲಿನ ಹಾಳೆ ಪ್ರಮುಖವಾದುದು. ಇದು ವೃತ್ತಾಕಾರವಾಗಿದ್ದು ತಗ್ಗುಪ್ರದೇಶದಲ್ಲಿದೆ. ಮೆಲ್‌ವಿಲ್ ದ್ವೀಪ ಭಾಗದಲ್ಲಿ ಮೂರು ಸಣ್ಣ ನೀರ್ಗಲ್ಲ ನದಿಗಳಿವೆ. ಕಡಲಕರೆಯಲ್ಲಿ ಹಲವು ನೀರ್ಗಲ್ಲ ನದಿಗಳು ಸಮುದ್ರವನ್ನು ಸೇರುವುದನ್ನೂ ನೋಡಬಹುದು. ಅಲ್ಲಲ್ಲೇ ತೇಲುತ್ತಿರುವ ನೀರ್ಗಲ್ಲ ದಿಬ್ಬಗಳೂ ಇವೆ. ಎಲ್ಸ್‌ಮಿಯರ್ ದ್ವೀಪದ ಉತ್ತರದಲ್ಲಿ ಸಾಗರದಲ್ಲಿ ತೇಲುತ್ತಿರುವ ಅತ್ಯಂತ ವಿಶಾಲವಾದ ನೀರ್ಗಲ್ಲ ಹಾಳೆ ಇದೆ. ತೇಲುತ್ತಿರುವ ಅನೇಕ ನೀರ್ಗಲ್ಲ ದ್ವೀಪಗಳು ಇದರಿಂದ ಮೂಡಿಬಂದಿವೆ. ಅಟ್ಲಾಂಟಿಕ್ ಸಾಗರದ ಉತ್ತರ ಮತ್ತು ಪೂರ್ವಭಾಗಗಳಲ್ಲಿ ಹಲಕೆಲವು ನೀರ್ಗಲ್ಲ ನದಿಗಳನ್ನು ನೋಡಬಹುದು. ಉದಾ: ನಾರ್ವೀಜಿಯನ್ ಮತ್ತು ಬರೆಂಟ್ಸ್ ಸಮುದ್ರಗಳು. ಐಸ್ಲೆಂಡಿನಲ್ಲಿ ಐದು ಮುಖ್ಯ ನೀರ್ಗಲ್ಲ

ಹಾಳೆಗಳಿವೆ. ಇವುಗಳಲ್ಲಿ ಅತ್ಯಂತ ವಿಶಾಲವಾದುದು ವಟ್ನಜೋಕುಲ್. ಇದರ ವಿಸ್ತೀರ್ಣ 8806 ಚಕಿಮೀ ಇದರ ಅಂಚುಗಳಲ್ಲಿ ಹಲವಾರು ಕಡೆ ಹಿಮನದಿಗಳೂ ಹುಟ್ಟುತ್ತವೆ. ಪಶ್ಚಿಮದತ್ತ ಗ್ರಿಮ್ಸ್‌ವಾಟನ್ ಎಂಬ ಜ್ವಾಲಾಮುಖಿಯನ್ನಿದು ಮುಚ್ಚಿದೆ. ಈ ಅಗ್ನಿಪರ್ವತ ಪ್ರತಿ 6–10 ವರ್ಷಗಳಿಗೊಮ್ಮೆ ಜಾಗೃತಗೊಳ್ಳುತ್ತದೆ. ಇದರಿಂದ ಉತ್ಪತ್ತಿಯಾಗುವ ಅಗಾಧ ಉಷ್ಣದಿಂದ ಹಿಮದ ಹಾಳೆಯ ಬಹುಭಾಗ ಕರಗಿ ಪ್ರವಾಹಗಳೂ ಸಣ್ಣಮಟ್ಟ ಸರೋವರಗಳೂ ಉಂಟಾಗುತ್ತವೆ.

ಐಸ್ಲೆಂಡಿನ ಉತ್ತರಕ್ಕಿರುವ ಜಾನ್ ಮೇಯಿನ್ ದ್ವೀಪದಲ್ಲಿ ನೀರ್ಗಲ್ಲ ಹಾಳೆ ಮೌಂಟ್ ಬೀರೆನ್‌ಬರ್ಗ್ ಎಂಬ ಅಗ್ನಿಪರ್ವತದ ಮೇಲಿದೆ. ಸ್ವಾಲ್‌ಬಾರ್ಡ್ ಎಂಬ ನೀರ್ಗಲ್ಲ ನದಿಗಳು ದ್ವೀಪದ ಬಹುಭಾಗವನ್ನು ಆವರಿಸಿವೆ. ವೆಸ್ಟ್‌ಸ್ಪಿಟ್ಸ್ ಬರ್ಗನ್ ದ್ವೀಪದ ನೀರ್ಗಲ್ಲ ಹಾಳೆಯಿಂದ ನೂರಾರು ಹಿಮನದಿಗಳು ಹುಟ್ಟುತ್ತವೆ. ಸ್ಕ್ಯಾಂಡಿನೇವಿಯದ ಪ್ರಸ್ಥಭೂಮಿಯ ಸುಮಾರು 5200 ಚಕಿಮೀ ಪ್ರದೇಶದಲ್ಲಿ ನೀರ್ಗಲ್ಲಹಾಳೆಗಳಿವೆ. ಇವು ಉತ್ತರ ಸ್ವೀಡನ್ ಮತ್ತು ನಾರ್ವೆ ದೇಶಗಳಿಗೆ ಸೀಮಿತ. ಇನ್ನೂ ಉತ್ತರಕ್ಕಿರುವ ಫ್ರಾನ್ಸ್ ಜೋಸೆಫ್ ಪರ್ಯಾಯದ್ವೀಪ ಮತ್ತು ಅದರ ಸುತ್ತಲಿನ ಸಣ್ಣಮಟ್ಟ ದ್ವೀಪಗಳು ನೀರ್ಗಲ್ಲಿನ ಸ್ತರಗಳಿಂದ ಮುಚ್ಚಿಹೋಗಿವೆ. ಅಲ್ಲಲ್ಲೇ ಹಿಮನದಿಗಳು ಮಂದಗತಿಯಿಂದ ಚಲಿಸುತ್ತ ಇರುವುದನ್ನೂ ಕಾಣಬಹುದು.

ರಷ್ಯದ ಉತ್ತರಭಾಗದಲ್ಲಿ ಅಷ್ಟಾಗಿ ನೀರ್ಗಲ್ಲ ಯೂರಲ್ ಮತ್ತು ನೈಋತ್ಯ ಸೈಬೀರಿಯದ ಪರ್ವತಪ್ರದೇಶಗಳ ಕಣಿವೆಗಳಲ್ಲಿ ಹಲಕೆಲವು ಹಿಮನದಿಗಳಿವೆ. ಉತ್ತರ ಪೆಸಿಫಿಕ್ ಸಾಗರದ ಅಲಾಸ್ಕ ಪ್ರದೇಶದಲ್ಲಿ ಹಲವಾರು ಹಿಮನದಿಗಳಿವೆ. ಇನ್ನು ಇಡೀ ವಿಶ್ವದಲ್ಲೇ ಅತ್ಯಂತ ಉತ್ತಮದರ್ಜೆಯ ಪರ್ವತ ಹಿಮನದಿಗಳೆಂದು ಪರಿಗಣಿಸಲಾಗಿದೆ. ಇಲ್ಲಿಯ ಫೇರ್‌ವೆಸರ್ ಶ್ರೇಣಿ, ಸೇಂಟ್ ಎಲಿಯಾಸ್ ಪರ್ವತ ಮತ್ತು ಚುಗಾಷ್ ಪರ್ವತಗಳಲ್ಲಿ ವಿಸ್ತಾರವಾದ ಹಿಮ ಕೇಂದ್ರಗಳಿವೆ. ಇಲ್ಲಿ ಹಲವಾರು ಪ್ರಸಿದ್ಧ ನೀರ್ಗಲ್ಲನದಿಗಳು ಹುಟ್ಟುತ್ತವೆ. ಇವುಗಳಲ್ಲಿ ಮುಖ್ಯವಾದುವು144 ಕಿಮೀ ಉದ್ದದ ಹುಬ್ಬರ್ಡ್, ಸಿವರ್ಡ್ ಮತ್ತು ಮಲಾಸ್ಪಿನ ನೀರ್ಗಲ್ಲ ಪ್ರವಾಹಗಳು. ಇವಲ್ಲದೆ ಅಲಾಸ್ಕ, ಬ್ರೂಕ್ ಮತ್ತು ರೋಮನ್ ಜಾಫ್ ಪರ್ವತ ಶ್ರೇಣಿಗಳಲ್ಲೂ ಅಲ್ಯೂಷನ್ ದ್ವೀಪಗಳಲ್ಲೂ ಹಲವಾರು ನೀರ್ಗಲ್ಲ ನದಿಗಳಿವೆ. ಇವುಗಳೆಲ್ಲ 16 ಕಿಮೀ ಉದ್ದದ ಓಕಿಯಾಲಾಕ್ ಪ್ರಸಿದ್ಧವಾದುದು.

ಉತ್ತರ ಮೇರುಪ್ರದೇಶದ ಅನೇಕ ಹಿಮ ನದಿಗಳು ಕರಗಿ ಹಿಂಜರಿಯುತ್ತಿವೆ ಎಂದು ಭೂವಿಜ್ಞಾನಿಗಳ ಅಭಿಪ್ರಾಯ. ಹಿಂದಿನ ಭೂಯುಗಗಳಲ್ಲಿ ಹಿಮದಿಂದ ಆವೃತವಾಗಿದ್ದ ಅನೇಕ ಭೂಪ್ರದೇಶಗಳಲ್ಲಿ ಈಗ ಹಿಮದ ಸುಳಿವೇ ಇಲ್ಲ. ಈಚಿನ ಅಧ್ಯಯನಗಳಿಂದ ಐಸ್ಲೆಂಡಿನಲ್ಲಿ 10–14ನೆಯ ಶತಮಾನದ ವರೆಗೆ ಹಿಮದ ಪ್ರಭಾವ ಅಷ್ಟಾಗಿರದೆ 14ನೆಯ ಶತಮಾನದಿಂದೀಚೆಗೆ ನೀರ್ಗಲ್ಲು ವಿಶಾಲ ಪ್ರದೇಶಗಳನ್ನೂ ಆಕ್ರಮಿಸಿಕೊಂಡಿತೆಂಬುದಕ್ಕೆ ಅನೇಕ ಆಧಾರಗಳು ದೊರೆತಿವೆ. 1750ರಲ್ಲಿ ಇದು ಪರಾಕಾಷ್ಠೆ ಮುಟ್ಟಿ ಮತ್ತೆ ಹಿಂಜರಿಯತೊಡಗಿತ್ತು. ಮುಂದೆ 1850ರ ವೇಳೆಗೆ ಹೆಚ್ಚಾಯಿತು. ಆದರೆ 1890ರಲ್ಲಿ ಅತ್ಯಂತ ಹೆಚ್ಚಿನ ಹಿಂಜರಿತ ಕಂಡುಬಂತು. ತದನಂತರ ಹಿಂಜರಿತದ ವೇಗ ಬಲು ಕಡಿಮೆಯಾಗಿ 1930ರ ವೇಳೆಗೆ ಮತ್ತೆ ಅಧಿಕವಾಯಿತು. ಇಂದಿಗೂ ಈ ಹಿಂಜರಿತ ತೀವ್ರಗತಿಯಲ್ಲೇ ಮುಂದುವರಿಯುತ್ತಿದೆ.(ಬಿ.ವಿ.ಜಿ.)

**ಉತ್ತರಮೇರು ವೃತ್ತ:** ನೋಡಿ– ಆರ್ಕ್‌ಟಿಕ್–ವೃತ್ತ.

**ಉತ್ತರಮೇರು ಶೋಧನೆ:** ಪೂರ್ವ ಏಷ್ಯದ ಸಂಪದ್ಯುಕ್ತ ರಾಷ್ಟ್ರಗಳಿಗೆ ಹಾದಿ ಕಂಡುಹಿಡಿಯಲು ಐರೋಪ್ಯರು ಪ್ರಯತ್ನಿಸಿದ್ದು ಉತ್ತರಮೇರು ಪ್ರದೇಶಗಳ ಅನ್ವೇಷಣೆ, ಆವಿಷ್ಕಾರ, ಶೋಧನೆಗಳಿಗೆ ಮೂಲಪ್ರೇರಣೆಯಾಯಿತು. ಈ ಉದ್ದೇಶ ಹೊಂದಿದ್ದವರಲ್ಲಿ ಕೆಲವರು ಯೂರೋಪಿನ ಉತ್ತರದ ಕಡೆಯಲ್ಲೇ ಪೂರ್ವಾಭಿಮುಖವಾಗಿ ಸಮುದ್ರಯಾನ ಮಾಡಿದರೆ ಇನ್ನು ಕೆಲವರು ಅಟ್ಲಾಂಟಿಕ್ ಸಾಗರದಲ್ಲಿ ಪಶ್ಚಿಮಾಭಿಮುಖವಾಗಿ ಪ್ರಯಾಣ ಮಾಡಿ ಅಮೆರಿಕವನ್ನು ಕಂಡುಹಿಡಿದು ಅನಂತರ ಅಮೆರಿಕದ ಉತ್ತರದ ಕಡೆಯಿಂದ ಪಶ್ಚಿಮಾಭಿಮುಖವಾಗಿ ಈಶಾನ್ಯಕ್ಕೆ ನಡೆದರು. ಆದ್ದರಿಂದ ಇವು ಕ್ರಮವಾಗಿ ಈಶಾನ್ಯಮಾರ್ಗ ಹಾಗೂ ವಾಯವ್ಯ ಮಾರ್ಗಗಳೆಂದು ಪ್ರಸಿದ್ಧವಾಗಿವೆ. ಕ್ರಿಸ್ತಪೂರ್ವ ಕಾಲದಲ್ಲೇ ಗ್ರೀಕರೂ ರೋಮನರೂ ಈ ಪ್ರದೇಶವನ್ನು ಕಂಡಿದ್ದರೆಂದು ಕೆಲವರ ವಾದ. ಗ್ರೀನ್‌ಲ್ಯಾಂಡಿಗೂ ಅದರ ಎದುರಿಗಿನ ಅಮೆರಿಕನ್ ತೀರಗಳಿಗೂ 10ನೆಯ ಶತಮಾನದಲ್ಲಿ ನಾರ್ಸ್ ಜನ ಮಾಡಿದ ಸಮುದ್ರಯಾನಗಳೂ 1194ರ ಸ್ವಾಲ್‌ಬಾರ್ ಆವಿಷ್ಕಾರವೂ ಇತಿಹಾಸ ಗುರುತಿಸಬಹುದಾದ ಮೊದಲು ಸಂಗತಿಗಳು. ಉತ್ತರಮೇರು ಪ್ರದೇಶದ ಅಮೆರಿಕನ್ ವಿಭಾಗದ ಶೋಧನೆಯ ಮೊದಲ ಮುಖ್ಯ ಘಟನೆಯೆಂದರೆ 1497ರಲ್ಲಿ ಜಾನ್ ಕ್ಯಾಬಟ್‌ನಿಂದ ನ್ಯೂಫೌಂಡ್‌ಲೆಂಡ್ ಮತ್ತು ಲ್ಯಾಬ್ರಡಾರ್ ಶೋಧನೆ. ಅನಂತರ ಇನ್ನು ಕೆಲವರು ಕ್ಯಾಬಟ್ ಅನುಸರಿಸಿದ ಮಾರ್ಗವನ್ನೇ ಮುಂದುವರಿಸಿ ಉ.ಅ. 60ºಯ ಬಳಿಯವರೆಗೂ ಸಾಗಿದರು. ಮುಂದಿನ ಮುಖ್ಯ ಪ್ರವಾಸವೆಂದರೆ ವಿಲೋಬಿಯದು (1553). ಈಶಾನ್ಯ ಮಾರ್ಗವನ್ನಾರಂಭಿಸಿದವ ಈತನೇ. ಆದರೆ ಇವನೂ ಸಂಗಡಿಗರೂ ಲ್ಯಾಪ್‌ಲ್ಯಾಂಡಿನ ಬಳಿ ಅಳಿದುಹೋದರು.

ಮುಂದೆ ಅನೇಕ ಇಂಗ್ಲಿಷರು ವಿಲೋಬಿಯ ಮಾರ್ಗದಲ್ಲೇ ಅನ್ವೇಷಣೆ ಮುಂದುವರಿಸಿದರಾದರೂ ಯಾರೂ ಆತ ಕಂಡ ಸ್ಥಳದಿಂದ ಮುಂದೆ ಸಾಗಲಿಲ್ಲ. 1594–97ರಲ್ಲಿ ವಿಲೆಂ ಬಾರೆಂಟ್ಸ್ ಎಂಬ ಡಚ್ ನಾವಿಕ ಮೂರು ಬಾರಿ ಪ್ರವಾಸ ಮಾಡಿ, ಸ್ಪಿಟ್ಸ್‌ಬರ್ಗನನ್ನು ಕಂಡು ಹಿಡಿದ. 1607ರಲ್ಲಿ ಹಡ್ಸನ್ ಉ. ಅ. $81^{0}30^{1}$ ವರೆಗೂ ಹೋಗಿ ಹಿಂದಿರುಗಬೇಕಾಯಿತು. ಪೂರ್ವಾಭಿಮುಖವಾಗಿ ಯಾನ ಮಾಡುವುದು ಅಸಾಧ್ಯವೆಂದು ಆ ಯತ್ನವನ್ನು ಕೈಬಿಡಲಾಯಿತು.

ಈ ಕಾಲದಲ್ಲಿ ಅಮೆರಿಕನ್ ಉತ್ತರಮೇರು ಪ್ರದೇಶದ ಅನ್ವೇಷಣೆ ಶೋಧನೆಗಳ ಪ್ರಯತ್ನವೂ ಸಾಗಿತ್ತು. ಫ್ರೋಬಿಷರ್ (1576), ಜಾನ್ ಡೇವಿಸ್ (1585–88) ಇವರು ಈ ಕ್ಷೇತ್ರದಲ್ಲಿ ಮೊದಲಿಗರು. ಗ್ರೀನ್‌ಲ್ಯಾಂಡಿನ ಪಶ್ಚಿಮತೀರದಲ್ಲಿ 70º41'ವರೆಗೂ ಪ್ರಯಾಣ ಮಾಡಿದ ಹಡ್ಸನ್ ವಾಯವ್ಯ ಮಾರ್ಗವನ್ನನುಸರಿಸಿ, ಅವನ ಹೆಸರಿನ ಕೊಲ್ಲಿಯನ್ನು ಕಂಡುಹಿಡಿದ. (ಅದಕ್ಕೆ ಆತನ ಹೆಸರು ಬಂದದ್ದು ಆಮೇಲೆ, ಅದು ಪೆಸಿಫಿಕ್ ಸಾಗರದ ಭಾಗವೆಂದು ಆಗ ಆತ ಭಾವಿಸಿದ್ದ.) ಮುಂದೆ ಬ್ಯಾಫಿನ್, ಫಾಕ್ಸ್, ಜೇಮ್ಸ್ ಮುಂತಾದವರು ಈ ಕಾರ್ಯ ಮುಂದುವರಿಸಿದರು. ಆಮೇಲೆ ಸುಮಾರು ಒಂದು ನೂರು ವರ್ಷ ಕಾಲ ಅಮೆರಿಕನ್ ಉತ್ತರ ಮೇರು ಪ್ರದೇಶದತ್ತ ಯಾರೂ ಗಮನಹರಿಸಲಿಲ್ಲ.

ಸೈಬೀರಿಯ ತೀರಪ್ರದೇಶದಲ್ಲಿ ರಷ್ಯಕ್ಕೆ ಬಹಳ ಆಸಕ್ತಿಯಿತ್ತು. 1648ರಲ್ಲಿ ಡೆಷ್ನೆಫ್ ಎಂಬಾತ ಬೇರಿಂಗ್ ಜಲಸಂಧಿಯ ಮೂಲಕ ಹಾದುಹೋದನಾದರೂ ವಾಸ್ತವವಾಗಿ ಈ ಜಲಸಂಧಿಯ ಶೋಧನೆ ನಡೆಸಿದವ ಬೇರಿಂಗನೇ––ಒಂದು ಶತಮಾನ ಕಳೆದ ಮೇಲೆ. ಈ ಸಂಧಿಗೆ ಈತನ ಹೆಸರೇ ಬಂದಿದೆ. ಈತನು 1741ರಲ್ಲಿ ವಾಯವ್ಯ ಅಮೆರಿಕದ ಒಂದು ಭಾಗದ ಶೋಧನೆ ಮಾಡಿದ. ಸೈಬೀರಿಯದ ಉತ್ತರದ ತುದಿಯನ್ನು ಕಂಡುಹಿಡಿದವ ಚೆಲ್ಯೂಸ್ಕಿನ್. ಇದಕ್ಕೆ ಈತನ ಹೆಸರೇ ಬಂದಿದೆ. ಮುಂದೆ ಅನೇಕ ರಷ್ಯನರು ಈ ಭಾಗಗಳ ಪರಿಶೋಧನೆಯ ಕಾರ್ಯ ಮುಂದುವರಿಸಿದರು.

ಉತ್ತರದ ಮೇರು ಪ್ರದೇಶದ ಶೋಧನೆಯಲ್ಲಿ ಇಂಗ್ಲಿಷರಿಗೆ ಮತ್ತೆ ಆಸಕ್ತಿ ಹುಟ್ಟಿದ್ದು ಹದಿನೆಂಟನೆಯ ಶತಮಾನದಲ್ಲಿ. ಜೆ.ಸಿ.ಫಿಪ್ಸ್ (ಮುಂದೆ ಲಾರ್ಡ್ ಮಲ್ಗ್ರೇರ್) 1773ರಲ್ಲಿ ಸ್ಪಿಟ್ಸ್ ಬರ್ಗನಿಗೆ ಯಾನ ಮಾಡಿ ಅಲ್ಲಿಂದ ಉ.ಅ. 80º48'ವರೆಗೂ ಹೋದ. ಬೇರಿಂಗ್ ಜಲಸಂಧಿಯ ಮೂಲಕ ಯಾನ ಮಾಡಿದ ಜೇಮ್ಸ್ ಕುಕ್ ಅಷ್ಟೊಂದು ಉತ್ತರಕ್ಕೆ ಹೋಗಲಾಗಲಿಲ್ಲ. ಈತನ ವೈಫಲ್ಯದಿಂದ ಈ ಪ್ರಯತ್ನ ತಾತ್ಕಾಲಿಕವಾಗಿ ನಿಂತಿದ್ದು 1806ರಲ್ಲಿ ಮತ್ತೆ ಪ್ರಾರಂಭವಾಯಿತು. ಸ್ಕೋರ್ಸ್ ಬಿ ಗ್ರೀನ್‌ಲ್ಯಾಂಡಿನ ಪೂರ್ವತೀರದಲ್ಲಿ ಸಂಚರಿಸಿ, ಉ.ಅ. 81º30' ವರೆಗೂ ಪ್ರಯಾಣ ಮಾಡಿದ. ಉತ್ತರಮೇರು ಪ್ರದೇಶದ ಭೂವಿವರಣೆ ಹಾಗೂ ಪ್ರಾಕೃತಿಕ ಇತಿಹಾಸದ ಬಗ್ಗೆ ಹೆಚ್ಚು ಮಾಹಿತಿ ಒದಗಿಸಿದವ ಈತನೇ. ಮುಂದೆ ಅನೇಕರು ಈ ಪ್ರದೇಶದ ಶೋಧನೆಯಲ್ಲಿ ನಿರತರಾದರೂ ಸ್ಕೋರ್ಸ್ ಬಿ ಮುಟ್ಟಿದ ಅಕ್ಷಾಂಶಕ್ಕಿಂತಲೂ ಮುಂದೆ (82º43') ಸಾಗಿದವ ಪ್ಯಾರಿ (1827). ಪೌರಸ್ತ್ಯ ರಾಷ್ಟ್ರಗಳಿಗೆ ವಾಯವ್ಯ ಮಾರ್ಗ ಕಂಡುಹಿಡಿಯುವ ಪ್ರಯತ್ನವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಬ್ರಿಟನ್ನು 20,000 ಪೌ. ಬಹುಮಾನ ನೀಡುವುದಾಗಿ ಪ್ರಕಟಿಸಿತ್ತಾದರೂ ಯಾರೂ ಈ ಬಗ್ಗೆ ಹೆಚ್ಚು ಯಶಸ್ಸು ಗಳಿಸಿರಲಿಲ್ಲ. ಪ್ಯಾರಿ ಈ ನಿಟ್ಟಿನಲ್ಲಿ ಸಾಕಷ್ಟು ದೂರ ಸಾಗಿ ಪ. ರೇ. 110ºಯವರೆಗೂ ಹೋದ, ಅನಂತರ ಟರ್ನಗೇನ್ ಬಿಂದುವಿಗೆ 320 ಕಿಮೀ. ವರೆಗೂ ಮುಂದುವರಿಯುವುದು ಸಾಧ್ಯವಾಯಿತು. ಬೇರಿಂಗ್ ಜಲಸಂಧಿಯಿಂದ ಪೂರ್ವಾಭಿಮುಖವಾಗಿ ಪ್ರಯಾಣ ಮಾಡಿದ ಇನ್ನೊಂದು ತಂಡ ಈ ಬಿಂದುವನ್ನು ಮುಟ್ಟಿ ಬಂತು. ಇದೇ ಕಾಲಕ್ಕೆ ಅನೇಕರು ಅಮೆರಿಕನ್ ತೀರಪ್ರದೇಶದ ಪರಿಶೋಧನೆಯಲ್ಲಿ ನಿರತರಾಗಿದ್ದರು.

ಸರ್ ಜಾನ್ ಫ್ರ್ಯಾಂಕ್‌ಲಿನ್ ಮಹಾಸಾಹಸಿ, ಟರ್ನಗೇನ್ ಸುತ್ತಮುತ್ತಣ ಪ್ರದೇಶದಲ್ಲಿ ಈತ ಪರಿಶೋಧನೆ ನಡೆಸಿದ. ಕಿಂಗ್ ವಿಲಿಯಂ ದ್ವೀಪದ ಪಶ್ಚಿಮಕ್ಕೆ ಉ. ಅ. 98º30'ನಲ್ಲಿ ಈತನ ಹಡಗುಗಳು ಮಂಜಿನಲ್ಲಿ ಸಿಕ್ಕಿಬಿದ್ದುವು. ಈತನೂ ಈತನ ಜೊತೆಯವರೂ ನಾಶ ಹೊಂದಿದರು (1847). ಇವರನ್ನು ಅನ್ವೇಷಣೆ ಮಾಡಲು ಹೋದ ತಂಡಗಳು ಅನೇಕ. ಈ ಅನ್ವೇಷಣೆಯಿಂದ ಉತ್ತರಮೇರು ಪ್ರದೇಶದ ಬಹುಭಾಗ ಶೋಧನೆಗೆ ಒಳಪಟ್ಟು ವಾಯವ್ಯ ಮಾರ್ಗದ ಕನಸು ನನಸಾಯಿತು. ಆದರೆ ವಾಣಿಜ್ಯದೃಷ್ಟಿಯಿಂದ ಈ ಮಾರ್ಗ ಈಗ ಅಷ್ಟೇನೂ ಮುಖ್ಯವಲ್ಲ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಸ್ಪಿಟ್ಸ್‌ಬರ್ಗನ್ ಸುತ್ತಮುತ್ತ ಸ್ವೀಡ್ ಜನರ ಚಟುವಟಿಕೆ ಅಧಿಕವಾಗಿತ್ತು. ನೂರ್ಡನ್ ಷೋಲ್ಡ್ 1878ರಲ್ಲಿ ಚೆಲ್ಯೂಸ್ಕಿನ್ ಭೂಶಿರ ಸುತ್ತಿ, ಬೇರಿಂಗ್ ಜಲಸಂಧಿಯ ಬಳಿ ಚಳಿಗಾಲ ಕಳೆದು, ಪೆಸಿಫಿಕ್‌ಗೆ ಪ್ರಯಾಣ ಮಾಡಿ 1879ರಲ್ಲಿ ಯೋಕೊಹಾಮ ತಲುಪಿದ. 1803–6ರಲ್ಲಿ ಅಮಂಡ್ಸೆನ್ ತನ್ನ ಹಡಗಿನಲ್ಲಿ ಪ್ರಯಾಣಮಾಡಿ ಕೆನಡಪ್ರದೇಶ ಮಾರ್ಗವಾಗಿ ಸಾಗಿ ಅಲಾಸ್ಕವನ್ನು ಬಳಸಿದಾಗ ಈ ವಾಯವ್ಯ ಮಾರ್ಗಾನ್ವೇಷಣೆ ಸಂಪೂರ್ಣವಾದಂತಾಯಿತು. ಈ ನಡುವೆ ಆತ ಮೂರು ಚಳಿಗಾಲಗಳನ್ನು ಮಾರ್ಗ ಮಧ್ಯೆ ಕಳೆಯಬೇಕಾಯಿತು. ಮುಂದೆ ಅನೇಕ ತಂಡಗಳು ಇನ್ನೂ ಶೀಘ್ರವಾಗಿ ಈ ಪ್ರಯಾಣ ಮಾಡಿ ಮುಗಿಸಿದುವು.

**ಉತ್ತರಮೇರು ದರ್ಶನ:** ಉತ್ತರಮೇರುವನ್ನು ಮೊದಲು ಸಂದರ್ಶಿಸಬೇಕೆಂಬ ಉತ್ಸಾಹದಿಂದ ಕಾರ್ಯಪ್ರವೃತ್ತವಾದ ತಂಡಗಳಿಂದ ಮೇರುವಿನ ಇತರ ಪ್ರದೇಶಗಳು ಪತ್ತೆಯಾದುವು, ಉತ್ತರದ ಗುರಿ ಹಿಡಿದ ಅನೇಕ ಸಾಹಸಿಗಳು ನಾನಾ ಬಗೆಯ ವಿಘ್ನಪರಂಪರೆಗಳನ್ನೆದುರಿಸಿದರು. 19ನೆಯ ಶತಮಾನದ ಕೊನೆಯಲ್ಲಿ ಬ್ರಿಟಿಷ್ ಹಾಗೂ ಅಮೆರಿಕನ್ ಅಭಿಯಾನಗಳು ಗ್ರೀನ್‌ಲ್ಯಾಂಡ್ ಮತ್ತು ಎಲ್ಸ್‌ಮೀರ್ ದ್ವೀಪದ ಕಿರು ಮಾರ್ಗದಲ್ಲಿ ಮುನ್ನುಗ್ಗಿದ್ದುವು (1875–

84). ವಿಶೇಷ ರೀತಿಯಲ್ಲಿ ರಚಿಸಲಾದ ಹಡಗೊಂದನ್ನು ನಾನ್ಸನ್ 1893ರಲ್ಲಿ ತೊಡಗಿಸಿ ನೀರ್ಗಲ್ಲಿನ ಖಂಡದೊಂದಿಗೆ ಪಶ್ಚಿಮಾಭಿಮುಖವಾಗಿ ಸಾಗಿ ಉ.ಅ. 84ºರಲ್ಲಿ ಹಡಗು ತ್ಯಜಿಸಿ ಪಾದಯಾತ್ರಿಯಾಗಿ ಮುನ್ನಡೆದು ಆ ವರ್ಷದ ಏಪ್ರಿಲ್ 8 ರಂದು ತನ್ನ ಜೊತೆಗಾರ ಜಾನ್ಸನ್ನನೊಂದಿಗೆ ಉ.ಅ.86º 14' ತಲುಪಿ ಹಿಂದಿರುಗಿದ. ಆ ಕಾಲದಲ್ಲಿ ಅದೊಂದು ವಿಕ್ರಮ.

ಮುಂದೆ ಅನೇಕ ಪ್ರಯತ್ನಗಳಾದ ಮೇಲೆ ಎಲ್ಸ್‌ಮೀರ್‌ದ್ವೀಪದ ಉತ್ತರದಿಂದ ಅಡ್ಮಿರಲ್ ಪೀರಿ ಮುನ್ನಡೆದು, 1909ರ ಏಪ್ರಿಲ್ 6ರಂದು ಉತ್ತರಮೇರು ತಲುಪಿ ಹಿಂತಿರುಗಿದ. 1897ರಲ್ಲಿ ಅಂಡ್ರೀ ಮತ್ತು ಆತನ ಇಬ್ಬರು ಜೊತೆಗಾರರು ಬೆಲೂನಿನಲ್ಲಿ ಅಲ್ಲಿಗೆ ಹೊರಟು ಕಾಣೆಯಾದರು. ಇವರ ದೇಹಗಳೂ ಇವರು ಬಿಟ್ಟ ಟಿಪ್ಪಣಿಗಳೂ ಚಿತ್ರಗಳೂ ಪತ್ತೆಯಾದದ್ದು 1930ರಲ್ಲಿ.

ಉತ್ತರಮೇರುವಿಗೆ ಸ್ಪಿಟ್ಸ್‌ಬರ್ಗನಿನಿಂದ ಮೊಟ್ಟಮೊದಲು ಹಾರಿಹೋಗಿ ಬಂದವ ಅಡ್ಮಿರಲ್ ಬರ್ಡ್ (1926). ಉಂಬರ್ಟೋನೋಬೀಲೆ ಸ್ಪಿಟ್ಸ್‌ಬರ್ಗನ್ನಿನಿಂದ ಹೊರಟು ಉತ್ತರಮೇರುವನ್ನು ದಾಟಿ ಅಲಾಸ್ಕ ತಲಪಿದ. ಈತನಿಗೆ ವಿರುದ್ಧ ದಿಕ್ಕಿನಲ್ಲಿ ಹಾರಿ ಉತ್ತರಮೇರು ದಾಟಿದವ ಜಿ. ಎಚ್. ವಿಲ್ಕಿನ್ಸ್. ಈತನೇ 1932ರಲ್ಲಿ ಜಲಾಂತರ್ಗಾಮಿ ನೌಕೆಯಲ್ಲಿ ಪ್ರಯಾಣ ಮಾಡಬೇಕೆಂದು ಯೋಚಿಸಿದ್ದ. ಆದರೆ ಯಾಂತ್ರಿಕ ತೊಂದರೆಯಿಂದ ಈ ಯತ್ನವನ್ನು ಕೈಬಿಡಬೇಕಾಯಿತು. ಉತ್ತರ ಮೇರುವಿನ ತೇಲು ನೀರ್ಗಲ್ಲಿನ ಮೇಲೆ ವಿಮಾನದ ಮೂಲಕ ಸೋವಿಯತರು ವಿಜ್ಞಾನ ಪರಿಶೋಧನ ಕೇಂದ್ರ ಸ್ಥಾಪಿಸಿದ್ದು 1937ರಲ್ಲಿ. ತೇಲುವ ನೀರ್ಗಲ್ಲ ಖಂಡದೊಂದಿಗೆ ದಕ್ಷಿಣಾಭಿಮುಖವಾಗಿ ಸಾಗಿದ ಈ ವಿಜ್ಞಾನಿಗಳನ್ನು ನೀರ್ಗಲ್ಲೊಡೆಯುವ ದೋಣಿಯೊಂದು ಗ್ರೀನ್‌ಲ್ಯಾಂಡಿನ ಪೂರ್ವತೀರದ ಬಳಿ ರಕ್ಷಿಸಿತು. (ಕೆ.ಆರ್.ಆರ್.)

**ಉತ್ತರಮೇರು ಸಮುದ್ರ: ನೋಡಿ– ಆರ್ಕ್‌ಟಿಕ್–ಸಮುದ್ರ.**

**ಉತ್ತರಮೇರೂರು:** ತಮಿಳುನಾಡಿನ ಚೆಂಗಲ್ಪಟ್ಟ್ ಜಿಲ್ಲೆಯ ಒಂದು ಊರು. ಚೋಳರಾಜ್ಯದಲ್ಲಿ ಒಂದು ಅಗ್ರಹಾರವಾಗಿತ್ತು. 1ನೆಯ ಪರಾಂತಕನ ಆಳ್ವಿಕೆಯ 12 ಮತ್ತು 14ನೆಯ ವರ್ಷಗಳ (919 ಮತ್ತು 921) ಎರಡು ಶಾಸನಗಳು ಇಲ್ಲಿ ಸಿಕ್ಕಿವೆ. ಇವುಗಳಿಂದ ಆ ಕಾಲದ ಗ್ರಾಮಾಡಳಿತ ಪದ್ಧತಿ ಹೇಗಿತ್ತೆಂಬುದನ್ನು ಅರಿಯಬಹುದು. ಹನ್ನೆರಡು ಹಳ್ಳಿಗಳನ್ನೊಳಗೊಂಡ ಕೂಟವನ್ನು (ಕೂಟ್ರಂ) 30 ವಿಭಾಗಗಳಾಗಿ ವಿಂಗಡಿಸಿ ಅವುಗಳ ಆಡಳಿತವನ್ನು ಎಲ್ಲಾ ಗ್ರಾಮಸ್ಥರ ವಶಕ್ಕೂ ಒಪ್ಪಿಸಲಾಗಿತ್ತು. ಇದಕ್ಕಾಗಿ ಸಂವತ್ಸರ ವಾರಿಯಂ, ತೋಟ್ಟವಾರಿಯಂ, ಏರಿವಾರಿಯಂ, ಪೊನ್‌ವಾರಿಯಂ, ಪಂಚವಾರವಾರಿಯಂ (ಇತರ ಮೂಲಗಳಿಂದ ತಿಳಿದುಬರುವ ಪ್ರಕಾರ) ಕಳನಿವಾರಿಯಂ, ಕಣಕ್ಕುವಾರಿಯಂ ಮತ್ತು ತಡಿವಳಿವಾರಿಯಂ ಎಂಬ ನಾನಾ ಮಂಡಳಿಗಳಿದ್ದುವು. ಕುಡುಂಬವಾರಿಯಂ ಎಂಬ ಮತ್ತೊಂದು ಮಂಡಳಿಯ ವಿಚಾರವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಜೊತೆಗೆ ಬ್ರಾಹ್ಮಣ ಮಹಾಸಭೆಯೊಂದು ಪ್ರತ್ಯೇಕವಾಗಿತ್ತು. ಇದಲ್ಲದೆ ಭೂಸ್ಥಿತಿವಂತರೂ ವಿದ್ಯಾವಂತರೂ ಶಾಸ್ತ್ರಜ್ಞಾನಿಗಳೂ ಆಡಳಿತ ಮಂಡಳಿಗಳಿಗೆ ಆಯ್ಕೆ ಹೊಂದಲು ಅರ್ಹತೆ ಹೊಂದಿದ್ದರು; ಆದರೆ ಅಪರಾಧಿಗಳೂ ಅವರ ಹತ್ತಿರದ ಸಂಬಂಧಿಗಳೂ ದಕ್ಷತೆಯಿಲ್ಲದವರೂ ದುರ್ನಡತೆಯವರೂ ಅನರ್ಹರು. ಚುನಾವಣೆಗೆ ಹಿಂದಿನ ಅವಧಿಯ ಮಂಡಳಿಯಲ್ಲಿದ್ದ ಸದಸ್ಯರು ಮಾರನೆಯ ಅವಧಿಯಲ್ಲಿ ಸ್ಪರ್ಧಿಸುವಂತಿರಲಿಲ್ಲ. ಎಲ್ಲ ಅಭ್ಯರ್ಥಿಗಳ ಹೆಸರುಗಳನ್ನೂ ಬರೆದ ಚೀಟಿಗಳನ್ನು ಮಡಕೆಯೊಂದರಲ್ಲಿ ಹಾಕಿ ಒಬ್ಬ ಬಾಲಕನಿಂದ ಎತ್ತಿಸುವುದೇ ಆಗಿನ ಆಯ್ಕೆ ಪದ್ಧತಿ. ಉತ್ತರಮೇರೂರಿನಲ್ಲಿದ್ದ ಕೆರೆಯ ಹೆಸರು ವೈರಮೇಘ ತಟಾಕ. ನೀರಾವರಿಗೆ ಇದು ಮುಖ್ಯ ಆಸರೆಯಾಗಿತ್ತು. (ಬಿ.ಕೆ.ಜಿ.)

**ಉತ್ತರರಾಮಚರಿತೆ:** ಭವಭೂತಿ ಕವಿ ಕೃತ (ಸು. 700) ಮೂರು ನಾಟಕಗಳಲ್ಲೊಂದು. ಅವುಗಳಲ್ಲಿ ಅತ್ಯುತ್ಕೃಷ್ಟ ಕೃತಿಯೆಂದು ಖ್ಯಾತಿವೆತ್ತಿದೆ. ಏಳಂಕದ ಈ ನಾಟಕಕ್ಕೆ ರಾಮಕಥೆ ಮೂಲವಾದರೂ ಖಚಿತವಾದ ಯಾವ ಮೂಲದಿಂದ ಕವಿ ವಸ್ತುವನ್ನು ಆರಿಸಿಕೊಂಡಿದ್ದಾನೆಂದು ಹೇಳಲು ಬಾರದು. ಏಕೆಂದರೆ ರಾಮಾಯಣ ಕಥೆ ಮಹಾಭಾರತ, ಬ್ರಹ್ಮ, ಗರುಡ, ಪದ್ಮ, ಸ್ಕಾಂದ, ಅಗ್ನಿ, ಕೂರ್ಮ, ಭಾಗವತ ಮೊದಲಾದ ಪುರಾಣೇತಿಹಾಸಗಳಲ್ಲೂ ಬರುತ್ತದೆ. ಅಲ್ಲದೆ ಜೈನ, ಬೌದ್ಧ ರಾಮಾಯಣಗಳು ಬೇರೆ ಇವೆ. ಇವುಗಳಲ್ಲಿ ಯಾವುವು ಭವಭೂತಿಗಿಂತ ಹಿಂದಿನವು ಎಂದು ಗುರುತಿಸುವುದೂ ಕಷ್ಟ. ಹೀಗಾಗಿ ಭವಭೂತಿ ಯಾವ ಮೂಲವನ್ನು ಅನುಸರಿಸಿದ್ದಾನೆಂದು ಹೇಳುವುದು ಸಾಧ್ಯವಾಗಿಲ್ಲ. ಪ್ರಾಯಃ ಭಾಸನಂತೆ ಈತನೂ ಪುರಾಣಕ್ಕಿಂತ ವಾಲ್ಮೀಕಿ ರಾಮಾಯಣದ ಆಧಾರದ ಮೇಲೆ ತನ್ನ ನಾಟಕಗಳನ್ನು ಬರೆದನೆಂದೂ ವ್ಯತ್ಯಾಸವಿರುವ ಕಡೆ ಅದು ಕವಿಕಲ್ಪಿತವೆಂದೂ ಹೇಳಬಹುದು. ಉತ್ತರರಾಮಚರಿತೆ ಕವಿಯ ಕೊನೆಯ ನಾಟಕವಾಗಿರಬಹುದು. ಕಥೆ ಹೀಗಿದೆ: ಪೂರ್ಣ ಗರ್ಭಿಣಿಯಾದ ಸೀತೆಯನ್ನು ರಾಮನೊಡನೆ ಬಿಟ್ಟು ಉಳಿದೆಲ್ಲ ಬಂಧುಬಳಗದವರು ಯಜ್ಞವನ್ನು ನೋಡಲು ಋಷ್ಯಶೃಂಗಾಶ್ರಮಕ್ಕೆ ಹೋಗುತ್ತಾರೆ. ಇತ್ತ ಸತಿಪತಿಯರು ರಾಮಾಯಣದ ಚಿತ್ರಪಟಗಳನ್ನು ನೋಡುತ್ತ ಆಯಾಸ ಕಳೆದುಕೊಳ್ಳುತ್ತಾರೆ. ಹಾಗೆಯೇ ಸೀತೆ ನಿದ್ರೆಹೋಗುತ್ತಾಳೆ. ಗೂಢಚಾರ ದುರ್ಮುಖ ಅದೇ ಹೊತ್ತಿನಲ್ಲಿ ಬಂದು ಸೀತಾ ವಿಷಯಕವಾದ ಜನಾಪವಾದವನ್ನು ತಿಳಿಸುತ್ತಾನೆ. ಇನ್ನು ಸೀತೆಯನ್ನು ಬಿಟ್ಟುಬಿಡುವುದೊಳಿತೆಂದು ನಿಶ್ಚಯಿಸಿ ಶ್ರೀರಾಮ ಅವಳನ್ನು ವನಕ್ಕೆ ಕರೆದುಕೊಂಡು ಹೋಗಲು ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ. ಋಷ್ಯಾಶ್ರಮಕ್ಕೆ ಹೋಗಬೇಕೆಂಬ ತನ್ನ ಹಳೆಯ ಬಯಕೆ ಕೈಗೂಡಿತೆಂದು ಸೀತೆ ಹೋಗುತ್ತಾಳೆ. ಪಂಚವಟಿಯಲ್ಲಿ ಅತ್ರೇಯಿ ವಾಸಂತಿಯರ ಸಂಭಾಷಣೆಯಿಂದ ಎರಡನೆಯ ಅಂಕ ಪ್ರಾರಂಭವಾಗುತ್ತದೆ. ವಾಲ್ಮೀಕಿ ಋಷಿಯ ಆಶ್ರಮದಲ್ಲಿ ಲವಕುಶರ ಬೆಳವಣಿಗೆ, ವಿದ್ಯಾಭ್ಯಾಸ, ಜೃಂಭಕಾಸ್ತ್ರಗಳ ಸಿದ್ಧಿ, ರಾಮಾಯಣದ ರಚನೆ, ಹಿರಣ್ಮಯೀ ಸೀತೆಯೊಡನೆ ಅಶ್ವಮೇಧಯಾಗ ಮಾಡಲು ರಾಮನ ಮನೀಷೆ,–ಶೂದ್ರತಪಸ್ವಿ ಶಂಬೂಕನನ್ನು ವಧಿಸಲು ಜನಸ್ಥಾನಕ್ಕೆ ರಾಮ ಬರುವುದು–ಹೀಗೆ ಕಥೆ ಮುಂದುವರಿದಿದೆ. ಶಂಬೂಕ ಸಾಯುವಾಗ ಆ ಸ್ಥಳ ಜನಸ್ಥಾನವೆಂದು ಹೇಳಲು ರಾಮನ ಹಳೆಯ ನೆನಪುಗಳು ಕೆರಳುತ್ತವೆ. ಇನ್ನು ಮೂರನೆಯ ಅಂಕ, ಸೀತೆ ಮಕ್ಕಳ ಹನ್ನೆರಡನೆಯ ಜನ್ಮೋತ್ಸವಕ್ಕಾಗಿ ಅಲ್ಲಿ ಗೋದಾವರೀ ತೀರಕ್ಕೆ ಬಂದಿದ್ದಾಳೆ. ರಾಮನೂ ಅಲ್ಲಿಯೇ ದುಃಖಿಸುತ್ತ ಆಗಾಗ ಎಚ್ಚರ ತಪ್ಪುತ್ತ ಕೊರಗುತ್ತಿದ್ದಾನೆ. ಗಂಗಾದೇವಿ ದಯಪಾಲಿಸಿದ ಅದೃಶ್ಯವಿದ್ಯೆಯಿಂದ ರಾಮನನ್ನು ಸೀತೆ ಸಂತೈಸಿ ಬದುಕಿಸುತ್ತಾಳೆ. ವಾಸಂತಿ ಕಟುವಾಗಿ ಟೀಕಿಸುವುದರಿಂದ ರಾಮ ದುಃಖಿತನಾಗಿ ಪುನಃ ಪುನಃ ಮೂರ್ಛೆಹೋಗುತ್ತಾನೆ. ಸೀತೆ ಮುಟ್ಟಿ ಮುಟ್ಟಿ ಎಚ್ಚರಿಸುತ್ತಾಳೆ. ಸೀತೆಗೆ ರಾಮನ ನೈಜಪ್ರೇಮದ ನಿದರ್ಶನವಾಗಿ ಸಮಾಧಾನವಾಗುತ್ತದೆ. ನಾಲ್ಕನೆಯ ಅಂಕದಲ್ಲಿ ಈ ವಿಷಯ ತಿಳಿದ ಜನಕನ ಕೋಪ: ವಸಿಷ್ಠ ಅರುಂಧತಿ, ಕೌಸಲ್ಯೆ, ಜನಕರ ಪರಸ್ಪರ ಸಂಭಾಷಣೆ; ಲವಕುಶರನ್ನು ನೋಡಿ ಉಂಟಾದ ಆನಂದ–ಇವು ಬಂದಿವೆ. ಯಜ್ಞಾಶ್ವವನ್ನು ಕಟ್ಟಿಹಾಕಿರುವುದರಿಂದ ಲವಕುಶ–ಚಂದ್ರಕೇತುಗಳಲ್ಲಿ ನಡೆದ ಘೋರಯುದ್ಧದ ವಿವರ ಐದನೆಯ ಅಂಕದಲ್ಲಿ ಬರುತ್ತದೆ. ಅಕಸ್ಮಾತ್ ರಾಮಚಂದ್ರ ಅಲ್ಲಿಗೆ ಬಂದು ಸರ್ವರನ್ನೂ ಸಂತೈಸುವುದು, ರಾಮಾಯಣಶ್ರವಣ, ಜೃಂಭಕಾಸ್ತ್ರಪ್ರಯೋಗದ ಪ್ರಕರಣ, ಲವಕುಶರ ಸಂದರ್ಶನದಿಂದ ರಾಮನಿಗೆ ಉಂಟಾದ ಅನಿರ್ವಚನೀಯ ಆನಂದ, ಕೊನೆಯ ಗರ್ಭಾಂಕದಲ್ಲಿ ಸೀತಾ ಪರಿತ್ಯಾಗ ನಾಟಕದ ಪ್ರಯೋಗ, ಅದನ್ನು ನೋಡಿ ರಾಮನಿಗೂ ಅಲ್ಲಿ ನೆರೆದ ಸಮಸ್ತರಿಗೂ ಮನಸ್ಸಿನ ಮೇಲಾದ ಪರಿಣಾಮ, ಪರಿವರ್ತನ, ಕೊನೆಗೆ ಅರುಂಧತಿ ಮಹಾಜನಗಳೆದುರಿಗೆ, ಸೀತೆಯನ್ನು ರಾಮನಿಗೊಪ್ಪಿಸುವುದು, ಪುನರ್ಮಿಲನವನ್ನು ಕಂಡು ಪ್ರಜೆಗಳೆಲ್ಲರೂ ಸಂತೋಷಪಡುವುದು–ಈ ಸಂಗತಿಗಳಿವೆ. ನಾಟಕ ಆನಂದದಲ್ಲಿ ಪರ್ಯವಸಾನವಾಗುತ್ತದೆ.

ಉತ್ತರರಾಮಚರಿತದ ಕಥೆ ಹಳೆಯದಾದರೂ ಕವಿಯ ಕಲಾಕೃತಿ ಚಿರನೂತನವಾಗಿದೆ. ತಾರ್ಕಿಕವಾಗಿ, ಸುಸಂಬದ್ಧವಾಗಿ ಮೂಲಕಥೆಯನ್ನು ಕವಿ ಪರಿವರ್ತಿಸಿಕೊಂಡಿದ್ದಾನೆ. ಸೀತಾತ್ಯಾಗದ ಸನ್ನಿವೇಶ ಪೂರ್ಣ ಕವಿಕಲ್ಪಿತ. ಲೋಕಾರಾಧನೆ ರಾಜನಿಗೆ ಒಂದು ಪವಿತ್ರ ವ್ರತ. ಪ್ರಜಾನಾಂ ರಂಜನಾತ್ ರಾಜಾ. ದಶರಥ ಅದನ್ನು ಪೂರೈಸಲು ರಾಮನನ್ನೂ ಪ್ರಾಣವನ್ನೂ ಬಿಟ್ಟ. ಅತಿರಥಿ ದಶರಥನ ಮಗನಾಗಿ ರಾಮಚಂದ್ರ ಸೀತೆಯ ವಿಷಯವಾಗಿ ಬಂದ ಜನಾಪವಾದಶಲ್ಯವನ್ನು ಕಿತ್ತೊಗೆಯಲು ಹಿಂದೆಮುಂದೆ ನೋಡಲಿಲ್ಲ. ಕರ್ತವ್ಯನಿರತನಾಗಿರಲು ವಸಿಷ್ಠರ ಸಂದೇಶ ಬೇರೆ ಅವನ ಎದುರಿಗಿತ್ತು. ಪ್ರಜೆಗಳು ದುರ್ಜನರು ಎಂದು ಯಾರಾದರೂ ಆಡಿಕೊಂಡರೆ ಅದನ್ನು ಆತ ಸಹಿಸ. ಇಕ್ಷ್ವಾಕುವಂಶದ ಗೌರವರಕ್ಷಣೆಯಲ್ಲಿ ಆತನಿಗೆ ಅತೀವಶ್ರದ್ಧೆ. ಪ್ರೇಮದ ಮಡದಿ, ಜೀವನದ ಸಾರಸರ್ವಸ್ವಳಾದ ಸೀತೆಯನ್ನು ಅಡವಿಗೆ ಅಟ್ಟಿ ಹೇಗೆ ವಿರಹಜ್ವಾಲೆಯನ್ನು ಸಹಿಸುವುದು? ದುರ್ಮುಖನ ಮಾತು ರಾಮನ ಮರ್ಮವನ್ನು ಭೇದಿಸಿತು. ದಿಕ್ಕುಗಾಣದೇ ಕಡುಬಡುವನಂತಾಗಿ ದುರ್ದೈವಿಯಾದ ತಾನು ಮಾಡುವುದಾದರೂ ಏನನ್ನು ಎಂದು ಗೋಳಿಟ್ಟ. ಪತಿಧರ್ಮವನ್ನು ಪಾಲಿಸಿದರೆ ರಾಜಧರ್ಮದ ವಿನಾಶ, ರಾಜಧರ್ಮರಕ್ಷಣೆ ಮಾಡಿದರೆ ಪತಿಧರ್ಮದ ಅಧಃಪತನ. ಹೀಗೆ ಧರ್ಮಸಂಕಟದಲ್ಲಿ ಬಿದ್ದು ಒಂದರೆಕ್ಷಣ ವಿಚಾರಿಸಿದ. ಮನೆಯಲ್ಲಿ ಸಾಕಿ ಸಲಹಿ ನಂಬಿದ ಪಕ್ಷಿಯನ್ನು ಕೈಯಾರೆ ಕೊಲ್ಲುವ ಕಟುಕನ ಹಾಗೆ ಸೀತೆಯನ್ನು ಅಡವಿಗಟ್ಟಲು ನಿರ್ಧರಿಸಿದ. ಅಪೂರ್ವಕರ್ಮ ಚಾಂಡಾಲನಾದೆ, ಕ್ರೂರಪಾತಕಿಯಾದೆ ಎಂದು ಕಣ್ಣೀರ ಕೋಡಿಯನ್ನೇ ಹರಿಸಿದ. ರಾಜಧರ್ಮ ಮೇಲಾಯಿತು. ಆದರೂ ಪತಿಧರ್ಮ ಅಳಿಯಲಿಲ್ಲ, ಪ್ರೇಮ ಕುಂದಲಿಲ್ಲ. ಸೀತೆ ಕಾಡಿಗೆ ಹೋಗಬೇಕಾಯಿತು. ಶಂಬೂಕವಧ ವೃತ್ತಾಂತ ಸೀತಾರಾಮರ ಶರೀರವಿಯೋಗವನ್ನು ಮಾತ್ರ ತೋರಿಸಿ, ಅನ್ಯೋನ್ಯ ಹೃದಯಗಳ ಅಭೇದ್ಯ ಪ್ರೇಮಘನತೆಯನ್ನು ದಿಗ್ದರ್ಶಿಸುತ್ತದೆ. ರಾಮ ಸಂತಪ್ತನಾದರೂ ಧರ್ಮಮೂರ್ತಿ. ಸೀತೆ ಪ್ರೇಮಮಯಿ, ಪತಿನಾರಾಯಣೆ, ಕ್ಷಮಾಶಾಲಿನಿ. ರಾಮ ಗೈದ ಸೀತಾ ತ್ಯಾಗದಲ್ಲಿ ಕೋಪಕ್ಕಿಂತಲೂ ಅನುಕಂಪವೇ ಹೆಚ್ಚುವಂತೆ ಕವಿ ಸಂವಿಧಾನ ಕೌಶಲವನ್ನು ತೋರಿಸಿದ್ದಾನೆ. ಮುನಿಗಳು ಸೀತೆಗೆ ಮಾಡಿದ ಆಶೀರ್ವಾದ, ಜೃಂಭಕಾಸ್ತ್ರಗಳು ಇವೇ ಮೊದಲಾದ ಸಂದರ್ಭಗಳಿಂದ ಭವಿಷ್ಯದ ಸುಖಾವಹ ಫಲಸಿದ್ಧಿಯನ್ನು ಸೂಚಿಸಿದ್ದಾನೆ. ಅದೃಶ್ಯರೂಪಿಣಿ ಸೀತೆಯ ಸನ್ನಿವೇಶ, ರಾಮನ ಮನೋಭೂಮಿಕೆಯನ್ನು ತೋರಿಸಲು ಸಾಕ್ಷಿಯಾಗಿದೆ. ಅಲ್ಲಲ್ಲಿ ರಾಮನನ್ನು ತೆಗಳುವ ಪ್ರಸಂಗಗಳಲ್ಲಿ ರಾಮನ ಕೃತಿ ಸುತ್ಯವಲ್ಲವೋ ಏನೋ ಎಂಬುವಂತೆ ಕವಿ ತೋರಿಸಿದ್ದಾನೆ. ರಾಮ, ಲವಕುಶರ ಸುಕುಮಾರ ಮಿಲನ ಸನ್ನಿವೇಶ ಹೃದಯಸ್ಪರ್ಶಿಯಾಗಿದೆ. ಗರ್ಭಾಂಕದ ತಂತ್ರಚಾತುರ್ಯವಂತೂ ಬಹಳ ಮಾರ್ಮಿಕವಾಗಿದೆ. ಪೌರಜನರಿಗೆ ಅಂತ ರಾರ್ಥವನ್ನು ಮನವರಿಕೆ ಮಾಡಿಕೊಡುವುದೇ ಇದರ ಮುಖ್ಯ ಉದ್ದೇಶ. ಸೀತೆಯ ಸೀಮಾತೀತ ದುಃಖದರ್ಶನದಿಂದ ರಾಮನ ಮನಸ್ಸು ಪುನರ್ಮಿಲನಕ್ಕೆ ಹಾತೊರೆಯುತ್ತದೆ. ನಾಟಕ ಮಂಗಳಮಯವಾಗುತ್ತದೆ. ಪಾತ್ರಚಿತ್ರಣ ಇಲ್ಲಿನ ಧ್ವನಿಗೆ ಅನುಗುಣವಾಗಿ ಅನುಪಮವಾಗಿದೆ. ರಾಮ ಮಾನನಿಧಿ, ಮಾನವೀಯತೆಯ ಮಹತಿಯ ಪ್ರತೀಕ. ಎರಡು ಶಾಶ್ವತ ಸತ್ಯಗಳ ದ್ವಂದ್ವದಲ್ಲಿ ಸಾಮರಸ್ಯವನ್ನು ಉಳಿಸಿಕೊಳ್ಳಲು ಆತ ಪ್ರಯತ್ನಿಸುತ್ತಾನೆ. ಅಸಾಮಾನ್ಯ ಸತ್ತ್ವಶಾಲಿ, ರಾಮಚಂದ್ರ, ಅದ್ವೈತಂ ಸುಖದುಃಖಯೋಃ–

ಎಂಬುದು ಸತ್ಯವಾದರೆ ರಾಮಸೀತೆಯರ ಪ್ರೇಮ ಅನನ್ಯಸಾಮಾನ್ಯವಾದು ದೆಂದು ಕವಿಯೊಡನೆ ಹೇಳಬಹುದು. ಪತಿಯ ಕರ್ತವ್ಯದ್ರವ್ಯವನ್ನು ರಾಜಧರ್ಮ ಯಜ್ಞದಲ್ಲಿ ಆಹುತಿ ಕೊಟ್ಟು, ಅನನ್ಯಸಾಮಾನ್ಯವಾದ ಸೀತಾತ್ಯಾಗದಲ್ಲಿ ವ್ಯಕ್ತವಾದ ರಾಮಚಂದ್ರನ ಮಹೋಜ್ಜ್ವಲ ಮನಃಸ್ಥೈರ್ಯದ ಪರಿಣಾಮವನ್ನು ಕವಿ ಉಜ್ಜ್ವಲವಾಗಿ ಚಿತ್ರಿಸಿದ್ದಾನೆ. ರಾಮ ಸ್ಥಿತಪ್ರಜ್ಞನಂತೆ ಕಾಣುತ್ತಾನೆ. ದುಃಖ ಸಂವೇದನಾಯ್ವೈವ ರಾಮೇ ಚೈತನ್ಯಮಾಹಿತಂ. ಹೃದಯ ಸಾವಿರ ಹೋಳಾಗಿ ಸಿಡಿದಿತ್ತು. ಸೀತಾ ವಿವಾಸನ ಪಟೋಃ ಕರುಣಾ ಕುತಸ್ತೇ. ಹೀಗೆ ತನ್ನನ್ನೇ ಹೀಯಾಳಿಸಿಕೊಂಡ, ರಾಮ. ಸೀತೆಯ ಪಾತ್ರವೂ ಅಷ್ಟೇ ಕಲಾಪ್ರಪೂರ್ಣ ವಾಗಿ ರೂಪು ಗೊಂಡಿದೆ. ರಾಮ ತನ್ನನ್ನು ಕಾಡಿಗಟ್ಟಿದುದು ಸರಿಯೇ ಎಂದು ಸಂಶಯ ಸಂತಾಪಗಳುಂಟಾ ದಾಗ್ಯೂ ಅವನ ಬಗ್ಗೆ ಪ್ರೇಮದ್ರೋಹದ ಕಲ್ಪನೆ ಅವಳ ಮನದಲ್ಲಿಲ್ಲ. ರಾಜಧರ್ಮದ ಶ್ರೀಮದ್ಗಾಂಭೀರ್ಯವನ್ನೂ ರಾಮನ ನಿರುಪಾಯತೆಯನ್ನೂ ಅವನ ಮನದಳಲನ್ನೂ ಮನಗಂಡು ಅವಳ ಅಂತಃಕರಣ ಕರಗಿಹೋಗಿದೆ. ರಾಮನ ಪ್ರೇಮದಾಳವನ್ನು ಕಾಣುವ ಸುಯೋಗವನ್ನು ಅಲಭ್ಯಲಾಭವೆಂದು ಹೊಗಳುತ್ತಾಳೆ. ಪ್ರೇಮದ ನೆಲೆ ಬೆಲೆಗಳನ್ನು ಕಂಡವ ಭವಭೂತಿಯೊಬ್ಬನೇ ಎಂದೆನಿಸುತ್ತದೆ. ಹೆಣ್ಣು ಕಷ್ಟಸಹಿಷ್ಣುವಾಗಿರಬೇಕು, ಸಾಧ್ವೀಶಿರೋಮಣಿ ಯಾಗಿರಬೇಕು. ಪತಿಯ ಪ್ರೇಮದಲ್ಲಿ ಪೂರ್ಣ ವಿಶ್ವಾಸವಿದ್ದರೆ ಮಾತ್ರ ಇದು ಸಾಧ್ಯ ಎಂದು ಭವಭೂತಿ ಸೂಚಿಸಿದ್ದಾನೆ.

**ಏಕೋರಸಃ ಕರುಣ ಏವ ನಿಮಿತ್ತ ಭೇದಾತ್**
**ಭಿನ್ನಃ ಪೃಥಕ್ ಪೃಥಗಿವಾಶ್ರಯತೇ ವಿವರ್ತಾನ್ ।**
**ಆವರ್ತಬುದ್ಬುದ ತರಂಗಮಯಾನ್ ವಿಕಾರಾನ್**
**ಅಂಭೋ ಯಥಾ ಸಲಿಲಮೇವ ತು ತತ್ಸಮಗ್ರಂ ॥**

ಎಂಬ ಭವಭೂತಿಯ ಸಿದ್ಧಾಂತ ನಾಟಕದ ಉದ್ದಕ್ಕೂ ಚಿತ್ರಿತವಾಗಿರುವ ಕರುಣರಸ ಪ್ರತಿಪಾದನೆಯಲ್ಲಿ ಸ್ಪಷ್ಟವಾಗಿ ತೋರುತ್ತದೆ. ಇದಕ್ಕೆ ನೇರಕಾರಣ ರಾಮಾಯಣದ ಮೂಲಕಥಾ ಸನ್ನಿವೇಶ. ರಾಮ ವೀರಾಗ್ರಣಿಯಾದ ರಾಜನಾದರೇನು? ಜನಕನಂದಿನಿ ಸೀತೆ ರಾಮಚಂದ್ರನ ಪ್ರೇಮದ ಪುತ್ಥಳಿಯಾದರೂ ಮುತ್ತಿನಂಥ ಮಕ್ಕಳ ತಾಯಿಯಾದರೂ ಏನು ಗತಿಯಾಯ್ತು? ಅಪಿಗ್ರಾವಾ ರೋದಿತ್ಯಪಿ ದಲತಿ ವಜ್ರಸ್ಯ ಹೃದಯಂ. ನಿಸರ್ಗವೇ ಕಣ್ಣೀರಿಟ್ಟಿತೆಂದು–ಸಹೃದಯರ ಕರುಳು ಕತ್ತರಿಸುವಂತೆ ಕವಿ ನುಡಿದಿದ್ದಾನೆ. ಜೀವನ ಬಿಡಿಸಲಾರದ ಸಮಸ್ಯೆಗಳ ಗ್ರಂಥಿ. ಪುಟ ಪಾಕಪ್ರತೀತಾಶೋ ರಾಮಸ್ಯ ಕರುಣೋರಸಃ, ರಾಮ, ಸೀತೆ, ಕೌಸಲ್ಯೆ, ಅರುಂಧತಿ, ಜನಕ, ಭಾಗೀರಥಿ, ವಾಸಂತಿ–ಎಲ್ಲರಿಗೂ ದುಃಖ; ಎಲ್ಲರೂ ಶೋಕಸ್ರೋತದ ರಭಸಕ್ಕೆ ಸಿಕ್ಕವರೆ. ಭವಭೂತಿಯ ಉತ್ತರರಾಮ ಚರಿತೆ ಸಹೃದಯರ ಅಂತಃಕರಣವನ್ನು ಸೂರೆಗೊಂಡಿದೆ. ಶೃಂಗಾರ, ತಿಳಿಹಾಸ್ಯ, ವೀರ, ವಾತ್ಸಲ್ಯ, ಅದ್ಭುತ, ಶಾಂತ ರಸಗಳು ಆನುಷಂಗಿಕವಾಗಿ ಬಂದು ಮೂಲ ಕರುಣರಸ ಪ್ರತಿಪಾದನೆಯನ್ನು ಪುಷ್ಟೀಕರಿಸುತ್ತವೆ. ಉತ್ತರೇರಾಮಚರಿತೇ ಭವಭೂತಿರ್ವಿಶಿಷ್ಯತೇ. ಜೀವನದಲ್ಲಿ ಆಳವಾದ ಅನುಭವ ಪಡೆದ ಕವಿ ಪರಿಣತಪ್ರಜ್ಞನಾಗಿ ಪ್ರೇಮದ ಉದಾತ್ತ ತತ್ತ್ವಗಳನ್ನು ನಾಟಕದಲ್ಲಿ ಸೇರಿಸಿದ್ದಾನೆ. ಪ್ರೇಮದ ನಾನಾ ರೂಪಗಳಾದ ಭಕ್ತಿ, ರತಿ, ವಾತ್ಸಲ್ಯ, ಸ್ನೇಹಗಳ ಚಿತ್ರಣ ಕಲಾವೈಭವದಿಂದ ಕೂಡಿದೆ. ಪ್ರೇಮ ಅವಿನಾಶಿ, ಅವಿಕಾರಿ, ಪವಿತ್ರ, ಆನಂದಮಯ. ಪ್ರೇಮವೇ ಜೀವನ. ಇದೇ ಭಾರತೀಯ ಸಂಸ್ಕೃತಿಯ ಉನ್ನತ ಆದರ್ಶ. ಇದೇ ಸೀತಾರಾಮರ ಆದರ್ಶಜೀವನ. ಇದನ್ನು ತಂತ್ರಕೌಶಲದಿಂದ ಹೃದಯಂಗಮವಾಗಿ ಚಿತ್ರಿಸಿರುವುದರಿಂದಲೇ ಈ ನಾಟಕಕ್ಕೆ ಈ ಬಗೆಯ ಖ್ಯಾತಿ. **(ನೋಡಿ– ಭವಭೂತಿ)** (ಎ.ಎಲ್.ಎಚ್.)

**ಉತ್ತರ ವಿಯೆಟ್ನಾಂ:** ಫ್ರೆಂಚ್ ಇಂಡೋಚೀನದ ಒಂದು ರಾಜ್ಯವಾಗಿದ್ದ ವಿಯೆಟ್ನಾಮಿನ ಉತ್ತರಭಾಗ. ವಿಯೆಟ್ನಾಂ ಪ್ರಜಾಸತ್ತಾತ್ಮಕ ಗಣರಾಜ್ಯವೆಂದು ಇದರ ಅಧಿಕೃತನಾಮ. 17ನೆಯ ಉತ್ತರ ಅಕ್ಷಾಂಶ ರೇಖೆಯೇ ಇದಕ್ಕೂ ದಕ್ಷಿಣ ವಿಯೆಟ್ನಾಮಿಗೂ ನಡುವಣ ಗಡಿಗೆರೆ. ಉತ್ತರ ಪಶ್ಚಿಮಗಳಲ್ಲಿ ಚೀನ, ಲಾವೋಸ್‍ಗಳೂ ಪೂರ್ವದಲ್ಲಿ ದಕ್ಷಿಣ ಚೀನ ಸಮುದ್ರವೂ ಇವೆ. ವಿಸ್ತೀರ್ಣ 63,360 ಚ. ಮೈ. ಜನಸಂಖ್ಯೆ 1,59,03,000 (1960). ರಾಜಧಾನಿ ಹಾನಾಯ್.

**ಮೇಲ್ಮೈ ಲಕ್ಷಣ:** ಉತ್ತರ ವಿಯೆಟ್ನಾಮಿನ ಭೂಪ್ರದೇಶವನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು: 1 ವಾಯವ್ಯದಿಂದ ಆಗ್ನೇಯಕ್ಕೆ ಹಬ್ಬಿರುವ ಪರ್ವತ ಶ್ರೇಣಿ. 2 ಕೆಂಪುನದಿಗೆ ದಕ್ಷಿಣದಲ್ಲಿ ಸುಣ್ಣಕಲ್ಲು ಹಾಗೂ ಬೆಣಚುಕಲ್ಲುಗಳಿಂದ ತುಂಬಿದ ಪರ್ವತ ಸಮೂಹ ಮತ್ತು ಯುನ್ನಾನ್ ಪ್ರದೇಶ. 3 ಇನ್ನೂ ದಕ್ಷಿಣಕ್ಕೆ ಸಮುದ್ರದ ಸನಿಹದವರೆಗೂ ಹಬ್ಬಿರುವ ಎತ್ತರದ ಪರ್ವತ. 4 ಕಡಲ ದಂಡೆಗುಂಟ ಹಬ್ಬಿರುವ ಕಿರು ಅಗಲದ ಮೈದಾನ. 5 ಇವುಗಳ ನಡುವೆ ಟಾಂಕಿನ್ ಖಾರಿಯ ಮಗ್ಗುಲಲ್ಲಿ ಮೈಚಾಚಿ ಮಲಗಿರುವ ಕೆಂಪುನದೀ ಮುಖಜಭೂಮಿ. ಈ ನದಿಯ ಸ್ವಭಾವ ಬಲು ಚಂಚಲ; ಮಣ್ಣು ತಂದು ಪಾತ್ರದಲ್ಲಿ ತುಂಬಿ ದಡಮೀರಿ ಹರಿದು ಹಾದಿಯನ್ನೇ ಬದಲಾಯಿಸುತ್ತಿರುತ್ತದೆ.

**ವಾಯುಗುಣ:** ಉತ್ತರ ವಿಯೆಟ್ನಾಮಿನದು ಉಷ್ಣ ಹಾಗೂ ತೇವದ ಮಾನ್ಸೂನ್ ಮಾದರಿಯ ವಾಯುಗುಣ. ಸಾಮಾನ್ಯವಾಗಿ ಮೇ ಯಿಂದ ಅಕ್ಟೋಬರ್ ವರೆಗೆ ಮಳೆಗಾಲ. ಆದರೆ ದಕ್ಷಿಣಭಾಗದ ಕಡಲ ತೀರದಲ್ಲಿ ಚಳಿಗಾಲದಲ್ಲೂ ಈಶಾನ್ಯ ಮಾನ್ಸೂನ್ ಮಾರುತಗಳಿಂದ ಸ್ವಲ್ಪ ಮಳೆ ಬೀಳುತ್ತದೆ.

**ಸ್ವಾಭಾವಿಕ ಸಸ್ಯವರ್ಗ:** ಮಳೆ ಹಾಗೂ ನೆಲದ ಎತ್ತರಕ್ಕೆ ಅನುಗುಣವಾಗಿ ಇಲ್ಲಿನ ಸಸ್ಯಗಳು ವ್ಯತ್ಯಾಸಗೊಳ್ಳುತ್ತವೆ. ಪರ್ವತಗಳ ಮೇಲೆ (5000'ವರೆಗೆ) ತೇಗ, ಬಿದಿರು ಮುಂತಾದ ಮರಗಳ ಕಾಡುಗಳುಂಟು. ಇನ್ನೂ ಎತ್ತರದಲ್ಲಿ (5000'–6000') ಪೈನ್ ಮುಂತಾದ ಸಮಶೀತೋಷ್ಣವಲಯದ ಮರಗಳು ಬೆಳೆಯುತ್ತವೆ.

**ವ್ಯವಸಾಯ:** ಈ ದೇಶದಲ್ಲಿ ವೈಜ್ಞಾನಿಕವಾದ ಸಾಂದ್ರ ಬೇಸಾಯ ವ್ಯಾಪಕವಾಗಿ ರೂಢಿಯಲ್ಲುಂಟು. ತಪ್ಪಲುಗಳ ಮೇಲೆ ಜಮೀನುಗಳನ್ನು ಮೆಟ್ಟಿಲು ಮೆಟ್ಟಿಲಾಗಿ ಮಾಡಿ ಸಾಗುವಳಿ ಮಾಡುತ್ತಾರೆ. ಹಿಡುವಳಿಗಳು ಚಿಕ್ಕವು. ದೇಶದ ಹೆಚ್ಚು ಜನ ಬೇಸಾಯ ನಿರತರು. ಬತ್ತ, ಗೋದಿ, ಕಬ್ಬು, ಹತ್ತಿ, ಮೆಕ್ಕೆಜೋಳ, ದ್ವಿದಳಧಾನ್ಯಗಳು, ಜೋಳ, ಎಳ್ಳು, ನೆಲಗಡಲೆ, ತೆಂಗು, ಬಾಳೆ, ಹೊಗೆಸೊಪ್ಪು, ಉಪ್ಪುನೇರಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ವಿವಿಧ ಹಣ್ಣುಗಳೂ ತರಕಾರಿಗಳೂ ಬೆಳೆಯುತ್ತವೆ. ಆದ್ದರಿಂದ ದೇಶ ಆಹಾರದಲ್ಲಿ ಸ್ವಯಂಪೂರ್ಣತೆ ಪಡೆದಿದೆ.

ಕಡಲ ತೀರದಲ್ಲೂ ನದಿಗಳಲ್ಲೂ ಮೀನುಗಾರಿಕೆ ಮುಖ್ಯ ಕಸಬು. ಸಣ್ಣಕೊಳಗಳಲ್ಲೂ ಮೀನುಗಳನ್ನು ಸಾಕುತ್ತಾರೆ. ದನಕರು, ಕುರಿ, ಕೋಳಿ, ಹಂದಿಗಳು ಸಾಕಷ್ಟು ಹೆಚ್ಚು ಸಂಖ್ಯೆಯ ಲ್ಲುಂಟು. ಹಾಲು, ಮಾಂಸ, ಉಣ್ಣೆ, ಮೊಟ್ಟೆ ಮತ್ತು ಚರ್ಮ ಸಿಗುತ್ತವೆ.

**ಖನಿಜ, ಕೈಗಾರಿಕೆ:** ಕ್ವಾಂಗ್ ಯೆನ್‍ನಲ್ಲಿ ದೊರಕುವ ಆಂಥ್ರಸೈಟ್ ಮುಖ್ಯ ಖನಿಜ. ತವರ, ಸತು, ತಾಮ್ರ, ಕ್ರೋಮಿಯಂ, ಕಬ್ಬಿಣ, ಬೆಳ್ಳಿ, ಪಾದರಸ, ಚಿನ್ನ, ಫಾಸ್ಫೇಟ್–ಇವು ಇತರ ಖನಿಜಗಳು. ಅಕ್ಕಿ ಗಿರಣಿ, ಸಕ್ಕರೆ, ಸಾಬೂನು, ಬೆಂಕಿ ಪೆಟ್ಟಿಗೆ, ಕಾಗದ, ಆಹಾರ ವಸ್ತು, ಗಾಜಿನ ಸಾಮಾನು, ಅಲ್ಯೂಮಿನಿಯಂ ವಸ್ತು, ಸಿಮೆಂಟ್, ಜವಳಿ, ರಾಸಾಯನಿಕ ವಸ್ತು, ಕಬ್ಬಿಣ, ಉಕ್ಕು, ಯಂತ್ರೋಪಕರಣ, ಹಡಗು ಮತ್ತು ಮರ ಕೊಯ್ಯುವುದು ಇಲ್ಲಿನ ಮುಖ್ಯ ಕೈಗಾರಿಕೆಗಳು. ಹಾನಾಯ್ ಹೈಫಾಂಗ್, ಥೈ ನ್ಗುಯೆನ್–ಈ ಕೆಲವು ಕೈಗಾರಿಕಾ ಕೇಂದ್ರಗಳು.

**ಜನ, ಜೀವನ:** ಇಲ್ಲಿನ ಜನಕ್ಕೆ ವ್ಯವಸಾಯವೇ ಮುಖ್ಯ ಕಸಬು. ಗ್ರಾಮದಲ್ಲಿ ವಾಸಮಾಡು ವವರು ಅಧಿಕ ಸಂಖ್ಯೆಯಲ್ಲಿದ್ದಾರೆ. ನದೀಬಯಲುಗಳಲ್ಲೂ ಕೈಗಾರಿಕಾ ಕೇಂದ್ರಗಳಲ್ಲೂ ಜನಸಾಂದ್ರತೆ ಹೆಚ್ಚು. ಆಹಾರದ ಉತ್ಪನ್ನ ಸಾಕಷ್ಟಿದೆ. ಜನರ ಭಾಷೆ ವಿಯೆಟ್ನಾಮೀ. ಇಲ್ಲಿ ಬೌದ್ಧರು ಅಧಿಕ ಸಂಖ್ಯೆಯಲ್ಲಿದ್ದಾರೆ. ಕ್ರೈಸ್ತಮತವೂ ಪ್ರಚಾರದಲ್ಲಿದೆ.

**ಸಾರಿಗೆ ವ್ಯವಸ್ಥೆ, ವ್ಯಾಪಾರ:** ಇಲ್ಲಿ 937 ಮೈಲಿ ಮಾರ್ಗಗಳಿವೆ. ರಸ್ತೆಗಳೆಲ್ಲ ಯುದ್ಧಕಾಲದಲ್ಲಿ ನಾಶವಾಗಿದ್ದುವು. ಈಗ ಅವು ಪುನರ್ನಿರ್ಮಿತವಾಗಿವೆ. ಅವುಗಳ ಉದ್ದ 8400 ಮೈ. ಸಾರಿಗೆಗೆ ನದಿಗಳೂ ಸ್ವಲ್ಪಮಟ್ಟಿಗೆ ಉಪಯುಕ್ತ. ಹೈಫಾಂಗ್ ಮುಖ್ಯ ಬಂದರು. ಇಲ್ಲಿ ಆಂತರಿಕ ವಿಮಾನ ವ್ಯವಸ್ಥೆಯುಂಟು. ಹಾನಾಯ್–ಪೀಕಿಂಗ್ ನಡುವೆ ವಿಮಾನ ಸಂಪರ್ಕವಿದೆ.

ಮೀನು, ಕಲ್ಲಿದ್ದಲು, ಮೆಕ್ಕೆಜೋಳ ಮತ್ತು ಖನಿಜಗಳು ಈ ದೇಶದ ನಿರ್ಯಾತ, ಪೆಟ್ರೋಲಿಯಂ, ಯಂತ್ರ, ಜವಳಿ, ಮತ್ತು ಆಹಾರ ಆಯಾತ.

ಹಾನಾಯ್, ಹೈಫಾಂಗ್, ನಾಂಪಿನ್ಹ್ ಮುಖ್ಯ ಪಟ್ಟಣಗಳು.

**ಆಡಳಿತ, ಅರ್ಥವ್ಯವಸ್ಥೆ:** ಟಾಂಕಿನ್ ಹಾಗೂ ಉತ್ತರ ಅನ್ನಾಂ ಪ್ರದೇಶಗಳನ್ನೊಳಗೊಂಡಿ ರುವ ಉತ್ತರ ವಿಯೆಟ್ನಾಮನ್ನು ಒಟ್ಟು 33 ಪ್ರಾಂತ್ಯಗಳಾಗಿ (ಟಾಂಕಿನ್ 29, ಅನ್ನಾಂ 4) ವಿಂಗಡಿಸಲಾಗಿದೆ.

ವಿಯೆಟ್ನಾಂ ಪ್ರಜಾಪ್ರಭುತ್ವವಾದಿ ಗಣರಾಜ್ಯದ ಪರಮಾಧಿಕಾರ ಇರುವುದು ರಾಷ್ಟ್ರೀಯ ಸಭೆಯಲ್ಲಿ. ಇದಕ್ಕೆ ನಾಲ್ಕು ವರ್ಷಗಳಿಗೊಮ್ಮೆ ವಯಸ್ಕ ಮತದಾನದ ಆಧಾರದ ಮೇಲೆ ಚುನಾವಣೆ ನಡೆಯುತ್ತದೆ. ಈ ಸಭೆ ಗಣರಾಜ್ಯದ ಅಧ್ಯಕ್ಷನನ್ನು ಆಯ್ಕೆ ಮಾಡುತ್ತದೆ. ಅಧ್ಯಕ್ಷನ ಅಧಿಕಾರಾವಧಿಯೂ ನಾಲ್ಕು ವರ್ಷ. ಮಂತ್ರಿ ಮಂಡಲ ಅಥವಾ ಸಂಪುಟವನ್ನು ನೇಮಿಸುವುದು ಅಧ್ಯಕ್ಷನ ಹೊಣೆ. ಇದು ರಾಷ್ಟ್ರೀಯ ಸಭೆಗೆ ಜವಾಬ್ದಾರಿಯಾಗಿರುತ್ತದೆ. ಇಲ್ಲಿ ವಿಯೆಟ್ನಾಂ ಕಮ್ಯೂನಿಸ್ಟ್ ಪಕ್ಷದ್ದೇ (ವಿಯೆಟ್‍ಮಿನ್ಹ್) ಆಡಳಿತ. ಆದ್ದರಿಂದ ಈ ದೇಶವನ್ನು ವಿಯೆಟ್‍ಮಿನ್ಹ್ ಎಂದೂ ಕರೆಯುವುದುಂಟು. (ಎ.ಕೆ.)

**ಚರಿತ್ರೆ :** 19ನೆಯ ಶತಮಾನದ ಕೊನೆಯಲ್ಲಿ ವಿಯೆಟ್ನಾಮು ಫ್ರೆಂಚ್ ಚಕ್ರಾಧಿಪತ್ಯಕ್ಕೆ ಅಧೀನವಾಗಿ, ಕಾಂಬೋಡಿಯ ಮತ್ತು ಲಾವೋಸ್‍ಗಳೊಂದಿಗೆ ಇಂಡೋ–ಚೀನ ಒಕ್ಕೂಟದ ಭಾಗವಾಯಿತು. 2ನೆಯ ಮಹಾಯುದ್ಧಕಾಲದಲ್ಲಿ ಜಪಾನೀಯರು ಇಂಡೋಚೀನವನ್ನಾ ಕ್ರಮಿಸಿಕೊಂಡರು. **(ನೋಡಿ– ಇಂಡೋ–ಚೀನದ–ಇತಿಹಾಸ)** ಯುದ್ಧದಲ್ಲಿ ಜಪಾನು ಸೋತಾಗ ಫ್ರೆಂಚರು ಇಲ್ಲಿಗೆ ಮರಳಿ ಬಂದು ಮತ್ತೆ ತಮ್ಮ ಅಧಿಕಾರ ಸ್ಥಾಪಿಸಲೆಳಸಿದಾಗ ವಿಯೆಟ್ನಾಮಿನ ತಾತ್ಕಾಲಿಕ ಸರ್ಕಾರದಲ್ಲಿ ಕಮ್ಯೂನಿಸ್ಟ್ ಮಿಯೆಟ್‍ಮಿನ್ಹ್ ಪಕ್ಷದ್ದೇ ಪ್ರಾಬಲ್ಯವಿತ್ತು. ಫ್ರೆಂಚರೊಂದಿಗೆ ಸಂಧಾನ ಮುರಿದು ಬಿದ್ದು (1946) ಯುದ್ಧ ಆರಂಭವಾಯಿತು. ವಿಯೆಟ್ನಾಮಿನ ಉತ್ತರ ಭಾಗದ ಮೇಲೆ ಕಮ್ಯೂನಿಸ್ಟರು ಹೊಂದಿದ್ದ ಹಿಡಿತವನ್ನು ಬಿಡಿಸಲು ಫ್ರೆಂಚರಿಗೆ ಸಾಧ್ಯವಾಗಲಿಲ್ಲ. ದಕ್ಷಿಣ ಭಾಗದಲ್ಲಿ ಫ್ರೆಂಚರು ಕಮ್ಯೂನಿಸ್ಟ್ ವಿರೋಧಿ ಪಂಗಡಗಳೊಂದಿಗೆ ಸಂಧಾನ ಮಾಡಿಕೊಂಡು 1949ರಲ್ಲಿ ವಿಯೆಟ್ನಾಂ ಸಂಯುಕ್ತ ರಾಜ್ಯ ಸ್ಥಾಪನೆ ಮಾಡಿದರು. 1954ರ ಜಿನೀವ ಒಪ್ಪಂದದ ಒಂದು ಮುಖ್ಯ ಪರಿಣಾಮವೆಂದರೆ ಯುದ್ಧದ ಅಂತ್ಯ.

17ನೆಯ ಅಕ್ಷಾಂಶ ರೇಖೆಗೆ ಉತ್ತರದ ಭಾಗದಲ್ಲಿ ಕಮ್ಯೂನಿಸ್ಟ್ ಸೈನಿಕ ಬಣವೂ ದಕ್ಷಿಣದ ಭಾಗದಲ್ಲಿ ಕಮ್ಯೂನಿಸ್ಟ್ ವಿರೋಧಿ ಸೈನಿಕ ಬಣವೂ ಕೇಂದ್ರೀಕೃತವಾದುದರ ಪರಿಣಾಮವಾಗಿ ವಿಯೆಟ್ನಾಮನ್ನು ವಿಭಜಿಸುವುದು ಅನಿವಾರ್ಯವಾದರೂ ಇದು

ತಾತ್ಕಾಲಿಕವೆಂದೂ ಮುಂದೆ ರಾಜಕೀಯ ಒಡಂಬಡಿಕೆಯ ಮೂಲಕ ಇವೆರಡು ಭಾಗಗಳನ್ನೂ ಒಂದುಗೂಡಿಸಬೇಕೆಂದೂ ಆಗಿನ ಉದ್ದೇಶವಾಗಿತ್ತು. ಆದರೆ ಉತ್ತರ ದಕ್ಷಿಣ ವಿಯೆಟ್ನಾಮುಗಳು ಪ್ರತ್ಯೇಕವಾಗಿಯೇ ಮುಂದುವರಿದುವು. ಇಡೀ ವಿಯೆಟ್ನಾಮಿನಲ್ಲಿ ನಡೆಸಬೇಕೆಂದು ಸೂಚಿಸಲಾಗಿದ್ದ ಚುನಾವಣೆ ಜರುಗಲಿಲ್ಲ. ದಕ್ಷಿಣದಲ್ಲಿನ ಸರ್ಕಾರ ವಿರೋಧಿ ವಿಯೆಟ್ ಕಾಂಗರ ಚಳವಳಿಗೆ ಉತ್ತರ ವಿಯೆಟ್ನಾಂ ಸರ್ಕಾರದ ಬೆಂಬಲವಿದೆಯೆಂದು ಹೇಳಲಾಗಿದೆ. ಈ ಚಳವಳಿ 1963ರಲ್ಲಿ ಉಗ್ರವಾಗಿ ಪರಿಣಮಿಸಿತು. ಉತ್ತರ ದಕ್ಷಿಣಗಳ ನಡುವಣ ಬಡಿದಾಟದ ಮಧ್ಯೆ ಅಮೆರಿಕ ಸಂಯುಕ್ತ ಸಂಸ್ಥಾನ ಪ್ರವೇಶಮಾಡಿದ್ದು 1965ರಲ್ಲಿ. ಅಮೆರಿಕದ ಸೈನಿಕರು ದಕ್ಷಿಣ ವಿಯೆಟ್ನಾಮಿನ ನೆರವಿಗೆ ಬಂದರು. ಉತ್ತರ ವಿಯೆಟ್ನಾಂ ಪ್ರದೇಶ ಬಾಂಬುದಾಳಿಗೆ ತುತ್ತಾಯಿತು.

1968ರ ನವೆಂಬರಿನಲ್ಲಿ ಬಾಂಬುದಾಳಿ ಕೊನೆಗೊಂಡು, ಯುದ್ಧದಲ್ಲಿ ನಿರತವಾದ ನಾಲ್ಕು ಪಕ್ಷಗಳ ನಡುವೆ ಪ್ಯಾರಿಸ್ಸಿನಲ್ಲಿ ಸಂಧಾನ ಆರಂಭವಾಯಿತಾದರೂ ಫಲ ದೊರಕಲಿಲ್ಲ. **(ನೋಡಿ– ವಿಯೆಟ್ನಾಮಿನ–ಇತಿಹಾಸ)** (ಬಿ.ಕೆ.ಜಿ.)

**ಉತ್ತರ ವೋಲ್ಟ:** ಪಶ್ಚಿಮ ಆಫ್ರಿಕದ ಒಂದು ಗಣರಾಜ್ಯ (ಅಪ್ಪರ್ ವೋಲ್ಟ). ಮೊದಲು ಫ್ರೆಂಚ್ ಪಶ್ಚಿಮ ಆಫ್ರಿಕದ ಒಂದು ಭಾಗವಾಗಿದ್ದು 1960ರಲ್ಲಿ ಸ್ವಾತಂತ್ರ್ಯ ಪಡೆಯಿತು. ನೆಲದ ನಡುವೆ ಇರುವ ಈ ರಾಜ್ಯವನ್ನು ಮಾಲಿ, ನೈಜರ್, ದಹೋಮಿ, ಟೋಗೊ, ಘಾನ ಮತ್ತು ಐವರಿ ಕೋಸ್ಟ್‌ಗಳು ಸುತ್ತುವರಿದಿವೆ. ಸ್ಥೂಲವಾಗಿ ಉ.ಅ. 10° ಯಿಂದ 15°ಯ ವರೆಗೆ ಹಬ್ಬಿರುವ ಈ ದೇಶದ ವಿಸ್ತೀರ್ಣ 2,74,200 ಚ.ಕಿ.ಮೀ. (1,05,839 ಚ.ಮೈ) ಜನಸಂಖ್ಯೆ 51,55,000 (1968ರ ಅಂದಾಜು). ರಾಜಧಾನಿ: ವಾಗಡೂಗೂ.

**ಮೇಲ್ಮೈಲಕ್ಷಣ:** ದೇಶದ ನೆಲ ಬಹಳಮಟ್ಟಿಗೆ ಚಪ್ಪಟೆ, ವೈವಿಧ್ಯರಹಿತ, ಮಳೆಗಾಳಿಗಳು ಸವೆಸಿ ಮಟ್ಟಸಮಾಡಿದ ಶಿಲಾಭೂಯಿಷ್ಠವಾದದ್ದು. ಪಶ್ಚಿಮದಲ್ಲಿ ಈ ಹರಳುಗಲ್ಲುರಾಶಿಯ ಮೇಲೆ ಕಾಚಶಿಲೆಯ ಪ್ರಸ್ಥಭೂಮಿಯಿದೆ. ಉತ್ತರ ಈಶಾನ್ಯಗಳಲ್ಲಿ ಬಂಡೆಗಳಲ್ಲಿನ ಬೆಟ್ಟ ಸಾಲುಗಳೇರ್ಪಟ್ಟಿವೆ. ಕೋಮೊ, ವೋಲ್ಟ ನದಿಗಳೂ ಉಪನದಿಗಳೂ ಶಾಖೆಗಳೂ ಚಳಿಗಾಲದಲ್ಲಿ ತುಂಬಿ ಹರಿಯುತ್ತವೆ.

**ವಾಯುಗುಣ:** ಇಲ್ಲಿನ ವಾಯುಗುಣ ಎರಡು ಬಗೆಯದು. ನೈಋತ್ಯ ವೋಲ್ಟದಲ್ಲಿ ಆಗಸ್ಟ್–ಸೆಪ್ಟೆಂಬರಿನಲ್ಲಿ ಪರಿಮಾವಧಿ ಮಳೆ (39" ಅಥವಾ 991 ಮಿಮೀ. ಗಿಂತ ಹೆಚ್ಚು). ಉಳಿದ ಭಾಗದಲ್ಲಿ ಕಡಿಮೆ ಮಳೆ (11" ಅಥವಾ 280 ಮಿಮೀ. ನಿಂದ 39" ಅಥವಾ 991 ಮಿಮೀ. ವರೆಗೆ). ಮಳೆಗಾಲದ ಆದಿ ಅಂತ್ಯಗಳಲ್ಲಿ ಸುಂಟರಗಾಳಿ ಸಾಮಾನ್ಯ. ರಾಜ್ಯದ ಉಷ್ಣತೆಯಲ್ಲಿ ಋತುವಿನಿಂದ ಋತುವಿಗೆ ವ್ಯತ್ಯಾಸ ಹೆಚ್ಚು.

**ಸಸ್ಯ, ಪ್ರಾಣಿ:** ಇಲ್ಲಿನ ಕಾಡು ತೆಳು. ಇದಕ್ಕೆ ವಾಯುಗುಣವೇ ಕಾರಣ. ದಕ್ಷಿಣದಲ್ಲಿ ಮರಬೆರೆತ ಹುಲ್ಲುಗಾಡು. ಉತ್ತರದಲ್ಲಿ ಮುಳ್ಳುಗಿಡ ಬೆರೆತ ಹುಲ್ಲುಗಾಡು. ನದಿಗಳ ಉದ್ದಕ್ಕೂ ಸೆರಗಿನ ಜರಿಯಂತೆ ಮರಗಳ ಸಾಲು. ಕೆಲವು ಉಪಯುಕ್ತ ಮರಗಳನ್ನು ರೈತರು ಎಚ್ಚರಿಕೆಯಿಂದ ಉಳಿಸಿಕೊಂಡಿದ್ದಾರಾದರೂ ಒಟ್ಟಿನಲ್ಲಿ ಇಲ್ಲಿ ಮರಗಳ ನಾಶ ಸಾರ್ವತ್ರಿಕವಾಗಿ ನಡೆದಿದೆ.

ಕೆಂಮೊಗದ ಗಜ಼ೆಲ್ ಜಿಂಕೆ, ಹಿಂಬಾಗುಕೊಂಬಿನ ಹಾರ್ಟ್–ಬೀಸ್ಟ್ ಚಿಗರಿ, ಆನೆ, ನೀರಾನೆ, ಕಾಡುಕೋಣ, ಮೊಸಳೆ, ಕೋತಿ, ಬಗೆಬಗೆಯ ಹಕ್ಕಿ–ಇವು ಇಲ್ಲಿನ ಪ್ರಾಣಿ ಸಂಕುಲ. ಇವುಗಳ ಜೊತೆಗೆ ಸೊಳ್ಳೆ, ಟ್ಸೆಟ್ಸಿ ನೊಣ, ಮಿಡತೆ ಮತ್ತು ಗೆದ್ದಲುಗಳ ಹಿಂಸೆಯೂ ಅಪಾಯವೂ ಅಪಾರ. ಕಪ್ಪು, ಬಿಳುಪು, ಕೆಂಪು ವೋಲ್ಟ ನದೀಶಾಖೆಗಳಲ್ಲಿ ಮೀನುಗಳು ಹೇರಳ.

**ಜನ, ಜೀವನ, ಆಡಳಿತ:** ಇಲ್ಲಿನ ಜನರನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಪಶ್ಚಿಮ ಹಾಗೂ ನೈಋತ್ಯ ಭಾಗದಲ್ಲಿರುವವರು ಪುರಾ ನಿಗ್ರೀಷಿಯೊ ಆದಿವಾಸಿ ಜನ. ಇವರು ವಿರಳ ವಸ್ತ್ರಧಾರಿಗಳು. ಈ ಜನರ ಮುಖ್ಯ ಕಸಬು ಬೇಸಾಯ, ಬೇಟೆ, ಇಲ್ಲಿ ಕುಲಾಡಳಿತಕ್ಕಿಂತ ಹೆಚ್ಚಿನ ಆಡಳಿತ ವ್ಯವಸ್ಥೆಯಿಲ್ಲ. ಉಳಿದ ಭಾಗಗಳಲ್ಲಿನ ಜನ ಸೂಡಾನ್ ಮಾದರಿಯ ತುಂಬುಡುಪು ಧರಿಸುತ್ತಾರೆ. ಇವರಲ್ಲಿ ಊಳಿಗಮಾನ್ಯ ರೀತಿಯ ಹಲವಾರು ಆಡಳಿತವ್ಯವಸ್ಥೆಗಳುಂಟು.

ಇವರಲ್ಲಿ ಬಹುಸಂಖ್ಯೆಯ ಜನ ಪ್ರಕೃತಿಯ ಆರಾಧಕರು. ಈಚೆಗೆ ಇಲ್ಲಿ ಕ್ರೈಸ್ತ ಮತ ಪ್ರಚಾರವಾಗುತ್ತಿದೆ. ಮುಸ್ಲಿಮರೂ ಇದ್ದಾರೆ. ಹಲವು ವೊಲ್ಟಾಯಿಕ್ ಭಾಷೆಗಳನ್ನಾಡುವ ಇಲ್ಲಿನ ಜನ ಅಧಿಕೃತ ಹಾಗೂ ವಾಣಿಜ್ಯ ಭಾಷೆ ಫ್ರೆಂಚ್.

**ಅರ್ಥವ್ಯವಸ್ಥೆ:** ಇಲ್ಲಿರುವವರು ಬಹುತೇಕ ರೈತಜನ, ವ್ಯವಸಾಯ ಪಶುಪಾಲನೆಗಳು ಇವರು ಮುಖ್ಯ ಉದ್ಯೋಗ. ಆದರೆ ಒಟ್ಟು ನೆಲದಲ್ಲಿ ಬೇಸಾಯವಾಗುತ್ತಿರುವ ಭಾಗ 6% ಮಾತ್ರ. ಜನಸಂದಣಿ ಹೆಚ್ಚಾಗಿರುವುದರಿಂದ ಜೋಳ, ಮೆಕ್ಕೆಜೋಳ, ಸಾರ್ಗಂ, ಬತ್ತ ಮುಂತಾದ ಆಹಾರ ಬೆಳೆಗಳೇ ಹೆಚ್ಚು. ನೆಲಗಡಲೆ ಮರಬೆಣ್ಣೆ, ಹತ್ತಿ ಮುಂತಾದ ನಿರ್ಯಾತ ಬೆಳೆಗಳಿಗೆ ಹೆಚ್ಚು ನೆಲ ಮೀಸಲಿಡುವುದು ಸಾಧ್ಯವಾಗಿಲ್ಲ. ಉತ್ತಮ ವ್ಯವಸಾಯ, ನೆಲದ ನಗ್ನೀಕರಣದ ತಡೆ, ನದೀಕಟ್ಟೆ ರಚನೆ ಇವುಗಳಿಂದ ಪರಿಸ್ಥಿತಿ ಸುಧಾರಿಸುತ್ತಿದೆ. ಪಶುಪಾಲನೆಗೆ ಸರ್ಕಾರ ಹೆಚ್ಚು ಗಮನ ಕೊಡುತ್ತಿದೆ. ನದೀ ಮೀನುಗಳೂ ವನಗಳ ಸಂಪತ್ತೂ ವಾಣಿಜ್ಯ ದೃಷ್ಟಿಯಿಂದ ಮುಖ್ಯವಾಗಬಹುದು.

ಚಿನ್ನ, ಬಾಕ್ಸೈಟ್, ಮ್ಯಾಂಗನೀಸ್ ನಿಕ್ಷೇಪಗಳಿವೆಯಾದರೂ ಗಣಿಗಾರಿಕೆ ಹೆಚ್ಚಾಗಿ ಬೆಳೆದಿಲ್ಲ. ಕಚ್ಚಾ ಸಾಮಾಗ್ರಿ ಹಾಗೂ ಶಕ್ತಿಯ ಅಭಾವದಿಂದ ಕೈಗಾರಿಕೆಯ ಬೆಳವಣಿಗೆ ಕಡಿಮೆ. ವಾಗಡೂಗೂವಿನ ಕಟ್ಟಡ ನಿರ್ಮಾಣ, ಬೋಬೋ ಡ್ಯೆಯೂಲಾಸೊವಿನ ಎಣ್ಣೆ ಗಿರಣಿ, ಸಕ್ಕರೆ ಕಾರ್ಖಾನೆ, ಹತ್ತಿ ಹಿಂಜುವ ಉದ್ಯಮ ಇವು ಮುಖ್ಯ ಕೈಗಾರಿಕೆಗಳು. 1963ರಿಂದೀಚೆಗೆ ಈ ದೇಶ ಅಭಿವೃದ್ಧಿ ಯೋಜನೆಯ ಹಾದಿಯಲ್ಲಿ ಸಾಗಿದೆ.

ಈ ರಾಜ್ಯಕ್ಕೆ ಸಮುದ್ರ ತೀರವಿಲ್ಲ. ಅಂತರದೇಶೀಯ ಭೂಮಾರ್ಗಗಳು ಈ ರಾಜ್ಯದ ಮೂಲಕ ಹಾದುಹೋಗುತ್ತವೆ. ವಿದೇಶೀ ವ್ಯಾಪಾರ ನಡೆಯುವುದು ಬಹಳಮಟ್ಟಿಗೆ ಐವರಿ ಕೋಸ್ಟ್ ಮೂಲಕ. ವಾಗಡೂಗೂ ಹಾಗೂ ಬೋಬೋ ಡ್ಯೆಯೂಲಾಸೊ ಮುಖ್ಯವಾದ ರಸ್ತೆ, ರೈಲು ಹಾಗೂ ವಿಮಾನ ಮಾರ್ಗಗಳ ಸಂಧಿ ಸ್ಥಾನಗಳು. ವಾಗಡೂಗೂ ಹಾಗೂ ಬೋಬೋ ಡ್ಯೆಯೂಲಾಸೊಗಳಲ್ಲದೆ ಕೂಡೂಗೂ, ಊಹಿಗೂಯ, ಬ್ಯಾನ್‌ಫೊರ, ಕಾಯ, ಡಿಡೂಗೂ ಮುಖ್ಯ ಪಟ್ಟಣಗಳು. ಜನಸಾಂದ್ರತೆ ಕಿಲೋಮೀಟರಿಗೆ 16ಕ್ಕಿಂತ (ಚ.ಮೈ.ಗೆ 40) ಹೆಚ್ಚು. ಪಶ್ಚಿಮ ಆಫ್ರಿಕದ ಗಣರಾಜ್ಯಗಳಲ್ಲೆಲ್ಲ ಇದೇ ಅಧಿಕ.

**ಆಡಳಿತ:** ಉತ್ತರ ವೋಲ್ಟ ಗಣರಾಜ್ಯದ ಆಡಳಿತಾಧಿಕಾರ ಇರುವುದು ಅಧ್ಯಕ್ಷನಲ್ಲಿ. ಸಾರ್ವತ್ರಿಕ ವಯಸ್ಕ ಮತದಾನದ ಮೂಲಕ ಐದು ವರ್ಷಗಳ ಅವಧಿಗೆ ಈತನ ಆಯ್ಕೆ. ಈತ ಮಂತ್ರಿಮಂಡಲವೊಂದನ್ನು ರಚಿಸುತ್ತಾನೆ. ರಾಷ್ಟ್ರೀಯ ಸಭೆಯ ಸದಸ್ಯರ ಸಂಖ್ಯೆ 75. ಅಧ್ಯಕ್ಷನ ಆಯ್ಕೆಯ ಸಮಯದಲ್ಲೇ ಇದಕ್ಕೂ ಚುನಾವಣೆ. ರಾಜ್ಯದಲ್ಲಿ 39 ಜಿಲ್ಲೆಗಳೂ ಇವುಗಳ ವಿಭಾಗಗಳೂ ಇವೆ. ಸ್ಥಳೀಯ ನ್ಯಾಯಾಲಯಗಳಿಂದ ಉಚ್ಚನ್ಯಾಯಾಲಯದ ವರೆಗೆ ಸುವ್ಯವಸ್ಥಿತ ನ್ಯಾಯಾಂಗ ಚೌಕಟ್ಟು ರಚಿತವಾಗಿದೆ. (ಪಿ.ಎಚ್.)

**ಇತಿಹಾಸ:** ಶಿಲಾಯುಗದ ಸಂಸ್ಕೃತಿಯ ಕೊಡಲಿಗಳು ಉತ್ತರ ವೋಲ್ಟದಲ್ಲಿ ದೊರಕಿವೆ. ಬೋಬೊ, ಲೋಬಿ, ಗೂರೂನ್ಸಿಗಳೇ ಈಗ ತಿಳಿದಿರುವ ಮಟ್ಟಿಗೆ ಈ ರಾಜ್ಯದ ಅತ್ಯಂತ ಪುರಾತನ ನಿವಾಸಿಗಳು.

14ನೆಯ ಶತಮಾನದಲ್ಲಿ ದಕ್ಷಿಣದಿಂದ ಅಶ್ವಾರೋಹಿ ಆಕ್ರಮಣಕಾರರು ಈ ಪ್ರದೇಶದ ಮೇಲೇರಿ ಬಂದು ಗೂರ್ಮ ಮತ್ತು ಮಾಸಿ ರಾಜ್ಯ ಸ್ಥಾಪನೆ ಮಾಡಿದರು. ಆಸ್ಥಾನ, ಮಂತ್ರಿಗಳು, ಸೇವಕರು, ಅಡಿಯಾಳುಗಳಿಂದ ಕೂಡಿದ ಈ ರಾಜ್ಯಗಳು ಇಪ್ಪತ್ತನೆಯ ಶತಮಾನದಲ್ಲೂ ಉಳಿದುಕೊಂಡು ಬಂದುವು. ಮಾಸಿ ರಾಜ್ಯಕ್ಕೆ ಫೂಲಾನಿ ಮತ್ತು ಸೊಂಗೈ ಮುಸ್ಲಿಮರ ಆಕ್ರಮಣಗಳನ್ನು ತಡೆಗಟ್ಟುವ ಸಾಮರ್ಥ್ಯವಿತ್ತು.

ಉತ್ತರ ವೋಲ್ಟದ ಬಾಗಿಲು ಮೊದಲ ಬಾರಿಗೆ ಪಾಶ್ಚಾತ್ಯರಿಗೆ ದೊಡ್ಡವಾಗಿ ತೆರೆದದ್ದು 1886ರಲ್ಲಿ–ಮಾಸಿ ಪ್ರದೇಶವನ್ನು ಜರ್ಮನ್ ಪ್ರವಾಸಿ ಕ್ರೌಸ್‌ಸುತ್ತಿ ನೋಡಿದಾಗ. 1889ರಲ್ಲಿ ಫ್ರೆಂಚ್ ಸೇನಾಧಿಕಾರಿ ಲೂಯಿ ಗಸ್ಟಾವ್ ಬಿಂಗರ್ ಇಲ್ಲಿಗೆ ಬಂದಿದ್ದ. 1895ರಲ್ಲಿ ಫ್ರಾನ್ಸು ಇಲ್ಲಿನ ಒಂದು ಪ್ರಾಂತ್ಯದ ಮೇಲೆ ತನ್ನ ರಕ್ಷಣೆಯ ಕೊಡೆ ಹಿಡಿಯಿತು. ಅಲ್ಲಿಂದ ಮುಂದೆ ಅನೇಕ ಪ್ರಾಂತ್ಯಗಳು ಒಂದೊಂದಾಗಿ ಫ್ರೆಂಚ್ ವಶಕ್ಕೆ ಬಂದುವು. 1898ರಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ಆದ ಒಂದು ಒಡಂಬಡಿಕೆಯ ಮೂಲಕ ಫ್ರಾನ್ಸಿನ ಈ ಪ್ರದೇಶಗಳಿಗೂ ಗೋಲ್ಡ್ ಕೋಸ್ಟಿಗೂ ನಡುವಣ ಗಡಿರೇಖೆಯ ನಿಷ್ಕರ್ಷೆಯಾಯಿತು.

ಫ್ರೆಂಚರು ಈ ದೇಶವನ್ನು ಅನೇಕ ಆಡಳಿತ ಜಿಲ್ಲೆಗಳಾಗಿ ವಿಂಗಡಿಸಿದರು. ದೇಶೀಯ ಮುಖಂಡರೂ ಉಳಿದುಕೊಂಡರು. ಇದು ಮೊದಲು ಫ್ರೆಂಚ್ ಸೂಡಾನಿಗೆ ಸೇರಿದ್ದು ಅನಂತರ ಪ್ರತ್ಯೇಕ ರಾಜ್ಯವಾಯಿತು (1919). 1932ರಲ್ಲಿ ಇದನ್ನು ಐವರಿ ಕೋಸ್ಟ್, ನೈಜರ್, ಹಾಗೂ ಫ್ರೆಂಚ್ ಸೂಡಾನುಗಳ ನಡುವೆ ಭಾಗ ಮಾಡಲಾಯಿತು. ಆದರೆ 1947ರಲ್ಲಿ ಇದನ್ನು ಮತ್ತೆ ಪ್ರತ್ಯೇಕಿಸಿದಾಗ ಇದಕ್ಕೆ ದೊರಕಿದೆ ಬಹುಮಾನವೆಂದರೆ ಫ್ರಾನ್ಸಿನ ಸಾಗರಾಂತರ ಪ್ರದೇಶವೆಂಬ ಅಧೀನಸ್ಥಾನ. ಇದಕ್ಕೆ ಪ್ರತ್ಯೇಕ ಸರ್ಕಾರ ಸ್ಥಾಪಿತವಾದದ್ದು 1957ರಲ್ಲಿ. 1959ರಲ್ಲಿ ಇದನ್ನು ದಹೋಮಿ, ಐವರಿ ಕೋಸ್ಟ್, ನೈಜರ್‌ಗಳೊಂದಿಗೆ ಸೇರಿಸಿ ಒಂದು ಬಗೆಯ ಸಡಿಲ ಒಕ್ಕೂಟ ರಚಿಸಲಾಯಿತು. 1960ರ ಆಗಸ್ಟ್ 5 ರಂದು ಸ್ವತಂತ್ರವಾದ ಈ ರಾಜ್ಯಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವ ದೊರಕಿದ್ದು ಅದೇ ವರ್ಷದ ಸೆಪ್ಟೆಂಬರಿನಲ್ಲಿ. 1966ರಲ್ಲಿ ಸಂಭವಿಸಿದ ಆಂತರಿಕ ಗಲಭೆಗಳ ಪರಿಣಾಮವಾಗಿ ಆಗಿನ ಅಧ್ಯಕ್ಷ ರಾಜೀನಾಮೆ ಕೊಡಬೇಕಾಗಿ ಬಂದು ಇಲ್ಲಿನ ಅಧಿಕಾರ ಸೇನೆಯ ವಶಕ್ಕೆ ಬಂತು. *

**ಉತ್ತರ ಸಮುದ್ರ:** ಗ್ರೇಟ್ ಬ್ರಿಟನ್ನಿಗೂ ಯುರೋಪ್ ಖಂಡ ಪ್ರದೇಶಕ್ಕೂ ನಡುವೆ ಇರುವ ಒಂದು ತಟ್ಟೆ (ಷ್ಯಾಲೋ) ಕಡಲು (ನಾರ್ತ್ ಸೀ). ಷೆಟ್ಲೆಂಡ್ ದ್ವೀಪಗಳ ಉತ್ತರ ಅಂಚಿನಿಂದ (ಉ.ಅ. 61°) ಡೋವರ್ ಜಲಸಂಧಿಯವರೆಗೆ (ಉ.ಅ. 51°) ವ್ಯಾಪಿಸಿರುವ ಸಮುದ್ರದ ನೀರು ನಾರ್ವೆ, ಡೆನ್ಮಾರ್ಕ್. ಜರ್ಮನಿ, ಬೆಲ್ಜಿಯಂ, ನೆದರ್‌ಲೆಂಡ್ಸ್ ಮತ್ತು ಉತ್ತರ ಫ್ರಾನ್ಸ್ ತೀರಗಳನ್ನು ತೊಳೆಯುತ್ತದೆ. ವಿಸ್ತೀರ್ಣ 2,20,000 ಚ.ಕಿಮೀ. ದಕ್ಷಿಣದಿಂದ ಉತ್ತರದೆಡೆಗೆ ಸ್ವಲ್ಪ ಬಾಗಿದೆ. ಸ್ವಲ್ಪ ತ್ರಿಕೋಣಾಕಾರವಾಗಿದ್ದು, 960 ಕಿ.ಮೀ. ಉದ್ದ ಮತ್ತು 640 ಕಿಮೀ. ಅಗಲವಾಗಿದೆ. ದಕ್ಷಿಣದ ಭಾಗ ಬಲು ಅಗಾಧ. ಸಮುದ್ರದ ಇಳಿತದ ಸಮಯದಲ್ಲಿ ಕೆಳಗಣ ಮರಳನ್ನು ನೀರು ಮುಚ್ಚಿಯೂ ಮುಚ್ಚದಂತಿರುತ್ತದೆ. ಈ ಸಮುದ್ರದ ದಕ್ಷಿಣಾರ್ಧದ ಆಳ 40 ಮೀಟರುಗಳಿಗಿಂತ ಕಡಿಮೆ. ಈ ಕಡಲ ನಡುವೆ ಇರುವ ತಿಟ್ಟುತಳದ ಹೆಸರು ಡಾಗರ್ ಬ್ಯಾಂಕ್. ತಿಟ್ಟುತಳದ ಉತ್ತರ ಅಂಚು ಕಡಿದು. ಈಶಾನ್ಯದಲ್ಲಿ ನಾರ್ವೆಬಳಿ ಕಡಲ ಆಳ ಹೆಚ್ಚು. ಇಲ್ಲಿನ ನೀರು ಕಿರಿದಾದ ಕಂದಕದಂತೆ ನಾರ್ವೆತೀರದ ಗುಂಟ ಆಗ್ನೇಯಾಭಿಮುಖವಾಗಿ ಸಾಗುತ್ತದೆ.

**ತಳದ ಭೂರಚನೆಯ ಇತಿಹಾಸ:** ಮೂರನೆಯ ಭೂಯುಗದಲ್ಲಿ ಯುರೋಪ್ ಖಂಡಭಾಗ ಕುಸಿದದ್ದರಿಂದ ಈ ಸಮುದ್ರ ರೂಪುಗೊಂಡಿತು. ತೃತೀಯ ಕಲ್ಪದ (ಪ್ಲಿಯೊಸೀನ್) ಅಂತ್ಯದಲ್ಲಿ ದಕ್ಷಿಣ ಇಂಗ್ಲೆಂಡು ಹಾಲೆಂಡ್ ಜರ್ಮನಿಗಳೊಂದಿಗೆ ಕೂಡಿಕೊಂಡಿತ್ತು. ದಟ್ಟ ಕಾಡಿದ್ದ ಈ ಜವುಗು ಮೈದಾನದಲ್ಲಿ ಥೇಮ್ಸ್–ರೈನ್ ನದೀ ವ್ಯವಸ್ಥೆಗಳ ಮುಖಜಭೂಮಿಗಳಿದ್ದುವು. ಬರಬರುತ್ತ ಶೈತ್ಯ ಹೆಚ್ಚಿ ಚತುರ್ಥ (ಪ್ಲಿಸ್ಟೊಸೀನ್) ಯುಗದಲ್ಲಿ ಇದನ್ನು ಹಿಮಗಡ್ಡೆಯ ಪದರಗಳು ಮುಚ್ಚಿಕೊಂಡಿದ್ದುವು. ಹಾಲೆಂಡ್ ಮತ್ತು ಪೂರ್ವ ಆಂಗ್ಲಿಯವೂ ಹಿಮಾವೃತವಾಗಿದ್ದುವು. ಆಗ ಥೇಮ್ಸ್–ರೈನ್ ನದಿಗಳ ವ್ಯವಸ್ಥೆಗಳಿಗೆ ಉತ್ತರದ ಹಾದಿ ಮುಚ್ಚಿಹೋಗಿದ್ದಿರಬೇಕು. ಇವು ಈ ಹಿಮರಾಶಿಯ ದಕ್ಷಿಣಕ್ಕೆ (ಈಗಿನ ಉತ್ತರ ಸಮುದ್ರದ ದಕ್ಷಿಣದಲ್ಲಿ ಇದ್ದ ಹಿಮಾನಿ (ಗ್ಲೇಷಿಯಲ್) ಸರೋವರದಲ್ಲಿ ಐಕ್ಯವಾಗಲಾಗಿ ಈ ಸರೋವರದ ನೀರಿನ ಮಟ್ಟ ಹೆಚ್ಚಿ ಇದು ಚತುರ್ಥ ಯುಗದ ನದೀಕಣಿವೆಯೊಂದರ ಮೂಲಕ ಹರಿದು ಹೋಗಿರಬೇಕು. ಇದೇ ಮುಂದೆ ಅಗಲವಾಗಿ ಆಳವಾಗಿ ಡೋವರ್ ಜಲಸಂಧಿಯಾಯಿತು. ಹಿಮಯುಗದ ಅಂತ್ಯದಲ್ಲಿ ಡಾಗರ್ ತಿಟ್ಟುತಳದ ದಕ್ಷಿಣಭಾಗದಲ್ಲಿ ತಗ್ಗು ಮೈದಾನವಿತ್ತು. ಪ್ರ.ಶ.ಪೂ. 6000ದ ವೇಳೆಗೆ ಸಮುದ್ರದ ಮಟ್ಟ ಏರಿತು. ಉತ್ತರ ಸಮುದ್ರ ಸ್ಥೂಲವಾಗಿ ಈಗಿನ ಆಕಾರ ತಳೆದದ್ದು ಆಗ.

ಉತ್ತರ ಸಮುದ್ರದ ಸುತ್ತಲೂ ಭೂಭಾಗ ಕುಸಿದು ಉಂಟಾದ ತೀರಭಾಗಗಳುಂಟು. ದಕ್ಷಿಣದ ತೀರಗಳು ಅತಿ ಕಿರಿದು. ಇಂಗ್ಲೆಂಡಿನ ತೀರದಲ್ಲಿ ಕಿರಿದಾದ ಕೋಡುಗಲ್ಲುಗಳೂ ಮರಳಿನಿಂದ ಕೂಡಿದ ದಂಡೆಗಳೂ ಕಂಡುಬರುತ್ತವೆ. ಯುರೋಪಿನ ತೀರದಲ್ಲಿ ಜೌಗು ಭಾಗಗಳೂ ಮರಳಿನ ದಿಣ್ಣೆಗಳೂ ಉಪ್ಪು ನೀರಿನ ಹರವು ಸುತ್ತು ಒಡ್ಡು ಗಳೂ (ಲಗೂನ್) ಉಂಟು. ಉತ್ತರದ ತೀರಗಳಲ್ಲಿ ಕಡಿದಾದ ಕೋಡುಗಲ್ಲುಗಳೂ ಕಿರಿ ಅಳಿವೆಯಂಥ ಕೊಲ್ಲಿಗಳೂ ಸ್ಕ್ಯಾಗರ್‌ರ್‍ಯಾಕ್ ಕೊಲ್ಲಿಯ ದಕ್ಷಿಣದಲ್ಲಿ ಮತ್ತು ಇಂಗ್ಲೆಂಡಿನ ವಾಯವ್ಯ ಭಾಗದಲ್ಲಿ ಮೃದುಶಿಲೆಗಳ ಕಿರಿದಾದ ಕೋಡುಗಲ್ಲುಗಳೂ ಕಂಡುಬರುತ್ತವೆ.

ಅಟ್ಲಾಂಟಿಕ್ ಸಾಗರದಿಂದ 35% ಕ್ಕಿಂತ ಹೆಚ್ಚಿನ ಲವಣಯುಕ್ತ ನೀರು ಡೋವರ್ ಜಲಸಂಧಿಯ ಮೂಲಕವೂ ಷೆಟ್‌ಲೆಂಡ್ ನಾರ್ವೆಗಳ ಮೂಲಕವೂ ಇಲ್ಲಿಗೆ ಹರಿದು ಬರುತ್ತದೆ. ಈ ಎರಡು ಕವಲುಗಳೂ ವಾಷ್–ಸ್ಕ್ಯಾಗರ್‌ರ್‍ಯಾಕ್‌ಗಳ ನೆರೆಯಲ್ಲಿ ಸಂಧಿಸುವುದೇ ಇಲ್ಲಿ ತೊಡಕಿನ ಸುಳಿಗಳ ಉದ್ಭವಕ್ಕೆ ಕಾರಣ. ಡೋವರಿನ ಮೂಲಕ ಬರುವ ಪ್ರವಾಹದೊಂದಿಗೆ ಥೇಮ್ಸ್, ರೈನ್ ಮತ್ತು ಎಲ್ಬ್ ನದಿಯ ನೀರೂ ಸೇರುತ್ತದೆ. ಸ್ಕ್ಯಾಗರ್‌ರ್‍ಯಾಕ್‌ನಿಂದ ಉತ್ತರಾಭಿಮುಖವಾಗಿ ನಾರ್ವೇ ತೀರಗುಂಟ ಹರಿಯುವ ನೀರು 30% ರಷ್ಟು ಲವಣಯುಕ್ತವಾದದ್ದು. ಬಾಲ್ಟಿಕ್‌ನಿಂದ ಹರಿದು ಬರುವ ನೀರು ಇದರಲ್ಲಿ ಸೇರುವುದರಿಂದ ಇದರ ಲವಣಾಂಶ ಕಡಿಮೆ. ಸಮಕಾಲೀನ ಉಬ್ಬರ ರೇಖೆಗಳು ಈ ಸಮುದ್ರದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹಬ್ಬಿವೆಯೆನ್ನಬಹುದು. ಆದ್ದರಿಂದ ಸ್ಕಾಟ್‌ಲೆಂಡ್ ಮತ್ತು ಥೇಮ್ಸ್ ಅಳಿವೆಯಲ್ಲಿ ಉಬ್ಬರಗಳು ಸಂಭವಿಸುವ ಕಾಲ ಒಂದೇ. ಉಬ್ಬರಗಳಿಂದ ಸ್ಕಾಟ್ಲೆಂಡಿನಲ್ಲಿ 4 ಮೀಟರುಗಳಷ್ಟೂ ಡಚ್ ಮತ್ತು ಜರ್ಮನ್ ತೀರಗಳಲ್ಲಿ 2 ರಿಂದ 3 ಮೀಟರುಗಳಷ್ಟೂ ನಾರ್ವೆ ತೀರದಲ್ಲಿ ಒಂದು ಮೀಟರಿನಷ್ಟೂ ಸಮುದ್ರಮಟ್ಟ ವ್ಯತ್ಯಾಸವಾಗುತ್ತದೆ. ಪೂರ್ವತೀರದಲ್ಲಿ ಉಬ್ಬರವಿಳಿತಗಳ ವ್ಯತ್ಯಾಸ ಹೆಚ್ಚು. ಬ್ರಿಟನ್, ಬೆಲ್ಜಿಯಂ ಮತ್ತು ನೆದರ್‌ಲೆಂಡ್ಸ್ ದೇಶಗಳ ತೀರ ಭಾಗಗಳಿಗೆ ಇಲ್ಲಿನ ವಿಷಮ ಉಬ್ಬರವಿಳಿತಗಳ ಸಂಭವಿಸುವ ಹಾನಿ ಅಧಿಕ. ಬೆಲ್ಜಿಯಂ ಮತ್ತು ನೆದರ್‌ಲೆಂಡ್ಸ್‌ಗಳ ತೀರಗಳಲ್ಲಿ ಕೃತಕ ದಿಣ್ಣೆಗಳನ್ನು ನಿರ್ಮಿಸಿ ಆಗುವ ಅನಾಹುತವನ್ನು ಸಾಕಷ್ಟು ಮಟ್ಟಿಗೆ ತಡೆಗಟ್ಟಲಾಗಿದೆ.

ಈ ಸಮುದ್ರದಲ್ಲಿ ಅನೇಕ ಪ್ರವಾಹಗಳೂ ಉಬ್ಬರವಿಳಿತಗಳೂ ಸುಳಿಗಳೂ ಕಂಡುಬರುವುದ ರಿಂದಲೂ ಅಟ್ಲಾಂಟಿಕ್ ಸಾಗರದ ಬೆಚ್ಚನೆಯ ನೀರಿಗೆ ಭೂಭಾಗದಿಂದ ಹರಿಯುವ ತಂಪಾದ ನೀರು ಸೇರುವುದರಿಂದಲೂ ವಿಪುಲವಾಗಿ ಪ್ಲಾಂಕ್‌ಟನ್ ಎಂಬ ಜೈವಿಕ ವಸ್ತು ಶೇಖರವಾಗಿರುತ್ತದೆ. ಅಲ್ಲದೆ ನೀರಿನ ಅಂಥ ಚಲನೆಗಳಿಂದ ಸಾಕಷ್ಟು ವಾಯುವಿನ ಅಂಶ ನೀರಿನಲ್ಲಿ ಸೇರಲೂ ಅವಕಾಶವಿದೆ. ಸಮುದ್ರ ಹೆಚ್ಚು ಆಳವಿಲ್ಲದಿರುವುದ ರಿಂದ ಬೆಳಕು ಸಾಕಷ್ಟು ಉಂಟು. ಇಂಥ ಆವರಣ ಮೀನುಗಳಿಗೆ ಆವಶ್ಯಕ. ಆದ್ದರಿಂದ ಉತ್ತರ ಸಮುದ್ರಕ್ಕೆ ಪ್ರಪಂಚದ ಮೀನುಗಾರಿಕೆ ಪ್ರದೇಶಗಳಲ್ಲಿ ಉನ್ನತ ಸ್ಥಾನ ಲಭ್ಯವಾಗಿದೆ. ಚಳಿಗಾಲದಲ್ಲಿ ಮೀನು ಹಿಡಿಯುವ ಚಟುವಟಿಕೆ ಹೆಚ್ಚು. ಜರಡಿ ಬಲೆಗಳಿಂದ ಈ ಭಾಗದಲ್ಲಿ ಹೇರಳವಾಗಿ ಮೀನು ಹಿಡಿಯುತ್ತಾರೆ. ಬೇಸಿಗೆಯಲ್ಲಿ ಪೂರ್ವಭಾಗದಲ್ಲಿ ಮೀನು ಹಿಡಿಯುವುದು ಹೆಚ್ಚು. ಆಳವಿಲ್ಲದ ಭಾಗಗಳಲ್ಲಿ ಚಪ್ಪಟೆ ಮೀನು ಉತ್ತರದ ಆಳವಾದ ಪ್ರದೇಶದಲ್ಲಿ ಕಾಡ್ ಮತ್ತು ಹ್ಯಾಡಕ್ ಮೀನೂ ಹೇರಳ. ಪಶ್ಚಿಮಭಾಗದಲ್ಲಿ ಜೂನ್‌ನಿಂದ ನವೆಂಬರ್‌ವರೆಗೆ ಹೆರಿಂಗ್ ಮೀನುಗಳೂ ಉಳಿದ ತಿಂಗಳುಗಳಲ್ಲಿ ಮೆಕರೆಲ್ ಮೀನುಗಳೂ ಸಿಗುತ್ತವೆ. ಡಾಗರ್ ಬ್ಯಾಂಕಿನ ಭಾಗದಲ್ಲಿ ಕಾಡ್ ಮೀನುಗಳು ಸಿಕ್ಕುತ್ತವೆ. ಡಚ್ ಭಾಷೆಯಲ್ಲಿ ಡಾಗರ್ ಎಂದರೆ ಕಾಡ್ ಮೀನು ಎಂದು ಅರ್ಥ. ಉತ್ತರದ ತಂಪು ನೀರಿನಲ್ಲೂ ಇವು ಸಿಕ್ಕುವುದುಂಟು. ಮಧ್ಯಭಾಗದಲ್ಲಿ ಮೀನುಗಳನ್ನು ಗಾಳಗಳಿಂದಲೇ ಹಿಡಿಯುತ್ತಾರೆ. 1899ಮತ್ತು 1927ರಲ್ಲಿ ಆದ ಅಂತಾರಾಷ್ಟ್ರೀಯ ಮೀನುಗಾರಿಕೆ ಒಪ್ಪಂದಗಳಿಂದ ಈ ಸಮುದ್ರದ ಮೀನುಗಾರಿಕೆಯಲ್ಲಿ ನಿರತವಾದ ವಿವಿಧ ರಾಷ್ಟ್ರಗಳು ನಿಯಂತ್ರಣಕ್ಕೊಳಪಟ್ಟಿವೆ. ಉತ್ತರ ಸಮುದ್ರವನ್ನು ಹಿಂದೆ ಜರ್ಮನ್ ಸಾಗರವೆಂದೂ ಕರೆಯಲಾಗುತ್ತಿತ್ತು. ಈ ಸಮುದ್ರದ ಮೂಲಕ ಸಾಗುವ ಸಾರಿಗೆ ಮಾರ್ಗಗಳು ಅನೇಕ. ಹಲ್, ಬರ್ಗೆನ್, ಸ್ಟಾಕ್‌ಹೋಂ ಮಾರ್ಗಗಳು ಮುಖ್ಯ. ಉತ್ತರ ಸಮುದ್ರವನ್ನು ಸೇರುವ ನದಿಗಳು ಈ ಮಾರ್ಗಗಳ ವಿಸ್ತರಣೆ ಗಳಂತಿರುವುದರಿಂದ ಉತ್ತರ ಸಮುದ್ರದ ಪ್ರಾಮುಖ್ಯ ಇನ್ನೂ ಅಧಿಕವಾಗಿದೆಯೆನ್ನಬಹುದು. (ಎ.ಕೆ.)

**ಉತ್ತರಾಂಚಲ:** ಭಾರತದ ಒಂದು ರಾಜ್ಯ. ದೇಶದ ಉತ್ತರದಲ್ಲಿರುವ ಈ ರಾಜ್ಯವನ್ನು ಪೂರ್ವದಲ್ಲಿ ನೇಪಾಳ, ಉತ್ತರದಲ್ಲಿ ಚೀನ(ಟಿಬೆಟ್) ಪಶ್ಚಿಮದಲ್ಲಿ ಹಿಮಾಚಲ ಪ್ರದೇಶ ಮತ್ತು ದಕ್ಷಿಣದಲ್ಲಿ ಉತ್ತರ ಪ್ರದೇಶ ರಾಜ್ಯಗಳು ಸುತ್ತುವರೆದಿವೆ. 16,826 ಗ್ರಾಮಗಳಲ್ಲಿ 86 ನಗರ ಪಟ್ಟಣಗಳೂ ಮತ್ತು 13 ಜಿಲ್ಲೆಗಳೂ ಇರುವ ಈ ರಾಜ್ಯದ ವಿಸ್ತಾರ 53,484 ಚ.ಕಿ.ಮೀ. 43,16,401 ಮಂದಿ ಗಂಡಸರು, 41,63,161 ಮಂದಿ ಮಹಿಳೆಯರೂ ಇರುವ ಈ ರಾಜ್ಯದ ಜನಸಂಖ್ಯೆ 84,79,562 (2001). ರಾಜಧಾನಿ ಡೆಹರಾಡುನ್ (ಡೆಹ್ರಾಡುನ್).




**ಕೃಷಿ:** ಈ ರಾಜ್ಯದ ಶೇ. 90 ಭಾಗ ಜನರು ವ್ಯವಸಾಯವನ್ನವಲಂಬಿಸಿಕೊಂಡಿದ್ದಾರೆ. 7,84,117 ಹೆಕ್ಟರ್ ಭೂಮಿಯಲ್ಲಿ ವ್ಯವಸಾಯ ಮಾಡಲಾಗುತ್ತಿದೆ. 5,51,054 ಹೆಕ್ಟರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ.

ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಬೇಕಾದ ವಿದ್ಯುತ್ ಇಲ್ಲಿ ಸಾಕಾಗುವಷ್ಟಿದೆ. ಯಮುನಾ ನದಿ, ಭಾಗೀರಥಿ, ಬಿಲಾಂಗನ, ಅಲಕಾನಂದ, ಮಂದಾಕಿನಿ, ಸರಯೂಗೌರಿ, ಕೋಸಿ ಮತ್ತು ಕಾಳಿ ಈ ಎಲ್ಲಾ ನದಿಗಳಿಂದ ಜಲವಿದ್ಯುತ್ ಉತ್ಪಾದಿಸಲಾಗುತ್ತಿದೆ. ಈ ರಾಜ್ಯದ 16826 ಗ್ರಾಮಗಳ ಪೈಕಿ 12,973 ಗ್ರಾಮಗಳಿಗೆ ವಿದ್ಯುತ್ ಪೂರೈಸಲಾಗಿದೆ.

**ಖನಿಜ ಸಂಪತ್ತು ಮತ್ತು ಕೈಗಾರಿಕೆ:** ಉತ್ತರಾಂಚಲ ರಾಜ್ಯ ವಿವಿಧ ಖನಿಜ ಸಂಪತ್ತನ್ನು ಹೊಂದಿದೆ. ಸುಣ್ಣಶಿಲೆ ಅಮೃತಶಿಲೆ, ರಾಕ್‌ಫಾಸ್ಪೇಟ್, ಡಾಲೊಮೈಟ್, ಮ್ಯಾಗ್ನೆಸೈಟ್, ತಾಮ್ರ, ಗ್ರಾಫೈಟ್ ಮತ್ತು ಜಿಪ್ಸ ಈ ಖನಿಜಗಳು ಹೇರಳವಾಗಿ ದೊರೆಯುತ್ತವೆ. ರಾಜ್ಯದಲ್ಲಿ 17,534 ಸಣ್ಣ ಕೈಗಾರಿಕೆಗಳಿದ್ದು ಸು. 59,659 ಮಂದಿಗೆ ಉದ್ಯೋಗ ನೀಡಿದೆ. 191 ದೊಡ್ಡ ಪ್ರಮಾಣದ ಕೈಗಾರಿಕೆಗಳಿದ್ದು ಇದರಲ್ಲಿ 2,694.66 ಕೋಟಿ ರೂಪಾಯಿ ಬಂಡವಾಳ ತೊಡಗಿಸಿದ್ದು 50,802 ಮಂದಿಗೆ ಉದ್ಯೋಗ ದೊರಕಿದೆ. ಹೆಚ್ಚಿನ ಕೈಗಾರಿಕೆಗಳು ಅರಣ್ಯೋತ್ಪಾದನೆಯ ಮೂಲದವು. ರಾಜ್ಯದಲ್ಲಿ ಒಟ್ಟು 54,047 ಗೃಹ ಕೈಗಾರಿಕಾ ಘಟಕಗಳಿದ್ದವು.

**ಸಾರಿಗೆ ಸಂಪರ್ಕ:** ಉತ್ತರಾಂಚಲದಲ್ಲಿ 19,543 ಕಿಮೀ ಉತ್ತಮ ರಸ್ತೆಗಳಿವೆ. 17,545 ಕಿಮೀ ಇಲ್ಲಿನ ಲೋಕೋಪಯೋಗಿ ಇಲಾಖೆಯ ಉಸ್ತುವಾರಿಯಲ್ಲಿದೆ. 1,998 ಕಿಮೀ ಉದ್ದದ ರಸ್ತೆಯನ್ನು ಈ ರಾಜ್ಯದ ಸ್ಥಳೀಯ ಪಂಚಾಯಿತಿ ಮುಂತಾದವು ನಿರ್ಮಿಸಿವೆ. ಉತ್ತಮ ರೈಲ್ವೆ ಸಂಪರ್ಕ ಸೌಲಭ್ಯವೂ ಈ ರಾಜ್ಯಕ್ಕಿದೆ. ಡೆಹ್ರಾಡುನ್, ಹರಿದ್ವಾರ್, ರೂರ್ಕೀ, ಕೊಟದ್ವಾರ್, ಕಾಸಿಪುರ್, ಉಧಮ್‌ಸಿಂಗ್‌ನಗರ್, ಹಲ್ದ್ವಾನಿ, ರಾಮ್‌ನಗರ್ ಮತ್ತು ಕತ್ಕೊದಾಮ್ ಇವು ಇಲ್ಲಿನ ಮುಖ್ಯ ರೈಲು ನಿಲ್ದಾಣಗಳು. ಡೆಹ್ರಾಡುನ್ ಹತ್ತಿರವಿರುವ ಜಾಲಿಗ್ರಾಂಟ್, ಉಧಮ್‌ಸಿಂಗ್‌ನಗರ್ ಬಳಿಯ ಪಂತನಗರ್ ವಿಮಾನ ನಿಲ್ದಾಣಗಳಿವೆ. ಪಿತೋರ್‌ಗರ್ ಬಳಿಯ ನೈನಿ–ಸೆನ, ಚಮೋಲಿ ಬಳಿಯ ಗೌಚಾರ್ ಮತ್ತು ಉತ್ತರಕಾಶಿ ಹತ್ತಿರದ ಚಿನ್ಯಾಲಿಸೌರ್ ಈ ವಿಮಾನನಿಲ್ದಾಣಗಳು ನಿರ್ಮಾಣವಾಗುತ್ತಿವೆ. ಪವನ ಹಂಸ, ಸಂಸ್ಥೆಯವರು ಯಾತ್ರಿಗಳಿಗಾಗಿ ರುದ್ರಪ್ರಯಾಗ್‌ನಿಂದ ಕೇದಾರನಾಥಕ್ಕೆ ಹೆಲಿಕಾಪ್ಟರ್ ಸೌಕರ್ಯ ಕಲ್ಪಿಸಿದೆ.

ಈ ರಾಜ್ಯದ ಹರಿದ್ವಾರದಲ್ಲಿ ನಡೆಯುವ ಕುಂಭಮೇಳ, ಅರ್ಧಕುಂಭಮೇಳ ಬಹುಪ್ರಸಿದ್ಧವಾದವು. ಲಕ್ಷಾಂತರ ಮಂದಿ ಯಾತ್ರಿಗಳು ಹನ್ನೆರಡು ಮತ್ತು ಆರು ವರ್ಷಕ್ಕೊಮ್ಮೆ ನಡೆಯುವ ಈ ಜಾತ್ರೆಯಲ್ಲಿ ಸೇರುತ್ತಾರೆ. ಚಂಪಾವತ್‌ನಲ್ಲಿ ನಡೆಯುವ ದೇವಿಧುರಮೇಳ, ಪೂರ್ಣಗಿರಿ

ಉತ್ತರಕಾಶಿಯ ಮಾಘಮೇಳ, ಭಾಗೇಶ್ವರದ ಉತ್ತರೈನಿಮೇಳ, ಚಾನ್ಸರ್‌ವರ್‌ನ ವಿಶುಮೇಳ, ರೂರ್ಕಿಯ ಪೀರನೆ ಕಲಿಯರ್‌ಮೇಳ ಚಾನ್ಸರ್‌ವರ್‌ನ ವಿಶುಮೇಳ, ರೂರ್ಕಿಯ ಪೀರನೆ ಕಲಿಯರ್ ಮೇಳ ಮುಂತಾದವು ಜನಾಕರ್ಷಣೆಯ ಪ್ರಸಿದ್ಧ ಜಾತ್ರೆಗಳಾಗಿವೆ.

ಈ ರಾಜ್ಯದಲ್ಲಿ ಯಾತ್ರಿಗಳನ್ನು, ಪ್ರವಾಸಿಗರನ್ನೂ ಸೆಳೆಯುವ ಕೆಲವು ಪ್ರಸಿದ್ಧ ತಾಣಗಳಿವೆ. ಅವುಗಳಲ್ಲಿ ಗಂಗೋತ್ರಿ, ಯಮುನೋತ್ರಿ, ಬದರೀನಾಥ, ಕೇದಾರನಾಥ, ಹರಿದ್ವಾರ, ರಿಷಿಕೇಷ್, ಹೇಮ್‌ಕುಂಡಸಾಹೇಬ್, ನಾನಕ್‌ಮತ್ ಮುಂತಾದವು. ಇಲ್ಲಿನ ಕುಮಾವ್ ಪ್ರದೇಶದಿಂದ ಕೈಲಾಸ ಮಾನಸಸರೋವರ ಯಾತ್ರೆ ಮಾಡುತ್ತಾರೆ. ಪ್ರಪಂಚ ಪ್ರಸಿದ್ಧ ಪುಷ್ಪಗಳ ಕಣಿವೆ, ಪಿಂಡಾರಿ ನೀರ್ಗಲ್ಲ ಪ್ರದೇಶ, ರೂಪ್‌ಕುಂಡ್, ದಯರ ಬುಗ್ಯಾಲ್, ಔಲಿ, ಇವುಗಳ ಜೊತೆಗೆ ಕಣಿವೆಗಳ ನಿಸರ್ಗ ಚೆಲುವಿನಿಂದ ಕೂಡಿದ ಮುಸ್ಸೋರಿ, ಡೆಹ್ರಾಡುನ್, ಚಕ್ರಾತ, ನೈನಿತಾಲ್, ರಾಣಿಕೇತ್, ಬಾಗೇಶ್ವರ, ಭೀಮ್‌ತಾಲ್ ಮತ್ತು ಕೌಸನಿ ಇವೆಲ್ಲ ಪ್ರವಾಸಿಗರನ್ನು ಸೆಳೆವ ಮುಖ್ಯ ಪ್ರವಾಸಿತಾಣಗಳಾಗಿವೆ.

ಉತ್ತರಾಂಚಲಕ್ಕೆ ಸಾಕಷ್ಟು ಪ್ರಾಚೀನ ಇತಿಹಾಸವಿದೆ. ಇದನ್ನು ಕೇರಾರ ಖಂಡ, ಮಾನಸಖಂಡ ಮತ್ತು ಹಿಮವಂತ ಎಂದು ಕರೆಯುತ್ತಿದ್ದರೆಂಬುದು ಕೆಲವು ಪುರಾತನ ಗ್ರಂಥಗಳಲ್ಲಿದೆ ಎಂಬುದನ್ನೂ ಉಲ್ಲೇಖಿಸಲಾಗಿದೆ. ಇಲ್ಲಿರುವ ಪುಣ್ಯ ಪವಿತ್ರ ಕ್ಷೇತ್ರಗಳು, ದೇವಸ್ಥಾನಗಳು ಮತ್ತು ಪುಣ್ಯ ನದಿ ತೀರ್ಥಗಳಿಂದಾಗಿ ಇದನ್ನು ದೇವಭೂಮಿ ಎಂದೂ ಕರೆಯುವುದುಂಟು. ಕ್ಷೇತ್ರದರ್ಶನಕ್ಕೆ ಬರುವವರೆಗೆ ಇಲ್ಲಿನ ಭೌಗೋಳಿಕ ಪ್ರಾಕೃತಿಕ ದೃಶ್ಯ ಚೇತೋಹಾರಿಯಾದದ್ದು. ಇಂತಹ ಈ ಭೂಮಿಯನ್ನು ಕುಶಾನರು, ಕುನಿನ್‌ದಾಸ್, ಕಾನಿಷ್ಕ, ಸಮುದ್ರಗುಪ್ತ, ಪೌರವರು, ಕಾತುರಿಗಳು, ಪಲಾಸರು ಮತ್ತು ಚಂದ್ರವಂಶಜರು, ಪೌರವಂಶಸ್ಥರು ಆಳಿದರು. ಕೊನೆಗೆ ಬ್ರಿಟಿಷರು ತಮ್ಮ ಆಡಳಿತ ನಡೆಸಿದ್ದರು.

ಈಗಿನ ಉತ್ತರಾಂಚಲ ರಾಜ್ಯ 1902ರಲ್ಲಿ ರಚಿಸಲಾದ ಆಗ್ರಾ ಮತ್ತು ಅವಧ್‌ನ ಸಂಯುಕ್ತ ಸಂಸ್ಥಾನದಲ್ಲಿ ಸೇರಿತ್ತು. 1935ರಲ್ಲಿ ಹೆಸರಿನಲ್ಲಿ ಅವಧ ಮತ್ತು ಆಗ್ರಾ ಇವನ್ನು ಬಿಟ್ಟು ಸಂಯುಕ್ತ ಸಂಸ್ಥಾನ ಎಂದು ನಾಮಕರಣ ಮಾಡಲಾಯಿತು. 1950 ಜನವರಿಯಲ್ಲಿ ಇದನ್ನು ಉತ್ತರ ಪ್ರದೇಶವೆಂದು ಕರೆಯಲಾಯಿತು. ಉತ್ತರಾಂಚಲ ಈ ಉತ್ತರ ಪ್ರದೇಶದ ಒಂದು ಭಾಗವಾಗಿ ಉಳಿಯಿತು. 2000 ದ ನವೆಂಬರ್ 9ನೇ ದಿನಾಂಕದಂದು ಉತ್ತರ ಪ್ರದೇಶದಿಂದ ಉತ್ತರಾಂಚಲ ಬೇರೆಯಾಗಿ ಭಾರತದ 27ನೇ ರಾಜ್ಯವಾಗಿ ಸೇರಿತು. ಈ ರಾಜ್ಯದ 13 ಜಿಲ್ಲೆಗಳ ವಿಸ್ತಾರ, ಜನಸಂಖ್ಯೆ ಮತ್ತು ಆಡಳಿತ ಕೇಂದ್ರದ ವಿವರ ಇಂತಿದೆ.

| ಜಿಲ್ಲೆ | ವಿಸ್ತಾರ ಚ.ಕಿ.ಮೀ | ಜನಸಂಖ್ಯೆ (2001) | ಆಡಳಿತ ಕೇಂದ್ರ |
|---|---|---|---|
| 1. ಉತ್ತರಕಾಶಿ | 8,016 | 2,94,179 | ಉತ್ತರಕಾಶಿ |
| 2. ಚಮೋಲಿ | 7,520 | 3,69,198 | ಗೋಪೇಶ್ವರ |
| 3. ರುದ್ರಪ್ರಯಾಗ್ | 2,439 | 2,27,461 | ರುದ್ರಪ್ರಯಾಗ್ |
| 4. ತೆಹರಿಘರವಾಲ್ | 3,796 | 6,04,608 | ನ್ಯೂತೆಹರಿ |
| 5. ಡೆಹ್ರಾಡೂನ್ | 3,088 | 12,79,083 | ಡೆಹ್ರಾಡೂನ್ |
| 6. ಘರ್‌ವಾಲ್ | 5,230 | 6,96,851 | ಪೌರಿ |
| 7. ಪಿತೋರ್‌ಗರ್ | 7,169 | 4,62,149 | ಪಿತೋರ್‌ಗರ್ |
| 8. ಚಂಪಾವತ್ | 2,004 | 2,24,461 | ಚಂಪಾವತ್ |
| 9. ಆಲ್ಮೋರ | 3,689 | 6,30,446 | ಆಲ್ಮೋರ |
| 10. ಬಾಗೇಶ್ವರ | 1,696 | 2,49,453 | ಬಾಗೇಶ್ವರ |
| 11. ನೈನಿತಾಲ್ | 3,422 | 7,62,912 | ನೈನಿತಾಲ್ |
| 12. ಉಧಮ್‌ಸಿಂಗ್‌ನಗರ್ | 3,055 | 12,34,548 | ಉಧಮ್‌ಸಿಂಗ್‌ನಗರ್ (ರುದ್ರಾಪುರ) |
| 13. ಹರಿದ್ವಾರ್ | 2,360 | 14,44,213 | ಹರಿದ್ವಾರ್ |

ಉತ್ತರಕಾಶಿ ಗೋಪೇಶ್ವರ ರುದ್ರಪ್ರಯಾಗ್ ನ್ಯೂತೆಹರಿ ಡೆಹ್ರಾಡೂನ್ ಪೌರಿ ಪಿತೋರ್‌ಗರ್ ಚಂಪಾವತ್ ಆಲ್ಮೋರ ಬಾಗೇಶ್ವರ ನೈನಿತಾಲ್ ಉಧಮ್‌ಸಿಂಗ್‌ನಗರ್ (ರುದ್ರಾಪುರ) ಹರಿದ್ವಾರ್.

*

**ಉತ್ತರಾ[1]: ನೋಡಿ– ಉತ್ತರ–ಫಲ್ಗುನೀ.**

**ಉತ್ತರಾ[2]:** ವಿರಾಟರಾಜನ ಮಗಳು. ಅಭಿಮನ್ಯುವಿನ ಹೆಂಡತಿ. ಉತ್ತರಕುಮಾರನ ತಂಗಿ. ಅರ್ಜುನನ ಸುಭದ್ರೆಯರ ಸೊಸೆ. ಪರೀಕ್ಷಿದ್ರಾಜನ ತಾಯಿ. ತ್ರಿಗರ್ತರು ವಿರಾಟರಾಜನ ಗೋವುಗಳನ್ನು ಹಿಡಿಯಲು ಅವರಿಗೆ ಸಹಾಯಕರಾಗಿ ಬಂದ ಕೌರವ ಸೇನೆಯನ್ನು ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನ ಎದುರಿಸಿದ. ಸಂತೋಷಗೊಂಡ ವಿರಾಟರಾಜ ಅರ್ಜುನನಿಗೆ ಉತ್ತರೆಯನ್ನು ಕೊಡಲು ಹೋದಾಗ ಅದುವರೆಗೂ ತನ್ನ ಮಗಳಂತೆ ನೋಡಿದ ಉತ್ತರೆಯನ್ನು ಮದುವೆಯಾಗಲು ಅರ್ಜುನ ನಿರಾಕರಿಸಿ ಆಕೆಯನ್ನು ತನ್ನ ಮಗ ಅಭಿಮನ್ಯುವಿಗೆ ತಂದುಕೊಂಡ. ಮುಂದೆ ಕುರುಕ್ಷೇತ್ರ ಯುದ್ಧದಲ್ಲಿ ಪದ್ಮವ್ಯೂಹವನ್ನು ಭೇದಿಸಿ ಹೊರಬರಲಾರದೆ ಅಭಿಮನ್ಯು ಮಡಿದ. ಬಸುರಿಯಾಗಿದ್ದ ಉತ್ತರೆ ವಿಧವೆಯಾದಳು. ಕುರುಕ್ಷೇತ್ರ ಯುದ್ಧಮುಗಿದಾಗ ಪಾಂಡವರ ಮೇಲಿನ ಸೇಡಿನ ಕಿಡಿ ಸಿಡಿದು ಅಶ್ವತ್ಥಾಮ ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸಿದ. ಅದು ಪಾಂಡವರ ಸಂತತಿಯನ್ನು ನಾಶಮಾಡುವುದೆಂದು ತಿಳಿದ ಶ್ರೀಕೃಷ್ಣ ಅಸ್ತ್ರವನ್ನು ಹಿಂದಕ್ಕೆ ಕರೆಯುವಂತೆ ಕೋರಿದಾಗ ಅಶ್ವತ್ಥಾಮ ನಿರಾಕರಿಸಿದ. ಆದರೂ ಕೃಷ್ಣನ ಕೃಪೆಯಿಂದ ಮಗು ಬದುಕಿತು. ಪರೀಕ್ಷಿತ್ ಎಂಬ ಹೆಸರಿನಿಂದ ಖ್ಯಾತವಾಗಿ ಕುರುಸಂತತಿಯ ಕುಡಿಯಾಗಿ ವಂಶವನ್ನು ಬೆಳೆಸಿತು.

*

**ಉತ್ತರಾಣಿ:** ಅಮರಾಂತೇಸಿ ಕುಟುಂಬದ ನೂರು ಪ್ರಭೇದಗಳಲ್ಲಿ ಒಂದಾದ ಗಿಡ (ಆಕಿರಾಂಥೀಸ್). ರಾಜಗಿರಿ, ಶಿರಸಾಲ ಗಿಡಗಳ ಗುಂಪಿಗೆ ಸೇರಿದೆ. ಇದೊಂದು ಪೊದರುಗಿಡ. 2'–3' ಎತ್ತರ: ಬಲು ಕವಲುಗಳು, ಬೂದುಬಣ್ಣದ ಚಚ್ಚೌಕ ಕಾಂಡ, ಕಾಂಡದ ಗಿಣ್ಣಿನ ಮೇಲೆ ಎದುರುಬದುರು ಜೋಡಣೆ ಗೊಂಡಿರುವ, 3"–4" ಉದ್ದದ, ಮಿತ ಸಂಖ್ಯೆಯ ಎಲೆಗಳು–ಇಷ್ಟು ಉತ್ತರಾಣಿಯ ವೈಶಿಷ್ಟ್ಯ. ನವೆಂಬರಿನಿಂದ ಜನವರಿವರೆಗೆ ಗಿಡದಲ್ಲಿ ವಿಪುಲವಾಗಿ ಹೂಗಳು ಅರಳುತ್ತವೆ. ಅವುಗಳ ಬಣ್ಣನೀಲಿ ಮಿಶ್ರಿತ ಬಿಳಿ; ತೆನೆತೆನೆಯಾಗಿ ಜೋಡಿಗೊಂಡಿರುತ್ತವೆ. ಇವು ಉದುರಿ ಕಾಯಿ ಆಗುವ ವೇಳೆಗೆ ತೆನೆಗಳು 16"–18" ಉದ್ದವಾಗುವುವು. ಕಾಯಲ್ಲಿ ಏಕಕೋಶದವು ಮತ್ತು ಏಕಬೀಜದವು ಇರುವುದುಂಟು.



ಉತ್ತರಾಣಿ ಒಂದು ಕಳೆಗಿಡ. ಭಾರತ, ಪಾಕಿಸ್ತಾನಗಳಲ್ಲಿ ಇದರ ವ್ಯಾಪ್ತಿ ಇದೆ: ಮುಖ್ಯವಾಗಿ ಹಾಳು ನೆಲದಲ್ಲಿ ಮತ್ತು ಹುಲ್ಲುಗಾವಲುಗಳಲ್ಲಿ. ಗಿಡದ ಬೂದಿಗೆ ಸಂಸ್ಕೃತದಲ್ಲಿ ಅಪಾಮಾರ್ಗವೆಂದು ಹೆಸರು. ಇದೊಂದು ಕ್ಷಾರವಸ್ತು. ಬಟ್ಟೆಬರೆಗಳನ್ನು ಸ್ವಚ್ಛಗೊಳಿಸುವಲ್ಲಿ. ಅವುಗಳಿಗೆ ಬಣ್ಣಹಾಕುವಾಗ ಇದರ ಉಪಯೋಗವಿದೆ. ಗಿಡದ ಇತರ ಉತ್ಪನ್ನಗಳಿಗೆ ಔಷಧೀಯ ಗುಣಗಳೂ ಇವೆ. ಎಳೆ ಎಲೆಗಳನ್ನು ಸೊಪ್ಪು ತರಕಾರಿಯಾಗಿ ಉಪಯೋಗಿಸುತ್ತಾರೆ. ವ್ರತ, ನಿಯಮಗಳಲ್ಲಿಯೂ ಬಳಸುವುದಿದೆ.

(ಎಂ.ಎಸ್.ಎಸ್.ಆರ್.;ಡಿ.ಎಂ.)

**ಉತ್ತರಾದಿ ಸಂಗೀತ: ನೋಡಿ– ಹಿಂದುಸ್ತಾನಿ–ಸಂಗೀತ.**

**ಉತ್ತರಾಧಿಕಾರ:** ಸ್ವತ್ತಿನ ಒಡೆಯ ಸತ್ತಾಗ ಅನ್ವಯಪ್ರಾಪ್ತವಾಗಿಯೋ ಆತನ ಕೊನೆಯ ಇಚ್ಛೆಯ ಉಯಿಲಿನಲ್ಲಿ ವ್ಯಕ್ತಪಟ್ಟಿರುವ ರೀತಿಯಲ್ಲೋ ಅವನ ಸ್ವತ್ತಿನ ಮೇಲೆ ಬರುವ ಅಧಿಕಾರ (ಸಕ್ಸೆಷನ್; ಇನ್‌ಹೆರಿಟೆನ್ಸ್). ಹೀಗೆ ಅಧಿಕಾರ ಪಡೆದ ವ್ಯಕ್ತಿ ಉತ್ತರಾಧಿಕಾರಿ. ಉತ್ತರಾಧಿಕಾರವನ್ನು ನಿಯಂತ್ರಣಗೊಳಿಸಲು ಆಧುನಿಕ ಸಮಾಜಗಳಲ್ಲಿ ವಿಶದವಾದ ನ್ಯಾಯವ್ಯವಸ್ಥೆಯೇ ರಚಿತವಾಗಿದೆ.

ಸ್ವತ್ತಿನ ಉತ್ತರಾಧಿಕಾರ ಪ್ರಶ್ನೆ ಉದ್ಭವಿಸಬೇಕಾದರೆ ಮುಖ್ಯವಾಗಿ ವ್ಯಕ್ತಿಸ್ವಾಮ್ಯಕ್ಕೆ ಒಳಪಟ್ಟ ವಸ್ತುಗಳಿರಬೇಕು. ಎಲ್ಲವೂ ಸಮಷ್ಟಿಯ ಒಡೆತನಕ್ಕೆ ಸೇರಿದ್ದಾದರೆ ಆಗ ಅದರ ವೈಯಕ್ತಿಕ ಹಕ್ಕುದಾರಿಕೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮಾಲೀಕ ಸತ್ತ ಮೇಲೂ ಈ ವಸ್ತುಗಳು ಉಳಿಯುವಂತಿರಬೇಕು, ಉಪಯುಕ್ತವಾಗಿ ಮುಂದುವರಿಯುವಂತಿರಬೇಕು. ಆಗಲೇ ಉತ್ತರಾಧಿಕಾರದ ಪ್ರಶ್ನೆ ಉದ್ಭವಿಸುವುದು ಸಾಧ್ಯ. ಸತ್ತಾತನ ವೈಯಕ್ತಿಕ ಒಡೆತನದ ಸಾಮಗ್ರಿಗಳನ್ನು ನಾಶ ಮಾಡುವ ಕ್ರಮ ಆದಿಯ ಜನರಲ್ಲಿ ರೂಢಿಯಲ್ಲಿತ್ತು. ಆತನ ಪ್ರೇತ ಉಳಿದವರನ್ನು ಕಾಡದಿರಲೆಂಬುದೇ ಈ ಕೃತಿಯ ಹಿಂದಿನ ಉದ್ದೇಶ. ಒಬ್ಬ ವ್ಯಕ್ತಿಯ ಸಾವಿಗೆ ಕಾರಣವಾದ ರೋಗದೇವತೆ ಇತರರಿಗೂ ಮೃತ್ಯುವಾಗಿ ಪರಿಣಮಿಸೀತೆಂಬ ಅಂಜಿಕೆಯಿಂದ ಅವನ ಗುಡಿಸಲನ್ನು ತ್ಯಜಿಸುವುದೂ ದಹಿಸುವುದೂ ದಕ್ಷಿಣ ಆಫ್ರಿಕದ ಕೆಲವು ಆದಿವಾಸಿಗಳ ವಾಡಿಕೆಯಾಗಿತ್ತು. ಮೃತನ ಆಡುಗಳನ್ನು ಕೊಂದು ತಿಂದರೆ ಆಗ ಆ ಪ್ರಾಣಿಗಳ ಆತ್ಮಗಳೂ ತಮ್ಮ ಭಾವೀ ಒಡೆಯನನ್ನು ಹಿಂಬಾಲಿಸಿ ಹೋಗಿ ಆತನ ಸೇವೆಯಲ್ಲಿ ನಿರತವಾಗುವುವೆಂಬುದು ಆಗ್ನೇಯ ಆಫ್ರಿಕದ ಹೆರೆರೋ ಜನರ ನಂಬಿಕೆ. ಸತ್ತವನ ಅಗತ್ಯಗಳನ್ನೊದಗಿಸುವ ಉದ್ದೇಶದಿಂದಲೇ ಅವನೊಂದಿಗೆ ಆಹಾರ. ಉಪಕರಣಗಳನ್ನೂ ಗುಲಾಮರನ್ನೂ ಪತ್ನಿಯರನ್ನೂ ಹೂಳುವ ಅಭ್ಯಾಸವಿತ್ತು. ಆತನ ಸ್ವತ್ತುಗಳನ್ನು ದೂರದ ನೆಂಟರಿಷ್ಟರಲ್ಲಿ ಹಂಚುವ ಪದ್ಧತಿ ಇಂಡಿಯನ್ನರಲ್ಲಿತ್ತೆಂದು ತಿಳಿದುಬಂದಿದೆ. ಆದರೆ ಉತ್ತರಾಧಿಕಾರದ ಸೂಕ್ತ ನಿಯಮಗಳಿಲ್ಲದ ಇಂಥ ಪದ್ಧತಿಯಿಂದ ಜಗಳಗಳಾಗುತ್ತಿದ್ದದ್ದೇ ಸಾಮಾನ್ಯ.

ಮಾನವನ ನಾಗರಿಕತೆಯ ಒಂದು ಕಾಲದಲ್ಲಿ ನೆಲವೇ ಮುಂತಾದ ಸ್ವತ್ತುಗಳ ಸಮಷ್ಟಿ ಸ್ವಾಮ್ಯವೇ ಸಾರ್ವತ್ರಿಕವಾಗಿತ್ತೆಂಬುದು ಮಾರ್ಕ್ಸನ ವಾದ. ಏಷ್ಯ, ಯುರೋಪ್, ಆಫ್ರಿಕಗಳ ಹಲವು ಭಾಗಗಳಲ್ಲಿ ನೆಲದ ಸಾಮೂಹಿಕ ಒಡೆತನ ಇದ್ದದ್ದುಂಟು. ಬೇಸಾಯದ

ಯಾಂತ್ರೀಕರಣ, ಕೃಷಿಕ್ಷೇತ್ರದ ವಿಸ್ತರಣೆ ಹಾಗೂ ಸಮಾಜವಾದೀ ಭಾವನೆಗಳ ಪ್ರಚಾರದಿಂದಾಗಿ ಈ ಶತಮಾನದಲ್ಲಿ ಸೋವಿಯತ್ ಒಕ್ಕೂಟ, ಚೀನ, ಇಸ್ರೇಲ್ ಮುಂತಾದ ದೇಶಗಳಲ್ಲಿ ಸಾಮೂಹಿಕ ಒಡೆತನದ ಹೊಸ ಹೊಸ ವ್ಯವಸ್ಥೆಗಳ ಆವಿರ್ಭಾವವಾಗುತ್ತಿದೆ. ನೆಲದ ಸಾಮೂಹಿಕ ಒಡೆತನ ಹೊಂದಿರುವವರ ಪೈಕಿ ಒಬ್ಬನ ಮರಣ ಸಂಭವಿಸಿದಾಗ ಉದ್ಭವಿಸುವುದು ಉತ್ತರಾಧಿಕಾರದ ಪ್ರಶ್ನೆಯಲ್ಲ, ಉಳಿದವರ ಪರಸ್ಪರ ಕರ್ತವ್ಯಗಳ ಪುನರ್ವ್ಯವಸ್ಥೆಯ ಪ್ರಶ್ನೆ.

ಉತ್ತರಾಧಿಕಾರ ವ್ಯವಸ್ಥೆಯನ್ನು ಟೀಕಿಸಿಯೂ ಸಮರ್ಥಿಸಿಯೂ ನಾನಾ ವಾದಗಳುಂಟು. ದುಡಿಮೆಯಿಲ್ಲದೆ ಸಂಪತ್ತು ಗಳಿಸುವುದಕ್ಕೆ ಇದರಿಂದ ಎಡೆಯುಂಟಾಗುವುದೆಂಬುದೂ ವರಮಾನದ ಅಸಮತೆಗೆ ಇದು ಹೆದ್ದಾರಿಯೆಂಬುದೂ ಒಂದು ಮುಖ್ಯ ಟೀಕೆ. ಸ್ವತ್ತಿನ ಖಾಸಗಿ ಒಡೆತನ ವ್ಯವಸ್ಥೆಯ ವಿರೋಧವೇ ಈ ಎಲ್ಲ ಟೀಕೆಗಳ ಮೂಲ.

ಸ್ವತ್ತಿನ ವೈಯಕ್ತಿಕ ಒಡೆತನ ಹಾಗೂ ಉತ್ತರಾಧಿಕಾರ ವ್ಯವಸ್ಥೆಯಿಂದ ಉದ್ಯಮಗಳು ಕುಂಠಿತವಾಗದೆ ಮುಂದುವರಿಯುವುದು ಸಾಧ್ಯವೆಂದೂ ಇದು ಎಲ್ಲ ಯತ್ನಶೀಲತೆಯ ಪ್ರೇರಕಶಕ್ತಿಯೆಂದೂ ಇದನ್ನು ಸಮರ್ಥಿಸುವವರಿದ್ದಾರೆ. ಆದರೆ ಬೃಹದ್ಗಾತ್ರದ ಉದ್ಯಮಗಳೂ ಇವುಗಳ ಒಡೆತನ ಹೊಂದಿರುವ ಕಂಪನಿಗಳೂ ಇರುವ ಈ ಕಾಲದಲ್ಲಿ ಇಂಥ ಉದ್ಯಮಗಳನ್ನು ನಡೆಸುವವರು ಒಡೆಯರಲ್ಲ; ವಿಶೇಷ ಪರಿಣತರು. ಇವರ ಪರಿಣತಿ ವಂಶಪಾರಂಪರ್ಯವಲ್ಲ. ಇವರು ಉದ್ಯಮದ ಒಡೆಯರಲ್ಲವಾದ್ದರಿಂದ ಉತ್ತರಾಧಿಕಾರವನ್ನು ಸಮರ್ಥಿಸುವ ವಾದ ಈ ದೃಷ್ಟಿಯಲ್ಲಿ ದುರ್ಬಲವೆನಿಸಬಹುದು.

ವ್ಯಕ್ತಿಯ ಸಾವಿನೊಂದಿಗೆ ಆತನ ಸ್ವತ್ತಿನ ಸ್ವಾಮ್ಯದ ಹಕ್ಕು ಹೊರಟುಹೋಗಬೇಕು ಎಂಬ ಆದರ್ಶದ ವಿಚಾರ ಬೇರೆ. ಆದರೆ ವಾಸ್ತವವಾಗಿ ಇದರಲ್ಲಿ ಅನೇಕ ತೊಂದರೆಗಳು ಉದ್ಭವಿಸುತ್ತವೆ. ಅವನು ಬದುಕಿದ್ದಾಗ ಹೊಂದಿದ್ದ ಪದಾರ್ಥಗಳೆಲ್ಲ ಸರ್ಕಾರಕ್ಕೆ ಸೇರಬೇಕು–ಎಂಬ ವಾದಕ್ಕೆ ಸ್ವತಂತ್ರ ಸಮಾಜದಲ್ಲಿ ಪುರಸ್ಕಾರವಿಲ್ಲ. ತನ್ನ ಸ್ವತ್ತಿನ ವಿಚಾರವಾಗಿ ಅದರ ಒಡೆಯ ಬದುಕಿದ್ದಾಗ ವ್ಯಕ್ತಪಡಿಸಿದ ಅಂತಿಮ ಇಚ್ಛೆಯ ಪ್ರಕಾರ ಅದರ ವಿಲೇವಾರಿ ಮಾಡುವುದೊಂದು ಮಾರ್ಗ. ಆತ ಈ ರೀತಿ ಯಾವ ಇಚ್ಛೆಯನ್ನೂ ವ್ಯಕ್ತಪಡಿಸದಿದ್ದ ಪಕ್ಷದಲ್ಲಿ ದೇಶದಲ್ಲಿ ಸಾರ್ವತ್ರಿಕವಾಗಿ ಅನ್ವಯಿಸುವಂತೆ ಜಾರಿಯಲ್ಲಿರುವ ನ್ಯಾಯಸೂತ್ರಗಳ ಪ್ರಕಾರ ಸ್ವತ್ತಿನ ವಿಲೇವಾರಿ ಆಗುತ್ತದೆ.

ಸತ್ತವನ ಸ್ವತ್ತು ಸಂಕ್ರಮಿಸುವ ವಿಚಾರವಾಗಿ ಅನೇಕ ದೇಶಗಳಲ್ಲಿರುವಂತೆ ಭಾರತದಲ್ಲೂ ವ್ಯಾಪಕವಾದ ನ್ಯಾಯನಿಯಮಗಳಿವೆ. ಒಬ್ಬನ ಸ್ವತ್ತು ಅವನ ರಕ್ತಸಂಬಂಧದ ವಾರಸುದಾರರಿಗೇ ಸೇರಬೇಕು ಎಂಬ ಸೂತ್ರ ಭಾರತದಲ್ಲಿ ಸಹಜವಾಗಿ ತನಗೆ ತಾನೇ ರೂಪಿತವಾಯಿತು. ಹಿಂದೂ ನ್ಯಾಯಶಾಸ್ತ್ರದಲ್ಲಿಯಂತೂ ಇದು ಅತ್ಯಂತ ಖಚಿತವಾಗಿದೆಯೆನ್ನಬಹುದು. ಒಬ್ಬ ಹಿಂದೂ ಅವಿಭಕ್ತ ಕುಟುಂಬದ ಕರ್ತ (ಯಜಮಾನ) ಸತ್ತರೆ ಅವನ ಆಸ್ತಿ ಮೊದಲು ತನ್ನ ಗೋತ್ರಜ ಸಪಿಂಡ ವರ್ಗದವರಿಗೆ, ಅವರಿಲ್ಲದಿದ್ದರೆ ಸಮನೋದಕ ವರ್ಗದವರಿಗೆ, ಅವರೂ ಇಲ್ಲದಿದ್ದರೆ ಕೊನೆಯದಾಗಿ ಬಂಧು ವರ್ಗದವರಿಗೆ ಸೇರಬೇಕೆಂದು ಹಿಂದೂ ನ್ಯಾಯಶಾಸ್ತ್ರದಲ್ಲಿ ವಿಧಿಸಲಾಗಿದೆ. ಬಂಧುವರ್ಗದವರಲ್ಲಿ ಆತ್ಮಬಂಧುಗಳೆಂದೂ ಪಿತೃ ಬಂಧುಗಳೆಂದೂ ಮಾತೃ ಬಂಧುಗಳೆಂದೂ ಮೂರು ಉಪವರ್ಗಗಳುಂಟು. ಮುಸ್ಲಿಂ ಜನಾಂಗದಲ್ಲೂ ಆಸ್ತಿಯ ಸಂಕ್ರಮಣದ ಬಗ್ಗೆ ಖಚಿತವಾದ ನ್ಯಾಯಶಾಸ್ತ್ರದ ಬೆಳವಣಿಗೆಯಾಗಿದೆ.

ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಸ್ಥಾಪಿತವಾದ ಮೇಲೂ ಈ ನ್ಯಾಯಸೂತ್ರಗಳೇ ಜಾರಿಯಲ್ಲಿದ್ದುವು. ಆದರೆ ಹಿಂದೂ ಮುಸ್ಲಿಮರೇ ಅಲ್ಲದೆ ಈ ದೇಶದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಕ್ರೈಸ್ತರಿಗೂ ಪಾರ್ಸಿಗಳಿಗೂ ಹಿಂದೂ ಮುಸ್ಲಿಂ ನ್ಯಾಯಶಾಸ್ತ್ರಗಳು ಅನ್ವಯಿಸುವುದು ಧರ್ಮಸಮ್ಮತವೆನಿಸಲಿಲ್ಲ. ಹಿಂದೂ ಮುಸ್ಲಿಂ ಧರ್ಮಗ್ರಂಥಗಳಲ್ಲಿರುವಂತೆ ಪಾರ್ಸಿಗಳಿಗೆ ಅವರ ಧರ್ಮಗ್ರಂಥಗಳಲ್ಲೇ ರೂಪಿತವಾದ ವಾರಸು ಪದ್ಧತಿಯ ಉತ್ತರಾಧಿಕಾರ ವ್ಯವಸ್ಥೆ ಇರಲಿಲ್ಲ. ಹಿಂದೂ ಮತದಿಂದ ಹೊರಗೆ ಹೋದವರಿಗೆ ಈ ಬಗ್ಗೆ ಯಾವ ನ್ಯಾಯಸೂತ್ರ ಅನ್ವಯವಾಗಬೇಕೆಂಬ ಬಗ್ಗೆ ಬಳ್ಳಾರಿ ಜಿಲ್ಲೆಯ ಸಿವಿಲ್ ನ್ಯಾಯಾಲಯದಿಂದ ಪ್ರಿವಿ ಕೌನ್ಸಿಲ್‌ವರೆಗೆ ನಡೆದ ಒಂದು ಮೊಕದ್ದಮೆಯಲ್ಲಿ ಈ ಜಿಜ್ಞಾಸೆ ಬಂದಿತ್ತು. ಹಿಂದೂವಾಗಿ ಹುಟ್ಟಿದವ ಮತಾಂತರ ಹೊಂದಿ ಇನ್ನೊಂದು ಮತವನ್ನವಲಂಬಿಸಿದರೂ ತನ್ನ ಅನಂತರ ಸ್ವತ್ತು ಹೇಗೆ ಸಂಕ್ರಮಿಸಬೇಕೆಂಬ ವಿಚಾರದಲ್ಲಿ ಆತ ತನ್ನಿಚ್ಛೆಯಂತೆಯೇ ನಿರ್ಧರಿಸಬಹುದು ಎಂದು ಆ ಪ್ರಿವಿ ಕೌನ್ಸಿಲ್ ನ್ಯಾಯಾಲಯ ತೀರ್ಪು ನೀಡಿತು. ಅಂದರೆ, ಹಿಂದೂವಾಗಿದ್ದವ ಕ್ರೈಸ್ತನಾದರೂ ಆತ ಇಷ್ಟಪಟ್ಟರೆ ಹಿಂದೂ ಉತ್ತರಾಧಿಕಾರದ ನ್ಯಾಯಶಾಸ್ತ್ರವನ್ನೇ ಅನುಸರಿಸಬಹುದು ಎಂಬುದು ಇದರ ಅರ್ಥ. ಹಿಂದೂ ಮತದಿಂದ ಹೊರಗೆ ಹೋದವನು ಹಿಂದೂವಾಗಿದ್ದಾಗ ಪಡೆದಿದ್ದ ಸ್ವತ್ತಿನ ಹಕ್ಕಿಗೆ ಧಕ್ಕೆಯಿರಲಿಲ್ಲ. ಇದರಿಂದ ಹಿಂದೂವಾದವ ಕ್ರೈಸ್ತನಾದರೆ ಆತ ಹಿಂದೂವಾಗಿಯೇ ಉಳಿದಿದ್ದರೆ ಪಿತ್ರಾರ್ಜಿತವಾಗಿ ಬರಬೇಕಾಗಿದ್ದ ಸ್ವತ್ತು ಬರುತ್ತಿತ್ತಲ್ಲದೆ ಕ್ರೈಸ್ತನಾಗಿದ್ದರಿಂದ ದೊರಕುವ ವಿಶೇಷ ಸೌಲಭ್ಯಗಳೂ ಪ್ರಾಪ್ತವಾಗುತ್ತಿದ್ದುವು. ಈ ತೀರ್ಪಿನ ಪರಿಣಾಮ ಬಲು ತೀವ್ರವೇ ಆಗಿತ್ತೆನ್ನಬಹುದು. ಇದರಿಂದ ದೇಶದಲ್ಲೆಲ್ಲ ದೊಡ್ಡ ಅವಾಂತರವೇ ಆದೀತೆಂಬ ಶಂಕೆ ತಲೆದೋರಿ, ಈ ಬಗ್ಗೆ ಒಂದು ಕಾಯಿದೆ ಜಾರಿಗೆ ತರಬೇಕೆಂದು ಬ್ರಿಟಿಷ್ ಸರ್ಕಾರ ನಿರ್ಧರಿಸಿತು. ಇದರ ಫಲವೇ ಭಾರತೀಯ ಉತ್ತರಾಧಿಕಾರ ಕಾಯಿದೆ. 1865ರ ಈ ಕಾಯಿದೆ 1925ರ ವರೆಗೂ ಜಾರಿಯಲ್ಲಿತ್ತು. ಆಗ ಅಂದಿನವರೆಗೆ ಪಡೆದ ಅನುಭವದಿಂದ ಮತ್ತೊಂದು ಶಾಸನ ರೂಪಿಸಲಾಯಿತು. ಅದೇ ಇಂದಿಗೂ ಜಾರಿಯಲ್ಲಿದೆ.

ಭಾರತೀಯ ಉತ್ತರಾಧಿಕಾರದ ಕಾಯಿದೆ ಪ್ರಮುಖವಾಗಿ ಕ್ರೈಸ್ತ ಮತ್ತು ಪಾರ್ಸಿಗಳಿಗೆ ಅನ್ವಯಿಸಲೆಂದು ರೂಪಿಸಿದ್ದು. ಆದರೂ ಉಯಿಲು ಮೂಲಕ ಸಂಕ್ರಮಣವಾಗುವ ಹಕ್ಕುದಾರಿಗೆ ಸಂಬಂಧಿಸಿದ ಭಾಗಗಳು ಹಿಂದೂ ಮುಸ್ಲಿಂ ಉಯಿಲುಗಳಿಗೂ ಅನ್ವಯವಾಗುವಂತಿದ್ದುವು.

ಭಾರತೀಯ ಉತ್ತರಾಧಿಕಾರದ ಕಾಯಿದೆಯಲ್ಲಿ ಪ್ರಮುಖವಾಗಿ ಎರಡು ಭಾಗಗಳಿವೆ. ಉಯಿಲುಗಳಿಲ್ಲದೆ ಸಂಕ್ರಮಿಸುವ ಉತ್ತರಾಧಿಕಾರಕ್ಕೆ ಸಂಬಂಧಿಸಿದ್ದು ಮೊದಲನೆಯ ಭಾಗವಾದರೆ ಉಯಿಲುಗಳ ಮೂಲಕ ಸಂಕ್ರಮಿಸುವುದಕ್ಕೆ ಸಂಬಂಧಿಸಿದ್ದು ಎರಡನೆಯ ಭಾಗ. ಒಂದನೆಯ ಭಾಗ ಹಿಂದೂ, ಮುಸ್ಲಿಂ, ಬೌದ್ಧ, ಸಿಖ್ ಮತ್ತು ಜೈನರಿಗೆ ಅನ್ವಯಿಸುವುದಿಲ್ಲ. ಈ ಭಾಗದಲ್ಲಿ ಉಯಿಲು ಮಾಡದ ಸತ್ತಾತನ ಸ್ವತ್ತಿನ ಸಂಕ್ರಮಣಕ್ಕೆ ಸಂಬಂಧಪಟ್ಟ ವಿಧಿಗಳನ್ನು ನಿರೂಪಿಸಲಾಗಿದೆ. ಸಹಜವಾಗಿ ಸತ್ತವನ ಸ್ವತ್ತಿನ ವ್ಯಾಖ್ಯೆ, ವಾರಸುಗಳು ಯಾರೆಂಬ ನಿರ್ಣಯ, ಅವರವರ ಹಕ್ಕುಗಳ ನಿರ್ಧಾರ, ಸ್ವತ್ತು ಸಂಕ್ರಮಿಸುವ ರೀತಿ ಮತ್ತು ಪ್ರಮಾಣ–ಇವೆಲ್ಲ ಇಲ್ಲಿವೆ. ಉಯಿಲಿನ ವ್ಯಾಖ್ಯೆ, ಇದನ್ನು ಮಾಡುವವರ ಅಧಿಕಾರ ನಿರ್ಣಯ, ಉಯಿಲಿಗೆ ಒಳಗಾಗಬಹುದಾದ ಸ್ವತ್ತಿನ ವ್ಯಾಖ್ಯೆ, ಉಯಿಲುಗಳ ಪ್ರಭೇದ–ಇವಕ್ಕೆ ಎರಡನೆಯ ಭಾಗ ಮೀಸಲು. ಉಯಿಲುಗಳನ್ನು ಅರ್ಥೈಸುವ ನಿಯಮಗಳನ್ನೂ ಉಯಿಲುಗಳನ್ನು ಜಾರಿಗೆ ತರಬೇಕಾದರೆ ಅನುಸರಿಸಬೇಕಾದ ಕ್ರಮವನ್ನೂ ಇಲ್ಲಿ ಕೊಟ್ಟಿದೆ.

ಸ್ವತಂತ್ರ ಭಾರತದ ಸಂವಿಧಾನದ 44ನೆಯ ಪ್ರಕರಣದ ಪ್ರಕಾರ ರಾಷ್ಟ್ರದ ಪ್ರಜೆಗಳೆಲ್ಲರಿಗೂ ಒಂದೇ ಬಗೆಯ ವ್ಯವಹಾರ ಸಂಹಿತೆ ಅನ್ವಯವಾಗುವಂತೆ ಮಾಡುವುದು ಭಾರತ ಗಣರಾಜ್ಯದ ಒಂದು ಆದರ್ಶ. ಈ ಆದರ್ಶದಂತೆ 1956ರಲ್ಲಿ ಜಾರಿಗೆ ತರಲಾದ ಹಿಂದೂ ಉತ್ತರಾಧಿಕಾರ ಕಾಯಿದೆಯ ಒಂದನೆಯ ಭಾಗದಲ್ಲಿ ಉಯಿಲುಗಳಿಲ್ಲದೆ ಆಸ್ತಿ ಸಂಕ್ರಮಿಸುವ ಬಗ್ಗೆ ರೂಪಿಸಿರುವ ವಿಧಿಗಳ ಕ್ರಾಂತಿಕಾರಕವೆನ್ನಬಹುದು. ಸ್ತ್ರೀಗೆ ಸ್ವತ್ತಿನ ಮೇಲೆ ಕೆಲವು ಸಂದರ್ಭಗಳಲ್ಲಿ ಸಂಪೂರ್ಣ ಹಕ್ಕುಗಳು ಲಭಿಸಿವೆಯಲ್ಲದೆ ಕೆಲವು ವರ್ಗದ ಸ್ತ್ರೀಯರಿಗೆ ಆಸ್ತಿಯಲ್ಲಿ ಹೆಚ್ಚಿನ ಹಕ್ಕುಗಳೂ ಲಭ್ಯವಾಗಿವೆ.

ಮುಸ್ಲಿಂ ಜನರ ಉತ್ತರಾಧಿಕಾರಿತ್ವ ಕಾಯಿದೆ ಮಾತ್ರ ಇಂದಿಗೂ ಇಸ್ಲಾಮೀ ನ್ಯಾಯದಂತೆಯೇ ನಡೆಯುತ್ತಿದೆ. ಇದನ್ನು ಬದಲಾಯಿಸಬಾರದೆಂಬುದು ಒಂದು ಮತ. ಅನೇಕ ಇಸ್ಲಾಮೀ ರಾಷ್ಟ್ರಗಳಲ್ಲಿ ಆಗಿರುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲೂ ಸೂಕ್ತ ಮಾರ್ಪಾಟು ಮಾಡಬಹುದೆಂಬ ಅಭಿಪ್ರಾಯವೂ ಉಂಟು. ಇದನ್ನು ಕುರಿತ ಪರ್ಯಾಲೋಚನೆ ನಡೆಯುತ್ತಿದೆ. **(ನೋಡಿ– ಆಸ್ತಿ) ಉತ್ತರಾಧಿಕಾರ–ತೆರಿಗೆ) (ಉಯಿಲು)** (ಕೆ.ಪಿ.)

**ಉತ್ತರಾಧಿಕಾರ ತೆರಿಗೆ:** ಸತ್ತವನ ಸ್ವತ್ತಿನ ಉತ್ತರಾಧಿಕಾರದ ಮೇಲೆ ವಿಧಿಸಲಾಗುವ ತೆರಿಗೆ (ಇನ್‌ಹೆರಿಟೆನ್ಸ್ ಟ್ಯಾಕ್ಸ್). ನಿಖರವಾಗಿ ಹೇಳುವುದಾದರೆ ಈ ತೆರಿಗೆಯೂ ಸಂಪತ್ತಿ ಶುಲ್ಕವೂ (ಎಸ್ಟೇಟ್ ಡ್ಯೂಟಿ) ಮರಣ ಶುಲ್ಕದ (ಡೆತ್ ಡ್ಯೂಟಿ) ಎರಡು ಪ್ರಭೇದಗಳು. ಇವೆರಡೂ ಸ್ವತ್ತಿನ ಮಾಲೀಕ ಸತ್ತಾಗ ತೆರಬೇಕಾದ ತೆರಿಗೆಗಳೇ ಆದರೂ ಆತನ ಸ್ವತ್ತನ್ನು ಅದರ ನೂತನ ಮಾಲೀಕರಿಗೆ ವರ್ಗಾಯಿಸುವಾಗ ಅದರ ಒಟ್ಟು ಮೌಲ್ಯದ ಮೇಲೆ ವಿಧಿಸಿದ್ದೇ ಸಂಪತ್ತಿ ಶುಲ್ಕ; ಸ್ವತ್ತಿನ ಫಲಾನುಭವಿಗಳನ್ನು ಗಮನದಲ್ಲಿಟ್ಟು, ಸತ್ತವನಿಗೂ ಇವರಿಗೂ ಇರುವ ರಕ್ತಸಂಬಂಧಕ್ಕನುಗುಣವಾಗಿ, ಅವರವರಿಗೆ ಸಲ್ಲುವ ವೈಯಕ್ತಿಕ ಪಾಲುಗಳನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸಿ ವಿಧಿಸಿದ್ದೇ ಉತ್ತರಾಧಿಕಾರ ತೆರಿಗೆ. ಉತ್ತರಾಧಿಕಾರಿ ದೂರದ ಸಂಬಂಧಿಯಾಗಿದ್ದರೆ ಆತನಿಗೆ ದೊರೆಯುವ ಸ್ವತ್ತು ಬಹು ಆಕಸ್ಮಿಕವಾದ್ದರಿಂದ ಅವನ ಮೇಲೆ ಬೀಳುವ ತೆರಿಗೆಯ ದರ ಹೆಚ್ಚು. ಹಕ್ಕುದಾರ ಹತ್ತಿರದ ಸಂಬಂಧಿಯಾಗಿದ್ದರೆ, ಅವನ ಮೇಲೆ ತೆರಿಗೆಯ ದರ ಸಹಜವಾಗಿ ಕಡಿಮೆ. ಅಂತೂ ಈ ತೆರಿಗೆಗಳೆರಡೂ ಉದ್ಭವಿಸುವುದು ಸಾವಿನ ಅನಂತರ, ಆದರೆ ಸ್ವತ್ತು ಬೇರೆಯವರ ಹಸ್ತಗತವಾಗುವ ಮುನ್ನ. ಇವೆರಡರ ಮೂಲ ಒಂದೇ; ತೆರಿಗೆ ವಿಧಿಸುವ ದೃಷ್ಟಿ ಬೇರೆ ಬೇರೆ.

ಕ್ರಾಂತಿಕಾರಕ ಕರಗಳಲ್ಲಿ ಒಂದೆನಿಸಿರುವ ಈ ತೆರಿಗೆ ಪ್ರ.ಶ. 6ರಷ್ಟು ಹಿಂದೆಯೇ, ರೋಮನ್ ಚಕ್ರಾಧಿಪತ್ಯದ ವೈಭವದ ಕಾಲದಲ್ಲಿ ಬಳಕೆಯಲ್ಲಿತ್ತು. ಆದರೆ ಅಂದು ಈ ತೆರಿಗೆ ಈಗಿನಷ್ಟು ಪರಿಪೂರ್ಣ ಸ್ವರೂಪದ್ದಾಗಿರಲಿಲ್ಲ. 17ನೆಯ ಶತಮಾನದ ಕೊನೆಯ ವೇಳೆಗೆ ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್, ಪೋರ್ಚುಗಲ್ಲುಗಳಲ್ಲಿ ಉತ್ತರಾಧಿಕಾರ ತೆರಿಗೆಗಳು ಜಾರಿಯಲ್ಲಿದ್ದುವು. ಉತ್ತರಾಧಿಕಾರಿಗಳ ರಕ್ತಸಂಬಂಧದ ದೂರಕ್ಕೆ ಅನುಗುಣವಾಗಿ ಏರುದರದ ತೆರಿಗೆ ವಿಧಿಸುವ ಆಧುನಿಕ ಮಾದರಿ ಅವತಾರವಾದದ್ದು ಫ್ರಾನ್ಸಿನಲ್ಲಿ (1796). ಮುಂದೆ ಇಟಲಿಯೂ ಇದನ್ನನುಸರಿಸಿತು (1862). 1853ರಲ್ಲಿ ಇಂಗ್ಲೆಂಡಿನಲ್ಲಿ ಜಾರಿಗೆ ಬಂದ ಉತ್ತರಾಧಿಕಾರ ಶುಲ್ಕ ಕಾಯಿದೆ (ಸಕ್ಸೆಷನ್ ಡ್ಯೂಟಿ ಆ್ಯಕ್ಟ್) ಸಾರ್ವಜನಿಕ ಹಣಕಾಸಿನ ಇತಿಹಾಸದಲ್ಲಿ ಒಂದು ಚಿರಸ್ಮರಣೀಯ ಘಟನೆ. 1885ರಲ್ಲಿ ನ್ಯೂಯಾರ್ಕ್ ರಾಜ್ಯದಲ್ಲಿ ಈ ತೆರಿಗೆಗೆ ಒಂದು ನಿರ್ದಿಷ್ಟ ರೂಪ ಕೊಟ್ಟು, ಅದರ ಸಲುವಾಗಿ ಬಹು ಜಾಗರೂಕತೆಯಿಂದ ಒಂದು ಶಾಸನ ರಚಿಸಿ ಜಾರಿಗೆ ತಂದಾಗ, ಈ ತೆರಿಗೆಯ ಪ್ರಾಮುಖ್ಯ ಖಚಿತವಾಯಿತು. 1790–1902ರ ಅವಧಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ 22 ರಾಜ್ಯಗಳಲ್ಲೂ ಅನೇಕ ಐರೋಪ್ಯ ರಾಷ್ಟ್ರಗಳಲ್ಲೂ ಇದು ಜಾರಿಗೆ ಬಂತು. 1894ರಲ್ಲಿ ಬ್ರಿಟನ್ ಈ ತೆರಿಗೆಯಲ್ಲಿ ಪ್ರಗತಿಪರ ಮಾರ್ಪಾಡುಗಳನ್ನು ಮಾಡಿದಾಗ, ಜಗತ್ತಿನ ಇತರ ರಾಷ್ಟ್ರಗಳಿಗೆಲ್ಲ ಇದು ಮಾದರಿಯಾಯಿತು. 1930ರಲ್ಲಿ ಸಂಯುಕ್ತ ಸಂಸ್ಥಾನದ ರಾಜ್ಯಗಳು ಎಲ್ಲ ತೆರಿಗೆಗಳಿಂದ ಗಳಿಸಿದ ಒಟ್ಟು ವರಮಾನದ ಶೇಕಡ 9ರಷ್ಟು ಈ ತೆರಿಗೆಯಿಂದಲೇ ಬಂತೆಂಬ ಅಂಶ ಈ ತೆರಿಗೆಯ ಸಫಲತೆಯ ದ್ಯೋತಕವಾಗಿದೆ.

ತೆರಿಗೆ ವಿಧಿಸುವ ಮುನ್ನ ಒಟ್ಟು ಆಸ್ತಿಯ ಮೌಲ್ಯವನ್ನು ಆಗಿನ ಬೆಲೆಗಳ ಪ್ರಕಾರ ನಿರ್ಧರಿಸಿ ಅನಂತರ ತೆರಿಗೆಯನ್ನು ವಿಧಿಸಬೇಕಾಗುತ್ತದೆ. ಇದು ವಿವಾದಾಸ್ಪದವಾದರೂ ಸಾವು ಸಂಭವಿಸಿದ ಮುಂದಿನ ಒಂದೆರಡು ವಾರಗಳಲ್ಲೇ ಈ ಕಾರ್ಯವನ್ನು ಪೂರ್ತಿಗೊಳಿಸ ಬೇಕಾದದ್ದು ಅನಿವಾರ್ಯ.

ಈ ಬಗೆಯ ತೆರಿಗೆಗಳು ಸಂಪತ್ತಿನ ಪುನರ್ವಿತರಣೆಯ ಸಾಧನಗಳು. ತೆರಿಗೆಯ ವಿಧಾನ, ದರಗಳ ಮಟ್ಟ, ವರಮಾನ ತೆರಿಗೆಯ ಸ್ವರೂಪ ಇವನ್ನು ನಿರ್ಧರಿಸಿ ಈ ಪುನರ್ವಿತರಣೆಯ ವ್ಯಾಪ್ತಿ ಹಾಗೂ ಗತಿಗಳನ್ನು ನಿರ್ಣಯಿಸುವುದು ಸಾಧ್ಯ. ದರಗಳ ಮಟ್ಟ ಉಗ್ರವಾಗಿಲ್ಲದಿದ್ದರೆ ಸ್ವತ್ತಿನ ಮಾಲೀಕ ತಾನು ಜೀವಂತವಾಗಿರುವಾಗಲೇ ಈ ತೆರಿಗೆಗಾಗಿ ಸಾಕಷ್ಟು ಹಣದ ಉಳಿತಾಯ ಮಾಡುವುದು ಸಾಧ್ಯ. ಆತ ಇದಕ್ಕಾಗಿ ಒಂದು ಜೀವವಿಮಾ ಪಾಲಿಸಿಯನ್ನು ತೆಗೆದು ವರ್ಷವರ್ಷವೂ ತನ್ನ ವರಮಾನದಲ್ಲಿ ಒಂದು ಭಾಗವನ್ನು ಇದಕ್ಕಾಗಿ ಕಟ್ಟಬಹುದು. ಆದರೆ ತೆರಿಗೆಯ ದರದ ಏರಿಕೆ ಬಲು ಕಡಿದಾಗಿದ್ದರೆ ಸಣ್ಣಪ್ರಮಾಣದ ಸ್ವತ್ತುಮಾಲೀಕರು ಮಾತ್ರ ಈ ವಿಧಾನ ಅನುಸರಿಸುವುದು ಸಾಧ್ಯ.

ಈ ತೆರಿಗೆಯ ಪರವಾಗಿಯೂ ವಿರೋಧವಾಗಿಯೂ ಅನೇಕ ವಾದಗಳುಂಟು. ಒಬ್ಬ ಪ್ರಜೆಗೆ ಉತ್ತರಾಧಿಕಾರದ ಹಕ್ಕು ದೊರಕುವುದು ಸರ್ಕಾರ ತನ್ನ ಸಾರ್ವಭೌಮಶಕ್ತಿಯನ್ನು ಚಲಾಯಿಸಿ ಮಾಡಿದ ನ್ಯಾಯವ್ಯವಸ್ಥೆಯಿಂದ. ಆದ್ದರಿಂದ ಉತ್ತರಾಧಿಕಾರಿ ಯಾರೇ ಆಗಿರಲಿ, ಆತನ ಒಂದು ಪಾಲು ಸರ್ಕಾರಕ್ಕೆ ಸಲ್ಲುವುದು ಯೋಗ್ಯವೆಂದು ಕೆಲವರು ವಾದಿಸುತ್ತಾರೆ. ತನ್ನ ಪ್ರಜೆಗಳೆಲ್ಲರ ಆರ್ಥಿಕ ಜೀವನದಲ್ಲಿ ಸರ್ಕಾರದ ಮೌನಪಾಲುಗಾರಿಕೆ ಯುಂಟು. ತನ್ನ ಪ್ರಜೆಗಳ ಗಳಿಕೆ–ನಷ್ಟಗಳಲ್ಲಿ ಸರ್ಕಾರವೂ ಪರೋಕ್ಷವಾಗಿ ಬಾಧ್ಯ. ಆದ್ದರಿಂದ ಅವರ ಸ್ವತ್ತಿನಲ್ಲಿ ಸರ್ಕಾರಕ್ಕೂ ಒಂದು ಭಾಗ ದೊರಕಬೇಕಾದದ್ದು ಅನಿವಾರ್ಯವೆಂಬುದು ಇನ್ನೂ ಕೆಲವರು ಮಂಡಿಸುವ ವಾದ. ಪ್ರತಿಯೊಬ್ಬ ಪ್ರಜೆಯೂ ತನ್ನ ಜೀವಿತಕಾಲದಲ್ಲಿ ತನ್ನ ಮೇಲೆ ಹೇರಿದ ಅನೇಕ ತೆರಿಗೆಗಳಿಂದ ನುಣುಚಿಕೊಂಡಿರುತ್ತಾನಾದ್ದರಿಂದ ಆತ ಸತ್ತಮೇಲೆ ಅವನ ಆಸ್ತಿಯಿಂದ ಸ್ವಲ್ಪವನ್ನು ಸರ್ಕಾರ ಕಸಿದುಕೊಳ್ಳಬೇಕೆಂದು ವಾದಿಸುವವರೂ ಇಲ್ಲದಿಲ್ಲ. ಆಧುನಿಕ ಅರ್ಥಶಾಸ್ತ್ರಜ್ಞರು ಇದರ ಪರವಾಗಿ ಮೂರು ಕಾರಣಗಳನ್ನು ಮುಂದಿಟ್ಟಿದ್ದಾರೆ: ನೈತಿಕ ದೃಷ್ಟಿಯಿಂದ ಈ ತೆರಿಗೆ ಅನಿವಾರ್ಯ. ಸಮಾಜವೊಂದರಲ್ಲಿ ಆರ್ಥಿಕ ಅಸಮಾನತೆ ತಾಂಡವವಾಡುವುದರಿಂದ ಜೀವನದಲ್ಲಿ ಅನೇಕ ಅನರ್ಥಗಳಿಗೆ ಎಡೆಯಾಗುತ್ತದೆ; ಈ ತೆರಿಗೆಯನ್ನು ವಿಧಿಸುವುದರಿಂದ ಕ್ರಮೇಣ ಆರ್ಥಿಕ ಸಮಾನತೆ ಸಾಧಿಸಬಹುದು ಎಂಬುದು ಒಂದು ಅಭಿಪ್ರಾಯ. ಉತ್ತರಾಧಿಕಾರಿಯ ಧಾರಣಸಾಮರ್ಥ್ಯ ಈ ಆಕಸ್ಮಿಕ ಧನಾಗಮನದಿಂದ ಹೆಚ್ಚುವುದರಿಂದ, ಆತ ಉಳಿದವರಿಗಿಂತ ಸ್ವಲ್ಪ ಹೆಚ್ಚಿನ ತೆರಿಗೆ ಕೊಡಬೇಕೆಂಬುದು ಪ್ರೊಫೆಸರ್ ಸೆಲಿಗ್ಮನ್ನನ ವಾದ. ಆರ್ಥಿಕ ಸಮಾನತೆಯಿಲ್ಲದ ಸಮಾಜದಲ್ಲಿ, ಬಡವರ ಆದಾಯ ಬಲು ಕಡಿಮೆ. ಆದ್ದರಿಂದ ಅನುಭೋಗವೂ ಕಡಿಮೆ. ರಾಷ್ಟ್ರೀಯ ಉತ್ಪಾದನೆ ಮತ್ತು ಉದ್ಯೋಗದ ಮಟ್ಟಗಳು ಏರುಪೇರುಗಳಿಗೆ ಒಳಗಾಗುವುದರಿಂದ ಮುಂದೆ ಇಡೀ ರಾಷ್ಟ್ರಾದಾಯವೇ ಇಳಿಯಬಹುದು. ನಿರುದ್ಯೋಗ ಪರಮಾವಧಿ ಮಟ್ಟ ಮುಟ್ಟಬಹುದು. ಆದ್ದರಿಂದ ಆರ್ಥಿಕ ಅಸಮತೆಯನ್ನು ನಿವಾರಿಸಲು ಇಂಥ ತೆರಿಗೆಗಳು ಅವಶ್ಯ. ಇದು ಕೇನ್ಸ್ ಪಂಥದ ಅಭಿಪ್ರಾಯ. ಮೂರು ತಲೆಮಾರುಗಳಲ್ಲಿ ಒಂದು ವಂಶದ ಇಡೀ ಸ್ವತ್ತು ಸರ್ಕಾರದ ವಶವಾಗುವ ರೀತಿಯಲ್ಲಿ ಈ ತೆರಿಗೆಯನ್ನು ವಿಧಿಸಬೇಕೆಂದು ಇಟ್ಯಾಲಿಯನ್ ಅರ್ಥಶಾಸ್ತ್ರಜ್ಞ ಡಾಕ್ಟರ್ ರಿಗ್ನಾನೋನ ಮತ. ಆರ್ಥಿಕ ಅಸಮಾನತೆಯ ಸಮಸ್ಯೆ ಈ ತೆರಿಗೆಯನ್ನು ಎಷ್ಟು ಪ್ರಭಾವಗೊಳಿಸಿದೆಯೆಂಬುದಕ್ಕೆ ಈ ಎಲ್ಲ ಅಭಿಪ್ರಾಯಗಳೂ ಸಾಕ್ಷಿ.

ಈ ತೆರಿಗೆ ಆಪಾತ (ಇನ್ಸಿಡೆನ್ಸ್) ಯಾರ ಮೇಲೆ ಸಂಭವಿಸುತ್ತದೆಂಬ ಪ್ರಶ್ನೆಗೆ ಸರ್ವಸಮ್ಮತ ವಾದ ಉತ್ತರ ಇನ್ನೂ ದೊರಕಿಲ್ಲ. ಇದೊಂದು ಪ್ರತ್ಯಕ್ಷ ತೆರಿಗೆಯಾದ್ದರಿಂದ ಇದರ ಆಘಾತ (ಇಂಪ್ಯಾಕ್ಟ್) ಆಪಾತಗಳೆರಡೂ ಉತ್ತರಾಧಿಕಾರಿಯ ಮೇಲೆ ಬೀಳುತ್ತವೆ. ಈ ತೆರಿಗೆಯ ಹೊರೆ ಸತ್ತವನ ಮೇಲೆ ಎಂಬ ವಾದಕ್ಕೆ ಸತ್ತವ ತೆರಿಗೆ ಕೊಡಲು ಸಾಧ್ಯವಿಲ್ಲವೆಂಬುದಾಗಿ ಉತ್ತರಕೊಡಬಹುದು. ಆದರೆ ಹಿಂದೆ ಹೇಳಿದ ಹಾಗೆ ಸ್ವತ್ತಿನ ಮಾಲೀಕ ತನ್ನ ಜೀವಿತಕಾಲದಲ್ಲೇ ಈ ತೆರಿಗೆಗಾಗಿ ಹಣ ಉಳಿತಾಯ ಮಾಡಿದ್ದರೆ, ತನ್ನ ಉತ್ತರಾಧಿಕಾರಿಗಳ ಮೇಲೆ ತೆರಿಗೆಯ ಭಾರಬೀಳದಿರಲೆಂಬ ಉದ್ದೇಶದಿಂದ ಹೆಚ್ಚಿನ ಸ್ವತ್ತು ಗಳಿಸಿ ಅದನ್ನು ಅವರಿಗಾಗಿ ಬಿಟ್ಟರೆ, ಆಗ ಈ ತೆರಿಗೆಯ ಇಡೀ ಭಾರವನ್ನು ಮೃತನೇ ಹೊತ್ತಂತೆ ಆಗುತ್ತದೆ. ಈ ಮುಂಜಾಗ್ರತೆ ಕ್ರಮಗಳು ಯಾವುವೂ ಇಲ್ಲದ ಪಕ್ಷದಲ್ಲಿ ತೆರಿಗೆಯ ಆಪಾತವಾಗುವುದು ಉತ್ತರಾಧಿಕಾರಿಯ ಮೇಲೆ. ತೆರಿಗೆಯ ಆಪಾತ ಉತ್ತರಾಧಿಕಾರಿಯ ಮೇಲೂ ಅಲ್ಲ, ತೀರಿಕೊಂಡವನ ಮೇಲೂ ಅಲ್ಲ; ಆಸ್ತಿಯ ಮೇಲೆ–ಎಂಬ ವಾದವೂ ಇಲ್ಲದಿಲ್ಲ.

ಈ ತೆರಿಗೆಯ ಆರ್ಥಿಕ ಪರಿಣಾಮಗಳ ಕೂಲಂಕಷ ವಿವೇಚನೆ ಧಾರಾಳವಾಗಿ ನಡೆದಿದೆ. ಒಂದು ದೃಷ್ಟಿಯಲ್ಲಿ ಇದು ಬಂಡವಾಳದ ಮೇಲಣ ತೆರಿಗೆಯಾದ್ದರಿಂದ ಆರ್ಥಿಕಾಭಿವೃದ್ಧಿಗೆ ಅತ್ಯಾವಶ್ಯಕವಾದ ಬಂಡವಾಳದ ಬೆಳವಣಿಗೆಗೆ ಇದರಿಂದ ಅಡ್ಡಿಯುಂಟಾಗು ವುದೆಂಬ ವಾದವುಂಟು. ತೆರಿಗೆಯ ದರ ಬಲು ಕಡಿದಾಗಿದ್ದು, ವಿನಾಯಿತಿಯ ಮಟ್ಟ ಬಹು ಕಡಿಮೆಯಿದ್ದಲ್ಲಿ ಈ ಮಾತು ಸತ್ಯ. ಆದರೆ ತೆರಿಗೆಯಿಂದ ಬಂದ ಆದಾಯವನ್ನು ಸರ್ಕಾರ ಸಾರ್ವಜನಿಕ ಕ್ಷೇತ್ರದಲ್ಲಿ ನಿಯೋಜಿಸಿದರೆ ಈ ಅಪಾಯದ ನಿವಾರಣೆಯಾಗಬಹುದು. ಈ ತೆರಿಗೆಯಿಂದ ಸ್ಥಿರಬಂಡವಾಳ ನಷ್ಟವಾಗುತ್ತದೆಂದು ಕೆಲವರ ಮತ. ಆದರೆ ತೆರಿಗೆ ಕೊಡಬೇಕಾದ ಉತ್ತರಾಧಿಕಾರಿ ತನ್ನ ಸ್ಥಿರಬಂಡವಾಳವನ್ನು ಮಾರಬೇಕಾದ ಪ್ರಸಂಗ ಬಂದರೂ ಕೊಂಡವನ ಕೈಯಲ್ಲಿ ಅದು ಹಾಗೇ ಉಳಿಯುವುದರಿಂದ, ಈ ನಷ್ಟ ಕೇವಲ ವೈಯಕ್ತಿಕವೇ ಹೊರತು ರಾಷ್ಟ್ರೀಯ ಮಟ್ಟದ್ದಲ್ಲವೆನ್ನಬಹುದು. (ಸಿ.ಬಿ.ಸಿ.)

**ಉತ್ತರಾಭಾದ್ರಪದ:** ನಕ್ಷತ್ರಮಂಡಲದಲ್ಲಿ ಮಿನುಗುತ್ತಿರುವ ತಾರೆಗಳಲ್ಲಿ ಮುಖ್ಯವಾದು ವೆಂದು ಜ್ಯೋತಿರ್ವಿದರಿಂದ ಪರಿಗಣಿತವಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಇಪ್ಪತ್ತಾರನೆಯದು. ಇದರಲ್ಲಿ ಎರಡು ನಕ್ಷತ್ರಗಳಿವೆ. ಇದರ ಧ್ರುವಕ 337 ಅಂಶಗಳು. ಶರ, ಉತ್ತರ 26 ಅಂಶಗಳು. ಖಗೋಳದಲ್ಲಿ ಇದರ ಸ್ಥಾನವನ್ನು ಈ ಎರಡು ಅಂಶಗಳಿಂದ ಗುರುತಿಸಬಹುದು. ಇದು ಮೀನ ರಾಶಿಗೆ ಸೇರಿದೆ.

ಪೌರಾಣಿಕವಾಗಿ, ದಕ್ಷಬ್ರಹ್ಮನ ಇಪ್ಪತ್ತೇಳು ಪುತ್ರಿಯರಲ್ಲಿ ಒಬ್ಬಾಕೆ. ಚಂದ್ರನ ಪತ್ನಿ. (ಎಸ್.ಎನ್.ಕೆ.)

ಖಗೋಳಶಾಸ್ತ್ರದಲ್ಲಿ ಉತ್ತರಾಭಾದ್ರದ ಶಾಸ್ತ್ರನಾಮ $(\alpha)$ ಆ್ಯಂಡ್ರೋಮಿಡ. ಪರ್ಯಾಯ ನಾಮ ಆಲ್ಫೆರಾಟ್ಸ್ (**ನೋಡಿ–ಆ್ಯಂಡ್ರೊಮಿಡ**). ಇದು ಆ್ಯಂಡ್ರೋಮಿಡ ನಕ್ಷತ್ರ ಪುಂಜದ ಪ್ರಥಮ ನಕ್ಷತ್ರ. ನೀಲಿ ಬಣ್ಣದ್ದು. *

**ಉತ್ತರಾಯಣ:** ಮಕರ ಮೊದಲಾಗಿ ಆರು ರಾಶಿಗಳಲ್ಲಿ ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಸಂಚರಿಸುವ ಕಾಲ. ಪ್ರಾಚೀನ ಸಂಪ್ರದಾಯದ ಪ್ರಕಾರ ಇದು ಸಾಮಾನ್ಯವಾಗಿ ಜನವರಿ 13 ಅಥವಾ 14ನೆಯ ದಿವಸ ತೊಡಗಿ ಜುಲೈ 16 ಅಥವಾ 17ನೆಯ ದಿವಸ ಕೊನೆಗೊಳ್ಳುತ್ತಿತ್ತು. ಚಾಂದ್ರಮಾನದಲ್ಲಾದರೋ ಉತ್ತರಾಯಣಾರಂಭ ಪುಷ್ಯಮಾಸದಲ್ಲಿ ಮತ್ತು ಅಂತ್ಯ ಆಷಾಢಮಾಸದಲ್ಲಿ. ಶಿಶಿರ, ವಸಂತ, ಗ್ರೀಷ್ಮ ಋತುಗಳು ಉತ್ತರಾಯಣ ಕಾಲದಲ್ಲಿ ಬರುತ್ತವೆ. ಇವು ನಿರಯನ ಉತ್ತರಾಯಣದ ಪ್ರಾರಂಭ ಮತ್ತು ಮುಗಿಯುವ ಕಾಲಗಳು. ಅಯನಾಂಶದ ಕಾರಣದಿಂದ ಇದು ಕಾಲಕಾಲಕ್ಕೆ ಬದಲಾಗುತ್ತದೆ. ಆದರೂ ಸಾಯನ ಉತ್ತರಾಯಣಕಾಲ ಕರ್ಮಾಚರಣೆಗೆ ಗ್ರಾಹ್ಯವಾಗಿರುವುದಿಲ್ಲ. ಒಮ್ಮೆ ಉತ್ತರಾಯಣ ಪ್ರಾರಂಭಕಾಲ ಮಾಘಶುಕ್ಲ ಸಪ್ತಮೀ ದಿವಸ ಇದ್ದ ಕಾರಣದಿಂದ ಅಂದು ಅದರ ದ್ಯೋತಕವಾಗಿ ಸೂರ್ಯಮಂಡಲದಿಂದ ಕೂಡಿದ ರಥದಲ್ಲಿ ಭಗವಂತನನ್ನು ಸೂರ್ಯೋದಯ ಕಾಲಕ್ಕೆ ಸರಿಯಾಗಿ ರಥಾರೋಹಣ ಮಾಡಿಸುವುದು ಇಂದಿಗೂ ಆಚರಣೆಯಲ್ಲಿದೆ. ಉತ್ತರಾಯಣ ಆರಂಭ ಕಾಲದಲ್ಲಿ ವೈದಿಕರು ಸ್ನಾನ, ತರ್ಪಣ ಮೊದಲಾದುವನ್ನು ಮಾಡುವುದಿದೆ. ಸೂರ್ಯ ಅಸ್ತನಾಗುವುದಕ್ಕೆ ಸ್ವಲ್ಪಕಾಲ ಮೊದಲು ಮಕರರಾಶಿಯನ್ನು ಪ್ರವೇಶಿಸಿದರೆ ಆ ದಿವಸದಲ್ಲೂ ಸಾಯಂಕಾಲಾನಂತರ ಪ್ರವೇಶಿಸಿದರೆ ಮಾರನೆಯ ದಿವಸದ ಹಗಲಿನಲ್ಲೂ ಮಕರ ಸಂಕ್ರಮಣ ಪುಣ್ಯಕಾಲವಾಗುತ್ತದೆ. ಇದರ ಅವಧಿ ಪ್ರವೇಶಕಾಲದಿಂದ ಮುಂದೆ ಎಂಟು ಗಂಟೆಗಳವರೆಗೆ. ಕೆಲವರು ಹನ್ನೆರಡು ಗಂಟೆ ಕಾಲದವರೆಗೂ ಇರುತ್ತದೆಂದೂ ಅಭಿಪ್ರಾಯಪಡುತ್ತಾರೆ. ಇದನ್ನು ಮಕರಸಂಕ್ರಾಂತಿ ಎಂದೂ ಕರೆಯುತ್ತಾರೆ. ಈ ದಿವಸ ತಿಲದಾನ ಮಾಡುವುದು ವಿಶೇಷ. ಅದಕ್ಕಾಗಿಯೇ ಇಂದಿಗೂ ಮಕರಸಂಕ್ರಾಂತಿಯಂದು ಎಳ್ಳಿಗೆ ಬೆಲ್ಲ ಮೊದಲಾದವನ್ನು ಕೂಡಿಸಿ ಎಲ್ಲರಿಗೂ ತಿನ್ನಲು ಕೊಡುತ್ತಾರೆ. ಇಷ್ಟೇ ಅಲ್ಲ. ಸಂಕ್ರಾಂತಿ ಪೀಡಾಪರಿಹಾರಕ್ಕಾಗಿ ಸಂಜೆ ಮಕ್ಕಳನ್ನು ಹಸೆಮಣೆಯಮೇಲೆ ಕುಳ್ಳಿರಿಸಿ ಎಲಚಿಹಣ್ಣಿನೊಡನೆ ಎಳ್ಳನ್ನು ತಲೆಯಮೇಲೆ ಸುರಿಯುತ್ತಾರೆ. ಕೆಲವು ಪ್ರದೇಶಗಳಲ್ಲಿ, ಹಸುಗಳನ್ನು ತೊಳೆದು ಬಣ್ಣ ಮೊದಲಾದುವುಗಳಿಂದ ಶೃಂಗರಿಸಿ ಕಿಚ್ಚು ಹಾಯಿಸುತ್ತಾರೆ. ಸಂಕ್ರಾಂತಿ ಎಂಬುದು ಒಂದು ದೇವತೆ. ಅದಕ್ಕೆ ಎಂಟು ಬಾಹುಗಳೂ ನಾಲ್ಕು ತಲೆಗಳೂ ಇವೆಯೆಂದು ಪ್ರತೀತಿ. (ಕೆಲವರು ಮೂರು ತಲೆಗಳೆಂದೂ ಮತ್ತೆ ಕೆಲವರು ಎರಡು ತಲೆಗಳೆಂದೂ ಹೇಳುತ್ತಾರೆ.) ಈ ದೇವತೆ ಬೃಹದಾಕಾರದಿಂದ ಕೂಡಿ ನೋಡಲು ಭಯಂಕರ ಳಾಗಿರುತ್ತಾಳೆ. ಇವಳು ಪ್ರಪಂಚದ ಯಾವ ಭಾಗದಲ್ಲಿ ಸಂಕ್ರಾಂತಿಯಂದು ಗೋಚರಿಸುತ್ತಾಳೋ ಆ ಭಾಗಕ್ಕೆ ತೊಂದರೆಯೆಂದೂ ಇವಳ ವಾಹನ ಇವಳು ಧರಿಸಿರುವ ಪದಾರ್ಥಗಳಿಂದ ಎಲ್ಲಕ್ಕೂ ಹಾನಿಯುಂಟಾಗುತ್ತದೆಂದೂ ಶಾಸ್ತ್ರ ಹೇಳುತ್ತದೆ. ಈ ಫಲಗಳನ್ನು ಯುಗಾದಿಯ ದಿನದಂದು ಕೇಳಿ ತಿಳಿದುಕೊಳ್ಳುವ ರೂಢಿ ಇದೆ. ಉತ್ತರಾಯಣದ ಆರು ತಿಂಗಳ ಅವಧಿಯನ್ನು ದೇವತೆಗಳಿಗೆ ಒಂದು ಹಗಲಿಗೆ ಸಮಾನವೆಂದು ಜ್ಯೋತಿಶ್ಶಾಸ್ತ್ರದಲ್ಲಿ ಪರಿಗಣಿಸಲಾಗಿದೆ. ಮದುವೆ, ಮುಂಜಿ, ದೇವಪ್ರತಿಷ್ಠೆ ಮೊದಲಾದ ಕಾರ್ಯಗಳನ್ನು ವಿಶೇಷವಾಗಿ ಮಾಡಲು ಈ ಅವಧಿ ಪ್ರಶಸ್ತ ಈ ಕಾಲವನ್ನು ಅಗ್ನಿ, ಜ್ಯೋತಿಸ್ಸು, ಅಹಸ್ಸು, ಶುಕ್ಲ ಎಂದೂ ಇದರಲ್ಲಿ ಮೃತರಾದ ಯೋಗಿಗಳಿಗೆ ಪುನರಾವೃತ್ತಿ ಇಲ್ಲವೆಂದೂ ಶ್ರೀ ಭಗವದ್ಗೀತೆ ಸಾರುತ್ತಿದೆ. ಇದಕ್ಕಾಗಿಯೇ ಭೀಷ್ಮ ಯುದ್ಧದಲ್ಲಿ ಬಾಣಗಳಿಗೆ ತುತ್ತಾಗಿಬಿದ್ದರೂ ಇಚ್ಛಾಮರಣಿಯಾದ ಕಾರಣ ಪ್ರಾಣೋತ್ಕ್ರಮಣಕ್ಕಾಗಿ ಉತ್ತರಾಯಣವನ್ನೇ ನಿರೀಕ್ಷಿಸುತ್ತ ಅರ್ಜುನಕೃತ ಶರಶಯ್ಯೆಯಲ್ಲಿ ಮಲಗಿದ್ದನೆಂದು ಮಹಾಭಾರತದಲ್ಲಿದೆ. (ಎಸ್.ಎನ್.ಕೆ.)

***ಖಗೋಳಶಾಸ್ತ್ರದಲ್ಲಿ:*** ನಮಗೆ ಭಾಸವಾಗುವಂತೆ ಸೂರ್ಯ ನಮ್ಮ ಸುತ್ತಲೂ ಕ್ರಾಂತಿವೃತ್ತದ (**ನೋಡಿ**) ಮೇಲೆ ಒಂದು ಪರಿಭ್ರಮಣೆಯನ್ನು 365.2422 ದಿವಸಗಳಲ್ಲಿ (=1ವರ್ಷ) ಮುಗಿಸುತ್ತದೆ. ಈ ವಾರ್ಷಿಕ ಚಲನೆಯಲ್ಲಿ ಎರಡು ಸ್ಪಷ್ಟ ವಿಧಗಳಿವೆ: ಡಿಸೆಂಬರ್ 22ರಿಂದ ಜೂನ್ 21ರ ವರೆಗೆ ಉತ್ತರಾಭಿಮುಖ ಚಲನೆ, ಇದು ಉತ್ತರಾಯಣ; ಜೂನ್ 21ರಿಂದ ಡಿಸೆಂಬರ್ 22ರ ವರೆಗೆ ದಕ್ಷಿಣಾಭಿಮುಖ ಚಲನೆ, ಇದು ದಕ್ಷಿಣಾಯನ. ಡಿ. 22 ಮತ್ತು ಜೂ. 21 ಚಲನದಿಕ್ಕು ಪಲ್ಲಟವಾಗುವ ದಿವಸಗಳು. ಇವುಗಳಿಗೆ ಕ್ರಮವಾಗಿ ಉತ್ತರಾಯಣಾರಂಭ

ದಿವಸ ಮತ್ತು ದಕ್ಷಿಣಾಯನಾರಂಭ ದಿವಸ ಎಂಬ ಹೆಸರುಗಳಿವೆ. ಕ್ರಾಂತಿವೃತ್ತದ ಮೇಲೆ ಸೂರ್ಯನ ಆ ದಿವಸಗಳ ಸ್ಥಾನಗಳನ್ನು ಗುರುತಿಸುವ ಬಿಂದುಗಳ ಹೆಸರು ಅಯನ ಸಂಕ್ರಾಂತಿಗಳು (**ನೋಡಿ**). ಇಂದಿಗೂ ವಾಡಿಕೆಯಲ್ಲಿ ಜನವರಿ 14ನ್ನು ಉತ್ತರಾಯಣ ಪುಣ್ಯಕಾಲ ಎಂದು ಆಚರಿಸುವುದಿದೆ. ಆದರೆ ವಾಸ್ತವಿಕವಾಗಿ ಇದು ಡಿಸೆಂಬರ್ 22ರಂದೇ ಸಂಭವಿಸಿರುವುದು. ಆಚರಣೆಗೂ ತತ್ಸಂಬಂಧ ಆಕಾಶಘಟನೆಗೂ ಇರುವ ಈ ದೀರ್ಘವ್ಯತ್ಯಾಸದ ಕಾರಣ ಅಯನಾಂಶ (**ನೋಡಿ**). ಒಂದು ಕಾಲದಲ್ಲಿ ಜನವರಿ 14ರಂದು ಸೂರ್ಯ (ಕ್ರಾಂತಿವೃತ್ತದ ಮೇಲೆ) ಇದ್ದ ಬಿಂದು ಒಂದು ಸಂಕ್ರಾಂತಿಬಿಂದುವೂ ಆಗಿತ್ತು. ಅಂದು ಆಚರಣೆ ಆಕಾಶಘಟನೆಯೊಂದಿಗೆ ಏಕಕಾಲಗೊಂಡಿತ್ತು. ಆದರೆ ವಿಷುವದ್ಬಿಂದುಗಳು ಪ್ರದಕ್ಷಿಣ ದಿಶೆಯಲ್ಲಿ (ಇದು ಸೂರ್ಯನ ಚಲನೆಯ ದಿಕ್ಕಿನ ವಿರುದ್ಧವಾಗುವುದು) ಕ್ರಾಂತಿವೃತ್ತದ ಮೇಲೆ ಮಂದಗತಿಯಿಂದ ಸರಿಯುವುದರಿಂದ ಅದೇ ದಿಶೆಯಲ್ಲಿ ಮತ್ತು ಗತಿಯಲ್ಲಿ ಸಂಕ್ರಾಂತಿ ಬಿಂದುಗಳೂ ಸರಿಯುತ್ತವೆ. ಹೀಗಾಗಿ ಜನವರಿ 14ರಂದು ಸಂಭವಿಸುತ್ತಿದ್ದ ಉತ್ತರಾಯಣ ಘಟನೆ ಇಂದು ಡಿಸೆಂಬರ್ 22ರಂದೇ ಸಂಭವಿಸುತ್ತದೆ. ಎಂದರೆ ಇಂದಿನ ಆಚರಣೆ ವಾಸ್ತವಿಕತೆಯಿಂದ ದೂರವಾಗಿದೆ ಎಂದಾಯಿತು. ಸೂರ್ಯನ ಉತ್ತರ-ದಕ್ಷಿಣ ಆಂದೋಲನ ಚಲನೆಯನ್ನು ಒಂದು ಸುಲಭ ಪ್ರಯೋಗದಿಂದ ತಿಳಿಯಲು ಸಾಧ್ಯ. ಪ್ರತಿದಿವಸ ಸೂರ್ಯೋದಯ ಸೂರ್ಯಾಸ್ತಮಾನ ಬಿಂದುಗಳನ್ನು ಒಂದು ನಿಶ್ಚಿತ ಸ್ಥಳದಲ್ಲಿ ನಿಂತು ಗುರುತಿಸಬೇಕು. ಡಿಸೆಂಬರ್ 22ರಂದು ಈ ವೀಕ್ಷಣೆಯನ್ನು ಪ್ರಾರಂಭಿಸುತ್ತೇವೆ ಎಂದು ಭಾವಿಸೋಣ. ಉದಯಾಸ್ತಬಿಂದುಗಳು ಜೂನ್ 21ರವರೆಗೆ ಉತ್ತರದೆಡೆಗೆ ಸರಿಯುವುದನ್ನೂ ಮುಂದೆ ಡಿಸೆಂಬರ್ 22ರ ವರೆಗೆ ದಕ್ಷಿಣದೆಡೆಗೆ ಸರಿಯುವುದನ್ನೂ ಕಾಣುತ್ತೇವೆ. ಡಿ. 22ರ ಬಿಂದುಗಳಿಗಿಂತ ದಕ್ಷಿಣಕ್ಕೂ ಜೂ. 21ರ ಬಿಂದುಗಳಿಗಿಂತ ಉತ್ತರಕ್ಕೂ ಸೂರ್ಯ ಎಂದೂ ಹೋಗುವುದಿಲ್ಲ. *

**ಉತ್ತರಾಷಾಢ:** ಜ್ಯೋತಿರ್ವಿದರಿಂದ ಪರಿಗಣಿತವಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಎಂಟು ತಾರೆಗಳಿಂದ ಕೂಡಿ, ಆನೆತಲೆ ಆಕೃತಿಯಂತೆ ಕಾಣುವ ತಾರಾಪುಂಜ. ಆಶ್ವಿನೀ ನಕ್ಷತ್ರ ಮೊದಲು ಮಾಡಿ ಲೆಕ್ಕ ಮಾಡುವಾಗ ಇದು 21ನೆಯ ನಕ್ಷತ್ರವಾಗುತ್ತದೆ. ಇದರ ಧ್ರುವಕ 260 ಅಂಶಗಳು. ಶರ ದಕ್ಷಿಣ 5 ಅಂಶಗಳು. ಈ ಎರಡರ ಸಹಾಯದಿಂದ ಖಗೋಳದಲ್ಲಿ ಇದನ್ನು ಗುರುತಿಸಬಹುದು.

ಪೌರಾಣಿಕವಾಗಿ, ದಕ್ಷಬ್ರಹ್ಮನ ಇಪ್ಪತ್ತೇಳು ಪುತ್ರಿಯರಲ್ಲಿ ಒಬ್ಬಾಕೆ, ಚಂದ್ರನ ಪತ್ನಿ. (ಎಸ್.ಎನ್.ಕೆ.)

ಖಗೋಳಶಾಸ್ತ್ರದಲ್ಲಿ ಈ ನಕ್ಷತ್ರದ ಶಾಸ್ತ್ರೀಯ ನಾಮ ಸ್ಯಾಜಿಟೇರಿಯಸ್. ನುಂಕಿ ಎಂದೂ ಹೆಸರಿದೆ. ಧನುಸ್‌ರಾಶಿಯ 11ನೆಯ ನಕ್ಷತ್ರ. ಇದರ ಕಾಂತಿವರ್ಗ 3.0. *

**ಉತ್ತಾನಪಾದ:** ವಿಷ್ಣುಪುರಾಣದಲ್ಲಿ ಹೇಳಿರುವಂತೆ ಸ್ವಾಯಂಭುವ ಮನುವಿನ ಇಬ್ಬರು ಪುತ್ರರಲ್ಲಿ ಕಿರಿಯವ; ಪ್ರಿಯವ್ರತ ಮೊದಲನೆಯವ. ಸುನೀತಿ, ಸುರುಚಿ ಎಂಬ ಇಬ್ಬರು ಪತ್ನಿಯರು. ಹೆಚ್ಚು ಪ್ರೀತಿಪಾತ್ರಳಾದ ಕಿರಿಯ ಪತ್ನಿ ಸುರುಚಿಯಲ್ಲಿ ಉತ್ತಮನೆಂಬ ಪುತ್ರನನ್ನು ಸುನೀತಿಯಲ್ಲಿ ಧ್ರುವ ಎಂಬುವನನ್ನೂ, ಪಡೆಯುತ್ತಾನೆ. ಇವನ ಹಿರಿಯ ಪತ್ನಿಯೂ ಬಹು ಪ್ರಸಿದ್ಧನಾದ ಧ್ರುವನ ಮಾತೆಯೂ ಆದ ಸುನೀತಿಗೆ ಸೂನೃತಾ ಎಂಬ ನಾಮಾಂತರವಿದೆ. ಸುರುಚಿಯ ಈರ್ಷ್ಯೆಗೆ ಪಾತ್ರನಾದ ಧ್ರುವ ಕಾಡುಪಾಲಾಗಿ, ತಪಸ್ಸನ್ನಾಚರಿಸಿ ಧ್ರುವ ಪದವಿಯನ್ನು ಪಡೆದ. (**ನೋಡಿ– ಧ್ರುವ–3**) (ಬಿ.ಕೆ.ಎಸ್.)

**ಉತ್ತುತ್ತೆ:** ನೋಡಿ– ಖರ್ಜೂರದ–ಮರ.

**ಉತ್ಥಾನ ದ್ವಾದಶೀ:** ಕಾರ್ತಿಕಮಾಸದ ಶುಕ್ಲಪಕ್ಷದಲ್ಲಿ ಬರುವಂಥದು. ಆಷಾಢಮಾಸ ಶುಕ್ಲ ಪಕ್ಷದ ಏಕಾದಶಿಯಲ್ಲಿ ಕ್ಷೀರಸಾಗರದಲ್ಲಿ ಶೇಷಶಾಯಿಯಾದ ಭಗವಂತನನ್ನು ಈ ದಿನ ರಾತ್ರಿಯಲ್ಲಿ ಏಳಿಸುವುದರಿಂದ ಈ ದ್ವಾದಶಿಗೆ ಭಗವಂತೋತ್ಥಾನ ರೂಪವಾದ ಉತ್ಥಾನದ್ವಾದಶೀ ಎಂದು ಹೆಸರು ಬಂದಿದೆ. ಆಷಾಢ ಶುಕ್ಲಪಕ್ಷದಲ್ಲಿ ಪ್ರಾರಂಭಿಸಿದ ಚಾತುರ್ಮಾಸ್ಯ ವ್ರತವನ್ನು ಈ ದಿವಸ ಮುಕ್ತಾಯಗೊಳಿಸಬೇಕು. ಈ ದ್ವಾದಶಿಯಲ್ಲಿ ಕ್ಷೀರಾಬ್ಧಿಶಯನ ವ್ರತವನ್ನು ಆಚರಿಸುತ್ತಾರೆ. ತುಲಸೀ ಸಹಿತ ಧಾತ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥವಾಗಿ ಈ ವ್ರತವನ್ನು ಮಾಡುವುದು ಇಂದಿಗೂ ರೂಢಿಯಲ್ಲಿದೆ. ಇದರ ದ್ಯೋತಕವಾಗಿ ಉತ್ಥಾನ ದ್ವಾದಶೀ ದಿವಸ ಬೆಳಗ್ಗೆ ಬೃಂದಾವನದಲ್ಲಿ ಧಾತ್ರಿಯನ್ನು (ಕಾಯಿಸಹಿತವಾದ ನೆಲ್ಲಿಗಿಡವನ್ನು) ನೆಟ್ಟು ಅಲ್ಲಿ ಭಗವಂತನನ್ನು ಕೂರಿಸಿ ನೀರಾಜನಾದಿಗಳಿಂದ ಪೂಜಿಸುತ್ತಾರೆ. ರಾತ್ರಿಯಲ್ಲಿ ಬೃಂದಾವನವನ್ನು ಪುಷ್ಪಾದಿಗಳಿಂದಲಂಕರಿಸಿ ಭಗವಂತನನ್ನು ಆ ಬೃಂದಾವನ ದಲ್ಲಿಟ್ಟು ಉತ್ಸವಮಾಡುತ್ತಾರೆ. ಮನೆಗಳಲ್ಲಿ ಬೃಂದಾವನವನ್ನು ಪೂಜಿಸಿ ದೀಪಗಳಿಂದ ಅಲಂಕರಿಸಿ ಪೂಜಿಸುತ್ತಾರೆ. ರಾತ್ರಿ ಭಗವಂತನಿಗೆ ಕ್ಷೀರಾನ್ನನಿವೇದನ ಒಂದು ವಿಶೇಷ. ಹೊಸ ನೆಲ್ಲಿಕಾಯನ್ನು ಈ ದ್ವಾದಶಿಯಿಂದ ಉಪಯೋಗಿಸಲು ಪ್ರಾರಂಭಿಸುತ್ತಾರೆ. ಕ್ಷೀರಾಬ್ಧಿ ಯಲ್ಲಿ ಶಯನಿಸಿದ ಭಗವಂತ ಈ ದ್ವಾದಶಿಯಲ್ಲಿ ತುಲಸೀ ಆವಾಸವಾದ ಬೃಂದಾವನದಲ್ಲಿ ತುಲಸೀ ಲಕ್ಷ್ಮಿಯರೊಡನೆ ಏಳುವುದರ ಸಂಕೇತವಾಗಿ ಈ ಪೂಜೆ ಇಂದಿಗೂ ನಡೆಯುವ ರೂಢಿಯಿದೆ. ಈ ದಿವಸದಲ್ಲಿ ದೀಪೋತ್ಸವ ವಿಶೇಷ ಪುಣ್ಯಪ್ರದ. ಈ ದ್ವಾದಶಿಯಲ್ಲಿ ಧಾತ್ರೀ ತುಲಸೀ ಸಹಿತ ಲಕ್ಷ್ಮೀನಾರಾಯಣನನ್ನು ಪೂಜಿಸುವುದರಿಂದ ಸರ್ವವಿಧವಾದ ಪಾತಕಗಳೂ ನಶಿಸುತ್ತವೆ–ಎಂದು ವ್ರತಮಹಾತ್ಮ್ಯೆ ತಿಳಿಸುತ್ತದೆ. (ಎಸ್.ಎನ್.ಕೆ.)

**ಉತ್ಪಲಮಾಲಾ:** 1 ಸಂಸ್ಕೃತದ ಒಂದು ವರ್ಣವೃತ್ತ. ನಾಲ್ಕು ಪಾದಗಳಲ್ಲಿಯೂ ಒಂದು ಲಕ್ಷಣವಿರುವ ಸಮವೃತ್ತದ ಇಪ್ಪತ್ತಾರು ಬಗೆಗಳಲ್ಲೊಂದಾದ ಕೃತಿ ಎಂಬ ಗುಂಪಿಗೆ ಸೇರಿದೆ. ಇದರ ಒಂದೊಂದು ಪಾದದಲ್ಲಿ ಇಪ್ಪತ್ತು ವರ್ಣಗಳಿರುತ್ತವೆ. ಪಾದಾರಂಭದ ಗುರುವನ್ನು ಎರಡು ಲಘುಗಳಾಗಿ ಒಡೆದರೆ ಚಂಪಕಮಾಲಾವೃತ್ತವಾಗುತ್ತದೆ. ಉತ್ಪಲಮಾಲೆ ಯಪ್ಪುದು ಭರಂನಭಭಂ ರಲಗಂ ನೆಗೆಟ್ದಿರಲ್ ಎಂಬ ಸೂತ್ರದಂತೆ ಇದರಲ್ಲಿ ಕ್ರಮವಾಗಿ ಭ, ರ, ನ, ಭ, ಭ, ರ, ಗಣಗಳು ಬಂದು ಕೊನೆಯಲ್ಲಿ ಒಂದು ಲಘು ಒಂದು ಗುರು ಬರುತ್ತವೆ. (**ನೋಡಿ– ಖ್ಯಾತ–ಕರ್ಣಾಟಕಗಳು**).

2 ಉತ್ಪಲಕೃತ ಸಂಸ್ಕೃತ ನಿಘಂಟೊಂದರ ಹೆಸರು. (ಬಿ.ಕೆ.ಎಸ್.)

**ಉತ್ಪಾತ:** ಪ್ರಕೃತಿ ತನ್ನ ಸ್ವಭಾವಕ್ಕೆ ಭಿನ್ನವಾಗುವುದು. ಎಂದರೆ ಅಕಸ್ಮಾತ್ ಸಂಭವಿಸುವ ಪ್ರಕೃತಿವಿಕಾರ. ಇದು ಅಶುಭಸೂಚಕ ಚಿಹ್ನೆ. ದಿವ್ಯ, ಅಂತರಿಕ್ಷ, ಭೌಮ ಎಂದು ಉತ್ಪಾತ ಮೂರು ವಿಧ. ಹುಣ್ಣಿಮೆ ಅಮಾವಾಸ್ಯೆ ದಿನಗಳಲ್ಲಿ ಮಾತ್ರ ಸಂಭವಿಸುವ ಗ್ರಹಣಾದಿ ಪರ್ವದಿವಸಗಳನ್ನು ಬಿಟ್ಟು ಇತರ ದಿನಗಳಲ್ಲಿ ಉಂಟಾಗುವುದು–ಇವೇ ಮೊದಲಾದವು ಸಹಜ ಭಿನ್ನವಾದವು ದಿವ್ಯ ಉತ್ಪಾತಗಳು. ಉಲ್ಕಾಪಾತ (ಬೆಂಕಿಯಮಳೆ) ನಿರ್ಘಾತ (ಬಿರುಗಾಳಿಯ ಪರಸ್ಪರ ಹೊಡೆತ) ಇವೇ ಮೊದಲಾದ ವಿಕಾರಗಳು ಅಂತರಿಕ್ಷ ಉತ್ಪಾತಗಳು. ಭೂಕಂಪ ದಿಗ್ದಾಹ ಮೊದಲಾಗಿ ಭೂಮಿಯಲ್ಲಿ ಸಂಭವಿಸುವ ಪ್ರಕೃತಿವಿಕಾರಗಳು ಭೌಮ ಉತ್ಪಾತಗಳು. ಸೂರ್ಯ, ಚಂದ್ರಾದಿ ಗ್ರಹಗಳು ಮತ್ತು ನಕ್ಷತ್ರಗಳು ಸಹಜಸಿದ್ಧವಾದ ವರ್ಣ ಮತ್ತು ಆಕಾರ ಸ್ಥಿತಿಯಲ್ಲಿ ಸ್ವಭಾವವಿರುದ್ಧವಾಗಿ ಕಾಣುವುದು, ಸೂರ್ಯಪ್ರಕಾಶದಲ್ಲಿ ನಕ್ಷತ್ರಗಳು ಕಾಣುವುದು, ಋತುಗಳಲ್ಲಿ ಸಹಜವಾಗಿ ಇರಬೇಕಾದ ಪ್ರಕೃತಿಗೆ ವಿರುದ್ಧವಾಗಿ ಇತರ ಋತುಗಳು, ಧರ್ಮಗಳು ಇರುವುದು; ಭೂಮಿಯಲ್ಲಿ ಧೂಳೆದ್ದು ಹಗಲಿನಲ್ಲಿ ಕತ್ತಲೆ ಕವಿಯುವುದು, ಬೆಂಕಿ ಇಲ್ಲದಿದ್ದರೂ ಉರಿಯುವಂತೆ ಕಾಣುವುದು, ರಕ್ತದ ಮಳೆ, ಬಾಲಚುಕ್ಕೆ ಕೇತುದರ್ಶನ, ಅಂಗವೈಕೃತ, ಅಗ್ನಿವೈಕೃತ, ವೃಕ್ಷವೈಕೃತ, ಸಸ್ಯವೈಕೃತ, ವೃಷ್ಟಿವೈಕೃತ, ಜಲವೈಕೃತ, ಪ್ರಸವವೈಕೃತ, ಚತುಷ್ಪದ ವೈಕೃತ, ವಾಯುವೈಕೃತ, ಮೃಗಪಕ್ಷ್ಯಾದಿವೈಕೃತ, ಶಕ್ರಧ್ವಜೇಂದ್ರಕೀಲಾದಿವೈಕೃತ–ಇವೆಲ್ಲ ಉತ್ಪಾತಗಳೇ. ದೇಶಕ್ಕೆ ಮುಂದೆ ಸಂಭವಿಸಬಹುದಾದ ಕೆಟ್ಟಫಲಗಳನ್ನು ಇವು ಸೂಚಿಸುತ್ತವೆ. ಮನುಷ್ಯರು ಮಾಡುವ ಅಕೃತ್ಯಗಳಿಂದುಂಟಾದ ಪಾಪದ ಹೆಚ್ಚಳದಿಂದ ಆಗಬಹುದಾದ ಅಶುಭಗಳನ್ನು ಸೂಚಿಸಿ ಎಚ್ಚರಿಕೆ ಕೊಡುತ್ತವೆ. ಈ ಉತ್ಪಾತ ಕಂಡಾಗ ಅದಕ್ಕೆ ಶಾಸ್ತ್ರದಲ್ಲಿ ವಿಹಿತವಾಗಿರುವಂತೆ ಶಾಂತಿಗಳನ್ನು ಮಾಡಿ ಸಂಭವಿಸಬಹುದಾದ ಕೆಟ್ಟ ಫಲಗಳನ್ನು ನಿವಾರಿಸಬಹುದು. (ಎಸ್.ಎನ್.ಕೆ.)

**ಉತ್ಪಾದಕತೆ:** ಈ ಶಬ್ದವನ್ನು (ಪ್ರೊಡಕ್ಟಿವಿಟಿ) ಮುಖ್ಯವಾಗಿ ಮೂರು ಅರ್ಥಗಳಲ್ಲಿ ಬಳಸಲಾಗಿದೆ: 1. ಒಂದು ಗೊತ್ತಾದ ಕಾಲಾವಧಿಯಲ್ಲಿ ಉತ್ಪಾದನಾಂಗವೊಂದರಿಂದ ಆದ ಉತ್ಪಾದನೆಯ ಮೊತ್ತ; 2. ಉತ್ಪಾದೀಸಾಧನಗಳ ಬಳಕೆಯ ಸಮರ್ಥತೆ; 3. ಒಂದು ಗೊತ್ತಾದಕಾಲಾವಧಿಯಲ್ಲಿ ಉತ್ಪಾದನೆಗಾಗಿ ಬಳಸಲಾದ ಭೌತ ಸಾಧನಗಳಿಗೂ ಉತ್ಪನ್ನ ಘಟಕಗಳಿಗೂ ಇರುವ ಸಂಬಂಧ, ಶ್ರಮಕ್ಕೆ (ಲೇಬರ್) ಸಂಬಂಧಿಸಿದಂತೆ ಸಾಮಾನ್ಯವಾಗಿ ಈ ಶಬ್ದ ಹೆಚ್ಚು ಬಳಕೆಯಲ್ಲಿದೆ. ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ ಇವು ಉತ್ಪಾದನೆಯ ಅಂಗಗಳು. ಒಂದು ದೇಶದ ಉತ್ಪನ್ನಕ್ಕೆ ಈ ಉತ್ಪಾದನಾಂಗಗಳ ಉತ್ಪಾದನ ಶಕ್ತಿಯೇ ಆಧಾರ. ಭೂಮಿಯ ಉತ್ಪಾದಕತೆಗೆ ಮಣ್ಣಿನ ಗುಣ, ಯಂತ್ರೋಪಕರಣಗಳ ಉಪಯೋಗ, ರಾಸಾಯನಿಕ ಗೊಬ್ಬರ, ಉತ್ತಮ ಬೀಜ ಮತ್ತು ಸಾಲದ ಪೂರೈಕೆ, ತಾಂತ್ರಿಕ ನೆರವು–ಮೊದಲಾದವು ಮುಖ್ಯ. ಸರಿಯಾದ ಪ್ರಮಾಣದಲ್ಲಿ ಈ ವಸ್ತುಗಳ ಪೂರೈಕೆಯಾಗದಿದ್ದರೆ ಭೂಮಿಯ ಉತ್ಪಾದಕತೆ ಕಡಿಮೆಯಾಗುತ್ತದೆ. ಕಾರ್ಮಿಕರ ಉತ್ಪಾದನೆಯ ಕಾರ್ಯಕ್ಷಮತೆಗೆ ಅವರು ಸೇವಿಸುವ ದೈನಂದಿನ ಆಹಾರ, ಕೂಲಿಯ ಪ್ರಮಾಣ, ದುಡಿತದ ಅವಧಿ, ವಿಶ್ರಾಂತಿ, ಯಂತ್ರಸಾಮಗ್ರಿಯ ಗುಣ, ಕಾರ್ಖಾನೆಯ ವಾತಾವರಣ, ಮಾಲೀಕ–ಕಾರ್ಮಿಕ ಸಂಬಂಧ ಮೊದಲಾದುವು ನೇರಸಂಬಂಧ ಹೊಂದಿವೆ. ಬಂಡವಾಳದ ಗಾತ್ರ ಹಾಗೂ ಗುಣಗಳು ಒಂದು ಉದ್ಯಮದ ಉತ್ಪಾದನೆಯ ಮೊತ್ತ ನಿರ್ಧಾರಕ. ಆಧುನಿಕ ಉಪಕರಣಗಳ ಸಂಗ್ರಹ ಹೆಚ್ಚಿದಾಗ ಉತ್ಪಾದನೆಯ ಮಟ್ಟ ಹೆಚ್ಚಬಹುದು. ಈ ಮೂರು ಉತ್ಪಾದನಾಂಗಗಳನ್ನೂ ಸರಿಯಾದ ಪ್ರಮಾಣದಲ್ಲಿ ಸಂಘಟಿಸಿ ಉತ್ಪಾದಕತೆ ಯನ್ನು ಹೆಚ್ಚಿಸಲು ಉದ್ಯಮಿಗಳು ಯಾವಾಗಲೂ ಪ್ರಯತ್ನಿಸುತ್ತಾರೆ.

18ನೆಯ ಶತಮಾನದ ಫ್ರೆಂಚ್ ಅರ್ಥಶಾಸ್ತ್ರಜ್ಞರೂ ಆಡಮ್ ಸ್ಮಿತ್, ರಿಕಾರ್ಡೋ ಮುಂತಾದವರೂ ಕೃಷಿ ಕ್ಷೇತ್ರದಲ್ಲಿ ದುಡಿಯುವವರು ಮಾತ್ರ ಉತ್ಪಾದೀಶ್ರಮಿಗಳೆಂದೂ ಉಳಿದವರು ಅನುತ್ಪಾದಿಗಳೆಂದೂ ಭಾವಿಸಿದ್ದರು. (**ನೋಡಿ– ಉತ್ಪಾದೀ–ಶ್ರಮ**) ಈಗ ಈ ತೆರದ ಅಂತರವಿಲ್ಲ. ಬೇಡಿಕೆಯನ್ನು ಪೂರೈಸುವ ದೃಷ್ಟಿಯಿಂದ ವಿನಿಯೋಗಿಸಿದ ಎಲ್ಲ ತೆರದ ಶ್ರಮವೂ ಉತ್ಪಾದಿಯೆ.

ಉತ್ಪಾದನಾಂಗಗಳ ಬೇಡಿಕೆಯ ಪ್ರಮಾಣ ಆಯಾ ಅಂಗಗಳ ಉತ್ಪಾದಕತೆಯನ್ನ ವಲಂಬಿಸಿದೆ. ಶ್ರಮದ ಉತ್ಪಾದಕತೆಗಿಂತ ಬಂಡವಾಳದ ಉತ್ಪಾದಕತೆ ಹೆಚ್ಚಿದ್ದಾಗ, ಉದ್ಯಮಿಗಳು ಹೆಚ್ಚು ಲಾಭ ದೃಷ್ಟಿಯಿಂದ ಬಂಡವಾಳದ ಪ್ರಮಾಣ ಹೆಚ್ಚಿಸಬಹುದು. ಉತ್ಪಾದನಾಂಗಗಳ ಬೆಲೆಗಳನ್ನು ನಿರ್ಧರಿಸುವಾಗ ಅವುಗಳ ಉತ್ಪಾದಕತೆಯನ್ನು ಕಂಡುಹಿಡಿಯಬೇಕಾಗುತ್ತದೆ. ಕಾರ್ಮಿಕರ ಕೂಲಿಯ ಪ್ರಮಾಣ ಅವರ ಉತ್ಪಾದಕತೆಯನ್ನೂ ನಿರ್ಣಯಿಸಬಲ್ಲುದು.

ಉತ್ಪಾದಕತೆ ಮತ್ತು ವೇತನ ಪ್ರಮಾಣಗಳಿಗೆ ನಿಕಟ ಸಂಬಂಧ ಉಂಟು. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಕಡಿಮೆ ಕೂಲಿಯ ಪ್ರಮಾಣ ಕಡಿಮೆ ಉತ್ಪಾದಕತೆಯ ಪರಿಣಾಮ ದಿಂದಿರಬಹುದು, ಇಲ್ಲವೆ ಅದು ಕಡಿಮೆ ಪ್ರಮಾಣದ ಉತ್ಪಾದಕತೆಗೆ ಕಾರಣವೂ ಆಗಿರಬಹುದು. ಉತ್ಪಾದನೆಯ ನಾನಾ ಅಂಗಗಳ ಸೇವೆಗಳನ್ನು ಕೊಳ್ಳುವ ಉದ್ಯಮಿಯ ಗುರಿ ಲಾಭವಾದ್ದರಿಂದ ಆತ ಅವಕ್ಕೆ ಉಚಿತವಾದ ಬೆಲೆಯನ್ನಷ್ಟೇ ಕೊಡಲು ಸಿದ್ಧನಾಗಿರುತ್ತಾನೆ. ಒಂದು ಉತ್ಪಾದ ನಾಂಗದ ಅಂಚಿನ ಘಟಕದ (ಕೊನೆಯ ಘಟಕದ) ಉತ್ಪಾದಕತೆ ಎಷ್ಟೋ ಅದಕ್ಕಿಂತ ಹೆಚ್ಚಾಗಿ ಆತ ಕೊಡುವುದಿಲ್ಲ. ಆದ್ದರಿಂದ ಆಯಾ ಅಂಗಗಳ ಅಂಚಿನ ಘಟಕಗಳ ಉತ್ಪಾದ ಕತೆಯ ಮೌಲ್ಯವೇ ಆಯಾ ಅಂಗಗಳ ಬೆಲೆಯೆನ್ನಬಹುದು. ವಾನ್ ಥ್ಯುನೆನ್, ವಿಕ್ಸ್‌ಟೀಡ್, ಹಿಕ್ಸ್ ಮೊದಲಾದ ಅರ್ಥಶಾಸ್ತ್ರಜ್ಞರು ಈ ಅಂಚಿನ ಉತ್ಪಾದಕತೆಯ ಸೂತ್ರವನ್ನು ಪ್ರತಿಪಾದಿಸಿ ದ್ದಾರೆ. ಚೇಂಬರಲಿನ್ ಮತ್ತು ಜೋನ್ ರಾಬಿನ್‌ಸನ್ನರ ಪ್ರಕಾರ ಉತ್ಪಾದನಾಂಗದ ಬೆಲೆ, ಅಂಚಿನ ಉತ್ಪನ್ನದಿಂದ ಒಟ್ಟು ಉತ್ಪನ್ನದ ಮಾರಾಟದ ಹುಟ್ಟುವಳಿಯಲ್ಲಾಗುವ ಹೆಚ್ಚಳಕ್ಕೆ ಸಮನಾಗಿರುತ್ತದೆ. ಒಂದು ಉತ್ಪಾದನಾಂಗದ ಉತ್ಪಾದಕತೆಯನ್ನು ನಿರ್ಣಯಿಸುವಾಗ ಸಹಾಯಕ ಅಂಗಗಳ ಪ್ರಮಾಣವನ್ನು ಸ್ಥಿರವಾಗಿಟ್ಟುಕೊಳ್ಳಬೇಕು. ಆ ಅಂಗದ ಪ್ರಮಾಣದಲ್ಲಿ ಹೆಚ್ಚು ಕಡಿಮೆ ಆದಾಗ ಒಟ್ಟು ಉತ್ಪಾದನೆಯೂ ಹೆಚ್ಚೋ ಕಡಿಮೆಯೋ ಆಗುತ್ತದೆ.

ಅಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಉತ್ಪಾದನಾಂಗದ ಬೆಲೆ ಅದರ ಅಂಚಿನ ಉತ್ಪಾದನೆಯ ಮೌಲ್ಯಕ್ಕಿಂತ ಕಡಿಮೆ ಇರುತ್ತದೆ. ಉತ್ಪಾದನಾಂಗಗಳಲ್ಲೊಂದಾದ ಶ್ರಮದ ಅಂಚಿನ ಉತ್ಪಾದಕತೆಗೆ ಅನುಗುಣವಾಗಿ ಕಾರ್ಮಿಕರಿಗೆ ಕೂಲಿ ಸಲ್ಲದೆ ಹೋದಾಗ ಕಾರ್ಮಿಕರು ಸಂಘಟಿತರಾಗಿ ತಮ್ಮ ಕೂಲಿಯ ಮಟ್ಟವನ್ನು ಉತ್ಪಾದಕತೆಯ ಮಟ್ಟಕ್ಕೆ ಹೆಚ್ಚಿಸಿಕೊಳ್ಳಲು ಯತ್ನಿಸುತ್ತಾರೆ. ಸಂಧಾನದ ಮೂಲಕ ಇದು ಸಾಧ್ಯವಾಗದಿದ್ದಾಗ ಅವರು ಇತರ ಕ್ರಮಗಳನ್ನನುಸರಿಸಬಹುದು.

ಉತ್ಪಾದನಾಂಗಗಳ ಪೂರೈಕೆಯ ಪ್ರಮಾಣ ಕಡಿಮೆ ಇರುವುದರಿಂದ ಅವುಗಳ ಅಂಚಿನ ಉತ್ಪಾದಕತೆ ಎಲ್ಲ ಉದ್ಯಮಗಳಲ್ಲೂ ಸಮನಾಗಿರುವ ರೀತಿಯಲ್ಲಿ ಈ ಅಂಗಗಳ ವಿತರಣೆಯಾಗುತ್ತದೆ. ಈ ತರದ ವಿತರಣೆ ಪರಿಪೂರ್ಣ ಮೇಲಾಟದ ವಾತಾವರಣದಲ್ಲಿ ಮಾತ್ರ ಸಾಧ್ಯ. ಸಾಮಾಜಿಕಸೇವೆ, ಆರೋಗ್ಯ, ಶಿಕ್ಷಣ, ಮೊದಲಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಉತ್ಪಾದಕ ವಸ್ತುಗಳ ಅಂಚಿನ ಉತ್ಪಾದಕತೆಯನ್ನು ಅಳೆಯುವುದು ಕಷ್ಟ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಕ್ಷೇತ್ರಗಳು ಪ್ರಮುಖವಾಗಿದ್ದು, ರಾಷ್ಟ್ರೀಯ ಉತ್ಪನ್ನವನ್ನು ಆಯಾ ಉತ್ಪಾದನಾಂಗಗಳಲ್ಲಿ ವಿತರಣೆ ಮಾಡುವುದೊಂದು ದೊಡ್ಡ ಸಮಸ್ಯೆ. ಪಾಶ್ಚಾತ್ಯ ದೇಶಗಳಲ್ಲಿ ಉತ್ಪಾದನೆಯ ಮಟ್ಟವನ್ನು ಅಳೆಯುವ ಪ್ರಯತ್ನ ನಡೆದಿದೆ. (ಎಸ್.ಜಿ.ಕೆ.)

**ಉತ್ಪಾದಕರ ಸಹಕಾರ ಸಂಘ:** ಉತ್ಪಾದನೆ ಮಾರಾಟಗಳಲ್ಲಿ ಪರಸ್ಪರ ಸಹಕರಿಸಿ, ವ್ಯಾಪಾರದಿಂದ ಬಂದ ಲಾಭವನ್ನು ಸದಸ್ಯರಾದ ತಂತಮ್ಮಲ್ಲೇ ಹಂಚಿಕೊಳ್ಳುವ ಉದ್ದೇಶದಿಂದ ಉತ್ಪಾದಕರು ಸೇರಿ ರಚಿಸಿಕೊಂಡ ಸಂಘ. ಬಂಡವಾಳವಾದೀ ಉತ್ಪಾದನ–ವಿತರಣ ವ್ಯವಸ್ಥೆಯಲ್ಲಿರುವ ಕೆಲವು ನ್ಯೂನತೆಗಳನ್ನು ನಿವಾರಿಸುವುದು ಇದರ ಮೂಲೋದ್ದೇಶ. ಬಂಡವಾಳವಾದೀ ವ್ಯವಸ್ಥೆಯಲ್ಲಿ ಶ್ರಮವೆಂಬುದು ಬಾಡಿಗೆಗೆ ದೊರಕುವ ಒಂದು ಪದಾರ್ಥ. ಅನೇಕ ವೇಳೆ ಇದಕ್ಕೆ ಕನಿಷ್ಠ ವೇತನವೂ ದೊರಕುವುದಿಲ್ಲ. ಸಾಮಾನ್ಯವಾಗಿ ಬೇಡಿಕೆ ಹಾಗೂ ಸರಬರಾಜುಗಳ ಆಧಾರದ ಮೇಲೆ ಇದರ ಬೆಲೆಯ ನಿರ್ಣಯವಾಗುತ್ತದೆ. ಸ್ವಾರ್ಥಮೂಲವಾದ ಈ ಬಗೆಯ ಮಾಲೀಕ–ಕಾರ್ಮಿಕ ಸಂಬಂಧವನ್ನು ನಿವಾರಿಸುವುದೇ ಉತ್ಪಾದಕರ ಸಹಕಾರ ಸಂಘದ ಅಂತಿಮೋದ್ದೇಶ. ಇದು ಉದ್ಯಮ ಚಾಲಕನನ್ನು (ಆಂಟ್ರಪ್ರನರ್) ನಿವಾರಿಸಿ, ಆತನಿಗೆ ಹೋಗಬಹುದಾಗಿದ್ದ ಲಾಭವನ್ನು ತಾನೇ ಅನುಭವಿಸುತ್ತದೆ. ಉತ್ಪಾದನೆಯ ಮೇಲೆ ಹತೋಟಿ ಹೊಂದಿರುವ ವರ್ಗವನ್ನೇ ಅಂತಿಮವಾಗಿ ತೊಡೆದು ಹಾಕುವುದು ಉತ್ಪಾದಕರ ಸಹಕಾರ ಚಳವಳಿಯ ಗುರಿ. ಕಾರ್ಮಿಕರೋ, ಅನುಭೋಗಿಗಳೋ ಅಥವಾ ಇಬ್ಬರೂ ಕೂಡಿಯೋ ನಿರ್ವಹಿಸಿ, ಲಾಭ ಹಂಚಿಕೊಳ್ಳುವ ಈ ವ್ಯವಸ್ಥೆಯಲ್ಲಿ ನಿಮಗೆ ನೀವೇ ಉತ್ಪಾದಕ ಎಂದು ರಾಬರ್ಟ್ ಓವೆನ್ ಇದನ್ನು ಬಣ್ಣಿಸುತ್ತಾನೆ.

ಉತ್ಪಾದಕರ ಸಹಕಾರ ಸಂಘವನ್ನು ಸಹಕಾರಿಗಳಲ್ಲೇ ಒಬ್ಬ ನಡೆಸುತ್ತಾನೆ. ಆತನ ಸೇವೆಗೆ ಪ್ರತಿಯಾಗಿ ಅವನಿಗೆ ಸಂಬಳ ದೊರಕುತ್ತದೆ. ಅದರೊಂದಿಗೆ ಆತ ಆ ಸಂಘದ ಬಂಡವಾಳಕ್ಕಾಗಿ ನೀಡಿರುವ ಹಣಕ್ಕೆ ಅನುಗುಣವಾಗಿ ಅವನು ಸಹಸದಸ್ಯರೊಂದಿಗೆ ಅದರ ಲಾಭವನ್ನೂ ಹಂಚಿಕೊಳ್ಳುತ್ತಾನೆ.

ಬಂಡವಾಳ ವ್ಯವಸ್ಥೆ ಹಸ್ತಕ್ಷೇಪರಹಿತ ನೀತಿಯ ಪ್ರಭಾವಕ್ಕೆ ಒಳಗಾಗಿದ್ದ ಕಾಲದಲ್ಲಿ, ಸರ್ಕಾರ ಅತ್ಯಂತ ಕನಿಷ್ಠ ಪ್ರಮಾಣದಲ್ಲಿ ಪ್ರಜೆಗಳ ಆರ್ಥಿಕ ವಿಚಾರಗಳಲ್ಲಿ ಕೈಹಾಕುತ್ತಿದ್ದಾಗ, ಎಂದರೆ ಬಂಡವಾಳ ವ್ಯವಸ್ಥೆಯ ಆರಂಭದೆಶೆಯಲ್ಲಿ, ಉತ್ಪಾದಕರ ಸಹಕಾರ ಚಳವಳಿಗೆ ಪ್ರೋತ್ಸಾಹ ದೊರಕಿತು. 1834ರಲ್ಲಿ ಬ್ರಿಟನ್ನಿನಲ್ಲಿ ರಾಬರ್ಟ್ ಓವೆನ್ ಮನೆಕಟ್ಟುವವರ ರಾಷ್ಟ್ರೀಯ ಸಂಘ ಸ್ಥಾಪಿಸಿದ. ಸಹಕಾರಿ ಕಾರ್ಯಶಾಲೆಗಳ ಸ್ವಾಮ್ಯ ಹೊಂದಿದ್ದ ಇಂಥ ಉತ್ಪಾದಕರ ಸಹಕಾರ ಸಂಘಗಳು ಐರೋಪ್ಯ ದೇಶಗಳಲ್ಲೂ ಸ್ಥಾಪಿತವಾದುವು. 1890ರ ವೇಳೆಗೆ ಇಟಲಿ, ಫ್ರಾನ್ಸ್‌ಗಳ ವಿನಾ ಇತರ ದೇಶಗಳಲ್ಲಿ ಈ ಚಳವಳಿಗೆ ಸೋಲಾಯಿತು.

ಉತ್ಪಾದಕರ ಸಹಕಾರ ವ್ಯವಸ್ಥೆ ಅವ್ಯವಹಾರ್ಯ ಆದರ್ಶ ಚಳವಳಿಯೆಂಬುದು ಸ್ಪಷ್ಟ. ಎಲ್ಲಿ ಅಗಾಧ ಬಂಡವಾಳದ ಅಗತ್ಯವಿದೆಯೋ, ಎಲ್ಲಿ ತಾಂತ್ರಿಕ ಬದಲಾವಣೆ ಶೀಘ್ರಗತಿಯಲ್ಲಿ ಸಂಭವಿಸುವುವೋ ಅಂಥ ಎಡೆಗಳಲ್ಲಿ ಸಹಕಾರತತ್ತ್ವ ಯಶಸ್ವಿಯಾಗಲಾರದು. ಈ ಚಳವಳಿ ಹೆಚ್ಚು ಬಂಡವಾಳ ಶೇಖರಿಸಲಾರದಾದ್ದರಿಂದ ಇದು ಸಂಶೋಧನೆಯ ಫಲಿತವಾದ ಅತ್ಯಂತ ನವೀನ ತಂತ್ರಜ್ಞಾನದ ಪ್ರಯೋಜನ ಪಡೆಯಲಾರದು. ಉತ್ಪಾದನೆಯಲ್ಲಿ ಯಾರ ಸಾಮರ್ಥ್ಯವೂ, ಮುನ್ನೋಟವೂ ಪ್ರಮುಖ ಅಂಶಗಳಾಗಿವೆಯೊ ಅಂಥ ವ್ಯವಸ್ಥಾಪಕರಿಗೆ ಹಾಗೂ ಸಂಘಟಕರಿಗೆ ಸೂಕ್ತ ಸಂಭಾವನೆ ನೀಡಲಾರದು. ಅಲ್ಲದೆ, ಗ್ರಾಹಕರ ಸಹಕಾರ, ಮಾರಾಟದ ಸಹಕಾರ ಮುಂತಾದ ಇತರ ಸಹಕಾರ ಚಳವಳಿಗಳಂತೆ ಇದಕ್ಕೂ ಸಹಕಾರದ ಆದರ್ಶಗಳ ಬಗ್ಗೆ ಉತ್ಸಾಹವುಳ್ಳ ಜನರ ಅಗತ್ಯವುಂಟು. ಸ್ವಸಹಾಯ, ಮಿತವ್ಯಯ, ಸಹೋದರ ಭಾವ–ಮುಂತಾಗಿ ಒಬ್ಬನನ್ನು ಆದರ್ಶ ವ್ಯಕ್ತಿಯನ್ನಾಗಿ ಮಾಡುವ ಮಾನವೀಯ ಗುಣಗಳು ಇವರಲ್ಲಿ ಇರಬೇಕು. ಉತ್ಪಾದಕರ ಸಹಕಾರವೇ ಆಗಲಿ, ಗ್ರಾಹಕರ ಸಹಕಾರವೇ ಆಗಲಿ, ಪ್ರತಿಯೊಂದು ಬಗೆಯ ಸಹಕಾರಕ್ಕೂ ಶಿಕ್ಷಣ ಅಗತ್ಯ, ಸ್ವಾರ್ಥತ್ಯಾಗದ ಮನೋಭಾವ ಇರಬೇಕು. ಆಧುನಿಕ ಸಂಗ್ರಹಣಶೀಲ ಸಮಾಜದಲ್ಲಿ ಈ ಮುಖ್ಯ ಗುಣಗಳೇ ಇಲ್ಲವಾಗಿವೆ. ಆರಂಭಕಾಲದಲ್ಲಿ ಪ್ರಚಾರಕರ ಉತ್ಸಾಹದಿಂದ ಮೊದಲಾದ ಈ ಚಳವಳಿ ಕ್ರಮೇಣ ವ್ಯವಹಾರ ಸಂಘಟನೆಯ ಇನ್ನೊಂದು ಪ್ರಕಾರವಾಗಿ ಪರಿವರ್ತನೆಗೊಂಡಿತು. ಸ್ವಾರ್ಥ ಹಿತಾಸಕ್ತಿಗಳು ಇದರೊಳಕ್ಕೂ ನುಸುಳಿಕೊಂಡುವು.

ಇಟಲಿ ಹಾಗೂ ಫ್ರಾನ್ಸ್‌ಗಳಲ್ಲಿ ಮಾತ್ರ ಈ ಚಳವಳಿ ಸ್ವಲ್ಪಮಟ್ಟಿಗೆ ಯಶಸ್ವಿಯಾಯಿತು. ಏಕೆಂದರೆ ಈ ದೇಶಗಳ ಸರ್ಕಾರಗಳು ಸಣ ಪ್ರಮಾಣದ ಉದ್ಯಮಗಳಿಗೆ ಪೋಷಣೆ ನೀಡಿದುವು, ಅವಕ್ಕೆ ಧನಸಹಾಯ ನೀಡಿದುವು. ಬಂಡವಾಳಿಗ ಸ್ಪರ್ಧೆಗಳನ್ನೆದುರಿಸುವಂತೆ ಅವುಗಳಿಗೆ ಸಾಲದ ಸೌಲಭ್ಯವನ್ನೂ, ಮಾರಾಟದ ಸವಲತ್ತುಗಳನ್ನು ದೊರಕಿಸುವ ಭರವಸೆ ನೀಡಿದುವು. ಸರ್ಕಾರದ ಒತ್ತಾಸೆ ಇಲ್ಲದ ಇತರ ದೇಶಗಳಲ್ಲಿ ಗ್ರಾಹಕರ ಸಹಕಾರಕ್ಕೆ ಈ ಚಳವಳಿ ಎಡೆಮಾಡಿಕೊಟ್ಟಿತು; ಇಲ್ಲಿ ಗ್ರಾಹಕರ ಸಹಕಾರವೇ ಉತ್ಪಾದನೆಯ ಕಾರ್ಯಗಳಲ್ಲೂ ತೊಡಗಿತು.

ಬಂಡವಾಳ ವ್ಯವಸ್ಥೆಯಲ್ಲಿ ಬಂಡವಾಳಿಗನ ವಿರುದ್ಧವಾಗಿ ಹೂಡಿದ ಚಳವಳಿಯೇ ಉತ್ಪಾದಕರ ಸಹಕಾರ. ಸರ್ಕಾರೀ ಉದ್ಯಮ ಸಂಘಟನೆಯೂ ಸರ್ಕಾರೀ ಕ್ಷೇತ್ರವೂ ಅತ್ಯಂತ ಪ್ರಧಾನ ಪಾತ್ರ ವಹಿಸುತ್ತಿರುವ ಸಮಾಜವಾದೀ ಆರ್ಥಿಕ ವ್ಯವಸ್ಥೆಯಲ್ಲಿ ಈ ಚಳವಳಿಯ ಪ್ರಾಮುಖ್ಯ ನಷ್ಟವಾಗಿದೆ. ಉತ್ಪಾದಕರ ಸಹಕಾರದ ಭವಿಷ್ಯ ಇರುವುದು ಕೈಗಾರಿಕಾ ಸಹಕಾರ ಸಂಘಗಳಲ್ಲಿ ಮಾತ್ರ ; ಸಹಕಾರೀಕ್ಷೇತ್ರದಲ್ಲಿ ಗುಡಿಸಲು ಕೈಗಾರಿಕೆ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸಂಘಟಿಸುವುದೇ ಉದ್ದೇಶವಾದ ಈ ಬಗೆಯ ಸಹಕಾರ ಸಂಘಗಳಿಗೆ ಕಡಿಮೆ ಬಂಡವಾಳ ಸಾಕು; ಇವುಗಳಲ್ಲಿ ಕಾರ್ಮಿಕರ ನೈಪುಣ್ಯವೂ ಅವಧಾನವೂ ಅಧಿಕವಾಗಿ ಬೇಕು. ಇವು ದೊಡ್ಡ ಕೈಗಾರಿಕೆಗಳಿಗೆ ಸಹಾಯಕಗಳಾಗಿ ಕಾರ್ಯ ನಡೆಸಬಹುದು. ಭಾರತದಂಥ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇವು ಬಹುಮಟ್ಟಿಗೆ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬಲ್ಲುವು. (ಜಿ.ಕೆ.ಐ.)

**ಉತ್ಪಾದನ ಗಣತಿ:** ಉತ್ಪಾದನೆಯ ಘಟಕಗಳ ಎಣಿಕೆ (ಸೆನ್ಸಸ್ ಆಫ್ ಪ್ರೊಡಕ್ಷನ್). ಉತ್ಪಾದನೆಯ ಗಣತಿಯೂ ಜನಗಣತಿಯಂತೆಯೇ ಎಂದು ಹೇಳಬಹುದಾದರೂ ಇವೆರಡಕ್ಕೂ ವ್ಯತ್ಯಾಸಗಳುಂಟು. ಎಲ್ಲ ಕಾಲ ದೇಶಗಳಲ್ಲೂ ಜನಗಣತಿ ಒಂದೇ ತರಹ. ಏಕೆಂದರೆ ಎಣಿಕೆಗೆ ಒಳಗಾದ ಘಟಕವನ್ನು ಸುಲಭವಾಗಿ ಗುರುತಿಸಬಹುದು; ಅದು ಸುಲಭವಾಗಿ ವ್ಯಾಖ್ಯೆಗೆ ಸಿಗುವಂಥದು. ಆದರೆ ಇದು ಹಾಗಲ್ಲ. ಎಣಿಕೆಗೆ ಒಳಪಡಿಸಬೇಕಾದ ಉತ್ಪಾದನ ಘಟಕ ಯಾವುದು ಎಂಬುದನ್ನು ನಿರ್ಣಯಿಸುವುದು ಬಲುಕಷ್ಟ. ಜನಗಣತಿಯ ಉದ್ದೇಶ ಹೆಚ್ಚು ಸರಳ, ನೇರ. ಉತ್ಪಾದನೆಯ ಗಣತಿಯ ಉದ್ದೇಶದ ವ್ಯಾಖ್ಯೆ ಕಠಿನತರ, ಭಿನ್ನ ಭಿನ್ನವೂ ಹೌದು. ಉತ್ಪಾದನೆಯನ್ನು ಕುರಿತ ಭಾವನೆಗಳೂ ಕಾಲದಿಂದ ಕಾಲಕ್ಕೆ ಬದಲಾಗುತ್ತಿವೆ. 18ನೆಯ ಶತಮಾನದ ಫ್ರೆಂಚ್ ಪ್ರಕೃತಿ ಪ್ರಾಧಾನ್ಯವಾದಿಗಳ ದೃಷ್ಟಿಯಲ್ಲಿ ವ್ಯವಸಾಯೋತ್ಪಾದನೆಯೊಂದೇ ನಿಜವಾದ ಉತ್ಪಾದನೆ. ಆದರೆ ಇಂದಿನ ದೃಷ್ಟಿ ತುಂಬ ವಿಶಾಲ. ಕಮ್ಯೂನಿಸ್ಟ್ ವ್ಯವಸ್ಥೆಯಲ್ಲೂ ಬಂಡವಾಳವಾದಿ ವ್ಯವಸ್ಥೆಯಲ್ಲೂ ಉತ್ಪಾದನೆಯ ಮೊತ್ತದ ಬಗ್ಗೆ ಭಿನ್ನ ಕಲ್ಪನೆಗಳಿವೆ.

ಗಣತಿಯೆಂಬುದು ವ್ಯಾಪಕಾರ್ಥವುಳ್ಳ ಪದ. ಗಣತಿ ಮಾಡಲು ಒಂದು ದೇಶ ಅಥವಾ ಪ್ರದೇಶವನ್ನು ಇಡಿಯಾಗಿ ಗಣನೆಗೆ ತೆಗೆದುಕೊಳ್ಳಬೇಕಾದದ್ದು ಅವಶ್ಯ. ಅಲ್ಲಿನ ಒಟ್ಟು ಉತ್ಪಾದನೆಯ ಲೆಕ್ಕ ತೆಗೆದುಕೊಂಡಾಗಲೇ ಉತ್ಪಾದನ ಗಣತಿ ಸಮಗ್ರವೆನಿಸಿಕೊಳ್ಳುತ್ತದೆ. ವ್ಯವಸಾಯ ಗಣತಿ, ಕೈಗಾರಿಕೆಯ ಹಾಗೂ ಗಣಿ ಉದ್ಯಮದ ಗಣತಿ, ವಿತರಣೆಯ ಗಣತಿ ಅಥವಾ ವ್ಯವಹಾರ ಗಣತಿ–ಎಂದು ಬೇರೆ ಬೇರೆ ವಿಭಾಗಗಳಲ್ಲಿ ಉತ್ಪಾದಕ ಘಟಕಗಳ ಎಣಿಕೆ ಮಾಡುವುದು ಆಧುನಿಕ ಪದ್ಧತಿ.

ಉತ್ಪಾದನ ಗಣತಿಯ ಬಗ್ಗೆ ಸಮಗ್ರ ಧೋರಣೆ ತಳೆದ ಮೊದಲ ರಾಷ್ಟ್ರವೆಂದರೆ ಅಮೆರಿಕದ ಸಂಯುಕ್ತ ಸಂಸ್ಥಾನಗಳು. ಮೊದಲ ಬಾರಿಗೆ ಅಲ್ಲಿನ ಕಾಂಗ್ರೆಸ್ಸು ಈ ಬಗ್ಗೆ ಕ್ರಮ ಕೈಗೊಂಡಿದ್ದು 1810ರಲ್ಲಿ. ಜನಗಣತಿಯ ಅಧಿಕಾರಿಗಳು ತಂತಮ್ಮ ಜಿಲ್ಲೆ, ಪ್ರದೇಶ ಮತ್ತು ವಿಭಾಗಗಳಲ್ಲಿನ ತಯಾರಿಕಾಸಂಸ್ಥೆಗಳ ಮತ್ತು ಅವುಗಳ ತಯಾರಿಕೆಗಳ ಲೆಕ್ಕ ತೆಗೆಯ ಬೇಕೆಂಬ ಉದ್ದೇಶಕ್ಕೆ ಅನುಸಾರವಾಗಿ ಮುಂದೆ (1818) ಒಂದು ಪ್ರಶ್ನಾವಳಿ ಸಿದ್ಧವಾಯಿತು. ತಯಾರಿಕೆಯ ಸ್ವರೂಪ, ಅದಕ್ಕೆ ಹೂಡಲಾದ ಕಚ್ಚಾ ಸಾಮಗ್ರಿ, ನೇಮಕವಾಗಿದ್ದ ಸಿಬ್ಬಂದಿಯ ಸಂಖ್ಯೆ, ವೆಚ್ಚಗಳು, ಬಂಡವಾಳ, ಉತ್ಪಾದನೆ ಇವುಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು.

# ಉತ್ಪಾದನ ಗಣತಿ

ಒಂದು ಕೈಗಾರಿಕೆಯಲ್ಲಿನ ಹಾಗೂ ದೇಶದ ಎಲ್ಲ ಕೈಗಾರಿಕೆಗಳಲ್ಲಿನ ಎಲ್ಲ ಸಂಸ್ಥೆಗಳ ನಿವ್ವಳ ಉತ್ಪತ್ತಿಗಳ ಮೊತ್ತ ಬಲು ಮುಖ್ಯ. ಏಕೆಂದರೆ ಇದರಿಂದ ಸ್ಥೂಲವಾಗಿ ಅಲ್ಲಿನ ರಾಷ್ಟ್ರೀಯ ಉತ್ಪನ್ನಕ್ಕೆ ಕೈಗಾರಿಕೆಗಳ ಕೊಡುಗೆಯೆಷ್ಟೆಂಬುದು ಗೊತ್ತಾಗುತ್ತದೆ. ಉತ್ಪಾದನೆಯಾದ ಪ್ರತಿಯೊಂದು ಪದಾರ್ಥದ ಆರ್ಥಿಕ ವೆಚ್ಚ, ಶ್ರಮ, ಸಾಮಗ್ರಿ ಇಂಧನಗಳೇ ಮುಂತಾದ ಗ್ರಾಸಗಳ ವೆಚ್ಚಗಳ ವಿವರ–ಇವೆಲ್ಲವೂ ದೊರಕುವುದರಿಂದ ಆರ್ಥಿಕ ವಿಶ್ಲೇಷಣೆಗೆ ಇದೇ ಆಧಾರ. ನಿವ್ವಳ ಉತ್ಪತ್ತಿಗೂ ನಿಯೋಜಿತ ಬಂಡವಾಳಕ್ಕೂ ಇರುವ ಸಂಬಂಧದ ಪರಿಶೀಲನೆಯಿಂದ ಬಂಡವಾಳದ ಉತ್ಪಾದಕತೆಯೂ ನಿವ್ವಳ ಉತ್ಪತ್ತಿಗೂ ಕೂಲಿಗೂ ಇರುವ ಸಂಬಂಧದಿಂದ ಕಾರ್ಮಿಕರ ಉತ್ಪಾದಕತೆಯೂ ವ್ಯಕ್ತಪಡುತ್ತದೆ. ಒಟ್ಟು ಉತ್ಪತ್ತಿಯಲ್ಲಿ ಶ್ರಮದ ಪಾಲೆಷ್ಟೆಂಬುದನ್ನು ಒಟ್ಟು ವೇತನ ಹಾಗೂ ಕೂಲಿಗಳ ಮೊತ್ತದಿಂದ ತಿಳಿಯುವುದು ಸಾಧ್ಯ. ಉಳಿದ ಭಾಗ ಇತರ ವೆಚ್ಚಗಳಿಗೆ ಸಂಬಂಧಿಸಿದ್ದು ವ್ಯತ್ಯಾಸದ ಅಧ್ಯಯನ ಆರ್ಥಿಕವಾಗಿ ಬಲು ಮುಖ್ಯ. ಉತ್ಪಾದನೆ ಶ್ರಮಪ್ರಧಾನವೇ ಅಥವಾ ಬಂಡವಾಳ ಪ್ರಧಾನವೇ, ಕೈಗಾರಿಕೆ (ಹಾಗೂ ದೇಶ) ಆರ್ಥಿಕ ಪ್ರಗತಿಯ ದಿಕ್ಕಿನಲ್ಲಿ ಸಾಗುತ್ತಿದೆಯೇ–ಮುಂತಾದ ಸ್ವಾರಸ್ಯಕರ ಅಂಶಗಳ ಮುಸುಕು ತೆರೆದು ಮುಂದೆ ನಿಲ್ಲುತ್ತವೆ. ಪ್ರಚಲಿತ ಅನುಭೋಗಕ್ಕೆ ಒದಗುವ ಪದಾರ್ಥಗಳ ಉತ್ಪಾದನೆಯಷ್ಟು, ಹೊಸ ಹೊಸ ಬಂಡವಾಳವಾಗಿ ಪರಿವರ್ತನೆಗೊಳ್ಳುವ ಪದಾರ್ಥದ (ಉತ್ಪಾದಕ ಸರಕಿನ) ಉತ್ಪಾದನೆಯೆಷ್ಟು–ಎಂಬುದೆಲ್ಲವೂ ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಬಲು ಉಪಯುಕ್ತ, ಅತ್ಯಂತ ಅವಶ್ಯ.

ಒಂದೊಂದು ಉತ್ಪಾದನ ಘಟಕಕ್ಕೆ ಸಂಬಂಧಿಸಿದ ಅಂಕಿಗಳನ್ನು ಸಂಗ್ರಹಿಸುವುದು ಆಧುನಿಕ ಗಣತಿಯ ವಿಧಾನ. ನಾನಾ ಪದಾರ್ಥಗಳ ತಲೆಕಟ್ಟುಗಳ ಅಡಿಯಲ್ಲಿ ಇವುಗಳನ್ನೆಲ್ಲ ಒಟ್ಟುಮಾಡುವುದು ಸುಲಭವಾಗುತ್ತದೆ.

ಕಾಲದ ಒಂದು ಗೊತ್ತಾದ ಬಿಂದುವಿನಲ್ಲಿದ್ದಂತೆ ಗಣನೆ ಮಾಡುವುದೇ ಉತ್ಪಾದನ ಗಣತಿಯಲ್ಲಿ ಸಾಮಾನ್ಯವಾಗಿ ಅನುಸರಿಸುವ ವಿಧಾನ. ಆದರೆ ಉತ್ಪಾದನೆಯೆಂಬುದು ಒಂದು ಅನುಸ್ಯೂತ ಪ್ರವಾಹ. ಆದ್ದರಿಂದ ಭಾರತ, ಬ್ರಿಟನ್, ಅಮೆರಿಕಗಳಂಥ ಕೆಲವು ದೇಶಗಳ ಗಣತಿಗೆ ಒಂದು ಗೊತ್ತಾದ ಕಾಲದಲ್ಲಿ ಸಂಭವಿಸಿದ ಉತ್ಪತ್ತಿಯ ಎಣಿಕೆಯೇ ಗುರಿ (ಪ್ರವಾಹ). ಆದರೆ ಉತ್ಪಾದೀ ಸಾಧನಗಳ ರಚನೆ ಹಾಗೂ ವಿತರಣೆಯ ಗಣತಿಯೇ ಐರೋಪ್ಯ ರಾಷ್ಟ್ರಗಳ ಪದ್ಧತಿ. ಉತ್ಪಾದನ ಸಂಸ್ಥೆಗಳನ್ನು ಕುರಿತ ವಿವರಗಳಿಗೆ ಈ ದೇಶದಲ್ಲಿ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ.

ಆರ್ಥಿಕ ಚಟುವಟಿಕೆಯ ಮಟ್ಟವನ್ನಳೆಯುವುದಕ್ಕೆ ಉತ್ಪಾದನೆಯ ಅಂಕಿ–ಅಂಶಗಳನ್ನು ಬಳಸುವುದು ಇಂದು ಎಲ್ಲ ಮುಂದುವರಿದ ದೇಶಗಳ ಪದ್ಧತಿ. ಆರ್ಥಿಕ ಚಟುವಟಿಕೆಗಳ ಏರಿಳಿತಗಳನ್ನು ತಡೆಗಟ್ಟಿ ಬೆಳೆವಣಿಗೆಗೆ ಉತ್ತೇಜನ ನೀಡಲು ಸರ್ಕಾರ ಕೈಗೊಳ್ಳಬೇಕಾದ ನಾನಾ ಆರ್ಥಿಕ ಕ್ರಮಗಳಿಗೆ ಈ ಅಂಕಿಗಳೇ ಆಧಾರ. ಕೈಗಾರಿಕೆ ಹಾಗೂ ವ್ಯವಸಾಯೋತ್ಪಾದನೆಯ ಸೂಚ್ಯಂಕಗಳ ರಚನೆ ಹಾಗೂ ಪ್ರಕಟನೆಗೆ ಈಚೆಗೆ ಹೆಚ್ಚು ಹೆಚ್ಚು ಗಮನ ನೀಡಲಾಗಿದೆ.*

**ಉತ್ಪಾದನ ಗಣತಿ ಹಾಗೂ ರಾಷ್ಟ್ರೀಯ ವರಮಾನ:** ಒಂದು ದೇಶದ ಸಮಗ್ರ ಆರ್ಥಿಕ ಪ್ರಗತಿಯ ಸೂಚಕವಾದ ರಾಷ್ಟ್ರೀಯ ವರಮಾನವನ್ನು ಅಳೆಯಲು ಬಳಸುವ ಮೂರು ಮುಖ್ಯ ವಿಧಾನಗಳಲ್ಲಿ ಗಣತಿ ವಿಧಾನವೂ ಒಂದು. ವರಮಾನ ಗಣತಿ ವಿಧಾನವೂ ಖರ್ಚು, ಬಂಡವಾಳ ನಿಯೋಜನೆ ಮತ್ತು ಉಳಿತಾಯ ಗಣತಿ ವಿಧಾನವೂ ಉಳಿದ ಎರಡು. ಈ ವಿಧಾನಗಳಲ್ಲಿ ಯಾವುದನ್ನು ಅನುಸರಿಸಬಹುದು, ಅಥವಾ ಒಂದಕ್ಕಿಂತ ಹೆಚ್ಚು ವಿಧಾನಗಳನ್ನು ಅನುಸರಿಸಬೇಕೆ ಎಂಬುದು ಒಂದು ದೇಶದ ಆರ್ಥಿಕ ಬೆಳವಣಿಗೆಯ ಮಟ್ಟ, ಅಂಕಿ–ಅಂಶಗಳ ಲಭ್ಯತೆ ಮತ್ತು ಜನಗಳ ವಿದ್ಯಾಮಟ್ಟ–ಇವೆಲ್ಲವನ್ನೂ ಅವಲಂಬಿಸಿರುತ್ತದೆ.

ಒಂದು ದೇಶದ ಜನ ಒಂದು ವರ್ಷದಲ್ಲಿ ಉತ್ಪಾದನೆ ಮಾಡಿದ ಸರಕು ಸೇವೆಗಳ ಹಣದ ಮೌಲ್ಯವೇ ರಾಷ್ಟ್ರೀಯ ವರಮಾನವೆನ್ನಬಹುದು. ಒಂದು ನಿರ್ದಿಷ್ಟ ಅವಧಿಯಲ್ಲಿ ಹೊರದೇಶಗಳಿಂದ ಬಂದ ನಿವ್ವಳ ಆದಾಯವನ್ನು ಒಳಗೊಂಡು ಒಂದು ರಾಷ್ಟ್ರದ ವಿವಿಧ ಆರ್ಥಿಕ ಕ್ಷೇತ್ರಗಳಿಂದ ಸೇರಿಸಲಾದ ಸರಕು ಸೇವೆಗಳ ಉತ್ಪಾದನೆಯ ನಿವ್ವಳ ಬೆಲೆಯ ಉತ್ಪಾದನ ಗಣತಿಯೇ ರಾಷ್ಟ್ರೀಯ ವರಮಾನದ ಲೆಕ್ಕಾಚಾರಕ್ಕೆ ಆಧಾರ. ಉತ್ಪಾದನೆಯಾದ ಸರಕು ಸೇವೆಗಳ ಮೌಲ್ಯವನ್ನು ಮಾರುಕಟ್ಟೆಯ ಬೆಲೆಯ ಲೆಕ್ಕದಲ್ಲಿ ಕಟ್ಟಿದ್ದಾದರೆ ಅದು ಮಾರುಕಟ್ಟೆಯ ಬೆಲೆಯಾಧಾರದ ರಾಷ್ಟ್ರೀಯ ವರಮಾನ. ಅದರ ಬದಲು ಉತ್ಪಾದನೆಯ ವಿವಿಧ ಅಂಗಗಳು ಪಡೆಯುವ ಬೆಲೆಗೆ ಅನುಗುಣವಾಗಿ ಮೌಲ್ಯ ನಿಷ್ಕರ್ಷೆ ಮಾಡಿದ್ದಾದರೆ ಅದು ಉತ್ಪಾದನಾಂಗಗಳ ಬೆಲೆಗಳ ರೀತಿಯ ರಾಷ್ಟ್ರೀಯ ವರಮಾನ. ಈ ರೀತಿ ಉತ್ಪಾದನ ಗಣತಿ ಮಾಡುವಾಗ ಒಂದು ದೇಶದಲ್ಲಿ ವಾಸಿಸುತ್ತಿರುವವರ ಶ್ರಮ ಮತ್ತು ಬಂಡವಾಳಗಳ ಮೂಲಕ ಆದ ಉತ್ಪಾದನೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು. ಆದರೆ ಇಂಥವರು ಯಾರು ಎಂಬುದನ್ನು ಕೆಲವು ವೇಳೆ ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಒಬ್ಬ ವ್ಯಕ್ತಿ ಖಾಯಂ ಆಗಿ ಒಂದು ದೇಶದವನೇ ಆದರೂ ಆತ ಇನ್ನೊಂದು ದೇಶದಲ್ಲಿ ಕೆಲಸ ಮಾಡುತ್ತಿರಬಹುದು. ಆತ ಕೆಲಸ ಮಾಡುತ್ತಿರುವ ಸಂಸ್ಥೆಯ ಮಾಲೀಕ ಮೂರನೆಯ ದೇಶದವನಾಗಿರಬಹುದು. ಒಂದು ದೇಶದ ಖಾಯಂ ನಿವಾಸಿ ಯಾರು ಎಂಬುದರ ಬಗ್ಗೆ ಎಲ್ಲ ದೇಶಗಳಲ್ಲೂ ಏಕರೀತಿಯ ಅರ್ಥವಿವರಣೆಯಿಲ್ಲ.

ಉತ್ಪಾದನ ಗಣತಿಯ ಮೂಲಕ ರಾಷ್ಟ್ರೀಯ ವರಮಾನವನ್ನು ಅಳೆಯಬೇಕಾದರೆ ಮುಖ್ಯವಾಗಿ ವಿವಿಧ ಉತ್ಪನ್ನಗಳ ಅಂಕಿ–ಅಂಶಗಳು ಸಿಕ್ಕಬೇಕು; ಈ ಅಂಕಿ–ಅಂಶಗಳು ಆದಷ್ಟು ಖಚಿತವಾಗಿರಬೇಕು. ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಉತ್ಪಾದಕರು ಸಾಮಾನ್ಯವಾಗಿ ಅಂಕಿ–ಅಂಶ ಇಟ್ಟಿರುತ್ತಾರೆ. ಇವನ್ನು ಸಂಗ್ರಹಿಸಲು ಸಾಕಷ್ಟು ನಿಪುಣರೂ ಅಲ್ಲಿ ಇರುತ್ತಾರೆ. ರಾಷ್ಟ್ರೀಯ ವರಮಾನವನ್ನು ಅಳೆಯುವಾಗ ಉತ್ಪಾದನೆಯ ಅಥವಾ ಸೇವೆಗಳ ಮೌಲ್ಯ ಎರಡು ಸಲ ಎಣಿಕೆಗೆ ಸೇರದಂತೆ ನೋಡಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಬ್ರೆಡ್ಡಿನ ಉತ್ಪಾದನೆಯ ಲೆಕ್ಕ ಹಾಕುವಾಗ ಅದರಲ್ಲಿ ಅಡಕವಾಗಿರುವ ಗೋದಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಒಂದು ವರ್ಷದಲ್ಲಿ ಒಂದು ಗುಂಪಿನ ಜನರಿಂದ ಉತ್ಪಾದನೆಯಾದ ಒಟ್ಟು ಉತ್ಪಾದನೆಯಲ್ಲಿ ಬೇರೆಯವರಿಂದ ಪಡೆಯಲಾದ ಉತ್ಪಾದನೆಯನ್ನು ಕಳೆದರೆ ಉಳಿಯುವುದೇ ನಿಜವಾದ ಉತ್ಪಾದನೆ. ಬ್ರೆಡ್ಡಿನಲ್ಲಿ ವಸ್ತುತಃ ಅಡಕವಾಗಿರುವ ಗೋದಿಯ ಪ್ರಮಾಣ ಎಲ್ಲರಿಗೂ ಸುಲಭವಾಗಿ ತಿಳಿಯುತ್ತದೆ. ಅದೇ ರೀತಿ ಉಣ್ಣೆಯ ಬಟ್ಟೆಯ ಉತ್ಪಾದನೆಯಲ್ಲಿ ಉಣ್ಣೆ ಸೇರಿರುವುದಾದರೂ ಆ ಬಟ್ಟೆಯ ಉತ್ಪಾದನೆಯಲ್ಲಿ ಪ್ರತಿ ವರ್ಷವೂ ಉಣ್ಣೆಯ ದಾರ ತೆಗೆಯುವ ಮತ್ತು ಬಟ್ಟೆ ನೇಯುವ ಯಂತ್ರಗಳ ಸವೆದು ಹೋದ ಭಾಗವೂ ಸೇರಿರುತ್ತದೆಯೆನ್ನುವುದು ಗೋಚರವಾಗುವುದಿಲ್ಲ. ಬಂಡವಾಳ ವಸ್ತುವಿನ ಸವೆತ ಸಂರಕ್ಷಣೆಗಳ ವೆಚ್ಚವನ್ನೂ ಒಟ್ಟು ಉತ್ಪಾದನೆಯಲ್ಲಿ ಕಳೆಯಬೇಕಾಗುತ್ತದೆ.

ಅಭಿವೃದ್ಧಿ ಹೊಂದಿಲ್ಲದ ಅಥವಾ ಹೊಸದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ರಾಷ್ಟ್ರೀಯ ವರಮಾನವನ್ನು ಉತ್ಪಾದನ ಗಣತಿಯ ವಿಧಾನದ ಮೂಲಕ ಅಳೆಯಲು ಅನೇಕ ತೊಂದರೆಗಳಿವೆ. ಮೊದಲನೆಯದಾಗಿ ಉತ್ಪಾದನೆಯ ಮೌಲ್ಯವನ್ನು ಅಳೆಯುವಾಗ ಸಾಮಾನ್ಯವಾಗಿ ದೇಶದಲ್ಲಿ ಉತ್ಪನ್ನವಾಗುವ ಸರಕು ಮತ್ತು ಸೇವೆಗಳ ಬಹುಭಾಗ ಹಣಕ್ಕೆ ಪ್ರತಿಯಾಗಿ ವಿನಿಮಯವಾಗುತ್ತದೆಂದು ಒಪ್ಪಬಹುದು. ಆದರೆ ಭಾರತದಂಥ ದೇಶದಲ್ಲಿ ಉತ್ಪಾದನೆಯಾಗುವ ಸರಕು ಸೇವೆಗಳ ಗಣನೀಯ ಪ್ರಮಾಣ ಮಾರುಕಟ್ಟೆಗೆ ಬರುವುದೇ ಇಲ್ಲ. ಈ ಭಾಗ ಉತ್ಪಾದಕರಿಂದಲೇ ಅನುಭೋಗಿಸಲ್ಪಡುತ್ತದೆ. ಅಥವಾ ಬೇರೆ ವಸ್ತು ಸೇವೆಗಳಿಗೆ ವಿನಿಮಯವಾಗುತ್ತದೆ. ಆದ್ದರಿಂದ ಇವುಗಳಿಗೆ ನಾವು ಬೆಲೆ ಕಟ್ಟಬೇಕಾಗುತ್ತದೆ. ಇದು ಸುಲಭವಲ್ಲ. ಇಂಥ ಪರಿಸ್ಥಿತಿಯಲ್ಲಿ ದೇಶದ ವರಮಾನವನ್ನು ವರ್ಗೀಕರಣ ಮಾಡುವಾಗ ಹಣ ಬಳಸುವ ಹಾಗೂ ಹಣ ಬಳಸದ ವಿಭಾಗಗಳೆಂದು ವರ್ಗೀಕರಣ ಮಾಡಬೇಕಾಗುತ್ತದೆ.

ಎರಡನೆಯದಾಗಿ ಭಾರತದಂಥ ದೇಶದಲ್ಲಿ ಅನೇಕ ಉತ್ಪಾದಕರು ಉತ್ಪಾದನೆಯ ಪ್ರಮಾಣ ಮತ್ತು ಬೆಲೆಯ ವಿಷಯದಲ್ಲಿ ಯಾವ ಖಚಿತ ಅಂದಾಜನ್ನೂ ಹೊಂದಿಲ್ಲದ್ದರಿಂದ ಉತ್ಪಾದನೆಗೆ ಬೆಲೆ ಕಟ್ಟುವುದು ಕಷ್ಟ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆರ್ಥಿಕ ಅಂಕಿ–ಅಂಶಗಳು ನೇರವಾಗಿ ಉತ್ಪಾದಕರಿಂದ ಸಂಗ್ರಹಿತವಾಗುತ್ತವೆ. ಅವರು ತಾವು ತೊಡಗಿರುವ ಆರ್ಥಿಕ ಚಟುವಟಿಕೆಗಳ ಮೂಲಕ ಆಗುವ ಉತ್ಪಾದನೆಯ ಪ್ರಮಾಣ ಮತ್ತು ಬೆಲೆಯ ಅರಿವನ್ನು ಪಡೆದಿರುತ್ತಾರೆ. ಆದರೆ ಉತ್ಪಾದಕರಿಂದ ನೇರವಾಗಿ ಉತ್ಪಾದನೆಯ ಬೆಲೆಯನ್ನು ಸಂಗ್ರಹಿಸುವಾಗ ಹಿಂದುಳಿದ ದೇಶಗಳಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಕೋಟ್ಯಂತರ ಜನರನ್ನು ನೇರವಾಗಿ ಸಂದರ್ಶಿಸುವುದರಲ್ಲಿ ಆಗುವ ಅಗಾಧ ಖರ್ಚು, ಮಾಹಿತಿ ಸಂಗ್ರಹಿಸಲು ಅಗತ್ಯವಾದ ತಜ್ಞರ ಅಭಾವ, ಅತ್ಯಧಿಕ ಜನರ ನಿರಕ್ಷರತೆ, ಸ್ವಂತ ಅನುಭೋಗಕ್ಕಾಗಿಯೇ ನಡೆಯುತ್ತಿರುವ ಬಹುಪಾಲು ಉತ್ಪಾದನೆ, ಉತ್ಪಾದಕರಲ್ಲಾಗಲಿ ಅನುಭೋಗಿಗಳಲ್ಲಾಗಲಿ ತಮ್ಮ ಉತ್ಪಾದನ ಅಥವಾ ಅನುಭೋಗದ ವಿಷಯದಲ್ಲಿ ಯಾವ ಲೆಕ್ಕವನ್ನೂ ಇಡುವ ಅಭ್ಯಾಸವಿಲ್ಲದ ಸ್ಥಿತಿ–ಇವು ಮುಖ್ಯ ಸಮಸ್ಯೆಗಳು. ಇಂಥ ಸಂದರ್ಭಗಳಲ್ಲಿ ಉತ್ಪಾದನೆಯ ಬೆಲೆಯನ್ನು ಅಳೆಯುವಾಗ ಸ್ವಲ್ಪಮಟ್ಟಿಗೆ ಊಹೆಯ ಅಂಶವನ್ನು ಸೇರಿಸಬೇಕಾಗುತ್ತದೆ. ಅದರಲ್ಲೂ ಸಣ್ಣ ಪ್ರಮಾಣದ ಉದ್ಯಮಗಳಲ್ಲಿ ಮತ್ತು ಗೃಹೋದ್ಯಮಗಳಲ್ಲಿ ಈ ಊಹೆಯ ಪ್ರಮಾಣ ಹೆಚ್ಚು.

ಮೂರನೆಯದಾಗಿ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಭಾರತದಲ್ಲಿ ಕಸುಬುಗಳನ್ನು ವ್ಯವಸಾಯ, ಕೈಗಾರಿಕೆ, ವ್ಯಾಪಾರ ಈ ರೀತಿ ನಿರ್ದಿಷ್ಟವಾಗಿ ವಿಂಗಡಣೆ ಮಾಡಲು ಸಾಧ್ಯವಿಲ್ಲ. ಒಂದೇ ಗುಂಪಿನವರು ವ್ಯವಸಾಯ ಕೈಗಾರಿಕೆ ವ್ಯಾಪಾರಗಳೇ ಮುಂತಾದ ಚಟುವಟಿಕೆಗಳಲ್ಲಿ ನಿರತರಾಗಿರುವ ಸಂಭವವೂ ಉಂಟು. ಉದಾಹರಣೆಗೆ, ಬೇಸಾಯಗಾರರಲ್ಲೆ ಅನೇಕರು ಪಟ್ಟಣಗಳಲ್ಲಿನ ಕೈಗಾರಿಕೆಗಳಲ್ಲೂ ಕೆಲಸ ಮಾಡಬಹುದು. ವ್ಯವಸಾಯದ ಕೆಲಸ ಇಲ್ಲದಾಗ ಸಣ್ಣ ಕೈಗಾರಿಕೆಗಳಲ್ಲೂ ಕೂಲಿ ಕೆಲಸಗಳಲ್ಲೂ ನಿರತರಾಗಬಹುದು. ಆದ್ದರಿಂದ ಕೈಗಾರಿಕಾ ಮೂಲದಿಂದ ಉತ್ಪನ್ನವಾಗುವ ವರಮಾನವನ್ನು ಅಳೆಯುವಾಗ ಆ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು ಕೈಗಾರಿಕಾ ಕೆಲಸದಿಂದ ಮಾತ್ರ ವರಮಾನ ಪಡೆಯುತ್ತಿದ್ದಾರೆಂದು ಹೇಳಲಾಗುವುದಿಲ್ಲ.

ನಾಲ್ಕನೆಯದಾಗಿ ಭಾರತದಂಥ ದೊಡ್ಡ ದೇಶದಲ್ಲಿ ಒಂದು ಪ್ರದೇಶದ ಪರಿಸ್ಥಿತಿ ಇನ್ನೊಂದರಲ್ಲಿರುವುದಿಲ್ಲ. ಒಂದು ಪ್ರದೇಶದಲ್ಲಿ ಸಂಗ್ರಹಿಸಲಾದ ಅಂಕಿ–ಅಂಶಗಳ ಆಧಾರದ ಮೇಲೆ ಮಾಡಬಹುದಾದ ನಿರ್ಧಾರವನ್ನು ಬೇರೊಂದು ಪ್ರದೇಶಕ್ಕೆ ಅನ್ವಯಿಸಲು ಸಾಧ್ಯವಿಲ್ಲ. ಆದ್ದರಿಂದ ರಾಷ್ಟ್ರೀಯ ವರಮಾನದ ಅಂದಾಜು ಮಾಡುವಾಗ ಸಂಗ್ರಹಿಸುವ ಅಂಕಿ–ಅಂಶಗಳ ಸ್ವರೂಪದ ಸ್ಪಷ್ಟ ಕಲ್ಪನೆ ಇರುವುದಗತ್ಯ.

ಈ ಎಲ್ಲ ತೊಂದರೆಗಳ ಜೊತೆಗೆ ಅನೇಕ ಕ್ಷೇತ್ರಗಳಲ್ಲಿ ಅಂಕಿ–ಅಂಶಗಳನ್ನು ಸಂಗ್ರಹಿಸುವುದೇ ದೊಡ್ಡ ಸಮಸ್ಯೆ. ವ್ಯವಸಾಯ ಕ್ಷೇತ್ರಗಳಲ್ಲಿ ಉತ್ಪನ್ನ ಬೆಲೆ ಮತ್ತು ಉತ್ಪಾದನೆಯ ಖರ್ಚುಗಳ ವಿಷಯದಲ್ಲಿ ಇರುವ ಅಂಕಿ–ಅಂಶಗಳು ಸಾಮಾನ್ಯವಾಗಿ ಕಾರ್ಖಾನೆಗಳಿಗೆ ಮಾತ್ರ ಸೀಮಿತವಾಗಿದೆ. ಸರ್ಕಾರದ ಕಾರ್ಯಗಳ ಬಗ್ಗೆ ಇರುವ ಅಂಕಿ–ಅಂಶಗಳು ವಿಪುಲವಾಗಿದ್ದರೂ ಅವನ್ನು ನಿರ್ದಿಷ್ಟವಾದ ಆರ್ಥಿಕ ವಿಂಗಡಣೆಗೆ ಒಳಪಡಿಸುವುದು ಕಷ್ಟ. ಕೆಲಸದಲ್ಲಿ ನಿರತರಾಗಿರುವವರ ಅಂಕಿ–ಅಂಶಗಳು ನಿಖರವಾಗಿಲ್ಲ. ಅಂತಾರಾಷ್ಟ್ರೀಯ ಲೆಕ್ಕದಲ್ಲೂ ಅಂಕಿ–ಅಂಶಗಳು ಪೂರ್ಣವಾಗಿ ಖಚಿತವಾಗಿರುವುದೆಂದು ಹೇಳಲು ಸಾಧ್ಯವಿಲ್ಲ.

ಈ ತೊಂದರೆಗಳ ಜೊತೆಗೆ ಅನೇಕ ಆರ್ಥಿಕ ವಿಭಾಗಗಳಲ್ಲಿ ಅಂಕಿ–ಅಂಶಗಳು ದೊರಕುವುದಿಲ್ಲ. ವ್ಯವಸಾಯದಲ್ಲಿ ಉತ್ಪಾದನೆಯ ಖರ್ಚಿನ ರಚನೆ, ವ್ಯವಸಾಯದಲ್ಲಿ ನಿರತರಾಗಿರುವವರ ಅನುಭೋಗಿ ವೆಚ್ಚ ಮತ್ತು ಅವರ ಉಳಿತಾಯ–ಇವುಗಳ ಬಗ್ಗೆ ನಿಖರವಾದ ಅಂಕಿ–ಅಂಶಗಳು ಸಿಕ್ಕುವುದಿಲ್ಲ. ಪಟ್ಟಣದಲ್ಲಿರುವ ಜನರಲ್ಲೂ ವಿವರವಾದ ಅನುಭೋಗಿ ಖರ್ಚು ಮತ್ತು ಉಳಿತಾಯದ ಬಗ್ಗೆ ಅಂಕಿ–ಅಂಶಗಳು ಸಿಗುವುದಿಲ್ಲ. ವಿವಿಧ ವರ್ಗಗಳಲ್ಲಿ ಯಾವ ರೀತಿಯಲ್ಲಿ ಆದಾಯ ಹಂಚಿಕೆಯಾಗಿದೆ ಎಂಬ ವಿಷಯದಲ್ಲಿ ಖಚಿತವಾದ ಅಂಕಿ–ಅಂಶಗಳ ಅಭಾವವಿದೆ. ಮನೆಗೆಲಸ, ಗ್ರಾಮಾಂತರ ಸಾರಿಗೆ, ಬಂಡವಾಳ ಶೇಖರಣೆ–ಇವುಗಳ ಬಗ್ಗೆ ಸರಿಯಾದ ಅಂಕಿ–ಅಂಶಗಳು ಸಿಗುವುದಿಲ್ಲ. ಒಟ್ಟಿನಲ್ಲಿ ಅಂಕಿ–ಅಂಶಗಳ ಅಭಾವ ಅಥವಾ ಅಪೂರ್ಣತೆಯ ಕಾರಣದಿಂದ ಉತ್ಪಾದನ ಗಣತಿ ಬಲು ಕಷ್ಟದ ಕೆಲಸ.

ಒಂದು ದೇಶದ ರಾಷ್ಟ್ರೀಯ ವರಮಾನವನ್ನು ಅಳೆಯುವಾಗ ಉತ್ಪಾದನ ಗಣತಿ ಹಾಗೂ ವರಮಾನ ಗಣತಿ, ಈ ಎರಡು ವಿಧಾನಗಳನ್ನೂ ಉಪಯೋಗಿಸಬಹುದು. ಭಾರತದಲ್ಲೂ ರಾಷ್ಟ್ರೀಯ ವರಮಾನವನ್ನು ಅಳೆಯುವಾಗ ಈ ಎರಡು ವಿಧಾನಗಳಲ್ಲಿ ಯಾವುದೊಂದನ್ನೂ ಪೂರ್ತಿಯಾಗಿ ಎಲ್ಲ ಕ್ಷೇತ್ರಗಳಲ್ಲೂ ಅನ್ವಯಿಸಲು ಸಾಧ್ಯವಿಲ್ಲ. ಇವೆರಡನ್ನೂ ಹೊಂದಿಸಿ ಬಳಸಬೇಕಾಗುತ್ತದೆ.

ಗಣತಿಯ ಅಂಕಿ–ಅಂಶಗಳ ಅಭಾವವಿರುವ ಕಡೆ ಅಥವಾ ಅಪೂರ್ಣವಾಗಿರುವ ಕಡೆ ಊಹೆಯ ನೆರವು ಪಡೆಯಬೇಕಾಗುತ್ತದೆ. ಇದರಿಂದ ರಾಷ್ಟ್ರೀಯ ವರಮಾನದ ಅಂದಾಜುಗಳು ಪೂರ್ಣವಾಗಿ ಸರಿಯಾಗಿರುತ್ತವೆಂದು ಹೇಳಲಾಗುವುದಿಲ್ಲ. ಉತ್ಪಾದನ ಅಂಕಿ–ಅಂಶಗಳು ಸರಿಯಾಗಿ ದೊರೆಯುವ ಪಾಶ್ಚಾತ್ಯ ದೇಶಗಳಲ್ಲೂ ರಾಷ್ಟ್ರೀಯ ವರಮಾನದ ಅಂದಾಜು ಪೂರ್ಣವಾಗಿ ಸರಿಯಾಗಿರುವುದಿಲ್ಲ.

ಈಗ ಭಾರತದಲ್ಲಿ ಪ್ರತಿಯೊಂದು ರಾಜ್ಯದಲ್ಲೂ ಅಂಕಿ–ಅಂಶಗಳನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿದೆ. ಕೇಂದ್ರೀಯ ಅಂಕಿ–ಅಂಶ ಸಂಸ್ಥೆಯ ಒಂದು ಭಾಗವಾಗಿ ರಾಷ್ಟ್ರೀಯ ವರಮಾನ ಅಂದಾಜು ಘಟಕ ಕೆಲಸ ಮಾಡುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಂಕಿ–ಅಂಶ ಸಂಗ್ರಹಣಾಧಿಕಾರಿಗಳ ಸಭೆ ಆಗಾಗ ಸೇರಿ ಇದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಿ ಪರಿಹರಿಸುವ ಕ್ರಮ ಕೈಗೊಳ್ಳಲಾಗಿದೆ. ಈ ಕ್ರಮಗಳ ಫಲವಾಗಿ ಸಂಗ್ರಹಿಸಿದ ಅಂಕಿ–ಅಂಶಗಳ ಗುಣ ಮತ್ತು ವ್ಯಾಪಕತೆ ಹೆಚ್ಚುತ್ತಿದೆ. ಆದ್ದರಿಂದ ಉತ್ಪಾದನ ಗಣತಿಯ ವಿಧಾನದಿಂದ ಹೆಚ್ಚು ಹೆಚ್ಚು ನಿಖರವಾಗಿ ರಾಷ್ಟ್ರೀಯ ವರಮಾನದ ಅಂದಾಜು ಮಾಡುವುದು ಸಾಧ್ಯವಾಗಿದೆ. (ಎಸ್.ಎಂ.ವಿ.)

**ಉತ್ಪಾದನ ನಿರ್ವಹಣೆ:** ಒಂದು ಉದ್ಯಮಸಂಸ್ಥೆಯ ಉತ್ಪತ್ತಿಯ ಮೊತ್ತದ ಯೋಜನೆ; ಪದಾರ್ಥದ ಉತ್ಪಾದನೆಗೆ ಅಗತ್ಯವಾದ ನಾನಾ ಕ್ರಿಯೆಗಳ ನಿರ್ದೇಶನ, ಸಂಘಟನೆ ಹಾಗೂ ನಿಯಂತ್ರಣ (ಪ್ರೊಡಕ್ಷನ್ ಮ್ಯಾನೇಜ್‌ಮೆಂಟ್). ಎಲ್ಲಿ, ಹೇಗೆ, ಯಾವಾಗ ಪದಾರ್ಥವನ್ನು ಉತ್ಪಾದಿಸಬೇಕು ಎಂಬ ಯೋಜನೆ, ತದನುಗುಣವಾಗಿ ಉತ್ಪಾದನಕಾರ್ಯನಿರ್ವಹಣೆ, ತತ್ಸಂಬಂಧವಾಗಿ ಆಡಳಿತ ಮಂಡಳಿಗೆ ಸಮಯೋಚಿತ ಸಲಹೆ–ಇವೆಲ್ಲವೂ ಇದರಲ್ಲಿ ಅಂತರ್ಗತವಾಗಿವೆ. ಒಂದು ಸಂಸ್ಥೆಯಲ್ಲಿ ಉತ್ಪಾದನ ವಿಭಾಗ ಅತಿ ಮುಖ್ಯ ಅಂಗ. ಆಡಳಿತ ಮಂಡಲಿಯ ಆದೇಶಾನುಸಾರ ತಯಾರು ಮಾಡುವುದು ಇದರ ಕೆಲಸ. ಒಂದು ಸಂಸ್ಥೆಯ ಅಳಿವು–ಉಳಿವುಗಳು ಆ ಸಂಸ್ಥೆಯ ಉತ್ಪಾದನ ನಿರ್ವಹಣೆಯನ್ನೇ ಅವಲಂಬಿಸಿದೆ. ಪದಾರ್ಥವನ್ನು ಸರಿಯಾದ ಕಾಲದಲ್ಲಿ. ಅಚ್ಚುಕಟ್ಟಾಗಿ. ಕಡಿಮೆ ವೆಚ್ಚದಲ್ಲಿ ಗಿರಾಕಿಗಳ ಅಭಿಲಾಷೆಗೆ ತಕ್ಕಂತೆ ಉತ್ಪಾದಿಸಬೇಕಾದರೆ ಈ ಕಾರ್ಯಕ್ಕೆ ಅನೇಕ ವಿಭಾಗಗಳ ಸಹಕಾರ ಅತ್ಯಾವಶ್ಯಕ. ಉತ್ಪಾದನಕಾರ್ಯವನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಒಂದು ಬೃಹತ್ ನಿರ್ವಹಣ ವ್ಯವಸ್ಥೆಯನ್ನೇ ಸ್ಥಾಪಿಸಿ ನಡೆಸ ಬೇಕಾಗುತ್ತದೆ.

**ಉತ್ಪಾದನಕಾರ್ಯದ ವ್ಯಾಪ್ತಿ:** ಒಂದು ದೃಷ್ಟಿಯಲ್ಲಿ ಉತ್ಪಾದನ ಕಾರ್ಯದ ವ್ಯಾಪ್ತಿ ಬಲು ಕಿರಿದೆನಿಸಬಹುದು. ಪದಾರ್ಥ ತಯಾರಿಕೆಯಷ್ಟೇ ಇದರ ಕೆಲಸವೆಂದೂ ಬೇರೆ ಯಾವ ಜವಾಬ್ದಾರಿಯೂ ಇದರದಲ್ಲವೆಂದೂ ಭಾವಿಸುವುದು ತಪ್ಪು. ಪದಾರ್ಥ ತಯಾರಿಕೆಯಷ್ಟೇ ಇದರ ಹೊಣೆಯಲ್ಲ. ತಯಾರಿಕೆಗೆ ಮೊದಲು ಆ ಪದಾರ್ಥದ ಭವಿಷ್ಯವನ್ನು ಅರಿತುಕೊಳ್ಳಬೇಕು. ಅದನ್ನು ತಯಾರು ಮಾಡಲು ಯಾವ ಯಾವ ಸಾಧನ ಸಾಮಗ್ರಿ ಎಷ್ಟೆಷ್ಟು ಪ್ರಮಾಣದಲ್ಲಿ ಯಾವ ಯಾವ ರೀತಿಯಲ್ಲಿ ಯಾವ ಯಾವ ಕಾಲಕ್ಕೆ ಅಗತ್ಯ. ಯಾವ ಬಗೆಯ ಕುಶಲಕೆಲಸಗಾರರು ಎಷ್ಟು ಸಂಖ್ಯೆಯಲ್ಲಿ ಯಾವ ಕಾಲಕ್ಕೆ ಒದಗಬೇಕು. ತಯಾರಿಕೆಯ ವಿಧಾನಗಳು ಹೇಗಿರಬೇಕು–ಎಂಬ ವಿಷಯಗಳ ಜೊತೆಯಲ್ಲಿ ಉತ್ಪಾದನೆಯ ವೆಚ್ಚ, ಗುಣ. ಉಪಯೋಗ ಇತ್ಯಾದಿಗಳನ್ನು ನಿರ್ಧರಿಸುವ ಜವಾಬ್ದಾರಿಯೂ ಉತ್ಪಾದನ ಕಾರ್ಯದ ಸೀಮೆಯೊಳಗೆ ಬರತಕ್ಕದ್ದೇ ಆಗಿದೆ.

**ಉತ್ಪಾದನ ಸಂಘಟನೆ:** ಕಾರ್ಖಾನೆಯ ಪ್ರಧಾನ ಅಂಗವಾದ ಉತ್ಪಾದನ ವಿಭಾಗ ಮಿಕ್ಕ ವಿಭಾಗಗಳಿಂದ ದೂರವಾಗಿ ಉಳಿಯುವಂತಿಲ್ಲ. ಉತ್ಪಾದನ ಕಾರ್ಯದಲ್ಲಿ ನಿರತನಾದ ವ್ಯವಸ್ಥಾಪಕನಿಗೆ ಇತರ ಎಲ್ಲ ವಿಭಾಗಗಳ ಸಹಾಯ ಸಹಕಾರ ಅತ್ಯಂತ ಅವಶ್ಯ. ಉತ್ಪಾದಿಸಲಿರುವ ಪದಾರ್ಥಕ್ಕೆ ಬೇಡಿಕೆ ಇದೆಯೆ, ಇಲ್ಲವೆ–ಎಂಬುದನ್ನು ಮೊಟ್ಟಮೊದಲು ಆತ ವಿಕ್ರಯ ವಿಭಾಗದ ಮುಖ್ಯಸ್ಥನಿಂದ ತಿಳಿದುಕೊಳ್ಳಬೇಕು. ಬೇಡಿಕೆ ಇಲ್ಲದ ಪಕ್ಷದಲ್ಲಿ ಅದಕ್ಕೆ ಮಾರುಕಟ್ಟೆ ಸೃಷ್ಟಿ ಸಾಧ್ಯವೇ? ಮಾರುಕಟ್ಟೆಯಲ್ಲಿ ಯಾವ ಬಗೆಯ ಪದಾರ್ಥಕ್ಕೆ ಬೇಡಿಕೆಯುಂಟು ಎಂಬುದನ್ನು ಆತ ತಿಳಿದುಕೊಳ್ಳಬೇಕು. ಉತ್ಪಾದನೆಯಲ್ಲಿ ತೊಡಗಲು ಸಾಕಷ್ಟು ಕೆಲಸಗಾರರು ಇರುವರೆ, ಇಲ್ಲವೆ ಎಂಬುದನ್ನು ಕಾರ್ಮಿಕಾಧಿಕಾರಿಯಿಂದ ಅರಿತುಕೊಳ್ಳುವುದಗತ್ಯ. ಯಂತ್ರ ಸಜ್ಜಿಕೆ, ಆರ್ಥಿಕ ಸಹಾಯ, ಸರಕು ಸರಬರಾಜು ಇತ್ಯಾದಿ ವಿಷಯಗಳ ಬಗ್ಗೆ ಆಯಾ ವಿಭಾಗಾಧಿಕಾರಿಗಳೊಡನೆ ಚರ್ಚಿಸಿ ಅನಂತರ ಉತ್ಪಾದನೆಯ ಯೋಜನೆ ತಯಾರಿಸಬೇಕು. ಈ ಯಾವ ಪೂರ್ವ ಸಿದ್ಧತೆಯೂ ಇಲ್ಲದೆಯೇ ಉತ್ಪಾದನೆಯಲ್ಲಿ ತೊಡಗಿದರೆ ತೊಂದರೆ ಉದ್ಭವಿಸುವುದು ಖಂಡಿತ. ಕಚ್ಚಾ ಸಾಮಗ್ರಿ ಸರಬರಾಜು ಇಲ್ಲದೆಯೂ ಯಂತ್ರಸೌಲಭ್ಯ ದೊರೆಯದೆಯೂ ಕೆಲಸಗಾರರ ಅಭಾವದಿಂದಲೂ ಉತ್ಪಾದನೆ ಸ್ಥಗಿತಗೊಳ್ಳಬಹುದು.

ಪದಾರ್ಥಗಳಿಗಾಗಿ ಗ್ರಾಹಕರಿಂದ ಆದೇಶ ಬಂದಾಗ, ಅಂಥ ಬೇಡಿಕೆಯನ್ನು ಒಪ್ಪಿಸಿಕೊಳ್ಳುವ ಮೊದಲು ಆಡಳಿತ ಮಂಡಲಿಯವರು ಉತ್ಪಾದನ ವ್ಯವಸ್ಥಾಪಕನ ಸಲಹೆ ಪಡೆಯುವ ವಾಡಿಕೆಯುಂಟು. ಈತನ ಸಲಹೆಯ ಮೇಲೆಯೇ ಸರಕು ಸರಬರಾಜು ಮಾಡುವ ಅಥವಾ ಬಿಡುವ ನಿರ್ಧಾರ ಕೈಗೊಳ್ಳಲಾಗುತ್ತದೆ.

ಉತ್ಪಾದನ ನಿರ್ವಹಣೆಯ ವ್ಯಾಪ್ತಿ ವಿಶಾಲವಾಗಿರುವುದರಿಂದ, ಎಲ್ಲ ಕಾರ್ಯಗಳನ್ನೂ ಸುಲಲಿತವಾಗಿಯೂ ಅಚ್ಚುಕಟ್ಟಾಗಿಯೂ ನಿರ್ವಹಿಸುವ ಉದ್ದೇಶದಿಂದ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಇದಕ್ಕೆ ಸಹಾಯಕವಾಗಿ ವಿಭಾಗಗಳಿರುತ್ತವೆ. ಅವುಗಳಲ್ಲಿ ಮುಖ್ಯವಾದವೆಂದರೆ: 1 ಉತ್ಪನ್ನ ಸಂಶೋಧನೆ ವಿಭಾಗ, 2 ಉತ್ಪನ್ನ ಕಾರ್ಯದ ನಿಯೋಜನೆ ಹಾಗೂ ನಕ್ಷಾಲೇಖನ ವಿಭಾಗ, 3 ಸಾಮಗ್ರಿವಿವರಣ, ಸಂಗ್ರಹಣ, ದಾಸ್ತಾನು ವಿಭಾಗ, 4 ಪ್ರಮಾಣ ವಿಭಾಗ, 5 ಪರೀಕ್ಷಣ ವಿಭಾಗ, 6 ಗುಣ ನಿಯಂತ್ರಣ ವಿಭಾಗ, 7 ವೆಚ್ಚ ವಿಶ್ಲೇಷಣೆ ಮತ್ತು ವೆಚ್ಚ ನಿಯಂತ್ರಣ ವಿಭಾಗ ಹಾಗೂ 8 ಕಾರ್ಯವಿಧಾನದ ಅಧ್ಯಯನ ಹಾಗೂ ಸಿದ್ಧತಾ ವಿಭಾಗ, ಸಣ್ಣ ಸಣ್ಣ ಉದ್ಯಮಸಂಸ್ಥೆಗಳಲ್ಲಿ ಮೇಲ್ಕಂಡ ವಿಭಾಗಗಳ ಕಾರ್ಯವನ್ನೆಲ್ಲ ಉತ್ಪಾದನೆಯ ವಿಭಾಗವೇ ನಿರ್ವಹಿಸಬೇಕಾಗುತ್ತದೆ.

ಇನ್ನು ಕೆಲವು ಸಂಸ್ಥೆಗಳು ಉತ್ಪಾದನ ಕಾರ್ಯವನ್ನು ನಿರ್ವಹಿಸುವ ರೀತಿ ಭಿನ್ನವಾದದ್ದು. ಅಲ್ಲಿ ಈ ಕಾರ್ಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗುತ್ತದೆ : 1 ಕಾರ್ಯಾತ್ಮಕ ವ್ಯವಸ್ಥೆ (ಫಂಕ್ಷನಲ್ ಆರ್ಗನೈಸೇಷನ್) ಮತ್ತು 2 ಪಂಕ್ತಿ ಮತ್ತು ಸಿಬ್ಬಂದಿ ವ್ಯವಸ್ಥೆ (ಲೈನ್ ಅಂಡ್ ಸ್ಟ್ಯಾಫ್ ಆರ್ಗನೈಸೇಷನ್).

ಶ್ರಮವಿಭಜನೆ ಹಾಗೂ ವಿಶೇಷ ಪರಿಶ್ರಮಗಳಿಂದ ಲಭಿಸುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು, ಉತ್ಪಾದನ ಕಾರ್ಯ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವುದು ಕಾರ್ಯಾತ್ಮಕ ವ್ಯವಸ್ಥೆಯ ಹೊಣೆ. ಉತ್ಪಾದನೆಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುವುದು ಸಾಧ್ಯವಾಗುವಂತೆ ನಾನಾ ವಿಭಾಗಗಳನ್ನು ತೆರೆದು ಉತ್ಪಾದನ ಕಾರ್ಯ ನೇರಮಾರ್ಗದಲ್ಲಿ ನಡೆಯುವಂತೆ ಏರ್ಪಡಿಸುವ ವ್ಯವಸ್ಥೆಯೇ ಪಂಕ್ತಿ ಮತ್ತು ಸಿಬ್ಬಂದಿ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಸೂಚನೆಗಳು ಮೇಲಿನ ಅಧಿಕಾರಿಯಿಂದ ಕೆಳಗಿನ ಅಧಿಕಾರಿಗೆ ಕ್ರಮವಾಗಿ ಬರುತ್ತವೆ. ಅದೇ ರೀತಿಯಲ್ಲಿ ಕೆಳಗಿನಿಂದ ವಿಷಯಗಳು ಹಂತ ಹಂತವಾಗಿ ಮೇಲೇರಿ ಉನ್ನತಾಧಿಕಾರಿಯನ್ನು ತಲುಪುತ್ತವೆ.

ಉತ್ಪಾದನೆಯ ಬಗ್ಗೆ ನಿರ್ಧಾರ ಕೈಗೊಳ್ಳುವಾಗ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಕೆಲವು ಸಮಸ್ಯೆಗಳು ಸಾಮಾನ್ಯ, ಸುಲಭವಾಗಿ ಪರಿಹಾರ್ಯ. ಮತ್ತೆ ಕೆಲವು ಹೆಚ್ಚು ಮುಖ್ಯ, ಜಟಿಲ. ಇಂಥವುಗಳ ಪರಿಹಾರ ಸುಲಭವೇನಲ್ಲ; ಆದರೆ ಇವನ್ನು ಹಾಗೆಯೇ ಬಿಡಲೂ ಸಲ್ಲ. ಅಂದರೆ ಈ ಸಮಸ್ಯೆಗಳ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಲೇ ಬೇಕಾಗುತ್ತದೆ, ಪರಿಹಾರ ಕಂಡು ಹಿಡಿಯಲೇ ಬೇಕಾಗುತ್ತದೆ.

ಉತ್ಪಾದನೆಯ ಕಾರ್ಯಕ್ಕೆ ಬೇಕಾಗುವ ಜನ, ಧನ, ಸಾಮಗ್ರಿ, ಉತ್ಪಾದನಕಾಲ ಇತ್ಯಾದಿಗಳನ್ನು ಯೋಗ್ಯರೀತಿಯಲ್ಲಿ ಆರಿಸಲೇಬೇಕಾಗುತ್ತದೆ. ಆಗ ಆರ್ಥಿಕ, ತಾಂತ್ರಿಕ ಮತ್ತು ಮಾನವೀಯ ಸಮಸ್ಯೆಗಳು ಉದ್ಭವಿಸುತ್ತವೆ. ಒಂದೊಂದೂ ಒಂದು ದೃಷ್ಟಿಯಿಂದ ಅತಿಮುಖ್ಯವೆನಿಸಿದರೂ ಮತ್ತೊಂದು ದೃಷ್ಟಿಯಿಂದ ಹಾನಿಕರವೆನಿಸಬಹುದು. ತಾಂತ್ರಿಕ ದೃಷ್ಟಿಯಿಂದ ಲಾಭಕರವೆನಿಸಿದ್ದು ಆರ್ಥಿಕವಾಗಿ ನಷ್ಟಕರವಾಗಿರಬಹುದು. ಏನೇ ಆದರೂ ಸಮಸ್ಯೆಗಳನ್ನು ಪರಿಹರಿಸುವಾಗ ಮಾನವೀಯತೆಗೆ ಪ್ರಾಶಸ್ತ್ಯ ಕೊಡುವುದೂ ಅಗತ್ಯವಾದೀತು.

ಉತ್ಪಾದನೆಯ ಸಮಸ್ಯೆಗಳನ್ನು ಪರಿಹರಿಸುವ ಸುಲಭಮಾರ್ಗವೆಂದರೆ ಅವುಗಳ ವಿಶ್ಲೇಷಣೆ; ಚಿಕ್ಕ ತುಂಡುಗಳಾಗಿ ಅವುಗಳ ವಿಭಜನೆ. ಮೊದಲು ಸಾಮಾನ್ಯವಾದ ಸಣ್ಣ ಸಣ್ಣ ಸಮಸ್ಯೆಗಳನ್ನು ಮೂಲ ಸಮಸ್ಯೆಯಿಂದ ಬೇರ್ಪಡಿಸಿಕೊಳ್ಳಬೇಕು. ಅನಂತರ ಆ ಪ್ರತಿಯೊಂದು ಸಮಸ್ಯೆಯೂ ನಿರ್ದಿಷ್ಟ ಉಪಸಮಸ್ಯೆಗಳೊಡನೆ ಬೆರೆಯುವಂತೆ ಮಾಡಿ ಪರೋಕ್ಷ ಮಾರ್ಗದಿಂದ ನಿರ್ದಿಷ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕು. ಕಚ್ಚಾಸಾಮಗ್ರಿಯಿಂದ ಪರಿಪೂರ್ಣ ಪದಾರ್ಥದ ತಯಾರಿಕೆಯೇ ಮುಖ್ಯ ಸಮಸ್ಯೆ. ಈ

ಸಮಸ್ಯೆಯನ್ನು ವಿಶ್ಲೇಷಿಸಿದರೆ ಕಚ್ಚಾಸಾಮಗ್ರಿಯ ಸಮಸ್ಯೆ. ಕಾರ್ಮಿಕರ ಸಮಸ್ಯೆ, ಆರ್ಥಿಕ ಸಮಸ್ಯೆ, ಯಂತ್ರೋಪಕರಣಗಳ ಸಮಸ್ಯೆ ಈ ರೀತಿ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಮೊದಲು ಸರಕಿನ ಸಮಸ್ಯೆಯನ್ನು ತೆಗೆದುಕೊಂಡು ಎಷ್ಟು, ಯಾವಾಗ, ಹೇಗೆ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ದೊರಕಿಸಿಕೊಂಡರೆ ಮೂಲಭೂತ ಸಮಸ್ಯೆಗೆ ಉತ್ತರ ದೊರೆಯುತ್ತದೆ.

**ಮುನ್ಸೂಚನೆ:** ಯಾವ ಪದಾರ್ಥ ತಯಾರು ಮಾಡುವುದಕ್ಕೂ ಮುಂಚೆ ಆ ವಸ್ತುವಿಗೆ ಉತ್ತಮ ಬೇಡಿಕೆಯ ಭವಿಷ್ಯ ಇದೆಯೆ ಇಲ್ಲವೆ ಎಂಬುದನ್ನು ಅರಿಯಬೇಕು. ಇದಕ್ಕಾಗಿ ಮಾರುಕಟ್ಟೆಯ ಸಂಶೋಧನೆ ನಡೆಸಬೇಕು. ಇದು ಗ್ರಾಹಕರ ನೈಜ ಬೇಡಿಕೆಯನ್ನು ತಿಳಿಸುತ್ತದೆ. ಅನುಭೋಗಿಗಳಿಗೆ ಯಾವ ತರದ ಪದಾರ್ಥ ಯಾವ ಕಾಲದಲ್ಲಿ ಎಷ್ಟು ಬೆಲೆಗೆ ಬೇಕಾಗಿದೆ ಎಂಬುದು ಗೊತ್ತಾಗುತ್ತದೆ. ಇದರಿಂದ ಉತ್ಪಾದಕ ಸುಲಭವಾಗಿ ಅದೇ ತೆರದ ಪದಾರ್ಥವನ್ನೇ ತಯಾರುಮಾಡಿ ಲಾಭ ಸಂಪಾದನೆಮಾಡಬಹುದು. ಕೆಲವು ವೇಳೆ ಹೊಸ ಪದಾರ್ಥ ತಯಾರುಮಾಡಲು ಹೊರಟರೆ ಅದಕ್ಕೆ ಬೇಡಿಕೆ ಹುಟ್ಟುವಂತೆ ಮಾಡಲು ಸಾಧ್ಯವಿದೆಯೆ, ಎಂದರೆ ಇದಕ್ಕೆ ಮಾರುಕಟ್ಟೆ ಸೃಷ್ಟಿಸಬಹುದೆ (ಕ್ರಿಯೇಟಿಂಗ್ ದಿ ಮಾರ್ಕೆಟ್) ಎಂಬುದನ್ನು ತಿಳಿಯುವುದು ಅತಿ ಮುಖ್ಯ. ಅಂಥ ಸಾಧ್ಯತೆ ಇದ್ದರೆ ತತ್‍ಕ್ಷಣದಲ್ಲೇ ಅದನ್ನು ಸೃಷ್ಟಿಸಲು ಎಲ್ಲ ಬಗೆಯ ಪ್ರಯತ್ನವನ್ನೂ ಮಾಡಬೇಕು. ಇದಕ್ಕೆ ವಿಕ್ರಯವಿಭಾಗದ ಪೂರ್ಣ ಸಹಕಾರ ಅಗತ್ಯ.

ವಿಕ್ರಯ ವಿಭಾಗ ಮಾರುಕಟ್ಟೆಯ ಸಂಶೋಧನೆಯ ಸಹಾಯದಿಂದ ವಿಕ್ರಯದ ಅಂದಾಜು ಪಟ್ಟಿಯನ್ನು ತಯಾರುಮಾಡಬೇಕು. ಈ ಪಟ್ಟಿಯಲ್ಲಿ ಬೇಡಿಕೆ ಇರುವ ಪದಾರ್ಥದ ಗುಣ, ಲಕ್ಷಣ, ಬೆಲೆ, ಪ್ರಮಾಣ ಉಪಯೋಗ, ಸಂರಕ್ಷಣೆ, ರವಾನಿಸಬೇಕಾದ ದಿನ, ಇದಕ್ಕೆ ಇರುವ ಬೇಡಿಕೆ, ಮುಂದಿನ ಅಂದಾಜು ಬೇಡಿಕೆ ಇತ್ಯಾದಿ ವಿವರಗಳನ್ನು ಕೊಟ್ಟಿರಬೇಕು. ಈ ಪಟ್ಟಿಯನ್ನು ಉತ್ಪಾದನ ವ್ಯವಸ್ಥಾಪಕನಿಗೆ ತಲುಪಿಸಬೇಕು.

ವಿಕ್ರಯದ ಅಂದಾಜು ಪಟ್ಟಿಯ ಆಧಾರದ ಮೇಲೆ ಉತ್ಪನ್ನದ ಅಂದಾಜು ಪಟ್ಟಿಯನ್ನು ತಯಾರಿಸುವುದು ಉತ್ಪಾದನ ವ್ಯವಸ್ಥಾಪಕನ ಕೆಲಸ. ಈ ಪಟ್ಟಿ ಉತ್ಪಾದನೆಗೆ ಬೇಕಾಗುವ ಸಕಲ ಸಲಕರಣೆ, ಜನ ಮತ್ತು ಸಾಮಗ್ರಿಗಳ ವಿವರಣೆ ನೀಡುತ್ತದೆ. ಈ ಪಟ್ಟಿಯನ್ನು ತಯಾರುಮಾಡುವುದಕ್ಕೆ ಮುಂಚೆ ಕೆಳಕಂಡ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಂಡಿರಬೇಕು.

ಸಾಮಗ್ರಿಗಳು ದಾಸ್ತಾನಿನಲ್ಲಿ ಬೇಕಾಗುವಷ್ಟು ಪ್ರಮಾಣದಲ್ಲಿ ಇವೆಯೆ? ಇಲ್ಲವೆ? ಇಲ್ಲದಿದ್ದರೆ ಸಕಾಲದಲ್ಲಿ ಸಾಮಗ್ರಿಗಳನ್ನು ಸರಬರಾಜು ಮಾಡಿಕೊಳ್ಳಬಹುದೆ? ಎಷ್ಟು ಸರಕನ್ನು ಕೊಳ್ಳಬೇಕು? ಇದಕ್ಕೆ ಹಣವಿದೆಯೆ? ಈಗ ಇರುವ ಕಾರ್ಮಿಕರೇ ಸಾಕೆ? ಇಲ್ಲದಿದ್ದರೆ ಯಾವ ಬಗೆಯ ಕೆಲಸಗಾರರನ್ನು ಎಷ್ಟು ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳಬೇಕು? ಇದಕ್ಕೆ ತಕ್ಕ ಯಂತ್ರಗಳು ಇವೆಯೆ ಇಲ್ಲವೆ? ತಯಾರಿಕೆಯ ಕಾಲದಲ್ಲಿ ಯಾವುದಾದರೂ ತೊಂದರೆ ಉದ್ಭವಿಸಿದರೆ ಅದನ್ನು ನಿವಾರಿಸುವ ಶಕ್ತಿ ಇದೆಯೆ? ಹೀಗೆ ಬಗೆ ಬಗೆಯ ಸಮಸ್ಯೆಗಳಿಗೆ ಉತ್ತರ ಪಡೆದು ಕೊಳ್ಳಬೇಕು.

ಇವು ಇಂಥ ಇನ್ನೂ ಹಲವು ಸಮಸ್ಯೆಗಳೂ ಹೊಸಪದಾರ್ಥ ತಯಾರು ಮಾಡುವಾಗ ಉದ್ಭವಿಸುವಂಥವು. ಹಿಂದಿನಿಂದ ತಯಾರು ಮಾಡುತ್ತಿರುವ ಪದಾರ್ಥಗಳಿಗಾಗಲಿ ಅಥವಾ ಹಳೆಯ ಸಂಸ್ಥೆಗಳಿಗಾಗಲಿ ಇಷ್ಟೊಂದು ಸಮಸ್ಯೆಗಳು ಉದ್ಭವಿಸುವುದಿಲ್ಲ. ಆದರೂ ಕಾಲದೇಶಗಳ ಬದಲಾವಣೆಯ ದೃಷ್ಟಿಯಿಂದ ಹೊಸ ಬೇಡಿಕೆ ಪೂರೈಸುವಾಗ ಈ ಸಮಸ್ಯೆಗಳು ಬಾರದಿರವು.

ಉತ್ಪನ್ನ ಅಂದಾಜು ಪಟ್ಟಿಯನ್ನು ತಯಾರುಮಾಡಿ ಅದನ್ನು ಆಡಳಿತ ಮಂಡಳಿಗೆ ಕಳುಹಿಸಬೇಕು. ಆಡಳಿತ ಮಂಡಳಿಯವರು ಅದರ ಯುಕ್ತಾಯುಕ್ತತೆಯನ್ನು ಕೂಲಂಕಷವಾಗಿ ಚರ್ಚಿಸಿ ಅನಂತರ ನಿರ್ಧಾರ ಕೈಗೊಳ್ಳುತ್ತಾರೆ.

ಗ್ರಾಹಕರ ಆದೇಶಾನುಸಾರ ಪದಾರ್ಥ ತಯಾರುಮಾಡುವ ಸಂಸ್ಥೆಗಳಿಗೆ ಇಷ್ಟೊಂದು ಸಮಸ್ಯೆಗಳಿರುವುದಿಲ್ಲ. ತಯಾರಿಸುವ ವಸ್ತುವಿನ ರೂಪರೇಖೆಯನ್ನು ಗ್ರಾಹಕರೇ ಕೊಟ್ಟಿರುವುದ ರಿಂದಲೂ ಬೇಡಿಕೆಯನ್ನು ಸೃಷ್ಟಿಮಾಡುವ ಹೊಣೆ ಸಂಸ್ಥೆಗೆ ಇಲ್ಲದಿರುವುದರಿಂದಲೂ ಉತ್ಪನ್ನ ಅಂದಾಜು ಪಟ್ಟಿಯನ್ನು ತಯಾರುಮಾಡಿಕೊಂಡರೆ ಸಾಕು. ಆದರೆ ಮುಂದಿನ ಬೇಡಿಕೆಯನ್ನು ನಿರೀಕ್ಷಿಸಿ ಈಗಲೇ ಪದಾರ್ಥ ತಯಾರಿಕೆಯಲ್ಲಿ ತೊಡಗುವ ಸಂಸ್ಥೆಗಳು ಅಂದಾಜುಪಟ್ಟಿಗಳನ್ನು ವಿವರವಾಗಿ ತಯಾರಿಸಬೇಕು.

**ಉತ್ಪಾದನ ಯೋಜನೆ ಮತ್ತು ನಿಯಂತ್ರಣ:** ಪದಾರ್ಥೋತ್ಪಾದನೆಯ ನಿರ್ಧಾರ ಕೈಗೊಂಡ ಮೇಲೆ ಯಾವರೀತಿಯಲ್ಲಿ ಉತ್ಪಾದಿಸಬೇಕು ಎಂಬ ಸಮಸ್ಯೆ ಉದ್ಭವಿಸುತ್ತದೆ. ಇದಕ್ಕಾಗಿ ಒಂದು ಯೋಜನೆ ತಯಾರಿಸಿ ಆ ಯೋಜನೆಯ ಮಾರ್ಗದಲ್ಲೆ ಉತ್ಪಾದನ ಕಾರ್ಯ ನಡೆಯುವಂತೆ ನೋಡಿಕೊಳ್ಳಬೇಕು. ಉತ್ಪಾದನ ಕಾರ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡು, ಪ್ರತಿಯೊಂದು ಭಾಗದ ಕಾರ್ಯವನ್ನೂ ಸುಗಮವಾಗಿ ನಡೆಸಿಕೊಂಡು ಹೋಗಲು ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸಬೇಕು. 1. ಪಥಸೂಚಿ (ರೂಟಿಂಗ್), 2. ಅನುಸೂಚಿ (ಷೆಡ್ಯೂಲಿಂಗ್), 3. ನಿಯಂತ್ರಣ (ಕಂಟ್ರೋಲಿಂಗ್) ಮತ್ತು 4. ರವಾನೆ (ಡಿಸ್ಪ್ಯಾಚ್)–ಇವೇ ಆ ನಾಲ್ಕು ಭಾಗಗಳು.

**1. ಪಥಸೂಚಿ:** ಯಾವ ರೀತಿಯಲ್ಲಿ ಉತ್ಪಾದಿಸಬೇಕೆಂಬ ಬಗ್ಗೆ ಮಾರ್ಗದರ್ಶನ ನೀಡುವ ಒಂದು ಸೂಚನಾಪಟ್ಟಿ. ಮಾಡಬೇಕಾದ ಕೆಲಸದ ಸಮಸ್ತ ವಿವರಣೆಗಳನ್ನೂ ಇದು ನೀಡುತ್ತದೆ. ಯಾವ ಸಾಮಗ್ರಿಯಿಂದ ಯಾವ ಕಾಲದಲ್ಲಿ, ಯಾವ ಯಂತ್ರಗಳ ಸಹಾಯದಿಂದ ಯಾವ ರೀತಿಯಲ್ಲಿ ಎಷ್ಟು ತಯಾರುಮಾಡಬೇಕು, ಯಾವ ಯಾವ ಸಲಕರಣೆಗಳು ಎಷ್ಟೆಷ್ಟು ಬೇಕು, ಅವುಗಳ ವಿವರಣೆ, ಉತ್ಪಾದನೆಯ ಹಂತಗಳು ಇತ್ಯಾದಿ ವಿಷಯಗಳ ಬಗ್ಗೆ ಇಲ್ಲಿ ವಿವರಣೆ ಇರುತ್ತದೆ ಈ ಪಥಸೂಚಿ ಕೆಲಸದ ಆದೇಶ ನೀಡುವುದಲ್ಲದೆ ಉತ್ಪಾದನೆ ಕಾರ್ಯ ಸುಗಮವಾಗಿ ನಡೆದುಕೊಂಡು ಹೋಗಲು ಸಹಾಯ ಮಾಡುತ್ತದೆ. ಇದರಿಂದ ಕೆಲಸಗಾರರು ಪದೇ ಪದೇ ಕೆಲಸ ಮಾಡಲು ಮೇಲಿನ ಅಧಿಕಾರಿಗಳಿಂದ ಆದೇಶಕ್ಕಾಗಿ ಕಾಯಬೇಕಾದ ಅಗತ್ಯವಿರುವುದಿಲ್ಲ. ಇದರಿಂದ ಮಧ್ಯೆ ಮಧ್ಯೆ ಕೆಲಸ ಸ್ಥಗಿತಗೊಳ್ಳದೆ ನಿರಂತರವಾಗಿ ನಡೆಯಲು ಸಾಧ್ಯ. ಕೆಲಸ ಸ್ತಬ್ಧಗೊಂಡದ್ದರಿಂದ ಆಗಬಹುದಾದ ನಷ್ಟಗಳನ್ನೂ ಇದು ನಿವಾರಿಸುತ್ತದೆ. ಈ ಪಥಸೂಚಿಯನ್ನು ಉತ್ಪಾದನೆಗೆ ಪೂರ್ವಭಾವಿಯಾಗಿಯೇ ತಯಾರಿಸಿ ಎಲ್ಲರಿಗೂ ಹಂಚಲಾಗುತ್ತದೆ.

**2. ಅನುಸೂಚಿ:** ಪಥಸೂಚಿ ಉತ್ಪಾದನ ಮಾರ್ಗವನ್ನು ಮಾತ್ರ ಸೂಚಿಸುತ್ತದೆ; ಅದರ ಕಾಲವನ್ನು ನಿಯಂತ್ರಿಸುವುದಿಲ್ಲ. ಎಲ್ಲಕ್ಕೂ ಕಾಲ ಅತಿಮುಖ್ಯ. ಉತ್ಪಾದನ ಕಾರ್ಯವನ್ನು ಕಾಲದಿಂದ ನಿಯುಕ್ತಗೊಳಿಸದಿದ್ದರೆ ಉತ್ಪಾದನ ಕಾರ್ಯದಲ್ಲಿ ಅನೇಕ ಘರ್ಷಣೆಗಳಿಗೆ ಎಡೆಮಾಡಿಕೊಟ್ಟಂತಾಗುತ್ತದೆ. ನಿಯತಕಾಲಕ್ಕೆ ವಸ್ತುಗಳನ್ನು ತಯಾರುಮಾಡಲು ಸಾಧ್ಯವಾಗದೆ ಸಂಸ್ಥೆ ನಷ್ಟ ಅನುಭವಿಸಬೇಕಾಗುತ್ತದೆ. ಕಾಲ ನಿರ್ಣಯವನ್ನೊಳಗೊಂಡ ಸೂಚನಾಪಟ್ಟಿಯೇ ಅನುಸೂಚಿ. ಯಾವಾಗ ವಸ್ತುಗಳನ್ನು ತರಿಸಿಕೊಳ್ಳಬೇಕು, ಯಾವಾಗ ವಸ್ತುಗಳನ್ನು ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ವರ್ಗಾಯಿಸಬೇಕು, ಯಾವ ಕಾಲದಲ್ಲಿ ಯಾವ ಯಂತ್ರವನ್ನು ಉಪಯೋಗಿಸಬೇಕು, ಎಂಬುದೆಲ್ಲ ಇಲ್ಲುಂಟು. ಉತ್ಪಾದನೆಯ ಪ್ರಾರಂಭದಿಂದ ಮುಕ್ತಾಯದವರೆಗೂ ಪ್ರತಿಯೊಂದು ಕ್ರಿಯೆಗೂ ಕಾಲ ಸೂಚಿಸಿರುತ್ತದೆ. ಉಪರಿಕಾಲದ (ಓವರ್‌ಟೈಮ್) ಕೆಲಸದ ಅವಶ್ಯಕತೆ, ಸಾಮಗ್ರಿಗಳ ಮತ್ತು ಉಪಸ್ಥಿತ ಸಲಕರಣೆಗಳ ನಿರ್ಮಾಣ ಇತ್ಯಾದಿಗಳ ಕಡೆಗೆ ಗಮನ ಹರಿಸಿ, ಉತ್ಪಾದನೆಯ ಕಾರ್ಯ ನಿರ್ದಿಷ್ಟ ಕಾಲದಲ್ಲಿ ಮುಗಿಯು ವಂತೆ ಇದನ್ನು ತಯಾರುಮಾಡಬೇಕು.

**3. ನಿಯಂತ್ರಣ:** ಉತ್ಪಾದನಕಾರ್ಯ ಯೋಜಿತ ರೀತಿಯಲ್ಲೇ ಸಾಗುವಂತೆ ನಿಯಂತ್ರಿಸು ವುದು ಅಗತ್ಯ. ತಯಾರಿಕೆಯ ಕಾಲದಲ್ಲಿ ಅನೇಕ ಕಾರಣಗಳಿಂದ ಉತ್ಪಾದನೆಯ ರೀತಿಯ ಬದಲಾವಣೆಯಾಗಿ ಉತ್ಪಾದಿಸುವ ಪದಾರ್ಥದ ಗುಣ. ಆಕಾರ, ಮತ್ತು ಪರಿಮಾಣ ದೃಷ್ಟಿಗಳಿಂದ ದೋಷಯುಕ್ತವಾಗುವ ಸಂಭವವುಂಟು. ಈ ರೀತಿ ದೋಷಯುಕ್ತ ಪದಾರ್ಥಗಳನ್ನು ತಯಾರುಮಾಡಿ ನಷ್ಟಹೊಂದುವುದಕ್ಕೆ ಬದಲಾಗಿ ತಯಾರಿಕೆಯ ಪ್ರತಿಯೊಂದು ಘಟ್ಟದಲ್ಲೂ ಪರೀಕ್ಷೆಗಳನ್ನು ನಡೆಸಿ ದೋಷ ನಿವಾರಿಸಿ ನಿಯಂತ್ರಿಸುವುದು ಅಗತ್ಯ.

ಪ್ರಚಲಿತ ಕಾರ್ಯದ ಪ್ರಗತಿಯನ್ನು ಯೋಜಿತಕಾರ್ಯದೊಡನೆ ತುಲನೆ ಮಾಡುವುದ ರಿಂದ ಕಾರ್ಯ ಬದಲಾವಣೆಯನ್ನಾಗಲಿ ಕಾರ್ಯದೋಷವನ್ನಾಗಲಿ ಸುಲಭವಾಗಿ ಕಂಡುಹಿಡಿ ಯಲು ಸಾಧ್ಯವಾಗುತ್ತದೆ. ಯಾವುದಾದರೂ ದೋಷಕಂಡುಬಂದಲ್ಲಿ ನಿಯಂತ್ರಣಾಧಿಕಾರಿ ಅದನ್ನು ತಕ್ಷಣವೇ ನಿವಾರಿಸಲು ಪ್ರಯತ್ನಿಸುತ್ತಾನೆ. ಉತ್ಪಾದನ ಕಾರ್ಯಪ್ರಗತಿಯನ್ನೂ ಮಧ್ಯೆ ಮಧ್ಯೆ ತಲೆದೋರುವ ಸಮಸ್ಯೆಗಳನ್ನೂ ಆಡಳಿತ ಮಂಡಳಿಗೆ ಈತನೇ ವರದಿಮಾಡಬೇಕು. ಈ ನಿಯಂತ್ರಣದಿಂದ ಮುಂದೆ ಆಗಬಹುದಾದ ನಷ್ಟವನ್ನು ತಪ್ಪಿಸಿಕೊಳ್ಳಲೂ ಶ್ರೇಷ್ಠಮಟ್ಟದ ವಸ್ತುಗಳನ್ನು ಕಡಿಮೆ ವೆಚ್ಚದಲ್ಲಿ ತಯಾರುಮಾಡಲೂ ಸಹಾಯವಾಗುತ್ತದೆ. ನಿಯಂತ್ರಣ ವಿಭಾಗ ಮುಖ್ಯವಾಗಿ ವಸ್ತುವಿನ ಗುಣ, ಶಕ್ತಿ, ವೆಚ್ಚ ಮುಂತಾದುವನ್ನು ನಿಯಂತ್ರಿಸುತ್ತದೆ.

**4. ರವಾನೆ:** ಉತ್ಪಾದನ ವಿಭಾಗಕ್ಕೆ ಸೂಕ್ತ ಸೂಚನೆಗಳನ್ನು ನೀಡುವುದು, ಉತ್ಪಾದನ ವಿಭಾಗದಿಂದ ಉತ್ಪಾದನೆಯ ಪ್ರಗತಿಯ ವಿಷಯವನ್ನು ತಿಳಿದುಕೊಂಡು ಆಡಳಿತ ಮಂಡಳಿಗೆ ಆ ವಿಷಯವನ್ನು ರವಾನಿಸುವುದು, ಪಥಸೂಚಿ ಮತ್ತು ಅನುಸೂಚಿಗಳ ಸಹಾಯದಿಂದ ಕೆಲಸಗಳನ್ನು ಹಂಚುವುದು, ಯಂತ್ರಗಳನ್ನು ಸಕಾಲಕ್ಕೆ ಒದಗಿಸುವುದು, ಮತ್ತು ಸಲಕರಣೆಗಳ ಸರಬರಾಜುಮಾಡುವುದು ಈ ಕಾರ್ಯಗಳ ಬಗ್ಗೆ ಯೋಗ್ಯ ತೀರ್ಮಾನ ಕೈಗೊಂಡು ಮೇಲ್ವಿಚಾರಕರ ಸಹಾಯದಿಂದ ಕೆಲಸಮಾಡಿಸುವುದು ಇವು ಈ ವಿಭಾಗದ ಕಾರ್ಯಭಾರ.

ಸಾಮಗ್ರಿಗಳ ಬಗ್ಗೆ ತೀರ್ಮಾನ: ವಸ್ತುವಿನ ಉತ್ಪಾದನೆಗೆ ಅನೇಕ ವಿಧವಾದ ಸಾಮಗ್ರಿಗಳು ಅತ್ಯಾವಶ್ಯಕ. ಕಚ್ಚಾ ಸಾಮಗ್ರಿ, ಮುಂದುವರಿಯುತ್ತಿರುವ ಕೆಲಸ (ವರ್ಕ್–ಇನ್–ಪ್ರೋಗ್ರೆಸ್), ಶೋಧಿತ ಸಾಮಗ್ರಿ, ಪರೋಕ್ಷ ಸಾಮಗ್ರಿ ಮುಂತಾದವು ಹಣಕ್ಕಿಂತ ಹೆಚ್ಚು ಮುಖ್ಯ. ಕೆಲವು ವೇಳೆ ಹಣವನ್ನಾದರೂ ದೊರಕಿಸಿಕೊಳ್ಳಬಹುದು: ಆದರೆ ಸಾಮಗ್ರಿಗಳು ದೊರೆಯುವುದು ಕಷ್ಟ. ಉತ್ಪಾದನ ವಸ್ತುವಿನ ವೆಚ್ಚದಲ್ಲಿ ಸಾಮಾನ್ಯವಾಗಿ ಶೇಕಡಾ 50ರಿಂದ 80 ಭಾಗ ಸಾಮಗ್ರಿ ವೆಚ್ಚವೇ ಆಗಿರುತ್ತದೆ. ಆದ ಕಾರಣ ಇದರ ಬಗ್ಗೆ ಉತ್ಪಾದನೆಗೆ ಪೂರ್ವಭಾವಿಯಾಗಿ ಜಾಗರೂಕತೆಯಿಂದ ನಿರ್ಧಾರ ಕೈಗೊಳ್ಳುವುದು ಅತಿಮುಖ್ಯ. ಸರಿಯಾದ ಕಾಲಕ್ಕೆ ಸಾಮಗ್ರಿಯ ಸರಬರಾಜು ನಿಂತುಹೋದರೆ ಉತ್ಪಾದನೆಯನ್ನೇ ನಿಲ್ಲಿಸಬೇಕಾಗುತ್ತದೆ. ಅಥವಾ ಉತ್ತಮಗುಣದ ಸಾಮಗ್ರಿ ಕೊಳ್ಳದೆ, ವೆಚ್ಚ ಕಡಿಮೆಮಾಡುವ ಉದ್ದೇಶದಿಂದ ಕಡಿಮೆ ಬೆಲೆಯ ಸಾಮಗ್ರಿ ಕೊಂಡು ಅದರಿಂದ ಪದಾರ್ಥ ತಯಾರಿಸಿದರೆ, ಗುಣಮಟ್ಟ ಕಡಿಮೆಯಾಗಿ ಬೇಡಿಕೆಯೇ ಇಲ್ಲದೆ ಸಂಸ್ಥೆ ನಷ್ಟ ಹೊಂದಬೇಕಾಗುತ್ತದೆ.

ಈ ಬಗ್ಗೆ ನಿರ್ಧಾರ ಕೈಗೊಳ್ಳುವಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಉತ್ಪಾದಿಸಲು ಎಷ್ಟು ಸಾಮಗ್ರಿ ಬೇಕು? ಎಷ್ಟು ಸಾಮಗ್ರಿ ಉಗ್ರಾಣದಲ್ಲಿ ಇರಬೇಕು? ಎಷ್ಟನ್ನು ಕೊಳ್ಳಬೇಕು, ಎಷ್ಟನ್ನು ಸಂಸ್ಥೆಯಲ್ಲೇ ಉತ್ಪಾದಿಸಬೇಕು? ಇವುಗಳನ್ನು ನಿರ್ಧರಿಸುವುದು

ಬಹಳ ಕಷ್ಟ. ಹೆಚ್ಚು ಸಾಮಗ್ರಿ ಕೊಂಡು ತಂದು ಇಟ್ಟುಕೊಂಡು ಅದರ ಉಪಯೋಗ ಬಹಳವಾಗಿಲ್ಲದಿದ್ದರೆ ಅದರ ಮೇಲೆ ನಿಯೋಜಿಸಿದ ಬಂಡವಾಳ ವ್ಯರ್ಥ. ದಾಸ್ತಾನು ವೆಚ್ಚ, ಸಾಮಗ್ರಿ ನಿರುಪಯೋಗಿಯಾಗುವ ಸಂಭವ, ನಷ್ಟ ಇತ್ಯಾದಿ ಕಾರಣಗಳಿಂದ ಸಾಮಗ್ರಿಯ ವೆಚ್ಚ ಏರಿ ಉತ್ಪಾದನವೆಚ್ಚ ಹೆಚ್ಚುತ್ತದೆ. ಒಂದು ವೇಳೆ ಕಡಿಮೆ ಪರಿಮಾಣದಲ್ಲಿ ಸಾಮಗ್ರಿ ಕೊಂಡು ದಾಸ್ತಾನು ಮಾಡಿದರೆ, ಕಡೆಯಲ್ಲಿ ಸಾಮಗ್ರಿ ಸಾಲದೆ ಉತ್ಪಾದನೆಯನ್ನು ನಿಲ್ಲಿಸಬೇಕಾಗಬಹುದು. ಗುಣ, ವೆಚ್ಚ, ಉಪಯೋಗ, ಗಾತ್ರ ಇತ್ಯಾದಿಗಳನ್ನು ಹೆಚ್ಚಿಗೆ ಗಮನದಲ್ಲಿ ಇಟ್ಟುಕೊಂಡು ಈ ಬಗ್ಗೆ ನಿರ್ಧರಿಸಬೇಕು. ಇದರ ಜೊತೆಯಲ್ಲಿ ಮಿತವಾಗಿ ಕೊಳ್ಳುವಿಕೆಯಿಂದ ಆಗುವ ಲಾಭ, ಉತ್ಪಾದನೆಗೆ ಅಗತ್ಯವಾಗಿ ಬೇಕಾಗುವ ಸಾಮಗ್ರಿಯ ಪರಿಮಾಣ, ದಾಸ್ತಾನಿನಲ್ಲಿ ಮೀಸಲಿಡಬೇಕಾದ ಪ್ರಮಾಣ ಇತ್ಯಾದಿ ವಿಷಯಗಳನ್ನೂ ತಿಳಿದುಕೊಂಡು ವೆಚ್ಚಕ್ಕೆ ಸಮತೂಗುವಂತೆ ಕೊಳ್ಳುವಿಕೆಯನ್ನು ನಿರ್ಧರಿಸಬೇಕು.

ಸಾಮಗ್ರಿಗಳನ್ನು ಕೊಳ್ಳುವುದೇ ಮುಖ್ಯವಲ್ಲ. ಅದನ್ನು ಸರಿಯಾದ ರೀತಿಯಲ್ಲಿ ಸಂರಕ್ಷಿಸುವುದೂ ಅವಶ್ಯಕ. ಹಣಕ್ಕಿಂತ ಮಿಗಿಲಾದ ಸಾಮಗ್ರಿಗಳು ಹಾಳಾಗದಂತೆ ನೋಡಿಕೊಳ್ಳುವುದು ಮುಖ್ಯ. ಇದಕ್ಕಾಗಿ ಅನೇಕ ಕ್ರಮ ಕೈಗೊಳ್ಳಬೇಕು.

ಸಾಮಗ್ರಿಗಳನ್ನು ಸ್ವೀಕರಿಸಿದ್ದಕ್ಕೂ ಅದನ್ನು ಅನೇಕ ವಿಭಾಗಗಳಿಗೆ ಸರಬರಾಜು ಮಾಡಿದ್ದಕ್ಕೂ ಸಾಮಗ್ರಿಗಳ ಖಾತೆಯಲ್ಲಿ ದಾಖಲೆ ಮಾಡಬೇಕು. ಪ್ರತಿಯೊಂದು ಸಾಮಗ್ರಿಗೂ ಒಂದೊಂದು ಸಂಕೇತ ಕೊಡಬೇಕು. ನಿರ್ದಿಷ್ಟ ಸಾಮಗ್ರಿಯನ್ನು ಸುಲಭವಾಗಿ ಪತ್ತೆ ಹಚ್ಚುವುದಕ್ಕೂ ಸಾಮಗ್ರಿಗಳ ವಿಷಯಗಳನ್ನು ಗೋಪ್ಯವಾಗಿ ಇಡುವುದಕ್ಕೂ ಈ ಸಂಕೇತ ಸಹಾಯಕ. ಪ್ರತಿಯೊಂದು ಸಾಮಗ್ರಿಗೂ ಗರಿಷ್ಠ ಪ್ರಮಾಣದ ಮಟ್ಟ, ಕನಿಷ್ಠ ಪ್ರಮಾಣದ ಮಟ್ಟ, ಅಪಾಯ ಪ್ರಮಾಣದ ಮಟ್ಟ, ಹೊಸದಾಗಿ ಸಾಮಗ್ರಿ ಸರಬರಾಜಿಗಾಗಿ ಬೇಡಿಕೆ ಕಳುಹಿಸಬೇಕೆಂಬುದನ್ನು ಸೂಚಿಸುವ ಮಟ್ಟ (ಆರ್ಡರಿಂಗ್ ಲೆವೆಲ್) ಇತ್ಯಾದಿ ಮಟ್ಟಗಳ ಸೂಚನೆಯಿಂದ ವೃಥಾ ಬಂಡವಾಳವನ್ನು ಸಾಮಗ್ರಿಗಳ ಮೇಲೆ ಹೂಡುವುದು ತಪ್ಪುವುದಲ್ಲದೆ, ಸರಕುಗಳನ್ನು ಸಕಾಲದಲ್ಲಿ ಸರಬರಾಜು ಮಾಡಿಕೊಳ್ಳಲು ಸಹಾಯಕವಾಗುತ್ತದೆ. ನಿರಂತರ ಸಾಮಗ್ರಿ ನಿಯಂತ್ರಣದಿಂದ (ಪರ್ಪೆಚುಯಲ್ ಇನ್‌ವೆಂಟರಿ ಕಂಟ್ರೋಲ್) ನಷ್ಟ ಹೊಂದಿದ, ಹಾಳಾದ, ಉಪಯೋಗಿಸದೆ ಇರುವ ವಸ್ತುಗಳ ಪತ್ತೆ ಸಿಕ್ಕಿ, ಈ ಸಮಸ್ಯೆಯ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು ಸಾಧ್ಯ. ಯಾವ ಕಾಲದಲ್ಲಿ ಎಷ್ಟು ಸರಕು ಇದೆ, ಮುಂದಕ್ಕೆ ಎಷ್ಟು ಬೇಕು, ಈಗ ಇರುವ ವಸ್ತುವಿನ ಮೌಲ್ಯವೇನು–ಮುಂತಾದ ವಿಷಯಗಳನ್ನು ಇದು ತಿಳಿಸುತ್ತದೆ. ಇದರಿಂದ ಮುಂದಿನ ಯೋಜನೆ ತಯಾರು ಮಾಡುವುದು ಸುಲಭ.

ಈ ರೀತಿ ಪ್ರತಿಯೊಂದು ಹಂತದಲ್ಲೂ ಸಮಸ್ಯೆಗಳು ಕೈಮೀರಿ ಹೋಗದಂತೆ ಎಚ್ಚರ ವಹಿಸಿ, ಸಾಮಗ್ರಿಗಳ ಬಗ್ಗೆ ಯೋಗ್ಯ ತೀರ್ಮಾನ ಕೈಕೊಂಡು ಉತ್ಪಾದನೆಯ ನಿರ್ವಹಣೆ ಮಾಡಲು ಇದು ಸಹಾಯಕವಾಗಬೇಕು.

**ಶ್ರಮನಿರ್ಣಯ:** ಉತ್ಪಾದನೆಯ ಕಾರ್ಯದಲ್ಲಿ ಎರಡನೆಯ ಮುಖ್ಯ ಅಂಗವಾದ ಶ್ರಮದ ಪಾತ್ರ ಬಲು ಹಿರಿದು. ಸಾಮಗ್ರಿಗಳು ಇದ್ದಮಾತ್ರಕ್ಕೆ ಉತ್ಪಾದನೆ ಸಾಧ್ಯವಿಲ್ಲ. ಅವನ್ನು ಸೂಕ್ತರೀತಿಯಲ್ಲಿ ಹೊಂದಿಸಿ ಮಾರ್ಪಡಿಸಿದರೆ ಮಾತ್ರ ಪರಿಪೂರ್ಣ ಉತ್ಪನ್ನ ಸಾಧ್ಯ. ಈ ಮಾರ್ಪಾಟಿನ ಕಾರ್ಯ ನಡೆಯುವುದು ಕಾರ್ಮಿಕರಿಂದ. ಇವರ ಬಗ್ಗೆ ಸೂಕ್ತ ನಿರ್ಧಾರ ಅತ್ಯಂತ ಮುಖ್ಯ.

ಈ ಬಗ್ಗೆ ನಿರ್ಧಾರ ಕೈಕೊಳ್ಳಲು ಕಾರ್ಮಿಕಾಧಿಕಾರಿಯ ಸಹಾಯ ಪಡೆಯಬೇಕು. ಪದಾರ್ಥದ ಉತ್ಪಾದನೆಗೆ ಯಾವ ಯಾವ ಬಗೆಯ ಪರಿಣತಿ ಪಡೆದವರು ಎಷ್ಟು ಸಂಖ್ಯೆಯಲ್ಲಿ ಎಷ್ಟು ಕಾಲಕ್ಕೆಬೇಕು ಎಂಬುದನ್ನು ನಿರ್ಧರಿಸಿ, ಈಗ ಇರುವವರ ಸಂಖ್ಯೆಯೊಡನೆ ತುಲನೆಮಾಡಿ, ಸಾಲದಿದ್ದರೆ ನೇಮಕ ಮಾಡಿಕೊಳ್ಳಬೇಕು. ಶ್ರಮ ನಷ್ಟವಾಗದಂತೆ ನೋಡಿಕೊಳ್ಳುವ ಸಲುವಾಗಿ, ಕಾಲದ ಅಧ್ಯಯನ (ಟೈಮ್ ಸ್ಟಡಿ), ಚಲನೆಯ ಅಧ್ಯಯನ (ಮೋಷನ್ ಸ್ಟಡಿ) ಮುಂತಾದವುಗಳ ಸಹಾಯದಿಂದ ಪ್ರತಿಯೊಂದು ಕೆಲಸಕ್ಕೂ ಎಷ್ಟು ಕಾಲ ಬೇಕು, ಇದನ್ನು ಹೇಗೆ ಮಾಡಬೇಕು ಎಂಬುದನ್ನು ಪೂರ್ವಭಾವಿಯಾಗಿ ತೀರ್ಮಾನಿಸಿ ಅದರಂತೆ ಮಾರ್ಗದರ್ಶನ ಮಾಡಬೇಕು. ಈ ಅಧ್ಯಯನದ ಫಲವಾಗಿ ಕೆಲಸಗಾರನ ಕುಶಲತೆಯನ್ನು ಅಳೆಯಲೂಬಹುದು. ಉತ್ತಮ ಕೆಲಸ ಪಡೆದುಕೊಳ್ಳಲೂಬಹುದು.

**ಸೌಲಭ್ಯಗಳ ಬಗ್ಗೆ ನಿರ್ಧಾರ:** ಬದಲಾಗುತ್ತಿರುವ ಬೇಡಿಕೆಗಳನ್ನು ಪೂರೈಸಲು ಹೊಸ ಹೊಸ ಪದಾರ್ಥಗಳನ್ನು ತಯಾರು ಮಾಡಬೇಕಾಗುತ್ತದೆ. ಹಾಗೆ ತಯಾರು ಮಾಡಲು ಈಗ ಇರುವ ಸಾಧನ ಸೌಲಭ್ಯಗಳು ಉಪಯೋಗಕ್ಕೆ ಬಾರದೆ ಅವುಗಳ ಬದಲಾವಣೆಯ ಅವಶ್ಯಕತೆ ಕಂಡುಬರುತ್ತದೆ. ಪದಾರ್ಥ ಉತ್ಪಾದಿಸುವುದಕ್ಕೆ ಮೊದಲು ಭೌತಿಕ ಸೌಲಭ್ಯಗಳ ಬಗ್ಗೆ ನಿರ್ಧಾರ ಕೈಗೊಳ್ಳಬೇಕು. ಸ್ಥಳ, ಯಂತ್ರ, ಸಾಮಗ್ರಿ, ಮೇಲ್ವಿಚಾರಣೆ ಇವೇ ಅಲ್ಲದೆ, ಮೊದಲು ಉತ್ಪಾದನೆಯ ಸ್ಥಳದ ಬಗ್ಗೆ ನಿರ್ಧಾರ ಕೈಗೊಳ್ಳಬೇಕು. ಉತ್ಪಾದಿಸುವ ವಸ್ತುವಿಗೆ ಹೆಚ್ಚಿನ ಬೇಡಿಕೆ ದೊರೆಯುವ, ಕಡಿಮೆ ಸಾಗಾಣಿಕೆ ವೆಚ್ಚದಲ್ಲಿ ಸಾಮಗ್ರಿಗಳು ದೊರೆಯುವ, ಉತ್ತಮ ಹವಾಗುಣವಿರುವ, ಸುಲಭ ದರದಲ್ಲಿ ಕೆಲಸಗಾರರು ದೊರೆಯುವ, ಪೈಪೋಟಿ ಅಥವಾ ಸಹಕಾರಿ ಕಾರ್ಖಾನೆಗಳ ಉಪಸ್ಥಿತಿ ಅಥವಾ ಅನುಪಸ್ಥಿತಿಯಲ್ಲಿರುವ, ಕಡಿಮೆ ಬೆಲೆಯಲ್ಲಿ ನಗರಗಳಿಗೆ ಹತ್ತಿರವಾಗಿರುವ, ಮುಂದೆ ಅಭಿವೃದ್ಧಿಪಡಿಸಿಕೊಳ್ಳಲು ಉತ್ತಮ ಅವಕಾಶಹೊಂದಿರುವ ಸ್ಥಳವನ್ನು ಆರಿಸಬೇಕು.

ಸ್ಥಳದ ಆಯ್ಕೆಯಾದ ಮೇಲೆ ಭವನದ ಒಳಗಡೆಗೆ ಬೇಕಾದ ಸಾಧನ ಸಲಕರಣೆಗಳನ್ನು ಆರ್ಥಿಕ ಮತ್ತು ತಾಂತ್ರಿಕ ವಿಚಾರಗಳ ಕಡೆಗೆ ಗಮನಕೊಟ್ಟು ಆರಿಸಿಕೊಳ್ಳಬೇಕು. ಉತ್ಪಾದಿಸುವ ವಸ್ತುವಿನ ಗುಣಲಕ್ಷಣ ಮತ್ತು ಉತ್ಪಾದಿಸುವ ರೀತಿನೀತಿ ಇವುಗಳಿಗೆ ಅನುಗುಣವಾದ ಯಂತ್ರ ಸಾಧನ ಸಲಕರಣೆ ತರಬೇಕು. ಸ್ಥಳಾಭಾವವಿರುವುದರಿಂದ ಕಡಿಮೇ ಸ್ಥಳದಲ್ಲೇ ಸಾಮಗ್ರಿ ಸಂರಕ್ಷಿಸಲು, ಯಂತ್ರಗಳನ್ನು ಸ್ಥಾಪಿಸಲು, ಆಡಳಿತದ ಕಾರ್ಯಗಳನ್ನು ನಿರ್ವಹಿಸಲು ಉತ್ಪಾದಿಸಿದ ಪದಾರ್ಥಗಳನ್ನು ಸಂಗ್ರಹಿಸಿ ಇಡಲು. ಉತ್ತಮ ವಾಹನಮಾರ್ಗ ಹೊಂದಲು ಯೋಜಕರು ಸ್ಥಳಮಾಡಿಕೊಡಬೇಕು. ಒಂದು ಸಲ ನಿರ್ಧರಿಸಿಕೊಂಡ ಸ್ಥಳವನ್ನು ಮತ್ತೊಂದು ಸಲ ಬದಲಾಯಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಆದ್ದರಿಂದ ಸ್ಥಳದ ರೂಪರೇಖೆಯನ್ನು ಬಹಳ ಬುದ್ಧಿವಂತಿಕೆಯಿಂದ ಮಾಡಬೇಕು.

ಯೋಜಿತ ಪದಾರ್ಥಗಳನ್ನು ತಯಾರು ಮಾಡಲು ಯಾವ ಯಾವ ಸಲಕರಣೆಗಳು ಬೇಕು ಎಂಬುದನ್ನು ಯೋಜಿಸಿ. ಹೆಚ್ಚು ಬಾಳಿಕೆ ಬರುವ, ಪದಾರ್ಥದ ಗುಣ ಹೆಚ್ಚಿಸುವ, ಚೆನ್ನಾಗಿ ಕೆಲಸಮಾಡುವ, ಯಂತ್ರೋಪಕರಣಗಳನ್ನು ಕಡಿಮೆ ವೆಚ್ಚದಲ್ಲಿ ದೊರಕಿಸಿಕೊಳ್ಳಬೇಕು.

ಈ ರೀತಿಯಾಗಿ ಪ್ರತಿಯೊಂದು ವಿಚಾರದಲ್ಲೂ ವೆಚ್ಚದ ನಿಯಂತ್ರಣ ಮಾಡದಿದ್ದರೆ ಉತ್ಪಾದನ ವೆಚ್ಚ ಹೆಚ್ಚಾಗಿ, ಉತ್ಪನ್ನದ ಬೆಲೆ ಏರಿ, ಪದಾರ್ಥಕ್ಕೆ ಬೇಡಿಕೆ ಕಡಿಮೆಯಾಗಿ ಸಂಸ್ಥೆ ನಷ್ಟ ಹೊಂದುವ ಸ್ಥಿತಿಗೆ ಬರುತ್ತದೆ. ಈ ಎಲ್ಲ ವಿಷಯಗಳೂ ಉತ್ಪಾದನೆಯ ಕಾರ್ಯಕ್ಕೆ ಸಂಬಂಧಪಟ್ಟಿರುವುದರಿಂದ, ಉತ್ಪಾದನ ನಿರ್ವಾಹಕ ಅತ್ಯಂತ ಜಾಗರೂಕತೆ ಯಿಂದಲೂ ತೀಕ್ಷ್ಣಬುದ್ಧಿಯಿಂದಲೂ ಇವನ್ನೆಲ್ಲ ನಿರ್ವಹಿಸಬೇಕು. ಅಂದರೆ ಪ್ರತಿಯೊಂದು ಕಾರ್ಯವನ್ನೂ ಯುಕ್ತಾಯುಕ್ತ ಚಿಂತನೆಯಿಂದ ನಿರ್ಧರಿಸಿ. ಅನಂತರ ಪ್ರತಿಯೊಂದು ಘಟ್ಟದಲ್ಲೂ ಆಗಬಹುದಾದಂಥ ಕಷ್ಟ ನಷ್ಟಗಳನ್ನು ನಿಯಂತ್ರಿಸಿ ಪದಾರ್ಥಗಳ ಉತ್ಪಾದನೆ ಮಾಡುವುದೇ ಉತ್ಪಾದನ ನಿರ್ವಹಣೆ.

*

**ಉತ್ಪಾದನ ಮಟ್ಟ ರೇಖೆಗಳು:** ಒಂದು ಗೊತ್ತಾದ ಉತ್ಪನ್ನ ಪರಿಮಾಣವನ್ನು ಪಡೆಯಲು ಸಾಧ್ಯವಾಗುವಂತೆ ಉತ್ಪಾದನಾಂಗಗಳನ್ನು ಯಾವ ಯಾವ ಪ್ರಮಾಣಗಳಲ್ಲಿ ಸಂಯೋಜಿಸಬಹುದೆಂಬುದನ್ನು ತೋರಿಸುವ ರೇಖೆಗಳು (ಪ್ರೊಡಕ್ಷನ್ ಕಾನ್ಟೂರ್ಸ್). ಇವುಗಳಲ್ಲಿ ಒಂದೊಂದು ರೇಖೆಯನ್ನೂ ಸಮೋತ್ಪನ್ನ ರೇಖೆ (ಐಸೊ–ಪ್ರಾಡಕ್ಟ್ ಕರ್ವ್), ಸಮಗಾತ್ರಿ (ಐಸೋಕ್ವಾಂಟ್), ಸಮಾನೋತ್ಪನ್ನ ರೇಖೆ (ಈಕ್ವಲ್–ಪ್ರಾಡಕ್ಟ್ ಕರ್ವ್) ಅಥವಾ ಉತ್ಪನ್ನ ಔದಾಸಿನ್ಯ ರೇಖೆ (ಪ್ರಾಡಕ್ಟ್–ಇಂಡಿಫರೆನ್ಸ್ ಕರ್ವ್) ಎಂದು ಕರೆಯಬಹುದು.

ಆರ್ಥಿಕ ಸಿದ್ಧಾಂತಗಳಲ್ಲಿ ಬಳಸಲಾಗುವ ಅನೇಕ ನಕ್ಷೆಗಳಲ್ಲಿ ಎರಡೇ ಆಯಾಮಗಳಿರುತ್ತವೆ (ಡೈಮೆನ್ಷನ್ಸ್). ಆದ್ದರಿಂದ ಅವು ಎರಡು ಚರ (ವೇರಿಯಬಲ್) ಪರಿಮಾಣಗಳನ್ನು (ಕ್ವಾಂಟಿಟೀಸ್) ಮಾತ್ರ ತೋರಿಸಬಲ್ಲವು. (ಉದಾ : ಬೇಡಿಕೆ, ಸರಬರಾಜು). ಆದರೆ ಎರಡಕ್ಕಿಂತ ಹೆಚ್ಚು ಚರ ಪರಿಮಾಣಗಳಿರುವ ಸಂದರ್ಭಗಳೂ ಉಂಟು. ಉತ್ಪಾದನೆಯನ್ನು ಕುರಿತದ್ದು ಇಂಥ ಒಂದು ಸಂದರ್ಭ. ಇಲ್ಲಿ ಕನಿಷ್ಠ ಪಕ್ಷ ಮೂರು ಚರಗಳಿರುತ್ತವೆ (ಬಂಡವಾಳ, ಶ್ರಮ ಹಾಗೂ ಉತ್ಪನ್ನ). ಬಂಡವಾಳ ಯಾ ಶ್ರಮಗಳಲ್ಲಿ ಯಾವುದನ್ನು ವ್ಯತ್ಯಾಸಗೊಳಿಸಿದರೂ ಉತ್ಪತ್ತಿ ವ್ಯತ್ಯಾಸಗೊಳ್ಳುತ್ತದೆ. ಆದ್ದರಿಂದ ಇಲ್ಲಿ ಭೌಗೋಳಿಕ ವಿಧಾನವಾದ ಮಟ್ಟ ಪದ್ಧತಿಯನ್ನನು ಸರಿಸಿ ನಕ್ಷೆ ರಚಿಸುವುದು ಅಗತ್ಯವಾಗುತ್ತದೆ. ಉತ್ಪನ್ನದ ಒಂದೊಂದು ಮಟ್ಟದಲ್ಲೂ ಉಳಿದೆರಡು ಚರಗಳನ್ನು (ಬಂಡವಾಳ, ಶ್ರಮ) ಯಾವ ಯಾವ ಪ್ರಮಾಣಗಳಲ್ಲಿ ಸಂಯೋಜಿಸ ಬಹುದೆಂಬುದನ್ನು (ಒಂದೊಂದು ಮಟ್ಟಕ್ಕೆ ಅನ್ವಯಿಸುವಂತೆ ಒಂದೊಂದು ಮಟ್ಟ ರೇಖೆ ಎಳೆಯುವುದರ ಮೂಲಕ) ತೋರಿಸಬಹುದು.

ಉತ್ಪಾದನೆಗೂ ಉತ್ಪಾದನಾಂಗಗಳಿಗೂ ಇರುವ ಕಾರಕ–ಪರಿಣಾಮ ಸಂಬಂಧಗಳನ್ನು ಗಣಿತಜ್ಞರು ಉತ್ಪಾದನ ಅನುಚರಿಯ (ಪ್ರೊಡಕ್ಷನ್ ಫಂಕ್ಷನ್) ಮೂಲಕ ತೋರಿಸಿಕೊಡುತ್ತಾರೆ. ಒಂದು ನಿರ್ದಿಷ್ಟ ಉತ್ಪತ್ತಿಯನ್ನು ತಯಾರಿಸಲು ಬಳಸಬೇಕಾಗುವ ಕನಿಷ್ಠ ಉತ್ಪಾದನಾಂಗಗಳನ್ನು ಸೂಚಿಸುವುದು ಅಥವಾ ನಿರ್ದಿಷ್ಟ ಉತ್ಪಾದನಾಂಗಗಳನ್ನು ಬಳಸಿ ತಯಾರಿಸಬಹುದಾದ ಪರಮಾವಧಿ ಉತ್ಪತ್ತಿಯನ್ನು ತೋರಿಸುವುದೇ ಉತ್ಪಾದನ ಅನುಚರಿಯ ಉದ್ದೇಶ. ಆದರೆ ಉತ್ಪಾದನ ಅನುಚರಿ ನಿಗದಿಯಾದಂಥದೇನೂ ಅಲ್ಲ; ತಾಂತ್ರಿಕಮಟ್ಟ ಬದಲಾದಂತೆಲ್ಲ ಅದೂ ಬದಲಾಗುತ್ತಿರುತ್ತದೆ. ಜಾರಿಯಲ್ಲಿರುವ ತಾಂತ್ರಿಕಮಟ್ಟದಲ್ಲಿ ಉತ್ಪಾದನೆಯ ಮಟ್ಟ ಮತ್ತು ಉತ್ಪಾದನಾಂಗಗಳ ಸಂಬಂಧವನ್ನು ಇದು ನಿರೂಪಿಸುತ್ತದೆ. ಉದಾಹರಣೆಗೆ, $y$ ಅನ್ನು ಉತ್ಪನ್ನ ಪರಿಮಾಣವೆಂದೂ $x_1, x_2, \ldots x_n$ ಗಳನ್ನು ಉತ್ಪಾದನಾಂಗಗಳ ಪರಿಮಾಣಗ ಳೆಂದೂ ಭಾವಿಸಿದರೆ ಉತ್ಪಾದನ ಅನುಚರಿಯನ್ನು ಈ ಕೆಳಗಿನಂತೆ ಬರೆಯಬಹುದು :

$$Y = f(x_1, x_2, \ldots x_n)$$

ಉತ್ಪತ್ತಿಯ ಪರಿಮಾಣ ಅದರ ಉತ್ಪಾದನಾಂಗಗಳ $x_1, x_2, \ldots x_n$ ಗಳ ಪರಿಮಾಣಗಳನ್ನೇ ಅವಲಂಬಿಸಿದೆಯೆಂಬುದನ್ನು ಇದು ಸೂಚಿಸುತ್ತದೆ. ಈ ಸಮೀಕರಣದ ಪ್ರಕಾರ ಉತ್ಪಾದನಾಂಗ ಗಳ ಪರಿಮಾಣ ಬದಲಾದಂತೆ ಉತ್ಪತ್ತಿಯ ಪರಿಮಾಣವೂ ಬದಲಾಗುತ್ತದೆಂಬುದು ಸ್ಪಷ್ಟ. ಉದಾಹರಣೆಗೆ, ವಿವರಣೆಯನ್ನು ಸರಳಗೊಳಿಸುವ ಸಲುವಾಗಿ, ಉತ್ಪತ್ತಿಯ ಪರಿಮಾಣಕ್ಕೆ ಒಂದೇ ಉತ್ಪಾದನಾಂಗ $x_1$ ಆಧಾರವೆಂದು ಇಟ್ಟುಕೊಳ್ಳೋಣ. ($x_1$) ನ ಪರಿಮಾಣವನ್ನು ಅಧಿಕಗೊಳಿಸಿದಂತೆಲ್ಲ ಉತ್ಪತ್ತಿಯ ಪರಿಮಾಣವೂ ಅಧಿಕಗೊಳ್ಳುತ್ತದೆ. ಇವೆರಡರ ಸಂಬಂಧವನ್ನೂ ಸೂಚಿಸುವಂತೆ ಒಂದು ರೇಖೆಯನ್ನೆಳೆಯಬಹುದು. ಉತ್ಪಾದನಾಂಗಗಳು

ಉತ್ಪತ್ತಿಯಾಗಿ ಪರಿವರ್ತನೆ ಹೊಂದುವ ಪ್ರಮಾಣವನ್ನು ಸೂಚಿಸುವುದರಿಂದ ಇದನ್ನು ತಾಂತ್ರಿಕ ಪರಿವರ್ತನೆಯ ವಕ್ರರೇಖೆ (ಟೆಕ್ನಿಕಲ್ ಟ್ರಾನ್ಸ್‌ಫರ್ಮೇಷನ್ ಕರ್ವ್) ಎನ್ನಬಹುದು. ಈ ಕೆಳಗಿನ ನಕ್ಷೆಯಲ್ಲಿ ಉತ್ಪಾದನಾಂಗಗಳ ಪರಿಮಾಣಗಳನ್ನು *x* ಅಕ್ಷದಲ್ಲೂ ಉತ್ಪತ್ತಿ ಪರಿಮಾಣವನ್ನು *y* ಅಕ್ಷದಲ್ಲೂ ಗುರುತಿಸಿದೆ.




ಚಿತ್ರ–1

0 ಬಿಂದುವಿನಿಂದ ನೇರವಾಗಿ O*x*, O*y* ಗಳಿಗೆ $45^0$ ಯಲ್ಲಿರುವ OP ರೇಖೆ $x_1$ ಉತ್ಪಾದನಾಂಗದ ವಿವಿಧ ಪರಿಮಾಣಗಳಿಗೆ ಲಭಿಸುವ ವಿವಿಧ ಉತ್ಪತ್ತಿ ಮಟ್ಟಗಳನ್ನು ಸೂಚಿಸುತ್ತದೆ. $x_1$ ಉತ್ಪಾದನಾಂಗದಲ್ಲಿ ಹೆಚ್ಚುಕಡಿಮೆ ಮಾಡಿದಂತೆ ಉತ್ಪತ್ತಿ ಮಟ್ಟವೂ ಅದೇ ಪ್ರಮಾಣದಲ್ಲಿ ಏರಿಳಿಯುತ್ತದೆ. ಉದಾಹರಣೆಗೆ, ಉತ್ಪಾದನಾಂಗದ ಮಟ್ಟ OM ಆದರೆ ಅದರಿಂದ ಲಭಿಸುವ ಉತ್ಪತ್ತಿಯ ಮಟ್ಟ OR; OM'ಗೆ OR' ಮತ್ತು OM''ಗೆ OR''.

ಉತ್ಪಾದನಾಂಗದ (ಅಥವಾ ಉತ್ಪಾದನಾಂಗಗಳ) ಮಟ್ಟಕ್ಕೆ ಅನುಗುಣವಾಗಿ ಉತ್ಪತ್ತಿಯ ಮಟ್ಟದ ಬೆಳವಣಿಗೆಯಿರುತ್ತದೆಂಬುದು ನಕ್ಷೆ 1 ರಿಂದ ವ್ಯಕ್ತವಾಗುತ್ತದೆ. ಆದರೆ ಇವೆರಡಕ್ಕೂ ಬೇರೆ ಬಗೆಯ ಸಂಬಂಧಗಳಿರುವುದೂ ಸಾಧ್ಯ. ನಕ್ಷೆ 2 ರಲ್ಲಿ ಎರಡು ಮಾದರಿಯ ರೇಖೆಗಳನ್ನು ತೋರಿಸಲಾಗಿದೆ. OP ರೇಖೆ ಮೇಲಿನಿಂದ ತಗ್ಗಾಗಿದ್ದು (ಕಾನ್‌ಕೇವ್) ಅದರ ಓಟ (ಸ್ಲೋಪ್) ತೀವ್ರವಾಗಿದೆ. ಅಂದರೆ ಇಲ್ಲಿ ಉತ್ಪಾದನಾಂಗದ ಪರಿಮಾಣವನ್ನು ಹೆಚ್ಚಿಸಿದಂತೆ ಸರಾಸರಿ ಉತ್ಪತ್ತಿಯೂ ಅಧಿಕ ಪ್ರಮಾಣದಲ್ಲಿ ಬೆಳೆಯುತ್ತದೆ. ಈ ಪ್ರವೃತ್ತಿಯನ್ನು ಏರುಮುಖ ಪ್ರತಿಫಲ ಸೂತ್ರ (ಲಾ ಆಫ್ ಇನ್‌ಕ್ರೀಸಿಂಗ್ ರಿಟರ್ನ್ಸ್) ವಿಶದಪಡಿಸುತ್ತದೆ. ಕೆಲವು ಉದ್ಯಮಗಳಲ್ಲಿ ಉತ್ಪಾದನಾಂಗಗಳನ್ನು ಹೆಚ್ಚು ಹೆಚ್ಚಾಗಿ ಬಳಸಿದಂತೆ ಅವುಗಳಲ್ಲಿ ಒಂದೊಂದನ್ನೂ ಅಧಿಕ ದಕ್ಷತೆಯಿಂದ ಬಳಸಲು ಸಾಧ್ಯವಾಗುವುದರಿಂದ ಬೃಹದ್ಗಾತ್ರ




ಚಿತ್ರ–2

ಉತ್ಪಾದನೆಯ (ಲಾರ್ಜ್–ಸ್ಕೇಲ್ ಪ್ರೊಡಕ್ಷನ್) ಅನುಕೂಲ ಲಭಿಸುತ್ತದೆ. ಕೆಳಮುಖವಾಗಿ ತಗ್ಗಾಗಿರುವ OP' ರೇಖೆ ಉತ್ಪಾದನೆಯನ್ನು ಕುರಿತು ಸೂಚಿಸುವ ಕಥೆಯೇ ಬೇರೆ. ಇಲ್ಲಿ ಉತ್ಪಾದನಾಂಗವನ್ನು ಹೆಚ್ಚಿಸಿದಂತೆ ಪ್ರತಿಫಲ ಇಳಿಮುಖವಾಗುತ್ತದೆ. ಉತ್ಪಾದನಾಂಗದ ಪರಿಮಾಣ ಹೆಚ್ಚಿಸಿದಂತೆ ಒಟ್ಟು ಉತ್ಪತ್ತಿ ಹೆಚ್ಚಬಹುದಾದರೂ ಅದರ ಸರಾಸರಿ ಯಾವ ವೇಗದಲ್ಲಿ ಇಳಿಯುತ್ತದೆಂಬುದು ಇದರಿಂದ ವ್ಯಕ್ತವಾಗುತ್ತದೆ. ಪ್ರತಿಯೊಂದು ಉತ್ಪತ್ತಿ ಘಟಕಕ್ಕೂ ಹೆಚ್ಚು ಹೆಚ್ಚು ಉತ್ಪಾದನಾಂಗ ಬಳಸಬೇಕಾಗುವುದೆಂದು ಇದರ ಅರ್ಥ.

ಮೇಲಿನ ವಿಶ್ಲೇಷಣೆಯಲ್ಲಿ ಒಂದು ಉತ್ಪಾದನಾಂಗವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಉತ್ಪತ್ತಿಯ ಮಟ್ಟದ ಬದಲಾವಣೆಗಳನ್ನು ಗಮನಿಸಲಾಯಿತು. ಒಂದು ಪದಾರ್ಥದ ಉತ್ಪತ್ತಿಗೆ ಕಾರಣವಾದ ಉತ್ಪಾದನಾಂಗಗಳು ಹಲವಾರು. ಆದ್ದರಿಂದ ಉತ್ಪಾದನ ಮೀಮಾಂಸೆಯಲ್ಲಿ ಉತ್ಪತ್ತಿಗೂ ಅನೇಕ ಉತ್ಪಾದನಾಂಗಗಳಿಗೂ ಸಂಬಂಧ ಕಲ್ಪಿಸಬೇಕಾಗುತ್ತದೆ. ನಕ್ಷೆ 3ರಲ್ಲಿ ವಿವಿಧ ಉತ್ಪತ್ತಿ–ಉತ್ಪನ್ನ ಪರಿಮಾಣಗಳಿಗೂ ಎರಡು ಉತ್ಪಾದನಾಂಗಗಳಿಗೂ ಸಂಬಂಧ ಕಲ್ಪಿಸಿ ಉತ್ಪನ್ನಮಟ್ಟ ರೇಖೆಗಳನ್ನು ಎಳೆಯಲಾಗಿದೆ.

ಉತ್ಪಾದನ ಮಟ್ಟರೇಖೆಯನ್ನು ಎಳೆಯುವುದಕ್ಕೆ ಮೊದಲು ಎರಡು ಅಭಿಗೃಹೀತಗಳನ್ನು (ಅಸಂಪ್ಷನ್ಸ್) ಇಟ್ಟುಕೊಳ್ಳಬೇಕಾಗುತ್ತದೆ. ಉತ್ಪತ್ತಿ ಪರಿಮಾಣ ಎರಡು ಉತ್ಪಾದನಾಂಗಗಳ ಪರಿಮಾಣಗಳನ್ನೇ ಅವಲಂಬಿಸಿದೆಯೆಂಬುದು ಮೊದಲನೆಯದು. ಹಾಗಿದ್ದ ಪಕ್ಷದಲ್ಲಿ ಉತ್ಪನ್ನ ಅನುಚರಿಯನ್ನು ಹೀಗೆ ಬರೆಯಬಹುದು :

$$Y=f\ (x_1,x_2)$$

$x_1$ ಮತ್ತು $x_2$ ಉತ್ಪಾದನಾಂಗಗಳನ್ನು ಪರಸ್ಪರವಾಗಿ ಪ್ರತಿನಿಧಾನಿಸಬಹುದೆಂಬುದು (ಸಬ್ಸ್ಟಿಟ್ಯೂಟ್) ಎರಡನೆಯ ಅಭಿಗೃಹೀತ. ಅಂಥ ಸಂದರ್ಭದಲ್ಲಿ ಈ ಉತ್ಪಾದನಾಂಗಗಳನ್ನು ಬೇರೆ ಬೇರೆ ಪರಿಮಾಣಗಳಲ್ಲಿ ಸಂಯೋಜಿಸಿ ಒಂದು ನಿರ್ದಿಷ್ಟ ಉತ್ಪತ್ತಿಯನ್ನು ಪಡೆಯಲು ಸಾಧ್ಯ ಎಂಬುದು ವ್ಯಕ್ತಪಡುತ್ತದೆ. $x_1$ ಮತ್ತು $x_2$ ಉತ್ಪಾದನಾಂಗಗಳನ್ನು ಕೆಳಗೆ ತೋರಿಸಿರುವ ವಿವಿಧ ಪರಿಮಾಣಗಳ ಸಂಯೋಜನೆಗಳಲ್ಲಿ ಯಾವುದರಿಂದಲಾದರೂ 100 ಉತ್ಪತ್ತಿ ಘಟಕಗಳನ್ನು ಪಡೆಯುವುದು ಸಾಧ್ಯವೆಂದು ಭಾವಿಸಿ ಸಂಯೋಜನೆಗಳ ನೆರವಿನಿಂದ ಒಂದು ರೇಖೆಯನ್ನು ರಚಿಸಬಹುದು :

| | | | |
|---|---|---|---|
| $x_1$ | 2 | 3 | 4 |
| $x_2$ | 12 | 6 | 2 |

$x_1$ ಉತ್ಪಾದನಾಂಗದ ವಿವಿಧ ಪರಿಮಾಣಗಳನ್ನು X ಅಕ್ಷದಲ್ಲೂ $x_2$ ವಿನದನ್ನು *Y* ಅಕ್ಷದಲ್ಲೂ ಗುರುತಿಸಿದರೆ O ಬಿಂದುವಿನ ಕಡೆಗೆ ಉಬ್ಬಿರುವ ರೇಖೆಯೊಂದು ಮೂಡಿಬರುತ್ತದೆ (ನಕ್ಷೆ 3). ಇದು ಸಮೋತ್ಪಾದನ ರೇಖೆ. ಈ ರೇಖೆಯ ಮೇಲಿನ ಪ್ರತಿ ಬಿಂದುವೂ ಯಾವುದೇ ಒಂದು ಜೋಡಿಯ ಎರಡು ಉತ್ಪನ್ನಕಾರಕಗಳಿಂದ ಒಂದೇ ಮಟ್ಟದ ಉತ್ಪನ್ನವನ್ನು ಉತ್ಪಾದಿಸಬಹುದೆಂಬುದನ್ನು ತೋರಿಸುತ್ತದೆ.

ಸಮೋತ್ಪಾದನ ರೇಖೆಯ ಮುಖ್ಯ ಲಕ್ಷಣಗಳು ಎರಡು. ಮೊದಲನೆಯದಾಗಿ, ಈ ರೇಖೆ ಮೇಲಿನಿಂದ ಕೆಳಕ್ಕೆ ಇಳಿಮುಖವಾಗಿ, ಬಲಕ್ಕೆ ಜಾರುತ್ತದೆ. ಇದರಿಂದ ತಿಳಿದುಬರುವುದೇನೆಂದರೆ, $x_2$ ವನ್ನು ಕಡಿಮೆಗೊಳಿಸಿದಂತೆ ಉತ್ಪನ್ನಮಟ್ಟವನ್ನು ಒಂದೇ ಪ್ರಮಾಣದಲ್ಲಿ ಉಳಿಸಿಕೊಳ್ಳಬೇಕಾದಲ್ಲಿ $x_1$ನ್ನು ಅಧಿಕಗೊಳಿಸಬೇಕಾಗುತ್ತದೆ ಎಂಬುದು. ಎರಡನೆಯದಾಗಿ, ಈ ರೇಖೆ *O* ಕೋನಕ್ಕೆ ಸರಿಯಾಗಿ ಪೀನ ಮಧ್ಯವಾಗಿರುತ್ತದೆ (ಕಾನ್‌ವರ್ಸ್). ಇದರಿಂದ ಮತ್ತೊಂದಂಶ ಗೋಚರವಾಗುತ್ತದೆ. ಒಂದೇ ಮಟ್ಟದ ಉತ್ಪನ್ನ ಪಡೆಯಬೇಕಾದರೆ $x_2$ ವನ್ನು ಕಡಿಮೆ ಮಾಡಿದಂತೆಲ್ಲ $x_1$ನ್ನು ಹೆಚ್ಚು ಹೆಚ್ಚಾಗಿ ಪ್ರತಿನಿಧಿಸಬೇಕಾಗುತ್ತದೆ. ಇದು ಇಳಿಮುಖ ಅಂಚಿನ ಪ್ರತಿನಿಧಾನ ಸೂತ್ರ.

ಉತ್ಪತ್ತಿಯ 100 ಘಟಕಗಳನ್ನು ಪಡೆಯಲು ಅಗತ್ಯವಾದ ಉತ್ಪಾದನಾಂಗಗಳ ವಿವಿಧ ಪರಿಮಾಣಗಳ ಸಂಯೋಜನೆಯನ್ನು ಕುರಿತು ಮೇಲೆ ಹೇಳಿರುವಂತೆಯೇ ಉತ್ಪತ್ತಿಯ 200, 300, 400 ಘಟಕಗಳನ್ನು ಉತ್ಪಾದಿಸುವುದಕ್ಕೆ $x_1$ ಮತ್ತು $x_2$ ಉತ್ಪಾದನಾಂಗಗಳ ಪರಿಮಾಣಗಳ ನಾನಾ ಸಂಯೋಜನೆಗಳನ್ನು ಕುರಿತ ಸಮೋತ್ಪಾದನ ರೇಖೆಗಳನ್ನೂ ನಕ್ಷೆ 3 ರಲ್ಲಿ ಎಳೆಯಲಾಗಿದೆ. ಪ್ರತಿಯೊಂದು ರೇಖೆಯೂ ಒಂದೊಂದು ಉತ್ಪಾದನ ಮಟ್ಟವನ್ನು ಸೂಚಿಸುತ್ತದೆ. ಆದರೆ ಒಂದೊಂದು ರೇಖೆಯ ಪ್ರತಿಯೊಂದು ಬಿಂದುವೂ ಉತ್ಪಾದನಾಂಗಗಳ ಬೇರೆ ಬೇರೆ ಜೋಡಿಗಳಿಂದ ಲಭಿಸುವ ಒಂದೇ ಉತ್ಪತ್ತಿಯನ್ನು ತೋರಿಸುತ್ತದೆ. ಈ ರೇಖೆಗಳ ಸಮೂಹವನ್ನು **ಸಮೋತ್ಪನ್ನ ರೇಖೆಗಳ ನಕ್ಷೆ** ಅಥವಾ **ಉತ್ಪಾದನ ಮಟ್ಟ ರೇಖೆ**ಗಳ ನಕ್ಷೆಯೆನ್ನಬಹುದು.

ಈ ನಕ್ಷೆಯ ಮೂಲಕ ಪರಿಮಾಣಾನುಗುಣ ಪ್ರತಿಫಲವನ್ನು ತೋರಿಸಬಹುದು. O ಬಿಂದುವಿನಿಂದ ಎಳೆದಿರುವ OR ಸರಳರೇಖೆ ಈ ನಾನಾ ಮಟ್ಟಗಳ ರೇಖೆಗಳನ್ನು A, B, C ಮತ್ತು D ಬಿಂದುಗಳಲ್ಲಿ ಛೇದಿಸಿಕೊಂಡು ಹೋಗುತ್ತದೆ. A ಬಿಂದುವಿನಲ್ಲಿ ಉತ್ಪತ್ತಿಯ 100 ಘಟಕಗಳನ್ನು ತಯಾರಿಸಲು $x_1$ ಮತ್ತು $x_2$ ಉತ್ಪಾದನಾಂಗಗಳ 4 ಮತ್ತು 2 ಘಟಕಗಳು ಆವಶ್ಯಕವೆಂಬುದನ್ನು ಸೂಚಿಸುತ್ತದೆ. ಉತ್ಪಾದನಾಂಗವನ್ನು 50%ರಷ್ಟು ಅಧಿಕಗೊಳಿಸಿದರೆ ಆಗ ಉತ್ಪತ್ತಿಯ ಮಟ್ಟ B ಬಿಂದುವಿನವರೆಗೆ ಏರುತ್ತದೆ. ಇಲ್ಲಿ ಕ್ರಮವಾಗಿ 6 ಮತ್ತು 3 ಉತ್ಪಾದನಾಂಗಗಳಿಂದ 200 ಘಟಕಗಳಷ್ಟು ಉತ್ಪತ್ತಿ ಪಡೆಯಬಹುದೆಂಬುದು ವ್ಯಕ್ತ. ಎಂದರೆ ಉತ್ಪತ್ತಿಯ ಹೆಚ್ಚಳ 100% ಆದ್ದರಿಂದ A ಬಿಂದುವಿನಿಂದ B ವರೆಗೆ ಏರುಮುಖ ಪ್ರತಿಫಲ ಪ್ರವೃತ್ತಿ ಇದ್ದಹಾಗಾಯಿತು. ಹೀಗೆಯೇ B ಬಿಂದುವಿನಿಂದ ಉತ್ಪಾದನಾಂಗಗಳನ್ನು 33.3% ಹೆಚ್ಚಿಸಿದರೆ ($x_1$ =8, $x_2$ =4 ) ಆಗ ಉತ್ಪತ್ತಿ ಮಟ್ಟ 300

ಘಟಕಗಳಿಗೆ ಏರುತ್ತದೆ. C ಉತ್ಪಾದನಾಂಗವನ್ನು ಹೆಚ್ಚಿಸಿದ ಗತಿಯಲ್ಲೆ (1/3) ಉತ್ಪತ್ತಿಯೂ ಅಧಿಕಗೊಂಡ ಕಾರಣ (1/3) B ಬಿಂದುವಿನಿಂದ C ವರೆಗೆ ಅಚಲ ಪ್ರತಿಫಲ ಪ್ರವೃತ್ತಿ ಇದೆಯೆಂದ ಹಾಗಾಯಿತು. ಕೊನೆಯದಾಗಿ, ಉತ್ಪಾದನಾಂಗಗಳನ್ನು C ಬಿಂದುವಿನಿಂದ 50% ರಷ್ಟು ಹೆಚ್ಚಿಸಿದರೆ ($x=12, x_2=6$ ) ಆಗ ಉತ್ಪತ್ತಿಯ ಮೊತ್ತ 400 ಘಟಕ (25% ರಷ್ಟು ಅಧಿಕ). ಇದನ್ನು D ಬಿಂದು ಸೂಚಿಸುತ್ತದೆ. ಈ ಘಟ್ಟದಲ್ಲಿ ಇಳಿಮುಖ ಪ್ರತಿಫಲ ಪ್ರವೃತ್ತಿ ಇದೆಯೆನ್ನಬಹುದು.




**ಚಿತ್ರ–3**

ಉತ್ಪಾದನ ಮಟ್ಟ ರೇಖೆಗಳು ಇನ್ನೂ ಒಂದು ದೃಷ್ಟಿಯಿಂದ ಉಪಯುಕ್ತವಾಗಿವೆ. ಒಂದೊಂದು ಮಟ್ಟದ ಉತ್ಪತ್ತಿಗೂ ಅವಶ್ಯವಾದ ಉತ್ಪಾದನಾಂಗಗಳನ್ನು ಯಾವ ಯಾವ ಪ್ರಮಾಣದಲ್ಲಿ ಸಂಯೋಜಿಸಬಹುದೆಂಬುದನ್ನು ಆಯಾ ರೇಖೆಗಳು ತೋರಿಸುತ್ತವೆ.

ಒಂದು ಗೊತ್ತಾದ ಮಟ್ಟದಲ್ಲಿ ಉತ್ಪತ್ತಿ ಪಡೆಯಲು ಯಾವ ಬಗೆಯ ಸಂಯೋಜನೆಯಿಂದ ಉದ್ಯಮಿಗೆ ಉತ್ಪಾದನೆಯ ವೆಚ್ಚ ಅತ್ಯಂತ ಕಡಿಮೆಯೆಂಬುದನ್ನೂ ಅರಿಯಬಹುದು. ಹೆಚ್ಚು ಬೆಲೆಯ ಉತ್ಪಾದನಾಂಗಕ್ಕೆ ಬದಲಾಗಿ ಕಡಿಮೆ ಬೆಲೆಯನ್ನೂ ಉತ್ಪತ್ತಿಯ ಮಟ್ಟ ತಗ್ಗದಂತೆ ಯಾವ ಮಿತಿಯವರೆಗೆ ಬಳಸಬಹುದು ಎಂಬುದನ್ನು ಈ ರೇಖೆಗಳ ವಿಧಾನದಿಂದ ತಿಳಿಯುವುದು ಸಾಧ್ಯ. (ಎ.ಬಿ.ಎ.)

**ಉತ್ಪಾದನ ಮೀಮಾಂಸೆ:** ಉತ್ಪಾದನೆಯ ವೆಚ್ಚಕ್ಕೂ ಉತ್ಪತ್ತಿಯ ಮೊತ್ತಕ್ಕೂ ಇರುವ ಸಂಬಂಧ. ಉತ್ಪಾದನ ಸಾಧನಗಳ ಬೇಡಿಕೆಯ ಮೂಲ. ಉತ್ಪಾದನಾಂಗಗಳ ಬೆಲೆಗಳ ನಿಷ್ಕರ್ಷೆ–ಮುಂತಾದವನ್ನು ಕುರಿತ ವಿಶ್ಲೇಷಣೆ, ಮೀಮಾಂಸೆ (ಥಿಯೊರಿ ಆಫ್ ಪ್ರೊಡಕ್ಷನ್).




**ಚಿತ್ರ–1**

ಶ್ರಮ, ಭೂಮಿ ಹಾಗೂ ಬಂಡವಾಳಗಳ ನಿರ್ದಿಷ್ಟ ಪರಿಮಾಣಗಳನ್ನು ಒಂದು ಪದಾರ್ಥದ ಉತ್ಪಾದನೆಯಲ್ಲಿ ತೊಡಗಿಸಿದರೆ ಅವುಗಳಿಂದ ದೊರಕುವ ಉತ್ಪತ್ತಿಯೆಷ್ಟು? ಈ ಪ್ರಶ್ನೆಗೆ ಉತ್ತರ ಎಲ್ಲ ಕಾಲ ದೇಶಗಳಲ್ಲೂ ಒಂದೇ ತೆರನಾಗಿರುವುದಿಲ್ಲ. ತಾಂತ್ರಿಕ ಬೆಳವಣಿಗೆಯ ಮಟ್ಟವನ್ನೇ ಇದು ಅವಲಂಬಿಸಿದೆ. ಆದರೆ ಯಾವುದೇ ಒಂದು ನಿರ್ದಿಷ್ಟ ಕಾಲದಲ್ಲಿ ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಉತ್ಪಾದನಾಂಗಗಳ ನಿರ್ದಿಷ್ಟ ಪರಿಮಾಣಗಳಿಗೆ ದೊರಕುವ ಪರಮಾವಧಿ ಉತ್ಪತ್ತಿ ನಿರ್ದಿಷ್ಟವಾಗಿರುತ್ತದೆ. ಉತ್ಪಾದಕನಿಗೆ ಈ ಸೂತ್ರ ಬಹಳ ಮುಖ್ಯ. ವಿವಿಧ ಉತ್ಪಾದನಾಂಗಗಳ ವಿವಿಧ ಪರಿಮಾಣಗಳ ಬಗೆಬಗೆಯ ಸಂಯೋಜನೆಗಳಿಗೆ ದೊರಕುವ ಉತ್ಪತ್ತಿಯೆಷ್ಟೆಂಬುದನ್ನು ಸೂಚಿಸುವ ಈ ನಿಯಮಕ್ಕೆ ಉತ್ಪಾದಕ ಅನುಚರಿಯೆಂಬುದು ಅರ್ಥಶಾಸ್ತ್ರ ನೀಡಿರುವ ಹೆಸರು.

ಆದರೆ ಈ ಸೂತ್ರ ಮೇಲುನೋಟಕ್ಕೆ ತೋರುವಷ್ಟು ಸರಳವಲ್ಲ. ಉತ್ಪಾದನೆಗೆ ಬಳಸಲಾಗುವ ನಾನಾ ಸಾಧನಗಳ ಬೆಲೆಗಳನ್ನೂ ಇವುಗಳಿಗೆ ಸಂಬಂಧಿಸಿದಂತೆ ಆ ಸಾಧನಗಳ ಉತ್ಪಾದಕತೆಯನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ ಕನಿಷ್ಠ ವೆಚ್ಚಕ್ಕೆ ಪರಮಾವಧಿ ಉತ್ಪತ್ತಿ ಬರುವಂಥ ಸಂಯೋಜನೆಯನ್ನು ಸಾಧಿಸುವುದು ದೀರ್ಘಕಾಲದ ನಿಷ್ಕೃಷ್ಟ ವಿವೇಚನೆಯಿಂದ ಮಾತ್ರ ಸಾಧ್ಯ. ಇದಕ್ಕೆ ಅಗತ್ಯವಾದ ನಾನಾ ಅಂಕಿ–ಅಂಶಗಳನ್ನು ಹೊಂದಿರಬೇಕಾದ್ದು ಅವಶ್ಯ. ಈ ನಾನಾ ಉತ್ಪಾದನ ಸಾಧನಗಳಲ್ಲಿ ಒಂದಕ್ಕೆ ಪ್ರತಿಯಾಗಿ ಇನ್ನೊಂದನ್ನು ಎಷ್ಟರಮಟ್ಟಿಗೆ ಬಳಸಬಹುದೆಂಬ ಪರಿಶೀಲನೆ ಕೈಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಉತ್ಪಾದನಾಂಗದ ಮಾರುಕಟ್ಟೆಯ ಬೆಲೆಯನ್ನೂ ಆ ಅಂಗವನ್ನು ಬಳಸುವುದರಿಂದ ದೊರಕುವ ಅಧಿಕ ಉತ್ಪತ್ತಿಯನ್ನೂ ಗಮನದಲ್ಲಿಟ್ಟು ಸಾಗಬೇಕಾಗುತ್ತದೆ.

ಉದಾಹರಣೆಗೆ ವ್ಯವಸಾಯವನ್ನು ತೆಗೆದುಕೊಳ್ಳಬಹುದು. ಒಂದು ಎಕರೆ ನೆಲದ ಬಾಡಿಗೆ 100 ರೂ. ಇದ್ದು, ಶ್ರಮದ ಒಂದು ಘಟಕದ ಬೆಲೆಯೂ (ಕೂಲಿ) 100ರೂ. ಇದ್ದರೆ ಆಗ ಇವೆರಡರ ಬೆಲೆ ಸಮವಾಗಿರುತ್ತದೆ. ಶ್ರಮದ ಪ್ರತಿಯೊಂದು ಘಟಕಕ್ಕೂ ನೆಲದ ಒಂದೊಂದು ಘಟಕದಿಂದ ದೊರಕುವ ಪ್ರತಿಫಲಕ್ಕಿಂತ ಹೆಚ್ಚು ಪ್ರತಿಫಲ ಎಲ್ಲಿಯ ವರೆಗೆ ದೊರಕುತ್ತಿರುತ್ತದೋ ಅಲ್ಲಿಯವರೆಗೆ ನೆಲದ ಬದಲು ಶ್ರಮವನ್ನು ಪ್ರತಿನಿಧಾನಿಸಬಹುದು. ಅತ್ಯಂತ ಕೊನೆಯ ಘಟ್ಟದಲ್ಲಿ (ಅಂಚಿನ ಘಟ್ಟದಲ್ಲಿ), ವೆಚ್ಚ ಮಾಡಿದ ಪ್ರತಿ ರೂಪಾಯಿಗೂ ಭೂಮಿ–ಶ್ರಮಗಳೆರಡರಿಂದಲೂ ಸಮನಾದ ಉತ್ಪತ್ತಿ ಬರುವಲ್ಲಿ, ಸಮಾನ ಬೆಲೆಯ ಭೂಮಿ ಶ್ರಮಗಳಲ್ಲಿ ಯಾವುದನ್ನು ನಿಯೋಜಿಸಿದರೂ ಸಮನಾದ ಉತ್ಪತ್ತಿಗಳು ಯಾವ ಘಟ್ಟದಲ್ಲಿ ದೊರಕುವುವೋ ಅಲ್ಲಿ ಈ ಪ್ರತಿನಿಧಾನವನ್ನು ನಿಲ್ಲಿಸಬೇಕಾಗುತ್ತದೆ. ವೆಚ್ಚ ಮಾಡಿದ ಹಣಕ್ಕೆ ಪರಮಾವಧಿ ಉತ್ಪತ್ತಿ ದೊರಕುವುದು ಈ ಘಟ್ಟದಲ್ಲಿ; ಇದು ಕನಿಷ್ಠ ವೆಚ್ಚದ ಘಟ್ಟ.

ಭೂಮಿಯ ಒಂದು ಘಟಕದ ಬೆಲೆಯೂ ಶ್ರಮದ ಒಂದು ಘಟಕದ ಬೆಲೆಯೂ ಸಮನಾಗಿರುವುದೆಂದು ಊಹಿಸಿಕೊಂಡರೆ ಮೇಲಿನ ಪ್ರತಿನಿಧಾನ ನಿಯಮವನ್ನು ಅನ್ವಯಿಸ ಬಹುದಾಗಿದೆ. ಆದರೆ ವಾಸ್ತವ ಜಗತ್ತಿನಲ್ಲಿ ಹೀಗಿರುವುದು ವಿರಳ. ಭೂಮಿಯ ಒಂದು ಘಟಕದ ಬೆಲೆ ಶ್ರಮದ ಒಂದು ಘಟಕದ್ದರ ಹತ್ತರಷ್ಟಿದೆಯೆಂದು ಊಹಿಸಿಕೊಂಡ ಪಕ್ಷದಲ್ಲಿ ಮೇಲೆ ವಿವರಿಸಿದ ಪ್ರತಿನಿಧಾನ ಯಾವ ಹಂತದಲ್ಲಿ ನಿಲ್ಲಬೇಕು–ಎಂಬುದು ಪ್ರಶ್ನೆ. ಭೂಮಿಯ ಒಂದು ಅಂಚಿನ ಘಟಕದಿಂದ ದೊರಕುವ ಉತ್ಪತ್ತಿ, ಶ್ರಮದ ಅಂಚಿನ ಘಟಕದ ಉತ್ಪತ್ತಿಯ ಹತ್ತರಷ್ಟಿರುವಲ್ಲಿ ಶ್ರಮದ ಪ್ರತಿನಿಧಾನವನ್ನು ನಿಲ್ಲಿಸಬೇಕಾಗುತ್ತದೆ. ಅದೇ ಪರಮಾವಧಿ ಸರಾಸರಿ ಉತ್ಪನ್ನದ ಅಥವಾ ಕನಿಷ್ಠ ಸರಾಸರಿ ವೆಚ್ಚದ ಹಂತ.

ಈ ಎರಡು ಉದಾಹರಣೆಗಳ ದೃಷ್ಟಿಯಿಂದ ಎಲ್ಲ ಪರಿಸ್ಥಿತಿಗಳಿಗೂ ಅನ್ವಯವಾಗುವ ಒಂದು ಸೂತ್ರವನ್ನು ರೂಪಿಸುವುದು ಸಾಧ್ಯ. ಒಂದು ಪದಾರ್ಥದ ಉತ್ಪಾದನೆಗೆ $x_1, x_2, x_3, \ldots\ldots, x_n$ ಸಾಧನಗಳು ಗ್ರಾಸಗಳಾಗಿದ್ದರೆ (ಇನ್‌ಪುಟ್ಸ್) ಈ ಒಂದೊಂದು ಸಾಧನದ ಅಂಚಿನ ಘಟಕದ ಹೂಡಿಕೆಯಿಂದಲೂ ಸಾಪೇಕ್ಷವಾಗಿ ಒಂದೇ ಮೊತ್ತದ ಉತ್ಪನ್ನ ದೊರಕುವ ಹಂತವೇ ಕನಿಷ್ಠ ವೆಚ್ಚದ ಹಂತ. ಇದು ಆ ಸನ್ನಿವೇಶದಲ್ಲಿನ ಸಮತೋಲ ಸ್ಥಿತಿ :

$$= \frac{x_1\text{ನ ಅಂಚಿನ ಭೌತಿಕ ಉತ್ಪನ್ನ}}{x_1\text{ನ ಬೆಲೆ}} = \frac{x_2\text{ನ ಅಂಚಿನ ಭೌತಿಕ ಉತ್ಪನ್ನ}}{x_2\text{ನ ಬೆಲೆ}} = \frac{x_3\text{ನ ಅಂಚಿನ ಭೌತಿಕ ಉತ್ಪನ್ನ}}{x_3\text{ನ ಬೆಲೆ}} \ldots\ldots = \frac{x_n\text{ನ ಅಂಚಿನ ಭೌತಿಕ ಉತ್ಪನ್ನ}}{x_n\text{ನ ಬೆಲೆ}}$$

ಉತ್ಪಾದನೆಯ ಸಾಧನಗಳಲ್ಲಿ ಯಾವುದರ ಬೆಲೆಯಾದರೂ ಇಳಿದರೆ ಅದನ್ನು ಇತರ ಸಾಧನಗಳ ಸ್ಥಾನದಲ್ಲಿ ಇನ್ನಷ್ಟು ದೂರ ಪ್ರತಿನಿಧಾನಿಸುವುದು ಲಾಭದಾಯಕವಾಗುತ್ತದೆ. ಉತ್ಪಾದನೆಯ ಸಮತೋಲ ಅದಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತದೆ. ಆದರೆ ಬೆಲೆ ಏರಿದರೆ ಸಾಪೇಕ್ಷವಾಗಿ ಇತರ ಸಾಧನಗಳ ಪ್ರತಿನಿಧಾನ ಲಾಭದಾಯಕವಾಗಿ ಮತ್ತೆ ಹೊಸ ಸಮತೋಲಕ್ಕೆ ಹೊಂದಾಣಿಕೆಯಾಗುತ್ತದೆ. ಇದು ಉತ್ಪಾದನೆಯಲ್ಲಿ ಸಾಧನಗಳ ಸಂಯೋಜನೆಯ ನಿಯಮ. ಇಲ್ಲಿ ಇನ್ನೊಂದು ವಿಷಯವನ್ನು ಉಲ್ಲೇಖಿಸುವುದು ಅವಶ್ಯ. ಮೇಲಿನ ಚರ್ಚೆಯಲ್ಲಿ ಉತ್ಪನ್ನದ ಭೌತಿಕ ಮೊತ್ತವನ್ನು ಕುರಿತು ಚರ್ಚಿಸಲಾಗಿದೆ. ಆದರೆ ವಾಸ್ತವ ಜಗತ್ತಿನಲ್ಲಿ ಉತ್ಪಾದಕನಿಗೆ

# ಉತ್ಪಾದನ ವೆಚ್ಚ

ಅಂತಿಮವಾಗಿ ಆಸಕ್ತಿಯಿರುವುದು ಉತ್ಪನ್ನದ ಬೆಲೆಯಲ್ಲೇ ಹೊರತು ಉತ್ಪನ್ನದಲ್ಲಲ್ಲ. ಆದ್ದರಿಂದ ಅಂಚಿನ ಉತ್ಪನ್ನಘಟಕದ ಬೆಲೆಯ ದೃಷ್ಟಿಯಿಂದಲೇ ಆತ ಈ ಎಲ್ಲ ವಿಚಾರ ನಡೆಸುತ್ತಾನೆ. ಒಬ್ಬ ಕಾರ್ಮಿಕನನ್ನು ನೇಮಿಸಿಕೊಂಡರೆ ಆತನ ಶ್ರಮದಿಂದ ಲಭಿಸುವ ಉತ್ಪನ್ನದಿಂದ ದೊರಕುವ ಹುಟ್ಟುವಳಿಯೇ ಅಂತಿಮವಾಗಿ ನಿರ್ಣಾಯಕವಾದದ್ದು.




ನಕ್ಷೆ–1

ಮೇಲೆ ವಿವರಿಸಿದ ಸಮತೋಲ ಸ್ಥಿತಿಯಲ್ಲಿ ಭೌತಿಕ ಉತ್ಪನ್ನದ ಬದಲು ಅದರ ಹುಟ್ಟುವಳಿಯನ್ನು ಪರಿಗಣಿಸಿದರೂ ಈ ನಿಯಮ ಅಷ್ಟೇ ಸತ್ಯ. ಅಂತಿಮವಾಗಿ ಸಮತೋಲ ಘಟ್ಟದಲ್ಲಿ ಪ್ರತಿಯೊಂದು ಉತ್ಪಾದನ ಸಾಧನದ ಬೆಲೆಯೂ ಅದರಿಂದ ಲಭಿಸುವ ಅಂಚಿನ ಹುಟ್ಟುವಳಿ ಉತ್ಪನ್ನಕ್ಕೆ ಸಮನಾಗಿರುತ್ತದೆ. $x_1$ ನ ಅಂಚಿನ ಹುಟ್ಟುವಳಿ ಉತ್ಪನ್ನ = $x_1$ನ ಬೆಲೆ : $x_2$ನ ಅಂಚಿನ ಹುಟ್ಟುವಳಿ ಉತ್ಪನ್ನ = $x_2$ ನ ಬೆಲೆ : $x_3$ ನ ಅಂಚಿನ ಹುಟ್ಟುವಳಿ ಉತ್ಪನ್ನ = $x_3$ ನ ಬೆಲೆ........ $x_n$ ನ ಅಂಚಿನ ಹುಟ್ಟುವಳಿ ಉತ್ಪನ್ನ = $x_n$ ನ ಬೆಲೆ.

ಒಂದು ಪದಾರ್ಥ ತಯಾರಿಸಲು ಅಗತ್ಯವಾದ ಶ್ರಮ ಹಾಗೂ ಬಂಡವಾಳಗಳ ಯಾವ ಯಾವ ಸಂಯೋಜನೆಯಿಂದ ಎಷ್ಟೆಷ್ಟು ಉತ್ಪತ್ತಿ ಪಡೆಯಬಹುದೆಂಬುದರ ಬಗ್ಗೆ ಒಂದು ಉತ್ಪಾದನ ಸಂಸ್ಥೆಗೆ ಸಂಬಂಧಿಸಿದ ಅಂಕಿಗಳನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ. (ಉದಾಹರಣೆ : ಬಂಡವಾಳ 5 ಘಟಕಗಳನ್ನು ಶ್ರಮದ 2 ಘಟಕಗಳೊಂದಿಗೆ ಸಂಯೋಜಿಸಿದರೆ ಲಭಿಸುವ ಉತ್ಪನ್ನ 448 ಘಟಕ).

ಬಂಡವಾಳ

| | | | | | | |
|---|---|---|---|---|---|---|
| 6 | 346 | 490 | 600 | 693 | 775 | 846 |
| 5 | 316 | 448 | 548 | 632 | 705 | 775 |
| 4 | 282 | 400 | 490 | 564 | 632 | 693 |
| 3 | 245 | 346 | 423 | 490 | 548 | 600 |
| 2 | 200 | 282 | 346 | 400 | 448 | 490 |
| 1 | 141 | 200 | 245 | 282 | 316 | 346 |
| 0 | 1 | 2 | 3 | 4 | 5 | 6 |

ಶ್ರಮ

ಈ ಕೋಷ್ಟಕದಲ್ಲಿ ಗಮನಿಸಬಹುದಾದ ಅಂಶವೆಂದರೆ, ಒಂದು ನಿರ್ದಿಷ್ಟ ಸಂಖ್ಯೆಯ ವಸ್ತುವನ್ನು ಅನೇಕ ಸಂಯೋಜನೆಗಳ ಮೂಲಕ ತಯಾರಿಸಬಹುದೆಂಬುದು. ಇದರ ಆಧಾರದ ಮೇಲೆ ಕನಿಷ್ಠ ವೆಚ್ಚದಲ್ಲಿ ಪರಮಾವಧಿ ಹುಟ್ಟುವಳಿ ಉತ್ಪನ್ನ ತರುವ ಸಂಯೋಜನೆ ಯಾವುದೆಂಬುದನ್ನು ನಿರ್ಧರಿಸುವುದು ಸಾಧ್ಯ. ಮೇಲಿನ ಕೋಷ್ಟಕದ ಪ್ರಕಾರ 346 ಘಟಕಗಳ ಉತ್ಪತ್ತಿಯನ್ನು 4 ಬಗೆಯ ಸಂಯೋಜನೆಗಳಿಂದ ಪಡೆಯಬಹುದು : A ಶ್ರಮ 1 + ಬಂಡವಾಳ 6; B ಶ್ರಮ 2 + ಬಂಡವಾಳ 3 : C ಶ್ರಮ 3 + ಬಂಡವಾಳ 2 ಮತ್ತು D ಶ್ರಮ 6 + ಬಂಡವಾಳ 1. (ಈ ನಾಲ್ಕು ಬಗೆಯ ಸಂಯೋಜನೆಗಳೂ ಸಾಧ್ಯವೆಂಬುದು ಅಧ್ಯಾಹಾರ). ಇವುಗಳಲ್ಲಿ ಕಡಿಮೆ ವೆಚ್ಚದ, ಆದರೆ ಹೆಚ್ಚು ಹುಟ್ಟುವಳಿ ತರುವ ಸಂಯೋಜನೆ ಯೊಂದನ್ನು ಆಯ್ದುಕೊಳ್ಳಬೇಕು. ಈ ಆಯ್ಕೆಗೆ ಈ ಅಂಗಗಳ ಬೆಲೆಯೇ ಆಧಾರ. ಬಂಡವಾಳದ 1 ಘಟಕಕ್ಕೆ 3 ರೂ. ಮತ್ತು ಶ್ರಮದ 1 ಘಟಕಕ್ಕೆ 2 ರೂ. ಬೆಲೆಯಿದ್ದರೆ ಆಗ 1 ನೆಯ ಸಂಯೋಜನೆಯ ವೆಚ್ಚ (ರೂ.2+ರೂ.18) ರೂ. 20. ಹೀಗೆಯೇ ಉಳಿದ ಸಂಯೋಜನೆಗಳಲ್ಲಿ ಕ್ರಮವಾಗಿ ರೂ. 13 ರೂ. 12 ಮತ್ತು ರೂ 15 ಉತ್ಪಾದನ ವೆಚ್ಚ ತಗಲುತ್ತವೆ. ಇವುಗಳಲ್ಲಿ ಮೂರನೆಯ (C) ಸಂಯೋಜನೆಯೇ (ಶ್ರಮ 3 + ಬಂಡವಾಳ 2) ಅತ್ಯಂತ ಕಡಿಮೆ ವೆಚ್ಚದ್ದು (ರೂ. 12). ಇದನ್ನು ನಕ್ಷೆ 1ರಲ್ಲಿ ತೋರಿಸಿದೆ.

(SS) ಎನ್ನುವುದು ಸಮೋತ್ಪನ್ನ ರೇಖೆ. ಈ ರೇಖೆಯ ಮೇಲಿನ ಯಾವ ಸಂಯೋಜನೆ ಯನ್ನು ತೆಗೆದುಕೊಂಡು ಉತ್ಪಾದನೆ ನಡೆಸಿದರೂ ಉತ್ಪನ್ನ ಒಂದೇ ಆಗಿರುತ್ತದೆ. ಶ್ರಮ ಹಾಗೂ ಬಂಡವಾಳಗಳ ಬೆಲೆ ತಿಳಿದರೆ. 1, 2, 3, 4ನೆಯ ಸಂಯೋಜನೆಗಳಿಗೆ (ಅಥವಾ SS) ರೇಖೆಯ ಯಾವುದೇ ಸಂಯೋಜನೆಗೆ) ತಗಲಬಹುದಾದ ಒಟ್ಟು ವೆಚ್ಚವನ್ನು ಲೆಕ್ಕ ಹಾಕಬಹುದು. ಅತ್ಯಂತ ಕಡಿಮೆ ವೆಚ್ಚದ ಸಂಯೋಜನೆಯನ್ನು ಆಯ್ದುಕೊಳ್ಳಲಿಕ್ಕಷ್ಟೆ ಇದು ಅತ್ಯಗತ್ಯ. ಶ್ರಮದ ಘಟಕದ ಬೆಲೆ ರೂ. 2 ಮತ್ತು ಬಂಡವಾಳದ ಬೆಲೆ ರೂ. 3 ಎಂದು ಊಹಿಸಿಕೊಂಡಾಗ ಸಾಧ್ಯವಿರುವ ಎಲ್ಲ ಸಂಯೋಜನೆಗಳ ಸಮಾನ ವೆಚ್ಚ ರೇಖೆಗಳನ್ನು ನಕ್ಷೆ 2ರಲ್ಲಿ ಕಾಣಿಸಿದೆ.

ನಕ್ಷೆ 3ರಲ್ಲಿ 1 ಮತ್ತು 2ನೆಯ ನಕ್ಷೆಗಳನ್ನು ಹೊಂದಿಸಲಾಗಿದೆ. ಸಮೋತ್ಪನ್ನ ರೇಖೆಯನ್ನು ಸಮಾನ ವೆಚ್ಚರೇಖೆ ಯಾವೆಡೆಯಲ್ಲಿ ಸ್ಪರ್ಶಿಸುತ್ತದೋ ಅದೇ ಆ ಉತ್ಪಾದನ ಮಟ್ಟದ ಕನಿಷ್ಠ ವೆಚ್ಚದ ಬಿಂದು.




ನಕ್ಷೆ–3

ಇದೇ ಆ ಪರಿಸ್ಥಿತಿಯಲ್ಲಿ ಆ ಉತ್ಪತ್ತಿ ಮಟ್ಟಕ್ಕೆ ಅನುಗುಣವಾದ ಸಮತೋಲ ಬಿಂದು ಅಷ್ಟೇ ಅಲ್ಲ, ವೆಚ್ಚ ಹಾಗೂ ಉತ್ಪಾದನ ರೇಖೆಗಳ ಓಟಗಳು (ಸ್ಲೋಪ್) Cಯಲ್ಲಿ ಸಮ. ಇದು ಆ ಉತ್ಪಾದನ ಮಟ್ಟಕ್ಕೆ ಸಂಬಂಧಿಸಿದಂತೆ ಅತ್ಯಂತ ಕನಿಷ್ಠ ವೆಚ್ಚದ ಸಾಧನ ಸಂಯೋಜನೆ (ಶ್ರಮ 3 + ಬಂಡವಾಳ 2). ಸಮೋತ್ಪಾದನ ರೇಖೆ O ಬಿಂದುವಿನ ಕಡೆಗೆ ಉಬ್ಬಿರುತ್ತದೆಯೆಂಬುದೂ ಗಮನಿಸಬೇಕಾದ ಅಂಶ. **ನೋಡಿ–ಉತ್ಪಾದನ–ಮಟ್ಟ–ರೇಖೆಗಳು.** (ಸಿ.ಕೆ.ಆರ್.)

**ಉತ್ಪಾದನ ವೆಚ್ಚ:** ಸರಕುಗಳು ಕಾರ್ಖಾನೆಯಲ್ಲಿ ತಯಾರಾಗಿ ಮಾರಾಟಕ್ಕೆ ಸಿದ್ಧವಾಗುವ ಘಟ್ಟದ ವರೆಗೂ ತಗಲುವ ವೆಚ್ಚ (ಪ್ರೊಡಕ್ಷನ್ ಕಾಸ್ಟ್). ತಯಾರಿಕೆಯ ಘಟ್ಟದಲ್ಲಿ, ಆಡಳಿತ ಘಟ್ಟದಲ್ಲಿ, ಸರಕು ಮಾರಾಟ ಮತ್ತು ವಿತರಣೆಯ ಘಟ್ಟಗಳಲ್ಲಿ, ತಗಲುವ ಒಟ್ಟು ವೆಚ್ಚವನ್ನು ನಿಯಂತ್ರಿಸುವ ಹಾಗೂ ಕಡಿಮೆ ಮಾಡುವ ದೃಷ್ಟಿಯಿಂದ ಒಟ್ಟು ವೆಚ್ಚವನ್ನು ಅನೇಕ ಭಾಗಗಳಾಗಿ ವಿಂಗಡಿಸಿರುತ್ತಾರೆ. ಪ್ರತ್ಯಕ್ಷ ಸಾಮಗ್ರಿ (ಡೈರೆಕ್ಟ್ ಮೆಟೀರಿಯಲ್), ಪ್ರತ್ಯಕ್ಷ ಶ್ರಮ (ಕೂಲಿ) ಮತ್ತು ಪ್ರತ್ಯಕ್ಷ ಖರ್ಚುಗಳು ಮೂಲ ವೆಚ್ಚವೆಂದೂ (ಪ್ರೈಮ್ ಕಾಸ್ಟ್) ಪರೋಕ್ಷ ಸಾಮಗ್ರಿ, ಪರೋಕ್ಷ ಶ್ರಮ ಮತ್ತು ಪರೋಕ್ಷ ಖರ್ಚುಗಳು ಮೇಲುವೆಚ್ಚವೆಂದೂ (ಕಾಸ್ಟ್ ಓವರ್ ಹೆಡ್) ವಿಂಗಡಿಸಲಾಗಿದೆ. ಸರಕು ತಯಾರಿಕೆಯ ಘಟ್ಟದಲ್ಲಿ ಸಂಭವಿಸಿದ ಮೇಲುವೆಚ್ಚವನ್ನು ಉತ್ಪಾದನ ಮೇಲುವೆಚ್ಚವೆಂದೂ (ವರ್ಕ್ಸ್ ಆನ್–ಕಾಸ್ಟ್) ಆಡಳಿತ ಸಂಬಂಧವಾಗಿ ಮಾಡಿದ ಮೇಲುವೆಚ್ಚವನ್ನು ಆಡಳಿತ ಮೇಲುವೆಚ್ಚ

ವೆಂದೂ ಮಾರಾಟದ ಘಟ್ಟದಲ್ಲಿ ಮಾಡಿದ್ದನ್ನು ವಿಕ್ರಯ ಮೇಲುವೆಚ್ಚವೆಂದೂ ಸರಕು ವಿತರಣೆಯ ಘಟ್ಟದಲ್ಲಾದದ್ದನ್ನು ವಿತರಣ ಮೇಲುವೆಚ್ಚವೆಂದೂ ವಿಂಗಡಿಸಲಾಗಿದೆ. ಉತ್ಪಾದನ ಮೇಲುವೆಚ್ಚದಲ್ಲಿ ಸರಕಿನ ತಯಾರಿಕೆಗೆ ಬೇಕಾಗುವ ಪರೋಕ್ಷ ಸಾಮಗ್ರಿ, ಪರೋಕ್ಷ ಶ್ರಮ ಮತ್ತು ಪರೋಕ್ಷ ಖರ್ಚುಗಳು ಅಡಕವಾಗಿರುತ್ತವೆ.

ಉತ್ಪಾದನ ವೆಚ್ಚದಲ್ಲಿ ಮೂಲ ವೆಚ್ಚಗಳೂ ಉತ್ಪಾದನ ಮೇಲುವೆಚ್ಚಗಳೂ ಉತ್ಪಾದನೆಯ ಘಟ್ಟದವರೆಗೂ ತಗಲಿದ ಆಡಳಿತ ಮೇಲುವೆಚ್ಚಗಳೂ ಅಡಕವಾಗಿರುತ್ತವೆ. ಪ್ರತ್ಯಕ್ಷ ಸಾಮಗ್ರಿ+ಪ್ರತ್ಯಕ್ಷ ಶ್ರಮ+ಪ್ರತ್ಯಕ್ಷ ಖರ್ಚು=ಮೂಲ ವೆಚ್ಚ. ಮೂಲ ವೆಚ್ಚ+ಉತ್ಪಾದನ ಮೇಲುವೆಚ್ಚ +ಉತ್ಪಾದನೆಯ ಘಟ್ಟದವರೆಗಿನ ಆಡಳಿತ ಮೇಲುವೆಚ್ಚ=ಉತ್ಪಾದನ ವೆಚ್ಚ. (ಎ.ಕೆ.ಎಸ್.ಎಚ್.)

**ಉತ್ಪಾದನ ಸೂಚ್ಯಂಕ:** ಒಂದು ದೇಶದ ಇಲ್ಲವೆ ಉತ್ಪಾದನಾಂಗದ ಉತ್ಪಾದನ ಮಟ್ಟದ ಬದಲಾವಣೆಯನ್ನು ಕಾಲ ಅಥವಾ ಪ್ರದೇಶಾನುಗುಣವಾಗಿ ಅಳೆಯಲು ಬಳಸುವ ಸಲಕರಣೆ (ಪ್ರೊಡಕ್ಷನ್ ಇಂಡೆಕ್ಸ್). ಉತ್ಪಾದನೆಯ ಏರಿಳಿತಗಳನ್ನಳೆಯಲು ಉಪಯೋಗಿಸುವ ಈ ಸಲಕರಣೆಯ ತಯಾರಿಕೆ ಸುಲಭವಲ್ಲದಿದ್ದರೂ ಇದರ ಹಿಂದಿರುವ ತಾತ್ತ್ವಿಕ ಸರಣಿ ಸರಳವಾದದ್ದು. ಒಂದು ಕಾರ್ಖಾನೆಯಲ್ಲಿ ಮೊದಲನೆಯ ವರ್ಷದಲ್ಲಿ ಒಂದು ಪದಾರ್ಥದ ಉತ್ಪತ್ತಿ 150 ಘಟಕಗಳಷ್ಟಿದ್ದು ಮರುವರ್ಷ 225 ಘಟಕಗಳಿಗೆ ಏರಿದರೆ ಆಗ ಮೊದಲನೆಯ ವರ್ಷದ್ದಕ್ಕಿಂತ ಎರಡನೆಯ ವರ್ಷದ ಉತ್ಪತ್ತಿ ಶೇಕಡಾ 50ರಷ್ಟು ಹೆಚ್ಚಿದ ಹಾಗಾಯಿತು. ಇಲ್ಲಿ ಮೊದಲನೆಯ ವರ್ಷದ ಉತ್ಪತ್ತಿ 100 ಎಂದು ಭಾವಿಸಿದರೆ ಎರಡನೆಯದರದು 150 (50% ಹೆಚ್ಚು) ಎಂದಾಗುತ್ತದೆ. ಇದೇ ರೀತಿಯಾಗಿ ಎರಡು ಕಾರ್ಖಾನೆಗಳ ಅಥವಾ ಪ್ರದೇಶಗಳ ಉತ್ಪಾದನೆಯನ್ನು ತೌಲನಿಕವಾಗಿ ಪರಿಶೀಲಿಸುವುದು ಸಾಧ್ಯ. ಇಂಥ ಪರಿಶೀಲನೆಗಳಿಗೆ ಒದಗಿ ಬರುವ ಶೇಕಡಾ ವಿಧಾನವೇ ಉತ್ಪಾದನ ಸೂಚ್ಯಂಕದ ವಿಧಾನ. ಪ್ರದೇಶಾನುಗುಣ ಸೂಚ್ಯಂಕಕ್ಕಿಂತ ಕಾಲಾನುಗುಣ ಸೂಚ್ಯಂಕವೇ ಹೆಚ್ಚಾಗಿ ಬಳಕೆಯಲ್ಲಿದೆ.

ಉತ್ಪಾದನ ಸೂಚ್ಯಂಕವನ್ನು ರಚಿಸಬೇಕಾದರೆ ಮೊಟ್ಟ ಮೊದಲಿಗೆ ಆಧಾರ ವರ್ಷವೊಂದನ್ನು ನಿರ್ಧರಿಸಬೇಕು. ಆ ವರ್ಷದ ಉತ್ಪಾದನೆಯನ್ನು ಆಧಾರವಾಗಿಟ್ಟುಕೊಂಡು (100) ಇತರ ವರ್ಷಗಳ (ಪರಾಮರ್ಶನ ವರ್ಷ) ಉತ್ಪಾದನೆಯನ್ನು ಇದರ ಶೇಕಡಾವಾರಾಗಿ ವ್ಯಕ್ತಪಡಿಸಬೇಕು. ಯಾವುದನ್ನು ಆಧಾರ ವರ್ಷವಾಗಿ ಆರಿಸಿಕೊಳ್ಳಬೇಕೆಂಬುದನ್ನು ನಿರ್ಧರಿಸುವಾಗ ಎರಡು ಅಂಶಗಳನ್ನು ಮುಖ್ಯವಾಗಿ ಗಮನಿಸಬೇಕು. ಮೊದಲನೆಯದಾಗಿ, ಪರಾಮರ್ಶನ ವರ್ಷಕ್ಕಿಂತ ಆಧಾರವರ್ಷ ಅತಿ ಹಿಂದಿನದಾಗಿರಬಾರದು. ಅರ್ಥವ್ಯವಸ್ಥೆಯಲ್ಲಿ ದೀರ್ಘಕಾಲದಲ್ಲಿ ಮಹತ್ತರ ಬದಲಾವಣೆಗಳು ಸಂಭವಿಸಿದ್ದರೆ ಹೋಲಿಕೆ ಅವೈಜ್ಞಾನಿಕವಾಗುತ್ತದೆ.

ಎರಡನೆಯದಾಗಿ, ಆಧಾರವಾಗಿ ಆಯ್ಕೆಗೊಳ್ಳುವ ವರ್ಷ ಯಥಾಸ್ಥಿತಿಯದಾಗಿರಬೇಕು. $(\sum q_0 p_0)$ ಆರ್ಥಿಕ ಚಟುವಟಿಕೆಯನ್ನು ಕುಂಠಿತಗೊಳಿಸುವ ಅಥವಾ ಉದ್ರೇಕಗೊಳಿಸುವ ಯಾವ ಘಟನೆಗಳೂ ಆ ವರ್ಷ ಇದ್ದಿರಬಾರದು. ಇಂಥ ಯಥಾಸ್ಥಿತಿ ವರ್ಷ ದೊರಕದಿದ್ದರೆ ಒಂದಕ್ಕಿಂತ ಹೆಚ್ಚು ವರ್ಷಗಳ ಸರಾಸರಿಯ ವಿಧಾನವನ್ನು ಅನುಸರಿಸಬಹುದು.

ಸೂಚ್ಯಂಕದಲ್ಲಿ ತೌಲನಿಕ ಪರಿಶೀಲನೆಗೆ ಒಳಪಡಿಸಬೇಕಾದ ಉತ್ಪಾದನೆಗಳು ಯಾವುವೆಂಬುದನ್ನು ತೀರ್ಮಾನಿಸುವುದೂ ಒಂದು ಮುಖ್ಯ ಹಂತ. ಯಾವುದೇ ದೇಶದಲ್ಲಿ ತಯಾರಾಗುವ ಪದಾರ್ಥಗಳು ಸಾವಿರಾರು. ಈ ಎಲ್ಲ ಪದಾರ್ಥಗಳ ಉತ್ಪಾದನೆಯಲ್ಲಾಗುವ ಬದಲಾವಣೆಯನ್ನೂ ಸೂಚ್ಯಂಕದಲ್ಲಿ ನಮೂದಿಸುವುದು ಸಾಧ್ಯವಿಲ್ಲವಾದ್ದರಿಂದ ಕೆಲವನ್ನು ಮಾತ್ರ ಆರಿಸಿಕೊಳ್ಳಬೇಕಾಗುತ್ತದೆ. ಈ ಆಯ್ಕೆಯಲ್ಲಿ ಗಮನದಲ್ಲಿಡಬೇಕಾದ ವಿಚಾರಗಳು ಮೂರು: (1) ಆದಷ್ಟು ಪ್ರಾತಿನಿಧಿಕವಾದ ಪದಾರ್ಥಗಳನ್ನು ಆರಿಸಿಕೊಳ್ಳಬೇಕು. (2) ಆದಷ್ಟು ಹೆಚ್ಚುಸಂಖ್ಯೆಯಲ್ಲಿ ಪದಾರ್ಥಗಳನ್ನು ಆರಿಸಿಕೊಳ್ಳಬೇಕು ಮತ್ತು (3) ಈ ಪದಾರ್ಥಗಳು ಆಧಾರ ವರ್ಷದಲ್ಲೂ ಪರಾಮರ್ಶನೆಗೆ ಒಳಗಾದ ವರ್ಷಗಳಲ್ಲೂ ಉತ್ಪಾದಿತವಾಗುತ್ತಿದ್ದಿರಬೇಕು.

ಉತ್ಪಾದನ ಸೂಚ್ಯಂಕ ಒಂದು ದೇಶದ ಒಟ್ಟು ಉತ್ಪಾದನೆಯಲ್ಲಿ ಒಂದು ಅವಧಿಯಲ್ಲಾಗಿರುವ ಬದಲಾವಣೆಯನ್ನು ತೋರಿಸಬೇಕಾಗಿರುವುದರಿಂದ ಇಲ್ಲಿ ಆರಿಸಲಾದ ಎಲ್ಲ ಪದಾರ್ಥಗಳ ಉತ್ಪಾದನೆಯ ಮೊತ್ತವನ್ನು ಕಂಡುಹಿಡಿಯುವುದು ಅವಶ್ಯ. ಆದರೆ ಈ ಕಾರ್ಯ ಕಷ್ಟಕರ. ಏಕೆಂದರೆ ಪದಾರ್ಥಗಳನ್ನು ಅಳೆಯುವ ವಿಧಾನಗಳು ಬೇರೆ ಬೇರೆ. ಉದಾಹರಣೆಗೆ ಬಟ್ಟೆ, ಧಾನ್ಯ ಹಾಗೂ ನಾನಾ ಸಲಕರಣೆಗಳನ್ನು ಒಂದೇ ರೀತಿಯಲ್ಲಿ ಮಾಪಿಸಲಾಗುವುದಿಲ್ಲ. ಒಂದರದು ಅಳತೆಯಾದರೆ ಇನ್ನೊಂದರದು ತೂಕ; ಮತ್ತೊಂದನ್ನು ಎಣಿಕೆಯಲ್ಲೇ ವ್ಯಕ್ತಪಡಿಸುವುದು ಸಾಧ್ಯ. ಆದ್ದರಿಂದ ಉತ್ಪಾದನೆಯ ಮೊತ್ತವನ್ನು ಕಂಡುಹಿಡಿಯುವಾಗ ಈ ನಾನಾ ಪರಿಮಾಣಗಳ ಮೌಲ್ಯವನ್ನೆಲ್ಲ ಹಣಕ್ಕೆ ಪರಿವರ್ತಿಸಬೇಕಾಗುತ್ತದೆ. ವಸ್ತುಗಳ ಮೌಲ್ಯನಿರ್ಧಾರ ಮಾಡುವಾಗ ಸಾಮಾನ್ಯವಾಗಿ ಸಗಟು ಬೆಲೆಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸಾಮಾನ್ಯ. ಅದಲ್ಲದೆ ಬೆಲೆಗಳ ಏರಿಳಿತದಿಂದಾಗಿ ಪರಾಮರ್ಶನ ವರ್ಷದಲ್ಲಿ ಮೌಲ್ಯ ವಿರೂಪಗೊಳ್ಳದಿರುವಂತೆ ಎಚ್ಚರಿಕೆ ವಹಿಸಬೇಕು. ಆಧಾರವರ್ಷದ ಬೆಲೆಗಳಲ್ಲೇ ಎಲ್ಲ ಪದಾರ್ಥಗಳ ಮೌಲ್ಯ ನಿರ್ಧಾರ ಮಾಡುವುದು ಅಗತ್ಯ. ಆಧಾರವರ್ಷದ ಸಗಟು ಬೆಲೆಯ ಆಧಾರದ ಮೇಲೆ ಪ್ರತಿ ಪದಾರ್ಥದ ಒಟ್ಟು ಮೌಲ್ಯವನ್ನು ಆಧಾರವರ್ಷಕ್ಕೂ ಪರಾಮರ್ಶನ ವರ್ಷಕ್ಕೂ ಕಂಡುಹಿಡಿಯಬೇಕು. ಆಧಾರವರ್ಷದಲ್ಲಿ ತಯಾರಾದ ಪ್ರತಿಪದಾರ್ಥದ ಮೌಲ್ಯವನ್ನೂ 100 ಎಂದು ಭಾವಿಸಿ, ಪರಾಮರ್ಶನ ವರ್ಷದಲ್ಲಿ ತಯಾರಾದ ಅದೇ ಪದಾರ್ಥದ ಮೌಲ್ಯವನ್ನು ಆಧಾರವರ್ಷದ ಮೌಲ್ಯದ ಶೇಕಡಾ ರೂಪಕ್ಕೆ ಈ ಕೆಳಗಿನ ಸೂತ್ರದ ಮೂಲಕ ಪರಿವರ್ತಿಸಬೇಕು:

$$\frac{\text{ಪರಾಮರ್ಶನ ವರ್ಷದ ಉತ್ಪನ್ನ x ಆಧಾರ ವರ್ಷದ ಸಗಟು ಬೆಲೆ}}{\text{ಆಧಾರ ವರ್ಷದ ಉತ್ಪನ್ನ x ಆಧಾರ ವರ್ಷದ ಸಗಟು ಬೆಲೆ}} \text{ X } 100$$

ಇದನ್ನೇ ಸಂಕೇತಗಳ ಮೂಲಕ ಹೀಗೆ ತೋರಿಸಬಹುದು:

$$Iq_1p_0 = \frac{\sum q_1p_0}{\sum q_0p_0} \times 100$$

ಇಲ್ಲಿ *q* ಎಂಬುದು ಉತ್ಪನ್ನದ ಮೊತ್ತ;; *p* ಎಂಬುದು ಬೆಲೆ. ಉಪಲಿಪಿಗಳಾದ (ಸಬ್ ಸ್ಕ್ರಿಪ್ಟ್ಸ್) 0 ಮತ್ತು 1 ಗಳು ಕ್ರಮವಾಗಿ ಆಧಾರ ಹಾಗೂ ಪರಾಮರ್ಶನ ವರ್ಷಗಳನ್ನು ಸೂಚಿಸುತ್ತವೆ. ಪರಾಮರ್ಶನ ವರ್ಷದಲ್ಲಿ ಉತ್ಪಾದಿಸಲಾದ ನಾನಾ ಪದಾರ್ಥಗಳ ಪರಿಮಾಣಗಳ ಮೌಲ್ಯಗಳ (ಆಧಾರವರ್ಷದ ಬೆಲೆಗಳಲ್ಲಿ) ಮೊತ್ತವನ್ನು $(\sum q_1 p_0)$ ಆಧಾರವರ್ಷದ ಉತ್ಪಾದನೆಯಾದ ಪರಿಮಾಣಗಳ ಮೌಲ್ಯಗಳ ಮೊತ್ತದಿಂದ ಭಾಗಿಸಿ ಬಂದ ಸಂಖ್ಯೆಯನ್ನು 100ರಿಂದ ಗುಣಿಸಿದರೆ ಸಿಗುವುದೇ ಪರಾಮರ್ಶನ ವರ್ಷದ ಉತ್ಪಾದನ ಸೂಚ್ಯಂಕ .

ಆಧಾರವರ್ಷದಲ್ಲಿ ಪ್ರತಿವಸ್ತುವಿನ ಮೌಲ್ಯವನ್ನೂ 100 ಎಂದು ಪರಿಗಣಿಸುವ ಕಾರಣ ಆಧಾರವರ್ಷದ ಪದಾರ್ಥ ಸೂಚ್ಯಂಕ 100. ಉತ್ಪಾದನೆಯಲ್ಲಾದ ಬದಲಾವಣೆಗೆ ಅನುಸಾರವಾಗಿ ಪರಾಮರ್ಶನ ವರ್ಷದ ಸೂಚ್ಯಂಕ 100ಕ್ಕಿಂತ ಹೆಚ್ಚು ಅಥವಾ ಕಡಿಮೆ ಇರಬಹುದು. ಆಧಾರವರ್ಷದ ಪದಾರ್ಥಸೂಚ್ಯಂಕಗಳು ಪರಾಮರ್ಶನ ವರ್ಷದ ಪದಾರ್ಥಸೂಚ್ಯಂಕಗಳ ಸರಾಸರಿಗಳನ್ನು (ಪದಾರ್ಥ ಸೂಚ್ಯಂಕಗಳ ಮೊತ್ತವನ್ನು ಪದಾರ್ಥಗಳ ಸಂಖ್ಯೆಯಿಂದ ಭಾಗಿಸಿ) ಕಂಡುಹಿಡಿಯಬೇಕು. ಈ ಎರಡು ಸರಾಸರಿಗಳ ವ್ಯತ್ಯಾಸವೇ ಆಧಾರ ಮತ್ತು ಪರಾಮರ್ಶನ ವರ್ಷಗಳ ನಡುವೆ ಉತ್ಪನ್ನದಲ್ಲಾಗಿರುವ ಬದಲಾವಣೆಯನ್ನು ಶೇಕಡಾ ರೂಪದಲ್ಲಿ ಸೂಚಿಸುತ್ತದೆ. ಒಂದು ದೇಶದಲ್ಲಿ ಗೋದಿ, ಬಟ್ಟೆ ಮತ್ತು ಕಾಫಿ ಮಾತ್ರ ಉತ್ಪಾದನೆಯಾಗುತ್ತಿವೆಯೆಂದು ಭಾವಿಸಿ, ಈ ಪದಾರ್ಥಗಳ ಉತ್ಪತ್ತಿಗಳ ಮೊತ್ತಗಳನ್ನೂ ಆಧಾರವರ್ಷದ ಬೆಲೆಗಳನ್ನೂ ಮುಂದೆ ಕೋಷ್ಟಕದಲ್ಲಿ ಕೊಟ್ಟಿದೆ.

ಆ ಕೋಷ್ಟಕದಲ್ಲಿನ ಆಧಾರ ಮತ್ತು ಪರಾಮರ್ಶನವರ್ಷಗಳ ಸೂಚ್ಯಂಕಗಳ ಮೊತ್ತಗಳನ್ನು ಪದಾರ್ಥಗಳ ಸಂಖ್ಯೆಯಾದ ಮೂರರಿಂದ ಭಾಗಿಸಿದಾಗ ಆಧಾರವರ್ಷದ ಉತ್ಪಾದನ ಸೂಚ್ಯಂಕವೂ (100) ಪರಾಮರ್ಶನವರ್ಷದ ಉತ್ಪಾದನ ಸೂಚ್ಯಂಕವೂ (216.6) ದೊರಕುತ್ತವೆ. ಎಂದರೆ 2001ರಲ್ಲಿ ಉತ್ಪಾದನೆಯ ಮೌಲ್ಯ ಶೇಕಡಾ 116.6ರಷ್ಟು ಹೆಚ್ಚಿದೆ ಎಂಬುದು ವ್ಯಕ್ತವಾದಂತಾಯಿತು. ಇದೇ ಮಾದರಿಯಲ್ಲಿ ಇತರ ವರ್ಷಗಳಿಗೂ ಉತ್ಪಾದನ ಸೂಚ್ಯಂಕ ತಯಾರಿಸುವುದು ಸಾಧ್ಯ.

ಮೇಲೆ ಸರಳ ಸರಾಸರಿ ಪರಿಮಾಣಾನುಪಾತಗಳನ್ನು (ಸಿಂಪಲ್ ಆವರೇಜ್ ಕ್ವಾಂಟಿಟಿ ರಿಲೆಟಿವ್ಸ್) ಕೊಡಲಾಗಿದೆ. ಆದರೆ ವಾಸ್ತವವಾಗಿ ಈ ನಾನಾ ಪದಾರ್ಥಗಳ ಪರಸ್ಪರ ಪ್ರಾಮುಖ್ಯವನ್ನು (ತೂಕ) ಪರಿಗಣಿಸಿ ಉತ್ಪಾದನ ಸೂಚ್ಯಂಕ ತಯಾರಿಸುವುದು ಹೆಚ್ಚು ಸೂಕ್ತ. ಉದಾಹರಣೆಗೆ, 2001ರಲ್ಲಿ ಬಟ್ಟೆ ಉತ್ಪಾದನೆ 50% ರಷ್ಟು ಕಡಿಮೆಯಾಗಿ, ಕಾಫಿಯ ಉತ್ಪಾದನೆ 50%ರಷ್ಟು ಅಧಿಕಗೊಂಡಿದ್ದು ಆಧಾರವರ್ಷದಲ್ಲಿ ಬಟ್ಟೆ ಮತ್ತು ಕಾಫಿಗಳ ಉತ್ಪತ್ತಿ ಮೌಲ್ಯ ರೂ. 25,00,000ರಷ್ಟಿದ್ದು 2001ರಲ್ಲಿ ರೂ. 17,50,000 ಆಗಿದ್ದರೆ ವಾಸ್ತವವಾಗಿ ಉತ್ಪತ್ತಿ ಮೌಲ್ಯ 30%ರಷ್ಟು ಕಡಿಮೆಗೊಳ್ಳುತ್ತದೆ. ಬಟ್ಟೆಯ ಉತ್ಪತ್ತಿಯ ಮೊತ್ತ ಹೆಚ್ಚಾಗಿದ್ದು ಕಾಫಿಯದು ತೀರ ಕಡಿಮೆಯಾಗಿರುವುದು ಇದಕ್ಕೆ ಕಾರಣ. ಆದರೆ ಸೂಚ್ಯಂಕ ಈ ವ್ಯತ್ಯಾಸವನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಈ ವಸ್ತುಗಳ ಉತ್ಪನ್ನ ಪ್ರಮಾಣಗಳ ಪರಸ್ಪರ ವ್ಯತ್ಯಾಸಗಳನ್ನು ಸೂಚ್ಯಂಕದಲ್ಲಿ ಪ್ರತಿಬಿಂಬಿಸುವ ದೃಷ್ಟಿಯಿಂದ ಈ ಪದಾರ್ಥಗಳ ತೂಕಗಳನ್ನು ಆಧಾರವರ್ಷದಲ್ಲಿನ ಪರಸ್ಪರ ಮೌಲ್ಯ ಪ್ರಮಾಣಗಳ ಆಧಾರದ ಮೇಲೆ ನಿರ್ಧರಿಸಲಾಗುವುದು. ಮೇಲಿನ ಉದಾಹರಣೆಯ ಪ್ರಕಾರ ಆಧಾರವರ್ಷದಲ್ಲಿ ಬಟ್ಟೆಯ ಮೌಲ್ಯ ಪ್ರಮಾಣ ರೂ. 20,00,000; ಕಾಫಿಯದು ರೂ 5,00,000. ಎಂದರೆ ಬಟ್ಟೆ ಕಾಫಿಗಿಂತ ನಾಲ್ಕರಷ್ಟು ಮುಖ್ಯ. ಈ ಆಧಾರದ ಮೇಲೆ ಕಾಫಿಯ ತೂಕ 1 ಆದರೆ ಬಟ್ಟೆಯದು 4. ಈ ತೂಕಗಳನ್ನು ಗಮನದಲ್ಲಿಟ್ಟುಕೊಂಡು ಸೂಚ್ಯಂಕವನ್ನು ತಯಾರಿಸಿದರೆ ಉತ್ಪತ್ತಿ ಮೌಲ್ಯಗಳಲ್ಲಾಗುವ ವ್ಯತ್ಯಾಸಗಳನ್ನು ಸರಿಯಾಗಿ ಪ್ರತಿಬಿಂಬಿಸಬಹುದು. ಪ್ರತಿ ಪದಾರ್ಥದ ಸೂಚ್ಯಂಕವನ್ನೂ ಅದರ ತೂಕದಿಂದ ಗುಣಿಸಿ ಅನಂತರ ಬರುವ ವಸ್ತುಸೂಚ್ಯಂಕಗಳ ಬಟ್ಟು ಮೊತ್ತವನ್ನು ಒಟ್ಟು ತೂಕಗಳಿಂದ ಭಾಗಿಸಿದರೆ ಸಿಗುವುದೇ ಭಾರಿತ ಉತ್ಪಾದನ ಸೂಚ್ಯಂಕ. ಮುಂದೆ ಕೊಟ್ಟಿರುವ ಕೋಷ್ಟಕದಲ್ಲಿ ಬಟ್ಟೆ ಕಾಫಿಗಳೆರಡನ್ನು ಮಾತ್ರ ತೆಗೆದುಕೊಂಡು ಮೇಲೆ ಹೇಳಿದ ಉದಾಹರಣೆಗಳಿಂದ ಭಾರಿತ ಉತ್ಪಾದನ ಸೂಚ್ಯಂಕವನ್ನು ಗುಣಿಸಿದೆ.

ಆ ಕೋಷ್ಟಕದಲ್ಲಿ ಬಟ್ಟೆಯ ಒಟ್ಟು ಉತ್ಪನ್ನಮೌಲ್ಯ 50%ರಷ್ಟು ಕಡಿಮೆಯಾಗಿದೆಯೆಂದೂ ಕಾಫಿಯ ಒಟ್ಟು ಉತ್ಪನ್ನ ಮೌಲ್ಯ 50%ರಷ್ಟು ಅಧಿಕಗೊಂಡಿದೆಯೆಂದೂ ಭಾವಿಸಿಕೊಂಡು, ಭಾರಿತ ಉತ್ಪಾದನ ಸೂಚ್ಯಂಕ ತಯಾರಿಸಲಾಗಿದೆ. ಆಧಾರವರ್ಷದ ಭಾರಿತ ಪದಾರ್ಥ ಸೂಚ್ಯಂಕದ ಮೊತ್ತವನ್ನೂ ($\Sigma$ ) ಪರಾಮರ್ಶನ ವರ್ಷದ ಭಾರಿತ ಪದಾರ್ಥಸೂಚ್ಯಂಕದ ಮೊತ್ತವನ್ನೂ ($\Sigma Iq_1$) ತೂಕಗಳ ಮೊತ್ತದಿಂದ (W) ಭಾಗಿಸಿದಾಗ ಲಬ್ಧವಾಗುವ ಆಧಾರ ವರ್ಷದ ಸರಾಸರಿ ಭಾರಿತ ಪದಾರ್ಥ ಸೂಚ್ಯಂಕ 100; ಪರಾಮರ್ಶನ ವರ್ಷದ ಸರಾಸರಿ

ಉತ್ಪಾದನ ಸೂಚ್ಯಂಕ (ಆಧಾರ ವರ್ಷ 1991=100)

| 1991: ಆಧಾರ ವರ್ಷ | | | | | | 2001: ಪರಾಮರ್ಶನ ವರ್ಷ | | | |
|---|---|---|---|---|---|---|---|---|---|
| ಪದಾರ್ಥ | ಘಟಕ | ಉತ್ಪತ್ತಿ ('000) | ಬೆಲೆ ರೂ. | ಮೌಲ್ಯ ರೂ. ('000) | ಪದಾರ್ಥ ಸೂಚ್ಯಂಕ | ಉತ್ಪತ್ತಿ ('000) | ಆಧಾರವರ್ಷದ ಬೆಲೆ ರೂ. | ಮೌಲ್ಯ ರೂ. ('000) | ಪದಾರ್ಥ ಸೂಚ್ಯಂಕ |
| 1. ಗೋದಿ | ಪಲ್ಲ | 100 | 30 | 3,000 | 100 | 300 | 30 | 9,000 | 300 |
| 2. ಬಟ್ಟೆ | ಗಜ | 1,000 | 2 | 2,000 | 100 | 1,500 | 2 | 3,000 | 150 |
| 3. ಕಾಫಿ | ಸೇರು | 100 | 5 | 500 | 100 | 200 | 5 | 1,000 | 200 |
| | | | | | 300 | | | | 650 |
| ಸೂಚ್ಯಂಕ | | | | | | | | | $\frac{\Sigma Iq_1p_0}{\Sigma Iq_0p_0} \times 100 = \frac{650}{3} = 216.6$ |

ಭಾರಿತ ಪದಾರ್ಥ ಸೂಚ್ಯಂಕ 70. ಎಂದರೆ 2001ರಲ್ಲಿ ಬಟ್ಟೆ ಮತ್ತು ಕಾಫಿಯ ಉತ್ಪನ್ನ ಮೌಲ್ಯಗಳು ಮೇಲೆ ಹೇಳಿದಂತೆ ಬದಲಾವಣೆಹೊಂದಿದ ಕಾರಣ ಒಟ್ಟು ಉತ್ಪಾದನ ಮೌಲ್ಯ 30ರಷ್ಟು ಕಡಿಮೆ.

ಭಾರತದಲ್ಲಿ ಬಳಕೆಯಲ್ಲಿರುವ ಉತ್ಪಾದನ ಸೂಚ್ಯಂಕಗಳನ್ನು ಎರಡು ಶಿರೋನಾಮಗಳಲ್ಲಿ ಕೊಡಬಹುದು. (1) ವ್ಯಾವಸಾಯಿಕ ಉತ್ಪಾದನ ಸೂಚ್ಯಂಕ ಮತ್ತು (2) ಕೈಗಾರಿಕಾ ಉತ್ಪಾದನ ಸೂಚ್ಯಂಕ.

ತೂಗಿದ ಉತ್ಪಾದನ ಸೂಚ್ಯಂಕ

| 1991: ಆಧಾರ ವರ್ಷ | | | | | 2001: ಪರಾಮರ್ಶನ ವರ್ಷ | | | |
|---|---|---|---|---|---|---|---|---|
| ವಸ್ತು | ಮೌಲ್ಯ ರೂ. (000) | ಪದಾರ್ಥ ಸೂಚ್ಯಂಕ | ತೂಕ | ತೂಗಿದ ಪದಾರ್ಥ ಸೂಚ್ಯಂಕ | ಮೌಲ್ಯ ರೂ. (000) | ಪದಾರ್ಥ ಸೂಚ್ಯಂಕ | ತೂಕ | ತೂಗಿದ ಪದಾರ್ಥ ಸೂಚ್ಯಂಕ |
| ಬಟ್ಟೆ | 2,000 | 100 | 4 | 400 | 1,000 | 50 | 4 | 200 |
| ಕಾಫಿ | 500 | 100 | 1 | 100 | 750 | 150 | 1 | 150 |
| | W (ತೂಕ) =5 $\Sigma Iq_0$=500 | | | | W =5 $\Sigma Iq_1$=500 | | | |
| ಸೂಚ್ಯಂಕ | $\frac{\Sigma Iq_0}{W} = \frac{500}{5} = 100$ | | | | $\frac{\Sigma Iq_1}{W} = \frac{350}{5} = 70$ | | | |

ವ್ಯಾವಸಾಯಿಕ ಉತ್ಪಾದನ ಸೂಚ್ಯಂಕವನ್ನು ಭಾರತದ ರಿಸರ್ವ್ ಬ್ಯಾಂಕ್ ಅಲ್ಲದೆ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯೂ ದೆಹಲಿಯ ಈಸ್ಟರ್ನ್ ಎಕಾನೊಮಿಸ್ಟ್ ವಾರಪತ್ರಿಕೆಯೂ ತಯಾರಿಸುತ್ತವೆ. ಭಾರತದ ಆಹಾರ ಮತ್ತು ಕೃಷಿ ಸಚಿವಾಲಯದವರು ಈ ಸೂಚ್ಯಂಕವನ್ನು 1949ರಲ್ಲಿ ತಯಾರಿಸುತ್ತಿದ್ದರು. ಅಲ್ಲಿಂದೀಚೆಗೆ ಇದು ನಿಂತಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯೂ ದೆಹಲಿಯ ಈಸ್ಟರ್ನ್ ಎಕಾನೊಮಿಸ್ಟ್ ವಾರಪತ್ರಿಕೆಯೂ ತಯಾರಿಸುತ್ತವೆ. ಭಾರತದ ಆಹಾರ ಮತ್ತು ಕೃಷಿ ಸಚಿವಾಲಯದವರು ಈ ಸೂಚ್ಯಂಕವನ್ನು 1949ರಲ್ಲಿ ತಯಾರಿಸುತ್ತಿದ್ದರು. ಅಲ್ಲಿಂದೀಚೆಗೆ ಇದು ನಿಂತಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಭಾರತವನ್ನೊಳಗೊಂಡು ಪ್ರಪಂಚದ ಅನೇಕ ದೇಶಗಳ ವ್ಯಾವಸಾಯಿಕ ಉತ್ಪಾದನ ಸೂಚ್ಯಂಕಗಳನ್ನು ಪ್ರಕಟಿಸುತ್ತಿದೆ. ಈಸ್ಟರ್ನ್ ಎಕಾನೊಮಿಸ್ಟ್ 14 ಪದಾರ್ಥಗಳನ್ನೊಳಗೊಂಡ ಸೂಚ್ಯಂಕವನ್ನು 1939–40ನೆಯ ವರ್ಷದಿಂದ ಕೊಡುತ್ತಿದೆ. ಭಾರತದ ರಿಸರ್ವ್ ಬ್ಯಾಂಕಿನ ಸೂಚ್ಯಂಕ 17 ಪದಾರ್ಥಗಳನ್ನೊಳಗೊಂಡದ್ದು. ಇದು 1939–40ರಿಂದ ಈಚಿನ ವರ್ಷಗಳಿಗೆ ಸಿಗುತ್ತದೆ.1948–49ರ ವರೆಗೆ 1939–37 ಮತ್ತು 1938–39ರ ಸರಾಸರಿಯೇ ಆಧಾರ ವರ್ಷವಾಗಿದ್ದು, 1949–50ರಿಂದ ಇದು 1948–49 ಆಗಿದೆ. ಇದು ಭಾರಿತ ಉತ್ಪಾದನ ಸೂಚ್ಯಂಕ. ಇಲ್ಲಿ ಉತ್ಪತ್ತಿ ಮೌಲ್ಯಗಳನ್ನು ತೂಕಗಳನ್ನಾಗಿ ಪರಿಗಣಿಸಲಾಗಿದೆ. ಸೂಚ್ಯಂಕದಲ್ಲಿ ಉಪಯೋಗಿಸಿರುವ ಪದಾರ್ಥಗಳೂ ಅವುಗಳ ತೂಕಗಳೂ ಈ ರೀತಿ ಇವೆ (ತೂಕಗಳನ್ನು ಆವರಣಗಳಲ್ಲಿ ಕೊಡಲಾಗಿದೆ): ಅಕ್ಕಿ (38), ಜೋಳ ಮತ್ತು ನವಣೆ (12), ಮೆಕ್ಕೆಜೋಳ (2), ರಾಗಿ (2), ಗೋದಿ (14), ಬಾರ್ಲಿ (4), ಕಾಳು (7), ಎಳ್ಳು (1), ನೆಲಗಡಲೆ (7), ಸಾಸಿವೆ (2), ಅಗಸೆ ಬೀಜ (1), ಹರಳಿನ ಬೀಜ (0.3), ಹತ್ತಿ (3) ಸಣಬು (2), ಚಹಾ (4), ಕಾಫಿ (0.4), ರಬ್ಬರು (0.1).

ಕೈಗಾರಿಕಾ ಉತ್ಪಾದನ ಸೂಚ್ಯಂಕವನ್ನು ಈಸ್ಟರ್ನ್ ಎಕಾನೊಮಿಸ್ಟ್ ಆಗಸ್ಟ್ 1939ನ್ನು ಆಧಾರ ವರ್ಷವಾಗಿಟ್ಟುಕೊಂಡು 11 ಪದಾರ್ಥಗಳಿಗೆ 1948ರಿಂದ ಮಾಸಿಕವಾಗಿ ಪ್ರಕಟಿಸುತ್ತಿದೆ. ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಕೈಗಾರಿಕಾ ಉತ್ಪಾದನ ಸೂಚ್ಯಂಕವನ್ನು ತಯಾರಿಸಿ ಪ್ರಚಾರ ಮಾಡುತ್ತಿದೆ. ಇಲ್ಲಿ ತೂಕಗಳನ್ನು 1946ರ ಕೈಗಾರಿಕಾ ಗಣತಿಯ ಪದಾರ್ಥ ಮೌಲ್ಯಗಳ ಆಧಾರದ ಮೇಲೆ ರೂಪಿಸಲಾಗಿದೆ. ಸೂಚ್ಯಂಕಕ್ಕೆ ಆರಿಸಲಾದ ಪದಾರ್ಥಗಳೂ ಅವುಗಳ ತೂಕಗಳೂ ಈ ರೀತಿಯಿವೆ: ಕಲ್ಲಿದ್ದಲು (11.95), ಸಕ್ಕರೆ

(ಆಧಾರವರ್ಷ 1951=100)

(3.54), ಬಣ್ಣ ಮತ್ತು ಮೆರುಗೆಣ್ಣೆ (0.61), ಸಿಮೆಂಟು (0.67), ಗಾಜು (0.55), ರಿಫ್ರಾಕ್ಟರಿಗಳು (0.48), ಪದರಂಟು

ಹಲಗೆ ಅಥವಾ ಪ್ಲೈವುಡ್ (0.15), ಕಾಗದ (1.14), ಬೆಂಕಿಕಡ್ಡಿ (1.21), ಹತ್ತಿ (43.49), ಉಣ್ಣೆ (1.38), ಸೆಣಬು (16.53), ರಾಸಾಯನಿಕ ಪದಾರ್ಥಗಳು (3.10); ನಾನ್–ಫೆರಸ್ ಲೋಹಗಳು (12.14), ಉಕ್ಕು (7.16), ಸೈಕಲ್ಲು (0.11), ಹೊಲಿಗೆ ಯಂತ್ರ (0.02), ವಿದ್ಯುತ್ ದೀಪ (0.04), ವಿದ್ಯುತ್ ಬೀಸಣಿಗೆ (0.35), ಎಂಜಿನಿಯರಿಂಗ್ ಮತ್ತು ವಿದ್ಯುತ್ ಉಪಕರಣಗಳು (5.06). (ಎ.ಬಿ.ಎ.)

**ಉತ್ಪಾದನಾಂಗಗಳು:** ಉತ್ಪಾದನೆಗೆ ಅಗತ್ಯವಾದ ಸಾಧನಗಳು (ಫ್ಯಾಕ್ಟರ್ಸ್ ಆಫ್ ಪ್ರೊಡಕ್ಷನ್). ಮೂಲ ಉತ್ಪಾದನ ಸಾಧನಗಳ ಒಂದು ಗುಂಪು ಅಥವಾ ವರ್ಗವೇ ಉತ್ಪಾದನಾಂಗವೆಂಬುದು ಫ್ರೇಸರನ ವ್ಯಾಖ್ಯೆ. ಈ ಒಂದೊಂದು ಗುಂಪು ಅಥವಾ ವರ್ಗಗಳಲ್ಲಿನ ಬಿಡಿ ಸಾಧನಗಳಿಗೆ ಅಂಶಗಳೆಂದು ಹೆಸರು. ಅಭಿಜಾತ ಸಂಪ್ರದಾಯಾನುಸಾರವಾಗಿ ಉತ್ಪಾದನೆಯ ನಾನಾ ಸಾಧನೆಗಳನ್ನು ವಿಂಗಡಿಸುವ ಬದಲು ಅವಕ್ಕೆ ಯಾವ ಹಣೆಚೀಟಿಗಳನ್ನೂ ಅಂಟಿಸದೆ ಕೇವಲ ಉತ್ಪಾದಕ ಸೇವೆಗಳೆಂದು ಕರೆಯಬೇಕೆಂದು ಆಧುನಿಕ ಅರ್ಥಶಾಸ್ತ್ರಜ್ಞರ ಅಭಿಲಾಷೆ. ಉತ್ಪಾದನಾಂಗಗಳನ್ನು ಗ್ರಾಸ ಅಥವಾ ಆದಾನವೆಂದೂ (ಇನ್‌ಪುಟ್) ಉತ್ಪಾದಿಸಿದ ಪದಾರ್ಥವನ್ನು ಉತ್ಪತ್ತಿ (ಔಟ್‌ಪುಟ್) ಎಂದೂ ಕರೆಯುವ ಪರಿಪಾಟವುಂಟು. ಉತ್ಪಾದನೆಗೆ ಸಹಾಯವಾಗುವಂಥದು ಏನೇ ಇರಲಿ, ಅದು ಉತ್ಪಾದನೆಯ ಅಂಗ ಎಂಬುದು ಬೆನ್‌ಹ್ಯಾಮನ ಮಾತು. ಉತ್ಪಾದನೆಯ ಅಂಗಗಳನ್ನು ಸಾಮಾನ್ಯವಾಗಿ ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ. ಅವೆಂದರೆ 1. ಭೂಮಿ, 2. ಶ್ರಮ, 3. ಬಂಡವಾಳ, 4. ಸಂಘಟನೆ.

**ಭೂಮಿ:** ಭೂಮಿಯೆಂಬ ಪದಕ್ಕೆ ಅರ್ಥಶಾಸ್ತ್ರದಲ್ಲಿ ವಿಶಿಷ್ಟವಾದ ಅರ್ಥವುಂಟು. ಇದು ಕೇವಲ ನೆಲವಲ್ಲ, ಮಣ್ಣಲ್ಲ. ನೆಲ ಜಲ ವಾಯು ಬೆಳಕು ಬೆಂಕಿಗಳ ರೂಪದಲ್ಲಿ ಪ್ರಕೃತಿ ಮಾನವನಿಗೆ ನೀಡುವ ವಸ್ತು ಶಕ್ತಿಗಳಿಗೆಲ್ಲ ಭೂಮಿ ಸಂಕೇತವೆಂಬುದು ಮಾರ್ಷಲನ ಮಾತು. ಮಾನವ ಏನು ಮಾಡಬೇಕಾದರೂ ನೆಲದ ಮೇಲ್ಮೈಯೇ ಅವನಿಗೆ ಮೂಲಾಧಾರ. ಆತನ ಕೃತಿಗಳಿಗೆಲ್ಲ ಅದು ಅನುವು ಮಾಡಿಕೊಡುತ್ತದೆ. ಮನುಷ್ಯನ ನಾಗರಿಕತೆಯ ನಾನಾ ಹಂತಗಳಲ್ಲಿ ಪ್ರಕೃತಿಯೇ ಆತನ ಪ್ರಧಾನ ಮಿತ್ರ  ಕೆಣಕಿ, ಸೆಣಸಿ, ಸೋಲಿಸಿ, ಒಲಿದು ಆತನ ಆರ್ಥಿಕ ಬೆಳವಣಿಗೆಗೆ ಎಡೆ ಮಾಡಿಕೊಟ್ಟಿರುವ ಶಕ್ತಿ. ಮನುಷ್ಯ ಬೇಟೆಯ ಜೀವನ ನಡೆಸುತ್ತಿದ್ದಾಗ ಪ್ರಾಣಿ ಸಂಪತ್ತನ್ನೂ ಪಶು ಪಾಲಕನಾಗಿದ್ದಾಗ ಹುಲ್ಲುಗಾವಲನ್ನೂ ಬೇಸಾಯಕ್ಕೆ ಫಲವತ್ತಾದ ನೆಲವನ್ನೂ ಇನ್ನೂ ಹೆಚ್ಚು ಮುಂದುವರಿದಾಗ ಕೈಗಾರಿಕೆಗೆ ಕಚ್ಚಾ ಸಾಮಗ್ರಿಯನ್ನೂ ಸರ್ವಕಾಲದಲ್ಲೂ ನೆಲೆಯನ್ನೂ ಒದಗಿಸಿಕೊಟ್ಟಿರುವುದು ಭೂಮಿಯೇ. ಮಾನವ ಬಳಸುವ ಎಲ್ಲ ಪದಾರ್ಥಗಳ ಮೂಲವೂ ಇದೇ.

ಈ ಭೂಮಿ ಎನ್ನುವುದು ಮಾನವನಿಗೆ ಪ್ರಕೃತಿ ನೀಡಿರುವ ಕಾಣಿಕೆ. ಒಮ್ಮೆ ಅನುಪಯುಕ್ತವಾಗಿದ್ದ ಪ್ರದೇಶಗಳನ್ನು ಮಾನವನಿಂದು ಪರಿವರ್ತಿಸಿಕೊಂಡಿದ್ದಾನೆ, ನಿಜ. ಆದರೂ ಪ್ರಕೃತಿಯಿಂದ ಮಾನವನಿಗೆ ಸಂದಿರುವ ಕೊಡುಗೆಯೊಂದಿಗೆ ಹೋಲಿಸಿದಲ್ಲಿ ಮಾನವ ಅದಕ್ಕೆ ಪ್ರತಿಯಾಗಿ ಮಾಡಿರುವುದು ಅತ್ಯಲ್ಪವೆಂಬುದು ನಿರ್ವಿವಾದ.

ಭೂಮಿಗೆ ಕೆಲವು ವಿಶಿಷ್ಟ ಲಕ್ಷಣಗಳುಂಟು : ಭೂಮಿಯ ಪರಿಮಾಣ ಮಿತವಾದುದ್ದು. ಇದರ ಸರಬರಾಜನ್ನು ಮನುಷ್ಯ ತನಗಿಷ್ಟ ಬಂದಂತೆ ಹಿಗ್ಗಿಸುವುದಾಗಲಿ ಕುಗ್ಗಿಸುವುದಾಗಲಿ ಸಾಧ್ಯವಿಲ್ಲ. ಭೂಮಿಗೆ ಸರಬರಾಜು ಬೆಲೆಯಿಲ್ಲವೆಂದು ಹೇಳಲಾಗಿದೆ. ಹೆಚ್ಚು ಬೆಲೆಗೆ ತಕ್ಕಂತೆ ಅದರ ಸರಬರಾಜನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಬೆಲೆ ಇಳಿದಾಗ ಅದರ ಪ್ರಮಾಣ ತಗ್ಗುವುದಿಲ್ಲ. ನೆಲದ ಪರಿಮಾಣ ಸ್ಥಿರವಾದ್ದರಿಂದ ಜನಸಂಖ್ಯೆ ಹೆಚ್ಚಿದಂತೆ ಅದಕ್ಕೆ ಅಭಾವ ಗೇಣಿ ಉದಿಸುತ್ತದೆ. ಭೂಮಿ ಸ್ಥಿರವಾದದ್ದು. ಬಾಂಬು ದಾಳಿಯಿಂದ ನೆಲದ ಉತ್ಪಾದಕತೆ ತಾತ್ಕಾಲಿಕವಾಗಿ ನಾಶವಾದರೂ ಅದನ್ನು ಪುನಃ ನೆಲೆಗೊಳಿಸುವುದು ಸಾಧ್ಯ. ರಿಕಾರ್ಡೋ ಮಾತಿನಲ್ಲಿ ಭೂಮಿಯ ಗುಣಧರ್ಮಗಳು ಮೂಲಭೂತ, ಅವಿನಾಶಿ. ಭೂಮಿ ಅಚಲ. ಭೌಗೋಳಿಕವಾಗಿ ಅದನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವುದು ಅಸಾಧ್ಯ. ಸ್ಥಳದಿಂದ ಸ್ಥಳಕ್ಕೆ ಭೂಮಿಯ ಗೇಣಿ ಬದಲಾಗುವುದಕ್ಕೆ ಅದರ ಈ ಗುಣವೇ ಕಾರಣ. ಭೂಮಿಯ ಫಲವತ್ತು ತಾಕಿನಿಂದ ತಾಕಿಗೆ ವ್ಯತ್ಯಾಸವಾಗುತ್ತದೆ. ಒಂದೇ ತೆರನಾದ ಎರಡು ತುಣುಕು ಭೂಮಿ ಇರುವುದು ಅಸಾಧ್ಯ. ಅಂಚಿನ ಬೇಸಾಯದ ಭಾವನೆ ಬೆಳೆದಿರುವುದು ಈ ಕಾರಣದಿಂದ. **(ನೋಡಿ– ಗೇಣಿ,–ಗೇಣಿ–ಸಿದ್ಧಾಂತ)**

**ಶ್ರಮ:** ಸಾಮಾನ್ಯರಲ್ಲಿ ರೂಢಿಯಲ್ಲಿರುವುದಕ್ಕಿಂತ ಅರ್ಥಶಾಸ್ತ್ರದಲ್ಲಿ ಶ್ರಮದ ಅರ್ಥ ಹೆಚ್ಚು ವಿಶಿಷ್ಟ ಆರೋಗ್ಯಪಾಲನೆಗಾಗಿ ಮಾಡುವ ವ್ಯಾಯಾಮ, ತಾಯಿಯಿಂದ ಶಿಶುಪೋಷಣೆ, ತಂದೆ ಮಗನಿಗೆ ಹೇಳಿಕೊಡುವ ಪಾಠ, ಮನೆಯ ಮುಂದಿನ ತೋಟದಲ್ಲಿ ನಾವು ಮಾಡುವ ಕೆಲಸ–ಇವೆಲ್ಲ ಸಾಮಾನ್ಯ ಅರ್ಥದಲ್ಲಿ ಶ್ರಮವೇ. ಆದರೆ ಅರ್ಥಶಾಸ್ತ್ರದ ದೃಷ್ಟಿಯಲ್ಲಿ ಇವೆಲ್ಲ ಶ್ರಮವಲ್ಲ. ಏಕೆಂದರೆ ಇವೆಲ್ಲವೂ ಸ್ವಸಂತೋಷಕ್ಕಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ಮಾಡಿದ್ದು.

ದುಡಿಮೆಯಿಂದ ದೊರಕುವ ಸಂತೋಷಕ್ಕಿಂತಲೂ ಬೇರೆಯಾದ ಫಲವನ್ನೇ ಕ್ವಚಿತ್ತಾಗಿಯೋ ಪ್ರಧಾನವಾಗಿಯೋ ನಿರೀಕ್ಷಿಸಿ ವಿನಿಯೋಗಿಸಿದ ದೈಹಿಕ ಮಾನಸಿಕ ಪ್ರಯಾಸವೆಲ್ಲ ದುಡಿಮೆ–ಎಂಬುದು ಮಾರ್ಷಲನ ವ್ಯಾಖ್ಯೆ. ಈ ಅರ್ಥದಲ್ಲಿ ಶ್ರಮಿಕ ಕೂಲಿಕಾರನಿರಲಿ, ಕೃಷಿಕನಿರಲಿ, ಶಿಕ್ಷಕನಿರಲಿ, ಗುಮಾಸ್ತನಿರಲಿ, ಪೊಲೀಸನಾಗಿರಲಿ, ವೈದ್ಯನಿರಲಿ, ತಂತ್ರಜ್ಞನಾಗಿರಲಿ ಇವರೆಲ್ಲರೂ ಪ್ರತಿಫಲಾಪೇಕ್ಷೆಯಿಂದ ತಮ್ಮ ಕಾರ್ಯ ಮಾಡಿದರೆ ಆ ಕಾರ್ಯ ಶ್ರಮವೆನಿಸಿಕೊಳ್ಳುತ್ತದೆ.

ಶ್ರಮಕ್ಕೂ ಇತರ ಉತ್ಪಾದನಾಂಗಗಳಿಗೂ ವ್ಯತ್ಯಾಸಗಳುಂಟು. ಇತರ ಉತ್ಪಾದನಾಂಗಗಳು ಉತ್ಪಾದನೆಯ ಗುರಿಯ ಸಾಧನಗಳು ಮಾತ್ರ. ಆದರೆ ಶ್ರಮ ಹೀಗಲ್ಲ. ಇದು ಗುರಿಯ ಸಾಧನವೂ ಹೌದು, ಇದೇ ಗುರಿಯೂ ಹೌದು. ಕಾರ್ಮಿಕರು ದುಡಿಯುವುದು ಅಂತಿಮವಾಗಿ ತಮ್ಮ ಬಯಕೆಗಳ ತೃಪ್ತಿಗಾಗಿಯೇ. ಆದ್ದರಿಂದ ಒಂದು ಕಡೆ ಇವರು ಉತ್ಪಾದಕರಾದರೆ ಇನ್ನೊಂದು ಕಡೆ ಇವರೇ ಅನುಭೋಗಿಗಳು.

ಶ್ರಮವನ್ನೂ ಶ್ರಮಿಕನನ್ನೂ ಬೇರ್ಪಡಿಸಲಾಗದ್ದು ಇದರ ಇನ್ನೊಂದು ಮುಖ್ಯ ಲಕ್ಷಣ. ಅವನ ಪದಾರ್ಥವನ್ನು ಅವನೇ ಖುದ್ದಾಗಿ ಬಂದು ಒಪ್ಪಿಸಬೇಕಾದ್ದು ಅನಿವಾರ್ಯ. ಆತ ಮಾಡುವುದು ತನ್ನ ಶ್ರಮವನ್ನೇ ಹೊರತು ತನ್ನನ್ನಲ್ಲ.

ಶ್ರಮ ಅವಿನಾಶಿಯಲ್ಲ. ಅದು ನಶ್ವರ. ಕೆಲಸ ಮಾಡದೆ ಕಳೆದ ಒಂದೊಂದು ದಿನವೂ ಶಾಶ್ವತವಾಗಿ ನಷ್ಟವಾದಂತೆಯೇ. ಸಂಚಿತವಾದ ಶ್ರಮಕ್ಕೆ ಇರುವುದು ಒಂದೇ ಮಾರ್ಗ ಅದರ ವಿನಿಯೋಗ. ಒಳ್ಳೆಯ ಬೆಲೆ ಬಂದಾಗ ಮಾರೋಣವೆಂದು ಶ್ರಮವನ್ನು ದಾಸ್ತಾನು ಮಾಡಿಡುವುದು ಕಾರ್ಮಿಕನಿಗೆ ಸಾಧ್ಯವಿಲ್ಲ. ಆದ್ದರಿಂದ ದೊರಕುವ ಕೂಲಿ ಪಡೆದು ಕೆಲಸ ಮಾಡಬೇಕಾದ್ದು ಹಲವು ವೇಳೆ ಆತನಿಗೆ ಅನಿವಾರ್ಯ. ಆದ್ದರಿಂದ ದುಡಿಮೆಗಾರನಿಗೆ ಚೌಕಾಶಿಯ ಶಕ್ತಿಯಿಲ್ಲವೆಂಬುದು ಸ್ವಯಂವೇದ್ಯ. ಉದ್ಯಮದೊಡೆಯರು ಈ ದೌರ್ಬಲ್ಯದ ದುರುಪಯೋಗ ಪಡೆಯದಿರಲೆಂದೇ ಅನೇಕ ಸರ್ಕಾರಗಳು ಕಾರ್ಮಿಕರ ಹಿತ ರಕ್ಷಿಸುವ ಕಾಯಿದೆಗಳನ್ನು ಜಾರಿಗೆ ತಂದಿವೆ. ಕಾರ್ಮಿಕ ಸಂಘಗಳು ಹುಟ್ಟಿ ಬೆಳೆದಿರುವುದೂ ಈ ಉದ್ದೇಶದಿಂದಲೇ.

ಕಾರ್ಮಿಕರ ಶ್ರಮದ ಬೆಲೆಯಲ್ಲಿ ಆಗುವ ಏರಿಳಿತಗಳಿಂದ ಅದರ ಸರಬರಾಜಿನಲ್ಲಿ ಅನೇಕ ವೇಳೆ ವ್ಯತ್ಯಾಸಗಳಾಗುತ್ತವೆ. ಬೆಲೆ ಕಡಿಮೆಯಾದಾಗ ಸರಬರಾಜು ಕಡಿಮೆಯಾಗುವುದು ಇತರ ಪದಾರ್ಥಗಳ ಧರ್ಮ. ಆದರೆ ಕೂಲಿ ಕಡಿಮೆಯಾದಾಗ ಕಾರ್ಮಿಕನ ಸಂಸಾರದಲ್ಲಿ ಕಡಿಮೆಯಾದ ವರಮಾನವನ್ನು ತುಂಬಲು ಅವನ ಕುಟುಂಬದಲ್ಲಿ ಇತರರೂ ಕೆಲಸಕ್ಕೆ ಬರಬಹುದು. ಇದರಿಂದ ಸರಬರಾಜು ಕಡಿಮೆಯಾಗುವ ಬದಲು ಹೆಚ್ಚೇ ಆಗುತ್ತದೆ. ಆದರೆ ಕೂಲಿ ಒಂದು ಮಟ್ಟವನ್ನು ಮೀರಿ ಹೆಚ್ಚಾದಾಗ ಕಾರ್ಮಿಕರ ವರಮಾನ ಹೆಚ್ಚಿ, ಅತಿಯಾಗಿ ದುಡಿಯುವ ಆವಶ್ಯಕತೆ ತಗ್ಗಿ, ಅವರ ಸರಬರಾಜೂ ತಗ್ಗಬಹುದು.

ಬೇಡಿಕೆಗೆ ತಕ್ಕಂತೆ ಕಾರ್ಮಿಕರ ಸಂಖ್ಯೆಯನ್ನು ಶೀಘ್ರವಾಗಿ ಏರಿಸಲಾಗಲಿ ತಗ್ಗಿಸಲಾಗಲಿ ಸಾಧ್ಯವಿಲ್ಲ. ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಪದಾರ್ಥಗಳಿಗೆ ಗಿರಾಕಿ ತಗ್ಗಿ ಬೆಲೆಯೂ ಇಳಿದಾಗ ಉತ್ಪಾದನೆಯನ್ನೂ ತಗ್ಗಿಸುವುದು ಅನಿವಾರ್ಯವಾಗಬಹುದು. ಆಗ ಕಾರ್ಮಿಕರಿಗೆ ಬೇಡಿಕೆ ತಗ್ಗಿ ಕೂಲಿಯೂ ಇಳಿಯುತ್ತದೆ. ಅದಕ್ಕೆ ತಕ್ಕಂತೆ ಕಾರ್ಮಿಕರ ಸರಬರಾಜನ್ನೂ ತಗ್ಗಿಸುವುದು ಸಾಧ್ಯವಾಗುವುದಿಲ್ಲ.

ಪ್ರತಿಯೊಬ್ಬ ಶ್ರಮಿಕನ ಕಾರ್ಯಸಾಮರ್ಥ್ಯವೂ ಬೇರೆಬೇರೆಯಾಗಿರುತ್ತದೆ. ಯಂತ್ರೋಪಕರಣಗಳಂತೆ ಕಾರ್ಮಿಕ ಎಲ್ಲ ವೇಳೆಯಲ್ಲೂ ಒಂದೇ ತೆರನಾಗಿ ಅಷ್ಟೇ ನೈಪುಣ್ಯದಿಂದ ಕಾರ್ಯಮಾಡಲು ಸಾಧ್ಯವಿಲ್ಲ.

**ಬಂಡವಾಳ:** ಉತ್ಪಾದನೆಯ ಮೂರನೆಯ ಅಂಗವಾದ ಬಂಡವಾಳ ಮೂಲಭೂತವಾಗಿ ಇದ್ದದ್ದಲ್ಲ. ಪ್ರಕೃತಿಯ (ಭೂಮಿ) ಶ್ರಮದ ಪ್ರಯೋಗದ ಫಲವಾಗಿ ಲಭಿಸಿದ ಉತ್ಪನ್ನವನ್ನು ಅನುಭೋಗಿಸದೆ ಅಷ್ಟನ್ನೂ, ಅಥವಾ ಅದರ ಒಂದು ಭಾಗವನ್ನು, ಉತ್ಪಾದನೆಯ ಕಾರ್ಯದಲ್ಲಿ ವಿನಿಯೋಗಿಸಿದ್ದೇ ಬಂಡವಾಳ.

ಸಾಮಾನ್ಯವಾಗಿ ಬಂಡವಾಳವೆಂದರೆ ಉದ್ಯಮದಲ್ಲಿ ಹೂಡಿದ ಹಣವೆಂಬ ಭಾವನೆಯಿದ್ದರೂ ಅರ್ಥಶಾಸ್ತ್ರ ದೃಷ್ಟಿಯಲ್ಲಿ ಹಣವೇ ಬಂಡವಾಳವಲ್ಲ. ಇದರಿಂದ ಕೊಂಡ ಯಂತ್ರ, ಸ್ಥಾವರ, ಉಪಕರಣ, ಕಚ್ಚಾ ಸಾಮಗ್ರಿ ಮುಂತಾದ ಎಲ್ಲವೂ ಬಂಡವಾಳ. ಬಂಡವಾಳವೆಂದರೆ ಉತ್ಪಾದನೆಗಾಗಿ ಉತ್ಪಾದಿಸಿದ ಸಾಧನ ಎಂಬುದು ಬಂಬಾವರ್ಕನ ವ್ಯಾಖ್ಯೆ. ಭೂಮಿ ನಿಸರ್ಗನಿಮಿತ್ತ; ಬಂಡವಾಳ ಮಾನವೋತ್ಪಾದಿತ ಉತ್ಪಾದೀ ಸಾಧನ.

**ಸಂಘಟನೆ:** ಉತ್ಪಾದನೆಯ ಅಂಗಗಳಾದ ಭೂಮಿ, ಶ್ರಮ ಹಾಗೂ ಬಂಡವಾಳಗಳ ಜೊತೆಗೆ ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಸೇರಿಕೊಂಡ ಇನ್ನೊಂದು ಅಂಗವೇ ಸಂಘಟನೆ. ಸಂಘಟನೆಯೂ ಉತ್ಪಾದನೆಯ ಅಂಗವಾಗುವಷ್ಟು ಪ್ರಮುಖ್ಯವುಳ್ಳದ್ದೆಂದು ಮಾರ್ಷಲ್ ವಾದಿಸಿದ್ದಾನೆ. ಭೂಮಿ, ಶ್ರಮ ಹಾಗೂ ಬಂಡವಾಳಗಳು ತಮ್ಮಕ್ಕಷ್ಟೇ ತಾವೇ ಏನನ್ನೂ ಉತ್ಪಾದಿಸಲಾರವು. ಅವುಗಳನ್ನು ಸಂಘಟಿಸಿ ಉತ್ಪಾದನೆಗೆ ಸಹಾಯಕವಾಗುವ ರೀತಿಯಲ್ಲಿ ಚಾಲನೆಗೊಳಿಸುವುದೇ ಉದ್ಯಮಿಯ ಮುಖ್ಯ ಕರ್ತವ್ಯ. ಆತನ ಸಾಹಸ ನಿರ್ದೇಶನಗಳಿಲ್ಲದೆ ಉತ್ಪಾದನೆ ಚಲಿಸದು. ಉದ್ಯಮವನ್ನು ಯೋಜಿಸುವುದೇ ಅಲ್ಲದೆ ಅದನ್ನು ಆರಂಭಿಸಿ ನಡೆಸಿಕೊಂಡು ಹೋಗುವುದೂ; ಏನು, ಎಲ್ಲಿ ಹಾಗೂ ಎಷ್ಟು ಉತ್ಪಾದಿಸಬೇಕೆಂಬ ಮಹತ್ವದ ಆರ್ಥಿಕ ನಿರ್ಣಯ ತೆಗೆದುಕೊಳ್ಳುವುದೂ; ಇದಕ್ಕಾಗಿ ಉಳಿದ ಮೂರು ಉತ್ಪಾದನೆಯ ಸಾಧನೆಗಳನ್ನು ಒಂದೆಡೆ ಸೇರಿಸಿ ಅವುಗಳಿಗೆ ಯೋಗ್ಯ ಕಾರ್ಯಗಳನ್ನು ನಿಯೋಜಿಸಿ ಅವು ಮಾಡಿದ ಕೆಲಸಕ್ಕೆ ತಕ್ಕಂತೆ ಯೋಗ್ಯ ಸಂಭಾವನೆ ಕೊಡುವುದೂ; ಇವೆಲ್ಲದರ ಜೊತೆಗೆ ವ್ಯವಹಾರದಲ್ಲಿ ತಲೆದೋರಬಹುದಾದ ನಷ್ಟಸಂಭವಗಳನ್ನು ಧೈರ್ಯವಾಗಿ ಎದುರಿಸುವುದೂ ಉದ್ಯಮಿಯ ಚಾಲಕನ ವಿಶಿಷ್ಟ ಕಾರ್ಯಭಾರ. ಧೈರ್ಯಶಾಲಿ ವ್ಯವಹಾರ ಚತುರನೇ ಸಾಹಸಿ ಉದ್ಯಮಿ, ಚಾಲಕ. ಕಾಲಕಾಲಕ್ಕೆ ಲಭ್ಯವಾಗುವ ಸಂಶೋಧನೆಗಳನ್ನು ಉತ್ಪಾದನೆಯಲ್ಲಿ ಅಳವಡಿಸಿಕೊಂಡು ಉತ್ಪಾದನೆಯ ವೆಚ್ಚ ತಗ್ಗಿಸಿ ತನ್ನ ಲಾಭ ಹೆಚ್ಚಿಸಿ, ಉಳಿದ ಉತ್ಪಾದನಾಂಗಗಳೊಡನೆ ಸಹಕರಿಸಿ ಸಮರ್ಥ ಉತ್ಪಾದನೆಯನ್ನು ಕೈಕೊಳ್ಳುವವನೇ ನಿಜವಾದ ಉದ್ಯಮಿ.

ಉತ್ಪಾದನೆಯ ಕ್ಷೇತ್ರದಲ್ಲಿ ಉದ್ಯಮಿಯ ವಿಶಿಷ್ಟ ಸ್ಥಾನವನ್ನು ಕುರಿತು ಮಾರ್ಷಲ್ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಇಂದು ಬಹುತೇಕ ಅರ್ಥಶಾಸ್ತ್ರಜ್ಞರು ಒಪ್ಪಿದ್ದಾರಾದರೂ ಕೆಲವರು ಆ ರೀತಿ ಭಾವಿಸುವುದಿಲ್ಲ. ಸಂಘಟನೆಯೂ ಒಂದು ವಿಶಿಷ್ಟ ರೀತಿಯ ಶ್ರಮವೇ ಎಂಬುದು ಇವರ ಮತ. ಇವರಲ್ಲಿ ಕೆಲವರ ದೃಷ್ಟಿಯಲ್ಲಿ ಉತ್ಪಾದನೆಯ ಅಂಗಗಳು ಕೇವಲ ಎರಡು ಬಗೆ: ಒಂದು ಮಾನವೀಯ (ಶ್ರಮ, ಸಂಘಟನೆ); ಇನ್ನೊಂದು ಮಾನವೇತರ (ಭೂಮಿ, ಬಂಡವಾಳ). ಆದರೆ ಈ ಕುರಿತ ಸ್ಪಷ್ಟ ವಿಚಾರದೃಷ್ಟಿಯಿಂದ ಇವನ್ನು ನಿಷ್ಕೃಷ್ಟವಾಗಿ ವಿಭಜಿಸುವುದು ಅವಶ್ಯ. ಭೂಮಿಗೂ ಬಂಡವಾಳಕ್ಕೂ ವ್ಯತ್ಯಾಸವಿರುವಂತೆಯೇ ಶ್ರಮಕ್ಕೂ ಸಂಘಟನೆಗೂ ವ್ಯತ್ಯಾಸವಿದ್ದೇ ಇದೆಯೆಂಬುದು ನಿರ್ವಿವಾದ. ಆದರೆ ಈ ಅಂಗಗಳ ಕೂಡುಗೆರೆಗಳ ಬಳಿ ಒಂದನ್ನಿನ್ನೊಂದರಿಂದ ಪ್ರತ್ಯೇಕಿಸಿ ತೋರಿಸುವುದೂ ಕಷ್ಟವೆಂಬುದು ನಿಜವೇ. ಕಾರ್ಮಿಕನನ್ನೂ ಉದ್ಯಮಿಯನ್ನೂ ಪ್ರತ್ಯೇಕವಾಗಿ ಪರಿಗಣಿಸುವುದು ಅನುಚಿತವೆಂದು ವಾದಿಸುವವರು ಇವರಿಬ್ಬರ ಕ್ರಿಯೆಗಳಿಗೂ ಇರುವ ಮೂಲಲಕ್ಷಣಗಳ ಕಡೆಗೆ ಬೆರಳು ತೋರಿಸುತ್ತಾರೆ. ಈ ಎಲ್ಲ ಬಗೆಯ ಮಾನವೀಯ ಶ್ರಮದ ಹಿಂದೆಯೂ ಸಂಘಟನೆ ಇದ್ದೇ ಇದೆಯೆಂಬುದು ಅವರ ವಾದ. ಉದ್ಯಮಿಯ ಕಾರ್ಯದಲ್ಲಿ ಇದರ ಭಾಗ ಹೆಚ್ಚಿರಬಹುದು, ಅಷ್ಟೇ. ಶ್ರಮ, ಸಂಘಟನೆಗಳೆರಡೂ ಪ್ರತ್ಯೇಕಾಂಗಗಳೆಂದು ವಾದಿಸುವವರು ಈ ಅಂಶವನ್ನೇ ಪ್ರಧಾನವಾಗಿ ಪರಿಗಣಿಸುತ್ತಾರೆ. ಕಾರ್ಮಿಕನ ವಿಚಾರದಲ್ಲಿ ಶ್ರಮದ ಭಾಗ

ಹೆಚ್ಚು; ಸಂಘಟನೆಯ ಭಾಗ ಇಲ್ಲವೆನ್ನುವಷ್ಟು ಅಲ್ಪ. ಉದ್ಯಮಿಯ ಕಾರ್ಯದಲ್ಲಿ ಸಂಘಟನೆಯ ಅಂಶವೇ ಅಧಿಕ. ಅದೇ ಎಲ್ಲವೂ ಎಂದರೂ ಸಂದೀತು. ಕಾರ್ಮಿಕ ತನ್ನ ದುಡಿಮೆಯನ್ನಷ್ಟೇ ಸಂಘಟಿಸುತ್ತಾನೆ. ಉದ್ಯಮಿ ಇತರರ ಕೆಲಸವನ್ನು ಸಂಘಟಿಸುತ್ತಾನೆ. ಉದ್ಯಮದ ಬಗ್ಗೆ ಎಲ್ಲ ಹೊಣೆಗಾರಿಕೆಯೂ ಆತನದು; ತೀರ್ಮಾನ ಕೈಕೊಳ್ಳುವವನೂ ಅದನ್ನು ಕಾರ್ಯರೂಪಕ್ಕೆ ತರುವವನೂ ಆತನೇ. ಉದ್ಯಮಿಯ ದೃಷ್ಟಿಯಲ್ಲಿ ಉಳಿದ ಮೂರು ಅಂಗಗಳೂ ಅವನ ವಶದಲ್ಲಿರುವ ಉತ್ಪಾದನ ಸಾಧನಗಳು. ಆತ ಸ್ವಲ್ಪಮಟ್ಟಿಗೆ ಅವುಗಳಲ್ಲಿ ಒಂದನ್ನು ಇನ್ನೊಂದರ ಬದಲು ಬಳಸಬಲ್ಲ. ಆದರೆ ಈ ಮೂರು ಅಂಗಗಳಲ್ಲಿ ಯಾವುದನ್ನೂ ಉದ್ಯಮಿಯ ಬದಲು ಬಳಸಲಾಗುವುದಿಲ್ಲ.

ಭೂಮಿ, ಶ್ರಮ ಹಾಗೂ ಬಂಡವಾಳಗಳನ್ನು ನಿರ್ದಿಷ್ಟ ಹಾಗೂ ಅನಿರ್ದಿಷ್ಟ ಅಂಗಗಳೆಂದೂ ವಿಂಗಡಿಸಬಹುದು. ಇವುಗಳ ಪರಸ್ಪರ ಸಾಮ್ಯದ ಪ್ರಾಮುಖ್ಯವನ್ನು ಈ ವಿಧಾನ ಒತ್ತಿ ಹೇಳುತ್ತದೆ. ಅಲ್ಲದೆ ಸಂಘಟನೆ ಇದರಿಂದ ಭಿನ್ನವಾದದ್ದು. ಒಂದೇ ಬಗೆಯಲ್ಲಿ ನಿಯೋಜಿಸಬಹುದಾದ ಅಂಗಗಳು ನಿರ್ದಿಷ್ಟ ಅಂಗಗಳು; ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಬದಲಾಯಿಸಬಹುದಾದವು ಅನಿರ್ದಿಷ್ಟವೆನಿಸಿಕೊಳ್ಳುತ್ತವೆ. ಒಂದು ಬಗೆಯ ಬಂಡವಾಳದ ಬದಲು ಒಂದು ಬಗೆಯ ಶ್ರಮವನ್ನು ಬಳಸುವುದು ಸಾಧ್ಯ. ಆದರೆ ಒಂದು ಬಗೆಯ ಶ್ರಮದ ಬದಲು ಇನ್ನೊಂದು ಬಗೆಯ ಶ್ರಮವನ್ನಾಗಲಿ, ಒಂದು ಬಗೆಯ ಬಂಡವಾಳದ ಬದಲು ಇನ್ನೊಂದು ಬಗೆಯ ಬಂಡವಾಳವನ್ನಾಗಲಿ ಬಳಸುವುದು ಸಾಧ್ಯವಾಗಲಾರದು. ಇಂಥ ಪ್ರತಿ ನಿಧಾನದ ಬಗ್ಗೆ ತೀರ್ಮಾನ ಕೈಕೊಳ್ಳುವುದು ಉದ್ಯಮಿಯ ಕೆಲಸ.

ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳ ಸೂಕ್ತ ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು **ನೋಡಿ– ಭೂಮಿ, ಬಂಡವಾಳ, ಸಂಘಟನೆ.**(ಕೆ.ಆರ್.ಎಂ.)

**ಉತ್ಪಾದನಾನುಗುಣ ಕೂಲಿ:** ಕಾರ್ಮಿಕನ ದುಡಿಮೆಯಿಂದ ಲಭ್ಯವಾದ ಉತ್ಪನ್ನದ ಮೊತ್ತಕ್ಕೆ ಅನುಗುಣವಾಗಿ ಆತನಿಗೆ ಕೂಲಿ ನಿರ್ಧರಿಸುವ ವಿಧಾನ; ಕೂಲಿಗುತ್ತಿಗೆ (ಪೀಸ್‌ವರ್ಕ್, ಪೀಸ್ ರೇಟ್ ವೇಜ್, ಪೇಮೆಂಟ್ ಬೈ ರಿಸಲ್ಟ್ಸ್). ಹೆಚ್ಚು ಉತ್ಪಾದಿಸಿದಷ್ಟೂ ಹೆಚ್ಚು ಕೂಲಿ ದೊರಕುವುದೆಂಬ ಕಾರಣದಿಂದ ಕಾರ್ಮಿಕ ಹೆಚ್ಚು ಆಸ್ಥೆಯಿಂದ ದುಡಿಯಲು ಇದು ಸಾಮಾನ್ಯವಾಗಿ ಉತ್ತೇಜಕ.

ಈ ವ್ಯವಸ್ಥೆಯಲ್ಲಿ ಹೆಚ್ಚು ಲಾಭ ಗಳಿಸುವುದೂ ಬಿಡುವುದೂ ಕಾರ್ಮಿಕನಿಗೇ ಸೇರಿದ್ದು. ಕೊಟ್ಟ ಕೆಲಸ ಬೇಗ ಮುಗಿಸಿದರೆ ಅಷ್ಟಕ್ಕೆ ಆತನಿಗೆ ಸಂಪೂರ್ಣ ಕೂಲಿ ಲಭಿಸುವುದಲ್ಲದೆ, ಮಿಗಿಸಿದ ಕಾಲದಲ್ಲಿ ಆತ ಇನ್ನಷ್ಟು ದುಡಿದು ಇನ್ನಷ್ಟು ಕೂಲಿಗಳಿಸಬಹುದು. ಕೆಲಸ ಮುಗಿಸಲು ಹೆಚ್ಚು ಕಾಲ ತೆಗೆದುಕೊಂಡರೆ ಆಗ ಆತನಿಗೇ ನಷ್ಟ. ಕಾಲಾನುಗುಣ ಕೂಲಿಯಷ್ಟು ಅವನಿಗೆ ದೊರಕದೆ ಹೋಗಬಹುದು ಆದ್ದರಿಂದ ಉತ್ಪಾದಕನಿಗೆ ನಷ್ಟವಿಲ್ಲ. ಕಾರ್ಮಿಕ ಶೀಘ್ರವಾಗಿ ದುಡಿದರಂತೂ ಉದ್ಯಮ ಚಾಲಕನಿಗೆ ಹೆಚ್ಚು ಲಾಭ. ಇದು ಈ ವಿಧಾನದ ಹಿಂದಿರುವ ಸರಳ ತರ್ಕ.

ಕೂಲಿಗುತ್ತಿಗೆ ಹಲವು ತೆರ. ಉತ್ಪನ್ನಕ್ಕೂ ಕೂಲಿಗೂ ನೇರ ಸಂಬಂಧ ಕಲ್ಪಿಸುವುದು ಒಂದು ವಿಧಾನ. ಇಲ್ಲಿ ಕಾರ್ಮಿಕ ತಯಾರಿಸಿದ ಪದಾರ್ಥದ ಪ್ರತಿ ಘಟಕಕ್ಕೂ ಒಂದೇ ಕೂಲಿಯ ದರ ಇದ್ದು ಆತನ ಉತ್ಪಾದನೆ ಹೆಚ್ಚಿದಂತೆ ಕೂಲಿಯೂ ಸಮಾನಾಂತರವಾಗಿ ಏರುತ್ತದೆ. ಇಲ್ಲಿ ಉತ್ಪನ್ನದ ಪ್ರತಿ ಘಟಕದ ಕೂಲಿವೆಚ್ಚ ಒಂದೇ.

ಆದರೆ ಉತ್ಪಾದನೆ ಹೆಚ್ಚಿದಂತೆ ಸ್ಥಿರ ಬಂಡವಾಳದ ಸರಾಸರಿ ವೆಚ್ಚ ಕಡಿಮೆ ಆಗುವುದರಿಂದ ಘಟಕದ (ಸರಾಸರಿ) ವೆಚ್ಚ ಕಡಿಮೆಯಾಗುತ್ತ ಹೋಗುತ್ತದೆ. ಒಟ್ಟು ಉತ್ಪಾದನ ವೆಚ್ಚ ಕಡಿಮೆಯಾಗಲು ಕಾರ್ಮಿಕನೇ ಕಾರಣನಾದ್ದರಿಂದ ಇದರ ಫಲ ಕಾರ್ಮಿಕನಿಗೇ ಸೇರತಕ್ಕದೆಂಬ ವಾದದ ಆಧಾರದ ಮೇಲೆ ಕಾರ್ಮಿಕನ ಉತ್ಪಾದನೆ ಹೆಚ್ಚಿದಂತೆ ಪ್ರತಿ ಘಟಕಕ್ಕೂ ಕೂಲಿ ದರ ಹೆಚ್ಚಿಸುವುದು ಇನ್ನೊಂದು ವಿಧಾನ.

ಇನ್ನು ಕೆಲವರು ಈ ದೃಷ್ಟಿಯನ್ನು ಸಂಪೂರ್ಣವಾಗಿ ಒಪ್ಪುವುದಿಲ್ಲ. ಹೆಚ್ಚು ಬಂಡವಾಳ, ಒಳ್ಳೆಯ ಸಾಮಗ್ರಿ ಮತ್ತು ಉದ್ಯಮಿಯ ದಕ್ಷ ನಿರ್ವಹಣೆ–ಇವುಗಳೂ ಅಧಿಕೋತ್ಪಾದನೆಗೆ ಕಾರಣವೆಂಬುದು ಇವರ ವಾದ. ಉತ್ಪಾದನೆಯ ಸರಾಸರಿ ವೆಚ್ಚ ಕಡಿಮೆಯಾಗುವುದರಿಂದ ಬರುವ ಫಲವನ್ನು ಕಾರ್ಮಿಕ ಹಾಗೂ ಉದ್ಯಮಿಗಳ ನಡುವೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಹಂಚಬೇಕೆಂಬುದು ಇಂಥವರ ಅಭಿಪ್ರಾಯ. ಇಲ್ಲಿ ಉತ್ಪಾದನೆಯ ಏರಿಕೆಗಿಂತ ಕೂಲಿಯ ಏರಿಕೆಯ ದರ ಕಡಿಮೆ.

ಕಾರ್ಮಿಕರು ಹೆಚ್ಚು ಉತ್ಪತ್ತಿ ಮಾಡುವ ಹಾಗೆ ಉತ್ತೇಜನ ಕೊಡುವ ದೃಷ್ಟಿಯಿಂದ ಹೆಚ್ಚು ಹೆಚ್ಚು ಉತ್ಪತ್ತಿ ಮಾಡಿದಂತೆ ಹೆಚ್ಚು ಹೆಚ್ಚು ದರದಲ್ಲಿ ಕೂಲಿ ನೀಡುವ ವ್ಯವಸ್ಥೆಯೂ ಉಂಟು. ಎಲ್ಲಿ ಉತ್ಪಾದನೆ ಕಾರ್ಮಿಕನ ದುಡಿಮೆಯನ್ನೇ ಹೆಚ್ಚಾಗಿ ಅವಲಂಬಿಸಿದೆಯೋ ಅಂಥಲ್ಲಿ ಈ ವಿಧಾನ ಹೆಚ್ಚು ಉಪಯುಕ್ತ.

ಇವುಗಳಲ್ಲಿ ಯಾವ ವ್ಯವಸ್ಥೆಯೇ ಜಾರಿಯಲ್ಲಿರಲಿ, ತನ್ನ ಹತೋಟಿಗೆ ಮೀರಿದ ಕಾರಣಗಳಿಂದ ಕಾರ್ಮಿಕ ಸಾಕಷ್ಟು ಉತ್ಪಾದಿಸಲಾಗದಿದ್ದ ಪಕ್ಷದಲ್ಲಿ ಅವನಿಗೆ ಅಗತ್ಯ ಮಟ್ಟದ ಕೂಲಿ (ವೇತನ) ಕೊಡಲಾಗುತ್ತದೆ. ಇದು ಒಬ್ಬ ಸಾಮಾನ್ಯ ಕೆಲಸಗಾರ ತಯಾರಿಸಬಹುದಾದ ಉತ್ಪನ್ನಕ್ಕೆ ಕೊಡಬಹುದಾದ ವೇತನದಷ್ಟಾದರೂ ಇರಬೇಕೆಂಬುದಾಗಿ ಭಾವಿಸಲಾಗಿದೆ. ಎರಡನೆಯದಾಗಿ, ವ್ಯಕ್ತಿಗತ ಉತ್ಪನ್ನವನ್ನಳೆಯಲು ಸಾಧ್ಯವಿರುವಲ್ಲಿ ಮಾತ್ರ ಈ ವ್ಯವಸ್ಥೆಗಳನ್ನು ಆಚರಣೆಗೆ ತರಬಹುದು. ಇಂಥ ಅನುಕೂಲವಿಲ್ಲದಿದ್ದಲ್ಲಿ ಕೊನೆಯ ಪಕ್ಷ ಒಂದು ತಂಡದ ಉತ್ಪನ್ನವನ್ನಳೆಯಲು ಸಾಧ್ಯವಾದರೂ ಆ ತಂಡದ ಉತ್ಪಾದನಾನುಗುಣ ಕೂಲಿಯನ್ನು ಎಲ್ಲರಿಗೂ ಆಚರಣೆಗೆ ತರಬಹುದು. ಉತ್ಪಾದನಾನುಗುಣ ಕೂಲಿ ವ್ಯವಸ್ಥೆಯನ್ನು ಸಾಮಾನ್ಯವಾಗಿ ಉತ್ಪಾದನೆಗೆ ಸಂಬಂಧಿಸಿದ ಕಾರ್ಮಿಕರ ಪ್ರತ್ಯಕ್ಷ ಶ್ರಮಕ್ಕೆ ಅನ್ವಯಿಸುವಂತೆ ಆಚರಣೆಗೆ ತರಬಹುದೇ ಹೊರತು ಪರೋಕ್ಷ ಶ್ರಮಿಕರಾದ ಕಾವಲುಗಾರ, ಗುಮಾಸ್ತ, ಮತ್ತಿತರ ಆಡಳಿತ ವರ್ಗದವರಿಗೆ ಅನ್ವಯಿಸಲು ಸಾಧ್ಯವಿಲ್ಲ.

ಈ ವ್ಯವಸ್ಥೆಯಲ್ಲಿ ಕೆಲವು ಅನುಕೂಲಗಳಿವೆ. ಮೊದಲನೆಯದಾಗಿ, ಉತ್ಪಾದನೆ ಹೆಚ್ಚಿದಂತೆ ಕೂಲಿ ಹೆಚ್ಚುವ ಸಂಭವವಿರುವುದರಿಂದ ಈ ವ್ಯವಸ್ಥೆಯಲ್ಲಿ ಕಾರ್ಮಿಕರು ಹೆಚ್ಚು ಉತ್ಪತ್ತಿ ಮಾಡುವಂತೆ ಉತ್ತೇಜನವಿರುತ್ತದೆ. ಕಾರ್ಮಿಕರ ಉತ್ಪಾದಕತೆ ಹೆಚ್ಚುವುದರಿಂದಲೂ ಹೆಚ್ಚು ಉಸ್ತುವಾರಿಯ ಆವಶ್ಯಕತೆಯಿಲ್ಲದ್ದರಿಂದಲೂ ಉತ್ಪಾದನ ವೆಚ್ಚ ಕಡಿಮೆಯಾಗಿ ಸರಕುಗಳ ಬೆಲೆಗಳು ಕಡಿಮೆಯಾಗುವ ಸಂಭವವುಂಟು. ಅಲ್ಲದೆ, ಕಾರ್ಮಿಕರು ಕಾಲ ಕಳೆಯದೆ ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿ ಹೆಚ್ಚುಗಳಿಸುವಂತೆ ಈ ವ್ಯವಸ್ಥೆ ಸಹಾಯಕ. ಇದರಲ್ಲಿ ಕೆಲವು ನ್ಯೂನತೆಗಳೂ ಉಂಟು. ಕಾರ್ಮಿಕ ಹೆಚ್ಚು ಗಳಿಸುವ ಆಸೆಯಿಂದ ಕೆಲಸದ ವೇಗವನ್ನು ತೀವ್ರಗೊಳಿಸಿ ತನ್ನ ಆರೋಗ್ಯಕ್ಕೆ ಭಂಗ ತಂದುಕೊಳ್ಳುವುದಲ್ಲದೆ ಯಂತ್ರೋಪಕರಣಗಳನ್ನೂ ಕೆಡಿಸಬಹುದು. ಕಾರ್ಮಿಕರಲ್ಲಿ ಪೈಪೋಟಿ ಹೆಚ್ಚಿ, ಸರಕುಗಳ ಗುಣಮಟ್ಟದ ಇಳಿತಕ್ಕೆ ಎಡೆಯಾದರೂ ಆಶ್ಚರ್ಯವಿಲ್ಲ. ಅಲ್ಲದೆ ಇಂಥ ವ್ಯವಸ್ಥೆಯಲ್ಲಿ ಕಾರ್ಮಿಕರ ಉದ್ಯೋಗಾವಕಾಶಗಳು ಹೆಚ್ಚದಿರಬಹುದೆಂದು ಕಾರ್ಮಿಕ ಸಂಘಗಳು ಈ ವ್ಯವಸ್ಥೆಯನ್ನು ಬಲವಾಗಿ ಖಂಡಿಸುವುದೂ ಉಂಟು.

ಆದರೂ ಈ ವ್ಯವಸ್ಥೆ (1940)ರಿಂದ ಈಚೆಗೆ ಹೆಚ್ಚು ಪ್ರಚಾರಕ್ಕೆ ಬರುತ್ತಿದೆ. ಶ್ರಮ ವಿಭಾಗದ ಫಲವಾಗಿ ಪ್ರತಿಯೊಂದು ಕೆಲಸವನ್ನೂ ಹಲವಾರು ಕ್ರಿಯೆಗಳಾಗಿ ವಿಂಗಡಿಸಿ ಒಂದೊಂದು ಕ್ರಿಯೆಯನ್ನೂ ಒಬ್ಬೊಬ್ಬ ಕಾರ್ಮಿಕನಿಗೆ ವಹಿಸುವುದರಿಂದ ಕೆಲಸ ಹೆಚ್ಚು ಸರಳವಾಗಿ ಆತನ ಉತ್ಪನ್ನವನ್ನು ಸುಲಭವಾಗಿ ಅಳೆಯಲು ಸಾಧ್ಯವಾಗಿದೆ. ಕಾಲ ಮತ್ತು ವೇಗಗಳ ಅಧ್ಯಯನಕ್ಕೆ ಈಚೆಗೆ ಹೆಚ್ಚು ಪುರಸ್ಕಾರ ದೊರೆತಿರುವುದರಿಂದ ಒಬ್ಬ ಸಾಮಾನ್ಯ ಕಾರ್ಮಿಕ ತಯಾರಿಸಬಹುದಾದ ಉತ್ಪನ್ನದ ಮೊತ್ತ ಎಷ್ಟೆಂಬುದನ್ನು ನಿಷ್ಕರ್ಷಿಸುವುದು ಸಾಧ್ಯ; ಇದರಿಂದ ಕಾರ್ಮಿಕನಿಗೆ ಕೊಡಬೇಕಾಗಬಹುದಾದ ಕನಿಷ್ಠ ವೇತನವನ್ನು ಗೊತ್ತುಪಡಿಸುವುದೂ ಸಾಧ್ಯವಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎರಡನೆಯ ಮಹಾಯುದ್ಧಾನಂತರ ನಿರುದ್ಯೋಗ ಕಡಿಮೆಯಾಗುತ್ತ ಬಂದ ಕಾರಣ ಕಾರ್ಮಿಕ ಸಂಘಗಳಿಂದ ಈ ವ್ಯವಸ್ಥೆಗೆ ವಿರೋಧ ಕಡಿಮೆಯಾಗಿದೆ.

ಉತ್ಪಾದನಾನುಗುಣ ಕೂಲಿ ಈಚೆಗೆ ಹೆಚ್ಚು ಪ್ರಚಾರಕ್ಕೆ ಬಂದಿದ್ದರೂ ಇದು ಕೆಲವೇ ಉದ್ಯಮಗಳಿಗೆ ಅನ್ವಯವಾಗಿದೆ. ಏಕೆಂದರೆ ಮೊದಲೇ ಹೇಳಿದಂತೆ ಈ ವ್ಯವಸ್ಥೆಯನ್ನು ಕೇವಲ ವ್ಯಕ್ತಿಗತ ಉತ್ಪನ್ನವನ್ನಳೆಯಲು ಸಾಧ್ಯವಿರುವ ಉದ್ಯಮಗಳಲ್ಲಿ ಮಾತ್ರ ಆಚರಣೆಗೆ ತರಲು ಸಾಧ್ಯ. ಕಾರ್ಖಾನೆ, ಗಣಿ, ಮತ್ತು ಪ್ಲಾಂಟೇಷನ್ ಉದ್ಯಮಗಳಲ್ಲಿ ಮಾತ್ರ ಈ ಬಗೆಯ ಸರಳ ವಿಧಾನಗಳನ್ನನ್ವಯಿಸಬಹುದು. ವ್ಯಕ್ತಿಗತ ಉತ್ಪನ್ನವನ್ನಳೆಯಲು ಸಾಧ್ಯವಿಲ್ಲದಿರುವ ಉದ್ಯಮಗಳಾದ ವಾಣಿಜ್ಯ ಮತ್ತು ಹಂಚಿಕೆ ಉದ್ಯಮಗಳಲ್ಲಿ ಈ ವ್ಯವಸ್ಥೆ ಆಚರಣೆಯಲ್ಲಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ಉತ್ಪಾದನಾನುಗುಣ ಕೂಲಿ ಪಡೆಯುವವರ ಸಂಖ್ಯೆ ಹೆಚ್ಚಿದೆ. ಉದಾಹರಣೆಗೆ, ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ 30%, ಇಂಗ್ಲೆಂಡಿನಲ್ಲಿ 40%, ಯುರೋಪಿನಲ್ಲಿ 50%–60% ಮತ್ತು ಸೋವಿಯತ್ ಒಕ್ಕೂಟದಲ್ಲಿ 75% ಕಾರ್ಮಿಕರು ಉತ್ಪಾದನಾನುಗುಣವಾಗಿ ಕೂಲಿ ಪಡೆಯುತ್ತಿದ್ದಾರೆ. ಭಾರತದಲ್ಲಿ ಈ ವ್ಯವಸ್ಥೆ ಬಟ್ಟೆ ಕೈಗಾರಿಕೆಗಳಲ್ಲಿ ಮೊದಮೊದಲು ಆಚರಣೆಗೆ ಬಂತು. ಅನಂತರ ವ್ಯಕ್ತಿಗತ ಉತ್ಪನ್ನವನ್ನಳೆಯಲನುಕೂಲವಾದ ಇತರ ಉದ್ಯಮಗಳಾದ ಗಣಿ ಮತ್ತು ಪ್ಲಾಂಟೇಷನ್ ಉದ್ಯಮಗಳಲ್ಲೂ ಪ್ರಚಾರಕ್ಕೆ ಬರುತ್ತಿದೆ. ಭಾರತ ಸರ್ಕಾರದ ಲೇಬರ್ ಬ್ಯೂರೊ 1958–59ರಲ್ಲಿ ನಡೆಸಿದ ಒಂದು ಪರಿಶೀಲನೆಯ ಪ್ರಕಾರ, ಈ ಬಗೆಯ ಕೂಲಿ ಪಡೆಯುವ ಕಾರ್ಮಿಕರ ಸಂಖ್ಯೆ ಕಾರ್ಖಾನೆ ಕೈಗಾರಿಕೆಗಳಲ್ಲಿ 31.8%, ಗಣಿ ಕೈಗಾರಿಕೆಗಳಲ್ಲಿ 57.8% ಮತ್ತು ಪ್ಲಾಂಟೇಷನ್ 75.4% ಎಂದು ತಿಳಿದುಬಂದಿದೆ. ಉತ್ಪನ್ನವನ್ನಳೆಯುವುದು ಸಾಧ್ಯವಿಲ್ಲದ ಉದ್ಯಮಗಳಲ್ಲಿ ಇಂಥವರ ಸಂಖ್ಯೆ ಬಲು ಕಡಿಮೆ. ಉದಾಹರಣೆಗೆ, ಎಂಜಿನಿಯರಿಂಗ್ ಉದ್ಯಮಗಳಲ್ಲಿ ಇವರ ಸಂಖ್ಯೆ ಕೇವಲ 1.1%.

ಯುರೋಪ್, ಸೋವಿಯತ್ ಒಕ್ಕೂಟ ಮತ್ತು ಚೀನಗಳೊಡನೆ ಹೋಲಿಸಿದರೆ ಭಾರತದಲ್ಲಿ ಉತ್ಪಾದನಾನುಗುಣ ಕೂಲಿವ್ಯವಸ್ಥೆಗೆ ಹೆಚ್ಚು ಪುರಸ್ಕಾರ ಸಿಕ್ಕಿರುವಂತೆ ಕಂಡುಬರುವುದಿಲ್ಲ. ಆದರೂ ಈಚೆಗೆ ಈ ವ್ಯವಸ್ಥೆ ಹೆಚ್ಚಾಗಿ ಜಾರಿಗೆ ಬರಬೇಕೆಂಬ ಭಾವನೆ ಬೆಳೆಯುತ್ತಿದೆ. ಉತ್ಪನ್ನಗಳನ್ನು ಹೆಚ್ಚಿಸುವುದೇ ಭಾರತದ ಯೋಜನೆಗಳ ಸದ್ಯದ ಗುರಿಯಾದ್ದರಿಂದ ಉತ್ಪನ್ನವನ್ನು ಹೆಚ್ಚಿಸುವಂತೆ ಉತ್ತೇಜನ ಕೊಡುವಂಥ ಈ ವ್ಯವಸ್ಥೆ ಒಳ್ಳೆಯದೆಂದು ಭಾರತ ಸರ್ಕಾರ ಒಪ್ಪಿಕೊಂಡು ಇದಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟಿದೆ. ಅಲ್ಲದೆ ಪ್ರತಿ ಕೈಗಾರಿಕೆಗೂ ನೇಮಕವಾಗುವ ವೇತನ ಮಂಡಲಿಗೆ ಸಮರ್ಪಕವಾದ ಉತ್ಪಾದನಾನುಗುಣ ಕೂಲಿ ವ್ಯವಸ್ಥೆಯೊಂದನ್ನು ರಚಿಸಿಕೊಡುವಂತೆ ಸರ್ಕಾರ ಮನವಿ ಮಾಡಿಕೊಂಡಿದೆ. ವೇತನ ಮಂಡಲಿಗಳು ಈ ವಿಷಯದಲ್ಲಿ ಅನೇಕ ಸಲಹೆಗಳನ್ನು ಆಗ್ಗಿಂದಾಗ್ಗೆ ನೀಡುತ್ತಿವೆ.

ಈ ವ್ಯವಸ್ಥೆಯನ್ನು ಯಾವುದೇ ಉದ್ಯಮದಲ್ಲಿ ಆಚರಣೆಗೆ ತರುವ ಮೊದಲು ಹಲವು ಅಂಶಗಳನ್ನು ಗಮನದಲ್ಲಿಡುವುದು ಅತ್ಯಾವಶ್ಯಕ. ಮೊದಲನೆಯದಾಗಿ, ಕಾಲ ಮತ್ತು ವೇಗದ ಅಧ್ಯಯನದ ಸಹಾಯದಿಂದ ಪ್ರತಿ ಕೆಲಸದ ವಿಷಯದಲ್ಲೂ ಸಾಮಾನ್ಯ ಕೆಲಸಗಾರ ತಯಾರಿಸಬಹುದಾದ ಉತ್ಪನ್ನವೆಷ್ಟೆಂಬುದನ್ನು ಖಚಿತಪಡಿಸಿಕೊಂಡು ಪ್ರತಿ ಕೆಲಸಕ್ಕೂ ಮೂಲಭೂತ ಕೂಲಿಯನ್ನು ನಿಗದಿಪಡಿಸಬೇಕು. ಇದರ ಜೊತೆಗೆ ಕಾರ್ಮಿಕರು ಅನವಶ್ಯ ವೇಗದಿಂದ ಕೆಲಸ ಮಾಡಿ ಯಂತ್ರೋಪಕರಣ ಮತ್ತು ಸರಕುಗಳನ್ನು ಕೆಡಿಸದಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡಬೇಕು. ಈ ವ್ಯವಸ್ಥೆಯನ್ನು ಆಚರಣೆಗೆ ತಂದ ಮೇಲೆ, ವೇತನ ದರವನ್ನು ಸೂಕ್ತವಾಗಿ ಬದಲಾಯಿಸದೆ ಉತ್ಪಾದನ ವಿಧಾನಗಳನ್ನು ಬದಲಾಯಿಸ ಕೂಡದು. ಕೊನೆಯದಾಗಿ, ಇದನ್ನು ಆಚರಣೆಗೆ ತರುವ ಮೊದಲು ಕಾರ್ಮಿಕ ಸಂಘಗಳ ಸಲಹೆ ಪಡೆಯುವುದು ಒಳ್ಳೆಯದು; ಇಲ್ಲದಿದ್ದರೆ ಕೈಗಾರಿಕಾ ಸಂಬಂಧಗಳು ಕೆಡುವ ಸಂಭವವುಂಟು. ಈ ಮುಂಜಾಗ್ರತೆ ತೆಗೆದುಕೊಳ್ಳುವುದರಿಂದ ಉತ್ಪಾದನಾನುಗುಣ ಕೂಲಿ ವ್ಯವಸ್ಥೆ ಯಶಸ್ವಿಯಾಗುವುದೆಂದು ಭಾವಿಸಲಾಗಿದೆ. (ಎ.ಬಿ.ಎ.)

**ಉತ್ಪಾದನೆಯ ವೆಚ್ಚ:** ಒಂದು ಪದಾರ್ಥದ (ಕಮಾಡಿಟಿ) ನಿರ್ದಿಷ್ಟ ಪ್ರಮಾಣದ ಉತ್ಪತ್ತಿಯಲ್ಲಿ ನಿರತವಾದ ಎಲ್ಲ ಉತ್ಪಾದನಾಂಗಗಳಿಗೆ ಸಲ್ಲುವ ಹಣದ ಮೊತ್ತ (ಕಾಸ್ಟ್ ಆಫ್ ಪ್ರೊಡಕ್ಷನ್). ಉತ್ಪಾದನೆಯ ವೆಚ್ಚಕ್ಕೂ ಪದಾರ್ಥದ ಉತ್ಪತ್ತಿಯ ಮೊತ್ತಕ್ಕೂ ನೇರ ಸಂಬಂಧವುಂಟು. ರೇಡಿಯೋ ಉತ್ಪಾದನೆಗಾಗಿ ಇಂತಿಷ್ಟು ಹಣ ವೆಚ್ಚವಾಗುತ್ತಿದೆಯೆಂದಷ್ಟೇ ಹೇಳಿದರೆ ಆ ಮಾತಿನಲ್ಲಿ ಏನೂ ಅರ್ಥವಿಲ್ಲ. ಈ ವೆಚ್ಚದ ಅವಧಿಯನ್ನೂ ಈ ಅವಧಿಯಲ್ಲಿನ ಉತ್ಪತ್ತಿಯನ್ನೂ ಹೇಳಿದಾಗಲೇ ಅದು ಸುಸಂಬದ್ಧ.

ವೆಚ್ಚ ಎಂಬ ಪದಕ್ಕೆ ನಾನಾ ಅರ್ಥಗಳುಂಟು. (ಅಸಲು ಎಂಬ ಪದವನ್ನು ಸಂದರ್ಭೋಚಿತವಾಗಿ ಪರ್ಯಾಯಪದವಾಗಿ ಬಳಸಬಹುದು.) ನಿರ್ದಿಷ್ಟ ಉತ್ಪತ್ತಿಯ ದೃಷ್ಟಿಯಲ್ಲಿ ಇದು ಒಟ್ಟು ವೆಚ್ಚ. ಉದಾ : ಕಳೆದ ತಿಂಗಳಲ್ಲಿ ತಯಾರಿಸಲಾದ ಒಂದು ನೂರು ರೇಡಿಯೋಗಳ ವೆಚ್ಚ ರೂ. 50,000. ತಯಾರಿಸಲಾದ ಪದಾರ್ಥದ ಒಂದೊಂದು ಘಟಕದ ವೆಚ್ಚವನ್ನೂ ಕುರಿತು ಹೇಳಿದಾಗ ಇದು ಸರಾಸರಿ ವೆಚ್ಚ. ಉದಾ : ಒಂದು ರೇಡಿಯೋವಿನ ಬೆಲೆ ರೂ. 500.

100 ರೇಡಿಯೋ ತಯಾರಿಸುವ ಒಂದು ಉದ್ಯಮ ಸಂಸ್ಥೆ 101ನ್ನು ತಯಾರಿಸಿದಾಗ ಒಟ್ಟು ಉತ್ಪಾದನೆಯ ವೆಚ್ಚ ಅಧಿಕವಾದರೂ 101ನೆಯ ರೇಡಿಯೋವಿನ ಉತ್ಪಾದನೆಯ ವೆಚ್ಚ ಸರಾಸರಿ ವೆಚ್ಚಕ್ಕಿಂತ ಕಡಿಮೆಯೇ ಇರಬಹುದು; ಅಥವಾ (ಉತ್ಪಾದನೆಯಲ್ಲಿ ಇಳಿಮುಖ ಪ್ರತಿಫಲ ಪ್ರವೃತ್ತಿ ಕಂಡುಬಂದಾಗ) ಹೆಚ್ಚಾಗಿಯೂ ಇರಬಹುದು; ಇಲ್ಲವೇ ಸಮನಾಗಿರಬಹುದು. ಇದು ಆ ಪದಾರ್ಥದ ಅಂಚಿನ ಘಟಕ ವೆಚ್ಚ. ಉತ್ಪಾದನೆಯ ಹೆಚ್ಚಳವಾದರೂ ಅಂಚಿನ ವೆಚ್ಚ ಅಚಲವಾಗಿ ಮುಂದುವರಿಯಲೂಬಹುದು.

ಪದಾರ್ಥ ತಯಾರಿಕೆಗಾಗಿ ಉತ್ಪಾದಕ ಹಣದ ರೂಪದಲ್ಲಿ ಮಾಡಿದ ಖರ್ಚುಗಳೆಲ್ಲ ಉತ್ಪಾದನೆಯ ವೆಚ್ಚದಲ್ಲಿ ಸೇರಿರುವುದರಿಂದ ಇದನ್ನು ಉತ್ಪಾದನೆಯ ಹಣವೆಚ್ಚವೆನ್ನಬಹುದು (ಮನಿಕಾಸ್ಟ್). ಉತ್ಪಾದಕನ ದೃಷ್ಟಿಯಲ್ಲಿ ಇದೇ ಮುಖ್ಯ. ಉತ್ಪನ್ನದ ಮಾರಾಟದಿಂದ ಆತನಿಗೆ ದೀರ್ಘಕಾಲದಲ್ಲಿ ಉತ್ಪಾದನೆಯ ವೆಚ್ಚವೇ ಅಲ್ಲದೆ ಸೂಕ್ತವಾದ ಲಾಭವೂ ದೊರಕಬೇಕು. ಪದಾರ್ಥದ ಬೆಲೆಯಲ್ಲಿ ಇವೆರಡೂ ಯುಕ್ತಪ್ರಮಾಣದಲ್ಲಿ ಅಡಕವಾಗಿರುವಂತೆ ಆತ ಎಚ್ಚರಿಕೆ ನಿರ್ವಹಿಸಬೇಕು.

ಕೂಲಂಕಷವಾಗಿ ನೋಡುವುದಾದರೆ ಈ ಹಣವೆಚ್ಚದಿಂದ ನಿಜಸ್ಥಿತಿಯ ಅರಿವಾಗುವುದಿಲ್ಲ. ಪದಾರ್ಥೋತ್ಪಾದನೆಗಾಗಿ ಒಂದು ಸಂಸ್ಥೆ ಮಾಡುವ ಹಣದ ವೆಚ್ಚ ಆ ಸಂಸ್ಥೆಯ ದೃಷ್ಟಿಯಿಂದ ಮುಖ್ಯ, ನಿಜ. ಆದರೆ ಹಣವೆಂಬುದು ಮೌಲ್ಯಗಳ ಸಾಪೇಕ್ಷ ಅಳತೆಯ ಸಾಧನವಾದರೂ ಇದು ಸಂಪೂರ್ಣ ಸಮರ್ಪಕವೇನೂ ಅಲ್ಲ. ಹಣದ ಮುಸುಕನ್ನು ಕಿತ್ತು ಒಳಹೊಕ್ಕು ನೋಡಿದಾಗಲೇ ಉತ್ಪಾದನೆಯ ನಿಜವಾದ ಅಥವಾ ಯಥಾರ್ಥವಾದ ವೆಚ್ಚವೇನೆಂಬುದು ವ್ಯಕ್ತವಾಗುತ್ತದೆ.

ಯಥಾರ್ಥ ವೆಚ್ಚದ (ರೀಯಲ್ ಕಾಸ್ಟ್) ಬಗ್ಗೆ ಅರ್ಥಶಾಸ್ತ್ರಜ್ಞರು ನಾನಾ ಬಗೆಯ ವ್ಯಾಖ್ಯೆ ನೀಡಿದ್ದಾರೆ. ಪದಾರ್ಥೋತ್ಪಾದನೆಗಾಗಿ ಕಾರ್ಮಿಕರು ಉಪಯೋಗಿಸಿದ ಶ್ರಮ ಹಾಗೂ ತ್ಯಾಗಗಳೇ ಅದರ ಯಥಾರ್ಥವೆಚ್ಚವೆಂಬುದು ಆಡಂಸ್ಮಿತ್ತನ ಅಭಿಪ್ರಾಯ. ಮಾರ್ಷಲ್ ಇನ್ನೊಂದು ಹೆಜ್ಜೆ ಮುಂದೆ ಹೋಗುತ್ತಾನೆ. ವಿವಿಧ ಗುಣಧರ್ಮಗಳ ಎಲ್ಲ ಬಗೆಯ ಶ್ರಮಯತ್ನಗಳೂ ಆತನ ದೃಷ್ಟಿಯಲ್ಲಿ ಇದರಲ್ಲಿ ಅಡಕವಾಗಿವೆ. ಉತ್ಪಾದಿಸಿದ ಪದಾರ್ಥ ಅಂತಿಮವಾಗಿ ಸೇವೆಗೆ ದೊರಕುವವರೆಗೂ ತೋರಿಸಿದ ತಾಳ್ಮೆಯನ್ನೂ ಯಥಾರ್ಥ ವೆಚ್ಚದಲ್ಲಿ ಸೇರಿಸಬೇಕೆಂಬುದಾಗಿ ಮಾರ್ಷಲ್ ಹೇಳಿದ್ದಾನೆ. ಸ್ಥಿತಿಗತಿಗಳು ಸಂತತವಾಗಿ ವ್ಯತ್ಯಾಸವಾಗುತ್ತಿರುವ ಪ್ರಪಂಚದಲ್ಲಿ ಪದಾರ್ಥೋತ್ಪಾದನೆಯ ಹಣವೆಚ್ಚವೂ ಯಥಾರ್ಥವೆಚ್ಚವೂ ಒಂದೇ ಆಗಿರುವುದು ಸಾಧ್ಯವಿಲ್ಲ.

ಆಸ್ಟ್ರಿಯನ್ ಪಂಥದ ಅರ್ಥಶಾಸ್ತ್ರಜ್ಞರು ಯಥಾರ್ಥ ವೆಚ್ಚದ ವ್ಯಾಖ್ಯೆಗೊಂದು ಹೊಸ ಆಯಾಮವನ್ನೇ ಸೃಷ್ಟಿಸಿದ್ದಾರೆನ್ನಬಹುದು. ಸಮಾಜದಲ್ಲಿ ದೊರಕುವ ಸಾಧನಗಳು ಅಪರಿಮಿತವಲ್ಲ. ಆದ್ದರಿಂದ ಇಚ್ಛಿಸಿದ ಎಲ್ಲ ಪದಾರ್ಥಗಳನ್ನೂ ಪಡೆಯುವುದೂ ಸಾಧ್ಯವಿಲ್ಲ. ಆದ್ದರಿಂದ ಒಂದು ಪದಾರ್ಥ ಪಡೆಯುವುದಕ್ಕಾಗಿ ಇನ್ನೊಂದನ್ನು ತ್ಯಾಗಮಾಡಬೇಕಾಗಿ ಬರುತ್ತದೆ. ಅದನ್ನು ಬಿಟ್ಟು ಇದನ್ನೇ ಆಯ್ಕೆ ಮಾಡಿಕೊಂಡ ವ್ಯಕ್ತಿ ವಾಸ್ತವವಾಗಿ ಅದನ್ನು ತ್ಯಾಗಮಾಡಿದಂತೆ. ಈ ತ್ಯಾಗವೇ ಈ ಪದಾರ್ಥದ ಯಥಾರ್ಥವೆಚ್ಚ. ಇದಕ್ಕೆ ಅವರು ಅನುವು ವೆಚ್ಚವೆಂದು (ಆಪರ್ಚುನಿಟಿ ಕಾಸ್ಟ್) ಎಂದು ವಿಶಿಷ್ಟ ನಾಮಕರಣವನ್ನೇ ಮಾಡಿದ್ದಾರೆ. ಅನುವುವೆಚ್ಚದ ವಿಚಾರವಾಗಿ ಅಮೆರಿಕದ ಅರ್ಥಶಾಸ್ತ್ರಜ್ಞ ಡೇವೆನ್‌ಪೋರ್ಟ್ ವಿಶದವಾಗಿ ವ್ಯಾಖ್ಯಾನ ಮಾಡಿದ್ದಾನೆ. (ಅನುಭೋಗಿಗಳ) ಬಯಕೆಗಳ ಪೂರೈಕೆಗಾಗಿ ಪರಸ್ಪರವಾಗಿ ಸ್ಪರ್ಧಿಸುವ ಪದಾರ್ಥಗಳ ಬೇಡಿಕೆ ಅಂತಿಮವಾಗಿ ಅವುಗಳ ಅಂಚಿನ ಉಪಯುಕ್ತತೆಗೆ ಅನುಗುಣವಾಗಿ ನಿರ್ಧಾರವಾಗುತ್ತದೆ. ದೀರ್ಘಕಾಲದಲ್ಲಿ ಪದಾರ್ಥಗಳ ಉತ್ಪಾದನೆಯ ಕಾರ್ಯ ನಡೆಯುವುದು ಈ ಬೇಡಿಕೆಯ ಅನುಗುಣವಾಗಿಯೇ. ಒಂದು ಪದಾರ್ಥವನ್ನು ಅನುಭೋಗಿಗಳು ಎಲ್ಲಿಯವರೆಗೆ ಒಂದು ಬೆಲೆಕೊಟ್ಟು ಕೊಳ್ಳಲು ಸಿದ್ಧವಾಗಿರುತ್ತಾರೋ ಅಲ್ಲಿಯವರೆಗೆ ಮಾತ್ರ ಆ ಬೆಲೆಯ ಮಟ್ಟಕ್ಕೆ ಅನುಗುಣವಾದ ಉತ್ಪಾದನೆಯ ವೆಚ್ಚಮಾಡಲು ಎಂದರೆ ಉತ್ಪಾದನೆಯ ನಾನಾ ಅಂಗಗಳನ್ನು ಆಯಾ ಬೆಲೆಗಳಲ್ಲಿ ಕೊಳ್ಳಲು ಉತ್ಪಾದಕರು ಸಿದ್ಧವಾಗಿರುತ್ತಾರೆ. ಹೀಗೆ ಒಂದು ಪದಾರ್ಥ ಅನುಭೋಗಿಯ ಹಂತದಲ್ಲಿ ನಿರ್ಣಯವಾಗುವ ಅನುವುವೆಚ್ಚ ಅರ್ಥ ಮೀಮಾಂಸೆಯಲ್ಲಿ ಬಹಳ ಪ್ರಮುಖವಾದದ್ದು. ಉತ್ಪಾದನೆಯಲ್ಲಿ ನಿರತವಾದ ನಾನಾ ಅಂಗಗಳ ನಡುವೆ ಅಂತಿಮವಾಗಿ ವರಮಾನದ ವಿತರಣೆಯಾಗುವುದೂ ಇದರ ಆಧಾರದ ಮೇಲೆಯೇ. (ಇದನ್ನು ಸ್ಥಾನಾಂತರ ವೆಚ್ಚವೆಂದೂ ಕರೆಯಲಾಗಿದೆ.)

ಹೀಗೆ ತಾತ್ತ್ವಿಕವಾಗಿ ಉತ್ಪಾದನೆಯ ಅನುವು ವೆಚ್ಚದ ವಿವೇಚನೆ ಬಲು ಬೋಧಪ್ರದವಾಗಿಯೂ ಉಪಯುಕ್ತವಾಗಿಯೂ ಇರುವುದಾದರೂ ಈ ಭಾವನೆಯನ್ನು ಒಂದು ಉದ್ಯಮ ಸಂಸ್ಥೆಯ ಉತ್ಪಾದನೆಯ ವಾಸ್ತವಿಕ ಕ್ಷೇತ್ರದಲ್ಲಿ ಪ್ರಯೋಗಿಸಲು ಯತ್ನಿಸಿದಾಗ ಅನಿವಾರ್ಯವಾದ ನಾನಾ ಬಗೆಯ ತೊಡಕುಗಳುದ್ಭವಿಸುವುದು ಸಹಜ. ಆದ್ದರಿಂದ ಈ ಕ್ಷೇತ್ರದಲ್ಲಿ ವ್ಯವಹರಿಸುವಾಗ ಉತ್ಪಾದನೆಯ ಹಣವೆಚ್ಚವನ್ನು ಕುರಿತು ಪರಿಶೀಲನೆ ನಡೆಸುವುದೇ ರೂಢಿ. ಇದೇ ಉದ್ಯಮಿಯ ವೆಚ್ಚ.

ಉದ್ಯಮಿಯ ದೃಷ್ಟಿಯಲ್ಲಿ ಒಂದು ಪದಾರ್ಥದ ಉತ್ಪಾದನೆಯ ವೆಚ್ಚದಲ್ಲಿ ಈ ಅಂಶಗಳಿವೆ: 1. ಕಾರ್ಮಿಕರ ಕೂಲಿ, 2. ಬಂಡವಾಳದ ಮೇಲೆ ಬಡ್ಡಿ, 3. ನೆಲ ಅಥವಾ ಇತರ ಬಗೆಯ ಸ್ವತ್ತನ್ನು ಬಳಸಿದ್ದಕ್ಕೆ ಪ್ರತಿಫಲವಾಗಿ ಅದರ ಮಾಲೀಕರಿಗೆ ಕೊಟ್ಟ ಬಾಡಿಗೆ ಹಾಗೂ ಸಂಭಾವನೆ, 4. ಅಸಿದ್ಧ ಸಾಮಗ್ರಿಯ ವೆಚ್ಚ, 5. ಯಂತ್ರವೇ ಮುಂತಾದವುಗಳ ದುರಸ್ತಿ ಹಾಗೂ ಪ್ರತಿಸ್ಥಾಪನೆಯ ಖರ್ಚು, 6. ಸರಕು ವಿಕ್ರಯ ಮತ್ತು ಜಾಹೀರಾತು ಖರ್ಚು, 7. ಪದಾರ್ಥೋತ್ಪಾದನೆಯಲ್ಲಿ ತೊಡಗಲು ತಯಾರಕನಿಗೆ ಉತ್ತೇಜನ ನೀಡುವಷ್ಟು ಲಾಭ.

ಉದ್ಯಮಿಯ ವೆಚ್ಚವನ್ನು ಇನ್ನೂ ಬೇರೆ ಬಗೆಯಾಗಿ ವಿಶ್ಲೇಷಿಸುವುದು ಸಾಧ್ಯ. ಕಾಲಾವಧಿಯ ದೃಷ್ಟಿಯಿಂದ ಈ ವೆಚ್ಚಗಳನ್ನು ವಿಂಗಡಿಸುವುದು ಒಂದು ವಿಧಾನ. ಉತ್ಪಾದಕನ ಕೆಲವು ವೆಚ್ಚಗಳು ಇತರ ವೆಚ್ಚಗಳಿಗಿಂತ ಹೆಚ್ಚು ಸ್ಥಿರ. ಇವನ್ನು ಬದಲಾಯಿಸಬೇಕಾದರೆ ಹೆಚ್ಚು ಕಾಲ ಹಿಡಿಸುತ್ತದೆ. ಯಂತ್ರಸ್ಥಾವರ. ಮೇಲ್ಮಟ್ಟದ ಆಡಳಿತ ಸಿಬ್ಬಂದಿ ವೆಚ್ಚ ಮುಂತಾದವು ದೀರ್ಘಾವಧಿಯ ವೆಚ್ಚಗಳು. ಆದರೆ ಈ ಚೌಕಟ್ಟನ್ನು ಬದಲಾಯಿಸದೆ ಇದರ ವ್ಯಾಪ್ತಿಯಲ್ಲೇ ತತ್ಕಾಲದಲ್ಲಿ ಒಂದು ಮಿತಿಯವರೆಗೆ ಉತ್ಪತ್ತಿಯನ್ನು ಹೆಚ್ಚಿಸಬಹುದು. ಹೀಗೆ ಅಲ್ಪಾವಧಿಯಲ್ಲಿ ಏರಿಸಿ ತಗ್ಗಿಸಬಹುದಾದ ವೆಚ್ಚಗಳು (ಅಸಿದ್ಧ ಸಾಮಗ್ರಿ, ಕೂಲಿ ಇತ್ಯಾದಿ) ಅಲ್ಪಾವಧಿ ವೆಚ್ಚಗಳು.

ಇದೇ ವಿಚಾರವನ್ನೇ ಇನ್ನಷ್ಟು ಮುಂದುವರಿಸಿ ಉತ್ಪಾದಕನ ವೆಚ್ಚಗಳನ್ನು ಸ್ಥಿರ (ಫಿಕ್ಸೆಡ್) ಹಾಗೂ ವ್ಯತ್ಯಯಕಾರಿ (ವೇರಿಯಬಲ್) ಎಂದು ವಿಂಗಡಿಸುವುದು ಸಾಧ್ಯ. ಉತ್ಪತ್ತಿಯ ಗಾತ್ರಕ್ಕೆ ಅನುಗುಣವಾಗಿ ಹೆಚ್ಚುಕಡಿಮೆಯಾಗುವ ವೆಚ್ಚಗಳು ವ್ಯತ್ಯಯಕಾರಿ (ಉದಾ: ಅಸಿದ್ಧ ಸಾಮಗ್ರಿ, ಕೂಲಿ); ಬದಲಾಗದವು ಸ್ಥಿರವೆಚ್ಚ (ಉದಾ: ಯಂತ್ರಸ್ಥಾವರ, ಕಟ್ಟಡದ ಬಾಡಿಗೆ). ವ್ಯತ್ಯಯಕಾರಿ ವೆಚ್ಚ ಪದಾರ್ಥದ ಉತ್ಪತ್ತಿಗೆ ಮೂಲಭೂತವಾದದ್ದು. ಅದು ಮೂಲ ವೆಚ್ಚ. ಉತ್ಪಾದನೆಯ ಕೆಲಸ ನಡೆದರೆ ಮಾತ್ರ ಈ ಖರ್ಚು. ಸ್ಥಿರವೆಚ್ಚವನ್ನು ಮೇಲುವೆಚ್ಚವೆನ್ನಬಹುದು. ಉತ್ಪಾದನೆಯ ಕಾರ್ಯ ನಡೆಯದಿದ್ದರೂ ಖರ್ಚು ಅನಿವಾರ್ಯ. ಆದರೆ ಒಂದು ವಿಚಾರವನ್ನು ನೆನಪಿನಲ್ಲಿಟ್ಟಿರಬೇಕಾದ್ದು ಅಗತ್ಯ. ಸ್ಥಿರ ಹಾಗೂ ವ್ಯತ್ಯಯಕಾರಿ ವೆಚ್ಚವೆಂಬ ವಿಂಗಡನೆ ಸ್ವಲ್ಪ ದೂರ ಮಾತ್ರ ಸಾಧ್ಯ. ದೀರ್ಘಕಾಲದಲ್ಲಿ ಎಲ್ಲವೂ ವ್ಯತ್ಯಾಸ ಹೊಂದುತ್ತದೆಯೆಂಬುದೇ ಅಬಾಧಿತವಾದ ಸತ್ಯ.

ಉತ್ಪಾದನೆಯ ಪ್ರಕ್ರಿಯೆಯ ದೃಷ್ಟಿಯಿಂದಲೂ ಉದ್ಯಮದೊಡೆಯನ ಉತ್ಪಾದನೆಯ ವೆಚ್ಚವನ್ನು ವಿಂಗಡಿಸಬಹುದಾಗಿದೆ : 1 ಪದಾರ್ಥೋತ್ಪಾದನೆಗೆ ನೇರವಾಗಿ ಸಂಬಂಧಿಸಿದ ವೆಚ್ಚ–ಉತ್ಪಾದನ ವೆಚ್ಚ (**ನೋಡಿ– ಉತ್ಪಾದನ–ವೆಚ್ಚ**), 2 ಮಾರಾಟ ವೆಚ್ಚ, 3 ಇತರ ವೆಚ್ಚ. **(ಕೆ.ಆರ್.ಎಂ.)**

**ಉತ್ಪಾದೀ ವ್ಯಯ:** ಭವಿಷ್ಯದಲ್ಲಿ ಆರ್ಥಿಕ ಕಲ್ಯಾಣ ಸಾಧಿಸುವ ಸಾರ್ವಜನಿಕ (ಸರ್ಕಾರಿ) ಖರ್ಚು (ಪ್ರೊಟಕ್ಟಿವ್ ಎಕ್ಸ್‌ಪೆಂಡಿಚರ್). ಸಾರ್ವಜನಿಕ ಹಣವನ್ನು ಯಾವ ಯಾವ ಕಾರ್ಯಗಳಿಗೆ ಖರ್ಚುಮಾಡಬೇಕೆಂಬ ಬಗ್ಗೆ ಕಾಲದಿಂದ ಕಾಲಕ್ಕೆ ಭಾವನೆಗಳು ಬದಲಾಗುತ್ತಿವೆ. ಆಯಾ ಕಾಲದ ದೃಷ್ಟಿಕೋನಗಳಿಗೆ ಅನುಸಾರವಾಗಿ ಉತ್ಪಾದೀ ವ್ಯಯದ ಅರ್ಥವೂ ವ್ಯತ್ಯಾಸಹೊಂದಿದೆ. ಸಾರ್ವಜನಿಕ ಹಣವನ್ನು ಖರ್ಚು ಮಾಡುವ ಅಧಿಕಾರ

ಆಯಾ ದೇಶಗಳ ಸರ್ಕಾರಗಳಿಗೆ ಸೇರಿದ್ದು. ಆದರೆ ಸರ್ಕಾರಕ್ಕೆ ಬರುವ ಹಣ ಆ ದೇಶದ ಪ್ರಜೆಗಳಿಂದ ಬರುತ್ತದೆಯಾದ್ದರಿಂದ ಪ್ರತಿಯೊಂದು ದೇಶದಲ್ಲೂ ಸಾರ್ವಜನಿಕ ಹಣವನ್ನು ವೆಚ್ಚ ಮಾಡುವಾಗ ಕೆಲವು ತತ್ತ್ವಗಳನ್ನು ಪಾಲಿಸಬೇಕೆಂಬುದು ಎಲ್ಲ ದೇಶಗಳಲ್ಲೂ ವ್ಯಕ್ತವಾಗಿರುವ ಅಭಿಪ್ರಾಯ. ಈ ತತ್ತ್ವಗಳನ್ನು ಪಾಲಿಸದಿದ್ದರೆ ಹಣ ವ್ಯರ್ಥವಾಗಿ ದೇಶದ ಪ್ರಜೆಗಳಿಗೆ ಅದರಿಂದ ಉಪಯೋಗವಾಗುವ ಬದಲು, ಅನಾಹುತವೇ ಸಂಭವಿಸೀತೆಂಬುದು ತಜ್ಞರ ಅಭಿಪ್ರಾಯ. ಸಾರ್ವಜನಿಕ ಮುಂದಾಳುಗಳೂ ರಾಜಕೀಯ ನಾಯಕರೂ ಅರ್ಥಶಾಸ್ತ್ರಜ್ಞರೂ ಸಾರ್ವಜನಿಕ ಹಣವನ್ನು ಖರ್ಚುಮಾಡಲು ಅನುಸರಿಸಬೇಕಾದ ನಿಯಮಗಳನ್ನು ಆಗಿಂದಾಗ್ಗೆ ಪ್ರತಿಪಾದಿಸಿದ್ದಾರೆ.

ಉತ್ಪಾದೀ ವ್ಯಯವನ್ನು ಫಲದಾಯಕ ವ್ಯಯವೆಂದೂ ಕರೆಯಬಹುದು. 18–19ನೆಯ ಶತಮಾನಗಳಲ್ಲಿ ಯುರೋಪಿನ ಕೆಲವು ಸರ್ಕಾರಗಳು ಸಾರ್ವಜನಿಕ ಹಣವನ್ನು ತಮ್ಮ ಮನಬಂದಂತೆ ಖರ್ಚು ಮಾಡುತ್ತಿದ್ದುವು. ಇಂಥ ಮನೋಭಾವವನ್ನು ಕೆಲವು ಅರ್ಥಶಾಸ್ತ್ರಜ್ಞರು ಖಂಡಿಸಿ, ಸಾರ್ವಜನಿಕ ಹಣದ ವ್ಯಯದಿಂದ ಸಾಕಷ್ಟು ಪ್ರತಿಫಲ ದೊರೆಯಬೇಕೆಂದು ಪ್ರತಿಪಾದಿಸಲು ಪ್ರಾರಂಭಿಸಿದರು.

ಹಿಂದಿನ ಕಾಲದಲ್ಲಿ ಪ್ರತಿ ದೇಶದಲ್ಲೂ ಸರ್ಕಾರ ನಿರ್ವಹಿಸಬೇಕಾದ ಕರ್ತವ್ಯಗಳು ಬಹಳ ಮಿತವಾಗಿದ್ದುವು. 1 ಶತ್ರುಗಳ ಆಕ್ರಮಣದಿಂದ ದೇಶದ ರಕ್ಷಣೆ, 2 ದೇಶದ ಒಳಗಡೆ ಶಾಂತಿಪಾಲನೆ ಮತ್ತು 3 ನ್ಯಾಯಾಂಗ ವ್ಯವಸ್ಥೆಯ ನಿರ್ಮಾಣ ಹಾಗೂ ನ್ಯಾಯಪಾಲನೆ–ಈ ಮೂರು ಕರ್ತವ್ಯಗಳನ್ನು ಸರ್ಕಾರ ನಿರ್ವಹಿಸಿದರೆ ಸಾಕೆಂಬ ಭಾವನೆಯಿತ್ತು. ಇವನ್ನು ಸರ್ಕಾರ ಸಾಧಿಸಿದರೆ ದೇಶದಲ್ಲಿ ನೆಮ್ಮದಿ ನೆಲೆಸಿ ಪ್ರಜೆಗಳು ಆರ್ಥಿಕ ಪ್ರಗತಿಯಲ್ಲಿ ತೊಡಗಲು ಸಾಧ್ಯವಾಗುತ್ತದೆಯೆಂಬುದಾಗಿ ಆಗ ನಂಬಲಾಗಿತ್ತು. ಈ ಕರ್ತವ್ಯಗಳನ್ನು ನಿರ್ವಹಿಸಬೇಕಾದರೆ ಸರ್ಕಾರಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನು ಮಾತ್ರ ವ್ಯಯಮಾಡಬೇಕೆಂದು ಅನೇಕ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಪ್ರತಿಪಾದಿಸಿದ್ದರು. ಇವನ್ನು ಬಿಟ್ಟು ಬೇರೆ ಕಾರ್ಯಗಳಿಗೆ ಸರ್ಕಾರ ಸಾರ್ವಜನಿಕ ಹಣವನ್ನು ವ್ಯಯ ಮಾಡಿದರೆ ಅದು ಸಂಪೂರ್ಣ ವ್ಯರ್ಥವೆಂಬುದು ಆಗಿನ ಕಾಲದ ಭಾವನೆ. ಆದರೆ ಈಗ ಸರ್ಕಾರದ ವೆಚ್ಚ ಊಹಿಸಲಾರದಷ್ಟು ದಿಕ್ಕುಗಳಲ್ಲಿ ವ್ಯಾಪಿಸಿದೆ. ಜನರಿಗೆ ಸಕಲ ಸೌಕರ್ಯಗಳನ್ನೂ ಒದಗಿಸಲೇಬೇಕಾದ್ದು ಇಂದು ಸರ್ಕಾರದ ಕರ್ತವ್ಯ. ಸಾರ್ವಜನಿಕ ಆರೋಗ್ಯ, ವಿದ್ಯಾಭ್ಯಾಸ, ಕಾರ್ಮಿಕ ಕ್ಷೇಮಾಭ್ಯುದಯ, ಹಿಂದುಳಿದ ವರ್ಗದವರಿಗೆ ಪ್ರೋತ್ಸಾಹ, ಸಾಮಾಜಿಕ ಭದ್ರತೆ–ಇವನ್ನೆಲ್ಲ ಸಾಧಿಸುವುದು ಈಗಿನ ಸರ್ಕಾರಗಳ ಕರ್ತವ್ಯ. ಹಿಂದಿನ ಕಾಲದಲ್ಲಿ ಇಂಥ ಬಾಬುಗಳ ಮೇಲಿನ ವೆಚ್ಚವನ್ನು ಫಲದಾಯಕವಲ್ಲದ ವೆಚ್ಚವೆಂದು ಭಾವಿಸಿ ಟೀಕಿಸಲಾಗುತ್ತಿತ್ತು. ಆದರೆ ಇಂದು ಇವೆಲ್ಲ ಉತ್ಪಾದೀ ವ್ಯಯಗಳು.

ಇಪ್ಪತ್ತನೆಯ ಶತಮಾನ ಪ್ರಾರಂಭವಾದ ಮೇಲೆ ಅದರಲ್ಲೂ ಮೊದಲನೆಯ ಮಹಾಯುದ್ಧವಾದ ಮೇಲೆ ಅರ್ಥಶಾಸ್ತ್ರಜ್ಞರ ಮತ್ತು ರಾಜಕೀಯ ನಿಪುಣರ ದೃಷ್ಟಿಕೋನವೇ ಬದಲಾಯಿಸಿದೆ. ಹಿಂದೆ ಯಾವುದನ್ನು ಫಲದಾಯಕವಲ್ಲದ ವೆಚ್ಚ ಎಂದು ಭಾವಿಸಿದ್ದರೋ ಅವುಗಳನ್ನು ಈಗ ಫಲದಾಯಕವಾದ ಅಥವಾ ಉತ್ಪಾದೀ ವೆಚ್ಚ ಎಂದು ಕರೆಯಲು ಆರಂಭಿಸಿದ್ದಾರೆ. ಸಾರ್ವಜನಿಕ ಆರೋಗ್ಯ ಮತ್ತು ವಿದ್ಯಾಭ್ಯಾಸ ಬಾಬುಗಳ ಮೇಲೆ ವೆಚ್ಚ ಮಾಡುವುದರಿಂದ ದೇಶದ ಜನರ ಸಂಪತ್ತು ಅಭಿವೃದ್ಧಿಗೊಂಡು ಆರ್ಥಿಕಪ್ರಗತಿಗೆ ಸಹಾಯವಾಗುವುದು ಎಂದು ಎಲ್ಲ ದೇಶಗಳಲ್ಲೂ ಅಭಿಪ್ರಾಯಪಡಲಾಗಿದೆ. ಹಿಂದುಳಿದ ದೇಶಗಳಲ್ಲಿ ಅಭಿವೃದ್ಧಿ ಸಾಧಿಸಬೇಕಾದರೆ ಆ ದೇಶಗಳಲ್ಲಿ ಸರ್ಕಾರಗಳು ತಾವೆ ಮುತುವರ್ಜಿ ವಹಿಸಿ ಆರೋಗ್ಯ, ವಿದ್ಯಾಭ್ಯಾಸ, ಕಾರ್ಮಿಕ ಕ್ಷೇಮಾಭ್ಯುದಯ ಇತ್ಯಾದಿ ಬಾಬುಗಳ ಮೇಲೆ ಖರ್ಚು ಮಾಡುವುದೇ ಅಲ್ಲದೆ, ಖಾಸಗಿಯವರು ಸ್ಥಾಪಿಸಲು ಸಾಧ್ಯವಿಲ್ಲದ ಮೂಲಭೂತ ಕೈಗಾರಿಕೆಗಳನ್ನೂ ಸ್ಥಾಪಿಸಬೇಕು, ಆರ್ಥಿಕ ರಂಗದಲ್ಲಿ ಅತ್ಯಾವಶ್ಯಕವಾದ ಮುಂದಾಳುತನದ ಕೆಲಸ ನಿರ್ವಹಿಸಬೇಕು ಎಂದು ಪ್ರತಿಪಾದಿಸಲಾಗಿದೆ. ಇಂಥ ಖರ್ಚುಗಳನ್ನೆಲ್ಲ ಉತ್ಪಾದೀ ಖರ್ಚು ಎಂದು ಭಾವಿಸಲಾಗಿದೆ.

ಈ ವಿಚಾರವನ್ನು ಸೂಕ್ಷ್ಮವಾಗಿ ಪರಿಶೀಲಿಸುವುದಾದರೆ, ಇಂಥದು ಉತ್ಪಾದೀ ವ್ಯಯ, ಇಂಥದ್ದು ಅಲ್ಲ ಎಂದು ನಿರ್ದಿಷ್ಟವಾಗಿ ಹೇಳುವುದು ಇಂದು ಸಾಧ್ಯವಿಲ್ಲ. ಈಗಿನ ಕಾಲದಲ್ಲಿ ಪ್ರತಿಯೊಂದು ರೀತಿಯ ಸಾರ್ವಜನಿಕ ವ್ಯಯವೂ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಆರ್ಥಿಕ ಕ್ಷೇತ್ರದಲ್ಲಿ ಫಲದಾಯಕವಾಗಿ ಪರಿಣಮಿಸುತ್ತದೆ. ಆದ್ದರಿಂದಲೇ ಆಧುನಿಕ ಅರ್ಥಶಾಸ್ತ್ರಜ್ಞರು ಸಾರ್ವಜನಿಕ ವ್ಯಯದಲ್ಲಿ ಇಂಥ ವಿಭಜನೆಯನ್ನು ಒಪ್ಪುವುದಿಲ್ಲ. ಅವರು ಇದನ್ನು ಕುರಿತು ದೀರ್ಘವಾಗಿ ಚರ್ಚಿಸಲೂ ಹೋಗುವುದಿಲ್ಲ.

(ಎನ್.ಪಿ.ಎಸ್.)

**ಉತ್ಪಾದೀ ಶ್ರಮ:** ಸಂಪತ್ತಿನ ಉತ್ಪಾದನೆಗೆ ಕಾರಣವಾದ ದುಡಿಮೆ (ಪ್ರೊಡಕ್ಟಿವ್ ಲೇಬರ್). ಅರ್ಥಶಾಸ್ತ್ರಜ್ಞರಲ್ಲಿ ಉತ್ಪಾದೀ ಶ್ರಮವೆಂಬ ಪದ ಬಹಳ ಹಿಂದೆಯೇ ಬಂದಿತ್ತು. ಮೊಟ್ಟಮೊದಲಿಗೆ ಈ ಪದವನ್ನು ಬಳಸಿದವರು 18ನೆಯ ಶತಮಾನದ ಫ್ರೆಂಚ್ ಪ್ರಕೃತಿ ಪ್ರಾಧಾನ್ಯವಾದಿಗಳು (ಫಿಸಿಯೋಕ್ರ್ಯಾಟ್ಸ್). ಇವರ ದೃಷ್ಟಿಯಲ್ಲಿ ವ್ಯವಸಾಯವೊಂದೇ ಫಲದಾಯಕ. ವ್ಯವಸಾಯದಲ್ಲಿ ವಿನಿಯೋಗಿಸಲಾದ ಶ್ರಮವನ್ನು ಉತ್ಪಾದೀ ಶ್ರಮವೆಂದೂ ಕೈಗಾರಿಕೆ, ವಾಣಿಜ್ಯ, ಮುಂತಾದ ಇತರ ಕ್ಷೇತ್ರಗಳಲ್ಲಿನ ಶ್ರಮವನ್ನು ಅನುತ್ಪಾದೀ ಶ್ರಮವೆಂದೂ ಅವರು ಸಾರಿದರು. ಆದರೆ ಕ್ರಮೇಣ ಸಿದ್ಧವಸ್ತುಗಳ ತಯಾರಕರ ಶ್ರಮವನ್ನೂ ಉತ್ಪಾದೀ ಶ್ರಮದಲ್ಲಿ ಸೇರಿಸಲಾಯಿತು.

ವಸ್ತುಗಳ ಮೌಲ್ಯವನ್ನು ಹೆಚ್ಚಿಸದ ದುಡಿಮೆ ಉತ್ಪಾದೀ ಶ್ರಮವಾಗಲಾರದೆಂಬುದು ಆಡಂ ಸ್ಮಿತ್ ಹಾಗೂ ಆತನ ಕಾಲದ ಇತರ ಅರ್ಥಶಾಸ್ತ್ರಜ್ಞರ ಭಾವನೆಯಾಗಿತ್ತು. ಸಂಗೀತಗಾರ, ನಟ, ಸೈನಿಕ, ವಕೀಲ, ಅಧ್ಯಾಪಕ ಮುಂತಾದವರ ಸೇವೆಗಳು ಈ ದೃಷ್ಟಿಯಿಂದ ಉತ್ಪಾದೀ ಶ್ರಮಗಳಲ್ಲ.

ಆಧುನಿಕ ಅರ್ಥಶಾಸ್ತ್ರಜ್ಞರು ಉತ್ಪಾದೀ ಶ್ರಮ ಮತ್ತು ಅನುತ್ಪಾದೀ ಶ್ರಮಗಳಲ್ಲಿನ ವ್ಯತ್ಯಾಸವನ್ನು ತೆಗೆದುಹಾಕಿ ಮೂರ್ತವಸ್ತುಗಳನ್ನು ಹಾಗೂ ಅಮೂರ್ತ ಸೇವೆಗಳನ್ನು ಉತ್ಪಾದಿಸುವ ಶ್ರಮಗಳೆರಡನ್ನೂ ಉತ್ಪಾದೀ ಶ್ರಮವೆಂದೇ ಪರಿಗಣಿಸಿದ್ದಾರೆ. ಸಾರಿಗೆ ಕೆಲಸಗಾರರು, ವ್ಯಾಪಾರೋದ್ಯಮಿಗಳ ಪ್ರತಿನಿಧಿಗಳು, ಬ್ಯಾಂಕ್ ನೌಕರರು ಮೊದಲಾದ ಶ್ರಮಜೀವಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿನಿಯೋಗಿಸುವ ಶ್ರಮವೂ ಕೈಗಾರಿಕೋದ್ಯಮಗಳಲ್ಲಿ ಬುದ್ಧಿ ಶಕ್ತಿಯನ್ನೊದಗಿಸುವ ಉದ್ಯಮ ಚಾಲಕರ, ಯಂತ್ರ ನಿರ್ಮಾಪಕರ, ವ್ಯವಸ್ಥಾಪಕರ ಹಾಗೂ ಆಡಳಿತಗಾರರ ಶ್ರಮವೂ ಕಚ್ಚಾ ಸಾಮಗ್ರಿಗಳನ್ನು ಬೆಳೆಯುವವರ ಮತ್ತು ಕೈಗಾರಿಕಾ ಉಪಕರಣ ತಯಾರಕರ ಶ್ರಮದಷ್ಟೇ ಮುಖ್ಯವಾದದ್ದೆಂದು ತೋರಿಸಿದ್ದಾರೆ.

ಮೇಲೆ ಹೇಳಿದ ರೀತಿಯಲ್ಲಿ ಉತ್ಪಾದೀ ಶ್ರಮವನ್ನು ವಿವರಿಸುವಾಗ ಕೆಲವು ಅಂಶಗಳನ್ನು ಗಮನಿಸಬೇಕು. ಹಲವು ವೇಳೆ ಶ್ರಮದ ಉದ್ದೇಶ ಸಫಲವಾಗದಿರಬಹುದು. ವಸ್ತು (ಮೂರ್ತ) ಹಾಗೂ ಸೇವೆ (ಅಮೂರ್ತ) ಗಳಲ್ಲಿ ಉಪಯುಕ್ತತೆಯನ್ನು ಸೃಷ್ಟಿಸುವ ಉದ್ದೇಶ ಇದ್ದೂ ಶ್ರಮ ಸಫಲವಾಗದಿರಬಹುದು. ಪನಾಮಾ ಕಾಲುವೆಯ ನಿರ್ಮಾಣದಲ್ಲಿ ಮೊಟ್ಟಮೊದಲು ತೊಡಗಿದಾಗ ಅದರಲ್ಲಿ ವಿನಿಯೋಗಿಸಿದ ಶ್ರಮ ಸಫಲವಾಗಲಿಲ್ಲ; ಮತ್ತೆ ಆ ಕೆಲಸದಲ್ಲಿ ತೊಡಗಿದಾಗ ಅದನ್ನು ಸಾಧಿಸುವುದಕ್ಕೆ ಮತ್ತೆ ಶ್ರಮ ಬಳಸಿಕೊಳ್ಳಲಾಯಿತು. ಮೊದಲ ಸಲ ಉಪಯೋಗಿಸಿದ್ದು ವ್ಯರ್ಥಶ್ರಮ. ಮಾರ್ಷಲ್ ಹೇಳಿರುವ ಹಾಗೆ ಇಂಥ ವ್ಯರ್ಥವಾದ ಹಾಗೂ ತಪ್ಪು ದಾರಿಯಲ್ಲಿ ವಿನಿಯೋಗಿಸಲಾದ ಶ್ರಮವನ್ನು ಅನುತ್ಪಾದೀ ಶ್ರಮವೆಂದು ಪರಿಗಣಿಸಬೇಕು.

ಅಂತೆಯೇ ಹಡಗು ಕಳ್ಳರು, ದರೋಡೆಕೋರರು, ಕಳ್ಳಕಾಕರು, ಜೂಜುಕೋರರು ಮುಂತಾದ ಸಮಾಜಘಾತಕ ವ್ಯಕ್ತಿಗಳ ಶ್ರಮವನ್ನೂ ಅನುತ್ಪಾದೀ ಶ್ರಮವೆಂದೇ ಹೇಳಬೇಕು. ಆದರೆ ಅಳಲೆಕಾಯಿ ಪಂಡಿತ, ಮದ್ಯ ತಯಾರಕ, ಅಶ್ಲೀಲ ಸಾಹಿತ್ಯ ಲೇಖಕ–ಇವರ ಶ್ರಮವನ್ನೂ ಉತ್ಪಾದೀ ಶ್ರಮವೆಂದು ತಿಳಿಯಬೇಕಾಗುತ್ತದೆ. ಏಕೆಂದರೆ ಇವರ ಸೇವೆಯ ಫಲವನ್ನು ಹಣ ಕೊಟ್ಟು ಕೊಳ್ಳುವವರಿದ್ದಾರೆ. ನೀತಿ–ಅನೀತಿ ಪ್ರಶ್ನೆ ಅರ್ಥಶಾಸ್ತ್ರದ ವ್ಯಾಪ್ತಿಯೊಳಕ್ಕೆ ಬರುವುದಿಲ್ಲ. ವಿಮಾಕೆಲಸಗಾರರ ಮತ್ತು ಸಮರ್ಥರಾದ ಸಣ್ಣ ವ್ಯಾಪಾರಿಗಳ ಶ್ರಮವೂ ಉತ್ಪಾದೀ ಶ್ರಮವೇ. ಶ್ರಮಿಕರ ದೃಷ್ಟಿಯಲ್ಲಿ ಉಪಯುಕ್ತತೆ ಹೊಂದಿರುವ ಚಟುವಟಿಕೆಗಳನ್ನೆಲ್ಲ ಉತ್ಪಾದೀ ಶ್ರಮವೆಂದು ಹೇಳಬಹುದು. ಆದರೆ ನ್ಯಾಯಸಮ್ಮತವಲ್ಲದ ಸಟ್ಟಾವ್ಯಾಪಾರಿಗಳ ಶ್ರಮ ಹಾಗೂ ಶಿಕ್ಷಾರ್ಹ ಚಟುವಟಿಕೆಗಳು ಮಾತ್ರ ಉತ್ಪಾದೀ ಶ್ರಮ ಆಗಲಾರವು.

(ಎಸ್.ಎನ್.ಎ.)

**ಉತ್ಸರ್ಗ:** (1) ತ್ಯಾಗ, ವರ್ಜನ. (2) ಒಂದು ಮುಖ್ಯವಾದ ಶೋಧನ ಕ್ರಮ. (3) ಅಗ್ನಿಸಾಕ್ಷಿಕವಾಗಿ ಮಾಡುವ ಒಂದು ವಿಹಿತ ಕ್ರಮ. (4) ಶ್ರಾವಣಮಾಸದಲ್ಲಿ ಪ್ರಾರಂಭಿಸಿ ವೇದಾಧ್ಯಯನವನ್ನು ಪುಷ್ಯದಲ್ಲಿ ತಾತ್ಕಾಲಿಕವಾಗಿ ನಿಲ್ಲಿಸುವಾಗ ಆಚರಿಸಬೇಕಾದ ಒಂದು ಕರ್ಮ. ಮನುಸ್ಮೃತಿಯಲ್ಲಿ ಹೇಳಿರುವಂತೆ ಪುಷ್ಯಮಾಸ ಬಂದಾಗ ಗ್ರಾಮದ ಹೊರಗೆ ಶಾಸ್ತ್ರಾನುಸಾರವಾಗಿ ಉತ್ಸರ್ಗವೆಂಬ ಕರ್ಮವನ್ನು ಮಾಡಿ ಅನಂತರ ವೇದಾಧ್ಯಯನವನ್ನು ಸ್ವಲ್ಪ ಕಾಲ ನಿಲ್ಲಿಸಬೇಕು. (5) ವ್ಯಾಕರಣಶಾಸ್ತ್ರದಲ್ಲಿ ಒಂದು ಸಾಮಾನ್ಯ ವಿಧಿ; ಇದಕ್ಕೆ ಪ್ರತಿಯಾದುದು ಅಪವಾದ.

(ಬಿ.ಕೆ.ಎಸ್.)

**ಉತ್ಸರ್ಜನ:** ಅಧ್ಯಯನವನ್ನು ತಾತ್ಕಾಲಿಕವಾಗಿ ಬಿಡಲು ಮಾಡುವ ವಿಧಿವತ್ತಾದ ಕ್ರಿಯೆ. ಉಪನಯನಾನಂತರದಲ್ಲಿ ಶ್ರಾವಣ ಅಥವಾ ಭಾದ್ರಪದ ಮಾಸದ ಪೂರ್ಣಿಮಾತಿಥಿ, ಶ್ರವಣ, ಹಸ್ತನಕ್ಷತ್ರ–ಈ ಮೂರರೊಂದರಲ್ಲಿ ಮಾಡುವ ಉಪಾಕರ್ಮದಿಂದ ಅಧ್ಯಯನಕ್ಕೆ ಪ್ರಾರಂಭ. ಅಲ್ಲಿಂದ ಮುಂದೆ $4\frac{1}{2}$ ತಿಂಗಳ ಕಾಲ ಅನಧ್ಯಾಯದಿವಸಗಳನ್ನು ಬಿಟ್ಟು ಉಳಿದ ದಿವಸಗಳಲ್ಲಿ ವೇದವನ್ನು ಗುರುವಿನಿಂದ ಸ್ವೀಕರಿಸಿ ಅಭ್ಯಾಸ ಮಾಡಬೇಕು. ಈ ಕಾಲ ಶಾಖಾಭೇದದಿಂದ $5\frac{1}{2}$ 6, $6\frac{1}{2}$ ತಿಂಗಳುಗಳವರೆಗೂ ಮುಂದುವರಿಯುತ್ತದೆ. ಈ ಕಾಲಾನಂತರದಲ್ಲಿ ಅಧ್ಯಯನ ಮಾಡುವುದನ್ನು ವಿಧಿಪೂರ್ವಕ ನಿಲ್ಲಿಸಬೇಕು. ಈ ವಿಧಿಯೇ ಉತ್ಸರ್ಜನ, ಋಷಿಪೂಜೆ, ಹೋಮ–ಇವು ಇದರಲ್ಲಿ ಮುಖ್ಯಕಾರ್ಯ. ಇದನ್ನು ಊರ ಹೊರಗೆ ಮಾಡಬೇಕೆಂದು ಶಾಸ್ತ್ರದಲ್ಲಿದೆ. ಉಪಾಕರ್ಮದ ದಿವಸವೇ ಮೊದಲು ಉತ್ಸರ್ಜನ ಮಾಡಿ ಬಳಿಕ ಉಪಾಕರ್ಮವನ್ನು ಮಾಡಿಕೊಳ್ಳುವುದು ಕೆಲವರಲ್ಲಿ ರೂಢಿಯಲ್ಲಿದೆ. ಉತ್ಸರ್ಜನವಿಲ್ಲದೆ ಮತ್ತೆ ವೇದಾಧ್ಯಯನಾರಂಭವಿಲ್ಲ. ಯಜುರ್ವೇದಿಗಳಲ್ಲಿ ಉತ್ಸರ್ಜನ ಮಾಡುವ ಪ್ರಯುಕ್ತ ಉಂಟಾದ ದೋಷನಿವಾರಣೆಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾರೆ. ಉತ್ಸರ್ಜನ ಮಾಡಿದ ಬಳಿಕ ಉಪಾಕರ್ಮದವರೆಗೂ ಅಧ್ಯಯನ ಮಾಡಬಾರದು. ಶುಕ್ಲಪಕ್ಷದಲ್ಲಿ ಧಾರಣಾಧ್ಯಯನವನ್ನೂ ಕೃಷ್ಣಪಕ್ಷದಲ್ಲಿ ಅಂಗಾಧ್ಯಯನವನ್ನೂ ಮಾಡಬಹುದು. (ಎಸ್.ಎನ್.ಕೆ.)

**ಉತ್ಸವ ಕವಾಯತು:** ಕವಾಯತು ಶಿಕ್ಷಣ ಪಡೆದ ದಳಗಳು ವಿಶೇಷ ಸಂತೋಷ ಸಮಾರಂಭಗಳಲ್ಲಿ ವಿಧಿವತ್ತಾಗಿ ಪ್ರದರ್ಶಿಸುವ ಸಾಮೂಹಿಕ ಕ್ರಿಯೆ (ಸೆರಿಮೋನಿಯಲ್ ಪೆರೇಡ್, ಸೆರಿಮೋನಿಯಲ್ ಡ್ರಿಲ್). ಸೈನ್ಯ, ಪೊಲೀಸ್, ಎನ್‌ಸಿಸಿ., ಸ್ಕೌಟ್ ಮತ್ತು ಇತರ ಸುವ್ಯವಸ್ಥಿತ ಸ್ವಯಂಸೇವಕ ದಳಗಳು ಒಟ್ಟಾಗಿ ಅಥವಾ ಪ್ರತ್ಯೇಕವಾಗಿ ಇಂಥ ಪ್ರದರ್ಶನಗಳಲ್ಲಿ ಭಾಗವಹಿಸುತ್ತವೆ. ರಾಷ್ಟ್ರೀಯ ದಿವಸಗಳು, ಆಯಾ ದಳಕ್ಕೆ ವಿಶಿಷ್ಟವಾದ ಸಮಾರಂಭಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಕ್ತಿಗಳ ಆಗಮನ ನಿರ್ಗಮನ ಘಟನೆಗಳು ಇಂಥಲ್ಲೆಲ್ಲ ಉತ್ಸವ ಕವಾಯತಿನ ಮೂಲಕ ಗೌರವ ವ್ಯಕ್ತಪಡಿಸುವುದು ವಾಡಿಕೆ. ಭಾಗಿಗಳ ದೃಷ್ಟಿಯಿಂದ ಹಿನ್ನೆಲೆಯಲ್ಲಿರುವ ಉದ್ದೇಶಗಳು: (1) ಸಮಷ್ಟಿಪ್ರಜ್ಞೆಯನ್ನು ವರ್ಧಿಸುವುದು; (2) ಕವಾಯ ತುರಂಗದಲ್ಲಿ ಉನ್ನತಮಟ್ಟದ ಸ್ತಿಮಿತತೆ ಮತ್ತು ಸಂಬದ್ಧತೆಗಳನ್ನು ಅಸ್ತಿತ್ವಕ್ಕೆ ತರುವುದು; (3) ಯುದ್ಧದಲ್ಲಿ ಜಯ (ಅಥವಾ ಉದ್ದೇಶ) ಸಿದ್ಧಿಸಲು ಆವಶ್ಯಕವಾದ ನೈತಿಕ ಗುಣಗಳ ಬೆಳವಣಿಗೆಯನ್ನು ಪೋಷಿಸುವುದು.

ಒಂದು ದಳದ ಶಿಕ್ಷಣಸಾಫಲ್ಯದ ಪ್ರತೀಕ ಆ ದಳ ಪ್ರದರ್ಶಿಸುವ ಉತ್ಸವ ಕವಾಯತಿ. ಆಯಾ ದಳಗಳ ಉದ್ದೇಶಗಳನ್ನು (ಎಂದರೆ ವಾಯುಪಡೆಯ ಶಿಕ್ಷಣದ ಉದ್ದೇಶ ನೌಕಾಪಡೆಯದಕ್ಕಿಂತ ಭಿನ್ನ; ಭೂಮಿಪಡೆಯ ಉದ್ದೇಶ ಬೇರೆಯೇ; ಇದೇ ರೀತಿ ಇತರ ದಳಗಳ ಶಿಕ್ಷಣದ ಉದ್ದೇಶಗಳು ಭಿನ್ನವಾಗಿವೆ.) ಸಿದ್ಧಿಸಲು ನೀಡುವ ಶಿಕ್ಷಣ ನಿರಂತರ ಹಂತಹಂತವಾಗಿ ನಡೆದಿರುತ್ತದೆ. ಅದು ಪ್ರೇಕ್ಷಣೀಯವಲ್ಲ. ಆದರೆ ಇಂಥ ಶಿಕ್ಷಣ ಯಾವ ಮಟ್ಟಕ್ಕೆ ಏರಿದೆ, ಸಾಮೂಹಿಕವಾಗಿ ಒಂದೊಂದು ದಳ ತನ್ನಲ್ಲಿಯೂ ಇತರ ದಳಗಳೊಡನೆಯೂ ಹೇಗೆ ವರ್ತಿಸುತ್ತದೆ ಎಂಬುದನ್ನು ಉತ್ಸವಕವಾಯತಿನಂದು ರಾಷ್ಟ್ರ ನೋಡುತ್ತದೆ.

ಒಂದು ಆಜ್ಞೆ, ಒಂದು ಕ್ರಿಯೆ–ಇದು ಇಲ್ಲಿನ ಸೂತ್ರ. ಇದರ ಪಾಲನೆಯಲ್ಲಿ ನಿಷ್ಕೃಷ್ಟತೆ ಸಿದ್ಧಿಸಿದರೆ ದಳಗಳ ಶಿಕ್ಷಣದ ಉದ್ದೇಶ ಸಫಲವಾಗಿದೆ ಎಂದು ಭಾವಿಸಬಹುದು. ಶಿಸ್ತಿನ ಕ್ರಮಬದ್ಧ ಶಿಕ್ಷಣ ಪಡೆದ ದಳಗಳು ವಿಧಿವತ್ತಾಗಿ ಪ್ರದರ್ಶಿಸುವ, ಉತ್ಸವಕವಾಯತು ನೋಡಲು ಒಂದು ಸುಂದರ ದೃಶ್ಯ. ಇದರಲ್ಲಿ ಸಾಮಾನ್ಯವಾಗಿರುವ ವಿಧಿಗಳು–(1) ರಂಗಸ್ಥಳಕ್ಕೆ ವ್ಯವಸ್ಥಿತ ತುಕಡಿಗಳು ಕ್ರಮಬದ್ಧವಾಗಿ ನಡೆದುಬಂದು ನಿಯಮಿತ ಸ್ಥಾನಗಳಲ್ಲಿ ಕವಾಯತು ರೀತ್ಯ ನಿಲ್ಲುತ್ತವೆ. ಭಾಗಿಗಳು ಶಸ್ತ್ರಗಳನ್ನು ಹೊಂದಿರಬಹುದು, ಹೊಂದದೆಯೂ ಇರಬಹುದು. ಹೊಂದಿದ್ದರೆ ಆ ಕವಾಯತು ಶ್ರೇಷ್ಠವೆಂದು ಸಂಕೇತ. (2) ಕವಾಯತಿನಾಯಕ ಯುಕ್ತ ಆಜ್ಞೆಯನ್ನು ಘೋಷಿಸಿ ತುಕ್ಕಡಿಗಳ ನೆಲೆಯನ್ನು ವ್ಯವಸ್ಥೆಗೊಳಿಸುತ್ತಾನೆ. ಜೊತೆಗೆ ಅವುಗಳ ಸಹಕ್ರಿಯಾ ಸಾಮರ್ಥ್ಯವನ್ನು ದೃಢಪಡಿಸಿಕೊಳ್ಳುತ್ತಾನೆ. (3) ಗೌರವ ಸ್ವೀಕರಿಸುವ ಮುಖ್ಯ ವ್ಯಕ್ತಿ ನಿಶ್ಚಿತವೇಳೆಗೆ ಆಗಮಿಸಿ ವಂದನವೇದಿಕೆಯ (ಸೆಲ್ಯೂಟಿಂಗ್ ಬೇಸ್) ಮೇಲೆ ನಿಂತೊಡನೆಯೇ ದಳಗಳಿಗೆ ನಾಯಕ ಆಜ್ಞೆ ನೀಡಿ ಶಸ್ತ್ರವಂದನೆ ಸಮೇತ ಗೌರವ ಪ್ರದರ್ಶಿಸುತ್ತಾನೆ. ಮುಖ್ಯವ್ಯಕ್ತಿ ಪ್ರತಿವಂದನೆ ಇತ್ತು ಗೌರವವನ್ನು ಸ್ವೀಕರಿಸುವನು. (4) ದಳಗಳನ್ನು ನಾಯಕ ಸಾವಧಾನ ಸ್ಥಿತಿಯಲ್ಲಿ ಇರುವಂತೆ ವಿಧಿಸಿ ಮುಖ್ಯವ್ಯಕ್ತಿಯಲ್ಲಿಗೆ ಆಗಮಿಸಿ ಉತ್ಸವಕವಾಯತು ವೀಕ್ಷಣೆಗೆ ಸನ್ನದ್ಧವಾಗಿದೆಯೆಂದು ಅರುಹುತ್ತಾನೆ. (5) ಮುಖ್ಯವ್ಯಕ್ತಿಯನ್ನು ನಾಯಕ ದಳಗಳ ಮುಂಚೂಣಿಯಲ್ಲಿ ನಡಿಗೆಯಿಂದಲೋ ವಾಹನದಲ್ಲಿಯೋ ವೀಕ್ಷಿಸಲು ಕರೆದೊಯ್ಯುತ್ತಾನೆ. ಇದು ಮುಖ್ಯವ್ಯಕ್ತಿಯಿಂದ ದಳಗಳ ಸಮೀಪ ಮತ್ತು ಪ್ರತ್ಯೇಕ ವೀಕ್ಷಣೆ. (6) ಮುಖ್ಯವ್ಯಕ್ತಿ ಸ್ವಸ್ಥಾನಕ್ಕೆ ಮರಳಿದ ಅನಂತರ ನಾಯಕ ದಳಗಳಿಗೆ ಪ್ರದರ್ಶನ ನಡಿಗೆ (ಮಾರ್ಚ್‌ಪಾಸ್ಟ್) ನಡೆಯಲು ಆಜ್ಞೆ ನೀಡುತ್ತಾನೆ. ಮೊದಲು ನಾಯಕ; ಆತನ ಹಿಂದೆ ದಳಗಳು ಅವು ನಿಂತಿರುವ ಕ್ರಮದಲ್ಲಿ ಬಲಕ್ಕೆ ತಿರುಗಿ ಸರಿಸುಮಾರು ವೃತ್ತಪಥದಲ್ಲಿ ನಡೆದು ಮುಖ್ಯವ್ಯಕ್ತಿ ಬಲಕ್ಕೆ ಇರುವಂತೆ ಗಮನಿಸುತ್ತವೆ. ಮುಖ್ಯವ್ಯಕ್ತಿ ನಿಂತಿರುವ ವಂದನವೇದಿಕೆಯ ಸಮೀಪ ಬರುವಾಗ ದೃಷ್ಟಿಯನ್ನು ಬಲಕ್ಕೆ (ಎಂದರೆ, ಮುಖ್ಯ ವ್ಯಕ್ತಿಯೆಡೆಗೆ) ಹರಿಸುವುದರ ಮೂಲಕ ಗೌರವ ಸಲ್ಲಿಸುತ್ತವೆ. ಆಗ ಆತನೂ ಪ್ರತಿವಂದನೆ ನೀಡುತ್ತಾನೆ. ಇಲ್ಲಿಗೆ ಉತ್ಸವ ನಡಿಗೆ ಮುಕ್ತಾಯವಾಗುತ್ತದೆ.

ಉತ್ಸವಕವಾಯತಿನಲ್ಲಿ ಭಾಗವಹಿಸಬಲ್ಲ ತುಕಡಿಗಳ ಸಂಖ್ಯೆಯನ್ನು ನಿಗದಿಸಿಲ್ಲ. ಲಭ್ಯ ಸುಶಿಕ್ಷಿತ ಪಡೆಗಳು ಮತ್ತು ರಂಗಸ್ಥಳದ ವಿಸ್ತಾರ ಇವನ್ನು ಅವಲಂಬಿಸಿ ಅನುಕೂಲ ಸಂಖ್ಯೆಯ ತುಕಡಿಗಳನ್ನು ಆರಿಸುವುದು ವಾಡಿಕೆ. ಮಿಶ್ರ ಉತ್ಸವಕವಾಯತಿನಲ್ಲಿ (ಎಂದರೆ ಸೈನ್ಯ, ಪೊಲೀಸ್, ಎನ್‌ಸಿಸಿ ಮುಂತಾದ ವಿವಿಧ ದಳಗಳು ಒಟ್ಟಾಗಿ ಭಾಗವಹಿಸುವಾಗ) ಯಾವ ದಳ ಮೊದಲು ಬರಬೇಕು ಯಾವುದುಅನಂತರ ಬರಬೇಕು ಎಂಬ ಜ್ಯೇಷ್ಠತೆಯ ನಿರ್ಧಾರವನ್ನು ಸರ್ಕಾರ ಮೊದಲೇ ವಿಧಿಸಿರುತ್ತದೆ. ಉತ್ಸವಕವಾಯತಿನಲ್ಲಿ ಮುಖ್ಯವ್ಯಕ್ತಿಗೆ ಶಸ್ತ್ರವಂದನೆ ಸಲ್ಲಿಸುವಾಗ ಕೆಲವು ನಿರ್ದಿಷ್ಟ ವಿಧಿಗಳನ್ನು ಪಾಲಿಸಬೇಕು : (1) ರಾಷ್ಟ್ರಾಧ್ಯಕ್ಷರು ಮುಖ್ಯವ್ಯಕ್ತಿಯಾದಾಗ, ರಾಜ್ಯಪಾಲರು ಅವರ ರಾಜ್ಯದಲ್ಲಿ ನೆರವೇರುವ ಉತ್ಸವಕವಾಯತಿನಲ್ಲಿ ಮುಖ್ಯವ್ಯಕ್ತಿಯಾದಾಗ, ಸ್ವಾತಂತ್ರ್ಯ ದಿವಸ, ಗಣರಾಜ್ಯ ದಿವಸಗಳಿಂದ ರಾಷ್ಟ್ರಧ್ವಜಾರೋಹಣ ಮಾಡಿದಾಗ–ಇಲ್ಲೆಲ್ಲ ರಾಷ್ಟ್ರಗೀತೆಯನ್ನು ನುಡಿಸಬೇಕು. (2) ಮಿಕ್ಕ ಎಲ್ಲ ಉತ್ಸವಕವಾಯತು ಗಳಲ್ಲೂ ಬೇರೆ ಗೀತೆಯನ್ನು (ಇದನ್ನೂ ವಿಧಿಸಲಾಗಿದೆ) ನುಡಿಸಬೇಕು (**ನೋಡಿ– ಗೌರವರಕ್ಷೆ**).

*

**ಉತ್ಸವಗಳು:** ಬಹು ಜನ ವಿಶೇಷ ಉತ್ಸಾಹದಿಂದ ನಡೆಸುವ ಕಲಾಪಗಳು. ಜೀವನದ ಮುಖ್ಯ ಆಶಯಗಳು ಈಡೇರಿದಾಗ ಉತ್ಸಾಹ ತೋರಿಸುವುದು ಮಾನವರ ಸಹಜವಾದ ಪ್ರವೃತ್ತಿ. ಉತ್ಸಾಹಸನ್ನಿವೇಶಗಳಲ್ಲಿ ಸಾಮಾನ್ಯವಾಗಿ ಹಲವು ಜನ ಸೇರುತ್ತಾರೆ. ಹೀಗೆ ಜನ ಸೇರಿದಾಗ ಈ ಉತ್ಸಾಹ ಹತ್ತುಪಟ್ಟು ಹೆಚ್ಚಿ ಅದು ಉತ್ಸವದಲ್ಲಿ ಪರಿಣಾಮಗೊಳ್ಳುತ್ತದೆ. ಉತ್ಸವಗಳು ಎಲ್ಲ ಬಗೆಯ ಜನರಲ್ಲೂ ಎಲ್ಲ ದರ್ಜೆಯ ಜನರಲ್ಲೂ–ಅನಾಗರಿಕರಲ್ಲೂ ನಾಗರಿಕರಲ್ಲೂ ಅನಾದಿ ಕಾಲದಿಂದ ಕಂಡುಬಂದಿರುವ ಸಾಮಾಜಿಕ ಸಂಪ್ರದಾಯಗಳಾಗಿವೆ. ಉತ್ಸವಗಳಲ್ಲಿ ಭಾಗವಹಿಸುವ ಜನರ ಸಂಖ್ಯೆ ಹತ್ತಿಪ್ಪತ್ತರಿಂದ ಹಿಡಿದು ಲಕ್ಷಾಂತರದವರೆಗೆ ಇರುತ್ತದೆ. ಉತ್ಸವ ಸಂದರ್ಭಗಳೂ ಅನೇಕವಾಗಿವೆ. ಹುಟ್ಟು ಹಬ್ಬ, ನಾಮಕರಣ, ಚೌಲ, ಮುಂಜಿ, ಮದುವೆ ಮುಂತಾದವು ಕುಟುಂಬಗಳ ಉತ್ಸವಗಳು. ಯುದ್ಧದಲ್ಲಿ ಜಯ, ಸಾಮಾಜಿಕ ಉದ್ಯಮಗಳ ಮುನ್ನಡೆ, ಕೆರೆ ಕಟ್ಟೆ ಕೋಟೆ ಕೊತ್ತಳಗಳ ನಿರ್ಮಾಣ, ಹೊಸ ಸಂಸ್ಥೆಗಳ ಸ್ಥಾಪನೆ, ಕಲೆಗಾರರ ಮತ್ತು ಮಹಾತ್ಮರ ಸನ್ಮಾನ ಮುಂತಾದ ಸಂದರ್ಭಗಳಲ್ಲಿ ನಡೆಯುವ ಉತ್ಸವಗಳು ಸಾರ್ವಜನಿಕ ಉತ್ಸವಗಳು. ಇವುಗಳಲ್ಲದೆ ಮತಕ್ಕೆ ಸಂಬಂಧಪಟ್ಟ ಉತ್ಸವಗಳು ವಿಶೇಷವಾಗಿ ಇವೆ. ಉತ್ಸವಗಳನ್ನು ಲೌಕಿಕ ಉತ್ಸವಗಳು, ಮತಕ್ಕೆ ಸಂಬಂಧಪಟ್ಟ ಉತ್ಸವಗಳು, ರಾಜಕೀಯ ಸಂಬಂಧವುಳ್ಳ ಉತ್ಸವಗಳು–ಎಂದು ಸಾಮಾನ್ಯವಾಗಿ ವಿಭಾಗಮಾಡಬಹುದು. **(ನೋಡಿ – ರಾಷ್ಟ್ರೀಯ ಉತ್ಸವಗಳು ಲೌಕಿಕ ಉತ್ಸವಗಳು)** ಹಿಂದಿನ ಕಾಲದಲ್ಲಿ ಎಲ್ಲ ಉತ್ಸವಗಳ ಹಿಂದೆ ಮತಭಾವನೆ ಇದ್ದೇ ಇತ್ತು. ಭಾರತೀಯ ಸಮಾಜದಲ್ಲಿ ಮದುವೆ, ನಾಮಕರಣ, ಚೌಲ ಮುಂತಾದ ಕುಟುಂಬಗಳ ಉತ್ಸವಗಳೂ ರಾಜನ ಪಟ್ಟಾಭಿಷೇಕ, ರಾಜಕೀಯ ವಿಜಯೋತ್ಸವಗಳೂ ಮತಸಂಸ್ಕಾರಗಳಾಗಿಯೇ ಇದ್ದುವು. ಬಹಳ ಕಾಲದವರೆಗೂ ಸಾಮಾನ್ಯವಾಗಿ ರಾಜಕೀಯಕ್ಕೂ ಮತಕ್ಕೂ ನಿಕಟಸಂಬಂಧ ಇತ್ತು. ಇಲ್ಲಿ ಮತಸಂಸ್ಥೆಗಳ ಉತ್ಸವಗಳನ್ನು ಮಾತ್ರ ಕುರಿತು ಪ್ರಸ್ತಾಪ ಮಾಡಲಾಗುತ್ತದೆ.

ಪ್ರಪಂಚದ ಎಲ್ಲ ಮತಗಳವರು ತಂತಮ್ಮ ಮತಗಳಿಗೆ ಸಂಬಂಧಿಸಿದಂತೆ ಉತ್ಸವಗಳನ್ನು ಏರ್ಪಡಿಸುತ್ತಾರೆ. ಯೆಹೂದ್ಯರು, ಕ್ರೈಸ್ತರು, ಮುಸ್ಲಿಮರು ವರ್ಷದ ಕೆಲವು ದಿನಗಳಲ್ಲಿ ಪ್ರಾರ್ಥನೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ಇವು ಜಾತ್ರೆಗಳು. ಇಂಥ ಸಂದರ್ಭಗಳಲ್ಲೂ ಉತ್ಸವಗಳು ನಡೆಯುವುದುಂಟು.

ಭಾರತದಲ್ಲಿ ಯೆಹೂದ್ಯರು, ಮುಸ್ಲಿಮರು, ಕ್ರೈಸ್ತರು, ಬೌದ್ಧರು, ಜೈನರು, ಶೈವರು, ವೈಷ್ಣವರು, ಸಿಖ್ಖರು–ಹೀಗೆ ಹಲವು ಮತಗಳ ಜನರಿದ್ದಾರೆ. ಅವರೆಲ್ಲರೂ ತಮ್ಮ ಮತಕ್ಕೆ ಸಂಬಂಧಪಟ್ಟ ಉತ್ಸವಗಳನ್ನು ನಡೆಸುತ್ತಾರೆ. ಈ ಉತ್ಸವಗಳು ಎರಡು ಬಗೆಯಾಗಿವೆ. ಮುಖ್ಯವಾದ ಮಹಾಪುರುಷರ ಜಯಂತಿಗಳು, ನಾನಕ್ ಜಯಂತಿ, ಬಸವಜಯಂತಿ, ಮಹಾವೀರಜಯಂತಿ, ಶಂಕರಜಯಂತಿ, ಆಳ್ವಾರುಗಳ ತಿರುನಕ್ಷತ್ರಗಳು ಇವು ಒಂದು ಬಗೆಯವು. ಶಿವರಾತ್ರಿ, ಕೃಷ್ಣಜನ್ಮಾಷ್ಟಮಿ, ಶ್ರೀರಾಮನವಮಿ, ಹಳ್ಳಿಯ ಜನರು ನಡೆಸುವ ಮಾರಮ್ಮನ ಉತ್ಸವ ಮುಂತಾದವು ಎರಡನೆಯ ಬಗೆಯವು.

ಇಲ್ಲಿ ಮುಖ್ಯವಾಗಿ ಲಕ್ಷಿಸಬೇಕಾದವು ಶಿವ, ವಿಷ್ಣು ದೇವಾಲಯಗಳಲ್ಲಿ ನಡೆಸುವ ಉತ್ಸವಗಳು. ಇವು ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳೆಂದು ಪ್ರಸಿದ್ಧವಾಗಿವೆ. ಪ್ರತಿನಿತ್ಯವೂ ಉತ್ಸವಗಳು ನಡೆಯುವುದು ತಿರುಪತಿ, ಮೇಲುಕೋಟೆ, ನಂಜನಗೂಡು, ಶ್ರೀರಂಗ ಮುಂತಾದ ದೊಡ್ಡ ದೇವಸ್ಥಾನಗಳಲ್ಲಿ. ಮಧ್ಯ ದರ್ಜೆಯ ದೇವಸ್ಥಾನಗಳಲ್ಲಿ ಪಕ್ಷೋತ್ಸವಗಳು ನಡೆಯುತ್ತವೆ. ಸಂವತ್ಸರೋತ್ಸವಗಳು ಬಹುಶಃ ಎಲ್ಲ ದೇವಾಲಯಗಳಲ್ಲೂ ನಡೆಯುತ್ತವೆ.

ದೇವಸ್ಥಾನಗಳ ಪೂಜೆಗಳಲ್ಲಿ ನಿತ್ಯಪೂಜೆ, ನೈಮಿತ್ತಿಕಪೂಜೆ, ಉತ್ಸವಪೂಜೆ ಎಂದು ಮೂರು ಬಗೆಗಳಿವೆ. ಸಾಧಾರಣವಾಗಿ ನಿತ್ಯವೂ ಒಂದು ಸಲವಾದರೂ ದೇವರಿಗೆ ಪೂಜೆ ಸಲ್ಲಿಸುವುದು ನಿತ್ಯಪೂಜೆ. ನಿತ್ಯಪೂಜೆ ದಿನಕ್ಕೆ ಎರಡು ಸಲ ನಡೆಯುವ ದೇವಾಲಯಗಳೂ ಇವೆ. ತಿರುಪತಿ ವೆಂಕಟೇಶ್ವರ ದೇವಾಲಯದಂಥ ತುಂಬ ಅಭಿವೃದ್ಧಿ ಸ್ಥಿತಿಯಲ್ಲಿರುವ ದೇವಾಲಯಗಳಲ್ಲಿ ಕ್ರಮವಾಗಿ ಸೂರ್ಯೋದಯಕ್ಕೆ ಮುಂಚೆ, ಸೂರ್ಯೋದಯಾನಂತರ, ಪೂರ್ವಾಹ್ನ, ಮಧ್ಯಾಹ್ನ, ಸಂಜೆ, ರಾತ್ರಿ, ಅರ್ಧಯಾಮದಲ್ಲಿ–ಹೀಗೆ ಆರು ಸಲ ನಿತ್ಯಪೂಜೆ ನಡೆಯುತ್ತದೆ. ಒಂದೊಂದು ಪೂಜೆಯ ಸಮಯದಲ್ಲೂ ದೇವರ ಅಲಂಕಾರಗಳು ಬೇರೆಯಾಗುತ್ತವೆ. ನಿತ್ಯಪೂಜೆಯ ಜೊತೆಗೆ ಕೆಲವು ದೊಡ್ಡ ದೇವಸ್ಥಾನಗಳಲ್ಲಿ ನೈಮಿತ್ತಿಕಪೂಜೆಯೂ ಉಂಟು. ಈ ನೈಮಿತ್ತಿಕ ಪೂಜೆಗಳು ಉತ್ಸವಗಳಾಗಿ ಪರಿಣಮಿಸುತ್ತವೆ. ಇವೇ ನಿತ್ಯೋತ್ಸವಗಳು. ಇವು ಸಾಮಾನ್ಯವಾಗಿ ದೇವಸ್ಥಾನದ ಒಳಪ್ರಾಕಾರದಲ್ಲಿ ನಡೆಯುತ್ತವೆ. ಆಗ ದೇವರ ಉತ್ಸವಕ್ಕಾಗಿ ಸಣ್ಣಪಲ್ಲಕ್ಕಿಯನ್ನು ಉಪಯೋಗಿಸುತ್ತಾರೆ. ದೇವಸ್ಥಾನದ ಸುತ್ತ ಅಥವಾ ಊರ ಸುತ್ತ, ನಡೆಯುವ ಉತ್ಸವಗಳಲ್ಲಿ ದೊಡ್ಡ ಪಲ್ಲಕ್ಕಿಯನ್ನೂ ಉಪಯೋಗಿಸುತ್ತಾರೆ. ಆಳ್ವಾರುಗಳ ತಿರುನಕ್ಷತ್ರ, ಗಣೇಶ ಚತುರ್ಥಿ, ಶಿವರಾತ್ರಿ, ರಾಮನವಮಿ, ಕೃಷ್ಣಜನ್ಮಾಷ್ಟಮಿ ಇತ್ಯಾದಿ ದಿನಗಳಲ್ಲೂ ಉತ್ಸವಗಳು ನಡೆಯುತ್ತವೆ. ಕೆಲವು ದೇವಾಲಯಗಳಲ್ಲಿ ಉದಾಹರಣೆಗೆ ಗಣೇಶನ ಗುಡಿಯಲ್ಲಿ ಗಣೇಶ ಚತುರ್ಥಿ ವಿಶೇಷೋತ್ಸವ. ಸ್ಕಾಂದ ಷಷ್ಠಿದಿವಸ ಸುಬ್ರಹ್ಮಣ್ಯ ಗುಡಿಯಲ್ಲಿ ವಿಶೇಷೋತ್ಸವ, ರಾಮದೇವರ ಗುಡಿಯಲ್ಲಿ ರಾಮನವಮಿಯಂದು ಉತ್ಸವ, ದುರ್ಗಿ ದೇವಸ್ಥಾನದಲ್ಲಿ ದುರ್ಗಾಷ್ಟಮಿಯಂದು ವಿಶೇಷೋತ್ಸವ, ಕೃಷ್ಣಜಯಂತಿಯ ದಿನ ಕೃಷ್ಣದೇವರ ವಿಶೇಷೋತ್ಸವ. ಆ ದಿವಸ ಸಾಮಾನ್ಯವಾಗಿ ಊರಿನ ಮುಖ್ಯ ಬೀದಿಗಳಲ್ಲಿ ದೇವರ ಮೆರವಣಿಗೆ ನಡೆಯುತ್ತದೆ.

ಈ ಉತ್ಸವಗಳಲ್ಲಿ ದೇವರ ಮೆರವಣಿಗೆಗಾಗಿ ಶಾಸ್ತ್ರೀಯವಾಗಿಯೂ ಕಲಾತ್ಮಕವಾಗಿಯೂ ಮಾಡಿದ ಲೋಹದ ವಿಗ್ರಹಗಳಿರುತ್ತವೆ. ಅವಕ್ಕೆ ಅಗತ್ಯವಾದ ಅನೇಕಾನೇಕ ಬೆಲೆ ಬಾಳುವ ಆಭರಣಗಳೂ ವಸ್ತ್ರಗಳೂ ಇರುತ್ತವೆ. ಕೆಲವು ಸಂದರ್ಭಗಳಲ್ಲಿ ಉತ್ಸವ ವಿಗ್ರಹಗಳನ್ನು

ವಾಹನಗಳ ಮೇಲೆ ಕೂಡಿಸಿ ಮೆರವಣಿಗೆ ಮಾಡುವುದೂ ಉಂಟು. ಶಿವನಿಗೆ ಗಜ, ವೃಷಭ, ಕಾಮಧೇನು, ಕುದುರೆ; ಗಣೇಶನಿಗೆ ಇಲಿ; ಸುಬ್ರಹ್ಮಣ್ಯಸ್ವಾಮಿಗೆ ನವಿಲು; ವಿಷ್ಣುವಿಗೆ ಗರುಡ, ಶೇಷ ಮುಂತಾದವು ವಾಹನಗಳು. ಕೆಲವು ದೇವರುಗಳಿಗೆ ನವರತ್ನಖಚಿತವಾದ ಕಿರೀಟಗಳಿರುತ್ತವೆ. ಉದಾ : ವೈರಮುಡಿ, ರಾಜಮುಡಿ. ಇಂಥ ಉತ್ಸವ ಸಂದರ್ಭಗಳಲ್ಲಿ ಆ ಕಿರೀಟಗಳನ್ನು ಉಪಯೋಗಿಸುತ್ತಾರೆ. ವಿಶೇಷ ಉತ್ಸವಗಳಲ್ಲಿ ಹೂವಿನ ಪಲ್ಲಕ್ಕಿ ಮತ್ತು ವಿಮಾನಗಳನ್ನು ಉಪಯೋಗಿಸುತ್ತಾರೆ. ಒಳ ಪ್ರಾಕಾರದಲ್ಲೇ ಉತ್ಸವ ನಡೆಸುವಾಗ ಬೆಳ್ಳಿ ಮತ್ತು ಬಂಗಾರದ ಪಲ್ಲಕ್ಕಿಗಳನ್ನು ಉಪಯೋಗಿಸುತ್ತಾರೆ.

ಉತ್ಸವಗಳ ಮೆರವಣಿಗೆಗಳಲ್ಲಿ ಉತ್ಸವವಿಗ್ರಹದ ಹಿಂದೆ ಛತ್ರಿಯನ್ನೂ ಎರಡು ಕಡೆಗಳಲ್ಲೂ ನಾನಾವಿಧವಾದ ಚಾಮರ ಮತ್ತು ಲೋಹದಿಂದ ರಚಿಸಿದ ಬಿರುದಾವಳಿಗಳನ್ನೂ ಲಾಂಛನಗಳನ್ನೂ ಹಿಡಿದವರು ಭಾಗವಹಿಸುತ್ತಾರೆ. ಉತ್ಸವದ ಮುಂದೆ ನಾಗಸ್ವರ, ಡೋಲು, ತಮಟೆ, ಭೇರಿ, ಕಹಳೆ, ಶಂಖ, ಪಣವ, ಆನಕ, ದುಂದುಭಿ ಮುಂತಾದ ವಾದ್ಯಗೋಷ್ಠಿಯವರೂ ಹಿಂಭಾಗದಲ್ಲಿ ವೇದ ಪ್ರಬಂಧ ಮುಂತಾದವನ್ನು ಪಠಿಸುವ ಗೋಷ್ಠಿಯವರೂ ಇರುತ್ತಾರೆ. ಹಿಂದಿನ ಕಾಲದಲ್ಲಿ ಪಂಜಿನವರು ಮೆರವಣಿಗೆಯನ್ನು ಬೆಳಗಿಸುತ್ತಿದ್ದರು. ಈಗಿನ ಕಾಲದಲ್ಲಿ ಅವುಗಳ ಜೊತೆಗೆ ಜನರೇಟರ್‌ನ ವಿದ್ಯುತ್ ದೀಪಗಳ ಸಾಲುಗಳಿರುತ್ತವೆ. ನರ್ತಕಿಯರೂ ಗಾಯಕರೂ ಕೆಲವು ದೊಡ್ಡ ಮೆರವಣಿಗೆಗಳಲ್ಲಿ ಭಾಗವಹಿಸುತ್ತಾರೆ. ಪಂಡರಾಪುರ ಮತ್ತು ಆಂಧ್ರ ಪ್ರದೇಶಗಳಲ್ಲಿ ಜನ ದೇವರ ಮುಂದೆ ಕುಣಿಯುತ್ತ ದೇವರ ನಾಮಗಳನ್ನು ಹಾಡುತ್ತಾರೆ. ಶ್ರೀರಾಮನವಮಿ ಉತ್ಸವಗಳಲ್ಲಿ ಉತ್ಸವವಿಗ್ರಹದ ಮುಂದೆ ಭಜನೆ ನಡೆಯುತ್ತದೆ.

ದೇವರ ಉತ್ಸವಗಳಲ್ಲಿ ತುಂಬ ವಿಜೃಂಭಣೆಯಿಂದ ನಡೆಯುವ ಉತ್ಸವ ರಥೋತ್ಸವ. ಇದನ್ನು ಬ್ರಹ್ಮೋತ್ಸವ ಎಂದೂ ಕರೆಯುವುದುಂಟು. ವಾರ್ಷಿಕೋತ್ಸವದ ಅವಧಿ ಐದು ದಿನಗಳಿಂದ ಹತ್ತು ದಿನಗಳ ಪರ್ಯಂತ ನಡೆಯುತ್ತದೆ. ಕೆಲವು ಕಡೆ ರಥೋತ್ಸವ ಏಳನೆಯ ಅಥವಾ ಒಂಬತ್ತನೆಯ ದಿನ ನಡೆಯುತ್ತದೆ. ಇತರ ದಿನಗಳಲ್ಲಿ ಇತರ ವಾಹನಗಳ ಉತ್ಸವ ನಡೆಯುತ್ತದೆ. ಶ್ರೀರಾಮನವಮಿಯ ಉತ್ಸವದಲ್ಲಿ ಹನುಮಂತೋತ್ಸವ ಮುಖ್ಯ. ವಸಂತೋತ್ಸವವೆನ್ನುವುದು ಮುಕ್ತಾಯದ ಉತ್ಸವ.

ರಥೋತ್ಸವಕ್ಕಾಗಿ ಉಪಯೋಗಿಸುವ ರಥ ದೇವಸ್ಥಾನದ ಶಿಖರದ ಮಾದರಿಯಲ್ಲಿರುತ್ತದೆ. ಇದನ್ನು ಬಣ್ಣ ಬಣ್ಣದ ಬಾವುಟಗಳಿಂದ, ಬಟ್ಟೆಗಳಿಂದ, ತಳಿರು ತೋರಣಗಳಿಂದ, ಬಾಳೆಯ ಕಂಬಗಳಿಂದ, ಹೂಗಳಿಂದ ಅಲಂಕರಿಸುತ್ತಾರೆ. ಇದರಲ್ಲಿ ಉತ್ಸವವಿಗ್ರಹವನ್ನು ಕೂಡಿಸುವುದಕ್ಕೆ ರಥಾರೋಹಣವೆಂದು ಹೆಸರು. ರಥಾರೋಹಣವಾದ ಮೇಲೆ ನೂರಾರು ಜನ ರಥಕ್ಕೆ ಕಟ್ಟಿದ, ರಟ್ಟೆಯಷ್ಟು ದಪ್ಪನಾದ ನೂರು ಇನ್ನೂರು ಅಡಿ ಉದ್ದದ ಹಗ್ಗವನ್ನು ಹಿಡಿದು ದೇವಸ್ಥಾನದ ಸುತ್ತ ಪ್ರಧಾನ ಹಾದಿ ಬೀದಿಗಳಲ್ಲಿ ಎಳೆಯುತ್ತಾರೆ. ರಥ ಎಳೆಯುವ ಸಮಯದಲ್ಲಿ ಸುತ್ತ ನಿಂತು ನೋಡುವ ಜನ ಬಾಳೆಹಣ್ಣಿಗೆ ದವನವನ್ನು ಸಿಕ್ಕಿಸಿ ರಥದೊಳಕ್ಕೆ ಎಸೆಯುತ್ತಾರೆ. ರಥವನ್ನು ದೇವಾಲಯದ ಮಾದರಿಯಲ್ಲೇ ಕಟ್ಟಿ ಅಲಂಕರಿಸಿರುವುದರಿಂದ ದೇವರ ಮೆರವಣಿಗೆ ಬೀದಿಯಲ್ಲಿ ಹೊರಟರೆ ದೇವಾಲಯವೇ ಮನೆ ಮನೆಯ ಬಾಗಿಲಿಗೆ ಬಂದಂತಾಗುತ್ತದೆ. ತಮ್ಮ ಮನೆಯ ಮುಂದೆ ಮೆರವಣಿಗೆ ಸಾಗಿದಾಗ ಅನೇಕರು ದೇವರಿಗೆ ಹಣ್ಣು ಕಾಯಿ ಹೂವು ಮತ್ತು ತಾಂಬೂಲವನ್ನು ಸಮರ್ಪಿಸಿ ದೇವರಿಗೆ ಮಂಗಳಾರತಿ ಮಾಡಿಸುತ್ತಾರೆ. ದೇವಾಲಯದೊಳಕ್ಕೆ ಪ್ರವೇಶವಿಲ್ಲದಿರುವ ನೂರಾರು ಜನರಿಗೆ ಕುಂಟರಿಗೆ, ಹೆಳವರಿಗೆ, ಈ ರೀತಿ ದೇವರ ದರ್ಶನ ದೊರೆಯುತ್ತದೆ.

ರಥೋತ್ಸವದ ಅವಧಿಯಲ್ಲಿ ಅನೇಕರು ದೇವಸ್ಥಾನದ ಸುತ್ತಮುತ್ತ ಬಯಲಿನಲ್ಲಿ ಕೊಪ್ಪಲುಗಳನ್ನು ಕಟ್ಟಿಕೊಂಡು ಅಲ್ಲಿಗೆ ದೇವರನ್ನು ಬರಮಾಡಿಕೊಂಡು ತಮ್ಮ ಭಕ್ತಿಯನ್ನು ಅರ್ಪಿಸುತ್ತಾರೆ. ಭಕ್ತಾದಿಗಳಿಗೆ ಕೋಸುಂಬರಿ, ಪಾನಕ, ನೀರುಮಜ್ಜಿಗೆ ಕೊಟ್ಟು ಸತ್ಕರಿಸುತ್ತಾರೆ. ಹೆಚ್ಚು ಸೌಕರ್ಯವಿರುವವರು ಮಧ್ಯಾಹ್ನ ನೂರಾರು ಜನರಿಗೆ ಅನ್ನಸಂತರ್ಪಣೆ ಏರ್ಪಡಿಸುತ್ತಾರೆ.

ರಥೋತ್ಸವದ ಸಮಯದಲ್ಲಿ ದೇವಸ್ಥಾನಕ್ಕೆ ಹತ್ತಿರವಿರುವ ಹತ್ತಾರು ಊರಿನವರು ಸಾವಿರಾರು ಜನ ಗುಂಪು ಕಟ್ಟಿಕೊಂಡು ಬಂದು ಸೇರುತ್ತಾರೆ. ಕೆಲವು ರಥೋತ್ಸವಗಳ ಕಾಲದಲ್ಲಿ ದನಜಾತ್ರೆ ನಡೆಯುತ್ತದೆ. ರಥೋತ್ಸವದ ಕಾಲ ಕೇವಲ ದೈವಿಕ ಭಾವವನ್ನು ಸ್ಥಿರೀಕರಿಸಿಕೊಳ್ಳಲು ಒಂದು ಮಹದಾವಕಾಶ ಮಾತ್ರವಲ್ಲ. ಲೌಕಿಕ ವಿನೋದಗಳ ಕಾಲವೂ ಹೌದು. ಈ ಸಂದರ್ಭಗಳಲ್ಲಿ ನಾಟಕ, ಸಿನಿಮಾ ಪ್ರದರ್ಶನಗಳೂ ಉಂಟು. ರಥೋತ್ಸವದ ಕಾಲ ಊರಿನವರ ಸಾಂಘಿಕ ಸಹಕಾರ, ಕಾರ್ಯದಕ್ಷತೆ ಮತ್ತು ಔದಾರ್ಯಭಾವನೆ ಹೊರಹೊಮ್ಮಲು ಒಂದು ಮಹದವಕಾಶ, ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ದೃಢ ದೈವೀಭಾವನೆಯ ಕುರುಹು.

ದೇವಸ್ಥಾನದ ಉತ್ಸವಗಳಲ್ಲಿ ಕರಗ ಒಂದು ವಿಶಿಷ್ಟ ಉತ್ಸವ. ಇದನ್ನು ಆಚರಿಸುವ ಜನ ವಿಶೇಷವಾಗಿ ತಿಗುಳರು. ಬೆಂಗಳೂರಿನಲ್ಲಿ ನಡೆಯುವ ಧರ್ಮರಾಯನ ಕರಗ ಸುಪ್ರಸಿದ್ಧವಾಗಿದೆ. ಇದು ಚೈತ್ರಾಪೂರ್ಣಿಮೆಯ ದಿವಸ ನಡೆಯುತ್ತದೆ.

ಕರ್ನಾಟಕ ರಾಜ್ಯದಲ್ಲಿ ಮತ್ತು ತಮಿಳುನಾಡಿನ ದೇವಸ್ಥಾನಗಳಲ್ಲಿ ನಡೆಸುವ ದೇವರ ರಥೋತ್ಸವಗಳ, ಜಯಂತಿಗಳ, ತಿರುನಕ್ಷತ್ರಗಳ ಪೈಕಿ ಕೆಲವುಗಳ ಪಟ್ಟಿಯೊಂದನ್ನು ಮುಂದೆ ಕೊಟ್ಟಿದೆ:

| ಸ್ಥಳ | ತಿಥಿ | ಉತ್ಸವದ ಹೆಸರು |
|---|---|---|
| ಕೊಳ್ಳೆಗಾಲ | ಚೈತ್ರ ಶುಕ್ಲ ಪ್ರಥಮ | ರಾಮಲಿಂಗ ಚೌಡೇಶ್ವರೀ ರಥ |
| ದೇವವೃಂದ | " " | ಪ್ರಸನ್ನ ರಾಮೇಶ್ವರ ರಥ |
| ಕೂಡ್ಲಿ | " " | ಸಂಗಮೇಶ್ವರ ರಥ |
| ಕುರುಚೂರು | " ದ್ವಿತೀಯ | ಶ್ರೀ ಭೂತೇಶ್ವರಿ ಅಮ್ಮನ ಜಾತ್ರೆ |
| ನಂಜನಗೂಡು | " ನವಮಿ | ಶ್ರೀಕಂಠಮುಡಿ |
| ಮೇಲುಕೋಟೆ | " ದಶಮಿ | ಚಲುವರಾಯಸ್ವಾಮಿ ವೈರಮುಡಿ |
| ಗುಬ್ಬಿ | " " | ಶ್ರೀ ಬೇಟರಾಯ ರಥ |
| ನಂಜನಗೂಡು | " ದ್ವಾದಶಿ | ಶಿವಪಥ |
| ಕೊಳ್ಳೇಗಾಲ | " ತ್ರಯೋದಶಿ | ಮಹಾವೀರ ಜಯಂತಿ |
| ಬೇಲೂರು | " " | ಚೆನ್ನಕೇಶವ ರಥ |
| ತಿರುಮಕೂಡಲು | " " | ಪ್ರಹ್ಲಾದೋತ್ಸವ |
| ಶ್ರೀರಂಗಪಟ್ಟಣ | " ಪೂರ್ಣಿಮೆ | ಪ್ರಸನ್ನ ಗಂಗಾಧರ ರಥ |
| ಬೆಂಗಳೂರು | " ಪೂರ್ಣಿಮೆ | ಕರಗ |
| ಹಾಲ್ಮುತ್ತೂರು | ಚೈತ್ರಕೃಷ್ಣ ಷಷ್ಠಿ | ಲೋಕಪರಮೇಶ್ವರೀ ರಥ |
| ಕಮಲಶಿಲಾಕ್ಷೇತ್ರ | " ಷಷ್ಠಿ | ದುರ್ಗಾಪರಮೇಶ್ವರೀ ರಥ |
| ಶಿವಮೊಗ್ಗ | ವೈಶಾಖ ಶುಕ್ಲ ತೃತೀಯ | ಸಂಜೀವಾಂಜನೇಯ ರಥ |
| ತೀರ್ಥಹಳ್ಳಿ ತಾ. ಆರುಣ | " " | ಬಸವೇಶ್ವರ ಜಯಂತಿ |
| ಮೈಸೂರು | " ಷಷ್ಠಿ | ಪೆರಿಯ ಪರಕಾಲ ಸ್ವಾಮಿಗಳ ತಿರು ನಕ್ಷತ್ರ |
| ಬೊಮ್ಮಲಾಪುರ | " ದಶಮಿ | ಶ್ರೀ ವಾಸವಾಂಬ ಜಯಂತಿ, ವರ್ಧಮಾನ ಕೇವಲಜ್ಞಾನ ಕಲ್ಯಾಣ |
| ತಲಕಾಡು | " ದ್ವಾದಶಿ | ಕೀರ್ತಿನಾರಾಯಣ ರಥ |
| ತಲಕಾಡು | " ತ್ರಯೋದಶಿ | ವೇದವ್ಯಾಸ ಜಯಂತಿ |
| ಕಂಚಿ | ಜ್ಯೇಷ್ಠಶುಕ್ಲ ಚತುರ್ದಶಿ | ಗರುಡೋತ್ಸವ, ನಮ್ಮಾಳ್ವಾರ್ ತಿರು ನಕ್ಷತ್ರ |
| ವಕ್ಕಲಕೇರಿ | ಆಷಾಢ ಶುಕ್ಲ ತೃತೀಯ | ಮಾರ್ಕಂಡೇಯ ಜಯಂತಿ |
| ಕುದೇರು | ಆಶ್ವಯುಜ ಶುಕ್ಲ ತೃತೀಯ | ಶಡಗೋಪದೇಶಿಕರ ತಿರುನಕ್ಷತ್ರ |
| ಚಿಂತಾಮಣಿ ತಾ. ಕೈವಾರ | " ಅಷ್ಟಮಿ | ದುರ್ಗಾ ಜಯಂತ್ಯುತ್ಸವ, ಜೀವದಯಾಷ್ಟಮಿ |
| ಮೈಸೂರು | ಆಶ್ವಯುಜ ಶುಕ್ಲ | |
| ಚಾಮುಂಡಿಬೆಟ್ಟ | ತ್ರಯೋದಶಿ | ಚಾಮುಂಡೇಶ್ವರಿ ರಥ |
| ತಲಕಾಡು | ಕಾರ್ತಿಕ ಕೃಷ್ಣ ಷಷ್ಠಿ | ವೈದ್ಯೇಶ್ವರ ರಥ |
| ಹೊಸೂರು | " " | ಚಿದಂಬರಸ್ವಾಮಿ ರಥ |
| ಸುಬ್ರಹ್ಮಣ್ಯ | ಮಾರ್ಗಶಿರ ಶುಕ್ಲ ಷಷ್ಠಿ | ಸುಬ್ರಹ್ಮಣ್ಯ ರಥ |
| ಹೇಮಗಿರಿ | ಪುಷ್ಯ ಶುಕ್ಲ ದ್ವಿತೀಯ | ಮಲ್ಲಿಕಾರ್ಜುನ ರಥ ಮತ್ತು ದನಗಳ ಜಾತ್ರೆ |
| ಚನ್ನಪಟ್ಟಣ ತಾ. | | |
| ವಂದಾರಗುಪ್ಪೆ | ಪುಷ್ಯ ಕೃಷ್ಣ ಪೂರ್ಣಿಮೆ | ಗರುಡ ಜಯಂತಿ |
| | " | ಪುರಂದರದಾಸರ ಪುಣ್ಯದಿನ |
| ಹರಿಹರ | ಮಾಘ ಶುಕ್ಲ ಪೂರ್ಣಿಮೆ | ಹರಿಹರೇಶ್ವರ ರಥ |
| ಶಿವಮೊಗ್ಗ ಜಿ. | | ಶಿವಯೋಗಿ ಹಾಲಸ್ವಾಮಿಗಳ ರಥ |
| ರಾಂಪುರ | ಮಾಘ ಕೃಷ್ಣ ದ್ವಿತೀಯ | |
| ಶೃಂಗೇರಿ | " ತೃತೀಯ | ಶಾರದಾಂಬಾ ವ್ರತೋತ್ಸವ |

(ಜಿ.ಎಚ್.)

**ಉತ್ನೂರು:** ಆಂಧ್ರಪ್ರದೇಶ ರಾಜ್ಯದ ಮೆಹಬೂಬ್‌ನಗರ ಜಿಲ್ಲೆಯಲ್ಲಿರುವ ನವಶಿಲಾ ಯುಗದ ಬೂದಿದಿಬ್ಬ. ಧಾರವಾಡ ಶಿಲಾಶ್ರೇಣಿಯ ಕೊನೆಯ ಭಾಗದಲ್ಲಿರುವ ಈ ಗ್ರಾಮದ ವಾಯವ್ಯದಲ್ಲಿ 60 ಚ.ಮೀ ಮತ್ತು 1–3 ಮೀ ಎತ್ತರವಿರುವ ಒಂದು ಬೂದಿ ದಿಬ್ಬವಿದೆ. ಹೈದರಾಬಾದಿನ ಭೂವಿಜ್ಞಾನ ಸರ್ವೇಕ್ಷಣಾ ಇಲಾಖೆ ಮೊದಲ ಬಾರಿಗೆ ತನ್ನ ನಿಯತಕಾಲಿಕೆಯಲ್ಲಿ ಇದನ್ನು ಪ್ರಕಟಿಸಿತು. ಬೂದಿದಿಬ್ಬದ ಹಲವು ಭಾಗಗಳು ನಾಶವಾಗಿದ್ದು, ಆ ಭಾಗಗಳಲ್ಲಿ ಕಪ್ಪು ಮತ್ತು ಕೆಂಪು, ಆದಿಚಾರಿತ್ರಿಕ ಕಾಲದ ಚಿತ್ರಿತ ಹಾಗೂ ಇತರ ಮಣ್ಪಾತ್ರೆಗಳು ದೊರಕಿದ್ದವು. ಬೂದಿದಿಬ್ಬದ ಸೃಷ್ಟಿ, ಕಾಲ, ಸೃಷ್ಟಿಯಾದ ಬಗೆ, ಬೂದಿಕಿಟ್ಟ ಮತ್ತು ದಿಬ್ಬದಲ್ಲಿಯ ವಸ್ತು ಅವಶೇಷಗಳ ಸಾಂಸ್ಕೃತಿಕ ಮಹತ್ತ್ವವನ್ನು ತಿಳಿಯಲು ಅಲ್ಚಿನ್ 1957ರಲ್ಲಿ ದಿಬ್ಬದ ಕೆಲವು ಭಾಗಗಳಲ್ಲಿ ಉತ್ಖನನ ಕೈಗೊಂಡ. 12 ಪದರಗಳನ್ನು ಗುರುತಿಸಲಾಯಿತು. ಸುಟ್ಟ ಸಗಣಿಯ ಬೂದಿ ಮತ್ತು ಕಂದುಬಣ್ಣದ ಜೇಡಿಮಣ್ಣಿನ ಪದರುಗಳು ಒಂದರ ತರುವಾಯ ಇನ್ನೊಂದರಂತೆ ಅನುಕ್ರಮವಾಗಿ ಕಂಡುಬಂದವು. ಜಾನುವಾರುಗಳ ಕೊಟ್ಟಿಗೆಯ ಅವಶೇಷ ಮತ್ತು ಗೊರಸಿನ ಪಡಿಯಚ್ಚು ಸಹ ದೊರಕಿವೆ. 1ನೆಯ ಹಂತದಲ್ಲಿ ಕೊಟ್ಟಿಗೆಯ ಸುತ್ತಲೂ ಮುಳ್ಳುಬೇಲಿಯ ಕುರುಹುಗಳೊಡನೆ ನೆಲದಲ್ಲಿ ಮೂಡಿದ ಎತ್ತಿನ ಕಾಲಿನ ಗೊರಸಿನ

ಪಡಿಯಚ್ಚು ಒಂದು ಉತ್ಖನನದ ಗುಂಡಿಯಲ್ಲಿ ಕಂಡುಬಂದಿತು. ಎತ್ತಿನ ಎಲುಬುಗಳು ಮತ್ತು ಮಣ್ಣಿನ ಪಾತ್ರೆಯ ಚೂರುಗಳು ಕಂಡುಬಂದಿವೆ. ಈ ಹಂತದಲ್ಲಿ ಇದ್ದ ಜಾಗದಲ್ಲಿಯೇ ಸಗಣಿಯನ್ನು ಸುಟ್ಟಿರುವುದು ಕಂಡುಬಂದಿದೆ. ಒಂದು ಗುಂಡಿಯಲ್ಲಿ ಶಿಶುವಿನ ಒಂದು ಶವಕುಣಿ ದೊರಕಿದೆ. 2ನೆಯ ಹಂತದಲ್ಲಿ ಮತ್ತೊಂದು ಕೊಟ್ಟಿಗೆ, ಬೂದಿಯ ಗುಪ್ಪೆ, ಮಣ್ಪಾತ್ರೆಯ ಚೂರುಗಳು, ಕಲ್ಲಿನ ಉಪಕರಣಗಳು, ಎತ್ತಿನ ಎಲುಬುಗಳು ಹಾಗೂ ಇನ್ನಿತರ ಅವಶೇಷಗಳು ದೊರಕಿವೆ. 3ನೆಯ ಹಂತದಲ್ಲಿ ಮೇಲೆ ಉಲ್ಲೇಖಿಸಿದ ಮಾದರಿಯ ದನದ ಕೊಟ್ಟಿಗೆಗಳು, ಕಲ್ಲಿನಿಂದ ನಿರ್ಮಿಸಿದ ಬೇಲಿಗಳು ಮತ್ತು ಮಾನವರ ವಾಸ್ತವ್ಯದ



ತಾಮ್ರ ವಸ್ತು ನಿಕ್ಷೇಪದ ವಿವಿಧ ವಸ್ತುಗಳು

ಕುರುಹುಗಳು ಹಾಗೂ ಆಗಾಗ್ಗೆ ಸಗಣಿಯನ್ನು ಸುಟ್ಟಿರುವ ಲಕ್ಷಣಗಳಿವೆ. 4ನೆಯ ಹಂತದಲ್ಲಿ ಇಂತಹ ಬೂದಿಕಿಟ್ಟಗಳನ್ನು ಗೋಡೆಯ ಬದಿಗೆ ಸಮನಾಗಿ ಹರಡಿರು ವಂತೆಯೂ ಮತ್ತು ಗುಪ್ಪೆಯಲ್ಲಿರುವಂತೆಯೂ ಕಂಡುಬಂದಿದೆ. 5ನೆಯ ಹಂತದಲ್ಲಿ ಈ ನೆಲೆಯನ್ನು ಕಬ್ಬಿಣಯುಗದ ಮತ್ತು ಆದಿಚಾರಿತ್ರಿಕ ಕಾಲದ ಜನರು ತ್ಯಜಿಸಿ ಮತ್ತೆ ಬಂದು ನೆಲೆಸಿರುವುದನ್ನು ಇವರ ಕಾಲದ ಮಣ್ಣಿನ ಪಾತ್ರೆಗಳಿಂದ ಕಂಡುಕೊಳ್ಳಲಾಗಿದೆ. ಒಟ್ಟಾರೆಯಾಗಿ ಇಲ್ಲಿ 5 ಬಾರಿ ವ್ಯವಸ್ಥಿತವಾಗಿ ಸಗಣಿಯ ದಿಬ್ಬವನ್ನು ಸುಡಲಾಗಿದೆ.

ಮಾನವ ವಾಸ್ತವ್ಯದ ಅವಶೇಷಗಳು ಬೂದಿ ಪದರಗಳಲ್ಲಿ ದೊರಕಿಲ್ಲವಾದರೂ ನವಶಿಲಾಯುಗದ ಬೂದು ಬಣ್ಣದ ಮಡಕೆ ಚೂರುಗಳು, ಇದ್ದಿಲು ಮತ್ತು ಎತ್ತಿನ ಎಲುಬುಗಳು ದಿಬ್ಬದ ಹೊರಭಾಗಗಳಲ್ಲಿ ಕಂಡುಬಂದಿವೆ. ಒಟ್ಟಾರೆ ಇವು 1–4ನೆಯ ಹಂತಗಳಿಗೆ ಸೇರಿದವು.

ನವಶಿಲಾಯುಗ ಕಾಲದ ಬಹುತೇಕ ಮಣ್ಪಾತ್ರೆಗಳನ್ನು ಹೆಚ್ಚಾಗಿ ಕೈಯಿಂದ ತಯಾರಿಸ ಲಾಗಿದೆ. ಇವು ಬೂದು, ಕಪ್ಪು, ಬಿಸ್ಕತ್, ಕಂದು, ಚಾಕೊಲೇಟ್ ಮುಂತಾದ ವಿವಿಧ ಬಣ್ಣಗಳ ಮಣ್ಪಾತ್ರೆಗಳಾಗಿವೆ. ಕೆಲವು ಮಣ್ಪಾತ್ರೆಗಳನ್ನು ಸುಟ್ಟ ಅನಂತರ ಕಾವಿವರ್ಣವನ್ನು ಪಾತ್ರೆಯ ಅಂಚಿನಲ್ಲಿ ಎಳೆಯಾಗಿ ಹಚ್ಚಿರುವುದು ಕಂಡುಬಂದಿದೆ. ಗೀರುಚಿತ್ರ ಅಲಂಕರಣೆಗಳು ಕೆಲವು ಪಾತ್ರೆಗಳಲ್ಲಿವೆ. ಮಣ್ಪಾತ್ರೆ ಪ್ರಕಾರಗಳು ಸೀಮಿತವಾಗಿವೆ. ಹೊರಚಾಚಿದ ಅಂಚಿನ ಹೂಜಿಗಳು, ಬೋಗುಣಿಗಳು, ಚಕಮಕಿ ಕಲ್ಲಿನ ಅಲಗುಗಳು, ಅರ್ಧಚಂದ್ರಾಕೃತಿ, ಉಂಟೆಗಲ್ಲು ಮತ್ತು ಚಕ್ಕೆಗಳು ದೊರಕಿವೆ. ಬೂದುಬಣ್ಣದ ನೀಸ್ ಶಿಲೆಯ ಕೊಡಲಿ ಮತ್ತು ಹಸುರು ಶಿಸ್ಟ್‌ಶಿಲೆಯ ಕೆತ್ತಿದ ಮತ್ತು ನಯಗೊಳಿಸಿದ ಶಿಲೋಪಕರಣ ಸಹ ಪತ್ತೆಯಾಗಿವೆ.

ಆದಿಕಬ್ಬಿಣ ಮತ್ತು ಆದಿಚಾರಿತ್ರಿಕ ಹಂತದಲ್ಲಿ ದೊರಕಿರುವ ಬಹುತೇಕ ಮಣ್ಪಾತ್ರೆಗಳು ಚಕ್ರದಿಂದ ತಯಾರಿಸಿದ ಕಡುಕೆಂಪು ಅಥವಾ ಮಾಸಿದ ಕೆಂಪು ವರ್ಣದ್ದಾಗಿವೆ. ಆಳ ಬೋಗುಣಿಗಳು, ತಟ್ಟೆಗಳು, ಕಪ್ಪು ಮತ್ತು ಕೆಂಪು ಬಣ್ಣದ ಟ್ಯೂಲಿಪ್ ಹೂವಿನಾಕಾರದ ಬೋಗುಣಿ, ಅಂಚಿರುವ ಬೋಗುಣಿ ಮತ್ತು ಮುಚ್ಚಳಗಳು ಮುಂತಾದ ಪ್ರಕಾರಗಳಿವೆ.

ಉತ್ಖನನ ಗುಂಡಿಯ 9ನೆಯ ಪದರದಲ್ಲಿ ಶಿಶುವಿನ ಒಂದು ಸಮಾಧಿ ದೊರೆತಿದೆ. ಪಕ್ಕೆಲುಬುಗಳು, ಕಾಲಿನ ಮೂಳೆ ಮತ್ತು ತಲೆಬುರುಡೆಯ ಭಾಗಗಳು ಸಂಪೂರ್ಣವಾಗಿ ನುಜ್ಜುಗುಜ್ಜಾಗಿರುವುದರಿಂದ ಇದು ನವಜಾತ ಶಿಶುವಿನ ಅಸ್ಥಿಭಾಗಗಳೆಂದು ಊಹಿಸಲಾಗಿದೆ. ಪ್ರಾಣಿ ಅವಶೇಷಗಳು ಬಹುಮಟ್ಟಿಗೆ ಎತ್ತು, ಜಿಂಕೆ ಮತ್ತು ಮೇಕೆಗಳದ್ದಾಗಿವೆ. 5ನೆಯ ಹಂತ ಇಂಗಾಲ–14 ತಂತ್ರದಿಂದ ಪ್ರ.ಶ.ಪೂ. 2295±155 ಅವಧಿಯದೆಂದು ಪರಿಗಣಿಸ ಲಾಗಿದೆ. ಸಾಪೇಕ್ಷವಾಗಿ 4ನೆಯ ಹಂತವನ್ನು ಪ್ರ.ಶ.ಪೂ. 1250 ಎಂದು ತೀರ್ಮಾನಿಸಲಾಗಿದೆ. ರಾಯಚೂರು ಜಿಲ್ಲೆಯ ದೋಆಬ್ ಪ್ರದೇಶದಲ್ಲಿ ಕಂಡುಬರುವ ಆದಿ ನವಶಿಲಾಯುಗದ ಕಾಲದ ಜನರು ಸೆಗಣಿ ದಿಬ್ಬಗಳನ್ನು ನಿಗದಿತ ಕಾಲಾವಧಿಗಳಲ್ಲಿ ಸುಡುತ್ತಿದ್ದರು. ಇದರಿಂದ ಬೂದಿದಿಬ್ಬಗಳ ರಚನೆಯಾಗುತ್ತಿತ್ತು. ಇದು ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ್ದು ಹೊಸ ಬೂದಿದಿಬ್ಬಗಳಿಗೆ ಎಡೆ ಮಾಡಿಕೊಡುತ್ತಿತ್ತು. ಹೋಳಿ ಮತ್ತು ದೀಪಾವಳಿ ಹಬ್ಬಗಳ ಆಚರಣೆಯ ಸಂದರ್ಭಗಳಲ್ಲಿ ಸಗಣಿಯನ್ನು ಸಾಂಕೇತಿಕವಾಗಿ ಸುಡುವ ಧಾರ್ಮಿಕ ಪದ್ಧತಿ ಇಂದಿಗೂ ಈ ಭಾಗದಲ್ಲಿ ಉಳಿದುಬಂದಿದೆ. *

**ಉದಂತಗಳು:** ಸಾಮಾನ್ಯವಾಗಿ ಪ್ರಕೃತಿಗೆ ಸಂಬಂಧಪಟ್ಟ ಅಥವಾ ಸಂಸ್ಕೃತಿಗೆ ಸಂಬಂಧಪಟ್ಟ ಮುಖ್ಯವಾದ ಘಟನೆಗಳನ್ನು ಒಂದು ಕ್ರಮವಾದ ರೀತಿಯಲ್ಲಿ ಕಾಲಾನುಕ್ರಮವಾಗಿ ನಿರೂಪಿಸುವ ಪ್ರಾಚೀನ ದಾಖಲೆಗಳು (ಕ್ರಾನಿಕಲ್ಸ್). ಟೀಕೆ, ಟಿಪ್ಪಣಿಗಳಿಲ್ಲದೆ ವಿಷಯಗಳನ್ನು ಮಾತ್ರ ಸಂಗ್ರಹಿಸಿಕೊಟ್ಟಲ್ಲಿ, ಅಂಥ ಉದಂತಗಳು ಇತಿಹಾಸ ಗ್ರಂಥಗಳಿಂದ ಬೇರೆಯಾಗಿ ನಿಲ್ಲುತ್ತವೆ. ಏಕೆಂದರೆ ಚರಿತ್ರೆ ವಿಷಯಗಳನ್ನು ನಿರೂಪಿಸುವುದಲ್ಲದೆ, ಮಾನವನ ನಡವಳಿಕೆಗಳನ್ನು, ಇತಿಹಾಸದ ಘಟನೆಗಳನ್ನು ವಿಶ್ಲೇಷಿಸುತ್ತದೆ. ಸಾಮಾನ್ಯವಾಗಿ ಎಲ್ಲ ಉದಂತಕರ್ತೃವೂ ತನಗೆ ಸೌಕರ್ಯವಾದ ವಿಷಯಗಳನ್ನು ಮಾತ್ರ ಆರಿಸಿಕೊಂಡು ಒಂದು ಮತದ ಬಗ್ಗೆಯೋ ಒಂದು ರಾಜವಂಶದ ಬಗ್ಗೆಯೋ ಉತ್ಪ್ರೇಕ್ಷೆಯಿಂದ ಕೂಡಿದ ಗ್ರಂಥವನ್ನು ರಚಿಸುತ್ತಾನೆ. ಒಂದು ತತ್ತ್ವವನ್ನು ಬೋಧನೆ ಮಾಡಲೂ ಒಂದು ಉದಂತವನ್ನು ಬರೆಯಬಹುದು.

ಎಲ್ಲ ಘಟನೆಗಳ ಹಿಂದೆ ಪರಮಾತ್ಮನ ಕೈವಾಡವಿದೆ ಎಂಬುದೇ ಕ್ರೈಸ್ತ ಉದಂತಕಾರರ ದೃಢ ನಂಬಿಕೆ. ಮನುಷ್ಯರೆಲ್ಲ, ಅವರು ನಡೆಸುವ ಚಟುವಟಿಕೆಗಳೆಲ್ಲ ಪರಮಾತ್ಮನ ನಿಶನದಿಂದಲೇ ರೂಪಿತ–ಎಂಬ ಅಭಿಪ್ರಾಯವನ್ನು ಮಠಾಧಿಪತಿಗಳು ತಾವು ಬರೆದ ಉದಂತಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಆಯಾ ದೇಶಗಳಿಗೆ ಸಂಬಂಧಪಟ್ಟ, ಸುವ್ಯವಸ್ಥಿತವಾಗಿ ಇತಿಹಾಸವನ್ನು ನಿರೂಪಿಸುವ ಉದಂತಗಳು ಬೆಳಕಿಗೆ ಬಂದುವು. ಈ ರೀತಿ ಪ್ರಾರಂಭವಾದ ಕಾರ್ಯ 19ನೆಯ ಶತಮಾನದ ಹೊತ್ತಿಗೆ ಜರ್ಮನಿಯ ತಜ್ಞರ ಕೈಕೆಳಗೆ ಉನ್ನತಮಟ್ಟವನ್ನು ಮುಟ್ಟಿತು.

ಪ್ರಾಚೀನ ಭಾರತೀಯರು ಇತಿಹಾಸ, ಉದಂತಗಳನ್ನುಳಿದು ಮಿಕ್ಕ ಎಲ್ಲ ಕ್ಷೇತ್ರಗಳಲ್ಲೂ ಗಮನಾರ್ಹವಾದ, ಶ್ರೇಷ್ಠಮಟ್ಟದ ವ್ಯವಸಾಯ ಮಾಡಿದ್ದಾರೆ. ಭಾರತೀಯರ ಸಾಹಿತ್ಯಸಂಪತ್ತಿನಲ್ಲಿ ದೊರಕಿರುವ ಉದಂತಗಳು ಕೆಲವೇ ಕೆಲವು. ಕಲ್ಹಣನ ರಾಜತರಂಗಿಣಿ, ಬಿಲ್ಹಣನ ವಿಕ್ರಮಾಂಕ ದೇವಚರಿತ, ಬಾಣಭಟ್ಟನ ಹರ್ಷಚರಿತೆಯೇ ಮೊದಲಾದ ಕೆಲವು ಉದಂತಗಳನ್ನು ಇಲ್ಲಿ ಉದಾಹರಿಸಬಹುದು : ಪ್ರಾಚೀನ ಭಾರತೀಯರಲ್ಲಿ ಆಧ್ಯಾತ್ಮಿಕ ದೃಷ್ಟಿಕೋನವೇ ಪ್ರಧಾನವಾಗಿದ್ದು ದರಿಂದ ಈ ರೀತಿ ಇತಿಹಾಸವನ್ನು ಸಮಗ್ರವಾಗಿ ಆಧುನಿಕ ರೀತಿಯಲ್ಲಿ ಬರೆಯಲಿಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೂ ಪುರಾಣಗಳಲ್ಲಿ ದೊರೆಯುವ ರಾಜರ ವಂಶಾವಳಿ ಗಳು, ಶಾಸನಗಳು ಮೊದಲಾದ ಇತಿಹಾಸಕ್ಕೆ ಸಂಬಂಧಪಟ್ಟ ಆಧಾರಗಳನ್ನು ನೋಡಿದಾಗ ಭಾರತೀಯರು ಉದಂತ ಬರೆದಿಡುವ ಕ್ರಮವನ್ನು ಸಂಪೂರ್ಣವಾಗಿ ಕೈಬಿಟ್ಟಿರಲಿಲ್ಲವೆಂದು ಕಾಣುತ್ತದೆ. ಮುಸ್ಲಿಮರ ಮತ್ತು ಮರಾಠರ ಕಾಲದಲ್ಲಿ ಅನೇಕ ಉದಂತಗಳು ಹುಟ್ಟಿದುವು. ಇಂಥ ಹಳೆಯ ಉದಂತಗಳನ್ನು ಸಂಗ್ರಹಿಸಿ, ವೈಜ್ಞಾನಿಕ ದೃಷ್ಟಿಯಿಂದ ಅಭ್ಯಾಸಮಾಡಿ, ಮೌಲ್ಯ ಕಟ್ಟುವ ಕಾರ್ಯ ಭಾರತದಲ್ಲಿ ಈಚೆಗೆ ಬ್ರಿಟಿಷ್ ಮತ್ತು ಐರೋಪ್ಯ ತಜ್ಞರಿಂದ ಪ್ರಾರಂಭವಾಗಿ ಈಗಲೂ ಮುಂದುವರಿಯುತ್ತಿದೆ.

ಯೆಹೂದಿಗಳ ರಾಜಕೀಯ, ಸಾಂಸ್ಕೃತಿಕ ಮತ್ತು ಮತೀಯ ವಿಷಯಗಳನ್ನು ಒಳಗೊಂಡ ಪ್ರಾಚೀನ ಗ್ರಂಥಗಳನ್ನೂ ಕ್ರಾನಿಕಲ್ಸ್ (ಉದಂತ) ಎಂದು ಕರೆಯುತ್ತಾರೆ. ಉದಂತ ಯೆಹೂದಿಗಳ ಇತಿಹಾಸವನ್ನು ನಿರ್ಧರಿಸುವಲ್ಲಿ ಅತ್ಯಂತ ಉಪಯುಕ್ತವಾಗಿದೆ. ಇವುಗಳನ್ನು ಎರಡು ಸಂಪುಟಗ ಳಾಗಿ ವಿಂಗಡಿಸಿದ್ದಾರೆ. ಮತೀಯ ಪುರೋಹಿತ ವರ್ಗದವರ ಇತಿಹಾಸ, ಯಹೂದಿಗಳಲ್ಲಿ ಪ್ರಖ್ಯಾತ ಚಕ್ರವರ್ತಿಗಳಾದ ಡೇವಿಡ್ ಮತ್ತು ಸಾಲಮನ್‌ರ ವಿಷಯಗಳು, ಜೂಡಾದ ಬುಡಕಟ್ಟಿನವರ ಚರಿತ್ರೆ–ಇವೇ ಮೊದಲಾದ ಹತ್ತಾರು ವಿಷಯಗಳನ್ನು ಉದಂತ ತಿಳಿಸುತ್ತದೆ. ಉದಂತದಲ್ಲಿ ಅಡಕವಾಗಿರುವ ವಿಷಯಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು:

(ಅ) ಒಂದನೆಯ ಉದಂತ: ಭಾಗ ಒಂದು: ಆ್ಯಡಂನಿಂದ ಹಿಡಿದು ನೋವನ ಮಕ್ಕಳವರೆಗೆ ಮುಖ್ಯವಾಗಿ ಶೆಮ್ಮು ಸಂತತಿಯಿಂದ ಈಸೋವರೆಗೆ, ಅಲ್ಲದೆ ಇಸ್ರೇಲ್ ಮತ್ತು ಅದರ ವಂಶಿಕರೇ ಮೊದಲಾದವರ ವಂಶಾವಳಿಗಳನ್ನು ಕೊಡುತ್ತದೆ. ಕೊನೆಯ ಹನ್ನೆರಡು ಪದ್ಯಗಳು ಈಡೋಮಿಟಿಷ್ ರಾಜರುಗಳ ಮತ್ತು ಪಾಳೆಯಗಾರರ ಪಟ್ಟಿಯನ್ನು ಕೊಡುತ್ತದೆ. ಬೇರೆ ಬೇರೆ ಕಾಲದ ವಿಷಯಗಳನ್ನು ಈ ವಂಶಾವಳಿಗಳ ಮಧ್ಯೆ ವಿವರಿಸುವ ಕ್ರಮವನ್ನು ಕಾಣಬಹುದಾಗಿದೆ. ಸಾಲನ ವಂಶಾವಳಿ ಕೊನೆಗೆ ಬರುತ್ತದೆ.

(ಆ) ಒಂದನೆಯ ಉದಂತ : ಭಾಗ ಎರಡು: ಇದು ಮುಖ್ಯವಾಗಿ ಯೆಹೂದಿಗಳಲ್ಲಿ ಪ್ರಖ್ಯಾತನಾಗಿದ್ದ ಡೇವಿಡ್‌ನ ರಾಜ್ಯಾಡಳಿತವನ್ನು ನಿರೂಪಿಸುತ್ತದೆ. ಈ ಭಾಗ ಮೊದಲು ಸಾಲ್ ದೊರೆ ನಡೆಸಿದ ಕೊನೆಯ ಯುದ್ಧ ಮತ್ತು ಅವನ ಸಾವಿನಿಂದ ಪ್ರಾರಂಭವಾಗುತ್ತದೆ. ಕೊನೆಯಲ್ಲಿ ಡೇವಿಡ್‌ನ ಮಗನಾದ ಸಾಲಮನ್ ಸಿಂಹಾಸನವನ್ನೇರಿದ ವಿಷಯ ಬರುತ್ತದೆ.

(ಇ) ಎರಡನೆಯ ಉದಂತ : ಭಾಗ ಒಂದು: ಈ ಭಾಗ ಸಾಲಮನ್ನನ ರಾಜ್ಯಾಡಳಿತಕ್ಕೆ ಸಂಬಂಧಿಸಿದ್ದಾಗಿದೆ. ಮೊದಲನೆಯ ಅಧ್ಯಾಯ ಗಿಬಿಯಾನಿನಲ್ಲಿ ಸಾಲಮನ್ ನಡೆಸಿದ ಯಜ್ಞದ ವಿಷಯವನ್ನು ತಿಳಿಸುತ್ತದೆ. ಅವನ ವೈಭವಪೂರಿತ ಜೀವನ, ಇಸ್ರೇಲಿನಲ್ಲಿ ಅವನು ಕಟ್ಟಿಸಿದ ಪ್ರಸಿದ್ಧವಾದ ದೇವಾಲಯ, ಅವನ ಪ್ರಾರ್ಥನೆಗಳು, ದರ್ಶನ, ವೈಭವ, ಯಜ್ಞಗಳು ಮತ್ತು ಅವನ ಸಾವೇ ಮೊದಲಾದ ವಿಷಯಗಳು ಈ ಭಾಗದಲ್ಲಿ ಬಂದಿವೆ.

(ಈ) ಎರಡನೆಯ ಉದಂತ : ಭಾಗ ಎರಡು : ಈ ಭಾಗ ಜೂಡಾ ರಾಜ್ಯದ ಮೊದಲಿನಿಂದ ಜೆರೂಸೆಲಂ ನಗರ ಅವನತಿಗೊಂಡು, ರಾಜ್ಯ ಇಬ್ಭಾಗವಾಗುವವರೆಗಿನ ಇತಿಹಾಸವನ್ನು ತಿಳಿಸುತ್ತದೆ. ಸೈರಸ್ಸನ ಪುನರುತ್ಥಾನದ ಶಾಸನ ಕೊನೆಗೆ ಬರುತ್ತದೆ. ಇದಲ್ಲದೆ ಹಲವಾರು ರಾಜರ ವಿಷಯಗಳು ನಿರೂಪಿತವಾಗಿವೆ.

ಉದಂತದಲ್ಲಿ ಅಡಕವಾಗಿರುವ ವಿಷಯಗಳು ಇತಿಹಾಸ ದೃಷ್ಟಿಯಲ್ಲಿ ಎಷ್ಟರ ಮಟ್ಟಿಗೆ ಸಮಂಜಸವಾಗಿವೆ ಎಂಬುದರ ಬಗ್ಗೆ ಭಿನ್ನಾಭಿಪ್ರಾಯವಿದೆ. ಉದಂತ ಕೊಡುವ ಹಲವಾರು ವಿಷಯಗಳು ಐತಿಹಾಸಿಕವಾಗಿ ಅಷ್ಟಾಗಿ ನಿರ್ದುಷ್ಟವಾಗಿ ನಿರೂಪಿತವಾಗಿಲ್ಲ ಎಂಬುದು ಕೆಲವರ ಅಭಿಪ್ರಾಯ. ಒಂದೇ ಹೆಸರನ್ನು ಇಬ್ಬರು ಬೇರೆ ಬೇರೆ ವ್ಯಕ್ತಿಗಳಿಗೆ ಕೊಡುವ ಕ್ರಮವೂ ಉಂಟು. ಇತಿಹಾಸದ ಅಂಶಗಳನ್ನು ಅನೇಕ ವೇಳೆ ಉದಂತಗಳು ಉತ್ಪ್ರೇಕ್ಷೆಯಿಂದ ನೋಡುತ್ತವೆ. ಆದ್ದರಿಂದ ಉದಂತವನ್ನು ಬಹಳ ಎಚ್ಚರಿಕೆಯಿಂದ ಅಭ್ಯಾಸ ಮಾಡಬೇಕೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಉದಂತವನ್ನು ಯೆಹೂದಿಗಳ ಬೈಬಲ್ ಎಂದು ಕರೆಯುವುದುಂಟು. ಅಲ್ಲದೆ ಇದಕ್ಕೆ ವಿವರಣೆ (ಆ್ಯನಲ್ಸ್) ಮತ್ತು ರಾಜರುಗಳ ಗ್ರಂಥ (ಬುಕ್ ಆಫ್ ಕಿಂಗ್ಸ್) ಎಂಬ ಹೆಸರುಗಳೂ ಇವೆ. ಉದಂತ ಅಥವಾ ಕ್ರಾನಿಕಲ್ಸ್ ಎಂಬ ಹೆಸರನ್ನು ಇತ್ತೀಚಿಗೆ ಕೊಟ್ಟವ ಜರೋಮ್ ಎಂಬುವನು.

ಮೂಲತಃ ಉದಂತಗಳು ಪ್ರಸಿದ್ಧವಾದ ಇಜ್ರ–ನೆಹಿಮಿಯಾ ಗ್ರಂಥದಲ್ಲಿ ಅಡಕವಾಗಿದ್ದುವು. ಅನಂತರ ಅವನ್ನು ಬೇರ್ಪಡಿಸಿ ಎರಡು ಸಂಪುಟಗಳಾಗಿ ವಿಭಾಗಮಾಡಲಾಯಿತು. ಈ ಸಂಗ್ರಹಗಳು ಗ್ರೀಕರ ಕಾಲದಲ್ಲಿ ರಚಿತವಾದುವು. ಅಂದರೆ ಇವನ್ನು ಅಲೆಕ್ಸಾಂಡರನ ಮರಣ (ಪ್ರಶ.ಪೂ. 323) ಮತ್ತು ಮಕಬ್ಬೀಸ್ ದಂಗೆಗಳ (ಪ್ರಶ.ಪೂ. 167) ನಡುವಣ ಕಾಲದಲ್ಲಿ ರಚಿಸಲಾಯಿತೆಂಬ ಅಭಿಪ್ರಾಯವಿದೆ. ಯೆಹೂದಿ ಮತದವರ ಕರುಣೆ ಔದಾರ್ಯಗಳೇ ಮೊದಲಾದ ಗುಣಗಳ ಪ್ರಶಂಸೆ ಇಲ್ಲಿದೆ; ಮಠಾಧಿಪತಿಗಳ ಇತಿಹಾಸ ಮತ್ತು ಅವರು ಸಲ್ಲಿಸಿದ ಸೇವೆಗಳ ವರ್ಣನೆ ಇದೆ; ಸಾಮ್ಯುಯಲ್ ರಾಜರುಗಳ ಇತಿಹಾಸವಿದೆ. ಕ್ರೈಸ್ತ ಮತ ಸಂಬಂಧವಾದ ಕೆಲವು ಗ್ರಂಥಗಳು ಪಟ್ಟಿಯಲ್ಲಿ ಇಲ್ಲದೆ ಇರುವುದು ಬಹುಶಃ ಒಂದು ಆಕಸ್ಮಿಕವಾಗಿರಬೇಕೆಂದು ಪಂಡಿತರು ಅಭಿಪ್ರಾಯಪಡುತ್ತಾರೆ.

ಉದಂತ, ಇಜ್ರ ಮತ್ತು ನೆಹಿನಿಯಾಗಳ ಶೈಲಿಗಳಲ್ಲಿ ಸಾಮ್ಯವಿರುವುದರಿಂದ ಇವು ಮೂಲತಃ ಒಂದೇ ಕೃತಿಯಲ್ಲಡಕವಾಗಿದ್ದುವೆಂದು ದೃಢವಾಗಿ ಹೇಳಬಹುದು. ಮತೀಯ ದೃಷ್ಟಿಯಿಂದ ನೋಡಿದಾಗಲೂ ಮತ್ತು ಉದಂತದಲ್ಲಿ ಬರುವ ಕಡೆಯ ಅಪೂರ್ವ ವಾಕ್ಯ ಸಮೂಹವೂ ಇಜ್ರದಲ್ಲೂ ಬಂದು, ಪೂರ್ಣಗೊಂಡಿರುವುದನ್ನು ನೋಡಿದಾಗಲೂ ಈ ಮಾತು ಸ್ಪಷ್ಟವಾಗುತ್ತದೆ. ಮೂಲತಃ ಒಂದೇ ಕೃತಿಯಾಗಿದ್ದ ಈ ಗ್ರಂಥಗಳು ಭಿನ್ನ ವಿಷಯಗಳನ್ನು ಒಳಗೊಂಡಿದ್ದರಿಂದ, ಇವನ್ನು ಅನುಕೂಲಕ್ಕಾಗಿ ಬೇರೆ ಬೇರೆ ಮಾಡಲಾಯಿತೆನ್ನಬಹುದು. ಬೇರೆ ಎಲ್ಲೂ ದೊರೆಯದ ಇತಿಹಾಸದ ಅಂಶಗಳನ್ನೊಳಗೊಂಡ ಉದಂತಗಳು ಇತಿಹಾಸಕಾರರಿಗೆ ಮಹದುಪಕಾರ ಮಾಡಿವೆ.

ಈ ಉದಂತಗಳ ಕರ್ತೃ ಯಾರು ಎಂಬುದು ಗೊತ್ತಿಲ್ಲ. ಜೋಹನಾನ್ ಎಂಬ ಪುರೋಹಿತ ಇದನ್ನು ಬರೆದನೆನ್ನುವ ಅಭಿಪ್ರಾಯಕ್ಕೆ ಸಾಕಷ್ಟು ಬೆಂಬಲವಿಲ್ಲ. ಉದಂತದ ಕರ್ತೃ (ಆತ ಯಾರೇ ಆಗಿರಲಿ) ಮಠದ ಕೀಳು ನೌಕರರ ಬಗ್ಗೆ ಹೆಚ್ಚಿನ ಸಹಾನುಭೂತಿಯುಳ್ಳ ದೃಷ್ಟಿ ಇದ್ದವನೆಂದು ತಿಳಿದುಬಂದಿರುವುದರಿಂದಲೂ ಆತ ನಾಯಕರ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದರಿಂದಲೂ ಉದಂತಗಳನ್ನು ಬರೆದವ ಯೆಹೂದ್ಯರ ದೇವಾಲಯದಲ್ಲಿದ್ದ ನಾಯಕರ ಗುಂಪಿಗೆ ಸೇರಿದವನಾಗಿದ್ದಿರಬಹುದೆಂಬ ಮತ್ತೊಂದು ಅಭಿಪ್ರಾಯವೂ ಇದೆ.

ಉದಂತಗಳ ಕಾಲದ ಬಗ್ಗೆ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ. ಬಹು ಜನಗಳ ಸಾಮಾನ್ಯ ಅಭಿಪ್ರಾಯದಂತೆ ಉದಂತಗಳು ಸುಮಾರು ಪ್ರ.ಶ.ಪೂ. (250–300) ರ ನಡುವಣ ಅವಧಿಯಲ್ಲಿ ರಚಿತವಾಗಿರಬೇಕು ಎಂಬುದೇ ಆಗಿದೆ. ಉದಂತಗಳು ಹಿಂದೆ ಇದ್ದ ಅನೇಕ ಅಪೂರ್ವ ಗ್ರಂಥಗಳನ್ನು ಉಪಯೋಗಿಸಿಕೊಂಡಿವೆ. ಬೈಬಲಿನಲ್ಲಿ ದೊರಕಿರುವ ಹಲವಾರು ಅಧ್ಯಾಯಗಳಲ್ಲದೆ, ಈಗ ಸಿಕ್ಕದೇ ಇರುವ ಅನೇಕ ಗ್ರಂಥಗಳನ್ನು ಆಧರಿಸಿ ಬರೆದದ್ದಾಗಿದೆ. ಉದಂತಗಳನ್ನು ಬರೆಯುವುದಕ್ಕೆ ಮುಂಚೆ ಇದ್ದ ಹಲವಾರು ಐತಿಹಾಸಿಕ ಕೃತಿಗಳನ್ನು ಸಹ ಆಧಾರವಾಗಿ ಉದಂತಗಳು ಬಳಸಿಕೊಂಡಿವೆ. ಅವುಗಳಲ್ಲಿ ಮುಖ್ಯವಾದುವು: (ಅ) ಜೂಡ ಮತ್ತು ಇಸ್ರೇಲ್ ರಾಜರುಗಳ ಗ್ರಂಥ, (ಆ) ಇಸ್ರೇಲ್ ರಾಜರ ಆಡಳಿತ, (ಇ) ರಾಜರ ಚರಿತ್ರೆಯ ಮಿದ್ರಾಷ್. ಒಟ್ಟಿನಲ್ಲಿ ಹೇಳುವುದಾದರೆ ಉದಂತಗಳು ಉಪಯೋಗಿಸಿಕೊಂಡಿರುವ ಆಕರಗ್ರಂಥಗಳು ಯೆಹೂದಿಗಳು ಈಜಿಪ್ಟಿನಿಂದ ಪ್ಯಾಲಿಸ್ಟೈನ್‌ಗೆ ಬಂದ ಅನಂತರ ರಚಿತವಾದ ಗ್ರಂಥಗಳಾಗಿವೆ. ಇವುಗಳ ಕರ್ತೃವೂ ಹಿಂದೆ ಇದ್ದಂಥ ರಾಜರುಗಳ ವಂಶಾವಳಿಗಳನ್ನು ಬಳಸಿಕೊಂಡಿರಬಹುದು. ಬೇರೆ ಗ್ರಂಥಗಳಲ್ಲಿ ಇಲ್ಲದ ವಿಷಯಗಳನ್ನು ನಿರೂಪಿಸುವಾಗ ಇವುಗಳ ಕರ್ತೃ ತನ್ನ ಆಕರಗ್ರಂಥಗಳಿಂದ ಎಷ್ಟನ್ನು ಪಡೆದಿದ್ದಾನೆ, ಮತ್ತೆಷ್ಟನ್ನು ತಾನೇ ಸ್ವತಃ ಸೇರಿಸಿದ್ದಾನೆ ಎಂದು ವಿಂಗಡಿಸುವುದು ಕಷ್ಟವಾಗಿದೆ.

ಯೆಹೂದಿ ಜನಾಂಗದ ಇತಿಹಾಸವನ್ನು, ಮತೀಯ ಭಾವನೆಗಳನ್ನು, ಅವರ ಮಠದ ಆಡಳಿತವನ್ನು, ಮಠಾಧಿಪತಿಗಳ ವಿಷಯಗಳನ್ನು, ಯೆಹೂದಿ ರಾಜರುಗಳ ಚರಿತ್ರೆಯನ್ನು ಮತ್ತು ಪ್ರಾಚೀನ ಗ್ರೀಕರ ಕಾಲದಲ್ಲಿದ್ದ ಮತೀಯ ಭಾವನೆಗಳನ್ನು ತಿಳಿದುಕೊಳ್ಳುವುದರಲ್ಲಿ ಉದಂತಗಳು ಮಾಡಿರುವ ಸಹಾಯ ಅತ್ಯಮೂಲ್ಯವಾಗಿದೆ. ಗ್ರಂಥಕರ್ತೃ ನಾವು ಈಗ ತಿಳಿದುಕೊಂಡಿರುವಂಥ ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ ಇತಿಹಾಸವನ್ನು ಬರೆಯದೇ ಇದ್ದಿರಬಹುದು. ಆದರೂ ಆತ ನಿರೂಪಿಸುವ ಆದರೆ ಬೇರೆ ಎಲ್ಲೂ ದೊರಕದ ವಿಷಯಗಳನ್ನು ಸಂಪೂರ್ಣವಾಗಿ ಸುಳ್ಳೆಂದು ಕೈಬಿಡುವ ಹಾಗಿಲ್ಲ. ಉದಂತಗಳಲ್ಲಿ ಅಡಗಿರುವ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ವಿದ್ವಾಂಸರು ಎರಡೂ ಬಗೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಉದಂತವನ್ನು ಬರೆಯುವಲ್ಲಿ ಒಂದು ಐತಿಹಾಸಿಕ ಆಧಾರವಿದೆ ಎಂದರೆ, ಮತ್ತೆ ಕೆಲವರು ಅಂಥ ಆಧಾರಗಳಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಉದಂತಗಳ ಬಗ್ಗೆ ಮಾತನಾಡುತ್ತ ಎ. ಎಚ್. ಸೇಸ್ ಹೇಳಿರುವ ಮಾತುಗಳು ಗಮನಾರ್ಹವಾಗಿವೆ : 'ಅಂಕಿ ಅಂಶಗಳ ಬಗ್ಗೆ ಉತ್ಪ್ರೇಕ್ಷೆಯುಳ್ಳ ಗ್ರಂಥಕರ್ತನನ್ನು ನೋಡಿದಾಗ, ಐತಿಹಾಸಿಕ ದೃಷ್ಟಿಯಿಂದ ಆಧಾರರಹಿತ ಹೇಳಿಕೆಗಳನ್ನು ಪರೀಕ್ಷಿಸುವಾಗ ಎಚ್ಚರಿಕೆಯಿಂದಿರಬೇಕು. ಆದರೆ ಅಂಥ ಹೇಳಿಕೆಗಳನ್ನು ಸಂಪೂರ್ಣ ಸುಳ್ಳಿನ ಕಂತೆ, ಬೇಕೆಂತಲೇ ಮಾಡಿದ ತಪ್ಪು, ಕಟ್ಟುಕಥೆ ಎಂದೆಲ್ಲ ಆರೋಪಿಸುವುದು ಅಷ್ಟಾಗಿ ಸರಿಯಾಗಲಾರದು. ನಾವು ಈಗ ಇತಿಹಾಸಕಾರನಲ್ಲಿ ಅಪೇಕ್ಷಿಸುವ ಐತಿಹಾಸಿಕ ಖಚಿತಗುಣ ಆತನಲ್ಲಿ ಇದ್ದಿರಲಿಲ್ಲವೆಂದು ಮಾತ್ರ ಹೇಳಬಹುದು.

(ಎಸ್.ಕೆ.ಎಸ್.)

**ಉದಂತ ಮಾರ್ತಾಂಡ:** ಹಿಂದಿ ಭಾಷೆಯಲ್ಲಿ ಪ್ರಕಟವಾದ (1826) ಪ್ರಥಮ ವಾರಪತ್ರಿಕೆ. ಯುಗಲಕಿಶೋರ್ ಶುಕ್ಲ ಇದರ ಸಂಪಾದಕ ಮತ್ತು ಪ್ರಕಾಶಕ. ಪತ್ರಿಕೆಯ ಕಚೇರಿ ಕಲ್ಕತ್ತೆಯಲ್ಲಿತ್ತು. ಹಣದ ಅಭಾವವಿದ್ದುದರಿಂದಲೂ ಸರ್ಕಾರ ಮತ್ತು ಜನತೆಯ ಪ್ರೋತ್ಸಾಹ ಸಾಕಷ್ಟು ಸಿಕ್ಕದುದರಿಂದಲೂ ಎರಡು ವರ್ಷಗಳಲ್ಲಿ ಪತ್ರಿಕೆ ನಿಂತು ಹೋಯಿತು. ಮುಂದೆ ಶುಕ್ಲರೇ 1850–51ರಲ್ಲಿ ಸಾಮ್ಯದಂತ ಮಾರ್ತಾಂಡ ಎಂಬ ಪತ್ರಿಕೆ ಹೊರಡಿಸಿದರು. ಆದರೆ ಅದೂ ಬಲು ಬೇಗ ನಿಂತುಹೋಯಿತು. (ಬಿ.ಜಿ.ಟಿ.)

**ಉದಕ ಪಾವಡ:** ಇಷ್ಟಲಿಂಗವನ್ನು ಮುಚ್ಚಿರುವ ಚಿಕ್ಕ ವಸ್ತ್ರ. ಉದುಗ ಪಾವಡ, ಲಿಂಗವಸ್ತ್ರ ಎಂಬ ಹೆಸರುಗಳೂ ಇವೆ. ಲಿಂಗವನ್ನು ಇದರಲ್ಲಿ ಹುದುಗಿಸಿ ಇಡುತ್ತಾರಾದ ಕಾರಣ ಹುದುಗು ಎಂಬ ಮಾತು ಉದುಗ ಆಗಿ ಉಳಿದು ಬಂದಿರಬಹುದು. ಈ ಪುಟ್ಟ ವಸ್ತ್ರದ ಉದ್ದಗಲ 5 ಅಂಗುಲ, 3 ಅಂಗುಲ. ರೇಷ್ಮೆಯದೋ ಹತ್ತಿಯದೋ ಆಗಿರಬಹುದು. ಇದರಲ್ಲಿಟ್ಟಾಗ ಲಿಂಗ ಅಲುಗಾಡದು, ಅಲ್ಲದೆ ಕಾಂತಿ (ಚಿದ್ರಸ) ಕೆಡದು. ವಸ್ತ್ರದ ಒಂದೊಂದು ಬಣ್ಣಕ್ಕೂ ಒಂದೊಂದು ಫಲವನ್ನು ಹೇಳಲಾಗಿದೆ. ಬಿಳುಪು ಜ್ಞಾನಪ್ರದ, ಕೆಂಪು ವಶ್ಯಕರ, ಕಪ್ಪು ಶತ್ರುಹರ, ಹಳದಿ ಪುತ್ರಪ್ರದ, ಚಿತ್ರವರ್ಣ ಚಿತ್ರಫಲದಾಯಕ. ಬಣ್ಣ ಯಾವುದೇ ಇರಲಿ, ವಸ್ತ್ರ ಶುದ್ಧವಾಗಿರಬೇಕೆಂದು ವೀರಶೈವ ಧರ್ಮಶಿರೋಮಣಿಯಲ್ಲಿ ಹೇಳಿದೆ.

(ಎಂ.ಜಿ.ಎಸ್.)

**ಉದಕಮಂಡಲ:** ತಮಿಳುನಾಡಿನಲ್ಲಿರುವ ಒಂದು ಗಿರಿಧಾಮ. ನೀಲಗಿರಿ ಜಿಲ್ಲೆಯ ಮುಖ್ಯ ಕೇಂದ್ರ. ಉ. ಅಕ್ಷಾಂಶ $11^{\circ}.24'$ ಮತ್ತು ಪೂ.ರೇ $76^{\circ}.44'$ ಹಿಂದೆ ಇದು ಮದ್ರಾಸ್ ಸರ್ಕಾರದ ಬೇಸಿಗೆ ರಾಜಧಾನಿಯಾಗಿತ್ತು. ಜನಸಂಖ್ಯೆ (9321) (2001). ಊಟಿ ಎಂಬುದು ಇದರ ಇನ್ನೊಂದು ಹೆಸರು. ಮೈಸೂರಿನಿಂದ ದಕ್ಷಿಣಕ್ಕೆ 104 ಕಿ.ಮೀ.

ಬೊಟಾನಿಕಲ್ ಗಾರ್ಡನ್

ದೂರದಲ್ಲಿ, ಸಮುದ್ರ ಮಟ್ಟದಿಂದ 2.134ಮೀ ಎತ್ತರದಲ್ಲಿದೆ. 2,634 ಮೀ ಎತ್ತರವಿರುವ ದೊಡ್ಡ ಬೆಟ್ಟದ ಎರಡು ಅಂಚುಗಳ ನಡುವೆ ಇರುವ ಈ ಊರಿನ ಸರಾಸರಿ ವಾರ್ಷಿಕ ಉಷ್ಣತೆ 14.4 ಸೆಂ. ಕನಿಷ್ಠ ಉಷ್ಣತೆ $9^{\circ}$ ಸೆಂ. ವರ್ಷದಲ್ಲಿ ಬಹುಕಾಲ ಇಲ್ಲಿ ಹಗಲಿನ ಉಷ್ಣತೆ $16.7^{\circ}$–$12.2^{\circ}$ಯ ಒಳಗಿರುತ್ತದೆ. ದೇಶ ವಿದೇಶಗಳ ಪ್ರವಾಸಿಗರನ್ನು ವಿಶೇಷತಃ

ಆಕರ್ಷಿಸಿರುವ ಈ ಊರು ಗಿರಿಧಾಮಗಳ ರಾಣಿಯೆಂದು ಪ್ರಸಿದ್ಧ. ವಿಶಾಲ ಬೀದಿಗಳಿಂದಲೂ ಗಿಡ ಮರಗಳಿಂದಲೂ ಕೂಡಿದ ಈ ಊರೇ ಒಂದು ದೊಡ್ಡ ಉದ್ಯಾನವನದಂತಿದೆ. ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ಕಟ್ಟಿದ ಕೆಲವು ಕಟ್ಟಡಗಳ ಪೈಕಿ ಸೇಂಟ್ ಥಾಮಸ್ ಚರ್ಚು, ಸೇಂಟ್ ಸ್ಟೀಫನ್ ಚರ್ಚು ಮತ್ತು ಸ್ಟೋನ್ ಹೌಸ್ ಇವು ಮುಖ್ಯ.



ತೋಡರ ಗುಡಿಸಲು

ಇಲ್ಲಿರುವ ಮುಕೇರ್ತಿ ಅಣೆಕಟ್ಟು, ಪೈಕಾರ ಜಲವಿದ್ಯುತ್ ಕೇಂದ್ರ, ಚೈರನ್‌ಬೆಟ್ಟ ಮತ್ತು ಬೊಟಾನಿಕಲ್ ಗಾರ್ಡನ್‌ಗಳೇ ಅಲ್ಲದೆ ಕಾಫಿ ಮತ್ತು ಚಹ ತೋಟಗಳೂ ಬ್ರಿಟಿಷರು ನಿರ್ಮಿಸಿದ (1823–25) 4 ಕಿ.ಮೀ. ಉದ್ದದ ಸರೋವರವೂ ಇಲ್ಲಿಗೆ ಸಮೀಪದಲ್ಲೇ ಇರುವ ಕಲಹಟ್ಟಿ ಜಲಪಾತವೂ ಅಸಂಖ್ಯಾತ ಪ್ರವಾಸಿಗರನ್ನು ವರ್ಷವರ್ಷವೂ ಆಕರ್ಷಿಸುತ್ತವೆ. ಇಲ್ಲಿ ಒಂದು ಸರ್ಕಾರಿ ಕಾಲೇಜು ಖಾಸಗಿ ಕಾಲೇಜು 32 ಕಿ.ಮೀ. ದೂರದಲ್ಲಿ ಕ್ವಿನೈನ್ ಕಾರ್ಖಾನೆಯೂ ಇವೆ.

ನೀಲಗಿರಿ ಬೆಟ್ಟಗಳ ಆದಿವಾಸಿಗಳು ತೋಡರು. ಇವರು ಇಂದಿಗೂ ತಮ್ಮ ಹಳೆಯ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ.

ಕೂನೂರು, ಕೆಟ್ಟಿ, ಕೊಟ್ಟಗಿರಿ ಮತ್ತು ವೆಲಿಂಗ್ಟನ್‌ಗಳು ಊಟಿಯ ಸಮೀಪದಲ್ಲಿರುವ ಇತರ ಗಿರಿಧಾಮಗಳು. *

**ಉದಯಕುಮಾರ್:** 1935–85. ರಂಗಭೂಮಿ ಮತ್ತು ಚಲನಚಿತ್ರನಟ, ಚಿತ್ರನಿರ್ದೇಶಕ ಹಾಗೂ ಸಾಹಿತಿ. ಆನೇಕಲ್ಲು ತಾಲ್ಲೂಕಿನ ಬೊಮ್ಮಸಂದ್ರದಲ್ಲಿ 1935 ಮಾರ್ಚ್ 16ರಂದು ಜನಿಸಿದರು. ತಂದೆ ಶಾನುಭೋಗ ಶ್ರೀನಿವಾಸಯ್ಯ, ತಾಯಿ ಶಾರದಮ್ಮ. ಇವರ ಮೊದಲ ಹೆಸರು ಸೂರ್ಯನಾರಾಯಣ ಶಾಸ್ತ್ರಿ. ಪ್ರೌಢಶಾಲೆಯ ಹಂತದವರೆಗೂ ವ್ಯಾಸಂಗ ಮಾಡಿರುವ ಇವರು ಸಂಸ್ಕೃತವನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದರು. 1951ರಲ್ಲಿ ದಾಂಪತ್ಯ ಜೀವನಕ್ಕೆ ಪ್ರವೇಶಿಸಿದರು. ಬೆಂಗಳೂರಿನ ಸರ್ವೋದಯ ಇಲಾಖೆಯಲ್ಲಿ ಸಾಹಿತ್ಯ ವಿಭಾಗದ ಕಾರ್ಯದರ್ಶಿಯಾಗಿ ಒಂದು ವರ್ಷ ಎ1954ಏ, ಆನೇಕಲ್ಲಿನ ಸರ್ಕಾರಿ ಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿ ಕೆಲವು ವರ್ಷ ಕೆಲಸ ಮಾಡಿ ಕೊನೆಗೆ ಆ ಕೆಲಸವನ್ನು ಬಿಟ್ಟು ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಚಾರ ಭಾಷಣಗಳನ್ನು ಮಾಡುವುದರಲ್ಲಿ ನಿರತರಾದರು. ನಟಿ ಬಿ.ಜಯಮ್ಮನವರ ಪರಿಚಯವಾಗಿ, ಅವರ ಮೂಲಕ ಗುಬ್ಬಿ ನಾಟಕ ಕಂಪೆನಿಯನ್ನು ಪ್ರವೇಶಿಸಿದ ಉದಯ ಕುಮಾರ್ ಪ್ರಾರಂಭದಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಿದರು. ಅನಂತರ ಕುರುಕ್ಷೇತ್ರ ನಾಟಕದಲ್ಲಿ ಪರಶುರಾಮನ ಪಾತ್ರವನ್ನು ಅಭಿನಯಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರಲ್ಲದೆ. ನಾಟಕ ಕಂಪನಿಯ ಮಾಲೀಕರಾಗಿದ್ದ ಗುಬ್ಬಿವೀರಣ್ಣನವರ

ಮೆಚ್ಚುಗೆಗೂ ಪಾತ್ರರಾದರು. ಅನಂತರ ಚಿತ್ರರಂಗವನ್ನು ಪ್ರವೇಶಿಸಿದ ಇವರು ಅಭಿನಯಿಸಿದ ಮೊದಲ ಚಿತ್ರ ಭಾಗ್ಯೋದಯ ಎ1956ಏ. ಸೇಡಿಗೆಸೇಡು ಇವರ ಅಭಿನಯದ ನೂರನೆಯ ಚಿತ್ರ. ತಮ್ಮ ಅಭಿನಯನೈಪುಣ್ಯ ಮತ್ತು ಶ್ರದ್ಧೆಗಳಿಂದ ಪಾತ್ರಗಳನ್ನು ನಿರ್ವಹಿಸಿ ಚಿತ್ರರಂಗದಲ್ಲಿ ಬಹು ಬೇಗ ಜನಪ್ರಿಯರಾದರು. ಚಂದವಳ್ಳಿಯ ತೋಟದ ಶಿವನಂಜೇಗೌಡ, ವಿಜಯನಗರದ ವೀರಪುತ್ರದ ಕೃಷ್ಣದೇವರಾಯ, ರಾವಣಾಂಜನೇಯ ಯುದ್ಧದ ಆಂಜನೇಯ ಈ ಪಾತ್ರಗಳು ಇವರ ಉನ್ನತ ಕಲಾಭಿನಯಕ್ಕೆ ಸಾಕ್ಷಿಯಾಗಿವೆ. ಇವರ ಅಭಿನಯವಿರುವ ಭಕ್ತಕನಕದಾಸ, ನಂದಾದೀಪ, ಸಂತತುಕಾರಾಂ, ಅಮರಶಿಲ್ಪಿ ಜಕಣಾಚಾರಿ, ಸತ್ಯಹರಿಶ್ಚಂದ್ರ, ಮಿಸ್ ಲೀಲಾವತಿ, ಸಂಧ್ಯಾರಾಗ ಮತ್ತು ಬಂಗಾರದ ಹೂ ಈ ಚಿತ್ರಗಳು ರಾಷ್ಟ್ರಪ್ರಶಸ್ತಿಗಳಿಸಿವೆ. ತಮಿಳು ಮತ್ತು ತೆಲುಗು ಚಿತ್ರಗಳಲ್ಲೂ ಅಭಿನಯಿಸಿ ಆ ಭಾಷೆಗಳ ಚಿತ್ರಪ್ರೇಮಿಗಳಿಗೂ ಇವರು ಪರಿಚಿತರಾಗಿದ್ದಾರೆ. ಕನ್ನಡದಲ್ಲಿ ಸ್ವತಂತ್ರವಾಗಿ ಇದೇ ಮಹಾಸುದಿನ ಎಂಬ ಚಿತ್ರವನ್ನು ನಿರ್ಮಿಸಿದ್ದರು. ಉದಯಕುಮಾರ್ ಅವರಿಗೆ 1964ರಲ್ಲಿ ರಾಷ್ಟ್ರಪ್ರಶಸ್ತಿ ಲಭಿಸಿತು. ಮದರಾಸಿನ ಫಿಲಂ ಫ್ಯಾನ್ಸ್ ಅಸೋಸಿಯೇಷನ್ ಇವರಿಗೆ ಶ್ರೇಷ್ಠವಿನಟ ಎಂಬ ಬಿರುದನ್ನಿತ್ತು ಗೌರವಿಸಿದೆ. ಕರ್ನಾಟಕದ ವಿವಿಧ ಸಾಂಸ್ಕೃತಿಕ ಸಂಸ್ಥೆಗಳು ಇವರಿಗೆ ಸನ್ಮಾನಿಸಿವೆ. ಕನ್ನಡದ ಕುಮಾರ ತ್ರಯರಲ್ಲಿ ಒಬ್ಬರೆಂದು ಪ್ರಸಿದ್ಧರಾಗಿದ್ದ ಇವರು 1985ರಲ್ಲಿ ಅಕಾಲಿಕವಾಗಿ ನಿಧನ ಹೊಂದಿದರು. *

**ಉದಯಗಿರಿ:** 1. ಒರಿಸ್ಸ ರಾಜ್ಯದಲ್ಲಿ ಭುವನೇಶ್ವರದ ಬಳಿ ಇರುವ ಬೆಟ್ಟ. 2.ಮಧ್ಯಪ್ರದೇಶದ ಬೆಸನಗರದ ಸಮೀಪದಲ್ಲೂ ಇದೇ ಹೆಸರಿನ ಒಂದು ಬೆಟ್ಟವಿದೆ. ಎರಡು ಕಡೆಗಳಲ್ಲೂ ಗುಹಾಂತರ್ದೇವಾಲಯಗಳುಂಟು. ಮೊದಲನೆಯದರ ಜೈನ ಗುಹೆಗಳಲ್ಲಿ ಹಲವು ಕಲಿಂಗರಾಜ ಖಾರವೇಲನ (**ನೋಡಿ**) ಕಾಲವೆಂದು (ಸು. 2ನೆಯ ಶತಮಾನ) ತರ್ಕಿಸಲಾಗಿದೆ. ಮಧ್ಯಪ್ರದೇಶದ ಉದಯಗಿರಿಯಲ್ಲಿರುವ ಗುಹಾಲಯಗಳನ್ನು ಗುಪ್ತಚಕ್ರವರ್ತಿ ಎರಡನೆಯ ಚಂದ್ರಗುಪ್ತ ನಿರ್ಮಿಸಿದ. ಎರಡರಲ್ಲೂ ಇರುವ ಶಿಲ್ಪಗಳು ಸುಂದರವಾಗಿವೆ. ಒರಿಸ್ಸದ ಉದಯಗಿರಿ ಗುಹೆಗಳಲ್ಲಿ ಮಂಚಪುರಿ ಗುಹೆಯನ್ನು ಆರ್ಯ ಮಹಾಮೇಘವಾಹನ ಮಹಾರಾಜ ವಕ್ರದೇವ ಕೊರೆಯಿಸಿದ. ಉದಯಗಿರಿಯ ಗವಿಗಳಲ್ಲಿ ರಾಣಿಗುಂಫ ಎಂಬ ಗವಿ ಎಲ್ಲಕ್ಕೂ ದೊಡ್ಡದಿದ್ದು ಅದರ ಒಳಭಾಗದಲ್ಲಿ ಅನೇಕ ಮೂರ್ತಿಗಳ ಸಾಲುಗಳನ್ನು ಕೆತ್ತಲಾಗಿದೆ. ಇವು ಭವ್ಯ ಮತ್ತು ಚೈತನ್ಯಪೂರ್ಣ ಕಲಾಕೃತಿಗಳು. ಇವುಗಳಲ್ಲಿನ ಬೌದ್ಧ ಶಿಲ್ಪಗಳ ಪೈಕಿ ಬೋಧಿವೃಕ್ಷದ ಸುತ್ತ ಸ್ತ್ರೀಪುರುಷರು ವಾದ್ಯಗಳನ್ನು ನುಡಿಸಿ ಹಾಡಿ ನರ್ತಿಸುತ್ತಿರುವ ಚಿತ್ರ ಅತ್ಯಂತ ಆಕರ್ಷಕವಾದದ್ದು. (ಬಿ.ಟಿ.;ಎಸ್.ಎಂ.;ಆರ್.ಎಸ್.ಪಿ.)

**ಉದಯನ:** ವಿಖ್ಯಾತ ನ್ಯಾಯಾಚಾರ್ಯ. ಕಾಲ ಸು. 10ನೆಯ ಶತಮಾನ. ನ್ಯಾಯ ಮತ್ತು ವೈಶೇಷಿಕ ದರ್ಶನಗಳಲ್ಲಿ ಅತ್ಯಂತ ವಿಚಾರಪೂರ್ವಕವಾದ ಸಿದ್ಧಾಂತ ಪರಿಷ್ಕಾರಗಳನ್ನು ಮಾಡಿದ. ವಾಚಸ್ಪತಿಮಿಶ್ರನ ನ್ಯಾಯಭಾಷ್ಯವಾರ್ತಿಕ ತಾತ್ಪರ್ಯ ಟೀಕೆಯ ಮೇಲೆ ಪರಿಶುದ್ಧಿ ಎಂಬ ಗ್ರಂಥವನ್ನೂ ವೈಶೇಷಿಕ ಭಾಷ್ಯದ ಮೇಲೆ ಟೀಕೆಯನ್ನೂ ರಚಿಸಿದ್ದಾನೆ. ಹಾಗೆಯೇ ಸ್ವತಂತ್ರ್ಯವಾಗಿ ಅತ್ಯಂತ ಪ್ರಸಿದ್ಧವಾದ ನ್ಯಾಯ ಕುಸುಮಾಂಜಲಿಯಲ್ಲಿ ಈಶ್ವರಾಸ್ತಿತ್ವವನ್ನು ಸಾಧಿಸಿರುವುದಲ್ಲದೆ, ಆತ್ಮತತ್ತ್ವವಿವೇಕದಲ್ಲಿ ಆತ್ಮ ವಿಷಯಕ ವಿಮರ್ಶೆಯನ್ನು ನಡೆಸಿದ್ದಾನೆ. ಅವೈದಿಕ ದರ್ಶನಗಳ ಮತ್ತು ನಿರೀಶ್ವರ ವಾದಗಳ ಖಂಡನೆಯಲ್ಲಿ ಈತ ಎತ್ತಿದ ಕೈ. ಈತನ ನಿರೂಪಣೆಯಲ್ಲಿ ಪ್ರಾಚೀನ ನ್ಯಾಯ ಪೂರ್ಣರೂಪವನ್ನು ಹೊಂದುತ್ತದೆ. ನವೀನ ನ್ಯಾಯದ ಮೂಲಪುರುಷ ಗಂಗೇಶೋಪಾಧ್ಯಾಯ ಉದಯನನಿಗೆ ಅತ್ಯಂತ ಋಣಿ. ತಾರ್ಕಿಕ ಸಂಪ್ರದಾಯದಲ್ಲಿ ಮಹತ್ವವನ್ನು ಗಳಿಸಿದ ದಾರ್ಶನಿಕ. (ಎಸ್.ಎಸ್.ಆರ್.)

**ಉದಯನ (ಕೋಸಲರಾಜ):** ದಕ್ಷಿಣ ಕೋಸಲದಲ್ಲಿ 6ನೆಯ ಶತಮಾನದಲ್ಲಿ ಅಧಿಕಾರಕ್ಕೆ ಬಂದ ಪಾಂಡವ ವಂಶದ (ಚಂದ್ರವಂಶದ) ರಾಜರಲ್ಲಿ ಒಬ್ಬ. ಈ ಉದಯನ ಕಲಂಬ ಶಾಸನದಲ್ಲಿ ಹೆಸರಿಸಲಾಗಿರುವ ಬಾಂಡ ಜಿಲ್ಲೆಯಲ್ಲಿ ಆಳುತ್ತಿದ್ದ ಪಾಂಡವ ಮನೆತನಕ್ಕೆ ಸೇರಿದ ಉದಯನನಲ್ಲವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಉದಯನ ರಾಜನ ಮೊಮ್ಮಗನಾದ ತಿವಾರಿ ಈ ರಾಜಮನೆತನದಲ್ಲಿ ಅತ್ಯಂತ ಪ್ರಸಿದ್ಧ ರಾಜನಾಗಿದ್ದ. (ಜಿ.ಆರ್.ಆರ್.)

**ಉದಯನ (ಮಗಧರಾಜ):** ಮಗಧ ರಾಜ್ಯದ ಶಿಶುನಾಗ ಸಂತತಿಯಲ್ಲಿ ಪ್ರಸಿದ್ಧನಾದ ಅಜಾತಶತ್ರುವಿನ ಮಗ. ಕೆಲವು ಗ್ರಂಥಗಳಲ್ಲಿ ಈತನನ್ನು ಉದಯಭದ್ರ ಎಂದೂ ಹೆಸರಿಸಲಾಗಿದೆ. ತಂದೆಯ ಕಾಲದಲ್ಲಿ ಚಂಪ ರಾಜ್ಯದ ಪ್ರಾಂತ್ಯಾಧಿಕಾರಿಯಾಗಿದ್ದು ತಂದೆಯ ಮರಣಾನಂತರ ಮಗಧರಾಜ್ಯದ ಸಿಂಹಾಸನವನ್ನೇರಿದ. ಕುಸುಮಪುರವೆಂಬ ಹೊಸ ನಗರವನ್ನು ಕಟ್ಟಿಸಿದ. ಕೆಲಕಾಲಾನಂತರ ಜೈನಮತವನ್ನವಲಂಬಿಸಿದ ಜೈನ ಸಂನ್ಯಾಸಿಗಳಿಗೆ ವಿಶೇಷ ಮನ್ನಣೆ ಕೊಡುತ್ತಿದ್ದ. ಅವಂತಿಯ ರಾಜನಾದ ಪಾಲಕನಿಗೂ ಉದಯನಿಗೂ ವೈರವಿತ್ತು. ಜೈನ ಸಂನ್ಯಾಸಿಗಳಿಗೆ ಉದಯನ ವಿಶೇಷ ಪ್ರೋತ್ಸಾಹ ಕೊಡುತ್ತಿದ್ದುದನ್ನು ಅರಿತ ಪಾಲಕ ಕೊಲೆಗಡುಕನೊಬ್ಬನನ್ನು ಜೈನ ಸನ್ಯಾಸಿಯ ವೇಷದಲ್ಲಿ ಕಳುಹಿಸಿ ಉದಯನನ್ನು ಕೊಲ್ಲಿಸಿದ. (ಜಿ.ಆರ್.ಆರ್.)

**ಉದಯನ (ವತ್ಸರಾಜ):** ಸು. ಪ್ರ.ಶ.ಪೂ. 6ನೆಯ ಶತಮಾನ. ಯಮುನ ತೀರದಲ್ಲಿದ್ದ ವತ್ಸದೇಶದ ಅರಸರಾಗಿ ಆಳಿದವರಲ್ಲಿ ಅತಿ ಪ್ರಸಿದ್ಧ. ಕೌಶಾಂಬಿ ಈತನ ರಾಜಧಾನಿ. ಉದಯನನಿಗೆ ಸಂಬಂಧಿಸಿದ ಅನೇಕ ದಂತಕಥೆಗಳು ಗುಪ್ತರ ಕಾಲದಲ್ಲೂ ಹರ್ಷವರ್ಧನನ ಕಾಲದಲ್ಲೂ ಪ್ರಚಲಿತವಾಗಿದ್ದವು. ಕಥಾಸರಿತ್ಸಾಗರದಲ್ಲಿ ಇವನನ್ನು ಕುರಿತ ಕಥೆಗಳಿವೆ. ಭಾಸನ ಪ್ರತಿಜ್ಞಾಯೌಗಂಧರಾಯಣ ಮತ್ತು ಸ್ವಪ್ನವಾಸವದತ್ತ, ಹರ್ಷನ ರತ್ನಾವಳಿ ಮತ್ತು ಪ್ರಿಯದರ್ಶಿಕಾ ನಾಟಕಗಳಿಗೆ ಈತನೇ ನಾಯಕ. ಪ್ರದ್ಯೋತನ ಮಗಳಾದ ವಾಸವದತ್ತೆಯನ್ನು ಉದಯನ ಅಪಹರಿಸಿದ ವಿಷಯ ಪ್ರತಿಜ್ಞಾಯೌಗಂಧರಾಯಣದಲ್ಲೂ ಪದ್ಮಾವತಿಯನ್ನು ಈತ ಮದುವೆಯಾದ ಕಥೆ ಸ್ವಪ್ನವಾಸದತ್ತದಲ್ಲೂ ಬರುತ್ತದೆ. ಹರ್ಷನ ಎರಡು ನಾಟಕಗಳ ಹೆಸರುಗಳಲ್ಲೇ ಉದಯನನನ್ನು ವರಿಸಿದ ಇಬ್ಬರು ನಾಯಕಿಯರ ನಾಮಧೇಯಗಳಿವೆ. ನಿಜಕ್ಕೂ ಭಾಸ ಮತ್ತು ಹರ್ಷ ಇವರ ನಾಟಕಗಳು ಉದಯನನ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿವೆ.

ಪಾಳೀ ಗ್ರಂಥಗಳಲ್ಲೂ ಉದಯನನಿಗೆ ಸಂಬಂಧಿಸಿದ ವಿಚಾರಗಳಿವೆ. ಬುದ್ಧ ನಿರ್ವಾಣದ ವೇಳೆಗೆ ಇನ್ನೂ ಯೌವ್ವನಾವಸ್ಥೆಯಲ್ಲಿದ್ದ ಉದಯನ ಬುದ್ಧನನ್ನಾಗಲೀ ಬೌದ್ಧಮತವನ್ನಾಗಲೀ ಪುರಸ್ಕರಿಸಲಿಲ್ಲ. ಬುದ್ಧನ ಮರಣಾನಂತರ ಉದಯನ ಪ್ರಮುಖ ಬೌದ್ಧ ಭಿಕ್ಷುಗಳಲ್ಲೊಬ್ಬನಾದ ಪಿಂಡೋಲ ಭರದ್ವಾಜ ಎಂಬಾತನನ್ನು ಹಿಂಸೆಗೆ ಗುರಿಮಾಡಿದ. ಕೊನೆಗೆ ಪಿಂಡೋಲನೊಡನೆ ನಡೆದ ಸಂಭಾಷಣೆಯಿಂದ ಸಂಪ್ರೀತನಾಗಿ ಬೌದ್ಧಮತಾವಲಂಬಿಯಾದ. ಉದಯನನಿಗೆ ಬೋಧಿ ಎಂಬ ಕುಮಾರನಿದ್ದ. (ಜಿ.ಆರ್.ಆರ್.; ಎಂ.ಡಿ.ಎನ್.)

ಪುರಾಣಗಳರೀತ್ಯ ಜನಮೇಜಯನ ಮರಿಮಗ. ಸಹಸ್ರಾನೀಕ ಮೃಗಾವತಿಯರ ಮಗ. ಗರ್ಭವತಿಯಾದ ಮೃಗಾವತಿ ರಕ್ತದ ಮಡುವಿನಲ್ಲಿ ಸ್ನಾನಮಾಡಬಯಸಿದಳು. ಅರಸ ರಕ್ತವರ್ಣದ ಮಡುವನ್ನು ನಿರ್ಮಿಸಿದ. ಮೃಗಾವತಿ ಮಿಂದು ಹೊರಬಂದಾಗ ಗರುಡ ಇವಳನ್ನು ಮಾಂಸದ ಮುದ್ದೆಯೆಂದು ಭ್ರಮಿಸಿ ಕೊಂಡೊಯ್ದು ಉದಯ ಪರ್ವತದ ಗವಿಯಲ್ಲಿಟ್ಟಿತು. ಚೇತರಿಸಿಕೊಂಡ ಮೃಗಾವತಿ ತನ್ನ ಸ್ಥಿತಿ ನೆನೆದು ಗೋಳಿಟ್ಟಳು. ಸಮೀಪದ ಆಶ್ರಮದಲ್ಲಿದ್ದ ಜಮದಗ್ನಿಋಷಿ ಧ್ವನಿ ಕೇಳಿ ಶಿಷ್ಯನ ಮೂಲಕ ಆಕೆಯನ್ನು ಕರೆತರಿಸಿ ಸಂತೈಸಿದ. ಕಾಲಕ್ರಮದಲ್ಲಿ ಮೃಗಾವತಿ ಮಗನನ್ನು ಹಡೆದಳು. ಉದಯಾಚಲದಲ್ಲಿ ಜನಿಸಿದವನಾದುದರಿಂದ ಉದಯನ ಎಂಬ ಹೆಸರಾಯಿತು. ಈತ ಪ್ರೌಢನಾಗಿ ಒಮ್ಮೆ ಬೇಟೆಗೆ ಹೋದಾಗ ಬೇಡನ ಕೈಗೆ ಸಿಕ್ಕಿದ್ದ ಹಾವೊಂದನ್ನು ತನ್ನ ಕೈಲಿದ್ದ ಕಡಗ ಕೊಟ್ಟು ಬಿಡಿಸಿದ. ಹಾವು ಮಾಯವಾಯಿತು. ಸರ್ಪರಾಜನ ಪುತ್ರ ಎದುರಿಗೆ ಬಂದು ಉದಯನನನ್ನು ಪಾತಾಳಕ್ಕೆ ಕರೆದೊಯ್ದು ತನ್ನ ಸಹೋದರಿ ಲಲಿತೆಯನ್ನು ಕೊಟ್ಟು ಮದುವೆ ಮಾಡಿಸಿದ. ಉದಯನನಿಂದ ಮಗನನ್ನು ಪಡೆದಮೇಲೆ ಘೋಷವತಿ ಎಂಬ ವೀಣೆ ಹಾಗೂ ಬಾಡದ ಹೂಮಾಲೆಯನ್ನು ಪುತ್ರನ ಸಮೇತ ಉದಯನನಿಗೆ ಇತ್ತು ಶಾಪಗ್ರಸ್ತಳಾಗಿದ್ದ ವಿದ್ಯಾಧರಿ (ಲಲಿತೆ) ಮಾಯವಾದಳು. ಉದಯನ ಪುತ್ರನ ಸಮೇತ ಜಮದಗ್ನಿ ಆಶ್ರಮದಲ್ಲಿದ್ದ ತಾಯಿಯನ್ನು ಕೂಡಿಕೊಂಡ. ಅತ್ತ ಉದಯನು ಬೇಡನಿಗಿತ್ತ ಕಡಗದಿಂದ ಸಹಸ್ರಾನೀಕ ತನ್ನ ಪತ್ನಿ ಜಮದಗ್ನಿ ಆಶ್ರಮದಲ್ಲಿರುವುದನ್ನು ತಿಳಿದು ಪತ್ನಿ ಪುತ್ರ ಪೌತ್ರರನ್ನು ಕೂಡಿದ ಎಂದು ಸ್ಕಂದ ಹಾಗೂ ಬ್ರಹ್ಮವೈವರ್ತ ಪುರಾಣಗಳಲ್ಲಿ ಉಕ್ತವಾಗಿದೆ. *

**ಉದಯಪುರ:** ಭಾರತದ ರಾಜಾಸ್ತಾನ ರಾಜ್ಯದ ಒಂದು ನಗರ. ಜಿಲ್ಲೆಯ ಮುಖ್ಯ ಸ್ಥಳ. ಜನಸಂಖ್ಯೆ 389317 (2001) ಉ. ಅ. 23º 46'–25 '56' ಹಾಗೂ ಪೂ. ರೇ. 72º 50'–75º 38' ನಡುವೆ, ಜಯಪುರದ ನೈರುತ್ಯಕ್ಕೆ 340 ಕಿಮೀ. ದೂರದಲ್ಲಿ, ಆರಾವಳಿ ಶ್ರೇಣಿಯ ಬೆಟ್ಟವೊಂದರ ಕೋಡುಗಲ್ಲಿನ ಮೇಲೆ, ಸಮುದ್ರ ಮಟ್ಟದಿಂದ 750 ಮೀ. (2,469') ಎತ್ತರದಲ್ಲಿದೆ. ಸು. (1570)ರಲ್ಲಿ ಈ ನಗರಸ್ಥಾಪನೆ ಮಾಡಿದ ಮಹಾರಾಣಾ ಉದಯಸಿಂಹನಿಂದ ಇದಕ್ಕೆ ಈ ಹೆಸರು ಬಂದಿದೆ. ಪಿಚೋಡಾ ಸರೋವರದ ಪೂರ್ವ ದಂಡೆಯ ಮೇಲೆ ಆತ ಈ ನಗರವನ್ನು ಸ್ಥಾಪಿಸಿ ಸುತ್ತ ಭದ್ರವಾದ 30 ಮೀ. (100) ಎತ್ತರದ ಕೋಟೆ ಕಟ್ಟಿಸಿದ. ಇಲ್ಲಿರುವ ಅರಮನೆ ಇಡೀ ರಾಜಾಸ್ತಾನದಲ್ಲೇ ಅತ್ಯಂತ ದೊಡ್ಡದು. 1571ರಲ್ಲಿ ಕಟ್ಟಿಸಲಾದ ಈ ಅರಮನೆಯನ್ನು ಮುಂದೆ ಪದೇ ಪದೇ ವಿಸ್ತರಿಸಲಾಗಿದ್ದು ಇದು ಹಲವುಬಗೆಯ ಶಿಲ್ಪಶೈಲಿಗಳನ್ನೊಳಗೊಂಡಿದೆ. ಪಿಚೋಡಾ ಸರೋವರದಲ್ಲಿನ ಎರಡು ದ್ವೀಪಗಳೂ ಅವುಗಳ ಮೇಲೆ ಅಮೃತಶಿಲೆಯಿಂದ ನಿರ್ಮಿತವಾದ ಜಗಮಂದಿರ ಮತ್ತು ಜಗನಿವಾಸ ಅರಮನೆಗಳೂ ಇತಿಹಾಸ ಪ್ರಸಿದ್ಧ. ಮೊಗಲ್ ಚಕ್ರವರ್ತಿ ಜಹಾಂಗೀರನ ಮಗ ಷಾ ಜಹಾನ್ ತಂದೆಯ ವಿರುದ್ಧ ಬಂಡಾಯವೆದ್ದಾಗ ಈ ದ್ವೀಪಗಳಲ್ಲೊಂದರಲ್ಲಿ ವಾಸಿಸುತ್ತಿದ್ದನೆಂದು ಹೇಳಲಾಗಿದೆ. ಉದಯಪುರದ ಸುತ್ತಮುತ್ತ ಪಿಚೋಡಾದಂತೆ ಅನೇಕ ಕೃತಕ ಸರೋವರಗಳಿವೆ. ಕಾಡಿನ ನಡುವೆ ಕುಳಿತಂತಿರುವ ಈ ನಗರದಲ್ಲಿ ಉಪವನಗಳಿಗೂ ಕೊರತೆಯಿಲ್ಲ. ಭೂದೃಶ್ಯ ಉಪವನಯೋಜನೆಯ (ಲ್ಯಾಂಡ್‌ಸ್ಕೇಪ್ ಗಾರ್ಡನಿಂಗ್) ಭಾರತೀಯ ಪದ್ಧತಿಗೆ ಇಲ್ಲಿರುವ ಉದ್ಯಾನವೊಂದು ಉತ್ತಮ ಉದಾಹರಣೆ.



ಸರೋವರ ಹರ್ಮ್ಯದ ವಿಹಾರಧಾಮ

ಹಿಂದಿನ ಶತಮಾನಗಳ ಸ್ತಬ್ಧಚಿತ್ರಗಳನ್ನು ಕಾಣಬಯಸಿ ಇಲ್ಲಿಗೆ ಬರುವ ಪ್ರವಾಸಿಗರಿಗೆ ಇಲ್ಲಿ ಇನ್ನೂ ಅನೇಕ ಬಗೆಯ ಆಕರ್ಷಣೆಗಳುಂಟು. ಉದಯಪುರದ ಪೂರ್ವಕ್ಕೆ ಎರಡು ಮೈಲಿ ದೂರದಲ್ಲಿ ಪುರಾತನ ನಗರವೊಂದರ ಪಳೆಯುಳಿಕೆಗಳಿವೆ. ನಗರದ ಸ್ಥಾಪಕನೇ ನಿರ್ಮಿಸಿದನೆಂದು ಹೇಳಲಾದ ಉದಯ ಸರೋವರ ಇರುವುದು 10 ಕಿಮೀ. ದೂರದಲ್ಲಿ. ನಗರದ ಉತ್ತರಕ್ಕೆ 64 ಕಿಮೀ. ದೂರದಲ್ಲಿರುವ ರಾಜ್‌ಸಮಂದ್ ಸರೋವರ ಇನ್ನೊಂದು ಸುಂದರ ತಾಣ. ಇದರ ಗಾರೆಯ ಏರಿಗೆ ಅಮೃತಶಿಲೆಯ ನೆಲಗಟ್ಟು; ನೀರಿನ ಸಮಾಗಮ ಬಯಸಿ ಸಾಗರದಂತಿರುವ ಹಾಲ್ಗಲ್ಲಿನ ಮೆಟ್ಟಿಲು; ಹೊಳೆಯುವ ಬಿಳಿಶಿಲೆಯಲ್ಲಿ ಕೆತ್ತಿ ನಿಲ್ಲಿಸಿದ ಚಿತ್ತಾರದ ಮೂರು ಮಂಟಪಗಳು. ಈ ಸರೋವರದ ಪಕ್ಕಕ್ಕೆ ಹೊದಿಸಿರುವ ಕಲ್ಲಿನ ಮೇಲೆ ಸಂಸ್ಕೃತ ಶಾಸನವೊಂದಿದೆ (1675). ಇದು ಭಾರತದಲ್ಲೇ ಅತ್ಯಂತ ದೊಡ್ಡದೆಂದು



ಉದಯಪುರ ಅರಮನೆ – ಪಚೋಲ ಸರೋವರದ ನಿಟ್ಟಿನಿಂದ

ಹೇಳಲಾಗಿದೆ. ಇಪ್ಪತ್ತೈದು ಚಪ್ಪಡಿಗಳ ಮೇಲೆ ಹರಿದಿರುವ ಈ ಶಾಸನಕ್ಕೆ ಮೇವಾಡದ ಇತಿಹಾಸವೇ ವಸ್ತು.

ಉದಯಪುರಕ್ಕೆ ಆಗ್ನೇಯದಲ್ಲಿ 51 ಕಿಮೀ. ದೂರದಲ್ಲಿರುವ ಢೇಬರ್ ಅಥವಾ ಜೈಸಮಂದ್ ಸರೋವರದ ವಿಸ್ತಾರ 52 ಚ.ಕಿಮೀ. ಇದಕ್ಕೆ ಕಟ್ಟಿರುವ ಕಟ್ಟೆ ಸು. 4ಕಿ.ಮೀ. ಉದ್ದ; 30 ಮೀ. ಎತ್ತರ. ಇದು ಒಂದು ಶಿಲ್ಪ ಕೌತುಕ.

ಉದಯಪುರದ ಉತ್ತರಕ್ಕೆ 22 ಕಿಮೀ. ದೂರದಲ್ಲಿರುವ ದೇವಸ್ಥಾನದಲ್ಲಿ ಮೇವಾಡದ ಅರಸರ ಮನೆದೇವರಾದ ಏಕ್‌ಲಿಂಗ್‌ಜಿಯ ದೇವಸ್ಥಾನವಿದೆ. ಇಲ್ಲಿ 8ನೆಯ ಶತಮಾನದಲ್ಲಿ ನಿರ್ಮಿಸಲಾದ ಕಟ್ಟಡದ ತಳಹದಿಯ ಮೇಲೆ 15ನೆಯ ಶತಮಾನದಲ್ಲಿ ಈಗಿನ ಕಟ್ಟಡ ನಿರ್ಮಿಸಲಾಯಿತು. ಸ್ವಲ್ಪ ದೂರದಲ್ಲೇ ಇರುವ ಇನ್ನೆರಡು ದೇಗುಲಗಳು 11ನೆಯ ಶತಮಾನದವು.

ಉದಯಪುರದಿಂದ ಉತ್ತರಕ್ಕೆ ಇನ್ನೂ ದೂರ ಸಾಗಿದರೆ ಸಿಕ್ಕುವುದೇ ನಾಥದ್ವಾರ. ಭಾರತದ ಅನೇಕ ಕಡೆಗಳಿಂದ ಯಾತ್ರಿಕರನ್ನು ಸೆಳೆಯುವ ಕೃಷ್ಣಮಂದಿರ ಇಲ್ಲಿದೆ. ಇಲ್ಲಿನ ವಿಗ್ರಹ 12ನೆಯ ಶತಮಾನದ್ದೆಂದೂ ಮುಸ್ಲಿಂ ವಿಗ್ರಹ ಭೇದಕರ ಕೈತಪ್ಪಿಸಿ 1669ರಲ್ಲಿ ಇದನ್ನು ಇಲ್ಲಿಗೆ ತರಲಾಯಿತೆಂದೂ ಹೇಳಲಾಗಿದೆ. ಇದನ್ನು ರಥದಲ್ಲಿ ಸಾಗಿಸುತ್ತಿದ್ದಾಗ ಹಾದಿಯಲ್ಲಿ ಅದರ ಚಕ್ರ ನೆಲದಲ್ಲಿ ಹೂತುಹೋಯಿತೆಂದೂ ಎಷ್ಟೇ ಪ್ರಯತ್ನಿಸಿದರೂ ಅದು ಮುಂದೆ ಹೋಗಲೇ ಇಲ್ಲವೆಂದೂ ಕಥೆಯುಂಟು.

ಉದಯಪುರಕ್ಕೆ 66 ಕಿಮೀ ದೂರದಲ್ಲಿರುವ ಹಲ್ದಿಘಾಟ್ ಇತಿಹಾಸ ಪ್ರಸಿದ್ಧ. ಇದನ್ನು ಭಾರತದ ಥರ್ಮಾಪೈಲೇ ಎನ್ನಬಹುದು. ಪ್ರಶ.ಪೂ. 3ನೆಯ ಶತಮಾನದಲ್ಲಿ ಅಲ್ಲಿ ಗ್ರೀಕರು ಪರ್ಷಿಯನ್ ಸಾಮ್ರಾಜ್ಯದ ಸೈನ್ಯವನ್ನು ಶೌರ್ಯದಿಂದ ಎದುರಿಸಿದ ಹಾಗೆ ಇಲ್ಲಿ ಮಹಾರಾಣಾ ಪ್ರತಾಪನ ಸೈನಿಕರು ಸಾಮ್ರಾಟ್ ಅಕ್ಬರನ ಸೈನ್ಯವನ್ನು ಎದುರಿಸಿ ಹೋರಾಡಿದರು. ರಾಣಾನ ಕಡೆಯ ಒಬ್ಬೊಬ್ಬ ಸೈನಿಕನಿಗೂ ಅಕ್ಬರನ ಕಡೆಯ 100 ಮಂದಿ ಇದ್ದರೂ ಇವರು ಒಟ್ಟಾಗಿ ನಿಂತು ಕಾದಾಡಿ ಮಡಿದರು. ಆದರೂ ಪ್ರತಾಪ ಜಗ್ಗಲಿಲ್ಲ; ತನ್ನ ನೆಚ್ಚಿನ ಕುದುರೆಯಾದ ಚೈತಕನ ಮೇಲೆ ಕುಳಿತು ಬೆಟ್ಟಗಾಡಿಗೆ ಹೋದ; ಮರಳಿ ಬಲ ಗಳಿಸಿ ಬಂದು ಕಾದಾಡಿ ತಾನು ಕಳೆದುಕೊಂಡಿದ್ದ ನೆಲದ ಬಹು ಭಾಗವನ್ನು ಗೆದ್ದ.



ನೀಲಕಂಠೇಶ್ವರ ದೇವಾಲಯ

ಇತಿಹಾಸದ ಸೋಲುಗೆಲವುಗಳನ್ನೂ ಗೋರಿ ಅರಮನೆಗಳನ್ನೂ ತುಂಬಿಕೊಂಡು ನಿಂತಿರುವ ಉದಯಪುರದಲ್ಲಿ ಎಲ್ಲೆಲ್ಲೂ ಹಸಿರೂ ನಡುನಡುವೆ ಅಮೃತಶಿಲೆಯೂ ಥಳಥಳಿಸುವ ಬಣ್ಣ ಗಾಜೂ ಇತಿಹಾಸದ ಪಡಿನೆಳಲನ್ನು ಹೊತ್ತು ನಿಂತಂತಿರುವ ತಿಳಿನೀರಿನ ಕಾಸಾರಗಳೂ ನಗರದ ರಮ್ಯತೆಯನ್ನು ಎತ್ತಿ ಸಾರುತ್ತಿವೆ.

ಉದಯಪುರ ಜಿಲ್ಲೆಯ ವಿಸ್ತೀರ್ಣ 17,643 ಚ.ಕಿಮೀ. ಜನಸಂಖ್ಯೆ 2632210 (2001). ಈ ಜಿಲ್ಲೆಯ ಹೆಚ್ಚು ಭಾಗ ಪರ್ವತಮಯ. ದಕ್ಷಿಣ ಭಾಗ ಕಪ್ಪು ಮಣ್ಣಿನಿಂದ ಕೂಡಿದೆ. ಆಗ್ನೇಯ–ನೈರುತ್ಯವಾಗಿ ಹಾಯುವ ಆರಾವಲಿ ಶಾಖೆಯೊಂದರಲ್ಲಿ ಅಭ್ರಕ, ಸೀಸ, ತವರ, ಮೇದಶ್ಶಿಲೆ (ಸ್ಟೀಯಟೈಟ್) ಮತ್ತು ಕಲ್ನಾರು ಇವೆ. ಮರಳು ಕಲ್ಲು, ಸುಣ್ಣಕಲ್ಲು ಮತ್ತು ಅಮೃತಶಿಲೆಗಳಿಗೂ ಕೊರತೆಯಿಲ್ಲ.

ಉದಯಪುರ ಜಿಲ್ಲೆ ದಕ್ಷಿಣೋತ್ತರವಾಗಿ ಇಳಿಜಾರು. ಬನಾಸ್ ನದಿಯೂ ಅದನ್ನು ಕೂಡುವ ಅನೇಕ ತೊರೆಗಳೂ ಆರಾವಳಿಯಲ್ಲಿ ಹುಟ್ಟಿ ಹರಿಯುತ್ತವೆ. (ಟಿ.ಆರ್.ಪಿ.; ಬಿ.ಕೆ.ಜಿ.)

**ಇತಿಹಾಸ:** ಈಗಿನ ಉದಯಪುರ ನಗರ ನಿರ್ಮಾಣವಾದದ್ದು 16ನೆಯ ಶತಮಾನದಲ್ಲಿ. 1568ರಲ್ಲಿ ಅಕ್ಬರನ ಸೇನೆಗಳಿಗೆ ಚಿತ್ತೂರು ವಶವಾದಾಗ ವಿಲಾಸಪ್ರಿಯ ಉದಯಸಿಂಹ ಅಲ್ಲಿಂದ ಹಿಮ್ಮೆಟ್ಟಿ ಬಂದು ಈ ನಗರವನ್ನು ನಿರ್ಮಿಸಿ ಇದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ.

ರಾಜಾ ಉದಯಸಿಂಹ ಶಿಶೋಡಾ ವಂಶದವನೆಂದೂ ರಜಪೂತರಲ್ಲಿ ಇದು ಶ್ರೇಷ್ಠ ಮನೆತನವೆಂದೂ ಹೇಳಲಾಗಿದೆ. ಈ ರಜಪೂತ ಕುಟುಂಬದವರು ಮುಸ್ಲಿಂ ಅರಸರಿಗೆ ಶರಣಾಗತರಾಗದೆ, ಆಶೆ–ಆಮಿಷಗಳಿಗೆ ತಲೆಬಾಗದೆ, ರಕ್ತಸಂಬಂಧ ಬೆಳೆಯಿಸದೆ ಉಳಿಯುವ ಉದ್ದೇಶ ಹೊಂದಿ ಅಭಿಮಾನದಿಂದ ಕಾದಿದರು. ಇವರ ಪರಂಪರೆ 144ರಲ್ಲಿ ರಾಣಾ ಕನಕಸೇನನಿಂದ ಪ್ರಾರಂಭವಾಯಿತೆಂದೂ 728ರಲ್ಲಿ ಈ ಮನೆತನದ ಬಾಪ್ಪಾ ರಾವಳ ಚಿತ್ತೂರಲ್ಲಿ ಮೇವಾಡ ರಾಜ್ಯ ಸ್ಥಾಪಿಸಿಕೊಂಡು ಪ್ರಭಾವಶಾಲಿಯಾಗಿದ್ದನೆಂದೂ ಈ ದೇಶಕ್ಕೆ ಮೊಟ್ಟಮೊದಲು ಬಂದ ಮುಸ್ಲಿಂ ಆಕ್ರಮಣಕಾರರನ್ನು ಈತ ಎದುರಿಸಿ ಹಿಮ್ಮೆಟ್ಟಿಸಿದನೆಂದೂ ಹೇಳಲಾಗಿದೆ. ಮುಂದೆ ಇಲ್ಲಿನ ಅರಸರು ಉದ್ದಕ್ಕೂ ಮುಸ್ಲಿಂ ಆಡಳಿತವನ್ನೆದುರಿಸಿ ಕಾದುತ್ತಲೇ ಇದ್ದರು.

ಉದಯಪುರ ನಗರ ಅನೇಕ ರಾಜಕೀಯ ದಾಳಿಗಳಿಗೆ ತುತ್ತಾಗುತ್ತಲೇ ಬಂತು. ಮೊಗಲ ಸಾಮ್ರಾಟರ ದಾಳಿಯನ್ನು ತಪ್ಪಿಸಿಕೊಂಡು ನಿಲ್ಲುವಷ್ಟರಲ್ಲಿ 1736ರಲ್ಲಿ ಬಾಜೀರಾಯ ಪೇಷ್ವೆ ಮಹಾದಾಜಿಸಿಂಧೆ, ಹೋಳಕರ ಮುಂತಾದ ಮರಾಠರನ್ನೆದುರಿಸಬೇಕಾಯಿತು. ರಜಪೂತರ ಒಗ್ಗಟ್ಟು ಹರಿಯಿತು. ಇಡೀ ಭಾರತದಲ್ಲಿ ಮೊಗಲ–ಮರಾಠ ರಾಜ್ಯಗಳು ಅಳಿದುಹೋಗಿ ಸಂಭವಿಸಿದ ಅನಾಯಕತ್ವದ ಪರಿಣಾಮವಾಗಿ ಥಗ್ಗರು (ಠಕ್ಕರು) ಮತ್ತು ಪೆಂಡಾರಿಗಳ ಹಾವಳಿ ಪಸರಿಸಿತು. ಇಲ್ಲಿನ ರಜಪೂತ ಅರಸರು ದುರ್ಬಲರಾಗಿ ಬ್ರಿಟಿಷರ ಮೊರೆ ಹೊಕ್ಕರು. 1817ರಲ್ಲಿ ಇದು ಬ್ರಿಟಿಷರ ರಕ್ಷಣೆಗೆ ಒಳಪಟ್ಟಿತು. 1948ರಲ್ಲಿ ಸ್ವತಂತ್ರ್ಯ ಭಾರತದ ರಾಜಾಸ್ತಾನದಲ್ಲಿ ವಿಲೀನವಾಯಿತು. (ಟಿ.ಆರ್.ಪಿ.)

**ಉದಯ ಮಾರ್ತಾಂಡ:** ತಿರುವಾಂಕೂರಿನ ಒಂದು ಭಾಗವಾದ ವೈನಾಡಿನಲ್ಲಿ 15ನೆಯ ಶತಮಾನದಲ್ಲಿ ರಾಜ್ಯವಾಳಿದ ಚೇರಸಂತತಿಯ ದೊರೆ. ತಿರುವಾಂಕೂರಿನ ಇತಿಹಾಸ ದಲ್ಲಿ ಈತನಷ್ಟು ದೀರ್ಘಕಾಲ ಮತ್ತ್ಯಾರೂ ಆಳಿಲ್ಲ. ಈತ ತನ್ನ ರಾಜ್ಯದ ದಕ್ಷಿಣಕ್ಕಿದ್ದ ಪ್ರದೇಶವನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದ. ವಳ್ಳಿಯೂರಿನಲ್ಲಿ ಹೆಚ್ಚಾಗಿ ಇರುತ್ತಿದ್ದುದರಿಂದ ರಾಜ್ಯದ ಪೂರ್ವ ಭಾಗದಲ್ಲಿ ಅನೇಕ ಪಾಳೆಯಗಾರರು ದಂಗೆಯೆದ್ದು ಸ್ವಾತಂತ್ರ್ಯವನ್ನು ಘೋಷಿಸಿದರು. ಉದಯ ಮಾರ್ತಾಂಡ ತನ್ನ 28ನೆಯ ವಯಸ್ಸಿನಲ್ಲಿ ಮೃತಪಟ್ಟ (1444). (ಎಂ.ವಿ.ಎಸ್.ಆರ್.)

**ಉದಯರಾಗ:** ಧಾರ್ಮಿಕ ಅಥವಾ ಆಧ್ಯಾತ್ಮಿಕ ಸಾಹಿತ್ಯಭಾವವನ್ನೊಳಗೊಂಡ ಜಾನಪದ ಗೇಯಪ್ರಕಾರ. ದ್ರಾವಿಡ ದೇಶಗಳಲ್ಲಿ ಹೆಚ್ಚು ಕಡಿಮೆ ಇದೇ ಹೆಸರಿನಿಂದ ಪ್ರಸಿದ್ಧವಾಗಿದೆ. ಔತ್ತರೇಯರ ಜಾನಪದ ಜೀವನದಲ್ಲೂ ತತ್ ಸದೃಶವಾದ ಹಾಡಿನ ರೀತಿಗಳನ್ನು ಕಾಣಬಹುದು. ಉದಯರಾಗ ಎಂಬ ಶಬ್ದ ಅರುಣೋದಯ ವೇಳೆಯನ್ನೂ ತತ್ಕಾಲ ಸಂಬಂಧದಲ್ಲಿ ವಿಧಿಸಲ್ಪಟ್ಟ ಆಚಾರಸಮಯದ ರಾಗಸಹಿತವಾದ, ಎಂದರೆ ಹಾಡಿಕೊಂಡ, ಸ್ಮರಣೆಯನ್ನೂ ಸೂಚಿಸುತ್ತದೆ. ಈ ಎರಡು ಅರ್ಥಗಳಲ್ಲೂ ಇಂದು ಪ್ರಯೋಗವಿಸ್ತಾರವನ್ನು ಪಡೆದಿದೆ. ಇಲ್ಲಿ ಈ ಪ್ರಬಂಧಪ್ರಕಾರ ಕನ್ನಡದಲ್ಲಿ ರೂಢವಾಗಿರುವ ರೀತಿಯನ್ನು ಮಾತ್ರ ಕುರಿತು ಸಂಕ್ಷೇಪವಾಗಿ ಹೇಳಲಾಗುವುದು.

**ಜನಪದದಿಂದ ಶಾಸ್ತ್ರೀಯ ಕಲೆಗೆ:** ಜನಪದ ಸಂಗೀತ ಸಾಹಿತ್ಯಗಳಲ್ಲಿ ಪ್ರಬಂಧ ರೀತಿಗಳು ಸಾಮಾನ್ಯ ವ್ಯಕ್ತಿಯ ದಿನಚರಿಯಲ್ಲಿ ವಿಶೇಷವಾಗಿ ಆಯಾ ಕಾಲ, ಕರ್ಮಗಳಿಗೆ ಸಂಬಂಧಿಸಿದಂತೆ ವಸ್ತುನಿಷ್ಠವಾಗಿರುವವೇ ಹೆಚ್ಚು. ಭಾರತದಂಥ, ಅದರಲ್ಲೂ ಕನ್ನಡ ನಾಡಿನಂಥ, ಅಧ್ಯಾತ್ಮ ಪ್ರವೃತ್ತಿ, ಧಾರ್ಮಿಕ ಆಚಾರ ಶೀಲಗಳಲ್ಲಿಯೇ ವಿಶೇಷವಾಗಿ ಒಲವಿರುವ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿಯೇ ಇದರ ಪ್ರಭಾವ ಜನಪದ ಹಾಡುಗಳಲ್ಲಿ ಹೆಚ್ಚಾಗಿರುತ್ತದೆ. ಎಂದೇ ಈ ಹಾಡುಗಳಲ್ಲಿ ಹಲವು ಸಾಮುದಾಯಿಕ ಸ್ಮರಣರೂಪವಾಗಿ ಆಚಾರ, ವಿಚಾರ, ಧರ್ಮಗಳ ದಾಖಲೆಗಳಾಗಿ ಉಳಿದಿವೆ. ಭಾರತದ ಧಾರ್ಮಿಕ ಇತಿಹಾಸದಲ್ಲಿ 15–16 ಶತಮಾನಗಳು ಮುಖ್ಯ. ಏಕೆಂದರೆ ಭಾರತದ ವಿವಿಧ ಭಾಗಗಳಲ್ಲಿ ಈ ಸುಮಾರಿಗೆ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಮತಸಂಬಂಧ ಚಿಂತನೆಗಳಲ್ಲಿ ಸಂಸ್ಕೃತ ಪ್ರಧಾನವಾಗಿದ್ದ ಮಾರ್ಗಪ್ರವೃತ್ತಿಯ ಬದಲು ಆಡುಮಾತಿನ ದೇಶ್ಯಪ್ರವೃತ್ತಿಯನ್ನು ಪ್ರತಿಭಾವಂತ ನಾಯಕರು ಪ್ರಚುರಪಡಿಸಿದರು. ಮೊದಲು ಇದಕ್ಕೆ ಬಂಡಾಯದ ಸ್ಥಾನಮಾನಗಳೇ ದೊರಕಿ ತೀವ್ರ ಪ್ರತಿಭಟನೆಯೇ ದೊರೆತರೂ ಒಂದೆರಡು ಶತಮಾನಗಳಲ್ಲೇ ಸಂಸ್ಕೃತಿ ಪ್ರವಾಹವನ್ನು ಶ್ರೀಸಾಮಾನ್ಯನ ಮನೆಬಾಗಿಲಿಗೆ ತಂದರೆ ಮಾತ್ರ ಸನಾತನ ಧರ್ಮದ ದಕ್ಷ ಪುನರುತ್ಥಾನವೂ ಅವಿಚ್ಛಿನ್ನ ಪರಂಪರೆಯ ಸಾಧನೆಯೂ ಆದೀತೆಂಬ ಸತ್ಯದರ್ಶನವಾದುದರ ಫಲವಾಗಿ, ಜನಸಾಮಾನ್ಯರಿಂದ ಅಭೂತಪೂರ್ವ ಉತ್ಸಾಹದ ಸ್ವಾಗತವೇ ದೊರೆತು ಸ್ಥಿರವಾಗಿ ನಿಂತಿತು. ಮಂತ್ರಗಳನ್ನೂ ತಂತ್ರಗಳನ್ನೂ ವೇದೋಪನಿಷದ್ರಹಸ್ಯಗಳನ್ನೂ ನಿಘಂಟುಗಳನ್ನೂ ಕನ್ನಡದ ತಿಳಿಯಾದ ಮಾತುಗಳಲ್ಲಿಯೇ ಹೇಳುವ ಪದ್ಧತಿ ಕನ್ನಡ ದೇಶದಲ್ಲಿ ಹರಿಶರಣರಿಂದಲೂ ಜಿನಶರಣರಿಂದಲೂ ಬಹು ಹಿಂದಿನಿಂದ ರೂಢಿಗೆ ಬಂದಿತು.

ಈ ನಿಟ್ಟಿನಲ್ಲಿ ಕರ್ನಾಟಕದ ಹರಿದಾಸರ ಪ್ರತಿಭೆಯೂ ಸೇವೆಯೂ ವಿಶೇಷವಾಗಿ ಸ್ಮರಣೀಯವಾಗಿವೆ. ಅವರು ಪುರಂದರದಾಸರ ನಾಯಕತ್ವದಲ್ಲಿ ಸುವ್ವಾಲಿ, ಜೋಗುಳ, ಲಾವಣಿ, ಸಾಂಗತ್ಯ, ಬುಡುಬುಡಿಕೆ ಮೊದಲಾದ ಜನಪದ ಛಂದಸ್ಸುಗಳನ್ನೂ ಮಟ್ಟುಗಳನ್ನೂ ಬೋಧನ ಮತ್ತು ಪ್ರಸಾರಗಳ ಉಪಕರಣವಾಗಿ ಬಳಸಿಕೊಂಡರು. ಉದಯರಾಗ ಈ ಜಾತಿಗೆ ಸೇರಿದ ಹಾಡು. ಇವರ ಸಾಧನೆಯ ಫಲವಾಗಿ ಈ ಹಾಡಿನ ರೀತಿಗಳಲ್ಲಿ ಕೆಲವಕ್ಕೆ ಶಾಸ್ತ್ರೀಯ ಸಂಗೀತದ ವೇದಿಕೆಗಳಲ್ಲಿ ಪ್ರಯುಕ್ತಿಯ ಗೌರವ ದೊರಕಿತು. ಶಾಸ್ತ್ರೀಯವೂ ಸಾಂಪ್ರದಾಯಿಕವೂ ಆದ ಸಂಗೀತ ಮರ್ಯಾದೆಯ ಚೌಕಟ್ಟಿನಲ್ಲಿ ನೀತಿ, ಸಮಾಜಪ್ರಜ್ಞೆ, ಆತ್ಮಬೋಧೆ ಮೊದಲಾದ ಗಹನವೂ ಸಾರ್ವಕಾಲಿಕವೂ ಆದ ಮೌಲ್ಯಗಳನ್ನು ಪಾಮರರಂಜನೆಯೂ ಆಗುವಂತೆ ಹೃದ್ಯಶೈಲಿಯಲ್ಲಿ ಅತ್ಯಂತ ಸಹಜವೂ ಸ್ವಾಭಾವಿಕವೂ ಎನ್ನಿಸುವಂಥ ರೀತಿಯಲ್ಲಿ ಹಾಡು ಕಟ್ಟುವ ಚಿರಂತನ ಸ್ಫೂರ್ತಿ, ವ್ಯಾಪಕ ಸಾಮಗ್ರಿ– ಇವುಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅವರು ಮೈಗೂಡಿಸಿಕೊಂಡಿದ್ದರಿಂದ ಇದು ಸಾಧ್ಯವಾಯಿತು.

**ಸ್ವರೂಪ:** ಉದಯರಾಗದ ಸಾಹಿತ್ಯ ಸ್ತುತಿ, ಆಚಾರ, ಶೀಲ, ಸುಪ್ರಭಾತ ಮುಂತಾದವುಗಳ ಭಾವವನ್ನು ಒಳಗೊಂಡಿದೆ. ನಿರೂಪಣಾತ್ಮಕವೂ, ಬೋಧನರೂಪದ ಶೈಲಿಯೇ ಸಾಮಾನ್ಯವಾಗಿ ಇದರಲ್ಲಿ ಕಂಡುಬರುತ್ತದೆ. ಮಾತುಗಳು ತುಂಬ ತಿಳಿಯಾಗಿ, ಸರಳವಾಗಿ, ಆಡುಮಾತಿನ ನುಡಿಗಟ್ಟಿನಲ್ಲಿರುತ್ತವೆ. ಛಂದಸ್ಸು ಇಂಥದೇ ಎಂದು ಹೇಳಲು ಬರುವುದಿಲ್ಲವಾದರೂ ಪುರಂದರದಾಸ, ಕನಕದಾಸ, ಮೊದಲಾದವರ ಒಲವು ಷಟ್ಪದಿಗಳಲ್ಲಿಯೇ–ವಿಶೇಷವಾಗಿ ವಾರ್ಧಕದಲ್ಲಿ– ಇರುವುದನ್ನು ಕಾಣಬಹುದು. ಅಕ್ಷರಗಣ ಛಂದಸ್ಸು ಅಪರೂಪವಾಗಿಯೂ ಮಾತ್ರಾಗಣದಲ್ಲಿ ಪಂಚಮಾತ್ರೆಗಳ ಗಣದ ಖಂಡನಡೆ ಅಧಿಕವಾಗಿಯೂ ಉದಯರಾಗಗಳಲ್ಲಿ ದೊರೆಯುತ್ತದೆ. ದ್ವಿತೀಯಾಕ್ಷರ ಪ್ರಾಸವೇ ಹೆಚ್ಚು ರೂಢಿಯಲ್ಲಿದೆ. ಪುರಂದರದಾಸರ ಗಜೇಂದ್ರಮೋಕ್ಷ ಮತ್ತು ಕಾಶೀಯಾತ್ರೆಗಳ ಪ್ರಸಿದ್ಧ ಉದಯರಾಗಗಳನ್ನು ಇಲ್ಲಿ ನೆನೆಯಬಹುದು. ಇಂದಿಗೂ ಅವನ್ನು ಆಚಾರಶೀಲ ಬ್ರಾಹ್ಮಣ ಕುಟುಂಬಗಳಲ್ಲಿ ಹೆಂಗಸರು ಮುಂಜಾನೆಯಲ್ಲಿ ರಂಗವಲ್ಲಿ ಹಾಕುವಾಗಲೋ ಸ್ನಾನ–ಮಡಿಗಳ ವೇಳೆಯಲ್ಲೋ ಹಾಡಿಕೊಳ್ಳುವುದನ್ನು ಕೇಳಬಹುದು. ವಾಸವನೆ ಮಾಡಿಕೋ ಕಾಶಿಯಲ್ಲಿ–ಎಂದು ಪ್ರಾರಂಭವಾಗುವ ಕಾಶೀವಾಸ ಉದಯರಾಗದಲ್ಲಿ ಮಾಧ್ವ ಸಂಪ್ರದಾಯದವರಿಗೆ ಕಾಶಿಯಲ್ಲಿ ವಿಧಿಸಿರುವ ಪಂಚಕ್ರೋಶವೆಂಬ ಐದು ದಿನದ ಯಾತ್ರೆಯನ್ನು ಕ್ಷೇತ್ರ, ನದೀವರ್ಣನೆಗಳೊಡನೆ ವಿವರವಾಗಿ ಹೇಳಿದೆ. ಒಂಬತ್ತು ನುಡಿಗಳುಳ್ಳ ಇದನ್ನು ಪುರಂದರದಾಸರೇ ನವರತ್ನ ಮಾಲಿಕೆಯೆಂಬ ಹೆಸರಿನಿಂದ ಕರೆದಿದ್ದಾರೆ. ನಾರಾಯಣಾಯ ನಮೋ ಎಂದು ಪ್ರಾರಂಭವಾಗುವ ಗಜೇಂದ್ರಮೋಕ್ಷದಲ್ಲಿ ಹನ್ನೊಂದು ನುಡಿಗಳಿದ್ದು ಪಾಂಡ್ಯ ದೇಶದ ಇಂದ್ರದ್ಯುಮ್ನ ದೊರೆ ಅಗಸ್ತ್ಯ ಶಾಪದಿಂದ ಸಲಗನಾಗಿ ಹುಟ್ಟಿ, ದೇವಲ ಋಷಿಯ ಶಾಪದಿಂದ ಮೊಸಳೆಯಾಗಿ ಹುಟ್ಟಿದ್ದ ಹೂಹೂ ಎಂಬ ಗಂಧರ್ವನಿಂದ ಸರೋವರದಲ್ಲಿ ಹಿಡಿಯಲ್ಪಟ್ಟು ಗರ್ವಭಂಗಿತನಾಗಿ ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ಎಂಬ ಭಾವದಲ್ಲಿ ವಿಷ್ಣುವನ್ನು ಬೇಡಿಕೊಳ್ಳಲಾಗಿ ಮಕರಬಾಧೆಯಿಂದಲೂ ಶಾಪದಿಂದಲೂ ಮುಕ್ತನಾದ ಚಿರಪ್ರಸಿದ್ಧ ಕಥೆ ಇದೆ. ಜೊತೆಗೆ ವಾಸುದೇವಾಯ ನಮೋ ಎಂದು ಪ್ರಾರಂಭವಾಗುವ ಕನಕದಾಸರ ದ್ರೌಪದೀಮಾನ ಸಂರಕ್ಷಣೆಯ ಉದಯರಾಗವೂ ಇದೆ. ಪುರಂದರದಾಸರ ರಂಗನೊಲಿದ ಎಂಬ ಇಪ್ಪತ್ತೊಂದು ನುಡಿಗಳ ಹಾಡನ್ನು ಅಪೂರ್ವವಾಗಿ ಉದಯರಾಗವಾಗಿಯೇ ಹಾಡಿಕೊಳ್ಳುವುದೂ ಉಂಟು. ಇದು ಷಟ್ಪದಿಯಲ್ಲಿ, ಚೌಪದಿಯಲ್ಲಿ, ದ್ವಿತೀಯಾಕ್ಷರ ಪ್ರಾಸದಲ್ಲಿ ರಚಿತವಾಗಿದೆ. ಇದನ್ನು ಕೃತಿಯಾಗಿ ಬೇಕಾದರೂ ಹಾಡಿಕೊಳ್ಳಬಹುದು. ಆದರೆ ಕಥಾವಸ್ತುವನ್ನು ಒಳಗೊಂಡಿರುವುದರಿಂದ ಒಂದೆರಡು ನುಡಿಗಳನ್ನು ಮಾತ್ರ ಕೃತಿಗಳಲ್ಲಿರುವಂತೆ ಹಾಡಿಕೊಂಡರೆ ಹಾಡಿನ ಉದ್ದೇಶ ನಿರರ್ಥಕವಾಗುತ್ತದೆ. ಇವುಗಳೇ ಅಲ್ಲದೆ ಕೋಳಿ ಕೂಗಿತಲ್ಲಾ, ಉದಯಕಾಲದೊಳೆದ್ದು, ಈಗಲುಪ್ಪವಡಿಸಿದಳು,ರಂಗನಾಯಕಸ್ವಾಮಿ... ಬೆಳಗಾಯಿತೇಳೆನ್ನುತ, ಉಪ್ಪವಡಿಸಯ್ಯ ಹರಿಯೇ, ಏಳಯ್ಯ ಬೆಳಗಾಯಿತು, ಏಳಯ್ಯ ಶ್ರೀ ಹರಿ ಹಾಗೂ ಚಿರಪ್ರಸಿದ್ಧವಾದ ಏಳು ನಾರಾಯಣ, ಏಳು ಲಕ್ಷ್ಮೀರಮಣ ಇತ್ಯಾದಿ ಸುಪ್ರಭಾತವನ್ನು ಹೇಳುವ ಹಾಡುಗಳು ಉದಯರಾಗಗಳೇ, ಉದಯಗೀತಗಳೇ ಆಗಿವೆ. ಆದರೆ ಇವು ಕೃತಿಯ ಶೈಲಿಯಲ್ಲಿವೆ.

ಸಂಗೀತ ಧಾತುವಿನ ದೃಷ್ಟಿಯಿಂದ ಉದಯರಾಗವೆಂದರೆ ಇಂದು ಸಾಧಾರಣವಾಗಿ ಭೂಪಾಳಿ, ರೇಗುಪ್ತಿಗಳ ಮಟ್ಟೀ ಆಗಿದೆ. ಉದಯಗೀತೆಗಳನ್ನು ಬಿಲಹರಿ, ದೇಶಾಕ್ಷಿ, ಆನಂದಭೈರವಿಗಳಲ್ಲಿ ಹಾಡುವ ರೂಢಿಯೂ ಉಂಟು. ರತ್ನಾಕರವರ್ಣಿಯೇ ಮೊದಲಾದ ಕವಿಗಳು ವೇಳಾವಳಿ, ಗುಂಡಕ್ರಿಯೆ ಮೊದಲಾದ ಇತರ ರಾಗಗಳನ್ನು ಉದಯಕಾಲದ ರಾಗಗಳೆಂದೇ ಹೇಳಿದ್ದಾರೆ. ಶಾಸ್ತ್ರದಲ್ಲೂ ಗುಂಡುಕ್ರಿಯೆ, ಮಲಹರಿ ಮೊದಲಾದ ಮಾಯಾಮಾಳವಗೌಳಜನ್ಯರಾಗಗಳನ್ನೂ ಇತರ ಕೆಲವನ್ನೂ ಪ್ರಾತರ್ಗೇಯ ರಾಗಗಳೆಂದು ವರ್ಣಿಸಿದೆ. ಉದಯರಾಗದ ಹಾಡುಗಳನ್ನು ಷಟ್ಪದಿಯವುಗಳನ್ನೂ ಒಳಗೊಂಡು ಪಲ್ಲವಿ, ಅನುಪಲ್ಲವಿ ಮತ್ತು ಅನೇಕ ನುಡಿಗಳಲ್ಲಿ ಹಾಡುತ್ತಾರೆ. ಪ್ರತಿನುಡಿಯ ಅನಂತರವೂ ಪಲ್ಲವಿಯ ಅಂತ್ಯಾಕ್ಷರ ದೀರ್ಘವಾಗುತ್ತದೆ. ಉಳಿದೆಲ್ಲ ಜನಪದ ಗೀತೆಗಳಂತೆ ಇದೂ ಮಾತು (ಸಾಹಿತ್ಯ)ಪ್ರಧಾನವಾದುದು, ಧಾತು ಪ್ರಧಾನವಲ್ಲ. ಕ್ರಮೇಣ ಕಣ್ಮರೆಯಾಗುತ್ತಿರುವ ಉದಯರಾಗದಂಥ ಸುಂದರ ಸಾಂಪ್ರದಾಯಿಕ ಹಾಡುಗಳನ್ನು ಉಳಿಸಿಕೊಂಡು ಶುದ್ಧರೂಪಿನಲ್ಲಿ ನಿಲ್ಲಿಸಿ ಹರಡುವುದರ ಕಡೆಗೆ ಸಂಗೀತ ಸಾಹಿತ್ಯ ಸಂಪ್ರದಾಯಪ್ರಿಯರ ಗಮನಹರಿಯಬೇಕಾಗಿದೆ. (ಆರ್.ಎಸ್.ಎನ್.)

**ಉದಯವಾಣಿ:** 1970 ಜನವರಿ 1ರಂದು ಪ್ರಾರಂಭವಾದ ಉದಯವಾಣಿ ರಾಜಧಾನಿ ಬಿಟ್ಟು ದೂರದಲ್ಲಿ ಸಮೃದ್ಧವಾಗಿ ಬೆಳೆದು ಬಂದ ಮುಖ್ಯವಾಹಿನಿಯ ಕನ್ನಡ ದಿನಪತ್ರಿಕೆ. ಅಂದಿನಿಂದ ಇಂದಿನವರೆಗೂ (2006) ಅದರ ಸಂಪಾದಕರು ಟಿ. ಸತೀಶ ಪೈ. ಅವರೇ ಪ್ರಕಾಶನ ಸಂಸ್ಥೆ ಮಣಿಪಾಲ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್ (ಈಗ ಮಣಿಪಾಲ ಮೀಡಿಯಾ ನೆಟ್‍ವರ್ಕ್) ಮಾಲೀಕರು ಕೂಡ.

ಉದಯವಾಣಿ 1993ರಲ್ಲಿ ಬೆಂಗಳೂರಿನಲ್ಲಿ ರಾಜಧಾನಿ ಆವೃತ್ತಿ ಪ್ರಾರಂಭಿಸಿತು. ಮೊದಲ ಆರುವರ್ಷಗಳ ಕಾಲ ಈಶ್ವರ ದೈತೋಟ ಇದರ ಸ್ಥಾನಿಕ ಸಂಪಾದಕರಾಗಿದ್ದರು. ಈಗ ಡಾ. ಪೂರ್ಣಿಮಾ ಸ್ಥಾನಿಕ ಸಂಪಾದಕರಾಗಿದ್ದಾರೆ. ಉದಯವಾಣಿ ಸೋದರಿ ಪ್ರಕಟಣೆಗಳಾಗಿ ತುಷಾರ (1973) ಮಾಸಪತ್ರಿಕೆ, ರೂಪತಾರಾ (1976) ಸಿನಿಮಾ ಮಾಸಿಕ, ತರಂಗ (1982) ವಾರಪತ್ರಿಕೆ ಹಾಗೂ ತುಂತುರು (1999) ಎಂಬ ಮಕ್ಕಳ ಪತ್ರಿಕೆಯನ್ನು ಕೂಡಾ ಓದುಗರಿಗೆ ಕೊಡುತ್ತದೆ. ಜೊತೆಗೆ ಉದಯವಾಣಿಯ ಇಂಟರ್ನೆಟ್ ಆವೃತ್ತಿಯೂ ಲಭ್ಯವಿದೆ ಹಾಗೂ ಮುಂಬಯಿ ಆವೃತ್ತಿಯನ್ನೂ (2000) ನಡೆಸುತ್ತಿದೆ. ಪ್ರತಿದಿನವೂ ಅಂಕಣಗಳನ್ನು ಪ್ರಾರಂಭಿಸಿದ್ದು ಈ ದೈನಿಕ. ಹೆಸರಾಂತ ಪತ್ರಿಕೋದ್ಯಮಿ ಎಂ.ವಿ.ಕಾಮತ್ ಈಗಲೂ ಅಂಕಣ ಬರೆಯುತ್ತಿದ್ದಾರೆ. ದಿವಂಗತ ಕು.ಶಿ.ಹರಿದಾಸ ಭಟ್, ಪ್ರೊ ಸಿ.ಎನ್

ರಾಮಚಂದ್ರನ್ ಕೂಡಾ ಅಂಕಣ ಬರೆಯುತ್ತಿದ್ದವರಲ್ಲಿ ಸೇರಿದ್ದಾರೆ. ಸಂಸ್ಕೃತ ಪಾಂಡಿತ್ಯವುಳ್ಳ ಬನ್ನಂಜೆ ಸಹೋದರರಾದ ರಾಮಾಚಾರ್ ಹಾಗೂ ಗೋವಿಂದಾಚಾರ್ ಇದರ ಸಹ ಸಂಪಾದಕರಾಗಿ ದೊಡ್ಡ ಕೊಡುಗೆ ಕೊಟ್ಟಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನ ಸವಲತ್ತುಗಳನ್ನು ಹೊಂದಿರುವ ಉದಯವಾಣಿ ಸಮೂಹದ ಪ್ರಕಟಣೆಗಳು ಅಚ್ಚುಕಟ್ಟಾದ ಸುಂದರ ಮುದ್ರಣಕ್ಕೆ ಅನೇಕ ಬಾರಿ ರಾಷ್ಟ್ರಪ್ರಶಸ್ತಿಗಳನ್ನು ಗಳಿಸಿವೆ. *

**ಉದಯಶಂಕರ:** 20ನೆಯ ಶತಮಾನದ ನಾಲ್ಕನೆಯ ದಶಕದಲ್ಲಿ ಭಾರತದಲ್ಲಾದ ನೃತ್ಯ ಕಲೆಯ ಪುನರುತ್ಥಾನಕ್ಕೆ ಕಾರಣಕರ್ತರೆನಿಸಿದ ಪ್ರಮುಖರಲ್ಲಿ ನೃತ್ಯಪಟು ಉದಯಶಂಕರ್ ಒಬ್ಬರು. ಹುಟ್ಟಿದ್ದು ಉದಯಪುರದಲ್ಲಿ (1902). ತಂದೆ ರಾಜಾಸ್ಥಾನದಲ್ಲಿ ಶಿಕ್ಷಣಾಧಿಕಾರಿ. ವಾರಾಣಸಿ ಮತ್ತು ಮುಂಬಯಿ ಆರ್ಟ್ಸ್ ಕಾಲೇಜುಗಳಲ್ಲಿ ಉದಯಶಂಕರ ಶಿಕ್ಷಣ ಪಡೆದರು. ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಅಮಿತವಾದ ಆಸಕ್ತಿ, ನೃತ್ಯಕಲೆಯಲ್ಲೂ ಅಭಿರುಚಿ.



ಅದು ನೃತ್ಯಕಲೆಗೆ ಕಳಂಕವಿದ್ದ ಕಾಲ. ಹೀನವೃತ್ತಿ,ಕಲೆ–ಎನಿಸಿಕೊಂಡಿದ್ದ ಈ ಕಲೆ ಇವರ ಅವಿರತ ಪ್ರಯತ್ನ ಮತ್ತು ದುಡಿಮೆಗಳಿಂದ ಶ್ರೇಷ್ಠ ಕಲೆಯೆಂದು ಮಾನ್ಯತೆ ಪಡೆಯಿತು. ಉದಯಶಂಕರರ ನೃತ್ಯಗಳಿಗೆ ಸ್ವದೇಶದಲ್ಲಿ ಅಲಭ್ಯವಾದ ಮನ್ನಣೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದೊರೆಯಿತು. ರಷ್ಯದ ಶ್ರೇಷ್ಠ ನರ್ತಕಿ ಅನ್ನ ಪಾವ್ಲೋವ ಜೊತೆಯಲ್ಲಿ ರಾಧಾಕೃಷ್ಣ ನೃತ್ಯವನ್ನು ರಚಿಸಿ, ಯುರೋಪಿನಲ್ಲಿ ಪ್ರದರ್ಶಿಸಿ ಜನಮೆಚ್ಚಿಗೆಯೊ ಅಪಾರ ಖ್ಯಾತಿಯೂ ದೊರಕಿದವು. ಹಿಂದೂ ದೇಶದ ನೃತ್ಯ ಕಲೆಯಲ್ಲಿನ ಆಧ್ಯಾತ್ಮಿಕ ಸೌಂದರ್ಯವನ್ನು ಪ್ರಚಾರಮಾಡುವ ಅವರ ಪ್ರಯತ್ನಕ್ಕೆ ಅಪೂರ್ವ ಯಶಸ್ಸು ದೊರೆಯಿತು. ಭಾರತೀಯ ಪುರಾಣಗಳಿಂದ ಅನೇಕ ಘಟನೆಗಳನ್ನು ಆಯ್ದು ಅವನ್ನು ತಮ್ಮ ನೃತ್ಯ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡರು. ಈ ಕಾರ್ಯಕ್ರಮಗಳೆಲ್ಲಾ ಪಾಶ್ಚಾತ್ಯರಾಷ್ಟ್ರಗಳಲ್ಲಿ ಯಶಸ್ವಿಯಾಗಿ ಭಾರತಕ್ಕೆ ಅಪೂರ್ವ ಕೀರ್ತಿ ತಂದುವು.

ಪಾಶ್ಚಾತ್ಯರಾಷ್ಟ್ರಗಳಲ್ಲಿ ಯಶಸ್ವಿ ಪ್ರವಾಸದಿಂದ ಮರಳಿದಾಗ (1938) ಗುರುದೇವ ರವೀಂದ್ರನಾಥ ಠಾಕೂರರು ಉದಯಶಂಕರರಿಗೆ ಪ್ರೋತ್ಸಾಹ ನೀಡಿದರು. ಹೊಸ ನೃತ್ಯ ರೂಪಕಗಳನ್ನು ಮಾಡಲು ಹುರಿದುಂಬಿಸಿದರು. ಕಥಕ್ಕಳಿ, ಮಣಿಪುರಿ ನೃತ್ಯಸಂಪ್ರದಾಯಗಳನ್ನು ಚೆನ್ನಾಗಿ ಅಭ್ಯಸಿಸಿ, ಅವುಗಳಿಂದ ಹೆಜ್ಜೆವಿನ್ಯಾಸ ಮತ್ತು ಮುದ್ರೆಗಳನ್ನು ಆಯ್ದು ತನ್ನದೇ ಆದ ಹಲವಾರು ಹೃದಯಂಗಮ ನೃತ್ಯಗಳನ್ನು ವಿನ್ಯಾಸ ಮಾಡಿದರು. ಅವುಗಳಲ್ಲಿ ಕಾರ್ತಿಕೇಯ, ಶಿವತಾಂಡವ, ಶಿವಪಾರ್ವತಿ ನೃತ್ಯ ದ್ವಂದ್ವ, ಇಂದ್ರ–ಇವು ಪ್ರಮುಖವಾದುವು. ಶಿವನಾಗಿ ರಂಗಸ್ಥಳ ಪ್ರವೇಶಿಸಿದಾಗ ಪ್ರೇಕ್ಷಕರೆಲ್ಲ ಸಾಕ್ಷಾತ್ ಶಿವನೇ ಪ್ರತ್ಯಕ್ಷನಾಗಿದ್ದಾನೆಂದು ಹೊಗಳುತ್ತಿದ್ದರು. ಇಂಥ ದೈವಿಕ ಶಕ್ತಿ ಇವರಲ್ಲಿತ್ತು. ಹಾವಾಡಿಗನ ನೃತ್ಯ, ಸುಗ್ಗಿ ಕುಣಿತ, ಜಾನಪದ ನೃತ್ಯ ಮುಂತಾದ ಹಲವಾರು ವಿಧದ ನೃತ್ಯಗಳನ್ನು ರಚಿಸಿ ಅವನ್ನು ಪ್ರದರ್ಶಿಸಿ ಭಾರತದ ನೃತ್ಯಕಲೆಯನ್ನು ಜನಪ್ರಿಯಗೊಳಿಸಿದರು. ಜೊತೆಗೆ ಜೀವನ ತರಂಗ, ದುಡಿಮೆ ಮತ್ತು ಯಂತ್ರಗಳು, ಪ್ರಮೀಳಾರ್ಜುನ, ಶಾಶ್ವತರಾಗ ಮುಂತಾದ ನೃತ್ಯನಾಟಕಗಳು ರೂಪುಗೊಂಡು, ಇವೆಲ್ಲ ಜಗತ್ತಿನ ಪ್ರಮುಖ ಕಲಾವಿದರ, ಕಲಾ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದವು. ನೃತ್ಯಕಲೆಯ ಪ್ರಸಾರಕ್ಕೆ ಕಲಾಶಾಲೆಯ ಆವಶ್ಯಕತೆ ಎಷ್ಟೆಂಬುದನ್ನು ಮನಗಂಡು ಆಲ್ಮೋರದಲ್ಲಿ

ಒಂದು ಕಲಾಶಾಲೆ ಸ್ಥಾಪಿಸಿದರು. ಈ ಶಾಲೆಯಲ್ಲಿ ಕಥಕ್ಕಳಿಪಂಡಿತ ಶಂಕರನ್‌ನಂಥ ಶ್ರೇಷ್ಠ ನೃತ್ಯ ಶಿಕ್ಷಕರಿದ್ದರು. ಕಾರಣಾಂತರದಿಂದ ಈ ಶಾಲೆ ಮುಚ್ಚಿಹೋದರೂ ಅಲ್ಲಿ ತರಬೇತು ಪಡೆದ ಅನೇಕ ಕಲಾವಿದರು ಭಾರತದಲ್ಲಿ ಹೆಸರು ಗಳಿಸಿದ್ದಾರೆ. ಮದರಾಸಿನ ಜೆಮಿನಿ ಸ್ಟುಡಿಯೊದಲ್ಲಿ ನಿರ್ಮಿಸಿದ, ಉದಯಶಂಕರರ 'ಕಲ್ಪನಾ' ಎಂಬ ನೃತ್ಯಪ್ರಧಾನವಾದ ಚಲನಚಿತ್ರ ಒಂದು ಅದ್ಭುತ ಕಲ್ಪನೆ. ಬುದ್ಧಚರಿತೆಯನ್ನು ಆಧರಿಸಿದ ಮಹಾತ್ಯಾಗ ಛಾಯಾನಾಟಕ ಒಂದು ಪ್ರಬುದ್ಧ ನೃತ್ಯ ರೂಪಕ. (ಯು.ಎಸ್.ಕೆ.)

**ಉದಯಶಂಕರ ಭಟ್ಟ:** ಜನನ 1808. ಹಿಂದೀ ಸಾಹಿತ್ಯ ಕ್ಷೇತ್ರದಲ್ಲಿ ಅದ್ವಿತೀಯ ಸ್ಥಾನ ಗಳಿಸಿದ ಕವಿ, ನಾಟಕಕಾರ. ನಾಟಕ ಸಾಹಿತ್ಯದ ಎಲ್ಲ ಕ್ಷೇತ್ರಗಳಿಗೂ ಈತನ ಕೊಡುಗೆ ಅಪಾರ. ಉಗ್ರ ಸಂಪ್ರದಾಯವಾದಿಯಾದ ತಂದೆಯಿಂದ ಸನಾತನ ಶಿಕ್ಷಣವನ್ನೂ ಸಮಕಾಲೀನ ಧೋರಣೆಯಂತೆ ಆಧುನಿಕ ಶಿಕ್ಷಣವನ್ನೂ ಪಡೆದ. ಸ್ವಾತಂತ್ರ್ಯಾಂದೋಲನದಲ್ಲಿ ಭಾಗವಹಿಸಿದಾಗ ಭಗವತೀಚರಣ ವೊಹರಾ, ಭಗತ್‌ಸಿಂಗ್, ಸುಖದೇವ, ಯಶಪಾಲ ಮೊದಲಾದ ಕ್ರಾಂತಿಕಾರಿಗಳಿಂದ ಪ್ರಭಾವಿತನಾಗಿ ಕ್ರಾಂತಿಕಾರಿ ಎಂಬ ನಾಟಕವನ್ನು ರಚಿಸಿದ. ದೇಶಬಂಧು ಚಿತ್ತರಂಜನ ದಾಸರಿಂದ ಪ್ರಭಾವಿತನಾಗಿ ಬಾಬೂ ಚಿತ್ತರಂಜನದಾಸ್ ಎಂಬ ನಾಟಕ, ರಚಿಸಿ ಅಭಿನಯಿಸಿದ. ಈತ ಬಹುಮುಖ ಪ್ರತಿಭೆಯುಳ್ಳವ. ನಾಟಕ, ಗೀತ ನಾಟಕ ಏಕಾಂಕನಾಟಕ ಮುಂತಾದ ನಾಟಕಪ್ರಕಾರಗಳಲ್ಲದೆ ಕಾವ್ಯ, ಕಾದಂಬರಿ ಮುಂತಾದ ಸಾಹಿತ್ಯದ ಇತರ ಕ್ಷೇತ್ರಗಳಲ್ಲೂ ಈತನ ಪ್ರತಿಭೆ ವ್ಯಕ್ತವಾಗಿದೆ. ಈತ ಪ್ರಕಟಿಸಿದ 12 ಕಾವ್ಯಸಂಗ್ರಹಗಳಲ್ಲಿ ತಕ್ಷಶಿಲಾ, ಮಾನಸಿ, ಯುಗದೀಪ ಮೊದಲಾದವು ಮುಖ್ಯ. ಈತನ ಕೆಲವು ಕವನಗಳಲ್ಲಿ ನವ್ಯಕಾವ್ಯದ ಹೊಳಪನ್ನೂ ಕಾಣಬಹುದು.

ಉದಯಶಂಕರನ ವಿಶೇಷ ಪರಿಶ್ರಮ ನಾಟಕ ಸಾಹಿತ್ಯದಲ್ಲಿಯೇ. ನಾಟಕದ ಎಲ್ಲ ಪ್ರಕಾರಗಳಲ್ಲಿ ಈತನ ಕೃತಿಗಳಿವೆ. ವಾಸ್ತವವಾಗಿ ಹಿಂದಿಯಲ್ಲಿ ಗೀತನಾಟಕದ ಪರಂಪರೆ ಬೆಳೆಸಿದವ ಈತನೇ. ಅಶೋಕವನ ಬಂದಿನೀ, ಸಂತ ತುಲಸೀದಾಸ, ನಹುಷ ನಿಪಾತ ಮುಂತಾದವು ಖ್ಯಾತ ಗೀತನಾಟಕಗಳು. ಗೀತನಾಟಕದ ಪ್ರಭೇದವಾದ ಭಾವನಾಟಕದ ಪರಂಪರೆಯನ್ನಾರಂಭಿಸಿದ ಶ್ರೇಯಸ್ಸೂ ಈತನದೇ. ಮತ್ಸ್ಯಗಂಧಾ, ರಾಧಾ, ಕಾಲಿದಾಸ– ಇವು ಪ್ರಸಿದ್ಧ ಭಾವನಾಟಕಗಳು. ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳ ರಚನೆಯಲ್ಲೂ ಈತ ಸಿದ್ಧಹಸ್ತ. ಅಂಬಾ, ಸಗರ ಎಂಬ ಪೌರಾಣಿಕ, ವಿಕ್ರಮಾದಿತ್ಯ, ಮುಕ್ತಿಪಥ ಎಂಬ ಐತಿಹಾಸಿಕ ಮತ್ತು ಕಮಲಾ, ಪಾರ್ವತೀ ಮುಂತಾದ ಸಾಮಾಜಿಕ ನಾಟಕಗಳು ಪ್ರಸಿದ್ಧವಾಗಿವೆ. ಈತನ ಕೆಲವು ಕಾದಂಬರಿಗಳೂ ಜನಮನ್ನಣೆ ಗಳಿಸಿವೆ.

ಈತನ ಸಾಹಿತ್ಯದಲ್ಲಿ ಭಾರತದ ಪ್ರಾಚೀನ ವೈಭವ, ಸಂಸ್ಕೃತಿಗಳ ದರ್ಶನವಾಗುತ್ತದೆ. ಹಾಗೆಯೇ ಪ್ರಾಚೀನ, ಅರ್ವಾಚೀನ ವಿಚಾರಗಳ ದರ್ಶನವಾಗುತ್ತದೆ. ಪ್ರಾಚೀನ, ಅರ್ವಾಚೀನ ವಿಚಾರಗಳ ಸಂಘರ್ಷಗಳನ್ನೂ ಈತನ ಕೃತಿಗಳಲ್ಲಿ ಕಾಣಬಹುದು. ಒಟ್ಟಿನಲ್ಲಿ ಉದಯಶಂಕರ ಆಧುನಿಕ ಹಿಂದೀ ಸಾಹಿತ್ಯದ ಉತ್ತಮ ನಾಟಕಕಾರ, ಪ್ರತಿಭಾವಂತ ಕಾದಂಬರಿಕಾರ. (ಯು.ಎಸ್.ಜೆ.)

**ಉದಯಸಿಂಹ:** 1205–49. ಕೀರ್ತಿಪಾಲನಿಂದ ಸ್ಥಾಪಿತವಾದ ಜಾಬಾಲಪುರದ ಚಹಮಾನ ರಾಜಪುತ್ರ ಸಂತತಿಯ ರಾಜರಲ್ಲಿ ಅತ್ಯಂತ ಪ್ರಖ್ಯಾತನಾದವ. ತಂದೆ ಸಮರಸಿಂಹನ ಮರಣಾನಂತರ 1205ರಲ್ಲಿ ರಾಜನಾದ. ಜಾಲಾರ್ ಈತನ ರಾಜಧಾನಿ. ಉದಯಸಿಂಹ ತನ್ನ ಅಧಿಕಾರವನ್ನು ನಾಥುಲ, ಮಾಂಡವ್ಯಪುರ, ಸೂರಚಂದ, ಖೇಡ, ರತ್ನಪುರ, ಸತ್ಯಪುರ ಮುಂತಾದ ಪ್ರದೇಶಗಳ ಮೇಲೆ ಸ್ಥಾಪಿಸಿದ. ಈತನ ರಾಜ್ಯ ಮಂದರ್‌ನಿಂದ ಸಾಂಚೋರ್‌ವರೆಗೂ ಮಲ್ಲಿನಿಯಿಂದ ಗದ್ವಾರ್‌ವರೆಗೂ ವಿಸ್ತರಿಸಿತ್ತು. ಈತ ಲಟದ ಚಹಮಾನ ರಾಜನಾದ ಸಿಂಧು ರಾಜನನ್ನು ಸೋಲಿಸಿದ. 1211ರಿಂದ 1216ರ ವರೆಗೆ ಅಲ್ತಮಷ್ ಉದಯಸಿಂಹನ ರಾಜ್ಯವನ್ನೂ ರಾಜಧಾನಿಯಾದ ಜಾಲಾರ್ ಪಟ್ಟಣವನ್ನೂ ಮುತ್ತಿದ. ಉದಯಸಿಂಹ ಸೋತರೂ ಆತನ ಪರಾಕ್ರಮಕ್ಕೆ ಮೆಚ್ಚಿ ರಾಜ್ಯವನ್ನು ಅಲ್ತಮಷ್ ಅವನಿಗೆ ಹಿಂದಕ್ಕೆ ಕೊಟ್ಟ. ಅನಂತರ ಗುಜರಾತಿನ ವೀರಮಾದೇವನೊಡನೆ ಸೇರಿ ಮಹಮದೀಯರ ಸೈನ್ಯವನ್ನು ಸೋಲಿಸಿ ಹಿಂತಿರುಗಿಸಿದ. ಉದಯಸಿಂಹ ಹಿಂದೂಶಾಸ್ತ್ರಗಳಲ್ಲಿ ವಿದ್ವಾಂಸನಾಗಿದ್ದ. ಇವನ ಮರಣಾನಂತರ ಮಗನಾದ ಚಾಚಿಗ ಪಟ್ಟಕ್ಕೆ ಬಂದ. (ಜಿ.ಆರ್.ಆರ್.)

**ಉದಯಸಿಂಹ (ಉದಯಸಿಂಗ್):** 1529–72. ರಾಜಪುತ್ರ ಸಂಸ್ಥಾನಗಳಲ್ಲಿ ಪ್ರಖ್ಯಾತವಾಗಿದ್ದ ಮೇವಾಡದ ರಾಣಾಸಿಂಹನ ಮಗ. ಈತ ಪಟ್ಟಕ್ಕೆ ಬಂದ ಸಮಯದಲ್ಲಿ ಮೊಗಲ್ ಚಕ್ರವರ್ತಿಯಾದ ಅಕ್ಬರ್ ಮಹಾಶಯ ರಾಜಪುತ್ರ ಸಂಸ್ಥಾನಗಳನ್ನೂ ತನ್ನ ಅಧೀನಕ್ಕೊಳಪಡಿಸುವ ಕಾರ್ಯದಲ್ಲಿ ತೊಡಗಿದ್ದ. ಅಕ್ಬರನಿಂದ ಸೋತ ಮಾಳವದ ರಾಜ ಬಾಜಬಹದ್ದೂರನಿಗೆ ಉದಯಸಿಂಹ ಆಶ್ರಯ ಕೊಟ್ಟ. ಆದ್ದರಿಂದ 1567ರಲ್ಲಿ ಮೊಗಲ್ ಬಾದಷಹ ಮೇವಾಡದ ರಾಜಧಾನಿಯಾದ ಚಿತ್ತೂರಿಗೆ ಮುತ್ತಿಗೆ ಹಾಕಿದ. ಚಿತ್ತೂರು ದುರ್ಗಮವಾದ ಕೋಟೆಯಿಂದ ಕೂಡಿದ ಅಜೇಯವಾದ ಸ್ಥಳವಾಗಿತ್ತು. ಉದಯಸಿಂಹ ತನ್ನ ತಂದೆಯಂತೆ ಪರಾಕ್ರಮಿಯಲ್ಲ. ಶತ್ರುವಿನ ದಾಳಿಯನ್ನು ಎದುರಿಸುವ ಬದಲು ಮಿತಪರಿವಾರದೊಡನೆ ಪಲಾಯನ ಮಾಡಿದ. ಆದರೆ ಆತನ ಮುಖ್ಯ ದಳಪತಿಗಳಾದ ಜಯಮಲ್ಲ ಮತ್ತು ಪುತ್ತ ಎಂಬ ಯೋಧರು ಸೈನ್ಯದ ನಾಯಕತ್ವ ವಹಿಸಿ ಪ್ರಬಲ ವಿರೋಧದಿಂದ ಶತ್ರುಗಳೊಡನೆ ಹೋರಾಡಿ ಅಸು ನೀಗಿದರು. 1568ರಲ್ಲಿ ಚಿತ್ತೂರು ಅಕ್ಬರನ ವಶವಾಯಿತು. ಆದರೆ ಉದಯಸಿಂಹ ಉದಯಪುರ ಎಂಬ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಕ್ಬರನಿಗೆ ಶರಣಾಗದೆ ಕೆಲಕಾಲ ಆಡಳಿತ ನಡೆಸಿದ. ರಾಜಪುತ್ರ ವೀರಾಗ್ರಣಿಗಳಲ್ಲಿ ಶ್ರೇಷ್ಠನಾದ ಹಾಗೂ ಪ್ರಬಲ ಬಲಸಂಪನ್ನನಾದ ಅಕ್ಬರ್ ಚಕ್ರವರ್ತಿಗೆ ಮಣಿಯದೆ ನಿಂತ ರಾಣಾ ಪ್ರತಾಪಸಿಂಹ ಉದಯಸಿಂಹನ ಮಗ. (ಜಿ.ಆರ್.ಆರ್.)

**ಉದಯಾದಿತ್ಯ[1]:** 1125. ಪ್ರಾಚೀನ ಕನ್ನಡ ಅಲಂಕಾರಶಾಸ್ತ್ರ ಗ್ರಂಥಗಳಲ್ಲಿ ನೃಪತುಂಗನದೆಂದು ಪ್ರತೀತಿಯಿರುವ ಕವಿರಾಜಮಾರ್ಗವನ್ನೂ (ಸು. 850), 2ನೆಯ ನಾಗವರ್ಮನ ಕಾವ್ಯಾವಲೋಕನವನ್ನೂ (ಸು. 1150) ಬಿಟ್ಟರೆ, ಅಷ್ಟೇ ಪ್ರಾಚೀನವಾದ ಇನ್ನೊಂದು ಅಲಂಕಾರಗ್ರಂಥವಾದ ಉದಯಾದಿತ್ಯಾಲಂಕಾರದ ಕರ್ತೃ. ಇದು ಕೇವಲ 72 ಪದ್ಯಗಳ ಒಂದು ಸಣ್ಣ ಗ್ರಂಥ. ಇದರಲ್ಲಿ ವೃತ್ತಗಳು 7; ಉಳಿದವು ಕಂದಪದ್ಯಗಳು. (ದೊರೆತಿರುವ ಎರಡು ಹಸ್ತಪ್ರತಿಗಳ ಪೈಕಿ ಒಂದರಲ್ಲಿ ನಾಲ್ಕು ಹೆಚ್ಚಿನ ಲಕ್ಷ್ಯಗಳು–ಕಂದ ಪದ್ಯಗಳು–ಇವೆಯಾದರೂ ಇವು ಪ್ರಕ್ಷಿಪ್ತಗಳಿರಬಹುದು). ಗ್ರಂಥದಲ್ಲಿ ವಸುಧಾನಾಥನ ಸೋಮನಾಥನ ಸುತಂ ಚೋಳೋದಯಾದಿತ್ಯಂ, ಸೋಮನಾಥಮಹೀಭೃನ್ನಂದನಂ ಎಂದು ಹೇಳಿಕೊಂಡಿರುವುದರಿಂದ ಈತ ಸೋಮನಾಥನೆಂಬ ಚೋಳರಾಜನ ಮಗನೆಂದು ತಿಳಿಯುತ್ತದೆ–ಎಂಬುದಾಗಿ ಕವಿಚರಿತ್ರಕಾರ ಆರ್. ನರಸಿಂಹಾಚಾರ್ಯರು ಊಹಿಸಿದ್ದಾರೆ. ಉದಯನೃಪ, ಉದಯನೃಪೇಶ್ವರಂ, ಉದೆಗಧಾತ್ರೀರಮಣಂ, ತನ್ನ ಸಿಂಹಾಸನಕ್ಕುದಯಾದ್ರೀಂದ್ರಕೆ ಬರ್ಪ ಪೆರ್ಮೆ ಮೆಱೆವನ್ನಂ, ಭೂಮಂಡಲಾಧೀಶನಪ್ಪುದಯಾದಿತ್ಯಂ–ಎಂಬೀ ಮಾತುಗಳಿಂದ ಉದಯಾದಿತ್ಯ ಸಿಂಹಾಸನಸ್ಥನಾದ ರಾಜನಾಗಿದ್ದನೆಂದು ವ್ಯಕ್ತಪಡುತ್ತದೆ. ಇವನಾಗಲಿ ಇವನ ತಂದೆಯಾದ ಸೋಮನಾಥನಾಗಲಿ ಯಾವ ದೇಶದ ರಾಜರು ಎಂಬುದಕ್ಕೆ ಚಾರಿತ್ರಿಕ ಆಧಾರ ಯಾವುದೂ ದೊರೆತಿಲ್ಲ. ಚೋಳ ಎಂಬ ಪದಪ್ರಯೋಗದಿಂದ, ಉದಯಾದಿತ್ಯ ಚೋಳರಾಜವಂಶಕ್ಕೆ ಸೇರಿದವನಿರಬಹುದೆಂಬ ಕವಿಚರಿತ್ರಕಾರರ ಊಹೆ ನಿಲ್ಲುವಂತೆ ಕಾಣದು. ಚೋಳರು ತಮಿಳುನಾಡಿನ ಅರಸರು. ಚೋಳವಂಶದವನೊಬ್ಬ ಕನ್ನಡ ಅಲಂಕಾರಗ್ರಂಥವನ್ನು ಬರೆದನೆಂಬುದನ್ನು ನಂಬುವುದು ಕಷ್ಟ. ಉದಯಾದಿತ್ಯನ ಒಂದು ಪದ್ಯ ಮಲ್ಲಿಕಾರ್ಜುನನ (ಸು. 1240) ಸೂಕ್ತಿಸುಧಾರ್ಣವದಲ್ಲಿ ಉದಾಹೃತವಾಗಿರುವುದರಿಂದ ಉದಯಾದಿತ್ಯ ಆ ಕಾಲಕ್ಕಿಂತ ಹಿಂದಿನವನೆಂಬುದು ಸ್ಪಷ್ಟ. ನಾಗವರ್ಮನಂತೆ ಉದಯಾದಿತ್ಯನೂ ಸಂಸ್ಕೃತ ಆಲಂಕಾರಿಕರಾದ ವಾಮನ, ರುದ್ರಟರನ್ನು ಅನುಸರಿಸಿ ವೈದರ್ಭ ಪಾಂಚಾಲ ಗೌಡ ಎಂಬ ರೀತಿತ್ರಯಗಳನ್ನು ಹೇಳಿರುವುದರಿಂದ ಈತ ಅವರಿಗಿಂತ, ಎಂದರೆ 9ನೆಯ ಶತಮಾನಕ್ಕೆ, ಈಚಿನವನೆಂದಾಗುತ್ತದೆ. ಉದಯಾದಿತ್ಯ ಯಾವ ಕನ್ನಡ ಕವಿಯನ್ನೂ ಸ್ಮರಿಸಿಲ್ಲದಿರುವುದು ಸೋಜಿಗದ ಸಂಗತಿ. ಸಂಸ್ಕೃತ ಕವಿಗಳಾದ ಮುಂಜ, ಭೋಜ, ಶ್ರೀಹರ್ಷರನ್ನು ಸ್ಮರಿಸಿದ್ದಾನೆ. ಇವರಲ್ಲಿ ಭೋಜ ಸುಮಾರು 997ರಿಂದ 1053ರವರೆಗೆ ಇದ್ದವ. ಆದ್ದರಿಂದ ಉದಯಾದಿತ್ಯ ಈ ಕಾಲಕ್ಕೂ ಈಚಿನವನಾಗುತ್ತಾನೆ. ಚೋಳರ ಪ್ರಾಬಲ್ಯ ಕನ್ನಡನಾಡಿನಲ್ಲಿ 12ನೆಯ ಶತಮಾನಕ್ಕೆ ಹಿಂದೆಯೇ ಕುಗ್ಗಿತ್ತು. ಆದ್ದರಿಂದ ಈತ ಸ್ವತಂತ್ರ ರಾಜನಾಗಿರದೆ ಯಾವುದೋ ದೊರೆಯ ಸಾಮಂತನಾಗಿದ್ದಿರಬಹುದೆಂದೂ ಇವನ ಕಾಲ ಸು. 1150 ಇದ್ದಿರಬಹುದೆಂದೂ ಕವಿ ಚರಿತ್ರಕಾರರು ಊಹಿಸಿದ್ದಾರೆ. ದಕ್ಷಿಣ ಕರ್ನಾಟಕವನ್ನು ಆಕ್ರಮಿಸಿಕೊಂಡಿದ್ದ ಚೋಳರನ್ನು ಹೊಡೆದಟ್ಟುವುದರಲ್ಲಿ ಹೊಯ್ಸಳರಾಜ ವಿಷ್ಣುವರ್ಧನನಿಗೆ ಅವನ ತಮ್ಮ ಉದಯಾದಿತ್ಯ ಬಹಳ ನೆರವಾಗಿದ್ದನೆಂದು ಚರಿತ್ರೆಯಿಂದ ತಿಳಿಯುತ್ತದೆ. ವಿಷ್ಣುವರ್ಧನನ ಕಾಲ ಸು. 1110–50. ಆದ್ದರಿಂದ ಚೋಳರನ್ನು ಗೆದ್ದ ಉದಯಾದಿತ್ಯ ಅವರಿಂದ ಪಡೆದುಕೊಂಡ ರಾಜ್ಯಭಾಗಕ್ಕೆ ಅಧಿಪತಿಯೆನಿಸಿ, ಚೋಳೋದಯಾದಿತ್ಯ ಎಂಬ ಬಿರುದನ್ನು ಪಡೆದಿದ್ದರೆ ಆಶ್ಚರ್ಯವಿಲ್ಲ. ಹೀಗಿರುವುದರಿಂದ, ಈ ಚಾರಿತ್ರಿಕ ವ್ಯಕ್ತಿ ಉದಯಾದಿತ್ಯನೂ ಆಲಂಕಾರಿಕ ಉದಯಾದಿತ್ಯನೂ ಒಬ್ಬನೇ ಆಗಿರಬಹುದೇ ಎಂಬ ಊಹೆಗೆ ಅವಕಾಶವಿದೆ. ಕಾಕತೀಯ ರುದ್ರದೇವ (1150–95) ಮತ್ತು ಅವನ ತಂದೆ ಎರಡನೆಯ ಪ್ರೋಲ (1117–50)–ಇವರ ಕಾಲದಲ್ಲಿನ ಶಾಸನಗಳ ಆಧಾರದಿಂದ ತೆಲುಗು ಚೋಡ(ಳ) ವಂಶಕ್ಕೆ ಸೇರಿದ ಉದಯಾದಿತ್ಯನೆಂಬ ಒಬ್ಬ ಕಾಕತೀಯರ ಸಾಮಂತ ದೊರೆ ಇದ್ದುದಾಗಿ ತಿಳಿದುಬರುತ್ತದೆ. ಅಲಂಕಾರ ಗ್ರಂಥದ ಚೋಳೋದಯಾದಿತ್ಯ ಶಾಸನಗಳ ಈ ಚೋಡೋದಯನಾಗಿದ್ದಿರಬಹುದೆಂದು ಊಹಿಸುವುದು ಹೆಚ್ಚು ಸಂಭವನೀಯವಾಗಿ ಕಂಡುಬರುತ್ತದೆ. ಅಲ್ಲದೆ, ಗ್ರಂಥಸ್ಥ ಆಧಾರಗಳಿಂದ ಉದಯಾದಿತ್ಯಾಲಂಕಾರದ ಕರ್ತೃ ಉದಯಾದಿತ್ಯನಾಗಿರದೆ ಆಸ್ಥಾನ ಕವಿಯೊಬ್ಬ ಆತನ ಅಂಕಿತದಲ್ಲಿ ಗ್ರಂಥರಚನೆ ಮಾಡಿರಬಹುದೆಂಬ ಊಹೆಗೂ ಅವಕಾಶವಿದೆ. ಅಂತೂ ಉದಯಾದಿತ್ಯನ ಕಾಲ ಸು. 1125 ಎಂದೂ ಉದಯಾದಿತ್ಯಾಲಂಕಾರ ಕಾವ್ಯಾವಲೋಕನಕ್ಕಿಂತ ಸ್ವಲ್ಪ ಮುಂಚೆಯೇ ರಚಿತವಾಗಿದ್ದಿರಬಹುದೆಂದೂ ತಿಳಿಯಬಹುದು.

ಗ್ರಂಥದಲ್ಲಿ ಉದಯಾದಿತ್ಯನಿಗೆ ಅನ್ವಿತವಾಗಿರುವ ಕವಿರತ್ನಶೇಖರ, ಸಾಹಿತ್ಯವಿದ್ಯಾಧರ, ರಾಜಸುಕವಿರತ್ನಾಭರಣ, ಕವಿರಾಜಶೇಖರ, ಸಾಹಿತ್ಯರತ್ನಾಕರ ಎಂಬ ಹೆಸರುಗಳು ಆತ್ಮಪ್ರಶಂಸೆಯ ವಿಶೇಷಣಗಳೋ ಬಿರುದುಗಳೋ ಹೇಳುವುದು ಕಷ್ಟ.

ಸಾಳ್ವ ತನ್ನ ರಸರತ್ನಾಕರದಲ್ಲಿ ವಿರುದ್ಧ ರಸಗಳನ್ನು ಹೇಳುವ ಸಂದರ್ಭದಲ್ಲಿ ಇದು ದಯಾದಿತ್ಯಮತಂ ಎಂದು ಉದಯಾದಿತ್ಯನ ಹೆಸರನ್ನು ಹೇಳಿದ್ದಾನೆ. ಆದರೆ, ಉದಯಾದಿತ್ಯಾಲಂಕಾರದಲ್ಲಿ ವಿರುದ್ಧರಸಗಳ ಪ್ರಸಕ್ತಿಯೇ ಇಲ್ಲ. ಇದರಿಂದಾಗಿ ಉದಯಾದಿತ್ಯ ರಸವಿಷಯಕವಾದ ಗ್ರಂಥವೊಂದನ್ನು ಬರೆದಿದ್ದಿರಬಹುದೇ ಎಂಬ ಊಹೆಗೆ ಅವಕಾಶವಿದೆ.

ಆದರೆ ಸಾಳ್ವ ಅನುಸರಿಸಿರುವ ಪದ್ಯ ಕವಿಕಾಮನ ಶೃಂಗಾರರತ್ನಾಕರದಲ್ಲೂ ಇರುವುದರಿಂದ, ಈ ವಿಚಾರದಲ್ಲಿ ಇದಮಿತ್ಥಂ ಎಂದು ಹೇಳಲಾಗದು. ಕಾವ್ಯಭೇದಗಳು, ರೀತಿಭೇದಗಳು, ನವರಸಗಳು ಮತ್ತು ರೀತಿಗಳಿಗೆ ಉಚಿತವಾದ ರಸಗಳು, ಮಹಾಕಾವ್ಯ, ಅದರ ಹದಿನೆಂಟು ಅಂಗಗಳು, ಕಾವ್ಯಗುಣಗಳು, ಜಾತಿ ಉಪಮಾನ ರೂಪಕ ಮುಂತಾದ 35 ಅರ್ಥಾಲಂಕಾರಗಳು, ಯಮಕ, ಪ್ರಹೇಳಿಕೆ–ಇವು ಗ್ರಂಥದಲ್ಲಿ ಪ್ರತಿಪಾದ್ಯವಾದ ಕಾವ್ಯಶಾಸ್ತ್ರವಿಚಾರಗಳು. ಗ್ರಂಥ ಬಹುಮಟ್ಟಿಗೆ ದಂಡಿಯ ಕಾವ್ಯಾದರ್ಶವನ್ನು ಅನುಸರಿಸಿದೆ. ಕವಿರಾಜಮಾರ್ಗದಲ್ಲಿ ಹೇಳಿರುವ ಚತ್ತಾಣ ಮತ್ತು ಬೆದಂಡೆ (ವೈದಂಡಕ) ಎಂಬ ಕಾವ್ಯಭೇದಗಳನ್ನು ಉದಯಾದಿತ್ಯನೂ ಹೆಸರಿಸಿರುವುದು ಗಮನಾರ್ಹ. ಅಂತೆಯೇ ಮೊತ್ತಮೊದಲಿಗೆ ಇವನ ಗ್ರಂಥದಲ್ಲಿ ಚಂಪೂಕಾವ್ಯ ಪ್ರಕಾರದ ನಾಮನಿರ್ದೇಶವಿರುವುದೂ ಗಮನಾರ್ಹ. ಕವಿರಾಜಮಾರ್ಗ ಕಾವ್ಯಾವಲೋಕನಗಳಲ್ಲಿ ಕಂಡುಬರುವ ವಿಸ್ತಾರವಾದ ವಿಷಯ ವಿವೇಚನೆಯಾಗಲಿಪ್ರಯೋಗ ಬಾಹುಳ್ಯವಾಗಲಿ ಈ ಗ್ರಂಥದಲ್ಲಿ ಇಲ್ಲ; ಹೊಸ ವಿಚಾರಗಳೂ ಇಲ್ಲ; ಆದ್ದರಿಂದ ಅವುಗಳಂತೆ ಇದು ಪ್ರಮಾಣ ಗ್ರಂಥವೆನಿಸದು. ಕಾವ್ಯಾವಲೋಕನಕ್ಕಿಂತ ಇದು ಹಿಂದಿನದು ಎಂದಾದರೆ ಕನ್ನಡ ಕಾವ್ಯ ಲಕ್ಷಣಗ್ರಂಥಗಳ ಸಾಲಿನಲ್ಲಿ ಇದಕ್ಕೊಂದು ಐತಿಹಾಸಿಕ ಪ್ರಾಮುಖ್ಯ ಸಲ್ಲುತ್ತದೆ. ಒಂದೊಂದೇ ಕಂದಪದ್ಯದಲ್ಲಿ ಅಡಕವಾದ ಅಂದವಾದ ಸರಳಶೈಲಿಯಲ್ಲಿ ಲಕ್ಷ್ಯಲಕ್ಷಣ ಸಮನ್ವಯಪೂರ್ವಕವಾಗಿ ಅಲಂಕಾರಗಳನ್ನು ನಿರೂಪಿಸಿರುವ ಬಗೆ ಮೆಚ್ಚತಕ್ಕದ್ದು. ಕೆಲವು ಲಕ್ಷ್ಯಪದ್ಯಗಳಲ್ಲಿ ಕವಿ ತನ್ನ ರೂಪ, ಪರಾಕ್ರಮ, ದಾನಪರತೆ ಮುಂತಾದ ಗುಣಗಳನ್ನೇ ಹೊಗಳಿಕೊಂಡಿದ್ದಾನೆ. (ಉದಾ: ರಸವದಲಂಕಾರಃ ಆವರಸವಾದೊಡಂ ನಿಜಭಾವದಿನೆಸೆವಂತು ಪೇಶ್ರೆರಸವತ್ವಂ; ನೋಡಾವಗಮುದೆಗನ ರೂಪಂ ಭಾವಿಸುವೊಡೆ, ಕೆಳದಿ, ತನ್ಮಯಂ ಜಗಮೆಲ್ಲಂ). ಅಲಂಕಾರಶಾಸ್ತ್ರವನ್ನು ಬಹು ಸಂಕ್ಷೇಪವಾಗಿ, ತಕ್ಕಮಟ್ಟಿಗೆ ಸುಲಭವಾಗಿ, ತಿಳಿಸಿಕೊಡುವ ಗ್ರಂಥವಿದಾದ್ದರಿಂದ, ಪ್ರಾರಂಭಿಕ ಅಲಂಕಾರ ವಿದ್ಯಾರ್ಥಿಗಳಿಗೆ ಇದು ಉಪಯುಕ್ತವಾಗಬಹುದಾದ ಗ್ರಂಥ. (ಎಂ.ವಿ.ಎಸ್.)

**ಉದಯಾದಿತ್ಯ[2]:** ಉದಾಯಾದಿತ್ಯ ಎಂಬ ಹೆಸರಿನ, ಬೇರೆ ಬೇರೆ ಸಂತತಿಗಳಿಗೆ ಸೇರಿದ ಅನೇಕ ರಾಜರು ಭಾರತದ ಭಿನ್ನ ಭಿನ್ನ ಭಾಗಗಳಲ್ಲಿ, ಭಿನ್ನ ಭಿನ್ನ ಕಾಲಗಳಲ್ಲಿ ರಾಜ್ಯವಾಳಿದ್ದಾರೆ.

ಮಾಳವದ ಪಾರಮಾನ ಸಂತತಿಗೆ ಸೇರಿದ ಉದಯಾದಿತ್ಯ ರಾಜನ ಹೆಸರು 1080–1086ರ ಅವಧಿಯ ಶಾಸನಗಳಲ್ಲಿ ಉಲ್ಲೇಖವಾಗಿದೆ. ಶೂರನೂ ವಿದ್ಯಾಪಕ್ಷಪಾತಿಯೂ ಆದ ಭೋಜರಾಜನ ಅನಂತರ ಪಟ್ಟಕ್ಕೆ ಬಂದ ಅವನ ಮಗ ಜಯಸಿಂಹನನ್ನು ಚಾಳುಕ್ಯ ಚಕ್ರವರ್ತಿಯಾದ ಇಮ್ಮಡಿ ಸೋಮೇಶ್ವರ ಸೋಲಿಸಿ ಮಾಳವ ರಾಜ್ಯವನ್ನು ವಶಪಡಿಸಿಕೊಂಡ. ಆಗ ಭೋಜನ ದಾಯಾದಿಯಾದ ಉದಯಾದಿತ್ಯ ಪರಾಕ್ರಮದಿಂದ ಹೋರಾಡಿ ಚಾಳುಕ್ಯ ಸೇನೆಯನ್ನು ಸೋಲಿಸಿ ಮತ್ತೆ ಮಾಳವವನ್ನು ವಶಪಡಿಸಿಕೊಂಡ. ಉದಯಾದಿತ್ಯ ಉದಯಪುರದಲ್ಲಿರುವ ಪ್ರಸಿದ್ಧವಾದ ನೀಲಕಂಠೇಶ್ವರ ದೇವಾಲಯವನ್ನು ಕಟ್ಟಿಸಿದ. ಈತನಿಗೆ ಲಕ್ಷ್ಮೀದೇವ, ನಾರವರ್ಮನ್ ಮತ್ತು ಜಗದ್ದೇವ ಎಂಬ ಮೂರು ಮಂದಿ ಗಂಡು ಮಕ್ಕಳಿದ್ದರೆಂದೂ ಅವರು ಒಬ್ಬರಾದ ಅನಂತರ ಮತ್ತೊಬ್ಬರಂತೆ ರಾಜ್ಯವಾಳಿದರೆಂದೂ ತಿಳಿದುಬರುತ್ತದೆ.

ಉದಯಾದಿತ್ಯ ವರ್ಮನ್ (ಕಂಬುಜ): 5ನೆಯ ಜಯವರ್ಮನ ಆಳ್ವಿಕೆಯ ಅನಂತರ ಆತನ ಮಗನಾದ ಉದಯಾದಿತ್ಯವರ್ಮ 1049ರಲ್ಲಿ ಕಂಬುಜ ರಾಜ್ಯದ ಸಿಂಹಾಸನಕ್ಕೇರಿದ. ಈತನ ಆಳ್ವಿಕೆಯ ಕಾಲದಲ್ಲಿ ಅತ್ಯಂತ ಜಟಿಲವಾದ ಸಮಸ್ಯೆಗಳು ಉದ್ಭವವಾದುವು. ರಾಜ್ಯದಲ್ಲೆಲ್ಲ ದಂಗೆಗಳು ತಲೆದೋರಿದುವು. ದಂಗೆಯನ್ನಡಗಿಸಲು ಉದಯಾದಿತ್ಯವರ್ಮ ಅಸಮರ್ಥನಾದ. ಈ ಮಧ್ಯೆ ಚಂಪದ ರಾಜ ಕಂಬುಜಕ್ಕೆ ಮುತ್ತಿಗೆ ಹಾಕಿದ. ಅಂಥ ದುಃಸ್ಥಿತಿಯ ಸಮಯದಲ್ಲಿ 1066ರಲ್ಲಿ ಉದಯಾದಿತ್ಯವರ್ಮನ್ ಮರಣ ಹೊಂದಿದ. ಆತನ ಮಂತ್ರಿಗಳೂ ರಾಜಗುರುವೂ ಸೇರಿ ಆತನ ತಮ್ಮನಾದ ಹರ್ಷವರ್ಮನನ್ನು ಕಂಬುಜದ ಉತ್ತರಾಧಿಕಾರಿಯನ್ನಾಗಿ ಮಾಡಿದರು.

ಉದಯಾದಿತ್ಯ ಎಂಬ ಹೆಸರಿನ ರಾಜಕುಮಾರನೊಬ್ಬ ಹೊಯ್ಸಳ ಸಂತತಿಯಲ್ಲಿದ್ದ. ಒಂದನೆಯ ಬಲ್ಲಾಳ, ವಿಷ್ಣುವರ್ಧನ ಮತ್ತು ಉದಯಾದಿತ್ಯ ಈ ಮೂವರು ಸಹೋದರರು ಇಮ್ಮಡಿ ವಿನಯಾದಿತ್ಯನ ಮೊಮ್ಮಕ್ಕಳು ಮತ್ತು ಯುವರಾಜ ಎರೆಯಂಗನ ಮಕ್ಕಳು. ವಿಷ್ಣುವರ್ಧನ ಚೋಳರನ್ನು ಸೋಲಿಸಿ ಗಂಗವಾಡಿಯನ್ನು (1116) ವಶಪಡಿಸಿಕೊಂಡ ಅನಂತರ ತನ್ನ ಕಿರಿಯ ತಮ್ಮನಾದ ಉದಯಾದಿತ್ಯನನ್ನು ಕೋಲಾರ ಪ್ರದೇಶದ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ್ದ. ಈತ 1123ರಲ್ಲಿ ಬೇತಮಂಗಲ ಎಂಬಲ್ಲಿ ಮರಣ ಹೊಂದಿದ.

ಉದಯಾದಿತ್ಯ ಎಂಬ ಹೆಸರಿನ ನೊಳಂಬ ಪಲ್ಲವರಾಜನೊಬ್ಬನಿದ್ದ. ಸುಮಾರು 750ರಿಂದ 1055ರ ವರೆಗೆ ಆಂಧ್ರದ ಅನಂತಪುರ, ಮೈಸೂರಿನ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಕೆಲವು ಭಾಗಗಳನ್ನೊಳಗೊಂಡ ರಾಜ್ಯವನ್ನು ನೊಳಂಬವಾಡಿ ಎಂಬುದಾಗಿ ಕರೆಯಲಾಗಿತ್ತು. ನೊಳಂಬರು ಗಂಗರ ಮಾರಸಿಂಹ ನೊಳಂಬ ಕುಲಾಂತಕನಿಂದ 974ರಲ್ಲಿ ಸೋಲಿಸಲ್ಪಟ್ಟ ಮೇಲೆ ಅವರು ಬಳ್ಳಾರಿ ಜಿಲ್ಲೆಯ ಕಂಪಿಲೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಹಲವು ಕಾಲ ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು. ಜಗದೇಕಮಲ್ಲ ನೊಳಂಬ ಪಲ್ಲವ ರಾಜನ ಅನಂತರ 1035ರ ಸುಮಾರಿನಲ್ಲಿ ಉದಯಾದಿತ್ಯ ನೊಳಂಬ (ಪಲ್ಲವ ಪೆರುಮಾನಂದಿ) ರಾಜನಾದ. ಈತನ ವಿಷಯವಾಗಿ ಹೆಚ್ಚು ವಿವರಗಳು ತಿಳಿದು ಬರುವುದಿಲ್ಲ.

ಉದಯಾದಿತ್ಯ ಎಂಬ ಹೆಸರಿನ ರಾಜನೊಬ್ಬ ಜಯಂತೀಪುರದ ಕದಂಬ ಸಂತತಿಯಲ್ಲಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಈತ ಧರ್ಮಖೇದಿಯ ಮಗ. ಉದಯಾದಿತ್ಯ ಶ್ವೇತಗಂಗ ಮನೆತನದ ರಾಜನಾದ ದೇವೇಂದ್ರವರ್ಮನ ಸಾಮಂತನಾಗಿದ್ದ. 1081ರಲ್ಲಿ ಹುಟ್ಟಿದ ಕಂಬಕಾಯ ಶಾಸನ ಉದಯಾದಿತ್ಯನಿಂದ ಸ್ಥಾಪಿತವಾಯಿತು. ಪಾರ್ತಕಿ ಮೇದಿ ಶಾಸನದಲ್ಲಿ ಉದಯಖೇದಿ ಎಂಬ ರಾಜನ ಉಲ್ಲೇಖವಿದೆ. ಉದಯಖೇದಿ ಎಂಬುದು ಉದಯಾದಿತ್ಯನ ಮತ್ತೊಂದು ಹೆಸರಾಗಿರಬೇಕೆಂದು ಹಲವು ವಿದ್ವಾಂಸರು ಊಹಿಸಿದ್ದಾರೆ. ಪಾರ್ತಕಿ ಮೇದಿ ಶಾಸನ ಎಪಿಗ್ರಾಫಿಯ ಇಂಡಿಕದ 3ನೆಯ ಸಂಪುಟದಲ್ಲಿ ಅಚ್ಚಾಗಿದೆ. (ಜಿ.ಆರ್.ಆರ್.)

**ಉದರ:** ದೇಹದ ಮೇಲ್ಭಾಗದ ಎದೆಗೂಡಿಗೂ ಕೆಳಗಿರುವ ಕಿಳ್ಗುಳಿಗೂ (ಪೆಲ್ವಿಸ್) ನಡುವೆ ಇರುವ ಪೊಳ್ಳು (ಹೊಟ್ಟೆ, ಒಡಲು, ಆ್ಯಬ್ಡೊಮೆನ್). ವಪೆಯೇ ಇದರ ಮೇಲುಗಡೆಯ ಮೇರೆ. ಉದರಕ್ಕೂ ಕಿಳ್ಗುಳಿಗೂ ನಡುವೆ ಆ ತೆರನ ಎದ್ದು ಕಾಣುವ, ಮೇರೆಯಾಗುವ ಯಾವ ಗೋಡೆ ತೆರೆಯೂ ಇಲ್ಲ. ಹಿಂದುಗಡೆ ಬೆನ್ನುಗಂಬವೂ ಅದಕ್ಕಂಟಿರುವ ಬಲವಾದ ಸ್ನಾಯುಗಳೂ ಇವೆ. ಒಡಲಿಗೆ ಸುತ್ತಲೂ ಆಧಾರವಾಗಿ ಬಲುಮಟ್ಟಿಗೆ ಸ್ನಾಯುಗಳೇ ಇರುವುದರಿಂದ ಅದರ ಆಕಾರ ಗಾತ್ರಗಳು ಹೊಟ್ಟೆಯಲ್ಲಿನ ಒಳಾಂಗಗಳ ಆಕಾರ ಗಾತ್ರಗಳಂತೆ



ಉದರದ ವಲಯಗಳು

ಉಸಿರಾಟದಂತೆ ವ್ಯತ್ಯಾಸವಾಗುತ್ತಿರುತ್ತವೆ. ಈ ಸ್ನಾಯುಗಳ ಬಿಗುವೂ ಇಲ್ಲಿ ಮುಖ್ಯ. ತೀರ ಕೆಳಗಿನ ಪಕ್ಕೆಲುಬುಗಳೂ ತುಸುಮಟ್ಟಿಗೆ ಗೋಡೆಯಾಗುವುವು. ತಿಂದದ್ದನ್ನು ಅರಗಿಸುವ ಅಂಗಗಳೂ ತೊರಳೆಯೂ ಇದರೊಳಗಿವೆ. ಇವನ್ನೆಲ್ಲ ಆವರಿಸುವಂತೆ ಹೊರಸುತ್ತು ಪೊರೆ (ಪೆರಿಟೋನಿಯಂ) ಇದೆ. ನೋಡಿ– ಅಂಗರಚನಾಶಾಸ್ತ್ರ–ಒಟ್ಟಾರೆ, ಉದರದ–ಶಸ್ತ್ರವೈದ್ಯ; ಜಠರ–ಕರುಳಿನ–ನಾಳ.

ಹೊಟ್ಟೆಯಲ್ಲಿ ಒಳಾಂಗಗಳು ಇರುವೆಡೆಯನ್ನು ಗುರುತಿಸಿ ಹೇಳಲು ಅದರ ಮೇಲೆ ನಾಲ್ಕು ಗೆರೆಗಳನ್ನು ಎಳೆದು ಅದನ್ನು ಒಂಬತ್ತು ಊಹೆಯ ವಲಯಗಳನ್ನಾಗಿ ವಿಂಗಡಿಸುವುದು ವಾಡಿಕೆ. ಮೊದಲನೆಯ ಅಡ್ಡಗೆರೆಯನ್ನು ಹೊಕ್ಕುಳಿನ ಮೇಲುಗಡೆ ಅಂಗೈಯಗಲದ ಎತ್ತರದಲ್ಲಿ ಮೈ ಸುತ್ತಲೂ ಎಳೆಯಬೇಕು. ಇದು ಅನ್ನಾಗಸೆಯಡ್ಡನೆಯ ಸಮತಲ (ಟ್ರಾನ್ಸ್‌ಪೈಲೋರಿಕ್ ಪ್ಲೇನ್). ಕೆಳಗಿನ ಅಡ್ಡಗೆರೆಯನ್ನು ಪಕ್ಕಗಳಲ್ಲಿನ ಟೊಂಕೆಲುಬುಗಳ ಮೇಲಿನ ಗುಬಟಗಳ

(ಟ್ಯುಬರ್ಕಲ್ಸ್) ಮೇಲೆ ಎಳೆಯಬೇಕು. ಇದು ಗುಬಟಡ್ಡನೆಯ ಸಮತಲ (ಟ್ರಾನ್ಸ್‌ಟ್ಯುಬರ್ಕ್ಯುಲಾರ್ ಪ್ಲೇನ್). ಆಗ ಉದರ ಮೂರು ವಲಯಗಳಾಗುತ್ತದೆ. ಇನ್ನೆರಡು ನೆಟ್ಟ ನೇರ ಗೆರೆಗಳನ್ನು ಕೀಲಿಕ (ಕ್ಲಾವಿಕಲ್) ಮೂಳೆಗಳ ನಡುಬಿಂದುಗಳಿಂದ ಎಳೆದಾಗ 9 ವಲಯಗಳಾಗುತ್ತವೆ.

(ಎಂ.ಡಿ.)

**ಉದರದ ಶಸ್ತ್ರವೈದ್ಯ:** ಉದರದಲ್ಲಿರುವ ಅಂಗಗಳ ಇಲ್ಲವೇ ಅದಕ್ಕೆ ಸಂಬಂಧಿಸಿದ ಅಂಗಗಳ ರೋಗಗಳಿಗಾಗಿ ಶಸ್ತ್ರಕ್ರಿಯೆಯಿಂದ (ಆಪರೇಷನ್) ಮಾಡುವ ಚಿಕಿತ್ಸೆ (ಸರ್ಜರಿ ಆಫ್ ಆ್ಯಬ್ಡೊಮೆನ್). ಈ ಭಾಗದ ಅಂಗಗಳ ರೋಗಗಳ ವಿಚಾರಗಳನ್ನು ಆಯಾ ಅಂಗಗಳ ಮೇಲಿನ (ಪಿತ್ತಕೋಶ, ಪಿತ್ತದ ನಾಳಿ, ಈಲಿಯ ರೋಗಗಳು ಇತ್ಯಾದಿ) ಲೇಖನಗಳಿಂದ ತಿಳಿಯಬೇಕು. ಜಠರಗರುಳಿನ ರೋಗಗಳು ಎಂಬ ಲೇಖನದಲ್ಲಿ ಹೆಚ್ಚಿನ ಪಾಲು ಬಂದಿದೆ.

ಹಿಂದಿನ ಕಾಲದಲ್ಲಿ ಹೊಟ್ಟೆ ಕೊಯ್ಯಿಸಿಕೊಂಡವರಲ್ಲಿ ಬಹಳ ಮಂದಿ ನೋವಿಗೆ ಬಲಿಯಾಗುತ್ತಿದ್ದರು. ಉಳಿದವರು ಆಮೇಲಿನ ಸೋಂಕುಗಳಿಂದ ಪ್ರಾಣಬಿಡುತ್ತಿದ್ದರು. ನೋವನ್ನು ಕಳೆಯಲು ಅರಿವಳಿಕೆಗಳಾದ (ಅನೀಸ್ತೆಟಿಕ್ಸ್) ಈಥರೂ (1846) ಆಮೇಲೆ ಕ್ಲೋರೋಫಾರ್ಮೂ (1847) ಬಂದ ಮೇಲೆ ಒಂದು ಮುಖ್ಯ ತೊಡಕು ಕಳೆಯಿತು. ಅದರೂ ಲಿಸ್ಟರನ ಕಾರ್ಬಾಲಿಕಾಮ್ಲದ ತೆರನ ನಂಜುರೋಧಕ (ಆ್ಯಂಟಿಸೆಪ್ಟಿಕ್) ಮದ್ದುಗಳು ಜಾರಿಗೆ ಬರುವ ತನಕ (1867) ಶಸ್ತ್ರಕ್ರಿಯಾನಂತರದ ಸೋಂಕುಗಳನ್ನು ತಡೆಯಲೂ ಕಳೆಯಲೂ ಸಾಧ್ಯವೇ ಇರಲಿಲ್ಲ.

ಮುಂದಿನ ದಶಕಗಳಲ್ಲಿ ನಂಜಿಗೆ ದಾರಿಕೊಡದ, ನಂಜಿರದ (ಎಸೆಪ್ಟಿಕ್) ಶಸ್ತ್ರವೈದ್ಯವೇ ಜಾರಿಗೆ ಬಂದುದರಿಂದ ಪರಿಸ್ಥಿತಿ ಸುಧಾರಿಸಿತು. ನೋವು ಕಳೆವ ಹಾಗೂ ಅರಿವಳಿಸುವ ಮದ್ದುಗಳು, ರೋಗಿಗೆ ಅವನ್ನು ಕೊಡುವ ವಿಧಾನಗಳು ಚೆನ್ನಾದಂತೆಲ್ಲ ಶಸ್ತ್ರಕ್ರಿಯೆಯನ್ನು ರೋಗಿಗೆ ಅಪಾಯವಾಗದಂತೆ ಅವಸರವಿಲ್ಲದೆ ನಿಧಾನವಾಗಿ ಚೆನ್ನಾಗಿ ಮಾಡಲು ಅನುವಾಯಿತು. ಶಸ್ತ್ರಕ್ರಿಯೆಯನ್ನು ತಡೆದುಕೊಳ್ಳುವಂತೆ ರೋಗಿಯನ್ನು ಅದಕ್ಕೊಡ್ಡುವ ಮುಂಚೆಯೂ ಆಮೇಲೂ ಸರಿಯಾಗಿ ಪಾಲಿಸುವಂತಾದ್ದರಿಂದ, ಹೆಚ್ಚಿನ ಶಸ್ತ್ರವೈದ್ಯಕ್ಕೆ ದಾರಿಯಾಯಿತು. **(ನೋಡಿ– ಅರಿವಳಿಕೆ,–ಅರಿವಳಿಕಗಳು)**. ರೋಗ ಚಿಕಿತ್ಸೆಗಳಲ್ಲಿ ಸಲ್ಫಮದ್ದುಗಳ, ಜೀವಿರೋಧಕಗಳ (ಆ್ಯಂಟಿಬಯೋಟಿಕ್ಸ್) ಅಗಾಧ ಗುಣಗಳು ಗೊತ್ತಾದಾಗಿನಿಂದ ಶಸ್ತ್ರಕ್ರಿಯಾನಂತರದ ಸೋಂಕುಗಳು ಇಲ್ಲವಾದುವು. ಹಾಗೇ ಉದರದ ಶಸ್ತ್ರವೈದ್ಯದ ಅಪಾಯವೂ ತೀರ ತಗ್ಗಿತು.

ಉದರದಲ್ಲಿ ಕೈಗೊಳ್ಳುವ ಶಸ್ತ್ರಕ್ರಿಯೆಗಳು ಆರಿಸಿದವೋ ತುರ್ತಿನವೋ ಆಗಿರಬಹುದು. ಮೊದಲೇ ನಿಧಾನವಾಗಿ ಯೋಚಿಸಿ ಬೇಕೆಂದೇ ಗೊತ್ತುಪಡಿಸಿದ ವೇಳೆಯಲ್ಲಿ ಮಾಡುವುದು ಆರಿಸಿದ್ದು. ಆದರೆ ಯಾವ ಮುನ್ಸೂಚನೆ, ಮುನ್ನೆಚ್ಚರಿಕೆಗಳೂ ಸಿಗದೆ ತತ್‌ಕ್ಷಣ ಅಥವಾ ಮುಂದಿನ ಗಳಿಗೆಯಲ್ಲೇ ಕೈಗೊಳ್ಳಬೇಕಾದ್ದು ತುರ್ತಿನದು. ಎಷ್ಟೋವೇಳೆ ರೋಗದ ಗುರುತು ಸರಿಯಾಗಿ ಪತ್ತೆಯಾಗಿದ್ದರೆ ಯಾವ ಶಸ್ತ್ರಕ್ರಿಯೆ ಆಗಬೇಕೆಂದು ಹೊಟ್ಟೆ ಕೊಯ್ಯುವ ಮೊದಲೇ ನಿರ್ಧಾರವಾಗಿರುತ್ತದೆ. ಕೆಲವೇಳೆ ಉದರಕೊಯ್ಸೀಳಿಗೆಯಲ್ಲಿ (ಲ್ಯಾಪರಾಟೊಮಿ) ಉದರವನ್ನು ಕೊಯ್ದು ಒಳಗೆ ಇಣಿಕಿಹಾಕುವ ತನಕ ಯಾವ ಅಂಗಕ್ಕೆ ಏನು ಮಾಡಬೇಕೆಂದು ಗೊತ್ತಿರದು; ಕೇವಲ ಊಹೆ ಚಿಂತೆಗಳು ಇರುತ್ತವೆ. ಉದರವಂತೂ ಎಷ್ಟೋವೇಳೆ ಶಸ್ತ್ರವೈದ್ಯನಿಗೂ ಸೋಜಿಗದ ಕಣವೇ.

**ಜಠರ, ಕರುಳುಗಳು:** ಚಿಕ್ಕ ಕರುಳು, ಹೆಗ್ಗರುಳು (ಕೋಲನ್), ಜಠರಗಳ (ಸ್ಟಮಕ್) ಮೇಲೆ ಶಸ್ತ್ರವೈದ್ಯ ನಮ್ಮಲ್ಲಿ ಸಾಮಾನ್ಯ.

ಸಾಮಾನ್ಯವಾಗಿ ಜಠರದ ಹುಣ್ಣು (ಗ್ಯಾಸ್ಟ್ರಿಕ್ ಅಲ್ಸರ್) ಅಥವಾ ಏಡಿಗಂತಿಗಾಗಿ (ಕ್ಯಾನ್ಸರ್) ಜಠರಶಸ್ತ್ರವೈದ್ಯ ನಡೆವುದು. ತಿಂದ ಉಣಿಸು ಜಠರದಿಂದ ಮುಂದಕ್ಕೆ ಸಾಗದಿರುವುದೇ ಇದರ ಶಸ್ತ್ರಕ್ರಿಯೆಗೆ ಮುಖ್ಯ ಸೂಚನೆ. ಇಡೀ (ಟೋಟಲ್) ಜಠರವನ್ನೋ ಅರೆಬರೆಯಾಗಿ (ಪಾರ್ಷಿಯಲ್) ಒಂದು ಭಾಗವನ್ನೋ ಕೊಯ್ದು ತೆಗೆದುಹಾಕುವುದೇ ಜಠರಕೊಯ್ತೆಗೆತ (ಗ್ಯಾಸ್ಟ್ರೆಕ್ಟೊಮಿ). ಸಣ್ಣ ಕರುಳಿನ ಮೊದಲ ಭಾಗವಾದ ದುರಾರ್ಗರುಳಲ್ಲಿ (ಡುಯೊಡಿನಂ) ಎದ್ದಿರುವ ಹುಣ್ಣಿಗೆ ತಿಂದ ಆಹಾರ ತಾಕದಂತಿರಿಸಲೋ ಜಠರದ ಕೆಳಮೂತಿಯ ಆಗಸೆಯಂತಿರುವ ಅನ್ನಾಗಸೆಯ (ಪೈಲೋರಸ್) ತೂತಡಕಿಗಾಗೋ (ಸ್ಟ್ರಿಕ್ಚರ್) ಕೊಯ್ದು ತೂತಿಟ್ಟು ನೇರ ದಾರಿ ಆಗುವಂತೆ ಕಂಡಿ ಇರಿವುದಕ್ಕೆ ಜಠರಬರಿಗರುಳಕಂಡಿ ಇರಿತ (ಗ್ಯಾಸ್ಟ್ರೊಜೆಜುನಾಸ್ಟೊಮಿ) ಎಂದು ಹೆಸರಿದೆ. ಅನ್ನನಾಳದ ತೂತಡಕು (ಈಸೊಫೇಜಿಯಲ್ ಸ್ಟ್ರಿಕ್ಚರ್) ಆಗಿ, ಜಠರಕ್ಕೆ ಆಹಾರ ಇನಿತೂ ಇಳಿಯದಂತೆ ಆಗಿರುವಾಗ ಜಠರಕಂಡಿಇರಿತ (ಗ್ಯಾಸ್ಟ್ರಾಸ್ಟೊಮಿ) ಮಾಡಬೇಕಾಗುವುದು. ಆಗ ಹೊಟ್ಟೆಮುಗುಳಿನಲ್ಲಿ ಹೊರಕ್ಕೆ ಕಂಡಿ ಇರುವ ಹಾಗೆ ಜಠರದಲ್ಲಿ ಮಾಡಿದ ತೂತಿನ ಮೂಲಕ ಆಹಾರವನ್ನು ಹೊತ್ತೊತ್ತಿಗೆ ಹೊರಗಿಂದ ನೇರವಾಗಿ ಜಠರದೊಳಕ್ಕೆ ಹಾಕಲು ಅನುಕೂಲಿಸುತ್ತದೆ.

ಸಣ್ಣ ಕರುಳಿನ ಭಾಗಗಳಾದ ದುರಾರ್ಗರುಳು, ಬರಿಗರುಳು (ಜೆಜುನಂ), ಮುರಿಗರುಳುಗಳಲ್ಲಿ (ಐಲಿಯಂ) ಆತಂಕ (ಅಬ್‌ಸ್ಟ್ರಕ್ಷನ್), ಕರುಳ್ನಡುಪೊರೆಯ ಕೂಡುಕರಣಿಕೆ (ಮಸೆಂಟರಿಕ್ ತ್ರಾಂಬೋಸಿಸ್), ಇಲ್ಲವೇ ವಿಷಮ (ಮ್ಯಾಲಿಗ್ನೆಂಟ್) ಗಂತಿಗಳು ಅವುಗಳೊಳಕ್ಕೂ ನುಗ್ಗಿಬಿಟ್ಟು, ಎಲ್ಲಾದರೂ ಕರುಳು ಕೊಳೆತು ಅಳಿಕೊಳಪು (ಗ್ಯಾಂಗ್ರೀನ್) ಆಗಿದ್ದಲ್ಲಿ ಕೂಡಲೇ ಶಸ್ತ್ರಕ್ರಿಯೆ ಮಾಡಬೇಕಾಗುವುದು. ಕೆಟ್ಟಿರುವ ಕರುಳಿನ ತುಂಡನ್ನು ಕೊಯ್ದು ತೆಗೆದುಹಾಕುವುದೇ ಕಡಿತೆಗೆತ (ರಿಸೆಕ್ಷನ್). ಹೆಗ್ಗರುಳಿನ ರೋಗಗಳಲ್ಲಿ ಸಾಮಾನ್ಯವಾಗಿ ಕರುಳವಾಳುರಿತ (ಅಪೆಂಡಿಸೈಟಿಸ್), ಏಡಿಗಂತಿಗಳಿಗಾಗಿ ಶಸ್ತ್ರಕ್ರಿಯೆ ಆಗುತ್ತದೆ. ಹೆಗ್ಗರುಳಿನ ಯಾವ ಭಾಗದಲ್ಲಾದರೂ ಏಡಿಗಂತಿ ಏಳಬಹುದು. ಆಗ ಅದರೊಂದಿಗೇ ಹೆಗ್ಗರುಳಿನ ಬಹುಪಾಲನ್ನು ಕೊಯ್ತೆಗೆದ ಸಾಧ್ಯವೆನಿಸಿದರೆ ಉಳಿದ ಕೊನೆಗಳನ್ನು ಹತ್ತಿರಕ್ಕೆ ತಂದು ಜೋಡಿಸಬಹುದು. ಇದು ಸಾಧ್ಯವಾಗದಿದ್ದರೆ ಹೊಟ್ಟೆಯ ಮುಂಗೋಡೆಯ ಮೂಲಕ ಮಲ ಹೊರಬೀಳಲು ಕೃತಕ ಕಂಡಿಯನ್ನು ಮಾಡಬೇಕು. ನೆಟ್ಟಗರುಳಲ್ಲೂ (ರೆಕ್ಟಂ), ಇಬ್ಬಂಕದಲ್ಲೂ (ಸಿಗ್ಮಾಯ್ಡ್) ಏಡಿಗಂತಿ ಏಳುವುದು ಬಲು ಸಾಮಾನ್ಯ. ಹೆಗ್ಗರುಳೇ ಅಲ್ಲದೆ ಸುತ್ತಮುತ್ತಣ ಅಂಗಗಳಿಗೂ ಏಡಿಗಂತಿ ಹರಡಿಕೊಳ್ಳುವ ಮೊದಲೇ ಅದು ಇರುವುದು ಎಳೆಯದರಲ್ಲೇ ಗೊತ್ತಾದರೆ ವಾಸಿಮಾಡಲು ಕೊನೆಯಪಕ್ಷ ಐದು ವರ್ಷಗಳಾದರೂ ಬದುಕಿಸಿರಲು ಕೆಟ್ಟಿರುವ ಹೆಗ್ಗರುಳಿನ ಭಾಗವನ್ನು ತೆಗೆದು ಬಿಡಬಹುದು.

ಹೊಟ್ಟೆಯ ಮೆತ್ತಗಿರುವ ಸ್ನಾಯು ಗೋಡೆಯಲ್ಲಿ ಎಲ್ಲಾದರೂ ತೆಳುವಾಗಿ ಬಲಗುಂದಿ ಕಂಡಿ ಇಟ್ಟಂತಾದರೆ, ಅದರ ಮೂಲಕ ಒಳಗಿರುವ ಕರುಳಿನ ಸುರುಳಿಗಳು ಹೊರಕ್ಕೆ ಉಬ್ಬಿಕೊಂಡು ಹೊರಗಣ ಬೂರು (ಎಕ್ಸ್‌ಟರ್ನಲ್ ಹರ್ನಿಯ) ಆಗಬಹುದು. ಹೊಟ್ಟೆಯ ಪೊಳ್ಳಿನೊಳಗೇ ಹೊರಬಿಗಿಪೊರೆಯ (ಪೆರಿಟೋನಿಯಲ್) ಪಟ್ಟೆಗಳ ತಡೆಯಿಂದ ಒಳಗಣ ಬೂರು (ಇಂಟರ್ನಲ್ ಹರ್ನಿಯ) ಆಗಲೂಬಹುದು. ಇದಕ್ಕಾಗಿ ಆಗುತ್ತಿರುವ ತೊಡಕಿಗೆ ತಕ್ಕಂತೆ ಬೇಗನೆ ಶಸ್ತ್ರಕ್ರಿಯೆಯಲ್ಲಿ ಕೇವಲ ಪಟ್ಟೆಗಳನ್ನೊ ಹೊಟ್ಟೆಗೋಡೆ ಕಂಡಿಯನ್ನೊ ಕತ್ತರಿಸಿ ಬಿಡಿಸಬೇಕು, ಇಲ್ಲವೇ ಕರಳು ಕೊಳೆತಿದರೆ ಅಷ್ಟನ್ನೂ ಕತ್ತರಿಸಿ ಹಾಕಬೇಕಾಗುತ್ತದೆ. **(ನೋಡಿ– ಬೂರು)**

ಈಲಿ, ಪಿತ್ತಕೋಶ, ಮಾಂಸಲಿಗಳು: ಗಾಯ, ಪೆಟ್ಟುಗಳಿಂದ ಬಿರಿದು ಸೀಳಿದ್ದಕ್ಕೂ ಎಕ್ಕಲಕಾಯ್ಜೀವಿ ಜಿಟ್ಟೆ (ಏಕಿನೊಕಾಕಸ್ ಸಿಸ್ಟ್) ಇಲ್ಲವೇ ಏಡಿಗಂತಿ ಬೆಳೆದಿರುವುದನ್ನು ತೆಗೆದುಹಾಕಲೂ 19ನೆಯ ಶತಮಾನದ ಕೊನೆಯ ದಶಕಗಳಲ್ಲಿ, ಕೆಟ್ಟಿರುವ ಈಲಿಯ ಭಾಗಗಳನ್ನು ಆಗಾಗ್ಗೆ ಕತ್ತರಿಸಿ ತೆಗೆದುಹಾಕುತ್ತಿದ್ದರು. ಮಾಂಸದ ಹಾಗೆ ತುಂಬಿ ಮೆತುವಾಗಿ ರಕ್ತನಾಳಗಳಿಂದ ತುಂಬಿರುವ ಅಂಗವಾದ್ದರಿಂದ ಎಲ್ಲಾದರೂ ಈಲಿ ಹರಿದರೆ ರಕ್ತಸುರಿತ ನಿಲ್ಲಿಸುವುದು ಬಲು ತಾಪತ್ರಯ ಆಗುತ್ತಿತ್ತು. ವಿದ್ಯುತ್ತು ಸುಡಿಗೆಯಿಂದಲೂ (ಎಲೆಕ್ಟ್ರೊಕಾಟರಿ) ಪರಿಣಾಮಕರವಾಗಿ ಹೊಲಿಗೆಗಳನ್ನು ಹಾಕುವುದರಿಂದಲೂ ರಕ್ತಸುರಿತವನ್ನು ತಡೆಗಟ್ಟುವಂತಾದ್ದರಿಂದ ಈಲಿಯ ಮೇಲಿನ ಶಸ್ತ್ರಕ್ರಿಯೆಗಳು ಈಗ ಸಾಮಾನ್ಯ ಆಗುತ್ತಿವೆ. ಪಿತ್ತವನ್ನು ಈಲಿಯಿಂದ ಹೊರ ಸಾಗಿಸುವ ಸಾಗುನಾಳಗಳಿಗೆ (ಡಕ್ಟ್ಸ್) ಎಲ್ಲಾದರೂ ಅಡ್ಡಿಯಾಗಿದ್ದರೆ ಅಡ್ಡಿಯ ಹಿಂದಿನ ಭಾಗದಿಂದ ಕರುಳಿನ ಸುರುಳಿಗೆ ಕೃತಕ ದಾರಿ ಆಗುವಂತೆ ಹೊಲೆಯಲು ಈಲಿಯಲ್ಲಿ ಒಂದಿಷ್ಟು ಭಾಗವನ್ನು ಬಿಡಿಸಿತೆಗೆವುದು ಈ ವಿಧಾನಗಳಿಂದ ಈಗ ಕೈಗೂಡುತ್ತಿದೆ.

ಪಿತ್ತಕೋಶ, ಅದರ ಸಾಗುನಾಳಗಳ ಮೇಲೂ ಶಸ್ತ್ರವೈದ್ಯ ನಡೆಯುತ್ತಿದೆ. ಸೊಂಕಿನಿಂದ ತೀರ ಕೆಟ್ಟಿರುವ ಪಿತ್ತಕೋಶವನ್ನು ತೆಗೆದುಹಾಕಿದರೂ ಜೀವಕ್ಕೆ ತೊಂದರೆಯಿಲ್ಲ. ಪಿತ್ತ ಹೊರಸಾಗುವ ಸಾಗುನಾಳಗಳಿಗೆ, ಹೇಗಾದರೂ ಸರಿಯೆ ಆತಂಕವಾದರೆ ಜಠರ, ಕರುಳುಗಳೊಂದಿಗೆ ಪಿತ್ತಕೋಶದ ಕಂಡಿ ಇರುವಂತೆ ಮಾಡಬೇಕಾಗುತ್ತದೆ. ಪಿತ್ತಗಲ್ಲುಗಳನ್ನು (ಗಾಲ್‌ಸ್ಟೋನ್ಸ್) ತೆಗೆದುಹಾಕಿದ ಮೇಲೆ ಕೆಲವೇಳೆ ಕೆಲವು ದಿನಗಳವರೆಗೂ ಪಿತ್ತರಸ ಮೈ ಹೊರಕ್ಕೆ ಸುರಿವಂತೆ ಮಾಡಲು ಪಿತ್ತಕೋಶಕ್ಕೂ ಹೊಟ್ಟೆಯ ಹೊರಭಾಗಕ್ಕೂ ಕೃತಕವಾಗಿ ಕಂಡಿ ಇರಿಸಬೇಕಾಗುವುದು. ಈ ಕ್ರಿಯೆಯ ಹೆಸರು ಪಿತ್ತಕೋಶಕಂಡಿಇರಿತ (ಕೋಲಿಸಿಸ್ಟಾಸ್ಟೊಮಿ). ಇದರಲ್ಲಿ ರಬ್ಬರ್ ಚೂರನ್ನು ತೂರಿಸಿದ್ದರೆ ಕಂಡಿ ಮುಚ್ಚಿಕೊಳ್ಳದು. ಪಿತ್ತಕೋಶವನ್ನು ಕೊಯ್ದು ತೆಗೆದುಹಾಕುವುದೇ ಪಿತ್ತಕೋಶಕೊಯ್ತೆಗೆತ (ಕೋಲಿಸಿಸ್ಟಕ್ಟೊಮಿ). ಪಿತ್ತಗಲ್ಲುಗಳನ್ನು ತೆಗೆದು ಹಾಕಿದ ಮೇಲೆ ಸೊಂಕು ಬೇರೂರಿದ್ದರೆ ಮತ್ತೆ ಕಲ್ಲು ಸೇರದಿರಲೆಂದು ಹೀಗೆ ಕೊಯ್ತೆಗೆಯಬೇಕಾಗುತ್ತದೆ. ಪಿತ್ತಕೋಶ, ಜಠರಗಳ ನಡುವೆ ಕೃತಕವಾಗಿ ದಾರಿ ಮಾಡುವುದು ಪಿತ್ತಕೋಶ ಜಠರಕಂಡಿಇರಿತ (ಕೋಲಿಸಿಸ್ಟೊ ಎಂಟರಾಸ್ಟೊಮಿ); ಇದೇ ತೆರನಾಗಿ ಪಿತ್ತಕೋಶ, ಕರುಳುಗಳ ನಡುವೆ ಮಾಡುವುದೇ ಪಿತ್ತಕೋಶ ಕರುಳುಕಂಡಿಇರಿತ (ಕೋಲಿಸಿಸ್ಟೊ ಎಂಟರಾಸ್ಟೊಮಿ). ವಿಷಮಗಂತಿ ವಿಪರೀತ ಬೆಳೆದುಬಿಟ್ಟು ಹೊರಗಿಂದ ಒತ್ತುತ್ತಿರುವಾಗ ಸಾಮಾನ್ಯ ಪಿತ್ತ ಸಾಗುನಾಳಕ್ಕೆ (ಕಾಮನ್ ಬೈಲ್ ಡಕ್ಟ್) ತೆಗೆಯಲಾಗದ ಅಡಚಣೆ ಆಗಿರುವ ವೇಳೆಗಳಲ್ಲಿ ಈ ಶಸ್ತ್ರಕ್ರಿಯೆಗಳು ಆಗುತ್ತವೆ. ಮಾಂಸಲಿ ದುರಾರ್ಗರುಳ ಕೊಯ್ತೆಗೆತದಲ್ಲಿ (ಪ್ಯಾಂಕ್ರಿಯಾಟೊಡುಯೇಡಿನೆಕ್ಟೊಮಿ) ಮಾಂಸಲಿಯನ್ನು (ಪ್ಯಾಂಕ್ರಿಯಾಸ್) ದುರಾರ್ಗರುಳಿನ ಒಂದು ಭಾಗದೊಂದಿಗೆ ತೆಗೆದುಹಾಕುವಾಗ ಪಿತ್ತಸಾಗುನಾಳವನ್ನೇ ಬರಿಗರುಳಿನ ಒಂದು ಸುರುಳಿಯೊಂದಿಗೆ ಹೊಲಿದು ಕಂಡಿ ಇರಿಸುವುದುಂಟು.

ಹಿಂದಿನ ಕಾಲದಲ್ಲಿ ಮಾಂಸಲಿಯ ಮೇಲೆ ಕೆಲವು ತೀರ ಸರಳ ಶಸ್ತ್ರಕ್ರಿಯೆಗಳನ್ನು ನಡೆಸಿದ್ದರು. ಆದರೆ ಅದರಲ್ಲಿನ ಕಲ್ಲುಗಳನ್ನು ತೆಗೆಯಲು ಒಂದು ಪಾಲನ್ನೋ ಇಡೀ ಗ್ರಂಥಿಯನ್ನೋ ತೆಗೆಯಲು ಕೈಹಾಕಿರುವುದು ಕೇವಲ ಇತ್ತೀಚೆಗೆ.

ಈಲಿಯ ಅರಿಶಿನಾರಿಗೆಯಲ್ಲಿ (ಹೆಪ್ಯಾಟಿಕ್ ಸಿರೊಸಿಸ್), ಈಲಿ ನಾರಿನಂತೆ ಗಡುಸೂ ಬಿರುಸೂ ಆದಾಗ, ಅದರ ಮೂಲಕ ರಕ್ತಹರಿವಿಗೆ ಆತಂಕವಾಗಿ ಹೊಟ್ಟೆ ತುಂಬ ನೀರು ಸೇರಿಕೊಂಡು ಉಬ್ಬರಿಸಿಕೊಂಡಿದ್ದಾಗ, ಅನ್ನನಾಳದ ಕೆಳಭಾಗದ ಸಿರಗಳು (ವೆನ್ಸ್) ಸಿರಕ್ಕೂ ಕೆಳಸಿರ ಕೊಳ್ಳಕ್ಕೂ (ಇನ್‌ಫೀರಿಯರ್ ವೀನಕೇವ) ನಡುವೆ ಮಾಡುವ ಕೃತಕ ದಾರಿಕಂಡಿಗೆ ಎಕ್‌ನಬೊರಿಗೆ (ಎಕ್ಸ್ ಫಿಸ್ಟ್ಯುಲ) ಎಂದು ಹೆಸರು.

**ಉಳಿದ ಕಾರಣಗಳು:** ಅಕಸ್ಮಾತ್ತಾಗಿ ದನ ಹಾಯುವುದರಿಂದ ಕೊಂಬಿನಿಂದ ಹೊಟ್ಟೆ ಬಗಿದು ಸೀಳಿದಂತಾಗಿ ಒಳಾಂಗಗಳಿಗೂ ಪೆಟ್ಟಾದಾಗ, ಉದರದ ಶಸ್ತ್ರ ವೈದ್ಯ ನಡೆಯಬೇಕಾಗುತ್ತದೆ. ಹೊಟ್ಟೆಯ ಕಿಳ್ಗುಳಿಯಲ್ಲಿ (ಪೆಲ್ವಿಸ್) ಇರುವ ಹೆಣ್ಣಿನ ಜನನಾಂಗಗಳ ಮೇಲಿನ ಶಸ್ತ್ರಕ್ರಿಯೆಗಾಗಿಯೂ ಎಂದಿನಂತೆ ಹೆರಿಗೆಯಾಗಲು ಅಸಾಧ್ಯವಾಗಿರುವಾಗ ಕೂಸನ್ನು ಗರ್ಭದಿಂದ ನೇರವಾಗಿಹೊರತೆಗೆಯಲೂ ಹೊಟ್ಟೆಯ ಶಸ್ತ್ರಕ್ರಿಯೆ ಆಗುವುದು. ಮಕ್ಕಳಾಗದಂತೆ ಮಾಡಲು, ಗರ್ಭನಾಳಗಳನ್ನು ಕತ್ತರಿಸಿ ತುದಿಗಳಿಗೆ ಗಂಟು ಬಿಗಿಸುವ ಗರ್ಭನಾಶಕೊಯ್ತೆಗೆತ (ಟ್ಯೂಬೆಕ್ಟೊಮಿ) ಇನ್ನೊಂದು ಸಣ್ಣ ಉದಾಹರಣೆ. ರೋಗಿಗೆ ಇದ್ದಕ್ಕಿದ್ದಹಾಗೆ ಹೊಟ್ಟೆಶೂಲೆ, ವಾಂತಿಗಳೊಂದಿಗೆ ವಿಪರೀತ ಸುಸ್ತಾಗಿರುವಾಗ, ರೋಗಕಾರಣವನ್ನು ಖಚಿತಪಡಿಸಿಕೊಳ್ಳಲು ಸಮಯ ಇಲ್ಲದಾಗಲೂ ಒಳಗೆ ಏನಾಗಿದೆಯೆಂದು ನೋಡಿ ತಿಳಿದೇ ಚಿಕಿತ್ಸೆ ಮಾಡಲೂ ತುರ್ತಾಗಿ ಹೊಟ್ಟೆ ಕೊಯ್ದು ನೋಡುವುದುಂಟು. ಸಾಕಷ್ಟು ರಕ್ತಹರಿದರೆ ಕಾಲು ಕೊಳೆತು ಒಣಗಿದಂತಾದಾಗ ಧಮನಿಗಳ ಸುತ್ತ ಹೆಣೆದುಕೊಂಡು ಅವು ಸೆಡೆತುಕೊಳ್ಳುವಂತೆ ಚೋದಿಸುತ್ತಿರುವ ಅನುವೇದನಾ ನರಗಂಟುಗಳನ್ನು (ಸಿಂಪತೆಟಿಕ್ ಗ್ಯಾಂಗ್ಲಿಯ) ಕಿತ್ತೊಗೆಯಲು ಅನುವೇದನಾಕೊಯ್ತೆಗೆತ (ಸಿಂಪೆಕ್ಟೊಮಿ) ಆಗುವುದು. ಜಠರದಲ್ಲಿ ಹುಣ್ಣು ಎದ್ದಿರುವಾಗ, ಆಮ್ಲ ಸುರಿತಕ್ಕೆ ಕಾರಣವಾಗಿರುವ ಅಲೆಕ ನರದ (ವೇಗಸ್ ನರ್ವ್) ಟಿಸಿಲುಗಳನ್ನು ತೆಗೆದರೆ (ಅಲೆಕನರ ಕೊಯ್ಸೀಳಿಗೆ_ ವೇಗಾಟೊಮಿ), ಆಮ್ಲರಸದ ಸುರಿತ ತಗ್ಗಿ ರೋಗಿಯ ನರಳಿಕೆ ಶಮನವಾಗುವುದು. ಅದರಲ್ಲೆ ಜಿಟ್ಟಿಗಾಗೂ (ಸಿಸ್ಟ್) ಹಲವಾರು ರಕ್ತಕಣಗಳ ರೋಗಗಳಲ್ಲೂ ತೊರಳೆಯನ್ನು (ಸ್ಪ್ಲೀನ್, ಪ್ಲೀಹ,) ತೆಗೆವುದೇ ತೊರಳೆ ಕೊಯ್ತೆಗೆತ (ಸ್ಪ್ಲೆನೆಕ್ಟೊಮಿ). ಮಹಾಧಮನಿಯಲ್ಲಿ (ಅಯೋರ್ಟ), ಅಗಲುಬ್ಬೊ (ಅನ್ಯೂರಿಸಂ), ಧಮನಿಪೆಡಸಣೆಯ (ಆರ್ಟಿರಿಯೊಸ್ಕ್ಲೀರೋಟಿಕ್) ಅಡಚಣೆಯೋ ಆಗಿದ್ದರೆ ಆ ಭಾಗವನ್ನೇ ತೆಗೆದು ಹಾಕಿ ಒಂಗುವ ನಾಟಿಗಳನ್ನು (ಪ್ಲಾಸ್ಟಿಕ್ ಗ್ರಾಫ್ಟ್ಸ್) ಹಾಕುವುದಕ್ಕೂ ಉದರದ ಶಸ್ತ್ರಕ್ರಿಯೆ ಕೈಗೊಳ್ಳುವುದುಂಟು. ಮೂತ್ರಪಿಂಡಗಳು, ಅಡ್ರಿನಲ್ ಗ್ರಂಥಿಗಳು, ಹೊಟ್ಟೆಯ ಪೊಳ್ಳಿನೊಳಗೆ ಇರದೆ ಅದರ ಹಿಂದಣ ಗೋಡೆಯಲ್ಲಿ ಇರುವುದರಿಂದ ಅವುಗಳ ಶಸ್ತ್ರಕ್ರಿಯೆಗಾಗಿ ಕೆಲವೇಳೆ ಹೊಟ್ಟೆಯನ್ನು ಕೊಯ್ದು ಒಳಹೊಗಬೇಕಾಗುತ್ತದೆ. ಕಂಕೋಶದಲ್ಲಿ (ಬ್ಲಾಡರ್, ಮೂತ್ರಕೋಶ) ಕಲ್ಲು ಸೇರಿದ್ದರು ಅದರ ತಳದಲ್ಲಿರುವ ಮುನ್ನಿಲುಗಳ (ಪ್ರಾಸ್ಟೇಟ್) ದೊಡ್ಡದಾಗಿ ಬೆಳೆದಾಗ ತೆಗೆಯಲೂ ಹೊಟ್ಟೆಯ ಕೆಳಭಾಗವನ್ನು ಕೊಯ್ದು ಶಸ್ತ್ರಕ್ರಿಯೆ ಮಾಡುವುದಾದರೂ ಹೊಟ್ಟೆಯ ಪೊಳ್ಳಿನೊಳಕ್ಕೆ ಹೋಗದ್ದರಿಂದ ಇದು ನಿಜವಾಗಿ ಉದರದ ಶಸ್ತ್ರ ಕ್ರಿಯೆ ಅಲ್ಲ. (ಕೆ.ಕೆ.ಎಂ.)

**ಉದರಶೂಲೆ:** ಮೇಲಿಂದ ಮೇಲೆ ಉದರದಲ್ಲಿ ಎಲ್ಲಾದರೂ ಒಂದೆಡೆ ಒಂದು ಒಳಾಂಗದ ಸಂಬಂಧವಾಗಿ ಕಾಣಿಸಿಕೊಳ್ಳುವ ಜೋರಾಗಿರುವ ನೋವು (ಕಾಲಿಕ್). ಯಾವುದಾದರೂ ಪೊಳ್ಳಾದ ಒಳಾಂಗದ ನಾಳದ ಕಂಡಿಯ ಅಗಲ ತುಸು ಹೆಚ್ಚು ಕಡಿಮೆಯಾಗಿ ಆತಂಕವಾದಾಗ ಅದರ ಸ್ನಾಯು ಗೋಡೆಗಳು ತಾತ್ಕಾಲಿಕವಾಗಿಯೇ ಬಹಳ ಹೊತ್ತೊ ಬಲವಂತದಿಂದ ಕುಗ್ಗುವುದರಿಂದ ಉಂಟಾಗುವ ನೋವಿಗೆ ಬಲು ಮಟ್ಟಿಗೆ ಈ ಹೆಸರನ್ನು ಕೊಡುವುದುಂಟು. ಜಠರ, ಕರುಳು, ಕಂಕೋಶ (ಬ್ಲ್ಯಾಡರ್), ಪಿತ್ತಕೋಶಗಳಲ್ಲಿ ಹೀಗಾಗುವುದು ಸಾಮಾನ್ಯ. ಆಮಶಂಕೆ, ಮತ್ತಿತರ ಕಾರಣಗಳಿಂದಾಗುವ ಕರುಳುರಿತದಲ್ಲಿ (ಎಂಟರೈಟಿಸ್) ಹೊಟ್ಟೆ ನುಲಿತವಾಗಿ ತೋರುವುದು. ಸೀಸದ ವಿಷವೇರಿಕೆಯಲ್ಲೂ ಸಾಮಾನ್ಯ. ಬುಡ್ಡಿಹಾಲು ಕುಡಿವ ಕೂಸುಗಳಲ್ಲಿ ಅಜೀರ್ಣವಾದಾಗ ಈ ಶೂಲೆ ಕಾಣಿಸಿಕೊಂಡು ತುಂಬ ರಂಪವಾಗುತ್ತದೆ. ಕಾಲುಗಳನ್ನು ಮುದುರಿಕೊಂಡು ಕೂಸು ತಳಮಳಗುಟ್ಟುತ್ತ ರಚ್ಚೆಹಿಡಿದು ಒಂದೇ ಸಮನೆ ಕಿಟಾರನೆ ಕಿರಚುವುದು. ಉದರಶೂಲೆಗೆ ಕಾರಣವಾದ ರೋಗಗಳಿಗೆ ತಕ್ಕ ಚಿಕಿತ್ಸೆಯಾದರೆ ಶೂಲೆ ಹೋಗುತ್ತದೆ **(ನೋಡಿ– ಪಿತ್ತಕೋಶ)**. (ಕೆ.ಆರ್.ಎ.)

**ಉದಾಮ್ ಸಿಂಗ್:** 1899–1940. ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ. ಪಂಜಾಬ್‌ನ ಅಮೃತಸರದಲ್ಲಿ ಜನಿಸಿದ. ಚಿಕ್ಕಂದಿನಲ್ಲಿ ಜನರಲ್ ಡೈಯರ್ ನೇತೃತ್ವದಲ್ಲಿ ನಡೆದ ಜಲಿಯನ್ ವಾಲಾಬಾಗ್ ದುರಂತದ ಮಾರಣ ಹೋಮದಿಂದ ಬ್ರಿಟಿಷ್ ವಿರೋಧಿ ಭಾವನೆ ಬೆಳೆಸಿಕೊಂಡ. ಇಂಗ್ಲೆಂಡ್‌ಗೆ ತೆರಳಿ ಲಂಡನ್‌ನಲ್ಲಿ ಎಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಸೇರಿದ. ಅಲ್ಲಿ ಕ್ರಾಂತಿಕಾರಿಗಳ ಸಂಪರ್ಕದೊಂದಿಗೆ 6 ಗುಂಡುಗಳ ರಿವಾಲ್ವರನ್ನು ಸಂಪಾದಿಸಿಕೊಂಡ. ಹಿಂದೆ ಜಲಿಯನ್ ವಾಲಾಬಾಗ್ ದುರಂತದ ವೇಳೆಯಲ್ಲಿ ಪಂಜಾಬಿನ ಗವರ್ನರ್ ಆಗಿ, ಪರೋಕ್ಷವಾಗಿ ದುರಂತಕ್ಕೆ ಕಾರಣನಾಗಿದ್ದ ಸರ್ ಮೈಕಲ್ ಓಡ್ವೈಯರ್‌ನನ್ನು 1940 ಮಾರ್ಚ್ 13ರಂದು ಲಂಡನ್‌ನ ಕ್ಯಾಕ್ಸ್‌ಟೌನ್ ಹಾಲ್ ಸಭೆಯೊಂದರಲ್ಲಿ ಗುಂಡಿಟ್ಟುಕೊಂದ. ಆಗ ಇವನನ್ನು ಬಂಧಿಸಿ ವಿಚಾರಣೆ ನಡೆಸಿ 1940 ಜೂನ್ 12ರಂದು ಗಲ್ಲಿಗೇರಿಸಲಾಯಿತು. *

**ಉದಾರವಾದ:** ಸರ್ಕಾರ, ಸಮಾಜ ಹಾಗೂ ವ್ಯಕ್ತಿಗಳಿಗೆ ಅನ್ವಯಿಸುವ ಒಂದು ನಂಬಿಕೆ, ದರ್ಶನ ಹಾಗೂ ಚಳವಳಿ; ವ್ಯಕ್ತಿಸ್ವಾತಂತ್ರ್ಯವನ್ನೇ ಪ್ರಧಾನವಾಗಿ ಎತ್ತಿಹಿಡಿದು, ಇದಕ್ಕನುಗುಣವಾಗಿ ಸರ್ಕಾರದ ರೀತಿನೀತಿಗಳೂ ಸಮಾಜವ್ಯವಸ್ಥೆಯೂ ಸಮಷ್ಟಿ ದೃಷ್ಟಿಯೂ ನೇರ್ಪುಗೊಳ್ಳಬೇಕೆಂಬ ಅಭಿಪ್ರಾಯ ಸಮುದಾಯ (ಲಿಬಿರಲಿಸಂ). 19ನೆಯ ಶತಮಾನದಲ್ಲಿ ಸ್ಪೇನಿನಲ್ಲಿದ್ದ ಲಿಬರೇಲ್ಸ್ ಎಂಬ ರಾಜಕೀಯ ಪಕ್ಷ ಜನ್ಮತಳೆದಾಗಿನಿಂದ ಇಂಗ್ಲಿಷಿನ ಲಿಬರಲಿಸಂ ಎಂಬ ಪದ ಹೆಚ್ಚು ಪ್ರಚಾರದಲ್ಲಿದೆ. ಆದರೆ ಇದರ ಹಿಂದಿನ ಅಭಿಪ್ರಾಯ ಇಷ್ಟೊಂದು ಈಚಿನದೇನೂ ಅಲ್ಲ. ಸ್ವಾತಂತ್ರ್ಯದ ಕಲ್ಪನೆ ಬಂದಾಗಿನಿಂದಲೇ ಉದಾರವಾದದ ಕಲ್ಪನೆಯೂ ಜನಮನದಲ್ಲಿ ಬೇರೂರಿ ಬೆಳೆದಿದೆ. ಲಿಬರ್ಟಿಗೂ (ಸ್ವಾತಂತ್ರ್ಯ) ಲಿಬರಲಿಸಂಗೂ ನೇರವಾದ ಸಂಬಂಧವುಂಟು.

ಉದಾರವಾದ ಭಾವನೆ ಎಷ್ಟು ಹಳೆಯದೋ ಇದರ ಅರ್ಥವೂ ಅಷ್ಟೇ ಗೊಂದಲಮಯವಾದದ್ದು. ಶತಮಾನದಿಂದ ಶತಮಾನಕ್ಕೆ ಬೇರೆಬೇರೆ ಅರ್ಥವ್ಯಾಪ್ತಿಗಳಿಗೆ ಇದು ಒಳಪಟ್ಟಿದೆ. ಉದಾರವಾದಿಯೆಂದು ಹೇಳಿಕೊಳ್ಳುವ ಅನೇಕ ರಾಜಕೀಯ ಪಕ್ಷಗಳು 20ನೆಯ ಶತಮಾನದಲ್ಲೂ ಉಂಟು. ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಭಾರತದಲ್ಲೂ ಲಿಬರಲ್ ಪಕ್ಷವೊಂದಿತ್ತು. ಉದಾರವಾದಿ ಅಂತಾರಾಷ್ಟ್ರೀಯ ಸಂಸ್ಥೆಯೂ ಇಲ್ಲದಿಲ್ಲ. ಈ ಎಲ್ಲ ಪಕ್ಷಗಳ ಗುರಿ ಉದಾರದೃಷ್ಟಿ. ಆರ್ಥಿಕ ಕ್ಷೇತ್ರದಲ್ಲಿ ಸರ್ಕಾರದ ಪ್ರವೇಶ ಕನಿಷ್ಠ ಮಟ್ಟದಲ್ಲಿರಬೇಕೆಂದೂ ವ್ಯಕ್ತಿಗೆ ಆರ್ಥಿಕ ಸ್ವಾತಂತ್ರ್ಯವಿರಬೇಕೆಂದೂ ಇವುಗಳ ವಾದ. ಆಧುನಿಕ ಜಗತ್ತಿನಲ್ಲಿ ಒಂದು ಕಡೆಯಿಂದ ಕಮ್ಯೂನಿಸಂ ಹಾಗೂ ಸಮಾಜವಾದಗಳೂ ಇನ್ನೊಂದು ಕಡೆಯಿಂದ ಬಲಪಕ್ಷೀಯ ಕೇಂದ್ರಾಧಿಕಾರವೂ ವ್ಯಕ್ತಿಯನ್ನೂ ಆತನ ಚಟುವಟಿಕೆಗಳನ್ನೂ ನಜ್ಜುಗುಜ್ಜು ಮಾಡುತ್ತಿವೆ. ಆತನನ್ನು ಇವೆರಡರಿಂದಲೂ ವಿಮೋಚನೆಗೊಳಿಸಿ ಆತನ ವಿಕಾಸಕ್ಕೆ ಅನುವು ಮಾಡಿಕೊಡಬೇಕೆಂಬುದು ಈ ಪಕ್ಷಗಳ ಉದ್ದೇಶ.

ಆದರೂ ಉದಾರವಾದದ ಕಲ್ಪನೆ ಯಾವ ಒಂದು ನಿಲವಿಗೂ ಸೀಮಿತವಾದದ್ದಲ್ಲ. 18–19ನೆಯ ಶತಮಾನಗಳಲ್ಲಿ ಇದು ಬಲು ಕ್ರಾಂತಿಕಾರೀ ಭಾವನೆಯೆನಿಸಿತ್ತು. ಅನೇಕ ಕ್ರಾಂತಿಪರ ಭಾವನೆಗಳು ಇದರ ಹೊಟ್ಟೆಯಲ್ಲಿ ಅಡಕವಾಗಿವೆ. ಯಾವ ಒಂದು ಆರ್ಥಿಕ ಕ್ರಮಕ್ಕಾಗಲಿ ಸಾಮಾಜಿಕ ವ್ಯವಸ್ಥೆಗಾಗಲಿ ಕಟ್ಟುಬೀಳದ ಈ ದರ್ಶನದ ವೈಶಿಷ್ಟ್ಯವೆಂದರೆ ವ್ಯಕ್ತಿಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯವೇ ಇದರ ಧರ್ಮ ಹಾಗೂ ವಿಧಾನ, ಸಾಧನ ಹಾಗೂ ಸಾಧನೀಯ.

**ಇತಿಹಾಸ:** ಮಾನವಚೇತನದ ವಿಕಾಸ ಹಾಗೂ ಸಾರ್ಥಕತೆಗೂ ವ್ಯಕ್ತಿಸ್ವಾತಂತ್ರ್ಯಕ್ಕೂ ನೇರವಾದ ಸಂಬಂಧವಿದೆಯೆಂಬ ಭಾವನೆಯ ಉಗಮವಾದಂದಿನಿಂದಲೂ ಉದಾರವಾದ ಬೆಳೆದುಕೊಂಡು ಬಂದಿದೆಯೆನ್ನಬಹುದು. ಪ್ರಾಣವನ್ನೇ ತೆತ್ತೇನು, ಆದರೆ ನಿಜಕ್ಕೆ ಅಂಟಿಕೊಂಡೇ ಇದ್ದೇನು–ಎಂಬ ಸಾಕ್ರಟೀಸನ ದಿಟ್ಟ ನಿಲವಿನ ಹಿಂದೆ ಇದ್ದದ್ದು ಇದೇ ದೃಷ್ಟಿ; ಜನಾಂಗದ ಕಟ್ಟುಪಾಡುಗಳಿಗೂ ನಗರ ಸರ್ಕಾರಗಳ ನಿಷ್ಠುರ ನಿಯಮಗಳಿಗೂ ವಿರುದ್ಧವಾಗಿ ಸಿಡಿದೆದ್ದ ಸ್ವತಂತ್ರ್ಯ ಆತ್ಮದ ಆರ್ತಧ್ವನಿ.

ಈ ಬಿಡುಗಡೆಯ ಮಾತಿಗೆ ಅರ್ಥಪುಷ್ಟಿ ಬಂದದ್ದು ಮುಂದೆ–ಸ್ಟೋಯಿಕರ ಕಾಲದಲ್ಲಿ. ಗುಂಪಿನ ಕಟ್ಟು ಸಡಿಲವಾಗಿ ಮಾನವನ ವಿಶ್ವವ್ಯಾಪಕಗುಣಕ್ಕೆ ಸಾರ್ವತ್ರಿಕ ಮಾನ್ಯತೆ ದೊರಕಿದ್ದು ಆಗ. ಮಾನವನ ವ್ಯಕ್ತಿತ್ವಕ್ಕೆ ಧರ್ಮದಲ್ಲಿ ಪುರಸ್ಕಾರ ದೊರಕುವಂತೆ ಆದದ್ದು ಕ್ರಿಸ್ತೋದಯದ ಫಲವೆನ್ನಬಹುದು.

ಆಗಿನಿಂದ ಅವಿಚ್ಛಿನ್ನವಾಗಿ ಹರಿದು ಬಂದ ಈ ಭಾವನೆಗಳಿಗೆ ಒಂದು ಮಾರ್ಗ ನಿರ್ಮಿಸಿದವರೆಂದರೆ 17ನೆಯ ಶತಮಾನದ ಚಿಂತನಶೀಲರಾದ ಡೇಕಾರ್ಟ್, ಮಿಲ್ಟನ್, ಮತ್ತು ಸ್ಪಿನೋಜ಼. ಯುಕ್ತಾಯುಕ್ತ ಪರಿಜ್ಞಾನ ವಿಧಾನವನ್ನು ರಚಿಸಿದವ ಡೇಕಾರ್ಟ್. ತರ್ಕಜೀವನಕ್ಕೂ ವಿಕಸನಶೀಲ ಉದಾರದೃಷ್ಟಿಯ ಮೌಲ್ಯಗಳಿಗೂ ಸಂಬಂಧ ರಚಿಸಿದವ ಸ್ಪಿನೋಜ಼. ಮಾನವನನ್ನು ಬಂಧಿಸಿದ್ದ ದಾಸ್ಯ ಅಜ್ಞಾನಗಳ ವಿರುದ್ಧವಾಗಿಯೂ ಸತ್ಯದ ಕೈಕಾಲು ಕಟ್ಟುವ ನಿಷೇಧಾಜ್ಞೆಗಳ ವಿರುದ್ಧವಾಗಿಯೂ ಉಗ್ರ ಹೋರಾಟ ನಡೆಸಿದ ಕೆಚ್ಚುಗಾರ ಮಿಲ್ಟನ್. ಇವರು ಮೂವರೂ ಒಟ್ಟಾಗಿ ಎಲ್ಲ ಪ್ರತಿಗಾಮೀ ಶಕ್ತಿಗಳನ್ನೂ ಎದುರಿಸಿದರು. ಇವರ ಚಿಕಿತ್ಸಕದೃಷ್ಟಿಗೆ ಆಡಳಿತ ಹಾಗೂ ಮತೀಯ ವ್ಯವಸ್ಥೆಗಳೂ ಹೊರತಾಗಲಿಲ್ಲ. ಹೆಪ್ಪುಗಟ್ಟಿದ ಎಲ್ಲ ವ್ಯವಸ್ಥೆಗಳೂ ಇವರ ವೈಚಾರಿಕ ವಿಧಾನದ ಬಿಸಿಗೆ ಕರಗಿದುವು. ಪ್ರಾಟೆಸ್ಟೆಂಟರ ಆಂದೋಲನದ ಪರವಾಗಿ ವ್ಯಕ್ತಿಯ ವಿಚಾರಮತಿಗೆ ದೊರಕಿದ್ದ ಪುರಸ್ಕಾರದ ಅಡಿಗಲ್ಲಿನ ಮೇಲೆ ಈ ಮೂವರೂ ಮಾಡಿದ ಸಾಧನೆ ಅಲ್ಪವೇನಲ್ಲ.

ಎಲ್ಲಕ್ಕಿಂತ ಪ್ರಬಲವಾದ ಪ್ರಭಾವವೆಂದರೆ ವಿಜ್ಞಾನ ಕ್ರಾಂತಿ. ಕಾಲದೇಶಗಳ ಹೊಸ ಆಯಾಮಗಳನ್ನು ಮಾನವನ ಮುಂದೆ ತೆರೆದಿಟ್ಟು, ಅವನ ದೃಷ್ಟಿಯನ್ನು ಸ್ವರ್ಗಲೋಕದಿಂದ ಇಳೆಗೆ ಇಳಿಸಿದ್ದು ವಿಜ್ಞಾನ. ಪುನರುಜ್ಜೀವನಕಾಲದಲ್ಲಿ ಇದು ವಾಮನನಂತೆ ತೊಡಗಿ, 16–17ನೆಯ ಶತಮಾನಗಳಲ್ಲಿ ತ್ರಿವಿಕ್ರಮನಂತೆ ಬೆಳೆದು, ಪರಿಸರದ ಮೇಲೆ ಮಾನವನ ಹಿಡಿತವನ್ನು ಹೆಚ್ಚಿಸಿ, ಈ ಸತ್ಫಲಗಳನ್ನು ಸಮಾಜದ ಒಳಿತಿಗಾಗಿ ಬಳಸಿಕೊಳ್ಳಬಲ್ಲ ಹೊಸ ಆರ್ಥಿಕ ವರ್ಗವೊಂದಕ್ಕೆ ಜನ್ಮವಿತ್ತು, ಹೊಸ ವಿಚಾರವಾದಿಗಳ ಶ್ರೇಣಿಯೊಂದರ ನಿರ್ಮಾಣಕ್ಕೆ ಕಾರಣವಾಯಿತು.

ಆಗಿನ ಕಾಲದಲ್ಲಿ ಪ್ರಕಟವಾದ ನಾನಾ ವಿಚಾರಧಾರೆಗಳೆಲ್ಲ ಒಂದು ಸ್ಫೋಟಕ ಚಳವಳಿಯಲ್ಲಿ ಕೇಂದ್ರೀಕೃತವಾದವು. ವಿಚಾರಯುಗವೆಂಬ ಅಭಿಧಾನದಿಂದ ಈ ಕಾಲ ಪ್ರಸಿದ್ಧವಾಯಿತು. ಈ ಹೊಸ ಹುರುಪು ಯುರೋಪನ್ನೆಲ್ಲ ಹಾಯ್ದು, ಅಟ್ಲಾಂಟಿಕವನ್ನು ದಾಟಿ ಹೊಸ ಜಗದಲ್ಲೂ ಹಬ್ಬಿತು. ವಾಲ್ಟೇರ್, ಲಾಕ್, ಗಯಟೆ, ಥಾಮಸ್ ಜೆಫರ್‌ಸನ್, ರೂಸೋ, ಹ್ಯೂಂ, ಕಾಂಟ್, ಡೀಡ್ರೋ. ಲೆಪಿಂಗ್, ಆಡಂ ಸ್ಮಿತ್, ಗಯೊವನ್ನಿ ವೀಕೊ, ಕಾಂಡಾರ್ಸೇ, ಮಾಂಟೆಸ್ಕ್ಯೂ, ಬೆಂಜಮಿನ್ ಫ್ರ್ಯಾಂಕ್‌ಲಿನ್ ಮುಂತಾದ ಮಹಾವ್ಯಕ್ತಿಗಳ ತೂರ್ಯಧ್ವನಿಗಳು ಇದರಲ್ಲಿ ಮಿಳಿತವಾದುವು. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಅರಮನೆ–

ಗುರುಮನೆಗಳ ಹಾಗೂ ಶ್ರೀಮಂತ-ಪುರೋಹಿತರ ಬಂದಿಯಾಗಿದ್ದ ತರ್ಕ-ಯುಕ್ತಿಗಳನ್ನೆಲ್ಲ ಬಿಡುಗಡೆ ಮಾಡಿ ಇವು ವಿಜ್ಞಾನದ ವಾತಾವರಣದಲ್ಲಿ ಸ್ವತಂತ್ರವಾಗಿ ಉಸಿರಾಡುವಂತೆ ಮಾಡಿದವರು ಇವರು. ಹಳೆಯ ವ್ಯವಸ್ಥೆಯ ಸ್ಥಾನದಲ್ಲಿ ಹೊಸ ಬೌದ್ಧಿಕ ಸಾಂಸ್ಕೃತಿಕ ವ್ಯವಸ್ಥೆ ಯಾವುದೂ ಆಗ ಇನ್ನೂ ಉದಯವಾಗಿರಲಿಲ್ಲ. ಏಕೆಂದರೆ ಇದಕ್ಕೆ ಅಗತ್ಯವಾದ ರಾಜಕೀಯ, ಆರ್ಥಿಕ, ಸಾಮಾಜಿಕ ವಜ್ರಾರೆ ಆಗ ತಾನೇ ನಿರ್ಮಾಣವಾಗುತ್ತಿತ್ತು. ಆದರೂ ಇವರು ಬರಲಿದ್ದ ಈ ವ್ಯವಸ್ಥೆಯ ಮುನ್ನೋಟ ಪಡೆದಿದ್ದರು.

ಮುಂದೆ ಈ ಹೊಸ ವ್ಯವಸ್ಥೆಯ ರಚನೆಗೆ ಅಗತ್ಯವಾಗಿದ್ದ ಮಾಧ್ಯಮವೂ ಲಭ್ಯವಾಯಿತು. 18ನೆಯ ಶತಮಾನದಲ್ಲಿ ಇಂಗ್ಲೆಂಡ್, ಅಮೆರಿಕ, ಫ್ರಾನ್ಸ್‌ಗಳಲ್ಲಿ ಸಂಭವಿಸಿದ ರಾಜಕೀಯ ಕ್ರಾಂತಿಗಳು ಈ ಹೊಸ ವ್ಯವಸ್ಥೆಗೆ ತಳಹದಿ ಹಾಕಿದವು. ಹೊಸ ಮಧ್ಯಮ ವರ್ಗದ ಉದಯವಾಯಿತು. ಅದು ಈ ಕ್ರಾಂತಿಗಳ ಸದುಪಯೋಗ ಪಡೆದು ತನ್ನ ಶಕ್ತಿ ಬೆಳೆಸಿಕೊಂಡಿತು. ತನಗೆ ಅರಿವಿಲ್ಲದೆಯೇ ಅದು ಬುದ್ಧಿಜೀವಿಗಳ ಸಖ್ಯ ಬೆಳೆಸಿತು. ಈ ಸಖ್ಯ ಬಲು ಸಡಿಲವಾಗಿತ್ತೇನೋ ನಿಜ. ಆದರೆ ಅವಾಸ್ತವವಾದದ್ದಾಗಿರಲಿಲ್ಲ. ಈ ಎರಡು ಪಕ್ಷಗಳೂ ಒಂದಕ್ಕೊಂದು ನೆರವಾಗಿ ಉದಾರವಾದಿ ವಿಚಾರವ್ಯವಸ್ಥೆಗೆ ಜನ್ಮನೀಡಿದವು.

ಉದಾರವಾದದ ಮುಖ್ಯ ಲಕ್ಷಣಗಳನ್ನೆಲ್ಲ ಪಟ್ಟಿ ಮಾಡುವುದು ಕಷ್ಟ. ಏಕೆಂದರೆ ಇವು ಅನೇಕ ಆದರ್ಶಭಾವನೆಗಳೊಂದಿಗೆ ಅವಿನಾಭಾವದಿಂದ ಹೆಣೆದುಕೊಂಡಿವೆ. ಆದರೂ ಆಗಿನ ವಿಚಾರಸಂಪತ್ತಿಗೆ ಉದಾಹರಣೆಯಾಗಿ ಕೆಲವು ಮುಖ್ಯ ಲಕ್ಷಣಗಳನ್ನಾದರೂ ಎತ್ತಿಕೊಡುವುದು ಲಾಭದಾಯಕವೆನ್ನಿಸಬಹುದು.

ಉದಾರವಾದದ ಆತ್ಮಸ್ವರೂಪಿಯಾದದ್ದು ಸ್ವಾತಂತ್ರ್ಯ-ಲಿಬರ್ಟಿ. ಇದು ನಿರುಪಾಧಿಕ ಅಥವಾ ನಿರಪೇಕ್ಷ ಸ್ವಾತಂತ್ರ್ಯವಲ್ಲ. ಏಕೆಂದರೆ ವ್ಯಕ್ತಿಗೆ ಈ ಬಗೆಯ ಸ್ವಾತಂತ್ರ್ಯ ನೀಡಲು ಯಾವ ಸರ್ಕಾರವೂ ಒಪ್ಪಲಾರದು. ಆದರೆ ವ್ಯಕ್ತಿಗೆ ವಿಚಾರಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ, ಅಭಿವ್ಯಕ್ತಿಯಸ್ವಾತಂತ್ರ್ಯ, ಚರ್ಚಾಸ್ವಾತಂತ್ರ್ಯ, ಸಂಘಟನಾಸ್ವಾತಂತ್ರ್ಯ, ಉದ್ಯೋಗ ಸ್ವಾತಂತ್ರ್ಯ ಪದಾರ್ಥ ಕ್ರಯವಿಕ್ರಯ ಸ್ವಾತಂತ್ರ್ಯ ಇವೆಲ್ಲ ದೊರಕಬೇಕು. ತನ್ನನ್ನು ಆಳುವವರು ಯಾರು, ಅವರು ಯಾವ ಬಗೆಯಲ್ಲಿ ಆಳಬೇಕು ಎಂಬುದನ್ನು ನಿರ್ಣಯಿಸುವ, ಕ್ರಾಂತಿಯಿಂದಲೇ ಆದರೂ ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವ ಸ್ವಾತಂತ್ರ್ಯ ಈತನಿಗಿರಬೇಕು. ಇದು ಉದಾರವಾದದ ಮೂಲಮಂತ್ರ. ಸಾಮಾಜಿಕ ಸ್ವಾತಂತ್ರ್ಯ ಸಂಘಟನೆ-ಅನುಸರಣೆಗಳಿಗಾಗಿ ನಡೆಸುವ ಪ್ರಯತ್ನವೇ ಉದಾರವಾದ.

ಈ ಸ್ವಾತಂತ್ರ್ಯಕ್ಕೆ ಸ್ಫೂರ್ತಿ ಬಂದದ್ದಾದರೂ ಎಲ್ಲಿಂದ ?-ಎಂಬ ಪ್ರಶ್ನೆಗೆ ಉತ್ತರವಾಗಿ ಉದಾರವಾದಿಗಳು ನಿಸರ್ಗದತ್ತ ಬೆಟ್ಟು ಮಾಡುತ್ತಾರೆ. ಥಾಮಸ್ ಜೆಫರ್ಸನ್ನನ ಮಾತಿನಲ್ಲಿ ಹೇಳುವುದಾದರೆ, ನಿಸರ್ಗ ನಿಯಮವೂ ನಿಸರ್ಗದ ಸೃಷ್ಟಿಕರ್ತನೂ ಈ ಸ್ಫೂರ್ತಿಯ ಉಗಮ. ಇದು ಉದಾರವಾದದ ನಿಜವಾದ ಧರ್ಮವ್ಯವಸ್ಥೆ. ಈ ಅಸ್ತಿಭಾರದ ಮೇಲೆಯೇ ಉದಾರವಾದಿಗಳು 18ನೆಯ ಶತಮಾನದ ದಾರ್ಶನಿಕರ ಸ್ವರ್ಗೀಯ ನಗರವನ್ನು ಸೃಷ್ಟಿಸಿದರು. 18ನೆಯ ಶತಮಾನದ ಮಹಾದ್ಭುತವೆಂದರೆ ಧರ್ಮ, ನ್ಯಾಯ, ರಾಜನೀತಿ, ದರ್ಶನಶಾಸ್ತ್ರ, ಭೂದೃಶ್ಯ ಚಿತ್ರಣ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ನಿಸರ್ಗದೊಂದಿಗೆ ನಡೆಸಿದ ಕೇಳೀವಿನೋದ. ಮಾನವರ ಹಕ್ಕುಗಳಿಗೆ ನಿಸರ್ಗವೇ ಮೂಲ. ನಿಸರ್ಗದತ್ತವಾದ ಈ ಹಕ್ಕುಗಳನ್ನು ಪೋಷಿಸಿ ರಕ್ಷಿಸುವುದು ಸರ್ಕಾರಗಳ ಕರ್ತವ್ಯ. ಇದು ರೂಸೋ-ಲಾಕ್ ಸಿದ್ಧಾಂತ.

ಈ ಯುಗದಲ್ಲಿ ಎಲ್ಲೆಲ್ಲೂ ಹಕ್ಕುಗಳ ಸೊಲ್ಲೇ ಕೇಳಿಬರುತ್ತಿತ್ತು. ಶಾಸನಸಭೆಗಳಲ್ಲೂ ಇದು ಮಾರ್ಮೊಳಗಿತು. ಇದಕ್ಕೆ ನಿಸರ್ಗವೂ ಅದರ ನಿಯಮಗಳೂ ಅಡಿಗಲ್ಲು. ಅವಿನಾಶಿ ಸರ್ವವ್ಯಾಪಿ ಮಾನವೀಯ ಹಕ್ಕಿಗೆ ಧರ್ಮಕ್ಕಿಂತ ವಿಜ್ಞಾನದ್ದೇ ಸ್ಫೂರ್ತಿ. ಆ ವೇಳೆಗೆ ಅವತಾರವೆತ್ತಿದ್ದ ಐಸಾಕ್ ನ್ಯೂಟನ್ ಜನರ ವಿಚಾರ ಕ್ರಮದಲ್ಲಿ ಕ್ರಾಂತಿಯನ್ನೇ ತಂದಿದ್ದ. ಆತನ ದೃಷ್ಟಿಯಲ್ಲಿ ವಿಶ್ವವ್ಯಾಪಾರವೆಲ್ಲ ತರ್ಕಬದ್ಧ ನಿಸರ್ಗನಿಯಮಬದ್ಧ. ಇದನ್ನು ವಿವರಿಸುವುದಕ್ಕೆ ಕಾಣದ ದೈವೀಶಕ್ತಿಯ ಕೈವಾಡದ ನೆರವು ಅವಶ್ಯವಿಲ್ಲ. ನ್ಯೂಟನ್ನನ ಈ ಸೂತ್ರವನ್ನು ಅದರ ಅಂತ್ಯದವರೆಗೂ ಎಳೆದೊಯ್ದ ಉದಾರವಾದಿಗಳು ದೇವರನ್ನೂ ನಿಸರ್ಗದ ಅಗ್ರಶಕ್ತಿಯೆಂದೇ ಗ್ರಹಿಸಿದರು. ದೇವರೂ ಇವರ ದೃಷ್ಟಿಯಲ್ಲಿ ಪ್ರಕೃತಿಸಿದ್ಧ. ಈ ನೈಸರ್ಗಿಕ ದೈವವನ್ನು ಯಾರು ಹೇಗಾದರೂ ಪೂಜಿಸಲಿ, ಈ ಬಗ್ಗೆ ಜಗಳ ಬೇಡ. ಇದು ಇವರ ವಾದ.

ಹೀಗೆ ಪುನರುಜ್ಜೀವನವೂ ವಿಜ್ಞಾನಕ್ರಾಂತಿಗಳೂ ತಾಂತ್ರಿಕ ಮುನ್ನಡೆಯೂ ಏರುತ್ತಿದ್ದ ಜೀವನಮಟ್ಟವೂ ಜನರಲ್ಲಿ ವೈಚಾರಿಕಪ್ರವೃತ್ತಿ ಬೆಳೆಯಲು ಕಾರಣವಾದುವು. ಆಮುಷ್ಮಿಕದ ಬದಲು ಐಹಿಕಕ್ಕೆ, ಗತಕಾಲದ ಸಂಪ್ರದಾಯದ ಬದಲು ವರ್ತಮಾನ-ಭವಿಷ್ಯಗಳ ಕಡೆಗೆ ಮಾನವನ ವಿಚಾರದ ದಿಕ್ಕನ್ನೇ ಬದಲಿಸಿದ್ದು ಈ ಚಳವಳಿಯ ಮಹತ್ಸಾಧನೆ. ಜನರು ಪಾಪದ ಮಾತಾಡುವುದು ಬಿಟ್ಟು ಪ್ರಗತಿಯ ಮಾತಾಡಲಾರಂಭಿಸಿದರು. ಅದೃಷ್ಟದಲ್ಲಿ ನಂಬಿಕೆ ತೊರೆದು ಯತ್ನಶಕ್ತಿಯಲ್ಲಿ ವಿಶ್ವಾಸ ತಳೆದರು. ಮಾನವ ಸುಖಸಾಧನೆಯೇ ಎಲ್ಲ ಸಂಸ್ಥೆಗಳ ಅಂತಿಮ ಧ್ಯೇಯವಾಯಿತು.

ಈ ಹೊಸ ವಿಚಾರದ ಬಿಸಿಯಿಂದ ಅನೇಕ ಹಳೆಯ ಆಚಾರ ವಿಚಾರಗಳೂ ವ್ಯವಸ್ಥೆಗಳೂ ಭಸ್ಮವಾದುವು. ಮಾನವನ ಸ್ವಾತಂತ್ರ್ಯ ಜನ್ಮಸಿದ್ಧ. ಆದರೆ ಅವನಿಗೆ ಎಲ್ಲೆಲ್ಲೂ ಸರಪಳಿಯ ಬಂಧನ, ಹೀಗೆಂದು ರೂಸೋ ಕಳವಳಿಸಿದ. ದೇವರು ಮಾಡಿದ್ದೆಲ್ಲ ಪರಿಶುದ್ಧ, ಆದರೆ ಮಾನವನ ಕೈತಾಕಿದಾಗ ಅದಕ್ಕೆ ದುಷ್ಟ ಗುಣ. ಮಾನವ ಜನ್ಮತಃ ವಿಚಾರವಾದಿ, ಪರಿಶುದ್ಧ. ಆದರೆ ನಾನಾ ಸಾಮಾಜಿಕ ವ್ಯವಸ್ಥೆಗಳು ಆತನ ಹುಟ್ಟಿನೊಂದಿಗೆ ಅವನನ್ನು ಆವರಿಸಿಕೊಂಡು ದುರ್ಮಾರ್ಗಕ್ಕೆಳೆಯುತ್ತವೆ. ರೂಢಿ, ಸಂಪ್ರದಾಯ, ಸಂಸ್ಥೆ, ಸಾಮಾಜಿಕ ಪದ್ಧತಿ-ಇವು ಮಾನವನ ಆಜನ್ಮಶತ್ರುಸಮೂಹ. ಇದು ರೂಸೋ ವಾದಸಾರ. ಆಗಿನ ಕಾಲದಲ್ಲಿದ್ದ ಕುಪಿತ ಯುವಜನರಾದ ಫ್ರೆಂಚ್ ತತ್ತ್ವಜ್ಞರೂ ಇಂಗ್ಲಿಷ್ ಉಪಯುಕ್ತತಾವಾದಿಗಳೂ ದಾರ್ಶನಿಕ ಕ್ರಾಂತಿವಾದಿಗಳೂ ಇಟಲಿಯ ರಾಷ್ಟ್ರಪ್ರೇಮೀ ಬುದ್ಧಿಜೀವಿಗಳೂ ತಮ್ಮ ಕಾಲದ ಪಟ್ಟಭದ್ರ ಸಂಸ್ಥೆಗಳ ವಿರುದ್ಧ ಹೋರಾಟ ನಡೆಸಿದರು; ಜನರನ್ನು ಸರ್ವದಾ ಅವುಕುತ್ತಿದ್ದ ಗತಕಾಲದ ಮೃತಹಸ್ತದಿಂದ ಅವರನ್ನು ಪಾರುಮಾಡಲು ಸತತವಾಗಿ ಶ್ರಮಿಸಿದರು.

ನೈಸರ್ಗಿಕ ನಿಯಮದಲ್ಲಿ ಮಾನವನ ಹಸ್ತಕ್ಷೇಪವೇ ಎಲ್ಲ ಅನಿಷ್ಟಕ್ಕೂ ಮೂಲ ಕಾರಣವಾದ್ದರಿಂದ ಅಲ್ಲಿಂದ ಅದನ್ನು ತೆಗೆಯಬೇಕೆಂದೂ ಎಲ್ಲವನ್ನೂ ಅವುಗಳ ಪಾಡಿಗೆ ಬಿಡಬೇಕೆಂದೂ ಇವರು ವಾದಿಸಿದರು. ಇದೇ ಕಾಲಕ್ಕೆ ಪ್ರವರ್ಧಿಸುತ್ತಿದ್ದ ವ್ಯಾಪಾರೀವರ್ಗಕ್ಕೂ ಇವರಿಗೂ ಕೊಂಡಿ ಬೆಸೆದುಕೊಂಡದ್ದು ಈ ಕಾರಣದಿಂದ. ತಮ್ಮ ಆರ್ಥಿಕ ಚಟುವಟಿಕೆಗಳನ್ನು ಕುಂಠಿತಗೊಳಿಸುತ್ತಿದ್ದ ಎಲ್ಲ ನಿರ್ಬಂಧಗಳನ್ನೂ ತೊಡೆದುಹಾಕಬೇಕೆಂಬ, ಅಬಾಧಿತವಾಗಿ ವ್ಯಾಪಾರ ನಡೆಸಲೂ ಅವಕಾಶವಿರಬೇಕೆಂಬ ಅವರ ಬಯಕೆಗೆ ಇವರ ವಾದದಿಂದ ಪುಷ್ಟಿ ದೊರಕಿತು **(ನೋಡಿ- ಅನಿರ್ಬಂಧಿತ-ಆರ್ಥಿಕ-ವ್ಯವಸ್ಥೆ).**

ಉದಾರವಾದಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಗಣರಾಜ್ಯ ವ್ಯವಸ್ಥೆ, ಜನಪ್ರಿಯ ರಾಜತ್ವ ಮತ್ತು ಶಿಕ್ಷಣ ಇವುಗಳ ಅಗತ್ಯವನ್ನೂ ಇವರು ಒತ್ತಿ ಹೇಳಿದರು. ಮೆಟ್ಟಿ ಆಳುವ ಸರ್ಕಾರಿ ಸಂಸ್ಥೆಗಳ ನಿವಾರಣೆಯೊಂದೇ ಸಾಲದು. ಇದು ನೇತ್ಯಾತ್ಮಕ. ಇದರ ಜೊತೆಗೆ ಇತ್ಯಾತ್ಮಕ ಪ್ರಯತ್ನವೂ ಸಾಗಬೇಕು. ಮಾನವನ ಅಂತಃಸತ್ತ್ವವನ್ನು ಬೆಳೆಯಿಸಿ ಅವನನ್ನು ಪರಿಪೂರ್ಣಗೊಳಿಸಲು ವಿದ್ಯಾಭ್ಯಾಸ ಅತ್ಯವಶ್ಯವೆಂಬುದೂ ಇವರ ದೃಷ್ಟಿ.

ಇನ್ನು ಕೆಲವರು ತಮ್ಮ ವಾದವನ್ನು ಹೀಗೆಯೇ ಮುಂದುವರಿಸಿದರು. ಮಾನವರು ಸ್ವಭಾವತಃ ಒಳ್ಳೆಯವರು, ನಿಜ. ಆದರೆ ಅವರಿಗೂ ಆಕಾಂಕ್ಷೆ, ದುರಾಸೆ, ಅಧಿಕಾರ ಪಿಪಾಸೆ ಇರುತ್ತವೆ. ಆದ್ದರಿಂದ ಪ್ರಬಲರು ದುರ್ಬಲರನ್ನು ಮೆಟ್ಟದಂತೆ ಒಂದು ಅಂಕುಶ ಇರಬೇಕು. ಶಾಸನ ಮಾಡುವ ಹಾಗೂ ಆಡಳಿತ ನಡೆಸುವ ಅಧಿಕಾರಗಳು ಒಂದೇ ಕಡೆ ಸೇರಬಾರದು. ಇವೆರಡಕ್ಕಿಂತ ಪ್ರತ್ಯೇಕವೂ ಸ್ವತಂತ್ರ್ಯವೂ ಆದ ನ್ಯಾಯವ್ಯವಸ್ಥೆ ಇರಬೇಕು. ಹೀಗೂ ಅವರು ವಾದಿಸಿದರು.

ಉದಾರವಾದಿಗಳು ಪ್ರತಿಪಾದಿಸಿದ ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ಭೌತಶಾಸ್ತ್ರದ ಸಮತೋಲ ಸೂತ್ರಗಳು ಅಡಕವಾಗಿದ್ದದ್ದನ್ನು ಕಾಣಬಹುದು. ಇವು ವಿಜ್ಞಾನ ಕ್ರಾಂತಿಯ ಫಲವಾಗಿ ಆ ವೇಳೆಗೆ ಪ್ರಚಾರದಲ್ಲಿದ್ದವು. ಉದಾರವಾದಿಗಳು ಮಾನವನ ಮನೋವ್ಯಾಪಾರವನ್ನೂ ನಿಚ್ಚಳವಾಗಿಯೇ ಮನಗಂಡಿದ್ದರು. ಸ್ವಂತ ಹಿತವೇ ಮಾನವನ ಕ್ರತುಶಕ್ತಿ, ವಿಚಾರ ಶೀಲತೆಯೇ ಸಾಧನ; ಸ್ವಲಾಭಸಾಧನೆಯ ಗುರಿಯಿಂದ ವ್ಯಕ್ತಿಗಳು ನಡೆಸುವ ಪ್ರಯತ್ನಗಳೆಲ್ಲ ಅಂತಿಮವಾಗಿ ಪ್ರಗತಿದಾಯಕ, ಸುಖಪ್ರದ; ಅವರವರನ್ನು ಅವರವರಷ್ಟಕ್ಕೆ ಬಿಡುವುದೇ ಸಹಜ ನಿಯಮ. ಇದು ಇವರ ಆದರ್ಶದ ಕಲ್ಪನೆ.

ಆದರೆ ಇದು ಆದರ್ಶವಷ್ಟೆ. 20ನೆಯ ಶತಮಾನದ ನಡುಗಾಲದ ವೇಳೆಗೆ ಈ ಕಲ್ಪನಾಲೋಕದ ಕೊರಕಲುಗಳು ಕಣ್ಣು ಕೋರೈಸುವಂತೆ ಕಾಣಿಸುತ್ತಿದ್ದುವು. ವಾಸ್ತವವಾಗಿ ಮಾನವನಿಷ್ಟು ಸರಳವಲ್ಲ. ಬಿಡಿಬಿಡಿಯಾಗಿ ಅವನಲ್ಲಿ ಪಾರಿಶುದ್ಧ್ಯದ ಆರೋಪಮಾಡುವುದು ವಸ್ತುಸ್ಥಿತಿಗಿಂತ ಬಲು ದೂರ. ಈ ಅತ್ಯಾದರ್ಶವೆಲ್ಲ ಬರೀ ಕನಸು. ಮಾನವನ ಸ್ವಭಾವವೀಕ್ಷಣೆಯಾಗಲಿ, ಪ್ರಗತಿದರ್ಶನವಾಗಲಿ, ಸುಖದ ಕಲ್ಪನೆಯಾಗಲಿ ಇಷ್ಟು ಸುಲಭವಾಗಿ ಸಾಧ್ಯವಿಲ್ಲ. ಈ ನಾನಾ ಕಾರಣಗಳಿಂದ ಉದಾರವಾದವಿಂದು ತಲೆಯ ಮೇಲೆ ತಾರಸಿಯಂತೆ ಹತ್ತಿರವಿದ್ದೂ ನಿಲುಕದಂತಾಗಿದೆ, ಧ್ರುವ ನಕ್ಷತ್ರದಂತೆ ದೂರ ನಿಂತಿದೆ.

ಆದರೆ ಇಷ್ಟು ಮಾತ್ರ ನಿಜ: ಈ ವಾದದ ಉಚ್ಛ್ರಾಯ ಕಾಲದಲ್ಲಿ ಇದು ಮಾನವನ ಆತ್ಮವಿಮೋಚನೆಯನ್ನು ಸಾಧಿಸಿತು. ಮಹಾಸಾಹಸಿಗಳ ಅಂತಃಶಕ್ತಿಗೆ ಪ್ರಚೋದನೆ ನೀಡಿತು. ಅಧೋಲೋಕದಿಂದೆದ್ದು ಅಂತರಿಕ್ಷದೆತ್ತರಕ್ಕೆ ಬೆಳೆದಿದ್ದ ಪ್ರತಿಗಾಮೀ ವ್ಯವಸ್ಥೆಯ ಕೋಟೆಯನ್ನು ಪುಡಿಪುಡಿ ಮಾಡಿ ಅದರ ಸ್ಥಾನದಲ್ಲಿ ಹೊಸ ವ್ಯವಸ್ಥೆಯ ಅಸ್ತಿಭಾರ ಹಾಕಲು ಇದು ನೆರವು ನೀಡಿತು. ಮಾನವನ ಅದಮ್ಯ ಚೇತನ ಏನನ್ನು ಸಾಧಿಸಬಲ್ಲದೆಂಬುದನ್ನು ಆಗಿನ ಐತಿಹಾಸಿಕ ರಸನಿಮಿಷದಲ್ಲಿ ಮಿಂಚಿ ಪ್ರತಿಬಿಂಬಿಸಿದ ಈ ವಾದ ನಿರರ್ಥಕವಲ್ಲ. *

**ಉದಾರ ಶಿಕ್ಷಣ:** ವಿದ್ಯಾರ್ಥಿಯ ಬುದ್ಧಿ ವಿಕಾಸಕ್ಕೆ ಪೋಷಕವಾಗುವ ಸಾಮಾನ್ಯ ಶಿಕ್ಷಣ (ಲಿಬರಲ್ ಎಜುಕೇಷನ್). ಗ್ರೀಕ್ ಮತ್ತು ರೋಮನರ ಅಭ್ಯುದಯದ ಕಾಲದಲ್ಲಿ ಈ ಮಾತಿಗೆ ಗುಲಾಮರಲ್ಲದ ಶ್ರೀಮಂತರ ಮತ್ತು ಆಳುವ ವರ್ಗದವರ ಶಿಕ್ಷಣವೆಂಬ ಸಂಕುಚಿತಾರ್ಥವಿತ್ತು. ಅರಿಸ್ಟಾಟಲನ ಸಿದ್ಧಾಂತದ ಪ್ರಕಾರ ವಿರಾಮಜೀವಿಗಳು ಮುಂದಿನ ತಮ್ಮ ಜೀವನದ ಸಾರ್ಥಕಕ್ಕೂ ಆತ್ಮದ ಪರಿಪೋಷಣೆಗೂ ಕೈಗೊಳ್ಳುತ್ತಿದ್ದ ಶಿಕ್ಷಣ. ಇದು ಜೀವನೋಪಾಯಕ್ಕಾಗಿ ಕೈಗೊಳ್ಳುವ, ಮನೋರಂಜನೆಗಾಗಿ ಪಡೆಯುವ ಶಿಕ್ಷಣಕ್ಕಿಂತ ಭಿನ್ನವಾದದ್ದು; ಹಿಂದೆ ಉದಾರಶಿಕ್ಷಣದಲ್ಲಿ ತರ್ಕಶಾಸ್ತ್ರ, ಭಾಷಣಕಲೆ, ವ್ಯಾಕರಣ, ಗಣಿತ, ಜ್ಯಾಮಿತಿ, ಖಗೋಳಶಾಸ್ತ್ರ, ಸಂಗೀತ ಎಂಬ ಏಳು ವಿಷಯಗಳಿದ್ದುವು. ಗುಮಾಸ್ತರು ಮತ್ತು ಜನಸಾಮಾನ್ಯರು ಪಡೆಯುತ್ತಿದ್ದ ವಿಶ್ವವಿದ್ಯಾನಿಲಯದ ಉದಾರಶಿಕ್ಷಣ ವ್ಯವಸ್ಥೆಯಲ್ಲಿ ಅರಿಸ್ಟಾಟಲನ ಗ್ರಂಥಗಳಿಗೆ ಹೆಚ್ಚಿನ ಪ್ರಾಧಾನ್ಯವಿತ್ತು. ಇವು ಮನಶಕ್ತಿಗಳನ್ನು ಪೋಷಿಸಬಲ್ಲ

ವಿಷಯಗಳೆಂದು ಪರಿಗಣಿತವಾಗಿ ಮಧ್ಯಯುಗಗಳಲ್ಲಿ ಶಾಲಾ ಕಾಲೇಜುಗಳ ಅಧ್ಯಯನ ವಿಷಯಗಳಾದುವು. ಅನಂತರದ ಕಾಲದಲ್ಲಿ ಚರ್ಚಿನ ಪ್ರಾಮುಖ್ಯ ಕಡಿಮೆಯಾಗಿ ವಿಜ್ಞಾನ ಬೆಳೆದು ಜಾತ್ಯತೀತ ಭಾವನೆಗಳು ಬೆಳೆದಂತೆಲ್ಲ ಉದಾರ ಶಿಕ್ಷಣದ ವ್ಯಾಪ್ತಿ ಮಾನವಾಸಕ್ತಿಯ ಅಭ್ಯಾಸಗಳಿಗೇ ಸೀಮಿತವಾಯಿತು. ಈಗಲೂ ಶುದ್ಧ ಗಣಿತ ಮತ್ತು ವಿಜ್ಞಾನವಿಷಯಗಳ ಅಭ್ಯಾಸದಿಂದ, ಜೀವನೋಪಾಯಕ್ಕಾಗಿ ಕಲಿಯುವ ವಿದ್ಯೆಯಿಂದ ಉದಾರ ಶಿಕ್ಷಣ ಭಿನ್ನವಾದದ್ದೆಂದು ಅನೇಕ ಶಿಕ್ಷಣತಜ್ಞರು ಅಭಿಪ್ರಾಯಪಡುತ್ತಾರೆ.

ಆಧುನಿಕ ಕಾಲದಲ್ಲಿ ಉದಾರ ಶಿಕ್ಷಣಕ್ಕೆ ವಿಶಾಲ ಅರ್ಥ ಮೂಡಿಕೊಂಡಿದೆ: ವಿದ್ಯಾರ್ಥಿಯ ಮನೋವೈಶಾಲ್ಯವನ್ನು ಬೆಳೆಯಿಸಿ, ಕಲಿತ ಮುಖ್ಯವಾದ ವಿಷಯಗಳಲ್ಲಿ ಕೆಲವನ್ನು ಮುಂದುವರಿಸಿ ಉನ್ನತ ಪರಿಣತಿಯನ್ನು ಸಾಧಿಸಲು ನೆರವಾಗಬಲ್ಲ ಎಲ್ಲ ವಿಷಯಗಳೂ ಉದಾರಶಿಕ್ಷಣದ ಮಿತಿಯಲ್ಲಿ ಬರುತ್ತವೆ (ಜಾನ್ ಡ್ಯೂಯಿ). ಎಂದರೆ ಅದು ಜೀವನೋಪಾಯ ಕ್ಕಾಗಿ ವಿಶಿಷ್ಟವೂ ಕಿರಿದೂ ಆದ ಕ್ಷೇತ್ರದಲ್ಲಿ ಸಾಧಿಸುವ ಶಿಕ್ಷಣಕ್ಕೆ ಭಿನ್ನವೆನಿಸಿದ್ದು ವಿಶಾಲವೂ ಸಾಮಾನ್ಯವೂ ಆದ ವಿಷಯಗಳ ಶಿಕ್ಷಣವೆನಿಸಿದೆ. ಒಂದು ದೃಷ್ಟಿಯಲ್ಲಿ ಅದು ಮುಂದಿನ ಜೀವನಕ್ಕೆ ಸಿದ್ಧತೆಯ ರೂಪದಲ್ಲಿರುವುದಾದರೂ ಜೀವನೋಪಾಯಕ್ಕಾಗಿ ಕೈಗೊಳ್ಳುವ ವೃತ್ತಿಶಿಕ್ಷಣಕ್ಕಿಂತ ಬೇರೆಯಾದದ್ದು. ವಿಶ್ವವಿದ್ಯಾನಿಲಯ ಪೂರ್ವದ ಸಾಮಾನ್ಯ ಶಿಕ್ಷಣ ಉದಾರ ಶಿಕ್ಷಣವೇ ಆಗಿದೆ.

ಸ್ನಾತಕಪೂರ್ವ ಕಾಲೇಜು ಶಿಕ್ಷಣವನ್ನೂ ಉದಾರವೆಂದು ಕರೆಯುವ ವಾಡಿಕೆ ಇದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಕೆಲವು ವಿಶಿಷ್ಟ ವಿಷಯಗಳನ್ನು ಅಭ್ಯಸಿಸಿದರೂ ಆಗ ದೊರೆತ ಮಾನಸಿಕ ತರಬೇತಿಯ ಫಲವಾಗಿ ಅವರು ಸ್ವತಂತ್ರ್ಯವಾದ (ಉದಾರ) ವಿಚಾರ ಶಕ್ತಿಯನ್ನು ಬೆಳೆಸಿಕೊಂಡು ತಮ್ಮ ಆಂತರಿಕ ಶಕ್ತಿ ಹಾಗೂ ಒಲವುಗಳನ್ನರಿತು ಭಾವೀ ಜೀವನದಲ್ಲಿ ಅವುಗಳ ಸದ್ವಿನಿಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತದೆಂದೂ ಸಮಾಜದ ಆರೋಗ್ಯಕ್ಕೆ ಇಂಥ ಉದಾರಶಿಕ್ಷಣ ಅವಶ್ಯವೆಂದೂ ವಾದಿಸಲಾಗುತ್ತಿದೆ.

(ಎನ್.ಆರ್.ಎಚ್.)

**ಉದಾಸಿಗಳು:** ಸಿಕ್ಖರಲ್ಲಿ ಮುಖ್ಯವಾದ ಒಂದು ಗುಂಪಿಗೆ ಸೇರಿದವರು. ಇವರನ್ನು ನಾನಕ್ ಪುತ್ರರು ಎಂದು ಕರೆಯವುದೂ ರೂಢಿಯಲ್ಲಿದೆ. ನಾನಕನ ಹಿರಿಯ ಮಗ ಶ್ರೀಚಂದನ ಸಂತತಿಯವರೆಂದು ಹೇಳಿಕೊಳ್ಳುತ್ತಾರೆ. ಇವರ ಮತಾಚಾರಗಳು ವಿಶೇಷವಾಗಿ ಹಿಂದೂ ಮತಾನುಸಾರವಾಗಿವೆ. ಇವರು ಮುಸ್ಲಿಮರ ಆಚಾರವನ್ನು ಅನುಸರಿಸಿದ ಸಿಕ್ಖರನ್ನು ಪ್ರತಿಭಟಿಸಿ ಬಹುಶಃ ಐದನೆಯ ಗುರುವಾದ ಅರ್ಜುನಸಿಂಗನ ಕಾಲದಲ್ಲಿ ಪ್ರತ್ಯೇಕ ಗುಂಪಿನವರಾದರು. ಇವರಲ್ಲಿ ನಾಲ್ಕು ಒಳಪಂಗಡಗಳಿವೆ.

ಉದಾಸಿಗಳಲ್ಲಿ ಎಲ್ಲ ಬಗೆಯ ಹಿಂದೂಗಳೂ ಸೇರಿರುತ್ತಾರೆ. ಇವರು ಯಾವ ಹಿಂದೂವಿನ ಮನೆಯಲ್ಲಾದರೂ ಊಟಮಾಡುತ್ತಾರೆ. ಇವರಲ್ಲಿ ಊರು ಊರು ತಿರುಗುವ ಸಂನ್ಯಾಸಿಗಳ ಸಂಖ್ಯೆ ಹೆಚ್ಚು.

(ಜೆ.ಎಚ್.)

**ಉದಾಹರಣೆ:** **ನೋಡಿ– ಅನುಗಮನ.**

**ಉದುಂಬರ:** 1 ಅತ್ತಿಮರ. ಪವಿತ್ರವೆಂದು ಪರಿಗಣಿಸಲಾಗಿರುವ ಇದರ ಉಪಯೋಗ ಯಜ್ಞಯಾಗಾದಿ ವೇದವಿಹಿತ ಕರ್ಮಗಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಕ್ಷೀರವೃಕ್ಷ, ಹೇಮದುಗ್ಧ, ಸದಾಫಲ, ಕಾಲಸ್ಕಂಧ, ಯಜ್ಞಯೋಗ್ಯ, ಯಜ್ಞೀಯ, ಸುಪ್ರತಿಷ್ಠಿತ, ಶೀತವಲ್ಕ, ಜಂತುಫಲ, ಪುಷ್ಪಶೂನ್ಯ, ಪವಿತ್ರಕ, ಸೌಮ್ಯ, ಶೀತಫಲ–ಇವು ಪರ್ಯಾಯ ಶಬ್ದಗಳು. 2 ಹೊಸ್ತಿಲು. 3 ಕುಷ್ಠರೋಗ. 4 ತಾಮ್ರ.

(ಬಿ.ಕೆ.ಎಸ್.)

**ಉದ್ಗಮವಾದ:** ಒಂದು ಕಡೆ ಅಧ್ಯಾತ್ಮರಹಸ್ಯವಾದಕ್ಕೂ ಮತ್ತೊಂದು ಕಡೆ ನವ ಪ್ಲೇಟೊ ತತ್ತ್ವಕ್ಕೂ ಸಂಬಂಧಿಸಿದ್ದು, ಸೃಷ್ಟಿರಹಸ್ಯವನ್ನು ವಿವರಿಸುವ ಒಂದು ವಾದ (ಎಮನೇಷನ್). ಭಾರತೀಯ ತತ್ತ್ವಶಾಸ್ತ್ರದಲ್ಲಿ ಬಹಳ ಕಡೆ ಇದರ ಉಲ್ಲೇಖವಿದೆ. ಒಂದು ತತ್ತ್ವದಿಂದ ಮತ್ತೊಂದು ಹೊರಹೊಮ್ಮುತ್ತದೆಯಲ್ಲದೆ ಹೊಮ್ಮಿದ ಎಲ್ಲ ತತ್ತ್ವಗಳೂ ಕೊನೆಗೆ ಮೂಲತತ್ತ್ವದಲ್ಲಿ ಲೀನವಾಗುತ್ತವೆ ಎಂದು ಹೇಳುವುದೇ ಈ ವಾದದ ಸಾರ. ಇದರಂತೆ ಇನ್ನೆರಡು ವಾದಗಳು ಪ್ರಚಲಿತದಲ್ಲಿವೆ. ಶೂನ್ಯದಿಂದ ಅಕ್ಷರನಾದ ಪರಮಾತ್ಮ ಜಗತ್ತನ್ನು ಸೃಷ್ಟಿಸಿದನೆನ್ನುವುದು ಒಂದು ವಾದ. ವಿಕಾಸತತ್ತ್ವಕ್ಕನುಗುಣವಾಗಿ ವೈವಿಧ್ಯಮಯವಾದ ಈ ಸೃಷ್ಟಿ ಆಯಿತೆನ್ನುವುದು ಇನ್ನೊಂದು. ಮೊದಲಿನದನ್ನು ಆರಂಭವಾದವೆನ್ನಬಹುದು. ಎರಡನೆಯದು ಪರಿಣಾಮವಾದ.

ಒಂದು ತತ್ತ್ವ ಮತ್ತೊಂದು ತತ್ತ್ವದಿಂದ ಹೊರಹೊಮ್ಮುವುದರ ವರ್ಣನೆಯನ್ನು ಅನೇಕ ದರ್ಶನಗಳಲ್ಲಿ ಕಾಣುತ್ತೇವೆ. ಈ ತತ್ತ್ವಗಳು ಬೀಜವೃಕ್ಷನ್ಯಾಯದಂತೆ ಒಂದರೊಳಗಿಂದ ಒಂದು ಹೊರಹೊಮ್ಮುತ್ತವೆ. ಇದು ಸಾಂಖ್ಯ ದರ್ಶನದ ಪರಿಣಾಮವಾದದಲ್ಲಿ ಕಂಡುಬರುತ್ತದೆ. ಪರಿಣಾಮವಾದ ಆರಂಭವಾದಕ್ಕೆ ಪ್ರತಿಯಾದದ್ದು. ಅಸತ್‌ನಿಂದ ಸತ್ ಬರುವುದೆಂದು ಆರಂಭವಾದ ಹೇಳಿದರೆ, ಸತ್ ನಿಂದಲೇ ಅಸತ್ ಬರಬಲ್ಲದೆಂದು ಪರಿಣಾಮವಾದ ತಿಳಿಸುತ್ತದೆ. ಸಾಂಖ್ಯದರ್ಶನದ ಪರಿಣಾಮವಾದ ಪ್ರಕೃತಿಯ ಪರಿಣಾಮವಾದ ಮಾತ್ರ. ಆದರೆ ಪ್ಲಾಟೈನಸ್ ಮೊದಲಾದ ಪಾಶ್ಚಾತ್ಯ ದಾರ್ಶನಿಕರಲ್ಲಿ ಮತ್ತು ವೇದಾಂತದಾರ್ಶನಿಕರಲ್ಲಿ ಈ ಉದ್ಗಮವಾದ ಜೀವಾತ್ಮದ ವಿಕಾಸಕ್ಕೆ ಅನ್ವಯಿಸುವಂಥದಾಗಿದೆ. ಸೃಷ್ಟಿ ಸೃಷ್ಟಿಕರ್ತನಿಂದ ಹೊರಹೊಮ್ಮುತ್ತದೆ. ಮಾತ್ರವಲ್ಲದೆ ಮತ್ತೆ ಹಿಂತಿರುಗಿ ಸೃಷ್ಟಿಕರ್ತನಲ್ಲಿಯೇ ಸಮಾವೇಶಗೊಳ್ಳುತ್ತದೆ ಎಂಬ ಭಾವ ಈ ತತ್ತ್ವದಲ್ಲಡಗಿದೆ. ಯಥೋರ್ಣನಾಭಿಃ ಸೃಜತೇ ಗೃಹ್ಣತೇಚ ಎಂಬ ಉಪನಿಷದ್ವಾಕ್ಯದಿಂದ ಜೇಡ ತನ್ನಲ್ಲಿಯೇ ಇರುವ ದ್ರವ್ಯದಿಂದ ಬಲೆಯೊಂದನ್ನು ಸೃಷ್ಟಿಸಿ, ಹರಡಿ, ಅದರಲ್ಲಿಯೇ ಪ್ರವೇಶಿಸುವಂತೆ ಈಶ್ವರ ಜಗತ್ತನ್ನು ಸೃಷ್ಟಿಸಿ ಆ ಜಗತ್ತನ್ನೇ ಪ್ರವೇಶಿಸುತ್ತಾನೆ ಎಂದು ವೇದಾಂತ ವಿವರಿಸುತ್ತದೆ. ತನ್ನಿಂದಲೇ ಸೃಷ್ಟಿಕಾರ್ಯ ನಡೆದು ಸೃಷ್ಟಿಯಾದುದನ್ನು ತನ್ನಲ್ಲಿಯೇ ಮತ್ತೆ ಸೆಳೆದುಕೊಳ್ಳುವ ಈ ಚಕ್ರರೂಪದ ವ್ಯಾಪಾರವೇ ಜಗತ್‌ಸೃಷ್ಟಿಯೆಂದು ವೇದಾಂತದರ್ಶನವು ಲೋಕವತ್ತು ಲೀಲಾಕೈವಲ್ಯಂ ಅನ್ನುವ ಬ್ರಹ್ಮಸೂತ್ರದಿಂದ ತಿಳಿಸುತ್ತದೆ.

**(ನೋಡಿ – ನವಪ್ಲೇಟೊ ತತ್ತ್ವ; ಪ್ಲಾಟೈನಸ್)** (ಎಂ.ವೈ.)

**ಉದ್ದಂಡ ಷಟ್ಪದಿ:** ಷಟ್ಪದಿಗಳಲ್ಲೊಂದು. ಕನ್ನಡದಲ್ಲಿ ಪ್ರಸಿದ್ಧವಿರುವ ಶರ ಕುಸುಮ ಭೋಗ ಭಾಮಿನಿ ಪರಿವರ್ಧಿನಿ ವಾರ್ಧಕ–ಎಂಬ ಆರಕ್ಕಿಂತ ಇದರ ಸ್ವರೂಪವನ್ನು ಈವರೆಗೆ ತಿಳಿದುಬಂದಿರುವ ಕನ್ನಡ ಭಿನ್ನವಾದದ್ದು. ಛಂದೋಗ್ರಂಥಗಳಲ್ಲಿ ಎಲ್ಲಿಯೂ ಇದನ್ನು ವಿವರಿಸಿಲ್ಲ. ರಾಘವಾಂಕ ಕವಿ (ಸು. 1230) ವೀರೇಶಚರಿತೆ ಎಂಬ ತನ್ನ ಕಾವ್ಯದ ರಚನೆಗೆ ಬಳಸಿರುವ ಷಟ್ಪದಿಯನ್ನು ಉದ್ದಂಡ ಷಟ್ಪದಿ ಎಂಬುದಾಗಿ ಕರೆಯುವುದು ರೂಢಿಯಾಗಿದೆ. ಈ ಹೆಸರನ್ನು ಈ ರೀತಿಯ ಷಟ್ಪದಿಗೆ ಆತನೇ ಕೊಟ್ಟಿರುವುದಕ್ಕೆ ದೃಢವಾದ ಯಾವ ಪ್ರಮಾಣವೂ ಕಾವ್ಯದಲ್ಲಿ ದೊರೆಯುವುದಿಲ್ಲ. ಆ ಗ್ರಂಥದ ಒಂದು ಹಸ್ತಪ್ರತಿಯಲ್ಲಿ (ರಾಯಚೂರಿನ ಪ್ರತಿ) ಮಾತ್ರ ಇದರ ಹೆಸರು ಪ್ರಾಯಃ ಪ್ರತಿಕಾರರ ಲಿಖಿತವಾಗಿ ಗೋಚರವಾಗುತ್ತದೆ. ಪ್ರತಿಯ ಕಾಲವೂ ಲಿಪಿಕಾರನೂ ತಿಳಿದಿಲ್ಲ.

ರಾಘವಾಂಕ ಕವಿಯ ವೀರೇಶಚರಿತೆಯ ಷಟ್ಪದಿ ಮೇಲುನೋಟಕ್ಕೆ ವಾರ್ಧಕ ಷಟ್ಪದಿಯನ್ನು ಹೋಲುತ್ತದೆ. ಆದರೆ ಕ್ರಮವಾಗಿ ಪರಿಶೀಲಿಸಿದರೆ ವಾರ್ಧಕದ ಲಕ್ಷಣ ಅಲ್ಲಿಗೆ ಹೊಂದುವುದಿಲ್ಲ. ವಾರ್ಧಕದಲ್ಲಿರುವಷ್ಟೇ ಮಾತ್ರಾ ಸಂಖ್ಯೆಯೇನೋ ಪ್ರತಿ ಪಾದದಲ್ಲೂ ಇದೆ. ಆದರೆ ಗಣ ವಿಭಜನೆ ಅಲ್ಲಿಯ ಹಾಗಿರದೆ ಬೇರೆ ರೀತಿಯಾಗಿದೆ. ವಾರ್ಧಕದಲ್ಲಿ ಐದು ಮಾತ್ರೆಗಳ ಗಣಗಳು ಬಂದರೆ, ವೀರೇಶಚರಿತೆಯ ಷಟ್ಪದಿಯಲ್ಲಿ ನಾಲ್ಕು ಮಾತ್ರೆಗಳ ಗಣಗಳು ಬರುತ್ತವೆ. ರಾಘವಾಂಕ ಷಟ್ಪದಿ ನಿರ್ಮಾಪಕನೆಂಬುದಾಗಿ ಪ್ರತೀತಿಯಿದೆ; ವಾರ್ಧಕ ಷಟ್ಪದಿಯಲ್ಲೂ ಶರಷಟ್ಪದಿಯಲ್ಲೂ ಕೃತಿರಚನೆ ಮಾಡಿದ್ದಾನೆಂದು ಉಲ್ಲೇಖವಿದೆ; ಆದ್ದರಿಂದ ಪ್ರಯೋಗ ಕುತೂಹಲಿಯಾಗಿಯೋ ವೈವಿಧ್ಯಕ್ಕಾಗಿಯೋ ಆತ ಮೊದಲು ವೀರೇಶಚರಿತೆಯನ್ನು ಒಂದು ಬಗೆಯ ಷಟ್ಪದಿಯಲ್ಲಿ ರಚಿಸಿರಬಹುದು. ಈ ಗ್ರಂಥ ಆತನ ಮೊದಲ ಕೃತಿಯಾಗಿರಬಹುದೆಂಬ ಊಹೆಯಿದೆ. ಅಂತೂ ಈ ಗ್ರಂಥದಲ್ಲಿ ಬಳಸಿರುವ ಷಟ್ಪದಿ ವಾರ್ಧಕದ ಪೂರ್ವರೂಪವೋ ಪ್ರಭೇದವೋ ಆಗಿದ್ದು ಪ್ರತ್ಯೇಕವಾದ ಗಣನೆಗೆ ಅರ್ಹವಾಗಿದೆ. ಅದಕ್ಕೆ ಯಾವಾಗಲೋ ಏನೋ ಉದ್ದಂಡ ಷಟ್ಪದಿ ಎಂಬ ಹೆಸರು ಸೇರಿ ಅದು ರೂಢಿಗೂ ಬಂದಿದೆ.

ಈ ವಿಶಿಷ್ಟ ಧಾಟಿಯಲ್ಲಿ ಬಸವಾಂಕನೆಂಬ (1550) ಕವಿಯ ಉದ್ಭಟ ದೇವಚರಿತೆಯಲ್ಲಿ ಕೆಲವು ಪದ್ಯಗಳು ರಚಿತವಾಗಿವೆ. ಈ ಪದ್ಯಗಳಿಗೆ ಉದ್ದಂಡವೆಂಬ ಹೆಸರನ್ನು ಹಾಕಿರುವಂತಿದೆ. ಚಿಕ್ಕನಂಜೇಶನ (ಸು. 1650) ರಾಘವಾಂಕ ಚರಿತೆಯಲ್ಲಿ ಪ್ರಾಯಃ ಕವಿಕೃತವೇ ಆಗಿರಬಹುದಾದ ಏಳುಬಗೆಯ ಷಟ್ಪದಿ ಅಡಕವಾದ ವಾರ್ಧಕ ಷಟ್ಪದಿ ಎಂಬುದಾಗಿ ಒಂದು ಗದ್ಯಭಾಗವೂ ಸರ್ವಲಘುವಾಗಿರುವ ವಾರ್ಧಕದ ಒಂದು ಪದ್ಯವೂ ಇದ್ದು ಏಳನೆಯದರ ಲಕ್ಷ್ಯವಾಗಿ ಉದ್ದಂಡ ಷಟ್ಪದಿ ಎಂಬ ಹೆಸರಿಗೆ ಅದೇ ಪದ್ಯವನ್ನು ಉದ್ಧರಿಸಿದೆ. ಇದನ್ನು ಗಮನಿಸಿದರೆ ವೀರೇಶ ಚರಿತೆಯಲ್ಲಿ ಕಂಡುಬರುವಂಥ ಷಟ್ಪದಿಯ ಛಂದಸ್ಸಿಗೆ ಉದ್ದಂಡ ಷಟ್ಪದಿ ಎಂಬ ಹೆಸರು ರೂಢಿಯಲ್ಲಿದ್ದುದು ಗೋಚರವಾಗುತ್ತದೆ.

ಈ ಸಂಗತಿಯನ್ನು ನಿಶ್ಚಯವಾಗಿ ಒಪ್ಪಿಕೊಳ್ಳುವುದರಲ್ಲಿ ಸ್ವಲ್ಪಮಟ್ಟಿಗೆ ತೊಡಕುಂಟು. ಸೂಪಶಾಸ್ತ್ರವನ್ನು ವಾರ್ಧಕದಲ್ಲಿ ರಚಿಸಿರುವ ಮಂಗರಸ ಕವಿ (1508) ತನ್ನ ಇನ್ನೊಂದು ಕೃತಿ ಸಮ್ಯಕ್ತ್ವಕೌಮುದಿಯನ್ನು ಉದ್ದಂಡ ಷಟ್ಪದಿಯಲ್ಲಿ ಹೇಳಿರುವುದಾಗಿ ತಿಳಿಸಿದ್ದಾನೆ. ತಿರುಮಲಭಟ್ಟ (ಸು. 1620) ತನ್ನ ಶಿವಗೀತೆಯನ್ನು ಕೆಳದಿ ವೆಂಕಟನೃಪನ ಸೂಚನೆಯಂತೆ ಉದ್ದಂಡ ಷಟ್ಪದಿಯಲ್ಲಿ ಕನ್ನಡಿಸಿರುವುದಾಗಿ ಹೇಳಿಕೊಂಡಿದ್ದಾನೆ. ಸಾಳ್ವಕವಿ (ಸು. 1550) ತನ್ನ ನೇಮಿನಾಥ ಪುರಾಣದ (ಸಾಳ್ವಭಾರತ) ಅಭ್ಯುದಯ ಪರ್ವವನ್ನು ಮಾತ್ರ ಉದ್ದಂಡ ಷಟ್ಪದಿಯಲ್ಲಿ ಬರೆದಿರುವಂತೆ ಸೂಚನಾ ಪದ್ಯದ ಮೊದಲಿಗೆ ಸೂಚಿತವಾದ ಆ ಹೆಸರಿನಿಂದ ಭಾವಿಸಬಹುದುದಾಗಿದೆ. ಈ ಮೂರು ಸಂದರ್ಭಗಳಲ್ಲೂ ಷಟ್ಪದಿಯ ರಚನೆ ವೀರೇಶಚರಿತೆಯ ಷಟ್ಪದಿಯ ವಿಶಿಷ್ಟ ಧಾಟಿಯಲ್ಲಿರುವ ವಾರ್ಧಕ ಷಟ್ಪದಿಯಲ್ಲಿಯೇ ಇರುವಂತೆ ಕಾಣುತ್ತದೆ. ಆ ಕವಿಗಳು ಸುಪರಿಚಿತವಾದ ವಾರ್ಧಕವನ್ನು ಬಲ್ಲವರಾಗಿಯೂ ಅದರಲ್ಲಿಯೇ ಕೃತಿರಚನೆಯನ್ನು ಮಾಡಿಯೂ ವಾರ್ಧಕದಿಂದ ವಿಭಿನ್ನವಾಗಿಯೇ ತೋರುವ ಷಟ್ಪದಿಗೆ ಉದ್ದಂಡವೆಂಬ ಮಾತನ್ನು ಏಕೆ ಬಳಸಿದರು ? ಸಾಳ್ವಭಾರತದ ಸೂಚನೆಯಿರಲಿ; ಮಂಗರಸ ತಿರುಮಲಭಟ್ಟರ ಗ್ರಹಿಕೆಯ ಅಭಿಪ್ರಾಯವೇನು ? ಷಟ್ಪದಿಗಳ ಗುಂಪಿನಲ್ಲಿ ವಾರ್ಧಕ ವಿಸ್ತಾರವಾದುದು, ಅತಿಶಯವಾದುದು, ಘನವಾದುದು–ಎಂಬುದಾಗಿ ತಿಳಿದು ಅದನ್ನೇ ಉದ್ದಂಡವೆಂದು ಕರೆದರೆ ? ಈ ಸಮಸ್ಯೆಗೆ ಖಚಿತವಾದ ಉತ್ತರ ದೊರೆಯುವುದು ಕಷ್ಟ. ವಾರ್ಧಕ ಮತ್ತು ಉದ್ದಂಡಗಳನ್ನು ಪರ್ಯಾಯ ವಾಚಕವಾಗಿ ತಿಳಿಯುತ್ತಿದ್ದಿರಬಹುದು ಎಂಬುದಕ್ಕೆ ಕೆಳದಿ ನೃಪವಿಜಯದ (ಸು. 18ನೆಯ ಶತಮಾನ)... ... ಶಿವಗೀತೆಯಂ ಲೋಕೋಪಕಾರಾರ್ಥಮಾಗಿ

ಕವಿ ತಿರುಮಲಭಟ್ಟರಿಂ ವಾರ್ಧಕ ಷಟ್ಪದಿಯೊಳ್ ಕರ್ಣಾಟಕ ಕಾವ್ಯಮನಾಗಿಸಿ... ...ಎಂಬ ಉಕ್ತಿ ಸ್ವಲ್ಪಮಟ್ಟಿಗೆ ಪೋಷಣೆಯನ್ನು ಕೊಡುತ್ತದೆ. ರಾಘವಾಂಕ ಕವಿಯ ವೀರೇಶಚರಿತೆಯಲ್ಲಿ ಬಳಸಿರುವಂಥ ವಿಶಿಷ್ಟ ರೀತಿಯ ಷಟ್ಪದಿಗೆ ಉದ್ದಂಡ ಷಟ್ಪದಿ ಎಂಬ ಹೆಸರು–ಅದು ಯಾರೇ ಸೇರಿಸಿದ್ದಿರಲಿ, ಎಂದೇ ಸೇರಿಸಿದ್ದಿರಲಿ–ಇಂದು ಸ್ವೀಕೃತವಾಗಿದೆ. ಆ ಹೆಸರಿನ ಷಟ್ಪದಿಗೆ ಅದೇ ಮೊದಲನೆಯ ಲಕ್ಷ್ಯವಾಗಿಯೂ ಮಾದರಿಯಾಗಿಯೂ ಗ್ರಾಹ್ಯವಾಗಿದೆ. ಆದ್ದರಿಂದ ಆ ಷಟ್ಪದಿಯ ಲಕ್ಷಣವನ್ನು ಉದ್ದಂಡ ಷಟ್ಪದಿಯ ಲಕ್ಷಣವೆಂಬುದಾಗಿ ಇಟ್ಟುಕೊಳ್ಳಬೇಕು. ರಾಘವಾಂಕ, ಬಸವಾಂಕರ ತರುವಾಯದಲ್ಲಿ ಈ ಷಟ್ಪದಿಯ ರಚನೆಯಲ್ಲಿ ಕೃಷಿ ನಡೆದಂತೆ ತೋರುವುದಿಲ್ಲ.

ಉದ್ದಂಡ ಷಟ್ಪದಿಯ ಲಕ್ಷಣವನ್ನು ಹೀಗೆ ಹೇಳಬಹುದು: ಇದು ವಾರ್ಧಕ ಷಟ್ಪದಿಯನ್ನು ಹೋಲುತ್ತದೆ. ಪ್ರತಿಚರಣದಲ್ಲೂ ವಾರ್ಧಕದಲ್ಲಿರುವಷ್ಟೇ ಮಾತ್ರಾ ಸಂಖ್ಯೆಯಿರುತ್ತದೆ. ಆದರೆ ಗಣವಿನ್ಯಾಸದಲ್ಲಿ ವ್ಯತ್ಯಾಸವಿರುತ್ತದೆ. ಅಲ್ಲಿ ಐದು ಮಾತ್ರೆಗಳ ಗಣವಿನ್ಯಾಸ ಬಂದರೆ, ಇಲ್ಲಿ ನಾಲ್ಕು ಮಾತ್ರೆಗಳ ಗಣವಿನ್ಯಾಸ ಬರುತ್ತದೆ. ಈ ಷಟ್ಪದಿಯ 1,2 ಮತ್ತು 4,5 ನೆಯ ಚರಣಗಳಲ್ಲಿ ಪ್ರತಿ ಚರಣಕ್ಕೆ ನಾಲ್ಕು ಮಾತ್ರೆಗಳ ಐದು ಗಣಗಳೂ 3 ಮತ್ತು 6ನೆಯ ಚರಣಗಳಲ್ಲಿ ಪ್ರತಿಚರಣಕ್ಕೆ 4 ಮಾತ್ರೆಗಳ ಎಂಟು ಗಣಗಳೂ ಬರುತ್ತವೆ. 3 ಮತ್ತು 6ನೆಯ ಚರಣಗಳ ಕೊನೆಯ ಲಘುವನ್ನು ಗುರುವಾಗಿ ಗ್ರಹಿಸಬೇಕು. ಈ ಲಕ್ಷಣ ಷಟ್ಪದಿಗಳ ಸಾಮಾನ್ಯ ಲಕ್ಷಣಕ್ಕೆ ಹೊಂದುವುದಿಲ್ಲವೆಂಬುದರಿಂದ, 1,2 ಮತ್ತು 4,5 ನೆಯ ಚರಣಗಳಲ್ಲಿ ಪ್ರತಿಚರಣಕ್ಕೆ 4–6–4–6 ಮಾತ್ರೆಗಳ ನಾಲ್ಕು ಗಣಗಳೂ 3 ಮತ್ತು 6ನೆಯ ಚರಣಗಳಲ್ಲಿ ಅದೇ ವಿನ್ಯಾಸದ ಆರು ಗಣಗಳೂ ಒಂದು ಗುರುವೂ ಬರುತ್ತವೆ ಎಂದು ಗ್ರಹಿಸಬೇಕೆಂಬ ಸೂಚನೆಯೂ ಇದೆ. ಷಟ್ಪದಿ ಸಾಮಾನ್ಯದ ಚೌಕಟ್ಟಿನ ದೃಷ್ಟಿಯಿಂದ ಹೀಗೆ ಹೇಳಬಹುದಾದರೂ ಲಯಪ್ರತೀತಿಯ ಮತ್ತು ಅರ್ಥಪ್ರತೀತಿಯ ದೃಷ್ಟಿಯಿಂದ ಸರ್ವತ್ರ ಚತುರ್ಮಾತ್ರಾಗಣ ವಿನ್ಯಾಸದ ಗಣನೆಯೇ ಸಹಜವಾಗಿ ತೋರುತ್ತದೆ.

ಉದ್ದಂಡ ಷಟ್ಪದಿಯ ಸಾಮಾನ್ಯ ಸ್ವರೂಪವನ್ನೂ ಲಕ್ಷಣವನ್ನೂ ತಿಳಿಯುವುದಕ್ಕೆ ಇಲ್ಲಿ ರಾಘವಾಂಕನ ವೀರೇಶಚರಿತೆಯ ಒಂದು ಪದ್ಯದ ಅರ್ಧವನ್ನು ಪ್ರಸ್ತಾರ ಹಾಕಿ ತೋರಿಸಿದೆ:

UUUU – UU – UU UUUU UUUU

ಪರಿಕಿಪೊ । ಡೀಕೃತಿ । ಗಾವುದು । ಮೊದಲೆನೆ । ಹಳಚುವ

UU U U UUUU UUUU – UU – –

ತೆರೆಯೊಳು । ತಿರುಗುವ । ಕರಿಮಕ । ರಂಗಳ । ಪುಚ್ಚೋ ।

UUUU – – UU UU UU UU – – – – UUUU UU–

ತ್ಕರಹತಿ । ಯಿಂ ಚೆ । ಲ್ಲಿದ ಮಣಿ । ಗಳ ಬೆಳ । ಗಿಂ ಶ್ವೇ । ತದ್ವೀ । ಪವನಣ । ಕಿಸುತ ॥

ಉದ್ದಂಡ ಷಟ್ಪದಿ ಎಂಬ ಹೆಸರಿನ ಔಚಿತ್ಯವೇನು ? ಈ ಷಟ್ಪದಿಯಲ್ಲಿ ಮಾತ್ರಾ ಗಣಗಳು ಗಣದಿಂದ ಗಣಕ್ಕೆ ಒಂದೇ ಸಮನೆ ಉದ್ದಂಡವಾಗಿ ಉರುಳುತ್ತ ಹೋಗುತ್ತವೆ. ಅಧಿಕಮಾತ್ರೆಗಳುಳ್ಳ ಗಣಗಳು ಬರುತ್ತವೆ, ಗಣಗಳು ದುಂಡಾಕಾರವಾಗಿ ಉರುಳುತ್ತ ಪಾದಾಂತ್ಯದಲ್ಲಿ ಕೂಡ ನಿಲ್ಲದೆ ಅವಿರತವಾಗಿ ಹರಿಯುತ್ತವೆ–ಎಂದು ಮುಂತಾಗಿ ಔಚಿತ್ಯವನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಿದೆ. ವೀರೇಶಚರಿತೆಯ ಕೃತಿವಸ್ತು ಉದ್ದಂಡವಾದದ್ದು (ಎಂದರೆ ಉಗ್ರ, ಪ್ರಚಂಡ, ಭಯೋತ್ಪಾದಕ ಎನ್ನುವಂಥದು) ಎಂದುಕೊಂಡು ಉದ್ದಂಡ ಷಟ್ಪದಿ ಎಂಬ ಹೆಸರನ್ನು ಅಲ್ಲಿಯ ಷಟ್ಪದಿಗೆ ಯಾರೋ ಸೇರಿಸಿದ್ದಿರಬಹುದು ಅಥವಾ ಅತಿಶಯಾರ್ಥದಲ್ಲಿ ಹಾಗೆಂದಿರಬಹುದು. ಇದು ಬರಿಯ ಊಹೆಯಷ್ಟೆ. ಇತರ ಎಷ್ಟೋ ಛಂದಸ್ಸುಗಳ ಹೆಸರುಗಳ ಹಾಗೆ ಇಲ್ಲೂ ನಿಷ್ಕೃಷ್ಟವಾಗಿ ಹೆಸರಿನ ಔಚಿತ್ಯವನ್ನು ಗುರುತಿಸುವುದು ಕಷ್ಟ. (ಟಿ.ವಿ.ವಿ.)

**ಉದ್ದರಿ:** ತತ್ಕ್ಷಣದಲ್ಲಿ ಪಡೆದ ಹಣ, ಸರಕು ಅಥವಾ ಸೇವೆಗೆ ಪ್ರತಿಯಾಗಿ ಭವಿಷ್ಯದಲ್ಲಿ ಹಣದ ಅಥವಾ ಪದಾರ್ಥದ ರೂಪದಲ್ಲಿ ಪಾವತಿ ಮಾಡುವುದಾಗಿ ನೀಡಿದ ವಾಗ್ದಾನ (ಕ್ರೆಡಿಟ್). ಈ ಭರವಸೆಯ ಮೇಲೆ ಸರಕು ಮಾರುವ, ಸೇವೆ ಸಲ್ಲಿಸುವ ಅಥವಾ ಹಣವನ್ನು ಸಾಲವಾಗಿ ಕೊಡುವ ವ್ಯಕ್ತಿಯೇ ಧಣಿ ಅಥವ ಲೇಣೆದಾರ (ಕ್ರೆಡಿಟರ್). ಈತ ಹೀಗೆ ನೀಡುವ ಉದ್ದರಿ ಪಡೆಯುವಾತನೇ ಋಣಿ ಅಥವಾ ಸಾಲಗಾರ (ಡೆಟರ್). ಋಣಿ ಹೀಗೆ ಪಡೆದ ಉದ್ದರಿ ಅಥವಾ ಸಾಲದ ಮೊಬಲಗನ್ನು ಮುಂದೆ ಪಾವತಿ ಮಾಡಲು ಕಾನೂನು ಪ್ರಕಾರ ಬದ್ಧ. ಈ ಋಣ, ಸಾಲ ಅಥವಾ ಉದ್ದರಿಯ ಅವಧಿಯಲ್ಲಿ ಇದರ ಮೇಲೆ ಬಡ್ಡಿ ಪಡೆಯುವ ಹಕ್ಕು ಧಣಿಗೆ ಸಾಮಾನ್ಯವಾಗಿ ಉಂಟು. ಉದ್ದರಿಗೆ ಸಾಕ್ಷ್ಯಾಧಾರವಾಗಿ ಒಂದು ಋಣಪತ್ರ ಅಥವಾ ಉದ್ದರಿಪತ್ರ ಇರಲೇಬೇಕೆಂಬ ಕಡ್ಡಾಯವೇನೂ ಇಲ್ಲ.

ಉದ್ದರಿಯ ಉದ್ಭವಕ್ಕೆ ಕಾರಣವಾದ ವಹಿವಾಟುಗಳಿಗೆ ಅನುಗುಣವಾಗಿ ಇದನ್ನು ನಾನಾ ಬಗೆಯಾಗಿ ವಿಂಗಡಿಸುವುದು ಸಾಧ್ಯ. ಬ್ಯಾಂಕು ತನ್ನ ಠೇವಣಿದಾರರಿಗೆ ನೀಡುವ ಸಾಲವೇ ಬ್ಯಾಂಕು ಉದ್ದರಿ. ಒಂದು ಉದ್ಯಮ ಸಂಸ್ಥೆಯ ತಾತ್ಕಾಲಿಕ ಹಣದ ಅಗತ್ಯ ಪೂರೈಸಲು ಅದು ಪಡೆದ ಕಿರುವಾಯಿದೆ ಸಾಲವನ್ನು ವಾಣಿಜ್ಯ ಉದ್ದರಿ ಎನುತ್ತಾರೆ. ಅನುಭೋಗ ವಸ್ತುಗಳನ್ನೂ ಸೇವೆಗಳನ್ನೂ ಕೊಳ್ಳಲೆಂದು ಅನುಭೋಗಿಗಳಿಗೆ ನೀಡಿದ್ದು ಅನುಭೋಗಿ ಉದ್ದರಿ. ಕಂತು ವಿಕ್ರಯ (ಇನ್ ಸ್ಟಾಲ್ ಮೆಂಟ್ ಸೇಲ್) ಮತ್ತು ಬಾಡಿಗೆ–ಕೊಳ್ಳಿಕೆ (ಹೈರ್–ಪರ್ಚೇಸ್) ಇನ್ನೆರಡು ಬಗೆಯ ಉದ್ದರಿ ವ್ಯವಹಾರಗಳು. (ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ) **(ನೋಡಿ– ಕಂತು–ವಿಕ್ರಯ) (ನೋಡಿ– ಬಾಡಿಗೆ–ಕೊಳ್ಳಿಕೆ)**

**ಉದ್ದರಿ ನಿರ್ಮಾಣ:** ಉದ್ದರಿಯ ನಿರ್ಮಾಣಕ್ಕೂ ಆರ್ಥಿಕಾಭಿವೃದ್ಧಿಗೂ ನೇರವಾದ ಸಂಬಂಧವುಂಟು. ಪದಾರ್ಥೋತ್ಪಾದನೆ ಹಾಗೂ ಮಾರಾಟ ಸುಸೂತ್ರವಾಗಲು ಉದ್ದರಿಯ ಸೌಲಭ್ಯವೇ ಕೀಲೆಣ್ಣೆ. ಉದ್ದರಿಯ ಆಧಾರದ ಮೇಲೆ ನಿಜ ಬಂಡವಾಳದ ಸಂಗ್ರಹ ಹಾಗೂ ವಿಸ್ತರಣೆ ಸಾಧ್ಯ. ಉಳಿತಾಯಗಾರರಲ್ಲಿ ಸಂಗ್ರಹವಾದ ಕೊಳ್ಳುವ ಶಕ್ತಿಯನ್ನು ಬಂಡವಾಳ ನಿಯೋಜಕರಿಗೆ ವರ್ಗಾಯಿಸಲು ಇದು ಸಾಧನ. ಒಂದು ಅರ್ಥವ್ಯವಸ್ಥೆಯಲ್ಲಿ ಜಾರಿಯಲ್ಲಿರುವ ಉದ್ದರಿ ವಿಧಾನಗಳೂ ಇದನ್ನು ಎಷ್ಟರಮಟ್ಟಿಗೆ ಬಳಸಿಕೊಳ್ಳಲಾಗುತ್ತಿದೆ ಯೆಂಬುದೂ ಆ ಜನಾಂಗದ ಬೆಳೆವಣಿಗೆಗೆ ದ್ಯೋತಕ. ಮಧ್ಯಕಾಲದಲ್ಲಿ ಪ್ರಚಲಿತವಿದ್ದದ್ದು ಬಹುತೇಕವಾಗಿ ಅನುಭೋಗಿ ಉದ್ದರಿ. ಅಂತಾರರಾಷ್ಟ್ರೀಯ ವ್ಯಾಪಾರ ಬೆಳೆದಂತೆ ಕಿರುವಾಯಿದೆಯ ವಾಣಿಜ್ಯಉದ್ದರಿ ಪ್ರಮುಖವಾಯಿತು. ಇದರೊಂದಿಗೆ ನಿಡುವಾಯಿದೆಯ (ದೀರ್ಘಾವಧಿ) ಉದ್ದರಿಯೂ ಬೆಳೆದದ್ದು ಕೈಗಾರಿಕೆಕ್ರಾಂತಿ ಸಂಭವಿಸಿದ ಮೇಲೆ. ರೈಲುಮಾರ್ಗ ನಿರ್ಮಾಣವೇ ಮುಂತಾದ ಸಾರ್ವಜನಿಕೋಪಯುಕ್ತ ಕಾರ್ಯಗಳಿಗಾಗಿ ನಿಡುವಾಯಿದೆ ಋಣಪತ್ರಗಳನ್ನು ನೀಡುವ ಪದ್ಧತಿ ಬೆಳೆಯಿತು. ಕೈಗಾರಿಕೆಗಳ ತಾತ್ಕಾಲಿಕ ಅಗತ್ಯಗಳೂ ಬೆಳೆದದ್ದರಿಂದ ಕಿರುವಾಯಿದೆ ಉದ್ದರಿ ಇವಕ್ಕೆ ಅನುವಾಗಿ ಬಂತು. ಕಾರು, ರೇಡಿಯೋ, ಅಣೆಕಟ್ಟು ಮುಂತಾದ ಬಾಳಿಕೆ–ಬಳಕೆಯ (ಡ್ಯೂರಬಲ್ ಯೂಸ್) ಪದಾರ್ಥ ಕೊಳ್ಳಲಿಕ್ಕಾಗಿ ಕಂತು ಬಿಕರಿ ಹಾಗೂ ಬಾಡಿಗೆ–ಕೊಳ್ಳಿಕೆ ವಿಧಾನಗಳು ಜನಪ್ರಿಯವಾದದ್ದು 20ನೆಯ ಶತಮಾನದಲ್ಲಿ.

ಮುಂದುವರಿದ ಸಮಾಜಗಳಲ್ಲಿ ಚಲಾವಣೆಯಲ್ಲಿರುವ ಹಣದ ಬಹು ಭಾಗ ಉದ್ದರಿಪತ್ರಗಳ ರೂಪದಲ್ಲಿವೆ. ಒಂದು ದೇಶದ ಕೇಂದ್ರೀಯ ಬ್ಯಾಂಕು ನೀಡುವ ನೋಟುಗಳು ವಾಸ್ತವವಾಗಿ ಅವುಗಳಲ್ಲಿ ನಮೂದಿಸಿರುವಷ್ಟು ಹಣವನ್ನು ಅವುಗಳ ಧಾರಕರಿಗೆ ಪಾವತಿ ಮಾಡುವುದಾಗಿ ನೀಡುವ ವಚನಪತ್ರಗಳೇ. ಚೆಕ್ಕಂತೂ ಅದನ್ನು ಬರೆದಾತ ತನ್ನ ಬ್ಯಾಂಕಿಗೆ ಅಷ್ಟು ಹಣ ಕೊಡಬೇಕೆಂದು ನೀಡಿದ ಆದೇಶ. ಅದೊಂದು ಉದ್ದರಿ ವ್ಯವಹಾರ. ಬ್ಯಾಂಕಿನಲ್ಲಿ ಆ ಗ್ರಾಹಕ ಇಟ್ಟ ಠೇವಣಿಯೂ (ಡಿಪಾಸಿಟ್) ಉದ್ದರಿಯೇ.

ಒಂದು ದೇಶದ ಆರ್ಥಿಕ ವ್ಯವಹಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವುಗಳ ಹಿಂದೆ ಉದ್ದರಿಯ ಮಹಾ ಸೌಧವೊಂದು ನಿರ್ಮಿತವಾಗಿರುವುದು ವೇದ್ಯವಾಗುತ್ತದೆ. ಇದರದು ತಲೆಕೆಳಗಾದ ಪಿರಮಿಡ್ಡಿನ ಆಕಾರ. ಎಲ್ಲಕಿಂತ ಕೆಳಗಿನದು ಗಟ್ಟಿ ಭಾಗ. ಖಜಾನೆಯ ವಶದಲ್ಲಿರುವ ಚಿನ್ನ ಮುಂತಾದ ಅಮೂಲ್ಯ ಲೋಹಗಳೂ ವಿದೇಶೀ ಹಣವೂ ಉದ್ದರಿ ನಿರ್ಮಾಣಕ್ಕೆ ಆಧಾರ. ತನ್ನಲ್ಲಿರುವ ಚಿನ್ನದ ಕೋಶ, ವಿದೇಶೀ ವಿನಿಮಯ ಹಾಗೂ ಸರ್ಕಾರೀ ವಚನಪತ್ರಗಳ ಆಧಾರದ ಮೇಲೆ ಕೇಂದ್ರೀಯ ಬ್ಯಾಂಕು ನೋಟುಗಳನ್ನು ಚಲಾವಣೆ ಮಾಡುತ್ತದೆ. ಗ್ರಾಹಕರಿಂದ ತಮ್ಮಲ್ಲಿಗೆ ಠೇವಣಿಯ ರೂಪದಲ್ಲಿ ಬಂದ ಹಣದ ತಳಹದಿಯ ಮೇಲೆ ವಾಣಿಜ್ಯ ಬ್ಯಾಂಕುಗಳು ಉದ್ದರಿ ನಿರ್ಮಾಣಕಾರ್ಯದಲ್ಲಿ ತೊಡಗುತ್ತವೆ. ಹೀಗೆ ಕ್ರಮವಾಗಿ ಬೆಳೆಯುವ ಉದ್ದರಿಯ ಸೌಧದ ಬುಡ ಸಣ್ಣವೂ ತಲೆ ದಪ್ಪವೂ ಆಗಿರುವುದರಿಂದ ಇದನ್ನು ಹತೋಟಿಗೆ ಒಳಪಡಿಸದಿದ್ದರೆ ಕುಸಿಯಬಹುದು. ಇದರಿಂದ ಉಪಕಾರದ ಬದಲು ಅಪಾಯವೇ ಆಗುವ ಸಂಭವ ಹೆಚ್ಚು.

ಉದ್ದರಿ ನಿರ್ಮಾಣಕಾರ್ಯದಲ್ಲಿ ನಿರತವಾದ ನಾನಾ ಸಂಸ್ಥೆಗಳ ಪೈಕಿ ವಾಣಿಜ್ಯ ಬ್ಯಾಂಕುಗಳದೇ ಪ್ರಧಾನ ಪಾತ್ರ. ಇವುಗಳ ಗ್ರಾಹಕರಿಂದ ಪಡೆದ ಠೇವಣಿಯ ಹಣವೇ ಅಲ್ಲದೆ ಇವು ಸ್ವತಃ ಹಣ ನಿರ್ಮಾಣಕಾರ್ಯದಲ್ಲಿ ನಿರತವಾಗಿರುತ್ತವೆ. ಇದೆಲ್ಲ ಉದ್ದರಿ ಹಣವೇ.

ಠೇವಣಿ ಪಡೆಯುವುದೂ ಸಾಲ ನೀಡುವುದೂ ಬ್ಯಾಂಕುಗಳ ಎರಡು ಪ್ರಮುಖ ಕಾರ್ಯಭಾರ. ಗ್ರಾಹಕರಿಂದ ತಾವು ಠೇವಣಿಯಾಗಿ ಪಡೆದ ಹಣವನ್ನು ಅವು ಇತರರಿಗೆ ಬಡ್ಡಿಯ ಮೇಲೆ ಸಾಲವಾಗಿ ಕೊಡುತ್ತವೆ. ತಾನು ಇಟ್ಟ ಹಣವನ್ನು ಠೇವಣಿದಾರ ತಕ್ಷಣವೇ ಹಿಂದೆ ಪಡೆಯುವುದಿಲ್ಲವೆಂದು ಬ್ಯಾಂಕಿಗಿರುವ ಭರವಸೆಯೂ ತಾನಿಟ್ಟ ಹಣವನ್ನು ತನಗೆ ಬೇಕಾದಾಗ ಪಡೆಯಬಹುದೆಂದು ಠೇವಣಿದಾರ ಬ್ಯಾಂಕಿನಲ್ಲಿಟ್ಟಿರುವ ನಂಬಿಕೆಯೂ ಬ್ಯಾಂಕು ಉದ್ದರಿ ವ್ಯವಹಾರಕ್ಕೆ ತಳಹದಿ. ಒಬ್ಬ ಠೇವಣಿದಾರ 1,000 ರೂ. ತಂದು ಬ್ಯಾಂಕಿನಲ್ಲಿಟ್ಟರೆ ಇದರಲ್ಲಿ ಸುಮಾರು ಹತ್ತನೆಯ ಒಂದು ಭಾಗವನ್ನು ಅದು ನಗದಾಗಿ ಉಳಿಸಿಕೊಂಡು ಉಳಿದ 900 ರೂ.ಗಳನ್ನು ಇತರರಿಗೆ ಸಾಲ ಕೊಡಬಹುದು. ಆದರೆ ಹೀಗೆ ಸಾಲ ಪಡೆದವರು ಹಣವನ್ನು ಬ್ಯಾಂಕಿನಿಂದ ನಗದು ರೂಪದಲ್ಲಿ ಪಡೆಯುವ ವಾಡಿಕೆಯಿಲ್ಲ. ಅವರಿಗೆ ನೀಡಿದ ಈ ಉದ್ದರಿಯ ಹಣವನ್ನು ಆ ಗ್ರಾಹಕರ ಠೇವಣಿ ಲೆಕ್ಕದಲ್ಲಿ ಜಮಾ ಮಾಡುವುದೇ ಸಾಮಾನ್ಯ. ತಮಗೆ ಬೇಕಾದಾಗ ಅವರು ಚೆಕ್ಕು ಮೂಲಕ ಈ ಹಣ ಪಡೆಯಬಹುದು. ಆದ್ದರಿಂದ ಬ್ಯಾಂಕು ಕೊಟ್ಟ ಸಾಲದ ಹಣ ಹೊರಕ್ಕೆ ಹೋದಂತಾಗುವುದಿಲ್ಲ. ಇದೇ ರೀತಿ ಬ್ಯಾಂಕು ಅನೇಕರಿಗೆ ಸಾಲ ಕೊಡಬಹುದು. ಅದು ನಗದು ಠೇವಣಿಯಾಗಿ ಪಡೆದ ಪ್ರತಿ ಹತ್ತು ರೂಪಾಯಿಗೂ ಸುಮಾರು ಒಂದು ಸಾವಿರ ರೂಪಾಯಿಯವರೆಗೆ

ಠೇವಣಿ ನಿರ್ಮಿಸಬಹುದಾಗಿದೆ. ಸಾಲ ನೀಡುವುದರಿಂದಲೇ ಅಲ್ಲದೆ ಬಂಡವಾಳ ಪತ್ರಗಳನ್ನು (ಸೆಕ್ಯೂರಿಟೀಸ್) ಕೊಳ್ಳುವುದರಿಂದಲೂ ಬ್ಯಾಂಕುಗಳು ಉದ್ದರಿ ನಿರ್ಮಾಣಮಾಡಬಹುದು. ಈ ಪತ್ರಗಳನ್ನು ಮಾರಾಟ ಮಾಡಿದವರಿಗೆ ಅದು ತನ್ನ ಮೇಲೆಯೇ ಚೆಕ್ಕುಗಳನ್ನು ಬರೆದು ಕೊಟ್ಟಾಗ ಅವರು ಸಾಮಾನ್ಯವಾಗಿ ಇವನ್ನು ತಮ್ಮ ಬ್ಯಾಂಕು ಲೆಕ್ಕಕ್ಕೆ ಜಮಾ ಮಾಡುತ್ತಾರೆ. ಆಗ ಬ್ಯಾಂಕಿನಿಂದ ಹಣ ಹೋಗುವ ಬದಲು ಬ್ಯಾಂಕಿನ ಋಣ (ಉದ್ದರಿ) ಅಷ್ಟರಮಟ್ಟಿಗೆ ಹೆಚ್ಚುತ್ತದೆ. ಇಂಥ ನಾನಾ ವಹಿವಾಟುಗಳ ಫಲವಾಗಿ ಒಂದು ಅರ್ಥವ್ಯವಸ್ಥೆಯಲ್ಲಿ ಚಲಾವಣೆಗೆ ಬರುವ ಠೇವಣಿ ಹಣದ ಅಥವಾ ಉದ್ದರಿಯ ಪರಿಮಾಣ ಅಗಾಧ.

ದೇಶದಲ್ಲಿ ಆರ್ಥಿಕ ವ್ಯವಹಾರಗಳಿಗೆ ಉತ್ತೇಜಕ ಸ್ಥಿತಿಯಿದ್ದು ಹಣದ ಚಲಾವಣೆ ಪದ್ಧತಿಯಲ್ಲಿ ಜನಕ್ಕೆ ನಂಬಿಕೆಯಿದ್ದು, ಸಟ್ಟಾ ವ್ಯಾಪಾರ ಹುರುಪುಗೊಂಡು, ವಾಣಿಜ್ಯೋದ್ಯಮಗಳು ಲಾಭದಾಯಕವಾಗಿ ಪರಿಣಮಿಸಿದಾಗ ಉದ್ದರಿ ಮೊತ್ತ ಹಿಗ್ಗುವುದು ಸಾಮಾನ್ಯ. ಇವು ಪ್ರತಿಕೂಲವಾದಾಗ ಇದು ಹಿಗ್ಗುವುದು ಕಷ್ಟಸಾಧ್ಯವಷ್ಟೇ ಅಲ್ಲ, ಪ್ರತಿಯಾಗಿ ಕುಗ್ಗಲೂಬಹುದು.

ಹೀಗೆ ಸುರುಳಿ ಸುರುಳಿಯಾಗಿ ಬೆಳೆದ ಉದ್ದರಿ ಠೇವಣಿಯಿಂದ ಚೆಕ್ಕಿನ ಬಳಕೆ ಅಧಿಕವಾಗಿ ಬೆಳೆಯುವುದು. ಆದ್ದರಿಂದ ಅಧಿಕ ಪರಿಮಾಣದಲ್ಲಿ ನಾಣ್ಯವನ್ನು ಚಲಾವಣೆಗೆ ತರುವ ಅಗತ್ಯವಿರುವುದಿಲ್ಲ. ನಾಣ್ಯಚಲಾವಣೆಯ ವೆಚ್ಚದ ಮಿಗಿತಾಯವಾಗುತ್ತದೆ. ಕೈಗಾರಿಕೆ ಹೆಚ್ಚು ಹಣ ಒದಗಿಸುವುದು ಸಾಧ್ಯ. ಹುಂಡಿ, ಡ್ರಾಫ್ಟ್ ಮುಂತಾದ ಪತ್ರಗಳ ಮೂಲಕ ಅಂತಾರಾಷ್ಟ್ರೀಯ ಹಣಪಾವತಿ ಸಾಧ್ಯವಾಗಿ ಆ ಬಗೆಗೆ ವಿದೇಶೀ ವಿನಿಮಯ ಅಥವಾ ಬಂಗಾರದ ಸಂದಾಯ ಅತ್ಯಲ್ಪ ಪ್ರಮಾಣಕ್ಕೆ ಇಳಿಯುತ್ತದೆ. ಇವೆಲ್ಲ ಉದ್ದರಿ ನಿರ್ಮಾಣದ ಪ್ರಯೋಜನಗಳೆನ್ನಬಹುದು. ಆದರೆ ಇವುಗಳಿಂದ ವಿಕಟ ವಿಪತ್ತುಗಳು ಸಂಭವಿಸುವುದೂ ಸಾಧ್ಯ. ಆದ್ದರಿಂದ ಉದ್ದರಿ ಸೌಕರ್ಯವನ್ನು ಒಂದು ಮಿತಿಯಲ್ಲಿ ಉಪಯೋಗಿಸಬೇಕು. ಉದ್ದರಿಯ ಪ್ರಮಾಣ ಆ ಮಿತಿಯನ್ನು ಮೀರಿ ಎಷ್ಟೆಷ್ಟು ಬೆಳೆಯುತ್ತದೊ ಅಷ್ಟಷ್ಟೂ ಅಪಾಯಕಾರಿಯಾಗಬಲ್ಲದು. ಬೆಲೆ ಏರಿಕೆ, ವ್ಯಾಪಾರ ಕ್ಷೇತ್ರದಲ್ಲಿನ ಅನಿಶ್ಚಿತತೆ, ವ್ಯಾಪಾರ ಉಚ್ಛ್ರಾಯ ಸ್ಥಿತಿಗೇರಿತೆಂಬ ಭ್ರಾಂತಿಯ ನಿರ್ಮಾಣ–ಇವು ಅರ್ಥವ್ಯವಸ್ಥೆಯನ್ನು ಅಪಾಯದ ಅಂಚಿಗೆ ದೂಡಬಹುದು. ಅಗ್ಗವಾಗಿ ದೊರೆತ ಬ್ಯಾಂಕುಸಾಲವನ್ನು ವ್ಯಾಪಾರಿಗಳು ಅಪ್ರಯೋಜಕ ಉದ್ಯಮಗಳಲ್ಲಿ ಹೂಡಬಹುದು. ಮತ್ತೊಂದು ಕಡೆ ಸರ್ಕಾರವೂ ತಿಳಿಗೇಡಿ ವೆಚ್ಚದ ಸುಳಿಮಡುವಿನಲ್ಲಿ ಸಿಕ್ಕಿಬೀಳುವ ಅಪಾಯವುಂಟು. ಅಳಿದೇ ಹೋಗಬೇಕಾಗಿದ್ದ ಹಲವಾರು ವ್ಯಾಪಾರಿ ಸಂಸ್ಥೆಗಳು ಒಂದು ಕಡೆ ಅಗ್ಗದ ಉದ್ದರಿಯ ಸೌಕರ್ಯದಿಂದಾಗಿ ದಕ್ಷತೆಯ ಸೋಗನ್ನು ತಾಳಿಕೊಂಡು ಉಳಿದು ದೇಶದ ಆರ್ಥಿಕ ರಚನೆಗೇ ಕುಟ್ಟೆ ಹಿಡಿಸಿದರೆ, ಮತ್ತೊಂದು ಕಡೆ ತಾವೇ ಸರ್ವೇಶ್ವರರೆಂದು ವರ್ತಿಸಿ ಸಾರ್ವಜನಿಕರ ಶೋಷಣೆಯನ್ನು ನಡೆಸುವ ಏಕಸ್ವಾಮ್ಯಗಳು ಹುಟ್ಟಿಕೊಳ್ಳುತ್ತವೆ. ಉದ್ದರಿ ಸೌಲಭ್ಯದ ಬೆಳವಣಿಗೆ ಎಷ್ಟು ಸತ್ಫಲದಾಯಕವೊ, ಎಲ್ಲೆ ಮೀರಿದಾಗ ಅಷ್ಟೇ ಅನಿಷ್ಟಕಾರಕವೂ ಹೌದು.

ಆಧುನಿಕ ಅರ್ಥ ವ್ಯವಸ್ಥೆಯಲ್ಲಿ ಉದ್ದರಿಯ ಬಳಕೆ ಮತ್ತು ಪರಿಮಾಣ ಕೆಲವು ವೇಳೆ ಏರುತ್ತಲೂ ಕೆಲವು ವೇಳೆ ಇಳಿಯುತ್ತಲೂ ನಡೆದಿವೆ. ಪರಿಣಾಮವಾಗಿ ಅದರ ಅನಿಷ್ಟಗಳನ್ನು ಹೋಗಲಾಡಿಸಿ, ಅನುಗ್ರಹಗಳನ್ನು ಮಾತ್ರ ಅನುಭವಿಸಲು ಸಹಾಯಕವಾಗುವಂಥ ಹಂಚಿಕೆಗಳನ್ನು ಹಂಚಿಕೊಳ್ಳುತ್ತಲೂ ಬರಲಾಗಿದೆ. ಇದು ಕೇಂದ್ರೀಯ ಬ್ಯಾಂಕಿನ ಹೆಗಲ ಮೇಲೆ ಬಿದ್ದ ಹೊಣೆ. ಈ ಹೊಣೆ ತುಂಬ ಭಾರವಾದದ್ದು. ಬ್ಯಾಂಕು ಇಡೀ ರಾಷ್ಟ್ರದ ಆರ್ಥಿಕ ಭದ್ರತೆಯನ್ನು ನೋಡಿಕೊಳ್ಳಬೇಕು; ಹಣಕಾಸಿನ ದೃಢತೆಯನ್ನು ಕಾಯ್ದುಕೊಳ್ಳಬೇಕು; ಅಲ್ಲದೆ, ಬ್ಯಾಂಕಿಂಗ್ ವ್ಯವಸ್ಥೆಯನ್ನು ಜನತೆಗೆ ನೆಚ್ಚಿಕೆಯಾಗಿರುವಂತೆ ಇಟ್ಟುಕೊಂಡಿರಬೇಕು. ಅದರ ಈ ಜವಾಬ್ದಾರಿಗಳ ನಿರ್ವಹಣೆ ಯಶಸ್ವಿಯಾಗಬೇಕಾದರೆ ಉದ್ದರಿಯ ಪ್ರವಾಹ ಅತಿಯಾದ ಉಬ್ಬರವಿಳಿತಗಳಿಗೆ ಪಕ್ಕಾಗದಂತೆ ಅದನ್ನು ಅಂಕೆಯಲ್ಲಿ ಇಟ್ಟುಕೊಳ್ಳಬೇಕು. ಈ ಉದ್ದೇಶ ಸಾಧನೆಗಾಗಿ ಕೇಂದ್ರೀಯ ಬ್ಯಾಂಕು ಸೂಕ್ತ ನಿಯಂತ್ರಣ ಕ್ರಮಗಳನ್ನು ರೂಪಿಸಿ ಜಾರಿಗೆ ತರುವುದು ಅತ್ಯವಶ್ಯ. ಈ ಕ್ರಮಗಳು ಸರ್ಕಾರದ ನೀತಿಗೆ ಹೊಂದಿಕೊಂಡಿರಬೇಕಾದದ್ದು ಅಗತ್ಯ. (ಸಿ.ಎಸ್.)

**ಉದ್ದರಿ ನಿಯಂತ್ರಣ:** ಒಂದು ಗೊತ್ತಾದ ಕಾಲದಲ್ಲಿರುವ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಉದ್ದರಿಯನ್ನು ಒಂದು ಗೊತ್ತಾದ ಪ್ರಮಾಣದಲ್ಲಿ ಏರಿಸುವ ಅಥವಾ ತಗ್ಗಿಸುವ ಉದ್ದೇಶದಿಂದ ಸರ್ಕಾರ, ಕೇಂದ್ರೀಯ ಬ್ಯಾಂಕು ಮತ್ತು ಇತರ ಸಂಸ್ಥೆಗಳು ಕೈಕೊಳ್ಳುವ ಕ್ರಮ (ಕ್ರೆಡಿಟ್ ಕಂಟ್ರೋಲ್). ಮುಖ್ಯವಾಗಿ ಇದು ಕೇಂದ್ರೀಯ ಬ್ಯಾಂಕಿನ ಒಂದು ಕಾರ್ಯಭಾರ. ಈ ಉದ್ದೇಶಕ್ಕಾಗಿ ಈ ಸಂಸ್ಥೆ ತನ್ನ ಬತ್ತಳಿಕೆಯಲ್ಲಿ ಇಟ್ಟಿರುವ ಅಸ್ತ್ರಗಳು ಅನೇಕ. ಕೇಂದ್ರೀಯ ಬ್ಯಾಂಕು ತನಗೆ ಸರಿತೋರಿದಾಗ 1. ತನ್ನ ಮಟ್ಟದ ದರವನ್ನು ಬದಲಾವಣೆ ಮಾಡಬಹುದು; 2. ಬುದ್ಧಿಪೂರ್ವಕವಾಗಿ ತಾನೇ ಮಾರುಕಟ್ಟೆಯಲ್ಲಿ ಕಾಲಿಟ್ಟು ಸರ್ಕಾರೀ ಬಂಡವಾಳ ಪತ್ರವೇ ಮುಂತಾದವನ್ನು ನೇರವಾಗಿ ಕೊಳ್ಳಬಹುದು, ಇಲ್ಲವೆ ಮಾರಬಹುದು; 3. ಸದಸ್ಯ ಬ್ಯಾಂಕುಗಳು ತನ್ನಲ್ಲಿ ಕಾನೂನುಬದ್ಧವಾಗಿ ಇಡಬೇಕಾದ ನಗದು ನಿಧಿಯ ಶೇಕಡವಾರು ಪ್ರಮಾಣವನ್ನು ತನ್ನ ಅಧಿಕಾರದತ್ತ ಮಿತಿಗಳೊಳಗೆ ಬದಲಾಯಿಸಬಹುದು. ಇದಕ್ಕೆ ಪೂರಕವಾಗಿ ಅವು ತಮ್ಮಲ್ಲಿರುವ ಬಂಡವಾಳಪತ್ರಗಳನ್ನು, ಒಂದು ಗೊತ್ತಾದ ಪ್ರಮಾಣದಲ್ಲಿ ನಿಧಿಯಾಗಿ ತನ್ನಲ್ಲಿ ತಂದಿಟ್ಟು ಆ ಹಣದ ಮೇಲೆ ಬಡ್ಡಿ ಪಡೆಯಬಹುದೆಂದೂ ಸೂಚಿಸಬಹುದು; 4. ತಾನು ಅಂದಂದು ಕೊಡಲಾಗುವಷ್ಟು ಉದ್ದರಿಯನ್ನು ಅದಕ್ಕಾಗಿ ಬೇಡಿಕೆ ಸಲ್ಲಿಸುವ ಸದಸ್ಯ ಬ್ಯಾಂಕುಗಳಿಗೆ ಪಡಿತರವಾಗಿ ಹಂಚಿಕೊಡಬಹುದು; 5. ಬ್ಯಾಂಕುಗಳು ತನ್ನ ಸಲಹೆಯಂತೆ ವಹಿವಾಟು ನಡೆಸಬೇಕೆಂದು ಅವುಗಳ ಮೇಲೆ ನೈತಿಕ ಪ್ರೇರಣೆ ಬೀರಬಹುದು; 6. ತನ್ನ ನೈತಿಕ ಒತ್ತಾಯಕ್ಕೆ ಬಗ್ಗದ ಬ್ಯಾಂಕುಗಳ ಮೇಲೆ ನೇರ ಕಾರ್ಯಾಚರಣೆಯನ್ನೂ ಕೈಗೊಳ್ಳಬಹುದು; 7. ಬ್ಯಾಂಕುಗಳು ತಮ್ಮ ಲೇಣಿದೇಣಿ ಸ್ಥಿತಿಯನ್ನು ಸಾರ್ವಜನಿಕರ ಅವಗಾಹನೆಗಾಗಿ ಬಹಿರಂಗವಾಗಿ ಪ್ರಕಟಿಸಬೇಕೆಂದು ಆಜ್ಞಾಪಿಸಬಹುದು; 8. ಅಷ್ಟೇ ಅಲ್ಲದೆ, ಯಾವುದಾದರೂ ನಿರ್ದಿಷ್ಟ ಕ್ಷೇತ್ರಗಳಲ್ಲಿ ಉದ್ದರಿಯನ್ನು ನಿಯಂತ್ರಣಗೊಳಿಸಬಹುದು. ಉದಾ : ಅನುಭೋಗಿ ಉದ್ದರಿ, ಷೇರುಪೇಟೆ ಉದ್ದರಿ. ಹೀಗೆ ರೂಪಿತವಾಗಿ ತನ್ನ ಬತ್ತಳಿಕೆಯಲ್ಲಿ ಸಿದ್ಧವಾಗಿರುವ ಈ ಉದ್ದರಿ ನಿಯಂತ್ರಣಗಳನ್ನು ಕೇಂದ್ರೀಯ ಬ್ಯಾಂಕು ಎಂದು, ಹೇಗೆ, ಯಾವ ಉದ್ದೇಶಸಾಧನೆಗಾಗಿ ಪ್ರಯೋಗಿಸಬೇಕೆಂಬುದು ಆಯಾ ದೇಶಗಳ ಅಂದಂದಿನ ಅರ್ಥ ವ್ಯವಸ್ಥೆ. ಆರ್ಥಿಕ ಪರಿಸ್ಥಿತಿ, ಅನುಸರಣೆಯಲ್ಲಿರುವ ಹಣಪ್ರಮಿತಿಯ ವಿಶಿಷ್ಟಗುಣ ಅಮದು, ರಫ್ತುಗಳ ವೈಲಕ್ಷಣ್ಯ ಮತ್ತು ಪ್ರಮಾಣ ಇತ್ಯಾದಿ ಅಂಶಗಳನ್ನು ಪ್ರಧಾನವಾಗಿ ಅವಲಂಬಿಸಿದೆ.

ಐತಿಹಾಸಿಕ ಉದ್ದರಿ ನಿಯಂತ್ರಣ ಕ್ರಮ ಒಂದೋ ಎರಡೋ ಉದ್ದೇಶಗಳಿಂದ ನಿಯಮಬದ್ಧವಾಗಿ ಕಾರ್ಯಾಚರಣೆಗೆ ಬಂದದ್ದು ಕೇವಲ 1ನೆಯ ಮಹಾಯುದ್ಧದಿಂದೀಚೆಗೆ. ಹಣಕಾಸಿನ ಸ್ಥಿತಿಯಲ್ಲಿ ಭದ್ರತೆ ಇರಬೇಕು, ಆ ದೃಷ್ಟಿಯಿಂದ ಹಣದ ಆಡಳಿತನಿರ್ವಹಣೆಯಾಗಬೇಕು ಎಂಬ ಸುಧಾರಣೆಗಳ ಬಯಕೆಯ ಉಗಮವಾದದ್ದೂ ಈ ಕಾಲದಲ್ಲೇ. 1ನೆಯ ಮಹಾಯುದ್ಧಕ್ಕೆ ಪೂರ್ವದಲ್ಲಿ ಸ್ವಯಂಚಾಲಿತವಾದ ಸ್ವರ್ಣಪ್ರಮಿತಿ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಜಾರಿಯಲ್ಲಿತ್ತು. ಆಗ ಒಂದು ದೇಶದ ಬ್ಯಾಂಕುಗಳು ಎಷ್ಟು ಹಣವನ್ನು ನಗದಾಗಿ ತಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕು ಎಂಬ ಮುಖ್ಯ ವಿಚಾರವನ್ನು ಕೇಂದ್ರೀಯ ಬ್ಯಾಂಕು ನಿರ್ಣಯಿಸುತ್ತಿರಲಿಲ್ಲ; ಈ ನಿರ್ಣಯವಾಗುತ್ತಿದ್ದುದ್ದು ಆ ದೇಶದಿಂದ ಪರದೇಶಗಳಿಗೆ ಹೋದ ಮತ್ತು ಪರದೇಶಗಳಿಂದ ಆ ದೇಶಕ್ಕೆ ಬಂದ ಚಿನ್ನವೆಷ್ಟು ಎಂಬುದರಿಂದ. ಆ ಸನ್ನಿವೇಶದಲ್ಲಿ ಕೇಂದ್ರೀಯ ಬ್ಯಾಂಕು ಮಾಡುತ್ತಿದ್ದ ಕೆಲಸ ಬಲು ಸರಳ. ಸ್ವದೇಶದಿಂದ ಪರದೇಶಗಳಿಗೆ ಹೋಗುವ ಹಾಗೂ ಪರದೇಶದಿಂದ ಸ್ವದೇಶಕ್ಕೆ ಬರುವ ಚಿನ್ನದ ಪ್ರಮಾಣದಿಂದಲೇ ದೇಶದೊಳಗಿನ ಉದ್ದರಿಯ ಪ್ರಮಾಣವೂ ದರವೂ ನಿರ್ಣಯವಾಗುವಂತೆ ಅನುವು ಮಾಡುವುದೇ ಅಲ್ಲದೆ, ಮಾರುಕಟ್ಟೆಯ ದರವನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ತನ್ನ ಮಟ್ಟದ ದರವನ್ನು ಏರಿಸುತ್ತಲೂ ಇಳಿಸುತ್ತಲೂ ಇತ್ತು. ಧಾರಣೆ, ಕೂಲಿ, ಬಾಡಿಗೆ, ಉದ್ಯೋಗ ಇತ್ಯಾದಿಗಳ ಮಟ್ಟಗಳು ತಾವಾಗಿಯೇ ಚಿನ್ನದ ಗಳಿಕೆಯ ಮೊತ್ತದ ಆಧಾರದ ಮೇಲೆಯೇ ನಿರ್ಣಯಗೊಳ್ಳುವಂತೆಯೂ ಕೇಂದ್ರೀಯ ಬ್ಯಾಂಕು ಅವಕಾಶ ಮಾಡಿಕೊಡುತ್ತಿತ್ತೇ ವಿನಃ ಅವುಗಳ ಮಾರ್ಗದಲ್ಲಿ ತಾನು ಯಾವ ಬಗೆಯ ಎಡರು ತೊಡರುಗಳನ್ನೂ ಒಡ್ಡುತ್ತಿರಲಿಲ್ಲ. ಆಗಿನ ಕಾಲದಲ್ಲಿದ್ದ ನೋಟುಗಳು ಸಂಪೂರ್ಣವಾಗಿ ಪರಿವರ್ತಕ. ಯಾರು ಬೇಕಾದರೂ ಅವನ್ನು ಕೊಟ್ಟು ನಿಯತಬೆಲೆಯಲ್ಲಿ ಚಿನ್ನ ಪಡೆಯಬಹುದಿತ್ತು. ಚಿನ್ನ ಕೊಟ್ಟು ನೋಟು ಪಡೆಯಬಹುದಿತ್ತು. ಎಲ್ಲಕ್ಕೂ ಸಾಮಾನ್ಯವಾಗಿ ಚಿನ್ನವೇ ಆಧಾರ. ಒಂದು ದೇಶದ ಕೇಂದ್ರೀಯ ಬ್ಯಾಂಕಿನ ಚಿನ್ನದ ದಾಸ್ತಾನು ಕರಗಿ ಹೋಗದಂತೆ ನೋಡಿಕೊಳ್ಳುವ ಅಗತ್ಯವಿತ್ತು. ಈ ದೃಷ್ಟಿಯಿಂದಲೇ ಅದು ವಹಿವಾಟು ನಡೆಸುತ್ತಿತ್ತು. ಈ ಉದ್ದೇಶದಿಂದಲೇ ಅದು ತನ್ನ ಮಟ್ಟದ ದರವನ್ನು ಸೂಕ್ತಕಂಡಂತೆ ಬದಲಾಯಿಸುತ್ತಿತ್ತು. ಆದರೆ 1ನೆಯ ಮಹಾಯುದ್ಧದ ತರುವಾಯ ಈ ವ್ಯವಸ್ಥೆ ಬದಲಾಯಿತು. ಅನೇಕ ಪಾಶ್ಚಾತ್ಯ ದೇಶಗಳ ವಿದೇಶೀ ವಿನಿಮಯದಲ್ಲಿ ಬಿಕ್ಕಟ್ಟು ಒದಗಿ, ಚಿನ್ನ ಸಾಗಿ, ಅವುಗಳ ಸ್ವರ್ಣ ಪ್ರಮಿತಿಯನ್ನು ಕಾಯ್ದಿಟ್ಟುಕೊಳ್ಳುವುದು ಕಷ್ಟವಾಗಿತ್ತಲ್ಲದೆ, ಹಣವ್ಯವಸ್ಥೆಯ ಸ್ವಯಂಚಾಲನಶಕ್ತಿಯೂ ಕುಂಠಿತವಾಯಿತು. ಕೇಂದ್ರೀಯ ಬ್ಯಾಂಕು ಅದನ್ನು ತನ್ನ ಆಡಳಿತ ವ್ಯಾಪ್ತಿಗೆ ಒಳಪಡಿಸಿಕೊಂಡು ನಿಶ್ಚಿತ ಆರ್ಥಿಕ ಗುರಿಗಳ ಸಾಧನೆಗಾಗಿ ಉದ್ದರಿಯ ಪ್ರವಾಹದ ಪ್ರಮಾಣವನ್ನೂ ದರವನ್ನೂ ನಿಯಂತ್ರಿಸುವ ಅಗತ್ಯ ತೋರಿಬಂದದ್ದು ಆಗ.

20ನೆಯ ಶತಮಾನದ ಮೂರನೆಯ ದಶಕದ ಆದಿಭಾಗದವರೆಗೂ ಸ್ವರ್ಣ ಪ್ರಮಿತಿಯ ಆ ಬಗೆಯ ಕುಂಠಿತ ಆಧಿಪತ್ಯ ಸಾಗಿಬಂತು. ಅದುವರೆಗೆ ಕೈಗಾರಿಕೆಯೇ ಮುಂತಾದ ಉದ್ಯಮಗಳ ಸ್ವಾಮ್ಯ ಹೆಚ್ಚಾಗಿ ಖಾಸಗಿ ಜನರ ಕೈಯಲ್ಲಿ ಇತ್ತು. ಕೇಂದ್ರೀಯ ಬ್ಯಾಂಕುಗಳೂ ಉದ್ದೇಶಿತ ಆರ್ಥಿಕ ಗುರಿಗಳ ಸಾಧನೆಯ ದೃಷ್ಟಿಯಿಂದ ಚಿನ್ನದ ಪ್ರವಾಹವನ್ನು ಹತೋಟಿಗೆ ತಂದುಕೊಳ್ಳುತ್ತಿದ್ದುವು. ಆ ಉದ್ದೇಶಿತ ಆರ್ಥಿಕ ಗುರಿಗಳಾದರೂ ಏನು ? ವಿದೇಶೀ ಹಣಗಳ ದೃಷ್ಟಿಯಲ್ಲಿ ತಮ್ಮ ದೇಶೀಯ ಹಣದ ವಿನಿಮಯ ದರ ಹೆಚ್ಚು ಏರುಪೇರುಗಳಿಗೆ ಒಳಗಾಗದಂತೆ, ನಿಗದಿಯಾದ ಮಟ್ಟದಲ್ಲೇ ದೃಢವಾಗಿರುವಂತೆ ನೋಡಿಕೊಳ್ಳುವುದೂ ತನ್ಮೂಲಕ ತಮ್ಮ ದೇಶ ಮತ್ತು ಪರದೇಶಗಳ ನಡುವೆ ಪಾವತಿ ಶಿಲ್ಕಿನ ಪರಿಸ್ಥಿತಿ ತೃಪ್ತಿದಾಯಕವಾಗಿದ್ದು, ತಮ್ಮ ಚಿನ್ನದ ನಿಧಿಯ ಸಂರಕ್ಷಣೆಯಾಗುವಂತೆ ನೋಡಿಕೊಳ್ಳುವುದೂ ಜೊತೆಗೆ ಒಳದೇಶದಲ್ಲಿ ಬೆಲೆಗಳ ಮಟ್ಟವನ್ನು ಸ್ಥಿರವಾಗಿಡುವುದೂ ವ್ಯಾಪಾರೇತ್ಯಾದಿ ಉದ್ಯಮಸ್ಥಿತಿಯಲ್ಲಿ ಉಂಟಾಗುವ ಉಬ್ಬರವಿಳಿತಗಳನ್ನು ನಿವಾರಿಸಿ ಉದ್ಯೋಗ ಸೌಲಭ್ಯಗಳನ್ನು ಉನ್ನತ ಮಟ್ಟಕ್ಕೆ ಒಯ್ಯುವುದೂ ಕೇಂದ್ರೀಯ ಬ್ಯಾಂಕುಗಳ ಉದ್ದರಿ ನಿಯಂತ್ರಣ ನೀತಿಯ ಮುಖ್ಯಗುರಿಗಳಾಗಿದ್ದವು. ಅಷ್ಟೇ ಅಲ್ಲ. ಇವುಗಳಲ್ಲಿ ಯಾವುದಾದರೂ ಒಂದು ಗುರಿಯನ್ನು ಸಾಧಿಸಲು ಹೊರಟರೆ ಸಾಕು, ಮಿಕ್ಕ ಎಲ್ಲ ಗುರಿಗಳೂ ತಾವಾಗಿಯೇ ಸಿದ್ಧಿಸುವುವು

ಎಂದೂ ಅಂದು ನಂಬಲಾಗಿತ್ತು. ಆದರೆ ಈ ಗುರಿಗಳು ಪರಸ್ಪರವಾಗಿರಲಿಲ್ಲ. ಅವುಗಳಲ್ಲಿ ಸಾಮರಸ್ಯ ಸುಲಭವಾಗಿರಲಿಲ್ಲ. ಎರಡನೆಯ ಮಹಾಯುದ್ಧದಿಂದೀಚೆಗೆ ಇದು ಸ್ಪಷ್ಟವಾಗಿ ಅನುಭವಕ್ಕೆ ಬಂತು ಎನ್ನಬಹುದು. ಆದ್ದರಿಂದ ದೇಶ ಒಟ್ಟಿನಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಸಾಧಿಸಿಕೊಳ್ಳುತ್ತ ಹೋಗಬೇಕಾದರೆ, ಈ ಗುರಿಗಳೆಲ್ಲದರ ಒಂದು ಅತ್ಯಂತ ತೃಪ್ತಿಕರ ಸಮತೋಲ ಸಾಧಿಸಬೇಕಾದ್ದು ಅನಿವಾರ್ಯವೆಂಬುದು ಈಗ ಸ್ಪಷ್ಟವಾಗಿ ಮನವರಿಕೆಯಾಗಿದೆ. ದೇಶದ ಅರ್ಥವ್ಯವಸ್ಥೆಯಲ್ಲಿ ಕೂಡ ಈಗ ಕೆಲವು ಪರಿಣಾಮಕಾರಿ ಪರಿವರ್ತನೆಗಳುಂಟಾಗಿವೆ. ಆರ್ಥಿಕ ಬೆಳವಣಿಗೆಯನ್ನು ಸಾಧಿಸುವ ಮೂಲಕ ರಾಷ್ಟ್ರದ ಸಂಪದುತ್ಪಾದನೆಯನ್ನು ವೃದ್ಧಿಗೊಳಿಸುತ್ತ ಹೋಗಿ, ಜನಜೀವನವನ್ನು ಉನ್ನತಮಟ್ಟಕ್ಕೆ ಒಯ್ದು ಅದನ್ನು ಹಸನು ಮಾಡುವ ತೀವ್ರ ಅಭಿಲಾಷೆಯಿಂದ ಸರ್ಕಾರ ಒಂದು ನಿರ್ದಿಷ್ಟ ದೀರ್ಘಾವಧಿ ಕಾರ್ಯನೀತಿ ಹಾಕಿಕೊಳ್ಳುತ್ತಿದೆ. ಈ ಉದ್ದೇಶ ಸಾಧನೆಗಾಗಿ ರಾಷ್ಟ್ರದ ಕೇಂದ್ರೀಯ ಬ್ಯಾಂಕು ಸರ್ಕಾರದೊಡನೆ ಮೇಳವಾಗಿ ನಿಂತು ಅದರ ಕಾರ್ಯನೀತಿಗೆ ಪೂರಕವಾಗಿ ಹಣದ ಕಾರ್ಯನೀತಿಯನ್ನು ರೂಪಿಸಬೇಕೆಂಬುದು ಸರ್ಕಾರದ ಸಹಜ ನಿರೀಕ್ಷೆ. ಹಾಗೆ ಮಾಡುವುದೇ ತನ್ನ ಆದ್ಯ ಕರ್ತವ್ಯವೆಂದು ಕೇಂದ್ರೀಯ ಬ್ಯಾಂಕೂ ತಿಳಿಯುತ್ತದೆ; ಮತ್ತು ಸಂಪದಭಿವೃದ್ಧಿಯ ನೇರ ಸಾಧನೆಗಾಗಿ ತಾನು ಹಾಗೆ ರೂಪಿಸಿದ ಹಣದ ನೀತಿ ಸಫಲವಾಗುವಂತೆ, ಆಗೊಮ್ಮೆ ಈಗೊಮ್ಮೆ ಉದ್ದರಿ ಪ್ರವಾಹದಲ್ಲಿ ಅಡ್ಡಿಯಾಗಿ ಉದ್ಭವಿಸುವ ಅರ್ಥವಿಲ್ಲದ ಮತ್ತು ಗೊಂದಲಕಾರಿ ಏಳು ಬೀಳುಗಳನ್ನು ನಿಯಂತ್ರಣಾಸ್ತ್ರಗಳಿಂದ ತಕ್ಕರೀತಿಯಲ್ಲಿ ಮೇಳೈಸಿ ಪ್ರಯೋಗಿಸುತ್ತಿದೆ. ಮುಖ್ಯವಾಗಿ ಈ ದೃಷ್ಟಿಯಿಂದಲೇ ಈ ಹಿಂದೆ ಖಾಸಗಿಯವರ ಸ್ವಾಮ್ಯದಲ್ಲಿದ್ದ ಕೇಂದ್ರೀಯ ಬ್ಯಾಂಕುಗಳು ಬಹುತೇಕ ಇಂದು ರಾಷ್ಟ್ರೀಕರಣಗೊಂಡಿವೆ. ಮಿಶ್ರ ಅರ್ಥವ್ಯವಸ್ಥೆ ಜಾರಿಗೆ ಬಂದಿದೆ. ಸರ್ಕಾರಿ ಉದ್ಯಮಕ್ಷೇತ್ರ ದಿನದಿನಕ್ಕೆ ವಿಸ್ತಾರಗೊಳ್ಳುತ್ತಿದೆ. ಹಿಂದೆ ದೇಶದ ಆಡಳಿತ, ಸಂರಕ್ಷಣೆ ಮುಂತಾದ ಹೊಣೆಗಳ ನಿರ್ವಹಣೆಗೆ ಮಾತ್ರ ವರಮಾನವನ್ನು ಹುಡುಕಿಕೊಳ್ಳುತ್ತಿದ್ದ ಸರ್ಕಾರಗಳು ಇಂದು ತಮ್ಮ ಉದ್ಯಮ ಕ್ಷೇತ್ರದಲ್ಲಿ ಬಂಡವಾಳ ಹೂಡುವುದಕ್ಕಾಗಿಯೂ ತತ್ಸಂಬಂಧವಾದ ಇತರ ಹೊಣೆಗಾರಿಕೆಯ ನಿರ್ವಹಣೆಗಾಗಿಯೂ ಹಣ ಎತ್ತಬೇಕಾಗಿದೆ. ಆದ್ದರಿಂದ ಸರ್ಕಾರಗಳು ತಮ್ಮ ತೆರಿಗೆ, ಸುಂಕ, ಸಾರಿಗೆ ಮತ್ತು ಸಾರ್ವಜನಿಕರಿಂದ ಸಾಲವೆತ್ತುವ ರಾಜ್ಯಾದಾಯ ನೀತಿಯನ್ನು ಉಚಿತರೀತಿಯಲ್ಲಿ ಮಾರ್ಪಡಿಸಿಕೊಳ್ಳುತ್ತಿವೆ. ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಕೊಳ್ಳುವುದೋ ಅದಕ್ಕನುಸಾರವಾಗಿ ಸಮಯೋಚಿತವಾಗಿ ತಾನೂ ಉದ್ದರಿನಿಯಂತ್ರಣ ಅಸ್ತ್ರಗಳನ್ನು ಅನುಸಂಧಾನ ಮಾಡುವುದು ಕೇಂದ್ರೀಯ ಬ್ಯಾಂಕಿನ ಹೊಣೆ.

2ನೆಯ ಮಹಾಯುದ್ಧಾನಂತರದ ಕಾಲದಲ್ಲಿ ಸರ್ಕಾರದ ಆರ್ಥಿಕ ಕಾರ್ಯನೀತಿಯ ಗುರಿಗಳೂ ಅದಕ್ಕೆ ಸಂಪೂರಕವಾದ ಹಣಕಾರ್ಯನೀತಿಯ ಗುರಿಗಳೂ ಒಂದೇ ಆಗಿ ಪರಿಣಮಿಸಿವೆಯೆನ್ನಬಹುದು. ಒಳದೇಶದ ಬೆಲೆಗಳ ಸ್ಥೈರ್ಯಸಾಧನೆ, ವಿದೇಶಿ ವಿನಿಮಯ ದರಗಳ ದೃಢತೆ, ವಿದೇಶೀ ಕ್ಷೇತ್ರದಲ್ಲಿ ಅನುಕೂಲಕರ ಪಾವತಿ ಶಿಲ್ಕಿನ ಸ್ಥಾಪನೆ, ಪೂರ್ಣೋದ್ಯೋಗ ಸ್ಥಿತಿ ಸಾಧನೆ, ಸಂರಕ್ಷಣೆ, ಸಂಪದಭಿವೃದ್ಧಿ-ಇವು ಇಂದಿನ ಮುಖ್ಯ ಗುರಿಗಳು. ಸರ್ಕಾರ ಹಾಕಿಕೊಂಡ ಆರ್ಥಿಕ ಕಾರ್ಯನೀತಿಯ ಈ ಗುರಿಗಳ ತೃಪ್ತಿಕರ ಸಾಧನೆಗೆ ಪೋಷಕವಾಗುವ ರೀತಿಯಲ್ಲಿ ಮತ್ತು ಸರ್ಕಾರ ಪ್ರಯೋಗಿಸುವ ಸುಂಕ, ಸಾಲ, ತೆರಿಗೆ ಇತ್ಯಾದಿ ವರಮಾನ ಸಾಧನೆಗಳಿಗೆ ಸಂಪೂರಕವಾದ ರೀತಿಯಲ್ಲಿ ಕೇಂದ್ರೀಯ ಬ್ಯಾಂಕು ತನ್ನ ದೀರ್ಘಾವಧಿ ಹಣ ಕಾರ್ಯನೀತಿಯನ್ನೂ ಅಲ್ಪಾವಧಿಯದಾದ ಉದ್ದರಿನಿಯಂತ್ರಣ ನೀತಿಯನ್ನೂ ರೂಪಿಸಿಕೊಳ್ಳಬೇಕಾದ್ದು ಅಗತ್ಯ.

ಒಂದು ದೇಶದ ಕೇಂದ್ರೀಯ ಬ್ಯಾಂಕು ಉದ್ದರಿನಿಯಂತ್ರಣ ಕಾರ್ಯಕ್ರಮದಿಂದ ನಿರೀಕ್ಷಿಸಿದ ಮಟ್ಟಕ್ಕೆ ಆದಷ್ಟು ಹತ್ತಿರದ ಸಿದ್ಧಿ ಪಡೆಯಲು ಯತ್ನಿಸುವುದು ಸಹಜ. ಅದು ಯಶಸ್ವಿಯಾಗಬೇಕಾದರೆ ಆ ದೇಶದ ವಾಣಿಜ್ಯ ಬ್ಯಾಂಕುಗಳು ಅದರ ಶಿಸ್ತಿಗೆ ಒಳಪಟ್ಟು ಅಷ್ಟೇ ಶ್ರದ್ಧೆ ಮತ್ತು ನಿಷ್ಠೆಯಿಂದ ತಮ್ಮ ನಿತ್ಯದ ವಹಿವಾಟುಗಳನ್ನು ನಡೆಸಬೇಕಾದ್ದು ಅಗತ್ಯ. ಕೇಂದ್ರೀಯ ಬ್ಯಾಂಕಿನ ಶಿಸ್ತನ್ನು ಪಾಲಿಸುವುದರಲ್ಲಿ ವಾಣಿಜ್ಯ ಬ್ಯಾಂಕುಗಳು ಎಷ್ಟು ಹಿಂದೆ ಬೀಳುವುವೋ ಅಷ್ಟರಮಟ್ಟಿಗೆ ಉದ್ದರಿನಿಯಂತ್ರಣ ಕಾರ್ಯ ವಿಫಲವಾದಂತೆ. ವಾಣಿಜ್ಯ ಬ್ಯಾಂಕುಗಳು ಕೇಂದ್ರೀಯ ಬ್ಯಾಂಕಿನ ನಾಯಕತ್ವವನ್ನು ಮಾನ್ಯಮಾಡಬೇಕು. ಅದರ ಸಲಹೆಯಂತೆ ಉದ್ದರಿ ನೀಡಬೇಕು. ಯಾವ ಉದ್ದೇಶಕ್ಕಾಗಿ ಉದ್ದರಿ ನೀಡಲಾಯಿತೋ ಅದೇ ಉದ್ದೇಶಕ್ಕೆ ಅದರ ಬಳಕೆಯಾಗುವಂತೆ ಎಚ್ಚರ ವಹಿಸುವುದಗತ್ಯ. ಮೇಲಾಗಿ ದೇಶದ ಎಲ್ಲ ಬ್ಯಾಂಕುಗಳೂ ಕೇಂದ್ರೀಯ ಬ್ಯಾಂಕಿನ ಸದಸ್ಯ ಬ್ಯಾಂಕುಗಳಾಗಿ ಒಂದೇ ಶಿಸ್ತಿನಿಂದ ತಮ್ಮ ತಮ್ಮ ವಹಿವಾಟು ನಡೆಸಬೇಕು. ಈ ಬಗೆಗೆ ಯಾವ ಕೇಂದ್ರೀಯ ಬ್ಯಾಂಕೇ ಆದರೂ ನೂರಕ್ಕೆ ನೂರರಷ್ಟು ಸಹಕಾರ ಮತ್ತು ಸಹೃದಯತೆಯನ್ನು ನಿರೀಕ್ಷಿಸುವುದು ಕಷ್ಟವೇ ಸರಿ. ಆದರೆ ಸಾಕಷ್ಟು ಸಹಕಾರವಾದರೂ ಬೇಕೇಬೇಕು. **(ನೋಡಿ- ಕೇಂದ್ರೀಯ-ಬ್ಯಾಂಕು)**

ಅಂತಾರಾಷ್ಟ್ರೀಯವಾಗೂ ಉದ್ದರಿ ನಿಯಂತ್ರಣದ ಮಹತ್ತ್ವ ಇಂದು ಹೆಚ್ಚಿನದು. ವಿಶ್ವದ ನಾನಾ ರಾಷ್ಟ್ರಗಳ ಹಣಕಾಸಿನ ಸ್ಥಿತಿಯನ್ನು ಒಂದು ಹದದಲ್ಲಿಟ್ಟು ಅಂತಾರಾಷ್ಟ್ರೀಯ ವ್ಯವಹಾರವನ್ನು ಸುಗಮಗೊಳಿಸುವ ಉದ್ದೇಶದಿಂದ ಸ್ಥಾಪಿತವಾಗಿರುವ ಅಂತಾರಾಷ್ಟ್ರೀಯ ದ್ರವ್ಯನಿಧಿಯ (ನೋಡಿ) ದೃಷ್ಟಿಯಿಂದ ಉದ್ದರಿನಿಯಂತ್ರಣ ಮಾಡಬೇಕಾಗಿದೆ. ದೇಶದ ಆರ್ಥಿಕ ಹಿತದೃಷ್ಟಿಯಿಂದ ವಾಣಿಜ್ಯ ಬ್ಯಾಂಕುಗಳ ಬಳಿ ಎಷ್ಟು ನಗದು ನಿಧಿ ಇರಬೇಕು, ಹೊರದೇಶಗಳಲ್ಲಿನ ಪಾವತಿಗಾಗಿ ನಗದಾಗಿ ದೇಶಿವಿದೇಶಿ ಹಣಗಳ ನಿಧಿ ಎಷ್ಟಿರಬೇಕು, ಎಂಬುದನ್ನು ಸದಾ ಗಮನದಲ್ಲಿ ಇಟ್ಟುಕೊಂಡು ಒಂದು ದೇಶದ ಕೇಂದ್ರೀಯ ಬ್ಯಾಂಕು ರಾಷ್ಟ್ರ ಮಟ್ಟದಲ್ಲಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಉದ್ದರಿ ನಿಯಂತ್ರಣ ವ್ಯವಸ್ಥೆ ಮಾಡುವುದು ಅಗತ್ಯ. ಅಂತಾರಾಷ್ಟ್ರೀಯ ಬಟವಾಡೆಗಳಲ್ಲಿ ಸಮತೋಲನ ಸಾಧ್ಯವಾಗುವಂತಿರಬೇಕು; ಅಂಥ ಬಟವಾಡೆಗಳು ಸುಸೂತ್ರವಾಗಿ ನಡೆಯುವಂತೆ ಅಂತಾರಾಷ್ಟ್ರೀಯ ನಗದು ನಿಧಿ ಸದಾಕಾಲದಲ್ಲೂ ಸಾಕಷ್ಟಿರಬೇಕು. ಇದಾಗದಿದ್ದರೆ ಉದ್ದರಿ ನಿಯಂತ್ರಣ ವ್ಯವಸ್ಥೆ ಪರಿಪೂರ್ಣವೆನಿಸಿಕೊಳ್ಳಲಾರದು. ಈ ದೃಷ್ಟಿಯಿಂದ, ದೇಶಕ್ಕೊಂದು ಕೇಂದ್ರೀಯ ಬ್ಯಾಂಕು ಇರುವಂತೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಕೇಂದ್ರೀಯ ಬ್ಯಾಂಕುಗಳೆಲ್ಲವನ್ನೂ ತನ್ನ ಸದಸ್ಯತ್ವದಲ್ಲಿ ಹೊಂದಿದ ಅಂತಾರಾಷ್ಟ್ರೀಯ ಬ್ಯಾಂಕು ಒಂದು ಇರಬೇಕು; ತನ್ನ ಸದಸ್ಯ ಬ್ಯಾಂಕುಗಳೆಲ್ಲ ತನ್ನ ಶಿಸ್ತಿಗೆ ಒಳಪಟ್ಟು ತಂತಮ್ಮ ಉದ್ದರಿ ವ್ಯವಹಾರ ನಡೆಸಬೇಕೆಂದು ಒಂದು ರಾಷ್ಟ್ರದ ಕೇಂದ್ರೀಯ ಬ್ಯಾಂಕು ಹೇಗೆ ನಿರೀಕ್ಷಿಸುತ್ತದೋ ಹಾಗೆ ಎಲ್ಲ ಕೇಂದ್ರೀಯ ಬ್ಯಾಂಕುಗಳೂ ಸ್ವಂತ ಇಚ್ಛೆಯಿಂದ ಅಂತಾರಾಷ್ಟ್ರೀಯ ಬ್ಯಾಂಕು ವ್ಯವಸ್ಥೆಯ ಶಿಸ್ತಿಗೆ ಒಳಪಟ್ಟು ತಮ್ಮ ವ್ಯವಹಾರ ನಡೆಸಬೇಕು; ಈ ಪಾತ್ರದ ಯಶಸ್ವೀ ನಿರ್ವಹಣೆಗಾಗಿ ಈಗಿನ ಅಂತಾರಾಷ್ಟ್ರಿಯ ದ್ರವ್ಯನಿಧಿ ಸಂಸ್ಥೆ ಅಂತರರಾಷ್ಟ್ರೀಯವಾಗಿ ಕೇಂದ್ರೀಯ ಬ್ಯಾಂಕಿನ ಪಾತ್ರವಹಿಸಬಹುದು. ಹೀಗೆ ಬದಲಾವಣೆಯಾದ ಹೊಸ ಸಂಸ್ಥೆಯಲ್ಲಿ ಕೇಂದ್ರೀಯ ಬ್ಯಾಂಕುಗಳು ನಗದು ನಿಧಿಯನ್ನು ತೃಪ್ತಿಕರವಾದ ಮಟ್ಟದಲ್ಲಿ ಇಡಬೇಕು; ಅಲ್ಲದೆ ಅಂತಾರಾಷ್ಟ್ರೀಯ ವಿಧಿಬದ್ಧ ಹಣವೆಂಬುದೊಂದನ್ನು ಪ್ರತ್ಯೇಕವಾಗಿಯೇ ಸೃಷ್ಟಿಸಿ ಅದರ ರೂಪದಲ್ಲೇ ಈ ನಿಧಿಯನ್ನು ಇಡಬೇಕೇ ಅಥವಾ ಚಿನ್ನದ ರೂಪದಲ್ಲಿ ಇಡಬೇಕೇ ಅಥವಾ ಪೌಂಡ್‌ಸ್ಟರ್ಲಿಂಗ್ ಇಲ್ಲವೇ ಡಾಲರ್ ರೂಪದಲ್ಲಿ ಇಡಬೇಕೇ ಅಥವಾ ಈ ಪ್ರಧಾನ ಸದಸ್ಯರಾಷ್ಟ್ರಗಳ ಹಣಗಳ ರೂಪದಲ್ಲಿ ಇಡಬೇಕೇ ಎಂಬ ಕ್ಲಿಷ್ಟ ಸಮಸ್ಯೆಯನ್ನೂ ಸಮರ್ಪಕವಾಗಿ ಬಿಡಿಸಬೇಕಾಗಿದೆ. ಕೇನ್ಸ್, ಟ್ರಿಫಿನ್ ಮುಂತಾದ ಅರ್ಥಶಾಸ್ತ್ರಜ್ಞರು ಈ ವಿಚಾರವಾಗಿ ವಿವೇಚನೆ ನಡೆಸಿದ್ದಾರೆ. **(ನೋಡಿ- ಕೇನ್ಸ್-ಯೋಜನೆ)** (ಸಿ.ಎಸ್.)

**ಉದ್ದರಿ ಮಾರಾಟ:** ಸರಕಿನ ಬೆಲೆಯನ್ನು ಗೊತ್ತಾದ ಒಂದು ಅವಧಿಯೊಳಗೆ ಪಾವತಿ ಮಾಡಲು ಕೊಳ್ಳಿಕೆದಾರನಿಗೆ ಅನುಮತಿ ನೀಡಿ ಮಾಡಿದ ಮಾರಾಟ (ಕ್ರೆಡಿಟ್ ಸೇಲ್). ಕೊಳ್ಳುವವನಿಂದ ಹಣ ಪಡೆಯದೆಯೇ ಮಾರಾಟಗಾರ ಸರಕನ್ನು ಸಾಮಾನ್ಯವಾಗಿ ಅವನಿಗೆ ಸ್ವಾಧೀನಪಡಿಸುತ್ತಾನೆ. ಉದ್ದರಿಯ ಅವಧಿ ಆಯಾ ಪರಿಸ್ಥಿತಿಗೆ ತಕ್ಕಂತೆ ಹೆಚ್ಚೋ ಕಡಿಮೆಯೋ ಆಗಿರುತ್ತದೆ. ವ್ಯಾಪಾರರೀತಿ, ವಹಿವಾಟಿನ ಪ್ರಮಾಣ, ಗ್ರಾಹಕನ ಪ್ರತ್ಯಯ (ಕ್ರೆಡಿಟ್)-ಮುಂತಾದ ಅಂಶಗಳು ಉದ್ದರಿಯ ಅವಧಿಯನ್ನು ನಿರ್ಣಯಿಸುತ್ತವೆ.

ಆರ್ಥಿಕವಾಗಿ ಉದ್ದರಿ ಮಾರಾಟ ಬಲು ಪ್ರಾಮುಖ್ಯವುಳ್ಳದ್ದು. ಸಟ್ಟಾವ್ಯಾಪಾರಿ ಸಾಮಾನ್ಯವಾಗಿ ಚಿಲ್ಲರೆ ವ್ಯಾಪಾರಿಗಳಿಗೆ ಈ ಬಗೆಯ ಸೌಕರ್ಯ ಒದಗಿಸುವುದುಂಟು. ಚಿಲ್ಲರೆ ವ್ಯಾಪಾರಿಯ ವ್ಯವಹಾರ ನಡೆಸಲು ಅಗತ್ಯವಾದ ಬಂಡವಾಳದ ಒಂದು ಭಾಗ ಈ ಮೂಲಕ ಆತನಿಗೆ ಲಭ್ಯವಾದಂತಾಗುತ್ತದೆ. ಸರಕಿನ ಬೆಲೆ ಪಾವತಿ ಮಾಡಲು ದೊರಕಿದ ಸಮಯದಲ್ಲಿ ಆತ ಅದನ್ನು ಮಾರಿ ಹಣ ಪಡೆದೋ ಇದು ಸಾಧ್ಯವಾಗದಿದ್ದರೆ ಬೇರೆ ಮೂಲಗಳಿಂದ ಹಣ ಪಡೆದೋ ಉದ್ದರಿ ಚುಕ್ತಾ ಮಾಡಬಹುದು. ಉದ್ದರಿ ಒದಗಿಸುವ ಸಟ್ಟಾವ್ಯಾಪಾರಿಗೆ ತಾತ್ಕಾಲಿಕವಾಗಿ ಅಷ್ಟು ಮೊತ್ತದ ಬಂಡವಾಳ ಇಲ್ಲದಂತಾಗುವುದಾದರೂ ತನ್ನ ಸರಕುಗಳನ್ನು ಬೇಗ ವಿಲೇವಾರಿ ಮಾಡಿ ವಹಿವಾಟಿನ ಮೊತ್ತ ಹೆಚ್ಚಿಸಿ, ಹೆಚ್ಚು ಲಾಭ ಗಳಿಸುವುದು ಇದರಿಂದ ಸಾಧ್ಯ.

ಅನೇಕ ವ್ಯಾಪಾರಿಗಳು ತಮ್ಮ ಅನುಭೋಗಿ ಗ್ರಾಹಕರಿಗೂ ಉದ್ದರಿ ಸೌಲಭ್ಯ ನೀಡುವುದುಂಟು. ಕಂತು ಮಾರಾಟವೂ ಉದ್ದರಿ ಮಾರಾಟವೇ **(ನೋಡಿ- ಕಂತು-ವಿಕ್ರಯ)** ಇಲ್ಲಿ ಗ್ರಾಹಕ ಒಂದು ಗೊತ್ತಾದ ಅವಧಿಯಲ್ಲಿ ತನಗೆ ಅನುಕೂಲವಾದ ಕಂತುಗಳಲ್ಲಿ ಸರಕಿನ ಬೆಲೆಯನ್ನು (ಬಡ್ಡಿಯ ಸಮೇತ) ಸಲ್ಲಿಸುವ ಸೌಲಭ್ಯ ಪಡೆಯುತ್ತಾನೆ. ಬಾಡಿಗೆ-ಕೊಳ್ಳಿಕೆಯನ್ನು (ಹೈರ್-ಪರ್ಚೇಸ್) ಒಂದು ಬಗೆಯ ಉದ್ದರಿ ವ್ಯವಹಾರವೆನ್ನಬಹುದಾದರೂ ಈ **(ನೋಡಿ- ಬಾಡಿಗೆ-ಕೊಳ್ಳಿಕೆ)** ವ್ಯವಹಾರದಲ್ಲಿ ಮಾರಾಟಗಾರನಿಂದ ಕೊಳ್ಳುವವನಿಗೆ ಸರಕಿನ ಮೇಲೆ ಸ್ವಾಮ್ಯ ತಕ್ಷಣವೇ ವರ್ಗವಾಗಿರುವುದಿಲ್ಲ.

ಇಂದು ವ್ಯಾಪಾರ ಅಧಿಕವಾಗಿ ಬೆಳೆದಿರುವುದಕ್ಕೆ ಉದ್ದರಿ ಮಾರಾಟ ಬಹಳ ಮಟ್ಟಿಗೆ ಕಾರಣ. ಒಬ್ಬ ಗ್ರಾಹಕನಿಗೆ ಯಾವ ಮಿತಿಯವರೆಗೆ ಉದ್ದರಿ ನೀಡಬಹುದು ಎಂಬ ಬಗ್ಗೆ ಆತನ ಪ್ರತ್ಯಯವನ್ನು ಕುರಿತ ಪರಿಶೀಲನೆ ನಡೆಸಿ ಸೂಕ್ತ ಸಲಹೆ ನೀಡುವ ಅನೇಕ ಸಂಸ್ಥೆಗಳು ಪಾಶ್ಚಾತ್ಯ ದೇಶಗಳಲ್ಲುಂಟು.

ಈ ಬಗೆಯ ಮಾರಾಟ ಮಾಡುವವರು ತಮ್ಮ ಗ್ರಾಹಕರ ಲೆಕ್ಕಗಳ ಮೇಲೆ ಕಣ್ಣಿಟ್ಟು ಉದ್ದರಿ ಬಾಕಿ ವಸೂಲಿಯ ಬಗ್ಗೆ ಸೂಕ್ತ ವ್ಯವಸ್ಥೆ ಏರ್ಪಡಿಸಬೇಕು. ವಸೂಲಿಯಾಗದ ಉದ್ದರಿಯನ್ನು ನಷ್ಟವೆಂದು ಪರಿಗಣಿಸಿ ಅದನ್ನು ಲಾಭದಿಂದ ತೂಗಿಸಲು ವರ್ಷೇ ವರ್ಷೇ ಕ್ರಮ ಕೈಕೊಳ್ಳಬೇಕಾಗಿ ಬರಬಹುದು **(ನೋಡಿ- ಕರಡುಸಾಲ-ಅಥವಾ-ಕರಡುಋಣ)**. ವ್ಯಾಪಾರ ಸಂಸ್ಥೆಯ ದೃಷ್ಟಿಯಿಂದಲೂ ಸೂಕ್ತ ಉದ್ದರಿ ನಿಯಂತ್ರಣ ವ್ಯವಸ್ಥೆ ಅವಶ್ಯ.

ಒಂದು ಗೊತ್ತಾದ ಕಾಲದಲ್ಲಿ ವ್ಯಾಪಾರಸಂಸ್ಥೆಯಲ್ಲಿನ ಕರ್ಮವಾಹಕ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್), ಮಾರಾಟ ವ್ಯವಸ್ಥೆಯ ಪ್ರಾವೀಣ್ಯ, ವ್ಯಾಪಾರದ ಒಟ್ಟಿನ ಸ್ಥಾನಮಾನ-ಇವನ್ನು ನಿರ್ಧರಿಸಲು ಆ ಸಂಸ್ಥೆಯ ಉದ್ದರಿ ವ್ಯಾಪಾರವೇ ಆಧಾರ. (ಪಿ.ಪಿ.)

**ಉದ್ದರಿ ವಿಮೆ:** ವರ್ತಕರಿಂದಲೂ ಉತ್ಪಾದಕರಿಂದಲೂ ಉದ್ದರಿಯ ಮೇಲೆ ಸರಕು ಕೊಂಡ ಗ್ರಾಹಕರು ದಿವಾಳಿಯಾದ್ದರಿಂದಲೊ ಕೊಡಬೇಕಾದ ಹಣ ಕೊಡದೆ ತಪ್ಪಿದ್ದರಿಂದಲೊ ಸಂಭವಿಸುವ ನಷ್ಟ ತುಂಬಿಕೊಡುವ ವಿಮಾ ವ್ಯವಸ್ಥೆ (ಕ್ರೆಡಿಟ್ ಇನ್ಷೂರೆನ್ಸ್). ಇದು ರಫ್ತು ಉದ್ದರಿಗೂ ಅನ್ವಯವಾಗಬಹುದು. ಸರಕು ರಫ್ತು ಮಾಡುವಾಗ ಸಾಮಾನ್ಯವಾಗಿ ಇಳಿಸುವ ವಿಮೆಯ ವ್ಯಾಪ್ತಿಯಲ್ಲಿ ಬಾರದಿರುವಂಥ ನಷ್ಟಸಂಭವಗಳನ್ನೂ ಒಳಗೊಳ್ಳುತ್ತದೆ.

ಉದ್ದರಿ ವಿಮೆ ಯುರೋಪ್ ಖಂಡದಲ್ಲಿ 19ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭವಾಗಿ ಮೊದಮೊದಲು ಬಲು ಮಂದವಾಗಿ ಮುಂದುವರಿಯಿತು. 1ನೆಯ ಮಹಾಯುದ್ಧ ಭೀಕರವಾದಂತೆ ರಫ್ತು ವ್ಯಾಪಾರವೂ ಹೊಸ ಹೊಸದಾಗಿ ವೃದ್ಧಿಯಾಗಲು ಮೊದಲಾಯಿತು. ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಒಂದು ವಿಮಾಸಂಸ್ಥೆ ಖಾಸಗಿ ವಲಯದಲ್ಲೂ ಮತ್ತೊಂದು ಸಂಸ್ಥೆ ಸರ್ಕಾರಿ ವಲಯದಲ್ಲೂ ತಮ್ಮ ವ್ಯವಹಾರ ಪ್ರಾರಂಭಿಸಿದುವು. ಮೊದಲು ಕೇವಲ ಒಳದೇಶದ ಹುಂಡಿಗೆ ಮಾತ್ರ ಮೀಸಲಾಗಿದ್ದ ಉದ್ದರಿ ವಿಮೆ ರಫ್ತುವ್ಯಾಪಾರಕ್ಕೂ ವಿಸ್ತರಿಸಿದ್ದು (1926)ರ ಹೊತ್ತಿಗೆ. (1933)ರ ತನಕ ಖಾಸಗಿ ಹಾಗೂ ಸರ್ಕಾರಿ ಸಂಸ್ಥೆಗಳೆರಡೂ ತಮ್ಮ ವ್ಯವಹಾರವನ್ನು ಚೆನ್ನಾಗಿ ಮುಂದುವರಿಸಿಕೊಂಡು ಹೋದುವಾದರೂ ಆ ವೇಳೆಗೆ ವಿಷಮಗೊಂಡ ಆರ್ಥಿಕ ಮುಗ್ಗಟ್ಟಿನ ಫಲವಾಗಿ ಉದ್ದರಿ ವಿಮೆಯ ಮೇಲೂ ದುರ್ಭರ ಪರಿಣಾಮಗಳುಂಟಾದವು. ವಿದೇಶಿವಿನಿಮಯ ವರ್ಗಾವಣೆ ಬಗ್ಗೆ ಬೇರೆ ಬೇರೆ ಸರ್ಕಾರಗಳು ವಿಧಿಸುತ್ತಿದ್ದ ನಿರ್ಬಂಧಗಳ ಕಾರಣದಿಂದ ಉದ್ದರಿ ಪಾವತಿಯಾಗದೆ ಸಂಭವಿಸುವ ನಷ್ಟವನ್ನೂ ತುಂಬಿಕೊಡುವ ಆವಶ್ಯಕತೆ ಉಂಟಾದದ್ದು ಆಗ. ಆದರೆ ಈ ಬಗೆಯ ರಾಜಕೀಯ ಸಂಬಂಧವಾದ ನಷ್ಟದ ಬೆಲೆಕಟ್ಟುವ ಹಾಗೂ ವಿಮೆ ಇಳಿಸುವ ಕಾರ್ಯಭಾರವನ್ನು ಖಾಸಗಿ ಸಂಸ್ಥೆಗಿಂತ ಸರ್ಕಾರಿ ಸಂಸ್ಥೆಯೇ ಹೆಚ್ಚು ಸಮರ್ಪಕವಾಗಿ ಮಾಡಬಲ್ಲದೆಂಬುದು ನಿರ್ವಿವಾದ. ಆದ್ದರಿಂದ ಆಗ ಖಾಸಗಿ ಸಂಸ್ಥೆಗೂ ಸರ್ಕಾರಿ ಸಂಸ್ಥೆಗೂ ನಡುವೆ ಸಂಭವಿಸಿದ ವ್ಯತ್ಯಾಸ ಇಂದಿಗೂ ಉಳಿದುಕೊಂಡು ಬಂದಿದೆಯೆನ್ನಬಹುದು.

ಇದರಿಂದಾಗಿ ಈ ಎರಡು ಸಂಸ್ಥೆಗಳೂ ಪ್ರತ್ಯೇಕ ಮಾರ್ಗಗಳಲ್ಲಿ ಮುಂದುವರಿಯಲು ನಿರ್ಧರಿಸಿದುವು. ಸರ್ಕಾರಿ ಸಂಸ್ಥೆ ರಫ್ತು ವ್ಯಾಪಾರದ ಉದ್ದರಿ ಬಗ್ಗೆಯೂ ಖಾಸಗೀ ಸಂಸ್ಥೆ ಒಳ ವ್ಯಾಪಾರದ ಬಗ್ಗೆಯೂ ವಿಮೆ ಇಳಿಸಲು ಪ್ರಾರಂಭಿಸಿದುವು. ವಿದೇಶಿ ವಿನಿಮಯದ ತೊಂದರೆಗಳು, ಆಮದು ಲೈಸೆನ್ಸ್ ರದ್ದು, ಯುದ್ಧ, ಕ್ರಾಂತಿ ಮುಂತಾದವುಗಳನ್ನು ರಫ್ತುದಾರರು ಬಹು ಲಘುವಾಗಿ ಪರಿಗಣಿಸಲಾಗುವುದಿಲ್ಲ. ಇಂಥ ವಿಷಯಗಳಲ್ಲಿ ಸರ್ಕಾರದ ಪಾತ್ರ ಹಿರಿದು. ಆದ್ದರಿಂದ ರಫ್ತು ಉದ್ದರಿ ವಿಮೆಗೆ ಸರ್ಕಾರದ ನೆರವು ಬಹಳ ಮುಖ್ಯ. ಒಳವ್ಯಾಪಾರದಲ್ಲಿ ಖಾಸಗಿ ಸಂಸ್ಥೆಯ ಏಕಸ್ವಾಮ್ಯವಿದೆ. ರಾಜಕೀಯ ಸ್ವರೂಪದ ನಷ್ಟ ಸಂಭವವಿಲ್ಲದ ರಫ್ತು ಉದ್ದರಿಯ ವಿಮೆಯಲ್ಲೂ ಇದಕ್ಕೆ ಆಸಕ್ತಿಯುಂಟು.

1ನೆಯ ಮಹಾಯುದ್ಧದ ಫಲವಾಗಿ ಪಶ್ಚಿಮ ಯುರೋಪಿನಲ್ಲಿ ಉದ್ದರಿ ವಿಮೆಯ ಆವಶ್ಯಕತೆ ಖಚಿತವಾಯಿತು. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಉದ್ದರಿ ವಿಮೆಯ ಸ್ಥಾನ ಮುಖ್ಯ. ಅದು ಇನ್ನೂ ಹೆಚ್ಚು ವೃದ್ಧಿಹೊಂದಲು ಸರ್ಕಾರ ಮತ್ತು ಖಾಸಗಿ ವಲಯಗಳ ಉದ್ದರಿ ವಿಮಾ ಸಂಸ್ಥೆಗಳ ಮಧ್ಯೆ ಸಹಕಾರ ಅವಶ್ಯ. ಇದನ್ನು ಮುಖ್ಯವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಲು ಎಲ್ಲ ರಾಷ್ಟ್ರಗಳೂ ಸಹಕರಿಸುತ್ತ ಬಂದಿವೆ. ಉದ್ದರಿ ವಿಮೆಯನ್ನು ಹೆಚ್ಚು ಹೆಚ್ಚು ಜನಪ್ರಿಯಗೊಳಿಸಲು (1928)ರಲ್ಲಿ ಝೂರಿಕ್ ನಗರದಲ್ಲಿ ಅಂತರರಾಷ್ಟ್ರೀಯ ಉದ್ದರಿ ವಿಮಾ ಸಂಘ ಸ್ಥಾಪಿಸಲಾಯಿತು. ಬೆರ್ನ್ ನಗರದಲ್ಲಿ (1934)ರಲ್ಲಿ ಇದೇ ರೀತಿಯ ಮತ್ತೊಂದು ಸಂಸ್ಥೆ ಹುಟ್ಟಿತು.

2ನೆಯ ಮಹಾಯುದ್ಧಾನಂತರ ಉದ್ದರಿ ವಿಮಾ ವ್ಯವಹಾರ ಚೆನ್ನಾಗಿ ಬೆಳೆಯುತ್ತಿದೆ. ವಿಮೆಯ ವ್ಯಾಪಕತೆ ಹೆಚ್ಚಾಗುತ್ತಿದೆ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಆದ ಬೆಳೆವಣಿಗೆ ಇದಕ್ಕೆ ಮುಖ್ಯ ಕಾರಣ. ಪ್ರತಿಯೊಂದು ಸಂಸ್ಥೆಯೂ ತಾನು ಮಾಡುವ ಉದ್ದರಿ ವ್ಯಾಪಾರದ ಅಪಾಯಗಳಿಂದ ತಪ್ಪಿಸಿಕೊಳ್ಳಲು ಪೂರ್ತಿಯಾಗಿ ಅಥವಾ ಭಾಗಶಃ ಉದ್ದರಿ ವಿಮೆ ಮಾಡಿಸುವ ವಾಡಿಕೆಯಿದೆ. ಆದರೆ ಸರ್ಕಾರದೊಡನೆಯೂ ತನ್ನ ಸೋದರ ಸಂಸ್ಥೆಗಳೊಡನೆಯೂ ಮಾಡಿದ ವ್ಯಾಪಾರಕ್ಕೆ ವಿಮೆ ಇಳಿಸುವಂತಿಲ್ಲ. ಸಾಮಾನ್ಯವಾಗಿ ಒಳಾಡಳಿತ ವ್ಯಾಪಾರದಲ್ಲಿ 75%–85%ರಷ್ಟು ತುಂಬಿ ಕೊಡಲಾಗುತ್ತಿದೆ. ಸಾಲಗಾರ ದಿವಾಳಿಯಾದ ವಿಷಯವನ್ನು ತಿಳಿಸಿ ನಷ್ಟ ತುಂಬಿಕೊಡಬೇಕೆಂದು ಕೇಳಿದ 30 ದಿನಗಳೊಳಗೆ ಅಥವಾ ಸಾಲಗಾರ ಹಣ ಕೊಡದೆ ತಪ್ಪಿದಲ್ಲಿ ಆರು ತಿಂಗಳೊಳಗಾಗಿ ವಿಮಾ ಹಣ ಕೊಡಲಾಗುತ್ತದೆ. ಈ ಕೊಡುಗೆಯ ಬಗ್ಗೆ ಸರ್ಕಾರ ಸಂಸ್ಥೆ ಒಂದು ನಿರ್ದಿಷ್ಟ ನೀತಿಯನ್ನು ಅನುಸರಿಸುತ್ತಾ ಬಂದಿದೆ. ಆಯಾ ವ್ಯವಹಾರಗಳಿಗೆ ಅನುರೂಪವಾದ ನೀತಿ ನಿಯಮಗಳಿವೆ. ಕಾಲೋಚಿತ ಮಾರ್ಪಾಡುಗಳನ್ನೂ ಮಾಡಿಕೊಳ್ಳುತ್ತಿರುವುದುಂಟು. ವಿಮಾ ಹಣವನ್ನು ಪಡೆಯುವ ಮುನ್ನ ರಫ್ತು ವ್ಯಾಪಾರಿ ಸರಿಯಾದ ವ್ಯಾಪಾರ ವಿವೇಕ ಮತ್ತು ವಿವೇಚನೆಯನ್ನು ಉಪಯೋಗಿಸಿ ವ್ಯಾಪಾರ ಮಾಡಿದ್ದಾನೆಂಬುದನ್ನು ಪ್ರಮಾಣಿಸಬೇಕು. ಇದು ಸ್ಥಾಪಿತವಾದ ಪಕ್ಷದಲ್ಲಿ ಗೊತ್ತಾದ ಶೇಕಡ ಪ್ರಮಾಣದಲ್ಲಿ ಹಣ ಕೊಡಲಾಗುತ್ತದೆ. ಗ್ರಾಹಕನ ದಿವಾಳಿತನದಿಂದ ಅಥವಾ ಗ್ರಾಹಕ ಹಣಕೊಡದೆ ತಪ್ಪಿದ್ದರಿಂದ ಸಂಭವಿಸುವ ನಷ್ಟಗಳಿಗೆ ಶೇಕಡ 85 ರಂತೆಯೂ ಬೇರೆ ರೀತಿಯ–ರಾಜಕೀಯ ಕಾರಣಗಳಿಂದ ಸಂಭವಿಸುವ–ನಷ್ಟಗಳಿಗೆ ಶೇಕಡ 90ರಂತೆಯೂ ಸಾಮಾನು ಸಾಗಾಣೆಯಾದ ಮೇಲೆ ಸಂಭವಿಸುವ ನಷ್ಟಗಳಿಗೆ ಶೇಕಡ 95ರಂತೆಯೂ ಹಣ ಕೊಡಲಾಗುವುದು. ಆದರೆ ವ್ಯವಹಾರವನ್ನು ತಿರಸ್ಕರಿಸಿದಲ್ಲಿ ಅಥವಾ ಉದ್ದರಿ ಉಚಿತವಲ್ಲದ್ದೆಂದು ಕಂಡು ಬಂದಲ್ಲಿ, ವಿಮಾ ಹಣವನ್ನು ನಿರಾಕರಿಸಬಹುದು.

**ಭಾರತದಲ್ಲಿ:** 1956ರ ವರೆಗೂ ಈ ರೀತಿಯ ವಿಮಾ ವ್ಯವಹಾರಗಳನ್ನು ಅನೇಕ ಖಾಸಗಿ ಕಂಪನಿಗಳು ಮಾಡುತ್ತಿದ್ದುವು. ಜೀವವಿಮೆಯ ರಾಷ್ಟ್ರೀಕರಣವಾದ ಅನಂತರ ಭಾರತದಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾದ ವಿಮಾ ಕಾರ್ಪೊರೇಷನ್ ಒಂದು ಸ್ಥಾಪಿತವಾಗಿದೆ. (ಎಕ್ಸ್‌ಪೋರ್ಟ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್, ಲಿ.). ಭಾರತೀಯ ರಫ್ತು ವ್ಯಾಪಾರಿಗಳಿಗೆ ಉದ್ದರಿ ವಿಮೆಯ ರಕ್ಷಣೆ ನೀಡುವುದಲ್ಲದೆ ಭಾರತೀಯ ರಫ್ತು ವ್ಯಾಪಾರಿಗಳು ತಮ್ಮ ವ್ಯಾಪಾರ ಬೆಳೆಸಿಕೊಳ್ಳಲು ಅಗತ್ಯವಾದ ಉದ್ದರಿ ಸೌಲಭ್ಯ ಪಡೆಯುವುದು ಸಾಧ್ಯವಾಗುವಂತೆ ಅವರ ಬಗ್ಗೆ ಬ್ಯಾಂಕುಗಳಿಗೆ ಖಾತರಿ ನೀಡಿ. ಈ ಮೂಲಕ ರಫ್ತು ವ್ಯಾಪಾರದ ಬೆಳೆವಣಿಗೆಯನ್ನು ಸುಸೂತ್ರಗೊಳಿಸುವುದು ಈ ಸಂಸ್ಥೆಯ ಉದ್ದೇಶ. (ಕೆ.ಜಿ.ಆರ್.)

**ಉದ್ದಾಲಕ:** ವೈದಿಕ ಸಂಹಿತೆ ಬ್ರಾಹ್ಮಣ ಮತ್ತು ಉಪನಿಷದ್‌ಗ್ರಂಥಗಳಲ್ಲಿ ಅದರಲ್ಲೂ ಯಜುರ್ವೇದೀಯ ಶಾಖೆಗಳಲ್ಲಿ ಅಪಾರ ಖ್ಯಾತಿಯನ್ನು ಗಳಿಸಿಕೊಂಡಿರುವ ವ್ಯಕ್ತಿ. ಪೂರ್ಣ ಹೆಸರು ಉದ್ದಾಲಕ ಅರುಣಿ. ತಂದೆ ಅರುಣ ಔಪವೇಶಿ ಗೌತಮ; ಪ್ರಸಿದ್ಧ ಮಂತ್ರದ್ರಷ್ಟಾರ. ಪಾಂಚಾಲ ದೇಶದವ. ಆದುದರಿಂದಲೇ ಉದ್ದಾಲಕನಿಗೆ ಅರುಣಿ ಪಾಚಾಲನೆಂಬ ಪೈತೃಕ ನಾಮಧೇಯ. ಕೃಷ್ಣಯಜುರ್ವೇದೀಯ ಸಂಹಿತೆಗಳಲ್ಲಿ ಶತಪಥ ಬ್ರಾಹ್ಮಣದಲ್ಲಿ ಅರುಣನ ಸ್ಥಾನ ಮಹತ್ತ್ವದ್ದು. ಅರುಣಿಯ ಮಂತ್ರಸಾಕ್ಷಾತ್ಕಾರಶಕ್ತಿ ತಂದೆಯ ತಪೋಶಕ್ತಿಯನ್ನೂ ಮೀರಿಸಿದ್ದು. ಅಖಂಡ ಋಷಿಸಂತಾನ ಪರಂಪರೆಯಲ್ಲಿ ದೇದೀಪ್ಯಮಾನವಾಗಿ ಬೆಳಗಿದವನಿವನು. ಉದ್ದಾಲಕನ ಋಷಿಪುತ್ರ ಶ್ವೇತಕೇತು ಔದ್ದಾಲಕಿ ಅಥವಾ ಶ್ವೇತಕೇತು ಆರುಣೇಯ. ಈತನ ಹೆಸರು ಭಾರತೀಯ ದರ್ಶನದ ಗ್ರಂಥಗಳಾದ ಉಪನಿಷತ್ತುಗಳಲ್ಲಿ ಅವುಗಳಷ್ಟೇ ಪ್ರಸಿದ್ಧವಾದದ್ದು. ಉದ್ದಾಲಕನ ಮತ್ತೊಬ್ಬ ಶಿಷ್ಯ ಬ್ರಹ್ಮಮೀಮಾಂಸೆಯ ಪುರೋಗಾಮಿ ಯಾಜ್ಞವಲ್ಕ್ಯ. ಗುರುವಿಗೇ ಪರಾಜಯವನ್ನುಣ್ಣಿಸಿದ ಯಶಸ್ಸು ಮೇಧಾವಿ ಯಾಜ್ಞವಲ್ಕ್ಯನದು.

ಮದ್ರ ಮತ್ತು ಪಾಂಚಾಲ ದೇಶಗಳು ಉದ್ದಾಲಕನ ದಾರ್ಶನಿಕ ಕಾರ್ಯರಂಗ. ಕೌಶಾಂಬಿಯ ರಾಜಪೌತ್ರೀ ಕೌಸುರು ಬಿಂದಿ ಇವನ ಶಿಷ್ಯ. ಈತನ ಋಷಿಕ್ರತುವಿನ ಪ್ರಖರತೆಯ ಮುಂದೆ ಯೌಗ್ಯಶೌಚೇಯ, ಭದ್ರಸೇನ, ಅಜಾತಶತ್ರುವ ಮುಂತಾದ ಪ್ರಾಚೀನ ಬ್ರಹ್ಮಜ್ಞಾನಿಗಳು ತಲೆ ತಗ್ಗಿಸಬೇಕಾಯಿತು. ಯಾಜ್ಞಿಕ ವಿಧಿಗಳಿಗೆ, ತತ್ತ್ವವಾದಗಳಿಗೆ ಉದ್ದಾಲಕನ ವಾಣಿ ಅಧಿಕೃತವಾದುದೆಂದು ಶತಪಥ, ಐತರೇಯ ಕೌಷೀತಕಿ, ಷಡ್ವಿಂಶ ಬ್ರಾಹ್ಮಣಗಳೂ ಬೃಹದಾರಣ್ಯಕ ಮತ್ತು ಛಾಂದೋಗ್ಯ ಉಪನಿಷತ್ತುಗಳೂ ಘೋಷಿಸುತ್ತವೆ. ಜೈಮಿನೀಯ ಬ್ರಾಹ್ಮಣದ ಸುಪ್ರಸಿದ್ಧವಾದ ಸುಬ್ರಹ್ಮಣ್ಯ ಸ್ತವದ ಕರ್ತೃವಾದ ಆರುಣಿಯಶಸ್ವಿನ್ ಎಂಬಾತ ಉದ್ದಾಲಕನೇ ಇರಬಹುದೆಂಬ ನಂಬಿಕೆಯಿದೆ.

ಉದ್ದಾಲಕನಿಗೆ ಸಂಬಂಧಿಸಿದಂತೆ ಮಹಾಭಾರತದಲ್ಲಿ ಅನೇಕ ಕಥಾಸನ್ನಿವೇಶಗಳು ಬೆಳೆದುಬಂದಿವೆ. ವಾಯುಪುರಾಣದಲ್ಲೂ ಉದ್ದಾಲಕನೆಂಬ ಋಷಿಯ ಉಲ್ಲೇಖವಿದೆ. ತೈತ್ತಿರೀಯ ಬ್ರಾಹ್ಮಣದ ವಾಜಶ್ರವಸ ಗೌತಮನ ಮಗ ನಚಿಕೇತನೇ ಉದ್ದಾಲಕನೆಂದು ಸಾಯಣಾಚಾರ್ಯರ ಮತ. (ಸಿ.ಜಿ.ಪಿ.)

ಮಹಾಭಾರತದಲ್ಲಿ ಉದ್ದಾಲಕನ ಬಗ್ಗೆ ಬಂದಿರುವ ಎರಡು ಕಥೆಗಳು ಹೀಗಿವೆ: ಉದ್ದಾಲಕ ಒಬ್ಬ ಬ್ರಾಹ್ಮಣ. ಸಕಲಶಾಸ್ತ್ರ ಪಾರಂಗತ. ಹೆಂಡತಿ ಚಂಡಿ; ಹೇಳಿದ ಮಾತಿಗೆ ಪ್ರತಿ ಆಡುವವಳು; ಪ್ರತಿ ನಡೆಯುವವಳು. ಈಕೆಯ ನಡೆನುಡಿಗಳನ್ನು ನೋಡಿದ ಉದ್ದಾಲಕ ತೀವ್ರ ಚಿಂತೆಗೊಳಗಾದ. ಒಮ್ಮೆ ಕೌಂಡಿನ್ಯ ಮುನಿ ಇವನ ಮನೆಗೆ ಬಂದಾಗ ಉದ್ದಾಲಕ ತನ್ನ ಹೆಂಡತಿಯ ನಡೆವಳಿಕೆಗಳನ್ನು ಋಷಿಗೆ ತಿಳಿಸಿದ. ಅದನ್ನು ಕೇಳಿದ ಋಷಿ ಆತನನ್ನು ಕುರಿತು, ನೀನು ಯಾವುದು ಮಾಡಬೇಕೆಂದು ಅಪೇಕ್ಷಿಸುವೆಯೋ ಅದಕ್ಕೆ ವಿರುದ್ಧವಾಗಿ ಚಂಡಿಗೆ ಹೇಳಿದರೆ ನಿನ್ನ ಅಪೇಕ್ಷೆಗಳು ಈಡೇರುತ್ತವೆ ಎಂದು ಹೇಳಿದ. ಅದರಂತೆ ಉದ್ದಾಲಕ ನಡೆಯಹತ್ತಿದ. ಒಮ್ಮೆ ಆತನ ತಂದೆಯ ಶ್ರಾದ್ಧ ಬಂತು. ಉಪಾಯವಾಗಿ ಕೌಂಡಿನ್ಯನ ಉಪದೇಶದಂತೆ ನಡೆದು ಶ್ರಾದ್ಧವನ್ನು ಕ್ರಮಗೊಳಿಸಿದ. ಆದರೆ ಕೊನೆಯಲ್ಲಿ ಅಜ್ಞಾನದಿಂದ ಪಿಂಡಗಳನ್ನು ತಿಪ್ಪೆಗೆ ಬಿಸಾಡು ಎಂದು ಮಾಡಬಾರದ್ದನ್ನು ಹೇಳುವುದಕ್ಕೆ ಪ್ರತಿಯಾಗಿ ನೀರಿನಲ್ಲಿ ಬಿಡು ಎಂದು ಮಾಡಬೇಕಾದ್ದನ್ನು ತಿಳಿಸಿದ. ಚಂಡಿ ಅದನ್ನು ತಿಪ್ಪೆಗೆ ಎಸೆದಳು. ಇದರಿಂದ ಕುಪಿತನಾದ ಉದ್ದಾಲಕ ಚಂಡಿಗೆ ಶಿಲೆಯಾಗುವಂತೆ ಶಾಪವಿತ್ತ. ಈ ಪ್ರಸಂಗ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ರಸಪೂರ್ಣವಾಗಿ ಮೂಡಿಬಂದಿದೆ.

ಧೌಮ್ಯ ಮುನಿಯ ಶಿಷ್ಯನಾದ ಉದ್ದಾಲಕನೊಬ್ಬನಿದ್ದ. ಈತ ಆಪೋದ ಮುನಿಯ ಪುತ್ರ. ಒಮ್ಮೆ ಗದ್ದೆಗೆ ಹರಿಯುತ್ತಿದ್ದ ನೀರನ್ನು ಅಡ್ಡಗಟ್ಟುವಂತೆ ಗುರುವಿನಿಂದ ಆಜ್ಞೆ ಬರಲು ಎಷ್ಟು ಪ್ರಯತ್ನಿಸಿದರೂ ಹರಿಯುವ ನೀರು ನಿಲ್ಲದಿರಲು ತಾನೇ ಪ್ರವಾಹಕ್ಕೆ ಅಡ್ಡಲಾಗಿ ಮಲಗಿದ. ಶಿಷ್ಯ ಎಷ್ಟು ಹೊತ್ತಾದರೂ ಆಶ್ರಮಕ್ಕೆ ಬಾರದಿರಲು ಧೌಮ್ಯ ಗದ್ದೆಯ ಬಳಿಗೆ ಹೋಗಿ ಕರೆದ. ಆಗ ಶಿಷ್ಯ ನೀರನ್ನು ಭೇದಿಸಿಕೊಂಡು ಬಂದುದರಿಂದ ಉದ್ದಾಲಕನೆಂಬ ಹೆಸರಾಯಿತೆಂದೂ ಈತ ಕುಶಿಕ ಪುತ್ರಿಯನ್ನು ಮದುವೆಯಾಗಿ ಶ್ವೇತಕೇತು, ನಚಿಕೇತರೆಂಬ ಪುತ್ರರನ್ನೂ ಸುಜಾತೆಯೆಂಬ ಪುತ್ರಿಯನ್ನೂ ಪಡೆದನೆಂದೂ ಒಮ್ಮೆ ಅಪುತ್ರನಾದ ಬ್ರಾಹ್ಮಣನೊಬ್ಬ

ಸಂತಾನಾರ್ಥವಾಗಿ ಈತನ ಮಡದಿಯನ್ನು ಕೇಳಿದ್ದನ್ನು ನೋಡಿದ ಶ್ವೇತಕೇತು ಕೋಪಗೊಂಡು ಸ್ತ್ರೀಪುರುಷರ ನಡವಳಿಕೆಗಳನ್ನು ಗೊತ್ತು ಪಡಿಸಿದನೆಂದೂ ಅಷ್ಟಾವಕ್ರ ಈತನ ದೌಹಿತ್ರನೆಂದೂ ಮಹಾಭಾರತದಿಂದ ತಿಳಿದುಬರುತ್ತದೆ. *

**ಉದ್ದು:** ಒಂದು ದ್ವಿದಳ ಧಾನ್ಯ (ಫ್ಯಾಸಿಯೋಲಸ್ ಮುಂಗೊ). ತೊಗರಿ, ಅವರೆ, ಹೆಸರು ಇಂಥ ಬೇಳೆಗಳ ಹಾಗೆಯೇ ಇದು ನಮ್ಮ ಆಹಾರದಲ್ಲಿ ಪ್ರೋಟೀನು ಆವಶ್ಯಕತೆಯನ್ನು ಪೂರೈಸಲು ಸಹಕಾರಿ. ಬಹು ಜನಪ್ರಿಯವಾಗಿರುವ ಇಡ್ಲಿ, ದೋಸೆಗಳ ತಯಾರಿಕೆಯಲ್ಲಿ ಉದ್ದನ್ನು ಬಳಸಿದಾಗ ಹುದುಗುವಿಕೆ ಉಂಟಾಗಿ, ಇಡ್ಲಿ ಮತ್ತು ದೋಸೆಯು ಮೃದುವಾಗಿ, ಉಬ್ಬಿ, ನೋಡುವುದಕ್ಕೆ ಆಕರ್ಷಕವಾಗಿಯೂ, ತಿನ್ನುವುದಕ್ಕೆ ರುಚಿಕರವಾಗಿಯೂ ಇರುತ್ತವೆ ಯಲ್ಲದೆ ಅಗತ್ಯವಾದ ಪ್ರೋಟೀನನ್ನು ಒದಗಿಸುತ್ತವೆ. ಉದ್ದಿನ ಮೂಲಕ ಈ ತಿಂಡಿಗಳಿಗೆ ಪ್ರೋಟೀನಿನ ಅಂಶ ಸೇರುತ್ತದೆ. ಊಟ, ತಿಂಡಿಗಳಲ್ಲಿ ಉದ್ದಿನ ಬಳಕೆ ಆರ್ಯರ ಕಾಲದಿಂದ ಇರುವುದು ಕಂಡುಬಂದಿದೆ. ಇಂದಿಗೂ ಶ್ರಾದ್ಧಾದಿ ವಿಶೇಷ ದಿವಸಗಳಲ್ಲಿ ಉದ್ದಿನ ವಡೆ ಊಟಕ್ಕೆ ಇರಲೇಬೇಕು. ಇದು ಮಾಂಸದಷ್ಟೇ ಪೌಷ್ಟಿಕ ಆಹಾರವೆಂಬ ವಿಷಯ ಅಂದಿನವರಿಗೆ ತಿಳಿದಿದ್ದಿರಬೇಕು.

ಉದ್ದಿನ ಬೇಳೆಯನ್ನು ದೇಶದ ಎಲ್ಲ ಭಾಗಗಳಲ್ಲೂ ಹೊಲದಲ್ಲಿ ಬೆಳೆಯುತ್ತಾರೆ.

ಮಳೆಯ ಆಸರೆಯಲ್ಲಿ ಬೆಳೆಯುವ ಉದ್ದಿನ ಇಳುವರಿ, ಎಕರೆ ಒಂದಕ್ಕೆ 180–230ಕೆ.ಜಿ. 35"–40" ಕ್ಕಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಉದ್ದು ಅಷ್ಟು ಚೆನ್ನಾಗಿ ಬರುವುದಿಲ್ಲ. ಮೈಸೂರು ಜಿಲ್ಲೆಯಲ್ಲಿ ಬತ್ತದ ಬೆಳೆಗೆ ಏಪ್ರಿಲ್ ತಿಂಗಳಲ್ಲಿ ಉದ್ದನ್ನು ಬಿತ್ತಿ ಜುಲೈ ತಿಂಗಳಿನಲ್ಲಿ, ನಾಟಿಗೆ ಮೊದಲು, ಕಾಯನ್ನು ಕೊಯ್ದು ಗಿಡವನ್ನು ಗದ್ದೆಗಳಲ್ಲಿ ಗೊಬ್ಬರಕ್ಕಾಗಿ ಉಳುತ್ತಾರೆ. ಪೈರು ಬೆಳೆಯುತ್ತಿರುವಾಗ ಒಂದೆರಡು ಬಾರಿ ನೀರು ಹಾಯಿಸಿದರೆ ಉತ್ತಮ ಬೆಳೆಯಾಗುತ್ತದೆ. ಮಳೆ ಪ್ರದೇಶಗಳಲ್ಲಿ ಮಳೆ ಕಳೆದ ಮೇಲೆ ಉದ್ದಿನ ಬಿತ್ತನೆ ಮಾಡಬಹುದು. ಉದ್ದು 3 ತಿಂಗಳ ಬೆಳೆಯಾದ್ದರಿಂದ ಪರ್ಯಾಯ ಬೆಳೆಯಾಗಿದೆ. ಮಳೆಯ ಅನುಕೂಲಕ್ಕನುಗುಣವಾಗಿ ಏಪ್ರಿಲ್, ಮೇ ತಿಂಗಳಲ್ಲಿ ಬಿತ್ತನೆ ಮಾಡಿ ಜೂನ್ ಜುಲೈನಲ್ಲಿ ಪೈರು ಕೊಯಿಲು ಮಾಡಿ, ಮುಂದೆ ರಾಗಿ ಅಥವಾ ಹುಚ್ಚೆಳ್ಳು ಮುಂತಾದ ಬೆಳೆ ತೆಗೆಯುವುದು ಸಾಧ್ಯ. ಮುಖ್ಯ ಬೆಳೆಯ ಕಾಲದಲ್ಲಿ ಎರೆಯ ಭೂಮಿಯಲ್ಲಿ ಇದನ್ನು ಮೇವು, ಜೋಳ, ಕುಸುಮ, ನಾರಗಸೆ ಮೊದಲಾದವುಗಳ ಜೊತೆಯಲ್ಲಿ ಸಾಲಮಿಶ್ರ ಬೆಳೆಯಾಗಿ ಬಿತ್ತುತ್ತಾರೆ. ಅಪಸಣಬು ಅಲಸಂದೆ, ಹುರುಳಿ ಇವುಗಳೊಡನೆ ಮಿಶ್ರವಾದ ಉದ್ದಿನ ಬೆಳೆಯನ್ನು ಬತ್ತದ ಗದ್ದೆಗಳಲ್ಲಿ ಹಸಿರು ಗೊಬ್ಬರಕ್ಕಾಗಿ ಬೆಳೆಯುವುದು ಸಾಮಾನ್ಯ.

ಉದ್ದಿನ ಬೆಳೆಗೆ ನೀರು ಹೆಚ್ಚು ಉಳಿಸಿಕೊಳ್ಳಲು ಸಾಮರ್ಥ್ಯವಿರುವ ಜೇಡಿ ಮಣ್ಣು ಬಹಳ ಅನುಕೂಲ. ಎರೆ ಭೂಮಿಗಳಲ್ಲಿ ಉತ್ತಮವಾದ ಬೆಳೆ ತೆಗೆಯಬಹುದು. ಹಾಗೆಯೇ ಆಳವಾದ ಕೆಂಪು ಗೋಡು ಭೂಮಿಗಳಲ್ಲೂ ಇದನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ಭೂಮಿಯನ್ನು 3–4 ವಾರಗಳ ಅಂತರದಲ್ಲಿ ಒಂದೆರಡು ಸಾರಿ ಉತ್ತು, ಕುಂಟೆ ಹೊಡೆದು ಬಿತ್ತನೆಗೆ ತಯಾರು ಮಾಡುತ್ತಾರೆ. ಬೀಜವನ್ನು ಎರಚಿ ಬಿತ್ತುವುದು ರೂಢಿ. ಸಾಲಿನಲ್ಲಿ ಬಿತ್ತಿದಾಗ ಮಧ್ಯಂತರ 10" ಇರುತ್ತದೆ. ಒಂದು ವಾರದಲ್ಲಿ ಬೀಜ ಮೊಳೆತು ಪೈರು ಮೇಲೆ ಕಾಣಿಸಿಕೊಳ್ಳುತ್ತದೆ. ಮೂರು ವಾರಾನಂತರ ಅಲುಗೆಯ ಕುಂಟೆಯಿಂದ ಸಾಲಿನ ಮಧ್ಯ ಕಳೆ ತೆಗೆಯುವುದುಂಟು. ಏಳು ವಾರದಲ್ಲಿ ಪೈರು ಹೂವಿಗೆ ಬರುತ್ತದೆ. ಮೂರು ತಿಂಗಳಲ್ಲಿ ಕಾಯಿ ಬಲಿತು ಕಟಾವಿಗೆ ಸಿದ್ಧವಾಗುತ್ತದೆ. ಗಿಡಗಳನ್ನು ಬೇರು ಸಮೇತ ಕಿತ್ತು ಒಣಗಿಸಿ ಬಡಿದು ಅಥವಾ ಎತ್ತಿನಿಂದ ತುಳಿಸಿ ಕಾಳನ್ನು ಬೇರೆ ಮಾಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಕಾಳನ್ನು ಬೇರ್ಪಡಿಸಲು ಯಂತ್ರಗಳನ್ನು ಉಪಯೋಗಿಸುತ್ತಾರೆ. ಸಿಪ್ಪೆಯನ್ನು ಹುಲ್ಲಿನೊಡನೆ ಬೆರೆಸಿ ದನಗಳಿಗೆ ತಿನ್ನಿಸುತ್ತಾರೆ. ಒಣಗಿದ ಗಿಡವನ್ನು ಗೊಬ್ಬರದ ಗುಂಡಿಗೆ ಹಾಕುತ್ತಾರೆ. ಇಲ್ಲವೆ ಉರುವಲಾಗಿ ಬಳಸುತ್ತಾರೆ. ಉಳಿದ ಕಾಳುಗಳಂತೆ ಉದ್ದನ್ನು ದಾಸ್ತಾನು ಮಾಡಿದಾಗಲೂ ಹುಳು ಬಿದ್ದು ನಷ್ಟವಾಗಬಹುದು.

ಉದ್ದು ದ್ವಿದಳ ಜಾತಿಗೆ ಸೇರಿದ್ದು. ವೈಜ್ಞಾನಿಕವಾಗಿ ಇದು ಲೆಗ್ಯುಮಿನೇಸೀ ಎಂಬ ಕುಟುಂಬಕ್ಕೂ ಪ್ಯಾಪಿಲಿಯೋನೇಸೀ ಎಂಬ ಉಪಕುಟುಂಬಕ್ಕೂ ಸೇರಿದೆ. ಸಸ್ಯಕ್ಕೆ ದೃಢವಾದ ತಾಯಿಬೇರು ಮತ್ತು ಹರಡುವ ಬೇರುಗಳಿವೆ. ಈ ಬೇರುಗಳ ಮೇಲೆ ಬ್ಯಾಕ್ಟೀರಿಯಗಳನ್ನು ಹೊಂದಿರುವ ಗಂಟುಗಳು ಇರುತ್ತವೆ. ಈ ಬ್ಯಾಕ್ಟೀರಿಯಗಳ ಸಹಾಯದಿಂದ ಬೇರುಗಳು ವಾಯುವಿನಲ್ಲಿರುವ ಸಾರಜನಕವನ್ನು ನೇರವಾಗಿ ಹೀರಬಲ್ಲವು. ಗಿಡದ ಎತ್ತರ 1 ಗಿಂತ ಹೆಚ್ಚಿರುವುದಿಲ್ಲ. ರೆಂಬೆಗಳು ಹೇರಳ. ಕಾಂಡ ಮತ್ತು ಎಲೆಗಳು ಒರಟಾದ ಕೆಂಪು ಕೂದಲಿನಿಂದ ಕೂಡಿವೆ. ಹೂವಿನ ಬಣ್ಣ ಹಳದಿ. ಕಾಯಿ ತೆಳು, ನಾಳಾಕಾರ, 1½"–2½" ಉದ್ದ. ಪ್ರತಿ ಕಾಯಿಯಲ್ಲೂ 8–15 ಕಾಳುಗಳಿರುತ್ತವೆ. ಕಾಳಿನ ಬಣ್ಣ ಕಪ್ಪು ಇಲ್ಲವೆ ಕಪ್ಪುಕಂದು. ಬೇಳೆಯ ಬಣ್ಣ ಬಿಳಿ. ಮೈಸೂರು ರಾಜ್ಯದಲ್ಲಿ ಎರಡು ಜಾತಿಯ ಉದ್ದು ಕೃಷಿಯಾಗುತ್ತದೆ ; ಸಣ್ಣದು ಮತ್ತು ದಪ್ಪದು. ಮೊದಲನೆಯದನ್ನು ಮುಂಗಾರು ಸಮಯದಲ್ಲೂ ಎರಡನೆಯ ಜಾತಿಯ ಉದ್ದನ್ನು ಹಿಂಗಾರಿನಲ್ಲೂ ಬೆಳೆಯುತ್ತಾರೆ.

ಉದ್ದಿನ ಹಿಟ್ಟಿನ ಒಂದು ಮುಖ್ಯ ಲಕ್ಷಣವೆಂದರೆ, ಇದನ್ನು ನೀರಿನಲ್ಲಿ ಕಲಸಿ ರುಬ್ಬಿದ ಹಾಗೆಲ್ಲ ನಯವಾಗಿ ದೋಸೆ, ಇಡ್ಲಿ, ವಡೆ ಮುಂತಾದ ತಿಂಡಿತಿನಿಸುಗಳ ರಚನೆಯನ್ನು ಉತ್ತಮಪಡಿಸುತ್ತದೆ. ಇದರಲ್ಲಿನ ಪ್ರೊಟೀನ್ ಮಾಂಸದ ಪ್ರೊಟೀನಿನಷ್ಟೇ ಪುಷ್ಟಿಕರ. ರುಬ್ಬಿದ ಉದ್ದನ್ನು ಹಸುಗಳಿಗೆ ತಿನ್ನಿಸಿದಾಗ ಹಾಲು ವೃದ್ಧಿಯಾಗುವುದು ಕಂಡುಬಂದಿದೆ. ಉದ್ದನ್ನು ದೋಸೆ, ಇಡ್ಲಿ ಮುಂತಾದ ತಿಂಡಿಗಳಲ್ಲೂ ಜಹಾಂಗೀರ್‌ನಂಥ ಸಿಹಿ ತಿಂಡಿಗಳಲ್ಲೂ ಸಾಂಬಾರು ಗೊಜ್ಜು ಮೊದಲಾದವುಗಳ ಲವಾಜಮೆಯಲ್ಲೂ ಹೇರಳವಾಗಿ ಬಳಸುತ್ತಾರೆ.

(ಬಿ.ವಿ.ವಿ.;ಎಂ.ಬಿ.ಟಿ.)

**ಉದ್ಧತವಾದ:** 19ನೆಯ ಶತಮಾನದ ನಾಲ್ಕನೆಯ ಪಾದದಲ್ಲಿ ಬ್ರಿಟನ್ನಿನಲ್ಲಿ ಅತಿಯಾದ ಕ್ಷಾತ್ರಾಭಿಮಾನದ ಫಲವಾಗಿ ಬೆಳೆದ ರಾಷ್ಟ್ರ ಜರ್ಬಿನ ಧೋರಣೆ (ಜಂಗೊಯಿಸಂ). 1877–78ರಲ್ಲಿ ರಷ್ಯ–ತುರ್ಕಿಗಳ ನಡುವೆ ಪ್ರಾರಂಭವಾದ ಯುದ್ಧದಲ್ಲಿ ರಷ್ಯನ್ನರನ್ನು ಹಿಮ್ಮೆಟ್ಟಿಸುವ ಉದ್ದೇಶದಿಂದ ಬ್ರಿಟನ್ ತನ್ನ ಮೆಡಿಟರೇನಿಯನ್ ಸೈನ್ಯ ತುಕಡಿಯನ್ನು ಕಳಿಸಿದಾಗ ಆ ರಾಷ್ಟ್ರವೂ ಯುದ್ಧಕ್ಷೋಭೆಗೆ ತುತ್ತಾಯಿತು. ಆಗ ರಷ್ಯದ ವಿರುದ್ಧ ಬ್ರಿಟನ್ನು ತಳೆದ ಧೋರಣೆಯನ್ನು ಜಿಂಗೊಯಿಸಂ ಎಂದೂ ಇದಕ್ಕೆ ಬೆಂಬಲ ನೀಡಿದವರನ್ನು ಜಿಂಗೊಗಳೆಂದೂ ಕರೆಯಲಾಯಿತು. ಆಗ ಜನರಲ್ಲಿ ಉದ್ರೇಕ ಹುಟ್ಟಿಸಲು ಕಾರಣವಾದ ಒಂದು ಹಾಡಿನ ಪಲ್ಲವಿಯಲ್ಲಿ ಜಿಂಗೊ ಎಂಬ ಪದವಿತ್ತು. ಯುದ್ಧ ಮಾಡುವುದೇನೂ ನಮ್ಮಿಚ್ಛೆಯಲ್ಲ; ಯುದ್ಧ ಸಂಭವಿಸಿದರೆ ನಮ್ಮಲ್ಲೇನೂ ಕಡಿಮೆಯಿಲ್ಲ; ನಮ್ಮಲ್ಲಿ ಹಡಗಿವೆ, ಸೈನ್ಯವಿದೆ, ಹಣವೂ ಇದೆ; ಕೆಣಕಿ ನೋಡಿ ! ಇದು ಈ ಹಾಡಿನ ಪಲ್ಲವಿಯ ಅರ್ಥ. ಇದೊಂದು ಆವೇಶಪೂರಿತ ಗುಂಪುಮನೋಭಾವ. ರಾಷ್ಟ್ರಾಭಿಮಾನದ ಅತಿರೇಕ, ಸಾಮ್ರಾಜ್ಯದಾಹ ಮತ್ತು ಯುದ್ಧಪ್ರವೃತ್ತಿಯ ಮನೋಭಾವಗಳ ಸಂಮಿಳನವಾಗಿರುವ ಈ ವಾದ ಅಂತಾರಾಷ್ಟ್ರೀಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಆಸ್ಫೋಟನಕಾರಿಯಾಗಿ ಪರಿಣಮಿಸ ಬಲ್ಲುದು. ವ್ಯಕ್ತಿಗೆ ರಾಷ್ಟ್ರೀಯತೆಯ ಉನ್ಮಾದ ಬಂದಾಗ ಆತ ಒಂದು ಮಿತಿಯ ವರೆಗೆ ಉದಾತ್ತ ಭಾವನೆಗಳಿಗೆ ಪ್ರಚೋದನೆ ನೀಡಿ ಇಡೀ ಜನತೆಯನ್ನೇ ರಾಷ್ಟ್ರ ಬೆಳವಣಿಗೆ–ರಕ್ಷಣೆಗಳ ಹಾದಿಯಲ್ಲಿ ಕೊಂಡೊಯ್ಯಬಲ್ಲ. ಈ ಮಿತಿ ಮೀರಿದಾಗ ಈ ಚಿತ್ತವೃತ್ತಿಯೇ ಅನ್ಯರಾಷ್ಟ್ರಗಳ ಆಕ್ರಮಣಕ್ಕೆ ಪ್ರೇರೇಪಕವಾಗಲೂಬಹುದು. ಇದು ಉದ್ಧತವಾದ.

ಬ್ರಿಟನ್ನಿಗೂ ಹಿಂದೆ ಫ್ರಾನ್ಸಿನಲ್ಲಿ ನಡೆದ ನೆಪೋಲಿಯಾನಿಕ್ ಯುದ್ಧಗಳಲ್ಲಿ ಫ್ರೆಂಚ್ ಸೈನಿಕರನ್ನು ಹುರಿದುಂಬಿಸಿದ್ದು ಇದೇ ಬಗೆಯ ಮನೋಭಾವ. ಅಲ್ಲಿ ಇದನ್ನು ಪ್ರವರ್ತಿಸಿದವನ ಹೆಸರಿನಿಂದ ಈ ಮನೋಭಾವವನ್ನು ಷೋವಿನಿಸಂ ಎಂದು ಕರೆಯಲಾಯಿತು.**ನೋಡಿ– ಉಗ್ರರಾಷ್ಟ್ರಾಭಿಮಾನ; ಅಂತರರಾಷ್ಟ್ರೀಯತೆ; ರಾಷ್ಟ್ರೀಯತೆ.** (ಎಂ.ಕೆ.ಎಸ್.)

**ಉದ್ಭಟ:** ಅಲಂಕಾರ ಶಾಸ್ತ್ರದಲ್ಲಿ ಗಣ್ಯನಾದ ಈತ ಕಾಶ್ಮೀರ ದೇಶದವ. 779ರಿಂದ 813ರವರೆಗೆ ಅಲ್ಲಿ ಆಳಿದ ಜಯಾಪೀಡನೆಂಬ ರಾಜನ ಆಸ್ಥಾನದಲ್ಲಿ ಸಭಾಪತಿಯಾಗಿದ್ದ ಉದ್ಭಟನೆಂಬುವನು ಇವನೇ ಎಂದು ಕಾಶ್ಮೀರದಲ್ಲಿ ಪ್ರತೀತಿ ಇದೆ.

ಉದ್ಭಟನಿಂದ ರಚಿತವಾದ ಉಪಲಬ್ಧ ಗ್ರಂಥ ಅಲಂಕಾರ ಸಾರಸಂಗ್ರಹ ಎಂಬುದು ಪ್ರಕಟವಾಗಿದೆ. ಇದಕ್ಕೆ ಪ್ರತೀಹಾರೇಂದು ರಾಜನ (10ನೆಯ ಶತಮಾನ) ಲಘುವೃತ್ತಿ ಎಂಬ ವ್ಯಾಖ್ಯಾನವಿದೆ; ರಾಜಾನಕತಿಲಕನ ಉದ್ಭಟ ವಿವೇಕ (ಅಥವಾ ಉದ್ಭಟ ವಿಚಾರ) ಅದರ ಮೇಲಣ ಮತ್ತೊಂದು ವ್ಯಾಖ್ಯಾನ.

ಭರತನ ನಾಟ್ಯಶಾಸ್ತ್ರಕ್ಕೆ ಟೀಕೆಯನ್ನು ಬರೆದಿರುವ ಹಲವಾರು ಆಲಂಕಾರಿಕರಲ್ಲಿ ಉದ್ಭಟನೂ ಒಬ್ಬನೆಂದು ಕೆಲವು ಆಧಾರಗಳಿಂದ ತಿಳಿದು ಬಂದಿದೆ. ಅಲ್ಲದೆ, ಈತ ಭಾಮಹನ ಕಾವ್ಯಾಲಂಕಾರದ ಮೇಲೆ ಭಾಮಹವಿವರಣ (ಅಥವಾ ಭಾಮಹವೃತ್ತಿ) ಎಂಬ ವ್ಯಾಖ್ಯಾನವನ್ನು ಬರೆದನೆಂದು ಹೇಳಲು ಆಧಾರಗಳಿವೆ. ಅಲಂಕಾರಸಾರ ಸಂಗ್ರಹದ ಉದಾಹರಣ ಶ್ಲೋಕಗಳು ಉದ್ಭಟನಿಂದಲೇ ರಚಿತವಾದ ಕುಮಾರಸಂಭವ ಎಂಬ ಕಾವ್ಯದಿಂದ ಆರಿಸಿಕೊಂಡು ಪ್ರತೀಹಾರೇಂದು ರಾಜ ಹೇಳಿದ್ದಾನೆ. ಆದರೆ ಈ ಕಾವ್ಯವಾಗಲಿ ಮೇಲ್ಕಂಡ ಟೀಕೆಯಾಗಲಿ, ಭಾಮಹವಿವರಣವಾಗಲಿ ದೊರೆತಿಲ್ಲ.

ಉದ್ಭಟನ ಪ್ರಸಿದ್ಧ ಗ್ರಂಥವೆಂದರೆ ಅವನ ಅಲಂಕಾರ ಸಾರಸಂಗ್ರಹ ಅಥವಾ ಕಾವ್ಯಾಲಂಕಾರಸಾರ ಸಂಗ್ರಹ. ಇದರಲ್ಲಿ ತೊಂಬತ್ತು ಉದಾಹರಣೆಗಳಿಂದ ಕೂಡಿದ ನಲವತ್ತೊಂದು ಅಲಂಕಾರಗಳ ವಿಮರ್ಶೆಯನ್ನೊಳಗೊಂಡ ಆರು ವರ್ಗಗಳಿವೆ. ಉದ್ಭಟ ಇದರಲ್ಲಿ ಭಾಮಹನನ್ನೇ ಅನುಸರಿಸಿದ್ದರೂ ತನ್ನ ವೈಶಿಷ್ಟ್ಯವನ್ನೂ ವ್ಯಕ್ತಪಡಿಸಿದ್ದಾನೆ. ಗ್ರಾಮ್ಯ ಉಪನಾಗರಿಕಾ ಎಂಬ ವೃತ್ತಿಗಳ ಆಧಾರದ ಮೇಲೆ ಭಾಮಹ ಗ್ರಾಮ್ಯಾನುಪ್ರಾಸ, ಲಾಟಾನುಪ್ರಾಸ, ವೃತ್ತ್ಯನುಪ್ರಾಸ ಎಂಬುದಾಗಿ ವಿಂಗಡಿಸಿ, ಕಡೆಯದನ್ನು ಗ್ರಾಮ್ಯಾ (ಕೋಮಲಾ), ಪರುಷಾ, ಉಪನಾಗರಿಕಾ ಎಂಬ ವೃತ್ತಿಗಳ ದೃಷ್ಟಿಯಲ್ಲಿ ಪುನರ್ವಿಭಜನೆ ಮಾಡಿರುವಂತೆ ತೋರುತ್ತದೆ. ಹೀಗೆ, ಅನುಪ್ರಾಸಕ್ಕೆ ಆವಶ್ಯಕವಾದ ಸ್ವನ ಸಮಾಯೋಗಕ್ಕೆ ಸಾಮಾನ್ಯವಾಗಿ ಅನ್ವಯಿಸುವ ಈ ಮೂರು ವೃತ್ತಿಗಳನ್ನು ಮೊದಲು ಗುರುತಿಸಿದವ ಉದ್ಭಟನೆಂಬುದು ಪ್ರತೀಹಾರೇಂದು ರಾಜನ ಮತ. ಇಷ್ಟೇ ಅಲ್ಲದೆ, ಉಪಮೆಯ ವಿಧಗಳಿಗೆ ವ್ಯಾಕರಣದ ಆಧಾರ ನಿರೂಪಣೆಯನ್ನು ಪರಿಣಾಮಕಾರಿಯಾದ ಕ್ರಮದಲ್ಲಿ ಮೊದಲು ಮಾಡಿದವ ಉದ್ಭಟ. ಈ ಆಧಾರದ ವಿಚಾರವನ್ನು ಕುರಿತು ಒಂದು ಸೂಚನೆ ಮಾತ್ರ ಭಾಮಹನಲ್ಲಿ ಕಂಡುಬರುತ್ತದೆ.

ದಂಡಿ ಭಾಮಹರ ತರುವಾಯದಲ್ಲೇ ಬಂದ ಅಲಂಕಾರ ಪಂಥಕ್ಕೆ ಸೇರಿದ ಉದ್ಭಟನಿಗೆ ವಿಮರ್ಶೆಯ ಪರಿಚಯವಿದ್ದಿತೆಂದು ಧಾರಾಳವಾಗಿ ಹೇಳಬಹುದು; ಏಕೆಂದರೆ ಆತ ವಿಭಾವ, ಸ್ಥಾಯೀ, ಸಂಚಾರೀ, ಅನುಭಾವ–ಎಂಬ ಪಾರಿಭಾಷಿಕ ಪದಗಳನ್ನು ಪ್ರಯೋಗಿಸು ವುದಲ್ಲದೆ ಭರತನ ಎಂಟು ರಸಗಳ ಜೊತೆಗೆ ಶಾಂತವನ್ನೂ ಸೇರಿಸಿ ಹೇಳಿದ್ದಾನೆ. ಆದರೆ

ಇವೆಲ್ಲವೂ ರಸವತ್ ಎಂಬ ಅಲಂಕಾರದಲ್ಲೇ ಅಡಕವಾಗಿವೆಯೆಂದು ಅವನ ಮತ. ಒಟ್ಟಿನಲ್ಲಿ ಭರತನ ನಾಟ್ಯಶಾಸ್ತ್ರಕ್ಕೆ ಸಂಬಂಧಪಟ್ಟ ರಸ ವಿಮರ್ಶೆಯನ್ನು ಬಲ್ಲವನಾಗಿದ್ದರೂ ಉದ್ಭಟ ಕೇವಲ ಭಾಮಹಮತಾನುಯಾಯಿ.

ಅಲಂಕಾರಶಾಸ್ತ್ರದಲ್ಲಿ ಉದ್ಭಟನ ಪ್ರಭಾವ ವಿಶೇಷವಾಗಿದೆ. ಅವನ ಪ್ರಸಿದ್ಧಿ ಭಾಮಹನನ್ನೂ ಹಿಂದೆ ಬೀಳುವಂತೆ ಮಾಡುವಷ್ಟು ಹಿರಿದಾಗಿತ್ತು. ಅನಂತರ ಬಂದ ಅನೇಕ ಆಲಂಕಾರಿಕರು–ಅವನೊಡನೆ ಭಿನ್ನಾಭಿಪ್ರಾಯವುಳ್ಳವರೂ–ಅವನನ್ನು ಅತ್ಯಂತ ಗೌರವದಿಂದ ಕಂಡಿದ್ದಾರೆ. ಇದಕ್ಕೆ ಅವರ ತತ್ತ್ವಭವದ್ಭಿರುದ್ಭಟಾದಿಭಿಃ (ಧ್ವನ್ಯಾಲೋಕ), ತಾವದ್ಭಾಮಹೋದ್ಭಟ ಪ್ರಭೃತಯಃ (ಅಲಂಕಾರಸರ್ವಸ್ವ) ಮುಂತಾದ ಮಾತುಗಳು ಸೂಕ್ತ ನಿದರ್ಶನಗಳಾಗಿವೆ.(ಬಿ.ಕೆ.ಎಸ್.)

**ಉದ್ಭವ:** 1 ಉದ್ ಮತ್ತು ಭೂ ಇವುಗಳಿಂದ ನಿಷ್ಪನ್ನವಾಗಿದೆ. ಉತ್ಪತ್ತಿ, ಜನ್ಮ, ಮೂಲಸ್ಥಾನ ಎಂಬ ಅರ್ಥದಲ್ಲಿ ಉಪನಿಷತ್ತು ಮುಂತಾದ ಗ್ರಂಥಗಳಲ್ಲಿ ಇದರ ಪ್ರಯೋಗವನ್ನು ಕಾಣಬಹುದು. 2 ನಹುಷನ ಮಗನ ಹೆಸರು. 3 ವಿಷ್ಣು ಸಹಸ್ರನಾಮದಲ್ಲಿರುವಂತೆ ವಿಷ್ಣುವಿನ ಒಂದು ಹೆಸರು: ಸಮುದ್ಗತೋ ಭವೋಯಸ್ಮಾದುದ್ಭವಃ ಪರಿಕೀರ್ತಿತಃ. ಯಾರಿಂದ ಈ ಲೋಕ ಹೊರಹೊಮ್ಮಿತೋ ಅವನು ಉದ್ಭವ. (ಬಿ.ಕೆ.ಎಸ್.)

**ಉದ್ಭವಾವಸ್ಥೆ:** ಸಂಯುಕ್ತಸ್ಥಿತಿಯಿಂದ ಆಗ ತಾನೆ ಬೇರ್ಪಟ್ಟ ವಸ್ತುವಿನ ಅವಸ್ಥೆ (ನೇಸೆಂಟ್ ಸ್ಟೇಜ್). ಕೆಲವು ಮೂಲವಸ್ತುಗಳಿಗೆ ಈ ಅವಸ್ಥೆಯಲ್ಲಿ ಹೆಚ್ಚು ಕ್ರಿಯಾಶಕ್ತಿ ಇರುವುದು ಕಂಡುಬಂದಿದೆ. ಇದಕ್ಕೆ ಜಲಜನಕ ಉತ್ತಮ ನಿದರ್ಶನ. ಕೂಡಿಟ್ಟ ಜಲಜನಕವನ್ನು ಆಮ್ಲಮಿಶ್ರಿತ ಪೊಟ್ಯಾಸಿಯಂ ಪರ್ಮಾಂಗನೇಟಿನ ದ್ರಾವಣದ ಮೂಲಕ ಹಾಯಿಸಿದಾಗ ಅದರ ಊದಾ ಬಣ್ಣ ಬದಲಾಯಿಸುವುದಿಲ್ಲ. ಆದರೆ ದ್ರಾವಣಕ್ಕೆ ಒಂದು ಚೂರು ಅಶುದ್ಧ ಸತುವನ್ನು ಸೇರಿಸಿದರೆ ಅದು ಅಲ್ಲಿರುವ ಆಮ್ಲದಿಂದ ಜಲಜನಕವನ್ನು ಪಲ್ಲಟಿಸುವುದು. ಬಿಡುಗಡೆಯಾದ ಜಲಜನಕ ಉದ್ಭವಾವಸ್ಥೆಯಲ್ಲಿರುವುದರಿಂದ ತತ್‌ಕ್ಷಣ ಪರ್ಮಾಂಗನೇಟನ್ನು ಅಪಕರ್ಷಿಸಲು ಪ್ರಾರಂಭಿಸುವುದು. ದ್ರಾವಣದ ಊದಾಬಣ್ಣ ಕ್ರಮೇಣ ಮಾಯವಾಗುವುದು. ಹೀಗಾಗಲು ಉದ್ಭವಾವಸ್ಥೆಯಲ್ಲಿರುವ ಜಲಜನಕದಲ್ಲಿ ಹೆಚ್ಚು ಕ್ರಿಯಾಶಕ್ತಿ ಇರುವುದೇ ಕಾರಣ. ನವಜಾತ ಜಲಜನಕವನ್ನು ಪಡೆಯಲು ಕೆಳಕಂಡ ಮಿಶ್ರಣಗಳನ್ನು ಉಪಯೋಗಿಸ ಬಹುದು: (i) ಅಶುದ್ಧ ಸತು ಮತ್ತು ದುರ್ಬಲ ಸಲ್ಫ್ಯೂರಿಕ್ ಆಮ್ಲ. (ii) ತವರ ಮತ್ತು ಹೈಡ್ರೊಕ್ಲೋರಿಕ್ ಆಮ್ಲ. (iii) ಕಬ್ಬಿಣ ಮತ್ತು ಸ್ವಲ್ಪ ಹೈಡ್ರೊಕ್ಲೋರಿಕ್ ಆಮ್ಲ ಬೆರೆಸಿರುವ ನೀರು. ಆರೊಮ್ಯಾಟಿಕ್ ನೈಟ್ರೊ ಸಂಯುಕ್ತಗಳನ್ನು ಅಮೈನೋ ಸಂಯುಕ್ತಗಳನ್ನಾಗಿ ಅಪಕರ್ಷಿಸಲು ಈ ಮಿಶ್ರಣ ಸಹಕಾರಿ. (iv) ಸೋಡಿಯಂ ಮತ್ತು ಆಲ್ಕೊಹಾಲ್. ಆಲ್ಕೈಲ್ ಸಯನೈಡುಗಳನ್ನು ಇದು ಪ್ರೈಮರಿ ಅಮೀನುಗಳಾಗಿ ಪರಿವರ್ತಿಸುವುದು. (v) ಸತು–ತಾಮ್ರದ ಜೋಡಿ ಮತ್ತು ಆಲ್ಕೊಹಾಲ್. ಇದರಿಂದ ಆಲ್ಕೈಲ್ ಹ್ಯಾಲೈಡುಗಳನ್ನು ಪ್ಯಾರಫಿನ್ ಹೈಡ್ರೊಕಾರ್ಬನ್ನುಗಳಾಗಿ ಪರಿವರ್ತಿಸಬಹುದು.

ಉದ್ಭವಾವಸ್ಥೆಗೂ ಕ್ರಿಯಾಶಕ್ತಿಗೂ ಇರುವ ಸಂಬಂಧವನ್ನು ವಿವರಿಸುವ ಅನೇಕ ಸಿದ್ಧಾಂತಗಳಿವೆ. ಮೊದಲನೆಯ ವಾದ ಹೀಗಿದೆ : ಕೂಡಿಟ್ಟ ಜಲಜನಕದಲ್ಲಿ ಅಣುಗಳಿವೆ. ಅವನ್ನು ಒಡೆದು ಪರಮಾಣು ರೂಪಕ್ಕೆ ತರಲು ಶಕ್ತಿ ವ್ಯಯವಾಗಬೇಕು. ಅನಂತರವೇ ಅದು ಅಪಕರ್ಷಣಕಾರಿಯಾಗಿ ವರ್ತಿಸಲು ಸಾಧ್ಯ. ಆದರೆ ನವಜಾತ ಜಲಜನಕದಲ್ಲಿ ಪರಮಾಣುಗಳು ಸಿದ್ಧವಾಗಿರುತ್ತವೆ. ಆದ್ದರಿಂದ ಆ ಜಲಜನಕ ನೇರವಾಗಿ ಅಪಕರ್ಷಿತವಾಗುವ ವಸ್ತುವಿನೊಡನೆ ವ್ಯವಹರಿಸಬಲ್ಲುದು. ಈ ವಾದ ಆಕರ್ಷಕವಾಗಿದೆ. ಆದರೆ ವಿವಿಧ ಮೂಲಗಳಿಂದ ಪಡೆದ ನವಜಾತ ಜಲಜನಕದ ಕ್ರಿಯಾಶಕ್ತಿಯಲ್ಲಿ ವ್ಯತ್ಯಾಸವಿರಲು ಕಾರಣವೇನು ಎಂಬ ಪ್ರಶ್ನೆಯನ್ನು ಇದು ಉತ್ತರಿಸುವುದಿಲ್ಲ. ಉದಾಹರಣೆಗೆ, ಸತು ಮತ್ತು ಸಲ್ಫ್ಯೂರಿಕಾಮ್ಲದಿಂದ ಪಡೆದ ನವಜಾತ ಜಲಜನಕ ಕ್ಲೋರೇಟುಗಳನ್ನು ಕ್ಲೋರೈಡುಗಳಾಗಿ ಅಪಕರ್ಷಿಸುತ್ತದೆ. ಆದರೆ ಸೋಡಿಯಂ ಅಮಾಲ್ಗಂ ಮತ್ತು ನೀರಿನಿಂದ ಉದ್ಭವಿಸಿದ ಜಲಜನಕ ಹೀಗೆ ಮಾಡುವುದಿಲ್ಲ. ಇದೇ ರೀತಿ ಬೇರೆ ಬೇರೆ ಲೋಹಗಳನ್ನು ಋಣಧ್ರುವವಾಗಿಟ್ಟುಕೊಂಡು ವಿದ್ಯುದ್ವಿಭಾನದಿಂದ ಪಡೆದ ಜಲಜನಕದ ಕ್ರಿಯಾಶಕ್ತಿಯಲ್ಲೂ ವ್ಯತ್ಯಾಸವಿರುವುದು ವ್ಯಕ್ತವಾಗಿದೆ. ಬೆಳ್ಳಿಗಿಂತ ಸೀಸದ ಋಣಧ್ರುವದಲ್ಲಿ ಜಲಜನಕ ಬಿಡುಗಡೆಯಾಗಲು 0.49 ವೋಲ್ಟುಗಳಷ್ಟು ಹೆಚ್ಚು ವಿದ್ಯುತ್ತು ಅಗತ್ಯ. ಅಂಥ ಜಲಜನಕ ನಾವು ಬಳಸಿದ ಹೆಚ್ಚು ವಿದ್ಯುಚ್ಛಕ್ತಿಯನ್ನು ಮೈಗೂಡಿಸಿಕೊಂಡು ವಿಶೇಷ ಪಟುತ್ವವನ್ನು ಪ್ರದರ್ಶಿಸುವುದು. ಇದರಂತೆಯೇ ವಿವಿಧ ಕ್ರಿಯೆಗಳಲ್ಲಿ ಹುಟ್ಟುವ ಶಕ್ತಿಯಲ್ಲಿ ವ್ಯತ್ಯಾಸವಿರುತ್ತದೆ. ಆ ಶಕ್ತಿಯೆಲ್ಲಾ ಉಷ್ಣದ ರೂಪದಲ್ಲೇ ಹೊರಬೀಳುವುದಿಲ್ಲ. ಸ್ವಲ್ಪಭಾಗವನ್ನು ನವಜಾತ ಜಲಜನಕ ಹೊಂದಿರಲು ಸಾಕು. ಇದರಿಂದ ಅದರ ಕ್ರಿಯಾಶಕ್ತಿ ಹೆಚ್ಚಾಗಬಹುದು. ಇದು ಕೆಲವರ ಮತ. ರೂಢಿಯಲ್ಲಿರುವ ಮತ್ತೊಂದು ವಿವರಣೆ ಹೀಗಿದೆ: ಹುಟ್ಟು ಸ್ಥಿತಿಯಲ್ಲಿ ಜಲಜನಕ ಸೂಕ್ಷ್ಮಗುಳ್ಳೆಗಳ ರೂಪದಲ್ಲಿರುತ್ತದೆ. ಪರಿಣಾಮವಾಗಿ ಅದರ ಆಂತರಿಕ ಒತ್ತಡ ಹೆಚ್ಚಿ ಪಟುತ್ವ ವೃದ್ಧಿಯಾಗುತ್ತದೆ. ಕೂಡಿಟ್ಟ ಜಲಜನಕವನ್ನು ವಿಪರೀತ ಒತ್ತಡಕ್ಕೆ ಗುರಿಪಡಿಸಿದಾಗ ಅದರ ಪಟುತ್ವ ಹೆಚ್ಚುವುದೆಂದು ಪ್ರಯೋಗಗಳಿಂದ ಶ್ರುತಪಟ್ಟಿದೆ. ಇದು ಮೇಲ್ಕಂಡ ವಾದವನ್ನು ಪುಷ್ಟೀಕರಿಸುತ್ತದೆ. ಆದರೆ ಈ ಬಗ್ಗೆ ತಜ್ಞರಲ್ಲಿ ಒಮ್ಮತವಿಲ್ಲ. ಅಂತೂ ನವಜಾತ ಜಲಜನಕದ ಉನ್ನತ ಚಟುವಟಿಕೆಗೆ ಅದು ಪರಮಾಣುಸ್ಥಿತಿಯಲ್ಲಿರುವುದೇ ಕಾರಣ ಎಂಬ ವಾದದ ಬಗ್ಗೆ ಒಲವು ಕಡಿಮೆಯಾಗಿದೆ. (ಎಚ್.ಜಿ.ಎಸ್.)

**ಉದ್ಭೂತರೂಪ:** ಚಕ್ಷು(ಕಣ್ಣು) ಇಂದ್ರಿಯದಿಂದ ಉಂಟಾಗುವ ಪ್ರತ್ಯಕ್ಷಕ್ಕೆ ಗೋಚರವಾಗುವ ರೂಪ. ಉದ್ಭೂತ ಎಂದರೆ ಮೇಲೆದ್ದು ವ್ಯಕ್ತವಾಗಿರುವುದು ಎಂದರ್ಥ. ರೂಪ ಚಕ್ಷುರಿಂದ್ರಿಯದಿಂದ ಗ್ರಹಿಸಲ್ಪಡುವ ಗುಣ. ಚಾಕ್ಷುಷ ಪ್ರತ್ಯಕ್ಷವಾಗಬೇಕಾದರೆ ಆಲೋಕ ಸಂಯೋಗ (ಬೆಳಕಿನ ಸಂಬಂಧ) ಮತ್ತು ಉದ್ಭೂತರೂಪ ಇವೆರಡೂ ಇದ್ದೇ ಇರಬೇಕು. ಆದುದರಿಂದಲೇ

ಕ್ರಿಯಾಂ ಜಾತಿಂ ಯೋಗ್ಯವೃತ್ತಿಂ ಸಮವಾಯಂ ಚ ತಾದೃಶಮ್
ಗೃಹ್ಣಾತಿ ಚಕ್ಷುಃ ಸಂಬಂಧಾದಾಲೋಕೋದ್ಭೂತರೂಪಯೋಃ

ಎಂದು ಭಾಷಾಪರಿಚ್ಛೇದದಲ್ಲಿ ಹೇಳಿದೆ. ಕಣ್ಣಿಗೆ ಗೋಚರವಾಗುವ ದ್ರವ್ಯ (ವಸ್ತು)ದಲ್ಲಿರುವ ಗಮನ ಮೊದಲಾದ ಕ್ರಿಯೆ, ಘಟತ್ವ ಮೊದಲಾದ ಜಾತಿ, ಸಮುದಾಯ ಸಂಬಂಧ ಇವುಗಳನ್ನು ಆಲೋಕ (ಬೆಳಕು) ಮತ್ತು ಉದ್ಭೂತರೂಪಗಳ ಸಂಬಂಧದಿಂದ ಚಕ್ಷುರಿಂದ್ರಿಯ ಗ್ರಹಿಸುತ್ತದೆ, ಅಂದರೆ ಸಾಕ್ಷಾತ್ಕರಿಸುತ್ತದೆ. (ಎಸ್.ಎಸ್.ಎಚ್.)

**ಉದ್ಯಮಕೂಟ:** ಎರಡು ಅಥವಾ ಹೆಚ್ಚು ಉದ್ಯಮಘಟಕಗಳ ತಾತ್ಕಾಲಿಕ ಅಥವಾ ಶಾಶ್ವತ ಏಕೀಕರಣ (ಕಾಂಬಿನೇಷನ್). ಉದ್ಯಮಕ್ಷೇತ್ರದಲ್ಲಿ ಬಂಡವಾಳದ ಮೊತ್ತವೂ ಉತ್ಪಾದನೆಯ ಗಾತ್ರವೂ ಅಧಿಕವಾದಂತೆಲ್ಲ ಇದರಲ್ಲಿ ನಿರತವಾದ ಘಟಕಗಳು ತಂತಮ್ಮಲ್ಲೇ ಸ್ಪರ್ಧೆ ನಡೆಯದಂತೆ ಪರಸ್ಪರವಾಗಿ ಏರ್ಪಡಿಸಿಕೊಂಡ ಒಡಂಬಡಿಕೆ, ಸಂಯೋಜನೆ, ವಿಲೀನತೆ.

ಬಂಡವಾಳ ವ್ಯವಸ್ಥೆಯ ಆರಂಭಕಾಲದಲ್ಲಿ ಅದರ ಬೆಳವಣಿಗೆಗೆ ಪ್ರೋತ್ಸಾಹಕವಾಗಿದ್ದ ಅನಿರ್ಬಂಧಿತ ಸ್ಪರ್ಧೆಯ ಒಂದು ದೊಡ್ಡ ದೋಷವೆಂದರೆ ಅದಕ್ಷ ಹಾಗೂ ಕಡಿಮೆ ದಕ್ಷತೆಯ ಸಂಸ್ಥೆಗಳ ನಾಶ. ಯೋಗ್ಯತೆಯುಳ್ಳದ್ದು ಮಾತ್ರ ಉಳಿಯಬೇಕೆಂಬುದು ಒಳ್ಳೆಯ ಆದರ್ಶವಾದರೂ ವಾಸ್ತವ ಜಗತ್ತಿನಲ್ಲಿ ಅನೇಕ ವೇಳೆ ಇದರಿಂದ ಅನರ್ಥವೇ ಸಂಭವಿಸ ಬಹುದು. ಒಂದು ಸಂಸ್ಥೆಯನ್ನು ಮುಚ್ಚಿದಾಗ ಅದರಲ್ಲಿ ನಿಯೋಜಿಸಿದ ಬಂಡವಾಳ ವ್ಯರ್ಥವಾಗುವುದಲ್ಲದೆ ಅಲ್ಲಿದ್ದ ಉದ್ಯೋಗಸ್ಥರು ನಿರುದ್ಯೋಗಿಗಳಾಗಬಹುದು; ಅಮೂಲ್ಯ ಸಾಧನಗಳ ಪೋಲಾಗಬಹುದು. ಬೃಹದ್ ಗಾತ್ರದಲ್ಲಿ ಉತ್ಪಾದನೆ ಹಾಗೂ ವಹಿವಾಟುಗಳು ನಡೆಯುವ ಈ ಕಾಲದಲ್ಲಿ ಇದರಿಂದ ಸಂಭವಿಸುವ ಕಷ್ಟ ನಷ್ಟಗಳೆಷ್ಟೆಂಬುದನ್ನು ಊಹಿಸಿಕೊಳ್ಳಬಹುದು. ಸ್ಪರ್ಧೆಯ ಅನಿಶ್ಚಿತತೆಯನ್ನೂ ಅನರ್ಥಕಾರಿ ಪರಿಣಾಮಗಳನ್ನೂ ದಕ್ಷತೆಗೆ ಹೆಚ್ಚಿನ ಸ್ಥಾನಕೊಟ್ಟು ಲಾಭದ ಮಟ್ಟವನ್ನು ಅದುಮಿಡುವ ಪ್ರವೃತ್ತಿಗಳನ್ನೂ ನಿವಾರಿಸಿಕೊಳ್ಳುವುದೂ, ಸಂಸ್ಥೆಯ ಉತ್ಪಾದನೆ ವಹಿವಾಟುಗಳನ್ನು ಹೆಚ್ಚಿಸಿಕೊಂಡು ಬೃಹದ್ ಗಾತ್ರದ ಉತ್ಪಾದನೆಯ ನಾನಾ ಬಗೆಯ ಆರ್ಥಿಕ ಪ್ರಯೋಜನಗಳನ್ನು ಪಡೆದುಕೊಳ್ಳುವುದೂ, ವ್ಯಾಪಾರಚಕ್ರದ ಏರಿಳಿತಗಳ ದುಷ್ಪರಿಣಾಮಗಳಿಂದ ತಪ್ಪಿಸಿಕೊಳ್ಳುವಂಥ ಆರ್ಥಿಕಶಕ್ತಿ ಬೆಳೆಸಿಕೊಳ್ಳುವುದೂ ಈ ಬಗೆಯ ವ್ಯವಸ್ಥೆಗಳ ಹಿಂದಿರುವ ಉದ್ದೇಶ. ಸುಂಕದ ವ್ಯವಸ್ಥೆಯ ಪ್ರಭಾವ, ಒಟ್ಟಾಗಿ ಸೇರುವ ಸಹಜಪ್ರವೃತ್ತಿ, ಅನಿಶ್ಚಿತತೆಯ ಫಲವಾದ ನಷ್ಟ ಸಂಭವ, ಬೃಹತ್ತಿನ ಮೋಹ–ಇವು ಒಕ್ಕೂಟಕ್ಕೆ ಕಾರಣಗಳಾಗಬಹುದು. ಒಂದು ಕೈಗಾರಿಕೆಗೆ ಅಲ್ಲಿನ ಸರ್ಕಾರದಿಂದ ಸುಂಕದ ರಕ್ಷಣೆ ದೊರಕಿದಾಗ ಅದರ ಅಡಿಯಲ್ಲಿ ಹೊರಗಿನ ಸ್ಪರ್ಧೆಯ ಭಯವಿಲ್ಲದೆ ನೇರವಾಗಿ ಬೆಳೆದ ಸಂಸ್ಥೆಗಳು ತಂತಮ್ಮಲ್ಲೇ ಒಡಂಬಡಿಕೆಯಿಂದ ಒಕ್ಕೂಟ ರಚಿಸಿಕೊಂಡು ಭೀಮಶಕ್ತಿ ಗಳಿಸಬಹುದು. ಹೀಗೆ, ಕಾರಣವೇನೇ ಇರಲಿ, ನಿರುಪಾಧಿಕ ಸ್ಪರ್ಧೆಯ ನಿವಾರಣೆ ಅಥವಾ ನಿರ್ಮೂಲವೇ ಇಂಥ ಪ್ರಯತ್ನಗಳೆಲ್ಲದರ ಅಂತಿಮ ಪರಿಣಾಮ. ಉತ್ಪಾದನೆಯಲ್ಲಿ ನಿರತವಾದ ಘಟಕಗಳ ನಡುವೆ ಅಲ್ಪ ಸ್ವಲ್ಪ ಒಪ್ಪಂದವೂ ಇಲ್ಲದ ಯಾವ ಉತ್ಪಾದನ ಕ್ಷೇತ್ರವೂ ಇಂದು ಬಹುಶಃ ಕಾಣಸಿಗಲಿಕ್ಕಿಲ್ಲ. ಏಕವ್ಯಕ್ತಿ ಉದ್ಯಮಗಳು ಕ್ರಮವಾಗಿ ಪಾಲುದಾರಿಕೆಗೂ ಕೂಡು–ಬಂಡವಾಳ ಕಂಪನಿಗಳಿಗೂ ಎಡೆ ಕೊಟ್ಟಿರುವ ವಿಕಾಸದ ಹಾದಿಯಲ್ಲಿ ಉದ್ಯಮಕೂಟವೇ ಅಂತಿಮ ಘಟ್ಟ.

ಈ ಬಗೆಯ ಸಂಘಟನೆಗೆ ಒಳಗಾದ ಘಟಕಗಳ ಸ್ವರೂಪಾನುಗುಣವಾಗಿ ಉದ್ಯಮಕೂಟಗಳನ್ನು ಮೂರು ತೆರನಾಗಿ ವಿಂಗಡಿಸುವುದು ಸಾಧ್ಯ :

**ಸಮತಲಕೂಟ (ವ್ಯಾಪಾರಕೂಟ):** ಇಂಥ ಕೂಟದಲ್ಲಿ ಕೂಡುವ ಘಟಕಗಳು ಒಂದೇ ಬಗೆಯ ವ್ಯಾಪಾರ ಮಾಡುವಂಥವು; ಅಥವಾ ಒಂದೇ ಬಗೆಯ ಉದ್ಯಮದಲ್ಲಿ ನಿರತವಾಗಿರುವಂಥವು (ಹಾರಿಸಾಂಟಲ್ ಕಾಂಬಿನೇಷನ್). ಉದಾಹರಣೆ: ಹಲವು ಕಾಗದ ಕಾರ್ಖಾನೆಗಳದೋ ಸಕ್ಕರೆ ಕಾರ್ಖಾನೆಗಳದೋ ಕೂಟ.

**ಉದಗ್ರಕೂಟ (ಅನುಕ್ರಮಕೂಟ):** ಒಂದೇ ಕೈಗಾರಿಕೆಯಲ್ಲಿನ ನಾನಾ ಉತ್ಪಾದನ ಘಟ್ಟಗಳು, ಅಥವಾ ತಳದಿಂದ ಮೇಲುಮುಖವಾಗಿಯೋ ತುದಿಯಿಂದ ಕೆಳಮೊಗನಾಗಿಯೋ ಒಂದರೊಡನೊಂದರ ಸಂಬಂಧವಿರುವ ನಾನಾ ಉದ್ಯಮಗಳು, ಅನುಕ್ರಮವಾಗಿ ಸೇರಿ ಸಂಭವಿಸಿದ ಕೂಟ (ವರ್ಟಿಕಲ್ ಕಾಂಬಿನೇಷನ್, ಸೀಕ್ವೆನ್ಸ್ ಕಾಂಬಿನೇಷನ್). ಉದಾಹರಣೆ: ಪ್ರಕಾಶನ ಸಂಸ್ಥೆಯೊಂದು ಮುದ್ರಣ ಸಂಸ್ಥೆಯೊಂದಿಗೂ ಅಚ್ಚುಕೂಟಉದ್ಯಮ ಕಾಗದದ ಕಾರ್ಖಾನೆಯೊಂದಿಗೂ ಮರದ ತಿಳ್ಳು (ವುಡ್ ಪಲ್ಪ್) ಕಾರ್ಖಾನೆಯೊಂದಿಗೂ ಕೂಡಿಕೆ.

**ವರ್ತುಲಕೂಟ (ಸಂಪೂರಕಕೂಟ, ಮಿಶ್ರಕೂಟ):** ಮೇಲೆ ಸೂಚಿಸಿದ ಯಾವ ಕ್ರಮವೂ ಇಲ್ಲದೆ, ಪರಸ್ಪರ ಸಂಬಂಧಿಗಳಾಗಿಲ್ಲದ ಉದ್ಯಮಗಳನ್ನು ಒಂದು ಮಾಡಿ ರಚಿಸಿದ ಕೂಟ (ಸರ್ಕ್ಯುಲರ್, ಕಾಂಪ್ಲಿಮೆಂಟರಿ ಅಥವಾ ಮಿಕ್ಸೆಡ್ ಕಾಂಬಿನೇಷನ್).

ಉದಾಹರಣೆ: ಒಂದು ಹತ್ತಿ ಗಿರಣಿಯೂ ಒಂದು ಸಕ್ಕರೆ ಕಾರ್ಖಾನೆಯೂ ಒಂದು ರಸಾಯನ ವಸ್ತು ಕಾರ್ಖಾನೆಯೂ ಒಂದು ಕಬ್ಬಿಣದ ಕಾರ್ಖಾನೆಯೂ ಸೇರಿ ಆದ ಕೂಟ. ಒಂದೇ ಬಗೆಯ ವ್ಯಾಪಾರ ಅಥವಾ ಉದ್ಯಮದಲ್ಲಿ ನಿರತವಾದ ಸಂಸ್ಥೆಗಳ ನಡುವಣ ಸ್ಪರ್ಧೆಯನ್ನು ನಿವಾರಿಸಬೇಕೆಂಬ ಮುಖ್ಯ ಉದ್ದೇಶದಿಂದ ಸಮತಲಕೂಟ ಹುಟ್ಟಿಕೊಳ್ಳುತ್ತದೆ. ಉತ್ಪಾದನೆಯ ಇಳಿತ, ಸಮಾನ ಬೆಲೆ ನಿಗದಿ, ಸಮಾನ ಮಾರಾಟ ಮುಂತಾದ ಕ್ರಮಗಳಿಂದ ಸ್ಪರ್ಧೆಯನ್ನು ಮೊಟಕು ಮಾಡುವುದು ಇಂಥ ಕೂಟಗಳ ಉದ್ದೇಶ. ಬೃಹದ್ಗಾತ್ರೋತ್ಪಾದನೆಯ ಅನುಕೂಲ ಗಳನ್ನೆಲ್ಲ ಪಡೆಯುವುದು ಇದರಿಂದ ಸಾಧ್ಯ. ಉದಗ್ರಕೂಟದಲ್ಲಿ ಇದು ಸಾಧ್ಯವಿಲ್ಲ. ಏಕೆಂದರೆ ಒಂದಾಗುವ ಘಟಕಗಳು ಬೇರೆ ಬೇರೆ ಪದಾರ್ಥಗಳನ್ನು ತಯಾರಿಸುತ್ತವೆ. ಸಮತಲಕೂಟದ ಇನ್ನೊಂದು ಅನುಕೂಲವೆಂದರೆ ಉತ್ಪಾದನ ಕಾರ್ಯದ ಸಂಯೋಜನೆ. ಕೆಲವು ಪರಿಣಿತರ ಸೇವೆಯನ್ನು ಘಟಕಕ್ಕಾಗಿ ಪಡೆಯುವುದು ಲಾಭದಾಯಕವಾಗದಾಗ ಈ ಕೂಟದಲ್ಲಿನ ಎಲ್ಲಾ ಉತ್ಪಾದನ ಘಟಕಗಳಿಗಾಗಿ ಅದನ್ನು ಪಡೆದುಕೊಳ್ಳಬಹುದು.

ಆದರೆ ಸಮತಲ ಕೂಟದಲ್ಲಿ ಕೆಲವು ನ್ಯೂನತೆಗಳಿವೆ. ಮಾರಾಟದ ಪೇಟೆಗಳ ಬಗ್ಗೆ ಎಂದೆಂದೂ ಭರವಸೆ ಹೊಂದಿರುವುದು ಸಾಧ್ಯವಿಲ್ಲ. ಕೂಟದಲ್ಲಿ ಸೇರಿದ ಘಟಕಗಳಿಗೆ ಕಚ್ಚಾಸಾಮಗ್ರಿ ಸರಬರಾಯಿ ಸರ್ವದಾ ಸುಸೂತ್ರವಾಗಿ ನಡೆಯುವುದೆಂಬ ಭರವಸೆಯೂ ಇರುವುದಿಲ್ಲ. ಆದರೆ ಕಚ್ಚಾಸಾಮಗ್ರಿ ಕೊಳ್ಳುವವರ ನಡುವೆ ನಿರುಪಾಧಿಕ ಸ್ಪರ್ಧೆ ಇಲ್ಲದಿರುವುದರಿಂದ ಅದರ ಉತ್ಪಾದಕರ ಮೇಲೆ ಒತ್ತಾಯ ಹೇರಿ ಪ್ರಭಾವ ಬೆಳೆಸಿಕೊಳ್ಳುವುದು ಸಾಧ್ಯ. ಇವರಂತೆಯೇ ಕಚ್ಚಾಸಾಮಗ್ರಿ ಉತ್ಪಾದಕರೂ ಒಂದಾಗಿ ಕೂಟ ರಚಿಸಿಕೊಂಡರೆ ಆಗ ಈ ಎರಡು ಕೂಟಗಳ ನಡುವೆ ಪರಸ್ಪರ ಶಕ್ತಿ ಪರೀಕ್ಷೆಯಾಗಬಹುದು. ಸಮತಲ ಕೂಟದಿಂದ ಏಕಸ್ವಾಮ್ಯಗಳು ಉದಿಸಬಹುದು. ಸಿದ್ಧವಸ್ತುವಿನ ಸರಬರಾಯಿ ಹಾಗೂ ಬೆಲೆಗಳು ಮಾರುಕಟ್ಟೆಯ ಬೆಲೆಗಳಿಗೆ ಅನುಗುಣವಾಗಿ ನಿರ್ಧಾರವಾಗುವ ಬದಲು ಈ ಕೂಟಗಳ ಹಿಡಿತಕ್ಕೆ ಸಿಕ್ಕಿ (ಅನುಭೋಗಿಗಳ) ಗ್ರಾಹಕರ ಹಿತಗಳಿಗೆ ಧಕ್ಕೆ ಬರಬಹುದು.

ಉದಗ್ರಕೂಟಗಳಿಂದ ಪದಾರ್ಥಗಳ ಸಂಗ್ರಹ, ಕ್ರಯವಿಕ್ರಯ, ಸಾಗಣೆ ಮುಂತಾದವು ಗಳಲ್ಲಿ ಉಳಿತಾಯ ಸಾಧಿಸಬಹುದು. ಒಂದು ಹಂತದ ಸಿದ್ಧವಸ್ತುವೇ ಇನ್ನೊಂದು ಹಂತದ ಕಚ್ಚಾಸಾಮಗ್ರಿಯಾಗಿದ್ದು, ಈ ಪದಾರ್ಥಗಳು ಅನುಕ್ರಮವಾಗಿ ಬಳಸಲ್ಪಡುವುದರಿಂದ ಜಾಹೀರಾತಿನ ಖರ್ಚಾಗಲಿ ದೀರ್ಘಕಾಲದ ದಾಸ್ತಾನಿನ ಅಗತ್ಯವಾಗಲಿ ಇರುವುದಿಲ್ಲ. ಕೂಟದಲ್ಲಿ ಅತ್ಯಂತ ಬುಡದಲ್ಲಿರುವ ಸಂಸ್ಥೆ ವಿನಾ ಮಿಕ್ಕೆಲ್ಲ ಸಂಸ್ಥೆಗಳಿಗೂ ಕಚ್ಚಾಸಾಮಗ್ರಿ ದೊರಕುವ ಖಾತರಿಯಿರುತ್ತದೆ. ಮಾರುಕಟ್ಟೆಯಲ್ಲೂ ಪದಾರ್ಥ ವಿಕ್ರಯ ಮಾಡುವ ಸಮಸ್ಯೆ ಮುಖ್ಯವಾಗಿ ಅಗ್ರ ಘಟಕದ ಘಟ್ಟಕ್ಕೆ ಸೀಮಿತವಾಗಿರುತ್ತದೆ.

ಆದರೆ ಈ ಕೂಟದಲ್ಲೂ ನ್ಯೂನತೆಗಳೂ ಇತಿಮಿತಿಗಳೂ ಇಲ್ಲದಿಲ್ಲ. ಈ ಕೂಟದ ನಾನಾ ಘಟ್ಟಗಳಲ್ಲಿ ಯಾವುದಾದರೂ ಒಂದು ಘಟ್ಟದಲ್ಲಿ ಏರುಪೇರು ಆದರೆ, ಆ ಕೂಟದ ಇಡಿಯ ಆರ್ಥಿಕ ವ್ಯವಸ್ಥೆಯೇ ಅಸ್ತವ್ಯಸ್ತವಾಗಬಹುದು. ಉತ್ಪಾದಕ ಘಟಕಗಳು ಬೇರೆ ಬೇರೆ ಘಟ್ಟವಾದ್ದರಿಂದ ಬೃಹದ್ಗಾತ್ರ ಉತ್ಪಾದನೆಯ ಅನುಕೂಲ ಹೆಚ್ಚಾಗಿ ಲಭಿಸುವುದಿಲ್ಲ.

ವರ್ತುಲಕೂಟದ ಹುಟ್ಟು ಸಾಮಾನ್ಯವಾಗಿ ಆಕಸ್ಮಿಕ; ಅಥವಾ ಉದ್ಯಮ ಶಕ್ತಿ ಗಳಿಸಬೇಕೆಂಬ ದುರಾಸೆಯ ಫಲ. ದೊಡ್ಡ ಉದ್ಯಮಪತಿಗಳೂ ಬಂಡವಾಳಗಾರರೂ ಸಾಧ್ಯವಾದಷ್ಟು ಮಟ್ಟಿಗೆ ಕೈಗಾರಿಕೆಗಳ ಮೇಲೆ ಹಿಡಿತಹೊಂದಲೂ ಪ್ರಭಾವ ಬೀರಲೂ ಆಸಕ್ತಿ ಹೊಂದಿರುತ್ತಾರೆ. ಕೂಟದಲ್ಲಿ ಸೇರುವ ಘಟಕಗಳ ಆಯ್ಕೆಯ ಹಿಂದೆ ಯಾವ ತರ್ಕವಾಗಲಿ ಕ್ರಮವಾಗಲಿ ಇರುವುದಿಲ್ಲ. ಬಹಳ ಹೆಚ್ಚೆಂದರೆ, ಒಂದು ಹತ್ತಿಗಿರಣಿಯೂ ಕಾಗದದ ಕಾರ್ಖಾನೆಯೂ ಸಕ್ಕರೆ ಕಾರ್ಖಾನೆಯೂ ಯಂತ್ರ ಕಾರ್ಖಾನೆಯೂ ಕೂಟದಲ್ಲಿ ಸೇರಿದರೆ ಯಂತ್ರ ಕಾರ್ಖಾನೆ ಇತರ ಘಟಕಗಳಿಗೆ ಯಂತ್ರವನ್ನು ಒದಗಿಸಬಹುದು; ಹತ್ತಿಯ ಗಿರಣಿಯಿಂದ ಎಲ್ಲ ಕಾರ್ಖಾನೆಗಳ ಕಾರ್ಮಿಕರೂ ಬಟ್ಟೆ ಕೊಳ್ಳುವ ಸೌಲಭ್ಯ ಪಡೆಯಬಹುದು. ಈ ಮಾರಾಟದಲ್ಲಿ ಒಂದಾಗಿರುವ ಘಟಕಗಳಿಗೆ ದ್ರವ್ಯ ಸೌಲಭ್ಯವೂ ಒದಗಬಹುದು.

ಕೂಟಗಳಲ್ಲಿ ಸೇರುವ ಘಟಕಗಳ ಉದ್ಯಮಗಳ ಸ್ವರೂಪದ ದೃಷ್ಟಿಯಿಂದಲೇ ಅಲ್ಲದೆ ಈ ಕೂಟಗಳ ರಚನೆಯ ದೃಷ್ಟಿಯಿಂದಲೂ ಇವನ್ನು ನಾನಾ ಗುಂಪುಗಳಾಗಿ ವಿಂಗಡಿಸುವುದು ಸಾಧ್ಯ. ಮಾರಾಟ ವಿಧಾನಗಳು, ಬೆಲೆ ನಿಯಂತ್ರಣ, ಪೇಟೆಯ ಹಂಚಿಕೆ, ಉತ್ಪತ್ತಿಯ ನಿಯಂತ್ರಣ ಮುಂತಾದವುಗಳ ವಿಚಾರವಾಗಿ ಸಂಸ್ಥೆಗಳು ತಂತಮ್ಮಲ್ಲೆ ಮಾಡಿಕೊಂಡ ಅನೌಪಚಾರಿಕ ಒಪ್ಪಂದಗಳು (ಇನ್‌ಫಾರ್ಮಲ್ ಅಗ್ರಿಮೆಂಟ್ಸ್) ಬಲು ಸಡಿಲ (**ನೋಡಿ–ಒಪ್ಪಂದಗಳು,– ಅನೌಪಚಾರಿಕ**). ಇವುಗಳ ಕಟ್ಟುಗಳನ್ನು ಮುರಿಯಲೂ ಸಾಧ್ಯ. ಇವು ಸಂಭಾವಿತರ ನಡುವಣ ಒಡಂಬಡಿಕೆಗಳು. ಇವಕ್ಕಿಂತ ಹೆಚ್ಚು ಬಿಗಿಯಾದ ಕೂಟಗಳು ಇವು : 1 ಸಮುಚ್ಚಯಗಳು (ಪೂಲ್ಸ್), 2 ವ್ಯವಹಾರ ಕೂಟಗಳು ಅಥವಾ ಮಾರಾಟ ಕೂಟಗಳು (ಕಾರ್ಟೆಲ್ಸ್), 3 ಕೂಟ ಸಂಸ್ಥೆಗಳು (ಟ್ರಸ್ಟ್ಸ್), 4 ಹಿತಾಸಕ್ತಿ ಸಮುದಾಯ (ಕಮ್ಯೂನಿಟಿ ಆಫ್ ಇಂಟರೆಸ್ಟ್ಸ್), 5 ಸೂತ್ರಧಾರೀ ಕಂಪನಿ (ಹೋಲ್ಡಿಂಗ್ ಕಂಪನಿ), 6 ಸಮೇಕನ (ಕನ್ಸಾಲಿಡೇಷನ್) ಮತ್ತು 7 ವ್ಯಾಪಾರ ಸಂಘಗಳು (ಟ್ರೇಡ್ ಅಸೋಸಿಯೇಷನ್ಸ್). ಇವುಗಳಿಗೆ ಆಯಾ ಶೀರ್ಷಿಕೆ ನೋಡಿ. (ಕೆ.ಆರ್.ಎಂ.ಎ.)

**ಉದ್ಯಮ ಘಟಕ:** ಒಂದೇ ಪದಾರ್ಥದ (ಕಮಾಡಿಟಿ) ತಯಾರಿಕೆಯಲ್ಲಿ ನಿರತವಾದ ಸ್ವತಂತ್ರಘಟಕ (ಫರ್ಮ್). ಇದು ಏಕವ್ಯಕ್ತಿ ಉದ್ಯಮವಾಗಿರಬಹುದು, ಪಾಲುದಾರಿಕೆಯಾಗಿರ ಬಹುದು, ಖಾಸಗಿ ಕಂಪನಿಯಾಗಿರಬಹುದು, ಸಾವಿರಾರು ಮಂದಿ ಷೇರುದಾರರನ್ನೂ ನೌಕರರನ್ನೂ ಉಳ್ಳ ಸಾರ್ವಜನಿಕ ಕಂಪನಿಯಾಗಿರುವುದೂ ಸಾಧ್ಯ. ಇದು ಕೈಗಾರಿಕೆಯ ಒಂದು ಅಂಗ. ಒಂದೇ ಬಗೆಯ ಪದಾರ್ಥಗಳನ್ನುತ್ಪಾದಿಸುವ ಅನೇಕ ಘಟಕಗಳ ಸಮೂಹಕ್ಕೆ ಕೈಗಾರಿಕೆಯೆಂದು ಹೆಸರು.

ಒಂದು ಕೈಗಾರಿಕೆಯಲ್ಲಿ ಸ್ಪರ್ಧೆಯ ಪರಿಸ್ಥಿತಿಯಿದ್ದರೆ ಒಂದಕ್ಕಿಂತ ಹೆಚ್ಚು ಉದ್ಯಮಘಟಕ ಗಳಾಗಿರುತ್ತವೆ. ಇಡೀ ಕೈಗಾರಿಕೆಗೆ ಒಂದೇ ಉದ್ಯಮ ಘಟಕವಿದ್ದರೆ ಅಲ್ಲಿ ಪರಿಪೂರ್ಣ ಏಕಸ್ವಾಮ್ಯವಿದೆಯೆಂದು ಅರ್ಥ (**ನೋಡಿ–ಏಕಸ್ವಾಮ್ಯ**). ಸ್ಪರ್ಧೆಯ ಪರಿಸ್ಥಿತಿಯಲ್ಲಿ ಕೈಗಾರಿಕೆ ಯಿಂದ ನಿರ್ಧಾರವಾದ ಬೆಲೆಯನ್ನೇ ಉದ್ಯಮ ಘಟಕ ಪುರಸ್ಕರಿಸುವುದಲ್ಲದೆ, ಅದಕ್ಕೆ ತಕ್ಕಂತೆ ತನ್ನ ಸರಕಿನ ಪ್ರಮಾಣವನ್ನು ಹೊಂದಿಸಿಕೊಳ್ಳುತ್ತದೆ. ಏಕಸ್ವಾಮ್ಯದಲ್ಲಿ ಉದ್ಯಮ ಘಟಕವೇ ಸರಕಿನ ಬೆಲೆಯನ್ನು ಅಥವಾ ಪರಿಮಾಣವನ್ನು ನಿರ್ಣಯಿಸುವ ಸಾಮರ್ಥ್ಯ ಹೊಂದಿರುತ್ತದೆ. (ಆರ್.ಕೆ.ಇ.)

**ಉದ್ಯಮಘಟಕ ಮೀಮಾಂಸೆ:** ಒಂದು ಉದ್ಯಮಘಟಕಕ್ಕೆ ಸಂಬಂಧಿಸಿದ ಬೆಲೆ, ಉತ್ಪತ್ತಿ, ಬೆಳವಣಿಗೆ ಮುಂತಾದ ಆರ್ಥಿಕ ಚರಗಳ ನಿರ್ಧಾರವನ್ನು ಕುರಿತ ಅರ್ಥ ಮೀಮಾಂಸೆ. ಈ ಮೀಮಾಂಸೆಯ ಎಲ್ಲೆಕಟ್ಟುಗಳನ್ನು ಖಚಿತವಾಗಿ ನಿರ್ಧರಿಸುವುದು ಕಷ್ಟ ಆದರೆ ಇಷ್ಟು ಮಾತ್ರ ಹೇಳಬಹುದು : ಉತ್ಪಾದನೆಗೆ ಬಳಸಲಾಗುವ ಗ್ರಾಸ (ಇನ್‌ಪುಟ್), ಉತ್ಪಾದನ ತಂತ್ರ ಮುಂತಾದವನ್ನು ಕುರಿತು ವಿಚಾರಮಾಡುವ ಉತ್ಪಾದನ ಮೀಮಾಂಸೆಯಿಂದ ಇದು ಭಿನ್ನವಾದದ್ದು. ಇದು ಪರಮಾವಧಿ ಉತ್ಪಾದನೆಯ ವಿಧಾನಗಳ ಅನ್ವೇಷಣೆಯಲ್ಲ. ಉತ್ಪಾದನ ಸಂಸ್ಥೆಯ ಸಂಘಟನೆಯನ್ನು ಕುರಿತ ವಿಚಾರಣೆಯೂ ಅಲ್ಲ. ಇಡೀ ಕೈಗಾರಿಕೆಯ ದೃಷ್ಟಿಯಿಂದ ವಿಚಾರ ಹರಿಯಿಸಿ, ಇದರಲ್ಲೊಂದು ಕ್ರಮವನ್ನು ಕಲ್ಪಿಸುವುದೇ ಇದರ ಉದ್ದೇಶ. ಒಂದೇ ಬಗೆಯ ಪದಾರ್ಥ ತಯಾರಿಕೆಯಲ್ಲಿ ತೊಡಗಿರುವ ನಾನಾ ಘಟಕಗಳ ನ್ನೊಳಗೊಂಡ ಕೈಗಾರಿಕೆಗೂ ಇದರಲ್ಲಿನ ಒಂದೊಂದು ಘಟಕಕ್ಕೂ ಇರುವ ಸಂಬಂಧದ ದೃಷ್ಟಿಯಿಂದ ನಡೆಸಿದ ಕಾರ್ಯ–ಕಾರಣ ವಿಚಾರಸರಣಿಯೇ ಉದ್ಯಮ ಘಟಕ ಮೀಮಾಂಸೆ.

ಉದ್ಯಮಘಟಕ ಮೀಮಾಂಸೆಯ ಚರಿತ್ರೆ ಇಂದು ನಿನ್ನೆಯದಲ್ಲ. 1838ರಷ್ಟು ಹಿಂದೆಯೇ ಕೂರ್ನೋ ಈ ಬಗ್ಗೆ ವಿಚಾರ ನಡೆಸಿದ್ದ. ಅದಕ್ಕೂ ಹಿಂದೆ ಸೂಚ್ಯವಾಗಿ ಇದನ್ನು ಕುರಿತ ಚರ್ಚೆ ನಡೆದಿತ್ತು. ಅನುಭೋಗ ಹಾಗೂ ವೈಯಕ್ತಿಕ ಇಷ್ಟಾನಿಷ್ಟಗಳ ಆಧಾರದ ಮೇಲೆ ರಚಿತವಾದ ಸಿದ್ಧಾಂತಗಳ ಬೆಳವಣಿಗೆಯ ಪರಿಣಾಮವಾಗಿ ಉದ್ಯಮಘಟಕವನ್ನು ಕುರಿತ ವಿಶಿಷ್ಟ ಮೀಮಾಂಸೆಯ ಆವಶ್ಯಕತೆ ಹೆಚ್ಚಾಗಿ ಕಂಡುಬಂದಿತು. ಈ ಶತಮಾನದ ಆದಿಯಿಂದ ಈ ವಿಚಾರಕ್ಕೆ ಹೆಚ್ಚು ಗಮನ ಸಂದಿದೆ.

**ಸ್ಥಿತಿ ಹಾಗೂ ಗತಿ ಸಿದ್ಧಾಂತಗಳು:** ಉದ್ಯಮಘಟಕ ಮೀಮಾಂಸೆಯನ್ನು ನಾನಾ ದೃಷ್ಟಿಗಳಿಂದ ವಿವೇಚಿಸುವುದು ಸಾಧ್ಯ. ಉದ್ಯಮಘಟಕದ ಸಮತೋಲ ಸ್ಥಿತಿಯ ಲಕ್ಷಣಗಳನ್ನು ಕುರಿತ ವಿವೇಚನೆಯೇ ಸ್ಥಿತಿ ಮೀಮಾಂಸೆ. ಪರಮಾವಧಿ ಲಾಭ ಪಡೆಯುವ ಏಕಸ್ವಾಮ್ಯದ ಸಮತೋಲನವನ್ನು ಕುರಿತ ವಿವೇಚನೆ ಸಾಂಗವಾಗಿ ನಡೆದಿದೆ. ಒಂದು ಪದಾರ್ಥ ಸರಬರಾಜು ಮಾಡುವ ಘಟಕ ಒಂದೇ ಆಗಿದ್ದಾಗ ಏಕಸ್ವಾಮ್ಯವಿರುತ್ತದೆ. ಇಂಥ ಸ್ಥಿತಿಯಲ್ಲಿ ಘಟಕದ ಉತ್ಪತ್ತಿಯ ವ್ಯತ್ಯಯಕ್ಕೆ ಅನುಸಾರವಾಗಿ ಒಟ್ಟು ಹುಟ್ಟುವಳಿಯೂ (ರೆವೆನ್ಯೂ) ವ್ಯತ್ಯಾಸಗೊಳ್ಳುತ್ತದೆ. ಉತ್ಪತ್ತಿ ಹಾಗೂ ಮಾರಾಟವಾದ ಪದಾರ್ಥ ಇವುಗಳ ಮೊತ್ತವೇ $x$ ಆಗಿದ್ದು, R ಇದರ ಹುಟ್ಟುವಳಿಯಾಗಿದ್ದರೆ, $R = f(x)$. ಉತ್ಪತ್ತಿಯ ಏರಿಳಿತಗಳಿಗೆ ಅನುಗುಣವಾಗಿ ಒಟ್ಟು ವೆಚ್ಚಗಳೂ (C) ವ್ಯತ್ಯಾಸವಾಗಿ, ಅದರೊಂದಿಗೆ ಏಕಸ್ವಾಮ್ಯದ ಸಹಜ ಲಾಭವೂ ಹೆಚ್ಚು–ಕಡಿಮೆಯಾಗುವುದೆಂಬುದು ನಿರ್ವಿವಾದ. R-C ಎಲ್ಲಿ ಪರಮಾವಧಿ ಯಾಗಿರುತ್ತದೋ ಅಲ್ಲಿ ಲಾಭವೂ ಪರಮಾವಧಿಯಾಗಿರುತ್ತದೆ. ಅಂಚಿನ ಹುಟ್ಟುವಳಿಗಿಂತ ಹೆಚ್ಚು ವೇಗವಾಗಿ ಅಂಚಿನ ವೆಚ್ಚ ಏರುತ್ತಿದ್ದರೆ ಅಥವಾ ಕಡಿಮೆಯ ವೇಗದಲ್ಲಿ ಇಳಿಯುತ್ತಿದ್ದರೆ ಉತ್ಪತ್ತಿ ಆಗ ಪರಮಾವಧಿ ಲಾಭದ ಘಟ್ಟದಲ್ಲಿದೆಯೆನ್ನಬಹುದು. ಮೇಲಣ ವಿವೇಚನೆಯಲ್ಲಿ ಬಳಸಲಾಗಿರುವ ಸಹಜಲಾಭವೆಂದರೇನೆಂಬುದನ್ನೂ ತಿಳಿಯುವುದು ಅವಶ್ಯ. ಉದ್ಯಮಿಯೂ ಆತನ ಉತ್ಪಾದನ ಘಟಕವೂ ಉತ್ಪಾದನ ಕ್ಷೇತ್ರದಲ್ಲಿ ಉಳಿಯಲು ಅವಶ್ಯವಾದಷ್ಟು ಲಾಭವೇ ಸಹಜಲಾಭ.

ಮುಂದೆ ಈ ಬಗ್ಗೆ ಪಿಗೂ ಹೆಚ್ಚಾಗಿ ವಿವೇಚನೆ ನಡೆಸಿದ್ದಾನೆ. ಪರಿಪೂರ್ಣ ಸ್ಪರ್ಧೆ ಹಾಗೂ ಏಕಸ್ವಾಮ್ಯಗಳೆರಡಕ್ಕೂ ಅನ್ವಯವಾಗುವ ಸ್ಥಿತ ಸಿದ್ಧಾಂತವೊಂದನ್ನು ಆತ ರಚಿಸಿದ. ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಸಮತೋಲ ಉತ್ಪತ್ತಿ ಬಿಂದುವಿನಲ್ಲಿ ಬೆಲೆ ಸ್ಥಿರವಾಗಿರುತ್ತದೆ. ಇಲ್ಲಿ ಅಂಚಿನ ಹುಟ್ಟುವಳಿಯ ಅಂಚಿನ ವೆಚ್ಚವೂ ಬೆಲೆಯೂ ಒಂದೇ ಸಮನಾಗಿರುತ್ತವೆ; ಅಂಚಿನ ವೆಚ್ಚ ಏರುವ ಪ್ರವೃತ್ತಿ ತೋರುತ್ತದೆ. ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಉದ್ಯಮ ಘಟಕಗಳ ಆಗಮನ–ನಿರ್ಗಮನಗಳ ಮೇಲೆ ನಿರ್ಬಂಧ ಇರುವುದಿಲ್ಲ; ನಿಗದಿಯಾದ ಬೆಲೆಗಳಲ್ಲಿ ಉತ್ಪಾದನಾಂಗಗಳು ಸಿಗುತ್ತವೆ. ಸಮತೋಲ ಸ್ಥಿತಿಯಲ್ಲಿ ಉತ್ಪಾದನೆಯ ಸರಾಸರಿ ವೆಚ್ಚವೂ ಬೆಲೆಗೆ ಸಮನಾಗಿಯೇ ಇರುತ್ತದೆ; ಅಲ್ಲದೆ ಇದು ಅತ್ಯಂತ ಕನಿಷ್ಠವಾದದ್ದಾಗಿರುತ್ತದೆ.

ಉತ್ಪಾದನ ಕ್ಷೇತ್ರದಲ್ಲಿ ಪರಿಪೂರ್ಣ ಸ್ಪರ್ಧೆಯ ಸ್ಥಿತಿಯಾಗಲಿ ಸಂಪೂರ್ಣ ಏಕಸ್ವಾಮ್ಯವಾಗಲಿ ಇರುವುದಿಲ್ಲ. ಪರಿಪೂರ್ಣ ಸ್ಪರ್ಧೆಯ ಎರಡು ಲಕ್ಷಣಗಳಾದ ಉದ್ಯಮ ಘಟಕಗಳ ಆಗಮನ–ನಿರ್ಗಮನ ಹಾಗೂ ಸರಾಸರಿ ವೆಚ್ಚ ಮತ್ತು ಬೆಲೆಗಳ ಸಮಾನತೆಗಳೊಂದಿಗೆ ಏಕಸ್ವಾಮ್ಯ ಪರಿಸ್ಥಿತಿಯೂ ಇರುವುದು ಸಾಧ್ಯವೆಂದು ಚೇಂಬರ್ಲಿನ್ ಹೇಳಿದ್ದಾನೆ. ಇಂಥ ಪರಿಸ್ಥಿತಿಯಲ್ಲಿ ಉತ್ಪಾದನೆಯಲ್ಲಿ ನಿರತವಾದ ಎಲ್ಲ ಉದ್ಯಮಘಟಕಗಳ ವೆಚ್ಚರೇಖೆಗಳೂ ಒಂದೇ ಆಗಿರುತ್ತವೆ. ನಕ್ಷೆ 1ರಲ್ಲಿ CC' ಎಂಬುದು ಯಾವುದಾದರೂ ಉದ್ಯಮಘಟಕದ ಸರಾಸರಿ ವೆಚ್ಚ ರೇಖೆ. ಉದ್ಯಮ ಘಟಕಗಳ ಆಗಮನ–ನಿರ್ಗಮನಗಳಿಗೆ ಪೂರ್ಣಾವಕಾಶವಿದ್ದು, ಎಲ್ಲ ಘಟಕಗಳೂ ಸಮಾನ ಬೆಲೆಗಳನ್ನು ವಿಧಿಸುತ್ತಿದ್ದ ಪಕ್ಷದಲ್ಲಿ DD' ಎಂಬುದು ಇಂಥ ಘಟಕವೊಂದರ ಬೇಡಿಕೆ ರೇಖೆ. ಈ ಘಟಕ ತನ್ನ ಪದಾರ್ಥದ ಬೆಲೆ ವ್ಯತ್ಯಾಸ ಮಾಡಿದ್ದೇ ಆದರೆ, ಈ ವ್ಯತ್ಯಾಸಕ್ಕೆ ಸ್ಪರ್ಧಿಘಟಕಗಳಲ್ಲಿ ಯಾವುವೂ ಯಾವ ಬಗೆಯ ಪ್ರಕ್ರಿಯೆಯನ್ನಾಗಲಿ ಪ್ರತಿಕ್ರಿಯೆಯನ್ನಾಗಲಿ ತೋರದಿದ್ದ ಪಕ್ಷದಲ್ಲಿ, ಈ ಘಟಕಕ್ಕೆ ಅನ್ವಯಿಸುವ ಬೇಡಿಕೆ ರೇಖೆಯೇ dd'.




ನಕ್ಷೆ 1

ಸಮತೋಲ ಸ್ಥಿತಿಯಲ್ಲಿ ಎಲ್ಲ ಘಟಕಗಳೂ ಸಹಜಲಾಭ ಗಳಿಸುವಂತಾಗುವವರೆಗೂ ಅವು ಸೂಕ್ತ ಹೊಂದಾಣಿಕೆ ಮಾಡಿಕೊಳ್ಳಬೇಕು. ತಾನು ಪರಮಾವಧಿ ಲಾಭ ಗಳಿಸುತ್ತಿರುವುದಾಗಿಯೇ ಪ್ರತಿ ಘಟಕವೂ ಭಾವಿಸುತ್ತದೆ. ಸ್ಪರ್ಧೆಯ ಕ್ಷೇತ್ರದಲ್ಲಿರುವ ಇತರ ಯಾವ ಘಟಕವೂ ತನ್ನ ಬೆಲೆ ನೀತಿಗೆ ಯಾವ ಬಗೆಯ ಪ್ರತಿಕ್ರಿಯೆಯನ್ನೂ ತೋರಿಸುವುದಿಲ್ಲವೆಂಬುದಾಗಿಯೂ ಅದರ ನಂಬಿಕೆ. ನಕ್ಷೆ 1ರ T ಎಂಬ ಬಿಂದು ಈ ಸ್ಥಿತಿಯನ್ನು ಸೂಚಿಸುತ್ತದೆ.

ಆದರೆ ಚೇಂಬರ್ಲಿನ್ ಊಹಿಸಿರುವ ಸರಳವ್ಯವಸ್ಥೆ ಎಲ್ಲೂ ಇಲ್ಲ. ಅರ್ಥವ್ಯವಸ್ಥೆ ಬಲು ಸಂಕೀರ್ಣವಾದದ್ದು. ಸ್ವತಂತ್ರ ಸಮಾಜಗಳಲ್ಲಿ ಪರಿಪೂರ್ಣ ಸ್ಪರ್ಧೆಯಾಗಲಿ, ಪರಿಪೂರ್ಣ ಏಕಸ್ವಾಮ್ಯವಾಗಲಿ, ಸ್ಪರ್ಧೆ–ಏಕಸ್ವಾಮ್ಯಗಳ ಸರಳ ಮೇಳವಾಗಲಿ ಎಲ್ಲೂ ಕಾಣಸಿಗುವುದಿಲ್ಲ. ಸಾಮಾನ್ಯವಾಗಿ ಕಂಡುಬರುವುದು ಅಪರಿಪೂರ್ಣ ಸ್ಪರ್ಧೆ–ಅಲ್ಪಸಂಖ್ಯಾಸ್ವಾಮ್ಯ (ಅಲಿಗೊಪೊಲಿ). ಅನೇಕ ಅರ್ಥಶಾಸ್ತ್ರಜ್ಞರು ಇದರ ವಿವರಣೆ ಕೊಟ್ಟು, ಈ ಬಗ್ಗೆ ವಿಚಾರಧಾರೆ ಹರಿಸಿದ್ದಾರೆ. ಆದರೆ ಇದು ಯಾವುದೂ ಇನ್ನೂ ಸಂಪೂರ್ಣ ಸ್ವೀಕಾರಯೋಗ್ಯವಾಗಿಲ್ಲ.

ಮೇಲೆ ಹೇಳಿದ್ದೆಲ್ಲ ಸ್ಥಿತಿ ದೃಷ್ಟಿಯಾಯಿತು. ಅರ್ಥವ್ಯವಸ್ಥೆ ಸದಾ ಪ್ರವಹನಶೀಲ. ಈ ಚಲನ ಸ್ವಭಾವವನ್ನೇ ಪ್ರಧಾನವಾಗಿ ಗುರುತಿಸಿದವರು ಕೆಲವೇ ಮಂದಿ. ಒಂದು ವ್ಯವಸ್ಥೆಯಲ್ಲಿ ಎಷ್ಟು ಅಜ್ಞೇಯ ಅಂಶಗಳಿವೆಯೋ ಅಷ್ಟೊಂದು ಸಮೀಕರಣಗಳಿರುತ್ತವಾದ್ದರಿಂದ ನಿರ್ದಿಷ್ಟ ಸಿದ್ಧಾಂತ ಮಾಡುವುದು ಕಷ್ಟಕರ. ಒಂದು ಉತ್ಪಾದನೆಯಲ್ಲಿ ನಿರತವಾದ ನಾನಾ ಹಿತಾರ್ಥಗಳನ್ನು ಕುರಿತ ಚರ್ಚೆ ನಡೆಸಿ ಗತಿಸಿದ್ಧಾಂತ ರಚನೆಯ ಯತ್ನ ಮಾಡಿರುವವನು ಜೆ.ಆರ್.ಹಿಕ್ಸ್. ಉದ್ಯಮಘಟಕದ ಉತ್ಪಾದನಾನುಭವಕ್ಕೆ ಅನುಗುಣವಾಗಿ ಅದರ ವೆಚ್ಚಗಳು ಹೇಗೆ ವ್ಯತ್ಯಾಸಗೊಳ್ಳುವುವೆಂಬುದನ್ನೂ ಹೊಸ ಸಮತೋಲ ಸ್ಥಿತಿಗೆ ನಾನಾ ಬಲಗಳು (ಫೋರ್ಸಸ್) ಹೊಂದಿಕೊಳ್ಳಲು ಅನುಸರಿಸುವ ಹಾದಿಯನ್ನೂ ಕುರಿತ ವಿವೇಚನೆ ಈಚೆಗೆ ವಿಸ್ತಾರವಾಗಿ ಬೆಳೆಯುತ್ತಿದೆ.

**ಪರಮಾವಧಿ ಲಾಭ ಗಳಿಕೆಯ ಉದ್ದೇಶ:** ಉದ್ಯಮಿಗಳು ಪರಮಾವಧಿ ಲಾಭಗಳಿಸುವ ಉದ್ದೇಶದಿಂದ ಕಾರ್ಯಪ್ರವೃತ್ತರಾಗುತ್ತಾರೆಂಬುದಾಗಿ ಊಹಿಸಿಕೊಂಡು ಈ ದೃಷ್ಟಿಯಿಂದ ಸಿದ್ಧಾಂತ ಪ್ರತಿಪಾದನೆ ಮಾಡಿರುವವರೂ ಉಂಟು. ಇಂಥ ಊಹೆ ವಾಸ್ತವಿಕವಾದದ್ದೆಂಬುದೇನೋ ನಿಜ. ಈ ಊಹೆ ತುಂಬ ಸರಳ ಹಾಗೂ ಸಹಜವಾದ್ದರಿಂದ ಇದರ ಆಧಾರದ ಮೇಲೆ ನಡೆಸಿದ ವಿವೇಚನೆ ಹೆಚ್ಚು ಸಿಂಧುವೆನಿಸುವುದೂ ಸಹಜವೇ. ಆದರೂ ಈ ಊಹೆಯ ಬಗ್ಗೆ ನಾನಾ ಬಗೆಯ ವಾದ–ಪ್ರತಿವಾದಗಳು ಉದ್ಭವಿಸಿವೆ. ಅನೇಕ ಉದ್ಯಮಿಗಳು ಕೊನೆಯ ಪೈಸದವರೆಗೂ ಲಾಭ ಹಿಂಡಲು ಉಜ್ಜುಗಿಸದಿರಬಹುದು. ಅವರು ಬಹಿರಂಗವಾಗಿ ಆಡುವ ಮಾತುಗಳಂತೂ ಇಂಥ ಅಭಿಪ್ರಾಯ ಮೂಡಿಸುವುದಿಲ್ಲ. ನ್ಯಾಯವಾದ ಲಾಭ ಬಂದರೆ ಸಾಕೆಂದು ಅವರು ಮಾತಾಡುತ್ತಾರೆ. ಆದ್ದರಿಂದ ಕೆಲವರು ಈ ಪರಮಾವಧಿ ಲಾಭ ಗಳಿಕೆ ಉದ್ದೇಶದ ಬದಲು ಇತರ ಊಹೆಗಳನ್ನು ಮುಂದೊಡ್ಡುತ್ತಾರೆ. ಉದ್ಯಮಿಗಳು ಉಪಯುಕ್ತತೆಯನ್ನು ಪರಮಾವಧಿಗೊಳಿಸುವ ಉದ್ದೇಶ ಹೊಂದಿರು ತ್ತಾರೆಂಬುದು ಒಂದು ಊಹೆ. ಇದನ್ನು ಹೆಚ್ಚಿಸಬೇಕಾದರೆ ಪ್ರಯತ್ನ ಹೆಚ್ಚಿಸಬೇಕು. ಇದು ಅಧಿಕಗೊಂಡಷ್ಟೂ ಉತ್ಪತ್ತಿ ಹೆಚ್ಚುವುದು ಸಹಜ. ಈ ಬಗೆಯ ವಿಚಾರಸರಣಿಯ ಬೆನ್ನ ಹಿಂದೆ ಸಾಗಿದರೆ ಆಗ ಪರಂಪರೆಯಾಗಿ ಬೆಳೆದುಬಂದಿರುವ ವಿಚಾರಸರಣಿ ಮಾಯವಾಗುತ್ತದೆ; ಸ್ಪರ್ಧೆ, ಸಮತೋಲ ಸ್ಥಿತಿಯಲ್ಲಿನ ಕನಿಷ್ಠ ಸರಾಸರಿ ವೆಚ್ಚ ಮುಂತಾದ ಮಾತೆಲ್ಲ ಅನ್ವಯಿಸುವುದಿಲ್ಲ. ಅಂತೂ ಉತ್ಪಾದನೆಯ ಹಿಂದೆ ಗರಿಷ್ಠ ಲಾಭೋದ್ದೇಶವೇ ಅಲ್ಲದೆ ಉಪಯುಕ್ತತೆಯ ಉದ್ದೇಶವೂ ಇರಬಹುದೆಂಬುದನ್ನೇ ಆಧರಿಸಿ ಅನೇಕ ಅರ್ಥಶಾಸ್ತ್ರಜ್ಞರು ನಾನಾ ಬಗೆಯ ವಾದಸರಣಿಗಳನ್ನು ರಚಿಸಿದ್ದಾರೆ. ಉದ್ಯಮಘಟಕಗಳ ವರ್ತನೆಯನ್ನ ವಲೋಕಿಸಿ ಅನೇಕ ಬಗೆಯ ವಾದಗಳು ಬಂದಿವೆ. ಆದರೆ ಇವುಗಳಲ್ಲಿ ಅನೇಕ ವಾದಗಳು ವಿವರಣಾತ್ಮಕವೇ ಹೊರತು ವಿವೇಚನಾತ್ಮಕವೆನ್ನಿಸಲಾರವು. ಏಕೆ ಎಂಬುದನ್ನು ಹೇಳುವುದಕ್ಕಿಂತ ಹೇಗೆ ಎಂಬುದನ್ನೇ ಇವು ಒಕ್ಕಣಿಸುತ್ತವೆನ್ನಬಹುದು. *

ಪರಮಾವಧಿ ಲಾಭಗಳಿಕೆಯ ವರ್ತನೆಯ ಇನ್ನೊಂದು ಬಗೆಯ ವಿವರಣೆಯೆಂದರೆ ಪರಿಸರದ ಅಂಚಿನ ವರ್ತನೆ. ಉದ್ಯಮಿಯಾಗಲಿ ಅನುಭೋಗಿಯಾಗಲಿ ಪರಮಾವಧಿ ಲಾಭದೃಷ್ಟಿಯಿಂದಲೇ ವರ್ತಿಸುವುದು ಸಹಜ. ಇದಕ್ಕಾಗಿ ಇಬ್ಬರೂ ಅಧಿಕಾಧಿಕವಾಗಿ ಈ ಉದ್ದೇಶಸಾಧನೆಗಾಗಿ ಶ್ರಮಿಸುತ್ತಾರೆ. ಆದ್ದರಿಂದ ಅಂಚಿನ ವರ್ತನೆಯೇ ಪರಮಾವಧಿ




ನಕ್ಷೆ 2

ಲಾಭ ಪಡೆಯುವಂಥ ವರ್ತನೆಯೆನ್ನಬಹುದು. ಅಂಚಿನ ಘಟ್ಟದಲ್ಲಿ ಮಾಡಿದ ವೆಚ್ಚಕ್ಕೆ ಸಮನಾದ ಲಾಭ ಬರುವಂತೆ ಅನುಭೋಗಿಯೂ ಉತ್ಪಾದಕನೂ ಯತ್ನಿಸುತ್ತಾರೆ. ಈ ಸ್ಥಿತಿ ಮುಟ್ಟುವವರೆಗೂ ಇವರ ಯತ್ನ ಮುಂದುವರಿಯುತ್ತದೆ. ಅರಿತೋ ಅರಿಯದೆಯೋ ಪ್ರತಿಯೊಬ್ಬರೂ ಈ ರೀತಿಯಾಗಿ ವರ್ತಿಸುವರೆಂಬ ದೃಷ್ಟಿ ಸತ್ಯಕ್ಕಿಂತ ದೂರವಿರಲಾರದು. ಈ ಅಂಚಿನ ವರ್ತನೆಯನ್ನು ನಕ್ಷೆ 2ರಲ್ಲಿ ವಿವರಿಸಲಾಗಿದೆ.

ಈ ನಕ್ಷೆಯ ಮೇಲರ್ಧದಲ್ಲಿನ ವಕ್ರರೇಖೆಯೇ ಲಾಭದ ರೇಖೆ (ಊಹೆ). ಈ ರೇಖೆಯ ಎತ್ತರವೇ ಲಾಭದ ಮೊತ್ತವನ್ನು ಸೂಚಿಸುತ್ತದೆ. ಈ ರೇಖೆಯ ಎಡತುದಿ OX ಅಕ್ಷವನ್ನು ತಾಕುವ ಬಿಂದುವಿನವರೆಗೂ ಉತ್ಪತ್ತಿಯಿಂದ ಲಾಭವೇ ಇರುವುದಿಲ್ಲ. ಅಲ್ಲಿಂದಾಚೆಗೆ ಅದು ಕ್ರಮವಾಗಿ ಏರುತ್ತ ನಡೆಯುತ್ತದೆ. ಉತ್ಪತ್ತಿ OA ಆಗಿರುವಾಗ ಒಟ್ಟು ಲಾಭ AA'. ಇದು ಪರಮಾವಧಿ ಲಾಭ. ಉತ್ಪತ್ತಿಯನ್ನು ಇನ್ನೂ ಹೆಚ್ಚಿಸಿದರೆ ಆಗ ಒಟ್ಟು ಲಾಭ ಇಳಿಯುತ್ತದೆ. ಈ ವೃತ್ತದ ಬಲತುದಿ OX ಅಕ್ಷವನ್ನು ಸೋಕುವಲ್ಲಿ ಲಾಭ ಸೊನ್ನೆ. ಈ ನಕ್ಷೆಯ ಕೆಳ ಅರ್ಧದಲ್ಲಿ OY ಎಂಬುದು ಅಂಚಿನ ಹುಟ್ಟುವಳಿ ಹಾಗೂ ಅಂಚಿನ ವೆಚ್ಚವನ್ನು ಸೂಚಿಸುತ್ತದೆ. ಅಂಚಿನ ಹುಟ್ಟುವಳಿ ರೇಖೆಯದು (MR) ಬಲದಿಕ್ಕಿನಲ್ಲಿ ಇಳಿಗತಿ. ಅಂಚಿನ ವೆಚ್ಚರೇಖೆಯದು (MC) ಬಲಗಡೆಗೆ ಏರುಗತಿ.

ಉತ್ಪತ್ತಿಯ ಮೊತ್ತ OA ಆಗಿರುವಾಗ ಅಂಚಿನ ಹುಟ್ಟುವಳಿಯೂ ಅಂಚಿನ ವೆಚ್ಚವೂ ಸಂಧಿಸುತ್ತವೆ. ಅದೇ ಪರಮಾವಧಿ ಲಾಭದ ಘಟ್ಟ (AA'). ಈ ಸಮತೋಲಸ್ಥಿತಿಯಲ್ಲಿ ಉದ್ಯಮಘಟಕ ತನ್ನ ಉತ್ಪಾದನ ಪ್ರಮಾಣವನ್ನಾಗಲಿ ವ್ಯವಸ್ಥೆಯನ್ನಾಗಲಿ ಬದಲಿಸಲಿಚ್ಛಿಸುವುದಿಲ್ಲ.

**ಸಂಭವನೀಯತಾ ಸಿದ್ಧಾಂತಗಳು:** ಮೇಲೆ ಹೇಳಿದ ನವ್ಯ ಅಭಿಜಾತ ಸಿದ್ಧಾಂತಗಳಿಗಿಂತ ಭಿನ್ನವಾದ ಕೆಲವು ಸಿದ್ಧಾಂತಗಳಿವೆ. ಒಂದು ಉದ್ಯಮಘಟಕದ ಸ್ಥಿತ ಸಮತೋಲನ ದೃಷ್ಟಿಯನ್ನು ಇಲ್ಲಿ ಬಿಡಲಾಗಿದೆ. ಒಂದು ಘಟಕದ ವರ್ತನೆಯ ಪರಿಣಾಮಗಳನ್ನು ಚರ್ಚಿಸುವ ಬದಲು ಹಲವು ಘಟಕಗಳ ದೊಡ್ಡ ಗುಂಪುಗಳ ವರ್ತನೆಯನ್ನು ಇಲ್ಲಿ ವಿವೇಚಿಸಲಾಗಿದೆ. ಲಾಭವನ್ನು ಪರಮಾವಧಿಗೊಳಿಸುವ ಉದ್ದೇಶವನ್ನು ಮರೆಯುವ ಅಗತ್ಯವಿಲ್ಲವಾದರೂ ಈ ಉದ್ದೇಶದ ಪರಿಣಾಮವನ್ನು ಮೊಟಕುಗೊಳಿಸುವ ಅಸಂಖ್ಯಾತ ಪ್ರವೃತ್ತಿಗಳು ಒಂದು ವ್ಯವಸ್ಥೆಯಲ್ಲಿ ಕೆಲಸಮಾಡುತ್ತಿರುತ್ತವೆ. ಆದ್ದರಿಂದ ಉತ್ಪಾದನೆಗೆ ಸಂಬಂಧಿಸಿದ ಯಾವ ಒಂದು ಅಂಶವನ್ನು ಬದಲಿಸಿದರೂ ಅದರ ಪರಿಣಾಮವಾಗಿ ಒಂದು ಉದ್ಯಮಘಟಕ ಹೇಗೆ ವರ್ತಿಸಬಹುದೆಂಬುದನ್ನು ಸ್ಥೂಲವಾಗಿ ಮಾತ್ರ ಹೇಳುವುದು ಸಾಧ್ಯ.

ಉದ್ಯಮಘಟಕ ಮೀಮಾಂಸೆಯಲ್ಲಿ ಈ ದೃಷ್ಟಿಯನ್ನು ಪ್ರಥಮತಃ ಪ್ರತಿಪಾದಿಸಿದವನು ಆಲ್ಫ್ರೆಡ್ ಮಾರ್ಷಲ್. ದೀರ್ಘಕಾಲದ ಸರಬರಾಜು ಬೆಲೆಯ ನಿರ್ಣಯವನ್ನು ಕುರಿತು ವಿವೇಚಿಸುವಾಗ ಆತ ಪ್ರಾತಿನಿಧಿಕ ಉದ್ಯಮಘಟಕದ ಕಲ್ಪನೆಯನ್ನು ಮುಂದಿಟ್ಟ. ಈ ಘಟಕ ವಾಸ್ತವ ಜಗತ್ತಿನಲ್ಲಿ ಇರುವಂಥದಲ್ಲ. ಬೆಲೆ ನಿರ್ಣಯದ ಸ್ಥಿತ ಸಿದ್ಧಾಂತವನ್ನೂ ಗತಿಶೀಲ ಸಂಭವನೀಯತಾ ಸಿದ್ಧಾಂತವನ್ನೂ ಜಂಟಿ ಹಾಕಲೂ ಆತ ಅನುಸರಿಸಿದ ವಿಧಾನ ಇದು.

(ಆರ್.ಕೆ.ಇ.)

ಈ ಸ್ಥಿತಿ–ಗತಿ ದೃಷ್ಟಿಗಳ ಸಂಯೋಜನೆಯನ್ನು ಮಾರ್ಷಲನ ಅನಂತರದ ಅರ್ಥಶಾಸ್ತ್ರಜ್ಞರು ತಳ್ಳಿಹಾಕಿದರು. ಇದು ಮುಂದೆ ಸುಮಾರು ಕಾಲು ಶತಮಾನಕಾಲ ಉದಾಸೀನಕ್ಕೆ ಗುರಿಯಾಯಿತು. ಆದರೆ ಈಚೆಗೆ (1961) ವುಲ್ಫನಿಂದ ಇದಕ್ಕೆ ಕಾಯಕಲ್ಪವಾಯಿತು. ಉದ್ಯಮಘಟಕಗಳ ಏರಿಳಿತಗಳಿಗೆ ಉತ್ಪನ್ನದ ಬೆಲೆಗಳು ಕಾರಣವೆಂದ ಮೇಲೆ ಪ್ರತಿಯೊಂದು ಬೆಲೆಗೂ ಒಂದು ಬಗೆಯ ಗಾತ್ರದ ಘಟಕಗಳ ಸಂಯೋಜನೆಯಾಗಿರಬಹುದು. ಈ ಬಗೆಯ ವಿವೇಚನಾ ವಿಧಾನದ ಸಹಾಯದಿಂದ ಬೆಲೆ, ಉತ್ಪತ್ತಿ ಹಾಗೂ ಉದ್ಯಮಗಾತ್ರ ವಿತರಣೆಗಳನ್ನು ಏಕಕಾಲದಲ್ಲಿ ನಿರ್ಣಯಿಸುವುದು ಸಾಧ್ಯವಾಗುತ್ತದೆ. ಇದು ವಸ್ತುಸ್ಥಿತಿಗೆ ತೀರ ಹತ್ತಿರದ ವಿವರಣೆಯೆನ್ನಬಹುದು.

**ಉದ್ಯಮಘಟಕ ಹಾಗೂ ಕೈಗಾರಿಕೆ:** ಈ ಎಲ್ಲ ವಿವೇಚನೆಗಳಿಂದ ಉದ್ಯಮ ಘಟಕ ಹಾಗೂ ಕೈಗಾರಿಕೆಗಳನ್ನು ಕುರಿತ ವ್ಯಾಖ್ಯೆಯ ನಿಖರತೆಯನ್ನೇ ಪ್ರಶ್ನಿಸುವಂತಾಗಿದೆ. ಒಂದೇ ಬಗೆಯ ಉತ್ಪನ್ನವನ್ನು ತಯಾರಿಸುವ ಎಲ್ಲ ಉದ್ಯಮ ಘಟಕಗಳ ಮೊತ್ತವೇ ಕೈಗಾರಿಕೆ–ಎನ್ನುವುದೇ ಸಂದೇಹಾಸ್ಪದ. ಪರಿಪೂರ್ಣ ಸ್ಪರ್ಧೆಯ ಸ್ಥಿತಿಯಲ್ಲಿ ಎಲ್ಲ ಘಟಕಗಳು ಒಂದೇ ಬಗೆಯ ಪದಾರ್ಥ ತಯಾರಿಸಲು ತೊಡಗುವುದೆಂದು ಊಹಿಸಿಕೊಳ್ಳಬಹುದು. ಸ್ಪರ್ಧೆ ಅಪರಿಪೂರ್ಣವಾದ್ದರಿಂದ ನಾನಾಬಗೆಯ ತೊಡಕುಗಳು ಉದ್ಭವಿಸುತ್ತವೆ. ಒಂದು ಕೈಗಾರಿಕೆಯ ಎಲ್ಲ ಘಟಕಗಳೂ ಒಂದೇ ಬಗೆಯ ಪದಾರ್ಥ ತಯಾರಿಸುವುವೆನ್ನುವುದೂ ಸತ್ಯದೂರ. ಹಾಗಾದರೆ ಅವೆಲ್ಲ ಸೇರಿ ಒಂದು ಕೈಗಾರಿಕೆ ಆಗುವುದು ಹೇಗೆ? ಆದರೆ ಈ ಬಗೆಯ ಕೂದಲು ಸೀಳುವ ವಾದವನ್ನು ದೂರ ಇಟ್ಟು, ಸ್ಥೂಲವಾಗಿ ಮಾರ್ಷಲನ ಕೈಗಾರಿಕೆಯ ವ್ಯಾಖ್ಯೆ ಇಟ್ಟುಕೊಂಡು ವಿವೇಚನೆ ನಡೆಸುವುದು ಫಲದಾಯಕವೆಂಬುದನ್ನು ಸ್ಥೂಲವಾಗಿ ಒಪ್ಪಿಕೊಳ್ಳಲಾಗಿದೆ.

ಒಟ್ಟು ಕೈಗಾರಿಕೆಯ ಉತ್ಪತ್ತಿಯ ವ್ಯತ್ಯಾಸದಿಂದ ಪ್ರತಿಯೊಂದು ಉದ್ಯಮ ಘಟಕದ ಉತ್ಪಾದನೆಯ ವೆಚ್ಚಗಳ ಮೇಲೆ ಆಗುವ ಪರಿಣಾಮವೂ ಬಹಳವಾಗಿ ವಿಚಾರಣೆಗೆ ಒಳಗಾಗಿದೆ. ಈ ಬಗೆಯ ಪ್ರಭಾವ ಬೀರುವ ಬಲಗಳು ಬಾಹ್ಯವಾದಂಥವು. *

**ಉದ್ಯಮಿ:** ಉತ್ಪಾದನೆಗೆ ಅಗತ್ಯವಾದ ನಾಲ್ಕು ಅಂಗಗಳಲ್ಲಿ ಕೊನೆಯದಾದ ಸಂಘಟನೆಯ ಕಾರ್ಯವನ್ನು ನಿರ್ವಹಿಸುವ ವ್ಯಕ್ತಿ (ಆಂಟ್ರಪ್ರನರ್). ಒಂದು ಉದ್ಯಮ ಸಂಸ್ಥೆಯ ಸ್ಥಾಪನೆ ನಿರ್ವಹಣೆಗಳ ಬಗ್ಗೆ ತೀರ್ಮಾನ ಕೈಗೊಳ್ಳುವುದು ಈತನ ಹೊಣೆ. ಬಂಡವಾಳಗಳನ್ನು ಯಾವ ಪ್ರಮಾಣದಲ್ಲಿ ಸಂಯೋಜಿಸಬೇಕು ಎಂಬುದನ್ನು ನಿರ್ಣಯಿಸುವವನೂ ಈ ಸಂಬಂಧವಾದ ಎಲ್ಲ ಬಗೆಯ ನಷ್ಟಸಂಭವಗಳ ಜವಾಬ್ದಾರಿ ಹೊರುವವನೂ ಈತನೇ. ಅನುಭೋಗಿಗಳ ಬಳಕೆಗಾಗಿ ನಾನಾ ಪದಾರ್ಥಗಳು ಒದಗಿಬರುವುದು ಒಂದು ದೇಶದ ಉದ್ಯಮಿಗಳೆಲ್ಲರೂ ಈ ಬಗ್ಗೆ ಕೈಗೊಳ್ಳುವ ತೀರ್ಮಾನದ ಒಟ್ಟು ಫಲ.

ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಉದ್ಯಮಿಯ ಕಾರ್ಯಭಾರ ನಾನಾ ತೆರನಾದದ್ದು. ಪ್ರಾರಂಭಿಸಬೇಕಾದ ಉದ್ಯಮದ ಯೋಜನೆ ನಿರ್ಮಿಸುವುದು ಈತನ ಮೊದಲ ಹೊಣೆ.

ಏನನ್ನು, ಎಲ್ಲಿ ಹಾಗೂ ಎಷ್ಟು ಉತ್ಪಾದಿಸಬೇಕು ಎಂಬುದನ್ನು ಕೂಲಂಕಷವಾಗಿ ಈತ ವಿಚಾರಿಸಿ ನಿರ್ಧರಿಸಬೇಕು. ಯಾವ ಪದಾರ್ಥಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆಯಿದೆಯೋ ಅದನ್ನು, ಅದಕ್ಕೆ ಬೇಡಿಕೆ ಇರುವಷ್ಟು ಮಟ್ಟಿಗೆ, ಉತ್ಪಾದಿಸಲು ಈತ ತೀರ್ಮಾನಿಸುತ್ತಾನೆ. ಈತ ಉತ್ಪಾದಿಸುವ ಸ್ಥಳ ನಿರ್ಧರಿಸುವಾಗ ಉತ್ಪಾದನೆಗೆ ಬೇಕಾಗುವ ಎರಡು ಅಂಶಗಳನ್ನೂ ಗಮನಿಸಬೇಕು. ಕಚ್ಚಾಸಾಮಗ್ರಿಯ ಪೂರೈಕೆ ಸಾಕಷ್ಟು ಪರಿಮಾಣದಲ್ಲಿ ಸುಲಭವಾಗಿ ದೊರೆಯುವಂತಿರಬೇಕು. ಉತ್ಪಾದನೆಯ ಸ್ಥಳ ಮಾರುಕಟ್ಟೆಗೆ ಆದಷ್ಟು ಸಮೀಪವಾಗಿರಬೇಕು ಅಥವಾ ಸುಲಭವಾಗಿ ಶೀಘ್ರವಾಗಿ ಕಡಿಮೆ ವೆಚ್ಚದಲ್ಲಿ ಮಾರುಕಟ್ಟೆಗೆ ಸಾಮಗ್ರಿ ಸಾಗಿಸುವಂತಿರಬೇಕು.

ಉದ್ಯಮದ ಮೇಲ್ವಿಚಾರಣೆ, ನಿರ್ದೇಶನ ಹಾಗೂ ನಿಯಂತ್ರಣಗಳು ಉದ್ಯಮಿಯ ಎರಡನೆಯ ಮುಖ್ಯ ಕಾರ್ಯಭಾರ. ಉತ್ಪಾದನೆಗೆ ಅಗತ್ಯವಾದ ಇತರ ಮೂರು ಅಂಗಗಳಾದ ಭೂಮಿ, ಶ್ರಮ ಹಾಗೂ ಬಂಡವಾಳಗಳು ತೃಪ್ತಿಕರವಾಗಿ ಕೆಲಸಮಾಡುವಂತೆ ನೋಡಿಕೊಳ್ಳುವುದು ಈತನ ಹೊಣೆ. ಉತ್ಪಾದನ ಕಾರ್ಯದಲ್ಲಿ ಈತ ಅನೇಕರ ಸಹಾಯ ಪಡೆಯಬಹುದಾದರೂ ಇದರ ನಿರ್ದೇಶನ ನಿಯಂತ್ರಣಗಳು ಸಂಪೂರ್ಣವಾಗಿ ಇವನ ಕೈಯಲ್ಲೇ ಇರುತ್ತವೆ. ಕಾರ್ಯಸಂಯೋಜಕನೂ ಕಾರ್ಯ ಪ್ರಾರಂಭಿಸುವವನೂ ಇವನೇ ಆಗಿರುವುದರಿಂದ ಕೈಕೊಂಡ ಕಾರ್ಯದ ಜಯಾಪಜಯಗಳಿಗೆ ಈತನೇ ಹೊಣೆ.

ಒಂದು ಉದ್ಯಮ ಸ್ಥಾಪಿಸುವ ತೀರ್ಮಾನ ಮಾಡಿದ ಮೇಲೆ ಈ ಬಗ್ಗೆ ಅಗತ್ಯವಾದ ಸಂಘಟನೆ ಮಾಡುವುದೂ ಉದ್ಯಮಿಯ ಹೊಣೆಗಾರಿಕೆ. ಇದಕ್ಕೆ ಬೇಕಾಗುವ ಹಣವನ್ನು ರೂಢಿಸಿಕೊಂಡು, ಯಂತ್ರೋಪಕರಣಗಳನ್ನೂ ಕಚ್ಚಾಸಾಮಗ್ರಿಗಳನ್ನೂ ಕೊಂಡು, ಕಾರ್ಮಿಕರನ್ನೂ ಇತರ ಸಿಬ್ಬಂದಿಯನ್ನೂ ನೇಮಿಸಿಕೊಂಡು ಆಯಾ ಕೆಲಸಗಳಿಗೆ ತಕ್ಕ ಪರಿಶ್ರಮ ಹೊಂದಿರುವವರಿಗೆ ಆಯಾ ಕೆಲಸಗಳನ್ನೇ ಕೊಟ್ಟು ಸೂಕ್ತ ಶ್ರಮವಿಂಗಡಣೆ ಮಾಡುವುದೂ ಉತ್ಪಾದಿಸಿದ ಪದಾರ್ಥವನ್ನು ಮಾರುಕಟ್ಟೆಗೆ ಸಾಗಿಸುವ ವ್ಯವಸ್ಥೆ ಮಾಡುವುದೂ ಈತನಿಗೆ ಸೇರಿದ ಕೆಲಸ.

ನಿರುಪಾಧಿಕ ಅರ್ಥವ್ಯವಸ್ಥೆಯಲ್ಲಿ ಉತ್ಪಾದನ ಕಾರ್ಯದ ನಡುವೆ ಬರತಕ್ಕ ಗಂಡಾಂತರಗಳೂ ಅನಿಶ್ಚಿತತೆಗಳೂ ಅನೇಕ. ಉತ್ಪನ್ನದ ಬಗ್ಗೆ ಇರುವ ಬೇಡಿಕೆಯ ಬಗ್ಗೆ ತಪ್ಪು ಕಲ್ಪನೆಯಿಂದಲೂ ಉತ್ಪಾದನೆಯ ಅಂಗಗಳಲ್ಲಿ ಯಾವುದಕ್ಕಾದರೂ ಥಟ್ಟನೆ ಅಭಾವ ಪರಿಸ್ಥಿತಿ ಒದಗುವುದರಿಂದಲೂ ಬೇರೊಂದು ಪದಾರ್ಥದಿಂದ ಅನಿರೀಕ್ಷಿತವಾಗಿ ಸ್ಪರ್ಧೆ ಒದಗುವುದರಿಂದಲೂ ಉತ್ಪಾದನಾಂಗಗಳನ್ನು ಯಾವ ಪ್ರಮಾಣದಲ್ಲಿ ಸಂಯೋಜಿಸಬೇಕೆಂಬ ಬಗ್ಗೆ ತಪ್ಪು ತೀರ್ಮಾನ ಮಾಡುವುದರಿಂದಲೂ ಅನುಭೋಗಿಗಳ ರುಚಿಭೇದವೇ ಮುಂತಾದ ಕಾರಣಗಳಿಂದ ಉತ್ಪನ್ನಕ್ಕೆ ಇದ್ದಕ್ಕಿದ್ದಂತೆಯೇ ಬೇಡಿಕೆ ಕುಸಿದು ಹೋಗುವುದರಿಂದಲೂ ಉದ್ಯಮಿ ಅಗಾಧ ಕ್ರಿಯೆಗೂನಷ್ಟವನ್ನೆದುರಿಸ ಬೇಕಾಗಬಹುದು. ಇವುಗಳಲ್ಲಿ ಕೆಲವು ಬಗೆಯ ನಷ್ಟಗಳನ್ನು ವಿಮೆಯೇ ಮುಂತಾದ ವಿಧಾನಗಳ ಮೂಲಕ ತುಂಬಿಕೊಳ್ಳುವುದು ಸಾಧ್ಯ. ಆದರೆ ಇಂಥ ಯಾವ ಕ್ರಮಗಳಿಂದಲೂ ನಿವಾರಿಸಲಾಗದಂಥ ಕೆಲವು ಅನಿಶ್ಚಿತತೆಗಳೂ ನಷ್ಟಸಂಭವಗಳೂ ಉಳಿದೇ ಉಳಿಯುತ್ತವೆ. ಉತ್ಪಾದನೆಯ ಕರ್ಮಕ್ಕೂ ಬೇಡಿಕೆಯ ಉದ್ಯಮಕ್ಕೂ ನಡುವಣ ದಾರಿ ಅಂಕು ಡೊಂಕು; ಕಾಲ ಬಲು ಹೆಚ್ಚು. ಉತ್ಪಾದನೆಯ ಗಾತ್ರ ಹೆಚ್ಚು. ಆದ್ದರಿಂದ ಮುನ್ನರಿಯಲಾಗದ, ಊಹೆಗೂ ನಿಲುಕದ ನಾನಾ ಸಂಕಷ್ಟಗಳು ಎದುರಾಗುವುದು ಸಹಜ. ಇವುಗಳ ಅಂತಿಮ ಹೊಣೆ ಉದ್ಯಮಿಯದು.

ಉತ್ಪಾದನೆಯಲ್ಲಿ ಹೊಸ ಹೊಸ ವಿಧಾನಗಳನ್ನು ಅಳವಡಿಸುವುದೂ ಆಗಿಂದಾಗ್ಗೆ ಸೂಕ್ತ ಮಾರ್ಪಾಟು ಮಾಡುವುದೂ ಉದ್ಯಮಿಯ ಇನ್ನೊಂದು ಕಾರ್ಯಭಾರ. ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಮೇಲೆ ಕಣ್ಣಿಟ್ಟು ಸ್ಪರ್ಧಿಗಳು ಜಾರಿಗೆ ತರುತ್ತಿರುವ ಸುಧಾರಣೆಗಳನ್ನು ಪರಿಶೀಲಿಸುತ್ತಿದ್ದು, ಅನುಭೋಗಿಗಳ ಆವಶ್ಯಕತೆಗಳನ್ನು ಗಮನಿಸುತ್ತಿದ್ದು ತನ್ನ ಉದ್ಯಮ ವಿಧಾನವನ್ನು ನವೀನವಗೊಳಿಸುವುದೂ ಸಾಧ್ಯವಾದರೆ ತನ್ನ ಪದಾರ್ಥಗಳ ಗುಣಮಟ್ಟ ಏರಿಸಿ ಬೆಲೆ ಇಳಿಸಲು ಸಾಧ್ಯವೇ ಎಂಬುದರ ಬಗ್ಗೆ ಸರ್ವದಾ ಪ್ರಯೋಗಶೀಲವಾಗಿರುವುದೂ ಉದ್ಯಮಿಯ ಮತ್ತೊಂದು ಕಾರ್ಯಭಾರ.

ಈ ಕಾರ್ಯಭಾರಗಳ ದೃಷ್ಟಿಯಲ್ಲಿ ಇಂದಿನ ಉದ್ಯಮಿಗೆ ಅನೇಕ ಗುಣಗಳಿರುವುದು ಆವಶ್ಯಕ :

ಮೊದಲನೆಯದಾಗಿ ಇವನಲ್ಲಿ ನಾಯಕತ್ವದ ಗುಣ ಇರಬೇಕು. ಕಾರ್ಯನಿರ್ವಹಣೆಯ ಸಮಯದಲ್ಲಿ ಈತನ ಸಂಪರ್ಕ ಪಡೆಯುವ ಸಿಬ್ಬಂದಿವರ್ಗದ ಅನುಕಂಪವನ್ನೂ ವಿಶ್ವಾಸವನ್ನೂ ಗಳಿಸಿಕೊಳ್ಳಬೇಕು. ಮನುಷ್ಯಸ್ವಭಾವವನ್ನರಿತು ಅದರಂತೆ ಎಲ್ಲರೊಂದಿಗೂ ವ್ಯವಹರಿಸುವುದು ಒಂದು ಮುಖ್ಯ ಗುಣ.

ಎರಡನೆಯದಾಗಿ ಈತ ತನ್ನ ಕಾರ್ಯಭಾರದ ಸಂಪೂರ್ಣಜ್ಞಾನದ ಜೊತೆಗೆ ಜಗತ್ತಿನ ಮಾರುಕಟ್ಟೆಯ ಜ್ಞಾನವನ್ನೂ ಪಡೆದಿರಬೇಕು. ಕಾರ್ಯ ಪ್ರಾರಂಭಿಸಲು ಅಗತ್ಯವಾದ ಯಂತ್ರೋಪಕರಣಗಳನ್ನೂ ಕಚ್ಚಾಸಾಮಗ್ರಿಯನ್ನೂ ಖರೀದಿಸುವಾಗ ಅವುಗಳ ಗುಣದೋಷಗಳನ್ನು ಕಂಡುಹಿಡಿಯುವ ಪರಿಣತಿಯೇ ಅಲ್ಲದೆ ಉತ್ಪಾದಿಸಿದ ಪದಾರ್ಥಗಳನ್ನು ಮಾರುಕಟ್ಟೆಯಲ್ಲಿ ಹೇಗೆ ಯಾವ ಸಮಯದಲ್ಲಿ ವಿಕ್ರಯಿಸಬೇಕೆಂಬುದರ ಅರಿವೂ ಇರಬೇಕಾದ್ದು ಅವಶ್ಯ.

ವಿಷಮಪರಿಸ್ಥಿತಿಯನ್ನು ಎದುರಿಸುವ ಧೈರ್ಯ ಈತನ ಮತ್ತೊಂದು ಅವಶ್ಯ ಗುಣ. ಉದ್ಯಮ ನಿರ್ವಹಣೆ ಒಂದು ಮಹಾಸಾಹಸ. ಕೈಕೊಂಡ ಕಾರ್ಯದಲ್ಲಿ ಯಶಸ್ಸು ದೊರಕುವುದು ಯಾವಾಗಲೂ ನಿಶ್ಚಿತವಲ್ಲ. ತುಂಬಲಾಗದ ಹಾನಿಯೂ ಆಗಬಹುದು. ಇಂಥ ಅನಿವಾರ್ಯವಾದ ದುರ್ಭರ ಪ್ರಸಂಗಗಳಲ್ಲಿ ಇವನಿಗೆ ಇದೊಂದೇ ರಕ್ಷೆ.

ನಾಲ್ಕನೆಯದಾಗಿ ಉದ್ಯಮಿ ಸದಾ ಜಾಗ್ರತೆವಹಿಸುವುದಲ್ಲದೆ ದಿಟ್ಟತನದ ನಿರ್ಣಯ ತೆಗೆದುಕೊಳ್ಳಬೇಕು. ಕಾರ್ಯನಿರ್ವಹಣೆಯ ಸಮಯದಲ್ಲಿ ಲಾಭದಾಯಕ ಅವಕಾಶ ದೊರೆತಾಗ ಅನುಮಾನಿಸದೆ ಜಾಗ್ರತೆಯಿಂದ ಜಾಣ ಹಾಗೂ ದಿಟ್ಟ ನಿರ್ಣಯ ತೆಗೆದುಕೊಂಡು ವ್ಯವಹಾರ ಲಾಭದಾಯಕವಾಗಿ ಪರಿಣಮಿಸುವಂತೆ ಅದನ್ನು ಪರಿವರ್ತಿಸಿಕೊಳ್ಳಬೇಕು. ಅತ್ಯಲ್ಪ ವ್ಯತ್ಯಾಸವಾದರೂ ಅದರಿಂದ ಅನರ್ಥವಾಗಬಹುದು.

ಐದನೆಯದಾಗಿ ಉದ್ಯಮ ಸಾಹಸಿ ಒಳ್ಳೆಯ ಪ್ರಯೋಗಶೀಲನಾಗಿರಬೇಕಲ್ಲದೆ ವ್ಯಾವಹಾರಿಕ ಬುದ್ಧಿಯನ್ನೂ ಪಡೆದಿರುವುದು ಅವಶ್ಯ. (ಕೆ.ಆರ್.ಎಂ.)

ಉದ್ಯಮಿಯನ್ನು ಇಂಗ್ಲಿಷಿನಲ್ಲಿ ಆಲಂಕಾರಿಕವಾಗಿ ಕ್ಯಾಪ್ಟನ್ ಆಫ್ ಇಂಡಸ್ಟ್ರಿ ಎಂದು ಕರೆಯುತ್ತಾರೆ. ಹಡಗಿನ ನಾಯಕನಾದವನು ಅದರ ಚಾಲಕ ಸಿಬ್ಬಂದಿಯನ್ನು ನಿರ್ವಹಿಸಿ, ನಿರ್ದೇಶಿಸಿ, ಚಾಲಕರನ್ನು ಸರಿಯಾಗಿ ಮುನ್ನಡೆಸಿ ಸಮುದ್ರದ ಏರುಪೇರುಗಳ ಬಗ್ಗೆ ಮುನ್ನೆಚ್ಚರಿಕೆ ಕೊಡಬೇಕಾಗುತ್ತದೆ. ಇದೇ ರೀತಿ ಒಬ್ಬ ಉದ್ಯಮಿ ಹಣ ಒದಗಿಸಿಕೊಂಡು ಉದ್ಯಮ ನಡೆಸ ಬೇಕಾಗುತ್ತದೆ. ತನ್ನ ನಿರ್ವಹಣ ಸಾಮರ್ಥ್ಯದಿಂದ ಸಂಬಂಧಪಟ್ಟ ಜನಗಳನ್ನು ನಿರ್ದೇಶಿಸಿ, ಮುನ್ನಡೆಸಿ, ತನ್ನ ವ್ಯಾಪಾರದ ಅಭಿವೃದ್ಧಿ ಮತ್ತು ವಿಸ್ತರಣೆಯ ಉದ್ದೇಶಗಳಿಗೋಸ್ಕರವಾಗಿ ಪರಿಣಾಮಕಾರಿಯಾದ ಮುನ್ನೆಚ್ಚರಿಕೆ ನೀಡಬೇಕಾಗುತ್ತದೆ. ಕೈಗಾರಿಕಾ ಬೆಳವಣಿಗೆ ಕಚ್ಚಾ ಸಾಮಗ್ರಿಯ ಸರಬರಾಜು ಮತ್ತು ಕಾರ್ಮಿಕರ ದುಡಿಮೆಗಳಷ್ಟೇ ಮುಖ್ಯವಲ್ಲ. ತಯಾರಿಕೆಯ ಇತರ ಎಲ್ಲ ಅಂಶಗಳನ್ನೂ ವೈಜ್ಞಾನಿಕವಾಗಿ ಸಂಘಟಿಸಿ, ಸಾಧ್ಯವಾದಷ್ಟು ಕಡಿಮೆ ವೆಚ್ಚದಲ್ಲಿ ಪದಾರ್ಥಗಳನ್ನು ಉತ್ಪಾದಿಸುವಂಥ ಉದ್ಯಮಶೀಲತೆಯೇ ಕೈಗಾರಿಕಾಭಿವೃದ್ಧಿಗೆ ಅತ್ಯಾವಶ್ಯಕ ಅಂಶ. ಆದ್ದರಿಂದಲೇ ಉದ್ಯಮಿಯನ್ನು ಇಂಗ್ಲಿಷಿನಲ್ಲಿ ಈ ರೀತಿ ಕರೆಯುವುದು ಸಮಂಜಸ ವಾಗಿದೆ. (ಸಿ.ಸಿ.ಪಿ.)

ಬಂಡವಾಳ ಅರ್ಥವ್ಯವಸ್ಥೆಯಲ್ಲಂತೂ ಉದ್ಯಮಿಯ ಪಾತ್ರ ಅತ್ಯವಶ್ಯ. ಆಧುನಿಕ ಕೈಗಾರಿಕೆಯಲ್ಲಿ ಕನಿಷ್ಠ ವೆಚ್ಚದಲ್ಲಿ ಗರಿಷ್ಠ ಉತ್ಪಾದನಾಂಗಗಳನ್ನು ಹೊಂದಿಸುವ ಈ ಪ್ರವರ್ತಕನಿಲ್ಲದಿದ್ದರೆ ಸಮಾಜಕ್ಕೆ ವಿಶೇಷ ಪ್ರಾವೀಣ್ಯದ ಅನುಕೂಲಗಳು ಲಭಿಸುತ್ತಿರಲಿಲ್ಲ. ಅಷ್ಟರಮಟ್ಟಿಗೆ ಸಮಾಜದ ಆರ್ಥಿಕ ಅಭಿವೃದ್ಧಿ ಕುಂಠಿತವಾಗುತ್ತಿತ್ತೆಂಬುದು ನಿರ್ವಿವಾದ.

ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಸರ್ಕಾರವೇ ಎಲ್ಲ ಆರ್ಥಿಕ ಚಟುವಟಿಕೆಗಳ ಮೇಲೆ ಒಡೆತನ ಹಾಗೂ ನಿಯಂತ್ರಣವಿಟ್ಟುಕೊಳ್ಳುವುದಷ್ಟೇ ಅಲ್ಲದೆ ತಾನೇ ಉದ್ಯಮಿಯ ಪಾತ್ರ ವಹಿಸುತ್ತದೆ. ಅಲ್ಲಿ ಖಾಸಗಿ ರಂಗಕ್ಕೆ ವಿಶೇಷ ಅವಕಾಶವಿಲ್ಲ. ಆದರೂ ಉದ್ಯಮ ನಡೆಸುವ ಹೊಣೆ ಹೊರಬಲ್ಲ ದಕ್ಷನಾಯಕತ್ವದ ಆವಶ್ಯಕತೆ ಅಲ್ಲೂ ಉಂಟು. ಮಿಶ್ರ ಅರ್ಥವ್ಯವಸ್ಥೆಯಲ್ಲಿ ಸರ್ಕಾರಿ ವಲಯ ಹಾಗೂ ಖಾಸಗಿ ವಲಯಗಳು ಒಂದಕ್ಕೊಂದು ಪೂರಕವಾಗಿ ಕಾರ್ಯಮಾಡಬೇಕಾಗುತ್ತದೆ. ಖಾಸಗಿ ವಲಯದಲ್ಲಿ ಉದ್ಯಮಶೀಲತೆ ವೃದ್ಧಿಗೊಂಡು ದೇಶದಲ್ಲಿ ಬಂಡವಾಳ ವಿನಿಯೋಗ ತೃಪ್ತಿಕರವಾಗಿ ಸಾಗಬೇಕಾದರೆ ಸರ್ಕಾರಿ ವಲಯ ಅದಕ್ಕೆ ತಕ್ಕ ಪ್ರೋತ್ಸಾಹ, ಸಹಕಾರ ಹಾಗೂ ಸಹಾಯ ನೀಡುವುದು ಅವಶ್ಯ. ಸರ್ಕಾರೀ ಮತ್ತು ಖಾಸಗಿ ವಲಯಗಳಲ್ಲಿ ಉದ್ಯಮಶೀಲತೆ ಪರಸ್ಪರ ಹೊಂದಾಣಿಕೆಯ ಮಾರ್ಗವನ್ನನುಸರಿಸಿ ದೇಶದ ಅಭಿವೃದ್ಧಿ ಸಾಧಿಸಬೇಕಾಗುತ್ತದೆ.

ಉತ್ಪಾದನೆಯ ಇತರ ಮೂರು ಅಂಗಗಳಂತೆ ಉದ್ಯಮಿಯ ಕಾರ್ಯವಾದ ಸಂಘಟ ನೆಯೂ ಒಂದು ಅಂಗವೆಂಬುದನ್ನು ಅನೇಕ ಅರ್ಥಶಾಸ್ತ್ರಜ್ಞರು ಒಪ್ಪುವುದಿಲ್ಲ. **(ನೋಡಿ– ಉತ್ಪಾದನಾಂಗಗಳು)**

ಆಧುನಿಕ ವ್ಯವಹಾರ ಸಂಸ್ಥೆಗಳಲ್ಲಿ ಉದ್ಯಮಿಯ ಕಾರ್ಯಾಂಗವನ್ನು ಗುರುತಿಸುವುದು ಕಷ್ಟ. ಏಕವ್ಯಕ್ತಿ ಸಂಸ್ಥೆಯಲ್ಲಿ ಅದರ ಮಾಲೀಕನೇ ಉದ್ಯಮಿ. ಬಂಡವಾಳ ತರುವವನೂ ಸಂಸ್ಥೆಯ ವ್ಯವಸ್ಥಾಪನ ಕಾರ್ಯ ನಡೆಸುವವನೂ ಉದ್ಯಮಕ್ಕೆ ಸಂಬಂಧಿಸಿದಂತೆ ಎಲ್ಲ ನಷ್ಟಕ್ಕೂ ಹೊಣೆಗಾರನಾಗುವವನೂ ಅವನೇ. ಪಾಲುದಾರಿಕೆ ಸಂಸ್ಥೆಯಲ್ಲಿ ಇವೆಲ್ಲವೂ ಪಾಲುದಾರರಲ್ಲಿ ಸಮನಾಗಿ ಹಂಚಿಕೆಯಾಗುತ್ತವೆ. ಆದರೆ ಮಿತಹೊಣೆಯ ಸಾರ್ವಜನಿಕ ಕಂಪನಿಗಳಲ್ಲಿ ಹೀಗಲ್ಲ. ನಷ್ಟದ ಹೊಣೆ ಷೇರುದಾರರದು. ನೀತಿ ನಿರ್ಧರಿಸುವವರೂ ತೀರ್ಮಾನ ಕೈಕೊಳ್ಳುವವರೂ ನಿರ್ದೇಶಕರು. ಪೌರಸಭೆಯ ಅಧೀನದಲ್ಲಿರುವ ಉದ್ಯಮದ ಅಂತಿಮ ಹೊಣೆ ಆ ಪ್ರದೇಶದ ಪೌರರದು. ಇದರ ನಿರ್ವಹಣೆ ಇದಕ್ಕಾಗಿಯೇ ನೇಮಕವಾದ ಮಂಡಲಿಯದು. ರಾಷ್ಟ್ರೀಕರಣಗೊಂಡ ಉದ್ಯಮಗಳ ಹೊಣೆ ಹೊರುವವರು ತೆರಿಗೆದಾರರು. ಇವುಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಹೊಣೆ ಸಂಸತ್ತು ಮತ್ತು ಇದರಿಂದ ಅಧಿಕಾರ ಪಡೆದ ಆಡಳಿತಗಾರರಿಗೆ ಸೇರಿದ್ದು.

ಅಭಿವೃದ್ಧಿ ಹೊಂದದ ದೇಶಗಳಲ್ಲಿ ಅಜ್ಞಾನ ಹಾಗೂ ಅಂಧಶ್ರದ್ಧೆಗಳು ತುಂಬಿ ತುಳುಕಾಡುತ್ತಿರುವಾಗ ಅವುಗಳನ್ನು ತೊಡೆದುಹಾಕಿ ಆಧುನಿಕ ವಿಜ್ಞಾನ ಯುಗದ ಗತಿಶೀಲ ಸಮಾಜ ನಿರ್ಮಿಸಬೇಕಾದರೆ ಸರ್ಕಾರವೇ ಆರ್ಥಿಕಚಟುವಟಿಕೆಗಳಿಗೆ ಚಾಲನೆ ಕೊಡುವ ಆವಶ್ಯಕತೆ ಹೆಚ್ಚಾಗಿದೆ. ಅಂದರೆ ಜನತೆಗೆ ತಕ್ಕ ತರಬೇತಿ ದೊರೆತು ಅನುಕರಣೆಗೆ ಪ್ರೇರಣೆ ದೊರೆಯುತ್ತದೆ. ಇಂಥ ದೇಶಗಳಲ್ಲಿ ಜನತೆ ಉದ್ಯಮಿಗಳಾಗಲು ಉತ್ಸುಕರಿದ್ದರೂ ಕೆಳಮಟ್ಟದ ಆದಾಯದಿಂದಾಗಿ ಬಂಡವಾಳ ಶೇಖರಣೆ ಹಾಗೂ ನಿಯೋಜನೆಯ ಸಾಮರ್ಥ್ಯ ಇಲ್ಲದಿರುವುದರಿಂದ ಉದ್ಯಮಶೀಲತೆಗೆ ಹೆಚ್ಚಿನ ಅವಕಾಶ ಇರುವುದಿಲ್ಲ. ಈ ಕೊರತೆಯ ನಿವಾರಣೆ ಸರ್ಕಾರದಿಂದ ಮಾತ್ರ ಸಾಧ್ಯ. ಸರ್ಕಾರೀ ವಲಯವೇ ಉದ್ಯಮ ಸ್ಥಾಪಿಸಿ ಆರ್ಥಿಕ ವ್ಯವಸ್ಥೆಯಲ್ಲಿ ನಾಯಕತ್ವ ವಹಿಸಬೇಕಾಗುತ್ತದೆ. ದೇಶದಲ್ಲಿಯ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಹೆಚ್ಚು ಪದಾರ್ಥಗಳ ಉತ್ಪಾದನೆಗೆ ಸಹಾಯಕವಾಗಲು ಭಾರಿ ವೆಚ್ಚದಿಂದ ವಿದ್ಯುಚ್ಛಕ್ತಿ ಹಾಗೂ ಯಂತ್ರ ಸಾಮಗ್ರಿಗಳನ್ನು ಉತ್ಪಾದಿಸಲೂ ಉತ್ಪಾದಿಸಿದ ಪದಾರ್ಥದ ಸಾಗಾಣಿಕೆಗಾಗಿ ಭಾರಿ ವೆಚ್ಚದ ರೈಲ್ವೇ ಹಾಗೂ ರಸ್ತೆಗಳನ್ನು ನಿರ್ಮಿಸಲೂ ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ. ಎಲ್ಲಕ್ಕೂ ಹೆಚ್ಚಾಗಿ ಇಂಥ ದೇಶಗಳಲ್ಲಿ ಇಂದು ಉದ್ಯಮಿಗೆ ಇಲ್ಲದಿರುವ ಗೌರವ ಹಾಗೂ ಸ್ಥಾನಮಾನಗಳು ದೊರೆಯುವಂತೆ ವಾತಾವರಣ ನಿರ್ಮಿಸುವುದೂ ಸರ್ಕಾರದ ಕರ್ತವ್ಯವೆನಿಸಿದೆ. ಹೀಗಾಗಿ ಎಲ್ಲ ದೃಷ್ಟಿಗಳಿಂದ ದೇಶದಲ್ಲಿ ಆರ್ಥಿಕ ಚೈತನ್ಯ ತುಂಬಲು ಸರ್ಕಾರವೇ ಉದ್ಯಮಿಯ ಪಾತ್ರ ನಿರ್ವಹಿಸಬೇಕೆಂಬ ವಾದವಿದೆ. (ಕೆ.ಆರ್.ಎಂ.)

**ಉದ್ಯಾನ:** ಅಲಂಕಾರ ಸಸ್ಯಗಳನ್ನು ಉಪಯುಕ್ತ ಹಾಗೂ ಸಂತೋಷದಾಯಕ ರೀತಿಯಲ್ಲಿ ಶಾಸ್ತ್ರೀಯವಾಗಿ ಬೆಳೆಸಿರುವ ಸ್ಥಳವೇ ಉದ್ಯಾನ (ಪಾರ್ಕ್). ದಣಿದು ಬಂದ ಮನುಷ್ಯ ಸಸ್ಯಸಮೂಹದ ತಂಪು ಮತ್ತು ಆಕರ್ಷಕ ಪರಿಸರದಲ್ಲಿ ಚೈತನ್ಯವನ್ನೂ ಮನೋರಂಜನ ಯನ್ನೂ ಪಡೆಯಲು ಮಾಡಿರುವ ಈ ಏರ್ಪಾಡು ಪ್ರಾಚೀನಕಾಲದಿಂದಲೂ ನಡೆದು ಬಂದಿದೆ. ಉದ್ಯಾನಕಲೆ ರಸಿಕನಾದ ಮಾನವನ ಕೈಯಲ್ಲಿ ಕಾಲಾನುಸಾರ ಪರಿವರ್ತನೆಗೊಂಡು ಇಂದು ಒಂದು ಶಾಸ್ತ್ರವಾಗಿ ಪರಿಣಮಿಸಿದೆ. ಈ ಕಲೆಗೆ ಸಸ್ಯವಿಜ್ಞಾನದ ಹಿನ್ನೆಲೆಯೂ ಸೌಂದರ್ಯಪ್ರಜ್ಞೆಯೂ ಬೇಕು.

ಉದ್ಯಾನಗಳು ಮನುಷ್ಯನಿರ್ಮಿತ. ಇವು ಭೌಗೋಳಿಕ ಪರಿಸ್ಥಿತಿ, ಹವಾಗುಣ ಮೊದಲಾದ ನೈಸರ್ಗಿಕ ಕಾರಣಗಳ ಜೊತೆಗೆ ಜನರ ಸೌಂದರ್ಯದೃಷ್ಟಿಯನ್ನೂ ವಿಶೇಷವಾಗಿ ಅವಲಂಬಿಸಿವೆ. ಒಂದು ಉದ್ಯಾನವನ್ನು ನಿರ್ಮಿಸುವ ಮೊದಲು ಆ ಸ್ಥಳದಲ್ಲಿರುವ ಗುಡ್ಡ, ತಗ್ಗು, ಕೆರೆ, ತೊರೆ ಮುಂತಾದ ನೈಸರ್ಗಿಕ ಸನ್ನಿವೇಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವನ್ನು ಪೂರ್ಣವಾಗಿ ಅಳವಡಿಸಿಕೊಳ್ಳುವಂಥ ಪ್ರಾಯೋಗಿಕ ಆಲೇಖ್ಯ ತಯಾರಿಸಬೇಕು. ಉದ್ಯಾನಗಾರಿಕೆಯಲ್ಲಿ ಹೆಚ್ಚು ಪರಿಶ್ರಮವಿರುವ ವ್ಯಕ್ತಿಗೆ ಇದನ್ನು ತೋರಿಸಿ ಸೂಕ್ತ ಸಲಹೆಗಳನ್ನು ಪಡೆದು ಅನಂತರ ಕೆಲಸಕ್ಕೆ ಕೈಹಾಕುವುದು ಒಳ್ಳೆಯದು.

ಲಾಲ್‌ಬಾಗ್, ಬೆಂಗಳೂರು

ಭಾರತೀಯ ಸಂಸ್ಕೃತಿಗೆ ನಿಸರ್ಗವೇ ತಳಹದಿ. ವನ ಮತ್ತು ಆಶ್ರಮಗಳು ಭಾರತೀಯ ಸಂಸ್ಕೃತಿಯ ತೌರುಮನೆ. ಗೌತಮಬುದ್ಧನ ಕಾಲದಲ್ಲಿಯೇ ಉದ್ಯಾನಗಳು, ಅವುಗಳ ಆವಶ್ಯಕತೆ, ರೂಪರೇಖೆಗಳು ಮುಂತಾದ ಎಲ್ಲ ವಿಚಾರಗಳೂ ಲಿಖಿತವಾಗಿದ್ದುವು. ಪುರಾಣಕಾಲದಲ್ಲೂ ಬೃಂದಾವನ, ಇಂದ್ರವನಗಳ ವರ್ಣನೆಗಳಿವೆ. ಮೊಘಲರ ಕಾಲದಲ್ಲಿ ಉದ್ಯಾನಗಳ ರಚನೆ ಉಪಯೋಗ ಬದಲಾದುದನ್ನು ಕಾಣುತ್ತೇವೆ. ಅಂದಿನವು ರಾಜರುಗಳ ಮತ್ತು ರಾಣಿಯರ ನಲಿವು ಮತ್ತು ಭೋಗಕ್ಕೆ ಹೆಚ್ಚಿಗೆ ಮುಡುಪಾಗಿದ್ದುವು. ಕಾಶ್ಮೀರದ ಶಾಲಿಮಾರ್ ಉದ್ಯಾನ, ತಾಜಮಹಲ್ ಉದ್ಯಾನ, ಕರ್ನಾಟಕ ರಾಜ್ಯದಲ್ಲಿ ದರಿಯಾದೌಲತ್, ಗುಂಬಜ್ ಮತ್ತು ಲಾಲ್‌ಬಾಗ್ ಇವು ಮೊಘಲ್ ಉದ್ಯಾನಕಲೆಗೆ ಉತ್ತಮ ಉದಾಹರಣೆಗಳು. ಬ್ರಿಟಿಷರ ಕಾಲದಲ್ಲಿ ಉದ್ಯಾನಗಳ ರಚನೆ, ರೂಪರೇಖೆಗಳು ಮತ್ತಷ್ಟು ಬದಲಾವಣೆಯಾದುವು. ಆಂಗ್ಲರ ಕಾಲದಲ್ಲಿ ನಿರ್ಮಿತವಾದ ಉದ್ಯಾನಗಳಲ್ಲಿ ಮಾನಸಿಕ, ದೈಹಿಕ ಮತ್ತು ಆರ್ಥಿಕ ಮುಂತಾದ ಅಂಶಗಳಿಗೆ ಹೆಚ್ಚಿನ ಪ್ರಾಧಾನ್ಯ ಸಿಕ್ಕಿತ್ತು. ಹೊಸ ದೆಹಲಿಯಲ್ಲಿರುವ ಉದ್ಯಾನಗಳು ಮತ್ತು ಮುನಿಸಿಪಲ್ ಪಾರ್ಕ್, ಕೃಷ್ಣರಾಜಸಾಗರದಲ್ಲಿನ ಬೃಂದಾವನ, ಬೆಂಗಳೂರು ಕಬ್ಬನ್ ಪಾರ್ಕ್ ಮತ್ತು ಪುರಸಭೆಯ ಉದ್ಯಾನಗಳು, ನೂತನವಾಗಿ ನಿರ್ಮಾಣವಾಗಿರುವ ವಿಧಾನಸೌಧದ ಉದ್ಯಾನ–ಇವೆಲ್ಲ ಆಂಗ್ಲ ಉದ್ಯಾನ ಕಲೆಯನ್ನು ಪ್ರತಿಬಿಂಬಿಸುತ್ತವೆ. ಇತ್ತೀಚೆಗೆ ಮುನಿರಾಬಾದಿನಲ್ಲಿ ಜಪಾನ್ ಮಾದರಿಯ ಉದ್ಯಾನ ನಿರ್ಮಿತವಾಗಿದೆ. ಹೊಸದಾಗಿ ನಿರ್ಮಾಣವಾಗುತ್ತಿರುವ ಕೆಲವು ತೋಟಗಳನ್ನು ಆರ್ಥಿಕ ಹಾಗೂ ಉಪಯುಕ್ತತೆಯ ದೃಷ್ಟಿಯಿಂದ ಸಸ್ಯೋದ್ಯಾನಗೋಳನ್ನಾಗಿ (ಸಸ್ಯಶಾಸ್ತ್ರೀಯ) ರೂಪಿಸುತ್ತಿದ್ದಾರೆ.

ಲಂಡನ್ನಿನಲ್ಲಿರುವ ಜಗದ್ವಿಖ್ಯಾತ ಕ್ಯೂ ಸಸ್ಯೋದ್ಯಾನ ಪ್ರಪಂಚದ ಉದ್ಯಾನಗಳ ಮತ್ತು ಎಲ್ಲ ಸಸ್ಯೋದ್ಯಾನಗಳ ತಾಯಿ; ಇದರ ರೂಪರೇಖೆಗಳ ಮೇಲೆಯೇ ನಿರ್ಮಿತವಾಗಿರುವ ಇತರ ಕೆಲವು ಸಸ್ಯೋದ್ಯಾನಗಳೆಂದರೆ ಕೋಲ್ಕತ್ತ ಲಖನೌ, ಬೆಂಗಳೂರು (ಲಾಲ್‌ಬಾಗ್), ಶ್ರೀಲಂಕ (ಪೆರಡೀನಿಯಾ), ಸಿಂಗಪುರ ಮುಂತಾದೆಡೆಗಳಲ್ಲಿರುವವು.

ಉದ್ಯಾನದ ಭಾಗಗಳು: ಉದ್ಯಾನವಿಡೀ ಒಂದೇ ರೂಪದಲ್ಲಿದ್ದರೆ ಆ ನೀರಸ ಏಕತೆ ಬೇಸರ ತರಿಸುತ್ತದೆ. ಉದ್ಯಾನಕಲಾಶಾಸ್ತ್ರದ ಪ್ರಕಾರ ಒಂದು ಒಳ್ಳೆಯ ಉದ್ಯಾನ ರಸ್ತೆ, ಹುಲ್ಲು ಹಾಸು ಹೂಮಡಿ, ಅಂಚು, ಅಲಂಕಾರ ಬೇಲಿ, ಕೊಳ, ಕಲ್ಲೇರಿ (ರಾಕ್ ಗಾರ್ಡನ್) ಸಾಲುಮರಗಳ ರಸ್ತೆ ಮುಂತಾದ ವೈವಿಧ್ಯಪೂರ್ಣ ಭಾಗಗಳಿಂದ ಕೂಡಿರಬೇಕು.

ರಸ್ತೆ: ಉದ್ಯಾನದ ರಸ್ತೆಗಳು ಸಾಮಾನ್ಯವಾಗಿ ನೇರವಾಗಿರಕೂಡದು. ಅಂದಮಾತ್ರಕ್ಕೆ ಅವು ಸಿಕ್ಕಾಪಟ್ಟೆ ಇರಬೇಕೆಂದಲ್ಲ. ಸಾಲುಮರಗಳಿರುವ ದೊಡ್ಡ ರಸ್ತೆಗಳನ್ನು ಬಿಟ್ಟರೆ ಉಳಿದ ರಸ್ತೆ ಮತ್ತು ಕಾಲುದಾರಿಗಳು ಡೊಂಕು ಡೊಂಕಾಗಿದ್ದರೆ ಚೆನ್ನ. ಸಾಮಾನ್ಯವಾಗಿ ರಸ್ತೆ ಮತ್ತು ಕಾಲುದಾರಿಗಳ ಅಂಚುಗಳನ್ನು ಕಲ್ಲು ಅಥವಾ ಅಲಂಕಾರ ಇಟ್ಟಿಗೆ ಅಥವಾ ಅಂಚು ಸಸ್ಯಗಳಿಂದ ನಿರ್ಮಿಸಿರುತ್ತಾರೆ.

ಹುಲ್ಲುಹಾಸು: ಮಟ್ಟಸ ಭೂಮಿಯಲ್ಲಿ ನಿರ್ದಿಷ್ಟವಾಗಿ ಒಂದೇ ಜಾತಿಯ ಹುಲ್ಲನ್ನು ಶಾಸ್ತ್ರೀಯವಾಗಿ ಬೆಳೆಸಿರುವ ಸ್ಥಳದ ಹೆಸರು ಹುಲ್ಲುಹಾಸು ಇದು ಉದ್ಯಾನದ ಮುಖ್ಯ ಭಾಗ ಮತ್ತು ಅದರ ಬಹುಭಾಗವನ್ನು ಆಕ್ರಮಿಸಿರುತ್ತದೆ. ಇದು ಸಾಮಾನ್ಯವಾಗಿ ಅಲಂಕಾರ ಇಟ್ಟಿಗೆ, ನಯವಾದ ಕಲ್ಲು ಅಥವಾ ಅಂಚುಸಸ್ಯಗಳ ಸಾಲುಗಳಲ್ಲಿ ಮುಗಿಯುತ್ತದೆ. ಉದ್ಯಾನದ ಹುಲ್ಲುಹಾಸಿನ ಮೇಲೆ ಪೊದೆ, ಮರಗಳು, ಹೂಮಡಿ, ಅಲಂಕಾರ ಸಸ್ಯದ ಮಡಿ ಇತ್ಯಾದಿಗಳು ಇರುತ್ತವೆ.

ಅಂಚುಗಳು: ಉದ್ಯಾನದಲ್ಲಿರುವ ರಸ್ತೆ ಮತ್ತು ಹುಲ್ಲುಹಾಸಿನ ಅಂಚುಗಳನ್ನು ಹಾಗೆಯೇ ಬಿಡುವುದಕ್ಕಿಂತ ಅಲಂಕಾರ ಇಟ್ಟಿಗೆ, ನಯವಾದ ಕಲ್ಲು, ಕುಳ್ಳಾಗಿ ಸುಂದರವಾಗಿರುವ ಸಸ್ಯಸಾಲುಗಳು ಮುಂತಾದವುಗಳಿಂದ ಸುಲಕ್ಷಣಗೊಳಿಸಬೇಕು.

ಅಲಂಕಾರ ಬೇಲಿ: ಉದ್ಯಾನದಲ್ಲಿರುವ ಹುಲ್ಲುಹಾಸು, ರಸ್ತೆ, ಕಲ್ಲೇರಿ ಮುಂತಾದವನ್ನು ಬೇರ್ಪಡಿಸಲು ಅಂಚುಗಳಿಗಿಂತ ಎತ್ತರವಾಗಿ ಬೆಳೆಸಿರುವ ಸಸ್ಯಸಮೂಹಕ್ಕೆ ಅಲಂಕಾರ ಬೇಲಿ ಎಂದು ಹೆಸರು. ಇದು ಸ್ವಲ್ಪಮಟ್ಟಿಗೆ ರಕ್ಷಣೆ ಮತ್ತು ಸೌಂದರ್ಯವನ್ನು ನೀಡುತ್ತದೆ.

ಕೊಳ: ಉದ್ಯಾನದಲ್ಲಿರುವ ತಗ್ಗಾದ ಪ್ರದೇಶಗಳಲ್ಲಿ ಸಸ್ಯಗಳನ್ನು ಬೆಳೆಸುವುದು ಬಹಳ ಕಷ್ಟ. ಆದ್ದರಿಂದ ಇಂಥ ಪ್ರದೇಶಗಳನ್ನು ಕೊಳಗಳಾಗಿ ಪರಿವರ್ತಿಸಿ, ಅವುಗಳಲ್ಲಿ ಕಮಲ, ನೈದಿಲೆ ಮುಂತಾದ ಸಸ್ಯಗಳನ್ನು ಬೆಳೆಸುವುದರಿಂದ ಉದ್ಯಾನ ಶೋಭಿಸುತ್ತದೆ. ಜೊತೆಗೆ ಕೊಳದಲ್ಲಿರುವ ನೀರನ್ನು ಅಕ್ಕಪಕ್ಕದ ಸಸ್ಯಗಳಿಗೆ ನೀರಾವರಿಗಾಗಿ ಉಪಯೋಗಿಸಬಹುದು. ಈ ಕೊಳದಲ್ಲಿ ವಿವಿಧ ರೀತಿಯ ಮೀನುಗಳು, ಕಪ್ಪೆಗಳು, ಬಾತುಗಳು, ಹಂಸಗಳು ಮುಂತಾದ ಜಲಚರ ಪ್ರಾಣಿಪಕ್ಷಿಗಳಿದ್ದರೆ ಈ ಕೊಳದ ಮತ್ತು ಉದ್ಯಾನದ ಅಂದ ಹೆಚ್ಚುತ್ತದೆ. ಇದರಿಂದ ಜಲಚರ ಪ್ರಾಣಿಪಕ್ಷಿಗಳ ಪರಿಚಯಕ್ಕೂ ಅನುಕೂಲವಾಗುತ್ತದೆ.

ಸಾಲುಮರಗಳ ರಸ್ತೆ: ಉದ್ಯಾನದಲ್ಲಿರುವ ಎಲ್ಲ ರಸ್ತೆಗಳೂ ಚಿಕ್ಕವಾಗಿರಬಾರದು. ವಿಶಾಲ ಅಂಚಿನ ಒಂದೆರಡಾದರೂ ದೊಡ್ಡ ರಸ್ತೆಗಳಿದ್ದರೆ ಸೊಗಸು. ಅಲ್ಲದೆ ಸಾರಿಗೆಗೆ ಅನುಕೂಲ. ಉದ್ಯಾನದಲ್ಲಿ ಉಪಯೋಗಿಸುವ ಕಾರ್ಯನಿರತವಾಹನಗಳು ಪೆಟ್ರೋಲ್ / ಡೀಸೆಲ್ ವಾಹನಗಳಾಗಿರದೆ, ವಿದ್ಯುತ್ ಚಾಲಿತ / ಸೌರಶಕ್ತಿ ಚಾಲಿತ ವಾಹನಗಳಾಗಿದ್ದರೆ ನಿಸರ್ಗಕ್ಕೆ ಮಾಲಿನ್ಯದಿಂದ ಧಕ್ಕೆ ಯಾಗುವುದಿಲ್ಲ.

ಭಾರತ ದೇಶದ ಉದ್ಯಾನಗಳಿಗೆ–ಕೋಲ್ಕತ್ತ ಸಸ್ಯೋದ್ಯಾನ, ಲಖನೌ ಸಸ್ಯೋದ್ಯಾನ, **ನೋಡಿ– ಲಾಲ್‌ಬಾಗ್**, ಬೃಂದಾವನ. (ಎಂ.ಎಚ್.ಎಂ.)

**ಉದ್ಯೋಗ ಮೀಮಾಂಸೆ:** ಉತ್ಪಾದನೆ, ಉದ್ಯೋಗ ಮತ್ತು ವರಮಾನಗಳ ನಿರ್ಣಾಯಕಗಳನ್ನು ಕುರಿತ ಆರ್ಥಿಕ ವಿವೇಚನೆ (ಥಿಯೊರಿ ಆಫ್ ಎಂಪ್ಲಾಯ್‌ಮೆಂಟ್). ಈ ಬಗ್ಗೆ ಎರಡು ಬಗೆಯ ಸಿದ್ಧಾಂತಗಳು ಪ್ರಚಲಿತವಾಗಿವೆ. ಇವುಗಳಲ್ಲೊಂದು ಅಭಿಜಾತ ಪಂಥದ್ದಾದರೆ ಇನ್ನೊಂದು ಕೇನ್ಸ್ ಪ್ರತಿಪಾದಿಸಿದ್ದು. ಕೇನ್ಸ್ ವಿವರಣೆಗೆ ಹೆಚ್ಚಿನ ಮನ್ನಣೆ ದೊರೆತಿದೆ. ಇದನ್ನು ಈಚಿನ ಅನೇಕರು ಪುಷ್ಟೀಕರಿಸಿದ್ದಾರೆ. ಅಭಿಜಾತ ದೃಷ್ಟಿಯೂ ಕೆಲವು ಆಧುನಿಕ ಅರ್ಥಶಾಸ್ತ್ರಜ್ಞರಿಂದ ಪುನಶ್ಚೇತನಗೊಂಡು ನವ ಅಭಿಜಾತ ಸಿದ್ಧಾಂತವಾಗಿ ಕೆಲವರ ಮನ್ನಣೆ ಪಡೆದಿದೆ.

**ಅಭಿಜಾತ ಸಿದ್ಧಾಂತ:** ಉದ್ಯೋಗವನ್ನು ಕುರಿತ ಅಭಿಜಾತ ಅರ್ಥಶಾಸ್ತ್ರಜ್ಞರ ಸಿದ್ಧಾಂತ ನಿಂತಿರುವುದು. ಎರಡು ಆಧಾರಸ್ತಂಭಗಳ ಮೇಲೆ. ಸಮಾಜದಲ್ಲಿ ಅನುಭೋಗಿಗಳೂ ಇತರರೂ ತಮಗೆ ಬಂದ ವರಮಾನವನ್ನೆಲ್ಲಾ ವೆಚ್ಚಮಾಡುತ್ತಾರೆ; ವೆಚ್ಚಮಾಡದೆ ಇರುವ ಸಂಭವವೇ ಇಲ್ಲ ಎಂಬುದು ಇವರ ಒಂದು ಊಹೆ. ಒಂದು ವೇಳೆ ಸಮಾಜದಲ್ಲಿ ಉಂಟಾದ ಒಟ್ಟು ವರಮಾನದಲ್ಲಿ ಸ್ವಲ್ಪ ಭಾಗವನ್ನು ವೆಚ್ಚ ಮಾಡದೆ ಇರುವ ಪರಿಸ್ಥಿತಿ ಇದ್ದರೂ ಬೆಲೆ ಕೂಲಿಗಳ ಘಟಿತದ ಪರಿಣಾಮವಾಗಿ ಸಮಾಜದಲ್ಲಿ ಉದ್ಯೋಗ, ವಾಸ್ತವ ವರಮಾನ, ವಾಸ್ತವ ಉತ್ಪಾದನೆ ಇವುಗಳಲ್ಲಿ ಇಳಿತಾಯ ಉಂಟಾಗದೆ, ಪೂರ್ಣಮಟ್ಟದ ಉದ್ಯೋಗ–ಪರಿಸ್ಥಿತಿ ಇರುತ್ತದೆ ಎಂಬುದು ಇವರ ಎರಡನೆಯ ಊಹೆ. ಅಭಿಜಾತ ಅರ್ಥಶಾಸ್ತ್ರಜ್ಞರು ಸಂಪೂರ್ಣ ಉದ್ಯೋಗಸಮತೆಯ ಸಿದ್ಧಾಂತ ಪ್ರತಿಪಾದಿಸಿದರೆನ್ನಬಹುದು.

ಅಭಿಜಾತ ದೃಷ್ಟಿಯ ಸಂಪೂರ್ಣ ಉದ್ಯೋಗ ಸಮತೆಯ ಸಿದ್ಧಾಂತದ ಪ್ರಕಾರ ನಿರುದ್ಯೋಗಕ್ಕೆ ಅಸ್ತಿತ್ವವಿಲ್ಲ. ಅಂದರೆ ಸಮಾಜದಲ್ಲಿ ನಿರುದ್ಯೋಗ ಇರುವುದೇ ಇಲ್ಲವೆಂಬ ಅಭಿಪ್ರಾಯವಲ್ಲ. ನಿರುದ್ಯೋಗ ಸಂಭವಿಸಿದರೂ ಅದು ತಾತ್ಕಾಲಿಕ. ಅದು ಸಮಾಜದಲ್ಲಿ ಉದ್ಭವಿಸುವ ಕೆಲವು ಆತಂಕಗಳ ಫಲ ಅಥವಾ ಉತ್ಪಾದನ ವ್ಯವಸ್ಥೆಯಲ್ಲಿ ಉತ್ಪಾದನಾಂಗಗಳ ಗತಿಶೀಲತೆಯ ಪರಿಣಾಮ. ಇದು ಈ ಪಂಥದವರ ಭಾವನೆ. ಇಂಥ ನಿರುದ್ಯೋಗ ಸಾಧಾರಣವಾಗಿ ಮೂರು ವಿಧ: ಒಬ್ಬ ಉದ್ಯೋಗಿ ತಾನಿದ್ದ ನೌಕರಿ ಬಿಟ್ಟು ಮತ್ತೊಂದನ್ನು ಹುಡುಕಲು ಯತ್ನಿಸಬಹುದು. ಇಂಥ ಸಂದರ್ಭದಲ್ಲಿ ಮತ್ತೊಂದು ಉದ್ಯೋಗ ದೊರಕುವ ತನಕ ಆತ ನಿರುದ್ಯೋಗಿ. ಇದು ಕಿಂಚಿತ್‌ಕಾಲದ ನಿರುದ್ಯೋಗ (ಟ್ರಾನ್ಸಿಟರಿ ಅನೆಂಪ್ಲಾಯ್‌ಮೆಂಟ್). ಇನ್ನು ಕೆಲವು ಸಂದರ್ಭಗಳಲ್ಲಿ ಉತ್ಪಾದನ ವ್ಯವಸ್ಥೆಯಲ್ಲಿ ಉಂಟಾಗುವ ಘರ್ಷಣೆಗಳಿಂದ ನಿರುದ್ಯೋಗ ಸಂಭವಿಸಬಹುದು. ಯಾವುದಾದರೂ ಕಾರಣದಿಂದ ಒಂದು ಉದ್ಯಮಸಂಸ್ಥೆ ಮುಚ್ಚಲ್ಪಡಬಹುದು. ಆಗ ಅಲ್ಲಿದ್ದ ಉದ್ಯೋಗಿಗಳು ಹೊಸ ಸಂಸ್ಥೆಯಲ್ಲಿ ಕೆಲಸ ದೊರಕಿಸಿಕೊಳ್ಳುವ ತನಕ ನಿರುದ್ಯೋಗಿಗಳಾಗಿರುತ್ತಾರೆ. ಏಕೆಂದರೆ ಇವರ ಪರಿಶ್ರಮಕ್ಕೆ ತಕ್ಕ ಉದ್ಯೋಗ ಹುಡುಕಬೇಕು. ಜೊತೆಗೆ ಹೊಸ ಉದ್ಯೋಗಕ್ಕೆ ಹೊಂದಿಕೊಳ್ಳಲು ಸ್ವಲ್ಪಕಾಲ ಕಷ್ಟಪಟ್ಟು ತರಬೇತಿಯನ್ನೂ ಪಡೆಯಬೇಕಾದೀತು. ಇದು ಘರ್ಷಣಾತ್ಮಕ ನಿರುದ್ಯೋಗ (ಫ್ರಿಕ್ಷನಲ್ ಅನೆಂಪ್ಲಾಯ್‌ಮೆಂಟ್). ಮತ್ತೆ ಕೆಲವು ಸಂದರ್ಭಗಳಲ್ಲಿ ಉದ್ಯೋಗಾಕಾಂಕ್ಷಿಗಳು ಸಮಾಜದಲ್ಲಿ ದೊರೆಯುವ ಉದ್ಯೋಗಾವಕಾಶಗಳ ಅರಿವಿಲ್ಲದೆ ನಿರುದ್ಯೋಗಿಗಳಾಗಿರಬಹುದು. ಇದು ತಾತ್ಕಾಲಿಕ ನಿರುದ್ಯೋಗ ಪರಿಸ್ಥಿತಿ.

ಇವೇ ಅಲ್ಲದೆ ಇನ್ನೂ ಒಂದು ಬಗೆಯ ಪರಿಸ್ಥಿತಿ ಉದ್ಭವಿಸಬಹುದು. ಅದು ಅನೈಚ್ಛಿಕ ನಿರುದ್ಯೋಗ: ಸಮಾಜದಲ್ಲಿ ಉದ್ಭವಿಸುವ ಅಸಾಧಾರಣ ಘಟನೆಗಳ ಪರಿಣಾಮ; ಜನರಿಗೆ ಉದ್ಯೋಗ ಮಾಡುವ ಆಕಾಂಕ್ಷೆ ಇದ್ದರೂ ಉದ್ಯೋಗ ದೊರೆಯದ ಪರಿಸ್ಥಿತಿ; ಪ್ರಚಲಿತ ಕೂಲಿ ಮಟ್ಟವನ್ನೊಪ್ಪಿ ಕೆಲಸ ಮಾಡಲಿಚ್ಚಿಸಿದರೂ ಉದ್ಯೋಗ ದೊರೆಯದೆ ಇರುವಂಥ ಸಂದರ್ಭ. ಆದರೆ ಇದಕ್ಕಾಗಿ ಕಳವಳಪಡುವ ಅಗತ್ಯವಿಲ್ಲ. ಆರ್ಥಿಕ ಶಕ್ತಿಗಳು ಕ್ರಮೇಣ ತಮ್ಮ ಪ್ರಭಾವ ಬೀರಿ ಸಮಾಜದಲ್ಲಿ ಸಂಪೂರ್ಣ ಉದ್ಯೋಗಪರಿಸ್ಥಿತಿ ಉಂಟುಮಾಡುತ್ತವೆ. ನಿರುದ್ಯೋಗ ತಾನಾಗೇ ಮಾಯವಾಗುತ್ತದೆ. ಇದು ಅಭಿಜಾತ ಭಾವನೆ.

ಅಭಿಜಾತ ಅರ್ಥಶಾಸ್ತ್ರಜ್ಞರ ಉದ್ಯೋಗಸಿದ್ಧಾಂತ ಜೆ.ಬಿ.ಸೇ ಸೂಚಿಸಿದ ಮಾರುಕಟ್ಟೆ ಸೂತ್ರಗಳ ಮೇಲೆ ರೂಪಿತವಾದದ್ದು. ಸೇ ಸೂತ್ರ ಬಲು ಸರಳ: ಸರಬರಾಯಿಯೇ ಬೇಡಿಕೆಯನ್ನು ಸೃಷ್ಟಿಸುತ್ತದೆ. ಪದಾರ್ಥ ಉತ್ಪಾದನೆ ಮಾಡಲು ಉತ್ಪಾದಕರು ವಿವಿಧ ಉತ್ಪಾದನಾಂಗಗಳನ್ನು ಕೊಳ್ಳುತ್ತಾರೆ. ಈ ಅಂಗಗಳ ಮಾಲೀಕರು ಇವುಗಳ ಪ್ರಯೋಜನವನ್ನು ಉತ್ಪಾದಕರಿಗೆ ದೊರಕಿಸಿಕೊಟ್ಟು, ಪ್ರತಿಯಾಗಿ ವರಮಾನ ಪಡೆಯುತ್ತಾರೆ. ಹೀಗೆ ಪಡೆದ ವರಮಾನವನ್ನು ಅವರೆಲ್ಲರೂ ತಮಗೆ ಬೇಕಾದ ಅನುಭೋಗಿ ಸರಕುಗಳನ್ನೂ ಸೇವೆಗಳನ್ನೂ ಕೊಳ್ಳಲು ಉಪಯೋಗಿಸುತ್ತಾರೆ. ಆದ್ದರಿಂದ ಪದಾರ್ಥೋತ್ಪಾದನೆಯ ಪ್ರಕ್ರಿಯೆಯಲ್ಲಿ ವಿತರಣೆಯಾದ ವರಮಾನ ಅದನ್ನು ಪಡೆದವರಲ್ಲೇ ಉಳಿಯುವುದಿಲ್ಲ; ಅದು ಸರಕು ಕೊಳ್ಳುವುದಕ್ಕಾಗಿ ಮಾರುಕಟ್ಟೆ ಪ್ರವೇಶಿಸುತ್ತದೆ. ಆಗ ಉತ್ಪಾದಕರು ತಯಾರಿಸಿದ ಪದಾರ್ಥಗಳಿಗೆ ಸಂಪೂರ್ಣವಾಗಿ ಬೇಡಿಕೆ ಒದಗಿಬಂದು ಮಾರುಕಟ್ಟೆಯಲ್ಲಿನ ಪದಾರ್ಥಗಳೆಲ್ಲ ವಿನಿಯೋಗ ವಾಗುತ್ತವೆ. ಹೀಗೆ ಮಾರುಕಟ್ಟೆಯಲ್ಲಿ ಯಾವ ವಿಧವಾದ ಸಂದಿಗ್ಧ ಪರಿಸ್ಥಿತಿಯೂ ಸಂಭವಿಸದೆ ಸುಸೂತ್ರವಾಗಿ ಪದಾರ್ಥಗಳ ಸರಬರಾಜು ಮತ್ತು ಬೇಡಿಕೆಗಳ ನಡುವೆ ಸಮತೋಲ ಉಂಟಾಗುತ್ತದೆ. ಇದರ ಪರಿಣಾಮವಾಗಿ ಸರಕುಗಳ ಬೇಡಿಕೆಯ ಸಮಸ್ಯೆಯೇ ಉದ್ಭವಿಸುವು ದಿಲ್ಲ. ಇದು ಅಭಿಜಾತ ಅರ್ಥಶಾಸ್ತ್ರಜ್ಞರ ಪ್ರತಿಪಾದನೆ. ಯಾವಾಗ ಬೇಡಿಕೆ ಮತ್ತು ಸರಬರಾಜು ಗಳ ಮಧ್ಯೆ ಸಮತೋಲವಿರುತ್ತದೋ ಆಗ ನಿರುದ್ಯೋಗ ಸಮಸ್ಯೆಯೇ ಇರುವುದಿಲ್ಲವೆಂಬುದು ಇವರ ವಾದ.

ಆದರೆ ಅನೇಕ ಅರ್ಥಶಾಸ್ತ್ರಜ್ಞರು ಅಭಿಜಾತ ಸಿದ್ಧಾಂತವನ್ನೂ ಜೆ.ಬಿ.ಸೇ ಸೂಚಿಸಿದ ಮಾರುಕಟ್ಟೆ ಸೂತ್ರಗಳನ್ನೂ ಒಪ್ಪಿಕೊಳ್ಳಲಿಲ್ಲ. ಜನ ತಾವು ಪಡೆದ ವರಮಾನವೆಲ್ಲವನ್ನೂ ಸಂಪೂರ್ಣವಾಗಿ ಖರ್ಚು ಮಾಡುತ್ತಾರೆಂಬ ಭರವಸೆ ಸರಿಯಲ್ಲ. ಇವರು ವರಮಾನದ ಒಂದು ಭಾಗವನ್ನು ಕೂಡಿಡುವುದುಂಟು. ವರಮಾನದ ಈ ಭಾಗ ಮಾರುಕಟ್ಟೆ ಪ್ರವೇಶಿಸುವುದಿಲ್ಲ. ಎಂದರೆ ಈ ಪ್ರಮಾಣದಲ್ಲಿ ಪದಾರ್ಥಗಳಿಗೆ ಬೇಡಿಕೆ ತಗ್ಗುತ್ತದೆ. ಮಾರುಕಟ್ಟೆಯಲ್ಲಿ ಸರಕುಗಳು ಶೇಖರವಾಗಿ ಉತ್ಪಾದನೆಯನ್ನು ಮೊಟಕುಗೊಳಿಸುವಂಥ ಪರಿಸ್ಥಿತಿ ಉದ್ಭವಿಸುತ್ತದೆ. ಇದರ ಫಲವೆಂದರೆ ನಿರುದ್ಯೋಗ. ಜನರ ವರಮಾನದ ಇಳಿತ. ಅರ್ಥವ್ಯವಸ್ಥೆಯಲ್ಲಿ ಪೂರ್ಣೋದ್ಯೋಗ ಸ್ಥಿತಿ ತನಗೆ ತಾನೇ ಸ್ಥಾಪಿತವಾಗುವುದೆಂಬ ಅಭಿಜಾತ ದೃಷ್ಟಿ ಸರಿಯಲ್ಲ. ಇದು ಅಭಿಜಾತ ವಿಚಾರಧಾರೆಯನ್ನು ಕುರಿತ ಟೀಕೆಯ ಸಾರಾಂಶ.

ಆದರೆ ಅಭಿಜಾತ ಅರ್ಥಶಾಸ್ತ್ರಜ್ಞರು ಈ ಟೀಕೆಗೆ ಮನ್ನಣೆ ಕೊಡಲಿಲ್ಲ. ಅದರ ಬದಲು ತಮ್ಮ ಅಭಿಪ್ರಾಯವನ್ನು ಸ್ವಲ್ಪ ಮಾರ್ಪಡಿಸಿ ಪ್ರತಿಪಾದಿಸಿದರು. ವರಮಾನದಲ್ಲಿ ಉಳಿತಾಯ ವಾದರೂ ಅದೂ ಮಾರುಕಟ್ಟೆಯನ್ನು ಪ್ರವೇಶಿಸುತ್ತದೆಯೆಂಬುದು ಇವರ ವಾದ. ಬಂಡವಾಳದ ಆವಶ್ಯಕತೆ ಇರುವ ಉತ್ಪಾದಕರು ಈ ಉಳಿತಾಯವನ್ನು ಬಡ್ಡಿಗೆ ಪಡೆದು ಅದನ್ನು ನಿಯೋಜಿಸುತ್ತಾರೆ. ಬಡ್ಡಿಯ ಆಕರ್ಷಣೆಯಿರುವುದರಿಂದ ಉಳಿತಾಯಗಾರರು ತಮ್ಮ ಹಣವನ್ನು ಬಂಡವಾಳ ನಿಯೋಜಕರಿಗೆ ಕೊಡುತ್ತಾರೆ. ಹೀಗೆ ಇದು ಬಂಡವಾಳರೂಪದಲ್ಲಿ ಸಮಾಜದಲ್ಲಿ ಉಪಯೋಗಕ್ಕೆ ಬರುವುದರಿಂದ ಪುನಃ ವರಮಾನ ಸಂಪೂರ್ಣವಾಗಿ ಮಾರುಕಟ್ಟೆಗೆ ಬರುತ್ತದೆ. ಆದ್ದರಿಂದ ಪೂರ್ಣ ಉದ್ಯೋಗ ಸ್ಥಿತಿಗೆ ಧಕ್ಕೆಯಾಗುವುದಿಲ್ಲ ವೆಂಬುದು ಇವರ ತರ್ಕ.

ಅಭಿಜಾತ ಸಿದ್ಧಾಂತದ ಪ್ರಕಾರ ಸಮಾಜದಲ್ಲಿ ಉಳಿತಾಯಕ್ಕೂ ಬಂಡವಾಳ ನಿಯೋಜನೆಗೂ ನಡುವೆ ಸಮತೋಲವನ್ನುಂಟುಮಾಡುವುದು ಬಡ್ಡಿದರದ ಮಹತ್ತ್ವದ ಪಾತ್ರ. ಪೂರ್ಣೋದ್ಯೋಗ ಸ್ಥಾಪನೆಗೆ ಇದು ಪ್ರಚೋದನೆ. ಜನ ತಮ್ಮ ವರಮಾನದಲ್ಲಿ ಸ್ವಲ್ಪ ಭಾಗವನ್ನು ಉಳಿತಾಯ ಮಾಡಬೇಕಾದರೆ ಅದಕ್ಕೆ ಬಡ್ಡಿಯ ದರ ಆಕರ್ಷಕವಾಗಿರಬೇಕು. ಬಡ್ಡಿಯ ದರ ಹೆಚ್ಚಿದ ಹಾಗೆಲ್ಲಾ ಉಳಿತಾಯ ಮಾಡುವವರು ಹೆಚ್ಚು ಹೆಚ್ಚಾಗಿ ಉಳಿತಾಯ

ಮಾಡಲೆತ್ನಿಸುತ್ತಾರೆ. ಆದರೆ ಬಡ್ಡಿಯ ದರ ಒಂದೇ ಸಮನೆ ಅಧಿಕವಾಗಲೂ ಸಾಧ್ಯವಿಲ್ಲ. ಏಕೆಂದರೆ ಬಂಡವಾಳ ನಿಯೋಜಕರು ಒಂದು ನಿರ್ದಿಷ್ಟ ಮಟ್ಟಕ್ಕಿಂತ ಹೆಚ್ಚು ಬಡ್ಡಿಕೊಡಲು ಇಷ್ಟಪಡುವುದಿಲ್ಲ. ಆದಷ್ಟು ಕಡಿಮೆ ದರದಲ್ಲಿ ಬಡ್ಡಿಕೊಟ್ಟು ಬಂಡವಾಳ ಪಡೆದು ಆದಷ್ಟು ಹೆಚ್ಚು ಲಾಭ ಸಂಪಾದಿಸಬೇಕೆಂಬುದು ಅವರ ಆಸೆ. ಉಳಿತಾಯಗಾರರ ಮತ್ತು ಬಂಡವಾಳ ನಿಯೋಜಕರ ಮಧ್ಯೆ ಉಂಟಾಗುವ ಕ್ರಿಯೆ-ಪ್ರತಿಕ್ರಿಯೆಗಳ ಪರಿಣಾಮವಾಗಿ ಕಟ್ಟಕಡೆಯದಾಗಿ ಬಡ್ಡಿದರ ಒಂದು ಗೊತ್ತಾದ ಮಟ್ಟದಲ್ಲಿ ನಿರ್ಧಾರವಾಗುತ್ತದೆ. ಹಣದ ಮಾರುಕಟ್ಟೆಯಲ್ಲಿ ಉಳಿತಾಯಕ್ಕೂ ಬಂಡವಾಳ ನಿಯೋಜನೆಗೂ ನಡುವೆ ಸಮತೋಲ ಏರ್ಪಡಿಸುವುದು ಬಡ್ಡಿದರ. ಪೂರ್ಣ ಉದ್ಯೋಗ ಸ್ಥಾಪನೆಗೆ ಇದು ಸಹಕಾರಿ. ಇದು ಅಭಿಜಾತ ಅರ್ಥಶಾಸ್ತ್ರಜ್ಞರ ಪ್ರತಿಪಾದನೆ. ನಕ್ಷೆ 1 ರಲ್ಲಿ ಇದನ್ನು ವಿವರಿಸಲಾಗಿದೆ.




ನಕ್ಷೆ 1

ಇಲ್ಲಿ SS ಎಂಬುದು ಉಳಿತಾಯದ ರೇಖೆ. II ನಿಯೋಜಕರಿಂದ ಬಂಡವಾಳಕ್ಕಿರುವ ಬೇಡಿಕೆಯನ್ನು ಸೂಚಿಸುತ್ತದೆ.

ಯಾವ ಬಡ್ಡಿದರದಲ್ಲಿ ಉಳಿತಾಯದ ರೇಖೆಯೂ ನಿಯೋಜಕರ ಬೇಡಿಕೆಯ ರೇಖೆಯೂ ಸಂಧಿಸುತ್ತವೋ ಅಲ್ಲಿ ಸಮತೋಲಸ್ಥಿತಿಯೇರ್ಪಡುತ್ತದೆ.

ಯಾವುದಾದರೂ ಕಾರಣಕ್ಕಾಗಿ ಸಮಾಜದಲ್ಲಿ ಉಳಿತಾಯದ ಮೊತ್ತ ಹೆಚ್ಚಾದರೆ ಆ ಬಡ್ಡಿದರದಲ್ಲಿ ಅದಕ್ಕೆ ಬೇಡಿಕೆ ಇರುವುದಿಲ್ಲ. ಬಡ್ಡಿದರ ಇಳಿಯುತ್ತದೆ. ಉಳಿತಾಯ ಕಡಿಮೆಯಾಗುತ್ತದೆ. ಮತ್ತೆ ಸಮತೋಲಸ್ಥಿತಿ ಏರ್ಪಡುತ್ತದೆ. ಉಳಿತಾಯ ಕಡಿಮೆಯಾದರೂ ಬಂಡವಾಳದ ಬೇಡಿಕೆ ಹೆಚ್ಚು ಕಡಿಮೆಯಾದರೂ ಅದಕ್ಕನುಗುಣವಾದ ಪ್ರತಿಕ್ರಿಯೆಯೇರ್ಪಟ್ಟು ಸಮತೋಲ ಸ್ಥಾಪಿತವಾಗುತ್ತದೆ. ಹೀಗಾಗಿ ಬಡ್ಡಿದರದ ಮಧ್ಯವರ್ತಿ ಪಾತ್ರದಿಂದ ಉಳಿತಾಯಕ್ಕೂ ಬಂಡವಾಳ ನಿಯೋಜನೆಗೂ ಮಧ್ಯೆ ಸಮತೆ ಏರ್ಪಟ್ಟು ವ್ಯವಹಾರ ನಡೆದುಕೊಂಡು ಹೋಗುತ್ತದೆ. ಆದ್ದರಿಂದ ಪೂರ್ಣೋದ್ಯೋಗ ಪರಿಸ್ಥಿತಿಗೇನೂ ಊನವಿಲ್ಲವೆಂಬುದು ಇವರ ವಾದ.

ತಾವು ಪ್ರತಿಪಾದಿಸಿರುವ ಪೂರ್ಣೋದ್ಯೋಗ ಸಿದ್ಧಾಂತದ ಪುಷ್ಟೀಕರಣೆಗೆ ಅಭಿಜಾತ ಅರ್ಥಶಾಸ್ತ್ರಜ್ಞರು ಮತ್ತೊಂದು ವಾದವನ್ನು ಮುಂದೊಡ್ಡಿದ್ದಾರೆ. ಹಣದ ಮಾರುಕಟ್ಟೆಯಲ್ಲಿ ಬಡ್ಡಿದರ, ಉಳಿತಾಯ ಮತ್ತು ಬಂಡವಾಳ ನಿಯೋಜನೆಗಳ ನಡುವೆ ಯಾವ ರೀತಿ ಸಮತೋಲವೇರ್ಪಡುವುದೋ ಹಾಗೆಯೇ ಪದಾರ್ಥಗಳ ಮತ್ತು ಕಾರ್ಮಿಕರ ಮಾರುಕಟ್ಟೆಗಳಲ್ಲಿ ಬೆಲೆ ಮತ್ತು ಕೂಲಿ ದರಗಳು ಸಮತೋಲವನ್ನುಂಟುಮಾಡಿ ಪೂರ್ಣೋದ್ಯೋಗ ಪರಿಸ್ಥಿತಿಯ ಸೃಷ್ಟಿಗೆ ನೆರವಾಗುತ್ತವೆಂದು ಅವರ ವಾದ. ಆದ್ದರಿಂದ ಕೆಲವು ವಿಶೇಷ ಸಂದರ್ಭಗಳಲ್ಲಿ ಸಮಾಜದ ಒಟ್ಟು ವೆಚ್ಚದಲ್ಲಿ ಖೋತ ಏರ್ಪಟ್ಟರೂ ನಿರುದ್ಯೋಗ ಪರಿಸ್ಥಿತಿ ಉಂಟಾಗುವುದಿಲ್ಲ ವೆಂಬುದು ಇವರ ವಾದ.

ಒಟ್ಟು ವೆಚ್ಚ ಕಡಿಮೆಯಾದರೆ ವಸ್ತುಗಳಿಗೆ ಬೇಡಿಕೆ ತಗ್ಗುತ್ತದೆ. ಆದರೆ ಪದಾರ್ಥಗಳಿಗೆ ಬೇಡಿಕೆ ತಗ್ಗಿದಾಗ ಉತ್ಪಾದಕರು ತಮ್ಮ ಪದಾರ್ಥಗಳನ್ನು ಹಾಗೇ ಶೇಖರಿಸಿಡಲು ಯತ್ನಿಸುವುದಿಲ್ಲ. ಅದರ ಬದಲು ಪದಾರ್ಥಗಳ ಬೆಲೆ ತಗ್ಗಿಸಿ ಮಾರಲು ಯತ್ನಿಸುತ್ತಾರೆ. ಅವುಗಳ ಬೆಲೆ ತಗ್ಗಿಸಿದ ಒಡನೆಯೇ ಬೇಡಿಕೆ ಹೆಚ್ಚುವುದು ಸಹಜ. ಆದ್ದರಿಂದ ಮಾರುಕಟ್ಟೆಯಲ್ಲಿರುವ ಎಲ್ಲ ಪದಾರ್ಥಗಳಿಗೂ ಗ್ರಾಹಕರು ದೊರೆತು ಪದಾರ್ಥಗಳ ವಿತರಣೆಯಾಗುತ್ತದೆ. ಎರಡನೆಯದಾಗಿ, ಪದಾರ್ಥಗಳು ಅಗ್ಗವಾದಾಗ ಜೀವನವೆಚ್ಚ ಕಡಿಮೆಯಾಗುತ್ತದೆ. ಆದ್ದರಿಂದ ಕಾರ್ಮಿಕರಿಗೆ ಕೊಡುವ ಕೂಲಿ ಕಡಿಮೆಯಾಗುತ್ತದೆ. ಕಡಿಮೆ ಬೇಡಿಕೆಯಿಂದಾಗಿ ಉತ್ಪಾದನೆಯನ್ನು ಕಡಿಮೆ ಮಾಡುವ ಪ್ರವೃತ್ತಿ ತೋರುವ ಉತ್ಪಾದಕರು ಕೂಲಿ ತಗ್ಗಿಸುತ್ತಾರೆ. ಇದರಿಂದ ಉತ್ಪಾದನೆಯ ವೆಚ್ಚ ಕೂಡ ತಗ್ಗಲೇಬೇಕು. ಕಡಿಮೆ ಬೆಲೆಗೆ ತಕ್ಕಂತೆ ಪದಾರ್ಥಗಳ ಉತ್ಪಾದನೆಯ ವೆಚ್ಚವೂ ತಗ್ಗುವುದು ಸಹಜ. ಹೀಗೆ ಬಡ್ಡಿದರದಿಂದ ಉಳಿತಾಯ, ಬಂಡವಾಳ ನಿಯೋಜನೆ ಇವುಗಳ ನಡುವಣ ಸಮತೋಲನವೂ ಪದಾರ್ಥಗಳ ಬೆಲೆ ಮತ್ತು ಕೂಲಿ ದರಗಳ ನಡುವಣ ಕ್ರಿಯೆಪ್ರತಿಕ್ರಿಯೆಗಳ ಪರಿಣಾಮವಾಗಿ ಪದಾರ್ಥಗಳ ಮತ್ತು ಕಾರ್ಮಿಕರ ಮಾರುಕಟ್ಟೆಯಲ್ಲಿ ಸಮತೋಲನವೂ ಉಂಟಾಗುತ್ತವೆ. ಆದ್ದರಿಂದ ಅಭಿಜಾತ ಅರ್ಥಶಾಸ್ತ್ರಜ್ಞರ ಪ್ರಕಾರ ಪೂರ್ಣ ಉದ್ಯೋಗ ಪರಿಸ್ಥಿತಿ ಎಂಬುದು ಸಮಾಜದಲ್ಲಿ ಸ್ವತಃಸಿದ್ಧ.

**ಕೇನ್ಸ್ ಸಿದ್ಧಾಂತ:** ಅಭಿಜಾತ ಅರ್ಥಶಾಸ್ತ್ರಜ್ಞರ ನಿರೂಪಣೆ ವಸ್ತುಸ್ಥಿತಿಗೆ ದೂರವೆಂಬುದನ್ನು ಕಂಡುಕೊಳ್ಳಲು ಅರ್ಥಶಾಸ್ತ್ರಜ್ಞರಿಗೆ ಕಷ್ಟವಾಗಲಿಲ್ಲ. ಈ ಅರಿವು ಮೂಡಿಸಲು ಕಾರಣವಾದ ಘಟನೆಯೆಂದರೆ 1920ರ ಸುಮಾರಿನಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟು. ಆಗ ಪ್ರಪಂಚದ ಅನೇಕ ರಾಷ್ಟ್ರಗಳು ನಿರುದ್ಯೋಗ ಸಮಸ್ಯೆ ಎದುರಿಸಬೇಕಾಯಿತು. ಮುಂದುವರಿದ ರಾಷ್ಟ್ರಗಳಲ್ಲೇ ಇದು ಪ್ರಾರಂಭವಾದದ್ದು. ಈ ಕಾಲದಲ್ಲಿ ನಿರುದ್ಯೋಗ ಹಾಗೂ ಇತರ ಅಸ್ಥಿರತೆಯ ಸಮಸ್ಯೆಗಳನ್ನು ಆಗಿಂದಾಗ್ಗೆ ಎದುರಿಸಬೇಕಾಯಿತು. ಅಭಿಜಾತ ಸಿದ್ಧಾಂತದ ಪ್ರಕಾರ ನಿರುದ್ಯೋಗ ವೆಂಬುದೇ ಇಲ್ಲ; ಇದ್ದರೂ ಅದು ಕಿಂಚಿತ್‌ಕಾಲದ್ದು ಮಾತ್ರ. ಆದರೆ 1930ರ ದಶಕದಲ್ಲಿ ಪ್ರಪಂಚದ ಬೃಹದ್ರಾಷ್ಟ್ರಗಳು ನಿರುದ್ಯೋಗ ಸಮಸ್ಯೆಯಿಂದ ಬಹಳ ವರ್ಷಗಳ ಕಾಲ ತೊಂದರೆ ಅನುಭವಿಸಿದುವು. ಆದ್ದರಿಂದ ಅನೇಕ ಅರ್ಥಶಾಸ್ತ್ರಜ್ಞರು ಉದ್ಯೋಗ ಮಟ್ಟವನ್ನು ನಿರ್ಧರಿಸುವ ಶಕ್ತಿಗಳನ್ನು ಕುರಿತು ಹೆಚ್ಚು ವಾಸ್ತವಿಕ ದೃಷ್ಟಿಯಿಂದ ವಿವೇಚನೆ ನಡೆಸತೊಡಗಿದರು.

1936ರಲ್ಲಿ ಜಾನ್ ಮೇನಾರ್ಡ್ ಕೇನ್ಸ್ ಉದ್ಯೋಗ ಮಟ್ಟದ ನಿರ್ಣಾಯಕಗಳನ್ನು ಕುರಿತು ಹೊಸ ನಿರೂಪಣೆ ನೀಡಿದಾಗ ತಕ್ಷಣವೇ ಅದು ಎಲ್ಲ ಅರ್ಥಶಾಸ್ತ್ರಜ್ಞರ ಗಮನ ಸೆಳೆಯಿತು. ಉದ್ಯೋಗ, ಬಡ್ಡಿ ಮತ್ತು ಹಣವನ್ನು ಕುರಿತು ಕೇನ್ಸ್ ಪ್ರತಿಪಾದಿಸಿದ ಸಿದ್ಧಾಂತ ಈಗ ಜಗತ್‌ಪ್ರಸಿದ್ಧ. ಇದು ಆರ್ಥಿಕ ಇಳಿತದ ನಿವಾರಣೆಗೆ ಒಂದು ನವ್ಯ ಸಾಧನವಾಗಿ ಬಳಕೆಗೆ ಬಂತು. ಈ ಸಿದ್ಧಾಂತದಿಂದ ಅಭಿಜಾತ ಸಿದ್ಧಾಂತಕ್ಕೆ ದೊಡ್ಡಪೆಟ್ಟು ಬಿತ್ತು. ನಿರುದ್ಯೋಗದ ಪ್ರಶ್ನೆಯನ್ನು ಕುರಿತು ಆರ್ಥಿಕ ಚಿಂತನೆಯಲ್ಲಿ ಇದೊಂದು ಮಹಾಕ್ರಾಂತಿಯೆನ್ನ ಬಹುದು. ಆಧುನಿಕ ಉದ್ಯೋಗ ಸಿದ್ಧಾಂತವನ್ನು ಕೇನ್ಸ್ ಪ್ರಥಮತಃ ರೂಪಿಸಿದರೂ, ಇತರ ಅನೇಕರು ಅದನ್ನು ಪರಿಷ್ಕರಿಸಿ ಅವನ ಕೃತಿಯನ್ನು ವಿಸ್ತರಿಸಿದ್ದಾರೆ.

ಆಧುನಿಕ ಉದ್ಯೋಗ ಸಿದ್ಧಾಂತ ಅಭಿಜಾತ ನಿಲುವಿಗೆ ಸಂಪೂರ್ಣವಾಗಿ ವಿರುದ್ಧವಾದದ್ದು. ಸದಾಕಾಲದಲ್ಲೂ ಪೂರ್ಣ ಉದ್ಯೋಗ ಪರಿಮಿತಿಯನ್ನೊದಗಿಸುವ ಯಾವುದೇ ವಿಧಾನವೂ ಬಂಡವಾಳವ್ಯವಸ್ಥೆಯಲ್ಲಿಲ್ಲವೆಂಬುದೇ ಆಧುನಿಕ ಸಿದ್ಧಾಂತದ ಮುಖ್ಯ ಅಂಶ. ಅರ್ಥವ್ಯವಸ್ಥೆಯನ್ನು ಪರಿಶೀಲಿಸಿದರೆ ಅದು ಯಾವ ಸಮಯದಲ್ಲೂ ಗಮನಾರ್ಹ. ನಿರುದ್ಯೋಗ ಸಮಸ್ಯೆಯ ಪರಿಣಾಮವಾಗಿ ಅಥವಾ ತೀವ್ರವಾದ ಹಣದ ಉಬ್ಬರದ ಪರಿಣಾಮವಾಗಿ, ನಿಲುಗಡೆಯ ಸ್ಥಿತಿ ತಲುಪಬಹುದು ಎಂಬ ಶಂಕೆಗೆ ಎಡೆಯುಂಟಾಗುತ್ತದೆ. ಬೆಲೆಗಳು ಸ್ಥಿರವಾಗಿರುವ ಪೂರ್ಣೋದ್ಯೋಗ ಪರಿಸ್ಥಿತಿ ಕೇನ್ಸ್ ದೃಷ್ಟಿಯಲ್ಲಿ ಅಪವಾದವೇ ಹೊರತು ನಿಯಮವಲ್ಲ. ಕೇನ್ಸ್ ಪ್ರಕಾರ ಬಂಡವಾಳಪದ್ಧತಿಯಲ್ಲಿ ನಿರಂತರ ಪ್ರಗತಿಸಾಧಕವಾದ ಸ್ವಯಂಚಾಲಿತ ವ್ಯವಸ್ಥೆಯೇನೂ ಇಲ್ಲ. ಅಭಿಜಾತ ಅರ್ಥಶಾಸ್ತ್ರಜ್ಞರು ಭಾವಿಸಿದ್ದಂತೆ ಅರ್ಥವ್ಯವಸ್ಥೆಯು ಕೇವಲ ಬಾಹ್ಯಶಕ್ತಿಗಳಾದ ಯುದ್ಧ, ಕ್ಷಾಮ, ಮತ್ತಿತರ ಅಸಾಧಾರಣ ಪರಿಸ್ಥಿತಿಗಳಿಂದ ಉಂಟಾಗುವುದಿಲ್ಲ. ನಿರುದ್ಯೋಗ ಮತ್ತು ಹಣದುಬ್ಬರ ಸಮಸ್ಯೆಗಳು ಸಮಾಜದಲ್ಲಿ ಕೈಗೊಳ್ಳಲಾಗುವ ಪ್ರಮುಖನಿರ್ಣಯಗಳಿಂದ ಸಂಭವಿಸುತ್ತವೆ ಎನ್ನಬಹುದು. ಸಮಾಜದಲ್ಲಿ ಉದ್ಭವಿಸುವ ಆರ್ಥಿಕ ಸಮಸ್ಯೆಗಳು ಪ್ರಮುಖವಾಗಿ ಉಳಿತಾಯ ಮತ್ತು ಬಂಡವಾಳ ನಿಯೋಜನೆಗಳ ಪರಿಣಾಮ. ಬಾಹ್ಯಶಕ್ತಿಗಳ ಜೊತೆಗೆ ಆಂತರಿಕ ಶಕ್ತಿಗಳೂ ಆರ್ಥಿಕ ಅಸ್ಥಿರತೆಗೆ ಬಹಳ ಮಟ್ಟಿಗೆ ಕಾರಣ.

ಉಳಿತಾಯ ಮತ್ತು ಬಂಡವಾಳ ನಿಯೋಜನೆಗಳ ನಡುವೆ ಸಮತೋಲನ ಏರ್ಪಡುವುದು ಬಡ್ಡಿಯ ದರದಿಂದ-ಎಂಬ ಸಿದ್ಧಾಂತವನ್ನು ಆಧುನಿಕ ಉದ್ಯೋಗ ಸಿದ್ಧಾಂತ ತಿರಸ್ಕರಿಸುತ್ತದೆ. ಉಳಿತಾಯ ಮಾಡುವವರು ಮತ್ತು ಬಂಡವಾಳ ನಿಯೋಜಿಸುವವರು ತಮ್ಮ ಕಾರ್ಯ ನಿರ್ವಹಿಸುವಾಗ ಕೇವಲ ಬಡ್ಡಿದರವನ್ನೇ ಆಧಾರವನ್ನಾಗಿ ಇರಿಸಿಕೊಳ್ಳುವುದಿಲ್ಲ. ಉಳಿತಾಯ ನಿಯೋಜನೆಗಳ ಹಿಂದೆ ನಾನಾ ಉದ್ದೇಶಗಳಿರುತ್ತವೆ.

ಅಭಿಜಾತ ಅರ್ಥಶಾಸ್ತ್ರಜ್ಞರು ಊಹಿಸಿದ್ದಂತೆ ಬೆಲೆಯೂ ಕೂಲಿದರವೂ ಮಾರುಕಟ್ಟೆಯಲ್ಲಿ ತಮ್ಮ ಪ್ರಕ್ರಿಯೆ-ಪ್ರತಿಕ್ರಿಯೆಗಳನ್ನುಂಟುಮಾಡುವುದಿಲ್ಲವೆಂಬುದು ಆಧುನಿಕ ಸಿದ್ಧಾಂತದಲ್ಲಿ ವೇದ್ಯವಾಗಿದೆ. ಕಾರ್ಮಿಕ ಸಂಘಗಳೂ ಏಕಸ್ವಾಮ್ಯ ಸಂಸ್ಥೆಗಳೂ ಕನಿಷ್ಠವೇತನ ಕಾನೂನುಗಳೂ ಸಮಾಜದಲ್ಲಿ ತಮ್ಮ ಪ್ರಭಾವ ಬೀರುವುದರಿಂದ ಬೆಲೆ ಮತ್ತು ಕೂಲಿ ದರಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಗ್ಗಿಸಲಾಗುವುದಿಲ್ಲ.

ಸಮಾಜದಲ್ಲಿ ಉಂಟಾಗುವ ಉತ್ಪಾದನೆ ಮತ್ತು ಉದ್ಯೋಗ ಮಟ್ಟಗಳು ಅಲ್ಲಿ ದೊರೆಯುವ ಸಂಪನ್ಮೂಲಗಳನ್ನು ಅವಲಂಬಿಸಿರುತ್ತವೆ. ಜೊತೆಗೆ ಸಮಾಜದಲ್ಲಿ ಉಂಟಾಗುವ ಒಟ್ಟು ಖರ್ಚಿನ ಆಧಾರದ ಮೇಲೆ ಉತ್ಪಾದಿತ ವಸ್ತುಗಳ ಮತ್ತು ಸೇವೆಗಳ ಪ್ರಮಾಣದ ಮತ್ತು ಅದರಿಂದಾಗಿ ಉದ್ಯೋಗಮಟ್ಟದ ನಿರ್ಧಾರವಾಗುತ್ತದೆ. ಒಂದು ಕಡೆ ಒಟ್ಟು ಖರ್ಚು, ಮತ್ತೊಂದು ಕಡೆ ಒಟ್ಟು ಉತ್ಪಾದನೆ ಹಾಗೂ ಉದ್ಯೋಗ ತುಂಬ ನೇರವಾಗಿ

ವ್ಯತ್ಯಾಸಗೊಳ್ಳುತ್ತವೆ. ಅಂದರೆ ಒಟ್ಟು ಖರ್ಚು ಅಧಿಕವಾದಂತೆಲ್ಲ ಉತ್ಪಾದನೆ ಮತ್ತು ಉದ್ಯೋಗ ಅಧಿಕಗೊಳ್ಳುತ್ತವೆ. ಒಟ್ಟು ಖರ್ಚು ಕಡಿಮೆಯಾದ ಹಾಗೆಲ್ಲ ಉತ್ಪಾದನೆ ಮತ್ತು ಉದ್ಯೋಗ ಕ್ಷೀಣಿಸುತ್ತವೆ. ಅನುಭೋಗ, ಉಳಿತಾಯ ಮತ್ತು ಬಂಡವಾಳನಿಯೋಜನೆ–ಇವು ಆಧುನಿಕ ಉದ್ಯೋಗ ಸಿದ್ಧಾಂತದ ಮೂಲಸ್ತಂಭಗಳು. ಈ ಮೂರು ಅಂಶಗಳು ಯಾವ ರೀತಿ ಉತ್ಪಾದನೆ ಮತ್ತು ಉದ್ಯೋಗಗಳ ಮೇಲೆ ತಮ್ಮ ಪ್ರಭಾವ ಬೀರುತ್ತವೆ ಎಂಬುದನ್ನು ಪರಿಶೀಲಿಸಬೇಕು.

ಒಂದು ಅರ್ಥವ್ಯವಸ್ಥೆಯಲ್ಲಿ ಅನುಭೋಗ ಹಾಗೂ ಉಳಿತಾಯಗಳನ್ನು ನಿರ್ಧರಿಸುವ ಅಂಶಗಳು ಹಲವಾರು ಉಂಟು: ಕುಟುಂಬಗಳು ಹೊಂದಿರುವ ನಗದು ಮುಂತಾದ ದ್ರವರೂಪಿ ಆಸ್ತಿ; ದೀರ್ಘಕಾಲ ಬಳಸಬಹುದಾದ ಅನುಭೋಗ ವಸ್ತುಸಂಗ್ರಹ; ಭವಿಷ್ಯದಲ್ಲಿ ಲಭಿಸುವ ವರಮಾನ, ಬೆಲೆ, ಪದಾರ್ಥ ಇವುಗಳನ್ನು ಕುರಿತ ನಿರೀಕ್ಷೆ; ಮಿತವ್ಯಯದ ಬಗ್ಗೆ ಇರುವ ಒಟ್ಟು ಭಾವನೆ; ಅನುಭೋಗಿಗಳ ಸಾಲದ ಮೊತ್ತ; ತೆರಿಗೆವ್ಯವಸ್ಥೆ–ಇವೆಲ್ಲವೂ ಅನುಭೋಗ ಮತ್ತು ಉಳಿತಾಯಗಳನ್ನು ಪರೋಕ್ಷವಾಗಿ ನಿರ್ಧರಿಸುತ್ತವೆ.

ಬಂಡವಾಳ ನಿಯೋಜನೆಯನ್ನು ನಿರ್ಧರಿಸುವ ಅಂಶಗಳು ಇವು: 1 ಲಾಭದ ನಿರೀಕ್ಷೆ, 2 ತಾಂತ್ರಿಕ ಪ್ರಗತಿ, 3 ನಿಜಬಂಡವಾಳ ಪಡೆಯಲು ತಗಲುವ ವೆಚ್ಚ, 4 ಬಡ್ಡಿಯ ದರ, 5 ಸರ್ಕಾರದ ನೀತಿ, 6 ಸದ್ಯದಲ್ಲಿ ನಿಯೋಜಿತವಾಗಿರುವ ಬಂಡವಾಳದ ಮೊತ್ತ ಭವಿಷ್ಯದಲ್ಲಿ ಉದ್ಯಮಪರಿಸ್ಥಿತಿಯಲ್ಲಿ ಸಂಭವಿಸಬಹುದಾದ ಘಟನೆಗಳು.

ಸಮಾಜದಲ್ಲಿ ಬಂಡವಾಳ ನಿಯೋಜನೆಯ ವಿಧಾನವನ್ನು ಪರಿಶೀಲಿಸಿದಾಗ ಅಲ್ಲಿ ಅಸ್ಥಿರತೆ ಬಹಳವಾಗಿರುವುದು ಕಂಡುಬರುತ್ತದೆ. ಬಂಡವಾಳ, ವಸ್ತುಗಳ ಬಾಳಿಕೆ. ಇದಕ್ಕಿದ್ದಂತೆಯೇ ಉತ್ಪಾದನ ಕ್ಷೇತ್ರದಲ್ಲಿ ಸಂಭವಿಸುವ ಬದಲಾವಣೆಗಳು, ಲಾಭಗಳಿಕೆಯಲ್ಲಿ ಇರುವ ಅಸ್ಥಿರತೆ, ನಿರೀಕ್ಷಣೆಯನ್ನೂ ಮೀರಿದ ಘಟನೆಗಳು–ಇವೆಲ್ಲ ಬಂಡವಾಳ ನಿಯೋಜನೆಯಲ್ಲಿ ಅಸ್ಥಿರತೆಗೆ ಕಾರಣ. ಬಂಡವಾಳ ನಿಯೋಜನೆಯಲ್ಲಿ ಉಂಟಾಗುವ ಏರುತಗ್ಗುಗಳಿಂದ ಉತ್ಪಾದನೆ, ವರಮಾನ, ಉದ್ಯೋಗಾವಕಾಶ–ಇವುಗಳಲ್ಲೂ ಏರುಪೇರುಗಳಾಗುತ್ತವೆ.

ವರಮಾನವೇ ಉದ್ಯೋಗಕ್ಕೆ ಮೂಲ–ಎಂಬುದು ಕೇನ್ಸ್ ಸಿದ್ಧಾಂತಕ್ಕೆ ಆಧಾರ. ರಾಷ್ಟ್ರೀಯ ವರಮಾನದ ಹೆಚ್ಚಳಕ್ಕೆ ಅನುಸಾರವಾಗಿ ಉದ್ಯೋಗದ ಮೊತ್ತ ಹೆಚ್ಚುತ್ತದೆ. ಉದ್ಯೋಗವನ್ನು ಕುರಿತ ವಿವೇಚನೆ ನಡೆಸಲು ಈ ಅರ್ಥಶಾಸ್ತ್ರಜ್ಞರು ಎರಡು ತರ್ಕಮಾರ್ಗಗಳನ್ನು ಬಳಸಿಕೊಂಡಿದ್ದಾರೆ. ಮೊದಲನೆಯದು ಒಟ್ಟು ಬೇಡಿಕೆ ಮತ್ತು ಒಟ್ಟು ಸರಬರಾಯಿಯನ್ನು ಕುರಿತ ತರ್ಕಮಾರ್ಗ. ಅನುಭೋಗಿ ಖರ್ಚು (C) ಬಂಡವಾಳದ ಖರ್ಚು (I) ಒಟ್ಟು ಉತ್ಪಾದನೆಯನ್ನೂ ಉದ್ಯೋಗವನ್ನೂ (Y) ನಿರ್ಧರಿಸುತ್ತವೆ (C + I = Y). ಉಳಿತಾಯವೂ ಬಂಡವಾಳ ನಿಯೋಜನೆಯೂ ಸಮನಾಗಿರುತ್ತವೆಯೆನ್ನುವುದೂ (S=I) ಇವು ಉದ್ಯೋಗವನ್ನೂ ಉತ್ಪಾದನೆಯನ್ನೂ ನಿಷ್ಕರ್ಷಿಸುತ್ತವೆಯೆನ್ನುವುದೂ ಎರಡನೆಯ ತರ್ಕಮಾರ್ಗ.

ಒಂದು ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯಾದ ಎಲ್ಲ ಸರಕುಗಳ ಹಾಗೂ ಸೇವೆಗಳ ಮೌಲ್ಯವನ್ನೂ ಒಟ್ಟುಗೂಡಿಸಿದಾಗ ಬಂದದ್ದೇ ಅಲ್ಲಿನ ಒಟ್ಟು ಸರಬರಾಯಿ. ಎಂದರೆ ಇದು ರಾಷ್ಟ್ರೀಯ ಉತ್ಪನ್ನ. ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆ ಮಾಡಲಾದ ಎಲ್ಲ ಸರಕು ಹಾಗೂ




ಒಟ್ಟು ಉತ್ಪಾದನೆ, ಉದ್ಯೋಗ, ವರಮಾನ

ಸೇವೆಗಳಿಗೆ ಉಂಟಾಗುವ ಬೇಡಿಕೆಯೇ ಒಟ್ಟು ಬೇಡಿಕೆ. ಇದನ್ನು ಪರಿಣಾಮಕಾರಿ ಬೇಡಿಕೆ ಎಂದೂ ಕರೆಯುತ್ತಾರೆ. ಒಟ್ಟು ಬೇಡಿಕೆ ಒಟ್ಟು ಸರಬರಾಜನ್ನು ಸಂಧಿಸುವ ಮಟ್ಟದಲ್ಲಿ ಸಮಾಜದಲ್ಲಿಯ ಒಟ್ಟು ಉದ್ಯೋಗದ ಮಟ್ಟದ ನಿರ್ಧಾರವಾಗುತ್ತದೆ. ವಾಸ್ತವವಾಗಿ ಉದ್ಯೋಗದ ಮಟ್ಟದ ನಿರ್ಧಾರವಾದಾಗ ಉದ್ಯಮಿಗಳು ತಾವು ಉತ್ಪಾದನೆಯಲ್ಲಿ ವೆಚ್ಚಮಾಡಿದ್ದನ್ನು ತಮ್ಮ ಸರಕು ಸರಬರಾಜು ಮಾಡಿ ಪಡೆಯುತ್ತಾರೆ.

ನಕ್ಷೆಯಲ್ಲಿ $45^{o}$ ರೇಖೆ ಒಟ್ಟು ಸರಬರಾಜನ್ನು ತೋರಿಸುತ್ತದೆ. ತಾವು ಉತ್ಪತ್ತಿಮಾಡಿದ ಒಟ್ಟು ವಸ್ತುಗಳು ಮತ್ತು ಸೇವೆಗಳಿಗೆ ಸಮನಾದ ಬೇಡಿಕೆ ಮಾರುಕಟ್ಟೆಯಿಂದ ಬರುತ್ತದೆ ಎಂದು ಕಂಡುಬಂದರೆ ಉದ್ಯಮಿಗಳು ಎಷ್ಟು ಪ್ರಮಾಣದಲ್ಲಿ ಬೇಕಾದರೂ ಉತ್ಪಾದಿಸಲು ಸಿದ್ಧರಾಗಿರುತ್ತಾರೆ. ಎಲ್ಲಿ ಒಟ್ಟು ಸರಬರಾಯಿ ರೇಖೆ ಮತ್ತು ಒಟ್ಟು ಬೇಡಿಕೆ ರೇಖೆ (C+I) ಸಂಧಿಸುತ್ತವೋ ಆ ಮಟ್ಟದಲ್ಲಿ ಒಟ್ಟು ಉತ್ಪಾದನೆ, ಉದ್ಯೋಗ ಮತ್ತು ವರಮಾನದ ನಿರ್ಧಾರವಾಗುತ್ತದೆ.

ಚಿತ್ರದಲ್ಲಿ (Ye) ಎಂಬುದು ಒಟ್ಟು ವರಮಾನವನ್ನು ಸೂಚಿಸುತ್ತದೆ. ಈ ಮಟ್ಟದಲ್ಲಿ ಸಮಾಜದ ಉತ್ಪಾದನೆ ಮತ್ತು ಬೇಡಿಕೆಯ ಅಂಶಗಳು ಹೊಂದಿಕೊಳ್ಳುತ್ತವೆ. Ye ಎಂಬ ಸಮತೋಲ ಮಟ್ಟದಲ್ಲಿ ಕಂಡು ಬಂದಿರುವುದಕ್ಕಿಂತ ಅಧಿಕ ವರಮಾನ ಉಂಟಾದರೆ, ಒಟ್ಟು ಬೇಡಿಕೆಗಿಂತ ಒಟ್ಟು ಸರಬರಾಜು ಅಧಿಕಗೊಳ್ಳುತ್ತದೆ. ಇದರ ಪರಿಣಾಮವಾಗಿ ಲಾಭಗಳು ಕುಸಿಯುತ್ತವೆ. ಮಾರಾಟವಾಗದೆ ವಸ್ತುಗಳು ಶೇಖರಿಸಲ್ಪಡುತ್ತವೆ. ಕೊನೆಯಲ್ಲಿ ಉತ್ಪಾದನೆ, ಉದ್ಯೋಗ ಮತ್ತು ವರಮಾನಗಳೂ ಕುಸಿಯುತ್ತವೆ. Ye ಎಂಬ ಸಮತೋಲ ಮಟ್ಟದಲ್ಲಿ ಕಂಡುಬಂದಿರುವುದಕ್ಕಿಂತ ಅಧಿಕ ವರಮಾನ ಕಡಿಮೆಯಾದರೆ ಒಟ್ಟು ಬೇಡಿಕೆ ಒಟ್ಟು ಸರಬರಾಜಿಗಿಂತ ಅಧಿಕವಾಗುತ್ತದೆ. ಇದರಿಂದ ಲಾಭ ಅಧಿಕಗೊಳ್ಳುತ್ತದೆ, ಶೇಖರಿಸಲಾಗಿದ್ದ ಸರಕುಗಳ ಮಾರಾಟವಾಗುತ್ತದೆ. ಕ್ರಮೇಣ ಉದ್ಯೋಗ, ಉತ್ಪಾದನೆ ಮತ್ತು ವರಮಾನ ಹೆಚ್ಚುತ್ತವೆ.

ಉಳಿತಾಯ ಮಾಡಿದ ಹಣ ಬಂಡವಾಳ ನಿಯೋಜನೆಗೆ ಸಮಾನವಾಗಿರುತ್ತದೆ ಎಂಬ ತರ್ಕಸರಣಿಯನ್ನನುಸರಿಸಿ ಈ ಬಗ್ಗೆ ಈಗ ವಿವೇಚನೆ ನಡೆಸಬಹುದು. ಸಮಾಜದಲ್ಲಿ ಉತ್ಪಾದನೆ, ಉದ್ಯೋಗ ಮತ್ತು ವರಮಾನಗಳು ಯಾವ ರೀತಿ ಸಮತೋಲ ಮಟ್ಟದಲ್ಲಿರುತ್ತವೆ ಎಂಬುದನ್ನು ತೋರಿಸಲು ಅರ್ಥಶಾಸ್ತ್ರಜ್ಞರು ಮೊದಲನೆಯ ವಿಧಾನಕ್ಕೆ ಪೂರಕವಾಗಿ ಈ ವಿಧಾನ ಅನುಸರಿಸಿದ್ದಾರೆ. ಇದರ ಪ್ರಕಾರ ಸಮಾಜದಲ್ಲಿಯ ಎಲ್ಲ ವರ್ಗಗಳ ಜನ ಉಳಿತಾಯ ಮಾಡುವ ಮೊತ್ತವೂ ಉದ್ಯಮಿಗಳು ಬಂಡವಾಳವಾಗಿ ಉಪಯೋಗಿಸಿಕೊಳ್ಳುವ ಮೊತ್ತವೂ ಸಮನಾಗಿಸುತ್ತವೆ ಎಂದು ತೋರಿಸಲಾಗಿದೆ. ಒಟ್ಟು ಉಳಿತಾಯ ಒಟ್ಟು ಬಂಡವಾಳ ನಿಯೋಜನೆಗೆ ಸಮನಾಗುವ ಮಟ್ಟದಲ್ಲಿ ಉತ್ಪಾದನೆ, ಉದ್ಯೋಗ ಮತ್ತು ವರಮಾನಗಳು ಸಮತೋಲ ಸ್ಥಿತಿಯಲ್ಲಿರುತ್ತವೆ.




Ye ಎಂಬುದು ಸಮತೋಲ ಮಟ್ಟವನ್ನು ಸೂಚಿಸುತ್ತದೆ. ಈ ಮಟ್ಟದಲ್ಲಿರುವುಕ್ಕಿಂತ ಅಧಿಕವಾಗಿ ಉಳಿತಾಯವಾದರೆ, ಒಟ್ಟು ವೆಚ್ಚದಲ್ಲಿ ಕೊರತೆ ಉಂಟಾಗುತ್ತದೆ. ಒಟ್ಟು ವೆಚ್ಚದಲ್ಲಿ ಕೊರತೆ ಉಂಟಾದರೆ ಪರಿಣಾಮಕಾರಿ ಬೇಡಿಕೆ ಕುಸಿಯುತ್ತದೆ. ಆಗ ಉತ್ಪಾದನೆ ಉದ್ಯೋಗ ಮತ್ತು ವರಮಾನ ಕುಸಿಯುತ್ತವೆ. ಉಳಿತಾಯ ಅಧಿಕವಾಗುವುದರ ಬದಲು ಬಂಡವಾಳ ನಿಯೋಜನೆ ಅಧಿಕವಾದರೆ ವ್ಯತಿರಿಕ್ತ ಪರಿಣಾಮಗಳು ಉದ್ಭವಿಸುತ್ತವೆ. ಆದ್ದರಿಂದ ಅರ್ಥವ್ಯವಸ್ಥೆಯಲ್ಲಿಯ ವಿವಿಧ ಆರ್ಥಿಕ ಪ್ರಭಾವಗಳು ಒಟ್ಟಾಗಿ ಕೆಲಸ ಮಾಡಿ ಪುನಃ ಉಳಿತಾಯ ಮತ್ತು ಬಂಡವಾಳ ನಿಯೋಜನೆಯ ಮಧ್ಯೆ ಸಮತೋಲನವನ್ನುಂಟುಮಾಡುತ್ತವೆ.

ಸಮತೋಲನ ಮಟ್ಟದಲ್ಲಿ ಯಾವ ರೀತಿ ಉತ್ಪಾದನೆ, ಉದ್ಯೋಗ ಮತ್ತು ವರಮಾನ ನಿರ್ಧಾರವಾಗುತ್ತವೆಯೆಂಬುದನ್ನು ಎರಡು ಭಿನ್ನಮಾರ್ಗಗಳಿಂದ ಇದುವರೆಗೂ ವಿವೇಚಿಸಿದ್ದಾಯಿತು. ಆದರೆ ಸಮತೋಲ ಮಟ್ಟ ಪೂರ್ಣೋದ್ಯೋಗದ ಮಟ್ಟಕ್ಕೆ ಯಾವಾಗಲೂ ಸಮನಾಗಿರಬೇಕಾಗಿಲ್ಲ. ಕೆಲವು ವೇಳೆ ಸಮತೋಲನದ ಮಟ್ಟ ಪೂರ್ಣ ಉದ್ಯೋಗದ ಮಟ್ಟಕ್ಕಿಂತ ಅಧಿಕವಾಗಿರಬಹುದು ಅಥವಾ ಕಡಿಮೆಯಾಗಿಯೂ ಇರಬಹುದು. ಆರ್ಥಿಕ ವ್ಯವಸ್ಥೆಯಲ್ಲಿ ಅನೇಕ ಸಂದರ್ಭಗಳಲ್ಲಿ ಪೂರ್ಣೋದ್ಯೋಗದ ಮಟ್ಟ ಏರ್ಪಡದೆ, ಉಳಿತಾಯ

ಮತ್ತು ಬಂಡವಾಳ ನಿಯೋಜನೆಗಳಲ್ಲಿ ಸಮಾನತೆ ಉಂಟಾದರೆ ಅಥವಾ ಒಟ್ಟು ವೆಚ್ಚ ಮತ್ತು ಒಟ್ಟು ಸರಬರಾಜುಗಳ ಮಧ್ಯೆ ಸಮಾನತೆಯಿದ್ದರೆ ಆಗ ಅಪೂರ್ಣ ಉದ್ಯೋಗ ಸಮತೋಲ ಏರ್ಪಡುತ್ತದೆ. ಇಂಥ ಸಂದರ್ಭಗಳಲ್ಲಿ ಪೂರ್ಣೋದ್ಯೋಗದ ಮಟ್ಟ ಮತ್ತು ಅಪೂರ್ಣ ಉದ್ಯೋಗದ ಮಟ್ಟ ಇವುಗಳಲ್ಲಿ ಅಂತರವನ್ನು ಕಾಣಬಹುದು. ಇದನ್ನೇ ಅರ್ಥಶಾಸ್ತ್ರಜ್ಞರು ಒಟ್ಟು ವೆಚ್ಚದ ಇಳಿತ-ಉಬ್ಬರಗಳಿಂದ ಉಂಟಾಗುವ ಅಂತರವೆಂದು ಕರೆಯುತ್ತಾರೆ. ಒಟ್ಟು ವೆಚ್ಚ ಪೂರ್ಣೋದ್ಯೋಗದ ಮಟ್ಟದ ವರಮಾನಕ್ಕಿಂತ ಕಡಿಮೆಯಾಗಿದ್ದರೆ ಆರ್ಥಿಕ ವ್ಯವಸ್ಥೆಯಲ್ಲಿ ಅಂತರ ಉಂಟಾಗುತ್ತದೆ. ಇದರ ಫಲವಾಗಿ ಅನೇಕ ಪರಿಣಾಮಗಳು ಕಂಡುಬರುತ್ತವೆ. ನಿಜವರಮಾನ, ಉತ್ಪಾದನೆ ಮತ್ತು ಉದ್ಯೋಗಗಳು ಕುಸಿಯುತ್ತವೆ.




**ಉತ್ಪಾದನೆ, ಉದ್ಯೋಗ, ವರಮಾನ**

ಅದರ ಬದಲು ಒಟ್ಟು ವೆಚ್ಚ ಪೂರ್ಣೋದ್ಯೋಗದ ಮಟ್ಟದ ವರಮಾನಕ್ಕಿಂತ ಅಧಿಕವಾದರೆ ಆಗಲೂ ಅರ್ಥವ್ಯವಸ್ಥೆಯಲ್ಲಿ ಅಂತರ ಉಂಟಾಗುತ್ತದೆ. ಇದರಿಂದಲೂ ಕೆಲವು ದುಷ್ಪರಿಣಾಮಗಳು ಕಂಡು ಬರುತ್ತವೆ. ಅಂದರೆ ಹಣದ ಚಲಾವಣೆ ಅಧಿಕಗೊಂಡು (ನಿಜ ಉತ್ಪಾದನೆ, ಉದ್ಯೋಗ ಮತ್ತು ವರಮಾನ ಏರಲು ಸಾಧ್ಯವಿಲ್ಲದೆ ಇರುವುದರಿಂದ) ವಸ್ತುಗಳ ಮತ್ತು ಸೇವೆಗಳ ಬೆಲೆ ಜನರಿಗೆ ತೊಂದರೆಯಾಗುತ್ತದೆ.

ಒಟ್ಟು ವೆಚ್ಚದ ಇಳಿತಾಯದ ಪರಿಣಾಮವೆಂದರೆ ಆರ್ಥಿಕ ಮುಗ್ಗಟ್ಟು. ಅಂದರೆ ಪರಿಣಾಮಕಾರಿ ಬೇಡಿಕೆಯ ಕೊರತೆಯಿಂದ ವಸ್ತುಗಳಿಗೆ ಸಾಕಷ್ಟು ಮಾರುಕಟ್ಟೆ ಇಲ್ಲದೆ ಉತ್ಪಾದನೆ ಕುಗ್ಗುತ್ತದೆ. ಉತ್ಪಾದನೆ ಕುಗ್ಗಿದಾಗ ನಿರುದ್ಯೋಗ ಉಂಟಾಗುತ್ತದೆ. ಇದನ್ನು ಸರಿಪಡಿಸಲು ಕೇನ್ಸ್ ಮತ್ತು ಆತನ ಅನುಯಾಯಿಗಳು ಕೆಲವು ಸಲಹೆ ನೀಡಿದ್ದಾರೆ: 1 ಸಮಾಜದಲ್ಲಿ ಪರಿಣಾಮಕಾರಿ ಬೇಡಿಕೆ ಏರ್ಪಡಿಸಲು ಕೊಳ್ಳುವ ಶಕ್ತಿ ಸೃಷ್ಟಿಸಬೇಕು. 2 ಇದಕ್ಕಾಗಿ ಸರ್ಕಾರ ಲೋಕೋಪಯೋಗಿ ಕಾರ್ಯ ಕೈಗೊಳ್ಳಬೇಕು. 3 ತೆರಿಗೆ ನೀತಿಯಲ್ಲಿ ಉದಾರ ರಿಯಾಯಿತಿ ತೋರಿಸಿ ಉದ್ಯಮಿಗಳಲ್ಲೂ ಅನುಭೋಗಿಗಳಲ್ಲೂ ಉತ್ಸಾಹ ಮೂಡಿಸಬೇಕು. 4 ಸರ್ಕಾರ ಬಡ್ಡಿಯ ದರ ತಗ್ಗಿಸಿ ಉದ್ಯಮಿಗಳಿಗೆ ಧಾರಾಳವಾಗಿ ಉದ್ದರಿ ಸೌಲಭ್ಯ ದೊರೆಯುವಂತೆ ಮಾಡಬೇಕು.

ಹಣದುಬ್ಬರದ ಪರಿಸ್ಥಿತಿ ಒದಗಿದಾಗ ಮೇಲೆ ಸೂಚಿಸಿರುವ ನೀತಿಗಳಿಗೆ ವ್ಯತಿರಿಕ್ತವಾದ ನೀತಿ ಅನುಸರಿಸುವುದು ಅವಶ್ಯ.

1930ರ ಸುಮಾರಿನಲ್ಲಿ ಪ್ರಪಂಚದಲ್ಲಿ ಅತ್ಯಂತ ಭೀಕರ ಆರ್ಥಿಕ ಮುಗ್ಗಟ್ಟು ಸಂಭವಿಸಿದಾಗ ಅನೇಕ ರಾಷ್ಟ್ರಗಳ ಸರ್ಕಾರಗಳ ಕೇನ್ಸ್ ಸಲಹೆಗಳನ್ನು ಪ್ರಯೋಗಿಸಿ ನೋಡಿದುವು. ಇವುಗಳಿಂದ ಸಾಕಷ್ಟು ಪರಿಣಾಮವೂ ಉಂಟಾಯಿತು. ಇದರಿಂದ ಆರ್ಥಿಕ ನೀತಿಗಳನ್ನು ರೂಪಿಸುವುದರಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಯಿತು ಎನ್ನಬಹುದು. ಹಣದುಬ್ಬರ ಪರಿಸ್ಥಿತಿ ಒದಗಿದಾಗಲೂ ಕೇನ್ಸ್ ಸಲಹೆಗಳು ಪ್ರಯೋಗ ಪರೀಕ್ಷೆಯಲ್ಲಿ ತಕ್ಕ ಮಟ್ಟಿಗೆ ಫಲಪ್ರದವಾಗಿವೆಯೆನ್ನಬಹುದು.

ಕೇನ್ಸ್ ಸಿದ್ಧಾಂತ ಪ್ರಸಿದ್ಧಿಗೆ ಬಂದ ಮೇಲೆ ಕೆಲ ಕಾಲ ಅಭಿಜಾತ ಸಿದ್ಧಾಂತ ಮಸುಳಿತ್ತು. ಆದರೆ ಈಚೆಗೆ ಕೆಲವು ಪ್ರಾಧ್ಯಾಪಕರು ಅಭಿಜಾತ ತತ್ತ್ವಕ್ಕೆ ಜೀವದಾನ ಕೊಡುವ ಯತ್ನ ನಡೆಸಿದ್ದಾರೆ. ಇವರ ಪೈಕಿ ಪ್ರಮುಖರಾದವರು ಪಿಗು ಮತ್ತು ಪ್ಯಾಟಿನ್‌ಕಿನ್. ಇವರ ಸಾಮರಸ್ಯ ಸಿದ್ಧಾಂತವನ್ನು ಈಗ ನವ ಅಭಿಜಾತ ಸಿದ್ಧಾಂತವೆಂದು ಕರೆಯಲಾಗುತ್ತಿದೆ. ಇದೇ ರೀತಿ ಕೇನ್ಸ್ ಪಂಥದವರು ತಮ್ಮ ಸಿದ್ಧಾಂತವನ್ನು ಪರಿಷ್ಕರಿಸಿ ಅದಕ್ಕೆ ಹಲವಾರು ನೂತನ ಅಂಶಗಳನ್ನು ಜೋಡಿಸಿದ್ದಾರೆ. ಇದರಿಂದಾಗಿ ಕೇನ್ಸನ ಉದ್ಯೋಗ ಸಿದ್ಧಾಂತ ಹೆಚ್ಚು ಉಪಯುಕ್ತವಾಗಿ ಕಂಡುಬಂದಿದೆ. ಉದ್ಯೋಗ, ಉತ್ಪಾದನೆ ಮತ್ತು ವರಮಾನಗಳನ್ನು ಕುರಿತು ಚರ್ಚಿಸುವಾಗ ಕೇನ್ಸನ ಪರಿಷ್ಕೃತ ಸಿದ್ಧಾಂತವೇ ಹೆಚ್ಚಾಗಿ ಬಳಕೆಯಲ್ಲಿದೆಯೆನ್ನಬಹುದು. (ಎಂ.ಎ.ಎಂ.)

**ಉದ್ಯೋಗ ವಿನಿಮಯ ವ್ಯವಸ್ಥೆ:** ಉದ್ಯೋಗಾರ್ಥಿಗಳನ್ನೂ ಉದ್ಯೋಗಕ್ಕೆ ನೇಮಕಮಾಡಿಕೊಳ್ಳುವವರನ್ನೂ ಒಟ್ಟಿಗೆ ತರುವ ವ್ಯವಸ್ಥೆ (ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್). ವಿವಿಧ ಕ್ಷೇತ್ರಗಳಲ್ಲೂ ಸ್ಥಳಗಳಲ್ಲೂ ಇರುವ ಉದ್ಯೋಗಾವಕಾಶಗಳನ್ನು ಉದ್ಯೋಗಾರ್ಥಿಗಳಿಗೆ ತಿಳಿಯಪಡಿಸಿ, ಕಾರ್ಮಿಕರ ಚಲನೆಯನ್ನು ಹೆಚ್ಚಿಸುವುದು ಉದ್ಯೋಗ ವಿನಿಮಯ ವ್ಯವಸ್ಥೆಯ ಒಂದು ಉದ್ದೇಶ. ತೆರವಾದ ಸ್ಥಾನಗಳ ಪ್ರಕಟಣೆ, ನೌಕರಿ ಬಯಸುವ ಅಭ್ಯರ್ಥಿಗಳ ನೋಂದಣಿ, ಕಾರ್ಮಿಕರ ಮಾರುಕಟ್ಟೆಯಲ್ಲಿ ಸಂಭವಿಸುತ್ತಿರುವ ಅಗತ್ಯಗಳ ಏರಿಳಿತಗಳ ಅಳಿತ-ಇವುಗಳ ಮೂಲಕ ಬೇಡಿಕೆಗೆ ತಕ್ಕಂತೆ ಕಾರ್ಮಿಕರ ಸರಬರಾಜಿನ ನಿಯಂತ್ರಣ ಸಾಧ್ಯವಾಗುವುದೆಂಬ ತತ್ತ್ವದ ತಳಹದಿಯ ಮೇಲೆ ಈ ವ್ಯವಸ್ಥೆ ಕೆಲಸಮಾಡುತ್ತದೆ. ಒಂದು ಪ್ರದೇಶದಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿರುವ ಕಾರ್ಮಿಕರು ಅಭಾವವಿರುವ ಇನ್ನೊಂದು ಪ್ರದೇಶಕ್ಕೆ ಚಲಿಸುವಂತೆ ಮಾಡುವ ಕಾರ್ಯದಲ್ಲಿ ಸಹಾಯಮಾಡಲು ಈ ವ್ಯವಸ್ಥೆ ಕೆಲವು ಪೂರ್ವಭಾವಿ ಕರ್ತವ್ಯ ನಿರ್ವಹಿಸುತ್ತದೆ. ನೇಮಕದಾರರು ತಮ್ಮಲ್ಲಿ ಖಾಲಿಯಿರುವ ನೌಕರಿಗಳ ಸಂಖ್ಯೆಯನ್ನು ಪ್ರಕಟಿಸಬೇಕೆಂದು ಅವರನ್ನು ಈ ವ್ಯವಸ್ಥೆ ಪ್ರಾರ್ಥಿಸಿಕೊಳ್ಳುತ್ತದೆ. ನೌಕರಿಗಳನ್ನು ಕುರಿತ ವಿವರಗಳನ್ನು ಈ ಪ್ರಕಟಣೆಯಲ್ಲಿ ನೀಡಬೇಕಾಗುತ್ತದೆ. ಖಾಲಿಯಿರುವ ಉದ್ಯೋಗದ ಸ್ವರೂಪ, ನೌಕರಿಯ ಅವಧಿ, ಮುಂದೆ ನೌಕರಿ ಲಭಿಸುವ ಸಂಭವ, ಬಡ್ತಿಯ ಅವಕಾಶ, ಅಭ್ಯರ್ಥಿಗೆ ಇರಬೇಕಾದ ಅರ್ಹತೆ, ನೌಕರಿಯ ಷರತ್ತುಗಳು ಮುಂತಾದ ವಿವರಗಳನ್ನೂ ಕೊಡಬೇಕಾಗುತ್ತದೆ. ಉದ್ಯೋಗ ಬಯಸುವವರೂ ತಮ್ಮ ಹೆಸರು, ಅರ್ಹತೆ, ಅನುಭವ, ಬಯಸುವ ಉದ್ಯೋಗ ಮುಂತಾದ ವಿವರ ನೀಡಿ ತಮ್ಮ ಹೆಸರುಗಳನ್ನು ನೋಂದಣಿಮಾಡಿಸಬೇಕಾಗುತ್ತದೆ. ಉದ್ಯೋಗ ವಿನಿಮಯ ವ್ಯವಸ್ಥೆ ಈ ಎಲ್ಲ ವಿವರಗಳನ್ನೂ ಪಡೆದುಕೊಂಡಮೇಲೆ ಉದ್ಯೋಗಾರ್ಥಿಗಳನ್ನು ಅವರಿಗೆ ತಕ್ಕ ಉದ್ಯೋಗಗಳಲ್ಲಿ ನೇಮಿಸುವುದು ಸಾಧ್ಯವಾಗುತ್ತದೆ.

ಉದ್ಯೋಗ ವಿನಿಮಯ ವ್ಯವಸ್ಥೆಯ ಶಾಖೆಗಳು ದೇಶಾದ್ಯಂತ ಇರುತ್ತವೆ. ಈ ಶಾಖೆಗಳು ಸದಾ ಪರಸ್ಪರ ಸಂಪರ್ಕ ಹೊಂದಿರುತ್ತವೆ. ಆದ್ದರಿಂದ ಇವು ಒಂದು ಪ್ರದೇಶದಲ್ಲಿ ಅಧಿಕವಾಗಿರುವವರನ್ನು ಅವರ ಸೇವೆ ಅಗತ್ಯವಿರುವ ಇನ್ನೊಂದು ಪ್ರದೇಶದಲ್ಲಿ ಉದ್ಯೋಗದಲ್ಲಿ ತೊಡಗಿಸಬಹುದಾಗಿದೆ.

ನೌಕರಿ ಎಲ್ಲೇ ಇರಲಿ, ಅದನ್ನು ಪಡೆಯಲು ಪ್ರತಿಯೊಬ್ಬ ವ್ಯಕ್ತಿಯೂ ಒಪ್ಪುವುದಾದರೆ ಮಾತ್ರವೇ ಈ ವ್ಯವಸ್ಥೆಯನ್ನು ಜಾರಿಗೆ ತರುವುದು ಸುಲಭ. ಆದರೆ ವೇತನಮಟ್ಟಗಳ ಹಾಗೂ ಪ್ರಾವೀಣ್ಯಗಳ ವ್ಯತ್ಯಾಸ, ವಿಶೇಷ ಪ್ರಾವೀಣ್ಯ, ವಸತಿ ಸಮಸ್ಯೆ, ಕುಟುಂಬ ಪರಿಸ್ಥಿತಿ, ಭೌಗೋಳಿಕ ಅಭಿಮಾನ ಮುಂತಾದ ಹಲವಾರು ಅಂಶಗಳು ಉದ್ಯೋಗ ವಿನಿಮಯ ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತವೆ. ಅಲ್ಲದೆ ಕೆಲವು ಉದ್ಯೋಗಪತಿಗಳು ಉದ್ಯೋಗ ವಿನಿಮಯ ವ್ಯವಸ್ಥೆಯ ಮೂಲಕ ಸೂಕ್ತ ವ್ಯಕ್ತಿಗಳು ದೊರಕುವುದಿಲ್ಲವೆಂದೂ ಈ ವ್ಯವಸ್ಥೆಯನ್ನು ಅವಲಂಬಿಸುವುದರಿಂದ ಕಾಲ ಹಾಗೂ ಉತ್ಪಾದನೆಯ ನಷ್ಟವಾಗುವುದೆಂದೂ ಭಾವಿಸುತ್ತಾರೆ. ಆದರೆ ಈ ಭಾವನೆಗೆ ವ್ಯತಿರಿಕ್ತವಾದ ಭಾವನೆಯೂ ಉಂಟು. ಉದ್ಯೋಗಾರ್ಥಿಗಳ ಸಂಗ್ರಹಣೆ, ಅವರ ಯೋಗ್ಯತೆಯ ಪರೀಕ್ಷೆ ಕರ್ತವ್ಯಗಳನ್ನು ನಿರ್ವಹಿಸಿ, ಪ್ರತಿಯೊಂದು ಸಂಸ್ಥೆಗೂ ಅದಕ್ಕೆ ತಕ್ಕಂಥವರನ್ನೇ ನೇಮಿಸುವುದರ ಸಂಪೂರ್ಣ ಹೊಣೆಯನ್ನು ವಿನಿಮಯ ವ್ಯವಸ್ಥೆ ವಹಿಸುವುದರಿಂದ ಇದು ಇಲ್ಲದಿದ್ದರೆ ಇಡೀ ಅರ್ಥ ವ್ಯವಸ್ಥೆಗೆ ಸಂಭವಿಸುತ್ತಿದ್ದ ವೃಥಾ ಕಾಲವ್ಯಯ ತಪ್ಪುವುದೆಂದೂ ಅನೇಕರ ಭಾವನೆ.

ಉದ್ಯೋಗ ವಿನಿಮಯ ವ್ಯವಸ್ಥೆ ನಿಷ್ಪಕ್ಷಪಾತವಾಗಿಯೂ ಸಕಾಲಿಕವಾಗಿಯೂ ಕಾರ್ಯ ನಿರ್ವಹಿಸಬೇಕು. ಆಗ ಮಾತ್ರವೇ ಅದು ಉದ್ಯೋಗಾರ್ಥಿಗಳಿಗೆ ಒಪ್ಪಿಗೆಯಾಗುವಂಥ ನೌಕರಿಗಳನ್ನೂ ಉದ್ಯೋಗಪತಿಗಳಿಗೆ ಉಚಿತವಾದ ನೌಕರರನ್ನೂ ಒದಗಿಸುವ ಕಾರ್ಯದಲ್ಲಿ ಯಶಸ್ವಿಯಾಗಬಲ್ಲುದು; ಅಲ್ಲದೆ ಪರಿಣಾಮಕಾರಿಯಾಗಿ ಕಾರ್ಯ ನಡೆಸಲೂಬಹುದು.

ವಿಕಾಸ: ಉದ್ಯೋಗ ವಿನಿಮಯ ಕೇಂದ್ರಗಳ ಆವಶ್ಯಕತೆಯ ಅರಿವು ವಿಶ್ವದ ಜನತೆಗೆ ಕೈಗಾರಿಕೆಯ ಬೆಳೆವಣಿಗೆ ಪ್ರಾರಂಭವಾದಂದಿನಿಂದ ಉಂಟಾಯಿತೆಂದು ಹೇಳಬಹುದು. ಪ್ರಾರಂಭದಲ್ಲಿ ಖಾಸಗಿ ಉದ್ಯೋಗ ವಿನಿಮಯ ಕೇಂದ್ರಗಳು ಸ್ಥಾಪಿತವಾಗಿದ್ದುವು. ಕ್ರಮೇಣ ಸಾರ್ವಜನಿಕ ಉದ್ಯೋಗ ವಿನಿಮಯ ಕೇಂದ್ರಗಳ ಪ್ರಯೋಜನದ ಅರಿವುಂಟಾಗಿ ಅವುಗಳಿಗೆ ಹೆಚ್ಚು ಬೆಂಬಲ ದೊರಕಿತು. ಖಾಸಗಿ ಉದ್ಯೋಗ ವಿನಿಮಯ ಕೇಂದ್ರಗಳು ಲಾಭ ಸಂಪಾದನೆಯ ದೃಷ್ಟಿಯಿಂದ ಕೆಲಸಮಾಡುವ ಸಂಭವವುಂಟು. ಸಾರ್ವಜನಿಕ ಉದ್ಯೋಗ ವಿನಿಮಯ ಕೇಂದ್ರಗಳ ಉದ್ದೇಶಲಾಭವಲ್ಲ; ಸಾರ್ವಜನಿಕ ಸೇವೆ. ಆದ್ದರಿಂದ ಸಾರ್ವಜನಿಕ ಉದ್ಯೋಗ ವಿನಿಮಯ ಕೇಂದ್ರಗಳ ಅಗತ್ಯವನ್ನು 1919ನೆಯ ಇಸವಿಯಲ್ಲಿ ವಾಷಿಂಗ್ಟನ್ನಿನಲ್ಲಿ ಸಮಾವೇಶಗೊಂಡಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಎತ್ತಿ ತೋರಿಸಲಾಯಿತು. ಈ ಸಮ್ಮೇಳನದ ಒಡಂಬಡಿಕೆಯ ಪ್ರಕಾರ ಸಮ್ಮೇಳನಕ್ಕೆ ಸೇರಿದ ಪ್ರತಿಯೊಂದು ಸದಸ್ಯರಾಷ್ಟ್ರವೂ ತನ್ನ ದೇಶದಲ್ಲಿ ಆಯಾ ಸರ್ಕಾರದ ಅಧೀನಕ್ಕೊಳಪಟ್ಟ ಹಾಗೆ ಒಂದು ಉಚಿತ ಉದ್ಯೋಗ ವಿನಿಮಯ ಸೇವಾವ್ಯವಸ್ಥೆ ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು. 1948ರಲ್ಲಿ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಮೂವತ್ತೊಂದನೆಯ ಮಹಾಧಿವೇಶನದಲ್ಲಿ ಈ ವಿಷಯವನ್ನು ಪುನಃ ಪ್ರಸ್ತಾಪಿಸಲಾಯಿತು. ಉದ್ಯೋಗ ವಿನಿಮಯ ವ್ಯವಸ್ಥೆಯ ಸ್ಥಾಪನೆಗೆ ಸಂಬಂಧಪಟ್ಟ ಒಡಂಬಡಿಕೆಯನ್ನು ತತ್‌ಕ್ಷಣವೇ ಅನುಷ್ಠಾನಕ್ಕೆ ತರಬೇಕೆಂಬ ವಿಷಯ ಎಲ್ಲ ಸದಸ್ಯರಾಷ್ಟ್ರಗಳಿಂದ ಸ್ವೀಕೃತವಾಗಿ ಆ ರಾಷ್ಟ್ರಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳ ಅಂಕುರಾರ್ಪಣವಾಯಿತು.

# ಉದ್ಯೋಗ ವಿನಿಮಯ ವ್ಯವಸ್ಥೆ



ಆಧುನಿಕ ಕೈಗಾರಿಕಾಯುಗದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು ಅವುಗಳ ಬಹುಮುಖ ಕಾರ್ಯಚಟುವಟಿಕೆಗಳಿಂದಾಗಿ ಬಹಳ ಪ್ರಾಮುಖ್ಯ ಗಳಿಸಿವೆ. ಈ ಕೇಂದ್ರಗಳು ಉದ್ಯೋಗಗಳನ್ನು ಸ್ವತಃ ಸೃಷ್ಟಿಸಲು ಶಕ್ತಿಯುತವಾಗಿಲ್ಲದಿದ್ದರೂ ಉದ್ಯೋಗಗಳ ಬೇಡಿಕೆ ಪೂರೈಕೆಗಳನ್ನು ಸಮನ್ವಯಗೊಳಿಸಿ, ದೇಶದಲ್ಲಿ ನಿರುದ್ಯೋಗವನ್ನು ಹೋಗಲಾಡಿಸುವುದೇ ಅಲ್ಲದೆ ದೇಶದ ಜನಶಕ್ತಿ ಸಂಪೂರ್ಣವಾಗಿ ಉಪಯೋಗಕ್ಕೆ ಬಂದು ಅದರ ಮೂಲಕ ರಾಷ್ಟ್ರೀಯ ಉತ್ಪಾದನೆ ಹೆಚ್ಚಿ ರಾಷ್ಟ್ರೀಯ ಆದಾಯ ಗರಿಷ್ಠ ಪ್ರಮಾಣ ಮುಟ್ಟಲು ಸಾಧ್ಯವಾಗುವಂತೆ ಮಾಡುತ್ತವೆ. ಪ್ರತಿಯೊಬ್ಬ ವ್ಯಕ್ತಿಗೂ ಅವನ ಅರ್ಹತೆಗೆ ತಕ್ಕಂತೆ ಉದ್ಯೋಗ ಒದಗಿಸಿಕೊಡುತ್ತವೆ. ದಳ್ಳಾಳಿಗಳ ಮೂಲಕ ಕಾರ್ಮಿಕರನ್ನು ಕೆಲಸಗಳಿಗೆ ನೇಮಿಸಿಕೊಳ್ಳುವಾಗ ಉಂಟಾಗಬಹುದಾದ ಲೋಪದೋಷಗಳ ನಿವಾರಣೆ ಸಾಧ್ಯವಾಗಿದೆ. ದೇಶದಲ್ಲಿನ ಒಟ್ಟು ಜನಶಕ್ತಿಗೆ ಒಂದು ವ್ಯವಸ್ಥಿತ ಮಾರುಕಟ್ಟೆಯನ್ನು ಒದಗಿಸಿಕೊಟ್ಟು, ಉತ್ಪಾದನೆಯ ನಾನಾ ಕವಲುಗಳಲ್ಲಿ ಶ್ರಮ ನೈಪುಣ್ಯಗಳನ್ನು ಸಮರ್ಪಕವಾಗಿ ಹಂಚುತ್ತಿವೆ. ಉದ್ಯೋಗಗಳು, ನಿರುದ್ಯೋಗ, ಜನಶಕ್ತಿ ಇವುಗಳ ಬಗ್ಗೆ ದೇಶದ ಜನತೆಗೆ ಮತ್ತು ಸರ್ಕಾರಕ್ಕೆ ಆವಶ್ಯಕವಾದ ವಾಸ್ತವಾಂಶವನ್ನು ಪ್ರಚುರಪಡಿಸುತ್ತಿವೆ. ಈಗಂತೂ ನಿರಾಶ್ರಿತರ, ಮಾಜಿ ಯೋಧರುಗಳ ಪುನರ್ವಸತಿ ವ್ಯವಸ್ಥೆಯನ್ನೂ ಪ್ರಶಂಸಾರ್ಹವಾಗಿ ಮಾಡುತ್ತಿವೆ. ವಿಷಯಪ್ರಸರಣ ಕಾರ್ಯವನ್ನಷ್ಟೇ ಅಲ್ಲದೆ ಕಾರ್ಮಿಕರಿಗೆ ಆವಶ್ಯಕವಾದ ತರಬೇತಿಯನ್ನೂ ಕೊಡಿಸುತ್ತಿವೆ. ಮಾರುಕಟ್ಟೆಯಲ್ಲಿ ಶ್ರಮ, ಬೇಡಿಕೆ ಮತ್ತು ಪೂರೈಕೆಗಳ ಸಮನ್ವಯ ಕಾರ್ಯದಲ್ಲಿ ವಿಳಂಬವಾಗುವುದನ್ನು ತಪ್ಪಿಸುವುದೇ ಅಲ್ಲದೆ ಶ್ರಮಶಕ್ತಿಗೆ ಹೆಚ್ಚು ಚಾಲನೆ ಕೊಡಲು ಇವು ಸಹಾಯಕವಾಗಿವೆ. ಈ ರೀತಿಯ ಚಾಲನೆಯಿಂದ ಅದರ ಉಪಯೋಗ ಹೆಚ್ಚುತ್ತದೆ. ಪ್ರಪಂಚದ ಎಲ್ಲ ನಾಗರಿಕ ರಾಷ್ಟ್ರಗಳಲ್ಲೂ ಈ ಕೇಂದ್ರಗಳು ಈ ಉದ್ದೇಶಗಳಿಂದ ಕೆಲಸ ಮಾಡುತ್ತಿವೆ.

ಸರ್ಕಾರದ ಅಧೀನಕ್ಕೊಳಪಟ್ಟ ಸಾರ್ವಜನಿಕ ಉದ್ಯೋಗ ವಿನಿಮಯ ಕೇಂದ್ರಗಳನ್ನು ಪ್ರಥಮತಃ 1891ರಲ್ಲಿ ನ್ಯೂಜ಼ಿಲೆಂಡಿನಲ್ಲಿ ಸ್ಥಾಪಿಸಲಾಯಿತು. ಜರ್ಮನಿಯಲ್ಲಿ ಮೊದಲ ವಿನಿಮಯ ಕೇಂದ್ರಗಳು 1883ರಲ್ಲಿ ಸ್ಥಾಪಿತವಾದರೂ 1918ರಲ್ಲಿ ಅವುಗಳ ರಾಷ್ಟ್ರೀಕರಣವಾಯಿತು. 1927ರಲ್ಲಿ ದಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಲೇಬರ್ ಎಕ್ಸ್‌ಚೇಂಜ್ ಅಂಡ್ ಎಂಪ್ಲಾಯ್‌ಮೆಂಟ್ ಇನ್‌ಷೂರೆನ್ಸ್ ಎಂಬ ಉದ್ಯೋಗ ವಿನಿಮಯ ಕೇಂದ್ರ ಬರ್ಲಿನ್ನಿನಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆ ಸರ್ಕಾರ, ಕಾರ್ಮಿಕರು ಮತ್ತು ಮಾಲೀಕರ ಪ್ರತಿನಿಧಿಗಳನ್ನೊಳಗೊಂಡ ಒಂದು ಮಂಡಳಿಯ ಅಧೀನದಲ್ಲಿ ಕೆಲಸಮಾಡುತ್ತಿದೆ. ಫ್ರಾನ್ಸಿನಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು ಪ್ರಾರಂಭದಲ್ಲಿ ಸಣ್ಣ ಸಣ್ಣ ಆಡಳಿತ ವಿಭಾಗಗಳಿಗೆ ಮೀಸಲಾದ ಕೇಂದ್ರಗಳಾಗಿದ್ದು 1914–18ರಲ್ಲಿ ವಿನಿಮಯ ಇಲಾಖೆಗಳಾಗಿ ಪರಿವರ್ತನೆ ಹೊಂದಿದುವು. ಫ್ರಾನ್ಸಿನಲ್ಲಿ ಕಾರ್ಮಿಕ ಸಚಿವರ ಅಧೀನದಲ್ಲಿರುವ ಪ್ರಾದೇಶಿಕ ತೀರುವೆ ಮನೆ (ಕ್ಲಿಯರಿಂಗ್ ಹೌಸ್) ಮತ್ತು ಕೇಂದ್ರಗಳನ್ನು ಆಯಾ ಉದ್ಯೋಗಗಳಿಗನುಸಾರವಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಔದ್ಯೋಗಿಕ ಪಂಗಡವೂ ತನಗೆ ಸಂಬಂಧಿಸಿದ ಕಾರ್ಮಿಕರು ಮತ್ತು ಉದ್ಯೋಗಪತಿಗಳೊಂದಿಗೆ ಸಮಾಲೋಚನೆ ನಡೆಸಿ ರೂಪಿಸಲಾದ ನೀತಿ ಅನುಸರಿಸುತ್ತದೆ. ಸೋವಿಯತ್ ಒಕ್ಕೂಟದಲ್ಲಿ 1931ರಲ್ಲಿ ಸ್ಥಾಪಿತವಾದ ಸಿಬ್ಬಂದಿ ಕಚೇರಿಗಳು ಉದ್ಯೋಗ ವಿನಿಮಯ ಕೇಂದ್ರಗಳ ಕೆಲಸ ನಿರ್ವಹಿಸುತ್ತವೆ. ಎಲ್ಲ ಸಂಸ್ಥೆಗೂ ತಮಗೆ ಬೇಕಾದ ಸಿಬ್ಬಂದಿಯನ್ನು ನೇಮಿಸಿಕೊಳ್ಳುವಾಗ ಈ ಕೇಂದ್ರಗಳನ್ನು ಬಳಸಿಕೊಳ್ಳಬೇಕಾದ್ದು ಕಡ್ಡಾಯ.

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ 1913ಕ್ಕೆ ಮುಂಚೆ ಪರವಾನಿಗೆ ಪಡೆದ ಉಚಿತ ಉದ್ಯೋಗ ನಿವಿಮಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದುವು. ಅಂಥ ಕೇಂದ್ರಗಳನ್ನು ಮೊದಲು ನ್ಯೂಯಾರ್ಕಿನಲ್ಲೂ ಅನಂತರ ಒಹಾಯೊ ರಾಜ್ಯದಲ್ಲೂ ಸ್ಥಾಪಿಸಲಾಯಿತು. ಸಂಯುಕ್ತಸಂಸ್ಥಾನ ಸರ್ಕಾರ ಒಂದನೆಯ ಮಹಾಯುದ್ಧದ ಕಾಲದಲ್ಲಿ ಒಂದು ರಾಷ್ಟ್ರೀಯ ಉದ್ಯೋಗ ಸೇವಾಸಂಸ್ಥೆಯನ್ನು ಕಾನೂನುಬದ್ಧವಾಗಿ ಸ್ಥಾಪಿಸಿತು. ರಾಜ್ಯ ಉದ್ಯೋಗ ಸೇವಾಸಂಸ್ಥೆಗಳೂ ಸೌಲಭ್ಯ ಇಲ್ಲದೆ ನಗರಗಳಲ್ಲಿ ಉದ್ಯೋಗ ವಿನಿಮಯ ಸೌಲಭ್ಯ ಒದಗಿಸಿಕೊಡುವುದೇ ಇದರ ಮುಖ್ಯ ಉದ್ದೇಶ. ಯುದ್ಧ ನಿಂತಮೇಲೆ ಈ ಸಂಸ್ಥೆಯ ಅಧೀನದಲ್ಲಿ ಕೆಲಸಮಾಡುತ್ತಿದ್ದ ವಿನಿಮಯ ಕೇಂದ್ರಗಳನ್ನು ಆಯಾ ರಾಜ್ಯಗಳ ಆಡಳಿತಗಳಿಗೆ ವಹಿಸಲಾಯಿತು. ಅಂತಾರಾಜ್ಯ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ತರಲಾದ ಒಂದು ಕಾಯಿದೆಯ ಪ್ರಕಾರ ಈಗ ರಾಷ್ಟ್ರಾದ್ಯಂತ ಉಚಿತ ಸಾರ್ವಜನಿಕ ಉದ್ಯೋಗ ವಿನಿಮಯ ಕೇಂದ್ರಗಳಿವೆ. ಇವುಗಳ ಆಡಳಿತದ ಜವಾಬ್ದಾರಿ ರಾಜ್ಯಗಳದಾದರೆ ಇವುಗಳ ಕಾರ್ಯಚಟುವಟಿಕೆಗಳ ಪರಸ್ಪರ ಹೊಂದಾಣಿಕೆ ಸಂಯುಕ್ತ ಸರ್ಕಾರದ ಜವಾಬ್ದಾರಿ. ಅಮೆರಿಕಸಂಯುಕ್ತ ಸಂಸ್ಥಾನದಲ್ಲಿ ಈಗ ಸುಮಾರು 2,000 ಪೂರ್ಣಕಾಲಿಕ ಸ್ಥಳೀಯ ಸಾರ್ವಜನಿಕ ಉದ್ಯೋಗ ವಿನಿಮಯ ಕೇಂದ್ರಗಳಿವೆ. ಇವೂ ಅಲ್ಲದೆ ಖಾಸಗಿ ಉದ್ಯೋಗ ವಿನಿಯಮ ಕೇಂದ್ರಗಳೂ ಕಾರ್ಯ ನಿರ್ವಹಣೆಯಲ್ಲಿ ತೊಡಗಿದ್ದು ಹೆಚ್ಚು ಲಾಭ ಗಳಿಸುತ್ತಿವೆ.

ಬ್ರಿಟನ್ನಿನಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು 1885ರಲ್ಲಿ ಪ್ರಾರಂಭವಾದರೂ ಶಾಸನಬದ್ಧವಾಗಿ 1909ರ ಕಾರ್ಮಿಕ ಉದ್ಯೋಗ ವಿನಿಮಯ ಕಾಯಿದೆಯ ಪ್ರಕಾರ ಸರ್ಕಾರಿ ಉದ್ಯೋಗ ವಿನಿಮಯ ಕೇಂದ್ರಗಳು ಬೋರ್ಡ್ ಆಫ್ ಟ್ರೇಡಿನ ಆಡಳಿತಕ್ಕೊಳಪಟ್ಟು ಸ್ಥಾಪಿತವಾದುವು. ಇವುಗಳ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ 1919ರಲ್ಲಿ ನೇಮಿಸಲಾದ ಒಂದು ಅಧ್ಯಯನ ಮಂಡಲಿಯ ಸಲಹೆಯ ಮೇರೆಗೆ ಬ್ರಿಟನ್ನಿನಲ್ಲಿ ನಿರುದ್ಯೋಗ ವಿಮೆ ಕಾಯಿದೆ ಜಾರಿಗೆ ಬಂತು

ಈಗ ಬ್ರಿಟನ್ನಿನಲ್ಲಿ ಕಾರ್ಮಿಕ ಮತ್ತು ರಾಷ್ಟ್ರೀಯ ವಿಮಾ ಸಚಿವಾಲಯವೇ ಉದ್ಯೋಗ ಸೇವಾಸೌಲಭ್ಯಗಳ ಜವಾಬ್ದಾರಿ ಹೊತ್ತಿದೆ. ಇದರ ಜೊತೆಗೆ ವೃತ್ತಿ ಶಿಕ್ಷಣ ಮತ್ತು ವೃತ್ತಿ ನಿರ್ದೇಶನ ಕಾರ್ಯಗಳೂ ಇದರ ಕಾರ್ಯವ್ಯಾಪ್ತಿಯಲ್ಲಿ ಸೇರಿವೆ. ಈ ಸಂಬಂಧವಾಗಿಯೇ 1945ರಲ್ಲಿ ಉದ್ಯೋಗ ಮತ್ತು ತರಬೇತಿ ಕಾಯಿದೆ ಜಾರಿಗೆ ಬಂತು. ಉದ್ಯೋಗ ವಿನಿಮಯಕ್ಕೆ ಸಂಬಂಧಿಸಿದಂತೆ 900 ಸ್ಥಳೀಯ ಮತ್ತು ಶಾಖಾ ಕಚೇರಿಗಳು ದೇಶಾದ್ಯಂತ ಕೆಲಸಮಾಡುತ್ತಿವೆ. ಕಾರ್ಮಿಕ–ಮಾಲೀಕರೊಂದಿಗೆ ನಿಕಟ ಸಂಬಂಧ ಹೊಂದುವುದು ಸ್ಥಳೀಯ ಸಮಿತಿಗಳ ಉದ್ದೇಶ. ಇವುಗಳ ಜೊತೆಗೆ ಯುವಕ ಉದ್ಯೋಗ ಸೇವಾಸಂಸ್ಥೆಗಳೂ ಅಶಕ್ತರ ಪುನರ್ವ್ಯವಸ್ಥೆಯ ಸೇವಾ ಸಂಸ್ಥೆಗಳೂ ಕೆಲಸ ಮಾಡುತ್ತಿವೆ.

ಬ್ರಿಟನ್ನಿನಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳೇ ನಿರುದ್ಯೋಗಿಗಳಿಗೆ ಪರಿಹಾರ ನೀಡುವ ಕರ್ತವ್ಯವನ್ನೂ ನಿರ್ವಹಿಸುತ್ತಿವೆ. ಏಕೆಂದರೆ ಇವೆರಡು ಕರ್ತವ್ಯಗಳನ್ನೂ ಒಂದೇ ಸಂಸ್ಥೆಯ ವ್ಯಾಪ್ತಿಗೆ ಒಳಪಡಿಸುವುದರಿಂದ ಅಭ್ಯರ್ಥಿಗಳ ಉದ್ಯೋಗೇಚ್ಛೆಯ ಹಿಂದಿರುವ ಪ್ರಾಮಾಣಿಕತೆಯನ್ನು ಪರಿಶೀಲಿಸುವುದು ಸಾಧ್ಯ.

ಸರ್ಕಾರದಿಂದ ನಿಯಂತ್ರಿತವಾದ ಉದ್ಯೋಗ ವಿನಿಮಯ ವ್ಯವಸ್ಥೆಗಳೇ ಅಲ್ಲದೆ ಇನ್ನೂ ಅನೇಕ ಸಂಸ್ಥೆಗಳು ಕಾರ್ಮಿಕರಿಗೆ ನೌಕರಿಗಳನ್ನು ಒದಗಿಸುವ ಕೆಲಸದಲ್ಲಿ ನಿರತವಾಗಿವೆ. ಕಾರ್ಮಿಕ ಸಂಘಗಳು, ಭ್ರಾತೃಸಮಾಜಗಳು, ಮತೀಯ ಪಂಗಡಗಳು, ಲೋಕೋಪಕಾರಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮುಂತಾದವು ಉದ್ಯೋಗ ವಿನಿಮಯ ವಿಭಾಗಗಳನ್ನು ನಡೆಸುತ್ತಿವೆ. ಶುಲ್ಕ ಪಡೆದು ಈ ಕೆಲಸ ನಿರ್ವಹಿಸುವ ಖಾಸಗಿ ಉದ್ಯೋಗ ವಿನಿಮಯ ಸಂಸ್ಥೆಗಳೂ ಉಂಟು.

1919ರ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಅನಂತರ ಅದರ ಸದಸ್ಯ ರಾಷ್ಟ್ರಗಳು ಕೇಂದ್ರೀಯ ಆಡಳಿತಕ್ಕೆ ಒಳಪಟ್ಟ ಉಚಿತ ಸಾರ್ವಜನಿಕ ಉದ್ಯೋಗ ವಿನಿಮಯ ವ್ಯವಸ್ಥೆಗಳನ್ನು ಸ್ಥಾಪಿಸಿವೆ. ಸಾರ್ವಜನಿಕ ಹಾಗೂ ಖಾಸಗಿ ವಿನಿಮಯ ವ್ಯವಸ್ಥೆಗಳೆರಡು ಇರುವ ಎಡೆಗಳಲ್ಲಿ ಇವೆರಡರ ಕಾರ್ಯಗಳಲ್ಲೂ ಹೊಂದಾಣಿಕೆ ತರುವ ಕ್ರಮಗಳನ್ನು ಕೈಕೊಳ್ಳಲಾಗಿದೆ. ಹೀಗೆ ಈಗ ಪ್ರಪಂಚದಲ್ಲಿ ಹೆಚ್ಚು ಕಡಿಮೆ ಎಲ್ಲ ದೇಶಗಳಲ್ಲೂ ಉದ್ಯೋಗ ವಿನಿಮಯ ವ್ಯವಸ್ಥೆಗಳು ಏಕರೀತಿಯ ವ್ಯವಸ್ಥೆಗೆ ಅನುಗುಣವಾಗಿ ಕೆಲಸಮಾಡುತ್ತಿರುವುದನ್ನು ಕಾಣಬಹುದು.

ನೌಕರಿಗಳನ್ನು ದೊರಕಿಸಿಕೊಡುವುದರ ಜೊತೆಗೆ ಈ ವ್ಯವಸ್ಥೆ ಇನ್ನೂ ನಾನಾ ಬಗೆಯ ಸೇವೆಗಳನ್ನು ಸಲ್ಲಿಸುತ್ತದೆ; ಉದ್ಯೋಗ ಸಮಸ್ಯೆಗಳನ್ನು ಹೊಂದಿರುವವರಿಗೆ ಸಲಹೆ ನೀಡುವುದು ಒಂದು ಸೇವೆ. ಪ್ರಾವೀಣ್ಯಪಡೆದ ಉದ್ಯೋಗಾರ್ಥಿಗಳಿಗೂ ದೈಹಿಕ ನ್ಯೂನತೆಗಳಿಗೆ ಒಳಗಾದವರಿಗೂ ತಕ್ಕ ಉದ್ಯೋಗಗಳನ್ನು ದೊರಕಿಸಿಕೊಡಲು ಅನುಸರಿಸುತ್ತಿರುವ ವಿಧಾನಗಳು ವಿಶೇಷ ರೀತಿಯವು.

**ಭಾರತದಲ್ಲಿ:** ಉಚಿತ ಉದ್ಯೋಗ ವಿನಿಮಯ ವ್ಯವಸ್ಥೆ ಏರ್ಪಡಿಸಬೇಕೆಂದು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ 1919ರಲ್ಲಿ ಮಾಡಿದ ಸಲಹೆಯನ್ನು ಭಾರತ ಸರ್ಕಾರ ಮೊದಲು ಅನುಮೋದಿಸಿದರೂ ಅನಂತರ 1938ರಲ್ಲಿ ಅದನ್ನು ತಿರಸ್ಕರಿಸಿತು. ದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾರ್ಮಿಕರು ಕಾರ್ಖಾನೆಗಳ ಬಾಗಿಲುಗಳಲ್ಲೇ ದೊರಕುವುದರಿಂದ ಉದ್ಯೋಗ ವಿನಿಮಯ ಕೇಂದ್ರಗಳ ಆವಶ್ಯಕತೆ ಇಲ್ಲವೆಂಬುದು ಆಗ ನೇಮಕವಾದ ಒಂದು ಆಯೋಗದ (ರಾಯಲ್ ಕಮಿಷನ್ ಆಫ್ ಲೇಬರ್) ಅಭಿಪ್ರಾಯವಾಗಿತ್ತು. ಆದರೆ ಕಾರ್ಮಿಕರ ಹಾಗು ಉದ್ಯೋಗಪತಿಗಳ ಅನೇಕ ಸಂಘಗಳೂ ಸಪ್ರುಸಮಿತಿಯೂ ಕಾರ್ಮಿಕ ವಿಷಯಗಳ ಪರಿಶೀಲನಾ ಸಮಿತಿಯೂ ಇಂಥ ಅನೇಕ ಸಮಿತಿಗಳೂ ರಾಷ್ಟ್ರದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಸಲಹೆಗೆ ಬೆಂಬಲ ನೀಡಿದವು.

ಎರಡನೆಯ ಮಹಾಯುದ್ಧದ ಕಾಲದಲ್ಲಿ ತಂತ್ರಜ್ಞರ ಅಭಾವವನ್ನು ಸರ್ಕಾರ ಎದುರಿಸಬೇಕಾಗಿ ಬಂದಾಗ ಯೋಗ್ಯವ್ಯಕ್ತಿಗಳಿಗೆ ತಾಂತ್ರಿಕ ತರಬೇತು ನೀಡುವುದಕ್ಕಾಗಿ ಒಂಬತ್ತು ಉದ್ಯೋಗ ವಿನಿಮಯ ಕೇಂದ್ರಗಳನ್ನು 1943–44ರಲ್ಲಿ ಸ್ಥಾಪಿಸಬೇಕಾಯಿತು. ಯುದ್ಧ ಮುಗಿದ ಮೇಲೆ ಈ ತಂತ್ರಜ್ಞರ ಮತ್ತು ಯುದ್ಧಭೂಮಿಯಿಂದ ಹಿಂತಿರುಗಿದ ಸಿಪಾಯಿಗಳ ಪುನರ್‌ವ್ಯವಸ್ಥೆಗಾಗಿ ಈ ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯವ್ಯಾಪ್ತಿಯನ್ನು ವಿಶಾಲಗೊಳಿಸುವುದು ಅನಿವಾರ್ಯವಾಯಿತು. ಉದ್ಯೋಗ ಮತ್ತು ಪುನರ್ ವ್ಯವಸ್ಥೆಯ ಡೈರೆಕ್ಟರ್–ಜನರಲ್‌ರ ಕಚೇರಿ ಸ್ಥಾಪಿತವಾದದ್ದು ಆಗ. ಈ ಸಂಸ್ಥೆಯ ಆಡಳಿತಕ್ಕೊಳಪಟ್ಟಂತೆ ಎಪ್ಪತ್ತು ಉದ್ಯೋಗ ವಿನಿಮಯ ಕೇಂದ್ರಗಳನ್ನು ದೇಶಾದ್ಯಂತ ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಈ ಕೇಂದ್ರಗಳು ತರಬೇತಿ ಮತ್ತು ಪುನರ್ ವ್ಯವಸ್ಥೆ ಕೇಂದ್ರಗಳಾಗಿದ್ದುವು. ಇವುಗಳ ಕಾರ್ಯವ್ಯಾಪ್ತಿಯನ್ನು ಮತ್ತೆ ವಿಶಾಲಗೊಳಿಸಿದ್ದು 1948ರಲ್ಲಿ. ಉದ್ಯೋಗ ಬಯಸುವ ಎಲ್ಲ ಕಾರ್ಮಿಕರಿಗೂ ನೆರವು ನೀಡುವ ವ್ಯವಸ್ಥೆ ಬಂದದ್ದು ಆಗ. ಇವುಗಳ ಜೊತೆಗೆ ನವದೆಹಲಿಯಲ್ಲಿ ಸ್ಥಾಪಿಸಲಾದ ಕೇಂದ್ರೀಯ ಉದ್ಯೋಗ ವಿನಿಮಯ ವ್ಯವಸ್ಥೆ ಅಂತಾರಾಜ್ಯ ಉದ್ಯೋಗಾವಕಾಶಗಳ ತೀರುವಿಕೆಗೆ ಗಮನ ಕೊಟ್ಟಿದೆ. ಪ್ರತಿಯೊಂದು ಪ್ರಾದೇಶಿಕ ಉದ್ಯೋಗ ವಿನಿಮಯ ಕೇಂದ್ರದಲ್ಲೂ ಒಂದು ಪ್ರತ್ಯೇಕ ಸ್ತ್ರೀ ವಿಭಾಗ ತೆರೆಯಲಾಯಿತು. ಗ್ರಾಮಾಂತರ ಕಾರ್ಮಿಕರಿಗೆ ಅಗತ್ಯ ಸೌಲಭ್ಯ ದೊರಕಿಸುವ ಉದ್ದೇಶದಿಂದ ಚಲಿಸುವ ಉದ್ಯೋಗ ವಿನಿಮಯ ಕೇಂದ್ರಗಳು ಸ್ಥಾಪಿತವಾಗಿವೆ.

ಭಾರತದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ಬೆಳೆಸಿ ಸುವ್ಯವಸ್ಥಿತಗೊಳಿಸಲು ಸೂಕ್ತ ಸಲಹೆ ನೀಡಬೇಕೆಂದು 1956ರಲ್ಲಿ ಭಾರತ ಸರ್ಕಾರ ಶಿವರಾವ್ ಸಮಿತಿಯನ್ನು ನೇಮಿಸಿತು. ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಉದ್ಯೋಗ ವಿನಿಮಯ ವ್ಯವಸ್ಥೆಗಳು ಪ್ರಮುಖ ಪಾತ್ರವಹಿಸಬಲ್ಲುವೆಂಬುದು ಈ ಸಮಿತಿ ನೀಡಿದ ಅಭಿಪ್ರಾಯ. ಜಪಾನಿನಲ್ಲಿ ಶೀಘ್ರ ಕೈಗಾರಿಕಾಭಿವೃದ್ಧಿಯ ಕಾಲದಲ್ಲಿ ಅಲ್ಲಿನ ಉದ್ಯೋಗ ವಿನಿಮಯ ಕೇಂದ್ರಗಳು ಅನೇಕ ಬಗೆಯಲ್ಲಿ ಸೇವೆ ಸಲ್ಲಿಸಿದುವೆಂಬ ಅಂಶವನ್ನು ಆ ಸಮಿತಿ ಸರ್ಕಾರದ ಗಮನಕ್ಕೆ ತಂದಿತು. ಜಪಾನಿನ ಈ ಕೇಂದ್ರಗಳು ಅಗತ್ಯವಾದ ಸಿಬ್ಬಂದಿಗೆ ಕೆಲಸ ಕೊಡಿಸಿದುವು; ಕೆಲಸಗಾರರಿಗೆ ಅಗತ್ಯವಾದ ಔದ್ಯೋಗಿಕ ಸಲಹೆಗಳನ್ನೂ ತರಬೇತಿ ಸೌಲಭ್ಯಗಳನ್ನೂ ಒದಗಿಸಿಕೊಟ್ಟುವು; ಉದ್ಯೋಗಗಳು ಇದ್ದಲ್ಲಿಗೆ ಕಾರ್ಮಿಕರು ಚಲಿಸುವುದು ಸಾಧ್ಯವಾಗುವಂತೆ ಅವರಿಗೆ ಸಾಲ ನೀಡಿದುವು. ಆದ್ದರಿಂದ ಭಾರತದಲ್ಲೂ ಉದ್ಯೋಗ ವಿನಿಮಯ ಕೇಂದ್ರಗಳನ್ನು ಅಭಿವೃದ್ಧಿಗೊಳಿಸಲು ಈ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕೆಂಬುದು ಸರ್ಕಾರಕ್ಕೆ ಈ ಸಮಿತಿ ಮಾಡಿದ ಶಿಫಾರಸು. 1964ರ ಅಂತ್ಯದ ವೇಳೆಗೆ ಭಾರತದಲ್ಲಿ ಕೆಲಸಮಾಡುತ್ತಿದ್ದ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆಯನ್ನು 365ಕ್ಕೆ ಏರಿಸಲಾಯಿತು. ಇದರ ಜೊತೆಗೆ ಉದ್ಯೋಗ ವಿನಿಮಯ ವ್ಯವಸ್ಥೆಗಳ (ತೆರವಾದ ಸ್ಥಾನಗಳ ಕಡ್ಡಾಯ ಪ್ರಕಟಣೆ) 1960ರ ಶಾಸನವನ್ನು ಸರ್ಕಾರ ಜಾರಿಗೆ ತಂದಿತು. ಇದರ ಪ್ರಕಾರ ಇಪ್ಪತ್ತೈದಕ್ಕಿಂತ ಹೆಚ್ಚು ಸಂಖ್ಯೆಯ ಕೆಲಸಗಾರರನ್ನು ಹೊಂದಿರುವ ಎಲ್ಲ ಉದ್ಯೋಗಪತಿಗೂ ತಮ್ಮಲ್ಲಿ ಖಾಲಿ ಬೀಳುವ ಎಲ್ಲ ಪ್ರವೀಣ ಕರ್ಮಗಳ ಹುದ್ದೆಗಳನ್ನೂ ಉದ್ಯೋಗ ವಿನಿಮಯ ಕೇಂದ್ರಗಳಿಗೆ ತಿಳಿಯಪಡಿಸಬೇಕಾದ್ದು ಕಡ್ಡಾಯ. ಉದ್ಯೋಗ ವಿನಿಮಯ ಕೇಂದ್ರಗಳ ಆಡಳಿತ ವಿಷಯವೂ ಈಗ ರಾಜ್ಯ ಸರ್ಕಾರಗಳಿಗೆ ವರ್ಗವಾಗಿದೆ. ಕೇಂದ್ರ ಸರ್ಕಾರ ಸ್ಥೂಲ ನೀತಿ ನಿರ್ಣಯ ಹಾಗೂ ಪ್ರಚಾರ ಕಾರ್ಯವನ್ನು ಮಾತ್ರ ತನ್ನಲ್ಲಿ ಉಳಿಸಿಕೊಂಡಿದೆ.

ಇಷ್ಟಾದರೂ ಭಾರತದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು ಸಾಕಷ್ಟು ಸಮರ್ಪಕವಾಗಿ ಕೆಲಸಮಾಡುತ್ತಿಲ್ಲವೆಂಬ ಆಕ್ಷೇಪಣೆ ಉಂಟು. ಇವುಗಳ ಸಿಬ್ಬಂದಿಯ ಅನನುಭವವೂ ಈ ಕೇಂದ್ರಗಳ ಕಾರ್ಯಗಳ ಸಮನ್ವಯದ ಅಭಾವವೂ ಈ ಪರಿಸ್ಥಿತಿಗೆ ಕಾರಣವೆಂದು ಹೇಳಲಾಗಿದೆ. (ಜಿ.ಬಿ.ಕೆ.;ಎಸ್.ಎನ್.ಎ.)

**ಉದ್ಯೋಗಿಗಳ ರಾಜ್ಯವಿಮಾ ವ್ಯವಸ್ಥೆ:** ಕಾಯಿಲೆ, ನಿಶ್ಶಕ್ತಿ, ಹೆರಿಗೆ, ಮುಪ್ಪು, ಅಪಘಾತ, ಅಂಗವೈಕಲ್ಯ, ಮರಣ ಮೊದಲಾದ ಕಾರಣಗಳಿಂದ ನೆಲೆತಪ್ಪಿದ ಕೆಲಸಗಾರರಿಗೆ ನೆರವು ನೀಡುವ ಸರ್ಕಾರಿ ವಿಮಾ ವ್ಯವಸ್ಥೆ (ಎಂಪ್ಲಾಯೀಸ್ ಸ್ಟೇಟ್ ಇನ್ಷೂರೆನ್ಸ್ ಸ್ಕೀಮ್). 1948ರಿಂದ ಭಾರತದಲ್ಲಿ ವ್ಯಾಪಕವಾಗಿ ಜಾರಿಯಲ್ಲಿದೆ. ಕೆಲಸಗಾರರು ಸ್ವಂತವಾಗಿಯಾಗಲಿ ಖಾಸಗಿ ಸಂಘಟನೆಯಿಂದಾಗಲಿ ಎಲ್ಲರಿಗೂ ಅನುಕೂಲವಾಗುವಂತೆ ಭದ್ರತೆಯನ್ನೇರ್ಪಡಿಸಿಕೊಳ್ಳುವುದು ಅಸಾಧ್ಯ. ಜನಸಾಮಾನ್ಯರ ಯೋಗಕ್ಷೇಮ ನಿರ್ವಹಣೆಯ ಹೊಣೆ ಹೊತ್ತ ಸರ್ಕಾರವೂ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಉದ್ಯೋಗಪತಿಗಳೂ ಅವರ ನೌಕರರೂ ಕೂಡಿ ಈ ಹೊಣೆ ಹೊರುವಂತೆ ಪ್ರತಿಯೊಂದು ಆಧುನಿಕ ಸರ್ಕಾರವೂ ಈ ಬಗೆಯ ವ್ಯವಸ್ಥೆಯನ್ನು ಜಾರಿಗೆ ತಂದಿವೆ.

1923ರ ಕೆಲಸಗಾರರ ಪರಿಹಾರ ಅಧಿನಿಯಮವೇ ಭಾರತದ ಈ ಬಗೆಯ ಸಾಮಾಜಿಕ ಭದ್ರತೆಯ ಬಗ್ಗೆ ಕೈಕೊಂಡ ಪ್ರಥಮ ಕ್ರಮ. ಅದಕ್ಕೆ ಹಿಂದೆ ಭಾರತದಲ್ಲಿ ಯಾವ ಕಾನೂನಾಗಲೀ ವ್ಯವಸ್ಥೆಯಾಗಲೀ ಇರಲಿಲ್ಲ. ಮಹಿಳಾ ಕೆಲಸಗಾರರಿಗೆ ಹೆರಿಗೆಯ ಪೂರ್ವದ ಮತ್ತು ಆ ತರುವಾಯದ ಕಾಲಾವಧಿಗಳಲ್ಲಿ ರಜಾ ಮಂಜೂರು ಮಾಡಲು ಮತ್ತು ಹೆರಿಗೆ ಸೌಲಭ್ಯಗಳನ್ನೊದಗಿಸಲು ಅನೇಕ ರಾಜ್ಯಗಳಲ್ಲಿ ಕಾನೂನು ಮಾಡಲಾಗಿತ್ತಾದರೂ ಇದರ ನಿರ್ವಹಣೆಯಲ್ಲಿ ಕೇಂದ್ರ–ಪ್ರಾಂತೀಯ ಸರ್ಕಾರಗಳಿಗೆ ಯಾವ ಬಗೆಯ ಆರ್ಥಿಕ ಹೊಣೆಗಾರಿಕೆಯೂ ಇರಲಿಲ್ಲ. ಆಗ ಇದು ಸಂಪೂರ್ಣವಾಗಿ ಉದ್ಯೋಗ ನಿಯೋಜಕರ ಜವಾಬ್ದಾರಿಯಾಗಿತ್ತು.

ಕೈಗಾರಿಕೆ, ವಾಣಿಜ್ಯ ಮತ್ತು ವ್ಯವಸಾಯ ಕಾರ್ಮಿಕರಿಗೆ ಆರೋಗ್ಯ ವಿಮಾ ಸೌಲಭ್ಯವನ್ನೊದಗಿಸಬೇಕೆಂದು 1927ರ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಆದ ನಿರ್ಣಯದ ದೃಷ್ಟಿಯಲ್ಲಿ ಪ್ರೊಫೆಸರ್ ಅಡಾರ್ ಕರ್ ನೀಡಿದ ವರದಿಯ (1944) ಆಧಾರದ ಮೇಲೆ ಉದ್ಯೋಗಿಗಳ ರಾಜ್ಯಮಿಮೆಯ ಅಧಿನಿಯಮ 1948ರಲ್ಲಿ ಜಾರಿಗೆ ಬಂತು. ವರ್ಷವಿಡೀ ಕೆಲಸ ಮಾಡುವ 20 ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ನೌಕರರನ್ನು ನೇಮಿಸಿಕೊಂಡಿರುವ, ವಿದ್ಯುತ್ ಅಥವಾ ಇತರ ಶಕ್ತಿಚಾಲಿತ ಯಂತ್ರ ಹೊಂದಿರುವ ಕಾರ್ಖಾನೆಗಳಲ್ಲಿ ತಿಂಗಳಿಗೆ 500 ರೂ.ಗಳಿಗಿಂತ ಹೆಚ್ಚಿನ ವೇತನ ಪಡೆಯದ ಎಲ್ಲ ಉದ್ಯೋಗಿಗಳೂ ಇದರ ವ್ಯಾಪ್ತಿಗೆ ಒಳಪಡುತ್ತಾರೆ.

ಈ ಯೋಜನೆಯನ್ವಯ ಒಂದು ಕೇಂದ್ರನಿಧಿ ಏರ್ಪಡಿಸಲಾಗಿದೆ. ತಿಂಗಳಿಗೆ 30 ರೂ.ಗಳಿಗಿಂತ ಕಡಿಮೆ ವೇತನ ಬರುವ ನೌಕರರು ಈ ನಿಧಿಗೆ ಯಾವ ವಂತಿಗೆಯನ್ನೂ ಸಲ್ಲಿಸುವುದಿಲ್ಲ; ಆದರೆ ಇವರಿಗೆ ಈ ವ್ಯವಸ್ಥೆಯ ಎಲ್ಲ ಸೌಲಭ್ಯಗಳೂ ಲಭಿಸುತ್ತವೆ. ತಿಂಗಳಿಗೆ 30 ರೂ.ಗಳಿಂದ 45 ರೂ.ಗಳ ವರೆಗೆ ತಲಬು ಬರುವವರು ವಾರಕ್ಕೆ 12 ಪೈ. ಪಾವತಿ ಮಾಡುತ್ತಾರೆ. ಅಲ್ಲಿಂದ ಮುಂದಕ್ಕೆ ಈ ದರ ನೌಕರನ ವೇತನಾನುಗುಣವಾಗಿ ಏರುತ್ತದೆ.

ಈ ವ್ಯವಸ್ಥೆಗೆ ಒಳಪಟ್ಟ ನೌಕರರು ಇದಕ್ಕಾಗಿ ನಿಯುಕ್ತವಾದ ವಿಶೇಷ ಆಸ್ಪತ್ರೆಗಳಲ್ಲಿ ಅಥವಾ ಅಗತ್ಯವಿದ್ದರೆ ಅವರ ಮನೆಗಳಲ್ಲಿ ಉಚಿತವಾಗಿ ವೈದ್ಯಕೀಯ ಸಲಹೆ, ಚಿಕಿತ್ಸೆಗಳನ್ನು ಪಡೆಯುತ್ತಾರೆ. ಆಸ್ಪತ್ರೆಯ ಸೌಲಭ್ಯಗಳಿಲ್ಲದ ದೂರದ ಸ್ಥಳಗಳಲ್ಲಿ ಇವರಿಗಾಗಿ ಸಂಚಾರಿ ಆಸ್ಪತ್ರೆಗಳಿವೆ. ಕಾಯಿಲೆ ಬಿದ್ದಾಗ ಇವರಿಗೆ ದಿನಗೂಲಿಯ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಪ್ರಮಾಣದ ಸಹಾಯಧನ ದೊರಕುತ್ತದೆ. ಒಟ್ಟು 365 ದಿನಗಳಲ್ಲಿ ಎಂಟು ವಾರಗಳ ಕಾಲ ಇವರು ಇದನ್ನು ಪಡೆಯಲು ಅರ್ಹರು. ಕರ್ತವ್ಯನಿರತರಾಗಿದ್ದಾಗ ಗಾಯಗೊಂಡ ನೌಕರನಿಗೆ ಕಂತುಗಳಲ್ಲಿ ನಗದು ಸಹಾಯ ದೊರಕುತ್ತದೆ. ಕಾಯಂ ಊನ ಸಂಭವಿಸಿದರೆ ಮುಂದೆ ಆತ ಜೀವಿಸಿರುವವರೆಗೂ ಈ ಹಣ ಸೌಲಭ್ಯ ನೀಡಬೇಕೆಂದು ವಿಧಿಸಲಾಗಿದೆ. ಈ ಅಪಘಾತದ ಫಲವಾಗಿ ಆತನಿಗೆ ಮರಣ ಸಂಭವಿಸಿದ ಪಕ್ಷದಲ್ಲಿ ಆತನ ಆಶ್ರಿತರಿಗೆ ದೀರ್ಘಕಾಲದ ಮಾಸಾಶನ ದೊರಕಿಸುವ ವ್ಯವಸ್ಥೆಯುಂಟು. ಶವಸಂಸ್ಕಾರಗಳಿಗೂ ಧನಸಹಾಯ ನೀಡಲಾಗುತ್ತದೆ. ಸ್ತ್ರೀ ನೌಕರರು ಹೆರಿಗೆಯ ಸಮಯದಲ್ಲಿ ದಿನಕ್ಕೆ ಕನಿಷ್ಠ 75 ಪೈಸೆಯಂತೆ ಒಟ್ಟು 12 ವಾರ ಕಾಲ ಧನಸಹಾಯ ಪಡೆಯಬಹುದು.

ಈ ವ್ಯವಸ್ಥೆಯ ಆಡಳಿತ ವೆಚ್ಚದಲ್ಲಿ 2/3 ಭಾಗವನ್ನು ಭಾರತ ಸರ್ಕಾರ ನೀಡುತ್ತದೆ. ವೈದ್ಯಕೀಯ ಖರ್ಚಿನಲ್ಲಿ ಒಂದು ಭಾಗ ರಾಜ್ಯ ಸರ್ಕಾರದ ಹೊಣೆ. ಉದ್ಯೋಗಪತಿಗಳು ಒಂದು ಭಾಗ ಹೊರಬೇಕಾಗುತ್ತದೆ. ಈ ವ್ಯವಸ್ಥೆ ಜಾರಿಯಲ್ಲಿರುವೆಡೆಗಳಲ್ಲಿ ನೌಕರರೂ ತಮ್ಮ ಪಾಲಿಗೆ ನಿಗದಿಯಾದ ವಂತಿಗೆ ಸಲ್ಲಿಸಬೇಕಾದ್ದು ಅವಶ್ಯ.

ನೌಕರರ ರಾಜ್ಯವಿಮಾ ಯೋಜನೆಯ ಆಡಳಿತವನ್ನು ದೆಹಲಿಯಲ್ಲಿರುವ ಉದ್ಯೋಗಿಗಳ ರಾಜ್ಯ ವಿಮಾ ಕಾರ್ಪೊರೇಷನ್ ನಡೆಸುತ್ತದೆ. ಕೇಂದ್ರಗಳ, ರಾಜ್ಯ ಸರ್ಕಾರಗಳ, ಉದ್ಯೋಗಿಗಳ, ಉದ್ಯೋಗಪತಿಗಳ, ಸಂಸತ್ತಿನ ಹಾಗೂ ವೈದ್ಯರ ಪ್ರತಿನಿಧಿಗಳು ಇದರ ಸದಸ್ಯರು. ಇದೇ ರೀತಿ ರಾಜ್ಯಗಳಲ್ಲಿ ಪ್ರಾದೇಶಿಕ ಮಂಡಳಿಗಳಿವೆ. ಈ ವ್ಯವಸ್ಥೆ ಸಮರ್ಪಕವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಲು ಪ್ರಾದೇಶಿಕ ಕಚೇರಿಗಳ, ಪರಿಶೀಲಕರ, ದೂರುಗಳ ವಿಚಾರಣೆ ನಡೆಸುವ ವೈದ್ಯರ ಹಾಗೂ ವಿಮಾ ನ್ಯಾಯಾಲಯಗಳ ವ್ಯವಸ್ಥೆಯಿದೆ.

ಮೈಸೂರು ರಾಜ್ಯ ವಿಮಾ ಯೋಜನೆ ಜಾರಿಗೆ ಬಂದದ್ದು 1958ರಲ್ಲಿ. ಇದು ಈಗ ಅನೇಕ ಪಟ್ಟಣಗಳಿಗೆ ವಿಸ್ತರಿಸಿದೆ. 1,86,00 ಕಾರ್ಮಿಕರು ಇದರ ವಾಪ್ತಿಗೆ ಒಳಪಟ್ಟಿದ್ದಾರೆ. ಈ ವ್ಯವಸ್ಥೆಗಾಗಿಯೇ ಪ್ರತ್ಯೇಕವಾದ ಚಿಕಿತ್ಸಾಲಯಗಳೂ ಆಸ್ಪತ್ರೆಗಳೂ ಆಪದ್ವಾಹನ (ಆಂಬ್ಯುಲೆನ್ಸ್) ಸೌಕರ್ಯವೂ ಏರ್ಪಟ್ಟಿವೆ. ದೇಶೀಯ ವೈದ್ಯವನ್ನೇ ಬಯಸುವವರಿಗೆ ಕೆಲವು ಕಡೆಗಳಲ್ಲಿ ಈ ಸೌಲಭ್ಯವೂ ಉಂಟು. (ವಿ.ಎಸ್.ಕೆ.)

**ಉದ್ಯೋತಕರ:** ನ್ಯಾಯಭಾಷ್ಯವಾರ್ತಿಕವೆಂಬ ಗ್ರಂಥದ ಕರ್ತೃ. ಕಾಲ ಸು. 6ನೆಯ ಶತಮಾನ. ನ್ಯಾಯದರ್ಶನದಲ್ಲಿ ಈತನ ಹೆಸರು ಬಹು ಪ್ರಸಿದ್ಧ. ಗೌತಮ ನ್ಯಾಯಸೂತ್ರದ ಮೇಲಿನ ವಾತ್ಸ್ಯಾಯನ ಭಾಷ್ಯಕ್ಕೆ ಈತನ ಗ್ರಂಥ ವಿಮರ್ಶಾತ್ಮಕವಾದ ವ್ಯಾಖ್ಯಾನವಾಗಿದೆ. ವಾಚಸ್ಪತಿಮಿಶ್ರ ಈ ವಾರ್ತಿಕದ ಮೇಲೆ ವಾರ್ತಿಕಟೀಕಾ ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಉದ್ಯೋತಕರ ನ್ಯಾಯದರ್ಶನದಲ್ಲಿ ಪ್ರಬಲವಾಗಿ ಚರ್ಚೆ ಮಾಡಿದವನೆಂದೂ, ನ್ಯಾಯದರ್ಶನಕ್ಕೆ ಅತ್ಯಂತ ಬಲದಾಯಕವಾದ ವಾದಗಳನ್ನು ಒದಗಿಸಿದವನೆಂದೂ ಖ್ಯಾತನಾಗಿದ್ದಾನೆ. ಇವನ ತರ್ಕಕೌಶಲವನ್ನು ಸೂಚಿಸುವ ರೀತಿಯಲ್ಲಿ ಬಾಣಭಟ್ಟ ತನ್ನ ಕಾದಂಬರಿ ಕಾವ್ಯದಲ್ಲಿ ಇವನ ಹೆಸರನ್ನು ಉಲ್ಲೇಖಿಸಿದ್ದಾನೆ. (ಎಸ್.ಎಸ್.ಆರ್.;ಸಿ.ಜಿ.ಪಿ.)

**ಉನ್ನತ ಶಿಕ್ಷಣ ಮತ್ತು ಸಂಶೋಧನೆ:** ಪದವಿಪೂರ್ವ ಶಿಕ್ಷಣದ ಅನಂತರ ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣವನ್ನು ಕರ್ನಾಟಕದಲ್ಲಿ ಉನ್ನತ ಶಿಕ್ಷಣವೆಂದು ಪರಿಗಣಿಸಲಾಗಿದೆ. ಎಂದರೆ ಏಳು ವರ್ಷ ಪ್ರಾಥಮಿಕ ಶಿಕ್ಷಣವೂ 3+2 ವರ್ಷ ಪ್ರೌಢಶಿಕ್ಷಣವೂ ಸೇರಿದಂತೆ ಒಟ್ಟು ಹನ್ನೆರಡು ವರ್ಷಗಳ ಶಾಲಾಶಿಕ್ಷಣದ ಅನಂತರದ ಶಿಕ್ಷಣಕ್ಕೆ ಸಾಮಾನ್ಯವಾಗಿ ಈ ಹೆಸರನ್ನು ಬಳಸಲಾಗುತ್ತದೆ. ಇದು ವಿಶ್ವವಿದ್ಯಾಲಯಗಳಲ್ಲೂ ಅದರ ಆಂಗಿಕ ಮತ್ತು ಅಂಗೀಕೃತ ಕಾಲೇಜುಗಳಲ್ಲೂ ಸ್ನಾತಕೋತ್ತರ ವಿಭಾಗ ಅಥವಾ ಕೇಂದ್ರಗಳಲ್ಲೂ ಪರಿಗಣಿತ ವಿಶ್ವವಿದ್ಯಾಲಯಗಳಲ್ಲೂ ಇತರ ವಿಶಿಷ್ಟ ಶಿಕ್ಷಣ ಸಂಸ್ಥೆಗಳಲ್ಲೂ ವ್ಯವಸ್ಥೆಗೊಂಡಿದೆ. ಬೋಧನೆ, ಸಂಶೋಧನೆ, ವಿಸ್ತರಣೆ–ಈ ಸಾಂಪ್ರದಾಯಿಕ ಅಂಶಗಳು ಇಲ್ಲಿನ ಉನ್ನತ ಶಿಕ್ಷಣದ ಕರ್ತವ್ಯಗಳಾಗಿವೆ.

ಆಧುನಿಕ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿರುವ ಉನ್ನತ ಶಿಕ್ಷಣ ವ್ಯವಸ್ಥೆ ಕರ್ನಾಟಕದಲ್ಲಿ 1853ರಲ್ಲಿ ಆರಂಭವಾಯಿತೆನ್ನಬಹುದು. ಆ ವರ್ಷ ಮೈಸೂರಿನ ಮಹಾರಾಜ ಕಾಲೇಜು ಅನಂತರ 1858ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜು ಅಸ್ತಿತ್ವಕ್ಕೆ ಬಂದವು. ಅವೆರಡೂ ಆಗ ಮದರಾಸು ವಿಶ್ವವಿದ್ಯಾಲಯದ ಅಂಗೀಕಾರ ಪಡೆದಿದ್ದವು. ಮದ್ರಾಸ್ ಸರ್ಕಾರ 1869ರಲ್ಲಿ ಮಂಗಳೂರಿನಲ್ಲಿ ಎರಡನೆಯ ದರ್ಜೆ ಕಾಲೇಜನ್ನು ಸ್ಥಾಪಿಸಿತು. 1879ರಲ್ಲಿ ಮಂಗಳೂರಿನಲ್ಲಿ ಸೇಂಟ್ ಅಲಾಸಿಯಸ್ ಕಾಲೇಜು ಮತ್ತು 1882ರಲ್ಲಿ ಬೆಂಗಳೂರಿನಲ್ಲಿ ಸೇಂಟ್ ಜೋಸೆಫ್‌ರ ಕಾಲೇಜು ಅಸ್ತಿತ್ವಕ್ಕೆ ಬಂದವು. 1902ರಲ್ಲಿ ಮೈಸೂರಿನ ಮಹಾರಾಜ ಕಾಲೇಜನ್ನು ಪ್ರಥಮ ದರ್ಜೆಗೆ ಏರಿಸಲಾಯಿತು. ಮೈಸೂರು ಸಂಸ್ಥಾನದಲ್ಲಿ ಪ್ರತ್ಯೇಕ ವಿಶ್ವವಿದ್ಯಾನಿಲಯ ಸ್ಥಾಪಿಸಲು ನಡೆಸಿದ ಪ್ರಯತ್ನದ ಫಲವಾಗಿ 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಆರಂಭವಾಯಿತು. ಅನಂತರ 1950ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೂ 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವೂ ಅಸ್ತಿತ್ವಕ್ಕೆ ಬಂದವು. ಇವುಗಳ ಅಂಗ ಕಾಲೇಜುಗಳು ಪ್ರತಿ ಜಿಲ್ಲೆಯಲ್ಲೂ ಅಸ್ತಿತ್ವಕ್ಕೆ ಬಂದವು. 1963ರಲ್ಲಿ ಹೆಬ್ಬಾಳಿನ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಹಿಂದೆ ರಾಜ್ಯದ ಸಾಮಾನ್ಯ ಶಿಕ್ಷಣದ ಮೂರು ವಿಶ್ವವಿದ್ಯಾಲಯಗಳೆಂದರೆ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಬೆಂಗಳೂರು

ವಿಶ್ವವಿದ್ಯಾಲಯಗಳು ಪ್ರತ್ಯೇಕ ರಾಜ್ಯ ಶಾಸನಗಳಿಂದ ಸಂಘಟಿತವಾಗಿ ತಮ್ಮದೇ ಆದ ರೀತಿಯ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ಆಡಳಿತದಲ್ಲಿ ಏಕತೆಯನ್ನು ತರಲು ರಾಜ್ಯಸರ್ಕಾರ 1975ರ ಕರ್ನಾಟಕ ವಿಶ್ವವಿದ್ಯಾಲಯಗಳ ಶಾಸನ ರೀತ್ಯಾ, ತಾರೀಖು 25–09–1975 ರಂದು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ, ಮೂರು ವಿಶ್ವವಿದ್ಯಾಲಯಗಳಿಗೂ ಏಕರೂಪದ ಶಾಸನವನ್ನು ರೂಪಿಸಿತು.

ಕ್ರಮೇಣ ಸರ್ಕಾರ ತಂದ ವಿವಿಧ ಕಾಯಿದೆ ತಿದ್ದುಪಡಿಗಳಿಂದಾಗಿ ವಿಶ್ವವಿದ್ಯಾಲಯದ ಆಡಳಿತ ವ್ಯವಹಾರಗಳ ಬಗ್ಗೆ ಸರ್ಕಾರದ ನಿಯಂತ್ರಣ ಹೆಚ್ಚಿದೆ. ವಿಶ್ವವಿದ್ಯಾಲಯದ ಪ್ರಮುಖ ಅಂಗವಾಗಿದ್ದ ಸೆನೆಟ್ ರದ್ದಾಗಿದ್ದು ಶಿಕ್ಷಣ ಮಂಡಳಿಯ ಸ್ವರೂಪವೂ ತೀವ್ರವಾಗಿ ಬದಲಾಗಿದೆ. ಕುಲಪತಿಗಳ ನೇಮಕದಲ್ಲೂ ಸರ್ಕಾರ ಹೆಚ್ಚಿನ ಅಧಿಕಾರ ಹೊಂದಿದೆ. ಮುಂದೆ ವಿಶ್ವವಿದ್ಯಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭವಾದವು. ಮಂಗಳೂರು ವಿಶ್ವವಿದ್ಯಾಲಯ (1980), ಗುಲ್ಬರ್ಗ ವಿಶ್ವವಿದ್ಯಾಲಯ (1980), ಕುವೆಂಪು ವಿಶ್ವವಿದ್ಯಾಲಯ (1987), ಕನ್ನಡ ವಿಶ್ವವಿದ್ಯಾಲಯ (1991)–ಇವು ಪ್ರಾರಂಭವಾಗಿ ಸ್ನಾತಕೋತ್ತರ ಶಿಕ್ಷಣವು ವಿವಿಧ ಕೇಂದ್ರಗಳಲ್ಲಿ ಪ್ರಾರಂಭವಾಗಲು ಅವಕಾಶ ಕಲ್ಪಿತವಾಯಿತು. ತುಮಕೂರು (ಈಗ ವಿಶ್ವವಿದ್ಯಾಲಯ) ಹಾಸನ, ಮಂಡ್ಯ, ದಾವಣಗೆರೆ, ಬಳ್ಳಾರಿ, ಬೆಳಗಾಂವಿ ಮೊದಲಾದವು ಸ್ನಾತಕೋತ್ತರ ಶಿಕ್ಷಣಗಳ ಕೇಂದ್ರಗಳನ್ನು ಪಡೆದಿವೆ. ಮೈಸೂರಿನ ಜೆ.ಎಸ್.ಎಸ್.ನಂತಹ ಶಿಕ್ಷಣ ಸಂಸ್ಥೆಗಳು ಕೆಲವು ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ನೀಡುತ್ತಿವೆ. ಚಾಮರಾಜನಗರದಲ್ಲಿ ಈ ಸಂಸ್ಥೆಯ ಸ್ನಾತಕೋತ್ತರ ಕೇಂದ್ರವಿದೆ. ಮಣಿಪಾಲ ಶಿಕ್ಷಣ ಸಂಸ್ಥೆ ಸಂಭಾವ್ಯ (ಡೀಮ್ಡ್) ವಿಶ್ವವಿದ್ಯಾಲಯದ ಸ್ಥಾನಮಾನ ಪಡೆದಿದೆ. ರಾಜ್ಯಾದ್ಯಂತ ಕಾನೂನು ಶಿಕ್ಷಣ ಕಾಲೇಜುಗಳು ಪ್ರಾರಂಭಗೊಂಡಿವೆ.

ವೈದ್ಯಕೀಯ, ದಂತವೈದ್ಯ ವಿಜ್ಞಾನ, ಆಯುರ್ವೇದ ಯುನಾನಿ, ಹೋಮಿಯೋಪತಿ, ದಾದಿವೃತ್ತಿ ಶಿಕ್ಷಣ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಶಿಕ್ಷಣ, ಅರಿವಳಿಕೆ ಹಾಗೂ ಔಷಧ ವಿಜ್ಞಾನಶಾಸ್ತ್ರದಲ್ಲಿ ಅನೇಕ ಪದವಿ ಮತ್ತು ಸ್ನಾತಕೋತ್ತರ ಕೇಂದ್ರಗಳು ಸ್ಥಾಪನೆಗೊಂಡಿವೆ. ರಾಜ್ಯದಲ್ಲಿ ಸು.258 ಸಂಸ್ಥೆಗಳು ವಿವಿಧ ಆರೋಗ್ಯ ವಿಜ್ಞಾನ ವಿಷಯಗಳಲ್ಲಿ ಶಿಕ್ಷಣ ನೀಡುತ್ತಿವೆ (2000). ಈ ಸಂಸ್ಥೆಗಳ ಪರೀಕ್ಷೆಗಳ ನಿರ್ವಹಣೆ ಮತ್ತು ಉಸ್ತುವಾರಿಗಾಗಿ ರಾಜೀವಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ (1996). ಹಾಗೆಯೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಮುನ್ನೂರಕ್ಕೂ ಹೆಚ್ಚು ಎಂಜಿನಿಯರಿಂಗ್, ತಾಂತ್ರಿಕ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‍ಗಳನ್ನು ನಿರ್ವಹಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ (1999). ಪಶುವೈದ್ಯ ವಿಶ್ವವಿದ್ಯಾಲಯವೂ ಸ್ಥಾಪನೆಗೊಂಡಿದೆ (2004).

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನಲ್ಲಿದ್ದು ಇದು ಹಿಂದೆ ಮೈಸೂರು ವಿಶ್ವವಿದ್ಯಾನಿಲಯ ನಡೆಸುತ್ತಿದ್ದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಕಾರ್ಯಭಾರವನ್ನು ವಹಿಸಿಕೊಂಡಿರುವುದಲ್ಲದೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಇತ್ತೀಚೆಗೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದೆ (2004). ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್‍ಶ್ರವಣ ಸಂಸ್ಥೆ, ಮೈಸೂರಿನ ಪ್ರಾದೇಶಿಕ ಕಾಲೇಜು, ಬೆಂಗಳೂರಿನ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್, ಇನ್‍ಸ್ಟಿಟ್ಯೂಟ್ ಆಫ್ ಬ್ಯುಸಿನೆಸ್ ಮ್ಯಾನೇಜ್‍ಮೆಂಟ್, ಇನ್‍ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ ಮೊದಲಾದವು ವಿಶಿಷ್ಟ ವಿಷಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣ ನೀಡುತ್ತಿವೆ. ಸಾಫ್ಟ್‍ವೇರ್ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಕ್ರಾಂತಿಕಾರಕ ಪ್ರಗತಿಯಾಗಿದ್ದು ಅವುಗಳಲ್ಲಿ ಶಿಕ್ಷಣ ನೀಡಲು ಹಲವಾರು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಮುಂದಾಗಿವೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳೂ ಜನಸಾಮಾನ್ಯರಲ್ಲಿ ಉನ್ನತ ಶಿಕ್ಷಣದ ಪ್ರಸಾರಕಾರ್ಯವನ್ನು ನಿರ್ವಹಿಸುತ್ತಿವೆ. ಪ್ರಚಾರೋಪನ್ಯಾಸ ಮತ್ತು ಪ್ರಕಟಣೆಗಳ ಮೂಲಕ ವಿಶ್ವವಿದ್ಯಾಲಯದ ನಿಯತ ವಿದ್ಯಾರ್ಥಿಗಳು ಪಡೆಯುತ್ತಿರುವ ಜ್ಞಾನಾರ್ಜನೆಯ ಸೌಲಭ್ಯವನ್ನು ರಾಜ್ಯದ ವಿವಿಧ ಭಾಗಗಳಲ್ಲಿರುವ ಜನಸಾಮಾನ್ಯರಿಗೂ ಒದಗುವಂತೆ ಅವಕಾಶ ಕಲ್ಪಿಸಿದೆ. ಅದಕ್ಕಾಗಿ ಒಂದು ಪ್ರತ್ಯೇಕ ವಿಭಾಗವನ್ನೇ ವ್ಯವಸ್ಥೆಗೊಳಿಸಿಕೊಂಡಿವೆ.

**ಸಂಶೋಧನೆ:** ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಸಂಶೋಧನೆಗೆ ಅವಕಾಶವಿದ್ದರೂ ಅದು ಮುಖ್ಯವಾಗಿ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿಭಾಗಗಳಲ್ಲೂ ಸ್ನಾತಕೋತ್ತರ ಕೇಂದ್ರಗಳಲ್ಲೂ ನಡೆಯುತ್ತಿವೆ. ಇವುಗಳ ಜೊತೆಗೆ ಸಂಶೋಧನೆಗೆಂದೇ ಮೀಸಲಾಗಿರುವ ಸಂಸ್ಥೆಗಳೂ ವಿಶಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿವೆ. ಬೆಂಗಳೂರಿನ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶಿಷ್ಟ ಕ್ಷೇತ್ರಗಳಲ್ಲಿ ಶಿಕ್ಷಣವೀಯುವುದರ ಜೊತೆಗೆ ಉದ್ಯೋಗ ಮತ್ತು ರಕ್ಷಣೆಯ ಕಾರ್ಯಗಳಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಕುರಿತು ಫಲದಾಯಕವಾದ ಸಂಶೋಧನೆ ನಡೆಸುತ್ತಿದೆ. ವಿವಿಧ ಉದ್ಯೋಗಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಿಡಿಸಿಕೊಡುವುದರಲ್ಲೂ ಇದು ಗಣನೀಯ ಪಾತ್ರ ನಿರ್ವಹಿಸುತ್ತಿದೆ. ಭಾರತೀಯ ಉದ್ಯಮಗಳೂ ರಕ್ಷಣಾಪಡೆಗಳೂ ಈ ಸಂಸ್ಥೆಯಿಂದ ಅನೇಕ ನೂತನ ವಿಧಾನಗಳನ್ನು ಪಡೆದುಕೊಂಡು ಕಾರ್ಯಕ್ಷೇತ್ರದಲ್ಲಿ ಬಳಸಿಕೊಳ್ಳುತ್ತಿವೆ. ಇದರಂತೆ ದಿವಂಗತ ಸರ್.ಸಿ.ವಿ. ರಾಮನ್ ಬೆಂಗಳೂರಿನಲ್ಲಿ ಸ್ಥಾಪಿಸಿರುವ ರಾಮನ್ ಸಂಶೋಧನಾ ಸಂಸ್ಥೆಯೂ ಭೌತಶಾಸ್ತ್ರದ ಸಂಶೋಧನೆಗಳಲ್ಲಿ ನಿರತವಾಗಿದೆ. ಔದ್ಯೋಗಿಕ ಮತ್ತು ವೈಜ್ಞಾನಿಕ ಸಂಶೋಧನ ಮಂಡಳಿಯ ನೇತೃತ್ವದಲ್ಲಿ ಏರ್ಪಟ್ಟಿರುವ ಎರಡು ಸಂಶೋಧನ ಸಂಸ್ಥೆಗಳು ಕರ್ನಾಟಕದಲ್ಲಿವೆ. ಮೈಸೂರಿನ ಕೇಂದ್ರ ಆಹಾರ ಸಂಶೋಧನ ಸಂಸ್ಥೆ ಜನತೆಯ ಹಾಗೂ ಸೈನ್ಯದ ಆಹಾರ ಸಮಸ್ಯೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸುತ್ತದೆ. ಇದು ಭಾರತದ ಅನೇಕ ಕಡೆ ತನ್ನ ಪ್ರಾದೇಶಿಕ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದೆ. ಆಹಾರ ತಯಾರಿಕೆಗೆ ಸಂಬಂಧಿಸಿದಂತೆ ಇದು ರೂಪಿಸಿದ ಅನೇಕ ವಿಧಾನಗಳು ಆಗಲೇ ವಾಣಿಜ್ಯ ಕ್ಷೇತ್ರದಲ್ಲಿ ಪ್ರಚಾರಕ್ಕೆ ಬಂದಿವೆ. ಬೆಂಗಳೂರಿನ ರಾಷ್ಟ್ರೀಯ ವಾಯುಯಾನ ಸಂಶೋಧನ ಸಂಸ್ಥೆಯೂ ವಿಮಾನಗಳ ವಿನ್ಯಾಸ ಮತ್ತು ಚಲನೆಗೆ ಸಂಬಂಧಿಸಿದಂಥ ಹಲವು ಪ್ರಧಾನ ಸಂಶೋಧನೆಗಳನ್ನು ನಡೆಸಿದೆ.

ಬೆಂಗಳೂರು ಮತ್ತು ಧಾರವಾಡದ ಕೃಷಿ ವಿಶ್ವವಿದ್ಯಾಲಯಗಳು ವ್ಯವಸಾಯ ಮತ್ತು ವ್ಯವಸಾಯೋದ್ಯಮಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿವೆ. ಬತ್ತ, ಜೋಳ, ರಾಗಿ, ಹತ್ತಿ ಮುಂತಾದವುಗಳ ನೂತನ ತಳಿಗಳ ನಿರ್ಮಾಣದ ಮೂಲಕ ರಾಜ್ಯದ ವ್ಯವಸಾಯದ ಪ್ರಗತಿಗೆ ಸಹಾಯ ಮಾಡಿವೆ. ಇವು ಹೆಬ್ಬಾಳ, ಮಂಡ್ಯ, ಮೂಡಿಗೆರೆ, ಧಾರವಾಡ, ರಾಯಚೂರು– ಈ ಸ್ಥಳಗಳಲ್ಲಿ ಪ್ರಾದೇಶಿಕ ಸಂಶೋಧನ ಕೇಂದ್ರಗಳನ್ನು ಹೊಂದಿವೆ. ಬೆಂಗಳೂರಿನ ಆಗ್ನೇಯದಲ್ಲಿ ಹೊಸೂರು ರಸ್ತೆಯ ಬಳಿ ಇರುವ ರಾಷ್ಟ್ರೀಯ ಕ್ಷೀರೋದ್ಯಮಕ್ಕೆ ಸಂಬಂಧಿಸಿದ ಸ್ನಾತಕ ಮತ್ತು ಸ್ನಾತಕೋತ್ತರ ತರಗತಿಗಳನ್ನು ನಡೆಸುವುದರ ಜೊತೆಗೆ ಕ್ಷೀರೋದ್ಯಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಅದು ಹರಿಯಾಣದ ಕರ್ನಾಲ್‍ನಲ್ಲಿರುವ ಕ್ಷೀರೋದ್ಯಮ ಸಂಶೋಧನ ಸಂಸ್ಥೆಯ ಅಂಗವಾಗಿ ನಡೆದುಕೊಂಡುಬರುತ್ತಿದೆ.

**ಇತಿಹಾಸ:** ಪ್ರಾಚೀನ ಕರ್ನಾಟಕದಲ್ಲಿ ಉನ್ನತ ಶಿಕ್ಷಣಕ್ಕೆ ವ್ಯಾಪಕವಾದ ವ್ಯವಸ್ಥೆಯಿತ್ತು. ಪ್ರ.ಶ.ಪೂ.4ನೆಯ ಶತಮಾನದ ಕೊನೆಯಲ್ಲಿ ಇಲ್ಲಿಗೆ ಆಗಮಿಸಿದ ಚಂದ್ರಗುಪ್ತ ಮೌರ್ಯ ಮತ್ತು ಅವನ ಗುರು ಭದ್ರಬಾಹುವಿನೊಡನೆ ಜೈನಧರ್ಮವೂ ಜೈನಸಂಸ್ಥೆಗಳೂ ಆಗಮಿಸಿದುವು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ಜೈನಬಸದಿಗಳು ಆರಂಭವಾಗಿ ಮೋಕ್ಷಸಾಧನೆಗೆ ನಂಬಿಕೆ, ಭಕ್ತಿ, ಪೂಜೆ ಪುನಸ್ಕಾರಗಳಂತೆ ಸುಜ್ಞಾನವೂ ಅಗತ್ಯವೆಂದು ಸಾರಿ ಉನ್ನತ ಶಿಕ್ಷಣಕ್ಕೆ ಧಾರ್ಮಿಕ ಮನ್ನಣೆಯನ್ನೂ ಪ್ರೋತ್ಸಾಹವನ್ನೂ ನೀಡಿದುವು. ಅಶೋಕನ ಕಾಲದಲ್ಲಿ ಕರ್ನಾಟಕಕ್ಕೆ ಬೌದ್ಧ ಧರ್ಮದೊಡನೆ ಸಂಘಾರಾಮಗಳೂ ವಿಹಾರಗಳೂ ಆಗಮಿಸಿ ವ್ಯವಸ್ಥಿತ ರೀತಿಯ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದುವು. ಕ್ರಿಸ್ತಶಕದ ಆರಂಭದ ವೇಳೆಗೆ ದೇಶದ ಅನೇಕ ಕಡೆ ಬೌದ್ಧ ಮಠಗಳೂ ವಿಹಾರಗಳೂ ಏರ್ಪಟ್ಟವು. ಪ್ರಪಕ್ರಶಕ ಮೂರನೆಯ ಶತಮಾನದಲ್ಲಿ ಚುಟುಕುಲದ ಶಿವಸ್ಕಂದ ನಾಗಶ್ರೀ ಬನವಾಸಿಯಲ್ಲಿ ಒಂದು ಬೌದ್ಧವಿಹಾರವನ್ನು ಸ್ಥಾಪಿಸಿದ ವಿಷಯ ಅಲ್ಲಿನ ಮಧುಕೇಶ್ವರ ದೇವಾಲಯದ ನಾಗಶಿಲೆಯ ಶಾಸನವೊಂದರಿಂದ ತಿಳಿದುಬರುತ್ತದೆ. ನಮಗೆ ದೊರೆತಿರುವ ಸಾಕ್ಷ್ಯಾಧಾರಗಳ ಪ್ರಕಾರ ಇದು ಕರ್ನಾಟಕದಲ್ಲಿ ಮೊಟ್ಟ ಮೊದಲು ಆರಂಭವಾದ ಉನ್ನತ ಶಿಕ್ಷಣ ಸಂಸ್ಥೆ. ಜೈನ ಬೌದ್ಧ ಧರ್ಮಗಳು ಆರಂಭಿಸಿದ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳು ಇಲ್ಲಿ ಪೌರಾಣಿಕ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಗುರುಕುಲ ಮತ್ತು ಆಶ್ರಮ ಶಿಕ್ಷಣ ಪದ್ಧತಿಗಳ ಮೇಲೆ ಪರಿಣಾಮ ಬೀರಿ ಶಿಕ್ಷಣಕ್ಕೆ ಸಂಘ ಸಂಸ್ಥೆಗಳ ನಿಯಂತ್ರಣ ಆರಂಭವಾಯಿತು. ಅವುಗಳಲ್ಲಿ ಘಟಿಕ ಎಂಬುವು ಅತ್ಯಂತ ಪ್ರಾಚೀನತಮ ಸಂಸ್ಥೆಗಳು. ಕದಂಬ ಮಯೂರಶರ್ಮ ಉನ್ನತ ಶಿಕ್ಷಣದ ಪ್ರೇಮಿಯಾಗಿದ್ದು ಅಂದು ಕಾಂಚೀಪುರದಲ್ಲಿದ್ದ ಘಟಿಕಾಲಯದ ಮಾದರಿಯಲ್ಲಿ ತನ್ನ ರಾಜ್ಯದಲ್ಲೂ ಘಟಿಕಗಳನ್ನು ಸ್ಥಾಪಿಸಿದ್ದ ಎಂದು ಕೆಲವರ ಊಹೆ. ನಾಗಾಯಿ, ಹೆಂಜಾರಪುರ, ಕಾಡಿಯೂರು, ಕುಕ್ಕೂರು, ಮೋರಿಗೆರೆ, ರಾಯಬಾಗ್ ಮುಂತಾದೆಡೆ ಖ್ಯಾತಿಪಡೆದ ಘಟಿಕಾಲಯಗಳು ಬೇರೆ ಬೇರೆ ಕಾಲಗಳಲ್ಲಿ ಅಸ್ತಿತ್ವದಲ್ಲಿದ್ದವು. ಅಲ್ಲಿ ಶಿಕ್ಷಣ ಮುಗಿಸಿದವರಿಗೆ, ಸಮಾರಂಭವೊಂದನ್ನು ನಡೆಸಿ ಘಟಿಕಸಾಹಸ ಎಂಬ ಪ್ರಶಸ್ತಿ ನೀಡುತ್ತಿದ್ದರು.

ಘಟಿಕಗಳಂತೆ ಅಗ್ರಹಾರಗಳೂ ಬ್ರಹ್ಮಪುರಿಗಳೂ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದವು. ಅವು ಬ್ರಾಹ್ಮಣಪಂಡಿತರ ವಸತಿಗಳಾಗಿದ್ದು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಒದಗಿಸುತ್ತಿದ್ದವು. ತಾಳಗುಂದ, ಬಾದಾಮಿ, ಉಮ್ಮಚಿಗೆ, ದೇಗಾಂವಿ, ಕಾಡಿಯೂರು, ಸರ್ವಜ್ಞಪುರ ಮುಂತಾದ ಅಗ್ರಹಾರಗಳೂ ಬಳ್ಳಿಗಾವೆ, ತಲಕಾಡು, ವಿಕ್ರಮಪುರ ಮುಂತಾದ ಬ್ರಹ್ಮಪುರಿಗಳೂ ಉನ್ನತ ಶಿಕ್ಷಣದ ಪ್ರಸಿದ್ಧ ಕೇಂದ್ರಗಳಾಗಿದ್ದುವು.

10ನೆಯ ಶತಮಾನದ ವೇಳೆಗೆ ಬೌದ್ಧವಿಹಾರಗಳ ಮಾದರಿಯಲ್ಲಿ ವ್ಯವಸ್ಥೆಗೊಂಡ ಹಿಂದು ಮಠಗಳು ವೈವಿಧ್ಯಮಯವೆನ್ನಬಹುದಾದ ರೀತಿಯಲ್ಲಿ ಉನ್ನತ ಶಿಕ್ಷಣ ಕೊಡುತ್ತಿದ್ದುವು. ಕೋಡಿಮಠ, ನಾಗಾಯಿಮಠ, ಊರೂರಿಗೂ ವ್ಯಾಪಿಸಿದ್ದ ವೀರಶೈವ ಮಠಗಳು ಇವೆಲ್ಲ ಉನ್ನತ ಶಿಕ್ಷಣವನ್ನು ಪ್ರಸಾರ ಮಾಡುತ್ತಿದ್ದವು.

10ನೆಯ ಶತಮಾನದ ಸುಮಾರಿಗೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ದೇವಾಲಯದ ವಿದ್ಯಾಪೀಠಗಳು ಅನೇಕ ಸ್ಥಳಗಳಲ್ಲಿ ಅಸ್ತಿತ್ವಕ್ಕೆ ಬಂದುವು. ಅದುತನಕ ಸಂಸ್ಕೃತ ಉನ್ನತ ಶಿಕ್ಷಣದಲ್ಲಿ ಬೋಧನ ಮಾಧ್ಯಮವಾಗಿತ್ತು. ಈಗ ಕನ್ನಡವೂ ಆ ಕಾರ್ಯಕ್ಕೆ ಬಳಕೆಯಾಗುವುದು ಆರಂಭವಾಯಿತು. ಆ ಸುಮಾರಿಗೆ ಕನ್ನಡದಲ್ಲಿ ಸಾಹಿತ್ಯಿಕ, ಶಾಸ್ತ್ರೀಯ ಮತ್ತು ಇತರ ಗ್ರಂಥಗಳೂ ರಚನೆಯಾಗಿ ಅವುಗಳ ಅಧ್ಯಯನವೂ ನಡೆಯುತ್ತಿತ್ತು. ಸಾಲೊಟಗೆ, ಹರಿಹರದ ಹರಿಹರೇಶ್ವರ ದೇವಾಲಯ, ತಾಳಗುಂದದ ಪ್ರಣವೇಶ್ವರ ದೇವಾಲಯ, ಮನಗೋಳಿಯ

ವ್ಯಾಕರಣ ವಿದ್ಯಾಪೀಠ, ಹೆಬ್ಬಾಳಿನ ಬುಜವ್ವೇಶ್ವರ ದೇವಾಲಯ, ಜಟಿಂಗ ರಾಮೇಶ್ವರದ ವಿದ್ಯಾಪೀಠ, ಬಿಜಾಪುರದ ಮೀಮಾಂಸೆ ವಿದ್ಯಾಪೀಠ, ಕೂಡಲ ಸಂಗಮದೇವಾಲಯದ ವಿದ್ಯಾಪೀಠ–ಇವೆಲ್ಲ ಪ್ರಸಿದ್ಧ ಉನ್ನತ ಶಿಕ್ಷಣ ಕೇಂದ್ರಗಳಾಗಿದ್ದವು. ಸಾಮಾನ್ಯವಾಗಿ ಪಠ್ಯಕ್ರಮದಲ್ಲಿ ವ್ಯಾಕರಣ, ಪುರಾಣ, ವೇದ, ಆಗಮ, ಕಾವ್ಯ, ನಾಟಕ ಮುಂತಾದುವು ಸೇರಿದ್ದುವು. ಆದರೆ ಒಂದೊಂದು ಕೇಂದ್ರವೂ ತನ್ನದೇ ಆದ ವಿಶೇಷ ವಿಷಯದಲ್ಲಿ ಶಿಕ್ಷಣವೀಯಲು ಹೆಸರಾಗಿತ್ತು. ಕೋಡಿಮಠದಲ್ಲಿ ಷಡ್ದರ್ಶನಗಳೂ ಕುಪ್ಪತ್ತೂರು ಮಠದಲ್ಲಿ ವಾತ್ಸಾಯನನ ಕಾಮಸೂತ್ರವೂ ವಿಶಿಷ್ಟ ಅಧ್ಯಯನ ವಿಷಯಗಳಾಗಿದ್ದುವು. ಸರ್ವಜ್ಞಪುರ ಭಾಷಾಶಾಸ್ತ್ರದಲ್ಲೂ ಉಮ್ಮಚಿಗೆ ವ್ಯಾಕರಣ, ಛಂದಸ್ಸು, ಕಾವ್ಯರಚನೆ–ಇವುಗಳಲ್ಲೂ ವಿಶೇಷ ಶಿಕ್ಷಣ ನೀಡುತ್ತಿದ್ದುವು. ನಾಗಾಯಿಮಠ ಮನುಧರ್ಮಶಾಸ್ತ್ರ, ಶುಕ್ರಶಾಸ್ತ್ರ ಮತ್ತು ವ್ಯಾಸಕೃತಿಗಳ ಬೋಧನೆಗೆ ಹೆಸರು ಗಳಿಸಿತ್ತು.

12–13ನೆಯ ಶತಮಾನಗಳಲ್ಲಿ ಆರಂಭವಾದ ಮುಸಲ್ಮಾನರ ದಾಳಿಯಿಂದ ಭಾರತದ ಇತರೆಡೆಗಳಂತೆ ಕರ್ನಾಟಕದಲ್ಲೂ ಉನ್ನತ ಶಿಕ್ಷಣಕ್ಕೆ ಧಕ್ಕೆಯೊದಗಿತು. ಅವರ ದಾಳಿಗೆ ಸಿಕ್ಕಿದ ದೇವಾಲಯದ ವಿದ್ಯಾಪೀಠಗಳು ಮುಚ್ಚಿಹೋದವು. ಅಗ್ರಹಾರ, ಬ್ರಹ್ಮಪುರಿ ಮುಂತಾದ ಇತರ ಉನ್ನತ ವಿದ್ಯಾವಸತಿಗಳು ಹಿಂದಿನ ಪ್ರೋತ್ಸಾಹವಿಲ್ಲದೆ ಹಿಂಬದಿಗೆ ಬಿದ್ದುವು. ನಾಡಿನ ಎಲ್ಲೋ ಕೆಲವೆಡೆ ದಾಳಿಗೆ ಸಿಕ್ಕದೆ ಉಳಿದುಕೊಂಡಿದ್ದ ಹಲವು ಮಠಗಳು ತಮ್ಮ ವಿದ್ಯಾಪ್ರಸಾರವನ್ನು ಹಾಗೂ ಹೀಗೂ ಕೆಲಕಾಲ ಮುಂದುವರೆಸಿದುವು. ವಿಜಯನಗರ ಸ್ಥಾಪನೆಯಾದ ಮೇಲೆ ಮುಖ್ಯನಗರಗಳಲ್ಲಿ ಮತ್ತೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹವೇನೋ ದೊರೆಯಿತು. ಆದರೆ ಅದರ ಪತನಾನಂತರ ಸಣ್ಣಪುಟ್ಟ ಪಾಳೆಯಪಟ್ಟುಗಳು ಏರ್ಪಟ್ಟು ನಾಡು ನಿತ್ಯಕದನಗಳ ಬೀಡಾಗಿ ವ್ಯವಸ್ಥಿತ ರೀತಿಯಲ್ಲಿ ಶಿಕ್ಷಣ ಪ್ರಸಾರ ಇಲ್ಲವಾಯಿತು. ಮುಸಲ್ಮಾನರು ಆಕ್ರಮಿಸಿದ ಪ್ರದೇಶಗಳಲ್ಲಿ ತಮ್ಮವರಿಗಾಗಿ ಮದ್ರಾಸಗಳೆಂಬ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಹದಿನಾಲ್ಕನೆಯ ಶತಮಾನದ ಮಧ್ಯಭಾಗದ ವೇಳೆಗೆ ಉತ್ತರ ಕರ್ನಾಟಕದಲ್ಲಿ ಅವು ಅಸ್ತಿತ್ವಕ್ಕೆ ಬಂದುವು. ಮಸೀದಿಗಳ ಅಂಗವಾಗಿ ಏರ್ಪಟ್ಟಿದ್ದ ಆ ಸಂಸ್ಥೆಗಳಲ್ಲಿ ಮುಸ್ಲಿಂ ಧರ್ಮಗ್ರಂಥಗಳನ್ನು ಬೋಧಿಸುತ್ತಿದ್ದರು. ಹೊನ್ನಾವರ ಪ್ರದೇಶದಲ್ಲಿದ್ದ ಕೆಲವು ಸಂಸ್ಥೆಗಳನ್ನು ಅಲ್ಲಿ ಸಂಚರಿಸುತ್ತಿದ್ದ ಇಬ್ನ ಬತೂತ ಕೊಂಡಾಡಿರುವನು. ಬಹಮನೀ ಅರಸರು ಉನ್ನತ ಶಿಕ್ಷಣದ ಪ್ರಚಾರದಲ್ಲಿ ತುಂಬ ಆಸಕ್ತಿ ವಹಿಸಿದ್ದರು. ಗುಲ್ಬರ್ಗ, ಬಿದರೆ ಮುಂತಾದೆಡೆ ಸ್ಥಾಪಿಸಿದ್ದ ಸಂಸ್ಥೆಗಳು ಪ್ರಸಿದ್ಧಿ ಪಡೆದಿದ್ದುವು. 15ನೆಯ ಶತಮಾನದ ಕೊನೆಯಲ್ಲಿ ಆ ರಾಜ್ಯದ ಮಂತ್ರಿಯಾಗಿದ್ದ ಮಹಮ್ಮದ್ ಗವಾನ್ ಬಿದರೆಯಲ್ಲಿ ವಿದ್ಯಾಲಯ ವೊಂದನ್ನು ಕಟ್ಟಿಸಿ ಧರ್ಮಶಾಸ್ತ್ರಗಳ ಜೊತೆಗೆ ಲೌಕಿಕ ವಿದ್ಯೆಗಳ ಬೋಧನೆಗೂ ವ್ಯವಸ್ಥೆಗೊಳಿಸಿದ. ಅಲ್ಲಿನ ಗ್ರಂಥಾಲಯಕ್ಕೆ ದೇಶವಿದೇಶಗಳಿಂದ ಅಮೂಲ್ಯ ಕೃತಿಗಳನ್ನು ತರಿಸಿ ಒದಗಿಸಿದ್ದ. ಅನಂತರ ಅಧಿಕಾರಕ್ಕೆ ಬಂದ ಆದಿಲ್ ಷಾಹೀ ಅರಸರು ಬಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪ್ರಾಥಮಿಕ ಸಾರ್ವತ್ರಿಕ ಶಿಕ್ಷಣಕ್ಕಾಗಿ ಮಕ್ತಾಬ್‍ಗಳೆಂದು ಶಾಲೆಗಳನ್ನು ಆರಂಭಿಸಿ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬರುವ ಅವಕಾಶ ಕಲ್ಪಿಸಿದರು. ಅರಬ್ಬೀ ಮತ್ತು ಪಾರಸೀ ಭಾಷೆಗಳ ವ್ಯಾಸಂಗಕ್ಕೂ ಶಿಲ್ಪ, ವೈದ್ಯ ಮುಂತಾದ ವೃತ್ತಿಶಿಕ್ಷಣಕ್ಕೂ ಪ್ರೋತ್ಸಾಹವಿತ್ತರು. ಕರ್ನಾಟಕದಲ್ಲಿ ಮುಸಲ್ಮಾನ ಆಳರಸರು ತಮ್ಮ ಮತದವರ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದರೂ ದೇಶೀಯ ಶಿಕ್ಷಣದ ಪುನರುಜ್ಜೀವನದ ಕಡೆಗೆ ಆಸಕ್ತಿ ತೋರಲಿಲ್ಲ. ಅಲ್ಲದೆ, ರಾಜಾಸ್ಥಾನದಲ್ಲಿ ಪುರಸ್ಕಾರವಿಲ್ಲದೆ ಜನತೆಗೂ ಅದರಲ್ಲಿ ಆಸಕ್ತಿ ತಪ್ಪಿತ್ತು. ಮೈಸೂರಿನ ಒಡೆಯರ ಕಾಲದಲ್ಲಿ ಅವರ ಆಡಳಿತ ಕ್ಷೇತ್ರದಲ್ಲೂ ರಾಜಧಾನಿಯಲ್ಲೂ ಸಂಗೀತ, ಶಾಸ್ತ್ರ, ಸಾಹಿತ್ಯ ಮುಂತಾದವಕ್ಕೆ ಪ್ರೋತ್ಸಾಹವನ್ನು ನೀಡಿದ್ದರು. 18ನೆಯ ಶತಮಾನದ ಆಡಳಿತ ಹೈದರ್ ಮತ್ತು ಅನಂತರ ಅವನ ಮಗ ಟಿಪ್ಪುವಿನ ಕೈಸೇರಿದಾಗ ಆ ಪ್ರೋತ್ಸಾಹ ಇಲ್ಲವಾಯಿತು. ಒಟ್ಟಿನಲ್ಲಿ ಸುಮಾರು ಎರಡು ಸಹಸ್ರ ವರ್ಷಗಳಿಂದ ಬೆಳೆದು ಬಂದಿದ್ದ ಉನ್ನತ ಶಿಕ್ಷಣದ ದೇಶೀಯ ಸಂಪ್ರದಾಯ ಕ್ರಮಕ್ರಮವಾಗಿ ಕುಂದುತ್ತ ಬಂದು ಮುಂದೆ ತಲೆಯೆತ್ತಲು ಅವಕಾಶವಿಲ್ಲವಾಯಿತು. (ಎನ್.ಎಸ್.ವಿ.)

**ಉನ್ಮಾದ ರೋಗ:** ಸಂವೇದನವಾಹಕ (ಸೆನ್ಸರಿ) ಅಥವಾ ಚಾಲಕ (ಮೋಟಾರ್) ಅಥವಾ ಮಾನಸಿಕ ರೋಗಲಕ್ಷಣಗಳನ್ನು ಉಂಟುಮಾಡುವ ಒಂದು ವಿಧದ ಮಾನಸಿಕ ಅವ್ಯವಸ್ಥೆ (ಹಿಸ್ಟೀರಿಯ). ಗರ್ಭಕೋಶದ ವ್ಯತ್ಯಾಸಗಳಿಂದ ಉನ್ಮಾದ ಕಾಣಿಸಿಕೊಳ್ಳುವುದೆಂಬ ತಪ್ಪು ನಂಬುಗೆ ಹಿಂದಿನ ಕಾಲದಲ್ಲಿತ್ತು. ಅದಕ್ಕೆ ಸಂಬಂಧಿಸಿದ ಗ್ರೀಕ್ ಶಬ್ದ ಹಿಸ್ಟಿರಾದಿಂದ ಹಿಸ್ಟೀರಿಯ ಎಂಬ ಶಬ್ದ ಬಂದಿದೆ. ಹಿಸ್ಟಿರಾ ಶಬ್ದಕ್ಕೆ ಗರ್ಭಕೋಶವೆಂದು ಅರ್ಥ. ಆದರೆ ಈ ವ್ಯಾಧಿ ಹೆಂಗಸರಿಗೇ ಸೀಮಿತವಾದದ್ದಲ್ಲ. ಅಭಿವ್ಯಕ್ತಿಗೊಳ್ಳದ ಮಾನಸಿಕ ಕ್ಲೇಶ ರೋಗಲಕ್ಷಣವಾಗಿ ಪರಿವರ್ತಿತವಾಗುತ್ತದೆ. ನಮಗೆ ಗೊತ್ತಿರುವ ಯಾವ ಜೈವಿಕ ಅಥವಾ ಶಾರೀರಿಕ ರೋಗನಿದಾನಕ್ಕೂ ಇದು ಒಳಪಡುವುದಿಲ್ಲ. ಗಂಡು–ಹೆಣ್ಣು, ಚಿಕ್ಕವರು–ದೊಡ್ಡವರೆಂಬ ಭೇದವಿಲ್ಲದೆ ಯಾರಲ್ಲಾದರೂ ಇದು ತಲೆದೋರಬಹುದಾದರೂ ಮಕ್ಕಳು/ಹದಿಹರೆಯದವರಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮಾನಸಿಕವಾಗಿ ದುರ್ಬಲರೂ, ಉನ್ಮಾದ ವ್ಯಕ್ತಿತ್ವ ಉಳ್ಳವರಲ್ಲಿ ಹೆಚ್ಚು. ಪುರುಷರಿಗೆ ಹೋಲಿಸಿದರೆ, ಸ್ತ್ರೀಯರಲ್ಲಿ ಹೆಚ್ಚು.

ಈ ಸಂವೇದನ ವಾಹಕ ಹಾಗೂ ಚಾಲಕ ರೋಗಲಕ್ಷಣಗಳು ನಾನಾ ಬಗೆಯಾಗಿ ಪ್ರಕಟವಾಗುತ್ತವೆ. ಇವುಗಳ ಹಿಂದಿರುವ ವ್ಯಾಕುಲತೆ ಅನೇಕವೇಳೆ ಯಾವುದೋ ದೈಹಿಕ ರೋಗಲಕ್ಷಣವಾಗಿ ಪರಿವರ್ತನೆ ಹೊಂದುತ್ತದೆ. ಮನೋಲೋಕದಿಂದ ದೈಹಿಕಕ್ಷೇತ್ರಕ್ಕೆ ಪರಿವರ್ತನೆ ಮಾಡಿಕೊಳ್ಳುವಂಥ ಪ್ರತಿಕ್ರಿಯೆಯೆಂದೇ ಇದನ್ನು ಗುರುತಿಸಲಾಗಿದೆ. ಇದೊಂದು ವಿಚಿತ್ರ ರೋಗ. ಇದರಲ್ಲಿ ಇದ್ದಕ್ಕಿದ್ದಂತೆಯೇ ಯಾವ ವಿಧವಾದ ದೈಹಿಕ ಕಾರಣವೂ ಇಲ್ಲದೆ ಒಬ್ಬ ವ್ಯಕ್ತಿ ಕುರುಡನಾಗಬಹುದು, ಕಿವುಡನಾಗಬಹುದು, ಪಾರ್ಶ್ವವಾಯುಪೀಡಿತನಾಗ ಬಹುದು; ತಾನು ಯಾರೆಂಬುದನ್ನೇ ಮರೆತುಬಿಡಬಹುದು. ಉನ್ಮಾದದ ಲಕ್ಷಣಗಳು ಹಲವು ವೇಳೆ ದೈಹಿಕ ರೋಗದವಂತೆಯೇ ಇರುತ್ತವೆ. ಇದನ್ನು ಮನೋರೋಗವೆಂದು ಗುರುತಿಸುವುದು ಬಲು ಕಷ್ಟ. ಇದಕ್ಕೆ ಸಮಸ್ಯೆಗಳ ಸೂಕ್ಷ್ಮ ಅವಲೋಕನವೂ ವ್ಯಕ್ತಿಯ ಬಾಳಿನ ಪರಿಸರದ ಅಧ್ಯಯನವೂ ಆವಶ್ಯಕ. ಇದರ ವಿಚಿತ್ರ ಸ್ವರೂಪದ ಕಾರಣದಿಂದ ಮನೋರೋಗದ ಇತಿಹಾಸದಲ್ಲಿ ಈ ವ್ಯಾಧಿಗೆ ಪ್ರಮುಖ ಸ್ಥಾನವಿದೆ. ಈ ರೋಗದ ಇತಿಹಾಸವೂ ಸ್ವಾರಸ್ಯಕರವೇ.

ಮಕ್ಕಳಲ್ಲೂ ಹರೆಯದವರಲ್ಲೂ ಅನಾಹುತಗಳೋ ಯುದ್ಧದಲ್ಲಾಗುವಂತೆ ತಡೆಯಲಾರದ ತೊಡಕುಗಳೋ ಆದ ಮೇಲೆ ಉನ್ಮಾದ ಕಾಣಿಸಿಕೊಳ್ಳುವುದರಿಂದ, ಉನ್ಮಾದಕ್ಕೆ ಈಡಾಗುವ ಗುಣ ಎಲ್ಲರಲ್ಲೂ ಇರುತ್ತದೆ. ಒತ್ತಡ ಮತ್ತು ಅಹಿತಕಾರಿ ಪರಿಸರವೇ ಹೆಚ್ಚು ಮುಖ್ಯ ಕಾರಣ ಎನ್ನಬಹುದು. ಉನ್ಮಾದ ಹೊರಗೆ ಕಾಣಿಸಿಕೊಳ್ಳುವ ಎಷ್ಟೋ ಮುಂಚೆ ಅನುವಂಶೀಯ ಹಾಗೂ ಪರಿಸರಗಳ ದೆಸೆಯಿಂದ ರೋಗಿಯ ವ್ಯಕ್ತಿತ್ವ ದುರ್ಬಲವಾಗಿರುತ್ತದೆ. ಎಲ್ಲ ಉನ್ಮಾದ ರೋಗಿಗಳಲ್ಲೂ ಇದು ಕಾಣದಿದ್ದರೂ ಹೀಗೆ ಬದಲಾಗಿರುವವರು ಎಂದಾದರೂ ಉನ್ಮಾದಕ್ಕೆ ಈಡಾಗುವರು. ಈ ವ್ಯಕ್ತಿತ್ವದ ಅನೇಕ ಲಕ್ಷಣಗಳು ಸಮಾಜದಲ್ಲಿ ಕೆಟ್ಟವೆನಿಸಿದರೂ ರೋಗಿಯ ನಡತೆಯೆಲ್ಲ ಹೀಯಾಳಿಸುವಂತಿರುವುದಿಲ್ಲ. ಈ ರೋಗಿಗಳು ತಮ್ಮ ಅಳವು ತಮಗೆ ಸಾಕೆನಿಸದೆ, ಇನ್ನೂ ಚೆನ್ನಾಗಿ ಜೋರಾಗಿ ತೋರಿಸಿಕೊಳ್ಳಲು ಯತ್ನಿಸುವರು. ಸೋಗೂ ಹಾಕುವರು. ಆದರೆ ಅವರಿಗೇ ಇದು ಸೋಗೆಂದು ನಿಜವಾಗೂ ಅನ್ನಿಸುವುದಿಲ್ಲ. ಗೊತ್ತೂ ಆಗದು. ಆದ್ದರಿಂದ, ಇಲ್ಲಿ ಮೋಸದ ಪ್ರಶ್ನೆಯೇ ಇಲ್ಲ. ಉನ್ಮಾದ ರೋಗಿಯ ಒಳಗಿನ ತಳಮಳ, ಹೀಗೇ ನಡೆದುಕೊಳ್ಳಬೇಕೆಂಬ ನಿರ್ಧಾರ, ವಿಪರೀತ ಜಂಭ, ಶೀವಿಯ ಕಲ್ಪನೆ ಹೆಚ್ಚು. ಎಳೆತನದಲ್ಲಿ ಸರಿಯೆಂದು ಕಾಣುವ ಮನೋಕಲ್ಪನೆಗಳು ಪರಿಸರಕ್ಕೆ ಹೊಂದದಿದ್ದರೂ ಇಲ್ಲಿ ಪ್ರೌಢ ರೋಗಿಯಲ್ಲಿ ತೋರುತ್ತವೆ. ಕಲ್ಪನಾಲೋಕವೊಂದನ್ನು ಕಟ್ಟಿಕೊಂಡು ನಿಜವಾಗಿ ಅಲ್ಲೇ ಇರುವೆನೆಂದು ಆತ ಭಾವಿಸುತ್ತಾನೆ. ಅಹಂಭಾವ, ಸುಳ್ಳುತನ ಇವು ಅಪರಾಧದ ಮಟ್ಟಕ್ಕೇರಬಹುದು. ಹೆಚ್ಚು ಗಮನ ಒಲವು, ಕನಿಕರಗಳಿಗಾಗಿ ಬಹುವಾಗಿ ಹಾತೊರೆಯುವ ಈ ರೋಗಿಯ ನಡೆವಳಿಕೆಯೇ ಬದಲಾಗಿರುತ್ತದೆ. ನೋಟಕರಿಗೆ ಕೆಲವೇಳೆ ಇದು ಗೊತ್ತಾಗುವು ದಾದರೂ ಯಾವಾಗಲೂ ಇದು ವ್ಯಕ್ತವಾಗದು. ರೋಗಲಕ್ಷಣದ ಇವನ ಅಣಕು ಅಷ್ಟು ಚೆನ್ನಾಗಿರುತ್ತದೆ. ನೋವಿನ ನೆನಪುಗಳನ್ನು ಈತ ಅನುಕೂಲವಾಗಿ ಮರೆಯುತ್ತಾನೆ. ಈ ಮರೆವು ಎಷ್ಟರಮಟ್ಟಿಗೆ ನಿಜವಾದುದೆಂದು ಕಂಡುಹಿಡಿಯುವುದೂ ಕಷ್ಟವೇ. ಇನ್ನೊಬ್ಬರು ಕೊಡುವ ಸೂಚನೆಗಳಿಗೆ ಉನ್ಮಾದ ರೋಗಿ ಸುಲಭವಾಗಿ ಈಡಾಗುತ್ತಾನೆ. ಕೆಲವು ಪ್ರಕರಣ ಗಳಲ್ಲಿ ರೋಗಿ ಮಿಕ್ಕವರನ್ನು ಕಾಣುವ ನಿಟ್ಟಿನಲ್ಲಿ ಹಲವೇಳೆ ಲೈಂಗಿಕಾಂಶ ಇರುತ್ತದೆ. ಬೆಡಗು, ಒಯ್ಯಾರವಿದ್ದರೂ, ಸಂಭೋಗದಲ್ಲಿ ಆಸಕ್ತಿ ಇರುವುದಿಲ್ಲ. ಇದರಿಂದಾಗಿ ದಾಂಪತ್ಯ ವಿರಸ ಕಾಣಿಸಿಕೊಳ್ಳುತ್ತದೆ.

ಉನ್ಮಾದ ವ್ಯಕ್ತಿತ್ವವನ್ನು ಚಿಕ್ಕಂದಿನಲ್ಲೇ ಗುರುತಿಸಬಹುದು. ಆದರೆ ತೀರ ಎಳೆಯರಲ್ಲಿ ಕಾಣಬೇಕಾದರೆ ಅದು ಬಲು ಜೋರಾಗಿರಬೇಕು. ಉನ್ಮಾದ ರೋಗಿಯ ನಡೆವಳಿಕೆಯ ಕೆಲವು ಉಗ್ರ ರೂಪಗಳು ನೆರೆಯದ ಹುಡುಗಿಯರಲ್ಲಿ ಕಂಡಿವೆ.

ರೋಗಿಗೆ ಗೊತ್ತಾಗಿಯೋ ಅಥವಾ ಗೊತ್ತಾಗದೆಯೋ ಒದಗುವಂಥ ಭಾವಾವೇಶದ ಸಂದರ್ಭವೇ ಉನ್ಮಾದದ ಲಕ್ಷಣಗಳು ಹೊರಗಾಣಲು ಕಾರಣವಾಗುವ ಅಂಶ. ಒಂದು ಪೆಟ್ಟು ಗಾಯದಿಂದಾದ ತೊಂದರೆ, ಇದಕ್ಕಾಗಿ ಪರಿಹಾರ ಕೇಳಿಕೆ ಇವು ಅರೆಬರೆ ಅನುಕೂಲದ ಸರಳ ಉದಾಹರಣೆ. ಉನ್ಮಾದ ಪ್ರಕಟವಾಗಲು ಅದು ಒಳ್ಳೆಯ ಅವಕಾಶ. ವೈದ್ಯಪರೀಕ್ಷೆ ಮೇಲಿಂದ ಮೇಲೆ ಆದರಂತೂ ಇನ್ನೂ ಜೋರು. ಹೋರಾಟದ ಕಣದಲ್ಲಿರುವ ಸೈನಿಕರಲ್ಲಿ ಉನ್ಮಾದ ಸಾಮಾನ್ಯ.

ಉನ್ಮಾದ ಪೂರ್ತಿಯಾಗಿ ಒಂದು ಮನೋರೋಗ. ಕೆಲವು ಬಗೆಯ ದೈಹಿಕ ರೋಗಗ ಳೊಂದಿಗೆ ಕೆಲವು ವೇಳೆ ಉನ್ಮಾದ ಕಾಣಿಸಿಕೊಳ್ಳುವುದಾದರೂ ಯಾವಾಗಲೂ ಹೀಗಾಗದು. ಇದು ಆಗ ಕಾಣಿಸಿಕೊಳ್ಳಬೇಕಾದರೂ ಹಿನ್ನೆಲೆಯಲ್ಲಿ ಮನೋರೋಗ ಇದ್ದೇ ಇರುತ್ತದೆ. ಚಿಕ್ಕಂದಿನಲ್ಲಿ ಪಾಲನೆ ಚೆನ್ನಾಗಿಲ್ಲದ್ದು ಕಾರಣವಾಗಿರುತ್ತದೆ. ಚಾಲಕ ಇಲ್ಲವೇ ಸಂವೇದನ ವಾಹಕವಾಗಿ ತೋರುವ ಉನ್ಮಾದದ ಲಕ್ಷಣಗಳು, ರೋಗಿ ತನ್ನ ಅನುಭವವನ್ನು ಎಷ್ಟು ಸುಲಭವಾಗಿ ಮೈಯಲ್ಲಿನ ಸಂಕೇತಗಳಾಗಿ ಮಾರ್ಪಡಿಸುವನೆಂಬುದನ್ನು ತೋರಿಸುತ್ತವೆ. ಅವೇ ರೋಗಲಕ್ಷಣಗಳಾಗಿ ಹೊರದೋರುತ್ತವೆ. ಉನ್ಮಾದದಲ್ಲಿ ಈ ಪರಿವರ್ತನ ಗುಣ ಇರುವುದು ಮುಖ್ಯವಲ್ಲ. ಸುಲಭವಾಗಿ ಈಡಾಗುವುದೂ ಜೋರಾಗುವುದೂ ಮುಖ್ಯ. ಇದು ನೋವಿನ ರೋಗವಾಗಿ ಮೈಯಲ್ಲಿ ಕಾಣಿಸಿಕೊಳ್ಳಬಹುದು. ಇದು ರೋಗಿಗೂ ಬೇಡವಾದದ್ದು. ಆದ್ದರಿಂದಲೇ ರೋಗಿ ಇದನ್ನು ಕೊಂಚಮಟ್ಟಿಗೆ ಎಚ್ಚರಕ್ಕೆ ತಾಕದಂತೆ ನೋಡಿಕೊಳ್ಳುತ್ತಾನೆ. ಮೈಯಲ್ಲಿ ಸಂಕೇತವಾಗಿ ಕಂಡದ್ದನ್ನು ಅನುಭವಿಸಬಹುದು, ಇದು ಬೇಕೆನಿಸಲೂಬಹುದು. ಆದರೆ ಇದು ಶಾರೀರಿಕವಾಗಿಯೇ ಪ್ರಕಟವಾಗಬೇಕಿಲ್ಲ. ಎಂದಿನದೋ ನೋವಿನ ಅನುಭವಗಳನ್ನು ಎಚ್ಚರದ ಮನಕ್ಕೆ ತರಗೊಡದ ಮನೋವೈಕಲ್ಯವಾಗಿಯೂ (ಸೈಕೋಸಿಸ್), ಮರೆವೆಚ್ಚರವಾಗಿಯೂ (ಫ್ಯೂಗ್) ಇದು ಪರಿಣಾಮ ಹೊಂದಬಹುದು.

ಇದು ಯಾವ ರೂಪ ತಳೆಯುತ್ತದೆಯೆಂಬುದಕ್ಕೆ ಅನಂತರ ಸಂಭವಿಸುವ ಘಟನೆಗಳೂ ಕೊಂಚಮಟ್ಟಿಗೆ ಕಾರಣ. ಮನೋರೋಗದ ಹಿನ್ನೆಲೆ ಗೊತ್ತಾಗದಿದ್ದರೆ ರೋಗಿಯ ಚಿಕಿತ್ಸೆ ಬಲು ಕಷ್ಟ.

**ಇತಿಹಾಸ:** ಈ ರೋಗದ ವಿಚಾರದಲ್ಲಿ, ನಮಗೆ ದೊರೆಯುವ ಅತ್ಯಂತ ಪ್ರಾಚೀನ ವೈದ್ಯಕೀಯ ಅಭಿಪ್ರಾಯವೆಂದರೆ ಪ್ರಸಿದ್ಧ ಗ್ರೀಕ್ ವೈದ್ಯ ಹಿಪಾಕ್ರಟಿಸ್‌ನದು. ಈ ರೋಗ ಹೆಂಗಸರಲ್ಲಿ, ಅದರಲ್ಲಿಯೂ ನವಯುವತಿಯರಲ್ಲಿ ಉಂಟಾಗುತ್ತದೆ ಎಂದು ಆತ ನಂಬಿದ್ದ. ಮಗುವನ್ನು ಪಡೆಯಬೇಕೆಂಬ ಬಯಕೆ ಭಂಗವಾದಾಗ, ಗರ್ಭಕೋಶ ದೇಹದ ನಾನಾ ಭಾಗಗಳಲ್ಲಿ ಅಲೆಯುವುದರಿಂದ ಈ ರೋಗ ಸಂಭವಿಸುತ್ತದೆಂಬುದು ಆತನ ಅಭಿಪ್ರಾಯ. ಗರ್ಭಕೋಶ ಗಂಟಲಿನಲ್ಲಿ ಸಂಚರಿಸುವಾಗ ಕಂಠ ಬಿಗಿಯುವ ವೇದನೆಯೂ ಗುಲ್ಮದಲ್ಲಿ ಪ್ರವೇಶಿಸಿದಾಗ ಕೋಪೋದ್ರೇಕಗಳ ಅನುಭವವೂ ಹೀಗೆ ನಾನಾ ವಿಕಾರಗಳು ಉಂಟಾಗುತ್ತವೆ ಎಂಬುದು ಅಂದಿನ ನಂಬಿಕೆ. ಈ ರೋಗಕ್ಕೆ ಮದುವೆಯೇ ಸೂಕ್ತ ಪರಿಹಾರವೆಂದು ಹಿಪಾಕ್ರಟಿಸ್ ಪ್ರತಿಪಾದಿಸಿದ್ದ. ಅಲ್ಲದೆ ಈ ರೋಗದಲ್ಲಿ ಪರಿಸರ ಹಾಗೂ ಲೈಂಗಿಕ ತೊಂದರೆಗಳೂ ಪ್ರಮುಖ ಪಾತ್ರ ವಹಿಸುತ್ತವೆಯೆಂದು ಆತನ ಊಹೆ. ಹಿಪಾಕ್ರಟಿಸನ ಅನಂತರ ಈ ರೋಗದ ಚಿಕಿತ್ಸೆಗೆ ಹೆಚ್ಚು ಗಮನಕೊಟ್ಟ ವೈದ್ಯನೆಂದರೆ ಮೆಸ್ಮರ್. ಈ ರೋಗದ ಸೂಕ್ತ ಚಿಕಿತ್ಸೆಗೆ ನಾಂದಿ ಹಾಡಿದ್ದು ಆತನೇ (1766). ಆತ ಅರಿವಿಲ್ಲದೆಯೇ ರೋಗಚಿಕಿತ್ಸೆಯನ್ನು ಆರಂಭಿಸಿದ. ಜೀವ ಅಯಸ್ಕಾಂತತ್ವ ಎಂಬುದು ಆತ ಇದಕ್ಕೆ ಇಟ್ಟ ಹೆಸರು. ಈ ದೃಷ್ಟಿಯಿಂದಲೇ ಆತ ಚಿಕಿತ್ಸಾ ವಿಧಾನವೊಂದನ್ನು ತನ್ನ ರೋಗಿಗಳ ಮೇಲೆ ಪ್ರಯೋಗಿಸಿದ. ಅಯಸ್ಕಾಂತಗಳನ್ನು ರೋಗಿಗಳಿಗೆ ಮುಟ್ಟಿಸಿದಾಗ ಅವುಗಳಿಂದ ಒಂದು ರೀತಿಯ ದ್ರವ ರೋಗಿಗೆ ಪ್ರವಹಿಸಿ ರೋಗವನ್ನು ಗುಣಪಡಿಸುತ್ತದೆ ಎಂಬುದು ಆತನ ನಂಬಿಕೆ. ಮೆಸ್ಮರನ ಅನಂತರ ಈ ವಿಧಾನ ಮೆಸ್ಮರಿಸಂ ಎಂದೇ ಪ್ರಸಿದ್ಧವಾಗಿ, ಅನಂತರ ಇದರ ಹೆಸರು ತಂತು ಸಂಮೋಹನೆ (ನ್ಯೂರೋಹಿಪ್ನಾಸಿಸ್) ಎಂದು ಮಾರ್ಪಾಟಾಗಿ ಕೊನೆಗೆ ಇಂಗ್ಲೆಂಡಿನ ಜೇಮ್ಸ್ ಬ್ರಾಯ್ಡ್ ಕೊಟ್ಟ ಸಂಮೋಹನ ಅಥವಾ ಮೋಹನಿದ್ರೆ (ಹಿಪ್ನಾಸಿಸ್) ಎಂಬ ಹೆಸರಿನಿಂದ ಪ್ರಚಲಿತವಾಯಿತು. ವೈದ್ಯನ ಮಾತುಗಳೂ ಸಂಕೇತಗಳೂ ರೋಗಿಯ ಮನಸ್ಸಿನಲ್ಲಿ ಭಾವಪ್ರೇರಣೆಯನ್ನುಂಟುಮಾಡಿ ರೋಗಿ ಗುಣಮುಖವಾಗುವಂತೆ ಮಾಡುತ್ತವೆ ಎಂದು ಮೊಟ್ಟಮೊದಲು ಪ್ರತಿಪಾದಿಸಿದವನೇ ಜೇಮ್ಸ್ ಬ್ರಾಯ್ಡ್.

ಉನ್ಮಾದ ರೋಗದ ವಿಧಿವತ್ತಾದ ಅಧ್ಯಯನವನ್ನು ಆರಂಭಿಸಿದ ಕೀರ್ತಿ ಅಂದು ಜಗತ್ಪ್ರಸಿದ್ಧ ತಂತು ವೈದ್ಯನೆನಿಸಿದ್ದ ಚಾರ್ಕಾಟ್‌ಗೆ ಸಲ್ಲಬೇಕು. ಆತ ಈ ರೋಗದ ಚಿಕಿತ್ಸೆಗಾಗಿ ಸಂಮೋಹನ ವಿಧಾನವನ್ನು ಪ್ರಭಾವಪೂರ್ಣವಾಗಿ ಉಪಯೋಗಿಸಿದ. ಮುಂದೆ ಸಿಗ್ಮಂಡ್ ಫ್ರಾಯ್ಡ್ ಪ್ರತಿಪಾದಿಸಿದ ಲೈಂಗಿಕತೆಯ ಪ್ರಾಮುಖ್ಯ ಈ ರೋಗದಲ್ಲಿ ಎಷ್ಟೆಂಬುದನ್ನು ಮೊಟ್ಟಮೊದಲಿಗೆ ಮನಗಂಡವನು ಆತನೇ. ಈ ರೋಗನಿದಾನಕಾರ್ಯದಲ್ಲಿ ಅವನ ಸಿದ್ಧಾಂತಗಳಿಗೆ ಹೆಚ್ಚು ಮಹತ್ತ್ವ ಕೊಡಲಾಯಿತು.

ಒಂದನೆಯ ಮಹಾಯುದ್ಧದಲ್ಲಿ ಅನೇಕ ಸೈನಿಕರು ಮನೋವಿಕಾರಗಳಿಗೆ ತುತ್ತಾದರು. ಆ ರೋಗಿಗಳ ಅಧ್ಯಯನದಿಂದ ಅತ್ಯಂತ ಪ್ರಮುಖವಾದ ಒಂದು ಸತ್ಯ ಸ್ಥಾಪಿತವಾಯಿತು. ಈ ರೋಗ ಹೆಂಗಸರಿಗೆ ಮಾತ್ರ ಮೀಸಲಾಗಿರದೆ, ಗಂಡಸರಲ್ಲಿಯೂ ಉಂಟಾಗುತ್ತದೆ ಎಂಬುದೇ ಆ ಸತ್ಯ. ಆಧುನಿಕ ಮನೋವೈದ್ಯಕೀಯ ಕ್ಷೇತ್ರದಲ್ಲಿ, ಉನ್ಮಾದ ರೋಗವನ್ನು ಅನೇಕ ಮನೋವಿಕಾರಗಳ ಒಂದು ಸಮೂಹವೆಂದು (ಸಿಂಡ್ರೋಮಾ) ಪರಿಗಣಿಸಲಾಗಿದೆ. ಅಲ್ಲದೆ ವಾಸ್ತವಜೀವನದ ಕಷ್ಟ ಕಾರ್ಪಣ್ಯಗಳಿಂದ ತಪ್ಪಿಸಿಕೊಳ್ಳುವ ಯಾವುದೋ ಸುಪ್ತ ಸಂಚಿನಿಂದ ವ್ಯಕ್ತಿಯಲ್ಲಿ ಈ ವರ್ತನಾವಿಕಾರಗಳು ಉಂಟಾಗುತ್ತವೆ ಎಂಬುದು ಇಂದು ಸರ್ವಮಾನ್ಯವಾಗಿದೆ. ಇದರ ಜೊತೆಗೆ, ಉನ್ಮಾದರೋಗಕ್ಕೂ ಲೈಂಗಿಕ ಅತೃಪ್ತಿ ಮತ್ತು ವಿರಸಗಳಿಗೂ ನಿಕಟ ಸಂಬಂಧವಿದೆಯೆಂಬ ಸಿದ್ಧಾಂತಕ್ಕೆ ಅನೇಕರಿಂದ, ಅದರಲ್ಲೂ ಮನೋವಿಶ್ಲೇಷಕರಿಂದ, ಮನ್ನಣೆ ದೊರಕಿದೆ.

**ರೋಗಲಕ್ಷಣಗಳು:** ಈ ರೋಗ ನಾನಾ ವಿಧವಾದ ಹಾಗೂ ಚಿತ್ರವಿಚಿತ್ರವಾದ ವರ್ತನಾವಿಕಾರಗಳ ಒಂದು ಸಮೂಹ. ರೋಗದ ಲಕ್ಷಣಗಳು ದಿಗ್ಭ್ರಮೆ ಹಿಡಿಸುವಂಥವು. ರೋಗಲಕ್ಷಣಗಳಿಗೆ ಶರೀರದಲ್ಲಾಗಲೀ ಮಿದುಳಿನಲ್ಲಾಗಲೀ ನ್ಯೂನತೆ, ಹಾನಿ ಇರುವುದಿಲ್ಲ. ಇವನ್ನು ಸ್ಥೂಲವಾಗಿ ಶಾರೀರಿಕ, ಸಂವೇದನಾತ್ಮಕ ಹಾಗೂ ತೋರಿಕೆಯ ರೋಗಲಕ್ಷಣಗಳೆಂದು ಮೂರು ತೆರನಾಗಿ ವಿಂಗಡಿಸಬಹುದು.

ಶಾರೀರಿಕ: ಇಂದ್ರಿಯಾನುಭವದ ನ್ಯೂನತೆ–ಯಾವುದಾದರೂ ಒಂದು ಇಂದ್ರಿಯ ಅಥವಾ ಇಂದ್ರಿಯದ ಭಾಗ ತನ್ನ ಕ್ರಿಯಾಶಕ್ತಿಯನ್ನು ಕಳೆದುಕೊಳ್ಳಬಹುದು. ಉದಾಹರಣೆಗೆ, ಸ್ಪರ್ಶ, ನೋವು ಅಥವಾ ಶೀತೋಷ್ಣ ಉದ್ದೀಪನಗಳ ಅನುಭವವನ್ನು ಚರ್ಮ ಕಳೆದುಕೊಳ್ಳಬಹುದು. ಅಲ್ಲದೆ ಚರ್ಮಸ್ಫುರಣದಂಥ ಅಸಾಮಾನ್ಯ ವೇದನಾನುಭವಗಳಾಗಬಹುದು. ಇವಲ್ಲದೆ ದೃಷ್ಟಿ, ಶ್ರವಣ, ಘ್ರಾಣ ಹಾಗೂ ರಸನ–ಈ ಇಂದ್ರಿಯಾನುಭವಗಳು ಲೋಪ ಹೊಂದಬಹುದು. ದೃಷ್ಟಿಮಾಂದ್ಯ, ಕುರುಡು ಮತ್ತು ಇತರ ದೃಷ್ಟಿಸಂಬಂಧಿ ಕ್ರಿಯಾಲೋಪಗಳಾಗುವುದೂ ಉಂಟು. ಮಧ್ಯ ವಯಸ್ಸು ಮೀರಿದ ಒಬ್ಬ ಹೆಂಗಸು ತನ್ನ ಘ್ರಾಣಶಕ್ತಿಯನ್ನೇ ಕಳೆದುಕೊಂಡಳು. ಆಕೆಗೆ ಒಬ್ಬನೇ ಮಗನಿದ್ದನೆಂದೂ ಆತ ಅತಿಯಾಗಿ ಕುಡಿದು ಮನೆಗೆ ಬಂದಾಗ ಅತನ ಉಸಿರಿನಲ್ಲಿ ಬರುತ್ತಿದ್ದ ಮದ್ಯದ ವಾಸನೆ ಆಕೆಗೆ ಅಸಹ್ಯಕರವಾಗಿತ್ತೆಂದೂ ಆ ಅಹಿತಕರ ಅನುಭವದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆಕೆಯ ಸುಪ್ತಚೇತನದ ಹಂಚಿಕೆಯ ಪ್ರಕಾರ ಅವಳು ತನ್ನ ಆಘ್ರಾಣಶಕ್ತಿ ಕಳೆದುಕೊಂಡಳೆಂದೂ ಆಮೇಲೆ ನಡೆಸಿದ ಅಧ್ಯಯನದಿಂದ ತಿಳಿದುಬಂತು (ಕೋಲ್‌ಮನ್). ಆದರೆ ಈ ಹಿಂದೆ ಸಾಮಾನ್ಯವಾಗಿ ಉನ್ಮಾದರೋಗದಲ್ಲಿ ಕಂಡುಬರುತ್ತಿದ್ದ ವೇದನಾ ಕ್ಷಮತೆಯ ರೋಗಲಕ್ಷಣಗಳು ಇಂದು ಕಡಿಮೆಯಾಗಿವೆಯೆಂಬುದು ವೇದ್ಯವಾಗಿದೆ. ಬಹುಶಃ ಇದಕ್ಕೆ ವೈದ್ಯಕೀಯ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯೇ ಕಾರಣವಾಗಿರಬಹುದು.

ದೇಹದ ವಿವಿಧ ಭಾಗಗಳಿಗೆ–ತೋಳು, ಕಾಲು, ಮುಖ ಅಥವಾ ಶಬ್ದಾಂಗಗಳಿಗೆ–ಕ್ರಿಯಾತ್ಮಕ (ಫಂಕ್ಷನಲ್) ಪಾರ್ಶ್ವವಾಯು ತಗಲಬಹುದು. ವೇದನಾಕ್ಷಮತೆಯಲ್ಲಿರುವಂತೆಯೇ ಇಲ್ಲೂ ಪಾರ್ಶ್ವವಾಯು ನರವಿಸ್ತರಣೆಗೆ ಅನುಗುಣವಾಗಿರದೆ, ಅಂಗಗಳನ್ನು ಅವಲಂಬಿಸಿರುವುದು ಕಾಣುತ್ತದೆ. ಕೆಲವು ವೇಳೆ, ಪಾರ್ಶ್ವವಾಯು ಒಂದು ಅಂಗದ ಎಲ್ಲ ಕ್ರಿಯೆಗಳಿಗೂ ಸಂಬಂಧಿಸಿರದೆ ಕೇವಲ ಕೆಲವು ಕ್ರಿಯೆಗಳಿಗೆ ಸಂಬಂಧಿಸಿರಬಹುದು. ಒಂದು ಚಲನೆಗೆ ಒಂದು ಸ್ನಾಯು ಬೇಕಿರುವುದು ರೋಗಿಗೆ ಗೊತ್ತಿಲ್ಲವಾದರೆ, ಆಡಿಸಲಾಗದೆಂದು ರೋಗಿ ಹೇಳುತ್ತಿರುವ ಸ್ನಾಯು ಕೂಡ ಸರಿಯಾಗಿ ಇರುವುದೆಂದು ಕೆಲವು ಉಪಾಯಗಳಿಂದ ತೋರಿಸಬಹುದು. ಮೈಭಂಗಿ ಹುಚ್ಚಾ ಪಟ್ಟೆ ಸೊಟ್ಟನಾಗಿ ಇರಬಹುದು. ಕಣ್ಣು, ನಾಲಗೆಗಳನ್ನು ಸೊಟ್ಟವಾಗಿ ಇಟ್ಟುಕೊಳ್ಳಬಹುದು. ಕಾಲುಗಳ ನಡೆಯುವ ಕ್ರಿಯೆ ಸ್ತಬ್ಧವಾಗಿ, ನೃತ್ಯಮಾಡುವಾಗ ಸರಿಯಾಗಿರಬಹುದು. ಅದರಂತೆಯೇ ಕೈಯಿಂದ ಬರೆಯಲು ಆಗದಿದ್ದರೂ ಇತರ ಕೆಲಸ ಮಾಡಲು ಸಾಧ್ಯವಾಗಬಹುದು. ಯಾವುದೋ ಸುಪ್ತ ಅಭಿಪ್ರೇರಣೆಯಿಂದ ಪಾರ್ಶ್ವವಾಯು ಉಂಟಾದುದೆಂಬುದನ್ನು ಈ ಲಕ್ಷಣ ಸ್ಪಷ್ಟವಾಗಿ ಸೂಚಿಸುತ್ತದೆ. ಕೆಲವು ವೇಳೆ, ಆಕಸ್ಮಿಕಗಳು ರೋಗಿಗಳನ್ನು ಈ ವಿಕಾರಗಳಿಂದ ಉಳಿಸಬಹುದು. ಅನೇಕ ದಿನಗಳಿಂದ ಪಾರ್ಶ್ವವಾಯು ಪೀಡಿತನಾಗಿ ಬಿದ್ದಿದ್ದ ಒಬ್ಬ ರೋಗಿ ಬೆಂಕಿಯ ಅನಾಹುತದಿಂದ ಪಾರಾಗಲು ಎದ್ದು ಓಡಿದ. ಆ ಘಟನೆಯ ಅನಂತರ ಆತನ ಪಾರ್ಶ್ವವಾಯು ಮಾಯವಾಯಿತು. ಕ್ರಿಯಾತ್ಮಕ ಪಾರ್ಶ್ವವಾಯುವಿನೊಂದಿಗೆ, ಇಲ್ಲಿ ಹೆಸರಿಸಬಹುದಾದ ಇತರ ಕೆಲವು ಪ್ರಮುಖ ಚಾಲಕವಿಕೃತಿಗಳೆಂದರೆ–ಸ್ನಾಯುಸ್ಪಂದನ (ಟಿಕ್), ಕಂಪನ (ಟ್ರೆಮರ್), ಧ್ವನಿ ಹೊರಡದಿರುವುದು (ಎಫೋನಿಯ), ಉಗ್ಗು (ಸ್ಟಟರಿಂಗ್), ಮೂಕತನ (ಮ್ಯೂಟಿಸಂ) ಮತ್ತು ಮೂರ್ಛೆ (ಫೇಂಟಿಂಗ್) ಕ್ಷೀಣಸ್ವರದ ರೋಗಿಯ ದನಿ ಪಿಸುಮಾತಿಗೆ ಇಳಿಯಬಹುದು. ಕೊನೆಗೆ ಸದ್ದೇ ಬರದಂತಾಗಬಹುದು. ಇಷ್ಟಾದರೂ ಕೆಮ್ಮಿದರೆ ಎಂದಿನಂತೆ ಸದ್ದಾಗುತ್ತದೆ. ಬಹಳ ಸೆಟೆತುಕೊಂಡು ಪಾರ್ಶ್ವವಾಯು ಅನುಭವಿಸುತ್ತಲೇ ಇದ್ದರೆ, ಆ ಅಂಗ ಅಥವಾ ಅವಯವ ಪುಷ್ಟಿಗೆಟ್ಟು ಸಣ್ಣಗಾಗುವುದೂ ಕೀಲು ಕಟ್ಟುವುದೂ ಊದಿಕೊಳ್ಳುವುದೂ ಹೆಚ್ಚೇನಲ್ಲ. ಯುದ್ಧನಿರತ ಸೈನಿಕರಲ್ಲಿ ಕಂಡಂತೆ ನಡುಕವೂ ಜೋರಾಗಿರಬಹುದು. ರೋಗಿಯ ಗಮನವನ್ನು ಬೇರೆಡೆ ಸೆಳೆದರೆ ನಡುಕ ಕೆಲವೇಳೆ ನಿಲ್ಲುತ್ತದೆ.

ಉನ್ಮಾದದಲ್ಲಿ, ಸೆಳವುಗಳೂ (ಫಿಟ್ಸ್) ಸಾಮಾನ್ಯ. ಸುಮ್ಮನೆ ಕೊಂಚ ಮೈ ಮರೆತಂತೆ ಆಗುವುದರಿಂದ ಹಿಡಿದು, ಮಕ್ಕಳು ರಚ್ಚೆ ಹಿಡಿದಂತೆ ಆಡುವ ತನಕ ಎಲ್ಲ ಬಗೆಗಳನ್ನೂ ಕಾಣಬಹುದು. ರೋಗಿಯ ಹಾವಭಾವಗಳಿಂದಲೇ ಕೆಲವೇಳೆ ಕಾಮ ಕೆರಳಿರುವುದನ್ನು ಗುರುತಿಸಬಹುದು. ಕೆಲವೇಳೆ ನಿಜವಾದ ಮೊಲ್ಲಾಗರವನ್ನೇ (ಅಪಸ್ಮಾರ) ಹೋಲುವಷ್ಟು ಜೋರಾಗಿರಬಹುದು. ಸೆಳವು ವಿಪರೀತ ಆಗಿರುವ ಹೊತ್ತಿನಲ್ಲಿ ವಿದ್ಯುನ್ಮಿದುಳ ಚಿತ್ರ (ಎಲೆಕ್ಟ್ರೋಎನ್ಸೆಫೆಲೊಗ್ರಾಫ್) ತೆಗೆದು ನೋಡಿದರೂ ಯಾವ ಬದಲಾವಣೆಗಳೂ ಕಾಣುವುದಿಲ್ಲ. ನೋವು, ಸಿಟ್ಟು, ಚೋದನೆಗಳಿಂದ ಹಲವೇಳೆ ಸೆಳವು ಹುಟ್ಟಬಹುದು. ರೋಗಿಯ ಹಾವಭಾವಗಳಿಂದಲೇ ಕೆಲವೇಳೆ ಕಾಮ ಕೆರಳಿರುವುದನ್ನು ಗುರುತಿಸಬಹುದು. ಸೆಳವು ಎಷ್ಟೇ ಜೋರಾಗಿರಲಿ, ರೋಗಿ ತನಗೆ ಸ್ವಲ್ಪವೂ ಅಪಾಯವಾಗದಂತೆ ನೋಡಿಕೊಳ್ಳುವನು. ನಿದ್ದೆ ಮಾಡುವಾಗಲೂ ಒಂಟಿಯಾಗಿ ಇರುವಾಗಲೂ ಸೆಳವು ಬರುವುದಿಲ್ಲ. ಸೆಳವು ಕಾಡಿಸುವ ಹೊತ್ತೂ ಜೋರೂ ಸುತ್ತಲೂ ನೆರೆದಿರುವವರನ್ನು ಅವಲಂಬಿಸಿದೆ. ಸೆಳವಿನ ಅಲುಗಾಟವನ್ನು ತಡೆಯಲು ಕೈ ಹಾಕಿದಷ್ಟೂ ಒದರಾಟ, ಕೂಗಾಟ, ಮೈಬಿಗಿತ, ಏದುಸಿರು–ಇವು ಇನ್ನೂ ಹೆಚ್ಚುತ್ತಾ ಹೋಗುತ್ತವೆ. ಅದು ಕೊನೆಗೆ ಸರಕ್ಕನೆ ನಿಂತುಬಿಡಬಹುದು. ತಲೆಯಲ್ಲಿ ಆಣಿ ಹೊಡೆದ ನೋವು, ಗಂಟಲಲ್ಲಿ ವಸ್ತು ಸಿಕ್ಕಿಕೊಂಡಂತಹ ಅನುಭವ, ಕುರುಡುತನ, ಕಿವುಡುತನ, ಅರಿವಳಿಕೆ (ಅನೀಸ್ತೀಸಿಯ)–ಇವು ಅರಿವಿನ ಇಲ್ಲವೇ ಇಂದ್ರಿಯಗ್ರಾಹ್ಯವಾದ ಲಕ್ಷಣಗಳು. ಮೊದಲಿನವು ಎರಡೂ ಕಳವಳ ಇರುವ ಮನೋರೋಗಗಳಲ್ಲಿ ಸಾಮಾನ್ಯವಾದ್ದರಿಂದ ಇಲ್ಲಿ ಅಷ್ಟು ಮುಖ್ಯವಲ್ಲ. ಉನ್ಮಾದ ರೋಗಿ ನುಂಗಲು ಕಷ್ಟವೆಂದು ಹೇಳಿದರೆ ತಿನ್ನಲು ಇಷ್ಟವಿಲ್ಲದ್ದರ ಸೂಚನೆ. ರೋಗಿ ಕಂಡಿರುವ ಯಾವ ತೆರನ ಚರ್ಮದಲ್ಲಿ ಸ್ಪರ್ಶದ ತೊಂದರೆ ತೋರಬಹುದು. ಕೆಲವೆಡೆ ಮುಟ್ಟಿದರೆ, ಗಿಂಡಿದರೆ, ಸುಟ್ಟರೆ, ಸೂಜಿ ಚುಚ್ಚಿದರೂ ಗೊತ್ತಾಗದು. ಆದರೆ ವೈದ್ಯರಿಗೆ ಗೊತ್ತಾಗುವ ಯಾವ ನರದ ರೋಗವನ್ನೂ ಇದು ತೋರದು. ರೋಗಿಯ ಈ ಉನ್ಮಾದ ಲಕ್ಷಣವನ್ನು ಅನುಭವೀ ವೈದ್ಯ ಚೆನ್ನಾಗಿ ಪತ್ತೆ ಹಚ್ಚಬಲ್ಲ. ರೋಗ ನಟನೆ–ಸುಳ್ಳು ರೋಗಲಕ್ಷಣಕ್ಕೂ (ಮೆಲಿಂಗರಿಂಗ್) ಉನ್ಮಾದಕ್ಕೂ ಇರುವ ವ್ಯತ್ಯಾಸ ತಿಳಿಯಬೇಕು. ಮೆಲರಿಂಗ್‌ನಲ್ಲಿ ತಾನು ಮಾಡುತ್ತಿರುವ ಸೋಗಿನ ತಿಳಿವಳಿಕೆ ಚೆನ್ನಾಗಿರುತ್ತದೆ. ಉನ್ಮಾದ ರೋಗಿ ತೋರುವ ಕುರುಡುತನ, ಕಿವುಡುತನ ಮತ್ತಿತರ ತೋರಿಕೆಗಳ ಪರೀಕ್ಷೆಗಳನ್ನು ವೈದ್ಯನ ಹೆಚ್ಚಿನ ತಿಳಿವಳಿಕೆಯಿಂದ ಯೋಜಿಸಬೇಕು.

ಸಂವೇದನಾತ್ಮಕ ಲಕ್ಷಣಗಳು: ಮರವು–ಇದರಲ್ಲಿ ರೋಗಿ ತನ್ನ ಹೆಸರು, ಸಂಬಂಧಿಗಳು ಮತ್ತು ತನ್ನ ಹಿಂದಿನ ಜೀವನಘಟನೆಗಳು ಇವೆಲ್ಲವನ್ನೂ ಮರೆತು ಬಿಡುತ್ತಾನೆ. ಆದರೆ ಇಲ್ಲಿ ಸ್ಮೃತಿಲೋಪ ಪೂರ್ಣವಲ್ಲ. ರೋಗಿ ತನ್ನ ಪದಸಂಪತ್ತು, ಸಾಮಾಜಿಕ ನಡೆನುಡಿಗಳು, ತನಗೆ ಸಂಬಂಧಿಸಿರದ ವಿಷಯಗಳ ನೆನಪು–ಇವುಗಳನ್ನು ಹೊಂದಿರುತ್ತಾನೆ. ಹೀಗಾಗಿ, ಆತ ಆರೋಗ್ಯವಂತನಾಗಿದ್ದಾನೆಂಬ ಭಾವನೆ ಇತರರಲ್ಲಿ ಮೂಡುತ್ತದೆ. ಸಾಮಾನ್ಯವಾಗಿ ಉನ್ಮಾದದ ಮರೆವು, ಯಾತನಾಮಯವಾದ ಹಾಗೂ ದುರದೃಷ್ಟಕರವಾದ ಪ್ರೇಮ ಪ್ರಸಂಗಗಳು, ಕೌಟುಂಬಿಕ ಕಲಹಗಳು, ಆರ್ಥಿಕ ಮುಗ್ಗಟ್ಟುಗಳು ಮುಂತಾದ ಸನ್ನಿವೇಶಗಳಿಂದ ಹೊರಹೊಮ್ಮುತ್ತವೆ. ವಿವಾಹಿತ ಮಹಿಳೆಯೊಬ್ಬಳು ವೈವಾಹಿಕ ಜೀವನದ ಅತೃಪ್ತಿಯಿಂದಲೂ ಮತ್ತೊಬ್ಬನಲ್ಲಿ ಆಕೆ ಇಟ್ಟಿದ್ದ ಪ್ರೀತಿಯಿಂದಲೂ ಮನೋಸಂಕ್ಷೋಭೆಗೆ ಒಳಗಾಗಿ ತನ್ನ ಸ್ಮೃತಿ ಕಳೆದುಕೊಂಡ ಸಂಗತಿಯೊಂದನ್ನು ಕಾನ್‌ಸಾರ್ ನಿರೂಪಿಸಿದ್ದಾನೆ.

ನಿದ್ರಾಸಂಚಾರ: ಹಲವು ವೇಳೆ ವಿಸ್ಮೃತಿ ವಿಕಾರಗಳು ಮೂಲವ್ಯಕ್ತಿತ್ವಕ್ಕೆ ಅರಿವಿಲ್ಲದಂತೆಯೇ ಸ್ವತಂತ್ರವಾಗಿ ಕಾರ್ಯಶೀಲವಾಗುವುದನ್ನು ನಿದ್ರಾಸಂಚಾರದಲ್ಲಿ ಕಾಣಬಹುದು. ಮೂಲ ವ್ಯಕ್ತಿತ್ವ ನಿಷ್ಕ್ರಿಯವಾಗಿ, ಈ ಎರಡನೆಯ ವ್ಯವಸ್ಥೆ ಜಾಗೃತವಾಗಿ, ಅನೇಕ ಕಾರ್ಯ ನಿರ್ವಹಿಸುತ್ತದೆ. ನಿದ್ರಾಸಂಚಾರಿ ಸಾಮಾನ್ಯವಾಗಿ, ತನ್ನ ಕಣ್ಣುಗಳನ್ನು ಅರೆತೆರೆದು ಅಥವಾ ಪೂರ್ಣವಾಗಿ ತೆರೆದು ನಡೆಯುತ್ತಿರುತ್ತಾನೆ. ಅಥವಾ ಇತರ ಕಾರ್ಯಗಳಲ್ಲಿ ತೊಡಗಿರುತ್ತಾನೆ. ನಿದ್ರೆ ಎಚ್ಚರಗಳ ನಡುವಣ ಮನಸ್ಥಿತಿ ಆತನಲ್ಲಿರುತ್ತದೆ, ನಿದ್ರಾಸಂಚಾರದ ಅವಧಿಯಲ್ಲಿ ತಾನು ಮಾಡಿದ ಕಾರ್ಯಗಳು ಎಚ್ಚರಗೊಂಡ ಅನಂತರ ಅವನ ನೆನಪಿನಲ್ಲಿರುವುದಿಲ್ಲ. ಯಾವಾಗಲೂ ಪೂರ್ಣಸಮವಸ್ತ್ರ ಧರಿಸಿ ಹಡಗಿನ ಅಟ್ಟದ ಮೇಲೆ ನಡೆಯುತ್ತಿದ್ದ ನಿದ್ರಾಸಂಚಾರಿ ನೌಕಾಧಿಕಾರಿಯೊಬ್ಬನ ಪ್ರಸಂಗವನ್ನು ರಾಸ್ ನಿರೂಪಿಸಿದ್ದಾನೆ.

ಮರೆವೆಚ್ಚರ (ಪಲಾಯನ ವಿಕೃತಿ–ಫ್ಯೂಗ್): ಈ ರೋಗಪೀಡಿತ ವ್ಯಕ್ತಿ ಹಲವು ದಿನ ಅಥವಾ ತಿಂಗಳುಗಳ ಕಾಲ ತನ್ನತನವನ್ನು ಮರೆತು, ಹೊಸ ಹೆಸರನ್ನಿಟ್ಟುಕೊಂಡು ಮನೆಯಿಂದ ದೂರ ಎಲ್ಲಿಯೋ ಅಲೆಯುತ್ತಿರುತ್ತಾನೆ. ಆಗಂತುಕರೊಡನೆ ವಾಸಿಸುವುದರ ಜೊತೆಗೆ, ಆತ ತನ್ನ ಮೂಲಸ್ವಭಾವಕ್ಕೆ ವಿರುದ್ಧವಾದ ಅಭಿರುಚಿ ಬೆಳೆಸಿಕೊಳ್ಳುತ್ತಾನೆ. ಇದಕ್ಕೆ ಸೊಗಸಾದ ಉದಾಹರಣೆಯೆಂದರೆ, ಜೇಮ್ಸ್ ನಿರೂಪಿಸಿರುವ ರೆವರೆಂಡ್ ಎ. ಬಾರ್ನೆಯ ಪ್ರಸಂಗ. ಆತ ತನ್ನನ್ನು ಸಂಪೂರ್ಣ ಮರೆತು, ಎರಡು ತಿಂಗಳ ಕಾಲ, ಎ.ಜೆ. ಬ್ರೌನ್ ಎಂಬ ಹೆಸರಿನಿಂದ ಬೇರೆಲ್ಲೋ ವಾಸವಾಗಿದ್ದ. ಪಲಾಯನ ವಿಕೃತಿಯಿರುವ ರೋಗಿಗಳ ಮನಸ್ಸು ಗೊಂದಲಮಯವಾಗಿದ್ದು ಕೆಲವು ಸಲ ಅವರು ಅಪರಾಧಗಳನ್ನೂ ಮಾಡಬಹುದು.

ದ್ವಿಮುಖ ವ್ಯಕ್ತಿತ್ವ : ಈ ಮನೋವಿಕಾರದಲ್ಲಿ ಎರಡು ವಿಧವಾದ ಪ್ರಜ್ಞಾಸ್ಥಿತಿಗಳು (ಮೂಲ ಮತ್ತು ಉತ್ತರ) ಒಂದೇ ವ್ಯಕ್ತಿಯಲ್ಲಿ ಮನೆಮಾಡಿಕೊಂಡಿರುತ್ತವೆ. ಅವು ಒಂದಾದ ಮೇಲೊಂದರಂತೆ ವ್ಯಕ್ತಿಯ ಜಾಗ್ರತ ಜೀವನವನ್ನು ನಿಯಂತ್ರಿಸುತ್ತವೆ. ಇವೆರಡು ಪ್ರಜ್ಞಾಸ್ಥಿತಿಗಳೂ ಎರಡು ವಿಭಿನ್ನ ವ್ಯಕ್ತಿತ್ವಗಳನ್ನು ಹೋಲುತ್ತವೆ. ಅನೇಕವೇಳೆ, ಇವೆರಡರಲ್ಲಿ ಪರಸ್ಪರ ವಿಸ್ಮೃತಿ ಇರುತ್ತದೆ. ಕೆಲವು ವೇಳೆ ಎರಡನೆಯ ವ್ಯಕ್ತಿತ್ವಕ್ಕೆ ಮೊದಲನೆಯದರ ಅನುಭವಗಳ ನೆನಪಿರಲು ಸಾಧ್ಯ. ಆದರೆ ಮೊದಲನೆಯ ವ್ಯಕ್ತಿತ್ವಕ್ಕೆ ಎರಡನೆಯದರ ಅಸ್ತಿತ್ವವೇ ತಿಳಿದಿರುವುದಿಲ್ಲ. ಆರ್.ಎಲ್. ಸ್ಟೀವನ್‌ಸನ್‌ನ ಡಾಕ್ಟರ್ ಜಕಿಲ್ ಅಂಡ್ ಮಿಸ್ಟರ್ ಹೈಡ್ ಕಾದಂಬರಿ ದ್ವಿಮುಖ ವ್ಯಕ್ತಿತ್ವದ ಲಕ್ಷಣಗಳನ್ನು ಸೊಗಸಾಗಿ ನಿರೂಪಿಸುತ್ತದೆ. ಈ ಮನೋವಿಕಾರಕ್ಕೆ ಸೂಕ್ತವಾದ ವೈದ್ಯಕೀಯ ಉದಾಹರಣೆಯೆಂದರೆ, ಗಾಡರ್ಡ್ ನಿರೂಪಿಸಿರುವ ನಾರ್ಮ–ಪಾಲಿಯ ಸಂಗತಿ. ಇದು ಒಬ್ಬ ಹುಡುಗಿಯಲ್ಲಿ ವ್ಯಕ್ತವಾಗುತ್ತಿದ್ದ ಎರಡು ಪರಸ್ಪರ ವಿರುದ್ಧ ಪ್ರಜ್ಞಾಸ್ಥಿತಿಗಳಿಗೆ ಸಂಬಂಧಿಸಿದ್ದು. ಮೂಲ ವ್ಯಕ್ತಿತ್ವವಾದ ನಾರ್ಮಳಲ್ಲಿ ಸಂಯಮ, ವಿನಯಶೀಲತೆ, ತೀಕ್ಷ್ಣಬುದ್ಧಿ–ಇವು ಪ್ರಮುಖ ಲಕ್ಷಣಗಳಾಗಿದ್ದರೆ, ಎರಡನೆಯ ವ್ಯಕ್ತಿತ್ವವಾದ ಪಾಲಿಯಲ್ಲಿ ತುಂಟತನ ಮತ್ತು ಸ್ವೇಚ್ಛಾಚಾರ ಪ್ರಮುಖ ಲಕ್ಷಣಗಳಾಗಿದ್ದವು. ಶ್ರೀಮತಿ ಆರ್ಯಾಂಬ ಪಟ್ಟಾಭಿ ಅವರ ಎರಡು ಮುಖ ಕಾದಂಬರಿ/ಯಲ್ಲಿ ಈ ದ್ವಿಮುಖ ವ್ಯಕ್ತಿತ್ವವನ್ನು ಚಿತ್ರಿಸಲಾಗಿದೆ.

ಬಹುಮುಖ ವ್ಯಕ್ತಿತ್ವ : ಇದು ನಿಜವಾಗಿಯೂ ದಿಗ್ಭ್ರಮೆ ಹಿಡಿಸುವಂಥ ಮನೋವಿಕಾರ. ಒಂದೇ ವ್ಯಕ್ತಿಯಲ್ಲಿ ಪರಸ್ಪರ ವಿಭಿನ್ನವಾದ ಹಲವು ವ್ಯಕ್ತಿತ್ವಗಳು ಪ್ರಕಟವಾಗುತ್ತವೆ. ಮೂರು ಅಥವಾ ಅದಕ್ಕೂ ಹೆಚ್ಚು ಪ್ರಜ್ಞಾವಸ್ಥೆಗಳು ಯಾವುದೋ ಒಂದು ನಿಯಮದ ಪ್ರಕಾರ ಒಂದಾದ ಮೇಲೊಂದರಂತೆ ವ್ಯಕ್ತಿಯ ಜಾಗೃತ ಜೀವನದ ಮೇಲೆ ಅಧಿಕಾರ ನಡೆಸುತ್ತವೆ ಎಂಬುದು ಸೋಜಿಗವೆನಿಸಿದರೂ ಸತ್ಯಸಂಗತಿ. ಮಾರ್ಟನ್ ಪ್ರಿನ್ಸ್ ವಿವರಿಸಿರುವ ಬ್ಯೂಚ್ಯಾಂಪಳ ಪ್ರಸಂಗದಲ್ಲಿ ಮೂರು ವ್ಯಕ್ತಿತ್ವಗಳ––ಸಂನ್ಯಾಸಿನಿ, ಹೆಂಗಸು, ದೆವ್ವ–ವಿವರವಾದ ನಿರೂಪಣೆ ಬರುತ್ತದೆ. ಮೂಲವ್ಯಕ್ತಿತ್ವ ಸಂನ್ಯಾಸಿನಿಯದು. ಈಕೆ ಆದರ್ಶಪ್ರಾಯಳಾದ ಪ್ರಜ್ಞಾಶೀಲೆ, ಆದರೆ ಸ್ವಲ್ಪ ನೊಂದಂತಿದ್ದ ಮಹಿಳೆ. ಎರಡನೆಯ ವ್ಯಕ್ತಿತ್ವ ಹೆಂಗಸಿನದು. ಈಕೆ ಕೋಪೋದ್ರೇಕಗಳಿಂದ ಕೂಡಿ, ಸ್ವಾರ್ಥ ಮತ್ತು ಅತಿಯಾಸೆ ಹೊಂದಿದ್ದ ಒಬ್ಬ ಸಾಮಾನ್ಯೆ. ಮೂರನೆಯ ವ್ಯಕ್ತಿತ್ವ ದೆವ್ವದ್ದು. ಇದಕ್ಕೆ ಸ್ಯಾಲಿ ಎಂಬ ಹೆಸರೂ ಇತ್ತು. ಅದು ಅನೀತಿಯಿಂದ ಕೂಡಿ, ಇತರ ಎರಡು ವ್ಯಕ್ತಿತ್ವಗಳ ಮೇಲೆ ತಂತ್ರ ಹೂಡುತ್ತಿದ್ದ ಪಿಶಾಚಿ. ಈ ಮನೋವಿಕಾರಕ್ಕೆ ಮತ್ತೊಂದು ಅತ್ಯಾಕರ್ಷಕ ಉದಾಹರಣೆಯೆಂದರೆ, ತೈಗ್‌ಪೆನ್ ಮತ್ತು ಕ್ಲೆಕ್ಲೆ ನಿರೂಪಿಸಿರುವ ಇವಳ ನಾಲ್ಕು ಮುಖಗಳು ಎಂಬ ಸಂಗತಿ. ಇದರಲ್ಲಿ ಮೂಲ ವ್ಯಕ್ತಿತ್ವ ಈವ್ ವೈಟ್. ಎರಡನೆಯ ಮತ್ತು ಮೂರನೆಯ ವ್ಯಕ್ತಿತ್ವಗಳು ಕ್ರಮವಾಗಿ ಈವ್‌ಬ್ಲಾಕ್ ಮತ್ತು ಜೇನ್. ನಾಲ್ಕನೆಯ ವ್ಯಕ್ತಿತ್ವ ನಿರಂತರ ಚಿಕಿತ್ಸೆಯಿಂದ ಹೆಚ್ಚು ಪಕ್ವವಾಗಿ ಹೊರಬಂದ ಈವ್‌ಲಿನ್. ಈ ಪ್ರಸಂಗ ಚಲನಚಿತ್ರದ ರೂಪದಲ್ಲೂ ಪ್ರಕಟವಾಗಿದೆ. ಏನೇ ಇರಲಿ ಇದು ಅಪರೂಪದ ಉನ್ಮಾದ.

ತೋರಿಕೆಯ ಮನೋರೋಗದ ಲಕ್ಷಣಗಳು: ಮಂಪರು (ಸ್ಟೂಪರ್), ಅರೆತಿಳಿವು (ಟ್ವೈಲೈಟ್ ಸ್ಟೇಟ್), ಹುಸಿ ಹುಚ್ಚು (ಸೂಡೊಡಿಮೆನ್ಷಿಯ), ಮರೆವೆಚ್ಚರ (ಫ್ಯೂಗ್)–ಇವೇ ತೋರಿಕೆಯ ಮನೋರೋಗ ಲಕ್ಷಣಗಳು. ಯುದ್ಧದಲ್ಲಿ ಹೊಡೆದು ಬಡಿದು ಕಾದಾಡಿ ಸುಸ್ತಾದ ಸೈನಿಕನಲ್ಲಿ ಮಂಪರು ಕಂಡಾಗ, ಮಲಮೂತ್ರಗಳು ಹೋಗುವುದೇ ಗೊತ್ತಾಗದೆ ಬಿದ್ದಿರಬಹುದು, ಎಳೆಗೂಸಿನಂತೆ ಊಟಮಾಡಬಹುದು. ಅಂಥವನನ್ನು ಯುದ್ಧರಂಗದಿಂದ ಹಿಂದಕ್ಕೆ ಕರೆಸಿಕೊಂಡರೆ ಬೇಗ ಸರಿಯಾಗಬಹುದು. ಆದರೆ, ಹೀಗೆ ಸುಸ್ತು ಬಿದ್ದವರನ್ನೆಲ್ಲ ಉನ್ಮಾದಿಗಳು ಎನ್ನುವಂತಿಲ್ಲ. ಸೆಳವಿನೊಂದಿಗೆ ಭ್ರಾಂತಿಯೂ (ಕನ್‌ಫ್ಯೂಷನ್) ಸನ್ನಿಯೂ (ಡಿಲೀರಿಯಂ) ಕಾಣಬಹುದು. ಇಲ್ಲವೇ ಭಾವೋದ್ವೇಗದ ಅನುಭವ ಆಗಿರಲೂಬಹುದು. ಕೆಲವೇಳೆ ಇದು ನಾಟಕೀಯವಾಗಿ ಪೂಜೆ ಪುನಸ್ಕಾರಗಳಲ್ಲಿ ತೋರ್ಪಡಬಹುದು. ರೋಗಿ ತಾನೊಂದು ಪ್ರಾಣಿಯೋ ಎಳೆಗೂಸೋ ಆಗಿರುವಂತೆ ನಡೆದುಕೊಳ್ಳಬಹುದು. ಹಲವೇಳೆ, ರಾತ್ರಿಹೊತ್ತಿನ ನಿದ್ರಾಸಂಚಾರದಲ್ಲಿ ಹಿಂದೆಂದೋ ಆದದ್ದನ್ನೋ ತೊಡಕಿನ ಕೆಲಸವನ್ನೋ ಮಾಡಬಹುದು. ಉನ್ಮಾದದ ಮರೆವೆಚ್ಚರದ ಹಾಗೇ ಇದೂ ಇರುತ್ತದೆ. ಎಚ್ಚರ ಇಲ್ಲಿ ತಗ್ಗದೆ ಕಿರಿದಾಗುವುದು. ಮರೆವೆಚ್ಚರದಲ್ಲಿ, ವ್ಯಕ್ತಿ ಒಂದು ಗೊತ್ತಾದ ತೇದಿಯ ಹಿಂದಿನದೆಲ್ಲವೋ ಕೆಲವೋ ನೆನಪಿಗೆ ಬಾರವು ಎನ್ನುತ್ತಾನೆ. ಆಮೇಲೆ, ಮರೆವೆಚ್ಚರದ ಹೊತ್ತಿನಲ್ಲಿ ಏನಾಯಿತೋ ಗೊತ್ತಿಲ್ಲ ಎನ್ನುವನು. ಅಂತೂ ಅವನಿಗೆ ಒಂದಾದ ಮೇಲೆ ಒಂದು ತೋರುವ ಎರಡು ಬಗೆಯ ನೆನಪುಗಳಿರುತ್ತವೆ. ಮರೆವಿನಲ್ಲಿ ತನ್ನ ಗುರುತನ್ನೂ ಮರೆಯುವುದರಿಂದ ಅವನಿಗೆ ಎರಡು (ಕೆಲವೇಳೆ, ಮೂರೋ ನಾಲ್ಕೋ) ವ್ಯಕ್ತಿತ್ವಗಳು ಇರುತ್ತವೆ ಎನ್ನಬಹುದು. ನಿಜವಾಗಿ, ಇವೆಲ್ಲ ಒಂದೇ ವ್ಯಕ್ತಿತ್ವದ ಬೇರೆ ಬೇರೆ ಮೊಗಗಳೇ ಹೊರತು ಬೇರೆ ಬೇರೆ ವ್ಯಕ್ತಿತ್ವಗಳಲ್ಲ. ಮರೆವೆಚ್ಚರದಲ್ಲಿ ಇರುವಾಗ ತಾನು ಯಾರು, ಎಲ್ಲಿನವನೆಂದೇ ರೋಗಿಗೆ ಗೊತ್ತಿರುವುದಿಲ್ಲ. ನೆನಪನ್ನು ಮರೆಯಲ್ಲಿರಿಸುವ ನೆನೆಮರೆವು (ಆ್ಯಮ್ನೀಸಿಯ) ಜೋರಾಗಿ, ಮರೆವೆಚ್ಚರಕ್ಕೆ ಕಾರಣ, ಯಾವುದೋ ಪೀಕಲಾಟವನ್ನು ತಪ್ಪಿಸಿಕೊಳ್ಳುವ ಉಪಾಯವೇ. ಅಂಥ ರೋಗಿ ಏನೋ ಮಾಡಬಾರದ್ದನ್ನು ಮಾಡಿರುವನು. ಮರೆವೂ ರೋಗಿ ಹೇಳಿಕೊಳ್ಳುವಷ್ಟು ಪೂರ್ತಿಯಾಗಿರದು. ಮಿದುಳು, ನರಗಳ ರೋಗಗಳಲ್ಲೂ ಮರೆವೆಚ್ಚರ ಕಾಣಬರುತ್ತದೆ. ಆದ್ದರಿಂದ, ಮರೆವೆಚ್ಚರ ಯಾವಾಗಲೂ ಉನ್ಮಾದದಿಂದಲೇ ಆಗಬೇಕಿಲ್ಲ.

ಹುಸಿಹುಚ್ಚಿನಲ್ಲಿ ರೋಗಿ ಹುಚ್ಚನಂತೆ ವರ್ತಿಸುವನು. ವಿಚಾರಣೆಗಾಗಿ ಕಾದಿರುವ ಬಂದಿಯಲ್ಲಿ ಇದನ್ನು ಕಾಣಬಹುದು. ಏನಾದರೂ ವಿರಸ ಸಂದರ್ಭದಿಂದ ತಪ್ಪಿಸಿಕೊಳ್ಳುವುದೇ ಇದರ ನೆಪ. ಈ ಉನ್ಮಾದ ಕಾಣಿಸಿಕೊಳ್ಳುವುದು ಮನೋರೋಗಕ್ಕೆ ಈಡಾಗುವಂತೆ ಇರುವವರಲ್ಲಿ ಮಾತ್ರ. ಕೆಲವೇಳೆ ಮಿದುಳಿಗೆ ಪೆಟ್ಟಾದಾಗಲೂ ಇದು ತೋರಬಹುದು. ರೋಗಿಯ ವರ್ತನೆ ಪೂರ್ತಿಯಾಗಿ ಹುಚ್ಚಿನ ವಿಚಾರವಾಗಿ ತನಗಿರುವ ತಿಳಿವಳಿಕೆಯಂತೆ ಇರುವುದೇ ಹೊರತು, ವೈದ್ಯನಿಗೆ ತಿಳಿದಿರುವ ನಿಜವಾದ ಹುಚ್ಚಿನ ಲಕ್ಷಣಗಳೇ ಕಾಣವು. ಕೆಲವೇಳೆ ರೋಗಿಯ ವರ್ತನೆ ತಮಾಷೆಯಾಗಿರುತ್ತದೆ. ತನ್ನ ವಯಸ್ಸು ಗೊತ್ತಿಲ್ಲ ಎನ್ನುವನು. ಸರಳ ಟೀಕೆಗಳೂ ಅರ್ಥವಾಗದೆಂಬಂತೆ ಇದ್ದು, ಹುಚ್ಚುಹುಚ್ಚು ಉತ್ತರ ಕೊಡುವುದರಲ್ಲೇ ಅವನಿಗೆ ಅರ್ಥ ಆಗಿರುವುದನ್ನು ಗುರುತಿಸಬಹುದು. ಸಾಮಾನ್ಯ ವಿಚಾರವನ್ನು ಕೇಳಿದರೂ ಏನೋ ಬಲು ತಿಣುಕಿ ಕಷ್ಟಪಟ್ಟು ನೆನಪಿಸಿಕೊಳ್ಳುವಂತೆ ಆಡುವನು. ಇಚ್ಛೆತ್ತದಲ್ಲಿ ಹೀಗಲ್ಲ. ಅಂತೂ ಮುಖ್ಯವಾಗಿ ತನ್ನಿಂದ ಏನೂ ಆಗದೆಂಬ ಆತನ ಹೇಳಿಕೆಗೂ ವರ್ತನೆಗೂ ಹೊಂದಾಣಿಕೆ ಇರುವುದಿಲ್ಲ.

ಉಗಮ: ಹಲವು ಉನ್ಮಾದರೋಗ ಲಕ್ಷಣಗಳು, ದೈಹಿಕ ವಿಕೃತಿಗಳಲ್ಲಿ ವ್ಯಕ್ತವಾದರೂ ಅವುಗಳಿಗೆ ಜೈವಿಕ ಆಧಾರವಿರುವುದಿಲ್ಲ. ಇದರಿಂದಾಗಿ, ಎಲ್ಲ ವಿಧವಾದ ಉನ್ಮಾದರೋಗಲಕ್ಷಣಗಳೂ ಕ್ರಿಯಾಜನ್ಯ ಮನೋವಿಕಾರಗಳು ಎಂದು ಹೇಳುವುದುಂಟು. ಅವು ಕ್ರಿಯಾಜನ್ಯವಾದುವೆಂಬುದನ್ನು ಸಂಮೋಹನೆಯ ವಿಧಾನದಿಂದ ತೋರಿಸಿಕೊಡಲು ಸಾಧ್ಯ. ಮೊದಲನೆಯದಾಗಿ, ಈ ರೋಗಲಕ್ಷಣಗಳನ್ನು ಮನೋಸೂಚನೆ ಕೊಟ್ಟು ಉಂಟುಮಾಡಬಹುದು. ರೋಗಿಗೆ, 'ನೀನು ಪಾರ್ಶ್ವವಾಯುಪೀಡಿತನಾಗುತ್ತೀಯೆ' ಎಂದು ಕೇವಲ ಭಾವಪ್ರೇರಣೆ ಕೊಟ್ಟಾಗ, ಆ ರೋಗಲಕ್ಷಣ ತತ್‌ಕ್ಷಣ ಪ್ರಕಟವಾಗುವುದನ್ನು ಕಾಣಬಹುದು. ಎರಡನೆಯದಾಗಿ ಈ ರೋಗಲಕ್ಷಣಗಳು ಮನೋಸೂಚನೆಯಿಂದ, ಭಾವಪ್ರೇರಣೆಯಿಂದ ಮಾಯವಾಗಬಹುದು. ಕುರುಡನಾಗಿದ್ದವನು ದೃಷ್ಟಿಪಡೆಯಬಹುದು. ಪಾರ್ಶ್ವವಾಯುಪೀಡಿತ ನಡೆಯಬಹುದು. ಹೀಗೆ ಉನ್ಮಾದ ರೋಗ ಕ್ರಿಯಾಜನ್ಯವಾದ್ದರಿಂದ ಅದನ್ನು ವಿವರಿಸಲು ಕೆಲವು ಸಿದ್ಧಾಂತಗಳನ್ನು ಪರಿಣತರು ಮುಂದಿಟ್ಟಿದ್ದಾರೆ. ಜೇಮ್ಸ್ ಬ್ರಾಯ್ಡ್ ಮೊದಲಾದವರು ಭಾವಪ್ರೇರಣೆಯೇ ಈ ರೋಗದ ಮೂಲವೆಂಬುದಾಗಿ ಪ್ರತಿಪಾದಿಸಿದ್ದಾರೆ. ಈ ಭಾವಪ್ರೇರಣೆ ಪರರಿಂದ ಬಂದದ್ದಾಗಿರಬಹುದು ಅಥವಾ ವ್ಯಕ್ತಿಯಲ್ಲೇ ಉದ್ಭವಿಸಿದ್ದಾಗಿರಬಹುದು. ಪಿಯಾರೆಯಾನೆ ವಿಸಂಯೋಜನಾ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಇದರ ಪ್ರಕಾರ, ವ್ಯಕ್ತಿಯಲ್ಲಿ ಮಾನಸಿಕ ಘರ್ಷಣೆ ಇದ್ದಾಗ, ಕೆಲವು ಜಟಿಲ ಹಾಗೂ ತ್ರಾಸದಾಯಕ ಕ್ರಿಯೆಗಳನ್ನು ನೆರವೇರಿಸುವ ಕಾರ್ಯದಲ್ಲಿ ಪ್ರಬುದ್ಧ ಚೇತನ ವಿಫಲವಾಗಬಹುದು. ಆಗ,

ಆ ಕ್ರಿಯೆಗಳು ಮೂಲ ವ್ಯಕ್ತಿತ್ವದಿಂದ ವಿಸಂಯೋಜನೆ ಹೊಂದಿ, ಸ್ವತಂತ್ರವಾಗಿ ವರ್ತಿಸಲು ಪ್ರಾರಂಭಿಸಿ ಉನ್ಮಾದರೋಗದ ದೈಹಿಕ ಮತ್ತು ಮಾನಸಿಕ ಲಕ್ಷಣಗಳಾಗಿ ವ್ಯಕ್ತವಾಗುತ್ತವೆ. ಹೀಗೆ ಉಂಟಾದ ವಿಸಂಯೋಜಿತ ವ್ಯವಸ್ಥೆಗಳೂ ಮನೋವ್ಯಾಪಾರಗಳೂ ಕ್ರಿಯಾಶೀಲವಾಗಿದ್ದು ವ್ಯಕ್ತಿಯ ಪ್ರಬುದ್ಧ ಚೇತನದ ಜೊತೆಯಲ್ಲಿ ಇರುತ್ತವೆ ಎಂಬುದು ಮಾರ್ಟನ್ ಪ್ರಿನ್ಸನ ಅಭಿಮತ. ಆದರೆ ಉಳಿದವರು ಇದನ್ನು ಒಪ್ಪುವುದಿಲ್ಲ; ಅವು ಸುಪ್ತಾವಸ್ಥೆಯಲ್ಲಿ ಇರುತ್ತವೆ ಎಂದು ಇವರು ಪ್ರತಿಪಾದಿಸಿದ್ದಾರೆ. ಈ ರೋಗದ ಉಗಮವನ್ನು ವಿವರಿಸಲು ಸಿಗ್ಮಂಡ್ ಫ್ರಾಯ್ಡ್ ತನ್ನ ನಿರೋಧ ಸಿದ್ಧಾಂತವನ್ನು ಮುಂದಿಟ್ಟ. ಅದರ ಪ್ರಕಾರ ವಾಸ್ತವ ಜೀವನದಲ್ಲಿ ನಿರಾಶೆಗೆ (ಫ್ರಸ್ಟ್ರೇಷನ್) ಒಳಗಾದ ವಾಂಛೆಗಳು ದಮನಸ್ಥಿತಿಗೊಳಗಾಗಿ ಸುಪ್ತಚೇತನ ಸೇರುತ್ತವೆ. ಅಲ್ಲಿದ್ದುಕೊಂಡು, ಅವಕಾಶ ದೊರೆತಾಗ, ಅವು ಉನ್ಮಾದ ರೋಗ ಲಕ್ಷಣಗಳಾಗಿ ಮತ್ತು ಕನಸುಗಳ ರೂಪದಲ್ಲಿ ವ್ಯಕ್ತವಾಗಿ, ತೃಪ್ತಿ ಪಡೆಯಲು ಯತ್ನಿಸುತ್ತವೆ. ಇದರಲ್ಲಿ ಕಾಮವಾಂಛೆಯೇ ಮೂಲಭೂತವಾದದ್ದೆಂಬುದು ಫ್ರಾಯ್ಡನ ಅಭಿಮತ.

ಉನ್ಮಾದ ರೋಗದ ಉಗಮಕ್ಕೆ ಮಾನಸಿಕ ತುಮುಲಗಳು ನಿರಾಶೆಗಳು ಫಲವತ್ತಾದ ನೆಲ ಒದಗಿಸುತ್ತವೆಂಬ ಅಭಿಪ್ರಾಯವೂ ಇದೆ. ತುಮುಲಗಳಿಂದ ಉಂಟಾದ ಮಾನಸಿಕ ಘರ್ಷಣೆಯಿಂದಾಗಿ (ಟೆನ್‌ಷನ್) ಅನೇಕ ಇಚ್ಛೆಗಳು ಭಂಗಹೊಂದಿ ದಮನಕ್ಕೊಳಗಾಗುತ್ತವೆ. ಅವಕಾಶ ದೊರೆತಾಗ ರೋಗಲಕ್ಷಣ ರೂಪದಲ್ಲಿ ಹೊರಹೊಮ್ಮುತ್ತವೆ. ಅಲ್ಲದೆ ಮಾನಸಿಕ ತುಮುಲಗಳ ದೆಸೆಯಿಂದಾಗಿ ವ್ಯಕ್ತಿತ್ವವನ್ನು ಪೂರ್ಣವಾಗಿ ನಿಯಂತ್ರಿಸಲು ಪ್ರಬುದ್ಧ ಚೇತನ ಅಶಕ್ತವಾದಾಗ ಕೆಲವು ಮನೋವ್ಯಾಪಾರಗಳು ಮೂಲವ್ಯಕ್ತಿತ್ವದಿಂದ ಪ್ರತ್ಯೇಕಗೊಂಡು, ಸ್ವತಂತ್ರವಾಗಿ ವ್ಯವಹರಿಸಲು ಪ್ರಾರಂಭಿಸಿದಾಗ ಈ ರೋಗಲಕ್ಷಣಗಳು ಉಂಟಾಗುತ್ತವೆ. ಪರಿವರ್ತನ ಉನ್ಮಾದ ರೋಗದಲ್ಲಿ ಬಹುಮುಖ್ಯವಾಗಿ ಜಟಿಲವಾದ ಹಾಗೂ ತ್ರಾಸದಾಯಕವಾದ ಜೀವನ ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವ ಸುಪ್ತ ಇಚ್ಛೆಯೇ ರೂಪಾಂತರ ಹೊಂದಿ ಒಂದಲ್ಲ ಒಂದು ವಿಧವಾದ ದೈಹಿಕ ಕ್ರಿಯಾ ವಿಕೃತಿಯಲ್ಲಿ ಪ್ರಕಟವಾಗುತ್ತದೆ. ಈ ರೋಗ ಬೆಳೆವಣಿಗೆಯ ಘಟನಾಸರಣಿಯನ್ನು ವಿಶ್ಲೇಷಿಸಿ ಕೋಲ್‌ಮನ್ ಈ ಕೆಳಗಿನ ಅಂಶಗಳನ್ನು ನಿರೂಪಿಸಿದ್ದಾನೆ: 1. ರೋಗಿಗೆ ಯಾವುದೋ ಒಂದು ಅಹಿತ ಸಂದರ್ಭದಿಂದ ತಪ್ಪಿಸಿಕೊಳ್ಳುವ ಇಚ್ಛೆ ಇರುತ್ತದೆ. 2. ಆ ಸನ್ನಿವೇಶದಿಂದ ತಪ್ಪಿಸಿಕೊಳ್ಳಬೇಕೆಂಬ ಇಚ್ಛೆ ಯೋಗ್ಯ ಹಾಗೂ ಸಾಧ್ಯವಾದದ್ದಲ್ಲವೆಂಬ ಪ್ರಜ್ಞೆಯಿಂದಾಗಿ, ಅದು ನಿರೋಧಿತವಾಗುತ್ತದೆ. 3. ಜೀವನದಲ್ಲಿ ಪ್ರಯಾಸಕರವಾದ ಸ್ಥಿತಿಗತಿಗಳು ಮುಂದುವರಿದಾಗ, ನಿರೋಧಿತವಾಗಿರುವ ಮೂಲ ಇಚ್ಛೆಗಳು ರೋಗಲಕ್ಷಣಗಳಾಗಿ ಹೊರಹೊಮ್ಮುತ್ತವೆ. ಹೀಗಿರುವುದರಿಂದ ರೋಗಿಯ ರೋಗಲಕ್ಷಣ ಆತನ ಹಿಂದಿನ ಕಾಯಿಲೆಗೆ ಸಂಬಂಧಿಸಿರುತ್ತದೆ ಅಥವಾ ಇತರರಲ್ಲಿ ಕಂಡ ಕಾಯಿಲೆ ಲಕ್ಷಣಗಳ ಅನುಕರಣವಾಗಿರುತ್ತವೆ.

ಉನ್ಮಾದ ರೋಗ ಮತ್ತು ರೋಗನಟನೆಗಳ ಮನೋವಿಕಾರಗಳ ಅಭಿಪ್ರೇರಣೆಗಳೂ ರೋಗಲಕ್ಷಣಗಳೂ ಹೆಚ್ಚುಕಡಿಮೆ ಒಂದೇ ಆಗಿದ್ದರೂ ಅವುಗಳಲ್ಲಿ ಭೇದವಿದೆ. ಜೀವನದ ಹೊಣೆಯಿಂದ ತಪ್ಪಿಸಿಕೊಳ್ಳಬೇಕೆಂಬ ತನ್ನ ಬಯಕೆಯ ಅರಿವು ಅಸ್ಪಷ್ಟವಾಗಿದ್ದರೂ ಆ ಬಯಕೆಯೇ ತನ್ನ ರೋಗಲಕ್ಷಣದ ಮೂಲವೆಂಬುದು ಉನ್ಮಾದ ರೋಗಿಗೆ ತಿಳಿದಿರುವುದಿಲ್ಲ. ಆದರೆ ರೋಗನಟಿಸುವಾತ ಪ್ರಜ್ಞಾಪೂರ್ವಕವಾಗಿ ರೋಗ ಲಕ್ಷಣವನ್ನು ಉದ್ದೀಪನಗೊಳಿಸಿಕೊಳ್ಳುತ್ತಾನೆ. ಉದಾಹರಣೆಗೆ ಅಹಿತಕರವಾದ ಜೀವನ ಹೊಣೆಯಿಂದ ತಪ್ಪಿಸಿಕೊಳ್ಳಲು ಪ್ರಜ್ಞಾಪೂರ್ವಕವಾಗಿ ಪಾರ್ಶ್ವವಾಯು ಪೀಡಿತನಾಗಬಹುದು.

**ಉನ್ಮಾದರೋಗಿಗಳ ವ್ಯಕ್ತಿತ್ವ:** ಉನ್ಮಾದ ರೋಗಲಕ್ಷಣಗಳ ಸ್ವಭಾವವನ್ನೂ ಅವುಗಳ ಹಿನ್ನೆಲೆಯಲ್ಲಿ ಕಂಡುಬರುವ ಸರಳವಾದ ತಂತ್ರಗಳನ್ನೂ ಗಮನಿಸಿದಾಗ, ಉನ್ಮಾದರೋಗಿಗಳ ಸ್ವಭಾವ ಮಕ್ಕಳ ಸ್ವಭಾವಕ್ಕೆ ಅನುಗುಣವಾಗಿರುವುದು ಕಂಡುಬರುತ್ತದೆ. ಪ್ರಥಮತಃ ಅವರು ಅಸ್ಥಿರವಾದ ಜಿತಪ್ರಕೃತಿಯಿಂದ ಕೂಡಿರುತ್ತಾರೆ. ಅವರ ಭಾವನೆಗಳು ಸುಲಭವಾಗಿ ನೋವಿಗೆ ಒಳಗಾಗುತ್ತವೆ. ಆದ್ದರಿಂದ ಅವರು ತಮ್ಮ ಪ್ರಿಯಜನರ ಸಹಾನುಭೂತಿ ಮತ್ತು ಗಮನಗಳಿಗೆ ಹಂಬಲಿಸುತ್ತಾರೆ. ಉನ್ಮಾದಾತ್ಮಕ ನಗು ಮತ್ತು ಆಳು ಇವು ಸ್ಪಷ್ಟ ದೃಷ್ಟಾಂತಗಳು. ಅವರದು ಅಪಕ್ವ ವ್ಯಕ್ತಿತ್ವ. ಯಾವಾಗಲೂ ಆವೇಗಪರರಾಗಿ, ಅಸಮಂಜಸವರ್ತನೆಯಿಂದ ಕೂಡಿರುತ್ತಾರೆ. ಅವರಲ್ಲಿ ಭಾವಪ್ರೇರಣಾಪ್ರವಣತೆ ಅತ್ಯಂತ ಪ್ರಬಲವಾಗಿರುತ್ತದೆ. ಕೇವಲ ಭಾವಪ್ರೇರಣೆಯಿಂದಲೇ ಅವರಲ್ಲಿ ಹಲವು ರೋಗಲಕ್ಷಣಗಳನ್ನು ಉಂಟು ಮಾಡಬಹುದೆಂಬುದು ಸಂಮೋಹನ ವಿಧಾನದಿಂದ ಸಿದ್ಧವಾಗಿದೆ. ಅಲ್ಲದೆ ಕೆಲವು ವೇಳೆ ಉಂಟಾಗುವ ಸಾಮೂಹಿಕ ಉನ್ಮಾದ ಕೂಡ ಭಾವಪ್ರೇರಣೆಯಿಂದಲೇ ಉಂಟಾಗುತ್ತದೆ ಎಂಬುದು ಪರಿಣತರ ಅಭಿಮತ. ಉನ್ಮಾದ ರೋಗಿ ಸಾಮಾನ್ಯವಾಗಿ ಪರಾವಲಂಬನ ಮನೋಭಾವದಿಂದ ಕೂಡಿರುತ್ತಾನಲ್ಲದೆ ತನ್ನ ಸ್ವಾರ್ಥಕ್ಕಾಗಿ ಇತರರನ್ನು ಕಾಡುವ ಪ್ರವೃತ್ತಿಯನ್ನೂ ತೋರುತ್ತಾನೆ. ಅಲ್ಲದೆ ವಯಸ್ಕ ಜವಾಬ್ದಾರಿ ವಹಿಸಿಕೊಳ್ಳುವುದರಲ್ಲಿ ಆತ ಮಾನಸಿಕವಾಗಿ ಅಶಕ್ತನಾಗಿರುತ್ತಾನೆ. ಅಹಿತಕರ ಸನ್ನಿವೇಶದಿಂದ ಪಾರಾಗಲು ಆತನಿಗೆ ಪ್ರಬಲವಾದ ಅಸ್ತ್ರವೆಂದರೆ ರೋಗ. ಜೀವನದಲ್ಲಿ ತಾನು ಅನುಭವಿಸಿದ ಅಥವಾ ಅನುಭವಿಸಬಹುದಾದ ಸೋಲಿನಿಂದ ಗಮನವನ್ನು ಬೇರೆಡೆ ಸೆಳೆಯಲು ಅದೊಂದು ಅನುಕೂಲಕರವಾದ ನೆಪ. ಉನ್ಮಾದರೋಗಿ ಇತರರನ್ನು ವಂಚಿಸುವುದರ ಜೊತೆಗೆ ತನ್ನನ್ನು ತಾನೇ ವಂಚಿಸಿಕೊಳ್ಳುತ್ತಾನೆ. ಉನ್ಮಾದರೋಗಲಕ್ಷಣಗಳು ಕೆಲವು ಸಲ ಅವುಗಳಿಗೆ ಕಾರಣವಾದ ಸನ್ನಿವೇಶ ಅಥವಾ ಜನ ಬದಲಾವಣೆಯಾದಾಗ ತಮ್ಮಷ್ಟಕ್ಕೆ ತಾವೇ ಇದ್ದಕ್ಕಿದ್ದಂತೆಯೇ ಮಾಯವಾಗಬಹುದು.

ಉನ್ಮಾದರೋಗಿಗಳು ತಮ್ಮ ರೋಗವನ್ನು ಸಿದ್ಧಪಡಿಸಲು ಎಷ್ಟೇ ಕಷ್ಟವನ್ನಾದರೂ ತಡೆದುಕೊಳ್ಳುವರು. ಏನುಮಾಡಿದರೂ ಮಾಡಿಸಿಕೊಳ್ಳುವರು. ಆಸ್ಪತ್ರೆಯಲ್ಲಿ ಕಂಗೆಟ್ಟ ಹುಚ್ಚರೊಂದಿಗೆ ಇರಿಸಿದರೂ ಇರುವರು. ಶಸ್ತ್ರಕ್ರಿಯೆಗಳಿಗೂ ಮೈಯೊಡ್ಡಬಹುದು. ತಮಗೆ ತಾವೇ ಗಾಯ, ಪೆಟ್ಟು, ಅಪಾಯ ಮಾಡಿಕೊಳ್ಳಬಹುದು. ಯಾವುದೋ ಸೇಡನ್ನು ತೀರಿಸಿಕೊಳ್ಳುವವೆಂದು ತಮ್ಮ ಪ್ರಾಣವನ್ನೂ ತೆಗೆದುಕೊಳ್ಳಲು ಯತ್ನಿಸುವುದುಂಟು. ಇದಕ್ಕೆ ಯಾರು ಯಾರೋ ಕಾರಣವೆಂದೂ ಕಾಗದ ಬರೆದಿಡಬಹುದು. ಕೆಲವೇಳೆ ಕನಿಕರವನ್ನೋ ನೆರವನ್ನೋ ಪಡೆಯಲಪೇಕ್ಷಿಸಿ ಪ್ರಾಣ ಕಳೆದುಕೊಳ್ಳುವ ಬೆದರಿಕೆಯನ್ನೂ ಸುಮ್ಮಸುಮ್ಮನೆ ಹಾಕುವುದುಂಟು. ಹಾಗೇನಾದರೂ ಸತ್ತರೆ ಅದು ಕೇವಲ ಆಕಸ್ಮಿಕವೇ.

**ನಿದಾನ:** ಮೈಯಲ್ಲಿ ಯಾವ ಅಂಗದಲ್ಲೂ ನಿಜವಾಗಿಯೂ ರೋಗ ಇಲ್ಲವೆಂದು ಮೊದಲು ಖಾತರಿಮಾಡಿಕೊಂಡು, ರೋಗಿಯ ಉದ್ದೇಶಗಳನ್ನು ಗುರುತಿಸಿ, ರೋಗ ಲಕ್ಷಣಗಳು ಅವಕ್ಕೆ ಹೊಂದುವುವೇ ಎಂಬುದನ್ನು ತಿಳಿಯಬೇಕು. ಎಷ್ಟೋ ವೇಳೆ ಶಾರೀರಿಕ ರೋಗಗಳಂತೆಯೇ ಮನೋಜನ್ಯ ರೋಗಲಕ್ಷಣಗಳೂ ಇರುವುದರಿಂದ ರೋಗಿಗೆ ಉನ್ಮಾದವಿರುವುದೆಂದು ತೀರ್ಮಾನಿಸುವ ಮುಂಚೆ ಚೆನ್ನಾಗಿ ಪರೀಕ್ಷಿಸಬೇಕು. ಅಂಗಗಳು ಕೆಟ್ಟಿರುವುದರಿಂದ ಬರುವ ರೋಗಲಕ್ಷಣಗಳು ರೋಗಿಯಲ್ಲಿ ಇರುವುವೇ ಎಂಬುದನ್ನು ಖಚಿತವಾಗಿ ಗುರುತಿಸಬೇಕು. ಅವು ಚೆನ್ನಾಗಿ ಗೊತ್ತಿರುವ ವೈದ್ಯ, ವೈದ್ಯ ಸಿಬ್ಬಂದಿಗೆ ಉನ್ಮಾದ ರೋಗ ಬಂದರೆ, ರೋಗವನ್ನು ಗುರುತಿಸುವುದು ಬಲು ಕಷ್ಟ. ರೋಗಿಗೆ ಯಾವ ರೋಗಲಕ್ಷಣಗಳನ್ನೂ ಸೂಚಿಸಬಾರದು. ಏಕೆಂದರೆ, ರೋಗಿ ಅದನ್ನೇ ಪಟ್ಟಾಗಿ ಹಿಡಿದುಕೊಳ್ಳುವನು. ರೋಗಿಗೆ ಕೇವಲ ಗುಣಕಾರಕ ಸೂಚನೆಗಳನ್ನು ಕೊಟ್ಟಾಗ ರೋಗಲಕ್ಷಣಗಳು ಇಲ್ಲದಂತಾದರೆ ಅವನನ್ನು ಉನ್ಮಾದಿ ಎನ್ನುವುದಿಲ್ಲ. ಅಂಗಗಳು ನಿಜವಾಗೂ ಕೆಟ್ಟು ಸಂಭವಿಸಿದ ರೋಗದ ಲಕ್ಷಣಗಳು ಕೂಡ ಕೆಲವೇಳೆ ಹೀಗೇ ತಗ್ಗಬಹುದು. ಉನ್ಮಾದರೋಗಿಯ ಪರೀಕ್ಷೆಗೆ ಕೇವಲ ನರಮಿದುಳಿನ ವಿಜ್ಞಾನಿ ಸಾಕಾಗದು. ಇಡೀ ವೈದ್ಯವೆಲ್ಲವನ್ನೂ ತಿಳಿದವನು ಬೇಕು. ಬೀರಿದ ಪೆಡಸಣೆ (ಡಿಸೆಮಿನೇಟೆಡ್ ಸ್ಕ್ಲೀರೋಸಿಸ್), ಕಾರ್ಬನ್ ಮಾನಾಕ್ಸೈಡ್ ವಿಷವೇರಿಕೆ, ಮಿದುಳ ರಕ್ತನಾಳರೋಗ. ಮಿದುಳುರಿತದ ಜಡತೆ (ಎನ್ಸೆಲೈಟಿಸ್ ಲೆತಾರ್ಜಿಕ) ರೋಗಗಳನ್ನು ಉನ್ಮಾದವೆಂದೂ ತಪ್ಪು ತಿಳಿಯುವ ಸಂದರ್ಭಗಳೇ ಹೆಚ್ಚು. ನಡು ವಯಸ್ಸಿನ ತನಕ ಚೆನ್ನಾಗಿದ್ದು ಅನಂತರ ಮೊತ್ತಮೊದಲ ಉನ್ಮಾದ ಲಕ್ಷಣಗಳು ಕಂಡುಬಂದರೆ ಅದು ಬರೀ ಮನೋರೋಗ ಆಗಿರಲಾರದು. ಈ ಲಕ್ಷಣಗಳು ತಾವಾಗೇ ಇಳಿದುಹೋದರೆ ಉನ್ಮಾದವಿರಬಹುದು.

ಚಿಕಿತ್ಸೆ, ಅಭಿಪ್ರೇರಣೆ ಮತ್ತು ರೋಗಲಕ್ಷಣದೊಡನೆ ಅದಕ್ಕೆ ಇರುವ ಸಂಬಂಧ_ ಇವುಗಳನ್ನು ತಿಳಿದುಕೊಳ್ಳಲು ರೋಗಿಗೆ ಸಾಧ್ಯವಾಗುವುದಾದರೆ, ಈ ರೋಗಲಕ್ಷಣಗಳನ್ನು ತೊಡೆದು ಹಾಕಲು ಸಾಧ್ಯ. ಜೀವನದ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವ ಇಚ್ಛೆ ಪ್ರಬಲವಾಗಿದ್ದಾಗ, ರೋಗಿ ಮನೋವೈದ್ಯನೊಡನೆ ಸಹಕರಿಸುವುದು ಕಷ್ಟ. ಆತ ತನಗರಿವಿಲ್ಲದಂತೆಯೇ ಚಿಕಿತ್ಸೆಯನ್ನು ವಿರೋಧಿಸುತ್ತಾನೆ.

ಜನಸಾಮಾನ್ಯರಲ್ಲಿ ಇಂದೂ ಕೂಡ ಪ್ರಚಲಿತವಾಗಿರುವ ನಂಬಿಕೆ ಚಿಕಿತ್ಸೆಗಳು ಮತ್ತು ಪವಾಡ ಚಿಕಿತ್ಸೆಗಳು ತಾತ್ಕಾಲಿಕ ಪರಿಹಾರವನ್ನು ಮಾತ್ರ ಒದಗಿಸಬಲ್ಲವು, ಅಷ್ಟೇ. ನೆಮ್ಮದಿಕಾರಕ ಮದ್ದುಗಳು ಈ ರೋಗಿಗಳ ಮೇಲೆ ಪರಿಣಾಮಕಾರಿಗಳಾಗುವುದಿಲ್ಲ. ಹೆಚ್ಚೆಂದರೆ ಅವರ ಆತಂಕವನ್ನು ಕಡಿಮೆ ಮಾಡಬಲ್ಲವು. ಇವುಗಳ ಜೊತೆಗೆ ಮನೋಚಿಕಿತ್ಸೆ, ಸಲಹೆ ಮತ್ತು ಮನವೊಪ್ಪಿಗೆ ವಿಧಾನಗಳನ್ನೂ ಸಂದರ್ಭೋಚಿತವಾಗಿ ಬಳಸುವುದು ಉತ್ತಮ.

ಏನೂ ಮಾಡದಿರುವುದಕ್ಕಿಂತಲೂ ಮಿತಿ ಮೀರಿದ ಚಿಕಿತ್ಸೆ ಹೆಚ್ಚು ಅಪಾಯಕರ. ಇದರಿಂದ ರೋಗ ಇನ್ನಷ್ಟು ಬೇರೂರಿ ಉನ್ಮಾದ ಏರುತ್ತದೆ. ರೂಢಿಯಲ್ಲಿಲ್ಲದ ಚಿಕಿತ್ಸೆಗಳನ್ನು ಪರಿಣಿತರಿಗೇ ಬಿಟ್ಟುಬಿಡಬೇಕು. ರೋಗಿಯ ಮನೋಭಾವವನ್ನು ತಿಳಿಯುವಷ್ಟೇ ಸಾಮಾನ್ಯ ತಿಳಿವಳಿಕೆಯೂ ಇರಬೇಕು. ರೋಗದ ಲಕ್ಷಣಗಳನ್ನು ತೆಗೆಯುವುದೇ ಮುಖ್ಯವಲ್ಲ. ಸಮಾಜದಲ್ಲಿ ರೋಗಿ ಹೊಂದಿಕೊಳ್ಳುವಂತೆ ಮಾಡುವುದು ಗುರಿಯಾಗಿರಬೇಕು. ಕಷ್ಟದ, ತೊಡಕಿನ, ಸಂದರ್ಭ, ಘಟನೆ ಇವುಗಳನ್ನು ರೋಗಿ ಎಲ್ಲರಂತೆ ಎದುರಿಸುವಂತೆ ನೆರವಾಗುವ ಚಿಕಿತ್ಸೆ ಮಾಡಬೇಕೇ ಹೊರತು ಆತನ ಉನ್ಮಾದದ ಕಾರಣ, ರೀತಿ ಇವು ಮುಖ್ಯವಲ್ಲ. ಇದಕ್ಕಾಗಿ ರೋಗಿ ಮಾಡಿದ್ದರಲ್ಲಿ ತಪ್ಪು ಕಂಡುಹಿಡಿಯದೆ ಅವನ ಸಮಯ ಸಂದರ್ಭ ಮನೋವ್ಯತ್ಯಾಸಗಳು ಆಸೆಗಳು ಇವನ್ನೆಲ್ಲ ಚೆನ್ನಾಗಿ ವಿಚಾರಿಸಿ ತಿಳಿಯಬೇಕು. ಇದಕ್ಕೆ ಮನೋವಿಜ್ಞಾನದ ತಿಳಿವಳಿಕೆ ಚೆನ್ನಾಗಿರಬೇಕು. ಉನ್ಮಾದದ ಹಳೆಯ ವಿಚಾರಗಳನ್ನು ಸಂಗತಿಗಳನ್ನು ಅನುಭವಗಳನ್ನು ಕೆದಕುವುದರಿಂದ ಒಳಿತಾಗದು. ಪರಿಸರದ ಜನರೊಂದಿಗೆ ರೋಗಿ ಚೆನ್ನಾಗಿ ಹೊಂದಿಕೊಳ್ಳಲು ಸಾಧ್ಯವಾಗುವಂತೆ, ಆತನಿಗೆ ಅನುಭವೀ ವೈದ್ಯ ಸೂಕ್ತ ಸಲಹೆ ವಿವರಣೆ ನೀಡಿ ಸರಿಯಾಗಿ ನೆರವಾಗಬೇಕು. ಮೊದಮೊದಲಲ್ಲೇ ರೋಗ ಲಕ್ಷಣಗಳನ್ನು ಕಳೆದರೆ ರೋಗಿಗೂ ವೈದ್ಯನಲ್ಲಿ ನಂಬಿಕೆ ಹುಟ್ಟುವುದು. ಚಿಕಿತ್ಸೆ ಮಹತ್ತರವಾಗಿ ಇರದಿದ್ದರೂ ವೈದ್ಯನ ಸಮಯವನ್ನು ನುಂಗುವಂಥದಾಗಿರುತ್ತದೆ. ರೋಗಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಇರಿಸಬೇಕಿಲ್ಲ. ಆದರೆ ರೋಗಿಯ ಪರಿಸರ ಸಮರ್ಪಕವಾಗಿಲ್ಲದಾಗ, ಆತ ಗಾಯಮಾಡಿಕೊಳ್ಳುವ ಅಥವಾ ತನ್ನ ಪ್ರಾಣ ತೆಗೆದುಕೊಳ್ಳುವ ಯತ್ನ ನಡೆಸುತ್ತಿದ್ದರೆ, ಹುಸಿಹುಚ್ಚು, ಕೈಕಾಲುಗಳು ಬಿದ್ದುಹೋಗುವಿಕೆ ಇವು ಇದ್ದರೆ, ಅವನನ್ನು ಆಸ್ಪತ್ರೆಗೆ ಸೇರಿಸಬೇಕಾಗುತ್ತದೆ. ಆಸ್ಪತ್ರೆಯಲ್ಲಿ ಇನ್ನಷ್ಟು ರೋಗ ಲಕ್ಷಣಗಳನ್ನು ಸಂಪಾದಿಸುವುದು ಸಾಧ್ಯವಿದೆ ! ಇನ್ನೊಂದೆಂದರೆ, ರೋಗಿಯನ್ನಂತೂ

ಒಂಟಿಯಾಗಿರಲು ಬಿಡಬಾರದು. ಉನ್ಮಾದದ ಕೆಲವು ಲಕ್ಷಣಗಳಿಗೆ ತ್ವರಿತವಾಗಿ ಚಿಕಿತ್ಸೆ ಮಾಡಬೇಕು. ಆಹಾರ ಸೇವನೆಯ ನಿರಾಕರಣೆಯನ್ನು (ಅನೊರೆಕ್ಸಿಯ) ಹಾಗೇ ಬಿಟ್ಟರೆ ರೋಗಿ ಆಹಾರವಿಲ್ಲದೆ ಸೊರಗುವನು. ಪಾರ್ಶ್ವವಾಯುವಿನ ಕೈಕಾಲುಗಳ ಚಿಕಿತ್ಸೆ ಆಗದಿದ್ದರೆ ಕೈಕಾಲುಗಳು ಹಾಗೇ ಸೆಟೆದುಕೊಂಡಿರುತ್ತವೆ. ಹುಸಿ ಕುರುಡ, ಕಿವುಡ, ತನ್ನ ಗುರುತೇ ತನಗಿಲ್ಲದವ–ಇಂಥವರಿಗೆ ಯಾವ ಚಿಕಿತ್ಸೆ ಮಾಡುವುದೂ ಕಷ್ಟವೇ. ಆದ್ದರಿಂದ ಆ ಲಕ್ಷಣಗಳ ಚಿಕಿತ್ಸೆ ಮೊದಲು ಆಗಬೇಕು. ಸೂಚನಾಕ್ರಮಗಳನ್ನು ಕೈಗೊಳ್ಳಬೇಕು. ಉಣ್ಣುವಾಗ ಉಸ್ತುವಾರಿ ಇಟ್ಟು ಆತ ಸಾಕಷ್ಟು ತಿನ್ನುವಂತೆ ನೋಡಿಕೊಳ್ಳಬೇಕು. ಪಾರ್ಶ್ವವಾಯುವಿಗೆ ಭಯಬೀತ ಚಿಕಿತ್ಸೆ (ಫಿಸಿಯೊತೆರಪಿ). ಕ್ಷೀಣಸ್ವರಕ್ಕೆ ಧ್ವನಿಯ ಸಾಧನೆಗಳನ್ನು ಮಾಡಿಸಬೇಕು. ಸಮ್ಮೋಹನಕ್ಕಿಂತಲೂ (ಹಿಪ್ನೊಸಿಸ್) ಎಚ್ಚರವಾಗಿದ್ದಾಗಿನ ಸೂಚನಾಕ್ರಮಗಳೇ ಒಳ್ಳೆಯವು. ಈ ಕ್ರಮದಿಂದ ಒಳ್ಳೆಯದೂ ಆಗಬಹುದು. ಕೆಡುಕೂ ಆಗಬಹುದು. ತನ್ನಲ್ಲಿ ತನಗೆ ನಂಬಿಕೆಯಿರುವ, ಚಾಲೂಕಾದ ವೈದ್ಯ ಹೆಚ್ಚು ಪರಿಣಾಮಕಾರಿ. ಸಾಮಾನ್ಯವಾಗಿ, ಸಂವೇದನವಾಹಕ ಅಥವಾ ಚಾಲಕ ಲಕ್ಷಣಗಳನ್ನು ತಾಳ್ಮೆ ನಿರ್ಧಾರ ನಂಬುಗೆಗಳಿಂದ ಪುಸಲಾಯಿಸಿ ಸೂಚನೆಗಳನ್ನು ಕೊಟ್ಟು ಹೋಗಲಾಡಿಸಬಹುದು. ಪೆಂಟೋತಾಲ್ ಸೋಡಿಯಂನ್ನು ರಕ್ತನಾಳದ ಮೂಲಕ ಕೊಟ್ಟರೆ, ರೋಗಿ ಹೇಳಿಕೊಳ್ಳಲು ಹಿಂಜರಿಯುತ್ತಿದ್ದ ವಿಚಾರಗಳನ್ನೆಲ್ಲ ಹೊರಗೆಡವಬಹುದು. ಇವುಗಳ ಬಳಕೆಯಲ್ಲಿ ಮಾತ್ರ ವೈದ್ಯ ಎಚ್ಚರದಿಂದಿರಬೇಕು.

ಉದ್ಯೋಗದ ಆಯ್ಕೆ ಪರಿಹಾರದ ಬೇಡಿಕೆಗಳಂತೆ ರೋಗದ ಸಾಮಾಜಿಕ ಕಾರಣದ ತೀರುವೆ. ರೋಗಿಯ ಸಂಬಂಧಿಗಳ ಹಾಗೂ ಗೆಳೆಯರ ಅತ್ತ ಕಷ್ಟವೂ ಅಲ್ಲದ ಇತ್ತ ಸಡಿಲವೂ ಅಲ್ಲದ ಸರಿಸಮನಾದ ನಡೆವಳಿಕೆ–ಇವೆಲ್ಲ ಚಿಕಿತ್ಸೆಯಲ್ಲಿ ಮುಖ್ಯ. ಗಾಯ, ಪೆಟ್ಟುಗಳ ಎದುರಾಗಿ ಉನ್ಮಾದ ಮರುವರ್ತನೆಯಾಗಿ ಏಳುವುದು ಸಾಮಾನ್ಯ. ಉದ್ದೇಶ ಅಷ್ಟಾಗಿ ಎದ್ದು ಕಾಣದಿದ್ದರೂ ಇದನ್ನು ಬರಿಯ ಬೂಟಾಟಿಕೆ ಎಂದು ತಳ್ಳಿಹಾಕುವಂತಿಲ್ಲ. ಏಕೆಂದರೆ, ರೋಗಿ ಬೇನೆ ಬಿದ್ದು ನರಳುತ್ತಿರುವುದು, ಕಳವಳ, ಕೆರಳು, ನಿದ್ದೆಗೇಡು ಇವೆಲ್ಲ ನಿಜ. ಇದನ್ನು ಹೋಗಲಾಡಿಸಿಕೊಳ್ಳಲು ರೋಗಿಯೂ ಆಸಕ್ತನಾಗಿರುತ್ತಾನೆ. ಇಷ್ಟಾದರೂ ಇವೆಲ್ಲ ಮನೋಜನ್ಯ. ಹೀಗೆಂದರೆ ಮನೋರೋಗಚಿಕಿತ್ಸೆಯೇ ಆಗಬೇಕು ಎನ್ನುವುದು ಸರಿಯಲ್ಲ. ಗಾಯವಾದ ಮೇಲಿನ ಪರಿಹಾರದ ವಿಚಾರವಾಗಿ ಎದ್ದ ಉನ್ಮಾದದಲ್ಲಿ ಮನೋರೋಗ ಚಿಕಿತ್ಸೆಯಿಂದ ಆಗುವಷ್ಟು ಕಡಿಮೆ ಅನುಕೂಲ ಇನ್ನಾವ ಮನೋರೋಗಗಳಲ್ಲೂ ಕಾಣಬರದು. ಮೊದಲ ಹಂತಗಳಲ್ಲೇ ಬೇಗನೆ ಪರಿಹಾರ ಕೊಡಿಸಿ, ಆಗಿರುವ ಗಾಯಗಳನ್ನು ವಾಸಿಮಾಡಿ, ರೋಗಿಯನ್ನು ಎಂದಿನ ಚಟುವಟಿಕೆಗಳಲ್ಲಿ ತೊಡಗಿಸಿದರೆ ಉನ್ಮಾದ ಬೇಗನೆ ಇಳಿಯುತ್ತದೆ. ಎಷ್ಟೋ ಕಾಲಗಳಿಂದಲೂ ರೋಗಲಕ್ಷಣಗಳು ಇದ್ದೇ ಇದ್ದರೂ ಆತನನ್ನು ಎಂದಿನ ಕೆಲಸ ಕಸಬುಗಳಿಗೆ ಹಿಂದಿರುಗಿಸುವುದು ಅತ್ಯಂತ ಶ್ರೇಷ್ಠ ಮಾರ್ಗ. ಮತ್ತೆ ಮತ್ತೆ ವೈದ್ಯನ ಭೇಟಿ ನಡೆಸುವುದಕ್ಕಿಂತಲೂ ಇದು ಎಷ್ಟೋ ಒಳ್ಳೆಯದು. ಇಂಥ ಚಿಕಿತ್ಸೆಯಲ್ಲಿ ಮನೋರೋಗ ಚಿಕಿತ್ಸೆ ಸಹಾಯಕವೇ ಹೊರತು ಪ್ರಧಾನವಲ್ಲ.

ಮದುವೆ ಎಂದಿಗೂ ಉನ್ಮಾದಕ್ಕೆ ಚಿಕಿತ್ಸೆಯಲ್ಲ. ಹಾಗೆ ಮಾಡುವುದಾದರೆ, ಉನ್ಮಾದ ರೋಗಿಯನ್ನು ಮದುವೆಯಾದವರಿಗೆ ತಾಪತ್ರಯ ಕಟ್ಟಿಟ್ಟಂತೆ. ಆದರೆ ಉನ್ಮಾದರೋಗಿಗಳನ್ನು ಯಾರೂ ಮದುವೆ ಮಾಡಿಕೊಳ್ಳಬಾರದು ಎಂದಲ್ಲ. ಆಗ ಚಿಕಿತ್ಸೆಗಿಂತಲೂ ಹೆಚ್ಚಿನ ವಿಚಾರಗಳನ್ನು ಯೋಚಿಸಬೇಕು. ಉನ್ಮಾದ ರೋಗಿಯ ಬೇಕು ಬೇಡಗಳನ್ನು ಜೀವನ ಸಂಗಾತಿ ಮತ್ತು ಮನೆಯವರು ಎಚ್ಚರಿಕೆಯಿಂದ ಗಮನಿಸಬೇಕು. ಉನ್ಮಾದ ಮರುಕಳಿಸದಂತೆ ನೋಡಿಕೊಳ್ಳಬೇಕು.

**ಗತಿ, ಮುನ್ನರಿವು:** ರೋಗಿಯ ವ್ಯಕ್ತಿತ್ವ ಸಮಾಜದ ಪರಿಸರ, ದೊರೆತ ಚಿಕಿತ್ಸೆ ಇವುಗಳಿಗೆ ತಕ್ಕಂತೆ ರೋಗಿಯ ಪ್ರಗತಿ ಸಾಧಿಸುತ್ತದೆ. ಈ ರೋಗ ಕಾಣಿಸುವ ಮುಂಚೆ ಬಹುಕಾಲದಿಂದ ಇದರ ಲಕ್ಷಣಗಳು ಸ್ವಲ್ಪ ಪ್ರಮಾಣದಲ್ಲಿ ತಲೆದೋರುತ್ತಿದ್ದರೆ, ಉನ್ಮಾದ ಕೆರಳಿಸುವ ಸಂದರ್ಭಗಳು ಮುಂದುವರಿಯದಂತೆ ನೋಡಿಕೊಳ್ಳಬೇಕು. ತಕ್ಕಷ್ಟು ಚಿಕಿತ್ಸೆ ಮಾಡದಿರುವುದೂ ಮಿತಿಮೀರಿದ ಚಿಕಿತ್ಸೆಯೂ ಒಳ್ಳೆಯದಲ್ಲ. ಆದರೆ, ಈ ರೋಗದಲ್ಲಿ ಹೀಗೇ ಆದೀತೆಂದು ಹೇಳಿದ್ದು ಎಷ್ಟೋ ಬಾರಿ ಸುಳ್ಳಾಗಿ ಹಲವು ವರ್ಷಗಳಿಂದಲೂ ಜೋರಾಗಿದ್ದ ರೋಗ ವಾಸಿಯಾಗಿದೆ. ತಡಮಾಡದೆ ಚಿಕಿತ್ಸೆ ಕೈಗೊಂಡರೆ ಮಕ್ಕಳಲ್ಲಿ ಚೆನ್ನಾಗಿ ಗುಣವಾಗಬಹುದು. ಯಾವುದೋ ದಿಗಿಲಿನ ಫಲವಾಗಿ ಒಂದೇ ಲಕ್ಷಣವಿದ್ದರೂ ಉನ್ಮಾದ ಕೆರಳಿಕೆಯ ಕಾರಣಗಳು ಇದ್ದೇ ಇರುವುದಾದರೆ ಅದು ವಾಸಿಯಾಗುವುದು ಕಷ್ಟವೇ. ಗಾಯ ಪೆಟ್ಟುಗಳಿಗೆ ಕಡೆಯದಾಗಿ ಪರಿಹಾರದ ತೀರ್ಮಾನ ಆದ ಹೊರತು ಯಾವ ವೈದ್ಯಕ ಚಿಕಿತ್ಸೆಯಿಂದಲೂ ಫಲವಾಗುವುದಿಲ್ಲ.

ಯುದ್ಧಕಾಲದಲ್ಲಿ ಸೈನಿಕ ಆಸ್ಪತ್ರೆಯಲ್ಲೇ ಇರುವ ತನಕ ಮನೋರೋಗ ಚಿಕಿತ್ಸೆಗಳಿಂದ ಹೆಚ್ಚಿನ ಉಪಯೋಗವಾದಂತೆ ಕಂಡರೂ ಕೆಲಸಕ್ಕೆ ಹಿಂತಿರುಗಿದರೆ ಉನ್ಮಾದ ಮತ್ತೆ ಅವನನ್ನು ಕಾಡುವುದು. ಇದರ ಪರಿಣಾಮ ಬಗೆಬಗೆಯದಾಗಿದ್ದರೂ ರೋಗಿ ಹೆಣವಾಗಿ ಬಿದ್ದಿರುವುದೇ ಸಾಮಾನ್ಯ. (ಡಿ.ಎಸ್.ಎಸ್.;ಡಿ.)

**ಉನ್ಮಾದವಿಷಣ್ಣತಾ ಮನೋವಿಕ್ಷಿಪ್ತಿ:** ಉನ್ಮಾದವಿಷಣ್ಣತಾ ಮನೋವಿಕ್ಷಿಪ್ತ : ಗಂಭೀರ ಸ್ವರೂಪದ ಮನೋರೋಗಗಳಲ್ಲಿ ಒಂದು (ಮ್ಯಾನಿಕ್ ಡಿಪ್ರೆಸಿವ್ ಸೈಕೋಸಿಸ್). ತೀವ್ರವಾದ ಏರಿಳಿತಗಳಿಂದ ಕೂಡಿದ ಭಾವವಿಕಾರ. ಈ ರೋಗಕ್ಕೀಡಾದ ವ್ಯಕ್ತಿಯ ಮನಃಸ್ಥಿತಿಯಲ್ಲಿ ಅಪಾರವಾದ ಬದಲಾವಣೆಗಳುಂಟಾಗುತ್ತವೆ. ಮುಖ್ಯವಾಗಿ ವ್ಯಕ್ತಿ ಒಮ್ಮೆ ಉನ್ಮತ್ತನಾಗಿ ಇನ್ನೊಮ್ಮೆ ಖಿನ್ನನಾಗಿ ವರ್ತಿಸುತ್ತಾನೆ. ಅಮೆರಿಕದ ಮನೋವೈದ್ಯಕೀಯ ಸಂಘದ ಡಿ.ಎಸ್.ಎಮ್. ಮನೋರೋಗ ವಿಭಜನೆ ಕ್ರಮದ ಪ್ರಕಾರ ಈ ಕಾಯಿಲೆಯನ್ನು ದ್ವಿ–ಧ್ರುವ (ಬಯಪೊಲಾರ್) ಖಾಯಿಲೆ ಎಂದು ಪರಿಗಣಿಸಲಾಗಿದೆ. ಉನ್ಮಾದ ಒಂದು ಧ್ರುವವಾದರೆ, ವಿಷಣ್ಣತೆ ಇನ್ನೊಂದು ಧ್ರುವ.

ಪ್ರತಿಯೊಂದು ಸಮಾಜದಲ್ಲೂ ಸುಮಾರು ಶೇಕಡ ಒಂದರಷ್ಟು ಜನರಲ್ಲಿ ಭಾವ ವಿಕಾರಗಳು ಕಾಣಿಸಿಕೊಳ್ಳುತ್ತವೆ. ಉನ್ಮಾದ ವಿಷಣ್ಣತಾ ರೋಗದಲ್ಲಿ ಕಂಡುಬರುವ ಚಿಹ್ನೆಗಳು ವಾಸ್ತವವಾಗಿ ಎಲ್ಲರಲ್ಲೂ ಕಂಡುಬರುವ ಖಿನ್ನತೆ–ಸಂತೋಷಗಳ ಅತಿಯಾದ ಉತ್ಪ್ರೇಕ್ಷೆ. ಎಲ್ಲರೂ ಒಂದಲ್ಲ ಒಂದು ಸಮಯದಲ್ಲಿ ಬೇಸರ ಖಿನ್ನತೆ ಚಿಂತೆ ದುಃಖ ಪಾಪಭಾವಗಳಿಗೂ ತಾನು ನಿಷ್ಪ್ರಯೋಜಕ, ತನ್ನ ಬದುಕು ನಿರರ್ಥಕ, ಎಂಬ ಭಾವನೆಗಳಿಗೂ ಈಡಾಗಿಯೇ ಇರುತ್ತಾರೆ. ಹಾಗೆಯೇ ಎಲ್ಲರಿಗೂ ಒಂದಲ್ಲ ಒಂದು ಸಮಯದಲ್ಲಿ ಕಾರಣವಿಲ್ಲದೆ ಅಪಾರವಾದ ಖುಷಿ ಸಂತೋಷಗಳಿರುತ್ತವೆ. ತನ್ನನ್ನು ಯಾರೂ ಹಿಡಿಯಲಾರರೆಂಬ ಉತ್ಸಾಹವೂ ಇರುವುದುಂಟು. ಏನನ್ನಾದರೂ ಸಾಧಿಸಿಯೇನೆಂಬ ಆತ್ಮವಿಶ್ವಾಸವೂ ಧೈರ್ಯವೂ ಬರುತ್ತಿರುತ್ತದೆ. ಎಂಥ ಕಷ್ಟದ ಕೆಲಸವನ್ನಾದರೂ ಎಷ್ಟೇ ಹೊತ್ತಾದರೂ ಮಾಡಿ ಮುಗಿಸುವ ಶಕ್ತಿ ಸಾಮರ್ಥ್ಯಗಳೂ ಯಾರು ಏನು ಕೇಳಿದರೂ ಓಹೋ ಅದಕ್ಕೇನು ಎಂಬ ಒಳ್ಳೆಯತನ ಧಾರಾಳತನಗಳೂ ಕೊನೆಯಿಲ್ಲದ ಆಕಾಂಕ್ಷೆಗಳೂ ಯೋಜನೆಗಳೂ ಅವನ್ನೆಲ್ಲ ಸಾಧಿಸಬೇಕೆಂಬ ಆಸೆ ಛಲಗಳೂ ಎಲ್ಲರ ಅನುಭವಕ್ಕೂ ಒಳಪಟ್ಟ ಭಾವಗಳೇ. ಇವುಗಳೆಲ್ಲ ಒಂದು ಮಿತಿಯೊಳಗೆ ಉಳಿದು, ವಾಸ್ತವಿಕತೆಯನ್ನು ಮರೆಯದೆ ಇದ್ದರೆ ವ್ಯಕ್ತಿ ಆರೋಗ್ಯವಂತನಾಗಿಯೇ ಇರುತ್ತಾನೆ. ಆದರೆ ಈ ಭಾವಗಳು ಮಿತಿಮೀರಿ ಹೋಗಿ ಆತ ವಾಸ್ತವ ಸ್ಥಿತಿಯನ್ನೇ ಮರೆತಾಗ ಉನ್ಮಾದವಿಷಣ್ಣತಾ ರೋಗ ತಲೆಹಾಕಿದೆಯೆನ್ನಬಹುದು.

ವಿಷಾದಕ್ಕೀಡಾಗುವ ರೋಗಿಗಳೇ ಹೆಚ್ಚಾದರೂ ಅನೇಕ ರೋಗಿಗಳ ಮನಃಸ್ಥಿತಿ ಉನ್ಮತ್ತತೆಯಿಂದ ವಿಷಾದಕ್ಕೆ, ವಿಷಾದದಿಂದ ಉನ್ಮತ್ತತೆಗೆ ತುಯ್ಯುತ್ತಿರುತ್ತದೆ. ಈ ರೋಗಿಗಳು ಈ ಹೊತ್ತು ಉನ್ಮತ್ತರಾಗಿ, ಆನಂದತುಂದಿಲರಾಗಿ, ತಮಾಷೆಯಾಗಿ, ತಮ್ಮನ್ನು ಬಿಟ್ಟರೆ ಇಲ್ಲ ಎಂದುಕೊಂಡು ಅತಿಯಾದ ಚಟುವಟಿಕೆಯಿಂದ ತಿರುಗಾಡಿಕೊಂಡಿದ್ದು, ಇನ್ನೊಂದು ಹೊತ್ತು ಎಣೆಯಿಲ್ಲದ ದುಃಖ ಚಿಂತೆ ಆಯಾಸ ಬೇಸರಗಳಿಂದ ಕೂಡಿ, ತಾವು ನಿಷ್ಪ್ರಯೋಜಕರು, ಮಹಾಪಾಪಿಗಳು, ಅಯೋಗ್ಯರು ಎಂಬ ಭಾವನೆಯಿಂದ ಪೂರ್ತಿ ಮನಸ್ಸು ಕುಂದಿ ಮೂಲೆ ಹಿಡಿದಿರುತ್ತಾರೆ.

ಗಂಡಸರಿಗಿಂತ ಹೆಂಗಸರಲ್ಲಿ ವಿಷಣ್ಣತಾ ಪ್ರತಿಕ್ರಿಯೆ (ಖಿನ್ನತೆ) ಸ್ವಲ್ಪ ಹೆಚ್ಚು. ಖಿನ್ನತೆ ಕ್ರಮೇಣ ಕಾಣಿಸಿಕೊಳ್ಳುವುದಾದರೂ ಕೆಲವು ದಿನಗಳಲ್ಲೇ ಇದು ತೀವ್ರವಾಗಬಹುದು. ಸಾಮಾನ್ಯವಾಗಿ ಈ ಪ್ರತಿಕ್ರಿಯೆ ಕಾಣಿಸಿಕೊಳ್ಳುವುದು ಜೀವನದಲ್ಲಿ ಒಂದಲ್ಲ ಒಂದು ವಿಧವಾದ ಕೆಡುಕು ಆದಾಗ. ಉದಾಹರಣೆಗೆ. ತುಂಬ ಪ್ರೀತಿಸಿದವರ ಸಾವು, ಪ್ರೇಮಭಂಗ, ಇದ್ದಕ್ಕಿದ್ದಂತೆ ಕೆಲಸ ಕಳೆದುಕೊಳ್ಳುವುದು, ವ್ಯವಹಾರದಲ್ಲಿ ನಷ್ಟ ಹೊಂದುವುದು–ಇತ್ಯಾದಿ ದುರ್ಘಟನೆಗಳು ಖಿನ್ನತೆಗೆ ಎಡೆ ಕೊಡಬಹುದು. ಅಪರೂಪವಾಗಿ ಕೆಲವರಿಗೆ ವಿಶೇಷ ಬಡ್ತಿ ದೊರೆತು, ಮೇಲಿನ ಹುದ್ದೆಗೆ ಹೋದಾಗ ಅವರಲ್ಲಿ ಖಿನ್ನತೆ ಕಾಣಿಸಿಕೊಳ್ಳಬಹುದು.

ವಿಷಣ್ಣತಾ ಪ್ರತಿಕ್ರಿಯೆಯ ಪ್ರಾರಂಭದಲ್ಲಿ ವ್ಯಕ್ತಿಗಳ ಉತ್ಸಾಹ ಕುಂದಿ ಅವರ ಸಾಮಾನ್ಯ ಚಟುವಟಿಕೆಗಳೆಲ್ಲ ಕಡಿಮೆಯಾಗುತ್ತವೆ. ಜೊತೆಗೆ ತಾವೇನು ಇನ್ನು ಮುಳುಗಿಯೇ ಹೋದೆವು ಎಂಬ ಹತಾಶಭಾವವೂ ಕಾರಣವಿಲ್ಲದ ಶಾರೀರಿಕ ಬೇನೆಗಳೂ ತಲೆದೋರುತ್ತವೆ. ತಾವೇನೋ ಮಹತ್ತರವಾದ ಪಾಪ ಮಾಡಿದವರು. ತಮಗಿನ್ನು ಕ್ಷಮೆ ಇಲ್ಲ, ಶಾಂತಿ ಇಲ್ಲ ಎಂಬ ದೃಢವಾದ ನಂಬಿಕೆ ರೋಗಿಗಳನ್ನು ಕಾಡುತ್ತದೆ. ಅವರ ಬದುಕಿನ ಉತ್ಸಾಹವನ್ನೆಲ್ಲ ಕುಂದಿಸುತ್ತದೆ. ಕೆಲವು ಖಿನ್ನರೋಗಿಗಳು ತಳಮಳದಿಂದ ಕೂಡಿರುತ್ತಾರೆ. ಖಿನ್ನರಾಗಿದ್ದರೂ ಇವರು ಸುಮ್ಮನೇ ಇರಲಾರರು. ಉದ್ವಿಗ್ನರಾಗಿ, ವ್ಯಗ್ರರಾಗಿ ಕೂತಲ್ಲಿ ಕೂರಲಾರದೆ ನಿಂತಲ್ಲಿ ನಿಲ್ಲಲಾರದೆ ವಿಪರೀತವಾಗಿ ಸಂಕಟಪಡುತ್ತಾರೆ. ಇನ್ನು ಕೆಲವು ವಿಷಾದ ರೋಗಿಗಳು ಒಂದಿಷ್ಟೂ ಚುರುಕು–ಚಟುವಟಿಕೆಗಳಿಲ್ಲದೆ ಮಂದಬುದ್ಧಿಯವರಂತೆ ಮೂಲೆ ಹಿಡಿದಿರುತ್ತಾರೆ.

ಖಿನ್ನತೆ ಉಲ್ಬಣಿಸಿದಾಗ ಈ ರೋಗಿಗಳು ನಿದ್ದೆ ಕಳೆದುಕೊಳ್ಳುತ್ತಾರೆ. ಹಸಿವು ಪೂರ್ತಿ ಕುಂದಿಹೋಗುತ್ತದೆ. ದಿನ ದಿನಕ್ಕೆ ಮೈ ಬಡವಾಗುತ್ತದೆ. ತಾವು ಮಾಡಿದ ಮಹಾ ಪಾಪಕ್ಕಾಗಿ ಕ್ರೂರವಾದ ಶಿಕ್ಷೆಗೆ ಅರ್ಹರೆಂಬ ಭ್ರಾಂತಿ ತಲೆದೋರುತ್ತದೆ. ಇನ್ನೂ ತೀವ್ರವಾದ ಪರಿಸ್ಥಿತಿಯಲ್ಲಿ ರೋಗಿಗಳಿಗೆ ತಮ್ಮ ಸೋಲು ಚಾರಿತ್ರಿಕವೆನಿಸಿ, ತಾವು ಜಗತ್ಪ್ರಸಿದ್ಧ ಕೊಲೆಗಡುಕರಾಗಿ ಕಾಣಿಸಿಕೊಳ್ಳಬಹುದು. ತಾವು ಬದುಕಲು ಅನರ್ಹರು ಎಂಬ ಭಾವ ಅನೇಕ ರೋಗಿಗಳನ್ನು ಆತ್ಮಹತ್ಯೆಗೆ ಪ್ರಯತ್ನಿಸುವಂತೆ ಮಾಡುತ್ತದೆ. ಎಚ್ಚರಿಕೆ ವಹಿಸದಿದ್ದರೆ ಕೆಲವರು ನಿಜವಾಗಿಯೂ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಖಿನ್ನತೆಯ ಬಗ್ಗೆ ಮೂರು ಬಗೆಯ ವಿವರಣೆಗಳಿವೆ: 1. ವ್ಯಕ್ತಿ ತನಗೆ ಬೇಕಾದವರ ಪ್ರೀತಿವಿಶ್ವಾಸಗಳನ್ನು ಅಥವಾ ಆರ್ಥಿಕ ಸುಭದ್ರತೆಯನ್ನು ಕಳೆದುಕೊಂಡಾಗ ತೋರಿಸುವ ಪ್ರತಿಕ್ರಿಯೆ: 2. ಆತ್ಮಾಭಿಮಾನಕ್ಕೆ ಧಕ್ಕೆ ಉಂಟಾದಾಗ ತೋರಿಸುವ ಪ್ರತಿಕ್ರಿಯೆ: 3. ವಾಸ್ತವವಾಗಿಯೂ ರೋಗಿ ಮಾಡಿದ ತಪ್ಪಿಗೆ, ಪಾಪಕ್ರಿಯೆಗೆ ಆತ ತೋರಿಸುವ ಪ್ರತಿಕ್ರಿಯೆ.

ಅಲ್ಪಸ್ವಲ್ಪ ಉನ್ಮತ್ತತೆ ವಿಕೃತವೇನಲ್ಲ. ವಿಕೃತವೆನ್ನಿಸಿಕೊಳ್ಳುವ ಉನ್ಮಾದದಲ್ಲಿ ಎರಡು ಮಟ್ಟಗಳನ್ನು ಗುರುತಿಸಲಾಗಿದೆ. ತೀವ್ರೋನ್ಮಾದ ಮತ್ತು ಉನ್ಮಾದ ಸನ್ನಿ. ಉನ್ಮಾದ ರೋಗಿಗಳು ತೀರಾ ನಾಟಕೀಯವಾಗಿ ವರ್ತಿಸುವುದರಿಂದ ಮನೆಯವರಿಗೆ ಥಟ್ಟನೆ ಇವನಿಗೇನೋ

ಆಗಿದೆ ಎಂಬುದು ಗೊತ್ತಾಗುತ್ತದೆ. ತಮ್ಮ ಭಾವೋದ್ರೇಕದಲ್ಲಿ ಉನ್ಮಾದ ರೋಗಿಗಳು ಇತರರನ್ನು ಕೊಲ್ಲಬಹುದು, ತಮ್ಮನ್ನೇ ಕೊಂದುಕೊಳ್ಳಬಹುದು. ಇವರನ್ನು ತಡೆಹಿಡಿಯದಿದ್ದರೆ ಊಟ, ನಿದ್ದೆ, ವಿಶ್ರಾಂತಿ ಒಂದೂ ಇಲ್ಲದೆ ರೋಗಿಗಳು ಪೂರ್ತಿ ಬಳಲಬಹುದು. ಉನ್ಮಾದ ಸ್ಥಿತಿಯಲ್ಲಿ ಇವರು ಲೈಂಗಿಕ ಸಾಹಸಗಳಲ್ಲಿ ತೊಡಗಬಹುದು; ಎರಡು ಮೂರು ಮದುವೆ ಮಾಡಿಕೊಳ್ಳಬಹುದು; ಇದ್ದ ಹಣವನ್ನೆಲ್ಲ ನಿಷ್ಪ್ರಯೋಜನ ವ್ಯವಹಾರಗಳಲ್ಲಿ, ಧಿಡೀರ್ ಶ್ರೀಮಂತರಾಗುವ ಯೋಜನೆಗಳಲ್ಲಿ ಪೋಲು ಮಾಡಬಹುದು.

ಉನ್ಮತ್ತತೆಯ ಮುಖ್ಯ ಲಕ್ಷಣ ಭಾವವಿಕಾರ. ಉನ್ಮತ್ತರ ಮನಃಸ್ಥಿತಿಯ ಲಕ್ಷಣಗಳೆಂದರೆ ಭಾರೀ ಉದ್ರಿಕ್ತತೆ, ಅಪರಿಮಿತವಾದ ಆನಂದ, ಮಹೋನ್ನತವಾದ ಉಲ್ಲಾಸ, ಉತ್ಸಾಹ, ಊಹಿಸಲಾರದಂಥ ಶಕ್ತಿ ಸಾಮರ್ಥ್ಯ, ತನ್ನನ್ನು ಬಿಟ್ಟರೆ ಇಲ್ಲ–ಎಂಬ ಆತ್ಮವಿಶ್ವಾಸ. ಜೊತೆಗೇ ಕಂಡುಬರುವ ಲಕ್ಷಣಗಳೆಂದರೆ ತಾನು ಜಗತ್ತನ್ನಾಳುವ ಪ್ರಭು, ಮಾನಸಿಕ ಆಸ್ಪತ್ರೆ ಸೇರಿರುವುದು ಇಲ್ಲಿರುವ ಹುಚ್ಚರನ್ನು ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಗುಣಪಡಿಸಲು, ವೈದ್ಯರೇ ಹುಚ್ಚರು–ಎಂಬಿತ್ಯಾದಿ ಭ್ರಾಂತಿಗಳು.

ಉನ್ಮತ್ತರ ಕಾರ್ಯಭಾರ ಅಪಾರ. ಒಂದು ಕ್ಷಣವೂ ಅವರಿಗೆ ಬಿಡುವಿಲ್ಲ. ಉಪಯುಕ್ತವಲ್ಲದ ನೂರೆಂಟು ಕೆಲಸಗಳನ್ನು ಆ ಕ್ಷಣವೇ ಅವರು ಮಾಡಿ ಮುಗಿಸಲೇಬೇಕು. ಆದರೆ ಒಂದು ಕೆಲಸಕ್ಕೆ ಕೈ ಹಾಕುವುದರೊಳಗೆ ಇನ್ನೊಂದು ಅವರ ಗಮನ ಸೆಳೆಯುವುದರಿಂದ ದಿನಗಟ್ಟಲೆ ಬಿಡುವಿಲ್ಲದೆ ದುಡಿದರೂ ಇವರು ಏನೊಂದನ್ನೂ ಸಾಧಿಸುವುದಿಲ್ಲ. ತಮ್ಮ ಓಡಾಟದ ರಭಸದಲ್ಲಿ, ಖುಷಿಯಲ್ಲಿ ಇವರು ಜನರನ್ನು ಘಾಸಿಗೊಳಿಸಬಹುದು. ಕುರ್ಚಿ ಮೇಜು ಮುರಿದು ಹಾಕಬಹುದು; ತಮ್ಮ ಕೈಕಾಲನ್ನೇ ಮುರಿದುಕೊಳ್ಳಬಹುದು. ಇವರ ಮಾತಿಗಂತೂ ಕೊನೆಯಿಲ್ಲ. ಹಲವೊಮ್ಮೆ ಉನ್ಮತ್ತರ ಮಾತು ಕೇಳಲು ರಂಜಿಸುತ್ತದೆ ; ಆದರೆ ಉನ್ಮತ್ತತೆ ಹೆಚ್ಚಾದಂತೆ ಮಾತು ಬರೀ ಬಡಬಡಿಕೆಯಾಗುತ್ತದೆ.

ಉನ್ಮತ್ತತೆ ಇನ್ನೂ ಹೆಚ್ಚಾಗಿ, ಉನ್ಮಾದಸನ್ನಿ ಉಂಟಾದಾಗ ರೋಗಿಗಳಿಗೆ ಅವರ ನಡೆನುಡಿಯ ಮೇಲೆ ಇದ್ದಬದ್ದ ಹತೋಟಿಯೂ ತಪ್ಪಿಹೋಗುತ್ತದೆ. ರೋಗಿಗಳು ಪೂರ್ತಿ ಗೊಂದಲಗೊಂಡು, ತಾವೆಲ್ಲಿದ್ದೇವೆ, ತಮ್ಮ ಸುತ್ತ ಏನಾಗುತ್ತಿದೆ ಎಂಬುದೊಂದರ ಪ್ರಜ್ಞೆಯೂ ಇಲ್ಲದೆ ಹಾಡುತ್ತ, ಕುಣಿಯುತ್ತ, ಕಿರುಚುತ್ತ, ಕೈಗೆ ಸಿಕ್ಕಿದ್ದನ್ನು ಮುರಿಯುತ್ತ, ಎಸೆಯುತ್ತ, ಕಂಡವರನ್ನು ಬೈಯ್ಯುತ್ತ, ಹೊಡೆಯುತ್ತ, ಮನೆ ತುಂಬ ಮೂತ್ರ ಮಾಡುತ್ತ, ಮಲವಿಸರ್ಜಿಸಿ ಎಸೆಯುತ್ತ ಜೀವದ ಪರಿವೆ ಇಲ್ಲದೆ ಜಿಗಿದಾಡುತ್ತಿರಬಹುದು. ಇವರು ಕೇಳಿದ್ದೇನಾದರೂ ಇಲ್ಲ ಎಂದರೆ, ಹೇಳಿದ್ದೇನಾದರೂ ಸುಳ್ಳು ಎಂದರೆ ಎಗರಿ ಬೀಳಬಹುದು. ಹಲವರಲ್ಲಿ ಈ ಉನ್ಮಾದ ಸನ್ನಿ ಕ್ರಮೇಣ ಕಡಿಮೆಯಾಗಿ ಖಿನ್ನತೆಗೆ ಎಡೆಗೊಡಬಹುದು.

ಖಿನ್ನತೆಯ ಸ್ಥಿತಿಯಲ್ಲಿ ಇವರ ಚಿತ್ರ ಇನ್ನೂ ಕರುಣಾಮಯವಾಗುತ್ತದೆ. ಹಲವರು ಒಂದೇ ಸಮನೆ ಅಳುತ್ತಾರೆ. ಹಲಬಗೆಯ ಪಾಪಗಳನ್ನು ತಮ್ಮ ಮೇಲೆ ಆರೋಪಿಸಿಕೊಳ್ಳುತ್ತಾರೆ. ಈ ಪಾಪಿಜನ್ಮಕ್ಕೆ ಏನೂ ಬೇಡವೆಂದು ಉಣ್ಣಲೂ ಕುಡಿಯಲೂ ನಿರಾಕರಿಸುತ್ತಾರೆ. ಅಂಥವರಿಗೆ ಕೊಳವೆಯಿಂದ ಆಹಾರ ಕೊಡಬೇಕಾದ್ದು ಅನಿವಾರ್ಯ. ಇಂಥವರು ಜೀವಕ್ಕೆ ಅಪಾಯ ತಂದುಕೊಳ್ಳದಂತೆ ಎಚ್ಚರಿಕೆ ವಹಿಸಬೇಕಾದ್ದೂ ಅವಶ್ಯ. ಉನ್ಮಾದವಿಷಣ್ಣತಾ ಸ್ಥಿತಿಗಳು ಒಂದಾದ ಮೇಲೊಂದರಂತೆ ನಾನಾ ಬಗೆಯಾಗಿ ಪುನರಾವರ್ತಿಸುತ್ತವೆ. ಕೆಲವರಿಗೆ ಒಂದೇ ಸ್ಥಿತಿ ಇರುತ್ತದೆ. ಇಂಥ ಎರಡು ಸ್ಥಿತಿಗಳ ನಡುವೆ ಅವರು ಸಹಜವಾಗಿ ಬದುಕುತ್ತಾರೆ. ಇನ್ನು ಕೆಲವರಿಗೆ ಒಮ್ಮೆ ವಿಷಣ್ಣತೆ, ಆಮೇಲೆ ಸಹಜತೆ, ಅನಂತರ ಉನ್ಮಾದ–ಹೀಗೆ ಈ ಸ್ಥಿತಿಗಳು ಪುನರಾವರ್ತಿಸುವುದೂ ಉಂಟು.

ಉನ್ಮಾದವಿಷಣ್ಣತಾ ಮನೋವಿಕ್ಷಿಪ್ತಿಗೆ ಒಳಗಾದವರನೇಕರು ಗುಣಹೊಂದಬಹುದು. ಕ್ಲಿಫರ್ಡ್ ಬೀಕ್ಸ್ ಇಂಥವರಲ್ಲೊಬ್ಬ. ಈತ ಮನೋರೋಗದ ಆಸ್ಪತ್ರೆಯಲ್ಲಿನ ತನ್ನ ಅನುಭವಗಳನ್ನು ಕುರಿತು ಪುಸ್ತಕ ಬರೆದಿದ್ದಾನೆ. ಇಂಥವರ ಅನುಭವಗಳ ಆಧಾರದ ಮೇಲೆ ಈ ವ್ಯಾಧಿಯನ್ನು ತಡೆಗಟ್ಟಲು ನಾನಾ ಕ್ರಮ ಕೈಗೊಳ್ಳಲಾಗಿದೆ.

ಬೀಕ್ಸ್‌ನಂಥ ಜನ ಅನುಭವಿಸಿದ ತೀವ್ರ ಉನ್ಮಾದ ವಿಷಣ್ಣತಾ ಅನುಭವಗಳು ಪಾಶ್ಚಾತ್ಯರಲ್ಲಂತೂ ಈಗ ತುಂಬ ವಿರಳ. ಬಿಕ್ಕಟ್ಟು ಉದ್ರೇಕಗಳನ್ನು ತಣಿಸಬಲ್ಲ ನೆಮ್ಮದಿಕಾರಕಗಳನ್ನು ಬಳಸಲಾಗುತ್ತಿರುವುದರಿಂದ ಇದು ಹದ್ದುಬಸ್ತಿಗೆ ಒಳಪಟ್ಟಿದೆ. ವಿಷಣ್ಣತೆ ಅತಿಯಾಗಿ, ಇವುಗಳಿಂದ ಅಷ್ಟೇನೂ ಪರಿಣಾಮ ಆಗದಾಗ, ವಿದ್ಯುದಾಘಾತ ಚಿಕಿತ್ಸೆ ಕೊಟ್ಟು ಗುಣಪಡಿಸಲಾಗಿದೆ. ರೋಗಿಯ ಮಿದುಳಿನ ಮೂಲಕ ಲಘು ವಿದ್ಯುತ್ ಪ್ರವಾಹ ಹರಿಸಿದಾಗ ಆತ ಸ್ವಲ್ಪ ಒದರಾಡಿ ಪ್ರಜ್ಞೆ ತಪ್ಪುತ್ತಾನೆ. ಹಲವಾರು ಬಾರಿ ಇಂಥ ಚಿಕಿತ್ಸೆ ನಡೆಸಿದ ಮೇಲೆ ರೋಗಿ ಗುಣಮುಖನಾಗುತ್ತಾನೆ. ಇದರ ಜೊತೆಗೆ ನೆಮ್ಮದಿಕಾರಕಗಳನ್ನೂ ಕೊಡಬಹುದು.

ವಿಷಣ್ಣತಾ ಸ್ಥಿತಿಯ ಮೇಲೆ ವಿದ್ಯುದಾಘಾತ ಚಿಕಿತ್ಸೆಯ ಈ ಸತ್‌ಪರಿಣಾಮಕ್ಕೆ ಕಾರಣಗಳೇನೆಂಬುದು ಮಾತ್ರ ಇನ್ನೂ ಗೊತ್ತಿಲ್ಲ. (ಎಂ.ಎನ್.ಎಚ್.)

**ಉನ್ಮೀಲನ:** ತೆರೆಯುವಿಕೆ, ಬಿಡುಗಡೆ, ಕಾಣುವಿಕೆ ಎಂಬ ಅರ್ಥದಲ್ಲಿ ಈ ಪದದ ಬಳಕೆ ಇದೆ. ಪೂರ್ಣಗ್ರಹಣಕಾಲದಲ್ಲಿ ಗ್ರಹಣ ಬಿಡಲು ಪ್ರಾರಂಭಿಸಿ ಮುಚ್ಚಿರುವ ಛಾಯೆ ತೆರೆದು ಬಿಂಬದ ಪ್ರಕಾಶ ಕಾಣಲು ಮೊದಲಾದಾಗ ಉನ್ಮೀಲನಕ್ರಿಯೆ ಪ್ರಾರಂಭವಾಗುತ್ತದೆ. ಚಂದ್ರಗ್ರಹಣದಲ್ಲಿ ಗ್ರಾಹ್ಯ ಚಂದ್ರ, ಗ್ರಾಹಕ ಭೂಮಿಯ ನೆರಳು. ಸೂರ್ಯಗ್ರಹಣದಲ್ಲಿ ಗ್ರಾಹ್ಯ ಸೂರ್ಯ, ಗ್ರಾಹಕ ಚಂದ್ರ. ಪೂರ್ಣಗ್ರಹಣದಲ್ಲಿ ಗ್ರಾಹ್ಯ ಗ್ರಾಹಕ ಬಿಂಬಪ್ರಮಾಣಾಂತರಾರ್ಧವರ್ಗವನ್ನು ವಿಕ್ಷೇಪವರ್ಗದಿಂದ ಕಳೆದು ಬಂದ ಶೇಷದ ವರ್ಗಮೂಲವನ್ನು ಅರುವತ್ತರಿಂದ ಗುಣಿಸಿ ಸೂರ್ಯಚಂದ್ರರ ಗತ್ಯಂತರದಿಂದ ಭಾಗಿಸಿದಾಗ ಬರುವ ಲಬ್ಧಿಯೇ ಮರ್ದಾರ್ಧಘಟೀ. ಇದನ್ನು ಗ್ರಹಣಮಧ್ಯಕಾಲಕ್ಕೆ ಕೂಡಿಸಿದರೆ ಉನ್ಮೀಲನಕಾಲ ಬರುತ್ತದೆ.

ದೇವತಾವಿಗ್ರಹಗಳನ್ನು ಪ್ರತಿಷ್ಠಿಸುವ ಮೊದಲು ಮಂತ್ರಪೂರ್ವಕವಾಗಿ ಅವುಗಳ ಕಣ್ಣನ್ನು ಬಿಡಿಸುವ (ತೆರೆಯುವ) ಆಗಮೋಕ್ತಕ್ರಿಯೆಯನ್ನು ನೇತ್ರೋನ್ಮೀಲನ ಎಂದು ಕರೆಯುತ್ತಾರೆ. (ಎಸ್.ಎನ್.ಕೆ.)

**ಉನ್ಮೇಷ:** ಒಂದು ಚಿಂತನೆಯಿಂದ ಇನ್ನೊಂದು ಚಿಂತನೆ ಅಥವಾ ಭಾವಕ್ಕೆ ಹೊರಳುವಾಗ ಉಂಟಾಗುವ ಅನುಭವ. ಇದು ಕೇವಲ ಅನುಭವದಿಂದ ಗುರುತಿಸಬಹುದಾದ ವಿಷಯ. ಶಿವನ ಶಕ್ತಿಪ್ರಸಾರವೇ ಈ ವಿಶ್ವ. ಅಂಥ ಶಕ್ತಿ ಪ್ರಸಾರವಾಗುವಲ್ಲಿ ಮೊದಲ ಸ್ಫುರಣವೇ ಉನ್ಮೇಷ. ಸ್ಪಂದ, ಸ್ಫೋಟ, ಕಂಪನ, ಅಭಾಸನ, ಉನ್ಮೀಲನ ಪದಗಳನ್ನು ಈ ಅರ್ಥದಲ್ಲಿ ಉಪಯೋಗಿಸುತ್ತಾರೆ. ಸೌಂದರ್ಯಮೀಮಾಂಸೆಯಲ್ಲಿ ಪ್ರತಿಭೆಯನ್ನು ನವನವೋನ್ಮೇಷಶಾಲಿನಿ ಯೆಂದು ಹೇಳುವಲ್ಲಿ ಆ ಗುಣವಿಶೇಷ ಸೃಷ್ಟಿಯಲ್ಲಿನ ಹೊಸ ಹೊಸ ವಿಷಯಗಳನ್ನು ತೆರೆದು ತೋರಿಸಬಲ್ಲುದೆಂಬ ಅರ್ಥದಲ್ಲಿ ಉನ್ಮೇಷ ಪದವನ್ನು ಬಳಸಿದ್ದಾರೆ. (ಜಿ.ಆರ್.)

**ಉನ್ಸೆಟ್, ಸೀಗ್‌ಫ್ರೀಡ್:** 1887–1949. ನಾರ್ವೆಯ ಕಾದಂಬರಿಕಾರ್ತಿ. ಹೊರಗಿನ ಜಗತ್ತಿನ ಗಮನವನ್ನು ಸೆಳೆದಿರುವ 20ನೆಯ ಶತಮಾನದ ಇಬ್ಬರು ಮೂವರು ನಾರ್ವೀಜಿಯನ್ ಸಾಹಿತಿಗಳಲ್ಲಿ ಒಬ್ಬಳು. 1928ರಲ್ಲಿ ನೋಬೆಲ್ ಪಾರಿತೋಷಕ ಪಡೆದಳು. ಮೊದಲ ಕೃತಿಗಳು ಆಸ್ಲೋ ನಗರದ ಮಧ್ಯಮ ವರ್ಗದ ಹೆಂಗಸರ ಬಾಳಿನ ನೈಜ ಚಿತ್ರಗಳು. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಜೆನ್ನಿ (1911). 1920–22ರ ಅವಧಿಯಲ್ಲಿ ಈಕೆಯ ಪ್ರಖ್ಯಾತ ಚಾರಿತ್ರಿಕ ಕಾದಂಬರಿಗಳು ಬರತೊಡಗಿದುವು. ಮಧ್ಯಯುಗದ ಸ್ಕ್ಯಾಂಡಿನೇವಿಯ ದೇಶಗಳ ಜನಜೀವನದ ಚಿತ್ರಗಳಿಗೆ ಅವು ಹೆಸರಾದಂತಿವೆ. ಪ್ರಾಧ್ಯಾಪಕನೊಬ್ಬನ ಮಗಳಾಗಿದ್ದ ಉನ್ಸೆಟ್ ತಂದೆಗೆ ಅವನ ಸಂಶೋಧನ ಕಾರ್ಯದಲ್ಲಿ ಸಹಾಯ ಮಾಡುವಾಗ ಅವನ ವ್ಯಾಸಂಗವಿಷಯವಾದ ಮಧ್ಯಯುಗದ ವಿವರಗಳಲ್ಲಿ ತಾನೂ ಆಸಕ್ತಳಾದಳು. ಈ ಕ್ಷೇತ್ರದಲ್ಲಿ ಇವಳ ಅತ್ಯಂತ ಪ್ರಸಿದ್ಧವಾದ ಕಾದಂಬರಿಗಳು ಕ್ರಿಸ್ಟಿನ್ ಲ್ಯಾವ್ರೆನ್ಸ್ ಡ್ಯಾಟರ್ (1925) ಓಲಾವ್ ಅಡೆನ್ಸನ್ ಇಹೆಸ್ವಿವಿಕೆನ್ (ಹೆಸ್ವಿವಿಕೆನ್ನನ ಒಡೆಯ. 1927). ಮತ್ತು ಓಲಾವ್ ಅಡೆನ್‌ಸನ್ ಓಗ್ ಹ್ಯಾನ್ಸ್ ಬಾರ್ನ್ (ಓಲಾವ್ ಅಡೆನ್‌ಸನ್ ಮತ್ತು ಅವನ ಮಕ್ಕಳು 1927). ಇವೆಲ್ಲ 14ನೆಯ ಶತಮಾನದ ನಾರ್ವೆಗೆ ಸಂಬಂಧಪಟ್ಟವು. ಇವುಗಳಲ್ಲಿ ಕಂಡುಬರುವ ಚಾರಿತ್ರಿಕ ವಿವರಗಳು, ವಾತಾವರಣ ಕಲ್ಪನೆ ಮೊದಲಾದುವು ಇವಳ ಪಾಂಡಿತ್ಯಕ್ಕೆ ಸಾಕ್ಷಿಗಳಾಗಿವೆ. ಪಾತ್ರಗಳ ಧಾರ್ಮಿಕ ಮತ್ತು ಲೈಂಗಿಕ ಸಮಸ್ಯೆಗಳನ್ನು ಈಕೆ ವಿಶ್ಲೇಷಣೆ ಮಾಡಿ ತೋರಿಸಿರುವ ರೀತಿಯೂ ಅದ್ಭುತವಾಗಿದೆ. ಇವುಗಳ ಅನಂತರ ಬರೆದ ಕೊಡಲಿ (1928). The Son Avenger ಸೇಡುಗಾರ ಮಗ (1930), The Burning Bush ಉರಿಯುವ ಪೊದೆ (1930), ಮೊದಲಾದ ಕಾದಂಬರಿಗಳಲ್ಲಿ ಉನ್ಸೆಟ್ ಮತ್ತೆ ಸಮಕಾಲೀನ ಸಮಾಜಕ್ಕೆ ಹಿಂದಿರುಗುತ್ತಾಳೆ. ಈ ಮಧ್ಯೆ 1934ರಲ್ಲಿ ಇವಳು ರೋಮನ್ ಕ್ಯಾಥೊಲಿಕ್ ಪಂಥಕ್ಕೆ ಪರಿವರ್ತನೆ ಹೊಂದಿದ್ದಳು. ಇವಳ ಈ ಹೊಸಮತದ ಪ್ರಭಾವವನ್ನು ಈ ಕಾದಂಬರಿಗಳಲ್ಲೂ ನಾರ್ಸ್ಕೆ ಹೆಲ್ಗ್‌ನರ್ (1934) ಎಂಬ ಸಂತರ ಚರಿತ್ರೆಯಲ್ಲೂ ಕಾಣಬಹುದು. ಇಡೆ ಎಲಿಜಬೆತ್ (1932) ಮತ್ತೆ ಡಾನ್ ಟ್ರೊಫಾಸ್ಟೆಹುಸ್ತ್ರ (ಪತಿವ್ರತೆ. 1936) ಇವಳ ಇನ್ನೆರಡು ಕಾದಂಬರಿಗಳು. ಇಲ್ಲೆವ್ ಆರ್ (ಹನ್ನೊಂದು ವರ್ಷಗಳು. 1934) ಬಹುಮಟ್ಟಿಗೆ ಆತ್ಮ ಚರಿತ್ರಾತ್ಮಕವಾದ ಕೃತಿ. ಇದರಲ್ಲೂ ತಾನು ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಬರೆದ ಹ್ಯಾಪಿ ಟೈಮ್ಸ್ ಇನ್ ನಾರ್ವೆ (1942) ಎಂಬ ಗ್ರಂಥದಲ್ಲೂ ಉನ್ಸೆಟ್ ಮಕ್ಕಳ ಮನಸನ್ನು ಅರಿತುಕೊಳ್ಳುವುದರಲ್ಲಿ ತನಗಿದ್ದ ಅಸಾಧಾರಣ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾಳೆ.

ಉನ್ಸೆಟ್ಟಳ ವೈಯಕ್ತಿಕ ಜೀವನವೂ ಮಧ್ಯಯುಗದ ವಿಷಯದಲ್ಲಿ ಅವಳಿಗಿದ್ದ ಆದರವನ್ನು ತೋರಿಸುತ್ತಿತ್ತು. ಪ್ರ. ಶ. 1,000ದಲ್ಲಿ ಕಟ್ಟಿದ್ದ ಹಳೆಯ ಮನೆಯೊಂದನ್ನು ಸರಿಪಡಿಸಿ ಅದರಲ್ಲೇ ವಾಸಿಸುತ್ತಿದ್ದುದಲ್ಲದೆ. ನಾರ್ವೆಯಲ್ಲಿ 1899–1909ರವರೆಗೆ ಕಾರ್ಯದರ್ಶಿ.

(ಎಂ.ಆರ್.)

**ಉಪಗುಪ್ತ:** ಅಶೋಕ ಕಾಲದಲ್ಲಿದ್ದ ಪ್ರಸಿದ್ಧ ಬೌದ್ಧ ಸನ್ಯಾಸಿ. ಮೊಗ್ಗಲೀಪುತ್ತ ತಿಸ್ಸ ಎಂಬುದು ಆತನ ಇನ್ನೊಂದು ಹೆಸರು. ಬುದ್ಧದೇವನ ತರುವಾಯ ಬಂದು ವಿನಯಪಿಟಕದ ಮುಖ್ಯ ಆಚಾರ್ಯರಲ್ಲಿ ಐದನೆಯವ. ಅಶೋಕನ ಪಟ್ಟಾಭಿಷೇಕದ ವೇಳೆಗೆ ಈತನಿಗೆ 60 ವರ್ಷ. ಅನಂತರ 26 ವರ್ಷಗಳ ಕಾಲ ಜೀವಿಸಿದ್ದ. ಕಳಿಂಗ ಯುದ್ಧಾನಂತರ ಅಶೋಕ ಆಚಾರ್ಯ ಉಪಗುಪ್ತನೊಡನೆ ನಿಕಟವಾದ ಸಂಪರ್ಕವನ್ನಿಟ್ಟುಕೊಂಡಿದ್ದ. ಉಪಗುಪ್ತನಿಂದ ಬೌದ್ಧಮತವನ್ನು ಸ್ವೀಕರಿಸಿದನೆಂದೂ ಆ ಮತದ ಪುಣ್ಯಕ್ಷೇತ್ರಗಳಾದ ಲುಂಬಿನೀವನ, ಬುದ್ಧಗಯ, ಸಾರಾನಾಥ ಮತ್ತು ಕುಶಿನಗರ ಸ್ಥಳಗಳನ್ನು ಅವನೊಡನೆ ಸಂದರ್ಶಿಸಿದನೆಂದೂ ಅಶೋಕಾವಧಾನ ಗ್ರಂಥದಿಂದ ತಿಳಿದುಬರುತ್ತದೆ. ಈತ ಅಶೋಕನ ಕಾಲದಲ್ಲಿ ಪಾಟಲೀಪುತ್ರದ ಅಶೋಕಾರಾಮದಲ್ಲಿ ನೆರವೇರಿದ 3ನೆಯ ಬೌದ್ಧ ಮಹಾ ಸಮ್ಮೇಳನದ ಅಧ್ಯಕ್ಷನಾಗಿದ್ದ. ಇವನ ಜೀವಿತ ಕಾಲದಲ್ಲಿ ರಚಿತವಾದ ಕಥಾವತ್ತು ಗ್ರಂಥದಲ್ಲಿ ಆ ಸಮ್ಮೇಳನಕ್ಕೆ ಸಂಬಂಧಿಸಿದ ದೀರ್ಘವಾದ ವಿವರಣೆಗಳಿವೆ. ಈತನ ಸ್ಮರಣಾರ್ಥವಾಗಿ ಮಧುರ ಪಟ್ಟಣದಲ್ಲಿ ಒಂದು

ಬೌದ್ಧಸ್ತೂಪ ನಿರ್ಮಾಣವಾಯಿತು. ಮಹಾನಾಮ ಎಂಬುವವನಿಂದ ರಚಿತವಾದ ಮಹಾವಂಶ ಮತ್ತು ಬೌದ್ಧಮತದ ಪಾಳೀ ಗ್ರಂಥಗಳಿಂದ ಈತನಿಗೆ ಸಂಬಂಧಿಸಿದ ವಿವರಣೆಗಳು ದೊರೆಯುತ್ತವೆ. (ಜಿ.ಆರ್.ಆರ್.)

**ಉಪಗ್ರಹ:** ಒಂದು ಗ್ರಹದ ಸುತ್ತಲೂ ಪರಿಭ್ರಮಿಸುವ ಆಕಾಶಕಾಯ (ಸ್ಯಾಟಿಲೈಟ್). ಚಂದ್ರಭೂಮಿಯ ಉಪಗ್ರಹ. ಚಂದ್ರನು ಆದ್ದರಿಂದ ಚಂದ್ರ, ಉಪಗ್ರಹ ಶಬ್ದಗಳನ್ನು ಪರ್ಯಾಯಾರ್ಥದಲ್ಲಿ ಬಳಸುವುದುಂಟು. ಸೌರವ್ಯೂಹದಲ್ಲಿ 32 ಉಪಗ್ರಹಗಳಿವೆ. ಅವುಗಳ ಕೆಲವು ವಿವರಗಳನ್ನು ಇಲ್ಲಿ ಕೊಟ್ಟಿದೆ.

ಪಟ್ಟಿ 1: ಗ್ರಹ–ಉಪಗ್ರಹ ವಿತರಣೆ

| ಗ್ರಹದ ಹೆಸರು | ಬುಧ | ಶುಕ್ರ | ಭೂಮಿ | ಮಂಗಳ | ಗುರು | ಶನಿ | ಯುರೇನಸ್ | ನೆಪ್ಚೂನ್ | ಪ್ಲೂಟೋ |
|---|---|---|---|---|---|---|---|---|---|
| ಉಪಗ್ರಹಗಳ ಸಂಖ್ಯೆ | 0 | 0 | 1 | 2 | 12 | 10 | 5 | 2 | 0 |

ಪಟ್ಟಿ 2: ಏಳು ಅತಿದೊಡ್ಡ ಉಪಗ್ರಹಗಳ ಕೆಲವು ವಿವರಗಳು

| ಉಪಗ್ರಹದ ಹೆಸರು | ಮೂಲಗ್ರಹದ ಹೆಸರು | ತ್ರಿಜ್ಯ (ಭೂ.ಗ್ರ.=1) | ಉಪಗ್ರಹದ ದ್ರವ್ಯರಾಶಿ (ಭೂ.ಗ್ರ.=1) | ಮೂಲಗ್ರಹದಿಂದ ಸರಾಸರಿ ದೂರ (ಭೂ.ಗ್ರ.ತ್ರಿ=1) |
|---|---|---|---|---|
| ಚಂದ್ರ | ಭೂಮಿ | 0.28 | 0.01 | 30 |
| ಅಯೊ | ಗುರು | 0.02 | 0.00005 | 3 |
| ಯೂರೋಪಾ | ಗುರು | 0.02 | 0.00003 | 5 |
| ಗನಿಮೀಡ್ | ಗುರು | 0.04 | 0.00008 | 8 |
| ಕಲಿಸ್ಟೊ | ಗುರು | 0.03 | 0.00005 | 13 |
| ಟೈಟಾನ್ | ಶನಿ | 0.04 | 0.0002 | 11 |
| ಟ್ರೈಟನ್ | ನೆಪ್ಚ್ಯೂನ್ | 0.08 | 0.001 | 8 |

ಉಪಗ್ರಹ–ಮೂಲಗ್ರಹ ವ್ಯವಸ್ಥೆಯ ಗುರುತ್ವಕೇಂದ್ರ ಸೂರ್ಯನ ಸುತ್ತಲೂ ಪರಿಭ್ರಮಿಸುವುದು. ಉಪಗ್ರಹದೊಡನೆ ಹೋಲಿಸುವಾಗ ಮೂಲಗ್ರಹ ಬಲು ದೊಡ್ಡದಾಗಿರುವುದರಿಂದ ಎಲ್ಲ ಸಾಮಾನ್ಯ ಹೇಳಿಕೆಗಳಲ್ಲಿಯೂ ಈ ಗುರುತ್ವಕೇಂದ್ರದ ಕಕ್ಷೆಯನ್ನೇ ಆ ಗ್ರಹದ ಕಕ್ಷೆಯೆಂದು ಭಾವಿಸುವುದು ವಾಡಿಕೆ.

ಒಂದೊಂದು ಉಪಗ್ರಹದ ವಿವರ ತಿಳಿಯಲು ಆಯಾ ಮೂಲಗ್ರಹದ ವಿವರ ನೋಡಿ. ಈ ನೈಸರ್ಗಿಕ ಉಪಗ್ರಹಗಳಲ್ಲದೇ ಅಂತರಿಕ್ಷ ಸಂಶೋಧನೆಯಲ್ಲಿ ಮಾನವ ಬಿಟ್ಟಿರುವ ಕೃತಕ ಉಪಗ್ರಹಗಳಿಗೆ ನೋಡಿ ಉಪಗ್ರಹ, –ಕೃತಕ. *

**ಉಪಗ್ರಹ, ಕೃತಕ:** ಒಂದು ಆಕಾಶಕಾಯದ (ಭೂಮಿ, ಚಂದ್ರ, ಇತ್ಯಾದಿ) ಸುತ್ತಲೂ ಪರಿಭ್ರಮಿಸಲು ಮನುಷ್ಯ ನಿಯೋಜಿಸಿರುವ ಸಾಧನ (ಆರ್ಟಿಫಿಷಲ್ ಸ್ಯಾಟಿಲೈಟ್). ಚಂದ್ರನಂಥ ನೈಸರ್ಗಿಕ ಉಪಗ್ರಹವಾಗಲಿ ಭೂಮಿಯಿಂದ ನಾವು ಕಳುಹಿಸಬಹುದಾದ ಕೃತಕ ಉಪಗ್ರಹಗಳಾಗಲಿ ಪಾಲಿಸಬೇಕಾದ ನಿಯಮಗಳೇನೆನು ಎಂಬುದನ್ನು 17ನೆಯ ಶತಮಾನದಲ್ಲಿಯೇ ಇಂಗ್ಲೆಂಡಿನ ವಿಖ್ಯಾತ ವಿಜ್ಞಾನಿ ನ್ಯೂಟನ್ ಅವನ ಗ್ರಂಥದಲ್ಲಿ ಬರೆದಿಟ್ಟಿದ್ದ. ನಾವು ಭೂಮಿಯಿಂದ ಸೆಕೆಂಡಿಗೆ 8 ಕಿಮೀ. ವೇಗಕ್ಕಿಂತ ಕಡಿಮೆ ವೇಗದಲ್ಲಿ ಯಾವ ಕಾಯವನ್ನೆಸೆದರೂ ಅದು ತಿರುಗಿ ಭೂಮಿಗೇ ಬೀಳುತ್ತದೆ. ಭೂಮೇಲ್ಮೈಯ ಹತ್ತಿರ ಆದರೆ ವಾಯುಮಂಡಲದ ಹೊರಗಡೆ ಸೆಕೆಂಡಿಗೆ 8ಕಿಮೀ. ವೇಗದಲ್ಲಿ ಭೂತಲಕ್ಕೆ ಸಮಾಂತರವಾಗಿ ಒಂದು ಕಾಯವನ್ನೆಸೆದರೆ ಅದು ಭೂಮಿಯನ್ನು ವೃತ್ತಕಕ್ಷೆಯಲ್ಲಿ ಪರಿಭ್ರಮಿಸ ತೊಡಗುತ್ತದೆ. ಸೆಕೆಂಡಿಗೆ 8–11 ಕಿಮೀ. ವೇಗದಲ್ಲಿ ಅಲ್ಲಿ ಎಸೆದಂಥ ಕಾಯಗಳಾದರೋ ಭೂಮಿಯನ್ನು ವಿವಿಧ ದೀರ್ಘವೃತ್ತ (ಎಲಿಪ್ಸ್, ಬಾದಾಮಿಯ ಆಕಾರ) ಕಕ್ಷೆಗಳಲ್ಲಿ ಸುತ್ತುಹಾಕುತ್ತಿರುತ್ತವೆ. ಅದೇ ಸ್ಥಳದಲ್ಲಿ ಸೆಕೆಂಡಿಗೆ 11 ಕಿಮೀ.ಗಿಂತ ಹೆಚ್ಚಿನ ವೇಗದಿಂದ ಕಾಯವನ್ನೆಸೆದರೆ ಅದು ಭೂಮಿಯ ಗುರುತ್ವಾಕರ್ಷಣದಿಂದ ತಪ್ಪಿಸಿಕೊಂಡು ಹೊರಟು ಹೋಗುತ್ತದೆ. ಇವೆಲ್ಲ ಅಂಶಗಳೂ ನ್ಯೂಟನ್ನನ ಗುರುತ್ವಾಕರ್ಷಣ ನಿಯಮಗಳಿಂದ ಸಿದ್ಧಿಸುತ್ತವೆ. ಸೆಕೆಂಡಿಗೆ 8ಕಿಮೀ.ಗಳಂಥ ಪ್ರಚಂಡ ವೇಗಗಳನ್ನು ಸಾಧಿಸಬಲ್ಲ ವಿಧಾನಗಳನ್ನು ವಿಚಾರಪೂರ್ವಕವಾಗಿ ಮೊದಲು ವಿಮರ್ಶೆಮಾಡಿದ ಕೀರ್ತಿ ರಷ್ಯದ ಪ್ರೌಢಶಾಲಾ ಉಪಾಧ್ಯಾಯ ಕಾನ್‌ಸ್ಟ್ಯಾಂಟಿನ್ ಸಿಯಾಲ್‌ಕೋಸ್ಕಿ ಎಂಬಾತನಿಗೆ ಸಲ್ಲುತ್ತದೆ. ಆ ದಿಸೆಯಲ್ಲಿ ರಾಕೆಟ್ ಯಂತ್ರಗಳ ಸ್ಪಷ್ಟ ಉಪಯುಕ್ತತೆಯನ್ನು ಅವನು ಗುರುತಿಸಿದ್ದಷ್ಟೇ ಅಲ್ಲದೆ ರಾಕೆಟ್ ಟ್ರೈನ್ ಎಂಬ ಅವನ ಯೋಜನೆಯಲ್ಲಿ ಹಲವಾರು ಅಂಥ ಯಂತ್ರಗಳನ್ನು ಜೋಡಿಸಿ ಅವು ಹಂತ ಹಂತವಾಗಿ ಒಂದಾದಮೇಲೊಂದು ಕೆಲಸ ಮಾಡಿ ಬಳಿಕ ಕಳಚಿಹೋಗುವಂತೆ ವ್ಯವಸ್ಥೆಗೊಳಿಸುವ ಗಮನಾರ್ಹ ತಂತ್ರವನ್ನೂ ಸಹ ಪ್ರತಿಪಾದಿಸಿದ್ದ. ಇಂಥ ವೇಗೋತ್ಪಾದಕ ಯಂತ್ರಗಳನ್ನು ಘನ ಇಂಧನಗಳಿಂದ ನಡೆಸುವ ಬದಲು ದ್ರವ ಇಂಧನಗಳಿಂದ ನಡೆಸುವುದು ಉತ್ತಮಮಾರ್ಗ ಎಂದೂ ಇವನು ಅಭಿಪ್ರಾಯಪಟ್ಟಿದ್ದ (1898). ಇದಾದಮೇಲೆ ಅಮೆರಿಕದ ಗಾಡರ್ಡ್ (1919) ಮತ್ತು ಜರ್ಮನಿಯ ಓಬರ್ತ್ (1923) ಎಂಬುವರು ಇಂಥ ಅಧಿಕ ವೇಗಗಳನ್ನು ರಾಕೆಟನಂಥ ಪ್ರತಿಕ್ರಿಯಾ ಯಂತ್ರಗಳಿಂದ ಯಶಸ್ವಿಯಾಗಿ ಸಾಧಿಸಬಹುದು ಎಂಬ ಬಗ್ಗೆ ಸ್ಪಷ್ಟವಾದ ಪ್ರಾಯೋಗಿಕ ಪುರಾವೆಗಳನ್ನು ಒದಗಿಸಿಕೊಟ್ಟರು.

ಜಗತ್ತಿನ ಮೊದಲನೆಯ ಕೃತಕ ಉಪಗ್ರಹವನ್ನು ರಷ್ಯನರು 1957 ಅಕ್ಟೋಬರ್ 4ರಂದು ಭೂಮಿಯ ಸುತ್ತಲ ಕಕ್ಷೆಯೊಂದರಲ್ಲಿ (ಆರ್ಬಿಟ್) ಯಂತ್ರಗಳ ನೆರವಿಲ್ಲದೆ ತನ್ನಷ್ಟಕ್ಕೆ ತಾನೇ ಚಲಿಸುವಂತೆ ಮಾಡಿ ಪ್ರಪಂಚದ ಜನರೆಲ್ಲರನ್ನೂ–ಪಾಮರರನ್ನೇ ಅಲ್ಲದೆ ವಿಜ್ಞಾನಿಗಳನ್ನೂ ಬೆರಗುಗೊಳಿಸಿದರು. ಇದಕ್ಕೆ ಅವರು ಸ್ಪುಟ್ನಿಕ್ (ಅಂದರೆ ಸಹಪ್ರವಾಸಿ) ಎಂದು ಹೆಸರಿಟ್ಟರು. ಇದರ ದೀರ್ಘವೃತ್ತ ಕಕ್ಷೆಯ ಉತ್ಕೇಂದ್ರತೆ (ಎಕ್ಸೆಂಟ್ರಿಸಿಟಿ) ಅತ್ಯಲ್ಪ. ಭೂಮಿ ನೀಚಸ್ಥಾನದಲ್ಲಿ (ಪೆರಿಜಿ) ಈ ಕಕ್ಷೆಯ ಎತ್ತರ 228 ಕಿಮೀ., ಉಚ್ಚಸ್ಥಾನದಲ್ಲಿ (ಅಪೋಜಿ) 947 ಕಿಮೀ. ಕಕ್ಷೆಯ ತಲ ಭೂಮಧ್ಯ ವೃತ್ತಕ್ಕೆ $65^0$ ಗಳಷ್ಟು ಓರೆಯಾಗಿದ್ದಿತು. ಕಕ್ಷೆಯಲ್ಲಿ ಪ್ರಥಮ ಸ್ಪುಟ್ನಿಕ್ ಉಪಗ್ರಹ ಒಂದು ಪರಿಭ್ರಮಣೆ ಮುಗಿಸಲು ಬೇಕಾಗುತ್ತಿದ್ದ ಕಾಲ (ಪರಿಭ್ರಮಣಾವಧಿ) ಸುಮಾರು 96.17 ಮಿನಿಟುಗಳು. ಅದು 92 ದಿವಸಗಳ ಕಾಲ ಭೂಮಿಯನ್ನು ಪಶ್ಚಿಮದಿಂದ ಪೂರ್ವಕ್ಕೆ ಸುತ್ತು ಹಾಕುತ್ತಿದ್ದು 1958 ಜನವರಿಯಲ್ಲಿ ಕಕ್ಷೆಯಿಂದ ಜಾರಿ ಭೂ ವಾಯುಮಂಡಲ ದೊಳಗಡೆ ವಾಯುಸಂಘರ್ಷಣದ ಪರಿಣಾಮವಾಗಿ ಸುಟ್ಟು ನಾಶವಾಯಿತು. ಸರಿಸುಮಾರು ಗೋಳಾಕಾರದಲ್ಲಿದ್ದ ಈ ಪ್ರಥಮ ಸ್ಪುಟ್ನಿಕಿನ ವ್ಯಾಸ ಸುಮಾರು 58 ಸೆಂಮೀ; ತೂಕ 83.6 ಕಿಗ್ರಾಂ.; ಅದರ ಗೂಡು ಅಲ್ಯುಮಿನಿಯಂನಿಂದಾ ದದ್ದು; ನೀಚಸ್ಥಾನದಲ್ಲಿ ಅದರ ಕಕ್ಷಾವೇಗ ಸೆಕೆಂಡಿಗೆ 8.4 ಕಿಮೀ; ಉಚ್ಚಸ್ಥಾನದಲ್ಲಿ ಸೆಕೆಂಡಿಗೆ 7.6 ಕಿಮೀ.

ಅಂತರಿಕ್ಷವಾಹನವೊಂದರ ಉಡಾವಣೆಗಾಗಿ (ಲಾಂಚಿಂಗ್) ಒಂದೇ ಒಂದು ರಾಕೆಟ್ ಯಂತ್ರವನ್ನು ಬಳಸಿಕೊಂಡ ಪಕ್ಷದಲ್ಲಿ ನಮಗೆ ಇದುವರೆಗೆ ತಿಳಿದಿರುವಂತೆ ಸಾಕಷ್ಟು ಉಪಯುಕ್ತವಾಗಬಲ್ಲ ವಾಹನಗಳಿಗೆ ಸೆಕೆಂಡಿಗೆ ಸುಮಾರು 5ಕಿ.ಮೀ. ಗಳಿಗಿಂತ ಹೆಚ್ಚಿನ ವೇಗವನ್ನು ದಕ್ಷರೀತಿಯಲ್ಲಿ ನೀಡಬಲ್ಲ ಇಂಧನಗಳಾವುವೂ ಇಲ್ಲ. ಆದ್ದರಿಂದ ಸೆಕೆಂಡಿಗೆ 8–10 ಕಿಮೀ.ಗಳ ವೇಗದಲ್ಲಿ ಕ್ಷಿಪಣಿಗಳನ್ನು (ಮಿಸೈಲ್) ಹಾರಿಸಬೇಕಾದರೆ ಹಲವು ಹಂತಗಳ ರಾಕೆಟ್ ಸಂಯೋಜನೆಯನ್ನೇ ಉಪಯೋಗಿಸಬೇಕಾಗುತ್ತದೆ. ಪ್ರಥಮ ಸ್ಪುಟ್ನಿಕ್ಕನ್ನು ಬಾಹ್ಯಾಂತರಿಕ್ಷಕ್ಕೆ ಹಾರಿಸಿದ ರಾಕೆಟ್ ಸಂಯೋಜನೆಯ ಒಟ್ಟು ತೂಕ 100 ಟನ್ನುಗಳು; ಹಂತಗಳು ಮೂರು. ಮೊದಲನೆಯ ಹಂತದಲ್ಲಿ ಸಮಗ್ರ ರಾಕೆಟ್–ವಾಹನ ವ್ಯವಸ್ಥೆಯ ವೇಗ ಸೆಕೆಂಡಿಗೆ 2 ಕಿಮೀ.ಗೆ ಏರಿತು. ಕೂಡಲೆ ಮೊದಲನೆಯ ಹಂತದ ರಾಕೆಟ್ ಈ ವ್ಯವಸ್ಥೆಯಿಂದ ಕೆಳಕ್ಕೆ ಕಳಚಿಬಿತ್ತು. ಎರಡನೆಯದು ಹೊತ್ತಿಕೊಂಡು ವ್ಯವಸ್ಥೆಯನ್ನು ಸೆಕೆಂಡಿಗೆ 5.5 ಕಿಮೀ. ವೇಗಕ್ಕೆ ತಂದು ಬಳಿಕ ಆ ಹಂತವೂ ಕಳಚಿಬಿತ್ತು. ಅನಂತರ ಮೂರನೆಯ ಹಂತ ವೇಗವನ್ನು ಸೆಕೆಂಡಿಗೆ 8 ಕಿಮೀ. ಗಿಂತ ಅಧಿಕಗೊಳಿಸಿ ಕೃತಕ ಉಪಗ್ರಹವನ್ನು ಬಿಡುಗಡೆ ಮಾಡಿತು. ಆರಂಭದಲ್ಲಿ ಸಮಗ್ರ ರಾಕೆಟ್‌ವಾಹನ ವ್ಯವಸ್ಥೆ ನೇರವಾಗಿ ಮೇಲಕ್ಕೆದ್ದು ಕೆಲವು ಸೆಕೆಂಡುಗಳಲ್ಲಿಯೇ ಸ್ವಲ್ಪ ಸ್ವಲ್ಪವಾಗಿ ವಾಲಿಕೊಳ್ಳುತ್ತ ಹೋಯಿತು. ಮೊದಲನೆಯ ಹಂತ ಕಳಚಿಕೊಂಡಾಗ ಅದು ಭೂತಲಕ್ಕೆ $45^0$ ಓರೆಯಾಗಿತ್ತು. ಉಪಗ್ರಹ ರಾಕೆಟ್ಟಿನಿಂದ ಬಿಡುಗಡೆಯಾದಾಗ ಅದು ನೆಲದಿಂದ 500 ಕಿಮೀ.ಗಳ ಎತ್ತರದಲ್ಲಿ ಭೂತಲಕ್ಕೆ ಸರಿಸುಮಾರಾಗಿ ಸಮಾಂತರವಾಗಿಯೇ ಚಲಿಸತೊಡಗಿತ್ತು.

ಭೂಕಕ್ಷೆಯಲ್ಲಿ ಕೃತಕ ಉಪಗ್ರಹವನ್ನು ಸ್ಥಾಪಿಸುವುದರಲ್ಲಿ ಅಮೆರಿಕನರು ಮೊದಲನೆಯ ಬಾರಿ ಸಫಲರಾದದ್ದು 1958 ಫೆಬ್ರವರಿ 1ರಂದು. ಅವರ ಉಪಗ್ರಹದ ಹೆಸರು ಪ್ರಥಮ ಎಕ್ಸ್‌ಪ್ಲೋರರ್; ತೂಕ ಕೇವಲ 14ಕಿಗ್ರಾಂ; ಉದ್ದ 230 ಸೆಂಮೀ.; ಆಕಾರ 15 ಸೆಂಮೀ. ವ್ಯಾಸದ ಸ್ತಂಭಾಕೃತಿ. ಪ್ರಥಮ ಎಕ್ಸ್‌ಪ್ಲೋರರಿನ ಎತ್ತರ ಉಚ್ಚಸ್ಥಾನದಲ್ಲಿ 2,548 ಕಿ.ಮೀ.; ನೀಚಸ್ಥಾನದಲ್ಲಿ 356 ಕಿಮೀ; ಪರಿಭ್ರಮಣಾವಧಿ 114.8 ಮಿನಿಟುಗಳು; ಸರಾಸರಿ ವೇಗ ಸೆಕೆಂಡಿಗೆ ಸರಿಸುಮಾರು 8ಕಿಮೀ. ಸಮಭಾಜಕವೃತ್ತದಿಂದ ಕಕ್ಷಾತಲದ ಕೋನಾಂತರ $34^0$.

ಎಕ್ಸ್‌ಪ್ಲೋರರಿನ ರಾಕೆಟ್ ವ್ಯವಸ್ಥೆ ನಾಲ್ಕು ಹಂತಗಳದು, 27 ಟನ್ ತೂಕದ್ದು, 20 ಮೀಟರ್ ಎತ್ತರದ್ದು. ಮೊದಲನೆಯ ಹಂತ ಎರಡೂವರೆ ಮಿನಿಟುಗಳ ಕಾಲ ಉರಿದು ಕ್ಷಿಪಣೆಯನ್ನು 80 ಕಿಮೀ. ಎತ್ತರಕ್ಕೆ ಎತ್ತಿ ಸೆಕೆಂಡಿಗೆ 3 ಕಿಮೀ. ವೇಗಕ್ಕೆ ತರುತ್ತದೆ. ಈ ಹಂತ ಕಳಚಿಕೊಂಡ ಮೇಲೆ 7ಮಿನಿಟುಗಳ ಕಾಲ ಕ್ಷಿಪಣಿ ತಾನಾಗಿಯೇ ಅಂತರಿಕ್ಷದಲ್ಲಿ ಜಾರುತ್ತಿರುತ್ತದೆ (ಕೋಸ್ಟಿಂಗ್). ಆಗ ನೆಲದಿಂದ ರೇಡಿಯೋ ಸಂಕೇತವನ್ನು ಕಳುಹಿಸಿ ಎರಡನೆಯ ಹಂತದ ಇಂಧನಗಳನ್ನು ಹೊತ್ತಿಸುತ್ತಾರೆ. ಅದಾದಮೇಲೆ ಕ್ರಮವಾಗಿ ಮೂರನೆಯ ನಾಲ್ಕನೆಯ ಹಂತಗಳೂ ಕಾಲಕ್ಕೆ ಸರಿಯಾಗಿ ಹೊತ್ತಿಕೊಂಡು ಅಂತ್ಯದಲ್ಲಿ ಉಪಗ್ರಹವನ್ನು ಸೆಕೆಂಡಿಗೆ 8 ಕಿಮೀ. ವೇಗದಲ್ಲಿ ಬಿಡುಗಡೆಮಾಡುತ್ತವೆ.

ಎಲ್ಲ ಕೃತಕ ಉಪಗ್ರಹಗಳಲ್ಲಿಯೂ ಅನೇಕ ಸಾಧನೋಪಕರಣಗಳ ವೈವಿಧ್ಯಪೂರ್ಣ ಪ್ರಪಂಚವೇ ಅಡಕವಾಗಿರುತ್ತದೆ. ಈ ಸಾಧನಗಳು ಉಪಗ್ರಹದೊಳಗಿನ ಮತ್ತು ಹೊರಗಿನ ಸಂಮರ್ದ ಉಷ್ಣತೆಗಳನ್ನೂ ಉಪಗ್ರಹದ ಮೇಲೆ ಮಳೆಗರೆಯುವ ಉಲ್ಕೆಗಳನ್ನು ವಿಶ್ವಕಿರಣಗಳನ್ನೂ ಸೂರ್ಯ ಮತ್ತು ನಕ್ಷತ್ರಗಳು ಪ್ರಸಾರ ಮಾಡುತ್ತಿರುವ ದೃಶ್ಯ ಬೆಳಕನ್ನೂ ಅತಿನೇರಳೆ ಬೆಳಕನ್ನೂ, ಎಕ್ಸ್‌ಕಿರಣಗಳನ್ನೂ, ಉನ್ನತವಾಯುಮಂಡಲದ ವಿದ್ಯುತ್‌ಸ್ಥಿತಿಯನ್ನೂ ಕಾಂತಕ್ಷೇತ್ರ

ವನ್ನೂ ಅಳೆಯುತ್ತವೆ. ಹೀಗೆ ಅಳೆದು ನಿರ್ಣಯಿಸಿದ ಅಂಕಿಅಂಶಗಳನ್ನೂ ರೇಡಿಯೋ ಸಂಕೇತಗಳ ಮೂಲಕ ಭೂಮಿಗೆ ಕಳುಹಿಸುವ ರೇಡಿಯೋ ಪ್ರೇಷಕ (ಟ್ರಾನ್ಸ್‌ಮಿಟರ್) ಭೂಮಿಯಿಂದ ಕಳುಹಿಸಿದ ಸಂಕೇತದ ಆಜ್ಞೆಗಳನ್ನು ಉಪಕರಣಗಳಿಗೆ ಮತ್ತು ಪ್ರೇಷಕಕ್ಕೆ ಸಾಗಿಸಬಲ್ಲ ರೇಡಿಯೋ ಗ್ರಾಹಕ (ರಿಸೀವರ್), ಪ್ರೇಷಕ ಗ್ರಾಹಕಗಳಿಗೆ ವಿದ್ಯುಚ್ಛಕ್ತಿಯನ್ನೂ ಒದಗಿಸಬಲ್ಲ ವಿದ್ಯುತ್ಕೋಶಗಳು ಇವಕ್ಕೂ ಉಪಗ್ರಹಗಳಲ್ಲಿ ಸ್ಥಳ ಮೀಸಲಾಗಿರುತ್ತದೆ.

(ಆರ್.ಎಲ್.ಎನ್.)

**ರಾಕೆಟ್ ಯಂತ್ರಗಳ ತತ್ತ್ವ:** ಉಪಗ್ರಹಗಳೇ ಮೊದಲಾದ ಅಂತರಿಕ್ಷ ವಾಹನಗಳನ್ನು ಅವುಗಳ ಕಕ್ಷೆಗಳಿಗೆ ಒಯ್ಯಲು ಬಳಸುವ ವಾಹಕ ರಾಕೆಟುಗಳು ಸಾಮಾನ್ಯವಾಗಿ ಬಾಣಬಿರುಸುಗಳಂತೆ ರಾಸಾಯನಿಕ ದ್ರವ್ಯಗಳ ದಹನ ಕ್ರಿಯೆಯನ್ನು ಅವಲಂಬಿಸಿ ಕೆಲಸಮಾಡುತ್ತವೆ. ಮಕ್ಕಳಾಟದ ಒಂದು ರಬ್ಬರ್ ಬೆಲೂನಿನ ಮೂಲಕ ಇಂಥ ರಾಕೆಟುಗಳ ಚಾಲಕಸಾಮರ್ಥ್ಯವನ್ನು ಚಿಕ್ಕ ಪ್ರಮಾಣದಲ್ಲಿ ಪ್ರದರ್ಶಿಸಬಹುದು. ವಾಯು ತುಂಬಿಸಿ ಬಾಯಿಕಟ್ಟಿರುವ ಬೆಲೂನಿಗೆ ಯಾವೆಡೆಗೆ ಚಲಿಸುವ ಪ್ರವೃತ್ತಿಯೂ ಇರುವುದಿಲ್ಲವಷ್ಟೆ; ಆದರೆ ಕಟ್ಟಿದ ಬಾಯನ್ನು ಬಿಚ್ಚಿಬಿಟ್ಟೊಡನೆಯೇ ಆ ಬೆಲೂನು ತೆರೆದ ಬಾಯಿಗೆ ವಿಮುಖವಾದ ದಿಸೆಯಲ್ಲಿ ವೇಗೋತ್ಕರ್ಷಗೊಂಡು ಸೊಯ್ಯನೆ ಚಲಿಸತೊಡಗುವುದು. ಕೆಲವರ ಮನಸ್ಸಿನಲ್ಲಿ ಆಟದ ಬೆಲೂನಿನ ಈ ವರ್ತನೆ ಅದರಿಂದ ನಿರ್ಗಮಿಸುವ ಗಾಳಿ ಹೊರಗಿನ ವಾಯುರಾಶಿಯನ್ನು ಹಿಂದಕ್ಕೆ ತಳ್ಳುವುದರಿಂದ ಉಂಟಾಗುವ ಪ್ರತಿಕ್ರಿಯೆಯ ಫಲ ಎಂಬ ತಪ್ಪು ಕಲ್ಪನೆಯಿರಬಹುದು. ಆದರೆ ವಾಯುತುಂಬಿಸಿ ಬಾಯಿತೆರೆದ ಬೆಲೂನನ್ನು ನಿರ್ವಾತಗೊಳಿಸಿದ ಆವರಣವೊಂದರಲ್ಲಿ ಬಿಡುಗಡೆ ಮಾಡಿ ನೋಡಿದಾಗ ಬೆಲೂನಿನ ವೇಗೋತ್ಕರ್ಷಕ್ಕೂ ಹೊರಗಿನ ವಾಯುರಾಶಿಗೂ ಸಂಬಂಧವಿಲ್ಲದಿರುವ ಅಂಶ ರುಜುವಾತಾಗುತ್ತದೆ. ನಿರ್ವಾತಾವರಣದಲ್ಲಿ ಆ ವೇಗೋತ್ಕರ್ಷ ನಿಜಕ್ಕೂ ಇನ್ನಷ್ಟು ಹೆಚ್ಚುವುದೇ ವಿನಾ ಕುಗ್ಗುವುದಿಲ್ಲ. ಬೆಲೂನಿನ ವೇಗೋತ್ಕರ್ಷಕ್ಕೆ ನಿಜವಾದ ಕಾರಣ ನಿರ್ಗಮಾವಕಾಶವನ್ನು ಪಡೆದು ಇನ್ನೂ ಬೆಲೂನಿನೊಳಗೇ ಉಳಿದುಕೊಂಡಿರುವ ವಾಯುವೇ ಹೊರತು ಅಲ್ಲಿಂದ ನಿಷ್ಕ್ರಮಿಸಿ ಹೋಗಿರುವ ಗಾಳಿಯಾಗಲೀ ಬಾಹ್ಯ ವಾತಾವರಣವಾಗಲೀ ಅಲ್ಲ. ಇದನ್ನರಿಯಲು ನಾವು ಮೊದಲು ಬಾಯಿಕಟ್ಟಿರುವ ಬೆಲೂನಿನ ಪ್ರಕರಣವನ್ನು ತೆಗೆದುಕೊಳ್ಳೋಣ.

ಒಳಗಿರುವ ಸಂಮರ್ದಿತ ವಾಯು ಈ ಸಂದರ್ಭದಲ್ಲಿ ಬೆಲೂನಿನ ರಬ್ಬರ್ ಕಾಯದ ಎಲ್ಲ ಪ್ರದೇಶಗಳನ್ನೂ ಒಂದೇ ಪ್ರಮಾಣದಲ್ಲಿ ಹೊರಮುಖ ಒತ್ತಡಕ್ಕೆ ಗುರಿಮಾಡುತ್ತದೆ




**ಚಿತ್ರ 1. A ಕಟ್ಟಿರುವ ಬೆಲೂನು, B ಬಾಯಿತೆರೆದ ಬೆಲೂನು (ತೆರೆದ ಕ್ಷಣದಲ್ಲಿ), C ಬಾಯಿತೆರೆದ ಬೆಲೂನು (ತೆರೆದ ಒಂದು ಕ್ಷಣದ ತರುವಾಯ), ಬಾಯಿತೆರೆದ ಬೆಲೂನಿನ ವೇಗೋತ್ಕರ್ಷಕ್ಕೆ ಕಾರಣ ಚಿತ್ರದಲ್ಲಿ ನಿರೂಪಿಸಿದೆ. ಬಾಣಗಳು ದಟ್ಟತೆ ಇಲ್ಲವೆ ವಿರಳತೆಯ ಮೂಲಕ ವಾಯುಸಂಮರ್ದ ಬಲಗಳ ಹಂಚಿಕೆಯನ್ನು ಪ್ರದರ್ಶಿಸುತ್ತವೆಯೇ ವಿನಾ ವಾಯುಚಲನೆಯನ್ನಲ್ಲ. ಸ್ಪಷ್ಟ ಚಿತ್ರಣದ ದೃಷ್ಟಿಯಿಂದ ಇಲ್ಲಿ ಬೆಲೂನಿನ ಬಾಯನ್ನು (B, Cಗಳಲ್ಲಿ) ಬೇಕೆಂದೇ ಬಹಳ ಅಗಲವಾಗಿ ತೋರಿಸಿದೆ.**

(ಚಿತ್ರ 1–A). ಕಾಯದ ಬೇರೆ ಬೇರೆ ಪ್ರದೇಶಗಳ ಮೇಲೆ ವರ್ತಿಸುವ ಸಂಮರ್ದ ಬಲಗಳು ತತ್ಫಲವಾಗಿ ಆಗ ಪರಸ್ಪರ ರದ್ದುಗೊಂಡು ಬಾಯಿ ಕಟ್ಟಿದ ಬೆಲೂನನ್ನು ಯಾವೆಡೆಗೂ ವೇಗೋತ್ಕರ್ಷಗೊಳಿಸಲಾರದೆ ಹೋಗುವುವು. ಆದರೆ ಕಟ್ಟಿರುವ ಬಾಯನ್ನು ಬಿಚ್ಚಿದಾಗ ಅಲ್ಲಿ ಬೆಲೂನಿನ ರಬ್ಬರ್ ಕಾಯದಿಂದ ಆಕ್ರಮಿತವಾಗದ ಕಂಡಿಯೊಂದು ಏರ್ಪಡುತ್ತದೆ. ಈ ಹೊಸ ಪರಿಸ್ಥಿತಿಯಲ್ಲಿ ಕಂಡಿಗೆ ಎದುರಾಗಿರುವ ಬೆಲೂನ್ ಭಾಗದ ಮೇಲೆ ವರ್ತಿಸುವ ಸಂಮರ್ದಬಲಗಳು ರದ್ದಾಗಲು ಸಾಧ್ಯವಿಲ್ಲವಷ್ಟೆ, ಆದ್ದರಿಂದಲೇ ಈ ಬಲಗಳು ಬಾಯಿ ತೆರೆದ ಬೆಲೂನನ್ನು ಆ ಬಾಯಿಗೆ ಎದುರಾಗಿರುವ ದಿಕ್ಕಿನಲ್ಲಿ ತಳ್ಳಿ ವೇಗೋತ್ಕರ್ಷಗೊಳಿಸಲು ಸಮರ್ಥವಾಗುತ್ತವೆ (ಚಿತ್ರ 1–B). ಇದುವರೆಗೆ ಬೆಲೂನಿನ ಆವರಣದೊಳಗಿನ ಎಲ್ಲ ಸ್ಥಳಗಳಲ್ಲಿಯೂ ವಾಯುಸಂಮರ್ದದ ಪರಿಮಾಣ ಒಂದೇ ಆಗಿರುತ್ತದೆ. ಇನ್ನು ಬಾಯಿ ತೆರೆದ ತರುವಾಯವಾದರೋ ಒಳಗಿದ್ದ ವಾಯು ಬೆಲೂನ್ ಆವರಣದಿಂದ ಹೊರಕ್ಕೆ ನುಗ್ಗಲಾರಂಭಿಸುವುದರಿಂದ ಆವರಣದೊಳಗಡೆ ಸಂಮರ್ದದ ಹಂಚಿಕೆ ಮಾರ್ಪಡಬೇಕಾಗುವುದು. ಹಾಗೆ ಮಾರ್ಪಟ್ಟ ಹಂಚಿಕೆಯಲ್ಲಿ ವಾಯುಸಂಮರ್ದ ಬೆಲೂನಿನ ಬಾಯಿಯ ಬಳಿ ಮಿಕ್ಕೆಲ್ಲ ಕಡೆಗಳಿಗಿಂತಲೂ ಕ್ಷೀಣವಾಗಿದ್ದು ಅಲ್ಲಿಂದ ಹೆಚ್ಚು ಹೆಚ್ಚು ಒಳಕ್ಕೆ ಹೋದಂತೆಲ್ಲ ತೀವ್ರಗತಿಯಲ್ಲಿ ವೃದ್ಧಿಗೊಳ್ಳುತ್ತದೆ. ಬೆಲೂನಿನ ರಬ್ಬರ್ ಕಾಯದ ಮೇಲೆ ವರ್ತಿಸುವ ಸಂಮರ್ದ ಬಲಗಳ ಪೈಕಿ ರದ್ದಾಗದೆ ಉಳಿದುಕೊಳ್ಳುವ ಪ್ರಬುದ್ಧ ಬಲಗಳ ಪ್ರಮಾಣ ಇದರಿಂದ ಮೊದಲಿಗಿಂತಲೂ ಹೆಚ್ಚಾಗಿ ಆ ಬಲಗಳು ತುಸುಕಾಲ ಬೆಲೂನನ್ನು ಮುಂಚಿನಂತೆಯೇ ಅದರ ಬಾಯಿಗೆ ವಿಮುಖವಾದ ದಿಸೆಯಲ್ಲಿ ಜೋರಾಗಿ ತಳ್ಳುತ್ತ ಹೋಗುವುವು (ಚಿತ್ರ 1–C). ಈ ಕೊನೆಯ ಪರಿಸ್ಥಿತಿಗೂ ರಾಕೆಟ್ ಯಂತ್ರಗಳು ಕೆಲಸ ಮಾಡುವ ರೀತಿಗೂ ತತ್ತ್ವಶಃ ಯಾವ ವ್ಯತ್ಯಾಸವೂ ಇಲ್ಲ. ಆದರೆ ಅಂತರಿಕ್ಷಗಾಮಿ ರಾಕೆಟುಗಳು ಬೆಲೂನಿನ ನಿದರ್ಶನದಲ್ಲಿ ಕಂಡುಬರುವುದಕ್ಕಿಂತ ಕೋಟ್ಯಂತರ ಪಾಲು ಸತ್ತ್ವಯುತವಾಗಿರಬೇಕಲ್ಲದೆ ಒಂದೆರಡು ಕ್ಷಣಗಳಿಗೆ ಬದಲು ಕೆಲವಾರು ಮಿನಿಟುಗಳಷ್ಟು ದೀರ್ಘಕಾಲ ಕೆಲಸ ಮಾಡಬೇಕಾಗುವುದು. ಆದ್ದರಿಂದ ಅವಶ್ಯ ಸಂಮರ್ದಬಲಗಳಿಗೆ ಜನ್ಮ ನೀಡಿ ನಿಷ್ಕಾಸವಾಗಬೇಕಾದ ಅನಿಲಗಳನ್ನು ಈ ಯಂತ್ರಗಳೊಳಗೆ ಮೊದಲೇ ಸ್ವತಂತ್ರ ಸ್ಥಿತಿಯಲ್ಲಿ ಶೇಖರಿಸಿಡಲು ಸಾಧ್ಯವೇ ಇಲ್ಲ. ಬದಲು ದೊಡ್ಡ ದೊಡ್ಡ ರಾಸಾಯನಿಕ ರಾಕೆಟುಗಳಲ್ಲಿ ಅಂಥ ಅನಿಲಗಳನ್ನು ವೇಗೋತ್ಕರ್ಷದ ಅಗತ್ಯವಿರುವಷ್ಟು ಕಾಲವೂ ದ್ರವ ಅಥವಾ ಘನರೂಪದಲ್ಲಿರುವ ಪದಾರ್ಥಗಳ ದಹನದಿಂದ ಅವಿಚ್ಛಿನ್ನವಾಗಿ ಉತ್ಪಾದಿಸ ಲಾಗುವುದು. ಅಂತರಿಕ್ಷಗಾಮಿ ಯಂತ್ರಗಳು ನಿರ್ವಾತಪ್ರದೇಶದಲ್ಲಿ ಕೆಲಸ ಮಾಡಬೇಕಾಗುವುದ ರಿಂದ ಉರಿಯುವ ದ್ರವ್ಯಗಳಷ್ಟೇ (ಇಂಧನ) ಅಲ್ಲದೆ ಆ ದ್ರವ್ಯಗಳನ್ನು ಉರಿಯುವಂತೆ ಮಾಡುವ ಆಕ್ಸಿಜನ್ ಮುಂತಾದ ಉತ್ಕರ್ಷಣಕಾರಿಗಳನ್ನೂ ಅವುಗಳಲ್ಲಿ ಪೂರ್ವಭಾವಿಯಾಗಿ ಶೇಖರಿಸಿಡುವುದು ಅತ್ಯಾವಶ್ಯಕ. ಇಂಧನ, ಉತ್ಕರ್ಷಣಕಾರಿಗಳು ಉಭಯಸಾಮಾನ್ಯವಾಗಿ ಚಾಲಕದ್ರವ್ಯಗಳೆನಿಸಿಕೊಳ್ಳುತ್ತವೆ (ಪ್ರೊಪೆಲೆಂಟ್ಸ್). ಈವರೆಗೆ ನಡೆದಿರುವ ಮುಖ್ಯ ಅಂತರಿಕ್ಷ ಕಾರ್ಯಕ್ರಮಗಳಲ್ಲೆಲ್ಲ ದ್ರವರೂಪದಲ್ಲಿರುವ ಚಾಲಕದ್ರವ್ಯಗಳೇ ವಿಶೇಷವಾಗಿ ಬಳಕೆಗೆ ಬಂದಿವೆ. ಇಂಥ ಕಾರ್ಯಕ್ರಮಗಳಲ್ಲಿ ಉಪಯೋಗಿಸುವ ರಾಕೆಟುಗಳು ಸಕ್ರಿಯವಾಗಿರುವಾಗ ಪ್ರತಿ ಸೆಕೆಂಡಿನಲ್ಲೂ ಸಹಸ್ರಾರು ಲೀಟರು ಚಾಲಕದ್ರವ್ಯಗಳನ್ನು ವೆಚ್ಚಮಾಡುತ್ತವೆ. ವಾಯುತುಂಬಿಸಿ ಬಾಯಿ ತೆರೆದ ಬೆಲೂನಿನ ವೇಗೋತ್ಕರ್ಷಕ್ಕೆ ನಿರ್ವಾತಾವರಣ ಅಡ್ಡಿಯಾಗುವ ಬದಲು ನಿಜಕ್ಕೂ ಅನುಕೂಲಕರವೆಂದು ಮೇಲೆ ತಿಳಿಸಲಾಗಿದೆ. ಇದೇ ಮೇರೆಗೆ ರಾಕೆಟ್ ಯಂತ್ರಗಳ ದಕ್ಷತೆ ಹಾಗೂ ಚಾಲಕಸಾಮರ್ಥ್ಯಗಳು ವಾತಾವರಣದಲ್ಲಿಗಿಂತ ಅಂತರಿಕ್ಷದ ನಿರ್ವಾತ ಪ್ರದೇಶದಲ್ಲಿ ಇನ್ನೂ ಉತ್ತಮಗೊಳ್ಳುವುವು.

ರಾಕೆಟ್ಟುಗಳನ್ನು ಪ್ರತಿಕ್ರಿಯಾ ಯಂತ್ರಗಳೆಂದು (ರಿಯಾಕ್ಷನ್ ಎಂಜಿನ್ಸ್) ವರ್ಣಿಸುವುದು ವಾಡಿಕೆಯಾಗಿದೆ. ಆದರೆ ಈ ಸಂಬಂಧದಲ್ಲಿ ಒಂದೆರಡು ಸ್ಪಷ್ಟನೆಯ ನುಡಿಗಳು ಅವಶ್ಯ. ಮೇಲಿನ ಬೆಲೂನ್ ನಿದರ್ಶನವನ್ನು ತೆಗೆದುಕೊಂಡು ಹೇಳುವುದಾದರೆ ವಿಸ್ತೃತಗೊಂಡ ಬೆಲೂನಿನ ರಬ್ಬರ್‌ಕಾಯ ಒಳಗಿರುವ ವಾಯುವನ್ನು ಹೊರಕ್ಕೆ ತಳ್ಳುತ್ತದೆ; ಆದ್ದರಿಂದ ನ್ಯೂಟನ್ನಿನ ಮೂರನೆಯ ಚಲನನಿಯಮದ ಮೇರೆಗೆ ಹಾಗೆ ತಳ್ಳಿಸಿಕೊಡುವ ವಾಯು ಕೂಡ ಪ್ರತಿಕ್ರಿಯಾರೂಪವಾಗಿ ರಬ್ಬರ್ ಕಾಯವನ್ನು ವಿರುದ್ಧ ದಿಸೆಯಲ್ಲಿ ಅಷ್ಟೇ ಬಲದಿಂದ ತಳ್ಳುತ್ತದೆ. ಎಂತಲೇ ವಾಡಿಕೆಯ ದೃಷ್ಟಿಯಲ್ಲಿ ಬೆಲೂನು ಒಂದು ಪ್ರತಿಕ್ರಿಯಾ ಯಂತ್ರಮಾದರಿಯಾಯಿತು. ಈ ದೃಷ್ಟಿಕೋನದಂತೆ ಬೆಲೂನು ತನ್ನಲ್ಲಿರುವ ವಾಯುವನ್ನು ಹೊರತಳ್ಳುವುದು ಕಡ್ಡಾಯವಾಗಿ ಕ್ರಿಯೆಯೇ (ಆ್ಯಕ್ಷನ್) ಆಗಬೇಕು. ಆ ವಾಯು ಬೆಲೂನನ್ನು ವಿರುದ್ಧ ದಿಸೆಯಲ್ಲಿ ನೂಕುವುದು ಪ್ರತಿಕ್ರಿಯೆಯೇ ಆಗಬೇಕು. ಆದರೆ ನ್ಯೂಟನ್ನಿನ ಮೂರನೆಯ ಚಲನನಿಯಮ ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಗೆ ವಿಪರ್ಯಯ ಮಾಡಬಹುದಾದ ಪರಿಪೂರ್ಣ ಸಮಾನಸ್ಥಾನಗಳನ್ನು ನೀಡುತ್ತದೆ. ಅಂದರೆ ಸಂಮರ್ದಿತ ವಾಯು ಬೆಲೂನನ್ನು ತಳ್ಳುವುದು ಕ್ರಿಯೆಯೂ ಬೆಲೂನು ವಾಯುವನ್ನು ಹೊರಕ್ಕೆ ನೂಕುವುದು ಪ್ರತಿಕ್ರಿಯೆಯೂ ಆಗಲು ಅಭ್ಯಂತರವಿಲ್ಲ–ನಮ್ಮ ಮೂಲ ಆಸಕ್ತಿ ಬೆಲೂನಿನ ವೇಗೋತ್ಕರ್ಷದಲ್ಲಿರುವುದಾದರೆ ಈ ವಿಪರ್ಯಯಸ್ತ ವರ್ಣನೆಯೇ ನಿಜಕ್ಕೂ ಭಾಷಾದೃಷ್ಟಿಯಿಂದ ಹೆಚ್ಚು ಸಮರ್ಪಕವೆನಿಸುತ್ತದೆ. ಈ ಅಂಶವನ್ನು ಗ್ರಹಿಸಿದ ಬಳಿಕ ವಾಡಿಕೆಯಲ್ಲಿ ಪ್ರತಿಕ್ರಿಯಾ ಯಂತ್ರಗಳೆನಿಸಿಕೊಳ್ಳದ ರೈಲು ಬಸ್ಸುಗಳು ಕೂಡ ವೇಗೋತ್ಕರ್ಷಗೊಳ್ಳಲು ಬಲಗಳನ್ನು (ಕಿಯೆ) ಬೇಡಿಯೇ ಬೇಡುತ್ತವೆಂದೂ ಆ ಸಂದರ್ಭಗಳಲ್ಲೂ ಮೂರನೆಯ ಚಲನನಿಯಮದ ಪ್ರಕಾರ ಅನುರೂಪ ಪ್ರತಿಕ್ರಿಯಾ ಬಲಗಳು ಅಸ್ತಿತ್ವಕ್ಕೆ ಬಂದೇ ತೀರಬೇಕೆಂದೂ ಹೊಳೆದು ಮನಸ್ಸಿನಲ್ಲಿ ಇವೆರಡು ಸನ್ನಿವೇಶಗಳಿಗಿರುವ ಭೇದವಾದರೂ ಏನೆಂದು ಗೊಂದಲವುಂಟಾಗುವುದು ಸಹಜ. ಆ ಭೇದ ಇಷ್ಟೆ : ಒಂದು ಪ್ರಕರಣದಲ್ಲಿ ತಳ್ಳಿಸಿಕೊಳ್ಳುವ ಬೆಲೂನಿನಿಂದ ಹೊರ ಹೊಮ್ಮುವ ಪ್ರತಿಕ್ರಿಯಾ ಬಲಕ್ಕೆ (ಬೇಕಿದ್ದರೆ ಅದನ್ನು ವಾಡಿಕೆಯಂತೆ ಕ್ರಿಯೆ ಎಂದೇ ಕರೆಯಿರಿ) ಗುರಿಯಾಗುವ ದ್ರವ್ಯ ಆ ಬೆಲೂನ್ ಆವರಣದೊಳಗಡೆಯಲ್ಲೇ ಇರುತ್ತದೆ (ಸಂಮರ್ದಿತ ವಾಯು); ಇನ್ನೊಂದು ಪ್ರಕರಣದಲ್ಲಾದರೋ ತಳ್ಳಿಸಿಕೊಳ್ಳುವ ರೈಲು ಬಸ್ಸುಗಳಿಂದ ಉದ್ಭವಿಸುವ ಪ್ರತಿಕ್ರಿಯಾಬಲಗಳಿಗೆ ಗುರಿಯಾಗುವ ದ್ರವ್ಯಗಳು ಬಲುಮಟ್ಟಿಗೆ ಆ ವಾಹನಗಳ ಹೊರಗಡೆ ಇರುತ್ತವೆ (ಕಂಬಿ, ರಸ್ತೆ, ಅಂತಿಮವಾಗಿ ಭೂಮಿ). ರಾಕೆಟ್ ಯಂತ್ರದ ಪರಿಸ್ಥಿತಿ ಬೆಲೂನ್ ಪ್ರಕರಣವನ್ನು ಹೋಲುತ್ತದೆ. ಆದ್ದರಿಂದಲೇ ವೇಗೋತ್ಕರ್ಷಕ್ಕೆ ಗುರಿಯಾಗಬೇಕಾದ ರಾಕೆಟ್ ಗೂಡಿನ ಪ್ರತಿಕ್ರಿಯಾಬಲವನ್ನು ಹೊರಿಸುವ ಸಲುವಾಗಿ ಅಪಾರ ಪರಿಮಾಣದ ದ್ರವ್ಯರಾಶಿಯನ್ನು ಇಂಧನ ಉತ್ಕರ್ಷಣಕಾರಿಗಳ ರೂಪದಲ್ಲಿ ಆ ಯಂತ್ರದೊಳಗೇ ಶೇಖರಿಸಿಡಬೇಕಾಗುವುದು. (ಅಂತರಿಕ್ಷದ ನಿರ್ವಾತಪ್ರದೇಶದಲ್ಲಿ ಆ ಬಲವನ್ನು ಹೊರುವಂಥ ಯಾವ ಬಾಹ್ಯ ದ್ರವ್ಯಗಳೂ ಸಿಗುವುದಿಲ್ಲವಷ್ಟೆ) ಹೀಗಾಗಿ ಅಂತರಿಕ್ಷಗಾಮಿ ರಾಕೆಟುಗಳ ಯಾನಪೂರ್ವ

ತೂಕದಲ್ಲಿ ಮುಕ್ಕಾಲಿಗೂ ಹೆಚ್ಚು ಭಾಗವೆಲ್ಲ ಕೇವಲ ಚಾಲಕದ್ರವ್ಯಗಳದೇ ಆಗಿರುತ್ತದೆ. ಈ ವಿಶ್ಲೇಷಣೆಯಿಂದ ರಾಕೆಟ್‌ಯಂತ್ರಗಳ ಕ್ರಿಯಾವಿಧಾನಕ್ಕೆ ನ್ಯೂಟನ್ನನ ಮೂರನೆಯ ಚಲನನಿಯಮವೇ ತಳಹದಿ ಎಂಬ ವಾಡಿಕೆಯ ಮಾತು ಅಷ್ಟೇನೂ ತರ್ಕಬದ್ಧವಾದುದಲ್ಲವೆಂದು ಗೊತ್ತಾಗುವುದು. ವಾಸ್ತವಿಕವಾಗಿ ಈ ಮೂರನೆಯ ನಿಯಮ ರಾಕೆಟುಗಳು ಚಾಲಕದ್ರವ್ಯಗಳ ಬಗ್ಗೆ ಪ್ರದರ್ಶಿಸುವ ಅತೀವ ದಾಹಕ್ಕೆ, ತತ್ಫಲವಾಗಿ ಇಂದಿನ ಅಂತರಿಕ್ಷ ಸಂಶೋಧನೆಗಳಿಗೆ ತಗಲುವ ಅಪಾರ ವೆಚ್ಚಕ್ಕೆ, ಕಾರಣವೆಂದು ಹೇಳುವುದು ಹೆಚ್ಚು ಸೂಕ್ತ.

ಈಗ ಮುಕ್ಕಾಲಿಗೂ ಹೆಚ್ಚು ಭಾಗ ಯಾನಪೂರ್ವತೂಕ ಚಾಲಕದ್ರವ್ಯಗಳದಾಗಿರುವ ರಾಕೆಟ್‌ಚಾಲಿತ ಅಂತರಿಕ್ಷಗಾಮಿ ವಾಹನವೊಂದು ತನ್ನ ವೇಗವೃದ್ಧಿಯನ್ನು ಎರಡು ರೀತಿಗಳಲ್ಲಿ ಸಾಧಿಸಿಕೊಳ್ಳುತ್ತದೆನ್ನಬಹುದು. ಪ್ರತ್ಯಕ್ಷವಾಗಿ ಮೇಲೆ ಸೂಚಿಸಿರುವಂತೆ ಯಂತ್ರದಿಂದ ನಿಷ್ಕಾಸವಾಗಲಿರುವ ದಹನೋತ್ಪಾದಿತ ಅನಿಲಗಳು ಅದನ್ನು ವಿಮುಖ ದಿಸೆಯಲ್ಲಿ ಅವಿಚ್ಛಿನ್ನವಾಗಿ ತಳ್ಳುತ್ತ ಹೋಗುತ್ತವೆ. ಪರೋಕ್ಷವಾಗಿ, ಚಾಲಕದ್ರವ್ಯಗಳು ಉರಿದು ನಿಷ್ಕಾಸವಾದಂತೆಲ್ಲ ವಾಹನವ್ಯವಸ್ಥೆ ಕ್ರಮಕ್ರಮವಾಗಿ ಹಗುರಗೊಂಡು, ಎಂದಿನಷ್ಟು ಪರಿಮಾಣದ ತಳ್ಳಿಕೆಯೇ ಕಾಲ ಸರಿದಂತೆ ವಾಹನದ ವೇಗವನ್ನು ಮೊದಲಿಗಿಂತ ತೀವ್ರಗತಿಯಲ್ಲಿ ಹೆಚ್ಚಿಸುತ್ತಲೂ ಹೋಗುವುದು. ಇನ್ನು ಯಂತ್ರದಲ್ಲಿ ಚಾಲಕದ್ರವ್ಯಗಳನ್ನು ಶೇಖರಿಸಿಡಲು ತೊಟ್ಟಿ ಮುಂತಾದ ರಚನಾವಿಭಾಗಗಳು ಅವಶ್ಯವಷ್ಟೆ. ರಾಕೆಟ್ಟಿನ ವೇಗೋತ್ಕರ್ಷದ ಫಲವಾಗಿ ವೆಚ್ಚವಾಗುವ ಸಾಮಗ್ರಿಯನ್ನು ಕೇವಲ ಚಾಲಕದ್ರವ್ಯಗಳಿಗೇ ಸೀಮಿತವಾಗಿಟ್ಟುಕೊಳ್ಳದೆ ಈ ರಚನಾವಿಭಾಗಗಳಿಗೂ ವ್ಯಾಪಕಗೊಳಿಸುವ ಚಮತ್ಕಾರಿಕ ತಂತ್ರವೊಂದರಿಂದ ರಾಕೆಟ್‌ಚಾಲಿತ ವಾಹನಗಳಲ್ಲಿ ಮತ್ತೂ ಹೆಚ್ಚಿನ ವೇಗಗಳನ್ನು ಉತ್ಪಾದಿಸಬಹುದು. ಇಂಥ ಯೋಜನೆಯಲ್ಲಿ ಅತಿ ದೊಡ್ಡ ತೊಟ್ಟಿಗಳನ್ನುಳ್ಳ ಭಾರಿ ದೈತ್ಯಾಕಾರದ ಒಂದೇ ರಾಕೆಟ್ಟನ್ನು ರಚಿಸಿಡುವ ಬದಲು ಒಟ್ಟಿನಲ್ಲಿ ಅಷ್ಟೇ ಚಾಲಕದ್ರವ್ಯಗಳನ್ನು ತುಂಬಿಕೊಳ್ಳಬಲ್ಲ ಮೂರುನಾಲ್ಕು ಪ್ರತ್ಯೇಕ ರಾಕೆಟುಗಳನ್ನು ನಿರ್ಮಿಸಿ ಅವನ್ನು ಹಂತಹಂತವಾಗಿ ಒಂದರ ಮೇಲೊಂದು ಜೋಡಿಸಿ ಬಂಧಿಸುತ್ತಾರೆ. ಉಪಯುಕ್ತ ಪಾವತಿಹೊರೆಯನ್ನೊಳಗೊಂಡ (ಪೇಲೋಡ್) ವಾಹನವನ್ನು ಈ ವ್ಯವಸ್ಥೆಯ ಕೊನೆಯ ಹಂತದ ರಾಕೆಟ್ಟಿನ ಮೇಲುಗಡೆ ಜೋಡಿಸಲಾಗುವುದು. ಈ ರೀತಿಯ ಏರ್ಪಾಡಿನಲ್ಲಿ ಒಂದೊಂದು ಹಂತದ ರಾಕೆಟ್ ಕೆಲಸಮಾಡಿ ಅದರ ಚಾಲಕದ್ರವ್ಯಗಳು ಬರಿದಾದಾಗಲೂ ಆ ಇಡೀ ಯಂತ್ರವನ್ನೇ ಉಳಿದ ಯಂತ್ರಗಳಿಂದ ಪ್ರತ್ಯೇಕಿಸಿ ವಿಸರ್ಜಿಸಬಹುದು. ಮೊದಲನೆಯ ರಾಕೆಟ್ ಕೆಲಸಮಾಡಿ ಕಳಚಿಕೊಂಡಾಗ ಎರಡನೆಯ ಹಂತದ ರಾಕೆಟ್ ಕ್ರಿಯೋನ್ಮುಖವಾಗುವುದು. ಅದೂ ಬರಿದಾಗಿ ಕಳಚಿಕೊಂಡಾಗ ಮೂರನೆಯ ಹಂತರ ಸರದಿ, ಇತ್ಯಾದಿ. ಹೀಗೆ ಕೆಲಸಮಾಡಿ ಮುಗಿಸಿದ ರಾಕೆಟುಗಳು ಹಂತಹಂತವಾಗಿ ಕಳಚಿಕೊಳ್ಳುವುದರಿಂದ ಕೇವಲ ಚಾಲಕದ್ರವ್ಯಗಳ ತೂಕವೇ ಅಲ್ಲದೆ ಅವುಗಳ ಶೇಖರಣೆಗೆ ಅವಶ್ಯವಾದ ರಚನಾವಿಭಾಗಗಳ ತೂಕ ಕಡಿಮೆಯಾಗುತ್ತ ಬಂದು ಕೊನೆಯ ಹಂತಕ್ಕೆ ಜೋಡಿಸಿರುವ ವಾಹನ ಎಂದಿಗಿಂತ ಅಧಿಕವಾದ ವೇಗವನ್ನು ಗಳಿಸುತ್ತದೆ. ಉಪಗ್ರಹ ಮುಂತಾದ ಅಂತರಿಕ್ಷವಾಹನಗಳ ಉಡಾವಣೆಯಲ್ಲಿ ಬಳಸಲಾಗುವ ರಾಕೆಟ್‌ಯಂತ್ರಗಳ ಬಗ್ಗೆ ಅರಿತುಕೊಳ್ಳಬೇಕಾದ ಪ್ರಧಾನ ತಾತ್ತ್ವಿಕ ವಿವರಗಳು ಇವಿಷ್ಟು. **(ನೋಡಿ– ರಾಕೆಟ್)**

**ಉಪಗ್ರಹಗಳ ಕಕ್ಷಾಚಲನೆ:** ಕೃತಕ ಭೂಉಪಗ್ರಹಗಳು ಸಂಕೀರ್ಣ ಉಪಕರಣಗಳನ್ನೊಳಗೊಂಡ ಮಾನವನಿರ್ಮಿತ ಅಂತರಿಕ್ಷವಾಹನಗಳು. ಇವನ್ನು ಭೂಮೇಲ್ಮೈಯಿಂದ ಎತ್ತಿ ವಾಯುಮಂಡಲದ ವ್ಯಾಪ್ತಿಯಾಚೆಗೆ ಕೊಂಡೊಯ್ದು ಅಲ್ಲಿ ಸೂಕ್ತವೇಗದೊಡನೆ ಸೂಕ್ತದಿಸೆಯಲ್ಲಿ ಬಿಡುಗಡೆ ಮಾಡುವುದಷ್ಟೆ ಈವರೆಗೆ ಪ್ರಸ್ತಾಪಿಸಿದ ವಾಹಕ ರಾಕೆಟ್ಟುಗಳ ಕೆಲಸ. ರಾಕೆಟ್ಟುಗಳಿಂದ ಪ್ರತ್ಯೇಕಗೊಂಡ ಮೇಲೆ ಉಪಗ್ರಹ ಯಂತ್ರ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾನೇ ಭೂಮಿಯ ಸುತ್ತ ಅವಿಚ್ಛಿನ್ನವಾಗಿ ಪರಿಭ್ರಮಿಸತೊಡಗುವುದು. ಇಂಥ ಯಂತ್ರರಹಿತ



ಚಿತ್ರ 2. ಎಡಗಡೆಯದು–ಸಾಧಾರಣ ಆಕೃತಿಯ ಬಾಣಲೆ; ಬಲಗಡೆಯದು–ಭೂಗುರುತ್ವಾಕರ್ಷಣ ಕ್ಷೇತ್ರದ ಲಕ್ಷಣಗಳನ್ನು ಪ್ರದರ್ಶಿಸುವ ವಿಶೇಷ ಆಕೃತಿಯ ಬಾಣಲೆ. ಎರಡರಲ್ಲೂ ಬಾಣಲೆಗಳ ಅಕ್ಷಗಳನ್ನು ತೋರಿಸಿದೆ.

ಚಲನೆ ಸಾಧ್ಯವಾಗಲು ಕಾರಣ ಆ ಉಪಗ್ರಹ ನಿರ್ವಾತಪ್ರದೇಶದಲ್ಲಿ ಸಂಚರಿಸುವಾಗ ಯಾವ ಗಮನಾರ್ಹ ಘರ್ಷಣೆ–ಪ್ರತಿರೋಧಗಳಿಗೆ ಸಿಲುಕದಿರುವುದೇ. ಅಲ್ಲದೆ ಉಪಗ್ರಹಕ್ಕೆ ಈ ರೀತಿಯಲ್ಲಿ ಲಭಿಸುವ ಸುದೀರ್ಘವಾದ ವೇಗಪೂರ್ಣ ಚರಸ್ಥಿತಿ ಅದನ್ನು ಭೂಮೇಲ್ಮೈಗೆ ಕೂಡಲೇ ಬಿದ್ದುಹೋಗದಂತೆ ರಕ್ಷಿಸುವುದು. ತಕ್ಕಮಟ್ಟಿಗೆ ನುಣುಪಾಗಿರುವ ಬಾಣಲೆಯೊಂದರಲ್ಲಿ ಆಸರೆಯಿಲ್ಲದೆ ನಿಶ್ಚಲವಾಗಿರಿಸಿದ ಗೋಲಿಯು ಆ ಬಾಣಲೆಯ ತಳಭಾಗದೆಡೆಗೆ ಜಾರಲಾರಂಭಿಸುತ್ತದೆ. ಆದರೆ ಹಾಗೆ ನಿಶ್ಚಲವಾಗಿರಿಸುವ ಬದಲು ಬಾಣಲೆಯೊಳಗಡೆ ಚಿಮ್ಮಿ ಬಿಟ್ಟಾಗ ಅದೇ ಗೋಲಿ ಸ್ವಲ್ಪಕಾಲ ತಳಭಾಗದ ಸುತ್ತ ನಿರ್ದಿಷ್ಟ ಹಾದಿಯಲ್ಲಿ ಪ್ರದಕ್ಷಿಣೆ ಹಾಕುವುದೇ ವಿನಾ ಕೂಡಲೇ ಅಲ್ಲಿಗೆ ಜಾರಿಹೋಗುವುದಿಲ್ಲ. ಗೋಲಿಯ ಚಲನೆಗೆ ಒಂದು ಪಕ್ಷ ಬಾಣಲೆ ಯಾವ ಪ್ರತಿರೋಧವನ್ನೂ ಒಡ್ಡದಿದ್ದಲ್ಲಿ ಅದರೊಳಗಡೆ ಗೋಲಿ ಶಾಶ್ವತವಾಗಿ ಸುತ್ತಾಡುತ್ತಲೇ ಇರುತ್ತಿತ್ತೆಂದು ಹೇಳಬಹುದು.

ನಿರ್ವಾತ ಭೂ ಗುರುತ್ವಾಕರ್ಷಣ ಕ್ಷೇತ್ರದಲ್ಲಿ ಜರುಗುವ ಉಪಗ್ರಹಗಳ ಚಲನೆ ಇಂಥ ಆದರ್ಶೀಕೃತ ಬಾಣಲೆಯೊಳಗಿನ ಗೋಲಿಯ ಚಲನೆಯನ್ನು ಹೋಲುವುದು. ಈ ಸಾದೃಶ್ಯವನ್ನು ಮತ್ತಷ್ಟು ಪುಷ್ಟೀಕರಿಸಬೇಕಿದ್ದಲ್ಲಿ ಸಾಧಾರಣ ಬಾಣಲೆಯ ಬದಲು ಚಿತ್ರ 2ರ ಬಲಭಾಗದಲ್ಲಿ ತೋರಿಸಿರುವ ವಿಶೇಷ ಆಕೃತಿಯ ಬಾಣಲೆಯೊಂದರೊಳಗೆ ಗೋಲಿಯನ್ನು ಚಿಮ್ಮಿಬಿಡಲಾಗಿದೆಯೆಂದು ಭಾವಿಸಬಹುದು. ಒಂದು ಲಂಬೀಯ ಹೈಪರ್‌ಬೊಲದ (ರೆಕ್ಟ್ಯಾಂಗ್ಯುಲರ್ ಹೈಪರ್‌ಬೊಲ) ವಕ್ರರೇಖೆಯ ಕಂಸವನ್ನು ಅದರ ಅನಂತಸ್ಪರ್ಶಿಯೊಂದರ (ಅಸಿಮ್‌ಟೋಟ್) ಮೇಲೆ ಪರಿಭ್ರಮಿಸಿದಾಗ ಈ ಆಕೃತಿ ಜನಿಸುತ್ತದೆ. ಚಿಮ್ಮಿಬಿಟ್ಟ ಗೋಲಿಯ ಚಲನೆಯ ಸಂಬಂಧದಲ್ಲಿ ಇದು ಭೂಗುರುತ್ವಾಕರ್ಷಣಕ್ಷೇತ್ರದ ಲಕ್ಷಣಗಳನ್ನು ಸರಿಸುಮಾರಾಗಿ ಪ್ರತಿಬಿಂಬಿಸುತ್ತದೆ. ಈ ಮಾದರಿಯ ಉಪಕರಣದಲ್ಲಿ ಬೇರೆ ಬೇರೆ ವೇಗಗಳಿಂದ ಗೋಲಿಯನ್ನು ಚಿಮ್ಮಿಬಿಟ್ಟು ಉಪಗ್ರಹ ಮುಂತಾದ ಯಂತ್ರರಹಿತ ಅಂತರಿಕ್ಷವಾಹನಗಳಿಗೆ ಪ್ರಾಪ್ತವಾಗಬಹುದಾದ ಪಥಗಳ ವೈವಿಧ್ಯವನ್ನು ಸ್ಥೂಲವಾಗಿ ಪ್ರದರ್ಶಿಸಬಹುದು. ಆ ಪಥಗಳು ವೃತ್ತ, ದೀರ್ಘವೃತ್ತ, ಪ್ಯಾರಬೊಲ ಅಥವಾ ಹೈಪರ್‌ಬೊಲ ಆಕಾರದಲ್ಲಿರುತ್ತವೆ.

ನಿರ್ವಾತ ಭೂಗುರುತ್ವಕ್ಷೇತ್ರದಲ್ಲಿ ಯಂತ್ರಕ್ರಿಯೆಯಿಲ್ಲದೆ ಸಂಚರಿಸುವ ವಾಹನಗಳ ಚಲನಕ್ರಮಗಳನ್ನು ನೇರ ಗಣಿತ ವಿಧಾನದ ಮೂಲಕ ಕೆಳಗೆ ಕಂಡಂತೆ ವಿಮರ್ಶಿಸಬಹುದು. ಎಲ್ಲೆಡೆಗಳಲ್ಲಿಯೂ ಒಂದೇ ಸಾಂದ್ರತೆಯಿರುವ ಏಕಕೇಂದ್ರೀಯವಾದ (ಕಾನ್‌ಸೆಂಟ್ರಿಕ್) ಅನೇಕ ಪರಿಪೂರ್ಣ ಗೋಲಾಕೃತಿಯ ಸ್ತರಗಳಿಂದ ಭೂಮಿ ರಚಿತವಾಗಿದೆಯೆಂದು ಭಾವಿಸೋಣ. ಆಗ ಅದರ ಆಕರ್ಷಣೆಯ ಫಲವಾಗಿ ವಾಹನದ ವೇಗೋತ್ಕರ್ಷ ಸದಾ ಕಾಲದಲ್ಲಿಯೂ ನಿಖರವಾಗಿ ಭೂ ಕೇಂದ್ರದೆಡೆಗೇ ಏರ್ಪಡುವುದು. ಈ ಪರಿಸ್ಥಿತಿಯಲ್ಲಿ ವಾಹನದ ಚಲನೆ ಭೂ ಕೇಂದ್ರದಿಂದ ವೀಕ್ಷಿಸಿದಾಗ ದೂರದ ನಕ್ಷತ್ರಗಳ ಹಿನ್ನೆಲೆಯಲ್ಲಿ ಸ್ಥಿರವಾದ ನಿಲುವನ್ನು ತಾಳುವ ಒಂದು ನಿರ್ದಿಷ್ಟ ತಳಕ್ಕಷ್ಟೇ ಸೀಮಿತವಾಗುತ್ತದೆ, ಈ ಸ್ಥಿರ ತಳದಲ್ಲಿ C ಭೂಕೇಂದ್ರವೂ CA ಯಾವುದಾದರೊಂದು ಸ್ಥಿರ ಸದಿಶರೇಖೆಯೂ ಹಾಗೂ B ವಾಹನದ ಯಾವುದಾದರೊಂದು ಕ್ಷಣಿಕ ಸ್ಥಾನವೂ ಆಗಿರಲಿ ಚಿತ್ರ. ಇದೇ ತಲದಲ್ಲಿ R ಮತ್ತು P ಎಂಬ ಚರ ಏಕಮಾನ (ಸದಿಶಗಳನ್ನು ವೇರಿಯಬಲ್ ಯೂನಿಟ್ ವೆಕ್ಟರ್ಸ್) ಕ್ರಮವಾಗಿ BC ಮತ್ತು BC ಗೆ ಲಂಬವಾಗಿರುವ ನೇರಗಳಲ್ಲಿ ಎಳೆದು ವಾಹನ B ಸ್ಥಾನವನ್ನು ತಲಪಿದ ಕಾಲವನ್ನು $t$, BC ರೇಖೆಯ ಉದ್ದ $r$, ABC ಕೋನ $\theta$. ಭೂಮಿಯ ತೂಕ M, ಸಾರ್ವತ್ರಿಕ ಗುರುತ್ವಾಕರ್ಷಣ ನಿಯತಾಂಕ G ಎಂದು ನಿರ್ದೇಶಿಸೋಣ.




**ಚಿತ್ರ 3.**

ಈಗ B ಯಲ್ಲಿರುವ ವಾಹನದ ಭೂಸಾಪೇಕ್ಷ ವೇಗೋತ್ಕರ್ಷ ನ್ಯೂಟನ್ನನ ಗುರುತ್ವಾಕರ್ಷಣ ನಿಯಮದ ಮೇರೆಗೆ $\left(\frac{GM}{r^2}\right)R$ ಎಂಬ (ಸದಿಶ) ಮೌಲ್ಯಕ್ಕೂ ಗತಿಶಾಸ್ತ್ರ ಸೂತ್ರಗಳ ಮೇರೆಗೆ $\left(r\dot{\theta}^2-\ddot{r}\right)R+\frac{1}{r}\frac{d}{dt}\left(r^2\dot{\theta}\right)P$ ಎಂಬ ಮೌಲ್ಯಕ್ಕೂ ಸಮವಾಗಬೇಕು. ಇವೆರಡು ಮೌಲ್ಯಗಳನ್ನು ಸಮೀಕರಿಸಿದಾಗ P ಯ ಸಹಗುಣಕ (ಕೋಎಫಿಷಂಟ್) ಶೂನ್ಯವಾಗಿ ಪರಿಣಮಿಸಿ $r^2\dot{\theta}$ ಒಂದು ನಿಯತಮೌಲ್ಯ ವೆಂಬ ಅಂಶ ಸ್ಥಾಪಿತವಾಗುತ್ತದೆ. ಈ ನಿಯತಮೌಲ್ಯವನ್ನು h ಎಂದೂ $r=\left(\frac{1}{u}\right)$ ಎಂದೂ ಬರೆದರೆ ಮೇಲಿನ ಸದಿಶೋಕ್ತಿಗಳಲ್ಲಿ R ನ ಸಹ ಗುಣಕಗಳನ್ನು ಕ್ರಮವಾಗಿ $GMu^2$ ಮತ್ತು $h^2u^2\left(\frac{d^2u}{d\theta^2}+u\right)$ ಎಂಬುದಾಗಿ ರೂಪಾಂತರಿಸಲು ಸಾಧ್ಯವಾಗುವುದು. ಅಂತಿಮವಾಗಿ ಈಗ ಇವೆರಡನ್ನೂ ಸಮೀಕರಿಸಿ ರಚಿಸಬಹುದಾದ

$$\frac{d^2u}{d\theta^2}+u=\frac{GM}{h^2}$$

ಎಂಬ ಅವಕಲನ ಸಮೀಕರಣವನ್ನು (ಡಿಫರೆನ್ಷಿಯಲ್ ಈಕ್ವೇಷನ್) ನಾವು ಬಿಡಿಸಿದರೆ

$$\frac{h^2u}{GM}=1+e\cos(\theta+\alpha) \qquad ......(1)$$

ಎಂದು ವ್ಯಕ್ತವಾಗುವುದು: ಇಲ್ಲಿ e ಹಾಗೂ α ಗಳು ನಿಯತಾಂಕಗಳು. ಈ ಕೊನೆಯ ಸಮೀಕರಣ ಉತ್ಕೇಂದ್ರತೆ e ಮತ್ತು ನಾಭೀಲಂಬ (ಲೇಟಸ್ ರೆಕ್ಟಂ) $h^2/GM$ ಇರುವ ದೀರ್ಘವೃತ್ತ, ಪ್ಯಾರಬೊಲ ಅಥವಾ ಹೈಪರ್‌ಬೊಲ ಮಾರ್ಗವಾಗಿ ವಾಹನ ಚಲಿಸುವುದೆಂದು ನಮಗೆ ತಿಳಿಸುತ್ತದೆ. ಅಲ್ಲದೆ ಇದಾವುದೇ ಪಥದ ನಾಭಿ (ಫೋಕಸ್) ಭೂಕೇಂದ್ರ C ಯಲ್ಲಿರಬೇಕಾಗುವುದು. ವಾಹನ ಚಲಿಸುವಾಗ ಗತಿಶಾಸ್ತ್ರ ಸೂತ್ರಗಳ ಪ್ರಕಾರ B ಸ್ಥಾನದಲ್ಲಿ ಆದರೆ ವೇಗ $r\dot{\theta}P-r\dot{R}$ ಎಂಬ ಸದಿಶಮೌಲ್ಯಕ್ಕೆ ಸಮವಾಗಿರಬೇಕಾಗುವುದು. ಪ್ರಸಕ್ತ ಸನ್ನಿವೇಶದಲ್ಲಿ ಈ ವೇಗ ಸದಿಶವನ್ನು $h\left(uP+\frac{du}{d\theta}R\right)$ ಎಂದು ರೂಪಾಂತರಿಸಿಕೊಂಡು ಅದರ ಪರಿಮಾಣ $v$ಯ ವರ್ಗವನ್ನು ಕೆಳಗಿನಂತೆ ಲೆಕ್ಕಹಾಕಿ ಸಂಕ್ಷೇಪಿಸಬಹುದು:

$$v^2=h^2\left[u^2+\left(\frac{du}{d\theta}\right)^2\right]=2GMu+G^2M^2(e^2-1)/h^2$$

$(e^2-1)$ ನಲ್ಲಿ ಇದನ್ನು ಬಿಡಿಸಿದಾಗ

$$e^2-1=\frac{h^2}{G^2M^2}\left(v^2-2GMu\right) \qquad ......(2)$$

ಎಂದಾಗುತ್ತದೆ. ಈಗ ವಾಹನ ಒಂದು ಪ್ಯರಾಬೊಲ ಮಾರ್ಗವಾಗಿ ಸಂಚರಿಸಬೇಕಾದಲ್ಲಿ ಅಂಥ ಯಾವುದೇ ಪರ್ಯಾಬೊಲದ ಉತ್ಕೇಂದ್ರತೆ e=1 ಆದ್ದರಿಂದ ಆ ವಾಹನದ ವೇಗಪರಿಮಾಣ ಪ್ರತಿ ಸ್ಥಾನದಲ್ಲೂ $\sqrt{2GMu}$ ಎಂಬ ನಿರ್ದಿಷ್ಟ (ಚರ) ಮೌಲ್ಯಕ್ಕೆ ಸಮವಾಗಿರಬೇಕಾಗುವುದು. ಈ ಕಾರಣಕ್ಕಾಗಿ $\sqrt{2GMu}$ ವನ್ನು ಆಯಾ ಸ್ಥಾನದ ಪ್ಯಾರಬೊಲೀಯ ವೇಗವೆಂದು (ಪರ್ಯೊಬೊಲಿಕ್ ಸ್ಪೀಡ್) ಕರೆಯುತ್ತಾರೆ. 1/u ಎಂಬುದು ಭೂಕೇಂದ್ರದಿಂದ ವಾಹನಸ್ಥಾನಕ್ಕಿರುವ ದೂರವನ್ನು ಸೂಚಿಸುತ್ತದೆಂಬುದನ್ನು ನೆನಪಿಡುವುದು ಅಗತ್ಯ, ರಾಕೆಟ್‌ಯಂತ್ರಗಳು ವಾಹನವನ್ನು B ಸ್ಥಾನಕ್ಕೆ ಕೊಂಡೊಯ್ದು ಅಲ್ಲಿ ಆ ಸ್ಥಾನಕ್ಕೆ ಅನ್ವಯಿಸುವ ಪರ್ಯಾಬೊಲೀಯ ವೇಗದಿಂದ ಬಿಡುಗಡೆ ಮಾಡಿದರೆ ಆ ತರುವಾಯ ಅದು ಒಂದು ಪರ್ಯಾಬೊಲ ಪಥದಲ್ಲಿ ಯಂತ್ರ ಕ್ರಿಯೆಯಿಲ್ಲದೆ ಸಂಚರಿಸತೊಡಗುವುದು. ಭೂಮೇಲ್ಮೈಯ ಸಮೀಪದಲ್ಲಿ ಪರ್ಯಾಬೊಲೀಯ ವೇಗಪರಿಮಾಣ ಸೆಕೆಂಡಿಗೆ ಸುಮಾರು 11 ಕಿಮೀ.ಗಳಷ್ಟಾಗುತ್ತದೆ. ರಾಕೆಟ್‌ಯಂತ್ರಗಳಿಂದ ಬಿಡುಗಡೆಯಾದಾಗ ವಾಹನ ಆ ಸ್ಥಾನಕ್ಕೆ ಅನ್ವಯಿಸುವ ಪರ್ಯಾಬೊಲೀಯ ವೇಗಕ್ಕಿಂತ ಹೆಚ್ಚಿನ ವೇಗದಿಂದ ಚಲಿಸುತ್ತಿದ್ದಲ್ಲಿ ಮೇಲಿನ ಸಮೀಕರಣದಂತೆ e>1 ಆಗುವುದರಿಂದ ವಾಹನಕ್ಕೆ ಪ್ರಾಪ್ತವಾಗುವ ಪಥ ಹೈಪರ್‌ಬೊಲಾ ಕಾರವನ್ನು ತಾಳುವುದು. ಪ್ಯಾರಾಬೊಲ, ಹೈಪರಾಬೊಲಗಳು ಸಂವೃತ (ಕ್ಲೋಸ್ಡ್), ವಕ್ರರೇಖೆಗಳಲ್ಲದ ಕಾರಣ ಪ್ಯಾರಬೊಲೀಯವೇಗ ಅಥವಾ ಅದಕ್ಕೂ ಹೆಚ್ಚಿನ ವೇಗಗಳಿಂದ ಬಿಡುಗಡೆಯಾದ ವಾಹನಗಳು ಭೂಮಿಯ ಸುತ್ತ ಪರಿಭ್ರಮಿಸುವ ಉಪಗ್ರಹಗಳಾಗಲಿ ಸಾಧ್ಯವಿಲ್ಲ. ಅಂಥ ವಾಹನಗಳು ಭೂಪರಿಸರದಿಂದ ತಪ್ಪಿಸಿಕೊಂಡು ಅನಿರ್ದಿಷ್ಟವಾಗಿ ದೂರಸರಿಯುತ್ತ ಹೋಗುವುದರಿಂದ ಪ್ಯಾರಾಬೊಲೀಯ ವೇಗವನ್ನು ವಿಮೋಚನವೇಗವೆಂದೂ (ಎಸ್ಕೇಪ್ ವೆಲಾಸಿಟಿ) ಕರೆಯುವುದುಂಟು. ಅಂತರಿಕ್ಷ ವಾಹನವೊಂದನ್ನು ಭೂಉಪಗ್ರಹವನ್ನಾಗಿ ಸ್ಥಾಪಿಸಲು ಅದನ್ನು ಪ್ಯಾರಬೊಲೀಯ ವೇಗಕ್ಕಿಂತ ಕಡಿಮೆವೇಗದಲ್ಲಿ ಬಿಡುಗಡೆ ಮಾಡಬೇಕು. ಆಗ ಮೇಲಿನ ಸಮೀಕರಣದ ಪ್ರಕಾರ e<1 ಆಗುವುದರಿಂದ ವಾಹನಕ್ಕೆ ದೀರ್ಘ ವೃತ್ತಾಕಾರದ ಸಂವೃತ ಪಥ ಲಭಿಸುತ್ತದೆ. ಇಂಥ ಸಂವೃತ ಪರಿಭ್ರಮಣ ಪಥಕ್ಕೆ ಕಕ್ಷೆ (ಆರ್ಬಿಟ್) ಎಂದು ಹೆಸರು. ಎಲ್ಲ ವಿಶ್ಲೇಷಣೆ ನಿರ್ವಾತ ಭೂಗುರುತ್ವಕ್ಷೇತ್ರಕ್ಕೆ ಸರಿ ಹೊಂದುವುದೇ ವಿನಾ ವಾಯುಮಂಡಲದೊಳಗಿನ ಪ್ರದೇಶಗಳಿಗಲ್ಲ. ಆದ್ದರಿಂದ ಇಲ್ಲಿ ಸೂಚಿಸಿರುವ ಲೆಕ್ಕಾಚಾರದ ಮೇರೆಗೆ ನಿರ್ಧರಿಸಿದ ಕಕ್ಷೆಯ ಯಾವುದಾದರೊಂದು ಭಾಗ ಭೂ ವಾಯುಮಂಡಲದೊಳಗಿದ್ದಲ್ಲಿ ಆ ಕಕ್ಷೆಯ ಮೇಲೆ ಚಲಿಸತೊಡಗಬಹುದಾದ ಉಪಗ್ರಹದ ಚಲನೆ ಈ ಲೆಕ್ಕಾಚಾರದಿಂದ ತೀರಭಿನ್ನವಾಗುತ್ತ ಬಂದು ವಾಯುಸಂಘರ್ಷದ ಫಲವಾಗಿ ಅಂಥ ಉಪಗ್ರಹ ಬಹುಬೇಗ ನಾಶವಾಗುವುದು.

ಉಪಗ್ರಹವೊಂದನ್ನು ರಾಕೆಟ್‌ಯಂತ್ರಗಳು ಭೂವಾಯುಮಂಡಲದಾಚೆ A ಎಂಬಲ್ಲಿಗೆ ಒಯ್ದು (ಚಿತ್ರ 3)ಅಲ್ಲಿ AD ನೇರದಲ್ಲಿ ಪ್ಯಾರಬೊಲೀಯ ವೇಗದ 1/k ನಷ್ಟು ವೇಗಪರಿಮಾಣದೊಡನೆ ಬಿಡುಗಡೆ ಮಾಡಲಿ. ಅಂದರೆ AC ಯ ಉದ್ದ $1/\lambda$ ಎಂದು ನಾವು ಇಟ್ಟುಕೊಂಡಲ್ಲಿ ವಾಹನ ಬಿಡುಗಡೆಯಾಗುವ ವೇಗ $\sqrt{2GM\lambda/k}$ ಆಗುವುದು. ಈ ಪರಿಸ್ಥಿತಿಯಲ್ಲಿ $\angle DAC=\beta$ ಎಂದು ಬರೆದರೆ $h^2=2GM\sin^2\beta/\lambda k^2$ ಆಗುತ್ತದೆಂದು ತೋರಿಸಬಹುದು. ಆದ್ದರಿಂದ ಮೇಲಿನ (1)ಮತ್ತು (2) ಸಮೀಕರಣಗಳಲ್ಲಿ $u=\lambda,\theta=0,v^2=2GM\lambda/k^2$ ಎಂಬ ಆದಿಮೌಲ್ಯಗಳನ್ನೂ ಈಗ ತಿಳಿಸಿದ $h^2$ ಮೌಲ್ಯವನ್ನೂ ಆದೇಶಿಸಿ ಅಜ್ಞಾತ ಕಕ್ಷಾ ಪ್ರಾಚಲಗಳಾದ (ಅನ್‌ನೋನ್ ಆರ್ಬಿಟಲ್ ಪ್ಯರಾಮೀಟರ್ಸ್) e ಮತ್ತು $\alpha$ ಗಳನ್ನು ಕಂಡುಹಿಡಿಯಬಹುದು. ಸಾಮಾನ್ಯವಾಗಿ ಉಪಗ್ರಹಗಳನ್ನು ಭೂಕೇಂದ್ರದಿಸೆಗೆ ಲಂಬವಾಗಿ ಬಿಡುಗಡೆ ಮಾಡುವುದರಿಂದ ಹೆಚ್ಚಿನ ಅನುಕೂಲಗಳು ಲಭಿಸುತ್ತವೆ. ವ್ಯಾವಹಾರಿಕ ಪ್ರಾಧಾನ್ಯವುಳ್ಳ ಈ ವಿಶೇಷ ಸಂದರ್ಭದಲ್ಲಿ $\beta=90^\circ$ ಮತ್ತು $\sin\beta=1$ ಆಗಿ ಪರಿಣಮಿಸಿ ಮೇಲೆ ಸೂಚಿಸಿದ ಮೌಲ್ಯಾದೇಶಗಳ ಬಳಿಕ ನಮಗೆ (1) ಮತ್ತು (2) ಸಮೀಕರಣಗಳಿಂದ ಕ್ರಮವಾಗಿ

$$e\cos\alpha=\frac{2}{k^2}-1 \quad \text{ಮತ್ತು} \quad e=\left|\frac{2}{k^2}-1\right|$$

ಎಂಬ ಮಾಹಿತಿಗಳು ದೊರಕುತ್ತವೆ, ಈಗ $k=\sqrt{2}$ ಆದಲ್ಲಿ ಉತ್ಕೇಂದ್ರತೆ e ಶೂನ್ಯವಾಗಿ ಪರಿಣಮಿಸಿ ಉಪಗ್ರಹದ ಕಕ್ಷೆ ಒಂದು ಪರಿಪೂರ್ಣ ವೃತ್ತವಾಗುವುದು. ಈ ಕಾರಣದಿಂದ ಪರ್ಯಾಬೊಲೀಯ ವೇಗದ $1/\sqrt{2}$ ರಷ್ಟು ವೇಗವನ್ನು ವರ್ತುಲ ವೇಗ (ಸರ್ಕ್ಯುಲರ್ ವೆಲಾಸಿಟಿ) ಎಂದು ಕರೆಯುತ್ತಾರೆ. ಭೂಮೇಲ್ಮೈಯ ಸಮೀಪದಲ್ಲಿ ವರ್ತುಲವೇಗದ ಪರಿಮಾಣ ಸೆಕೆಂಡಿಗೆ ಸುಮಾರು 8ಕಿ.ಮೀ. ಹೆಚ್ಚು ಎತ್ತರಕ್ಕೆ ಹೋದಂತೆಲ್ಲ ಈ ಪರಿಮಾಣ ಕಡಿಮೆಯಾಗುತ್ತದೆ. ಉಪಗ್ರಹವೊಂದನ್ನು ಭೂ ಕೇಂದ್ರದಿಸೆಗೆ ಲಂಬವಾಗಿ ವರ್ತುಲವೇಗಕ್ಕಿಂತ ಹೆಚ್ಚಿನ ವೇಗದಿಂದ $\left(1<k<\sqrt{2}\right)$ ಬಿಡುಗಡೆ ಮಾಡಿದಲ್ಲಿ $\cos\alpha=1$ ಮತ್ತು $\alpha=0$ ಆಗಿ ಉಪಗ್ರಹ ಬಿಡುಗಡೆಯಾದ ಸ್ಥಾನ ಫಲಿಸುವ ಕಕ್ಷೆಯಲ್ಲಿ ಭೂಕೇಂದ್ರಕ್ಕೆ ಅತ್ಯಂತ ಸಮೀಪವಾದ ಬಿಂದುವಾಗುತ್ತದೆ (ನೀಚಬಿಂದು). ಬದಲು, ಅದನ್ನು ಹಾಗೆ ಬಿಡುಗಡೆ ಮಾಡಿದ ವೇಗ ವರ್ತುಲವೇಗಕ್ಕಿಂತ ಕಡಿಮೆಯಾದಲ್ಲಿ $\left(k>\sqrt{2},\cos\alpha=-1\text{ ಮತ್ತು }\alpha=180^\circ\text{ ಆಗಿ}\right)$ ಉಪಗ್ರಹ ಬಿಡುಗಡೆಯಾದ ಸ್ಥಾನ ಕಕ್ಷೆಯಲ್ಲಿ ಭೂಕೇಂದ್ರಕ್ಕೆ ಅತ್ಯಂತ ದೂರವಾದ ಬಿಂದುವಾಗುತ್ತದೆ (ಉಚ್ಚಬಿಂದು).

ಈ ಕೊನೆಯ ಪ್ರಸಂಗದಲ್ಲಿ ಉಪಗ್ರಹ ಭೂಕೇಂದ್ರದ ಸುತ್ತ ಪರಿಭ್ರಮಿಸುವಾಗ ಪದೇ ಪದೇ ವಾಯುಮಂಡಲದ ಮೂಲಕ ಹಾದುಹೋಗುವ (ಅಥವಾ ಇನ್ನೂ ಅಧಮ ಪರಿಸ್ಥಿತಿಯಲ್ಲಿ ಘನ ಭೂಮಿಗೇ ಡಿಕ್ಕಿ ಹೊಡೆಯುವ) ಸಂಭವವಿರುವುದರಿಂದ ಹಾಗಾಗದಂತೆ ಎಚ್ಚರವಹಿಸುವುದು ಆವಶ್ಯಕ: ಇದಕ್ಕಾಗಿ ಬಿಡುಗಡೆಯಾದಾಗ ಉಪಗ್ರಹಕ್ಕೆ ಪ್ರಾಪ್ತವಾಗಿರುವ ವೇಗ ವರ್ತುಲವೇಗಕ್ಕಿಂತ ತೀರ ಕಡಿಮೆಯಾಗಿರದಂತೆ ನೋಡಿಕೊಳ್ಳಬೇಕಾಗುವುದು. ಬೇರೆಬೇರೆ ವೇಗಗಳಿಂದ ಭೂಕೇಂದ್ರ ದಿಸೆಗೆ ಲಂಬನೇರದಲ್ಲಿ ಬಿಡುಗಡೆಯಾಗುವ ಅಂತರಿಕ್ಷ ವಾಹನಗಳಿಗೆ ಲಭಿಸಲು ಸಾಧ್ಯವಿರುವ ಪಥಗಳ ವಿನ್ಯಾಸವನ್ನು ಚಿತ್ರ 4ರಲ್ಲಿ ತೋರಿಸಲಾಗಿದೆ. ಇಂಥ ಪಥವೊಂದು ಸಂವೃತ ಕಕ್ಷೆಯಾದಾಗ $(k>1)$,$1/\lambda$ ಮತ್ತು $1/\lambda\left(k^2>1\right)$ ಗಳ ಪೈಕಿ ಅಧಿಕತರವಾದದ್ದು ಭೂಕೇಂದ್ರದಿಂದ ಕಕ್ಷೆಯ ಉಚ್ಚಬಿಂದುವಿನ ದೂರವನ್ನೂ ಚಿಕ್ಕದಾದದ್ದು ನೀಚಬಿಂದುವಿನ ದೂರವನ್ನೂ ವ್ಯಕ್ತಪಡಿಸುತ್ತವೆ; ಆ ಕಕ್ಷೆಯಲ್ಲಿ ಸಂಚರಿಸುವ ಉಪಗ್ರಹದ ಪರಿಭ್ರಮಣಾವಧಿ $\pi k^3/\sqrt{2GM\lambda^3\left(k^2-1\right)^3}$ ದಷ್ಟು ಇರುತ್ತದೆಂದು ತೋರಿಸಬಹುದು.

ಮೇಲಿನ ಲೆಕ್ಕಾಚಾರಗಳೆಲ್ಲ ಕೆಲ ಆದರ್ಶೀಕೃತ ಸನ್ನಿವೇಶಗಳನ್ನು ಆಶ್ರಯಿಸಿ ಮಾಡಿದಂಥವೆಂಬುದನ್ನು ಮರೆಯಬಾರದು. ವಾಸ್ತವಿಕವಾಗಿ ಎಲ್ಲ ಉಪಗ್ರಹಗಳ ಕಕ್ಷೆಗಳನ್ನು ಕಾಲಕ್ರಮೇಣ ಸ್ವಲ್ಪಸ್ವಲ್ಪವಾಗಿ ಪಲ್ಲಟಗೊಳಿಸುತ್ತ ಹೋಗುವ ಅನೇಕ ಪ್ರಭಾವಗಳನ್ನು (ಪರ್ಟರ್ಬಿಂಗ್ ಫೋರ್ಸಸ್) ಆಕಾಶವಿಜ್ಞಾನಿಗಳು ಗಣನೆಗೆ ತೆಗೆದುಕೊಳ್ಳಬೇಕಾಗುವುದು. ಭೂಮಿಯ ಆಕೃತಿಗೂ ಪರಿಪೂರ್ಣ ಗೋಳಕ್ಕೂ ಇರುವ ಅಂತರ, ಭೂಮಿಯ ಸಾಂದ್ರತೆಯಲ್ಲಿನ ಏರುಪೇರುಗಳು, ಎಷ್ಟೇ ಇಲ್ಲವೆಂದರೂ ಸ್ವಲ್ಪಮಟ್ಟಿಗೆ ಕಾಣಿಸಿಕೊಳ್ಳುವ ವಾಯುಪ್ರತಿರೋಧ, ಸೂರ್ಯರಶ್ಮಿ ಉಪಗ್ರಹದ ಮೇಲೆ ಬೀರುವ ಸಂಮರ್ದಬಲ, ಸೂರ್ಯಚಂದ್ರರ ಗುರುತ್ವಾಕರ್ಷಣೆ–ಇವು ಅಂಥ ಪಲ್ಲಟಕಾರಿ ಪ್ರಭಾವಗಳಲ್ಲಿ ಮುಖ್ಯವಾದವು. ಆದರೆ ಇವನ್ನು ಕುರಿತ ಚರ್ಚೆ ಪ್ರಸಕ್ತ ಲೇಖನದ ವ್ಯಾಪ್ತಿಯಲ್ಲಿ ಸಾಧ್ಯವಿಲ್ಲ.

ಯಂತ್ರಕ್ರಿಯೆ ಮತ್ತು ಗಿರಕಿ (ಸ್ಪಿನ್) ಚಲನೆಗಳಿಲ್ಲದೆ. ಬಾಹ್ಯಾಂತರಿಕ್ಷದಲ್ಲಿ ಸಂಚರಿಸುವ ವಾಹನಗಳಲ್ಲಿರುವ ವ್ಯವಸ್ಥೆಗಳು ತೂಕರಹಿತ (ವೇಟ್ ಲೆಸ್) ಸ್ಥಿತಿಯಲ್ಲಿರುತ್ತವೆ. ವಾಹನ ಗಣನಾರ್ಹ ದ್ರವ್ಯರಾಶಿಯನ್ನೇನೂ ಒಳಗೊಳ್ಳದ ಕಾರಣ ಅದರ ಬೇರೆ ಬೇರೆ ತೂಕಗಳ ನಡುವಿನ ಗುರುತ್ವಾಕರ್ಷಣ ಬಲಗಳು ತೀರಾ ಉಪೇಕ್ಷಣೀಯ. ಇನ್ನು ಸೂರ್ಯ ಭೂಮಿ ಮುಂತಾದ ಬೃಹತ್ಕಾಯಗಳು ಸೃಷ್ಟಿಸಿರುವ ಪ್ರಬಲಬಾಹ್ಯ ಗುರುತ್ವಾಕರ್ಷಣ ಕ್ಷೇತ್ರದಲ್ಲಿ ಇವೆಲ್ಲ ಭಾಗಗಳೂ ಒಂದೇ ವೇಗೋತ್ಕರ್ಷಣವನ್ನು ಗಳಿಸುವುದರಿಂದ ಅವುಗಳ ನಡುವೆ ಯಾವ ಸಾಪೇಕ್ಷ ವೇಗೋತ್ಕರ್ಷವೂ ಉಳಿಯುವುದಿಲ್ಲ. ಆದ್ದರಿಂದ ವಾಹನಭಾಗಗಳ ಪೈಕಿ ಒಂದೊಂದರ ಮೇಲೆ ವರ್ತಿಸುತ್ತಿರುವ ಬಾಹ್ಯ ಗುರುತ್ವಾಕರ್ಷಣಬಲವೂ ವಾಹನದ ಇತರ ಭಾಗಗಳಿಗೆ ಸಾಪೇಕ್ಷವಾಗಿ ಅಗೋಚರವೇ ಆಗಿ ಪರಿಣಮಿಸುವುದು. ವಾಹನಭಾಗಗಳ ತೂಕರಹಿತ ಸ್ಥಿತಿಗೆ ಈ ಪರಿಸ್ಥಿತಿ ಕಾರಣವೇ ವಿನಾ ಸೂರ್ಯ ಭೂಮಿ ಮುಂತಾದ ಕಾಯಗಳಿಂದ ಅವುಗಳ ಗುರುತ್ವಾಕರ್ಷಣೆ ಉಪೇಕ್ಷಣೀಯವಾಗುವಷ್ಟು ದೂರಕ್ಕೆ ವಾಹನ ಸರಿದು ಹೋಗಿರುತ್ತದೆಂದಾಗಲೀ ಅಂಥ ಕಾಯಗಳ ಗುರುತ್ವ ಬಲಗಳು. ಸರಿದು ಹೋಗಿರುತ್ತದೆ. ವಾಹನದ ಬಳಿ ಪರಸ್ಪರ ರದ್ದುಗೊಂಡಿರುತ್ತವೆಂದಾಗಲೀ ಭಾವಿಸಬಾರದು. (ಹಾಗಾಗಿದ್ದಲ್ಲಿ ವಾಹನದ ಪಥ ನ್ಯೂಟನ್ನನ ಪ್ರಥಮ ಚಲನನಿಯಮದ ಮೇರೆಗೆ ಒಂದು ಸರಳ ರೇಖೆಯಾಗಿರುತ್ತಿತ್ತು) ಈ ವಿಶ್ಲೇಷಣೆಯಿಂದ ಪ್ರಕಾಶಕ್ಕೆ ಬರುವ ಒಂದು ಮುಖ್ಯ ಅನುಮಿತ ನ್ಯೂಟನ್ನನ ಚಲನನಿಯಮಗಳಿಗೆ ಸರಿಹೊಂದುವ ವೀಕ್ಷಣ ಚೌಕಟ್ಟಿನಲ್ಲಿ ಕಾಯವೊಂದರ ತೂಕ ಸಾರ್ವತ್ರಿಕವಾಗಿ ಆ ಕಾಯದ ಮೇಲೆ ವರ್ತಿಸುವ ಗುರುತ್ವಬಲಗಳ ಮೊತ್ತಕ್ಕೆ ಸಮವಾಗಿರಬೇಕಿಲ್ಲ ಎಂಬುದು. ತದ್ವಿರುದ್ಧವಾಗಿ ಈ ತೂಕ ಅದನ್ನಳೆಯುವ ವ್ಯವಸ್ಥೆಯ ಮೇಲೆ ಕಾಯ ಪ್ರಯೋಗಿಸುವ ಬಲದ ಅಳತೆಯಾಗಿದ್ದು ನಿಜಕ್ಕೂ ಅದರ

ಸ್ವರೂಪ ಗುರುತ್ವೇತರವೇ ಆಗಿರುತ್ತದೆ. ಗಿರಕಿ ಚಲನೆಯಿರುವ ಯಂತ್ರರಹಿತ ವಾಹನಗಳ ಒಳಗಡೆಯಲ್ಲಿ ಕಾಯಗಳು ಕೇಂದ್ರಾಭಿಗಾಮಿ ಬಲಕ್ಕೆ (ಸೆಂಟ್ರಿಪೀಟಲ್ ಫೋರ್ಸ್) ಗುರಿಯಾಗುತ್ತವೆ. ಅವುಗಳ ಮೇಲೆ ತೂಕವನ್ನಳೆಯುವ ವ್ಯವಸ್ಥೆಗಳು ಈ ಬಲವನ್ನು ಪ್ರಯೋಗಿಸುವುದರಿಂದ ಕಾಯಗಳೂ ಆ ವ್ಯವಸ್ಥೆಗಳ ಮೇಲೆ ಅಷ್ಟೇ ಬಲವನ್ನು ವಿರುದ್ಧ




ಚಿತ್ರ 4. ಭೂಮಿಯಿಂದ ವಿವಿಧ ವೇಗಗಳಲ್ಲಿ ಉಡಾಯಿಸಿದ ವಾಹನಗಳ ಪಥಗಳು ಚಿತ್ರದಲ್ಲಿ ಸಂಖ್ಯೆಗಳು ಪಥಗಳನ್ನು ಸೂಚಿಸುತ್ತವೆ. 1. $k>1$ (ಹೈಪರ್‌ಬೋಲ). 2. $k=1$ (ಪ್ಯರಾಬೋಲ). 3. $1<k<\sqrt{2}$ (ಒಂದನೆಯ ದೀರ್ಘವೃತ್ತ). 4. $k=\sqrt{2}$ (ವೃತ್ತ) 5. $k>\sqrt{2}$ (ಎರಡನೆಯ ದೀರ್ಘವೃತ್ತ). A ಎಂಬುದು ವಾಹನ ಬಿಡುಗಡೆಯಾದ ಸ್ಥಳ (ಇದು ದೀರ್ಘವೃತ್ತ 3ಕ್ಕೆ ನೀಚಬಿಂದು, ದೀರ್ಘವೃತ್ತ 5ಕ್ಕೆ ಉಚ್ಚಬಿಂದು. C ಭೂಕೇಂದ್ರ. D ನೀಚ ಬಿಂದು. E ಉಚ್ಚಬಿಂದು.

ದಿಸೆಯಲ್ಲಿ ಪ್ರಯೋಗಿಸಬೇಕಾಗುವುದು. ಆದ್ದರಿಂದಲೇ ಅಂಥ ವಾಹನಗಳೊಳಗೆ ಕಾಯಗಳು ಕೇಂದ್ರಾಪಗಾಮಿ ದಿಸೆಯಲ್ಲಿ ತೂಕವನ್ನು ಗಳಿಸಿಕೊಳ್ಳುತ್ತವೆ.

**ಉಪಗ್ರಹಗಳ ಗತಿವೀಕ್ಷಣೆ:** ಉಪಗ್ರಹವೊಂದರಿಂದ ಅಂತರಿಕ್ಷದ ಬಗ್ಗೆ ಮಾಹಿತಿಗಳನ್ನು ಗ್ರಹಿಸಬೇಕಾದರೆ–ಹಾಗೂ ಅದರ ಕಕ್ಷೆಯನ್ನು ಲೆಕ್ಕಹಾಕಬೇಕಾದರೆ–ಅದು ಆಕಾಶದ ಯಾವ ಭಾಗದಲ್ಲಿ ಯಾವ ಮಾರ್ಗವನ್ನನುಸರಿಸಿ ಚಲಿಸುತ್ತಿದೆಯೆಂದು ಪತ್ತೆ ಹಚ್ಚುವುದು ಆವಶ್ಯಕ. ಈ ಬಗೆಯ ಗತಿವೀಕ್ಷಣೆಯನ್ನು (ಟ್ರ್ಯಾಕಿಂಗ್) ರೇಡಿಯೊ, ರೇಡಾರ್ ಹಾಗೂ ನೇರದೃಶ್ಯ (ಆಪ್ಟಿಕಲ್) ತಂತ್ರಗಳಿಂದ ನಿರ್ವಹಿಸಬಹುದು. ರೇಡಿಯೊ ವೀಕ್ಷಣೆಯ ಒಂದು ವಿಧಾನದಲ್ಲಿ ಉಪಗ್ರಹದೊಳಗೆ ಸಜ್ಜುಗೊಳಿಸಿರುವ ಪ್ರೇಷಕದಿಂದ (ಟ್ರಾನ್ಸ್ ಮೀಟರ್) ನಿರ್ಗಮಿಸಿ ಬಂದು ರೇಡಿಯೊ ತರಂಗಗಳನ್ನು ಅತ್ಯಂತ ಸ್ಫುಟವಾಗಿ ಸ್ವೀಕರಿಸುವಂತೆ ಭೂಮ್ಯಾಧಾರಿತ ಗ್ರಾಹಕಗಳ (ರಿಸೀವರ್ಸ್) ಚರಆ್ಯಂಟೆನಗಳನ್ನು ಸೂಕ್ತವಾದ ದಿಕ್ಕಿನೆಡೆಗೆ ತಿರುಗಿಸಬಹುದು. ಇದರಿಂದ ಗೊತ್ತಾದ ಕಾಲದಲ್ಲಿ ಉಪಗ್ರಹವಿರುವ ದಿಕ್ಕನ್ನು ಮಾತ್ರ ನೇರವಾಗಿ ನಿಷ್ಕರ್ಷಿಸಲು ಸಾಧ್ಯವಾಗುವುದು. ರೇಡಿಯೊ ತರಂಗಗಳನ್ನು ಉಪಗ್ರಹದೊಳಗೇ ಉತ್ಪಾದಿಸುವ ಬದಲು ಭೂಮೇಲ್ಮೈಯಲ್ಲಿರುವ ಪ್ರೇಷಕಗಳಿಂದ ಉಪಗ್ರಹಕ್ಕೆ ಕಳುಹಿಸಿ ಅಲ್ಲಿಂದ ಪ್ರತಿಫಲನಗೊಂಡು ಹಿಂತಿರುಗುವ ತರಂಗಗಳನ್ನು ಆ ಉಪಗ್ರಹದ ಗತಿವೀಕ್ಷಣೆಗಾಗಿ ಬಳಸಿಕೊಳ್ಳಬಹುದು. ಇದು ಅಂತರಿಕ್ಷವಾಹನಗಳ ರೇಡಾರ್ ವೀಕ್ಷಣವಿಧಾನದ ತತ್ತ್ವ. ಇಲ್ಲಿ ರೇಡಿಯೊ ತರಂಗಗಳನ್ನು ಅಲ್ಪಾವಧಿ ಸ್ಫುರಣಗಳ (ಷಾರ್ಟ್ ಪಲ್ಸಸ್) ರೂಪದಲ್ಲಿ ಉತ್ಪಾದಿಸಿ ಉಪಗ್ರಹದೆಡೆಗೆ ಕಳುಹಿಸುತ್ತಾರೆ. ಆಗ ಆ ಸ್ಫುರಣಗಳು ಉಪಗ್ರಹವನ್ನು ಮುಟ್ಟಿ ಅಲ್ಲಿಂದ ಮರಳಿಬರಲು ಹಿಡಿಸುವ ಅವಧಿಯಿಂದ ಉಪಗ್ರಹದ ದೂರ ಕೂಡ ನಿಷ್ಕರ್ಷಿತವಾಗುತ್ತದೆ. ಉಪಗ್ರಹದೊಳಗಿನ ಉಪಕರಣಗಳೆಲ್ಲವೂ ಕೆಟ್ಟು ನಿಷ್ಕ್ರಿಯವಾಗಿದ್ದರೂ ರೇಡಾರ್ ವಿಧಾನದಿಂದ ಅದರ ಗತಿವೀಕ್ಷಣೆಯನ್ನು ನಿರ್ವಹಿಸಲು ಸಾಧ್ಯವಾಗುವುದು. (ಆದರೆ ಭೂಮಿಯಿಂದ ಅತಿದೂರ ಸರಿದುಹೋಗಿರುವ ಅಂತರಿಕ್ಷವಾಹನಗಳು ಪ್ರತಿಫಲಿಸಿ ಹಿಂತಿರುಗಿಸುವ ರೇಡಾರ್ ಸಂಕೇತಗಳು ತೀರ ದುರ್ಬಲ ಸ್ಥಿತಿಯಲ್ಲಿ ಭೂಮಿಗೆ ಮರಳುವುದರಿಂದ ಅಂಥ ವಾಹನಗಳನ್ನು ನೇರ ರೇಡಾರ್ ವಿಧಾನದಿಂದ ಗುರುತಿಸಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ರೇಡಾರ್ ಕ್ರಮದಿಂದ ವಾಹನದ ಗತಿಯನ್ನು ವೀಕ್ಷಿಸಲು ವಾಹನದೊಳಗೆ ರೇಡಾರ್ ಬೀಕನ್ ಅಥವಾ ಟ್ರ್ಯಾನ್ಸ್‌ಪಾಂಡರ್ ಎಂಬ ವ್ಯವಸ್ಥೆಯನ್ನು ಅಳವಡಿಸಿರಬೇಕಾಗುತ್ತದೆ. ಭೂಮಿಯಿಂದ ಆಗಮಿಸಿದ್ದ ರೇಡಾರ್ ಸಂಕೇತಗಳು ಈ ವ್ಯವಸ್ಥೆಯನ್ನು ಪ್ರಚೋದಿಸಿದ ತತ್‌ಕ್ಷಣ ಅದು ವಾಹನದೊಳಗಿರುವ ವಿದ್ಯುಚ್ಛಕ್ತಿಯನ್ನು ಬಳಸಿಕೊಂಡು ಭಿನ್ನ ತರಂಗಾತರವನ್ನುಳ್ಳ ತನ್ನದೇ ರೇಡಿಯೊ ತರಂಗಗಳನ್ನು ಉತ್ಪಾದಿಸಿ ಭೂಮಿಗೆ ಕಳುಹಿಸಿಕೊಡುವುದು. ಟ್ರ್ಯಾನ್ಸ್‌ಪಾಂಡರ್ ವ್ಯವಸ್ಥೆ ಸಕ್ರಿಯವಾಗಿರುವವರೆಗೂ ಈ ಮಾರ್ಗದಿಂದ ವಾಹನದ ಚಲನೆಯನ್ನು ವೀಕ್ಷಿಸಬಹುದು.) ರೇಡಿಯೊ ವ್ಯತಿಕರಣಮಾಪನವೆಂಬ (ರೇಡಿಯೊ ಇಂಟರ್‌ಫಿಯರೋಮೆಟ್ರಿ) ಬೇರೊಂದು ರೇಡಿಯೊ ವೀಕ್ಷಣವಿಧಾನದಲ್ಲಿ ಉಪಗ್ರಹದೊಳಗೆ ಉತ್ಪಾದಿತವಾದ ರೇಡಿಯೋ ತರಂಗಗಳನ್ನು ಭೂಮಿಯ ಮೇಲಿರುವ ವೀಕ್ಷಣಕೇಂದ್ರದಲ್ಲಿ ಒಂದಕ್ಕೆ ಬದಲು ಹಲವು ಬೇರೆ ಬೇರೆ ಆ್ಯಂಟೆನಗಳ ಮೂಲಕ ಏಕಕಾಲಿಕವಾಗಿ ಗ್ರಹಿಸಲಾಗುವುದು. ಭಿನ್ನ ಸ್ಥಾನಗಳಲ್ಲಿ ನೆಟ್ಟಿರುವ ಆಂಟೆನಗಳಿಂದ ಹೀಗೆ ಸ್ವೀಕೃತವಾದ ತರಂಗಗಳಿಗೆ ಸ್ವಲ್ಪ ದಶಾಂತರಗಳನ್ನಳೆದು (ಫೇಸ್ ಡಿಫರೆನ್ಸ್). ವ್ಯತಿಕರಣಮಾರ್ಗದಲ್ಲಿ ಇಂಥ ದಶಾಂತರಗಳನ್ನಳೆದು ಉಪಗ್ರಹದ ಸ್ಥಾನವನ್ನು ನಿಖರವಾಗಿ ನಿಷ್ಕರ್ಷಿಸುತ್ತಾರೆ. ಗತಿವೀಕ್ಷಣೆಯ ರೇಡಿಯೊ ವಿಧಾನಗಳ ಬಗ್ಗೆ ಗಮನಿಸಬೇಕಾದ ಇನ್ನೊಂದು ಅಂಶ ಇಲ್ಲಿ ಬಳಕೆಯಾಗುವ ರೇಡಿಯೊ ತರಂಗಗಳು ಡಾಪ್ಲರ್ ಪರಿಣಾಮಕ್ಕೆ (**ನೋಡಿ**) ಗುರಿಯಾಗುತ್ತವೆಂಬುದು. ಅಂತರಿಕ್ಷವಾಹನದೊಳಗೆ ಉತ್ಪಾದನೆಯಾದಾಗ ವಾಹನಕ್ಕೆ ಸಾಪೇಕ್ಷವಾಗಿ ಅವಕ್ಕಿರುವ ಆವರ್ತನ ಸಂಖ್ಯೆಯೇ (ಫ್ರೀಕ್ವೆನ್ಸಿ) ಬೇರೆ, ಭೂಮಿಯ ಮೇಲಿನ ಆ್ಯಂಟೆನಗಳಿಂದ ಸ್ವೀಕೃತವಾದಾಗ ಆ ಭೂಮೇಲ್ಮೈಗೆ ಸಾಪೇಕ್ಷವಾಗಿ ಅವುಗಳಲ್ಲಿ ಗೋಚರಿಸುವ ಆವರ್ತನ ಸಂಖ್ಯೆಯೇ ಬೇರೆ. ಭೂಮೇಲ್ಮೈಯ ಮತ್ತು ವಾಹನದ ನಡುವಿನ ಪರಸ್ಪರ ಸಾಪೇಕ್ಷ ಚಲನೆಯೇ ಈ ಭೇದಕ್ಕೆ ಕಾರಣ. ಆದ್ದರಿಂದ ಆವರ್ತನ ಸಂಖ್ಯೆಗಳ ವ್ಯತ್ಯಾಸವನ್ನು ಉಪಯೋಗಿಸಿಕೊಂಡು ಅಂತರಿಕ್ಷವಾಹನಗಳ ನಿರ್ಗಮನ/ಅಭಿಗಮನ ವೇಗಗಳನ್ನು (ವೆಲಾಸಿಟಿ ಆಫ್ ರಿಸೆಷನ್/ಅಪ್ರೋಚ್; ರೇಡಿಯಲ್ ವೆಲಾಸಿಟಿ) ಸಹ ರೇಡಿಯೊ ಗತಿವೀಕ್ಷಣ ವಿಧಾನಗಳಲ್ಲಿ ನಿರ್ಧರಿಸಲು ಸಾಧ್ಯವಿದೆ. ಇಂದಿನ ವೀಕ್ಷಣಕೇಂದ್ರಗಳಲ್ಲಿ ಗತಿವೀಕ್ಷಣೆಗೆ ಸಂಬಂಧಿಸಿದ ಎಲ್ಲ ಲೆಕ್ಕಾಚಾರಗಳನ್ನೂ ಕ್ಷಿಪ್ರವಾಗಿ ಸ್ವಯಂಕ್ರಿಯಾತ್ಮಕ ವ್ಯವಸ್ಥೆಗಳೇ (ಆಟೋಮ್ಯಾಟಿಕ್ ಸಿಸ್ಟಮ್ಸ್) ನಿರ್ವಹಿಸುತ್ತವೆ.

ಕೆಲವು ಸನ್ನಿವೇಶಗಳಲ್ಲಿ ಉಪಗ್ರಹಗಳ ಚಲನೆಯನ್ನು ಉಪಕರಣಗಳ ನೆರವಿಲ್ಲದೆ ಬರಿಗಣ್ಣಿನಿಂದ ನೋಡಲು ಸಾಧ್ಯವಾಗುವುದೆಂಬ ಸಂಗತಿ ಜನಸಾಮಾನ್ಯರ ಆಸಕ್ತಿಯನ್ನು ಕೆರಳಿಸದಿರದು. ಇಂಥ ಅವಕಾಶವೊದಗುವುದು ಸೂರ್ಯಾಸ್ತಮಾನವಾದ ಬಳಿಕ ಹಾಗೂ ಸೂರ್ಯೋದಯಕ್ಕೆ ಮುಂಚೆ ಎರಡು ಮೂರು ತಾಸುಗಳ ಕಾಲ ಮಾತ್ರ. ಆಗ ವಾತಾವರಣದಲ್ಲಿ ಕತ್ತಲೆ ಇರುವುದರಿಂದ ಅದಕ್ಕೂ ಮೇಲುಗಡೆ (ನೆಲದಿಂದ ಕೆಲ ನೂರು ಕಿಮೀ. ಎತ್ತರದಲ್ಲಿ) ಸಂಚರಿಸುವ ಯಾವುದಾದರೊಂದು ಉಪಗ್ರಹ ಅತ್ಯಲ್ಪ ಪ್ರಮಾಣದಲ್ಲಿ ಪ್ರತಿಫಲಿಸುವ ಸೂರ್ಯರಶ್ಮಿಯೇ ಎದ್ದು ಕಾಣಿಸಲು ಸಾಧ್ಯವಿದೆ. ಅಂಥ ಸಂದರ್ಭದಲ್ಲಿ ಉಪಗ್ರಹ ಒಂದು ಚಲಿಸುತ್ತಿರುವ ನಕ್ಷತ್ರದಂತೆ ಕೆಲವು ಮಿನಿಟುಗಳ ಕಾಲ ಬರಿಗಣ್ಣ ವೀಕ್ಷಕರ ಗೋಚರಕ್ಕೆ ಬರುತ್ತದೆ. ಭೂಮೇಲ್ಮೈಯಲ್ಲಿರುವ ಕೇಂದ್ರಗಳಲ್ಲಿ ನೇರ ದೃಶ್ಯ (ಆಪ್ಟಿಕಲ್) ವಿಧಾನದಿಂದ ಉಪಗ್ರಹಗಳ ಗತಿವೀಕ್ಷಣೆಯನ್ನು ನಿರ್ವಹಿಸಲು ಸಾಧ್ಯವಾಗುವುದೂ ಇಂಥ ಸಂದರ್ಭಗಳಲ್ಲಿ ಮಾತ್ರವೇ. ಆಕಾಶದಲ್ಲಿ ಹೊಳೆಯುತ್ತ ಚಲಿಸುವ ಉಪಗ್ರಹದ ಮಾರ್ಗರೇಖೆಯ ಚಿತ್ರವನ್ನು ಸ್ಥಿರನಕ್ಷತ್ರಗಳ ಹಿನ್ನೆಲೆಯೊಡನೆ ತೆಗೆದುಕೊಂಡು ಅದರಿಂದ ಉಪಗ್ರಹದ ಚಲನೆಯನ್ನು ವಿಶ್ಲೇಷಿಸುವುದಕ್ಕೆ ನೇರ ದೃಶ್ಯವಿಧಾನವೆಂದು ಹೆಸರು. ಇದಕ್ಕಾಗಿ ವಿಶೇಷ ನಿಯೋಜನೆಯ ದೊಡ್ಡ ದೊಡ್ಡ ಕ್ಷಿಪ್ರಗ್ರಾಹಿ (ಫಾಸ್ಟ್) ಕ್ಯಾಮರಗಳು ಅಗತ್ಯ. ಇವುಗಳಲ್ಲಿ ಕಿಟಕಿಯನ್ನು (ಷಟರ್) ನಿಯತಕಾಲಿಕವಾಗಿ ಒಂದೇ ಸಮನೆ ಮುಚ್ಚಿತೆರೆಯುವ ವ್ಯವಸ್ಥೆ ಮಾಡಿರುತ್ತಾರೆ. ಇದರಿಂದ ಉಪಗ್ರಹದ ಚಿತ್ರೀಕೃತ ಮಾರ್ಗರೇಖೆಯಲ್ಲಿ ಕೆಲವಾರು ಭಿನ್ನ ಭಿನ್ನ ಖಂಡಗಳು (ಸೆಗ್‌ಮೆಂಟ್ಸ್) ಏರ್ಪಟ್ಟು ಕ್ಷಣ ಕ್ಷಣಕ್ಕೂ ಆ ಉಪಗ್ರಹ ಯಾವ ದಿಸೆಯಲ್ಲಿದ್ದಿತೆಂಬ ಬಗ್ಗೆ ನಿಖರ ಮಾಹಿತಿ ದೊರಕುವುದು. ನಿಖರತೆಯಲ್ಲಿ ಬೇರಾವ ಗತಿವೀಕ್ಷಣಮಾರ್ಗವೂ ನೇರದೃಶ್ಯ ವಿಧಾನಕ್ಕೆ ಸಾಟಿಯಾಗದು. ಆದರೆ ಇದು ಎಲ್ಲ ಸಮಯಗಳಿಗೂ ಒದಗಿಬರುವಂಥದಲ್ಲವಾದ ಕಾರಣ ರೇಡಿಯೊ ರೇಡಾರ್ ಮಾರ್ಗಗಳಿಂದ ನಿಷ್ಕರ್ಷಿತವಾದ ವಿವರಗಳನ್ನು ತಾಳೆ ನೋಡಿ ಸಂಸ್ಕರಿಸುವಲ್ಲಿ ಮಾತ್ರ ನೇರದೃಶ್ಯವಿಧಾನ ವಿಶಿಷ್ಟ ಉಪಯುಕ್ತತೆಯನ್ನು ಗಳಿಸಬಲ್ಲುದು.

ಉಪಗ್ರಹಗಳನ್ನು ವಿವಿಧ ತಲಗಳಲ್ಲಿ ಭೂಕೇಂದ್ರದ ಸುತ್ತ ಪರಿಭ್ರಮಿಸುವಂತೆ ಉಡಾಯಿಸಬಹುದು. ಭೂಧ್ರುವಗಳ ಮುಖಾಂತರ ಹಾದುಹೋಗುವ ತಳಗಳಲ್ಲಿ ಏರ್ಪಟ್ಟ ಉಪಗ್ರಹ ಕಕ್ಷೆಗಳು ಧ್ರುವೀಯ ಕಕ್ಷೆಗಳೆನಿಸುತ್ತವೆ (ಪೋಲಾರ್ ಆರ್ಬಿಟ್ಸ್). ಸಮಭಾಜಕವೃತ್ತದ ತಳದಲ್ಲಿರುವ ಕಕ್ಷೆಗಳಿಗೆ ಸಮಭಾಜಕೀಯ ಕಕ್ಷೆಗಳೆಂದು (ಈಕ್ವೆಟೋರಿಯಲ್ ಆರ್ಬಿಟ್ಸ್) ಹೆಸರು. ಇವೆರಡು ವರ್ಗಗಳಿಗೂ ಸೇರದ ಕಕ್ಷೆಗಳನ್ನು ಓರೆಕಕ್ಷೆಗಳೆಂದು (ಅಬ್ಲೀಕ್ ಆರ್ಬಿಟ್ಸ್) ಕರೆಯಬಹುದು. ಆದರ್ಶ ಸನ್ನಿವೇಶದಲ್ಲಿ ಉಪಗ್ರಹವೊಂದರ ಆಕಾಶಮಾರ್ಗವನ್ನು ಭೂಕೇಂದ್ರದಿಂದ ವೀಕ್ಷಿಸಿದಾಗ ಮಾತ್ರ ಅದು ನಕ್ಷತ್ರಗಳ ಹಿನ್ನೆಲೆಯಲ್ಲಿ ಒಂದೇ ನಿಶ್ಚಲ ತಲದಲ್ಲಿರುವಂತೆ ಕಾಣಲು ಸಾಧ್ಯ. (ಆದರೆ ವಾಸ್ತವಿಕ ಪರಿಸ್ಥಿತಿಯಲ್ಲಿ ಹಿಂದೆ ತಿಳಿಸಿರುವ ಪಲ್ಲಟಕಾರಿ ಪ್ರಭಾವಗಳ ಫಲವಾಗಿ ಭೂಕೇಂದ್ರದಿಂದ ವೀಕ್ಷಿಸಿದಾಗಲೂ ಉಪಗ್ರಹ ಚಲಿಸುವ ತಲ ಸ್ವಲ್ಪ ಸ್ವಲ್ಪವಾಗಿ ವ್ಯತ್ಯಸ್ತವಾಗುತ್ತ ಹೋಗುವುದು. ಭೂಮಿ ತನ್ನ ಅಕ್ಷದ ಮೇಲೆ ಆವರ್ತಿಸುತ್ತಿರುವುದರಿಂದಲೂ ಸಮೀಪ ಕಾಯಗಳು ಅಪಾರ ದೃಗಂತರ ಪಲ್ಲಟಕ್ಕೆ (ಪ್ಯಾರಲ್ಯಾಕ್ಷಿಫ್ಟ್) ಗುರಿಯಾಗುವುದರಿಂದಲೂ ಭೂ ಮೇಲ್ಮೈಯಿಂದ ವೀಕ್ಷಿಸಿದಾಗ ಸಾಧಾರಣವಾಗಿ ಉಪಗ್ರಹಗಳ ಆಕಾಶ ಮಾರ್ಗಗಳು ನಕ್ಷತ್ರಗಳ ಹಿನ್ನೆಲೆಯಲ್ಲಿ ಸ್ಥಿರವಾಗಿರುವಂತೆ ಕಾಣಬರುವುದೇ ಇಲ್ಲ. ಉದಾಹರಣೆಗೆ ಸಮಭಾಜಕ ವೃತ್ತದ ಮೇಲಿರುವ E ಸ್ಥಳದಿಂದ ನೋಡಿದಾಗ ನಿನ್ನೆ ರಾತ್ರಿ 9 ಗಂಟೆಗೆ S ಉಪಗ್ರಹ Q ನಕ್ಷತ್ರದ ದಿಸೆಯಲ್ಲಿ ಗೋಚರವಾಗಿರಬಹುದು (ಚಿತ್ರ 5.)

ಈ ಉಪಗ್ರಹದ ಪರಿಭ್ರಮಣಾವಧಿ 115 ಮಿನಿಟುಗಳೆಂದಿಟ್ಟುಕೊಳ್ಳೋಣ. ಹಾಗಿದ್ದಲ್ಲಿ ಉಪಗ್ರಹ 12 ಪೂರ್ಣ ಪರಿಭ್ರಮಣಗಳ ಬಳಿಕ ಇಂದು ರಾತ್ರಿ 8 ಗಂಟೆಗೆ ಭೂಕೇಂದ್ರ ಸಾಪೇಕ್ಷವಾಗಿ ಮತ್ತೆ S ಸ್ಥಾನಕ್ಕೇ ಹಿಂತಿರುಗುತ್ತದೆ. ಆದರೆ ಈ ಸಮಯದಲ್ಲಿ ವೀಕ್ಷಣ ಸ್ಥಳ ಭೂಕೇಂದ್ರ ಸಾಪೇಕ್ಷವಾಗಿ ಹಿಂದಿನ ಸ್ಥಾನದಲ್ಲಿರದೆ ಅದಕ್ಕೆ ಸುಮಾರು $14^0$ ಹಿಂದೆ ಇರುವ F ಎಂಬ ಭಿನ್ನಸ್ಥಾನದಲ್ಲಿರುವುದರಿಂದ ಗೋಚರಿಸಿದ ಉಪಗ್ರಹವೇ ಈಗ R ಎಂಬ ಬೇರೊಂದು ನಕ್ಷತ್ರದ ದಿಸೆಯಲ್ಲಿ ಕಾಣಿಸಿಕೊಳ್ಳುವುದು. ಅಲ್ಲದೆ ಈ ಉಪಗ್ರಹ ಧ್ರುವೀಯ ಅಥವಾ ಓರೆಕಕ್ಷೆಯೊಂದರಲ್ಲಿ ಚಲಿಸುತ್ತಿದ್ದರೆ ಅದು ಇಂದು ಬೇರಾವ ಸಮಯದಲ್ಲೂ ನಕ್ಷತ್ರದ ದಿಸೆಯಲ್ಲಿ ಕಾಣಿಸುವುದೇ ಇಲ್ಲ. ಮೇಲಾಗಿ ಧ್ರುವೀಯ ಕಕ್ಷೆಯೊಂದರ ಯಾವ ಅರ್ಧಭಾಗ ವೀಕ್ಷಕನ ನೋಟಕ್ಕೆ ಲಭಿಸಿದೆ ಎಂಬುದನ್ನು ಅವಲಂಬಿಸಿ ಆ ಕಕ್ಷೆಯಲ್ಲಿ ಚಲಿಸುವ ಒಂದೇ ಉಪಗ್ರಹ ಕೆಲವೊಮ್ಮೆ ಉತ್ತರದಿಂದ ದಕ್ಷಿಣಕ್ಕೂ ಕೆಲವೊಮ್ಮೆ ದಕ್ಷಿಣದಿಂದ ಉತ್ತರಕ್ಕೂ ಸಂಚರಿಸುವಂತೆ ಆತನಿಗೆ ಕಾಣಬಹುದು.




**ಚಿತ್ರ 5. ನಕ್ಷತ್ರಗಳ ಹಿನ್ನೆಲೆಯಲ್ಲಿ ತೋರಿಕೆಯ ಆಕಾಶಮಾರ್ಗ ವ್ಯತ್ಯಾಸವಾಗಲು ಕಾರಣದ ಚಿತ್ರ. ಚಿತ್ರದಲ್ಲಿ C ಭೂಕೇಂದ್ರ ಮತ್ತು ವೃತ್ತ ಭೂಮಧ್ಯ ವೃತ್ತ**

ಅನೇಕ ಉಪಗ್ರಹಗಳು ತಮ್ಮ ಆಂತರಿಕ ಹಾಗೂ ಬಾಹ್ಯ ಪರಿಸರಗಳನ್ನು ಸಂಶೋಧಿಸಿ ಅಲ್ಲಿಯ ಭೌತ ಪರಿಸ್ಥಿತಿಗಳನ್ನು ವಿಶ್ವದ ವಿವಿಧ ಮೂಲೆಗಳಿಂದ ಆಗಮಿಸುವ ಕಿರಣಗಳ ಮತ್ತು ಸೂಕ್ಷ್ಮ ಕಣಾವಳಿಗಳ ಪರಿಮಾಣಗಳನ್ನು ನಿಖರವಾಗಿ ಅಳೆಯಬಲ್ಲವು. ಹೀಗೆ ಉಪಗ್ರಹಕ್ಕೆ ದೊರೆತ ಅಳತೆಗಳನ್ನು ಅದು ರೇಡಿಯೊ ಸಂಕೇತಗಳ ಮೂಲಕ ಭೂಮೇಲ್ಮೈಯಲ್ಲಿರುವ ವೀಕ್ಷಣಕೇಂದ್ರಗಳಿಗೆ ಕಳುಹಿಸಿಕೊಡುತ್ತದೆ. ಈ ಕೇಂದ್ರಗಳಲ್ಲಿ ಗಣಕಯಂತ್ರಗಳ ಸಹಾಯದಿಂದ ಅಂಥ ರೇಡಿಯೊ ಸಂಕೇತಗಳನ್ನು ವಿಶ್ಲೇಷಿಸಿ ಉಪಗ್ರಹದಲ್ಲಿ ನಿರ್ವಹಣೆಯಾದ ಮೂಲ ಅಳತೆಗಳನ್ನು ಪುನಾರಚಿಸುತ್ತಾರೆ. ಅಳತೆಗಳ ಮಾಹಿತಿಯನ್ನು ಗಳಿಸುವ ಈ ತಂತ್ರಕ್ಕೆ ದೂರಗ್ರಾಹ್ಯ ಮಾಪನವೆಂದು (ಟೆಲಿಮೆಟ್ರಿ) ಹೆಸರು. ದೂರಗ್ರಾಹ್ಯಮಾಪನ ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಸಂಶೋಧನೆಗಳಿಗೊಂದು ಹೊಸ ಆಯಾಮವನ್ನು ನೀಡಿದೆ. ಕೆಲವು ವೇಳೆ ಉಪಗ್ರಹಗಳು ಅಳತೆಗಳಷ್ಟನ್ನೇ ಅಲ್ಲದೆ ಖಗೋಳಯಾತ್ರಿಕರ ಮಾತುಗಳನ್ನೂ ವಿವಿಧ ದೃಶ್ಯಗಳ ಟೆಲಿವಿಷನ್ ಚಿತ್ರಗಳನ್ನೂ ಭೂಮಿಗೆ ಪ್ರಸಾರಮಾಡಬೇಕಾಗಬಹುದು. ಅಂಥ ಉಪಗ್ರಹಗಳಲ್ಲಿ ಇವೆಲ್ಲ ಕಾರ್ಯಕ್ರಮಗಳ ದಕ್ಷ ನಿರ್ವಹಣೆಗಾಗಿ ಸೂಕ್ತ ಪ್ರೇಷಕ ವ್ಯವಸ್ಥೆಗಳಿರುತ್ತವೆ. ಭೂ ಮೇಲ್ಮೈಯಲ್ಲಿರುವ ಗ್ರಾಹಕ ಕೇಂದ್ರಗಳು ಉಪಗ್ರಹದ ಗತಿಯನ್ನು ವೀಕ್ಷಿಸುವುದರ ಜೊತೆಗೆ ಅಲ್ಲಿಂದ ಆಗಮಿಸುವ ಸಕಲ ಬಗೆಯ ಸಾಂಕೇತಿಕ ಮಾಹಿತಿಗಳನ್ನೂ ತಮ್ಮ ಬೃಹತ್‌ಆ್ಯಂಟೆನಗಳ ಮೂಲಕ ಸ್ವೀಕರಿಸಿ ವಿಶ್ಲೇಷಿಸುತ್ತವೆ.

**ಕೃತಕ ಉಪಗ್ರಹಗಳ ಉಪಯೋಗಗಳು:** ನಾಲ್ಕುವಿಭಾಗಗಳಲ್ಲಿ ಇವನ್ನು ಅಭ್ಯಸಿಸಬಹುದು–ಸಂಪರ್ಕ ಉಪಗ್ರಹಗಳು. ಹವಾಮಾನ ಉಪಗ್ರಹಗಳು, ನೌಕಾ ಉಪಗ್ರಹಗಳು, ವೈಜ್ಞಾನಿಕ ಉಪಗ್ರಹಗಳು **(ನೋಡಿ– ಅಂತರಿಕ್ಷ, ಸಂಶೋಧನೆ ಅಪೋಲೊ).**

ಪ್ರಥಮ ಸ್ಪುಟ್ನಿಕಿನ ಉಡಾವಣೆಯಿಂದೀಚೆಗೆ ಬಗೆಬಗೆಯ ಉಪಗ್ರಹಗಳನ್ನು ಸಹಸ್ರಾರು ಸಂಖ್ಯೆಯಲ್ಲಿ ಅಂತರಿಕ್ಷಕ್ಕೆ ಉಡಾಯಿಸಲಾಗಿದೆ. ಆಧುನಿಕ ಉಪಗ್ರಹಗಳಲ್ಲಿರುವ ಯಂತ್ರೋಪಕರಣ ವ್ಯವಸ್ಥೆ ಸಂಕೀರ್ಣ ಹಾಗೂ ವೈವಿಧ್ಯಪೂರ್ಣ. ವೈಜ್ಞಾನಿಕ ಸಂಶೋಧನೆಗಳಲ್ಲಿ, ಅತಿವೇಗದ ವಿಮಾನ ಕ್ಷಿಪಣಿಗಳ ಮಾರ್ಗದರ್ಶನದಲ್ಲಿ, ಹವಾಮುನ್ಸೂಚನೆಗಳ ನಿಷ್ಕರ್ಷೆಯಲ್ಲಿ, ಭೂಮಿಯ ಮೇಲೆ ದೀರ್ಘವ್ಯಾಪಕ ಟೆಲಿಫೋನ್ ಸಂಪರ್ಕಗಳ ಸಂಸ್ಥಾಪನೆಯಲ್ಲಿ. ಬಾಹ್ಯಾಕಾಶಯಾನಿಗಳ ತರಬೇತಿಯಲ್ಲಿ ಹಾಗೂ ಆಕಾಶಾಧಾರಿತ ಕೈಗಾರಿಕೆಗಳ ನಿಯೋಜನೆಯಲ್ಲಿ ಉಪಗ್ರಹಗಳು ನಿರ್ವಹಿಸುವ ಪಾತ್ರ ಅಮೂಲ್ಯವಾದುದು. ಸಂಶೋಧನ ಕ್ಷೇತ್ರದಲ್ಲಿ ಭೂಮಿಯ ವಾಯುಮಂಡಲದ ಬಾಹ್ಯವಲಯಗಳ ಸ್ವರೂಪ. ಭೂಮಿಯ ಆಕಾರ ಹಾಗೂ ಗುರುತ್ವಾಕರ್ಷಣೆ, ವಿಶ್ವದ ಬೇರೆಡೆಗಳಿಂದ ಭೂಮಿಯ, ಬಳಿಗೆ ಆಗಮಿಸುವ ಕಣ ಪ್ರವಾಹಗಳು ಮತ್ತು ದೃಶ್ಯಾದೃಶ್ಯ ರಶ್ಮಿಗಳು. ಭೂಪರಿಸರದ ಕಾಂತ ಕ್ಷೇತ್ರ, ಆಕಾಶದಲ್ಲಿ ಉಲ್ಕಾಧೂಳಿಯ ಹಂಚಿಕೆ, ಜೀವಗಳ ಮೇಲೆ ಆಕಾಶಯಾನದ ಪ್ರಭಾವ–ಇವೇ ಮುಂತಾದ ವಿಚಾರಗಳ ಬಗ್ಗೆ ತನಿಖೆ ನಡೆಸಲು ಉಪಗ್ರಹಗಳು ವಿಜ್ಞಾನಿಗಳಿಗೆ ನೆರವಾಗಿವೆ. ವಾಯುಯಾನ–ಕ್ಷಿಪಣಿಯಾನ ಕ್ಷೇತ್ರದಲ್ಲಿ ಸೂಕ್ತ ಮಾರ್ಗದರ್ಶಕ ಉಪಗ್ರಹಗಳು (ನ್ಯಾವಿಗೇಷನಲ್ ಸ್ಯಾಟಲೈಟ್ಸ್) ತಮ್ಮಿಂದ ಪ್ರಸಾರವಾಗುವ ರೇಡಿಯೊ ಸಂಕೇತಗಳ ಮೂಲಕ ವಿಮಾನ ಕ್ಷಿಪಣಿಗಳಿಗೆ ನಿಯೋಜಿತ ಮಾರ್ಗದಲ್ಲಿ ಚಲಿಸುವಂತೆ ನಿಖರ ನಿರ್ದೇಶನ ನೀಡಬಲ್ಲವು. ಹವಾವಿಜ್ಞಾನ ಕ್ಷೇತ್ರದಲ್ಲಿ ಪವನೋಪ ಗ್ರಹಗಳು (ಮೀಟಿಯರೇಲಾಜಿಕಲ್ ಸ್ಯಾಟಲೈಟ್ಸ್) ಭೂಮಿಯ ವಿವಿಧ ಭಾಗಗಳ ಮೇಲೆ ನೆರೆದಿರುವ ಮೇಘರಾಶಿಗಳ ಚಿತ್ರಗಳನ್ನು ತೆಗೆದುಕೊಳ್ಳುತ್ತವೆ. ಮತ್ತು ಅಲ್ಲಿಗೆ ಸಂಬಂಧಿಸಿದ ಉಷ್ಣ ವಿಸರಣ ದರವನ್ನು ಅಳೆಯುತ್ತವೆ. ಭಾರತದಲ್ಲಿ ಇಂಥ ಉಪಗ್ರಹಗಳಿಂದ ಮೇಘಚಿತ್ರಗಳನ್ನು ಸ್ವೀಕರಿಸುವ ಕೇಂದ್ರಗಳು ಕೊಲಾಬ (ಮುಂಬಯಿ), ಕೋಲ್ಕತ ಮದ್ರಾಸ್ ಮತ್ತು ದೆಹಲಿಗಳಲ್ಲಿವೆ. ಪವನೋಪಗ್ರಹಗಳು ಸಂಗ್ರಹಿಸುವ ವ್ಯಾಪಕ ದತ್ತಾಂಶಗಳ ನೆರವಿನಿಂದ ದೀರ್ಘಕಾಲಿಕ ಹವಾಮುನ್ಸೂಚನೆಗಳನ್ನು ನೀಡಲು ಇಂದು ಸಾಧ್ಯವಾಗಿದೆ. ಟೆಲಿಫೋನ್ ಟೆಲಿವಿಷನುಗಳಂಥ ಸಂಪರ್ಕ ವ್ಯವಸ್ಥೆಗಳ ಕ್ಷೇತ್ರದಲ್ಲಿ ಸೂಕ್ತ ನಿಯೋಜನೆಯ ಉಪಗ್ರಹಗಳು ಭೂಮೇಲ್ಮೈಯಿಂದ ಬರುವ ವಿದ್ಯುತ್ಕಾಂತಸಂಕೇತಗಳನ್ನು ಗ್ರಹಿಸಿ ಶಕ್ತಿವರ್ಧನೆ ಮಾಡಿ ಮತ್ತೆ ಭೂಮಿಯೆಡೆಗೆ ಮರುಪ್ರಸಾರ ಮಾಡುವುದರ ಮೂಲಕ ಭೂಮೇಲ್ಮೈಯಲ್ಲಿ ದೂರವಾಗಿರುವ ಪ್ರೇಷಕ–ಗ್ರಾಹಕ ಕೇಂದ್ರಗಳ ನಡುವೆ ಸಂಬಂಧ ಕಲ್ಪಿಸುತ್ತವೆ. (ಹ್ರಸ್ವ ತರಂಗಾಂತರದ ಸಂಕೇತಗಳು ಸರಳರೇಖೆಯಲ್ಲೇ ಚಲಿಸುವುದರಿಂದ ಭೂಮಿಯ ವಕ್ರತೆಯನ್ನು ಬಳಸಿಕೊಂಡು ಒಂದೇ ಮಜಲಿನಲ್ಲಿ ಪ್ರೇಷಕ ಕೇಂದ್ರದಿಂದ ಗ್ರಾಹಕಕೇಂದ್ರದೆಡೆಗೆ ಸಂಚರಿಸಲು ಅವಕ್ಕೆ ಸಾಧ್ಯವಾಗುವುದಿಲ್ಲ.) ಇಂಥ ಹಲವಾರು ಮರುಪ್ರಸಾರಕಾರಿ ಸಂಪರ್ಕೋಪಗ್ರಹಗಳು (ಆಕ್ಟಿವ್ ಕಮ್ಯೂನಿಕೇಷನ್ ಸ್ಯಾಟಲೈಟ್ಸ್) ಕಕ್ಷೆಗಳಲ್ಲಿ ನಿಂತು ಜನರ ನಿತ್ಯಜೀವನದ ವ್ಯವಹಾರಗಳ ಮೇಲೆ ಇಂದು ಕ್ರಾಂತಿಕಾರಕ ಪ್ರಭಾವವನ್ನು ಬೀರುತ್ತಿವೆ. ಇವುಗಳ ಪೈಕಿ ಇಂಟರ್‌ನ್ಯಾಷನಲ್ ಟೆಲಿಕಮ್ಯೂನಿಕೇಷನ್ಸ್ ಕನ್‌ಸಾರ್ಟಿಯಮ್ಮಿನ ಮಾಲಿಕತ್ವದಲ್ಲಿ ಅಟ್ಲಾಂಟಿಕ್, ಪೆಸಿಫಿಕ್ ಮತ್ತು ಹಿಂದೂ ಮಹಾಸಾಗರಗಳ ಮೇಲೆ ಸ್ಥಾಪಿತವಾಗಿರುವ ಭೂಸಮಸ್ಥರ ವ್ಯವಸ್ಥೆಗಳು ಮುಖ್ಯವಾದುವು. ಭೂಮೇಲ್ಮೈಯಿಂದ 35,870 ಕಿಮೀ. ಎತ್ತರದಲ್ಲಿ ಸಮಭಾಜಕ ವೃತ್ತಕ್ಕೆ ಸಮಾಂತರವಾಗಿ ಚಲಿಸುತ್ತಿದ್ದು ಭೂಮಿಯನ್ನು ಒಮ್ಮೆ ಪರಿಭ್ರಮಿಸಲು 23 ಗಂಟೆ 56 ಮಿನಿಟುಗಳನ್ನು ತೆಗೆದುಕೊಳ್ಳುವುದೇ ಇಂಥ ಸಮಸ್ಥರ (ಸಿನ್‌ಕ್ರೊನಸ್) ಉಪಗ್ರಹಗಳ ವೈಶಿಷ್ಟ್ಯ. ಇದೇ ವಿಶಿಷ್ಟ ಅವಧಿಯಲ್ಲಿ ಭೂಮಿ ಕೂಡ ತನ್ನ ಅಕ್ಷದ ಮೇಲೆ ಒಂದು ಸಲ ಆವರ್ತಿಸುವುದರಿಂದ ಭೂಮೇಲ್ಮೈಯಿಂದ ವೀಕ್ಷಿಸಿದಾಗ ಸಮಭಾಜಕೀಯ ಕಕ್ಷೆಯಲ್ಲಿರುವ ಸಮಸ್ಥರ ಸಂಪರ್ಕೋಪಗ್ರಹಗಳು ಚಲಿಸದೆ ಇದ್ದಲ್ಲಿಯೇ ಇರುವಂತೆ ಕಂಡು ಪ್ರೇಷಕ ಗ್ರಾಹಕ ಕೇಂದ್ರಗಳನ್ನು ನಿರಂತರ ಗತಿವೀಕ್ಷಣೆಯ ತೊಡಕುಗಳಿಂದ ಪಾರುಮಾಡುತ್ತವೆ. ಭಾರತದಲ್ಲಿ ಪ್ರಾಯೋಗಿಕವಾಗಿ ರಾಷ್ಟ್ರೀಯ ಮಟ್ಟದ ಟೆಲಿವಿಷನ್ ಪ್ರಸಾರ ವ್ಯವಸ್ಥೆಯೊಂದನ್ನು ರೂಪಿಸುವ ಸಲುವಾಗಿ ಅಮೆರಿಕದ ನ್ಯಾಸಾ ಸಂಸ್ಥೆಯ ನೆರವಿನಿಂದ ಎ.ಟಿ.ಎಸ್.–ಎಫ್ ಎಂಬ ಇಂಥದೇ ಒಂದು ಪ್ರತ್ಯೇಕ ಸಮಸ್ಥರ ಸಂಪರ್ಕೋಪಗ್ರಹವನ್ನು 1973ರ ವೇಳೆಗೆ $20^0$ ಪೂರ್ವ ರೇಖಾಂಶದ ಬಳಿ ಸಂಸ್ಥಾಪಿಸುವ ನಿರೀಕ್ಷೆಯಿದೆ. ಆ ಉಪಗ್ರಹದ ಉಪಯೋಗವನ್ನು ಭಾರತ ಎರಡು ವರ್ಷಗಳ ಮಟ್ಟಿಗೆ ಪಡೆಯಬಹುದು. ಅನಂತರ ಬೇರೊಂದು ಸಮಸ್ಥರ ಸಂಪರ್ಕೋಪಗ್ರಹವನ್ನು ಸ್ವತಂತ್ರವಾಗಿ ಉಡಾಯಿಸಲು ಸವಿವರ ಯೋಜನೆಯನ್ನು ಪರಮಾಣುಶಕ್ತಿ ಇಲಾಖೆಯ ಭಾರತೀಯ ಆಕಾಶ ಸಂಶೋಧನ ಸಂಘಟನೆ (ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್) ಈಗಾಗಲೇ ಸಿದ್ಧಪಡಿಸಿಟ್ಟಿದೆ. ಇಂಥ ಸಂಪರ್ಕೋಪಗ್ರಹಗಳು ಅಸ್ತಿತ್ವಕ್ಕೆ ಬಂದಾಗ ಸಾಧಾರಣ ಟೆಲಿವಿಷನ್ ಸೆಟ್ಟುಗಳಿಗೆ ಸ್ಥಳೀಯ ಕಮ್ಮಾರರು ನಿರ್ಮಿಸಬಲ್ಲ ಪರ್ಯಾಬೊಲಾಕಾರದ ಆ್ಯಂಟೆನಗಳನ್ನು ಜೋಡಿಸಿಕೊಂಡು ಪ್ರೇಷಕ ಕೇಂದ್ರಗಳಿಂದ ಅತಿದೂರದಲ್ಲಿರುವ ಹಳ್ಳಿಗಳಲ್ಲಿ ಸಹ ರಾಷ್ಟ್ರೀಯ ಟೆಲಿವಿಷನ್ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾಧ್ಯವಾಗುವುದು.

ಬಾಹ್ಯಾಕಾಶಕ್ಕೆ ತೆರಳುವ ಯಾನಿಗಳ ತರಬೇತಿಯಲ್ಲಿ ಉಪಗ್ರಹಗಳು ಪ್ರದರ್ಶಿಸಿರುವ ಉಪಯುಕ್ತತೆ ಸರ್ವವಿದಿತ. ಚಂದ್ರಲೋಕಕ್ಕೆ ಯಾನಿಗಳನ್ನು ಕಳುಹಿಸುವ ಮಹತ್ಸಾಧನೆಗೆ ಪೂರ್ವಭಾವಿಯಾಗಿ ಆ ಸಂಬಂಧದಲ್ಲಿ ಅವಶ್ಯವಾಗುವ ಸಹಸ್ರಾರು ಮಾಹಿತಿಗಳನ್ನು ಮಾನವಯುತ ಉಪಗ್ರಹಗಳ (ಮ್ಯಾನ್ಡ್ ಸ್ಯಾಟಲೈಟ್ಸ್) ಮೂಲಕವೇ ಸಂಗ್ರಹಿಸಲಾಯಿತು. ಮಾನವಯುತ ಉಪಗ್ರಹಗಳ ಪರಂಪರೆ 1961 ಏಪ್ರಿಲ್ 12ರಂದು ಸೋವಿಯತ್ ಒಕ್ಕೂಟದ ಯೂರಿ ಗಗಾರಿನ್ನನನ್ನು ಕಕ್ಷೆಗೆ ಒಯ್ದು ಒಮ್ಮೆ ಭೂಪ್ರದಕ್ಷಿಣೆ ಮಾಡಿಸಿದ ವೋಸ್ಟೋಕ್ 1 ಎಂಬ ಹೆಸರಿನ ವಾಹನದಿಂದ ಪ್ರಾರಂಭವಾಗಿ ಜೂನ್ 1970ರ ವರೆಗೆ 16 ಸೋವಿಯತ್ ಉಪಗ್ರಹಗಳೂ 18 ಅಮೆರಿಕನ್ ಉಪಗ್ರಹಗಳನ್ನೂ ಒಳಗೊಂಡಿದೆ (ಈ ಎಣಿಕೆಯಲ್ಲಿ ಚಂದ್ರನ ಪರಿಸರವನ್ನು ಮುಟ್ಟಿ ಹಿಂತಿರುಗಿರುವ ಅಮೆರಿಕದ ವಾಹನಗಳು ಸೇರಿಲ್ಲ). ಬಾಹ್ಯಾಕಾಶಯಾನಗಳ ಸಿದ್ಧತೆಗೆ ನೆರವಾಗಿರುವುದರ ಜೊತೆಗೆ ಮುಂದೆ ಭೂ ಪರಿಸರದಲ್ಲಿ ಆಕಾಶ ನಿಲ್ದಾಣಗಳೆಂಬ (ಸ್ಪೇಸ್ ಸ್ಟೇಷನ್ಸ್) ಮಾನವಯುತ ಬೃಹದುಪಗ್ರಹವ್ಯವಸ್ಥೆಗಳನ್ನು ನಿರ್ಮಿಸಲು ಅವಶ್ಯವಾಗುವ ಅನೇಕ ಉಪಯುಕ್ತ ಮಾಹಿತಿಗಳನ್ನು ಸಹ ಈ ಉಪಗ್ರಹಗಳು ಒದಗಿಸಿಕೊಟ್ಟಿವೆ. ಆಕಾಶ ನಿಲ್ದಾಣಗಳು ದೂರದ ಗ್ರಹಗಳೆಡೆಗೆ ಮಾಮೂಲಾಗಿ ವಾಹನಗಳನ್ನು ಉಡಾಯಿಸುವ ಹಾಗೂ ಆ ಗ್ರಹಗಳಿಂದ ಹಿಂತಿರುಗಿ ಬಂದ ವಾಹನಗಳನ್ನು ಇಳಿಸಿಕೊಳ್ಳುವ ಜಗುಲಿಗಳಾಗಬಲ್ಲವು. ಅಲ್ಲದೆ ದ್ರವ್ಯಗಳಲ್ಲಿ ಭಾರವಿಹೀನತೆ ಮುಂತಾದ ಅಸಾಮಾನ್ಯ ಅವಸ್ಥೆಗಳಿಗೆ ಜನ್ಮ ನೀಡಬಲ್ಲ ಕಕ್ಷಾಪರಿಸರವನ್ನು ಬೇಡುವ ಹೊಸ ಹೊಸ ಕೈಗಾರಿಕೋದ್ಯಮಗಳು ಕಾಲಕ್ರಮೇಣ ಅಂಥ ನಿಲ್ದಾಣಗಳಲ್ಲಿ ಅಂಕುರಿಸಿ ಪ್ರವರ್ಧಿಸಬಹುದು. **(ಎಸ್.ಆರ್.ಎಂ.)**

# ಉಪಗ್ರಹ, ಕೃತಕ

ಕೆಲವು ಪ್ರಮುಖ ಉಪಗ್ರಹಗಳ ವಿವರಗಳು

| ಕ್ರಮ ಸಂಖ್ಯೆ | ಉಪಗ್ರಹದ ಹೆಸರು | ರಾಷ್ಟ್ರ | ಉಡಾವಣೆ ತಾರೀಕು | ಅವಧಿ (ನಿಮಿಷಗಳು) | ಭೂಮಿನೀಚ ಬಿಂದುವಿನ ಎತ್ತರ(ಕಿಮೀ) | ಭೂಮ್ಯುಚ್ಚ ಬಿಂದುವಿನ ಎತ್ತರ(ಕಿಮೀ) | ವೈಶಿಷ್ಟ್ಯಗಳು |
|---|---|---|---|---|---|---|---|
| i | ii | iii | iv | v | vi | vii | viii |
| 1 | ಸ್ಪುಟ್ನಿಕ್ 1 | ರಷ್ಯ | 4–10–57 | 96.17 | 228 | 947 | ಆಕಾಶಯುಗದ ಪ್ರಾರಂಭ. |
| 2 | ಸ್ಪುಟ್ನಿಕ್ 2 | ರಷ್ಯ | 3–11–57 | 103.75 | 225 | 1,671 | ಲೈಕಾ ಎಂಬ ಹೆಸರಿನ ನಾಯಿ ಈ ಯಾನದಲ್ಲಿ ಭಾಗವಹಿಸಿ ಪ್ರಥಮ ಆಕಾಶಪ್ರಾಣಿಯಾಯಿತು. ನೌಕೆ ಭೂಮಿಗೆ ಮರಳಲಿಲ್ಲ. |
| 3 | ಎಕ್ಸ್ ಪ್ಲೋರರ್ 1 | ಅಮೆರಿಕ | 1–2–58 | 114.8 | 356 | 2,548 | ಅಮೆರಿಕದ ಪ್ರಥಮ ಉಪಗ್ರಹ. |
| 4 | ಎಕ್ಸ್ ಪ್ಲೋರರ್ 3 | ಅಮೆರಿಕ | 26–3–58 | 115.7 | 186 | 2,799 | ಕಕ್ಷೆಯಿಂದ ಭೂಮಿಯೆಡೆಗೆ ಒಳಹೋಗುವಾಗ ನಿಶ್ಶೇಷವಾಯಿತು. |
| 5 | ಪಯನೀರ್ 1 | ಅಮೆರಿಕ | 11–10–58 | – | – | – | ಗುರಿ ಚಂದ್ರ. ಆದರೆ ಪಥದಲ್ಲಿ ನಿಶ್ಶೇಷವಾಯಿತು. |
| 6 | ಲ್ಯೂನಾ 1 | ರಷ್ಯ | 2–1–59 | – | – | – | ಗುರಿ ಚಂದ್ರ. ಸೂರ್ಯಕೇಂದ್ರೀಯ ಕಕ್ಷೆ. ಚಂದ್ರನಿಂದ ಸು. 5,900ಕಿಮೀ ದೂರದಲ್ಲಿ ಸಾಗಿಹೋಯಿತು. |
| 7 | ಲ್ಯೂನಾ 2 | ರಷ್ಯ | 12–9–59 | – | – | – | 33.5 ಗಂ. ಕಾಲ ಯಾನಮಾಡಿ ಚಂದ್ರನ ಮೇಲೆ ಬಡಿದಪ್ಪಳಿಸಿತು. ಇತರ ಯಾವುದೇ ಆಕಾಶಕಾಯವನ್ನು ಸ್ಪರ್ಶಿಸಿದ ಪ್ರಥಮ ಭೂಮಿವಸ್ತು. ಇದರ ತೂಕ ಸು. 390 ಕಿ.ಗ್ರಾಂ. |
| 8 | ಲ್ಯೂನಾ 3 | ರಷ್ಯ | 4–10–59 | – | – | – | ಚಂದ್ರನ ಹಿಂಬದಿಯ ಛಾಯಾಚಿತ್ರ ತೆಗೆದು ಭೂಮಿಗೆ ಪ್ರಸರಿಸಿದ ಪ್ರಥಮ ಆಕಾಶನೌಕೆ, ಭೂ ವಾಯುಮಂಡಲ ವನ್ನು ಒಳಹೊಕ್ಕ ತರುವಾಯ ನಿಶ್ಶೇಷವಾಯಿತು. |
| 9 | ಪಯನೀರ್ 5 | ಅಮೆರಿಕ | 11–3–60 | – | – | – | ಶುಕ್ರಗ್ರಹದೆಡೆಗೆ ಉಡಾಯಿಸಿದ ಪ್ರಥಮನೌಕೆ. ಭೂಮಿ ಯಿಂದ 35 ಮಿಲಿಯನ್ ಕಿಮೀ ವರೆಗಿನ ಅಂತರಗ್ರಹ ಆಕಾಶವನ್ನು ಅಭ್ಯಸಿಸಿ ವರದಿ ಕಳಿಸಿತು. |
| 10 | ಟೈರೋಸ್ 1 | ಅಮೆರಿಕ | 1–4–60 | 99.16 | 693 | 750 | ಪ್ರಥಮ ಹವಾಮಾನ ಉಪಗ್ರಹ. |
| 11 | ಡಿಸ್ಕವರರ್ 13 | ಅಮೆರಿಕ | 10–8–60 | 94.04 | 258 | 683 | ಸುರಕ್ಷಿತವಾಗಿ ಭೂಮಿಗೆ ಹಿಂತಿರುಗಿಸಿಕೊಂಡ ಪ್ರಥಮ ನೌಕೆ, ಆವರೆಗೆ 17 ಭೂಪರಿಭ್ರಮಣೆಗಳನ್ನು ಮುಗಿಸಿತ್ತು. |
| 12 | ಸ್ಪುಟ್ನಿಕ್ 5 | ರಷ್ಯ | 20–8–60 | 90.7 | 306 | 339 | ಬೆಲ್ಕಾ ಮತ್ತು ಸ್ಟ್ರೆಲ್ಕಾ ಎಂಬ ಎರಡು ನಾಯಿಗಳು 17 ಭೂಪರಿಭ್ರಮಣೆಗಳನ್ನು ಯಶಸ್ವಿಯಾಗಿ ಮಾಡಿ ಭೂಮಿಗೆ ಜೀವಂತ ಮರಳಿದುವು. |
| 13 | ಸ್ಪುಟ್ನಿಕ್ 6 | ರಷ್ಯ | 1–12–60 | 88.47 | 180 | 249 | ನೌಕೆ ಭೂಮಿಗೆ ಹಿಂತಿರುಗುವಾಗ ಸುಟ್ಟು ನಿಶ್ಶೇಷವಾಯಿತು. |
| 14 | ವೀನಸ್ 1 | ರಷ್ಯ | 12–2–61 | – | – | – | ಗುರಿ ಶುಕ್ರ. ಭೂಮಿಯಿಂದ 73,60,000 ಕಿಮೀ ದೂರದವರೆಗೂ ರೇಡಿಯೊ ಸಂಪರ್ಕ ಉಳಿದಿತ್ತು. |
| 15 | ವೋಸ್ಟೋಕ್ 1 | ರಷ್ಯ | 12–4–61 | 89.34 | 181 | 327 | ಯೂರಿ ಗಗಾರಿನ್ ಭೂಮಿಯನ್ನು ಒಂದು ಸಲ ಪರಿಭ್ರಮಿಸಿ ಮರಳಿದ. ಇವನೇ ಪ್ರಥಮ ಆಕಾಶ ಮಾನವ. |
| 16 | ಎಕ್ಸ್ ಪ್ಲೋರರ್ 11 | ಅಮೆರಿಕ | 27–4–61 | 107.84 | 487 | 1,779 | ಸೌರ ಎಕ್ಸ್ ಮತ್ತು ಗಾಮಾ ಕಿರಣಗಳ ಪ್ರಥಮ ಅನ್ವೇಷಣೆಮಾಡಿದ ಉಪಗ್ರಹ. |

| i | ii | iii | iv | v | vi | vii | viii |
|---|---|---|---|---|---|---|---|
| 17 | ಮರ್ಕ್ಯುರಿ–ಅಟ್ಲಾಸ್ 6 | ಅಮೆರಿಕ | 20–2–62 | 88.6 | 159 | 265 | ಜಾನ್ ಗ್ಲೆನ್ ಭೂಮಿಯನ್ನು ಮೂರುಸಲ ಪರಿಭ್ರಮಿಸಿ ಮರಳಿದ. ಈತ ಜಗತ್ತಿನ ದ್ವಿತೀಯ ಹಾಗೂ ಅಮೆರಿಕದ ಪ್ರಥಮ ಆಕಾಶಮಾನವ. |
| 18 | ಏರಿಯಲ್ 1 | ಇಂಗ್ಲೆಂಡ್ | 26–4–62 | 100.86 | 389 | 1,214 | ಗ್ರೇಟ್ ಬ್ರಿಟನ್ನಿನ ಪ್ರಥಮ ಉಪಗ್ರಹ. ಅಮೆರಿಕದ ಸಹಕಾರ ದಿಂದ ಇದರ ಉಡಾವಣೆ ಸಾಧ್ಯವಾಯಿತು. |
| 19 | ಟೆಲ್ ಸ್ಟಾರ್ 1 | ಅಮೆರಿಕ | 10–7–62 | 157.65 | 952 | 5,632 | ಸಂಪರ್ಕೋಪಗ್ರಹ. ಪ್ರಥಮವಾಗಿ ಯುರೋಪು ಮತ್ತು ಅಮೆರಿಕಗಳ ನಡುವೆ ಟೆಲಿವಿಷನ್ ಪ್ರಸಾರ ನಡೆಸಿತು. |
| 20 | ಮ್ಯಾರಿನರ್ 2 | ಅಮೆರಿಕ | 27–8–62 | – | – | – | ಗುರಿ ಶುಕ್ರ. ಶುಕ್ರನನ್ನು 33,600 ಕಿಮೀ ನಷ್ಟು ಸಮೀಪ ವಾಗಿ ಸಂದರ್ಶಿಸಿ ಆಕಾಶದಲ್ಲಿ ಮರೆಯಾಯಿತು. 3.1.63 ರವರೆಗೆ (ಭೂಮಿಯಿಂದ 86.4 ಮಿಲಿಯನ್ ಕಿಮೀ ದೂರದವರೆಗೆ) ರೇಡಿಯೊ ಸಂಪರ್ಕ ಉಳಿಸಿಕೊಂಡಿತ್ತು. |
| 21 | ಅಲೂಟ್ 1 | ಕೆನಡ | 20–9–62 | 105.52 | 996 | 1,032 | ಕೆನಡದ ಪ್ರಥಮ ಉಪಗ್ರಹ. ಅಮೆರಿಕದ ಸಹಕಾರದಿಂದ ಇದರ ಉಡಾವಣೆ ಸಾಧ್ಯವಾಯಿತು. |
| 22 | ಮಾರ್ಸ್ 1 | ರಷ್ಯ | 1–11–62 | – | – | – | ಗುರಿ ಮಂಗಳ. ಭೂಮಿಯಿಂದ 105.6 ಮಿಲಿಯನ್ ಕಿಮೀ ದೂರದವರೆಗೂ ರೇಡಿಯೊ ಸಂಪರ್ಕ ಉಳಿಸಿಕೊಂಡಿತ್ತು. |
| 23 | ವೋಸ್ಟೋಕ್ 6 | ರಷ್ಯ | 16–6–63 | 88.3 | 180.9 | 231.1 | ವಾಲೆಂಟಿನಾ ಟೆರೆಶ್ಕೋವಾ (ಪ್ರಥಮ ಆಕಾಶ ಮಹಿಳೆ) ಭೂಮಿಯನ್ನು 48 ಸಲ ಪರಿಭ್ರಮಿಸಿ ಮರಳಿದಳು. |
| 24 | ರೇಂಜರ್ 7 | ಅಮೆರಿಕ | 28–7–64 | – | – | – | ಗುರಿ ಚಂದ್ರ. 08.6 ಗಂ. ಕಾಲ ಯಾನ ಮಾಡಿತು. ಚಂದ್ರನ 4,316 ಅತ್ಯುತ್ಕೃಷ್ಟ ಛಾಯಾಚಿತ್ರಗಳನ್ನು 13 ನಿಮಿಷಗಳಲ್ಲಿ ಭೂಮಿಗೆ ಪ್ರಸರಿಸಿತು. |
| 25 | ಮ್ಯಾರಿನರ್ 4 | ಅಮೆರಿಕ | 28–11–64 | – | – | – | ಗುರಿ ಮಂಗಳ. ಮಂಗಳಗ್ರಹದ 22 ಸಮೀಪ ಛಾಯಾ ಚಿತ್ರಗಳನ್ನು (14, 15.7.65ರಂದು) ಭೂಮಿಗೆ ಪ್ರಸರಿಸಿತು. |
| 26 | ಸಾನ್ ಮಾರ್ಕೋ 1 | ಇಟಲಿ | 15–12–64 | 94.94 | 198 | 846 | ಇಟಲಿಯ ಪ್ರಥಮ ಉಪಗ್ರಹ. ಅಮೆರಿಕದ ಸಹಕಾರ ದಿಂದ ಇದರ ಉಡಾವಣೆ ಸಾಧ್ಯವಾಯಿತು. |
| 27 | ಲ್ಯೂನಾ 7 | ರಷ್ಯ | 4–10–65 | – | – | – | ಗುರಿ ಚಂದ್ರ. ತೂಕ ಸು. 1,500 ಕಿ.ಗ್ರಾಂ. 86.1 ಗಂಟೆ ಕಾಲ ಯಾನಮಾಡಿ ಚಂದ್ರನ ಮೇಲೆ ಬಡಿದಪ್ಪಳಿಸಿತು. (ಯೋಜನೆಯ ಉದ್ದೇಶ ಮೆತ್ತಗೆ ಇಳಿಸಬೇಕೆಂದಿತ್ತು). |
| 28 | ವೋಸ್ಕೊಡ್ 2 | ರಷ್ಯ | 18–3–65 | 90.944 | 173.5 | 497.7 | ಅಲೆಕ್ಸಿನ್ ಲಿಯೋನಾವ್ ಪ್ರಥಮ 'ಆಕಾಶ ನಡಿಗೆ' ಪ್ರದರ್ಶಿಸಿದ. 10 ನಿಮಿಷಗಳಕಾಲ ಅವನು ನೌಕೆಯಿಂದ ಹೊರಗೆ ಇದ್ದ. |
| 29 | ವೀನಸ್ 3 | ರಷ್ಯ | 16–11–65 | – | – | – | ಗುರಿ ಶುಕ್ರ. 105 ದಿವಸಗಳ ಕಾಲ ಹಾರಿ ಶುಕ್ರ ತಲದ ಮೇಲೆ ಬಿತ್ತು. ಇತರ ಗ್ರಹವನ್ನು ಸ್ಪರ್ಶಿಸಿದ ಪ್ರಥಮ ಭೂಮಿವಸ್ತು. |
| 30 | ಆಸ್ಟರಿಕ್ಸ್ | ಫ್ರಾನ್ಸ್ | 26–11–65 | 108.61 | 527 | 1,808 | ಫ್ರಾನ್ಸಿನ ಪ್ರಥಮ ಉಪಗ್ರಹ. |
| 31 | ಜೆಮಿನಿ 6 | ಅಮೆರಿಕ | 15–12–65 | 89.6 | 199 | 320 | ಜೆಮಿನಿ 7ರೊಡನೆ ಕಕ್ಷೆಯಲ್ಲಿ 31 ಸೆಂಮೀ ಸಮೀಪದ ಯಶಸ್ವೀ ಮತ್ತು ಪ್ರಥಮ ಆಕಾಶ ಭೇಟಿ ನಡೆಯಿತು. |

# ಉಪಗ್ರಹ, ಕೃತಕ

| i | ii | iii | iv | v | vi | vii | viii |
|---|---|---|---|---|---|---|---|
| 32 | ಲ್ಯೂನಾ 9 | ರಷ್ಯ | 31–1–66 | – | – | – | ಚಂದ್ರನ ಮೇಲೆ ಮೆತ್ತಗೆ ಇಳಿದ ಪ್ರಥಮ ನೌಕೆ. |
| 33 | ಜೆಮಿನಿ 8 | ಅಮೆರಿಕ | 16–3–66 | 90.2 | 285 | 298 | ಆಕಾಶದಲ್ಲಿ ಪ್ರಥಮವಾಗಿ ನೆರವೇರಿದ ಯಶಸ್ವೀ ಕೂಡಿಕೆ. |
| 34 | ಲ್ಯೂನಾ 10 | ರಷ್ಯ | 31–3–66 | – | – | – | ಚಂದ್ರನ ಪ್ರಥಮ ಉಪಗ್ರಹ. |
| 35 | ಸರ್ವೇಯರ್ 1 | ಅಮೆರಿಕ | 30–5–66 | – | – | – | ಗುರಿ ಚಂದ್ರ. ಯಾನಾವಧಿ 63.6 ಗಂ. ಚಂದ್ರನ ಮೇಲೆ ಮೆತ್ತಗೆ ಇಳಿದ ಅಮೆರಿಕದ ಪ್ರಥಮ ನೌಕೆ. ಚಂದ್ರನ ಒಂದು ರಾತ್ರಿಯನ್ನು ತಾಳಿ ಉಳಿಯಿತು. 13 ದಿವಸಗಳ ಕಾಲ ಚಂದ್ರನ 11,150 ಟೆಲಿವಿಷನ್ ಚಿತ್ರಗಳನ್ನು ಪ್ರಸರಿಸಿತು. |
| 36 | ವೀನಸ್ 4 | ರಷ್ಯ | 12–9–70 | – | – | – | ಗುರಿ ಶುಕ್ರ, 105 ದಿವಸಗಳ ಯಾನಾನಂತರ ಪ್ಯಾರಾಚೂಟುಗಳ ನೆರವಿನಿಂದ ಶುಕ್ರನ ಮೇಲೆ ಮೆತ್ತಗೆ ಇಳಿದ ಪ್ರಥಮ ನೌಕೆ (18–10–67). |
| 37 | ಲ್ಯೂನಾ 16 | ರಷ್ಯ | 12–9–70 | – | – | – | ಸ್ವಯಂಚಾಲಿತ ವ್ಯವಸ್ಥೆ. ಚಂದ್ರತಲದ ಮೇಲೆ ಮೆತ್ತಗೆ ಇಳಿದು (20–9–70) ಚಂದ್ರಶಿಲೆಯನ್ನು 350 ಸೆಂಮೀ ಆಳದಿಂದ ಸಂಗ್ರಹಿಸಿ ಸುರಕ್ಷಿತವಾಗಿ ಭೂಮಿಗೆ ಮರಳಿತು (24–9–70). ಪ್ರಥಮ ವಿಜಯ. |
| **ಮಾನವ ಚಂದ್ರನ ಮೇಲೆ ಇಳಿದುದರ ಕೆಲವು ವಿವರಗಳು** | | | | | | | |
| i | ii | iii | iv | v | vi | vii | viii |
| 38 | ಅಪೊಲೊ 5 | ಅಮೆರಿಕ | 22–1–68 | – | – | – | ಪರೀಕ್ಷಾ ಪ್ರಯೋಗಗಳು (ಮಾನವ ರಹಿತ). |
| 39 | ಅಪೊಲೊ 6 | ಅಮೆರಿಕ | 4–4–68 | – | – | – | ಪರೀಕ್ಷಾ ಪ್ರಯೋಗಗಳು (ಮಾನವ ರಹಿತ). |
| 40 | ಅಪೊಲೊ 7 | ಅಮೆರಿಕ | 11–10–68 | – | – | – | ಮೂವರು ಯಾನಿಗಳು ಕಮಾಂಡ್ ಕೋಶದೊಳಗೆ ಕುಳಿತು, 11 ದಿವಸಗಳ ಭೂಮಿಪರಿಭ್ರಮಣೆ ಮಾಡಿದರು. ಯಾನದಲ್ಲಿ ಸರ್ವಿಸ್ ಮತ್ತು ಕಮಾಂಡ್ ಕೋಶಗಳ ಪೂರ್ಣ ಪರೀಕ್ಷೆ ನಡೆಸಿದರು. |
| 41 | ಅಪೊಲೊ 8 | ಅಮೆರಿಕ | 21–12–68 | – | – | – | ಮೂವರು ಯಾನಿಗಳು (ಲೂನಾರ್ ಕೋಶರಹಿತ ಆದರೆ ಸರ್ವಿಸ್ ಮತ್ತು ಕಮಾಂಡ್ ಕೋಶ ಸಹಿತ) ನೌಕೆಯಲ್ಲಿ ಚಂದ್ರನೆಡೆಗೆ ಹೋಗಿ ಚಂದ್ರನಿಗೆ 10 ಪರಿಭ್ರಮಣೆಗಳನ್ನು ಮುಗಿಸಿ ಭೂಮಿಗೆ ಮರಳಿದರು. |
| 42 | ಅಪೊಲೊ 9 | ಅಮೆರಿಕ | 3–3–60 | – | – | – | ಲೂನಾರ್ ಕೋಶವನ್ನು ಸಹ ಒಳಗೊಂಡ, ಮೂವರು ಯಾನಿಗಳು ಕುಳಿತಿದ್ದ, ಪೂರ್ಣ ಅಪೊಲೊ ನೌಕೆ ಭೂಮಿಯನ್ನು ಯಶಸ್ವಿಯಾಗಿ ಪರಿಭ್ರಮಿಸಿ ಮರಳಿತು. |
| 43 | ಅಪೊಲೊ 10 | ಅಮೆರಿಕ | 18–5–69 | – | – | – | ಮಾನವ ಚಂದ್ರನ ಮೇಲೆ ಇಳಿದು ಹಿಂದೆ ಬರುವ ಕಾರ್ಯಕ್ರಮದ ಅಭ್ಯಾಸ. |
| 44 | ಅಪೊಲೊ 11 | ಅಮೆರಿಕ | 16–7–69 | – | – | – | 21–7–69ರಂದು ಮಾನವ ಚಂದ್ರನ ಮೇಲೆ ಪ್ರಥಮವಾಗಿ ಕಾಲೂರಿದ. |
| 45 | ಅಪೊಲೊ 12 | ಅಮೆರಿಕ | 14–11–69 | – | – | – | ಅಪೊಲೊ 11ರ ಕಾರ್ಯಕ್ರಮದಂತೆಯೇ. |
| 46 | ಅಪೊಲೊ 13 | ಅಮೆರಿಕ | 12–4–70 | – | – | – | ನೌಕೆಗೆ ಪಥಮಧ್ಯೆ ಆಘಾತ ಉಂಟಾದ ಪರಿಣಾಮವಾಗಿ ಯಾನಿಗಳಿಗೆ ಚಂದ್ರನ ಮೇಲೆ ಇಳಿಯಲಾಗಲಿಲ್ಲ; ಬದಲು ಅವರು ಚಂದ್ರನನ್ನು ಪರಿಭ್ರಮಿಸಿ ಭೂಮಿಗೆ ಮರಳಿದರು. ಈ ಘಟನೆಯೊಂದು ಅದ್ಭುತ ಸಾಹಸ. |

ಸೂಚನೆ: ಏಪ್ರಿಲ್ 1970ರಲ್ಲಿ ಚೀನವೂ ಒಂದು ಕೃತಕ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಿ ಆಕಾಶರಾಷ್ಟ್ರಗಳ ಸಾಲಿಗೆ ಸೇರಿದೆ.

**ಉಪದೇಶ ಭಾಷಣ:** ನೀತಿನಿಷ್ಠೆ. ಧರ್ಮತತ್ತ್ವಗಳ ಬೋಧನೆ. ಪ್ರತಿಪಾದನೆಗಳನ್ನು ಉದ್ದೇಶವಾಗುಳ್ಳ ಭಾಷಣ (ಸರ್ಮನ್). ಇದೂ ಭಾಷಣದಷ್ಟೇ ಪ್ರಾಚೀನವಾದುದು. ಪ್ರಾಚೀನ ಗ್ರೀಕರಿಗೂ ಪ್ರಾಚೀನ ರೋಮನರಿಗೂ ಭಾಷಣ (ಸ್ಪೀಚ್; ಆರೇಷನ್) ಸುಸಂಸ್ಕೃತ ಜೀವನಕ್ಕೆ ಅತ್ಯಗತ್ಯವೆಂಬ ಅಭಿಮತವಿತ್ತು. ಭಾಷಣ ಕಲೆಯನ್ನು ಕಲಿಯುವುದಕ್ಕೆ ಅನೇಕರು ಮುಂಬರುತ್ತಿದ್ದರು; ಅದನ್ನು ಕಲಿಸುವ ಅನೇಕ ಉಪಾಧ್ಯಾಯರು ಇರುತ್ತಿದ್ದರು. ಭಾಷಣ ವಿಧಗಳು ವಿಂಗಡನೆಯಾಗಿ ಒಂದೊಂದು ವಿಧಕ್ಕೂ ನಿರ್ದಿಷ್ಟ ನಿಯಮಾವಳಿ ಕ್ರಮೇಣ ಏರ್ಪಾಡಾಗಿ ರೂಢಿಗೆ ಬಂತು. ಆ ವಿಧಗಳಲ್ಲಿ ಉಪದೇಶ ಭಾಷಣ ಪ್ರತ್ಯೇಕವಾಗಿ ಕಂಡುಬರುವುದಿಲ್ಲ. ಯೆಹೂದ್ಯರ ಧಾರ್ಮಿಕ ಮುಖಂಡರೂ ಯೇಸುಕ್ರಿಸ್ತನೂ ಜನರನ್ನು ಉದ್ದೇಶಿಸಿ ಮಾತನಾಡಿದರು ಎಂದು ಬೈಬಲ್ ತಿಳಿಸುತ್ತದೆ. ಕ್ರೈಸ್ತಮತ ಬೆಳೆದು ಚರ್ಚುವ್ಯವಸ್ಥೆ ಅಚ್ಚುಕಟ್ಟಾಗಿ ರೂಪಿತವಾದ ಅನಂತರ ಉಪದೇಶ ಭಾಷಣಕ್ಕೆ ನಿಯತ ಕಾರ್ಯಕ್ರಮದ ಸ್ಥಾನವೂ ಗೌರವವೂ ದಕ್ಕಿತು. (ಎಸ್.ವಿ.ಆರ್.)

ವೇದೋಪನಿಷತ್ತುಗಳ ಕಾಲದಲ್ಲಿ ಉಪದೇಶ ಭಾಷಣ ಹೇಗಿರುತ್ತಿತ್ತು ಎಂಬುದಕ್ಕೆ ತೈತ್ತಿರೀಯೋಪನಿಷತ್ತಿನಲ್ಲಿ ಅತ್ಯುತ್ತಮವಾದ ಒಂದು ನಿದರ್ಶನ ದೊರೆಯುತ್ತದೆ: ವೇದವನ್ನು ಅಧ್ಯಾಪನೆ ಮಾಡಿ ಆಚಾರ್ಯ ಶಿಷ್ಯನಿಗೆ ಹೀಗೆ ಅನುಶಾಸನ ಮಾಡುತ್ತಾನೆ; ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ಅಧ್ಯಯನದಲ್ಲಿ ಪ್ರಮಾದ ಮಾಡಬೇಡ. ಆಚಾರ್ಯನಿಗೆ ಇಷ್ಟವಾದ ಧನವನ್ನು ತಂದುಕೊಡು ಸಂತತಿಯನ್ನು ವಿಚ್ಛಿನ್ನಗೊಳಿಸಬೇಡ. ಸತ್ಯದಿಂದ ಕದಲದಿರು. ಧರ್ಮದಿಂದ ಕದಲದಿರು. ಕುಶಲದಿಂದ ಕದಲದಿರು. ಮಂಗಳಯುಕ್ತವಾದ ಕರ್ಮದಿಂದ ಕದಲದಿರು. ಸ್ವಾಧ್ಯಾಯ ಪ್ರವಚನಗಳಿಂದ ಕದಲದಿರು. ದೇವಪಿತೃ ಕಾರ್ಯದಿಂದ ಕದಲದಿರು. ತಾಯಿಯೇ ನಿನಗೆ ದೇವರಾಗಲಿ. ತಂದೆಯೇ ನಿನಗೆ ದೇವರಾಗಲಿ. ಅತಿಥಿಯೇ ನಿನಗೆ ದೇವರಾಗಲಿ. ಯಾವ ಕರ್ಮಗಳು ಅನಿಂದಿತವೋ ಅಂಥವನ್ನು ಸೇವಿಸಬೇಕು, ಉಳಿದವನ್ನು ಸೇವಿಸಬಾರದು. ನಮ್ಮಲ್ಲಿ ಯಾವ ಒಳ್ಳೆಯ ನಡತೆಗಳಿವೆಯೋ ಅವನ್ನೇ ಸೇವಿಸಬೇಕು, ಉಳಿದವನ್ನು ಸೇವಿಸಬಾರದು. ನಮಗಿಂತ ಉತ್ತಮರಾದ ಯಾವ ಯಾವ ಬ್ರಾಹ್ಮಣರಿರುವರೋ ಅವರನ್ನು ಆಸನಾದಿಪೂರ್ವಕ ಆದರಿಸಬೇಕು. ಇನ್ನು ಶ್ರೌತಸ್ಮಾರ್ತ ಕರ್ಮವಿಷಯದಲ್ಲಾಗಲಿ ಆಚಾರವಿಷಯದಲ್ಲಾಗಲಿ ಸಂಶಯವುಂಟಾದಾಗ ವಿಚಾರಕ್ಷಮರೂ ಕರ್ಮದಲ್ಲಿ ಸಮರ್ಥರೂ ಅಕ್ರೂರರೂ ಅಕಾಮಹತರೂ ಆದ ಬ್ರಾಹ್ಮಣರು ಹೇಗೆ ವರ್ತಿಸುವರೋ ಹಾಗೆಯೆ ನೀನು ಅಲ್ಲಿ ವರ್ತಿಸು. ಇದು ವಿಧಿ. ಇದು ಉಪದೇಶ. ಇದು ವೇದರಹಸ್ಯ. ಇದು ಈಶ್ವರಾಜ್ಞೆ. ಹೀಗೆ ಉಪಾಸಿಸಬೇಕು. ಹೀಗೆ ಇದು ಅನುಷ್ಠೇಯ.'

ಬರವಣಿಗೆ ಇನ್ನೂ ರೂಢಿಯಿರದ ಆ ಕಾಲದಲ್ಲಿ ಜ್ಞಾನಪರಂಪರೆ ತಲೆಯಿಂದ ತಲೆಗೆ ಮಾತಿನ ಮೂಲಕ ನಡೆದು ಬರುತ್ತಿತ್ತಾದ ಕಾರಣ ಈ ಭಾಷಣ ಅಂದಿನ ಮಾತಿನ ವೈಖರಿಯನ್ನು ಚೆನ್ನಾಗಿ ವ್ಯಕ್ತಪಡಿಸುತ್ತದೆ. ಇಲ್ಲಿನ ಉಪದೇಶವಸ್ತು ಎಷ್ಟು ಗಹನವೋ ಮಾತಿನ ಓಘ ಅಷ್ಟು ಸರಳ ಎಂಬುದು ಗಮನಾರ್ಹವಾದ ಅಂಶ. ಪುಟ್ಟ ಪುಟ್ಟ ವಾಕ್ಯಗಳ ಬಳಕೆ, ಅಭಿಪ್ರಾಯಗಳ ಪುನರಾವರ್ತನೆ, ನಡುನಡುವೆ ಉದ್ದನೆಯ ವಾಕ್ಯಗಳ ಸಂಯೋಜನೆ–ಇವುಗಳಿಂದಾಗಿ ಈ ಭಾಷಣ ಇಂದಿಗೂ ಮಾದರಿಯಾಗಿ ಉಳಿದಿದೆ.

ಹೀಗೆಯೇ ಬೈಬಲ್ಲಿನಲ್ಲಿ ಬರುವ ಅನೇಕ ಉಪದೇಶ ಭಾಷಣಗಳಲ್ಲಿ ಬಹು ಪ್ರಸಿದ್ಧವಾಗಿರುವ ಸರ್ಮನ್ ಆನ್ ದಿ ಮೌಂಟ್ ಎಂಬುದನ್ನು ಪರಾಮರ್ಶಿಸಬಹುದು. ಇದು ಏಸುವಿನ ಭಾಷಣಗಳಲ್ಲೆಲ್ಲ ಅತಿ ದೊಡ್ಡದು. ಇದರಲ್ಲಿ ಆತನ ಧಾರ್ಮಿಕ ಅಭಿಪ್ರಾಯಗಳೆಲ್ಲ ಕ್ರೋಡೀಕರಣಗೊಂಡಿವೆ. ಇಲ್ಲಿನ ಕೆಲವು ಅಂಶಗಳು ಸರ್ಮನ್ ಆನ್ ದಿ ಪ್ಲೇನ್ ಎಂಬಲ್ಲೂ ಬಂದಿವೆ. 'ಬಡವರಿಗೇ ದೇವಕೃಪೆ ಒದಗುತ್ತದೆ. ಅವರು ದೇವರಾಜ್ಯದ ಪ್ರಜೆಗಳಾಗುತ್ತಾರೆ. ಅನುತಾಪ ಪಡುವವರಿಗೆ ದೇವಾನುತಾಪ ಸಿಗುತ್ತದೆ. ನಮ್ರಭಾವದಿಂದ ವಿನೀತರಾಗಿ ನಡೆವವರು ಈ ಜಗತ್ತನ್ನು ಆಳುತ್ತಾರೆ. ಧರ್ಮಕ್ಕಾಗಿ ಹಸಿದು ಬಾಯಾರುವವರಿಗೆ ತೃಪ್ತಿ ಸಿಕ್ಕೇ ಸಿಕ್ಕುತ್ತದೆ. ದಯಾಶೀಲರಿಗೆ ದೇವದಯೆ ಖಂಡಿತ ದೊರೆಯುತ್ತದೆ. ಹೃದಯ ಶುದ್ಧಿಯುಳ್ಳವರಿಗೆ ದೈವಸಾಕ್ಷಾತ್ಕಾರವಾಗುತ್ತದೆ. ಶಾಂತಿ ದೂತರಾಗಿ ದುಡಿವವರೇ ದೇವರ ಮಕ್ಕಳೆನಿಸುತ್ತಾರೆ. ಧರ್ಮಕ್ಕಾಗಿ ಆತ್ಮಾರ್ಪಣೆ ಮಾಡಿದವರಿಗೆ ಸ್ವರ್ಗ ನಿಜಕ್ಕೂ ಸಿಗುತ್ತದೆ'–ಹೀಗೆ ಮೊದಲಾಗುವ ಈ ಧರ್ಮಬೋಧೆ ವಿಸ್ತಾರವಾಗಿ ಬೆಳೆದು ಕ್ರೈಸ್ತಧರ್ಮದ ಸಾರವನ್ನೆಲ್ಲ ಸಂಗ್ರಹಿಸಿ ಹೇಳುತ್ತದೆ. *

ನೀತಿನಿಷ್ಠೆಯ ಬೋಧನೆಯೂ ಧರ್ಮತತ್ತ್ವಗಳ ಪ್ರತಿಪಾದನೆಯೂ ಉಪದೇಶ ಭಾಷಣದ ಮುಖ್ಯ ವಿಷಯವಷ್ಟೆ. ವಿಷಯ ನಿರೂಪಣೆಯ ವಿಧಾನಕ್ಕೆ ಮೊದಲಿನಿಂದಲೂ ಪ್ರಾಚೀನ ಗ್ರೀಕ್ ರೋಮನ್ ಭಾಷಣ ವಿಧಾನವೇ ಮೇಲ್ಪಂಕ್ತಿ. ಏತಕ್ಕೆಂದರೆ ಉಪದೇಶಕರೆಲ್ಲರೂ ಪ್ರಾಚೀನರು, ವಿಶೇಷ ಮುತುವರ್ಜಿಯಿಂದ ವೃದ್ಧಿಗೊಳಿಸಿ ಪರಿಷ್ಕರಿಸಿ ಅಚ್ಚುಕಟ್ಟಾಗಿ ಗ್ರಂಥಸ್ಥ ಮಾಡಿದ್ದ ಭಾಷಣವಿದ್ಯೆಯಲ್ಲಿ (ರೆಟೊರಿಕ್) ಪಂಡಿತರು. ಭಾಷಣವಿದ್ಯೆ ಯುರೋಪಿನಲ್ಲಿ ಇತ್ತೀಚಿನವರೆಗೂ ಶಾಲಾ ವಿದ್ಯಾಭ್ಯಾಸದ ಒಂದು ಪಠ್ಯಾಂಗವಾಗಿದ್ದುದನ್ನು ಮರೆಯಬಾರದು. ಲೌಕಿಕ ಭಾಷಣದ ರಚನಾ ಕ್ರಮವನ್ನೇ ಧಾರ್ಮಿಕ ಭಾಷಣವೂ ಅನುಸರಿಸಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ವಿಷಯ ಶೇಖರಣೆ, ಹಲವಂಶಗಳ ವ್ಯವಸ್ಥೆ, ಸಮರ್ಥವಾದ ನಿದರ್ಶನ, ಭಾಷಾಶೈಲಿ–ಇವು ನಾಲ್ಕನ್ನು ಉಪದೇಶಕ ಲಕ್ಷ್ಯವಿಟ್ಟು ಸಿದ್ಧಗೊಳಿಸತಕ್ಕದ್ದು. ಒಂದೊಂದು ಉಪದೇಶ ಭಾಷಣವೂ ಸಾರವತ್ತಾದ ಒಂದು ತತ್ತ್ವದ ಸುತ್ತ ಕಟ್ಟಿದ್ದಾಗಿರಬೇಕು. ಆ ತತ್ತ್ವ ಆದಿ ಮಧ್ಯ ಅಂತ್ಯದಲ್ಲಿ ಅಷ್ಟಿಷ್ಟು ನುಡಿ ವ್ಯತ್ಯಾಸದಿಂದ ಒತ್ತಿ ಹೇಳಲ್ಪಡಬೇಕು. ಒಂದೇ ತತ್ತ್ವದ ಪುನರುಕ್ತಿಯಾದರೂ ಉಕ್ತಿಜಾಣ್ಮೆಯಿಂದ ನೀರಸತೆಯನ್ನೂ ಬೇಸರಿಕೆಯನ್ನೂ ಕಡಿಮೆ ಮಾಡಬೇಕು ಅಥವಾ ಅಂದಗೊಳಿಸಬೇಕು. ನೀರಸತೆ ಉಪದೇಶ ಭಾಷಣಕ್ಕೆ ಸುಲಭವಾಗಿ ಅಂಟಿಕೊಳ್ಳುವ ಜಾಡ್ಯ. ವೈವಿಧ್ಯವೇ ಅದಕ್ಕೆ ಮದ್ದು. ಮುಂದಾವ ವಾಕ್ಯ ಕೇಳಬರುವುದೊ ಎಂಬ ಕುತೂಹಲ, ನಿರೀಕ್ಷೆ ಆಲಿಸುವವರಲ್ಲಿ ಕುಗ್ಗದಂತೆ ನೋಡಿಕೊಳ್ಳುವುದು ಉಪದೇಶಕನ ಕರ್ತವ್ಯ, ಹೊಣೆ, ಸಾರ್ಥಕತೆ. ಆದರೆ ಆಲಿಸುವವರ ಚಿತ್ತಾಹ್ಲಾದವನ್ನೇ ಗುರಿಯಾಗಿಟ್ಟುಕೊಂಡು ಉಪದೇಶಕ ಹಗುರ ಹಾಸ್ಯಕ್ಕೆ ಮನತೆತ್ತರೆ ಬೋಧೆಯ ಉದಾತ್ತತೆಗೆ ಭಂಗ ಉಂಟಾಗುತ್ತದೆ, ಗಾಂಭೀರ್ಯಕ್ಕೆ ಕುಂದುತಟ್ಟುತ್ತದೆ. ಹಾಸ್ಯವೆಂದರೆ ಕುಚೋದ್ಯವಲ್ಲ, ವಿನೋದವಲ್ಲ, ಗಹಗಹ ನಗುವಲ್ಲ; ಲಲಿತವೂ ಸುಂದರ ಮಂದವಿಸ್ಮಿತವನ್ನು ತರುವುದೂ ಆದ ಗಂಭೀರ ಹಾಸ್ಯ–ಎಂದು ಉಪದೇಶಕನೂ ಶ್ರೋತೃಗಳೂ ತಿಳಿಯತಕ್ಕದ್ದು. ಉಪದೇಶ ಭಾಷಣವೇತಕ್ಕೆ ಎಂದು ಕೆಲವರ ಆಕ್ಷೇಪ. ನಿಜವನ್ನು ಆಡು, ಒಳ್ಳೆಯದನ್ನು ಮಾಡು ಎಂಬ ನಾಲ್ಕು ಮಾತಿನಲ್ಲಿ ಸಮಸ್ತ ಉಪದೇಶವೂ ಅಡಗಿಲ್ಲವೆ, ಎಂದು ಅವರ ಹೇಳಿಕೆ ಇರಬಹುದು. ಆದರೂ ನವನಾಗರಿಕತೆಯ ದೇಶಗಳಲ್ಲೂ ಅದು ಇನ್ನೂ ರೂಢಿಯಲ್ಲಿದೆ. ಚರ್ಚಿನಲ್ಲೇ ಅಲ್ಲದೆ ವಿದ್ಯಾಶಾಲೆಗಳಲ್ಲೂ ಆಗಾಗ ಅದನ್ನು ಏರ್ಪಡಿಸುವ ವಾಡಿಕೆ ಇದ್ದೇ ಇದೆ. ಹಿಂದೆ ಬಲು ಉದ್ದವಾಗಿರುತ್ತಿದ್ದ ಉಪದೇಶ ಭಾಷಣ ಈಗ ಚಿಕ್ಕಚಿಕ್ಕದಾಗುತ್ತ ಬಂದಿದೆ. ಆಧುನಿಕ ತ್ವರಿತ ಜೀವನಕ್ಕೆ ಅದು ಅನುರೂಪ. (ಎಸ್.ವಿ.ಆರ್.)

**ಉಪದ್ರವ:** ಸ್ಥಿರಾಸ್ತಿ ಅಥವಾ ಭೂಮಿಯ ಉಪಯೋಗಕ್ಕೆ ಸಂಬಂಧಿಸಿದಂತೆ ಇತರರಿಗೆ ಅಪಾಯ ಅಥವಾ ತೊಂದರೆ ನೀಡುವ ರೀತಿಯ ಚಟುವಟಿಕೆ, ಸ್ಥಿತಿ (ನ್ಯೂಸೆನ್ಸ್). ನ್ಯಾಯಕ್ಷೇತ್ರದಲ್ಲಿ ಇದನ್ನು ಈ ಅರ್ಥದಲ್ಲಿ ಬಳಸಲಾಗಿದೆ. ಖಾಸಗಿ ಹಾಗೂ ಸಾರ್ವಜನಿಕವೆಂದು ಇದರಲ್ಲಿ ಎರಡು ಬಗೆಯುಂಟು. ನೆರೆಹೊರೆಯ ಖಾಸಗಿ ನೆಲವನ್ನು ಅನುಭವಿಸಲು ಜನಕ್ಕೆ ಅಡ್ಡಿಬರುವಂಥ ಚಟುವಟಿಕೆ ಅಥವಾ ಪರಿಸ್ಥಿತಿಯೇ ಖಾಸಗಿ ಉಪದ್ರವ. ಇಂಥ ಸಂದರ್ಭದಲ್ಲಿ ನೆರೆಹೊರೆಯ ಸ್ವಾಧೀನಾನುಭವದಲ್ಲಿರುವ ನೆಲದ ಅತಿಕ್ರಮಣವೇ ಆಗಬೇಕೆಂದೇನೂ ಇಲ್ಲ. ಅತಿ ಗಲಭೆ, ಹೊಲಸು ಹೊಗೆ, ದುರ್ಗಂಧ, ಕಂಪನ–ಇವೂ ವೈಯುಕ್ತಿಕ ಉಪದ್ರವದ ಉದಾಹರಣೆಗಳೆ. ಸಾರ್ವಜನಿಕ ಉಪದ್ರವ ಇನ್ನೂ ವ್ಯಾಪಕ ಪರಿಣಾಮಗಳುಳ್ಳದ್ದು. ಇದು ರಾಷ್ಟ್ರದ ವಿರುದ್ಧ ನಡೆಸಿದ ಅಪರಾಧ. ಈ ಉಲ್ಲಂಘನೆ ಎರಡು ಬಗೆ: 1 ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕ ಭೂಮಿಯ ಮೇಲೆ ಆಗಿದ್ದು. ಉದಾ: ಸಾರ್ವಜನಿಕ ರಸ್ತೆಗೆ ಅಡಚಣೆ, ಹೊಳೆ, ಕೆರೆ ನೀರು ಕಶ್ಮಲ ಮಾಡುವಂಥ ಕಾರ್ಯಾಚರಣೆ. 2 ಸಮಾಜದ ಆರೋಗ್ಯ ನೀತಿ ಕ್ಷೇಮಗಳಿಗೆ ಭಂಗಬರುವಂಥದು. ಉದಾ: ವೇಶ್ಯಾಗೃಹ ನಿರ್ವಹಣೆ, ಆಸ್ಫೋಟಕ ವಸ್ತು ಶೇಖರಣೆ.

ಸಾರ್ವಜನಿಕ ಉಪದ್ರವ ಸರ್ಕಾರದಿಂದ ಮಾತ್ರ ವ್ಯಾಜ್ಯಯೋಗ್ಯ (ಆಕ್ಷನಬಲ್). ಆದರೆ ಹಲವು ಸಂದರ್ಭಗಳಲ್ಲಿ ಸಾರ್ವಜನಿಕ ಉಪದ್ರವಕ್ಕೆ ಕಾರಣವಾದ ಸಂದರ್ಭವೇ ಖಾಸಗಿ ಉಪದ್ರವಕ್ಕೂ ಕಾರಣವಾಗಬಹುದು. ಜಾರಿಯಲ್ಲಿರುವ ಕಾನೂನು ಉಲ್ಲಂಘಿಸಿ ಒಂದು ಪ್ರದೇಶದಲ್ಲಿ ಉದ್ಯಮವೊಂದನ್ನು ನಡೆಸುವುದು ಸಾರ್ವಜನಿಕ ಉಪದ್ರವ ಹೇಗೊ ಹಾಗೆ ಅದು ವೈಯಕ್ತಿಕ ಉಪದ್ರವವೂ ಆಗಬಹುದು. ಆ ಉದ್ಯಮದ ಫಲವಾಗಿ ನೆರೆಹೊರೆಯ ಸ್ವತ್ತುಗಳ ಬೆಲೆ ತಗ್ಗಬಹುದು.

ಖಾಸಗಿ ಉಪದ್ರವಕ್ಕೆ ನ್ಯಾಯಿಕ ಕ್ರಮವೆಂದರೆ ಹಣದ ಪರಿಹಾರ ಅಥವಾ ಆ ಉಪದ್ರವಕ್ಕೆ ತಡೆಯೊಡ್ಡುವಂತೆ ಸಾಮ್ಯನ್ಯಾಯ ರೀತ್ಯಾ ದಾವಾ ಹೂಡಿಕೆ. ತಡೆ ಆಜ್ಞೆಯಿಂದ ಸಮಾಜಕ್ಕೆ ಹೆಚ್ಚಿನ ತೊಂದರೆ ಆಗುವುದಿದ್ದರೆ ನ್ಯಾಯಾಲಯಗಳು ಹಣ ಪರಿಹಾರದ ನಿರ್ಣಯ ನೀಡಬಹುದು. ಉದಾ: ಅನೇಕರಿಗೆ ಉದ್ಯೋಗ ದೊರಕಿಸಿ ಕೊಡುತ್ತಿರುವ ಕಾರ್ಖಾನೆಯನ್ನು ಮುಚ್ಚುವುದರಿಂದ ಅವರಿಗೆಲ್ಲ ನಿರುದ್ಯೋಗ ಸಂಭವಿಸಬಹುದು.

ಭಾರತದಲ್ಲಿ ಇಂಡಿಯನ್ ಪೀನಲ್ ಕೋಡಿನ 268ನೆಯ ಕಲಂ ಪ್ರಕಾರ ಸಾರ್ವಜನಿಕ ಉಪದ್ರವವೆಸಗುವುದು ಅಪರಾಧ. ಸಾರ್ವಜನಿಕರಿಗೆ ಅಥವಾ ಸಾರ್ವಜನಿಕರಲ್ಲಿ ಅನೇಕರಿಗೆ ಕಿರುಕುಳ, ಭಯ ಅಥವಾ ಕೇಡುಂಟುಮಾಡುವ ಕೃತ್ಯಗಳು ಈ ಉಪದ್ರವಕ್ಕೆ ಸೇರಿವೆ. ಸಾರ್ವಜನಿಕವಾಗಿ ಉಪಯೋಗಿಸುವ ರಸ್ತೆ, ಕೊಳ, ಬಾವಿ, ಉದ್ಯಾನ, ರೈಲು ಅಥವಾ ಬಸ್ ನಿಲ್ದಾಣ ಮುಂತಾದ ಸ್ಥಳಗಳಲ್ಲಿ ಅಡ್ಡಿಯಾಗುವಂತೆ ಅಥವಾ ಹೇಸಿಗೆಯಾಗುವಂಥ ಕೃತ್ಯವೆಸಗುವುದು ಉಪದ್ರವ. ದುರ್ವಾಸನೆಯುಂಟುಮಾಡುವುದು, ಕುಡಿಯುವ ನೀರು ಕೆಡಿಸುವುದು, ಮನೆ ಅಥವಾ ಅಂಗಡಿಯ ಸೂರುಗಳನ್ನು ಸಾರ್ವಜನಿಕರಿಗೆ ತೊಂದರೆಯಾಗುವಂತೆ ಮುಂದೆ ಚಾಚುವುದು, ವಾಸದ ಮನೆಯಲ್ಲಿ ಜೂಜಾಡುವುದು ಮುಂತಾದವೂ ಉಪದ್ರವಗಳು. ತೊಂದರೆಗೀಡಾದವರು ನ್ಯಾಯಾಧೀಶರಿಗೆ ದೂರು ಕೊಡಬಹುದು. ತುರ್ತುಪರಿಸ್ಥಿತಿಯಲ್ಲಿ ತಕ್ಷಣವೇ ಕ್ರಮಕೈಕೊಳ್ಳಲು ಕ್ರಿಮಿನಲ್ ಪ್ರೊಸೀಜರ್ ಕೋಡಿನ 144 ಮತ್ತು 145ನೆಯ ಕಲಂ ಪ್ರಕಾರ ಸಂಬಂಧಪಟ್ಟ ನ್ಯಾಯಾಧೀಶರಿಗೆ ಅಧಿಕಾರವಿರುತ್ತದೆ.

ಅಪಕೃತ್ಯದಲ್ಲಿ ಉಪದ್ರವ ಪರಿಹಾರ ಪಡೆಯುವ ಕೃತ್ಯವಾಗುತ್ತದೆ. ಯಾವ ಸಂದರ್ಭಗಳಲ್ಲಿ ಈ ಉಪದ್ರವವಾಗುತ್ತದೆ ಎಂಬುದನ್ನು ನ್ಯಾಯಾಲಯ ನಿರ್ಣಯಿಸುತ್ತದೆ. ಸಂಗೀತಗಾರರೊಬ್ಬರ ಪಕ್ಕದ ಮನೆಯಲ್ಲಿದ್ದವರೊಬ್ಬರು ಸಂಗೀತದ ಪಾಠಗಳಿಂದ ತೊಂದರೆಗೊಂಡು, ಪ್ರತಿದಿನ ಸಂಗೀತ ಆರಂಭವಾದೊಡನೆ ಕೂಗುವುದು, ಶಿಳ್ಳೆಹೊಡೆಯುವುದು, ತಟ್ಟೆ

ಬಡಿಯುವುದು ಮುಂತಾದ ಕೃತ್ಯಗಳಲ್ಲಿ ನಿರತರಾಗಿ ಸಂಗೀತ ಪಾಠ ಮುಂದುವರಿಯದಂತೆ ಅಡ್ಡಿ ಮಾಡಿದರು. ಅವರು ಸಂಗೀತಗಾರರಿಗೆ ಪರಿಹಾರ ಕೊಡಬೇಕೆಂದು ಒಂದು ಮೊಕದ್ದಮೆಯಲ್ಲಿ ತೀರ್ಮಾನವಾಯಿತು. (ಎಂ.ಎಸ್.ಆರ್.)

**ಉಪನಯನ:** ಆಚಾರ್ಯರ ಸಮೀಪಕ್ಕೆ ಉಪದೇಶಕ್ಕಾಗಿ ಆಗಮಿಸುವುದು (ಇನಿಷಿಯೇಷನ್). ಇದರಲ್ಲಿ ಮುಖ್ಯವಾದುದು ಗಾಯತ್ರಿ ಮಂತ್ರೋಪದೇಶ ಮತ್ತು ಬ್ರಹ್ಮಚರ್ಯವ್ರತ ದೀಕ್ಷೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಂಬ ತ್ರಿವರ್ಣದವರಿಗೆ ಮಾತ್ರ ಈ ಸಂಸ್ಕಾರವುಂಟು. ವಟುವಿನ ವಯಸ್ಸನ್ನು ಮೂರು ವರ್ಣದವರಿಗೂ ಪ್ರತ್ಯೇಕವಾಗಿ ನಿಬಂಧಿಸಲಾಗಿದೆ. ಅವರ ಉಡುಗೆ ತೊಡುಗೆಯಲ್ಲೂ ವ್ಯತ್ಯಾಸವುಂಟು. ಈ ಸಂಸ್ಕಾರದಲ್ಲಿ ವಟುವಿಗೆ ಯಜ್ಞೋಪವೀತ ಧಾರಣೆ ಮಾಡಿಸಲಾಗುತ್ತದೆ. ಅನಂತರ ಬ್ರಹ್ಮಚಾರಿಯಾಗಿ ಆತ ಧರ್ಮವನ್ನು ಪಾಲಿಸಬೇಕು, ಭಿಕ್ಷೆಯಿಂದ ಜೀವಿಸಬೇಕು. ತ್ರಿಸಂಧ್ಯಾಕಾಲಗಳಲ್ಲಿ ಗಾಯತ್ರಿ ಮಂತ್ರಪೂರ್ವಕ ಸಂಧ್ಯಾವಂದನೆಯನ್ನಾಚರಿಸಬೇಕು. ಅರ್ಘ್ಯವನ್ನು ಕೊಡಬೇಕು. ವೇದಾಧ್ಯಯನವೇ ವಟುವಿನ ಪ್ರಥಮ ಕರ್ತವ್ಯ. ಗುರುಕುಲವಾಸ, ಗುರುಶುಶ್ರೂಷೆ, ಗುರುಪತ್ನಿಯಲ್ಲಿ ಭಕ್ತಿ–ಇವುಗಳನ್ನು ವಿಧಿಸಲಾಗಿದೆ. ವಿದ್ಯಾಭ್ಯಾಸಕ್ಕೆ ಕಾಲಾವಧಿಯನ್ನು ಗೊತ್ತು ಮಾಡಿದಂತೆ ತೋರುವುದಿಲ್ಲ. ಭಾರದ್ವಾಜರು 75 ವರ್ಷ ಬ್ರಹ್ಮಚಾರಿಗಳಾಗಿದ್ದರೂ ವೇದಗಳ ಅಧ್ಯಯನವನ್ನು ಅಲ್ಪ ಪ್ರಮಾಣದಲ್ಲಿ ಮಾತ್ರ ಮುಗಿಸಿದ್ದರಂತೆ. ಪ್ರಾಚೀನ ಕಾಲದಲ್ಲಿ ತಂದೆಯೇ ಗಾಯತ್ರೀ ಮಂತ್ರೋಪದೇಶ ಮಾಡುತ್ತಿದ್ದಿರಬಹುದೆಂಬ ಅಭಿಪ್ರಾಯವಿದೆ. ತೈತ್ತಿರೀಯ ಸಂಹಿತೆ, ಬ್ರಾಹ್ಮಣಗಳ ಕಾಲಕ್ಕೆ ವಟುವನ್ನು ಗುರುಕುಲವಾಸಕ್ಕೆ ಕಳುಹಿಸುವ ಸಂಪ್ರದಾಯ ಬಂದಿರಬಹುದು. ಉದ್ದಾಲಕ ಆರುಣಿ ತಾನೇ ಬ್ರಹ್ಮ ವಿದ್ಯಾಪಾರಂಗತನಾಗಿದ್ದರೂ ತನ್ನ ಪುತ್ರ ಶ್ವೇತಕೇತುವನ್ನು ಮತ್ತೊಬ್ಬ ಗುರುವಿನಲ್ಲಿಗೆ ಕಳುಹಿಸಿಕೊಟ್ಟ ಕಥೆ ಇದೆ.

ಉಪನಯನ ಸಂಸ್ಕಾರವನ್ನು ಆಪಸ್ತಂಬ ಗೃಹ್ಯ ಸೂತ್ರದಲ್ಲಿ ವಿವರವಾಗಿ ಹೇಳಿದೆ. ಧರ್ಮಸೂತ್ರಗಳ ಆಧಾರದ ಮೇಲೆ ಸ್ಮೃತಿಚಂದ್ರಿಕೆಯಲ್ಲಿ ಸ್ತ್ರೀಯರಿಗೂ ಉಪನಯನವಿತ್ತೆಂದು ಹೇಳಲಾಗಿದೆ. ಉಪನಯನಕ್ಕೂ ಮುಂಚೆ ಅಕ್ಷರಾಭ್ಯಾಸದೊಂದಿಗೆ ವಿದ್ಯಾರಂಭ ಸಂಸ್ಕಾರ ನಡೆದಿರಬೇಕು. ಉಪನಯನದಿಂದ ಪ್ರೌಢ ವಿದ್ಯಾಭ್ಯಾಸವನ್ನು ಪ್ರಾರಂಭಿಸಲಾಗುತ್ತದೆ. ಇತರ ಸಂಸ್ಕೃತಿಗಳಲ್ಲೂ ಉಪನಯನದಂತೆಯೇ ದೀಕ್ಷಾಪದ್ಧತಿ ಇದೆ. ಸಾಮಾಜಿಕವಾಗಿ ತನ್ನ ಕರ್ತವ್ಯಗಳನ್ನು ಅರಿಯಬೇಕಾದ ಆವಶ್ಯಕತೆಯನ್ನು ವಿದ್ಯಾರ್ಥಿಗೆ ಆಗ ತಿಳಿಸಲಾಗುತ್ತದೆ. ಉಪನಯನದ ಅನಂತರ ಅತಿ ಕಠಿಣವಾದ ಶಿಕ್ಷಣವನ್ನು ಕೊಡಲಾಗುವುದು. ಸಾಮಾಜಿಕ ಜೀವನ ಸುಗಮವಾಗುವುದಕ್ಕೆ ವಿದ್ಯಾಭ್ಯಾಸ ಕ್ರಮ ಎಷ್ಟು ಮಹತ್ತರವಾಗಿರಬೇಕೆಂಬುದನ್ನು ಭಾರತೀಯರು ಚೆನ್ನಾಗಿ ಅರಿತಿದ್ದರು. ಮಾನವಜೀವನ, ಪ್ರಾಣಿಜೀವನದ ಮಟ್ಟಕ್ಕೆ ಇಳಿಯದಿರಬೇಕಾದರೆ ಮಾನವನ ಬೌದ್ಧಿಕ ಬೆಳವಣಿಗೆಯೇ ಕಾರಣ. ಮಾನಸಿಕ ಶಿಕ್ಷಣದೊಂದಿಗೆ ಆತ್ಮಬಲ ಮತ್ತು ದೈಹಿಕಬಲಗಳ ಶಿಕ್ಷಣಕ್ಕೂ ಅಷ್ಟೇ ಗಮನಕೊಟ್ಟು ಗುರು ವಿದ್ಯಾರ್ಥಿಯನ್ನು ತರಬೇತು ಮಾಡಬೇಕು. ಇದಕ್ಕಾಗಿ ಗುರುವಿನ ಲಕ್ಷಣಗಳು ಹೇಗಿರಬೇಕೆಂಬ ನಿಬಂಧನೆಗಳನ್ನೂ ಉಪನಯನ ಸಂಸ್ಕಾರದಲ್ಲಿ ತಿಳಿಸಲಾಗಿದೆ. ತನ್ನ ಮಹತ್ತರವಾದ ಹೊಣೆಯನ್ನು ಉಪಾಧ್ಯಾಯ ನಿರ್ವಹಿಸಲೇಬೇಕು. ಉಪನಯನದಿಂದ ಎರಡನೆಯ ಜನ್ಮ ಪ್ರಾಪ್ತವಾಗುವುದೆಂಬ, ಅಂದರೆ ಬಾಲಕ ದ್ವಿಜನಾಗುವನೆಂಬ ಅಭಿಪ್ರಾಯವಿದೆ. ಶಿಷ್ಯನ ಶೀಲವನ್ನು ರೂಪಿಸುವ ಗುರು ಶೀಲವಂತನಾಗಿರಬೇಕು; ಶಿಷ್ಯನ ಮೇಲೆ ಪ್ರಭಾವ ಬೀರುವಷ್ಟು ಯೋಗ್ಯನಾಗಿರಬೇಕು.

ಬ್ರಾಹ್ಮಣನಿಗೆ ವಸಂತ ಋತುವಿನಲ್ಲೂ ಕ್ಷತ್ರಿಯನಿಗೆ ಗ್ರೀಷ್ಮ ಋತುವಿನಲ್ಲೂ ವೈಶ್ಯನಿಗೆ ವರ್ಷ ಋತುವಿನಲ್ಲೂ ಅವರ ಸಾತ್ವಿಕ, ರಾಜಸ ಗುಣಗಳಿಗನುಸಾರವಾಗಿ ಉಪನಯನವನ್ನು ಮಾಡಬೇಕೆಂದು ನಿಯಮವಿದೆ. ಬ್ರಾಹ್ಮಣರು ಶಮದಮಗಳಿಂದ ತೇಜೋವಂತನಾಗಿ ಬಾಳಬೇಕೆಂಬುದು ಒಟ್ಟು ಅಭಿಪ್ರಾಯ. (ಎಸ್.ಎಸ್.ಆರ್.;ಎಲ್.ಎಸ್.ಎ.)

**ಉಪನಾಟಕಗಳು:** ಯುರೋಪಿನಲ್ಲಿ ಮಧ್ಯಯುಗದಲ್ಲಿ ಹುಟ್ಟಿದ ಒಂದು ಬಗೆಯ ಗೌಣ ನಾಟಕ (ಇಂಟರ್‌ಲೂಡ್). ಆ ಕಾಲದಲ್ಲಿ ಜನರು ಹೆಚ್ಚು ಹೆಚ್ಚು ಮನರಂಜನೆಯನ್ನು ಬಯಸಿದಾಗ, ನಾಟಕವೃತ್ತಿಸಂಘಗಳು ಹೆಚ್ಚು ಸಂಖ್ಯೆಯಲ್ಲಿ ಬೆಳೆದಾಗ ಈ ಜಾತಿಯ ಕಿರುನಾಟಕಗಳು ಹುಟ್ಟಿದವು. ನೀತಿನಾಟಕದಿಂದ (ಮೊರ್‍ಯಾಲಿಟಿ ಪ್ಲೇ) ಉಪನಾಟಕ ಹುಟ್ಟಿತಾದರೂ ಇದರಲ್ಲಿ ಧರ್ಮ ಅಥವಾ ನೀತಿಬೋಧೆಯ ಉದ್ದೇಶವಿರಲಿಲ್ಲ. ಪ್ರ.ಶ. 15ನೆಯ ಮತ್ತು 16ನೆಯ ಶತಮಾನಗಳಲ್ಲಿ ರಚಿತವಾದ ಈ ಉಪನಾಟಕಗಳಲ್ಲಿ ಅನೇಕವು ವಿನೋದದಿಂದ ಕೂಡಿದ, ಸರಳ ಕಾವ್ಯಶೈಲಿಯಲ್ಲಿ ರಚಿತವಾದ, ಪುಟ್ಟ ವಿಡಂಬನ ದೃಶ್ಯಗಳು. ಹಗುರವಾದ ಮನೋರಂಜನೆಯೇ ಇವುಗಳ ಉದ್ದೇಶ. ಭೋಜನಕೂಟಗಳಲ್ಲಿ ಔತಣಶಾಲೆಯ ನಡುಮನೆಯಲ್ಲಿ ಅಥವಾ ದೊಡ್ಡ ಉಪಾಹಾರ ಗೃಹಗಳ ಅಂಗಳದಲ್ಲಿ 4–5 ನಟರು ಕೂಡಿ ಈ ನಾಟಕಗಳನ್ನು ಅಭಿನಯಿಸುತ್ತಿದ್ದರು. ಅನೇಕ ವೇಳೆ, ಉದ್ದವಾದ ನೀತಿನಾಟಕದ ನಡುವೆ ದೊರೆಯುತ್ತಿದ್ದ ವಿರಾಮದಲ್ಲಿ ಸ್ವಲ್ಪ ವೈವಿಧ್ಯವನ್ನು ತರಲು ಈ ಪುಟ್ಟ ವಿನೋದ ದೃಶ್ಯಗಳನ್ನು ಅಭಿನಯಿಸುತ್ತಿದ್ದುದರಿಂದ ಇವುಗಳಿಗೆ ಉಪನಾಟಕಗಳೆಂದು ಹೆಸರು ಬಂತು. ಉಪನಾಟಕಕ್ಕೆ ಒಳ್ಳೆಯ ಉದಾಹರಣೆಯೆಂದರೆ ಜಾನ್ ಹೇವುಡ್ (ಸು. 1497–1580) ರಚಿಸಿದ ದಿ ಫೋರ್ ಪೀಸ್. ಇದರಲ್ಲಿ ಪಕಾರದಿಂದ ಪ್ರಾರಂಭವಾಗುವ ಹೆಸರಿನ ನಾಲ್ಕು ಪಾತ್ರಗಳು ಬರುತ್ತವೆ. ಒಬ್ಬ ಯಾತ್ರಿಕ (ಪಾಮರ್), ಒಬ್ಬ ಕ್ಷಮಾಧಿಕಾರಿ (ಪಾರ್ಡನರ್), ಇನ್ನೊಬ್ಬ ಸಣ್ಣಪುಟ್ಟ ಸಾಮಾನುಗಳನ್ನು ಮಾರುವ ವರ್ತಕ (ಪೆಡ್ಲರ್), ಮತ್ತೊಬ್ಬ ಅಳಲೇಕಾಯಿ ಪಂಡಿತ (ಅಪಾತಿಕರಿ). ಈ ನಾಲ್ವರೂ ತಮ್ಮಲ್ಲಿ ಯಾರು ಅತಿ ದೊಡ್ಡ ಸುಳ್ಳು ಹೇಳಬಲ್ಲರೆಂದು ಪಣ ತೊಡುತ್ತಾರೆ. ತಾಳ್ಮೆ ತಪ್ಪಿದ್ದ ಹೆಣ್ಣನ್ನೇ ತನ್ನ ಜೀವಮಾನದಲ್ಲಿ ತಾನು ಕಾಣೆನೆಂದು ಶ್ಲೇಷಾತ್ಮಕವಾದ ಅತಿ ದೊಡ್ಡ ಸುಳ್ಳನ್ನು ಹೇಳಿ ಯಾತ್ರಿಕ ಪಣವನ್ನು ಗೆಲ್ಲುತ್ತಾನೆ.

ಕೇವಲ ವಿನೋದವೇ ಮುಖ್ಯವಾಗಿರುವ ಈ ಗೌಣನಾಟಕಗಳು ಬರಬರುತ್ತ ಚಾರಿತ್ರಿಕ ವಸ್ತುವನ್ನೂ ಅಳವಡಿಸಿಕೊಂಡವು. ಮೊಟ್ಟಮೊದಲು ಚರ್ಚಿನಲ್ಲಿ ಧರ್ಮ ಮತ್ತು ನೀತಿಬೋಧನೆಗೆಂದು ಉದ್ದೇಶಿಸಿದ ನಾಟಕರೂಪ ಕಾಲಕ್ರಮೇಣ ಚರ್ಚಿನ ಎಲ್ಲೆಯನ್ನುಲ್ಲಂಘಿಸಿ ಲೌಕಿಕ ಮನೋರಂಜನೆಯ ಸ್ವರೂಪವನ್ನು ಪಡೆಯಿತು. ಪ್ರಾಚೀನ ಪಾಶ್ಚಾತ್ಯ ನಾಟಕದ ಈ ಮೂಲರೂಪಗಳೇ ಮುಂದೆ ಎಲಿಜಬೆತ್ ಕಾಲದಲ್ಲಿ ವಿಪುಲವಾಗಿ ರಚಿತವಾದ ಉನ್ನತ ನಾಟಕಗಳಿಗೆ ನಾಂದಿಯಾದುವು. (ಎಚ್.ಕೆ.ಆರ್.)

ಇಂಟರ್‌ಲೂಡ್, ನಾಟಕದ ವಿಕಾಸದಲ್ಲಿ ಒಂದು ಮುಖ್ಯ ಘಟ್ಟ. ಮಿರಕಲ್, ಮೊರ್‍ಯಾಲಿಟಿಗಳಲ್ಲಿ ಧರ್ಮ ಮತ್ತು ನೀತಿಗಳೇ ಪ್ರಧಾನವಾಗಿದ್ದವು. ಇದರಿಂದ ಉಪದೇಶವೇ ಮುಖ್ಯವಾಗಿತ್ತು. ಹೀಗಿದ್ದಷ್ಟು ಕಾಲ ನಾಟಕವು ಸ್ವತಂತ್ರವಾಗಿ ಬೆಳೆಯುವಂತಿರಲಿಲ್ಲ, ಮನುಷ್ಯ ಸ್ವಭಾವದಲ್ಲಿ ಆಸಕ್ತಿ ಬೆಳೆಯುವಂತಿರಲಿಲ್ಲ, ಇಂಟರ್‌ಲೂಡ್ ನಾಟಕಕಾರನ ಉಪದೇಶದ ಸಂಕೋಲೆಗಳನ್ನು ತೆಗೆದುಹಾಕಿತು, ಹಾಸ್ಯವನ್ನು ತಂದುಕೊಟ್ಟಿತು. ನಾಟಕ ಪ್ರಕಾರದ ವಿಕಾಸವನ್ನು ಸಾಧ್ಯ ಮಾಡಿಕೊಟ್ಟಿತು. ಅಲ್ಲದೆ ಅವರೆವಿಗೆ ಮಿರಕಲ್ಸ್‌ಗಳು, ತೊಕ್ಕಲಾಟಗಳನ್ನು ರಚಿಸುತ್ತಿದ್ದವರು ಕಥಾವಸ್ತುವಿಗೆ ಬೈಬಲನ್ನೂ ಸಂತರ ಜೀವನಗಳನ್ನೂ ಆಶ್ರಯಿಸುತ್ತಿದ್ದರು. ಹೀಗೆ ನಾಟಕಕಾರನು (**ದ ಫೋರ್ ಪೀಸ್** ನಾಟಕವು ತೋರಿಸುವಂತೆ) ತನ್ನ ಕಥಾವಸ್ತುವನ್ನು ತಾನೇ ಸೃಷ್ಟಿಸಲು ಪ್ರಾರಂಭಿಸಿದ. (ಎಲ್.ಎಸ್.ಎಸ್.)

**ಉಪನಿಷತ್‌ಗಳು:** ವೇದಗಳ ಕೊನೆಯ ಹಾಗೂ ನಾಲ್ಕನೆಯ ವಿಭಾಗವನ್ನು ಈ ಹೆಸರಿನಿಂದ ಕರೆಯುತ್ತಾರೆ. ಉಳಿದ ಮೊದಲ ಮೂರು ಭಾಗಗಳೆಂದರೆ ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು. ಆದ್ದರಿಂದಲೇ ಉಪನಿಷತ್‌ಗಳಿಗೆ ವೇದಾಂತವೆಂಬ ಹೆಸರೂ ರೂಢಿಯಲ್ಲಿದೆ. ಉಪನಿಷತ್‌ಗಳು ಸಂಖ್ಯೆಯಲ್ಲಿ ಎಷ್ಟಿವೆ, ಇವುಗಳ ಕಾಲವೇನು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ವೇದಧರ್ಮದ ಅತ್ಯುನ್ನತ ಆದರ್ಶ ಮತ್ತು ಸಿದ್ಧಿಗಳನ್ನು ಪ್ರತಿಪಾದಿಸಿ ಮೋಕ್ಷ ಶಾಸ್ತ್ರಗಳೆನ್ನಿಸಿಕೊಂಡಿರುವ ಇವು ವೇದಗಳ ಸಾರಸರ್ವಸ್ವವಾಗಿ ಮಾನವನನ್ನು ಅಮೃತತ್ವಕ್ಕೆ ಒಯ್ಯುವ ಹಂತಪಂಕ್ತಿಗಳೆನ್ನಬಹುದು. ಇವುಗಳಲ್ಲಿ ವಿಚಾರದ ಅಂತ್ಯವನ್ನು ಮೀರಿ ಹೋಗಿರುವ ಮಹಾಮಹಿಮರ, ಋಷಿಗಳ, ಮಂತ್ರದ್ರಷ್ಟಾರರ, ಅಂತರ್ದೃಷ್ಟಿ ಗೋಚರವಾದ ಪರಬ್ರಹ್ಮವಸ್ತುವಿನ ಸ್ವರೂಪ ನಿರೂಪಣೆ ದಿವ್ಯಜ್ಯೋತಿಯಂತೆ ಬೆಳಗುತ್ತಿದೆ. ಇವು ಭಾರತೀಯ ದರ್ಶನಗಳೆಲ್ಲಕ್ಕೂ ಸಿದ್ಧಾಂತಗಳೆಲ್ಲಕ್ಕೂ ಮೂಲವಾದ ತತ್ತ್ವ ತರಂಗಗಳ ಪಾವನ ಬುಗ್ಗೆಗಳಂತಿವೆ. ಅಂತೆಯೇ ವಿದ್ವಾಂಸರು ಇವನ್ನು ವೇದಗಳೆಂಬ ಪರ್ವತಪಂಕ್ತಿಗಳಲ್ಲಿನ ಗಗನಸ್ಪರ್ಶಿ ಶಿಖರಗಳೆಂದು ಬಣ್ಣಿಸಿದ್ದಾರೆ. ಇವುಗಳಲ್ಲಿ ಅಡಗಿರುವ ಮಹತ್ತ್ವವನ್ನು, ಆತ್ಮ ಪರಮಾತ್ಮ ಜ್ಞಾನವನ್ನು, ಗುರುವಿನ ಪದತಲದಲ್ಲಿ ಕುಳಿತು ಭಕ್ತಿಯಿಂದ ಕೇಳಿ ತಿಳಿಯಬೇಕಾಗಿರುವುದರಿಂದ ಈ ಅರ್ಥವನ್ನೊಳಗೊಂಡ ಉಪನಿಷತ್ ಎಂಬ ಹೆಸರು ಅನ್ವರ್ಥವಾಗಿದೆ. ಇವುಗಳಲ್ಲಿ ಬಹುಭಾಗ ಗುರುಶಿಷ್ಯರ ಸಂವಾದ ರೂಪದಲ್ಲಿದೆ.

ತತ್ತ್ವದೃಷ್ಟಿಯಿಂದ ಹೇಗೋ ಸಾಹಿತ್ಯದೃಷ್ಟಿಯಿಂದಲೂ ಇವು ಅದ್ಭುತವಾಗಿವೆ. ಸಂಸ್ಕೃತ ಭಾಷೆಯನ್ನು ಎಷ್ಟು ವೀರ್ಯವತ್ತಾಗಿ ಗದ್ಯದಲ್ಲಿ ಬಳಸಬಹುದೆಂಬುದಕ್ಕೆ ಇವು ನಿದರ್ಶನಗಳಾಗಿವೆ. ಕೆಲವು ಭಾಗಗಳಂತೂ ವಿಶ್ವಸಾಹಿತ್ಯದಲ್ಲಿಯೇ ಅತ್ಯುತ್ತಮವಾದುವೆನ್ನಬಹುದು.

ಋಗ್ವೇದಕ್ಕೆ ಐತರೇಯ, ಕೌಷೀತಕಿ ಉಪನಿಷತ್‌ಗಳೂ ಸಾಮವೇದಕ್ಕೆ ಛಾಂದೋಗ್ಯ ಮತ್ತು ಕೇನ ಉಪನಿಷತ್‌ಗಳೂ ಕೃಷ್ಣ ಯಜುರ್ವೇದಕ್ಕೆ ಕಠ, ಶ್ವೇತಾಶ್ವತರ, ಮೈತ್ರಾಯಣೀಯ, ತೈತ್ತಿರೀಯ ಮತ್ತು ಮಹಾ ನಾರಾಯಣೀಯ ಉಪನಿಷತ್‌ಗಳೂ ಶುಕ್ಲಯಜುರ್ವೇದಕ್ಕೆ ಬೃಹದಾರಣ್ಯಕ ಮತ್ತು ಈಶಾವಾಸ್ಯೋಪನಿಷತ್‌ಗಳೂ ಅಥರ್ವವೇದಕ್ಕೆ ಮುಂಡಕ, ಪ್ರಶ್ನ, ಮಾಂಡೂಕ್ಯ ಉಪನಿಷತ್‌ಗಳೂ ಸೇರಿವೆ.

ಉಪನಿಷತ್‌ಗಳ ಸಂಖ್ಯೆಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಮುಕ್ತಿಕೋಪನಿಷತ್ತಿನಲ್ಲಿ ಇವು 108 ಎಂದು ತಿಳಿಸಲಾಗಿದೆ. ಬೇರೆ ಬೇರೆ ವೇದಶಾಖೆಗಳಿಗೆ ಸೇರಿದ ಅನೇಕ ಉಪನಿಷತ್‌ಗಳಿದ್ದರೂ ಅತ್ಯಂತ ಪ್ರಾಚೀನವೂ ಮಹತ್ತ್ವಪೂರ್ಣವೂ ಆದವೆನ್ನಿಸಿಕೊಂಡಿರುವವು 13. ಅವುಗಳಲ್ಲಿ ದಶೋಪನಿಷತ್‌ಗಳೆಂದು ಸುಪ್ರಸಿದ್ಧವಾಗಿರುವವು ಈಶ, ಕೇನ, ಪ್ರಶ್ನ, ಕಠ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕಗಳು. ಉಳಿದವು ಕೌಷೀತಕಿ, ಶ್ವೇತಾಶ್ವತರ, ಮೈತ್ರಾಯಣೀಯ. ಈ 13 ಉಪನಿಷತ್‌ಗಳಿಂದ ಭಾಷ್ಯಕಾರರು ಯಥೇಚ್ಛವಾಗಿ ಉಲ್ಲೇಖಿಸಿದ್ದಾರೆ; ಮತ್ತು ಇವನ್ನು ಕುರಿತು ಭಾಷ್ಯ ಬರೆದಿದ್ದಾರೆ.

ಉಪನಿಷತ್‌ಗಳ ಕಾಲದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಇವು ಬೌದ್ಧ ಧರ್ಮಕ್ಕೆ ಹಿಂದಿನವು ಎಂಬಲ್ಲಿ ಒಮ್ಮತವಿದೆ. ಅಂದರೆ ಇವು ಪ್ರ.ಶ.ಪೂ. 600ಕ್ಕೆ ಹಿಂದಿನವು. ಋಗ್ವೇದ ಸಂಹಿತೆಗಳ ಕಾಲಕ್ಕೆ ಈಚಿನವು ಎಂದು ಹೇಳಬೇಕಾಗಿರುವುದರಿಂದಲೂ ಋಗ್ವೇದದ ಕಾಲ ಸು. ಪ್ರ.ಶ.ಪೂ. 1200 ಎಂದು ಪಂಡಿತರ ಅಭಿಪ್ರಾಯವಿರುವುದರಿಂದಲೂ ಉಪನಿಷತ್‌ಗಳ ಕಾಲವನ್ನು ಪ್ರ.ಶ.ಪೂ. 1200 ಮತ್ತು ಪ್ರ.ಶ.ಪೂ. 600ರ ಮಧ್ಯಕಾಲವೆನ್ನಬಹುದು. ಆದರೆ ಮೈತ್ರಾಯಣೀಯ ಉಪನಿಷತ್ತಿನಲ್ಲಿ ಬಂದಿರುವ ಜ್ಯೋತಿಶ್ಶಾಸ್ತ್ರಕ್ಕೆ

ಸಂಬಂಧಿಸಿದ ಒಂದು ಉಲ್ಲೇಖದ ಆಧಾರದ ಮೇಲೆ ಬಾಲಗಂಗಾಧರ ತಿಲಕರು ಕಾಲವನ್ನು ಪ್ರ.ಶ.ಪೂ. 2000ದ ಹಿಂದಕ್ಕೆ ಹಾಕಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅತ್ಯಂತ ಪ್ರಾಚೀನ ವಾದವು ಛಾಂದೋಗ್ಯ, ಬೃಹದಾರಣ್ಯಕಗಳು.

ವೇದಗಳೆಂಬ ಕ್ಷೀರಸಾಗರವನ್ನು ಮಥಿಸಿ ತೆಗೆದ ಅಮೃತಕಲಶವೇ ಉಪನಿಷತ್ ಗಳೆನ್ನಬಹುದು. ಇವುಗಳಲ್ಲಿ ಕೇಳಿಬರುವುದು ಮಾನವವಾಣಿಯಲ್ಲ. ವೇದಗಳಂತೆ ಇವೂ ಅಪೌರುಷೇಯವೆಂದೇ ಆಸ್ತಿಕರ ನಂಬಿಕೆ. ಇವುಗಳ ನಿಗೂಢ ತತ್ತ್ವವನ್ನು ಪ್ರತಿಪಾದಿಸಿದವರು ವಿಚಾರಮಂಥನದ ಸೀಮೆಯನ್ನು ದಾಟಿಹೋದ ದೈವಾಂಶಸಂಭೂತರು. ತಮ್ಮ ದಿವ್ಯದೃಷ್ಟಿಗೆ ಗೋಚರವಾದ ದೇಶಕಾಲಾತೀತವಾದ ಪರಮ ಸತ್ಯವನ್ನು ಅಮೃತವಾಣಿಯಲ್ಲಿ ಅವರು ನುಡಿದಿದ್ದಾರೆ. ಉಪನಿಷತ್‌ಗಳು ವಿಶ್ವದ ಜ್ಞಾನಭಂಡಾರದಲ್ಲಿರುವ ಜ್ಯೋತಿರ್ಮಯವಾದ ಅಮೂಲ್ಯ ರತ್ನಗಳು. ಇವು ಭಾರತೀಯ ತತ್ತ್ವಸಾಮ್ರಾಜ್ಯದ ಸಿಂಹಾಸನವನ್ನಲಂಕರಿಸಿವೆ. ಇವುಗಳ ಪ್ರಭೆಗೆ ಭಾರತೀಯ ತತ್ತ್ವಜ್ಞರು, ಆಚಾರ್ಯರು, ದರ್ಶನಕಾರರಷ್ಟೇ ಅಲ್ಲದೆ ಪಾಶ್ಚಾತ್ಯ ಜ್ಞಾನವೇತ್ತರೂ ಮಣಿದು ಮಾರುಹೋಗಿದ್ದಾರೆ. ಷೋಪೆನ್‌ಹೌರ್, ಮ್ಯಾಕ್ಸ್ ಮ್ಯೂಲರ್, ಡೌಸನ್, ಹ್ಯೂಮ್ ಮೊದಲಾದವರು ಮುಕ್ತಕಂಠದಿಂದ ಇವನ್ನು ಶ್ಲಾಘಿಸಿದ್ದಾರೆ.

ಪ್ರಸ್ಥಾನತ್ರಯಗಳೆನ್ನಿಸಿಕೊಂಡ ಶಾಸ್ತ್ರಗ್ರಂಥಗಳಲ್ಲಿ ಉಪನಿಷತ್‌ಗಳು ಪ್ರಧಾನವಾದವು. ಬ್ರಹ್ಮಸೂತ್ರಗಳೂ ಭಗವದ್ಗೀತೆಯೂ ಇವನ್ನೇ ಆಶ್ರಯಿಸಿದ ಉಳಿದ ಎರಡು ಪ್ರಸ್ಥಾನಗಳು. ಬ್ರಹ್ಮಸೂತ್ರಗಳಲ್ಲಿ ಉಪನಿಷತ್‌ಗಳ ತೊಡಕಾದ ತತ್ತ್ವಗಳನ್ನು ಕ್ರಮಬದ್ಧವಾಗಿ ಸೂತ್ರಗಳ ರೂಪದಲ್ಲಿ ಜೋಡಿಸಲಾಗಿದೆ. ಭಗವದ್ಗೀತೆಯಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಈ ತತ್ತ್ವಗಳನ್ನು ವಿಶದಪಡಿಸಲಾಗಿದೆ. ಉಪನಿಷತ್ತೆಂಬ ಗೋವಿನಿಂದ ಗೀತೆಯೆಂಬ ಕ್ಷೀರವನ್ನು ಕೃಷ್ಣನೇ ಗೊಲ್ಲನಾಗಿ ಕರೆದುಕೊಟ್ಟಿದ್ದಾನೆ–ಎಂದು ಒಂದು ಹೇಳಿಕೆ ಇದೆ. ಹೀಗೆ ಉಪನಿಷತ್ ಪ್ರಸ್ಥಾನತ್ರಯಗಳಲ್ಲಿ ಆಧಾರಸ್ತಂಭದಂತೆ ನಿಂತಿದ್ದು ಎಲ್ಲ ತತ್ತ್ವಗಳೂ ಇದರ ಶಾಖೋಪಶಾಖೆಗಳಾಗಿವೆ.

**ಪ್ರಧಾನ ಉಪನಿಷತ್‌ಗಳ ಸ್ಥೂಲಪರಿಚಯ: 1 ಈಶೋಪನಿಷತ್**: ಪ್ರಮುಖ ಉಪನಿಷತ್ ಗಳಲ್ಲಿ ಒಂದು. ಯಜುರ್ವೇದದ ವಾಜಸನೇಯ ಶಾಖೆಗೆ ಸೇರಿದೆ. ಇದಕ್ಕೆ ಈಶಾವಾಸ್ಯೋಪ ನಿಷತ್ ಎಂಬ ಹೆಸರೂ ಇದೆ. ಗಾತ್ರದಲ್ಲಿ ಚಿಕ್ಕದು. ಕೇವಲ 18 ಶ್ಲೋಕಗಳಿಂದ ಕೂಡಿದೆ. ಆದರೂ ತತ್ತ್ವಗಾಂಭೀರ್ಯದಿಂದ ಅರ್ಥ ಸಂಪತ್ತಿನಿಂದ ಅತಿ ಮಹತ್ತ್ವದ್ದಾಗಿದೆ. ಇದರಲ್ಲಿ ಜಗತ್ತಿಗೂ ಬ್ರಹ್ಮನಿಗೂ ಇರುವ ಸಂಬಂಧ ವಿವರಣೆ ಪರಿಷ್ಕಾರವಾಗಿ ಬಂದಿದೆ. ಮಾನವಜೀವ ನದ ಅಂತರಾರ್ಥವನ್ನಿಲ್ಲಿ ಬಿಡಿಸಲಾಗಿದೆ. ಎಲ್ಲದಕ್ಕೂ ಪ್ರಭುವಾದ ಭಗವಂತನಲ್ಲಿ ಸಮರ್ಪಣ ಭಾವದಿಂದ ಕರ್ಮಮಾಡಿ ಪರೋಪಕಾರಿಯಾಗಿ ಸೇವಾನಿಷ್ಠನಾಗಿ ಮನುಷ್ಯಜೀವನವನ್ನು ಸಾಗಿಸಬೇಕೆಂಬ ಬೋಧೆ ಇಲ್ಲಿದೆ. ಭಗವದ್ಗೀತೆಯ ವಿಸ್ತಾರವಾದ ಉಪದೇಶ ಈ ಉಪನಿಷತ್ತಿನ ವಿವರಣೆಯಂತಿದೆ. ವಿವರಗಳಿಗೆ **ನೋಡಿ– ಈಶೋಪನಿಷತ್**.

**2 ಕೇನೋಪನಿಷತ್**: ತಲವಕಾರ ಶಾಖೆಗೆ ಸೇರಿರುವುದರಿಂದ ಇದಕ್ಕೆ ತಲವಕಾರೋಪ ನಿಷತ್ತೆಂದೂ ಹೆಸರಿದೆ. ಇದರಲ್ಲಿ ನಾಲ್ಕು ಖಂಡಗಳಿವೆ. ಮೊದಲೆರಡು ಖಂಡಗಳು ಪದ್ಯಮಯವಾಗಿಯೂ ಕೊನೆಯ ಎರಡು ಖಂಡಗಳು ಗದ್ಯಮಯವಾಗಿಯೂ ಇದ್ದು ಒಟ್ಟು 34 ಮಂತ್ರಗಳಿವೆ. ಕೇನ (ಯಾರಿಂದ) ಎಂಬ ಪದದಿಂದ ಸಾಹಿತ್ಯ ಆರಂಭವಾಗುತ್ತದೆ. ಚಿಕ್ಕ ಚಿಕ್ಕ ಮಂತ್ರಗಳಲ್ಲಿ ಬ್ರಹ್ಮಸ್ವರೂಪವನ್ನು ಮಾರ್ಮಿಕವಾಗಿ ಇದು ವರ್ಣಿಸಿದೆ. ಯಾವುದನ್ನು ಕಣ್ಣಿನಿಂದ ಕಾಣಲಾಗುವುದಿಲ್ಲವೋ ಯಾವುದರಿಂದ ಕಣ್ಣು ಕಾಣುತ್ತದೋ ಅದು ಬ್ರಹ್ಮವೆಂದು ತಿಳಿ ಎಂಬುದು ಮೊದಲ ಬೋಧೆ. ಸರ್ವವೂ ಬ್ರಹ್ಮಮಯವಾಗಿರುವುದಲ್ಲದೆ ಪರತತ್ತ್ವ ಸಾಕ್ಷಾತ್ಕಾರ ಇಂದ್ರಿಯಾತೀತವೆಂಬುದು ತಾತ್ಪರ್ಯ. ಮೂರು ಮತ್ತು ನಾಲ್ಕನೆಯ ಖಂಡದಲ್ಲಿ ಬರುವ ವ್ಯಾಖ್ಯಾನದಲ್ಲಿ, ದೇವತೆಗಳು ಬ್ರಹ್ಮನಿಂದಾದ ವಿಜಯವನ್ನು ತಮ್ಮಿಂದಾದುದೆಂದು ಭ್ರಮಿಸಿ ಯಕ್ಷರೂಪದಲ್ಲಿ ಕಾಣಿಸಿಕೊಂಡ ಬ್ರಹ್ಮನನ್ನು ತಿಳಿಯಲಾಗದೆ, ಆತ ತಮ್ಮ ಮುಂದೆ ಇಟ್ಟ ಒಂದು ಹುಲ್ಲುಕಡ್ಡಿಯನ್ನು ದಹಿಸಲು, ಅಲುಗಿಸಲು ಅಗ್ನಿವಾಯುಗಳು ಅಸಮರ್ಥರಾ ದಾಗ, ಅಂತರ್ಧಾನನಾದ ಯಕ್ಷನೇ ಬ್ರಹ್ಮನೆಂದು, ಹೈಮವತಿ ಉಮಾದೇವಿಯಿಂದ ಅರಿತುಕೊಂಡರೆಂದು ಬೋಧಿಸಲಾಗಿದೆ. ಶ್ರೇಷ್ಠನಾಗಿದ್ದರೂ ಇಂದ್ರನೇ ಇಲ್ಲಿ ಪರಬ್ರಹ್ಮನಲ್ಲ.

**3 ಕಠೋಪನಿಷತ್**: ಇದು ಎರಡು ಅಧ್ಯಾಯಗಳಿಂದ ಕೂಡಿದೆ. ಬ್ರಹ್ಮವಿದ್ಯೆಯನ್ನು ಬೇಡಿದ ನಚಿಕೇತನಿಗೆ ಯಮದೇವ ಪ್ರಲೋಭನಗಳನ್ನು ಒಡ್ಡಿದರೂ ಆತ ಅದಾವುದನ್ನೂ ಲಕ್ಷಿಸದೆ ಬ್ರಹ್ಮವಿದ್ಯೆಯನ್ನೇ ವರವಾಗಿ ಪಡೆದ ರೋಮಾಂಚನಕಾರಿ ಕಥೆ ಇರುವುದರಿಂದ ಅತ್ಯಂತ ಪ್ರಸಿದ್ಧವಾಗಿದೆ. ಜನ್ಮ ಪುನರ್ಜನ್ಮಗಳು, ಮರಣಾನಂತರ ಆತ್ಮದ ಸ್ಥಿತಿ, ಇಂದ್ರಿಯನಿಗ್ರಹ ದಿಂದ ಪರಮಾತ್ಮಪ್ರಾಪ್ತಿ, ಶ್ರದ್ಧೆ, ಧೈರ್ಯಗಳಿಂದ ಪರಮಾತ್ಮ ಸ್ವರೂಪಜ್ಞಾನ, ಶಾಶ್ವತಸುಖ ಶಾಂತಿಗಳ ಪ್ರಾಪ್ತಿ–ಇವನ್ನು ಯಮ ಪ್ರಣವದಿಂದ ಸಂಗ್ರಹವಾಗಿ ನಚಿಕೇತನಿಗೆ ಉಪದೇಶಿಸಿ ದ್ದಾನೆ. ತಂದೆಯಾದ ವಾಜಶ್ರವಸ್ ಯಾಗ ಸಂದರ್ಭದಲ್ಲಿ ಕುಪಿತನಾಗಿ ತನ್ನನ್ನು ಯಮನಿಗೆ ಒಪ್ಪಿಸಿದರೂ ಧೈರ್ಯಗೆಡದೆ ಮಗನಾದ ನಚಿಕೇತ ಯಮನೊಂದಿಗೆ ವಾದಮಾಡಿ ಅಮೃತತ್ವವನ್ನು ಪಡೆಯುತ್ತಾನೆ. ತಂದೆಯ ಪ್ರಸನ್ನತೆಯೊಂದಿಗೆ ಅಗ್ನಿವಿದ್ಯೆಯನ್ನೂ ವರವಾಗಿ ಪಡೆಯುತ್ತಾನೆ. ಈ ಆಖ್ಯಾನವನ್ನು ಹೇಳಿದರೂ ಕೇಳಿದರೂ ಬ್ರಹ್ಮಲೋಕಪ್ರಾಪ್ತಿಯೆಂದು ಫಲಶ್ರುತಿ ಇದೆ. ಇದರಲ್ಲಿ ಮಾನವನ ಹುಟ್ಟು ಸಾವುಗಳ ಪ್ರಶ್ನೆಗೂ ಅವನ ಸುಖಕ್ಕೆ ಶ್ರೇಯ ಪ್ರೇಯಗಳಾವುವು ಎಂಬ ಪ್ರಶ್ನೆಗೂ ಉತ್ತರವಿದೆ. ನಿತ್ಯರಲ್ಲಿ ನಿತ್ಯನೂ ಚೇತನರಲ್ಲಿ ಚೇತನನೂ ಆಗಿ ಸಮಸ್ತಕ್ಕೂ ಏಕೈಕ ಕಾರಣನಾದ ಪರಮಾತ್ಮನನ್ನು ನಚಿಕೇತನಂಥ ಅಸಾಧಾರಣ ಧೀರನಾದವ ಮಾತ್ರ ಹೃದಯಗಹ್ವರದಲ್ಲಿ ಕಂಡುಕೊಳ್ಳುವನೆಂದು ಸ್ಪಷ್ಟಪಡಿಸಲಾಗಿದೆ. ಕೆಲವು ಸ್ವಾರಸ್ಯವಾದ ಅಂಶಗಳೂ ಇದರಲ್ಲಿ ಕಂಡುಬಂದಿವೆ. ಪರಲೋಕದಲ್ಲಿ ನಂಬಿಕೆ ಇಲ್ಲದವರು ಆ ಕಾಲದಲ್ಲೂ ಇದ್ದರೆಂದು ಸೂಚಿಸಲಾಗಿದೆ. 'ಆಶ್ಚರ್ಯೋ ವಕ್ತಾ'. 'ಅಣೋರಣೀಯಾನ್', 'ಅಜೋ ನಿತ್ಯಃ ಶಾಶ್ವತೋಯ ಪುರಾಣಃ' ಎಂಬ ಉಕ್ತಿಗಳನ್ನು ಗೀತೆಯಲ್ಲಿ ತೆಗೆದುಕೊಳ್ಳಲಾಗಿದೆ.

ಸಾಂಖ್ಯ ಮತ್ತು ಯೋಗದರ್ಶನಗಳಿಗಿಂತ ಈ ಉಪನಿಷತ್ ಹಿಂದಿನದೆಂದು ಕೆಲವು ವಾಕ್ಯಗಳು ಸೂಚಿಸುತ್ತವೆ: 'ತದ್ವಿಷ್ಣೋಃ ಪರಮಂ ಪದಮ್' ಎಂಬ ವಾಕ್ಯ ವಿಷ್ಣುವೇ ಪರಬ್ರಹ್ಮನೆಂದು ಈ ಉಪನಿಷತ್ತಿನ ನಿರ್ಣಯವೆಂದು ತೋರಿಸುತ್ತದೆ. 'ಮೃತ್ಯೋಃ ಸಮೃತ್ಯುಮಾಪ್ನೋತಿ ಯ ಇಹ ನಾನೇವಪಶ್ಯತಿ' ಎಂಬ ವಾಕ್ಯದಲ್ಲಿ ಅದ್ವೈತ ತತ್ತ್ವದ ಅಭಿಪ್ರಾಯವಿದೆ.

**4 ಪ್ರಶ್ನೋಪನಿಷತ್**: 'ಭದ್ರಂ ಕರ್ಣೇಭಿಃ ಶೃಣು ಯಾಮ ದೇವಾಃ' ಎಂಬುದು ಇದರ ಶಾಂತಿಮಂತ್ರ. ಪ್ರಶ್ನೆಗಳಿಂದ ಕೂಡಿದ ಇದು ಅಥರ್ವವೇದಕ್ಕೆ ಸೇರಿದ್ದು. ಗದ್ಯಮಯವಾಗಿದ್ದು, ಆರು ಮಂದಿ ಬ್ರಹ್ಮಾನ್ವೇಷಕರು ಭಗವಂತನಾದ ಪಿಪ್ಪಲಾದ ಮಹರ್ಷಿಯೊಡನೆ ಮಾಡಿದ ಸಂವಾದ ರೂಪದ ಆರು ಪ್ರಶ್ನೆಗಳನ್ನೊಳಗೊಂಡಿದೆ. ಲೋಕದಲ್ಲಿ ಪ್ರಜೆಗಳು ಹೇಗೆ ಎಲ್ಲಿಂದ ಜನಿಸುತ್ತಾರೆ ? ಎಂಬುದು ಕಬಂಧಿ ಕಾತ್ಯಾಯನ ಮೊದಲು ಕೇಳಿದ ಪ್ರಶ್ನೆ. ಪ್ರಜಾಪತಿಯ ತಪಸ್ಸಿನ ಫಲವಾಗಿ ಆದಿತ್ಯನೂ (ಪ್ರಾಣ) ಚಂದ್ರಮನೂ (ರಯಿ) ಸೃಷ್ಟಿಯಾಗಿ ಅವರಿಂದ ಪ್ರಜಾಸೃಷ್ಟಿಯಾಯಿತು ಎಂಬುದು ಅದಕ್ಕೆ ಉತ್ತರ. ದೇವತೆಗಳೆಷ್ಟು ಮಂದಿ ಪ್ರಜೆಗಳಿಗೆ ಆಧಾರಭೂತರು ? ಅವರಲ್ಲಿ ವರಿಷ್ಠರು ಯಾರು ? ಎಂಬುದು ಭಾರ್ಗವ ವೈದರ್ಭಿ ಕೇಳಿದ ಎರಡನೆಯ ಪ್ರಶ್ನೆ. ಆಕಾಶ, ವಾಯು, ಅಗ್ನಿ, ಆಪಃ, ಪೃಥಿವೀ, ವಾಕ್, ಮನಸ್ಸು, ಚಕ್ಷುಸ್ಸು, ಶ್ರೋತ್ರ ಇವರು ದೇವತೆಗಳು; ಇವರಲ್ಲಿ ವರಿಷ್ಠ ಪ್ರಾಣ, ಇದು ಉತ್ತರ. ಕೊನೆಯಲ್ಲಿ ಪ್ರಾಣಸ್ವರೂಪಿಯಾದ ಪರಬ್ರಹ್ಮನ ಸ್ತುತಿ ಇದೆ. ಮೂರನೆಯ ಪ್ರಶ್ನೆ ಈ ಪ್ರಾಣ ಎಲ್ಲಿಂದ ಹುಟ್ಟಿ ಈ ಶರೀರಕ್ಕೆ ಹೇಗೆ ಬಂದು ವಿಭಾಗ ಮಾಡಿಕೊಂಡು ಪ್ರತಿಷ್ಠಿತವಾಗುತ್ತದೆ ? ಎಂಬುದು ಅಶ್ವಲಾಯನ ಕೇಳಿದುದು. ಇದಕ್ಕೆ ಉತ್ತರ: ಪುರುಷನನ್ನು ನೆರಳು ಹಿಂಬಾಲಿಸುವಂತೆ, ಈ ಶರೀರದಲ್ಲಿ ಆತ್ಮನಿಂದ ಕರ್ಮನಿಮಿತ್ತವಾಗಿ ಪ್ರಾಣ ಜನಿಸುತ್ತದೆ. ಸಾಮ್ರಾಟನಾದವ ಬೇರೆ ಬೇರೆ ಗ್ರಾಮಗಳಲ್ಲಿ ಅಧಿಕಾರಿಗಳನ್ನು ನಿಯೋಜಿಸುವಂತೆ ಇದು ಇತರ ಪ್ರಾಣಗಳನ್ನು ನಿಯೋಜಿಸುತ್ತದೆ. ಪುಣ್ಯಾಧಿಕ್ಯವಾದರೆ ದೇವಲೋಕಕ್ಕೂ ಪಾಪಾಧಿಕ್ಯವಾದರೆ ನರಕಕ್ಕೂ ಮೇಲ್ಮುಖವಾದ ನಾಡಿಯಿಂದ ಇದು ಉತ್ಕ್ರಮಿಸುತ್ತದೆ. ನಾಲ್ಕನೆಯ ಪ್ರಶ್ನೆ ಸೌರ್ಯಾಯಣಿ ಗಾರ್ಗ್ಯರದು: ಈ ಪುರುಷನಲ್ಲಿ ನಿದ್ರಿಸುವವರು ಯಾರು ? ಜಾಗೃತರಾಗಿರುವವರು ಯಾರು ? ಸ್ವಪ್ನಗಳನ್ನು ಕಾಣುವವರೂ ಅನುಭವಿಸುವವರೂ ಯಾರು ? ಯಾರಲ್ಲಿ ಎಲ್ಲರೂ ಸಂಪ್ರತಿಷ್ಠಿತರಾಗು ತ್ತಾರೆ ? ಉತ್ತರ: ಶ್ರೋತ್ರಾದಿ ಇಂದ್ರಿಯಗಳು ಮನಸ್ಸಿನಲ್ಲಿ ಏಕೀಭವಿಸಿ ನಿದ್ರಿಸುವುವು. ಪ್ರಾಣಾದಿ ಪಂಚವಾಯುಗಳು ಎಚ್ಚರವಾಗಿರುವುವು. ಮನಸ್ಸೆಂಬ ದೇವ ಸ್ವಪ್ನಗಳನ್ನು ಕಾಣುವಾತ. ಪಕ್ಷಿಗಳು ವೃಕ್ಷದಲ್ಲಿರುವಂತೆ ಅಕ್ಷರರೂಪಿಯಾದ ಪರಮಾತ್ಮನಲ್ಲಿ ಎಲ್ಲರೂ ಸಂಪ್ರತಿಷ್ಠಿತರಾಗಿರುತ್ತಾರೆ. ಶೈಬ್ಯ ಸತ್ಯಕಾಮನದು ಐದನೆಯ ಪ್ರಶ್ನೆ. ಪ್ರಣವೋಪಾಸಕ ಯಾವ ಲೋಕವನ್ನು ಜಯಿಸುತ್ತಾನೆ ? ಅಂಥವ ಸೂರ್ಯನಲ್ಲಿ ಸಂಗತವಾಗಿ ಪಾಪವಿಮುಕ್ತ ನಾಗಿ ಬ್ರಹ್ಮಲೋಕವನ್ನು ಸೇರುತ್ತಾನೆಂದು ಪಿಪ್ಪಲಾದಿ ಋಷಿ ಉತ್ತರ ಹೇಳಿದ್ದಾನೆ. ಸುಕೇಶ ಭಾರದ್ವಾಜ ಷೋಡಶ ಕಲಾ ಪುರುಷನ ವಿಚಾರವಾಗಿ ಕೇಳಿದ ಆರನೆಯ ಪ್ರಶ್ನೆಗೆ ಪ್ರಾಣಾದಿ ಷೋಡಶ ಕಲೆಗಳು ಹೃದಯ ಪುಂಡರೀಕಾಕ್ಷದ ಮಧ್ಯದಲ್ಲಿ ಸಂಭವಿಸುವುದರಿಂದ ಆ ಪುರುಷ ಶರೀರದೊಳಗಿದ್ದಾನೆಂಬ ಉತ್ತರವಿದೆ. ಅನಂತರ ಆರು ಮಂದಿ ಶಿಷ್ಯರೂ ತಮ್ಮ ಅವಿದ್ಯೆಯನ್ನು ಹೋಗಲಾಡಿಸಿದ ಆಚಾರ್ಯರನ್ನು ವಂದಿಸುತ್ತಾರೆ.

**5 ಮುಂಡಕೋಪನಿಷತ್**: ಅಥರ್ವ ವೇದದ ಶೌನಕ ಶಾಖೆಗೆ ಸೇರಿದ ಇದರಲ್ಲಿ 3 ಮುಂಡಕಗಳು, 6 ಖಂಡಗಳು, 64 ಮಂತ್ರಗಳು ಇವೆ. ಇಡೀ ಉಪನಿಷತ್ತು ಪದ್ಯಮಯ ವಾಗಿದೆ. ಮೊದಲ ಮುಂಡಕದಲ್ಲಿ ಅಥರ್ವಣ ಪರಂಪರೆಯ ವಿವರಣೆಯೂ ಪರಾಪರ ವಿದ್ಯೆಗಳ ವಿಭಾಗವೂ ಕರ್ಮಕಾಂಡದ ನಿರಾಕರಣೆಯೂ ಜ್ಞಾನಕಾಂಡದ ಪ್ರಾಧಾನ್ಯವೂ ಸನ್ಯಾಸದ ಶ್ರೇಷ್ಠತೆಯೂ ನಿರೂಪಿತವಾಗಿವೆ. ಋಗ್ವೇದ, ಯಜುರ್ವೇದಗಳನ್ನು ಅಪರಾವಿದ್ಯೆಗೆ ಸೇರಿಸಿರುವುದೂ ಯಜ್ಞಸಂಸ್ಥೆಯ ಫಲದ ನಶ್ವರತೆಯನ್ನು ಸ್ಪಷ್ಟಪಡಿಸಿರುವುದೂ ಗಮನಾರ್ಹ ವಾಗಿದೆ. ವೇದಾಂಗಗಳ ಸಂಖ್ಯೆಯನ್ನೂ ಹೆಸರುಗಳನ್ನೂ ಕ್ರಮವಾಗಿ ಇಲ್ಲಿ ಕೊಡಲಾಗಿದೆ. ಎರಡನೆಯ ಮುಂಡಕದಲ್ಲಿ ಸೃಷ್ಟಿಸ್ಥಿತಿ ನಾಶಗಳಿಗೆ ಸರ್ವಭೂತಾಂತರಾತ್ಮವಾದ ಬ್ರಹ್ಮವಸ್ತುವೇ ಕಾರಣವೆಂದೂ ಅಮೃತತ್ವಕ್ಕೆ ಸೇತುವಾದ ಆ ಪರಮಾತ್ಮನೊಬ್ಬನನ್ನೇ ತಿಳಿಯಬೇಕೆಂದೂ ಇತರ ವಿಷಯಗಳಲ್ಲಿ ವಿರಕ್ತಿ ಇರಬೇಕೆಂದೂ ಬೋಧಿಸಲಾಗಿದೆ. ತದೇ ತತ್ಸತ್ಯಂ ತದಮೃತಂ ತದ್ವೇದ್ಧವ್ಯಂ, ತಮೇವೈಕಂ ಜಾನಥ ಆತ್ಮಾನಂ ಅನ್ಯವಾಚೋ ವಿಮುಂಚಥ–ಎಂದು ಇಲ್ಲಿ ಸಾರಿದೆ. ಮೂರನೆಯ ಮುಂಡಕದಲ್ಲಿ ವೇದಾಂತ ದರ್ಶನದ ಮುಖ್ಯ ವಿಚಾರವಾದ ಜೀವಾತ್ಮ ಪರಮಾತ್ಮರನ್ನು ಒಂದೇ ವೃಕ್ಷವನ್ನಾಶ್ರಯಿಸಿ ಅದರ ಫಲವನ್ನು ಭುಂಜಿಸುವ, ಭುಂಜಿಸದೇ ಇರುವ, ಎರಡು ಪಕ್ಷಿಗಳ ದೃಷ್ಟಾಂತದಿಂದ ನಿರೂಪಿಸಲಾಗಿದೆ. ದ್ವೈತಾದ್ವೈತ ಪಂಥಗಳು ಇದನ್ನು ಬಗೆಬಗೆಯಾಗಿ ವಿವರಿಸುತ್ತವೆ. ಜ್ಞಾನ ಪ್ರಸಾದದಿಂದ ಮಾತ್ರವೇ

ಪರಮಾತ್ಮನನ್ನು ಪಡೆಯಬಹುದೆಂಬುದನ್ನು ಪರಮಾತ್ಮನನ್ನು ಕಂಡವನು ಪುಣ್ಯಪಾಪ ವಿಮುಕ್ತನಾಗಿ ಪರಮಾತ್ಮನ ಪರಮ ಸಾಮ್ಯವನ್ನು ಪಡೆಯುತ್ತಾನೆಂದು ಹೇಳಲಾಗಿದೆ. ಕಾಮಗಳನ್ನು ಜಯಿಸಿದವನಿಗೆ ಭಗವಂತನ ದಯೆಯಿಂದ ಬ್ರಹ್ಮಪ್ರಾಪ್ತಿಯಾಗುವುದೆಂದು ತಿಳಿಸಲಾಗಿದೆ. ವೇದಾಂತ ಶಬ್ದದ ಪ್ರಯೋಗ ಇಲ್ಲಿಯೇ ಮೊದಲು ಬಂದಿರುವುದು. ಇದರಲ್ಲಿ (ಮುಂಡನ ಮಾಡಿಕೊಂಡು) ವಿರಕ್ತಿಯಿಂದ ಇಂದ್ರಿಯಾತೀತವಾದ ಬ್ರಹ್ಮಾನಂದವನ್ನು ಪಡೆಯುವ ಸಾಧನೆ, ತಪಸ್ಸು, ಇಹಲೋಕ ತ್ಯಾಗ ಇವನ್ನು ವಿಶೇಷವಾಗಿ ವಿವರಿಸಿರುವುದರಿಂದ ಸಂನ್ಯಾಸಿಗಳ (ಮುಂಡಕ) ಉಪನಿಷತ್ತು ಎಂದು ಪರ್ಯಾಯವಾಗಿ ಇದನ್ನು ಕರೆಯಲಾಗಿದೆ.

**6 ಮಾಂಡೂಕ್ಯೋಪನಿಷತ್:** ಅಥರ್ವವೇದಕ್ಕೆ ಸೇರಿದ ಇದು ಅತ್ಯಂತ ಚಿಕ್ಕದಾಗಿದ್ದು ಕೇವಲ ಹನ್ನೆರಡು ಮಂತ್ರಗಳಿಂದ ಕೂಡಿದೆ. ಇದರಲ್ಲಿ ಓಂಕಾರದ ಮಹಿಮೆ, ಮನುಷ್ಯನ ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯ ಎಂಬ ನಾಲ್ಕು ಅವಸ್ಥೆಗಳ ವಿವರಣೆ ಇದೆ. ಸೂತ್ರ ಗ್ರಂಥದಂತಿದ್ದರೂ ಓಂಕಾರವೇ ಸಮಸ್ತ ವಿಶ್ವವೂ ಭೂತ ಭವಿಷ್ಯದ್ವರ್ತಮಾನಗಳೂ ಆಗಿದೆ ಎಂದು ವಿವರಿಸುವ ಈ ಉಪನಿಷತ್ತಿಗೆ ಗೌಡಪಾದರೂ ವಿಸ್ತಾರವಾದ ಕಾರಿಕೆಯನ್ನು ಬರೆದಿದ್ದಾರೆ. ಅದ್ವೈತ, ಪ್ರಪಂಚ ಎಂಬ ಪದಗಳು ಇದರಲ್ಲಿಯೇ ಮೊದಲು ಬಂದಿರುವುದು.

**7 ತೈತ್ತಿರೀಯೋಪನಿಷತ್:** ಇದರ ಶಾಂತಿಮಂತ್ರ 'ಶಂ ನೋ ಮಿತ್ರಃ ಶಂ ವರುಣಃ' ಎಂಬುದು. ಕೃಷ್ಣ ಯಜುರ್ವೇದದ ಶಾಖೆಗೆ ಸೇರಿದ್ದು ಮೂರು ವಲ್ಲಿಗಳಿಂದ ಕೂಡಿದೆ. ಶಿಕ್ಷಾವಲ್ಲೀ (ಶಿಕ್ಷಾಧ್ಯಾಯ), ಬ್ರಹ್ಮಾನಂದವಲ್ಲೀ, ಭೃಗುವಲ್ಲೀ ಎಂದು ಮೊದಲ ಶಬ್ದಗಳಿಂದ ಹೆಸರುಗಳನ್ನು ಕೊಡಲಾಗಿದೆ. ಅನುವಾಕಗಳಾಗಿ ವಿಭಜಿಸಲ್ಪಟ್ಟು ಚಿಕ್ಕ ಚಿಕ್ಕ ಗದ್ಯವಾಕ್ಯಗಳಿಂದ ಕೂಡಿದೆ. ಶಿಕ್ಷಾಧ್ಯಾಯದಲ್ಲಿ ಅಧ್ಯಯನವನ್ನು ಮುಗಿಸಿರುವ ಶಿಷ್ಯನಿಗೆ ಮಾಡಿರುವ ಉಪದೇಶ ಎಲ್ಲ ದೇಶಕಾಲಗಳಿಗೂ ಅನ್ವಯಿಸುವಂತಿದ್ದು ಸಾರ್ವತ್ರಿಕ ಧರ್ಮನಿರೂಪಣೆಯಂತಿದೆ. ಬ್ರಹ್ಮಾನಂದವಲ್ಲಿಯಲ್ಲಿ 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂಬ ಬ್ರಹ್ಮವಸ್ತುಲಕ್ಷಣಗಳು, ಸೃಷ್ಟಿಕ್ರಮದ ವಿವೇಚನೆ ಇರುವುದಲ್ಲದೆ ವಾಙ್ಮನದರನಾದ ಬ್ರಹ್ಮವಸ್ತುವಿನಲ್ಲಿ ನೆಲೆನಿಂತವ ಭಯವಿದೂರನಾಗುವನೆಂಬ ಉಪದೇಶವಿದೆ. ಭೃಗುವಲ್ಲಿಯಲ್ಲಿ ಬ್ರಹ್ಮವಸ್ತು ಸೃಷ್ಟಿಸ್ಥಿತಿಲಯಗಳಿಗೆ ಕಾರಣವೆಂದೂ ಅದೇ ಆನಂದ ಸ್ವರೂಪಿ ಎಂದೂ 'ಆನಂದೋ ಬ್ರಹ್ಮೇತಿ ವ್ಯಜಾನಾತ್' ಎಂದೂ ತಿಳಿಸಲಾಗಿದೆ. ಪಂಚಕೋಶಗಳ ನಿರೂಪಣೆ ಸ್ಪಷ್ಟವಾಗಿದೆ. ಅವು ಒಂದರಿಂದ ಮತ್ತೊಂದು ಹುಟ್ಟುವುವೆಂಬ ಸಿದ್ಧಾಂತವಿದೆ. ಆಕಾಶ ಆತ್ಮನಿಂದ ಹುಟ್ಟಿತು ಎಂಬ ತತ್ತ್ವ ಸಾಂಖ್ಯದರ್ಶನದ ಬೆಳೆವಣಿಗೆಗೆ ಸಹಾಯಕವಾಯಿತು. ಇದರಲ್ಲಿ ಆಜಾನಜ, ಕರ್ಮಜ ಎಂದು ದೇವತೆಗಳನ್ನು ವಿಭಾಗಿಸಲಾಗಿದೆ. ಬ್ರಹ್ಮನೇ ದೇವತೆಗಳಿಗಿಂತ ಅಧಿಕನೆಂದು ಸಾರಿದೆ. ಬ್ರಹ್ಮಾನಂದವನ್ನು ಪಡೆದವ ಹಾಡುವ ಸಾಮವೊಂದು ಕೊನೆಯಲ್ಲಿ ಇದೆ.

**8 ಐತರೇಯೋಪನಿಷತ್:** ಋಗ್ವೇದದ ಐತರೇಯ ಆರಣ್ಯಕಕ್ಕೆ ಸೇರಿದೆ. 'ವಾಙ್ಮೇ ಮನಸಿ ಪ್ರತಿಷ್ಠಿತಾ' ಎಂಬುದು ಇದರ ಶಾಂತಿಮಂತ್ರ. ಗಾತ್ರದಲ್ಲಿ ಬಹಳ ಚಿಕ್ಕದು. ಮೂರು ಅಧ್ಯಾಯಗಳಿವೆ. ಆತ್ಮನಿಂದ ಲೋಕಗಳೆಲ್ಲದರ ಸೃಷ್ಟಿಯಾಯಿತೆಂದು ಮೊದಲು ತಿಳಿಸಲಾಗಿದೆ. ಅನಂತರ ಅಶನಾ ಪಿಪಾಸೆಗಳ ವೃತ್ತಾಂತ. ಪುರುಷ ಲೋಕಗಳಿಗೂ ಲೋಕಪಾಲಕರಿಗೂ ಅನ್ನವನ್ನು ಸೃಜಿಸಲು ಮಾಡಿದ ಸಂಕಲ್ಪ, ಇಂದ್ರ ಶಬ್ದದ ಅರ್ಥ, ಪುರುಷನ ಮೂರು ಜನ್ಮಗಳು, ಮನೋವ್ಯಾಪಾರಗಳ ವಿಶ್ಲೇಷಣೆ–ಇವನ್ನು ನಿರೂಪಿಸಲಾಗಿದೆ. ಕೊನೆಯಲ್ಲಿ 'ಪ್ರಜ್ಞಾನಂ ಬ್ರಹ್ಮ' ಎಂಬ ಉಪದೇಶವಿದೆ.

**9 ಛಾಂದೋಗ್ಯೋಪನಿಷತ್:** ಇದು ಅತ್ಯಂತ ಪ್ರಾಚೀನವಾದುದೆಂದು ಎಲ್ಲರೂ ಒಪ್ಪುತ್ತಾರೆ. ಸಾಮವೇದಕ್ಕೆ ಸೇರಿದ್ದು ಪ್ರಾಚೀನತೆ, ಅರ್ಥಗಾಂಭೀರ್ಯ, ಬ್ರಹ್ಮಜ್ಞಾನ ಪ್ರತಿಪಾದನೆ–ಈ ದೃಷ್ಟಿಗಳಿಂದ ಇದು ಬಹಳ ಪ್ರೌಢವೂ ಪ್ರಮೇಯ ಬಹುಲವೂ ಆಗಿದೆ. ಎಂಟು ಅಧ್ಯಾಯಗಳೂ (ಪ್ರಪಾಠಕಗಳು) ಒಂದೊಂದರಲ್ಲೂ ಅನೇಕಾನೇಕ ಖಂಡಗಳೂ ಇವೆ. ಒಂದೊಂದು ಖಂಡದಲ್ಲೂ ಹಲವಾರು ಗದ್ಯ ಮಂತ್ರಗಳಿವೆ. ಈ ಖಂಡಗಳು ಬೇರೆ ಬೇರೆ ವಿಚಾರಗಳನ್ನು ವಿವೇಚಿಸುವುದರಿಂದ ಇವು ಬೇರೆ ಬೇರೆ ಕಾಲಕ್ಕೆ ಸೇರಿರಬಹುದೆಂದು ವಿಮರ್ಶಕರು ಭಾವಿಸುತ್ತಾರೆ. ಗೃಹಸ್ಥಜೀವನ ಬ್ರಹ್ಮಲೋಕ ಪ್ರಾಪ್ತಿಗೆ ವಿಹಿತಮಾರ್ಗವೆಂದು ಕೊನೆಯ ಖಂಡದಲ್ಲಿ ಹೇಳಿರುವುದರಿಂದ ಯಾಗಾದಿಗಳ ಪ್ರಾಧಾನ್ಯ ತಪ್ಪುವುದಕ್ಕೆ ಮುಂಚೆಯೇ ಇದು ಸಂಕುಲಿತವಾಗಿರಬೇಕೆಂದು ನಿರ್ಣಯಿಸಬಹುದು. ಪಶುಹಿಂಸೆಯೂ ಅನುಮೋದಿತ ವಾಗಿದೆ. ಆಚಾರ್ಯ ಪರಂಪರೆಯನ್ನೂ ಸಂಗ್ರಹವಾಗಿ ಕೊಡಲಾಗಿದೆ. ಮೊದಲ ಅಧ್ಯಾಯದಲ್ಲಿ ಪ್ರಣವ ಸ್ವರೂಪವನ್ನೂ ಸಾಮಗಾನದ ಗೂಢ ಸ್ವರೂಪವನ್ನೂ ಮಾರ್ಮಿಕವಾಗಿ ತಿಳಿಸಲಾಗಿದೆ. ಉದ್ಗೀಥ ವಿದ್ಯೆಯ ಮಹತ್ತ್ವದ ನಿರೂಪಣೆಯೊಂದಿಗೆ ಉದ್ಗೀಥ, ಪ್ರಣವಗಳ ತಾದಾತ್ಮ್ಯವನ್ನು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ವಿಶ್ವವೇ ಸಾಮವೆಂದು ಸಾರಿ ಪಂಚವಿಧ ಸಪ್ತವಿಧ ಸಾಮೋಪಾಸನೆಯನ್ನು ಬೋಧಿಸಲಾಗಿದೆ. 3ನೆಯ ಅಧ್ಯಾಯದಲ್ಲಿ ಮಧುವಿದ್ಯೆಯ ನಿರೂಪಣೆಯೊಂದಿಗೆ ಆದಿತ್ಯನೇ ದೇವಮಧು, ಅವನೇ ಆತ್ಮ ಎಂದು ಸಾರಲಾಗಿದೆ. ಶಾಂಡಿಲ್ಯ ವಿದ್ಯೆ ಉಪವರ್ಣಿತವಾಗಿದೆ. 4ನೆಯ ಅಧ್ಯಾಯದಲ್ಲಿ ರೈಕ್ವನೆಂಬ ಬ್ರಹ್ಮಜ್ಞನಿಂದ ಜಾನು ಶ್ರುತಿ ಪೌತ್ರಾಯಣ ರಾಜಬ್ರಹ್ಮೋಪದೇಶವನ್ನು ಪಡೆದ ಕಥಾನಿರೂಪಣೆ ಇದೆ. ಸಂವರ್ಗ ವಿದ್ಯೆ ಮತ್ತು ಉಪಕೋಸಲ ವಿದ್ಯೆಗಳ ಉಪದೇಶ, ಸತ್ಯಕಾಮ ಜಾಬಾಲನ ವೃತ್ತಾಂತ, ದೇವಯಾನದ ಮುಖಾಂತರ ಆತ್ಮ ಬ್ರಹ್ಮಲೋಕವನ್ನು ಸೇರುವ ಕ್ರಮದ ವರ್ಣನೆಗಳು ಬಂದಿವೆ. 5ನೆಯ ಅಧ್ಯಾಯದಲ್ಲಿ ಇಂದ್ರಿಯಗಳಲ್ಲೆಲ್ಲ ಪ್ರಾಣವೇ ಶ್ರೇಷ್ಠವೆಂದು ತಿಳಿಸಲಾಗಿದೆ. ಜೈವಲಿಯಲ್ಲಿ ಪಂಚಾಗ್ನಿ ವಿದ್ಯೆಯ ಉಪದೇಶವಿದೆ. ಐದು ಜನ ಜಿಜ್ಞಾಸುಗಳು ಕೇಕಯ ಅಶ್ವಪತಿಯಿಂದ ವೈಶ್ವಾನರವಿದ್ಯೆಯ ಉಪದೇಶವನ್ನು ಪಡೆದ ಸಂವಾದವಿದೆ. 6ನೆಯ ಅಧ್ಯಾಯದಲ್ಲಿ ಉದ್ದಾಲಕ ಆರುಣಿ ಮಗನಾದ ಶ್ವೇತಕೇತುವಿಗೆ ಆತ್ಮವಿದ್ಯೆಯನ್ನು ಬೋಧಿಸಿದ ಸುಂದರವಾದ ಸಂವಾದವಿದೆ. ವಿಶ್ವವಿಖ್ಯಾತವಾದ ತತ್ತ್ವಮಸಿ ಮಂತ್ರದ ಉಪದೇಶ ಇದರಲ್ಲಿಯೇ ಬರುತ್ತದೆ. 7ನೆಯ ಅಧ್ಯಾಯದಲ್ಲಿ ನಾರದನಿಗೆ ಸನತ್ಕುಮಾರ ಮಾಡಿದ ಆತ್ಮವಿದ್ಯೋಪದೇಶವಿದೆ. 8ನೆಯ ಅಧ್ಯಾಯದಲ್ಲಿ ದಹರ ವಿದ್ಯೆಯ ಉಪದೇಶವೂ ಪ್ರಜಾಪತಿಯಿಂದ ಇಂದ್ರ ಆತ್ಮೋಪದೇಶವನ್ನು ಪಡೆದ ವೃತ್ತಾಂತವೂ ಇದೆ. ಇದು ಈ ಉಪನಿಷತ್ತಿಗೆ ಶಿಖರಪ್ರಾಯವಾಗಿದೆ. ಈ ಉಪನಿಷತ್ತಿನಲ್ಲಿ ತಿಳಿದುಬರುವ ಅಂಶಗಳು ಹೀಗಿವೆ: ಋಗ್ವೇದ ಸಾಮವೇದಗಳನ್ನು ಇನ್ನೂ ಅಧ್ಯಯನ ಮಾಡುತ್ತಿದ್ದರು; ಸಾಮದ ಸ್ವರವನ್ನೂ ಋಷಿದೇವತೆಗಳನ್ನೂ ನಿರ್ಧರಿಸಲಾಗಿತ್ತು; ಸಾಮಗಾನದೊಂದಿಗೆ ವೀಣಾಗಾನವೂ ಇತ್ತು; ಮಾಂಸಭಕ್ಷಣವನ್ನು ನಿಷೇಧಿಸಲಾಗಿತ್ತು; ಗೋತ್ರ ಪದ್ಧತಿ ದೃಢವಾಗಿತ್ತು; ವ್ಯಾಕರಣದ ಅಧ್ಯಯನವನ್ನೂ ಇತರ ವಿದ್ಯೆಗಳ ಅಧ್ಯಯನವನ್ನೂ ಗುರುವಿನ ಆವಶ್ಯಕತೆಯನ್ನೂ ಸ್ಪಷ್ಟಪಡಿಸಲಾಗಿತ್ತು. ದೇವಕೀಪುತ್ರನಾದ ಕೃಷ್ಣನಿಗೆ ಘೋರ ಅಂಗೀರಸ ಅಧ್ಯಾತ್ಮವಿದ್ಯೆಯನ್ನು ಉಪದೇಶಿಸಿದನೆಂದು 3ನೆಯ ಅಧ್ಯಾಯದಲ್ಲಿ ಹೇಳಲಾಗಿದೆ.

**10 ಬೃಹದಾರಣ್ಯಕೋಪನಿಷತ್:** ಈ ಹೆಸರು ಪಾಣಿನಿಗಿಂತ ಈಚೆಗೆ ಬಂದ ಶಬ್ದದಿಂದ ಬಂದಿದೆ. ಇದನ್ನು ಬೇರೆ ಬೇರೆ ಕಾಲದಲ್ಲಿದ್ದ ಅನೇಕರು ರಚಿಸಿದ್ದಾರೆ. ಇದರ ಸಂಗ್ರಹವಾದದ್ದು ಛಾಂದೋಗ್ಯಕ್ಕಿಂತ ಈಚೆಗೆ. ಇದು ಶುಕ್ಲ ಯಜುರ್ವೇದಕ್ಕೆ ಸೇರಿದುದು. ಇದರ ಅವಾಂತರ ಭಾಗಗಳನ್ನು ಶತಪಥ ಬ್ರಾಹ್ಮಣದ ಖಿಲಭಾಗಗಳೆಂದು ಎಣಿಸಲಾಗಿತ್ತು. ಆರು ಅಧ್ಯಾಯಗಳೂ ಒಟ್ಟು 57 ಬ್ರಾಹ್ಮಣಗಳೂ ಇವೆ. 5ನೆಯ ಅಧ್ಯಾಯದ ಆರಂಭದಲ್ಲಿ ಬರುವ 'ಪೂರ್ಣಮದಃ, ಪೂರ್ಣಮಿದಂ' ಎಂಬುದು ಇದರ ಶಾಂತಿಮಂತ್ರ. ಇದು ಗದ್ಯಮಯವಾಗಿದೆ. ಇದರಲ್ಲಿ ಭಿನ್ನ ಭಿನ್ನವಾದ ವಂಶ ವಿವರಣೆಗಳಿವೆ. ಮಧ್ಯೆ ಮಧ್ಯೆ ಪ್ರಮಾಣ ಶ್ಲೋಕಗಳಿವೆ. ಒಟ್ಟು 3 ಕಾಂಡಗಳೂ ಆರು ಅಧ್ಯಾಯಗಳೂ ಇವೆ.

ಮೊದಲ ಅಧ್ಯಾಯದಲ್ಲಿ ಯಜ್ಞಾಶ್ವದ ವರ್ಣನೆ ಇದೆ. ಈ ಅಶ್ವವೇ ವಿರಾಟ್ಪುರುಷನೆಂದೂ ಆತ್ಮವಸ್ತುವೇ ಸರ್ವಕ್ಕಿಂತ ಶ್ರೇಷ್ಠವೆಂದೂ ಪ್ರೇಯವೆಂದೂ ತಿಳಿಸಲಾಗಿದೆ. ದ್ವಿತೀಯಾಧ್ಯಾಯದಲ್ಲಿ ದೃಪ್ತಬಾಲಾಕಿ, ಗಾರ್ಗ್ಯ ಮತ್ತು ಅಜಾತಶತ್ರು–ಇವರಲ್ಲಿ ಆತ್ಮವಸ್ತುವನ್ನು ಕುರಿತು ನಡೆದ ಸಂವಾದವಿದೆ. ಇದಲ್ಲದೆ ಯಾಜ್ಞವಲ್ಕ್ಯ ಮತ್ತು ಮೈತ್ರೇಯಿ ಇವರ ಸುಪ್ರಸಿದ್ಧ ಸುಂದರ ಸಂವಾದವಿದೆ. ಸುಂದರವಾದ ಉಪಮಾನಗಳಿಂದ ಬ್ರಹ್ಮ ಸರ್ವಕ್ಕೂ ಏಕಾಯನವಾಗಿದೆ ಎಂಬುದನ್ನೂ ಜೇಡರಹುಳುವಿನ ನಿದರ್ಶನದಿಂದ ಭಗವಂತನೇ ಸಮಸ್ತಕ್ಕೂ ಕಾರಣ ಎಂಬುದನ್ನೂ ವರ್ಣಿಸಿ ಮಹೋನ್ನತ ಉಪದೇಶವನ್ನು ನೀಡಲಾಗಿದೆ. ಇದೇ ಅಧ್ಯಾಯದಲ್ಲಿ ಮಧುವಿಧ್ಯೆಯ ವಿವರಣೆಯೂ ಕೊನೆಯ ಭಾಗದಲ್ಲಿ ವಂಶಕ್ರಮ ನಿರೂಪಣೆಯೂ ಇವೆ. 3ನೆಯ ಅಧ್ಯಾಯದಲ್ಲಿ ಜನಕರಾಜನ ಸಭೆಯಲ್ಲಿ ಯಾಜ್ಞವಲ್ಕ್ಯರಿಗೆ ತತ್ತ್ವಜ್ಞರು ಪ್ರಶ್ನೆಗಳನ್ನು ಕೇಳಿ ಪರಾಭವ ಹೊಂದಿದ್ದು, ಗಾರ್ಗಿ ವಾಚಕ್ನವೀ ಎಂಬ ಬ್ರಹ್ಮವಾದಿನಿ ಈ ಚರ್ಚೆಯಲ್ಲಿ ಭಾಗವಹಿಸಿದ್ದು, ಕೊನೆಯಲ್ಲಿ ಯಾಜ್ಞವಲ್ಕ್ಯರಿಗೆ ಜನಕರಾಜನ ಸಂಭಾವನೆ ಸಲ್ಲುವುದು–ಇವನ್ನು ಸ್ವಾರಸ್ಯವಾಗಿ ಚಿತ್ರಿಸಲಾಗಿದೆ. 4ನೆಯ ಅಧ್ಯಾಯದಲ್ಲಿ ಜನಕನಿಗೆ ಯಾಜ್ಞವಲ್ಕ್ಯ ಮಾಡಿದ ಆತ್ಮತತ್ತ್ವ ವಿವರಣೆ ಈ ಉಪನಿಷತ್ತಿಗೇ ರತ್ನಪ್ರಾಯವಾಗಿದೆ. ಮೈತ್ರೇಯಿಯ ವೃತ್ತಾಂತವೂ ಬಂದಿದೆ. 5ನೆಯ ಅಧ್ಯಾಯದಲ್ಲಿ ಪೂರ್ಣಮಿದಂ ಎಂಬ ಮಂತ್ರದ ಆವೃತ್ತದಿಂದ ಪ್ರಾರಂಭವಾಗಿ ನೀತಿ, ಸೃಷ್ಟಿ, ಪರಲೋಕ ಇವುಗಳ ಅನೇಕ ವಿಚಾರಗಳಿವೆ. ದಯೆ, ದಾನ, ಧರ್ಮ ಇವುಗಳ ಪ್ರಶಂಸೆ ಇದೆ. 6ನೆಯ ಅಧ್ಯಾಯದಲ್ಲಿ ಛಾಂದೋಗ್ಯ ಉಪನಿಷತ್ತಿನಲ್ಲಿ ಬಂದಿರುವ ಆತ್ಮದ (ಪ್ರಾಣ) ಶ್ರೇಷ್ಠತೆಯನ್ನೇ ಪುನಃ ಪ್ರಸ್ತಾಪಿಸಿ ಪಂಚೇಂದ್ರಿಯ ಗಳನ್ನು ಕುರಿತ ರೂಪಕವನ್ನು ಕೊಡಲಾಗಿದೆ. ಇದರಲ್ಲೂ ಶ್ವೇತಕೇತು ಜೈವಲಿಗಳ ದಾರ್ಶನಿಕ ಸಂವಾದ, ಜೈವಲಿಯ ಪಂಚಾಗ್ನಿ ವಿದ್ಯೆಯ ಉಪದೇಶಗಳು ಇವೆ. ಈ ಉಪನಿಷತ್ತಿನಲ್ಲಿ ಗಮನಾರ್ಹ ಅಂಶಗಳು ಇವು; ದೇವತೆಗಳಲ್ಲೂ ವರ್ಣಭೇದಗಳನ್ನು ನಿರೂಪಿಸಲಾಗಿದೆ. ಪೂಷನ್ ಶೂದ್ರ, ಅಗ್ನಿ ಮಾತ್ರ ಬ್ರಾಹ್ಮಣ, ಇಂದ್ರಾದಿಗಳು ಕ್ಷತ್ರಿಯರು, ವೈಶ್ಯರು, ಕ್ಷತ್ರಿಯರು ಸರ್ವಶ್ರೇಷ್ಠರೆಂದೂ ಬ್ರಾಹ್ಮಣಹಿಂಸೆ ಮಹಾಪಾಪವೆಂದೂ ಹೇಳಲಾಗಿದೆ. ಅಹಿಂಸಾ ಪರಮೋಧರ್ಮಃ ಎಂಬ ತತ್ತ್ವ ಬೆಳೆಯುತ್ತ ಇತ್ತು. ಇದರಲ್ಲಿ ಉದಾಹರಿಸಲ್ಪಟ್ಟಿರುವ ಶ್ಲೋಕಗಳು ಸಂಹಿತೆಗಳಿಂದ ತೆಗೆದುಕೊಂಡವಾಗಿರದೆ ಬ್ರಹ್ಮವಾದಿಗಳೂ ಆಚಾರ್ಯರೂ ರಚಿಸಿದವಾಗಿವೆ.

**11. ಶ್ವೇತಾಶ್ವತರೋಪನಿಷತ್:** ಇದು ಕೃಷ್ಣ ಯಜುರ್ವೇದಕ್ಕೆ ಸೇರಿದುದಾಗಿದ್ದು ಆರು ಅಧ್ಯಾಯಗಳಿಂದ ಕೂಡಿದೆ. ಪದ್ಯಮಯವಾಗಿದೆ. ಸಹನಾವವತು ಎಂಬುದು ಇದರ ಶಾಂತಿಮಂತ್ರ, ವಿಚಾರಪೂರಿತವಾದ 113 ಮಂತ್ರಗಳಿವೆ. ಜಗತ್ಕಾರಣವಾವುದು ? ನಾವು ಎಲ್ಲಿಂದ ಬಂದೆವು ? ಯಾರ ಕಟ್ಟಳೆಗೊಳಗಾಗಿ ಸುಖ ದುಃಖಗಳುಂಟಾಗುವುವು ? ಎಂಬ ಪ್ರಶ್ನೆಗಳ ಮಾಲೆಯಿಂದ ಇದು ಪ್ರಾರಂಭವಾಗಿದೆ. ಜೀವ, ಬ್ರಹ್ಮರ (ಜ್ಞ, ಅಜ್ಞ) ವಿಚಾರ ಪ್ರಸ್ತುತವಾಗಿದೆ. 2ನೆಯ ಅಧ್ಯಾಯದ ಯೋಗದ, ಯೋಗಾನುಭವದ ನಿರೂಪಣೆ ಇದೆ. ಇದು ಪಾತಂಜಲಯೋಗದ ಪೀಠಿಕೆಯಂತಿದೆ. 3–4ನೆಯ ಅಧ್ಯಾಯಗಳಲ್ಲಿ ಬ್ರಹ್ಮತತ್ತ್ವ, ಆತ್ಮತತ್ತ್ವಗಳ ಸ್ವರೂಪ ನಿರೂಪಣೆ ಇದೆ. ಬ್ರಹ್ಮವನ್ನು ಮಹೇಶ್ವರ ಎಂದು ಕರೆಯಲಾಗಿದೆ.

5ನೆಯ ಅಧ್ಯಾಯದಲ್ಲಿ ಕಪಿಲ ಋಷಿಯ ಸಾಂಖ್ಯತತ್ತ್ವದ ಉಲ್ಲೇಖವಿದೆ. ಆದರೆ ನಿರೀಶ್ವರ ಸಿದ್ಧಾಂತದ ಛಾಯೆ ಇಲ್ಲ. ಏಕೈಕ ಕಾರಣನೂ ಸರ್ವಾಧಿಪನೂ ಆದ ಅದ್ವಿತೀಯನನ್ನು ಅರಿಯುವುದರಿಂದ, ಮುಕ್ತಿ ಎಂದು ಹೇಳಲಾಗಿದೆ. 6ನೆಯ ಅಧ್ಯಾಯದಲ್ಲಿ ಕರ್ಮಸಿದ್ಧಾಂತದ ನಿರೂಪಣೆ ಇದ್ದು ಕರ್ಮಕ್ಷಯದಿಂದ ಮೋಕ್ಷಪ್ರಾಪ್ತಿ ಎಂದೂ ಮಹೇಶ್ವರ ಕರ್ಮಚಕ್ರದಿಂದ ಹೊರಗಿರುವ, ಕರ್ಮಾಧ್ಯಕ್ಷನೆಂದೂ ಶ್ವೇತಾಶ್ವತರ ಉಪದೇಶಿಸಿದ್ದಾನೆ. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಎಲ್ಲಕ್ಕಿಂತಲೂ ಮೊದಲಾಗಿ ಗುರುಭಕ್ತಿ ಇರಬೇಕೆಂಬುದನ್ನು ಕೊನೆಯಲ್ಲಿ ಒತ್ತಿಹೇಳಲಾಗಿದೆ.

**12 ಕೌಷೀತಕಿ ಉಪನಿಷತ್:** ಕೌಷೀತಕಿ ಎಂಬ ಆಚಾರ್ಯರಿಂದ ಇದಕ್ಕೆ ಈ ಹೆಸರು. ಋಗ್ವೇದಕ್ಕೆ ಸೇರಿದ್ದು ಗದ್ಯಮಯವಾಗಿದೆ. 4 ಅಧ್ಯಾಯಗಳಿವೆ. ವಾಙ್ಮೇ ಮನಸಿ ಪ್ರತಿಷ್ಠಿತಾ ಎಂಬುದು ಇದರ ಶಾಂತಿಮಂತ್ರ. ಮೊದಲ ಅಧ್ಯಾಯದಲ್ಲಿ ದೇವಯಾನದ ವಿಸ್ತಾರವಾದ ವರ್ಣನೆ ಇದೆ. ದೇವಯಾನದಲ್ಲಿ ಹೋಗುವವ ಬ್ರಹ್ಮಲೋಕಕ್ಕೆ ಸೇರುವ ರೀತಿ ವಿವರವಾಗಿ ಬಂದಿದೆ. 2ನೆಯ ಅಧ್ಯಾಯದಲ್ಲಿ ಪ್ರಾಣವಿದ್ಯೆಯ ವಿವೇಚನೆ ಇದೆ. ಸಂನ್ಯಾಸಾಶ್ರಮದ ಪ್ರಶಂಸೆಯೂ ಸಾಧಕರು ಅನುಸರಿಸಬೇಕಾದ ವ್ರತಗಳ ವಿವರಣೆಯೂ ಇವೆ. 3–4ನೆಯ ಅಧ್ಯಾಯಗಳಲ್ಲಿ ಬೃಹದಾರಣ್ಯಕ ಮತ್ತು ಛಾಂದೋಗ್ಯೋಪನಿಷತ್ತಿನ ಪ್ರಸಂಗಗಳಿವೆ.

**13 ಮೈತ್ರಾಯಣೀಯೋಪನಿಷತ್:** ಕೃಷ್ಣಯಜುರ್ವೇದಕ್ಕೆ ಸೇರಿದ್ದು 7 ಅಧ್ಯಾಯಗಳ ನ್ನೊಳಗೊಂಡಿದೆ. ಶಾಕಾಯನರಿಗೆ ಮೈತ್ರೀ ಋಷಿ ಉಪದೇಶಿಸಿದ ಬ್ರಹ್ಮ ತತ್ತ್ವವನ್ನು ಬೃಹದ್ರಥನಿಗೆ ಹೇಳಲಾಗಿದೆ. ಜ್ಯೋತಿಶ್ಶಾಸ್ತ್ರದ ವಿಚಾರವಾಗಿ ಉಲ್ಲೇಖವಿರುವುದರಿಂದ ಇದರ ಕಾಲವನ್ನು ಪ್ರ.ಶ.ಪೂ. 1900 ಎಂದು ವಿಮರ್ಶಕರು ನಿರ್ಣಯಿಸಿದ್ದಾರೆ. ಇದರಲ್ಲಿ ಇತರ ಉಪನಿಷತ್‌ಗಳ ವಾಕ್ಯಖಂಡಗಳಿರುವುದರಿಂದ ಅವು ಇದಕ್ಕೂ ಪ್ರಾಚೀನವಾದವು ಗಳೆಂದು ತೀರ್ಮಾನಿಸಬಹುದು. ಇದರಲ್ಲಿ ಗಮನಿಸಬೇಕಾದ ಅಂಶಗಳು: ಚಂದ್ರವಂಶ ಸೂರ್ಯವಂಶಗಳನ್ನು ಬೇರೆ ಬೇರೆ ಹೇಳಿರುವುದು, ಜ್ಯೋತಿರ್ಗಣದ ನಿರೀಕ್ಷಣೆ ನಡೆಯುತ್ತಿದ್ದುದು, ಸಾಂಖ್ಯ ಸಿದ್ಧಾಂತದ ಪರಿಚಯವಿದ್ದುದು, ಪಾತಂಜಲ ಯೋಗಕ್ಕಿಂತ ಬೇರೆಯಾದ ಷಡಂಗಯೋಗದ ವಿಚಾರ ಪ್ರಸ್ತುತವಾಗಿರುವುದು, ತ್ರಿಮೂರ್ತಿಗಳನ್ನೂ ಅವರ ವಿಶಿಷ್ಟ ಗುಣಗಳನ್ನೂ ಹೇಳಿರುವುದು.

ಹಿಂದೆ ವಿವರಿಸಿದ ಮುಖ್ಯ ಉಪನಿಷತ್‌ಗಳಲ್ಲದೆ ಉಳಿದ ಕೆಲವು ಉಪನಿಷತ್‌ಗಳ ಬಹುಸ್ಥೂಲ ಪರಿಚಯ ಹೀಗಿದೆ:

**ನಾರಾಯಣೀಯ:** ಗಾಯತ್ರೀ ಮಂತ್ರದಂತೆಯೇ ಇತರ ದೇವತೆಗಳನ್ನು ಸ್ತುತಿಸುವ ಮಂತ್ರಗಳಿಂದ ಕೂಡಿ ಬಹಳ ದೀರ್ಘವಾಗಿದೆ. ಆತ್ಮಯಾಗದ ನಿರೂಪಣೆಯಿದೆ.

**ಕೈವಲ್ಯೋಪನಿಷತ್:** ಶೈವಪರವಾಗಿದೆ. ಸಂನ್ಯಾಸಾಶ್ರಮ ಮತ್ತು ಗುರುವಿನ ಪ್ರಾಮುಖ್ಯ ಗಳನ್ನು ಒತ್ತಿಹೇಳುತ್ತದೆ. ಗೀತೆಯ ಶ್ಲೋಕಗಳು ಸೇರಿಕೊಂಡಿವೆ.

**ಜಾಬಾಲೋಪನಿಷತ್:** ಶತರುದ್ರೀಯ ಜಪವನ್ನು ಇದು ವಿಧಿಸುತ್ತದೆ. ಇದೂ ಶಿವಪರವಾಗಿದೆ.

**ಬೃಹಜ್ಜಾಬಾಲ ಉಪನಿಷತ್:** ಭಸ್ಮಧಾರಣೆಯ ಮಹತ್ತ್ವವನ್ನು ಕುರಿತದ್ದು. ಅನೇಕ ಪರಮಹಂಸರುಗಳ ಹೆಸರುಗಳನ್ನು ಉಲ್ಲೇಖಿಸಿದೆ.

**ಜಾಬಾಲೀ ಉಪನಿಷತ್:** ಜೀವವನ್ನು ಪಶುವೆಂದೂ ಈಶನನ್ನು ಪಶುಪತಿ ಎಂದೂ ಕರೆಯಲಾಗಿದೆ. ನಾಮಜಪಕ್ಕೆ ಪ್ರಾಶಸ್ತ್ಯ ಕೊಡುತ್ತದೆ.

**ಮುಕ್ತಿಕೋಪನಿಷತ್:** ಇದರಲ್ಲಿ ನೂರೆಂಟು ಉಪನಿಷತ್‌ಗಳನ್ನು ವಿಂಗಡಿಸಲಾಗಿದೆ. ಋಗ್ವೇದಕ್ಕೆ 10, ಶುಕ್ಲಯಜುರ್ವೇದಕ್ಕೆ 19, ಕೃಷ್ಣಯಜುರ್ವೇದಕ್ಕೆ 32, ಸಾಮವೇದಕ್ಕೆ 16, ಅಥರ್ವವೇದಕ್ಕೆ 31 ಸೇರಿವೆಯೆಂದು ತಿಳಿಸಿದೆ.

**ತತ್ತ್ವಪ್ರತಿಪಾದನೆ:** ಉಪನಿಷತ್‌ಗಳನ್ನು ಪರಮ ಪ್ರಮಾಣವಾದ ಅಪೌರುಷೇಯ ಮಂತ್ರಗಳೆಂಬ ದೃಷ್ಟಿಯಿಂದ ಪರಿಶೀಲಿಸಿದಾಗ ಅವೆಲ್ಲವೂ ಒಂದೇ ತತ್ತ್ವವನ್ನು ಪ್ರತಿಪಾದಿಸು ವುವು ಎಂದು ಒಪ್ಪಿಕೊಳ್ಳಬೇಕಾಗುತ್ತದಾದರೂ ಭಾಷ್ಯಕಾರರ ದೃಷ್ಟಿಯಲ್ಲಿ ಅವುಗಳಲ್ಲಿ ಭಿನ್ನ ಭಿನ್ನ ಸಿದ್ಧಾಂತಗಳ ನಿರೂಪಣೆ ಇದೆ. ಬಾದರಾಯಣರು ವೇದಾಂತಸೂತ್ರದಲ್ಲಿ ಇದನ್ನು ಒಪ್ಪಿಕೊಂಡಿದ್ದಾರೆ. ಅನೇಕ ಸಿದ್ಧಾಂತಗಳ ಉಲ್ಲೇಖವಿದ್ದರೂ ಅವುಗಳೆಲ್ಲಕ್ಕೂ ಸಮಪ್ರಾಧಾನ್ಯ ದೊರೆತಿಲ್ಲ. ಕೆಲವು ಮಿಂಚಿನಂತೆ ಕಂಡು ಮಾಯವಾಗುವುವು. ಕೆಲವು ಸಂಗ್ರಹವಾಗಿ ಬಂದರೆ ಮತ್ತೆ ಕೆಲವು ಹಳೆಯ ತತ್ತ್ವಗಳನ್ನೇ ಸಮರ್ಥಿಸುವುವು. ಆದರೆ ಈ ಎಲ್ಲ ಸಂಶಯಗಳನ್ನೂ ಬದಿಗೊತ್ತಿ ಪರಿಶೀಲಿಸಿದಲ್ಲಿ ಪ್ರಧಾನವಾಗಿ ಅಲ್ಲಿ ಘೋಷಿತವಾಗಿ ರುವ ತತ್ತ್ವ ವೇದಾಂತ ದರ್ಶನವೆನ್ನಿಸಿಕೊಂಡಿರುವ ಬ್ರಹ್ಮತತ್ತ್ವ ಅಥವಾ ಬ್ರಹ್ಮ ಮತ್ತು ಆತ್ಮಗಳೆಂಬ ಆಧಾರಸ್ತಂಭಗಳ ಮೇಲೆ ನಿಂತಿರುವ ಭಾರತೀಯ ದರ್ಶನಸಾರ.

ಉಪನಿಷತ್‌ಗಳು ಬ್ರಾಹ್ಮಣಗಳೊಂದಿಗೆ ಸೇರಿಕೊಂಡಿದ್ದರೂ ಇವುಗಳ ವಿಚಾರಧಾರೆ ಬೇರೆಯಾಗಿವೆ. ಬ್ರಾಹ್ಮಣಗಳು ಪ್ರತಿಪಾದಿಸುವ ಯಾಗಾದಿಗಳನ್ನು ಕಾಮ್ಯ ಕರ್ಮಗಳೆಂದು ಉಪನಿಷತ್‌ಗಳು ತಿರಸ್ಕರಿಸಿ ಅವುಗಳಿಂದ ಆತ್ಮೋದ್ಧಾರವಿಲ್ಲವೆನ್ನುತ್ತವೆ; ಮತ್ತು ಬಾಹ್ಯಯಜ್ಞ ಆತ್ಮಯಜ್ಞದ ಪ್ರತೀಕವೆಂದು ಹೇಳಿವೆ. ಹೀಗೆ ಉಪನಿಷತ್‌ಗಳ ಕಾಲಕ್ಕೆ ಭಾರತೀಯ ದರ್ಶನದ ಸರಣಿಯಲ್ಲಿ ಗಮನಾರ್ಹವಾದ ಬದಲಾವಣೆಯಾಗಿತ್ತು. ಅದಲ್ಲದೆ ಉಪನಿಷತ್ ರಹಸ್ಯವಾದ ವಿದ್ಯೆ ಎಂಬ ಅರ್ಥವನ್ನೂ ಹೊಂದಿದೆ. ಇದನ್ನು ಗುರುಮುಖೇನ ಪಡೆಯುವವ ಅಸಾಧಾರಣ ಶ್ರದ್ಧಾಭಕ್ತಿಗಳಿಂದ ಕೂಡಿದವನಾಗಿದ್ದು ಜ್ಞಾನಪಿಪಾಸುವೂ ಸಮ್ಯಗುಪಸನ್ನನೂ ಶಮಾನ್ವಿತನೂ ಆಗಿರಬೇಕು. ಈ ಆದರ್ಶವಿದ್ಯೆಗೆ ಆದರ್ಶ ಶಿಷ್ಯನೇ ಪಾತ್ರವೆಂದು ಕಟ್ಟುನಿಟ್ಟಾಗಿ ನಿರ್ದೇಶಿಸ ಲಾಗಿದೆ. ಮೇಲೆ ಹೇಳಿದ ಉಪನಿಷತ್‌ಗಳಲ್ಲಿ ಈ ಬಗೆಯ ಗುರುಶಿಷ್ಯ ಸಂವಾದಗಳೇ ಚಿತ್ರಿತವಾಗಿವೆ. ಪ್ರವಚನದಲ್ಲೂ ಕೆಲವು ಗೂಢತತ್ತ್ವಗಳು ಸೂತ್ರರೂಪದಲ್ಲಿವೆಯೇ ಹೊರತು ಸ್ಪಷ್ಟವಾದ ವಿವರಣೆ ಇಲ್ಲ. ಈ ಕಾರಣದಿಂದಲೇ ಅರ್ಥವೃತ್ತಿಗಳಲ್ಲಿ ಭಿನ್ನತೆಗೆ ಅವಕಾಶವಾಗಿದೆ. ಸಂಹಿತೆಗಳಂತೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ದಾರ್ಶನಿಕರಿಂದ ಸಂಗ್ರಹವಾಗಿರುವುದು ಸಿದ್ಧಾಂತಗಳ ವ್ಯತ್ಯಾಸಕ್ಕೆ ಕಾರಣವಿರಬಹುದೆಂದು ವಿದ್ವಾಂಸರ ಅಭಿಪ್ರಾಯ.

**ಬ್ರಹ್ಮತತ್ತ್ವ:** ಮೂಲ ಎಂಬ ಅರ್ಥವುಳ್ಳ ಬೃಃ ಶಬ್ದದಿಂದ ಬ್ರಹ್ಮಶಬ್ದ ಬಂದಿದೆ. ಯಾವುದು ತಾನೇ ತನ್ನ ಅಂತಃಶಕ್ತಿಯಿಂದಲೇ ನಿರಾತಂಕವಾಗಿ ಆವಿರ್ಭವಿಸುವುದೋ ಅದೇ ಬ್ರಹ್ಮ. ಇದೇ ಜಗತ್ತಿಗೆ ಏಕೈಕ ಕಾರಣ ಮತ್ತು ಏಕಮೇವಾದ್ವಿತೀಯವಾದದ್ದು. ಉಪನಿಷತ್ಕಾರರ ಮೊದಲ ತತ್ತ್ವವೇ ಬ್ರಹ್ಮನನ್ನು ಕುರಿತದ್ದು. ಬ್ರಹ್ಮ ಮತ್ತು ಆತ್ಮ ಎಂಬ ಶಬ್ದಗಳು ಮೊಟ್ಟಮೊದಲು ಅಥರ್ವವೇದದಲ್ಲಿ ಉಪಯೋಗಿಸಲ್ಪಟ್ಟಿವೆ. ಪರಮಾತ್ಮಪರವಾಗಿ ಬ್ರಹ್ಮಶಬ್ದದ ಅರ್ಥಪುಷ್ಟಿಯನ್ನು ಅಲ್ಲಿ ಕಾಣುತ್ತೇವೆ.

ಉಪನಿಷತ್ಕಾರರ ಮೊದಲ ಪ್ರಶ್ನೆ ಜಗತ್ತು ಮತ್ತು ನಾವು ಎಲ್ಲಿಂದ ಬಂದೆವು ? ನಮ್ಮ ಮುಂದಿನ ಗತಿಗೂ ಸುಖದುಃಖಗಳಿಗೂ ಕಾರಣರಾರು ? ಎಂಬುದೇ ಆಗಿದೆ. ಉತ್ತರವಾಗಿ ಸತ್, ಆತ್ಮ, ಬ್ರಹ್ಮ, ಅಕ್ಷರ, ಆಕಾಶ ಶಬ್ದಗಳಿಂದ ಜಗತ್ಕಾರಣವಾದ ಪರವಸ್ತುವನ್ನು ಹೇಳಲಾಗಿದೆ. ಬ್ರಹ್ಮನೇ ಜಗತ್ತಿಗೆ ಉಪಾದಾನ ಕಾರಣ ಮತ್ತು ನಿಮಿತ್ತಕಾರಣ ಎರಡೂ. ಬ್ರಹ್ಮ ಹೊರತು ಮತ್ತಾವುದೂ ಮೊದಲು ಇರಲಿಲ್ಲವಾದ್ದರಿಂದ ಜಗತ್ತು ಬ್ರಹ್ಮಮಯ. ಸಂಕಲ್ಪ ಮಾತ್ರದಿಂದ ಜಗತ್ತನ್ನು ಸೃಷ್ಟಿಸಿ ಅದರಲ್ಲಿ ಬ್ರಹ್ಮ ಅಂತರ್ಯಾಮಿಯಾಗಿದೆ. ಸರ್ವಭೂತಗಳಿಗೂ ಅಂತರಾತ್ಮನಾದ ಬ್ರಹ್ಮವೊಂದೇ ಶಾಶ್ವತ, ಸರ್ವಶಕ್ತ, ಅನಂತ, ಪೂರ್ಣಕಾಮ. ಸರ್ವರಿಗೂ ಅಂತರಾತ್ಮನಾದ ಬ್ರಹ್ಮನಲ್ಲಿ ಸರ್ವ ಆತ್ಮಗಳೂ ಚಕ್ರದ ನೇಮಿ ಮತ್ತು ನಾಭಿಯಲ್ಲಿ ಅರೆಕಾಲುಗಳು ಹೇಗೋ ಹಾಗೆ ಅಡಕವಾಗಿದ್ದಾರೆ. ಲವಣ ನೀರಿನಲ್ಲಿ ಕರಗಿ ವ್ಯಾಪಿಸುವಂತೆ ಬ್ರಹ್ಮ ಸರ್ವವನ್ನೂ ವ್ಯಾಪಿಸಿದ್ದಾನೆ. ಅಗ್ನಿಯಿಂದ ಅಗ್ನಿಕಣಗಳೂ ಜೇಡರ ಹುಳುವಿನಿಂದ ಬಲೆಯ ಎಳೆಗಳೂ ವೇಣುವಿನಿಂದ ನಾದದ ಅಲೆಗಳೂ ಉದ್ಭವಿಸುವಂತೆ ಎಲ್ಲ ಭೂತಜಾತಗಳೂ ಬ್ರಹ್ಮನಿಂದಲೇ ಉದ್ಭವಿಸುತ್ತವೆ. ಎಲ್ಲ ಭೂತ ಜಾತಗಳಿಗೂ ಬ್ರಹ್ಮ ಏಕಾಯನನಾಗಿದ್ದಾನೆ.

ಬ್ರಹ್ಮನಿಗೂ ಜಗತ್ತಿಗೂ ಹೇಗೆ ಸಂಬಂಧ ಎಂಬ ವಿಚಾರದಲ್ಲಿ ಉಪನಿಷತ್‌ಗಳು ಹೀಗೆಯೇ ಎಂದು ಸ್ಪಷ್ಟವಾಗಿ ಹೇಳಿಲ್ಲ. ಅಂದರೆ ಆತ ವಿಶ್ವಾಂತರ್ಯಾಮಿಯೆಂದೂ ವಿಶ್ವಾತೀತನೆಂದೂ ಎರಡು ಬಗೆಯಾಗಿ ಹೇಳಿವೆ. ಹಾಗೆಯೇ ಸಪ್ರಪಂಚ ಬ್ರಹ್ಮ, ನಿಷ್ಪ್ರಪಂಚ ಬ್ರಹ್ಮರ ವಿಚಾರವೂ ಬರುತ್ತದೆ. ಈ ಎರಡು ವಾದಗಳ ಸಮರ್ಥನೆಗೂ ಉಪನಿಷತ್ತಿನಲ್ಲಿ ಸಾಕಷ್ಟು ತತ್ತ್ವಪ್ರತಿಪಾದನೆಯನ್ನು ಕಾಣುತ್ತೇವೆ. ಮುಂಡಕೋಪನಿಷತ್ತಿನಲ್ಲಿ ಎರಡು ವಾದಗಳನ್ನೂ ಸಮನ್ವಯ ಮಾಡುವ ಅರ್ಥವುಳ್ಳ ಒಂದು ಮಂತ್ರವಿದೆ. ಬ್ರಹ್ಮನನ್ನು ಬಿಟ್ಟು ಜಗತ್ತಿಗೆ ಬೇರೆ ಅಸ್ತಿತ್ವವಿಲ್ಲ. ಆದರೆ ಬ್ರಹ್ಮ ಜಗತ್ತಿಗೆ ಪರಿಮಿತನಾಗಿಲ್ಲ. ನಾಮರೂಪಗಳಿಗೆ ಸಿಲುಕಿಲ್ಲ. ಬ್ರಹ್ಮ ಪರಿಣಾಮವಾದದ ಪ್ರಕಾರ ಬ್ರಹ್ಮನೇ ಜಗತ್ತಿನ ರೂಪವನ್ನು ತಾಳುತ್ತಾನೆ. ಇದು ಸಪ್ರಪಂಚವಾದ. ಬ್ರಹ್ಮ ಜಗತ್ತಿಗೆ ಕಾರಣನಾಗಿದ್ದು, ನಾಮರೂಪ ಜಗತ್ತು ಬ್ರಹ್ಮನಷ್ಟು ಸತ್ಯವಲ್ಲವೆಂಬುದು ನಿಷ್ಪ್ರಪಂಚವಾದ. ಇದರ ಪ್ರಕಾರ ಬ್ರಹ್ಮ ಜಗತ್ತಿನಂತೆ ಕಾಣಿಸಿಕೊಳ್ಳುತ್ತಾನೆ. ಅಂದರೆ ಬ್ರಹ್ಮವಿವರ್ತವಾದ ಸಮರ್ಥನೆ ಇದೇ. ಆದರೆ ಬ್ರಹ್ಮನೇ ಏಕಮೇವಾದ್ವಿತೀಯವಾದ ಸತ್ಯ ಎಂಬುದನ್ನು ನಿಸ್ಸಂಶಯವಾಗಿ ಸಾರಲಾಗಿದೆ. ನಿಷ್ಪ್ರಪಂಚನಾದ ಬ್ರಹ್ಮ ಸಪ್ರಪಂಚನಂತೆ ಕಾಣಿಸುತ್ತಾನೆಂದು ಹೇಳುವುದು ಮಾಯಾವಾದ. ಅದ್ವೈತವಾದ ಇದನ್ನೇ ಹೆಚ್ಚು ವಿಸ್ತಾರವಾಗಿ ವಿವರಿಸಿದೆ. ಉಪನಿಷತ್‌ಗಳಲ್ಲಿ ಮಾಯೆ ಎಂಬ ಶಬ್ದ ಅಷ್ಟು ನಿರ್ದಿಷ್ಟವಾಗಿಲ್ಲ. ಇದರ ಅರ್ಥವನ್ನೇ ಕೊಡುವ ಅವಿದ್ಯೆ ಎಂಬ ಮತ್ತೊಂದು ಪದದ ಪ್ರಯೋಗವೂ ಇದೆ.

ನಾಮರೂಪ ಜಗತ್ತಿನ ಸೃಷ್ಟಿಕ್ರಮವನ್ನು ಉಪನಿಷತ್‌ಗಳು ಹೇಳುವಾಗ ಚೇತನ, ಅಚೇತನ ಎಂಬ ಭೇದವನ್ನು ಹೇಳಿವೆ. ಅಚೇತನ ಜಗತ್ತು ಚೇತನ ಜೀವಗಳಿಗೆ ಸಾಧನಸಾಮಗ್ರಿ ಮಾತ್ರ. ಅದು ಪಂಚಭೂತಗಳಿಂದ ಕೂಡಿದೆ. ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ ಎಂಬುವೇ ಇವು. ಛಾಂದೋಗ್ಯೋಪನಿಷತ್ತಿನಲ್ಲಿ ಅಗ್ನಿ, ಜಲ, ಪೃಥ್ವಿ ಎಂಬುವು ಬ್ರಹ್ಮನಿಂದ ಕ್ರಮವಾಗಿ ಸೃಷ್ಟಿಯಾದುವೆಂದು ಹೇಳಲಾಗಿದೆ. ತೇಜಸ್ಸು, ಜಲ, ಅನ್ನಗಳೇ ಇತರ ಸಕಲ ಭೂತಜಾತಗಳಿಗೆ ಮೂಲಕಾರಣ. ಈ ಮೂರನ್ನು ಸೃಷ್ಟಿಸಿದ ಮೇಲೆ ಇದನ್ನು ಒಂದುಗೂಡಿಸಿ ಅವುಗಳೊಂದಿಗೆ ಜೀವನಸಹಿತ ಪ್ರವೇಶಿಸಿ ನಾಮರೂಪಾತ್ಮಕವಾದ ಜಗತ್ತನ್ನು ಸೃಜಿಸಲು ಬ್ರಹ್ಮ ಸಂಕಲ್ಪಿಸಿತು. ಹೀಗೆ ಜಗತ್ತಿಗೆ ಬ್ರಹ್ಮವೇ ಉಪಾದಾನಕಾರಣ, ನಿಮಿತ್ತಕಾರಣ ಎರಡೂ ಆಗಿದೆ. ಐತರೇಯ, ತೈತ್ತಿರೀಯ ಉಪನಿಷತ್‌ಗಳಲ್ಲಿಯೂ ಪರಮಾತ್ಮಸಂಕಲ್ಪದಿಂದ ಸೃಷ್ಟಿ ಯೆಂದೂ ಅದರೊಳಗೆ ಬ್ರಹ್ಮನೇ ಅಂತಃಪ್ರವೇಶ ಮಾಡಿದನೆಂದೂ ಭಾವವಿದೆ. ಕಾರಣರೂಪಿ ಯಾದ ಬ್ರಹ್ಮನನ್ನು ತಿಳಿದವ ಅದರಿಂದಾದ ಪಂಚಭೌತಿಕ ಜಗತ್ತನ್ನೂ ಅರಿಯುತ್ತಾನೆ.

ಬ್ರಹ್ಮಜ್ಞಾನವನ್ನು ಪಡೆಯುವ ಕ್ರಮವನ್ನು ಕುರಿತು ಪರಾವಿದ್ಯೆ, ಅಪರಾವಿದ್ಯೆಗಳ ಭೇದವನ್ನು ಹೇಳಿದೆ. ಬ್ರಹ್ಮನನ್ನು ತಿಳಿಯುವುದು ಪರಾವಿದ್ಯೆ. ನಾಮರೂಪವಾದ ಜಗತ್ತನ್ನು ತಿಳಿಯುವುದು ಅಪರಾವಿದ್ಯೆ. ಮಣ್ಣನ್ನು ತಿಳಿಯುವುದರಿಂದ ಮಣ್ಣಿನಿಂದಾದುವೆಲ್ಲವನ್ನೂ ತಿಳಿಯುವಂತೆ, ಬ್ರಹ್ಮನನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ, ಇದಕ್ಕಿಂತ ಹೆಚ್ಚಿನ ವಿದ್ಯೆ ಯಾವುದೂ ಇಲ್ಲ. ಹೀಗೆಂದು ಮುಂಡಕೋಪನಿಷತ್ ಹೇಳುತ್ತದೆ. ಆದರೆ ಈಶೋಪನಿಷತ್

ಬ್ರಹ್ಮನನ್ನು ಅರಿಯಲು ಸಾಧ್ಯವಿಲ್ಲವೆಂದು ಬ್ರಹ್ಮಸ್ವರೂಪವನ್ನು ಹೇಳುವಾಗ ಸೂಚಿಸುತ್ತದೆ. 'ಚಲಿಸುತ್ತದೆ, ಚಲಿಸುವುದಿಲ್ಲ, ದೂರದಲ್ಲಿದೆ, ಸಮೀಪದಲ್ಲಿದೆ, ಒಳಗೂ ಇದೆ, ಹೊರಗೂ ಇದೆ.' ಹೀಗೆಯೇ ಬೃಹದಾರಣ್ಯಕದಲ್ಲಿ ಅಕ್ಷರರೂಪಿಯಾದ ವಿಶ್ವಾತ್ಮನನ್ನು ಕುರಿತು 'ಸ್ಥೂಲನಲ್ಲ, ಅಣುವಲ್ಲ, ಹ್ರಸ್ವನಲ್ಲ, ದೀರ್ಘನಲ್ಲ, ಅಗ್ನಿಯಂತೆ ಕೆಂಪಾಗಿಲ್ಲ, ಜಲದಂತೆ ಹರಿಯುವುದಿಲ್ಲ. ನೆರಳಲ್ಲ, ಕತ್ತಲೆಯಲ್ಲ, ವಾಯುವಾಗಲೀ ಆಕಾಶವಾಗಲೀ ಅಲ್ಲ, ಸಂಸರ್ಗವುಳ್ಳದ್ದಲ್ಲ, ರಸವಲ್ಲ, ಗಂಧವಲ್ಲ. ಅದಕ್ಕೆ ಕಣ್ಣುಗಳಿಲ್ಲ, ಅದು ಅಳತೆಗೊಳಗಾದುದಲ್ಲ, ಒಳಗಿಲ್ಲ, ಹೊರಗಿಲ್ಲ' ಎಂಬ ವಿವರಣೆ ಇದೆ. ಕೊನೆಯಲ್ಲಿ ಅರಿಯಲ್ಪಡುವವನೂ ನೋಡುವವನೂ ಮನನಮಾಡುವವನೂ ಅರಿಯುವವನೂ ಅದಲ್ಲದೆ ಬೇರೆಯಲ್ಲ. ಈ ಅಕ್ಷರನಲ್ಲಿ ಎಲ್ಲವೂ ಓತಪ್ರೋತವಾಗಿದೆ. ಯಾವನು ಈ ಅಕ್ಷರನನ್ನು ತಿಳಿದು, ಈ ಲೋಕವನ್ನೇ ಬಿಡುವನೋ ಅವನು ಬ್ರಹ್ಮಜ್ಞನೆನಿಸುವನು ಎಂದು ಹೇಳಿದ್ದರೂ ವಾಕ್ಕಿಗೂ ಮನಸ್ಸಿಗೂ ದೂರನಾಗಿರುವನೆಂಬ ಸೂಚನೆ ಇದೆ. ಇದು ವಾಚಕ್ನವೀಗಾರ್ಗಿಗೆ ಯಾಜ್ಞವಲ್ಕ್ಯ ಜನಕನ ಸಭೆಯಲ್ಲಿ ಮಾಡಿದ ಉಪದೇಶ. ಧನದಲ್ಲಿ ನಿರಾಸಕ್ತಳಾಗಿ, ಅಮೃತತ್ವವನ್ನು ಪಡೆಯುವ ಅಭಿಲಾಷೆಯಿಂದ ತನ್ನ ಪತ್ನಿ ಮೈತ್ರೇಯಿ ಬ್ರಹ್ಮೋಪದೇಶ ಮಾಡಬೇಕೆಂದು ಬೇಡಿದಾಗಲೂ ಯಾಜ್ಞವಲ್ಕ್ಯ ಸರ್ವಾಂತರ್ಯಾಮಿಯಾದ ಆತ್ಮನನ್ನು (ಬ್ರಹ್ಮ) ತಿಳಿಯುವುದರಿಂದ ಮಾತ್ರವೇ ಅಮೃತತ್ವವನ್ನು ಪಡೆಯಬಹುದೆಂದೂ ಅವನೊಬ್ಬನನ್ನು ತಿಳಿದರೆ ಸರ್ವವನ್ನೂ ತಿಳಿದಂತಾಗುವುದೆಂದೂ ಹೇಳುತ್ತಾನೆ. ಆದರೆ ಬ್ರಹ್ಮತತ್ತ್ವವನ್ನು ತಿಳಿಯುವುದಾಗುವುದಿಲ್ಲ. ಬ್ರಹ್ಮನ ಹೊರತು ಮತ್ತಾವುದೂ ಇಲ್ಲ ಎಂದು ತಿಳಿಯಬೇಕಾದರೆ ಬ್ರಹ್ಮತ್ವವನ್ನು ಪಡೆಯುವುದರಿಂದ ಮಾತ್ರ ಸಾಧ್ಯ ಎಂದೂ ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ ಎಂಬ ಜ್ಞಾನವುಂಟಾಗಬೇಕೆಂದೂ ಇದೇ ಉಪನಿಷತ್ತಿನ ಸಾರವೆಂದೂ ಶಂಕರಾಚಾರ್ಯರು ಪ್ರತಿಪಾದಿಸುತ್ತಾರೆ. ಅವರ ವೇದಾಂತಸೂತ್ರಭಾಷ್ಯದಲ್ಲಿ ಬಾಷ್ಕಲಿ ಎಂಬ ಶಿಷ್ಯ ಬಾಧ್ವ ಎಂಬ ಗುರುವಿನಲ್ಲಿ ಬ್ರಹ್ಮಜ್ಞಾನವನ್ನು ಉಪದೇಶಿಸಬೇಕೆಂದು ಕೋರಿದ ಸಂದರ್ಭದಲ್ಲಿ ಮೂರನೆಯ ಸಲ ಕೇಳಿದಾಗಲೂ ಮೌನವಾಗಿದ್ದ ಗುರು 'ಉಪಶಾಂತೋಯಂ ಆತ್ಮಾ' ಎಂದು ಕೊನೆಯಲ್ಲಿ ಉಪದೇಶಿಸಿದುದನ್ನು ಉದಾಹರಿಸಿದ್ದಾರೆ. ಬ್ರಹ್ಮನನ್ನು ವರ್ಣಿಸಲು ಸಾಧ್ಯವಿಲ್ಲ, ಬ್ರಹ್ಮನನ್ನು ಅರಿತವ ಬ್ರಹ್ಮನಾಗುತ್ತಾನೆ–ಎಂಬುದೇ ಸಾರಾಂಶ. ಬೃಹದಾರಣ್ಯಕ 'ನೇತಿ, ನೇತಿ' ಎಂದು ಬ್ರಹ್ಮಸ್ವರೂಪವನ್ನು ತಿಳಿಸಲೆತ್ನಿಸಿದೆ.

ಜ್ಞಾನಮಾರ್ಗವನ್ನಷ್ಟೇ ಅಲ್ಲದೆ, ಉಪನಿಷತ್‌ಗಳು ಭಕ್ತಿ ಮತ್ತು ಕರ್ಮಮಾರ್ಗಗಳನ್ನೂ ಅನುಮೋದಿಸಿವೆ. ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯ ಎಂಬ ನಾಲ್ಕು ಅವಸ್ಥೆಗಳಲ್ಲಿ ನಾಲ್ಕನೆಯದರಲ್ಲಿ ಯೋಗಶಕ್ತಿಯಿಂದ ಬ್ರಹ್ಮಜ್ಞಾನ ಉಂಟಾಗುತ್ತದೆ ಎಂದು ಉಪನಿಷತ್‌ಗಳಲ್ಲಿ ಹೇಳಲಾಗಿದೆ. ಆದರೂ ಈ ಜ್ಞಾನಮಾರ್ಗದಲ್ಲಿ ಕರ್ಮಕ್ಕೂ ಭಕ್ತಿಗೂ ಅವಕಾಶವನ್ನು ಕಲ್ಪಿಸಲಾಗಿದೆ. ತೈತ್ತಿರೀಯೋಪನಿಷತ್ತಿನಲ್ಲಿ ಸತ್ಯನಿಷ್ಠೆ, ತಪಸ್ಸು, ವೇದಾಧ್ಯಯನಗಳಿಂದ ಅಮೃತತ್ವವುಂಟಾಗುತ್ತದೆ ಎಂದು ಹೇಳಲಾಗಿದೆ. ಅಹಂಕಾರನಿವೃತ್ತಿಯಾದಾಗಲೇ ಬ್ರಹ್ಮಜ್ಞಾನ ಪ್ರಾಪ್ತಿ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಎಂಬ ಮೂರು ಆಶ್ರಮಗಳಲ್ಲಿದ್ದು ಮಾನವ ಸರ್ವಸಂಗ ಪರಿತ್ಯಾಗ ಭಾವನೆಯಿಂದ ವೈರಾಗ್ಯವನ್ನು ಅಭ್ಯಾಸ ಮಾಡಿದರೆ ಸಂನ್ಯಾಸಾಶ್ರಮ, ಅದರೊಂದಿಗೆ ಬ್ರಹ್ಮಜ್ಞಾನ ಪ್ರಾಪ್ತಿಯಾಗುತ್ತವೆ ಎಂದು ತಿಳಿಸಲಾಗಿದೆ. ಹೀಗೆ ಮೋಕ್ಷಕ್ಕೆ ಅಂದರೆ ಬ್ರಹ್ಮಸಾಕ್ಷಾತ್ಕಾರಕ್ಕೆ ಪೂರ್ವಭಾವಿಯಾಗಿ ಸಾಧನೆಯೂ ಅಗತ್ಯ. ಬೃಹದಾರಣ್ಯಕದಲ್ಲಿ ಪ್ರಜಾಪತಿಯ ಮಕ್ಕಳನ್ನು ದೇವ, ಮನುಷ್ಯ, ಅಸುರ ಎಂದು ವರ್ಗೀಕರಿಸಿ ಅವರಿಗೆ ಪ್ರಜಾಪತಿ ಕರ್ತವ್ಯವನ್ನು ವಿಧಿಸುವಾಗ ಅಸುರರಿಗೆ ದಯಧ್ವಂ ಎಂದೂ ಮನುಷ್ಯರಿಗೆ ದತ್ತ ಎಂದೂ ದೇವತೆಗಳಿಗೆ ದಾಮ್ಯತ ಎಂದೂ ವಿಧಿಸಿರುವ ಸಂಗತಿ ಇದೆ. ಅಂದರೆ ಮಾನವರು ಸಮಾಜದಲ್ಲಿ ಪರಹಿತವನ್ನು ಆಚರಿಸತಕ್ಕದ್ದು, ಲೋಕವನ್ನು ತ್ಯಜಿಸಿ ಒಂಟಿಯಾಗಿದ್ದರೆ ಮಾತ್ರ ಮೋಕ್ಷಪ್ರಾಪ್ತಿಯಲ್ಲ ಎಂಬುದೇ ಸಾರಾಂಶ.

ವೈರಾಗ್ಯ ಮಾನವನನ್ನು ಜ್ಞಾನಕ್ಕೆ ಒಯ್ಯುತ್ತದೆ. ಜ್ಞಾನಮಾರ್ಗದಲ್ಲಿ ಶ್ರವಣ, ಮನನ, ನಿಧಿಧ್ಯಾಸನ ಎಂಬ ಮೂರು ವಿಧವಾದ ಸಾಧನೆ ಇದೆ. ಮೊದಲನೆಯದಾಗಿ ಉಪನಿಷತ್‌ಗಳನ್ನು ಸರಿಯಾದ ಗುರುವಿನಲ್ಲಿ ಅಧ್ಯಯನ ಮಾಡುವುದು ಶ್ರವಣ. ಬ್ರಹ್ಮಜ್ಞಾನಿಯಾದ ಗುರುವಿನ ಸಂಗದಿಂದಲೇ ಜ್ಞಾನ ಪ್ರಾಪ್ತಿಯಾಗಬೇಕಾದರೆ. ಶ್ರವಣ ಮಾತ್ರ ಸಾಲದು. ಪದೇ ಪದೇ ಕೇಳಿದುದನ್ನು ಮನನ ಮಾಡಿ ಮಂದಟ್ಟು ಮಾಡಿಕೊಳ್ಳಬೇಕು. ಅನಂತರ ನಿಧಿಧ್ಯಾಸನದಿಂದ ಜಗತ್ತಿನ ಏಕೈಕ ಸತ್ಯವನ್ನು ಕಂಡುಕೊಳ್ಳಬೇಕು. ನಿಧಿಧ್ಯಾಸನವೆಂಬ ಸಾಧನೆಯಲ್ಲಿ ಉಪಾಸನೆಗಳಿವೆ. ಈ ಉಪಾಸನೆಗಳು ಬ್ರಾಹ್ಮಣಗಳಲ್ಲಿ ಹೇಳಿರುವ ಯಜ್ಞಯಾಗಾದಿಗಳಂತೆ ಪ್ರಾಧಾನ್ಯವನ್ನು ಪಡೆದಿವೆ. ಬ್ರಹ್ಮಜ್ಞಾನಿಯಾಗಲು ಸಾಮಾನ್ಯ ಮನುಷ್ಯನಿಗೆ ಸಾಧ್ಯವಿಲ್ಲವೆಂತಲೂ ಅಂಥವನು ಅತ್ಯಂತ ವಿರಳನೆಂದೂ ಕಠೋಪನಿಷತ್ತಿನಲ್ಲಿ ಹೇಳಲಾಗಿದೆ.

ಸರ್ವಶಕ್ತನಾದ ಪರಬ್ರಹ್ಮ ನಿರ್ಗುಣನಂತೆ ನಿರೂಪಿತನಾಗಿದ್ದರೂ ಅವನು ದಯಾಮಯನೆಂದೂ ಸಂಸಾರ (ಜನ್ಮ, ಮೃತ್ಯು) ಬಂಧನದಿಂದ ನಮ್ಮನ್ನು ಬಿಡುಗಡೆ ಮಾಡುವವನೆಂದೂ ತಿಳಿಸಿ 32 ಉಪಾಸನೆಗಳನ್ನು ಹೇಳಿದೆ. ಅದರಲ್ಲಿ ಶರಣಾಗತಿ ಎಂಬುದನ್ನು ಸೇರಿಸಲಾಗಿದೆ.

ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ–ಎಂಬುದನ್ನು ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿದೆ. ಆದ್ದರಿಂದ ದಯಾಮಯನಾದ ಭಗವಂತನನ್ನು ಭಜಿಸುವ ಭಕ್ತಿಗೂ ಉಪನಿಷತ್‌ಗಳಲ್ಲಿ ಪ್ರಶಂಸೆ ಇದೆ.

**ಆತ್ಮ ಮತ್ತು ಜೀವಾತ್ಮ:** ಉಪನಿಷತ್‌ಗಳು ಮೊದಮೊದಲು ಆತ್ಮನಿಗೂ ಬ್ರಹ್ಮನಿಗೂ ಭೇದವನ್ನು ಹೇಳುವಂತೆ ತೋರುತ್ತವೆ. ಆತ್ಮ ಎಂದರೆ ಚೇತನದಲ್ಲಿರುವ ಪರತತ್ತ್ವ, ಬ್ರಹ್ಮ ಎಂದರೆ ಜಗತ್ತಿನಲ್ಲಿರುವ ಪರತತ್ತ್ವ ಎಂಬ ಭಾವನೆ ಇದೆ. ಅವಿನಾಶಿಯಾದ ಚೇತನ ಅಥವಾ ಪ್ರಾಣವೇ ಆತ್ಮ. ಮಾನವನಲ್ಲಿ ಇರುವ ಅಂತಸ್ಸತ್ತ್ವ ಯಾವುದು ? ದೇಹ ನಾಶವಾದಾಗ ಅವನು ಏನಾಗುತ್ತಾನೆ? ಎಂಬ ಪ್ರಶ್ನೆಗಳನ್ನು ಉಪನಿಷತ್‌ಗಳು ಕೇಳಿವೆ. ಆತ್ಮ ಎಂದರೆ ಮಾನವನ ಅಂತಸ್ಸತ್ತ್ವ: ನಾಶವಾಗದೆ ಉಳಿಯುವ ಸತ್ಯ. ಅದರಂತೆ ಜಗತ್ತಿಗೆ ಅಂತಸ್ಸತ್ತ್ವ ಬ್ರಹ್ಮ. ಈ ಎರಡು ಅಂತಸ್ಸತ್ತ್ವಗಳೂ ಒಂದೇ ಎಂಬ ತತ್ತ್ವ ಕ್ರಮೇಣ ಬೆಳೆಯಿತು. ಆತ್ಮ ಮತ್ತು ಬ್ರಹ್ಮ ಶಬ್ದಗಳನ್ನು ಒಂದೇ ಅರ್ಥದಲ್ಲಿ ಪ್ರಯೋಗಿಸಲಾಗಿದೆ. ತನ್ನಲ್ಲಿರುವ ಸತ್ಯ ಯಾವುದು ? ಜಗತ್ತಿನಲ್ಲಿ ಯಾವ ಸತ್ಯವಿದೆ ? ಎಂದು ಮಾನವ ಒಳಗೂ ಹೊರಗೂ ಶೋಧನೆ ಮಾಡಲು ಯತ್ನಿಸಿ ಕೊನೆಗೆ ಏಕೈಕ ಸತ್ಯವೇ ತನಗೂ ಜಗತ್ತಿಗೂ ಕಾರಣವಾಗಿದೆ ಎಂದು ತತ್ತ್ವವನ್ನು ಕಂಡುಕೊಂಡನೆಂದು ಉಪನಿಷತ್‌ಗಳು ಹೇಳಿವೆ. ಒಳಗೂ ಹೊರಗೂ ಬ್ರಹ್ಮವೊಂದೇ ಇರುವುದು. ಉಳಿದುದೆಲ್ಲ ಅಸತ್ಯ, ಅನಿತ್ಯ–ಎಂಬುದೇ ಸಾರಾಂಶ. ದೇಹಕ್ಕೂ ಆತ್ಮಕ್ಕೂ ಯಾವ ಸಂಬಂಧವಿದೆಯೋ ಅದೇ ಜಗತ್ತಿಗೂ ಬ್ರಹ್ಮನಿಗೂ ಇರುವ ಸಂಬಂಧವೆಂದೂ ತಿಳಿಸಲಾಗಿದೆ. ಆತ್ಮನಿಗೂ ಬ್ರಹ್ಮನಿಗೂ ಸಮನ್ವಯ ಮಾಡಿ 'ಸತ್ಯಂ ಜ್ಞಾನಂ ಅನಂತಂ' ಆಗಿರುವ ಪರವನ್ನು ನಿರ್ದೇಶಿಸಲಾಗಿದೆ.

ಜೀವಾತ್ಮನ ಸ್ವರೂಪವನ್ನು ಹೇಳುವಾಗ ಕಠೋಪನಿಷತ್ತಿನಲ್ಲಿ ಶರೀರವೆಂಬ ವೃಕ್ಷದಲ್ಲಿ ಜೀವ ಈಶ್ವರನೊಡನೆ ವಾಸಿಸುತ್ತಾನೆಂದೂ ಈಶ್ವರನನ್ನು ಕಾಣುವವರೆಗೂ ಮೋಹದಿಂದ ದೇಹವೇ ತಾನೆಂದು ಭ್ರಮಿಸಿ ತನ್ನ ಅಸಹಾಯಕತೆಗೂ ದುಃಖಸ್ಥಿತಿಗೂ ಶೋಕಿಸುತ್ತಾನೆಂದೂ ಆದರೆ ನಿತ್ಯನೂ ಜನನ ಮರಣ ರಹಿತನೂ ಆದ ಆತ್ಮನ ಸ್ವರೂಪವನ್ನು ಅರಿತಾಗ ಅವನ ಶೋಕಗಳು ಕಳೆದುಹೋಗುವುವೆಂದೂ ಹೇಳಿದೆ. ಜೀವಾತ್ಮನ ಸ್ವರೂಪವನ್ನು ಹೇಳುವಾಗ ಪ್ರಜಾಪತಿ ಛಾಂದೋಗ್ಯೋಪನಿಷತ್ತಿನಲ್ಲಿ ಉಪದೇಶಿಸಿದ್ದು ಹೀಗಿದೆ: ಇದನ್ನು ನೋಡುವೆನು, ತಿಳಿಯುವೆನು ಎಂದು ಯಾರು ತಿಳಿಯುವನೋ ಅವನೇ ಆತ್ಮ. ಅಮೃತಸ್ವರೂಪಿಯೂ ಅಶರೀರಿಯೂ ಆದ ಆತ್ಮನಿಗೆ ಅವನ ಕರ್ಮಾನುಗುಣವಾಗಿ ಈ ದೇಹ ವಾಸಸ್ಥಾನವಾಗುವುದು. ದೇಹಸಂಬಂಧದಿಂದ ಪ್ರಿಯ ಅಪ್ರಿಯಗಳಿಂದ ಆವೃತವಾಗುವ ಆತ್ಮನಿಗೆ ದೇಹವಿರುವವರೆಗೂ ಸುಖದುಃಖಗಳು ತಪ್ಪುವುದಿಲ್ಲ.

ಜಗತ್ತಿನ ಚೇತನಾಚೇತನ ವಸ್ತುಗಳಲ್ಲಿ ಸೂತ್ರದಂತೆ ಒಂದಾಗಿರುವ ಬ್ರಹ್ಮವಸ್ತು ಅಸಂಖ್ಯಾತ ಜೀವರನ್ನು ಸೃಷ್ಟಿಸಿ ಜೀವಾತ್ಮನೂ ಆಗಿದೆ. ಇವರನ್ನು ಸೃಷ್ಟಿಸುವಾಗ ಅವರವರ ಕರ್ಮಾನುಸಾರವಾದ ಜನ್ಮಪ್ರಾಪ್ತಿಯಾಗುತ್ತದೆ. ಅನಾದಿಯಾದ ಅವಿದ್ಯೆಯೇ ಅವರ ಪುಣ್ಯಪಾಪರೂಪವಾದ ಕರ್ಮಕ್ಕೆ ಕಾರಣ. ಶರೀರದಲ್ಲಿ ವಾಸಿಸುವುದರಿಂದ ಜೀವಾತ್ಮನಿಗೆ ಪುರುಷ (ಪುರೀಶಯಃ) ಎಂದು ನಿರ್ದೇಶ. ಪಂಚಭೂತಗಳಿಂದ ಉತ್ಪನ್ನವಾಗಿರುವ ಶರೀರೇಂದ್ರಿಯಗಳಿಗೆ ಸಂಬಂಧಿಸಿರುವ ಸೋಪಾಧಿಕ ಬ್ರಹ್ಮನಿಗೆ ಮೂರ್ತ, ಮರ್ತ್ಯ, ಪರಿಚ್ಛಿನ್ನ, ಸರ್ತ ಎಂಬ ರೂಪವುಂಟು. ಇದಕ್ಕೆ ವಿರೋಧವಾದ ಅಜವೂ ಅಜರವೂ ಅಮೃತವೂ ಅಭಯವೂ ಆಗಿ ಅದ್ವೈತವಾಗಿರುವ ಬ್ರಹ್ಮನನ್ನು ನೇತಿ ನೇತಿ ಎಂದು ನಿರ್ದೇಶಿಸಲಾಗಿದೆ. ಆದರೆ ಶರೀರಗಳನ್ನು ಪ್ರವೇಶಿಸಿದ ಪರಮಾತ್ಮ ಜೀವಾತ್ಮನಂತೆ ಕಾಣುತ್ತಾನೆಯೇ ಹೊರತು ಬ್ರಹ್ಮ ಜೀವಾತ್ಮನಿಂದ ಭಿನ್ನವಾಗಿಲ್ಲ. ಜೀವಾತ್ಮ ಸತ್ಯ, ಬ್ರಹ್ಮ ಸತ್ಯದ ಸತ್ಯ. ಪ್ರಾಣ, ಇಂದ್ರಿಯ, ಮನಸ್ಸು ಜೀವಾತ್ಮನಿಗೋಸ್ಕರವಾಗಿಯೇ ಜೀವನಿಗೆ ಅಧೀನವಾಗಿವೆ. ಸುಷುಪ್ತಿಯಲ್ಲಿ ಆತ್ಮ ಬ್ರಾಹ್ಮೀಸ್ಥಿತಿಯಲ್ಲಿ, ತನ್ನ ಪರಮಪದದಲ್ಲಿ ಪರಮ ಸಂಪತ್ತಿನಿಂದ ಕೂಡಿ ಪರಮಾನಂದದಿಂದಿರುತ್ತಾನೆ. ಇದೇ ಅವನ ಸ್ವಾಭಾವಿಕ ಸ್ಥಿತಿ, ಇತರ ಸಂಪತ್ತುಗಳೆಲ್ಲ ಕೃತಕ. ಜಾಗ್ರದವಸ್ಥೆಯಲ್ಲಿ ಅಹಂಕಾರದಿಂದ ಆವೃತನಾಗುತ್ತಾನೆ. ಬ್ರಹ್ಮನಿಂದ ತಾನು ಭಿನ್ನವೆಂದು ಭ್ರಮಿಸುತ್ತಾನೆ. ಸರ್ವವೂ ಆತ್ಮನೆಂದು (ಬ್ರಹ್ಮನೆಂದು) ಅರಿಯದೆ ಎಲ್ಲವನ್ನೂ ಆತ್ಮನಿಗಿಂತ ಭಿನ್ನವೆಂದು ಅರಿಯುವವನನ್ನು ಎಲ್ಲವೂ ನಿರಾಕರಿಸುವುವು. ಅಸಂಗನೂ ನಿರಾಸಕ್ತನೂ ಬಂಧರಹಿತನೂ ಶೋಕರಹಿತನೂ ಆದ ಆತ್ಮನಿಗಾಗಿಯೇ ಅಂದರೆ ಆತ್ಮನ ಪ್ರಯೋಜನಕ್ಕಾಗಿಯೇ ಎಲ್ಲವೂ ಪ್ರಿಯವಾಗಿರುತ್ತದೆ. ಎಲ್ಲದರ ಪ್ರಯೋಜನಕ್ಕಾಗಿ ಎಲ್ಲವೂ ಪ್ರಿಯವಾಗಿರುವುದಿಲ್ಲ. ಆದ್ದರಿಂದ ಆತ್ಮನನ್ನೇ ಕೇಳಬೇಕು, ಮನನ ಮಾಡಬೇಕು. ನಿಧಿಧ್ಯಾಸನ ಮಾಡಿ ಆತ್ಮಸಾಕ್ಷಾತ್ಕಾರ–ಅಂದರೆ ಬ್ರಹ್ಮಸಾಕ್ಷಾತ್ಕಾರ ಹೊಂದಬೇಕು.

ಕರ್ಮಸಿದ್ಧಾಂತವನ್ನೂ ಉಪನಿಷತ್‌ಗಳಲ್ಲಿ ನಿರೂಪಿಸಲಾಗಿದೆ. ಜನನಮರಣ ಪರಂಪರೆಗಳಿಗೆ ಜೀವಾತ್ಮನ ಕರ್ಮವೇ ಕಾರಣ. ಜೀವರುಗಳು ಅವರವರ ಪುಣ್ಯಪಾಪಾನುಸಾರವಾದ ಪುನರ್ಜನ್ಮಗಳನ್ನು ಪಡೆಯುತ್ತಾರೆ. ಭಗವಂತ ನಿಷ್ಪಕ್ಷಪಾತಿ. ಪುಣ್ಯಪಾಪ ಫಲಗಳ ನಿಯಾಮಕ. ಆದ್ದರಿಂದ ಕರ್ಮವನ್ನು ಮಾಡುವುದಕ್ಕೆ ಮಾತ್ರ ಜೀವ ಅಧಿಕಾರಿ, ಫಲವನ್ನು ಕೊಡುವವ ಪರಮಾತ್ಮ. ಆದ್ದರಿಂದ ಕರ್ಮವನ್ನು ನಿಷ್ಕಾಮಬುದ್ಧಿಯಿಂದ ಮಾಡಬೇಕು. ಆತ್ಮರು ಅನಾದಿಯಾದ ಅವಿದ್ಯೆಯ ಸಂಬಂಧದಿಂದ ತಮ್ಮ ನಿಜಸ್ವರೂಪವನ್ನರಿಯದೆ ಕರ್ಮಬಂಧನಕ್ಕೂ ಅದರಿಂದ ಸಂಸಾರಕ್ಕೂ ಸಿಕ್ಕಿ ನರಳುತ್ತಾರೆ–ಎಂದು ಉಪನಿಷತ್‌ಗಳು ಹೇಳಿವೆ. ಐಹಿಕ ಸುಖಗಳು ಪ್ರೇಯವೇ ವಿನಾ ಶ್ರೇಯವಲ್ಲ. ನಿರತಿಶಯವಾದ ಆನಂದವನ್ನೂ ಪಡೆಯುವುದು ಬ್ರಹ್ಮಸಾಕ್ಷಾತ್ಕಾರದಿಂದ ಮಾತ್ರ. ಆನಂದಂ ಬ್ರಹ್ಮಣೋ ವಿದ್ವಾನ್ ನಬಿಭೇತಿ ಕದಾಚನೇತಿ.

ಜನ್ಮಕಾರಣವನ್ನಷ್ಟೇ ಹೇಳದೆ ಜನಿಸುವ ಬಗೆಯನ್ನು ಬೃಹದಾರಣ್ಯಕ ಪಂಚಾಗ್ನಿ ವಿದ್ಯೆಯಲ್ಲಿ ಹೇಳಿದೆ. ಪಾಂಚಾಲ ರಾಜನಾದ ಜೈಬಲಿ ಆರುಣಿಗೂ ಅವನ ಮಗ ಶ್ವೇತಕೇತು ವಿಗೂ ಈ ವಿದ್ಯೆಯನ್ನು ಉಪದೇಶಿಸುತ್ತಾನೆ. ಮೃತರಾದ ಮೇಲೆ ಜೀವರು ಯಾವ ಯಾನದಲ್ಲಿ ಹೋಗಿ ಯಾವ ರೀತಿ ಪುನಃ ಭೂಲೋಕಕ್ಕೆ ಹಿಂತಿರುಗುತ್ತಾರೆ ಎಂದು ವಿವರಿಸಲಾಗಿದೆ. ಬ್ರಹ್ಮಜ್ಞಾನಿಗಳು ದೇವಯಾನದಲ್ಲಿ ಪ್ರಯಾಣ ಮಾಡಿ ಬ್ರಹ್ಮಲೋಕಕ್ಕೆ ಹೋಗಿ ಸೇರುವರು. ಪುನಃ ಸಂಸಾರಕ್ಕೆ ಹಿಂತಿರುಗುವುದಿಲ್ಲ. ಬ್ರಹ್ಮೋಪಾಸನೆಯನ್ನು ಮಾಡದೆ, ಯಜ್ಞದಾನಾದಿಗಳಲ್ಲಿ ನಿರತರಾಗಿ ಕರ್ಮ ಮಾಡುವವರು ಪಿತೃಯಾನವೆಂಬ ಧೂಮಮಾರ್ಗದಲ್ಲಿ ಚಲಿಸಿ ಕರ್ಮಫಲಕ್ಷಯವಾದ ಮೇಲೆ ಭೂಮಿಗೆ ಹಿಂತಿರುಗುವರು. ಇದೇ ಪುನರ್ಜನ್ಮ ಸಿದ್ಧಾಂತ.

ದುಃಖಕರವಾದ ಸಂಸಾರಚಕ್ರದಿಂದ ಬಿಡುಗಡೆ ಹೊಂದುವುದೇ ಮೋಕ್ಷ. ಮೋಕ್ಷೋಪಾಯವಾಗುವುದು? ಎಂಬ ಪ್ರಶ್ನೆಯನ್ನು ಉಪನಿಷತ್‌ಗಳಲ್ಲಿ ಪುನಃ ಪುನಃ ವಿಮರ್ಶಿಸಲಾಗಿದೆ. ಪರಿಶುದ್ಧವಾದ ನಡತೆ, ಇಂದ್ರಿಯನಿಗ್ರಹ, ಆತ್ಮಶುದ್ಧಿ ಅತ್ಯಾವಶ್ಯಕವೆಂದೂ ಬ್ರಹ್ಮಸಾಕ್ಷಾತ್ಕಾರವೇ ಮಾನವನ ಗುರಿಯೆಂದೂ ಉಪನಿಷತ್‌ಗಳ ಉತ್ತರ. ನಿಜವಾದ ಯೋಗಿಯನ್ನು ಶಾಂತ, ದಾಂತ, ತಿತಿಕ್ಷು, ಉಪರತ, ಸಮಾಹಿತ ಎಂದು ವರ್ಣಿಸುತ್ತವೆ. ಮುಕ್ತರಾದವರು ನದಿಗಳು ಸಾಗರವನ್ನು ಸೇರುವಂತೆ, ನಾಮರೂಪಗಳನ್ನು ಕಳೆದುಕೊಂಡು ಸರ್ವಾತ್ಮಗಳನ್ನು ಸೇರುವರು. ಮೋಕ್ಷ ಆತ್ಮನಾಶವಲ್ಲ. ಅನಾದಿಯಾಗಿದ್ದ ಕರ್ಮಲೇಪ ಪೂರ್ತಿಯಾಗಿ ತೊಳೆದು ಹೋಗಿ ಆತ್ಮ ಸ್ವರೂಪಾವಿರ್ಭಾವದಿಂದ, ಪೂರ್ಣವಿಕಾಸವಾದ ಜ್ಞಾನದಿಂದ ಪ್ರಜ್ವಲಿಸುತ್ತ ನಿರತಿಶಯವಾದ ಆನಂದವನ್ನು ಅನುಭವಿಸುವುದೇ ಮೋಕ್ಷ.

ಕೆಲವು ಉಪನಿಷತ್‌ಗಳು ಮುಕ್ತರು ಪರಮಾತ್ಮನಿಗೆ ಸಮರಾಗುವರೆಂದೂ ಮತ್ತೆ ಕೆಲವು ಪರಮಾತ್ಮನೊಡನೆ ಸೇರಿಹೋಗುವವೆಂದೂ ಹೇಳಿವೆ. ಇನ್ನು ಕೆಲವು ಮಂತ್ರಗಳು ಜೀವ ಪರಮರಿಗೆ ಭೇದ ಮತ್ತು ಐಕ್ಯ ಎರಡನ್ನೂ ಹೇಳುವ ಘಟಕಶ್ರುತಿಗಳಾಗಿವೆ.

ಅಭೇದ ಶ್ರುತಿಗಳು ಅದ್ವೈತ ದರ್ಶನಕ್ಕೂ ಭೇದಶ್ರುತಿಗಳು ಭೇದದರ್ಶನಕ್ಕೂ ಆಧಾರವಾಗಿವೆ. ಭೇದಾಭೇದ ದರ್ಶನಗಳು ಎರಡು ವಿಧವಾದ ಶ್ರುತಿಗಳನ್ನೂ ಸ್ವೀಕರಿಸುತ್ತವೆ.

ಸಗುಣ ಬ್ರಹ್ಮನನ್ನು ಕೆಲವು ಉಪನಿಷತ್‌ಗಳೂ ನಿರ್ಗುಣ ಬ್ರಹ್ಮವನ್ನು ಮತ್ತೆ ಕೆಲವೂ ಪ್ರತಿಪಾದಿಸುತ್ತವೆ, ಸಗುಣ ಶ್ರುತಿಗಳಿಗೆ ಪ್ರಾಧಾನ್ಯ ಕೊಡುವ ದರ್ಶನಗಳು ನಿರ್ಗುಣ ಶ್ರುತಿಗಳಿಗೆ ಹೇಯಗುಣರಾಹಿತ್ಯವೆಂದು ವಿವರಣೆ ಕೊಡುತ್ತವೆ. ನಿರ್ಗುಣ ಶ್ರುತಿಗಳಿಗೇ ಪ್ರಾಧಾನ್ಯ ಕೊಡುವ ದರ್ಶನಗಳು ಸಗುಣ ಶ್ರುತಿಗಳೇ ಪರಮಾಧಾರವೆಂದೂ ಹೇಳುತ್ತವೆ.

ಹೀಗೆ ಉಪನಿಷತ್‌ಗಳು ಸರ್ವ ದರ್ಶನಗಳಿಗೂ ಪರಮಾಧಾರವಾಗಿಯೂ ರಹಸ್ಯವಾದ ಜ್ಞಾನಪ್ರಚೋದಕವಾಗಿಯೂ ಮಾನವ ಕೋಟಿಯ ಉದ್ಧಾರದ ಅಮೃತಧಾರೆಯಾಗಿಯೂ ಇವೆ. (ಎಸ್.ಎಸ್.ಆರ್.)

**ಉಪನಿಷತ್‌ಗಳಲ್ಲಿ ಕಾವ್ಯತ್ವ:** ಆತ್ಮೋನ್ನತಿಗೆ ಆಧಾರಸ್ತಂಭಗಳಂತಿರುವ ಉಪನಿಷತ್‌ಗಳ ತತ್ತ್ವಾನ್ವೇಷಣೆಯ ಕ್ರಮದಲ್ಲಿ ಕಾವ್ಯದ ಸೊಬಗಿದೆ. ಅವು ಅಸಾಧಾರಣ ಸ್ಫೂರ್ತಿಯಿಂದ ಬಂದ ಉಕ್ತಿಗಳು. ವೇದದ ಗುಂಪಿಗೆ ಸೇರಿ ಶ್ರುತಿಗಳೆನ್ನಿಸಿಕೊಂಡು ಕೇವಲ ಪವಿತ್ರವಾದ ವೆಂಬುದಕ್ಕಿಂತಲೂ ಹೆಚ್ಚಾಗಿ ಈ ಗ್ರಂಥಗಳ ಹೃದಯಂಗಮ ಕಾವ್ಯ ಸರಣಿ ಅವುಗಳ ಪ್ರಭಾವ, ಮಹತ್ತ್ವಗಳಿಗೆ ಕಾರಣವಾಗಿದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಇನ್ನೂರಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಉಪನಿಷತ್‌ಗಳಲ್ಲಿ ಸುಮಾರು ಹದಿನಾಲ್ಕು ಅತಿಮುಖ್ಯವೂ ಪ್ರಾಚೀನತಮವೂ ಆಗಿವೆ. ಅವುಗಳ ಭಾಷೆ ಶೈಲಿಗಳು ಸರಳತೆ ಸೌಂದರ್ಯಗ ಳಿಂದ ಕೂಡಿವೆ. ಅಭಿಪ್ರಾಯಗಳು ಮತ್ತು ಕಲ್ಪನೆಗಳು ಪ್ರತಿಭೆಯ ಮೆರುಗಿನಿಂದ ರಂಜಿತವಾಗಿ ಶೋಭಿಸುತ್ತಿವೆ. ತತ್ತ್ವಸಾಕ್ಷಾತ್ಕಾರದಲ್ಲಿ ಸೂಕ್ಷ್ಮತಮ ಸಾಧಕವಾಗಿರುವ ನಿಧಿಧ್ಯಾಸನಕ್ಕೆ ಅವೆಲ್ಲವೂ ಹೊಂದಿಕೊಂಡಿವೆ. ಈ ಉಪನಿಷತ್‌ಗಳಲ್ಲಿ ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ, ಐತರೇಯ, ಕೌಷೀತಕಿ–ಇವು ಅತ್ಯಂತ ಪ್ರಾಚೀನವಾದುವು. ಕಾಲದ ದೃಷ್ಟಿಯಿಂದ ಬ್ರಾಹ್ಮಣ ಗ್ರಂಥಗಳಿಗೆ ಸಮೀಪವಾಗಿ ಗದ್ಯರೂಪದಲ್ಲಿದ್ದು ಅವುಗಳು ಅಷ್ಟು ನಯವಿಲ್ಲದ ಭಾಷೆಯಿಂದ ಪ್ರಭಾವಿತವಾಗಿವೆಯಾದರೂ ಸೌಂದರ್ಯಕ್ಕೇನೂ ಕಡಿಮೆ ಇಲ್ಲ. ಕಾವ್ಯದ ಸೊಬಗು ಚಿಮ್ಮುವ ಹಲವಾರು ಸಂದರ್ಭಗಳನ್ನು ಅಲ್ಲಿ ಕಾಣಬಹುದು, ಬೃಹದಾರಣ್ಯಕೋಪ ನಿಷತ್ತಿನ ಕೆಳಕಂಡ ಭಾಗ ಅದಕ್ಕೆ ನಿದರ್ಶನವಾಗಿದೆ.

ಸ ಯಥೋರ್ಣನಾಭಿಸ್ತಂತುನೋಚ್ಚರೇದ್ಯಥಾಗ್ನೇ ಕ್ಷುದ್ರಾ ವಿಸ್ಫುಲಿಂಗಾ ವ್ಯುಚ್ಚರಂತ್ಯೇವಮೇವಾಸ್ಮಾದಾತ್ಮನಃ ಸರ್ವೇ ಪ್ರಾಣಾಃ ಸರ್ವೇ ಲೋಕಾಃ ಸರ್ವೇ ದೇವಾಃ ಸರ್ವಾಣಿ ಭೂತಾನ್ಯುಚ್ಚರಂತಿ ತಸ್ಯೋಪನಿಷತ್ಸತ್ಯಸ್ಯ ಸತ್ಯಮಿತಿ ಪ್ರಾಣಾ ವೈ ಸತ್ಯಂತೇಷಾಮೇವ ಸತ್ಯಮ್ ॥ (ಜೇಡರಹುಳು ತನ್ನ ತಂತುಗಳ ಮೇಲೆ ಚಲಿಸುವಂತೆ, ಅಗ್ನಿಯಿಂದ ನಾನಾಕಡೆ ಕಿಡಿಗಳು ಹೋಗುವಂತೆ, ಆತ್ಮನಿಂದ ಎಲ್ಲ ಪ್ರಾಣಗಳೂ ಎಲ್ಲ ಲೋಕಗಳೂ ಎಲ್ಲ ದೇವತೆಗಳೂ ಎಲ್ಲ ಭೂತಗಳೂ ಹೊರ ಹೊರಡುತ್ತವೆ. ಸತ್ಯದ ಸತ್ಯವೆಂದು ಅದರ ರಹಸ್ಯ. ಪ್ರಾಣಗಳು ಸತ್ಯ, ಇದು ಅವುಗಳ ಸತ್ಯ).

ಸ ವಾ ಅಯಮಾತ್ಮಾ ಸರ್ವೇ ಷಾಂಭೂತಾನಾಮಧಿಪತಿಃ ಸರ್ವೇ ಷಾಂ ಭೂತಾನಾಂ ರಾಜಾ ತದ್ಯಥಾ ರಥನಾಭೌ ಚ ರಥನೇಮೌ ಚಾರಾಃ । ಸರ್ವೇ ಸಮರ್ಪಿತಾ ಏವಮೇವಾಸ್ಮಿನ್ನಾತ್ಮನಿ ಸರ್ವಾಣಿ ಭೂತನಿ ಸರ್ವೇ ದೇವಾಃ ಸರ್ವೇ ಲೋಕಾಃ ಸರ್ವೇ ಪ್ರಾಣಾ । ಸರ್ವ ಏತ ಆತ್ಮನಃ ಸಮರ್ಪಿತಾಃ ॥ (ಆತ್ಮ ಎಲ್ಲ ಭೂತಗಳಿಗೂ ಅಧಿಪತಿ. ಎಲ್ಲ ಭೂತಗಳಿಗೂ ರಾಜನಾಗಿದ್ದಾನೆ. ರಥದ ನಾಭಿನೇಮಿಗಳಲ್ಲಿ ಅರಗಳು ಸೇರಿರುವಂತೆ ಆತ್ಮನಲ್ಲಿ ಎಲ್ಲ ಭೂತಗಳೂ ಎಲ್ಲ ದೇವತೆಗಳೂ ಎಲ್ಲ ಲೋಕಗಳೂ ಎಲ್ಲ ಪ್ರಾಣಗಳೂ ಈ ಎಲ್ಲ ಜೀವರೂ ಸೇರಿದ್ದಾರೆ).

ಕೇನೋಪನಿಷತ್ ಗದ್ಯಪದ್ಯಗಳ ಮಿಶ್ರಣವಾಗಿದ್ದು ಮೇಲ್ಕಂಡ ಗದ್ಯರೂಪದ ಉಪನಿಷತ್ ಗಳಿಗೂ ಮುಂದೆ ಬರುವ ಪದ್ಯರೂಪದ ಉಪನಿಷತ್‌ಗಳಿಗೂ ಬದಲಾವಣೆಯಲ್ಲಿ ಮಧ್ಯವರ್ತಿ ಯಾಗಿದೆ. ಅದರ ಸ್ವಾರಸ್ಯವನ್ನು ಮುಂದಿರುವ ಕೆಲವು ಪಂಕ್ತಿಗಳು ಸೂಚಿಸುತ್ತವೆ:

ಯದ್ವಾಚಾऽನಭ್ಯುದಿತಂ ಯೇನ ವಾಗಭ್ಯುದ್ಯತೇ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ । ತದೇವ ಬಹ್ಮತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಮ್ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ (ಯಾವುದನ್ನು ಮಾತಿನಿಂದ ಹೇಳಲಶಕ್ಯವೋ ಯಾವುದರಿಂದ ಮಾತಿಗೆ ಅಭಿವ್ಯಕ್ತಿ ಇದೆಯೋ ಅದೇ ಬ್ರಹ್ಮ ಎಂದು ತಿಳಿ; ಇದೆಂದು ಯಾವುದನ್ನು ಪೂಜಿಸುತ್ತಾರೋ ಇದಲ್ಲ. ಯಾವುದು ಮನಸ್ಸಿನಿಂದ ಅಚಿಂತ್ಯವೋ ಯಾವುದರಿಂದ ಮನಸ್ಸು ಯೋಚಿಸುತ್ತದೋ ಅದು ಬ್ರಹ್ಮ ಎಂದು ತಿಳಿದುಕೋ; ಇದೆಂದು ಯಾವುದನ್ನು ಪೂಜಿಸುತ್ತಾರೋ ಇದಲ್ಲ. ಯಾವುದು ಕಣ್ಣಿಂದ ನೋಡದೋ ಯಾವುದರಿಂದ ಕಣ್ಣು ನೋಡುತ್ತದೋ ಅದೇ ಬ್ರಹ್ಮ ಎಂದು ತಿಳಿದುಕೊ; ಇದೆಂದು ಯಾವುದನ್ನು ಪೂಜಿಸುತ್ತಾರೋ ಇದಲ್ಲ. ಯಾವುದು ಕಿವಿಯಿಂದ ಆಲಿಸದೋ ಯಾವುದರಿಂದ ಕಿವಿ ಆಲಿಸುತ್ತದೋ ಅದೇ ಬ್ರಹ್ಮ ಎಂದು ತಿಳಿ; ಇದೆಂದು ಯಾವುದನ್ನು ಪೂಜಿಸುತ್ತಾರೋ ಇದಲ್ಲ. ಯಾವುದು ಪ್ರಾಣದಿಂದ ಉಸಿರಾಡದೋ ಯಾವುದರಿಂದ ಪ್ರಾಣಗಳ ಮೂಲಕ ಉಸಿರಾಡುವುದಿದೆಯೋ ಅದೇ ಬ್ರಹ್ಮ ಎಂದು ತಿಳಿ; ಇದೆಂದು ಯಾವುದನ್ನು ಪೂಜಿಸುತ್ತಾರೋ ಇದಲ್ಲ).

ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ ತಸ್ಯ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ। ತ ಐಕ್ಷಂತಾಸ್ಮಾಕಮೇವಾಯಂ ವಿಜಯೋऽಸ್ಮಾಕಮೇವಾಯಂ ಮಹಿಮೇತಿ ॥ ತದ್ಧೈಷಾಂ ವಿಜಜ್ಞೌ ತೇಭ್ಯೋ ಹ ಪ್ರಾದುರ್ಬಭೂವ ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ॥ ತೇऽಗ್ನಿಮಬ್ರುವನ್ ಜಾತವೇದ ಏತದ್ವಿಜಾ ನೀಹಿ ಕಿಮೇತದ್ಯಕ್ಷಮಿತಿ ತಥೇತಿ ॥ ತದಭ್ಯದ್ರವತ್ತಮಭ್ಯವದತ್ಕೋऽಸೀತ್ಯಗ್ನಿರ್ವಾ ಅಹಮಸ್ಮೀತ್ಯಬ್ರವೀಜ್ಜಾತವೇದಾ ವಾ ಅಹಮಸ್ಮೀತಿ ತಸ್ಮಿಂಸ್ತ್ವಯಿ ಕಿಂ ವೀರ್ಯಮಿತ್ಯಪೀದಂ ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ॥ ತಸ್ಮೈತೃಣಂ ನಿದಧಾವೇತದ್ದಹೇತಿ ತದುಪಪ್ರೇಯಾಯ ಸರ್ವಜವೇನ ತನ್ನ ಶಶಾಕ ದಗ್ಧುಂ ಸ ತತ ಏವ ನಿವವೃತೇ ॥ ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥

(ದೇವತೆಗಳ ಪರವಾಗಿ ಬ್ರಹ್ಮನಿಗೆ ಗೆಲುವು ಲಭಿಸಿತು. ದೇವತೆಗಳೆಲ್ಲರೂ ಆ ಗೆಲುವಿನಲ್ಲಿ ಸಂತಸಗೊಂಡರು . ನಮ್ಮದೇ ಗೆಲುವು ನಮ್ಮದೇ ಮಹಿಮೆ ಎಂದು ಯೋಚಿಸಿಕೊಂಡರು. ಬ್ರಹ್ಮನಿಗೆ ಇದು ತಿಳಿಯಿತು. ಅವರ ಮುಂದೆ ಬಂದಾಗ ದೇವತೆಗಳು ಅದನ್ನು (ಯಕ್ಷ) ಯಾವುದೆಂದು ತಿಳಿಯದೆ ಹೋದರು. ಅಗ್ನಿಯನ್ನು ಕುರಿತು ಇದೇನು ತಿಳಿದುಕೋ ಎಂದು ಹೇಳಿದರು. ಅಗ್ನಿ ಆಗಲಿ ಎಂದು ಅತ್ತ ಕಡೆ ಧಾವಿಸಿದ, ನೀನು ಯಾರು? ಎಂದು ಅಗ್ನಿ ಅದು ಅಗ್ನಿಯನ್ನು ಕೇಳಿತು. ನಾನು ಅಗ್ನಿ, ಜಾತವೇದ ಎಂದು ಅಗ್ನಿ ಉತ್ತರಿಸಿದ. ನಿನ್ನಲ್ಲಿ ಯಾವ ಶಕ್ತಿ ಇದೆ? (ಉತ್ತರವಾಗಿ ಅಗ್ನಿ) ಪೃಥ್ವಿಯಲ್ಲಿ ಯಾವುದಿದೆಯೋ ಅದೆಲ್ಲವನ್ನೂ ದಹಿಸಬಲ್ಲೆ. ಅದು ಅಗ್ನಿಯ ಮುಂದೆ ಹುಲ್ಲು ಕಡ್ಡಿಯೊಂದನ್ನು ಇರಿಸಿ ದಹಿಸು ಎಂದು ಹೇಳಿತು. ಎಲ್ಲ ರಭಸದಿಂದ ಅಗ್ನಿ ಅತ್ತ ಸಾಗಿದ; ಅದನ್ನು ದಹಿಸಲು ಅಶಕ್ತನಾಗಿ ಅಲ್ಲಿಂದ ಹಿಂತಿರುಗಿ ಈ ಯಕ್ಷ ಯಾವುದೆಂದು ತಿಳಿಯಲು ಅಸಮರ್ಥನಾಗಿದ್ದೇನೆ ಎಂದ.)

ಸ್ವಾರಸ್ಯ, ಸರಳತೆ, ಉತ್ಸಾಹಗಳು ಈ ಉಪನಿಷತ್‌ಗಳಿಗೆ ಒಂದು ವಿಶೇಷ ಮನೋಜ್ಞತೆ ಯನ್ನುಂಟುಮಾಡಿವೆ. ಇವುಗಳ ವಾಕ್ಸಂಪತ್ತು ಗಮನಾರ್ಹವಾಗಿದೆ. ಮುಂದೆ ಬರುವ ಕಠ, ಈಶ, ಶ್ವೇತಾಶ್ವತರ, ಮುಂಡಕ, ಮಹಾನಾರಾಯಣ ಉಪನಿಷತ್‌ಗಳು ಕಾವ್ಯತ್ವ ದೃಷ್ಟಿಯಿಂದ ಹೆಚ್ಚು ಆಕರ್ಷಣೀಯವಾಗಿವೆ. ಕಠೋಪನಿಷತ್ತಿನಿಂದ ದೃಷ್ಟಾಂತವಾಗಿ ತೆಗೆದುಕೊಂಡಿರುವ ಒಂದು ರಮಣೀಯವಾದ ಭಾಗ ಹೀಗಿದೆ.

ಯತಶ್ಚೋದೇತಿ ಸೂರ್ಯೋऽಸ್ತಂ ಯತ್ರ ಚ ಗಚ್ಛತಿ । ತಂ ದೇವಾಃ ಸರ್ವೇऽರ್ಪಿ ತಾಸ್ತದು ನಾತ್ಯೇತಿ ಕಶ್ಚನ ॥ ಏತದ್ವೈತತ್॥ ನೈವ ವಾಚಾನ ಮನಸಾ ಪ್ರಾಪ್ತುಂ ಶಕ್ಯೋನ ಚಕ್ಷುಷಾ । ಅಸ್ತೀತಿ ಬ್ರುವತೋऽನ್ಯತ್ರ ಕಥಂ ತದುಪಲಭ್ಯತೇ॥

(ಯಾವುದರಿಂದ ಸೂರ್ಯ ಉದಯಿಸುತ್ತಾನೋ ಯಾವುದರಲ್ಲಿ ಅಸ್ತಂಗತ ನಾಗುತ್ತಾನೋ—ಅದನ್ನು ಎಲ್ಲ ದೇವತೆಗಳೂ ಅವಲಂಬಿಸಿದ್ದಾರೆ. ಯಾರೂ ಅದನ್ನು ಮೀರಿರುವುದಿಲ್ಲ [ಇದೇ ಅದು. ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಕಣ್ಣಿನಿಂದಾಗಲಿ ಅರಿಯಲು ಸಾಧ್ಯವಿಲ್ಲ. ಅಸ್ತಿ ಎಂದು ಹೇಳುವವರಲ್ಲದೆ ಬೇರೆಯ ಕಡೆ ಅದು ಹೇಗೆ ಉಪಲಬ್ಧವಾಗುತ್ತದೆ?)].

ಪ್ರಶ್ನ, ಮೈತ್ರಾಯಣೀಯ, ಮಾಂಡೂಕ್ಯ–ಇವು ಪುನಃ ಮೊದಲಿನಂತೆ ಗದ್ಯರೂಪವನ್ನು ತಾಳಿವೆ. ಆಗಲೇ ಅವುಗಳಲ್ಲಿ ಸಂಸ್ಕೃತ ಕಾವ್ಯದ ದೃಷ್ಟಿಯಿಂದಲೂ ಈ ಉಪನಿಷತ್‌ಗಳು ಉತ್ತಮವಾಗಿವೆ. ಉದಾಹರಣೆ:

ಅಥ ಹೈನಂ ಸೌರ್ಯಾಯಣೀ ಗಾರ್ಗ್ಯಃ ಪಪ್ರಚ್ಛ ಭಗವನ್ನೇತಸ್ಮಿನ್ಪುರುಷೇ ಕಾನಿ ಸ್ವಪಂತಿ ಕಾನ್ಯಸ್ಮಿನ್ ಜಾಗ್ರತಿ ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ ಕಸ್ಯೈ ತತ್ಸುಖಂ ಭವತಿ ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವಂತೀತಿ॥ ತಸ್ಮೈ ಸ ಹೋವಾಚ। ಯಥಾ ಗಾರ್ಗ್ಯ ಮರೀಚಯೋಽರ್ಕಸ್ಯಾಸ್ತಂ ಗಚ್ಛತಃ ಸರ್ವಾ ಏತಸ್ಮಿಂಸ್ತೇಜೋಮಂಡಲ ಏಕೀಭವಂತಿ ತಾಃ ಪುನಃ ಪುನರುದಯತಃ ಪ್ರಚರಂ ತ್ಯೇವಂ ಹ ವೈ ತತ್ಸರ್ವಂ ಪರೇ ದೇವೇ ಮನಸ್ಯೇಕೀಭವತಿ । ತೇನ ತರ್ಹ್ಯೇ ಷ ಪುರುಷೋ ನ ಶೃಣೋತಿ ನ ಪಶ್ಯತಿ ನ ಜಿಘ್ರತಿ ನ ರಸಯತೇ ನಸ್ಪೃಶತೇ ನಾಭಿವದತೇ ನಾದತ್ತೇ ನಾನಂದಯತೇ ನ ವಿಸೃಜತೇ ನೇಯಾಯತೇ ಸ್ವಪಿತೀತ್ಯಾಚಕ್ಷತೇ॥ ಪ್ರಶ್ನೋಪನಿಷತ್.

(ಅನಂತರ ಸೌರ್ಯಾಯಣೀಗಾರ್ಗ್ಯ ಕೇಳಿದ [ಪಿಪ್ಪಲಾದನೆಂಬ ಗುರುವನ್ನು] : ಪೂಜ್ಯರೇ, ಮನುಷ್ಯನೊಡನೆ ಸುಪ್ತವಾಗತಕ್ಕವು ಯಾವುವು ? ಅವನು ಎಚ್ಚರದಿಂದ ಇರುವಾಗ ಅವನೊಡನೆ ಇರತಕ್ಕವು ಯಾವುವು ? ಸ್ವಪ್ನವನ್ನು ನೋಡುವ ದೇವತೆ ಯಾರು ? ಈ ಸುಖ ಯಾರದು ? ಯಾರಲ್ಲಿ ಇವೆಲ್ಲವೂ ಪ್ರತಿಷ್ಠಿತವಾಗಿವೆ?

[ಗುರು] ಗಾರ್ಗ್ಯ, ಅಸ್ತಂಗತನಾಗುತ್ತಿರುವ ಸೂರ್ಯನ ರಶ್ಮಿಗಳೆಲ್ಲವೂ ತೇಜೋಮಂಡಲ ದಲ್ಲಿ ಏಕೀಭವಿಸಿ, ಅವನು ಪುನಃ ಪುನಃ ಉದಯಿಸಿದಾಗ ಪ್ರಸರಿಸುವಂತೆ, ಎಲ್ಲವೂ ಆ ಶ್ರೇಷ್ಠ ದೇವನಾದ ಮನಸ್ಸಿನಲ್ಲಿ ಏಕೀಭವಿಸುತ್ತವೆ. ಆದ್ದರಿಂದ ಆ ಸ್ಥಿತಿಯಲ್ಲಿ ಮನುಷ್ಯ ಆಲಿಸುವುದಿಲ್ಲ, ನೋಡುವುದಿಲ್ಲ, ಆಘ್ರಾಣಿಸುವುದಿಲ್ಲ; ಅವನಿಗೆ ರುಚಿ ತಿಳಿಯದು, ಸ್ಪರ್ಶ ಉಂಟಾಗದು; ಅವನು ಮಾತನಾಡುವುದಿಲ್ಲ, ತೆಗೆದುಕೊಳ್ಳುವುದಿಲ್ಲ, ಸಂತೋಷಪಡುವುದಿಲ್ಲ. ಅವನು ವಿಸೃಜಿಸನು, ಚಲಿಸನು, ಸುಪ್ತನಾಗಿದ್ದಾನೆಂದು ಹೇಳುತ್ತಾರೆ.).

ಹದಿನಾಲ್ಕನ್ನು ಬಿಟ್ಟು ಉಳಿದ ಉಪನಿಷತ್‌ಗಳು ಅಷ್ಟು ಪ್ರಾಚೀನವಲ್ಲವೆಂಬ ಅಭಿಪ್ರಾಯ ವಿದೆ. ಭಾಷೆ, ಶೈಲಿ ಮುಂತಾದ ಕಾವ್ಯಗುಣಗಳ ದೃಷ್ಟಿಯಿಂದ ಅವು ತಮ್ಮದೇ ಆದ ಒಂದು ವೈಶಿಷ್ಟ್ಯವನ್ನು ಪಡೆದಿವೆ.

ತತ್ತ್ವಾನ್ವೇಷಣವನ್ನೇ ಗುರಿಯಾಗಿ ಇಟ್ಟುಕೊಂಡಿರುವ ಈ ಉಪನಿಷತ್‌ಗಳ ಉಕ್ತಿಗಳು ಕಾವ್ಯದ ಮಹೋನ್ನತಿಯಿಂದಲೂ ಕೂಡಿ ತತ್ತ್ವಬೋಧೆ ಸಾಕ್ಷಾತ್ಕಾರಗಳನ್ನುಂಟುಮಾಡಬಲ್ಲ ಮಹಾಶಕ್ತಿಗಳಾಗಿ ಪರಿಣಮಿಸಿರುವುದು ಗಮನಾರ್ಹವಾದ ಒಂದು ಅಂಶ. (ಬಿ.ಕೆ.ಎಸ್.)

**ಉಪಪಾಂಡವರು:** ದ್ರೌಪದಿಯ ಐದು ಮಂದಿ ಮಕ್ಕಳು. ಪ್ರತಿವಿಂಧ್ಯನ ತಂದೆ ಧರ್ಮರಾಜ. ಶ್ರುತಸೋಮನ ತಂದೆ ಭೀಮಸೇನ. ಶ್ರುತಕೀರ್ತಿಯ ತಂದೆ ಅರ್ಜುನ. ಈತನನ್ನು ಶ್ರುತಕರ್ಮ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಮಹಾಭಾರತ ಯುದ್ಧದ ಹದಿನಾರನೆಯ ದಿವಸ ಈತ ಶಲ್ಯನೊಡನೆ ಯುದ್ಧ ಮಾಡಿ ಸೋತ. ಶತಾನೀಕನ ತಂದೆ ನಕುಲ. ಶ್ರುತಸೇನನ ತಂದೆ ಸಹದೇವ.

ಮಹಾಭಾರತ ಯುದ್ಧ ಮುಗಿದ ರಾತ್ರಿಯಲ್ಲಿ ಈ ಐದು ಮಂದಿ ಸಹೋದರರೂ ಶಿಬಿರದಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಅಶ್ವತ್ಥಾಮ ಯಾರಿಗೂ ತಿಳಿಯದಂತೆ ಶಿಬಿರಕ್ಕೆ ನುಗ್ಗಿ ಇವರ ತಲೆಗಳನ್ನು ತುಂಡರಿಸಿದ.

ಉಪಪಾಂಡವರು ಪೂರ್ವಜನ್ಮದಲ್ಲಿ ವಿಶ್ವೇದೇವತೆಗಳಾಗಿದ್ದವರು. ಹರಿಶ್ಚಂದ್ರನ ಪತ್ನಿಯಾದ ಚಂದ್ರಮತಿಯನ್ನು ವಿಶ್ವಾಮಿತ್ರ ಋಷಿ ಪೀಡಿಸುತ್ತಿದ್ದುದನ್ನು ಕಂಡು ಈ ದೇವತೆಗಳು ಮರುಕಗೊಂಡು ವಿಶ್ವಾಮಿತ್ರನನ್ನು ತೆಗಳಿದರು. ಕುಪಿತನಾದ ವಿಶ್ವಾಮಿತ್ರ ಭೂಲೋಕದಲ್ಲಿ ಮನುಷ್ಯರಾಗಿ ಹುಟ್ಟುವಂತೆ ಶಾಪಕೊಟ್ಟ. ಹೆದರಿದ ವಿಶ್ವೇದೇವತೆಗಳು ವಿಶ್ವಾಮಿತ್ರನನ್ನು ಕಂಡು ಕೇಳಿಕೊಂಡಾಗ ಮದುವೆಗೆ ಮೊದಲೇ ಸತ್ತು ಶಾಪದಿಂದ ವಿಮೋಚಿತರಾಗುವಂತೆ ಅನುಗ್ರಹಿಸಿದ. ಅದರಂತೆ ದ್ರೌಪದಿಯಲ್ಲಿ ಉಪಪಾಂಡವರಾಗಿ ಹುಟ್ಟಿ ಮದುವೆಗೆ ಮುಂಚೆಯೇ ಸತ್ತು ಶಾಪದಿಂದ ವಿಮುಕ್ತರಾದರು ಎಂದು ಮಾರ್ಕಂಡೇಯ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. (ಎಸ್.ಎನ್.ಕೆ.)

**ಉಪಪುರಾಣಗಳು:** **ನೋಡಿ– ಅಷ್ಟಾದಶ–ಉಪಪುರಾಣಗಳು.**

**ಉಪಭಾಷೆಗಳು:** ಇತ್ತೀಚೆಗೆ 'ಉಪಭಾಷೆ' ಪದ ಹೆಚ್ಚಾಗಿ ಬಳಕೆಯಾಗುತ್ತಿದೆ. **'ಡಯಲೆಕ್ಟ್'** ಮೂಲತಃ ಗ್ರೀಕ್ ಪದ (dialektos = conversation). ಇದು ಲ್ಯಾಟಿನ್ ಮತ್ತು ಫ್ರೆಂಚ್ ಭಾಷೆಗಳ ಮೂಲಕ ಇಂಗ್ಲಿಷಿಗೆ ಬಂದಿದೆ. 16ನೆಯ ಶತಮಾನದ ಇಂಗ್ಲಿಷ್ ವಿದ್ವಾಂಸರು ಆ ಮಾತನ್ನು ಶಿಷ್ಟೇತರ ಜನ ಅಥವಾ ಅವಿದ್ಯಾವಂತರು ಆಡುವ ಭಾಷಾಪ್ರಭೇದ ಎಂಬರ್ಥದಲ್ಲಿ ಬಳಸಿದ್ದಾರೆ. ಆದರೆ ಶಿಷ್ಟ ಭಾಷೆಯೂ (ಸ್ಟ್ಯಾಂಡರ್ಡ್ ಲ್ಯಾಂಗ್ವೇಜ್) ಒಂದು ಉಪಭಾಷೆಯೇ ಆಗಿದೆ. 'ಉಪಭಾಷೆ' ಎಂಬ ಮಾತನ್ನು ಇದೇ ಎಚ್ಚರಿಕೆಯಿಂದಲೇ ತೆಗೆದುಕೊಳ್ಳಬೇಕು. ಉಪಭಾಷೆಯೆಂದಾಗ ಪ್ರಧಾನಭಾಷೆಯೊಂದಿದೆ ಎನ್ನುವ ಅರ್ಥ ಬರುತ್ತದೆ. ಆದರೆ ಒಂದು ಭಾಷಾ ಪ್ರದೇಶದಲ್ಲಿ ಕಂಡುಬರುವ ಆ ಭಾಷೆಯ ಎಲ್ಲ ಪ್ರಭೇದಗಳನ್ನೂ ಉಪಭಾಷೆಯೆಂದೇ ಕರೆಯುವರು.

ಒಂದು ಭಾಷೆ ವಿಸ್ತಾರ ಪ್ರದೇಶದಲ್ಲಿ ಹಬ್ಬಿದ್ದರೆ ಅಲ್ಲಿ ಅನಿವಾರ್ಯವಾಗಿ ಉಪಭಾಷೆಗಳು ಏರ್ಪಡುತ್ತವೆ. ಆ ಪ್ರದೇಶದ ಬೇರೆ ಬೇರೆ ಭಾಗಗಳು ಪರ್ವತ, ನದಿ, ದಟ್ಟವಾದ ಕಾಡು ಅಥವಾ ಜೌಗು ಭೂಮಿ ಇತ್ಯಾದಿ ಪ್ರಾಕೃತಿಕ ಕಾರಣಗಳಿಂದ ಬೇರೆ ಬೇರೆಯಾಗಿ ವಿಭಾಗಗೊಂಡಿದ್ದರೆ, ಆಯಾ ವಿಭಾಗಗಳಲ್ಲಿ ವಾಸಿಸುವ ಜನರಿಗೆ ಇತರೆಡೆಯ ವಿಭಾಗಗಳಲ್ಲಿನ ಜನರ ಸಂಪರ್ಕ ತಪ್ಪಿ ಹೋಗಬಹುದು. ಅದರ ಫಲವಾಗಿ ಅವರ ಭಾಷೆಯಲ್ಲಿ ವೈಲಕ್ಷಣ್ಯಗಳು ಹೆಚ್ಚುತ್ತಾ ಹೋಗಿ, ಅವರ ಉಪ ಭಾಷೆಯಲ್ಲಿನ ಪ್ರತ್ಯೇಕತೆ ಕಡಿಮೆಯಾಗುತ್ತ ಹೋಗುತ್ತದೆ. ಒಂದು ಪ್ರದೇಶ ಬೇರೆ ಬೇರೆ ಆಡಳಿತಗಳಿಗೆ ಸೇರಿದ್ದರೆ, ಆಗಲೂ ಆಯಾ ಆಡಳಿತ ಪ್ರದೇಶಗಳಲ್ಲಿ ಪ್ರತ್ಯೇಕ ಉಪಭಾಷೆಗಳಾಗಬಹುದು. ಸುತ್ತ ಮುತ್ತಣ ಬೇರೆ ಬೇರೆ ಭಾಷೆಗಳ ಪ್ರಭಾವದಿಂದ ಉಪಭಾಷೆಗಳು ಏರ್ಪಡಬಹುದು. ಈ ಯಾವುದೇ ಕಾರಣಗಳಿಲ್ಲದೇ ಹೋದರೂ ವಿಸ್ತಾರ ಪ್ರದೇಶದಲ್ಲಿ ಬೇರೆ ಬೇರೆ ಭಾಗದ ಜನ ತಮ್ಮ ತಮ್ಮಲ್ಲೇ ಹೆಚ್ಚಾಗಿ ವ್ಯವಹಾರಗಳನ್ನು ನಡೆಸುವುದರಿಂದ ಅಲ್ಲೂ ಉಪಭಾಷೆಗಳು ಏರ್ಪಡಬಹುದು. ಒಂದು ಭಾಷೆಯಲ್ಲಿ ಉಪಭಾಷೆಗಳು ಏರ್ಪಟ್ಟು, ಆ ಉಪಭಾಷೆಗಳ ಜನರಲ್ಲಿ ವ್ಯವಹಾರ ಕಡಿಮೆ ಯಾದಷ್ಟೂ ಅವುಗಳಲ್ಲಿರುವ ಸಮಾನ ಅಂಶಗಳು ಕಡಿಮೆಯಾಗಿ ಭಿನ್ನತೆ ಹೆಚ್ಚಿ, ಇದೇ ಬಹಳ ಕಾಲ ಮುಂದುವರೆದರೆ ಕ್ರಮೇಣ ಆ ಉಪಭಾಷೆಗಳೇ ಸ್ವತಂತ್ರ ಭಾಷೆಗಳಾಗುತ್ತವೆ.

ಒಂದು ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಜನ ರಾಜಕೀಯ ಅಥವಾ ಧಾರ್ಮಿಕ ಕಾರಣಗಳಿಂದಾಗಿ ತಮ್ಮ ಭಾಷೆಗಳನ್ನು ಕೈಬಿಟ್ಟು ಬೇರೊಂದು ಭಾಷೆಯನ್ನು ಅಂಗೀಕರಿಸಿದಾಗ, ಆ ಭಾಷೆಗೆ ಆಯಾ ಜನ ಮೂಲ ಭಾಷೆಗಳ ಉಚ್ಚಾರಣೆ, ಪದಗಳನ್ನು ಕೈಬಿಟ್ಟು ಬೇರೊಂದು ಭಾಷೆಯನ್ನು ಅಂಗೀಕರಿಸಿದಾಗ, ಆ ಹೊಸ ಭಾಷೆಗೆ ಆಯಾ ಜನ ಮೂಲ ಭಾಷೆಗಳ ಉಚ್ಚಾರಣೆ, ಪದಗಳು, ವಾಕ್ಯರಚನೆ ಇತ್ಯಾದಿ ಅಂಶಗಳನ್ನು ಸೇರಿಸಬಹುದು. ಈ ಬೇರೆ ಬೇರೆ ಮಿಶ್ರಣಗಳಿಂದಾಗಿ ಆ ಹೊಸ ಭಾಷೆಯಲ್ಲಿ ಉಪಭಾಷೆಗಳು ರಚನೆಗೊಳ್ಳಲು ಸಾಧ್ಯವಾಗುವುದು.

ಆದರೆ ಬಸ್ಸು, ರೈಲು, ವಿಮಾನ, ಆಕಾಶವಾಣಿ, ವೃತ್ತಪತ್ರಿಕೆ, ಟೆಲಿವಿಷನ್, ಪುಸ್ತಕ ಮುಂತಾದ ಸಂಪರ್ಕ ಸಾಧನಗಳು ಹೆಚ್ಚಿದಂತೆ ಉಪಭಾಷೆಗಳ ವೈಲಕ್ಷಣ್ಯಗಳು ಕಡಿಮೆಯಾಗುತ್ತ ಕ್ರಮೇಣ ಭಾಷೆಯಲ್ಲಿ ಏಕರೂಪತೆ ಹೆಚ್ಚುಹುದು. ಇದರಿಂದ ಉಪಭಾಷೆಗಳು ಏರ್ಪಡುವುದು ಸಂಪರ್ಕದ ಕೊರತೆ ಅಥವಾ ಅಭಾವದಿಂದ ಎಂಬುದು ಸ್ಪಷ್ಟ.

ಎರಡು ಬೇರೆ ಬೇರೆ ಭಾಷಾವಂಶಗಳಿಗೆ ಸೇರಿದ ಭಾಷೆಗಳನ್ನು ಪ್ರತ್ಯೇಕ ಭಾಷೆಗಳೆಂದು ಕರೆಯುತ್ತೇವೆ. ಆದರೆ ಒಂದೇ ಭಾಷಾವಂಶದ ಎರಡು ಪ್ರತ್ಯೇಕ ಭಾಷೆಗಳಿಗೂ ಒಂದು ಭಾಷೆಯ ಉಪಭಾಷೆಗಳಿಗೂ ಇರುವ ವ್ಯತ್ಯಾಸಗಳನ್ನು ಹೀಗೆ ಹೇಳಬಹುದು. ಪ್ರತಿಯೊಬ್ಬ ವ್ಯಕ್ತಿಯ ಮಾತೂ (ವ್ಯಕ್ತಿ ಭಾಷೆ) ಇನ್ನೊಬ್ಬ ವ್ಯಕ್ತಿಯ ಮಾತಿನಿಂದ ಭಿನ್ನವಾಗಿರುತ್ತದೆ. ಆ ವ್ಯತ್ಯಾಸಗಳು ಎಷ್ಟೇ ಇದ್ದರೂ ಸ್ಥೂಲವಾಗಿ ಹೇಳುವುದಾದರೆ ಒಂದು ಭಾಗದಲ್ಲಿ ವಾಸಿಸುವ ಜನರ ಮಾತುಗಳೆಲ್ಲ ಒಂದೇ ರೀತಿಯಾಗಿ ಕೇಳಿಸುತ್ತವೆ. ಒಬ್ಬ ವ್ಯಕ್ತಿಯ ಮಾತಿನಿಂದ ಆತ ಇಂಥ ಪ್ರದೇಶದವನೆಂದು ಸುಲಭವಾಗಿ ಗುರುತಿಸಬಹುದು, ಎಂದರೆ ಒಂದು ಪ್ರದೇಶದ ಜನರ ವ್ಯಕ್ತಿಭಾಷೆಗಳು ಸದೃಶವಾಗಿರುತ್ತವೆ. ಅವರಲ್ಲಿ ಪರಸ್ಪರ ಅರಿವಿನ ಶೇಕಡಾವಾರು ನೂರಕ್ಕೆ ನೂರು ಅಥವಾ ನೂರಕ್ಕೆ ತೊಂಬತ್ತೈದು ಇರಬಹುದು. ಒಂದು ಪ್ರದೇಶದ ವ್ಯಕ್ತಿಯ ಮತ್ತು ಇನ್ನೊಂದು ಪ್ರದೇಶದ ವ್ಯಕ್ತಿಯ ಪರಸ್ಪರ ಅರಿವಿನ ಶೇಕಡಾವಾರು ಸಂಖ್ಯೆ ಅರವತ್ತಕ್ಕಿಂತ ಮಿಗಿಲಾಗಿದ್ದರೆ ಅವರಿಬ್ಬರೂ ಒಂದೇ ಭಾಷೆಯ ಎರಡು ಉಪಭಾಷೆ ಗಳನ್ನು ಮಾತಾಡುತ್ತಿದ್ದಾರೆ ಎಂದು ಭಾವಿಸಬೇಕಾಗುತ್ತದೆ (ಈ ವಿವರಣೆಯನ್ನು ನಿರ್ಣಾಯಕ ಎಂದು ಭಾವಿಸಬಾರದು. ಏಕೆಂದರೆ ಒಂದು ಭಾಷೆಯ ಸಾಮಾನ್ಯ ಉಪಭಾಷೆಗೂ ಭೌತವಿಜ್ಞಾನದಂಥ ತಾಂತ್ರಿಕ ಉಪಭಾಷೆಗೂ ಪರಸ್ಪರ ಅರಿವಿನ ಶೇಕಡಾವಾರು ಸಂಖ್ಯೆ ಐದಕ್ಕಿಂತ ಹೆಚ್ಚಿರಲಾರದು). ಒಂದು ಉಪಭಾಷಾಪ್ರದೇಶದ ವ್ಯಕ್ತಿಭಾಷೆ, ಇನ್ನೊಂದು ಉಪಭಾಷಾಪ್ರದೇಶದ ವ್ಯಕ್ತಿಭಾಷೆಗಳಿಗಿಂತ ಹೆಚ್ಚು ಸದೃಶವಾಗಿರುತ್ತವೆ. ಒಂದು ಉಪಭಾಷೆಗೂ ಇನ್ನೊಂದು ಉಪಭಾಷೆಗೂ ಉಚ್ಚಾರಣೆ ಪದಗಳಲ್ಲಿ, ವ್ಯಾಕರಣದಲ್ಲಿ ಕೂಡ ವ್ಯತ್ಯಾಸಗಳಿರ ಬಹುದು ಹಾಗೂ ಭಾಷೆಯನ್ನು ವಿಶ್ಲೇಷಿಸಿ ನೋಡಿದಾಗ ಅದು ಅನೇಕ ಉಪಭಾಷೆಗಳ ಮೊತ್ತವೆಂದು ಗೊತ್ತಾಗುತ್ತದೆ. ಹಾಗೆಯೇ ಒಂದೊಂದು ಉಪಭಾಷೆಯ ಸದೃಶ ವ್ಯಕ್ತಿಭಾಷೆಗಳ ಮೊತ್ತವೆಂದೂ ತಿಳಿದುಬರುತ್ತದೆ.

ಆದರೆ ಭಾಷೆಯೆಂದರೆ ಕೆಲವರ ಪ್ರಕಾರ ಬರೆಹದ ಭಾಷೆ ಅಥವಾ ಶಿಷ್ಟಭಾಷೆ. ಈ ಪಂಗಡದವರು ಉಪಭಾಷೆಗಳನ್ನು ಬರಹದ ಭಾಷೆಯ ಅಥವಾ ಶಿಷ್ಟಭಾಷೆಯ ವಿಕೃತಿಗಳೆಂದು ಪರಿಗಣಿಸುತ್ತಾರೆ, ಬರಹದ ಭಾಷೆಯ ವಿಚಾರ ಇಲ್ಲಿ ಅಪ್ರಸ್ತುತ. ಆದರೆ ಯಾವುದನ್ನು ಶಿಷ್ಟಭಾಷೆಯೆಂದು ಕರೆಯುತ್ತೇವೆಯೋ ಅದು ಒಂದಾನೊಂದು ಕಾಲದಲ್ಲಿ ಇತರ ಉಪಭಾಷೆಗಳಂತೆಯೇ ಇದ್ದು, ವಿಶೇಷ ಕಾರಣಗಳಿಂದಾಗಿ ಉನ್ನತಸ್ಥಾನವನ್ನು ಪಡೆಯುತ್ತವೆ ಎಂಬ ವಿಷಯ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಪ್ರಾಚೀನ ಗ್ರೀಸ್‌ನಲ್ಲಿ ಇದ್ದ ನಾಲ್ಕು ಉಪಭಾಷೆಗಳಲ್ಲಿ ರಾಜಕೀಯ ಕಾರಣಗಳಿಂದಾಗಿ ಅಥೆನ್ಸಿನ ಭಾಷೆ ಪ್ರಬಲವಾಗಿ, ಶಿಷ್ಟಭಾಷೆಯೆನಿಸಿಕೊಂಡಿತು. ಈಗಿನ ಇಟಾಲಿಯನ್ ಭಾಷೆ ಹಿಂದೆ ರೋಮ್ ನಗರದ ಸುತ್ತ ಮುತ್ತ ಆಡುತ್ತಿದ್ದ ಲ್ಯಾಟಿನ್ನಿನ ಒಂದು ಉಪಭಾಷೆಯೇ ಆಗಿತ್ತು. ಇಂಗ್ಲೆಂಡಿನಲ್ಲಿ ಲಂಡನ್ ಮತ್ತು ಆಕ್ಸ್‌ಫರ್ಡ್ ಇಂಗ್ಲಿಷ್ ಭಾಷೆಯೇ ಶಿಷ್ಟಭಾಷೆಯೆನಿಸಿಕೊಂಡಿದೆ. ಹೀಗೆ

ರಾಜಕೀಯ ಅಥವಾ ಸಾಂಸ್ಕೃತಿಕ ಕಾರಣಗಳಿಂದಾಗಿ ಒಂದು ಪ್ರದೇಶದ ಭಾಷೆ ಮೇಲ್ಮೆಯನ್ನು ಪಡೆಯುತ್ತದೆ. ಇದರ ಫಲವಾಗಿ ಜನಪ್ರಿಯವಲ್ಲದ ಉಪಭಾಷೆಗಳು ನಾಶವಾದ ನಿದರ್ಶನಗಳೂ ಇವೆ.

ಈಗ ಕನ್ನಡ ನಾಡಿನಲ್ಲಿ ಶಿಷ್ಟಭಾಷೆ ಯಾವುದೇ ಆಗಿರಲಿ, ಪ್ರಾಚೀನ ಕರ್ನಾಟಕದಲ್ಲಿ ಈಗಿನ ಗದಗ್, ಕೊಪ್ಪಳ, ಲಕ್ಷ್ಮೇಶ್ವರ, ಐಹೊಳೆ, ಪಟ್ಟದಕಲ್ಲುಗಳ ಸುತ್ತಮುತ್ತಣ ಭಾಗದ ಕನ್ನಡಕ್ಕೆ ವಿಶೇಷ ಪ್ರಾಶಸ್ತ್ಯ ಸಂದಿತ್ತು. ಇದು ಕವಿರಾಜಮಾರ್ಗಕಾರ, ಪಂಪ, ರನ್ನರ ಮಾತುಗಳಿಂದ ಸ್ಪಷ್ಟವಾಗುತ್ತದೆ. ಹೀಗೆ ಆ ಪ್ರದೇಶದ ಕನ್ನಡ ಆ ಕಾಲದ ಶಿಷ್ಟಭಾಷೆಯಾಗಿ ಪರಿಣಮಿಸಲು ಮೇಲೆ ಹೇಳಿದಂತೆ ರಾಜಕೀಯ ಅಥವಾ ಸಾಂಸ್ಕೃತಿಕ ಕಾರಣಗಳಿರಬೇಕು. ಹಾಗೆಯೇ 9–10ನೆಯ ಶತಮಾನಗಳಲ್ಲಿ ಕನ್ನಡದಲ್ಲಿ ಉಪಭಾಷೆಗಳಿದ್ದಿರಬೇಕು ಎಂಬ ಊಹೆಗೆ ಕವಿರಾಜಮಾರ್ಗಕಾರ ಪುಷ್ಟಿ ನೀಡಿದ್ದಾನೆ. ಅವನು ಹೇಳುವ ದಕ್ಷಿಣ, ಉತ್ತರ, ಉತ್ತರೋತ್ತರ ಮಾರ್ಗಗಳು ಆ ಕಾಲದ ಮೂರು ಮುಖ್ಯ ಉಪಭಾಷೆಗಳೇ ಆಗಿವೆ. ಹಾಗೆಯೇ ಪಂಪನೂ ಜನಪದಪರ ನುಡಿಯ ತಂಪನ್ನು ವರ್ಣಿಸುವಲ್ಲಿ ಪಟ್ಟಣಿಗರ ಮತ್ತು ಹಳ್ಳಿಯವರ ನುಡಿಯ ತಂಪನ್ನು ವರ್ಣಿಸುವಲ್ಲಿ, ಪಟ್ಟಣಿಗರ ಮತ್ತು ಹಳ್ಳಿಯವರ ಉಪಭಾಷೆಗಳನ್ನು ಸೂಚಿಸುತ್ತಿದ್ದಾನೆ ಎಂದು ಹೇಳಬಹುದು. ಶಾಸನಗಳೂ ಹಿಂದಿನ ಕನ್ನಡ ಭಾಷೆಯ ಉಪಭಾಷೆಗಳ ಸ್ಥೂಲಚಿತ್ರವನ್ನು ಕಲ್ಪಿಸಿಕೊಳ್ಳಲು ಸಾಮಗ್ರಿಯನ್ನೊದಗಿಸುತ್ತವೆ.

ನಾವು ಹೊಸಗನ್ನಡದಲ್ಲಿ ನಾಲ್ಕು ಉಪಭಾಷೆಗಳಿವೆಯೆಂದು ಸ್ಥೂಲವಾಗಿ ಹೇಳುತ್ತೇವೆ (ಮೈಸೂರು, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗ). ಆದರೆ ಉಪಭಾಷೆಗಳ ಸಂಖ್ಯೆ ಇದಕ್ಕಿಂತ ಎಷ್ಟೋ ಹೆಚ್ಚಾಗಿರುವುದರಲ್ಲಿ ಸಂದೇಹವಿಲ್ಲ. ಇದು ಶಾಸ್ತ್ರೀಯ ಪರಿವೀಕ್ಷಣೆಯ ಅನಂತರವೇ ನಿರ್ಧಾರವಾಗಬೇಕಾದ ವಿಷಯ. ಒಂದು ಭಾಷೆಯ ಉಪಭಾಷೆಗಳನ್ನು ಶಾಸ್ತ್ರೀಯವಾಗಿ ಗುರುತಿಸಲು ಕ್ರಮಬದ್ಧ ಪರಿವೀಕ್ಷಣೆ ಅಗತ್ಯ. ಇಂಥ ಪರಿವೀಕ್ಷಣೆಗಳಲ್ಲಿ ನಾಲ್ಕನ್ನು ಮುಖ್ಯವಾಗಿ ಹೇಳಬಹುದು. ಒಂದು – ಜಾರ್ಜ್ ವೆಂಕರ್ ಕೈಗೊಂಡ (1876) ಜರ್ಮನಿಯ ಉಪಭಾಷಾ ಪರಿವೀಕ್ಷಣೆ, ಇಲ್ಲಿ ವೆಂಕರ್ ಪ್ರಶ್ನಾವಳಿಯನ್ನು ದೇಶದ ನಾನಾ ಭಾಗಗಳ ಉಪಾಧ್ಯಾಯರಿಗೆ ಕಳುಹಿಸಿ ಅವರವರ ಉಪಭಾಷೆಗಳಿಗೆ ಆ ಪ್ರಶ್ನಾವಳಿಯನ್ನು ಅನುವಾದಿಸುವಂತೆ ಕೇಳಿಕೊಂಡ. ಎರಡನೆಯದು –ಗಿಲಿಯೆರೊನ್ ಕೈಗೊಂಡ ಫ್ರಾನ್ಸಿನ ಉಪಭಾಷಾ ಪರಿವೀಕ್ಷಣೆ. ಈತ ಎಡ್ಮಂಡ್ ಎಂಬ ಪ್ರಚ್ಛಕನಿಂದ ಉಪಭಾಷಾ ವಿಶ್ಲೇಷಣೆಗೆ ಸಾಮಗ್ರಿಯನ್ನು ಸಂಗ್ರಹಿಸಿದ. ಮೂರನೆಯದು – ಜೇಬರ್ಗ್ ಮತ್ತು ಜೂಡ್ ವಿದ್ವಾಂಸರು ಕೈಗೊಂಡು ಇಟಲಿ ಮತ್ತು ದಕ್ಷಿಣ ಸ್ವಿಟ್ಜರ್ಲೆಂಡಿನ ಉಪಭಾಷಾ ಪರಿವೀಕ್ಷಣೆ. ನಾಲ್ಕನೆಯದು–ಅಮೆರಿಕ ಸಂಯುಕ್ತ ಸಂಸ್ಥಾನಗಳ ನ್ಯೂ ಇಂಗ್ಲೆಂಡ್ ಪ್ರದೇಶದಲ್ಲಿ ಕೈಗೊಂಡ ಉಪಭಾಷಾ ಪರಿವೀಕ್ಷಣೆ. ಇಲ್ಲಿ ಅನೇಕ ಭಾಷಾವಿಜ್ಞಾನಿಗಳು ಮೊದಲೇ ತರಬೇತಿ ಪಡೆದು, ಆ ಪ್ರದೇಶದ ಬೇರೆ ಬೇರೆ ಭಾಗಗಳಿಗೆ ಹೋಗಿ ವಿಷಯ ಸಂಗ್ರಹಿಸಿದರು. ಒಂದೊಂದು ಕೇಂದ್ರದಲ್ಲೂ ಮೂರು ಬಗೆಯ ಭಾಷಾ ಸಾಮಗ್ರಿಯನ್ನು ಸಂಗ್ರಹಿಸಲಾಯಿತು.

ಪರಿವೀಕ್ಷಣೆಯಲ್ಲಿ ಸಾಮಗ್ರಿ ಸಂಗ್ರಹ ಒಂದು ಘಟ್ಟ ಮಾತ್ರ. ಸಾಮಗ್ರಿ ಸಂಗ್ರಹದ ಬಳಿಕ, ಒಂದೊಂದು ಅಂಶಕ್ಕೂ (ಉಚ್ಚಾರಣೆ ಅಥವಾ ಪದ ಅಥವಾ ವಾಕ್ಯ ವೈಚಿತ್ರ್ಯ ಅಥವಾ ವ್ಯಾಕರಣಾಂಶ) ಅದರ ವ್ಯಾಪ್ತಿಯನ್ನು ತೋರಿಸುವ ಸೀಮಾ ರೇಖೆಯನ್ನು (ಐಸೊಗ್ಲಾಸ್) ಭೂಪಟದ ಮೇಲೆ ಎಳೆಯಬೇಕು. ಹೀಗೆ ಎಲ್ಲ ಅಂಶಗಳಿಗೂ ಪ್ರತ್ಯೇಕವಾಗಿ ಸೀಮಾರೇಖೆಗಳನ್ನೆಳೆದು, ಆ ಎಲ್ಲ ಸೀಮಾರೇಖೆಗಳನ್ನು ಒಂದು ಭೂಪಟಕ್ಕೆ ವರ್ಗಾಯಿಸಿದಾಗ, ಆ ರೇಖೆಗಳು ನಾನಾ ಮುಖವಾಗಿ ಹರಿದಿರುವುದು ಕಂಡುಬರುತ್ತದೆ. ಆದರೆ ಕೆಲವು ಸ್ಪಷ್ಟ ಸೀಮಾರೇಖೆಗಳು ಒಟ್ಟೊಟ್ಟಿಗೆ ಹರಿದು ಒಂದು ಭಾಗವನ್ನು ಇನ್ನೊಂದು ಭಾಗದಿಂದ ಪ್ರತ್ಯೇಕಿಸುವುದು ಕಂಡುಬರುತ್ತದೆ. ಇಂಥ ಸೀಮಾರೇಖೆಗಳ ಸಮೂಹದ ಸಹಾಯದಿಂದ ಉಪಭಾಷೆಗಳನ್ನು ಪ್ರತ್ಯೇಕಿಸಲು ಸಾಧ್ಯವಾಗುತ್ತದೆ. ಅಪ್ಪರ್ ಜರ್ಮನ್ ತಂಡ ಪ್ರತ್ಯೇಕಿಸಿರುವ ಉದಾಹರಣೆಯನ್ನು ಇಲ್ಲಿ ಸ್ಮರಿಸಬಹುದು.

ಸೀಮಾರೇಖೆಗಳ ಅಧ್ಯಯನ ಇನ್ನೂ ಹಲವು ರೀತಿಗಳಲ್ಲಿ ಉಪಯುಕ್ತವಾಗಿವೆ. ಒಂದು ಪ್ರದೇಶದಲ್ಲಿ ಅನೇಕ ಸೀಮಾರೇಖೆಗಳು ವರ್ತುಲಾಕಾರದಲ್ಲಿ ಸುತ್ತುವರಿದಿದ್ದರೆ, ಅಲ್ಲಿ ಇರುವ ಪ್ರಮುಖ ಕೇಂದ್ರವೊಂದರಲ್ಲಿ ಪದಗಳು ಮತ್ತು ಇತರ ಒಂದು ಪ್ರದೇಶವನ್ನು ಸುತ್ತಮುತ್ತಣ ಪ್ರದೇಶಗಳಿಂದ ಹಬ್ಬುತ್ತಿರುವ ಸೀಮಾರೇಖೆಗಳು ಆಕ್ರಮಿಸುತ್ತಿದ್ದರೆ, ಆ ಪ್ರದೇಶದ ಉಪಭಾಷೆ ಇತರ ಉಪಭಾಷೆಗಳ ಪ್ರಭಾವಕ್ಕೆ ಒಳಗಾಗಿ ದುರ್ಬಲವಾಗುತ್ತದೆ ಎಂದರ್ಥ. ಕೆಲವು ಬಾರಿ ಸೀಮಾರೇಖೆಗಳ ಒಂದು ಗೊಂಚಲು ಪ್ರಸಿದ್ಧ ವಾಹನಮಾರ್ಗಗಳನ್ನು ಅನುಸರಿಸಿರುವುದು ಕಂಡುಬಂದಿದೆ. ಭಾಷೆಯಲ್ಲಿ ಹೊಸ ಅಂಶಗಳು ವಾಹನಮಾರ್ಗಗಳಲ್ಲಿ ಪ್ರಯಾಣಮಾಡಿ, ಅವುಗಳ ಅಕ್ಕಪಕ್ಕದ ಪ್ರದೇಶಗಳಿಗೆ ನಿಧಾನವಾಗಿ ಹಬ್ಬುತ್ತವೆ. ಒಂದು ಭಾಷಾಂಶದ ಸೀಮಾರೇಖೆ ಇನ್ನೊಂದು ಭಾಷಾಂಶ ಪ್ರದೇಶದ ಒಳಕ್ಕೆ ಒತ್ತರಿಸಿ ನಡೆದಿದ್ದರೆ, ಸ್ಪರ್ಧೆಯಲ್ಲಿ ಎರಡನೆಯ ಭಾಷಾಂಶ ಸೋತು ಹಿಂಜರಿಯುತ್ತಿದೆಯೆಂಬುದು ಇದರಿಂದ ತಿಳಿದು ಬರುತ್ತದೆ.

ಇಲ್ಲಿಯವರೆಗೆ ಉಪಭಾಷೆಗಳನ್ನು ಭೂಮಿಯ ಮೇಲೆ ಸಮತಲ ರೀತಿಯಲ್ಲಿ ಹರಡಿಕೊಂಡಿರುವಂತೆ ವಿವರಿಸಿದ್ದಾಯಿತು. ಇವನ್ನು ಪ್ರಾದೇಶಿಕ ಅಥವಾ ಭೌಗೋಳಿಕ ಉಪಭಾಷೆಗಳೆಂದು ಕರೆಯಬಹುದು, ಉಪಭಾಷೆಗಳು ಹೀಗೆ ಸಮತಲ ರೀತಿಯಲ್ಲಿ ಅಲ್ಲದೆ, ಲಂಬರೀತಿಯಲ್ಲಿಯೂ ಹರಡಿರುವಂತೆ ಕಲ್ಪಿಸಿಕೊಳ್ಳಬಹುದು. ಇವನ್ನು ಸಾಮಾಜಿಕ ಉಪಭಾಷೆಗಳೆಂದು ಕರೆಯಬಹುದು. ಜನ ಒಂದೇ ಪ್ರದೇಶದಲ್ಲಿ ವಾಸಿಸುತ್ತಿದ್ದರೂ ಅವರು ಆರ್ಥಿಕ ಅಥವಾ ಧಾರ್ಮಿಕ ಅಥವಾ ಇತರ ಸಾಮಾಜಿಕ ಕಾರಣಗಳಿಂದ ಬೇರೆ ಬೇರೆ ಗುಂಪುಗಳಾಗಿ ಒಡೆದು ತಮ್ಮ ತಮ್ಮಲ್ಲೇ ಹೆಚ್ಚಾಗಿ ವ್ಯವಹರಿಸುವುದರಿಂದ ಆಯಾ ಗುಂಪಿನವರು ಇತರ ಗುಂಪಿನವರಿಗಿಂತ ಭಿನ್ನ ರೀತಿಯಲ್ಲಿ ಭಾಷೆಯನ್ನು ಬೆಳೆಸಿಕೊಳ್ಳುತ್ತಾರೆ. ಉದಾ: ಒಬ್ಬ ವ್ಯಕ್ತಿ ಮಾತನಾಡುವ ರೀತಿಯಿಂದಲೇ ಅವನನ್ನು ವಿದ್ಯಾವಂತ ಅಥವಾ ಅವಿದ್ಯಾವಂತನೆಂದು, ಪಟ್ಟಣಿಗ ಅಥವಾ ಹಳ್ಳಿಗನೆಂದು ಇತರರು ಗುರುತಿಸಿಬಿಡುತ್ತಾರೆ. ಸಾಮಾಜಿಕ ಉಪಭಾಷೆಗಳಿಗೆ ಸ್ಪಷ್ಟ ನಿದರ್ಶನಗಳು ಈ ವಿದ್ಯಾವಂತರ ಭಾಷೆಗಳು ಬಹುಮಟ್ಟಿಗೆ ಒಂದೇ ಆಗಿರುತ್ತವೆ. ಅವರಾಡುವ ಭಾಷೆ ಶಿಷ್ಟಭಾಷೆಯಾಗಿರುತ್ತದೆ ಅಥವಾ ಶಿಷ್ಟಭಾಷೆಗೆ ಸಮೀಪದ್ದಾಗಿರುತ್ತದೆ (ಉಳಿದವರನ್ನು ಶಿಷ್ಟೇತರ ಭಾಷೆಯೆಂದು ಕರೆಯಬಹುದು). ಹೀಗೆ ಭಾಷೆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳನ್ನು ನಿರ್ದೇಶಿಸುವ ಗುರುತಾಗಿ ಪರಿಣಮಿಸುತ್ತದೆ. ಸಾಮಾನ್ಯವಾಗಿ–ಭಾಷೆ ಆ ಭಾಷಾಪ್ರದೇಶದ ರಾಜಧಾನಿಯ ಅಥವಾ ಸಾಂಸ್ಕೃತಿಕ ಕೇಂದ್ರದ ವಿದ್ಯಾವಂತರು ಆಡುವ ಮಾತಾಗಿರುತ್ತದೆ. ಉದಾಹರಣೆ; ಕಲ್ಕತ್ತೆಯ ಬಂಗಾಳಿ, ಇರಾನಿನ ಪರ್ಷಿಯನ್, ಕೈರೋದ ಈಜಿಪ್ಷಿಯನ್, ಪ್ಯಾರಿಸ್ಸಿನ ಫ್ರೆಂಚ್, ಲಂಡನ್ನಿನ ಇಂಗ್ಲಿಷ್ ಇತ್ಯಾದಿ.

ದೇಶದ ಬೇರೆ ಬೇರೆ ಭಾಗಗಳ ಶಿಷ್ಟಭಾಷೆ ಆಯಾ ಪ್ರಾದೇಶಿಕ ಉಪಭಾಷೆಗಳ ಬಣ್ಣವನ್ನು ಪಡೆದಿದ್ದರೂ ಪರಸ್ಪರ ವ್ಯವಹಾರಕ್ಕೆ ಅದು ಯಾವ ರೀತಿಯಿಂದಲೂ ಅಡ್ಡಿಯಾಗಿರುವುದಿಲ್ಲ, ಬೇರೆ ಬೇರೆ ಭಾಗಗಳ ಶಿಷ್ಟಭಾಷೆ ಆ ನಾಡಿನ ಸಾಂಸ್ಕೃತಿಕ ಅಥವಾ ರಾಜಕೀಯ ಕೇಂದ್ರದ ಶಿಷ್ಟಭಾಷೆಯ ಆಧಾರದ ಮೇಲೆ ರೂಪಿತವಾಗಿರುತ್ತದೆ. ಶಿಷ್ಟಭಾಷೆಯ ಪ್ರಭಾವ ಶಿಷ್ಟೇತರ ಭಾಷೆಯ ಮೇಲೆ ನಿರಂತರ ಆಗುತ್ತಲೇ ಇರುತ್ತದೆ. ಈ ಪ್ರಭಾವ ಬಹುಮಟ್ಟಿಗೆ ಏಕಮುಖವಾದುದು.

ಸಾಮಾಜಿಕ ಉಪಭಾಷೆಗಳಲ್ಲಿ, ಅದರಲ್ಲೂ ಭಾರತ ದೇಶದಲ್ಲಿ, ಜಾತ್ಯಾತ್ಮಕ ಉಪಭಾಷೆಗಳನ್ನು ಗುರುತಿಸಬಹುದು. ಒಂದೊಂದು ಜಾತಿಯವರೂ ತಮ್ಮ ವೃತ್ತಿಗಳಿಗೆ ಸಂಬಂಧಿಸಿದಂತೆ ಅನೇಕ ವಿಶಿಷ್ಟ ಪದಗಳನ್ನು ಬೆಳೆಸಿಕೊಂಡಿರುತ್ತಾರೆ. ಉದಾಹರಣೆ; ಒಂದು ಊರಿನ ಕುಂಬಾರರು ಮತ್ತು ನೇಯ್ಗೆಯವರು ಆಡುವ ಉಪಭಾಷೆಗಳಲ್ಲಿ ಕೋಶಕ್ಕೆ ಸಂಬಂಧಿಸಿದ ಅನೇಕ ವ್ಯತ್ಯಾಸಗಳಿರುತ್ತವೆ. ತಾಂತ್ರಿಕ ಉಪಭಾಷೆಗಳೂ ಇದೇ ಬಗೆಯವು. ವಕೀಲರು ಅಥವಾ ರಸಾಯನಶಾಸ್ತ್ರಜ್ಞರು ತಮ್ಮ ಪಾರಿಭಾಷಿಕ ಪದಗಳನ್ನು ಬಳಸಿ ಮಾತನಾಡಲಾರಂಭಿಸಿದರೆ ಅಲ್ಲಿಯ ಸರ್ವನಾಮ, ಗುಣವಾಚಕ, ಕ್ರಿಯಾಪದ ಇತ್ಯಾದಿಗಳನ್ನು ಬಿಟ್ಟರೆ ಉಳಿದದ್ದು ಇತರರಿಗೆ ಏನೂ ಅರ್ಥವಾಗದಿರಬಹುದು.

ಗಂಡಸರ ಮತ್ತು ಹೆಂಗಸರ ಉಪಭಾಷೆಗಳಿಗೆ ಕೆಲವಡೆ ಸ್ಪಷ್ಟ ವ್ಯತ್ಯಾಸಗಳಿರಬಹುದು. ಉದಾ: ಅಮೆರಿಕ ಸಂಯುಕ್ತ ಸಂಸ್ಥಾನ ಕ್ಯಾಲಿಫೋರ್ನಿಯ ಪ್ರಾಂತ್ಯದ ಉತ್ತರ ಭಾಗದಲ್ಲಿ ಆಡುವ 'ಯನ' ಭಾಷೆ. ಇಲ್ಲಿ ಪುರುಷಭಾಷೆ ಮತ್ತು ಸ್ತ್ರೀಭಾಷೆಗಳೆಂದು ಸ್ಪಷ್ಟಭೇದಗಳಿವೆ. ಪುರುಷಭಾಷೆಯನ್ನು ಗಂಡಸರು ತಮ್ಮ ತಮ್ಮಲ್ಲಿ ಅಥವಾ ಇತರ ಹೆಂಗಸರೊಡನೆ ಬಳಸುತ್ತಾರೆ. ಹೆಂಗಸರು ಗಂಡಸರೊಡನೆ ಮಾತನಾಡುವಾಗ ಇದೇ ಭಾಷೆಯನ್ನೇ ಬಳಸುತ್ತಾರೆ.

ಶಿಷ್ಟಭಾಷೆ ಮತ್ತು ಇತರ ಉಪಭಾಷೆಗಳಲ್ಲದೆ, ಭಾಷೆಯಲ್ಲಿ ಇನ್ನೊಂದು ಸನ್ನಿವೇಶವೂ ಇರುತ್ತದೆ. ಇದನ್ನು ಫರ್ಗೂಸನ್ ಡೈಗ್ಲೊಸಿಯ ಎಂದು ಕರೆದು ಅದನ್ನು ಅರಬ್ಬೀ, ಸ್ವಿಸ್, ಜರ್ಮನ್, ಹೈಟಿಯನ್, ಕ್ರಯೋಲ್ ಮತ್ತು ಗ್ರೀಕ್ ಭಾಷೆಗಳನ್ನು ಮುಖ್ಯ ನಿದರ್ಶನಗಳಾಗಿಟ್ಟುಕೊಂಡು ವಿವರಿಸಿದ್ದಾನೆ. ಇಲ್ಲಿ ಸೇವಕರಿಗೆ ಸೂಚನೆ ಕೊಡುವಾಗ, ಸ್ನೇಹಿತರೊಡನೆ ಇತರ ಬಂಧುಗಳೊಡನೆ ಮಾತನಾಡುವಾಗ, ಮನೆಯಲ್ಲಿ ಮಾತನಾಡುವಾಗ, ಬಳಸುವ ಭಾಷಾ ಪ್ರಭೇದ ಬೇರೆ, ಆದರೆ ಚರ್ಚು, ಮಸೀದಿಗಳಲ್ಲಿ ಧಾರ್ಮಿಕ ಪ್ರವಚನ ಮಾಡುವಾಗ ಪತ್ರ ವ್ಯವಹಾರಗಳಲ್ಲಿ, ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುವಾಗ, ಆಕಾಶವಾಣಿಯಲ್ಲಿ ವಾರ್ತೆಯನ್ನು ಪ್ರಸಾರ ಮಾಡುವಾಗ, ವಿಶ್ವವಿದ್ಯಾನಿಲಯಗಳ ಪಾಠ–ಪ್ರವಚನ ಸಂದರ್ಭಗಳಲ್ಲಿ ಬಳಸುವ ಭಾಷಾ ಪ್ರಭೇದ ಬೇರೆ. ಇದೇ ಡೈಗ್ಲೊಸಿಯ ಜನ ಸಾಮಾನ್ಯವಾಗಿ ಮೊದಲ L (low), H(High) ಎಂದು ಕರೆಯೋಣ. L ಮತ್ತು H ಗಳ ಬಳಕೆ ಮತ್ತು ಕಾರ್ಯಗಳು ನಿರ್ದಿಷ್ಟ ಒಂದನ್ನು ಇನ್ನೊಂದರ ಸನ್ನಿವೇಶದಲ್ಲಿ ಬಳಸಿದರೆ ತೀರಾ ಆಭಾಸವಾಗಿ ಬಿಡುತ್ತದೆ. ಒಬ್ಬ ವ್ಯಕ್ತಿ ಎರಡನ್ನೂ ಪ್ರತ್ಯೇಕವಾಗಿ ಬಳಸುತ್ತ ಹೋಗುತ್ತಾನೆ. L ಸಹಜವಾಗಿ ಕಲಿತದ್ದು, H ಮುಂದೆ ಪ್ರಯತ್ನಪೂರ್ವಕವಾಗಿ ವಿದ್ಯಾಭ್ಯಾಸದ ಮೂಲಕ ರೂಢಿಸಿಕೊಂಡದ್ದು. ಜನ ಒಂದು ಸಾಂಪ್ರದಾಯಿಕ ಭಾಷಣವನ್ನು H ನಲ್ಲಿ ಮಾಡಿ ಅದನ್ನು L ನಲ್ಲಿ ಚರ್ಚಿಸಬಹುದು, ವ್ಯಾಕರಣದ ದೃಷ್ಟಿಯಿಂದ ಹೇಳುವುದಾದರೆ H ಗಿಂತ L ಸರಳವಾದುದು. ಎರಡಕ್ಕೂ ಪದಕೋಶದಲ್ಲಿ ಬಹು ಪ್ರಮಾಣದಲ್ಲಿ ಸಮಾನತೆ ಇದ್ದರೂ H ನಲ್ಲಿ ಪ್ರೌಢೋಕ್ತಿಗಳು ಹಾಗೂ ಪಾರಿಭಾಷಿಕ ಪದಗಳು ಹೆಚ್ಚು, L ನಲ್ಲಿ ಜನಪ್ರಿಯೋಕ್ತಿಗಳು ಹೆಚ್ಚು, ಕೆಲವು ಸಾರಿ ಒಂದೇ ಅರ್ಥದ ಎರಡು ಪದಗಳಿದ್ದು, ಒಂದರ ಬಳಕೆಯಿಂದ ಆ ಮಾತು H ಅಥವಾ L ಆಗಿದೆಯೋ ನಿರ್ಧರಿಸಿ ಬಿಡಬಹುದು. ಅರಬ್ಬೀ ಭಾಷೆಯಲ್ಲಿ ನೋಡು ಎಂಬರ್ಥ

|– v- |–

ದಲ್ಲಿ H ಪದ raa; L ಪದ saf, raa ಎಂಬುದನ್ನು ಸಾಮಾನ್ಯ ಸಂಭಾಷಣೆ

v-

ಯಲ್ಲಿ ಬಳಸುವುದೇ ಇಲ್ಲ, saf ಎಂಬುದನ್ನು ಬರೆವಣಿಗೆಯಲ್ಲಿ ಬಳಸುವುದೇ ಇಲ್ಲ. ಗ್ರೀಕ್‍ನಲ್ಲಿ ಮದ್ಯ ಎಂಬರ್ಥದಲ್ಲಿ H ಪದ inos; L ಪದ Krasi, ಅಚ್ಚಾಗಿರುವ ತಿಂಡಿ ಪಟ್ಟಿಯಲ್ಲಿ inos ಇದ್ದರೂ ಅದನ್ನು ಓದಿಕೊಂಡ ವ್ಯಕ್ತಿ ಮಾಣಿಗೆ Krasi ತರಲು ಹೇಳುತ್ತಾನೆ.

ಶಿಷ್ಟ-ಶಿಷ್ಟೇತರ ಭಾಷಾ ಸನ್ನಿವೇಶಕ್ಕೂ ಡೈಗ್ಲೊಸಿಯ ಸನ್ನಿವೇಶಕ್ಕೂ ಮೇಲ್ನೋಟಕ್ಕೆ ಸಾಮ್ಯ ಕಂಡರೂ ಮೂಲತಃ ಅವೆರಡೂ ಬೇರೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ H ಪ್ರಭೇದವನ್ನು ಯಾರೂ ಸಾಮಾನ್ಯ ಸಂಭಾಷಣೆಗಳಲ್ಲಿ ಬಳಸುವುದೇ ಇಲ್ಲ. ಅಕಸ್ಮಾತ್ ಬಳಸಿದರೆ ಅದು ಕೃತಕವೆಂದೂ ಪಾಂಡಿತ್ಯ ಪ್ರದರ್ಶನವೆಂದೂ ಜನ ಭಾವಿಸುತ್ತಾರೆ. ಡೈಗ್ಲೊಸಿಯ ಬಹುಮಟ್ಟಿಗೆ ಎಲ್ಲ ಭಾಷೆಗಳಲ್ಲೂ ಕಂಡುಬರುವ ಸಂಗತಿಯಾಗಿದೆ. ಬರೆಹವಿಲ್ಲದಿರುವ ಸಮಾಜದಲ್ಲಿ ಜಾನಪದ ಸಾಹಿತ್ಯದ ಭಾಷೆ ಉಳಿದ ಭಾಷೆಗಳ ಗ್ರಂಥಸ್ಥ ಭಾಷೆಯ ಸ್ಥಾನದಲ್ಲಿ ನಿಲ್ಲಬಹುದು. (ಎಂ.ಸಿ.)

**ಉಪಯುಕ್ತತಾವಾದ:** ಯಾವ ಕಾರ್ಯದಿಂದ ಗರಿಷ್ಠ ಸಂಖ್ಯೆಯ ಜನಕ್ಕೆ ಗರಿಷ್ಠ ಕ್ಷೇಮ ಲಭಿಸುವುದೋ ಅಂಥ ಕಾರ್ಯವೇ ಸೂಕ್ತ ಕಾರ್ಯ ಎಂಬ ನೀತಿಸೂತ್ರ (ಯುಟಿಲಿಟೇರಿಯನಿಸಂ). ಪ್ರಯೋಜಕತೆಯೇ ಧರ್ಮಕ್ಕೆ ನಿರ್ಣಾಯಕ—ಎಂಬ ಈ ವಾದ ಪಾಶ್ಚಾತ್ಯ ರಾಜಕೀಯ ನೈತಿಕ ಇತಿಹಾಸದಲ್ಲಿ ಕಾಲದಿಂದ ಕಾಲಕ್ಕೆ ಬಗೆಬಗೆಯ ಬಣ್ಣ ತಳೆದಿದೆ. ಯಾವುದು ಐಹಿಕ ಗುರಿ ಸಾಧಕವೋ ಅದು ಉಪಯುಕ್ತ. ಬೇಕೆನಿಸುವ ಎಲ್ಲ ವಸ್ತುವೂ, ಬಾಳಬಹುದಾದ ಎಲ್ಲ ಜೀವನವೂ ಇಲ್ಲಿ ಉದ್ಭವಿಸುವುದಿಲ್ಲ. ಆದ್ದರಿಂದ ಈ ವಾದ ಅಷ್ಟೇನೂ ಸ್ತುತ್ಯಾರ್ಹವಲ್ಲ. ಇದೊಂದು ನೀತಿಸೂತ್ರವಾಗಲಿ ಧರ್ಮದೃಷ್ಟಿಯಾಗಲಿ ಆಗಲಾರದು—ಎಂದು ಈ ಬಗ್ಗೆ ವಾದಿಸುವವರೂ ಉಂಟು.

ಉಪಯುಕ್ತತಾವಾದವನ್ನು ಮೊಟ್ಟಮೊದಲಿಗೆ ಮಂಡಿಸಿದ ರಿಚರ್ಡ್ ಕಂಬರ್‍ಲ್ಯಾಂಡ್ (1670). ಪರಮಸುಖ ಸಾಧನೆಯೇ ಮೂಲಭೂತ ನೀತಿಸೂತ್ರವೆಂದು ಆತ ಪ್ರತಿಪಾದಿಸಿದ. ಈ ಸೂತ್ರ ದೈವದತ್ತ: ಇದು ದೇವರ ಮೂಲ ನಿಯಮ.

ಮುಂದೆ ಜೆರೆಮಿ ಬೆಂಥಾಮ್ ಎಂಬ ಆಂಗ್ಲ ದಾರ್ಶನಿಕ ಈ ಬಗ್ಗೆ ಹೆಚ್ಚು ವಿಚಾರ ಮಾಡಿದ. ಈ ವಾದಕ್ಕೆ ಕೀರ್ತಿಯೂ ಪ್ರಭಾವವೂ ದೊರಕಿದ್ದು ಆತನಿಂದಲೇ. ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವನದಲ್ಲಿ ಸುಖವನ್ನು ಬಯಸಿ ದುಃಖವನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಮನುಷ್ಯನ ಜೀವನದಲ್ಲಿ ಇತರ ಬೇರೆ ಬೇರೆ ಪ್ರವರ್ತಕೋದ್ದೇಶಗಳು ತಮ್ಮವೇ ಆದ ಪಾತ್ರವಹಿಸುತ್ತವೆ ಎಂಬುದು ನಿಜ. ಆದರೆ ನಮ್ಮ ಜೀವನದ ಮುಖ್ಯವಾದ ಪ್ರವರ್ತಕಗಳು ಸುಖ ಮತ್ತು ದುಃಖ, ಪ್ರತಿಯೊಬ್ಬ ಮನುಷ್ಯನನ್ನೂ ಪ್ರಕೃತಿ ಎರಡು ಪ್ರಮುಖ ವಿಷಯಗಳ ಅಧೀನಕ್ಕೆ ಒಳಪಡಿಸಿವೆ. ಅವು ಸುಖ ಮತ್ತು ದುಃಖ. ನಾವು ಏನು ಮಾಡುತ್ತಿದ್ದೇವೆ ಮತ್ತು ಏನು ಮಾಡಬೇಕು ಎಂಬುದನ್ನು ನಿರ್ಧರಿಸುವುದು ಅವುಗಳಿಗೆ ಸೇರಿದ್ದು, ನಮ್ಮೆಲ್ಲ ಭಾವನೆಗಳೂ ಅದಕ್ಕೆ ಬದ್ಧವಾಗಿರುತ್ತವೆ; ನಮ್ಮೆಲ್ಲ ತೀರ್ಮಾನಗಳೂ ಮತ್ತು ನಮ್ಮ ಜೀವಿತದ ನಿರ್ಧಾರಗಳೆಲ್ಲವೂ ಅವಕ್ಕೆ ಅಂತಿಮವಾಗಿ ಒಪ್ಪಿಸಲ್ಪಡುತ್ತವೆ ಎಂದು ಬೆಂಥಾಮ್ ಬರೆದಿದ್ದಾನೆ. ಯಾವುದು ಒಳ್ಳೆಯ ಸೂತ್ರ, ಯಾವುದು ಕೆಟ್ಟದ್ದು ಎಂಬ ವಿಮರ್ಶೆಗೆ ಉಪಯುಕ್ತತೆಯೇ ಆಧಾರ—ಎಂದು ವಾದಿಸಿದ. ಆದರೆ ಆತ ಇದನ್ನು ಸಿದ್ಧಾಂತದ ಸೀಮೆಗೆ ಕೊಂಡೊಯ್ಯಲಿಲ್ಲ. ಇದು ವಾಸ್ತವಿಕ ಹಾಗೂ ರಾಜಕೀಯ ಕ್ಷೇತ್ರಗಳಿಗಷ್ಟೇ ಮೀಸಲಾಗಿತ್ತು. ಅವನ ದೃಷ್ಟಿಯಲ್ಲಿ ಇದೊಂದು ನೀತಿಸೂತ್ರ. ಮನುಷ್ಯನ ಎಲ್ಲಕಾರ್ಯಗಳ ಅಂತಿಮಗುರಿಯೇ ಸುಖ; ಅರ್ಥಾತ್ ದುಃಖ ನಿವಾರಣೆ, ಸಂತೋಷಪ್ರಾಪ್ತ. ಆದರೆ ಪ್ರತಿಯೊಬ್ಬನೂ ತನ್ನ ಸುಖವನ್ನೇ ಪ್ರಧಾನವಾಗಿ ಪರಿಗಣಿಸಿದರೆ ಸಮಷ್ಟಿಯ ಸುಖ ಸಾಧಿಸುವುದು ಹೇಗೆಂಬ ಪ್ರಶ್ನೆ ಉದ್ಭವಿಸಬಹುದು. ಇತರರ ಸಂತೋಷ ದುಃಖಗಳನ್ನು ಕಡೆಗಣಿಸಿದ ವ್ಯಕ್ತಿ ಬಂಧನಕ್ಕೊಳಗಾಗಬಹುದು. ಇದು ರಾಜಕೀಯ ಕಟ್ಟಳೆ, ಅಥವಾ ಆತ ಬಹಿಷ್ಕಾರವನ್ನೆದುರಿಸಬೇಕಾಗಬಹುದು. ಇದು ನೈತಿಕ ಅಥವಾ ಸಾಮಾಜಿಕ ಕಟ್ಟಳೆ, ಅಥವಾ ಈ ಜನ್ಮ ಮುಗಿದ ಮೇಲೆ ಆತ ಶಿಕ್ಷೆಗೆ ಒಳಗಾಗಬಹುದು. ಇದು ಮತೀಯ ಕಟ್ಟಳೆ. ಆದ್ದರಿಂದ ಸ್ವಂತ ಸುಖದೃಷ್ಟಿಗೂ ಸಮಾಜ ಹಿತದ ಗುರಿಗೂ ವಿರೋಧಾಭಾಸವೇನೂ ಇಲ್ಲ. ಒಂದು ಉದ್ದೇಶ ಒಳ್ಳೆಯದು ಎಂದು ಹೇಳಿದರೆ ಅದರ ಫಲಿತಾಂಶ ಒಳ್ಳೆಯದೆಂದು ಅರ್ಥ, ಇದೊಂದು ಸಾಧನ, ಇದೇ ಸಾಧನೀಯವಲ್ಲ. ಹೀಗೆಂದು ಬೆಂಥಾಮ್ ಹೇಳಿದ್ದಾನೆ. (ಜೆ.ಎಸ್.ಜಿ.)

ಆದರೂ ಬೆಂಥಾಮ್ ಈ ತರ್ಕದ ಕೊನೆ ಮುಟ್ಟಲಿಲ್ಲ. ಆತನ ಅನಂತರ ಬಂದವರನೇಕರು ಬೆಂಥಾಮ್ ಬರೆದದ್ದನ್ನು ಸಂಪೂರ್ಣ ಮರೆತರು. ಮುಂದೆ ಇದಕ್ಕೆ ಸಿದ್ಧಾಂತದ ಒಪ್ಪ ನೀಡಿದ ಜೆ.ಎಸ್.ಮಿಲ್ ಕೂಡ ಗಿಲ್ಟನ ಕಾದಂಬರಿಯೊಂದರಿಂದ (ಅನಾಲ್ಸ್ ಆಫ್ ದಿ ಪ್ಯಾರಿಷ್) ಈ ಪದವನ್ನು ಪಡೆದುದಾಗಿ ಹೇಳಿದ್ದಾನೆ. ಅಂತೂ ಈ ಸೂತ್ರಕ್ಕೆ ಅಭಿಜಾತ ಸಿದ್ಧಾಂತದ ಸ್ಥಾನ ದೊರಕಿಸಿಕೊಟ್ಟವನು ಜೆ. ಎಸ್. ಮಿಲ್. ಸುಖಾನ್ವೇಷಣೆ. ದುಃಖಾಭಾವ ಎಂಬ ಸೂತ್ರ ಹೊಂದಿರುವ ಹೀಡನಿಸಂ ಅಥವಾ ಸೌಖ್ಯ ಪುರುಷಾರ್ಥವಾದಕ್ಕಿಂತ ಉಪಯುಕ್ತತಾವಾದಕ್ಕೆ ಹೆಚ್ಚಿನ ವ್ಯಾಪ್ತಿಯನ್ನು ಮಿಲ್ ದೊರಕಿಸಿಕೊಟ್ಟ. ಕೆಲವು ಸುಖಗಳು ಇತರ ಕೆಲವಕ್ಕಿಂತ ಉತ್ತಮ; ಹೆಚ್ಚು ಉದಾತ್ತ ಸುಖಪ್ರಾಪ್ತಿಯೇ ಅಲ್ಲದ ಕೆಲವು ಗುರಿಗಳೂ ಉಂಟು. ಶ್ರೇಷ್ಠಗುಣ, ಜ್ಞಾನಸಂಪಾದನೆ ಇವು ಎಂಥ ಗುರಿಗಳು. ಇವುಗಳನ್ನು ಇವಕ್ಕಾಗಿಯೇ ಸಾಧಿಸಬೇಕು ಎಂದು ಆತ ವಾದಿಸಿದ.

ಒಳಿತು-ಕೆಡಕುಗಳ ಭಾವನಾತ್ಮಕ ವಿವೇಚನೆ ನಡೆಸಿದ್ದ ಬೆಂಥಾಮ್, ಮಿಲ್‍ಗಳ ವಾದವನ್ನು ಸಂಪೂರ್ಣ ತಳ್ಳಿ ಹಾಕಿ ಅದಕ್ಕೆ ಬೇರೆ ರೂಪು ಕೊಟ್ಟವನು ಹೆನ್ರಿ ಸಿಜ್‍ವಿಕ್ (1874), ಗರಿಷ್ಠ ಕ್ಷೇಮಸೂತ್ರ ರಚಯಕನೀತನೇ. ಇದೊಂದೇ ಈತನ ದೃಷ್ಟಿಯಲ್ಲಿ ಮೂಲಭೂತ ನೀತಿಸೂತ್ರ .ಸುಖಪ್ರಾಪ್ತಿಯೊಂದೇ ಸಾಧನೀಯವೆಂಬ ಸೂತ್ರವನ್ನು ಜಿ.ಇ. ಮೂರನೂ (1903) ತಳ್ಳಿ ಹಾಕಿದ. ಜ್ಞಾನ, ರಸಾಭಿಜ್ಞತೆ, ಪ್ರೀತಿ, ಸ್ನೇಹ—ಇವೆಲ್ಲವೂ ಪರಮ ಪುರುಷಾರ್ಥಗಳೇ ಎಂದು ಈತ ಬರೆದ. ಗರಿಷ್ಠ ಸಂಖ್ಯೆಯ ಗರಿಷ್ಠ ಕ್ಷೇಮ—ಎಂಬ ಸೂತ್ರವನ್ನೂ ಈತ ಮುಂದೆ (1912) ಸಮರ್ಥಿಸಿದ. ಆದ್ದರಿಂದ ಈತನ ಉಪಯುಕ್ತತಾವಾದವನ್ನು ಆದರ್ಶ ಉಪಯುಕ್ತತಾವಾದವೆಂದು ಕರೆಯಲಾಗಿದೆ. ಸೌಖ್ಯ ಪುರುಷಾರ್ಥೀ ಉಪಯುಕ್ತತಾವಾದಕ್ಕಿಂತ ಇದು ಭಿನ್ನ, ಒಂದು ಕೆಲಸ ಒಳ್ಳೆಯದೇ, ಕೆಟ್ಟದ್ದೇ ಎಂಬುದನ್ನು ಪರಿಗಣಿಸಬೇಕು-ಎಂದು ಈತ ವಾದಿಸಿದ್ದಾನೆ. ಆದ್ದರಿಂದ ಈತನ ದೃಷ್ಟಿಯಲ್ಲಿ ಉದ್ದೇಶಗಳು ಕೇವಲ ಗುರಿಸಾಧಕಗಳಲ್ಲ. ಹೀಗೆ ಉಪಯುಕ್ತತಾವಾದದ ಹಲವಾರು ಲೇಖಕರು ಎರಡು ವಿರುದ್ಧ ನಿಲವುಗಳ ನಡುವೆ ಸಾಮರಸ್ಯ ತರಲು ಯತ್ನಿಸಿರುವುದು ಕಂಡುಬರುತ್ತದೆ. ಸ್ವಂತ ಸುಖವೇ ಅನ್ವೇಷಣಾರ್ಹವೆಂಬುದು ಒಂದು ನಿಲವು. ಮಾನವಹಿತವೇ ಅಂತಿಮ ಲಕ್ಷ್ಯವೆನ್ನುವುದಾದರೆ ಸ್ವಂತಸುಖವೇ ಏಕೈಕ ಲಕ್ಷ್ಯವೆಂಬುದು ಸರಿಯಲ್ಲ-ಎಂಬುದು ಇನ್ನೊಂದು ನಿಲವು. ಈ ವಿರುದ್ಧ ನಿಲವುಗಳ ಸಾಮರಸ್ಯ ಯತ್ನದಿಂದಾಗಿಯೇ ಈ ವಾದ ಅನೇಕರ ಆಸಕ್ತಿ ಕೆರಳಿಸಿದೆ.

ಒಟ್ಟಿನಲ್ಲಿ ಹೆಚ್ಚು ಜನರಿಗೆ ಹೆಚ್ಚು ಸುಖವನ್ನೊದಗಿಸುವುದೇ ಉಪಯುಕ್ತತಾವಾದದ ಒರೆಗಲ್ಲು. ಮನುಷ್ಯನ ಜೀವನದಲ್ಲಿ ಅಂತಿಮವಾದ ಗುರಿಯೇ ಸುಖ. ಆದ್ದರಿಂದ ಎಲ್ಲ ಪ್ರಜೆಗಳಿಗೂ ನಾನಾ ವಿಧಗಳಲ್ಲಿ ಹೆಚ್ಚು ಸುಖ ಸಂವರ್ಧನೆಗೆ ಅವಕಾಶ ಕೊಟ್ಟು, ಆದಷ್ಟೂ ದುಃಖದ ಉಗಮವನ್ನು ತಪ್ಪಿಸುವಂತೆ ದೇಶ ಮತ್ತು ಸರ್ಕಾರ ತನ್ನ ಕೆಲಸಕಾರ್ಯಗಳನ್ನು ನಿಭಾಯಿಸಬೇಕು. ಪ್ರಜೆಗಳ ಕಷ್ಟಕಾರ್ಪಣ್ಯ ಕಡಿಮೆಮಾಡಿ ಅವರ ಸುಖಸಂತೋಷ ಹೆಚ್ಚಿಸುವುದೇ ದೇಶದ ಶಾಸಕರ ಹಾಗೂ ರಾಜಕಾರಣಿಗಳ ಆದ್ಯ ಕರ್ತವ್ಯ. ಪ್ರಜೆಗಳ ಸುಖಸಂತೋಷವನ್ನು ಹೆಚ್ಚಿಸಿ, ತನ್ಮೂಲಕ ಅವರ ನೈತಿಕ ಬೆಳವಣಿಗೆಯನ್ನು ರೂಪಿಸುವುದು ಸರ್ಕಾರದ ಕರ್ತವ್ಯ. ದೇಶದ ಯಾವ ಕಾಯಿದೆಯೇ ಆಗಲಿ ಅದರ ಮಹತ್ತ್ವ ಮತ್ತು ಉಪಯುಕ್ತತೆಯು ಅದು ನೀಡುವ ಒಳ್ಳೆಯ ಫಲಿತಾಂಶವನ್ನೇ ಅವಲಂಬಿಸುತ್ತದೆ. ಒಟ್ಟಿನಲ್ಲಿ ಪ್ರಜೆಗಳ ಸುಖ, ಸಂತೋಷ, ಕಲ್ಯಾಣ-ಇವೇ ದೇಶದ ಎಲ್ಲ ಕಾಯಿದೆಗಳ ಪರಮ ಗುರಿಯಾಗಿರಬೇಕು. ಅಂದರೆ ಪ್ರಜೆಗಳ ಏಳಿಗೆ ಮತ್ತು ಅಭಿವೃದ್ಧಿಯ ಹಾದಿಯಲ್ಲಿ ಬರಬಹುದಾದ ಅಡ್ಡ ಆತಂಕಗಳನ್ನೆಲ್ಲ ನಿವಾರಿಸಲು ಸಾಧ್ಯವಾದ ಕಾರ್ಯಗಳೆಲ್ಲವನ್ನೂ ದೇಶ, ಸರ್ಕಾರ, ರಾಜಕಾರಣಿಗಳು ಮತ್ತು ಶಾಸಕರು ಕೈಗೊಳ್ಳಬೇಕು.

ಈ ರೀತಿಯಾಗಿ ಉಪಯುಕ್ತತಾವಾದಿಗಳು ವ್ಯಕ್ತಿಯ ಸುಖ ಸಂತೋಷ ಸ್ವಾತಂತ್ರ್ಯಗಳಿಗೆ ಹೆಚ್ಚು ಪ್ರಾಮುಖ್ಯ ಕೊಟ್ಟರು; ಅನ್ಯಾಯ ಅನೀತಿ ಪ್ರಜಾಪೀಡೆಗಳಲ್ಲಿ ಪರ್ಯವಸಾನವಾಗುವ ಕ್ರೂರ ಶಾಸನಗಳಿಗೆ ಅವರು ಯಾವಾಗಲೂ ವಿರುದ್ಧ. ಯಾವ ಕಾಯಿದೆಯನ್ನೇ ಆಗಲಿ, ಯಾವ ರಾಜಕೀಯ ಸಂಸ್ಥೆಯನ್ನೇ ಆಗಲಿ ಅವು ಇರುವ ಹಾಗೆಯೇ ಒಪ್ಪಲು ಅವರು ತಯಾರಿಲ್ಲ. ಆದರೆ ಸಮಾಜದ ಕಲ್ಯಾಣಕ್ಕಾಗಿ ಅವುಗಳನ್ನು ಬದಲಾಯಿಸಲು ಅವರು ಬದ್ಧಕಂಕಣರು. ಯಾವ ರಾಜಕೀಯ ಸಂಸ್ಥೆಯನ್ನಾದರೂ ಅದು ಎಷ್ಟೇ ಶತಮಾನಗಳಿಂದಿರಲಿ, ಅದರ ಯೋಗ್ಯತೆಯನ್ನು ಅದರ ಉಪಯುಕ್ತತೆಯಿಂದಲ್ಲದೆ ಮತ್ತಾವುದರಿಂದಲೂ ನಿರ್ಧರಿಸಲಾಗದು, ಜನಕ್ಕೆ ಉಪಯೋಗವಿಲ್ಲದ ಸಂಸ್ಥೆ ಅಥವಾ ವ್ಯವಸ್ಥೆಯನ್ನು ಅದು ಎಷ್ಟೇ ಶತಮಾನಗಳಿಂದಿದ್ದರೂ ಬದಲಾಯಿಸಬೇಕು. ಈ ರೀತಿ ದೇಶದ ಮತ್ತು ಸರ್ಕಾರದ ಎಲ್ಲ ಕೆಲಸಕಾರ್ಯಗಳನ್ನೂ ಈವಾದ ಉಪಯುಕ್ತತೆಯ ದೃಷ್ಟಿಯಿಂದಲೇ ನೋಡುತ್ತದೆ. ಒಟ್ಟಿನಲ್ಲಿ ಸಮಾಜದ ಸರ್ವತೋಮುಖ ಅಭಿವೃದ್ಧಿ ಸಾಧಿಸಿ ಜನಜೀವನವನ್ನು ಉತ್ತಮಪಡಿಸುವುದೇ ಉಪಯುಕ್ತತಾವಾದದ ಪರಮಗುರಿ.

ಈ ಸಿದ್ಧಾಂತ ಕೆಲವು ಟೀಕೆಗಳಿಗೂ ಗುರಿಯಾಗಿದೆ. ಸುಖ, ಸಂತೋಷ ಮುಂತಾದ ಸ್ವಾರ್ಥನಿಷ್ಟ ಗುಣಗಳೇ ಮನುಷ್ಯನ ಜೀವನದಲ್ಲಿ ಮುಖ್ಯವಲ್ಲ; ಜ್ಞಾನ, ಅನುಕಂಪ ಮುಂತಾದ ಪರಹಿತನಿಷ್ಠ ಗುಣಗಳೂ ಅವನ ಜೀವನದಲ್ಲಿ ತಮ್ಮವೇ ಆದ ಪಾತ್ರ ವಹಿಸಬೇಕು-ಎಂಬ ಟೀಕೆಗೆ ಉತ್ತರವಾಗಿ ಹಲವು ಲೇಖಕರು ಈ ಗುರಿಗಳನ್ನೂ ಉಪಯುಕ್ತತಾವಾದದ ವ್ಯಾಪ್ತಿಯಲ್ಲಿ ಸೇರಿಸಿದ್ದಾರಾದರೂ ಸುಖ ದುಃಖಗಳನ್ನು ಯಾವ ಮಾನದಿಂದಲೂ ಅಳೆಯಲು ಸಾಧ್ಯವಿಲ್ಲವೆಂಬುದು ಗಮನಿಸಬೇಕಾದ ವಿಚಾರ. ಇದು ಮಾನಸಿಕವಾದದ್ದು. ವ್ಯಕ್ತಿವ್ಯಕ್ತಿಗಳ ನಡುವೆ ಈ ಬಗ್ಗೆ ವ್ಯತ್ಯಾಸವಿರುತ್ತದೆ. ಒಂದು ವಿಷಯದಲ್ಲಿ ಒಬ್ಬ ವ್ಯಕ್ತಿಗೆ ಸುಖ ಸಿಕ್ಕಿದರೆ ಅದೇ ವಿಷಯದಲ್ಲಿ ಮತ್ತೊಬ್ಬ ವ್ಯಕ್ತಿಗೆ ಅಷ್ಟೇ ಸುಖ ಸಿಕ್ಕದೆ ಹೋಗಬಹುದು. ಆದ್ದರಿಂದ ಸಾಮೂಹಿಕ ಅಥವಾ ಸಾಮಾನ್ಯ ಸುಖಸಂತೋಷವನ್ನು ದೇಶದ ಕಾನೂನುಗಳ ಮೂಲಕ ಉತ್ಪಾದಿಸಲಾಗುವುದಿಲ್ಲ. ಅಲ್ಲದೆ ಉಪಯುಕ್ತತಾವಾದ ಐಶ್ವರ್ಯ ಮತ್ತು ಪ್ರಾಪಂಚಿಕ ಸುಖದ ಕಡೆ ಮಾತ್ರ ಗಮನ ಕೊಡುವ ಸೌಕರ್ಯವಾದದ ಸಿದ್ಧಾಂತವೆಂದೂ ಇದು ಆಧಿಭೌತಿಕವಾದವೆಂದೂ ಹೇಳಲಾಗಿದೆ.

ಉಪಯುಕ್ತತಾವಾದದ ಲೋಪದೋಷಗಳೇನೇ ಇರಲಿ, ಇದು ಸಾಧಿಸಿದ ಒಳ್ಳೆಯ ಕಾರ್ಯಗಳನ್ನು ಅಲ್ಲಗಳೆಯಲಾಗುವುದಿಲ್ಲ. ಇಡೀ 19ನೆಯ ಶತಮಾನದಲ್ಲಿ ಇಂಗ್ಲೆಂಡಿನ ರಾಜಕಾರಣ ಮತ್ತು ಶಾಸನಗಳಲ್ಲಿ ಅದರ ಪ್ರಬಲ ಪ್ರಭಾವವನ್ನು ಕಾಣಬಹುದು. ಈ

ಸಿದ್ಧಾಂತದ ಪ್ರಭಾವದಿಂದ ಅನೇಕ ಸುಧಾರಣೆಗಳು 19ನೆಯ ಶತಮಾನದಲ್ಲಿ ಜಾರಿಗೆ ಬಂದವು. ಜನಗಳ ಕಾಲ್ಪನಿಕ ದೃಷ್ಟಿಯನ್ನು ಕಳಚಿ ಅವರು ವಾಸ್ತವಿಕವಾಗಿ ಯೋಚಿಸುವಂತೆ ಮಾಡಲು ಇದರಿಂದ ಸಾಧ್ಯವಾಯಿತು. ಜನರ ಹಿತಸಾಧನೆಗಳ ಬಗ್ಗೆ ರಾಜಕಾರಣಿಗಳ ಮುಂದೆ ಇದು ಒಂದು ನಿರ್ದಿಷ್ಟ ಗುರಿಯನ್ನಿಟ್ಟಿತು. ಇಡೀ ಇಂಗ್ಲೆಂಡಿನ ನ್ಯಾಯವ್ಯವಸ್ಥೆಗೆ ಮೊನೆಯೂ ಕ್ರಮವೂ ಲಭಿಸಿದ್ದು ಇದರಿಂದ. ರೈತ ಮತ್ತು ಕಾರ್ಮಿಕ ವರ್ಗದವರ ಏಳಿಗೆಗಾಗಿ ಅನೇಕ ಸುಧಾರಣೆಗಳು ಹೊರಬಂದುವು. ನ್ಯಾಯಾಂಗ, ಆಡಳಿತಾಂಗ ಮುಂತಾದ ಎಲ್ಲವನ್ನೂ ಶುದ್ಧೀಕರಿಸಿ, ಕ್ರಮಗೊಳಿಸಿ, ಸಮಾಜದ ಸರ್ವತೋಮುಖ ಏಳಿಗೆಗೆ ಈ ಸಿದ್ಧಾಂತ ಬಹುಮಟ್ಟಿಗೆ ಕಾರಣವಾಯಿತು. (ಜಿ.ಎಸ್.ಜಿ.)

**ಉಪಯುಕ್ತತೆ:** ಮಾನವನ ಬಯಕೆಗಳ ಪೂರೈಕೆಯಲ್ಲಿ ಸರಕು-ಸೇವೆಗಳಿಗೆ ಇರುವ ಸಾಮರ್ಥ್ಯ (ಯುಟಿಲಿಟಿ). ಅರ್ಥಶಾಸ್ತ್ರದ ಮುಖ್ಯ ಭಾವನೆಗಳಲ್ಲೊಂದು ಇದು ವಸ್ತುಗಳ ಅಂತರ್ಗತ ಗುಣವೇನೂ ಅಲ್ಲ. ಬಯಕೆಯ ಕಾರಣದಿಂದ ಜನಕ್ಕೂ ಅದಕ್ಕೂ ಇರುವ ಸಂಬಂಧದ ಸೂಚಕ.

ಬಳಕೆಮಾತಿನಲ್ಲಿ ಪ್ರಯೋಜನಗುಣವೂ ಒಂದೇ. ಇಲ್ಲಿ ನೈತಿಕದೃಷ್ಟಿ ಅಡಗಿರುತ್ತದೆ. ಒಂದು ವಸ್ತುವನ್ನು ಬಯಸುವುದೇತಕ್ಕೆ ಎಂಬುದರ ಮೇಲಿಂದ ಅದರ ಉಪಯುಕ್ತತೆಯನ್ನ ಳೆಯುವುದು ಸಾಮಾನ್ಯ. ನೈತಿಕ ಆಧಾರದ ಮೇಲೆ ಒಂದುವಸ್ತು ಇನ್ನೊಂದಕ್ಕಿಂತ ಹೆಚ್ಚು ಅಮೂಲ್ಯವೆನ್ನಬಹುದು. ಅಫೀಮು ಸೇವಿಸುವ ಚಟ ಇರುವವನಿಗೆ ಅದು ಪ್ರಯೋಜನಕಾರಿಯೆಂದು ಯಾರೂ ಹೇಳುವುದಿಲ್ಲ. ಒಂದು ಯಂತ್ರವೋ ಒಲೆಯೋ ಪ್ರಯೋಜನಕಾರಿ, ಆದರೆ ಒಂದು ಕಲಾಕೃತಿಯಿಂದ ಏನು ಪ್ರಯೋಜನವುಂಟು?-ಎಂದು ವಾದಿಸುವುದು ಸಾಧ್ಯ.

ಆದರೆ ಅರ್ಥಶಾಸ್ತ್ರಜ್ಞನ ದೃಷ್ಟಿಯಲ್ಲಿ ಇಂಥ ವಾದ ಅಪ್ರಕೃತ. ಒಂದು ಸರಕನ್ನು ಪಡೆಯುವುದಕ್ಕೂ ಸಿದ್ಧವಿರುವವರಿದ್ದಾರೆಂದೇ ಆತನ ದೃಷ್ಟಿಯಲ್ಲಿ ಅದು ಉಪಯುಕ್ತ. ಇಲ್ಲಿ ನೈತಿಕ ವಿವೇಚನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಶಬ್ದದ ಹಿಂದಿರುವ ನೈತಿಕದೃಷ್ಟಿಯ ಬಣ್ಣವನ್ನು ತಿಳಿಯುವ ಉದ್ದೇಶದಿಂದಲೇ ಪಾರೇಟೋ ಎಂಬ ಇಟಾಲಿಯನ್ ಅರ್ಥಶಾಸ್ತ್ರಜ್ಞ ತುಷ್ಟಿಗುಣ (ಓಫೆಲಿಮಿಟಿ) ಎಂಬ ಶಬ್ದ ಬಳಸಿದ.

ಉಪಯುಕ್ತತೆಯನ್ನಳೆಯಲು ವಸ್ತುನಿಷ್ಠಾತ್ಮಕ ಸಾಧನವೇನೂ ಇಲ್ಲ. ಇದು ಸಂಪೂರ್ಣವಾಗಿ ಸ್ವಾನುಭವನಿಷ್ಠವಾದದ್ದು. ಆದ್ದರಿಂದ ಇದನ್ನಳೆಯುವುದು ಅಸಾಧ್ಯ. ಒಂದು ಗೊತ್ತಾದ ಪರಿಸ್ಥಿತಿಯಲ್ಲಿ ಒಂದು ಸರಕಿನ ಬಗ್ಗೆ ಒಬ್ಬ ವ್ಯಕ್ತಿ ಕಟ್ಟಿದ ಬೆಲೆಯೇ ಉಪಯುಕ್ತತೆ. ಉದಾಹರಣೆಗೆ ಶಾಲಿನ ಉಪಯುಕ್ತತೆಯ ಕಲ್ಪನೆ ಎಲ್ಲರಿಗೂ ಒಂದೇ ತೆರನಾಗಿರುವುದು ಸಾಧ್ಯವಿಲ್ಲ. ಒಬ್ಬನ ದೃಷ್ಟಿಯಲ್ಲೇ ಆದರೂ ಇದು ಋತುಮಾನಕ್ಕೆ ಅನುಗುಣವಾಗಿ ವ್ಯತ್ಯಾಸವಾಗಬಹುದು. ಒಬ್ಬನಲ್ಲಿ ಎಷ್ಟು ಶಾಲುಗಳಿರುತ್ತವೆಂಬುದರ ಮೇಲಿಂದಲೂ ಇದರ ಉಪಯುಕ್ತತೆ ನಿರ್ಣಯಿಸಲ್ಪಡುತ್ತದೆ.

ಈ ವಿವೇಚನೆಯ ಹಿನ್ನೆಲೆಯಲ್ಲಿ ಉಪಯುಕ್ತತೆಯ ಬಗ್ಗೆ ಕೆಲವು ಸೂತ್ರಗಳನ್ನು ಕೊಡುವುದು ಸಾಧ್ಯ. ಮೊದಲನೆಯದಾಗಿ ಒಂದು ಸರಕು ಉಪಯುಕ್ತತೆ ಹೊಂದಿದೆಯೆಂದ ಮಾತ್ರಕ್ಕೆ ಅದು ಅಪೇಕ್ಷಣೀಯವೆಂದು ಅರ್ಥವಲ್ಲ. ಅದಕ್ಕೆ ಒಬ್ಬನ ಬಯಕೆ ಪೂರೈಸುವ ಗುಣವಿದ್ದರೆ ಸಾಕು. ಇದು ಪ್ರಧಾನ. ಉಳಿದದ್ದು ಗೌಣ.

ಅನೇಕ ಸರಕು ಸೇವೆಗಳನ್ನು ಹಸಿವು ಬಾಯಾರಿಕೆ ನಿವಾರಣೆ, ಚಳಿ ಮಳೆ ಬಿಸಿಲು ಗಾಳಿಗಳೆದುರು ರಕ್ಷಣೆ, ರೋಗ ನಿವಾರಣೆ ಇತ್ಯಾದಿ ಉದ್ದೇಶಗಳಿಗಾಗಿ ಬಯಸುವುದು ಸಾಮಾನ್ಯ. ಈ ಸಂದರ್ಭಗಳಲ್ಲಿ ಉಪಯುಕ್ತತೆ ನೋವನ್ನು ಹೋಗಲಾಡಿಸುವ, ದುಃಖ ನಿವಾರಣೆ ಮಾಡುವ ಗುಣ ಮಾತ್ರವಾಗಿರುತ್ತದೆ; ಆದ್ದರಿಂದ ಉಪಯುಕ್ತತೆ ಇದೆ ಎಂದ ಮಾತ್ರಕ್ಕೆ ಆ ಸರಕಿನ ಅನುಭೋಗದಿಂದ ನಿಶ್ಚಿತವಾಗಿ ಸಂತೋಷ ಉಂಟಾಗುವುದೆಂದು ಹೇಳಿದಂತಾಗುವುದಿಲ್ಲ. ಹೀಗೆ ಸರಕು ಸೇವೆಗಳ ಅನುಭೋಗ ಕೇವಲ ಸಂಕಟ ಪರಿಹಾರಕ್ಕಾಗಿರಲಿ ಅಥವಾ ಹೆಚ್ಚಿನ ಆನಂದ ಪಡೆಯುವುದಕ್ಕಾಗಿರಲಿ, ಕಪಟ್ಟದ್ದೆಂದು ಭಾವಿಸುವಂಥದಾಗಿರಲಿ ಅಥವಾ ಒಳ್ಳೆಯದೇ ಎಂದು ಹೇಳಬಹುದಾದ್ದಾಗಿರಲಿ ಅದು ಒಬ್ಬ ವ್ಯಕ್ತಿಯ ಬಯಕೆಯ ಪೂರೈಕೆಗೆ ಅನುಗುಣವಾಗಿ ಉಪಯುಕ್ತತೆಯಿರುತ್ತದೆ. ಅಂದಮೇಲೆ ವ್ಯಕ್ತಿಯ ಬಯಕೆಯೇ ಉಪಯುಕ್ತತೆಗೆ ಆಧಾರ. ಇದು ಅನುಭೋಗಿಯ ಮನಸ್ಸಂಬಂಧವಾಚಕ.

ಉಪಯುಕ್ತತೆಯೆಂಬುದು ಸಾಪೇಕ್ಷವಾದದ್ದು. ಏಕೆಂದರೆ ಒಂದು ಕಾಲದಲ್ಲಿ ಹೆಚ್ಚು ಉಪಯುಕ್ತವಲ್ಲವೆನಿಸಿದ್ದಕ್ಕೆ ಇನ್ನೊಂದು ಕಾಲದಲ್ಲಿ ಹೆಚ್ಚು ಉಪಯುಕ್ತತೆ ಕೂಡಿ ಬರಬಹುದು. ಸಾಮಾನ್ಯವಾಗಿ ಹೇಳುವುದಾದರೆ ಚಳಿಗಾಲದಲ್ಲಿ ಉಣ್ಣೆ ಬಟ್ಟೆಯ, ಮಳೆಗಾಲದಲ್ಲಿ ಛತ್ರಿಗಳ, ಬೇಸಗೆಯಲ್ಲಿ ತಂಪು ಪಾನೀಯಗಳ ಉಪಯುಕ್ತತೆ ಹೆಚ್ಚುವುದೆಂದು ಹೇಳಬಹುದು. ಈ ಬಗೆಯ ಉಪಯುಕ್ತತೆಯನ್ನು ಕಾಲೋಪಯುಕ್ತತೆಯೆನ್ನಬಹುದು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸರಕುಗಳನ್ನು ರವಾನಿಸುವುದರಿಂದ ಅವಕ್ಕೆ ಉಪಯುಕ್ತತೆ ಬರಬಹುದು. ಬೆಟ್ಟದ ಕಿಬ್ಬಿಯಲ್ಲಿ ಬೆಲೆಯಿಲ್ಲದೆ ಬಿದ್ದಿರುವ ಕಲ್ಲುಬಂಡೆಯನ್ನು ಒಡೆದು ಪಟ್ಟಣಕ್ಕೆ ತಂದರೆ ಅದಕ್ಕೆ ಉಪಯುಕ್ತತೆಯುಂಟು. ಇದು ಸ್ಥಲೋಪಯುಕ್ತತೆ, ಹೆಬ್ಬಂಡೆಯ ಕಗ್ಗಲ್ಲು ಹಾಗೆಯೇ ಬಿದ್ದಿದ್ದರೆ ಅದಕ್ಕೆ ಬೆಲೆಯಿಲ್ಲ. ಅದನ್ನು ಕಡಿದು ಚಪ್ಪಡಿಯಾಗಿಯೋ ಕಡಿದು ಮೂರ್ತಿಯಾಗಿಯೋ ಮಾಡಿದಾಗ ಅದಕ್ಕೆ ಉಪಯುಕ್ತತೆ. ಇದು ಆಕಾರೋಪಯುಕ್ತತೆ. ಸರಕುಗಳ ಈ ಮೂರು ಬಗೆಯ ಉಪಯುಕ್ತತೆಯ ನಿರ್ಮಾಣವೇ ಉತ್ಪಾದನೆಯ ಗುರಿ.

ಸರಕು ಸೇವೆಗಳ ಬೆಲೆಗಳಿಗೂ ಉಪಯುಕ್ತತೆಗೂ ನಿಕಟ ಸಂಬಂಧವಿರುವುದರಿಂದ ಅರ್ಥಶಾಸ್ತ್ರ ಅಧ್ಯಯನದಲ್ಲಿ ಉಪಯುಕ್ತತೆಯನ್ನು ಕುರಿತ ಭಾವನೆಗೆ ಹೆಚ್ಚು ಪ್ರಾಮುಖ್ಯವುಂಟು. ಅನುಭೋಗಿಯ ವೈಯಕ್ತಿಕ ಬಯಕೆಯ ಪೂರೈಕೆಯ ದೃಷ್ಟಿಯಿಂದ ಉದ್ಭವಿಸುವ ಇದರ ನಿರಪೇಕ್ಷ ಮಾಪನ ಸಾಧ್ಯವಿಲ್ಲವಾದರೂ ಅನುಭೋಗಿಗಳು ಉಪಯುಕ್ತತೆಯ ಆಧಾರದ ಮೇಲೆ ಸರಕುಗಳಿಗೆ ಬೆಲೆ ಕೊಡುವರೆಂದು ಹೇಳುವುದಾದರೆ ಸರಕುಗಳ ಉಪಯುಕ್ತತೆಯನ್ನು ಬೆಲೆಗಳ ಮೂಲಕ ಸೂಚಿಸುವುದರಿಂದ ಒಂದು ರೀತಿಯಲ್ಲಿ ಅಳೆಯುವ ಪ್ರಯತ್ನ ಮಾಡಬಹುದು. ಸರಕೊಂದರ ಉಪಯುಕ್ತತೆ ಇಷ್ಟೆಂದು ಅಳೆಯುವ ಮಾನದಂಡ ಹುಡುಕುವುದು ಕಷ್ಟವಾದರೂ ಅನುಭೋಗಿ ತೆಗೆದುಕೊಳ್ಳುವ ವಿವಿಧ ಸರಕುಗಳ ಉಪಯುಕ್ತತೆಯನ್ನು ಹೋಲಿಸುವುದು ಸಾಧ್ಯ. ಕಿತ್ತಲೆಹಣ್ಣಿನ ಉಪಯುಕ್ತತೆ ಒಂದು ಸೇಬಿನ ಹಣ್ಣಿನ ಉಪಯುಕ್ತತೆಗೆ ಸಮ. ನಾಲ್ಕು ಕಿತ್ತಲೆ ಹಣ್ಣುಗಳಿಗೆ 1 ರೂಪಾಯಿ ಕೊಡುವುದರ ಬದಲು ಒಂದು ಸೇಬಿಗೆ 1 ರೂಪಾಯಿ ಕೊಟ್ಟೇವು; ಅಥವಾ ಅ, ಆ, ಇ, ಈ ಎಂಬ ನಾಲ್ಕು ಸರಕುಗಳ ಉಪಯುಕ್ತತೆಯನ್ನು ಹೋಲಿಸಿ ಅ>ಆ>ಇ>ಈ ಎಂಬುದಾಗಿ ಅವುಗಳ ಉಪಯುಕ್ತತೆಗಳನ್ನು ಸಾಪೇಕ್ಷವಾಗಿ ಸೂಚಿಸಬಹುದು; ಈ ಮೂಲಕ ಸರಕುಗಳ ಅನುಭೋಗದ ಬಗ್ಗೆ ಆದ್ಯತೆಯ ಅನುಕ್ರಮವನ್ನು ಹಾಕುವುದು ಸಾಧ್ಯ, ಉಪಯುಕ್ತತೆಯನ್ನು ಅಳೆಯಬಹುದೆಂಬ ಮತ್ತು ಹೋಲಿಸಬಹುದೆಂಬ ಊಹೆಗಳ ಮೇಲೆ ಅರ್ಥಶಾಸ್ತ್ರದಲ್ಲಿ ಅನೇಕ ಮೂಲಭೂತ ನಿಯಮಗಳನ್ನು ಸೃಜಿಸಲಾಗಿದೆ.

ಉಪಯುಕ್ತತೆಯ ವಿಚಾರವಾಗಿ ಜರ್ಮನ್ ಅರ್ಥಶಾಸ್ತ್ರಜ್ಞ ಗಾಸೆನ್ (1810-58) ಎರಡು ಮುಖ್ಯ ಸೂತ್ರಗಳನ್ನು ರಚಿಸಿದ್ದಾನೆ. ಒಂದು, ಸರಕಿನ ಹೆಚ್ಚು ಹೆಚ್ಚು ಘಟಕಗಳನ್ನು ಪಡೆದಂತೆಲ್ಲ ಅದರ ಹೆಚ್ಚಿನ ಘಟಕದ ಉಪಯುಕ್ತತೆ ಆ ಸರಕಿನ ಒಟ್ಟು ಘಟಕಗಳೊಂದಿಗೆ ವಿಲೋಮ ಸಂಬಂಧ ಹೊಂದಿರುತ್ತದೆ (**ನೋಡಿ-ಇಳಿಮುಖ-ಉಪಯುಕ್ತತೆಯ-ಸೂತ್ರ**). ಒಂದು ಸರಕನ್ನು ನಾನಾ ಬಗೆಯಾಗಿ ಉಪಯೋಗಿಸಬಹುದಾಗಿದ್ದು ವಿವಿಧ ಬಯಕೆಗಳನ್ನು ಪೂರೈಸುವಂಥದಾಗಿದ್ದರೆ, ಅದರಿಂದ ಗರಿಷ್ಠ ತೃಪ್ತಿ ದೊರಕುವಂತೆ ಆ ಸರಕಿಗಾಗಿ ಸ್ಪರ್ಧಿಸುತ್ತಿರುವ ಈ ನಾನಾ ಬಯಕೆಗಳ ತೃಪ್ತಿಗಾಗಿ ಯಾವ ಯಾವ ಪ್ರಮಾಣಗಳಲ್ಲಿ ವಿತರಣೆಮಾಡಬೇಕು?-ಎಂಬುದು ಗಾಸೆನ್ ವಿವೇಚನೆಗೆ ಒಳಗಾದ ಎರಡನೆಯ ವಿಚಾರ. ಆ ಸರಕಿನ ನಾನಾ ಉಪಯೋಗಗಳಿಗಾಗಿ ಅದನ್ನು ಬಳಸಿದಾಗ ಅದರ ಪ್ರತಿಯೊಂದು ಅಂಚಿನ ಘಟಕದಿಂದ ದೊರಕುವ ತೃಪ್ತಿಯೂ ಸಮನಾಗಿರುವ ಸ್ಥಿತಿಯೇ ಗರಿಷ್ಠ ತೃಪ್ತಿಯ ಸ್ಥಿತಿ.

ಅನೇಕ ಉಪಯೋಗಗಳಿಗೆ ವಿನಿಯೋಗಿಸಬಹುದಾದ ಸರಕು ಒಬ್ಬನಲ್ಲಿ ಇದ್ದರೆ ಈ ಸರಕನ್ನು ಅತ್ಯುತ್ತಮ ರೀತಿಯಲಿ-ಅಂದರೆ ಒಟ್ಟಿನಲ್ಲಿ ಗರಿಷ್ಠ ತೃಪ್ತಿತರುವಂತೆ-ಹಂಚಬೇಕಾದರೆ, ಪ್ರತಿಯೊಂದು ಉಪಯೋಗಕ್ಕೆ ಹಾಕಲಾಗುವ ಕೊನೆಯ ಘಟಕದ ಉಪಯುಕ್ತತೆ ಅಂದರೆ ಅಂಚಿನ ಉಪಯುಕ್ತತೆ ಸಮವಾಗಿರಬೇಕು.

ಒಬ್ಬನಲ್ಲಿ 10 ರೂಪಾಯಿಗಳಿದ್ದು ಇದನ್ನು ಎರಡು ಉಪಯೋಗಗಳಿಗೆ ಹಾಕಬಹುದಾಗಿದ್ದರೆ ಈ ಎರಡು ಉಪಯೋಗಗಳಲ್ಲಿ ಒಂದೊಂದು ಘಟಕಕ್ಕೂ ಉಪಯುಕ್ತತೆ ಎಷ್ಟು ಇಳಿಯುವುದೆಂಬುದನ್ನು ಹೋಲಿಸಬೇಕಾಗುತ್ತದೆ. ಎರಡು ಸರಕುಗಳ ಮೇಲೆ ಮಾಡುವ ವೆಚ್ಚದಿಂದ ಲಭಿಸುವ ತೃಪ್ತಿ ಹೇಗಿದ್ದೀತೆಂಬುದರ ಊಹೆಯ ಅಂಕಗಳನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ:

| | 1ನೆಯ ಸರಕು | | 2ನೆಯ ಸರಕು | |
|---|---|---|---|---|
| ವೆಚ್ಚ ರೂ. | ಒಟ್ಟು ಉಪಯುಕ್ತತೆ | ಅಂಚಿನ ಉಪಯುಕ್ತತೆ | ಒಟ್ಟು ಉಪಯುಕ್ತತೆ | ಅಂಚಿನ ಉಪಯುಕ್ತತೆ |
| 1 | 10 | 10 | 9 | 9 |
| 2 | 18 | 8 | 16 | 7 |
| 3 | 24 | 6 | 20 | 4 |
| 4 | 29 | 5 | 23 | 3 |
| 5 | 32 | 3 | 25 | 2 |
| 6 | 34 | 2 | 26 | 1 |

ಮೇಲಿನ ಉದಾಹರಣೆಯಲ್ಲಿ ಒಂದನೆಯ ಸರಕಿನ ಮೇಲೆ ಮಾಡಲಾಗುವ 5ನೇ ರೂ. ವೆಚ್ಚದಿಂದಲೂ ಎರಡನೆಯ ಸರಕಿನ ಮೇಲೆ ಮಾಡಲಾಗುವ 4ನೇ ರೂ. ವೆಚ್ಚದಿಂದಲೂ ಲಭಿಸುವ ಅಂಚಿನ ತೃಪ್ತಿ ಒಂದೇ (3) ಆದ್ದರಿಂದ ಒಂದರ ಮೇಲೆ 5 ರೂ., ಎರಡರ ಮೇಲೆ 4 ರೂ. ವೆಚ್ಚ ಮಾಡುವುದರಿಂದ ಅನುಭೋಗಿಯ ತೃಪ್ತಿ ಪರಮಾವಧಿಯಾಗುತ್ತದೆ: ಆಗ ಒಟ್ಟು ತೃಪ್ತಿ 32+23=55. ಈ ಹಣವನ್ನು ಬೇರೆ ಯಾವ ರೀತಿ ಹಂಚಿದರೂ ಒಟ್ಟು ತೃಪ್ತಿ 55ಕ್ಕೆ ಕಡಿಮೆಯಾಗುವುದು. ಕೇವಲ ಹಣದ ವೆಚ್ಚಕ್ಕೆ ಮಾತ್ರವಲ್ಲದೆ ಈ ತತ್ತ್ವ ಅನೇಕ ಉಪಯೋಗಗಳಿಗಾಗಿ ಬಳಸಬಹುದಾದ ಯಾವ ಸರಕಿಗಾದರೂ ಅನ್ವಯವಾಗುತ್ತದೆ. ತಮ್ಮ ಹಣವನ್ನು ಯಾವ ರೀತಿ ವೆಚ್ಚ ಮಾಡಿದರೆ ಹೆಚ್ಚು ತೃಪ್ತಿ ದೊರಕುವುದೆಂದು ಅನುಭೋಗಿಗಳು ಲೆಕ್ಕಾಚಾರ ಮಾಡುವುದು ಸ್ವಾಭಾವಿಕ: ಅವರು ಮಾಡುವ ನಾನಾ ಬಗೆಯ ವೆಚ್ಚಗಳ ಅಂಚಿನ ಘಟಕಗಳು ಕೊಡುವ ತೃಪ್ತಿ ಒಂದೇ ಆದಾಗ ಮಾತ್ರ ಒಟ್ಟು

ತೃಪ್ತಿ ಪರಮಾವಧಿ ಮಟ್ಟದ್ದಿರುತ್ತದೆ. ಹೀಗೆಯೇ ಉತ್ಪಾದಕರು ಶ್ರಮ, ಬಂಡವಾಳ ಇವುಗಳ ಪ್ರತಿ ಅದಲು ಬದಲು ಮಾಡುವರು. ಇಲ್ಲಿಯೂ ಅಂಚಿನ ಘಟಕಗಳ ಪ್ರತಿಫಲ ಸಮಾನತೆ ಇರುವ ಹಂಚಿಕೆಯೇ ಅತ್ಯುತ್ತಮವಾದದ್ದು. ಈ ಸೂತ್ರದಿಂದ ಅನುಭೋಗಿಗಳ ಹಾಗೂ ಉತ್ಪಾದಕರ ವರ್ತನೆಯ ಮುಖ್ಯಪ್ರವೃತ್ತಿಯನ್ನರಿಯಬಹುದು. ಅವರ ಅನೇಕ ಆರ್ಥಿಕ ನಿರ್ಣಯಗಳು ಉಪಯುಕ್ತತೆಯ ಅಳತೆ ಹೋಲಿಕೆಗಳನ್ನೇ ಅವಲಂಬಿಸಿದೆ (**ನೋಡಿ– ಇಳಿಮುಖ–ಪ್ರತಿನಿಧಾನ–ಅಂಚು–ದರ–ಸೂತ್ರ**). ಅರ್ಥ ಮೀಮಾಂಸೆಯಲ್ಲಿ ಉಪಯುಕ್ತತೆಯ ಭಾವನೆಗೆ ಪ್ರಮುಖವಾದ ಸ್ಥಾನಮಾನ ನೀಡಿದವರು ಆಸ್ಟ್ರಿಯನ್ ಪಂಥದ ಅರ್ಥಶಾಸ್ತ್ರಜ್ಞರು– ಮುಖ್ಯವಾಗಿ ಕಾರ್ಲ್ ಮೆಂಗರ್ ಮತ್ತು ಬಂ–ಬಾವೆರ್ಕ್.

ಉಪಯುಕ್ತತೆಯ ಭಾವನೆಯನ್ನು ಕುರಿತು ಮೊಟ್ಟಮೊದಲು ಚಿಂತನೆ ಮಾಡಿದವರು ಉಪಯುಕ್ತತಾವಾದಿಗಳು. ಇವರು ಜೆರೆಮಿ ಬೆಂಥಾಮ್ ಪಂಥದವರು. ಯಾವುದು ಸುಖ, ಯಾವುದು ಅಸುಖ, ಯಾವುದು ದುಃಖೋಪಾತ್ತ–ಎಂದು ಮುಂತಾಗಿ ಮಾನವ ನಡೆಸುವ ವಿವೇಚನೆಯೇ ಆರ್ಥಿಕವರ್ತನೆಗೆ ಆಧಾರವೆಂಬಂತೆ ಇವರು ವಾದಿಸಿದರು (**ನೋಡಿ– ಉಪಯುಕ್ತತಾವಾದ**). ಮನಃಶ್ಶಾಸ್ತ್ರದ ದೋಣಿಯಲ್ಲಿ ಒಂದು ಕಾಲನ್ನೂ ತತ್ತ್ವಶಾಸ್ತ್ರದಲ್ಲಿ ಇನ್ನೊಂದನ್ನೂ ಊರಿ ನಡೆದಿದ್ದ ಈ ಬಗೆಯ ವಾದವನ್ನು ಈ ಎರಡೂ ಕ್ಷೇತ್ರಗಳ ವಿಚಾರವಂತರು ತಳ್ಳಿಹಾಕಿದರು. ಅರ್ಥಶಾಸ್ತ್ರದಲ್ಲಿ ಈ ಬಗ್ಗೆ ವಿಚಾರ ಹರಿಸಿದವರು ಈ ಕಲ್ಪನೆಯ ಹಿಂದಿನ ನೈಜಸೃಷ್ಟಿಯನ್ನಷ್ಟೇ ಎತ್ತಿ ಹಿಡಿದರು. ಉಪಯುಕ್ತತೆಯ ಕಲ್ಪನೆಗೂ ಅದರ ಹಿಂದೆ ಇರತಕ್ಕ ಬಯಕೆಗಳ ರೂಪಕ್ಕೂ ಯಾವ ಸಂಬಂಧವೂ ಇಲ್ಲವೆಂದು ಶುಂಪೀಟರ್ ವಾದಿಸಿದ. ಇದು ಮಾನಸಿಕ ಮೌಲ್ಯಮಾಪನ ವಿಧಾನವಲ್ಲ; ಇದು ತರ್ಕಬದ್ಧ– ಎಂಬುದು ಆತನ ಅಭಿಪ್ರಾಯ.

ಉಪಯುಕ್ತತೆಯನ್ನು ಅಳತೆ ಮಾಡಬಹುದೇ ಇಲ್ಲವೇ–ಎಂಬ ವಿಚಾರವಾಗಿಯೂ ಇದಮಿತ್ಥಂ ಎಂದು ಹೇಳುವ ಸ್ಥಿತಿ ಇನ್ನೂ ಬಂದಿಲ್ಲ. ಒಬ್ಬ ವ್ಯಕ್ತಿಯ ದೃಷ್ಟಿಯಲ್ಲಿ ಒಂದು ಸರಕಿನ ಬದಲು ಇನ್ನೊಂದು ಹೆಚ್ಚು ಉಪಯುಕ್ತವೆನ್ನಬಹುದು. ಈ ನಾನಾ ಸರಕುಗಳ ಘಟಕಗಳ ಆದ್ಯತಾಕ್ರಮವನ್ನು ನಿರ್ದೇಶಿಸಬಹುದು. ಆದರೆ ಒಂದರಿಂದ ಇನ್ನೊಂದು ಎಷ್ಟು ಹೆಚ್ಚು ಉಪಯುಕ್ತ ಎಂಬುದನ್ನು ಅಳೆಯಲು ಸಾಧ್ಯವಿಲ್ಲ. ಇದು ಒಂದು ವಾದ. ಆದರೆ ಇನ್ನು ಕೆಲವರು ಇದು ಆಧಾರಭೂತ ಕಲ್ಪನೆಯೆಂದೂ ಇದನ್ನು ಮಾನಕವೊಂದರ ನೆರವಿನಿಂದ ಅಳೆಯಬಹುದೆಂದೂ ಹೇಳುತ್ತಾರೆ.

ನಾನಾ ಜನರ ಅನುಭವಕ್ಕೆ ಬಂದ ಉಪಯುಕ್ತತೆಗಳನ್ನು ಪರಸ್ಪರವಾಗಿ ಹೋಲಿಸ ಬಹುದೇ–ಎಂಬುದು ಅರ್ಥಶಾಸ್ತ್ರದಲ್ಲಿ ಇನ್ನೂ ತೀರ್ಮಾನವಾಗದಿರುವ ಇನ್ನೊಂದು ಪ್ರಶ್ನೆ. ಒಬ್ಬನ ವರಮಾನ ಹೆಚ್ಚಿದಂತೆ ಆತನಿಗೆ ಅದರ ಅಂಚಿನ ಘಟಕದ ಉಪಯುಕ್ತತೆ ಕಡಿಮೆಯಾಗುತ್ತದೆ. ಎಲ್ಲರ ತ್ಯಾಗವೂ ಒಂದೇ ಸಮನಾಗಿರಬೇಕಾದರೆ ವರಮಾನ ಹೆಚ್ಚಿದಂತೆಲ್ಲ ತೆರಿಗೆಯ ದರ ಹೆಚ್ಚಿಸಬೇಕು–ಎಂಬುದು ಸ್ವೀಕೃತಭಾವನೆ. ಒಬ್ಬ ವ್ಯಕ್ತಿಯ ವರಮಾನದ 10,000ದನೆಯ ರೂಪಾಯಿಗೂ ಇನ್ನೊಬ್ಬನ ವರಮಾನದ 10,000ದನೆಯದಕ್ಕೂ ಒಂದೇ ಉಪಯುಕ್ತತೆಯಿರುವುದೆಂಬ ಊಹೆಯೇ ತೆರಿಗೆ ದರಗಳಿಗೆ ಆಧಾರ. ವಾಸ್ತವವಾಗಿ ನೋಡಿದರೆ ಈ ಇಬ್ಬರ ವರಮಾನಗಳ ಅಂಚಿನ ಉಪಯುಕ್ತತೆಗಳೂ ಒಂದೇ ವೇಗದಲ್ಲಿ ಇಳಿಯುವು ವೆನ್ನಲಾಗುವುದಿಲ್ಲ. ಆದ್ದರಿಂದ ಇಂಥ ತಾತ್ತ್ವಿಕ ವಿವೇಚನೆಯಲ್ಲ ಒಂದು ಮಿತಿಯವರೆಗೆ ಮಾತ್ರ ಅನ್ವಯವಾಗಬಹುದೆಂಬ ವಾದವನ್ನೂ ಸಂಪೂರ್ಣವಾಗಿ ತಳ್ಳಿಹಾಕುವುದು ಸಾಧ್ಯವಿಲ್ಲ.

*

**ಉಪರೂಪಕಗಳು:** ರೂಪಕದ ಅವಾಂತರ ಭೇದಗಳು. ನಾಟಿಕೆ, ತ್ರೋಟಕ, ಗೋಷ್ಠೀ, ಸಟ್ಟಕ, ನಾಟ್ಯರಾಸಕ, ಪ್ರಸ್ಥಾನಕ, ಉಲ್ಲಾಸ್ಯ, ಕಾವ್ಯ, ಪ್ರೇಂಖಣ, ರಾಸಕ, ಸಂಲಾಪಕ ಶ್ರೀಗದಿತ, ಶಿಲ್ಪಿಕ, ವಿಲಾಸಿಕಾ, ದುರ್ಮಲ್ಲಿಕಾ, ಪ್ರಕರಣಿಕಾ, ಹಲ್ಲೀಶ, ಭಾಣಿಕ–ಹೀಗೆ ಸಂಖ್ಯೆಯಲ್ಲಿ ಇವು ಹದಿನೆಂಟು. ಸಾಹಿತ್ಯ ದರ್ಪಣದಲ್ಲಿ ಎಲ್ಲ ಉಪರೂಪಕಗಳ ಲಕ್ಷಣವನ್ನೂ ತಿಳಿಸಲಾಗಿದೆ. ಇಲ್ಲಿ ಬಹು ಪ್ರಸಿದ್ಧವಾದ ನಾಟಿಕೆ ಮತ್ತು ತ್ರೋಟಕಗಳ ವಿವರಗಳನ್ನು ಮಾತ್ರ ಕೊಟ್ಟಿದೆ.

ನಾಟಿಕೆ: ಭರತನೇ ನಾಟಕದ ಅವಾಂತರ ಭೇದ ನಾಟಿಕೆ ಎಂದು ತಿಳಿಸಿದ್ದಾನೆ. ವಸ್ತು ಕಲ್ಪಿತ, ನಾಯಿಕೆಯ ಪಾತ್ರಕ್ಕೇ ಹೆಚ್ಚು ಪ್ರಾಶಸ್ತ್ಯ. ಶುದ್ಧ ಲಕ್ಷಣದಿಂದ ಕೂಡಿದಾಗ ನಾಟಿಕೆ ಎನಿಸಿದರೆ ಶುದ್ಧಾಶುದ್ಧವಾಗಿ ಮಿಶ್ರಿತ ಲಕ್ಷಣದಿಂದ ಕೂಡಿದ್ದಲ್ಲಿ ಪ್ರಕರಣಿಕೆ ಎನಿಸುತ್ತದೆ. ನಾಟಿಕೆಯಲ್ಲಿ ನಾಯಕ ಪ್ರಖ್ಯಾತ, ಧೀರಲಲಿತ, ಹೆಂಡತಿ ಜೇಷ್ಠೆ, ಪ್ರಗಲ್ಭೆ, ಮಾನವತಿ, ನಾಯಿಕೆ ರಾಜವಂಶೀಯಳು, ಮುಗ್ಧೆ, ಅಂತಃಪುರವಾಸಿ, ಸಂಗೀತಾಭ್ಯಾಸಿ, ನಾಯಕಾನುರಕ್ತೆ, ಹಿರಿಯಳ ಭಯದಿಂದ ಅಂಜುತ್ತ ನಾಯಕ ಕೊನೆಗೆ ಆಕೆಯ ಅನುಗ್ರಹದಿಂದ ನಾಯಿಕೆಯನ್ನು ಪಡೆಯುವನು. ಉದಾ: ರತ್ನಾವಳೀ.

ತ್ರೋಟಕ: ವಸ್ತು ಪ್ರಸಿದ್ಧ, ಅಂಕಗಳು ವಿಷಮ (ಐದು, ಏಳು, ಒಂಬತ್ತು). ರಸ ಶೃಂಗಾರ. ನಾಯಕ ನಾಯಿಕೆಯರಲ್ಲಿ ದೈವಾಂಶ ಮಾನವಾಂಶ ಎರಡೂ ಇರಬೇಕು. ಎಲ್ಲ ಅಂಕಗಳಲ್ಲೂ ವಿದೂಷಕನಿರಬೇಕು. ಅವನ ಪಾತ್ರವೂ ಗಣ್ಯವಾಗಿರಬೇಕು. ಉಳಿದೆಲ್ಲ ಭಾಗಗಳಲ್ಲೂ ನಾಟಕದಂತೆ ಸಂಧಿ, ಸಂಧ್ಯಾಂಗ ರಚನೆ. ಅಂದರೆ ಇಲ್ಲಿ ದೇವ ಮರ್ತ್ಯಗಳ ಮಧುರ ಮಿಲನವೆಂದಂತಾಗುವುದು. ಉದಾ:ವಿಕ್ರಮೋರ್ವಶೀಯ.

ಉಳಿದ ಉಪರೂಪಕಗಳಲ್ಲಿ ಅಲ್ಪಸ್ವಲ್ಪ ಭೇದವಿರುವುದರಿಂದ ಅವನ್ನು ಕೇವಲ ನಾಮನಿರ್ದೇಶನ ಮಾಡಿ ಉದಾಹರಿಸಲಾಗಿದೆ. ಹೆಸರಿನಿಂದ ಗುಣಲಕ್ಷಣಗಳನ್ನು ಊಹಿಸಬಹುದು.

1. ಗೋಷ್ಠೀ : ರೈವತ ಮದನಿಕಾ, 2. ಸಟ್ಟಕ ಮಂಜರೀ, 3. ನಾಟ್ಯ ರಾಸಕ: ನರ್ಮವತೀ, ವಿಲಾಸವತೀ, 4. ಪ್ರಸ್ಥಾನಕ: ಶೃಂಗಾರ ತಿಲಕ, 5. ಉಲ್ಲಾಸ್ಯ: ದೇವೀ ಮಹಾದೇವ, 6. ಕಾವ್ಯ: ಗೌಡವಿಜಯ, ಯಾದವೋದಯ, 7. ಪ್ರೇಂಖಣ: ತ್ರಿಪುರ ಮರ್ದನ, 8. ರಾಸಕ: ಮೇನಕಾಹಿತ, 9. ಸಂಲಾಪಕ : ಮಾಯಾಕಾಪಾಲಿಕ, 10.ಶ್ರೀಗದಿತ: ರಾಮಾನಂದ, 11. ಶಿಲ್ಪಿಕ : ಕನಕವತೀಮಾಧವ, 12. ವಿಲಾಸಿಕಾ:, 13. ದುರ್ಮಲ್ಲಿಕಾ: ಬಿಂದುಮತೀ, 14. ಪ್ರಕರಣಿಕಾ, 15. ಹಲ್ಲೀಶ: ಕೇಲಿರೈವತಕ, 16. ಭಾಣಿಕಾ : ವೀಣಾವತೀ, ಈ ಹದಿನಾರರೊಂದಿಗೆ ನಾಟಿಕೆ, ತ್ರೋಟಕಗಳು ಸೇರಿದರೆ 18. ಆಗುತ್ತವೆ.

ಶಾರದಾತನಯನ ಅಭಿಪ್ರಾಯದಂತೆ ಇನ್ನೂ ನಾಲ್ಕಿವೆ : 1. ಪಾರಿಜಾತಲತಾ : ಗಂಗಾತರಂಗಿಕಾ, 2. ಕಲ್ಪವಲ್ಲೀ : ಮಾಣಿಕ್ಯವಲ್ಲಿಕಾ 3. ಡೊಂಬಿಕಾ: ಗುಣ ಮಾಲಾ, ಚೂಡಾಮಣಿ, 4. ಭಾಣ: ನಂದೀಮತೀ, ಶೃಂಗಾರ ಮಂಜರೀ.

ಈ ಉದಾಹರಣೆಗಳು ಅಭಿನವ ಭಾರತೀ, ಸರಸ್ವತೀಕಂಠಾಭರಣ, ಶೃಂಗಾರ ಪ್ರಕಾಶ, ದಶರೂಪಕ, ನಾಟ್ಯ ದರ್ಪಣ, ಸಾಹಿತ್ಯದರ್ಪಣ ಇತ್ಯಾದಿ ಗ್ರಂಥಗಳಲ್ಲಿದ್ದರೂ ಕೇವಲ ಹೆಸರಿಗೆ ಮಾತ್ರ ಇವೆ. ಉಪರೂಪಕಗಳಲ್ಲಿ ನಾಟಿಕೆ, ತ್ರೋಟಕ, ಸಟ್ಟಕ ಇಷ್ಟು ಮಾತ್ರ ಪ್ರಚಲಿತ. ಉಪರೂಪಕಗಳು ಎಷ್ಟು, ಅವುಗಳಲ್ಲಿ ಯಾವುವು ಉಪಲಬ್ಧ ಎಂಬ ವಿಷಯವನ್ನು ಎಂ. ಕೃಷ್ಣಮಾಚಾರ್ಯರು ತಮ್ಮ ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಸೂಚಿಸಿರುವರು. ಉಪರೂಪಕಗಳಲ್ಲಿ ನಾಟ್ಯಾಂಶ ಹೆಚ್ಚು; ಜಾನಪದ ನೃತ್ಯಗಳಿಗೂ ಪ್ರವೇಶವುಂಟು. ಗೀತಕ್ಕೂ ಪ್ರಾಶಸ್ತ್ಯ; ಆದರೆ ಇವಕ್ಕೆ ನಾಟಕದ ಗಾಂಭೀರ್ಯವಿಲ್ಲ, ಪ್ರಾಚೀನ ಭಾರತದ ರಂಗಭೂಮಿಯ ಪರಿಜ್ಞಾನಕ್ಕೆ ಜನಪದ ನಾಟಕ ಜಾತಿಗಳ ವಿಕಾಸದ ಕಲ್ಪನೆಗೆ ಇವುಗಳ ಅಧ್ಯಯನ ಉಪಯುಕ್ತವಾಗುತ್ತದೆ. (ಜಿ.ಎಂ.)

**ಉಪವಾಸ:** ಊಟ ಮಾಡದಿರುವುದು. ಇದಕ್ಕೆ ಆಹಾರದ ಅಭಾವ ಒಂದು ಕಾರಣವಿರಬಹುದು. ಆಹಾರ ಸಿಕ್ಕದಿದ್ದಾಗ ಉಪವಾಸ ಕಡ್ಡಾಯ. ಅಭಾವ ಪರಿಸ್ಥಿತಿ ಎಲ್ಲ ಕಾಲಗಳಲ್ಲೂ ಉಂಟು, ಇಂಥ ಪರಿಸ್ಥಿತಿಯಲ್ಲಿ ಜನ ಒಂದೆರಡು ದಿವಸಗಳ ಪರ್ಯಂತ ಅಥವಾ ಒಪ್ಪತ್ತು ಉಪವಾಸ ಮಾಡಬೇಕಾಗುತ್ತದೆ. ಅಭಾವ ಪರಿಸ್ಥಿತಿಯಲ್ಲಿ ಅಲ್ಲದೆ ಆಹಾರ ಯಥೇಚ್ಛವಾಗಿ ಲಭಿಸಿದ ಕಾಲದಲ್ಲೂ ಅತಿಯಾಗಿ ಉಂಡವ ಲಂಘನವನ್ನು ಔಷಧವಾಗಿ ಉಪಯೋಗಿಸಬೇಕಾಗುತ್ತದೆ. ಆರೋಗ್ಯಶಾಸ್ತ್ರ ರೀತ್ಯ ಉಪವಾಸ ಉತ್ತಮವಾದ ಶುದ್ಧೀಕರಣವಿಧಿ, ಅನೇಕ ರೋಗಗಳಲ್ಲಿ ಉತ್ತಮ ಚಿಕಿತ್ಸಾ ವಿಧಾನ, ವಾರಕ್ಕೊಮ್ಮೆ ಪೂರ್ಣ ಉಪವಾಸವನ್ನು ಆಚರಿಸುವುದರಿಂದ ಅಥವಾ ಫಲಾಹಾರವಿಧಿಯನ್ನು ಪಾಲಿಸುವುದರಿಂದ ಶರೀರ ಬಾಧೆಗಳು ದೂರವಾಗುತ್ತವೆ. ಜೀರ್ಣಶಕ್ತಿ ಕುದುರುತ್ತದೆ. ಇದರಂತೆ ನೆಗಡಿ ಕೆಮ್ಮಲಿನಂಥ ರೋಗಗಳು ನಿವಾರಣೆಯಾಗುತ್ತವೆ. ಆ ಹೊತ್ತಿನಲ್ಲಿ ಮೈಯಲ್ಲಿನ ಸ್ನಾಯುಗಳು, ಈಲಿಯಲ್ಲಿರುವ ಆಹಾರ ವಸ್ತು, ಊತಕಗಳಲ್ಲಿ ಹೆಚ್ಚಾಗಿ ಸೇರಿಕೊಂಡಿರುವ ಕೊಬ್ಬು ಬಳಕೆಯಾಗಿ ಕರಗುವುದು. ಸ್ನಾಯುಗಳು, ಈಲಿಯಲ್ಲಿರುವ ಮಿಗದಿಟ್ಟಿನ (ಗ್ಲೈಕೊಜನ್) ತೆರನ ಸಕ್ಕರೆಜನಿಕ ಪದಾರ್ಥಗಳೇ ಮೊದಲು ಕರಗುತ್ತವೆ, ಆಮೇಲೆ ಕೊಬ್ಬು. ಉಪವಾಸ ಅಲ್ಲಿಗೂ ನಿಲ್ಲದೆ ಮುಂದುವರಿದರೆ, ಮೈಯ ಸ್ನಾಯುತೆರನ ಪ್ರೋಟೀನುಗಳೂ ಬಳಕೆ ಆಗುತ್ತವೆ. ಸಿಹಿಮೂತ್ರ ರೋಗಿಸೊರಗುವುದು ಇದೇ ಕಾರಣದಿಂದ, ಹೀಗಾಗಲು ಬಿಟ್ಟರೆ, ವ್ಯಾಪಾರಕ್ಕಿಳಿದವ ಅಸಲನ್ನೇ ನುಂಗುತ್ತ ಹೋದ ಹಾಗಾಗುತ್ತದೆ. ಹೀಗಾಗದಂತೆ ನೋಡಿಕೊಳ್ಳ ಬೇಕು, ಬೆಳೆಯುತ್ತಿರುವ ಮಕ್ಕಳು, ಸಿಹಿಮೂತ್ರವೇ ಮೊದಲಾದ ರೋಗವಿರುವವರು, ಬಸುರಿಯರು, ಹಾಲೂಣಿಸುತ್ತಿರುವ ತಾಯಂದಿರಿಗೆ ಉಪವಾಸ ತರವಲ್ಲ.

ಅಜೀರ್ಣತೆ, ಕರುಳಿನ ಬೇರೂರಿದ ವಿಷವೇರಿಕೆ, ವಿಶೇಷ ಸಮಾರಂಭಗಳಲ್ಲಿ ತಿಂದು ಕಟ್ಟರೆ ಆಗಿರುವಿಕೆ, ಬೊಜ್ಜು, ಮತ್ತಿತರ ಜೀವವಸ್ತುಕರಣದ ತಾರುಮಾರುಗಳಲ್ಲಿ ಈ ಚಿಕಿತ್ಸಾವಿಧಾನ ಬಲುಒಳ್ಳೆಯದು. ಉಪವಾಸ ಮಾಡುತ್ತಿರುವಾಗ ಎಳನೀರು, ಬರೀ ನೀರು, ಹಣ್ಣಿನ ರಸಗಳನ್ನು ಚೆನ್ನಾಗಿ ಕುಡಿಯುತ್ತಿರಬಹುದು. ತಕ್ಕಾಳಿ (ಟೊಮ್ಯಾಟೊ) ರಸ, ತಿಳಿ ಚಹ, ತೀರ ತಿಳಿಯಾದ ಕಟ್ಟು, ತಿಳಿಸಾರು ಸಲ್ಲುತ್ತವೆ. ಕಾರ, ಸಿಹಿ ಪಾನಕಗಳು ಇರಬಾರದು ಅಷ್ಟೇ ವೈದ್ಯನ ಉಸ್ತುವಾರಿ ಇಲ್ಲದೆ ನಾಲ್ಕೈದುದಿನಗಳು ಮೀರಿ, ಯಾರಾದರೂ ಸರಿಯೇ, ಉಪವಾಸವನ್ನು ಮುಂದುವರಿಸಬಾರದು, ಅದರಿಂದ ಎರಡನೆಯ ದಿನವೇ ಮೊದಲಾಗುವ ಹಾನಿಕರ ರಕ್ತಾಮ್ಲತೆ ಮತ್ತಷ್ಟು ಏರುತ್ತದೆ. ದಿನವೂ ಮಲ ಮೂತ್ರಗಳು ಚೆನ್ನಾಗಿ ಆಗುವಂತೆ ನೋಡಿಕೊಳ್ಳಬೇಕು. ಅಂಗಸಾಧೆಯನ್ನು ಕೊಂಚ ಕೊಂಚ, ಕೈಲಾಗುವಷ್ಟು ಮಾಡುತ್ತಿರಬಹುದು. ಮೊದಲ ದಿನ ಮಾತ್ರ ಹಸಿವು ಕಾಣಿಸುವುದು ಆಮೇಲಿರದು.

ನೀರು ಬೆರೆಸಿದ ಹಾಲಿಂದಲೋ ಇಡ್ಲಿ, ನಾನ್ ರೊಟ್ಟಿ ಮತ್ತು ಬೆಣ್ಣೆಯಿಂದಲೋ ಉಪವಾಸವನ್ನು ಮುರಿಯಬಹುದು. ಬರಬರುತ್ತ ಪ್ರಮಾಣವನ್ನೂ ಬಗೆಗಳನ್ನೂ ಕೆಲವು ದಿನಗಳಲ್ಲಿ ಹೆಚ್ಚಿಸುತ್ತ ಹೋಗಬೇಕು. ಉಪವಾಸ ಮುಗಿಯಲು ಕಾದಿದ್ದು ಕೂಡಲೇ ಎಂದಿನಂತೆ ಹೊಟ್ಟೆ ತುಂಬ ತುಂಬಿಸಿಕೊಳ್ಳುವುದು ಹಾನಿಕರ. ಸಾಮಾನ್ಯವಾಗಿ ಹೊಟ್ಟೆ ಬೆಳೆಯುತ್ತ ಬೊಜ್ಜಿನ ಸೂಚನೆ ಕಂಡಾಗಲೂ ದಿನವೂ ಅಡ್ಡಾಡಲು ಪುರಸೊತ್ತು ಇಲ್ಲದಾಗಲೂ

ಆಗಾಗ್ಗೆ ಏಕಾದಶಿಯಾದರೆ ಮನಸ್ಸಿಗೂ ಸಮಾಧಾನ. ದಿನವೆಲ್ಲ ಉಪವಾಸ ಮಾಡುವುದು ಆರೋಗ್ಯಕರ, ಉಲ್ಲಾಸಕರ, ಮೈ ಹಗುರವಾಗಿ ಲವಲವಿಕೆಯಾಗಿರುತ್ತದೆ. ಪೂರ್ತಿಉಪವಾಸ ಮಾಡಿದರೆ ದಿನಕ್ಕೆ ಸರಾಸರಿ ಒಂದು ಕಿಲೋಗ್ರಾಂ ಮೈತೂಕವಾದರೂ ಕಳೆವುದು.

(ಡಿ.ಎಸ್.ಎಸ್.)

ಇಲ್ಲಿ ಪ್ರಸಕ್ತವಾದದ್ದು ಆಚಾರವಾಗಿ ಅನುಸರಿಸುವ ಉಪವಾಸ.

ಉಪವಾಸ ತುಂಬ ಪ್ರಾಚೀನವಾದ ಆಚಾರ. ಇದು ಕಾಡು ಜನರಲ್ಲೂ ಉಂಟು, ಊರು ಜನರಲ್ಲೂ ಉಂಟು. ಬ್ಯಾಬಿಲೋನಿಯ, ಈಜಿಪ್ಟ್, ಪರ್ಷಿಯ, ಭಾರತ, ಚೀನ ಮುಂತಾದ ಎಲ್ಲ ನಾಗರಿಕ ಜನಾಂಗದವರೂ ಒಂದಲ್ಲ ಒಂದು ರೀತಿಯಲ್ಲಿ ಉಪವಾಸವನ್ನು ತಮ್ಮ ಮತಾಚಾರವಾಗಿ ಅನುಸರಿಸುತ್ತಾರೆ. ಹಿಂದೂ, ಬೌದ್ಧ, ಜೈನ, ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮದವರು ಉಪವಾಸವನ್ನು ಆಚರಿಸುತ್ತಾರೆ.

ಉಪವಾಸ ದೀರ್ಘ ಕಾಲದ್ದಾಗಿರಬಹುದು ಅಥವಾ ಅಲ್ಪ ಕಾಲದ್ದಾಗಿರಬಹುದು. ಉಪವಾಸದ ಅವಧಿ ನಲವತ್ತು ದಿವಸಗಳಷ್ಟು ದೀರ್ಘವಾಗಿರಬಹುದು ಅಥವಾ ಕೇವಲ ಒಂದು ಹೊತ್ತಿನಷ್ಟು ಹ್ರಸ್ವವಾಗಿರಬಹುದು. ಯೇಸುಕ್ರಿಸ್ತ ತನ್ನ ಪ್ರಚಾರ ಕಾರ್ಯವನ್ನು ಆರಂಭಿಸುವುದಕ್ಕೆ ಮುಂಚೆ ನಲವತ್ತು ದಿವಸಗಳಷ್ಟು ದೀರ್ಘಕಾಲ ಉಪವಾಸವನ್ನು ಆಚರಿಸಿದ. ಉಪವಾಸ ಸಂಪೂರ್ಣ ಉಪವಾಸವಾಗಿರಬಹುದು. ಇಂಥ ಕಠಿಣ ಉಪವಾಸ ಕಾಲದಲ್ಲಿ ಒಂದು ಗುಟುಕು ನೀರನ್ನು ಕೂಡ ಕುಡಿಯಕೂಡದು, ಇದನ್ನು ನಿರ್ಜಲ ಉಪವಾಸವೆಂದು ಕರೆಯುವುದುಂಟು. ಜೀವನದಿಂದ ಮುಕ್ತರಾಗಲು ಜೈನರು ಆಮರಣಾಂತ ಉಪವಾಸ ಮಾಡುವ ವ್ರತವನ್ನು ಇಟ್ಟುಕೊಂಡಿದ್ದಾರೆ. ಉಪವಾಸ ಅರೆ ಉಪವಾಸವಾಗಿರ ಬಹುದು. ನಿತ್ಯಗಟ್ಟಲೆ ಉಪಯೋಗಿಸುವ ಬೇಯಿಸಿದ ಆಹಾರವನ್ನು ಬಿಟ್ಟು, ಹಾಲು ಹಣ್ಣುಗಳನ್ನು ಸೇವಿಸುವುದು ಅಂದರೆ ಫಲಾಹಾರ ಅರೆ ಹೊಟ್ಟೆಯ ಉಪವಾಸ.

ಉಪವಾಸವನ್ನು ಆಚರಿಸುವ ಸಂದರ್ಭಗಳು ಅನೇಕವಾಗಿವೆ. 1. ಕಾಡುಜನರಲ್ಲಿ ಗರ್ಭಿಣಿ ಕೆಲವು ಬಗೆಯ ಆಹಾರಗಳನ್ನು ತಿನ್ನಕೂಡದು. 2. ಹಾಗೆಯೇ ಪ್ರಸವ ಕಾಲದಲ್ಲೂ ಪ್ರಸವಿಸಿದ ತಾರುಣ್ಯದಲ್ಲೂ ಮಗುವಿನ ತಂದೆತಾಯಿಯರು ಕೆಲವು ಬಗೆಯ ಆಹಾರಗಳನ್ನು ತಿನ್ನಕೂಡದು. ಈ ನಿಷೇಧಗಳು ಮಲನೇಸಿಯ, ನ್ಯೂಗಿನಿ ಮತ್ತು ಅಸ್ಸಾಮಿನ ಕಾಡುಜನರಲ್ಲಿ ಬಳಕೆಯಲ್ಲಿವೆ. ಕ್ಯಾರಿಬ್ ಜನರಲ್ಲಿ ತಂದೆ ಶಿಶುವಿನ ಜನನ ಕಾಲದಿಂದ ನಲವತ್ತು ದಿವಸಗಳ ಪರ್ಯಂತ ಕೆಲವು ಬಗೆಯ ಆಹಾರಗಳನ್ನು ತಿನ್ನಕೂಡದು. 3. ಬ್ರಿಟಿಷ್ ಕೊಲಂಬಿಯದ ಕಾಡುಜನರಲ್ಲಿ ಋತುಮತಿಯಾದವಳು ನಾಲ್ಕು ದಿವಸಗಳ ಕಾಲ ಮಾಂಸವನ್ನು ತಿನ್ನಕೂಡದು. 4. ಮದುವೆಗೆ ಮುಂಚೆ ಕನ್ಯೆ ಉಪವಾಸವನ್ನು ಆಚರಿಸಬೇಕೆಂಬ ಕಟ್ಟಲೆಯನ್ನು ಪ್ರಾಚೀನ ಚೀನೀಯರು ಆಚರಿಸುತ್ತಿದ್ದರು. 5. ಶವಸಂಸ್ಕಾರದ ಕಾಲದಲ್ಲಿ ಉಪವಾಸ ಮಾಡುವುದು ಬಹುಶಃ ಎಲ್ಲ ಬಗೆಯ ಜನರಲ್ಲೂ ಬಳಕೆಯಲ್ಲಿದೆ. ಅಂಡಮಾನ್ ದ್ವೀಪದ ಆದಿವಾಸಿಗಳು ಶೋಕದ ಹೆಗ್ಗುರುತಾಗಿ ಉಪವಾಸವನ್ನು ಅವಲಂಬಿಸುತ್ತಾರೆ. ಈ ಉಪವಾಸದ ಅವಧಿ ಹತ್ತು ದಿವಸಗಳಿಂದ ಇಪ್ಪತ್ತು ದಿವಸಗಳಷ್ಟು ದೀರ್ಘವಾಗಿರಬಹುದು. ಹಿಂದುಗಳು ಶವಸಂಸ್ಕಾರ ಕಾಲದಲ್ಲಿ 11ನೆಯ ದಿವಸ ಒಪ್ಪತ್ತು ಉಪವಾಸ ಮಾಡುತ್ತಾರೆ. ಪ್ರಾಚೀನ ಚೀನೀಯರಲ್ಲಿ ಮಗನಾದವ ತಂದೆ, ತಾಯಿ ಅಥವಾ ಗುರುವಿನ ಸಮಾಧಿಯ ಬಳಿ ವಾಸಿಸುತ್ತ ಮೂರು ವರ್ಷಗಳ ಕಾಲ ಅರೆ ಉಪವಾಸವನ್ನು ಆಚರಿಸುತ್ತಿದ್ದ. ಕೂಂಗ್ ಫುಷೆಯ ಸಮಾಧಿಯ ಬಳಿ ಅವನ ಶಿಷ್ಯನೊಬ್ಬ ಗುರಿವಿನ ಆತ್ಮಕ್ಕೆ ತೃಪ್ತಿಯಾಗಲೆಂದು ಮೂರು ವರ್ಷಗಳ ಕಾಲ ಅರೆ ಉಪವಾಸವನ್ನು ಆಚರಿಸಿದನಂತೆ. 6. ಮಾಟಮಂತ್ರಗಳಲ್ಲಿ ತೊಡಗಿದವರು ಮಂತ್ರಶಕ್ತಿಯನ್ನು ಸಿದ್ಧಿಸಿಕೊಳ್ಳಲು ಉಪವಾಸವನ್ನು ಆಚರಿಸುತ್ತಾರೆ. ಬ್ಯಾಂಕ್ ದ್ವೀಪದ ಮಾಟಗಾರರು, ಮಾವೊರಿ ಮಾಟಗಾರರು ಯಾವುದಾದರೂ ಒಂದು ಮಾಟವನ್ನು ಕೈಕೊಳ್ಳುವ ಮುಂಚೆ ಹಲವು ದಿನಗಳ ಉಪವಾಸವನ್ನು ಕೈಗೊಳ್ಳುತ್ತಾ. 7. ಕಾಡು ಜನ ತಮ್ಮ ಮಕ್ಕಳಿಗೆ ದೀಕ್ಷೆ ಕೊಡುವ ಕಾಲದಲ್ಲಿ ಉಪವಾಸವನ್ನು ನಿಯಮಿಸುತ್ತಾರೆ. ನ್ಯೂ ಹೆಬ್ರಿಡೀಸಿನ ಮತ್ತು ನ್ಯೂಗಿನಿಯ ಕಾಡುಜನ ದೀಕ್ಷೆ ಕೊಡುವುದಕ್ಕೆ ಮೂವತ್ತು ದಿವಸಗಳ ಮುಂಚಿನಿಂದ ಉಪವಾಸ ಮಾಡುತ್ತಾರೆ. ಹೀಗೆ ಕೆಲವು ಕಾಲ ಉಪವಾಸವನ್ನು ಆಚರಿಸಿದಾಗ ದೀಕ್ಷೆ ಪಡೆಯುವವನಿಗೆ ಕನಸಿನಲ್ಲಿ ಅವನ ಇಷ್ಟದೈವ ಪ್ರತ್ಯಕ್ಷವಾಗುತ್ತದೆ. ಈ ನಂಬಿಕೆ ಹೀಬ್ರೂ ಜನರಲ್ಲೂ ಇತ್ತು. ಮೋಸೆಸ್ ಪರ್ವತದ ಶಿಖರದ ಮೇಲೆ ಯಾಹವೇಯಿಂದ ಸಂದೇಶವನ್ನು ಪಡೆಯಲು ನಲವತ್ತು ದಿವಸಗಳ ಉಪವಾಸವನ್ನು ಆಚರಿಸಿದ. ಈ ಯೆಹೂದಿ ಆಚಾರ ಕ್ರೈಸ್ತರಲ್ಲೂ ಮುಂದುವರಿದಿದೆ. 8. ಪಾಪವಿಮೋಚನೆಗಾಗಿ, ಪ್ರಾಯಶ್ಚಿತ್ತ ನಿಮಿತ್ತವಾಗಿ ಉಪವಾಸವನ್ನು ಆಚರಿಸುವುದು. ಇದು ವಿಶೇಷವಾಗಿ ಮೇಲ್ಮಟ್ಟದ ಮತಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ಮತಗಳಲ್ಲಿ ಪ್ರಾರ್ಥನೆ ಉಪವಾಸದ ಒಂದು ಮುಖ್ಯ ಅಂಗವಾಗಿರುತ್ತದೆ. 9. ಸಂನ್ಯಾಸವನ್ನು ಅವಲಂಬಿಸುವ ಮತಗಳಲ್ಲಿ ಉಪವಾಸ ಒಂದು ಮುಖ್ಯ ಅಂಗ, ಈ ಎರಡು ಬಗೆಯ ಉಪವಾಸಗಳು ಬೌದ್ಧ, ಹಿಂದೂ, ಕ್ರೈಸ್ತ ಮತ್ತು ಇಸ್ಲಾಂ ಮತದವರಲ್ಲಿ ವಿಶೇಷವಾಗಿ ಬಳಕೆಯಲ್ಲಿವೆ.

ಹಿಂದುಗಳಲ್ಲಿ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಉಪವಾಸವನ್ನು ಕೈಗೊಳ್ಳುತ್ತಾರೆ. ಇದು ಮನುವಿನ ಕಾಲದಷ್ಟು ಆರ್ಷೇಯ ಪದ್ಧತಿ. ಪ್ರಾಯಶ್ಚಿತ್ತ ನಿಮಿತ್ತವಾಗಿ ಅಲ್ಲದೆ ದೇವರ ಪ್ರೀತಿಗಾಗಿ ಉಪವಾಸವನ್ನು ಆಚರಿಸುವುದುಂಟು. ಏಕಾದಶಿ ಉಪವಾಸ ಸರ್ವರಲ್ಲೂ ಸಾಧಾರಣ. ಮಾಧ್ವರು ಏಕಾದಶಿಯ ವ್ರತವನ್ನು ತುಂಬ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ದೊಡ್ಡ ಏಕಾದಶಿಯ ದಿನ ಶೂದ್ರರೂ ಉಪವಾಸ ಮಾಡುತ್ತಾರೆ. ಪಿತೃಗಳ ಪ್ರೀತ್ಯರ್ಥವಾಗಿ ಹಿಂದುಗಳು ಅಮವಾಸ್ಯೆ ಮತ್ತು ಪೂರ್ಣಿಮೆ ದಿನಗಳಂದು ಒಂದು ಹೊತ್ತು ಮಾತ್ರ ಊಟ ಮಾಡುತ್ತಾರೆ. ಶಿವರಾತ್ರಿ ಶೈವರಿಗೆ ಉಪವಾಸದ ದಿನ. ಋಷಿಪಂಚಮಿಯನ್ನು ಆಚರಿಸುವವರು ಮೂರು ದಿನಗಳ ಕಾಲ ಉಪವಾಸ ಮಾಡುತ್ತಾರೆ. ಈ ದೊಡ್ಡ ಉಪವಾಸದ ದಿನಗಳಲ್ಲಿ ಅಲ್ಲದೆ ಕೆಲವರು ಶನಿವಾರ ರಾತ್ರಿ, ಗುರುವಾರ, ಕಾರ್ತಿಕ ಸೋಮವಾರ ಇತ್ಯಾದಿ ದಿನಗಳಲ್ಲೂ ಉಪವಾಸ ಮಾಡುವುದೂ ಉಂಟು. ಸನ್ಯಾಸಿಗಳು ಸಾಮಾನ್ಯವಾಗಿ ನಿತ್ಯವೂ ಒಂದು ಹೊತ್ತು ಮಾತ್ರ ಊಟ ಮಾಡುತ್ತಾರೆ. ಕೆಲವು ನಿರ್ದಿಷ್ಟಕಾಲಗಳಲ್ಲಿ, ಮುಖ್ಯವಾಗಿ ತಪಸ್ಸು ಮಾಡುವ ಕಾಲದಲ್ಲಿ, ದೀರ್ಘಕಾಲ ಉಪವಾಸ ಮಾಡುತ್ತಾರೆ. ದೇಹದಂಡನೆ, ಇಂದ್ರಿಯ ನಿಗ್ರಹ ಈ ಉಪವಾಸಗಳ ಉದ್ದೇಶ, ಮಹಾತ್ಮ ಗಾಂಧಿ ಕೈಗೊಂಡ ಉಪವಾಸಗಳು ಪ್ರಾಯಶ್ಚಿತ್ತ ರೂಪವಾದವು. ಅವುಗಳ ಉದ್ದೇಶ, ಆತ್ಮಶೋಧನೆ, ಆತ್ಮಶುದ್ಧಿ, ಅವು ರಾಜಕೀಯ ಸಂದರ್ಭಗಳಲ್ಲಿ ಕೈಗೊಂಡುವಾದರೂ ಅವುಗಳ ಉದ್ದೇಶ ಲೌಕಿಕವಾದದ್ದಲ್ಲ, ಆಧ್ಯಾತ್ಮಿಕವಾದದ್ದು.

ಜೈನಧರ್ಮೀಯರು ಕಠಿಣ ಉಪವಾಸವನ್ನು ಆಚರಿಸುತ್ತಾರೆ. ಮಹಾವೀರ ಸಿದ್ಧಿಯನ್ನು ಪಡೆಯುವುದಕ್ಕೆ ಮುಂಚೆ ಅನೇಕ ಘಟ್ಟಗಳಲ್ಲಿ ಮೂರು ದಿನಗಳ ಕಾಲ ಉಪವಾಸವನ್ನು ಆಚರಿಸಿದ. ಬುದ್ಧ ಕಠಿಣ ಉಪವಾಸವನ್ನು ನಿಷೇಧಿಸಿದರೂ ಭಿಕ್ಷುಗಳು ಹಿಂದುಗಳಂತೆ ಪಕ್ಷಾಂತ್ಯದಲ್ಲಿ ಉಪವಾಸವನ್ನು ಕೈಗೊಳ್ಳುತ್ತಾರೆ. ಲಾಮಾಗಳು ತಿಂಗಳ 13, 15, 29ಮತ್ತು 30ನೆಯ ದಿನಗಳಂದು ತಾವು ಮಾಡಿದ ತಪ್ಪುಗಳನ್ನು ಒಪ್ಪಿಕೊಂಡು, ಬೌದ್ಧ ನಿಯಮಗಳನ್ನು ಪಠಿಸಿ ಉಪವಾಸವನ್ನು ಆಚರಿಸುತ್ತಾರೆ. ಈ ಉಪವಾಸ ದಿನಗಳಿಗೆ ಉಪೋಸ್ಥ ದಿನಗಳೆಂದು ಹೆಸರು. ಬುದ್ಧ ನಿರ್ವಾಣ ಪಡೆದ ದಿನಕ್ಕೆ ಐದು ದಿನಗಳ ಮುಂಚೆ ಅವರು ಉಪವಾಸವನ್ನು ಪ್ರಾರಂಭಿಸುತ್ತಾರೆ.

ಮುಸ್ಲಿಮರು ಪ್ರಾಯಶ್ಚಿತ್ತ ರೂಪವಾಗಿ ಉಪವಾಸ ಮಾಡಬೇಕೆಂದು ಕುರಾನು ವಿಧಿಸಿರುತ್ತದೆ. ಒಬ್ಬ ಮುಸ್ಲಿಮ ಇನ್ನೊಬ್ಬ ಮುಸ್ಲಿಮನನ್ನು ಕೊಂದಾಗ, ದಂಡ ತೆರಲಾಗದಿದ್ದರೆ ಎರಡು ತಿಂಗಳ ಕಾಲ ಉಪವಾಸವನ್ನು ಆಚರಿಸಬೇಕು, ಮಾತಿಗೆ ತಪ್ಪಿದವ ಹತ್ತು ಜನ ಬಡ ಮುಸ್ಲಿಮರಿಗೆ ಅನ್ನ ಹಾಕಬೇಕು. ಹಾಗೆ ಮಾಡಲಾಗದವ ಮೂರು ದಿನಗಳವರೆಗೆ ಉಪವಾಸವಿರಬೇಕು. ಮುಸ್ಲಿಮರು ಉಪವಾಸವನ್ನು ಪ್ರಾಯಶ್ಚಿತ್ತವಾಗಿ ಅಲ್ಲದೆ ಅದನ್ನು ಒಂದು ವ್ರತವಾಗಿ ಆಚರಿಸಬೇಕೆಂದು ಕುರಾನು ವಿಧಾಯಕ ಮಾಡಿರುತ್ತದೆ. ಅದು ಉಪವಾಸವನ್ನು ಒಂದು ಸತ್ಕಾರ್ಯವಾಗಿ ಗಣಿಸಿದೆ. ಹಜ್ ಯಾತ್ರೆಗೆ ಹೋಗುವುದಕ್ಕೆ ಮೂರು ದಿನಗಳ ಮುಂದೆ ಮುಸ್ಲಿಮನಾದವ ಉಪವಾಸ ಕೈಗೊಳ್ಳಬೇಕು. ಯಾತ್ರೆಯಿಂದ ಹಿಂತಿರುಗಿದ ಮೇಲೆ ಏಳು ದಿವಸ ಉಪವಾಸ ಮಾಡಬೇಕು. ರಂಜಾನ್ ಕಾಲದಲ್ಲಿ ಮೂವತ್ತು ದಿನಗಳ ಪರ್ಯಂತ ಮುಂಜಾನೆಯಿಂದ ಸಂಜೆಯ ವರೆಗೆ ಮುಸ್ಲಿಮ ನೀರನ್ನು ಕೂಡ ಕುಡಿಯಕೂಡದು. ಮೊಹರಂ ಹತ್ತನೆಯ ದಿವಸ ಮುಸ್ಲಿಮರು ಉಪವಾಸ ವನ್ನು ಆಚರಿಸಬೇಕು. ಈ ಸಂದರ್ಭಗಳಲ್ಲಿ ಅಲ್ಲದೆ ಮುಸ್ಲಿಮರಲ್ಲಿ ಕೆಲವರು ಸೋಮವಾರ ಮತ್ತು ಗುರುವಾರಗಳಲ್ಲಿ ಉಪವಾಸವಿರುತ್ತಾರೆ. ಕುರಾನಿನ ಪ್ರಕಾರ ಉಪವಾಸ ಮಾಡಿದ ಮುಸ್ಲಿಮನ ಬಾಯ ವಾಸನೆ ದೇವರಿಗೆ ಪುನಗಿಗಿಂತ ಪ್ರಿಯವಾದದ್ದು. ಪೈಗಂಬರ್ ಮಹಮದ್ ಸನ್ಯಾಸವನ್ನು ಒಪ್ಪಲಿಲ್ಲ. ಮಹಮದನ ಅನಂತರ ಹುಟ್ಟಿದ ಸೂಫಿ ಪಂಥದ ಸನ್ಯಾಸಿಗಳಲ್ಲಿ ಉಪವಾಸ ಸನ್ಯಾಸದ ಒಂದು ಮುಖ್ಯ ಅಂಗವಾಯಿತು.

ಯೇಸುಕ್ರಿಸ್ತ ಉಪವಾಸದ ಬಗ್ಗೆ ಕಟ್ಟುನಿಟ್ಟಾದ ಸೂತ್ರಗಳನ್ನೇನೂ ರಚಿಸಲಿಲ್ಲ. ಆಗಿನ ಕಾಲದ ಯೆಹೂದ್ಯರಲ್ಲಿ ವಾಡಿಕೆಯಿದ್ದಂತೆ ಆತ ಪ್ರಾಯಶ್ಚಿತ್ತ ದಿನದಂದು ಉಪವಾಸ ಮಾಡುತ್ತಿದ್ದ; ತನ್ನ ಪೌರೋಹಿತ್ಯವನ್ನಾರಂಭಿಸುವ ಮುನ್ನ ನಲವತ್ತು ದಿನಗಳಕಾಲ ಉಪವಾಸ ಮಾಡಿದ. ಆದರೆ ಅವನ ಶಿಷ್ಯರು ಯಾರೂ ಆ ಕಾಲದಲ್ಲಿ ಉಪವಾಸ ಮಾಡುತ್ತಿರಲಿಲ್ಲ. ಮದುವಣಿಗ ಜತೆಯಲ್ಲಿದ್ದನಾದ್ದರಿಂದ ಇದು ಅಗತ್ಯವಿಲ್ಲವೆಂದು ಆಗಿದ್ದ ನಂಬಿಕೆ. ಮುಂದೆ ಮದುವಣಿಗನನ್ನು ಕೊಂಡೊಯ್ಯುವ ದಿನ ಬಂದಾವು; ಆಗ ಅಂಥ ದಿನದಲ್ಲಿ ಉಪವಾಸ ಮಾಡಬೇಕು–ಎಂದಷ್ಟೇ ಯೇಸು ಹೇಳಿದ್ದ. ಉಪವಾಸದಲ್ಲಿ ಆಡಂಬರ ಇರದಿರಲಿ ಎಂದೂ ಆತನ ನಿರೂಪ.

ಉಪವಾಸ ವಿಚಾರದಲ್ಲಿ ಯೇಸು ಈ ರೀತಿ ತಾತ್ತ್ವಿಕವಾಗಿಯಷ್ಟೇ ವಿಚಾರ ನಡೆಸಿದ್ದ ರಿಂದ ಆತನ ಅನಂತರ ಚರ್ಚ್ ಬಲು ತಡವಾಗಿ ಈ ಬಗ್ಗೆ ವಿಧಿಗಳನ್ನು ರಚಿಸಿತು. ಕ್ರಿಸ್ತ ಹೇಳಿದ ಮದುವಣಿಗನೆಂಬ ಮಾತನ್ನು ಕ್ರೈಸ್ತರು ಅಕ್ಷರಶಃ ಅನ್ವಯ ಮಾಡಿಕೊಂಡರು; ಈಸ್ಟರ್ ಹಬ್ಬದ ಕಾಲದಲ್ಲಿ ಉಪವಾಸದ ಅವಧಿಯನ್ನು ಬೆಳೆಸಿದರು.

ಪ್ರಾಯಶ್ಚಿತ್ತ ದಿನದಂದು ಉಪವಾಸ ಮಾಡುತ್ತಿದ್ದ ಯೆಹೂದ್ಯರು ಮುಂದೆ ಇನ್ನೂ ಅನೇಕ ದಿನಗಳಲ್ಲಿ ಸ್ವಯಂ ಇಚ್ಛೆಯಿಂದ ಉಪವಾಸ ಮಾಡಲಾರಂಭಿಸಿದರು. ಆದರೆ ಕ್ರೈಸ್ತರ ಉಪವಾಸ ದಿನಗಳು ಹೆಚ್ಚಲು ಪ್ರಬಲಕಾರಣಗಳಿದ್ದವು. ಧರ್ಮೋಪದೇಶದ ಬೆಟ್ಟಕ್ಕೆ (ಹಿರ್) ಮೋಸೆಸ್ ಹೋಗಿದ್ದು ಗುರುವಾರದಂದು, ಆತ ಅಲ್ಲಿಂದ ಹಿಂದಿರುಗಿದ್ದು ಸೋಮವಾರ, ಈ ಕಾರಣದಿಂದ ಸೋಮವಾರ ಗುರುವಾರಗಳು ಕ್ರೈಸ್ತರಿಗೆ ಪವಿತ್ರ. ಇವೂ ಉಪವಾಸದದಿನಗಳು.

ಲೆಂಟಿನ ನಲವತ್ತು ದಿವಸಗಳು, ಎಂಬರ್ ದಿನಗಳು, ರೋಗೇಷನ್ ದಿನಗಳು, ಶುಕ್ರವಾರಗಳೂ—ಉಪವಾಸ ದಿನಗಳೆಂದು ಇಂಗ್ಲೆಂಡಿನ ಮತ್ತು ರೋಮಿನ ಚರ್ಚ್‌ಗಳು ವಿಧಾಯಕ ಮಾಡಿವೆ. ಈ ದಿನಗಳಲ್ಲಿ ಅಲ್ಲದೆ ದೀಕ್ಷೆ ಪಡೆಯುವವರು ದೀಕ್ಷೆ ಪಡೆಯುವ ಉಪವಾಸವನ್ನೂ ಆಚರಿಸಬೇಕು **(ನೋಡಿ– ಏಕಾದಶಿ; ಪಾರಣೆ)**. (ಜಿ.ಎಚ್.)

**ಉಪವಾಸ ಮುಷ್ಕರ:** ನ್ಯಾಯವಾದ ಬೇಡಿಕೆಗಳನ್ನು ಮೂಲೆಗೊತ್ತಿದ ಸರ್ಕಾರದ ಅಥವಾ ಯಾವುದಾದರೂ ಅಧಿಕಾರದ ವಿರುದ್ಧ ಅವರ ಮನವನ್ನು ಒಲಿಸಿಕೊಳ್ಳಲು ಪ್ರಯೋಗಿಸುವ ಒಂದು ಮಾರ್ಗ (ಹಂಗರ್ ಸ್ಟ್ರೈಕ್). ಇದು ನೈತಿಕ ಪ್ರಯೋಗವಾದ ಸತ್ಯಾಗ್ರಹದ ಒಂದು ರೂಪ. ಸಮಾಜದ ಅನ್ಯಾಯಗಳನ್ನು ವಿರೋಧಿಸಲು, ಕೇಡುಮಾಡಿದವರ ವರ್ತನೆಯನ್ನು ಬದಲಾಯಿಸಲು, ಹಲವುವೇಳೆ ತಮ್ಮ ಆತ್ಮಶುದ್ಧಿಗಾಗಿಯೂ, ಜನ ಈ ಮುಷ್ಕರವನ್ನು ಕೈಗೊಳ್ಳುತ್ತಾರೆ. ಅನ್ಯಾಯ ಮಾಡಿದವರ ಮನಸ್ಸನ್ನು ಪರಿವರ್ತಿಸುವ ಸಲುವಾಗಿ ಕೈಗೊಳ್ಳುವ ಈ ಮುಷ್ಕರದಿಂದ ತಮಗೆ ಉಂಟಾಗಬಹುದಾದ ಎಲ್ಲ ತೊಂದರೆಗಳನ್ನು ಅನುಭವಿಸಲು ಸಿದ್ಧರಾಗಿಯೂ ಇವರು ಇರುವರು. ಇಂಥ ಮುಷ್ಕರಕ್ಕೆ ತೊಡಗುವ ಜನ ಸಾಮಾನ್ಯರಿಗಿಂತ ಭಿನ್ನರಾಗಿರಬೇಕು. ನಿಷ್ಠಾವಂತರೂ ಪ್ರಾಮಾಣಿಕರೂ ಆಗಿರುವವರು ಮಾತ್ರ ಈ ಕಾರ್ಯಗಳಿಗೆ ಉದ್ಯುಕ್ತರಾದಾಗ ಅದರಿಂದ ಬರುವ ಫಲ ಮಹತ್ತ್ವಪೂರಿತವಾದುದಾಗಿರುತ್ತದೆ. ಮಹಾತ್ಮ ಗಾಂಧೀಜಿ ಈ ವಿಧಾನಕ್ಕೆ ಹೆಚ್ಚಿಗೆ ಪ್ರಾಶಸ್ತ್ಯ ಕೊಟ್ಟಿದ್ದರು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇದನ್ನು ಅನೇಕ ವೇಳೆ ಬಳಸಿದ್ದೂ ಉಂಟು. ಉಪವಾಸ ಮುಷ್ಕರ ಸ್ವಯಂ ಪ್ರೇರಿತವಾಗಿರಬೇಕು; ಹಾಗೂ ಅಹಿಂಸಾತ್ಮಕವಾಗಿರ ಬೇಕು. ಅನ್ಯಾಯದ ವಿರುದ್ಧ ಇರಬೇಕು. ಮನಸ್ಸಿನ ನೈರ್ಮಲ್ಯ, ಧಾರ್ಮಿಕ ಸತ್ಯ, ನೈತಿಕಬಲ, ಶಿಸ್ತು, ನಮ್ರತೆ ಇವನ್ನು ಪಡೆದವರು ಮಾತ್ರ ಉಪವಾಸ ಮುಷ್ಕರ ಕೈಗೊಳ್ಳಬೇಕೆಂದು ಗಾಂಧೀಜಿಯ ಅಭಿಮತ. ಇತ್ತೀಚೆಗೆ ಇದರ ವ್ಯಾಪಕತೆ, ಮಹತ್ತ್ವ ಕಡಿಮೆಯಾಗುತ್ತಿದೆ. ಏಕೆಂದರೆ ನ್ಯಾಯವಲ್ಲದ ಬೇಡಿಕೆಗಳಿಗೂ ಈ ಮುಷ್ಕರವನ್ನು ಬಳಸುತ್ತಿರುವುದರಿಂದ ಇದರ ಅಂತಃಸತ್ವ ಸವಕಲಾಗಿ ಹಾಸ್ಯಾಸ್ಪದವಾಗುತ್ತಿದೆ **(ನೋಡಿ– ಸತ್ಯಾಗ್ರಹ)**. (ಎನ್.ಎಸ್.ಎಚ್.)

**ಉಪವೀತ:** ಉಪ ಮತ್ತು ವ್ಯೇ ಇವುಗಳಿಂದ ನಿಷ್ಪನ್ನವಾಗಿದೆ. ವೇದದಲ್ಲಿ ವಿಹಿತವಾಗಿರುವಂತೆ ಬಾಲಕನನ್ನು ವೇದಾಧ್ಯಯನಕ್ಕೋಸ್ಕರ ಗುರುವಿನ ಸಾನ್ನಿಧ್ಯಕ್ಕೆ ಕರೆದೊಯ್ಯುವ ಸಮಾರಂಭವಾದ ಉಪನಯನದಲ್ಲಿ ಅವನ ಎಡಭುಜದ ಮೇಲೆ ಮತ್ತು ಬಲತೋಳಿನ ಕೆಳಗಿರುವಂತೆ ಮಾಡಿಸುವ ಯಜ್ಞಸೂತ್ರಧಾರಣೆ; ಆ ಯಜ್ಞಸೂತ್ರ; ಅದರ ಧಾರಣೆಯ ಒಂದು ಸಂಸ್ಕಾರ. ಮನುಸ್ಮೃತಿಯಲ್ಲಿ ಹೇಳಿರುವಂತೆ ಉದ್ಧೃತೇ ದಕ್ಷಿಣೇ ಪಾಣಾವುಪವೀತ್ಯುಚ್ಯತೇ ದ್ವಿಜಃ. ಬಲತೋಳನ್ನು ಎತ್ತಿ ಧರಿಸಿದಾಗ ಆ ದ್ವಿಜ ಉಪವೀತೀ ಎನ್ನಿಸಿಕೊಳ್ಳುತ್ತಾನೆ.(ಬಿ.ಕೆ.ಎಸ್.)

**ಉಪವೇದ:** ಗೌಣವೆಂದು ಪರಿಗಣಿಸಿರುವ ವೇದ. ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಶಸ್ತ್ರಶಾಸ್ತ್ರ ಎಂಬ ನಾಲ್ಕು ಉಪವೇದಗಳಿವೆ. ಇವು ಅನುಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬ ಮುಖ್ಯ ವೇದಗಳಿಗೆ ಸಂಬಂಧಪಟ್ಟಿವೆ. ಆಯುರ್ವೇದ ಅಥರ್ವವೇದಕ್ಕೆ ಸೇರಿದೆಯೆಂದು ಕೆಲವರು ಮತ. ಹಾಗೆಯೇ ಶಸ್ತ್ರಶಾಸ್ತ್ರದ ಬದಲು ಸ್ಥಾಪತ್ಯವೇದವನ್ನು (ವಾಸ್ತುಶಿಲ್ಪ) ನಾಲ್ಕನೆಯ ಉಪವೇದವೆಂದು ಹೇಳುವುದುಂಟು. (ಬಿ.ಕೆ.ಎಸ್.)

**ಉಪಸರ್ಗ:** ಸಂಸ್ಕೃತ ಭಾಷೆಯ ಈ ಪದಕ್ಕೆ ಹಲವು ಅರ್ಥಗಳಿವೆ. ಕಾಯಿಲೆ ಎಂಬುದು ಒಂದು ಅರ್ಥ. ತೊಂದರೆ ಎಂಬುದು ಇನ್ನೊಂದು ಅರ್ಥ. ವ್ಯಾಕರಣದ ಪರಿಭಾಷೆಯಲ್ಲಿ ಪದಗಳಿಗೆ ಪ್ರಾರಂಭದಲ್ಲಿ ಹತ್ತುವ ಪದ ಪ್ರತ್ಯಯವೆಂದು ಅರ್ಥ. ಇದೇ ಸಾಮಾನ್ಯವಾಗಿ ರೂಢಿಯಲ್ಲಿರುವ ಅರ್ಥ. ಆದರೆ ಜೈನಧರ್ಮ ಪರಿಭಾಷೆಯಲ್ಲಿ ಇದಕ್ಕೆ ವಿಶಿಷ್ಟಾರ್ಥವಿದೆ. ಜೈನಮುನಿಗಳ ನಿರಾತಂಕ ತಪಸ್ಸಿಗೆ ಅಡ್ಡಬರುವ ಕಿರುಕುಳವನ್ನು ಉಪಸರ್ಗವೆಂಬ ಪಾರಿಭಾಷಿಕ ಪದದಿಂದ ನಿರ್ದೇಶಿಸಿದ್ದಾರೆ; ಹಿಂಸೆ, ಕೇಡು, ಅಟ್ಟುಳಿ ಎಂದೂ ಕರೆದಿದ್ದಾರೆ.

ತಪಸ್ಸಿನಲ್ಲಿ ತೊಡಗಿರುವ ತಪೋಧನರಾದ ಜಿನಮುನಿಗಳಿಗೆ ಆತ್ಮಾನುಸಂಧಾನದ ಏಕಾಗ್ರತೆಗೆ ಅಡ್ಡ ಬರುವ ಈ ಉಪಸರ್ಗ ನಿಮಿತ್ತವಾಗಿಯಾಗಲಿ, ಅನಿಮಿತ್ತವಾಗಿಯಾಗಲಿ ಒದಗಬಹುದು. ಉಪಸರ್ಗಗಳಲ್ಲಿ ನಾಲ್ಕು ವಿಧ: ತಪಸ್ಸಿನ ಏಕಾಗ್ರತೆಗೆ ದೇವತೆಗಳಿಂದ ಉಂಟಾಗುವ ತೊಂದರೆಯೇ ದೇವೋಪಸರ್ಗ. ಮನುಷ್ಯರಿಂದ ಆಗುವ ತೊಂದರೆ ಮನುಷ್ಯೋಪಸರ್ಗ. ಪ್ರಾಣಿಗಳಿಂದ ಬರುವ ತೊಂದರೆ ತಿರಿಕೋಪಸರ್ಗ. ಪ್ರಕೃತಿಯಿಂದ ಒದಗುವ ತೊಂದರೆ ಅಚೇತನೋಪಸರ್ಗ. ಇದನ್ನು ನರಕೋಪಸರ್ಗವೆಂದೂ ಕರೆಯುತ್ತಾರೆ.

ಕನ್ನಡದ ಗದ್ಯಗ್ರಂಥಗಳಲ್ಲೆಲ್ಲ ತುಂಬ ಹಳೆಯದಾದ ವಡ್ಡಾರಾಧನೆಯಲ್ಲಿ ಇರುವ 19 ಕಥೆಗಳಿಗೆ ಉಪಸರ್ಗಕೇವಲಿಗಳ ಕಥೆ ಎಂಬ ಇನ್ನೊಂದು ಹೆಸರೂ ಪ್ರಚಲಿತವಾಗಿದೆ. ವಡ್ಡಾರಾಧನೆಯಲ್ಲಿ ಬರುವ ಎಲ್ಲ ಕಥೆಗಳಲ್ಲೂ ಒಂದಲ್ಲ ಒಂದು ತೆರನಾದ ಉಪಸರ್ಗಕ್ಕೆ ಒಳಗಾದ ಕೇವಲಿಗಳ ಕಥಾನಕವೇ ಬರುತ್ತದೆ. ಜೈನ ಮುನಿಗಳು ಉಪಸರ್ಗದ ಪರಿಣಾಮವಾಗಿ ಸತ್ತು, ಆದರೆ ಆ ಅಟ್ಟುಳಿಯ ನಿವಾರಣೆಗೆ ಎಳ್ಳಷ್ಟೂ ಪ್ರಯತ್ನಿಸದೇ ಆ ದಿಕ್ಕಿನಲ್ಲಿ ಸ್ವಲ್ಪವೂ ಆಲೋಚಿಸದೆ ಸಂಯಮ ಹಾಗೂ ಪಂಚಪರಮೇಷ್ಠಿಗಳ ಧ್ಯಾನಾನುಷ್ಠಾನದಿಂದ ಮೋಕ್ಷ ಸುಖಕ್ಕೆ ಭಾಜನರಾಗುವ ವಿಚಾರ ಈ ಉಪಸರ್ಗಕೇವಲಿಗಳ ಎಲ್ಲ ಕತೆಗಳಲ್ಲೂ ತಪ್ಪದೆ ಬರುತ್ತದೆ. ಉದಾ: ಮತ್ತಾರಾಧಕರಪ್ಪವರ್ಗಳ್ ಸುಕೌಶಲಸ್ವಾಮಿಯ ತಿರಿಕೋಪಸರ್ಗಮಂ ಮನದೆ ಬಗೆದು ಪಸಿವುಂ ನೀರಳ್ಕೆದಾಹವವಾತಂ ಸೂಲೆಯೆಂದಿವು ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ಯಂಗಳಂ ಸಾಧಿಸಿ ಸಮಾಧಿ ಮರಣದಿಂದ ಮುಡಿಪಯಭ್ಯುದಯನಿಶ್ರೇಯಸಸುಖಂಗಳನೆಯ್ದುಗೆ. (ಎಚ್.ಪಿ.ಎನ್.)

**ಉಪಸ್ಥಾನ:** ಜಪದ ಕೊನೆಯಲ್ಲಿ ನಮಸ್ಕಾರ ಮುದ್ರೆಯಿಂದ ನಿಂತುಕೊಂಡು ಮಂತ್ರಾನುಸಂಧಾನಪೂರ್ವಕ ಮಾಡುವ ದೇವತಾ ಉಪಾಸನೆ. ತ್ರಿಕಾಲ ಸಂಧ್ಯಾವಂದನೆಯಲ್ಲಿ ಮಾಡುವುದು ಆಯಾ ಕಾಲದ ಸಂಧ್ಯೋಪಸ್ಥಾನ. ಅಗ್ನಿ ಕಾರ್ಯಾನಂತರ ಮಾಡುವುದು ಅಗ್ನ್ಯುಪಸ್ಥಾನ. ಹೀಗೆ ಆಯಾ ಕಾರ್ಯಭೇದದಿಂದ ಉಪಸ್ಥಾನಗಳೂ ಭಿನ್ನವಾಗುತ್ತವೆ. (ಎಸ್.ಎನ್.ಕೆ.)

**ಉಪಾಕರ್ಮ:** ವಿಧಿವತ್ತಾಗಿ ವೇದವನ್ನು ಅಧ್ಯಯನ ಮಾಡಲು ಪ್ರಾರಂಭಿಸುವುದು. ವೇದಾಧಿಕಾರಿಗಳಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಈ ಮೂರು ವರ್ಣದವರಿಗೂ ವಿಹಿತವಾಗಿದೆ. ಉಪನಯನಾನಂತರದಲ್ಲಿ ಮೊಟ್ಟ ಮೊದಲು ವೇದಾಧ್ಯಯನಕ್ಕೆ ಪ್ರಾರಂಭಿಸುವುದು ಪ್ರಥಮೋಪಾಕರ್ಮ. ಅಧ್ಯಯನ ಮಾಡಲು ಪ್ರಾರಂಭಿಸುವುದಕ್ಕೆ ಮೊದಲು ಹೋಮಮಾಡಿ ಆ ಅಗ್ನಿ ಸನ್ನಿಧಿಯಲ್ಲಿ ವೇದಾಧ್ಯಯನಕ್ಕೆ ಉಪಕ್ರಮಿಸಬೇಕು. ಪ್ರತಿವರ್ಷದಲ್ಲೂ ಶ್ರಾವಣ ಮಾಸದ ಹುಣ್ಣಿಮೆಯಲ್ಲಿ ಯಜುರ್ವೇದಿಗಳೂ ಇದೇ ತಿಂಗಳಿನ ಶ್ರವಣನಕ್ಷತ್ರದಲ್ಲಿ ಋಗ್ವೇದಿಗಳೂ ಹುಣ್ಣಿಮೆಯಲ್ಲೇ ಅಥರ್ವಣವೇದಿಗಳೂ ಉಪಾಕರ್ಮ ಮಾಡಬೇಕೆಂದು ವಿಹಿತವಾಗಿದೆ. ಶ್ರಾವಣ ಹುಣ್ಣಿಮೆ ಅಥವಾ ಶ್ರವಣನಕ್ಷತ್ರದ ದಿವಸ ಚಂದ್ರಗ್ರಹಣ ಸಂಭವಿಸಿದರೆ ಅಥವಾ ಸಿಂಹ ಸಂಕ್ರಮಣವಾದರೆ ಆ ದಿವಸ ಗ್ರಹಣ ಅಥವಾ ಸಂಕ್ರಮಣ ದುಷ್ಟವಾಗುವುದರಿಂದ ಆ ಕಾಲವನ್ನು ಬಿಟ್ಟು ಆಷಾಢ ಶುಕ್ಲ ಪೂರ್ಣಿಮಾ ಅಥವಾ ಭಾದ್ರಪದಶುಕ್ಲ ಪೂರ್ಣಿಮಾ ದಿವಸ ಯಜುರ್ವೇದಿಗಳೂ ಶುಕ್ಲಪಂಚಮಿ ಅಥವಾ ಹಸ್ತನಕ್ಷತ್ರದಲ್ಲಿ ಋಕ್ವೇದಿಗಳೂ ಶ್ರಾವಣಮಾಸ ಅಧಿಕ ಬಂದರೆ ನಿಜಶ್ರಾವಣಮಾಸದಲ್ಲಿ ಮಾಡಬೇಕು. ಅಧಿಕ ಶ್ರಾವಣದಲ್ಲೇ ಮಾಡುವ ಪದ್ಧತಿ ಕೆಲವರಲ್ಲಿ ಮಾತ್ರ ಇದೆ. ಗುರು, ಶುಕ್ರರು ಅಸ್ತರಾಗಿದ್ದಾಗ ಪ್ರಥಮೋಪಾಕರ್ಮ ಕೂಡದು. ಉಪಾಕರ್ಮಾನಂತರ ಐದು ತಿಂಗಳಕಾಲ ಶುಕ್ಲಪಕ್ಷದ ದಿವಸಗಳಲ್ಲಿ ವೇದಾಧ್ಯಯನವನ್ನೂ ಕೃಷ್ಣಪಕ್ಷದ ದಿವಸಗಳಲ್ಲಿ ಶಾಸ್ತ್ರಾಧ್ಯಯನವನ್ನೂ ಮಾಡಬೇಕು. ಶ್ರಾವಣದಲ್ಲಿ ಪ್ರಾರಂಭಿಸುವ ವೇದಾಧ್ಯಯನವನ್ನು ಪುಷ್ಯಮಾಸ ಶುಕ್ಲಪಕ್ಷದಲ್ಲಿ ಮುಕ್ತಾಯ ಮಾಡಬೇಕು. ಈ ಮುಕ್ತಾಯಕ್ಕೆ ಉತ್ಸರ್ಜನ **(ನೋಡಿ– ಉತ್ಸರ್ಜನ)** ಎಂದು ಹೆಸರು. ಉತ್ಸರ್ಜನಾನಂತರ ಮತ್ತೆ ಶ್ರಾವಣದಲ್ಲಿ ಅಧ್ಯಯನವನ್ನು ಪ್ರಾರಂಭಿಸುವುದು ನಿತ್ಯೋಪಾಕರ್ಮ. ಇದಕ್ಕೆ ಗುರು ಶುಕ್ರಾಸ್ತಾದಿದೋಷಗಳಿಲ್ಲ. ಈ ಸಮಾರಂಭವನ್ನು ಜನಿವಾರದ ಹಬ್ಬ ಎಂದು ಕರೆಯುವುದೂ ಕೆಲವರಲ್ಲಿ ರೂಢಿಯಲ್ಲಿದೆ. (ಎಸ್.ಎನ್.ಕೆ.)

**ಉಪಾಗಮಗಳು:** ಪ್ರಧಾನವಲ್ಲದ ಆಗಮಗಳು. ಭಗವಂತನನ್ನು ಕುರಿತ ಸಗುಣ ಮತ್ತು ನಿರ್ಗುಣೋಪಾಸನೆಯ ಕ್ರಮವನ್ನು ತಿಳಿಸುವ ಶಾಸ್ತ್ರವೆನಿಸಿಕೊಂಡಿರುವ ಶೈವಾಗಮಕ್ಕೆ ಸಂಬಂಧಪಟ್ಟಿವೆ. ಉದಾಹರಣೆ: ಮೃಗೇಂದ್ರ ಮತ್ತು ಪೌಷ್ಕರ. ಇವುಗಳಲ್ಲಿ ಇನ್ನೂ ಹಲವಾರು ಬೆಳಕಿಗೆ ಬಂದಿಲ್ಲ. (ಬಿ.ಕೆ.ಎಸ್.)

**ಉಪಾಧ್ಯೆ, ಎ. ಎನ್.:** 1906–75. ಸಂಸ್ಕೃತ, ಪ್ರಾಕೃತ, ಕನ್ನಡ, ಮರಾಠಿ, ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದ ಅಂತಾರಾಷ್ಟ್ರೀಯ ಖ್ಯಾತ ವಿದ್ವಾಂಸರು. ಇವರ ಪೂರ್ಣ ಹೆಸರು ಆದಿನಾಥ ನೇಮಿನಾಥ ಉಪಾಧ್ಯೆ. ಬೆಳಗಾಂವಿ ಜಿಲ್ಲೆಯ ಸದಲಗಿ ಗ್ರಾಮದಲ್ಲಿ 1906 ಫೆಬ್ರವರಿ 6ರಂದು ಜನಿಸಿದ ಇವರು ಬೆಳಗಾಂವಿಯಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದರು. ಸಂಸ್ಕೃತ ಪ್ರಾಕೃತ ಅರ್ಧಮಾಗಧೀ ಭಾಷೆ ಮತ್ತು ಸಾಹಿತ್ಯವನ್ನು ವ್ಯಾಸಂಗದ ವಿಷಯವನ್ನಾಗಿ ಆರಿಸಿಕೊಂಡು ಕೊಲ್ಲಾಪುರದ ರಾಜಾರಾಮ್ ಕಾಲೇಜು ಮತ್ತು ಸಾಂಗಲಿಯ ವಿಲಿಂಗ್‌ಡನ್ ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿ ಪಡೆದರು (1928). ಅನಂತರ ಪುಣೆಯ ಭಂಡಾರ್‌ಕರ್ ಸಂಸ್ಥೆಯಲ್ಲಿ ಕಲಿತು ಉನ್ನತ ಶ್ರೇಣಿಯಲ್ಲಿ ಎಂ.ಎ. ಪದವಿ ಪಡೆದರು. ಈ ಅವಧಿಯಲ್ಲಿ ವಿ.ಎಸ್. ಸುಕ್ತಂಕರ್, ಪಿ.ಎಲ್.ವೈದ್ಯ, ಎಸ್.ಕೆ. ಬೆಳವಲಕರ್ ಮೊದಲಾದ ಹೆಸರಾಂತ ವಿದ್ವಾಂಸರ ಉಪನ್ಯಾಸಗಳನ್ನು ಕೇಳಿ ಅವರಿಂದ ಪ್ರಭಾವಿತರಾದರು. ಕೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ ಅರ್ಧಮಾಗಧೀ ಪ್ರಾಕೃತ ವಿಭಾಗದ ಅಧ್ಯಾಪಕರಾಗಿ ನೇಮಕಗೊಂಡು (1930) ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಉಪಾಧ್ಯೆ ಅವರು ಮುಂದೆ ಮೂರೇ ವರ್ಷಕ್ಕೆ ಪ್ರಾಧ್ಯಾಪಕರಾದರು. 1939ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿಯನ್ನು ಪಡೆದರು. ಅದೇ ವಿಶ್ವವಿದ್ಯಾನಿಲಯದ ಸ್ಪ್ರಿಂಜರ್ ಸಂಶೋಧನ ಶಿಷ್ಯವೃತ್ತಿಯನ್ನು ಪಡೆದರು (1941–43). ರಾಜಾರಾಮ್ ಕಾಲೇಜಿನಲ್ಲಿ ಸುಮಾರು 33 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ನಿವೃತ್ತಿಯ ಅನಂತರ ಅದೇ ಕಾಲೇಜಿನಲ್ಲಿ ಯು.ಜಿ.ಸಿ. ಸಂಶೋಧನಾ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು. ಅನಂತರ ಇವರು ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಸಂಸ್ಥಾಪಕ ಪ್ರಾಧ್ಯಾಪಕರಾಗಿಯೂ ಮತ್ತು ಆ ವಿಭಾಗದ ಮುಖ್ಯಸ್ಥರೂ ಆಗಿದ್ದರು (1971–75). ಬೋಧನೆ, ಸಂಶೋಧನೆ ಮತ್ತು ಪ್ರಕಟಣೆ– ಇವು ಉಪಾಧ್ಯೆ ಅವರ ಕಾರ್ಯಕ್ಷೇತ್ರ. ಈ ಕ್ಷೇತ್ರದಲ್ಲಿ ಇವರು ಶ್ರದ್ಧಾಪೂರ್ವಕವಾದ ದುಡಿಮೆಯನ್ನು

ಮಾಡಿದ್ದಾರೆ. ತಮ್ಮ 23ನೆಯ ವಯಸ್ಸಿನಲ್ಲಿಯೇ ಬರೆವಣಿಗೆಯನ್ನು ಆರಂಭಿಸಿದ ಇವರು ಸು.150 ವಿದ್ವತ್ಪೂರ್ಣವಾದ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಗ್ರಂಥಸಂಪಾದನಾ ಕಾರ್ಯವನ್ನು ಒಂದು ಕಾಯಕ ಎಂದು ನಂಬಿ ಬಂದಿದ್ದ ಉಪಾಧ್ಯೆ ಸುಮಾರು ಇಪ್ಪತ್ತೈದಕ್ಕೂ ಮೀರಿದ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಪ್ರತಿಯೊಂದು ಸಂಪಾದಿತ ಗ್ರಂಥಕ್ಕೂ ಪಾಂಡಿತ್ಯಪೂರ್ಣವಾದ ದೀರ್ಘಪೀಠಿಕೆ ಬರೆಯುವುದು ಇವರ ವೈಶಿಷ್ಟ್ಯ. ಇವರು ಸಂಪಾದಿಸಿರುವ ಕೆಲವು ಮುಖ್ಯ ಗ್ರಂಥಗಳಿವು –ಪ್ರವಚನಸಾರ (1935), ಪರಮಾತ್ಮ ಪ್ರಕಾಶ (1936), ವರಾಂಗ ಚರಿತೆ (1936), ಕಂಸವಹೋ (1940), ಬೃಹತ್ ಕಥಾಕೋಶ (1943), ತಿಲೋಯಪಣ್ಣತ್ತಿ (1951), ಕುವಲಯಮಾಲಾ (1959–70), ಕಾರ್ತಿಕೇಯಾನುಪ್ರೇಕ್ಷಾ (1960), ಸಪ್ತಶತೀಸಾರ (1970), ಧರ್ಮ ರತ್ನಾಕರ (1974).

ಕನ್ನಡದಲ್ಲೂ ಉಪಾಧ್ಯೆ ಅವರು ದೇಶೀಕೋಶಗಳಲ್ಲಿನ ಕನ್ನಡ ಪದಗಳು, ಕವಿಪರಮೇಶ್ವರ ಅಥವಾ ಪರಮೇಷ್ಠಿ ಮುಂತಾದ ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ಇವರ ಪಾಲಿ ಮತ್ತು ಪ್ರಾಕೃತ ಎಂಬ ಗ್ರಂಥ ಕನ್ನಡಕ್ಕಿರುವ ಪ್ರಾಕೃತದ ಗಾಢ ಹಿನ್ನೆಲೆಯನ್ನು ವಿವರಿಸುತ್ತದೆ. ವಡ್ಡಾರಾಧನೆಯ ಮೇಲಿನ ಇವರ ಸಂಶೋಧನೆ ಬಹು ಬೆಲೆಯುಳ್ಳದ್ದು.

ಉಪಾಧ್ಯೆ ಅವರು ಹಲವು ವಿದ್ವತ್ ಸಮ್ಮೇಳನಗಳಿಗೆ ಅಧ್ಯಕ್ಷರಾಗಿದ್ದರು. ಅಖಿಲ ಭಾರತ ಪ್ರಾಚ್ಯ ಸಮ್ಮೇಳನ 1940ರಲ್ಲಿ ಹೈದರಾಬಾದಿನಲ್ಲಿ ನೆರೆದಿದ್ದಾಗ, ಅದರ ಪ್ರಾಕೃತ, ಬೌದ್ಧ, ಜೈನ ವಿಭಾಗಗಳ ಅಧ್ಯಕ್ಷರಾಗಿ ಇವರು ಆಯ್ಕೆಯಾಗಿದ್ದರು. ಅನಂತರ ಅಲಿಗಡದಲ್ಲಿ 1966ರಲ್ಲಿ ನಡೆದ ಪ್ರಾಚ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಶ್ರವಣಬೆಳಗೊಳದಲ್ಲಿ 1967ರಲ್ಲಿ ನಡೆದ 46ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ ಕನ್ನಡಿಗರು ಗೌರವಿಸಿದ್ದಾರೆ.

ರಾಷ್ಟ್ರದ ಹಲವು ಪ್ರಮುಖ ಸಂಘ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳೊಂದಿಗೆ ಉಪಾಧ್ಯೆ ಅವರಿಗೆ ನಿಕಟವಾದ ಸಂಪರ್ಕವಿತ್ತು. ಸೊಲ್ಲಾಪುರದ ಜೀವರಾಜ ಜೈನಗ್ರಂಥಮಾಲೆ, ವಾರಾಣಸೀ ಜ್ಞಾನಪೀಠ ಮೂರ್ತಿದೇವಿ ಜೈನ ಗ್ರಂಥಮಾಲೆ ಮುಂತಾದ ಹಲವು ಗ್ರಂಥಮಾಲೆಗಳ ಪ್ರಧಾನ ಸಂಪಾದಕರಾಗಿದ್ದರು. ಭಾರತೀಯ ಜ್ಞಾನಪೀಠದೊಂದಿಗೆ ನಿಕಟ ಸಂಪರ್ಕ ಪಡೆದಿದ್ದ ಇವರು ಪೀಠದ ಕನ್ನಡ ಕಾವ್ಯಮಾಲೆಯ ಉದಯಕ್ಕೆ ಕಾರಣರಾಗಿದ್ದರು. ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ 9 ವರ್ಷ ಕಲಾವಿಭಾಗದ ಡೀನರಾಗಿದ್ದ ಇವರು ಪುಣೆ, ಗಯಾ, ಮುಂಬಯಿ, ನಾಗಪುರ, ಬೆಂಗಳೂರು ಮುಂತಾದ ಹಲವು ವಿಶ್ವವಿದ್ಯಾಲಯಗಳ ವಿವಿಧ ಮಂಡಳಿಗಳ ಸದಸ್ಯರಾಗಿದ್ದರು. ಪುಣೆಯ ಸಂಸ್ಕೃತ ಕೋಶ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕೀಯ ಮಂಡಲಿಗಳಲ್ಲಿದ್ದರು.

ಭಾರತ ಸರ್ಕಾರದ ಪ್ರತಿನಿಧಿಗಳಾಗಿ ಕ್ಯಾನ್ಬರದಲ್ಲಿ (1971) ಮತ್ತು ಪ್ಯಾರಿಸ್‌ನಲ್ಲಿ (1973) ನಡೆದ ಅಂತಾರಾಷ್ಟ್ರೀಯ ಪ್ರಾಚ್ಯಪರಿಷತ್ತಿನಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದರು. ಬೆಲ್ಜಿಯಂನಲ್ಲಿ 1974ರಲ್ಲಿ ನಡೆದ ಎರಡನೆಯ ಜಾಗತಿಕ ಧರ್ಮ ಮತ್ತು ಶಾಂತಿ ಸಮ್ಮೇಳನದಲ್ಲೂ ಭಾಗವಹಿಸಿದ್ದರು.

ಭಾರತ ಸರ್ಕಾರ 1975ರ ಸ್ವಾತಂತ್ರ್ಯ ದಿನದಂದು ಉಪಾಧ್ಯೆ ಅವರಿಗೆ ಸಂಸ್ಕೃತ ವಿದ್ವಾಂಸ ಪ್ರಶಸ್ತಿಪತ್ರ ಕೊಟ್ಟು ಗೌರವಿಸಿತು. ಇದೇ ವರ್ಷ ಇವರ ಸಿದ್ಧಸೇನ ದಿವಾಕರನ ನ್ಯಾಯಾವತಾರ ಎಂಬ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಬಹುಮಾನ ಲಭಿಸಿತು. ಅವರು 1975 ಅಕ್ಟೋಬರ್ 8ರಂದು ನಿಧನರಾದರು. (ಎಂ.ಎ.)

**ಉಪಾಧ್ಯಾಯ:** ಸಾರ್ವಜನಿಕ ಅಥವಾ ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಬಾಲಕರ ಮತ್ತು ತರುಣರ ಕಲಿವಿನ ಅನುಭವಗಳನ್ನು ನಿರ್ದೇಶಿಸಲು ಅಧಿಕೃತವಾಗಿ ನೇಮಕವಾಗಿರುವ ವ್ಯಕ್ತಿ. ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದ ಅನುಭವ ಅಥವಾ ಶಿಕ್ಷಣ ಪಡೆದಿದ್ದು ತನ್ನ ಪ್ರಭಾವಕ್ಕೊಳಗಾಗುವ ಇತರರ ಬೆಳವಣಿಗೆಯನ್ನೂ ವಿಕಾಸವನ್ನೂ ಪೋಷಿಸುವವ. ಅಂಗೀಕೃತ ಅಧ್ಯಾಪಕವೃತ್ತಿ ಶಿಕ್ಷಣ ಸಂಸ್ಥೆಯೊಂದು ರೂಪಿಸಿರುವ ಅಧ್ಯಯನಕ್ರಮವನ್ನು ಯಶಸ್ವಿಯಾಗಿ ಮುಗಿಸಿ, ಆ ಬಗ್ಗೆ ರಾಜ್ಯದ ಅಧಿಕೃತ ಸಂಸ್ಥೆಯಿಂದ ಅರ್ಹತಾಪತ್ರ ಪಡೆದಿರುವ, ಇತರರಿಗೆ (ದೊಡ್ಡವರಿಗೂ ಸೇರಿ) ಪಾಠ ಹೇಳತಕ್ಕ ವ್ಯಕ್ತಿ. ಅಧ್ಯಾಪಕ, ಆಚಾರ್ಯ, ಅಯ್ಯ, ಓಜ, ಗುರು, ಶಿಕ್ಷಕ–ಇವು ಪರ್ಯಾಯವಾಗಿ ಈತನ ಹೆಸರುಗಳು. ಪ್ರಾಚೀನ ಭಾರತದಲ್ಲಿ ಆಚಾರ್ಯ ಅಥವಾ ಗುರು ಎನಿಸಿದವನಿಗೆ ಸಮಾಜದಲ್ಲಿ ಹಿರಿಯ ಸ್ಥಾನವಿತ್ತು. ಆತನ ಗುಣಲಕ್ಷಣಗಳ ಬಗ್ಗೆ ಮತ್ತು ಆತ ನಡೆಸುತ್ತಿದ್ದ ಗುರುಕುಲದ ಬಗ್ಗೆ ತಿಳಿಯಲು (**ನೋಡಿ– ಗುರು–1; ಗುರುಕುಲ**). ಪ್ರಪಂಚದಲ್ಲಿ ಈಗ ಸುಮಾರು ಒಂದೂವರೆ ಕೋಟಿ ಮಂದಿ ಅಧ್ಯಾಪಕರಿದ್ದಾರೆ. ಪ್ರಾಚೀನ ಕಾಲದಲ್ಲಿ ಎಲ್ಲೋ ಕೆಲವರು ಜೀವನದ ಆದರ್ಶ, ದೃಷ್ಟಿ, ಧ್ಯೇಯಗಳಿಂದ ಪ್ರೇರಿತರಾಗಿ ಈ ವೃತ್ತಿಯನ್ನು ಅನುಸರಿಸುತ್ತಿದ್ದರು. ವರ್ಷಂಪ್ರತಿ ಲಕ್ಷಗಟ್ಟಲೆ ಅಧ್ಯಾಪಕರ ಅಗತ್ಯವಿರುವ ಈ ಕಾಲದಲ್ಲಿ ಅವರೆಲ್ಲರೂ ಆದರ್ಶ, ಸಾಧನೆಗಾಗಿಯೇ ಬರುವರೆಂದು ಹೇಳುವಂತಿಲ್ಲ; ಅದು ಸಾಧ್ಯವೂ ಇಲ್ಲ. ಉಪಾಧ್ಯಾಯರ ವೃತ್ತಿಯೂ ಈಗ ಇತರ ವೃತ್ತಿಗಳಂತೆ ಜೀವನೋಪಾಯಕ್ಕಾಗಿ ಅನುಸರಿಸುವ ಒಂದು ಸಾಮಾನ್ಯ ವೃತ್ತಿಯಾಗುತ್ತಿದೆ.

ಮಿಕ್ಕ ವೃತ್ತಿಗಳೊಡನೆ ಹೋಲಿಸಿದರೆ ಅಧ್ಯಾಪಕವೃತ್ತಿಯ ಹೊಣೆಗಾರಿಕೆ ಹೆಚ್ಚಿನದೆಂಬುದು ಹಿಂದಿನಿಂದಲೂ ಗೊತ್ತೇ ಇದೆ. ಮುಂದಿನ ಪೀಳಿಗೆಯ ಸ್ವರೂಪವನ್ನು ರೂಪಿಸುವ ಹಿರಿಯ ಹೊಣೆಗಾರಿಕೆ ಆ ವ್ಯಕ್ತಿಗೆ ಸಂದಿದೆ. ಆದ್ದರಿಂದ ತಕ್ಕಮಟ್ಟಿಗಾದರೂ ಆ ವೃತ್ತಿಯನ್ನನುಸರಿಸುವವರು ವೃತ್ತಿಯ ಆದರ್ಶವನ್ನು ಪಾಲಿಸುವುದು ಅನಿವಾರ್ಯವೆನಿಸುತ್ತದೆ. ಆದ್ದರಿಂದ ಯಾವ ದೇಶದಲ್ಲೇ ಆಗಲಿ ಶಿಕ್ಷಣ ವ್ಯವಸ್ಥೆಯ ಹೊಣೆಯನ್ನು ಹೊತ್ತಿರುವ ಸರ್ಕಾರ ತನ್ನ ಶಿಕ್ಷಣ ಸಂಸ್ಥೆಗಳಿಗೆ ಸಮರ್ಥ ಉಪಾಧ್ಯಾಯರನ್ನು ಆರಿಸಬೇಕಾಗುತ್ತದೆ.

ಶಿಕ್ಷಣ ಕಾರ್ಯದಲ್ಲಿ ಪಾತ್ರ ವಹಿಸತಕ್ಕ ವಿದ್ಯಾರ್ಥಿ, ಪಠ್ಯವಿಷಯ ಮತ್ತು ಅಧ್ಯಾಪಕ– ಈ ಮೂರರಲ್ಲಿ ಪ್ರಥಮ ಪ್ರಾಧಾನ್ಯ ಮಕ್ಕಳಿಗಿದ್ದರೂ ಅದರ ಯಶಸ್ಸು ಮಾತ್ರ ಶಿಕ್ಷಕರನ್ನೇ ಅವಲಂಬಿಸಿರುತ್ತದೆ; ಉತ್ತಮ ಪಠ್ಯವಸ್ತು, ಉತ್ತಮ ಪಠ್ಯಪುಸ್ತಕ, ಉತ್ತಮ ಶಿಕ್ಷಣಯೋಜನೆ, ಪ್ರತಿಭಾವಂತ ಮಕ್ಕಳು–ಇಷ್ಟೆಲ್ಲ ಇದ್ದರೂ ತಕ್ಕ ಉಪಾಧ್ಯಾಯರಿಲ್ಲದಿದ್ದರೆ ಅವೆಲ್ಲ ನಿರರ್ಥಕವಾಗಬಹುದು. ಅದಕ್ಕಾಗಿ ಈಗ ಎಲ್ಲ ದೇಶಗಳಲ್ಲೂ ಇರುವ ಅವಕಾಶದಲ್ಲಿ ಉತ್ತಮ ವ್ಯಕ್ತಿಗಳನ್ನು ಉಪಾಧ್ಯಾಯ ವೃತ್ತಿಗೆ ಆರಿಸುವ ಯತ್ನ ನಡೆಯುತ್ತಿದೆ.

ಅಧ್ಯಾಪಕರನ್ನು ಆರಿಸುವಾಗ ಒಳ್ಳೆಯ ಉಪಾಧ್ಯಾಯರಲ್ಲಿರಬೇಕಾದ ಲಕ್ಷಣಗಳ ಕಡೆಗೆ ಗಮನ ಕೊಡಬೇಕಾಗುತ್ತದೆ. ಕೆಟಲ್ ನಡೆಸಿರುವ ಸಂಶೋಧನೆಗಳ ಆಧಾರದ ಮೇಲೆ ಹೇಳುವುದಾದರೆ ಯಶಸ್ವೀ ಅಧ್ಯಾಪಕರಲ್ಲಿ ಹಲವು ಲಕ್ಷಣಗಳಿರುವುದು ಅಗತ್ಯ, ಜೊತೆಗೆ ಆ ಒಂದೊಂದು ಲಕ್ಷಣವೂ ಯಾವ ಪ್ರಮಾಣದಲ್ಲಿ ಅಧ್ಯಾಪಕರ ಯಶಸ್ಸಿಗೆ ಕಾರಣವಾಗುವುದೆಂಬುದೂ ನಿಷ್ಕರ್ಷೆಯಾಗಿದೆ. ಆ ಅಂಶಗಳನ್ನೂ ವೃತ್ತಿಯ ಯಶಸ್ಸಿನಲ್ಲಿ ಅವು ವಹಿಸುವ ಪಾತ್ರದ ಪ್ರಮಾಣವನ್ನೂ ಕೆಳಗಿನ ಪಟ್ಟಿಯಲ್ಲಿ ಸೂಚಿಸಿದೆ:

| ಅಧ್ಯಾಪಕರ ಲಕ್ಷಣ | ಯಶಸ್ಸಾಧನೆಯಲ್ಲಿ ಆಯಾ ಲಕ್ಷಣ ವಹಿಸುವ ಪ್ರಭಾವದ ಶೇಕಡ ಪ್ರಮಾಣ |
|---|---|
| ಬುದ್ಧಿಶಕ್ತಿ | 10 |
| ವ್ಯಕ್ತಿತ್ವ ಮತ್ತು ಸಂಕಲ್ಪ | 10 |
| ತೆರೆದ ಮನಸ್ಸು | 10 |
| ಸಹಾನುಭೂತಿ | 10 |
| ಸರಸ ಪ್ರವೃತ್ತಿ | 10 |
| ಆದರ್ಶ | 10 |
| ದಯೆ | 5 |
| ಉತ್ಸಾಹ | 5 |
| ಕಷ್ಟ ಸಹಿಷ್ಣುತೆ | 5 |
| ಆತ್ಮಸಂಯಮ | 5 |

ಕೆಟಲ್ ಸೂಚಿಸುವ 22 ಲಕ್ಷಣಗಳಲ್ಲಿ ಈ ಹತ್ತು ಅಂಶಗಳು ವೃತ್ತಿ ಯಶಸ್ಸಿಗೆ ಶೇ.80ರಷ್ಟು ನೆರವಾಗುತ್ತವೆ; ಮಿಕ್ಕ 12 ಲಕ್ಷಣಗಳು ಇನ್ನುಳಿದ ಶೇ. 20ರಷ್ಟು ನೆರವಾಗುತ್ತವೆ. ಎಂದರೆ ಅಧ್ಯಾಪಕವೃತ್ತಿಗೆ ಆರಿಸಿಕೊಳ್ಳುವಾಗ ಈ ಹತ್ತು ಅಂಶಗಳನ್ನು ನಿರ್ಣಾಯಕ ಅಂಶಗಳನ್ನಾಗಿ ಮಾಡಿಕೊಳ್ಳಬೇಕು. ಆದರೆ ಈ ಅಂಶಗಳನ್ನು ಅಳೆದು ನೋಡುವುದು ಹೇಗೆ? ಇವುಗಳಲ್ಲಿ ಕೆಲವು ಲಕ್ಷಣಗಳನ್ನು ಅಳೆಯಲು ಮನೋವೈಜ್ಞಾನಿಕ ಪರೀಕ್ಷಣಗಳು ಈಗ ರೂಪುಗೊಂಡಿವೆ. ಅವನ್ನು ಬಳಸಿ ಆಯಾ ಲಕ್ಷಣಗಳ ಪ್ರಮಾಣವನ್ನು (ಉತ್ತಮ, ಮಧ್ಯಮ ಅಥವಾ ಅಧಮ) ನಿಷ್ಕರ್ಷಿಸಬಹುದು, ಇದು ವೃತ್ತಿಶಿಕ್ಷಣಕ್ಕೆ ಅಭ್ಯರ್ಥಿಗಳನ್ನು ಆರಿಸುವಾಗ ನಡೆಯಬೇಕು.

ಅಧ್ಯಾಪಕವೃತ್ತಿಯ ಕೆಲವು ಸಾಮಾನ್ಯ ಲಕ್ಷಣಗಳನ್ನು ಮೇಲೆ ಸೂಚಿಸಿದ್ದರೂ ಬೇರೆ ಬೇರೆ ದೃಷ್ಟಿಕೋನದಿಂದ ಪರೀಕ್ಷಿಸಿದಾಗ ಬೇರೆ ಬೇರೆ ಲಕ್ಷಣಗಳು ಮುಖ್ಯವೆನಿಸುತ್ತವೆ. ಆ ಮುಖವಾಗಿಯೂ ಕೆಲವು ಸಂಶೋಧನೆಗಳು ನಡೆದಿವೆ. ಅವೆಲ್ಲದರಿಂದ ಸಂಗ್ರಹಿಸಿ ಆ ಲಕ್ಷಣಗಳನ್ನು ನಾಲ್ಕು ರೀತಿಯವಾಗಿ ವಿಂಗಡಿಸಬಹುದು; ಮಾನವೀಯ ಲಕ್ಷಣಗಳು, ವೃತ್ತಿ ಲಕ್ಷಣಗಳು, ಸಾಂಸ್ಕೃತಿಕ ಲಕ್ಷಣಗಳು, ಮತ್ತು ಆರೋಗ್ಯ ಲಕ್ಷಣಗಳು.

1. ಮಾನವೀಯ ಲಕ್ಷಣಗಳು: ಮಕ್ಕಳು ಶಿಕ್ಷಕರಲ್ಲಿ ಆಸಕ್ತಿ ತಾಳಿ ಅವರ ಬಗ್ಗೆ ಗೌರವಾಭಿಮಾನಗಳಿಂದಿದ್ದು ಅವರ ಸಲಹೆ, ಸಹಕಾರಗಳನ್ನು ಸ್ವೀಕರಿಸಿ ಅವರ ನೇತೃತ್ವದಲ್ಲಿ ತಮ್ಮ ಪ್ರಗತಿಯನ್ನು ಸಾಧಿಸಬೇಕಾದರೆ ಪ್ರಥಮತಃ ಶಿಕ್ಷಕರು ಕೆಲವು ಮಾನವೀಯ ಗುಣಗಳನ್ನು

ಹೊಂದಿರಬೇಕು. ಅವುಗಳಲ್ಲಿ ಶೀಲಸಂಪನ್ನತೆ, ವಿನಯ, ದಯೆ, ಮಕ್ಕಳ ಬಗ್ಗೆ ಸಹಜವಾದ ಮಮತೆ, ಸಹನೆ, ಹಿತಕರವೆನಿಸುವ ಶರೀರ ರಚನೆ, ನ್ಯಾಯಪರತೆ, ನಿಷ್ಪಕ್ಷಪಾತಭಾವನೆ, ದೃಢಚಿತ್ತ, ಗಾಂಭೀರ್ಯ, ಒಳ್ಳೆಯದರ ಬಗ್ಗೆ ಅಭಿಮಾನ ಮತ್ತು ಸಹಕಾರ ಭಾವನೆ–ಇವು ಮುಖ್ಯವಾದವು. ಇವೆಲ್ಲ ಬಹುಮಟ್ಟಿಗೆ ಜೀವನದಲ್ಲಿ ರೂಢಿಸಿಕೊಂಡವೇ ಆದರೂ ಅನುವಂಶೀಯವಾಗಿ ಬರುವ ಮೂಲಪ್ರವೃತ್ತಿಗಳನ್ನು ಅನುಸರಿಸಿರುತ್ತವೆ. ಅಂಥ ಉತ್ತಮ ಅನುವಂಶೀಯ ಪ್ರವೃತ್ತಿಗಳನ್ನು ಪಡೆದಿರುವ ಕೆಲವರು ಸುಲಭವಾಗಿ ಸನ್ನಿವೇಶ, ಸಂಸ್ಕಾರಗ ಳಿಂದ ಉತ್ತಮ ಮಾನವೀಯ ಗುಣಗಳನ್ನು ರೂಢಿಸಿಕೊಳ್ಳಬಲ್ಲರು, ಲಕ್ಷಗಟ್ಟಲೆ ಅಧ್ಯಾಪಕರು ಬೇಕಾಗಿರುವ ಈ ಕಾಲದಲ್ಲಿ ಅಂಥವರು ಸಿಕ್ಕುವುದಾದರೂ ಹೇಗೆ ಸಾಧ್ಯ? ಅಷ್ಟಾಗಿ ಅನುವಂಶೀಯ ಸಂಪತ್ತಿಲ್ಲದವರು ಶಿಕ್ಷಣ ಸಂಸ್ಕಾರಗಳಿಂದ ಸ್ವಲ್ಪ ಮಟ್ಟಿಗಾದರೂ ಆ ಗುಣ ಧರ್ಮಗಳನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಂಥವರ ಪಾಲಿಗೆ ವೃತ್ತಿ ಶಿಕ್ಷಣ, ವೃತ್ತಿಯಲ್ಲಿ ದೊರಕುವ ಅನುಭವ–ಇವೆಲ್ಲ ತುಂಬ ಸಹಕಾರಿಯಾಗತಕ್ಕ ಸಿದ್ಧತಾಕಾರ್ಯ ಕ್ರಮಗಳು.

2. ವೃತ್ತಿಲಕ್ಷಣಗಳು: ವ್ಯಕ್ತಿತ್ವಕ್ಕೆ ಸಂಬಂಧಿಸಿದ ಹಲವು ಸಲ್ಲಕ್ಷಣಗಳೂ ಶಿಕ್ಷಣ ವೃತ್ತಿಗೆ ಅಗತ್ಯ: ಬಹುಮಟ್ಟಿಗೆ ಅವೆಲ್ಲ ವೃತ್ತಿಶಿಕ್ಷಣದಿಂದ ದೊರೆಯುವ ಕುಶಲ ಅಭ್ಯಾಸಗಳ ರೂಪದಲ್ಲೋ ಆದರ್ಶಗಳ ರೂಪದಲ್ಲೋ ಇರುತ್ತವೆ. ಅವುಗಳಲ್ಲಿ 1. ಸ್ಪಷ್ಟವಾಗಿ ಭಾವಗಳನ್ನು ವ್ಯಕ್ತಪಡಿಸುವಂತೆ ಮಾತಾಡುವ ಅಭ್ಯಾಸ, 2. ದೋಷರಹಿತ ಭಾಷೆಯಲ್ಲಿ ಸರಿಯಾಗಿ ಉಚ್ಚರಿಸುವ ಅಭ್ಯಾಸ, 3. ಮಕ್ಕಳ ಮನೋಜೀವನಕ್ಕೆ ಸಂಬಂಧಿಸಿದ ಪರಿಜ್ಞಾನ, 4.ಶಿಕ್ಷಣದ ಗುರಿಯ ಬಗ್ಗೆ ಸ್ಪಷ್ಟವಾದ ಅರಿವು ಮತ್ತು ನಿಷ್ಠೆ, 5. ಶಿಕ್ಷಣವೃತ್ತಿಯಲ್ಲಿ ಆಸಕ್ತಿ, 6.ಬೋಧನೆ ಮತ್ತು ಕಲಿಕೆಗಳ ಬಗ್ಗೆ ತಕ್ಕಷ್ಟು ಜ್ಞಾನ ಮತ್ತು ಕೌಶಲ. 7. ಮಾನವ ಜೀವನದಲ್ಲಿ ವಿಶಾಲವಾದ ಆಸಕ್ತಿ. 8. ಹೊಂದಿಕೊಳ್ಳುವ ಶಕ್ತಿ ಮತ್ತು ಕ್ರಿಯಾತ್ಮಕ ಆಸಕ್ತಿ–ಇವು ಮುಖ್ಯವಾದವು. ಇವೆಲ್ಲ ಬಹುಮಟ್ಟಿಗೆ ವೃತ್ತಿಶಿಕ್ಷಣದಿಂದ ದೊರೆಯತಕ್ಕವಾಗಿದ್ದರೂ ಇವು ದೃಢಗೊಂಡು ಫಲಕಾರಿಯಾಗಿ ಕೆಲಸಮಾಡುವಂತಾಗುವುದು ವೃತ್ತಿನಿರತರಾದಮೇಲೆಯೆ.

3. ಸಾಂಸ್ಕೃತಿಕ ಲಕ್ಷಣಗಳು: ಉಪಾಧ್ಯಾಯರು ಜನಾಂಗದ ಸಂಸ್ಕೃತಿ, ನಾಗರಿಕತೆಗಳನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹಸ್ತಗತ ಮಾಡುವ ಹೊಣೆಗಾರಿಕೆಯನ್ನು ಹೊತ್ತಿರುತ್ತಾರೆ. ಆದ್ದರಿಂದ ಅವರಿಗೆ ತಮ್ಮ ಜನಾಂಗದ ಸಂಸ್ಕೃತಿ ನಾಗರಿಕತೆಗಳ ಪರಿಚಯ ಅಗತ್ಯ; ಜೊತೆಗೆ ಆ ಜನತೆಯ ಜೀವನದಲ್ಲಿ ಪ್ರಚಾರದಲ್ಲಿರುವ ಮೌಲ್ಯಗಳನ್ನು ಅರಿತು, ಅಲ್ಲಿನವರ ಆದರ್ಶಗಳಿಗೆ ಒಪ್ಪುವಂತೆ ತಮ್ಮ ದೃಷ್ಟಿ ಧ್ಯೇಯಗಳನ್ನವರು ರೂಪಿಸಿಕೊಂಡಿರಬೇಕು. ಇಲ್ಲವಾದರೆ ಮಕ್ಕಳ ಮತ್ತು ಅಲ್ಲಿನ ಸಮಾಜದ ವಿಶ್ವಾಸವನ್ನಾಗಲಿ ಅಭಿಮಾನವನ್ನಾಗಲಿ ಪಡೆದುಕೊಳ್ಳುವುದು ಕಷ್ಟ. ಅಂಥ ಸಾಂಸ್ಕೃತಿಕ ಸಿದ್ಧಿಯಲ್ಲಿ ಮುಖ್ಯವಾದ ಅಂಶಗಳೆಂದರೆ–1. ಬೋಧಿಸತಕ್ಕ ವಿಷಯದಲ್ಲಿ ತಕ್ಕಷ್ಟು ಪರಿಜ್ಞಾನ, 2. ಸಮಾಜರಚನೆಯ ಪರಿಚಯ 3. ಜನಾಂಗದ ಸಂಸ್ಕೃತಿ ನಾಗರಿಕತೆಗಳ ಇತಿಹಾಸದ ಪರಿಚಯ, 4. ಜನಾಂಗದ ತತ್ತ್ವದೃಷ್ಟಿಯ ಪರಿಚಯ, 5 ಜೀವನದ ಆಶೆ ಆಕಾಂಕ್ಷೆಗಳ ಅರಿವು 6. ಅಲ್ಲಿ ಪ್ರಚಾರದಲ್ಲಿರುವ ದೃಷ್ಟಿಧ್ಯೇಯಗಳು, ರುಚಿಯ ಸ್ವರೂಪ, ನಯನಾಜೂಕುಗಳು–ಇವೆಲ್ಲದರ ಅನುಸರಣೆ, 7. ತಮ್ಮ ಜೀವನದಲ್ಲಿ ಜನಾಂಗದ ಮೌಲ್ಯಗಳ ಅನುಷ್ಠಾನ.

ಈ ಸಾಂಸ್ಕೃತಿಕ ಲಕ್ಷಣಗಳೆಲ್ಲ ಶಿಕ್ಷಣದಿಂದ ಲಭಿಸಬೇಕು. ಅದಕ್ಕಾಗಿಯೇ ಶಿಕ್ಷಣ ವೃತ್ತಿಗೆ ಬರತಕ್ಕವರಿಗೆ ವೃತ್ತಿ ಶಿಕ್ಷಣದ ಜೊತೆಗೆ ಕನಿಷ್ಠ ಮಟ್ಟದ ಸಾಂಸ್ಕೃತಿಕ ಶಿಕ್ಷಣವನ್ನೂ ಗೊತ್ತುಮಾಡಿರುವುದು.

ಮೇಲೆ ಉಲ್ಲೇಖಿಸಿದ ತ್ರಿಮುಖ ಲಕ್ಷಣಗಳೂ ಒಬ್ಬ ಉಪಾಧ್ಯಾಯನಲ್ಲೇ ಇರುವುದು ಅಗತ್ಯವಾದರೂ ಅಂಥ ಸಕಲ ಸಂಪನ್ನತೆಯ ಸಂಸ್ಕಾರ ಪಡೆದಿರುವ ಉಪಾಧ್ಯಾಯರು ಸಿಕ್ಕುವುದು ಅಪರೂಪ. ಆದರೂ ಆ ಲಕ್ಷಣಗಳಲ್ಲಿ ಬಹು ಅಂಶಗಳನ್ನು ತಕ್ಕಷ್ಟು ಉತ್ತಮಮಟ್ಟ ದಲ್ಲಿ ಪಡೆದಿರುವವರ ಸಂಖ್ಯೆ ತಕ್ಕಮಟ್ಟಿಗೆ ಇದ್ದೇ ಇರುತ್ತದೆ. ಅದು ಪ್ರಕೃತಿಧರ್ಮ. ಸು. ಶೇ. 60 ಪ್ರಮಾಣದಲ್ಲಿತಕ್ಕ ಅಂಥ ವ್ಯಕ್ತಿಗಳಲ್ಲಿ ಬಹುಮಂದಿ ಶಿಕ್ಷಣವೃತ್ತಿಗೆ ಬರಲೊಲ್ಲರು. ವಿದ್ಯಾವಂತರಲ್ಲಿ ಶೇ.ಸು.15 ಮಾತ್ರ ಈ ವೃತ್ತಿಗೆ ಬರುತ್ತಾರೆ. ಹಾಗೂ ಇನ್ನೆಲ್ಲೂ ಅವಕಾಶ ದೊರಕದ ಕೆಳಗಿನ ಅಂತಸ್ತಿನವರೇ ಅವರಲ್ಲಿ ಅಧಿಕವಾಗಿರುತ್ತಾರೆ. ನಾವು ಎಷ್ಟೇ ಎಚ್ಚರಿಕೆ ವಹಿಸಿ ಸೂಕ್ತವಾದವರನ್ನು ಆರಿಸಿಕೊಳ್ಳಲು ಯತ್ನಿಸಿದರೂ ಅಂಥ ಮೇಲ್ಮಟ್ಟದ ವ್ಯಕ್ತಿಗಳು ಸಿಕ್ಕದಿರುವುದಕ್ಕೆ ಇದೂ ಒಂದು ಕಾರಣ.

4. ಆರೋಗ್ಯ ಲಕ್ಷಣಗಳು: ಯಾವ ವೃತ್ತಿಯೇ ಆಗಲಿ, ಅದರಲ್ಲಿ ನಿರತರಾದವರ ದೇಹಸ್ಥಿತಿ ಅವರ ಕೆಲಸದ ದಕ್ಷತೆಯ ಮೇಲೆ ಪರಿಣಾಮ ಬೀರುವುದು ಸ್ವಾಭಾವಿಕವಾದುದು. ದೈಹಿಕ ಆರೋಗ್ಯ ಆ ದಕ್ಷತೆಗೆ ನೇರವಾಗಿ ಸಂಬಂಧಿಸಿದ್ದು ತಾತ್ಕಾಲಿಕ ಪರಿಣಾಮ ಬೀರುವಂಥದು. ಆದರೆ ಅಷ್ಟು ತೀಕ್ಷ್ಣವಲ್ಲದಿದ್ದರೂ ದೀರ್ಘಕಾಲದ ದುಷ್ಪರಿಣಾಮ ಬೀರತಕ್ಕ ರೀತಿಯದು ಅವರ ಮಾನಸಿಕ ಅಸ್ವಸ್ಥತೆ. ಆದ್ದರಿಂದ ಅದನ್ನು ಮಾತ್ರ ಇಲ್ಲಿ ವಿವರವಾಗಿ ಪರಿಶೀಲಿಸಿದೆ.

ವೃತ್ತಿದಕ್ಷತೆಯಲ್ಲಿ ಅಧ್ಯಾಪಕರ ಮಾನಸಿಕ ಆರೋಗ್ಯ ಮುಖ್ಯವೆಂಬ ಅಂಶ ಈಗ ಸ್ಪಷ್ಟವಾಗಿದೆ. ದೇಹವೇ ಬೇರೆ, ಮನಸ್ಸೇ ಬೇರೆ ಎನ್ನುತ್ತಿದ್ದ ಕಾಲವೊಂದಿತ್ತು. ಒಂದನ್ನುಳಿದು ಇನ್ನೊಂದು ಕೆಲಸಮಾಡುವಂತಿಲ್ಲವೆಂಬುದು ಈಗ ಸ್ಪಷ್ಟಪಟ್ಟಿದೆ. ದೇಹ, ಮನಸ್ಸು ಎರಡೂ ಆರೋಗ್ಯದಿಂದಿರುವುದು ಅವರೆಡರ ಕ್ಷೇಮಕ್ಕೂ ಅಗತ್ಯ. ಒಳ್ಳೆಯ ದೇಹದಲ್ಲಿ ಒಳ್ಳೆಯ ಮನಸ್ಸು ಎಂಬ ಹಳೆಯ ಮಾತು ಮತ್ತೆ ಆಧುನಿಕವಾಗಿ ತೋರುತ್ತಿದೆ. ವ್ಯಕ್ತಿ ಅನುಭವಿಸುವ ನಿರಾಶೆ, ಘರ್ಷಣೆ. ಆಘಾತ ಇತ್ಯಾದಿ ಅಹಿತ ಪರಿಣಾಮಗಳು ಮನಸ್ಸಿನ ರೋಗರುಜಿನಗಳಿಗೆ ಕಾರಣವೆನಿಸುತ್ತದೆ. ಅವು ನಮ್ಮ ಅರಿವಿಗೆ ನಿಲುಕದ ಅಜ್ಞಾತ ಮನಸ್ಸಿನಲ್ಲಿ ಮುದುರಿಕೊಂಡು ಸಂಕೀರ್ಣತೆಯ ಸ್ವರೂಪವನ್ನು ತಾಳಿ ನಿತ್ಯಜೀವನದ ವರ್ತನೆಗಳ ಮೇಲೆ ಅಹಿತ ಪ್ರಭಾವವನ್ನು ಬೀರುತ್ತಿರುತ್ತವೆ. ಅದೇ ಮನೋರೋಗ, ಅದರಿಂದ ಅಹಿತ ವ್ಯಕ್ತಿತ್ವ ಲಕ್ಷಣಗಳು ಮೂಡಿಕೊಳ್ಳು ತ್ತವೆ; ವ್ಯಕ್ತಿಗೆ ನೆಮ್ಮದಿ ಕಡಿಮೆಯಾಗುತ್ತದೆ; ತಾನು ಅನುಸರಿಸುವ ವೃತ್ತಿಯಲ್ಲಿ ದಕ್ಷತೆ ಕುಂದುತ್ತದೆ. ಈ ಮಾತುಗಳು ಉಪಾಧ್ಯಾಯ ವೃತ್ತಿಗೆ ಅಕ್ಷರಶಃ ಅನ್ವಯಿಸುತ್ತವೆ. ಅವರು ದಕ್ಷರಾಗಿರಬೇಕೆಂದು ಆಶಿಸುವುದಾದರೆ ಅವರ ಮಾನಸಿಕ ಆರೋಗ್ಯದ ಕಡೆ ಗಮನವೀಯು ವುದು ತೀರ ಅಗತ್ಯ.

ಮಾನಸಿಕ ಆರೋಗ್ಯವುಳ್ಳ ಉಪಾಧ್ಯಾಯರ ಲಕ್ಷಣಗಳು ಹೀಗಿವೆ; ಹಿಂದೆ ದಕ್ಷ ಶಿಕ್ಷಕರ ಲಕ್ಷಣಗಳನ್ನು ಉಲ್ಲೇಖಿಸಿದೆ. ಅವೆಲ್ಲ ಬಹುಮಟ್ಟಿಗೆ ಮಾನಸಿಕವಾಗಿ ಆರೋಗ್ಯದಿಂದಿ ದ್ದವರ ಲಕ್ಷಣಗಳೇ. ಎಂದರೆ ಮಾನಸಿಕ ಆರೋಗ್ಯದ ಲಕ್ಷಣಗಳು ದಕ್ಷಶಿಕ್ಷಕರ ಲಕ್ಷಣಗಳೂ ಆಗಿರುತ್ತವೆ. ಆದರೂ ಮಾನಸಿಕವಾಗಿ ಆರೋಗ್ಯದಿಂದಿರುವ ಉಪಾಧ್ಯಾಯರ ಲಕ್ಷಣಗಳನ್ನು ಸಂಶೋಧಕರು ಪ್ರತ್ಯೇಕವಾಗಿ ನಿರ್ಧರಿಸಿರುವರು. ಅವುಗಳಲ್ಲಿ 1. ಬೋಧಿಸುವ ವಿಷಯದಲ್ಲಿ ಪಾಂಡಿತ್ಯ. 2. ವೃತ್ತಿಯ ಆದರ್ಶಗಳಲ್ಲಿ ವ್ಯಕ್ತಿಯ ಆಸಕ್ತಿ, 3. ಪರಿಣಾಮಕಾರಿಯಾಗುವಂತೆ ಬೋಧಿಸುವ ಕೌಶಲ, 4. ಮಕ್ಕಳಲ್ಲಿ ದಯೆ, ಮಮತೆ ಮತ್ತು ವಿಶ್ವಾಸ, 5. ಭಾವನೆಗಳನ್ನು ನಿರ್ವಿಕಾರವಾಗಿ ವ್ಯಕ್ತಪಡಿಸುವ ಶಕ್ತಿ, 6. ಪಕ್ಷಪಾತರಹಿತವೂ ಮಾನವೀಯವೂ ಆದ ಸ್ವಭಾವ, 7. ಮಕ್ಕಳ ಅಭಿವೃದ್ಧಿಯಲ್ಲಿ ಆಸಕ್ತಿ. 8. ಮಕ್ಕಳ ಜೀವನದಲ್ಲಿ ಕುತೂಹಲ, ಅವರ ಕಷ್ಟಗಳಲ್ಲಿ ಅನುಕಂಪ, ಅವರ ಶಕ್ತಿವಿಶೇಷಗಳಲ್ಲಿ ನಂಬಿಕೆ, ಅವುಗಳ ವಿಶ್ಲೇಷಣದಲ್ಲಿ ಕುತೂಹಲ, ಅವರ ದೌರ್ಬಲ್ಯಗಳಿಗೆ ಚಿಕಿತ್ಸೆ ನೀಡುವ ವೃತ್ತಿಧರ್ಮ. 9 ವಿನೋದ ಮತ್ತು ಸರಸಪ್ರವೃತ್ತಿ ಮತ್ತು 10. ಗಾಂಭೀರ್ಯ ಪ್ರವೃತ್ತಿ–ಇವು ಮುಖ್ಯವಾದವು. ಇವೆಲ್ಲ ಒಳ್ಳೆಯ ಶಿಕ್ಷಕರಲ್ಲಿ ಇರುವುವೆಂದು ಆಗಲೇ ಸೂಚಿಸಿದೆ. ಇವು ಮಾನಸಿಕ ಆರೋಗ್ಯವುಳ್ಳ ಶಿಕ್ಷಕರಲ್ಲೂ ಇರುವುದ ರಿಂದ ದಕ್ಷತೆಗೂ ಮಾನಸಿಕ ಆರೋಗ್ಯಕ್ಕೂ ನಿಕಟಸಂಬಂಧವಿರುವುದು ವ್ಯಕ್ತಪಡುತ್ತದೆ.

ಶಿಕ್ಷಕವೃತ್ತಿಯಲ್ಲಿರುವವರಲ್ಲಿ ಶೇ. 33ಕ್ಕೂ ಹೆಚ್ಚು ಮಂದಿ ಮನೋರೋಗದಿಂದ ನರಳತಕ್ಕವರೆಂದು ಹಲವು ಸಂಶೋಧನೆಗಳು ಸೂಚಿಸಿವೆ. ಕೆಲವರಲ್ಲಿ ಈ ರೋಗ ಆರಂಭಾವಸ್ಥೆಯಲ್ಲಿರುತ್ತದೆ, ಅಂಥವರಲ್ಲಿ ಕೆಲವು ವಿಲಕ್ಷಣ ವರ್ತನೆಗಳೂ ಉದ್ರೇಕ ಪ್ರವೃತ್ತಿಯೂ ವೃತ್ತಿಯಲ್ಲಿ ನಿರಾಸಕ್ತಿಯೂ ಕಂಡುಬರುತ್ತವೆ. ಮತ್ತೆ ಕೆಲವರಲ್ಲಿ ರೋಗ ಮುಂದುವರಿದಿದ್ದು, ಅವರು ಮಕ್ಕಳೊಡನೆ ಸಿಕ್ಕಾಪಟ್ಟೆ ಕಿರುಚಾಡಿ ಅಕ್ಷಮ್ಯ ರೀತಿಯಲ್ಲಿ ವರ್ತಿಸುವುದು ಕಂಡುಬರುತ್ತದೆ. ಅಕ್ಷಮ್ಯವೆನ್ನಬಹುದಾದ ಅವರ ಅಂಥ ಆದರ್ಶ ಮಕ್ಕಳಿಗೆ ಮೇಲ್ಪಂಕ್ತಿಯಾಗಿ ಅವರ ಮುಂದಿನ ಜೀವನ ಕಳಂಕಮಯವಾಗಬಹುದು. ರೋಗ ಇನ್ನೂ ಪ್ರಬಲಿಸಿರುವವರು ವೃತ್ತಿಗೆ ಅಯೋಗ್ಯರಾಗಿದ್ದು ಚಿಕಿತ್ಸಾಲಯಕ್ಕೆ ಸೇರುವುದು ಅಗತ್ಯವೆನಿಸುತ್ತದೆ. ಸಾಮಾನ್ಯವಾಗಿ ಅಂಥವರು ವೃತ್ತಿಯಲ್ಲಿ ಶೇ. 7–8ರಷ್ಟು ಇರುವರೆಂದು ಅಂದಾಜುಮಾಡಲಾಗಿದೆ.

ಮಾನಸಿಕರೋಗಕ್ಕೂ ವೃತ್ತಿದಕ್ಷತೆಗೂ ನಿಕಟಸಂಬಂಧವಿರುವುದರಿಂದ ಅಂಥ ಅಧ್ಯಾಪಕರನ್ನು ಗುರುತಿಸಲು ನೆರವಾಗುವ ಹಲವು ವಿಚಿತ್ರಲಕ್ಷಣಗಳ ಪರಿಚಯ ಅಗತ್ಯವೆನಿಸ ಬಹುದು. ಅಂಥ ಉಪಾಧ್ಯಾಯರಲ್ಲಿ ಕಂಡುಬರುವ ಮುಖ್ಯ ಲಕ್ಷಣಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಿದೆ; 1. ಪಾಠಪ್ರವಚನದ ಜಾಡನ್ನು ಬಿಟ್ಟು ಅತ್ತ ಇತ್ತ ಮನಸ್ಸನ್ನು ಹರಿಯಗೊಡು ವುದು, ಅದು ತೋರುವಂತೆ ಹಾವಭಾವಗಳನ್ನು ಮಾಡುವುದು, ಆಗಾಗ ಪಾಠವಿಷಯಗಳಲ್ಲಿ ವಿವರಗಳನ್ನು ಮರೆತು ತಬ್ಬಿಬ್ಬಾಗುವುದು, 2. ಮಕ್ಕಳನ್ನು ಸಿಕ್ಕಾಪಟ್ಟೆ ಅಡ್ಡಹೆಸರುಗಳಿಂದ, ಅನ್ವರ್ಥನಾಮಗಳಿಂದ ಕರೆಯುತ್ತ, ಹಿಯ್ಯಾಳಿಸುವ ದನಿಯಿಂದ ಮಾತನಾಡಿಸುವುದು, ಭೀತಿ ಹುಟ್ಟಿಸುವುದು, ಮತ್ತೆ ಮತ್ತೆ ಪರೀಕ್ಷೆಯ ವಿಷಯವೆತ್ತಿ ಅನಗತ್ಯವಾಗಿ ಕಾತರವನ್ನು ಕೆರಳಿಸುವುದು, ಹಾಸ್ಯಮಾಡುವುದು. 3. ಕೆಳದರ್ಜೆಯ ಗಾದೆಗಳನ್ನೂ ಅಶ್ಲೀಲ ಹಾಸ್ಯಸನ್ನಿವೇಶ ಗಳನ್ನೂ ತೀರ ಹಳಸಿದ ನಿದರ್ಶನಗಳನ್ನೂ ಮಿತಿಯಿಲ್ಲದೆ ಬಳಸುವುದು, ಮನ ಬಂದಂತೆ ಅನಗತ್ಯ ಸನ್ನಿವೇಶಗಳಿಗೆ ವಿಪರೀತ ಪ್ರಾಮುಖ್ಯ ನೀಡುವುದು, 4. ಆಕರ್ಷಕವಲ್ಲದ ಕೀರಲು ಧ್ವನಿ. ಇಲ್ಲವೇ ತೀರ ಗಡಸು ಧ್ವನಿ, ಅಥವಾ ಉದ್ರೇಕಗೊಂಡು ನಡುಗುವ ಧ್ವನಿ–ಇತ್ಯಾದಿ ವಿಕಾರಗಳಿಂದ ಮಕ್ಕಳಿಗೆ ಅಹಿತವೆನಿಸುವಂತೆ ಮಾತನಾಡುವುದು. 5. ಒಟ್ಟಿನಲ್ಲಿ ತರಗತಿಯಲ್ಲೂ ಇತರ ಶಾಲಾ ಸನ್ನಿವೇಶಗಳಲ್ಲೂ ಏನು ಮಾಡಿದರೂ ವಿಕಾರವಾಗಿ ಮಾಡುವುದು. ಕೆಲವು ವರ್ತನೆಗಳಂತೂ ವೈಪರೀತ್ಯವನ್ನು ಮುಟ್ಟಿದಂತಿರುವುದು.

ಈ ಐದು ಪ್ರಧಾನ ಲಕ್ಷಣಗಳ ಜೊತೆಗೆ ಇತರ ಗೌಣಲಕ್ಷಣಗಳೂ ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಹೀಗಿವೆ: 1. ಮಕ್ಕಳೊಡನೆ, ಸಹೋದ್ಯೋಗಿಗಳೊಡನೆ ವ್ಯವಹರಿಸುವಾಗ ಸಂಕೋಚ ಹಾಗೂ ಅನುಸರಿಸಿಕೊಂಡು ಹೋಗಲಾರದ ಪ್ರವೃತ್ತಿ. 2. ತೇಜಸ್ಸು ಕುಂದಿ, ಅಂತರ್ಮುಖಿ ಜೀವನ ಆರಂಭವಾಗಿ ಗೌಪ್ಯವಾಗಿ ಒಂದೆಡೆ ಕುಳಿತು ಕೊರಗುವುದು, ಎಟುಕದ ಆಸೆಗಳನ್ನು ಕಟ್ಟುವುದು, ವಿಫಲವಾದ ಸಂಭವಗಳನ್ನು ನೆನೆದು ನಿಟ್ಟುಸಿರುಬಿಡುವುದು. 3. ತನ್ನ ಸಮಸ್ಯೆಯೇ ದೊಡ್ಡದೆಂದುಕೊಂಡು ಮಿಕ್ಕ ಪ್ರಪಂಚವನ್ನು ಕಡೆಗಣಿಸುವುದು, ತನ್ನ ಕಷ್ಟಕ್ಕೆಲ್ಲ ಇತರರನ್ನು ದೂಷಿಸುವುದು, 4. ಸಣ್ಣ ಪುಟ್ಟ ಆಗುಹೋಗುಗಳನ್ನು

ದೊಡ್ಡದು ಮಾಡಿಕೊಂಡು ಹೋಗುತ್ತ ಎಲ್ಲವೂ ತನ್ನ ದುರ್ದೈವವೆಂದು ಕೊರಗುವುದು, ವೈಪರೀತ್ಯದ ಭಾವನೆಗಳನ್ನೂ ವರ್ತನೆಗಳನ್ನೂ ಪ್ರದರ್ಶಿಸುವುದು, 5. ಮಾತಿನಲ್ಲಿ ಧ್ವನಿಯಲ್ಲಿ ಅಳತೆ ತಪ್ಪುವುದು, 6. ವೃತ್ತಿಯಲ್ಲಿ ಆಸಕ್ತಿ ತಪ್ಪಿ ಬೋಧನೆ, ವಿಷಯ, ಮಕ್ಕಳು—ಇವುಗಳ ಬಗ್ಗೆ ನಿರ್ಲಕ್ಷ್ಯ ತಾಳುವುದು. 7. ಯಾರು ಸಿಕ್ಕಿದರೂ ತನ್ನ ನಷ್ಟಗಳನ್ನೆ ತೋಡಿಕೊಳ್ಳುತ್ತ ಕೇಳುವವರಿಗೆ ಬೇಸರ ಹಿಡಿಸುವುದು, 8. ಶಿಕ್ಷಣವೃತ್ತಿ ಎತ್ತಿಹಿಡಿದಿರುವ ಆದರ್ಶಗಳಿಗೆ ಬೆನ್ನು ತಿರುಗಿಸಿ, ಶಿಕ್ಷಣಶಾಖೆಯ ನಿಯಮಗಳನ್ನು ಉಲ್ಲಂಘಿಸಿ ನಿತ್ಯ ಕಾರ್ಯಗಳಲ್ಲಿ ಕ್ರಮಾನುಸರಣೆಯಿಲ್ಲದೆ ನಡೆದುಕೊಳ್ಳುವುದು.

ಇಂಥ ವಿಲಕ್ಷಣವರ್ತನೆಗಳಿಂದ ಶಿಕ್ಷಕರಿಗೂ ಸುಖವಿಲ್ಲ. ಅವರ ಸಹೋದ್ಯೋಗಿಗಳಿಗೂ ಸುಖವಿಲ್ಲ. ಅವರ ಸೇವೆಯನ್ನು ಆಶ್ರಯಿಸಿರುವ ಶಾಲೆಗಳಿಂದ ಮಕ್ಕಳಿಗಾಗಲಿ ಸಮಾಜಕ್ಕಾಗಲಿ ಅನುಕೂಲವಿಲ್ಲ. ಆದ್ದರಿಂದ ಶಿಕ್ಷಣದ ದಕ್ಷತೆಗೆ ಮಿಕ್ಕೆಲ್ಲ ಲೋಪದೋಷಗಳಿಗಿಂತ ಅಧ್ಯಾಪಕರ ಮಾನಸಿಕ ಅನಾರೋಗ್ಯ ದೊಡ್ಡ ಆತಂಕವೆನಿಸುತ್ತದೆ.

ಮಾನಸಿಕ ಅಸ್ವಸ್ಥತೆ ಎಲ್ಲ ವೃತ್ತಿಯವರಲ್ಲೂ ಕಂಡುಬರುತ್ತದೆ. ಆದರೆ ಕೆಲವು ವೃತ್ತಿಗಳಲ್ಲಿ ಅದರ ಪ್ರಮಾಣ ಅಧಿಕವಾಗಿರುತ್ತದೆ. ಅಂಥ ವೃತ್ತಿಗಳಲ್ಲಿ ಶಿಕ್ಷಣವೂ ಒಂದೆಂದು ಹೇಳುವರು. ಇದು ನಿಜವಾದರೆ. ಅಧ್ಯಾಪಕರ ಮಾನಸಿಕ ಆರೋಗ್ಯವನ್ನು ಕೆಡಿಸಲು ಈ ವೃತ್ತಿಯಲ್ಲಿ ಅಂತರ್ಗತವಾಗಿರುವ ಅಂಶಗಳಾವುವು ಎಂಬ ಸಮಸ್ಯೆ ಕುತೂಹಲ ಹುಟ್ಟಿಸದಿರಲಾರದು. ಆ ಬಗ್ಗೆ ಸಂಶೋಧನೆಗಳು ನಡೆದಿವೆ. ಅವು ಸೂಚಿಸಿರುವಂತೆ ಶಿಕ್ಷಕರ ಮನೋರೋಗಕ್ಕೆ ಕಾರಣವಾದ ಅಂಶಗಳಲ್ಲಿ ಕೆಲವು ಹೀಗಿವೆ: 1. ವಿಫಲವಾದ ಆಶೆ ಆಕಾಂಕ್ಷೆಗಳು, 2. ವಿದ್ಯಾರ್ಥಿಗಳು, ಆಡಳಿತವರ್ಗ ಮತ್ತು ಸಮಾಜ ತಮ್ಮ ಬಗ್ಗೆ ತೋರುವ ನಿರ್ಲಕ್ಷ್ಯ. 3. ಮೇಲಧಿಕಾರಿಗಳ ಕಠೋರವೂ ನಿಷ್ಠುರವೂ ಅಮಾನುಷವೂ ಹಲವು ವೇಳೆ ವೈಯಕ್ತಿಕವೂ ಆದ ವರ್ತನೆ. 4. ಮೇಲಧಿಕಾರಿಗಳು ಎಂದು, ಎಲ್ಲಿ ಯಾವ ಶಿಕ್ಷೆ ವಿಧಿಸುವರೋ ಎಂಬ ನಿರಂತರ ಭೀತಿ, 5. ಅಂದಿಗಂದಿಗೆ ಶಾಲೆಯಲ್ಲಿ ಸಂಭವಿಸುವ ಗಲಭೆ, ಘರ್ಷಣೆ, ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಮುಷ್ಕರ, ಸಹೋದ್ಯೋಗಿಗಳು ನಡೆಸುವ ಪಿತೂರಿ ಇತ್ಯಾದಿಗಳಿಂದ ಉದ್ಭವಿಸುವ ಉದ್ರೇಕದ ಸನ್ನಿವೇಶಗಳು, 6. ವೃತ್ತಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಡಳಿತವರ್ಗ ರೂಪಿಸುವ ಆದರ್ಶತೆಯ ಕಠೋರನಿಯಮಗಳು, 7. ಬಡತನಕ್ಕೆ ಸಿಕ್ಕಿದ ಕುಟುಂಬ ಜೀವನದ ವೈಯಕ್ತಿಕ ಸಂಕಟಗಳು, 8. ಅಗತ್ಯ ಉಪಕರಣಾದಿ ಸೌಲಭ್ಯಗಳು ಇಲ್ಲವಾದರೂ ಉತ್ತಮ ಶಿಕ್ಷಣಾಭಿವೃದ್ಧಿಯನ್ನೇ ಬಯಸಿ ದಂಡಧಾರಿಗಳಾಗಿ ನಿಂತಿರುವ ಸಮಾಜದ ಮತ್ತು ಶಿಕ್ಷಣಶಾಖೆಯ ಕಠೋರಪ್ರವೃತ್ತಿ 9. ಸೂಕ್ತ ವಸತಿ ಸೌಕರ್ಯವಿಲ್ಲದೆ ದೇಹಾರೋಗ್ಯ ಕುಂದಿ ನರಳುತ್ತಿರುವ ಅಧ್ಯಾಪಕರ ಸತ್ತ್ವಹೀನ ಜೀವನ, 10. ತಕ್ಕಷ್ಟು ವೃತ್ತಿಕೌಶಲದ ಮತ್ತು ಸಿದ್ಧಿ ಸಂಸ್ಕಾರಗಳ ಅಭಾವ.

ಇವುಗಳಲ್ಲಿ ಕೆಲವು ವೃತ್ತಿಯ ಬಗ್ಗೆ ರಾಷ್ಟ್ರ ತೋರುತ್ತಿರುವ ಕಾರ್ಪಣ್ಯದೃಷ್ಟಿಯಿಂದ ಹುಟ್ಟಿದವು; ಇನ್ನು ಕೆಲವು ಶಿಕ್ಷಣದ ಆಡಳಿತಗಾರರಲ್ಲಿ ಕಂಡುಬರುವ ಪಾಶವೀವರ್ತನೆಯಿಂದ ಹುಟ್ಟಿಕೊಂಡಂತಹವು; ಮತ್ತೆ ಕೆಲವು ಅಧ್ಯಾಪಕರ ನಿರ್ಲಕ್ಷ್ಯದಿಂದಲೇ ಮೂಡಿಕೊಂಡಿರುವಂತಹವು. ಅವು ಹೇಗೇ ಮೂಡಿಕೊಳ್ಳಲಿ ಅವುಗಳಿಂದರಾಷ್ಟ್ರಕ್ಕೆ ಅಗಾಧಪ್ರಮಾಣದ ನಷ್ಟವಾಗುತ್ತಿದೆ. ಈ ದೃಷ್ಟಿಯಿಂದ ರಾಷ್ಟ್ರದ ಕಾರ್ಪಣ್ಯದೃಷ್ಟಿ 'ಪೆನ್ನಿವೈಸ್ ಪೌಂಡ್ ಫೂಲಿಷ್' ಎಂಬ ಇಂಗ್ಲಿಷ್ ಗಾದೆಯನ್ನು ನೆನಪಿಗೆ ತರುತ್ತದೆ. ಎಂದರೆ ಶಿಕ್ಷಣಶಾಖೆ ಒಂದಿಷ್ಟು ಹೆಚ್ಚು ಹಣ ಒದಗಿಸುವುದರಿಂದ ರಾಷ್ಟ್ರ ಅನೇಕ ಉಪಾಧ್ಯಾಯರ ಮನೋರೋಗಗಳನ್ನು ತಡೆಯಬಹುದು; ಆ ಮೂಲಕ ಆ ಕ್ಷೇತ್ರದ ದಕ್ಷತೆ ಹೆಚ್ಚಿ ಖರ್ಚು ಮಾಡಿದ ಅದರ ಹಣಕ್ಕೆ ಸರಿದೂಗಿಸುವಂಥ ಪ್ರತಿಫಲ ದೊರಕಬಲ್ಲದು. ತಮ್ಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಅಧ್ಯಾಪಕರೂ ಪ್ರಯತ್ನಿಸಬೇಕು, ಅವರ ಆ ದಿಶೆಯ ಯತ್ನದಲ್ಲಿ ನೆರವಾಗತಕ್ಕ ಹಲವು ಸಲಹೆಗಳು ಇವು: 1. ವಿಪರೀತಕ್ಕೆ ಹೋಗದ ವಿಹಿತವಾದ ಭಾವನೆಗಳನ್ನೂ ಆಶೋತ್ತರಗಳನ್ನೂ ಬೆಳೆಸಿಕೊಳ್ಳುವುದು, 2. ತಮ್ಮ ವೃತ್ತಿಗೆ ಅಗತ್ಯವಾದ ಅರ್ಹತೆಗಳನ್ನು ಸಾಧಿಸಲು ನಿರಂತರವೂ ಯತ್ನಿಸುವುದು, 3. ವೃತ್ತಿದಕ್ಷತೆಗೆ ಸಾಧಕವೆನಿಸುವ ಅಂಶಗಳನ್ನು ಅಭ್ಯಸಿಸಿ ಅನುಷ್ಠಾನಕ್ಕೆ ತರುವುದು, 4. ಅವಕಾಶವಾದಾಗ ಮನೋರಂಜನಕಾರ್ಯಗಳಲ್ಲಿ ಭಾಗವಹಿಸುವುದು, 5. ಆದಾಯಕ್ಕೆ ತಕ್ಕಂತೆ ಖರ್ಚನ್ನು ಮಿತಿಗೊಳಿಸಿಕೊಳ್ಳುವುದು, 6. ಪಾಠಪ್ರವಚನಗಳಲ್ಲಿ ಮಕ್ಕಳಿಗೆ ಅತಿಯಾದ ಹೊರೆಯನ್ನು ಹೇರಹೋಗದೆ ಸಹಾನುಭೂತಿಯಿಂದ ವರ್ತಿಸುವುದು, 7. ಶಿಕ್ಷಣಶಾಖೆ, ಶಾಲೆ ಇತರ ಸಂಘಸಂಸ್ಥೆಗಳು ನೀಡಿರುವ ಸೌಲಭ್ಯಗಳನ್ನು ಬಳಸಿಕೊಳ್ಳುವುದು, 8. ವಾಸಕ್ಕೆ ಅನುಕೂಲವಾದ ಮನೆ ಮಾಡುವುದು. 9. ವೃತ್ತಿಗೆ ಸಂಬಂಧಿಸಿದ ನೀತಿ ಸಂಹಿತೆಗೆ ನಿಷ್ಠೆಯಿಂದಿರುವುದು, 10. ವೃತ್ತಿನಿರತರ ಸಂಘಸಂಸ್ಥೆಗಳಲ್ಲಿ ಪಾತ್ರವಹಿಸುವುದು, 11. ಸಹೋದ್ಯೋಗಿ ವೃತ್ತದಲ್ಲಿ ಅಥವಾ ಸಂಬಂಧಿಸಿದ ಸನ್ನಿವೇಶಗಳಲ್ಲಿ ನಡೆಯುವ ಪಿತೂರಿಗಳಲ್ಲಿ ಭಾಗವಹಿಸದಿರುವುದು ಮತ್ತು ಆ ಬಗ್ಗೆ ಅತಿಯಾಗಿ ಹಚ್ಚಿಕೊಂಡು ಹೋಗದಿರುವುದು, 12. ತನ್ನ ಬಗ್ಗೆ ತನ್ನ ಮನಸ್ಸಿನಲ್ಲಿ ಕೀಳುಭಾವನೆಯನ್ನು ಬೆಳಸಿಕೊಳ್ಳುವ ಪ್ರವೃತ್ತಿಯಿಂದ ದೂರವಿದ್ದು ಆತ್ಮವಿಶ್ವಾಸವನ್ನು ಸಾಧಿಸುವುದು.

ಮೇಲಿನ ಅಂಶಗಳಲ್ಲಿ ಹಲವು ಶಿಕ್ಷಕರನ್ನೇ ಅವಲಂಬಿಸಿವೆ. ಆದ್ದರಿಂದ ತಮ್ಮ ಆರೋಗ್ಯ ಜೀವನಕ್ಕೆ ತಾವೂ ಹೊಣೆಯಾಗಬೇಕೆನ್ನಿಸುತ್ತದೆ. ಅವರ ಕೈ ಮೀರಿರುವ ಅಂಶಗಳೂ ಅದರಲ್ಲಿವೆ. ಅವನ್ನು ನಿವಾರಿಸುವುದು ಸಮಾಜದ ಮತ್ತು ರಾಷ್ಟ್ರದ ಹೊಣೆಗಾರಿಕೆ. (ಎನ್.ಎಸ್.ವಿ.)

**ಉಪಾಧ್ಯಾಯ, ಅಯೋಧ್ಯಾಸಿಂಹ:** 1865–1941. ಆಧುನಿಕ ಹಿಂದೀ ಕಾವ್ಯ ಪಿತಾಮಹ ಎಂದು ಖ್ಯಾತಿವೆತ್ತವ. ಜನಿಸಿದ್ದು ಉತ್ತರ ಪ್ರದೇಶದ ಆಜ಼ಮ್‌ಗಢದಲ್ಲಿ, ಕಾವ್ಯನಾಮ ಹರಿಔಧ್. ಕಾವ್ಯನಾಮವನ್ನು ಆಯ್ದುಕೊಳ್ಳುವಲ್ಲೂ ಈತ ಔಚಿತ್ಯ ತೋರಿದ್ದಾನೆ. ಹರಿ ಎಂದರೆ ಸಿಂಹ, ಔಧ್ ಎಂದರೆ ಅಯೋಧ್ಯಾ. ಉಪಾಧ್ಯಾಯ ಮನೆತನದ ಹೆಸರು. ಈತನ ಪೂರ್ವಿಕರು ಬದಾಯೂನ್ ಜಿಲ್ಲೆಯವರಾದರೂ ಕಳೆದ ಕೆಲವು ತಲೆಮಾರಿನಿಂದ ಆಜ಼ಮ್‌ಗಢದಲ್ಲಿದ್ದಾರೆ.

ಖಡಿಬೋಲೀ (ಆಧುನಿಕ ಹಿಂದೀ) ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡದ್ದು ಇಪ್ಪತ್ತನೆಯ ಶತಮಾನದಲ್ಲಿ, ಗದ್ಯ ಮತ್ತು ಪದ್ಯಗಳಿಗೆ ಆಡುನುಡಿ ಬಳಸುವಲ್ಲಿ ಅನೇಕರು ವಿಫಲರಾಗಿ ಭಾಷೆಯನ್ನೇ ತೆಗಳುತ್ತಿದ್ದ ಕಾಲದಲ್ಲಿ ಅದನ್ನು ಬಹು ಚತುರತೆಯಿಂದ ಬಳಸಿ ಅದರ ಕೈ ಹಿಡಿದವರಲ್ಲಿ ಉಪಾಧ್ಯಾಯನೂ ಒಬ್ಬ. ಉಪಾಧ್ಯಾಯ ಮೊದಲಿಗೆ ವ್ರಜಭಾಷೆಯಲ್ಲಿ ಕಾವ್ಯರಚನೆ ಮಾಡುತ್ತಿದ್ದು, ಅನಂತರ ಆಡುಮಾತಿನಲ್ಲಿ ಕಾವ್ಯರಚನೆಯ ಹಾದಿ ಹಿಡಿದ.

20ನೆಯ ಶತಮಾನದ ಮೊದಲಲ್ಲಿ ಕೆಲವು ಸಣ್ಣಪುಟ್ಟ ಕಾವ್ಯಗಳು, ನಾಲ್ಕಾರು ಅನುವಾದಗಳು ಹಾಗೂ ಮೈಥಿಲೀಶರಣಗುಪ್ತರ ಜನದ್ರಥವಧ ಕಾವ್ಯ ಬೆಳಕಿಗೆ ಬಂದಿದ್ದರೂ ಹಿಂದೀ ಕಾವ್ಯ ಸಾಂಪ್ರದಾಯಿಕ ಬಂಧನದಿಂದ ಪೂರ್ಣವಾಗಿ ಮುಕ್ತವಾಗಿರಲಿಲ್ಲ. ಆಧುನಿಕ ಹಿಂದೀ ಕಾವ್ಯಕ್ಕೆ ಇನ್ನೂ ಪೂರ್ಣ ಯಶಸ್ಸು ದೊರೆತಿರಲಿಲ್ಲ. ಇಂಥ ಪ್ರಯೋಗಾವಸ್ಥೆಯಲ್ಲಿ ಹರಿಜೌಧ್‌ನ ಪ್ರಿಯಪ್ರವಾಸ ಎಂಬ ಕಾವ್ಯ ಜಯಭೇರಿ ಹೊಡೆಯಿತು. ಆಡುನುಡಿಯ ಬಳಕೆಗೆ ವಿರೋಧಿಗಳಾಗಿದ್ದವರಿಗೆ ಈ ಕಾವ್ಯ ಸವಾಲಾಗಿ ಪರಿಣಮಿಸಿತು.

ಆಧುನಿಕ ಭಾಷೆಯ ಪ್ರಾಯೋಗಿಕ ಸ್ಥಿತಿಯಲ್ಲಿ ಮೂಡಿಬಂದ ಕಾವ್ಯವಾದರೂ ಹಿಂದಿನ ಎಲ್ಲ ಕಾವ್ಯಗಳನ್ನೂ ಮೆಟ್ಟಿನಿಂತ ಕೀರ್ತಿ ಇದರದು. ಪ್ರಿಯಪ್ರವಾಸ ಈ ಯುಗದ್ದಲ್ಲ, ಮುಂದಿನ ಯುಗದ್ದು ಎನಿಸುವಷ್ಟು ವೈಶಿಷ್ಟ್ಯ ಪೂರ್ಣವಾಗಿತ್ತು. ಇಡೀ ಕಾವ್ಯ ಸಂಸ್ಕೃತ ವರ್ಣವೃತ್ತಗಳಲ್ಲಿದೆ. ಅಂತ್ಯಪ್ರಾಸದ ಬಂಧನವನ್ನು ಕಿತ್ತೊಗೆದ (ಹಿಂದೀ ಕಾವ್ಯ ಇನ್ನೂ ಈ ಬಂಧನದಿಂದ ಸಂಪೂರ್ಣವಾಗಿ ಮುಕ್ತವಾಗಿಲ್ಲ) ಮೊಟ್ಟಮೊದಲ ಕಾವ್ಯವಿದು. ಸರಳತೆ, ಸರಸತೆ ಮತ್ತು ರಸಸಿಕ್ತತೆ ಇಲ್ಲಿ ಮೇಳವಿಸಿದೆ. ಹಿಂದೀ ಸಂಸ್ಕೃತ ಶಬ್ದಗಳ ಸಾಮರಸ್ಯಕ್ಕೆ ಇದೊಂದು ಸುಂದರ ನಿದರ್ಶನ. ಮಧುರಾಗಮನದವರೆಗಿನ ಶ್ರೀಕೃಷ್ಣ ಚರಿತ್ರೆ ಇದರ ಕಥಾವಸ್ತು ಗೋಪ ಗೋಪಿಯರ ವಿರಹ, ಯಶೋದೆಯ ದುಃಖ ಬಲು ಹೃದಯಸ್ಪರ್ಶಿಯಾಗಿ ಮೂಡಿದೆ. ಈ ಕಾವ್ಯಕ್ಕೆ ಮಂಗಲಪ್ರಸಾದ್ ಪಾರಿತೋಷಕವನ್ನು ನೀಡಲಾಯಿತು (1915).

ವೈದೇಹೀ ವನವಾಸ ಎಂಬುದು ಈತನ ಇನ್ನೊಂದು ಪ್ರಸಿದ್ಧ ಕಾವ್ಯ. ಸೀತೆಯ ವನವಾಸ ಈ ಕಾವ್ಯದ ವಸ್ತು. ಪಾಂಡಿತ್ಯ ಮತ್ತು ಸರಸತೆ ಇಲ್ಲಿ ಹೋಯ್‌ಕೈಯಾಗಿ ಸಾಗಿವೆ. ಚೌಖೇ ಚೌಪದೇ ಮತ್ತು ಚುಭತೇ ಚೌಪದೇ ಎಂಬುವು ದೇಸೀ ಶೈಲಿಯಲ್ಲಿ ರಚಿತವಾಗಿರುವ ಸರಸಪೂರ್ಣ ಕವನಸಂಗ್ರಹಗಳು, ನುಡಿಗಟ್ಟುಗಳನ್ನು ಇಲ್ಲಿ ವಿಶೇಷವಾಗಿ ಬಳಸಲಾಗಿದೆ. ಪ್ರಿಯಪ್ರವಾಸಕ್ಕೆ ಪೀಠಿಕಾರೂಪವಾಗಿ ಹಿಂದೀ ಕಾವ್ಯದ ವಿಕಾಸವನ್ನು ಕುರಿತು ಬರೆದ ದೀರ್ಘಪ್ರಬಂಧ. ಪಾಟ್ನ ವಿಶ್ವವಿದ್ಯಾನಿಲಯದ ಭಾಷಣಮಾಲೆಯಲ್ಲಿ ಬರೆದ ಹಿಂದೀ ಭಾಷೆ ಮತ್ತು ಸಾಹಿತ್ಯದ ವಿಕಾಸಕ್ಕೆ ಸಂಬಂಧಿಸಿದ ಪ್ರಬಂಧಗಳು ಈತನ ಮುಖ್ಯ ಗದ್ಯಕೃತಿಗಳು. ಕೆಲವು ಸಾಹಿತ್ಯಕ ಪ್ರಬಂಧಗಳನ್ನೂ ರಚಿಸಿದ್ದಾನೆ. ಜೊತೆಗೆ ನಾಟಕ, ಕಾದಂಬರಿ ಮತ್ತು ಪ್ರಬಂಧಗಳೂ ಮೂಡಿಬಂದಿವೆ. ಪ್ರದ್ಯುಮ್ನವಿಜಯ ನಾಟಕದ ವಸ್ತು ಹಳೆಯದಾದರೂ ನಿರೂಪಣೆ ಹೊಸತು. ಠೇಠ್ ಹಿಂದಿ ಕಾ ಠಾಠ್ ಮತ್ತು ಅಧಖಿಲಾ ಫೂಲ್ ಸಾಮಾಜಿಕ ಕಾದಂಬರಿಗಳು ಕಾವ್ಯಾತ್ಮಕ ಶೈಲಿ ಈತನ ವಿಶೇಷ ಆಕರ್ಷಣೆ.

ರಸಕಲಸ ರಸನಿರೂಪಣೆಗೆ ಸಂಬಂಧಿಸಿದ ಉತ್ತಮ ಗ್ರಂಥ, ರಸ ಮತ್ತು ನಾಯಿಕಾಭೇದದ ಸಮಸ್ಯೆಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಒಳಗೊಂಡಿದೆ. ಲಕ್ಷಣಗಳನ್ನು ಗದ್ಯದಲ್ಲಿ ಕೊಟ್ಟು, ಸ್ವರಚಿತ ಸರಸ, ಸುಂದರ, ಅಪೂರ್ವ ಲಕ್ಷ್ಯ ಪದ್ಯಗಳನ್ನು ಲೇಖಕ ನೀಡಿದ್ದಾನೆ. ವಿಷಯ ವಿವೇಚನೆಗೆ ಪ್ರಾಚೀನ ಕಾವ್ಯ ಮೀಮಾಂಸಕರ ಅಭಿಪ್ರಾಯಗಳೇ ಈತನಿಗೆ ಆಧಾರ. ಬದಲಾದ ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ನಾಯಿಕಾಭೇದದ ಹಳೆಯ ಕಲ್ಪನೆಗಳಿಗೆ ಬದಲಾಗಿ ಹೊಸವರ್ಗೀಕರಣ ಆವಶ್ಯಕವೆಂದು ಪ್ರತಿಪಾದಿಸಿ ಆ ಬಗೆಯಲ್ಲಿ ನಾಯಿಕೆಯರನ್ನು ವರ್ಗೀಕರಿಸಿರುವುದು, ಸಾಹಿತ್ಯಕ್ಷೇತ್ರದಲ್ಲಿನ ಅಧುನಾತನ ಪ್ರವೃತ್ತಿಗಳನ್ನು ಗಮನದಲ್ಲಿರಿಸಿಕೊಂಡು ರಸವಿವೇಚನೆ ಮಾಡಿರುವುದು ಈ ಗ್ರಂಥದ ವೈಶಿಷ್ಟ್ಯಗಳು.

ಈತನ ಬಹುಮುಖ ಸಾಹಿತ್ಯ ಸೇವೆಯನ್ನು ಗಮನಿಸಿ, 20ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ, ನಾಗರೀ ಪ್ರಚಾರಿಣೀ ಸಭೆ ಅಭಿನಂದನ ಗ್ರಂಥವೊಂದನ್ನು ಸಮರ್ಪಿಸಿ ಗೌರವಿಸಿತು (1938). ದೆಹಲಿಯಲ್ಲಿ ನಡೆದ ಹಿಂದೀ ಸಾಹಿತ್ಯ ಸಮ್ಮೇಳನಕ್ಕೆ ಈತ ಅಧ್ಯಕ್ಷನಾಗಿದ್ದ.

ಉಪಾಧ್ಯಾಯ ಕಾಶಿ ಹಿಂದೂ ವಿಶ್ವವಿದ್ಯಾನಿಲಯದ ಅಧ್ಯಾಪಕನಾಗಿ ನಿವೃತ್ತನಾದ. ವೃತ್ತಿಯಿಂದ ಅಧ್ಯಾಪಕನಾದರೂ ಪ್ರವೃತ್ತಿಯಿಂದ ಸಾಹಿತಿಯಾಗಿದ್ದು, ಸಾಹಿತ್ಯಸೇವೆಯನ್ನು ಸತತವಾಗಿ ನಡೆಸಿಕೊಂಡು ಬಂದ ಈತ ಹಿಂದೀಸಾಹಿತ್ಯದ ವರಕವಿಗಳಲ್ಲಿ ಒಬ್ಬ. (ಪಿ.ಜಿ.ಡಿ.)

**ಉಪಾಧ್ಯಾಯರ ಶಿಕ್ಷಣ:** ಶಿಕ್ಷಣವೃತ್ತಿಯಲ್ಲಿ ತನ್ನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ವ್ಯಕ್ತಿಯೊಬ್ಬನಿಗೆ ಸಾಧ್ಯವಾಗುವಂತೆ ಮಾಡಲು ರೂಪಿಸಿರುವ, ಔಪಚಾರಿಕ ಮತ್ತು ಅನೌಪಚಾರಿಕ ರೀತಿಯ ವಿವಿಧ ಅನುಭವಗಳನ್ನೂ ಚಟುವಟಿಕೆಗಳನ್ನೂ

ಒಳಗೊಂಡ, ಕಾರ್ಯಕ್ರಮ ಎಂದರೆ ಅಭ್ಯರ್ಥಿಯನ್ನು ಶಿಕ್ಷಣವೃತ್ತಿಗೆ ಸಿದ್ಧಪಡಿಸುವುದಕ್ಕೂ ಆಗಲೇ ಶಿಕ್ಷಣವೃತ್ತಿಯಲ್ಲಿ ನಿರತರಾಗಿರತಕ್ಕ ಅಧ್ಯಾಪಕರಿಗೆ ಅಗತ್ಯವೆನಿಸುವ ವೃತ್ತಿಸಿದ್ಧತೆಯನ್ನು ದೊರಕಿಸುವುದಕ್ಕೂ ಅನಂತರ ಆ ಕೌಶಲದ ಬೆಳವಣಿಗೆಯನ್ನು ಸಾಧಿಸುವುದಕ್ಕೂ ವೃತ್ತಿ ಶಿಕ್ಷಣಸಂಸ್ಥೆ ವ್ಯವಸ್ಥೆಗೊಳಿಸಿರುವ ವಿಧ್ಯುಕ್ತವೆನಿಸುವ ಮತ್ತು ವಿಧ್ಯುಕ್ತವಲ್ಲದ ಎಲ್ಲ ಕಾರ್ಯಕ್ರಮಗಳು.

ಜನಾಂಗವೊಂದರ ಸಂಸ್ಕೃತಿಯನ್ನು ಅರಿಯಬೇಕಾದರೆ ಅಲ್ಲಿನ ಶಾಲೆಗೆ ಹೋಗಬೇಕು; ಆ ಜನಾಂಗದ ಭವಿಷ್ಯವನ್ನು ದರ್ಶಿಸಬೇಕಾದರೆ ಅಲ್ಲಿನ ಕಾರ್ಯಕ್ರಮಗಳನ್ನು ಪರಿಶೀಲಿಸಬೇಕು – ಎಂದು ಹೇಳುವುದುಂಟು. ಅಂಥ ಕಾರ್ಯಕ್ರಮಗಳ ವಿನ್ಯಾಸವನ್ನು ರೂಪಿಸಿ ಕಾರ್ಯಾಚರಣೆಯನ್ನು ನಡೆಸುವವರು ಅಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯ ಉಪಾಧ್ಯಾಯಿನಿಯರು. ಆದ್ದರಿಂದ ಒಂದು ರಾಷ್ಟ್ರದ ಸಂಸ್ಕೃತಿ, ಅದರ ಭವಿಷ್ಯ ಮತ್ತು ಪುರೋಭಿವೃದ್ಧಿ ಬಹುಮಟ್ಟಿಗೆ ಆ ನಾಡಿನ ಅಧ್ಯಾಪಕರನ್ನು ಅವಲಂಬಿಸಿರುತ್ತದೆ. ಅಂಥ ಪ್ರಮುಖ ಕರ್ತವ್ಯದ ನಿರ್ವಹಣೆಗೆಂದು ನೇಮಕವಾಗುವ ವ್ಯಕ್ತಿಗಳು ಪಡೆಯುವ ವೃತ್ತಿಶಿಕ್ಷಣದ ಸಿದ್ಧಿ ಸಂಸ್ಕಾರಗಳು ಎಂಥ ಪ್ರಮುಖ ವಿಷಯವೆಂಬುದು ಇದರಿಂದ ಸ್ಪಷ್ಟಪಡುತ್ತದೆ.

ಇತಿಹಾಸ: ಗುರುಕುಲಗಳಿದ್ದ ಕಾಲದಲ್ಲಿ ವಿದ್ಯೆ ಮತ್ತು ಬೋಧನಕ್ರಮಗಳು ಗುರುವಿನಿಂದ ಶಿಷ್ಯರಿಗೆ, ಅವರಿಂದ ಇತರರಿಗೆ ಪಾಂಕ್ತವಾಗಿ ನಡೆದು ಬರುತ್ತಿತ್ತಾದರೂ ಅಧ್ಯಾಪಕರ ವೃತ್ತಿಶಿಕ್ಷಣದಲ್ಲಿ ಪ್ರಾಚೀನವೆನ್ನಬಹುದಾದ ಯಾವ ಪರಂಪರೆಯೂ ಇಲ್ಲ. ಅದು ಕೇವಲ ಎರಡು ಮೂರು ಶತಮಾನಗಳಿಂದ ಮಾತ್ರ ಪ್ರಚಾರಕ್ಕೆ ಬಂದಿರುವ ವಿಷಯ. 17ನೆಯ ಶತಮಾನದಲ್ಲಿ ಇಂಗ್ಲೆಂಡು ಮತ್ತು ಫ್ರಾನ್ಸ್‌ಗಳಲ್ಲಿ ಅಧ್ಯಾಪಕರ ವೃತ್ತಿಶಿಕ್ಷಣದ ಬಗ್ಗೆ ಆಸಕ್ತಿ ಆರಂಭವಾಯಿತೆನ್ನಬಹುದು. ಜರ್ಮನಿಯಲ್ಲಿ 19ನೆಯ ಶತಮಾನದ ಆರಂಭದಲ್ಲಿ ಶಿಕ್ಷಣವನ್ನು ಸಾಮಾಜಿಕ ಅಂಶವನ್ನಾಗಿ ಮಾಡಿ ಶಿಕ್ಷಣಕ್ಕಾಗಿ ರಾಷ್ಟ್ರವ್ಯಾಪಕ ಯೋಜನೆಯನ್ನು ತಯಾರಿಸುವಾಗ ಅಧ್ಯಾಪಕರ ಶಿಕ್ಷಣಕ್ಕಾಗಿ ನಿರ್ದಿಷ್ಟ ಸಂಸ್ಥೆಗಳ ಸ್ಥಾಪನೆಗೆ ಅವಕಾಶ ಕಲ್ಪಿಸಿಕೊಳ್ಳಲಾಯಿತು. ಜೊತೆಗೆ 1826ರಲ್ಲಿ ಅಧ್ಯಾಪಕರಾಗಿ ನೇಮಿಸಿಕೊಳ್ಳುವ ಮುನ್ನ ಒಂದು ವರ್ಷ ಕಾಲ ಪರೀಕ್ಷಾರ್ಥ ಬೋಧನೆ ಅಗತ್ಯವೆಂದು ಶಾಸನವಾಯಿತು. 1831ರಿಂದ ವೃತ್ತಿಶಿಕ್ಷಣ ಪಡೆಯುವುದರ ಜೊತೆಗೆ ಅಧ್ಯಾಪಕರಾಗತಕ್ಕವರು ಬೋಧಿಸುವ ವಿಷಯದಲ್ಲೂ ಶಿಕ್ಷಣಶಾಸ್ತ್ರದಲ್ಲೂ ಪರೀಕ್ಷೆಯೊಂದಕ್ಕೆ ಕುಳಿತು ಉತ್ತೀರ್ಣರಾಗಬೇಕೆಂದೂ ನಿಯಮವಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕಳೆದ ಶತಮಾನದ ಮಧ್ಯಕಾಲದ ವೇಳೆಗೆ ಅಧ್ಯಾಪಕರಿಗೆ ವೃತ್ತಿ ಶಿಕ್ಷಣ ವೀಯಲು ನಾರ್ಮಲ್ ಸ್ಕೂಲುಗಳೆಂಬ ವಿಶಿಷ್ಟಸಂಸ್ಥೆಗಳು ಆರಂಭವಾದವು. ಇಂಗ್ಲೆಂಡಿನಲ್ಲಿ ಆ ಶತಮಾನದ ಆದಿಯಲ್ಲಿ ಪ್ರಚಾರಕ್ಕೆ ಬಂದ ಹಿರೇಮಣಿಗಳ ಬೋಧನಕ್ರಮ ಅಲ್ಲಿನ ಅಧ್ಯಾಪಕರ ವೃತ್ತಿ ಶಿಕ್ಷಣ ಪದ್ಧತಿಗೆ ಒಂದು ರೀತಿಯ ತಳಹದಿಯಾಯಿತೆನ್ನಬಹುದು. ಭಾರತದಲ್ಲಿ ಪ್ರಚಾರದಲ್ಲಿದ್ದ ಈ ಪದ್ಧತಿಯನ್ನು ಇಂಗ್ಲೆಂಡಿನ ಬೆಲ್ ಮತ್ತು ಲ್ಯಾಂಕ್ಯಾಸ್ಟರ್ ಎಂಬವರು ತಮ್ಮ ದೇಶಕ್ಕೆ ತಂದು ಪ್ರಚಾರ ಮಾಡಿದರು. ಶಾಲೆಯ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಪಾಠವನ್ನು ತಾವು ತಮ್ಮ ಅಧ್ಯಾಪಕರಿಂದ ಕಲಿತಂತೆ ಬೋಧಿಸುತ್ತಿದ್ದ ಈ ಪದ್ಧತಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಹೆಚ್ಚು ಜನಕ್ಕೆ ಶಿಕ್ಷಣವೀಯಲು ತುಂಬ ಅನುಕೂಲವಾಗಿ ತೋರಿತು. ಆದರೆ ಅದು ತನಕ ಕೇವಲ ಓದು ಬರಹ ಲೆಕ್ಕಾಚಾರಗಳನ್ನು ಮಾತ್ರ ಹೇಳಿಕೊಡುತ್ತಿದ್ದ ಶಾಲೆಗಳಲ್ಲಿ ಇತರ ವಿಷಯಗಳ ಬೋಧನೆಯೂ ಸೇರಿಕೊಂಡಿತು. ಅದಕ್ಕಾಗಿ ಅಧ್ಯಾಪಕರಾಗತಕ್ಕವರಿಗೆ ಮೂರರಿಂದ ಆರು ತಿಂಗಳ ಅವಧಿಯ ಒಂದು ರೀತಿಯ ವೃತ್ತಿಶಿಕ್ಷಣವನ್ನು ಲ್ಯಾಂಕ್ಯಾಸ್ಟರ್ ಆರಂಭಿಸಿದರು. ಅನಂತರ 1846ರಲ್ಲಿ ಆ ಶಿಕ್ಷಣದ ತಳಹದಿಯ ಮೇಲೆ ಬ್ಯಾಟರ್‌ಸೀ ಎಂಬ ಸ್ಥಳದಲ್ಲಿ ಕೇಯಿ ಷೆಟ್ಲ್‌ವರ್ತ್ ಎಂಬಾತ 18 ತಿಂಗಳ ಅವಧಿಯ ಅಧ್ಯಾಪಕರ ವೃತ್ತಿ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದ. ಇದು ಮುಂದೆ ಆ ನಾಡಿನಲ್ಲಿ ಯಥೇಚ್ಛವಾಗಿ ಸ್ಥಾಪನೆಯಾದ ಎರಡು ವರ್ಷದ (ಈಗ ಮೂರು ವರ್ಷ) ಟ್ರೈನಿಂಗ್ ಕಾಲೇಜುಗಳಿಗೆ ಮಾದರಿಯಾಯಿತು.

ಭಾರತದಲ್ಲಿ ಅನೇಕ ವರ್ಷಗಳಿಂದಲೂ ಶಾಲೆಯ ಹಿರೇಮಣಿಗಳು ಕಿರಿಯರಿಗೆ ಪಾಠ ಹೇಳಿ ಅನುಭವಗಳಿಸುತ್ತಿದ್ದುದು ಒಂದು ರೀತಿಯ ವೃತ್ತಿಶಿಕ್ಷಣವೇ ಆಗಿತ್ತೆಂದು ಭಾವಿಸಬಹುದಾದರೂ ಆಧುನಿಕ ಸ್ವರೂಪದ ವೃತ್ತಿಶಿಕ್ಷಣ ಇಲ್ಲಿ ಆರಂಭವಾದದ್ದು ಕಳೆದ ಶತಮಾನದ ಮಧ್ಯಕಾಲದ ಅನಂತರವೇ. 19ನೆಯ ಶತಮಾನದ ಪೂರ್ವಾರ್ಧದಲ್ಲಿ ಕ್ರೈಸ್ತಪಾದ್ರಿಗಳು ಬಂಗಾಳ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಅಧ್ಯಾಪಕರ ತರಬೇತಿ ಕೇಂದ್ರಗಳನ್ನು ತೆರೆದರು. ಮೊದಮೊದಲು ಅಲ್ಲಿ ಕೇವಲ ಕ್ರೈಸ್ತ ಅಧ್ಯಾಪಕರಿಗೆ ಮಾತ್ರ ತರಬೇತಿ ನೀಡುತ್ತಿದ್ದರೂ ಕ್ರಮೇಣ ಇತರರಿಗೂ ಅವಕಾಶ ಕಲ್ಪಿಸಿಕೊಟ್ಟರು. 1854ರಲ್ಲಿ ಈಸ್ಟ್ ಇಂಡಿಯ ಕಂಪನಿಯವರಿಗೆ ಭಾರತದ ಆಡಳಿತದ ಸನ್ನದನ್ನು ಮುಂದುವರಿಸುವಾಗ ಕಳಿಸಿದ ವುಡ್ಡರಪತ್ರದಲ್ಲಿ ಬ್ರಿಟಿಷ್ ಸರ್ಕಾರ ಇಲ್ಲಿ ವಿಸ್ತರಿಸುತ್ತಿದ್ದ ಶಿಕ್ಷಣ ಸೌಲಭ್ಯವನ್ನು ಉತ್ತಮ ಪಡಿಸಲು ಅಧ್ಯಾಪಕರ ತರಬೇತಿ ಕೇಂದ್ರಗಳನ್ನು ತೆರೆಯಬೇಕೆಂದು ಸೂಚಿಸಿತು. ಅಂದಿಗಾಗಲೇ ಇಂಗ್ಲೆಂಡಿನಲ್ಲಿ ಪ್ರಚಾರಕ್ಕೆ ಬಂದಿದ್ದ ವಿದ್ಯಾರ್ಥಿ – ಅಧ್ಯಾಪಕರ ಪದ್ಧತಿಯನ್ನೂ ಆಚರಣೆಗೆ ತರುವಂತೆ ಸಲಹೆ ಮಾಡಲಾಗಿತ್ತು. ಸಾಮಾನ್ಯ ಶಿಕ್ಷಣ ಮುಗಿಸಿ ಶಿಕ್ಷಕರಾಗ ಬಯಸುವ ಅಭ್ಯರ್ಥಿಗಳಿಗೆ ವೇತನವನ್ನು ನೀಡಿ ಒಂದು ವರ್ಷಕಾಲ ಪರೀಕ್ಷಾರ್ಥ ಬೋಧನೆಯನ್ನು ಒಂದು ಶಾಲೆಯಲ್ಲಿ ನಡೆಸಿದ ಮೇಲೆ ಸೂಕ್ತವೆಂದು ತೋರಿ ಬಂದರೆ ಅಂಥವರನ್ನು ತರಬೇತಿಗೆ ಆರಿಸಿಕೊಂಡು ಅದನ್ನು ಮುಗಿಸಿದ ಮೇಲೆ ಕೆಲಸಕ್ಕೆ ಸೇರಿಸಿಕೊಳ್ಳುವುದು ಈ ಪದ್ಧತಿಯಲ್ಲಿ ವಾಡಿಕೆಯಲ್ಲಿತ್ತು. ಸ್ವಲ್ಪಕಾಲ ಈ ಪದ್ಧತಿ ಪ್ರಚಾರದಲ್ಲಿದ್ದರೂ ವಿಸ್ತರಿಸುತ್ತಿದ್ದ ಪ್ರಾಥಮಿಕ ಶಿಕ್ಷಣರಂಗಕ್ಕೆ ತಕ್ಕಷ್ಟು ಸೂಕ್ತ ರೀತಿಯಲ್ಲಿ ಶಿಕ್ಷಣ ಪಡೆದ ಅಧ್ಯಾಪಕರು ದೊರಕುವುದು ಕಷ್ಟವಾಗಿತ್ತು. ಅನಂತರ 1859ರಲ್ಲಿ ಕಂಪನಿಯಿಂದ ಆಡಳಿತ ಸೂತ್ರವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ ಕಳಿಸಿದ ಪತ್ರವೊಂದರಲ್ಲಿ ವುಡ್ಡರ ಪತ್ರದಲ್ಲಿ ಸೂಚಿಸಿದ್ದ ಮೇಲಿನ ಸಲಹೆಯನ್ನು ನಿಧಾನವಿಲ್ಲದೆ ಕಾರ್ಯರೂಪಕ್ಕೆ ತರುವಂತೆ ಆಗ್ರಹದಿಂದ ಸೂಚಿಸಿತು. ಅದರ ಫಲವಾಗಿ ಕೂಡಲೇ ದೇಶದ ಅನೇಕ ಭಾಗಗಳಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕರ ತರಬೇತಿಗಾಗಿ ನಾರ್ಮಲ್ ಸ್ಕೂಲುಗಳು ಆರಂಭವಾದವು. ಅಲ್ಲಿ ಅಧ್ಯಾಪಕ ವೃತ್ತಿಗೆ ಸೇರಬಯಸುವ ಅಭ್ಯರ್ಥಿಗಳಿಗೆ ಓದುವುದು, ಬರೆಯುವುದು, ಲೆಕ್ಕ, ಚರಿತ್ರೆ, ಭೂಗೋಳ ಮತ್ತು ಬೋಧನಕಲೆ – ಈ ವಿಷಯಗಳಲ್ಲಿ ಶಿಕ್ಷಣವೀಯಲಾಗುತ್ತಿತ್ತು. ಅಲ್ಲಿ ನೀಡುತ್ತಿದ್ದ ಸಾಮಾನ್ಯ (ಸಾಂಸ್ಕೃತಿಕ) ಮತ್ತು ವೃತ್ತಿ ಸಂಬಂಧದ ಶಿಕ್ಷಣ ತೀರ ಕೆಳಮಟ್ಟದ್ದಾಗಿದ್ದರೂ ಬಹುಬೇಗ ಅವು ಜನಪ್ರಿಯವೆನಿಸಿದವು. 1882ರ ಹೊತ್ತಿಗೆ ದೇಶಾದ್ಯಂತ 106 ನಾರ್ಮಲ್ ಸ್ಕೂಲುಗಳು ಏರ್ಪಟ್ಟು ಅವುಗಳಲ್ಲಿ ಸುಮಾರು ನಾಲ್ಕು ಸಹಸ್ರ ಅಭ್ಯರ್ಥಿಗಳು ವೃತ್ತಿ ಶಿಕ್ಷಣ ಪಡೆಯುತ್ತಿದ್ದರು.

1882ರಲ್ಲಿ ಭಾರತ ಸರ್ಕಾರ ನೇಮಿಸಿದ ಶಿಕ್ಷಣ ಆಯೋಗ ಅಧ್ಯಾಪಕರ ತರಬೇತಿಯ ಬಗ್ಗೆ ಹೆಚ್ಚಿನ ಉತ್ಸಾಹ ತೋರಿತು. ಪ್ರಾಥಮಿಕ ಶಿಕ್ಷಣಕ್ಕೆ ಒದಗಿಸುವ ಹಣದಲ್ಲಿ ತಕ್ಕಷ್ಟನ್ನು ಮೊದಲು ಅಧ್ಯಾಪಕರ ತರಬೇತಿಗಾಗಿ ತೆಗೆದಿಡಬೇಕೆಂದು ಸಲಹೆ ಮಾಡಿತು. ಆ ಸಲಹೆಯನ್ನನುಸರಿಸಿ ನೂತನವಾಗಿ ಅನೇಕ ನಾರ್ಮಲ್ ಸ್ಕೂಲುಗಳು ಅಸ್ತಿತ್ವಕ್ಕೆ ಬಂದವು. ಅಧ್ಯಾಪಕರ ಸಿದ್ಧತೆಯ ಬಗ್ಗೆ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಮೂಡಿತು. ಆ ವೇಳೆಗೆ ಪ್ರಾಥಮಿಕ ಶಿಕ್ಷಣಶಾಲೆಗಳು ಭರದಿಂದ ಹೆಚ್ಚ ತೊಡಗಿದವು. ಆ ಸುಮಾರಿಗೆ ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಸರ್ಕಾರಗಳಿಗೆ ವಹಿಸಲಾಯಿತು. ಧನಬಲವಿಲ್ಲದ ಈ ನೂತನ ಆಡಳಿತಸಂಸ್ಥೆ ಅಧ್ಯಾಪಕರ ವೃತ್ತಿಶಿಕ್ಷಣದ ವ್ಯವಸ್ಥೆಯನ್ನು ಅಷ್ಟಾಗಿ ವಿಸ್ತರಿಸಲಿಲ್ಲ.

ಪ್ರೌಢಶಾಲೆಯ ಅಧ್ಯಾಪಕರಿಗೆ ವೃತ್ತಿಶಿಕ್ಷಣ ಅನಿವಾರ್ಯವೆಂದು ಶಿಕ್ಷಣವೇತ್ತರನೇಕರು ಮೊದಮೊದಲು ಭಾವಿಸಿರಲಿಲ್ಲ. ಅವರಿಗೆ ವಿಷಯ ಪಾಂಡಿತ್ಯವೊಂದೇ ಸಾಕೆಂಬ ಭಾವನೆ ಇದ್ದುದೇ ಇದಕ್ಕೆ ಕಾರಣ. ಪ್ರತಿಭಾವಂತ ಅಧ್ಯಾಪಕರ ಬಗ್ಗೆ ಈ ಮಾತು ನಿಜವೆನಿಸಬಹುದಾದರೂ ಮಿಕ್ಕ ಬಹುತೇಕ ಮಂದಿಗೆ ಇದು ಅನ್ವಯಿಸಲಾರದು. ಕಲಿತದ್ದನ್ನು ಪರಿಣಾಮಕಾರಿಯಾಗಿ ಬೋಧಿಸುವುದು ಅವರಿಗೆ ವೃತ್ತಿಶಿಕ್ಷಣದಿಂದ ಸಾಧ್ಯವಾಗುವುದೆಂಬ ಅಭಿಪ್ರಾಯ ಕ್ರಮಕ್ರಮವಾಗಿ ಬಲಗೊಳ್ಳುತ್ತ ಬಂತು. 1856ರಲ್ಲಿ ಭಾರತದಲ್ಲಿ ಪ್ರೌಢಶಾಲೆಯ ಅಧ್ಯಾಪಕರ ಪ್ರಥಮ ತರಬೇತಿ ಸಂಸ್ಥೆ ಮದ್ರಾಸಿನಲ್ಲಿ ನಾರ್ಮಲ್ ಸ್ಕೂಲ್ ಎಂಬ ಹೆಸರಿನಿಂದ ಆರಂಭವಾಯಿತು (ಮುಂದೆ ಇದನ್ನು ಟೀಚರ್ಸ್ ಕಾಲೇಜೆಂದು ಕರೆಯಲಾಯಿತು). ಅನಂತರ 1880ರಲ್ಲಿ ಲಾಹೋರಿನಲ್ಲಿ ಮತ್ತೊಂದು ಟೀಚರ್ಸ್ ಕಾಲೇಜು ಆರಂಭವಾಯಿತು. ಆಗ ಅವೆರಡೂ ಸೇರಿ ಅರುವತ್ತು ಮಂದಿಗೆ ಶಿಕ್ಷಣ ನೀಡುತ್ತಿದ್ದವು. ಜೊತೆಗೆ ಅಲ್ಲಲ್ಲಿ ಸಾಂಸ್ಕೃತಿಕ ಕಾಲೇಜುಗಳಲ್ಲಿ ಪ್ರೌಢಶಾಲೆಯ ಅಧ್ಯಾಪಕರಿಗೆ ತರಬೇತಿ ಕೇಂದ್ರಗಳನ್ನೂ ತರಗತಿಗಳನ್ನೂ ಏರ್ಪಡಿಸಲಾಗಿತ್ತು. 1902ರ ವೇಳೆಗೆ ಅಂಥ ಆರು ಟೀಚರ್ಸ್ ಕಾಲೇಜುಗಳೂ ಹಲವಾರು ತರಬೇತಿ ಕೇಂದ್ರ ಮತ್ತು ತರಗತಿಗಳೂ ಏರ್ಪಟ್ಟಿದ್ದವು. ಆದರೆ ಅಂದಿಗಾಗಲೇ ಪ್ರೌಢಶಿಕ್ಷಣ ದೇಶಾದ್ಯಂತ ವಿಸ್ತರಿಸಿತ್ತು. ಇಷ್ಟಾದರೂ ತರಬೇತಿ ಪಡೆದ ಶಿಕ್ಷಕರು ಮಾತ್ರ ತಕ್ಕಷ್ಟು ದೊರಕುತ್ತಿರಲಿಲ್ಲ.

ಅಧ್ಯಾಪಕವೃತ್ತಿಗೆ ಮೊದಮೊದಲು ಅಷ್ಟಾಗಿ ಭಾರತೀಯ ಮಹಿಳೆಯರು ಬರುತ್ತಿರಲಿಲ್ಲ; ಹಾಗೂ ಬರುತ್ತಿದ್ದವರಲ್ಲಿ ಕ್ರೈಸ್ತ ಮಹಿಳೆಯರೇ ಹೆಚ್ಚಾಗಿರುತ್ತಿದ್ದರು. ಆದ್ದರಿಂದ ಇತರ ಮತದ ಹೆಣ್ಣು ಮಕ್ಕಳು ಶಾಲೆಗೆ ಬರುತ್ತಿರಲಿಲ್ಲ. ಆದರೆ ಮಹಿಳಾ ಶಿಕ್ಷಣದ ಅಗತ್ಯವನ್ನು ಕುರಿತು ಎಲ್ಲೆಡೆಯಲ್ಲೂ ಪ್ರಚಾರ ಮಾತ್ರ ನಡೆಯುತ್ತಿತ್ತು. 1866ರಲ್ಲಿ ಭಾರತಕ್ಕೆ ಬಂದಿದ್ದ ಶ್ರೀಮತಿ ಕಾರ್ಪೆಂಟರ್ ಎಂಬ ಆಂಗ್ಲ ಸಮಾಜ ಸೇವಕಿ ಭಾರತದ ಸದ್ಯದ ಆವಶ್ಯಕತೆ ಮಹಿಳಾಶಿಕ್ಷಣ; ಅದಕ್ಕಾಗಿ ಶಾಲೆಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಅಧ್ಯಾಪಕರಾಗಿ ಬರಬೇಕು – ಎಂದು ಪ್ರಚಾರ ಮಾಡಿ ಸರ್ಕಾರದ ಮತ್ತು ಸಾರ್ವಜನಿಕರ ಬೆಂಬಲವನ್ನು ದೊರಕಿಸಿಕೊಂಡಳು. ಇದರಿಂದ ಭಾರತೀಯ ಮಹಿಳೆಯರೂ ಅಧ್ಯಾಪಕರ ತರಬೇತಿ ಕಾಲೇಜುಗಳಿಗೆ ಸೇರಲಾರಂಭಿಸಿದರು. ಆದರೆ ಅವರಲ್ಲನೇಕರು ತಕ್ಕಷ್ಟು ಸಾಮಾನ್ಯ (ಸಾಂಸ್ಕೃತಿಕ) ಶಿಕ್ಷಣ ಪಡೆದಿರುತ್ತಿರಲಿಲ್ಲ. ಆದ್ದರಿಂದ ನಾರ್ಮಲ್ ಸ್ಕೂಲುಗಳಲ್ಲಿ ಅವರಿಗೆ ತಕ್ಕಷ್ಟು ಸಾಮಾನ್ಯ ಶಿಕ್ಷಣವನ್ನು ಮೊದಲು ಕೊಟ್ಟು, ಅನಂತರ ವೃತ್ತಿಶಿಕ್ಷಣ ನೀಡುವ ನೂತನ ಪ್ರಚಾರಕ್ಕೆ ಬರಹತ್ತಿತು.

ಲಾರ್ಡ್ ಕರ್ಜûನ್ನನ ನೇತೃತ್ವದಲ್ಲಿ ಈ ಶತಮಾನದ ಆದಿಯಿಂದ ಭಾರತೀಯ ಶಿಕ್ಷಣ ಪ್ರಗತಿಯ ತೀವ್ರ ವೇಗದ ನೂತನ ಯುಗವೊಂದಕ್ಕೆ ಕಾಲಿಟ್ಟಿತು. ಅಧ್ಯಾಪಕರ ತರಬೇತಿಯ ಬಗ್ಗೆ ಆತ ಹೆಚ್ಚಿನ ಆಸಕ್ತಿಯನ್ನೂ ಶ್ರದ್ಧೆಯನ್ನೂ ವ್ಯಕ್ತಪಡಿಸಿದ; ವಿಸ್ತರಿಸುತ್ತಿದ್ದ ಪ್ರಾಥಮಿಕ ಶಿಕ್ಷಣರಂಗಕ್ಕೆ ಅಧ್ಯಾಪಕರನ್ನೊದಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ನಾರ್ಮಲ್ ಸ್ಕೂಲ್‌ಗಳನ್ನು ಆರಂಭಿಸಲು ಕಾರ್ಯತಃ ನೆರವಾದ, ಬಹುಬೇಗ ತರಬೇತಿ ಕಾರ್ಯಕ್ರಮದ ಅವಧಿ ಒಂದರಿಂದ ಎರಡು ವರ್ಷಗಳಿಗೆ ಹೆಚ್ಚಿತು. 1922ರ ವೇಳೆಗೆ ಭಾರತದಲ್ಲಿ 1,072

ನಾರ್ಮಲ್ ಸ್ಕೂಲ್‍ಗಳೂ 27,000 ವಿದ್ಯಾರ್ಥಿಗಳೂ ಇದ್ದರು. ಅವರಲ್ಲಿ ಹತ್ತು ಸಹಸ್ರಕ್ಕೂ ಮಿಕ್ಕು ಮಹಿಳಾ ಅಭ್ಯರ್ಥಿಗಳು ವೃತ್ತಿ ಶಿಕ್ಷಣ ಪಡೆಯುತ್ತಿದ್ದರು. ಹಲವು ನಾರ್ಮಲ್ ಸ್ಕೂಲ್‍ಗಳೂ ಕೇವಲ ಅಪ್ಪರ್ ಪ್ರೈಮರಿ ತರಗತಿಗಳನ್ನು ಮುಗಿಸಿದ ಅಭ್ಯರ್ಥಿಗಳನ್ನು ತರಬೇತಿಗೆ ಸೇರಿಕೊಳ್ಳುತ್ತಿದ್ದವು. ಅವರಿಗೆ ಎರಡು ವರ್ಷಗಳ ಅವಧಿಯ ವೃತ್ತಿಸಿದ್ಧತೆ ಸಾಲದೆಂದು ಮೂರು ವರ್ಷಕ್ಕೆ ವಿಸ್ತರಿಸುವ ಯತ್ನವೂ ನಡೆಯುತ್ತಿತ್ತು.

ಭಾರತದ ಬೇರೆ ಬೇರೆ ಭಾಗಗಳಲ್ಲಿ ಪ್ರಾಥಮಿಕ ಶಿಕ್ಷಣ ತೀವ್ರ ವೇಗದಿಂದ ವಿಸ್ತರಿಸುತ್ತಿತ್ತು. ಅದಕ್ಕನುಕೂಲಿಸಲು ಅಧ್ಯಾಪಕರ ತರಬೇತಿ ಸಂಸ್ಥೆಗಳೂ ಹೆಚ್ಚಿದ್ದವು. ಆದರೆ ಅಲ್ಲಿ ಅವರಿಗೆ ದೊರಕುತ್ತಿದ್ದ ಶಿಕ್ಷಣ ಪರಿಣಾಮಕಾರಿಯಾಗಿರಲಿಲ್ಲ. ಆದ್ದರಿಂದ ಶಿಕ್ಷಣರಂಗ ವಿಸ್ತರಿಸಿದ್ದರೂ ಶಾಲೆಗಳಲ್ಲಿ ಶಿಕ್ಷಣದ ಮಟ್ಟ ತೀರ ಹಿಂದುಳಿದಿತ್ತು. ಆ ಸುಮಾರಿನಲ್ಲಿ ಎಂದರೆ 1928ರಲ್ಲಿ ನೇಮಕವಾದ ಹರ್ಟಾಗ್ ಶಿಕ್ಷಣ ಸಮಿತಿ ಈ ಅಂಶಗಳನ್ನು ತೀವ್ರವಾಗಿ ಟೀಕಿಸಿ ಪ್ರಾಥಮಿಕ ಶಿಕ್ಷಕರ ಶಿಕ್ಷಣ ಸೂಕ್ತವಾಗಿಲ್ಲ; ಅವರಿಗೆ ದೊರಕುವ ವೃತ್ತಿಶಿಕ್ಷಣ ಏನೇನೂ ಸಾಲದು ಅಲ್ಲದೆ ಪರಿಣಾಮಕಾರಿಯಾಗಿಯೂ ಇಲ್ಲ; ಹಾಗೂ ತಕ್ಕ ಪ್ರಮಾಣದಲ್ಲಿ ತರಬೇತಿ ಪಡೆದ ಅಧ್ಯಾಪಕರೂ ಇಲ್ಲ – ಎಂದು ಸೂಚಿಸಿ ಆ ಬಗ್ಗೆ ರಾಷ್ಟ್ರದ ಗಮನ ಸೆಳೆಯಿತು. ಆಗ ಪ್ರಾಥಮಿಕ ಶಾಲೆಗಳಲ್ಲಿ ಶೇ. 44 ತರಬೇತಿ ಪಡೆದ ಅಧ್ಯಾಪಕರು ಮಾತ್ರ ಇದ್ದರು.

ಶಿಕ್ಷಣದ ಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಸಂಸ್ಥೆಗಳನ್ನು ಆರಂಭಿಸಿದುದರ ಫಲವಾಗಿ ಶಾಲೆಗಳಲ್ಲಿ ತರಬೇತಿ ಪಡೆದ ಅಧ್ಯಾಪಕರ ಸಂಖ್ಯೆ 1937ರ ವೇಳೆಗೆ ಶೇ. 57 ಕ್ಕೇರಿತ್ತು.

ಲಾರ್ಡ್ ಕರ್ಜ಼ನ್ ಪ್ರೌಢಶಾಲೆಗಳ ಶಿಕ್ಷಣದ ಮಟ್ಟವನ್ನು ಉತ್ತಮಪಡಿಸಲು ಇಲ್ಲಿನ ಶಿಕ್ಷಕರ ತರಬೇತಿ ವ್ಯವಸ್ಥೆಯನ್ನು ವಿಸ್ತರಿಸಿ ಉತ್ತಮಪಡಿಸುವ ಕಡೆಯೂ ತಕ್ಕಷ್ಟು ಗಮನ ನೀಡಿದ್ದಲ್ಲದೆ ಶಿಕ್ಷಣವೃತ್ತಿಗೆ ಸಂಬಂಧಿಸಿದ ಜ್ಞಾನ ಮತ್ತು ಅಭ್ಯಾಸ ಎರಡೂ ಅಧ್ಯಾಪಕರಿಗೆ ಅಗತ್ಯವೆಂದು ಸೂಚಿಸಿ ತರಬೇತಿ ಸಂಸ್ಥೆಗಳು ಶಾಲೆಗಳೊಡನೆ ನಿಕಟ ಸಂಪರ್ಕ ಹೊಂದಿರುವುದರ ಅಗತ್ಯವನ್ನು ತೋರಿಸಿಕೊಟ್ಟ. ಅವನ ಪ್ರೋತ್ಸಾಹದಿಂದ ಪ್ರೌಢಶಾಲೆಯ ಅಧ್ಯಾಪಕರ ತರಬೇತಿ ಸಂಸ್ಥೆಗಳು ಸಂಖ್ಯೆಯಲ್ಲಿ ಹೆಚ್ಚಿದವು. ಇತರ ತರಬೇತಿ ಕಾಲೇಜುಗಳಿಗೆ ಮಾದರಿಯಾಗುವಂಥ ಕಾಲೇಜುಗಳ ಆರಂಭಕ್ಕೂ ಆತ ಕಾರಣನಾದ. 1906ರಲ್ಲಿ ಬೊಂಬಾಯಿಯಲ್ಲಿ ಆರಂಭವಾದ ಸೆಕೆಂಡರಿ ಟ್ರೈನಿಂಗ್ ಕಾಲೇಜೂ 1908ರಲ್ಲಿ ಕಲ್ಕತ್ತದಲ್ಲಿ ಆರಂಭವಾದ ಡೇವಿಡ್ ಹೇರ್ ಟ್ರೈನಿಂಗ್ ಕಾಲೇಜೂ ಅವುಗಳಲ್ಲಿ ಮುಖ್ಯವಾದವು. ಅವೆಲ್ಲ ಉತ್ತಮ ಅಧ್ಯಾಪಕ ವರ್ಗವನ್ನೂ ಉಪಕರಣಾದಿ ವಸ್ತು ಸಂಪತ್ತನ್ನೂ ಪಡೆದಿದ್ದು ಪ್ರೌಢಶಾಲೆಯ ಅಧ್ಯಾಪಕರ ಶಿಕ್ಷಣದಲ್ಲಿ ಹೊಸ ಮಾದರಿಯನ್ನು ಹಾಕಿಕೊಟ್ಟವು.

ಈ ನಡುವೆ ಲಾರ್ಡ್ ಕರ್ಜ಼ನ್ ಎಲ್ಲ ಶಾಲೆಗಳೂ ಕೆಲವು ವರ್ಷಗಳೊಳಗಾಗಿ ವೃತ್ತಿ ಶಿಕ್ಷಣ ಪಡೆದ ಅಧ್ಯಾಪಕರನ್ನೇ ನೇಮಿಸಿಕೊಳ್ಳುವಂತಾಗಬೇಕು, ಅರ್ಹತೆಯ ಪ್ರಮಾಣಪತ್ರವಿಲ್ಲದವರಿಗೆ ಭೋಧಿಸುವ ಅವಕಾಶವಿರಬಾರದು – ಎಂದು ಅಧಿಕೃತವಾಗಿ ಸೂಚಿಸಿದ (1913). ಖಾಸಗಿ ಶಾಲೆಗಳೂ ಅಂಥ ವೃತ್ತಿಶಿಕ್ಷಣ ಪಡೆದವರನ್ನೇ ನೇಮಿಸಿಕೊಳ್ಳಲೆಂಬ ಉದ್ದೇಶದಿಂದ ತರಬೇತಿ ಸಂಸ್ಥೆಗಳನ್ನು ಏಕಪ್ರಕಾರವಾಗಿ ಹೆಚ್ಚಿಸಿದ. ಪ್ರಾಥಮಿಕ ಶಿಕ್ಷಣವನ್ನು ಅತಿಯಾಗಿ ಟೀಕಿಸಿದ ಹರ್ಟಾಗ್ ಸಮಿತಿ ಪ್ರೌಢಶಿಕ್ಷಣದ ನೂತನ ಸ್ಥಿತಿಯ ಬಗ್ಗೆ ಸಮಾಧಾನ ವ್ಯಕ್ತಪಡಿಸಿತ್ತು.

ದ್ವಿತೀಯ ಯುದ್ಧದ ದೆಸೆಯಿಂದ ಶಿಕ್ಷಣದ ಇತರ ಕ್ಷೇತ್ರಗಳಂತೆ ಅಧ್ಯಾಪಕರ ತರಬೇತಿ ವ್ಯವಸ್ಥೆಯೂ ಕೆಲವು ವರ್ಷಗಳವರೆಗೆ ವಿಸ್ತರಿಸಲಿಲ್ಲ. ಆದರೆ ಆ ಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಗಾಧ ಬದಲಾವಣೆಗಳು ಆರಂಭವಾಗಿದ್ದವು. ರಾಜಕೀಯವಾಗಿ ಭಾರತ ಸ್ವಾತಂತ್ರ್ಯವನ್ನು ಸಾಧಿಸಿತ್ತು. ಗಾಂಧೀಜಿಯವರ ನೇತೃತ್ವದಲ್ಲಿ ಮೂಲಶಿಕ್ಷಣ ಶಾಲೆಗಳೂ ಅಸ್ತಿತ್ವಕ್ಕೆ ಬರಹತ್ತಿದ್ದವು. ಅವುಗಳಿಗೂ ವಿಶಿಷ್ಟರೀತಿಯ ಶಿಕ್ಷಕರನ್ನೊದಗಿಸಲು ನೂತನ ರೀತಿಯ ತರಬೇತಿ ಸಂಸ್ಥೆಗಳು ಆರಂಭವಾದವು. ಯಾವ ಮಟ್ಟದ ಶಾಲೆಯಲ್ಲೇ ಆಗಲಿ ಅಧ್ಯಾಪಕರ ತರಬೇತಿ ಹೊಂದಿಯೇ ಇರಬೇಕೆಂದೂ ಇಲ್ಲದವರನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದರೆ ಅವರೆಲ್ಲರಿಗೂ ತರಬೇತಿ ನೀಡಬೇಕೆಂದೂ 1924ರಲ್ಲಿ ಭಾರತದ ಕೇಂದ್ರ ಶಿಕ್ಷಣ ಸಲಹಾಮಂಡಲಿ, ಸೂಚಿಸಿತು. 1947ರ ಅನಂತರ ಕಡ್ಡಾಯ ಶಿಕ್ಷಣ ಆರಂಭವಾಗಿ ಪ್ರಾಥಮಿಕ ಮಟ್ಟದ ಶಿಕ್ಷಣ ಇಮ್ಮಡಿ ಮುಮ್ಮಡಿ ವಿಸ್ತರಿಸಹತ್ತಿತು; ಅದೇ ಪ್ರಮಾಣದಲ್ಲಿ ಪ್ರೌಢಶಿಕ್ಷಣವೂ ವಿಸ್ತರಿಸತೊಡಗಿತು. ಅಲ್ಲಿಗೆ ವೃತ್ತಿ ಶಿಕ್ಷಣ ಪಡೆದ ಅಧ್ಯಾಪಕರನ್ನೊದಗಿಸಲು ಎರಡೂ ಅಂತಸ್ತಿನ ತರಬೇತಿ ಸಂಸ್ಥೆಗಳೂ ಸಂಖ್ಯೆಯಲ್ಲಿ ಹೆಚ್ಚಿದವು.

ಯುನೆಸ್ಕೊ, ಪ್ರಾಥಮಿಕ(1935) ಮತ್ತು ಪ್ರೌಢಶಾಲೆಗಳ(1953) ಶಿಕ್ಷಕರ ವೃತ್ತಿಶಿಕ್ಷಣವನ್ನು ಕುರಿತು ಪ್ರಪಂಚದಾದ್ಯಂತ ಪರಿಶೀಲನೆ ನಡೆಸಿ ಈ ಕೆಲವು ಸೂಚನೆಗಳನ್ನು ನೀಡಿತು; 1.ಪ್ರಾಥಮಿಕ ಮತ್ತು ಪ್ರೌಢಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣವನ್ನು ವಿಶ್ವವಿದ್ಯಾನಿಲಯಗಳಿಗೆ ವಹಿಸಬೇಕು, 2. ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೆ ಹೆಚ್ಚಿನ ಕಾಲಾವಧಿಯ ಸಾಂಸ್ಕೃತಿಕ ಶಿಕ್ಷಣವೂ ಪ್ರೌಢಶಾಲೆಯ ಅಧ್ಯಾಪಕರಿಗೆ ಹೆಚ್ಚಿನ ಕಾಲಾವಧಿಯ ವೃತ್ತಿಶಿಕ್ಷಣವೂ ಅಗತ್ಯ. 3. ಪ್ರಾಥಮಿಕ ಮತ್ತು ಪ್ರೌಢಶಾಲೆಯ ಅಧ್ಯಾಪಕರುಗಳಲ್ಲಿ ಸಂಪರ್ಕ ಹೆಚ್ಚಿಸಬೇಕು, 4.ಅಧ್ಯಾಪಕರಿಗೆ ಬೌದ್ಧಿಕ ಶಿಕ್ಷಣದ ಜೊತೆಗೆ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಶಿಕ್ಷಣವೂ ಅಗತ್ಯ. 5. ಎಲ್ಲ ಮಟ್ಟದ ಶಾಲೆಗಳ ಎಲ್ಲ ರೀತಿಯ ವಿಷಯಗಳ ಅಧ್ಯಾಪಕರಿಗೂ ಮನೋವೈಜ್ಞಾನಿಕ ಶಿಕ್ಷಣ ಅಗತ್ಯ, 6. ಶಾಲೆಯ ಕಾರ್ಯಕ್ರಮಗಳ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ವೃತ್ತಿಶಿಕ್ಷಣ ಅಗತ್ಯ, 7. ಬೇರೆ ಬೇರೆ ವಿಧಾನಗಳಲ್ಲಿ ಬೋಧಿಸುವ ಮತ್ತು ಉಪಕರಣಗಳನ್ನು ಬಳಸುವ ಕೌಶಲದಲ್ಲೂ ಶಿಕ್ಷಣ ಅಗತ್ಯ.–ಇವು ನೀಡಿದ ಪ್ರಮುಖ ಸಲಹೆಗಳು. ಈ ಸಲಹೆಗಳು ಈಚೆಗೆ ಹೇಗೆ ಪರಿಣಾಮ ಬೀರಿವೆಯೆಂಬುದನ್ನು ಗಮನಿಸಬಹುದು.

ಸ್ವತಂತ್ರ ಭಾರತದ ಶಿಕ್ಷಣ ಯೋಜನೆ ಏಕಪ್ರಕಾರವಾಗಿ ವಿಸ್ತರಿಸುತ್ತ ಬಂದುದರ ಫಲವಾಗಿ ವೃತ್ತಿಶಿಕ್ಷಣ ಪಡೆದ ಅಧ್ಯಾಪಕರ ಅಗತ್ಯ ಈಗ ಹತ್ತಾರು ಪಾಲು ಹೆಚ್ಚಿದೆ. ಅದಕ್ಕಾಗಿ ಸದ್ಯದಲ್ಲಿ ಭಾರತದಲ್ಲಿ ಎರಡು ಸಹಸ್ರಕ್ಕೂ ಹೆಚ್ಚಿನ ಸಂಖ್ಯೆಯ ಅಧ್ಯಾಪಕರ ಶಿಕ್ಷಣ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಅವುಗಳಲ್ಲಿ ಸುಮಾರು 250 ಪದವೀಧರ ಅಧ್ಯಾಪಕರ ತರಬೇತಿ ಸಂಸ್ಥೆಗಳು, ಮಿಕ್ಕವು ಪ್ರಾಥಮಿಕ ಶಾಲೆಯ ಅಧ್ಯಾಪಕರ ತರಬೇತಿ ಸಂಸ್ಥೆಗಳು.

ತರಬೇತಿಗೆ ಬದಲಾಗಿ ಶಿಕ್ಷಣ: ಮೊದಲ ಮಹಾಯುದ್ಧ ಮುಗಿದ ಈ ಶತಮಾನದ ಎರಡನೆಯ ದಶಮಾನ ಉರುಳಿದಂತೆ ಶಿಕ್ಷಣದ ಬಗ್ಗೆ ನೂತನ ಸಂಶೋಧನೆಗಳೂ ನಡೆದು ಹೊಸ ವಿಷಯಗಳು ಬೆಳಕಿಗೆ ಬಂದವು. ಮಕ್ಕಳಿಗೆ ವಿಷಯ ಜ್ಞಾನ ನೀಡುವುದೊಂದೇ ಶಿಕ್ಷಣವಲ್ಲ – ಅವರ ದೇಹ, ಮನಸ್ಸು, ಆತ್ಮ ಅವರ ಇಡೀ ವ್ಯಕ್ತಿತ್ವವೇ ವಿಕಾಸವಾಗಬೇಕು; ಆದ್ದರಿಂದ ವಿಷಯಬೋಧನೆ ಮಾತ್ರ ಅಧ್ಯಾಪಕರ ಕೆಲಸವಲ್ಲ – ಮಕ್ಕಳ ಸಮಗ್ರ ವ್ಯಕ್ತಿತ್ವ ಸಮರಸವಾಗಿ ರೂಪುಗೊಳ್ಳುವಂತೆ ಮಾಡುವುದೂ ಅವರಕೆಲಸ; ಹಾಗೂ ಆ ಕಾರ್ಯಗಳು ಸಾಮಾಜಿಕ ಹಿನ್ನೆಲೆಯಲ್ಲಿ ಸಾಧನೆಯಾಗಬೇಕು. ಹೀಗೆಂಬ ಭಾವನೆ ಪ್ರಚಾರವಾದಂತೆ ಅಧ್ಯಾಪಕರ ಸಿದ್ಧತೆಯ ಕಾರ್ಯದ ಬಗ್ಗೆ ತೀವ್ರವಾಗಿ ಆಲೋಚನೆ ಆರಂಭವಾಯಿತು. ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳು ಅಭ್ಯರ್ಥಿಗಳಿಗೆ ಮಕ್ಕಳ ತಲೆಗೆ ವಿಷಯಜ್ಞಾನವನ್ನು ತುರುಕುವ ಬೋಧನಕ್ರಮಗಳನ್ನು ಮಾತ್ರ ಪರಿಚಯ ಮಾಡಿಕೊಡುವುದು ತೀರ ಅಸಮರ್ಪಕವಾಗಿ ತೋರಿತು. ಶಿಕ್ಷಣದ ಹೊಸ ಅರ್ಥದ ಬೆಳಕಿನಲ್ಲಿ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾದರೆ ಅವರಿಗೆ ಬರೀ ಬೋಧನಕ್ರಮವನ್ನು ಕಲಿಸುವುದು ಸಾಲದು; ಅವರ ಸಾಂಸ್ಕೃತಿಕ ವ್ಯಕ್ತಿತ್ವ, ಸಾಮಾಜಿಕ ವ್ಯಕ್ತಿತ್ವ ಮತ್ತು ವೃತ್ತಿವ್ಯಕ್ತಿತ್ವ ಪರಿಪುಷ್ಟಿಗೊಳ್ಳುವಂಥ ಶಿಕ್ಷಣ ಅನಿವಾರ್ಯವೆಂಬುದು ಸ್ಪಷ್ಟಪಡುತ್ತ ಬಂತು. ಎರಡನೆಯ ಮಹಾಯುದ್ಧದ ವೇಳೆಗೆ ವೃತ್ತಿಶಿಕ್ಷಣ ಸಂಸ್ಥೆಗಳು ಅದಕ್ಕನುಗುಣವಾಗಿ ತಮ್ಮ ಕಾರ್ಯಕ್ರಮಗಳನ್ನು ಮಾರ್ಪಡಿಸಿಕೊಳ್ಳಹತ್ತಿದವು. ಕೇವಲ ಬೋಧನ ಕ್ರಮವನ್ನು ಬೋಧಿಸುತ್ತಿದ್ದ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳು ಅವರಿಗೆ ವಿಶಾಲವೂ ವ್ಯಾಪ್ತಿಯುತವೂ ಆದ ಸರ್ವಾಂಗೀಣ ಶಿಕ್ಷಣವನ್ನೀಯುವ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾರಂಭಿಸಿದವು. ತಮ್ಮ ನೂತನ ಕರ್ತವ್ಯ ನಿರ್ವಹಣೆಯ ದೃಷ್ಟಿಯಿಂದ ಹಿಂದೆ ಬಳಸುತ್ತಿದ್ದ 'ಅಧ್ಯಾಪಕರ ತರಬೇತಿ' ಎಂಬುದರ ಬದಲು ಅಧ್ಯಾಪಕರ ಶಿಕ್ಷಣ ಎಂಬ ಪಾರಿಭಾಷಿಕನಾಮವನ್ನು ಬಳಸಲಾರಂಭಿಸಿದವು. ಅಂತೆಯೇ ಅಧ್ಯಾಪಕರ ಟ್ರೈನಿಂಗ್ ಕಾಲೇಜು ಎಂಬುದರ ಬದಲು ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆ ಎಂಬ ಹೆಸರೂ ಪ್ರಚಾರಕ್ಕೆ ಬರುತ್ತಿದೆ. 1944ರಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಶಿಕ್ಷಣವೇತ್ತನಾದ ಎಚ್.ಸಿ.ಡೆಂಟ್ ಎಂಬಾತ ಈ ಬಗ್ಗೆ ಬರೆಯುತ್ತ ಶಿಕ್ಷಣದ ಉದ್ದೇಶ, ವಿಷಯ, ಕ್ರಮ, ವ್ಯವಸ್ಥೆ – ಇವುಗಳಲ್ಲೆಲ್ಲ ತೀವ್ರ ರೀತಿಯ ಬದಲಾವಣೆಗಳಾಗಿರುವಾಗ ಅಧ್ಯಾಪಕರ ತರಬೇತಿ ಸಂಸ್ಥೆಗಳಲ್ಲೂ ಸೂಕ್ತ ರೀತಿಯ ಬದಲಾವಣೆಗಳಾಗುವುದು ಅನಿವಾರ್ಯ– ಎಂದು ಸೂಚಿಸಿದ. ಅದೇ ವರ್ಷ ಅಲ್ಲಿ ಪ್ರಕಟವಾದ ಮೆಕ್ನೇರ್ ಸಮಿತಿಯ ವರದಿಯಲ್ಲಿ (ಟೀಚರ್ಸ್ ಅಂಡ್ ಯೂತ್ ಲೀಡರ್ಸ್) ಅಧ್ಯಾಪಕರು ಪಡೆಯುವ ಸಿದ್ಧತೆಯಿಂದ ಅವರು ತಮ್ಮಷ್ಟಕ್ಕೆ ವೈವಿಧ್ಯವೂ ಪರಿಪೂರ್ಣವೂ ಆದ ಜೀವನವನ್ನು ನಡೆಸುವಂತಾಗಬೇಕು; ಅಂಥ ಅನುಭವಪೂರ್ಣವಾದ ಜೀವನದಿಂದ ಮಕ್ಕಳಿಗೆ ವಿಷಯಜ್ಞಾನ ನೀಡುವುದರ ಜೊತೆಗೆ ಜೀವನದ ಇತರ ಸಾಧನಕ್ಷೇತ್ರಗಳ ಕಡೆಗೂ ಹೆಜ್ಜೆಯಿಡುವಂತೆ ಮಾಡುವ ಶಕ್ತಿ ದೊರಕುವಂತಾಗಬೇಕು – ಎಂದು ವಿವರಿಸಿ ಅಧ್ಯಾಪಕವೃತ್ತಿಯ ಸಿದ್ಧತೆಯ ನೂತನ ತತ್ತ್ವದೃಷ್ಟಿಯನ್ನು ಸ್ಪಷ್ಟಪಡಿಸಿತು. ಅಮೆರಿಕದಲ್ಲಿ ಅಧ್ಯಾಪಕರ ಶಿಕ್ಷಣ ಎಂಬ ಪದ ಅಂದಿಗಾಗಲೇ ಬಳಕೆಗೆ ಬಂದಿದ್ದರೂ ಇಂಗ್ಲೆಂಡಿನಲ್ಲಿ ಮೊದಲ ಬಾರಿಗೆ ಈ ಪದವನ್ನು ಈ ವರದಿಯಲ್ಲಿ ಅಧಿಕೃತವಾಗಿ ಬಳಸಲಾಯಿತು. ಭಾರತದ ಶಿಕ್ಷಣ ಕ್ಷೇತ್ರದ ಮೇಲೆ ಅಲ್ಲಿನ ಬದಲಾವಣೆಗಳು ತದ್ವತ್ತಾದ ಬದಲಾವಣೆಗಳನ್ನು ಮೂಡಿಸುತ್ತಿದ್ದುದರಿಂದ ಇಲ್ಲಿನ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳೂ ತಮ್ಮ ಕಾರ್ಯವ್ಯಾಪ್ತಿಯನ್ನೂ ತಮ್ಮ ಹೆಸರನ್ನೂ ಬದಲಾಯಿಸಿಕೊಳ್ಳುತ್ತಿವೆ.

ಅಧ್ಯಾಪಕರ ಶಿಕ್ಷಣದ ಉದ್ದೇಶ: ಅಧ್ಯಾಪಕರ ವೃತ್ತಿಶಿಕ್ಷಣದ ಉದ್ದೇಶ ಪರಿಣಾಮಕಾರಿಯಾಗಿ ಬೋಧಿಸುವುದೇ ಆಗಿದೆಯೆಂದು ಸ್ಥೂಲವಾಗಿ ಹೇಳಬಹುದಾದರೂ ಅದನ್ನು ವಿವರವಾಗಿ ಪರಿಶೀಲಿಸುವ ಯತ್ನ ಎಲ್ಲೆಡೆಯೂ ನಡೆದಿದೆ. ಅಂಥ ಪರಿಶೀಲನೆಯಿಂದ ವೃತ್ತಿಶಿಕ್ಷಣ ಸಂಸ್ಥೆ ತನ್ನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದಕ್ಕೂ ಅನಂತರ ಅವುಗಳನ್ನು ನಿರ್ವಹಿಸುವ ಮಾರ್ಗವನ್ನು ಕಂಡುಕೊಳ್ಳುವುದಕ್ಕೂ ಅನುಕೂಲವಾಗುವುದು. ಅಮೆರಿಕದ ನ್ಯಾಷನಲ್ ಸರ್ವೆ ಆಫ್ ಎಜುಕೇಷನ್ ಆಫ್ ಟೀಚರ್ಸ್ ಎಂಬ ಸಂಸ್ಥೆ ಆ ಬಗ್ಗೆ ನಡೆಸಿದ ಒಂದು ಪರಿಶೀಲನೆಯಲ್ಲಿ, ಅಧ್ಯಾಪಕರ ಶಿಕ್ಷಣದ ಉದ್ದೇಶಗಳನ್ನು ಕುರಿತು ಹೀಗೆ ಹೇಳಿದೆ: 1. ನಮ್ಮ ಸಾಮಾಜಿಕ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ, ಸಾಮಾಜಿಕ ಮತ್ತು ಇತರ ಸೇವಾಕ್ಷೇತ್ರಗಳ ದೃಷ್ಟಿಯಲ್ಲಿ ಶಿಕ್ಷಣದ ಪ್ರಾಮುಖ್ಯ ಇತ್ಯಾದಿಯಾದ ವೃತ್ತಿಜ್ಞಾನವನ್ನು

ದೊರಕಿಸಬೇಕು; 2. ವೃತ್ತಿಗೆ ಸಂಬಂಧಿಸಿದ ಉಪಕರಣಗಳೆನ್ನಬಹುದಾದ ವೃತ್ತಿಕೌಶಲವನ್ನೂ ವೃತ್ತಿಭಾವನೆಗಳನ್ನೂ ಬೆಳಸಬೇಕು; 3. ಮಕ್ಕಳ ಬೆಳವಣಿಗೆಯ ಎಲ್ಲ ಅಂತಸ್ತುಗಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಗುಣ ಧರ್ಮಗಳನ್ನು ಪರಿಚಯ ಮಾಡಿಕೊಡಬೇಕು; 4. ವಿಷಯದ ಸ್ವರೂಪ, ಅದನ್ನು ಕಲಿಯಲಿರುವ ವಿದ್ಯಾರ್ಥಿಯ ವಯೋಮಟ್ಟ – ಇವುಗಳಿಗೊಪ್ಪುವಂಥ ಬೋಧನಕ್ರಮಗಳನ್ನು ಪರಿಚಯ ಮಾಡಿಕೊಡಬೇಕು. 5. ತಾವು ಬೋಧಿಸಲಿರುವ ಶಾಲೆಯ ಉದ್ದೇಶ, ವ್ಯವಸ್ಥೆ, ಪಠ್ಯಕ್ರಮ, ಕಾರ್ಯಕ್ರಮಗಳ ಯೋಜನೆ, ಆಡಳಿತ ನಿರ್ವಹಣೆ ಇತ್ಯಾದಿ ಅಂಶಗಳ ಪರಿಚಯ ಮಾಡಿಕೊಡಬೇಕು, 6. ಪಾಠ ಬೋಧನೆಯ ಪರಿವೀಕ್ಷಣೆ, ಅಭ್ಯಾಸಾರ್ಥ ಬೋಧನೆ, ಪಾಠವಿಮರ್ಶೆ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಅವರ ಬೋಧನ ಕೌಶಲವನ್ನು ರೂಪಿಸಬೇಕು, 7. ತನ್ನ ಕರ್ತವ್ಯ ನಿರ್ವಹಣೆಯಲ್ಲಿ ನೆರವಾಗಬಲ್ಲ ಶಿಕ್ಷಣತತ್ತ್ವವನ್ನೂ ತನ್ನ ಸೇವಾ ಜೀವನದಲ್ಲಿ ತಾನು ವೃತ್ತಿಗೆ ನೀಡಬಹುದಾದ ಕಾಣಿಕೆಯನ್ನೂ ಪರಿಚಯ ಮಾಡಿಕೊಡಬೇಕು.

ಈ ಅಭಿಪ್ರಾಯಗಳನ್ನೇ ಸ್ವಲ್ಪ ಸ್ಥೂಲವಾಗಿ ಇಂಗ್ಲೆಂಡಿನಲ್ಲಿ ಮೆಕ್ನೇರ್ ಸಮಿತಿ 1944ರಲ್ಲಿ ತನ್ನ ವರದಿಯಲ್ಲಿ ಸೂಚಿಸುತ್ತ, ವೃತ್ತಿಶಿಕ್ಷಣದಿಂದ ಅಧ್ಯಾಪಕರು – 1.ಮಾತೃ ಭಾಷೆಯ ಬಳಕೆಯಲ್ಲಿ ತಕ್ಕಷ್ಟು ಸೌಲಭ್ಯವನ್ನೂ ಸ್ಪಷ್ಟವಾಗಿ ಮಾತನಾಡುವ ಶಕ್ತಿಯನ್ನೂ ಪಡೆದುಕೊಳ್ಳಬೇಕು; 2. ಶಿಕ್ಷಣದ ಮೂಲಭೂತ ತತ್ತ್ವಗಳನ್ನು ಪರಿಚಯ ಮಾಡಿಕೊಳ್ಳಬೇಕು; 3. ಬೋಧನಕಾರ್ಯದಲ್ಲಿ ತಕ್ಕ ಮಟ್ಟಿನ ಅನುಭವ, ಕೌಶಲ ಮತ್ತು ದಕ್ಷತೆಯನ್ನು ಪಡೆದುಕೊಳ್ಳಬೇಕು—ಎಂದು ತನ್ನದೇ ಆದ ರೀತಿಯಲ್ಲಿ ವ್ಯಕ್ತಪಡಿಸಿದೆ. ಭಾರತದ ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್ ಅಂಡ್ ಟ್ರೈನಿಂಗ್ ಸಂಸ್ಥೆ (ಎನ್.ಸಿ.ಇ.ಆರ್.ಟಿ) ಅಧ್ಯಾಪಕರಿಗೆ ವೃತ್ತಿಶಿಕ್ಷಣದಿಂದ ಬರಬೇಕಾದ ದಕ್ಷತೆಯನ್ನು ವಿವರಿಸುತ್ತ 1. ವೃತ್ತಿದಕ್ಷತೆಯೂ ವೃತ್ತಿಸೌಜನ್ಯವೂ ಮೂಡಬೇಕು; 2. ಬೋಧಿಸುವ ವಿಷಯದಲ್ಲಿ ತಕ್ಕಷ್ಟು ಪಾಂಡಿತ್ಯವೂ ಅದನ್ನು ಬೋಧಿಸುವ ತಂತ್ರ ಮತ್ತು ಕೌಶಲಗಳೂ ಮೂಡಬೇಕು; 3. ಬೋಧನೆ ಮತ್ತು ಕಲಿವುಗಳೆರಡರ ಪರಿಜ್ಞಾನವನ್ನೂ ಪಡೆದಿದ್ದು ಅವುಗಳನ್ನೂ ಸಾಧಿಸುವ ವಿವಿಧ ಕ್ರಮಗಳನ್ನು ಅರಿತುಕೊಳ್ಳಬೇಕು; 4. ಬೋಧನ ವಿಷಯವನ್ನೂ ಪಾಠೋಪಕರಣಗಳನ್ನೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಅನುಭವ ಸಿದ್ಧಿಸಬೇಕು; 5. ವಿಷಯನ್ನು ಬೋಧನೆಗೆ ಯುಕ್ತ ರೀತಿಯಲ್ಲಿ ವ್ಯವಸ್ಥೆಗೊಳಿಸಿಕೊಳ್ಳುವ ಶಕ್ತಿ ಮೂಡಬೇಕು; 6. ವೈಯಕ್ತಿಕ ಭಿನ್ನತೆಗಳನ್ನು ಗುರುತಿಸಿಕೊಂಡು ಮಕ್ಕಳಿಗೆ ಸೂಕ್ತರೀತಿಯಲ್ಲಿ ಸಹಾಯ ನೀಡುವ ಶಾಸ್ತ್ರೀಯ ಜ್ಞಾನದ ಪರಿಚಯವಾಗಬೇಕು; 7. ತರಗತಿಯಲ್ಲಿ ಶಿಸ್ತಿನ ಪಾಲನೆ, ಶೈಕ್ಷಣಿಕ ನಿರ್ದೇಶನ, ಸಹಪಠ್ಯ ಚಟುವಟಿಕೆ – ಇವುಗಳಲ್ಲಿ ಅನುಭವ, ಆಸಕ್ತಿಗಳು ಮೂಡಬೇಕು; 8. ತನ್ನ ವೃತ್ತಿದಕ್ಷತೆಯನ್ನು ವಿವಿಧ ಸೌಲಭ್ಯಗಳನ್ನು ಬಳಸಿಕೊಂಡು ಹೆಚ್ಚಿಸಿಕೊಳ್ಳುವ ಮನೋಭಾವವೂ ಶಕ್ತಿಯೂ ಸಿದ್ಧಿಸಬೇಕು ಇತ್ಯಾದಿಯಾಗಿ ಹೇಳಿದೆ. ಮೇಲಿನ ಮೂರು ರಾಷ್ಟ್ರಗಳೂ ಬೇರೆ ಬೇರೆ ವಿಧದಲ್ಲಿ ವಿವರಿಸಿದ್ದರೂ ಅಧ್ಯಾಪಕರ ವೃತ್ತಿಶಿಕ್ಷಣದಿಂದ ಅವರಲ್ಲಿ ಮೂಡಬೇಕಾದ ಫಲಗಳನ್ನು ಸ್ಪಷ್ಟವಾಗಿ ಸೂಚಿಸಿವೆ. ಅಂಥ ಸಿದ್ಧಿ ಸಂಸ್ಕಾರಗಳನ್ನು ಮೂಡಿಸುವಲ್ಲಿ ಇಂದಿನ ನಮ್ಮ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳು ವಿಫಲವಾಗಿವೆಯೆಂಬ ಮಾತು ಎಲ್ಲ ಕಡೆಯಿಂದಲೂ ಕೇಳಿಬರುತ್ತಿದೆ. ಜೊತೆಯಲ್ಲೇ ಆ ಉದ್ದೇಶಗಳು ಈಡೇರುವಂತೆ ಅವನ್ನು ಪರಿವರ್ತಿಸುವ ಕಾರ್ಯವೂ ನಡೆಯುತ್ತಿದೆ.

ವೃತ್ತಿಶಿಕ್ಷಣ ಸಂಸ್ಥೆಯ ಅಂತಸ್ತುಗಳು: ಎಲ್ಲ ದೇಶಗಳಲ್ಲೂ ಶಿಕ್ಷಣ ನಾಲ್ಕು ಅಂತಸ್ತುಗಳಲ್ಲಿ ವ್ಯವಸ್ಥೆಗೊಳ್ಳುತ್ತಿದೆ – ಪ್ರಾಥಮಿಕ ಪೂರ್ವದ ಶಿಶುವಿಹಾರ ಅಥವಾ ಕಿಂಡರ್‌ಗಾರ್ಟನ್ ಪಾಠಶಾಲೆಗಳು, ಪ್ರಾಥಮಿಕ ಶಾಲೆಗಳು, ಪ್ರೌಢ(ಸೆಕಂಡರಿ)ಶಾಲೆಗಳು ಮತ್ತು ಉನ್ನತಶಿಕ್ಷಣ ಸಂಸ್ಥೆಗಳು, ಈ ವ್ಯವಸ್ಥೆಯನ್ನು ಅನುಸರಿಸಿ ಅಧ್ಯಾಪಕರ ಶಿಕ್ಷಣದ ಮಟ್ಟವೂ ನಾಲ್ಕು ಹಂತಗಳಲ್ಲಿ ವ್ಯವಸ್ಥೆಗೊಳ್ಳುತ್ತಿದೆ. ಇತ್ತೀಚಿನ ವರೆಗೂ ಪ್ರಾಥಮಿಕ ಶಿಕ್ಷಣ ನಾಲ್ಕು ವರ್ಷದ್ದಾಗಿದ್ದು ಅನಂತರದ 3 – 4 ವರ್ಷಗಳ ಶಿಕ್ಷಣ ಮಾಧ್ಯಮಿಕ ಶಿಕ್ಷಣವೆನಿಸಿತ್ತು. ಆದ್ದರಿಂದ ಅವೆರಡು ಅಂತಸ್ತಿನ ಶಾಲೆಗಳಿಗೂ ವಿ.ಟಿ.ಸಿ. (ವರ್ನಾಕ್ಯುಲರ್ ಟೀಚರ್ಸ್ ಸರ್ಟಿಫಿಕೇಟ್) ಮತ್ತು ಯು.ಜಿ.ಟಿ. (ಅಂಡರ್ ಗ್ರಾಜುಯೇಟ್ ಟ್ರೈನಿಂಗ್) ಎಂಬ ಎರಡು ಬೇರೆ ಬೇರೆ ಅಂತಸ್ತಿನ ಅಧ್ಯಾಪಕರ ವೃತ್ತಿಶಿಕ್ಷಣದ ವ್ಯವಸ್ಥೆಯಿತ್ತು. ಕೇವಲ ಪ್ರೌಢ, ಅಪ್ಪರ್ ಪ್ರೈಮರಿ ತರಗತಿಯ ಸಾಮಾನ್ಯ ಶಿಕ್ಷಣವನ್ನು ಪಡೆದಿರುವ ಅಭ್ಯರ್ಥಿಗಳನ್ನು ವಿ.ಟಿ.ಸಿ. ತರಗತಿಗೆ ಸೇರಿಸಿಕೊಳ್ಳಲಾಗುತ್ತಿತ್ತು. ಈಚೆಗೆ ಪ್ರಾಥಮಿಕ ಶಿಕ್ಷಣ 6–7ವರ್ಷದ ಅವಧಿಯದಾಗುತ್ತ ಬಂದಂತೆ ಮಾಧ್ಯಮಿಕ ಶಾಲೆಗಳು ಮಾಯವಾಗುತ್ತಿವೆ. ಜೊತೆಗೆ ಯಾವ ಮಟ್ಟದ ಶಾಲೆಯಲ್ಲೇ ಆಗಲಿ ಅಧ್ಯಾಪಕರಿಗೆ ಎಸ್.ಎಸ್.ಎಲ್.ಸಿ. ಯಷ್ಟು ಕನಿಷ್ಠ ಮಟ್ಟದ ಸಾಮಾನ್ಯ (ಸಾಂಸ್ಕೃತಿಕ) ಶಿಕ್ಷಣ ಅಗತ್ಯವೆಂಬ ಅಂಶವನ್ನು ಎಲ್ಲ ರಾಷ್ಟ್ರಗಳಂತೆ ಭಾರತದಲ್ಲೂ ಅಂಗೀಕರಿಸಲಾಗಿದೆ. ಆದ್ದರಿಂದ ವಿ.ಟಿ.ಸಿ. ಈಗ ನಿಂತುಹೋಗುತ್ತಿದೆ. ಪ್ರಾಥಮಿಕ ಶಾಲೆಗಳಿಗೆಲ್ಲ ಎಸ್.ಎಸ್.ಎಲ್.ಸಿ. ಆದವರನ್ನೇ ಸೇರಿಸಿಕೊಂಡು ಒಂದೇ ಅಂತಸ್ತಿನ ವೃತ್ತಿಶಿಕ್ಷಣವನ್ನು ನೀಡಲಾಗುತ್ತಿದೆ. ಪ್ರೌಢಶಾಲೆಯ ಅಧ್ಯಾಪಕರಿಗೆ ವಿಶ್ವವಿದ್ಯಾನಿಲಯದ ಪದವಿ ಕನಿಷ್ಠಮಟ್ಟದ ಸಾಂಸ್ಕೃತಿಕ ಶಿಕ್ಷಣವೆಂದು ಪರಿಗಣಿಸಿ ಪದವಿಯೋತ್ತರ ವೃತ್ತಿಶಿಕ್ಷಣ ವ್ಯವಸ್ಥೆ ಏರ್ಪಟ್ಟಿದೆ. ಕಾಲೇಜುಗಳಂಥ ಉನ್ನತ ಶಿಕ್ಷಣಸಂಸ್ಥೆಗಳ ಅಧ್ಯಾಪಕರಿಗೂ ವೃತ್ತಿಶಿಕ್ಷಣ ಅಗತ್ಯವೆಂಬ ಭಾವನೆ ಬೆಳೆಯುತ್ತಿದ್ದರೂ ಆ ಬಗ್ಗೆ ಇನ್ನೂ ನಿರ್ದಿಷ್ಟ ವೃತ್ತಿಶಿಕ್ಷಣ ಕಾರ್ಯಕ್ರಮಗಳು ರೂಪುಗೊಂಡಿಲ್ಲ. ಪ್ರಾಥಮಿಕ ಪೂರ್ವದ ಶಿಕ್ಷಣ ಅನೇಕ ದೇಶಗಳಲ್ಲಿ ಇನ್ನೂ ರಾಷ್ಟ್ರದ ನೇರ ಹೊಣೆಗಾರಿಕೆಗೆ ಬಂದಿಲ್ಲವಾದ್ದರಿಂದ ಆ ಅಂತಸ್ತಿನ ಅಧ್ಯಾಪಕರ ವೃತ್ತಿಶಿಕ್ಷಣಕ್ಕೆ ನಿರ್ದಿಷ್ಟ ವೃತ್ತಿಶಿಕ್ಷಣ ಸಂಸ್ಥೆಗಳು ಅಷ್ಟಾಗಿ ರೂಪುಗೊಂಡಿಲ್ಲ. ಆದರೆ ಆ ಕಾರ್ಯವನ್ನು ಪ್ರಾಥಮಿಕ ಶಿಕ್ಷಕರ ವೃತ್ತಿಶಿಕ್ಷಣ ಸಂಸ್ಥೆಗಳೂ ಶಿಶುವಿಹಾರಗಳಿಗೆ ಸೇರಿದಂಥ ಕೇಂದ್ರಗಳೂ ನಿರ್ವಹಿಸುತ್ತಿವೆ. ಇನ್ನು ನಾಡಿನಲ್ಲಿ ಪ್ರಚಾರದಲ್ಲಿರುವ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳು ಮುಖ್ಯವಾಗಿ ಎರಡೇ ಅಂತಸ್ತಿನಲ್ಲಿ ವ್ಯವಸ್ಥೆಗೊಂಡಿವೆ – ಪ್ರಾಥಮಿಕ ಅಧ್ಯಾಪಕರನ್ನು ಸಿದ್ಧಪಡಿಸುವವು. ಪ್ರೌಢಶಾಲೆಯ ಶಿಕ್ಷಕರನ್ನು ಸಿದ್ಧಪಡಿಸುವವು.

ಭಾರತದಲ್ಲಿ ಶಿಕ್ಷಣ ರಾಜ್ಯಸರ್ಕಾರಗಳಿಗೆ ಸೇರಿದ ವಿಷಯ, ರಾಜ್ಯದ ಪಾಠ ಶಾಲೆಗಳಿಗೆ ಅಧ್ಯಾಪಕರನ್ನು ಸಿದ್ಧಪಡಿಸುವ ಕಾರ್ಯವೂ ಆಯಾ ರಾಜ್ಯದ ಹೊಣೆಗಾರಿಕೆ. ಆದರೂ ಇಡೀ ಭಾರತದಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕರ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ವಿಷಯದಲ್ಲಿ ಏಕರೂಪತೆ ಕಂಡುಬರುತ್ತದೆ. ಅದೆಲ್ಲ ನೇರವಾಗಿ ಆಯಾ ರಾಜ್ಯದ ಶಿಕ್ಷಣ ಶಾಖೆಯ ಆಡಳಿತಕ್ಕೆ ಒಳಪಟ್ಟಿದೆ. ಅವುಗಳಲ್ಲಿ ಕೆಲವು ಸರ್ಕಾರೀ ಸಂಸ್ಥೆಗಳು; ಇನ್ನು ಕೆಲವು ಖಾಸಗಿ ಸಂಸ್ಥೆಗಳು. ಖಾಸಗಿ ಸಂಸ್ಥೆಗಳಿಗೆ ಶಿಕ್ಷಣಶಾಖೆ ಅಂಗೀಕಾರ ನೀಡುವುದಲ್ಲದೆ ಸಹಾಯಧನವನ್ನೂ ಕೊಡುತ್ತದೆ. ಜೊತೆಗೆ ಆ ಸಂಸ್ಥೆಗಳ ಮೇಲ್ವಿಚಾರಣೆಯನ್ನೂ ತನಿಖೆಯನ್ನೂ ನಡೆಸುತ್ತದೆ. ಸರ್ಕಾರದ ಮತ್ತು ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಶಿಕ್ಷಣದ ಮಟ್ಟದಲ್ಲಿ ವ್ಯತ್ಯಾಸವಿದ್ದರೂ ಪಠ್ಯಕ್ರಮದಲ್ಲಿ ಮಾತ್ರ ಏಕರೂಪತೆಯುಂಟು.

ಪ್ರೌಢಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳೆಲ್ಲ ಪದವೀಧರ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳುವುದೊಂದನ್ನು ಬಿಟ್ಟರೆ ಮಿಕ್ಕ ಅನೇಕ ಅಂಶಗಳಲ್ಲಿ ಏಕರೂಪತೆಯನ್ನು ತಳೆದಿಲ್ಲ. ಆಡಳಿತದ ದೃಷ್ಟಿಯಿಂದ ಅವನ್ನು ನಾಲ್ಕು ವಿಧಗಳನ್ನಾಗಿ ವಿಂಗಡಿಸಬಹುದು; 1. ವಿಶ್ವವಿದ್ಯಾನಿಲಯವೊಂದಕ್ಕೆ ಅಂಗಸಂಸ್ಥೆಯಾಗಿದ್ದು ಸರ್ಕಾರದ ಆಡಳಿತಕ್ಕೆ ಒಳಪಟ್ಟಿರುತಕ್ಕವು; 2. ವಿಶ್ವವಿದ್ಯಾಲಯದ ಅಂಗಸಂಸ್ಥೆಗಳಾಗಿದ್ದು ಖಾಸಗಿ ಆಡಳಿತಕ್ಕೆ ಒಳಪಟ್ಟಿರತಕ್ಕವು; 3. ವಿಶ್ವವಿದ್ಯಾಲಯದ ಶಿಕ್ಷಣಶಾಸ್ತ್ರದ ವಿಭಾಗಕ್ಕೆ ಸೇರಿದವು; 4. ಯಾವ ವಿಶ್ವವಿದ್ಯಾನಿಲಯಕ್ಕೂ ಸೇರದೆ, ಆದರೆ ಸರ್ಕಾರದ ಡಿಪ್ಲೊಮಾಗಳನ್ನು ನೀಡುವ ಖಾಸಗಿ ಅಥವಾ ಸರ್ಕಾರಿ ಆಡಳಿತದಲ್ಲಿರುವ ಸಂಸ್ಥೆಗಳು, ಅಧ್ಯಾಪಕರ ವೃತ್ತಿಶಿಕ್ಷಣದ ಬಗ್ಗೆ ಬೇರೆ ಬೇರೆ ವಿಶ್ವವಿದ್ಯಾಲಯಗಳು ತಳೆದಿರುವ ಆಸಕ್ತಿಯ ಪ್ರಮಾಣದಲ್ಲೂ ವ್ಯತ್ಯಾಸ ಕಂಡುಬರುತ್ತದೆ. ಸರ್ಕಾರದ ಮತ್ತು ವಿಶ್ವವಿದ್ಯಾಲಯಗಳ ಆಡಳಿತದಲ್ಲಿರುವ ಸಂಸ್ಥೆಗಳಲ್ಲಿ ಶುಲ್ಕದ ದರ ಖಾಸಗಿ ಸಂಸ್ಥೆಗಳಲ್ಲಿರುವುದಕ್ಕಿಂತ ಕಡಿಮೆಯಿರುವುದು; ಈಚೆಗೆ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಶುಲ್ಕ ವಿಧಿಸಬಾರದೆಂಬ ಪ್ರಚಾರ ನಡೆಯುತ್ತಿದೆ. ರಾಜ್ಯ ಸರ್ಕಾರಗಳು ಅಭ್ಯರ್ಥಿಗಳಲ್ಲಿ ಬಹುತೇಕ ಮಂದಿಗೆ ವೇತನವನ್ನು ನೀಡುತ್ತಿವೆ.

ವೃತ್ತಿ ಶಿಕ್ಷಣದ ತ್ರಿಮುಖಗಳು: ಅಧ್ಯಾಪಕರ ವೃತ್ತಿಶಿಕ್ಷಣ ಟ್ರೇನಿಂಗ್ ಕಾಲೇಜಿನಲ್ಲಿ ನಡೆಯುವುದಾದರೂ ಅದೊಂದೆ ಅಧ್ಯಾಪಕರ ಸಿದ್ಧತೆಯ ಸಂಪೂರ್ಣ ಹೊಣೆಯನ್ನು ಹೊರುವಂತಿಲ್ಲ. ಏಕೆಂದರೆ ಆ ಸಿದ್ಧತೆಗೆ ಮೂರು ನಿರ್ದಿಷ್ಟ ಮುಖಗಳಿವೆ – ವೃತ್ತಿ ಶಿಕ್ಷಣ ಪೂರ್ವದಮುಖ; ವೃತ್ತಿಮುಖ ಮತ್ತು ವೃತ್ತಿನಿರತಮುಖ, ಇವು ಮೂರೂ ಬೇರೆ ಬೇರೆ ಕ್ಷೇತ್ರಗಳಿಗೆ ಸೇರಿದ ಹೊಣೆಗಾರಿಕೆ.

1. ವೃತ್ತಿಶಿಕ್ಷಣಕ್ಕೆ ಪೂರ್ವದ ಸಿದ್ಧತೆ; ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗೆ ಸೇರುವ ಮುನ್ನ ಅಭ್ಯರ್ಥಿ ಪಡೆಯಬೇಕೆಂದು ನಿಷ್ಕರ್ಷಿಸಿರುವ ಸಾಮಾನ್ಯ ಶಿಕ್ಷಣ, ಪ್ರಾಥಮಿಕ ಶಾಲೆಯ ಅಧ್ಯಾಪಕರ ವೃತ್ತಿಗೆ ಸೇರತಕ್ಕವರಿಗೆ ಪ್ರೌಢಶಾಲೆಯ ಶಿಕ್ಷಣವೂ ಪ್ರೌಢಶಾಲೆಯ ಅಧ್ಯಾಪಕರಾಗತಕ್ಕವರಿಗೆ ಪದವೀ ಮಟ್ಟದ ಶಿಕ್ಷಣವೂ ಆಗಿರಬೇಕೆಂದು ಎಲ್ಲ ಕಡೆಯೂ ಪ್ರಚಾರದಲ್ಲಿದೆ. ಆದರೂ 1947ರಲ್ಲಿ ಭಾರತದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಆದ ಅಧ್ಯಾಪಕರ ಸಂಖ್ಯೆ ಕೇವಲ 6% ಮಾತ್ರ ಇತ್ತು.

ಪ್ರಾಥಮಿಕ ಶಾಲೆಯ ಅಧ್ಯಾಪಕರ ಸಾಮಾನ್ಯ ಶಿಕ್ಷಣ ಇಂದಿಗೂ ತೀರ ಕಡಿಮೆಯಾಗಿಯೇ ಉಳಿದಿದೆಯೆಂಬುದು ಕೊಠಾರಿ ಶಿಕ್ಷಣ ಆಯೋಗದ (1966) ವರದಿಯಿಂದ ಸ್ಪಷ್ಟಪಡುತ್ತದೆ. ಅದರೊಡನೆ ಹೋಲಿಸಿದರೆ ಪ್ರೌಢಶಾಲೆಯ ಅಧ್ಯಾಪಕರ ಸಾಮಾನ್ಯ ಶಿಕ್ಷಣ ಉತ್ತಮವಾಗಿರುವುದು ಕಂಡುಬರುತ್ತದೆ:

ತಕ್ಕಷ್ಟು ಸಾಮಾನ್ಯ ಶಿಕ್ಷಣವಿಲ್ಲದವರ ಸಂಖ್ಯೆಯನ್ನು ಇಳಿಸುವುದು ನಿಧಾನವಾಗುವುದಕ್ಕೆ ಕೆಲವು ಕಾರಣಗಳಿವೆ. ಈಚೆಗೆ ಕೆಲವು ಪ್ರದೇಶಗಳಲ್ಲಿ ಅಧ್ಯಾಪಕರನ್ನು ನೇಮಿಸಿಕೊಳ್ಳುವಾಗ ಎಲ್ಲರೂ ಪ್ರೌಢಶಾಲೆಯ ಶಿಕ್ಷಣ ಮುಗಿಸಿರಬೇಕೆಂಬ ಅಂಶವನ್ನು ಕಡ್ಡಾಯಮಾಡುತ್ತಿಲ್ಲ; ಆದಿವಾಸಿಗಳ ಮತ್ತು ಮಹಿಳೆಯರ ಬಗ್ಗೆ ಆ ನಿಯಮವನ್ನು ಸಡಿಲಿಸಲಾಗುತ್ತಿದೆ; ಹಿಂದುಳಿದ ವರ್ಗಗಳ ಅಧ್ಯಾಪಕರ ಬಗ್ಗೆಯೂ ಈ ಸಡಿಲಿಕೆ ಉಂಟು, ಜೊತೆಗೆ ತಕ್ಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳು ಸಿಕ್ಕದಿರುವಾಗಂತೂ ಇಂಥ ಸಡಿಲಿಕೆ ಅನಿವಾರ್ಯವಾಗುತ್ತಿದೆ. ಇದನ್ನು ಒಪ್ಪಬಹುದಾದರೂ ಅನಿವಾರ್ಯವೆಂದು ವಾದಿಸಬಹುದಾದರೂ ಕೆಲಸಕ್ಕೆ ಸೇರಿದಮೇಲಾದರೂ ಅವರು ಹತ್ತು ವರ್ಷಗಳ ಸಾಮಾನ್ಯ ಶಿಕ್ಷಣವನ್ನು ಆದಷ್ಟು ಬೇಗ ಮುಗಿಸಿಕೊಳ್ಳಬೇಕೆಂದು ಕಡ್ಡಾಯ ಮಾಡುವುದು ಅಗತ್ಯ.

ಪ್ರೌಢಶಾಲೆಯಲ್ಲಿ ವಿಶಿಷ್ಟ ವಿಷಯಗಳ ಅಧ್ಯಾಪಕರನ್ನುಳಿದು ಮಿಕ್ಕವರೆಲ್ಲ ಪದವೀಧರ ಅಧ್ಯಾಪಕರು. ಅಧ್ಯಾಪಕರ ವೃತ್ತಿಶಿಕ್ಷಣಕ್ಕೆ ಬರತಕ್ಕ ಗಂಡಸರಿಗಿಂತ ಹೆಂಗಸರು ಹೆಚ್ಚಿನ ಶಿಕ್ಷಣಾರ್ಹತೆ ಪಡೆದಿರುವುದು ಈಚೆಗೆ ನಡೆದಿರುವ ಸಂಶೋಧನೆಯಿಂದ ಕಂಡುಬರುತ್ತದೆ.

ಗಂಡಸರಲ್ಲಿ ಶೇ. 75 ಮೂರನೆಯ ದರ್ಜೆಯಲ್ಲಿ ಉತ್ತೀರ್ಣರಾದ ಪದವೀಧರರು. ಎಂ.ಎ., ಎಂ.ಎಸ್.ಸಿ., ಎಂ.ಕಾಂ. ಆಗಿರತಕ್ಕವರು ಬರುವುದೇ ಅಪರೂಪ. ಹಾಗೇನಾದರೂ ಬಂದಿದ್ದರೆ ಸಾಮಾನ್ಯವಾಗಿ ಅವರು ಮೂರನೆಯ ದರ್ಜೆಯಲ್ಲಿ ಉತ್ತೀರ್ಣರಾದವರು. ಅನೇಕ ವೇಳೆ ಬಿ.ಕಾಂ.ಮತ್ತು ವ್ಯವಸಾಯ ಶಿಕ್ಷಣದ ಪದವೀಧರರನ್ನು ದೊರಕಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಬಹುಶಃ ಇತರ ಸೇವಾಕ್ಷೇತ್ರಗಳು ಆರ್ಥಿಕವಾಗಿ ತೋರುತ್ತಿರುವ ಹೆಚ್ಚಿನ ಆಕರ್ಷಣೆ ಇದಕ್ಕೆ ಕಾರಣವಾಗಿರಬೇಕು. ಈಚೆಗೆ ವೃತ್ತಿನಿರತ ಅಧ್ಯಾಪಕರು ಖಾಸಗಿ ಅಧ್ಯಯನದಿಂದಲೋ ಪತ್ರಮುಖೇನ ಶಿಕ್ಷಣದಿಂದಲೋ ತಮ್ಮ ಸಾಮಾನ್ಯ ಶಿಕ್ಷಣಾರ್ಹತೆಯನ್ನು ಹೆಚ್ಚಿಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ.

ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದ ಅಥವಾ ಉನ್ನತ ಪದವಿಗಳನ್ನು ಪಡೆದ ಅಭ್ಯರ್ಥಿಗಳು ಶಿಕ್ಷಣವೃತ್ತಿಗೆ ಬಾರದಿರುವುದರ ಜೊತೆಗೆ ವಿಜ್ಞಾನದ ಪದವೀಧರರು ಬರುವುದು ಕಡಿಮೆಯಾಗುತ್ತಿದೆ. ಶಾಲೆಯಲ್ಲಿ ವಿಜ್ಞಾನ ಪ್ರಧಾನಬೋಧನ ವಿಷಯವಾಗುತ್ತಿದ್ದರೂ ಅದನ್ನು ಬೋಧಿಸುವ ಅಧ್ಯಾಪಕರು ತಕ್ಕಷ್ಟು ಸಂಖ್ಯೆಯಲ್ಲಿ ದೊರಕದೆ ಅನೇಕ ಶಾಲೆಗಳಲ್ಲಿ ಅವರ ಸ್ಥಾನಗಳು ತಿಂಗಳುಗಟ್ಟಲೆ, ವರ್ಷಗಟ್ಟಲೆ ಖಾಲಿ ಉಳಿದಿರುತ್ತವೆ.

ಪ್ರೌಢಶಾಲೆಯ ಅಧ್ಯಾಪಕರ ಸಾಮಾನ್ಯ ಶಿಕ್ಷಣದ ಬಗ್ಗೆ ಮತ್ತೊಂದು ನ್ಯೂನತೆ ಈಚೆಗೆ ಬೆಳಕಿಗೆ ಬರುತ್ತಿದೆ. ಶೇ. ಸು. 331/3 ರಷ್ಟು ಅಧ್ಯಾಪಕರು ಪದವೀಧರರಾಗಿದ್ದರೂ ತಾವು ಬೋಧಿಸುತ್ತಿರುವ ವಿಷಯದಲ್ಲಿ ಪದವಿಮಟ್ಟದಲ್ಲಿ ಶಿಕ್ಷಣವನ್ನು ಪಡೆದಿರುವುದಿಲ್ಲ. ಇತರ ವಿಷಯಗಳನ್ನು ಅಭ್ಯಸಿಸಿ ಪದವಿ ಪಡೆದಿರುತ್ತಾರೆ. ಆದರೂ ಅನಿವಾರ್ಯವಾಗಿ ಅವರು ಆ ಪಾಠ ಮಾಡುತ್ತಿರುವುದುಂಟು. ಅಂಥವರು ತಾವು ಅಭ್ಯಸಿಸದಿರುವ ವಿಷಯವನ್ನು ಬೋಧಿಸುವುದರಿಂದ ಬೋಧನೆ ಪರಿಣಾಮಕಾರಿಯಾಗದಿರುವುದು ಸ್ವಾಭಾವಿಕ.

ಮೇಲಿನ ತೊಂದರೆಗಳ ನಿವಾರಣೆಗೆ ಎರಡು ಅಂತಸ್ತಿನಲ್ಲಿ ಪ್ರಯತ್ನ ನಡೆಯಬೇಕಾಗಿದೆ. ಮೊದಲನೆಯ ಅಂತಸ್ತಿನಲ್ಲಿ, ಪ್ರೌಢಶಾಲೆಯಲ್ಲಿ ಬೋಧಿಸುವ ವಿಷಯಗಳನ್ನು ಪದವಿ ಪರೀಕ್ಷೆಗೆ ಆರಿಸಿಕೊಂಡಿದ್ದ ಅಭ್ಯರ್ಥಿಗಳನ್ನು ಮಾತ್ರ ವೃತ್ತಿ ಶಿಕ್ಷಣಕ್ಕೆ ಆರಿಸಿಕೊಳ್ಳಬೇಕು; ಎರಡನೆಯ ಅಂತಸ್ತಿನಲ್ಲಿ, ಅಧ್ಯಾಪಕರನ್ನು ನೇಮಿಸಿಕೊಳ್ಳವಾಗ ಅವರು ಬೋಧಿಸಬೇಕಾಗಿರುವ ವಿಷಯಗಳನ್ನು ಅಧ್ಯಯನ ಮಾಡಿರುವವರನ್ನೇ ಆರಿಸಿಕೊಳ್ಳಬೇಕು. ಜೊತೆಗೆ ದಕ್ಷ ಅಧ್ಯಾಪಕರನ್ನು ದೊರಕಿಸಿಕೊಳ್ಳಲು. ಉನ್ನತದರ್ಜೆಯಲ್ಲಿ ಉತ್ತೀರ್ಣರಾದವರನ್ನೂ ವಿಜ್ಞಾನದ ಪದವೀಧರರನ್ನೂ ಆಕರ್ಷಿಸಲು ಅಂಥವರಿಗೆ ಹೆಚ್ಚಿನ ಆರ್ಥಿಕ ಆಕರ್ಷಣೆ ತೋರುವುದೂ ಅಗತ್ಯ.

II ವೃತ್ತಿಶಿಕ್ಷಣದ ಮುಖ: ಅಧ್ಯಾಪಕರ ಸಿದ್ಧತೆಯ ಎರಡನೆಯ ಮುಖವೇ ವೃತ್ತಿಶಿಕ್ಷಣ. ಪ್ರಾಥಮಿಕ ಶಿಕ್ಷಕರ ವೃತ್ತಿಶಿಕ್ಷಣದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಆಡಳಿತ ದೃಷ್ಟಿಯಿಂದ ಏಕರೂಪತೆ ಕಂಡುಬಂದರೂ ಕಾಲಾವಧಿ, ಉದ್ದೇಶ, ಕಾರ್ಯಕ್ರಮ. ಪ್ರವೇಶನಿಯಮ ಇತ್ಯಾದಿಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಕೆಲವು ರಾಜ್ಯಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಅಧ್ಯಾಪಕರಿಗೆ ಪ್ರತ್ಯೇಕ ಪಠ್ಯಕ್ರಮಗಳುಂಟು; ಅವರ ವೃತ್ತಿಶಿಕ್ಷಣದ ಕಾಲಾವಧಿಯಲ್ಲೂ ವ್ಯತ್ಯಾಸವಿದೆ; ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೆ 2–3 ವರ್ಷಗಳ ಅವಧಿಯದಾದರೆ ಮಾಧ್ಯಮಿಕ ಶಿಕ್ಷಕರಿಗೆ 1–2 ವರ್ಷಗಳದಾಗಿರುತ್ತದೆ. ಪಠ್ಯ ವಿಷಯಗಳಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲದಿದ್ದರೂ ಸಾಮಾನ್ಯ ವಿಷಯಗಳ ಬೋಧನೆಯ ಪ್ರಮಾಣದಲ್ಲಿ ವ್ಯತ್ಯಾಸವಿರುವುದುಂಟು. ಅದರಲ್ಲಿ ಮಾತೃಭಾಷೆ, ಚರಿತ್ರೆ, ಭೂಗೋಳ, ವಿಜ್ಞಾನ, ಗಣಿತ, ಪೌರನೀತಿ ಇತ್ಯಾದಿ ಸಾಮಾನ್ಯವಿಷಯಗಳೂ ಚಿತ್ರಲೇಖನ, ದೈಹಿಕಶಿಕ್ಷಣ, ಕಸುಬು ಇತ್ಯಾದಿಗಳೂ ಸೇರಿರುತ್ತವೆ; ವೃತ್ತಿವಿಷಯಗಳಲ್ಲಿ ಬೋಧನತತ್ತ್ವ, ಶಾಲಾನಿರ್ವಹಣೆ, ಬೋಧನಕ್ರಮ, ಆರೋಗ್ಯಶಾಸ್ತ್ರ, ಶೈಕ್ಷಣಿಕ ಮನೋವಿಜ್ಞಾನ ಮತ್ತು ಅಭ್ಯಾಸಾರ್ಥಬೋಧನೆ–ಇವು ಸೇರಿರುತ್ತವೆ; ಮಹಿಳೆಯರಿಗೆ ಸಂಗೀತ ಮತ್ತು ಹೊಲಿಗೆ ಕೆಲಸ ಸೇರಿರುತ್ತವೆ. ಈಚೆಗೆ ಶಾಲಾಶಿಕ್ಷಣವನ್ನು ಎರಡೇ ಅಂತಸ್ತುಗಳಲ್ಲಿ ವ್ಯವಸ್ಥೆ ಮಾಡುತ್ತಿರುವುದರಿಂದ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆಲ್ಲ ಸಾಮಾನ್ಯವಾಗಿ ಎರಡು ವರ್ಷಗಳ ಕಾಲಾವಧಿಯ ಒಂದೇ ಅಂತಸ್ತಿನ ವೃತ್ತಿಶಿಕ್ಷಣ ವ್ಯವಸ್ಥೆ ಆಚರಣೆಗೆ ಬರುತ್ತಿದೆ.

ಪ್ರೌಢಶಾಲೆಯ ವಿಶಿಷ್ಟ ವಿಷಯಗಳ ಅಧ್ಯಾಪಕರನ್ನುಳಿದು ಮಿಕ್ಕ ಸಾಮಾನ್ಯ ವಿಷಯಗಳ ಅಧ್ಯಾಪಕರ ವೃತ್ತಿಶಿಕ್ಷಣದಲ್ಲಿ ಸದ್ಯದಲ್ಲಿ ಸಾಮಾನ್ಯ ವಿಷಯಗಳು (ಕಂಟೆಂಟ್ಸ್) ಸೇರಿರದಿದ್ದರೂ ಅವನ್ನು ಸೇರಿಸುವ ಬಗ್ಗೆ ಒತ್ತಾಯ ಹೆಚ್ಚುತ್ತಿದೆ.ವೃತ್ತಿ ವಿಷಯಗಳಲ್ಲಿ ಆಳವಾದ ಅಧ್ಯಯನವೂ ವೈವಿಧ್ಯವೂ ಕಂಡುಬರುತ್ತಿದೆ. ಶಿಕ್ಷಣತತ್ತ್ವ, ಶೈಕ್ಷಣಿಕ ಮನೋವಿಜ್ಞಾನ, ಶಿಕ್ಷಣದ ಆಡಳಿತ – ಈ ವಿಷಯಗಳ ಜೊತೆಗೆ ಶಾಲೆಯಲ್ಲಿ ಅಧ್ಯಾಪಕರು ಬೋಧಿಸಲುದ್ದೇಶಿಸಿರುವ ಎರಡು ವಿಷಯಗಳಿಗೆ ಸಂಬಂಧಿಸಿದ ಬೋಧನಕ್ರಮ, ಐಚ್ಛಿಕ ವಿಷಯ ಇತ್ಯಾದಿಗಳೂ ಸೇರಿರುತ್ತವೆ. ಐಚ್ಛಿಕ ವಿಷಯಗಳಲ್ಲಿ ಪ್ರಾಥಮಿಕ ಪೂರ್ವಶಿಕ್ಷಣ, ಮೂಲಶಿಕ್ಷಣ, ಶೈಕ್ಷಣಿಕ ಮತ್ತು ಔದ್ಯೋಗಿಕ ನಿರ್ದೇಶನ, ಪ್ರಾಯೋಗಿಕ ಶಿಕ್ಷಣ ಮತ್ತು ಶೈಕ್ಷಣಿಕ ಸಂಖ್ಯಾಶಾಸ್ತ್ರ – ಇತ್ಯಾದಿಗಳು ಸೇರಿರುವುದುಂಟು.

ವೃತ್ತಿಶಿಕ್ಷಣದಲ್ಲಿ ಮೇಲೆ ಉಲ್ಲೇಖಿಸಿರುವ ವಿವರಗಳು ತತ್ತ್ವ ವಿಷಯಗಳಿಗೆ ಸಂಬಂಧಿಸಿದವು; ಅವುಗಳಷ್ಟೇ ಮುಖ್ಯವೆನ್ನಬಹುದಾದ ಪ್ರಾಯೋಗಿಕ ಅಥವಾ ಅಭ್ಯಾಸಾರ್ಥ ಬೋಧನೆಯ ಶಿಕ್ಷಣವೂ ಸೇರಿರುತ್ತದೆ. ತರಗತಿಯಲ್ಲಿ ಪಾಠಬೋಧನೆ, ಪಾಠಯೋಜನೆಯ ತಯಾರಿಕೆ, ಪಾಠದ ಟಿಪ್ಪಣಿಯ ನಿರೂಪಣೆ, ಪಾಠಗಳ ವಿಮರ್ಶೆ, ಪಾಠವೀಕ್ಷಣೆ ಇತ್ಯಾದಿಗಳೆಲ್ಲ ಅಧ್ಯಾಪಕವೃತ್ತಿಗೆ ಸಂಬಂಧಿಸಿದ ನಿಜವಾದ ಅನುಭವವನ್ನು ಕೊಡತಕ್ಕ ಚಟುವಟಿಕೆಗಳಾದ್ದರಿಂದ ಆ ವಿಭಾಗವನ್ನು ಮುಂದೆ ಪ್ರತ್ಯೇಕವಾಗಿ ಪರಿಶೀಲಿಸಿದೆ.

ಮೇಲಿನ ಕಾರ್ಯಕ್ರಮಗಳ ಜೊತೆಗೆ ಅಧ್ಯಾಪಕವೃತ್ತಿಗೆ ಅಗತ್ಯವೆನಿಸುವ ಹಲವು ಕಾರ್ಯಕ್ರಮಗಳೂ ಸೇರಿರುತ್ತವೆ; ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಪ್ರವಾಸಗಳನ್ನು ಏರ್ಪಡಿಸುವುದು, ಗೋಷ್ಠಿಗಳನ್ನು ವ್ಯವಸ್ಥೆಗೊಳಿಸಿ ಕಾರ್ಯನಿರ್ವಹಿಸುವುದು, ಸಭೆ, ಸಮ್ಮೇಳನ, ಹಬ್ಬದಿನಾಚರಣೆಗಳನ್ನು ನಡೆಸುವುದು – ಇತ್ಯಾದಿ ಕಾರ್ಯಕ್ರಮಗಳ ಮೂಲಕ ಅವರ ಸಾಮಾಜಿಕ ವ್ಯಕ್ತಿತ್ವವನ್ನು ಬೆಳೆಸುವ ಕಾರ್ಯವೂ ಸೇರಿರುತ್ತದೆ.

ಅಧ್ಯಯನದ ಕಾಲಾವಧಿ ಮುಗಿದ ಅನಂತರ ವೃತ್ತಿವಿಷಯಗಳ ತಾತ್ತ್ವಿಕ ವಿಭಾಗ ಮತ್ತು ಪ್ರಾಯೋಗಿಕ ವಿಭಾಗಗಳೆರಡಕ್ಕೂ ಸಂಬಂಧಿಸಿದಂತೆ ಪರೀಕ್ಷೆ ನಡೆಯುತ್ತದೆ.

ವಿಶಿಷ್ಟವಿಷಯಗಳ ಅಧ್ಯಾಪಕರ ವೃತ್ತಿಶಿಕ್ಷಣ: ಪ್ರೌಢಶಾಲೆಯಲ್ಲಿ ಸಾಮಾನ್ಯ ವಿಷಯಗಳಂತೆ ಸಂಗೀತ, ವ್ಯವಸಾಯ, ನೇಯ್ಗೆ, ಮುದ್ರಣ ಇತ್ಯಾದಿ ವಿಶೇಷ ವಿಷಯಗಳನ್ನು ಐಚ್ಛಿಕವಾಗಿ ಬೋಧಿಸುವ ವ್ಯವಸ್ಥೆಯೂ ಉಂಟಷ್ಟೆ. ಆ ವಿಶೇಷ ಅಧ್ಯಾಪಕರಿಗೆ ಇದುವರೆಗೆ ವೃತ್ತಿಶಿಕ್ಷಣ ಬೇಕೆಂದು ಭಾವಿಸಿರಲಿಲ್ಲ. ಈಚೆಗೆ ಅವರಿಗೂ ವೃತ್ತಿಶಿಕ್ಷಣ ಅಗತ್ಯವೆಂದು ಭಾವಿಸಿ ಅವರ ವೃತ್ತಿಶಿಕ್ಷಣಕ್ಕಾಗಿಯೇ ಪ್ರಾದೇಶಿಕ ಶಿಕ್ಷಣ ಕಾಲೇಜುಗಳಂಥ (ರೀಜನಲ್ ಕಾಲೇಜುಗಳು) ನೂತನ ಸಂಸ್ಥೆಗಳು ಆರಂಭವಾಗಿವೆ. ಅಲ್ಲಿ ಅವರು ಬೋಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಣವೀಯುವುದರ ಜೊತೆಗೆ ಆ ವಿಷಯವನ್ನು ಬೋಧಿಸುವ ವಿಧಾನ ಮೊದಲಾದ ವೃತ್ತಿಸಂಬಂಧವಾದ ಶಿಕ್ಷಣವನ್ನೂ ನೀಡಲಾಗುತ್ತದೆ.

ಮೂಲಶಿಕ್ಷಣಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣ: ಸಹಕಾರತತ್ತ್ವದ ಆಧಾರದ ಮೇಲೆ ವ್ಯವಸ್ಥೆಗೊಂಡಿರುವ ಸಮಾಜ ಜೀವನದ ಅನುಭವ ಪಡೆಯುವುದು: ಸತ್ಯ, ಅಹಿಂಸೆಗಳ ಆಧಾರದ ಮೇಲೆ ನೂತನ ಸಮಾಜವ್ಯವಸ್ಥೆಯನ್ನು ಒಪ್ಪಿ ಅದರ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರವನ್ನು ಅರ್ಥಮಾಡಿಕೊಳ್ಳುವುದು; ಅಧ್ಯಾಪಕರ ವೃತ್ತಿಯನ್ನನುಸರಿಸುವ ಅಭ್ಯರ್ಥಿಗಳ ದೈಹಿಕ, ಮಾನಸಿಕ ಮತ್ತು ಗುಣಗ್ರಾಹಕ ಶಕ್ತಿಗಳನ್ನು ಬೆಳೆಸಿ ಅವರು ಸಮತೂಕದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಂತೆ ಮಾಡುವುದು; ಮಕ್ಕಳ ಮಾನಸಿಕ, ದೈಹಿಕ ಮತ್ತು ಭಾವಾತ್ಮಕ ಆವಶ್ಯಕತೆಗಳನ್ನು ಅರಿತು ಅವರ ಬೆಳೆವಣಿಗೆಯನ್ನು ಸಾಧಿಸಲು ನೆರವಾಗುವ ವೃತ್ತಿಕೌಶಲವನ್ನೂ ಜ್ಞಾನವನ್ನೂ ದೊರಕಿಸುವುದು – ಇವಿಷ್ಟೂ ಮೂಲಶಿಕ್ಷಣದ ಅಧ್ಯಾಪಕರ ವೃತ್ತಿ ಶಿಕ್ಷಣದ ಉದ್ದೇಶಗಳು, ಇಂಥ ವೃತ್ತಿಶಿಕ್ಷಣಕ್ಕಾಗಿ ಅನೇಕ ಸಂಸ್ಥೆಗಳೂ ಏರ್ಪಟ್ಟಿವೆ. ಅಲ್ಲಿ ಅಧ್ಯಾಪಕರಿಗೆ ವೃತ್ತಿಶಿಕ್ಷಣದ ಜೊತೆಗೆ ಸಮಾಜ ಜೀವನಕ್ಕೆ ಸಂಬಂಧಿಸಿದ ಅನುಭವವನ್ನೂ ದೊರಕಿಸುವರು. ವೃತ್ತಿಶಿಕ್ಷಣದಲ್ಲಿ ಸಾಮಾನ್ಯ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವುದರ ಜೊತೆಗೆ ಪಠ್ಯವಿಷಯಗಳನ್ನು (ಅಲ್ಲಿ ಕೇಂದ್ರ) ವಿಷಯವಾಗಿರುವ ಕಸಬಿಗೆ ಸಂಬಂಧಿಸಿದಂತೆ ಬೋಧಿಸುವ ಸಮನ್ವಯ ಪಾಠಕ್ರಮವನ್ನೂ ಬೋಧಿಸುವರು, ಕೇವಲ ತಾತ್ತ್ವಿಕ ವಿಷಯ ಜ್ಞಾನಕ್ಕೇ ಪ್ರಾಧಾನ್ಯವೀಯದೆ ಪ್ರಾಯೋಗಿಕ ಕಾರ್ಯಕ್ರಮಗಳಿಗೂ ಅವಕಾಶ ಕಲ್ಪಿಸಿಕೊಂಡಿರುವರು. ಮೂಲಶಿಕ್ಷಣಶಾಲೆಗಳ ಪಠ್ಯಕ್ರಮದಲ್ಲಿ ಸೇರಿರುವ ಸಾಮಾನ್ಯ ವಿಷಯಗಳನ್ನೂ ಅಲ್ಲಿ ಬೋಧಿಸಲಾಗುವುದು. ಈ ಸಂಸ್ಥೆಗಳು ಏಕೋ ಜನಪ್ರಿಯವಾಗಿಲ್ಲ ಆದರೆ ಅದರಲ್ಲಿರುವ ಉತ್ತಮಾಂಶಗಳನ್ನು ಸಾಮಾನ್ಯ ವೃತ್ತಿಶಿಕ್ಷಣ ಸಂಸ್ಥೆಗಳಲ್ಲೂ ಬಳಸಿಕೊಳ್ಳುವ ಯತ್ನವೇನೋ ನಡೆಯುತ್ತಿದೆ.

III ವೃತ್ತಿನಿರತ ಮುಖ: ವೃತ್ತಿಶಿಕ್ಷಣ ಎಷ್ಟೇ ಸಮರ್ಪಕವಾಗಿದ್ದರೂ ಅಧ್ಯಾಪಕರಾಗತಕ್ಕವರು ತಮ್ಮ ಕಾರ್ಯದಲ್ಲಿ ಪೂರ್ಣ ಕೌಶಲವನ್ನು ಸಾಧಿಸಿರುವರೆನ್ನುವಂತಿಲ್ಲ; ಆ ಕಾರ್ಯಕ್ಕೆ ಅನಿವಾರ್ಯವಾಗಿ ಬೇಕಾಗುವ ಕನಿಷ್ಠಮಟ್ಟದ ಕೌಶಲವನ್ನು ಮಾತ್ರ ಸಾಧಿಸಿರುತ್ತಾರೆ. ಆ ಕೌಶಲ ನಿಜವಾಗಿ ವೃದ್ಧಿಯಾಗುವುದು ಅವರು ವೃತ್ತಿಗೆ ಸೇರಿದಮೇಲೆಯೆ. ತಾತ್ತ್ವಿಕವಾಗಿ ಅರಿತ ಅನೇಕ ಅಂಶಗಳ ನಿಜವಾದ ಪರಿಜ್ಞಾನವೂ ಆ ಕಾರ್ಯಕ್ಷೇತ್ರದಲ್ಲೇ ಪ್ರಕಾಶಕ್ಕೆ ಬರುವುದು, ಮೇಲಾಗಿ ಶಿಕ್ಷಣಶಾಖೆ, ವಿಶ್ವವಿದ್ಯಾನಿಲಯ, ವೃತ್ತಿಶಿಕ್ಷಣಸಂಸ್ಥೆ ಮುಂತಾದವು ವೃತ್ತಿನಿರತ ಅಧ್ಯಾಪಕರಿಗಾಗಿಯೆ ವ್ಯಾಪಕವಾದ ಶಿಕ್ಷಣ ಸೌಲಭ್ಯಗಳನ್ನೊದಗಿಸುತ್ತಿರುವುವು. ಅಧ್ಯಾಪಕರು ತಮ್ಮ ವೃತ್ತಿಜೀವನದಲ್ಲಿ ಪಡೆಯಬಹುದಾದ ಈ ಶಿಕ್ಷಣ ಬಹುಮುಖ್ಯವಾದ್ದರಿಂದ ಅದನ್ನು ಪ್ರತ್ಯೇಕವಾಗಿ ಈ ಲೇಖನದ ಕೊನೆಯಲ್ಲಿ ವೃತ್ತಿನಿರತ ಉಪಾಧ್ಯಾಯರ ಶಿಕ್ಷಣ ಎಂಬ ಉಪಶೀರ್ಷಿಕೆಯ ಅಡಿ ಪರಿಶೀಲಿಸಿದೆ.

**ಪಠ್ಯಕ್ರಮ:** ಪ್ರಾಥಮಿಕ ಅಧ್ಯಾಪಕರ ವೃತ್ತಿಶಿಕ್ಷಣದ ಪಠ್ಯಕ್ರಮವನ್ನು ಎರಡು ವಿಭಾಗ ಮಾಡಿದ್ದಾರೆ. ಸೈದ್ಧಾಂತಿಕ (ತಾತ್ತ್ವಿಕ) ವಿಭಾಗ ಮತ್ತು ಪ್ರಾಯೋಗಿಕ ವಿಭಾಗ ಸೈದ್ಧಾಂತಿಕ ವಿಭಾಗದಲ್ಲಿ ಶಿಕ್ಷಣತತ್ತ್ವ, ಮಕ್ಕಳ ಬೆಳೆವಣಿಗೆ, ಬಾಲಮನೋವಿಜ್ಞಾನ, ಬೋಧನಕ್ರಮ, ಶಾಲಾವ್ಯವಸ್ಥೆ, ಆರೋಗ್ಯಶಿಕ್ಷಣ–ಈ ವಿಷಯಗಳು ಸೇರಿವೆ. ಪ್ರಾಯೋಗಿಕ ವಿಭಾಗದಲ್ಲಿ ಕಸುಬು, ಅಭ್ಯಾಸಾರ್ಥ ಬೋಧನಕ್ರಮ, ಸಾಮೂಹಿಕ ಜೀವನಕ್ಕೆ ಸಂಬಂಧಿಸಿದ ಚಟುವಟಿಕೆಗಳು – ಈ ವಿಷಯಗಳು ಒಳಗೊಂಡಿವೆ. ಅಭ್ಯರ್ಥಿಗಳಿಗೆ ಅದುತನಕ ದೊರೆತಿರುವ ಸಾಮಾನ್ಯಶಿಕ್ಷಣ ಸಾಲದೆಂಬ ಉದ್ದೇಶದಿಂದ ಅವರು ಮಕ್ಕಳಿಗೆ ಮುಂದೆ ಬೋಧಿಸಬೇಕಾದ ವಿಷಯಗಳನ್ನೂ ಬೋಧಿಸಲಾಗುವುದು. ಆ ಮೂಲಕ ಅವರಿಗೆ ಸಾಮಾಜಿಕ ಪರಿಜ್ಞಾನ, ಸಂಸ್ಕೃತಿಯ

ದರ್ಶನ, ಸಮಾಜದ ಆಶೋತ್ತರಗಳು ಆಧುನಿಕ ಜೀವನದೃಷ್ಟಿ, ಮಾನವೀಯತೆಯ ವಿಶಾಲಭಾವನೆ – ಇವುಗಳ ಪರಿಚಯಮಾಡಿಕೊಡಲು ಸಹಕಾರಿಯಾಗುವುದೆಂದು ಆಶಿಸಿದೆ. ಪ್ರಾಯೋಗಿಕ ವಿಭಾಗದಲ್ಲಿ ಅಭ್ಯಾಸಾರ್ಥ ಪಾಠಬೋಧನೆ, ಪರಿವೀಕ್ಷಣೆ, ಪಾಠದ ಟಿಪ್ಪಣಿಯ ತಯಾರಿಕೆ – ಇವೂ ಸೇರಿರುತ್ತವೆ. ಪ್ರೌಢಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣದಲ್ಲೂ ಬಹುಮಟ್ಟಿಗೆ ಪಠ್ಯಕ್ರಮ ಇದೇ ರೀತಿಯಲ್ಲಿದೆ. ಆದರೆ ಸೈದ್ಧಾಂತಿಕ ವಿಭಾಗದಲ್ಲಿ ಆಳವಾದ ಅಧ್ಯಯನವೂ ಕೆಲವು ನೂತನ ಅಧ್ಯಯನ ವಿಷಯಗಳೂ ಸೇರಿರುತ್ತವೆ. ಸದ್ಯದಲ್ಲಿ ಬೋಧನವಿಷಯವನ್ನು (ಕಂಟೆಂಟ್ಸ್) ಸೇರಿಸಿಲ್ಲ.

ವೃತ್ತಿಶಾಸ್ತ್ರಕ್ಕೆ ಸಂಬಂಧಿಸಿದ ತತ್ತ್ವಜ್ಞಾನವನ್ನು ಅಧ್ಯಾಪಕರ ವೃತ್ತಿಕೌಶಲವನ್ನೂ ವೃತ್ತಿಪರಿಜ್ಞಾನವನ್ನೂ ಹೆಚ್ಚಿಸಿ ಅವರು ಪರಿಣಾಮಕಾರಿಯಾಗಿ ಶಿಕ್ಷಣದಲ್ಲಿ ತೊಡಗುವಂತಾಗ ಲೆಂಬ ಉದ್ದೇಶದಿಂದ ರೂಪಿಸಿದ್ದರೂ ಅದಕ್ಕೇ ಅನಗತ್ಯವಾದ ಪ್ರಾಮುಖ್ಯ ಮೂಡಿಕೊಂಡು ಪ್ರಾಯೋಗಿಕ ಕಾರ್ಯದ ಕಡೆ ತಕ್ಕಷ್ಟು ಗಮನ ನೀಡದಾಗಿದೆ. ಇವೆರಡೂ ಕಾರಣಗಳಿಂದ ಅಧ್ಯಾಪಕರ ವೃತ್ತಿಶಿಕ್ಷಣ ಆಶಿಸಿದಷ್ಟು ಯಶಸ್ಸನ್ನು ಸಾಧಿಸುತ್ತಿಲ್ಲ. ಆದ್ದರಿಂದ ಆ ಬಗ್ಗೆ ಅಗತ್ಯವಾಗಿ ಕೈಕೊಳ್ಳ ಬೇಕಾದ ಕೆಲವುಮಾರ್ಪಾಡುಗಳನ್ನು ಮುಂದೆ ಸೂಚಿಸಿದೆ.

ಅಭ್ಯಾಸಾರ್ಥ ಬೋಧನೆ (ಪ್ರಾಕ್ಟೀಸ್ ಟೀಚಿಂಗ್): ಅಭ್ಯಾಸಕ್ಕಾಗಿ ಅಧ್ಯಾಪಕರ ವೃತ್ತಿಶಿಕ್ಷಣ ಕಾರ್ಯಕ್ರಮದ ಅಂಗವಾಗಿ ಅಭ್ಯರ್ಥಿಯೊಬ್ಬ ನಡೆಸುವ ಪಾಠಬೋಧನೆ ಎಂಬಿಷ್ಟು ಅರ್ಥ ಮಾತ್ರ ಇದರಿಂದ ಸ್ಪಷ್ಟಪಡುವುದಾದರೂ ಇದರ ವ್ಯಾಪ್ತಿಯಲ್ಲಿ ಇತರರು ಮಾಡುವ ಪಾಠಗಳ ಪರಿಶೀಲನೆ, ಅವುಗಳ ವಿಮರ್ಶೆಗಳೂ ಸೇರಿವೆ: ಜೊತೆಗೆ, ಪಾಠಕ್ಕೆ ಅಧ್ಯಾಪಕರು ನಡೆಸುವ ಸಿದ್ಧತೆ, ಪಾಠದ ಟಿಪ್ಪಣಿಯ ತಯಾರಿಕೆಯೂ ಸೇರುತ್ತವೆ. ಆದ್ದರಿಂದ ಈಚೆಗೆ ಅಭ್ಯಾಸಾರ್ಥ ಬೋಧನೆ ಎಂಬುದಕ್ಕೆ ಬದಲಾಗಿ ವಿದ್ಯಾರ್ಥಿಬೋಧನೆ (ಸ್ಟೂಡೆಂಟ್ ಟೀಚಿಂಗ್) ಎಂಬುದು ಬಳಕೆಗೆ ಬರುತ್ತಿದೆ. ಅಲ್ಲದೆ ಅನುಭವ ಸಾಧಿಸಲು ವೃತ್ತಿಶಿಕ್ಷಣಕಾಲದಲ್ಲಿ ವಿದ್ಯಾರ್ಥಿ– ಅಧ್ಯಾಪಕ ನಡೆಸುವ ಎಲ್ಲ ಕ್ರಿಯಾತ್ಮಕ (ಪ್ರಾಯೋಗಿಕ) ಚಟುವಟಿಕೆಗಳನ್ನೂ ಈ ವಿಭಾಗದಲ್ಲಿ ಸೇರಿಸಿ ವೃತ್ತಿಶಿಕ್ಷಣದ ಈ ಭಾಗವನ್ನು ಪ್ರಾಕ್ಟಿಕಲ್ ವರ್ಕ್ ಎಂದು ಕರೆಯುವ ಹೊಸ ಸಂಪ್ರದಾಯವೂ ಆಚರಣೆಗೆ ಬರುತ್ತಿದೆ. ಆದ್ದರಿಂದ ಅವೆಲ್ಲ ಅಂಶಗಳನ್ನು ಇಲ್ಲಿ ಪರಿಶೀಲಿಸಬೇಕಾಗಿದೆ.

ವೃತ್ತಿಶಿಕ್ಷಣದ ಪಠ್ಯಕ್ರಮವನ್ನು ತತ್ತ್ವಜ್ಞಾನ (ಸೈದ್ಧಾಂತಿಕ) ಮತ್ತು ಪ್ರಾಯೋಗಿಕ ಚಟುವಟಿಕೆಗಳೆಂದು ಎರಡು ಭಾಗಮಾಡಿರುವುದು ಕೇವಲ ವಿವರಣೆಯ ಅನುಕೂಲಕ್ಕಾಗಿ ಮಾತ್ರ ಅವೆರಡೂ ಒಂದನ್ನೊಂದು ಅವಲಂಬಿಸಿಕೊಂಡು, ಒಂದನ್ನೊಂದು ಪೋಷಿಸುವಂತೆ ಸಮನ್ವಯವಾಗಿ ಹೆಣೆದುಕೊಂಡೇ ಸಾಗುತ್ತವೆ. ವಿದ್ಯಾರ್ಥಿಗಳು ಪಾಠಮಾಡುವಾಗ ಅಧ್ಯಾಪಕರು ಉಪನ್ಯಾಸಗಳ ಮೂಲಕ ನೀಡಿದ ತಾತ್ತ್ವಿಕ ಜ್ಞಾನದ ಮಾರ್ಗದರ್ಶನ ನೀಡಬೇಕು; ಅಲ್ಲಿ ರೂಪುಗೊಳ್ಳುವ ತತ್ತ್ವಸಿದ್ಧಾಂತಗಳನ್ನು ಅವರು ಕಾರ್ಯಕ್ಷೇತ್ರದಲ್ಲಿ ಪರೀಕ್ಷಿಸಿ ನೋಡಬೇಕು. ಹಾಗೆಯೇ, ಕಾರ್ಯಕ್ಷೇತ್ರದಲ್ಲಿ ಎದುರು ಬರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಆ ತತ್ತ್ವಜ್ಞಾನ ನೆರವಾಗಬೇಕು.

ಇಂಗ್ಲೆಂಡಿನಲ್ಲಿ ಅಭ್ಯಾಸಾರ್ಥ ಬೋಧನೆಗಾಗಿ 12 ವಾರಗಳ ಪೂರ್ಣಕಾಲವನ್ನು ಗೊತ್ತು ಮಾಡಿರುವರು. ಅದು ಕೇವಲ ಅಭ್ಯಾಸ ಬೋಧನೆಗಾಗಿ ಎಂದು ಅರ್ಥ ಮಾಡಬೇಕಾ ಗಿಲ್ಲ. ನಿಜವಾಗಿ ಅದು ಶಿಕ್ಷಕರ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳನ್ನೂ ಆಚರಿಸಿ ಅನುಭವ ಪಡೆಯುವ ಉದ್ದೇಶಕ್ಕಾಗಿ. ಈ ಅವಧಿಯಲ್ಲಿ ಅಧ್ಯಾಪಕರು ತಮ್ಮ ಕಾರ್ಯದಲ್ಲಿ ಪೂರ್ಣ ಕೌಶಲವನ್ನು ಸಾಧಿಸದಿದ್ದರೂ ಅದು ತಪ್ಪು ಮಾಡದ ಮಟ್ಟಿನ ಕನಿಷ್ಠಮಟ್ಟದ್ದಾದರೂ ಆಗಿರಬೇಕು. ಈ ದೃಷ್ಟಿಯಿಂದ ಅಭ್ಯಾಸಾರ್ಥ ಬೋಧನೆಯ ಉದ್ದೇಶ ಗಳನ್ನು ಪರಿಶೀಲಿಸಿದರೆ, ಅಭ್ಯರ್ಥಿಗಳಿಗೆ ತಾವು ಕೆಲಸಮಾಡಬೇಕಾಗಿರುವ ಸನ್ನಿವೇಶಗಳ ಸಾಮಾಜಿಕ ಮತ್ತು ಮಾನವೀಯ ಸಮಸ್ಯೆಗಳನ್ನು ಪರಿಚಯಮಾಡಿಕೊಟ್ಟು ಮಕ್ಕಳ ಜೀವನದಲ್ಲಿ ಆಸಕ್ತಿ ಮೂಡಿಸಿ ಬೋಧನಕ್ರಮ ಮತ್ತು ಮನೋವಿಜ್ಞಾನಗಳನ್ನು ಅರ್ಥಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು: ಆ ವಿದ್ಯಾರ್ಥಿಗಳ ಶಿಕ್ಷಣದ ಗುರಿಯನ್ನು ಸ್ಪಷ್ಟಪಡಿಸಿ ಆ ಗುರಿಯನ್ನು ಸಾಧಿಸಲು ಪೂರಕವಾಗುವಂಥ ಸ್ಪಷ್ಟವೂ ಮೂರ್ತ ಸ್ವರೂಪದ್ದೂ ಆದ ನಿದರ್ಶನ, ಸಾಕ್ಷ್ಯ ಮತ್ತು ಉದಾಹರಣೆಗಳ ಮೂಲಕ ತತ್ತ್ವಜ್ಞಾನಕ್ಕೂ ಅನುಷ್ಠಾನಕ್ಕೂ ಪರಸ್ಪರ ಹೊಂದಾಣಿಕೆ ಯನ್ನು ಮೂಡಿಸುವುದು – ಇವೆಲ್ಲ ಸೇರುತ್ತವೆಂಬುದು ಸ್ಪಷ್ಟಪಡುತ್ತದೆ.

ವೃತ್ತಿಶಿಕ್ಷಣಕ್ಕೆ ಬರತಕ್ಕ ಅಭ್ಯರ್ಥಿಗಳು ಅಲ್ಲಿನ ಅಧ್ಯಾಪಕರೂ ಅಭ್ಯಾಸಾರ್ಥ ಪಾಠ ಬೋಧನೆಯ ಪ್ರಾಮುಖ್ಯವನ್ನು ಚೆನ್ನಾಗಿ ಮನಗಂಡಿರುವರು. ಆದ್ದರಿಂದಲೇ ಒಂದು (ಅಥವಾ ಎರಡು) ವರ್ಷಗಳ ವೃತ್ತಿಶಿಕ್ಷಣದಲ್ಲಿ ಅದಕ್ಕೆ ಅರ್ಧ ಕಾಲಾವಧಿಯನ್ನು ಮೀಸಲಿಡಲಾಗಿದೆ. ಉಪನ್ಯಾಸಗಳ ಮೂಲಕ ಅಭ್ಯರ್ಥಿಗಳಿಗೆ ಪರಿಚಯ ಮಾಡಿಕೊಡುವ ತತ್ತ್ವಜ್ಞಾನದ ವಿಷಯದಲ್ಲಿ ಅಂಥ ವ್ಯತ್ಯಾಸಗಳು ಕಂಡುಬರದಿದ್ದರೂ ಅಭ್ಯಾಸಾರ್ಥ ಬೋಧನೆಯಲ್ಲಿ ವಿವಿಧರೀತಿಯ ಕಾರ್ಯ ಯೋಜನೆಗಳು ಪ್ರಚಾರದಲ್ಲಿವೆ. ಎಲ್ಲ ಕಡೆಯೂ ಸಾಮಾನ್ಯವಾಗಿ ಬಳಕೆಯಲ್ಲಿರುವ ರೂಪದಲ್ಲಿ ಅಭ್ಯಾಸಾರ್ಥ ಬೋಧನೆ ಕೆಳಗಿನ ಕಾರ್ಯಕ್ರಮಗಳನ್ನೊಳಗೊಂಡಿರುತ್ತದೆ.

1 ಅಧ್ಯಾಪಕರ ಅಥವಾ ಶಾಲೆಯ ಹಿರಿಯ ಅಧ್ಯಾಪಕರೊಬ್ಬರ ಮೇಲ್ವಿಚಾರಣೆಯಲ್ಲಿ ನಿರ್ದಿಷ್ಟಗೊಳಿಸಿರುವಷ್ಟು ಸಂಖ್ಯೆಯ ಪಾಠಗಳನ್ನು ಮಾಡುವುದು, ಕೆಲವು ಕಡೆ ಎರಡು ವಿಷಯಗಳಲ್ಲಿ ಇನ್ನು ಕೆಲವು ಕಡೆ ಮೂರು ಅಥವಾ ಹೆಚ್ಚು ವಿಷಯಗಳಲ್ಲಿ ಪಾಠಮಾಡುವು ದುಂಟು; ಮಾಡಬೇಕಾದ ಪಾಠಗಳ ಪ್ರತಿವಿಷಯದಲ್ಲೂ ಒಟ್ಟು ಸಂಖ್ಯೆಯಲ್ಲೂ ವ್ಯತ್ಯಾಸ ಕಂಡುಬರುತ್ತದೆ. ಅದು 8ರಿಂದ50ರ ವರೆಗೂ ಇರಬಹುದು.

2 ಪಾಠ ಪರಿವೀಕ್ಷಣೆ, ಇತರ ವಿದ್ಯಾರ್ಥಿಗಳು ಮಾಡುವ ಪಾಠವನ್ನು ನೋಡಿ ವಿಮರ್ಶಿಸುವ ಕಾರ್ಯ ಎಲ್ಲ ಕಡೆಯೂ ಕಂಡುಬಂದರೂ ಅದಕ್ಕಾಗಿ ಪ್ರತಿವಿಷಯಕ್ಕೂ ನಿಗದಿಯಾಗಿರುವ ಪಾಠಗಳ ಸಂಖ್ಯೆಯಲ್ಲಿ ವ್ಯತ್ಯಾಸವುಂಟು. ಅದು 5 ರಿಂದ 50ರ ವರೆಗೂ ವ್ಯತ್ಯಾಸವಾಗುವುದು.

3 ಮಾದರಿ ಅಥವಾ ನಿದರ್ಶನ ಪಾಠಗಳಿಗೆ ಹಾಜರಾಗುವುದು. ಅಭ್ಯರ್ಥಿಗಳೆಲ್ಲ ಕಾಲೇಜಿನ ಅಧ್ಯಾಪಕರು ಅಥವಾ ಇತರ ಹಿರಿಯ ಅಧ್ಯಾಪಕರು ನೀಡುವ ನಿದರ್ಶನ ಪಾಠವನ್ನು ನೋಡುವರು. ಅನೇಕ ಕಡೆ ಪ್ರತಿವಿಷಯದಲ್ಲೂ ಎರಡು ಪಾಠಗಳನ್ನು ನೀಡುವುದುಂಟು: ವರ್ಷದ ಆದಿಯಲ್ಲಿ ಒಂದು; ಅಂತ್ಯದಲ್ಲಿ ಇನ್ನೊಂದು.

ಮೇಲಿನ ಕಾರ್ಯಕ್ರಮಗಳ ಜೊತೆಗೆ ಕೆಲವು ಕಾಲೇಜುಗಳಲ್ಲಿ ವಿಮರ್ಶಾ ಪಾಠಗಳನ್ನು ಏರ್ಪಡಿಸುವುದುಂಟು; ಸಹಪಠ್ಯ ಚಟುವಟಿಕೆಯಲ್ಲಿ ಪಾತ್ರವಹಿಸುವುದನ್ನೂ ನಿಗದಿಮಾಡಿರುವು ದುಂಟು; ಹಂಚಿಕೆ ಹಾಕಿಕೊಡುವ ಕಾರ್ಯವನ್ನು ಸೇರಿಸಿರುವುದುಂಟು.

ಪಾಠಬೋಧನೆ: ಅಭ್ಯಾಸಬೋಧನೆಗೆ ಗೊತ್ತುಮಾಡಿರುವ ಪಾಠಭಾಗವನ್ನು ಮೊದಲು ಅಭ್ಯರ್ಥಿಗಳು ಪರಿಚಯಮಾಡಿಕೊಂಡು ಅದನ್ನು ಪಾಠಭಾಗಗಳನ್ನಾಗಿ ವಿಂಗಡಿಸಿಕೊಳ್ಳುವರು, ತಮ್ಮ ಪಾಠಕ್ಕೆ ಗೊತ್ತು ಮಾಡಿರುವ ಶಾಲೆಗೆ ಹೋಗಿ ತರಗತಿಯನ್ನು ಪರಿಚಯಮಾಡಿ ಕೊಳ್ಳುವರು, ಪಾಠಬೋಧನೆ ಇರುವ ದಿನ ಆ ಪಾಠ ಭಾಗಕ್ಕೆ ಸಿದ್ಧತೆಯ ರೂಪದಲ್ಲಿ ವಿವರವಾದ ಟಿಪ್ಪಣಿಯೊಂದನ್ನು ಬರೆದುಕೊಳ್ಳುವರು. ಅದನ್ನು ಕಾಲೇಜಿನ ಅಧ್ಯಾಪಕರು ನೋಡಿ ಅಗತ್ಯವಾದ ಮಾರ್ಪಾಟುಗಳನ್ನು ಮಾಡಿಕೊಡುವರು. ತಿದ್ದಿದ ಆ ಟಿಪ್ಪಣಿಯನ್ನು ಆಧಾರ ಮಾಡಿಕೊಂಡು ವಿದ್ಯಾರ್ಥಿ, ಅಧ್ಯಾಪಕರು ಅಭ್ಯಾಸಬೋಧನೆಯನ್ನು ನಡೆಸುವರು; ಕಾಲೇಜಿಗೆ ಸಂಬಂಧಿಸಿದ ಅಧ್ಯಾಪಕರೂ ಬಂದು ವೀಕ್ಷಿಸುವರು, ಪಾಠಮುಗಿದ ಮೇಲೆ ಅವರೆಲ್ಲ ಒಂದೆಡೆ ಕುಳಿತು ಪಾಠದ ಗುಣದೋಷಗಳನ್ನು ವಿಮರ್ಶಿಸುವರು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳೆರಡರಲ್ಲೂ ಈ ರೀತಿಯ ಕಾರ್ಯಕ್ರಮ ಕಂಡುಬರುತ್ತದೆ.

ಮೇಲಿನ ಕಾರ್ಯಚಟುವಟಿಕೆಗಳ ಜೊತೆಗೆ ಉಪಕರಣಗಳ ತಯಾರಿಕೆ, ನೂತನ ಪರೀಕ್ಷಣಗಳ ರಚನೆ ಮತ್ತು ಪ್ರಯೋಗ, ಪಠ್ಯವಿಷಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತ ಯೋಜನೆಗಳ (ಉದ್ಯಮ, ಪ್ರಾಜೆಕ್ಟ್)ರಚನೆ, ಶೈಕ್ಷಣಿಕ ಪ್ರಯೋಗ, ಪೌರಶಿಕ್ಷಣ ಶಿಬಿರ, ರಾಷ್ಟ್ರೀಯ ಸೇನಾ ತರಬೇತಿ, ಸಾಂಸ್ಕೃತಿಕ ಕಾರ್ಯಕ್ರಮಗಳು – ಇವೆಲ್ಲ ಸೇರಿರುವುದುಂಟು.

ಕೆಲವು ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಅಭ್ಯಾಸಾರ್ಥ ಬೋಧನೆ ಆರಂಭವಾಗುವ ಮುನ್ನ ಅಭ್ಯರ್ಥಿಗಳು ಅಭ್ಯಾಸಾರ್ಥ ಬೋಧನೆಗೆಂದು ಗೊತ್ತು ಮಾಡಿರುವ ಪಾಠಶಾಲೆಯಲ್ಲಿ ಹಿರಿಯ ಅಧ್ಯಾಪಕರು ಮಾಡುವ ಪಾಠಗಳನ್ನು ನೋಡಿ ಅನುಭವ ಪಡೆಯುವುದುಂಟು. ಇದರಿಂದ ಅನುಕೂಲಗಳಂತೆ ಅನನುಕೂಲಗಳೂ ಇವೆಯೆಂಬುದು ಸ್ಪಷ್ಟಪಟ್ಟಿರುವುದರಿಂದ ಈಚೆಗೆ ಇದನ್ನು ಕೈಬಿಡಲಾಗುತ್ತಿದೆ. ಅನೇಕ ದೇಶಗಳಲ್ಲಿ ಅಭ್ಯಾಸಬೋಧನೆಗಾಗಿ ಹನ್ನೆರಡು ವಾರಗಳನ್ನು ಗೊತ್ತುಮಾಡಿದ್ದರೂ ಆ ಕಾಲವನ್ನು ಬಳಸಿಕೊಳ್ಳುವ ರೀತಿಯಲ್ಲಿ ಎರಡು ಮೂರು ಮುಖ್ಯ ಪ್ರವೃತ್ತಿಗಳು ಕಂಡುಬರುತ್ತವೆ. ಪ್ರತಿ ಅಭ್ಯರ್ಥಿಯೂ ಹನ್ನೆರಡು ವಾರಗಳ ತನಕ ಒಂದೇ ಸಮನೆ ಒಂದು ಶಾಲೆಯಲ್ಲಿ ಪಾಠಮಾಡುವ ಒತ್ತಂಡದ ಅಭ್ಯಾಸಾರ್ಥ ಬೋಧನೆ (ಬ್ಲಾಕ್ ಪ್ರಾಕ್ಟೀಸ್) ಒಂದು ವಿಧ; ವಾರಕ್ಕೆ ಎರಡು ದಿನ ಎರಡು ಪಾಠಗಳನ್ನು ಮಾತ್ರ ಮಾಡುತ್ತ ಅದನ್ನು ವರ್ಷವೆಲ್ಲ ನಡೆಸಿಕೊಂಡು ಹೋಗುವ ಹರಡಿಕೆಯ ಪದ್ಧತಿ (ಸ್ಪ್ರೆಡ್ ಸಿಸ್ಟಂ) ಇನ್ನೊಂದು ವಿಧ. ಒತ್ತಂಡದ ಪದ್ಧತಿಯನ್ನು ಅನುಸರಿಸುವವರು ವರ್ಷದ ಮಧ್ಯಭಾಗವನ್ನು ಆ ಕಾರ್ಯಕ್ಕಾಗಿ ಬಳಸುವರು. ಒಂದೇ ಶಾಲೆಯಲ್ಲಿ ಅಭ್ಯರ್ಥಿ ಅನೇಕ ವಾರಗಳ ತನಕ ಪಾಠಮಾಡುವುದರಿಂದ ಅವನ ಬಗ್ಗೆ ವಿದ್ಯಾರ್ಥಿಗಳು ಆಸಕ್ತಿಯಿಂದಿದ್ದು ನಿಜವಾದ ಶಿಕ್ಷಣ ಸಾಧಿಸುವರೆಂದೂ ತರಗತಿಯ ನಿಜವಾದ ಅಧ್ಯಾಪಕರಾಗಿದ್ದುಕೊಂಡು ಅವರೂ ತಮ್ಮ ಕಾರ್ಯವನ್ನು ವಾಸ್ತವಿಕ ಸನ್ನಿವೇಶಗಳಲ್ಲಿ ನಡೆಸಿ ಆಗ ಮೂಡಬಹುದಾದ ಸಮಸ್ಯೆಗಳನ್ನು ಎದುರಿಸಿ ಒಳ್ಳೆಯ ಅನುಭವ ಪಡೆಯುವರೆಂದೂ ಕೆಲವರು ವಾದಿಸುವರು. ಈ ಪದ್ಧತಿಗೆ ಪರ್ಯಾಯವಾಗಿ ಅನುಸರಿಸುವ ಹರಡಿಕೆಯ ಪದ್ಧತಿಯಲ್ಲಿ ವಾರಕ್ಕೊಂದು ಅಥವಾ ಎರಡುಸಲ ವಿದ್ಯಾರ್ಥಿಗಳನ್ನು ಸಂಧಿಸಿ ಪಾಠಮಾಡುವಾಗ ಅವರನ್ನು ಪರಿಚಯಮಾಡಿ ಕೊಂಡು ಅವರಲ್ಲಿ ಕಲಿವಿನ ಮನೋಭಾವವನ್ನು ಮೂಡಿಸುವುದಾಗಲಿ ತಾವು ಶಾಲೆಯಲ್ಲಿ ನಿಜವಾದ ಅನುಭವವನ್ನು ಪಡೆಯುವುದಾಗಲಿ ಅಸಾಧ್ಯವಾಗುವುದೆಂದು ಕೆಲವರು ವಾದಿಸುವರು. ಈಚೆಗೆ ಈ ಎರಡು ಪದ್ಧತಿಗಳಿಗೂ ಮಧ್ಯಸ್ಥವೆನ್ನುವ ಒಂದು ಸಂಯೋಜಿತ ಪದ್ಧತಿ ಆಚರಣೆಗೆ ಬರುತ್ತಿದೆ. ವರ್ಷವೆಲ್ಲ ವಾರಕ್ಕೆ ಎರಡು ದಿನಗಳಂತೆ ಅಧ್ಯಾಪಕರ ಮೇಲ್ವಿಚಾರಣೆಗೆ ಬರುತ್ತಿದೆ. ವರ್ಷವೆಲ್ಲ ವಾರಕ್ಕೆ ಎರಡು ದಿನಗಳಂತೆ ಅಧ್ಯಾಪಕರ ಮೇಲ್ವಿಚಾರಣೆಯಲ್ಲಿ ಹರಡಿಕೊಂಡು ಪಾಠಮಾಡುವ ಪದ್ಧತಿಯೊಡನೆ ಮಧ್ಯೆ ಆರು ವಾರಗಳ ಒತ್ತಂಡದ ಅಭ್ಯಾಸ ಬೋಧನೆಯನ್ನು ಏರ್ಪಡಿಸಿಕೊಳ್ಳುವುದರಿಂದ ಅವೆರಡರ ಉತ್ತಮ ಪ್ರತಿಫಲಗಳೂ ದೊರಕುವಂತಾಗುತ್ತದೆ. ಈ ಸಮ್ಮಿಶ್ರ ಪದ್ಧತಿಯಲ್ಲೂ ಬಗೆ ಬಗೆಯ ವಿಧಗಳುಂಟು. ಕಾಲಕಳೆದಂತೆ ಅವುಗಳಲ್ಲಿ ಯಾವುದು ಉತ್ತಮ ವಿಧಾನವೆಂಬುದು ಸ್ಪಷ್ಟಪಡಬೇಕಾಗಿದೆ.

ಲೋಪದೋಷಗಳು: ಪೂರ್ವಸಿದ್ಧತೆ, ಅಧ್ಯಾಪಕರ ಸಲಹೆ, ಅಭ್ಯರ್ಥಿಯ ಎಚ್ಚರಿಕೆಯ ತರಗತಿಯ ನಿರ್ವಹಣೆ, ಸಹಪಾಠಿಗಳ ಮತ್ತು ಅಧ್ಯಾಪಕರ ಟೀಕೆ ಮತ್ತು ಸಲಹೆ–ಇಷ್ಟೆಲ್ಲ ಕ್ರಮವಾಗಿ ನಿಷ್ಠೆಯಿಂದ ನಡೆಯುತ್ತಿದ್ದರೂ ಅಭ್ಯರ್ಥಿಗೆ ದೊರಕುವ ಪ್ರಾಯೋಗಿಕ ಅನುಭವ ಫಲಕಾರಿಯಾಗುತ್ತಿಲ್ಲವೆಂಬ ಟೀಕೆ ಕೇಳಿಬರುತ್ತಿದೆ. ವೃತ್ತಿ ಶಿಕ್ಷಣವನ್ನು ಮುಗಿಸಿಕೊಂಡು ಶಾಲೆಯಲ್ಲಿ ಕೆಲಸಕ್ಕೆ ಬರುವ ಅಭ್ಯರ್ಥಿಗಳು ಕೂಡ ತೃಪ್ತಿ ವ್ಯಕ್ತಪಡಿಸುತ್ತಿಲ್ಲ. ಅವರು ವೃತ್ತಿಶಿಕ್ಷಣ ಸಂಸ್ಥೆಯಲ್ಲಿ ಕಲಿತ ಬೋಧನಕ್ರಮಗಳೆಲ್ಲ ತಮ್ಮ ಶಾಲೆಯಲ್ಲಿ ಪ್ರಯೋಜನಕ್ಕೆ ಬಾರದಾಗಿವೆ ಎಂದು ಕೊಳ್ಳುವುದುಂಟು. ನಿಜ, ಇದಕ್ಕೆ ವೃತ್ತಿಶಿಕ್ಷಣ ಸಂಸ್ಥೆಗಳು ಪ್ರತಿ ಹೇಳುವಂತಿಲ್ಲ. ಅಲ್ಲಿ ಬೋಧಿಸುವ ವೃತ್ತಿಯ ತಾತ್ತ್ವಿಕ ಜ್ಞಾನಕ್ಕೂ ಶಾಲೆಗಳಲ್ಲಿ ಇರತಕ್ಕ ಸನ್ನಿವೇಶಗಳಿಗೂ ಹೊಂದಿಕೆಯಾಗುತ್ತಿಲ್ಲ. ಆದ್ದರಿಂದ ಪ್ರಾಥಮಿಕ ಅಥವಾ ಪ್ರೌಢಶಾಲೆಯ ಅಧ್ಯಾಪಕರು ತಾವು ಕಲಿತ ಜ್ಞಾನವನ್ನು ಮುಂದೆ ತಮ್ಮ ವೃತ್ತಿಯಲ್ಲಿ ಬಳಸಿಕೊಳ್ಳದಾಗುವರು. ಬಹಳ ಮಟ್ಟಿಗೆ ವೃತ್ತಿಶಿಕ್ಷಣ ಸಂಸ್ಥೆಗಳು ಬೋಧಿಸುವುದೆಲ್ಲ ಇಂಗ್ಲೆಂಡು ಅಮೆರಿಕಗಳಲ್ಲಿ ಮುದ್ರಣವಾದ ಗ್ರಂಥಗಳಿಂದ. ಆ ಪರಿಜ್ಞಾನ ಭಾರತದ ಪಾಠಶಾಲೆಗಳ ಸನ್ನಿವೇಶಗಳಿಗೆ ಹೊಂದದಿರುವುದೇ ಮೇಲಿನ ಲೋಪದೋಷಗಳಿಗೆ ಮುಖ್ಯ ಕಾರಣವೆನ್ನಬೇಕು. ಆದ್ದರಿಂದ ಅನುಷ್ಠಾನಕ್ಕೆ ನಿಜವಾಗಿಯೂ ನೆರವಾಗುವಂಥ ಜ್ಞಾನವನ್ನೊಳಗೊಂಡಂತೆ ವೃತ್ತಿಶಿಕ್ಷಣದ ಪಠ್ಯಕ್ರಮವನ್ನು ಪುನಃ ವ್ಯವಸ್ಥೆಗೊಳಿಸುವುದು ಅಗತ್ಯವಾಗುತ್ತದೆ. ಜೊತೆಗೆ ಇಲ್ಲಿನ ಸನ್ನಿವೇಶಕ್ಕೊಪ್ಪುವಂಥ ಪುಸ್ತಕಗಳ ರಚನೆಯೂ ಅಗತ್ಯವಾಗಿ ಆಗಬೇಕು.

ಆಧುನಿಕ ಜೀವನದಂತೆ ಇಂದಿನ ಶಾಲೆಯ ಕೆಲಸಕಾರ್ಯಗಳು ಹೆಚ್ಚಿರುವುದೂ ಅಲ್ಲದೆ ಸಂಕೀರ್ಣಸ್ವರೂಪವನ್ನೂ ತಾಳಿವೆ. ವೃತ್ತಿಶಿಕ್ಷಣಸಂಸ್ಥೆಗಳು, ಅಧ್ಯಾಪಕರು ಅಂಥ ಶಾಲೆಗಳಲ್ಲಿ ಕೆಲಸಮಾಡಲು ಅಗತ್ಯವೆನಿಸುವ ವಿವಿಧ ಅನುಭವಗಳನ್ನು ಅಭ್ಯರ್ಥಿಗಳಿಗೆ ಒದಗಿಸುತ್ತಿಲ್ಲ ಎಂಬುದು ಮತ್ತೊಂದು ಕೊರತೆ. ತರಗತಿಯ ಬೋಧನೆ ಅಧ್ಯಾಪಕರ ಹಲವಾರು ಹೊಣೆಗಾರಿಕೆಗಳಲ್ಲೊಂದು ಮಾತ್ರ. ಶಾಲೆಯ ಇತರ ಕಾರ್ಯಗಳಲ್ಲಿ ಅವರು ಪಾತ್ರವಹಿಸಬೇಕು. ಆಡಳಿತನೀತಿಯನ್ನು ರೂಪಿಸುವುದರಲ್ಲೂ ಅವರ ಪಾತ್ರ ಇಲ್ಲದೇ ಇಲ್ಲ: ಶಾಲೆ ಇರುವ ಸಮಾಜಜೀವನದಲ್ಲೂ ಅವರು ಪಾತ್ರವಹಿಸಬೇಕಾಗುತ್ತದೆ. ಆದ್ದರಿಂದ ಆ ಅನುಭವಗಳೆಲ್ಲ ದೊರಕುವಂತೆ ವೃತ್ತಿಶಿಕ್ಷಣ ಸಂಸ್ಥೆಗಳು ಪ್ರಾಯೋಗಿಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಅಂಥ ಕಾರ್ಯಗಳಲ್ಲಿ ಮುಖ್ಯವಾದವನ್ನು ಇಲ್ಲಿ ಉಲ್ಲೇಖಿಸಿದೆ: 1. ಅಭ್ಯಾಸಬೋಧನೆ, 2. ಮಕ್ಕಳ ಮತ್ತು ಪಾಠಗಳ ಪರಿವೀಕ್ಷಣೆ, 3. ವಿಮರ್ಶಾತ್ಮಕ ಪಾಠಬೋಧನೆ, 4. ಬೇರೆ ಬೇರೆ ಅಂತಸ್ತುಗಳ ಮತ್ತು ವಿಧಗಳ ಪಾಠಶಾಲೆಗಳ ಪರಿಶೀಲನೆ, 5. ಶಾಲೆಯ ಮಕ್ಕಳಿಗೆ ಮನೆಗೆಲಸ ಕೊಟ್ಟು ಅವರು ಮಾಡಿತೋರಿಸಿದ ಕೆಲಸಗಳನ್ನು ತಿದ್ದಿಕೊಡುವುದು, 6. ಸಹಪಠ್ಯಚಟುವಟಿಕೆಗಳ ವ್ಯವಸ್ಥೆ ಮತ್ತು ನಿರ್ವಹಣೆ, 7. ಶಾಲೆಯ ಪಠ್ಯವಿಷಯಗಳನ್ನು ಕುರಿತ ಪರೀಕ್ಷಾಪತ್ರಿಕಗಳ ತಯಾರಿಕೆ ಮತ್ತು ಉತ್ತರಪತ್ರಿಕೆಗಳ ಮೌಲ್ಯ ನಿರ್ಣಯ. 8. ಮಕ್ಕಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವೈಯಕ್ತಿಕ ಅಧ್ಯಯನ ನಡೆಸುವುದು (ಕೇಸ್ ಸ್ಟಡಿ), 9. ಕಪ್ಪು ಹಲಗೆಯ ಮೇಲೆ ಬರೆಯುವ ಕಾರ್ಯ, 10. ತರಗತಿಯ ಮಕ್ಕಳ ಗುಂಪುಗಳ ಜೀವನಕ್ಕೆ ಸಂಬಂಧಿಸಿದಂತೆ ಸಮಾಜಮಿತಿಯ ಅಧ್ಯಯನ ನಡೆಸುವುದು, 11. ವಿಜ್ಞಾನದ ಅಧ್ಯಾಪಕರಿಗೆ ಪ್ರಯೋಗಮಂದಿರದ ಅನುಭವ, 12. ಶಾಲೆಯಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದ ಪ್ರಯೋಗ ಕಾರ್ಯಗಳಲ್ಲಿ ಅನುಭವ, 13. ಪಾಠೋಪಕರಣಗಳನ್ನು ರೂಪಿಸಿಕೊಂಡು ಬಳಸುವುದು, 14. ಕೆಲವು ಮುಖ್ಯ ಶ್ರವ್ಯ – ದೃಶ್ಯೋಪಕರಣಗಳನ್ನು ಬಳಸುವುದು, 15. ರೇಡಿಯೊ (ಮತ್ತು ಟೆಲಿವಿಷನ್) ಶೈಕ್ಷಣಿಕ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವುದು – ಇತ್ಯಾದಿ. ಈ ಎಲ್ಲ ಅನುಭವಗಳನ್ನೂ ಎಲ್ಲ ಅಭ್ಯರ್ಥಿಗಳಿಗೂ ಕೊಡುವುದು ಅಸಾಧ್ಯವೆನಿಸಬಹುದು. ಅವುಗಳಲ್ಲಿ ಕೆಲವು ಅನುಭವಗಳು ಕೆಲವರಿಗೆ ಆಗಲೇ ಆಗಿರಬಹುದು, ಮಿಕ್ಕ ಅನುಭವಗಳನ್ನು ಅಂಥವರಿಗೆ ಒದಗಿಸಬೇಕಾಗುತ್ತದೆ. ವೃತ್ತಿಶಿಕ್ಷಣಸಂಸ್ಥೆ ಆರಂಭವಾದ ಕೆಲವು ದಿನಗಳವರೆಗೆ ಸಾಮಾನ್ಯವಾಗಿ ಅಭ್ಯಾಸಾರ್ಥ ಬೋಧನೆ ಆರಂಭವಾಗಲಾರದು, ಆ ಮಧ್ಯಕಾಲದಲ್ಲಿ ಮೇಲೆ ಸೂಚಿಸಿದ ಹಲವು ಅನುಭವಗಳನ್ನು ಅಗತ್ಯವಿರುವಲ್ಲಿ ದೊರಕಿಸಬಹುದು. ಮಿಕ್ಕವನ್ನು ಅಭ್ಯಾಸಾರ್ಥಪಾಠ ಬೋಧನೆಯ ಅಂಗವಾಗಿ ದೊರಕುವಂತೆ ವ್ಯವಸ್ಥೆಗೊಳಿಸಬಹುದು.

ಅಭ್ಯಾಸಬೋಧನೆ ಪರಿಣಾಮಕಾರಿಯಾಗುವಂತೆ ಮಾಡಲು ಅದರ ವ್ಯವಸ್ಥೆಗೆ ಸಂಬಂಧಿಸಿದ ಕೆಲವಂಶಗಳ ಬಗ್ಗೆ ಎಚ್ಚರಿಕೆ ವಹಿಸುವುದು ಅಗತ್ಯ. ಅಭ್ಯಾಸ ಬೋಧನೆಯನ್ನು ವರ್ಷದ ಆರಂಭದಲ್ಲೇ ಮೊದಲು ಮಾಡದೆ ವಿದ್ಯಾರ್ಥಿಗಳು ತಾವು ಬೋಧಿಸಬೇಕಾದ ಶಾಲೆ, ಅದರ ಸುತ್ತಣ ಸಮಾಜದ ಸ್ವರೂಪ, ಅಲ್ಲಿನ ಅಧ್ಯಾಪಕರ ಮತ್ತು ಪಠ್ಯಕ್ರಮದ ಪರಿಚಯ – ಇವನ್ನೆಲ್ಲ ಮಾಡಿಕೊಂಡಮೇಲೆ ಆರಂಭಿಸಬೇಕು. ಅಭ್ಯಾಸಬೋಧನೆಯ ಯಶಸ್ಸು ಆ ಶಾಲೆ ಮತ್ತು ವೃತ್ತಿಶಿಕ್ಷಣಸಂಸ್ಥೆ ಇವೆರಡಕ್ಕೂ ಸೇರಿದ ಹೊಣೆಗಾರಿಕೆಯೆಂಬುದನ್ನು ಸಂಬಂಧಿಸಿದವರು ಮನಗಂಡು ತಕ್ಕಂತೆ ನಡೆದುಕೊಳ್ಳಬೇಕು. ಅಲ್ಲಿ ಪಾಠಬೋಧನೆಗೆ ಸೂಕ್ತ ಸನ್ನಿವೇಶವನ್ನು ದೊರಕಿಸಿಕೊಡುವುದು. ಶಾಲೆಗೆ ಸೇರಿದ್ದು, ಅಭ್ಯಾಸಪಾಠಮಾಡತಕ್ಕ ಅಭ್ಯರ್ಥಿಗಳಿಗೆ ಸೂಕ್ತ ನಿರ್ದೇಶನ ನೀಡುವುದು ವೃತ್ತಿಶಿಕ್ಷಣ ಸಂಸ್ಥೆಯ ಮತ್ತು ಶಾಲೆಯ ಹಿರಿಯ ಅಧ್ಯಾಪಕರುಗಳಿಗೆ ಸೇರಿದ್ದು, ಅಭ್ಯಾಸಾರ್ಥ ಬೋಧನೆ ನಿಜವಾಗಿಯೂ ಪರಿಣಾಮಕಾರಿಯಾಗಬೇಕಾದರೆ ಇವೆರಡು ಮುಖಗಳೂ ಸಹಕರಿಸಿ ನಡೆದುಕೊಳ್ಳುವುದು ಅಗತ್ಯ. ಅಭ್ಯಾಸಾರ್ಥ ಬೋಧನೆಗಾಗಿ ಶಾಲೆಯನ್ನು ಆರಿಸಿಕೊಳ್ಳುವಾಗ ಬಹುಮಂದಿ ವಿದ್ಯಾರ್ಥಿಗಳನ್ನು ಒಂದೇ ಶಾಲೆಗೆ ಕಳುಹಿಸುವುದರ ಬದಲು ಆಯಾ ವಿದ್ಯಾರ್ಥಿಬೋಧಿಸಲಿರುವ ವಿಷಯದ ಪರಿಗಣನೆಯ ಮೇಲೆ ಹಲವಾರು ಶಾಲೆಗಳಿಗೆ ಹಂಚಬೇಕು. ಸಾಮಾನ್ಯವಾಗಿ ಅಭ್ಯಾಸಾರ್ಥಬೋಧನೆಗೆ ಬರತಕ್ಕವರಿಂದ ತಮಗೆ ಅನಿವಾರ್ಯತೊಂದರೆ ಆಗುವುದೆಂದು ಅನೇಕ ಶಾಲೆಗಳು ಭಾವಿಸುವುದುಂಟು. ಹೀಗಿರುವಲ್ಲಿ ಒಂದೇ ಶಾಲೆಗೆ ಅಧಿಕಮಂದಿಯನ್ನು ಕಳಿಸುವುದು ಉಚಿತವೆನಿಸಲಾರದು. ಅದಕ್ಕಾಗಿ ವಿದ್ಯಾರ್ಥಿ–ಅಧ್ಯಾಪಕರನ್ನು ಬೇರೆ ಬೇರೆ ಶಾಲೆಗಳಿಗೆ ಮಿತವಾಗಿ ಹಂಚಬೇಕು. ಆರಿಸಿಕೊಳ್ಳತಕ್ಕ ಶಾಲೆಗಳಲ್ಲಿ ಅಭ್ಯಾಸಾರ್ಥ ಬೋಧನೆಗೆ ಅಗತ್ಯ ಸನ್ನಿವೇಶಗಳೂ ಉಪಕರಣಾದಿಗಳೂ ಅಗತ್ಯ. ಆದ್ದರಿಂದ ಅಂಥ ಶಾಲೆಗಳಿಗೆ ಆಡಳಿತವರ್ಗದವರು ಅಥವಾ ಶಿಕ್ಷಣಶಾಖೆಯವರು ತಕ್ಕಷ್ಟು ಅನುಕೂಲಗಳನ್ನು ಕಲ್ಪಿಸಿಕೊಡಬೇಕು.

ಅಭ್ಯಾಸಾರ್ಥ ಬೋಧನೆಯ ಕಾಲಾವಧಿ ಸ್ಥೂಲವಾಗಿ 12 ವಾರಗಳಿಗೆ ಕಡಿಮೆಯಿರಬಾರದೆಂದು ಹೇಳಿದ್ದರೂ ಭಾರತದ ಅನೇಕ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಒತ್ತಂಡ ಪದ್ಧತಿಯನ್ನು ಪೂರ್ಣವಾಗಿ ಅನುಸರಿಸದ ಸಂಸ್ಥೆಗಳು ಬೇರೆ ಬೇರೆ ಕಾಲಾವಧಿಯನ್ನು ನಿಷ್ಕರ್ಷೆ ಮಾಡಿಕೊಂಡಿವೆ. ಸಮಾನ್ಯವಾಗಿ ವರ್ಷವೆಲ್ಲ ಹರಡಿಕೊಂಡು ವಾರಕ್ಕೆರಡು ದಿನ ಪಾಠ ಮಾಡುವುದರ ಜೊತೆಗೆ ಎರಡು ವಾರದೊತ್ತಂಡದ ಅಭ್ಯಾಸಾರ್ಥ ಬೋಧನೆಗೂ ಅವಕಾಶ ಕಲ್ಪಿಸಿಕೊಂಡಿವೆ. ಈ ಅಲ್ಪ ಕಾಲಾವಧಿಯಲ್ಲಿ ವಿದ್ಯಾರ್ಥಿ ಆ ನೂತನ ಸನ್ನಿವೇಶಕ್ಕೆ ಹೊಂದಿಕೊಂಡು ಅಲ್ಲಿನ ಮಕ್ಕಳನ್ನೂ ಅಧ್ಯಾಪಕರನ್ನೂ ಪರಿಚಯ ಮಾಡಿಕೊಂಡು ಉದ್ದೇಶಿಸಿದ ಅನುಭವಗಳನ್ನು ಸಾಧಿಸುವುದು ಅಸಾಧ್ಯವಾಗುತ್ತದೆ. ಆ ಬಗ್ಗೆ ಎನ್.ಸಿ.ಇ.ಆರ್.ಟಿ. ನೇಮಿಸಿದ್ದ ರಾಷ್ಟ್ರೀಯ ಮಟ್ಟದ ಅಧ್ಯಯನ ತಂಡವೊಂದು ಅದಕ್ಕಾಗಿ 8–12 ವಾರಗಳಾದರೂ ಅಗತ್ಯವೆಂದು ಸೂಚಿಸಿ, ಆ ಕಾಲದಲ್ಲಿ ಅಭ್ಯಾಸಿ ಅಧ್ಯಾಪಕರು ಆ ಶಾಲೆಯ ಅಧ್ಯಾಪಕರ ಕೆಲಸದ ಹೊರೆಯಲ್ಲಿ ಅರ್ಧದಷ್ಟನ್ನಾದರೂ ನಿರ್ವಹಿಸಬೇಕೆಂದು ಸೂಚಿಸಿದೆ. ಅಂದು ಮಾತ್ರ ವಿದ್ಯಾರ್ಥಿ–ಅಧ್ಯಾಪಕರು ತಾವೂ ಆ ಅಧ್ಯಾಪಕರೊಬ್ಬರೆಂದು ಭಾವಿಸಿ ಅಲ್ಲಿ ದೊರಕಬಹುದಾದ ಸೌಲಭ್ಯಗಳನ್ನೆಲ್ಲ ಬಳಸಿಕೊಂಡು ಅನುಭವ ಸಾಧಿಸಲು ಸಾಧ್ಯವಾದೀತು.

ಅಭ್ಯಾಸಾರ್ಥ ಪಾಠಗಳ ಪರಿವೀಕ್ಷಣೆ: ಅಭ್ಯಾಸಾರ್ಥ ಬೋಧನೆಯ ಯಶಸ್ಸಿಗೆ ಆ ಪಾಠಗಳನ್ನು ನೋಡಿ ಗುಣದೋಷಗಳನ್ನು ವಿಮರ್ಶಿಸಿ ಸೂಕ್ತ ನಿರ್ದೇಶನ ನೀಡುವ ಕಾರ್ಯವೂ ಮುಖ್ಯವೆ. ಈ ಕಾರ್ಯವನ್ನು ಪ್ರೌಢಶಾಲೆಯ ಅಧ್ಯಾಪಕರೂ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ವಿಷಯಬೋಧನೆಯ ಕ್ರಮವನ್ನು ಬೋಧಿಸುವ ಅಧ್ಯಾಪಕರೂ ಪರಿಶೀಲಿಸುವುದು ವಾಡಿಕೆ. ಕೆಲವು ಕಡೆ ಶಾಲೆಯಲ್ಲಿ ಆಯಾ ವಿಷಯವನ್ನು ಬೋಧಿಸುವ ಅಧ್ಯಾಪಕರು ಮೇಲ್ವಿಚಾರಣೆ ನೋಡಿಕೊಳ್ಳುವರು. ಹೇಗೇ ಆಗಲಿ, ಪಾಠವನ್ನು ಮೊದಲಿಂದ ಕೊನೆಯವರೆಗೂ ನೋಡಿ ಲೋಪದೋಷಗಳನ್ನು ಸೂಚಿಸಿ ಸೂಕ್ತವೆನಿಸುವ ಮಾರ್ಗದರ್ಶನ ನೀಡುವುದು ಅಗತ್ಯ. ಆದರೆ ಒಬ್ಬೊಬ್ಬ ವಿದ್ಯಾರ್ಥಿ ನೀಡುವ ಒಂದೊಂದು ವಿಷಯದಲ್ಲೂ ಒಟ್ಟು ಎಷ್ಟೆಷ್ಟು ಪಾಠಗಳನ್ನು ಪೂರ್ಣವಾಗಿ ನೋಡಬೇಕು ಎಂಬ ಬಗ್ಗೆ ಏಕರೀತಿಯ ಅಭಿಪ್ರಾಯ ಕಂಡುಬರುತ್ತಿಲ್ಲ.

ಅಭ್ಯಾಸಾರ್ಥ ಬೋಧನೆಯ ಮೌಲ್ಯನಿಷ್ಕರ್ಷೆ; ಅಭ್ಯಾಸಾರ್ಥ ಬೋಧನೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಇಟ್ಟುಕೊಂಡು ಪ್ರತಿಯೊಂದು ಪಾಠದ ಮೌಲ್ಯ ನಿಷ್ಕರ್ಷೆಯನ್ನೂ ನಡೆಸುವುದು ಅಗತ್ಯ. ಆ ಮೂಲಕವೇ ಅಂದಿಗಂದಿಗೆ ವಿದ್ಯಾರ್ಥಿ–ಬೋಧಕರಿಗೆ ಸೂಕ್ತ ನಿರ್ದೇಶನ ನೀಡುವುದು ಸಾಧ್ಯ. ಅದಕ್ಕಾಗಿ ಪ್ರತಿಯೊಬ್ಬರಿಗೂ ಒಂದೊಂದು ಸಂಚಿತಾಭಿವೃದ್ಧಿ ಪತ್ರವನ್ನಿಟ್ಟು, ಅದರಲ್ಲಿ ಅವರ ಪ್ರತಿಪಾಠದ ಮೌಲ್ಯ ನಿಷ್ಕರ್ಷೆಯನ್ನೂ ಆಗ ಕಂಡುಬಂದ ದೋಷಗಳನ್ನೂ ನೀಡಿದ ಸಲಹೆಗಳನ್ನೂ ಉಲ್ಲೇಖಿಸಬೇಕು. ಅದನ್ನೆಲ್ಲ ಅಧ್ಯಾಪಕರೂ ವಿದ್ಯಾರ್ಥಿಯೂ ಸಹಕರಿಸಿ ಬರೆದಿಡಬೇಕು. ಆಗ ಪ್ರತಿ ವಿದ್ಯಾರ್ಥಿಯೂ ಕ್ರಮಕ್ರಮವಾಗಿ ಸಾಧಿಸಿರುವ ಅಭಿವೃದ್ಧಿ ವ್ಯಕ್ತವಾಗುತ್ತದೆ. ಸಂಚಿತಾಭಿವೃದ್ಧಿ ಪತ್ರದಲ್ಲಿ ವಿದ್ಯಾರ್ಥಿಯ ಹೆಸರು, ಆರಿಸಿಕೊಂಡಿರುವ ಬೋಧನ ವಿಷಯ, ಆಗಲೆ ಮಾಡಿರುವ ಪಾಠಗಳ ಸಂಖ್ಯೆ, ಅದಕ್ಕೆ ಕೊಟ್ಟಿರುವ ಸ್ಥಾನ–ಇಷ್ಟನ್ನು ಮಾತ್ರ ಬರೆದುಕೊಳ್ಳುವುದು ಅನೇಕ ಸಂಸ್ಥೆಗಳಲ್ಲಿ ಕಂಡುಬರುತ್ತದೆ. ಅವಷ್ಟರಿಂದ ನಿಜವಾದ ಪ್ರಯೋಜನವಾಗಲಾರದು. ಅದರಲ್ಲಿ ವಿದ್ಯಾರ್ಥಿಯ ವೈಯಕ್ತಿಕಗುಣಗಳು, ಬೋಧನಶಕ್ತಿ, ಕೆಲಸಮಾಡುವ ಅಭ್ಯಾಸ, ಅಭ್ಯಾಸದಲ್ಲಿ ಅನುಸರಿಸುವ ಕ್ರಮ, ಇತ್ಯಾದಿ ಅಂಶಗಳನ್ನೂ ಬರೆದಿಡಬೇಕು. ತಮ್ಮ ತಮ್ಮ ಸಂಚಿತಾಭಿವೃದ್ಧಿ ಪತ್ರವನ್ನು ವಿದ್ಯಾರ್ಥಿಗಳು ನೋಡಿಕೊಳ್ಳಲು ಎಂದಾದರೂ ಅವಕಾಶವಿರಬೇಕು.

ಅಭ್ಯಾಸಾರ್ಥ ಬೋಧನೆಯ ಪಾಠಶಾಲೆ: ಬೋಧನೆಯ ಪ್ರಯೋಗ ಪಾಠಶಾಲೆ, ಮಾದರಿ ಪಾಠಶಾಲೆ, ನಿದರ್ಶನ ಪಾಠಶಾಲೆ ಇತ್ಯಾದಿ ಹೆಸರುಗಳಿಂದ ಕರೆಯಲಾಗುವ, ಅಭ್ಯಾಸಿ ವಿದ್ಯಾರ್ಥಿಗಳು ಅಭ್ಯಾಸ ಪಾಠ ಮಾಡಲು ಗೊತ್ತುಮಾಡಿಕೊಳ್ಳುವ, ಪಾಠಶಾಲೆಗಳಲ್ಲಿ ಎರಡು ರೀತಿಯವಿರುವುದುಂಟು–ಅಧ್ಯಾಪಕರ ವೃತ್ತಿ ಶಿಕ್ಷಣ ಸಂಸ್ಥೆಯ ಮೇಲ್ವಿಚಾರಣೆಯಲ್ಲೇ ನಡೆಯುತ್ತಿರುವ, ಅದಕ್ಕೆ ಸೇರಿದ ಪಾಠಶಾಲೆ ಮತ್ತು ಆ ಸಂಸ್ಥೆಯೊಡನೆ ಸಹಕರಿಸುವ ಇತರ ಖಾಸಗಿ ಅಥವಾ ಸರ್ಕಾರಿ ಪಾಠಶಾಲೆಗಳು. ಪ್ರಾಥಮಿಕ ಮತ್ತು ಪ್ರೌಢಶಾಲೆಯ ಅಧ್ಯಾಪಕರ ವೃತ್ತಿ ಶಿಕ್ಷಣ ಸಂಸ್ಥೆಗಳು ತಮ್ಮ ತಮ್ಮ ಅಭ್ಯಾಸ ಪಾಠಶಾಲೆಗಳನ್ನು ವ್ಯವಸ್ಥೆಗೊಳಿಸುವುದು ಅಗತ್ಯ. ಅಲ್ಲಿ ಆದರ್ಶರೀತಿಯಲ್ಲಿ ಎಲ್ಲವನ್ನೂ ಏರ್ಪಡಿಸಿಕೊಳ್ಳಲು ಸಾಧ್ಯ. ವಿದ್ಯಾರ್ಥಿಗಳ

ಅಭ್ಯಾಸಾರ್ಥ ಬೋಧನೆಯ ಜೊತೆಗೆ ಅಧ್ಯಾಪಕರು ನೂತನ ಬೋಧನ ವಿಧಾನ, ಪಠ್ಯಕ್ರಮ. ಆಡಳಿತ ವ್ಯವಸ್ಥೇ ಇತ್ಯಾದಿಗಳನ್ನು ಅಲ್ಲಿ ಪ್ರಾಯೋಗಿಕವಾಗಿ ನಡೆಸಲು ಸಾಧ್ಯವಾಗುತ್ತದೆ. ಆದರೂ ಅದರ ಜೊತೆಗೆ ಇತರ ಪಾಠಶಾಲೆಗಳನ್ನು ಅಭ್ಯಾಸ ಬೋಧನೆಗೆ ಆರಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಸದ್ಯದಲ್ಲಿ ಅಭ್ಯಾಸಾರ್ಥ ಬೋಧನೆ ಸಮರ್ಪಕವಾಗಿಲ್ಲವೆಂದೂ ಅದರ ವ್ಯಾಪ್ತಿ ತೀರ ಸಂಕುಚಿತವಾಗಿದ್ದು ಉದ್ದೇಶ ಸ್ಪಷ್ಟವಾಗಿಲ್ಲವೆಂದೂ ಅದು ನಡೆಯುತ್ತಿರುವ ಸನ್ನಿವೇಶ ತೀರ ಕೃತಕರೀತಿಯದೆಂದೂ ಟೀಕೆಗಳು ಕೇಳಿಬರುತ್ತಿವೆ. ಆದ್ದರಿಂದ ಎಲ್ಲ ದೇಶಗಳಲ್ಲೂ ಅದನ್ನು ಮೇಲೆ ಉಲ್ಲೇಖಿಸಿರುವ ರೀತಿಯಲ್ಲಿ ಉತ್ತಮ ಪಡಿಸುವ ಬಗ್ಗೆ ಯತ್ನ ನಡೆಯುತ್ತಿದೆ.

ವ್ಯಕ್ತಿತ್ವದ ಶಿಕ್ಷಣ: ಅಧ್ಯಾಪಕರು ಮಕ್ಕಳಿಗೆ ಬಹುಮುಖ ಶಿಕ್ಷಣವಿತ್ತು ಅವರ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸುವ ಕಾರ್ಯವನ್ನು ನಿರ್ವಹಿಸಬೇಕಾದರೆ ಅವರಿಗೆ ಆ ಮುಖವಾದ ಶಿಕ್ಷಣವೂ ವೃತ್ತಿಶಿಕ್ಷಣದ ಅಂಗವಾಗಿ ದೊರಕಬೇಕು. ಅಲ್ಲಿ ಅವರಿಗೆ ಸಮಾಜದಲ್ಲಿ ವಯಸ್ಕರ ಸ್ಥಾನಮಾನಗಳನ್ನೂ ಹೊಣೆಗಾರಿಕೆಯನ್ನೂ ತಳೆಯುವಂತೆ, ಜೀವನದಲ್ಲಿ ನಿರ್ದಿಷ್ಟವೂ ವಿಹಿತವೂ ಆದ ತತ್ತ್ವದೃಷ್ಟಿಯನ್ನು ರೂಪಿಸಿಕೊಳ್ಳುವಂಥ ಅವರ ವ್ಯಕ್ತಿತ್ವ ಬಹುಮುಖದ್ದೂ ಸಮರಸದ್ದೂ ಆಗಿರೂಪುಗೊಳ್ಳುವಂತೆ ಹಾಗೂ ಜೀವನದ ಕಲೆಯನ್ನು ಪರಿಚಯ ಮಾಡಿಕೊಳ್ಳುವಂಥ ಶಿಕ್ಷಣ ದೊರೆಯಬೇಕು. ಇದೆಲ್ಲ ಅತಿಯಾದ ಆದರ್ಶವಾದವೆಂದು ತೋರಿದರೂ ಅಧ್ಯಾಪಕರಿಗೆ ವಹಿಸುವ ಕೆಲಸದ ಪ್ರಾಮುಖ್ಯದ ದೃಷ್ಟಿಯಿಂದ ಅನಿವಾರ್ಯವೇ ಎನ್ನಬೇಕಾಗುತ್ತದೆ. ವೃತ್ತಿಶಿಕ್ಷಣದಂತೆ ವ್ಯಕ್ತಿತ್ವದ ಶಿಕ್ಷಣವೂ ದೊರಕುವಂತೆ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ನಿಯೋಜಿಸಿ ಕೊಳ್ಳಬೇಕಾಗುತ್ತದೆ. ಅಲ್ಲಿ ನೀಡುವ ವೃತ್ತಿಶಿಕ್ಷಣದಿಂದ ಅದಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳ ಫಲವಾಗಿ ವಿದ್ಯಾರ್ಥಿಗಳ ದೇಹ, ಮನಸ್ಸು, ಆತ್ಮ–ಇವೆಲ್ಲ ಸಂಸ್ಕರಣ ಗೊಂಡು ಅವರ ಪರಿಪೂರ್ಣವ್ಯಕ್ತಿತ್ವ ರೂಪುಗೊಳ್ಳಬೇಕು. ಎಂದರೆ, ಅಧ್ಯಾಪಕರು ಪಡೆಯುವ ಸಾಮಾನ್ಯ ಶಿಕ್ಷಣ, ಜ್ಞಾನಾರ್ಜನೆಯಂತೆ ಕ್ರಿಯಾತ್ಮಕ ಅನುಭವಗಳನ್ನೂ ಒಳಗೊಂಡಿದ್ದು ಅವರ ವ್ಯಕ್ತಿತ್ವವನ್ನು ವಿಹಿತ ರೀತಿಯಲ್ಲಿ ಪೋಷಿಸಲು ನೆರವಾಗಬೇಕು. ಅಂಥ ಅಧ್ಯಾಪಕರು ಮಕ್ಕಳಿಗೆ ಪಾಠ ಬೋಧಿಸುವುದರ ಜೊತೆಗೆ ಅವರ ವ್ಯಕ್ತಿತ್ವವನ್ನೂ ಸೂಕ್ತರೀತಿಯಲ್ಲಿ ಬೆಳೆಸಬಲ್ಲರು.

ವೃತ್ತಿಶಿಕ್ಷಣದ ತಾಂತ್ರಿಕ ಮುಖವೆನ್ನಬಹುದಾದ ಬೋಧನಕ್ರಮವನ್ನು ಅಧ್ಯಾಪಕರಿಗೆ ಪರಿಚಯ ಮಾಡಿಕೊಡುವುದರ ಜೊತೆಗೆ ವೃತ್ತಿಯ ಅಂತರಾಳದಲ್ಲಿರುವ ತತ್ತ್ವ ದೃಷ್ಟಿಯನ್ನೂ ಪರಿಚಯಮಾಡಿಕೊಡಬೇಕು; ಆಗ ವೃತ್ತಿಗೆ ಸರಿಯಾದ ಮಾನವನನ್ನೂ ಅಧ್ಯಾಪಕನನ್ನೂ ಸಿದ್ಧಪಡಿಸಿದಂತಾಗುತ್ತದೆ. ಆದ್ದರಿಂದ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳಿಗೆ ಮುಂದೆ ಅವರು ಬೋಧಿಸಬೇಕಾದ ವಿಷಯ, ವೃತ್ತಿ ವಿಷಯಗಳು ಮತ್ತು ಹಲವು ವಿಶಿಷ್ಟ (ಐಚ್ಛಿಕ) ವಿಷಯಗಳು–ಈ ಮುಖವಾದ ಶಿಕ್ಷಣವೀಯಬೇಕು.

ಸಾಮೂಹಿಕ ಜೀವನದ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸಲು ವಸತಿಗೃಹಗಳ ಜೀವನ ತುಂಬ ಪರಿಣಾಮಕಾರಿಯಾಗಬಲ್ಲುದು. ಆದರೆ ಅಲ್ಲಿನ ಮೇಲ್ವಿಚಾರಣೆಯೂ ನಿರ್ದೇಶನವೂ ದಕ್ಷತೆಯಿಂದ ಕೂಡಿದ್ದು ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಆದರ್ಶವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿರಬೇಕು.

ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಅನುಸರಿಸುವ ಕ್ರಮ: ಇತ್ತೀಚಿನವರೆಗೂ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದ ಉಪನ್ಯಾಸಗಳಿಗೆ ಮೀಸಲಾಗಿದ್ದ ಪ್ರಾಶಸ್ತ್ಯ ಈಗ ಚರ್ಚೆ, ವಿಚಾರವಿನಿಮಯ, ಸಮಾಲೋಚನೆ, ವಿಚಾರಸಂಕಿರಣ, ಕಾರ್ಯಶಿಬಿರ ಇತ್ಯಾದಿ ಕ್ರಮಗಳಿಗೆ ಹಂಚಿಹೋಗುತ್ತಿದೆ. ಅಧ್ಯಾಪಕರು ನೀಡುವ ವಿವರಣೆಯನ್ನು ಕುರಿತು ವಿದ್ಯಾರ್ಥಿಗಳು ಚರ್ಚಿಸುವುದು ಒಂದು ನೂತನ ಸಂಪ್ರದಾಯವಾಗಿ ಬೆಳೆದು ಬರುತ್ತಿದೆ. ಈ ಕ್ರಮ ಪ್ರಚಾರವಾದಂತೆ ವಿದ್ಯಾರ್ಥಿಗಳಲ್ಲಿ ವಿಮರ್ಶಿಸುವ ಮನೋಭಾವವೂ ಅನುಮಾನಗಳನ್ನು ಪರಿಹರಿಸಿಕೊಳ್ಳುವ ಅವಕಾಶವೂ ಹೆಚ್ಚುತ್ತಿವೆ; ಉಪನ್ಯಾಸಕ್ರಮ ಅಧ್ಯಾಪಕರು ಬರೆದು ತಂದಿರುವ ಟಿಪ್ಪಣಿಯನ್ನು ವಿದ್ಯಾರ್ಥಿಗಳು ಸುಮ್ಮನೆ ಬರೆದುಕೊಳ್ಳಲು ನೆರವಾದರೆ ಚರ್ಚಾಪದ್ಧತಿಯಲ್ಲಿ ವಿಷಯವನ್ನು ವಿವೇಚನೆಯಿಂದ ಅರಿತುಕೊಳ್ಳುವ ಸೌಲಭ್ಯವಿರುತ್ತದೆ. ಚರ್ಚೆಗೆ ಸೂಕ್ತ ಸನ್ನಿವೇಶವನ್ನೂ ಮಾರ್ಗದರ್ಶನವನ್ನೂ ನೀಡುವುದರ ಮೂಲಕ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಮೇಲ್ಪಂಕ್ತಿಯಾಗಿ ಪರಿಣಮಿಸುತ್ತಾರೆ; ವಿದ್ಯಾರ್ಥಿಗಳು ಆ ಕ್ರಮವನ್ನು ಪರಿಚಯಮಾಡಿಕೊಳ್ಳುವುದಲ್ಲದೆ ಆ ಮನೋಭಾವವನ್ನೂ ಬೆಳೆಸಿಕೊಳ್ಳುತ್ತಾರೆ. ಅವರು ಮುಂದೆ ಅಧ್ಯಾಪಕರಾದಾಗ ಆ ಮನೋಭಾವ ಎಳೆಯ ಮಕ್ಕಳಲ್ಲಿ ವಿಚಾರಶೀಲತೆಯನ್ನು ಬೆಳೆಸಲು ಸಹಕಾರಿಯಾಗುತ್ತದೆ. ಹಾಗೆ ನೂತನವಾಗಿ ಪ್ರಚಾರಕ್ಕೆ ಬರುತ್ತಿರುವ ಕೆಲವು ಕ್ರಮಗಳನ್ನು ಇಲ್ಲಿ ಉಲ್ಲೇಖಿಸಿದೆ.

1 ವಿಚಾರಗೋಷ್ಠಿ: ಚರ್ಚೆಯಂತೆ ವಿಚಾರಗೋಷ್ಠಿಯ (ಸೆಮಿನಾರ್) ಕ್ರಮವೂ ಪ್ರಚಾರಕ್ಕೆ ಬರುತ್ತಿದೆ. ಅದರಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ವಿಷಯವನ್ನು ಆಧಾರ ಗ್ರಂಥಗಳಿಂದ ಸಂಗ್ರಹಿಸುವ ಮತ್ತು ಚರ್ಚೆ ನಡೆಸುವ ಅಭ್ಯಾಸಗಳು ಬೆಳೆಯುತ್ತವೆ. ಇತರರ ಅಭಿಪ್ರಾಯಗಳನ್ನು ಅರಿತು, ಲಾಭಪಡೆಯುವ ಅವಕಾಶವೂ ಇರುತ್ತದೆ. ಇಡೀ ತರಗತಿ ಸಣ್ಣ ಸಣ್ಣ ತಂಡಗಳಾಗಿ ವಿಷಯದ ಬೇರೆ ಬೇರೆ ಮುಖಗಳಿಗೆ ಸಂಬಂಧಿಸಿದ ಅಂಶಗಳನ್ನು ಸಂಗ್ರಹಿಸಿ, ಸಮಗ್ರ ತರಗತಿಯ ಮುಂದೆ ಮಂಡಿಸುವಾಗ ಎಲ್ಲ ವಿದ್ಯಾರ್ಥಿಗಳಿಗೂ ಅಪಾರವಾದ ಜ್ಞಾನರಾಶಿಯ ಪರಿಚಯವಾಗುತ್ತದೆ.

2 ಉಪಬೋಧೆ (ಟ್ಯುಟೋರಿಯಲ್): ಸಣ್ಣ ಸಣ್ಣ ತಂಡಗಳಲ್ಲಿ ಕುಳಿತು ಅಧ್ಯಾಪಕರೊಡನೆ ವಿಷಯವನ್ನು ಚರ್ಚಿಸಿ ಅರ್ಥಮಾಡಿಕೊಳ್ಳುವ ಉಪಬೋಧನ ಪದ್ಧತಿ ಕೆಲವು ಕಡೆ ಪ್ರಚಾರದಲ್ಲಿದೆ. ಅಧ್ಯಾಪಕರ ಅಭಾವದಿಂದ ಇದನ್ನು ಆಚರಣೆಗೆ ತರುವುದು ಕಷ್ಟವಾಗಿದ್ದರೂ ಅದರ ಉಪಯುಕ್ತತೆ ಚೆನ್ನಾಗಿ ವ್ಯಕ್ತಪಟ್ಟಿದೆ. ಆಗ ಹಿರಿಯ ಅನುಭವಿಗಳಾದ ಅಧ್ಯಾಪಕರ ವ್ಯಕ್ತಿಪ್ರಭಾವ ವಿದ್ಯಾರ್ಥಿಗಳ ಮೇಲೆ ಬಿದ್ದು ಅವರ ನೈತಿಕ ಜೀವನ, ಸಾಮಾಜಿಕ ಪರಿಜ್ಞಾನ, ಅಧ್ಯಯನ ವಿಭಾಗ ಇವೆಲ್ಲ ಪರಿಣಾಮಗೊಳ್ಳುವುವು. ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ವಿಷಯದ ಬಗ್ಗೆ ಆಲೋಚನೆಯನ್ನು ಪ್ರಚೋದಿಸಿ ಅವರೇ ಚಟುವಟಿಕೆಯಾಗಿದ್ದು ಮುಂದುವರಿಯಲು ನೆರವಾಗುತ್ತಾರೆ. ವಿಷಯವನ್ನು ಪರಿಶೀಲಿಸಿ, ವಿಶ್ಲೇಷಿಸಿ ತೀರ್ಮಾನಕ್ಕೆ ಬರುವ ಮಾರ್ಗದಲ್ಲಿ ಕಂಡುಬರುವ ದೋಷಗಳನ್ನು ತೋರಿಸಿ ಅಧ್ಯಾಪಕರು ತಿದ್ದಿಕೊಟ್ಟು ಸರಿಯಾದ ಮಾರ್ಗದಲ್ಲಿ ಮುಂದುವರಿಯಲು ನೆರವಾಗುತ್ತಾರೆ. ಅನೇಕ ದೇಶಗಳಲ್ಲಿ ಈ ಉಪಬೋಧಪದ್ಧತಿ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳಲ್ಲಿ ಆಚರಣೆಯಲ್ಲಿದೆ. ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ತಂಡಗಳನ್ನಾಗಿ ವಿಂಗಡಿಸಿ, ಒಂದೊಂದು ತಂಡವನ್ನು ಅಲ್ಲಿನ ಒಬ್ಬೊಬ್ಬ ಅಧ್ಯಾಪಕರಿಗೆ ವಹಿಸಿರುವುದುಂಟು. ಭಾರತದಲ್ಲೂ ಈ ಪದ್ಧತಿ ಜನಪ್ರಿಯವಾಗಿ ತೋರಿಬಂದಿದ್ದರೂ ತಕ್ಕಷ್ಟು ಅಧ್ಯಾಪಕರು ಇಲ್ಲದ ಕಾರಣದಿಂದ ಕೈ ಬಿಡಲಾಗಿದೆ.

3 ಉದ್ಯಮಾಚರಣೆ: ಹಲವು ವಿಷಯಗಳನ್ನು ಉದ್ಯಮಗಳ (ಪ್ರಾಜೆಕ್ಟ್) ರೂಪದಲ್ಲಿ ಆಚರಿಸಿ ಕಲಿಸುವುದು ಕೆಲವು ಸಂಸ್ಥೆಗಳಲ್ಲಿ ಪ್ರಚಾರದಲ್ಲಿದೆ. ಮಾಡಿಕಲಿಸುವ ವಿಧಾನವನ್ನು ಉದ್ಯಮಾಚರಣೆಯ ಮೂಲಕ ಅಧ್ಯಾಪಕರಿಗೆ ಪರಿಚಯ ಮಾಡಿಕೊಡಬಹುದು. ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೆ ಈ ವಿಧಾನದ ಪರಿಚಯ ಎಷ್ಟು ಅಗತ್ಯವೆಂಬುದನ್ನು ವಿವರಿಸಬೇಕಾಗಿಲ್ಲ.

4 ನಿರ್ದೇಶಿತ ಅಧ್ಯಯನ: ಅಧ್ಯಾಪಕರೊಬ್ಬರ ನಿರ್ದೇಶನದಲ್ಲಿ ಖಾಸಗಿಯಾಗಿ ಅಧ್ಯಯನವನ್ನು ಕೈಗೊಂಡು ಪ್ರತಿ ವಿದ್ಯಾರ್ಥಿಯೂ ತನಗೊಪ್ಪಿಸಿದ ವಿಷಯದ ಬಗ್ಗೆ ಒಂದು ವರದಿಯನ್ನು ಸಲ್ಲಿಸುವ ಈ ವಿಧಾನ ಕೆಲವೆಡೆ ಪ್ರಚಾರದಲ್ಲಿದೆ. ಇದರಿಂದ ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿಗೆ ಸಂಶೋಧನೆಯ ಕ್ರಮದ ಪರಿಚಯವಾಗುತ್ತದೆ.

ಅಧ್ಯಾಪಕರ ಶಿಕ್ಷಣದ ಪೃಥಕ್ಕರಣ: 1966ರ ಕೊಠಾರಿ ಶಿಕ್ಷಣ ಆಯೋಗ ಅಧ್ಯಾಪಕರ ಶಿಕ್ಷಣ ವಿಶ್ವವಿದ್ಯಾನಿಲಯದ ಜ್ಞಾನಪ್ರವಾಹದಿಂದಲೂ ಶಾಲೆಗಳ ಸ್ಥಿತಿಗತಿ ಮತ್ತು ದಿನಚರಿ ಕಾರ್ಯಕ್ರಮಗಳಿಂದಲೂ ಪ್ರತ್ಯೇಕಿಸಿ ಹೋಗಿರುವ ಅಂಶದ ಕಡೆ ಬೆರಳಿಟ್ಟು ತೋರಿಸಿ ಅದನ್ನು ಒಂದು ದೊಡ್ಡ ನ್ಯೂನತೆ ಎಂದು ಕರೆದಿದೆ. ಸದ್ಯದ ಪ್ರಾಥಮಿಕ ಅಧ್ಯಾಪಕರ ಶಿಕ್ಷಣ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿಯೇ ಇಲ್ಲ. ಪ್ರೌಢಶಾಲೆಯ ಶಿಕ್ಷಕರ ಶಿಕ್ಷಣ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದರೂ ಅಲ್ಲಿನ ಇತರ ಜ್ಞಾನ ಶಾಖೆಗಳಿಂದ ದೂರವುಳಿದುಕೊಂಡಿದೆ; ಜೊತೆಗೆ ವಿಶ್ವವಿದ್ಯಾನಿಲಯವೂ ಅದನ್ನು ಇತರ ಜ್ಞಾನಶಾಖೆಗಳಷ್ಟು ಗೌರವದಿಂದ ಕಾಣುತ್ತಿಲ್ಲ ಆದ್ದರಿಂದ ತನ್ನದೇ ಆದ ಒಂದು ಆವರಣದಲ್ಲಿ ಅಧ್ಯಾಪಕರ ಶಿಕ್ಷಣ ಕೂಪಕೂರ್ಮವಾಗುಳಿದುಕೊಂಡಿದೆ. ಸಾಲದ್ದಕ್ಕೆ, ಶಾಲೆಗಳಲ್ಲಿ ಈಚೆಗೆ ಆಗುತ್ತಿರುವ ಪರಿವರ್ತನೆಗಳ ಕಡೆಗೆ ವೃತ್ತಿಶಿಕ್ಷಣ ಶಾಲೆಗಳು ಅಷ್ಟಾಗಿ ಗಮನಕೊಡದೆ ತಮ್ಮಷ್ಟಕ್ಕೆ ತಮ್ಮ ಮಾಮೂಲು ಕಾರ್ಯಮಾಡುತ್ತ ಹೋಗುತ್ತಿವೆ; ಅಲ್ಲದೆ, ಬೇರೆ ಬೇರೆ ಮಟ್ಟದ ಅಧ್ಯಾಪಕರ ವೃತ್ತಿ ಶಿಕ್ಷಣ ಸಂಸ್ಥೆಗಳು ಒಂದಕ್ಕೊಂದಕ್ಕೆ ಸಂಪರ್ಕವಿಲ್ಲದೆ ಪ್ರತ್ಯೇಕವಾಗಿ ಕೆಲಸಮಾಡುತ್ತಿವೆ. ಈ ತ್ರಿಮುಖ ಪೃಥಕ್ಕರಣವನ್ನು ನಿವಾರಿಸಿದ ಹೊರತು ನಮ್ಮ ಶಿಕ್ಷಣಕ್ಷೇತ್ರಕ್ಕೆ ಸೂಕ್ತರೀತಿಯ ಅಧ್ಯಾಪಕರು ದೊರೆಯುವುದು ದುರ್ಲಭವೆಂದು ಮೇಲಿನ ಆಯೋಗ ಅಭಿಪ್ರಾಯಪಟ್ಟಿದೆ. ಅದು ಸಾಧ್ಯವಾಗಬೇಕಾದರೆ ಶಿಕ್ಷಣಶಾಸ್ತ್ರ ಬರೀ ವೃತ್ತಿ ಮಾತ್ರವಲ್ಲ, ಇತರ ಜ್ಞಾನಶಾಖೆಗಳಂತೆ ಅದೂ ಒಂದು ಸಾಂಸ್ಕೃತಿಕ ಜ್ಞಾನಶಾಖೆ ಎಂಬುದು ಸ್ಪಷ್ಟಪಡಬೇಕು, ಶಿಕ್ಷಣಶಾಸ್ತ್ರ ಸಮಾಜವಿಜ್ಞಾನದ ಒಂದು ಶಾಖೆಯೆಂಬುದನ್ನೂ ಅದು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಇನ್ನಿತರ ಕ್ಷೇತ್ರಗಳ ಮೇಲೆ ಬೀರುವ ಪ್ರಭಾವವನ್ನೂ ಪರಿಗಣಿಸಿ ಅದನ್ನು ಬಿ.ಎ., ಬಿ.ಎಸ್‍ಸಿ. ಇತ್ಯಾದಿ ತರಗತಿಗಳಲ್ಲಿ ಸಾಂಸ್ಕೃತಿಕ ಅಧ್ಯಯನದ ವಿಷಯವನ್ನಾಗಿ ಗೊತ್ತುಮಾಡಬಹುದು; ಅದನ್ನು ಸಾಂಸ್ಕೃತಿಕ ವಿಷಯವನ್ನಾಗಿ ಅಧ್ಯಯನ ಮಾಡಲು ಎಂ.ಎ.ತರಗತಿಯಲ್ಲೂ ಅವಕಾಶ ಕಲ್ಪಿಸಬಹುದು.

ಶಾಲೆಗಳೊಡನೆ ಸಂಪರ್ಕವಿಲ್ಲದೆ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳು ಪ್ರತ್ಯೇಕವಾಗುಳಿದಿರುವುದನ್ನೂ ನಿವಾರಿಸಬೇಕು. ಇದಕ್ಕಾಗಿ ಪ್ರತಿ ವೃತ್ತಿಶಿಕ್ಷಣಸಂಸ್ಥೆಯೂ ತನ್ನ ಸುತ್ತಣ ಕೆಲವು ಶಾಲೆಗಳ ಕಾರ್ಯಕ್ರಮಗಳನ್ನು ರೂಪಿಸಲು ನೆರವು ನೀಡಬೇಕು. ಅದರಿಂದ ಅವೆರಡು ಸಂಸ್ಥೆಗಳಿಗೂ ಒಂದಕ್ಕೊಂದರ ಸ್ವರೂಪ, ಸ್ಥಿತಿಗತಿಗಳು ಕಾರ್ಯಕ್ರಮಗಳು ಮತ್ತು ಆವಶ್ಯಕತೆಗಳು ಪರಿಚಯವಾಗಿ ಸಂಪರ್ಕ ಹೆಚ್ಚುತ್ತದೆ. ಅದರಿಂದ ಅವೆರಡೂ ತಮ್ಮ ತಮ್ಮ ಕಾರ್ಯಗಳು ಹೆಚ್ಚು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವುದು. ಈ ಮುಂಚಿನಲ್ಲಿ ಎನ್.ಸಿ.ಇ.ಆರ್.ಟಿ.ಯ ಪ್ರೌಢಶಾಲೆಗಳ ವಿಸ್ತರಣಕಾರ್ಯಕ್ರಮಗಳ ವಿಭಾಗವೂ (ಡೆಪ್ಸಿ) ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಬೇಸಿಕ್ ಎಜುಕೇಷನ್ ಸಂಸ್ಥೆಯೂ ನೂತನ ಆಸಕ್ತಿಯನ್ನು ವ್ಯಕ್ತಪಡಿಸುತ್ತಿವೆ. ಅವೆರಡೂ ತಮ್ಮ ಕಾರ್ಯಗಳನ್ನು ದೇಶಾದ್ಯಂತ ವಿಸ್ತರಿಸುವುದರಿಂದ ಮೇಲಿನ ಪ್ರತ್ಯೇಕತೆ ಕಡಿಮೆಯಾಗಬಲ್ಲದು.

ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳು ತಮ್ಮ ಹಳೆಯ ವಿದ್ಯಾರ್ಥಿಗಳೊಡನೆ ಸಂಪರ್ಕವಿಟ್ಟುಕೊಂಡು ಅವರಿಂದ ಬರುವ ಸಮಸ್ಯೆಗಳನ್ನು ಪರಿಶೀಲಿಸಿ ಪರಿಹಾರಗಳನ್ನು ನೀಡುವುದರ ಮೂಲಕವೂ ಆ ಪ್ರತ್ಯೇಕತೆಯನ್ನು ಕಡಿಮೆಮಾಡಿಕೊಳ್ಳಬಹುದು. ಪ್ರತಿಸಂಸ್ಥೆಯೂ ತನ್ನ

ಹಳೆಯ ವಿದ್ಯಾರ್ಥಿಗಳ ಸಂಘವನ್ನೇರ್ಪಡಿಸಿಕೊಂಡು, ಆಗಾಗ ಅವರ ಸಭೆ ನಡೆಸಿ, ಅವರಿಗೆ ಕಾಲೇಜಿನಲ್ಲಿ ಆಸಕ್ತಿ ಮೂಡುವಂತೆ ಮಾಡಬೇಕು. ಅದಕ್ಕಾಗಿ ಒಂದು ನಿಯತಕಾಲಿಕ ಪತ್ರಿಕೆಯನ್ನೂ ಹೊರಡಿಸಬಹುದು. ಅದರಿಂದ ತಮ್ಮ ವಿದ್ಯಾರ್ಥಿಗಳ ಕಾರ್ಯದ ಬಗ್ಗೆ ಅನುಪರೀಕ್ಷಣ (ಫಾಲೋ ಅಪ್) ಕಾರ್ಯವನ್ನೂ ನಡೆಸಿದಂತಾಗಿ ಆ ಮೂಲಕ ತಮ್ಮ ಲೋಪದೋಷಗಳನ್ನು ತಿದ್ದಿಕೊಳ್ಳಲೂ ನೆರವಾಗುತ್ತದೆ.

ಅಧ್ಯಾಪಕರ ವೃತ್ತಿಶಿಕ್ಷಣಕ್ಕೆ ಇರತಕ್ಕ ಬೇರೆಬೇರೆ ಅಂತಸ್ತಿನ ಸಂಸ್ಥೆಗಳಲ್ಲೂ ಪ್ರತ್ಯೇಕತೆ ಕಂಡುಬರುತ್ತಿದೆ; ಬೇರೆಬೇರೆ ವಿಶಿಷ್ಟ ವಿಷಯಗಳ ಅಧ್ಯಾಪಕರ ಶಿಕ್ಷಣ ಬೇರೆಬೇರೆ ಸಂಸ್ಥೆಗಳ ಪಾಲಿಗಿದ್ದು ಅದೂ ಒಂದು ರೀತಿಯ ಪ್ರತ್ಯೇಕತೆಗೆ ಅವಕಾಶ ಕಲ್ಪಿಸಿದೆ. ಇದನ್ನು ನಿವಾರಿಸಲು, ಯಾವ ಶಾಲೆಯಲ್ಲೇ ಕೆಲಸಮಾಡಲಿ ಅಧ್ಯಾಪಕರೆಲ್ಲ ಒಂದೇ ವರ್ಗದವರೆಂದೂ ಅವರನ್ನು ಸಿದ್ಧಪಡಿಸುವ ವೃತ್ತಿಶಿಕ್ಷಣ ಸಂಸ್ಥೆಗಳು ಸಮಾನ ಗೌರವಕ್ಕೆ ಅರ್ಹವೆಂದೂ ಪರಿಗಣಿಸಬೇಕು. ಅಂತಿಮವಾಗಿ, ಎಲ್ಲ ಮಟ್ಟದ ಶಾಲೆಗಳ ಮತ್ತು ಎಲ್ಲ ವಿಶಿಷ್ಟ ವಿಷಯಗಳ ಅಧ್ಯಾಪಕರ ವೃತ್ತಿಶಿಕ್ಷಣವನ್ನೂ ನಡೆಸುವಂಥ ವ್ಯಾಪಕ ರೀತಿಯ ಸಂಸ್ಥೆಗಳನ್ನು (ಕಾಂಪ್ರಿಹೆನ್ಸಿವ್ ಕಾಲೇಜ್) ಸ್ಥಾಪಿಸುವ ಯತ್ನವೂ ನಡೆಯಬೇಕು.

ಪ್ರತಿಯೊಂದು ರಾಜ್ಯದಲ್ಲೂ ಅಧ್ಯಾಪಕರ ಶಿಕ್ಷಣದ ರಾಜ್ಯ ಸಮಿತಿ (ಸ್ಟೇಟ್ ಬೋರ್ಡ್ ಆಫ್ ಟೀಚರ್ ಎಜುಕೇಷನ್) ಸಂಸ್ಥೆಯನ್ನು ರಚಿಸಿ ಇಡೀ ರಾಜ್ಯದಲ್ಲಿ ಎಲ್ಲ ಮಟ್ಟದ ಮತ್ತು ಎಲ್ಲ ವಿಧದ ಅಧ್ಯಾಪಕರ ಶಿಕ್ಷಣದ ನಿರ್ದೇಶನ ಕಾರ್ಯವನ್ನೂ ಅದಕ್ಕೆ ವಹಿಸಬೇಕು. ಅದರಲ್ಲಿ ವಿಶ್ವವಿದ್ಯಾನಿಲಯ, ಶಿಕ್ಷಣ ಶಾಖೆ, ರಾಷ್ಟ್ರೀಯ ಅಧ್ಯಾಪಕರ ಶಿಕ್ಷಣದ ಸಂಘ – ಇವುಗಳ ಪ್ರತಿನಿಧಿಗಳೂ ಶಿಕ್ಷಣಶಾಸ್ತ್ರದ ಕಾಲೇಜುಗಳ ಪ್ರಿನ್ಸಿಪಾಲರೂ ಸದಸ್ಯರಾಗಿರಬೇಕು. ಅದು ತನ್ನ ನೇತೃತ್ವದಲ್ಲಿ ಅಧ್ಯಾಪಕರ ಶಿಕ್ಷಣದಮಟ್ಟ, ಪಠ್ಯಕ್ರಮ, ಕಾರ್ಯಕ್ರಮ, ಪಠ್ಯಪುಸ್ತಕಗಳು, ಬೋಧನಕ್ರಮ, ಪಾಠೋಪಕರಣಗಳು ಇತ್ಯಾದಿಗಳನ್ನು ಉತ್ತಮಪಡಿಸುವಿಕೆ, ಸಂಸ್ಥೆಗಳ ಅಂಗೀಕರಣ ಸೂತ್ರಗಳನ್ನು ರೂಪಿಸಿ ಕಾಲಕಾಲಕ್ಕೆ ಅವುಗಳ ತನಿಖೆ ನಡೆಸುವುದು, ಬೇಕಾದಾಗ ಆ ಸಂಸ್ಥೆಗಳಿಗೆ ತಾಂತ್ರಿಕ ಸಹಾಯನೀಡುವುದು, ಶಿಕ್ಷಣ ಮುಗಿಸಿದ ಅಭ್ಯರ್ಥಿಗಳು ಶಾಲೆಯಲ್ಲಿ ಬೋಧಿಸುವ ಅರ್ಹತೆಯನ್ನು ಸಾಧಿಸಿರುವ ಬಗ್ಗೆ ತಕ್ಕ ಎಚ್ಚರಿಕೆ ವಹಿಸುವುದು (ಪರೀಕ್ಷೆಯ ಮೂಲಕ), ಅಧ್ಯಾಪಕರ ಶಿಕ್ಷಣದ ದೀರ್ಘಾವಧಿ ಯೋಜನೆಗಳನ್ನು ರೂಪಿಸುವುದು– ಇತ್ಯಾದಿ ಕಾರ್ಯಗಳ ಮೂಲಕ ವಿವಿಧ ಮಟ್ಟದ ಅಧ್ಯಾಪಕರ ಶಿಕ್ಷಣ ಸಂಸ್ಥೆಗಳಲ್ಲೂ ಸಂಪರ್ಕ ಮತ್ತು ತಿಳಿವಳಿಕೆಗಳನ್ನು ಹೆಚ್ಚಿಸಬಹುದು.

ಉನ್ನತ ಶಿಕ್ಷಣ ಸಂಸ್ಥೆಯ ಅಧ್ಯಾಪಕರ ಶಿಕ್ಷಣ: ಕಾಲೇಜಿನಂಥ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕ ಅಧ್ಯಾಪಕರ ಶಿಕ್ಷಣ ಪೂರ್ಣವಾಗಿ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದು. ಪ್ರತಿಭಾವಂತರಿಗೆ ವಿಷಯ ಪಾಂಡಿತ್ಯವಿದ್ದರೆ ಸಾಕು, ಅವರು ಚೆನ್ನಾಗಿ ಬೋಧಿಸಬಲ್ಲರೇನೊ. ಆದರೆ ಈ ಮಾತು ಬಹುಮಂದಿ ಸಾಮಾನ್ಯ ಅಧ್ಯಾಪಕರಿಗೆ ಅನ್ವಯಿಸದಿರಬಹುದು. ತಮ್ಮ ವೃತ್ತಿಯ ಬಗ್ಗೆ ಅಷ್ಟಿಷ್ಟು ಶಿಕ್ಷಣ ದೊರೆತರೆ ತಮ್ಮ ಕರ್ತವ್ಯವನ್ನು ಅವರು ಹೆಚ್ಚು ದಕ್ಷತೆಯಿಂದ ನಿರ್ವಹಿಸಬಲ್ಲರು. ಈಚೆಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಂಡುಬರುವ ಸ್ಥಿತಿಗತಿಗಳು ಈ ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತವೆ. ಆದ್ದರಿಂದಲೇ ಕಾಲೇಜಿಗೆ ಅಧ್ಯಾಪಕರಾಗಿ ಬರುವವರಿಗೆ ಆರಂಭದಲ್ಲಿ ಒಂದು ರೀತಿಯ ವೃತ್ತಿಶಿಕ್ಷಣ ಅಗತ್ಯವೆಂಬ ಭಾವನೆ ಎಲ್ಲ ಕಡೆಯೂ ಬೆಳೆಯುತ್ತಿದೆ. ಈ ಮುಖವಾಗಿ ಆಗಲೇ ನಿರ್ದಿಷ್ಟ ಯತ್ನ ನಡೆಯುತ್ತಿದೆ. ಭಾರತದಲ್ಲಿ ವಿಶ್ವವಿದ್ಯಾನಿಲಯದ ಧನ ಆಯೋಗ ಆಸಕ್ತಿ ವಹಿಸಿ ಕಾಲೇಜಿನ ಕಿರಿಯ ಅಧ್ಯಾಪಕರಾಗಿ ಹಲವು ವಾರಗಳ ಕಾಲಾವಧಿಯ ಬೇಸಿಗೆಯ ವೃತ್ತಿಶಿಕ್ಷಣದ ಕಾರ್ಯಕ್ರಮಗಳನ್ನು ದೇಶಾದ್ಯಂತ ಏರ್ಪಡಿಸುತ್ತಿದೆ. ಈ ಕಾರ್ಯಕ್ಕೆ ಪ್ರತ್ಯೇಕ ಸಂಸ್ಥೆಗಳ ಅಗತ್ಯ ಸದ್ಯಕ್ಕೆ ಇಲ್ಲದಿದ್ದರೂ ಮೇಲೆ ಉಲ್ಲೇಖಿಸಿರುವಂಥ ಕಾರ್ಯಕ್ರಮಗಳನ್ನು ಏರ್ಪಡಿಸುವುದರಿಂದ ಉನ್ನತಶಿಕ್ಷಣ ಸಂಸ್ಥೆಗಳ ಶಿಕ್ಷಣದ ಮಟ್ಟ ಉತ್ತಮಗೊಳ್ಳುವುದೆಂದು ಭಾವಿಸಬಹುದು.

ವೃತ್ತಿಶಿಕ್ಷಣವಿಲ್ಲದ ಅಧ್ಯಾಪಕರ ಶಿಕ್ಷಣ: ವೃತ್ತಿಶಿಕ್ಷಣಪಡೆದವರನ್ನೇ ಅಧ್ಯಾಪಕರನ್ನಾಗಿ ಸೇರಿಸಿಕೊಳ್ಳುವ ಯತ್ನ ನಡೆಯುತ್ತಿದ್ದರೂ ಅನಿವಾರ್ಯ ಕಾರಣಗಳಿಗಾಗಿ ವೃತ್ತಿಶಿಕ್ಷಣವಿಲ್ಲದ ಅನೇಕರನ್ನು ಈಗಾಗಲೇ ವೃತ್ತಿಗೆ ಸೇರಿಸಿಕೊಂಡಿದೆ. ಅವರಲ್ಲಿ ಶೇ. 90 ಮಂದಿ 40 ವರ್ಷ ವಯಸ್ಸಿನೊಳಗೆ ಇರತಕ್ಕವರು: ಮಿಕ್ಕ ಶೇ. 10 ಮಂದಿ ಮೇಲ್ಪಟ್ಟ ವಯಸ್ಸಿನವರು. 40 ವರ್ಷ ವಯಸ್ಸಿಗೆ ಮೀರದವರಿಗೆ ವೃತ್ತಿ ಶಿಕ್ಷಣ ವ್ಯವಸ್ಥೆ ಮಾಡುವುದು ಅಗತ್ಯ. ಎಲ್ಲ ರಾಜ್ಯಗಳಲ್ಲೂ ಅವರಿಗೆಲ್ಲ ಸರ್ಕಾರದ ವೆಚ್ಚದಲ್ಲೇ ವೃತ್ತಿಶಿಕ್ಷಣ ನೀಡುವ ತತ್ತ್ವವನ್ನು ಒಪ್ಪಿದ್ದರೂ ಅಂಥವರು ಪತ್ರ ಮುಖೇನ ಶಿಕ್ಷಣ, ಸಂಜೆಯ ತರಗತಿ, ಬೇಸಿಗೆ ತರಗತಿ ಇತ್ಯಾದಿಯಾದ ಇತರ ಸೌಲಭ್ಯಗಳನ್ನು ಬಳಸಿಕೊಂಡು ತಮ್ಮ ವೃತ್ತಿಶಿಕ್ಷಣದ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸುವುದು ಅಗತ್ಯ. ಕೆಲವು ರಾಜ್ಯಗಳಲ್ಲಿ ಈಗಾಗಲೇ ಪ್ರಚಾರದಲ್ಲಿರುವಂತೆ ತಮ್ಮ ವೆಚ್ಚದಲ್ಲೇ ವೃತ್ತಿಶಿಕ್ಷಣ ಪಡೆಯುವ ಅಧ್ಯಾಪಕರಿಗೆ ವಿಶೇಷ ಬಡ್ತಿಗಳನ್ನು ನೀಡಿಯೂ ಪ್ರೋತ್ಸಾಹಿಸಬಹುದು.

ಪರೀಕ್ಷಾ ವ್ಯವಸ್ಥೆ: ಪ್ರಾಥಮಿಕ ಮತ್ತು ಪ್ರೌಢಶಾಲೆಯ ಅಧ್ಯಾಪಕರ ವೃತ್ತಿ ಶಿಕ್ಷಣದ ಅವಧಿ ಮುಗಿದನಂತರ ತಾತ್ತ್ವಿಕ ಮತ್ತು ಪ್ರಾಯೋಗಿಕ ವಿಭಾಗಗಳ ಪರೀಕ್ಷೆ ನಡೆಯುತ್ತಿದೆ. ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಯೋಗಿಕ ವಿಭಾಗದ ಪರೀಕ್ಷೆಯನ್ನು ನಡೆಸುವುದಿಲ್ಲ. ಅದಕ್ಕೆ ಬದಲು ಸತತವಾಗಿ ನಡೆಸಿದ ಆಂತರಿಕ ಮೌಲ್ಯ ನಿಷ್ಕರ್ಷೆಯಿಂದ ನಿರ್ಧರಿಸಿದ ಅಂಕಗಳನ್ನು ಆ ಬಗ್ಗೆ ಪರಿಗಣಿಸುವುದುಂಟು. ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೆ ಬೋಧನ ವಿಷಯದಲ್ಲೂ ಪರೀಕ್ಷೆ ನಡೆಯುತ್ತದೆ. ಈಚೆಗೆ ಕೆಲವುಕಡೆ ಪ್ರೌಢಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣದಲ್ಲೂ ವೃತ್ತಿವಿಷಯ, ಪ್ರಾಯೋಗಿಕ ವಿಭಾಗ–ಈ ಮೂರು ಕ್ಷೇತ್ರಗಳಲ್ಲೂ ಪರೀಕ್ಷೆ ನಡೆಯಬೇಕಾಗುತ್ತದೆ.

ಅಧ್ಯಾಪಕರ ಆವಶ್ಯಕತೆ ಮತ್ತು ಪೂರೈಕೆ: ಸದ್ಯದಲ್ಲಿ ಪ್ರತಿವರ್ಷವೂ ವಿವಿಧ ಕಾರಣಗಳಿಂದ ತೆರವಾದ ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಸ್ಥಾನವನ್ನು ತುಂಬಲು ಹೊಸ ಅಧ್ಯಾಪಕರು ಬೇಕಾಗುತ್ತಾರೆ. ಪ್ರೌಢಶಾಲೆಗಳಲ್ಲಿ ತೆರವಾದ ಸ್ಥಾನವನ್ನು ಭರ್ತಿಮಾಡಲು 35,000 ಅಧ್ಯಾಪಕರಾದರೂ ಬೇಕು. ಜೊತೆಗೆ ಅವೆರಡೂ ಕ್ಷೇತ್ರಗಳು ನಿರಂತರವೂ ವಿಸ್ತರಿಸುತ್ತಿರುವುದರಿಂದ ಅವಕ್ಕೂ ಅಧ್ಯಾಪಕರು ಬೇಕಾಗುತ್ತದೆ. ಆದರೆ ಸದ್ಯದಲ್ಲಿ ದೇಶದಲ್ಲಿರುವ ವೃತ್ತಿಶಿಕ್ಷಣಸಂಸ್ಥೆಗಳು ಅಗತ್ಯವಿರುವುದರಲ್ಲಿ ಕೇವಲ ಅರ್ಧಸಂಖ್ಯೆಯ ಅಧ್ಯಾಪಕರನ್ನು ಮಾತ್ರ ಒದಗಿಸುತ್ತಿದೆ. ಎಂದರೆ ಸದ್ಯದ ಅಗತ್ಯವನ್ನು ಪೂರೈಸಲು ಪ್ರಾಥಮಿಕ ಮತ್ತು ಪ್ರೌಢಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳ ಸಂಖ್ಯೆಯನ್ನು ಇಮ್ಮಡಿಗೊಳಿಸಬೇಕು. ಇದು ಆರ್ಥಿಕದೃಷ್ಟಿಯಿಂದ ಅಧಿಕ ಹೊರೆಯಾಗುತ್ತದೆ; ಅಗತ್ಯವಿರುವ ಕಡೆ ಹೆಚ್ಚಿಗೆ ವೃತ್ತಿಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರೂ ಇತರ ಸೌಲಭ್ಯಗಳನ್ನೂ ಆ ಮುಖವಾಗಿ ರೂಢಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಈಗ ಇರತಕ್ಕ ಸಂಸ್ಥೆಗಳಿಗೆ ಹೆಚ್ಚಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಂತೆ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸಬೇಕು; ಸಂಜೆಯ ತರಗತಿಯನ್ನೂ ಆರಂಭಿಸಬೇಕು; ಪತ್ರಮುಖೇನ ಶಿಕ್ಷಣದ ಸೌಲಭ್ಯವನ್ನೂ ಬಳಸಿಕೊಳ್ಳಬೇಕು, ಜೊತೆಗೆ ಬೇಸಿಗೆಯ ರಜಾಕಾಲದಲ್ಲಿ ವಿಶೇಷ ತರಗತಿಯನ್ನೂ ನಡೆಸಬಹುದು.

ವಿಶಿಷ್ಟ ವಿಷಯಗಳ ಅಧ್ಯಾಪಕರ ಕೊರತೆ; ಪ್ರಾಥಮಿಕ ಶಾಲೆಗಳಿಗೆ ಅಧ್ಯಾಪಕರ ಕೊರತೆಯಿದ್ದು ಪ್ರೌಢಶಾಲೆಗಳಲ್ಲಿ ವಿಶಿಷ್ಟ ವಿಷಯಗಳ ಅಧ್ಯಾಪಕರ ಕೊರತೆ ತೀವ್ರವಾಗಿ ಕಂಡುಬರುತ್ತಿದೆ; ಹಾಗೂ ವಿಜ್ಞಾನ, ಗಣಿತ, ಇಂಗ್ಲಿಷ್, ಅರ್ಥಶಾಸ್ತ್ರಗಳಲ್ಲಿ ಪಾಠ ಮಾಡತಕ್ಕ ಅಧ್ಯಾಪಕರ ಕೊರತೆ ತೀವ್ರವಾಗಿದೆ. ವೃತ್ತಿಶಿಕ್ಷಣಕ್ಕೆ ಬರತಕ್ಕ ಅಭ್ಯರ್ಥಿಗಳಲ್ಲಿ ಮುಕ್ಕಾಲು ಭಾಗಕ್ಕಿಂತ ಹೆಚ್ಚು ಮಂದಿ ಕಲಾಶಾಸ್ತ್ರದ ಪದವೀಧರರು. ತೆರವಾಗುವ ಮತ್ತು ಇತರ ಸ್ಥಾನಗಳನ್ನು ಭರ್ತಿಮಾಡಲು ಬೇಕಾದ ಅಧ್ಯಾಪಕರಲ್ಲಿ ಬಹುಮಂದಿ ಮೇಲಿನ ವಿಷಯಗಳನ್ನು ಬೋಧಿಸತಕ್ಕ ಅಧ್ಯಾಪಕರಾಗಿರುತ್ತಾರೆ. ಈ ಕೊರತೆಯನ್ನು ತುಂಬಿಕೊಳ್ಳಲು ಮೇಲ್ಕಂಡ ಕೊರತೆಯಿರುವ ವಿಷಯಗಳಲ್ಲಿ ಪದವಿ ಪಡೆದವರನ್ನು ವೃತ್ತಿಶಿಕ್ಷಣಶಾಲೆಗೆ ಹೆಚ್ಚು ಹೆಚ್ಚಾಗಿ ಸೇರಿಸಿಕೊಳ್ಳಬೇಕು; ಜೊತೆಗೆ ಆ ವಿಷಯಗಳ ಅಧ್ಯಾಪಕರನ್ನು ಸಿದ್ಧಪಡಿಸುವುದಕ್ಕಾಗಿಯೆ ಪ್ರತಿರಾಜ್ಯದಲ್ಲೂ ಒಂದೆರಡು ವೃತ್ತಿಶಿಕ್ಷಣಸಂಸ್ಥೆಗಳನ್ನು ಮೀಸಲಿಡಬೇಕು. ಪ್ರಾದೇಶಿಕ ಶಿಕ್ಷಣ ಕಾಲೇಜುಗಳಲ್ಲಿ 4 ವರ್ಷದ ಪದವಿ ಪಠ್ಯಕ್ರಮವನ್ನು ಮೇಲಿನ ವಿಷಯಗಳಲ್ಲಿ ಮುಂದುವರಿಸಿಕೊಂಡು ಬರಬೇಕು.

ಸ್ನಾತಕೋತ್ತರ ಶಿಕ್ಷಣ: ವಿಸ್ತರಿಸುತ್ತಿರುವ ಶಿಕ್ಷಣದ ಆಡಳಿತ ಕ್ಷೇತ್ರಕ್ಕೂ ಸಂಖ್ಯೆಯಲ್ಲಿ 8 – 10 ಪಟ್ಟು ಹೆಚ್ಚಿರುವ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳಿಗೂ ತಜ್ಞರನ್ನೂ ಅಧ್ಯಾಪಕರನ್ನೂ ಒದಗಿಸುವ ಕಾರ್ಯ ಈಚೆಗೆ ರಾಷ್ಟ್ರದ ಗಮನವನ್ನು ಸೆಳೆದಿದೆ.

ಪ್ರೌಢಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳ ಅಧ್ಯಾಪಕರಲ್ಲಿ ಸುಮಾರು ಅರ್ಧದಷ್ಟು ಮಂದಿ ಕೇವಲ ಶಿಕ್ಷಣದ ಪ್ರಥಮ (ಬಿ.ಎಡ್.ಬಿ.ಟಿ. ಅಥವಾ ಎಲ್.ಟಿ) ಪದವಿಯನ್ನು ಮಾತ್ರ ಪಡೆದಿರುತ್ತಾರೆ. ಪ್ರಾಥಮಿಕ ಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳ ಅಧ್ಯಾಪಕರಲ್ಲಿ ಸಾಮಾನ್ಯವಾಗಿ ಬಿ.ಎಡ್. ಪದವಿ ಪಡೆದಿದ್ದರೂ ಪ್ರಾಥಮಿಕ ಶಿಕ್ಷಕರ ತರಬೇತಿಯಲ್ಲಿ ವಿಶಿಷ್ಟ ಶಿಕ್ಷಣ ಪಡೆದವರು ಅಪೂರ್ವ, ಶಿಕ್ಷಣಕ್ಷೇತ್ರದಲ್ಲಿ ನೂತನ ರೀತಿಯ ವಿವಿಧ ಕಾರ್ಯಾಚರಣೆಗಳು ಆರಂಭವಾಗಿವೆ. ಅವನ್ನು ನಿರ್ವಹಿಸಲು ಶಿಕ್ಷಣಾಧಿಕಾರಿಗಳೂ ಅಧ್ಯಾಪಕರೂ ಸಿದ್ಧತೆ ಪಡೆದಿರಬೇಕು. ಆದ್ದರಿಂದ ಅಧ್ಯಾಪಕರ ಶಿಕ್ಷಕರೂ ಇತರ ಶಿಕ್ಷಣಾಧಿಕಾರಿಗಳೂ ಬುದ್ಧಿಪರೀಕ್ಷಣ ಮತ್ತು ಮಾಪನ, ಬೆಳವಣಿಗೆಯ ಮನೋವಿಜ್ಞಾನ, ಶಿಕ್ಷಣತತ್ತ್ವಶಾಸ್ತ್ರ, ಶೈಕ್ಷಣಿಕ ಸಂಶೋಧನೆ, ಶೈಕ್ಷಣಿಕ ಸಮಾಜ ವಿಜ್ಞಾನ, ಶಿಕ್ಷಣದ ಆಡಳಿತ ಇತ್ಯಾದಿ ಕ್ಷೇತ್ರಗಳಲ್ಲಿ ವಿಶೇಷ ಶಿಕ್ಷಣ ಪಡೆದಿರುವುದು ಅಗತ್ಯ.

ಆರ್ಥಿಕ ಬೆಂಬಲ: ಶಿಕ್ಷಣಕ್ಕೊದಗಿಸುವ ಹಣದಲ್ಲಿ 1946–47ರಲ್ಲಿ ಶೇ. 4.9ನ್ನು ಅಧ್ಯಾಪಕರ ಶಿಕ್ಷಣಕ್ಕೆಂದು ಮೀಸಲಿಡಲಾಗಿತ್ತು: ಸ್ವಾತಂತ್ರ್ಯ ಬಂದು ಶಿಕ್ಷಣ ವಿಸ್ತರಿಸಿದ ಮೇಲೆ 1958–59ರ ವೇಳೆಗೆ ಅದು ಶೇ.ಸು. 4ಗೆ ಇಳಿಯಿತು. ಉತ್ತಮ ಅಧ್ಯಾಪಕರು, ಇತರ ಸಿಬ್ಬಂದಿ ಶಿಕ್ಷಣವನ್ನು ಉತ್ತಮಪಡಿಸಲು ಅಗತ್ಯವೆನಿಸುವ ಕಟ್ಟಡ, ಉಪಕರಣಾದಿಗಳು ವರ್ಗ–ಇವೆಲ್ಲ ಅಗತ್ಯ. ಅದಕ್ಕೆ ತಕ್ಕಷ್ಟು ಹಣ ಬೇಕು. ಸದ್ಯದ ಪರಿಸ್ಥಿತಿಯಲ್ಲಿ ಶಿಕ್ಷಣಕ್ಕಾಗಿ ಅಗಾಧಪ್ರಮಾಣದಲ್ಲಿ ಧನವಿನಿಯೋಗವಾಗುತ್ತಿದ್ದರೂ ಅಧ್ಯಾಪಕರ ಶಿಕ್ಷಣದ ಬಗ್ಗೆ ತಕ್ಕಷ್ಟು ಹಣ ಒದಗಿಸದಿರುವುದರಿಂದ ಅಧ್ಯಾಪಕರ ಪೂರೈಕೆಯಲ್ಲೂ ಅವರ ಕಾರ್ಯದ ದಕ್ಷತೆಯಲ್ಲೂ ಕೊರತೆ ತಲೆದೋರಿದೆ.

ಅಧ್ಯಾಪಕರ ಶಿಕ್ಷಣಕ್ಕೆಂದು ಕೇಂದ್ರ ಸರ್ಕಾರದ ಆದೇಶದಂತೆ ಎನ್.ಸಿ.ಇ.ಆರ್.ಟಿ. ಈಗಾಗಲೆ ಆರಂಭಿಸಿರುವ ಪ್ರಾದೇಶಿಕ ಕಾಲೇಜುಗಳ ಜೊತೆಗೆ ಪ್ರತಿರಾಜ್ಯದಲ್ಲೂ ಒಂದೊಂದು ವ್ಯಾಪಕರೀತಿಯ (ಕಾಂಪ್ರಿಹೆನ್ಸಿವ್) ಕಾಲೇಜುಗಳನ್ನು ಆರಂಭಿಸಿ ನಡೆಸಿಕೊಂಡು ಬಂದಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ನೆರವೂ ಸಿಕ್ಕಂತಾಗುತ್ತದೆ.

ಶಿಕ್ಷಣದ ಮಟ್ಟವನ್ನು ಉತ್ತಮ ಪಡಿಸುವಕಾರ್ಯ: ಎಲ್ಲ ಮಟ್ಟದ ಅಧ್ಯಾಪಕರ ವೃತ್ತಿಶಿಕ್ಷಣವನ್ನೂ ಅಂತಿಮವಾಗಿ ವಿಶ್ವವಿದ್ಯಾನಿಲಯದ ಪರಿಮಿತಿಗೆ ಒಳಪಡಿಸುವ ಅಗತ್ಯವನ್ನು ಆಗಲೇ ಸೂಚಿಸಿದೆ. ಆದರೆ ರಾಷ್ಟ್ರೀಯ ಮಟ್ಟದಲ್ಲೂ ರಾಜ್ಯಮಟ್ಟದಲ್ಲೂ ಆ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಶಾಸನದತ್ತ ಸಂಸ್ಥೆಗಳನ್ನು ಸ್ಥಾಪಿಸುವುದೂ ಅಗತ್ಯ. ಕೊಠಾರಿ ಶಿಕ್ಷಣ ಆಯೋಗದವರು ಸಲಹೆ ಮಾಡಿರುವಂತೆ, ರಾಜ್ಯಮಟ್ಟದಲ್ಲಿ ಅಧ್ಯಾಪಕರ ಶಿಕ್ಷಣದ ರಾಜ್ಯಮಂಡಲಿಯನ್ನು (ಸ್ಟೇಟ್ ಬೋರ್ಡ್ ಆಫ್ ಟೀಚರ್ ಎಜುಕೇಷನ್) ಸ್ಥಾಪಿಸಬೇಕು; ಅದು ಅಲ್ಲಿನ ವಿಶ್ವವಿದ್ಯಾನಿಲಯಗಳ ಮತ್ತು ವಿಶ್ವವಿದ್ಯಾನಿಲಯದ ಧನ ಆಯೋಗದ ಸಹಕಾರದಿಂದ ರಾಜ್ಯದಲ್ಲಿ ಹಿಂದೆ ಸೂಚಿಸಿರುವಂತೆ ಅಧ್ಯಾಪಕರ ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳನ್ನು ನೋಡಿಕೊಳ್ಳಬೇಕು; ರಾಷ್ಟ್ರೀಯ ಮಟ್ಟದಲ್ಲಿ, ವಿಶ್ವವಿದ್ಯಾನಿಲಯದ ಧನ ಆಯೋಗ ಎನ್.ಸಿ.ಇ.ಆರ್.ಟಿ.ಯ ಸಹಕಾರದಿಂದ ಅಧ್ಯಾಪಕರ ಶಿಕ್ಷಣದ ಸ್ಥಾಯೀ ಸಮಿತಿಯನ್ನು (ಸ್ಟಾಂಡಿಂಗ್ ಕಮಿಟಿ ಆನ್ ಟೀಚರ್ ಎಜುಕೇಷನ್) ಸ್ಥಾಪಿಸಬೇಕು. ಅದರಲ್ಲಿ ಸಂಬಂಧಿಸಿದ ಕ್ಷೇತ್ರಗಳ ಪ್ರತಿನಿಧಿಗಳೆಲ್ಲ ಸದಸ್ಯರಾಗಿರಬೇಕು. ಅದು 1. ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಶಿಕ್ಷಣವಿಭಾಗದ ಶಿಕ್ಷಣದ ಗುಣಮಟ್ಟವನ್ನು ರೂಪಿಸಿ ಕಾಪಾಡಿಕೊಂಡು ಬರುವುದು; 2. ಎಲ್ಲ ಮಟ್ಟದ ಅಧ್ಯಾಪಕರ ಶಿಕ್ಷಣದಲ್ಲೂ ಸಮನ್ವಯವಿರುವಂತೆ ಮಾಡುವುದು; 3. ಅಲ್ಲಿನ ಪಠ್ಯಕ್ರಮ, ಕಾರ್ಯಚಟುವಟಿಕೆಗಳು, ಪಠ್ಯಪುಸ್ತಕಗಳು, ಅಧ್ಯಾಪಕರ ಅರ್ಹತೆ—ಇವುಗಳ ಬಗ್ಗೆ ರಾಜ್ಯಸರ್ಕಾರಕ್ಕೂ ವಿಶ್ವವಿದ್ಯಾನಿಲಯಗಳಿಗೂ ಅಗತ್ಯವೆನಿಸುವ ಸಲಹೆ ನೀಡುವುದು: 4. ಅಧ್ಯಾಪಕರ ಶಿಕ್ಷಣ ಸಂಸ್ಥೆಗಳಿಗೆ ಧನ ಸಹಾಯ ನೀಡುವುದು: 5. ಆ ಸಂಸ್ಥೆಗಳನ್ನು ಆಗಾಗ ತನಿಖೆ ನಡೆಸುವುದು; ವೃತ್ತಿ ನಿರತ ಅಧ್ಯಾಪಕರ ಮತ್ತು ಅಧ್ಯಾಪಕ ಶಿಕ್ಷಕರ (ಟೀಚರ್ ಎಜುಕೇಟರ್ಸ್) ಮುಂದುವರಿದ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಏರ್ಪಡಿಸಲು ಆ ಸಂಸ್ಥೆಗಳಿಗೆ ಧನಸಹಾಯ ನೀಡುವುದು–ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಬೇಕು. ಅದಕ್ಕೆ ಅಗತ್ಯವಾದ ಧನವನ್ನು ಕೇಂದ್ರಸರ್ಕಾರ ಒದಗಿಸಬೇಕು.

ಸಂಶೋಧನೆ ಮತ್ತು ಶೈಕ್ಷಣಿಕ ಸಾಹಿತ್ಯದ ಪ್ರಕಟಣೆ: ಯಾವ ವೃತ್ತಿಯಲ್ಲೇ ಆಗಲಿ, ಸಂಬಂಧಿಸಿದ ಮೂಲಭೂತ ಮತ್ತು ಪ್ರಯುಕ್ತ (ಅಪ್ಲೈಡ್) ಸಂಶೋಧನೆಗಳು ನಡೆದ ಹೊರತು ಆ ವೃತ್ತಿ ಅಭಿವೃದ್ಧಿ ಸಾಧಿಸುವಂತಿಲ್ಲ. ಈ ಮಾತು ಶಿಕ್ಷಣವೃತ್ತಿಗೂ ಅನ್ವಯಿಸುತ್ತದೆ. ಅಂಥ ಸಂಶೋಧನೆಗಳನ್ನು ನಡೆಸಲು ಅಧ್ಯಾಪಕರ ವೃತ್ತಿಶಿಕ್ಷಣಸಂಸ್ಥೆಗಳೂ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗಗಳೂ ಸೂಕ್ತ ಸ್ಥಳಗಳು, ಈಗಾಗಲೆ ಭಾರತದಲ್ಲಿ ಕೇಂದ್ರ ಮಂತ್ರಿಮಂಡಲ ಸಂಶೋಧನೆಗಳಿಗೆ ಉತ್ತೇಜನವೀಯುತ್ತಿದೆ. ಎನ್.ಸಿ.ಇ.ಆರ್.ಟಿ. ಮತ್ತು ಬರೋಡದ ಶಿಕ್ಷಣಶಾಸ್ತ್ರದ ಉನ್ನತಕೇಂದ್ರವೂ ಆ ಮುಖವಾಗಿ ಅಷ್ಟಿಷ್ಟು ಸಂಶೋಧನೆ ನಡೆಸುತ್ತಿವೆ. ಆದರೆ ಈ ಮುಖವಾದ ಯತ್ನ ರಾಷ್ಟ್ರಾದ್ಯಂತ ವ್ಯಾಪಕವಾಗಿ ನಡೆಯಬೇಕು.

ಆದ್ಯತೆಯ ದೃಷ್ಟಿಯಿಂದ ಸಮಸ್ಯೆಗಳನ್ನು ಆರಿಸಿಕೊಂಡು ಸಂಶೋಧನೆಗಳನ್ನು ನಡೆಸುವ ಅಗತ್ಯವನ್ನು ಒತ್ತಿಹೇಳಬೇಕಾಗಿಲ್ಲ. ಹಾಗೆಯೇ ಸಂಶೋಧನೆಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವ ನಿರ್ದಿಷ್ಟ ಯತ್ನವೂ ನಡೆಯಬೇಕು.

ಇಷ್ಟೇ ಮುಖ್ಯವೆನ್ನಬಹುದಾದ ಮತ್ತೊಂದು ಸಮಸ್ಯೆ ಅಧ್ಯಾಪಕರ ಶಿಕ್ಷಣಕ್ಕೆ ಸಂಬಂಧಿಸಿದ ಸಾಹಿತ್ಯದ ಪ್ರಕಟಣೆ. ಸದ್ಯದಲ್ಲಿ ಅಧ್ಯಾಪಕರ ಶಿಕ್ಷಣ ಸಂಸ್ಥೆಗಳು ಬಳಸುತ್ತಿರುವ ಗ್ರಂಥಗಳು ಬಹುಮಟ್ಟಿಗೆ ಇಂಗ್ಲಿಷಿನಲ್ಲಿ ಮುದ್ರಿಸಿರುವ ಅಮೆರಿಕ ಮತ್ತು ಇಂಗ್ಲೆಂಡಿನಲ್ಲಿ ಬರೆಸಿ ಪ್ರಕಟಿಸಿದ ಗ್ರಂಥಗಳು ಅವು ಭಾರತದ ಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು ಬರೆದವಲ್ಲ. ಆದ್ದರಿಂದ ಅಂಥ ಸಾಹಿತ್ಯ ಭಾರತೀಯರ ದೃಷ್ಟಿಯಲ್ಲಿ ಉತ್ತಮ ಫಲ ನೀಡಲಾರದು. ಭಾರತೀಯ ಸನ್ನಿವೇಶಗಳಿಗೆ ತಕ್ಕಂತೆ ರೂಪುಗೊಂಡ ಶಿಕ್ಷಣ ಸಾಹಿತ್ಯ ಅಗತ್ಯ. ಈ ಸಾಹಿತ್ಯ ಇಂಗ್ಲಿಷಿನಂತೆ ದೇಶೀಯ ಭಾಷೆಗಳಲ್ಲೂ ಪ್ರಕಟವಾಗಬೇಕು. ಅಂದು ಮಾತ್ರ ಅಧ್ಯಾಪಕರಿಗೂ ಅಧ್ಯಾಪಕರ ಶಿಕ್ಷಕರಿಗೂ ಈ ವೃತ್ತಿಗೆ ಸಂಬಂಧಿಸಿದ ನಿಖರವಾದ ಶಾಸ್ತ್ರೀಯ ಜ್ಞಾನ ದೊರೆತು ಅವರಿಂದ ಶಿಕ್ಷಣಕ್ಷೇತ್ರ ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡಲನುಕೂಲವಾದೀತು. (ಎನ್.ಎಸ್.ವಿ.)

**ವೃತ್ತಿನಿರತ ಉಪಾಧ್ಯಾಯರ ಶಿಕ್ಷಣ:** ವೃತ್ತಿಶಿಕ್ಷಣ ಪಡೆದಿರುವ ಅಧ್ಯಾಪಕರು ತಮ್ಮ ವೃತ್ತಿಗೆ ಸಂಬಂಧಿಸಿದ ಜ್ಞಾನ ಮತ್ತು ಅನುಭವಗಳನ್ನು ಪಡೆದುಕೊಳ್ಳುವುದಕ್ಕೂ ವೃತ್ತಿಶಿಕ್ಷಣದಲ್ಲಿ ಕಲಿತ ಅಂಶಗಳನ್ನು ನವೀಕರಿಸಿಕೊಳ್ಳುವುದಕ್ಕೂ ಶಿಕ್ಷಣ ಕ್ಷೇತ್ರದಲ್ಲಿ ಬಳಕೆಗೆ ಬಂದಿರುವ ನೂತನ ಅಂಶಗಳನ್ನು ಅರಿತುಕೊಂಡು ಅನುಷ್ಠಾನಕ್ಕೆ ತರುವುದಕ್ಕೂ ವೃತ್ತಿಯಲ್ಲಿರತಕ್ಕ ಅಧ್ಯಾಪಕರಿಗಾಗಿಯೇ ವ್ಯವಸ್ಥೆಗೊಳಿಸಿರುವ ಶಿಕ್ಷಣ ಸೌಲಭ್ಯವಿದು.

ವೃತ್ತಿನಿರತ ಅಧ್ಯಾಪಕರ ತರಬೇತಿಯ ಉದ್ದೇಶಗಳಲ್ಲಿ 1. ಉಪಾಧ್ಯಾಯರು ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿದಾಗ ಎದುರಿಸಬೇಕಾದ ಸಮಸ್ಯೆಗಳನ್ನು ಬಿಡಿಸಲು ಸಹಾಯಮಾಡುವುದು; 2. ದೇಶ ಹಾಗೂ ವಿದೇಶಗಳ ಶಿಕ್ಷಣಕ್ಷೇತ್ರಗಳಲ್ಲಿ ಆದ ಸುಧಾರಣೆಗಳ ಪರಿಚಯ ಮಾಡಿಕೊಂಡು ಅವುಗಳನ್ನು ತಮ್ಮ ಶಾಲೆಗಳಲ್ಲಿ ಸೂಕ್ತ ಬದಲಾವಣೆಗಳೊಂದಿಗೆ ಹೇಗೆ ಅಳವಡಿಕೊಂಡು ಅನುಷ್ಠಾನಕ್ಕೆ ತರಬಹುದೆಂಬುದನ್ನು ಮನದಟ್ಟು ಮಾಡಿಕೊಡುವುದು; 3. ತಮ್ಮ ತಮ್ಮ ಐಚ್ಛಿಕ ವಿಷಯಗಳಲ್ಲಿ ಆಳವಾದ ಅಭ್ಯಾಸ ಮಾಡಿ ಆ ಕ್ಷೇತ್ರದಲ್ಲಿ ಇತ್ತೀಚೆಗೆ ಆದ ಸಂಶೋಧನೆಗಳನ್ನು ತಿಳಿದುಕೊಂಡು ಅವುಗಳಲ್ಲಿ ಬೇಕಾದವುಗಳನ್ನು ತಮ್ಮ ಶಾಲೆಯ ಶಿಕ್ಷಣಕ್ರಮದಲ್ಲಿ ಅಳವಡಿಸಿಕೊಳ್ಳಲು ನೆರವಾಗುವುದು–ಇವು ಮುಖ್ಯವಾದ ಅಂಶಗಳು.

ಭಾರತದಲ್ಲಿ ಕೇಂದ್ರ ಶಿಕ್ಷಣಶಾಲೆ 1961ರಲ್ಲಿ ಸ್ವಯಮಾಧಿಕಾರವುಳ್ಳ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿಮಂಡಲವನ್ನು (ಎನ್.ಸಿ.ಇ.ಆರ್.ಟಿ.) ಸಂಘಟಿಸಿತು. ಈ ಸಂಸ್ಥೆ ತನ್ನ ಅಧಿಕಾರ ಕ್ಷೇತ್ರಕ್ಕೆ ಸೇರಿದ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ನಿನ ಮೂಲಕ ಉಚ್ಚ ಶಿಕ್ಷಣವನ್ನುಳಿದು ಶಿಕ್ಷಣದ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿದೆ. ಇದರ ಅಂಗ ಸಂಸ್ಥೆಗಳಲ್ಲಿ 1. ಶಿಕ್ಷಕರ ತರಬೇತಿ ವಿಭಾಗ, 2. ಕೇಂದ್ರ ಶಿಕ್ಷಣಸಂಸ್ಥೆ, 3. ರಾಷ್ಟ್ರೀಯ ಮೂಲ ಶಿಕ್ಷಣಸಂಸ್ಥೆ, 4. ಡೈರೆಕ್ಟರೇಟ್ ಆಫ್ ಫೀಲ್ಡ್ ಸರ್ವಿಸಸ್, 5. ರಾಷ್ಟ್ರೀಯ ಮೂಲಭೂತ ಶಿಕ್ಷಣಸಂಸ್ಥೆ, 6. ರಾಷ್ಟ್ರೀಯ ದೃಕ್ ಶ್ರಾವ್ಯಸಂಸ್ಥೆ, 7. ಮೂಲಭೂತ ಮನೋವಿಜ್ಞಾನ ವಿಭಾಗ, 8. ಪಾಠಕ್ರಮ, ಶಿಕ್ಷಣ ವಿಧಾನ ಮತ್ತು ಪಠ್ಯಪುಸ್ತಕ ವಿಭಾಗ, 9. ವಿಜ್ಞಾನ ಶಿಕ್ಷಣ ವಿಭಾಗ, 10. ಶಿಕ್ಷಣ ಆಡಳಿತ ವಿಭಾಗ, 11. ಮೂಲಭೂತ ಶಿಕ್ಷಣಸಂಸ್ಥೆ – ಇವೆಲ್ಲ ಸೇರಿವೆ.

ಈ ಅಂಗ ಸಂಸ್ಥೆಗಳಲ್ಲದೆ ಶಿಕ್ಷಣದ ಪ್ರಾದೇಶಿಕ ಕಾಲೇಜುಗಳ ಮುಖಾಂತರ ಅದು ಶಿಕ್ಷಕರ ತರಬೇತಿಗಾಗಿ ಶ್ರಮಿಸುತ್ತಿದೆ. ಶಿಕ್ಷಣದ ಪ್ರಾದೇಶಿಕ ಕಾಲೇಜುಗಳು ಅಜಮೀರ್. ಭೂಪಾಲ್, ಭುವನೇಶ್ವರ ಮತ್ತು ಮೈಸೂರುಗಳಲ್ಲಿವೆ. ದೆಹಲಿಯಲ್ಲಿರುವ ಕೇಂದ್ರ ಶಿಕ್ಷಣಸಂಸ್ಥೆ ಹಾಗೂ ಈ ಮಹಾ ವಿದ್ಯಾಲಯಗಳು ಮಾಧ್ಯಮಿಕ ಶಿಕ್ಷಕರ ಪೂರ್ವ ತರಬೇತಿಗಳ ಕಡೆಗೆ ಗಮನವನ್ನು ಕೇಂದ್ರೀಕರಿಸಿದ್ದರೆ, ಉಳಿದ ವಿಭಾಗಗಳು ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾದ ಸಂಶೋಧನೆ ಹಾಗೂ ಶಿಕ್ಷಕರು ತಮ್ಮ ವೃತ್ತಿಯಲ್ಲಿ ತೊಡಗಿದಾಗ ಪಡೆಯಬೇಕಾದ ಶಿಕ್ಷಣದ ಕಡೆ ಗಮನವೀಯುತ್ತಿವೆ. ಈ ಅಂಗಸಂಸ್ಥೆಗಳಲ್ಲಿ ಒಂದಾದ ಫೀಲ್ಡ್ ಸರ್ವಿಸಸ್ ವಿಭಾಗ ತರಬೇತಿಯ ಅನಂತರ ಶಿಕ್ಷಣದತ್ತ ಗಮನ ಕೊಟ್ಟಿದೆ. ಈ ಕಾರ್ಯದಲ್ಲಿ ಅದು ಆಯಾ ರಾಜ್ಯಗಳಲ್ಲಿರುವ ಶಿಕ್ಷಣದ ಪ್ರಾದೇಶಿಕ ಕಾಲೇಜುಗಳ ನೆರವನ್ನು ತನ್ನ ವಿಸ್ತರಣಾ ವಿಭಾಗಗಳ ಮೂಲಕ ಪಡೆಯುತ್ತಿವೆ. ಇಂಥ ವಿಸ್ತರಣಾ ವಿಭಾಗಗಳು ಭಾರತದಲ್ಲಿ ಸದ್ಯ 97 ಇದ್ದು ಅವನ್ನು ಇನ್ನೂ ಹೆಚ್ಚಿಸುವ ಯೋಜನೆ ಇದೆ.

ಈ ವಿಸ್ತರಣಾ ವಿಭಾಗಗಳ ಮೂಲಕ ನಡೆಸುತ್ತಿರುವ ಅಲ್ಪಾವಧಿ ತರಬೇತಿ ಕೇಂದ್ರಗಳು, ಕಾರ್ಯಶಿಬಿರಗಳು ಬೇಸಿಗೆಯ ಶಿಬಿರಗಳು, ವ್ಯಾಸಂಗ ಗೋಷ್ಠಿಗಳು ಹಾಗೂ ಸಮ್ಮೇಳನಗಳು ಈಗಾಗಲೇ ಶಿಕ್ಷಣ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಒಂದು ಕ್ರಾಂತಿಯನ್ನುಂಟು ಮಾಡಿವೆ. ಈ ತರಬೇತಿ ಕೇವಲ ಉಪಾಧ್ಯಾಯರಿಗೆ ಮಾತ್ರ ಸೀಮಿತವಾಗಿರದೆ ಮುಖ್ಯೋಪಾಧ್ಯಾಯರು, ಉಪನ್ಯಾಸಕರು, ಪ್ರಾಧ್ಯಾಪಕರು ಮತ್ತು ರಾಜ್ಯದ ಶಿಕ್ಷಣ ಆಡಳಿತಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಒಳಗೊಂಡಿದೆ. ಇದರಿಂದಾಗಿ ವಿವಿಧ ರಾಜ್ಯಗಳ ಪರೀಕ್ಷಾ ಮಂಡಲಿಗಳು ನಡೆಸುತ್ತಿರುವ ಶಾಲಾಂತ್ಯ ಪರೀಕ್ಷೆಗಳಲ್ಲಿ ಉಪಯೋಗಿಸುವ ಪ್ರಶ್ನೆಪತ್ರಿಕೆಗಳು ಹೆಚ್ಚು ಹೆಚ್ಚು ಉದ್ದೇಶಪೂರಿತ ಹಾಗೂ ವಸ್ತುನಿಷ್ಠವಾಗುತ್ತಿವೆ. ಈ ಹೊಸ ಮೌಲ್ಯಮಾಪನ ಪದ್ಧತಿಯ ಪರಿಣಾಮ ಪರೀಕ್ಷಾಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿರದೆ ಅಭ್ಯಾಸ ಕ್ರಮದ ಮೇಲೂ ಪರಿಣಾಮ ಬೀರುತ್ತಿದೆ. ಈ ಪದ್ಧತಿ ಕಾಳನ್ನು ತೂಕ ಮಾಡುವುದರ ಜೊತೆಗೆ ಅದರ ಗುಣಾಂಶವನ್ನೂ ಹೆಚ್ಚಿಸುವ ಮಾಯಾ ತಕ್ಕಡಿಯಂತಿದೆ: ಹೇಗೆಂದರೆ ಉಪಾಧ್ಯಾಯ ಪಾಠ ಮಾಡುವ ಮೊದಲು ತಾನು ಕಲಿಸಲಿರುವ ಪಾಠದ ಉದ್ದೇಶವೇನು ಎಂಬುದನ್ನು ತಿಳಿದಿರುತ್ತಾನೆ. ಈ ಉದ್ದೇಶವನ್ನು ಸಾಧಿಸಲು ತರಗತಿಯ ಪರಿಸರಕ್ಕೆ ಅನುಗುಣವಾಗುವಂಥ ಕಲಿವಿನ ಅನುಭವವನ್ನು ವಿದ್ಯಾರ್ಥಿಗಳಿಗೆ ನೀಡುತ್ತಾನೆ. ವಿದ್ಯಾರ್ಥಿಗಳು ಈ ಸ್ವಾನುಭವದಿಂದ ತಾವು ಮನಸ್ಸಿನಲ್ಲಿಟ್ಟುಕೊಂಡ ಉದ್ದೇಶವನ್ನು ಸಾಧಿಸಿರುವರೇ ? ಇದರಿಂದ ವಿದ್ಯಾರ್ಥಿಗಳ ನಡವಳಿಕೆಯಲ್ಲಿ ಆದ ಬದಲಾವಣೆಗಳೇನು ? ಎಷ್ಟು? ಎಂಬುದನ್ನು ಈ ಮೌಲ್ಯಮಾಪನದಿಂದ ತಿಳಿಯಬಹುದು. ಇದರಿಂದ ಉಪಾಧ್ಯಾಯ ತಾನು ಮಾಡಿದ ಪಾಠದ ಪ್ರಭಾವ ವಿದ್ಯಾರ್ಥಿಗಳ ಮೇಲೆ ಎಷ್ಟು ಪ್ರಮಾಣದಲ್ಲಿ ಆಗಿದೆ, ಹಾಗೆ ಆಗದೇ ಇದ್ದರೆ ಏಕೆ ಆಗಿಲ್ಲ? ಎಂದು ವಿಚಾರಿಸಿ ಆಯಾ ತರಗತಿಗಳಿಗೆ ಸರಿಹೊಂದುವ ವಿಧಾನಗಳಿಂದ ಪಾಠ ಮಾಡಿ ವಿದ್ಯಾರ್ಥಿಗಳಲ್ಲಿ ತಾನು ಊಹಿಸಿದ ವರ್ತನೆಯ ಪರಿವರ್ತನೆಗಳನ್ನು ಮೂಡಿಸಿ ಪಾಠದ ಉದ್ದೇಶವನ್ನು ಸಾಧಿಸಬಹುದು. ಈ ರೀತಿಯಲ್ಲಿ ಅದು ಅಭ್ಯಾಸಕ್ರಮದ ಮೇಲೂ ಪರಿಣಾಮವನ್ನುಂಟು ಮಾಡಿದೆ. ಈ ತರಬೇತಿ ಕಾಲದಲ್ಲಿ ಉಪಾಧ್ಯಾಯರ ಸಮ್ಮಿಲನದ ಫಲವಾಗಿ ಆಗುವ ವಿಚಾರವಿನಿಮಯ ಮತ್ತು ತಮ್ಮ ವಿಶಿಷ್ಟ ಕ್ಷೇತ್ರದಲ್ಲಾದ ಸುಧಾರಣೆಗಳ ಅರಿವಿನಿಂದಾಗಿ ಉಪಾಧ್ಯಾಯರಲ್ಲಿ ನವಚೇತನ ಮೂಡಿ ಅವರ ಶಿಕ್ಷಣ ಕಾರ್ಯ ಹೆಚ್ಚು ಪರಿಣಾಮಕಾರಿಯಾಗುತ್ತಿದೆ. ಇದರಿಂದಾಗಿ ಶಿಕ್ಷಣಮಟ್ಟ ಉತ್ತಮಗೊಳ್ಳುವುದೆಂಬ ಭರವಸೆಯೂ ಹೆಚ್ಚುತ್ತಿದೆ.

ಆರ್ಥಿಕ ಪರಿಸ್ಥಿತಿ, ವಯೋಪರಿಮಿತಿ ಮುಂತಾದ ಕಾರಣಗಳಿಂದ ತರಬೇತಿ ಪಡೆಯದೆ ವೃತ್ತಿಗಿಳಿದ ಅನೇಕ ಶಿಕ್ಷಕರಿಗೆ ಮೂಲ ತರಬೇತಿ ಪಡೆಯಲು ಸಾಧ್ಯವಾಗದು. ಅಂಥವರಿಗಾಗಿ ರಾಷ್ಟ್ರೀಯ ಶಿಕ್ಷಣ ಮಂಡಲಿಯೂ ಶಿಕ್ಷಣದ ಪ್ರಾದೇಶಿಕ ಕಾಲೇಜುಗಳೂ ಅಂಚೆಯ ಮುಖೇನ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಿವೆ. ಅಂಥ ಉಪಾಧ್ಯಾಯರು ತಮ್ಮ ಶಾಲೆಗಳಲ್ಲಿಯೇ ಕೆಲಸ ಮಾಡುತ್ತಿದ್ದು ನಿಯಮಿತ ವೃತ್ತಿಶಿಕ್ಷಣ ಪಡೆದ ಅನುಭವಿ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ನಿಗದಿ ಮಾಡಿರುವ ಸಂಖ್ಯೆಯಷ್ಟು ಅಭ್ಯಾಸಾರ್ಥ ಪಾಠಗಳನ್ನು ಕೊಡುವುದರ ಜೊತೆಗೆ ಬೇಸಿಗೆಯ ಬಿಡುವಿನಲ್ಲಿ ಸಂಬಂಧಿಸಿದ ಕಾಲೇಜುಗಳಿಗೆ ಹೋಗಿ ತಮ್ಮ ತಾತ್ವಿಕ ಪಾಠಕ್ರಮವನ್ನು ಸಾಗಿಸಬೇಕಾಗುವುದು. ಆಮೇಲೆ ಉಳಿದ ಶಿಕ್ಷಕ ವಿದ್ಯಾರ್ಥಿಗಳಂತೆ ಇವರೂ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಕೂಡಬೇಕಾಗುತ್ತದೆ.

ವೃತ್ತಿನಿರತ ಶಿಕ್ಷಣ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಅಧ್ಯಾಪಕರಿಗೆ ಅಗತ್ಯವಿರುವಂತೆ ಅಧ್ಯಾಪಕರ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕ–ಶಿಕ್ಷಕರಿಗೂ (ಟೀಚರ್ ಎಜುಕೇಟರ್ಸ್) ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಣಾಧಿಕಾರಿಗಳಿಗೂ ಅಗತ್ಯವೆನಿಸುತ್ತದೆ. ಈಚೆಗೆ ಅಂಥ ಸೌಲಭ್ಯಗಳನ್ನು ಒದಗಿಸಲು ವಿಶ್ವವಿದ್ಯಾನಿಲಯಗಳೂ ರಾಜ್ಯ ಶಿಕ್ಷಣಶಾಖೆಯವರೂ ದೆಹಲಿಯ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನ್ ರಿಸರ್ಚ್ ಅಂಡ್ ಟ್ರೈನಿಂಗ್ (ಎನ್.ಸಿ.ಇ.ಆರ್.ಟಿ.) ಸಂಸ್ಥೆಯವರೂ ಅದಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಆರಂಭಿಸಿರುವರು. ನಡೆಯುತ್ತಿವೆ. ಎಲ್ಲ ರಾಜ್ಯಗಳಲ್ಲೂ ಈ ಕಾರ್ಯಕ್ರಮಗಳು ವ್ಯವಸ್ಥಿತರೂಪದಲ್ಲಿ ನಡೆದರೆ ಒಳ್ಳೆಯದು. (ಎಂ.ಎಚ್.ಎನ್.)

**ಉಪಾಲಿ:** ಬುದ್ಧನ ಸಮಕಾಲೀನ, ರಾಜಮನೆತನಕ್ಕೆ ಸೇರಿದವ, ಪ್ರಾರಂಭದಲ್ಲಿ ಮಹಾವೀರನ ಬೋಧನೆಯನ್ನು ಸ್ವೀಕರಿಸಿ ಗೃಹಸ್ಥಾಶ್ರಮವನ್ನನುಸರಿಸುತ್ತಿದ್ದು ಬುದ್ಧನ ತತ್ತ್ವಗಳನ್ನು ವಿರೋಧಿಸುತ್ತಿದ್ದವರಲ್ಲಿ ಒಬ್ಬನಾಗಿದ್ದ. ಒಮ್ಮೆ ಬುದ್ಧ ರಾಜಗೃಹಕ್ಕೆ ಬಂದಾಗ ಆತನನ್ನು ವಿರೋಧಿಸಲು ಹೊರಟು ಬುದ್ಧನ ವ್ಯಕ್ತಿತ್ವ ಮತ್ತು ಬೋಧನೆಗೆ ಮಾರುಹೋಗಿ ಬೌದ್ಧಮತಾವಲಂಬಿಯಾದ. ಮುಂದೆ ಮಹಾವೀರನನ್ನು ವಿರೋಧಿಸಲು ಪ್ರಾರಂಭಿಸಿದ; ಬುದ್ಧನ ನಿರ್ವಾಣಾನಂತರ ಬೌದ್ಧಧರ್ಮ ಪ್ರಚಾರಕರಲ್ಲಿ ಗಣ್ಯನಾದ. ರಾಜಗೃಹದಲ್ಲಿ ಸೇರಿದ್ದ ಮೊದಲ ಬೌದ್ಧ ಮಹಾಸಮ್ಮೇಳನದಲ್ಲಿ ಆನಂದನೂ ಉಪಾಲಿಯೂ ಬುದ್ಧನ ತತ್ತ್ವಗಳನ್ನು ವಿವರಿಸಿದುದಲ್ಲದೆ ಅವನ್ನು ಗ್ರಂಥಸ್ಥಗೊಳಿಸಲು ನೆರವಾದರು. (ಜಿ.ಆರ್.ಆರ್.)

**ಉಪಾಸನ:** ಹತ್ತಿರ ಕೂಡುವುದು ಎಂದು ಪದಶಃ ಅರ್ಥ, ಅತಿಗೂಢವಾದ ವಿಷಯವನ್ನು ತಿಳಿಯಲು ತುಂಬ ಆಸಕ್ತಿಯಿಂದ ಗುರುವಿನ ಬಳಿ ಕುಳಿತುಕೊಳ್ಳುವುದಕ್ಕೆ ಉಪಾಸನ ಎಂಬ ಪದವನ್ನು ಉಪನಿಷತ್‌ಗಳು ಉಪಯೋಗಿಸುತ್ತವೆ. ಮುಖ್ಯವಾಗಿ ಇದು ಬ್ರಹ್ಮವಿದ್ಯೆಗೆ ಸಂಬಂಧಪಟ್ಟದ್ದು. ಆರಾಧಿಸುವುದು ಎಂಬುದು ಸಾಮಾನ್ಯ ಅರ್ಥ. ಆದರೆ ಉಪಾಸನ ಕೇವಲ ದೇವರ ಆರಾಧನೆ ಮಾತ್ರ ಆಗಬೇಕಾದ್ದಲ್ಲ. ಏಕೆಂದರೆ ದೇವರನ್ನು ಆರಾಧಿಸದ ಬೌದ್ಧರಲ್ಲೂ ಜೈನರಲ್ಲೂ ಉಪಾಸನ ಬಳಕೆಯಲ್ಲಿತ್ತು.

ಉಪಾಸನ ಕೇವಲ ಸಾಮಾನ್ಯ ಆರಾಧನೆಯಲ್ಲ, ಪೂಜೆಯಲ್ಲ, ಉಪಾಸನಕ್ಕೆ ಅತಿಶಯವಾದ ತಾದಾತ್ಮ್ಯ ತದೇಕಭಾವ ಅತ್ಯಗತ್ಯ. ಪೂಜ್ಯವಾದ ವಸ್ತು ಯಾವುದೇ ಆಗಲಿ ಅದರಲ್ಲಿ ನಿತ್ಯ, ನಿರಂತರ ಮತ್ತು ಅತಿಶಯ ಆಸಕ್ತಿ, ತಲ್ಲೀನತೆ ಇರುವುದು ಉಪಾಸನದ ಹೆಗ್ಗುರುತು.

ಉಪಾಸನ ಹಲವು ಬಗೆಯಾಗಿವೆ. ಆ ಬಗೆಗಳಿಗೆ ಉಪಾಸಕ ಆಯ್ದುಕೊಂಡ ಇಷ್ಟಾರ್ಥ ಬೌದ್ಧರ ನಿರ್ವಾಣವಾಗಬಹುದು. ಸುಖವತಿಯಲ್ಲಿ ಪುನರ್ಜನ್ಮ ಪಡೆಯುವುದಾಗಬಹುದು. ದೇವಿಯ ಅಥವಾ ಶಕ್ತಿಯ ಕೃಪೆ ಪಡೆಯುವುದಾಗಿರಬಹುದು. ಇಷ್ಟದೈವವಾದ ನರಸಿಂಹ ಅಥವಾ ಭೈರವನ ಕೃಪೆ ಪಡೆಯುವುದಾಗಿರಬಹುದು. ಇಷ್ಟಾರ್ಥ ಅಥವಾ ಇಷ್ಟದೇವತೆಗೆ ಅನುಗುಣವಾಗಿ ಉಪಾಸನ ವಿಧಾನಗಳು ಬೇರೆಬೇರೆಯಾಗಿವೆ.

ಶೈವರಲ್ಲಿ ಶಂಕರಚಾರ್ಯರ ಅನುಯಾಯಿಗಳೂ ವೈಷ್ಣವರಲ್ಲಿ ರಾಮಾನುಜ ಮತ್ತು ಮಧ್ವರ ಅನುಯಾಯಿಗಳೂ ಸೌಮ್ಯ ಉಪಾಸಕರು. ರಾಮಾನುಜಜೀಯರಲ್ಲಿ ಉಪಾಸನೆಯ ಅಂಗಗಳು ಐದು: ಅಭಿಗಮನ (ಹತ್ತಿರಕ್ಕೆ ಬರುವುದು), ಉಪಾದಾನ (ಸಿದ್ಧತೆ), ಇಜ್ಯ(ಅರ್ಘ್ಯ), ಸ್ವಾಧ್ಯಾಯ (ಮಂತ್ರೋಚ್ಚಾರಣೆ) ಮತ್ತು ಯೋಗ (ತದೈಕ ಭಕ್ತಿ). ವೈಷ್ಣವರಲ್ಲೂ ಶೈವರಲ್ಲೂ ಬೌದ್ಧರಲ್ಲೂ ವಾಮ ಉಪಾಸನೆಯುಂಟು. ರಾಸಲೀಲೆ ವೈಷ್ಣವರ ವಾಮಚಾರ, ಪಂಚ ಮಕಾರಗಳು ಶಾಕ್ತರ ವಾಮಾಚಾರ. ಬೌದ್ಧ ತಾಂತ್ರಿಕರೂ ಶಾಕ್ತೇಯರಂತೆ ವಾಮಾಚಾರವನ್ನು ಅನುಸರಿಸುತ್ತಾರೆ. ಬೌದ್ಧರಲ್ಲಿ ಭಿಕ್ಷು ಮತ್ತು ಉಪಾಸಕ ಎಂಬ ಎರಡು ಭೇದಗಳಿವೆ. ಭಿಕ್ಷು ಸಂನ್ಯಾಸಿ, ಉಪಾಸಕ ಗೃಹಸ್ಥ, ಭಿಕ್ಷು ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಉಪಾಸಕ ಮದುವೆಯಾಗಬಹುದು. ಆದರೆ ಕಾಮಮಿಥ್ಯಾಚಾರವನ್ನು ವರ್ಜಿಸಬೇಕು. ಅವನು ಪ್ರತಿ ಪಕ್ಷಾಂತ್ಯದಲ್ಲೂ ಇಪ್ಪತ್ತನಾಲ್ಕು ಗಂಟೆಗಳ ಕಾಲ ಸನ್ಯಾಸಿಯಂತೆ ಸಂವೃತನಾಗಿರಬೇಕು. ಮಹಾಯಾನ ಬೌದ್ಧಮತ ಬೆಳೆದ ಮೇಲೆ ಭಿಕ್ಷುಗಳು ಮದುವೆಯಾಗಿ ಉಪಾಸಕರಂತೆ ವ್ಯವಹರಿಸುವುದು ರೂಢಿಗೆ ಬಂತು. ನೇಪಾಳದಲ್ಲಿ ವಜ್ರಾಚಾರ್ಯರೆಂಬ ಮದುವೆಯಾದ ಭಿಕ್ಷುಗಳ ಗುಂಪು ಇದೆ. (ಜಿ.ಎಚ್.)

**ಉಪೋತ್ಪನ್ನ:** ನಿರ್ದಿಷ್ಟ ವಸ್ತುವಿನ ಉತ್ಪಾದನೆಯ ಉದ್ದೇಶವಿರುವ ಕೈಗಾರಿಕೆಯಲ್ಲಿ ಆನುಷಂಗಿಕವಾಗಿ ಲಭಿಸುವ ಇತರ ಉತ್ಪನ್ನ (ಬೈಪ್ರಾಡಕ್ಟ್). ಉಪೋತ್ಪನ್ನಗಳಲ್ಲಿ ಬಹುಪಾಲು ಉಪಯುಕ್ತ ವಸ್ತುಗಳು, ಎಲ್ಲೋ ಕೆಲವು ಮಾತ್ರ ಅಪ್ರಯೋಜಕವಾಗಿದ್ದು ಅವುಗಳ ವಿಲೇವಾರಿಯೇ ಒಂದು ಸಮಸ್ಯೆಯಾಗಿ ಪರಿಣಮಿಸುವುದುಂಟು. ಇದಕ್ಕೆ ಒಂದು ನಿದರ್ಶನ ಲೆಬ್ಲ್ಯಾಂಕ್ ಸೋಡಾ ವಿಧಾನ. ಕಬ್ಬಿಣದ ಬಾಣಲೆಗಳಲ್ಲಿ ಉಪ್ಪನ್ನು ಪ್ರಬಲ ಸಲ್ಫ್ಯೂರಿಕ್ ಆಮ್ಲದೊಡನೆ ಕಾಯಿಸಿದರೆ ಸೋಡಿಯಂ ಬೈಸಲ್ಫೇಟ್ ಮತ್ತು ಹೈಡ್ರೋಜನ್ ಕ್ಲೋರೈಡ್ ಉಂಟಾಗುವುವು.

$$NaCl + H_2SO_4 \rightarrow NaHSO_4 + HCl \uparrow$$

ಬೈಸಲ್ಫೇಟನ್ನು ಕೆದಕಿ ತೆಗೆದು ಮತ್ತಷ್ಟು ಉಪ್ಪನ್ನು ಸೇರಿಸಿ ಪ್ರತಿಫಲಕ (ರೆವರ್ಬರೆಟರಿ) ಕುಲುಮೆಯಲ್ಲಿ ಹೆಚ್ಚಿನ ಉಷ್ಣತೆಗೆ ಕಾಯಿಸಿದರೆ ಕೆಳಕಂಡ ರಾಸಾಯನಿಕ ಕ್ರಿಯೆ ನಡೆದು ಸೋಡಿಯಂ ಸಲ್ಫೇಟ್ ಆಗುವುದು

$$NaCl + NaHSO_4 \rightarrow Na_2SO_4 + HCl \uparrow$$

ಹೈಡ್ರೊಜನ್ ಕ್ಲೋರೈಡನ್ನು ನೀರಿನಲ್ಲಿ ವಿಲೀನ ಮಾಡಿದರೆ ಹೈಡ್ರೋಕ್ಲೋರಿಕ್ ಆಮ್ಲವಾಗುವುದು. ಹುಡಿಮಾಡಿದ ಸೋಡಿಯಂ ಸಲ್ಫೇಟನ್ನು ಕೋಕ್ ಮತ್ತು ಸುಣ್ಣಕಲ್ಲಿನೊಡನೆ ಉರುಳು (ರಿವಾಲ್ವಿಂಗ್) ಕುಲುಮೆಗಳಲ್ಲಿ ಕಾಯಿಸಿದಾಗ ಸೋಡಿಯಂ ಕಾರ್ಬೋನೇಟ್ ದೊರೆಯುವುದು

$$Na_2SO_4 + CaCO_3 + 2C \rightarrow Na_2CO_3 + 2CO_2 \uparrow + CaS$$

ದೊರೆತ ಬೂದಿಯಂತಿರುವ ಮಿಶ್ರಣವನ್ನು ನೀರಿನಲ್ಲಿ ಕದಡಿದರೆ ಕಾರ್ಬೋನೇಟ್ ಮಾತ್ರ ಕರಗುವುದು. ಶೋಧಿಸಿ ಬಂದ ದ್ರಾವಣದಿಂದ ಸೋಡಿಯಂ ಕಾರ್ಬೋನೇಟನ್ನು ಹರುಳು ರೂಪಕ್ಕೆ ತರಬಹುದು. ಉಳಿದ ಕ್ಯಾಲ್ಸಿಯಂ ಸಲ್ಫೈಡಿಗೆ ಕ್ಷಾರೀಯ ಕಸ (ಆಲ್ಕಲಿ ವೇಸ್ಟ್) ಎಂದು ಹೆಸರು. ಈ ಕಸವನ್ನು ಕಾರ್ಖಾನೆಯ ಬಳಿ ಗುಡ್ಡೆ ಹಾಕಿದಾಗ ಅದು ವಾತಾವರಣದ ಸಂಪರ್ಕದಲ್ಲಿ ದುರ್ವಾಸನೆಯುಳ್ಳ ಅನಿಲ ವಸ್ತುಗಳನ್ನು ಕೊಡುತ್ತದೆ. ಇದರಿಂದ ಸುತ್ತಮುತ್ತಲ ಪ್ರದೇಶದ ನಿವಾಸಿಗಳ ಆರೋಗ್ಯ ಕೆಡುವ ಸಂಭವ ಉಂಟು. ಆದ್ದರಿಂದ ಕಸವನ್ನು ತತ್‌ಕ್ಷಣ ವಿನಿಯೋಗಮಾಡದೆ ಗತ್ಯಂತರವಿಲ್ಲ. ಅದನ್ನು ನೀರಿನಲ್ಲಿಟ್ಟು ಇಂಗಾಲದ ಡೈಆಕ್ಸೈಡ್ ಹಾಯಿಸಿದರೆ ಕ್ಯಾಲ್ಸಿಯಂ ಕಾರ್ಬೋನೇಟ್ ಒತ್ತರಿಸಿ ಹೈಡ್ರೋಜನ್ ಸಲ್ಫೈಡ್ ಬಿಡುಗಡೆಯಾಗುವುದು.

$$CaS + H_2O + CO_2 \rightarrow CaCO_3 \downarrow H_2S$$

ಅನಿಲವನ್ನು ಗಾಳಿಯೊಡನೆ ಬೆರೆಸಿ ಫೆರಿಕ್ ಆಕ್ಸೈಡ್ ವೇಗವರ್ಧಕದ ಮೇಲೆ ಹಾಯಿಸಿದರೆ ಗಂಧಕವಾಗಿ ಉತ್ಕರ್ಷಿತವಾಗುವುದು. ಸಾಲ್ವೆ ವಿಧಾನ ಜಾರಿಗೆ ಬರುವ ಮುನ್ನ ಈ ವಿಧಾನ ಬಳಕೆಯಲ್ಲಿತ್ತು. ವ್ಯಾವಹಾರಿಕವಾಗಿ ಈ ವಿಧಾನ ಲಾಭದಾಯಕವಾಗಿರಲಿಲ್ಲ. ಆದ್ದರಿಂದ ಅದನ್ನು ಕೈಬಿಡಲಾಗಿದೆ. ಆದರೂ ಸೋಡಿಯಂ ಸಲ್ಫೇಟ್ ಮತ್ತು ಹೈಡ್ರೋಜನ್ ಕ್ಲೋರೈಡನ್ನು ತಯಾರಿಸಲು ಮಾತ್ರ ಈ ವಿಧಾನವನ್ನು ಈಗಲೂ ಅನುಸರಿಸುತ್ತಾರೆ.

ಕೆಲವು ಸಂದರ್ಭಗಳಲ್ಲಿ ಉಪೋತ್ಪನ್ನಗಳು ಅಲ್ಲೇ ಪುನಃ ಉಪಯೋಗವಾಗಿ ಉದ್ಯಮ ಲಾಭದಾಯಕವೂ ಮತ್ತು ಸ್ವಯಂಪರಿಪೂರ್ಣವೂ ಆಗುವುದುಂಟು. ಇದು ಸಾಲ್ವೆ ವಿಧಾನಕ್ಕೆ ಅನ್ವಯಿಸುತ್ತದೆ. ಉಪ್ಪು ನೀರನ್ನು ಮೊದಲು ಅಮೋನಿಯದಿಂದಲೂ ಅನಂತರ ಇಂಗಾಲದ ಡೈಆಕ್ಸೈಡಿನಿಂದಲೂ ಬೇರೆ ಬೇರೆ ಕೋಶಗಳಲ್ಲಿ ಪರ್ಯಾಪ್ತಗೊಳಿಸಲಾಗುವುದು. ಇದಕ್ಕೆ ಅಗತ್ಯವಾದ ಇಂಗಾಲದ ಡೈ ಆಕ್ಸೈಡನ್ನು ಸುಣ್ಣಕಲ್ಲನ್ನು ಕಾಯಿಸಿ ಪಡೆಯುವರು.

$$CaCO_3 \rightarrow CaO + CO_2 \uparrow$$

ಈ ಸ್ಥಿತಿಯಲ್ಲಿ ಸೋಡಿಯಂ ಬೈಕಾರ್ಬೋನೇಟ್ ಒತ್ತರಿಸುವುದು.

$$NaCl + H_2o + NH_3 + CO_2 \rightarrow NaHCO_3 \downarrow NH_4Cl$$

ಇದನ್ನು ಶೋಧಿಸಿ ಕಾಯಿಸಿದಾಗ ವಿಭಜನೆ ಹೊಂದಿ ಸೋಡಿಯಂ ಕಾರ್ಬೋನೇಟ್ ಘನವೂ ಇಂಗಾಲದ ಡೈ ಆಕ್ಸೈಡೂ ದೊರೆಯುವುವು. ಮೇಲ್ಕಂಡ ಕ್ರಿಯೆಗಳಲ್ಲಿ ದೊರೆತ ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಅಮೋನಿಯಂ ಕ್ಲೋರೈಡುಗಳನ್ನು ಒಟ್ಟಿಗೆ ಕಾಯಿಸಿ ಅಮೋನಿಯ ಪಡೆಯಬಹುದು.

$$CaCO + 2NH_4Cl \rightarrow CaCl_2 + H_2O + 2NH_3 \uparrow$$

ಲಭ್ಯವಾದ ಅಮೋನಿಯ ಮತ್ತು ಇಂಗಾಲದ ಡೈ ಆಕ್ಸೈಡುಗಳಿಂದ ಮತ್ತಷ್ಟು ಉಪ್ಪಿನ ದ್ರಾವಣವನ್ನು ಪರ್ಯಾಪ್ತಗೊಳಿಸಬಹುದು. ಆದರೆ ಉಪ್ಪಿನಲ್ಲಿದ್ದ ಕ್ಲೋರಿನ್ನಿನ ಭಾಗ ಅಷ್ಟು ಉಪಯುಕ್ತವಲ್ಲದ ಕ್ಯಾಲ್ಸಿಯಂ ಕ್ಲೋರೈಡಾಗಿ ನಷ್ಟವಾಗುವುದು, ಇದೊಂದೇ ಈ ವಿಧಾನದಲ್ಲಿರುವ ಕೊರತೆ.

ಮುಖ್ಯೋತ್ಪನ್ನದಷ್ಟೇ ಉಪೋತ್ಪನ್ನಗಳು ಅಮೂಲ್ಯವಾಗಿರುವ ಸಂದರ್ಭಗಳಿವೆ. ಅಂಥ ಕ್ರಿಯೆಗಳನ್ನು ಮುಂದೆ ಹೆಸರಿಸಲಾಗಿದೆ. ಉಪ್ಪಿನ ದ್ರಾವಣವನ್ನು ವಿದ್ಯುದ್ವಿಭಜನೆ ಮಾಡಿದಾಗ ಉತ್ಪತ್ತಿಯಾದ ಸೋಡಿಯಂ ನೀರಿನೊಡನೆ ವರ್ತಿಸಿ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣವಾಗುವುದು. ಹೈಡ್ರೋಜನ್ ಋಣಧ್ರುವದಲ್ಲೂ ಕ್ಲೋರಿನ್ ಧನ ಧ್ರುವದಲ್ಲೂ ಬಿಡುಗಡೆ ಆಗುವುವು. ಇವು ಉಪೋತ್ಪನ್ನಗಳು, ಹಾಗೆಯೇ ದ್ರವೀಕರಿಸಿದ ಉಪ್ಪನ್ನು ವಿದ್ಯುದ್ವಿಭಜನೆಗೆ ಒಳಪಡಿಸಿದರೆ ಋಣಧ್ರುವದಲ್ಲಿ ಸೋಡಿಯಂ ಲೋಹವೂ ಧನ ಧ್ರುವದಲ್ಲಿ ಕ್ಲೋರಿನ್ನೂ ಉತ್ಪತ್ತಿಯಾಗುವುವು. ಇವೆಲ್ಲ ಸಮಾನ ಪ್ರಾಮುಖ್ಯವಿರುವ ವಸ್ತುಗಳು.

ಕಬ್ಬಿನ ರಸದಿಂದ ಸಕ್ಕರೆಯನ್ನು ತಯಾರಿಸುವಾಗ ಅದರ ಒಂದು ಅಂಶ ಹರಳು ರೂಪಕ್ಕೆ ಬಾರದೆ ಉಳಿಯುವುದು. ಇದೇ ಕಾಕಂಬಿ. ಇದರಿಂದ ಆಲ್ಕೋಹಾಲ್ ಮತ್ತು ಇಂಗಾಲದ ಡೈ ಆಕ್ಸೈಡುಗಳನ್ನು ತಯಾರಿಸಲಾಗುತ್ತದೆ. ಉಳಿದ ಕಬ್ಬಿನ ಸಿಪ್ಪೆಯನ್ನು ಹದಮಾಡಿ ತೆಳುವಾದ ಹಲಗೆಗಳನ್ನು ಮಾಡಬಹುದು. ವಾಕ್ಚಿತ್ರಮಂದಿರಗಳ ಮೇಲ್ಹಾವಣಿಗೆ ಇದನ್ನು ಜೋಡಿಸಿದರೆ ಧ್ವನಿ ನಿಯಂತ್ರಣವಾಗಿ ಶ್ರೋತೃಗಳಿಗೆ ಹಿತವೆನಿಸುವುದು. ಸಲ್ಫೈಡ್ ಅದಿರುಗಳಿಂದ ತಾಮ್ರ, ಸತು ಮತ್ತು ಸೀಸಗಳನ್ನು ತಯಾರಿಸುವಾಗ ಹೇರಳವಾಗಿ ಗಂಧಕದ ಡೈ ಆಕ್ಸೈಡ್ ಹೊರಬೀಳುತ್ತದೆ. ಇದನ್ನು ಸಲ್ಫ್ಯೂರಿಕ್ ಆಮ್ಲವಾಗಿ ಪರಿವರ್ತಿಸಲಾಗುವುದು.

ಸಾಬೂನಿನ ತಯಾರಿಕೆಯಲ್ಲಿ ಗ್ಲಿಸರಾಲ್ ಉಪೋತ್ಪನ್ನವಾಗಿ ಸಿಕ್ಕುತ್ತದೆ. ಅದನ್ನು ಕಡಿಮೆ ಒತ್ತಡದಲ್ಲಿ ಸಾಂದ್ರೀಕರಿಸಬಹುದು ಅಥವಾ ಅಯಾನು ವಿನಿಮಯ ಅಂಟುಗಳನ್ನು ಬಳಸಿ ಶುದ್ಧಿಗೊಳಿಸಬಹುದು, ಪೆಟ್ರೋಲಿಯಂ ಎಣ್ಣೆಯನ್ನು ಆಂಶಿಕ ಬಾಷ್ಪ ಸಾಂದ್ರೀಕರಣ

ಮಾಡಿದಾಗ ಸಾಂದ್ರತೈಲ (ಹೆವಿ ಆಯಿಲ್) ಬೇರ್ಪಡುವುದು. ಇದರಲ್ಲಿ ಭಾರವಾದ ಹೈಡ್ರೊಕಾರ್ಬನ್ನುಗಳ ಅಣುಗಳಿರುತ್ತವೆ. ಸೂಕ್ತ ವೇಗವರ್ಧಕಗಳ ನೆರವಿನಿಂದ ಉನ್ನತ ಉಷ್ಣಕ್ಕೆ ಒಡ್ಡಿದಾಗ ಅವು ವಿಭಜಿಸಿ ಪೆಟ್ರೋಲಿನಂತಿರುವ ಎಣ್ಣೆ ಬರುತ್ತದೆ. ಆಗ ಪ್ರೊಪಿಲೀನ್ ಎಂಬ ಅಪರ್ಯಾಪ್ತ ಹೈಡ್ರೊಕಾರ್ಬನ್ ಲಭಿಸುತ್ತದೆ. ಇದನ್ನೂ ಸಹ ಗ್ಲಿಸರಾಲಿಗೆ ಮಾರ್ಪಡಿಸುವರು. ಹೀಗೆ ಉಪೋತ್ಪನ್ನಗಳನ್ನು ಬುದ್ಧಿವಂತಿಕೆಯಿಂದ ಬಳಸಿದರೆ ಉತ್ಪಾದನ ವೆಚ್ಚವನ್ನು ತಗ್ಗಿಸಿ ಮುಖ್ಯವಸ್ತುವನ್ನು ಆಕರ್ಷಕ ಬೆಲೆಗೆ ಒದಗಿಸಬಹುದು. (ಎಚ್.ಜಿ.ಎಸ್.)

**ಉಪ್ಪಿನಂಗಡಿ:** ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನಲ್ಲಿ ನೇತ್ರಾವತಿ ದಂಡೆಯ ಮೇಲಿರುವ ಒಂದು ಊರು. ಪುತ್ತೂರಿಗೆ 13ಕಿಮೀ ಈಶಾನ್ಯಕ್ಕಿದೆ. ಪ್ರಾಚೀನ ಕಾಲದಲ್ಲಿ ಸಮುದ್ರದಿಂದ ಹೇರಳವಾಗಿ ಉಪ್ಪು ತಯಾರಿಸಿ ತಂದು ಇಲ್ಲಿ ಮಾರುತ್ತಿದ್ದರು. ಘಟ್ಟದ ಮೇಲಿನವರು ದವಸ, ಸಂಬಾರ ಮತ್ತಿತರ ತಮ್ಮ ವಸ್ತುಗಳನ್ನು ನೀಡಿ ಉಪ್ಪು ಮತ್ತಿತರ ವಸ್ತುಗಳನ್ನು ಕೊಂಡುಕೊಂಡು ಹೋಗುತ್ತಿದ್ದರು. ಆದ್ದರಿಂದ ಈ ಸ್ಥಳಕ್ಕೆ ಉಪ್ಪಿನಂಗಡಿ ಎಂಬ ಹೆಸರು ಬಂದಿತು. ಶ್ರೀರಂಗಪಟ್ಟಣದ ಪತನದ ತರುವಾಯ 1800ರಲ್ಲಿ ಈ ನಗರವನ್ನು ವಶಪಡಿಸಿಕೊಳ್ಳಲು ವಿಠಲ ಹೆಗ್ಗಡೆ ಹಾಗೂ ಸುಬ್ಬರಾವ್ ಪ್ರಯತ್ನಿಸಿದ್ದರು. 1882ರಲ್ಲಿ ಪುತ್ತೂರು ತಾಲ್ಲೂಕು ಆಗುವವರೆಗೆ ಉಪ್ಪಿನಂಗಡಿ ಅದೇ ಹೆಸರಿನ ತಾಲ್ಲೂಕಿನ ಕೇಂದ್ರವಾಗಿತ್ತು.

ತುಳು ಭಾಷೆಯಲ್ಲಿ ಈ ಊರನ್ನು ಉಬಾರ್ ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನದಿಗಳಾದ ನೇತ್ರಾವತಿ ಮತ್ತು ಕುಮಾರಧಾರಾಗಳು ಇಲ್ಲಿ ಸಂಗಮಿಸುತ್ತವೆ. ಇದೊಂದು ಪ್ರಮುಖ ಪುಣ್ಯ ಕ್ಷೇತ್ರವೆಂದು ಪರಿಗಣಿತವಾಗಿದೆ. ನೇತ್ರಾವತಿ ನದಿಯ ನಡುವೆ ಸಹಸ್ರಲಿಂಗೇಶ್ವರ ಲಿಂಗವಿದೆ. ದಡದ ಮೇಲೆ ಈ ದೇವರ ಗುಡಿಯೂ ಇದೆ. ಈಶ್ವರನ ಪರಿವಾರದೇವತೆಗಳಾದ ಕಲ್ಕುಡದೈವ ಮತ್ತು ಮಾಂಕಾಳಿಯ ಗುಡಿಗಳು ಸಮೀಪದಲ್ಲಿವೆ. ಕುಂಭಮಾಸದಲ್ಲಿ ಇಲ್ಲಿ ಮೂರು ಜಾತ್ರೆಗಳು ನಡೆಯುತ್ತವೆ. ಇಲ್ಲಿ 400 ವರ್ಷಗಳಷ್ಟು ಹಳೆಯದಾದ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನವಿದೆ. ಉಪ್ಪಿನಂಗಡಿ ಮೂಲಕ ಹಾಸನ ಮಂಗಳೂರು ಹೆದ್ದಾರಿ ಹಾದು ಹೋಗುತ್ತದೆ. ಇಲ್ಲಿ ಪ್ರಥಮದರ್ಜೆಯ ಕಾಲೇಜಿದೆ. *

**ಉಪ್ಪಿನ ಕುದುರು ಕೊಗ್ಗ ಕಾಮತ್:** 1921–2003. ಯಕ್ಷಗಾನ ಗೊಂಬೆಯಾಟದ ಹೆಸರಾಂತ ಕಲಾವಿದರು. ಇಂದಿನ ಉಡುಪಿಜಿಲ್ಲೆ ಕುಂದಾಪುರ ತಾಲ್ಲೂಕಿನ ಉಪ್ಪಿನಕುದುರು ಗ್ರಾಮದಲ್ಲಿ 1921 ನವೆಂಬರ್ 27ರಂದು ಜನಿಸಿದರು. ರಾಷ್ಟ್ರಪ್ರಶಸ್ತಿ ವಿಜೇತ ಉಪ್ಪಿನ ಕುದುರು ದೇವಣ್ಣ ಕಾಮತ್ ಇವರ ತಂದೆ, ತಾಯಿ ರಾಧಾಬಾಯಿ. ವಂಶ ಪಾರಂಪರ್ಯವಾಗಿ ಯಕ್ಷಗಾನ ಗೊಂಬೆಯಾಟ ಕಲೆಯನ್ನು ಮುಂದುವರೆಸಿಕೊಂಡು ಬಂದ ತಂದೆಯಿಂದ ತರಬೇತಿ, ಅನುಭವ ಪಡೆದ ಕೊಗ್ಗ ಕಾಮತರು ಗೊಂಬೆಯಾಟಕ್ಕೆ ಹೊಸತನ ಹಾಗೂ ಜೀವಂತಿಕೆ ತುಂಬಿದರು. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಬಳಿಕ ತಮ್ಮ ತಂದೆ ಹಾಗೂ ಅಜ್ಜ ನಾಗಪ್ಪ ಭಾಗವತರ ಆಟಗಳನ್ನು ನೋಡಿ ತರಬೇತಿ ಪಡೆದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ತಂದೆಯ ಗೊಂಬೆಯಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಶೃಂಗೇರಿಯಲ್ಲಿ ಪ್ರದರ್ಶನ ಮಾಡುವ ಹೊತ್ತಿಗೆ (1941) ಆರ್ಥಿಕ ಮುಗ್ಗಟ್ಟು ಹಾಗೂ

ಸಾರ್ವಜನಿಕ ಪ್ರೋತ್ಸಾಹವಿಲ್ಲದೆ ತಮ್ಮ ತಂದೆ ಹತ್ತು ಎಕರೆ ಜಮೀನು ಕಳೆದುಕೊಂಡಿದ್ದನ್ನು ನೋಡಿದ್ದರು. ಆದ್ದರಿಂದ ಈ ಕಲೆಯನ್ನಾಧರಿಸಿದರೆ ಉದರ ನಿರ್ವಹಣೆಗೆ ತೊಂದರೆಯಾಗಬಹುದೆಂದು ಭಾವಿಸಿ ನಾಗಪುರ, ಪುಣೆ, ಮುಂಬಯಿಗಳಲ್ಲಿ ಕೆಲಕಾಲ ನೌಕರಿ ಮಾಡಿದರು. ಹದಿನಾಲ್ಕು ವರ್ಷಗಳ ಅನಂತರ ಕಲೆಯ ತುಡಿತದಿಂದ ಮರಳಿ ಊರಿಗೆ ಬಂದರು (1955). ಬಣ್ಣ ಕಳೆದುಕೊಂಡು, ವೇಷ ಹರಿದುಕೊಂಡು ಮೂಲೆಯಲ್ಲಿ ಬಿದ್ದ ಗೊಂಬೆಗಳನ್ನು ಕೈಗೆತ್ತಿಕೊಂಡು ಅವಕ್ಕೆ ಹೊಸರೂಪ ಕೊಡಲು ಮುಂದಾದರು. ಅಲ್ಲಲ್ಲಿ ಪ್ರದರ್ಶನ ನೀಡಲಾರಂಭಿಸಿದರು. ಆದರೂ ಜೀವನ ಸಾಗಿಸುವುದು ಕಷ್ಟವಾದಾಗ ಕುಂದಾಪುರದ ಒಂದು ಕಟ್ಟಿಗೆ ಕೊರೆಯುವ ಮಿಲ್ಲಿನಲ್ಲಿ ಕೆಲಸಕ್ಕೆ ಸೇರಿಕೊಂಡರು.

ಕಮಲಾದೇವಿ ಚಟ್ಟೋಪಾಧ್ಯಾಯರ ಪ್ರೋತ್ಸಾಹದಿಂದ ಹ್ಯಾಂಡಿಕ್ರಾಫ್ಟ್ ಬೋರ್ಡಿನಿಂದ ಆರಂಭವಾದ ಟ್ರೈನಿಂಗ್ ಸೆಂಟರ್ ಕಾರಣಾಂತರಗಳಿಂದ ಮುಚ್ಚಿಹೋಗಿದ್ದರೂ (1966) ತಯಾರಾದ ಗೊಂಬೆಗಳು ಸುಸ್ಥಿತಿಯಲ್ಲಿದ್ದವು. ಇಂಥ ಸಂದರ್ಭದಲ್ಲಿ ಮೈಸೂರು ಎಜ್ಯುಕೇಶನಲ್ ಕಲ್ಚರಲ್ ಅಂಡ್ ಸರ್ವಿಸ್ ಕೋ–ಆಫ್ ಸಂಸ್ಥೆಯವರು ಆರ್ಥಿಕ ಸಹಾಯಕ ಮಾಡಿ ಗೊಂಬೆಯಾಟ ತರಬೇತಿ ಕೇಂದ್ರ ನಡೆಸುವಂತೆ ಮಾಡಿದರು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯೂ ಕೊಂಚ ಆರ್ಥಿಕ ನೆರವು ನೀಡಿತು. ಈ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಗೆ ಅಕಾಡೆಮಿ ನೆರವು ನೀಡಲು ಮುಂದೆ ಬಂದರೂ ಕಾರಣಾಂತರಗಳಿಂದ ಕಾಮತರು ಅದನ್ನು ಸ್ವೀಕರಿಸಲಿಲ್ಲ.

ಕೇಂದ್ರ ಸಂಗೀತ ನಾಟಕ ಅಕಾಡೆಮಿ ದೆಹಲಿಯಲ್ಲಿ ನಡೆಸಿದ ಮುಖವಾಡ ಮತ್ತು ಗೊಂಬೆಗಳ ಉತ್ಸವಕ್ಕೆ ಕೊಗ್ಗ ಕಾಮತರನ್ನು ಆಹ್ವಾನಿಸಿತ್ತು (1972). ಅದೇ ವರ್ಷ ರಾಜ್ಯ ಸಾಹಿತ್ಯ ಅಕಾಡೆಮಿಯ ಸಹಕಾರದಿಂದ ಶಿವರಾಮ ಕಾರಂತರು ಏರ್ಪಡಿಸಿದ ಗೊಂಬೆಗಳ ಉತ್ಸವದಲ್ಲಿ ಭಾಗವಹಿಸಿ ಇವರು ಪ್ರಥಮ ಬಹುಮಾನ ಪಡೆದರು. ಕೇಂದ್ರ ಸಾಹಿತ್ಯ ಅಕಾಡೆಮಿ ದೆಹಲಿಯಲ್ಲಿ ವಿಚಾರಗೋಷ್ಠಿ ಏರ್ಪಡಿಸಿದಾಗ (1972), ಇವರ ಗೊಂಬೆಯಾಟ ಪ್ರದರ್ಶನಗೊಂಡಿತು. ಮುಂಬಯಿಯ ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆ ಇವರನ್ನು ಆಮಂತ್ರಿಸಿ ಪ್ರದರ್ಶನ ಏರ್ಪಡಿಸಿದಾಗ (1976) ದೇಶವಿದೇಶಗಳಿಂದ ಬಂದ ಜನ ಇವರ ಗೊಂಬೆಯಾಟದ ಪ್ರದರ್ಶನ ನೋಡಿ ತಮ್ಮಲ್ಲಿ ಪ್ರದರ್ಶನ ನೀಡಲು ಇವರನ್ನು ಆಹ್ವಾನಿಸಿದರು.

ಕೊಗ್ಗ ಕಾಮತರ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯೊಂದಿಗೆ ಸಂಪರ್ಕ ಹೊಂದಿದ ಕೆ.ಎಸ್. ಉಪಾಧ್ಯಾಯರ ಮೂಲಕ ಇವರು ಯುರೋಪ್ ದೇಶದ ವಿವಿಧ ಭಾಗಗಳಲ್ಲಿ ಪ್ರದರ್ಶನ ನೀಡಿ ಅಪಾರ ಜನಪ್ರಿಯತೆ ಗಳಿಸಿದರು (1978–79).

ಫ್ರಾನ್ಸಿನ ರೆನ್ನೆಯಲ್ಲಿ ನಡೆದ ಐದನೆಯ ಸಾಂಪ್ರದಾಯಿಕ ಕಲೆಗಳ ಉತ್ಸವದಲ್ಲಿ ಕಾಮತರು ಪಾಲ್ಗೊಂಡರು (1978). ಪ್ಯಾರಿಸ್‌ನಗರವೂ ಸೇರಿದಂತೆ ಫ್ರಾನ್ಸಿನ ಪ್ರಮುಖ ನಗರಗಳಲ್ಲಿ ಪ್ರದರ್ಶನ ನೀಡಿ ಭಾರತದ ಈ ಕಲೆಗೆ ಪ್ರತಿಷ್ಠೆ ತಂದುಕೊಟ್ಟರು. ಮೊದಲ ವಿದೇಶ ಯಾತ್ರೆಯಲ್ಲಿ ಜಯಭೇರಿ ಬಾರಿಸಿದ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯನ್ನು ಫ್ರಾನ್ಸ್ ಮತ್ತೊಮ್ಮೆ ಆಹ್ವಾನಿಸಿ ಫ್ರಾನ್ಸಿನ ಲೀಲೆ ಉತ್ಸವದಲ್ಲಿ ಭಾಗವಹಿಸುವಂತೆ ಮಾಡಿದ್ದಲ್ಲದೆ ಇನ್ನೂ ಅನೇಕ ಕಡೆ ಪ್ರದರ್ಶನ ಏರ್ಪಡಿಸಿತು (1979).

ದಿ ರಾಯಲ್ ಟ್ರಾಫಿಕಲ್ ಇನ್‌ಸ್ಟಿಟ್ಯೂಟ್ ಆಫ್ ಆಮ್‌ಸ್ಟರ್‌ಡ್ಯಾಮ್, ಹಾಲೆಂಡ್ ಎಂಬ ಸಂಸ್ಥೆ ಈ ಯಕ್ಷಗಾನ ಗೊಂಬೆಯಾಟ ಮಂಡಳಿಯನ್ನು ಆಹ್ವಾನಿಸಿ ಆಮ್‌ಸ್ಟರ್ ಡ್ಯಾಮ್ ಮತ್ತು ಬ್ರಿಡಾಗಳಲ್ಲಿ ಪ್ರದರ್ಶನ ಏರ್ಪಡಿಸಿತ್ತು.

ಯಕ್ಷಗಾನ ಗೊಂಬೆಯಾಟವನ್ನು ಜನಪ್ರಿಯಗೊಳಿಸಿದ ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದವು– ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1979), ರಾಜ್ಯೋತ್ಸವ ಪ್ರಶಸ್ತಿ (1985), ಮಧ್ಯಪ್ರದೇಶ ಸರ್ಕಾರದ ಪ್ರತಿಷ್ಠಿತ ತುಳಸಿ ಸಮ್ಮಾನ (1995). ಕು.ಶಿ. ಹರಿದಾಸಭಟ್ಟರು ಕೊಗ್ಗ ಕಾಮತರ ಗೊಂಬೆಗಳು ಎಂಬ ಪುಸ್ತಕ ಬರೆದಿದ್ದಾರೆ.

ಕಾಮತರು ಸ್ವತಃ ತಯಾರಿಸುತ್ತಿದ್ದ ಗೊಂಬೆಗಳಿಗೂ ಬೇಡಿಕೆಯಿತ್ತು. ಈ ಗೊಂಬೆಗಳು ದೇಶ ವಿದೇಶದ ಅನೇಕ ವಸ್ತು ಸಂಗ್ರಹಾಲಯಗಳನ್ನಲಂಕರಿಸಿವೆ. ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಈ ಕಲೆಯ ಬೆನ್ನು ಬಿಡದೆ ಶ್ರೀಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯನ್ನು ಬದುಕಿಸಿಕೊಂಡು ಬಂದರು. ಲಕ್ಷ್ಮೀದೇವಿ ಇವರ ಪತ್ನಿ. ಈ ದಂಪತಿಗಳಿಗೆ ಒಬ್ಬ ಮಗ, ನಾಲ್ವರು ಹೆಣ್ಣು ಮಕ್ಕಳು. ಕೊಗ್ಗ ಕಾಮತರ ಮಗ ಭಾಸ್ಕರ ಕಾಮತರು 2003 ಆಗಸ್ಟ್ 27ರಂದು ನಿಧನರಾದರು. ಕೊಗ್ಗಕಾಮತರು ತಮ್ಮ ತಂದೆಯ ಕಲೆಯನ್ನು ಮುಂದುವರಿಸಿಕೊಂಡು ಬಂದರು. (ಎಸ್.ಎಂ.ಕೆ.)

**ಉಪ್ಪಿನ ಕುದುರು ದೇವಣ್ಣ ಕಾಮತ್:** 1888 1971. ಯಕ್ಷಗಾನ ಗೊಂಬೆಯಾಟ ದಲ್ಲಿ ರಾಷ್ಟ್ರಪ್ರಶಸ್ತಿ ಗಳಿಸಿದ ಕಲಾವಿದ. ಇಂದಿನ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಉಪ್ಪಿನಕುದುರುವಿನಲ್ಲಿ 1888 ಸೆಪ್ಟೆಂಬರ್ 17ರಂದು ಜನಿಸಿದರು. ಇವರ ಹಿರಿಯರು ಈ ಕಲೆಯನ್ನು ಪೋಷಿಸಿಕೊಂಡು ಬಂದದ್ದರಿಂದ ಇವರ ಮನೆತನಕ್ಕೆ ಭಾಗವತರ ಮನೆ ಎಂಬ ಹೆಸರು ಬಂತು. ಇವರ ತಂದೆ ವೆಂಕಟರಮಣ ಕಾಮತ್. ಆರಂಭದಲ್ಲಿ ಇವರಿಗೆ ಪ್ರಾಥಮಿಕ ಶಿಕ್ಷಣ ಮಾತ್ರ ದೊರೆತಿತ್ತು. ತಮ್ಮ ತಂದೆ ಹಾಗೂ ಅಜ್ಜ ಲಕ್ಷ್ಮಣಕಾಮತರಿಂದ ತರಬೇತಿ ಪಡೆದರು. ಅನಂತರ ಇವರು ತಮ್ಮ ಮಗ ಉಪ್ಪಿನಕುದುರು ಕೊಗ್ಗ ಕಾಮತರೊಂದಿಗೆ ಏನೋಡಿವಿ ದೇಶದ ಬೇರೆ ಬೇರೆ ಭಾಗಗಳಲ್ಲಿ ಯಕ್ಷಗಾನ ಗೊಂಬೆಯಾಟದ ಪ್ರದರ್ಶನ ನೀಡಿ ಈ ಕಲೆಯ ಪ್ರಚಾರಕ್ಕೆ ಕಾರಣರಾದರು. ಇವರ ಪತ್ನಿ ರಾಧಾಬಾಯಿ. ಈ ದಂಪತಿಗಳಿಗೆ 3 ಗಂಡು, 3 ಹೆಣ್ಣು ಮಕ್ಕಳು.

ದೇವಣ್ಣ ಕಾಮತರು ಸ್ವತಃ ಯಕ್ಷಗಾನ ಕಲೆಯಲ್ಲಿ ನುರಿತವರಾದುದರಿಂದ ರಾಮಾಯಣ, ಮಹಾಭಾರತದ ಪ್ರಸಂಗಗಳಿಗೆ ಗೊಂಬೆಯ ಕುಣಿತ ಹೊಂದಿಸಿ ಅದೊಂದು ಮನರಂಜನೆಯ ಆಟ ವಾಗುವಂತೆ ಮಾಡಿದರು. ಯಕ್ಷಗಾನ ವೇಷಭೂಷಣ ಮುಖವರ್ಣಿಕೆಗೆ ಹೊಂದುವ ಗೊಂಬೆಗಳನ್ನು ತಾವೇ ತಯಾರಿಸಿದರು. ಪಾತ್ರಗಳಿಗೆ ಸೂಕ್ತವಾದ ವಸ್ತ್ರಾಲಂಕಾರ ಮಾಡಿ, ಹಿನ್ನೆಲೆಯಲ್ಲಿ ಯಕ್ಷಗಾನ ಸಂಗೀತ ಅಳವಡಿಸಿ ಗೊಂಬೆಗಳೂ ಮನುಷ್ಯರಂತೆ ಹಾವಭಾವ

ಪೂರ್ಣವಾಗಿ ಕುಣಿಯುವಂತೆ ಮಾಡುವಲ್ಲಿ ಯಶಸ್ವಿಯಾದರು. ದೊಡ್ಡ ಆಕಾರದ ಮೂರ್ತಿಗಳ ರಚನೆ ಮಾಡಿ ಅವುಗಳ ಚಲನವಲನಕ್ಕೆ ಯೋಗ್ಯವಾದ ಸೂತ್ರಗಳನ್ನು ಜೋಡಿಸಿದ್ದು ಇವರ ಬಹು ದೊಡ್ಡ ಸಾಧನೆ.

1966ರಲ್ಲಿ ದೆಹಲಿಯ ಗಣರಾಜ್ಯೋತ್ಸವ ಸಮಾರಂಭಕ್ಕೆ ಆಮಂತ್ರಿತರಾದ ಇವರು ಅಂದಿನ ರಾಷ್ಟ್ರಪತಿ ಎಸ್. ರಾಧಾಕೃಷ್ಣನ್ ಅವರಿಂದ ರಾಷ್ಟ್ರಪ್ರಶಸ್ತಿ ಪಡೆದರು. ಆರ್ಥಿಕ ತೊಂದರೆಗಳ ನಡುವೆಯೂ ಇವರು ಛಲ ಮತ್ತು ನಿಷ್ಠೆಯಿಂದ ಈ ಕಲಾ ಸಂಪ್ರದಾಯವನ್ನು ಉಳಿಸಲು ಮತ್ತು ಬೆಳೆಸಲು ತುಂಬ ಪರಿಶ್ರಮಿಸಿದರು. ಕಮಲಾ ದೇವಿ ಚಟ್ಟೋಪಾಧ್ಯಾಯರ ನಿರ್ದೇಶನದಲ್ಲಿ ಸೆಂಟ್ರಲ್ ಹ್ಯಾಂಡಿಕ್ರಾಫ್ಟ್ ಬೋರ್ಡಿನ ಸಹಾಯದಿಂದ ಯಕ್ಷಗಾನ ಗೊಂಬೆಯಾಟ ತರಬೇತಿ ಕೇಂದ್ರವನ್ನು ಆರಂಭಿಸಿ ಅನೇಕ ವಿದ್ಯಾರ್ಥಿಗಳಿಗೆ ಈ ಕಲೆಯ ಪರಿಚಯ ಮಾಡಿಕೊಟ್ಟರು ಎ1966 68ಏ. ಇವರು 1971 ಜುಲೈ 20ರಂದು ನಿಧನರಾದರು. *

**ಉಪ್ಪಿನ ಕಾಯಿ:** ಉಪ್ಪು, ಹುಳಿ(ಆಮ್ಲ), ಕಾರ, ಕಾಡಿ (ವಿನೇಗರ್), ಎಣ್ಣೆ, ಸಕ್ಕರೆ ಇಲ್ಲವೇ ಇವುಗಳ ಮಿಶ್ರಣದಲ್ಲಿ ಊರಿಟ್ಟ ಹಸಿಯ ಹುಳಿಗಾಯಿ, ತರಕಾರಿ ತೆರನ ವಸ್ತುಗಳೇ ಉಪ್ಪಿನಕಾಯಿ (ಪಿಕ್ಲ್). ಬಹುಬೇಗ ಕೆಟ್ಟುಹೋಗುವ ಇಂಥ ಪದಾರ್ಥಗಳನ್ನು ಬಹುದಿನ ಕೆಡದಂತಿರಿಸಲು ಈ ವಿಧಾನವನ್ನು ಬಳಸುತ್ತಾರೆ. ಅಂದರೆ ರುಚಿಗೆ ತಕ್ಕಂತೆ ಉಪ್ಪಿನಕಾಯಿಯಲ್ಲಿ ಸಿಹಿ, ಹುಳಿ, ಎಂಬ ಎರಡು ಬಗೆಯವಿದೆ. ಉಪ್ಪಿನಕಾಯಿಗಳ ಹೆಚ್ಚಿನ ನೆರವು ಮೈಗೆ ಬಲು ಮುಖ್ಯವಾದ ಸಿ ಜೀವಾತನ್ನು ಕಾಲವಲ್ಲದ ಕಾಲಗಳಲ್ಲೂ ಸುಲಭವಾಗಿ ಒದಗಿಸುವುದು. ಅಲ್ಲದೆ ಹುಳಿಯಿಂದ ಹಸಿವು ಹುಟ್ಟಿ, ಜೊಲ್ಲೂ ಜಠರ ರಸವೂ ಹೆಚ್ಚು ಸುರಿವಂತಾಗುವುದರಿಂದ, ಹಸಿ ತರಕಾರಿ, ಮಾಂಸ, ಮೀನು ಮತ್ತಿತರ ರುಚಿಯಿಲ್ಲದ ಆಹಾರ ಪದಾರ್ಥಗಳೊಂದಿಗೂ ಹಸಿವು ಕುಂದಿರುವಾಗಲೂ ಬಳಕೆಗೆ ಬರುತ್ತದೆ. ಇದರಿಂದಲೇ ಜಠರದಲ್ಲಿ ಹುಣ್ಣಾಗಿರುವವರೂ ಉಪ್ಪಿನ ಪಥ್ಯ ಇರುವವರೂ ಇವನ್ನು ತಿನ್ನುವಂತಿಲ್ಲ. ಉಪ್ಪಿನಕಾಯಿಗಳನ್ನು ಮಿತವಾಗಿ ಬಳಸಿದರೆ ಬಲು ಆರೋಗ್ಯಕರ, ನಂಜಿಕೆಗೂ ಒಳ್ಳೆಯದು, ರುಚಿಗೂ ಹಿತಕರ.

ಹುಳಿಗಾಯನ್ನೂ ತರಕಾರಿಗಳನ್ನೂ ಈ ರೀತಿ ಕೆಡದಂತೆ ಇರಿಸುವ ವಿಧಾನಕ್ಕೆ ಊರಿಡಿಕೆ ಎಂದು ಹೆಸರು (ಪಿಕ್ಲಿಂಗ್). ಕ್ರಿಯೋಸೋಟು, ಮೈಲುತುತ್ತ (ಕಾಪರ್ ಸಲ್ಫೇಟು), ಹಾಲುತುತ್ತ (ಜಿಂಕ್ ಸಲ್ಫೇಟು) ಮತ್ತಿತರ ರಾಸಾಯನಿಕ ದ್ರಾವಣಗಳಲ್ಲಿ ಮರವನ್ನು ಜೋಪಾನಿಸುವುದಕ್ಕೂ ಇದೇ ಹೆಸರಿದೆ. ಕೆಲವು ಬಗೆಗಳ ಉಕ್ಕನ್ನು ಗಂಧಕಾಮ್ಲದಲ್ಲಿ ಊರಿಡುವುದುಂಟು. ಲೋಹ ಎರಕ ಹೊಯ್ಯುವಲ್ಲೂ ಹದಮಾಡಿ ಚರ್ಮ ತಯಾರಿಸುವುದರಲ್ಲೂ ಊರಿಡಿಕೆ ಬಳಕೆಯಲ್ಲಿದೆ.

**ಶಾಕಾಹಾರ ಊರಿಡಿಕೆ:** ಚಳಿಗಾಲ, ಮಳೆಗಾಲಗಳಲ್ಲಿ ಸಿಗದ ಹಸಿಯ ಕಸುಗಾಯಿ, ದೋರಹಣ್ಣುಗಳನ್ನು ಉಪ್ಪು, ಕಾರ, ಕಾಡಿಗಳೊಂದಿಗೆ ಜೋಪಾನಿಸಿಡುವುದು ಆದಿಕಾಲದಿಂದಲೂ ಬಂದ ಒಂದು ಒಳ್ಳೆಯ ಪದ್ಧತಿ, ಊರಿಡುವ ಈ ಹಳೆಯ ವಿಧಾನದ ಬದಲಾಗಿ ಈಗ ಡಬ್ಬಿ ತುಂಬುವ, ಶೀತಕಗಳೇ ಮುಂತಾದವಲ್ಲಿ ಕೆಡದಂತಿರಿಸುವ, ನೀರ್ಗಳೆತದ ವಿಧಾನಗಳು ಹೆಚ್ಚು ಹೆಚ್ಚಾಗಿ ಜಾರಿಗೆ ಬರುತ್ತಿದೆ.

ಮುಂದುವರಿದ ನಾಡುಗಳಲ್ಲಿ ಉಪ್ಪಿನಕಾಯಿಗಾಗಿ ಊರಿಡಬಹುದಾದ ಆಹಾರ ವಸ್ತುಗಳೆಂದರೆ ಈರುಳ್ಳಿ, ಹಸಿರು ಮೆಣಸು, ಟೊಮ್ಯಾಟೊ ಕಾಯಿ, ಹೂ ಕೋಸು ಸೌತೆಕಾಯಿ, ಎಳೆಸೌತೆಕಾಯಿ, ಪೀಚುಹಣ್ಣು, ಪೇರೆಹಣ್ಣು, ಕಲ್ಲಂಗಡಿಕಾಯಿ, ಕೆಂಪು ಕೋಸುಗಡ್ಡೆ, ಬೀಟ್‌ಗೆಡ್ಡೆ, ಅಕ್ರೋಡು–ಮುಂತಾದವು. ಆಗ ತಾನೇ ಕೊಯ್ದು ತಂದ ಈ ತರಕಾರಿಗಳ ಜೊತೆಗೆ 20–24% ಹಾಲಿನಾಮ್ಲ (ಲ್ಯಾಕ್ಟಿಕ್ ಆಸಿಡ್) ತಯಾರಾಗುವಂತೆ ಹುಳಿ ಹಿಡಿಯುವುದು. ಅವು ಮೆತ್ತಗಾಗಿ ರುಚಿಕರವೂ ಸುವಾಸನಾಯುಕ್ತವೂ ಆಗುವುವು. ನೀರಲ್ಲಿ ಕದಡಿ ಅರೆಪಾಲು ಉಪ್ಪು ತೆಗೆದುಹಾಕಿದಮೇಲೆ, ಊರಿಟ್ಟ ತರಕಾರಿಗಳನ್ನು ಸಂಬಾರ ಪುಡಿ ಬೆರೆತ ಕಾಡಿಯಲ್ಲಿ ಇಡುವರು. ಅಮೆರಿಕ ಸಂಸ್ಥಾನಗಳಲ್ಲಿ, ಸೌತೆಕಾಯಿ ಉಪ್ಪಿನಕಾಯಿ ಹೇರಳವಾಗಿ ರೂಢಿಯಲ್ಲಿದೆ. ಎರಡು ಬಗೆಯವು ಬಳಕೆಯಲ್ಲಿ ಹೆಚ್ಚಾಗಿವೆ. ಹೋಳುಗಳಾಗಿ ತಯಾರಿಸಲು ಬಿಳಿಯದನ್ನೂ ಉಪ್ಪಿನಕಾಯಿಗಾಗೇ ಬೆಳೆದ ಹಸಿರುಗಾಯನ್ನೂ ಬಳಸುವರು. ಹಸಿಯ ಸೌತೆಕಾಯಿಯ, ಎಲ್ಲ ಬಗೆಗಳನ್ನೂ ಹಸಿಯದಾಗಿ ತಂದು ತೊಳೆದು ಇಡೀ ಕಾಯನ್ನೋ ಹೋಳುಗಳನ್ನೋ ಗಾಜಿನ ಸೀಸೆಗಳಲ್ಲಿ ಹಾಕಿ, ಉಪ್ಪು, ಅಸಿಟಿಕ್ ಆಮ್ಲ, ಸಕ್ಕರೆ, ಅರಿಸಿನ, ಪಕ, ಸಂಬಾರವಸ್ತುಗಳನ್ನು ಹಾಕಿ, ಆಮೇಲೆ ಪ್ಯಾಶ್ಚರೀಕರಿಸುವರು. ಉಪ್ಪಿನಕಾಯಿ ಕೈಗಾರಿಕೆ ಯುರೋಪ್, ಹಾಲೆಂಡ್, ಫ್ರಾನ್ಸ್, ಇಟಲಿಗಳಲ್ಲಿ ಹೆಚ್ಚಾಗಿದೆ.

ಉಪ್ಪಿನಕಾಯಿ ಕೆಡದಿರಲು ಮುಖ್ಯಕಾರಣ ಕಾಯಲ್ಲಿರುವ ಹುಳಿ, ಮೇಲೆ ಹಾಕುವ ಉಪ್ಪು, ಸಿಹಿ ಉಪ್ಪಿನ ಕಾಯಿಗಳಲ್ಲಿ ಸಕ್ಕರೆ ಜೋಪಾಸನೆಗೆ ನೆರವಾಗುವುವು. ಆಹಾರ ಕೆಡದಂತೆ ಜೋಪಾನಿಸಿಡುವ ಉಪ್ಪಿನಗುಣಕ್ಕೆ ಬಹುಮಟ್ಟಿಗೆ ಅದರ ನೀರ್ಗಳೆತವೇ (ಡಿಹೈಡ್ರೇಷನ್) ಕಾರಣ. ಅಲ್ಲದೆ, ಆಮ್ಲಜನಕ ಕಳೆತ, ಪ್ರೋಟೀನುಲಯಕ ಕಿಣ್ವಗಳು (ಪ್ರೋಟಿಯೊಲಿಟಿಕ್ ಎಂಜೈಮ್ಸ್) ಬೇಗನೆ ವರ್ತಿಸುವುದರ ತಡೆ, ಉಪ್ಪಿನಲ್ಲಿರುವ ಕ್ಲೋರಿನ್ ಅಯಾನಿನ ನೇರ ಪರಿಣಾಮಗಳೂ ಇವೆ. ಉಪ್ಪು, ನೀರು, ಕಾಡಿ, ದುರ್ಬಲ ಆಮ್ಲ ಮುಂತಾದುವಕ್ಕೆ ಏಕಾಣುಜೀವಿಬಂಧಕ (ಬ್ಯಾಕ್ಟೀರಿಯೊಸ್ಟ್ಯಾಟಿಕ್) ಗುಣವಿದೆ. ಅವುಗಳ ಸಾರಗಳ ಮಟ್ಟಕ್ಕೆ ತಕ್ಕ ಹಾಗೆ ದುರ್ಬಲವಾದ ಜೀವಾಣುನಾಶಕ ಗುಣವೂ ಇರುವುದು.

**ವಿಧಾನ:** ಭಾರತದಲ್ಲಿ ರೂಢಿಯಲ್ಲಿರುವ ಉಪ್ಪಿನಕಾಯಿಯ ಒಂದು ವಿಧಾನವನ್ನು ಉದಾಹರಿಸಬಹುದು. ಬಳಸುವ ಸಾಮಾನುಗಳಿವು:

| | | | |
|---|---|---|---|
| ನಿಂಬೆಯ ಹಣ್ಣುಗಳು | 25 | ನೆಲ್ಲಿಕಾಯಿ | 1 ಕಿ.ಗ್ರಾಂ. |
| ಹಸಿಶುಂಠಿ | 50ಗ್ರಾಂ. | ಮಾಕಳಿಬೇರು | 50 ಗ್ರಾಂ |
| ಹಸಿಮೆಣಸಿನಕಾಯಿ | 10 ಗ್ರಾಂ. | ಉಪ್ಪು | ಕಿ.ಗ್ರಾಂ. |
| ಅರಿಸಿನ ಪುಡಿ | 1 1/4 ಚಹ | ಚಮಚ ಸಾಸುವೆ | 1½ ದೊಡ್ಡ ಚಮಚ |
| ಒಣಮೆಣಸಿನಕಾಯಿ | 100 ಗ್ರಾಂ. | ನೀರು | 1 ಲೀಟರ್ |

ನಿಂಬೆಯ ಹಣ್ಣುಗಳನ್ನು ನೀರಿನಿಂದ ಚೆನ್ನಾಗಿ ತೊಳೆದು ಶುದ್ಧವಾದ ಬಟ್ಟೆಯಿಂದ ಒರೆಸಬೇಕು. ಅನಂತರ ಅವನ್ನು ಶುಭ್ರವಾದ ಒಂದು ಜಾಡಿಯಲ್ಲಿ ಸಣ್ಣಗೆ ಹೆಚ್ಚಿ ಹಾಕಿ, ಉಪ್ಪನ್ನೂ ಬೆರೆಸಿ ಚೆನ್ನಾಗಿ ಕೆದಕಿ ಭದ್ರವಾಗಿ ಮುಚ್ಚಳ ಮುಚ್ಚಿಡಬೇಕು. ಬಿಳಿಯ ಒಂದು ಶುಭ್ರವಾದ ಬಟ್ಟೆಯನ್ನು ಜಾಡಿಯ ಬಾಯಿಗೆ ಕಟ್ಟಿ ಶುಚಿಯಾದ ಸ್ಥಳದಲ್ಲಿ ಅದನ್ನು ಇಡುವುದೊಳ್ಳೆಯದು. ಎರಡು. ಮೂರು ದಿವಸಗಳಾದ ಮೇಲೆ, ನೆಲ್ಲಿಕಾಯಿಗಳನ್ನು ಎರಡೆರಡುಭಾಗಗಳಾಗಿ ಮಾಡಿ ನೀರಿನಿಂದ ಚೆನ್ನಾಗಿ ತೊಳೆದು ಒರೆಸಿ, ಜಾಡಿಯಲ್ಲಿ ಹಾಕಬೇಕು. ಮಾಕಳಿ ಬೇರು ಹಸಿ ಶುಂಠಿ ಇವುಗಳ ಸಿಪ್ಪೆಯನ್ನು ತೆಗೆದು ಸಣ್ಣಗೆ ಹೆಚ್ಚಿ ತೊಳೆದು ಒರೆಸಿ ಜಾಡಿಯಲ್ಲಿರುವ ಉಪ್ಪಿನ ಕಾಯಿಯ ಜೊತೆಗೆ ಕೂಡಿಸಬೇಕು. ಬೇಕೆಂದವರು ನಾಲ್ಕು ಚಮಚ ಮೆಂತ್ಯವನ್ನು ಹುರಿದು ಪುಡಿಮಾಡಿ ಸೇರಿಸಬಹುದು. ಒಣಮೆಣಸಿನಕಾಯಿಗಳ ತೊಟ್ಟು ತೆಗೆದು ಸಾಸುವೆಯೊಂದಿಗೆ ಒರಳಿನಲ್ಲಿ ಹಾಕಿ ನುಣ್ಣಗೆ ಚೆನ್ನಾಗಿ ಕುಟ್ಟಿ ಬಂದ ಪುಡಿಯನ್ನೂ ಅರಿಸಿನಪುಡಿಯನ್ನೂ ಜಾಡಿಗೆ ಸುರಿದು, ಕುದಿಸಿ ಆರಿಸಿದ ನೀರನ್ನೂ ಹಾಕಿ ಶುಭ್ರವಾದ ಸೌಟಿನಿಂದ (ಬಿಸಿಮಾಡಿದ ಸ್ಟೇನ್‌ಲೆಸ್‌ಸ್ಟೀಲ್ ಸೌಟಾದರೆ ಉತ್ತಮ) ಚೆನ್ನಾಗಿ ಕೆದಕಿ ಜಾಡಿಯನ್ನು ಹಿಂದಿನಂತೆ ಒಪ್ಪಮಾಡಬೇಕು. ಎರಡೆರಡು ದಿವಸಕ್ಕೆ ಒಂದಾವರ್ತಿ ಸೌಟಿನಿಂದ ಕೆದುಕುತ್ತಿರಬೇಕು, ದೂಳು, ಸೊಳ್ಳೆಗಳೂ ಬೀಳದಂತೆ ನೋಡಿಕೊಳ್ಳುತ್ತಿರಬೇಕು. ಗುಂಗಾಡು ಮುತ್ತದಿರಲು ಜಾಡಿಯ ಒಳಗೆ ಒಂದು ಇಂಗಿನ ಹೆಂಟೆಯನ್ನೋ ಬಿಡಿಸಿ ಬೆಳ್ಳುಳ್ಳಿ ಬೇಳೆಗಳನ್ನೋ ಇಡಬಹುದು. ಉಪ್ಪಿನಕಾಯನ್ನು ಕೈನಿಂದ ಮುಟ್ಟಬಾರದು. ಚಮಚ ಅಥವಾ ಸೌಟಿನಿಂದಲೇ ತೆಗೆದುಕೊಳ್ಳಬೇಕು. ಎಂಟು ದಿವಸಗಳಾದ ಮೇಲೆ ಬಳಸಬೇಕು. ಸಕಾಲದಲ್ಲಿ ಸಿಕ್ಕಿದರೆ ಹಸಿ ಏಲಕ್ಕಿಕಾಯಿ, ಹಸಿಮೆಣಸು–ಇವನ್ನು ಚೆನ್ನಾಗಿ ತೊಳೆದು ಒರೆಸಿ ಜಾಡಿಯಲ್ಲಿರುವ ಉಪ್ಪಿನಕಾಯಿಯ ಜೊತೆಗೆ ಹಾಕಬಹುದು. ಹೀಗೆ ಮಾಡಿದ ಉಪ್ಪಿನಕಾಯಿಗೆ ಬಹಳ ಕಾರವೂ ಎಣ್ಣೆಯೂ ಇಲ್ಲದೆ ಇರುವುದರಿಂದ ಆರೋಗ್ಯಕರ, ರುಚಿಕರ.

ಇದೇ ವಿಧಾನವನ್ನನುಸರಿಸಿ ವಿವಿಧ ರೀತಿಯ ಉಪ್ಪಿನ ಕಾಯಿಗಳನ್ನು ತಯಾರಿಸಬಹುದು. ನಿಂಬೆ, ಮಾದಲ, ಹೇರಳೆ, ಮಾವು, ನೆಲ್ಲಿ ಕಿರುನೆಲ್ಲಿ, ಅಮಟೆ, ಮುಂತಾದುವನ್ನು ಬೇರೆ ಬೇರೆಯಾಗಿ ಬಳಸಿ ಉಪ್ಪಿನಕಾಯಿ ತಯಾರಿಸುತ್ತಾರೆ. ಇವುಗಳೊಂದಿಗೂ ಸೌತೆ, ಹಾಗಲ, ನೀರುಳ್ಳಿ, ಕಳಲೆ ಮೊದಲಾದ ತರಕಾರಿಗಳ ಬಳಕೆಯೂ ಇದೆ. ಎಳೆಯ ಮಾವಿನಕಾಯಿಗಳಿಂದಾದ ಮಿಡಿಗಾಯಿ ಉಪ್ಪಿನಕಾಯಿ ದಕ್ಷಿಣ ಭಾರತದ ವೈಶಿಷ್ಟ್ಯವೆನಿಸಿದೆ. ಕೆಲವು ಸಂಸಾರಗಳಲ್ಲಿ ಒಂದು ವರ್ಷ ಹಾಕಿದ ಉಪ್ಪಿನಕಾಯಿಯನ್ನು ನಾಲ್ಕು ವರ್ಷಗಳವರೆಗೆ ಬಳಸುವುದುಂಟು. ಸುಗ್ಗಿಯಲ್ಲಿ ಹೇರಳವಾಗಿ ಫಲ ಬರುತ್ತಾದರೂ ಅದರಲ್ಲಿ ಬಹುಪಾಲು ಹಾಳಾಗಿ ಹೋಗುತ್ತದೆ. ಇದು ಉಪ್ಪಿನಕಾಯಿಗೆ ಬಳಸುವ ಕಾಯಿಗಳಿಗೂ ಅನ್ವಯಿಸುವ ಮಾತು. ಆದ್ದರಿಂದ ಊರಿಡುವ ಕ್ರಮ ಹಾಳಾಗುವ ಆಹಾರಪದಾರ್ಥವನ್ನು ಜೋಪಾನಿಸುವಲ್ಲಿ ಬಹು ಪ್ರಾಮುಖ್ಯ ಪಡೆದಿದೆ. ಈಚೆಗೆ ಭಾರತದ ಉಪ್ಪಿನಕಾಯಿಗೆ ವಿದೇಶೀ ಮಾರುಕಟ್ಟೆ ಚೆನ್ನಾಗಿ ಸಿಗುತ್ತಿದೆ. ಈ ದೃಷ್ಟಿಯಿಂದ ಉಪ್ಪಿನಕಾಯಿ ಊರಿಡಿಕೆಯನ್ನು ಒಂದು ಉದ್ಯಮವಾಗಿ ಬೆಳೆಸುವುದು ಅಗತ್ಯ.

**ಮಾಂಸಾಹಾರ ಊರಿಡಿಕೆ:** ಮೀನು ಮಾಂಸಗಳನ್ನು ಬರೀ ಉಪ್ಪು, ನೀರುಗಳಲ್ಲಿ ಜೋಪಾನಿಸುವುದು ಬಲು ಹಿಂದಿನ ಕಾಲಗಳಿಂದಲೂ ವಾಡಿಕೆಯಲ್ಲಿದೆ. ನೀರಿನಲ್ಲಿ ಶೇ. 12–25 ರಷ್ಟಾದರೂ ಉಪ್ಪು ಇರಬೇಕು. ಕೆಂಪು ಮಾಂಸಕ್ಕೆ ಕೊಂಚ ಪೊಟಾಸಿಯಂ ನೈಟ್ರೇಟ್ ಹಾಕಿದರೆ ಎಂದಿನಂತೆ ಕೆಂಪಗೇ ಇರುವುದು, ಉಪ್ಪು ನಂಜುರೋಧಕ (ಆ್ಯಂಟಿ ಸೆಪ್ಟಿಕ್). ಉಪ್ಪಿನಲ್ಲಿ ಊರಿಡುವುದರಿಂದ ಮಾಂಸದ ಪ್ರೋಟೀನು, ಪ್ರತ್ಯಾಮ್ಲಗಳು (ಬೇಸಸ್),

ಸಾರಕಗಳು ಕರಗಿ ಹೋಗಿಬಿಟ್ಟು ಮಾಂಸ ನಾರುಗಟ್ಟುತ್ತದೆ. ಹೀಗಾಗಿ ಇದರ ಪುಷ್ಟಿ ಕುಂದುತ್ತದಾಗಿ ಅರಗುವುದೂ ಕಷ್ಟಕರ. ಏನಾದರೂ ಸರಿಯೇ. ನೀರಿಗೆ ಹಾಕುವ ಉಪ್ಪು ಮಾತ್ರ 8%ಗೆ ಕಡಿಮೆ ಇರಬಾರದು. ಅಷ್ಟಿದ್ದರೇನೆ, ಊರುಬಾಡುಬೇನೆಯ (ಬಾಟುಲಿಸರಿ) ರೋಗಾಣುಗಳು ಇದರಲ್ಲಿ ಗುಣಿತವಾಗಿ ಆಹಾರಕ್ಕೆ ವಿಷಗೂಡಿಸಲು ಅವಕಾಶ ಇರದು.

ಊರಿಟ್ಟ ಮಾಂಸಗಳನ್ನು ತಯಾರಿಸಲು, ಮುಖ್ಯವಾಗಿ ಹಂದಿಮಾಂಸವನ್ನು ಉಪ್ಪು ನೀರಲ್ಲೋ ಕೆಲವು ವೇಳೆ ಸಕ್ಕರೆ, ಕಾಡಿ, ಸಾಂಬಾರವಸ್ತುಗಳೊಂದಿಗೋ ನೆನೆಸಿಡುವುದುಂಟು. ಹಿಂದಿನ ಕಾಲದಲ್ಲಿ ಸೋಡಿಯಂ ಸಲ್ಫೇಟ್ (ಬೋರ್‍ಯಾಕ್ಸ್), ಬೆಂಜೋಯಿಕಾಮ್ಲ ಮತ್ತಿತರ ರಾಸಾಯನಿಕಗಳ ಬಳಕೆಯಿತ್ತು, ಈಗ ಅವು ಅಪಾಯಕರವಾಗಿ ಕಂಡುಬಂದಿವೆ. ಸರಿಯಾಗಿ ಊರಿಟ್ಟರೆ, ಯಾವ ರಾಸಾಯನಿಕಗಳನ್ನೂ ಹಾಕಬೇಕಿಲ್ಲ. ಬೇಕೆಂದರೆ, ಮಾಂಸ ಕತ್ತರಿಸಿ ಕೊಳ್ಳುವ ಮೊದಲೇ ಸತ್ತ ಪ್ರಾಣಿಗೆ ಕಾಡಿ ಇಲ್ಲವೇ ಅಸಿಟಿಕಾಮ್ಲವನ್ನು ಧಮನಿಗಳ ಮೂಲಕ ಚುಚ್ಚಿ ಹೋಗಿಸಬಹುದು. ಆಗ ಅದು ಮಾಂಸದ ಎಲ್ಲ ಭಾಗಗಳಿಗೂ ಹೋಗುವುದರಿಂದ, ಹುಳಿ ರುಚಿ ಬಯಸುವವರಿಗೆ ಅದೊಂದು ಬಲು ಒಳ್ಳೆಯ ಜೋಪಾನ ವಿಧಾನವಾಗುತ್ತದೆ. ಹೀಗೆ ಕಾಡಿ ನೀರನ್ನು ಚುಚ್ಚಿದ ಮಾಂಸವನ್ನು ಕೆಡದಂತೆ ಇರಿಸುವುದು ಬಲು ಸುಲಭ, ಆರೋಗ್ಯ ದೃಷ್ಟಿಯಿಂದಲೂ ಯಾವ ಅಪಾಯವೂ ಇಲ್ಲ, ಕೆಲವೇಳೆ, ಮೊಟ್ಟೆಗಳನ್ನು ಸುಣ್ಣದ ತಿಳಿನೀರು, ನೀರುಗಾಜು (ಸೋಡಿಯಂ ಸಿಲಿಕೇಟು) ಇವುಗಳಲ್ಲಿ ಊರಿಡುವುದುಂಟು.

ಅನೇಕ ರೋಗಜನಕ ಏಕಾಣುಗಳು ಉಪ್ಪುನೀರಲ್ಲಿ ಅದರ ಪ್ರಮಾಣ, ಕಾವುಗಳಿಗೆ ತಕ್ಕಂತೆ ಬೇಗನೆ ಸಾಯುತ್ತವೆ. ಆದರೆ ಉಪ್ಪು ನಂಜುರೋಧಕವೇ (ಆ್ಯಂಟಿ ಸೆಪ್ಟಿಕ್) ಹೊರತು ಜೀವಾಣು ನಾಶಕವಲ್ಲ. ಅಲ್ಲಿರುವ ಏಕಾಣುಜೀವಿಗಳು ಗುಣಿತವಾಗಿ ಬೆಳೆಯದಂತೆ ತಡೆವುದೇ ಹೊರತು ಅವನ್ನು ಸಾಯಿಸದು, ಸಾಕಷ್ಟು ಉಪ್ಪು ಹಾಕದೆ, ಕೊಳಕು ಸೇರಿಸಿದ್ದರೆ ಆರೋಗ್ಯಕ್ಕೆ ಕೆಡುಕಾಗುವುದು. (ಎಸ್.ವಿ.)

**ಉಪ್ಪು: ನೋಡಿ– ಅಡಿಗೆ–ಉಪ್ಪು.**

**ಉಪ್ಪು ನೇರಳೆ:** ಮೊರೇಸಿ ಕುಟುಂಬದ ಒಂದು ಜಾತಿ (ಜೀನಸ್) (ಮೊರಸ್ ಇಂಡಿಕ). ಹಿಪ್ಪು ನೇರಳೆ ಎಂಬ ಹೆಸರೂ ಬಳಕೆಯಲ್ಲಿದೆ. ಮರ ಅಥವಾ ಪೊದೆಸಸ್ಯವಾಗಿ ಉಷ್ಣವಲಯ ಹಾಗು ಸಮಶೀತೋಷ್ಣವಲಯದ ಅನೇಕ ಭಾಗಗಳಲ್ಲಿ ಕಂಡುಬರುತ್ತದೆ. ಇವುಗಳಲ್ಲಿ ಕೆಲವುಗಳ ಎಲೆಯನ್ನು ರೇಷ್ಮೆ ಹುಳುಗಳಿಗೆ ಆಹಾರವಾಗಿ ಹಾಕುತ್ತಾರೆ. ಕೆಲವನ್ನು ಹಣ್ಣಿಗಾಗಿ ಅಥವಾ ಮರಮುಟ್ಟಿಗಾಗಿ ಬೆಳೆಸುತ್ತಾರೆ. ರೇಷ್ಮೆ ವ್ಯವಸಾಯದಲ್ಲಿ ಬಳಕೆಯಲ್ಲಿರುವ ಈ ಸಸ್ಯಜಾತಿಗಳಲ್ಲಿ ಅನೇಕವು ಜಪಾನ್ ಮತ್ತು ಚೀನದಿಂದ ಬಂದವು.

ಉಪ್ಪುನೇರಳೆ ಪ್ರತಿ ವರ್ಷ ಎಲೆ ಉದುರುವ ಜಾತಿಗೆ ಸೇರಿದ ಗಿಡ ಅಥವಾ ಪೊದೆ, ಭಾರತದಲ್ಲಿ ಹಿಮಾಲಯ ತಪ್ಪಲಿನಲ್ಲಿ 7,000 ಎತ್ತರದ ಪ್ರದೇಶದಿಂದ ಹಿಡಿದು ಜಮ್ಮು ಮತ್ತು ಕಾಶ್ಮೀರ, ಪಶ್ಚಿಮ ಬಂಗಾಳ, ಅಸ್ಸಾಂ, ದಕ್ಷಿಣ ಭಾರತದಲ್ಲಿ ಮೈಸೂರು ಮುಂತಾದೆಡೆ ಇದರ ಕೃಷಿ ಬಳಕೆಯಲ್ಲಿದೆ. ರಸ್ತೆ ಅಂಚಿನಲ್ಲಿ ಅಲಂಕಾರಕ್ಕಾಗಿ ದೇಶದ ಎಲ್ಲ ಭಾಗಗಳಲ್ಲೂ ಬೆಳೆಸುತ್ತಾರೆ. ತೀವ್ರ ಚಳಿಯನ್ನು ಇದು ಸಹಿಸಬಲ್ಲದು. ಆದರೆ ಬಿರುಗಾಳಿಯ ಅವಾಂತರ ತಡೆಯಲಾರದು. ಭಾರತದಲ್ಲಿ ಉಪ್ಪು ನೇರಳೆ ಬೆಳೆಯ ವಿಸ್ತೀರ್ಣ ಸುಮಾರು 2 ಲಕ್ಷ ಎಕರೆಗಳು. ಇದರ 90%ರಷ್ಟು ಭಾಗ ಮೈಸೂರಿನಲ್ಲಿದೆ. ಇದು ಬಹುವಾಗಿ ಹೊಲದ ಬೆಳೆ. ಗಿಡಗಳಿಂದ ವರ್ಷಕ್ಕೆ ಎರಡು ಮೂರುಬಾರಿ ಸೊಪ್ಪನ್ನು ಕೊಯ್ದು ರೇಷ್ಮೆ ಹುಳುಗಳಿಗೆ ಆಹಾರವಾಗಿ ಬಳಸುತ್ತಾರೆ. (ಬಿ.ವಿ.ವಿ;ಎ.ಕೆ.ಎಸ್.)

ಮಣ್ಣು ಮತ್ತು ಹವಾಗುಣ: ಉಪ್ಪುನೇರಳೆ ಬೆಳೆಯನ್ನು ನೀರು ನಿಲ್ಲದೆ ಬಸಿಯುವ ಎಲ್ಲ ಭೂಮಿಗಳಲ್ಲೂ ತೆಗೆಯುವುದು ಸಾಧ್ಯ. ಜೌಗು ಭೂಮಿಗಳಲ್ಲಿ ಬೆಳೆಬರುವುದಿಲ್ಲ. ಮರಳುಭೂಮಿ, ಗೋಡು ನೆಲ ಇಲ್ಲವೇ ಎರೆಭೂಮಿ ಮುಂತಾದ ಯಾವುದೇ ಮಣ್ಣಿನ ಪರಿಸ್ಥಿತಿಯಲ್ಲೂ ಬರುತ್ತದೆ. ಮಳೆ ಚೆನ್ನಾಗಿ ವರ್ಷವೆಲ್ಲ ಸುರಿದರೆ ಅನುಕೂಲ. ಇಲ್ಲದಿದ್ದಲ್ಲಿ ನೀರು ಹಾಯಿಸುವುದು ಅವಶ್ಯಕ. ಮುಖ್ಯ ಮಳೆಗಳೆಲ್ಲವೂ ಮುಗಿದ ಅನಂತರ ನೆಲ ಅಗೆತ ಮಾಡಿಯೊ ಇಲ್ಲವೆ ಉತ್ತೊ 12"–18" ಆಳದವರೆಗೆಗೆ ಸಡಿಲ ಮಾಡಬೇಕು. ಹೆಂಟೆಗಳನ್ನು ಪುಡಿಮಾಡಿ ಭೂಮಿಯ ಹದ ಕುದುರಿಸಬೇಕು. ಈ ಸಮಯದಲ್ಲಿ ಕೊಟ್ಟಿಗೆ ಗೊಬ್ಬರವನ್ನು ಭೂಮಿಗೆ ಸೇರಿಸಬಹುದು. ಹೆಚ್ಚಿಗೆ ಗೊಬ್ಬರ ಕೊಟ್ಟಷ್ಟೂ ಭೂಮಿ ಸೆಜ್ಜೆಗೆ ಬರುತ್ತದೆ.

ಬಿತ್ತನೆ: ಬೀಜ ಬಿತ್ತಿ ಇಲ್ಲವೇ ತುಂಡುಗಳನ್ನು ನೆಟ್ಟು, ಇಲ್ಲವೇ ಕಸಿಕೊಂಬೆ ಅಥವಾ ಕಣ್ಣುಗಳನ್ನು ನೆಟ್ಟು ಬೆಳೆಸಬಹುದು. ಬಿತ್ತನೆ ಬೀಜವನ್ನು ಒಂದು ತಿಂಗಳೊಳಗೆ ನೆರಳು ಮಾಡಿರುವ ಸಸಿಪಾತಿಗಳಲ್ಲಿ ಹಾಕುತ್ತಾರೆ. ಬೀಜ ಬಲುಸೂಕ್ಷ್ಮ. ಒಂದು ಔನ್ಸ್ ತೂಕದಲ್ಲಿ 12,000–14,000 ಬೀಜಗಳು ದೊರೆಯುತ್ತವೆ. ಅವುಗಳ ಬಳಕೆಯಲ್ಲಿ ಎಚ್ಚರಿಕೆ ಅಗತ್ಯ. ರೋಗ ನಿರೋಧದ ದೃಷ್ಟಿಯಿಂದ ಬೀಜಕ್ಕೆ ಕರ್ಪೂರದ ನೀರು ಚಿಮುಕಿಸುವುದು ರೂಢಿ. ಬೀಜವನ್ನು ಪಾತಿಯಲ್ಲಿ ಬಿತ್ತಿದ ಮೇಲೆ, ತೆಳುವಾಗಿ ಬೂದಿ ಮತ್ತು ಮಣ್ಣನ್ನು ಎರಚುತ್ತಾರೆ. ಪಾತಿಗೆ ಆಗಾಗ ನೀರು ಹಾಕಿ ತೇವವನ್ನು ಹದವಾದ ಮಟ್ಟದಲ್ಲಿ ಉಳಿಸುವುದು ಅಗತ್ಯ. ಬೀಜ 10–15 ದಿವಸಗಳಲ್ಲಿ ಮೊಳೆಯುತ್ತದೆ. ಸಸಿ ¼"–½" ಬೆಳೆದಾಗ ಪಾತಿ ವಿರಳವಾಗುವಂತೆ ಹೆಚ್ಚಿಗೆ ಸಸಿಗಳನ್ನು ಕಿತ್ತುಹಾಕಿ ಬೇಕಾದಷ್ಟನ್ನು ಮಾತ್ರ ಉಳಿಸುತ್ತಾರೆ. ಪೊದೆ ಬೆಳೆಸುವುದಕ್ಕೆ ನಾಟಿ ಮಾಡುವುದಾದರೆ 4"–6" ಉದ್ದದ ಸಸಿಗಳನ್ನು ಉಪಯೋಗಿಸುತ್ತಾರೆ. ಮರಗಳನ್ನು ಬೆಳೆಸುವುದಾದರೆ 4" ಎತ್ತರ ಬೆಳೆದ ಅನಂತರ ಸಸಿಗಳನ್ನು ರೆಂಬೆ ಕತ್ತರಿಸಿ ಗುಣಿಗಳಲ್ಲಿ ನೆಡುತ್ತಾರೆ.

ಮುಡಿ ಉಪ್ಪುನೇರಳೆ ಪೊದೆಗಳ ರೆಂಬೆಗಳನ್ನು ವರ್ಷ ವರ್ಷ ಸವರುತ್ತಾರೆ. ಸವರಿದ ರೆಂಬೆಗಳಿಂದ 3 ಕಣ್ಣುಳ್ಳ 9"–12" ಉದ್ದದ ತುಂಡುಗಳನ್ನು ವಿಂಗಡಿಸಿ ಅವು ಹಸಿಯಾಗಿರುವಾಗಲೇ ನೆಡುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಇಂಥ ತುಂಡುಗಳನ್ನು ಕಂತೆ ಕಟ್ಟಿ ಮಣ್ಣಿನಲ್ಲಿ ಹುಗಿದು ಕಣ್ಣುಗಳಿಂದ ಮೊಳಕೆ ಬಂದ ಅನಂತರ ನಾಟಿ ಮಾಡುವುದು ವಾಡಿಕೆ. ಕಸಿಮಾಡಿದ ಸಸಿಗಳನ್ನು ನಾಟಿ ಮಾಡಿ ಉಪ್ಪುನೇರಳೆ ತೋಟ ಬೆಳೆಸುವುದು ಒಂದು ವಿಧ. ಉತ್ತಮ ರೀತಿಯ ಸಸಿಗಳಿಂದ ಬೇರಿನ ಕಸಿ ಒದಗಿಸಿಕೊಂಡು ಎಬ್ಬಿಸಿದ ಉಪ್ಪುನೇರಳೆ ಉತ್ಕೃಷ್ಟವಾದ ಸೊಪ್ಪನ್ನು ಕೊಡುತ್ತದೆ.

ಸಂತಾನಾಭಿವೃದ್ಧಿ: ಮೈಸೂರಿನಲ್ಲಿ ಬಹುಭಾಗ ಉಪ್ಪುನೇರಳೆ ಹೊಲದ ಬೆಳೆ. ನೀರಾವರಿ ಕೇವಲ 15% ಅಂಶ ಮಾತ್ರ ಬಿತ್ತನೆಗೆ ತುಂಡುಗಳ ಬಳಕೆಯೇ ಸಾಮಾನ್ಯ. ತುಂಡುಗಳನ್ನು ನೇಗಿಲು ಸಾಲಿನಲ್ಲಿ ಇಲ್ಲವೇ ಗುಣಿಗಳಲ್ಲಿ ಹೂಳುತ್ತಾರೆ. ನೀರಾವರಿ ಸೌಕರ್ಯವಿದ್ದೆಡೆಯಲ್ಲಿ ಸಾಲಿನಲ್ಲಿ ಹೂಳುವುದು ವಾಡಿಕೆ. ಹೊಲದಲ್ಲಿ ನೆಡುವಾಗ 30". ಅಂತರದಲ್ಲಿ 9" ಆಳ 12" ವ್ಯಾಸವುಳ್ಳ ಗುಣಿಗಳಲ್ಲಿ ತುಂಡುಗಳನ್ನು ಇಡುವುದು ಬಳಕೆಯಲ್ಲಿರುವ ಕ್ರಮ. ಸಾಲುಗಳ ಮಧ್ಯದ ಅಂತರ 30". ಮುಂಗಾರು ಮಳೆ ಪ್ರಾರಂಭದಲ್ಲಿ ಜುಲೈ ತಿಂಗಳು ಬಿತ್ತನೆ ಮಾಡುವುದಕ್ಕೆ ಅನುಕೂಲವಾದ ಸಮಯ. ನೀರಾವರಿ ಸೌಲಭ್ಯ ಕಡಿಮೆ ಇರುವ ಸಂದರ್ಭದಲ್ಲಿ ಸಾಲಿನಲ್ಲಿ ಗುಣಿಗಳ ಮಧ್ಯದ ಅಂತರ 18" ಇರುತ್ತದೆ. ಪ್ರತಿ ಗುಣಿಯಲ್ಲೂ 3 ತುಂಡುಗಳನ್ನು ನೆಡುತ್ತಾರೆ. ಬೇಕಾದ ಮಟ್ಟದ ತೇವವನ್ನು ಉಳಿಸಿಕೊಳ್ಳಲು ನೀರು ಹೊತ್ತುಹಾಕುವುದು ಅವಶ್ಯಕ. ಈ ರೀತಿ ನೆಟ್ಟಾಗ ಒಂದು ಎಕರೆಗೆ 30,000–40,000 ಬಿತ್ತನೆ ತುಂಡುಗಳು ಬೇಕಾಗುತ್ತವೆ. ನೀರಾವರಿ ಅನುಕೂಲವಿದ್ದಾಗ ಸಾಲು ನಾಟಿ ಉತ್ತಮ. ಏಪ್ರಿಲ್–ಮೇ ತಿಂಗಳುಗಳಲ್ಲಿ ಪ್ರತಿ ಗುಣಿಯಲ್ಲೂ ಒಂದೊಂದು ಜೋಡಿ ತುಂಡನ್ನು ನೆಡುತ್ತಾರೆ. ಗುಣಿಗಳ ಮಧ್ಯ ಒಂದಕ್ಕೆ 70,000ಕ್ಕೂ ಹೆಚ್ಚು ಬಿತ್ತನೆಗಳು ಬೇಕಾಗುತ್ತದೆ. ಕೆಲವಡೆ 8–10 ಉಪ್ಪು ನೇರಳೆ ತುಂಡುಗಳನ್ನು ಕಂತೆ ಮಾಡಿ 3' ಅಂತರದಲ್ಲಿ ನೆಡುತ್ತಾರೆ. ಹೊಲದಲ್ಲಿ ಇವನ್ನು ಪೂರ್ತಿ ಮಣ್ಣಿನಲ್ಲಿ ಓರೆಯಾಗಿಟ್ಟು ಹೂಳುತ್ತಾರೆ. ತೇವ ಸಾಕಷ್ಟು ಇರುವೆಡೆ ಸ್ವಲ್ಪ ಭಾಗ ಹೊರಬಂದಿರುತ್ತದೆ. ಈ ರೀತಿಯ ನಾಟಿ ಮಳೆಗಾಲದ ಪ್ರಾರಂಭದಲ್ಲೇ ಆಗಬೇಕು. ತುಂಡುಗಳು ಬೇರು ಬಿಟ್ಟು ಕೃಷಿಮಾಡಿ ನೀರು ಕೊಟ್ಟಂತೆ ಗಿಡ 6 ವಾರದೊಳಗೆ 2'–3' ಎತ್ತರ ಬೆಳೆಯುತ್ತದೆ. ಗಿಡ 3'–5' ಎತ್ತರ ಬೆಳೆದ ಮೇಲೆ ನೀರು ಹಾಕುವುದನ್ನು ನಿಲ್ಲಿಸುತ್ತಾರೆ. ನೀರಾವರಿ ಇದ್ದರೆ ವಾರಕ್ಕೆರಡು ಬಾರಿ ನೀರುಹಾಯಿಸುವುದು ಸಾಮಾನ್ಯ. ಆಗಾಗ್ಗೆ ಮಧ್ಯಂತರ ಸಾಗುವಳಿ ಮಾಡಿ ಕಳೆ ಕೀಳುವುದು ಅಗತ್ಯ.

ಸಸಿಮಾಡಿ ಉಪ್ಪುನೇರಳೆ ಬೆಳೆಸುವುದು ದುಬಾರಿಯಾದರೂ ಎಲೆ ಇಳುವರಿ ಹೆಚ್ಚು; ಹಾಗೆಯೇ ಗುಣವೂ ಉತ್ತಮ. ಈ ಕಾರಣದಿಂದ ಸಸಿಯಿಂದ ಬೆಳೆಸಿದ ತೋಟಗಳು ಇತ್ತೀಚಿನ ದಿವಸಗಳಲ್ಲಿ ಹೆಚ್ಚಾಗುತ್ತಿವೆ. ಸಸಿಗಳನ್ನು ಪಾತಿಯಲ್ಲಿ ಬೆಳೆಸಿ 4"–6" ಎತ್ತರ ಬಂದಾಗ ಗುಳಿಗಳಿಗೆ ಸಾಗಿಸುತ್ತಾರೆ. ಗುಳಿಗಳ ಮಧ್ಯದ ಅಂತರ 2"–2½'. ಉಪ್ಪು ನೇರಳೆ ಪೊದೆಗಳನ್ನು ಬೀಜ ಬಿತ್ತಿ ನೇರವಾಗಿ ಬೆಳೆಸುವುದು ಸಾಧ್ಯ. ಇವು ಕಸಿ ಮಾಡಿದ ಸಸಿಯಿಂದ ಬೆಳೆಸಿದ ಗಿಡಕ್ಕಿಂತ ಹೆಚ್ಚು ಬೇರು ಬಿಡುವುದು ಕಂಡುಬಂದಿದೆ. ಜಪಾನಿನಲ್ಲಿ ಈ ರೀತಿಯ ಕೃಷಿ ವ್ಯಾಪಕ, ಭಾರತದಲ್ಲೂ ಇದರ ಅನುಸರಣೆಯಿಂದ ಇಳುವರಿ ಹೆಚ್ಚಿಸುವ ಕೆಲಸ ನಡೆದಿದೆ. ಜಪಾನಿನಿಂದ ಆಮದುಮಾಡಿದ ಕಸಿ ಕೊಂಬೆಯನ್ನು ಸ್ಥಳೀಯ ಉಪ್ಪು ನೇರಳೆ ಗಿಡದೊಡನೆ ಸೇರಿಸಿ ತಳಿ ವೃದ್ಧಿ ಮಾಡುವ ಪ್ರಯತ್ನ ಸಹ ನಡೆಯುತ್ತಿದೆ.

ಉಪ್ಪುನೇರಳೆ ಮರವನ್ನೂ ಪೊದೆಯಂತೆ ತುಂಡನ್ನು ನೆಟ್ಟು ಬೆಳೆಸಬಹುದು. ಗಿಡ ನೇರವಾಗಿ ಲಂಬವಾಗಿರುವಂತೆ ರೆಂಬೆಗಳನ್ನು ಕತ್ತರಿಸಿ ಬೆಳೆಸಿ ಒಂದು ವರ್ಷದ ಅನಂತರ ಗುಳಿಗಳಲ್ಲಿ ನೆಡುತ್ತಾರೆ. ಉಪ್ಪುನೇರಳೆ ಮರವನ್ನು ಪಾತಿಯಲ್ಲಿ ಬೆಳೆಸಿದ ಸಸಿಯಿಂದ ಎಬ್ಬಿಸುವುದು ಅನುಕೂಲ. ಮೊದಲನೆಯ ಪಾತಿಯಿಂದ ಸಸಿ 4' ಬೆಳೆದ ಮೇಲೆ ಇನ್ನೊಂದು ಪಾತಿಗೆ ಸಾಗಿಸಿ ಅಲ್ಲಿ 6' ಎತ್ತರಕ್ಕೆ ಬೆಳೆಸಿ ಪಕ್ಕದ ರೆಂಬೆಗಳನ್ನು ಕಡಿದು ಹೊಲದ ಗುಳಿಗಳನ್ನು ಸಾಗಿಸುತ್ತಾರೆ.

ಗಿಡ ಸವರುವುದು ಮತ್ತು ಎಲೆಕೊಯ್ಲು: ಕಾಲಕಾಲಕ್ಕೆ ಪೈರಿನಿಂದ ಎಲೆ ಬಿಡಿಸಿಕೊಳ್ಳುವುದರಲ್ಲಿ ಉಪ್ಪುನೇರಳೆ ಮರವನ್ನು ಮತ್ತು ಪೊದೆಯನ್ನು ನಿಯತಕಾಲಕ್ಕೆ ಸವರುವುದು ಅತ್ಯಾವಶ್ಯಕ. ಸುಮಾರು 10 ವಾರದ ಹೊತ್ತಿಗೆ ನೀರು ಕೊರತೆ ಇಲ್ಲದಿದ್ದರೆ ಗಿಡ 3'–4' ಎತ್ತರ ಬೆಳೆಯುತ್ತದೆ. ಆಗ ಮೊದಲ ಬಾರಿಗೆ ಎಲೆ ಕೊಯ್ಯುವುದು ಸಾಧ್ಯ. ಹೊಲದ ಬೆಳೆಯಾದರೆ 4 ತಿಂಗಳಲ್ಲಿ ಎಲೆ ಕೊಯ್ಲಿಗೆ ಬರುತ್ತದೆ. ವರ್ಷಕ್ಕೆ 8–10 ಸಲ ಎಲೆ ಬಿಡಿಸಿಕೊಳ್ಳಬಹುದು. ಪ್ರತಿ ವರ್ಷ ಗಿಡವನ್ನು ನೆಲದ ಮಟ್ಟಕ್ಕೆ ಕತ್ತರಿಸುತ್ತಾರೆ. ರೇಷ್ಮೆ ಹುಳ ಬೆಳೆಸುವ ಕಾಲಕ್ಕೆ ಮೊದಲು ಗಿಡ ಸವರುವುದು ವಾಡಿಕೆ. ಪ್ರತಿಸಾರಿ ಗಿಡ ಸವರಿದ ಮೇಲೆ ಭೂಮಿ ಕೃಷಿಮಾಡಿ ಗೊಬ್ಬರ ಕೊಡುತ್ತಾರೆ. ಕುಡಿ ಒಡೆದು ಸಮೃದ್ಧಿಯಾಗಿ ಎಲೆ ಹೊರ ಬರುತ್ತದೆ. 5–6 ವಾರಗಳಲ್ಲಿ ಎಲೆ ಕೊಯ್ಯುವುದು ಸಾಧ್ಯ. ಎಲೆ ಬಿಡಿಸುವುದಕ್ಕೆ ಯುಕ್ತ ಸಮಯ ಸಂಜೆ. ಕೊಯ್ದ ಎಲೆಯನ್ನು ಸಡಿಲವಾಗಿ ಗುಡ್ಡೆ ಮಾಡುತ್ತಾರೆ. ಅವಶ್ಯವಿದ್ದರೆ ನೆನೆಸಿದ ಗೋಣಿ ಇಲ್ಲವೆ ಬಟ್ಟೆ ತೂಗುಹಾಕಿ ಕೋಣೆ ಶಾಖ ಏರುವುದನ್ನು ತಡೆಯುತ್ತಾರೆ. ಉಪ್ಪುನೇರಳೆ ಪೊದೆ 10–15 ವರ್ಷ ಫಲ ಕೊಡುತ್ತದೆ. ಅನಂತರ ಅದನ್ನು ತೆಗೆದು ಹೊಸಗಿಡ ನೆಡಬೇಕು. ಹಾಗೆ ಮಾಡುವುದಕ್ಕೆ ಮುಂಚೆ ಒಂದೆರಡು ರಾಗಿ ಅಥವಾ ಜೋಳದ ಬೆಳೆ ತೆಗೆದುಕೊಂಡರೆ ಒಳ್ಳೆಯದು.

ಇಳುವರಿ: ಉಪ್ಪುನೇರಳೆ ಸೊಪ್ಪಿನ ಇಳುವರಿ ಮಣ್ಣಿನ ಗುಣ, ನೀರಿನ ಸೌಕರ್ಯ, ಗೊಬ್ಬರ, ಸಾಗುವಳಿ ಇವುಗಳನ್ನು ಅವಲಂಬಿಸಿದೆ. ಮೈಸೂರಿನಲ್ಲಿ ಹೊಲದ ಬೆಳೆಯ ಅವಧಿ ಒಂದು ವರ್ಷ. ಇಲ್ಲಿ ಎಕರೆ ಒಂದಕ್ಕೆ ಇಳುವರಿ 4000–7000ಪೌಂಡುಗಳು. ನೀರಾವರಿ ಇದ್ದಲ್ಲಿ 10,000–14,000 ಪೌಂಡುಗಳು.

ಜಾತಿಗಳು: ಅನೇಕ ಜಾತಿಯ ಉಪ್ಪುನೇರಳೆ ಕೃಷಿಯಲ್ಲಿವೆ. ಜಪಾನಿನಲ್ಲಿ 7,000 ಜಾತಿಗಳಿದದ್ದು ಅವುಗಳಲ್ಲಿ ಸುಮಾರು 21ನ್ನು ವ್ಯಾಪಕವಾಗಿ ಬೆಳೆಸುತ್ತಾರೆ. ಭಾರತದಲ್ಲಿ ರೇಷ್ಮೆ ಹುಳುಗಳಿಗೆ ತಿನ್ನಿಸುವುದಕ್ಕೆ ಮಲ್ಟಿ ಕ್ಯಾಲಿಸ್ ಎಂಬ ಚೀನೀಜಾತಿಯ ಉಪ್ಪು ನೇರಳೆ ವ್ಯಾಪಕವಾಗಿ ಕೃಷಿಯಲ್ಲಿದೆ. ಆಟ್ರೋ–ಪರ್–ಪ್ಯೂರಿಯ ಎಂಬ ಇನ್ನೊಂದು ಜಾತಿಯ ಚೀನೀ ತಳಿ ಸಹ ಹಲವೆಡೆ ಬಳಕೆಯಲ್ಲಿದೆ. ಇದನ್ನು ರಸ್ತೆ ಮತ್ತು ಜಮೀನಿನ ಅಂಚುಗಳಲ್ಲಿ ಬೆಳೆಸುವುದು ಸಾಮಾನ್ಯ. ಮೈಸೂರಿನಲ್ಲಿ ತಳಿ ಅಭಿವೃದ್ಧಿ ಕೆಲಸ ಅಷ್ಟಾಗಿ ಆಗಿಲ್ಲ. ಬಂಗಾಳದಲ್ಲಿ ಹೊರತಂದ KM-1, ಸ್ಥಳೀಯ ತಳಿಗಳಿಗಿಂತ ಹೆಚ್ಚು ಇಳುವರಿ ಕೊಡುವುದು ಕಂಡುಬಂದಿದೆ. ಕೊಳ್ಳೆಗಾಲದ ಪ್ರದೇಶದಲ್ಲಿ ಇದನ್ನು ಕಸಿ ಮಡುವುದಕ್ಕೆ ಉಪಯೋಗಿಸುತ್ತಾರೆ. ಮೈಸೂರಿನಲ್ಲಿ ಹೊರತಂದ S-I ಮತ್ತು S-V ತಳಿಗಳು ಹೆಚ್ಚು ಇಳುವರಿ ಕೊಡುವುದು ಕಂಡುಬಂದಿದೆ.

ಗೊಬ್ಬರ: ಮೇಲೆ ಹೇಳಿದಂತೆ ಉಳುಮೆ ಮಾಡುವಾಗ ಮಣ್ಣಿನ ಸೆಪ್ಪೆ ಕಾಪಾಡಿ ಫಲವತ್ತನ್ನು ಉಳಿಸುವ ದೃಷ್ಟಿಯಿಂದ ಎಕರೆಗೆ 15–20 ಗಡಿ ಕೊಟ್ಟಿಗೆ ಗೊಬ್ಬರ ಕೊಡುವುದು ಅಗತ್ಯ. ಇದರ ಜೊತೆಗೆ ಸುಮಾರು ವರ್ಷಕ್ಕೆ 60 ಪೌಂಡ್ ಸಾರಜನಕ ಒದಗುವಷ್ಟು ಅಮೋನಿಯಂ ಸಲ್ಫೇಟ್ ಇಲ್ಲವೆ ಯಾಲ್ಸಿಯಂ ಅಮೋನಿಯಂ ನೈಟ್ರೇಟ್ ಕೊಡಬಹುದು. ತಲಾ 20 ಪೌಂಡ್ ರಂಜಕ ಮತ್ತು ಪೊಟ್ಯಾಷ್ ಸಹ ಕೊಡುವುದು ಅಗತ್ಯ. ಗೊಬ್ಬರಗಳನ್ನು ಸಮಭಾಗ ಮಾಡಿ ಸೇರಿಸಬೇಕು. ನೀರಾವರಿ ಬೆಳೆಗೆ ವರ್ಷಕ್ಕೆ 150 ಪೌಂಡ್ ಸಾರಜನಕ, 50 ಪೌಂಡ್ ರಂಜಕ, 150 ಪೌಂಡ್ ಪೊಟ್ಯಾಷ್ ಸಮಭಾಗ ಮಾಡಿ ಪ್ರತಿಸಾರಿ ಎಲೆಕೊಯ್ದ ಮೇಲೆ ಕೊಡುವುದು ಅಗತ್ಯ.

ರೋಗ ರುಜಿನಗಳು: ಎಲೆಗಳನ್ನು ಬೂದಿರೋಗ ತೀವ್ರವಾಗಿ ನಾಶಪಡಿಸುತ್ತದೆ. ಎಲೆಗಳ ತಳಭಾಗದಲ್ಲಿ ಒಂದು ರೀತಿಯ ಬಿಳಿಪುಡಿ ಶೇಖರಣೆಯಾಗಿ ಎಲೆ ವಿಕಾರವಾಗಿ ಮುದುರಿಕೊಂಡು ಒಣಗಿ ಸತ್ತುಹೋಗುತ್ತದೆ. ಗಂಧಕದ ಪುಡಿಯನ್ನು ಎಕರೆಯೊಂದಕ್ಕೆ 15 ಪೌಂಡಿನಂತೆ ಸಿಂಪಡಿಸಿ ರೋಗವನ್ನು ತಡೆಗಟ್ಟುವುದು ಸಾಧ್ಯ. ದುಕೆರೋಗ ಇನ್ನೊಂದು ಉಪದ್ರವ. ಕೋನಾಕಾರದ ಕೆಂಪು ಚುಕ್ಕೆ ಪ್ರಾರಂಭವಾಗಿ ಗಂಟು ರೂಪುಗೊಂಡು ಎಲೆ ಉದುರಿಹೋಗುತ್ತದೆ. ಬೋರ್ಡೋ ದ್ರಾವಣ ಸಿಂಪಡಿಸಿ ಈ ರೋಗದ ತೀವ್ರತೆಯನ್ನು ಕಡಿಮೆ ಮಾಡಬಹುದು. ಮತ್ತೊಂದು ರೋಗ ಕಾಂಡದ ಕೊಳೆ. ಈ ಶಿಲೀಂದ್ರ ಕಾಂಡ ಮತ್ತು ರೆಂಬೆಗಳಿಗೆ ತಗಲಿ ಅವು ಒಣಗುತ್ತವೆ. ಇಂಥ ಭಾಗಗಳನ್ನು ಕತ್ತರಿಸಿ ರೋಗ ಹರಡುವುದುನ್ನು ತಪ್ಪಿಸುವುದು ಸಾಧ್ಯ. ಷೊನಿಯ ಎಂಬುದು ಉಪ್ಪುನೇರಳೆಗೆ ಬರುವ ಒಂದು ರೋಗ. ತುಕ್ಕು ಹಿಡಿದಂಥ ಕಂದು ಮಚ್ಚೆಗಳು ಎಲೆಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಇಂಥ ಎಲೆಗಳಿಂದ ರೇಷ್ಮೆ ಹುಳುಗಳಿಗೆ ನಂಜಾಗುತ್ತದೆ.

ಪೀಡೆಗಳು: ಉಪ್ಪುನೇರಳೆಗೆ ತುಕ್ರ ಎಂಬ ರೀತಿಯ ರೋಗ ಕೆಲವೆಡೆ ಕಾಣಿಸಿಕೊಳ್ಳುತ್ತದೆ. ಇದರ ಲಕ್ಷಣ, ಸುರುಳಿ ಸುತ್ತಿ ಮುದುರಿಕೊಂಡ ಎಲೆಗಳು. ಇದು ಅಗ್ರ ಕುಡಿಗಳಲ್ಲಿ ಗೆಣ್ಣಿನ ಮಧ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಾರಕ ಕಾಂಡದಿಂದ ಮತ್ತು ಎಲೆ ತೊಟ್ಟಿನಿಂದ ಸಸ್ಯ ರಸ ಹೀರುವ ಒಂದು ಹುಳ. ನಿಕೋಟಿನ್ ಸಲ್ಫೇಟ್ ಸಿಂಪಡಿಕೆಯಿಂದ ಇದರ ಹಾವಳಿ ತಗ್ಗಿಸಬಹುದು. ಉದ್ದನೆ ಮೀಸೆ ದುಂಬಿ ಅಥವಾ ಕಾಂಡದ ಸುತ್ತ ಕೊರೆಯುವ ದುಂಬಿ ಉಪ್ಪು ನೇರಳೆಗೆ ಬೀಳುವ ಉಪದ್ರವಕಾರಿ ಕೀಟ. ಇದು ಬುಡದಲ್ಲಿ ಕಾಂಡವನ್ನು ಕೊರೆದು ಗಿಡವನ್ನು ಸಾಯಿಸುತ್ತದೆ. ಷಲ್ಕ ಕೀಟಗಳು (ಸ್ಕೇಲ್ಇನ್ಸೆಕ್ಟ್ಸ್) ಗಿಡದಿಂದ ರಸವನ್ನು ಹೀರಿ ತೊಂದರೆ ಉಂಟುಮಾಡುತ್ತವೆ. ಸೋಪಿನ ನೀರನ್ನು ಸಿಂಪಡಿಸಿ ಇವುಗಳ ಹಾವಳಿಯನ್ನು ಕಡಿಮೆಮಾಡಬಹುದು. ಕೊರೆಯುವ ಹುಳುಗಳು, ಚಿಪ್ಪಿನ ಹುಳುಗಳು, ಸಸ್ಯ ಹೇನುಗಳು, ನುಸಿ ಮುಂತಾದುವೂ ಉಪದ್ರವಕಾರಿ ಕೀಟಗಳು.

ರಾಸಾಯನಿಕ ರಚನೆ ಮತ್ತು ಉಪಯೋಗ: ಉಪ್ಪುನೇರಳೆ ಎಲೆಗಳನ್ನು ಮುಖ್ಯವಾಗಿ ರೇಷ್ಮೆಹುಳುಗಳಿಗೆ ಆಹಾರವಾಗಿ ಬಳಸುತ್ತಾರೆ. ಸೊಂಪಾಗಿ ಬೆಳೆದ ಎಲೆಗಳು ಹುಳುಗಳಿಗೆ ಉತ್ತಮ ಆಹಾರ, ಒಣ ಎಲೆಯಲ್ಲಿನ ವಿವಿಧ ವಸ್ತುಗಳ ಶೇಕಡ ಅಂಶ ಹೀಗಿರುತ್ತದೆ. ಪ್ರೋಟೀನ್:10.00–39.0, ಕರಗುವ ಶರ್ಕರ ಪಿಷ್ಟಾದಿಗಳು: 7.6–26.0 ಖನಿಜಾಂಶ: 8.0–17.0 ಸುಣ್ಣ: 0.7–2.7, ಕಬ್ಬಿಣ: 0.05–0.12, ರೇಷ್ಮೆಹುಳುಗಳಿಗೆ ಈ ಎಲೆಗಳು ಹೆಚ್ಚು ಅಪೇಕ್ಷಣೀಯ ಆಹಾರವಾಗುವುದಕ್ಕೆ ಕಾರಕ ಅಂಶಗಳು (i) ಸಿಟ್ರಾಲ್, ಲಿನಿಲೈಲ್ ಅಸಿಟೇಟ್, ಲಿನಲಾಲ್, ಟರ್‌ಪಿನೈಲ್ ಅಸಿಟೇಟ್ ಮತ್ತು ಹೆಕ್ಸನಾಲ್ ಇವು ಆಕರ್ಷಕ ಸಂಯುಕ್ತ ವಸ್ತುಗಳು. ಹುಳುಗಳು ಇವುಗಳಿಂದ ಆಕರ್ಷಿತವಾಗುತ್ತವೆ; (ii) B–ಸಿಸ್ಟೋಸ್ಟೆರಾಲ್ ಮತ್ತು ಉಳಿದ ಕೆಲವು ಸ್ಟೆರಾಲ್ ವಸ್ತುಗಳು ಹುಳುಗಳು ಎಲೆಯನ್ನು ಕತ್ತರಿಸುವ ಕ್ರಿಯೆಯನ್ನು ಪ್ರಚೋದಿಸುತ್ತವೆ; (iii) ಮಿಥೈಲ್ ಆಲ್ಕೊಹಾಲಿನಲ್ಲಿ ಕರಗದಿರುವ ಮತ್ತು ನೀರಿನಲ್ಲಿ ಕರಗುವ ಎಲೆಗಳ ಭಾಗ ಹುಳುಗಳು ಎಲೆಯನ್ನು ಬಿಡುವಿಲ್ಲದೆ ತಿನ್ನುವ ಕ್ರಿಯೆಯನ್ನು ಪ್ರಚೋದಿಸುತ್ತದೆ.

ಉಪ್ಪುನೇರಳೆ ಎಲೆಯನ್ನು ಕೆಲವು ವೇಳೆ ತರಕಾರಿಯಾಗಿ ಬಳಸುತ್ತಾರೆ. ದನಗಳಿಗೂ ಇದು ಉತ್ತಮವಾದ ಮೇವು. ಹಸುಗಳಿಗೆ ಇದನ್ನು ಮೇವಾಗಿ ನೀಡಿದಾಗ ಹಾಲು ವೃದ್ಧಿಯಾಗುವುದು ಕಂಡುಬಂದಿದೆ.

ಹಣ್ಣನ್ನು ಹಾಗೆಯೇ ತಿನ್ನಬಹುದು. ರಸತೆಗೆದು ವಿವಿಧ ಪಾನೀಯಗಳನ್ನೂ ಮಾದಕದ್ರವ್ಯಗಳನ್ನೂ ತಯಾರಿಸುತ್ತಾರೆ. ಬೀಜದಿಂದ ಬಣ್ಣಗಳಿಗೆ ಬಳಸಬಹುದಾದ ಒಂದು ರೀತಿಯ ಎಣ್ಣೆ ತೆಗೆಯಬಹುದು, ಉಪ್ಪು ನೇರಳೆ ಮರ ಆವಿ ಕ್ರಿಯೆಗೆ ಒಳಪಡಿಸಿದ ಅನಂತರ ಹೆಚ್ಚಿನ ಮಟ್ಟದ ಸ್ಥಿತಿಸ್ಥಾಪಕ ಗುಣವನ್ನು ಪಡೆಕೊಳ್ಳುತ್ತದೆ. ಕ್ರಿಕೆಟ್, ಟೆನ್ನಿಸ್, ಹಾಕಿ ಮುಂತಾದ ಬ್ಯಾಟುಗಳ ತಯಾರಿಕೆಗೆ ಈ ಮರ ಬಹು ಉಪಯೋಗಕರ. (ಬಿ.ವಿ.ವಿ.)

**ಉಪ್ಪು ಮಣ್ಣುಗಳು:** ಅಧಿಕ ಪ್ರಮಾಣದಲ್ಲಿ ದ್ರಾವ್ಯ ಉಪ್ಪುಗಳನ್ನೂ (ಚೌಳುಪ್ಪು), ವಿನಿಮಯಿಸಬಹುದಾದ ಸೋಡಿಯಮನ್ನೂ ಒಳಗೊಂಡಿರುವಂಥವು (ಸಾಲ್ಟೆಡ್ ಸಾಯಿಲ್ಸ್). ಬಟ್ಟೆ ಸ್ವಚ್ಛ ಮಾಡಲು ಬಳಸುವ ಉಪ್ಪು ಅಥವಾ ಚೌಳು ಬೇಸಾಯದ ಭೂಮಿಗಳಲ್ಲಿ ಅಲ್ಲಲ್ಲಿ ಉದ್ಭವಿಸಿ ಭೂಮಿಯ ಫಲವತ್ತತೆಯನ್ನು ಕುಂಠಿಸುವುದುಂಟು. ಮರುಭೂಮಿಗಳಲ್ಲಿ ಶುಷ್ಕಪ್ರದೇಶಗಳಲ್ಲಿ ಅದರಲ್ಲೂ ಉಳಿದ ಭಾಗಗಳಿಂದ ನೀರು ಹರಿದು ಮುಂದಕ್ಕೆ ಹೋಗಲು ಅವಕಾಶವಿಲ್ಲದಿರುವ ತಗ್ಗು ಪ್ರದೇಶಗಳಲ್ಲಿ ಉಪ್ಪಿನ ಶೇಖರಣೆ ಸಾಮಾನ್ಯ. ನೀರಾವರಿ ಪ್ರದೇಶಗಳಲ್ಲಿ ಕೆರೆ ಅಚ್ಚುಕಟ್ಟಿನಲ್ಲಿ ನಾಲಾ ಬಯಲುಗಳಲ್ಲಿ ಕೆಳಪದರಗಳಿಂದ ಉಪ್ಪು ಮೇಲಕ್ಕೆ ಉಕ್ಕಿ ಭೂಮಿ ಉಪ್ಪಾಗುವುದು ತರಿಬೇಸಾಯದಲ್ಲಿನ ಒಂದು ತೀವ್ರ ಸಮಸ್ಯೆ. ತೀರಪ್ರದೇಶದ ಕೆಲವು ಜಮೀನುಗಳಲ್ಲಿ ಸಮುದ್ರದ ನೀರು ನುಗ್ಗಿ ಇಲ್ಲವೆ ಅದರ ಸಿಂಪಡಣೆಯಿಂದ ಭೂಮಿ ಉಪ್ಪಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಮೈದಾನ ಪ್ರದೇಶದ ಎಲ್ಲ ಕೆರೆ ಅಚ್ಚುಕಟ್ಟಿನಲ್ಲೂ ಅದೆಷ್ಟೋ ಜಮೀನು ಚೌಳಿನಿಂದ ಹಾಳಾಗಿರುವುದನ್ನು ನೋಡಬಹುದು. ಹಾಗೆಯೇ ಚಿತ್ರದುರ್ಗ ಜಿಲ್ಲೆಯ ವಾಣೀವಿಲಾಸ ಸಾಗರದ ಅಚ್ಚುಕಟ್ಟಿನಲ್ಲಿ, ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ, ವಿಶ್ವೇಶ್ವರಯ್ಯ ನಾಲಾ ಬಯಲಿನಲ್ಲಿ ಅನೇಕ ಸಾವಿರ ಎಕರೆ ಭೂಮಿ ಇಂಥ ಉಪ್ಪಿನಿಂದಾಗಿ ಹಾಳು ಬಿದ್ದಿದೆ. ಮಳೆ ಕಡಿಮೆ ಇರುವ ಪ್ರದೇಶಗಳಾದ ಬಿಜಾಪುರ, ಧಾರವಾಡ ಮತ್ತಿತರ ಎರೆ ಪ್ರದೇಶಗಳಲ್ಲಿ ಕರಲು ಮಣ್ಣು ಎಂದು ಹೇಳುವ ಉಪ್ಪು ಭೂಮಿಗಳಿವೆ.

ನೀರು, ಗಾಳಿ, ಬಿಸಿಲು ಇವುಗಳ ಕ್ರಿಯೆಯಿಂದ ಶಿಲೆ ಮತ್ತು ಖನಿಜಗಳು ಶಿಥಿಲವಾಗಿ ಕ್ರಮೇಣ ಮಣ್ಣು ರೂಪುಗೊಳ್ಳುತ್ತದೆ. ಆಗ ಅವುಗಳಲ್ಲಿರುವ ಸಿಲಿಕ, ಮ್ಯಾಗ್ನೀಸಿಯಂ, ಪೊಟ್ಯಾಸಿಯಂ, ಸೊಡಿಯಂ, ಕ್ಯಾಲ್ಸಿಯಂ, ಕಬ್ಬಿಣ, ಅಲ್ಯುಮಿನಿಯಂ ಮತ್ತು ಅನೇಕ ಲವಣಗಳು ಬಿಡುಗಡೆಯಾಗುತ್ತವೆ. ಸಾಕಷ್ಟು ಮಳೆ ಇರುವೆಡೆ ಇವು ಕರಗಿ ಹರಿದುಹೋಗುತ್ತವೆ: ಮಳೆ ಕಡಿಮೆ ಇರುವ ಸ್ಥಳಗಳಲ್ಲಿ ಸಂಗ್ರಹವಾಗತೊಡಗುತ್ತವೆ.

ನೀರಾವರಿ ಪ್ರದೇಶಗಳಲ್ಲಿ ಭೂಮಿಯ ಒಳನೀರಿನ ಮಟ್ಟ ಮೇಲಕ್ಕೆ ಏರುತ್ತದೆ. ಅದು ಮಣ್ಣಿನ ಮೇಲ್ಮೈನಿಂದ 6' ಒಳಗೆ ಬಂದಾಗ, ಕೆಳಪದರಗಳಲ್ಲಿರಬಹುದಾದ ಉಪ್ಪು ನೀರಿನೊಡನೆ ಮೇಲಕ್ಕೆ ಬಂದು ನೀರು ಆರಿದಾಗ ಮೇಲ್ಮಣ್ಣಿನಲ್ಲಿ ಶೇಖರಣೆಯಾಗುತ್ತ ಹೋಗುತ್ತದೆ. ಇದಲ್ಲದೆ ಎಲ್ಲ ಕೆರೆ, ಬಾವಿ, ನದಿ ಮುಂತಾದವುಗಳ ನೀರಿನಲ್ಲೂ ಸ್ವಲ್ಪ ಅಂಶ ಉಪ್ಪು ಮಣ್ಣಿಗೆ ಸೇರಿ ಅದರ ಉಪ್ಪಿನ ಅಂಶ ವೃದ್ಧಿಸುವುದು ಅನಿವಾರ್ಯವಾಗುತ್ತದೆ. ಹೀಗೆ ಏರುತ್ತ ಹೋದ ಉಪ್ಪಿನ ಅಂಶ 0.20%ಕ್ಕಿಂತ ಹೆಚ್ಚಾದಲ್ಲಿ ಬೆಳೆಗೆ ತೊಂದರೆಯುಂಟು. ಇಂಥ ಮಣ್ಣಿನ ಮೇಲೆ ನೀರು ಆರಿದಾಗ ಬೂದು ಉಪ್ಪು ಸಂಗ್ರಹಣೆಗೊಂಡಿರುವುದನ್ನು ಕಾಣಬಹುದು. ಇದರ ಬಹ್ವಂಶ ಸೋಡಿಯಂ ಕ್ಲೋರೈಡ್ (ಅಡಿಗೆ ಉಪ್ಪು); ಸ್ವಲ್ಪ ಸೋಡಿಯಂ ಸಲ್ಫೇಟ್, ಕ್ಯಾಲ್ಸಿಯಂ ಕ್ಲೋರೈಡ್, ಕ್ಯಾಲ್ಸಿಯಂ ಸಲ್ಫೇಟ್, ಮೆಗ್ನಿಷಿಯಂ ಕ್ಲೋರೈಡ್, ಮೆಗ್ನೀಷಿಯಂ ಸಲ್ಫೇಟ್ ಇರಬಹುದು. ಲವಣಾಂಶ ಒಂದು ಮಟ್ಟಕ್ಕಿಂತ (0.02%) ಮೇಲೇರಿದಾಗ ಅನೇಕ ಪೈರುಗಳಿಗೆ ತೊಂದರೆಯಾದರೂ ಮಣ್ಣಿಗೆ ಹೆಚ್ಚು ಹಾನಿಯಾಗುವುದಿಲ್ಲ. ಬದಲಾಗಿ ಮಣ್ಣಿನ ಕಣಜೋಡಣೆಯನ್ನು ಕುದುರಿಸಿ ನೀರು ಬಸಿಯುವುದಕ್ಕೆ ಗಾಳಿ ತೂರುವುದಕ್ಕೆ ಸಹಾಯಕವಾಗುತ್ತದೆ. ಆದರೆ ಲವಣಗಳು ಹೆಚ್ಚಿದರೆ ನೀರು ಬಸಿದಾಗ ಸೋಡಿಯಂ ಅಂಶ ಮಣ್ಣಿನ ಜೇಡಿಯಲ್ಲಿ ವಿನಿಮಯಕ್ರಿಯೆಯಿಂದ ಸೇರಿ ಕಣಜೋಡಣೆ ವ್ಯತ್ಯಾಸವಾಗಿ ನೀರು ಇಳಿಯದೆ ಮಣ್ಣು ಹಾಳಾಗುತ್ತದೆ.

**ವರ್ಗೀಕರಣ:** ಜೇಡಿಯಲ್ಲಿನ ಸೋಡಿಯಂ ಅಂಶ ಮಿತಿಯಲ್ಲಿದ್ದು ಕೇವಲ ಸೋಡಿಯಂ ಕ್ಲೋರೈಡಿನಂಥ ಲವಣಗಳು ಹೆಚ್ಚಿರುವ ಭೂಮಿಗಳಿಗೆ ಉಪ್ಪು ಮಣ್ಣುಗಳೆಂದು (ಸೆಲೈನ್ ಸಾಯಿಲ್ಸ್) ಹೆಸರು. ಇಂಥವುಗಳ ರಸಸಾರಸ್ಥಿತಿ (PH) 7-8.5ರ ಒಳಗಿರುವುದು. ಮಣ್ಣಿನ ಜೇಡಿಯಲ್ಲಿ ಸೋಡಿಯಂ ಹೆಚ್ಚಿದಂತೆಲ್ಲ ಅದು ವಿಕರಣವಾಗುತ್ತದೆ. ಇದಲ್ಲದೆ ಸೋಡಿಯಂ ಹೈಡ್ರಾಕ್ಸೈಡ್ ಉತ್ಪತ್ತಿಯಾಗಿ ಮಣ್ಣಿನ PH 8.5ಕ್ಕಿಂತ ಜಾಸ್ತಿಯಾಗುತ್ತದೆ. ವೈರಿಗೂ ಸೂಕ್ಷ್ಮ ಜೀವಿಗಳಿಗೂ ಇದು ಪ್ರತಿಕೂಲ, ಮಣ್ಣಿನಲ್ಲಿರುವ ಸಾವಯವಾಂಶ ಕರಗಿ ಕಪ್ಪು ಅಥವಾ ಕಂದು ಕಲೆಗಳು ಅಲ್ಲಲ್ಲಿ ಕಾಣುತ್ತವೆ. ಇಂಥ ಮಣ್ಣುಗಳ ಹೆಸರು ಕ್ಷಾರ ಮಣ್ಣುಗಳೂ (ಆಲ್ಕಲಿ ಸಾಯಿಲ್ಸ್). ಕೆಲವು ಸಂದರ್ಭಗಳಲ್ಲಿ ಸೋಡಿಯಂ ಕೆಳಪದರಗಳಿಗೆ ಇಳಿದು ಜೇಡಿಯ ಗಟ್ಟಿಪದರ ಉಂಟಾಗಿ ನೀರು ಇಳಿಯುವುದಕ್ಕೆ ಹಾನಿಯಾಗುವುದುಂಟು.

**ಉಪ್ಪು ಮಣ್ಣುಗಳ ಸುಧಾರಣೆ:** ಈ ದಿಸೆಯಲ್ಲಿ ಮೊದಲ ಹೆಜ್ಜೆ ನೀರು ಚರಂಡಿಗಳನ್ನು ಹೊಡೆದು ಸಿಹಿ ನೀರನ್ನು ಕಟ್ಟಿ ಉಪ್ಪನ್ನು ಕರಗಿಸಿ ಬಸಿಯುವುದು: ತರುವಾಯ ಸಾವಯವ ವಸ್ತುಗಳಾದ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್ ಹಸುರೆಲೆ ಗೊಬ್ಬರ ಮುಂತಾದುವುವನ್ನು ಧಾರಾಳವಾದ ಪ್ರಮಾಣದಲ್ಲಿ ಮಿಶ್ರಣ ಮಾಡಿ ಪರಿಸ್ಥಿತಿಯನ್ನು ಸುಧಾರಿಸಬೇಕು. ಮಣ್ಣಿನ ಜೇಡಿಯ ಸೋಡಿಯಂ ಹೆಚ್ಚಳದಿಂದ ತೊಂದರೆಯಿದ್ದಾಗ ಜಿಪ್ಸಂ, ಗಂಧಕ ಮುಂತಾದ ವಸ್ತುಗಳನ್ನು ಮಿಶ್ರಣ ಮಾಡಿ ಮಣ್ಣುಗಳನ್ನು ಉತ್ತಮಗೊಳಿಸವುದು ಅಗತ್ಯ. ಉಪ್ಪು ಮಣ್ಣುಗಳ ಸುಧಾರಣೆ (ಅದರಲ್ಲೂ ನೀರಾವರಿ ಬಯಲುಗಳಲ್ಲಿ) ನೀರು ಬಳಸುವ ಪ್ರದೇಶದ ಎಲ್ಲ ರೈತರುಗಳ ಸಹಕಾರದಿಂದಲೇ ಸಾಧ್ಯ. ಎಲ್ಲರೂ ವಿವೇಚನೆಯಿಂದ ನೀರು ಬಳಸಿ ಚರಂಡಿ ವ್ಯವಸ್ಥೆಯಿಂದ ಹೆಚ್ಚು ನೀರನ್ನು ಹೊರಸಾಗಿಸುವ ಕ್ರಮವನ್ನು ಅನುಸರಿಸಿದಲ್ಲಿ ಹಾನಿಯ ಪರಿಮಾಣವನ್ನು ತಗ್ಗಿಸುವುದು ಸಾಧ್ಯ. (ಬಿ.ವಿ.ವಿ.)

**ಉಪ್ಪೂರು ನಾರ್ಣಪ್ಪ ಭಾಗವತ:** 1918 –84. ಯಕ್ಷಗಾನ ಬಡಗುತಿಟ್ಟಿನ ಹಳೆಯ ತಲೆಮಾರಿನ ಸಾಂಪದಾಯಿಕ ಶೈಲಿಯ ಪಸಿದ್ಧ ಭಾಗವತರು. ಖಚಿತ ರಾಗಜ್ಞಾನ ದಿಂದ, ಕುಣಿತಕ್ಕೆ ತಕ್ಕ ತಾಳವನ್ನು ನಡೆಸುವ ಸಾಮರ್ಥ್ಯದಿಂದ, ಹಾಡಿನ ಪದ ಪದಗಳನ್ನೂ ಹಿಂಜಿ ಅದರ ಭಾವವನ್ನು ಬಿಂಬಿಸುವ ಅಪರೂಪದ ಶೈಲಿಯಿಂದಾಗಿ ಯಕ್ಷಗಾನದ ಪಾಚಾರ್ಯರೆಂದೇ ಪರಿಚಿತರು. ಇವರು 1918ರಲ್ಲಿ ಜನಿಸಿದರು. ತಂದೆ ಶೀನಿವಾಸಭಾಗವತ. ಅವರೇ ಭಾಗವತಿಕೆಯಲ್ಲಿ ಮೊದಲ ಗುರು. ಉಪ್ಪೂರರು ಮೊದಲಿಗೆ ಸಂಗೀತಗಾರರಾಗಿ ಅನುಭವ ಪಡೆದು ಅನಂತರ ತಮ್ಮ 20ನೆಯ ವಯಸ್ಸಿನಲ್ಲೇ ಭಾಗವತರಾಗಿ ರೂಪುಗೊಂಡರು. ಅಮೃತೇಶ್ವರಿ, ಮಾರಣಕಟ್ಟೆ, ಕೊಲ್ಲೂರು, ಪೆರ್ಡೂರು, ಸೌಕೂರು, ಸಾಲಿಗ್ರಾಮ ಮುಂತಾದ ಮೇಳಗಳಲ್ಲಿ 30 ವರ್ಷಗಳನ್ನು ಕಳೆದರು.

ಭಾಗವತಿಕೆಯಲ್ಲಿ ಹೆಸರಾದಂತೆ ಇವರು ಯಕ್ಷಗಾನ ಕಲಿಕೆಯಲ್ಲಿ ಸಿದ್ಧಹಸ್ತರು. ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರದ ಪಾಚಾರ್ಯರಾಗಿ 13 ವರ್ಷ ಯಕ್ಷಗಾನದಲ್ಲಿ ತರಬೇತಿ ನೀಡಿದರು. ಅಪಾರ ಸಂಖ್ಯೆಯ ಶಿಷ್ಯರನ್ನು ಬೆಳೆಸಿದ್ದು, ಹಲವು ಮೇಳಗಳಲ್ಲಿ ಇವರ ಶಿಷ್ಯಂದಿರು ಅಗ್ರಪಂಕ್ತಿಯ ಕಲಾವಿದರಾಗಿರುವುದು ಉಲ್ಲೇಖನೀಯ. ಯಕ್ಷಗಾನ ಲೋಕದಲ್ಲಿ ಮಿಂಚಿ ಬಹುಬೇಗ ಮಾಯವಾದ ಪ್ರತಿಭಾವಂತ ಯುವ ಭಾಗವತ ಗುಂಡ್ಮಿ ಕಾಳಿಂಗ ನಾವಡ ಎನೋಡಿಏ ಇವರ ಪಮುಖ ಶಿಷ್ಯರಲ್ಲೊಬ್ಬರು.

ಇವರು ಯಕ್ಷಗಾನ ಕುರಿತು ಯಕ್ಷಗಾನ ಶಿಕ್ಷಕ, ಯಕ್ಷಗಾನ ಅಧ್ಯಯನ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಯಕ್ಷಗಾನದ ರಾಗ, ತಾಳ, ಕುಣಿತಗಳ ಬಗ್ಗೆ ದೀರ್ಘವಾದ ವಿವರಗಳು ಮತ್ತು ಮಾರ್ಗದರ್ಶಕ ಸೂತ್ರಗಳಿವೆ. ಸತ್ಯಂ ವಧ ಧರ್ಮಂ ಚರ ಎಂಬುದು ಇವರ ಒಂದು ಯಕ್ಷಗಾನ ಪ್ರಸಂಗ. ಉಪ್ಪೂರರು ಭಾಗವತರಾಗಿ ವಿದ್ವತ್ತು, ಸಹೃದಯತೆಯ ಜೊತೆಗೆ ಕಲಾವಿದರಿಗೆ ಮಾದರಿಯಾಗಬಲ್ಲ ವ್ಯಕ್ತಿತ್ವ ಹೊಂದಿದ್ದರು. ಸಂಪ್ರದಾಯಬದ್ಧ ಭಾಗವತಿಕೆಯನ್ನು ಮೈಗೂಡಿಸಿಕೊಂಡಿದ್ದರೂ ಹಲವಾರು ಅರ್ಥಪೂರ್ಣ ಬದಲಾವಣೆಗಳಿಗೆ ತಮ್ಮನ್ನು ಒಡ್ಡಿಕೊಂಡಿದ್ದರು. ಆದರೆ ಕೆಲವೊಮ್ಮೆ ಅತಿರೇಕದ ಬದಲಾವಣೆ ಗಳಿಗೆ ಇವರು ರಾಜಿಯಾಗಲಿಲ್ಲ. ಶಿವರಾಮ ಕಾರಂತರ ನೃತ್ಯ ನಾಟಕಗಳಲ್ಲಿ ಭಾಗವತರಾಗಿ ಭಾಗವಹಿಸಿದ್ದರಿಂದ, ಕಾರಂತರ ಪ್ರಯೋಗಗಳಿಂದ ತಮ್ಮ ಅನುಭವ ವಿಸ್ತಾರಗೊಂಡಿದ್ದನ್ನು ಇವರು ಒಪ್ಪಿಕೊಂಡಿದ್ದರು. ಯಕ್ಷಗಾನಕ್ಕೆ ನಾಟಕಗಳಲ್ಲಿರುವಂತೆ ನಿರ್ದೇಶನದ ಅಗತ್ಯವಿದೆ ಎಂಬ ಬಗ್ಗೆ ಇವರ ಸಹಮತವಿತ್ತು. ಇವರು 1984 ಏಪ್ರಿಲ್ 11ರಂದು ನಿಧನರಾದರು. *

**ಉಪ್ರುಂಜ ಗಿಡ:** ವರ್ಬಿನೇಸಿ ಕುಟುಂಬದ (ಫ್ಯಾಮಿಲಿ) ಅವಿಸಿನಿಯ ಜಾತಿಯ (ಜಿನೆರ) ಆಫಿಸಿನ್ಯಾಲಿಸ್ ಪ್ರಭೇದದ (ಸ್ಪೀಶೀಸ್) ಒಂದು ಗಿಡ (ಅವಿಸಿನಿಯ ಆಫಿಸಿನ್ಯಾಲಸ್). ಮ್ಯಾನ್‌ಗ್ರೂವ್ ಜಾತಿಗೆ ಸೇರಿದೆ. ಭಾರತ ಮತ್ತು ಇತರ ದೇಶಗಳ ಕರಾವಳಿ ಪ್ರದೇಶಗಳಲ್ಲಿ – ಉಪ್ಪಿನ ಅಂಶ ಅಧಿಕವಾಗಿರುವ ನೀರು ಮತ್ತು ನೆಲಗಳಲ್ಲಿ – ಮ್ಯಾನ್‌ಗ್ರೂವ್ ಸಸ್ಯ ಬೆಳೆಯುತ್ತದೆ. ನೆಲದಲ್ಲಿ ಉಪ್ಪಿನ ಅಂಶ ಹೆಚ್ಚು. ಆದ್ದರಿಂದ ಗಿಡಕ್ಕೆ ಸಿಗುವ ನೀರಿನ ಪ್ರಮಾಣ ಕಡಿಮೆ. ಹೀಗಾಗಿ ಈ ಪ್ರದೇಶದ ಇತರ ಗಿಡಗಂಟೆಗಳಂತೆ ಇದೂ ಶುಷ್ಕಸಸ್ಯ. ಭಾರತದಲ್ಲಿ ಇದು ಬೆಳೆಯುವ ಪ್ರದೇಶಗಳು ರತ್ನಗಿರಿ ಜಿಲ್ಲೆಯ ಮಾಲವಣ, ಕಾರವಾರ, ಮುಂಬಯಿ ಕರಾವಳಿ, ಇತ್ಯಾದಿ. ಇದೊಂದು ಪೊದೆಸಸ್ಯ, ಎಲೆಗಳು ತೊಗಲಿನಂತೆ, ನೀರು ಆರಿಹೋಗುವದನ್ನು ತಡೆಯಲು ಇಂಥ ರಚನೆ ಆವಶ್ಯ. ಕಾರಣವಿಷ್ಟೆ – ನೀರು ಆರಿದಾಗ ಬೇರಿನ ಮೂಲಕ ಒಳಸೇರುವ ನೀರಿನ ಪ್ರಮಾಣ ಹೆಚ್ಚುತ್ತದೆ; ಆಗ ಉಪ್ಪು ಒಳಸೇರಿ ರಸಾಭಿಸರಣದ ನಾಳಗಳನ್ನು ಮುಚ್ಚಿ ಗಿಡ ನಾಶವಾಗುವ ಸಂಭವವಿದೆ. ಆದ್ದರಿಂದ ಬೆಳೆಯುವುದು ತೇವವಾದ ನೆಲದಲ್ಲಾದರೂ ಬೇರಿನ ಮುಖಾಂತರ ಹೀರಿಕೊಳ್ಳುವ ನೀರಿನ ಪರಿಮಾಣ ಮಾತ್ರ ಕಡಿಮೆ. ಇದಲ್ಲದೆ ಭೂ ಗಾಳಿ ಮತ್ತು ಸಮುದ್ರ ಗಾಳಿಗಳಿಗೆ ಈ ಗಿಡ ಸದಾಕಾಲ ಮೈಯೊಡ್ಡುವುದರಿಂದ ನೀರು ಹೆಚ್ಚಾಗಿ ಬೆವರಿಹೋಗುವ ಸಂಭವವೂ ಇದೆ. ಇದನ್ನು ತಡೆಯಲು ಎಲೆಗಳಿಗೆ ದಪ್ಪ ತೊಗಲಿನಂಥ ಹೊದಿಕೆ ಅನಿವಾರ್ಯ.

ಉಪ್ರುಂಜ ಗಿಡ ಬೆಳೆಯುವಂಥ ನೆಲ ಪೊಳ್ಳಾಗಿಯೂ ಕೆಸರಾಗಿಯೂ ಇರುವುದರಿಂದ ನೀರಿನ ಭರತ ಇಳಿತಗಳು ಗಿಡವನ್ನು ಅಲುಗಿಸಿ ಗಿಡ ಬೇರುಸಹಿತ ಕಿತ್ತು ಬರುವ ಸಂಭವವಿದೆ. ಇಂಥ ಅಪಾಯವನ್ನು ಅದು ತನ್ನ ದಂಟು ಬೇರುಗಳಿಂದ ಎದುರಿಸುತ್ತದೆ. ಇವು ಸಾಧಾರಣ ವಾಗಿ ಮುಖ್ಯಕಾಂಡ ಕೆಳಭಾಗದಿಂದ ಬೆಳೆದು ಕೆಸರಿನಲ್ಲಿ ನಾಟಿಕೊಂಡು ಗಿಡಕ್ಕೆ ದೃಢತೆಯನ್ನು ಕೊಡುತ್ತವೆ. ಬೆಳೆಯುವ ಪ್ರತಿಯೊಂದು ಗಿಡಕ್ಕೂ ಆಮ್ಲಜನಕ ಅವಶ್ಯವಷ್ಟೆ. ಕೆಸರಿನಲ್ಲಿರುವ ಆಮ್ಲಜನಕ ಸಸ್ಯಜನ್ಯವಾದ ಪದಾರ್ಥಗಳನ್ನು ಕೊಳೆಯಿಸಿ ಬೇರ್ಪಡಿಸುವಲ್ಲಿಯೇ ವ್ಯಯವಾಗು ತ್ತದೆ. ಆದ್ದರಿಂದ ಉಪ್ರುಂಜದ ಬೇರುಗಳಿಗೆ ಆವಶ್ಯಕವಾದ ಆಮ್ಲಜನಕ ನೆಲದಲ್ಲಿ ಸಾಕಷ್ಟು ದೊರೆಯುವುದಿಲ್ಲ. ಆದಕಾರಣ ಅವು ನೆಲದ ಮೇಲ್ಗಡೆಯೇ ಅಧಿಕವಾಗಿ ಬೆಳೆದು ಬರುತ್ತವೆ. ಬೇರುಗಳು ಗುರುತ್ವಾಕರ್ಷಣದ ಕಡೆಗೆ ಬೆಳೆಯದೆ ಅದರ ವಿರುದ್ಧ ಕಡೆಗೆ ಬೆಳೆಯುವುದು ಒಂದು ವಿಚಿತ್ರ ಅಂಶ. ಇವುಗಳಿಗೆ ಸಣ್ಣ ಸಣ್ಣ ರಂಧ್ರಗಳಿವೆ (ಲೆಂಟಿಕಲ್ಸ್). ರಂಧ್ರಗಳ ಮುಖಾಂತರ ಗಿಡ ಆಮ್ಲಜನಕವನ್ನು ಪಡೆಯುತ್ತದೆ. ಆದ್ದರಿಂದಲೇ ಈ ಬೇರುಗಳನ್ನು ಉಸಿರಾಡುವ ಬೇರುಗಳೆಂದು ಕರೆಯುವರು.

ಹಣ್ಣುಗಳ ಉದ್ದ 1" -1½", ಆಕಾರ ತತ್ತಿಯಂತೆ. ಬೀಜ ಬಹಳ ದೊಡ್ಡದಾಗಿದ್ದು ಹಣ್ಣಿನ ಒಳಭಾಗವನ್ನು ಪೂರ್ತಿಯಾಗಿ ತುಂಬಿಕೊಂಡಿರುತ್ತದೆ. ಬೀಜ ಹಣ್ಣಿನ ಒಳಗೇ ಮೊಳೆತು ಬೆಳೆಯಲಾರಂಭಿಸುವುದು. ಭ್ರೂಣದ ಬೇರು ಫಲದ ತುದಿಯನ್ನು ದಾಟಿ ಹೊರಬಂದು ಉಬ್ಬಿಕೊಳ್ಳುವುದು. ಅನಂತರ ಚಿಕ್ಕ ಚಿಕ್ಕ ಮತ್ತು ಗಂಟುಗಂಟಾದ ಊಬುಗಳು ಬೇರಿನ ಮೇಲೆಲ್ಲ ಕಂಡುಬರುವುವು. ಇವೇ ಮುಂದೆ ಹುಟ್ಟಿ ಬರುವ ದಂಟುಬೇರುಗಳು. ಕೆಲವು ತಿಂಗಳ ತರುವಾಯ ಈ ಚಿಕ್ಕ ಸಸಿ ಕೆಳಗೆ ಬಿದ್ದು ಬೇರುಗಳು ಕೆಸರಿನಲ್ಲಿ ಹೂತು ಹೋಗುತ್ತವೆ. ಅನಂತರ ಗಂಟುಬೇರುಗಳು ಬೇಗನೆ ಹುಟ್ಟಿಕೊಂಡು ಎಲ್ಲ ದಿಕ್ಕುಗಳಲ್ಲೂ ಹರಡುವುವು. ಆಗ ಗಿಡ ಎದ್ದು ನೇರವಾಗಿ ನಿಲ್ಲುವುದು. ಈ ತೆರನಾಗಿ ತಾಯಿ ಗಿಡದಲ್ಲಿರುವ ಹಣ್ಣುಗಳಲ್ಲಿ ಬೀಜಗಳು ಮೊಳೆಯುವುದನ್ನು ಜರಾಯುಜತ್ವ (ವಿವಿಪ್ಯಾರಸ್) ಎನ್ನುವರು. ಉಪ್ರುಂಜಗಿಡದ ತೊಗಟೆ ಕಂದುಬಣ್ಣದ್ದಿದ್ದರೂ ಭಾರತದಲ್ಲಿ ಇದನ್ನು ಬಿಳಿಯ ಮ್ಯಾನ್‌ಗ್ರೋವ್ ಎಂದು ಕರೆಯುವುದುಂಟು. ತೊಗಟೆಯಲ್ಲಿ ಚರ್ಮವನ್ನು ಹದ ಮಾಡುವ ವಿಶೇಷ ಗುಣವಿದೆ. (ಪಿ.ಎಸ್.ಸಿ.)

**ಉಫೀಜ್ಜೀ ಮತ್ತು ಪಿಟ್ಟಿ ಚಿತ್ರಶಾಲೆಗಳು:** ಫ್ಲಾರೆನ್ಸಿನ ಉಫೀಟ್ಜೀ ಮತ್ತು ಪಿಟ್ಟಿ ಎರಡು ಅರಮನೆಗಳಲ್ಲಿ ಪ್ರಪಂಚದಲ್ಲಿ ಅತ್ಯುತ್ತಮ ಎನಿಸಿರುವ ಚಿತ್ರಗಳನ್ನು ಸಂಗ್ರಹಿಸಿಡಲಾಗಿದೆ. ಇವು ಪ್ರಪಂಚದಲ್ಲೇ ಅತಿ ದೊಡ್ಡ ಸಂಗ್ರಹಾಲಯಗಳೆನಿಸಿವೆ. ಲೊರನ್ಸೊ ದಿ ಮ್ಯಾಗ್ನಿಫಿಸೆಂಟ್ ಇವುಗಳ ಸಂಸ್ಥಾಪಕ. ಒಂದನೆಯ ಫ್ರಾನ್ಸಿಸ್, ಎರಡನೆಯ ಫರ್ಡಿನೆಂಡ್, ಮೂರನೆಯ ಕೊಸಿಮೊ ಇವರೂ ಇಲ್ಲಿನ ಅನೇಕ ಉತ್ತಮ ಚಿತ್ರಗಳ ಸಂಗ್ರಹಕ್ಕೆ ಶ್ರಮಿಸಿದ್ದಾರೆ. ಈ ಚಿತ್ರ ಶಾಲೆಯ ಹೆಸರು ಫ್ಲಾರೆನ್ಸಿನ ಪುರಸಭೆಯ ಆಡಳಿತ ನಡೆಯುತ್ತಿದ್ದ ಪಾಲಜ್ಜೊ ಡೆಗ್ಲಿ ಉಫೀಟ್ಜೀ ಅಥವಾ ಕಚೇರಿಗಳ ಅರಮನೆ ಎಂಬುದರಿಂದ ಬಂದಿದೆ. ಇಲ್ಲಿಯ ವಿಶೇಷ ಆಕರ್ಷಣೆ ಎಂದರೆ ಇಟಲಿಯ ಪ್ರಾಚೀನ ಚಿತ್ರಕಲಾವೈಭವ. ಇಲ್ಲಿ ಮೈಕಲೇಂಜಲೊ, ಲಿಯೊನಾರ್ಡೊ ಡ ವಿಂಚಿ, ವೆರೋಕಿಯೊ, ರ್‍ಯಾಫೆಲ್, ಜೋವನಿ ಬೆಲ್ಲಿನಿ ಮೊದಲಾದ ಪ್ರಸಿದ್ಧರ ಉತ್ತಮ ಚಿತ್ರಗಳಿವೆ. ಉಫೀಟ್ಜೀಯಂತೆ ಲ್ಯೂಕ ಪಿಟ್ಟಿಯ ಅರಮನೆಯಲ್ಲಿ ಮೆಡಿಚಿ ಕುಟುಂಬದವರಿಂದ ಪಿಟ್ಟಿ ಚಿತ್ರಶಾಲೆಯ ಚಿತ್ರ ಸಂಗ್ರಹ ಮೊದಲಾಯಿತು. ಉಫೀಟ್ಜೀಯಲ್ಲಿ ಇಟಲಿಯ ಎಲ್ಲ ಕಾಲದ ಚಿತ್ರಗಳ ಸಂಗ್ರಹವಿದ್ದರೆ, ಪಿಟ್ಟಿಯಲ್ಲಿ ಇಟಲಿಯ ಒಂದು ಕಾಲಕ್ಕೇ ಸೀಮಿತವಾದ ಪ್ರಬುದ್ಧ ಚಿತ್ರಕಲೆಯ ಸಂಗ್ರಹವಿದೆ. *

**ಉಬ್ಬರ:** ಮೈಯಲ್ಲಿರುವ, ಕೂಡಿಸುವ ಊತಕದ (ಕನೆಕ್ಟಿವ್ ಟಿಷ್ಯು) ಜೀವಕಣಗಳ ನಡುವಣ ತೆರಪುಗಳಲ್ಲೂ ರಸಿಕೆಯ (ಸೀರಮ್) ಪೊಳ್ಳುಗಳಲ್ಲೂ ನೀರಿನಂತಿರುವ ದ್ರವ ಸೇರಿಕೊಂಡು ಉಬ್ಬಿರುವಿಕೆ (ಈಡೀಮ). ಹೀಗೆ ಊದಿರುವ ಊತಕಗಳನ್ನು ಚುಚ್ಚಿದರೆ ತೆಳುವಾದ ಹೆಪ್ಪುಗಟ್ಟದ ರಸ ಒಸರುವುದು. ರಕ್ತದಲ್ಲಿನ ರಸಿಕೆಯನ್ನು ತೀರ ಹೆಚ್ಚು ಸೋಸಿ ಬಳಸಿರುವ ಈ ರಸದಲ್ಲಿ ಒಂದಿಷ್ಟು ಪ್ರೋಟೀನೂ ಇರುತ್ತದೆ. ಉಬ್ಬರದ ಕಾರಣವಾದ ರೋಗಗಳನ್ನು ಅನುಸರಿಸಿ ಈ ರಸದಲ್ಲಿ ಕೊಂಚ ವ್ಯತ್ಯಾಸಗಳಿರುವುವು. ಪ್ರೋಟೀನು ತುಂಬಿರುವ ಬಿಳಿರಕ್ತಕಣಗಳಿರುವ ಉರಿತದಲ್ಲಿನ (ಇನ್‌ಫಮೇಷನ್) ಸೋನೆಯಿಂದ (ಎಕ್ಸುಡೇಟ್) ವ್ಯತ್ಯಾಸ ತೋರಲು ಈ ರಸಕ್ಕೆ ಉಬ್ಬರದ ಒಸರು (ಟ್ರಾನ್ಸುಡೇಟ್) ಎಂದು ಹೆಸರಿದೆ. ಸೋನೆ ಬಲು ಮಟ್ಟಿಗೆ ರಕ್ತರಸವನ್ನು ಹೋಲುವುದು. ಶೋಫದಲ್ಲಿ (ಡ್ರಾಪ್ಸಿ, ಬಲ್ಲೆ, ಶೋಬೆ) ಮೈಯಲ್ಲೆಲ್ಲ ಉಬ್ಬರ ಹರಡಿಕೊಂಡು ಎದೆ ಹೊಟ್ಟೆಗಳ ತೆರನ ಮೈಪೊಳ್ಳುಗಳಲ್ಲೂ ಊತಕಗಳಲ್ಲೂ ಮಿತಿಮೀರಿ ಈ ರಸ ಸೇರಿಕೊಂಡಿರುವುದು. ಉಬ್ಬರ ಕೆಲವು ರೋಗಗಳ ಲಕ್ಷಣವೇ ಹೊರತು ಅದೇ ಒಂದು ರೋಗವಲ್ಲ. ಉಬ್ಬರಿಸಿಕೊಂಡಿರುವ ಜಾಗದಲ್ಲಿ ಬೆರಳು

ಒತ್ತಿ ಹಿಡಿದಿದ್ದು ಮತ್ತೆ ಎತ್ತಿದರೆ ಅಲ್ಲಿ ಗುಳಿ ಬೀಳುವುದು. ರೋಗಗಳಲ್ಲಿ ಜೀವಕಣಗಳ ಊತಕಗಳ ರಕ್ತದಲ್ಲಿನ ನೀರನ ಸಮತೋಲ ಕೆಟ್ಟಿರುವುದೇ ಉಬ್ಬರದ ಕಾರಣ. ಗುಂಡಿಗೆ, ಮೂತ್ರಪಿಂಡಗಳು, ಸಿರಗಳು, ಹಾಲುರಸಮಂಡಲ (ಲಿಂಫ್ಯಾಟಿಕ್ ಸಿಸ್ಟಂ), ನ್ಯೂನಪೋಷಣೆ, ಒಗ್ಗದಿಕೆಯ (ಅಲರ್ಜಿ) ರೋಗಗಳಲ್ಲಿ ಹೀಗಾಗಿರುವುದು. ಗುಂಡಿಗೆಯೊ ಮೂತ್ರ ಪಿಂಡಗಳೊ ಕೆಟ್ಟಿರುವಾಗ ಅವುಗಳ ಕೆಲಸವನ್ನು ಸರಿಪಡಿಸುವಂತೆ ಸಾಮಾನ್ಯವಾಗಿ ಮೂಲಕಾರಣಗಳನ್ನು ಹೋಗಲಾಡಿಸುವುದೇ ಇದರ ಚಿಕಿತ್ಸೆ. ತುರುಚೆದದ್ದಿನ (ಅರ್ಟಿಕೇರಿಯ) ಹಾಗೆ ಕೇವಲ ಒಂದೆಡೆಯಲ್ಲೊ ಮೂತ್ರಪಿಂಡಕ (ನೆಫ್ರಿಟಿಕ್) ಉಬ್ಬರದಲ್ಲಿದ್ದಂತೆ ಮೈಯಲ್ಲಿ ಎಲ್ಲೆಲ್ಲೂ ಕಾಣಿಸಿಕೊಳ್ಳಬಹುದು. ಕೈಕಾಲುಗಳೊ ಮೊಗವೊ ಮತ್ತಾವ ಅಂಗದಲ್ಲೊ ಹೀಗೆ ನೀರು ಸೇರಿಕೊಂಡರೆ ಬೋದುಗೆ (ಅನಸಾರ್ಕ) ಎನ್ನುವುದುಂಟು. ಶೋಫ, ಬಲ್ಲೆ, ಶೋಬೆ, ಬೋದುಗೆ ಹಳೆಯ ಕಾಲದ ಪದಗಳು. ಈಗಿನ ಪದ ಉಬ್ಬರ. ಹೊಟ್ಟೆಯ ಪೊಳ್ಳಿನಲ್ಲಿ ಮಿತಿಮೀರಿ ನೀರು ಸೇರಿಕೊಂಡಿರುವುದಕ್ಕೆ ನೀರ್ದೊಳ್ಳು (ಅಸೈಟಿಸ್) ಎನ್ನುತ್ತಾರೆ.

**ಮೈ ನೀರಿನ ಸಮತೋಲನ:** ಆಹಾರ ಮತ್ತು ಪಾನೀಯಗಳ ಸೇವನೆಯಿಂದ ದೇಹದೊಳಕ್ಕೆ ನೀರು ಸೇರುವುದು, ಮಲ, ಮೂತ್ರ, ಬೆವರು, ಉಸಿರು, ಚರ್ಮಗಳ ಮೂಲಕ ನೀರು ಹೊರ ಸಾಗುತ್ತದೆ. ಆರೋಗ್ಯವಂತರಲ್ಲಿ ಇವೆಲ್ಲ ಚಟುವಟಿಕೆಗಳೂ ಸುಸೂತ್ರವಾಗಿ ನಡೆದು ದೇಹದಲ್ಲಿ ನೀರಿನ ಅಂಶ ಯುಕ್ತ ಪ್ರಮಾಣದಲ್ಲಿ ಉಳಿದಿರುವುದು. ಬೆಳೆದಿರುವ ಆರೋಗ್ಯವಂತ ಒಬ್ಬನಲ್ಲಿ ಮೈ ತೂಕದ 40%–60% ನೀರೇ ಇರುವುದು. ಎಳೆಗೂಸುಗಳು, ಮಕ್ಕಳಲ್ಲಿ ಇನ್ನೂ ಹೆಚ್ಚು. ಬೊಜ್ಜಿನವರಿಗಿಂತ ಸಣಕಲು ಶರೀರದವರಲ್ಲೂ ಹೆಂಗಸರಿಗಿಂತ ಗಂಡಸರಲ್ಲೂ ನೀರು ಹೆಚ್ಚಾಗಿರುವುದು. ಇರಬೇಕಾದುದಕ್ಕಿಂತ ಹೆಚ್ಚಾಗಿ ನೀರು ಸುಮಾರು ಐದಾರು ಲೀಟರುಗಳಷ್ಟು ಸೇರಿಕೊಂಡಾಗ ಉಬ್ಬರ ಕಾಣಿಸಿಕೊಳ್ಳುತ್ತದೆ. ಮೈಯಲ್ಲಿನ ನೀರೆಲ್ಲ ಮುಖ್ಯವಾಗಿ ಮೂರು ಜಾಗಗಳಲ್ಲಿ ತುಂಬಿದೆ; ಜೀವಕೋಶಗಳೊಳಗೆ ಮೈ ನೀರಿನ ಸು. 70%, ಊತಕಗಳೊಳಗೆ 22.5% ರಕ್ತನಾಳಗಳಲ್ಲಿ 7.5%. ಊತಕಗಳು ಮತ್ತು ರಕ್ತನಾಳಗಳಲ್ಲಿ ಇರುವ ನೀರು ಜೀವಕೋಶದಾಚೆನದು (ಎಕ್ಸ್‌ಟ್ರಾಸೆಲ್ಯುಲರ್). ಇಲ್ಲಿ ನೀರು ಸೇರಿದಾಗಲೇ ಉಬ್ಬರವಾಗುವುದು ಸಾಮಾನ್ಯ. ಇವೇ ಅಲ್ಲದೆ ರಸಿಕೆ ಇಲ್ಲವೆ ಹಾಲುರಸದಿಂದ ಬರುವ ಇಳಿರಸದಿಂದ ತೇವಗೂಡಿರುವ ಪೊರೆಯೇ ಒಳವರಿಯಾಗಿರುವ ಗುಂಡಿಗೆ ಸುತ್ತುಪೊರೆಯ (ಪೆರಿಕಾರ್ಡಿಯಲ್) ಚೀಲ, ಪುಪ್ಪುಸದ ಸುತ್ತ ಇರುವ ಅಳ್ಳೆಪೊರೆಯ (ಪ್ಲೂರಲ್) ಹಾಗೂ ಹೊಟ್ಟೆಯಲ್ಲಿ ಒಳಾಂಗಗಳ ಸುತ್ತ ಇರುವ ಹೊರ ಬಿಗಿಪೊರೆಯ (ಪೆರಿಟೋನಿಯಲ್) ಕೋಶಗಳು ಕೀಲುಗಳ ತೆರಪುಗಳಲ್ಲೂ ನೀರು ಸೇರಿಕೊಂಡು ಉಬ್ಬರಿಸಿಕೊಳ್ಳಬಹುದು. ಆರೋಗ್ಯವಂತರಲ್ಲಿ ಈ ಎಡೆಗಳಲ್ಲಿ ಎಲ್ಲ ಒಟ್ಟು ಕೇವಲ ಕೆಲವೇ ಮಿಲಿಲೀಟರುಗಳಷ್ಟು ನುಣುಪಿಸುವ (ಲೂಬ್ರಿಕೇಟಿಂಗ್) ರಸ ಇರುವುದು. ಹೀಗೆ ನೀರು ಮೈಯಲ್ಲಿ ಕೆಲವು ಗೊತ್ತಾದ ತೆರಪುಗಳಲ್ಲಿ ಸೇರಿಕೊಳ್ಳುವುದೆಂಬ ಕಲ್ಪನೆಗೆ ಇನ್ನೊಂದು ವಾದ ಇದೆ. ಊತಕಾಂತರ ಇಲ್ಲವೇ ತಳಗಟ್ಟಿನ ವಸ್ತುವಿನಲ್ಲಿ (ಗ್ರಾಂಡ್ ಸಬ್‌ಸ್ಟೆನ್ಸ್) ಕರಗುವ ವಸ್ತುವೂ ತೇವವೂ ಸೇರಿಕೊಂಡು ಗಿಜಿಯಂತಿದ್ದು (ಜೆಲ್) ಕೆಲವೆಡೆ ಇವುಗಳ ಪ್ರಮಾಣ ಹೆಚ್ಚು ಕಡಿಮೆ ಆಗಿರುವುದು ಎನ್ನುವುದೇ ಈ ವಾದ. ಈ ತಳಗಟ್ಟಿನ ವಸ್ತುವಿನ ನೀರಿಲ್ಲದೆ ನೀರ್ದುಂಬಿದ ಹಂತಗಳೂ, ಜೀವಕಣಗಳು, ಮೈಪೊಳ್ಳುಗಳು, ಹರಿವ ರಕ್ತ ಇವಲ್ಲಿರುವ ನೀರಿನೊಂದಿಗೆ ಚುರುಕಾದ ಸಮತೋಲನದಲ್ಲಿ ಇರುತ್ತವೆ.

ಮೈಯಲ್ಲಿನ ನೀರಿನ ಪರಿಮಾಣವನ್ನು ನಿಜವಾಗಿಯೂ ಹತೋಟಿಯಲ್ಲಿ ಇಡುವುದು ಮೂತ್ರಪಿಂಡ. ಇದರ ಕೆಲಸ ಬಲು ಸಂಕೀರ್ಣವಾದದ್ದು. ಮೂತ್ರಪಿಂಡಕ್ಕೆ ಮೂತ್ರ ಪಿಂಡದ ನರದ ಹತೋಟಿ; ಅದರಲ್ಲಿನ ರಕ್ತದ ಹರಿವು; ಮೂತ್ರಪಿಂಡದ ಜೀವಕಣಗಳ ರಚಗಟ್ಟು, ನಿಜಗೆಲಸಗಳು ಚೆನ್ನಾಗಿರುವಿಕೆ; ತೆಮಡಿಕ (ಪಿಟ್ಯುಟರಿ), ಅಡ್ರಿನಲ್ ಮತ್ತಿತರ ಒಳಸುರಿಕ ಗ್ರಂಥಿಗಳ ಚಟುವಟಿಕೆ; ಮೂತ್ರಪಿಂಡದಲ್ಲಿ ಇವೆ ಎಂದಿರುವ ಘನಗಾತ್ರ (ವಾಲ್ಯೂಂ), ಹಿಗ್ಗಿತ ರಾಸಾಯನಿಕ ಗ್ರಾಹಕಗಳ (ರಿಸೆಪ್ಟರ್ಸ್) ನಿಯಂತ್ರಿಕ ಏರ್ಪಾಡುಗಳು ಇವೆಲ್ಲ ಈ ಯಾಂತ್ರಿಕತೆಯಲ್ಲಿ ಸೇರಿವೆ. ಈ ವಿಶೇಷ ನಿಯಂತ್ರಕಗಳ ಪೂರಕ ಗುಣವನ್ನು ಚೋದನಿಕ (ಹಾರ್ಮೋನ್ಸ್) ವರ್ತನೆ ತೋರಿಸುವುದು. ಆಲ್ಡೋಸ್ಟಿರೋನ್ ತೆರನ ಸ್ಟೀರಾಯ್ಡ್ ಚೋದನಿಕಗಳು ಸೋಡಿಯಂ ಮತ್ತಿತರ ಖನಿಜಗಳನ್ನು ಮೂತ್ರಪಿಂಡ ನೀರನ್ನು ಮೈಯಲ್ಲೇ ಉಳಿಸಿಕೊಳ್ಳುವಂತೆ ಮಾಡಿದರೆ ತೆಮಡಿಕ ಗ್ರಂಥಿಯ ಮೂತ್ರಸ್ರಾವರೋಧಕ ಚೋದನಿಕ ಮೂತ್ರಪಿಂಡ ಉಳಿಸಿಕೊಳ್ಳುವಂತೆ ಮಾಡುವುದು. ಮೂತ್ರಪಿಂಡ ಖನಿಜಗಳನ್ನೂ ಹೊರದೂಡುವಂತೆ ಮಾಡುವ ಒಂದು ಚೋದನಿಕವೂ ಇದೆ ಎನ್ನಲಾಗಿದೆ.

ಮೈಯಲ್ಲಿನ ನೀರಿನ ಹಂಚಿಕೆ ಸರಿಯಾಗಿರುವಂತೆ ನೋಡಿಕೊಳ್ಳುವುದಕ್ಕಾಗಿ ಮೂತ್ರಪಿಂಡದ ಹತೋಟಿಯೇ ಅಲ್ಲದೆ ಬೇರೆ ಅಂಶಗಳು ಇವೆ. 1. ಲೋಮ ನಾಳಗಳ ಗೋಡೆಯ ಮೂಲಕ ನೀರು, ವಿದ್ಯುಲ್ಲೀನಿಗಳ (ಎಲಕ್ಟ್ರೋಲೈಟ್ಸ್) ಸಾಗಣೆಯ ನಿಯಂತ್ರಣ. 2. ಅಡಿಪಾಯದ ಪೊರೆ (ಬೇಸ್‌ಮೆಂಟ್ ಮೆಂಬ್ರೇನ್), ಒಳಪೊರೆಯ (ಎಂಡೊತೀಲಿಯಲ್) ಮತ್ತಿತರ ಜೀವಕಣಗಳ ಪಾರಗಮ್ಯ (ಪರ್ಮಿಯಬಲ್) ಬಲ. 3. ಊತಕಗಳಲ್ಲಿನ ಒತ್ತಡದ ಬಿಗುಪನ್ನು (ಟೋನ್)ಉಳಿಸಿಕೊಂಡಿರುವಿಕೆ. ಈ ಅಂಶಗಳಲ್ಲಿ ರಕ್ತನಾಳಾಂತರದ ನೀರುನಿಲುವಿನ (ಹೈಡ್ರೊಸ್ಟ್ಯಾಟಿಕ್) ಒತ್ತಡ; ಗುರುತ್ವ; ಗುಂಡಿಗೆಯ ಇಳುವರಿ (ಔಟ್‌ಪುಟ್); ರಕ್ತನಾಳಗಳ ತಳಹಾಸಿನ ಅಡ್ಡವಿಕೆ; ಪರಿಸರದ ಕಾವು; ವಿಷಗಳು, ಜೀವಿವಿಷಗಳು, ಹಿಸ್ಟಮೀನ್ ತೆರನ ರಾಸಾಯನಿಕ ವಸ್ತುಗಳ ತೂರಡಿಕೆಯ ಮೇಲಿನ ಪರಿಣಾಮಗಳು; ಊತಕಾಂತರದ ವಸ್ತುವಿನ ಬಹ್ವಂಗೀಕರಣದ (ಪಾಲಿಮರೈಸೇಷನ್) ಮಟ್ಟ; ಹಾಲುರಸದ ಹರಿವು; ಪುಷ್ಟಿ; ಆಸ್ಮಾಟಿಕ್ ಒತ್ತಡದೊಂದಿಗೆ ರಕ್ತರಸದಲ್ಲಿನ ಪ್ರೋಟೀನುಗಳು, ವಿದ್ಯುಲ್ಲೀನಿಗಳ ಹಂಚಿಕೆ; ಲೋಮನಾಳಗಳು ಇವನ್ನು ಹೊರಕ್ಕೆ ತೂರಬಿಡದ್ದರಿಂದ ರಕ್ತದ ಹರಿವಿನಲ್ಲಿ ರಕ್ತರಸದಲ್ಲಿನ ಪ್ರೋಟೀನುಗಳು, ಅದರಲ್ಲೂ ಲೋಳೆ (ಆಲ್ಬುಮಿನ್) ಒಂದೇ ಸಮನಾದ ಆಸ್ಮಾಟಿಕ್ ಒತ್ತಡವನ್ನು ತೋರುತ್ತದೆ.

ಮೈಯಲ್ಲಿ ನೀರು ಜಾಗ ಬಿಟ್ಟು ಕದಲುವುದನ್ನು ಕೊಂಚಮಟ್ಟಿಗೆ ಮಾತ್ರ ಭೌತ ಮತ್ತು ರಾಸಾಯನಿಕ ಕಾರಣಗಳಿಂದ ವಿವರಿಸಬಹುದು. ಜೀವಿಯಲ್ಲಿ ನೀರಿನ ವಿನಿಮಯಕ್ಕೆ ರಾಸಾಯನಿಕ ನೀರ್ದುಂಬಿಕೆಯೂ ವಿದ್ಯುತ್ತಿನ ವಿಭವಗಳೂ (ಪೊಟೆನ್ಷಿಯಲ್ಸ್) ಕಾರಣವಿರುವಂತಿದೆ. ಇದಲ್ಲದೆ ಬದುಕಿರುವ ಜೀವಕಣದ ಪೊರೆಗಳೂ ದ್ರವದ ವಿನಿಮಯದಲ್ಲಿ ಪಾಲ್ಗೊಂಡು ಅವುಗಳ ಸಾಂದ್ರತೆಯ ಓಟಕ್ಕೆ (ಗ್ರೇಡಿಯೆಂಟ್) ಎದುರು ದಿಕ್ಕಿನಲ್ಲಿ ನೀರನ್ನೂ ಕರಗುವ ವಸ್ತುಗಳನ್ನೂ ಸಾಗಿಸುವುದೂ ಗೊತ್ತಾಗಿದೆ.

ಆರೋಗ್ಯದಲ್ಲಿ ಉಬ್ಬರ: ಪಾದಗಳು, ಹರಡುಗಳ ತೆರನ ಊತಕಗಳ ತೆರಪುಗಳಲ್ಲಿ ನೀರು ಸೇರಿಕೊಂಡು ಸಂಜೆಯೇ ಬಹು ಹೊತ್ತು ನಡೆದಾಗಲೊ, ನಿಂತೇ ಇದ್ದರೂ ಕಾಲು ಊದಿಕೊಳ್ಳುವುದು ಸಾಮಾನ್ಯ, ಗುರುತ್ವ, ಸಿರಗಳ ಮೇಲಿನ ಒತ್ತಡ, ಸುತ್ತಂಚಿನ (ಪೆರಿಫೆರಲ್) ರಕ್ತನಾಳಗಳು ರಕ್ತದಿಂದ ಬೀಗುವಿಕೆ–ಇವು ಕಾರಣಗಳಾಗಬಹುದು. ಬಸಿರಲ್ಲೊ ಕೊಂಕಿದ (ವೆರಿಕೋಸ್) ಸಿರಗಳಲ್ಲೊ ಇರುವಂತೆ ಸಿರಗಳಲ್ಲಿ ಒತ್ತಡ ಎಂದಿಗಿಂತಲೂ ಒಂದಿಷ್ಟು ಹೆಚ್ಚಾದರೆ ಅಂಥ ಉಬ್ಬರ ಕಾಣಿಸಿಕೊಳ್ಳಬಹುದು. ಕೂಡಿಸುವ ಊತಕದ ಮೇಲಿನ ಪರಿಣಾಮದಿಂದಲೂ ಮೂತ್ರಪಿಂಡದ ಕೆಲಸದ ಮೇಲಿನ ಹತೋಟಿಯಿಂದಲೂ ಎಂದಿನ ಒಳಸುರಿಕ ಗ್ರಂಥಿಗಳ ಚಟುವಟಿಕೆಯಿಂದಲೂ ನೀರು ಇದ್ದ ಜಾಗವನ್ನು ಬಿಟ್ಟು ಬೇರೆಡೆಗಳಲ್ಲಿ ಸೇರಿಕೊಳ್ಳಬಹುದು. ಹೆಂಗಸರಲ್ಲಿ ಮುಟ್ಟಿನ ಕಾಲದಲ್ಲಿ ಆಗುವ ಚೋದನಿಕಗಳ ಏರಿಳಿತಗಳ ಎಂದಿನ ಚಕ್ರದ ಪರಿಣಾಮವಾಗಿ ಮೂತ್ರಪಿಂಡ ನೀರನ್ನೂ ಸೋಡಿಯಮನ್ನೂ ಹಿಡಿದಿರುತ್ತದೆ. ಆಗ ಮೈಯಲ್ಲಿ ನೀರು ಹೆಚ್ಚಿಕೊಳ್ಳುತ್ತದೆ. ಇದರಿಂದ ಮುಟ್ಟು ಮುಂಚಿನ ತೂಕವೂ ಏರುವುದು. ರೋಗಗಳಲ್ಲಿ ಮೈಯಲ್ಲೆಲ್ಲ ಇಲ್ಲವೆ ಒಂದು ತಾವಿನಲ್ಲಿ ಉಬ್ಬರ ಆಗಬಹುದು. ಇಲ್ಲವೇ ಮೈಯ ಪೊಳ್ಳುಗಳಲ್ಲಿ ನೀರುತುಂಬಿಕೊಳ್ಳಬಹುದು.

ಮೈಯಲ್ಲೆಲ್ಲ ಉಬ್ಬರ: ಗುಂಡಿಗೆ, ಮೂತ್ರಪಿಂಡ, ನ್ಯೂನಪೋಷಣೆಯ, ಒಳಸುರಿಕ ಗ್ರಂಥಿಯ ಮತ್ತಿತರ ಕಾರಣಗಳಲ್ಲೂ ಇಡೀ ಮೈಯಲ್ಲಿನ ಒಟ್ಟು ನೀರು ಹೆಚ್ಚಿರುವುದಕ್ಕೆ ತೊಡಕಿನ ವಿಧಾನದ ವಿವರಣೆ ಇದೆ. ಕುಡುಕುತನದಿಂದ ಬರುವ ಪಿತ್ತಜನಕಾಂಗದ ಅರಿಶಿನಾರಿಗೆಯಲ್ಲಿ (ಲಿವರ್ ಸಿರೋಸಿಸ್) ಸಾಮಾನ್ಯವಾಗಿ ಹೊರಬಿಗಿಪೊರೆಯ ಚೀಲದಲ್ಲಿ ನೀರು ಸೇರಿಕೊಳ್ಳುತ್ತದೆ (ನೀರ್ದೊಳ್ಳು), ಅಲ್ಲದೆ ಕಾಲುಗಳಲ್ಲೂ ತರಡು ಚೀಲ (ಸ್ಕ್ರೋಟಂ) ಅಳ್ಳೆಪೊರೆಯ ಪೊಳ್ಳುಗಳಲ್ಲೂ ಕೂಡಿಕೊಳ್ಳಬಹುದು, ರೋಗದಿಂದ ಹಾಳಾದ ಪಿತ್ತಜನಕಾಂಗದ ಗಾಯ ಕಲೆಗಳು, ತಂತುವಿನ ಊತಕ ಪಟ್ಟಿಗಳು, ಮರುಹುಟ್ಟುತ್ತಿರುವ ಜೀವಕಣಗಳೂ ಪಿತ್ತಜನಕಾಂಗದ ತೂರುಗೊಂದಿಯ (ಪೋರ್ಟಲ್) ಸಿರವನ್ನು ಕಿವುಚಿ ಅದರೊಳಗಿನ ಒತ್ತಡವನ್ನು ಏರಿಸುವುವು. ಇದರಿಂದ ತೂರುಗೊಂದಿಯ ಲೋಮನಾಳಗಳ ಮೂಲಕ ದ್ರವ ಹೆಚ್ಚಾಗಿ ಹೊರಬಿದ್ದು ಹೊರಬಿಗಿಪೊರೆಯ ಪೊಳ್ಳಿನಲ್ಲಿ (ಹೊಟ್ಟೆಯಲ್ಲಿ) ನೀರು ಸೇರಿಕೊಳ್ಳುತ್ತದೆ. ಇದಲ್ಲದೆ ಕೆಟ್ಟಿರುವ ಪಿತ್ತಜನಕಾಂಗದ ಕೋಳೆಯನ್ನು ತಯಾರಿಸಲಾರದ ರಕ್ತದಲ್ಲಿನ ಕೋಳೆಯ ಮಟ್ಟ ಇಳಿಯುತ್ತದೆ. ಇದರಿಂದ ರಕ್ತರಸದ ಆಸ್ಮಾಟಿಕ್ ಒತ್ತಡವೂ ಕುಸಿದು ರಕ್ತದಲ್ಲಿನ ನೀರು ಊತಕಗಳೊಳಕ್ಕೆ ಸಾಗುತ್ತದೆ. ಹಸಿವು ಕೆಟ್ಟು ಪುಷ್ಟಿಗೆಡುತ್ತದೆ. ಊತಕಗಳೂ ಸೊರಗುತ್ತವೆ. ಆಗ ಊತಕಗಳಲ್ಲಿನ ಬಿಗುಪೂ ಕುಗ್ಗಿ ಸಡಿಲ ಬಿದ್ದೆಡೆಗಳಲ್ಲಿ ನೀರು ಸೇರಿಕೊಳ್ಳುವುದು. ಹಾಳಾಗಿರುವ ಪಿತ್ತಜನಕಾಂಗದ ಸ್ಟೀರಾಯ್ಡುಗಳನ್ನು ಎಂದಿನಂತೆ ಜಡಗೊಳಿಸಲಾಗದ್ದರಿಂದ ಅವು ಮೈಯಲ್ಲಿ ಮತ್ತಷ್ಟು ಹೆಚ್ಚುತ್ತವೆ. ರಕ್ತದಿಂದ ಕೋಳೆ ಇಳಿದು ಹೋದುದರಿಂದ ರಕ್ತದ ಘನಗಾತ್ರ ಹೆಚ್ಚಿದ್ದನ್ನು ಗಮನಿಸುವ ಘನಗಾತ್ರದ ಗ್ರಾಹಕದಿಂದೇಳುವ ಚೋದನೆಯ ಮೂಲಕ ಅಡ್ರಿನಲ್ ಸ್ಟೀರಾಯ್ಡುಗಳು ಹೇರಳವಾಗಿ ರಕ್ತ ಸೇರುತ್ತವೆ. ಸ್ಟೀರಾಯ್ಡುಗಳ ಹೆಚ್ಚಳದಿಂದ ಸೋಡಿಯಮನ್ನೂ ನೀರನ್ನೂ ಮೂತ್ರಪಿಂಡ ಹಿಡಿದಿಟ್ಟುಕೊಳ್ಳುವಂತಾಗುವುದು. ಹೀಗೆ ಉಬ್ಬರ, ನೀರ್ದೊಳ್ಳು ಆಗಲು ಹಲವಾರು ಯಾಂತ್ರಿಕತೆಗಳು ಬೇರೆ ಬೇರೆಯಾಗಿಯೊ ಒಟ್ಟಾಗಿಯೊ ಕೆಲಸ ಮಾಡುತ್ತಿರುವುವು. ಈಲಿಯ ಬೇರೆ ತೆರನ ರೋಗಗಳಲ್ಲೂ ಉಬ್ಬರ ಕಾಣಿಸಿಕೊಳ್ಳುವುದು **(ನೋಡಿ– ಈಲಿ ; ಪಿತ್ತಕೋಶ ; ಪಿತ್ತನಾಳಗಳು)**.

ಗುಂಡಿಗೆಯ ಸೋಲುವೆಯೊಂದಿಗೆ (ಹಾರ್ಟ್ ಫೇಲ್ಯರ್) ಹಲವೇಳೆ ಉಬ್ಬರವೂ ಕಾಣಿಸಿಕೊಳ್ಳುವುದು. ರೋಗಿ ಅಡ್ಡಾಡುತ್ತಿದ್ದಲ್ಲಿ ಕಾಲುಗಳಲ್ಲಿ ಉಬ್ಬರ ತೋರುತ್ತದೆ. ಹಾಸಿಗೆ ಹಿಡಿದಿದ್ದರೆ, ಕುಂಡಿ ಕೆಳಗೂ ಚರ್ಮದಡಿಯ ಊತಕಗಳಲ್ಲೂ ಉಬ್ಬರಿಸಿಕೊಳ್ಳವುದು. ರಕ್ತಗಟ್ಟಿನ (ಕಂಜೆಕ್ಟಿವ್) ಗುಂಡಿಗೆ ಸೋಲುವೆ ಇಲ್ಲವೇ ಹಿಂದೂಡುವ ಗುಂಡಿಗೆ ಸೋಲುವಿಕೆ ಸಾಮಾನ್ಯವಾಗಿ ಗುಂಡಿಗೆ ಕವಾಟಗಳ ಕುಂದುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಹೆಚ್ಚಿನ ಓಟದ (ಗ್ರೇಡಿಯೆಂಟ್) ಇಲ್ಲವೆ ಮುಂದೂಡುವ ಗುಂಡಿಗೆ ಸೋಲುವೆಗೆ ಕಾರಣ ರಕ್ತಕೊರೆ, ಅತಿಗುರಾಣಿಕತನ (ಹೈಪರ್‌ಥೈರಾಯ್ಡಿಸಂ), ಮೂತ್ರರಕ್ತ (ಯೂರೀಮಿಯ), ಪಿತ್ತರಕ್ತ (ಕೋಲೀಮಿಯ), ಬೆರಿಬೆರಿ. ಗುಂಡಿಗೆಯ ಕೂರಾದ (ಅಕ್ಯೂಟ್) ಸೋಲುವೆಯಿಂದ ಪುಪ್ಪುಸಗಳು ಉಬ್ಬರಿಸಿಕೊಳ್ಳುವುವು. ಸಾಸಿವೆ ಅನಿಲದ (ಮಸ್ಟರ್ಡ್ ಗ್ಯಾಸ್) ತೆರನ ಹಾನಿಕರ

ರಾಸಾಯನಿಕಗಳನ್ನೂ ಉಸಿರಲ್ಲೆಳೆದುಕೊಂಡಾಗ ಪುಪ್ಪುಸದ ಲೋಮನಾಳಗಳ ಬಹ್ವಂಗೀಕರಣದಲ್ಲಿ ವ್ಯತ್ಯಾಸಗಳು ಆಗುವುದರಿಂದಲೂ ಪುಪ್ಪುಸ ಉಬ್ಬರಿಸಿಕೊಳ್ಳುವುದು. (**ನೋಡಿ– ಗುಂಡಿಗೆಯ–ರೋಗಗಳು, ಊನಗಳು**).

ಎಷ್ಟೋ ವೇಳೆ ಮೂತ್ರಪಿಂಡದ ರೋಗದಲ್ಲಿ ಕಣ್ಣುರೆಪ್ಪೆಗಳು, ಮೊಗವೇ ಅಲ್ಲದೆ ಜೋಲುಬಿದ್ದಿರುವ ಭಾಗಗಳಲ್ಲೂ ಸಾಮಾನ್ಯವಾಗಿ ಉಬ್ಬರ ಕಾಣಿಸಿಕೊಳ್ಳುವುದು. ಕೆಲವು ತಾಸುಗಳು ಮಲಗಿದ್ದರಂತೂ ಇನ್ನೂ ಜೋರಾಗಿರುವುದು. ಎಲ್ಲ ಬಿಟ್ಟು ಕಣ್ಣುರೆಪ್ಪೆಗಳೂ ಮೊಗವೂ ಊದಿಕೊಳ್ಳುವುದರ ಕಾರಣ ತಿಳಿದಿಲ್ಲ. ಸಾಮಾನ್ಯವಾಗಿ ಕೂರಾದ ಬ್ರೈಟನ ರೋಗ ಮೂತ್ರ ಪಿಂಡದ ಅನುವಳಿಕ ಲಕ್ಷಣಕೂಟ (ನೆಫ್ರೋಟಿಕ್ ಸಿಂಡ್ರೋಂ). ಅಸಾಮಾನ್ಯವಾಗಿ ಬೇರೂರಿ ಮೂತ್ರಪಿಂಡದ ಸೋಲುವೆಯಲ್ಲೂ ಉಬ್ಬರ ಇರುವುದು, ಕೂರಾದ ಮೂತ್ರಪಿಂಡದ ಸೋಲುವೆಯಲ್ಲಿ ಮಿತಿಮೀರಿ ನೀರು ಕುಡಿದರಂತೂ ಉಬ್ಬರಿಸಿಕೊಳ್ಳುತ್ತದೆ. ಶಸ್ತ್ರಕ್ರಿಯೆಗಳು ಆದಮೇಲೆ ಕೂರಾದ ಮೂತ್ರಪಿಂಡದ ಸೋಲುವೆಯಲ್ಲೂ ಈಲಿ ಇಲ್ಲವೇ ಗುಂಡಿಗೆಯ ಸೋಲುವೆಯ ಕೆಲವು ರೋಗಿಗಳಲ್ಲೂ ಕೊನೆಯ ಸಂಗಾತಿಯಾಗಿಯೂ ಮೂತ್ರಪಿಂಡಗಳು ನೀರನ್ನು ಹೊರದೂಡುವ ಬಲಗುಂದುವುದರಿಂದ ನೀರಿನ ವಿಷವೇರಿಕೆ ಕಂಡುಬರುವುದು.

ಪುಷ್ಟಿಗೆಟ್ಟು ಬರುವ ಉಬ್ಬರ ಬಲುಮಟ್ಟಿಗೆ ಹೊಟ್ಟೆಗಿಲ್ಲದ ಇಲ್ಲವೇ ಬರಗಾಲದ ಉಬ್ಬರ, ಪ್ರೋಟೀನು ಬಳಸುವ ಮಟ್ಟ ಇಳಿದುದರಿಂದ ಉಬ್ಬರ ಈ ತೆರನ ಎರಡು ರೂಪಗಳಲ್ಲಿ ಬರುತ್ತದೆ. ತಯಮೀನ್ (ಬಿ 1) ಕೊರೆಯಲ್ಲೂ (ಬೆರಿಬೆರಿ), ಪೊಟ್ಯಾಸಿಯಂ ಕೊರೆಯಲ್ಲೂ ಉಬ್ಬರ ಇರುವುದು, ಬರಗಾಲ, ಮನೋರೋಗದ ಹಸಿವು ನಾಶ (ಅನೋರೆಕ್ಸಿಯ ನರ್ವೋಸ), ಏಡಿಗಂತಿ ಇತ್ಯಾದಿಗಳಿಂದ ಏಳುವ ಹೊಟ್ಟೆಗಿಲ್ಲದಾಗಿನ ಉಬ್ಬರಕ್ಕೆ ಮುಖ್ಯಕಾರಣ ಸಾಮಾನ್ಯವಾಗಿ ಊತಕಗಳಲ್ಲಿ ಬಿಗುಪು ಇಲ್ಲದೆ ಸಡಿಲ ಬಿದ್ದಿರುವುದೇ. ಇಷ್ಟಾದರೂ ಮೂತ್ರಪಿಂಡದಲ್ಲಿ ಸೋಡಿಯಮ್‌ನ್ನು ಹಿಡಿದಿಟ್ಟುಕೊಳ್ಳುವಂತೆ ಮಾಡುವ ಇತರ ಕಾರಣಗಳೂ ಇವೆ. ಹೊಟ್ಟೆಗಿಲ್ಲದಿರುವ ರೋಗಿಗಳಿಗೆ ಉಪ್ಪಿರುವ ದ್ರವ ಇಲ್ಲವೇ ಉಣಿಸುಗಳನ್ನು ಬೇಗನೆ ಮೊದಲ ದಿನಗಳಲ್ಲೇ ಕೊಟ್ಟು ಚಿಕಿತ್ಸೆ ಮಾಡಿದರೆ ಉಬ್ಬರಿಸಿಕೊಂಡು ಗುಂಡಿಗೆ ಸೋತು ಕೆಡುಕಾಗುವುದು.

ಸಹಜವಾದ ಇಲ್ಲವೆ ಚಿಕಿತ್ಸೆಯಿಂದಾದ ಒಳಸುರಿಕ ಗ್ರಂಥಿಗಳ ಏರುಪೇರುಗಳಲ್ಲೂ ಉಬ್ಬರ ತೋರಬಹುದು. ಬಸಿರುನಂಜಿನಲ್ಲೊ (ಎಕ್ಲಾಂಪ್ಸಿಯ) ಅದರ ಮುಂಚೆಯೋ ಬಸುರಿನಲ್ಲೂ ಮೈಯೆಲ್ಲ ಉಬ್ಬರಿಸಿಕೊಳ್ಳಬಹುದು. ಮನೋಬೇನೆಯಿಂದ ನರಳುವ ಹೆಂಗಸರಲ್ಲಿ ಬಿಟ್ಟೂ ಬಿಟ್ಟೂ ಉಬ್ಬರ ತೋರಬಹುದು. ಸ್ಟೀರಾಯ್ಡ್ ಚೋದನಿಕಗಳಿಂದ ಮಾಡುವ ಚಿಕಿತ್ಸೆಯ ಅಡ್ಡಪರಿಣಾಮವಾಗಿ ಉಬ್ಬರಿಸಿಕೊಳ್ಳುವುದೂ ಸಾಮಾನ್ಯ. ಸಿಹಿಮೂತ್ರರೋಗಿ ತಾಯಂದಿರ ಮಕ್ಕಳಿಗೆ ಹುಟ್ಟಿದ ಹಸುಗೂಸುಗಳಲ್ಲೂ ಕಾಣುವುದು.

ಮೈಯಲ್ಲಿ ಎಲ್ಲಾದರೂ ಒಂದೆಡೆ ಉಬ್ಬರ ಆಗಲು ದ್ರವದ ಬದಲು ಸಾಗಣೆಯೇ ಸಾಮಾನ್ಯ ಕಾರಣ. ಮೈ ನೀರಿನ ಒಟ್ಟು ಪರಿಮಾಣ ಮಾತ್ರ ಬದಲಾಗದು. ಇಲ್ಲವೇ ಕೊಂಚಮಾತ್ರವೇ ಹೆಚ್ಚುತ್ತದೆ. ಒಂದೆಡೆಯ ಲೋಮನಾಳದ ಬಹ್ವಂಗೀಕರಣದ ವ್ಯತ್ಯಾಸಗಳಿಂದ ಆಗುವುದು. ಇದಕ್ಕೆ ಕಾರಣಗಳೂ ಹಲವಾರು. 1. ಸೊಳ್ಳೆ ಕಡಿದೆಡೆ ಊದುವಂತೆ ಜೀವಿವಿಷಗಳು ಒಳಹೋಗುವುಕೆ; 2. ತುಟಿ, ನಾಲಗೆ, ಗಂಟಲುಗಳು ರಕ್ತನಾಳಸೆಡೆತದ (ಆಂಜಿಯೊನ್ಯೂರೋಟಿಕ್) ಉಬ್ಬರದಲ್ಲಿ ಇದ್ದಂತೆ ಒಗ್ಗದಿಕೆ ಜನಕಗಳು (ಅಲರ್ಜೆನ್ಸ್) ಒಳಸೇರಿದಮೇಲೆ ಊತಕಗಳಲ್ಲಿ ಹಿಸ್ಟಮೀನಿನ ಬಿಡುಗಡೆಯೊಂದಿಗೆ ಒಗ್ಗದಿಕೆಯ (ಅಲರ್ಜಿಕ್) ಮಾರುವರ್ತನೆಗಳು ಆಗುವಿಕೆ; 3. ಕೂಡು ಗರಣೆ ಸಿರದುರಿತ (ಥ್ರಾಂಬೋಫ್ಲೆಬೈಟಿಸ್) ಇಲ್ಲವೇ ಸಿರಗಳ ಮೇಲೆ ಗ್ರಂಥಿಗಳ ಒತ್ತಡದಲ್ಲಿ ಇರುವಂತೆ ಸಿರದ ರಕ್ತ ಗುಂಡಿಗೆಗೆ ಹಿಂತಿರುಗುವುದಕ್ಕೆ ಆತಂಕ; 4. ಎಳೆಕೀಟ ಬೇನೆಯಿಂದ (ಫೈಲೇರಿಯಾಸಿಸ್) ಆಗುವ ಆನೆದೊಗಲಿನಲ್ಲಿ (ಎಲಿಫೆಂಟಿಯಾಸಿಸ್) ಆಗುವಂತೆ ಹಾಲುರಸನಾಳಗಳ ಅಡಚಣೆ.

ಮೈಯಲ್ಲಿನ ಕೆಲವು ಪೊಳ್ಳುಗಳಲ್ಲಿ ಉರಿಯೂತವೆದ್ದೊ (ಇನ್‌ಫ್ಲಮೇಷನ್), ಏಡಿಗಂತಿ ನುಗ್ಗಿ ಹರಡಿಯೊ ಕೆಲವು ಮೈಪೊಳ್ಳುಗಳಲ್ಲಿ ಮಾತ್ರ ನೀರು ತುಂಬಲೂಬಹುದು. ಆದರೆ ಇವನ್ನು ಉಬ್ಬರವಾಗಿ ಗಣಿಸಿಲ್ಲ. ಮೈಯಲ್ಲೆಲ್ಲ ಉಬ್ಬರವಾದರೆ, ಅಳ್ಳೆಪೊರೆ ಚೀಲದಲ್ಲೂ ಗುಂಡಿಗೆಸುತ್ತುಪೊರೆ ಚೀಲದಲ್ಲೂ ನೀರು ಕೂಡಿಕೊಳ್ಳುವುದು ಸಾಮಾನ್ಯ. (**ನೋಡಿ– ಅಳ್ಳೆಪರೆಯ–ರೋಗಗಳು**) ಆದರೆ ಕೀಲುವಾತದ (ರುಮ್ಯಾಟಿಕ್) ಬೇನೆಗಳನ್ನು ಬಿಟ್ಟರೆ ಕೀಲುಗಳಲ್ಲಿ ನೀರು ಸೇರುವುದು ಅಸಾಮಾನ್ಯ. ತೂರುಗೊಂದಿಯ ಸಿರದ ಕೂಡುಗರಣಿಕೆ ತೆರನ ಸಿರಗಳ ಅಲ್ಲದೆ ಹಾಲುರಸನಾಳಗಳ ಅಡಚಣೆಗಳಿಂದಲೂ ನೀರು ಸೂಸುವುದು. ಮಿದುಳುಬೆನ್ನುಹುರಿಯ ದ್ರವ ಎಂದಿನಂತೆ ಹರಿದು ಸಾಗುವ ಜೇಡಂದಡಿಯ (ಸಬ್‌ಅರಕ್ನಾಯ್ಡ್) ನಾಳದಾರಿಗಳಲ್ಲಿ ಉರಿತವಾಗಿ ಆತಂಕವಾಗುವುದರಿಂದ ಮಿದುಳ್ಗುಣಿಗೆಗಳೊಳಗೆ (ವೆಂಟ್ರಿಕಲ್ಸ್) ಮಿತಿಮೀರಿ ನೀರು ಸೇರುವುದೆಂಬ ಭಾವನೆ ಇದೆ. (ಡಿ.ಎಸ್.ಎಸ್.)

**ಉಬ್ಬರವಿಳಿತಗಳು:** ಒಂದು ವಸ್ತುವಿನ ಗುರುತ್ವಾಕರ್ಷಣ ಬಲದಿಂದ ಇನ್ನೊಂದು ವಸ್ತುವಿನ ಮೇಲೆ ಉಂಟಾಗುವ ಪ್ರತಿಬಲಗಳು (ಸ್ಟ್ರೆಸಸ್) ಮತ್ತು ಅವುಗಳಿಂದ ಆ ವಸ್ತುವಿನಲ್ಲಿ ತಲೆದೋರುವ ಪರಿಣಾಮಗಳು (ಟೈಡ್ಸ್). ಎಲ್ಲ ಆಕಾಶಕಾಯಗಳೂ ಭೂಗೋಳದ ಗಾಳಿ ನೆಲ ನೀರುಗಳ ಮೇಲೆ ಗುರುತ್ವಾಕರ್ಷಣ ಬಲಗಳನ್ನು ಬೀರಿ ಪ್ರತಿಬಲಗಳನ್ನು ಉತ್ಪಾದಿಸುತ್ತವೆ. ಆದರೆ ಸೂರ್ಯ ಚಂದ್ರರ ಪ್ರಭಾವವೇ ಇಲ್ಲಿ ಅತ್ಯಧಿಕ ಮತ್ತು ಆ ಕಾರಣದಿಂದ ಗಮನಾರ್ಹ. ಗಾಳಿಯಲ್ಲಿ ಉಂಟಾಗುವ ಉಬ್ಬರವಿಳಿತವನ್ನು ಕಾಣುವುದು ಸಾಧ್ಯವಿಲ್ಲ: ಬೇರೆ ಬಲಗಳೂ ಅಲ್ಲಿ ಕ್ಷೋಭೆ ಉಂಟುಮಾಡುವುದರಿಂದ ಇದೇ ಉಬ್ಬರವಿಳಿತದ ಪರಿಣಾಮವೆಂದು ಖಚಿತವಾಗಿ ಹೇಳುವಂತಿಲ್ಲ. ನೆಲ ಸರಿಸುಮಾರು ದೃಢಪದಾರ್ಥ. ದೀರ್ಘಕಾಲ ಸೂಕ್ಷ್ಮಾವಲೋಕನದಿಂದ ನೆಲದ ಉಬ್ಬರವಿಳಿತವನ್ನು ಗುರುತಿಸಬಹುದು. ಇಂಥ ತಿಳಿವಳಿಕೆ ಆ ಪ್ರದೇಶದ ತೊಗಟೆ ಮತ್ತು ಒಳರಚನೆಗಳನ್ನು ಕುರಿತು ಉಪಯುಕ್ತ ಮಾಹಿತಿಯಾಗಿದೆ. ಭೂಮಿ ಶುದ್ಧಗೋಳಾಕಾರವಾಗಿಲ್ಲದಿರಲು ಒಂದು ಕಾರಣ ಉಬ್ಬರವಿಳಿತ. ಸಮುದ್ರ ಅಥವಾ ಇತರ ಜಲರಾಶಿ ಆವರಣದ ನೆಲವನ್ನು ಕುರಿತು ನಿಯತಕಾಲಿಕವಾಗಿ ಉಬ್ಬಿ ಇಳಿಯುವ ಘಟನೆಗೆ ಸಾಮಾನ್ಯವಾಗಿ ಉಬ್ಬರವಿಳಿತವೆಂದು ಹೆಸರು.

ಉಬ್ಬರವಿಳಿತಗಳು ಬೇರೆ ಬೇರೆ ಪ್ರದೇಶಗಳಲ್ಲಿ ಎಷ್ಟರಮಟ್ಟಿಗೆ ಯಾವ ಕಾಲದಲ್ಲಿ ಉಂಟಾಗುತ್ತವೆಂಬುದನ್ನು ವೈಜ್ಞಾನಿಕ ರೀತಿಯಲ್ಲಿ ವಿಚಾರ ಮಾಡಿದ್ದಾರೆ. ಸೂರ್ಯ, ಚಂದ್ರ ಮತ್ತು ಭೂಮಿಗಳ ಚಲನೆ ಖಚಿತವಾಗಿ ತಿಳಿದಿರುವುದರಿಂದ ಉಬ್ಬರವಿಳಿತಗಳಿಗೆ ಕಾರಣವಾದ ಬಲಗಳನ್ನು ತರ್ಕಿಸಬಹುದು. ಆದರೆ ಹೀಗೆ ಪಡೆದ ಉಬ್ಬರವಿಳಿತಗಳ ಜ್ಞಾನ ಅಷ್ಟೊಂದು ಸಮಂಜಸವಾಗಿಲ್ಲ. ಸಾಗರದ ಪಾತ್ರಗಳಿಗೆ ಬಲು ತೊಡಕಿನ ಆಕೃತಿಗಳಿರುವುದೇ ಇದಕ್ಕೆ ಕಾರಣ. ಇನ್ನೊಂದು ರೀತಿಯ ಪ್ರಕಾರ, ನಿರ್ದಿಷ್ಟ ಪ್ರದೇಶಗಳಲ್ಲಿ ಆಯಾ ಕಾಲಕ್ಕೆ ಉಂಟಾಗುವ ಉಬ್ಬರವಿಳಿತಗಳನ್ನು ಗುರುತು ಹಾಕಿ, ಮುಂದೆ ಅದೇ ಕಾಲದಲ್ಲಿ ಅದೇ ರೀತಿಯ ವ್ಯತ್ಯಾಸಗಳು ಆಗಬಹುದೆಂದು ಊಹಿಸಬಹುದು. ಇದೂ ಅಷ್ಟೇನೂ ಸಮರ್ಪಕವಾದ ವಿಧಾನವಲ್ಲ. ನೆಲ ಮತ್ತು ಜಲದ ಪ್ರತಿಯೊಂದು ಕಣವನ್ನೂ ಚಂದ್ರ ಆಕರ್ಷಿಸುತ್ತದೆ. ಇಲ್ಲಿ ಬಲಗಳು ಒಂದೇ ದಿಕ್ಕಿನಲ್ಲಿ ಸರಿಸಮಾನವಾಗಿದ್ದರೆ ಉಬ್ಬರವಿಳಿತಗಳು ಸಂಭವಿಸವು. ಅವುಗಳ ಮಾನ ಮತ್ತು ದಿಕ್ಕುಗಳಲ್ಲಿ ಕೊಂಚ ವ್ಯತ್ಯಾಸವಿರುವುದೇ ಉಬ್ಬರವಿಳಿತಗಳಿಗೆ ಕಾರಣ.




ಚಿತ್ರದಲ್ಲಿ ಚಂದ್ರ (M) ಭೂಮಿಯಮೇಲಿನ A ಬಿಂದುವಿನ ನೆತ್ತಿಯಲ್ಲಿದೆ. B ಬಿಂದು A ಯ ವ್ಯಾಸೀಯ ವಿರುದ್ಧ ದಿಕ್ಕಿನಲ್ಲಿದೆ: ಆದ್ದರಿಂದ ಅದು Aಗೆ ಅಧೋಬಿಂದು. A ಬಿಂದು ಚಂದ್ರನಿಗೆ ಅತಿ ಸಮೀಪವಾಗಿರುವುದರಿಂದ ಅಲ್ಲಿ ಚಂದ್ರನ ಗುರುತ್ವಾಕರ್ಷಣಬಲದ ಪ್ರಭಾವ ಗರಿಷ್ಠ. Bಯಲ್ಲಿ ಈ ಪ್ರಭಾವ ಕನಿಷ್ಠ. ಇನ್ನು C,D ಗಳಲ್ಲಿ ಬಲದ ಮಾನಗಳು ಒಂದೇ ಆಗಿದ್ದರೂ ದಿಕ್ಕುಗಳು ಬೇರೆ. ಹೀಗೆ ಭೂಮಿಯ ಒಂದೊಂದು ಕಣದ ಮೇಲೂ ಪತನವಾಗುವ ಚಂದ್ರನ ಗುರುತ್ವಾಕರ್ಷಣಬಲದ ಮಾನ ಮತ್ತು ದಿಕ್ಕುಗಳು ಬೇರೆ ಬೇರೆಯಾಗಿವೆ. ಇವುಗಳ ಪರಿಣಾಮವಾಗಿ ಭೂಮಿಯ ಮೇಲೆ ಉಬ್ಬರವಿಳಿತಗಳು ತಲೆದೋರುವುವು. Aಯಲ್ಲಿ ಸಾಗರವಿದ್ದರೆ ಅಲ್ಲಿ ಉಬ್ಬರವೂ Bಯಲ್ಲಿ ಇಳಿತವೂ ಉಂಟಾಗುತ್ತವೆ. CA ಮತ್ತು BA ಕಡೆಗಳಿಂದ ನೀರು A ದಿಕ್ಕಿನಲ್ಲಿ ಧಾವಿಸಿ Aಯಲ್ಲಿ ನೀರಿನ ಮಟ್ಟ ಗರಿಷ್ಠವಾಗುವುದು. ಇದೇ ಕಾರಣದಿಂದ Bಯಲ್ಲಿ ನೀರಿನಮಟ್ಟ ಕನಿಷ್ಠವಾಗುವುದು.

ಚಿತ್ರದಲ್ಲಿ O ಭೂಮಿಕೇಂದ್ರ. ಇಲ್ಲಿರುವ ಕಣದ ಮೇಲೆ ಪತನವಾಗುವ ಚಂದ್ರನ ಗುರುತ್ವಾಕರ್ಷಣ ಬಲ F ಆಗಿರಲಿ. Fನ ದಿಕ್ಕುOM. ಭೂಮಿಯ ಆವರ್ತನದಿಂದ ಜನಿಸುವ ಕೇಂದ್ರಾಪಗಾಮೀ (ಸೆಂಟ್ರಿಫ್ಯೂಗಲ್) ಬಲಕ್ಕೆ F ಸಮಾನವಾಗಿದೆ. ಉಬ್ಬರವಿಳಿತಗಳು ಇದರಿಂದ ಉಂಟಾಗುವುದಿಲ್ಲ. ನೆಲ ಮತ್ತು ಜಲಕಣಗಳ ಮೇಲೆ ಪತನವಾಗುವ ಚಂದ್ರನ ಗುರುತ್ವಾಕರ್ಷಣಬಲಗಳು Fಗಿಂತ ಮಾನ ಮತ್ತು ದಿಕ್ಕುಗಳಲ್ಲಿ ಭಿನ್ನವಾಗಿವೆ. ಈ ವ್ಯತ್ಯಾಸಗಳಿಗೆ ಉಬ್ಬರವಿಳಿತ ಕಾರಕಬಲಗಳೆಂದು ಹೆಸರು.

ಉಬ್ಬರವಿಳಿತಕಾರಕ ಬಲ ಭೂಮಿಯ ಮೇಲಿನ ಕಣ ಮತ್ತು ಚಂದ್ರ ಇವುಗಳ ಅಂತರದ ವಿಲೋಮ 3ನೆಯ ಘಾತ ಪ್ರಮಾಣದಷ್ಟಿದೆ. ಉಬ್ಬರವಿಳಿತಕಾರಕಬಲದ ವಿಭವ (ಪೊಟೆನ್ಷಿಯಲ್) Ψ ಈ ಕೆಳಗಿನಂತಿದೆ

$$\Psi = \frac{3}{2}\frac{\gamma M r^2}{c^3}\left(\frac{1}{3} - \cos^2\lambda\right)$$

ಇಲ್ಲಿ λ ಕಣದಲ್ಲಿರುವ ವೀಕ್ಷಕನಿಗೆ ಚಂದ್ರನ ಖಮಧ್ಯ ದೂರ, r ಭೂಮಿ ಕೇಂದ್ರದಿಂದ ಕಣಕ್ಕೆ ಇರುವ ದೂರ, c ಭೂಮಿ– ಚಂದ್ರರ ಕೇಂದ್ರಗಳ ದೂರ, γ ಗುರುತ್ವಾಕರ್ಷಣ ನಿಯತಾಂಕ, M ಚಂದ್ರನ ದ್ರವ್ಯರಾಶಿ, ಈ ಸಮೀಕರಣದಿಂದ ಸಾಗರದಲ್ಲಿನ ಯಾವ

ಪ್ರದೇಶದಲ್ಲಿಯಾದರೂ ಉಬ್ಬರವಿಳಿತದ ಮಾನವನ್ನು ಗೊತ್ತುಮಾಡಬಹುದು. ಆದರೆ ಸಮೀಕರಣವನ್ನು ಪಡೆಯುವಲ್ಲಿ ಕೆಲವು ಸಮಂಜಸವಲ್ಲದ ಊಹೆಗಳನ್ನು ಮಾಡಿರುವುದರಿಂದ ಉಬ್ಬರವಿಳಿತದ ಮಾನ ಅಷ್ಟು ನಿಖರವಲ್ಲ.

ಉಬ್ಬರ ಉನ್ನತಮಟ್ಟಕ್ಕೆ ಏರುವುದಕ್ಕೂ ಸೂರ್ಯಚಂದ್ರರ ಸ್ಥಾನಕ್ಕೂ ಸಂಬಂಧವಿದೆ. ಚಂದ್ರ ಭೂಮಿಯನ್ನು ಅರ್ಧ ಸುತ್ತಲು ಬೇಕಾಗುವ ಕಾಲ ಸುಮಾರು 12 ಗಂ. 25ಮಿ. ಚಂದ್ರ ನೆತ್ತಿಯಮೇಲೆ ಬರುವ ಕಾಲಕ್ಕೂ ಮತ್ತು ಉಬ್ಬರ ಉನ್ನತಮಟ್ಟವನ್ನು ಮುಟ್ಟುವ ಕಾಲಕ್ಕೂ ಸ್ವಲ್ಪ ಅಂತರವಿದೆ. ಇದಕ್ಕೆ ಚಾಂದ್ರಉಬ್ಬರವಿಳಿತ ಅಂತರ (ಲ್ಯೂನಿ ಟೈಡಲ್ ಇಂಟರ್ವಲ್) ಅಥವಾ ಏರುನೀರಿನ ಅಂತರ ಎಂದು ಹೆಸರು. ಇದೇ ರೀತಿಯಲ್ಲಿ ಚಂದ್ರ ನೆತ್ತಿಯ ಮೇಲೆ ಬರುವ ಕಾಲ ಮತ್ತು ಇಳಿತ ಕನಿಷ್ಠ ಮಟ್ಟವನ್ನು ತಲಪುವ ಕಾಲದ ಅಂತರಕ್ಕೆ ಇಳಿನೀರಿನ ಅಂತರ ಎಂದು ಹೆಸರು. ಹುಣ್ಣಿಮೆ, ಅಮಾವಾಸ್ಯೆಗಳು ಕಳೆದ ಮಾರನೆ ದಿವಸ ಉಬ್ಬರ ಮಹತ್ತರವಾಗಿರುವುದು. ಇದರ ಹೆಸರು ಉಕ್ಕು ಭರತ (ಸ್ಪ್ರಿಂಗ್ ಟೈಡ್) ಅಥವಾ ಉಕ್ಕುಬ್ಬರ. ಪಂಚಮಿಯ ಹೊತ್ತಿಗೆ ಉಬ್ಬರ ಕ್ಷೀಣಿಸುವುದು. ಇದಕ್ಕೆ ಕೆಳ ಉಬ್ಬರ (ನೀಪ್‍ಟೈಡ್) ಎಂದು ಹೆಸರು. ಉಬ್ಬರ ಮೇಷ ಮತ್ತು ತುಲಾಸಂಕ್ರಮಣಕಾಲದಲ್ಲಿ ಹೆಚ್ಚಾಗಿ ಮಕರ, ಕರ್ಕಾಟಕ ಸಂಕ್ರಾಂತಿಗಳಲ್ಲಿ ಕಡಿಮೆಯಾಗುವುದು. ಈ ವ್ಯತ್ಯಾಸಗಳಿಗೆ ಸೂರ್ಯಚಂದ್ರರು ಭೂಮಿಯ ಕಡೆಗೆ ಇರುವ ದಿಕ್ಕಿನ ದಿಕ್ಪಾತವೇ (ಡೆಕ್ಲಿಯನೇಷನ್) ಕಾರಣ.

ಸಮುದ್ರ ತೀರಪ್ರದೇಶಗಳಲ್ಲಿ ನೀರು ಸಾಮಾನ್ಯವಾಗಿ ಎರಡುಸಾರಿ ಉನ್ನತ ಮಟ್ಟಕ್ಕೆ ಏರುವುದು. ಎರಡು ಸಲ ಈ ರೀತಿಯಾಗಲು ಬೇಕಾಗುವ ಕಾಲದ ಅಂತರ 12 ಗಂ.25 ಮಿ. ಈ ಅಂತರ ದಿವಸ ದಿವಸಕ್ಕೆ ಸ್ವಲ್ಪ ವ್ಯತ್ಯಾಸವಾಗಬಹುದು. ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಅಂತರ ವಿವಿಧ ಪ್ರಮಾಣಗಳಲ್ಲಿ ಇರಬಹುದು. ಭಾರತದ ಪೂರ್ವದ ಸಮುದ್ರಗಳಲ್ಲಿ 12 ಗಂಟೆ ಅಂತರವಿದ್ದರೆ ಚೀನ ಸಮುದ್ರದ ಕೆಲವು ಪ್ರದೇಶಗಳಲ್ಲಿ ಇದು 24 ಗಂಟೆ ಆಗುತ್ತದೆ. ಸಮುದ್ರ ತೀರದಲ್ಲಿ ಅನುಕ್ರಮವಾಗಿ ಉಬ್ಬರ ಅಥವಾ ಇಳಿತ ಇವುಗಳ ಅಂತರ ಒಂದೇ. ಆದರೆ ಅಳಿವೆಗಳಲ್ಲಿ ನೀರಿನಮಟ್ಟ ವೇಗವಾಗಿ ಹೆಚ್ಚುತ್ತ ಬಂದು ಇಳಿಯುವುದು ನಿಧಾನ.

ಸರಾಸರಿ ನೀರಿನಮಟ್ಟದಿಂದ ಎಷ್ಟು ಎತ್ತರಕ್ಕೆ ಉಬ್ಬರವಾಗುವುದೋ ಅಷ್ಟೇ ಕೆಳಕ್ಕೆ ಇಳಿತ ಆಗುತ್ತದೆ. ಉಬ್ಬರದ ಎತ್ತರ ಮತ್ತು ಇಳಿತದ ತಗ್ಗು ಇವೆರಡರ ಅಂತರಕ್ಕೆ ಅಲೆಶ್ರೇಣಿ (ರೇಂಜ್) ಎಂದು ಹೆಸರು. ಲಂಡನ್ ಸೇತುವೆ ಹತ್ತಿರ ಉನ್ನತ ಶ್ರೇಣಿ 6.5ಮೀ. ಕಡಿಮೆ ಶ್ರೇಣಿ 4.26ಮೀ. ಪೆಸಿಫಿಕ್ ಸಾಗರದ ಕೆಲವು ಕಡೆಗಳಲ್ಲಿ 15ಮೀ ಇದ್ದರೆ ಮೆಡಿಟರೇನಿಯನ್ ತೀರದಲ್ಲಿ 2' ಗಳಿಗಿಂತ ಹೆಚ್ಚಾಗುವುದಿಲ್ಲ.

ಇಕ್ಕಟ್ಟಾದ ಸಮುದ್ರದಲ್ಲಿ ಅಲೆ ಪ್ರವಾಹ ಒಂದು ದಿಕ್ಕಿನಲ್ಲಿ 6 ಗಂ. 12 ಮಿ. ವರೆಗೆ ಹರಿದು ಮತ್ತೆ ಅದರ ಎದುರು ದಿಕ್ಕಿನಲ್ಲಿ ಅಷ್ಟೇ ಕಾಲ ಹರಿಯುತ್ತದೆ. ದಿಕ್ಕು ವ್ಯತ್ಯಾಸವಾಗುವ ಸಮಯದಲ್ಲಿ ನೀರು ಶಾಂತವಾಗಿರುವುದು. ಅಳಿವೆ ಪ್ರದೇಶಗಳಲ್ಲಿ ನೀರು ಹರಿಯುವ ಕಡೆ ಪ್ರವಾಹ ಹೆಚ್ಚು ಕಾಲ ಇದ್ದು ವಿರುದ್ಧ ದಿಕ್ಕಿನಲ್ಲಿ ಕಡಿಮೆ ಕಾಲ ಹರಿಯುತ್ತದೆ. ಬಯಲು ಸಮುದ್ರದಲ್ಲಿ ಅಲೆಯ ಪ್ರವಾಹ ಎಲ್ಲ ದಿಕ್ಕಿನಲ್ಲಿಯೂ ಒಂದೇ ವೇಗವಾಗಿ ಪ್ರವಹಿಸುವುದು. ಅಲೆಯ ಎತ್ತರ ಹೆಚ್ಚುವುದಕ್ಕೂ ಪ್ರವಾಹ ವೇಗ ಅಧಿಕವಾಗುವುದಕ್ಕೂ ಏನೂ ಸಂಬಂಧವಿದ್ದಂತೆ ಕಾಣುವುದಿಲ್ಲ. ಪ್ರವಾಹ ಭೂಮಿಯ ಕಡೆಗೆ ಹರಿಯುತ್ತಿದ್ದರೆ ಅದಕ್ಕೆ ಮಹಾಪೂರ (ಫ್ಲಡ್) ಎಂದೂ ಅದಕ್ಕೆ ವ್ಯತಿರಿಕ್ತ ಕಡೆಗೆ ಹರಿಯುತ್ತಿದ್ದರೆ ಕ್ಷೀಣ (ಎಬ್) ಪ್ರವಾಹವೆಂದೂ ಹೆಸರು. ಪ್ರವಾಹದ ವೇಗ ಎಲ್ಲ ಕಡೆಯಲ್ಲಿಯೂ ಒಂದೇ ಸಮನಾಗಿರುವುದಿಲ್ಲ. ಲಿವರ್‍ಪೂಲಿನಲ್ಲಿ 7 ನಾವಿಕ ಮೈಲಿ (ನಾಟ್ಸ್) ಆದರೆ ಉತ್ತರ ಸಮುದ್ರದಲ್ಲಿ ಇದು 1ನಾವಿಕ ಮೈಲಿ.

ಸಮುದ್ರದ ಉಬ್ಬರವಿಳಿತಗಳಲ್ಲಿ ನೀರಿನ ಮಟ್ಟವನ್ನು ಅಳೆಯಲು ಗುರುತು ಮಾಡಿರುವ ದೊಣ್ಣೆಗಳನ್ನು ಸಮುದ್ರದಲ್ಲಿ ಹೂಳಿರುತ್ತಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಅವಲೋಕಿಸ ಬೇಕಾದಾಗ ಉಬ್ಬರವಿಳಿತ ಮಾನ (ಟೈಡ್ ಗೇಜ್) ಎಂಬ ಸಾಧನವನ್ನು ಬಳಸುತ್ತಾರೆ. ಪ್ರವಾಹ ವೇಗವನ್ನು ಅಳೆಯಲು ಪ್ರವಾಹ ಮಾಪಕ (ಕರೆಂಟ್ ಮೀಟರ್) ಉಪಯೋಗಿಸುತ್ತಾರೆ. ಈ ಯಂತ್ರಗಳನ್ನು ಅಲ್ಲಾಡದಂತೆ ಸಮುದ್ರದಲ್ಲಿ ನಾಟಿ ಅನಂತರ ಅಳೆಯಬೇಕಾಗುವುದರಿಂದ ನಿರ್ದಿಷ್ಟ ವಿವರ ಸಂಗ್ರಹಣೆ ಕಷ್ಟ..

ಇದೇ ರೀತಿ ಸೂರ್ಯನ ಗುರುತ್ವಾಕರ್ಷಣ ಬಲದಿಂದ ಸಾಗರ, ಸಮುದ್ರಗಳಲ್ಲಿ ಉಬ್ಬರವಿಳಿತಗಳು ಉಂಟಾಗುತ್ತವೆ. ಸೂರ್ಯನ ದ್ರವ್ಯರಾಶಿ ಚಂದ್ರನಿಗಿಂತ 27,000,000 ಪಟ್ಟು ಹೆಚ್ಚಾಗಿದೆ. ದೂರ 399ರಷ್ಟು ಹೆಚ್ಚು. ಆದ್ದರಿಂದ ಸೂರ್ಯನಿಂದ ಉತ್ಪನ್ನವಾಗುವ ಉಬ್ಬರವಿಳಿತಗಳ ಬಲಕ್ಕೂ ಚಂದ್ರನ ಬಲಕ್ಕೂ ಹೋಲಿಸಿದರೆ 27,000,000: $390^3$= 1: 2.17 ಆಗುವುದು. ಆದ್ದರಿಂದ ಸೂರ್ಯನಿಗಿಂತಲೂ ಚಂದ್ರನಿಂದ ಉಂಟಾಗುವ ಉಬ್ಬರವಿಳಿತದ ಬಲ ಹೆಚ್ಚಿನದು.

ಭೂಮಿ, ವಾಯುಮಂಡಲದಲ್ಲಿ ಉಬ್ಬರವಿಳಿತಗಳು: ಭೂಮಿಯ ಜಡಭಾಗದ ಗುರುತ್ವಾಕರ್ಷಣ ಬಲದಿಂದ ಉಬ್ಬರವಿಳಿತಗಳು ನಿರ್ದಿಷ್ಟ ಕಾಲಾವಧಿಯಲ್ಲಿ ಆಗುತ್ತವೆ. ಇದರಿಂದ ಗುರುತ್ವಾಕರ್ಷಣದ ಪ್ರಮಾಣ ಸ್ವಲ್ಪ ವ್ಯತ್ಯಾಸವಾಗಬಹುದು. ವಾಯುಮಂಡಲದಲ್ಲಿ ಉಬ್ಬರವಿಳಿತಗಳು ಉಂಟಾಗಿ ವಾಯುವಿನ ಒತ್ತಡದ ಪ್ರಮಾಣ ಕೊಂಚ ಮಾರ್ಪಾಟಾಗುವುದು. ಘರ್ಷಣದಿಂದ (ಫ್ರಿಕ್ಷನ್) ನಷ್ಟವಾಗುವ ಶಕ್ತಿ ಗ್ರಹಗಳ ಚಲನೆ ವಿಷಯದಲ್ಲಿ ಅತಿಮುಖ್ಯವಾದ ಅಂಶ. ಇದರಿಂದ ಕೋನಜಡವೇಗವನ್ನು (ಆಂಗ್ಯುಲರ್ ಮೊಮೆಂಟಂ) ಒಂದು ರೀತಿಯ ಚಲನೆಯಿಂದ ಇನ್ನೊಂದು ರೀತಿಗೆ ವರ್ಗಾಯಿಸಲು ಅವಕಾಶವಾಗುತ್ತದೆ.

ಒಂದು ಗ್ರಹದ ಚಲನೆಯ ವೇಗ ಉಪಗ್ರಹದ ವೇಗಕ್ಕಿಂತ ಹೆಚ್ಚಾಗಿದ್ದರೆ (ಭೂಮಿ ಚಂದ್ರರವೇಗದಂತೆ) ಘರ್ಷಣೆಯ ಶಕ್ತಿನಷ್ಟದಿಂದ ಗ್ರಹದ ವೇಗ ಕಡಿಮೆಯಾಗುತ್ತದೆ. ಉಪಗ್ರಹದ ಕೋನಜಡವೇಗ ವ್ಯತ್ಯಾಸವಾಗುವುದು. ಆದರೆ ಗ್ರಹ–ಉಪಗ್ರಹಗಳ ವ್ಯವಸ್ಥೆಯ ಒಟ್ಟು ಕೋನಜಡವೇಗ ಸ್ಥಿರವಾಗಿರುತ್ತದೆ. ಉಬ್ಬರವಿಳಿತದಿಂದ ಕೂಡಿರುವ ಭೂಮಿಯ ಮೇಲೆ ಚಂದ್ರನ ಆಕರ್ಷಣಬಲದಿಂದ ಭೂಮಿಯ ಆವರ್ತನ ವೇಗ ಕಡಿಮೆಯಾಗುತ್ತದೆ. ಇದು ಅತ್ಯಲ್ಪವಾದ್ದರಿಂದ 1,20,000 ವರ್ಷಗಳಲ್ಲಿ ದಿವಸದ ವೇಳೆ 1 ಸೆಕೆಂಡಿನಷ್ಟು ಹೆಚ್ಚಾಗಬಹುದು. ಇದೇ ಕಾರಣದಿಂದ ಚಂದ್ರ ಭೂಮಿಯಿಂದ ದೂರ ದೂರ ಸಾಗುತ್ತಿದೆ.

ಸಮುದ್ರದ ಉಬ್ಬರವಿಳಿತಗಳ ಶಕ್ತಿಯಿಂದ ಯಂತ್ರಗಳನ್ನು ಚಲಿಸಲು ಸಾಧ್ಯವಾಗಿದೆ. ಹೆಚ್ಚು ವೆಚ್ಚ ಮಾಡದೆ ಯಾವ ರೀತಿಯ ಇಂಧನವನ್ನೂ ಉಪಯೋಗಿಸದೆ ಅತಿ ಸುಲಭವಾಗಿ ನಡೆಸಬಹುದಾದ ಯಂತ್ರಗಳು ಕೆಲವು ಪ್ರದೇಶಗಳಲ್ಲಿ ಉಪಯೋಗದಲ್ಲಿವೆ. ಆದರೆ ಅತಿ ಹೆಚ್ಚಾಗಿ ಶಕ್ತಿ ಉಬ್ಬರವಿಳಿತಗಳಿಂದ ಉತ್ಪನ್ನವಾಗದೇ ಇರುವುದರಿಂದಲೂ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಶಕ್ತಿ ದೊರಕಬಹುದೆಂಬ ನಂಬಿಕೆ ಇಲ್ಲದೆ ಇರುವುದರಿಂದಲೂ ಈ ಯಂತ್ರಗಳ ಬಳಕೆ ಹೆಚ್ಚಾಗಿಲ್ಲ. (ಎ.ಪಿ.)

**ಉಬ್ಬಸ:** ನೋಡಿ– ಗೂರಲು.

**ಉಭಯ ನರಹರಿ ಪ್ರಾಣಿಗಳು:** ಕಡಲ ಮೃದ್ವಂಗಿಗಳನ್ನು ಒಳಗೊಂಡ (ಮೆರೈನ್ ಮೊಲಸ್ಕ್) ಒಂದು ವರ್ಗ (ಆಂಫಿನ್ಯೂರ): **ಅಪ್ಲಕೋಫೊರ** (ಕವಚ ಫಲಕಗಳಿರದ ಕೀಟ ರೂಪದ ಪ್ರಾಣಿಗಳು) ಮತ್ತು **ಪಾಲಿಪ್ಲಕೋಫೊರ** (ಬೆನ್ನ ಮೇಲೆ ಎಂಟು ಕವಚ ಫಲಕಗಳಿರುವ ಚಪ್ಪಟೆ ದೀರ್ಘವೃತ್ತರೂಪದವು) ಇದರ ಎರಡು ಉಪವರ್ಗಗಳು. ಸಮನಾದ ಎರಡು ಜೊತೆ ನರತಂತುಗಳಿರುವುದರಿಂದ ಲ್ಯಾಟಿನ್ ಭಾಷೆಯಲ್ಲಿ **ಆಂಫಿನ್ಯೂರ** ಎಂಬ ಹೆಸರು ಬಂದಿದೆ. ಪ್ರಾಣಿಯ ಲಕ್ಷಣವಿಷ್ಟು – ಕಣ್ಣು, ಕರಬಳ್ಳಿಗಳು (ಟೆಂಟಕಲ್ಸ್) ಇರದ ಅಸ್ಪಷ್ಟವಾದ ತಲೆ; ಅದರ ಕೆಳಭಾಗದಲ್ಲಿ ಚಲಿಸಲು ಉಪಯುಕ್ತವಾದ ಮಾಂಸಖಂಡಗಳಿಂದ ತುಂಬಿದ ದಪ್ಪ ತೆವಳು ಪಾದ; ಮೇಲ್ಭಾಗ ಮತ್ತು ಪಕ್ಕಗಳನ್ನು ಆವರಿಸಿರುವ ಒಂದು ಹೊದಿಕೆ (ಮ್ಯಾಂಟಲ್). ಹೊದಿಕೆಯ ಹೊರಭಾಗದಲ್ಲಿ ಒಂದು ಅಥವಾ ಎರಡು




ಕೈಟನ್ನಿನ ಮೇಲ್ಭಾಗ ಕೈಟನ್ನಿನ ಕೆಳಭಾಗ

1. ಬಾಯಿ; 2. ಕಿವಿರು; 3. ಕಾಲು; 4. ಅಸನದ್ವಾರ

ಫಲಕಗಳಿರುವ, ಸ್ರವಿಸುವ ಸುಣ್ಣದ ಚಿಪ್ಪು. ಕೆಲವು ಪ್ರಾಣಿಗಳಿಗೆ ಚಿಪ್ಪಾಗಲಿ, ಕಾಲುಗಳಾಗಲಿ ಇರುವುದಿಲ್ಲ. ಬಾಯಿ ಮತ್ತು ಆಸನದ್ವಾರ ದೇಹದ ಕೆಳಭಾಗದಲ್ಲಿ ಎರಡು ತುದಿಗಳಲ್ಲಿವೆ. ಅನ್ನನಾಳ ನೇರವಾಗಿದೆ. ಬಾಯ ಅಂಗುಳಲ್ಲಿ ಹಲ್ಲುಗಳನ್ನೊಳಗೊಂಡ ರ್‍ಯಾಡ್ಯುಲ ಎಂಬ ಉಜ್ಜುವ ಅಂಗವೂ ಲಾಲಾಗ್ರಂಥಿಗಳೂ ಇವೆ. ಸಮಗಾತ್ರವಾದ ಒಂದು ಜೊತೆ ಕಿವಿರುಗಳು ಹೊರ ಹೊದಿಕೆಯ ಪದರದಲ್ಲಿವೆ. ಉಭಯ ನರಹರಿ ಪ್ರಾಣಿಗಳು ಸಾಮಾನ್ಯವಾಗಿ ಎಲ್ಲ ಸಮುದ್ರಗಳಲ್ಲೂ ತೀರಕ್ಕೆ ಸಮೀಪವಾಗಿ ಆಳವಿಲ್ಲದ ಭಾಗಗಳಲ್ಲಿ ವಾಸಿಸುತ್ತವೆ. ಬಂಡೆ, ಹವಳ, ಕಡಲಸಸ್ಯಗಳು ಮುಂತಾದುವುಗಳ ಮೇಲೆ ತೆವಳುತ್ತ ಅಲ್ಲಿ ಬೆಳೆದಿರುವ ಪಾಚಿ ಮುಂತಾದ ಸಸ್ಯಗಳನ್ನು ತಿಂದು ಬದುಕುವುವು. ಇವುಗಳ ರೂಢನಾಮ ಕೈಟನ್.

ಪಾಲಿಪ್ಲಕೋಫೊರ (ಬಹುಫಲಕಿಗಳು): ಈ ಉಪವರ್ಗದ ಕೈಟನ್ನುಗಳನ್ನು ಕೆಲವರು ಗ್ಯಾಸ್ಟ್ರಾಪೊಡ ವರ್ಗದಲ್ಲಿ ಲೋರಿಕೇಟ ಎಂಬ ಪ್ರತ್ಯೇಕವಾದ ಒಂದು ಉಪವರ್ಗಕ್ಕೆ ಸೇರಿಸಿರುವರು. ಕೈಟನ್ನುಗಳ ದೇಹ ಸಾಮಾನ್ಯವಾಗಿ ಸ್ವಲ್ಪ ಉದ್ದ ಮತ್ತು ಚಪ್ಪಟೆ. ಇವು ತುಂಬ ದೊಡ್ಡಗಾತ್ರಕ್ಕೆ ಬೆಳೆಯುವುದಿಲ್ಲ. ಇವುಗಳಲ್ಲಿರುವ ಎಂಟು ಫಲಕಗಳಲ್ಲಿ ಮೊದಲನೆಯ

ಮತ್ತು ಕೊನೆಯ ಫಲಕಗಳು ಅರ್ಧ ಗೋಳಾಕಾರವಾಗಿಯೂ ಮಿಕ್ಕವು ಆಯಾಕಾರವಾಗಿಯೂ ಇವೆ. ಫಲಕಗಳು ಒಂದರ ಹಿಂದೊಂದು ಮನೆಯ ಹೆಂಚುಗಳಂತೆ ಜೋಡಣೆಯಾಗಿವೆ. ಹೀಗಿರುವುದರಿಂದ ಈ ಪ್ರಾಣಿಗಳು ತಮ್ಮನ್ನು ಯಾವುದಾದರೂ ವೈರಿಗಳು ಹೆದರಿಸಿದಾಗ ತಮ್ಮ ಮೈಯ್ಯನ್ನು ಆರ್ಮಡಿಲೊ ಇಲ್ಲವೇ ಮರಹೇನುಗಳ ಹಾಗೆ ಸುತ್ತಿಕೊಳ್ಳುತ್ತವೆ. ಕ್ರಿಪ್ಟೊಕೈಟನ್ನಿನಂಥ ಪ್ರಾಣಿಗಳಿಗೆ ಮುಳ್ಳುಗಳಿಂದಾದ ಆವೃತವಾದ ಚಿಪ್ಪಿನ ಹೊದಿಕೆ ಇದೆ. ಟೋನಿಸಿಯ ಎಂಬುದರಲ್ಲಿ ಇವು ಹೆಚ್ಚು ಸಂಖ್ಯೆಯಲ್ಲಿವೆ. ಈ ಪ್ರಾಣಿಗಳಿಗೆ



ನಿಯೋಪಿಲೈನ ಪ್ರಾಣಿಯ ತಳಭಾಗ

ಲಾಲಾಗ್ರಂಥಿ, ರ್‍ಯಾಡ್ಯುಲ ಮತ್ತು ಪಿತ್ತಜನಕಾಂಗಗಳೂ ಇವೆ. ತಲೆಯ ಭಾಗದಲ್ಲಿ ಗಂಟಲಿನ ಸುತ್ತ ಒಂದು ನರವ್ಯೂಹವಿದೆ. ಅದರಿಂದ ಎರಡು ಜೊತೆ ನರಗಳು ಪಾದಕ್ಕೂ ಹೊರ ಹೊದಿಕೆಗೂ ಸಾಗಿವೆ. ಪ್ರಾಣಿಯ ದೇಹದ ಹಿಂಭಾಗದ ಮಧ್ಯದಲ್ಲಿ ಹೃದಯವಿದೆ. ಇದನ್ನು ಪೆರಿಕಾರ್ಡಿಯಂ ಕವಚ ಆವರಿಸಿದೆ. ಮಧ್ಯದಲ್ಲಿರುವ ಒಂದೇ ಒಂದು ಹೃತ್ಕುಕ್ಷಿಯ ಎರಡು ಪಕ್ಕಗಳಲ್ಲೂ ಹೃತ್ಕರ್ಣಗಳಿವೆ. ಮೂತ್ರ ಜನಕಾಂಗಗಳ ಒಳ ತುದಿಗಳಲ್ಲಿ ಹೃತ್ಕವಚದಲ್ಲೂ ಹೊರತುದಿಗಳು ಆಸನದ್ವಾರದ ಪಕ್ಕದಲ್ಲೂ ಹೊರಗಡೆಗೆ ತೆರೆಯುತ್ತವೆ. ಇವು ಏಕಲಿಂಗಿಗಳು ; ಇವುಗಳ ಜನನದ್ವಾರಗಳೂ ಸೊಲೆನೊಗ್ಯಾಸ್ಟ್ರಸುಗಳಲ್ಲಿದ್ದ ಹಾಗೆ ಹೃತ್ಕವಚದೊಳಕ್ಕೆ ತೆರೆಯುವುದಿಲ್ಲ. ಜನನನಾಳಗಳ ಮೂಲಕ ಜನನಾಣುಗಳು ಹೊರಬರುತ್ತವೆ. ಇವುಗಳ ಜೀವನ ಚರಿತ್ರೆಯಲ್ಲಿ ಟ್ರೋಕೋಫೋರ್ ಎಂಬ ಲಾರ್ವದ ಅವಸ್ಥೆ ಕಂಡುಬರುತ್ತದೆ.

4–80 ಸಮಗಾತ್ರದ ಕಿವಿರುಗಳು ಹೊರಹೊದಿಕೆಯ ಮಡಿಕೆಯಲ್ಲಿವೆ. ವೆಸ್ಟ್ ಇಂಡೀಸ್ ಮತ್ತು ಇತರ ದೇಶಗಳಲ್ಲಿ ಕೈಟನ್ನಿನ ಕಾಲುಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ.

ಮಾನೋಪ್ಲಕೋಫೊರ (ಏಕಫಲಕಿಗಳು): ಚಿಪ್ಪಿನಲ್ಲಿ ಒಂದು ಫಲಕ ಮಾತ್ರ ಇದೆ. ರ್‍ಯಾಡ್ಯುಲಾದಲ್ಲಿ ಆರುಸಾಲು ಹಲ್ಲುಕೂಡಿವೆ. ಚಿಪ್ಪಿನ ಅಗ್ರಭಾಗದ ಅಡಿಯಲ್ಲಿ ಹೊಟ್ಟೆ ಇದೆ. ಸಮಗಾತ್ರದ ಎರಡು ಪಿತ್ತಜನಕಾಂಗಗಳೂ ಅನ್ನನಾಳದ ಜೊತೆಗೆ ಕೂಡಿಕೊಂಡಿವೆ. ವಿಶಾಲವಾದ ಕಾಲು ಐದು ಜೊತೆ ಕಿವಿರುಗಳ ನಡುವೆ ಇದೆ. ಪ್ರತಿಯೊಂದು ಕಿವಿರಿನ ಜೊತೆಗೂ ಒಂದೊಂದು ಮೂತ್ರಾಂಗವೂ ಕೂಡಿದೆ. ನರವ್ಯೂಹ ಕೈಟನಿನಲ್ಲಿರುವ ಹಾಗೆಯೇ ಇದೆ ; ದೇಹಾವಕಾಶ ಚೆನ್ನಾಗಿ ರೂಪುಗೊಂಡಿದೆ. ಮೂತ್ರಾಂಗಗಳು (ನೆಫ್ರೀಡಿಯಗಳು) ಕಿವಿರಿನ ಅಡಿಯಲ್ಲಿ ತೆರೆಯುತ್ತವೆ. ಅಂಗಾಂಗಗಳಿಂದ ಉತ್ಪತ್ತಿಯಾದ ವಿಸರ್ಜನ ಪದಾರ್ಥಗಳು ಕೆಲವು ನೆಫ್ರೀಡಿಯಗಳ ಮೂಲಕ ಹೊರಬರುತ್ತವೆ. ಇವುಗಳೆಲ್ಲ ಏಕಲಿಂಗಿಗಳು. (ಕೆ.ಎಂ.ಜಿ.)

**ಉಭಯ ವೇದಾಂತ:** ವೇದಾಂತದರ್ಶನದ ಸಮಗ್ರ ಸ್ವರೂಪವನ್ನು ತಿಳಿಯಲು ಸಂಸ್ಕೃತದಲ್ಲಿರುವ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಗೀತೆಯೊಡನೆ, ದ್ರಾವಿಡ ಪ್ರಬಂಧಗಳ ಅನುಭವವಾಣಿಯನ್ನೂ ಸೇರಿಸಿಕೊಳ್ಳಬೇಕು ಎಂದು ವಾದಿಸಿ ಈ ದ್ವಿಮುಖವಾದ ಅನ್ಯೋನ್ಯ ಪೋಷಕ ಸಾಹಿತ್ಯರಾಶಿಗೆ ಉಭಯ ವೇದಾಂತವೆಂಬ ಪಾರಿಭಾಷಿಕ ನಿರ್ದೇಶವನ್ನು ಕೊಡಲಾಗಿದೆ. ವೇದಾಂತವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ರಾಮಾನುಜಾಚಾರ್ಯರು ನಿರೂಪಿಸಿದ್ದಾರೆ. ಅವರು ಸಂಸ್ಕೃತ ಆಧಾರಗಳಿಂದ ಒದಗಿಬಂದ ಈ ದರ್ಶನ ಸಂಪ್ರದಾಯದೊಡನೆ ದ್ರಾವಿಡದೇಶದಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದ್ದ, ಆಳ್ವಾರುಗಳೆಂಬ ಭಕ್ತ ಪರಂಪರೆಯ, ಕೃತಿಗಳಾದ ದಿವ್ಯ ಪ್ರಬಂಧವನ್ನೂ ಸಂಯೋಜನೆ ಮಾಡುತ್ತಾರೆ. ಈ ಪ್ರಬಂಧಗಳು ವೇದ–ವೇದಾಂತದ ತಮಿಳು ಪರಿವರ್ತನೆಯೆಂದು ಶ್ರೀವೈಷ್ಣವ ಸಂಪ್ರದಾಯ ಪರಿಗಣಿಸುತ್ತದೆ. ಕೆಲವು ವೇಳೆ ಸಂಸ್ಕೃತ ಪ್ರಮಾಣಗಳ ಮೂಲಕ ನಿರ್ಣೀತವಾದ ವಿಷಯಗಳೂ ದ್ರಾವಿಡ ವೇದಗಳಲ್ಲಿ ಖಚಿತಗೊಳ್ಳುವುವೆಂದು ವೇದಾಂತದೇಶಿಕರೇ ಮೊದಲಾದ ಪ್ರಧಾನ ಸಾಧಕರು ಅಭಿಪ್ರಾಯಪಡುತ್ತಾರೆ. ಈ ಪ್ರಬಂಧಗಳಿಗೆ ವಿಪುಲವಾದ ಭಾಷ್ಯಗಳು ಬೆಳೆದಿವೆ. ಇವಕ್ಕೆ ಸಾಮೂಹಿಕ ಭಗವದ್ವಿಷಯ ಎಂದು ಹೆಸರು ಬಂದಿದೆ.

ಉಭಯ ವೇದಾಂತ ಸಂಪ್ರದಾಯದ ಅಂತಿಮ ತಾತ್ಪರ್ಯ ಒಂದೇ ಆದರೂ ಪ್ರತಿಪಾದನೆ ಮಾತ್ರ ಸಂಸ್ಕೃತ ವೇದಾಂತ ಮತ್ತು ದ್ರಾವಿಡವೇದಾಂತ ಇವೆರಡರ ಆಧಾರದಿಂದಲೂ ನಡೆಯುತ್ತದೆ ಎಂಬುದು ಇಲ್ಲಿನ ವಿಶೇಷ. (ಎಸ್.ಎಸ್.ಆರ್.)

**ಉಮರ್ ಖಯ್ಯಾಮ್:** ರುಬಾಯ್ಯತ್ ಎಂದು ಪ್ರಸಿದ್ಧವಾಗಿರುವ ರುಬಾಯಿ ಛಂದಸ್ಸಿನ ಚೌಪದಿಗಳ ಮೂಲಕ ಪ್ರಪಂಚಕ್ಕೆ ಪ್ರಸಿದ್ಧನಾದ ಕವಿ. ಪರ್ಷಿಯ ದೇಶದವ. ಖೊರಾಸಾನ್ ಪ್ರಾಂತ್ಯಕ್ಕೆ ಸೇರಿದ ನೀಷಾಪುರ ಎನ್ನುವ ಗ್ರಾಮದಲ್ಲಿ ಜನ್ಮ ತಾಳಿದ. ಈತನ ಕಾಲದ ವಿಚಾರದಲ್ಲಿ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಹಲವರ ಪ್ರಕಾರ ಈತ 1915 ಮತ್ತು 1020ರ ಮಧ್ಯೆ ಜನಿಸಿ 1123ರ ವರೆಗೂ ಜೀವಿಸಿದ್ದನೆಂದೂ ಮತ್ತೆ ಹಲವರ ಪ್ರಕಾರ 1050ರಲ್ಲಿ ಜನಿಸಿ 1132ರವರೆಗೂ ಇದ್ದನೆಂದೂ ತಿಳಿದುಬರುತ್ತದೆ.

ಉಮರ್ ಗುಡಾರಗಳನ್ನು (ಡೇರೆ) ಮಾಡುವವರ ಮನೆತನಕ್ಕೆ ಸೇರಿದವ. ಖಯ್ಯಾಮ್ ಎಂದರೆ ಗುಡಾರವೆಂದರ್ಥ. ಉಮರ್ ಇದರಿಂದಾಗಿ ಉಮರ್ ಖಯ್ಯಾಮ್ ಎಂದೇ ಆದ. ಈತನ ಪೂರ್ಣ ಹೆಸರು ಹೀಗಿದೆ: ಘಿಯಾತ್ ಉದ್ದೀನ್ ಅಬುಲ್ ಫಾತ್ ಓಮರ್ ಬಿನ್ ಇಬ್ರಾಹಿಂ ಅಲ್ ಖಯ್ಯಾಮಿ. ಆದರೆ ಉಮರ್ ಖಯ್ಯಾಮ್ ಎಂದೇ ಆತ ಸುಪ್ರಸಿದ್ಧ. ಚಿಕ್ಕಂದಿನಿಂದಲೇ ಬುದ್ಧಿ ಸಂಪನ್ನನಾದ ಈತ ಕವಿ ಮಾತ್ರ ಆಗಿರದೆ ಜ್ಯೋತಿಷ್ಯ, ಬೀಜಗಣಿತ, ಕ್ಷೇತ್ರಗಣಿತ, ಭೌತವಿಜ್ಞಾನದಲ್ಲೂ ಪಾರಂಗತನಾಗಿದ್ದ. ಅಂತಃಸ್ಫೂರ್ತಿಯನ್ನು ಅಪಾರವಾಗಿ ಪಡೆದಿದ್ದ ಈತ ದಾರ್ಶನಿಕನಾಗಿಯೂ ಇದ್ದು ಸೂಫಿಗಳಂತೆ ಅನುಭಾವಿಯೂ ಆಗಿದ್ದ. ಬಹುಮುಖ ಪ್ರತಿಭೆಯಿಂದ ಕೂಡಿದ್ದ ಈತ ತನ್ನ ಸಮಾಜದಲ್ಲಿ ಹೆಸರುವಾಸಿಯಾಗಿದ್ದರೂ ಈತನ ಜೀವಿತಕಾಲದ ಅನೇಕ ವಿವರಗಳು ಸಿಕ್ಕಿಲ್ಲದುದು ಅಚ್ಚರಿಯ ಸಂಗತಿ.

ಉಮರ್ ಖಯಾಮ್ ಎಷ್ಟು ವಿದ್ವಾಂಸನಾಗಿದ್ದನೋ ತನ್ನ ಜೀವನಕ್ರಮದಲ್ಲಿ ಅಷ್ಟೇ ಸರಳವಾಗಿಯೂ ಅನಾಸಕ್ತನಾಗಿಯೂ ಇದ್ದನೆಂಬುದಕ್ಕೆ ನಿದರ್ಶನ ಸಿಗುತ್ತದೆ. ಅಧಿಕಾರಕ್ಕೆ ಬಂದ ಬಾಲ್ಯಸ್ನೇಹಿತ ನಿಜಾಮ್ ಉಲ್ ಮುಲ್ಕ್‍ನ ಮೊದಲು ಮಾಡಿಕೊಂಡಿದ್ದ ಮಾತಿನ ಪ್ರಕಾರ ಉಮರನಿಗೆ ಪದವಿ, ಬಿರುದು, ಧನ ಇತ್ಯಾದಿ ನೀಡಲು ಬಂದಾಗ ಅವೆಲ್ಲವನ್ನೂ ನಿರಾಕರಿಸಿ ರಾಜ್ಯದ ಯಾವುದೋ ಒಂದು ಮೂಲೆಯಲ್ಲಿ ನೆಲೆಸಿಕೊಂಡು ಜ್ಞಾನಸಂಪತ್ತನ್ನು ಜನರಲ್ಲಿ ಹರಡಲು ಬೇಕಾದ ಸೌಕರ್ಯಗಳನ್ನು ಮಾಡಿಕೊಟ್ಟರೆ ಸಾಕೆಂದು ಕೇಳಿಕೊಂಡನಂತೆ. ಇದೇ ಆತನಿಗೆ ಇದ್ದ ಆಶಯ; ತನ್ನ ವ್ಯಾಸಂಗಕ್ಕೆ ವಿಚಾರವಿನಿಮಯಕ್ಕೆ ಬೇಕಾದ ಅವಕಾಶ ಕಲ್ಪನೆಯೇ ಆತ ಕೋರಿದ ಸಹಾಯ.

ಉಮರನ ಕೃತಿಗಳಲ್ಲಿ ಜೀಝು ಮಲ್ಲಿಕ್‍ಷಾಹಿ ಎನ್ನುವ ಜ್ಯೋತಿಷ್ಯಕ್ಕೆ ಸಂಬಂಧಿಸಿದ ಟಿಪ್ಪಣಿಗಳೂ ಪ್ರಕಟಗೊಂಡಿದ್ದು ವಿದ್ವಾಂಸರಿಂದ ಮನ್ನಣೆ ಪಡೆದಿವೆ. ಹಾಗೆಯೇ ಬೀಜಗಣಿತದ ಮೇಲಿನ ಕೃತಿ ಈತನ ಬುದ್ಧಿಶಕ್ತಿಯ ಅಳತೆಗೋಲಾಗಿದೆಯೆಂದು ಇಂದಿಗೂ ಹೇಳುತ್ತಾರೆ. ಯೂಕ್ಲಿಡನ ಕ್ಷೇತ್ರಗಣಿತದ ನಿರೂಪಣೆಗಳಲ್ಲಿರುವ ತೊಡಕುಗಳು ಎಂಬ ಗ್ರಂಥ ಉಮರನಿಗೆ ಅಪಾರ ಕೀರ್ತಿಯನ್ನು ತಂದಿತ್ತು. ಎಲ್ಲದಕ್ಕಿಂತ ಹೆಚ್ಚಾಗಿ ಈತನ ಖ್ಯಾತಿ ಉಳಿದಿರುವುದು ಇವನ ಕವನಗುಚ್ಛದಿಂದ.

ಉಮರ್ ಖಯ್ಯಾಮನನ್ನು ಸಹಿಸದ ಅನೇಕರು ಈತನನ್ನು ತೆಗಳಿದ್ದುಂಟು. ನಿಜಾಮುದ್ದೀನ್ ರಾಸಿ ಎಂಬಾತ ಉಮರನನ್ನು ನಿರ್ಭಾಗ್ಯತಾತ್ತ್ವಿಕ, ನಾಸ್ತಿಕ, ಚಾರ್ವಾಕ ಎಂದು ಜರೆದಿದ್ದಾನೆ. ಆದರೆ ಉಮರನ ಧರ್ಮಪ್ರಜ್ಞೆ ಧರ್ಮಶಾಸ್ತ್ರದಲ್ಲಿನ ನಿಪುಣತೆ ಎಷ್ಟಿತ್ತೆಂದರೆ ಅಬೂ ಹಮೀದ್ ಘಸಾಲಿ ಎಂಬ ಶಿಷ್ಯ ಮಸೀದಿಗಳಲ್ಲಿ ಉಮರನನ್ನು ಕುತರ್ಕಿ, ನಾಸ್ತಿಕ ಎಂದು ಬಹಿರಂಗವಾಗಿ ಬಯ್ಯುತ್ತಿದ್ದರೂ ಗುಪ್ತವಾಗಿ ಉಮರನ ಹತ್ತಿರವೇ ಹೋಗಿ ಧರ್ಮದ ಅಂತರಂಗವನ್ನು ಕಲಿಯುತ್ತಿದ್ದನಂತೆ.

ರುಬಾಯತ್ ಎನ್ನುವುದು ನಾಲ್ಕು ಪಾದಗಳುಳ್ಳ ಸಣ್ಣ ಪದ್ಯ. ಮೂರನೆ ಪಾದವನ್ನು ಬಿಟ್ಟರೆ ಉಳಿದ ಪಾದಗಳ ಅಂತ್ಯಾಕ್ಷರಗಳು ಪ್ರಾಸಬದ್ಧವಾಗಿರುವ ಕವಿತಾರಚನೆ. ಈ ರೀತಿಯ ಪದ್ಯಗಳನ್ನು ಪರ್ಷಿಯದಲ್ಲಿ ಜಾರಿಗೆ ತಂದವ ಷೇಕ್ ಅಬುಲ್ ಸೈಯದ್ ಬಿನ್ ಅಬುಲ್ ಖಯಿರ್ ಎನ್ನುವ ಸೂಫಿ. ಈ ರಚನೆ ಸೂಕ್ಷ್ಮರೀತಿಯ ಭಾವಪ್ರಕಾಶಕ್ಕೆ ಅನುಕೂಲವೆಂಬುದನ್ನು ಅರಿತ ಉಮರ್ ಅದನ್ನೇ ತನ್ನ ಮಾಧ್ಯಮವನ್ನಾಗಿ ಬಳಸಿಕೊಂಡ, ರಚನೆ ಹೇಗಿದ್ದರೇನು. ಅಂತರಂಗವನ್ನು ಕಲಕುವ, ಬುದ್ಧಿಯನ್ನು ಕೆರಳಿಸುವ ಭಾವಶಕ್ತಿ ಕವಿಗಿದ್ದರಲ್ಲವೇ ತಂತ್ರವೂ ಅಮರವಾಗುವುದು? ರುಬಾಯತ್ ಎನ್ನುವುದು ಖ್ಯಾತಿ ಪಡೆಯಲು ಭಾವಸಂಪನ್ನನಾದ ಉಮರನೇ ಕಾರಣ.

ಉಮರ್ ರಚಿಸಿದ ರುಬಾಯತ್‍ಗಳು ಎಷ್ಟೆಂದು ಖಚಿತವಾಗಿ ಗೊತ್ತಿಲ್ಲ. ಹಲವರು 1,200 ಎಂದರೆ, ಮತ್ತೆ ಕೆಲವರು 500 ಎಂದು ಹೇಳುತ್ತಾರೆ. ಫಿಟ್ಸ್‍ಜರಲ್ಡ್‍ನ ಇಂಗ್ಲಿಷ್ ಅನುವಾದದಲ್ಲಿನ ಅನೇಕವು ಉಮರನವಲ್ಲವೆಂದು ಹಲವರ ಅಭಿಪ್ರಾಯ, ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಎ.ಜೆ. ಆರ್ಬರಿ ಸಂಶೋಧಿಸಿ ಸಂಪಾದಿಸಿದ ಉಮರನ ಕೃತಿಗಳಲ್ಲಿ ಮೊದಲ ಸಂಸ್ಕರಣದಲ್ಲಿ 172 ಪದ್ಯಗಳೂ ಎರಡನೆಯ ಸಂಸ್ಕರಣದಲ್ಲಿ 252 ಪದ್ಯಗಳೂ ಇವೆ. ಇವು ಉಮರನ ಬಹು ಹತ್ತಿರ ಕಾಲದ ಮೂಲ ಪ್ರತಿಗಳಿಂದ ಸಂಪಾದಿತವಾದುದರಿಂದ ನಂಬುಗೆಗರ್ಹವೆಂದು ಹೇಳಲಾಗಿದೆ.

ಉಮರನ ರುಬಾಯತ್‍ಗಳಲ್ಲಿ ವಿಚಾರಗಳು ಏಕಸೂತ್ರವಾಗಿ ಹರಿದಿಲ್ಲ. ಅನೇಕ ವಿಚಾರಗಳು ಅಲ್ಲಿ ಹಂಚಿಕೊಂಡಂತೆ ಬಂದಿವೆ. ಹಲವುಸಲ ಒಂದೇ ರುಬಾಯತ್ ಸ್ವಯಂಪೂರ್ಣವೆನಿಸುವುದೂ ಉಂಟು. ಅನೇಕ ಸಲ ಹತ್ತು ಹನ್ನೆರಡು ರುಬಾಯತ್‍ಗಳಿಂದ ಒಂದು ಅಭಿಪ್ರಾಯ ಸ್ಪಷ್ಟಗೊಳ್ಳುತ್ತದೆ. ಹೀಗೆ ಭಾವಕ್ಕೆ, ವಿಚಾರಕ್ಕೆ ಅನುಗುಣವಾಗಿ ರುಬಾಯತ್‍ಗಳ ಸಂಖ್ಯೆ, ದೇವರು, ಜಗತ್ತು, ಸಂಸಾರ, ಬಂಧನ, ಮುಕ್ತಿ, ಸೃಷ್ಟಿ, ಸ್ಥಿತಿ, ಲಯ, ಜಗಳ, ಸ್ನೇಹ, ಪ್ರೇಮ, ಕೋಪ, ಹೆಂಡ, ಹೆಂಡದಂಗಡಿ, ಸೂರ್ಯೋದಯ,

ಕತ್ತಲು ಇತ್ಯಾದಿ ಅನೇಕ ವಿಚಾರಗಳು ಕವಿಯ ಭಾವವೆಂಬ ಮೂಸೆಯಲ್ಲಿ ಕರಗಿ ಒಡವೆಗಳಾಗಿ ಹೊರಗೆ ಬಂದಿವೆ. ಎಷ್ಟೋ ವೇಳೆ ಕವನದ ವ್ಯಾಚ್ಯಾರ್ಥ ಇಹಲೋಕದ್ದಾದರೆ ವ್ಯಂಗ್ಯಾರ್ಥ ಪರಲೋಕದಾಗುತ್ತದಾಗಿ ಉಮರನ ಸ್ಪಷ್ಟೋದ್ದೇಶ ಏನು ಎಂದು ತಿಳಿಯುವುದು ಕಷ್ಟಸಾಧ್ಯ.

ಯಾವ ಪಂಥಕ್ಕೂ ನಿರ್ದಿಷ್ಟವಾಗಿ ಸೇರಿಸಲಾಗದ ಈತನ ಕವನಗಳಲ್ಲಿ ಅತ್ಯಮೂಲ್ಯವಾದ ಅನುಭವ ಸಿದ್ಧಾಂತ ನಮಗೆ ಕಾಣುತ್ತದೆ. ಆತ್ಮಪ್ರತ್ಯಾನುಬೋಧದಿಂದ ಚೋದಿತವಾದ ಈತನ ಕವನಗಳು ಲೋಕದ ಅನುಭವವನ್ನೇ ಹೆಚ್ಚಿಸಿವೆ ಎಂದರೆ ತಪ್ಪಾಗಲಾರದು. ಸಂಜ್ಞೆ ಅಥವಾ ಪ್ರತಿಮೆಗಳ ಮೂಲಕ ತನ್ನ ಅನುಭವವನ್ನು ವ್ಯಕ್ತಪಡಿಸುವಾಗ ಅದರ ಅಂತರಾರ್ಥ ನಮಗಾಗದೆ ಹೋಗಬಹುದು. ಬಹಳ ಕೀಳುಮಟ್ಟದ ಮೌಲ್ಯಗಳೇ ಅವುಗಳಲ್ಲಿವೆ ಎಂದೆನಿಸ ಬಹುದು. ಆದರೆ ಆತನ ಅನುಭವ ಮತ್ತು ಜ್ಞಾನಪರಿಶುದ್ಧತೆ ನಮ್ಮನ್ನು ಸೆಳೆಯುತ್ತವೆ. ಸೂಫಿ ಅನುಭಾವಿಗಳ ಜಾಡಿನಲ್ಲೇ ನಡೆಯುತ್ತ ಆತ ಹಾಡಿದ್ದೂ ಉಂಟು. ಮದ್ಯ, ಬಟ್ಟಲು, ಅರವಟ್ಟಿಗೆ ಮುಂತಾದ ಪ್ರತಿಮೆಗಳನ್ನು ಉಪಯೋಗಿಸಿದ್ದೂ ಉಂಟು. ಮದ್ಯವೆಂದರೆ ಭಗವಂತನ ಉಪಾಸನೆಯಿಂದ ಲಭ್ಯವಾಗುವ ಆನಂದ, ಬಟ್ಟಲೆಂದರೆ ಮಾನವ ಹೃದಯ, ಅರವಟ್ಟಿಗೆ ಎಂದರೆ ಭಕ್ತರ ಗುಂಪು. ಪ್ರಿಯತಮ ಎಂದರೆ ಬುದ್ಧಿ, ಗಂಧರ್ವ ಎಂದರೆ ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡವರು. ಹೀಗೆ ಇನ್ನೂ ಅನೇಕ, ಇವು ಸೂಫಿಗಳ ಮಾತು. ಇವುಗಳ ಹಿಂದೆ ಅಡಗಿದೆ ಉಮರನ ಅಂತರಂಗ, ಆತ್ಮದರ್ಶನ, ಜೀವನದ ಆಕಾಂಕ್ಷೆ.

ಉಮರ್ ವಿನೋದಪ್ರಿಯನಾಗಿದ್ದ ರಸಿಕ, ಲಜ್ಜಾಹೀನನಾದ ಇಂದ್ರಿಯಾಸಕ್ತನಲ್ಲ. ಲೋಕವ್ಯವಹಾರದಲ್ಲಿಯೇ ಇದ್ದರೂ ಅನಾಸಕ್ತ. ವಿಶ್ವದ ಎಲ್ಲ ಅಂಶಗಳಲ್ಲೂ ಅಖಂಡವಾಗಿ ಮತ್ತು ಗುಪ್ತವಾಗಿರುವ ತತ್ತ್ವವನ್ನು ಅರಸುತ್ತಿದ್ದ ಸಾಧಕ. ಪ್ರಪಂಚದ ವಿಚಾರದಲ್ಲಿ ಅಭಿಮಾನವನ್ನು ತೋರಿಸುತ್ತಾನೆ. ಅದನ್ನು ಅಪಾರ್ಥ ಮಾಡಿಕೊಂಡವರಲ್ಲಿ ಮರುಕವನ್ನೂ ತೋರಿಸುತ್ತಾನೆ. ಪ್ರಪಂಚದ ಅನುಭವ ಆತನಿಗೆ ತಿರಸ್ಕೃತವಲ್ಲ. ಅದನ್ನು ಲೋಕಹಿತಕ್ಕಾಗಿ ಸಂಗ್ರಹಿಸುವಲ್ಲಿ ಜನರ ಸುಖ ಸಂತೋಷಗಳಿವೆ. ಮೋಕ್ಷ ಇದರಲ್ಲಿಯೇ ಇದೆ ಎಂಬುದು ಕವಿಯ ಮತ. ಪ್ರಪಂಚಕ್ಕೆ ಮೂಲವಾದ ಪರಾತ್ಪರ ವಸ್ತು ಒಂದಿದೆ ಎನ್ನುವುದರಲ್ಲಿ ನಾಸ್ತಿಕನೆಂದೆನಿಸಿಕೊಂಡ ಈ ಕವಿಗೆ ಸ್ವಲ್ಪವೂ ಸಂದೇಹವಿರಲಿಲ್ಲ. ಆ ದೇವನನ್ನು ಅರಿಯಲು ಮಾನವಗುಣವಾದ ಪ್ರೇಮವೇ ಸಾಧನವೆಂಬುದರಲ್ಲಿ ಈ ಮಾನವದ್ವೇಷಿ ಎಂದೆನಿಸಿಕೊಂಡವನಿಗೆ ಪೂರ್ಣ ವಿಶ್ವಾಸವಿತ್ತು. ಈತ ಹಾಕಿಕೊಂಡ ಸೋಗು ಇತರರನ್ನು ವಂಚಿಸಿತ್ತೇ ಹೊರತು ಈತ ನಂಬಿದ್ದ ದೈವವನ್ನಲ್ಲ. ಜೀವನಕ್ಕೆ ಬೇಕಾಗಿದ್ದ ಸುಖ, ಶಾಂತಿ ಸಮಾಧಾನಗಳ ರೂಪದಲ್ಲಿ ದೇವರು ಈತನನ್ನು ಅನುಗ್ರಹಿಸಿದ್ದುದನ್ನು ಬಲ್ಲವರೇ ಬಲ್ಲರು. ಸಾಯುವಾಗಲೂ ಅಷ್ಟೇ ಸಮಾಧಾನದಿಂದ ಸತ್ತನಂತೆ. ಮಹಾಗರ್ವಿ ಎಂದು ಇತರರಿಗೆ ತೋರಿದರೂ ತನ್ನ ದೇವರನ್ನು ಅರಸುವುದರಲ್ಲಿ ತಾನು ಗೆದ್ದನೆಂಬ ಜಂಬ ಲೇಶಮಾತ್ರವೂ ಕವಿಗೆ ಇಲ್ಲದಿದ್ದುದು ಅವನ ವಿನೀತ ತಾತ್ತ್ವಿಕ ದೃಷ್ಟಿಗೆ ನಿದರ್ಶನ. ಓ ದೇವನೇ ನನ್ನ ಶಕ್ತಿ ಇದ್ದಷ್ಟೂ ನಿನ್ನನ್ನು ಅರಿಯಲು ವಿಫಲನಾಗಿದ್ದರೆ ನನ್ನನ್ನು ಕ್ಷಮಿಸು. ಏಕೆಂದರೆ ನಾನು ಹೊಂದಿರತಕ್ಕ ಅಲ್ಪ ಶಕ್ತಿಯೇ ನಿನ್ನನ್ನು ಅರಿಯಲು ನನ್ನಲ್ಲಿ ಉಳಿದಿರುವ ಏಕೈಕ ಸಾಧನ–ಇದು ಆತನ ಹೃದಯ ನಿವೇದನೆ. ಈ ಜೀವನ ರಹಸ್ಯಮಯ, ಇದರ ಮೊದಲು ಗೊತ್ತಿಲ್ಲ. ಇದರ ಭವಿಷ್ಯವೂ ಗೊತ್ತಿಲ್ಲ. ಈ ಎರಡು ಗೊತ್ತಿರದ ಅಂಕಗಳ ಮಧ್ಯೆ ನಾನು ಇರುವುದಾದರೂ ಎರಡೇ ದಿನ. ಇದ್ದಾಗ ಮಾಡಬಹುದಾದರೂ ಏನು? ಇದು ಉಮರನ ಪ್ರಶ್ನೆ, ಕವಿಯೇ ಉತ್ತರಿಸುತ್ತಾನೆ: ಕುಡಿ, ಕುಡಿದು ಸತ್ತರೆ, ನೀನಿತ್ತ ಬರಲಾರೆ! ಈ ಕುಡಿಯುವ ಅರ್ಥವಾದರೂ ಏನು? ಭಗವಂತನೆಂಬ ಮಧುವನ್ನು. ಕುಡಿದವ ಅಮರನಲ್ಲವೇ? ಹಿಂತಿರುಗಿ ಹೇಗೆ ಬರಬಲ್ಲ? ಉಮರನ ಮಾತು ಹೀಗೆ, ಅರ್ಥ ಹೀಗೆ.

ತಾನಿದ್ದ ಪ್ರಪಂಚಕ್ಕೆ ವಿಚಿತ್ರ ಒಗಟಿನಂತೆ ಕಂಡಿದ್ದರೂ ಕಾಲ ಗತಿಸಿದಂತೆಲ್ಲ ಉಮರನ ನಿಜಸ್ವರೂಪ ಅರ್ಥವಾಗುತ್ತಿದೆ ಇಂಥ ಹುಚ್ಚ, ನಾಸ್ತಿಕ, ಗರ್ವಿಯ ರುಬಾಯತ್‍ಗಳು ನಾನಾ ಭಾಷೆಗಳಲ್ಲಿ ಅನುವಾದಗೊಂಡಿವೆ. ಇಂಗ್ಲಿಷ್, ಫ್ರೆಂಚ್, ಜರ್ಮನ್, ರಷ್ಯ ಮತ್ತಿತರ ಯುರೋಪಿನ ಭಾಷೆಗಳಲ್ಲಿ, ಸಂಸ್ಕೃತ, ಮರಾಠಿ, ತೆಲುಗು ಮತ್ತು ಕನ್ನಡ ಮೊದಲಾದ ಭಾರತೀಯ ಭಾಷೆಗಳಲ್ಲಿ ಉಮರನ ಅಮರನ್ ಅಮರವಾಣಿ ಕೇಳಿಬರುತ್ತಿದೆ. ಡಿ.ವಿ.ಗುಂಡಪ್ಪ ನವರ ಉಮರನ ಒಸಗೆಯಂತೂ ಖ್ಯಾತ ಅನುವಾದವೆನಿಸಿದೆ. (ಕೆ.ಬಿ.ಆರ್.)

**ಉಮಾ:** ಪಾರ್ವತಿಯ ಒಂದು ಹೆಸರು. ಉಗ್ರತಪಸ್ಸಿನಲ್ಲಿ ನಿರತಳಾದ ಈಕೆಯನ್ನು ಕುರಿತು ತಾಯಿ ಉ (ಎಲೌ) ಮಾ (ಬೇಡ, ಕಷ್ಟಸಾಧ್ಯವಾದ ತಪಸ್ಸಿಗೆ ಉದ್ಯುಕ್ತಳಾಗಬೇಡ) ಎಂದು ಬಾರಿಬಾರಿಗೂ ಅಡ್ಡಗಿಸಿದ ಕಾರಣ ಉಮಾ ಎಂಬ ಹೆಸರು ರೂಢಿಗೆ ಬಂತು.*

**ಉಮಾದೇವಿ:** ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರಬಲ್ಲಾಳನ (1173–1220) ಮಹಿಷಿಯರಲ್ಲಿ ಒಬ್ಬಳು. ಈಕೆಯ ವರ್ಣನೆ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಜಗನ್ನಾಥವಿಜಯದ ಕರ್ತೃ ರುದ್ರಭಟ್ಟ ತನ್ನ ಕಾವ್ಯದಲ್ಲಿ ಬಲ್ಲಾಳನನ್ನು ಉಮಾಕಾಮಿನೀಜೀವಿತೇಶ್ವರ ಎಂದು ಸಂಬೋಧಿಸಿದ್ದಾನೆ. ಬಲ್ಲಾಳನ ದಂಡನಾಯಕರಲ್ಲೊಬ್ಬನಾದ ಕುಮಾರ ಪಂಡಿತಯ್ಯ ತಾನು ಉಮಾದೇವಿ ಮತ್ತು ಬಲ್ಲಾಳಚಕ್ರವರ್ತಿಯ ಕುಮಾರನೆಂಬುದಾಗಿ ಕರೆದುಕೊಂಡಿದ್ದಾನೆ. ಈಕೆ ವೀರವಾಣಿ. ಬಲ್ಲಾಳನ ರಾಜ್ಯಾಡಳಿತದಲ್ಲಿ ಸಲಹೆಗಳನ್ನು ನೀಡುತ್ತಿದ್ದುದಲ್ಲದೆ ಸ್ವಯಂ ಯುದ್ಧಭೂಮಿಯಲ್ಲಿ ನಿಂತು ಶತ್ರುಗಳನ್ನು ಎದುರಿಸುತ್ತಿದ್ದಳು. 1196–97ರಲ್ಲಿ ರಾಣಿ ಸೈನ್ಯಸಮೇತವಾಗಿ ಬೆಳಗವತ್ತಿಯ ಸಿಂಧಭೂಪಾನಾದ ಈಶ್ವರದೇವನ ರಾಜ್ಯವನ್ನು ಮುತ್ತಿ ಅವನ ಸೈನ್ಯವನ್ನು ಸೋಲಿಸಿ ಅಪಾರ ಐಶ್ವರ್ಯಸಮೇತ ಹಿಂದಿರುಗಿದ ಳೆಂದು ಹೊನ್ನಾಳಿ ತಾಲ್ಲೂಕಿನಲ್ಲಿ ದೊರೆತಿರುವ ಶಾಸನವೊಂದರಿಂದ ತಿಳಿದು ಬರುತ್ತದೆ. ಈಕೆ ಸುಂದರಿಯೂ ಗೀತಾವಾದ್ಯ ನೃತ್ಯ ಚತುರೆಯೂ ಆಗಿದ್ದಳೆಂದು ಅರಸೀಕೆರೆ ಬಳಿ ಸಿಕ್ಕಿರುವ ತ್ರಿವಿಕ್ರಮ ಪಂಡಿತನದೆನ್ನಲಾದ ಶಾಸನವೊಂದರಿಂದ ತಿಳಿದುಬರುತ್ತದೆ.(ಜಿ.ಆರ್.ಆರ್.)

**ಉಮ್ಮತ್ತಿ:** ಸೊಲನೇಸೀ ಕುಟುಂಬದ ಸಸ್ಯ (ದತೂರ,ಸ್ಟ್ರಮೋನಿಯಂ). ರೂಢ ನಾಮಗಳು ದತೂರ, ಜಿಮ್‍ಸನ್ ವೀಡ್, ಜೇಮ್ಸ್‍ಟೌನ್‍ವೀಡ್, ಮದ್ದು ಕುಣಿಕೆ, ಬದನೆ ಜಾತಿಯದು. 15 ಪ್ರಭೇದಗಳಿವೆ. ಮುಖ್ಯವಾದವು ಎರಡು–ಬಿಳಿ ಉಮ್ಮತ್ತಿ (ದತೂರ ಸ್ಟ್ರಮೋನಿಯಂ) ಮತ್ತು ಕರಿ ಉಮ್ಮತ್ತಿ (ದತೂರ ಮೆಟಲ್). ಉಮ್ಮತ್ತಿಯ ಮೂಲಸ್ಥಾನ ಮೆಕ್ಸಿಕೊ. ಆದರೆ ಈಗ ಇದು ಸರ್ವವ್ಯಾಪಿಯಾಗಿದೆ. ಸಾಮಾನ್ಯವಾಗಿ ಬಯಲುಜೀವಿ: ಶೀತಪ್ರದೇಶ, ಕೊಚ್ಚೆ ಕೊಂಪೆಗಳಲ್ಲಿ ವಿಪುಲವಾಗಿ ಬೆಳೆಯುತ್ತದೆ. ಹೆಚ್ಚಿನ ಪ್ರಭೇದಗಳು ಪೊದೆರೂಪದ ಗಿಡಗಳು. ಕೆಲವು ಮರಗಳಾಗಿ ಬೆಳೆಯುವುದೂ ಉಂಟು. ಹೂಗಳು ಕೊಳವೆಯಾಕಾರದ ಉದ್ದ ತೊಟ್ಟಿನಿಂದ ತೊಡಗಿ ತುತ್ತೂರಿಯ ಕೊಡೆಯಂತೆ ಹೊರಕ್ಕೆ

ಉಮ್ಮತ್ತಿ ಗಿಡ

ತೆರೆದುಕೊಂಡಿರುವುವು. ಒಂದೇ ದಳ, ಹೂಗಳ ಬಣ್ಣ ಕೆಂಪು, ಬಿಳಿ, ಹಳದಿ, ಕಾಯಿಗಳ ಮೇಲೆ ಮುಳ್ಳಿವೆ. ಉಮ್ಮತ್ತಿ ಬೀಜಗಳನ್ನು ವಿಶಿಷ್ಟರೀತಿಯಲ್ಲಿ ಸಂಸ್ಕರಿಸಿ ಮಾದಕ ರೀತಿಯಲ್ಲಿ ಸಂಸ್ಕರಿಸಿ ಮಾದಕ ದ್ರವ್ಯವಾಗಿ ಸೇವಿಸುವ ದುಶ್ಚಟ ಬಲು ಪ್ರಾಚೀನ ಕಾಲದಿಂದ ನಡೆದು ಬಂದಿದೆ. ಬೀಜಗಳಲ್ಲಿ ದತ್ತೂರಿನ್ ಎಂಬ ಮದ್ದು ಇದೆ. ಮಕ್ಕಳು ಈ ಬೀಜಗಳನ್ನು ತಿಂದು ಅನಾಹುತಗಳಾಗಿವೆ. ಮೆಣಸಿನಕಾಯಿ ಬೀಜಗಳಂತಿರುವ ಇವನ್ನು ಎಲೆ ಅಡಕೆಯೊಂದಿಗೆ ಸೇರಿಸಿಕೊಟ್ಟು ಅರಿವು ತಪ್ಪಿಸಿ ಮೋಸ ಮಾಡುವುದು ಹಳ್ಳಿಗಳ ಕಡೆ ಈಗಲೂ ಇದೆ. ತಮ್ಮ ಗಂಡಂದಿರ ಕಣ್ಣುತಪ್ಪಿಸುವುದಕ್ಕಾಗಿ ದತ್ತೂರಬೀಜದ ರಸವನ್ನು ಊಟದಲ್ಲೋ ಪಾನೀಯದಲ್ಲೋ ಕೊಡುತ್ತಿದ್ದರೆಂದು ಗೋವಾನಗರವನ್ನು ಕಂಡ ಪ್ರವಾಸಿ ಜಾನನ್ ಹ್ಯೂಘನ್ ಫನ್ ಲಿನ್ ಷಾಟಿನ್ ತನ್ನ ದಿನಚರಿಯಲ್ಲಿ ಬರೆದಿದ್ದಾನೆ. (1583–1588). ಇದರ ವಿಷವೇರಿದ ಲಕ್ಷಣಗಳು ಅಟ್ರೋಪೀನಿನ ವಿಷದಂತೆಯೇ. ಅಟ್ರೋಪೀನ್ ವಿಷಕ್ಕೆ ಮಾಡಿದಂತೆಯೇ ಇದಕ್ಕೂ ಚಿಕಿತ್ಸೆ. ಉಮ್ಮತ್ತಿ ಗಿಡದ ಮೇಲ್ಪದರದಲ್ಲಿ ಸ್ಕೋಪಲಮೈನ್ ಎಂಬ ರಾಸಾಯನಿಕವಸ್ತು ಉತ್ಪತ್ತಿಯಾಗುತ್ತದೆ ಶಸ್ತ್ರಕ್ರಿಯೆಯಲ್ಲಿ ಸಂವೇದನ ನಾಶಕವಾಗಿ ಸಸ್ಯದ ವಿವಿಧ ಭಾಗಗಳನ್ನು ಉಪಯೋಗಿಸುತ್ತಾರೆ. ಬಿಳಿ ಮತ್ತು ಕರಿ ಉಮ್ಮತ್ತಿಯ ಒಣಗಿದ ಎಲೆಗಳನ್ನು ಕಫದಿಂದ ಕೂಡಿದ ಅಸ್ತಮ ಕಾಯಿಲೆಯನ್ನು ಗುಣಪಡಿಸಲು ಚುಟ್ಟಾರೂಪದಲ್ಲಿ ಸೇದುವುದುಂಟು. ಎಲೆಗಳಿಂದ ಎಣ್ಣೆ ತಯಾರಿಸುತ್ತಾರೆ; ಸಿ ಜೀವಾತನ್ನು ಸಹ ಪಡೆಯುತ್ತಾರೆ. (ಎಂ.ಎಂ.ಯು.;ಡಿ.ಎಸ್.ಎಸ್.)



ಉಮ್ಮತ್ತಿಕಾಯಿ, ಬೀಜಗಳು

ಉಮ್ಮತ್ತಿ ಹೂ ಶಿವನಿಗೆ ಪ್ರಿಯವಾದುದೆಂದೂ ಶಿವನ ಶಿರಸ್ಸಿನಲ್ಲಿ ಈ ಹೂ ಕಂಗೊಳಿಸುವುದರಿಂದ ಇದಕ್ಕೆ ಶಿವಶೇಖರ, ಶಿವಪ್ರಿಯ ಎಂಬ ಹೆಸರುಗಳಿವೆಯೆಂದೂ ಶಿವಪೂಜಾಕಲ್ಪದಲ್ಲಿ ಹೇಳಿದೆ. ದತ್ತೂರ, ಜಾಜಿ, ಕಲ್ಹಾರ, ಕನ್ನೈದಿಲೆ ಹೂಗಳಿಂದ ಶರದೃತುವಿನಲ್ಲಿ ಗೌರೀಪತಿಯಾದ ಶಿವನನ್ನು ಪೂಜಿಸುವಾತ ಸತ್ರಯಾಗದ ಫಲವನ್ನು ಹೊಂದುತ್ತಾನೆಂದು ಶೈವಾಗಮ ತಿಳಿಸುತ್ತದೆ. ಪುತ್ರಾರ್ಥಿಯಾದವ ಒಂದು ಲಕ್ಷ ಉಮ್ಮತ್ತಿ ಹೂಗಳಿಂದ ಶಿವನನ್ನು ಪೂಜಿಸಬೇಕು. ಕೆಂಪು ತೊಟ್ಟುಳ್ಳ ಈ ಹೂ ಪೂಜೆಗೆ ಬಹಳ ಶ್ರೇಷ್ಠವಾದುದೆಂದು ಶಿವಪುರಾಣದಲ್ಲಿ ಹೇಳಿದೆ. (ಎಸ್.ಎಸ್.ಎಚ್.)

**ಉಮಾಶ್ರೀ:** ಕನ್ನಡದ ಪ್ರಸಿದ್ಧ ಚಲನಚಿತ್ರ ನಟಿ, ರಂಗಕಲಾವಿದೆ ಹಾಗೂ ರಾಜಕಾರಣಿ. ಕರ್ನಾಟಕ ವಿಧಾನಮಂಡಲದ ಸದಸ್ಯೆ. ಹಾಸ್ಯಪಾತ್ರಗಳನ್ನೂ ಇತರ ವಿವಿಧ ಪಾತ್ರಗಳನ್ನೂ ಸಮರ್ಥವಾಗಿ ನಿಭಾಯಿಸಿ, ಪ್ರೇಕ್ಷಕರ ಮನಗೆದ್ದ ಖ್ಯಾತಿ ಇವರದು. ಸ್ವಾಭಿಮಾನ, ಗೋಲ್‌ಮಾಲ್ ರಾಧಾಕೃಷ್ಣ, ಸಂಗ್ಯಾ ಬಾಳ್ಯಾ, ಕುರಿಗಳು ಸಾರ್ ಕುರಿಗಳು ಮೊದಲಾದ 350ಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿರುವ ಕೀರ್ತಿ ಇವರದು.

ರಂಗ ಕಲಾವಿದೆಯಾಗಿ ಇವರಿಗೆ 30 ವರ್ಷಗಳ ಅನುಭವವಿದೆ. ಜರ್ಮನ್ ನಿರ್ದೇಶಕ ಫ್ರಿಟ್ಸ್ ಬೆನೆವಿಟ್ಸ್ ಅವರೂ ಸೇರಿದಂತೆ, ಬಿ.ವಿ. ಕಾರಂತ್, ಗಿರೀಶ್ ಕಾರ್ನಾಡ್, ಟಿ.ಎಸ್.ನಾಗಾಭರಣ ಮೊದಲಾದ ಕನ್ನಡದ ಶ್ರೇಷ್ಠ ನಿರ್ದೇಶಕರ ನಿರ್ದೇಶನದಲ್ಲಿ ಸಮರ್ಥವಾಗಿ ನಟಿಸಿದ್ದಾರೆ. ಇವರು ಸು.100ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿ, ಸು. 6000ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ. ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಗುಲಾಬಿ ಟಾಕೀಸ್' ಚಲನಚಿತ್ರದಲ್ಲಿನ ಇವರ ನಟನೆಗೆ 'ಅತ್ಯುತ್ತಮ ನಟಿ'ಯೆಂಬ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಮುಸ್ಸಂಜೆಯ ಕಥಾಪ್ರಸಂಗ, ಕಿಚ್ಚು ಮೊದಲಾದ ದೂರದರ್ಶನದ 'ಧಾರಾವಾಹಿ'ಗಳು, ಕಿರುಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳಲ್ಲೂ ನಟಿಸಿದ್ದಾರೆ.

ರಾಷ್ಟ್ರ ಪ್ರಶಸ್ತಿಯ ಜೊತೆಗೆ, ರಾಜ್ಯೋತ್ಸವ ಪ್ರಶಸ್ತಿ (1999–2000), ಫಿಲ್ಮ್‌ಫೇರ್ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರ ಮೊದಲಾದ ಹಲವಾರು ಗೌರವಗಳು ಇವರಿಗೆ ಲಭಿಸಿವೆ. (ಬಿ.ವಿ.ಎಸ್.)

**ಉಮೇರಿಯಾ ಸ್ತರಗಳು:** ಮಧ್ಯಪ್ರದೇಶದ ರೇವಾಜಿಲ್ಲೆಯಲ್ಲಿರುವ ಉಮೇರಿಯಾ ಎಂಬ ಹಳ್ಳಿಯ ಸಮೀಪದಲ್ಲಿ ಹೊರ ಕಂಡಿರುವ ಸಾಗರ ಶಿಲಾ ಪದರಗಳು. ಮಂದ ಸುಮಾರು 3.048 ಮೀ. ಶೋಧಿಸಿದವನ ಹೆಸರು ಕೆ. ಪಿ. ಸಿನಾರ್. ಉಮೇರಿಯಾಕ್ಕೆ ಪೂರ್ವದಲ್ಲಿರುವ ಅನೂಕ್‌ಪುರದಲ್ಲಿ ಇಂಥದೇ ಸಾಗರಶಿಲಾಪದರವಿರುವುದನ್ನು ಘೋಷ್ ಎಂಬಾತ ವರದಿ ಮಾಡಿದ(1954). ಉಮೇರಿಯಾ ಸಾಗರಶಿಲಾಪದರ ತಾಲ್ಚೀರ್ ಗುಂಡು ಶಿಲೆಯ ಮೇಲೂ ಬರಕಾರ್ ಶಿಲೆಗಳ ಕೆಳಗೂ ನಿಕ್ಷೇಪಗೊಂಡಿದೆ. ತಾಲ್ಚೀರ್ ಗುಂಡುಶಿಲೆಗೂ ಉಮೇರಿಯಾಸ್ತರಕ್ಕೂ ಮಧ್ಯೆ ನಿರ್ದಿಷ್ಟ ಅನನುರೂಪತೆ ಇದ್ದರೂ ಉಮೇರಿಯಾ ಸ್ತರ ಮತ್ತು ಬರಕಾರ್ ಶಿಲೆಗಳು ಅನುರೂಪವಾಗಿರುವುದು ವ್ಯಕ್ತವಾಗಿದೆ. ಉಮೇರಿಯಾ ಸ್ತರಗಳಲ್ಲಿ ಸಾಗರವಾಸಿಗಳಾದ ಸ್ಪಿರಿಫೆರ, ಪ್ರೊಡಕ್ಟಸ್, ರಿಟಿಕ್ಯುಲೇರಿಯ ಮತ್ತು ಕೆಲವು ಚಿಕ್ಕ ಶಂಖ ಜಾತಿಯ ಪ್ರಾಣಿಗಳ ಚಿಪ್ಪುಗಳು ಸಾಮಾನ್ಯವಾಗಿ ದೊರೆಯುತ್ತವೆ. ಬ್ರೇಕಿಯೋಪೊಡ ಪ್ರಾಣಿಗಳ ಜೀವಾವಶೇಷಗಳೇ ಹೆಚ್ಚು. ಅವೆಲ್ಲ ಹೊಸಜಾತಿಯವು ಮತ್ತು ವೈಶಿಷ್ಟ್ಯಪೂರಿತ ವಾದವು. ಕೌಪರ್ ರೀಡ್ ಎಂಬಾತ ಇದನ್ನು ಪರೀಕ್ಷಿಸಿ ಇವು ಕಾರ್ಬಾನಿಫೆರಸ್ ಮತ್ತು ಪರ್ಮಿಯನ್ ಯುಗಗಳ ಜೀವಾವಶೇಷಗಳ ಮಿಶ್ರ ಎಂಬ ಅಭಿಪ್ರಾಯಕ್ಕೆ ಬಂದಿದ್ದಾನೆ. ಈ ಜೀವಾವಶೇಷಗಳು ಹಿಮಾಲಯ ಪ್ರದೇಶ ಮತ್ತು ರಷ್ಯಗಳಲ್ಲಿರುವ ಪರ್ಮೊಕಾರ್ಬಾನಿಫೆರಸ್ ಯುಗವನ್ನು ಹೋಲುತ್ತವೆ ಎಂದಿದ್ದಾನೆ. ಡೈನೊಕ್ರೈನಸ್ ಎಂಬ ಜೀವಾವಶೇಷವಂತೂ ನಿರ್ದಿಷ್ಟವಾಗಿ ಪರ್ಮಿಯನ್ ಯುಗದ ಆದಿಭಾಗವನ್ನು ಸೂಚಿಸುತ್ತದೆ. ಆದ್ದರಿಂದ ಉಮೇರಿಯಾ ಪ್ರದೇಶ ಪರ್ಮಿಯನ್ ಯುಗದ ಆದಿಭಾಗದಲ್ಲಿ ಟೆತಿಸ್ ಸಾಗರದ ಆಕ್ರಮಣಕ್ಕೊಳಗಾಗಿರಬೇಕು. ಆಕ್ರಮಣಾವಧಿ ಮಾತ್ರ ಅತ್ಯಲ್ಪ. ಆದರೆ ಉಮೇರಿಯಾ ಸ್ತರಗಳು ಗೊಂಡವಾನಾ ಶಿಲಾನಿಕ್ಷೇಪದ ಪ್ರಾರಂಭಕಾಲದ ಪರಿಮಿತಿಯನ್ನು ನಿರ್ಣಯಿಸಲು ಬಲು ಸಹಾಯವಾಗಿವೆ. ಈ ಕಾರಣದಿಂದ ಅವುಗಳ ಪ್ರಾಮುಖ್ಯ ಇಮ್ಮಡಿಸಿದೆ. ಉಮೇರಿಯಾ ಸ್ತರಗಳು, ಗಿರಿಧಿಯ ಕಿರ್‌ಹಾರ್‌ಬಾರಿ ಶಿಲಾಪದರಗಳು, ಸಾಲ್ಟ್‌ರೇಂಜಿನ ಯೂರಿಡೆಸ್ಮ ಮತ್ತು ಕಾನ್ಯುಲೇರಿಯಾ ಪದರ ಮತ್ತು ಕಾಶ್ಮೀರದ ಗಂಗಮಾಪ್ಟರಿಸ್ ಶಿಲಾಪದರ ಏಕಕಾಲೀನವಾದವುಗಳೆಂದು ಪರಿಗಣಿಸಲ್ಪಟ್ಟಿವೆ. ಉಮೇರಿಯಾ ಸ್ತರಗಳಲ್ಲಿನ ಕೆಲವು ಜೀವಾವಶೇಷಗಳನ್ನು ಇಲ್ಲಿ ಕೊಟ್ಟಿದೆ: ಬ್ರೇಕಿಯೋಪೊಡ – ಪ್ರೊಡಕ್ಟಸ್ ಉಮೇರಿಯನ್ಸಿಸ್ (ಹೇರಳವಾಗಿವೆ); ಪ್ರೊ. ಉವಾಯೆನ್ಸಿಸ್, ಸ್ಪಿರಿಫೆರನರ್ಸರೆನ್ಸಿಸ್, ರಿಟಿಕ್ಯುಲೇರಿಯ ಬರ್ಕ್ಕಾರೆನ್ಸಿಸ್; ಅಥಿಸ್ ಪ್ರೊಟಿಯ. ಶಂಖಗಳು – ಪ್ಲೂರೊಟೋಮೇರಿಯ ಉಮೇರಿಯನ್ಸಿಸ್. ಇವಲ್ಲದೆ ಕೆಲವು ಮೀನುಗಳ ಮತ್ತು ಕ್ರೈನಾಯಿಡ್ ಪ್ರಾಣಿಗಳ ಜೀವಾವಶೇಷಗಳೂ ಇವೆ. (ಡಿ.ಆರ್.)

**ಉಮ್ಮತ್ತೂರು:** ಚಾಮರಾಜನಗರ ಜಿಲ್ಲೆಯ ಅದೇ ತಾಲ್ಲೂಕಿನಲ್ಲಿ ಯಳಂದೂರಿನಿಂದ 14ಕಿಮೀ ದೂರದಲ್ಲಿರುವ ಗ್ರಾಮ. ಹಿಂದೆ ಇದು ಉಮ್ಮತ್ತೂರು ಪಾಳೆಯಗಾರರ ರಾಜಧಾನಿಯಾಗಿತ್ತು.

11ನೆಯ ಶತಮಾನದಲ್ಲಿಯೇ ಈ ಊರು ಇದ್ದುದಕ್ಕೆ ಇಲ್ಲಿರುವ ನಿಷಧಿಶಾಸನಗಳು ಸಾಕ್ಷಿ. ಆಗ ಇಲ್ಲಿ ಜೈನರ ವಸತಿ ಹೆಚ್ಚಾಗಿದ್ದಂತೆ ತೋರುತ್ತದೆ. ಇಲ್ಲಿರುವ ವರ್ಧಮಾನ ಬಸದಿ 13ನೆಯ ಶತಮಾನಕ್ಕೆ ಸೇರಿದ ಸರಳವಾದ ದ್ರಾವಿಡ ಶೈಲಿಯ ಕಟ್ಟಡ. 15–16ನೆಯ ಶತಮಾನಗಳಲ್ಲಿ ಈ ಪ್ರಾಂತ್ಯವನ್ನಾಳಿದ ಉಮ್ಮತ್ತೂರು ಅರಸರು ಇಲ್ಲಿ ಒಂದು ಕೋಟೆಯನ್ನು ಕಟ್ಟಿದ್ದರು. ಅದರ ಅವಶೇಷಗಳನ್ನು ಈಗಲೂ ಅಲ್ಲಲ್ಲಿ ಕಾಣಬಹುದು. ಊರಿನ ನೈರುತ್ಯಕ್ಕೆ ಆ ಅರಸರ ಅರಮನೆ ಇದ್ದುದು ನಾಮಾವಶೇಷವಾಗಿದೆ. ಅರಮನೆಯ ಹೊಲ ಎಂದು ಒಂದು ಹೊಲವನ್ನು ಸ್ಥಳೀಕರು ಗುರುತಿಸುತ್ತಾರೆ.

ಉಮ್ಮತ್ತೂರರಸರ ಕಾಲದಲ್ಲಿ ಈ ಊರಿನಲ್ಲಿ ಹಲವು ದೇವಾಲಯಗಳು ನಿರ್ಮಿತವಾದುವು. ಅವುಗಳಲ್ಲಿ ರಂಗನಾಥ ದೇವಾಲಯ ಮತ್ತು ಭುಜಂಗೇಶ್ವರ ದೇವಾಲಯಗಳು ದ್ರಾವಿಡ ಶೈಲಿಯಲ್ಲಿ ಕಟ್ಟಿರುವ ದೊಡ್ಡ ದೇವಾಲಯಗಳು. ಈ ದೇವಾಲಯಗಳ ಮುಂದೆ ಉನ್ನತವಾದ ಮತ್ತು ಸ್ಥೂಲವಾದ ಗರುಡಗಂಬಗಳಿವೆ. ರಂಗನಾಥಸ್ವಾಮಿ ದೇವಾಲಯದ ಮುಂದಿನ ಗರುಡಗಂಬದ ಬುಡದ ನಾಲ್ಕು ಮುಖಗಳಲ್ಲಿಯೂ ಕ್ರಮವಾಗಿ ಭಕ್ತವಿಗ್ರಹ ಹನುಮಾನ್, ಗರುಡ ಮತ್ತು ಪರವಾಸುದೇವರ ಮೂರ್ತಿಗಳಿವೆ. ಭಕ್ತವಿಗ್ರಹ, ಉಮ್ಮತ್ತೂರ ರಸನೊಬ್ಬನದಿರಬಹುದು. ಭುಜಂಗೇಶ್ವರ ದೇವಾಲಯದಲ್ಲಿಯೂ ಇಂಥದೇ ಒಂದು ಭಕ್ತವಿಗ್ರಹವನ್ನು ನೋಡಬಹುದು. ಈ ದೇವಾಲಯದಲ್ಲಿರುವ ಪಂಚಲಿಂಗಗಳಲ್ಲೊಂದರ ಮೇಲೆ ಜಟೆಯಿದ್ದು ಅದರ ಮೇಲೆ ಚತುರ್ಭುಜಳಾದ ಗಂಗೆಯ ಮೂರ್ತಿ ಇದೆ. ಇದು ಒಂದು ಅಪರೂಪ ಕೃತಿ. ಈ ದೇವಾಲಯದ ಮುಂದಿನ ಗರುಡಗಂಬದ ಚೌಕನಾದ ಬುಡದ ಮೇಲು ಮೂಲೆಯೊಂದರಲ್ಲಿ ತೆರೆದ ಬಾಯಿ ಕೋರೆಹಲ್ಲುಗಳು ಉಬ್ಬಿದ ಕಣ್ಣು ಕೆದರಿದ ತಲೆಯುಳ್ಳ ಸ್ಥೂಲಕಾಯದ ಒಂದು ಮೂರ್ತಿ ಇದೆ. ಇದನ್ನು ಬೇತಾಳನೆಂದೂ ಭುಜಂಗೇಶ್ವರ ದೇವಾಲಯವನ್ನು ಕಟ್ಟಿದ ಅನಂತರ ಆ ಊರ ಅರಸನಿಗೆ ಅದರಿಂದ ಬಿಡುಗಡೆಯಾಯಿತೆಂದೂ ಅದರಿಂದ ಆತ ಆ ಮೂರ್ತಿಯನ್ನು ಅಲ್ಲಿ ಕಂಡರಿಸಿದನೆಂದೂ ಹೇಳಿಕೆ ಇದೆ. ಈ ಎರಡು ದೇವಾಲಯಗಳಲ್ಲದೆ ಸಪ್ತಮಾತೃಕಾ, ವೀರಭದ್ರ ದೇವಾಲಯಗಳೂ ಇಲ್ಲಿವೆ. ಊರ್ಪರಿಗೆ ಸಿಂಹಾಸನ ಮಠವೆಂಬ ಒಂದು ಮಠವೂ ಇಲ್ಲಿದ್ದುದಾಗಿ ತಿಳಿದುಬರುತ್ತದೆ. (ಎಂ.ಎಚ್.)

**ಉಮ್ಮತ್ತೂರು ಪಾಳೆಯಗಾರರು:** 15ನೆಯ ಶತಮಾನದ ಅಂತ್ಯ ಮತ್ತು 16ನೆಯ ಶತಮಾನದ ಆದಿಭಾಗಗಳಲ್ಲಿ ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮತ್ತು ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಆಳುತ್ತಿದ್ದ ಪಾಳೆಯಗಾರರು. ಚಾಮರಾಜನಗರ ತಾಲ್ಲೂಕಿನ ನಂಜನಗೂಡು–ಯಳಂದೂರು ರಸ್ತೆಯಲ್ಲಿ ಈಗ ಒಂದು ಚಿಕ್ಕ ಗ್ರಾಮವಾಗಿರುವ ಉಮ್ಮತ್ತೂರು ಇವರ ರಾಜಧಾನಿ. ಈ ವಂಶದ ಕೆಲವರು ಬೆಟ್ಟದ ಕೋಟೆ ಮತ್ತು ತೆರಕಣಾಂಬಿಯಲ್ಲಿ ಸಹ ಆಳುತ್ತಿದ್ದಂತೆ ತೋರುತ್ತದೆ.

ಮೂಲಾಧಾರಗಳು ಬಹು ವಿರಳವಾಗಿರುವದರಿಂದ ಈ ವಂಶದ ಇತಿಹಾಸ ಅಸ್ಪಷ್ಟ. ಶಾಸನಗಳ ಪ್ರಕಾರ ಈ ವಂಶದ ಆದ್ಯ ಹನುಮಪ್ಪ ಒಡೆಯ. ಇವನ ಮಗ ಇಮ್ಮಡಿರಾಯ ಒಡೆಯ. ಇವನಿಗೆ ಸೋಮರಾಯ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವನ ಹಿರಿಯ ಮಗ ದೇವಣ್ಣ ಒಡೆಯ. ಈತ ಚೇರ, ಚೋಳ, ಪಾಂಡ್ಯ ಮೂವರುರಾಯರ ಗಂಡ, ನೀಲಗಿರಿ ಸಾಧಾರ ಒಡೆಯ, ನೀಲಗಿರಿ ನಾಡಾಳ್ವ ಇತ್ಯಾದಿ ಬಿರುದುಗಳನ್ನು ಧರಿಸಿ ಮೂಡಣಕೋಟೆಯಲ್ಲಿ (ಪ್ರಾಯಶಃ ಗುಂಡ್ಲುಪೇಟೆ ಬಳಿಯ ಗೋಪಾಲಸ್ವಾಮಿಬೆಟ್ಟ) ಆಳ್ವಿಕೆ ನಡೆಸುತ್ತಿದ್ದ (ಸು.1488–1504). ಇದೇ ಬಿರುದುಗಳಿರುವ ಗೋವಣ್ಣ ಒಡೆಯ (1504) ದೇವಣ್ಣನ ಮಗ. ದೇವಣ್ಣನ ಇನ್ನೊಬ್ಬ ಮಗ ಚಿಕ್ಕರಾಯ (ಮಲ್ಲರಾಜ) ಪೆನುಗೊಂಡೆ ಚಕ್ರೇಶ್ವರ ಎಂಬ ಬಿರುದಿನೊಡನೆ ತೆರಕಣಾಂಬಿಯಿಂದ ಆಳುತ್ತಿದ್ದ (ಸು.1505–12). ಇವನ ರಾಜ್ಯ ಕೊಯಮತ್ತೂರು ಜಿಲ್ಲೆಯ ಅವನಾಸಿ ತಾಲ್ಲೂಕಿನ ಭಾಗಗಳನ್ನೂ ಒಳಗೊಂಡಂತೆ ತೋರುತ್ತದೆ. ಇವನ ಚಿಕ್ಕಪ್ಪ, ಅಂದರೆ ದೇವಣ್ಣ ಒಡೆಯನ ತಮ್ಮ ನಂಜರಾಜ ಉಮ್ಮತ್ತೂರಿನಲ್ಲಿ ಆಳ್ವಿಕೆ ನಡೆಸಿದ (ಸು.1482–1504). ಇವನಿಗೆ ಫಣಾಂಕ ಚಕ್ರೇಶ್ವರ, ಪೆಸಾಳಿ ಹನುಮ ಇತ್ಯಾದಿ ಬಿರುದುಗಳಿದ್ದವು. ಇವನ ರಾಜ್ಯ ಮೈಸೂರು ಜಿಲ್ಲೆಯ ದಕ್ಷಿಣ ಭಾಗವಲ್ಲದೆ ಕೊಯಮತ್ತೂರು ಜಿಲ್ಲೆಯ ಭಾಗಗಳಿಗೂ ಹಬ್ಬಿತ್ತು. ವಿಜಯನಗರದ ಕೃಷ್ಣದೇವರಾಯ ಪಟ್ಟಕ್ಕೆ ಬಂದ ತರುಣದಲ್ಲಿ (1509–12) ಉಮ್ಮತ್ತೂರು ಪಾಳೆಯಗಾರನನ್ನು ನಿಗ್ರಹಿಸಿ ತನ್ನ ಪ್ರತಿನಿಧಿಯನ್ನು ಇಲ್ಲಿಯ ಆಡಳಿತಕ್ಕೆ ನೇಮಿಸಿದ. ಈತ ಸೋಲಿಸಿದ ರಾಜನ ಹೆಸರು ಗಂಗರಾಜ ಎಂದು ಸಾಹಿತ್ಯಿಕ ಮೂಲಗಳಲ್ಲಿ ದೊರೆತರೂ ಈತ ನಂಜರಾಜ ಇರಬಹುದೆಂದು ಊಹಿಸಲಾಗಿದೆ. ಆದರೆ ಈ ನಂಜರಾಜ

ಉಮ್ಮತ್ತೂರನ್ನು ಕಳೆದುಕೊಂಡರೂ ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಸು.1519ರವರೆಗೂ ಉಳಿಸಿಕೊಂಡಿರಬಹುದೆಂದು ಅಲ್ಲಿ ದೊರಕಿರುವ ಕೆಲವು ಶಾಸನಗಳಿಂದ ಊಹಿಸಬಹುದಾಗಿದೆ. *

ಉಮ್ಮತ್ತೂರಿನ ನಾಯಕರಿಗೂ ಕಳಲೆ ಒಡೆಯರಿಗೂ ಹಗೆತನವಿತ್ತು. ಒಮ್ಮೆ ಉಮ್ಮತ್ತೂರಿನ ನಾಯಕನೊಬ್ಬ ಕಳಲೆ ಮನೆತನದ ಎಲ್ಲರನ್ನೂ ವಂಚನೆಯಿಂದ ಕೊಲ್ಲಿಸಿದನೆಂದೂ ಆಗ ಒಬ್ಬ ಬಾಲಕ ಮಾತ್ರ ತಪ್ಪಿಸಿಕೊಂಡು ಅನಂತರ ತನ್ನ ಮನೆತನದ ಆಳ್ವಿಕೆಯನ್ನು ಪುನಃ ಸ್ಥಾಪಿಸಿದನೆಂದೂ ತಿಳಿದುಬರುತ್ತದೆ. 1612ರಲ್ಲಿ ವಿಜಯನಗರದ ವೆಂಕಟಪತಿರಾಯ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿ ಶ್ರೀರಂಗಪಟ್ಟಣ ಮತ್ತು ಉಮ್ಮತ್ತೂರುಗಳನ್ನು ರಾಜ ಒಡೆಯರಿಗೆ ನೀಡಿದುದಾಗಿ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ದೊರೆತಿರುವ ಶಾಸನವೊಂದರಿಂದ ತಿಳಿದುಬರುತ್ತದೆ. 1613ರಲ್ಲಿ ರಾಜ ಒಡೆಯ ಉಮ್ಮತ್ತೂರಿನ ಮೇಲೆ ದಂಡೆತ್ತಿ ಹೋಗಿ ಅಲ್ಲಿನ ಪಾಳೆಯಗಾರರನ್ನು ಸೋಲಿಸಿ ಅವನ ರಾಜ್ಯವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡ. ಈ ಅನಂತರ ಕಾಲದ ಉಮ್ಮತ್ತೂರಿನ ಪಾಳೆಯಗಾರರು ಯಾರು, ಇವರಿಗೂ ಮೊದಲಿನ ನಂಜರಾಜ ಇತ್ಯಾದಿ ಪಾಳೆಯಗಾರರಿಗೂ ಇದ್ದ ಸಂಬಂಧವೇನೆಂದು ತಿಳಿಯುವುದಿಲ್ಲ. (ಜಿ.ಆರ್.ಆರ್.)

**ಉಯಿಲು:** ಸ್ವತ್ತಿನ ಮಾಲೀಕನ ಮರಣ ಸಂಭವಿಸಿದಾಗ ಆತನ ಆಸ್ತಿಗಳ ವಿಲೆಯ ಬಗ್ಗೆ ಆತ ಮಾಡಿದ ಕಾಯಿದೆಬದ್ಧ ವಹಿವಾಟು (ವಿಲ್). ಮೃತ್ಯು ಪತ್ರ ಎಂಬುದು ಇದರ ಇನ್ನೊಂದು ಹೆಸರು. ಒಬ್ಬಾತ ತನ್ನ ಮರಣಾನಂತರ ತನ್ನ ಸ್ವತ್ತು ಹೇಗೆ ವಿಲೆ ಆಗಬೇಕೆಂಬುದನ್ನು ವ್ಯಕ್ತಪಡಿಸುವ ಕೊಟ್ಟಕೊನೆಯ ಬಯಕೆ–ಎಂಬುದಾಗಿ ಭಾರತೀಯ ಉತ್ತರಾಧಿಕಾರ ಕಾಯಿದೆಯಲ್ಲಿ ಹೇಳಲಾಗಿದೆ. ಇದು ಇಂಗ್ಲೀಷಿನ ವಿಲ್ ಎಂಬ ಶಬ್ದದಿಂದ ಬಂದದ್ದು. ವಿಲ್ ಎಂಬ ಪದಕ್ಕೆ ಸಮಾನವಾದ ಶಬ್ದ ಸಂಸ್ಕೃತದಲ್ಲಾಗಲಿ, ಇತರ ಯಾವ ಭಾರತೀಯ ಭಾಷೆಯಲ್ಲೇ ಆಗಲಿ ಹಿಂದೆ ಇರಲಿಲ್ಲ. ಭಾರತದ ಪ್ರಾಚೀನ ನ್ಯಾಯಶಾಸ್ತ್ರದಲ್ಲಿ ಉಯಿಲಿನ ಕಲ್ಪನೆಯೇ ಇರದಿದ್ದದ್ದೇ ಇದಕ್ಕೆ ಮುಖ್ಯ ಕಾರಣ. ಶುದ್ಧ ಹಿಂದೂ ನ್ಯಾಯಶಾಸ್ತ್ರಕ್ಕೆ ಉಯಿಲಿನ ಕಲ್ಪನೆ ತೀರ ಹೊರಗು. ಉಯಿಲಿಗೆ ಸಂಬಂಧಪಟ್ಟ ನ್ಯಾಯವೇನಿದ್ದರೂ ರೋಮನ್ ನ್ಯಾಯದಿಂದ ಹುಟ್ಟಿದ್ದು. ಆದರೂ 1867ರಷ್ಟು ಹಿಂದೆಯೇ ಬೀರ್ ಪ್ರತಾಪ್ ವಿರುದ್ಧ ರಾಜೇಂದ್ರ ಪರ್ತಾಬ್ (12 ಮೂರ್ಸ್ ಇಂಡಿಯನ್ ಅಪೀಲ್ಸ್ 1–37–38) ಮೊಕದ್ದಮೆಯಲ್ಲಿ ಪ್ರಿವಿ ಕೌನ್ಸಿಲ್ ತನ್ನ ತೀರ್ಪುಕೊಡುತ್ತಾ, ಪ್ರಾಚೀನ ಹಿಂದೂ ನ್ಯಾಯಶಾಸ್ತ್ರದಲ್ಲಿ ಉಯಿಲುಗಳ ಉಲ್ಲೇಖ ಇಲ್ಲ ಎಂಬ ಕಾರಣದಿಂದ ಹಿಂದುಗಳು ತಮ್ಮ ಆಸ್ತಿಯನ್ನು ಉಯಿಲು ಮೂಲಕ ವಿಲೆ ಮಾಡಲಾರರು ಎಂಬುದನ್ನು ಸಾಧಿಸುವ ಕಾಲ ಎಂದೋ ಮುಗಿದುಹೋಗಿದೆಯೆಂದು ಸುಸ್ಪಷ್ಟವಾಗಿ, ನಿರ್ವಿವಾದವಾಗಿ ಘೋಷಿಸಿದೆ. ಉಯಿಲುಗಳಿಗೆ ಸಂಬಂಧಿಸಿದ ನ್ಯಾಯ ಇಂದು ಭಾರತದ ನ್ಯಾಯ ಪದ್ಧತಿಯಲ್ಲಿ ಸ್ಥಿರವಾದ ಸ್ಥಾನ ಪಡೆದಿದೆ. ಉಯಿಲಿನ ಮುಖ್ಯ ಲಕ್ಷಣಗಳು ಮೂರು: 1 ಇದರಲ್ಲಿ ಸ್ವತ್ತಿನ ವಿಲೆಯ ಉಲ್ಲೇಖವಿರುತ್ತದೆ. 2 ಈ ವಿಲೆ ಆಗತಕ್ಕದ್ದು ಉಯಿಲು ಬರೆದಾತನ ಮರಣಾನಂತರ. 3 ಇದನ್ನು ಮಾಡಿದಾತ ತನಗಿಷ್ಟ ಬಂದಂತೆ ಇದನ್ನು ರದ್ದು ಪಡಿಸಲು, ಬದಲಾಯಿಸಲು ಅಥವಾ ಮೊಟಕು ಮಾಡಲು ಅವಕಾಶ ಇರುತ್ತದೆ. ಈ ಮೇಲಿನ ಮೂರು ಲಕ್ಷಣಗಳಲ್ಲಿ ಕೊನೆಯ ಎರಡು ಲಕ್ಷಣಗಳು ಉಯಿಲುಗಳಿಗೇ ವಿಶಿಷ್ಟವಾದಂಥವು. ವಿಕ್ರಯ, ಭೋಗ್ಯ, ಗುತ್ತಿಗೆ ಮುಂತಾದ ರೀತಿಯಲ್ಲಿ ನಡೆಯುವ ಸ್ವತ್ತಿನ ವಿಲೆಗೂ ಉಯಿಲು ಮೂಲಕ ನಡೆಯುವ ವಿಲೆಗೂ ಇದೇ ಮುಖ್ಯ ವ್ಯತ್ಯಾಸ.

ಒಬ್ಬಾತ ತನ್ನ ಹೆಂಡತಿಗೆ ತನ್ನ ಮರಣಾನಂತರ ದತ್ತು ತೆಗೆದುಕೊಳ್ಳುವ ಅಧಿಕಾರ ಕೊಟ್ಟು ಬರೆದಿಡುವ ಪತ್ರವನ್ನು ಆತ ಉಯಿಲು ಎಂದು ಕರೆದರೂ ಅದು ಉಯಿಲಲ್ಲ. ಏಕೆಂದರೆ ಅದರಲ್ಲಿ ಸ್ವತ್ತಿನ ವಿಲೆಗೆ ಸಂಬಂಧಿಸಿದ ಅಂಶವಿಲ್ಲ. ಹಾಗೆಯೇ, ಪತ್ರ ಬರೆದ ಕೂಡಲೇ ಒಂದು ಸ್ವತ್ತು ಇನ್ನೊಬ್ಬನಿಗೆ ಹಸ್ತಾಂತರವಾಗಿ ಆತನಿಗೆ ಅದರ ಮೇಲೆ ಅಧಿಕಾರ ಪ್ರಾಪ್ತವಾದರೆ ಅಂಥ ಪತ್ರವೂ ಉಯಿಲಲ್ಲ. ಏಕೆಂದರೆ, ಅಂಥ ದಸ್ತವೇಜನ್ನು ಬರೆದಾತನ ಜೀವಿತ ಕಾಲದಲ್ಲೇ ಸ್ವತ್ತು ಹಸ್ತಾಂತರಗೊಳ್ಳುತ್ತದೆ. ಕೊನೆಯದಾಗಿ, ಯಾವ ದಸ್ತಾವೇಜನ್ನು ರದ್ದು ಪಡಿಸಲಾಗದ ರೀತಿಯಲ್ಲಿ ರಚಿಸಲಾಗುವುದೋ ಅದು ಉಯಿಲು ಎನ್ನಿಸಿಕೊಳ್ಳಲಾರದು, ಏಕೆಂದರೆ, ಬರೆದಾತನಿಗೆ ಅದನ್ನು ರದ್ದುಪಡಿಸುವ ಅಧಿಕಾರವಿಲ್ಲದಿದ್ದರೆ ಅಂಥ ದಸ್ತಾವೇಜು ಉಯಿಲಾಗಲಾರದು.

ಉಯಿಲನ್ನು ಮೊಟಕು ಮಾಡುವ, ವಿವರಿಸುವ, ಸ್ಪಷ್ಟೀಕರಿಸುವ ಇಲ್ಲವೇ ಮತ್ತಾವ ರೀತಿಯಲ್ಲಾದರೂ ಮೂಲದಲ್ಲಿ ಬದಲಾವಣೆ ಮಾಡುವ ಪತ್ರವನ್ನು ಉಪಮೃತ್ಯುಪತ್ರ, ಉಪಉಯಿಲು ಅಥವಾ ಅನುಬಂಧ (ಕಾಡಿಸಿಲ್) ಎಂದು ಕರೆಯುತ್ತಾರೆ. ಇದಕ್ಕೂ ಉಯಿಲಿಗೆ ಇರಬೇಕಾದ ಎಲ್ಲ ಲಕ್ಷಣಗಳೂ ಇರಲೇಬೇಕು. ಆದರೆ ಇದು ಉಯಿಲು ಎನಿಸಿಕೊಳ್ಳಲಾರದು. ಮೂಲ ಉಯಿಲು ಇದ್ದಾಗ ಮಾತ್ರ ಇದು ಹುಟ್ಟಲು ಅವಕಾಶವುಂಟು.

**ಉಯಿಲುಗಳ ಪ್ರಭೇದಗಳು:** ಭಾರತೀಯ ಉತ್ತರಾಧಿಕಾರ ಕಾಯಿದೆಯ ಪ್ರಕಾರ ವಿಶೇಷ ಸೌಲಭ್ಯಯುಕ್ತ ಹಾಗೂ ಸಾಮಾನ್ಯ ಉಯಿಲು ಎಂಬ ಎರಡು ಬಗೆಯ ಉಯಿಲುಗಳಿವೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಸೈನಿಕರು, ವೈಮಾನಿಕರು ಅಥವಾ ನಾವಿಕರು ಮಾಡಬಹುದಾದ ಉಯಿಲು ವಿಶೇಷ ಸೌಲಭ್ಯಯುಕ್ತ ಉಯಿಲು, ಯುದ್ಧರಂಗಕ್ಕೆ ಕಳಿಸಿದ ಅಥವಾ ಯುದ್ಧದಲ್ಲಿ ವಾಸ್ತವವಾಗಿ ಹೋರಾಟದಲ್ಲಿ ತೊಡಗಿದ ಹದಿನೆಂಟು ವರ್ಷ ತುಂಬಿದ ಸೈನಿಕರಿಗೂ ನಾವಿಕರಿಗೂ ವೈಮಾನಿಕರಿಗೂ ಇಂಥ ಉಯಿಲುಗಳನ್ನು ಮಾಡುವ ವಿಶೇಷ ಅಧಿಕಾರ ಕೊಡಲಾಗಿದೆ. ಇಂಥ ಉಯಿಲು ಬರವಣಿಗೆಯಲ್ಲೇ ಇರಬೇಕಾದ್ದಿಲ್ಲ; ಬಾಯಿಮಾತಿನಲ್ಲಿದ್ದರೂ ಇದು ಕಾಯಿದೆಬದ್ಧ. ಈ ಉಯಿಲುಗಳನ್ನು ಮಾಡುವುದರಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಭಾರತೀಯ ಉತ್ತರಾಧಿಕಾರ ಕಾಯಿದೆಯ 66ನೆಯ ಕಲಮಿನಲ್ಲಿ ನಮೂದಿಸಲಾಗಿದೆ. ಈ ನಿಯಮಗಳು ಯಾವುವೆಂದರೆ: 1. ಸ್ವತ್ತು ವಿಲೆ ಮಾಡಬೇಕೆಂದಿರುವಾತ ತನ್ನ ಹಸ್ತದಿಂದ ಉಯಿಲನ್ನು ಬರೆದದ್ದಾದರೆ, ಅದಕ್ಕೆ ಆತ ತನ್ನ ಸಹಿ ಹಾಕಲೇ ಬೇಕಾಗಿಲ್ಲ. ಅದಕ್ಕೆ ಸಾಕ್ಷಿಗಳೂ ಬೇಕಿಲ್ಲ. 2. ಇದನ್ನು ಇತರರು ಪೂರ್ಣವಾಗಿ ಅಥವಾ ಆಂಶಿಕವಾಗಿ ಬರೆದದ್ದಾದರೆ, ಸ್ವತ್ತಿನ ವಿಲೆದಾರ ಸಹಿಮಾಡಬೇಕಾದ್ದು ಅಗತ್ಯ. ಸಾಕ್ಷಿಗಳು ಇರಲೇಬೇಕೆಂದಿಲ್ಲ. 3. ಒಂದು ವೇಳೆ ಇಂಥ ಉಯಿಲನ್ನು ಪೂರ್ಣವಾಗಿ ಅಥವಾ ಆಂಶಿಕವಾಗಿ ಬೇರೆಯವರು ಯಾರಾದರೂ ಬರೆದಿದ್ದು, ವಿಲೆದಾರ ಇದಕ್ಕೆ ಸಹಿಮಾಡಿಲ್ಲದಿದ್ದರೂ ಇದು ಆತನೇ ಹೇಳಿ ಬರೆಸಿದ್ದೆಂದು ರುಜುವಾತು ಮಾಡಬೇಕು, ಇಲ್ಲವೇ ಇದು ತನ್ನದೆಂದು ಆತ ಒಪ್ಪಿಕೊಳ್ಳಬೇಕು. 4. ಹೀಗೆ ದಸ್ತಾವೇಜು ವಿಲೆದಾರನ ಇಚ್ಛೆಗೆ ಅನುಗುಣವಾಗಿ ಪೂರ್ಣಗೊಳ್ಳದೆ ಇದ್ದ ಪಕ್ಷದಲ್ಲಿ, ಇದು ಅಪೂರ್ಣವೆಂಬ ಕಾರಣದಿಂದಲೇ ನ್ಯಾಯಬಾಹಿರವೆಂದು ಪರಿಗಣಿಸತಕ್ಕದ್ದಲ್ಲ. ಆದರೆ ಹಾಗೆ ಇದು ಅಪೂರ್ಣವಾಗಿ ಉಳಿಯಲು ಬೇರೆ ಯಾವುದಾದರೂ ಕಾರಣಗಳಿದ್ದುವೆಂದು ರುಜುವಾತಾದರೆ ಸಾಕು. 5. ಯಾವನೇ ಸೈನಿಕ, ವೈಮಾನಿಕ ಅಥವಾ ನಾವಿಕ ಉಯಿಲು ಬರೆಯಲೆಂದು ಬರವಣಿಗೆಯ ಮೂಲಕ ಸೂಚನೆಗಳನ್ನು ಕೊಟ್ಟಿದ್ದು, ಆ ರೀತಿ ಉಯಿಲು ರಚನೆಯಾಗುವ ಮೊದಲೇ ಆತ ಸತ್ತರೆ, ಆಗ ಆತ ಬರೆದ ಸೂಚನೆಗಳೇ ಉಯಿಲು ಎಂದು ಭಾವಿಸತಕ್ಕದ್ದು. 6. ಒಂದು ವೇಳೆ ಆತ ಉಯಿಲು ತಯಾರಿಸಲು ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ಬಾಯಿಮಾತಿನ ಸೂಚನೆ ಕೊಟ್ಟಿದ್ದು ಆ ಸೂಚನೆಗಳನ್ನು ಆತನ ಎದುರಿನಲ್ಲೇ ಬರೆದು ಓದಿ ಹೇಳಿದ್ದ ಪಕ್ಷದಲ್ಲಿ ಆ ಸೂಚನೆಗಳೇ ಆತನ ಉಯಿಲು ಎಂದು ಭಾವಿಸತಕ್ಕದ್ದು. 7. ಏಕಕಾಲಕ್ಕೆ ಹಾಜರಿದ್ದ ಕನಿಷ್ಠ ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ಬಾಯಿಮಾತಿನಲ್ಲಿ ಆತ ತನ್ನ ಇಚ್ಛೆ ವ್ಯಕ್ತಪಡಿಸುವುದರ ಮೂಲಕ ಉಯಿಲು ಮಾಡುವುದು ಸಾಧ್ಯ. 8. ಬಾಯಿಮಾತಿನಲ್ಲಿ ಉಯಿಲುಮಾಡಿದ ಒಂದು ತಿಂಗಳ ಅನಂತರ ಉಯಿಲು ಮಾಡಿದಾತನಿಗೆ ವಿಶೇಷ ಸೌಲಭ್ಯಯುಕ್ತ ಉಯಿಲುಮಾಡುವ ಅಧಿಕಾರ ತಪ್ಪಿಹೋಗಿ, ಆತ ಇನ್ನೂ ಬದುಕಿದ್ದರೆ ಆಗ ಅಂಥ ಉಯಿಲು ಅನೂರ್ಜಿತವೆನಿಸುತ್ತದೆ.

ಹಿಂದೆ ವಿವರಿಸಲಾದ ಸಂದರ್ಭದಲ್ಲಿನ ಸೈನಿಕ, ವೈಮಾನಿಕ, ನಾವಿಕರ ಹೊರತು ಇತರ ಯಾರೇ ಆಗಲಿ ಮಾಡುವ ಉಯಿಲುಗಳು ಸಾಮಾನ್ಯ ಉಯಿಲುಗಳು–ಇವುಗಳ ರಚನೆಯ ನಿಯಮಗಳನ್ನು ಭಾರತೀಯ ಉತ್ತರಾಧಿಕಾರ ಕಾಯಿದೆಯ 63ನೆಯ ಕಲಮಿನಲ್ಲಿ ಈ ರೀತಿ ನಮೂದಿಸಲಾಗಿದೆ: 1. ಸ್ವತ್ತು ವಿಲೇವಾರಿ ಮಾಡುವಾತ ಉಯಿಲಿಗೆ ತನ್ನ ಸಹಿ ಅಥವಾ ಗುರುತನ್ನು ತಾನೇ ಆಗಲಿ ತನ್ನ ಸಮಕ್ಷಮದಲ್ಲಿ ತನ್ನ ನಿರ್ದೇಶನದ ಪ್ರಕಾರ ಇನ್ನೊಬ್ಬನಾಗಲಿ ಹಾಕಿರಬೇಕು. 2. ಆತ ಮಾಡಿದ ಅಥವಾ ಆತನ ನಿರ್ದೇಶದ ಪ್ರಕಾರ ಇನ್ನೊಬ್ಬರು ಮಾಡಿದ ಸಹಿಯ ಉದ್ದೇಶ ಸ್ಪಷ್ಟವಾಗಿರಬೇಕು. ಉಯಿಲನ್ನು ಆಚರಣೆಯಲ್ಲಿ ತರುವ ಉದ್ದೇಶವನ್ನು ಅದು ಸ್ಪಷ್ಟವಾಗಿ ವ್ಯಕ್ತಪಡಿಸುವಂತಿರಬೇಕು. 3. ಸ್ವತ್ತಿನ ವಿಲೆದಾರನೋ ಆತನ ಪರವಾಗಿ ಇನ್ನೊಬ್ಬನೋ ಆ ಉಯಿಲಿಗೆ ಸಹಿ ಅಥವಾ ಗುರುತು ಹಾಕಿದ್ದನ್ನು ಕಣ್ಣಾರೆ ಕಂಡ ಕನಿಷ್ಠ ಇಬ್ಬರು ಸಾಕ್ಷ್ಯ ಹಾಕಿರತಕ್ಕದ್ದು. ಒಂದು ವೇಳೆ ಆತ ತಮ್ಮ ಸಮಕ್ಷವೇ ಸಹಿ ಹಾಕಿರದಿದ್ದರೂ ತಾನೇ ಹಾಕಿದುದಾಗಿ ಆತ ತಮ್ಮೆದುರಿಗೆ ಒಪ್ಪಿಕೊಂಡ ಮೇಲೆ ಇವರು ಸಾಕ್ಷ್ಯ ಹಾಕಿರಬೇಕು. ಈ ಸಾಕ್ಷಿಗಳು ಮಾತ್ರ ಉಯಿಲಿಗೆ ವಿಲೆದಾರನ ಸಮಕ್ಷದಲ್ಲೇ ಸಾಕ್ಷ್ಯ ಹಾಕಿರಬೇಕಾದ್ದು ಅವಶ್ಯ. ಇವರು ಏಕಕಾಲದಲ್ಲಿ ಹಾಜರಿರಬೇಕಾದ್ದಿಲ್ಲ. ಹೀಗೇ ಸಾಕ್ಷ್ಯ ಹಾಕಬೇಕೆಂಬ ಯಾವ ನಿರ್ದಿಷ್ಟ ನಿಯಮವೂ ಇಲ್ಲ.

**ಉಯಿಲುದಾರನ ಅರ್ಹತೆ:** ಅಪ್ರಾಪ್ತವಯಸ್ಕನಲ್ಲದ, ಸ್ವಸ್ಥಚಿತ್ತನಾದ ಯಾವನಾದರೂ ಸ್ವಂತ ಇಚ್ಛೆಯಿಂದ ಯಾವ ಆತಂಕ ನಿರ್ಬಂಧಗಳಿಗೂ ಒಳಗಾಗದೆ ಉಯಿಲು ಮಾಡಬಹುದು. ಆತ ಯಾವ ಮತದವನಾದವನಾದರೂ ಆಗಿರಬಹುದು. ಭಾರತೀಯ ಉತ್ತರಾಧಿಕಾರ ಕಾಯಿದೆ ಹಿಂದೂ, ಮುಸ್ಲಿಂ, ಬೌದ್ಧ, ಸಿಖ್ ಅಥವಾ ಜೈನರಿಗೆ ಅನ್ವಯಿಸದೆ ಇದ್ದರೂ ಆಯಾ ಮತದವರು ತಾವು ವಿಲೆ ಮಾಡಬಹುದಾದಂಥ ಆಸ್ತಿಯನ್ನು ಉಯಿಲು ಮೂಲಕ ವಿಲೆ ಮಾಡಬಯಸಿದರೆ, ಆ ಕಾಯಿದೆಯ ಆರನೆಯ ಪರಿಚ್ಛೇದದಲ್ಲಿನ ಕಲಮುಗಳಿಗೆ ಅನುಗುಣವಾಗಿಯೇ ಉಯಿಲು ಮಾಡಬೇಕಾಗುತ್ತದೆ. ಇದರಲ್ಲಿನ ಕೆಲವು ಕಲಮುಗಳು ಹಿಂದೂಗಳಿಗೆ ಅನ್ವಯಿಸುವುದಿಲ್ಲ. 1956ರ ಹಿಂದೂ ಉತ್ತರಾಧಿಕಾರ ಕಾಯಿದೆ ಹಿಂದುಗಳಿಗೂ ಅನ್ವಯಿಸುತ್ತದೆ.

**ನ್ಯಾಯದ ಅನ್ವಯ:** ಎಂಥ ಸ್ವತ್ತನ್ನು ಉಯಿಲು ಮೂಲಕ ವಿಲೆ ಮಾಡಬಹುದು ಎಂಬುದು ಇನ್ನೊಂದು ಪ್ರಶ್ನೆ. ಹಿಂದೆ ಭಾರತೀಯ ನ್ಯಾಯ ಬಹುಮಟ್ಟಿಗೆ ವ್ಯಕ್ತಿಯ ಮತವನ್ನೇ ಅವಲಂಬಿಸಿತ್ತು. ಹಿಂದೂಗಳಿಗೆ ಹಿಂದೂಧರ್ಮಶಾಸ್ತ್ರದ ಆಧಾರದ ಮೇಲೆ ರೂಪಿತವಾದ ನ್ಯಾಯವೂ ಮುಸ್ಲಿಮರಿಗೆ ಷರಿಯತ್ ನ್ಯಾಯವೂ ಅನ್ವಯವಾಗುತ್ತಿದ್ದುವು. 1956ನೆಯ ಹಿಂದೂ ಉತ್ತರಾಧಿಕಾರ ಕಾಯಿದೆ ಜಾರಿಗೆ ಬರುವ ತನಕ ಹಿಂದೂಗಳಿಗೆ ಸಂಬಂಧಿಸಿದಂತೆ ಈ ಹಕ್ಕು ಬಹು ಕುಂಠಿತವಾಗಿತ್ತು. ತಾನು ಬದುಕಿರುವಾಗ ಯಾವ

ಸ್ವತ್ತನ್ನು ದಾನಮಾಡಲು ಹಿಂದೂವಿಗೆ ಅಧಿಕಾರವಿತ್ತೋ ಅದನ್ನು ಮಾತ್ರ ಆತ ಉಯಿಲು ಮೂಲಕ ವಿಲೆ ಮಾಡಲು ಸಮರ್ಥನಾಗಿದ್ದ. ಆದರೆ 1956ರ ಕಾಯಿದೆ ಜಾರಿಗೆ ಬಂದಮೇಲೆ ಹಿಂದೂವಿನ ಈ ಅಧಿಕಾರ ಬಹಳ ಮಟ್ಟಿಗೆ ವಿಸ್ತಾರವಾಗಿದೆ. ಮಿತಾಕ್ಷರ ನ್ಯಾಯ ಅನ್ವಯಿಸುವ ಪ್ರತಿಯೊಬ್ಬ ಹಿಂದುವೂ ಅವಿಭಕ್ತ ಕುಟುಂಬದಲ್ಲಿರುವ ತನ್ನ ಅವಿಭಕ್ತ ಹಿಸ್ಸೆಯನ್ನು ಉಯಿಲು ಮೂಲಕ ವಿಲೆ ಮಾಡಬಹುದು. ಆದರೆ ತನ್ನ ಹೆಂಡತಿಯ ಹಕ್ಕಿಗಾಗಲಿ ತನ್ನಿಂದ ಜೀವನಾಂಶವನ್ನೋ ರಕ್ಷಣೆಯನ್ನೋ ಪಡೆಯಬಲ್ಲ ಯಾರ ಹಕ್ಕಿಗಾಗಲಿ ಧಕ್ಕೆ ಬಾರದ ರೀತಿಯಲ್ಲಿ ಮಾತ್ರ ಆತ ತನ್ನ ಸ್ವತ್ತು ವಿಲೆ ಮಾಡುವುದು ಸಾಧ್ಯ.

ಈಗ ಜಾರಿಯಲ್ಲಿರುವ ಶಾಸನದ ಪ್ರಕಾರ ಹಿಂದೂಗಳು ತಮ್ಮ ಸ್ವಯಾರ್ಜಿತ ಸ್ವತ್ತನ್ನು ಯಾವತ್ತೂ ಉಯಿಲು ಮೂಲಕ ವಿಲೆ ಮಾಡಬಹುದು. ದಾಯಭಾಗಾ ಹಿಂದೂ ನ್ಯಾಯಪದ್ಧತಿ ಅನ್ವಯಿಸುವ ಹಿಂದೂ ತಂದೆ ತನ್ನ ಎಲ್ಲ ಸ್ವತ್ತನ್ನೂ—ಅದು ಪೂರ್ವಾರ್ಜಿತವಾಗಿರಲಿ ಸ್ವಯಾರ್ಜಿತವಾಗಿರಲಿ—ಉಯಿಲು ಮೂಲಕ ವಿಲೆ ಮಾಡಬಹುದು. ಅಂಥ ಹಿಂದೂ ಕುಟುಂಬದ ಸದಸ್ಯನೂ ಅವಿಭಕ್ತ ಕುಟುಂಬದಲ್ಲಿರುವ ತನ್ನ ಹಿಸ್ಸೆಯನ್ನು ಉಯಿಲು ಮೂಲಕ ವಿಲೇವಾರಿ ಮಾಡಬಹುದು. ಹಿಂದೂ ಸ್ತ್ರೀ ತನ್ನ ಸ್ತ್ರೀಧನವನ್ನು ತನ್ನ ಗಂಡನ ಒಪ್ಪಿಗೆಯಿಂದ ಉಯಿಲು ಮೂಲಕ ವಿಲೆ ಮಾಡಬಹುದು. ಹಿಂದೂ ಉತ್ತರಾಧಿಕಾರ ಕಾಯಿದೆ ಬಂದ ಮೇಲೆ ಆಕೆಯ ಅಧಿಕಾರ ಇನ್ನೂ ಅಧಿಕವಾಗಿದೆ. ಅವಿಭಾಜ್ಯದಾಯದ ಮಾಲೀಕ ಯಾವುದಾದರೂ ವಿಶೇಷವಾದ ರೂಢಿ ಇಲ್ಲವೇ ನಿಷೇಧದ ಷರತ್ತಿಗೆ ಒಳಗಾಗಿಲ್ಲದ ಆಸ್ತಿಯನ್ನು ಉಯಿಲಿನ ಮೂಲಕ ವಿಲೆಮಾಡಬಹುದು. **(ನೋಡಿ– ಅವಿಭಾಜ್ಯದಾಯ)**

ಮುಸ್ಲಿಂ ನ್ಯಾಯಪದ್ಧತಿಯ ಪ್ರಕಾರ ಯಾವುದೇ ಒಬ್ಬ ಮುಸ್ಲಿಂ ಮತಸ್ಥನು/ಳು ತನ್ನ ಉತ್ತರಕ್ರಿಯೆ ಮತ್ತು ಸಾಲಗಳಿಗೆ ಸಂದಾಯವಾಗಿ ಮಿಗತೆ ಉಳಿದ ಸ್ವತ್ತಲ್ಲಿ ಮೂರನೇ ಒಂದು ಭಾಗಕ್ಕೆ (1/3) ಮೀರದಷ್ಟು ಭಾಗವನ್ನು ಮಾತ್ರ ಉಯಿಲು ಮೂಲಕ ವಿಲೆ ಮಾಡಬಹುದು. ಈ ಮಿತಿಯನ್ನು ಉಲ್ಲಂಘಿಸಿದ ಯಾವುದೇ ಉಯಿಲು ವ್ಯಕ್ತಿಯ ಮರಣಾಂತರದಲ್ಲಿ ಉತ್ತರಾಧಿಕಾರಿಗಳು ಸಮ್ಮತಿ ಕೊಡದ ಪಕ್ಷದಲ್ಲಿ ಮಿತಿಯನ್ನು ಉಲ್ಲಂಘಿಸಿದ ಅಂಶಕ್ಕೆ ಸಂಬಂಧಿಸಿದಂತೆ ಅನ್ವಯವಾಗುವುದಿಲ್ಲ.

**ಉಯಿಲುಗಳ ರೂಪ:** ಉಯಿಲುಗಳು ಲಿಖಿತವಾಗಿರಬೇಕು. ಆದರೆ ರಿಜಿಸ್ಟರ್ ಮಾಡಿಸಬೇಕಾದ ನಿಯಮವೇನೂ ಇಲ್ಲ. ವಿಶೇಷ ಸೌಲಭ್ಯಯುಕ್ತ ಉಯಿಲುಗಳು ಬಾಯಿ ಮಾತಿನಲ್ಲೂ ಇರಬಹುದು. ಆದರೆ ಕನಿಷ್ಠ ಇಬ್ಬರು ಸಾಕ್ಷಿಗಳ ಸಹಿ ಅನಿವಾರ್ಯ.

**ಉಯಿಲುಗಳನ್ನು ಅರ್ಥೈಸುವ ರೀತಿ:** ಉಯಿಲು ಸತ್ತ ಮನುಷ್ಯನ ಕೊಟ್ಟಕೊನೆಯ ಇಚ್ಛೆಯಾದ್ದರಿಂದ ಅದನ್ನು ಆತನ ಉದ್ದೇಶಕ್ಕೆ ಅನುಗುಣವಾಗಿಯೇ ಅರ್ಥೈಸಬೇಕಾದ್ದು ನ್ಯಾಯ ಮತ್ತು ಧರ್ಮ. ಉಯಿಲು ಸ್ಪಷ್ಟವಾಗಿ ನಿಸ್ಸಂದಿಗ್ಧವಾಗಿದ್ದರೆ ಅದನ್ನು ಅರ್ಥೈಸುವ ಕಷ್ಟ ಕಡಿಮೆ. ಒಂದು ವೇಳೆ ಅದು ಸ್ಪಷ್ಟವಾಗಿಲ್ಲದೆ ಇದ್ದರೆ, ಅದನ್ನು ಅರ್ಥೈಸುವಾಗ ಉಯಿಲುದಾರನ ಉದ್ದೇಶಕ್ಕೆ ಭಂಗಬಾರದ ರೀತಿಯಲ್ಲಿ, ಅವನ ಅಂತಿಮ ಇಚ್ಛೆಗೆ ದ್ರೋಹವಾಗದಂತೆ, ಅರ್ಥೈಸಬೇಕಾದ ಮಹತ್ತರ ಹೊಣೆ ನ್ಯಾಯಾಲಯಗಳ ಮೇಲೂ ಉಯಿಲನ್ನು ಆಚರಣೆಯಲ್ಲಿ ತರಬೇಕಾದವರ ಮೇಲೂ ಇದೆ. ಉಯಿಲಿನ ಅರ್ಥವನ್ನು ಅನಾವಶ್ಯಕವಾಗಿ ಹಿಗ್ಗಿಸಲೂ ಕೂಡದು; ಅದಕ್ಕೆ ತೀರ ಸಂಕುಚಿತ ಅರ್ಥವನ್ನು ಕಲ್ಪಿಸಬಾರದು. ತೀರಿದವನ ಕೊನೆಯ ಬಯಕೆಯನ್ನು ಈಡೇರಿಸಲು ಎಲ್ಲ ರೀತಿಯ ಎಚ್ಚರಿಕೆಯಿಂದ ಪ್ರಯತ್ನಿಸಬೇಕು. ಇದೊಂದು ಪವಿತ್ರ ಕರ್ತವ್ಯ. (ಕೆ.ಪಿ.)

**ಉರ್:** ದಕ್ಷಿಣ ಮೆಸಪೊಟೇಮಿಯದ ಸುಮೇರಿಯನ್ ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚೀನ ನಗರ. ಯೂಫ್ರಟೀಸ್ ನದಿಯ ದಡದಲ್ಲಿ ಈಗಿನ ಬಾಗ್ದಾದಿಗೆ ಸಮೀಪದಲ್ಲಿದೆ. ಇಲ್ಲಿ ನಡೆದ ಪುರಾತತ್ತ್ವ ಶೋಧನೆಗಳಿಂದ ಸುಮೇರಿಯ ಸಂಸ್ಕೃತಿಯ ವೈಶಿಷ್ಟ್ಯ ಬೆಳಕಿಗೆ ಬಂದಿದೆ. ಈಗಿನ ಟೆಲ್ ಮುಕಾಯರ್ ಪ್ರದೇಶವೇ ಪ್ರಾಚೀನ ಉರ್ ಪಟ್ಟಣ. ಇಲ್ಲಿ ಪರಿಶೋಧನೆ ಪ್ರಾರಂಭವಾದದ್ದು 1854ರಿಂದ. ಈ ಸ್ಥಳವನ್ನು ಮೊದಲಬಾರಿಗೆ ಉತ್ಖನನ ಮಾಡಿ ಅವಶೇಷಗಳನ್ನು ಬೆಳಕಿಗೆ ತಂದ ಕೀರ್ತಿ ಜೆ. ಇ. ಟೇಲರ್ ಎಂಬ ಪುರಾತತ್ತ್ವ ಶೋಧಕನದು. ಅನಂತರ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ಅಧಿಕಾರಿಗಳೂ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಅಧಿಕಾರಿಗಳೂ ಉರ್‌ನಲ್ಲಿ ಶೋಧ ನಡೆಸಿದರು. 1922ರಿಂದ 12 ವರ್ಷಗಳ ಕಾಲ ಸತತವಾಗಿ ಉತ್ಖನನ ಕಾರ್ಯ ಕೈಗೊಂಡು ಈ ನಗರದ ಅವಶೇಷಗಳನ್ನು ಬಹುವಾಗಿ ಹೊರತೆಗೆದ ಕೀರ್ತಿ ಸರ್ ಲಿಯೋನಾರ್ಡ್ ವೂಲಿ ಎಂಬ ಪ್ರಾಕ್ತನಶಾಸ್ತ್ರಜ್ಞನಿಗೆ ಸಲ್ಲುತ್ತದೆ. ಈತ ನಡೆಸಿದ ಉತ್ಖನನಗಳಿಂದ ಉರ್ ನಗರದ ಸಂಪೂರ್ಣ ಚರಿತ್ರೆ ಬೆಳಕಿಗೆ ಬಂತು.

ಈ ನಗರಕ್ಕೆ ಸಮೀಪದಲ್ಲಿರುವ ಉಬಾಯ್ಡ್‌ನಲ್ಲಿ ದೊರಕಿರುವ ಅವಶೇಷಗಳೇ ಇಲ್ಲಿನ ಪ್ರಾಚೀನತಮ ನಾಗರಿಕತೆಯ ಕುರುಹುಗಳು. ಮಣ್ಣಿನ ಮಡಕೆಯ ಹೋಲಿಕೆಗಳಿಂದ ಇಲ್ಲಿಯ ನಾಗರಿಕತೆ ಇರಾನಿಗೆ ಸಂಬಂಧಿಸಿ ದ್ದೆಂದು ಹೇಳಬಹುದು. ಉಬಾಯ್ಡ್ ಸಂಸ್ಕೃತಿಯ ಅನಂತರ ಸುಮೇರಿಯ ಸಂಸ್ಕೃತಿ ಬೇರೂರುವುದಕ್ಕೆ ಮೊದಲು ಈ ಎರಡು ವಿಭಿನ್ನ ಸಂಸ್ಕೃತಿಯ ಜನರು ಅಲ್ಲಿ ವಾಸವಾಗಿದ್ದರೆಂದು ಉರುಕ್‌ನಲ್ಲಿ ದೊರಕಿರುವ ಅವಶೇಷ ಗಳಿಂದಲೂ ಜಂಡೆಟ್‌ನಾಸ್ರ್ ಎಂಬಲ್ಲಿ ದೊರಕಿರುವ ಅವಶೇಷಗಳಿಂದಲೂ ತಿಳಿದುಬರುತ್ತದೆ. ಈ ಸಂಸ್ಕೃತಿಯ ಕಾಲವನ್ನು ಪ್ರ.ಶ.ಪೂ.4400–3000 ಎಂದು ನಿರ್ಧರಿಸಲಾಗಿದೆ. ಅನಂತರ ಈ ನಗರದ ರಾಜವಂಶಗಳ ಸಂಸ್ಕೃತಿಯ ಕಾಲವನ್ನು ಕಾಣುತ್ತೇವೆ. ಈ ರಾಜವಂಶದ ಸ್ಥಾಪಕ ಮೆಸ್–ಅನ್ನಿ ಪದ್ದನೆಂದು ತಿಳಿಯುತ್ತದೆ. ಈ ವಂಶದ ಅನೇಕ ರಾಜರುಗಳ ನೇತೃತ್ವದಲ್ಲಿ ಈ ನಗರ ಸರ್ವತೋಮುಖ ಪ್ರಗತಿ ಸಾಧಿಸಿ ಸುಮೇರಿಯ ಸಂಸ್ಕೃತಿ ಪ್ರಸಿದ್ಧವಾಗಲು ನೆರವಾಯಿತು. ಈ ಕಾಲದಲ್ಲಿ ರಾಜವಂಶ ಬೇರೂರಿದಂತೆ ನ್ಯಾಯಾಂಗ ವಿಶೇಷವಾಗಿ ಬೆಳೆಯಿತು. ರಾಜತ್ವದ ಜೊತೆಯಲ್ಲೇ ಧರ್ಮಗಳೂ ಬೆಳೆದವು. ಇದರಿಂದ ದೇವತೆಗಳ ಸಮೂಹವೊಂದು ರಚಿತವಾಯಿತು. ದೇವತೆಗಳಿಗೆ ದೇವಾಲಯವನ್ನು ಕಟ್ಟುವ ಕಾರ್ಯಕ್ಕೆ ಹೆಚ್ಚಾಗಿ ಪ್ರೋತ್ಸಾಹ ಸಿಕ್ಕಿ, ವಾಸ್ತು ಮತ್ತು ಶಿಲ್ಪಕಲೆಗಳು ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದುವು. ಇವುಗಳನ್ನು ಕಾಪಾಡಿಕೊಂಡು ಬರಲು ಮತ್ತು ಶತ್ರುಗಳನ್ನು ಸೋಲಿಸಲು ಸುಭದ್ರ ಸೈನ್ಯದ ವ್ಯವಸ್ಥೆ ರೂಢಿಗೆ ಬಂದಿತು. ಈ ಎಲ್ಲ ಪ್ರಗತಿಗಳಿಂದ ಸಾಮಾನ್ಯ ಜನಗಳ ಜೀವನ ಸುಖಮಯವಾಗುವಂತೆ ಆಯಿತು. ಇದಕ್ಕೆ ಉದಾಹರಣೆಯಾಗಿ ಮೊದಲನೆಯ ರಾಜವಂಶದ ಗೋರಿಗಳನ್ನು ನೋಡಬಹುದು. ಈ ಗೋರಿಗಳು ವಿಶಾಲವಾ ಗಿದ್ದು ಬೆಲೆಬಾಳುವ ಆಭರಣ ಗಳು, ಮಂಚ, ಕುರ್ಚಿ, ಮಡಕೆ ಮುಂತಾದವುಗಳ ನ್ನೊಳಗೊಂಡಿವೆ. ಜೊತೆಗೆ ರಾಜನ ಸೇವೆಯಲ್ಲಿ ನಿರತರಾಗಿದ್ದ ಎಲ್ಲ ಆಳುಕಾಳುಗಳ ಗೋರಿಗಳನ್ನೂ ಕಾಣಬಹುದು. ಸ್ವಲ್ಪ ಕಾಲಾನಂತರ ಈ ನಗರ ಇತರ ನಗರಗಳ ಆಳ್ವಿಕೆಗೆ ಒಳಪಟ್ಟಿತು. ಮೂರನೆಯ ರಾಜವಂಶದ ಸ್ಥಾಪಕನಾದ ಅರ್‌ನಮ್ಮು ಎಂಬ ರಾಜನ ಕಾಲದಲ್ಲಿ ಮತ್ತೆ ಪ್ರಾಮುಖ್ಯತೆಗೆ ಬಂತು. ಈತ ನಿರ್ಮಿಸಿದ (2100) ಕಟ್ಟಡಗಳಲ್ಲಿ ಜಿಗ್ಗುರಾಟ್ ಮುಖ್ಯವಾದುದು. ಇದು ಸು.70ಮೀ ಉದ್ದ, ಸು.42ಮೀ ಅಗಲ ಮತ್ತು ಸು.17ಮೀ ಎತ್ತರವಿರುವ ಇಟ್ಟಿಗೆಗಳಿಂದ ಕಟ್ಟಿದ ಭವ್ಯಸೌಧ. ಎಲ್ಲ ಜಿಗ್ಗುರಾಟ್‌ಗಳಂತೆ ಇದೂ ಚೌಕ ಪ್ರಕಾರಗಳನ್ನುಳ್ಳ ಕಟ್ಟಡ. ಹೊರಗಿನ ಪ್ರಾಕಾರಕ್ಕಿಂತ ಒಳಗಿನ ಪ್ರಾಕಾರ ಕಿರಿದಾಗಿರುತ್ತ ಬಂದು ಕೊನೆಗೆ ಎತ್ತರದ ಜಗಲಿಯಲ್ಲಿ ಕೊನೆಗೊಳ್ಳುತ್ತದೆ. ಇದೇ ದೇವರ ವಾಸಸ್ಥಾನ. ಅರ್‌ನಮ್ಮುವಿನಿಂದ ರಚಿತವಾದ ಜಿಗ್ಗುರಾಟ್ ದೇವಾಲಯಕ್ಕೆ ಮುಂಭಾಗದಲ್ಲಿ ಮೂರು ದಿಕ್ಕಿನಲ್ಲೂ ಮೆಟ್ಟಲುಗಳಿವೆ. ಇವುಗಳನ್ನು ಹತ್ತಿ ಒಳಗಿನ ಪ್ರಾಕಾರಕ್ಕೆ ಹೋಗಬೇಕು. ಈ ಪ್ರಾಕಾರಗಳ ಗೋಡೆಯ ಒಳಭಾಗಗಳು ಶಿಲ್ಪಫಲಕ ಗಳಿಂದ ಅಲಂಕೃತವಾಗಿವೆ. ಈ ಫಲಕಗಳು ಉರ್ ನಗರದ ಚರಿತ್ರೆಯನ್ನು ತಿಳಿಸುತ್ತವೆ.



ಚಿತ್ರಿತ ಮಣ್ಣಿನ ಬಟ್ಟಲು

ಪ್ರ.ಶ.ಪೂ.1800ರಲ್ಲಿ ಉಂಟಾದ ಕ್ಷೋಭೆಯಲ್ಲಿ ಉರ್ ನಗರ ನಾಶವಾಗಿ ಕಟ್ಟಡಗಳೆಲ್ಲ ಒಡೆಯಲ್ಪಟ್ಟು, ಅವುಗಳ ಭವ್ಯತೆ ನಾಶವಾಯಿತು. 300 ವರ್ಷಗಳ ಅನಂತರ ಆಳಿದ ರಾಜರು ನಗರದ ಪುನರ್ನಿರ್ಮಾಣ ಕಾರ್ಯವನ್ನು ಕೈಗೊಂಡರು. ಪ್ರ.ಶ.ಪೂ.7ನೆಯ ಶತಮಾನದಿಂದ ಮತ್ತೆ ಈ ನಗರ ಪ್ರಾಮುಖ್ಯ ಪಡೆಯಿತು. ನೆಬುಚೆಡ್ನಸರ್ ಎಂಬ ರಾಜ ಇಲ್ಲಿನ ದೇವಾಲಯಗಳನ್ನು ಪುನರ್ನಿರ್ಮಿಸಿ ನಗರದ ಸೌಂದರ್ಯವನ್ನು ಹೆಚ್ಚಿಸಿದ. ಆದರೆ ಪರ್ಷಿಯನ್ನರ ದಂಡಯಾತ್ರೆಗಳ ಅನಂತರ ಸುಮೇರಿಯ ಮತಧರ್ಮಗಳು ಅವನತಿ ಹೊಂದಿದುವು. ಅವುಗಳ ಜೊತೆಯಲ್ಲಿಯೇ ಜಿಗ್ಗುರಾಟ್‌ಗಳೂ ನಾಶವಾದುವು. ಪ್ರ.ಶ.ಪೂ. 4ನೆಯ ಶತಮಾನದಿಂದ ಈ ನಗರ ಪೂರ್ಣ ನಾಶವಾಗಿ ಮತ್ತೆ ಉಚ್ಛ್ರಾಯ ಸ್ಥಿತಿಯನ್ನು ಕಾಣಲಿಲ್ಲ. (ಎ.ವಿ.ಎನ್.)

**ಉರಗದಂಡ:** ಎರಡು ಹಾವುಗಳು ಸುತ್ತಿಕೊಂಡಿರುವ ಒಂದು ದಂಡ, ದಂಡದ ಮೇಲೆ ಎರಡು ರೆಕ್ಕೆಗಳು–ಈ ಸಂಕೇತದ ಒಟ್ಟು ಹೆಸರು (ಕೆಡೂಸಿಯಸ್). ಹಾವುಗಳನ್ನು ಬುದ್ಧಿ, ಆರೋಗ್ಯಗಳ ಸಂಕೇತಗಳೆಂದು ಈಜಿಪ್ಟ್, ಗ್ರೀಸ್ ದೇಶಗಳ ಜನರು ಪೂಜಿಸುತ್ತಿದ್ದರೆಂದು ಆ ದೇಶಗಳ ಪ್ರಾಚೀನಕಾಲದ ದಾಖಲೆಗಳಿಂದ ತಿಳಿದುಬಂದಿದೆ. ಅಂದು ಗ್ರೀಸ್ ದೇಶದಲ್ಲಿ ಈಸ್ಕುಲೇಪಿಯಸನ **(ನೋಡಿ– ಈಸ್ಕುಲೇಪಿಯಸನ)** ದೇಗುಲಗಳಲ್ಲಿ ಹಾವುಗಳಿದ್ದವು. ಅಲ್ಲಿನ ಪೂಜೆ ಪುನಸ್ಕಾರಗಳಲ್ಲಿ ಇವೂ ಸೇರಿರುತ್ತಿದ್ದವು. ಈಸ್ಕುಲೇಪಿಯಸನ ದಂಡದಲ್ಲಿ ಒಂದು ಹಾವು ಸುತ್ತಿಕೊಂಡಿರುವಂತೆ ಮೊದಲು ಚಿತ್ರಿಸಲಾಗಿತ್ತು. ಇವನು ರೋಗಶಾಮಕ ದೇವತೆ. ರೋಗವನ್ನು ಗುಣಪಡಿಸುವ ಸಂಕೇತ ಹಾವು ಎಂಬ ಭಾವನೆಯಿಂದ ಅದರ ಆಕೃತಿಯನ್ನು ದಂಡಕ್ಕೆ ಸುತ್ತಿರಬಹುದೆಂಬ ಒಂದು ವಾದವಿದೆ. ಹಾವಿನ ದೀರ್ಘಾಯುಷ್ಯ, ಚುರುಕು, ಪೊರೆಕಳಚುವುದು ಮುಂತಾದುವೂ ಕಾರಣವಿರಬಹುದು.

ಗ್ರೀಕರ ಪುರಾಣದಲ್ಲಿ ಉರಗದಂಡ ರೆಕ್ಕೆಯಿದ್ದ ಮರ್ಕ್ಯುರಿಯ ಲಾಂಛನ. ಮೊದಲಿಗೆ ಇದು ಸಂಪತ್ತು ಏಳಿಗೆ ದೊರಕಿಸುವ ಶಕ್ತಿಯ ಪ್ರತೀಕ ಮಾತ್ರವಾಗಿತ್ತು. ಸತ್ತವರ, ಬದುಕಿರುವವರ ಮೇಲೆ ಹಲವಾರು ಪರಿಣಾಮಗಳ ಗುರುತೂ ಆಗಿತ್ತು. ಇದಕ್ಕೂ ಮೊದಲು ನಿಜವಾಗಿ ಹರ್ಮಿಸ್ ಬಳಸಿದ, ದೂತನಿಗೆ ಗೊತ್ತಾಗಿರುವ, ಅಂದರೆ ಅವನನ್ನು ಕಾಪಿಡುವ ಸಂಕೇತವಾಗಿತ್ತು. ಇನ್ನೂ ಮೊದಲು ಇದರಲ್ಲಿ ಆಲಿವ್ ರೆಂಬೆಗಳಿದ್ದುವು. ಒಂದು ಹಿಡಿ,

ಇನ್ನೆರಡು ಮೇಲೆ ಒಂದಕ್ಕೊಂದು ಗಂಟು ಹೆಣೆದುಕೊಂಡಿದ್ದವು. ಆ ಮೇಲೆ ಈ ಎರಡು ರೆಂಬೆಗಳ ಜಾಗಕ್ಕೆ ಹಾವುಗಳು ಬಂದು ಉರಗದಂಡವಾಯಿತು. ಇದರಲ್ಲಿ ಎರಡು ಹಾವುಗಳು ಸುತ್ತಿಕೊಂಡು ಮೇಲುಗಡೆ ಮುಖಗಳು ಎದುರುಬದುರಾಗಿವೆ. ಒಲಿಂಪಸನ ವೇಗದ ದೂತನಾದ ಮರ್ಕ್ಯುರಿಯದೆಂದು ಸೂಚಿಸಲು ರೆಕ್ಕೆಗಳಿವೆ. ಅನಂತರ ಇದನ್ನು ರೋಮನ್ ದೂತರು ಅಧಿಕಾರದ ದಂಡವಾಗಿ ಹಿಡಿಯುತ್ತಿದ್ದರು. ಹೀಗೆ ಉರಗದಂಡ ಅಂದು ವ್ಯಾಪಾರದ ಗುರುತಾಗಿತ್ತೇ ಹೊರತು ವೈದ್ಯಕ್ಕೆ ಸಂಬಂಧಿಸಿರಲಿಲ್ಲ.

ಇವೆರಡು ಲಾಂಛನಗಳಲ್ಲಿ ಒಂದಕ್ಕೊಂದರ ತಪ್ಪು ತಿಳಿವಳಿಕೆ ಬಹು ಕಾಲದ್ದು, ಮೊಟ್ಟಮೊದಲು 16ನೆಯ ಶತಮಾನದಲ್ಲಿ ವೈದ್ಯಕ ಪುಸ್ತಕಗಳ ಪ್ರಕಾಶಕ ಜೊಹಾನ್ ಫ್ರೋಬೆನ್ ಪುಸ್ತಕಗಳ ಮುಖಪತ್ರದ ಗುರುತಾಗಿ ಇದನ್ನು ಬಳಸಿದನಂತೆ. ಕೆಲ ಕಾಲಾನಂತರ




ಉರಗದಂಡ

ಮೊದಲನೆಯದು: ಈಸ್ಕುಲೇಪಿಯಸನ ಮೂಲದಂಡ. ಕೆತ್ತನೆಯಲ್ಲಿ, ಜೀವನದ: ಬಾಳು ಮೊಟಕು, ಕಲೆ ನಿಡುಗಾಲದ್ದು, ಅನುಭವ ಕಷ್ಟ, ಎಂದಿದೆ. ಎರಡನೆಯದು ಮರ್ಕ್ಯುರಿ ಹಿಡಿದಿದ್ದ ದೂತ ದಂಡ. ಮೂರನೆಯದು: ಅಮೆರಿಕ ಸಂಯುಕ್ತ ಸಂಸ್ಥಾನಗಳ ವೈದ್ಯಕ ದಳದ ಲಾಂಛನ, ಉರಗದಂಡ.

ಎರಡನೆಯ ಹೆನ್ರಿಯ ವೈದ್ಯ ಸರ್ ವಿಲಿಯಂ ಬಟ್ಸ್ ತನ್ನ ಲಾಂಛನವಾಗಿ ಇದನ್ನು ಇಟ್ಟುಕೊಂಡನಂತೆ. ಬ್ರಿಟಿಷ್ ಸೇನೆಯಲ್ಲಿ ರಾಯಲ್ ಸೇನೆಯ ವೈದ್ಯಕದಳ, ಅಮೆರಿಕದ ವೈದ್ಯಕ ಸಂಘ ಇವು ದಂಡದೊಂದಿಗೆ ಒಂದೇ ಹಾವನ್ನು ಲಾಂಛನವಾಗಿ ಇಟ್ಟುಕೊಂಡಿವೆ. ಅಮೆರಿಕ ಸಂಯುಕ್ತಸಂಸ್ಥಾನಗಳ ಸೇನೆಯ ವೈದ್ಯ ದಳಕ್ಕೆ ಮಾತ್ರ ಎರಡು ಹಾವುಗಳಿರುವ ಉರಗದಂಡವೇ ಲಾಂಛನ. (ಎಸ್.ಆರ್.ಆರ್.)

**ಉರಗಪಕ್ಷಿ:** ಉರಗವರ್ಗದ ಡೈಆಪ್ಸಿಡ ಉಪವರ್ಗದ ಟೀರೋಸಾರಿಯ ಗಣದ ಗತವಂಶೀ ಪ್ರಾಣಿಗಳು (ಟಿರೋಡಾಕ್ಟೈಲ್). ಹಾರುವ ಉರಗ, ಪಕ್ಷಾಂಗುಲಿ–ಪರ್ಯಾಯ ನಾಮಗಳು. ಕೆಳ ಜುರಾಸಿಕ್ ಯುಗದಲ್ಲಿ ಆರಂಭವಾದ ಈ ಪ್ರಾಣಿಗಳು ಮೀಸೋಜೋಯಿಕ್ ಕಲ್ಪ ಕೊನೆಯವರೆಗೂ ಬಾಳಿದ್ದುದಕ್ಕೆ ಆಧಾರಗಳಿವೆ (ಸುಮಾರು 170–65 ದ. ಲ. ವ. ಪ್ರಾಚೀನಕಾಲ). ವಾಸ ಬೆಟ್ಟಗುಡ್ಡಗಳಲ್ಲಿ. ಇವನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಗುಂಪಿನ ಉರಗಪಕ್ಷಿಗಳಿಗೆ ಉದ್ದವಾದ ಬಾಲ ಮತ್ತು ತುದಿಯಲ್ಲಿ ಸಮಾನಾಂತರವಾದ ರೆಕ್ಕೆ ಇದೆ. ಮತ್ತೊಂದು ಗುಂಪಿನವಕ್ಕೆ ಬಾಲವೂ ಇಲ್ಲ, ರೆಕ್ಕೆಯೂ ಇಲ್ಲ.

ರ್‍ಯಾಂಫೊರಿಂಕಸ್ ಟೀರೋಸಾರಿಯ ಗಣದ ಒಂದು ಜಾತಿ. ಇದರ ಜೀವಾವಶೇಷ ಇಂಗ್ಲೆಂಡಿನಲ್ಲಿ ಸಿಕ್ಕಿದೆ; ಚಿಕ್ಕದೇಹ–ಉದ್ದ 10 ಸೆಂ. ಮೀ. ಸುತ್ತಳತೆ 3.7 ಸೆಂ.ಮೀ. ತಲೆಯ ಉದ್ದ 8 ಸೆಂ.ಮೀ. ದೊಡ್ಡ ಬಾಯಿ ಅದರೊಳಗೆ ಉದ್ದ, ದಪ್ಪ ಮತ್ತು ಚೂಪು ಹಲ್ಲುಗಳು. ಕೆಳದವಡೆ ಕೂಡುವ ಸ್ಥಳದಿಂದ ಸ್ವಲ್ಪ ಮೇಲ್ಭಾಗದಲ್ಲಿ ಒಂದೊಂದು ದೊಡ್ಡ ಕಣ್ಣು ಇದೆ. ಅವುಗಳ ಸುತ್ತಲೂ ಪಕ್ಷಿಗಳಿಗಿರುವ ಹಾಗೆ ಸರದಂತೆ ಜೋಡಿಸಿದ ಎಲುಬಿನ ತಟ್ಟೆಗಳಿವೆ. ಕಣ್ಣುಗಳಿಗೆ ಸ್ವಲ್ಪ ದೂರದಲ್ಲಿ ಎರಡು ನಾಸಿಕ ರಂಧ್ರಗಳಿವೆ. 40 ಸೆಂ.ಮೀ. ಉದ್ದವುಳ್ಳ ಕತ್ತು ತಲೆಯನ್ನು ಇಕ್ಕೆಲಕ್ಕೂ ಬಾಗಿಸಲು ಅನುಕೂಲವಾಗಿತ್ತೆನ್ನಬಹುದು. ಉರಗಪಕ್ಷಿಯ ಬಾಲ ಮಾತ್ರ 40 ಸೆಂ.ಮೀ. ಉದ್ದವಿದ್ದು ಅನೇಕ ಅಸ್ಥಿ, ಸ್ನಾಯುಗಳ ಜೋಡಣೆಯಿಂದ ಗಡುಸಾಗಿತ್ತು. ಆದ್ದರಿಂದ ಇಡೀ ಬಾಲವೇ ಚಲಿಸಿರಬೇಕು ಎಂದು ಊಹಿಸಬಹುದು. ಚರ್ಮದ ಮಡಿಕೆಗಳಿಂದಾದ ಚಾಚಿದ ಪದರಗಳೇ ರೆಕ್ಕೆಗಳಾಗಿ ಮಾರ್ಪಟ್ಟಿದ್ದವು. ಇವು ಅತಿ ಉದ್ದನಾದ ಮುಂಗಾಲುಗಳಿಗೆ ಗಟ್ಟಿಯಾಗಿ ಅಂಟಿಕೊಂಡಿವೆ. ಹರಡಿಕೊಂಡಾಗ ರೆಕ್ಕೆಗಳು 70 ಸೆಂ.ಮೀ ಗಳಷ್ಟು ಅಗಲವಾಗುತ್ತಿದ್ದವು. ರೆಕ್ಕೆಯ ಮುಂಭಾಗದ ಅಂಚಿನಲ್ಲಿ ಒಂದು ಬೆರಳು ಇದೆ. ರೆಕ್ಕೆಯ ಪದರ ಸುಮಾರು 5 ಸೆಂ.ಮೀ. ಅದಕ್ಕೆ ಮುಂಗಾಲಿನಿಂದ ಹಿಂಗಾಲಿನವರೆಗೂ ಶರೀರದ ಜೊತೆ ಸಂಬಂಧ ಇದೆ. ಬಾಲದ ತುದಿಯಲ್ಲಿ ಸಮಾನಾಂತರವಾದ ಒಂದು ಪದರವಿದೆ. ಮೊದಲ ಮೂರ ಕೈ ಬೆರಳುಗಳು ಬಿಡಿ ಬಿಡಿಯಾಗಿವೆಯಲ್ಲದೆ ಅವಕ್ಕೆ ಉದ್ದನಾದ ಉಗುರುಗಳಿವೆ. ಇವು ರೆಕ್ಕೆಯ ಮುಂಭಾಗದ

ಎಡಗಡೆಯದು : ರ್‍ಯಾಂಫೊರಿಂಕಸ್
ಬಲಗಡೆಯದು : ಗಿಡ್ಡ ಬಾಲದ ಟೀರೋಡಾಕ್ಟಿಲಸ್

ಹೊರಪಾರ್ಶ್ವದಲ್ಲಿದ್ದು ಆಹಾರ ಹಿಡಿಯಲು ಅಥವಾ ಹಾರಾಟದಿಂದ ಕೆಳಗೆ ಇಳಿಯಲು ಸಹಾಯ ಆಗಿದ್ದಿರಬೇಕು. ಮಂಡಿಯ ಚಿಪ್ಪು ದೇಹದಿಂದ ಹೊರಕ್ಕೆ ಚಾಚಿದೆ. ಉದ್ದನಾದ ಮೊಣಕಾಲಿನಲ್ಲಿ 5 ಕಾಲ್ಬೆರಳುಗಳಿವೆ. ಅವುಗಳಲ್ಲಿ ಒಂದು ಮಾತ್ರ ಯಾವಾಗಲೂ ಒಳಪಾರ್ಶ್ವಕ್ಕೂ ಕೆಳಕ್ಕೂ ಬಾಗಿರುತ್ತದೆ. ಉಳಿದ 4 ಬೆರಳುಗಳೂ ಪದರದಿಂದ ಬಂಧಿಸಲ್ಪಟ್ಟಿವೆ. ರ್‍ಯಾಂಫೊರಿಂಕನ ದೇಹದ ಮೇಲೆ ಮೃದುವಾದ ಫಲಕರಹಿತ ಚರ್ಮದ ಹೊದಿಕೆ ಇದೆ. ಆದರೆ ತಲೆಯ ನೆತ್ತಿಯ ಮೇಲೆ ಗೊಂಚಲು ಕೂದಲಿನಂತಹ ಗಂಟುಗಳಿವೆ.

ಜೂರಾಸಿಕ್ ಕಲ್ಪದ ಗುಬ್ಬಚ್ಚಿಗಿಂಗಲೂ ದೊಡ್ಡವಲ್ಲದ ಪಕ್ಷಾಂಗುಲಿಗಳು ಬಾಲವಿಲ್ಲದ ಗುಂಪಿಗೆ ಸೇರಿವೆ. ಕ್ರಿಟೇಷಿಯಸ್ ಕಲ್ಪದಲ್ಲಿ ಬಾಲವುಳ್ಳ ಪಕ್ಷಾಂಗುಲಿ ವಂಶ ನಾಶವಾದರೂ ಅದರ ಸಂತತಿ ಮುಂದುವರಿದು ಅತ್ಯಧಿಕ ಗಾತ್ರವನ್ನು ತಾಳಿತು. ಇದೇ ಕಾನ್ಸಾಸ್ ಚಾಕಿನಲ್ಲಿ ಸಿಕ್ಕಿದ ಟಿರಾನೊಡಾನ್ (ಟೀರೋಸಾರಿನ ಒಂದ ಜಾತಿ). ಈ ಪ್ರಾಣಿಗೆ 18" ಉದ್ದದ ರೆಕ್ಕೆಯಿತ್ತು. ಅದರ ತಲೆಯ ಉದ್ದ 4". ಬಹುಶಃ ಪಕ್ಷಾಂಗುಲಿಗಳ ಪೈಕಿ ಇದೇ ಅತ್ಯಂತ ದೊಡ್ಡ ಪ್ರಾಣಿಯಾಗಿದ್ದಿರಬೇಕು. ದೇಹ ದೊಡ್ಡದಿದದರೂ ಶರೀರ ಮಾತ್ರ ಹಗುರವಾಗಿತ್ತು. ರೆಕ್ಕೆಯ ಎಲುಬುಗಳು ಬಲು ತೆಳುವಾದ ಪದರದಿಂದ ಕೂಡಿದ್ದುವು. ಅಲ್ಲದೆ ಅವಕ್ಕೆ 1"ನಷ್ಟು ವ್ಯಾಸದ ಗಾಳಿ ಅವಕಾಶವೂ ಇತ್ತು. ಕಾನ್‌ಸಾಸ್ ಮತ್ತು ಇಂಗ್ಲಿಷ್ ಚಾಕುಗಳಲ್ಲಿ ಸಿಕ್ಕಿರುವ ಪಳೆಯುಳಿಕೆಗಳ ಆಧಾರದ ಮೇರೆಗೆ ಅವು ಭೂಮಿಯಿಂದ ಸುಮಾರು ನೂರಾರು ಮೈಲಿದೂರ ಹಾರಿರಲು ಸಾಧ್ಯ ಎಂದು ಊಹಿಸಬಹುದು. ಈ ಪ್ರಾಣಿಯ ಮಿದುಳು ಪಕ್ಷಿಯ ಮಿದುಳಿನಷ್ಟಿತ್ತು. ಘ್ರಾಣೇಂದ್ರಿಯವಿರಲಿಲ್ಲವಾದ್ದರಿಂದ ದೃಷ್ಟಿಯ ಮೂಲಕವೇ ಅದು ಆಹಾರವನ್ನು ಗುರುತಿಸುತ್ತಿತ್ತೆನ್ನಬಹುದು **(ನೋಡಿ – ಟಿರಾನೊಡಾನ್)**.

(ಕೆ.ಎಂ.ವಿ.)

**ಉರಗವರ್ಗ:** ಪ್ರಾಣಿ ಪ್ರಪಂಚದಲ್ಲಿ ದ್ವಿಚರಿಗಳು ಮತ್ತು ಹಕ್ಕಿಗಳಿಗೂ ಸಸ್ತನಿಗಳಿಗೂ ನಡುವಿನ ಶೀತರಕ್ತದ ಕಶೇರುಗಳು (ರೆಪ್ಟಿಲಿಯ). ಸರೀಸೃಪಗಳೆಂದೂ ಕರೆಯುವುದಿದೆ. ಉರಗದ ವಿಕಾಸ ದ್ವಿಚರಿಗಳಿಂದ. ಅವು ಮೊದಲ ಬಾರಿಗೆ ನೀರನ್ನು ಬಿಟ್ಟು ಭೂಮಿಯ ಮೇಲೆ ವಾಸಿಸಿ ವಾತಾವರಣದ ಶುಷ್ಕ ಗಾಳಿಯ ಸಹಾಯದಿಂದ ಉಸಿರಾಡುವ ಶಕ್ತಿಯನ್ನು ಬೆಳೆಸಿಕೊಂಡವು. ಆದರೆ ಮೊಟ್ಟೆಗಳನ್ನಿಡಲು ಅವು ನೀರನ್ನು ಆಶ್ರಯಿಸಬೇಕಾಗಿತ್ತು. ಕೆಲವು ದ್ವಿಚರಿಗಳು ದಿಟ್ಟತನದ ಮತ್ತೊಂದು ಹೆಜ್ಜೆಯನ್ನಿಟ್ಟು ಅಜೀವಪರ್ಯಂತ ನೆಲದ ಮೇಲೆ ವಾಸಿಸುವ ಶಕ್ತಿಯನ್ನು ಪ್ರದರ್ಶಿಸಿದುವು. ಇವುಗಳಿಂದ ವಿಕಸಿಸಿದ ಪ್ರಾಣಿವರ್ಗವೇ ಉರಗಗಳು.

**ಚರಿತ್ರೆ:** ಬಹುಶಃ 25ಕೋಟಿ ವರ್ಷಗಳ ಹಿಂದೆ ಪೇಲಿಯೋಜೋಯಿಕ್ ಯುಗದ ಕೊನೆಯ ಕಲ್ಪದಲ್ಲಿ ಪ್ರಾರಂಭವಾಯಿತು. ಆರಂಭ ಸರಳ, ಆದರೆ ಮುಂದೆ ಆ ವರ್ಗದಿಂದ (ಕ್ಲಾಸ್) ಸರ್ವತೋಮುಖವಾಗಿ ವಿಕಸಿಸಿದ ಉಪವರ್ಗ, ಗಣ, ಕುಟುಂಬ ಮತ್ತು ಜಾತಿಗಳು (ಸಬ್‌ಕ್ಲಾಸ್, ಆರ್ಡರ್, ಫ್ಯಾಮಿಲಿ ಅಂಡ್ ಜೀನಸ್), ಅವುಗಳ ದೇಹರಚನೆಯ ವೈಶಿಷ್ಟ್ಯ, ಮಿಕ್ಕೆಲ್ಲ ಪ್ರಾಣಿಗಳಿಗಿಂತ ಭಿನ್ನವಾದ ಬೃಹದಾಕಾರದ ಇವು ಸೃಷ್ಟಿಯಲ್ಲೇ ಬಲು ಕುತೂಹಲಕಾರಿ ಘಟನೆಗಳು. ಉರಗಗಳು ಬಾಳಿ ಮೆರೆದ ಭೂಚರಿತ್ರೆಯ ಮೀಸೊಜೋಯಿಕ್ ಯುಗದಲ್ಲಿ (225–65 ದ.ಲ.ವ. ಪ್ರಾಚೀನಾವಧಿ) ಅವು ಸಕಲ ಭೂಪ್ರದೇಶವನ್ನೂ ಆಕ್ರಮಿಸಿದ್ದುವು. ಇಷ್ಟು ಮಾತ್ರವಲ್ಲ, ನದಿಗಳು, ಸರೋವರಗಳು, ವಾಯುಮಂಡಲ

ಇವೆಲ್ಲವೂ ಉರಗಗಳ ಆವಾಸ ಸ್ಥಾನಗಳಾಗಿದ್ದುವು. ಕೆಲವು ಸಸ್ಯಾಹಾರಿಗಳಾದರೆ ಮತ್ತೆ ಕೆಲವು ಅತಿಕ್ರೂರಿಗಳಾದ ಮಾಂಸಾಹಾರಿಗಳು; ಮಾಂಸಾಹಾರಿಗಳ ಹಾವಳಿಯನ್ನು ತಡೆಯಲಾರದೆ ಆತ್ಮ ಸಂರಕ್ಷಣೆಗಾಗಿ ಚಿತ್ರವಿಚಿತ್ರವಾದ ರಕ್ಷಾಕವಚಗಳನ್ನು ಬೆಳೆಸಿಕೊಂಡ ಉರಗಗಳು ಕೆಲವಾದರೆ, ಪುಷ್ಕಳವಾಗಿ ಬೆಳೆದಿದ್ದ ಸಸ್ಯವರ್ಗಗಳನ್ನು ತಿಂದು ಕೊಬ್ಬಿ ಬೃಹದಾಕಾರವಾಗಿ ಬೆಳೆದವು ಮತ್ತೆ ಕೆಲವು; ಕೆಲವು ದ್ವಿಪಾದಿಗಳಾದರೆ ಮತ್ತೆ ಕೆಲವು ಚತುಷ್ಪಾದಿಗಳು; ಭೂಮಿಯ ಮೇಲೆ ವೇಗವಾದ ಚಲನೆಗೆ ದೇಹದ ರಚನೆಯನ್ನು ಅಳವಡಿಸಿಕೊಂಡವು ಕೆಲವಾದರೆ ಮತ್ತೆ ಕೆಲವು ನೀರಿನಲ್ಲಿ ಈಜಲು, ಗಾಳಿಯಲ್ಲಿ ಹಾರಾಡಲು



ಸ್ಟೆಗೊಸಾರಸ್ ಅಂಗುಲೇಟಸ್ ಜೀವಿಯ ಅಸ್ಥಿಪಂಜರ

ಅನುಕೂಲಿಸುವಂತೆ ದೇಹವನ್ನು ಹೊಂದಿಸಿಕೊಂಡಂಥವು. ಈ ರೀತಿ ಬಹುಶಾಖೋಪ ಶಾಖೆಯಾಗಿ ವಿಸ್ತರಿಸುತ್ತಿದ್ದ ಸರೀಸೃಪದ ಕಾಂಡದಿಂದಲೇ ಇಂದಿನ ಸಸ್ತನಿ ಪ್ರಾಣಿಗಳು, ಪಕ್ಷಿಗಳ ಶಾಖೆಗಳು ವಿಕಸಿಸಿವೆ. (ಈ ಸಸ್ತನಿ ಶಾಖೆಯ ಅಂತ್ಯದಲ್ಲಿ ನಿಂತಿರುವ ಪ್ರಾಣಿ ಎಂದರೆ ಮನುಷ್ಯ). ದೇಹ ರಚನೆಯ ವೈಶಿಷ್ಟ್ಯದೊಂದಿಗೆ ಸಂಖ್ಯಾಪ್ರಾಬಲ್ಯವೂ ಸೇರಿ ಇವು ಪ್ರಪಂಚದ ಮೂಲೆಮೂಲೆಗಳಲ್ಲೂ ವ್ಯಾಪಿಸಿ ನಿರಂಕುಶಪ್ರಭುಗಳಾಗಿ ಮೆರೆದ ಕಾಲವನ್ನು (ಭೂಚರಿತ್ರೆಯ ಮಧ್ಯ ಜೀವಕಲ್ಪ) ಉರಗಗಳ ಸುವರ್ಣಯುಗ ಎಂದು ಕರೆಯಲಾಗಿದೆ. ವಿಸ್ಮಯ ಹುಟ್ಟಿಸುವಂಥ ಬೃಹದಾಕಾರದ ಅನೇಕಾನೇಕ ಉರಗಗಳು ನಿಸರ್ಗದ ಹೊಡೆತ ಬದಲಾವಣೆಗಳೊಂದಿಗೆ ಹೆಜ್ಜೆಯಿಡಲಾಗದೇ ಅಳಿದುಹೋದುವು. ಅತಿಪರಾಕ್ರಮಿಗಳು ಗತವಂಶಿಗಳಾದುವು. ಈ ಭವ್ಯ ಪೂರ್ವಜರ ಸಂತತಿಗೆ ಸೇರಿದ್ದು ಇಂದಿಗೂ ಉಳಿದಿರುವ ಉರಗಗಳು ಕೇವಲ ಕೆಲವೇ ಆದರೂ ಅವು ಸಾಕಷ್ಟು ಕುತೂಹಲಕಾರಿಗಳಾಗಿವೆ.

**ಆಮ್ನಿಯೋಟ:** ಉರಗ, ಪಕ್ಷಿ ಮತ್ತು ಸಸ್ತನಿ ಪ್ರಾಣಿಗಳ ಒಟ್ಟು ಹೆಸರು. ಈ ವರ್ಗಗಳ ಪ್ರಾಣಿಗಳ ಭ್ರೂಣಗಳನ್ನು ಆವರಿಸಿ ಆಮ್ನಿಯಾನ್ ಮತ್ತು ಅಲಂಟಾಯ್ಸ್ ಎಂಬ ಎರಡು ಮುಖ್ಯ ಭ್ರೂಣ ಪಟಲಗಳಿವೆ. ಮೊದಲಿನದು ಭ್ರೂಣಕ್ಕೆ ಒಂದು ಕೃತಕ ಜಲಾಶಯವನ್ನು ಒದಗಿಸುವುದು; ಎರಡನೆಯದು ಅದರ ಉಸಿರಾಟಕ್ಕೆ ನೆರವಾಗುತ್ತದೆ. ದ್ವಿಚರಿಗಳಿಂದ ಆಮ್ನಿಯೋಟ ವಿಕಸಿಸಿತು. ಇದರ ಕಾಂಡದಿಂದ ಎರಡು ಕಾಂಡಗಳು ಮುಖ್ಯವಾಗಿ ಕವಲೊಡೆದುವು: 1. ಥೀರಾಪ್ಸಿಡ. ಇದು ಉರಗವರ್ಗದ ಸೈನಾಪ್ಸಿಡ ಉಪವರ್ಗದ ಗಣ (ಆರ್ಡರ್). ಈ ಶಾಖೆಯಿಂದ ಸಸ್ತನಿ ಪ್ರಾಣಿಗಳ ಲಕ್ಷಣಗಳಿದ್ದ ಉರಗಗಳು ಮತ್ತು ಸಸ್ತನಿ ಪ್ರಾಣಿಗಳು ವಿಕಸಿಸಿದವು. 2. ಸೌರಾಪ್ಸಿಡ. ಈ ಶಾಖೆಯಿಂದ ಉರಗಗಳು ಮತ್ತು ಪಕ್ಷಿಗಳು ರೂಪುಗೊಂಡವು.

**ಗುಣಗಳು:** ಉರಗವರ್ಗದ ಪ್ರಾಣಿಗಳಿಗೆ ಈ ಕೆಳಗಿನ ವಿಶಿಷ್ಟ ಗುಣಲಕ್ಷಣಗಳಿವೆ : 1. ಅವು ಶೀತರಕ್ತದ ಪ್ರಾಣಿಗಳು ಮತ್ತು ಹೆಚ್ಚಿನವು ಭೂವಾಸಿ ಚತುಷ್ಪಾದಿಗಳು 2. ದೇಹದ ಹೊರಹೊದಿಕೆಯಲ್ಲಿ ರಕ್ಷಣೆ ಕೊಡುವ ಗಟ್ಟಿಯಾದ ಹುರುಪೆಗಳಿವೆ. ಇವು ಪ್ರಾಣಿಯ ಹೊರಚರ್ಮದಿಂದಾದ ರಚನೆಗಳು. 3.ಕೆಲವು ವೇಳೆ ಹುರುಪೆಗಳ ಕೆಳಗೆ ಗಟ್ಟಿಯಾದ ಮೂಳೆತಟ್ಟೆಗಳು ರೂಪುಗೊಂಡಿರುತ್ತವೆ. 4. ಹುರುಪೆಗಳಿಲ್ಲದಿದ್ದರೆ ಹೊರಚರ್ಮ ಗಟ್ಟಿಯಾದ ಚಿಪ್ಪುಗಳ ಹೊದಿಕೆಯಂತಿರುವುದು. 5. ಚರ್ಮಗಳಲ್ಲಿ ಗ್ರಂಥಿಗಳು ಇಲ್ಲ. 6. ಸಾಮಾನ್ಯವಾಗಿ ಎರಡು ಜೊತೆ ಕಾಲುಗಳಿರುವುವು 7. ಬಲವಾದ ಕಶೇರು ಮಣಿಗಳು, ಚೆನ್ನಾಗಿ ಬೆಳೆದ ಎದೆಯ ಮೂಳೆ, ಕಡೆಯಪಕ್ಷ ಎರಡು ಪಕ್ಕೆಲುಬುಗಳು, ದಪ್ಪವಾದ ಭುಜಪಟ್ಟಿ ಮತ್ತು ಸೊಂಟ ಪಟ್ಟಿಗಳು ಮತ್ತು ಐದು ಬೆರಳುಗಳುಳ್ಳ ಬಲವಾದ ಎರಡು ಜೊತೆ ಕೈಕಾಲುಗಳು ಇವಿಷ್ಟರಿಂದ ಕೂಡಿದ ದೃಢರಚನೆಯ ಅಸ್ಥಿಪಂಜರವಿದೆ. 8. ರೂಪವೈವಿಧ್ಯವಿರುವ ತಲೆಬುರುಡೆ ಮೊದಲನೆಯ ಅಟ್ಲಾಸ್ ಕಶೇರುಮಣಿಗೆ ಒಂದೇ ಒಂದು ಎಲುಬಿನ ಗೋಳದಿಂದ (ಕೋಂಡೈಲ್) ಸೇರಿದೆ. 9. ಸಾಮಾನ್ಯವಾಗಿ ಹಲ್ಲುಗಳು ಸರಳ ಮತ್ತು ಮೊನಚಾಗಿರುತ್ತವೆ. ಅವು ಆಹಾರಾಭ್ಯಾಸಕ್ಕೆ ತಕ್ಕಂತೆ ಮಾರ್ಪಾಡಾಗಿರುತ್ತವೆ. 10. ಶ್ವಾಸಕೋಶಗಳು, ಉಸಿರಾಟದ ಅಂಗಗಳು ಮತ್ತು ಕಿವಿರಿನ ರಂಧ್ರವಿದ್ದರೂ ಅದು ಉಸಿರಾಟದಲ್ಲಿ ನೆರವಾಗುವುದಿಲ್ಲ. ಶ್ವಾಸೋಚ್ಛ್ವಾಸ ಕ್ರಿಯೆ ಪಕ್ಕೆಲುಬುಗಳ ಚಲನೆಯಿಂದ ನಡೆಯುತ್ತದೆ. 11. ಹೃತ್ಕುಕ್ಷಿ ಅಪೂರ್ಣ ಮತ್ತು ಎರಡು ಭಾಗಗಳಾಗಿ ವಿಂಗಡಣೆಗೊಂಡಿದೆ. ಮೊಸಳೆಗಳ ಜಾತಿಯಲ್ಲಿ ಮಾತ್ರ ಇದು ಪೂರ್ಣವಾಗಿ ಎಡ ಮತ್ತು ಬಲಹೃತ್ಕುಕ್ಷಿಗಳಾಗಿ ಕಾಣುತ್ತದೆ. 12.ಮಿದುಳಿನ ಉತ್ತಮ ಮಸ್ತಿಷ್ಕದ ಗೋಳಗಳು ದ್ವಿಚರಿಗಳಿಗಿಂತ ಹೆಚ್ಚು ಕ್ರಿಯಾಪೂರ್ಣವಾಗಿವೆ. ಹಾವುಗಳ ಹೊರತು ಮಿಕ್ಕ ಉರಗಗಳಲ್ಲಿ ಹನ್ನೆರಡು ಜೊತೆ ಮಿದುಳಿನ ನರಗಳಿವೆ (ಕ್ರೇನಿಯಲ್ ನರ್ವ್ಸ್). 13. ಜೀರ್ಣಾಂಗದ ಕೊಳವೆ ಶುದ್ಧೀಕರಣಾಂಗ ಮತ್ತು ಜನನೇಂದ್ರಿಯಗಳು ಒಟ್ಟುಗೂಡಿ ಕ್ಲೋಯಕ ಎಂಬ ಭಾಗವಾಗಿ ಅದೇ ಹೆಸರಿನ ರಂಧ್ರದಿಂದ ಹೊರತೆರೆಯುತ್ತವೆ. 14. ಉರಗಗಳು ಭೂಮಿಯ ಮೇಲೆ ದಪ್ಪವಾದ ಮೊಟ್ಟೆಗಳನ್ನಿಡುತ್ತವೆ. ಇವುಗಳಲ್ಲಿ ಭ್ರೂಣದ ಬೆಳವಣಿಗೆಗೆ ಬೇಕಾದ ತತ್ತಿಯ ಹಳದಿಭಂಡಾರ (ಯೋಕ್) ಹೆಚ್ಚು ಪ್ರಮಾಣದಲ್ಲಿರುವುದು. ಮೊಟ್ಟೆಗಳು ಸಚ್ಛಿದ್ರವಾದ ಸುಣ್ಣದ ಚಿಪ್ಪಿನಿಂದ ಸುರಕ್ಷಿತವಾಗಿರುತ್ತವೆ. 15. ಭ್ರೂಣವನ್ನು ಎರಡು ಗರ್ಭಸಂರಕ್ಷಣಾ ಪಟಲಗಳು (ಆಮ್ನಿಯಾನ್ ಮತ್ತು ಅಲಂಟಾಯ್ಸ್) ಆವರಿಸಿವೆ. ಅಲಂಟಾಯ್ಸ್ ಪಟಲ ಭ್ರೂಣದ ಉಸಿರಾಟದಲ್ಲಿ ನೆರವಾಗುವುದು.

ಉರಗಗಳ ತಲೆಬುರುಡೆಗಳ ಅಭ್ಯಾಸದಿಂದ ಈ ವರ್ಗದ ವಿಕಾಸಹಂತಗಳನ್ನು ಅರ್ಥಮಾಡಿಕೊಳ್ಳಬಹುದು. ತಲೆಬುರುಡೆ ಎರಡು ಮುಖ್ಯ ಕೆಲಸಗಳನ್ನು ಸಾಧಿಸುತ್ತದೆ: 1.ಜ್ಞಾನೇಂದ್ರಿಯಗಳ ರಕ್ಷಣೆ: 2. ಕೆಳದವಡೆಯ ಚಲನೆಗೆ ಸಹಾಯವಾದ ಮಾಂಸಖಂಡಗಳನ್ನೂ ಬುರುಡೆಯನ್ನು ಬೆನ್ನೆಲುಬಿಗೆ ಸೇರಿಸುವ ಮಾಂಸಖಂಡಗಳನ್ನೂ ಬಂಧಿಸಿಡುವುದು. ಮಾಂಸಖಂಡಗಳ ಕೆಲಸದ ಶ್ರಮವನ್ನು ತಡೆದುಕೊಳ್ಳಲು ತಲೆಬುರುಡೆ ಸಾಕಷ್ಟು ಬಲವಾಗಿರ ಬೇಕು. ಆದರೆ ಒಟ್ಟು ಭಾಗ ಮಿತಿಯಲ್ಲೂ ಇರಬೇಕು–ಬಲಿಷ್ಠ ಮತ್ತು ಹಗುರ ಗುಣಗಳ ಸಮತೋಲ. ಬಹುಶಃ ಇವೆರಡು ಕಾರಣಗಳು ತಲೆಬುರುಡೆಯ ವಿಕಾಸಕ್ಕೆ ಪ್ರೇರಣೆ ಕೊಟ್ಟುವು. ಮಿದುಳು ಚಿಕ್ಕದಾಗಿರುವುದರಿಂದ ಬುರುಡೆಯ ಗಾತ್ರ ಚಿಕ್ಕದು. ಆದರೆ ಕಪಾಲಪ್ರದೇಶದ ಮೂಳೆಗಳು ದವಡೆಗಳ ಯಶಸ್ವಿಚಲನೆಯನ್ನು ಉಂಟುಮಾಡುವ ಮಾಂಸಖಂಡಗಳ ಅಳವಡಿಕೆಗೆ ಸ್ಥಳಾವಕಾಶ ಕೊಟ್ಟು ಬಲಿಷ್ಠವಾಗಿರಬೇಕು; ಜೊತೆಯಲ್ಲೇ ಹಗುರವಾಗಿರಲೂಬೇಕು. ಈ ಕಾರಣದಿಂದಲೇ, ಬುರುಡೆಯ ಚಾವಣಿ ಮತ್ತು ಪಾರ್ಶ್ವಗಳ ಕೆಲವು ಮೂಳೆಗಳು ಬಲಿಷ್ಠವಾಗಿ ಜೋಡಣೆಗೊಂಡಿದ್ದರೂ ಅವುಗಳ ಮಧ್ಯೆ ಕೆಲವು ಬೃಹದ್ರಂಧ್ರಗಳು (ಟೆಂಪೊರಲ್ ಫೋಸ್ಸಾ) ಇರುವಂತೆ ಏರ್ಪಾಡಾಗಿದೆ. ಬೃಹದ್ರಂಧ್ರಗಳು ಮಾಂಸಖಂಡಗಳ ಅಳವಡಿಕೆಗೆ ಸ್ಥಳಾವಖಾಸ ಮಾಡಿಕೊಟ್ಟುವಲ್ಲದೆ ಬುರುಡೆ ಹಗುರವಾಗುವಂತೆಯೂ ಮಾಡಿದುವು.

ತಲೆಬುರುಡೆಯ ಕಪಾಲಭಾಗದ ಎಲುಬುಗಳ ರಚನೆ ಮತ್ತು ಅಲ್ಲಿರುವ ಬೃಹದ್ರಂಧ್ರಗಳ ಆಧಾರದಮೇಲೆ ಉರಗಗಳನ್ನು ವರ್ಗೀಕರಿಸುವುದು ವಾಡಿಕೆ. ಆದಿ ಉರಗಗಳ ಕಪಾಲದ ಎಲುವುಗಳು ಒತ್ತಾಗಿ ಜೋಡಿಕೊಂಡಿದ್ದುವು. ಆಹಾರವನ್ನು ಅಗಿಯಲು ಕೆಳದವಡೆಯ ಚಲನೆ ಅನಿವಾರ್ಯವಾದಾಗ ಅದರ ಚಲನೆಗೆ ಸಹಾಯಕಾರಿಯಾದ ಮಾಂಸಖಂಡಗಳು ವಿಕಸಿಸಿದುವು. ಇವುಗಳ ಸಂಕುಚನೆ ಮತ್ತು ವಿಕಸನೆಗೆ ಅನುಕೂಲವಾಗುವಂತೆ ಕಪಾಲದ



ಟ್ರೈಸೆರಟಾಪ್ಸ್ ಪ್ರಾರ್ಸ್ಸ್ ಜೀವಿಯ ಅಸ್ಥಿಪಂಜರ

ಎರಡು ಪಕ್ಕಗಳ ಎಲುಬುಗಳ ಜೋಡಣೆಯಲ್ಲಿ ಮಾರ್ಪಾಡಾಗಿ ಒಂದೊಂದು ಪಾರ್ಶ್ವದಲ್ಲೂ ಒಂದು ಅಥವಾ ಎರಡು ಬೃಹದ್ರಂಧ್ರಗಳು ಕಾಣಿಸಿಕೊಂಡವು. ಈ ವಿಕಸನವನ್ನು ಗಮನಿಸಿ ಉರಗ ವರ್ಗವನ್ನು ಈ ಕೆಳಗಿನ ಆರು ಉಪವರ್ಗಗಳಾಗಿ ವರ್ಗೀಕರಿಸಿದೆ: ಅನಾಪ್ಸಿಡ, ಸೈನಾಪ್ಸಿಡ, ಯೂರ್ಯಾಪ್ಸಿಡ, ಲೆಪಿಡೋಸಾರಿಯ, ಆರ್ಕಿಯೋಸಾರಿಯ, ಪ್ಯಾರಾಪ್ಸಿಡ.

**ಅನಾಪ್ಸಿಡ ಉಪವರ್ಗ:** ಕಪಾಲದಲ್ಲಿ ರಂಧ್ರವಿಲ್ಲದ ಉರಗಗಳು. ಆದಿಯಲ್ಲಿ ಕಾಣಿಸಿಕೊಂಡಂಥವು. ಇವುಗಳ ಕಪಾಲದ ಎಲುಬುಗಳು ಎಲ್ಲೆಡೆಯಲ್ಲೂ ಒತ್ತಾಗಿ ಜೋಡಿಕೊಂಡಿದ್ದು ದ್ವಿಚರಿಗಳ ಕಪಾಲವನ್ನು ಹೋಲುತ್ತಿದ್ದವು. ಈ ಉಪವರ್ಗದ ಒಂದು ಗಣ (ಆರ್ಡರ್) ಅಳಿದುಹೋದ ಕಾಟಿಲೋಸಾರಿಯ. ಆದಿ ಉರಗಗಳು ಈ ಗಣದವು. ಇವು ಪರ್ಮಿಯನ್ ಕಲ್ಪದ (280–225 ದ.ಲ.ವ. ಪ್ರಾಚೀನ) ಆದಿ ಭಾಗದಲ್ಲಿ ಕಾಣಿಸಿಕೊಂಡು ಟ್ರಯಾಸಿಕ್ ಕಲ್ಪದ (225–190 ದ.ಲ.ವ. ಪ್ರಾಚೀನ) ವರೆಗೆ ಬಾಳಿದುವು. ಇನ್ನೊಂದು

ಗಣ ಕಿಲೋನಿಯ ಆಮೆಗಳು ಮತ್ತು ಕಡಲಾಮೆಗಳು ಈ ಗಣದವು. ಟ್ರಯಾಸಿಕ್ ಕಲ್ಪದಲ್ಲಿ ಕಾಣಿಸಿಕೊಂಡ ಇವು ಇಂದಿನವರೆಗೂ ಬಾಳಿವೆ. ಮಿಕ್ಕಾವ ಉಪವರ್ಗದಲ್ಲೂ ಕಾಣಿಸದ ವೈಚಿತ್ರ್ಯ ಇವುಗಳ ಎಲುಬಿನ ರಚನೆಯಲ್ಲಿ ಕಾಣಿಸುತ್ತದೆ.

**ಸೈನಾಪ್ಸಿಡ ಉಪವರ್ಗ:** ಕಪಾಲದ ಎರಡು ಪಕ್ಕಗಳಲ್ಲೂ ಒಂದೊಂದು ಬೃಹದ್ರಂಧ್ರ ಇದೆ. ಸೈನಾಪ್ಸಿಡದಲ್ಲಿ ಎರಡು ಗುಣಗಳಿವೆ. ಪೆಲಿಕೋಸಾರಿಯ ಮತ್ತು ಥೀರಾಪ್ಸಿಡ. ಪೆಲಿಕೋಸಾರಿಯಗಳು ಕಾಟಲೋಸಾರಿಯಗಳೊಡನೆ ಬಾಳಿದುವು. ಇದಕ್ಕಿಂತ ಹೆಚ್ಚು ಪರಿಷ್ಕರಿಸಿದ ಗಣ ಥೀರಾಪ್ಸಿಡ. ಇವು ಪರ್ಮಿಯನ್ ಕಲ್ಪದ ಮಧ್ಯಭಾಗದಲ್ಲಿ ಕಾಣಿಸಿಕೊಂಡು ಜೂರಾಸಿಕ್ ಕಲ್ಪದ (190–135 ದ.ಲ.ವ. ಪ್ರಾಚೀನ) ವರೆಗೆ ಬಾಳಿದುವು. ಈ ಗಣದ ಅನೇಕ ಗುಂಪುಗಳಲ್ಲಿ ಸಸ್ತನಿ ಪ್ರಾಣಿಗಳ ಕಪಾಲದ ಲಕ್ಷಣಗಳು ಮಜಲು ಮಜಲಾಗಿ ಕಾಣಿಸಿಕೊಂಡುವು. ಇದರೊಂದಲೇ ಈಗಿನ ಸಸ್ತನಿಗಳ ವಂಶಜರನ್ನು ಥೀರಾಪ್ಸಿಡ ಎಂದು ಪರಿಗಣಿಸಲಾಗಿದೆ.

ಅಲ್ಲೊಸಾರಸ್

**ಯೂರ್ಯಾಪ್ಸಿಡ ಉಪವರ್ಗ:** ಬೃಹದ್ರಂಧ್ರ ಒಂದೇ, ಸ್ಥಾನ ಬೇರೆ. ಇದರಲ್ಲಿ ಹಲವಾರು ದ್ವಿಚರಿಗಳು ಸೇರಿವೆ. ಪ್ರೊಟೊರೊಸಾರಿಯ ಮತ್ತು ಸೌರಾಪ್ಟೆರಿಜಿಯ ಗಣಗಳು ಈ ಉಪವರ್ಗದವು. ಇವುಗಳ ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ.

**ಲೆಪಿಡೋಸಾರಿಯ ಮತ್ತು ಆರ್ಕಿಯೋಸಾರಿಯ ಉಪವರ್ಗಗಳು:** ಒಟ್ಟು ಹೆಸರು ಡೈಆಪ್ಸಿಡ ಉಪವರ್ಗ, ಇದನ್ನು ಉರಗಕಾಂಡದ ಮಧ್ಯಶಾಲೆಯೆಂದೂ ಇವರ ಎರಡು ಮುಖ್ಯ ಉಪಶಾಖೆಗಳು ಲೆಪಿಡೋಸಾರಿಯ ಮತ್ತು ಆರ್ಕೋಸಾರಿಯಗಳೆಂದೂ ಪರಿಗಣಿಸಲಾಗಿದೆ. ಅನಾಪ್ಸಿಡ ಮತ್ತು ಸೈನಾಪ್ಸಿಡಗಳನ್ನು ಬಿಟ್ಟರೆ ಅನೇಕ ಉರಗಗಳ ಕಪಾಲದ ಒಂದೊಂದು ಪಕ್ಕದಲಿಯೂ ಎರಡು ಬೃಹದ್ರಂಧ್ರಗಳಿದ್ದುವು. ಆದ್ದರಿಂದಲೇ ಡೈಅಪ್ಸಿಡ ಎಂಬ ಹೆಸರುಬಂದಿದೆ. ಲೆಪಿಡೋ ಸಾರಿಯ ಉಪವರ್ಗದಲ್ಲಿ ಮೂರು ಗಣಗಳಿವೆ: ಯೂಸೊಕಿಯ, ರ್‍ಹಿಂಕೋಕಿಫಾಲಿಯ ಮತ್ತು ಸ್ಕ್ವಮಾಟ. ಮೊದಲು ರೂಪುಗೊಂಡದ್ದು ಯೂಸೊಕಿಯ ಗಣ. ಚಿಕ್ಕ ಪ್ರಾಣಿ, ನೋಡಲು ಹಲ್ಲಿಯಂತೆ, ಗುಣಲಕ್ಷಣಗಳೂ ಬಹುಶಃ ಅದರಂತೆಯೇ ಇದ್ದಿರಬಹುದು. ಟ್ರಯಾಸಿಕ್ ಮತ್ತು ಕ್ರಿಟೇಷಿಯನ್ ಕಲ್ಪಗಳಲ್ಲಿ ಮೊಸಳೆಗಳಂತೆ ತೋರುತ್ತಿದ್ದ ಪ್ರಾಣಿಗಳನ್ನೊಳಗೊಂಡಂತೆ ಹಲವಾರು ಉರಗಗಳನ್ನು ಈ ಗಣದಲ್ಲಿ ಸೇರಿಸಲಾಗಿದೆ. ಟ್ರಯಾಸಿಕ್ ಕಲ್ಪದಲ್ಲಿ ಮೈದಳೆದ ರ್‍ಹಿಂಕೋಫಾಲಿಯ ಗಣದ ಜೀವಂತ ಉಳಿಕೆಯೇ ನ್ಯೂಜಿಲೆಂಡಿನ ಟ್ವಾಟರಾ (ಸ್ಫೆನೊಡನ್). ಉಳಿದ ಎಲ್ಲ ಪ್ರಭೇದಗಳೂ ಕ್ರಿಟೇಷಿಯನ್ ಕಲ್ಪದಲ್ಲಿ ಗತಿಸಿ ಹೋದುವು. ಸ್ಕ್ವಮಾಟಗಣ ಲೆಪಿಡೋಸಾರಿಯ ಉಪವರ್ಗದಲ್ಲಿ ತಲೆದೋರಿದ ಅಂತಿಮ ಗಣ. ಹಲ್ಲಿ ಮತ್ತು ಹಾವುಗಳು ಇದರಲ್ಲಿ ಯಶಸ್ವಿಯಾಗಿ ಬದುಕಿ ಬೆಳೆದು ಬಾಳಿದ ಪ್ರಾಣಿಗಳು. **(ನೋಡಿ–ಹಲ್ಲಿ; ಹಾವು)**.

ಅರ್ಕಿಯೋಸಾರಿಯದ ಆದಿ ಗಣ ಥೀಕೋಡಾಂಶಿಯ. ಇದರ ಕೆಲವು ಪ್ರಭೇದಗಳ ಕಪಾಲ ರಚನೆ ಇಂದಿನ ಪಕ್ಷಿಗಳ ಕಪಾಲವನ್ನು ಹೋಲುತ್ತಿತ್ತು. ಇವು ದ್ವಿಪಾದಿಗಳ ಲಕ್ಷಣಗಳೆಡೆಗೆ ವಿಕಸಿಸುತ್ತಿದ್ದುವು. ದವಡೆಗಳಲ್ಲಿದ್ದ ಗುಣಿಗಳಲ್ಲಿ ಹಲ್ಲುಗಳು ಜೋಡಣೆಗೊಂಡಿದ್ದುವು. (ಥೀಕೋಡಾಂಟ್ ಎಂದರೆ ಗುಣಿಗಳಲ್ಲಿ ಜೋಡಣೆಗೊಂಡ ಹಲ್ಲುಗಳು ಎಂದರ್ಥ). ಆರ್ಕಿಯೋಸಾರಿಯ ಉಪವರ್ಗದ ಕ್ರಕೋಡೀಲಿಯ ಗಣಕ್ಕೆ ಮೊಸಳೆಗಳು ಮತ್ತು ನೆಗಳೆಗಳು ಸೇರಿವೆ. ಜೂರಾಸಿಕ್ ಕಲ್ಪದ ಆದಿ ಭಾಗದಲ್ಲಿ ಕಾಣಿಸಿಕೊಂಡ ಈ ಗಣ ಇಲ್ಲಿಯವರೆಗೆ ಬಾಳಿದೆ. ಭೂಮಿಯಿಂದ ನೀರಿಗೆ ಹಿಂತಿರುಗಿದ ಉರಗಗಳಲ್ಲಿ ಇದೂ ಒಂದು. ಜಲಚರಿಗಳನ್ನು ತಿಂದು ಜೀವಿಸಲು ಅನುಕೂಲವಾಗುವಂತೆ ಇದು ದೇಹವನ್ನೇನೋ ಅಳವಡಿಸಿಕೊಂಡಿತು. ಆದರೆ ಇತರ ಉರಗಗಳಿಗಿರುವಂತೆ ಶ್ವಾಸಕೋಶವೇ ಇದರ ಶ್ವಾಸಾಂಗ. ಆರ್ಕಿಯೋಸಾರಿಯದ ಮತ್ತೆರಡು ಪ್ರಮುಖ ಗಣಗಳು. ಸೌರಿಶ್ಚಿಯ ಮತ್ತು ಅರ್ನಿತಿಶ್ಚಿಯ ಸೌರಿಶ್ಚಿಯ ಗಣ ಟ್ರಯಾಸಿಕ್ ಕಲ್ಪದ ಅಂತ್ಯಭಾಗದಿಂದ ಕ್ರಿಟೇಷಿಯಸ್ ಕಲ್ಪದ ಅಂತ್ಯದವರೆಗೂ ಬಾಳಿದರೆ ಆರ್ನಿತಿಶ್ಚಿಯ ಗಣ ಜೂರಾಸಿಕ್ ಕಲ್ಪದ ಮಧ್ಯಭಾಗದಿಂದ ಕ್ರಿಟೇಷಿಯಸ್ ಕಲ್ಪದ ಅಂತ್ಯದವರೆಗೆ ಬಾಳಿತು. ಇವೆರಡು ಗಣಗಳ ಕುಟುಂಬಗಳನ್ನು ಒಂದಾಗಿ ಪರಿಗಣಿಸಿ ದೈತ್ಯೋರಗಗಳು ಅಥವಾ ಹೆಗ್ಗೌಳಿಗಳು (ಡೈನೊಸಾರ್ಸ್) ಎಂದು ಕರೆಯಲಾಗಿತ್ತು. ಆದರೆ ಈ ಎರಡು ಗಣಗಳು ಥಿಕೋಡಾಂಶಿಯ ಗಣದಿಂದ ಪ್ರತ್ಯೇಕವಾಗಿ ವಿಕಸಿಸಿದಂಥವು ಎಂದು ಹೇಳಲಾಗಿದೆ. ದ್ವಿಮುಖ ಬೆಳವಣಿಗೆಗೆ ಅವುಗಳ ನಡುಕಟ್ಟಿನ ಅಥವಾ ಸೊಂಟಪಟ್ಟಿಯ ರಚನೆ, ಸ್ವಭಾವ ಮತ್ತು ದವಡೆಯ ರಚನೆಯಲ್ಲಿನ ಭಿನ್ನತೆ ಆಧಾರ. ಸೌರಿಶ್ಚಿಯ ಗಣದಲ್ಲಿ ಹಲ್ಲಿಯಲ್ಲಿರುವಂಥ ಸೊಂಟಪಟ್ಟಿ ಇದ್ದುದರಿಂದ ಉರಗಗಳನ್ನು ಹಲ್ಲಿ ನಡುಕಟ್ಟಿನ ದೈತ್ಯೋರಗಗಳು (ಲಿಜರ್ಡ್‍ಹಿಪ್ಡ್ ಡೈನೊಸಾರ್ಸ್) ಎಂದೂ ಆರ್ನಿತಿಶ್ಚಿಯ ಗಣದಲ್ಲಿ ಪಕ್ಷಿಗಳ ವಿಕಸನಕ್ಕೆ ಅನುಕೂಲವಾದ ಸೊಂಟಪಟ್ಟಿ ಇದ್ದುದರಿಂದ ಅವನ್ನು ಪಕ್ಷಗಳ ಸೊಂಟಪಟ್ಟಿಯ ದೈತ್ಯೋರಗಗಳು ಎಂದೂ ಕರೆಯಲಾಗಿದೆ. ಕೆಲವು ಸೌರಿಶ್ಚಿಯಗಳು ಚತುಷ್ಪಾದಿಗಳಾಗಿ ಬೃಹದಾಕಾರವಾಗಿ ಬೆಳೆದು ಸಸ್ಯಾಹಾರಿಗಳಾದವು. ದ್ವಿಪಾದಿಗಳು ಮಾಂಸಾಹಾರಿಗಳಾದುವು. ಆರ್ನಿತಿಶ್ಚಿಯದ ಕುಟುಂಬಗಳು ದ್ವಿಪಾದಿಗಳಾದರೂ ಮಾಂಸಾಹಾರಿಗಳಾಗಲಿಲ್ಲ. ಆರ್ಕಿಯೋಸಾರಿಯದ ಐದನೆಯ ಗಣ ಟರೋಸಾರಿಯ. ಇದು ಜೂರಾಸಿಕ್ ಕಲ್ಪದ ಆದಿಭಾಗದಲ್ಲಿ ಕಾಣಿಸಿಕೊಂಡು ಕ್ರಿಟೇಷಿಯಸ್ ಕಲ್ಪದವರೆಗೂ ಬಾಳಿತು.

**ಪ್ಯಾರಾಪ್ಸಿಡ ಉಪವರ್ಗ:** ಈವರೆಗೆ ಬರೆದಿರುವ ಉಪವರ್ಗಗಳಿಗೆ ಸೇರಿಸಲಾಗದ ಇತರ ಉರಗ ಗಣಗಳಲ್ಲಿ ಮುಖ್ಯವಾದವು ಮೂರು: ಪ್ರೋಟೋಸಾರಿಯ, ಪ್ಲಿಸಿಯೋಸಾರಿಯ ಮತ್ತು ಇಕ್ತಿಯೋಸಾರಿಯ. ಅನಾಪ್ಸಿಡ ಉರಗಗಳಂತೆ ಕಪಾಲದ ಪ್ರತಿಯೊಂದು ಪಾರ್ಶ್ವದಲ್ಲಿ ಒಂದು ರಂಧ್ರವಿದ್ದರೂ ಆ ರಂಧ್ರದ ಎಲುಬಿನ ಆಯಕಟ್ಟುಗಳು ಬೇರೆಯಾಗಿದ್ದುವು. ಇದರಿಂದ ಈ ಮೇಲಿನ ಮೂರು ಗಣಗಳನ್ನು ಒಟ್ಟಾಗಿ ಪ್ಯಾರಾಪ್ಸಿಡ ಉರಗಗಳು ಎಂದು ಕರೆಯಲಾಗಿದೆ.

ಇವು ಟ್ರಿಯಾಸಿಕ್ ಕಲ್ಪದ ಮಧ್ಯಭಾಗದಲ್ಲಿ ಕಾಣಿಸಿಕೊಂಡು ಕ್ರಿಟೇಷಿಯಸ್ ಕಲ್ಪದ ಅಂತ್ಯದವರೆಗೆ ಬಾಳಿದುವು. ಭೂಮಿಯಿಂದ ಸಮುದ್ರಕ್ಕೆ ಮರಳಿದ ಈ ಗಣಗಳ ಪ್ರಾಣಿಗಳು ತಮ್ಮ ದೇಹರಚನೆಯನ್ನು ಮತ್ಸ್ಯವರ್ಗದ ಪ್ರಾಣಿಗಳಂತೆ ರೂಪಿಸಿಕೊಂಡುವು. ಇವುಗಳಲ್ಲಿ ಹೆಚ್ಚು ಪರಿಷ್ಕರಿಸಿದ ಕುಟುಂಬಗಳು ಬಾಲದ ಸಹಾಯದಿಂದ ಚಲನೆ, ಬೆನ್ನಿನ ರೆಕ್ಕೆ ಮತ್ತು ನಾಲ್ಕು ಕಾಲುಗಳಿಂದ ದೇಹದ ಸಮತೋಲವನ್ನು ಕಾಪಾಡಿಕೊಳ್ಳುವ ಶಕ್ತಿ ಪಡೆದಿದ್ದುವು. ಇವು ಮೀನನ್ನು ಹೆಚ್ಚು ಹೋಲುತ್ತಿದ್ದವು.

**ಅಳಿದ ಉರಗಗಳು:** ಮಧ್ಯ ಜೀವಯುಗದಲ್ಲಿ ಮೆರೆದ ಅಸಂಖ್ಯಾತ ಉರಗಗಳಲ್ಲಿ 90% ನಶಿಸಿಹೋದುವೆಂದು ಹೇಳಬಹುದು. ಇವುಗಳಲ್ಲಿ ಬಹಳ ಮುಖ್ಯವಾದವು–ಭೂಮಿಯ ದೈತ್ಯೋರಗಗಳು (ಡೈನೊಸಾರ್ಸ್), ತಿಮಿಂಗಿಲವನ್ನು ಹೋಲುತ್ತಿದ್ದ ಜಲವಾಸಿಗಳಾದ ಮತ್ಸ್ಯೋರಗಗಳು **(ನೋಡಿ–ಇಕ್ತಿಯೋಸಾರ್ಸ್)** ಮತ್ತು ವಾಯುಮಂಡಲವನ್ನು ಆಕ್ರಮಿಸಿದ ಪಕ್ಷಿಗಳನ್ನು ಹೋಲುತ್ತಿದ್ದ ಹಾರುವ ಟೀರೋಡ್ಯಾಕ್ಟೈಲ ಉರಗಗಳು. ಕಾಟಿಲೋಸಾರಿಯ ಗಣದ ಉರಗಗಳು ಅತ್ಯಂತ ಆದಿಯಲ್ಲಿ ಪ್ರಾರಂಭವಾದುವು. ಇವು ಹೋಲುತ್ತಿದ್ದುದು ಹೆಚ್ಚಾಗಿ ದ್ವಿಚರಿಗಳನ್ನು ಉದರದ ಮೇಲಿನ ಚಲನೆಗೆ ಇವು ಮೊದಲಬಾರಿಗೆ ಪೀಠಿಕೆ ಹಾಕಿದುವು. ಇವುಗಳ ಕಪಾಲ ದ್ವಿಚರಿಗಳ ಕಪಾಲಕ್ಕಿಂತ ಹೆಚ್ಚು ಪರಿಷ್ಕಾರಗೊಂಡಿತ್ತು. ಅಲ್ಲಿ ಮೇಲ್ಛಾವಣಿಯ ಎಲುಬುಗಳು (ರೂಟ್ ಬೋನ್ಸ್) ಪೂರ್ಣವಾಗಿದ್ದುವು. ಈ ಪ್ರಾಣಿಗಳು ಸುಮಾರು 1'–7' ವರೆಗೆ ಬೆಳೆದುವು. ಸೈಮೂರಿಯ ಕುಟುಂಬ ಕಾಟಿಲೋಸಾರಿಯ ಗಣದಲ್ಲಿ ಅತ್ಯಂತ ಪುರಾತನವಾದದ್ದು. ಇದು ಬಹುಶಃ 30 ಕೋಟಿ ವರ್ಷಗಳ ಹಿಂದೆ ಕಾಣಿಸಿಕೊಂಡಿತು. ಇದರ ಅನೇಕ ಪಳೆಯುಳಿಕೆಗಳು ಉತ್ತರ ಅಮೆರಿಕ, ರಷ್ಯ ಮತ್ತು ಆಫ್ರಿಕಗಳಲ್ಲಿ ಸಿಕ್ಕಿರುವುದರಿಂದ ಆ ಪ್ರದೇಶಗಳಲ್ಲಿ ಇವು ಹೇರಳವಾಗಿದ್ದುವೆಂದು ಹೇಳಬಹುದು. ಸೈಮೂರಿಯ ದ್ವಿಚರಿಗಳನ್ನು ಹೋಲುತ್ತಿತ್ತು. ಅದರ ಬಾಯಲ್ಲಿ ಮೊನಚಾದ ಹಲ್ಲುಗಳಿದ್ದುವು. ಕಾಟಿಲೋಸಾರಿಯ ಗಣದಿಂದ ಮುಂದಕ್ಕೆ ಬಹುಶಃ ಸ್ಪಷ್ಟವಾದ ಎರಡು ಕವಲುಗಳು ಕಾಣಿಸಿಕೊಂಡವು: ಕಾಪ್ಟೋರೈನಸ್, ಡೈಡೆಕೋಮಾರ್ಫ, ಮೊದಲಿನ ಕುಟುಂಬದ ಪ್ರಾಣಿಗಳಲ್ಲಿ ಮುಂದೆ ವಿಕಸಿಸಿದ ಸೈನಾಪ್ಸಿಡ ಉರಗಗಳ ಕೆಲವು ಲಕ್ಷಣಗಳಿದ್ದುವು. ಎರಡನೆಯವುಗಳಲ್ಲಿ ಡೈಆಪ್ಸಿಡ ಉರಗಗಳ ಕಡೆಗೆ ವಿಕಸನಗೊಳ್ಳುವ ಸ್ಪಷ್ಟ ಲಕ್ಷಣಗಳಿದ್ದುವು.

ಮುಂದಿನ ಐದು ಕೋಟಿ ವರ್ಷಗಳಲ್ಲಿ ವಿವಿಧ ಜಾತಿಯ ಉರಗಗಳು ವಿಕಸಿಸಿದುವು. ಸೈನಾಪ್ಸಿಡ ಉರಗಗಳ ಆದಿಗಣ ಪೆಲಿಕೋಸಾರಿಯ. ಇದು ಪರ್ಮಿಯನ್ ಕಲ್ಪದ ಆದಿಭಾಗದಲ್ಲಿ ಕಾಣಿಸಿಕೊಂಡಿತು (283 ದ.ಲ.ವ. ಪ್ರಾಚೀನ ಕಾಲ). ಇದರಲ್ಲಿ ಡೈಮಿಟ್ರಿಡಾನ್ ಎಂಬ ಜಾತಿ (ಜೀನಸ್) ಬಹಳ ಮುಖ್ಯವಾದದ್ದು. ಇದಕ್ಕೆ ಎದೆಗೂಡಿತ್ತು. ಪ್ರಾಣಿಯ ಉದ್ದ 10'–12'. ಇದರ ಬೆನ್ನೆಲುಬಿನ ಮುಳ್ಳುಗಳು ಬಹಳ ಉದ್ದವಾಗಿದ್ದುವು. ಅವನ್ನು ಧರ್ಮ ಆವರಿಸಿ ಅದು ನೋಡಲು ಹಡಗಿನಪಟವಂತೆ ಕಾಣಿಸುತ್ತಿತ್ತು. ಪ್ರಾಣಿಯ ಕಾಲುಗಳು ಮಾತ್ರ ಚಿಕ್ಕವಾಗಿಯೇ ಇದ್ದುವು. ಆನಂತರ ವಿಕಸಿಸಿದ ಪೆಲಿಕೋಸಾರಿಯ ಗಣದ ಪ್ರಾಣಿಗಳ ಹಲ್ಲಿನ ರಚನೆಯಲ್ಲಿ ಕ್ರಮೇಣ ರೂಪಭೇದ ಕಂಡುಬರಲು ಪ್ರಾರಂಭಿಸಿತು.

ಸೈನಾಪ್ಸಿಡ ಉರಗಗಳ ಎರಡನೆಯ ಗಣ ಪರ್ಮಿಯನ್ ಕಲ್ಪದ ಮಧ್ಯಭಾಗದಲ್ಲಿ ಕಾಣಿಸಿಕೊಂಡ ಥೀರೊಡಾಂಶಿಯ ಅಥವಾ ಥೀರಾಪ್ಸಿಡ. ಹೆಚ್ಚು ಪರಿಷ್ಕರಿಸಿದ ಈ ಗಣದ ಉರಗಗಳು ಇಂದಿನ ಸಸ್ತನಿಗಳ ಪೂರ್ವಜರು ಎಂದು ನಿಸ್ಸಂದೇಹವಾಗಿ ಹೇಳಬಹುದು. ಅವುಗಳ ಪಳೆಯುಳಿಕೆಗಳು ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ರಷ್ಯಗಳಲ್ಲಿ ಕಾಣಿಸಿಕೊಂಡಿವೆ. ಇವುಗಳಲ್ಲಿ ಅನೇಕವು ಮಾಂಸಾಹಾರಿ ಅಥವಾ ಕೀಟಾಹಾರಿಗಳಾಗಿದ್ದುವು. ಕೆಲವು ಸಸ್ಯಾಹಾರಿಗಳು ಇದ್ದಿರಬಹುದು. ಒಂದಡಿ ಉದ್ದದ ಜಾತಿಯಿಂದ ಇಂದಿನ ಸಿಂಹದ ಗಾತ್ರದವರೆಗೆ ಬೆಳೆದ ಅನೇಕ ಜಾತಿಗಳಿದ್ದವು. ಹಲ್ಲುಗಳಲ್ಲಿ ಬಾಚೀಹಲ್ಲು, ಕೋರೆಹಲ್ಲು ಮತ್ತು ದವಡೆಹಲ್ಲುಗಳೆಂಬ ರೂಪಭೇದಗಳು ಕಾಣಿಸಿಕೊಂಡುವು. ಕ್ರಮೇಣ ಕಪಾಲದ ಎಲುಬುಗಳ ಸಂಖ್ಯೆ ಕಡಿಮೆಯಾಗುತ್ತ

ಸಸ್ತನಿ ಕಪಾಲರಚನೆಯಂತೆ ರೂಪುಗೊಂಡುವು. ಭುಜಪಟ್ಟಿ ಮತ್ತು ಸೊಂಟಪಟ್ಟಿಗಳು ರಚನೆಯಲ್ಲಿ ಸಸ್ತನಿಗಳಿಗಿರುವಂತೆಯೇ ರೂಪುಗೊಂಡುವು. ಸುಮಾರು ಟ್ರಯಾಸಿಕ್ ಕಲ್ಪದ ಅಂತ್ಯಭಾಗದ ವೇಳೆಗೆ ಸಸ್ತನಿಗಳನ್ನು ಹೋಲುವ ಉರಗಗಳು ಕಾಣಿಸಿಕೊಂಡವು. ಇವು ಯಾವುವೂ ಇಂದು ಉಳಿದಿಲ್ಲ.

ಕಾಟಲೋಸಾರಿಯ ಗಣದ ಪ್ರತ್ಯೇಕವಾದ ಕವಲಿನಿಂದ ವಿಕಸಿಸಿದ ಉರಗಗಳ ಚರಿತ್ರೆ ಬೇರೆಯೇ ಇದೆ. ಅವು ಡೈಆಪ್ಸಿಡ ಉರಗಗಳು. ಇವುಗಳಲ್ಲಿ ಥೀಕೋಡಾಂಶಿಯ ಗಣದ ಉರಗಗಳು ಬಹಳ ಮುಖ್ಯವಾದವು. ಇವು ಮಾಂಸಾಹಾರಿಗಳು. ಸಾಲ್ಟೋಪಸ್ ಎಂಬ ಜೀವಿ ಈ ಗಣದ ಒಂದು ವಿಶಿಷ್ಟ ಮಾದರಿ. ಬಹಳ ಬಲಿಷ್ಠವೂ ಉದ್ದವೂ ಆಗಿದ್ದ



ಸ್ಫಿನೊಡಾನ್

ಹಿಂಗಾಲುಗಳು ಓಡಲು ಸಹಾಯಕವಾಗಿದ್ದರೆ ಮೊಟಕಾದ ಮುಂಗಾಲುಗಳು ಆಹಾರವನ್ನು ಬಾಚಿಕೊಳ್ಳಲೂ ಹಿಡಿದುಕೊಳ್ಳಲೂ ಕೈಗಳಂತೆ ಸಹಾಯಕವಾಗಿದ್ದುವು. ಇದರ ದೇಹ ಹಲ್ಲಿಯ ದೇಹದಂತೆ. ತಲೆ ಮೊಸಳೆಯ ತಲೆಯಂತೆ ಉದ್ದವಾದ ಬಾಲವೂ ಇತ್ತು. ಇಂಥ ಪ್ರಾಣಿಗಳೇ ಮುಂದೆ ಕಾಣಿಸಿಕೊಂಡ ದೈತ್ಯೋರಗ ಮತ್ತು ವಾಯುಮಂಡಲದ ಟಿರೋಡ್ಯಾಕ್ಟೈಲ್ ಉರಗಗಳ ಪೂರ್ವಜರಾಗಿರಬೇಕು. ಥೀಕೊಡಾಂಶಿಯದ ಒಂದು ಉಪಗಣ (ಸಬ್ ಆರ್ಡರ್) ಫೈಟೋಸಾರ್ಸ್. ಇವು ಪೂರ್ವಜರಂತೆ ನಾಲ್ಕು ಕಾಲುಗಳ ಮೇಲೆ ನಡೆದುವು. ಇಂದಿನ ಮೊಸಳೆಗಳನ್ನು ಇವು ಹೋಲುತ್ತಿದ್ದುವು. ಉದ್ದ 25'. ಫೈಟೋಸಾರ್ಸ್ ನೀರಿನಲ್ಲಿ ಅತ್ಯಂತ ಕ್ರೂರ ಪ್ರಾಣಿಗಳು. ಮೊಸಳೆಗಳಲ್ಲಿ ನಾಸಿರಂಧ್ರ ಮುಸುಡಿನ ತುದಿಯಲ್ಲಿದ್ದರೆ ಫೈಟೋಸಾರ್ಸ್‌ಗಳಲ್ಲಿ ನಾಸಿಕರಂಧ್ರಗಳು ತಲೆಯ ಮೇಲ್ಭಾಗದಲ್ಲಿದ್ದುವು.

ಥೀಕೋಡಾಂಟ್ ಗಣದಿಂದ ಎರಡು ಸ್ಪಷ್ಟವಾದ ಶಾಖೆಗಳು ಉದ್ಭವಿಸಿದುವು. ಆ ಶಾಖೆಗಳ ವಿಂಗಡಣೆಗೆ ಮುಖ್ಯ ಆಧಾರವೆಂದರೆ ಅವುಗಲ ಸೊಂಟಪಟ್ಟಿಯ ರಚನೆ ಮತ್ತು ವ್ಯತ್ಯಾಸ. ಒಂದು ಶಾಖೆ ಹಲ್ಲಿಗಳ ಸೊಂಟಪಟ್ಟಿಯುಳ್ಳ ಸೌರಿಶ್ಚಿಯ ಗಣ ಮತ್ತೊಂದು ಶಾಖೆ ಪಕ್ಷಿಗಳ ಸೊಂಟಪಟ್ಟಿಯುಳ್ಳ ಆರ್ನಿತಿಶ್ಚಿಯ ಗಣ. ಈ ಎರಡು ಗಣದ ಜೀವಿಗಳನ್ನೂ ಒಟ್ಟಾಗಿ ಡೈನೋಡಾರಿಯ ಎಂಬ ಗಣಕ್ಕೆ ಜೋಡಿಸಿ ಅವನ್ನು ಡೈನೋಸಾರ್ಸ್ ಎಂದು ಕರೆಯಲಾಗಿತ್ತು. ಆದರೆ ಆ ಎರಡು ಶಾಖೆಗಳ ಜೀವಿಗಳ ಕಪಾಲ ಮತ್ತು ಸೊಂಟಪಟ್ಟಿಯ ರಚನೆಗಳಲ್ಲಿ ವ್ಯತ್ಯಾಸವಿದ್ದುವು.

**ಡೈನೊಸಾರುಗಳು:** ಇವನ್ನು ಸಾಮಾನ್ಯವಾಗಿ ನಾಲ್ಕು ಉಪಗಣಗಳಾಗಿ ವಿಂಗಡಿಸಬಹುದು. 1.ಮಾಂಸಾಹಾರಿ ದ್ವಿಪಾದಿ ಡೈನೊಸಾರುಗಳು ಅಥವಾ ಥೀರೊಪೊಡ. 2. ಬೃಹದಾಕಾರದ ಚತುಷ್ಪಾದಿ ದೈತ್ಯೋರಗಗಳು ಅಥವಾ ಸೌರೊಪೊಡ. 3. ಸಸ್ಯಾಹಾರಿ ದ್ವಿಪಾದಿ ದೈತ್ಯೋರಗಗಳು ಅಥವಾ ಆರ್ನಿತೋಪೊಹ. 4. ಕವಚಧಾರಿಯಾದ ದೈತ್ಯೋರಗಗಳು. ಥೀರೊಪೊಡ ಮತ್ತು ಸೌರೊಪೊಡಗಳನ್ನು ಸೌರಿಶ್ಚಿಯ ಗಣಕ್ಕೆ (ಆರ್ಡರ್) ಸೇರಿಸಿದೆ. ಮಿಕ್ಕ ಎರಡು ಬಗೆಗಳನ್ನು ಆರ್ನಿತಿಶ್ಚಿಯ ಗಣಕ್ಕೆ ಸೇರಿಸಿದೆ. ಇವೆರಡೂ ದ್ವಿಪಾದಿಗಳು. ಆದರೆ ಮಾಂಸಾಹಾರಿ ಥೀರೊಪೊಡ ಗಳಿಗೂ ಮತ್ತು ಸಸ್ಯಾಹಾರಿ ಆರ್ನಿತೋಪೊಡಗಳಿಗೂ ಯಾವ ಹತ್ತಿರದ ಸಂಬಂಧವೂ ಇರುವುದಿಲ್ಲ. ಅವು ಎರಡು ನಿರ್ದಿಷ್ಟ ಗಣಗಳಿಗೆ ಸೇರಿವೆ.

ಎಷ್ಟು ಜಾತಿಯ ದೈತ್ಯೋರಗಗಳಿದ್ದುವೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಇದುವರೆಗೆ ದೊರೆತಿರುವ ಪಳೆಯುಳಿಕೆಗಳು ನೂರಾರು ಬಗೆಯವು. ಅವುಗಳ ಸಂಖ್ಯೆ ಬಹುಶಃ 5,000 ಜಾತಿಗಳಿಗೂ ಹೆಚ್ಚು ಇತ್ತೆಂದು ಹೇಳಬಹುದು. ಪಳೆಯುಳಿಕೆಗಳು, ಇಂದಿನ ಉರಗಗಳ ರಚನೆ ಮತ್ತು ಸ್ವಭಾವ ಇವುಗಳ ಆಧಾರದ ಮೇಲೆ ನಾವು ದೈತ್ಯೋರಗಗಳ ವಿಷಯವಾಗಿ ಊಹಿಸಬಹುದು. ವಸ್ತುಸಂಗ್ರಹಾಲಯಗಳ ಕಲಾಕಾರರು ದೈತ್ಯೋರಗಗಳ ಮಾದರಿಗಳನ್ನು ವೈಜ್ಞಾನಿಕ ಸಂಶೋಧನೆಗಳ ಮೇಲೆ ಆಧರಿಸಿ ರಚಿಸಿದ್ದಾರೆ. ಪ್ರಾರಂಭದಲ್ಲಿ ಕಾಣಿಸಿಕೊಂಡ ದೈತ್ಯೋರಗಗಳು 2'–3'ಗಳಷ್ಟು ಚಿಕ್ಕದಾಗಿದ್ದರೂ ಅವು ದ್ವಿಪಾದಿಗಳು. ಅವು ಅತಿವೇಗವಾಗಿ ಚಲಿಸಿ ಇತರ ಸಣ್ಣ ಸಣ್ಣ ಉರಗಗಳನ್ನು ಬೇಟೆಯಾಡಿ ತಿನ್ನುತ್ತಿದ್ದವು. ಜೀವನ ಸಂಗ್ರಾಮದಲ್ಲಿ ಗೆದ್ದ ದೈತ್ಯೋರಗಗಳು ಸರ್ವತೋಮುಖವಾಗಿ ವಿಕಸಿಸಲು ಪ್ರಾರಂಭಿಸಿದುವು.

**ಸೌರಿಶ್ಚಿಯ ಗಣದ ದೈತ್ಯೋರಗಗಳು:** ಈ ಗಣದ ಎರಡು ಉಪಗಣಗಳಲ್ಲಿ ಒಂದು ದ್ವಿಪಾದಿ ಮಾಂಸಾಹಾರಿ ಥೀರೊಪೊಡಗಳು. ಮತ್ತೊಂದು ಸಸ್ಯಾಹಾರಿ ಸೌರೊಪೊಡಗಳು. ಮೊದಲಿನವು ಆದಿ ಅಥವಾ ಪುರಾತನವಾದ ಡೈನೊಸಾರುಗಳೆಂದು ಪ್ರಸಿದ್ಧವಾಗಿವೆ. ಇವು ತಮ್ಮ ಪೂರ್ವಜರಂತೆ ದ್ವಿಪಾದಿಗಳಾಗಿ ಮಾಂಸಾಹಾರಿಗಳಾಗಿದ್ದುವು. ಇವುಗಳಲ್ಲಿ ಅಲ್ಲೋಸಾರಸ್ ಜಾತಿ (ಜೀನಸ್) ಮತ್ತು ಟೈರಾನೊಸಾರಸ್ ಕುಲಗಳು ಬಹಳ ಸಮೃದ್ಧಿಯಾಗಿ ಬೆಳೆದುವು. ಅವೆಲ್ಲವೂ ರಾಕ್ಷಸ ಪ್ರವೃತ್ತಿಯ ಅತಿ ಬಲಿಷ್ಠವಾದ ಮಾಂಸಾಹಾರಿ ದೈತ್ಯೋರಗಗಳು. ಇತರ ಉರಗಗಳಿಗೆ ಇವು ಅತಿ ಉಪದ್ರವಕಾರಿಗಳಾಗಿದ್ದುವು. ಅಲ್ಲೋಸಾರಸ್ ಕುಲದ ಪ್ರಾಣಿಗಳ ಉದ್ದ 30'–50'. ಅವಕ್ಕೆ ಘನ ಮತ್ತು ತೂಕವಾದ ಮೂಳೆಗಳಿದ್ದುದರಿಂದ ಒಟ್ಟು ತೂಕ ಹಲವಾರು ಟನ್ನಿನಷ್ಟೇ ಇತ್ತು. ಈ ಗಾತ್ರಕ್ಕೆ ಹೋಲಿಸುವಾಗ ಅದರ ತಲೆ ಸ್ವಲ್ಪ ಚಿಕ್ಕದೆನಿಸಿದರೂ ವಾಸ್ತವವಾಗಿ ಅದು ಇತರ ಉರಗಗಳ ತಲೆಗಿಂತ ದೊಡ್ಡದಾಗಿತ್ತು. ಬಲವಾದ ದವಡೆ, ಉದ್ದ ಮತ್ತು ಮೊನಚಾದ ಹಲ್ಲುಗಳು, ಕೈಯ್ಯ ಮೊದಲ ಮೂರು ಬೆರಳುಗಳಲ್ಲಿ ಅಗಲ ಮತ್ತು ಚೂಪು ನಖಗಳು, ಸ್ಥೂಲ ಶರೀರವನ್ನು ಹೊರಲು ಬಲಿಷ್ಠವಾದ ದಪ್ಪಕಾಲುಗಳು–ಇಷ್ಟು ಈ ಪ್ರಾಣಿಯ ವೈಶಿಷ್ಟ್ಯ. ಇವು ದೈತ್ಯೋರಗಗಳನ್ನು ನಿರ್ಲಕ್ಷ್ಯದಿಂದ ಕೊಂದು ತಿನ್ನುತ್ತಿದ್ದುವು. ಇದುವರೆಗೆ ಜೀವಿಸಿದ ಮಾಂಸಾಹಾರಿಗಳಲ್ಲೆಲ್ಲ ಅತ್ಯಂತ ಭೀಕರ ಮತ್ತು ಬಲಿಷ್ಠ ಪ್ರಾಣಿಯೆಂದರೆ ಮುಂದೆ ಕೆಲವು ಕೋಟಿ ವರ್ಷಗಳ ತರುವಾಯ ಕಾಣಿಸಿಕೊಂಡ ಟೈರಾನೊಸಾರ್ ಅಥವಾ ಕ್ರೂರೋರಗ. ಹಲ್ಲಿಗಳ ನಿರಂಕುಶ ಪ್ರಭು ಎಂದು ಈ ಶಬ್ದದ ಅರ್ಥ. ಇದು ಅಲ್ಲೋಸಾರನ್ನು ಹೋಲುತ್ತಿತ್ತು. ಇದರ ಉದ್ದ ತಲೆಯಿಂದ ಬಾಲದವರೆಗೆ 50'. ತೂಕ 8–10ಟನ್. ಇದು ನಿಂತಾಗ 18'–20' ಎತ್ತರವಾಗಿತ್ತು. ದೈತ್ಯೋರಗಗಳಿಗೂ ಇದು ಮೃತ್ಯುಪ್ರಾಯವಾಗಿತ್ತು. ಇಂದಿನ ಉಷ್ಟ್ರಪಕ್ಷಿಯನ್ನು ಹೋಲುವ ದೈತ್ಯೋರಗಗಳೂ ಕೂಡ ಥೀರೊಪೊಡ ಉಪಗಣಕ್ಕೆ ಸೇರಿದವು. ಅವುಗಳಲ್ಲಿ ಓವಿರಾಪ್ಟರ್ ಎಂಬ ಜೀವಿ ಸಾಧುಪ್ರಾಣಿಯಾಗಿತ್ತು. ಅದು ಇತರ ಉರಗಗಳ ಮೊಟ್ಟೆಗಳನ್ನು ಕದ್ದು ತಿನ್ನುತ್ತಿದ್ದರಿಂದ ಅದಕ್ಕೆ ಎಗ್‌ಸ್ಟೀಲರ್ ಎಂಬ ಹೆಸರು ಇತ್ತು.

ಸೌರೊಪೊಡ ಉಪಗಣದ ದೈತ್ಯೋರಗಗಳು ಭೂತಾಕಾರವಾಗಿ ಬೆಳೆದುವು. ಇವುಗಳಲ್ಲಿ ಮುಖ್ಯವಾದ ಜಾತಿಗಳು (ಜಿನಸ್) ಬ್ರಾಂಟೋಸಾರಸ್, ಬ್ರಾಕಿಯೋಸಾರಸ್ ಮತ್ತು ಡಿಪ್ಲೊಡೋಕಸ್, ಅವೆಲ್ಲ ಸಸ್ಯಾಹಾರಿಗಳು. ಬಾಂಟೋಸಾರಸ್ ಇವುಗಳಲ್ಲಿ ಬಹಳ ಮುಖ್ಯವಾದದ್ದು. ಹೆಸರಿನ ಅರ್ಥ ಗುಡುಗುಹಲ್ಲಿ, ಇದರ ಉದ್ದ ತಲೆಯಿಂದ ಬಾಲದವರೆಗೆ 70'–80'. ಬಾಲದಷ್ಟೇ ಉದ್ದವಾದ ಬಳುಕುವ ಕತ್ತು ಇದಕ್ಕಿತ್ತು. ಸುಮಾರು 60,000 ಪೌಂಡ್ ತೂಕದ ಈ ಪ್ರಾಣಿ ಬಹುಶಃ ಆರು ಆನೆಗಳ ಗಾತ್ರಕ್ಕೆ ಸಮವಾಗಿತ್ತು. ಆದರೆ ಅತಿ ಚಿಕ್ಕದಾದ ತಲೆ, ನಿರ್ಬಲವಾದ ದವಡೆ ಮತ್ತು ಹಲ್ಲುಗಳು ಅದರ ಭೂತಾಕೃತಿಗೆ ಸ್ವಲ್ಪವೂ ತಾಳೆಯಾಗುತ್ತಿರಲಿಲ್ಲ. ನೀರಿನಲ್ಲಿನ ಮೃದು ಸಸ್ಯಗಳನ್ನು ತಿನ್ನಲು ಮಾತ್ರ ಆ ಹಲ್ಲುಗಳು ಸಹಕಾರಿಯಾಗಿದ್ದುವು. ಮಾಂಸಾಹಾರಿಗಳಿಂದ ತಪ್ಪಿಸಿಕೊಳ್ಳಲು ಇವು ನೀರಿಗೆ ಹೋಗುತ್ತಿದ್ದಿರ ಬಹುದು. ಇವುಗಳ ಅವಶೇಷಗಳು ಉತ್ತರ ಅಮೆರಿಕದಲ್ಲಿ ಸಿಕ್ಕಿವೆ. ಅಮೆರಿಕದ ಪಳೆಯುಳಿಕೆಗಳ

ಟೈರನೊಸಾರಸ್

ತಜ್ಞನಾದ ಆರ್.ಬಿ.ಬರ್ಡ್ ಮತ್ತು ಆತನ ವಿದ್ಯಾರ್ಥಿಗಳು ಸೌರಾಪೊಡದ ಕಾಲಿನ ಗುರುತುಗಳಿರುವ ಶಿಲೆಗಳನ್ನು ಕಂಡುಹಿಡಿದರು. ಅದೇ ಸ್ಥಳದಲ್ಲಿ ಮಾಂಸಾಹಾರಿ ಥೀರೊಪೊಡಗಳ ಮೂರು ಬೆರಳಿನ ಕಾಲುಗುರುತುಗಳುಳ್ಳ ಕಲ್ಲುಗಳೂ ದೊರೆತುವು. ಇದರಿಂದ ಮಾಂಸಾಹಾರಿ ಟೈರಾನೋಸಾರುಗಳು ಈ ಸಸ್ಯಾಹಾರಿಗಳನ್ನು ಅಟ್ಟಿಸಿಕೊಂಡು ಹೋಗಿ ಬೇಟೆಯಾಡುತ್ತಿದ್ದಿರಬೇಕೆಂಬ ತೀರ್ಮಾನಕ್ಕೆ ಅವರು ಬಂದರು; ದೈತ್ಯೋರಗಗಳಲ್ಲೆಲ್ಲ ಬ್ರಾಕಿಯೋಸಾರಸ್ ಅತಿ ದೊಡ್ಡದು ಮತ್ತು ತೂಕವಾದದ್ದು, ಇದರ ತೂಕ ಸುಮಾರು ಒಂದು ಲಕ್ಷ ಪೌಂಡ್ ಇದ್ದಿರಬಹುದು. ಮಾಂಸಾಹಾರಿಗಳಿಂದ ತಪ್ಪಿಸಿಕೊಳ್ಳುವುದಿರಲಿ, ತಮ್ಮ ದೇಹವನ್ನು ಭೂಮಿಯ ಮೇಲೆ ಎಳೆಯುವುದೂ ಇವುಗಳಿಗೆ ಪ್ರಯಾಸಕರ. ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳಲು ತಮ್ಮ ಜೀವಮಾನದ ಹೆಚ್ಚುಭಾಗವನ್ನು ಇವು ನೀರಿನಲ್ಲೇ ಕಳೆಯುತ್ತಿದ್ದುವು. ಆಳವಾದ ನೀರಿಗೆ ಇಳಿದರೂ ಉದ್ದವಾದ ಮುಂಗಾಲುಗಳ ಮತ್ತು ಕತ್ತಿನ ನೆರವಿನಿಂದ ತಮ್ಮ ತಲೆಯನ್ನು ನೀರಿನ ಮೇಲೆ ಎತ್ತಿಟ್ಟುಕೊಳ್ಳುತ್ತಿದ್ದುವು. ತಲೆಯ ಮೇಲ್ಭಾಗದಲ್ಲಿ ಒಂದು ಗುಮ್ಮಟದಂಥ ಪ್ರದೇಶವಿತ್ತು. ಅದರಲ್ಲಿ ನಾಸಿಕ ರಂಧ್ರಗಳಿದ್ದುವು. ನೀರಿನಲ್ಲಿ ಅಡಗಿದ್ದರೂ ರಂಧ್ರಗಳ ನೆರವಿನಿಂದ ಉಸಿರಾಡಲು ಸಾಧ್ಯವಾಗುತ್ತಿತ್ತು. 87½ ಉದ್ದವಿದ್ದ ಡಿಪ್ಲೊಡೋಕಸುಗಳು ತಮ್ಮ ಇತರ ಸಂಬಂಧಿಗಳಿಗಿಂತ ಮತ್ತು ಹಗುರುವಾಗಿದ್ದವು. ಈ ಪ್ರಾಣಿಯ ಮಿದುಳು ಬಲು ಕಿರಿದು. ಅದರ ಸೊಂಟಪಟ್ಟಿಯ

ಭಾಗದಲ್ಲಿ ಕಾಲುಗಳಿಗೆ ಹೋಗುವ ಮಿದುಳುಬಳ್ಳಿಯ ನರಗಳು ಒಟ್ಟುಗೂಡಿ ಆ ಪ್ರಾಣಿಯ ಮಿದುಳಿಗಿಂತ ಅನೇಕಪಾಲು ದೊಡ್ಡವಾದ ನರಗಳ ವಸ್ತುವನ್ನು ನಿರ್ಮಿಸಿದ್ದುವು. ಇದನ್ನು ಎರಡನೆಯ ಮಿದುಳು ಎಂದು ಕರೆಯಬಹುದು. ಇದಕ್ಕೆ ಜ್ಞಾನವಾಹಕ ಗ್ರಹಣಶಕ್ತಿ (ಸೆನ್ಸರಿ ಪರ್‌ಸೆಪ್ಷನ್) ಇರದಿದ್ದರೂ ಬಹುಶಃ ಇದು ಸ್ಥೂಲವಾದ ಹಿಂಗಾಲುಗಳ ಚಲನೆಗೆ ಸಹಾಯಕವಾಗಿದ್ದಿರಬಹುದು. ಸೌರೊಪೊಡ ದೈತ್ಯೋರಗಗಳ ಅಸ್ಥಿಪಂಜರದ ರಚನೆಯನ್ನು ಪ್ರಕೃತಿಯ ಒಂದು ಅದ್ಭುತ ವಿಶ್ವಕರ್ಮಾಕೃತಿ (ವಾಸ್ತುಶಿಲ್ಪ) ಎಂದು ಪರಿಗಣಿಸಲಾಗಿದೆ. ಇಷ್ಟಾದರೂ ನೀರಿನಲ್ಲಿ ಆಸರೆ ಪಡೆಯದಿದ್ದರೆ ಇವು ಅಲ್ಲೋಸಾರ್ ಮತ್ತು ಟೈರಾನೋಸಾರುಗಳ ಕ್ರೌರ್ಯಕ್ಕೆ ಸುಲಭವಾಗಿ ಬಲಿಯಾಗುತ್ತಿದ್ದುವು. ಕೋಟ್ಯಂತರ ವರ್ಷಗಳ ಅನಂತರ ಭೂಮಿಯ ಮೇಲಿನ ನೀರು ಬತ್ತುತ್ತ ಬಂದಂತೆ ಇವುಗಳ ಜೀವನ ಕಷ್ಟವಾಗುತ್ತ ಬಂದು ಅವು ಭೂಮಿಯ ಮೇಲೆ ಜೀವಿಸಲಾರದೆ ಹೋದುವು.

**ಪಕ್ಷಿಸೊಂಟಪಟ್ಟಿಯ ಆರ್ನಿತಿಶ್ಚಿಯಗಣದ ದೈತ್ಯೋರಗಗಳು:** ಸ್ಟೀಗೋಸಾರಸ್ ಪ್ರಾಣಿ ಆರ್ನಿತಿಶ್ಚಿಯ ಗಣದ ಉಪಗಣ. ಇದು ಸಸ್ಯಾಹಾರಿ ಮತ್ತು ಚತುಷ್ಪಾದಿ. ಬೆನ್ನಿನಮೇಲೆ ತಲೆಯಿಂದ ಬಾಲದವರೆಗೆ ಹಾಳೆಹಾಳೆಯಾಗಿ ಎದ್ದುನಿಂತ ಒಂದು ಸಾಲು ಚಿಪ್ಪುಗಳು ಮತ್ತು ಬಾಲದಮೇಲೆ ಇದ್ದ ನಾಲ್ಕು ದೊಡ್ಡ ಸಲಾಕಿಗಳಂಥ ಮುಳ್ಳುಗಳೂ ಆತ್ಮಸಂರಕ್ಷಣೆಯ ಸಾಧನವಾಗಿದ್ದವು. ಆಂಕೈಲೋಸಾರಸಿನ 20' ಉದ್ದದ ದೇಹವನ್ನು ಸಂಪೂರ್ಣವಾಗಿ ರಕ್ಷಾಕವಚಗಳು ಮುಚ್ಚಿದ್ದುವು. ಮುಳ್ಳುಗಳಿಂದ ಕೂಡಿದ ಬಲಿಷ್ಠವಾದ ಬಾಲ ಅದರ ಒಂದು ಪ್ರಬಲ ಆಯುಧವಾಗಿತ್ತು. ಕಾಂಪ್ಸೋಸಾರಸ್ ತಮ್ಮ ಪೂರ್ವಜರಾದ ಥೀಕೋಡಾಂಟುಗಳಂತೆ ದ್ವಿಪಾದಿಗಳು. ಇವು ಅನಂತರ ಕಾಣಿಸಿಕೊಂಡ ಬಾತು ಕೊಕ್ಕಿನ ಮೂತಿಯ (ಡಕ್‌ಬಿಲ್ಡ್ ಡೈನೋಸಾರ್ಸ್) ದೈತ್ಯೋರಗಗಳ ಪೂರ್ವಜಗಳು. 40' ಉದ್ದದ ಅನಾಟೋಸಾರಸ್ ಇಂಥ ಒಂದು ಬಾತುಕೊಕ್ಕಿನ ದೈತ್ಯೋರಗ. ಅದರ ಮುಸುಡು ಬಾತುಕೋಳಿಯ ಕೊಕ್ಕಿನಂತಿತ್ತು. ಪ್ರತಿಯೊಂದು ಸಾಲಿನಲ್ಲೂ ನೂರಾರು ಹಲ್ಲುಗಳಿದ್ದುವು. ಬಹುಶಃ ಕಾಂಪ್ಸೋಸಾರಸಿನಿಂದ ವಿಕಸಿಸಿದ ಇಗ್ವಾನೊಡಾನ್ 25'–30'ವರೆಗೆ ಬೆಳೆದ ದ್ವಿಪಾದಿ ಸಸ್ಯಾಹಾರಿ ದೈತ್ಯೋರಗ. ಮೊಟ್ಟಮೊದಲು ದೊರೆತ ಇದರ ಪಳೆಯುಳಿಕೆಗಳು ವಿಜ್ಞಾನಿಗಳಿಗೆ ದೈತ್ಯೋರಗಗಳ ಪೂರ್ಣರೂಪ ಗಾತ್ರಗಳನ್ನು ಕಲ್ಪಿಸಿಕೊಳ್ಳಲು ನೆರವಾದವು. ಇಂದು ಬದುಕಿರುವ ಇಗ್ವಾನ ಜಾತಿಯ ಹಲ್ಲಿಯ ಬೃಹತ್ ಸ್ವರೂಪ ಇದಾಗಿರಬೇಕು ಎಂಬ ತಪ್ಪು ತಿಳಿವಳಿಕೆಯ ಮೇಲೆ ಅದನ್ನು ಇಗ್ವಾನೊಡಾನ್ ಎಂದು ಕರೆಯಲಾಯಿತು. ಇದರ ಪಳೆಯುಳಿಕೆಗಳು ಮೊದಲು ದೊರೆತದ್ದು ಇಂಗ್ಲೆಂಡಿನಲ್ಲಿ. ಅನಂತರ 1878ರಲ್ಲಿ ಬೆಲ್ಜಿಯಂನ ಕಲ್ಲಿದ್ದಲ ಗಣಿಯಲ್ಲಿ 30 ಪೂರ್ಣಪಳೆಯುಳಿಕೆಗಳು ಸಿಕ್ಕಿವೆ. ಸಸ್ಯಾಹಾರಿಯಾದರೂ ಈ ದ್ವಿಪಾದಿಗೆ ಹರಿತವಾದ ಹೆಬ್ಬೆರಳಿನ ತುದಿಯಲ್ಲಿದ್ದ ಚೂಪಾದ ಮುಳ್ಳು ರಕ್ಷಣಾಯುಧವಾಗಿತ್ತು. ಕೊಂಬಿನ ದೈತ್ಯೋರಗಗಳಲ್ಲಿ ಇಂದಿನ ಗೇಂಡಾ ಮೃಗವನ್ನು (ಖಡ್ಗಮೃಗ, ರೈನೋಸಾರಸ್) ಹೋಲುತ್ತಿದ್ದ ಟ್ರೈಸೆರಟಾಪ್ಸ್ ಬಹಳ ಮುಖ್ಯವಾದದ್ದು. ಉತ್ತರ ಅಮೆರಿಕದಲ್ಲಿ ಹೇರಳವಾಗಿತ್ತು. ಇದರ ತಲೆಯ ಅಗಲ 7'ಗಳಷ್ಟು. ಆತ್ಮಸಂರಕ್ಷಣೆಗೆ ಸಾಧನವಾಗಿ ಮೂರು ಕೊಂಬುಗಳಿದ್ದವು; 3' ಉದ್ದದ ಎರಡು ಕೊಂಬುಗಳು ಎರಡು ಕಣ್ಣುಗಳ ಮೇಲೆ; ಮತ್ತೊಂದು ಸ್ವಲ್ಪ ಚಿಕ್ಕದು ಮೂಗಿನಮೇಲೆ. ಬಹುಶಃ ಅಲ್ಲೋಸಾರ್ಸ್ ಮತ್ತು ಟೈರಾನೋಸಾರಿನಂಥ ಭೀಕರ ಮಾಂಸಾಹಾರಿಗಳೊಡನೆ ಸೆಣಸಿ ಕಾದಾಡಿ ಕೆಲವು ವೇಳೆ ಜಯಶಾಲಿಯಾದ ದೈತ್ಯೋರಗವೆಂದರೆ ಟ್ರೈಸೆರಟಾಪ್ಸ್ ಎಂದು ಊಹಿಸಲಾಗಿದೆ.

ಥೀಕೋಡಾಂಟಿನ ಸಾಲ್ಟೋಪಸ್ ಎಂಬ ಜೀವಿಯ ವಿಷಯ ಈಗಾಗಲೇ ಹೇಳಿದೆ. ಅಂಥ ಕೆಲವು ಜೀವಿಗಳು ಬಹುಶಃ ವಾಯು ಮಂಡಲವನ್ನು ಆಕ್ರಮಿಸಲು ತೊಡಗಿದುವು. ಅವುಗಳಿಂದ ವಿಕಸಿಸಿದ ಗಣವನ್ನು ಟೀರೊಡ್ಯಾಕ್ಟೈಲ ಅಥವಾ ಪಕ್ಷಾಂಗುಲೀಯ ಎಂದು ಕರೆಯಲಾಗಿದೆ. ಇದು ಜೂರಾಸಿಕ್ ಮತ್ತು ಕ್ರಿಟೇಷಿಯಸ್ ಕಲ್ಪಗಳಲ್ಲಿ ಹೇರಳವಾಗಿತ್ತು. ಇದರ ಮುಂಗಾಲುಗಳು ಇಂದಿನ ಬಾವಲಿಗಳಿಗಿರುವಂತೆ ರೆಕ್ಕೆಗಳಾಗಿ ರೂಪಗೊಂಡಿತ್ತು. ಆದರೆ ಪಕ್ಕಗಳಲ್ಲಿರಲಿಲ್ಲ. ಬಾಲ ಬಹಳ ಉದ್ದ. ತುದಿಯಲ್ಲಿ ಇದರ ಆಕಾರ ಮೀನಿನ ಈಜುರೆಕ್ಕೆಯಂತೆ ಇದನ್ನು ವಾಯುಮಂಡಲದ ಹಾರುವ ಪೆಡಂಭೂತ ಎಂದು ಕರೆಯಬಹುದು. ಇದು ಮಾಂಸಾಹಾರಿ ಪ್ರಾಣಿ. ಇದರಲ್ಲಿ ಮೊದಮೊದಲು ವಿಕಸಿಸಿದವು ಕೇವಲ ಗುಬ್ಬಚ್ಚಿಯಷ್ಟು ಚಿಕ್ಕದಾಗಿದ್ದುವು. ಉದ್ದವಾದ ದವಡೆ. ಅದು ತುಂಬ ಹಲ್ಲುಗಳು; ಇವು ನೋಡಲು ಅಸಹ್ಯವಾಗಿದ್ದುವು. ಕ್ರಮೇಣ ಇವುಗಳ ಗಾತ್ರ ಇಂದಿನ ಪುಟ್ಟ ವಿಮಾನದಷ್ಟು ಬೆಳೆಯಿತು. ಅತಿ ದೊಡ್ಡದಾದ ಜೀವಿ ರೆಕ್ಕೆಗಳನ್ನು ಹರಡಿದಾಗ ಅದು ಸುಮಾರು 28'ಗಳಷ್ಟು ಅಗಲವಾಗಿ ವ್ಯಾಪಿಸುತ್ತಿತ್ತು. ರ್‍ಯಾಂಫೊರ್ಹಿಂಕಾಯ್ಡಿಯ ಎಂಬ ಜಾತಿಯ (ಜೀನಸ್) ರ್‍ಯಾಂಫೊರ್ಹಿಂಕಸ್ ಮತ್ತು ಡೈಮಾರೊಡಾನ್ ಎಂಬುವ ಹಾರುವ ಜಾತಿಗಳಿಗೆ ಉದ್ದನೆಯ ಬಾಲವಿತ್ತು; ಅದರ ತುದಿಮೀನಿನ ಈಜುರೆಕ್ಕೆಯಂತಿತ್ತು. ಟೆರೊಡ್ಯಾಕ್ಟೈಲಾಯ್ಡಿಯಾ ಎಂಬ ಜಾತಿಯ ಜೀವಿಗಳಲ್ಲಿ ಬಾಲ ಮೋಟಕು. ಅದೇ ಜಾತಿಯ ಟೀರೊಡ್ಯಾಕ್ಟೈಲಸ್ ಪ್ರಭೇದದ ಉರಗಗಳಿಗೆ ಹಲ್ಲುಗಳು ಇರಲಿಲ್ಲ.

ಅಂದು ಭೂಮಿಯ ಮೇಲೆ ಬಾಳುತ್ತಿದ್ದ ಮಹಾಕ್ರೂರಿ ದೈತ್ಯೋರಗಗಳ ಉಪದ್ರವವನ್ನು ತಾಳಲಾರದೆ ಬಹುಶಃ ಕೆಲವು ಉರಗಗಳು ತಮ್ಮ ಪೂರ್ವಜರಂತೆ ಪುನಃ ನೀರಿಗೆ ಮರಳಿರಬಹುದು. ಇದನ್ನು ಮತ್ಸ್ಯೋರಗಗಳು ಎಂದು ಕರೆಯಬಹುದು. ಜಲಜೀವನಕ್ಕೆ ಹೆಚ್ಚು ಪರಿಣಾಮಕಾರಿಯಾಗಿ ತಮ್ಮ ದೇಹವನ್ನು ಅಳವಡಿಸಿಕೊಂಡ ಇವನ್ನು ಎರಡು ಗಣಗಳಿಗೆ ಸೇರಿಸಲಾಗಿದೆ. ಅವು ಪ್ಲೀಸಿಯೋಸಾರಿಯ ಮತ್ತು ಇಕ್ತಿಯೋಸಾರಿಯ. ಈ ಎರಡು ಗಣಗಳ ಜೀವಿಗಳ ಕಪಾಲದಲ್ಲಿ ಪ್ರತಿಯೊಂದು ಪಾರ್ಶ್ವದಲ್ಲೂ ಸೈನಾಪ್ಸಿಡದಂತೆ ಒಂದೊಂದು ಬೃಹದ್ರಂಧ್ರವಿದ್ದರೂ ಅದರ ಎಲುಬಿನ ಆಯಕಟ್ಟಿನಲ್ಲಿ ವ್ಯತ್ಯಾಸವಿದ್ದುದರಿಂದ ಅದನ್ನು ಸೈನಾಪ್ಸಿಡಕ್ಕೆ ಸೇರಿಸಲಾಗುವುದಿಲ್ಲ. ಈ ಕಾರಣದಿಂದ ಆ ಗಣದ ಉರಗಗಳನ್ನು ಪ್ಯಾರಾಪ್ಸಿಡ ಉರಗಗಳು ಎಂದು ಪರಿಗಣಿಸಲಾಗಿದೆ. ಇದೇ ಕಾರಣದ ಮೇಲೆ ನೆಲಸ ಮೇಲೆ ವಾಸಿಸುತ್ತಿದ್ದ ಚಿಕ್ಕ ಹಲ್ಲಿಯಂಥ ದೇಹದ ಅರಿಯೋಸೆಲಿಸನ್ನು ಒಳಗೊಂಡ ಪ್ರೋಟೋಸಾರಿಯ ಗಣವನ್ನು ಪ್ಯಾರಾಪ್ಸಿಡ ಉಪವರ್ಗಕ್ಕೆ ಸೇರಿಸಲಾಗಿದೆ. ಪ್ಯಾರಾಪ್ಸಿಡಗಳು ಉರಗದ ಯಾವ ಶಾಖೆಯಿಂದ ವಿಕಸಿಸಿದುವು ಎಂಬುದು ವಿವಾದಾಸ್ಪದ. ಬಹುಶಃ ಕಾಟಿಲೋಸಾರಿಯದಿಂದ ವಿಕಸಿಸಿದ ಡೈಆಪ್ಸಿಡ ಶಾಖೆಯಿಂದ ಆದಿಯಲ್ಲೇ ಕವಲಾಗಿ ಇವು ವಿಕಸಿಸಿರಬಹುದು ಎಂದು ಊಹಿಸಿದೆ. ಸಮುದ್ರವಾಸಿಗಳಾದ ಸ್ಪಿಸಿಯೋಸಾರಿಯ ಮತ್ತು ಇಕ್ತಿಯೋಸಾರಿಯ ಗಣಗಳ ಮತ್ಸ್ಯೋರಗಗಳ ವಂಶಜರು ಪ್ರೋಟೋಸಾರಿಯ ಗಣದ ಜೀವಿಗಳು ಎಂದೂ ಊಹಿಸಲಾಗಿದೆ. ಮತ್ಸ್ಯೋರಗಗಳಲ್ಲಿ ಕೆಲವು ದ್ವಿಚರಿಗಳಾಗಿದ್ದುವು. ಅವನ್ನು ಸೌರಾಪ್ಟೆರಿಗಿಯ ಎಂಬ ಗಣಕ್ಕೆ ಸೇರಿಸಿದೆ. ಪ್ಲಿಸಿಯೋಸಾರಿಯ ಉಪವರ್ಗದ ಜೀವಿಗಳು ಸಮುದ್ರವಾಸಿಗಳು. ಅವುಗಳ ಅಮೆಯಂಥ ದೇಹಕ್ಕೆ ಉದ್ದವಾದ ಕತ್ತು ಮತ್ತು ದೇಹದ ಗಾತ್ರಕ್ಕೆ ಸ್ವಲ್ಪವೂ ಹೊಂದದ ಚಿಕ್ಕತಲೆ ಮೋಟಕಾದ ಬಾಲಗಳಿದ್ದವು. ಕಾಲುಗಳು ಈಜಲು ಸಹಾಯಕವಾಗಿ ಜಲಪಾದಗಳಾಗಿ ರೂಪಾಂತರಗೊಂಡಿದ್ದವು. ಕೆಲವು ಜಾತಿಗಳು 40'ಗಳಷ್ಟು ಉದ್ದ ಬೆಳೆದಿದ್ದುವು. ಇಕ್ತಿಯೊಸಾರಿಯ ಗಣದ ಮತ್ಸ್ಯೋರಗಗಳು ಜಲವಾಸಕ್ಕೆ ಇನ್ನಷ್ಟು ಚೆನ್ನಾಗಿ ಹೊಂದಿಕೊಂಡು ಟ್ರಿಯಾಸಿಕ್ ಕಲ್ಪದಿಂದ ಜೂರಾಸಿಕ್ ಕಲ್ಪದವರೆಗೆ ಬಾಳಿದವು. ಇವು ಮೀನನ್ನು ಹೋಲುತ್ತಿದ್ದವು. ಉದ್ದ 30'–40'ಗಳಷ್ಟು. ಇಂಗ್ಲೆಂಡ್ ದೇಶದ ಒಬ್ಬ ಬಾಲಕಿಗೆ ಇದರ ಒಂದು ಪಳೆಯುಳಿಕೆ 1811ರಲ್ಲಿ ಸಿಕ್ಕಿತು. ಇಂಥವು ಈಚೆಗೆ ಭೂಮಿಯ ಎಲ್ಲ ಭಾಗಗಳಲ್ಲೂ ದೊರೆತಿವೆ. ಈ ಕಾರಣದಿಂದಲೇ ಇವು ಆ ಯುಗದಲ್ಲಿ ಸಮುದ್ರದಲ್ಲಿ ಹೇರಳವಾಗಿ ಲೀಲಾಜಾಲವಾಗಿ ಬಾಳಿರಬೇಕು ಎಂದು ಊಹಿಸಲಾಗಿದೆ.

ಹೀಗೆ ಭೂಮಿಯ ಮೇಲಿನ ದೈತ್ಯೋರಗಗಳು, ಸಮುದ್ರದ ಪೈಶಾಚಿಕ ಮತ್ಸ್ಯೋರಗಗಳು ಮತ್ತು ವಾಯುಮಂಡಲದ ಪೆಡಂಭೂತಗಳು–ಈ ಪ್ರಾಣಿಗಳಿಂದ ತುಂಬಿದ ಭೂಮಂಡಲ ಅತಿ ಭಯಂಕರವೂ ಅದ್ಭುತವೂ ಇದ್ದಿರಬೇಕು. ಆದರೆ 12ಕೋಟಿ ವರ್ಷಗಳ ಕಾಲ ಸತತವಾಗಿ ನಿರಂಕುಶ ಪ್ರಭುಗಳಾಗಿ ಮೆರೆದ ಈ ಮಹಾಪ್ರಾಣಿಗಳು ಮುಂದೊಂದು ದಿವಸ ನಿಶ್ಶೇಷವಾದುವು. ಇದಕ್ಕೆ ಕಾರಣಗಳು ಇನ್ನೂ ಗೂಢವಾಗಿಯೇ ಉಳಿದಿವೆ. ಈ ವಿಷಯದ ಬಗ್ಗೆ ವಿಜ್ಞಾನಿಗಳು ಊಹಾಪೋಹಗಳನ್ನು ಮಾಡುತ್ತಲೇ ಇದ್ದಾರೆ. ವಾತಾವರಣದಲ್ಲಿ ಬದಲಾವಣೆಯಾಗುತ್ತ ಬಂತು; ಗಾಳಿ ತಂಪಾಗಿ ಶೀತಲಗಾಳಿ ಬೀಸಲು ಪ್ರಾರಂಭಿಸಿತು; ಕ್ರಮೇಣ ಜೌಗುಪ್ರದೇಶಗಳು ಬತ್ತುತ್ತಬಂದುವು; ಅನೇಕ ಹೊಸವರ್ಗದ ಸಸ್ಯಗಳು ಕಾಣಿಸಿಕೊಂಡವು; ಶೀತರಕ್ತದ ಉರಗಗಳಲಿ ಅನೇಕ ಪ್ರಭೇದಗಳು ಅದರಲ್ಲೂ ದೈತ್ಯೋರಗ ಮತ್ಸ್ಯೋರಗ ಮತ್ತು ಹಾರುವ ಪೆಡಂಭೂತಗಳು ಈ ಶೀತಳ ಹವೆಯನ್ನು ತಾಳಲಾರದೆ ಗತಿಸಿಹೋಗಿರಬಹುದು. ಸಮುದ್ರದ ಶೈತ್ಯವೂ ಹೆಚ್ಚಿ ಮತ್ಸ್ಯೋರಗಗಳು ಅವಸಾನಗೊಂಡುವು. ಸಸ್ಯಾಹಾರಿ ದೈತ್ಯೋರಗಗಳಿಗೆ ಹೊಸಬಗೆಯ ಸಸ್ಯಾಹಾರ ಒಗ್ಗಲಿಲ್ಲ. ಹೀಗೆ ಉಂಟಾದ ಅಹಾರಭಾವದಿಂದ ಅವು ಮಡಿದಿರಬಹುದು. ಅದರ ಪರಿಣಾಮವಾಗಿ ಅವನ್ನು ತಿಂದು ಜೀವಿಸುತ್ತಿದ್ದ ಮಾಂಸಾಹಾರೀ ದೈತ್ಯೋರಗಗಳಿಗೂ ಆಹಾರದ ಕೊರತೆ ಪ್ರಾರಂಭವಾಯಿತು. ಇದರಿಂದ ಕ್ರಮೇಣ ಅವೂ ಅವಸಾನ ಹೊಂದಿರಬಹುದು ಎಂಬುದು ಒಂದು ವಾದ.

ಸ್ವೀಕಾರಾರ್ಹವಾದ ಇನ್ನೊಂದು ತರ್ಕಸರಣಿ ಇದೆ. ಈ ದೈತ್ಯಜೀವಿಗಳಿಗೆ ತಮ್ಮ ಭೂತಾಕಾರದ ಮೊಟ್ಟೆಗಳನ್ನು ಯಾವ ಮರೆಯಲ್ಲಾಗಲೀ ಅಥವಾ ರಕ್ಷಣೆಯಲ್ಲಾಗಲೀ ಇಡಲು ಸಾಧ್ಯವಾಗುತ್ತಿರಲಿಲ್ಲ. ನೆಲದಮೇಲೆಯೇ ಅವನ್ನು ಇಡುತ್ತಿದ್ದವು. ಚಿಕ್ಕ ಸರೀಸೃಪಗಳೂ ಮತ್ತು ಆ ವೇಳೆಗೆ ವಿಕಸಿಸುತ್ತಿದ್ದ ಆದಿ ಸಸ್ತನಿಗಳೂ ಈ ಮೊಟ್ಟೆಗಳನ್ನು ನಾಶಪಡಿಸಿರಬಹುದು. ಡಾಕ್ಟರ್ ಮೋರಿಯವರ ಕೌತುಕವಾದ ಊಹೆಯೊಂದಿದೆ. ಒಂದು ಬಗೆಯ ಅಸಾಧಾರಣವಾದ ಸಾಂಕ್ರಾಮಿಕ ಜಾಡ್ಯಕ್ಕೆ ಈ ದೈತ್ಯೋರಗಗಳು ಬಲಿಯಾಗಿ ನಿಶ್ಶೇಷವಾಗಿ ಅಳಿದವು; ಸಾಂಕ್ರಾಮಿಕ ರೋಗಗಳನ್ನುಂಟುಮಾಡುವ ಜೀವಾಣುಗಳು ಪ್ರಾರಂಭದಲ್ಲಿ ಸ್ವತಂತ್ರ ಜೀವಿಗಳಾಗಿದ್ದು ಉರಗಗಳು ಉನ್ನತಸ್ಥಿತಿಗೆ ತಲಪುವ ವೇಳೆಗೆ ಬಹುಶಃ ಪರತಂತ್ರಜೀವಿಗಳಾಗಿ ಪರಿಣಮಿಸಿ ಈ ದೈತ್ಯೋರಗಗಳ ವಿಪತ್ತಿಗೆ ಕಾರಣವಾಗಿರಬಹುದು ಎಂಬುದು ಅದರ ಸಾರ. ಇದು ನಿಜವಾದ ಪಕ್ಷದಲ್ಲಿ, ಇತರ ಉರಗ ಮತ್ತು ಅನೇಕ ಇತರ ವರ್ಗದ ಪ್ರಾಣಿಗಳು ಈ ವಿಪತ್ತಿನಿಂದ ಹೇಗೆ ಪಾರಾದುವು ಎಂಬ ಪ್ರಶ್ನೆ ಏಳುತ್ತದೆ. ಮೇಲೆ ಹೇಳಿದ ವಿಪತ್ತುಗಳು ಇದ್ದರೂ ಅವನ್ನು ಎದುರಿಸಿ ಉಳಿದಿರುವ ಸಣ್ಣ ಸಣ್ಣ ಉರಗಗಳನ್ನು ಗಮನಿಸಿದರೆ ಆ ದೈತ್ಯೋರಗಗಳ ವಿನಾಶಕ್ಕೆ ಕಾರಣ ಇಂಥಾದ್ದೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಬಹುಶಃ ಮೇಲೆ ಹೇಳಿದ ಎಲ್ಲ ಊಹೆಗಳ ಮೊತ್ತ ಇದ್ದರೂ ಇರಬಹುದು.

ದೈತ್ಯೋರಗಗಳ ವಿಷಯವಾಗಿ ಊಹಾಪೋಹಗಳಲ್ಲದೇ ಕೆಲವು ತಪ್ಪು ಕಲ್ಪನೆಗಳೂ ಇರುವುದುಂಟು ಮೊದಲನೆಯದಾಗಿ ದೈತ್ಯೋರಗ ಒಂದ ಬೃಹತ್ ಸ್ವರೂಪದ ಸರೀಸೃಪ ಮಾತ್ರ ಎಂದು. ಕೇವಲ ಕೋಳಿ ಮರಿಯಷ್ಟು ಚಿಕ್ಕದಾದ ದೈತ್ಯೋರಗವೂ ಕೂಡ ಇದ್ದದಲ್ಲದೇ ಅನೇಕ ದೈತ್ಯೋರಗಗಳ ಉದ್ದ 6'–8'ವರೆಗೆ ಮಾತ್ರ ಇತ್ತು. ಎರಡನೆಯ ತಪ್ಪು ಕೆಲವು ಚಿತ್ರಕಾರರ ಕಾಲ್ಪನಿಕ ಚಿತ್ರಗಳಿಂದ ಮೂಡಿದೆ. ಆದಿಮಾನವ ದೈತ್ಯೋರಗಗಳ ಎದುರು

ಹೋರಾಡುತ್ತಿರುವ ಚಿತ್ರಗಳು ಅನೇಕ ಇವೆ. ಏಳು ಕೋಟಿ ವರ್ಷಗಳ ಹಿಂದೆಯೇ ದೈತ್ಯೋರಗಗಳು ಕಣ್ಮರೆಯಾದವು. ಆ ವೇಳೆಗೆ ಮಾನವ ಇನ್ನೂ ವಿಕಸಿಸಿಯೇ ಇರಲಿಲ್ಲ. ಮಾನವನ ಹತ್ತಿರದ ಪೂರ್ವಜರು ಕೇವಲ 10ಲಕ್ಷ ವರ್ಷಗಳ ಹಿಂದೆ ಇದ್ದಿರಬಹುದು ಎಂದು ಊಹಿಸಲಾಗಿದೆ.

**ಇಂದು ಉಳಿದಿರುವ ಉರಗಗಳು:** ಇವನ್ನು ನಾಲ್ಕು ಮುಖ್ಯ ಗಣಗಳಿಗೆ ಸೇರಿಸಲಾಗಿದೆ– ಕ್ರಾಕಡಿಲಿಯ, ರ್‍ಹಿಂಕೋಕಿಫೇಲಿಯ, ಸ್ಕ್ವಮಾಟ, ಕೀಲೋನಿಯ.

**ಕ್ರಾ ಕಡಿಲಿಯ ಗಣ:** ಡೈ ಆಪ್ಸಿಡ ಉರಗಗಳ ಆರ್ಕಿಸೌರಿಯ ಉಪವರ್ಗಕ್ಕೆ ಸೇರಿದೆ. ನೆಗಳೆಗಳು, ಮೊಸಳೆಗಳು ಈ ಗಣದ ಪ್ರಾಣಿಗಳು. ಕ್ರಾಕಡಿಲಿಯದ ಪಳೆಯುಳಿಕೆಗಳು ಮಧ್ಯಜೀವಯುಗದ ಜೂರಾಸಿಕ್ ಮತ್ತು ಕ್ರಿಟೇಷಿಯಸ್ ಕಲ್ಪಗಳ ಶಿಲೆಗಳಲ್ಲಿ ಸಿಕ್ಕಿವೆ. ಇವು ಜೂರಾಸಿಕ್ ಕಲ್ಪದ ಆರಂಭದಲ್ಲಿ ವಿಕಸಿಸಿ ಇಲ್ಲಿಯವರೆಗೂ ಬಾಳಿ ಬೆಳೆದಿವೆ. ಸುಮಾರು 16 ಕೋಟಿ ವರ್ಷಗಳಿಂದಲೂ ಇವುಗಳ ದೇಹರಚನೆಯಲ್ಲಿ ಹೆಚ್ಚು ಬದಲಾವಣೆ ಆಗಿಲ್ಲ ಎಂದು ಕೆಲವು ತಜ್ಞರ ಅಭಿಪ್ರಾಯ. ಉಷ್ಣವಲಯದಲ್ಲಿ ಇವು ಸಾಮಾನ್ಯ. ಶೀತಳ ನೀರಿರುವಲ್ಲಿ ಕಾಣಿಸವು. ಅನಾದಿಕಾಲದಲ್ಲಿ ಮೊಸಳೆಗಳು ಪ್ರಪಂಚದ ಎಲ್ಲ ಭಾಗಗಳಲ್ಲೂ ಹರಡಿದ್ದುವು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯ ಇದೆ. ಇಂಗ್ಲೆಂಡ್ ದೇಶದಲ್ಲಿ ಈಗ ಮೊಸಳೆಗಳ ಗಣ ಇಲ್ಲದಿದ್ದರೂ ಹಿಂದೆ ಇತ್ತು ಎಂಬುದಕ್ಕೆ ಸಾಕ್ಷಿಯಾಗಿ ಅದರ ಪಳಯುಳಿಕೆಗಳು ಸಿಕ್ಕಿವೆ. ಆಫ್ರಿಕ, ಬ್ರೆಜ಼ಿಲ್ ಮತ್ತು ದಕ್ಷಿಣ ಏಷ್ಯದ ನದಿ ಜೌಗು ಪ್ರದೇಶಗಳಲ್ಲೂ ಅವು ಸಮೃದ್ಧಿಯಾಗಿ ಬಾಳಿವೆ. ಅದರಲ್ಲೂ ಆಫ್ರಿಕದ ನದಿಗಳಲ್ಲಿಯೂ ದಕ್ಷಿಣ ಅಮೆರಿಕದ ಅಮೆಜ಼ಾನ್ ನದಿಗಳಲ್ಲಿಯೂ ಮೊಸಳೆಗಳ ಹಿಂಡುಗಳನ್ನು ವಿಪುಲವಾಗಿ ಕಾಣಬಹುದು. ಸಮಶೀತೋಷ್ಣವಲಯದ ಅನೇಕ ಪ್ರದೇಶಗಳಲ್ಲಿಯೂ ಚೀನ ಆಸ್ಟ್ರೇಲಿಯ ಮತ್ತು ಮಧ್ಯ ಅಮೆರಿಕಗಳಲ್ಲೂ ಇವು ಸಾಕಷ್ಟು ಸಂಖ್ಯೆಯಲ್ಲಿವೆ.

**ಮೊಸಳೆಗಳಲ್ಲಿ ನಾಲ್ಕು ಪ್ರಭೇದಗಳಿವೆ:** 1. ಅಮೆರಿಕ ಮತ್ತು ವೆಸ್ಟ್ ಇಂಡೀಸಿನ ಕೈಮನ್. 2. ಉತ್ತರ ಅಮೆರಿಕದ ಮತ್ತು ಚೀನದ ನದಿಗಳಲ್ಲಿರುವ ಅಲಿಗೇಟರ್ ಅಥವಾ ನೆಗಳೆಗಳು. 3. ಭಾರತ ಆಸ್ಟ್ರೇಲಿಯ  ಮತ್ತು ಆಫ್ರಿಕಗಳ ಮೊಸಳೆ (ಕ್ರೊಕೋಡೈಲ್ಸ್). 4. ಭಾರತದ ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳಲ್ಲಿ ವಾಸಿಸುವ ಗೇವಿಯಲ್ ಅಥವಾ ಘಾರಿಯಲ್ಲುಗಳು. ಮೊಸಳೆಗಳ ತಲೆಯ ಆಕಾರದಲ್ಲಿ ಭಿನ್ನತೆ ಇದೆ. ಗೇವಿಯಲ್ ಪ್ರಭೇದದ ಕೊಕ್ಕಿನಂತಿರುವ ಮುಸುಡಿಯಿಂದ ಹಿಡಿದು ನೆಗಳೆಗಳ ಗುಂಡಾದ ಮೊಟಕಿನ ಮುಸುಡಿಯವರೆಗೆ ಈ ಭಿನ್ನತೆಯನ್ನು ಮಜಲು ಮಜಲಾಗಿ ಕಾಣಬಹುದು. ಗೇವಿಯಲ್ಲುಗಳಿಗೆ ಮುಸುಡು ಪಕ್ಷಿಯ ಕೊಕ್ಕಿನ ಆಕಾರದಲ್ಲಿದೆ. ಇದು ಬಲು ಉದ್ದ. ಮೊಸಳೆಗಳ ತಲೆ ತ್ರಿಕೋನಾಕಾರವಾಗಿದೆ ಮುಸುಡಿನ ಮುಂಭಾಗ ಚೂಪು, ಕೈಮನ್ನುಗಳ ತಲೆ ಹೆಚ್ಚು ಗುಂಡಾಕಾರವಾಗಿದೆ. ಮುಸುಡು ಮೊಂಡಾದ ತ್ರಿಕೋನಾಕಾರದಲ್ಲಿದೆ. ನೆಗಳೆಗಳಲ್ಲಿ ಎರಡು ಉಪಪ್ರಭೇದಗಳಿವೆ; ಒಂದರ ವಾಸ ಅಮೆರಿಕದ ನದಿಗಳಲ್ಲಿ, ಇನ್ನೊಂದರದು ಚೀನದೇಶದ ನದಿಗಳಲ್ಲಿ ಭಾರತ ದೇಶದಲ್ಲಿರುವ ಮೊಸಳೆಗಳ ಪ್ರಭೇದಗಳು ಕ್ರಕಡೈಲಸ್ ಪೊರೋಸಸ್ ಮತ್ತು ಕ್ರಕಡೈಲಸ್ ಪಲೂಸ್ಟ್ರಿಸ್. ಇವು ನದೀ ಮುಖಗಳಲ್ಲಿನ ಜೌಗುಪ್ರದೇಶಗಳಲ್ಲಿವೆ. ಗೇವಿಯಲ್ ಪ್ರಭೇದದ ಗೆವಿಯಾಲಸ್ ಗ್ಯಾಂಜಿಟಿಕಸ್ ಎಂಬುದು ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳಲ್ಲಿವೆ. ಉಪ್ಪಿನ ಜೌಗು ಪ್ರದೇಶಗಳಲ್ಲಿ ವಾಸಿಸುವ ಮೊಸಳೆಗಳನ್ನು ಅಳಿವೆ ಮೊಸಳೆಗಳು (ಯೂಸ್ಟರೀನ್ ಕ್ರೊಕೋಡೈಲ್ಸ್) ಎಂದು ಕರೆಯುವುದು ವಾಡಿಕೆ. ಭಾರತ, ಸಿಲೋನ್, ದಕ್ಷಿಣ ಚೀನ ಮತ್ತು ಉತ್ತರ ಆಸ್ಟ್ರೇಲಿಯ ದೇಶಗಳಲ್ಲಿ ಇವು ವ್ಯಾಪಿಸಿವೆ. ಇವು ಅತಿಕ್ರೂರಿ ಮೊಸಳೆಗಳು.

ಕೈಮನ್ ಮತ್ತು ನೆಗಳೆಗಳು ಒಂದನ್ನೊಂದು ಬಹುವಾಗಿ ಹೋಲುತ್ತವೆ. ಅವುಗಳ ಸ್ವಭಾವವೂ ಅಷ್ಟೆ. ಅವೆರಡೂ ಮಾಂಸಾಹಾರಿ ಪ್ರಾಣಿಗಳು. ನದಿಯನೀರು ಬತ್ತಿದಂತೆ ಸಮುದ್ರಕ್ಕೆ ವಲಸೆ ಹೋಗುವ ಈಪ್ರಾಣಿಗಳು ನೀರು ಹೆಚ್ಚು ಬತ್ತದೆ ಇರುವ ಸಮಯಗಳಲ್ಲಿ ನೀರಿನ ತಳಭಾಗದ ಮಣ್ಣಿನಲ್ಲಿಯೇ ಹುದುಗಿಕೊಂಡಿದ್ದು ಪುನಃ ನೀರಿಗಾಗಿ ಕಾಯಬಲ್ಲವು. ಮೊಸಳೆಗಳಿಗೆ ಹಿಂಗಾಲುಗಳಲ್ಲಿ ಅರ್ಧ ಜಾಲಪಾದವಿದ್ದರೆ ನೆಗಳೆಗಳಿಗೆ ಪೂರ್ಣ ಜಾಲಪಾದವಿದೆ. ಮೊಸಳೆಗಳಿಗೆ ಉಪ್ಪಿನ ಜೌಗು ಪ್ರದೇಶಗಳೇ ಹೆಚ್ಚು ಇಷ್ಟ. ಕೆಲವು ವೇಳೆ ಸಮುದ್ರಕ್ಕೂ ಈಜಿಕೊಂಡು ಹೋಗುತ್ತವೆ. ಆದರೆ ನೆಗಳೆಗಳಿಗೇ ಸಿಹಿನೀರೇ ಹೆಚ್ಚು ಪ್ರಿಯವಾದದ್ದು. ಸಾಮಾನ್ಯವಾಗಿ ನೆಗಳೆಗಳು ನಿರುಪದ್ರವಿಗಳು, ಭಾರತದ ಕ್ರಕಡೈಲಸ್ ಪೊರೊಸಸ್ ಮತ್ತು ಮಲೇಶಿಯ, ಆಫ್ರಿಕಗಳ ಕ್ರಕಡೈಲಸ್ ಕ್ರೊಟಕಸ್ ಇವುಗಳಿಂದ ಮನುಷ್ಯನ ಪ್ರಾಣಕ್ಕೆ ಆಗುತ್ತಿರುವ ಹಾನಿ ಅಪಾರವಾದದ್ದು. ಆದ್ದರಿಂದ ಇವನ್ನು ನರಭಕ್ಷಕಗಳೆಂದು ಕರೆಯುವುದು ವಾಡಿಕೆ. ದಕ್ಷಿಣ ಏಷ್ಯದ ಕೆಲವು ಮೊಸಳೆಗಳೂ ನರಭಕ್ಷಕಗಳು. ನೀರನ್ನು ಕುಡಿಯುಲು ಬರುವ ಕಾಡುಕೋಣ, ದನಕರುಗಳು, ಕುದುರೆಗಳು ಮತ್ತು ಸ್ನಾನಕ್ಕಾಗಿ ಇಳಿಯುವ ಜನರು ಈ ನರಭಕ್ಷಕಗಳಿಗೆ ಬಲಿಯಾಗಿರುವ ಸಂದರ್ಭಗಳು ಸಾವಿರಾರು. ಗೇವಿಯಲ್, ನೆಗಳೆ, ಮೊಸಳೆ ಇವುಗಳ ಕೆಲವು ಪ್ರಭೇದಗಳ ನೀರಿನಲ್ಲಿರುವ ಮೀನು, ಕಡಲಾಮೆ, ಹಕ್ಕಿ, ಏಡಿ ಮುಂತಾದುವನ್ನು ತಿಂದು ಜೀವಿಸುತ್ತವೆ. ನೀರಿನಲ್ಲಿದ್ದಾಗ ಇವು ಅತಿ ಭಯಂಕರಿಗಳು. ಆದರೆ ನೆಲದ ಮೇಲೆ ಬಿದ್ದಾಗ ಏನೂ ಕೈಲಾಗದವು.

ದೊಡ್ಡ ನದೀಮುಖಗಳ ಜೌಗುಪ್ರದೇಶಗಳಲ್ಲಿ ವಾಸಿಸುವ ಮೊಸಳೆಗಳು (ಅಳಿವೆ ಮೊಸಳೆಗಳು) ಬಹಳಹಳೆಯ ಬುಡಕಟ್ಟಿಗೆ ಸೇರಿದಂಥವು. ಇವು ಸುಮಾರು 30' ಉದ್ದ ಬೆಳೆಯಬಲ್ಲವು. ಆಯುರ್ಮಾನ 200 ವರ್ಷಗಳೇ ಇರಬಹುದು. 20' ಉದ್ದದ ಗೇವಿಯಲ್ ಜಾತಿ ಮೊಸಳೆಗಳ ಪೂರ್ವಜರು ಸುಮಾರು 60' ಉದ್ದ ಬೆಳೆಯುತ್ತಿದ್ದುವೆಂದು ಊಹಿಸಲಾಗಿದೆ. ಅವುಗಳ ನಾಲ್ಕು ಕಾಲುಗಳು ಭೂಮಿಯಮೇಲೆ ಮತ್ತು ನೀರಿನ ತಳದಲ್ಲಿ ನಡೆಯಲು ಸಹಕಾರಿಯಾಗಿವೆ. ಆದರೆ ನೀರಿನಲ್ಲಿ ಈಜಲು ಸಹಾಯಕವಾಗಿಲ್ಲ. ಈಜುವಾಗ ಕಾಲುಗಳನ್ನು ದೇಹದ ಪಕ್ಕಕ್ಕೆ ಒತ್ತಿಡುತ್ತವೆ. ಜಾಲಪಾದವಿರುವ ಹಿಂಗಾಲುಗಳು ಮತ್ತು ಬಲಿಷ್ಠವಾದ ದೊಡ್ಡಬಾಲ ಈ ಪ್ರಾಣಿಗೆ ನೀರಿನಲ್ಲಿ ಸಮತೋಲದಿಂದ ನಿಧಾನವಾಗಿ ಚಲಿಸಲು ಸಹಕಾರಿಗಳು. ಬೇರೆ ಪ್ರಾಣಿಗಳನ್ನು ಬಡಿದು ನುಚ್ಚು ನೂರು ಮಾಡಲು ಬಾಲವನ್ನು ಖಡ್ಗಾಯುಧದಂತೆ ಉಪಯೋಗಿಸಿಕೊಳ್ಳುವುದಿದೆ. ಇದರ ತಲೆ ಸದೃಢವಾದ ಎಲುಬುಗಳಿಂದ ಕೂಡಿದೆ. ಆದರೂ ಮಿದುಳಿನಗಾತ್ರ ದೇಹದ ಗಾತ್ರದೊಡನೆ ಹೋಲಿಸುವಾಗ ಬಲು ಚಿಕ್ಕದು. ಎಲುಬುತಟ್ಟೆಗಳಿಂದಾದ ಹುರುಪೆಗಳ ಕವಚ ಈ ಪ್ರಾಣಿಗಳ ವಿಶೇಷ ಲಕ್ಷಣ. ಸಾಮಾನ್ಯ ಆಯುಧಗಳು ಕವಚವನ್ನು ಭೇದಿಸಿ ದೇಹವನ್ನು ನಾಟಲಾರವು. ಅದರ ಕತ್ತಿನ ಕಶೇರುಮಣಿಗಳು ಭದ್ರವಾಗಿ ಜೋಡಿಕೊಂಡಿರುವುದರಿಂದ ಮೊಸಳೆಗೆ ಕತ್ತನ್ನು ಪಕ್ಕನೆ ತಿರುಗಿಸಲು ಸಾಧ್ಯವಿಲ್ಲ. ಮೊಸಳೆಯನ್ನು ಎದುರಿಸಬೇಕಾಗುವ ಮನುಷ್ಯರೂ ಪ್ರಾಣಿಗಳೂ ಅದರ ಈ ದೌರ್ಬಲ್ಯವನ್ನು ತಮ್ಮ ಆತ್ಮರಕ್ಷಣೆಗೋಸ್ಕರ ಚೆನ್ನಾಗಿ ಬಳಸಿಕೊಳ್ಳುವುದಿದೆ. ಮೊಸಳೆಯ ಎದುರಿನಿಂದ ಫಕ್ಕನೆ ಮಗ್ಗುಲಿಗೆ ಜಾರುವುದೊಂದೇ ಕ್ಷಿಪ್ರ ಉಪಾಯ. ಮೊಸಳೆಗಿರುವ ಅತಿ ಸಾಮರ್ಥ್ಯದ ಎರಡು ದವಡೆಗಳು, ಅವುಗಳ ತುಂಬ ಇರುವ ಎರಡುಸಾಲು ಬಲವಾದ ಮತ್ತು ಚೂಪಾದ ಹಲ್ಲುಗಳು ಇವು ಇದರ ಮುಸುಡನ್ನು ಅತಿ ಭಯಾನಕವಾದ ಶಸ್ತ್ರಾಗಾರವನ್ನಾಗಿ ಮಾಡಿವೆ. ಇದರ ಬಾಯಿಗೆ ಸಿಕ್ಕಿದ ಪ್ರಾಣಿ ಇಕ್ಕುಳದಲ್ಲಿ ಸಿಕ್ಕಿಕೊಂಡಂತೆಯೇ ಸರಿ. ಕಣ್ಣುಗಳು ಮತ್ತು ನಾಸಿಕ ರಂಧ್ರಗಳು ತಲೆಯ ಒಂದು ಉಬ್ಬಿದ ಭಾಗದಲ್ಲಿವೆ. ಪ್ರತಿಯೊಂದು ಕಣ್ಣಿನ ಹಿಂದೆಯೂ ಕಿವಿಯ ರಂಧ್ರವಿದೆ. ಇದನ್ನು ಮುಚ್ಚಿ ತೆರೆಯಬಲ್ಲ ಎಲುಬಿನ ಕವಾಟವಿದೆ. ನಾಸಿಕರಂಧ್ರಗಳಿಗೂ ಕವಾಟದ ವ್ಯವಸ್ಥೆಯಿದೆ. ಒಳನಾಸಿಕ ರಂಧ್ರಗಳು ಗಂಟಲಿನ ಮೇಲ್ಭಾಗದಲ್ಲಿವೆ. ಮೊಸಳೆ ನೀರಿನಲ್ಲಿ ಮುಳುಗಿದಾಗ ನಾಸಿಕ ರಂಧ್ರಗಳು ಸ್ವಲ್ಪ ನೀರಿನ ಮೇಲ್ಮಟ್ಟದಲ್ಲಿರುತ್ತವೆ. ಆಗ ಶ್ವಾಸರಂಧ್ರದ ಭಾಗ (ಗ್ಲಾಟಿಸ್) ಮುಂದಕ್ಕೆ ಚಾಚಿ ಒಳಗಿನ ನಾಸಿಕರಂಧ್ರಕ್ಕೆ ಅಂಟಿಕೊಳ್ಳುತ್ತದೆ; ಇದರಿಂದ ಹೊರಗಿನಿಂದ ಗಾಳಿ ಸತತವಾಗಿ ಶ್ವಾಸಕೋಶಗಳಿಗೆ ಹೋಗಲು ಸಹಾಯಕವಾಗುವುದು. ಆ ಕಾರಣದಿಂದಲೇ ನೀರಿನಲ್ಲಿ ದೇಹ ಮುಳುಗಿದ್ದಾಗಲೂ ದೊಡ್ಡ ಪ್ರಾಣಿಗಳನ್ನು ಬಾಯಲ್ಲಿ ಹಿಡಿದಿರುವಾಗಲೂ ಉಸಿರಾಟ ಅವಿರತವಾಗಿ ಸಾಗುವುದು. ನೀರಿನ ಮೇಲೆ ತಲೆಯಿಟ್ಟಾಗ ಮಾತ್ರ ನಾಸಿಕರಂಧ್ರಗಳು ತೆರೆಯುತ್ತವೆ. ನೀರಿನಲ್ಲಿ ಮುಳುಗಿದ್ದರೂ ತೆರೆದ ಬಾಯಿಯ ಮೂಲಕ ನೀರು ನುಗ್ಗಲು ಅವಕಾಶವಿಲ್ಲ. ಸದಾ ನೀರಿನಲ್ಲಿ ಮುಳುಗಿಕೊಂಡೇ ಮೊಸಳೆ ಜೀವಿಸಲಾರದು. ಕೆಲವು ವೇಳೆ ಅದು ನೀರಿನಲ್ಲಿ ಅಡಗಿರಬಹುದು. ಆದರೆ ಹೆಚ್ಚು ವೇಳೆಯನ್ನು ಬಂಡೆಗಳು ಮತ್ತು ದಡಗಳ ಮೇಲೆ ಕಳೆಯುತ್ತವೆ. ಬಿಸಿಲಿನ ಅಲ್ಪ ಶಾಖ ಅದಕ್ಕೆ ಬಹಳ ಹಿತಕರ.

ಮೊಸಳೆಯ ಜಠರದ ಒಳಭಾಗ ಬಲವಾದ ಮಾಂಸಖಂಡಗಳಿಂದ ರಚನೆಗೊಂಡಿವೆ. ಇದಲ್ಲದೆ ಸಾಮಾನ್ಯವಾಗಿ ಈ ಭಾಗದಲ್ಲಿ ಒಂದು ಅಂಗುಲದಷ್ಟು ದಪ್ಪದ ಹಲವಾರು ಕಲ್ಲುಗಳೂ ಇವೆ. ಹೃದಯದಲ್ಲಿ ಹೃತ್ಕುಕ್ಷಿ ಪೂರ್ಣವಾಗಿ ಎಡ ಮತ್ತು ಬಲಭಾಗಗಳಾಗಿ ವಿಭಾಗವಾಗಿದೆ. ಇದು ಶುದ್ಧ ಮತ್ತು ಅಶುದ್ಧ ರಕ್ತಗಳನ್ನು ಬೇರ್ಪಡಿಸಲು ಸಹಕಾರಿ. ಆದರೂ ಪ್ರತಿಯೊಂದು ಹೃತ್ಕುಕ್ಷಿಯಿಂದ ಹೊರಡುವ ಒಂದೊಂದು ಆಯೋರ್ಟ ರಕ್ತನಾಳ (ಮಹಾ ಅಪಧಮನಿಗಳು–ಆರ್ಟರೀಸ್) ಹೃದಯದ ಹಿಂಭಾಗದಲ್ಲಿ ಒಂದುಗೂಡಿ ಊರ್ಧ್ವ ಆಯೋರ್ಟ ರಕ್ತನಾಳಗಳಾಗುವುದರಿಂದ ಶುದ್ಧ ಮತ್ತು ಅಶುದ್ಧರಕ್ತಗಳು ಬೆರೆತು ದೇಹದ ಮುಂಡಭಾಗಕ್ಕೆ ಮಿಶ್ರರಕ್ತ ಹರಿಯುತ್ತದೆ. ಬಲ ಅಯೋರ್ಟದಲ್ಲಿ ಶುದ್ಧ ರಕ್ತವೂ ಎಡ ಅಯೋರ್ಟದಲ್ಲಿ ಅಶುದ್ಧ ರಕ್ತವೂ ಹರಿಯುತ್ತದೆ. ಬಲ ಅಯೋರ್ಟ ನಾಳದಿಂದ ಅದರ ಪ್ರಾರಂಭದಲ್ಲಿ ತಲೆಯ ಭಾಗಕ್ಕೆ ಕವಲುಗಳು ಹೊರಡುವುದರಿಂದ ಶುದ್ಧರಕ್ತ ತಲೆಯಭಾಗಕ್ಕೆ ಹರಿಯುತ್ತದೆ. ಶುದ್ಧರಕ್ತ ದೇಹದ ವಿವಿಧಭಾಗಗಳಿಗೂ ಅಶುದ್ಧ ರಕ್ತ ಶುದ್ಧಿಯಾಗಲು ಶ್ವಾಸಕೋಶಗಳಿಗೂ ಹರಿಯುವಂತೆ ಪ್ರಕೃತಿ ಏರ್ಪಡಿಸುವ ಒಂದು ಪ್ರಯೋಗದಲ್ಲಿ ಇದು ಒಂದು ಸ್ಪಷ್ಟವಾದ ಹೆಜ್ಜೆ ಎಂದು ಹೇಳಬಹುದು. ಮುಂದೆ ವಿಕಸಿಸಿದ ಪಕ್ಷಿಗಳು ಮತ್ತು ಸಸ್ತನಿ ಪ್ರಾಣಿಗಳಲ್ಲಿ ಈ ಪ್ರಯತ್ನ ಸಫಲವಾಯಿತು. ಮೊಸಳೆಯ ಪ್ರತಿಯೊಂದು ಶ್ವಾಸಕೋಶವೂ ಸಸ್ತನಿ ಪ್ರಾಣಿಗಳಲ್ಲಿರುವಂತೆ ಎರಡು ಪ್ಲೂರಾ ಪರೆಗಳಿಂದ ಆವರಿಸಲ್ಪಟ್ಟಿದೆ. ಕೆಳದವಡೆಯ ಅಂಚಿನಲ್ಲಿ ಮತ್ತು ಕ್ಲೋಯಕ ರಂಧ್ರದ ಅಕ್ಕಪಕ್ಕಗಳಲ್ಲಿ ಚರ್ಮದ ಗ್ರಂಥಿಗಳಿವೆ. ಇವು ಹೊರ ಚೆಲ್ಲುವ ದ್ರವದ ವಾಸನೆ ಕಸ್ತೂರಿಯಂತೆ ಸಂತಾನೋತ್ಪತ್ತಿಯ ಕಾಲದಲ್ಲಿ ಇದರ ಉತ್ಪತ್ತಿ ಹೆಚ್ಚು. ಬಹುಶಃ ಗಂಡುಹೆಣ್ಣು ಪರಸ್ಪರ ಹತ್ತಿರ ಬರಲು ಈ ವಾಸನೆ ಕಾರಣವಾಗಿರಬಹುದು. ಇತರ ಪ್ರಾಣಿಗಳನ್ನು ಬೇಟೆಯಾಡುವಾಗಲೂ ಈ ದ್ರವ ಹೆಚ್ಚು ಉತ್ಪತ್ತಿಯಾಗುವುದು ಕಂಡುಬಂದಿದೆ.

ಮೊಸಳೆಗಳು ಅಂಡಜಗಳು ಒಂದು ಬಾರಿಗೆ 20–100 ಮೊಟ್ಟೆಗಳನ್ನಿಡುವುವು. ಬೇಸಿಗೆ ಸಮೀಪಿಸುತ್ತಿದ್ದಂತೆ ಕೆಲವು ಜಾತಿಯ ಮೊಸಳೆಗಳು ನೀರಿನ ತಳದ ಮರಳಿನಲ್ಲಿ ಗುಣಿಗಳನ್ನು ತೋಡಿ ಅಲ್ಲಿ ಮೊಟ್ಟೆಗಳನ್ನಿಟ್ಟು ಅನಂತರ ಮರಳು ಸೊಪ್ಪು ಸೊದೆಗಳಿಂದ ಗುಣಿಗಳನ್ನು ಮುಚ್ಚುತ್ತವೆ. ಇದರಿಂದ ಮೊಟ್ಟೆಗಳ ಬೆಳವಣಿಗೆಗೆ ಬೇಕಾದ ಶಾಖ ದೊರೆಯುವುದು. ಹೆಣ್ಣು ಮೊಸಳೆ ಆ ಜಾಗವನ್ನು ಆಗಿಂದಾಗ್ಗೆ ಕಣ್ಣಿನಲ್ಲಿ ಕಣ್ಣಿಟ್ಟು ಕಾಯುವುದಲ್ಲದೆ ಕೆಲವು

## ಜೂರಾಸಿಕ್ ಮತ್ತು ಕ್ರಿಟೇಷಿಯಸ್ ಕಲ್ಪಗಳ ದೈತ್ಯೋರಗಗಳು



ಸ್ಟೈಗೊಸಾರ್



ಆಂಕೈಲೊಸಾರ್



ಥೀರೊಪೊಡ



ಆರ್ನಿತೋಪೊಡ

ಸೆರಾಟಾಪ್ಸಿಯನ್

ಸೌರೊಪೊಡ

ವೇಳೆ ಮೊಟ್ಟೆಗಳು ಒಡೆದು ಮರಿಗಳಾಗುವವರೆಗೂ ಅಲ್ಲಿ ಅಜ್ಞಾತವಾಸ ಸಹ ಮಾಡಬಲ್ಲದು. ಎರಡು ತಿಂಗಳುಗಳ ಅವಧಿಯಲ್ಲಿ ಮೊಟ್ಟೆಗಳು ಬಲಿತು ಒಳಗಿರುವ ಮರಿಗಳು ಧ್ವನಿಗೈಯುವುವೆಂದೂ ತಾಯಿ ಮೊಸಳೆ ಬಹುಶಃ ಆ ಧ್ವನಿಯನ್ನು ಕೇಳಿ ಗುಣಿಗಳ ಮೇಲಿನ ಮುಚ್ಚಿಕೆಗಳನ್ನು ಸಡಿಲಿಸುತ್ತವೆ ಎಂದೂ ಕೆಲವರ ಅಭಿಪ್ರಾಯ. ಮೊಟ್ಟೆಗಳಲ್ಲಿರುವ ಮರಿಗಳು ಕತ್ತರಿಸುವ ಆಯುಧವನ್ನು ಹೋಲುವ ತಮ್ಮ ಮೂತಿಯ ತುದಿಯಿಂದ ಮೊಟ್ಟೆಯ ಚಿಪ್ಪನ್ನು ಒಡೆದು ಹೊರಬರುತ್ತವೆ. ಆಗ ತಾಯಿ ಮೊಸಳೆ ಅವನ್ನು ನೀರಿನೆಡೆಗೆ ಕರೆದೊಯ್ಯುತ್ತವೆ. ಮೊಸಳೆ ಚರ್ಮ ಸಾಮಾನ್ಯವಾಗಿ 4'–8' ಅಗಲ ಮತ್ತು 10'–20' ಉದ್ದವಾಗಿರುವುದು. ಇದನ್ನು ಹದಮಾಡಿ ಪೆಟ್ಟಿಗೆಗಳ ರಕ್ಷಣೆಗಾಗಿ ಉಪಯೋಗಿಸುವುದಿದೆ. ದುಡ್ಡಿನ ಚೀಲ, ಸೊಂಟದಪಟ್ಟಿಗಳು, ಜೋಡುಗಳು ಮುಂತಾದ ವಸ್ತುಗಳನ್ನು ತಯಾರಿಸುತ್ತಾರೆ. ಮೊಸಳೆ ಕೊಬ್ಬು ಮೀನೆಣ್ಣೆಯಂತಹ ಔಷಧಿಗಳಿಗೆ ಉಪಯುಕ್ತ **(ನೋಡಿ ಅಲಿಗೇಟರ್ ಮೊಸಳೆ)**.

**ರ್‍ಹಿಂಕೋಕಿಫೇಲಿಯ ಗಣ:** ಇದು ಡೈಆಪ್ಸಿಡದ ಇನ್ನೊಂದು ಗಣ. ಬಲು ಪುರಾತನ ವಾದದ್ದು. ಇದರಲ್ಲಿ ಉಳಿದಿರುವ ಒಂದೆ ಪ್ರಭೇದ ಸ್ಫಿಸೋಡಾನ್ ಪಂಕ್ಟೇಟಿಸ್ ಟಾಟರಾ. ಬಾಲಾವಸ್ಥೆಯಲ್ಲಿ ಮೇಲ್ದವಡೆ, ಕೆಳದವಡೆಗಳಲ್ಲಲ್ಲದೆ ಮೇಲಿನ ವಸಡಿನಲ್ಲಿಯೂ ಹಲ್ಲುಗಳಿರುತ್ತವೆ. ಪ್ರಾಣಿ ಬೆಳೆದಂತೆ ಕ್ರಮೇಣ ಹಲ್ಲುಗಳು ಸವೆದು ಪ್ರೌಢಾವಾಗುವುದರಲ್ಲಿ ಎಲ್ಲ ಹಲ್ಲುಗಳನ್ನೂ ಕಳೆದುಕೊಳ್ಳುತ್ತದೆ. ಇದರಿಂದಲೇ ಕೊಕ್ಕಿನ ಗೌಳಿ (ಹಲ್ಲಿ) ಎಂದು ಇದನ್ನು ಕರೆಯುತ್ತಾರೆ. ತಲೆಯ ಮೇಲ್ಭಾಗದಲ್ಲಿ ಮೂರನೆಯ ಕಣ್ಣಿದೆ. ಅದು ಈಗ ಕೆಲಸಮಾಡದಿದ್ದರೂ ಹಿಂದಿನ ಅಳಿದ ಉರಗಗಳ ಬುರುಡೆಯಲ್ಲಿ ಈ ರೀತಿಯ ಕಣ್ಣಿದ್ದು, ಮಿಕ್ಕೆರಡು ಕಣ್ಣುಗಳೊಡನೆ ಸಹಕರಿಸುತ್ತಿದ್ದಿರಬಹುದೆಂಬ ಊಹೆಗೆ ಬೆಂಬಲ ನೀಡುವಂತಿದೆ. ಈ ಪ್ರಾಣಿ ಕೋಟ್ಯಂತರ ವರ್ಷಗಳಿಂದ ಬಾಳಿದೆ. ಆದರೆ ಇದರಲ್ಲಿ ಅಂದಿನಿಂದ ಇಂದಿನವರೆಗೂ ಯಾವ ಬದಲಾವಣೆಯೂ ಆಗಿಲ್ಲ. ಉರಗಗಳಲ್ಲಿ ಒಂಟಿಯಾಗಿ ನಿಂತಿದ್ದರೂ ಈಗ ಬಾಳುತ್ತಿರುವ ಹಲ್ಲಿವರ್ಗದ ಅನೇಕ ಉರಗಗಳು ಬಹುಃ ಟಾಟರ ಪ್ರಾಣಿಯ ಜಾತಿಯಿಂದ ಪ್ರಭೇದಗೊಂಡಿರಬೇಕೆಂದು ಊಹಿಸಲಾಗಿದೆ.

**ಸ್ಕ್ವಮಾಟ ಗಣ:** ಡೈಆಪ್ಸಿಡ ಉರಗಗಳ ಲೆಪಿಡೋಸಾರಿಯ ಉಪವರ್ಗಕ್ಕೆ ಸೇರಿದೆ. ಸ್ಕ್ವಮಾಟವನ್ನು ಎರಡು ಉಪಗಣಗಳಾಗಿ ವಿಭಾಗಿಸಿದೆ. ಲ್ಯಾಸರ್ ಟೇಲಿಯ ಮತ್ತು ಒಫಿಡಿಯ.

ಲ್ಯಾಸರ್‌ಟೇಲಿಯ ಉಪಗಣದಲ್ಲಿ ಹಲ್ಲಿಗಳು, ನೆಗಳೆಗಳು, ಊಸರವಳ್ಳಿ, ಗೆಕೊ (ಮನೆಯ ಹಲ್ಲಿ), ಓತಿ ಮುಂತಾದವು ಇವೆ. ಇವನ್ನು ಈ ಕೆಳಗಿನ ವಂಶಗಳಾಗಿ ವಿಭಾಗಿಸಿದೆ; 1 ಗೆಕೊನಿಡೆ, 2 ಅಗಾಮಿಡೆ, 3. ಕೆಮೆಲಿಯೊಂಟಿಡೆ, 4. ಸಿನ್ಸಿಡೆ, 5. ಲ್ಯಾಸರಟಿಡೆ, 6. ಆಂಗ್ವಿಡೆ 7. ವರಾನಿಡೆ.

ಈ ಉಪಗಣಗಳ ಪ್ರಾಣಿಗಳ ಲಕ್ಷಣಗಳು ಹೀಗಿವೆ. ದೇಹ ಪೂರ್ಣವಾಗಿ ಹುರುಪೆಗಳಿಂದ ಆವೃತವಾಗಿದೆ. ಕೆಲವು ಜಾತಿಗಳ ವಿನಾ ಮಿಕ್ಕವಲ್ಲಿ ಹಿಂಗಾಲು ಮತ್ತು ಮುಂಗಾಲುಗಳು ಚೆನ್ನಾಗಿ ಬೆಳೆದಿವೆ. ಎದೆಯಲ್ಲಿ ಎದೆಯ ಮೂಳೆ ಇದೆ. ಬೆನ್ನೆಲುಬಿನ ಕಶೇರುಮಣಿಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇದೆ. ಕಶೇರುಮಣಿಗಳನ್ನು ಬೆನ್ನೆಲುಬಿನ ಕತ್ತಿನಭಾಗ (ಸರ್ವೈಕಲ್), ಎದೆಯಭಾಗ (ತೊರಾಸಿಕ್), ಉದರಭಾಗ (ಲಂಬಾರ್) ಕಟಿಭಾಗ (ಸೇಕ್ರಲ್) ಮತ್ತು ಬಾಲದ ಭಾಗಗಳಾಗಿ (ಕಾಡಲ್) ವಿಂಗಡಿಸಬಹುದು. ಎದೆಯ ಮೂಳೆಗಳ ಸಂಖ್ಯೆ ಹೆಚ್ಚು. ಕತ್ತಿನ ಭಾಗದ ಕಶೇರುಮಣಿಗಳು ಕತ್ತಿನ ಪಕ್ಕೆಲುಬುಗಳನ್ನೂ ಎದೆಯಭಾಗದ ಕಶೇರುಮಣಿಗಳು ಎದೆಯ ಪಕ್ಕೆಲುಬುಗಳನ್ನೂ ಹೊಂದಿವೆ. ಇದರ ಬಾಯಿಯನ್ನು ಹಾವಿನ ಬಾಯಿಯಂತೆ ಅಗಲಿಸಲು ಸಾಧ್ಯವಿಲ್ಲ. ಹೊರಕಿವಿಯ ರಂಧ್ರಗಳೂ ಚಲಿಸಬಲ್ಲ ಕಣ್ಣಿನ ಗುಡ್ಡೆಗಳೂ ಇವೆ. ಕೆಲವು ಬಾಲದ ಭಾಗವನ್ನು ಸುಲಭವಾಗಿ ಬೇರ್ಪಡಿಸಬಲ್ಲವು. ಕತ್ತರಿಸಿದ ಬಾಲ ಮತ್ತು ಕಾಲುಗಳ ಭಾಗಗಳನ್ನು ಪುನಃ ಸೃಷ್ಟಿಸಿಕೊಳ್ಳಬಲ್ಲವು. ಲಾಲಾಗ್ರಂಥಿಗಳು ಬಾಯಿಯ ಕೆಳಭಾಗದಲ್ಲಿವೆ. ಶ್ವಾಸಕೋಶಗಳು ಉದ್ದ ಮತ್ತು ಅಂಡಾಕಾರವಾಗಿವೆ. ಶ್ವಾಸೋಚ್ಛ್ವಾಸಕ್ರಿಯೆ ಪಕ್ಕೆಲುಬುಗಳ ನೆರವಿನಿಂದ ನಡೆಯುವುದು. ಊಸರವಳ್ಳಿ ಮತ್ತು ಗೆಕೊಗಳಲ್ಲಿ ಶ್ವಾಸಕೋಶಗಳು ಗಾಳಿಯ ಚೀಲಗಳಾಗಿ ವಿಸ್ತರಿಸಿವೆ. ಇವು ಪಕ್ಷಿಗಳ ಶ್ವಾಸಕೋಶಗಳೊಳಗಿನ ಗಾಳಿಯ ಗೂಡುಗಳನ್ನು ಸೂಚಿಸುತ್ತವೆ **(ನೋಡಿ– ಇಗ್ವಾನ್; ಇಗ್ವಾನೊಡಾನ್; ಉಡ; ಊಸರವಳ್ಳಿ; ಓತಿ)**.

ಹಾವುಗಳನ್ನು ಒಫಿಡಿಯ ಉಪಗಣಕ್ಕೆ ಸೇರಿಸಲಾಗಿದೆ. ಈ ಪ್ರಾಣಿಗಳನ್ನು ಅವಯವಗಳಿಲ್ಲದ (ವಿದೌಟ್ ಲಿಂಬ್ಸ್) ಸ್ಕ್ವಮಾಟ ಎಂದು ಕರೆಯುವುದುಂಟು. ಒಫಿಡಿಯವನ್ನು ಒಂದು ಗಣವೆಂದೇ ಕರೆಯುವುದೂ ಇದೆ.

ಒಫಿಡಿಯ ಗಣದ ಪ್ರಾಣಿಗಳ ಲಕ್ಷಣಗಳು ಹೀಗಿವೆ. ಇವು ಕಶೇರುಕಗಳು, ಚರ್ಮ ಹುರುಪೆಗಳಿಂದ ಆವೃತವಾಗಿವೆ. ಹೊರಚರ್ಮದ ಭಾಗ ಪದೇ ಪದೇ ಕಳಚಲ್ಪಡುವುದು. ಪೊರೆ ಬಿಡುವುದು ಎಂದು ಇದರ ಹೆಸರು. ವರ್ಷಕ್ಕೆ 5–6 ಸಲ ಪೊರೆಬಿಡಬಲ್ಲ ಹಾವುಗಳೂ ಉಂಟು. ಆದ್ದರಿಂದ ಪೊರೆ ಸತತವಾಗಿ ಬೆಳೆಯಬಲ್ಲುದು; ಬಾಯಿ ವಿಶಾಲವಾಗಿ ಹಿಗ್ಗುವಂತಿದೆ. ಕಣ್ಣಿಗೆ ರೆಪ್ಪೆಯಿಲ್ಲ. ಬದಲು ಪಾರದರ್ಶಕ ಹುರುಪೆಯುಂಟು. ಇದೂ ಪೊರೆ ಬಿಡುವಾಗ ಬಿದ್ದುಹೋಗಿ ಹೊಸ ಹುರಪೆ ಬೆಳೆಯುತ್ತದೆ. ಹೊರಕಿವಿಯಾಗಲೀ ಕಿವಿಯ ತಮಟೆಯಾಗಲೀ ಇಲ್ಲದಿದ್ದರೂ ಸಹ ಒಳಕಿವಿಯುಂಟು. ಗ್ರಹಿಸಿದ ಶಬ್ದಕಂಪನಗಳು ಒಳಕಿವಿಯನ್ನು ಸೇರುತ್ತವೆ. ಮುಂದೂಡಬಲ್ಲ ಮತ್ತು ಹಿಂದಕ್ಕೆ ಎಳೆದುಕೊಳ್ಳಬಹುದಾದ ತುದಿಸೀಳಿದ ನಾಲಗೆ ಹಾವಿನ ವಿಶೇಷವಾದ ಸ್ಪರ್ಶೇಂದ್ರಿಯ. ಸ್ವತಃ ಮೂಸಿನೋಡದಿದ್ದರೂ ವಾಸನೆಯಿರುವ ಕಣಗಳನ್ನು ಬಾಯೊಳಕ್ಕೆ ಎಳೆದುಕೊಂಡು ಅವು ಘ್ರಾಣೇಂದ್ರಿಯಗಳ ಸಂಪರ್ಕ ಹೊಂದುವಂತೆ ಮಾಡುತ್ತವೆ. ಯಾವ ಅನುಬಂಧಗಳೂ (ಅಪೆಂಡೇಜಸ್) ಇಲ್ಲದ ಇದರ ದೇಹ ಹಗ್ಗದಂತಿದ್ದು ಉದ್ದವಾಗಿದೆ. ರುಂಡ. ಮುಂಡ, ಬಾಲಗಳಿಗೆ ಪರಸ್ಪರ ನಿರ್ದಿಷ್ಟವಾದ ಎಲ್ಲೆಗಳು ಇಲ್ಲ. ಇದು ಕೊರಕಲು ಹಳ್ಳಗಳಲ್ಲಿ, ಕಲ್ಲುಗಳ ಸಂಧಿಯಲ್ಲಿ



ಬ್ರಾಂಟೊಸಾರಸ್

ಚಲಿಸಲು ಸಹಾಯಕವಾದ ದೇಹದ ಒಂದು ಹೊದಿಕೆ. ಕಿರಿದಾದ ಉದ್ದವಾದ ದೇಹಕ್ಕೆ ಅನುಗುಣವಾಗಿ ಒಳಭಾಗದ ಅಂಗಗಳೂ ಕೂಡ ಬದಲಾವಣೆಗಳನ್ನು ಹೊಂದಿವೆ. ಸಾಮಾನ್ಯವಾಗಿ ಒಂದು ಶ್ವಾಸಕೋಶ, ಅದರಲ್ಲೂ ಎಡಶ್ವಾಸಕೋಶ ಮತ್ತೊಂದಕ್ಕಿಂತ ಬಹಳ ಕಿರಿದು. ಕೆಲವುವೇಳೆ ಒಂದೇ ಒಂದುಶ್ವಾಸಕೋಶ ಇರುವುದೂ ಉಂಟು. ಪಿತ್ತಕೋಶ ಬಲು ಉದ್ದ. ಮೂತ್ರಪಿಂಡಗಳು ಎದುರುಬದಿರಾಗಿರುವುದಿಲ್ಲ. ಬೆನ್ನೆಲುಬಿನ ಕಶೇರುಮಣಿಗಳ ಸಂಖ್ಯೆ ಬಲು ಹೆಚ್ಚು. ಪ್ರತಿಯೊಂದು ಕಶೇರುಮಣಿಗೂ ಒಂದು ಜತೆ ಪಕ್ಕೆಲುಬು ಜೋಡಿಸಲ್ಪಟ್ಟಿರುವುದರಿಂದ, ಪಕ್ಕೆಲುಬುಗಳ ಸಂಖ್ಯೆಯೂ ಹೆಚ್ಚು. ಉದರಭಾಗದಲ್ಲಿ ಅಗಲವಾದ ಉದರ ಫಲಕಗಳಿವೆ. ಈ ಫಲಕಗಳು ಚಾವಣಿಯ ಹೆಂಚುಗಳಂತೆ ಜೋಡಿಸಲ್ಪಟ್ಟಿವೆ. ಪ್ರತಿಯೊಂದು ಫಲಕಕ್ಕೂ ಅದರ ಮುಂಭಾಗದಲ್ಲಿ ಒಂದೊಂದು ಜೊತೆ ಪಕ್ಕೆಲುಬು ಸ್ನಾಯುಗಳ ಸಹಾಯದಿಂದ ಚಲಿಸುವ ರೀತಿಯಲ್ಲಿ ಸೇರಿಸಲ್ಪಟ್ಟಿವೆ. ಇದರಿಂದ ಎದೆಯ ಗೂಡು ಮಾಯವಾಗಿದೆ. ಒಂದೇ ಪಾರ್ಶ್ವದ ಅನುಕ್ರಮವಾದ ಪಕ್ಕೆಲುಬುಗಳ ನಡುವೆಇರುವ ಸ್ನಾಯುಗಳ (ಇಂಟರ್ ಕೋಸ್ಟಲ್ ಮಸಲ್ಸ್) ಸಂಕುಚನೆ, ವಿಕಸನೆಗಳಿಂದ ಪಕ್ಕೆಲುಬುಗಳು ಚಲಿಸಲು ಪ್ರಾರಂಭಿಸುತ್ತವೆ. ಪಕ್ಕೆಲುಬುಗಳು ಮುಂದಕ್ಕೆ ಸರಿದಾಗ ಫಲಕದ ಮುಂದಿನ ಅಂಚು ಮೇಲಕ್ಕೆ ಬರುವುದು; ಹಿಂದಕ್ಕೆ ಚಲಿಸಿದಾಗ ಫಲಕದ ಹಿಂದಿನ ಅಂಚು ನೆಲದ ಏರುತಗ್ಗುಗಳನ್ನು ಬಿಗಿಯಾಗಿ ಅಪ್ಪಿಕೊಳ್ಳುವುದು. ಅನಂತರ ಸ್ನಾಯುಗಳ ಸಂಕುಚನೆ ಮತ್ತು ವಿಕಸನೆಗಳಿಂದ ದೇಹದ ಹಿಂಭಾಗ ಮುಂದಕ್ಕೆ ಎಳೆಯಲ್ಪಡುವುದು. ಈ ಚಲನೆಗೆ ಬಾಲವೂ ಸಹಾಯ ಮಾಡುತ್ತದೆ. ಉದರ ಫಲಕಗಳ ಚಲನೆಯ ವೈಚಿತ್ರ್ಯವೇ ಅದು ಡೊಂಕುಡೊಂಕಾಗಿ ಹರಿಯಲು ಕಾರಣ. ಮರಹತ್ತುವ ಹಾವುಗಳಲ್ಲಿ ಉದರ ಫಲಕಗಳು ದೋಣಿಯ ತಳಭಾಗದಂತೆ ಜೋಡಿಸಲ್ಪಟ್ಟಿರುತ್ತವೆ. ಇದರಿಂದಲೇ ಅವು ನೇರವಾಗಿ ಮರವನ್ನು ಹತ್ತಬಲ್ಲವು. ನೀರಿನಲ್ಲಿ ವಾಸಿಸುವ ಹಾವುಗಳಿಗೆ ಉದರಫಲಕಗಳ ಅಗತ್ಯವಿಲ್ಲ.

ತನ್ನ ದೇಹದ ಗಾತ್ರಕ್ಕಿಂತಲೂ ದೊಡ್ಡ ಗಾತ್ರದ ಪ್ರಾಣಿಗಳನ್ನು ಹಾವು ನುಂಗಬಲ್ಲುದೆಂಬುದು ನಿಜಕ್ಕೂ ಒಂದು ಆಶ್ಚರ್ಯವಾದ ಸಂಗತಿ. ಇದರ ಗುಟ್ಟು ಅದರ ದೇಹದ ಅಸ್ಥಿಪಂಜರದ ಜೋಡಣೆಯಲ್ಲಿದೆ. ಆಹಾರವನ್ನು ನುಂಗಲು ದೇಹರಚನೆಯಲ್ಲಿರುವ ಹೊಂದಿಕೆಗಳು ಹೀಗಿವೆ; 1 ದವಡೆಯ ಮೂಳೆಗಳ ಅಂಚಿನಲ್ಲಿ ಮೂರು ಪಂಕ್ತಿಯನೇಕ ಚೂಪಾದ ಮತ್ತು ಹಿಮ್ಮುಖವಾಗಿ ಬಗ್ಗಿರುವ ಹಲ್ಲುಗಳಿವೆ. 2. ಈ ಹಲ್ಲುಗಳು ಮುರಿದರೆ ಹೊಸ ಹಲ್ಲುಗಳು ಹುಟ್ಟುತ್ತವೆ. 3. ಕೆಳದವಡೆ ನೇರವಾಗಿ ಮೇಲ್ದವಡೆಗೆ ಜೊಡಿಕೊಂಡಿಲ್ಲ. ಬದಲು ತಲೆಯ ಬುರುಡೆಗೆ ಅಂಟಿರುವ ಕ್ವಾಡ್ರೇಟ್ ಮೂಳೆಗೆ ಜೋಡಿಕೊಂಡಿದೆ. ಈ ಜೋಡಣೆಯಿಂದ ದವಡೆ ಕೆಳಕ್ಕೂ ಮುಂದಕ್ಕೂ ಚಲಿಸಿ ಬಾಯಿಯ ಮುಂಭಾಗದಷ್ಟೇ ಅಗಲವಾಗಿ ಹಿಂಭಾಗದಲ್ಲಿಯೂ ತೆರೆಯಬಲ್ಲುದು. 4. ಕೆಳದವಡೆಯ ಎರಡು ಭಾಗಗಳು ಮುಂಭಾಗದಲ್ಲಿ ಸೇರಿಲ್ಲ; ಆದರೆ ಸ್ಥಿತಿಸ್ಥಾಪಕಶಕ್ತಿಯುಳ್ಳ ಅಸ್ಥಿಬಂಧದ ತಂತುವಿನಿಂದ (ಲಿಗಮೆಂಟ್) ಜೋಡಣೆಗೊಂಡಿವೆ. ಇದರಿಂದ ಕೆಳದವಡೆಯ ಎರಡು ಭಾಗಗಳೂ ಪರ್ಯಾಯವಾಗಿ ಹಿಂದಕ್ಕೂ ಮುಂದಕ್ಕೂ ಚಲಿಸಬಲ್ಲವು. 5. ಆಹಾರವನ್ನು ನುಂಗುವಾಗ ಕೆಳದವಡೆಯ ಒಂದು ಭಾಗವನ್ನು ಮೊದಲು ಮುಂದಕ್ಕೆ ಚಾಚಿ ಬೇಟೆಯ ಪ್ರಾಣಿಯ ದೇಹವನ್ನು ಬಲವಾಗಿ ಹಿಡಿದು ಬಾಯಿಯೊಳಕ್ಕೆ ಎಳೆಯುತ್ತದೆ. ಅಷ್ಟರಲ್ಲಿ ದವಡೆಯ

ಮತ್ತೊಂದು ಭಾಗವನ್ನು ಮುಂದಕ್ಕೆ ಎಸೆದು ಪ್ರಾಣಿಯ ಮತ್ತೊಂದು ಭಾಗವನ್ನು ಹಿಡಿಯುತ್ತದೆ. ದವಡೆಯ ಭಾಗಗಳ ಈ ಪರ್ಯಾಯ ಚಲನೆಯನ್ನು ಬಾವಿಯಿಂದ ನೀರು ಸೇದುವಾಗ ರಾಟೆಯಿಂದ ಹಗ್ಗವನ್ನೆಳೆಯುವ ಕೈಗಳ ಚಲನೆಗೆ ಹೋಲಿಸಬಹುದು. 6. ಉಸಿರಾಟದ ಕ್ರಮದಲ್ಲಿ ಮಾರ್ಪಾಡುಗಳು ಏರ್ಪಟ್ಟಿವೆ. ದೊಡ್ಡಪ್ರಾಣಿಯನ್ನು ನುಂಗಲು ಸ್ವಲ್ಪ ಸಮಯ ಹಿಡಿಯುವುದರಿಂದ ಆ ವೇಳೆಯಲ್ಲಿ ನಾಸಿಕ ರಂಧ್ರಗಳ ಮೂಲಕ ಗಾಳಿ ಪ್ರವೇಶಿಸಲು ಸಾಧ್ಯವಾಗದೇ ಉಸಿರಾಟಕ್ಕೆ ತೊಂದರೆಯಾಗಬಹುದು. ಆದ್ದರಿಂದ ಇಂಥ ಸಂದರ್ಭಗಳಲ್ಲಿ ಶ್ವಾಸನಾಳದ ರಂಧ್ರವನ್ನು ಕೆಳದವಡೆಯ ಎರಡು ಭಾಗಗಳ ಮಧ್ಯೆ ನೂಕಿ ಗಾಳಿಯನ್ನು ನೇರವಾಗಿ ಶ್ವಾಸಕೋಶಗಳೊಳಕ್ಕೆ ತೆಗೆದುಕೊಳ್ಳುತ್ತದೆ. 7. ಗಂಟಲು, ಅನ್ನನಾಳ ಮತ್ತು ಜಠರಗಳು ಮಿತಿ ಮೀರಿ ಹಿಗ್ಗಬಲ್ಲವು. ಅವುಗಳಿಗೆ ವಿಶೇಷ ಸ್ಥಿತಿಸ್ಥಾಪಕಶಕ್ತಿ ಇದೆ. ಅಷ್ಟು ಹೆಚ್ಚು ಪರಿಮಾಣದ ಆಹಾರವನ್ನು ಅರಗಿಸಿಕೊಳ್ಳಲು ಸಹಾಯಕವಾಗುವಂತೆ ಜೀರ್ಣರಸಗಳು ಅತಿ ತೀಕ್ಷ್ಣವಾಗಿವೆ. 8. ಎದೆಯ ಮೂಳೆ, ಭುಜ ಮತ್ತು ಸೊಂಟಪಟ್ಟಿಗಳು ಇಲ್ಲ. ಅಲ್ಲದೆ ಸುಲಭವಾಗಿ ಬಾಗುವಂಥ ಪಕ್ಕೆಲುಬುಗಳು ಇವೆ. ಈ ಅಸ್ಥಿಪಂಜರದ ರಚನೆಯಿಂದ ದೇಹ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೂ ಹಿಗ್ಗಬಲ್ಲದು. 9. ಆಹಾರವನ್ನು ನುಂಗುವಾಗ ತನ್ನ ಮೃದುವಾದ ತೆಳುವಾದ ಸೀಳಿರುವ ನಾಲಗೆಯ ಹಿಂದಿರುವ ರಕ್ಷಾಕವಚದೊಳಕ್ಕೆ ಎಳೆದುಕೊಳ್ಳುವ ಸಾಮರ್ಥ್ಯವಿದೆ.

ಹಾವುಗಳು ದೀರ್ಘಕಾಲ ಆಹಾರವಿಲ್ಲದೇ ಜೀವಿಸಬಲ್ಲವು. ಅದರಲ್ಲೂ ಸೆರೆಯಲ್ಲಿಟ್ಟ ಹಾವುಗಳಿಗೆ ಹಸಿವೆಯ ತೀಕ್ಷ್ಣತೆ ಬಲು ಕಡಿಮೆ. ನ್ಯೂಯಾರ್ಕಿನ ಪ್ರಾಣಿ ರಕ್ಷಣಾ ಉದ್ಯಾನಕ್ಕೆ ತಂದಿದ್ದ ದೈತ್ಯ ಹೆಬ್ಬಾವೊಂದು ಎರಡು ವರ್ಷಗಳ ದೀರ್ಘ ಕಾಲ ನಿರಶನದಲ್ಲಿದ್ದುದರ ನಿದರ್ಶನವಿದೆ. ಚಳಿಗಾಲದಲ್ಲಿ ಹಾವುಗಳು ಆಹಾರವಿಲ್ಲದೇ ದೀರ್ಘನಿದ್ರೆಯಲ್ಲಿರಬಲ್ಲುವು.

ವಿಷದ ಹಾವುಗಳಲ್ಲಿ ಲಾಲಾಗ್ರಂಥಿಗಳು ಅತ್ಯಂತ ಮಾರಕವಾದ ವಿಷವನ್ನು ಉತ್ಪತ್ತಿ ಮಾಡಬಲ್ಲ ಗ್ರಂಥಿಗಳು. ಮೇಲ್ದವಡೆಯ ಎರಡು ಪಕ್ಕಗಳಲ್ಲೂ ಚೀಲಗಳಂತೆ ಕಾಣುವ ಎರಡು ವಿಷದ ಗ್ರಂಥಿಗಳಿವೆ. ಇವುಗಳಿಗೆ ಸೇರಿರುವಂತೆ ಬಾಗಿರುವ ವಿಷದ ಹಲ್ಲುಗಳಿವೆ. ಇವುಗಳ ಉದ್ದಕ್ಕೂ ಮೇಲ್ಭಾಗದಲ್ಲಾಗಲೀ ಒಳಗಾಗಲೀ ಕಾಲುವೆ ಇದೆ. ಸಮಾನ್ಯವಾಗಿ ಬಗ್ಗಿ ನಿಂತಿರುವ ಈ ಹಲ್ಲುಗಳು ಬೇಟೆಯ ಪ್ರಾಣಿ ಸಿಕ್ಕಾಗ ನೇರವಾಗಿ ನಿಂತು ಅದಕ್ಕೆ ಹೊಡೆಯುವುದು. ಇದರಿಂದ ಮೇಲ್ದವಡೆಯ ಎಲುಬುಗಳು ಚಲಿಸಿ ವಿಷದ ಚೀಲವನ್ನು ಒತ್ತುತ್ತವೆ. ಕೂಡಲೆ ವೈದ್ಯರ ಪಿಚಕಾರಿಯಂತೆ ಕಾಲುವೆಯ ಮೂಲಕ ವಿಷ ಪ್ರಾಣಿಯ ಮಾಂಸಖಂಡದೊಳಗೆ ನುಗ್ಗುತ್ತದೆ. ರೆಪ್ಪೆ ಬಡಿಯುವುದರೊಳಗೆ ಇಷ್ಟು ಚಲನೆಗಳೂ ನಡೆದುಹೋಗಿರುತ್ತವೆ. ವಿಷ ರಕ್ತಪ್ರವಾಹವನ್ನು ಸೇರಿ ನರವ್ಯೂಹ, ಹೃದಯ ಮತ್ತು ಶ್ವಾಸಾಂಗಗಳನ್ನು ದುರ್ಬಲಗೊಳಿಸಿ ಕ್ರಮೇಣ ಪ್ರಾಣಿಯ ಸಾವಿಗೆ ಕಾರಣವಾಗುತ್ತವೆ.

ಕಡಲ ಹಾವು, ಎಲಾಸ್‌ಮೋಸಾರ್ ಮತ್ತು ಮೀನುಗಳು

**ಕಿಲೋನಿಯ ಗಣ:** ಅನಾಪ್ಸಿಡ ಉರಗಗಳ ಒಂದು ಗಣ. ಭೂಮಿಯ ಮತ್ತು ಸಿಹಿನೀರಿನ ಆಮೆಗಳನ್ನೂ ಸಮುದ್ರದ ಕಡಲಾಮೆಗಳನ್ನೂ ಇದಕ್ಕೆ ಸೇರಿಸಿವೆ. ಈಗ ಉಳಿದಿರುವ ಉರಗಗಳ ಪೈಕಿ ಬಹಳ ಪ್ರಾಚೀನವಾದ ಪ್ರಾಣಿಗಳು ಈ ಆಮೆಗಳು. ಇವು ಅನಾಪ್ಸಿಡದ ಯಾವ ಶಾಖೆಯಿಂದ ವಿಕಸಿಸಿದವು; ಮತ್ತು ಇವುಗಳ ಪೂರ್ವಜರು ಯಾರು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಕಪಾಲದ ಎಲುಬುಗಳಲ್ಲಿ ರಂಧ್ರವಿಲ್ಲದೆ ಒತ್ತಾಗಿ ಜೋಡಿಸಿರುವುದು ಆದಿ ಉರಗಗಳ ಒಂದು ಲಕ್ಷಣ. ಈ ಕಾರಣದಿಂದಲೇ ಇದರ ಪೂರ್ವಜರು 20 ಕೋಟಿ ವರ್ಷಗಳ ಹಿಂದೆ ಅಂದರೆ ದೈತ್ಯೋರಗಗಳು ಕಾಣಿಸುವ ಮೊದಲೇ ಭೂಮಿಯ ಮೇಲೆ ಜನಿಸಿರಬಹುದು ಎಂದು ಅನೇಕರ ಅಭಿಪ್ರಾಯ. ಬಲಿಷ್ಠವಾದ ದೈತ್ಯೋರಗಗಳು ಬಾಳಲಾರದೇ ಲಯವಾದರೂ ಕೊನೆಯಪಕ್ಷ 15 ಕೋಟಿ ವರ್ಷಗಳಿಂದ ಆಮೆಯ ಕುಲ ಹೆಚ್ಚು ಬದಲಾವಣೆ ಇಲ್ಲದೆ ಬದುಕಿರುವುದು ಒಂದು ಆಶ್ಚರ್ಯ. ಈ ದೀರ್ಘಕಾಲದ ಉಳಿವಿಗೆ ಬಹುಶಃ ಆಮೆಯ ವಿಶಿಷ್ಟವಾದ ಅಸ್ಥಿಪಂಜರವೇ ಒಂದು ಕಾರಣವಿರಬಹುದು. (**ನೋಡಿ– ಆಮೆ; ಕಡಲಾಮೆ**).

ಸಾಮಾನ್ಯವಾಗಿ ಭೂಮಿಯ ಆಮೆಗಳನ್ನು ಟಾರ್ಟಸ್‌ಎಂದೂ ಗಟ್ಟಿಚಿಪ್ಪಿನ ಸಿಹಿ ನೀರಿನ ಆಮೆಗಳನ್ನು ಟೆರ್‍ರಾಪಿನ್ ಎಂದೂ ಸಮುದ್ರದಲ್ಲಿ ಮತ್ತು ಸಮುದ್ರದ ತೀರದಲ್ಲಿ ವಾಸಿಸುವ ಆಮೆಗಳನ್ನು ಟರ್ಟಲ್ಸ್ ಅಥವಾ ಕಡಲಾಮೆಗಳೆಂದೂ ಉರಗ ಶಾಸ್ತ್ರಜ್ಞನೆನಿಸಿದ ರೇಮಾಂಡ್ ಡಿಟ್‌ಮಾರ್ಸ್ ವರ್ಗೀಕರಿಸಿದ್ದಾರೆ.

**ಸಾರಾಂಶ:** ಕಶೇರುಕಗಳನ್ನೆಲ್ಲ ಒಟ್ಟಾಗಿ ನೋಡಿದರೆ ಉರಗಗಳು ಅವುಗಳ ಮಧ್ಯದ ಸಮೂಹದಲ್ಲಿವೆ ಎಂದು ಹೇಳಬಹುದು. ಕಣ್ಮರೆಯಾದ ಕೆಲವು ಆದಿ ಉರಗಗಳು ಹಲವು ಆದಿ ದ್ವಿಚರಿಗಳಿಗೆ ನಿಕಟ ಸಂಬಂಧವನ್ನು ತೋರಿಸುತ್ತದೆ. ಮತ್ತೆ ಕೆಲವು ಉರಗಗಳಲ್ಲಿರುವ ಗುಣಲಕ್ಷಣಗಳು ಪುನಃ ಪಕ್ಷಿಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಂಡಿರುವುದರಿಂದ ಪಕ್ಷಿಗಳು ಆದಿ ಥೀಕೋಡಾಂಟ್ಸ್ ಉರಗಗಳ ಕಾಂಡದಿಂದ ವಿಕಸಿಸಿದುವು ಎಂಬ ವಾದವನ್ನು ಸಮರ್ಥಿಸುತ್ತವೆ. ಸಸ್ತನಿಗಳು ಕೂಡ ಬಹುಶಃ ಉರಗದ ಕಾಂಡದ ಹೆಚ್ಚು ಮುಂದುವರಿದ ಆದಿಭಾಗದ ಥೀರಾಪ್ಸಿಡ್ ಕ್ರಮದಿಂದ ವಿಕಸಿಸಿದವು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ.

ಈ ಮೇಲೆ ಹೇಳಿದ ಕಾರಣಗಳಿಂದಲೇ ಉರಗಗಳು ಜೀವವಿಜ್ಞಾನಿಯ ಕುತೂಹಲವನ್ನು ಹೆಚ್ಚು ಕೆರಳಿಸಿವೆ ಎಂದು ಹೇಳಬಹುದು. ಒಂದು ಸಾಮಾನ್ಯ ಬಿಂದುವಿನಿಂದ ಪ್ರಾರಂಭವಾದ ಪ್ರಾಣಿವರ್ಗ ವಿವಿಧ ವಾತಾವರಣಗಳ ಅಗತ್ಯಗಳಿಗೆ ಅನುಗುಣವಾಗಿ ತನ್ನ ದೇಹವನ್ನು ಅಳವಡಿಸಿಕೊಳ್ಳುತ್ತ ಹೋಗುತ್ತದೆ. ಇದರಿಂದ ನಾನಾ ಬಗೆಯ ಪ್ರಾಣಿಗಳು ಉಂಟಾಗುವುದು ಕಂಡುಬರುತ್ತದೆ. ಈ ಒಂದು ನಿಯಮವನ್ನು ಆಸ್‌ಬಾರ್ನ್ ಎಂಬ ವಿಜ್ಞಾನಿ ಮೊದಲಬಾರಿಗೆ ಹೊಂದಾಣಿಕೆಯ ವಿಕಿರಣ (ಅಡಾಪ್ಟೀವ್ ರೇಡಿಯೇಷನ್) ಎಂಬುದಾಗಿ ಕರೆದ. ಆತ ಉರಗವರ್ಗದ ಪ್ರಾಣಿಗಳ ವಿಕಸನದ ಆಧಾರದ ಮೇಲೆಯೇ ಈ ವಾದವನ್ನು ಪ್ರತಿಪಾದಿಸಿದ್ದು. ಆದಿ ಉರಗಗಳು ಜೀವನ ಸಂಗ್ರಾಮದಲ್ಲಿ ಗೆದ್ದು ಬದುಕಲು ಅನೇಕ ಮಾರ್ಗಗಳನ್ನು ಹಿಡಿದವು. ಟೆರೋಸಾರುಗಳಂಥವು ವಾಯುಮಂಡಲದ ಜೀವನಕ್ಕೂ ಇಕ್ತಿಯೋಸಾರಿನಂಥವು ಜಲಜೀವನಕ್ಕೂ ಸೌರಾಪೊಡ ದೈತ್ಯೋರಗಗಳಂಥವು ದ್ವಿಚರಿ ಜೀವನಕ್ಕೂ ಹಾವಿನಂಥ ಕೆಲವು ಬಿಲ ಮತ್ತು ಕೊರಕಲುಗಳ ಜೀವನಕ್ಕೂ ಮತ್ತೆ ಕೆಲವು ವೃಕ್ಷ ಜೀವನಕ್ಕೂ ತಕ್ಕಂತೆ ದೇಹವನ್ನು ಅಳವಡಿಸಿಕೊಂಡುವು. ಇವೆಲ್ಲ ಸಂದರ್ಭಗಳಲ್ಲೂ ಉಂಟಾಗಿರುವ ಮಾರ್ಪಾಡುಗಳು ಆ ಪ್ರಾಣಿಯ ಚಲನೆಗೆ ಸಂಬಂಧವಾದುದು ಎಂಬುದು ಒಂದು ಗಮನಾರ್ಹವಾದ ವಿಷಯ. (ಎಚ್.ವಿ.ಕೆ.)

**ಉರಾಳ:** ಕಾಂಪೊಸಿಟೆ ಕುಟುಂಬಕ್ಕೆ ಒಂದು ಜಾತಿಯ ಆಸ್ಟರೇಸೀ ಸಸ್ಯ ಅಜಿರೇಟಂ ಕೋನೈಸಾಯ್ಡಿಸ್. ಪರ್ಯಾಯನಾಮ ಮೇಕೆ ಗಿಡ. ಸುಗಂಧಯುಕ್ತ ಸಸ್ಯ. ಉಷ್ಣವಲಯದಲ್ಲೆಲ್ಲ ಪಸರಿಸಿದೆ. ಸುಮಾರು 45 ಜಾತಿಗಳಿವೆ. ಭಾರತದಲ್ಲಿ ಎಲ್ಲ ಕಡೆಯೂ ಬಯಲು ಜೀವಿಯಾಗಿ ಬೆಳೆಯುವುದು. ಹೂಗಳು ಬಿಳುಪಾಗಿಯೂ ಹಲವು ಬಾರಿ ತಿಳಿಗೆಂಪಾಗಿಯೂ ಇವೆ. ಎಲೆಗಳನ್ನು ಗಾಯಗಳಿಗೆ ಔಷಧವಾಗಿ ಉಪಯೋಗಿಸುತ್ತಾರೆ. ಮ್ಯಾಂಡ್‌ಗಿಲ್ ಎಂಬಾತ ಈ ಗಿಡದಲ್ಲಿ ಎಲೆ ಹಾಗೂ ಹೂವಿನಲ್ಲಿ 0.02%ರಷ್ಟು ಸಾರಭೂತ ಎಣ್ಣೆಯ ಅಂಶವಿದೆಯೆಂದು ತಿಳಿಸಿದ್ದಾನೆ. (1925).(**ನೋಡಿ– ಅಜಿರೇಟಂ**). (ಸಿ.ಎಸ್.ಎಚ್.)

**ಉರಿ:** ದಹಿಸುವ ಅನಿಲದ ಅಣುಗಳಿಂದ ಹೊರಸೂಸುವ ಬೆಳಕಿನ ಕಿರಣ ಸಮೂಹ (ಫ್ಲೇಮ್, ಜ್ವಾಲೆ). ದಹನ ಒಂದು ರಾಸಾಯನಿಕ ಕ್ರಿಯೆ. ಎರಡು ರಾಸಾಯನಿಕ ವಸ್ತುಗಳು ಪರಸ್ಪರ ಕ್ರಿಯೆಗಳಿಗೆ ಒಳಗಾದಾಗ ಅಂತರ್ಗತವಾದ ಉಷ್ಣ ಹೊರಬೀಳುವುದುಂಟು. ಇದರ ಪ್ರಮಾಣ ಸಾಕಷ್ಟಿದ್ದರೆ ಅನಿಲದ ಅಣುಗಳು ಕಾದು ಉಷ್ಣದೀಪ್ತ ಸ್ಥಿತಿಯನ್ನು ಮುಟ್ಟಿದಾಗ ಉರಿಯ ರೂಪದಲ್ಲಿ ಕಂಡುಬರುತ್ತವೆ. ದಹಿಸುವ ವಸ್ತುಗಳು ಮೂಲತಃ ಘನ, ದ್ರವ ಅಥವಾ ಅನಿಲ ರೂಪದಲ್ಲಿರುತ್ತವೆ. ಸೌದೆ, ಇದ್ದಲು, ಕರ್ಪೂರ, ಮೆಗ್ನೀಷಿಯಂ ಮುಂತಾದ ಘನ ಪದಾರ್ಥಗಳೂ ಪೆಟ್ರೋಲ್, ಸೀಮೆಎಣ್ಣೆ, ಮೆಥಿಲೇಟೆಡ್ ಸ್ಪಿರಿಟ್ ಮುಂತಾದ ದ್ರವ ಪದಾರ್ಥಗಳೂ ಜಲಜನಕ, ಅಸಿಟಲೀನ್, ಬ್ಯುಟೇನ್ ಗ್ಯಾಸಿನಂಥ ಅನಿಲಗಳೂ ಗಾಳಿಯಲ್ಲಿ ಉರಿಯುವುದು ನಮಗೆ ನಿತ್ಯದ ಅನುಭವ. ಇಂಥ ವಸ್ತುಗಳು ಗಾಳಿಯಲ್ಲಿರುವ ಆಕ್ಸಿಜನ್ನಿನೊಂದಿಗೆ ರಾಸಾಯನಿಕ ಕ್ರಿಯೆಗೊಳಗಾಗಿ ಆಯಾ ವಸ್ತುಗಳ ಆಕ್ಸೈಡುಗಳನ್ನು ಉತ್ಪಾದಿಸುವುದೇ ಉರಿಗೆ ಕಾರಣ. ಈ ಆಕ್ಸೈಡುಗಳ ಶಕ್ತಿ ಕಡಿಮೆಯಾಗಿರುವುದರಿಂದ ಅವು ಉರಿಯ ರೂಪದಲ್ಲಿ ಕಂಡುಬರುವುದಿಲ್ಲ. ದಹನ ಕ್ರಿಯೆಯಲ್ಲಿ ಉತ್ಪತ್ತಿಯಾಗುವ ಉಷ್ಣಶಕ್ತಿ ಬೆಳಕಿನ ರೂಪದಲ್ಲಿಯೂ ಉಷ್ಣರೂಪದಲ್ಲಿಯೂ ಹೊರಬೀಳುತ್ತದೆ. ವಸ್ತುಗಳು ಉರಿಯಬೇಕಾದರೆ ಆಕ್ಸಿಜನ್ ಇರಬೇಕೆಂಬ ನಿಯಮವೇನೂ ಇಲ್ಲ, ಕ್ಲೋರಿನ್ ಅನಿಲದಲ್ಲಿ ಟರ್ಪಂಟೈನ್ ಹೊಗೆಯನ್ನು ಉಗುಳುತ್ತ ಉರಿಯುತ್ತದೆ. ಕ್ಲೋರಿನ್, ಅಮೋನಿಯ ಅನಿಲದೊಂದಿಗೆ ಸೇರುವಾಗ ಹಸಿರು–ನೀಲಿ ಬಣ್ಣದ ಉರಿ ಕಂಡುಬರುತ್ತದೆ. ಸೂರ್ಯನ ಉರಿ ಅದರಲ್ಲಿರುವ ಜಲಜನಕದ ಬೀಜಾಣುಗಳು ಒಂದಕ್ಕೊಂದು ಸೇರಿ, ಹೀಲಿಯಂ ಉತ್ಪಾದಿಸುವ ಕ್ರಿಯೆಯಲ್ಲಿ ಹೊರಬೀಳುವ ಉಷ್ಣದ ಫಲ.

ಉರಿಯ ಬಣ್ಣ ಕೆಂಪಗೆ, ಬೆಳ್ಳಗೆ ಅಥವಾ ನೀರಿಳೆಯಾಗಿ ಕಂಡುಬರುವುದು. ಉಷ್ಣತೆಯ ಪ್ರಮಾಣ ಹೆಚ್ಚಿದಂತೆಲ್ಲ ಉರಿ ಕೆಂಪುಬಣ್ಣದಿಂದ ನೀರಿಳೆಬಣ್ಣಕ್ಕೆ ತಿರುಗುವುದು. ಪ್ರಯೋಗಶಾಲೆಯಲ್ಲಿ ಉಪಯೋಗಿಸುವ ಬುನ್ಸೆನ್ ಬರ್ನರಿನಲ್ಲಿ ಉರಿಯುವ ಗ್ಯಾಸ್ ಆಕ್ಸಿಜನ್ನಿನ ಪ್ರಮಾಣ ಕಡಿಮೆಯಾದಾಗ ಕೆಂಪಗೆ ಉರಿಯುವುದೂ ಪ್ರಮಾಣ ಸರಿಯಾದಾಗ ನೀರಿಳೆಬಣ್ಣದ ಉರಿಯಂತೆ ಕಾಣುವುದೂ ವಿಜ್ಞಾನದ ವಿದ್ಯಾರ್ಥಿಗಳಿಗೆ ಪರಿಚಯವಾದ

ವಿಷಯ. ಆಕ್ಸಿಅಸಿಟಲೀನ್ ಮಿಶ್ರಣ ಉರಿದಾಗ ನೇರಿಳೆಬಣ್ಣ ಕಂಡುಬರುವುದು. ಅದರ ಉಷ್ಣತೆ ಹೆಚ್ಚಿನ ಪ್ರಮಾಣದಲ್ಲಿರುವುದೇ (3600ಲಿ ಸೆ.) ಇದಕ್ಕೆ ಕಾರಣ. ಅನಿಲಗಳು ಉರಿಯುವಾಗ ಹೊರಸೂಸುವ ಉಷ್ಣಶಕ್ತಿಯನ್ನು ಅನೇಕ ಕೈಗಾರಿಕೆಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಲೋಹ ಕೈಗಾರಿಕೆಯಲ್ಲಿ, ಬೆಸುಗೆಗೆ, ಕರಗಿಸಲು ಮತ್ತು ಕೊಯ್ಯಲು ಆಕ್ಸಿಅಸಿಟಲೀನ್, ಆಕ್ಸಿಹೈಡ್ರೋಜನ್ ಮುಂತಾದ ಅನಿಲ ಮಿಶ್ರಣಗಳನ್ನು ಉಪಯೋಗಿಸುತ್ತಾರೆ. ಪ್ರಯೋಗಶಾಲೆಯಲ್ಲಿ ಸೋಡಿಯಂ, ಪೊಟಾಸಿಯಂ ಮತ್ತು ಬೇರಿಯಂ ಮುಂತಾದ ಲೋಹಗಳನ್ನು, ಅತ್ಯಂತ ಅಲ್ಪಪ್ರಮಾಣದಲ್ಲಿದ್ದರೂ ಸಹ, ಬನ್ಸೆನ್ ಬರ್ನರಿನ ಉರಿಯ ಸಹಾಯದಿಂದ ಪತ್ತೆ ಮಾಡಬಹುದು (**ನೋಡಿ– ಜ್ವಾಲೆ**). *

**ಉರಿಗಾಂ:** ಕೋಲಾರ ಜಿಲ್ಲೆಯ ರಾಬರ್ಟ್ಸನ್ ಪೇಟೆಯ ಒಂದು ಭಾಗ. ಮೊದಲು ಪ್ರತ್ಯೇಕ ಹಳ್ಳಿಯಾಗಿತ್ತು. ಕೋಲಾರದ ಚಿನ್ನದ ಗಣಿಯ ಮೊಟ್ಟ ಮೊದಲ ಸುರಂಗ ತೋಡಿದ್ದು ಇಲ್ಲಿ. ಮುಂದಿನ ಹತ್ತು ವರ್ಷಗಳಲ್ಲಿ ಈ ಸುತ್ತಿನ ಪ್ರದೇಶವೆಲ್ಲ ಅಭಿವೃದ್ಧಿ ಹೊಂದಿ ಹೊಸರೂಪು ತಳೆಯಿತಲ್ಲದೆ ರಾಬರ್ಟ್ಸನ್ ಪೇಟೆಯೆಂಬ ಹೊಸನಗರ ಆವಿರ್ಭವಿಸಿದಾಗ ಅದರಲ್ಲಿ ಇದೂ ಲೀನವಾಯಿತು. ಉರಿಗಾಂಪೇಟೆ ಎಂದೂ ಇದನ್ನು ಕರೆಯುವ ವಾಡಿಕೆಯುಂಟು. ಇಲ್ಲೊಂದು ಪ್ರಥಮ ದರ್ಜೆಯ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು ಸ್ಥಾಪಿತವಾಗಿದೆ. ಇತಿಹಾಸ ದೃಷ್ಟಿಯಿಂದಲೂ ಉರಿಗಾಂಗೆ ಪ್ರಾಶಸ್ತ್ಯವುಂಟು. ಹೊಯ್ಸಳ ದೊರೆ ರಾಮನಾಥನ (13ನೆಯ ಶತಮಾನ) ತಮಿಳು ಶಾಸನಗಳು ಇಲ್ಲಿವೆ. ಅವುಗಳ ಪ್ರಕಾರ ಇದರ ಹೆಸರು ಉರಿಗೈಯಂ. *

**ಉರಿಗೆದರು (ಬಸುರು ನಂಜು):** ಬಸುರಿನಲ್ಲೋ ಹೆರಿಗೆಯಲ್ಲೋ ಹೆರಿಗೆಯ ನಂತರದ 24 ಗಂಟೆಗಳಲ್ಲೋ ಕಾಣಿಸಿಕೊಳ್ಳುವ ಸೆಳವಿನ ಬಸುರು ರಕ್ತನಂಜು (ಎಕ್ಲಾಂಪ್ಸಿಯ). ಮೈಯಲ್ಲಿ ಉಬ್ಬರ ಕಾಣಿಸಿಕೊಂಡು ರಕ್ತ ಒತ್ತಡವೇರಿ ಕೋಳೆಮೂತ್ರದೊಂದಿಗೆ (ಅಲ್ಬುಮಿನೂರಿಯ) ಮುಖ್ಯವಾಗಿ ಸೆಳವು ಬರುವುದು. ಬೇಗನೆ ಚಿಕಿತ್ಸೆ ಆಗದಿದ್ದಲ್ಲಿ ಕೂಸಿಗೂ ಬಸುರಿಗೂ ಮಾರಕ (**ನೋಡಿ– ಹೆರಿಗೆ–ವಿಜ್ಞಾನ**).

ಇದಕ್ಕೆ ಮುಖ್ಯ ಕಾರಣ ಜರಾಯುವಿನಲ್ಲಿರುವ ತೀವ್ರ ವ್ಯತ್ಯಾಸ. ಹೇಗೆ ಬರುತ್ತದೆ ಎಂದು ಇದುವರೆಗೂ ತಿಳಿದಿಲ್ಲ. ಸದ್ಯಕ್ಕೆ ಸಂಪೂರ್ಣ ಚಿಕಿತ್ಸೆ ಲಭ್ಯವಿಲ್ಲ. ಗರ್ಭಿಣಿಗೆ ಸಂಪೂರ್ಣ ವಿಶ್ರಾಂತಿ, ಉಪ್ಪು/ಖಾರ/ಮಸಾಲೆಯನ್ನು ಕಡಿಮೆ ಕೊಡುವುದು ಹಾಗೂ ಕೆಲವು ಔಷಧಿಗಳನ್ನು ಅನುಸರಿಸಲಾಗುತ್ತದೆ. ಆದರೂ ಬಾರದಂತೆ ತಡೆಯುವ ಅಥವಾ ಬಂದ ಮೇಲೆ ಪೂರ್ಣ ಉಪಶಮನಕ್ಕಾಗಿ ಯಾವುದೇ ಚಿಕಿತ್ಸೆ ಇಲ್ಲ. (ಡಿ.ಎಸ್.ಎಸ್.)

**ಉರಿತ:** ವೈದ್ಯಶಾಸ್ತ್ರದಲ್ಲಿ ಪೆಟ್ಟು, ಗಾಯಗಳಿಗೆ ಪ್ರತಿಕ್ರಿಯೆಯಾಗಿ ಜೀವಿಯ ಊತಕದಲ್ಲಿ (ಟಿಷ್ಯು) ತೋರುವ ಒಂದು ಸ್ಥಿತಿ. ಪರಿಸರಕ್ಕೆ ಹೊಂದಿಕೊಂಡು ಬದುಕಿರಲೋಸುಗ ಜೀವಿಗಳಲ್ಲಿ ಹೊಮ್ಮುವ ತೊಡಕಿನ ಯಾಂತ್ರಿಕತೆಯಿದು (ಇನ್‌ಫ್ಲಮೇಷನ್). ಕೆಂಪಗೆ ಊದಿಕೊಂಡು ಕಾವೇರಿ ಉರಿಯುವುದರಿಂದ ಈ ಹೆಸರು. ಭೌತ, ಜೈವಿಕ ಪ್ರಪಂಚದಲ್ಲಿ ತಾಕುವ ಪೆಟ್ಟುಗಳು ಹೊರ ವಸ್ತುಗಳ ದಾಳಿಗಳನ್ನು ಎದುರಿಸುವುದರಲ್ಲಿ, ಚೋದನೆಗೆ (ಸ್ಟಿಮ್ಯುಲೇಷನ್). ಮರುವರ್ತನೆ, ನುಂಗಣೆ, ಅರಗಣೆ, ಹೊಸ ವಸ್ತುಗಳ ತಯಾರಿಕೆ ಮುಂತಾದ ಹುಟ್ಟುಗುಣಗಳು ಇದರಲ್ಲಿ ಕಾಣಬರುತ್ತವೆ. ಜೀವಕಣಗಳಲ್ಲಿ ನಿಜಗೆಲಸಗಳು ಹಂಚಿಹೋಗಿ, ಹೊಸ ರಾಸಾಯನಿಕವಲ್ಲದೆ ರೂಪಗಳ ರಚನೆಗಟ್ಟುಗಳು (ಸ್ಟ್ರಕ್ಚರ್) ಏಳುತ್ತಾ, ಅಮೀಬದಿಂದ ಹಿಡಿದು ಮಾನವನ ತನಕ ಈ ವಿಧಾನ ಇನ್ನೂ ಜಟಿಲವಾಗುತ್ತ ಬಂದಿದೆ. ಬೇರೆ ಎಲ್ಲ ಯಾಂತ್ರಿಕತೆಗಳ ಹಾಗೇ ಇದರ ಆಚರಣೆಗೂ ಮಿತಿಗಳಿವೆ. ಮಿತಿ ಮೀರಿದರೆ ಇದು ನಡೆಯುವುದೇ ಇಲ್ಲ. ಇತರ ಯಾಂತ್ರಿಕತೆಗಳಂತೆ ಇದೂ ಅಡ್ಡಾದಿಡ್ಡಿ ಆಗಬಹುದು. ಹಾಗಾದಾಗಲೇ ರೋಗ ಕಾಣಿಸಿಕೊಳ್ಳುತ್ತದೆ. ಉರಿತ ಇಲ್ಲದಿದ್ದರೆ, ಯಾವ ಪ್ರಾಣಿಯೂ ಉಳಿಯುತ್ತಿರಲಿಲ್ಲ. ಇದು ಸುಗಮವಾಗಿ ನಡೆಯುತ್ತಿದ್ದರೆ, ಜೀವಿಯು ತನ್ನತನವನ್ನೂ ಪೂರ್ಣತೆಯನ್ನೂ ಉರಿತದ ಯಾಂತ್ರೀಕತೆ ಖಚಿತಗೊಳಿಸಲು ನೆರವಾಗುವುದು.

ಸಾಮಾನ್ಯ ಮಾದರಿ: ಉರಿತದ ಚರಿತ್ರೆಯನ್ನು ರೋಗಶಾಸ್ತ್ರದ ಚರಿತ್ರೆಯೆಂದೇ ತಿಳಿಯಬಹುದು. ಕೀವುಗೂಡುವುದೇ ಮೊದಲಾದ ಉರಿತದ ಕೆಲವು ಮೊಗಗಳನ್ನು ಪ್ರ.ಶ.ಪೂ. 2000 ವರ್ಷಗಳ ಹಿಂದೆಯೇ ಈಜಿಪ್ಟಿನ ಆಮುಕರಡುಗಳಲ್ಲಿ (ಪಪೈರಸ್) ನಮೂದಿಸಿದೆ. ಉರಿತದಲ್ಲಿ ಎದ್ದು ಕಾಣುವ ಲಕ್ಷಣಗಳಾದ, ಕೆಂಪೇರಿಕೆ (ರೂಬರ್), ಊತ (ಟ್ಯೂಮರ್), ಕಾವು (ಕ್ಯಾಲರ್), ನೋವು (ಡೊಲರ್)–ಇವನ್ನು ರೋಗವೆಂದು ತಿಳಿದು ಒಂದನೆಯ ಶತಮಾನದಲ್ಲಿ ಸೆಲ್ಸಸ್ ಬಣ್ಣಿಸಿದ. ಇವಷ್ಟೇ ಅಲ್ಲದೆ. ಉರಿತವೆದ್ದ ಭಾಗದ ನಿಜಗೆಲಸವೂ ಕೆಟ್ಟಿರುವುದೆಂದು ಸೂಚಿಸಿ, ಗಾಯ ಪೆಟ್ಟುಗಳಿಂದ ಉರಿತ ಏಳಬಹುದೆಂದು, 3ನೆಯ ಶತಮಾನದಲ್ಲಿ ಗ್ಯಾಲನ್ ವಿವರಿಸಿದ್ದರೂ ಯಾವ ಪೆಟ್ಟಿನಿಂದಲಾದರೂ ಒಂದೆಡೆಯ ಊತಕದಲ್ಲಿ ಏಳುವ ಮುಖ್ಯವಾದ ಸಾಮಾನ್ಯ ಪ್ರತಿಕ್ರಿಯೆಯೇ ಉರಿತವೆಂದು ಮೊಟ್ಟಮೊದಲು ಅನುಮಾನವಿಲ್ಲದಂತೆ 18ನೆಯ ಶತಮಾನದಲ್ಲಿ ಗುರುತಿಸಿದವ ಜಾನ್ ಹಂಟರ್. ಮೇಲ್ತರದ ಪ್ರಾಣಿಗಳಲ್ಲಿ ಆಗುವ ಉರಿತದ ಮುಖ್ಯ ಕ್ರಮಗತಿಯಲ್ಲಿ ಮೂರು ಹಂತಗಳನ್ನು ಗುರುತಿಸಬಹುದು; ಕೆರಳಿಕೆ ಕಾರಣವಾದ ಕಾರಕವನ್ನು ಹಾಳುಮಾಡಿ ತೆಗೆದುಹಾಕುವ ರಕ್ತನಾಳಗಳ ಬದಲಾವಣೆಗಳು; ಸೋನೆ (ಎಕ್ಸುಡೇಟ್) ಸುರಿತ: ಹಾಳಾದ ಭಾಗಗಳ ಆಮೇಲಿನ ನೇರ್ಪಾಟು (ರಿಪೇರಿ), ಮೊದಲ ಕೆಲಸವನ್ನು ಅಲೆದಾಡುವ ಜೀವಕಣಗಳೂ ಎರಡನೆಯದನ್ನು ಊತಕದವೂ ಮಾಡುವುವು.

**ರಕ್ತನಾಳಗಳ ಬದಲಾವಣೆಗಳು:** ಜೀವಿಗಳಲ್ಲಿ ಗಾಯಗಳನ್ನು (ಲೀಷನ್ಸ್) ಮಾಡಿ ಸೂಕ್ಷ್ಮದರ್ಶಕ, ರಾಸಾಯನಿಕ ಪ್ರಯೋಗಗಳನ್ನು ನಡೆಸಿ ಪಡೆದ ತಿಳಿವಳಿಕೆಯಿಂದ ಉರಿತದ ಕ್ರಮಗತಿ ಬಹುಮಟ್ಟಿಗೆ ಗೊತ್ತಾಗಿದೆ. ಕಪ್ಪೆಯ ನಾಲಗೆ, ಕಾಲುಗಳ ಜಾಲಗಳು, ಕರುಳು ನಡುಪೊರೆಗಳಂಥ (ಮೆಸಂಟರಿ) ಸಿಲುವಿನ (ಪಾರದರ್ಶಕ) ರಚನೆಗಟ್ಟುಗಳನ್ನು ಇದಕ್ಕಾಗಿ 19ನೆಯ ಶತಮಾನದ ನಡುವಿನಲ್ಲಿ ಜರ್ಮನ್ ಪ್ರಾಯೋಗಿಕರೋಗಶಾಸ್ತ್ರಜ್ಞ ಜೆ.ಎಫ್. ಕಾನ್‌ಹೀಮ್ ಬಳಸಿದ. ಉರಿತ ಎಬ್ಬಿಸಲು ಬೆಳ್ಳಿಯ ನೈಟ್ರೇಟು, ಜಾಪಾಳದೆಣ್ಣೆ ತೆರನ ವಸ್ತುಗಳನ್ನು ಹಚ್ಚಿದ. ಇದರಿಂದ ಕೆರಳಿದ ಮೇಲೆ ಆಗುವ ರಕ್ತನಾಳಗಳ ಬದಲಾವಣೆಗಳ ಸಾಲನ್ನು ಸೂಕ್ಷ್ಮದರ್ಶಕದಿಂದ ಕಂಡ. ರಕ್ತನಾಳಗಳು ಮುಖ್ಯವಾಗಿ ಹಿಗ್ಗುತ್ತವೆ; ಕೆಲವೇಳೆ ಮೊದಲು ಕೊಂಚಕಾಲ ಕುಗ್ಗುವುದುಂಟು. ಮೊದಲು ಕಿರಿಧಮನಿಗಳು ಹಿಗ್ಗುತ್ತವೆ; ಆಮೇಲೆ ಸಿರಗಳು, ಕೊನೆಗೆ ಲೋಮನಾಳಗಳು ಹಿಗ್ಗಿದಂತೆಲ್ಲ, ಎಲ್ಲ ರಕ್ತನಾಳಗಳಲ್ಲೂ ರಕ್ತ ಹರಿವಿನ ವೇಗ ಏರುವುದು, ಆಮೇಲೆ ರಕ್ತದ ಹರಿವು ಮೊದಲಿಗಿಂತ ನಿಧಾನವಾದರೂ ರಕ್ತನಾಳಗಳು ಹಿಗ್ಗಿಕೊಂಡೇ ಇರುತ್ತವೆ. ಲೋಮನಾಳಗಳು ಇನ್ನೂ ಚೆನ್ನಾಗಿ ಎದ್ದು ತೋರುವುವು. ಕೆಲವು ತಾಸುಗಳು ಕಳೆದ ಮೇಲೆ ಎಲ್ಲ ರಕ್ತ ನಾಳಗಳಲ್ಲೂ ಅಸಹಜವಾಗಿ ರಕ್ತ ತುಂಬಿಕೊಂಡ



ಮುಳ್ಳು ಚುಚ್ಚಿದಾಗ ಸೋಂಕು ಹತ್ತಿ ಉರಿತವಾಗುವ ವಿಧಾನ

ಹಾಗೆ ತೋರುತ್ತದೆ. ರಕ್ತದ ಹರಿವಿನ ಅಂಚಿನ ಪದರಗಳಲ್ಲಿ ಎಷ್ಟೋ ಬಿಳಿಯ ರಕ್ತಕಣಗಳಿದ್ದು ರಕ್ತನಾಳಗಳ ಗೋಡೆಗಳಿಗೆ ಅಂಟಿಕೊಂಡಿರುತ್ತವೆ. ಅಲ್ಲದೆ ಕೆಂಪು ರಕ್ತಕಣಗಳು ರಾಶಿ ಬಿದ್ದಿರುವುದು ಕಾಣುವುದು. ಕೆಲವು ರಕ್ತನಾಳಗಳಲ್ಲಿ ಸದ್ಯಕ್ಕೆ ರಕ್ತದ ಹರಿವು ನಿಂತುಬಿಡಬಹುದು. ಬಿಳಿ ಕಣಗಳು (ಲೂಕೊಸೈಟ್ಸ್) ಒಳಪೊರೆಗೆ (ಎಂಡೋತೀಲಿಯಂ) ತಾಸುಗಟ್ಟಲೆ ಅಂಟಿಕೊಂಡೇ ಇರಬಹುದು. ಕಿವುಚಿಕೆ, ಗಿಲ್ಲುವುದು, ಒತ್ತಡ ಇವುಗಳ ತೆರನ ಮೇಲುಪಿನ ಗಾಯವಾದ ಮೇಲೆ, ರಕ್ತದ ಹರಿವು ಬೇಗನೆ ಮುನ್ನಿನಂತಾಗಿ, ಅಂಟಿಕೊಂಡಿದ್ದ ಬಿಳಿಕಣಗಳು ಜಾಗ ಬಿಟ್ಟು ಮುಂದೆ ಸಾಗುತ್ತವೆ. ಇನ್ನೂ ಬಲವಾದ ಗಾಯವಾದರೆ, ರಕ್ತನಾಳಗಳ ಬದಲಾವಣೆಗಳು ಹಾಗೇ ಉಳಿಯುತ್ತವೆ. ಕೆಲವು ರಕ್ತನಾಳಗಳಲ್ಲಿ ಕೂಡುಕರಣೆಕೆಯಿಂದ (ಥ್ರಾಂಬೋಸಿಸ್) ಅಡಚಣೆಯಾಗಬಹುದು. ಉರಿತ ಎದ್ದಾಗಲೆಲ್ಲಾ ರಕ್ತನಾಳಗಳ ಬದಲಾವಣೆಗಳು ಆಗಲೇಬೇಕೆಂದಿಲ್ಲ. ಕಣ್ಣಿನ ಮುಂದುಗಡೆ ಇರುವ ಕೋಡುಪೊರೆಯಲ್ಲಿ (ಕಾರ್ನಿಯ) ರಕ್ತನಾಳಗಳೇ ಇರದಿದ್ದರೂ ಅಲೆಯುವ ಬಿಳಿಕಣಗಳು ಅಲ್ಲಿಗೂ ನುಗ್ಗುತ್ತವೆ.

ಸೋನೆ ಸುರಿತ: ಉರಿತದ ವಿಶೇಷ ಲಕ್ಷಣಗಳಲ್ಲಿ ಒಂದಾದ ಸೋನೆ ಸುರಿತಕ್ಕೂ ಸಣ್ಣ ರಕ್ತನಾಳಗಳ ಒಳಪೊರೆಯಲ್ಲಾಗುವ ಬದಲಾವಣೆಗಳಿಗೂ ಸಂಬಂಧವಿದೆ. ಗಾಯವಾದ ತಾವಿನಲ್ಲಿ ಕಂಡುಬರುವ, ಸಾಮಾನ್ಯವಾಗಿ ಜೀವಕಣಗಳೂ ಜೀವಕಣದ ಚೂರುಗಳೂ ಸೇರಿರುವ, ಜೋಲಂಟು (ಕಲಾಯ್ಡ್) ಕೂಡಿದ ದ್ರವ ತುಂಬಿದುದೇ ಸೋನೆ. ಜೋಲಂಟೂ ಜೀವಕಣಗಳೂ ಬಹುಮಟ್ಟಿಗೆ ರಕ್ತದಿಂದಲೇ ಬಂದವು. ಕೆಲವಂತೂ ಊತಕದ ಸಾರಾಂಶದಿಂದ

(ಪೇರೆಂಖೈಮ) ಬರಬಹುದು. ರಕ್ತನಾಳದಾಚೆಗಿನ ದ್ರವದಲ್ಲಿ ಯಾವಾಗಲೂ ಎಲ್ಲೋ ಕೊಂಚ ಮಾತ್ರ ರಕ್ತರಸದ (ಪ್ಲಾಸ್ಮ), ಪ್ರೋಟೀನುಗಳಿರುತ್ತವೆ. ಆದರೆ ಉರಿತದಲ್ಲಿ ಸಣ್ಣ ನಾಳಗಳಿಂದ ದ್ರವ ಹೊರಕ್ಕೆ ಜಿನುಗುವುದು ಹೆಚ್ಚುತ್ತದೆ. ರಕ್ತರಸದಲ್ಲಿರುವ ಲೋಳಿಗೆ (ಅಲ್ಬುಮಿನ್) ಹತ್ತಿಕೊಳ್ಳುವ ಒಂದು ಬಣ್ಣವಸ್ತು ರಕ್ತದ ಹರಿವಿನೊಳಕ್ಕೆ ಸಾಗಬಿಟ್ಟು, ಆ ತಾವಿನಲ್ಲಿ ಉರಿತ ಎಬ್ಬಿಸಿದರೆ, ಕೊಂಚ ಹೊತ್ತಿನಲ್ಲೇ ಗಾಯದಲ್ಲೂ ಅದರ ಸುತ್ತಲೂ ಆ ಬಣ್ಣವಸ್ತು ಕಾಣಿಸಿಕೊಳ್ಳುತ್ತದೆ.

ಕಾನ್‌ಹೀಮ್ ಮತ್ತಿತರರು ಕಂಡಂತೆ, ಸೊನೆಯ ಬಿಳಿಕಣಗಳು ಬಹುವಾಗಿ ರಕ್ತದಿಂದ ಬರುತ್ತವೆ. ಗಾಜನ್ನಿಟ್ಟು ನೋಡುತ್ತಿದ್ದರೆ, ಉರಿತವಾಗಿರುವ ತಾವಿಗೆ ಬಿಳಿಕಣಗಳು ನುಗ್ಗುವುದನ್ನು ಕಾಣಬಹುದು. ಒಳಪೊರೆಗೆ ಬಿಳಿಕಣಗಳು ಅಂಟಿಕೊಳ್ಳುವ ಹಂತ ಕಳೆದ ಮೇಲೆ, ಈ ಜೀವಕಣಗಳು ಒಳಪೊರೆಯ ಮೂಲಕ ಆಚೆಗೆ ತೂರಿ ದಾಟುವುದನ್ನು ನೋಡಬಹುದು. ಅಮೀಬದ (ಅಮೀಬಾಯ್ಡ್) ಚಲನೆಯಿಂದ ಬಿಳಿಕಣಗಳು ರಕ್ತನಾಳ ಗೋಡೆಯ ಮೂಲಕ ನುಣುಚಿಕೊಂಡು ಊತಕದ ಜೀವಕಣಗಳ ನಡುವಣ ತೆರಪಿನೊಳಕ್ಕೆ ಜಾರಿಕೊಳ್ಳುತ್ತವೆ. ಒಳಪೊರೆಯ ಜೀವಕಣಗಳ ನಡುವೆಯೇ ಬಿಳಿಕಣಗಳ ಸಾಗಣೆ ಇರಬಹುದು. ಗಾಯದ, ಲಕ್ಷಣ, ಜೋರುಗಳಿಗೆ ತಕ್ಕ ಹಾಗೆ, ಬೇಗನೆ ಅವು ನುಣುಚಿಕೊಳ್ಳುವುವು.

ಉರಿತದಲ್ಲಿ ಬಿಳಿಕಣಗಳನ್ನು ಇತರರು ಕಂಡಿದ್ದರೂ ಅವು ಅಲೆದಾಡುವ ತೀನಿಕಣಗಳೆಂದು (ಫಾಗೊಸೈಟ್ಸ್) 1822ರಲ್ಲಿ ಒತ್ತಿ ಹೇಳಿದವ ರಷ್ಯದ ಪ್ರಾಣಿಶಾಸ್ತ್ರಜ್ಞ ಎಲೀಮೆಷ್ನಿಕಾವ್. ಬೇರೆ ಬೇರೆ ಪ್ರಾಣಿಗಳಲ್ಲಿ ರೋಗಶಾಸ್ತ್ರ ಕಣ್ಣರಿಕೆಗಳಲ್ಲಿನ ಅವನ ಸರಣಿ ಈಗಲೂ ಹೆಸರುವಾಸಿ. ರಕ್ತ ಸುತ್ತುವ ಮಂಡಲವಿಲ್ಲದ ಸಿಲುವಿನ, ಸರಳ, ಬೆನ್ನೆಲುಬಿರದ ಜೀವಿಗಳಲ್ಲಿ, ನಡುನೆಚರ್ಮದಲ್ಲಿ (ಮೀಸೋಡರ್ಮ್) ಅಲೆದಾಡುವ ಜೀವಕಣಗಳನ್ನು ಆತ ಕಂಡ. ಸಸ್ತನಿಗಳಲ್ಲಿನ ಕೂಡಿಸುವ ಊತಕಕ್ಕೆ ಸಮನಾದುವೇ ಆ ನಡುನೆಚರ್ಮ. ಒಂದು ಹೆರ ವಸ್ತು ಪ್ರಾಣಿಯ ಹೊರನೆಚರ್ಮದಲ್ಲಿ (ಎಕ್ಟೊಡರ್ಮ್) ತೂರಿ ಒಳಹೊಕ್ಕರೆ, ಈ ಅಲೆವ ಜೀವಕಣಗಳು ಅದನ್ನು ಸುತ್ತುಗಟ್ಟುತ್ತಿದ್ದುವು. ಮೈ ಪೊಳ್ಳಿನೊಳಕ್ಕೆ ಸೂಕ್ಷ್ಮಜೀವಕಣಗಳು ಅವನ್ನು ನುಂಗಿಹಾಕಿ ಅರಗಿಸಿಕೊಳ್ಳುತ್ತಿದ್ದುವು. ಅವು ಹಾಗೆ ಮಾಡದಿದ್ದಲ್ಲಿ, ಸೂಕ್ಷ್ಮ ಜೀವಾಣುಗಳೇ ಗುಣಿತವಾಗಿ ಆಸರಿಗವನ್ನೇ (ಹೋಸ್ಟ್) ಸಾಯಿಸಿಬಿಡುತ್ತಿದ್ದುವು. ಇದೇ ಅಲ್ಲದೆ, ಮೇಲ್ತರದ ಪ್ರಾಣಿಗಳಲ್ಲಿ ರಕ್ತದಲ್ಲಿರುವ ಹಲರೂಪಿ ನಡುಬೀಜಕ (ಪಾಲಿಮಾರ್ಫೊನ್ಯೂಕ್ಲಿಯಾರ್) ಬಿಳಿಕಣಗಳು, ಏಕಜೀವಿಕಣಗಳು (ಮಾನೋಸೈಟ್ಸ್). ಕೆಂಪಣುಗಿಗಳೂ (ಇಯೋಸಿನೊಫಿಲ್ಸ್), ಊತಕಗಳ ನಿಡುತೀನಿಕಣಗಳೂ (ಮ್ಯಾಕ್ರೊಫೇಜಸ್). ನವಿರುಜಾಲದ ಒಳಪೊರೆಯ (ರೆಟಿಕ್ಯುಲೋ ಎಂಡೋತೀಲಿಯಲ್) ಮಂಡಲದ ಜೀವಕಣಗಳು ತೀನಿಕಣದ ಕೆಲಸಗಳನ್ನು ಮಾಡುತ್ತವೆ. **(ನೋಡಿ– ತೀನಿ–ಕಣತೆ)**.

ನೇರ್ಪಾಟು: ರಕ್ತನಾಳಗಳೂ ಕೂಡಿಸುವ ಊತಕಗಳೂ ಹೆಚ್ಚಿಕೊಂಡಿದ್ದರಿಂದ ಆಗುವ ನೇರ್ಪಾಟಿನ ಕೆಲಸಗಳು ಉರಿತದಲ್ಲಿ ಸಾಮಾನ್ಯ. ಊತಕಗಳು ಹಾಳಾದಾಗ ಮಾತ್ರವೇ ಅಲ್ಲದೆ ಸೂಕ್ಷ್ಮದರ್ಶಕದಲ್ಲೂ ಕಾಣಿಸದ ಹಾಗೆ ಊತಕ ನಾಶವಾದರೂ ನೇರ್ಪಾಟು ಆಗುವುದು. ಕೆಲವು ಅಂಗಗಳ ಉರಿತಗಳಲ್ಲಿ, ನೇರ್ಪಾಟು ಎದ್ದು ಕಾಣುವಂತೆ ಇರುವುದು. ಇರುವ ರಕ್ತನಾಳಗಳಿಂದಲೇ ಮೊಳೆತು ಲೋಮನಾಳಗಳು ಹೊಮ್ಮುತ್ತವೆ. ತಂತುಕಣಗಳಿಂದ (ಫೈಬ್ರೋಬ್ಲಾಸ್ಟ್) ಕೂಡಿಸುವ ಊತಕದ ತಂತುಗಳು ಬೆಳೆಯುತ್ತವೆ. ಮುಖ್ಯವಾಗಿ ನಿಡುತೀನಿ ಕಣಗಳಿಂದಲೂ ಇರುವ ತಂತು ಕಣಗಳಿಂದಲೋ ಮತ್ತಷ್ಟು ತಂತುಕಣಗಳು ಹುಟ್ಟಿಕೊಳ್ಳುತ್ತವೆ.

ವಿವರಣೆ: ಉರಿತದ ನಾಲ್ಕು ಮೂಲ ಲಕ್ಷಣಗಳಿಗೆ ಈಗ ಕಾರಣಗಳನ್ನು ಹೇಳಬಹುದು. ರಕ್ತನಾಳಗಳು ಹಿಗ್ಗಿದ್ದರಿಂದ ಕೆಂಪೇರಿರುವುದು. ಕೊಂಚಮಟ್ಟಿಗೆ ರಕ್ತನಾಳಗಳ ಹಿಗ್ಗಲಿಕೆಯಿಂದಲೂ ಬಹುಮಟ್ಟಿಗೆ ಸೊನೆ ಜಿನುಗುವುದರಿಂದಲೂ ಉರಿತ ಆಗುವುದು. ಹೆಚ್ಚು ರಕ್ತ ಹರಿವುದರಿಂದ ಕಾವು ಹುಟ್ಟುವುದು. ತುಸುಮಟ್ಟಿಗೆ ಒಂದು ತಾವಿನಲ್ಲಾಗುವ ಊತ, ಒತ್ತಡಗಳಿಂದಲೂ ಉರಿತವೆದ್ದಾಗ ಹೊರಬಿದ್ದ ರಾಸಾಯನಿಕ ವಸ್ತುಗಳು ನರಾಂತಗಳನ್ನು (ನರ್ವ್ ಎಂಡಿಂಗ್ಸ್) ಕೆರಳಿಸುವುದರಿಂದಲೂ ತೋರುವುದು ನೋವು **(ನೋಡಿ– ಏಕಾಣುಜೀವಿಕ,–ಸೋಂಕಿನ–ರೋಗಗಳು ; ರೋಗವಿಜ್ಞಾನ)**.

**ಉರಿತದ ಬಗೆಗಳು:** ಮೂಲವಾಗಿ ಎಲ್ಲ ಉರಿತಗಳೂ ಒಂದೇ ಮಾದರಿಯಲ್ಲಿ ಇರುವುವಾದರೂ ಹಲವಾರು ಬಗೆಗಳನ್ನು ಗುರುತಿಸಬಹುದು. ಬೇಗನೆ ಬರುವ, ಹಲವಾರು ವಾರಗಳಿರುವ ಉರಿತಕ್ಕೆ ಕೂರುರಿತ (ಅಕ್ಯೂಟ್) ಎನ್ನುತ್ತಾರೆ. ಹಲವು ತಿಂಗಳುಗಳೋ ಇನ್ನೂ ಹೆಚ್ಚಿನ ಕಾಲವೋ ಇರುವಂಥದ್ದು (ಕ್ರಾನಿಕ್) ಇವೆರಡರ ನಡುವಣದ್ದು. ಸುಮಾರು ಕೂರಾದ ಉರಿತಗಳು (ಸಬ್ ಅಕ್ಯೂಟ್). ಸುಮಾರು ಕೂರಾದ ಉರಿತಗಳಲ್ಲಿ, ಹಾಲುರಸಕಣಗಳು (ಲಿಂಫೊಸೈಟ್ಸ್). ನಿಡುತೀನಿಕಣಗಳು, ರೂಪಿತ (ಪ್ಲಾಸ್ಮ) ಜೀವಕಣಗಳೊಂದಿಗೆ ಒಂದಿಷ್ಟು ಹಲರೂಪಿ ನಡುಬೀಜಕ ಬಿಳಿಕಣಗಳೂ ಬೆರೆತಿರುವುವು. ಬೇರೂರಿದ ಉರಿತಗಳಲ್ಲಿ ಸಾಮಾನ್ಯವಾಗಿ ಎದ್ದು ಕಾಣುವ ಹಾಗೆ ಬೇಕಾದಷ್ಟು ತಂತುಕಣಗಳೂ ಅವುಗಳೊಂದಿಗಿನ ಕಿರುಎಳೆಗಳೂ (ಫೈಬ್ರಿಲ್ಸ್) ಇರುತ್ತವೆ. ಹಾಲುರಸಕಣಗಳೂ ಮತ್ತಿತರ ಒಂದು ಬೀಜಕ (ಮಾನೊನ್ಯೂಕ್ಲಿಯರ್) ಜೀವಕಣಗಳೂ ಹೇರಳವಾಗಿ ಇರುವುದೇ ಸಾಮಾನ್ಯ.

ಬೇರೆ ಬೇರೆ ರೋಗಕಾರಕಗಳ ಹಾಗೇ ಉರಿತದ ಮಾದರಿಗಳೂ ತೆರತೆರನಾಗಿರುತ್ತವೆ. ಒಂದೆಡೆ ಹರಡುವ, ಚರ್ಮ ಕೂರಾದ ಉರಿತವಾದ ವಿಸರ್ಪ(ಎರಿಸಿಪೆಲಾಸ್) ಇದರ ಒಂದು ಉದಾಹರಣೆ. ಇದು ಬೀಟ ರಕ್ತಲಯಕ ಸರಕಾಯ್ಜೀವಿಯಿಂದ (ಹೀಮೊಲಿಟಿಕ್ ಸ್ಟ್ರೆಪ್ಟೊಕಾಕಸ್) ಆಗುವುದು. ಆ ಜಾಗ ಮಸಕು ಕೆಂಪಗೆ ಊದಿಕೊಂಡು ಸುಡುತ್ತ ನೋವಿಡುವುದು ವಿಶೇಷ ಲಕ್ಷಣ. ಏಕಾಣುಜೀವಿಗಳೂ ಒಂದಿಷ್ಟು ರಕ್ತರಸದ ಪ್ರೋಟೀನುಗಳೂ ಸಾಕಷ್ಟು ಬಿಳಿಕಣಗಳೂ ಕೆಂಪುಕಣಗಳೂ ಸೇರಿರುವ ಸೊನೆ ದ್ರವ, ಊತಕಗಳು ಮತ್ತು ಜೀವಕಣಗಳ ನಡುವೆ ಇರುವುದು. ಸಣ್ಣರಕ್ತನಾಳಗಳು ಹಿಗ್ಗುವುವು. ಊತಕ ಕೊಂಚವೇ ಹಾಳಾಗಿರುವುದು. ಉರಿತವೆದ್ದ ಸುಮಾರು ಒಂಬತ್ತು ದಿನಗಳ ಹೊತ್ತಿಗೆ, ತೀನಿಕಣತೆ (ಫೇಗೊಸೈಟೋಸಿಸ್) ಏಕಾಣುಜೀವಿಗಳನ್ನು ಅರಗಿಸಿ ಸಾಗಿಸುವುದನ್ನು ವೇಗಗೊಳಿಸುವ ವಿಶಿಷ್ಟ ಏಕಾಣು ಜೀವಿರೋಧಕ ರೋಧ ವಸ್ತುಗಳ (ಆ್ಯಂಟಿ ಬಾಡೀಸ್) ಹುಟ್ಟಿಕೊಳ್ಳುವುದರಿಂದ ಈ ಅಂಗದ ಗಾಯ ಸಾಮಾನ್ಯವಾಗಿ ಕರಗಿ ಹೋಗುತ್ತದೆ. ಹೀಗೆ ಕರಗಿ ಹೋಗುವಾಗ, ಸೊನೆಯ ದ್ರವಗಳೂ ಜೋಲಂಟುಗಳೂ ಹೀರಿ ಹೋಗುವುವು. ತೀನಿಕಣಗಳೂ ಇಲ್ಲದಂತಾಗಿ, ರಕ್ತನಾಳದ ಪ್ರತಿಕ್ರಿಯೆ ಸಾಮಾನ್ಯ ಮಾದರಿಗಿಳಿಯುತ್ತದೆ.

ಕೆಲವೇಳೆ ಗುತ್ತಿಕಾಯ್ಜೀವಿಗಳಿಂದ (ಸ್ಟೆಫಿಲೋಕಾಕೈ) ಒಂದು ತಾವಿನಲ್ಲಾಗುವ ಕೂರಾದ ಉರಿತವೇ ಕುರು ಎನಿಸಿಕೊಳ್ಳುವುದು. ಮುಖ್ಯವಾಗಿ ಇದರಲ್ಲಿ ಕೀವುಗೂಡಿರುತ್ತದೆ. ಕುರುವಿನ ನಡುವೆ ಇರುವ ಕೀವು ಸೊನೆಯ ಒಂದು ರೂಪ. ಕೀವಿನಲ್ಲಿ ಬಹಳವಾಗಿ, ಜೀವಿಯ ಸತ್ತ ಊತಕದೊಂದಿಗೆ ಹಲವು ಸತ್ತ ಬಿಳಿಕಣಗಳೂ ಕೆಲವು ಬದುಕಿರುವ ಬಿಳಿಕಣಗಳು ಇರುವುವು. ನೀರಾಗಿಲ್ಲದ ಕೀವಿನ ಸುತ್ತಲೂ ತಂತುಕದ (ಫೈಬ್ರಿನ್) ಜಾಲರಚನೆಯಿದ್ದು ಸಂದುಗಳಲ್ಲಿ ದ್ರವವೂ ಬಿಳಿಕಣಗಳೂ ಸಿಕ್ಕಿಬಿದ್ದಿರುತ್ತವೆ. ತಂತುಕದ ಬದಿಯಲ್ಲಿ ಬದುಕಿರುವ ಊತಕದ ಪದರ ಇರುವುದು. ಈ ಪದರದ ರಕ್ತನಾಳಗಳಿಂದಲೇ ಸೊನೆಯ ವಸ್ತುಗಳು ಜಿನುಗುವುದು. ಕೀವು ಒಂದೆಡೆ ಬೇರೂರಿ ಕುರು ಎದ್ದಿದ್ದರೆ, ಕೀವಿನ ಸುತ್ತಲೂ ರಕ್ತ




**ಸೋಂಕು ಹತ್ತಿ 30 ದಿನಗಳಾದ ಮೇಲೆ ಕಾಣುವ ಕುರು ಸುತ್ತಲೂ ತಂತುಕಣಗಳಿಂದ ನಾರುಗಟ್ಟಿದೆ. ನಡುವೆ ಕೀವುಗೂಡಿದೆ.**
**1. ಹಲರೂಪನಡುಬೀಜಕಣ, 2. ರಕ್ತಕಣ, 3. ಕೂಡಿಸುವ ಊತಕ, 4. ತಂತುಕಣ, 5. ಕಿರಿಧಮನಿ, 6. ನಿಡುತೀನಿಕಣ**

ತುಂಬಿದ ಕೂಡಿಸುವ ಊತಕದ ಪದರ ಕವಚವಾಗಿ ಬೆಳೆದುಕೊಳ್ಳುತ್ತವೆ. ಕುರುವಿನಿಂದ ಕೀವನ್ನು ಹೊರಡಿಸಿದ ಮೇಲೆ, ಈ ಪದರದಿಂದಲೇ ಹೊಸ ಹುಟ್ಟಿನಿಂದ ಹುಣ್ಣು ವಾಸಿಯಾಗುವುದು.

ಹೊರಗಿನಿಂದ ಏನಾದರೂ ಕಸಕಡ್ಡಿಗಳು ಊತಕಗಳ ಒಳಹೊಕ್ಕರೆ ಪರ ವಸ್ತುವಿನ ಪ್ರತಿಕ್ರಿಯೆ ಆಗುವುದು. ಬಿಂಗಾರ (ಟಾಲ್ಕ್), ಕಲ್ಲುಚೂರು, ಹೊಲಿಗೆದಾರ, ಸಿಬರುಗಳು, ಗಾಜಿನ ಚೂರುಪಾರುಗಳಿಂದ, ಸೋಂಕಿಲ್ಲದಿದ್ದರೆ ಕೊಂಚ ಕೂರಾದ ಉರಿತದ ಪ್ರತಿಕ್ರಿಯೆ ಆಗುತ್ತದೆ. ರಕ್ತನಾಳಗಳು ಸೊನೆಯೂ ಇದ್ದೇ ಇರುತ್ತದೆ. ಸಣ್ಣಪುಟ್ಟ ಚೂರುಗಳಾಗಿದ್ದರೆ ಅವನ್ನು ಸುತ್ತುಗಟ್ಟಿ ಕಬಳಿಸುವ ನಿಡುತೀನಿಕಣಗಳು (ಇವು ನಡುಬೀಜಕಕಣಗಳು) ಎದ್ದು ಕಾಣುತ್ತಿರುತ್ತವೆ. ಒಂದೊಂದೇ ಜೀವಕಣ ನುಂಗಿ ಹಾಕಲಾಗದಷ್ಟು ಕಪ್ಪನೆಯ ಚೂರುಗಳ ಸುತ್ತಲೂ ಹಲವೇಳೆ ಹಲನಡುಬೀಜಗೂಡಿದ ದೈತ್ಯಜೀವಕಣಗಳು ಮುತ್ತುತ್ತವೆ. ಸಣ್ಣ ಸಣ್ಣ ತೀನಿಕಣಗಳು ಒಂದುಗೂಡುವುದರಿಂದಲೂ ಒಂಟಿ ಜೀವಕಣ ಪಾಲಾಗದೆಯೆ ಹಿರಿದಾಗಿ ಬೆಳೆದು ಅದರ ನಡುಬೀಜ (ನ್ಯೂಕ್ಲಿಯಸ್) ಗುಣಿತವಾಗಿಯೊ ಈ ದೈತ್ಯಕಣಗಳು ಆಗುತ್ತವೆ. ಕ್ಷಯದ ದಂಡಾಣುಜೀವಿ (ಬೆಸಿಲಸ್) ತೆರನ ಕೆಲವು ಗೊತ್ತಾದ ಜೀವಕಣಗಳು ಒಂದು ಪ್ರಾಣಿಯನ್ನು ಮುತ್ತಿ ಒಳನುಗ್ಗಿದರೆ, ಹರಳಗಂತಿತೆರನ (ಗ್ರಾನ್ಯುಲೊಮ್ಯಾಟಸ್) ಉರಿತ ಆಗುವುದೇ ಸಾಮಾನ್ಯ ಪ್ರತಿಕ್ರಿಯೆ. ಕ್ಷಯದಲ್ಲಿ ಕ್ಷಯಗಂಟೆಂಬ (ಟ್ಯೂಬರ್ಕಲ್)

ಸಾಸಿವೆತೆರನ (ಮಿಲಿಯರಿ) ಹರಳಗಂತಿ (ಗ್ರಾನ್ಯೂಲೋಮ) ಆಗುವುದು ವಿಶೇಷ. ಒಂದು ಜೀವಿಕಣಗಳಿಂದ ಬಂದ, ಮೇಲುಪೊರೆಯಂಥ (ಎಪಿತೀಲಿಯಾಯ್ಡ್) ಜೀವಿಕಣಗಳು ಎನಿಸಿಕೊಳ್ಳುವ ಒಂದು ನಡುಬೀಜಕ ಜೀವಕಣಗಳು ಇದರ ನಟ್ಟನಡುವಣ ಭಾಗದಲ್ಲಿ ಇರುವುವು. ಇಲ್ಲಿ ರಕ್ತನಾಳಗಳ ಸುಳಿವಿರದು. ಈ ಜೀವಕಣಗಳೊಳಗೆ ಕ್ಷಯದ ದಂಡಾಣುಜೀವಿಗಳು ಇರುತ್ತವೆ. ಇವೊಂದಿಗೆ ಹಲವು ಹಲನಡುಬೀಜಗೂಡಿದ ದೈತ್ಯಕಣಗಳೂ ಬೆರೆತಿರಬಹುದು. ಹಾಲುರಸಕಣಗಳು ಒಳನುಗ್ಗಿರುವ ತಂತುಕಣಗಳ ಜಾಲರಚನೆ ಈ ಜೀವಿಕಣಗಳ ಗುಂಪಿನ ಸುತ್ತುವಲಯದಲ್ಲಿ ಇರುವುದು. ಕ್ಷಯದಿಂದಾದ ಉರಿತದ ನಡುವೆ ಹಲವೇಳೆ ಗಿಣ್ಣಿನಂಥ (ಕೇಸಿಯಸ್) ಅಳಿಗೊಳೆತ (ನೆಕ್ರೋಸಿಸ್) ಇರುವುದು ಹೆಚ್ಚಳಿಕೆ. ಈ ಅಳಿಗೊಳೆತದಿಂದ ಆಸರಿಗದ ಸತ್ತ ಊತಕದ ಗಿಣ್ಣೆತೆರನಾಗಿರುತ್ತದೆ. ಕ್ಷಯ ದಂಡಾಣುಜೀವಿಗಳಿಂದ ಮೈಗೆ ಮೊದಮೊದಲು ಸೋಂಕು ತಾಕಿದರೆ ಗಿಣ್ಣೆತೆರನಾಗಲು ಹಲವಾರು ವಾರಗಳೇ ಹಿಡಿಯುತ್ತದೆ. ಆದರೆ ಎಂದಾದರೂ ಮರು ಸೋಂಕು ಹತ್ತಿತೆಂದರೆ ಕೆಲವು ದಿನಗಳಲ್ಲಿ ಹೀಗಾಗುವುದು. ಕ್ಷಯ ದಂಡಾಣುಜೀವಿಗಳ ಉತ್ಪನ್ನಗಳಿಗೆ ಊತಕಗಳ ಈಡುವಳಿಯಿಂದ (ಸೆನ್ಸಿಟೇಷನ್) ಇಷ್ಟು ಬೇಗ ಆಗುತ್ತದೆ.

ರೋಧಜನಕಗಳ (ಆಂಟಿಜನ್ಸ್) ಎದುರಾಗಿ ಒಗ್ಗದಿಕೆ (ಅಲರ್ಜಿಕ್), ಇಲ್ಲವೆ ಕೂಡಲೆ ಆಗುವ ಹೇರೀಡುವಳಿ (ಹೈಪರ್‌ಸೆನ್ಸಿಟಿವಿಟಿ) ಉರಿತವಾಗಿ ತೋರುತ್ತದೆ. ತುರುಚೆದದ್ದು (ಹೈವ್ಸ್), ಕರಡ ಜ್ವರವೂ (ಹೇ ಫೀವರ್) ಇದರ ಎರಡು ಸಾಧಾರಣ ಉದಾಹರಣೆಗಳು. ನುಂಗಿಯೋ ಚುಚ್ಚಿಯೋ ರೋಧಜನಕವನ್ನು ಮೈ ಒಳಹೊಗಿಸಿದಾಗ ಏಳುವ ತುರುಚೆದದ್ದುಗಳ ಆ ತಾವುಗಳಲ್ಲಿ ಕೆಂಪೇರಿಕೆ, ಊತ, ಕೆರೆತ ಕಾಣಿಸಿಕೊಳ್ಳುತ್ತವೆ. ಸೂಕ್ಷ್ಮದರ್ಶಕದಲ್ಲಿ ನೋಡಿದರೆ, ಸೊನೆಯಲ್ಲಿ ಕೆಲವು ಜೀವಕಣಗಳಿರುವ ಮೆಲುಪಿನ ಕೂರಾದ ಉರಿತ ಆಗಿರುವುದು ಕಾಣುವುದು. ಕರಡ ಜ್ವರದಲ್ಲಿ ರಕ್ತನಾಳಗಳಿಂದ ದ್ರವವೂ ಮೂಗಿನ ಲೋಳೆಪೊರೆಯಿಂದ ಲೋಳೆನೀರೂ ಹೇರಳವಾಗಿ ಸುರಿಯುತ್ತವೆ. ಇದರಲ್ಲಿರುವ ಜೀವಕಣಗಳಲ್ಲಿ, ಕೆಂಪಗಿನ ಬಿಳಿಕಣಗಳೇ ಹೆಚ್ಚು.

ಕುದುರೆಯ ರಸಿಕೆಯಂಥ (ಸೀರಂ) ಹೊರಗಿನಿಂದ ಬಂದ ಪ್ರೋಟೀನು ರೋಧಜನಕವನ್ನು ಈಡಾಗುವವನಿಗೆ ಚುಚ್ಚಿ ಹೊಗಿಸಿದರೆ, ಆರ್ಥಸ್ ಪ್ರತಿಕ್ರಿಯೆ ಎಂಬ ಒಂದೆಡೆಯ ವಿಪರೀತ ಉರಿತ ಆಗಬಹುದು. ರೋಧಜನಕ–ರೋಧವಸ್ತುಗಳನ್ನು (ಆಂಟಿಬಾಡೀಸ್) ಬೆರೆಸಿ ಒಂದಡೆ ಚುಚ್ಚಿದರೂ ಇದೇ ಆರ್ಥಸ್ ಪ್ರತಿಕ್ರಿಯೆ ತೋರುತ್ತದೆ. ರಕ್ತನಾಳಗಳ ಗೋಡೆಗಳ ಅಳಿಗೊಳೆತ, ಬಿಳಿಕಣಗಳ ಒಳನುಗ್ಗಲು ಕೂಡುಗರಣಿಕೆ ಇವು ಈ ಪ್ರತಿಕ್ರಿಯೆಯ ವಿಶೇಷ ಲಕ್ಷಣಗಳೆಂದು ಕಾಣುವುದು. ಚುಚ್ಚಿ ಒಳಬಿಟ್ಟ ಕೆಲವೇ ಮಿನಿಟುಗಳಲ್ಲಿ ಇದು ಆರಂಭವಾಗಿ ಕೆಲವೇ ತಾಸುಗಳಲ್ಲಿ ತುತ್ತತುದಿಗೆ ಏರುತ್ತದೆ. ಪ್ರತಿಕ್ರಿಯೆ ಪೂರ್ತಿಯಾದಾಗ ಕಂಡುಬರುವ ಅದರ ನಟ್ಟನಡುವೆ ಸತ್ತು ಹೋಗಿರುವ ಊತಕ ಕೊನೆಗೆ ಉದುರಿಬಿದ್ದು, ಕೂಡಿಸುವ ಊತಕದಿಂದ ನೇರ್ಪಾಟಾಗುವುದು.

ಹಿಂದೆಂದೋ ಸೋಂಕುಹತ್ತಿರುವ, ಇಲ್ಲವೇ ಕ್ಷಯ ದಂಡಾಣುಜೀವಿಗಳಿಂದ ಮರೆವಣಿದ (ಇಮ್ಯೂನೈಸೆಡ್) ಒಬ್ಬನಿಗೆ ಚೊಕ್ಕಗೊಳಿಸಲು ಕ್ಷಯ ಪ್ರೋಟೀನನ್ನು ಚುಚ್ಚಿ ಹೊಗಿಸಿದಾಗ ಆಗುವ ಕ್ಷಯಾಣುಸಾರದ (ಟ್ಯುಬರ್ಕ್ಯುಲಿನ್) ಬಗೆಯ ಇಲ್ಲವೇ ತಡವಾದ ಹೇರೀಡುವಳಿ ಇನ್ನೊಂದು ಬಗೆಯದು. ಇಲ್ಲಿ ಸುಮಾರು ಒಂದು ತಾಸಿನಲ್ಲಿ ಈ ಪ್ರತಿಕ್ರಿಯೆ ಆರಂಭವಾದರೂ ಅದರ ತುತ್ತತುದಿಗೇರಬೇಕಾದರೆ ಎರಡು ಮೂರು ದಿನಗಳೇ ಹಿಡಿಯುತ್ತದೆ. ಊತಕ ಜೀವಕಣಗಳು ಸಾಯುವುದೇ ಮೊದಲು ಕಾಣುವ ಬದಲಾವಣೆ. ಚರ್ಮದಲ್ಲಿ ಹೀಗಾದರೆ ಮೇಲುಪೊರೆ, ತಂತುಕಣಗಳು, ರಕ್ತನಾಳಗಳ ಗೋಡೆಗಳೂ ಸಾಯುವುವು.

ಗೊತ್ತಾದ ಕೆಲವು ಅಂಗಗಳಲ್ಲಿ ಉರಿತದ ಇನ್ನೂ ಹಲವಾರು ಬಗೆಗಳನ್ನು ಕಾಣಬಹುದು. ಮಿದುಳಿನ ಜೀರ್ಣಸಾಗುನಾಳದ ಪುಪ್ಪುಸಗಳ ಕವಚಗಳಾಗಿರುವ ಪೊರೆಗಳ ಉರಿತವಾದರೆ, ಕ್ರಮವಾಗಿ ಮಿದುಳುಪೊರೆಯುರಿತ (ಮೆನಿಂಜೈಟಿಸ್). ಹೊರ ಬಿಗಿಪೊರೆಯೂತ (ಪೆರಿಟೋನೈಟಿಸ್), ಅಳ್ಳೆಪೊರೆಯುರಿತ (ಪ್ಲೂರೈಟಿಸ್) ಆಗುವುದೇ ಇದರ ಉದಾಹರಣೆಗಳು. ಕೀಲುವಾತದ (ರುಮ್ಯಾಟಿಕ್) ಜ್ವರ ಬಂದಾಗ, ಗುಂಡಿಗೆಯಲ್ಲಿ ಸ್ನಾಯು ಉರಿತವೂ (ಮೈಯೊಕಾರ್ಡೈಟಿಸ್). ಕವಾಟ ಉರಿತವೂ (ವಾಲ್ವುಲೈಟಿಸ್) ಆಗುವುವು. ಗೊಂಡೆಮೂತ್ರಪಿಂಡದ ಉರಿತವೂ (ಗ್ಲೊಮೆರುಲೊನೆಫ್ರೈಟಿಸ್) ಮೂತ್ರ ಪಿಂಡಗುಳಿಯ ಉರಿತವೂ (ಪಯೊಲೊನೆಫ್ರೈಟಿಸ್) ಮೂತ್ರಪಿಂಡದಲ್ಲಿ ಆಗುವ ಬಗೆಗಳು. ಇವೆಲ್ಲದರಲ್ಲೂ ಒಂದೊಂದು ವಿಶೇಷವಾಗಿರುತ್ತದೆ. ರೋಗಕ್ಕೆ ಕಾರಣವಾದ ಕಾರಕ ತಾಕಿರುವ ಅಂಗ ಆಸರಿಗದಲ್ಲಿನ ಮಾರ್ಪಾಟಿಕ ಅಂಶಗಳು ಇದಕ್ಕೆ ತಕ್ಕ ಹಾಗೆ ರೋಗದ ಲಕ್ಷಣಗಳು ಇರುವುದಾದರೂ ಮೂಲಮಾದರಿ ಒಂದೇ ತೆರವಾದದ್ದು.

ಉರಿತದ ಯಾಂತ್ರಿಕತೆ: ಉರಿತದಲ್ಲಿ ರಕ್ತನಾಳಗಳಲ್ಲಾಗುವ ಬದಲಾವಣೆಗಳ ಕ್ರಮವಂತೂ ತೀರಾ ಸಿಕ್ಕಿನದು. ರಕ್ತನಾಳಗಳ ಒಳಡ್ಡಳತೆ, ರಕ್ತದ ಹರಿವುಗಳನ್ನು ಕೊಂಚಮಟ್ಟಿಗೆ ನರದ ಮಂಡಲ ಹತೋಟಿಗೊಳಿಸುವುದು. ಗಾಯವಾದ ಮೊದಲಲ್ಲಿ ಕಾಣುವ ರಕ್ತನಾಳಗಳ ಕುಗ್ಗು, ಹಿಗ್ಗಲಿಕೆಗಳಿಗೆ ಅದೇ ತಾವಿನ ನರದ ಹಿಮ್ಮುರಿಕೆಗೆ (ಆಕ್ಸಾನ್ ರಿಫ್ಲೆಕ್ಸ್) ಕಾರಣವಾಗಿರಬಹುದು. ಇಷ್ಟಾದರೂ ನರಗಳಿಲ್ಲದ ತಾವುಗಳಲ್ಲೂ ಎಂದಿನ ರೀತಿಯಲ್ಲೇ ಉರಿತ ಆಗುತ್ತದೆ. ಆದ್ದರಿಂದ ಈ ಪ್ರತಿಕ್ರಿಯೆ ಬಹುಮಟ್ಟಿಗೆ ರಾಸಾಯನಿಕಗಳ ಮೂಲಕವೇ ನಡೆಯಬೇಕು.

ಹಿಸ್ಟಮೀನನ್ನು ಚುಚ್ಚಿ ಹೊಗಿಸಿದಾಗಲೂ ಉರಿತದಲ್ಲಿ ಆಗುವ ಹಾಗೇ ರಕ್ತನಾಳ ಹಿಗ್ಗುವುದನ್ನೂ ಹೆಚ್ಚಿಗೆ ಜಿನುಗುವುದನ್ನೂ ಇಂಗ್ಲೆಂಡಿನ ವೈದ್ಯ ಸರ್ ಥಾಮಸ್ ಲೂಯಿಸ್ ತೋರಿಸಿದ, ಅದನ್ನೆ ಒಬ್ಬನ ಚರ್ಮದೊಳಕ್ಕೆ ಕೊಂಚ ಚುಚ್ಚಿ ಹೊಗಿಸಿದರೆ ಎಂದಿನಂತೆ ಕೆಂಪೇರಿ ಊದಿಕೊಂಡರೂ ಬಿಳಿಕಣಗಳು ಅಂಟಿಕೊಂಡು ರಕ್ತನಾಳಗಳಿಂದ ಈಚೆಗೆ ನುಣುಚಿಕೊಳ್ಳವುವು. ಉರಿತದಲ್ಲಿ, ರಕ್ತನಾಳಗಳ ಬಳಿ ಇರುವ ತುಂಬು (ಮಾಸ್ಟ್) ಜೀವಕಣಗಳಲ್ಲಿರುವ ಹಿಸ್ಟಮೀನ್ ಹೊರಬೀಳುತ್ತದೆ. ತುರುಚೆದದ್ದು, ಕರಡ ಜ್ವರದ ತೆರನ ಮೆಲುಪಿನ ಉರಿತಗಳಲ್ಲಿ, ಆ ತಾವಿನಲ್ಲಿ ಆಗುವ ಪ್ರತಿಕ್ರಿಯೆಯನ್ನು ಹಿಸ್ಟಮೀನ್ ರೋಧಕಗಳು (ಆ್ಯಂಟಿಹಿಸ್ಟಮೀನ್ಸ್) ಆಗಗೊಡಿಸವು. ಇಲ್ಲವೇ ತಗ್ಗಿಸುವುವು. ಆದರೆ ಹಲವಾರು ಬಗೆಯ ಉರಿತಗಳಲ್ಲಿ ರಕ್ತನಾಳಗಳ ಪ್ರತಿಕ್ರಿಯೆಯನ್ನು ಮಾತ್ರ ಈ ಮದ್ದುಗಳು ತಪ್ಪಿಸವು. ಹೀಗಾದುದರಿಂದ ಹಿಸ್ಟಮೀನ್ ಅಲ್ಲದ ಇನ್ನಾವುದೋ ವಸ್ತುಗಳು ಈ ಪ್ರತಿಕ್ರಿಯೆಗೆ ಕಾರಣವಿರಬೇಕು.

ಅಮೈನೋ ಆಮ್ಲ ಟ್ರಿಪ್ಟೊಫ್ಯಾನಿನಿಂದ ತಯಾರಾದ, ಅಲ್ಲದೆ ತುಂಬು ಜೀವಕಣಗಳಲ್ಲೂ ಇರುವ, 5–ಹೈಡ್ರಾಕ್ಸಿಟ್ರಿಪ್ಟಮೀನ್ (ಸೆರೋಟೆನಿನ್) ಕೆಲವು ಜೀವಿಜಾತಿಗಳಲ್ಲಿ, ಹಿಸ್ಟಮೀನಿನಿಂದ ಆಗುವ ತೆರನ ಪ್ರತಿಕ್ರಿಯೆಗಳನ್ನೇ ಕೆರಳಿಸಬಹುದು. ರಕ್ತನಾಳಗಳಿಂದ ನುಣುಚಿಕೊಳ್ಳುವಂತೆ ಮಾಡುವ ರಕ್ತರಸದ ಗೋಳಕಿ (ಗ್ಲಾಬ್ಯುಲಿನ್) ಇನ್ನೊಂದು ಕಾರಕ. ಜೀವಕಣಗಳಲ್ಲಿನ ಇತರ ವಸ್ತುಗಳೂ ಇದರಲ್ಲಿ ಪಾಲ್ಗೊಳ್ಳಬಹುದು. ಇದೂ ಅಲ್ಲದೆ, ರಕ್ತನಾಳ ಹಿಗ್ಗಲಿಸುವ ತೆರನ ವಸ್ತುಗಳನ್ನು ಏಕಾಣುಜೀವಿಗಳೂ ಹುಟ್ಟಿಸಿ ಹೊರಬಿಡುತ್ತವೆ.

ಉರಿತದ ಕ್ರಮಗತಿಯಲ್ಲಿ, ಕರಣಕಾರದ ವಸ್ತುಗಳೂ ಆಸರಿಗಗಳೂ ಒಂದರೊಡನೊಂದು ವರ್ತಿಸುತ್ತವೆ. ಏಕಾಣುಜೀವಿಗಳು ಹಲವಾರು ಪದಾರ್ಥಗಳನ್ನು ಹೊರಬಿಡುತ್ತವೆ. ಬದುಕಿರುವ ಜೀವಕಣಗಳಿಂದ ಕೆಲವು ಹೊರಬಿದ್ದರೆ ಇನ್ನು ಹಲವು ಏಕಾಣುಜೀವಿಗಳು ಸತ್ತಾಗ ಹೊರಬೀಳುವುವು. ತಂತುಜನಕ (ಫೈಬ್ರಿನೋಜನ್) ಗರಣೆಗಟ್ಟುವಂತೆ ಮಾಡುವ ಗರಣೆದೊಳೆಯನ್ನು (ಕೊಯಾಗುಲೇಸ್) ಗುತ್ತಿಕಾಯ್ಜೀವಿಗಳು ತಯಾರಿಸಿ ಬಿಡುವುದು ಒಂದು ಉದಾಹರಣೆ. ಒಂದು ತಾವಿನಿಂದ ಊತಕಗಳ ನಡುವಣ ತೆರಪುಗಳು ಹಾಲುರಸನಾಳಗಳ ಮೂಲಕ ತಂತುಕಾರಕಗಳು ಹರಡಿಕೊಳ್ಳುವುದಕ್ಕೆ ತಂತುಕದ ಗರಣೆ ಅತಿ ಸಣ್ಣ ಅಡಚಣೆ. ಜೀವಕಣಗಳ ನಡುವಣ ಅಡಿಗಟ್ಟಿನ ವಸ್ತುವಿನ ಜಿಗುಟನ್ನು ಕುಗ್ಗಿಸಿ, ದ್ರವ, ಚೂರು ಚೂರುಗಳು ಹರಡುವುದನ್ನು ಸರಾಗಗೊಳಿಸಬಲ್ಲ ಒಂದು ದೊಳೆಯಾದ ಹಯಲೂ ರೋನೀಡೇಸನ್ನು ಬೇರೆ ಏಕಾಣುಜೀವಿಗಳಾದ ಸರಕಾಯ್ಜೀವಿಗಳೂ ಗಾಳಿಕಾಯ್ಜೀವಿಗಳೂ (ನ್ಯೂಮೋಕಾಕೈ) ಹೊರಬಿಡುತ್ತವೆ. ಕೆಲವು ಏಕಾಣುಜೀವಿಗಳಿಂದಾಗುವ ಹರಡಿಕೊಳ್ಳುವ ಉರಿತಗಳಿಗೆ ಈ ಹಯಲುರೋನಿಡೇಸೊ ಇನ್ನಾವುದೊ ಹರಡಬಲ್ಲ ಅಂಶಗಳೂ ಕಾರಣವಿರಬೇಕು. ಜನೆಗೊಬ್ಬುದೊಳೆಗಳು (ಲೆಸಿತಿನೇಸಸ್). ಅಂಟುಜನಕದೊಳೆಗಳು (ಕೊಲ್ಲಾಜಿನೇಸಸ್), ಪ್ರೋಟೀನುಲಯಕದೊಳೆಗಳು ನ್ಯೂಕ್ಲೀಯಿಕ್ ಆಮ್ಲಗಳನ್ನು ಒಡೆವ ದೊಳೆಗಳೂ ಏಕಾಣುಜೀವಿಗಳಿಂದ ತಯಾರಾಗುತ್ತವೆ. ಉರಿತದಲ್ಲಾಗುವ ರಾಸಾಯನಿಕ ಚಲನವಲನಗಳೂ ಉರಿತದ ತೋರಿಕೆಗಳಲ್ಲೂ ಅವುಗಳಲ್ಲಿ ಒಂದೊಂದೂ ಪಾಲುಗೊಳ್ಳವುದು. ಇವುಗಳಲ್ಲಿ ಕೆಲವು ಉರಿತವನ್ನು ಕೆರಳಿಸುವಂತಿದ್ದರೆ, ಬೇರೆಯವು ಕುಂದಿಸುತ್ತವೆ.

ಪೆಟ್ಟು ಗಾಯ, ಸುಟ್ಟರಗಿಕ (ಕರೋಸಿವ್) ರಾಸಾಯನಿಕಗಳು, ಏಕಾಣುಜೀವಿಗಳು, ರೋಧಜನಕ–ರೋಧವಸ್ತು ಬೆರಕೆಗಳೆಲ್ಲ ಊತಕದ ಜೀವಕಣಗಳನ್ನೇ ಗಾಯಗೊಳಿಸಿ ಉರಿತವನ್ನು ಕೆರಳಿಸುತ್ತವೆ. ಸತ್ತ, ಸಾಯುತ್ತಿರುವ ಜೀವಕಣಗಳಿಂದ ಹೊರಬಿದ್ದ ವಸ್ತುಗಳೂ ಉರಿತದ ಮರುವರ್ತನೆಯನ್ನು ಚೋದಿಸುತ್ತವೆ. ಹೀಗೆ ಹೊರಬಿದ್ದ ವಸ್ತುಗಳಲ್ಲಿ ಕೆಲವು ಜೀವಕಣಗಳ ಪ್ರೋಟೀನುಗಳನ್ನು ಒಡೆದುದರಿಂದ ಬಂದ ಹಲ ಪೆಪ್ಟೈಡುಗಳೂ ಇರುವುವು. ಗಾಯಗೊಂಡ ತುಂಬು ಜೀವಕಣಗಳಿಂದ ಬಂದ ಅಮೀನುಗಳು ಕೆಲವು. ಇನ್ನೂ ಕೆಲವು ನ್ಯೂಕ್ಲೀಯಿಕಾಮ್ಲಗಳನ್ನು ಪಡೆದುದರಿಂದ ಬಂದಿರಬಹುದು. ಆರ್ಥಸ್ ಪ್ರತಿಕ್ರಿಯೆಯಲ್ಲಿ ಕಿರಿಸಿರಗಳ (ವೆನ್ಯೂಲ್ಸ್) ಒಳ ಪೊರೆಯಡಿಯಲ್ಲಿ ರೋಧಜನಕ–ರೋಧವಸ್ತು ಬೆರಕೆಗಳು ಕಂಡುಬಂದಿವೆ. ದೊಳೆಯ ಚಟುವಟಿಕೆಗಳನ್ನು ತೋರುವ ಪೂರಕದೊಂದಿಗೆ (ಕಾಂಪ್ಲಿಮೆಂಟ್) ಇವು ಕೂಡಿಕೊಳ್ಳುತ್ತವೆ. ಇದರಿಂದೇಳುವ ರೋಧಜನಕ – ರೋಧವಸ್ತು – ಪೂರಕ ಬೆರೆಕೆ ಒಟ್ಟಿಗೇ ಜೀವಕಣಗಳನ್ನು ಹಾಳುಗೆಡಿಸಿ ಉರಿತಕ್ಕೆ ದಾರಿಮಾಡಿಕೊಡುವುದು. ಉರಿತದ ಯಾಂತ್ರಿಕತೆಗೆ ಬಹುಮಟ್ಟಿನ ಕಾರಣ ದೊಳೆಗಳು. ಇದರಿಂದಲೇ ದೊಳೆಗಳನ್ನು ಅಣಗಿಸುವ ವಸ್ತುಗಳಿಂದ ಉರಿತವನ್ನೂ ಒಂದಿಷ್ಟು ಉಡುಗಿಸಬಹುದು.

ಉರಿತದಲ್ಲಿ ಕಂಡುಬರುವ, ರಕ್ತನಾಳಗಳ ಆಚೆಗೆ ಅವುಗಳ ಒಳಪೊರೆಯ ಮೂಲಕ ರಕ್ತರಸದ ಜೋಲಂಟುಗಳ ಸಾಗಣೆ, ಬಿಳಿಕಣಗಳು, ಸಣ್ಣವಸ್ತುಗಳ ನುಸುಳಿಕೆ, ಇವನ್ನೆಲ್ಲ ವಿವರಿಸಲು ಹಲವಾರು ಯಾಂತ್ರಿಕತೆಗಳನ್ನು ಸೂಚಿಸುವುದುಂಟು. ರಕ್ತನಾಳದ ಒಳವರಿಯಲ್ಲಿನ ತೂತುಗಳು ರಕ್ತರಸದಲ್ಲಿನ ಪ್ರೋಟೀನುಗಳು ಆಚೆಗೆ ನುಸುಳುವಷ್ಟು ಮಾತ್ರ ದೊಡ್ಡದಾಗಿರುವುವೆಂದು ಕೆಲವು ಶೋಧಕರು ಅನುಮಾನಿಸಿರುವರು. ಈ ಗಾತ್ರದ ಯಾವ ತೂತೂ ವಿದ್ಯುದಂಶ ಸೂಕ್ಷ್ಮದರ್ಶಕದಲ್ಲಿ (ಎಲೆಕ್ಟ್ರಾನ್ ಮೈಕ್ರೋಸ್ಕೋಪ್) ಕೂಡ ಕಾಣದಿದ್ದರೂ ಒಳಪೊರೆಯ ಜೀವಕಣಗಳ ಮೂಲಕ ಸಣ್ಣ ವಸ್ತುಗಳೂ ನುಸುಳಿರುವುದನ್ನು ನೋಡಬಹುದು.

ಈ ಯಾಂತ್ರಿಕತೆಗೆ ಕಣದಿಂಟಿಕೆ (ಪೈನೊಸೈಟೋಸಿಸ್) ಎಂದು ಹೆಸರಿದೆ. ಒಳಪೊರೆಯ ಜೀವ ಕಣಗಳ ನಡುವಣ ತೆರಪುಗಳ ಮೂಲಕ ಸಾಗುವುದು ಮೂರನೆಯ ವಿಧಾನ. ಉರಿತದಲ್ಲಿ ಸಣ್ಣಸಣ್ಣ ವಸ್ತುಗಳೂ ಕರಗುವ ಜೋಲಂಟುಗಳೂ ದ್ರವವೂ ಈ ಅಗಲ ತೆರಪುಗಳಲ್ಲಿ ದಾಟುತ್ತವೆ. ಎಲ್ಲ ಬಗೆಗಳ ಬಿಳಿಕಣಗಳೂ ಒಳಪೊರೆಗೆ ಅಂಟಿಕೊಂಡ ಮೇಲೆ, ಈ ತೆರಪುಗಳ ಮೂಲಕ ಹೊರ ಬೀಳುತ್ತವೆ. ಇಷ್ಟಾದರೂ ಬಿಳಿಕಣಗಳು ಅಂಟಿಕೊಳ್ಳುವುದಕ್ಕೂ ಒಳಪೊರೆಯಿಂದ ಹೊರಕ್ಕೆ ನುಸುಳುವುದಕ್ಕೂ ಕಾರಣ ಕಾರಕ ವಸ್ತುಗಳು ಯಾವುವೆಂದು ಗೊತ್ತಿಲ್ಲ. ಉರಿತವೆದ್ದಿರುವ ಜಾಗದಲ್ಲಿ ಏಕಾಣುಜೀವಿಗಳ ಕಡೆಗೆ ಬಿಳಿಕಣಗಳು ಸೆಳೆದುಹೋಗುತ್ತವೆ. ಏಕಾಣುಜೀವಿಗಳನ್ನು ತಾಕಿದ ಕೂಡಲೆ ಅವನ್ನು ಸುತ್ತುವರಿದು ಕಬಳಿಸಿ ಅರಗಿಸಿಕೊಳ್ಳುವುವು. ಕಬಳಿಸುವಾಗ ಬಿಳಿಕಣಗಳೊಳಗೆ ಏಳುವ ಮುಚ್ಚರಗುಳ್ಳೆಯಲ್ಲಿ (ವ್ಯಾಕ್ಯುಯೋಲ್) ಏಕಾಣುಜೀವಿಗಳು ಸತ್ತು ಕರಗಿ ಹೋಗುವುದು ಸಾಮಾನ್ಯ. ಬಿಳಿಕಣಗಳಲ್ಲಿನ ಸಣ್ಣ ಹರಳಂಥ ಕಣಗಳೇ ಏಕಾಣುಜೀವಿಗಳನ್ನು ಸಾಯಿಸಿ ಕರಗಿಸುವ ವಸ್ತುಗಳು. ಏಕಾಣುಜೀವಿ ಮಾರಕ ಬಲವಿರುವ, ಹಿಸ್ಟೋನ್ ಕೂಡ ಸೇರದಂತೆ ಹಲವಾರು ಕಾರಕಗಳೂ ಲಯ ದೊಳೆಯೂ (ಲೈಸೊಜೈಮ್) ಈ ಕಣಗಳ ತುಂಬ ಇರುವುವು. ಫಾಸ್ಫಟೇಸ್ ಪೆಪ್ಟಿಡೇಸ್, ಪೆರಾಕ್ಸಿಡೇಸ್, ನ್ಯೂಕ್ಲಿಯೋಸೈಡೇಸುಗಳೇ ಮುಂತಾದ ಬೇರೆ ದೊಳೆಗಳು ಬಿಳಿಕಣಗಳ ಈ ಸಣ್ಣ ತಾಣಗಳಲ್ಲಿ ಇರುತ್ತವೆ. ತೀನಿಕಣತೆ ಆಗುವಾಗ ಈ ಕಣಗಳು ಇಲ್ಲವಾಗುತ್ತವೆ. ಇವುಗಳ ದೊಳೆಗಳು ಜೀವಕಣದೊಳಕ್ಕೆ ಬಂದು ಕರಗಿಸುವ ಮುಚ್ಚರಗುಳ್ಳೆಯ ಒಳಹೊಗುವುವು. ಈ ದೊಳೆಗಳಲ್ಲಿ ಬಹುಪಾಲಿನವು ಆಮ್ಲಗಳಲ್ಲಿದ್ದಾಗ ಚೆನ್ನಾಗಿ ಕೆಲಸ ಮಾಡುತ್ತವೆ. ಬಿಳಿಕಣದೊಳಗೆ ಗ್ಲೂಕೋಸ್ ಕೊಂಚ ಪಾಲು ಹಾಲಿನಾಮ್ಲವಾಗಿ (ಲ್ಯಾಕ್ಟಿಕ್ ಆ್ಯಸಿಡ್) ಜೀವವಸ್ತುಕರಣವಾಗುವುದರಿಂದ ಸಾಮಾನ್ಯವಾಗಿ ಮುಚರಗುಳ್ಳೆಯಲ್ಲಿ ಆಮ್ಲ ಗುಣವಿರುವುದು. ನಡುಬೀಜಕ ಬಿಳಿಕಣಗಳಲ್ಲೂ ಎಸ್ಟರೇಸುಗಳು. ಲೈಪೇಸುಗಳೂ ಸೇರಿದಂತೆ ದೊಳೆಗಳು ಇರುವುವು. ಜೀವಕಣದೊಳಗಣ ಅರಗಣೆಯಲ್ಲಿ ಇವೂ ಪಾಲ್ಗೊಳ್ಳುತ್ತವೆ. ಬಿಳಿಕಣಗಳು ಹಾಳಾಗಿ ಒಡೆದಾಗ ಅರಗಿ ಉಳಿದ ವಸ್ತುಗಳೂ ಅವುಗಳ ದೊಳೆಗಳು ಉರಿತವೆದ್ದಿರುವ ಜಾಗದಲ್ಲಿ ಬೀಳುವುದರಿಂದ, ಆ ತಾವಿನಲ್ಲಿ ಕೀವನ್ನು ಕರಗಿಸಿ, ರಕ್ತನಾಳಗಳ ಪ್ರತಿಕ್ರಿಯೆಗಳನ್ನು ಮುಂದುವರಿಸುತ್ತ ನೇರ್ಪಾಟನ್ನು ಚೋದಿಸುತ್ತವೆ.

ಉರಿತದ ಬದಲಿಕೆ: ರಕ್ತನಾಳಗಳೇ ಇರದ ಕೆಳಮಟ್ಟದ ಪ್ರಾಣಿಗಳಲ್ಲಿ ವಲಸೆ, ತೀನಿಕಣತೆ, ಜೀವಕಣದ ರಸಸುರಿತ, ನೇರ್ಪಾಟಿನ ತೆರನ ಕೇವಲ ಜೀವಕಣದ ಪ್ರತಿಕ್ರಿಯೆಯಾಗಿ ಉರಿತ ತೋರುವುದು. ಮೇಲ್ತರದ ಪ್ರಾಣಿಗಳಲ್ಲಿ ಸಿಕ್ಕಿನ ರಕ್ತನಾಳಗಳ ಮಂಡಲ ಇರುವುದರಿಂದ ವಿಶೇಷಿಕ ಕಾಪಿಡುವ ಜೀವಕಣಗಳನ್ನೂ ರಾಸಾಯನಿಕ ವಸ್ತುಗಳನ್ನೂ ಗಾಯವಾಗಿರುವ ಜಾಗಕ್ಕೆ ಬೇಗನೆ ಸಾಗಹಾಕುವಂತಿರಬೇಕು.

ಇನ್ನಷ್ಟು ಹೆಚ್ಚಿಗೆ ವಿಶೇಷೀಕರಣದೊಂದಿಗೆ ನರಗಳ, ಒಳಸುರಿಕ ಗ್ರಂಥಿಗಳ ಮಂಡಲಗಳ ತೆರನ ಬೇರೆ ಹತೋಟಿ ಯಾಂತ್ರಿಕತೆಗಳೂ ಒದಗಿವೆ. ಅಡ್ರಿನಲ್ ಗ್ರಂಥಿಗಳ (**ನೋಡಿ**) ಒಳಸುರಿಕ ಚೋದನಿಕಗಳು (ಹಾರ್ಮೋನ್ಸ್) ಉರಿತವನ್ನು ಬದಲಿಸಬಲ್ಲವು. ಉದಾಹರಣೆಗೆ. ಅಡ್ರಿನಲಿನನ್ನು ಬೇಕಾದೆಡೆಯಲ್ಲಿ ಚುಚ್ಚಿ ಹೊಗಿಸಿದರೆ ರಕ್ತ ತುಂಬಿಕೊಳ್ಳುವುದನ್ನು ತಪ್ಪಿಸಿ ಸೋನೆವುದನ್ನೂ ಒಂದಿಷ್ಟು ತಗ್ಗಿಸಬಹುದು. ಅಡ್ರಿನಲ್ ರಗಟೆಯ (ಕಾರ್ಟೆಕ್ಸ್) ಚೋದನಿಕವಾದ 17–ಹೈಡ್ರಾಕ್ಸಿಕಾರ್ಟಿಸೋನ್ ಎಷ್ಟು ಕಾಲಬೇಕಾದರೂ ಉರಿತದ ಪ್ರತಿಕ್ರಿಯೆಯ ಎಲ್ಲ ಹಂತಗಳನ್ನೂ ಅಣಗಿಸಬಲ್ಲದು. ರೋಗಕಾರಕಗಳು ಬದುಕಿರುವ ವಿಷಮ ಏಕಾಣುಜೀವಿಗಳಾಗಿರದಿದ್ದಲ್ಲಿ, ಚಿಕಿತ್ಸೆಯಲ್ಲಿ ಈ ಚೋದನಿಕಗಳು ಚೆನ್ನಾಗಿ ಅನುಕೂಲಿಸುತ್ತವೆ. ಆದರೆ ಏಕಾಣುಜೀವಿಗಳಿಂದಾದ ಸೋಂಕಿನಲ್ಲಿ ಉರಿತದ ಪ್ರತಿಕ್ರಿಯೆಯ ಒಂದು ಪಾಲನ್ನೋ ಎಲ್ಲವನ್ನೋ ಅಣಗಿಸುವುದರಿಂದ ಕೆಡುಕೂ ಆಗಬಹುದು.

ಉರಿತದಲ್ಲಿ ಕೀಲಿಯಂತಿರುವ ಕೆಲವು ಮೂಲವಸ್ತುಗಳೇ ಇಲ್ಲವಾಗುವುದರಿಂದ ಏಳುವ ಕೆಡಕಿನ ಪರಿಣಾಮಗಳನ್ನು ಕೆಲವರಲ್ಲಿ ಕಾಣಬಹುದು. ಕೆಲವರು ತಲತಲಾಂತರವಾಗಿ ರೋಧವಸ್ತುಗಳನ್ನು ತಯಾರಿಸುವ ಬಲವೇ ಇಲ್ಲವಾಗಿರುವವರು. ಇಂಥವರು ಸೋಂಕುಗಳಿಗೆ ಬಲು ಸುಲಭವಾಗಿ ಈಡಾಗುವರು. ರಕ್ತದಲ್ಲಿ ಬಿಳಿಕಣಗಳ ಕೊರೆ ಅತಿಯಾಗಿರುವ ಹರಳುಕಣಾಭಾವದಲ್ಲಿ (ಎಗ್ರಾನುಲೋಸೈಟೋಸಿಸ್) ಸೋಂಕನ್ನು ತಡೆವ ಬಲ ಕುಗ್ಗಿರುವುದು. ಅಂಥ ರೋಗಿಗಳಲ್ಲಿ ಉರಿತವಾದರೆ ಕೀವಿಲ್ಲದ, ಕೇವಲ ರಕ್ತತುಂಬಿಕೊಂಡು ಊತಕ ಅಳಿಗೊಳೆತ ಆಗುತ್ತದೆ. ಹಲವರಲ್ಲಿ ಉರಿತವೆದ್ದಾಗ ಪ್ರತಿಕ್ರಿಯೆ ಎಲ್ಲೊ ಕೊಂಚವಾಗಿದ್ದರೆ, ಕೆಲವರಲ್ಲಿ ಇದೇ ವಿಪರೀತವಾಗಿರುವುದು ಇವರು ಹೇರಿಡುವಳಿಯವರು. ಕರಡ ಜ್ವರದಿಂದ ನರಳುವವರು ಬಹುಮಟ್ಟಿಗೆ ಕೀಲುವಾತದ ಜ್ವರ, ಕೀಲುರಿತಗಳ (ಆರ್ಥ್ರೈಟಿಸ್) ರೋಗಿಗಳು–ಇಂಥವರಲ್ಲಿ ಈ ತೆರನ ಪ್ರತಿಕ್ರಿಯೆ ಕಾಣುವುದು. (ಡಿ.ಎಸ್.ಎಸ್.)

**ಉರಿಲಿಂಗ ದೇವ:** ಸು.1170, ಬಸವಾದಿ ಮಹಾಶರಣರಲ್ಲಿ ಒಬ್ಬ. ಶರಣಸತಿ, ಲಿಂಗಪತಿ ಹೊಂದಿದ್ದ ನೈಷ್ಠಿಕ ಬ್ರಹ್ಮಚಾರಿ, ಆಚಾರ್ಯಪುರುಷ. ಕಾಶ್ಮೀರದಿಂದ ಬಂದು ಕಲ್ಯಾಣದಲ್ಲಿ ನೆಲೆಸಿದ ಮಹಾಪಂಡಿತ ಶಿವಲೆಂಕಮಂಚಣ್ಣನ ಮಗನೆಂದು ನೀಲಕಂಠಾಚಾರ್ಯನ (ಸು. 1485) ಆರಾಧ್ಯಚಾರಿತ್ರದಲ್ಲಿ ಹೇಳಿವೆ. ಈತ ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿರುವ ಕಂದಹಾರ್ (ಕಂಧಾರ್, ಕಂದಾಪುರ) ಪಟ್ಟಣದಲ್ಲಿ ಮಠಾಧಿಪತಿಯಾಗಿದ್ದ. ಮಹಾಕ್ರಾಂತಿಕಾರ. ಗೋದಾವರೀ ತೀರಪ್ರದೇಶದಲ್ಲಿ ವೀರಶೈವ ಜಾಗೃತಿಯ ಗುರುತರ ಹೊಣೆ ಹೊತ್ತು ಅನೇಕರಿಗೆ ವೀರಶೈವೋಪದೇಶ ಮಾಡಿದ. ಕಲ್ಯಾಣದಲ್ಲಿ ಬಸವಾದಿ ಪ್ರಮಥರು ಹರಳಯ್ಯ ಮತ್ತು ಮಧುವರಸರಿಗೆ ಲಿಂಗದೀಕ್ಷೆಯಿತ್ತು ಶರೀರಸಂಬಂಧ ಮಾಡಿಸಿದರೆ ಪೆದ್ದಣ್ಣ (**ನೋಡಿ– ಉರಿಲಿಂಗ–ಪೆದ್ದಿ**) ಮತ್ತು ಕಾಳವ್ವೆಯರೆಂಬ ಅಸ್ಪೃಶ್ಯರಿಗೆ ಉರಿಲಿಂಗದೇವ ವೀರಶೈವೋಪದೇಶವಿತ್ತು ಶಿವಾನುಭವ ಶಾಸ್ತ್ರಕೋವಿದರನ್ನಾಗಿಸಿದ. ಅಷ್ಟೇ ಅಲ್ಲದೆ ಪೆದ್ದಣ್ಣನಿಗೆ ಮಠಾಧ್ಯಕ್ಷ ಪದವಿಯನ್ನೂ ದಯಪಾಲಿಸಿದ. ವಿರೋಧಿಗಳು ಈತ ವಾಸಿಸುತ್ತಿದ್ದ ಚಪ್ಪರಕ್ಕೆ ಬೆಂಕಿ ಹಾಕಿ ಸುಟ್ಟರು. ಆದರೂ ಈತ ಧೃತಿಗೆಡಲಿಲ್ಲ. ತನ್ನ ಶಿಷ್ಯಕೋಟಿ ಸಮೇತನಾಗಿ ಈತ ಆಗಾಗ ಕಲ್ಯಾಣಪಟ್ಟಣಕ್ಕೆ ಹೋಗಿ ಬರುತ್ತಿದ್ದನೆಂದು ಹಲವು ಗ್ರಂಥಗಳಿಂದ ತಿಳಿಯುತ್ತದೆ. ಈತ ರಚಿಸಿದ 29 ವಚನಗಳು ಉಪಲಬ್ಧವಿವೆಯೆಂದೂ ವಚನಗಳ ಕೊನೆಯಲ್ಲಿ ಉರಿಲಿಂಗದೇವ ಎಂಬ ಮುದ್ರಿಕೆ ಇದೆಯೆಂದೂ ಕವಿಚರಿತಕಾರರು ತಿಳಿಸುತ್ತಾರೆ. (ಜಿ.ಎಸ್.ಪಿ.ಎಂ.)

**ಉರಿಲಿಂಗ ಪೆದ್ದಿ:** ಸು. 1180. ಉರಿಲಿಂಗ ದೇವನ (**ನೋಡಿ– ಉರಿಲಿಂಗ–ದೇವ**) ಶಿಷ್ಯ. ಆಂಧ್ರ ಪ್ರದೇಶದವ. ಪೂರ್ವಾಶ್ರಮದಲ್ಲಿ ಪೆದ್ದಣ್ಣನೆಂಬ ಹೆಸರು ಹೊಂದಿದ್ದು ಕುಪ್ರಸಿದ್ಧ ಕಳ್ಳನಾಗಿದ್ದ. ಉರಿಲಿಂಗದೇವ ನಂದವಾಡದ ಸೂರಯ್ಯನಿಗೆ ವೀರಶೈವೋಪದೇಶ ಕೊಡುತ್ತಿರುವಾಗ ಕಳ್ಳತನಕ್ಕಾಗಿ ಅದೇ ಮನೆಗೆ ಹೋಗಿದ್ದ ಪೆದ್ದಣ್ಣ ಕುತೂಹಲದಿಂದ ದೀಕ್ಷಾಕಾರ್ಯವನ್ನು ನೋಡಿ ಮನಃಪರಿವರ್ತನೆಗೊಂಡನಂತೆ. ಅಂದಿನಿಂದ ಹನ್ನೆರಡು ವರ್ಷಕಾಲ ಉರಿಲಿಂಗದೇವನ ಮಠಕ್ಕೆ ಯಾರಿಗೂ ತಿಳಿಯದಂತೆ ಸೌದೆ ತಂದು ಹಾಕುತ್ತಿದ್ದನಂತೆ. ಒಮ್ಮೆ ಉರಿಲಿಂಗದೇವನಿಗೆ ಸಿಕ್ಕಿಬಿದ್ದು ಉರುವಲಿನ ಬೆಲೆ ತೆಗೆದುಕೋ ಎಂದು ಒತ್ತಾಯಪಡಿಸಿದಾಗ ಸೂರಯ್ಯನಿಗೆ ಕೊಟ್ಟಂಥ ದೀಕ್ಷೆಯನ್ನು ನನಗೂ ಕೊಡಿ – ಎಂದು ಬೇಡಿದನಂತೆ. ಅಂದಿನಿಂದ ಗುರು ಹೋದ ಬಂದ ಕಡೆಯಲ್ಲೆಲ್ಲಾ ದೀಕ್ಷೆಗಾಗಿ ಕಾಡತೊಡಗಿದಾಗ ಗುರುವಿಗೆ ಬೇಸರವಾಗಿ ಛೇದಗಡಿ ಜಾ ಜಾದಗಡಿ ಜೆ. ತೆಗೆದುಕೋ ಈ ಕಲ್ಲನ್ನು, ಹೊರಟು ಹೋಗು –ಎಂದು ಹೇಳಿ ಒಂದು ಕಲ್ಲು ತೆಗೆದು ಎಸೆದನಂತೆ. ಪೆದ್ದಣ್ಣನ ಶುದ್ಧ ಭಕ್ತಿಯಿಂದ ಕಲ್ಲು ಲಿಂಗವಾಯಿತು. ಶ್ರದ್ಧೆಯಿಂದ ಮಾತು ಮಂತ್ರವಾಯಿತು. ಅದೇ ಊರಿನ ಅರಸ ನಂದರಾಜ ಕೆರೆಯೊಂದನ್ನು ತೆಗೆಸುತ್ತಿದ್ದು, ಬಂಡೆ ಸಿಕ್ಕಿ ಅದನ್ನು ತೆಗೆಯದ ಹೊರತು ನೀರು ಬರುವುದಿಲ್ಲವೆಂದು ತಿಳಿದು ಉರಿಲಿಂಗದೇವನಿಗೆ ಶರಣಾದ. ಗುರುವಿನ ಅಪ್ಪಣೆಯಂತೆ ಪೆದ್ದಣ್ಣ ಆ ಬಂಡೆಯನ್ನು ಒಡೆದನೆಂದೂ ಅವನ ಇಷ್ಟಲಿಂಗವೇ ಆ ಬಂಡೆಯನ್ನು ಸೀಳಿತೆಂದೂ ಪ್ರತೀತಿ. ಶಿಷ್ಯನ ನಿಷ್ಠಾಭಕ್ತಿಯನ್ನು ಕಂಡು ಗುರು ಆತನಿಗೆ ಲಿಂಗದೀಕ್ಷೆ ಕೊಟ್ಟು ಉರಿಲಿಂಗ ಪೆದ್ದಿಯೆಂದು ನಾಮಕರಣ ಮಾಡಿ, ಮುಂದೆ ಆತನನ್ನೇ ತನ್ನ ಪೀಠಕ್ಕೆ ಕುಳ್ಳಿರಿಸಿದ. ಈ ಕಥೆ ಅದೃಶ್ಯಕವಿಯ ಪ್ರೌಢದೇವರಾಯನ ಕಾವ್ಯ, ಬಸವಕವಿಯ ಮಹಾಲಿಂಗಲೀಲೆಗಳಲ್ಲಿ ಸೂಚಿತವಾಗಿದೆ. ಪೆದ್ದಿ ಗೃಹಸ್ಥ. ಈತನ ಸತಿ ಪ್ರಸಿದ್ಧ ಶರಣೆ ಹಾಗೂ ವಚನಕಾರ್ತಿಯಾದ ಕಾಳವ್ವೆ. ಈತನ ವಚನಗಳಿಂದ ಈತ ಮಹಾವಿದ್ವಾಂಸನೂ ಹಲವಾರು ಶಾಸ್ತ್ರಪಾಂಡಿತ್ಯವುಳ್ಳವನೂ ವೇದವಿದ್ಯಾವೈದುಷ್ಯ ಪ್ರಪೂರ್ಣನೂ ಶಿವಾನುಭವ ಚರ್ಯಾಕಾಂಡ ಪಂಡಿತನೂ ಆಗಿದ್ದುದು ಕಂಡುಬರುತ್ತದೆ. ಕೆಲವು ವಚನಗಳು 2–3 ಪುಟಗಳಷ್ಟು ದೀರ್ಘವಾಗಿದ್ದು ವೇದ, ಶಾಸ್ತ್ರ, ಪುರಾಣ, ಆಗಮ, ಉಪನಿಷತ್ ಮೊದಲಾದ ಧರ್ಮಗ್ರಂಥಗಳ ಪ್ರಮಾಣವಾಕ್ಯ ಭೂಯಿಷ್ಠವಾಗಿವೆ. ಇವನದು ಜ್ಞಾನೋಪಾಸನೆಯ ತೈಜಸ ಜೀವನ. ಇವನ ವಚನಗಳಲ್ಲಿ ಉರಿಲಿಂಗ ಪೆದ್ದ ಪ್ರಿಯ ವಿಶ್ವೇಶ್ವರ ಎಂಬ ಅಂಕಿತವಿದೆ. ವಚನ ರಚನೆಯಲ್ಲಿ ಈತ ಗುರುವನ್ನು ಮೀರಿಸಿದ ಶಿಷ್ಯ. ಲಿಂಗಲೀಲಾವಿಲಾಸಚಾರಿತ್ರ, ಗುಬ್ಬಿಮಲ್ಲಣ್ಣಾರ್ಯರ ಗಣಭಾಷ್ಯರತ್ನಮಾಲಾ, ಆರ್. ಆರ್. ದಿವಾಕರರ ವಚನ ಶಾಸ್ತ್ರರಹಸ್ಯಗಳಲ್ಲಿ ಈತನ ವಚನಗಳು ಉದ್ಧೃತವಾಗಿವೆ. ಪಾಲ್ಕುರಿಕೆಯ ಸೋಮನಾಥನ (ಸು.1195) ಸಹಸ್ರಗಣನಾಮದಲ್ಲಿ 350 ಅಮರಗಣಗಳಲ್ಲಿ ಬಸವ, ಚನ್ನಬಸವರ ಹೆಸರುಗಳ ಜೊತೆ ಉರಿಲಿಂಗ ಪೆದ್ದಿಯ ಹೆಸರಿದೆ. ಫ. ಗು. ಹಳಕಟ್ಟಿಯವರು ಈತನ 149 ವಚನಗಳನ್ನು ಸಂಗ್ರಹಿಸಿದ್ದಾರೆ (1936). ತನ್ನ ಗುರುವಿನ ಮರಣದಿಂದ ಬೇಸರಹೊಂದಿದ ಪೆದ್ದಿ ಕಲ್ಯಾಣ ಪಟ್ಟಣಕ್ಕೆ ಬಂದು ತನ್ನ ಕೊನೆಯ ದಿನಗಳನ್ನು ಅಲ್ಲೇ ಕಳೆದಂತೆ ಕಾಣುತ್ತದೆ. ಅಲ್ಲಿ ಇವನದೊಂದು ಮಠವೂ ಸಮಾಧಿಯೂ ಇದೆಯೆಂದು ಹೇಳುತ್ತಾರೆ. ಕಲ್ಯಾಣ ಸೇಡಮದ ಹತ್ತಿರದ ಕೊರಳಿ, ಬೇವಿನ ಚಿಂಚೋಳಿ ಮತ್ತು ಭಾಲ್ಕಿಗಳಲ್ಲಿ ಇಂದಿಗೂ ಉರಿಲಿಂಗ ಪೆದ್ದಿಗಳ ಮಠಗಳಿವೆಯೆಂದೂ ಅವೆಲ್ಲಕ್ಕೂ ಹರಿಜನರೇ ಭಕ್ತರೆಂದೂ ಮಠಾಧಿಕಾರಿಗಳು ಮಾತ್ರ ಲಿಂಗಾಂಗಿಗಳೆಂದೂ ತಿಳಿದು ಬರುತ್ತದೆ. ಅಸ್ಪೃಶ್ಯ ಆಚಾರ್ಯನಾದದ್ದು. ಮಠಾಧಿಕಾರಿಯಾದದ್ದು ಭಾರತದ ಇತಿಹಾಸದಲ್ಲೇ ಒಂದು ಕ್ರಾಂತಿಕಾರಕ ಘಟನೆ. (ಜಿ.ಎಸ್.ಪಿ.ಎಂ.)

**ಉರಿಶೀತ:** ಅಲಸಿಕೆ, ಜ್ವರ, ಸ್ನಾಯುಗಳಲ್ಲಿ ನೋವು ಚಳುಕು, ಮೂಗು ಕಟ್ಟುವಿಕೆ, ಕಣ್ಣುರಿ, ತಲೆನೋವು ಇವು ಇದ್ದಕ್ಕಿದ್ದ ಹಾಗೆ ತೋರುವ ವಿಷಕಣದ (ವೈರಸ್) ಬೇನೆ (ಇನ್‌ಫ್ಲೂಯೆಂಜ). ಇದನ್ನು ಫ್ಲೂ ಎನ್ನುವುದೂ ಉಂಟು. ನೆಗಡಿಯ ಪ್ರಭಾವದಿಂದ (ಇನ್‌ಫ್ಲುಯೆನ್ಸ್) ಇದು ಬರುವುದೆಂದು. ಇನ್‌ಫ್ಲೂಯೆಂಜ ಎಂಬ ಇಟಾಲಿಯನ್ ಪದವನ್ನು ಬಳಸಿದವ ಜನ್ ಹಕ್ಸ್‌ಹಾಂ (1743). ಬಿರುಗಾಳಿಗಳು ಉರಿಶೀತವನ್ನು ಹೊತ್ತು ತರುವುವೆಂದು 1890ರ ತನಕ ನಂಬಿಕೆ ಇತ್ತು. ಒಂದಿಷ್ಟು ಕೆಮ್ಮು, ಗಂಟಲ ನೋವು ತೋರಿ, 3–4 ದಿನಗಳಲ್ಲಿ ಇಳಿದು ಹೋಗುವುದೇ ಸಾಮಾನ್ಯ. ಅಷ್ಟಕ್ಕೇ ನಿಲ್ಲದೆ, ರೋಗ

ಹೆಚ್ಚಿಕೊಂಡು, ಉಸಿರುನಾಳದ ಉರಿತ (ಟ್ರೇಕಿಯೈಟಿಸ್), ಪುಪ್ಪುಸ ಉರಿತವೂ (ನ್ಯುಮೋನಿಯ) ಆಗಬಹುದು. ಕಂಡೂ ಕಾಣದಂತೆ ಹೋಗುವುದೇ ಸಾಮಾನ್ಯ. ಆದರೆ ನಿಜವಾಗಿಯೂ ರೋಗ ಹತ್ತಿ ಕಾಡಿಸುವುದಕ್ಕಿಂತಲೂ ಹೆಚ್ಚು ಸುಸ್ತು ಮಾಡುತ್ತದೆ.

**ಕಾರಣ:** ಉರಿಶೀತದ ಎ ಇಲ್ಲವೇ ಬಿ ವಿಷಕಣಗಳೇ ಇದರ ಸಾಮಾನ್ಯ ಕಾರಣ. ಉರಿಶೀತದ ಸಿ ವಿಷಕಣ ಅಷ್ಟು ಜೋರಿನದಲ್ಲ. ಹತ್ತಿದರೂ ಹತ್ತದಂತೆ ಬಂದುಹೋಗುವ ಬಗೆಯದು. ಇದೇ ತೆರನ ಬೇನೆ ಇನ್ನೂ ಹಲವಾರು ವಿಷಕಣಗಳಿಂದಲೂ ಆಗಬಹುದು. ಉರಿಶೀತದ ವಿಷಕಣಗಳು ಎಳೆಗಳ, ಗೋಳಗಳ ಆಕಾರದವು. ಗೋಳಗಳ ಅಡ್ಡಳತೆ 80–100 ಮಿಲಿಮೈಕ್ರಾನುಗಳು. ಇವುಗಳ ಹೊರ ಕವಚದಲ್ಲಿ ಹಿಟ್ಟು ಸಕ್ಕರೆ, ಪ್ರೋಟೀನು, ಕೊಬ್ಬು, ನಡುವೆ ರೈಬೊನ್ಯೂಕ್ಲೀಯಿಕಾಮ್ಲವೂ ಇರುತ್ತವೆ. ಉರಿಶೀತದ ಎ,ಬಿ ವಿಷಕಣಗಳು ಕೆಲವು ಮುಖ್ಯ ಸಸ್ತನಿಗಳ ಊತಕಗಳಲ್ಲಿ ತಳಿ ಬೆಳೆಸುತ್ತವೆ. ಎ ಬಗೆಯದರಿಂದಾದ ಸೋಂಕಿನಿಂದ ಬಿ ಬಗೆಯೆದುರು ರೋಗ ಮರವಣಿ (ಇಮ್ಯೂನಿಟಿ) ಆಗದು. ಆದ್ದರಿಂದ ಎ,ಬಿ ಬಗೆಗಳನ್ನು ಕೆಲವರು ಎರಡೂ ಬೇರೆ ಬೇರೆ ರೋಗಗಳು ಎನ್ನುವರು. ಎ,ಬಿ ತಳಿಗಳಲ್ಲೂ ಎಷ್ಟೋ ವ್ಯತ್ಯಾಸಗಳಿವೆ.

ತುಬ್ಬೆಕ್ಕುಗಳಿಗೂ (ಫೆರೆಟ್ಸ್), ಚಿಟ್ಟಿಲಿಗಳಿಗೂ (ಮೈಸ್) ಮಾನವನ (ಎ,ಬಿ) ವಿಷಕಣಗಳಿಂದ ಉಸಿರ್ನಾಳದ ರೋಗ ಹತ್ತುತ್ತದೆ. ಇದೇ ತೆರನ ಉರಿಶೀತದ ವಿಷಕಣಗಳಿಂದ, ಕುದುರೆ, ಹಂದಿ, ಕೋಳಿಗಳಲ್ಲಿ ಉಸಿರ್ನಾಳ ಬೇನೆ ಹತ್ತುವುದಾದರೂ ಇವು ಮಾನವನನ್ನು ಕಾಡುವಂತೆ ತೋರಿಲ್ಲ. ಆದರೆ, ಹಂದಿಯಲ್ಲಿ ಬರುವ ಉರಿಶೀತ ಮಾನವನ ಬಗೆಯದು. ಹಂದಿಯಲ್ಲಿರುವ ಪರೋಪಜೀವಿ (ಪ್ಯಾರಸೈಟ್) ಹುಳುಗಳಲ್ಲಿ ಈ ಸೋಂಕು ಅವಿತಿದ್ದು, ಹಂದಿಯ ನಿಜಗೆಲಸಗಳು (ಫಂಕ್ಷನ್ಸ್) ಏರುಪೇರಾಗುವಾಗ ಹೊರಬಂದು ಹಂದಿಗೆ ಉರಿಶೀತ ಹತ್ತುವುದೆಂದು ಲೇಡ್ಲಾನ (1936) ಅಭಿಪ್ರಾಯ. ಅಂತೂ ಉಗುಳು. ಸೀನು, ಕೆಮ್ಮು, ನೆಗಡಿ ಕಾಣಿಸಿಕೊಳ್ಳುವ ಮುಂಚಿನ ಮೊದಲ ಒಂದೆರಡು ದಿನಗಳಲ್ಲೇ ರೋಗಿಗಳಿಂದ ಸೋಂಕು ಹತ್ತಿದ, ಉಸಿರಾಟ ಮಂಡಲದಿಂದ ಹೊರಬಿದ್ದ ತುಂತುರುಕಣಗಳು (ಡ್ರಾಪ್ಲೆಟ್ಸ್) ಗಾಳಿಯಲ್ಲಿ ಸೇರಿ, ಈಡಾಗುವ, ತೀರ ಹತ್ತಿರ ಇರುವ ಉಳಿದವರಿಗೆ ಉಸಿರಿನ ಮೂಲಕವೇ ಉರಿಶೀತ ಒಳಹೋಗಬಹುದು. ಸೋಂಕುಗ್ರಸ್ತ ಕೈವಸ್ತ್ರ, ಬಟ್ಟೆಬರೆಗಳಿಂದಲೂ ಹರಡಬಹುದು. ಈ ಕಾರಣದಿಂದಲೇ ಉರಿಶೀತವನ್ನು ತಡೆವ ಯಾವ ನಿರೋಧ ಕ್ರಮಗಳೂ ಕೈಗೂಡವು. ಒಂದು ತಂಡದ ಜನರಲ್ಲಿ ಸಾಮಾನ್ಯವಾಗಿ ಆರೆಂಟು ವಾರಗಳು ಸೋಂಕು ಉಳಿದಿರುವುದು. ಕೆಲವೇ ಮಂದಿ ಕೂಡಿರುವೆಡೆ 1–3 ವಾರಗಳಲ್ಲಿ ಹೊಗುವುದೂ ಉಂಟು. ಆದ್ದರಿಂದ ಬಹುಕಾಲ ಹೊತ್ತು ಹರಡುವವರಿಲ್ಲ. ಸರಿಯಾಗಿ ಗಾಳಿ ಬೆಳಕು ಬಾರದೆಡೆಯ ಗಾಳಿಯಲ್ಲಿ ಸೋಂಕು ಹೆಚ್ಚಾಗಿ ತುಂಬಿರುವುದಾದರೂ ಬಿರುಗಾಳಿಗಳಿಂದ ಉರಿಶೀತ ಎಂದಿಗೂ ಹರಡದು.

**ಚಿಹ್ನೆ, ಲಕ್ಷಣಗಳು:** ಬೇನೆ ಹೊರಗಾಣುವ ಮುಂಚಿನ ಕುಮುಲುಕಾಲ (ಇನ್‌ಕ್ಯುಬೇಷನ್ ಪೀರಿಯಡ್) 2–3 ದಿನಗಳು. ಸಾಂಕ್ರಾಮಿಕಗಳಲ್ಲೂ ರೋಗ ಲಕ್ಷಣಗಳು ಹೀಗೆ ಇರುವುವು. ಬಹಳ ಮಂದಿಯಲ್ಲಿ ಬೇನೆ ಸುಮಾರು ಮೂರು ದಿನಗಳು ಕಾಡುವುದು. ಇದ್ದಕ್ಕಿದ್ದ ಹಾಗೆ ಚಳಿ, ನಡುಕ, ತಲೆನೋವು. ಅಲಸಿಕೆ, 38°–39° ಜ್ವರ, ಕೈಕಾಲುಗಳಲ್ಲಿ ವಿಪರೀತ ನೋವು ಚಳುಕು ಕಾಣುತ್ತವೆ. ಸುಸ್ತು ಮೊದಲಲ್ಲೇ ವಿಪರೀತವಾಗಿರುವುದು. ಆಮೇಲೆ ಕಫವೇ ಬರದ ಒಣಗೆಮ್ಮು ಕಾಣಿಸಿ ಮೂಗು ಕಟ್ಟಿಕೊಂಡೊ ಇಲ್ಲದೆಯೊ ಗಂಟಲು ಉರಿಯುತ್ತದೆ. ಮೊಗ ದದ್ದರಿಸಿ ಕೆಂಪೇರಬಹುದು. ಕಣ್ಣುರಿಯಾಗಿ ಕೆಲವರಲ್ಲಿ ಕೆಂಪಗಾಗಬಹುದು. ಕೆಲವರಲ್ಲಂತೂ ಉರಿಶೀತ ಮೊದಲಿಂದಲೇ ಜೋರಾಗಿರುವುದು. ಉಸಿರಾಟದ ತೊಂದರೆ, ಪುಪ್ಪುಸದ ಬೇನೆ ಮೊದಲೆ ಕಾಣಿಸಿಕೊಳ್ಳುತ್ತವೆ. ರೋಗ ಏರುಪೇರಾಗಿ ಮುಂದೇನು ಎನ್ನಿಸುತ್ತಿರುತ್ತದೆ. ಉಳಿದವರಲ್ಲಿ ಬೇನೆ ತಾಕಿದ್ದೇ ಕಾಣದಂತೆ ಹೋಗುವುದು. ಒಂದೆರಡು ವಾರಗಳು ಕಳೆದ ಮೇಲೆ, ಮಿದುಳು ಬೆನ್ನುಹುರಿಯುರಿತ (ಎನ್‌ಸೆಫೆಲೊಮಯಲೈಟಿಸ್) ಆಗಬಹುದು.

ಈ ಚಿಹ್ನೆ, ಲಕ್ಷಣಗಳು ಕೆಲವೇ ದಿನಗಳಲ್ಲಿ ಇಳಿದು, ಜ್ವರ ಇಲ್ಲವಾದರೂ ರೋಗಿ ಇನ್ನಷ್ಟು ದಿನಗಳು ಬಲು ನಿತ್ರಾಣದಿಂದಿರುವನು. ಇನ್ನೂ ಒಂದೆರಡು ವಾರಗಳು ರೋಗಿ ಸುಲಭವಾಗಿ ದಣಿದಂತಿರುವನು. ಕೆಲವರಂತೂ ತುಂಬಾ ಸುಸ್ತಾಗಿ ಕುಸಿದುಬಿದ್ದಿರುವರು. ಕೇವಲ ಒಂದು ದಿನ ಇರುಸುಮುರುಸಾಗಿ ಗಂಟಲು ಕೆರೆತ ಆಗಬಹುದಷ್ಟೇ. ಜ್ವರ ಬಂದರೂ ಗೊತ್ತಿರದಷ್ಟೇ ಇರುವುದು, ಸೋಂಕು ಹತ್ತಿದರೂ ಹೊರಗೆ ತೋರದವರಿಂದಲೇ ಹೆಚ್ಚು ಅಪಾಯ. ಅವರಿಂದ ರೋಗ ಇನ್ನೊಬ್ಬರಿಗೆ ಬೇಗ ಹರಡುತ್ತದೆ. ಸಾಂಕ್ರಾಮಿಕಗಳಲ್ಲಿ 20–25 ಮಂದಿ ಇಂಥವರೇ ಇರಬಹುದು. ಕೆಲವರಲ್ಲಿ ಪುಪ್ಪುಸ ಉರಿತವೇ ಇಲ್ಲದಿರಬಹುದು. ತೀರ ಎಳೆಯರಲ್ಲೂ, ವಯಸ್ಸಾದವರಲ್ಲೂ ಸಿಹಿಮೂತ್ರ, ಗೂರಲು, ಎದೆಗೆಮ್ಮು, ಕ್ಷಯಗಳ ತೆರನ ಉಸಿರಾಟದ, ಗುಂಡಿಗೆಯ ಬೇರೂರಿದ ರೋಗದವರಲ್ಲೂ ಹೀಗಾಗುವುದು ಸಾಮಾನ್ಯ. ಉರಿಶೀತದ ವಿಷಕಣಗಳಿಂದ ಪುಪ್ಪುಸ ಉರಿತ ತೊಡಕಿಗೆಡೆಗೊಡಬಹುದು. ಇತ್ತೀಚೆಗೆ ಕಂಡಂತೆ, ಕೀವುಜನಿಕ ಗುತ್ತಿಕಾಯ್ಜೀವಿಗಳ (ಸ್ಟಫಿಲೊಕಾಕೈ ಪಯೋಜಿನಿಸ್) ತೆರನ ದ್ವಿತೀಯಕ (ಸೆಕೆಂಡರಿ) ಸೋಂಕು ಹತ್ತಲೂ ಬಹುದು.

**ರೋಗದ ರೀತಿ:** ಉಸಿರಿನ ಮಂಡಲದಲ್ಲಿ ಬಿದ್ದ ವಿಷಕಣ ಬಾಸೆಗೂಡಿದ ಮೇಲ್ಪೊರೆಯನ್ನು (ಸಿಲಿಯೇಟೆಡ್ ಎಪಿತೀಲಿಯಂ) ಆಯ್ಕೆ ಮಾಡಿದ ಹಾಗೆ ಅಳಿಗೊಳಿಸುವುದು (ನೆಕ್ರೋಸ್) ಮುಖ್ಯ ಲಕ್ಷಣ. ಮೇಲ್ಪೊರೆಯ ಜೀವಕಣಗಳಿಗೆ ಹೀಗೆ ಉರಿಶೀತದಿಂದ ಅಪಾಯವಾದಾಗ ರಕ್ತದಲ್ಲಿನ ದ್ರವ ಹೊರ ಸುರಿದು, ಅಲ್ಲಿನ ಊತಕದಲ್ಲಿ ಉರಿತದ ಬದಲಾವಣೆಗಳಾಗುತ್ತವೆ. ಸೋಂಕು ಮೂಗಿನಲ್ಲಿ ಕಾಲಿಟ್ಟು ಅಲ್ಲೇ ನೆಲೆಸಬಹುದು. ಇಲ್ಲವೇ ಉಸಿರ್ನಾಳಕ್ಕೂ ಇನ್ನೂ ಆಳವಾಗಿಳಿದು ಹರಡಬಹುದು. ಗಂಟಲುರಿತವೂ ಆಗುತ್ತದೆ. ಸೋಂಕು ಹಚ್ಚಿಕೊಂಡಾಗ ಪುಪ್ಪುಸಗಳಿಗೂ ಹರಡಿಕೊಳ್ಳುವುದು. ಪುಪ್ಪುಸಗಳು ಸೊನೆ (ಎಕ್ಸುಡೇಟ್) ತುಂಬಿಕೊಂಡು ಊದುತ್ತವೆ. ಹೀಗಾದಾಗ ಉರಿಶೀತ ವಿಷಕಣಗಳಿಂದಾದ ಪುಪ್ಪುಸದ ಉರಿತದಿಂದಲೇ ರೋಗಿ ಸಾಯುವುದಾದರೂ ಕೀವುಜನಕ ಗುತ್ತಿಕಾಯ್ಜೀವಿಯಿಂದಾದ ಮರುಚಲು ಸೋಂಕಿನ ಪುಪ್ಪುಸ ಉರಿತವೇ ಸಾಮಾನ್ಯ.

ರಕ್ತದಲ್ಲೂ ಒಳಾಂಗಗಳಲ್ಲೂ ಕೆಲವೇಳೆ ಮಿದುಳಲ್ಲೂ ಉರಿಶೀತದ ವಿಷಕಣಗಳು ಕಂಡುಬಂದಿವೆ. ಒಳಾಂಗಗಳಿಗೆ ಇವು ಬಂದಿರಬೇಕು. ಪುಪ್ಪುಸ ಬಿಟ್ಟು ಇನ್ನೆಲ್ಲಾದರೂ ವಿಷಕಣಗಳು ಕಂಡುಬಂದರೆ, ಅಲ್ಲೂ ನಂಜೇರುವುದನ್ನು ಸೂಚಿಸುತ್ತದೆ.

**ನಿದಾನ:** ಸಾಂಕ್ರಾಮಿಕಗಳ ಕಾಲದಲ್ಲಿ ರೋಗದ ಲಕ್ಷಣಗಳ ವಿಚಾರವಾಗಿ ಯಾವ ಅನುಮಾನವೂ ಇರದು. ಆದರೂ ಉರಿಶೀತದ್ದೇ ಅಲ್ಲದೆ ಇನ್ನೂ ಬಗೆಬಗೆ ವಿಷಕಣಗಳ ಬೇನೆಗಳೂ ಇದೇ ತೆರನಾಗಿರಬಹುದು. ಆದ್ದರಿಂದ ಅಲ್ಲೊಂದಿಲ್ಲೊಂದು ರೋಗಿಯಲ್ಲಿ ಹೀಗಾಗಿದ್ದರೆ, ಕೇವಲ ರೋಗಿಯ ಪರೀಕ್ಷೆಯಿಂದ ರೋಗ ನಿದಾನ (ಡಯಗ್ನೋಸಿಸ್) ಖಚಿತವಾಗಲಾರದು. ಸಾಂಕ್ರಾಮಿಕಗಳಲ್ಲಿ ಕೂಡ ಕೆಲವು ರೋಗಿಗಳಿಗೆ ಬೇರೆ ವಿಷಕಣಗಳೇ ಹತ್ತಿರಬಹುದು. ಸಾಮಾನ್ಯ ನೆಗಡಿಯಲ್ಲಿ, ಮೂಗು ಕಟ್ಟಿಕೊಂಡು ನೀರು ಸುರಿಯುತ್ತ ಜ್ವರವಿಲ್ಲದೆಯೂ ಇರಬಹುದು. ಬೇನೆಯ ಮೊದಲ ಒಂದೆರಡು ದಿನಗಳಲ್ಲೇ ಗಂಟಲು, ಬಾಯಿಗಳಿಂದಲೂ ರೋಗಿ ಕೆಲವೇ ದಿನಗಳಲ್ಲಿ ಸತ್ತಿದ್ದರೆ ಉಸಿರ್ನಾಳ, ಪುಪ್ಪುಸಗಳಿಂದಲೋ ತೆಗೆದ ಒರಸುಗಳಿಂದಲೋ (ಸ್ವಾಬ್ಸ್), ಮರುಚಲು ಸೊಂಕಿನಿಂದ ಅಸು ನೀಗಿದ್ದರೆ ವಿಷಕಣ ಸಿಗುವುದು ಇನ್ನೂ ಕಷ್ಟ, ಇದಾವುದೂ ಆಗದಿದ್ದಲ್ಲಿ, ರೋಗಿ ಚೇತರಿಸಿಕೊಳ್ಳುವಾಗ ಅವನ ರಕ್ತದಲ್ಲಿ ಹುಟ್ಟಿರುವ ರೋಧವಸ್ತುಗಳ (ಆ್ಯಂಟಿಬಾಡೀಸ್) ಮಟ್ಟ ಏರಿರುವುದರಿಂದ ತಿಳಿಯಬಹುದು.

ಈ ವಿಷಕಣವನ್ನು ಬೇರೆ ತೆಗೆದು ಬೆಳೆಸಿ ಪರೀಕ್ಷಿಸಲು ಕಾವಿಗಿಟ್ಟಿರುವ ಮೊಟ್ಟೆಗಳೇ ಸರಿಯೆಂದು ಬರ್ನಲ್ (1939) ತೋರಿಸಿಕೊಟ್ಟ ಅಲ್ಲದೆ, ಉರಿಶೀತದ ವಿಷಕಣಗಳು ಕೋಳಿಮರಿಯ ಕೆಂಪು ರಕ್ತಕಣಗಳನ್ನು ಮುದ್ದೆಗಟ್ಟಿಸುವುದರಿಂದ ಅವನ್ನೂ ಅವುಗಳ ಎದುರಾಗಿ ಬೆಳೆವ ರೋಧವಸ್ತುಗಳನ್ನೂ ಅಳೆಯಲು ಅನುಕೂಲವೆಂದು ಹರ್ಸ್ಟ್, ಮಿಡ್ಲಿಲ್‌ಲಾಂಡ್ ಮತ್ತು ಹೇರ್ ಕಂಡುಹಿಡಿದರು. ಪಿಂಡದ ಸುತ್ತಣ ಹೊಕ್ಕುಳುಚೀಲದ (ಅಲಾಂಟಾಯಿಸ್) ದ್ರವದಲ್ಲಿ ಈ ವಿಷಕಣ ಹೇರಳವಾಗಿ ಬೆಳೆಯುವುದೇ ಇದರ ಲಸಿಕೆಯ ತಯಾರಿಕೆಗೆ ಮೂಲ.

ಚಿಕಿತ್ಸೆ: ಸಾಂಕ್ರಾಮಿಕ ತಲೆಹಾಕುವ ಮುಂಚೆಯೇ ಜಡಗೊಳಿಸಿದ ಉರಿಶೀತ ವಿಷಕಣದ ಲಸಿಕೆಗಳನ್ನು ಹಾಕಿದಾಗ ಎಷ್ಟೋ ಕಡೆಗಳಲ್ಲಿ ಒಳ್ಳೆಯದಾಗಿದೆ. ಎರಡು ವಾರಗಳಲ್ಲಿ ಮರವಣಿ (ಇಮ್ಯೂನಿಟಿ) ಹೆಚ್ಚಿಕೊಂಡು 4–12 ವಾರಗಳಲ್ಲಿ ಇಳಿಯುತ್ತ ಹೋಗುವುದು. ಎರಡು ಪ್ರಮಾಣದಲ್ಲಿ (ಡೋಸಸ್) ಒಂದನ್ನು, ಈ ವಿಷಕಣಕ್ಕೆ ಒಡ್ಡಿದ್ದವರಿಗೂ ವರ್ಷದೊಳಗಾಗಿ ಈ ಲಸಿಕೆಯನ್ನು ಹಾಕಿಲ್ಲದವರಿಗೂ ಚುಚ್ಚಿ ಹೊಗಿಸಬೇಕು. ಇದರ ಪ್ರಭಾವ ಸುಮಾರು 12 ತಿಂಗಳು ಮಾತ್ರ ಇರುವುದಾದರೂ ಇದರೊಂದಿಗಿನ ಬೇರೆ ಲಸಿಕೆಗಳಿಂದ ಇದು ಬಲಗೂಡುತ್ತದೆ. ರಷ್ಯದಲ್ಲಿ ಎಲ್ಲೆಲ್ಲೂ ಬಲಗುಂದಿಸಿದ (ಅಟೆನ್ಯುಯೇಟೆಡ್) ಬದುಕಿರುವ ವಿಷಕಣಗಳನ್ನು ಮೂಗಿನ ಮೂಲಕ ಹಾಕುತ್ತಿರುವರು. ಇದನ್ನು ಇನ್ನಾವ ದೇಶಗಳಲ್ಲೂ ಅಷ್ಟಾಗಿ ಬಳಸಿಲ್ಲ. ಇದು ಅನುಕೂಲವಾಗಿ ಕಂಡರೂ ಇನ್ನಷ್ಟು ಪರೀಕ್ಷೆಗಳಿಗೀಡಾಗಬೇಕು. ಮೂಗಿಗೇರಿಸಿದ ಮರವಣಿಕ (ಇಮ್ಯೂನೈಸಿಂಗ್) ಲಸಿಕೆಯಿಂದ (ಸೀರಂ) ರೋಗವನ್ನು ಚೆನ್ನಾಗಿ ತಡೆಗಟ್ಟಿದ ವರದಿಗಳಿದ್ದರೂ ಇನ್ನೂ ಸಾಮಾನ್ಯ ಬಳಕೆಗೆ ಬಂದಿಲ್ಲ. ಲಸಿಕೆಯ ಬಳಕೆಯಲ್ಲಿ ಕೆಲವು ಮಿತಿಗಳಿವೆ. ಒಂದೊಂದು ಸಾಂಕ್ರಾಮಿಕದ ವಿಷಕಣದ ಬಗೆಯ ರಾಸಾಯನಿಕಗಳಲ್ಲೂ ಕೆಲಸ ಮಾಡವು. ಆಯಾ ಸಾಂಕ್ರಾಮಿಕಕ್ಕೆ ಕಾರಣವಾದ ವಿಷಕಣದ ತಳಿಯ ಎದುರಿನ ಬೇರೆ ಗೊತ್ತಾದ ಲಸಿಕೆಯನ್ನು ಆಗಾಗಲೇ ತಯಾರಿಸಬೇಕು. ಅಲ್ಲದೆ, ಸಾಂಕ್ರಾಮಿಕ ತಲೆದೋರುವ ಎಷ್ಟೋ ಮುಂಚೆಯೇ ಇದನ್ನು ಕೊಟ್ಟಿರಬೇಕು. ಸಾಂಕ್ರಾಮಿಕ ನಡುವಣ ಕಾಲಗಳಲ್ಲಿ ಅವನ್ನು ಕೊಡುವುದರಿಂದ ಏನೇನೂ ಫಲವಿಲ್ಲ.

ಮಾನವನಲ್ಲಿ ಕಾಣುವ ಉರಿಶೀತದ ವಿಷಕಣಗಳ ಬಗೆಗಳ ಮೇಲೆಯೇ ಗೊತ್ತಾದ ಪರಿಣಾಮಗಳನ್ನು ತೋರುವ ಯಾವ ರಾಸಾಯನಿಕ ಇಲ್ಲವೇ ಜೀವಿರೋಧಕವಾಗಲಿ (ಆ್ಯಂಟಿಬಯೋಟಿಕ್) ಮದ್ದುಗಳಾಗಲಿ ಇಲ್ಲವೇ ಇಲ್ಲ. ಜೀವಿಯಲ್ಲಿ ಚುರುಕಾಗಿ ತೋರುವ ವಸ್ತುವಾದ ಆತಂಕಿ. (**ನೋಡಿ– ಇಂಟರ್‌ಫೆರಾನ್**) ವಿಷಕಣವನ್ನು ಹಾಕುವ ಮೊದಲೋ ಹಾಕಿದ ಮೇಲೋ ಕೆಲವು ತಾಸುಗಳೊಳಗೂ ಕೇವಲ ಪ್ರಯೋಗಾಲಯದಲ್ಲಿ ಚಟುವಟಿಕೆ ತೋರಿದರೂ ಬೇನೆ ಹತ್ತಿರುವ ರೋಗಿಯಲ್ಲಿ ಇದರ ಕೈವಾಡ ಕಂಡುಬಂದಿಲ್ಲ.

ಕೇವಲ ರೋಗಲಕ್ಷಣಗಳ ಶಮನವೊಂದೇ ರೋಗಿಗೆ ಸಿಗುವ ಚಿಕಿತ್ಸೆ. ಸಾಂಕ್ರಾಮಿಕಗಳಲ್ಲಿ ಎಲ್ಲೇ ಆಗಲೀ ಗುಂಪು ಸೇರದಿರಬೇಕು. ರೋಗಿಯನ್ನು ಒಳಕೋಣೆಯಲ್ಲಿ ಬೆಚ್ಚನೆ ಹಾಸಿಗೆಯಲ್ಲಿ ಮಲಗಿಸಿದರೆ, ಲೇಸಲ್ಲದೆ ಬೇಗನೆ ವಾಸಿಯಾಗುವುದು. ಹೆಚ್ಚಿನ ತಾಕುತೊಡಕುಗಳೂ ಇರವು. ಬಹಳ ಮಂದಿಯಲ್ಲಿ ಕೆಲವೇ ದಿನಗಳಲ್ಲಿ ತನಗೆ ತಾನೇ ಇಳಿದುಹೋಗುವುದ

ರಿಂದ, ಮೈ ಕೈಕಾಲುಗಳ ನೋವುಗಳಿಗೂ ಗಂಟಲುರಿಗೂ ನೋವು ಕಳೆವ ಮದ್ದುಗಳನ್ನು ಕೊಟ್ಟರೆ ಸಾಕು. ಪುಪ್ಪುಸ ಉರಿತ ಆಗಿದ್ದರೆ, ಮುಖ್ಯವಾಗಿ ಕೀವುಜನಿಕ ಗುತ್ತಿಕಾಯ್ಜೀವಿಗಳ ಮಾರಕವಾದ ಜೀವಿರೋಧಕಗಳನ್ನು ಹೆಚ್ಚು ಹೆಚ್ಚಾಗಿ ಕೊಡಬೇಕಾಗುತ್ತದೆ. ಕೆಲವೇಳೆ ಹೀಗೆ ಮುಂದಾಗುವುದನ್ನು ತಪ್ಪಿಸಲೂ ಸಲ್ಫೋನ್‍ಮೈಡುಗಳು, ಪೆನಿಸಿಲಿನ್ನುಗಳು, ಸ್ಟ್ರೆಪ್ಟೊಮೈಸಿನುಗಳನ್ನೂ ಕೊಡಬೇಕಾಗಬಹುದು. ಎದೆಗೂಡಲ್ಲೊ ಗುಂಡಿಗೆಯಲ್ಲೊ ಮೊದಲೇ ರೋಗ ಇದ್ದರಂತೂ ತಕ್ಕ ಮದ್ದುಗಳನ್ನು ಕೊಡಲೇಬೇಕು. ಒಂದೆರಡು ವಾರಗಳು ಕಳೆದ ಮೇಲೆ, ಮಿದುಳು, ಬೆನ್ನುಹುರಿಯುರಿತ ಕಂಡರೆ ಕಾರ್ಟಿಕೋಸ್ಟಿರಾಯ್ಡುಗಳನ್ನು ಕೊಟ್ಟೇ ತೀರಬೇಕು.

**ಮುನ್ನರಿವು:** ಒಂದು ಬಾರಿ ಸೋಂಕು ಹತ್ತಿತೆಂದರೆ, ರೋಗ ತಡೆವ ಬಲ ಎಲ್ಲರಲ್ಲೂ ಒಂದೇ ಸಮನಾಗಿ ಹೆಚ್ಚಿರದಿದ್ದರೂ ಬಹಳ ಮಂದಿಯಲ್ಲಿ ಏರಿರುತ್ತದೆ. ಇದರಿಂದಲೇ ಸಾಂಕ್ರಾಮಿಕಗಳಲ್ಲಿ ನರಳುವವರು ಅಷ್ಟು ಕಡಿಮೆ ಇರುವುದು. ಉರಿಶೀತ ಆಗಾಗ್ಗೆ ಮರುಕಳಿಸುವುದನ್ನು ಕಂಡಾಗ, ಇದರ ಹತೋಟಿ ಸಾಧ್ಯವಿಲ್ಲ ಎನಿಸುತ್ತದೆ. ಕೆಲವೇ ರೋಗಿಗಳಿದ್ದರೆ ಅವರನ್ನು ಕಟ್ಟುನಿಟ್ಟಾಗಿ ಬೇರೆಯಾಗಿ ಇರಿಸಬಹುದು. ಆದರೆ, ಸಾಂಕ್ರಾಮಿಕದಲ್ಲಿ ಇದು ಆಗದ ಕೆಲಸ.

ಗುಂಡಿಗೆ ರೋಗಿಗಳು, ವಯಸ್ಸಾದವರು, ಕೂಸುಗಳನ್ನು ಬಿಟ್ಟರೆ, ಬಹುಮಟ್ಟಿಗೆ ಎಲ್ಲರಲ್ಲೂ ಚೆನ್ನಾಗಿ ವಾಸಿಯಾಗುವುದು. ರಕ್ತನಾಳಗಳ ಗೋಡೆಯ ಮೇಲಿನ ಪ್ರಭಾವದಿಂದಲೋ ವಿಷಕಣದ ಜೀವವಿಷದಿಂದಲೋ (ಟಾಕ್ಸಿನ್), ವಿಷಕಣದ ಪ್ರಭಾವದಿಂದಲೋ 24–48 ತಾಸುಗಳಲ್ಲೇ ರೋಗಿ ಸಾಯಬಹುದು. ಮರುಚಲು ಸೋಂಕನ್ನು ಬೇಗನೆ ಗುರುತಿಸಿ ಚಿಕಿತ್ಸೆ ಮಾಡಿದ್ದಾದರೆ ರೋಗಿ ಚೇತರಿಸಿಕೊಳ್ಳಬಹುದು.

**ಸಾಂಕ್ರಾಮಿಕ ಉರಿಶೀತ:** ಉರಿಶೀತ ಸಾಂಕ್ರಾಮಿಕವಾಗಿ ಬಂದರೆ ಬಲು ಅಪಾಯಕರ. ಸರಕ್ಕನೆ ಕಾಣಿಸಿಕೊಂಡು ಬಹುಬೇಗನೆ ಜನರಲ್ಲಿ 25–40 ಮಂದಿಗೆ ತಾಕುವುದು. ಅಷ್ಟಾಗಿರದೆ, ಅಷ್ಟೇ ಬೇಗನೆ ಹೋಗುವುದು. ಕೆಮ್ಮು, ಉಸಿರಾಟ ಕೆಡಿಸುವುದಕ್ಕಿಂತ ನೋವು, ಸುಸ್ತು ತೊಂದರೆಕೊಡುತ್ತವೆ. ಉರಿಶೀತ ಸಾಂಕ್ರಾಮಿಕ ಆದಾಗಿನ ಹೆಚ್ಚಿನ ತೊಡುಕು, ಉಸಿರಾಟದ ಮಂಡಲದ್ದು. ಕೆಲವರಲ್ಲಿ ಪುಪ್ಪುಸುರಿತ ಮೊದಲೇ ಕಾಣಿಸಿಕೊಳ್ಳುತ್ತದೆ. ಗಾಳಿಕಾಯ್ಜೀವಿ (ನ್ಯೂಮೊಕಾಕೈ), ಗುತ್ತಿಕಾಯ್ಜೀವಿ, ಉರಿಶೀತದ ರಕ್ತಾನುರಾಗಿ (ಹೀಮೊಫಿಲಸ್ ಇನ್‍ಫ್ಲೂಯೆಂಜ), ಮತ್ತಿತರ ಏಕಾಣುಜೀವಿಗಳು ಪುಪ್ಪುಸಕ್ಕೆ ಹತ್ತಬಹುದು. ಪುಪ್ಪುಸ ಉರಿತವಾಗುವುದು ಒಂದೊಂದು ಸಾಂಕ್ರಾಮಿಕದಲ್ಲೂ ಒಂದೊಂದು ಬಗೆ. ಅಲ್ಲದೆ ಉರಿಶೀತದೊಂದಿಗೆ ಏಕಾಣುಜೀವಿಗಳ ಸೋಂಕು ಇದ್ದಷ್ಟೂ ಇದು ಹೆಚ್ಚು. ಮೂಗಿನ ಪಕ್ಕದ ಬಟವೆಯುರಿತ (ಸೈನುಸೈಟಿಸ್), ಒಳಗಿವಿಯುರಿತವೂ (ಆಟೈಟಿಸ್ ಮೀಡಿಯ) ಆಗಬಹುದು. ಬಸುರಿಯರಿಗೆ ಉರಿಶೀತ ತಾಕಿದರೆ, ಎಷ್ಟೋ ಬಾರಿ ಮೈಯಿಳಿವುದು. ಇದರಿಂದ ಬಾಣಂತಿಯರ, ಕೂಸುಗಳ ಸಾವು ಏರುತ್ತದೆ. ಒಂದು ರೀತಿಯಲ್ಲಿ ಉರಿಶೀತ ಬಸುರಿನ ಬಲು ಅಪಾಯಕರ ತೊಡಕು.

ಹಲವಾರು ನಾಡುಗಳಲ್ಲಿ ಒಂದೇ ಬಾರಿಗೆ ತಲೆದೋರುವ, ಇಲ್ಲವೇ ಒಂದು ದೇಶದಲ್ಲಿ ಸಾಂಕ್ರಾಮಿಕವಾಗಿ ತಲೆಹಾಕಿ ಬೇರೆ ದೇಶಗಳಿಗೂ ಹರಡುತ್ತ, ಪ್ರಪಂಚದ ಬಹುಪಾಲು ದೇಶಗಳಲ್ಲಿ ಹಬ್ಬುವುದೇ ಮಹಾಸಾಂಕ್ರಾಮಿಕ (ಪ್ಯಾಂಡೆಮಿಕ್) ಉರಿಶೀತ ಇಂಥ ಒಂದು ಕಾಯಿಲೆ. ಇದರಿಂದಾಗುವ ಸಾವುನೋವುಗಳಂತೂ ಅಪಾರ. ಇದರ ಜೋರೂ ತಾಕುತೊಡಕುಗಳೂ ವಿಪರೀತವಾಗಬಹುದು. ಸಾಂಕ್ರಾಮಿಕಗಳು ಆಗುವ ನಿಜವಾದ ಕಾರಣ ಗೊತ್ತಿಲ್ಲವಾದರೂ 1930ರಿಂದ ಈಚೆಗೆ ಉರಿಶೀತದ ಎ,ಬಿ ವಿಷಕಣಗಳು ರೋಗಕಾರಕಗಳಾಗಿ ಕಂಡಿವೆ.

ಉರಿಶೀತ ಸಾಂಕ್ರಾಮಿಕವಾಗುವುದು ಪುರಾತನ ಕಾಲದಿಂದಲೂ ಹೆಸರಾಗಿದೆ. ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಹಿಪೊಕ್ರೆಟೀಸ್ ಒಂದು ಸಾಂಕ್ರಾಮಿಕವನ್ನು ಉರಿಶೀತವೆಂದು ಹೆಸರಿಟ್ಟರೂ 1610ರ ಸಾಂಕ್ರಾಮಿಕದಲ್ಲೇ ಮೊದಲು ಸರಿಯಾಗಿ ವರ್ಣಿಸಿದ್ದು. ಆಮೇಲೆ ಬಂದು ಹೋದ ಸಾಂಕ್ರಾಮಿಕಗಳೆಲ್ಲ ಒಂದೇ ತೆರನಾಗಿದ್ದರೂ ಆಗುವ ಕಾಲ, ತೀವ್ರತೆಗಳಲ್ಲಿ ಬೇಕಾದಷ್ಟು ವ್ಯತ್ಯಾಸ ತೋರಿದವು. 1889–90, 1918ರ ಸಾಂಕ್ರಾಮಿಕಗಳ ವಿವರಗಳು ದೊರೆತಿವೆ. ಈ ಸಾಂಕ್ರಾಮಿಕಗಳೆಲ್ಲ ಬಹುಪಾಲು ರಷ್ಯದಲ್ಲಿ ಹುಟ್ಟಿ ಸಂಚಾರ ದಾರಿಗಳ ಮೂಲಕ ಹರಡಿ ಬಂದವೆಂಬ ನಂಬಿಕೆಯಿತ್ತು. ಸಂಚಾರಗಳು ಬರುಬರುತ್ತ ಹೆಚ್ಚಿಸಿಕೊಂಡ ಮೇಲೆ ಯಾವೊಂದು ಮೂಲದಿಂದಲೇ ಆಗಲಿ ಸಾಂಕ್ರಾಮಿಕ ಹುಟ್ಟಿ ಹರಡಿತೆಂದು ಹೇಳುವುದು ಕಷ್ಟವಾಯಿತು. 1918ರ ಸಾಂಕ್ರಾಮಿಕ ಪ್ರಪಂಚದಲ್ಲಿ ಹರಡಿಕೊಂಡ ಕಾಲಕ್ರಮವನ್ನು ಭೂಪಟದ ಚಿತ್ರದಲ್ಲಿ ತಿಂಗಳುಗಳಾಗಿ ಸೂಚಿಸಿದೆ. ಆ ವರ್ಷದ ಹೊತ್ತಿಗೆ ಒಂದೇ ತಿಂಗಳಲ್ಲಿ ಉತ್ತರಾರ್ಧ ಗೋಳವೆಲ್ಲ ಉರಿಶೀತಕ್ಕೆ ಸಿಲುಕಿತ್ತು. ಆಸ್ಟ್ರೇಲಿಯ ತೆರನ ಬಿಡಿಯಾಗಿರುವ ನಾಡುಗಳು ನಿಧಾನವಾಗಿ ಸಿಕ್ಕಿಬಿದ್ದವು. ಸಾಂಕ್ರಾಮಿಕ ಜೋರಾದಾಗ ಬೇಗನೆ ಎಲ್ಲೆಲ್ಲೂ ಕಿಚ್ಚಿನಂತೆ ಹರಡುವುದು ಇದರಿಂದ ಗೊತ್ತಾಗುತ್ತದೆ. ಮೆಲುಪಿನದಾಗಿದ್ದಾಗಲೂ ಹೀಗೇ ಇರುವುದು.

ಉರಿಶೀತದ ಸಾಂಕ್ರಾಮಿಕ ಜನರಲ್ಲಿ ಬಹಳ ಮಂದಿಯನ್ನು ಕಾಡಿಸುವುದು. ಸಾಮಾನ್ಯ ಸಾಂಕ್ರಾಮಿಕದಲ್ಲಿ ನೂರಕ್ಕೆ 10 ಇದ್ದುದು ಮಹಾಸಾಂಕ್ರಾಮಿಕವಾದಾಗ 30–40ಕ್ಕೆ ಏರಿತು. ಇದು ಬೆಳೆದವರಲ್ಲಿ ಹೆಚ್ಚೆಂದು ತೋರಿದರೂ ಎಳೆಯರಲ್ಲೇ ಹೆಚ್ಚು. ಅಂತೂ ಕಿರಿಯರಲ್ಲೇ ವಿಪರೀತ. ಇಷ್ಟಾದರೂ ಬೇರಾವ ತೊಡಕುಗಳೂ ಹತ್ತದೆ ಕೇವಲ ಇದರಿಂದಲೇ ಸಾಯುವವರು ತೀರ ಕಡಿಮೆ. ಆದರೆ, ಪುಪ್ಪುಸ ಉರಿತದ ತೆರನ ತೊಡಕುಗಳಿಗೆ ಬಲಿಯಾಗುವವರು ಹೆಚ್ಚು. ಗುಂಡಿಗೆಯ, ಮತ್ತಿತರ ರೋಗಗಳಿಂದ ನರಳುವವರಲ್ಲಿ, ಅದರಲ್ಲೂ ವಯಸ್ಸಾದವರಲ್ಲಿ ಇನ್ನೂ ಹೆಚ್ಚು. 1918ರ ಉಗ್ರ ಸಾಂಕ್ರಾಮಿಕದಲ್ಲಿ ಬಲಿಯಾದಷ್ಟು ಮಂದಿ ಪ್ರಪಂಚದಲ್ಲಿ ಇನ್ನೆಂದೂ ಆಗಿಲ್ಲ. ಕೆಲವೇ ತಿಂಗಳಲ್ಲಿ 2 ಕೋಟಿಗೂ ಹೆಚ್ಚು ಮಂದಿ ಬಲಿಯಾದ ಲೆಕ್ಕ ಸಿಕ್ಕಿದೆ. ಇದರ 50 ಪಟ್ಟು ಮಂದಿ ರೋಗದಿಂದ ನರಳಿದರು. ಭಾರತದಲ್ಲೇ 1 ಕೋಟಿ ಜನರು ಅಮೆರಿಕದಲ್ಲಿ 5–48 ಲಕ್ಷ ಮಂದಿ ಸತ್ತರು. 1889–90ರ ಮಹಾಸಾಂಕ್ರಾಮಿಕಕ್ಕೆ ಇದರ ಹತ್ತರಲ್ಲೊಂದು ಪಾಲೂ ಬಲಿಯಾಗಲಿಲ್ಲ.

ಇದು ಚಳಿಗಾಲದಲ್ಲೇ ಬಲು ವಿಶೇಷವಾಗಿ ಬರುವುದಾದರೂ ಸಾಂಕ್ರಾಮಿಕ ಜೋರಾಗಿದ್ದರೆ ಗೊತ್ತಾದ ಕಾಲದಲ್ಲೇ ಬರಬೇಕಿಲ್ಲ. ಚಳಿ ದೇಶಗಳಲ್ಲಿನಂತೆ ಉಷ್ಣವಲಯದಲ್ಲೂ ಅದೇ ಕಾಲಗಳಲ್ಲಿ ಆಗುವುದು. ಒಂದೇ ವರ್ಷದಲ್ಲಿ ಪ್ರಪಂಚದ ದಕ್ಷಿಣಾರ್ಧದಲ್ಲಿ ಒಂದು ಬಾರಿ, ಇನ್ನೊಮ್ಮೆ ಉತ್ತರಾರ್ಧದಲ್ಲಿ ಕಾಣಿಸಿಕೊಳ್ಳುವುದರಿಂದಲೂ ಕೆಲವೆಡೆಗಳಿಗೆ ಮಿತಿಗೊಂಡಿರುವುದರಿಂದಲೂ ಉರಿಶೀತ ಜನರಲ್ಲಿ ಯಾವಾಗಲೂ ಇದ್ದು, ಇದಕ್ಕೆ ಈಡಾಗುವ ಮಂದಿ ಬಹಳವಾದಾಗ ಮಾತ್ರ ಸಾಂಕ್ರಾಮಿಕ ಆಗಬಹುದು.

ಉರಿಶೀತದ ಬಿ ವಿಷಕಣದ ಸಾಂಕ್ರಾಮಿಕ 4–5 ವರ್ಷಗಳಿಗೊಮ್ಮೆ ಮರುಕಳಿಸಿ ಎಲ್ಲೆಲ್ಲೂ ಹೆಚ್ಚಾಗಿ ಹರಡಿಕೊಳ್ಳುತ್ತದೆ. ಆದರೆ ಎ ಬಗೆಯದರಷ್ಟು ಬಾರಿ ಕಾಣಿಸಿಕೊಳ್ಳದು. ಇದರಿಂದ ಸಾವೂ ಕಡಿಮೆ. ಕೆಲವು ವರ್ಷಗಳಿಗೊಮ್ಮೆ ಇವೆರಡು ಬಗೆಯವೂ ತಲೆಹಾಕುವುದರಿಂದ, ಮಹಾಸಾಂಕ್ರಾಮಿಕ ಮೂರು ಅಲೆಗಳಲ್ಲಿ ಬರುವುದು ಹೆಚ್ಚಲ್ಲ. ಮೊದಲು 1880–90ರ ಚಳಿಗಾಲದಲ್ಲಿ ಸಾಂಕ್ರಾಮಿಕವಾಗಿ ಬಂದುದು, ಎರಡನೆಯ ಅಲೆ ಇನ್ನೂ ಬಲವಾಗಿ ಒಂದೂಕಾಲು ವರ್ಷಕಾಲ ಬಿಟ್ಟು 1891–92ರ ವಸಂತ ಕಾಲದಲ್ಲಿ ಬಂದರೂ ಅದೇ ಚಳಿಗಾಲದಲ್ಲಿ ಬಂದ ಮೂರನೆಯ ಅಲೆ ಅಷ್ಟು ಜೋರಾಗಿರಲಿಲ್ಲ. ಹಾಗೇ 1918ರ ವಸಂತ, ಬೇಸಗೆ ಕಾಲಗಳಲ್ಲಿ ಪ್ರಪಂಚದಲ್ಲಿ ಎಲ್ಲೆಲ್ಲೂ ಮೆಲುವಾಗಿ ಹರಡಿದ ಸಾಂಕ್ರಾಮಿಕ ಕಳೆದ ಕೂಡಲೆ, ಶರತ್ಕಾಲದಲ್ಲಿ ತುಂಬ ತೀವ್ರತಮವಾಗಿತ್ತು. ಮೊದಲ ಬಾರಿಯ ಸೋಂಕಿನಿಂದ ರೋಗಿಗಳಿಗೆ ರೋಗ ತಡೆವ ಬಲ ಬಂದಿರಬೇಕೆಂಬ ಅನುಮಾನವಿದೆ.

ರಕ್ತದೊಲವಿನ ಉರಿಶೀತಜೀವಿ, ಉರಿಶೀತದ ದಂಡಾಣುಜೀವಿಯನ್ನು (ಬೆಸಿಲಸ್) ರಿಚರ್ಡ್ ಫೇಫರ್ ವರ್ಣಿಸಿದ. ಇದು ಹಲವಾರು ರೂಪಗಳಲ್ಲಿದ್ದು ರಕ್ತದ ಮೇಲೆ ಬದುಕಿರುತ್ತದೆ. ಬಹುಕಾಲ, ಉರಿಶೀತಕ್ಕೆ ಇದೇ ಕಾರಣ ಎಂದಿತ್ತು. 1918ರ ಮಹಾಸಾಂಕ್ರಾಮಿಕದಲ್ಲಿ ಇದರ ಪಾತ್ರ ಮತ್ತೆ ಆಳವಾದ ಪರೀಕ್ಷೆಗೀಡಾಯಿತು. ಉಳಿದವೆಲ್ಲಕ್ಕಿಂತಲೂ ಈ ಏಕಾಣುಜೀವಿಯ ಪಾತ್ರ ಹೆಚ್ಚಿದ್ದರೂ ಇದೇ ಉರಿಶೀತದ ಮೂಲಕಾರಕವಾಗಿ ಕಾಣಲಿಲ್ಲ. ಸೋಸಬಹುದಾದ ವಿಷಕಣ ಕಾರಣ ಇರಬಹುದೆಂಬ ಅಭಿಪ್ರಾಯ ಭದ್ರವಾಯಿತು. ಆಗ ಮುಂದುವರಿದ ದೇಶಗಳಲ್ಲೆಲ್ಲ ಈ ಬೇನೆಯನ್ನು ಜನರಿಗೂ ಪ್ರಯೋಗಾಲಯದ ಪ್ರಾಣಿಗಳಿಗೂ ಹತ್ತಿಸುವುದು ಕೈಗೂಡಲಿಲ್ಲ. ಬೇನೆ ಹತ್ತಿದವರಲ್ಲೂ ರೋಗ ಕಾರಣವಾದ ಯಾವ ಜೀವಿಯೂ ಸಿಗಲಿಲ್ಲ. ಆದ್ದರಿಂದ 1918ರ ಸಾಂಕ್ರಾಮಿಕದ ಕಾರಣ ಖಚಿತವಾಗಲಿಲ್ಲ. ಹಂದಿಯಲ್ಲಿ ಉರಿಶೀತಕ್ಕೆ ಕಾರಣವಾಗಿ ಒಂದು ವಿಷಕಣವನ್ನು ತೋರಿಸಿದವ ಅಮೆರಿಕದ ಪೋಪ್ (1931). ಕೊನೆಗೆ ಉರಿಶೀತ ರೋಗಿಗಳ ಗಂಟಲಿಂದ ತೆಗೆದ ವಿಷಕಣಗಳಿಂದ ತುಬ್ಬೆಕ್ಕುಗಳಲ್ಲಿ ಉರಿಶೀತ ಆಗುವುದನ್ನು ಸ್ಮಿತ್, ಆಂಡ್ರೂಸ್, ಲೆಯ್ಡ್‍ಲಾ (1933) ಮಾಡಿತೋರಿಸಿದರು. ಚಿಟ್ಟಿಲಿಗಳಿಗೂ ಹತ್ತಿಸಬಹುದೆಂದು ಕಂಡ ಉಳಿದವರೂ ಇದನ್ನು ಸರಿಗಂಡರು. ಇವೆರಡು ಪ್ರಾಣಿಗಳೂ ಸೋಂಕು ವಿಪರೀತವಾದಾಗ ಏಕಾಣುಜೀವಿಯಿಂದಲ್ಲದೆ ಪುಪ್ಪುಸ ಉರಿತದಿಂದ ಸತ್ತವು. ಉಸಿರಲ್ಲಿ ಸೇವಿಸಿದಾಗ ಸೋಂಕು ಹತ್ತಿತು.

ಇತ್ತೀಚಿನ ಸಾಂಕ್ರಾಮಿಕಗಳಲ್ಲಿ, 1933ರದಕ್ಕೆ ಉರಿಶೀತದ ಎ ವಿಷಕಣ ಕಾರಣವಾಗಿತ್ತು. ಆಮೇಲೆ, 2–3 ವರ್ಷಗಳಿಗೊಂದು ಬಾರಿ ಇದು ಸಾಂಕ್ರಾಮಿಕ ಆಗುತ್ತಿತ್ತು. ಸಾಂಕ್ರಾಮಿಕಗಳು ಹರಡುವುದು ಒಂದೊಂದು ಬಾರಿಯೂ ಬೇರೆ ಬೇರೆ ಆಗಿತ್ತು. 1936–37, 1940–41ರಲ್ಲಿ ಮಾತ್ರ ಪ್ರಪಂಚದಲ್ಲೆಲ್ಲ ಹಬ್ಬಿತ್ತು. ಚಳಿದೇಶಗಳಲ್ಲಿ ಇದರ ಸಾಂಕ್ರಾಮಿಕಗಳು ಚಳಿಗಾಲದಲ್ಲಿ ಸರಕ್ಕನೆ ಬಂದು ಕೆಲ ದಿನಗಳಿದ್ದು ಹೋಗುತ್ತಿದ್ದವು. ಏನಿಲ್ಲವೆಂದರೂ ಇವುಗಳಲ್ಲಿ ನರಳಿದ ಜನಸಂಖ್ಯೆ ಶೇ. 8–15, ಸಾಂಕ್ರಾಮಿಕವಾಗಿ ಹಬ್ಬಿಕೊಳ್ಳುವ ಮೊದಲು ಉರಿಶೀತ ಅಲ್ಲಲ್ಲಿ ಸಣ್ಣದಾಗಿ ತಲೆಹಾಕುತ್ತಿದ್ದುದೂ ಉಂಟು. ಸಾವು ಕೇವಲ ಸಾವಿರಕ್ಕೊಂದು ಇತ್ತು. ಆ ಕಾಲದಲ್ಲಿ ಪುಪ್ಪುಸ ಉರಿತ. ಮತ್ತಿತರ ರೋಗಗಳಿಂದ ಸಾಯುವವರೂ ಹೆಚ್ಚಿದ್ದರು.

1957 ಏಪ್ರಿಲಿನಲ್ಲಿ ಹಾಂಕಾಂಗಿನ ನಿರಾಶ್ರಿತರಲ್ಲಿ ಕಾಣಿಸಿಕೊಂಡ ಏಷ್ಯದ ಉರಿಶೀತದ ಸಾಂಕ್ರಾಮಿಕ ಬೇಗನೆ ಎಲ್ಲೆಡೆಗೂ ಹರಡಿ ಜೂನ್ ಹೊತ್ತಿಗೆ ಪ್ರಪಂಚವನ್ನೇ ಸುತ್ತು ಹಾಕಿತು. ಸಾಗಣೆಯ ದಾರಿಗಳಲ್ಲಿ ಇದು ಎದ್ದು ಕಾಣುತ್ತ, ಜನಸಂದಣಿ ಇರುವೆಡೆ ಬಲವಾಗಿತ್ತು. ಸಾಮಾನ್ಯವಾಗಿ ಅಷ್ಟು ಜೋರಿನದಲ್ಲದಿದ್ದರೂ ಉಸಿರಾಟದ ರೋಗಗಳಿಂದ ಹೆಚ್ಚು ಮಂದಿ ಸತ್ತರು. 15–30 ವರ್ಷದವರೇ ಹೆಚ್ಚಾಗಿ ಬಲಿಯಾದವರು. ಪ್ರಪಂಚದಲ್ಲಿ ಎಲ್ಲೆಲ್ಲೂ ಹರಡಿದರೂ ರೋಗ ಬಹಳ ಮಂದಿಗೆ ತಗುಲಿ, ಅಷ್ಟಾಗಿ ಮಾರಕವಾಗಿರಲಿಲ್ಲ. ಉರಿಶೀತ ಹೆಚ್ಚಿದಾಗ ಜನರು ಎಲ್ಲೂ ಗುಂಪು ಸೇರಬಾರದೆಂಬ ಅಂಶ ಆಗ ಸ್ಪಷ್ಟವಾಯಿತು. 1957ರ

ಸಾಂಕ್ರಾಮಿಕವನ್ನು ಚೆನ್ನಾಗಿ ಎದುರಿಸಲು ಅಮೆರಿಕದಲ್ಲಿ ಹೆಚ್ಚಿನ ಯತ್ನಗಳಾದವು. ಗೊತ್ತಾದ ಲಸಿಕೆಯನ್ನು ಮೊದಲೇ ಹೇರಳವಾಗಿ ತಯಾರಿಸಿ ಇಟ್ಟುಕೊಂಡಿದ್ದರು. ಒಳ್ಳೆಯ ಬಲವಿರುವ ಲಸಿಕೆ ಹಾಕಿದಾಗ ಶೇ. 80 ಮಂದಿಗೆ ಹತ್ತದಂತೆ ತಡೆಯುವುದು ಸಾಧ್ಯವಾಯಿತು. ರೋಗದಿಂದ ನರಳುವವರ, ಸಾಯುವವರ ಸಂಖ್ಯೆ ಇಳಿಯಿತು (**ನೋಡಿ– ಏಕಾಣುಜೀವಿಕ; ಸೋಂಕಿನ–ರೋಗಗಳು; ಕೈಗಾರಿಕಾ–ವೈದ್ಯ; ನೆಗಡಿ**). (ಕೆ.ಎಸ್.ಎ.;ಡಿ.ಎಸ್.ಎಸ್.)

**ಉರುಗುಗೊರಲು:** ಯಾವ ಕಾರಣದಿಂದಲಾದರೂ ಕತ್ತನ್ನು ಸೊಟ್ಟವಾಗಿ ಇರಿಸಿಕೊಂಡಿದ್ದು ಅತ್ತಿತ್ತ ಆಡಿಸದಂತೆ ಇರುವಿಕೆ (ರೈ ನೆಕ್), ಕತ್ತು ಹಿಡಿದಂತಿರಬಹುದು, ಇಲ್ಲವೇ ಸೆಡೆತುಕೊಂಡಿರಬಹುದು. ಹಿಡಿದಂತಿರುವ ಸೊಟ್ಟಕತ್ತು ಹುಟ್ಟುತ್ತಲೇ ಬಂದಿರುವುದು. ಅಂತೂ ಎಳೆತನದಲ್ಲೇ ಹೀಗಾಗಿರುವುದಾದರೂ ಹಸುಗೂಸಿನಲ್ಲಿ ಕೊರಳು ಅಷ್ಟಾಗಿ ಬೆಳೆಯದೆ ಮೋಟಾಗಿರುವುದರಿಂದ ಆಗ ಸುಲಭವಾಗಿ ಗೊತ್ತಾಗದಿರಬಹುದು. ಇಲ್ಲಿ ಮುಖ್ಯವಾಗಿ ತಲೆಯನ್ನು ಒಂದು ಪಕ್ಕಕ್ಕೆ ಬಾಗಿಸಿ ಗಲ್ಲವನ್ನು ಇನ್ನೊಂದು ಪಕ್ಕಕ್ಕೆ ತಿರುಗಿಸಿ ತಲೆವಾಲುವಂತೆ ಮಾಡುವ ಸ್ನಾಯುವಾದ ಎದೆ ಎಲುಬುಚೂಚುಕಂದ (ಸ್ಟರ್ನೊಮ್ಯಾಸ್ಟಾಯ್ಡ್) ಮೊಟಕಾಗಿ ಬಿರುಸಾಗಿ ಬಿರಿಸಿಕೊಂಡು, ಮುಟ್ಟಿದರೆ ಕಡ್ಡಿಯಂತೆ ಗಡುಸಾಗಿ ತೋರುವುದು. ಇದಕ್ಕೆ ಸಂಬಂಧಿಸಿದ ಅಕ್ಕಪಕ್ಕದ ಕೂಡಿಸುವ ಊತಕದ ಬೆಳವಣಿಗೆಯೂ ಕುಂದಿರುವುದು. ಹೀಗಾಗುವುದರ ಸರಿಯಾದ ಕಾರಣ ಗೊತ್ತಿಲ್ಲ. ಹೆರಿಗೆ ಆಗುವಾಗಿನ ಅಪಾಯ ಪೆಟ್ಟುಗಳಿಂದ ಆ ಸ್ನಾಯು ಹಾಗೆ ಬಿರುಸಾಗಿ ಮುದುರಿಕೊಳ್ಳುವುದೆಂಬ ಒಂದು ಅಭಿಪ್ರಾಯವಿದೆ. ಎಳೆಗೂಸಿನಲ್ಲೇ ಕೊರಳಿನ ಸ್ನಾಯುಗಳ ಅರನಾರಿ (ಪಾರ್ಶ್ವವಾಯು, ಲಕ್ವ, ಪೆರ್‍ಯಾಲಿಸಿಸ್) ಆಗುವುದು ಕಾರಣವೆಂದು ಕೆಲವರ ಮತವಿದೆ. ಇದಕ್ಕೆ ಕುಮ್ಮಕ್ಕಾಗಿ ಸೊಟ್ಟಕತ್ತು ಬಾಗಿರುವ ಪಕ್ಕದ ಮೊಗ ಚೆನ್ನಾಗಿ ಬೆಳೆಯದಿರುವುದು. ಇಂಥ ಸೊಟ್ಟ ಕತ್ತನ್ನು ಸರಿಪಡಿಸುವ ಒಂದು ಉಪಾಯ ಶಸ್ತ್ರಕ್ರಿಯೆಯಿಂದ ಆ ಸ್ನಾಯುವನ್ನು ಕತ್ತರಿಸಿ ಬಿಡಿಸುವುದು. ಆಗ ಸೊಟ್ಟಕತ್ತು ನೆಟ್ಟಗಾಗಿ ಸರಾಗವಾಗಿ ಆಡಿಸಬಹುದು. ಆದರೆ ತೀರ ಎಳೆಯದರಲ್ಲೇ ಹೀಗೆ ಮಾಡದಿದ್ದಲ್ಲಿ ಮೊಗದ ಅಸಮರೂಪ (ಎಸಿಮೆಟ್ರಿ) ಹಾಗೇ ಉಳಿದುಬಿಡಬಹುದು. ಶಸ್ತ್ರಕ್ರಿಯೆ ಆದಮೇಲೆ ಇನ್ನೊಂದು ಪಕ್ಕದ ಸ್ನಾಯುಗಳಿಗೆ ಬಲಬರುವ ತನಕ ತಲೆಯನ್ನು ಎದುರು ಕಡೆಗೆ ಕೆಲಕಾಲ ಎಳೆದಿಟ್ಟಿರಬೇಕಾಗುತ್ತದೆ.

ಸೆಡೆತದಿಂದಾದ ಸೊಟ್ಟಕತ್ತಿಗೆ ಒಂದು ಪಕ್ಕದ ಸ್ನಾಯುಗಳ ಮಿತಿಮೀರಿದ ಎಳೆತವೇ ಕಾರಣ. ಈ ಸೆಡೆತ ಬಿಟ್ಟು ಬಿಟ್ಟು ಬರಬಹುದು; ಇಲ್ಲವೇ ಎಡೆಬಿಡದೆ ಇರಬಹುದು. ಆಳವಾದ ಗಾಯವಾಗಿ ಕಲೆಗಟ್ಟುವುದು, ಕೊರಳಿನ ಬೆನ್ನೆಲುಬುಗಳ ರೋಗಗಳು, ಹಾಲುರಸ ಗ್ರಂಥಿಗಳ ಉರಿತ, ಮೆಂಡಿಕೆಯುರಿತ (ಟಾನ್ಸಿಲೈಟಿಸ್), ಕಣ್ಣಿನ ನೋಟದ ವ್ಯತ್ಯಾಸ, ಕೀಲುವಾತ (ರುಮ್ಯಾಟಿಸಂ), ಕೊರಳಿನ ಗ್ರಂಥಿಗಳ ಊತ, ಗಂಟಲ ಹಿಂದುಗಡೆ ಗೋಡೆಯಲ್ಲಿ ಏಳುವ ಕುರು, ಕಿರ್ಮಿದುಳಿನ (ಸೆರಿಬೆಲಂ) ಗಂತಿಗಳು ಮುಖ್ಯಕಾರಣಗಳು; ಉನ್ಮಾದದಲ್ಲೂ (ಹಿಸ್ಟೀರಿಯ) ಚಳಿಗೊಡ್ಡಿದ್ದರಿಂದಲೂ ಕೊರಳಿನ ಬೆನ್ನುಲುಬುಗಳ ಉರುಗು ಗೊರಲಾಗ ಬಹುದು, ಕ್ಷಯರೋಗದಿಂದಲೂ ಆಗುವುದು ಸಾಮಾನ್ಯ. (ಡಿ.ಎಸ್.ಎಸ್.)

**ಉರುಗ್ವೇ:** ದಕ್ಷಿಣ ಅಮೆರಿಕದ ಅತಿಪುಟ್ಟ ಸ್ವತಂತ್ರದೇಶ. ಇದರ ವಿಸ್ತೀರ್ಣ 1,77,508 ಚ.ಕಿಮೀ. ದಕ್ಷಿಣೋತ್ತರವಾಗಿ 530 ಕಿಮೀ. ಉದ್ದ ಮತ್ತು ಪೂರ್ವ ಪಶ್ಚಿಮವಾಗಿ 480 ಕಿಮೀ. ಅಗಲವಾಗಿದೆ. ಉತ್ತರದಲ್ಲಿ ಬ್ರೆಜಿಲ್, ದಕ್ಷಿಣದಲ್ಲಿ ರಿಯೊ ದೆ ಲಾ ಪ್ಲಾಟಾ ನದಿಯ ಅಳಿವೆ, ಪಶ್ಚಿಮದಲ್ಲಿ ಉರುಗ್ವೇ ನದಿ, ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರ –ಇವು ದೇಶದ ಮೇರೆಗಳು.

**ಮೇಲ್ಮೈ ಲಕ್ಷಣ:** ಈ ದೇಶದ ದಕ್ಷಿಣ ಭಾಗ ಬ್ರೆಜಿಲಿಯನ್ ಪ್ರಸ್ಥಭೂಮಿಯ ಕೊನೆಯಾದ್ದರಿಂದ ಇಲ್ಲಿ ಹಲವಾರು ಪುಟ್ಟ ಬೆಟ್ಟಗಳಿವೆ. ಕರಾವಳಿಯ ಉದ್ದಕ್ಕೂ ಕಡಲುಬ್ಬರದಿಂದಾದ ಸರೋವರಗಳೂ ಸೈಕತ ಗುಡ್ಡಗಳೂ ಸಾಮಾನ್ಯ. ಈ ಭಾಗದಲ್ಲಿ ಹರಿಯುವ ನದಿಗಳ ದಡಗಳು ಎತ್ತರವಿಲ್ಲ. ಉತ್ತರಾರ್ಧದ ಪ್ರದೇಶ ಹೆಚ್ಚು ವೈವಿಧ್ಯಮಯ. ಇಲ್ಲಿ ಕಂದರಗಳೂ ತಗ್ಗಿನ ಪ್ರಸ್ಥಭೂಮಿಗಳೂ ವಿಶಾಲ ಕಣಿವೆಗಳೂ ಇವೆ. ಆದರೆ ಒಟ್ಟಿನಲ್ಲಿ ಈ ದೇಶದ ಯಾವ ಭಾಗವೂ 610ಮೀ. ಗಿಂತ ಎತ್ತರವಾಗಿಲ್ಲ. ಕರಾವಳಿ ಪ್ರದೇಶ ಮತ್ತು ಒಳನಾಡಿನ ತಗ್ಗು ಪ್ರದೇಶಗಳೆಂದು ವಿಂಗಡಿಸಬಹುದು. ಎರಡನೆಯ ಪ್ರದೇಶವು ಒಟ್ಟು ಭೌಗೋಳಿಕ ಪ್ರದೇಶದಲ್ಲಿ 4/5 ಭಾಗವನ್ನಾವರಿಸಿದ ವಿಸ್ತಾರವಾದ ಭಾಗ.

ಉರುಗ್ವೇಯಲ್ಲೇ ಹರಿಯುವ ದೊಡ್ಡ ನದಿಗಳು ಯಾವುವೂ ಇಲ್ಲ. ರಿಯೊನೇಗ್ರೊ ಅತ್ಯಂತ ದೊಡ್ಡದು. ಇದರ ಅಧೋಕೆಳಭಾಗ ಮಾತ್ರವೇ ನೌಕಾಸಂಚಾರ ಯೋಗ್ಯ. ಉಳಿದ ನದಿಗಳಲ್ಲಿ ಸಣ್ಣಪುಟ್ಟ ನೌಕೆಗಳು ಯಾನ ಮಾಡಬಹುದಷ್ಟೇ. ರಿಯೊನೇಗ್ರೊವನ್ನು ಬಿಟ್ಟರೆ ಹೆಸರಿಸಬಹುದಾದ ಉಳಿದ ನದಿಗಳೆಂದರೆ ಸಾಂತಾಲೂಸಿಯಾ, ಕ್ವೀಗ್ವೆರಿ ಮತ್ತು ಸಿಬೊಲಾಟಿ. ಉರುಗ್ವೇಯ ಪಶ್ಚಿಮದಂಚಿನಲ್ಲಿ ಹರಿಯುವ ಉರುಗ್ವೇ ನದಿಯ ಮೇಲೆ ಅದರ ಮುಖದಿಂದ ಪೈಸಾಂಡೂ ನಗರದವರೆಗೆ ಜಹಜು ಸಂಚಾರಾವಕಾಶವುಂಟು. ಅಲ್ಲಿಂದ ಮುಂದೆ ಸಣ್ಣ ನೌಕೆಗಳು ಸಾಲ್ಟೊ ವರೆಗೂ ಹೋಗಿ ಬರುತ್ತವೆ.

**ವಾಯುಗುಣ:** ಉರುಗ್ವೇಯದು ಸಮಶೀತೋಷ್ಣ ವಾಯುಗುಣ ದಕ್ಷಿಣಾರ್ಧ ಗೋಳದಲ್ಲಿರುವುದರಿಂದ ಇಲ್ಲಿ ಜನವರಿ–ಫೆಬ್ರವರಿಗಳಲ್ಲಿ ಬೇಸಿಗೆಯ ಹವಾಗುಣ ಇರುತ್ತದೆ. ಆಗಿನ ಸರಾಸರಿ ಉಷ್ಣತೆ 22° ಸೆ. (ಸು. 71°ಫ್ಯಾ.). ಜುಲೈ ತಿಂಗಳು ಇಲ್ಲಿ ಅತ್ಯಂತ ಚಳಿ. ಆಗಿನ ಉಷ್ಣತೆ 10° ಸೆಂ.ಗ್ರೇ. (50° ಫ್ಯಾ.) ಕರಾವಳಿಯಲ್ಲಿ ಮಂಜು ಬೀಳುವುದಿಲ್ಲ. ವರ್ಷದುದ್ದಕ್ಕೂ ದಿನದಿನವೂ ಹವಾಗುಣ ಬದಲಾಗುತ್ತಿರುತ್ತದೆ. ಝಂಝಾವಾತದ ಕೇಂದ್ರಗಳು ಈ ದೇಶದ ಮೂಲಕ ಹಾದು ಹೋಗುವುದೇ ಈ ಪವನಚಾಂಚಲ್ಯಕ್ಕೆ ಮುಖ್ಯಕಾರಣ. ಉತ್ತರದ ಉಷ್ಣಮಾರುತಗಳು ಥಟ್ಟನೆ ಅದೃಶ್ಯವಾಗಿ, ನೈರುತ್ಯದ ಚಳಿಗಾಳಿ ಬೀಸಿ ಉಷ್ಣಮಾಪಕದ ಪಾದರಸ ಕುಸಿಯುವುದು ಸಾಮಾನ್ಯ.

ಈ ಕಾರಣದಿಂದ ಉರುಗ್ವೇಯಲ್ಲಿ ನಿಶ್ಚಿತವಾದ ಮಳೆಗಾಲವಾಗಲಿ ಒಣಹವೆಯ ಬೇಸಿಗೆ ಋತುವಾಗಲಿ ಇಲ್ಲ. ಏಪ್ರಿಲ್–ಮೇ ತಿಂಗಳುಗಳಲ್ಲಿ ಗರಿಷ್ಠ ಮಳೆ ಬೀಳುತ್ತದೆ.

ಚಳಿಗಾಲದಲ್ಲೂ ಮಳೆಯುಂಟು. ಸಮುದ್ರದೆಡೆಯಿಂದ ದೂರದೂರ ಸಾಗಿದಂತೆ ಮಳೆಯ ಪರಿಮಾಣ ಕಡಿಮೆ, ಆದರೆ ಎಲ್ಲೂ ಅನಾವೃಷ್ಟಿಯಿಲ್ಲ. ಬೇಸಿಗೆಯಲ್ಲಿ ಗುಡುಗು ಸಿಡಿಲುಗಳ ಆರ್ಭಟ ಹೆಚ್ಚು.




**ಸ್ವಾಭಾವಿಕ ಸಸ್ಯ, ಪ್ರಾಣಿವರ್ಗ:** ಎತ್ತರವಾದ ಹುಲ್ಲಿನ ಬೆಳೆ ಎಲ್ಲೆಲ್ಲೂ ಸಾಮಾನ್ಯವಾಗಿದೆ. ಸ್ವದೇಶೀ ಪರದೇಶೀ ವೃಕ್ಷಗಳೂ ಹರಡಿವೆ. ಇವು ನದಿಗಳ ಕೆಳ ಪ್ರದೇಶಗಳಲ್ಲಿ ಹೆಚ್ಚು ಸಾಂದ್ರ ಆಲ್ಡರ್, ಆ್ಯಲೊ (ಕತ್ತಾಳೆ ಜಾತಿ), ಪಾಪ್ಲರ್, ಅಕೇಸಿಯ, ವಿಲೊ, ಯೂಕಲಿಪ್ಟಸ್— ಇವು ಮುಖ್ಯ ಮರಗಳು. ತಾಳೆಜಾತಿಯ ಮರಗಳು ಶುದ್ಧ ಸ್ವದೇಶಿ. ಕಣಿವೆಗಳಲ್ಲೂ ಹುಲ್ಲುಗಾವಲುಗಳಲ್ಲೂ ಬಣ್ಣ ಬಣ್ಣದ ನಸುಗಂಪಿನ ಹೂಗಿಡಗಳು ಅಸಂಖ್ಯಾತ.

ಜನವಸತಿ ಇರುವ ಪ್ರದೇಶಗಳಲ್ಲೆಲ್ಲ ವನ್ಯಮೃಗಗಳು ಬಹುಮಟ್ಟಿಗೆ ಅದೃಶ್ಯವಾಗಿವೆ. ಅಮೆರಿಕನ್ ಉಷ್ಟ್ರಪಕ್ಷಿಯೂ ಈಗ ವಿರಳ. ಸಿಂಹ, ಚಿರತೆ. ನರಿ, ಜಿಂಕೆ, ಕಾಡುಬೆಕ್ಕು, ನೀರುಹಂದಿ, ಆರ್ಮಡಿಲೊ–ಇವು ಇಲ್ಲಿನ ಕೆಲವು ಚತುಷ್ಪಾದಿ ಪ್ರಾಣಿಗಳು, ರಣಹದ್ದು, ನಾಡಕಾಗೆ, ಉದ್ದ ತೋಕೆಯ ಸಣ್ಣಗಿಳಿ, ಬಿಲವಾಸಿ ಗೂಬೆ, ಕೆಂಪುಹಕ್ಕಿ, ಝೇಂಕಾರದ ಹಕ್ಕಿ ಇವನ್ನೂ ಇಲ್ಲಿ ಕಾಣಬಹುದು. ಚೇಳು ವಿರಳ; ಆದರೆ ದೊಡ್ಡದು. ಜೇಡಗಳು ಸಾಮಾನ್ಯ, ವಿಷಪೂರಿತ ಹಲ್ಲಿ, ಆಮೆ, ತಲೆಯ ಮೇಲೆ ಸಿಲುಬೆಯ ಗುರುತಿರುವ ಭಯಂಕರ ವಿಷಸರ್ಪ. ಗಿಲಿಕೆ ಹಾವು ಇವು ಇಲ್ಲಿನ ಪ್ರಾಣಿಲೋಕದ ಇತರ ಪ್ರಜೆಗಳು. ಉರುಗ್ವೇ ನದಿಯ ಶಿರೋಭಾಗ ಮೊಸಳೆಗಳ ಸಾಮ್ರಾಜ್ಯ.

**ಜನ, ಜೀವನ:** ಶೇ.50ರಷ್ಟು ಜನ ವ್ಯವಸಾಯಗಾರರು. ದಕ್ಷಿಣಭಾಗದಲ್ಲಿ ಜನಸಂಖ್ಯೆ ಹೆಚ್ಚು. ದೇಶದ 83%ರಷ್ಟು ಪ್ರದೇಶದಲ್ಲಿ ಹುಲ್ಲುಗಾವಲಿರುವ ಉರುಗ್ವೇಯನ್ನು ಜಗತ್ತಿನ ಅತಿ ಉತ್ತಮ ಮೇವಿನಭೂಮಿ ಎನ್ನುತ್ತಾರೆ. 1840ರ ಅನಂತರ ಬ್ರಿಟಿಷರು ಮೆರಿನೊ ಕುರಿಗಳನ್ನು ಇಲ್ಲಿಗೆ ತಂದು ಸಾಕಿದರು. ಅವುಗಳಿಂದ ಉಣ್ಣೆ ಮತ್ತು ಮಾಂಸ ತೆಗೆದು ರಫ್ತು ಮಾಡುತ್ತಾರೆ. ಶೀತಕ ಯಂತ್ರ ಬಂದ ಮೇಲೆ ಮಾಂಸದ ಉದ್ಯೋಗ ಭರದಿಂದ ಸಾಗಿದೆ. ಉರುಗ್ವೇ ನದಿಯ ಮೇಲಿನ ಪೈಸಾಂಡೂ, ಸಾಲ್ಟೊ, ಮತ್ತು ರಿಯೊ ನೇಗ್ರೊ ನದಿಯ ಮೇಲಿರುವ ಮರ್ಸೇದೇಸ್ ಪಟ್ಟಣಗಳಲ್ಲಿ ಮಾಂಸ ಕೈಗಾರಿಕೆ ಪ್ರಬಲ.

ದಕ್ಷಿಣ ಭಾಗದಲ್ಲಿ ವ್ಯವಸಾಯ ಸಾಮಾನ್ಯ. ಅರ್ಧ ಭೂಮಿ ಗೋದಿಗಾಗಿ ಮೀಸಲಾಗಿದೆ. ಅಗಸೆ ನಾರು, ಓಟ್ಸ್, ಬಾರ್ಲಿ, ದ್ರಾಕ್ಷಿ ಇತರ ಬೆಳೆಗಳು. ಎರಡನೆಯ ಮಹಾಯುದ್ಧದ ಅನಂತರ ಇಲ್ಲಿ ಪ್ರಗತಿ ಹೆಚ್ಚಿದೆ. ಸರ್ಕಾರವೇ ವ್ಯವಸಾಯ ಪದಾರ್ಥಗಳ ಬೆಲೆ ನಿಗದಿ ಮಾಡಿ ವ್ಯವಸಾಯಕ್ಕೆ ಪ್ರೋತ್ಸಾಹ ಕೊಟ್ಟಿದೆ. ಈಗ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಹೆಚ್ಚು ಭೂಮಿಯನ್ನು ಸಾಗುವಳಿಗೆ ಒಳಪಡಿಸಲಾಗಿದೆ. ರೈಲುಗಳ ನಿರ್ಮಾಣ ಬ್ರಿಟಿಷ್ ಬಂಡವಾಳದಿಂದಾಯಿತು. ಈಗ ಎಲ್ಲ ರೈಲುಗಳೂ ಸರ್ಕಾರದ ಅಧೀನದಲ್ಲಿವೆ. ರಸ್ತೆ ಸಾರಿಗೆಯೂ ಪ್ರಗತಿ ಹೊಂದಿದೆ.

ಉರುಗ್ವೇಯಲ್ಲಿ ಹೇಳಿಕೊಳ್ಳುವ ಖನಿಜಗಳು ಮತ್ತು ಶಕ್ತಿ ಸಂಪನ್ಮೂಲಗಳು ದೊರೆಯುವುದಿಲ್ಲ. ಆದಕಾರಣ ಅವುಗಳಲ್ಲಿ ಬಹಳಷ್ಟು ಆಮದಾಗುತ್ತವೆ. ಜಲವಿದ್ಯುಚ್ಛಕ್ತಿಯೇ ಪ್ರಧಾನವಾದುದು. ಮಾಂಸದ ಸಂಸ್ಕರಣೆ, ಚರ್ಮಹದಮಾಡುವುದು, ಜವಳಿ ಉದ್ಯಮ, ಸಿಮೆಂಟ್ ಮತ್ತು ಟೈರ್‌ಗಳ ತಯಾರಿಕೆ ಪ್ರಮುಖ ಕೈಗಾರಿಕೆಗಳಾಗಿವೆ. ಬಹಳಷ್ಟು ಕೈಗಾರಿಕೆಗಳು ರಾಜಧಾನಿ ಮಾಂಟೆವಿಡೆವೋದಲ್ಲಿ ಕೇಂದ್ರೀಕೃತವಾಗಿವೆ.

ಇಲ್ಲಿಯ ಮುಖ್ಯ ರಫ್ತು ಉಣ್ಣೆ, ಮಾಂಸ, ಮಾಂಸದ ಪದಾರ್ಥಗಳು ಮತ್ತು ಚರ್ಮ. ಈಗ ಮಾಂಸಕ್ಕಿಂತಲೂ ಗೋದಿಯ ರಫ್ತು ಹೆಚ್ಚು. ರಫ್ತಿನ ಬಹುಭಾಗ ನೆದರ್ಲೆಂಡ್ಸ್‌ಗೆ ಹೋಗುತ್ತದೆ. ಆಮದು ವಿಶೇಷವಾಗಿ ಸಂಯುಕ್ತ ಸಂಸ್ಥಾನ. ಬ್ರೆಜಿಲ್, ಪಶ್ಚಿಮ ಜರ್ಮನಿ ಮತ್ತು ಬ್ರಿಟನ್‌ಗಳಿಂದ.

ಉರುಗ್ವೇಯ ಜನ ಪ್ರಧಾನವಾಗಿ ಬಿಳಿಯರು. 19–20ನೆಯ ಶತಮಾನಗಳಲ್ಲಿ ಸ್ಪೇನ್, ಇಟಲಿ ಮತ್ತು ಇತರ ಐರೋಪ್ಯ ದೇಶಗಳಿಂದ ಬಂದವರ ವಂಶದವರು. ಇಂಡಿಯನ್ನರು ಇಲ್ಲವೇ ಇಲ್ಲವೆನ್ನಬಹುದು. ಈ ಲಕ್ಷಣವುಳ್ಳ ಶೇ. 5 ರಷ್ಟು ಮಂದಿ ಮಾತ್ರ ಕಾಣಸಿಗುತ್ತಾರೆ. ರೋಮನ್ ಕ್ಯಾಥೊಲಿಕರು ಬಹುಸಂಖ್ಯಾತರು. ಸ್ಪಾನಿಷ್ ಅಧಿಕೃತ ಭಾಷೆ.

ಉರುಗ್ವೇಯ ಜನಸಂಖ್ಯೆ 3382000(2002). ಚ.ಕಿಮೀ.ಗೆ 19.2 ಜನಸಾಂದ್ರತೆಯಿದೆ. ದಕ್ಷಿಣ ಕರಾವಳಿ ಹಾಗು ಉರುಗ್ವೇನದೀ ತೀರಪ್ರದೇಶಗಳಲ್ಲಿ ಜನ ಹೆಚ್ಚಾಗಿ ವಾಸಿಸುತ್ತಾರೆ. ರಾಜಧಾನಿಯಾದ ಮಾಂಟೆವಿಡೆವೋದಲ್ಲಿ ಜನದಟ್ಟಣೆ ಬಲು ಹೆಚ್ಚು ಜನಸಂಖ್ಯೆ 1378707 (1996). ಇಡೀ ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚಿನ ಮಂದಿ ಈ ನಗರದಲ್ಲೂ ಸುತ್ತಮುತ್ತಣ ಉಪನಗರಗಳಲ್ಲೂ ವಾಸಿಸುತ್ತಾರೆ.

ಉರುಗ್ವೇಯಲ್ಲಿ ಸು. 3050 ಕಿಮೀ. ರೈಲುಮಾರ್ಗಗಳೂ 4,828 ಕಿಮೀ. ರಸ್ತೆಗಳೂ ಇವೆ. ಇವಕ್ಕೆ ಮಾಂಟೆವಿಡೆವೋ ಕೇಂದ್ರ. ಅಂತಾರಾಷ್ಟ್ರೀಯ ಸಾಲ ಪಡೆದು ಹೆದ್ದಾರಿಗಳನ್ನು ಉತ್ತಮಪಡಿಸಿ ಮುಖ್ಯವಾಗಿ ಬ್ರೆಜಿಲಿನೊಂದಿಗೆ ಹೆಚ್ಚಿನ ಸಂಪರ್ಕ ಕಲ್ಪಿಸಲಾಗಿದೆ. ಉರುಗ್ವೇ ಜನರಲ್ಲಿ 85%ರಷ್ಟು ಮಂದಿ ಅಕ್ಷರಸ್ಥರು. ಪೇಸೋ ಇಲ್ಲಿನ ನಾಣ್ಯ. ನಗರ ಜನಸಂಖ್ಯೆ ಶೇ. 92.4. ಭಾಷೆ; ಸ್ಪಾನಿಷ್, ಕ್ರೈಸ್ತಧರ್ಮೀಯರ ಸಂಖ್ಯೆ ಹೆಚ್ಚು. (ಆರ್.ಆರ್.ಎ.;ಬಿ.ಐ.)

**ಇತಿಹಾಸ, ಆಡಳಿತ:** 17ನೆ ಶತಮಾನದ ಅಂತ್ಯದಲ್ಲಿ ಪೋರ್ಚುಗೀಸರು ಮೊಟ್ಟಮೊದಲು ಇಲ್ಲಿಗೆ ಬಂದರು. ನೂರು ವರ್ಷ ಕಾಲ ಪೋರ್ಚುಗಲ್ಲಿನ ಅಧೀನದಲ್ಲಿದ್ದ ಮೇಲೆ ಈ ದೇಶ ಸ್ಪೇನ್ ಚಕ್ರಾಧಿಪತ್ಯದ ಅಂಗವಾಯಿತು. 1805ರಲ್ಲಿ ಸ್ಪೇನ್ ನೆಪೋಲಿಯನ್ನನ ವಶವಾದಾಗ ದಕ್ಷಿಣ ಅಮೆರಿಕದ ಇತರ ವಸಾಹತುಗಳಂತೆ ಉರುಗ್ವೇಯಲ್ಲೂ ಸ್ವಾತಂತ್ರ್ಯ ಚಳವಳಿ ಹರಡಿತು. ಆದರೆ ನೆರೆಯ ಬ್ರೆಜಿಲ್ ಅರ್ಜೆಂಟೀನಗಳು ಇದನ್ನು ಆಕ್ರಮಿಸಲು ಯತ್ನಿಸಿದವು. ಈ ಪ್ರಯತ್ನಗಳು ವಿಫಲವಾಗಿ, ಕೊನೆಗೆ ಇಂಗ್ಲೆಂಡಿನ ಮಧ್ಯಸ್ಥಿಕೆಯಿಂದ ಉರುಗ್ವೇ ಸ್ವತಂತ್ರ ರಾಷ್ಟ್ರವಾಯಿತು. ಇದರ ಪ್ರಥಮ ಸಂವಿಧಾನ ಜಾರಿಗೆ ಬಂದದ್ದು 1830ರಲ್ಲಿ, ಪ್ರಜಾತಂತ್ರ ಗಣರಾಜ್ಯ ತತ್ತ್ವಗಳೇ ಇದಕ್ಕೆ ಮೂಲಾಧಾರ. ಆದರೆ ಇಲ್ಲಿ ಹುಟ್ಟಿಕೊಂಡ ಕೊಲರ‍್ಯಾಡೋ ಮತ್ತು ಬ್ಲಾಂಕೋ ಎಂಬ ಪಕ್ಷಗಳೆರಡರ ಕಚ್ಚಾಟದಿಂದ ದೇಶದಲ್ಲಿ ಅನಾಯಕತೆ ಮೂಡಿತು. ಚುನಾವಣೆಗಳಲ್ಲಿ ಅನೀತಿಯೂ ಮೋಸವೂ ಬೆಳೆದವು. ಬಲ ಪ್ರದರ್ಶನದಿಂದ ಸರ್ಕಾರದ ಮೂಲಸ್ಥಾನಗಳ ಆಕ್ರಮಣ ಸಾಮಾನ್ಯವಾಯಿತು. ಈ ಕಾರಣಗಳಿಂದ 19ನೆಯ ಶತಮಾನದ ಕೊನೆಯವರೆಗೂ ಅಲ್ಲಿ ಪ್ರಜಾಪ್ರಭುತ್ವ ಬೇರೂರಲಿಲ್ಲ. ಈ ಅವ್ಯವಸ್ಥೆಯನ್ನು ಕೊನೆಗಾಣಿಸಿ ದೇಶದಲ್ಲಿ ಶಾಂತಿ ನೆಲಗೊಳಿಸಿದವ ಜೋಸೆಬಾಟ್ಯೆ. ಈತನ ನೇತೃತ್ವದಲ್ಲಿ 1918ರಲ್ಲಿ ಜಾರಿಗೆ ಬಂದ ಸುಧಾರಣೆಗಳ ಫಲವಾಗಿ ಏಕಪಕ್ಷೀಯ ಸಚಿವ ಸಂಪುಟದ ಸ್ಥಾನದಲ್ಲಿ ದ್ವಿಪಕ್ಷೀಯ ಸಂಪುಟದ ಸ್ಥಾಪನೆಯಾಯಿತು. ಚುನಾವಣೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಪಕ್ಷಗಳೆರಡಕ್ಕೂ ಅದರದರ ಬಲಾನುಗುಣವಾಗಿ ಸ್ಥಾನ ಕಾಯ್ದಿಡಲಾಯಿತು. ಇದರಿಂದ ಪಕ್ಷವೈಮನಸ್ಯ ಅಡಗಿ ಪ್ರಜಾಸರ್ಕಾರ ಸುಲಲಿತವಾಗಿ ನಡೆಯುವಂತಾಯಿತು. ಆದರೆ ಮುಂದೆ ಸಂಭವಿಸಿದ ಆರ್ಥಿಕಮುಗ್ಗಟ್ಟಿನ ಕಾಲದಲ್ಲಿ ಈ ವ್ಯವಸ್ಥೆ ಪ್ರಯೋಜನಕಾರಿಯಾಗಿರಲಿಲ್ಲ. ಈ ಸನ್ನಿವೇಶದಲ್ಲಿ ರಾಜಕಾರ್ಯಗಳನ್ನು ಏಕದೃಷ್ಟಿಯಿಂದ ಸಕಾಲಕ್ಕೆ ದಾರ್ಢ್ಯದಿಂದ ನಡೆಸಬಲ್ಲ ಆಡಳಿತದ ಅಗತ್ಯವಿತ್ತು. 1933ರಲ್ಲಿ ಗೇಬ್ರಿಯಲ್ ಟೆರ ರಾಷ್ಟ್ರದ ಸರ್ವಾಧಿಕಾರಿಯಾದ. 1917ರ ಸಂವಿಧಾನ ಮುರಿದು ಬಿತ್ತು. ಬಹಳ ಕಷ್ಟ ನಷ್ಟ ಅನುಭವಿಸಿ ಸ್ವಾತಂತ್ರ್ಯ ಪಡೆದಿದ್ದ ಉರುಗ್ವೇಯನರಿಗೆ ಇದರಿಂದ ಮುಖಭಂಗವಾಗಿ ಕೊನೆಗೆ ಅವರು ಮತ್ತೆ ಶ್ರಮಪಟ್ಟು ಪ್ರಜಾಪ್ರಭುತ್ವ ಸ್ಥಾಪಿಸಿಕೊಂಡರು. 1951ರಲ್ಲಿ ಅನೇಕ ರಾಜಕೀಯ ಸುಧಾರಣೆಗಳು ಜಾರಿಗೆ ಬಂದುವು.

ಆದರೂ ಉರುಗ್ವೇಯಲ್ಲಿ ದೃಢವಾದ ಸರ್ಕಾರ ಬರಲಿಲ್ಲ. ಆದ್ದರಿಂದ 1967ರ ಫೆಬ್ರವರಿಯಲ್ಲಿ ಇಲ್ಲಿ ಅಧ್ಯಕ್ಷೀಯ ಸರ್ಕಾರ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಅಧ್ಯಕ್ಷ ಹಾಗೂ ಹನ್ನೊಂದು ಮಂದಿ ಸಚಿವ ಮಂಡಲ ಆಡಳಿತ ನಡೆಸುತ್ತಾರೆ. ಇವರ ಆಯ್ಕೆ ಐದು ವರ್ಷಕ್ಕೊಮ್ಮೆ. ವಿಧಾನಮಂಡಲದಲ್ಲಿ ಎರಡು ಸದನಗಳಿವೆ. ಒಂದು ಸೆನೆಟ್ (ಸದಸ್ಯ ಸಂಖ್ಯೆ 30). ಇನ್ನೊಂದು ಚೇಂಬರ್ ಆಫ್ ಡೆಪ್ಯುಟೀಸ್ (ಸದಸ್ಯ ಸಂಖ್ಯೆ 99). ಇವುಗಳಿಗೂ ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. ಹದಿನೆಂಟು ವರ್ಷ ತುಂಬಿದ ಎಲ್ಲರಿಗೂ ಮತ ನೀಡುವ ಅಧಿಕಾರವುಂಟು. ಸೆನೆಟಿನ ಅಧ್ಯಕ್ಷನೇ ರಾಷ್ಟ್ರದ ಉಪಾಧ್ಯಕ್ಷ. ಆಡಳಿತ ಸೌಕರ್ಯಕ್ಕಾಗಿ ದೇಶವನ್ನು 19 ವಿಭಾಗಗಳಾಗಿ ಮಾಡಲಾಗಿದೆ ಪ್ರತಿ ವಿಭಾಗದ ಆಡಳಿತವೂ ಒಬ್ಬ ಮೇಲ್ವಿಚಾರಕನ (ಇಂಟೆಂಡೆಂಟ್) ಹಾಗೂ 31 ಸದಸ್ಯರಿರುವ ಮಂತ್ರಣ ಸಭೆಯ (ಜಂಟ) ಅಧೀನದಲ್ಲಿರುತ್ತದೆ. (ಎಸ್.ವಿ.ಡಿ)

**ಉರುಟಣೆ:** ಕನ್ನಡಿಗರ ಮದುವೆ ಸಮಾರಂಭದಲ್ಲಿ ಹಸೆಯ ಮೇಲೆ ಕುಳಿತ ವಧೂವರರು ಪರಸ್ಪರ ಅರಿಸಿನ, ಕುಂಕುಮ, ಗಂಧ, ಪುಷ್ಪಗಳನ್ನು ಅನುಲೇಪನ ಮಾಡುವ, ತಾಂಬೂಲ ನೀಡುವ ಪದ್ಧತಿ ಉಂಟು. ಆಗ ಹೇಳುವ ಹಾಡುಗಳನ್ನು ಉರುಟಣೆಯ ಹಾಡುಗಳು ಎನ್ನುತ್ತಾರೆ. ಉರುಟಣೆ ಎಂಬ ಪದಕ್ಕೆ ಸುತ್ತುವುದು, ಲಾಗಹಾಕುವುದು ಎಂಬ ಅರ್ಥವಿದೆ. ಇಲ್ಲೂ ಉಪಚಾರ ಹೆಂಡತಿಯಿಂದ ಗಂಡನಿಗೆ ಆಗುವಂತೆ ಗಂಡನಿಂದ ಹೆಂಡತಿಗೂ ಆಗುತ್ತೆಯಾಗಿ ಇದನ್ನು ಉರುಟಣೆ ಎಂದು ಕರೆದಿರಬೇಕು. ನೂತನ, ಅಪರಿಚಿತ ವಧೂವರರಲ್ಲಿ ಪರಸ್ಪರ ಸಂಕೋಚಪ್ರವೃತ್ತಿಯನ್ನು ಕಳೆಯುವುದು ಇದರ ಉದ್ದೇಶವೆಂದು ತೋರುತ್ತದೆ.

ಸಾಮಾನ್ಯವಾಗಿ ಮದುವೆಯ ಸಂಜೆ ವಿಶಾಲವಾದ ಅಂಗಳದಲ್ಲಿ ಈ ಕಾರ್ಯಕ್ರಮ ನಡೆಯುತ್ತದೆ. ಮದುವೆಗೆ ಬಂದಿರುವ ಬೀಗರೂ ಊರಿನ ಜನರೂ ಆ ಸಭೆಯಲ್ಲಿ ಕುಳಿತುಕೊಳ್ಳುತ್ತಾರೆ. ಅವರಿಗೆಲ್ಲ ಅದೊಂದು ಮನೋರಂಜನೆಯ ಕಾರ್ಯಕ್ರಮವಾಗಿರುತ್ತದೆ. ಆದರೆ ನಾಚಿಕೆಯುಳ್ಳ ವಧುವಿಗೆ ಅದೊಂದು ಪರೀಕ್ಷೆಯೇ ಸರಿ. ವಧೂವರರನ್ನು ಮಂಟಪದಲ್ಲಿ ಅಲಂಕೃತವಾದ ಆಸನದ ಮೇಲೆ ಕೂಡಿಸಿರುತ್ತಾರೆ. ಅನಂತರ ವಧು ತನ್ನ ಪತಿಯನ್ನು ದೈವಿಕ ಭಾವನೆಯಿಂದ ಪೂಜಿಸಬೇಕು. ನಾವು ದೇವರನ್ನು ಅಷ್ಟವಿಧ ಪೂಜೆಯಿಂದ ಸಂಪ್ರೀತಗೊಳಿಸುವಂತೆ, ಮೊದಲು ವಧು ತನ್ನ ಪತಿಯನ್ನು ಈ ಸುಂದರವಾದ ಪೀಠಕ್ಕೆ ಆಗಮಿಸಬೇಕೆಂದು ಹಾಡಿನ ಮೂಲಕ ಪ್ರಾರ್ಥಿಸುತ್ತಾಳೆ.

ಉರುಟಣೆಗೆ ಕರೆಯುವುದು, ಕುಂಕುಮ ಹಚ್ಚುವುದು, ಅರಿಸಿನ ಹಚ್ಚುವುದು, ಚೆಂಡಾಡುವುದು, ಹಾರಹಾಕುವುದು, ತಾಂಬೂಲ ಕೊಡುವುದು ಈ ಎಲ್ಲ ಕಾರ್ಯಕ್ರಮಗಳಿಗೂ ಬೇರೆ ಬೇರೆ ಹಾಡುಗಳಿರುತ್ತವೆ. ವಧು ಮೊದಲು ಹಾಡುವ ಹಾಡಿಗೆ ಹಸೆಗೆ ಕರೆಯುವ ಹಾಡು ಎಂತಲೇ ಹೆಸರು. ಸಭಾಕಂಪನವಿರುವ ವಧುವಿನ ಜೊತೆಗೆ ಆಕೆಯ ತಂಗಿಯೊ ಅಥವಾ ಬೇರೆ ಯಾರಾದರೂ ಹೆಣ್ಣುಮಕ್ಕಳೆ ದನಿಗೂಡಿಸುತ್ತಾರೆ.

ಜಯ ಜಾನಕಿ ಪತಿ ರಾಘವ ಮೂರುತಿ
ದಯಮಾಡುರುಟಣೆಗೆ।
ನಿಗಮಾನುತ ಹೃದಯಾನ್ವಿತ
ಸೇವಿತ ಸೇವಕಿ ನಾ ನಿಮಗೆ ॥

ಎಂದು ಉರುಟಣೆಗೆ ದಯಮಾಡಿಸಬೇಕೆಂದು ವಧು ಪ್ರಾರ್ಥಿಸುತ್ತಾಳೆ. ಅಷ್ಟು ಹೊತ್ತಿಗೆ ಒಬ್ಬ ಹಿರಿಯ ಮುತ್ತೈದೆ ವಧೂವರರ ಹತ್ತಿರ ಬಂದು ಪತಿಪೂಜೆ ಅರ್ಥಾತ್ ಉರುಟಣೆ ಮಾಡಿಸಲು ಸಹಾಯ ಮಾಡುತ್ತಾಳೆ. ಅರಿಸಿನ ಕುಂಕುಮದ ಬಟ್ಟಲನ್ನು ವಧುವಿನ ಎದುರಿಗೆ ಹಿಡಿದಾಗ ವಧು ಅದನ್ನು ತೆಗೆದುಕೊಂಡು

ಹಳದಿಯ ಹಚ್ಚುವೆ ಪರಿಕರ ಪಾದಕೆ
ನಳಿನಾಕ್ಷನ ಫಣೆಗೆ।
ಹೊಳೆವ ಕಸ್ತೂರಿ ತಿಲಕವ ತಿದ್ದುವೆ
ಎಳೆಸಿರಿ ನಗು ಮುಖಕೆ ॥

ಎನ್ನುತ್ತ ಅವನ ಕೆನ್ನೆಗೆ ಅರಿಸಿನವನ್ನು ಹಚ್ಚುತ್ತಾಳೆ. ಹಣೆಗೆ ಕುಂಕುಮವಿಡುತ್ತಾಳೆ. ಅನಂತರ ಗಂಧ ಹಚ್ಚುವುದು; ಪನ್ನೀರುದಾನಿ ಕೈಗೆ ಬಂದ ಕೂಡಲೇ——

ಗಂಧವನು ಹಚ್ಚುವೆನು ಇಂದಿರೇಶ ನಿಮಗೆ।
ವಾಸನೆಯಿಂದಿರುವ ಕೇಸರಿ ಗಂಧವನು।
ಶ್ರೀಪತಿ ಈ ನಿಮ್ಮ ಮುತ್ತಿನ ಕಂದರಕೀಗ ॥

ಎಂದು ಹೇಳುತ್ತ ಪರಿಮಳದ ಪನ್ನೀರನ್ನು ಚಿಮುಕಿಸುತ್ತಾಳೆ. ಈಗ ವೀಳ್ಯ ಕೊಡುವುದು. ಒಂದು ತಟ್ಟೆಯಲ್ಲಿ ಬಣ್ಣದಡಿಕೆ, ಚಿಗುರೆಲೆ, ಏಲಕ್ಕಿ, ಲವಂಗ, ಒಣ ಕೊಬ್ಬರಿ ಮೊದಲಾದುವನ್ನು ಇಟ್ಟಿರಲಾಗುತ್ತದೆ. ವಧು ಆ ತಟ್ಟೆಯನ್ನು ಹಿಡಿದುಕೊಂಡು——

ಮಲೆನಾಡ ಚೂರಡಿಕೆ ಬಣ್ಣಕರ್ಪೂರವನು
ದೊಡ್ಡ ಸಕ್ಕರೆಯನ್ನು ಸೇರಿಸಿರುವ
ಎಳೆವೀಳೆದೆಲೆ ಮತ್ತೆ ಸುಗಂಧ ಸುಣ್ಣವನು
ನಿಮಗಾಗಿ ಹಿಡಿದಿರುವೆ ಸ್ವೀಕರಿಸಿ ದೇವ।

ಎಂದ ಕೂಡಲೇ ಸಭೆಯಲ್ಲಿರುವ ವರನ ಗೆಳೆಯರು ಒಗಟೊಂದನ್ನು ಹೇಳಿ ತಾಂಬೂಲ ಕೊಡುವಂತೆ ವಧುವನ್ನು ಪೀಡಿಸುತ್ತಾರೆ. ಆಗ ವಧು ದ್ರಾಕ್ಷಿ ಬೆಳೆಯುವ ದೇಶ ಕಾಬೂಲ... ರಾಯರಿಗೆ ಕೊಡುವೆನು ತಾಂಬೂಲ ಎಂದ ಕೂಡಲೇ ವರ ನಗುನಗುತ್ತ ತಾಂಬೂಲದ ತಟ್ಟೆ ಮುಟ್ಟುತ್ತಾನೆ. ಆ ಸಭೆಯಲ್ಲಿ ನಗುವಿನ ಹೊನಲೇ ಹರಿಯುತ್ತದೆ. ಇದಾದ ಅನಂತರ ವಧುವರರು ಚೆಂಡಾಡುವುದು. ಮಲ್ಲಿಗೆ ಅಥವಾ ಸೇವಂತಿಗೆ ಹೂವಿನ ಚೆಂಡನ್ನು ಪತಿಯ ಕಡೆಗೆ ವಧು ಎಸೆಯುತ್ತಾಳೆ. ಪತಿ ಅದನ್ನು ಹಿಂತಿರುಗಿಸುತ್ತಾನೆ. ಅದು ಮೈನೋವಿಲ್ಲದ ಒಂದು ಚೆಂಡಾಟ. ಆ ಚೆಂಡು ಒಮ್ಮೆ ವರನ ಕೈಗೂ ಮತ್ತೊಮ್ಮೆ ವಧುವಿನ ಕೈಗೂ ಬರುತ್ತಿರುತ್ತದೆ. ಸಾಮಾನ್ಯವಾಗಿ ವಧುವಿನ ಹಾಡು ಮುಗಿಯುವವರೆಗೂ ಈ ಚೆಂಡಾಟ ನಡೆಯುತ್ತಲೇ ಇರುತ್ತದೆ.

ಚಂಡಾಂಶವಂಶಜಾತಾ। ಚಂಡನಾಡಿದ।
ಮರುಗ ಮಲ್ಲಿಗೆ ಜಾಜಿ ಸಂಪಿಗೆ
ದಂಡೆಯಿಂದ ರಚಿತವಾದ।
ಚಂಡನು ಕೈಕೊಂಡ ನಿಮಿಷದಿ
ತಂಡದಿ ಶುಭಮಳೆಯು ಕರೆಯೆ॥

ಹೀಗೆ ವಧು ಒಂದು ನುಡಿ ಹೇಳಿದ ಅನಂತರ ಹಾಡುವುದು ಗಂಡನ ಸರದಿ, ಆದರೆ ಆತ ಹಾಡುವುದಿಲ್ಲ. ಆತ ಹೇಳಬೇಕಾದ ನುಡಿಯನ್ನೂ ವಧುವೇ ಮುಂದುವರಿಸುತ್ತಾಳೆ. ವರ ಕೇವಲ ಯಾಂತ್ರಿಕವಾಗಿ ಚೆಂಡನ್ನು ಎಸೆಯುತ್ತಾನೆ. ಅಷ್ಟೇ.

ಸುದತಿ ನೋಡು ನಿನ್ನ ಹೃದಯಕೆ
ಗುರಿ ಇಟ್ಟಿರುವೆನು ನಾನು ।
ಇಗೋ ಹಾಕುವೆ, ಅಗೊ ತಗುಲಿತು
ಸದಯಳೆ ನೀಂ ಸೋತೆ ಎನುತ ॥ಚಂ॥

ಈ ನುಡಿ ಆಗುತ್ತಿದ್ದಂತೆ ವರ ನಾನೇ ಗೆದ್ದೆ ನೀನೇ ಸೋತೆ ಎನ್ನುತ್ತಾನೆ. ವಧು ಅವನ ವಾದವನ್ನು ಅನಿವಾರ್ಯವಾಗಿ ಒಪ್ಪಿಕೊಂಡಂತೆ ನಟಿಸುತ್ತಾಳೆ. ಹಿರಿಯ ಮುತ್ತೈದೆಯ ಆದೇಶದಂತೆ ವರ ಆ ಹೂವಿನ ದಂಡೆಯನ್ನು ವಧುವಿನ ತಲೆಗೆ ಮುಡಿಸುತ್ತಾನೆ. ಸಭಿಕರೆಲ್ಲ ಚಪ್ಪಾಳೆಯೊಂದಿಗೆ ಹರ್ಷಧ್ವನಿಗೈಯ್ಯುತ್ತಾರೆ.

ಹಾರಹಾಕುವುದು, ಆರತಿ ಎತ್ತುವುದು, ಪತಿಯನ್ನು ಪ್ರಾರ್ಥಿಸಿ ಅಲ್ಪಳೂ ಪಾಮರಳೂ ಅಬಲೆಯೂ ಆದ ತನ್ನನ್ನು ಉದ್ಧರಿಸಬೇಕೆಂದು ಕೇಳಿಕೊಳ್ಳುವುದು—ಇವೆಲ್ಲವೂ ಹಾಡಿನ ಮೂಲಕವೇ ನಡೆಯಬೇಕು.

ಹಾರವ ಹಾಕುವೆ ನಾಂ ।
ಮಾರಸುಂದರ ನಿಮಗೆ ॥
ಜಾಜಿ ಸೇವಂತಿಗೆ, ಮೈಸೂರು ಮಲ್ಲಿಗೆ
ಪರಿಪರಿ ಪರಿಮಳ ಪುಷ್ಪಗಳಾ ।
ದುಂಡುಮಲ್ಲಿಗೆ ಸರ, ಕೆಂಡ ಸಂಪಿಗೆಹಾರ
ಕಂಠಕೆ ತೊಡಿಸುವೆ ಶ್ರೀಪತಿ ನಿಮಗೆ ॥
ಹಾರ ಹಾಕಿ ಆದ ಅನಂತರ ಆರತಿಯ ಕಾರ್ಯಕ್ರಮ.
ನಳಿನಾಕ್ಷಗೀಗ ಬೆಳಗೂವೆ ನಾ । ಆರೂತಿಯನು ॥
ಕಾಳಿಂಗಮರ್ದನ ಕೃಷ್ಣಗೆ ಈಗ ॥
ಗೋಕುಲದಲಿ ಹುಟ್ಟಿ ಗೋವುಗಳನೆ ಕಾಯ್ದು ।
ಗೋಪಿಯರೊಡೆಯ ಮುರಳೀಲೋಲನೆ ॥

ಎಂದು ಹಾಡಿ ವಧು ಆರತಿ ಬೆಳಗುತ್ತಾಳೆ. ಆಮೇಲೆ ವಿನಯಪೂರ್ವಕವಾದ ಪ್ರಾರ್ಥನೆ. ವಧುವಿನ ಪ್ರಾರ್ಥನೆಯಲ್ಲಿ ಅವಳ ಸೇವಾಭಾವ; ಆತ್ಮನಿವೇದನೆ; ತನ್ನ ಅಲ್ಪ ಅಸ್ತಿತ್ವಗಳು ಒಂದನ್ನೊಂದು ಅಂಟಿರುವ ಸರಪಳಿಯ ಕೊಂಡಿಗಳಂತೆ ಕಂಡುಬರುತ್ತವೆ. ಆಗ ಸಭಿಕರೇ ಏಕೆ, ವರನೂ ಮರುಗಿ ಅವಳಿಗೆ ಭರವಸೆ ನೀಡುವ ಭಾವ ಬೀರುತ್ತಾನೆ.

ತನ್ನ ಮನದಳಲನ್ನು ನಿವೇದಿಸಿ ಪತಿಯ ಪಾದಕಮಲಗಳಿಗೆ ವಧು ಎರಗುತ್ತಾಳೆ. ಮುತ್ತೈದೆಯರು ಆರತಿಹಾಡು ಹೇಳುತ್ತ ವಧೂವರರಿಗೆ ಆರತಿ ಬೆಳಗುತ್ತಾರೆ. ಅದರೊಡನೆ ಆಶೀರ್ವಾದದ ಹಾಡುಗಳೂ ಸೇರಿರುತ್ತವೆ. ಮುತ್ತೈದೆಯರಿಗೆಲ್ಲ ಅರಿಸಿನಕುಂಕುಮ, ಹೂ ಮತ್ತು ಸೇರಿರುವ ಸಭಿಕರಿಗೆಲ್ಲ ಅವಲಕ್ಕಿ ಉಂಡೆ, ಸಕ್ಕರೆ ಕೊಬ್ಬರಿ ಇಲ್ಲವೇ ಬಾಳೇಹಣ್ಣುಗಳನ್ನು ಹಂಚುತ್ತಾರೆ.

ಆಮೇಲೆ ವಧೂವರರು ತಮ್ಮ ಜಾಗದಿಂದ ಎದ್ದು ದೇವರ ಮನೆಗೆ ಹೋಗಬೇಕು. ದೇವರಿಗೆ ವಂದಿಸಿ ಮನೆಯಲ್ಲಿ ಹಿರಿಯರಿಗೆಲ್ಲ ನಮಸ್ಕರಿಸಿ ಆಶೀರ್ವಾದ ಪಡೆಯಬೇಕು. ಆಗ ಒಂದು ಮೋಜು ನಡೆಯುತ್ತದೆ. ಎಲ್ಲ ಹುಡುಗಿಯರೂ ಅಡಿಗೆ ಮನೆ ಬಾಗಿಲಿಗೆ ಅಡ್ಡಲಾಗಿ ನಿಂತು ವಧುವಿನಿಂದ ವರನ ಹೆಸರನ್ನೂ ವರನಿಂದ ವಧುವಿನ ಹೆಸರನ್ನೂ ಮತ್ತೆ ಮತ್ತೆ ಹೇಳಿಸಿ ನಲಿಯುತ್ತಾರೆ. ಒಗಟು ಹಾಕಿ ಹೆಸರು ಹೇಳಬೇಕೆಂಬುದೊಂದು ನಿಯಮ. ಇಬ್ಬರೂ ಮೂರು ಮೂರು ಬಾರಿ ಪರಸ್ಪರರ ಹೆಸರು ಹೇಳಲೇಬೇಕಾಗುತ್ತದೆ. ಅನಂತರ ದೇವರ ಮನೆಗೆ ಪ್ರವೇಶ, ಇದಕ್ಕೆ ಬಾಗಿಲು ಕಟ್ಟುವುದು ಎಂದೇ ಹೆಸರು. ಇಲ್ಲಿಗೆ ಉರುಟಣೆ ಕಾರ್ಯಕ್ರಮ ಮುಗಿದಂತಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಇನ್ನೊಂದು ಪದ್ಧತಿ ನಡೆದುಬಂದಿದೆ. ಉರುಟಣೆಗೆ ಕುಳಿತುಕೊಳ್ಳುವ ಮುನ್ನ ವರನಾದವ ಅನೇಕ ಗುಂಡಿಗಳಿರುವ ಅಂಗಿಯೊಂದನ್ನು ಹಾಕಿಕೊಂಡಿರುತ್ತಾನೆ; ಅಥವಾ ಒಂದರ ಮೇಲೊಂದರಂತೆ ಎರಡು ಮೂರು ಅಂಗಿಗಳನ್ನು ಹಾಕಿಕೊಂಡಿರಬಹುದು. ಅವನಿಗೆ ಸಾವಿರ ಗುಂಡಿ ಸವಕಾರ (ಸಾಹುಕಾರ) ಇಲ್ಲವೇ ಸಾವಿರ ಗುಂಡಿ ಸರದಾರ ಎನ್ನುತ್ತಾರೆ–ಅವನ ಗೆಳೆಯರು, ವಿನೋದಕ್ಕಾಗಿ, ವಧು ಉರುಟಣೆ ಕಾರ್ಯಕ್ರಮದಲ್ಲಿ ಆರತಿ ಬೆಳಗಿದ ಅನಂತರ ಒಂದೊಂದು ಒಗಟಿನೊಡನೆ ತನ್ನ ಗಂಡನ ಹೆಸರು ಹೇಳಿ ಒಂದೊಂದು ಗುಂಡಿ ಬಿಚ್ಚಬೇಕು. ತೊಟ್ಟ ಬಾಣವನ್ನು ತೊಡಬಾರದೆಂಬ ನಿಯಮದಂತೆ ಒಮ್ಮೆ ಹೇಳಿದ ಒಗಟನ್ನು ಪುನಃ ಹೇಳುವಂತಿಲ್ಲ. ಆದ್ದರಿಂದ ವಧು ತನ್ನ ಮದುವೆಗೆ ಬಹಳ ಮುಂಚೆಯೇ ನೂರಾರು ಒಗಟುಗಳನ್ನು ಅಭ್ಯಾಸ ಮಾಡಿರುತ್ತಾಳೆ. ಹಾಡುಗಳನ್ನಾದರೂ ಅಷ್ಟೇ. ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿನಿಯಂತೆ ಈ ಸಾರ್ವಜನಿಕ ಸಭೆಯಲ್ಲಿ ನಡೆಯುವ ತನ್ನ ಪರೀಕ್ಷೆಗೆ ಆಕೆ ಸಿದ್ಧತೆ ಮಾಡಿಕೊಂಡಿರಲೇಬೇಕು. ಕೆಲವು ಒಗಟುಗಳು ಹೀಗಿವೆ.

1 ಹಂಪೆಯಲ್ಲಿ ಆಗುವುದು ವಿರೂಪಾಕ್ಷನ ತೇರು. ಅಲ್ಲಿ ಹರಿವುದು ತುಂಗಭದ್ರಾ ನೀರು.. . . . . ರಾಯರಿಗೆ ಹಾಕುವೆನು ಗುಲಾಬಿ ಪನ್ನೀರು.

2 ಗಂಗಾಯಮುನಾ ಸರಸ್ವತಿ ಸಂಗಮ. . . . . ರಾಯರಿಗೆ ಹಚ್ಚುವೆ ಕುಂಕುಮ.

3 ಜೀಮೂತವಾಹನನನ್ನು ಹಿಂಸಿಸಿದುದು ಗರುಡಪಕ್ಷಿ. . . . . ರಾಯರ ಹೆಸರು ಹೇಳುವೆನು ನಿಮ್ಮೆಲ್ಲರ ಸಾಕ್ಷಿ.

4 ಮನುಷ್ಯನು ಮುಪ್ಪಿನ ಕಾಲದಲ್ಲಿ ಬಯಸುವುದು ವೈರಾಗ್ಯ . . . ರಾಯರೇ ನನಗೆ ಸೌಭಾಗ್ಯ.

5 ಹೆಂಗಳೆಯರ ಕೊರಳಲ್ಲಿ ಹೊಳೆಯುವುದು ಕಂಠೀಹಾರ . . . . ರಾಯರಿಗೆ ಹಾಕುವೆನು ಮಲ್ಲಿಗೆಹಾರ.

6 ಕಲ್ಲುಸಕ್ರೆ ಹಳಕು, ಬೆಳದಿಂಗಳ ಬೆಳಕು, ಈ ನನ್ನ ಚಂದ್ರಮುಖಿಯ ಮುಖವೆಲ್ಲ ಹುಳುಕು. (ವರ ಹೇಳುವುದು).

ಹಿರಿಯರು ಜಲ, ಗಂಧ (ಅಕ್ಷತೆ), ಪತ್ರ, ಧೂಪ, ದೀಪ, ನೈವೇದ್ಯ, ತಾಂಬೂಲ ಮೊದಲಾದ ಅಷ್ಟವಿಧ ಪೂಜೆಗಳಿಂದ ಭಗವಂತನನ್ನು ಪೂಜಿಸಿದರೆ ಇಷ್ಟಾರ್ಥಗಳು ಸಿದ್ಧಿಸುತ್ತವೆಂದು ನಿಯಮ ಮಾಡಿದ್ದಾರೆ. ಅದರಿಂದ ಪರಮಾತ್ಮ ಸುಪ್ರೀತನಾಗುತ್ತಾನೆ. ಭಕ್ತ ಭಗವಂತನನ್ನು ಕುರಿತು ಮಾಡುವ ಅಷ್ಟವಿಧಪೂಜೆ ಈ ಉರುಟಣೆಯಲ್ಲಿ ಸಮಾವೇಶ ಗೊಂಡಿದೆ. ಹೆಂಡತಿಗೆ ಗಂಡನೇ ದೇವರೆಂಬ ಭಾವ ಮೂಡಿಬರಲು ಈ ಮನೋರಂಜನ ಪ್ರಧಾನವಾದ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ತಿರುಳೇ ಇದರಲ್ಲಿದೆ. (ಸಿ.ಎಸ್.ಆರ್.)

**ಉರುಳು ಹಕ್ಕಿ:** ಕಾರಸೈಯೀಫಾರ್ಮೀಸ್ ಗಣದ ಕಾರಸೈಯಿಡೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಹಕ್ಕಿ (ರೋಲರ್ ಬರ್ಡ್). ಇದರಲ್ಲಿ ಹದಿನಾರು ಪ್ರಭೇದಗಳಿವೆ. ಹಾರುವಾಗ ಗಾಳಿಯಲ್ಲಿ ದೇಹವನ್ನು ಉರುಳಿಸುವುದರಿಂದ ಈ ಹಕ್ಕಿಗೆ ಈ ಹೆಸರು ಬಂದಿದೆ. ಗರಿಗಳ ಬಣ್ಣ ನೀಲಿ. ಆದರೆ ಅಲ್ಲಲ್ಲಿ ಹಸಿರು ಚಿಮುಕಿಸಿದಂತಿರುವುದು. ಪೂರ್ವಗೋಳದಲ್ಲಿ ಜೀವಿಸುವ ಯೂರಿಸ್ಟೋಮಸ್ ಓರಿಯೆಂಟ್ಯಾಲಿಸ್ ಅಥವಾ ಡಾಲರ್ ಉರುಳುಹಕ್ಕಿಗಳು ದಕ್ಷಿಣ ಸೈಬೀರಿಯದಿಂದ ಆಸ್ಟ್ರೇಲಿಯದವರೆಗೆ ಹಬ್ಬಿವೆ. ಕಾರಸಿಯಸ್ ಬೆಂಗಾಲೆನ್ಸಿಸ್‌ನ್ನು ಭಾರತದ ಬ್ಲೂಜೇ ಎಂದು ಕರೆಯುವರು. ಇದೂ ಸೇರಿದಂತೆ ಭಾರತದಲ್ಲಿ ಮೂರು ಬಗೆಯ ಉರುಳುಹಕ್ಕಿಗಳು ಕಂಡುಬರುತ್ತವೆ. ಅವೆಂದರೆ, ಯುರೋಪಿಯನ್ ಉರುಳು ಹಕ್ಕಿ, ಭಾರತದ ಉರುಳು ಹಕ್ಕಿ ಹಾಗೂ ಪೂರ್ವದ ಅಗಲ ಕೊಕ್ಕಿನ ಉರುಳು ಹಕ್ಕಿ. ಸಂತಾನೋತ್ಪತ್ತಿ ಕಾಲದಲ್ಲಿ ಗಂಡುಹಕ್ಕಿ ಹೆಣ್ಣನ್ನು ಒಲಿಸಿಕೊಳ್ಳಲು ಗಾಳಿಯಲ್ಲಿ ಲಾಗ ಹಾಕುತ್ತದೆ. ಭಾರತದಲ್ಲಿ ಉರುಳು ಹಕ್ಕಿ ಕರ್ನಾಟಕದಲ್ಲಿದೆ. (ಪಿ.ಎ.ಆರ್.)

**ಉರ್ೖೆಯೂರು:** ತಮಿಳುನಾಡಿನ ಮುಖ್ಯ ನಗರಗಳಲ್ಲಿ ಒಂದು. ತಿರುಚಿರಪಳ್ಳಿಯ ಎಲ್ಲೆಯೊಳಗೆ ಕಾವೇರಿ ನದಿಯ ದಕ್ಷಿಣ ದಡದಲ್ಲಿದೆ. ಪ್ರಸಕ್ತಶಕೆಯ ಮೊದಲ ಹಲವು ಶತಮಾನಗಳಲ್ಲಿ ಚೋಳರ ರಾಜಧಾನಿಯಾಗಿತ್ತು. ಇದಕ್ಕೆ ಉರಯೂರು, ಉರಗಪುರ, ಉರಂದೈ, ಕೋಳಿಯೂರು ಮುಂತಾದ ಹೆಸರುಗಳಿದ್ದುವೆಂದು ಪುರಾತನ ತಮಿಳು ಸಾಹಿತ್ಯದಿಂದ ತಿಳಿದು ಬರುತ್ತದೆ. ಕಾವೇರಿ ನದಿಯ ಪ್ರವಾಹದಿಂದ ಹಾಳಾದ ಈ ನಗರ ಪ್ರ.ಶ.5ನೆಯ ಶತಮಾನದ ಸುಮಾರಿನಲ್ಲಿ ಪುನರ್‌ನಿರ್ಮಿತವಾಯಿತು. 6, 7ನೆಯ ಶತಮಾನಗಳಲ್ಲಿ ಪಲ್ಲವರ ಅಧೀನರಾಗಿದ್ದ ಚೋಳರ ಮುಖ್ಯ ಪಟ್ಟಣವಾಗಿತ್ತು. 8ನೆಯ ಶತಮಾನದಲ್ಲಿ ಪಾಂಡ್ಯರಿಂದ ಪುನಃ ನಾಶವಾಯಿತು. ಮತ್ತೆ ಮಧ್ಯಯುಗೀನ ಚೋಳ ಸಾಮ್ರಾಜ್ಯದ ಪ್ರಾಬಲ್ಯ ಪಡೆಯಿತು. 1310ರಲ್ಲಿ ಉರ್ೖೆಯೂರಿನ ಸಮೀಪದ ಪ್ರದೇಶಗಳನ್ನು ಅಲ್ಲಾವುದ್ದೀನನ ಸರದಾರ ಮಲಿಕ್ ಕಾಫರ್ ಗೆದ್ದುಕೊಂಡ.

ಪ್ರಾಚೀನ ತಮಿಳು ಕಾವ್ಯಗಳಲ್ಲೂ ಈ ನಗರದ ಐತಿಹ್ಯ ಹಲವು ರೀತಿಯಲ್ಲಿ ವರ್ಣಿತವಾಗಿದೆ: ಶಿಲಪ್ಪದಿಗಾರಂ ಕಾವ್ಯದ ಪ್ರಕಾರ ತಮಿಳು ರಾಜ್ಯಗಳನ್ನು ಆಳುತ್ತಿದ್ದ ಹತ್ತು ಮಂದಿ ಅರಸರಲ್ಲಿ ಪ್ರಮುಖನಾದ ಆಯ್ ಉರ್ೖೆಯೂರಿನ ಬ್ರಾಹ್ಮಣ ಕವಿಯೊಬ್ಬನಿಗೆ

ಪ್ರೋತ್ಸಾಹ ಕೊಟ್ಟಿದ್ದನೆಂದೂ ಪೆರಿಪ್ಲೆಸ್ ಗ್ರಂಥದ ಪ್ರಕಾರ ಈ ನಗರ ಅರಳೆ ವ್ಯಾಪಾರದ ದೊಡ್ಡ ಕೇಂದ್ರವಾಗಿತ್ತೆಂದೂ ಸುಂದರವಾದ ಅತಿ ಸೂಕ್ಷ್ಮ ವಸ್ತ್ರಗಳು ತಯಾರಾಗುತ್ತಿದ್ದುವೆಂದೂ ತಿಳಿದುಬರುತ್ತದೆ. 1965ರಿಂದ 1968ರವರೆಗೆ ಇಲ್ಲಿ ನಡೆದ ಉತ್ಖನನಗಳಿಂದ ಅನೇಕ ಪುರಾತನ ಅವಶೇಷಗಳು ದೊರಕಿ ಈ ನಗರದ ಪ್ರಾಮುಖ್ಯವನ್ನು ಬೆಳಕಿಗೆ ತಂದಿವೆ. ದಕ್ಷಿಣ ಭಾರತದ ಇತಿಹಾಸದ ಪ್ರಾರಂಭದಲ್ಲೇ, ಎಂದರೆ ಪ್ರಶ.ಪೂ. 4–3ನೆಯ ಶತಮಾನದಲ್ಲೇ ಈ ಪ್ರದೇಶದಲ್ಲಿ ನಾಗರಿಕತೆ ಪ್ರಾರಂಭವಾಗಿತ್ತು. ವ್ಯವಸಾಯ ಜನರ ಮುಖ್ಯ ಕಸುಬಾಗಿತ್ತು. ಹುಲ್ಲು ತಡಿಕೆಗಳ ಗುಡಿಸಲುಗಳಲ್ಲಿ ಇವರ ವಾಸ. ಕೆಂಪುಬಣ್ಣದ ಮತ್ತು ವರ್ಣಚಿತ್ರಿತವಾದ ಮಡಕೆಗಳನ್ನೂ ಕಬ್ಬಿಣದ ಆಯುಧೋಪಕರಣಗಳನ್ನೂ ಬೆಲೆ ಬಾಳುವ ಕಲ್ಲು ಮತ್ತು ಶಂಖದ ಮಣಿಗಳನ್ನೂ ಇವರು ಬಳಸುತ್ತಿದ್ದರು. ಪ್ರಶ. 1–2ನೆಯ ಶತಮಾನಗಳ ಸುಮಾರಿನಲ್ಲಿ ಚೋಳರ ರಾಜಧಾನಿಯಾಗಿದ್ದ ಈ ಪಟ್ಟಣದೊಡನೆ ರೋಮನರು ವ್ಯಾಪಾರಸಂಬಂಧ ಬೆಳೆಸಿದ್ದರು. ಆ ಕಾಲದಲ್ಲಿ ತಮಿಳುಭಾಷೆಯನ್ನು ಬ್ರಾಹ್ಮೀಲಿಪಿಯಲ್ಲಿ ಬರೆಯುತ್ತಿದ್ದರೆಂಬುದಕ್ಕೆ ಪ್ರಮಾಣವಾಗಿ ಬ್ರಾಹ್ಮೀ ಅಕ್ಷರಗಳನ್ನು ಕೆತ್ತಿರುವ ಮಡಕೆ ಚೂರುಗಳು ದೊರಕಿವೆ. ರೋಮನರ ವ್ಯಾಪಾರವಸ್ತುಗಳಲ್ಲೊಂದಾದ ಬಟ್ಟೆಗಳ ತಯಾರಿಕೆಯಲ್ಲಿ ಬಣ್ಣ ಹಾಕಲು ಉಪಯೋಗಿಸುತ್ತಿದ್ದ ಇಟ್ಟಿಗೆ ತೊಟ್ಟಿಯ ಅವಶೇಷಗಳೂ ಈ ಕಾಲಕ್ಕೆ ಸೇರಿದವು. ಚೋಳ–ವಿಜಯನಗರ ಸಾಮ್ರಾಜ್ಯ ಕಾಲಗಳಿಗೆ ಸೇರಿದ ನಾಚ್ಚಿಯಾರ್ ಮತ್ತು ಪಂಚವರ್ಣೇಶ್ವರ ದೇವಾಲಯಗಳು ಇಲ್ಲಿನ ಮಧ್ಯಯುಗೀನ ಮುಖ್ಯ ಕಟ್ಟಡಗಳು. (ಬಿ.ಕೆ.ಜಿ.)

**ಉರ್ದುಭಾಷೆ:** ಇಂಡೋ–ಯುರೋಪಿಯನ್ ಭಾಷಾವರ್ಗಕ್ಕೆ ಸೇರಿದ ಆರ್ಯ ಭಾಷೆ. ಸಿಮಿಟಿಕ್ ಲಿಪಿಯ ಗುಂಪಿಗೆ ಸೇರಿದ ಅರಬ್ಬೀ ಲಿಪಿಯನ್ನು ಕೊಂಚ ಬದಲಾವಣೆ ಮಾಡಿ ಇದಕ್ಕೆ ಅಳವಡಿಸಿಕೊಳ್ಳಲಾಗಿದೆ. ಪರ್ಷಿಯನ್ ಲಿಪಿಯೂ ಇದನ್ನೇ ಹೋಲುತ್ತದೆ. ಬರವಣಿಗೆ ಬಲದಿಂದ ಎಡಕ್ಕೆ. ದೆಹಲಿಯ ಸುತ್ತಮುತ್ತ ಆಡುತ್ತಿದ್ದ ಶೌರಸೇನೀ ಅಥವಾ ಅಪಭ್ರಂಶದಿಂದ (12ನೆಯ ಶತಮಾನ) ಈ ಭಾಷೆ ರೂಪುಗೊಂಡಿದೆಯೆಂದು ತೋರುತ್ತದೆ.

ಆ ಕಾಲದಲ್ಲಿ ದೆಹಲಿಯ ಸುತ್ತಮುತ್ತ ವಾಡಿಕೆಯಲ್ಲಿದ್ದ ಬ್ರಜ್, ಹರ್‍ಯಾನಿ, ಪಂಜಾಬಿ ಮತ್ತು ರಾಜಸ್ತಾನೀ ಪ್ರಾಕೃತ ಭಾಷೆಗಳಿಂದ ಉರ್ದು ಕೆಲಮಟ್ಟಿಗೆ ಪ್ರಭಾವಗೊಂಡಿದೆಯಾದರೂ ಅನಂತರ ಪರ್ಷಿಯನ್ ಭಾಷೆಯ ಶಕ್ತಿಪೂರ್ಣ ಪ್ರಭಾವದಲ್ಲಿ ಕಳೆಯಿತು, ಇದರ ಬಹುಪಾಲು ಪದಸಂಪತ್ತು ಪರ್ಷಿಯನ್‌ನಿಂದ ಬಂದದ್ದು. ಆದರೆ ಇದು ತನ್ನ ಮೂಲ ಹಾಗೂ ವಿಶಿಷ್ಟ ಲಕ್ಷಣವನ್ನು ವ್ಯಾಕರಣ, ನುಡಿಗಟ್ಟು ಮತ್ತು ಹೇರಳ ಪ್ರಾಕೃತಪದಗಳ ಮೂಲಕ ಉಳಿಸಿಕೊಂಡಿದೆ, ಈ ಭಾಷೆ ಪರ್ಷಿಯನ್ ಮತ್ತು ತುರ್ಕಿ ಮಾತನಾಡುವ, ಆಫ್ಘಾನಿಸ್ತಾನದಿಂದ ಬಂದು ಮೊದಲು ಲಾಹೋರಿನಲ್ಲೂ ಕಾಲಾನಂತರ ದೆಹಲಿಯಲ್ಲೂ ನೆಲೆಸಿದ ಮುಸ್ಲಿಂ ವಲಸೆಗಾರರ, ವರ್ತಕರ, ಸೂಫಿಗಳ ಮತ್ತು ದಾಳಿಕಾರರ ನಿಕಟಸಂಪರ್ಕದಿಂದ ರೂಪುಗೊಂಡಿತು.

ಘಜ್ನೀ ಸೈನ್ಯ 1027 ರಲ್ಲಿ ಮೊಟ್ಟ ಮೊದಲಿಗೆ ಲಾಹೋರಿನಲ್ಲಿ ನೆಲೆಸಿದಾಗ ಉರ್ದು ಭಾಷೆಯ ಅಸ್ತಿಭಾರವಾಯಿತು. ಪರ್ಷಿಯನ್ ಮತ್ತು ತುರ್ಕಿ ಮಾತನಾಡುವ ಸೈನಿಕರು ಅನಿವಾರ್ಯವಾಗಿ ಪ್ರಾದೇಶಿಕ ಭಾಷೆಯನ್ನು ಬಳಸಬೇಕಾಯಿತು. ಅದು ಮುಂದೆ ಪಂಜಾಬಿ ಭಾಷೆಯಾಗಿ ಬೆಳೆಯಿತಲ್ಲದೆ ಆಗಿನ ಕಾಲದ ಪರ್ಷಿಯನ್, ಅರಬ್ಬೀ ಮತ್ತು ತುರ್ಕಿ ಭಾಷೆಗಳ ಮಿಶ್ರಣವಾಗಿದ್ದು ಖಡಿಬೋಲಿಯಿಂದ ಅಷ್ಟೇನೂ ಬೇರೆಯಾಗಿರಲಿಲ್ಲ. ಅಲ್ಲಿನ ಜನತೆ ಇದರ ಪದಸಂಪತ್ತನ್ನು ಸ್ವೀಕರಿಸತೊಡಗಿತು, ಹೀಗೆ ಪರಸ್ಪರ ಸಾಮಾಜಿಕ ವ್ಯವಹಾರ ಇಬ್ಬರಿಗೆ ಅರ್ಥವಾಗುವ, ಸಮ್ಮಿಶ್ರ ಪದಸಂಪತ್ತಿನ ಆವಶ್ಯಕತೆಯನ್ನು ಎತ್ತಿಹಿಡಿಯಿತು. ಪ್ರಾಕೃತ ಪದಗಳು ಸಮಕಾಲೀನ ಇರಾನೀ ಕವಿಗಳಾದ ಫರ್ಖೂಸಿ, ಸನಈ ಮತ್ತು ಮಿನೂ ಚೆಹ್ರಿ ಅವರ ಕಾವ್ಯಗಳಲ್ಲಿ ಪ್ರವೇಶಿಸಿದವು. ಪೃಥ್ವಿರಾಜನ ಆಸ್ಥಾನಕವಿ ಚೆಂದ್‌ಬರ್ದಾಯಿ ಮತ್ತು ಇನ್ನಿತರರ ಪ್ರಾಕೃತ ಕವಿಗಳಲ್ಲಿ ಪರ್ಷಿಯನ್ ಪದಗಳು ಬಳಕೆಗೆ ಬಂದವು. ಘಜ್ನಿ ಮತ್ತು ಘೋರಿ ಸೈನ್ಯಗಳು 1193 ಮತ್ತು 1206 ರಲ್ಲಿ ದೆಹಲಿಯನ್ನು ವಶಪಡಿಸಿಕೊಂಡ ಕಾಲದಲ್ಲಿ ಪರ್ಷಿಯನ್ ಮತ್ತು ತುರ್ಕಿ ಮಾತನಾಡುವ ಹೊಸಬರು ಅಲ್ಲಿ ತಳವೂರಿದರು. ಅವರ ಸಂಪರ್ಕ ಮತ್ತು ವ್ಯವಹಾರಗಳು ಆ ಜನರನ್ನು ದೆಹಲಿಯಲ್ಲಿ ಬಳಕೆಯಲ್ಲಿದ್ದ ಖಡಿಬೋಲಿಯನ್ನು ಬಳಸುವಂತೆ ಮಾಡಿತು. ಸ್ಥಳೀಯ ಜನತೆ ಪರ್ಷಿಯನ್ ಪದಗಳನ್ನು ತಮ್ಮ ಮಾತಿನಲ್ಲಿ ಉಪಯೋಗಿಸುವಂಥ ಪರಿಸ್ಥಿತಿಯುಂಟಾಯಿತು. ಹೊಸದಾಗಿ ಬಂದವರು ಪರ್ಷಿಯನ್‌ನಿಂದ ಪ್ರಭಾವಿತವಾದ ಪ್ರಾಕೃತವನ್ನು ಪಂಜಾಬ್ ಮತ್ತು ಹರ್‍ಯಾಣದಿಂದ ತಂದು ಸು. 2 ಶತಮಾನಗಳವರೆಗೂ ಬಳಸಿದರು. ಇದರಿಂದ ಖಡಿಬೋಲಿಗೆ ಹೊಂದಿಕೊಳ್ಳುವುದು ಅವರಿಗೆ ಸುಲಭವಾಯಿತು. ದೆಹಲಿ ಮತ್ತು ಉತ್ತರ ಭಾರತದಲ್ಲಿ ಪರ್ಷಿಯನ್ ಆಡಳಿತ, ಆಸ್ಥಾನ (ದರ್ಬಾರ್) ಮತ್ತು ಸಾಹಿತ್ಯಕ ಭಾಷೆಯಾಗಿರುವಾಗ ಉರ್ದು ನಾಲ್ಕು ಶತಮಾನಗಳ ಕಾಲ ಜನತೆಯ ಆಡುಭಾಷೆಯಾಗಿತ್ತು.

ಖಿಲ್ಜಿ ದಾಳಿಗಳ (1294–1311) ಮೂಲಕ ಹೊಸಭಾಷೆ ಗುಜರಾತಿನಿಂದ ದಕ್ಷಿಣ ಭಾರತಕ್ಕೆ ಬಂತು. ಮೊದಲು ಬಹಮನಿ ನಂತರ ಇದು ಹೊಮ್ಮಿದ ದಖನ್ನಿನ ಐದು ರಾಜ್ಯಗಳ 350 ವರ್ಷಗಳ ಆಳ್ವಿಕೆಯಲ್ಲಿ ಉರ್ದುಭಾಷೆ ದಕ್ಷಿಣ ಭಾರತದಲ್ಲಿ ಹುಲುಸಾಗಿ ಬೆಳೆಯಿತು. ಪ್ರದೇಶದ ಹೆಸರಿನಿಂದಲೇ ಅದಕ್ಕೆ ದಖನಿ ಎಂದು ಹೆಸರು ಬಂತು. ಆಗ ಈ ಭಾಷೆ 14ನೆಯ ಶತಮಾನದಲ್ಲಿ ದೆಹಲಿಯಲ್ಲಿ ಮಾತನಾಡುತ್ತಿದ್ದ ಭಾಷೆಯೇ ಆಗಿತ್ತು. ಅನಂತರ ಉತ್ತರದಲ್ಲಿ ಇದು ಪರ್ಷಿಯನ್ ಭಾಷೆಯ ತೀವ್ರ ಪ್ರಭಾವದಿಂದ ಅಭಿವೃದ್ಧಿಗೊಂಡು ಉರ್ದುವಾಯಿತು. ದಕ್ಷಿಣದಲ್ಲಿ ಇದು ತನ್ನ ಮೂಲ ಲಕ್ಷಣಗಳನ್ನು ಬಹುಪಾಲು ಉಳಿಸಿಕೊಂಡಿತಲ್ಲದೆ ಮರಾಠಿ, ಗುಜರಾತಿ ಮತ್ತು ಕೆಲವು ಪ್ರಾದೇಶಿಕ ಭಾಷೆಗಳಿಂದ ಕೆಲಮಟ್ಟಿಗೆ ಪ್ರಭಾವಗೊಂಡಿತು. ಗುಜರಾತಿನಲ್ಲಿ ಗುಜರಾತಿ ಭಾಷೆಗಳಿಂದ ಪ್ರಭಾವಗೊಂಡು 'ಗುಜ್ರಿ' ಹೆಸರು ಪಡೆಯಿತು. ಹೀಗೆ ದಕ್ಷಿಣ ಭಾರತದಲ್ಲಿ ದಖನಿ ಕಾವ್ಯ ಮತ್ತು ಸಾಹಿತ್ಯಕಭಾಷೆಯಾಗಿ ಬಳಕೆಯಾಯಿತು. **(ನೋಡಿ– ದಖನೀ–ಭಾಷೆ,–ಸಾಹಿತ್ಯ).** ಕ್ರಮೇಣ ಉತ್ತರ ಮತ್ತು ದಕ್ಷಿಣದವರ ಪ್ರತ್ಯೇಕತಾಮನೋಭಾವ ಹೆಚ್ಚುತ್ತಾ ಹೋಯಿತು.

ದಕ್ಷಿಣ ರಾಜ್ಯಗಳ ಆಡಳಿತಗಾರರು ತಮ್ಮನ್ನು ದಖನಿಗಳೆಂದೂ ಹೊರಗಿನವರನ್ನು ಅಂದರೆ ಉತ್ತರದವರನ್ನು ಆಫಾಕಿಗಳೆಂದೂ ಕರೆದುಕೊಂಡರು. ಈ ಭೇದ ಆಸ್ಥಾನದಲ್ಲಿ ಮತ್ತು ಸಾಮಾಜಿಕ ಜೀವನದಲ್ಲಿ ಉಳಿಯಿತು. ಪರಿಣಾಮವಾಗಿ ದೆಹಲಿಯ ಆಸ್ಥಾನ ಮತ್ತು ಸಾಹಿತ್ಯಕ ಭಾಷೆಯಾದ ಪರ್ಷಿಯನ್ನಿನ ಪೈಪೋಟಿಯಿಂದ ಉರ್ದು ಬೆಳೆಯತೊಡಗಿತು. ಸು. 1375ರ ವರೆವಿಗೂ ದೆಹಲಿ ಉರ್ದುವಿಗೂ ದಕ್ಷಿಣದ ಉರ್ದುವಿಗೂ ಯಾವುದೇ ವ್ಯತ್ಯಾಸವಿರಲಿಲ್ಲ. ಮುಂದೆ ಅವು ಎರಡು ರೀತಿಯಲ್ಲಿ ಬೆಳೆದವು. ದಖನಿ ಒಂದು ವಿಶಿಷ್ಟ ಭಾಷೆಯಾಗಿ ಅದರಲ್ಲಿ ಕವಿ ಮತ್ತು ಸಾಹಿತಿಗಳು ಶ್ರೀಮಂತ ಸಾಹಿತ್ಯವನ್ನು ರಚಿಸಿದರು. ದಕ್ಷಿಣದ ಸುಲ್ತಾನರು ಈ ಭಾಷೆಗೆ ಪ್ರೋತ್ಸಾಹವನ್ನು ನೀಡಿದರಲ್ಲದೆ ತಾವೇ ಸುಂದರ ಕಾವ್ಯಗಳನ್ನು ರಚಿಸಿದರು. ಔರಂಗಜೇಬನ ದಾಳಿ ಮತ್ತು ಮೊಘಲರ ಆಳ್ವಿಕೆಗಳು ಉತ್ತರದ ಉರ್ದುವಿನ ಪ್ರಭಾವ ದಖನಿಯ ಮೇಲೆ ಹೆಚ್ಚುವಂತೆ ಮಾಡಿದವು. ಇದರಿಂದಾಗಿ ಈ ಕಾಲದ ಅಂತ್ಯದಲ್ಲಿ ಈ ಭಾಷೆ ತನ್ನ ಪಥವನ್ನು ಬದಲಾಯಿಸಿತು. ಕ್ರಮೇಣ ದಖನಿ ದಕ್ಷಿಣಭಾರತದಲ್ಲಿ 3ರಿಂದ 4 ಶತಮಾನದ ಉಜ್ಜ್ವಲ ಸಾಹಿತ್ಯಕ ಚಟುವಟಿಕೆಯಿಂದಾಗಿ ಉತ್ತರ ಭಾರತದ ಆಡುಭಾಷೆಯಾಗಿದ್ದ ಉರ್ದುವಿನ ಸಾಹಿತ್ಯಕ ಚಟುವಟಿಕೆಗೆ ನಾಂದಿಯಾಯಿತು. ದಖನಿ ಭಾಷೆಯ ಸಾಹಿತ್ಯಕ ಚಟುವಟಿಕೆ ದಕ್ಷಿಣ ಭಾರತದಲ್ಲಿ ಮೊಘಲರ ಆಳ್ವಿಕೆ ಮುಗಿದ ಮೇಲೂ ಹೈದರಾಬಾದಿನ ಆಸಫ್‌ಜಾಹಿ, ಹೈದರಾಲಿಯ ಖುದದಾದ ಸುಲ್ತಾನಶಾಹಿ, ಮೈಸೂರಿನ ಟಿಪ್ಪುಸುಲ್ತಾನ ಮುಂತಾದ ಅರಸರ ಆಶ್ರಯದಲ್ಲಿ ಮತ್ತು ಕರ್ನಾಟಕದ ನವಾಬರು, ಸಿದ್ದೋಟ್ (ಕಡಪ ಜಿಲ್ಲೆ) ಮತ್ತು ಕರ್ನೂಲುಗಳಲ್ಲಿ ಮುಂದುವರಿಯಿತು. ಆದರೆ ದಖನಿ ಭಾಷೆ ತನ್ನ ಮೂಲ ಲಕ್ಷಣವನ್ನು ಕ್ರಮೇಣ ಕಳೆದುಕೊಂಡು ಉರ್ದೀಕರಣಗೊಂಡಿತು. ದಕ್ಷಿಣ ಭಾರತದಲ್ಲಿ ಇಂದಿಗೂ ದಖನಿ ಆಡುಭಾಷೆಯಾಗಿಯೂ ಉರ್ದು ಸಾಹಿತ್ಯಕ ಭಾಷೆಯಾಗಿಯೂ ಉಳಿದಿವೆ.

ವಲೀ ಕವಿಯ ದಖನಿ ಕಾವ್ಯ ದೆಹಲಿಯನ್ನು ಪ್ರವೇಶಿಸಿದ ನಂತರ (17,00,1722) ಉತ್ತರ ಭಾರತದಲ್ಲಿ ಉರ್ದು ಕಾವ್ಯ ಮತ್ತು ಸಾಹಿತ್ಯದ ಉಬ್ಬರ ಕಂಡುಬಂತು. ಅಲ್ಲಿ ಪರ್ಷಿಯನ್ನಿನ ತೀವ್ರ ಪ್ರಭಾವಕ್ಕೆ ಉರ್ದುಭಾಷೆ ಒಳಗಾದುದಲ್ಲದೆ ಬಹುಪಾಲು ಪರ್ಷಿಯನ್ನೀಕರಣಗೊಂಡಿತು. ಇದಕ್ಕೆ ಕಾರಣ ಪರ್ಷಿಯನ್ ಭಾಷೆ ಸೊಗಸಾಗಿ ಬೆಳೆದು ಸಂಸ್ಕಾರಗೊಂಡು ಸಾಂಸ್ಕೃತಿಕ ಭಾಷೆಯಾಗಿದ್ದುದು. ಪರ್ಷಿಯನ್ನಿನ ಪದಸಂಪತ್ತಿಗೆ ಸಮಾನವಾಗಬಲ್ಲ ಪದಸಂಪತ್ತು ಪ್ರಾಕೃತ ಭಾಷೆಯಲ್ಲಿರಲಿಲ್ಲ. ಅದು ಕೇವಲ ಆಳುವವರ, ವೀರರ, ಯುದ್ಧದ ಮತ್ತು ಪ್ರೇಮದ ಭಾಷೆಯಾಗಿತ್ತು. ಅಲ್ಲದೆ ಪರ್ಷಿಯನ್ ಭಾಷೆಯಲ್ಲಿನ ಪದಗಳು ಮಧುರವಾಗಿಯೂ ಕಿವಿಗೆ ಹಿತವಾಗಿಯೂ ಇದ್ದುವು. ಖಿಲ್ಜಿ ಮತ್ತು ತುಘಲಕರ ಅನಂತರ ಬಂದ ಮೊಘಲರ ಕಾಲದಲ್ಲಿ ಅಂದರೆ 1857ರ ವರೆವಿಗೂ ಉರ್ದು ಭಾಷೆಯ ಪರ್ಷಿಯನ್ನೀಕರಣ ಮುಂದುವರಿಯಿತೆಂದೇ ಹೇಳಬೇಕು. ಪರ್ಷಿಯನ್ ಭಾಷೆ ಮತ್ತು ಸಾಹಿತ್ಯ ಉರ್ದುಭಾಷೆಗೆ ಮಾದರಿಯಾದವು. ಪರ್ಷಿಯನ್ನೀಕರಣ ಉರ್ದುಭಾಷೆಗೆ ಕಾಂತಿಯನ್ನಿತ್ತಿತು. ಅಕ್ಬರನ ಆಳ್ವಿಕೆಯಲ್ಲಿ ಸರ್ಕಾರಿಸೇವೆಗೆ ಸೇರಲು ಪರ್ಷಿಯನ್ ಭಾಷಾಜ್ಞಾನ ಕಡ್ಡಾಯವಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಸಂಸ್ಕೃತಕ್ಕೆ ಸೋದರಿ ಭಾಷೆಯಾದ ಪರ್ಷಿಯನ್ ಭಾಷಾ ಪದಸಂಪತ್ತು ಮತ್ತು ನುಡಿಗಟ್ಟು ಪ್ರಾಕೃತಕ್ಕೆ ಚೆನ್ನಾಗಿ ಒಗ್ಗಿಕೊಂಡಿತು. ದೆಹಲಿ ಮತ್ತು ಲಖನೌದ ಬಹುಪಾಲು ಕವಿಗಳು ದ್ವಿಭಾಷಾ ಕವಿಗಳಾಗಿದ್ದರು. ಅವರು ಪರ್ಷಿಯನ್ ಮತ್ತು ಉರ್ದುವಿನಲ್ಲಿ ಕಾವ್ಯವನ್ನು ರಚಿಸಿದರು. 1700 ರಿಂದ ಸುಮಾರು ನೂರು ವರ್ಷಗಳ ಕಾಲ ದೆಹಲಿ ಸಾಹಿತ್ಯಕ ಚಟುವಟಿಕೆಗಳ ಕೇಂದ್ರವಾಗಿತ್ತು. ಮುಂದಿನ ಸತತ ರಾಜಕೀಯ ಅನಾಯಕತ್ವದಿಂದಾಗಿ ವಿದ್ವಾಂಸರು ಮತ್ತು ಕವಿಗಳು ದೆಹಲಿ ಆಡಳಿತದಿಂದ ಸ್ವತಂತ್ರಗೊಂಡ ಲಖನೌಗೆ ವಲಸೆ ಹೋದರು. ಅಲ್ಲಿ ಉರ್ದು ವ್ಯಾಕರಣ, ಭಾಷೆ ಮತ್ತು ನುಡಿಗಟ್ಟಿನ ಚೌಕಟ್ಟು ಸಿದ್ಧವಾಯಿತು. ಕಾವ್ಯರಚನಾ ಸ್ವಾತಂತ್ರ್ಯ ನಿಗದಿಗೊಂಡಿತು. ಛಂದಸ್ಸು, ಅಲಂಕಾರ, ಉಪಮೆ, ರೂಪಕಗಳು ಸಿದ್ಧವಾದವು. ಒಟ್ಟಿನಲ್ಲಿ ಉರ್ದುಭಾಷೆ 19ನೆಯ ಶತಮಾನದಲ್ಲಿ ಲಖನೌದಲ್ಲಿ ವ್ಯವಸ್ಥೆಗೊಂಡು ನಿಯಂತ್ರಣಗೊಂಡಿತು. ಮೊಘಲ್ ರಾಜನಾದ ಬಹದೂರ್ ಷಾಹನ ಆಳ್ವಿಕೆಯ ಕೊನೆಗೆ (19ನೆಯ ಶತಮಾನದ ಮಧ್ಯ) ದೆಹಲಿಯಲ್ಲಿ ಸಾಹಿತ್ಯಕ ಚಟುವಟಿಕೆ ಪುನರಾರಂಭವಾಯಿತು. ಅಲ್ಲಿಂದ ಮುಂದೆ ದೆಹಲಿ, ಲಖನೌಗಳೆರಡೂ ಉರ್ದುಭಾಷೆ ಮತ್ತು ಸಾಹಿತ್ಯದ ಪ್ರಮುಖ ಕೇಂದ್ರಗಳಾದುವು. ಇದರೊಡನೆ ಪಟ್ನ, ಮುರ್ಶಿದಾಬಾದ್, ಟೋಂಕ್, ಭೂಪಾಲ್, ಮಂಗ್ರೋಲ್, ರಾಮಪುರ, ಹೈದರಾಬಾದ್ ಆಸ್ಥಾನಗಳು ಕವಿ, ವಿದ್ವಾಂಸ ಬರೆಹಗಾರರನ್ನು ಆಕರ್ಷಿಸಿದವು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ (1857) ಫಲವಾಗಿ ಸಾಹಿತಿಗಳು ದೆಹಲಿಯಿಂದ ನಿರ್ಗಮಿಸಿ ದೇಶದ ಬೇರೆ

# ಉರ್ದು ವರ್ಣಮಾಲೆ

| | | | | | | | |
|---|---|---|---|---|---|---|---|
| ج | ث | ٹ | ت | پ | ب | ا | 1 |
| (ಅ) ಜೀಮ್ | (ಅ) ಸೆ | (ಹಿ) ಟೆ | (ಅ) ತೆ | (ಪ) ಪೆ | (ಅ) ಬೆ | (ಅ) ಅಲೀಫ್ | 2 |
| ಜ | ಸ | ಟ | ತ | ಪ | ಬ | ಅ,ಆ | 3 |
| ر | ذ | ڈ | د | خ | ح | چ | 1 |
| (ಅ) ರೆ | (ಅ) ಜ಼ಾಲ್ | (ಹಿ) ಡಾಲ್ | (ಅ) ದಾಲ್ | (ಅ) ಖ಼ೈ | (ಅ) ಹೈ | (ಅ) ಚೀಮ್ | 2 |
| ರ | ಜ಼ | ಡ | ದ | ಖ಼ | ಹ | ಚ | 3 |
| ض | ص | ش | س | ژ | ز | ڑ | 1 |
| (ಅ) ಜ಼್ವಾದ್ | (ಅ) ಸ್ವಾದ್ | (ಅ) ಷೀನ್ | (ಅ) ಸೀನ್ | (ಪ) ಷ಼ೆ | (ಅ) ಜ಼ೆ | (ಹಿ) ಡ಼ೆ | 2 |
| ಜ಼ | ಸ | ಷ | ಸ | ಷ಼ | ಜ಼ | (ಹ) ಡ಼ | 3 |
| ک | ق | ف | غ | ع | ظ | ط | 1 |
| (ಅ) ಕಾಫ್ | (ಅ) ಕ಼ಾಫ್ | (ಅ) ಫೆ | (ಅ) ಗ಼ೈನ್ | (ಅ) ಐನ್ | (ಅ) ಜ಼ೋಯೆ | (ಅ) ತೋಯೆ | 2 |
| ಕ | ಕ಼ | ಫ಼ | ಗ಼ | ಅ, ಆ | ಜ಼ | ತ | 3 |
| ے ی | ھ ہ | و | ن | م | ل | گ | 1 |
| (ಅ) ಏ | (ಅ) ಹೆ | (ಅ) ವಾವು | (ಅ) ನೂನ್ | (ಅ) ಮೀಮ್ | (ಅ) ಲಾಮ್ | (ಪ) ಗಾಫ್ | 2 |
| ಏ ಇ | ಹ | ವ | ನ | ಮ | ಲ | ಗ | 3 |

ಮಹಾಪ್ರಾಣಗಳು

(ಸಂಯುಕ್ತಾಕ್ಷರಗಳು)

| | | | | | | | |
|---|---|---|---|---|---|---|---|
| دھ | چھ | جھ | ٹھ | تھ | پھ | بھ | 1 |
| (ಹಿ) ಧಾಲ್ | (ಹಿ) ಛೀಮ್ | (ಹಿ) ಝೀಮ್ | (ಹಿ) ಠೆ | (ಹಿ) ಥೆ | (ಹಿ) ಫೆ | (ಹಿ) ಭೆ | 2 |
| ಧ | ಛ | ಝ | ಠ | ಥ | ಫ | ಭ | 3 |
| نھ | مھ | لھ | گھ | کھ | ڑھ | ڈھ | 1 |
| (ಹಿ) ನ್ಹೂನ್ | (ಹಿ) ಮ್ಹೀಮ್ | (ಹಿ) ಲ್ಹಾಮ್ | (ಹಿ) ಘಾಫ್ | (ಹಿ) ಖಾಫ್ | (ಹಿ) ಢ಼ೇ | (ಹಿ) ಢಾಲ್ | 2 |
| ನ್ಹ | ಮ್ಹ | ಲ್ಹ | ಘ | ಖ | ಢ಼ | ಢ | 3 |

1. ಉರ್ದು ವರ್ಣ, 2. ವರ್ಣದ ಹೆಸರು, 3. ಅಕ್ಷರ ಸೂಚಿಸುವ ಉಚ್ಚಾರ.

ಅ—ಅರಬ್ಬೀ, ಪ—ಪರ್ಷಿಯನ್, ಹಿ—ಹಿಂದಿ.

ಬೇರೆ ಸ್ಥಳಗಳಲ್ಲಿ ನೆಲೆಸಿದರು. ಇದರಿಂದ ಉರ್ದು ಭಾಷೆ ಮತ್ತು ಸಾಹಿತ್ಯ ದೇಶದಲ್ಲೆಲ್ಲ ಹರಡಿತು. ಬ್ರಿಟಿಷ್ ಆಳ್ವಿಕೆಯ ಆರಂಭದಿಂದ ಉರ್ದು ಹೊಸ ತಿರುವನ್ನು ಪಡೆದು ಅವರ ಭಾಷೆ ಮತ್ತು ನಾಗರೀಕತೆಯ ಪ್ರಭಾವದಿಂದ ಆಧುನಿಕತೆಯ ಕಡೆಗೆ ಸಾಗಿತು. ಅದುವರೆಗೂ ಉರ್ದು ಕಾವ್ಯಭಾಷೆಯಾಗಿತ್ತು. ಪ್ರಧಾನ ಬರೆದ ಉರ್ದು ಗದ್ಯವೆಲ್ಲವೂ ಸಾಂಪ್ರದಾಯಕವಾಗಿದ್ದುವು. ಈಸ್ಟ್ ಇಂಡಿಯಾ ಕಂಪೆನಿಯ ಬ್ರಿಟಿಷ್ ಅಧಿಕಾರಿಗಳಿಗೆ ದೇಶೀ ಭಾಷೆಗಳನ್ನು ಕಲಿಸಲು ಆರಂಭವಾದ (1800) ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಉರ್ದು ಗದ್ಯ ಅಭಿವೃದ್ಧಿಗೊಂಡಿತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಅಲಿಘರ್ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಸರ್ ಸೈಯದ್ ಅಹಮದ್‌ಖಾನ್ ತನ್ನ ಅಮೂಲ್ಯ ಕಾಣಿಕೆಗಳಿಂದ ಉರ್ದು ಗದ್ಯದ ಭಾಷೆಯನ್ನು ಸರಳಗೊಳಿಸಿ ಸಾಂಪ್ರದಾಯಕತೆಯನ್ನು ಹೋಗಲಾಡಿಸಿ ಶಾಸ್ತ್ರೀಯಗೊಳಿಸಿದ. ಇಂಗ್ಲಿಷ್ ಕೃತಿಗಳ ಅನುವಾದ ಉರ್ದುಭಾಷೆ ಮತ್ತು ಸಾಹಿತ್ಯದ ಅವಕಾಶವನ್ನು ಹೆಚ್ಚಿಸಿದುದಲ್ಲದೆ ಶಾಸ್ತ್ರೀಯ ಪರಿಭಾಷೆ ಮತ್ತು ಪದಕೋಶವನ್ನು ಶ್ರೀಮಂತಗೊಳಿಸಿತು. ದೆಹಲಿಯಲ್ಲಿ ಬ್ರಿಟಿಷ್ ಸರ್ಕಾರದ ಆಡಳಿತ ಭಾಷೆಯಾಗಿದ್ದ ಪರ್ಷಿಯನ್ನಿನ ಸ್ಥಾನವನ್ನು ಉರ್ದು ಆಕ್ರಮಿಸಿ ಇಂಗ್ಲಿಷ್ ಆ ಸ್ಥಾನವನ್ನು ಪಡೆಯುವವರೆಗೂ ವಿರಾಜಿಸಿತು.

ಉರ್ದು ವರ್ಣಮಾಲೆಯಲ್ಲಿ 35 ಅಕ್ಷರಗಳಿವೆ. ಅರಬ್ಬೀಯಲ್ಲಿ 28 ಅಕ್ಷರಗಳಾದರೆ ಪರ್ಷಿಯನ್‌ನಲ್ಲಿ 32. ಪ್(p), ಚ್ (cl), ಗ್ (g) ಗಳು ಪರ್ಷಿಯನ್ ಮತ್ತು ಉರ್ದುವಿನಲ್ಲಿ ಸಮಾನ ಧ್ವನಿಗಳು. ಟ್ (t), ಡ್ (d), ಡ (R) ನಂಥ ವಿಶಿಷ್ಟ ಅಕ್ಷರಗಳು ಭಾರತದ ಪ್ರಾಕೃತದಿಂದ ಉರ್ದು ವರ್ಣಮಾಲೆಗೆ ಹೊಸದಾಗಿ ಸೇರಿದವು. ಈ ಏಕಾಕ್ಷರಗಳ ಜತೆಗೆ ಭೇ (bhe), ಥೆ (the), ಝೀಮ್(jheem), ಛೀಮ್(cheem) ಮೊದಲಾದ ಹದಿನಾರು ಮಹಾಪ್ರಾಣಾಕ್ಷರಗಳು ಇವೆ.

ಹಿಂದ್ ಅಥವಾ ಇಂಡಿಯ (ಭಾರತ) ಎಂಬುದರ ಮೂಲ ಅರ್ಥದಲ್ಲಿ ಈ ಆಡು ಭಾಷೆಯನ್ನು ಹಿಂದಿಯೆಂದು ಕರೆದರು. ದೆಹಲಿಯ ಮೊಟ್ಟ ಮೊದಲ ಬರಹಗಾರ ಅಮೀರ್ ಖುಸ್ರೋ (ಮರಣ 1322) ಇದನ್ನು ಹಿಂದವೀ ಎಂದು ಕರೆದ. ಇದು ಕಾವ್ಯ ರಚನೆಗೆ ಬಳಕೆಯಾದಾಗ ರೀಖ್ತ ಎಂದಾಯಿತು: ಆರಂಭಿಕ ಕಾವ್ಯಕ್ಕೂ ಇದೇ ಹೆಸರಾಯಿತು. (1950). ಇದರ ಅರ್ಥಪತನಗೊಂಡು, ಅಚ್ಚಿಗೆ ಹುಯ್ದು, ಮತ್ತು ಸುರಿದ–ಎಂದು; ಅಂದರೆ ಮೂಲ ಭಾಷೆಯಿಂದ ಭಿನ್ನವಾದುದರಿಂದ ಇದು ಅಪಭ್ರಂಶ. ಭಿನ್ನ ಭಾಷೆಗಳ ಪದಗಳನ್ನು ಎರವಲಾಗಿ ಪಡೆದು ಹೊಂದಿಕೊಂಡು ಬೆಸುಗೆಯಾಗಿ ಎರಕಗೊಂಡ ಭಾಷೆ. ಪರ್ಷಿಯನ್ ಮತ್ತು ಅರಬ್ಬೀ ಭಾಷೆಗಳಿಂದ ಬಂದ ಪ್ರಾಕೃತ ರೂಪಗಳು ಈ ಭಾಷೆಗೆ ಸುರಿಯಲ್ಪಟ್ಟುದರಿಂದ ಸುರಿದ ಭಾಷೆ ಎನಿಸಿತು. ರಾಜಸೇನೆಯ ಭಾಷೆ ಅರ್ಥ ಬರುವ ಝಬಾನೆ ಉರ್ದು–ಎ–ಮುಅಲ್ಲಾ ಎಂಬ ಹೆಸರನ್ನು ಕೊಟ್ಟವು ಷಹಜಹಾನ್ ಚಕ್ರವರ್ತಿ. ಕ್ರಮೇಣ ಝಬಾನ್ ಮತ್ತು ಮುಅಲ್ಲ ಪದಗಳನ್ನು ಕಳೆದುಕೊಂಡು ಉರ್ದು ಪದ ಬಳಕೆಗೆ ಬಂತು. ಉರ್ದು ತುರ್ಕಿ ಪದ ಇದಕ್ಕೆ ಪ್ರತಿಯಾಗಿ ಇಂಗ್ಲಿಷಿನಲ್ಲಿ ಅಲೆದಾಡುವ ಜನಗಳ ಗುಂಪು (ಹೋರ್ಡ್) ಎಂಬುದುಂಟು. ದಖನಿ ಮತ್ತು ಹಿಂದಿ ಭಾಷೆ ದಕ್ಷಿಣದಲ್ಲಿ ಬೆಳೆದಂತೆ ಉತ್ತರದಲ್ಲಿ ಇದನ್ನು ಝಬಾನೆ ಹಿಂದೂಸ್ತಾನ್ (ಭಾರತದ ಭಾಷೆ) ಮತ್ತು ಉರ್ದು ಎಂದು ಕರೆದರು.

ಉರ್ದು ಸಾಕಷ್ಟು ಪ್ರಾಚೀನ ಭಾಷೆ: ಈಗಲೂ ಜೀವಂತವಾಗಿರುವ ಭಾಷೆ. ರಚನೆ, ವ್ಯಾಕರಣ ಮತ್ತು ಅನ್ವಯಗಳ ದೃಷ್ಟಿಯಿಂದ ಉರ್ದುವಿಗೂ ಹಿಂದಿಗೂ ಹೆಚ್ಚಿನ ವ್ಯತ್ಯಾಸ ಕಾಣದು. ಅವಕ್ಕೆ ಬಹುಪಾಲು ಪದಭಂಡಾರವೂ ಅವಕ್ಕೆ ಒಂದೇ ಆಗಿದೆ. ಆದರೆ ಲಿಪಿ ಎರಡಕ್ಕೂ ಬೇರೆ ಬೇರೆ. ಉರ್ದುವಿನಲ್ಲಿ ಅರಬ್ಬೀ ಮತ್ತು ಪರ್ಷಿಯನ್ ಪದಗಳು ಹೆಚ್ಚು. ಹಿಂದಿಯಲ್ಲಾದರೋ ಸಂಸ್ಕೃತ ಪದಗಳು ಹೆಚ್ಚು. ಈಗ ಜಮ್ಮು ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಉರ್ದು ಪ್ರಾಂತ್ಯ ಭಾಷೆಗಳಲ್ಲೊಂದಾಗಿದೆ. ಪಂಜಾಬು, ಉತ್ತರ ಪ್ರದೇಶ, ಬಿಹಾರ ಮೊದಲಾದ ಉತ್ತರಭಾರತದ ಕೆಲವು ಭಾಗಗಳಲ್ಲಿ ಇದರ ವ್ಯಾಪ್ತಿ ಹೆಚ್ಚು, ಉರ್ದು ಮಾತನಾಡುವವರ ಸಂಖ್ಯೆ ಭಾರತದಲ್ಲಿ ಸು.2 1/3 ಕೋಟಿಯಾದರೆ ಪ್ರಪಂಚದಲ್ಲಿ 5.5 ಕೋಟಿ (1968).

(ಎಂ.ವೈ.ಕೆ.;ಎಂ.ಎಂ.ಎಚ್.)

**ಉರ್ದು ಸಾಹಿತ್ಯ:** ದಖನಿಯ ಮೊದಲ ಉರ್ದು ಕವಿ ವಲೀ ದೆಹಲಿಗೆ ನೀಡಿದ ಮೊಟ್ಟ ಮೊದಲ ಭೇಟಿಯೆ (1700) ಉತ್ತರಭಾರತದಲ್ಲಿ ಉರ್ದುಕಾವ್ಯದ ಅಸ್ತಿಭಾರಕ್ಕೆ ಕಾರಣವಾಯಿತು. ಅದುವರೆಗೂ ದೆಹಲಿಯ ಕವಿಗಳು ಉರ್ದುವಿನಲ್ಲಿ ಮಾತನಾಡಿ ಪರ್ಷಿಯನ್ನಿನಲ್ಲಿ ಬರೆಯುತ್ತಿದ್ದರು. ದಕ್ಷಿಣದಲ್ಲಿ 400 ವರ್ಷಗಳಿಂದ ಉರ್ದುವಿನಲ್ಲಿ (ದಖನಿ) ಗದ್ಯಪದ್ಯ ಸೃಷ್ಟಿಯಾಗುತ್ತಿದ್ದ ಸಂಗತಿ ಅವರಿಗೆ ತಿಳಿದೇ ಇರಲಿಲ್ಲ. ವಲೀಯ ಕಾವ್ಯವನ್ನು ಓದಿ, ಕೇಳಿದ ಜನ ಅದರ ಓಘವನ್ನು ಕಂಡು ಮಾರುಹೋದರು. ವಲೀಯ ಪದ್ಯಗಳು ಬಹುಬೇಗ ಜನಪ್ರಿಯವಾದವು. ಬಜಾರುಗಳಲ್ಲಿ ಅವನ ಕಾವ್ಯವನ್ನು ಜನ ಹಾಡತೊಡಗಿದರು. ಎಲ್ಲ ಕಡೆಯೂ ಅವನಿಗೆ ಗೌರವಪೂರ್ಣ ಸ್ವಾಗತ ದೊರೆಯಿತು. ಹೀಗೆ ವಲೀಯ ಭೇಟಿ ಉತ್ತರ ಭಾರತದ ಕಾವ್ಯ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನುಂಟುಮಾಡಿತಲ್ಲದೆ ಅದರ ಭಾಷೆಯನ್ನು ಪರ್ಷಿಯನ್ನಿನಿಂದ ಉರ್ದುವಿಗೆ ಬದಲಾಯಿಸಿತು. ಆದ್ದರಿಂದ ದೆಹಲಿಯ ಕವಿಗಳು ದಖನಿ ಕವಿಗಳನ್ನು ಅನುಸರಿಸಿದರಲ್ಲದೇ ತಮ್ಮ ಆಡುಭಾಷೆಯಾದ ಉರ್ದುವಿನಲ್ಲೇ ಕಾವ್ಯವನ್ನು ರಚಿಸಿದರು. ಆದರೆ ಬಹುಮಟ್ಟಿಗೆ ಅನೇಕ ಕವಿಗಳಿಗೆ ಪರ್ಷಿಯನ್ ಕಾವ್ಯಗಳೇ ಮೇಲ್ಪಂಕ್ತಿಗಳಾಗಿದ್ದವು. ಹಾಗಾಗಿ ಉರ್ದು ಕಾವ್ಯ ಪರ್ಷಿಯನೀಕರಣಗೊಂಡಿರುವುದನ್ನು ಬಹುಸುಲಭವಾಗಿ ಗುರುತಿಸಬಹುದು. ವಲೀಯಂಥ ದೇಶೀಯ ಕವಿಗೂ ಈ ಪ್ರಭಾವ ತಗಲದಿರಲಿಲ್ಲ. ಅವನ ಮೊದಲ ಕಾವ್ಯಗಳಲ್ಲಿ ಕಾಣಲಾಗದ ಪರ್ಷಿಯನ್ ಛಾಯೆಗಳನ್ನು ಅವನ ಅನಂತರದ ಕಾಣಬಹುದು. ವಲೀಯೇ ಅಲ್ಲದೆ ಫಿರಾಕಿ, ಫಕ್ರೀ, ಅಜ಼ಾದ್, ತಾಲಿಲೆ ಮತ್ತು ಇತರ ಕೆಲವಾರು ಕವಿಗಳು ದೆಹಲಿಗೆ ಭೇಟಿನೀಡಿದರು. ವಲೀಯಂತೂ ಉರ್ದು ಕಾವ್ಯದ ಜನಕನಾದುದರಿಂದ ಔಚಿತ್ಯಪೂರ್ಣವಾಗಿ ಬಾಬಾ–ಎ–ರೀಖ್ತ (ಉರ್ದು ಕಾವ್ಯದ ತಂದೆ) ಎಂಬ ಹೊಗಳಿಕೆಗೆ ಪಾತ್ರನಾದ. ಇವನು ದೆಹಲಿಯಿಂದ ತಂದ ಪರ್ಷಿಯನ್ ಪ್ರಭಾವ ದಕ್ಷಿಣದಲ್ಲಿ ದಖನಿಯ ಪಥವನ್ನು ಬದಲಾಯಿಸಿದುದೇ ಅಲ್ಲದೆ ಉರ್ದುವನ್ನು ದಖನಿಯ ಸ್ಥಾನದಲ್ಲಿಟ್ಟಿತು.

ವಲೀಯ ಸುತ್ತಮುತ್ತ ಗುಂಪುಗೂಡಿದ ಕವಿಗಳಲ್ಲಿ ಸಿರಾಜುದ್ದೀನ್ ಸಿರಾಜ್ (1714–63) ಅತ್ಯಂತ ಶ್ರೇಷ್ಠನಾದವ. ಔರಂಗಾಬಾದಿನಿಂದ ಬಂದ ಈತ ಒಬ್ಬ ಸೂಫಿ. ದೊಡ್ಡ ಸತ್ತ್ವದ ಕವಿಯಾಗಿದ್ದ ಇವನು ಗಜ಼ಲ್‌ಗಳ ಒಂದು ಪೂರ್ಣ ಕುಲ್ಲಿಯಾತನ್ನು ರಚಿಸಿದ್ದಾನೆ. ವಸ್ತುವಿನ ನೂತನತೆ, ಚಿಂತನೆಯ ಔನ್ನತ್ಯವನ್ನು ಇವನಲ್ಲಿ ಕಾಣಬಹುದು. ಇವನ ಭಾಷೆ ದಖನಿಗಿಂತ ಉರ್ದುವಿನ ಕಡೆಗೆ ಹೆಚ್ಚು ವಾಲಿದೆ. ಸೂಫಿ ಸಿದ್ಧಾಂತದ ಪ್ರಚಾರವೇ ಇವನ ಉದ್ದೇಶ. ವಾರಕ್ಕೊಮ್ಮೆ ಮುಷಾಯರಗಳನ್ನು ತನ್ನ ಮನೆಯಲ್ಲಿ ಈತ ಏರ್ಪಡಿಸುತ್ತಿದ್ದ, ವಲೀಯ ಉತ್ತರಾಧಿಕಾರಿಯೆಂದು ಜನ ಈತನನ್ನು ಪರಿಗಣಿಸಿದ್ದರು. ದಕ್ಷಿಣ ಭಾರತದಲ್ಲಿ ಮೊಘಲರ ಆಳ್ವಿಕೆ ಕೊನೆಗೊಂಡ ಮೇಲೆ (1700) ದಖನಿ ದಕ್ಷಿಣದಲ್ಲಿ ಆಡುಭಾಷೆಯಾಗಿ ಮುಂದುವರಿಯಿತಲ್ಲದೇ ಇಂದಿಗೂ ಈ ಪ್ರದೇಶದಲ್ಲಿ ಆಡುಭಾಷೆಯಾಗಿದೆ. ಗದ್ಯಪದ್ಯಗಳ ಭಾಷೆಯಾಗಿ 18ನೆಯ ಶತಮಾನದ ಮಧ್ಯದವರೆಗೂ ಹೈದರಾಬಾದ್, ಮದ್ರಾಸ್, ಮೈಸೂರು ಮತ್ತು ಮಹಾರಾಷ್ಟ್ರಗಳಲ್ಲಿ ಇದು ಬಳಕೆಯಲ್ಲಿತ್ತು. ಆದರೆ ಕ್ರಮೇಣ ಉತ್ತರದಿಂದ ಬಂದ ಪರ್ಷಿಯನೀಕೃತ ಉರ್ದುವಿನ ಪ್ರಭಾವದಲ್ಲಿ ತನ್ನ ಬಣ್ಣವನ್ನು ಕಳೆದುಕೊಂಡಿತು. ಅಂತ್ಯದಲ್ಲಿ ಬರೆವಣಿಗೆ ಭಾಷೆಯಾಗಿ ಬೇರೂರಿದ ಉರ್ದು ದಖನಿಯನ್ನು ಕೆಳ ತಳ್ಳಿತು.

ಹೀಗೆ ವಲೀಯ ಉರ್ದು ಕವಿತೆ ಉತ್ತರ ಭಾರತದ ಕವಿಗಳಿಗೆ ಮೇಲುಪಂಕ್ತಿ ಎನಿಸಿತು. ಆ ಭಾಗದಲ್ಲಿ ಉರ್ದು ಕವಿತೆಯನ್ನು ಜನಪ್ರಿಯಗೊಳಿಸಿದ ಹಾತಿಂ (1669–1792) ಖಾನ್ ಆರ್‌ಜ಼ು (1689–1756), ಮುಂತಾದ ಕೀರ್ತಿವಂತ ಕವಿಗಳು ಉದಿಸಿದರು. ಮೀರ್ ತಕಿ ಮೀರ್ (1713–1810), ಮಿರ್ಜ಼ಾ ರಫಿ ಸೌದಾ (1713–81), ಖಾಜ ಮೀರ್ ದರ್ಜ್ (1720–85) ಮತ್ತು ಮೀರ್ ಮೊಹಮ್ಮದ್ ಸೋಜ಼್ (1720–98) ಎಂಬ ನಾಲ್ವರು ಶ್ರೇಷ್ಠ ಕವಿಗಳು ಬಹಳ ಬೇಗ ಮುಂದಕ್ಕೆ ಬಂದು ದೇಶದಲ್ಲಿ ಶಾಶ್ವತವಾದ ಕೀರ್ತಿಯನ್ನು ಗಳಿಸಿದರು. ಅವರು ಭಾಷೆಯನ್ನು ಸಂಸ್ಕರಿಸಿದುದೇ ಅಲ್ಲದೆ ಕೆಲವು ಮನೋಹರವಾದ ಪರ್ಷಿಯನ್ ವಾಕ್ಸರಣಿಗಳನ್ನೂ ಪದಪುಂಜಗಳನ್ನೂ ಬಳಕೆಗೆ ತಂದರು. ಇದರ ಪರಿಣಾಮವಾಗಿ ಕೆಲವು ನಿರುಪಯುಕ್ತ ಹಳೆಯ ಶಬ್ದಗಳೂ ಪ್ರಾಚೀನವಾಕ್ಯರಚನಾರೀತಿಗಳೂ ಮೂಲೆಗೆ ಬಿದ್ದವು. ಜನಕ್ಕೆ ಕವಿತೆಯ ವಿಷಯದಲ್ಲಿರುವ ಆಂತರಿಕವಾದ ಪ್ರೀತಿ ಮುಷೈರಾಗಳ (ಕವಿಗೋಷ್ಠಿ) ಮೂಲಕ ಹೊರಹೊಮ್ಮಿ ನಾಡ ತುಂಬ ಹೆಚ್ಚಾಗಿ ಉರ್ದುವನ್ನು ಬಳಸತೊಡಗಿದರು. ದಕ್ಷಿಣ ಭಾರತದ ದೂರ ಪ್ರಾಂತ್ಯಗಳಲ್ಲಿ ಕೂಡ ಮದ್ರಾಸಿನ ಮೌಲಾನಾ ಬಾಕರ್ ಆಗಾಹ್ (1744–1805) ಮತ್ತು ಅವನ ಇತರ ಶಿಷ್ಯರು ಭಾವಗೀತೆಗಳನ್ನೂ ಮಸ್ನವಿಗಳನ್ನೂ (ದೀರ್ಘಕವನಗಳು) ಉರ್ದುವಿನಲ್ಲಿ ರಚಿಸುವುದಕ್ಕೆ ತೊಡಗಿ ಅನೇಕ ಗ್ರಂಥಗಳನ್ನೂ ಬರೆದು ದೇಶದ ಈ ಭಾಗದಲ್ಲಿ ಉರ್ದು ಹೆಚ್ಚು ಹೆಚ್ಚಾಗಿ ಜನಪ್ರಿಯವಾಗುವಂತೆ ಮಾಡಿದರು.

ಈ ಕಾಲದಲ್ಲಿ ಮೀರ್ ಹಸನ್ (1726–86) ಎಂಬಾತ ಸೆಹ್‌ರುಲ್ ಬಯನ್ (ವಾಗ್ವಿಭವದ ಯಕ್ಷಿಣಿ) ಎಂಬ ತನ್ನ ಮಸ್ನವಿಯನ್ನು ರಚಿಸಿ ಪ್ರಸಿದ್ಧನಾದ. ಈ ಕವಿತೆ ತನ್ನ ಸೌಂದರ್ಯ ಸರಳತೆಗಳಿಂದ ಉರ್ದುಕವಿತೆಗಳ ಪೈಕಿ ಅತ್ಯುತ್ತಮವೆನಿಸಿದೆ.

ದಕ್ಷಿಣ ಮತ್ತು ಪಂಜಾಬುಗಳಿಂದ ಉರ್ದುವಿನ ಕೇಂದ್ರ ದೆಹಲಿಗೆ ಸರಿದರೂ ಅಲ್ಲಿ ಮೊಗಲರ ಆಳ್ವಿಕೆ ಕ್ಷೀಣಿಸಿದ ಬಳಿಕ ಒಂದಿಲ್ಲೊಂದು ಸಮಯದಲ್ಲಿ ಕವಿಗಳು ದೆಹಲಿಯಿಂದ ಕಾಲ್ತೆಗೆಯತೊಡಗಿ ಲಖ್‌ನೌದಲ್ಲಿದ್ದ ಔಧ್ ನವಾಬರ ವಿಪುಲವೂ ಉದಾರವೂ ಆದ ಆಶ್ರಯಕ್ಕೆ ಹೋಗಬಯಸಿದರು. ಈ ನವಾಬರು ವೈಭವದಲ್ಲೂ ಔದಾರ್ಯದಲ್ಲೂ ಪ್ರತಿಷ್ಠಾ ಪ್ರದರ್ಶನದಲ್ಲೂ ಆಶ್ರಯದಾನದಲ್ಲೂ ದೆಹಲಿಯ ದೊರೆಗಳನ್ನು ಮೀರಿಸಲೆಳೆಸಿದರು. ಕೀರ್ತಿಶಾಲಿಗಳಾದ ಕವಿಗಳು ತಮ್ಮ ಸುತ್ತಲೂ ಇರಬೇಕೆಂಬುದಲ್ಲದೆ ಸ್ವತಃ ಪದ್ಯರಚನೆಯಲ್ಲೂ ಇವರು ದೆಹಲಿ ರಾಜರನ್ನು ಅನುಕರಿಸಿದರು. ಮೀರ್ ಸೌದಾ ಎಂಬುವರು ದೆಹಲಿಯಿಂದ ಲಖ್‌ನೌಗೆ ಆಗಲೇ ವಲಸೆ ಬಂದಿದ್ದರು ಹಾಗೆಯೇ ಇತರರೂ ಅಲ್ಲಿಗೆ ವಲಸೆ ಬಂದರು. ಲಖ್‌ನೌದ ದೊರೆಗಳು ಅವರಿಗೆ ಆಸರೆಕೊಟ್ಟರು. ಈ ಕವಿಗಳು ಉರ್ದುವಿನಲ್ಲಿ ಬಹಳ ಗ್ರಂಥಗಳನ್ನು ರಚಿಸಿದ್ದಾರೆ. ಇನ್ಷಾ ಎಂಬಾತ ಸ್ವಭಾವತಃ ತುಂಬ ಹಾಸ್ಯಗಾರ. ಆತನಲ್ಲಿ ಬೇಕಾದಷ್ಟು ನಗೆಮಾತುಗಳಿದ್ದುವು. ಅವನ್ನು ಆತ ಸಂಭಾಷಣೆಯಲ್ಲೂ ಪದ್ಯಗಳಲ್ಲೂ ಎರಚಿಹೋಗಿದ್ದಾನೆ. ದರ್ಯಾಯೆ ಲತಾಫತ್ (ಸಾರ ಸಾಗರ) ಎಂಬುದು ಈತನ ಕೃತಿ, ಇದನ್ನು ಉರ್ದುವಿನ ಬಗ್ಗೆ ಪರ್ಷಿಯನ್‌ನಲ್ಲಿ ಬರೆದ ಮೊದಲ ವ್ಯಾಕರಣವೆಂದು ಪರಿಗಣಿಸಲಾಗಿದೆ.

ಸಆದತ್ ಯಾರ್ ಖಾನ್ ರಂಗೀನ್ (1755–1835) ಎಂಬಾತನನ್ನು ರೀಖ್ತಿ ಕವಿತೆಯ ಜನಕನೆಂದು ಹೇಳುತ್ತಾರೆ. ಹೆಂಗಸರ ಮಾತಿನಲ್ಲೇ ರಾಗೋತ್ಕಟ ಕವಿತೆಗಳನ್ನು ರಚಿಸುವುದು, ಈ ಪ್ರಕಾರದ ಸ್ವರೂಪ ಹೆಂಗಸರಿಗೇ ವಿಶಿಷ್ಟವಾದ ಉಕ್ತಿರೀತಿಗಳನ್ನು ಪದಗಳನ್ನೂ

ಇದರಲ್ಲಿ ಬಳಸಲಾಗುತ್ತದೆ. ಪೂರ್ವದ ಕವಿಗಳ ರಚನೆಗಳಲ್ಲಿ, ಅದರಲ್ಲೂ ಬಿಜಾಪುರದ ಹಾಷಿಮಿ ಎಂಬುವನ ಕವಿತೆಯಲ್ಲಿ ಈ ಕವಿತಾ ರೂಪದ ಕುರುಹುಗಳಿವೆ. ಮನಸ್ಸನ್ನು ಕಾಮವಿಕಾರಕ್ಕೆ ಒಳಗಾಗಿಸುವ ಇಂಥ ಮಸಾಲೆ ಹಾಕಿದ ಪದ್ಯಗಳು ತುಂಬ ಜನಪ್ರಿಯವಾಗಿ ಶ್ಲಾಘನೆಗೆ ಪಾತ್ರವಾದವು.

ದೆಹಲಿಯಿಂದ ಬಂದ ಕವಿಗಳು ಲಖನೌದ ಜನತೆಯಲ್ಲಿ ಕವಿತಾಭಿರುಚಿಯನ್ನು ಹುಟ್ಟಿಸಿದರು. ಆಗಾಗ ಕವಿಸಭೆಗಳು ಏರ್ಪಟ್ಟು ಜನರಿಗೆ ಅವುಗಳದ್ದೇ ಹುಚ್ಚಾಯಿತು. ಕವಿತಾಸ್ಪರ್ಧೆಗಳಿಂದ ಕವಿಗಳ ತೇಜಸ್ಸೂ ವೃದ್ಧಿಯಾಯಿತು. ಸರಳ ಮತ್ತು ಒಳ್ಳೆಯ ಓಟವುಳ್ಳ ಪದ್ಯಗಳಲ್ಲಿ ಭಾವಗಳನ್ನು ಚಿತ್ರಿಸುವುದು ದೆಹಲಿಯ ಕವಿಗಳ ವೈಶಿಷ್ಟ್ಯವಾಗಿತ್ತು. ಕಲ್ಪನೆಗಳೂ ಶಬ್ದಗಳೂ ಭಾವನೆಗಳಿಗೂ ವಿಚಾರಗಳಿಗೂ ಅಡಿಯಾಳಾಗಿದವು. ಅತ್ಯುತ್ಪ್ರೇಕ್ಷೆಗಳಿಗೆ ಈ ಕವಿಗಳು ಮನಗೊಡಲಿಲ್ಲ. ಆದರೆ ಲಖ್‌ನೌ ಕವಿಗಳು ಈ ಸಂಪ್ರದಾಯದಿಂದ ದೂರ ಸರಿದು ತಮ್ಮದೇ ಒಂದು ಹಾದಿಯಲ್ಲಿ ನಡೆದರು, ಅವರು ಪದಗಳಿಗೂ ಅಲಂಕಾರಗಳಿಗೂ ವಿಶಿಷ್ಟ ಗಮನ ಕೊಟ್ಟರು. ರೀತಿಗಾಗಿ ಭಾವಗಳು ಬಲಿಯಾದವು. ಪರಸ್ಪರ ಸಂಬದ್ಧವೂ ದ್ವಿಪದಿಯ ವಿಷಯಕ್ಕೆ ಸಂಗತವೂ ಆದ ಶಬ್ದಗಳನ್ನು ಮಾತ್ರ ಅವರು ಬಳಸುತ್ತಿದ್ದರು. ಶಬ್ದಗಳಿಗೆ ಇಷ್ಟು ಮಹತ್ತ್ವವನ್ನು ಕೊಟ್ಟಿದ್ದರಿಂದ ಸಮಯಸ್ಫೂರ್ತಿ ತಪ್ಪಿ ಕೃತಕತೆ ತಲೆಹಾಕಿತು. ಕವಿತೆಗೆ ಸಾಂಪ್ರದಾಯಿಕ ಸ್ವರೂಪ ಬಂತು, ಭಾವನಾ ಸ್ವಾತಂತ್ರ್ಯ, ಕರುಣರಸ, ನೈಜಭಾವಗಳು, ವಾಗ್ವೈಖರಿ, ಸರಳತೆ–ಇವೆಲ್ಲವೂ ಶಬ್ದಕ್ಕೆ ಬಲಿಯಾದವು. ಈ ರೀತಿಯ ಶಬ್ದಸಂಸ್ಕರಣ ಷೇಕ್ ಇಮಾಂಬಕ್ಷ್ ನಾಸಿಕ್ (ಮ.1838) ಎಂಬಾತನಿಂದ ಪ್ರಾರಂಭವಾಯಿತು. ಲಖ್‌ನೌ ಮತ್ತು ರಾಮ್‌ಪುರಗಳಲ್ಲಿದ್ದ ಆತನ ಶಿಷ್ಯರು ತಮ್ಮ ನುಡಿಗಟ್ಟುಗಳನ್ನೂ ಪದಗಳನ್ನೂ ಗುರುವಿನಂತೆ ಬಹಳ ಎಚ್ಚರಿಕೆಯಿಂದ ಆಯ್ದು ಬಳಸತೊಡಗಿದರು. ಹೀಗೆ ಲಖ್‌ನೌಪಂಥ ಭಾಷೆಯಲ್ಲಿನ ಕೆಲವು ವ್ಯತ್ಯಾಸಗಳಿಗೆ ಕಾರಣವಾಯಿತು. ಲಖ್‌ನೌದ ಕವಿಗಳೂ ಜನಗಳೂ ತಮ್ಮ ಶಬ್ದ ಪ್ರಯೋಗಗಳು ದೆಹಲಿಯ ಜನರೂ ಕವಿಗಳೂ ಬಳಸುವ ನುಡಿ ಮತ್ತು ನುಡಿಗಟ್ಟುಗಳಿಗಿಂತಲೂ ಮೇಲ್ತರದವೆಂದು ವಾದಿಸಿದರು. ಈ ವ್ಯತ್ಯಾಸಗಳು ವ್ಯಾಕರಣಕ್ಕೂ ಹಬ್ಬಿದುವು. ಲಖ್‌ನೌದವರು ಕೆಲವು ಶಬ್ದಗಳನ್ನು ಪುಲ್ಲಿಂಗವೆಂದರೆ ದೆಹಲಿಯವರು ಅವನ್ನು ಸ್ತ್ರೀಲಿಂಗದವೆನ್ನುತ್ತಿದ್ದರು. ಇದು ಪರಸ್ಪರವಾಯಿತು. ಈ ವ್ಯತ್ಯಾಸಗಳು ಆಯಾ ಪಂಥದವರ ಸ್ಪರ್ಧಾಕ್ಷೇತ್ರವಾಗಿ ಈಗಲೂ ಹೋರಾಟ ನಡೆಯುತ್ತಿದೆ.

ಈ ಕಾಲದಲ್ಲಿ ನಾಸಿಕ್ ಮತ್ತು ಆತಿಷ್ ಎಂಬ ಕವಿಗಳು ಭಾಷಾಶುದ್ಧಿಗೆ ಗಮನಕೊಟ್ಟು ರೂಪಕಾಲಂಕಾರಗಳನ್ನು ಬಳಸಿ ಕಾವ್ಯ ರಚಿಸಿದರು. ಆತಿಷ್‌ನ ಶಿಷ್ಯನಾದ ಪಂಡಿತ್ ದಯಾಶಂಕರ್ ನಸೀಂ ಎಂಬಾತ ಗುಲ್‌ಜ಼ಾರೆ ನಸೀಂ ಎಂಬ ಪ್ರಸಿದ್ಧ ಮಸ್ನವಿಯನ್ನು ಬರೆದ ಪ್ರಖ್ಯಾತ ಕವಿ. ಇದು ಈಗಲೂ ಜನಪ್ರಿಯವಾಗಿದೆ.

ಕರ್ಬಲಾದಲ್ಲಿ ಇಮಾಂ ಹುಸೇನ್ ಮತ್ತು ಸಂಗಡಿಗರು ಮಡಿದ ದುರಂತ ಇಸ್ಲಾಮಿನ ಇತಿಹಾಸದಲ್ಲಿ ಬಹು ವಿಷಾದಕರ ಪ್ರಸಂಗ, ಇದನ್ನು ಪ್ರತಿವರ್ಷವೂ ಮೊಹರಮ್ಮಿನ ಮೊದಲ ಹತ್ತು ದಿವಸಗಳಲ್ಲಿ ಜನಕ್ಕೆ ಶ್ರವಣ ಮಾಡಿಸಲಾಗುತ್ತದೆ. ದಕ್ಷಿಣದ ಹಾಗೂ ದೆಹಲಿಯ ಪ್ರಾಚೀನ ಕವಿಗಳು ದುರಂತಕ್ಕೀಡಾದ ಈ ಮಹಾ ನಾಯಕರ ಪೈಕಿ ಯಾರಾದರೊಬ್ಬರನ್ನು ಕುರಿತು ಶೋಕಗೀತೆಗಳನ್ನು ರಚಿಸಲು ಯತ್ನಿಸುತ್ತಿದ್ದರು. ಮೀರ್ ಖಲೀಕ್ (1704–1804), ಮೀರ್ ಬಬ್ಬರ್ ಆಲಿ ಅನೀಸ್ (1802–74) ಮಿರ್ಜಾ ಸಲಾಮತ್ ಆಲಿ ದಬೀರ್ (1803–75) ಮುಂತಾದ ಕವಿಶ್ರೇಷ್ಠರು ಈ ಬಗೆಯ ರಚನೆಗಳನ್ನು ಉತ್ತಮದರ್ಜೆಗೆ ತಂದು ಲಖನೌದಲ್ಲಲ್ಲದೆ ಇಡೀ ದೇಶದಲ್ಲೆಲ್ಲ ಅದನ್ನು ಜನಪ್ರಿಯಗೊಳಿಸಲು ತಮ್ಮ ಸಮಸ್ತ ಗಮನವನ್ನೂ ಕೊಟ್ಟರು. ಮೀರ್ ಖಲೀಕನ ಮಗ ಮೀರ್ ಅನಿಸ್ ತಂದೆಯ ಹೆಜ್ಜೆಯನ್ನೇ ಅನುಸರಿಸಿ ನಡೆದ, ಆದರೆ ಕಥಾವಸ್ತುವನ್ನು ಕಥಾಪ್ರಸಂಗಗಳ ಮೂಲಕವೂ ಪ್ರಸ್ತಾವನೆಗಳ ಮೂಲಕವೂ ಈತ ಬೆಳೆಸುತ್ತಿದ್ದಲ್ಲದೆ ಶುದ್ಧವಾದ ನುಡಿಗಟ್ಟುಗಳನ್ನೂ ನಿರ್ಮಲವಾದ ಭಾಷೆಯನ್ನೂ ಉಪಯೋಗಿಸುತ್ತಿದ್ದ. ಈತ ಸಾವಿರಾರು ಶೋಕಗೀತೆ (ಮರ್ಸಿಯ), ಪ್ರಗಾಥ, ಚೌಪದಿ ಮತ್ತು ಗೀತೆಗಳನ್ನು ರಚಿಸಿದ, ಹರ್ಷ–ಶೋಕ, ರಾಗ–ದ್ವೇಷ, ಮತ್ಸರ–ಈರ್ಷೆ, ಭಯ–ಮೃತ್ಯು ಮುಂತಾದ ಮಾನವೀಯ ಭಾವಗಳನ್ನೂ ರಾಗಗಳನ್ನೂ ರಚಿಸಿರುವ ಶೋಕಗೀತಕಾರರ ಪೈಕಿ ಈತ ಒಬ್ಬ ವಿಲಕ್ಷಣಪುರುಷ, ಈತನ ತರುವಾಯ ಎಣಿಕೆಗೆ ಬರುವವ ಮಿರ್ಜ಼ಾ ದಬಿರ್. ಈತನಿಗೆ ಗಂಭೀರವಾದ ಉಕ್ತಿ ಮತ್ತು ನಾದಗುಂಫನವುಳ್ಳ ಶಬ್ದಗಳಲ್ಲಿ ತುಂಬ ಪ್ರೀತಿ. ಈ ಶೋಕಗೀತಕಾರರಿಬ್ಬರ ಶಿಷ್ಯರು ತಮ್ಮ ಸ್ಪರ್ಧೆಗಳಿಂದ ಇಡೀ ಲಖ್‌ನೌವನ್ನು ಎರಡು ಪಕ್ಷಗಳಾಗಿ ವಿಭಜಿಸಿದರು.

ನಜ಼ೀರ್ ಅಕ್ಬರಾಬಾದಿ ಎಂಬ ಕಾವ್ಯನಾಮದ ವಲೀ ಮಹಮ್ಮದನ (ಮ.1830) ಅಂತಸ್ತೇ ಬೇರೆ. ಈತನನ್ನೂ ಇಂಥ ಪಂಥದವನೆಂದೂ ಇಂಥ ಕಾಲಕ್ಕೆ ಸೇರಿದವನೆಂದೂ ಹೇಳುವ ಹಾಗಿರಲಿಲ್ಲ. ಧನ ಮತ್ತು ಭೋಗಗಳನ್ನು ಕಂಡರೆ ಈತನಿಗೆ ತೀರ ತಿರಸ್ಕಾರ, ತನ್ನ ದಿವ್ಯವೂ ಮೋಹಕವೂ ಆದ ಕವಿತೆಯ ಮೂಲಕ ಜನಗಳಿಗೆ ನೀತಿಯನ್ನು ಬೋಧಿಸಿ ಐಹಿಕವಸ್ತುಗಳ ವಿಷಯದಲ್ಲಿ ಹೆಮ್ಮೆಗೊಳ್ಳಬಾರದೆಂದು ಹೇಳುತ್ತ ಸ್ವಾರ್ಥತ್ಯಾಗವನ್ನೂ ದಾನಶೀಲತೆಯನ್ನೂ ಈತ ಉಪದೇಶಿಸುತ್ತಿದ್ದ, ಮತ ಪಂಥಗಳ ಮತ್ತು ಮತಭೇದಗಳ ಹಿಡಿತಕ್ಕೆ ಈತ ಒಳಗಾಗಲಿಲ್ಲ. ಆದ್ದರಿಂದ ಹಿಂದೂಗಳೂ ಮುಸ್ಲಿಮರೂ ಈತನನ್ನು ತುಂಬ ಮಮತೆಯಿಂದ ಕಾಣುತ್ತಿದ್ದರು. ಈತನ ಸೂಫೀ ಕವಿತೆಗಳು ಎಲ್ಲ ವರ್ಗದ ಜನಕ್ಕೂ ಹಿಡಿಸುತ್ತಿತ್ತು. ಆಜ಼ಾದ್ ಹಾಲಿ, ಸರೂರ್ ಮತ್ತು ಚಕ್‌ಬಸ್ತ ಎಂಬವರಿಂದ ಉದಿಸಿದ ರಾಷ್ಟ್ರೀಯವೂ ಸಹಜವೂ ಆದ ಕವಿತೆಯ ಹೊಸ ಪಂಥವನ್ನು ಪ್ರಾರಂಭಿಸಿದವ ಈತನೇ.

ವೆಲ್ಲೂರಿನ ಮೌಲಾನಾ ಬಾಕಿರ್ ಆಗಾಹ್ (1744–1800) ಎಂಬಾತ ಅರಬ್ಬೀ, ಪರ್ಷಿಯನ್ ಮತ್ತು ಉರ್ದು ಭಾಷೆಗಳಲ್ಲಿ ಗದ್ಯಪದ್ಯಾತ್ಮಕವಾದ ಅನೇಕ ಕೃತಿಗಳನ್ನು ರಚಿಸಿದ್ದಾನೆ.

ಗಾಲಿಬ್, ಜ಼ಾಕ್, ಮೋಮಿನ್ ಮತ್ತು ಜ಼ಫರ್ ಎಂಬುವರು ಬೆಳಕಿಗೆ ಬಂದು ಉರ್ದು ಕವಿತೆಯ ಆಕಾಶದಲ್ಲಿ ಪ್ರಭೆಬೀರತೊಡಗಿದಾಗ ದೆಹಲಿ ಪುನಃ ಹೆಚ್ಚಿನ ಪ್ರಾಮುಖ್ಯಕ್ಕೆ ಬಂತು. ಮಹಾಪ್ರತಿಭಾಶಾಲಿಯಾದ ಮಿರ್ಜಾ ಅಸದುಲ್ಲಾಖಾನ್ ಗಾಲಿಬ್‌ನನ್ನು (1775–1869) ಜಗತ್ತಿನ ಅತ್ಯುತ್ತಮ ಕವಿಗಳ ಪಂಕ್ತಿಗೆ ಸೇರಿಸಬಹುದು (**ನೋಡಿ– ಗಾಲಿಬ್**).

ಗಾಲಿಬ್ ಪರ್ಷಿಯನ್ನಿನಲ್ಲೂ ಉರ್ದುವಿನಲ್ಲೂ ಶ್ರೇಷ್ಠ ಗದ್ಯವನ್ನು ಬರೆದಿದ್ದಾನೆ. ಆತ ತನ್ನ ಮಿತ್ರರಿಗೆ ಬರೆದ ಪತ್ರಗಳು ಇಂದು ಶ್ರೇಷ್ಠ ಸಾಹಿತ್ಯವೆನಿಸಿಕೊಂಡಿವೆ.

ಮೊಗಲ್ ವಂಶದ ಕೊನೆಯ ರಾಜನಾದ ಬಹಾದ್ದುರ್‌ಷಾ ಜ಼ಫರ್ (1755–1862) ಗಣನೀಯವಾದ ಒಬ್ಬ ದೊಡ್ಡ ಕವಿ. ಈತನ ಗುರುವಾಗಿದ್ದ ಷೇಕ್ ಇಬ್ರಾಹಿಂ ಜ಼ಾಕ್ (1789–1854) ಕೂಡ ಬಹಳ ಪ್ರಸಿದ್ಧ ಕವಿ. ಇವರ ಕವಿತೆ ವಾಗ್ವೈಭವದಿಂದ ಕೂಡಿದೆ. ಓಟ ಚೆನ್ನಾಗಿದೆ. ರೀತಿ ಮಧುರವಾಗಿದ್ದು ಮನೋಹರವಾದ ಸರಳತೆಯಿಂದ ಕೂಡಿದೆ.

ಹಕೀಂ ಮೋಮಿನ್ ಖಾನ್ ಮೋಮಿನ್ (1800–51) ತನ್ನ ಸಮಕಾಲೀನರ ಪೈಕಿ ವಯಸ್ಸಿನಲ್ಲಿ ಕಿರಿಯವ. ಅವರಿಗಿಂತ ಮುಂದೆ ದೈವಾಧೀನನಾದವ. ಆದರೆ ಕವಿತೆಯಲ್ಲಿ ತುಂಬಾ ಪಳಗಿದಕೈ ಎನಿಸಿಕೊಂಡವ, ಸೂಕ್ಷ್ಮ ಭಾವನೆಗಳಿಗೂ ಉನ್ನತ ಕಲ್ಪನೆಗಳಿಗೂ ಈತನ ಪದ್ಯಗಳು ಪ್ರಖ್ಯಾತವಾಗಿವೆ. ಉಪಮಾನೋತ್ಪ್ರೇಕ್ಷೆಗಳು ಇವನಲ್ಲಿ ಅಸಾಧಾರಣವಾಗಿವೆ.

1856ರಲ್ಲಿ ಔಧ್ ಸಂಸ್ಥಾನ ಬ್ರಿಟಿಷರ ಸ್ವಾಧೀನಕ್ಕೆ ಬಂತು 1857ರಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಯಿತು. ಆಗ ದೆಹಲಿ ಮತ್ತು ಲಖ್‌ನೌಗಳ ವ್ಯಾಮೋಹ ಕವಿಗಳಿಗೆ ಬಿಟ್ಟು ಹೋಯಿತು. ಅವರು ತಮ್ಮ ಆಶಾನೇತ್ರಗಳನ್ನು ಸಣ್ಣರಾಜ್ಯಗಳಾದ ರಾಮಪುರದತ್ತಲೂ ಸಂಪನ್ನವಾದ ಹೈದರಾಬಾದಿನತ್ತಲೂ ತಿರುಗಿಸಿದರು. ಲಖ್‌ನೌದ ಮುನ್ಷಿ ಅಮೀರ್ ಅಹಮದ್ ಮೀನಾಯಿ (1828–1900) ಎಂಬಾತನನ್ನು ರಾಮ್‌ಪುರ ಆಕರ್ಷಿಸಿತು. ಆತನ ಪ್ರತಿಸ್ಪರ್ಧಿಯಾದ ದೆಹಲಿಯ ಕವಿ ಮಿರ್ಜ಼ಾ ಫಸೀಹುಲ್ ಮುಲ್ಕ್ ದಾಗ್ (1831–1905) 1888ರಲ್ಲಿ ಹೈದರಾಬಾದಿಗೆ ಬಂದ. ನಿಜ಼ಾಮ ಈತನನ್ನು ತನ್ನ ಕವಿತಾ ಗುರುವಾಗಿ ಮಾಡಿಕೊಂಡ. ಈತನ ರಚನೆಗಳಲ್ಲಿ ಗಜ಼ಲ್‌ಗಳು (ಪ್ರಣಯಗೀತೆ) ಮುಖ್ಯ.

ಪರ್ಷಿಯನ್ ಭಾಷೆಗೆ ಮನ್ನಣೆ ದೊರೆಯುತ್ತಿರುವವರೆಗೂ ಉರ್ದುಗದ್ಯ ಬೆಳೆದು ಮುಂಬರಿಯಲು ಅವಕಾಶ ದೊರೆಯಲಿಲ್ಲ. ತಮ್ಮ ಶಿಷ್ಯರು ಮತ್ತು ಅನುಯಾಯಿಗಳ ಉಪಯೋಗಕ್ಕಾಗಿ ಅನೇಕ ಮುಸ್ಲಿಂ ಯೋಗಿಗಳು ಚಿಕ್ಕ ಪುಸ್ತಕಗಳನ್ನು ಹಳೆಯ ಉರ್ದುವಿನಲ್ಲಿ ಬರೆದರು. ಪರ್ಷಿಯನ್ನಿನಿಂದ ಕೆಲವು ಶೃಂಗಾರ ಕಥೆಗಳು ಉರ್ದುವಿಗೆ ಅನುವಾದಿತವಾದವು. ಅದು ಕವಿತೆಗೆ ಪ್ರಶಸ್ತವಾದ ಕಾಲ. ಉರ್ದು ಕವಿಗಳೇ ಸ್ವತಃ ತಮ್ಮ ಕವನಗಳನ್ನು ಉರ್ದುವಿನಲ್ಲಿ ಬರೆಯಲು ಬಯಸದೆ ಪರ್ಷಿಯನ್ ಭಾಷೆಯಲ್ಲಿ ಕಟ್ಟಲು ಆಸೆಪಡುತ್ತಿದ್ದರು. ಈಸ್ಟ್ ಇಂಡಿಯ ಕಂಪನಿಯ ನೌಕರರಾಗಿದ್ದ ಬ್ರಿಟಿಷ್ ಅಧಿಕಾರಿಗಳು ಪರ್ಷಿಯನ್ ಭಾಷೆಯ ವ್ಯಾಸಂಗಕ್ಕೆ ಅಷ್ಟಾಗಿ ಗಮನ ಕೊಡದೆ ದೇಶೀಯ ಭಾಷೆಗಳನ್ನು, ಮುಖ್ಯವಾಗಿ ಜನಗಳಲ್ಲಿ ಹರಡಿದ್ದ ಹಿಂದೂಸ್ತಾನಿಯನ್ನು ಕಲಿತು ಎಲ್ಲ ಪಂಗಡಗಳ ಸಂಪರ್ಕವನ್ನೂ ಇರಿಸಿಕೊಳ್ಳಬೇಕೆಂಬ ಅಂಶವನ್ನು ಮನಗಂಡರು. ಇಂಥ ಕೆಲವರ ಪೈಕಿ ಜಾನ್ ಗಿಲ್‌ಕ್ರಿಸ್ಟ್ (1750–1841) ಎಂಬ ವೈದ್ಯವೃತ್ತಿಯ ವಿದ್ವಾಂಸನೊಬ್ಬ ಈತ ಕಲ್ಕತ್ತೆಯಲ್ಲಿ ಸ್ಥಾಪಿತವಾದ (1800) ಪೋರ್ಟ್ ವಿಲಿಯಂ ಕಾಲೇಜಿಗೆ ಅಧ್ಯಕ್ಷನಾಗಿ ನಿಯಮಿತನಾದ. ಈತನ ದಕ್ಷವೂ ಸಹಾನುಭೂತಿಯುಳ್ಳದ್ದೂ ಆದ ಆಡಳಿತದಲ್ಲಿ ಮೀರ್ ಅಮ್ಮನ್, ಮೀರ್ ಷೇರ್ ಆಲಿ ಅಫ್‌ಸೋಸ್ ((1735–1809), ಮೀರ್ ಬಹಾದೂರ್ ಅಲಿ ಹುಸೇನಿ ಮತ್ತು ಇತರರು ಈ ಕಾಲೇಜಿನಲ್ಲಿ ಸಂಗಡಿಸಿದರಲ್ಲದೆ, ಅಧಿಕಾರಿಗಳ ವ್ಯಾಸಂಗಕ್ಕೆ ಪಠ್ಯಪುಸ್ತಕಗಳನ್ನು ರಚಿಸಿ ಉರ್ದುವಿಗೊಂದು ಗದ್ಯದ ಮೇಲುಪಂಕ್ತಿಯನ್ನೂ ಹಾಕಿಕೊಟ್ಟರು. ಷಾ ವಲೀವುಲ್ಲನ ಪುತ್ರರಾದ ಮೌಲ್ವಿ ರಫಿಯುದ್ದೀನ್ (1753–1814) ಮತ್ತು ಮೌಲ್ವಿ ಅಬ್ದುಲ್ ಕಾದಿರ್ (1740–1817) ಎಂಬುವರು ಕುರಾನನ್ನು ಸರಳವೂ ಶುದ್ಧವೂ ಆದ ಉರ್ದುವಿಗೆ ಭಾಷಾಂತರಿಸಿದರು. ದೂರದ ದಕ್ಷಿಣದಲ್ಲಿ ಮದ್ರಾಸಿನ ಕಾಜಿ ಬದ್ರುದ್ದೌಲ (1796–1863) ಉರ್ದುವಿನಲ್ಲಿ ಕೆಲವು ಘನವಾದ ಕೃತಿಗಳನ್ನು ರಚಿಸಿ ಅದರ ಭಾಷೆಯನ್ನು ಹಿಂದಿ ಎಂದು ಕರೆದ.

ಈ ಘಟ್ಟದಲ್ಲಿ ಫಕೀರ್ ಮುಹಮ್ಮದ್ ಗೋಯ (ಮ.1850) ಮತ್ತು ಮಿರ್ಜಾ ರಜಬ್ ಆಲಿ ಬೇಗ್ ಸುರೂ (1786–1867) ಮುಂತಾದ ಕೆಲವು ವಿದ್ವಾಂಸರು ಕೆಲವು ಕತೆಗಳನ್ನೂ ಶೃಂಗಾರ ಕತೆಗಳನ್ನೂ ಪ್ರಾಸಬದ್ಧ ಗದ್ಯದಲ್ಲಿ ರಚಿಸಿದರು. ಆದರೆ ಇದು ಸಾಮಾನ್ಯರ ಬಳಕೆಗೆ ಎಟುಕದಂಥ ಗದ್ಯವಾಗಿ ಜನರಲ್ಲಿ ಅಷ್ಟಾಗಿ ಹರಡಲಿಲ್ಲ. ಮಿರ್ಜಾ ಗಾಲಿಬ್ ಮತ್ತು ಸರ್ ಸೈಯದ್ ಅಹಮದ್‌ಖಾನ್ (1817–98) ಎಂಬುವರು ಭಾಷೆಯನ್ನು

ಕೃತಕತೆಯ ಮತ್ತು ಶಬ್ದಾಡಂಬರದ ಸಂಕೋಲೆಯಿಂದ ಬಿಡಿಸಿದರು. ದೇಶಾದ್ಯಂತ ಮುದ್ರಣಯಂತ್ರಗಳು ಹರಡಿ ಹಳೆಯ ರೂಢಿಗಳನ್ನೆಲ್ಲ ಮುರಿದುವು. ಅನೇಕ ಪುಸ್ತಕಗಳನ್ನೂ ಕಾಲಿಕ ಪತ್ರಿಕೆ, ಸಂಚಿಕೆ, ಮತ್ತು ವೃತ್ತಾಂತ ಪತ್ರಿಕೆಗಳನ್ನೂ ಪ್ರಕಟಿಸಲು ಸಾಧ್ಯವಾಯಿತು. ಇಂಗ್ಲಿಷ್ ಸಾಹಿತ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳು ಉರ್ದುವಿನಲ್ಲಿ ಹೊಸದಾರಿಗಳನ್ನು ತೆರೆದುವು. ಸರ್ ಸೈಯದ್ ಅಹಮದ್‌ಖಾನ್ ಎಲ್ಲ ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನೂ ತನ್ನ ಪ್ರಖ್ಯಾತವಾದ ತಹಜೀಬುಲ್ ಅಖ್ಲಾಕ್ ಎಂಬ ಮಾಸಪತ್ರಿಕೆಯಲ್ಲಿ ಚರ್ಚಿಸಲು ಪ್ರಾರಂಭಿಸಿದ. ಇದು ಬೇಗ ಭಾರತದ ಮುಸ್ಲಿಂರಲ್ಲಿ ಒಂದು ಕ್ರಾಂತಿಯನ್ನೆಬ್ಬಿಸಿತು. ಸರಳ ಮತ್ತು ನಿರರ್ಗಳ ಶೈಲಿಯಲ್ಲಿ ಈತ ಕೆಲವು ಗ್ರಂಥಗಳನ್ನು ಉರ್ದುವಿನಲ್ಲಿ ಬರೆದ. ಈತನ ಉರ್ದು ಶೈಲಿ ಹಿಂದೆಂದೂ ಕಾಣದಂಥ ನಿಷ್ಣಾತ ಶೈಲಿ. ಹಾಲಿ ಈತನನ್ನು ಉರ್ದು ಗದ್ಯದ ಜನಕನೆಂದು ಕರೆಯುತ್ತಾನೆ. ಈತನ ಆಕರ್ಷಕ ವ್ಯಕ್ತಿತ್ವ ಸಾಹಿತ್ಯೋತ್ಸಾಹಿಗಳ ತಂಡವನ್ನು ತನ್ನತ್ತ ಸೆಳೆಯಿತು. ಈ ಗುಂಪಿನ ಕಾರ್ಯಗಳು ತುಂಬ ವ್ಯಾಪಕವಾದುವು. ಇದರಲ್ಲಿ ಮುಖ್ಯರಾದವರು ನವಾಬ್ ಮೊಹಸಿನುಲ್–ಮುಲ್ಕ್ (1837–1907). ನವಾಬ್ ವಕಾರುಲ್–ಮುಲ್ಕ್ (1839–1917), ಮೌಲಾನ ಆಲ್‌ತಾಫ್ ಹುಸೇನ್ ಹಾಲಿ (1837–1914) ಮೌಲ್ವಿ ಜ಼ೀರ್ ಅಹಮದ್ (1831–1912), ಮೌಲಾನ ಮುಹಮ್ಮದ್ ಹುಸೇನ್ ಆಜ಼ಾದ್ (1829–1910). ಇವರೆಲ್ಲರೂ ಉರ್ದುವಿಗೆ ಹಿಂದೆ ಅಲಭ್ಯವಾಗಿದ್ದ ಹೊಸ ವಿಷಯಗಳನ್ನೂ ಭಾವನೆಗಳನ್ನೂ ತುಂಬಿ ಅದನ್ನು ಸಂಪನ್ನಗೊಳಿಸಿದರು.

ಹಾಲಿ ಮತ್ತು ಆಜ಼ಾಧರು ಉರ್ದುಕವಿತೆಯಲ್ಲಿ ಒಂದು ಹೊಸ ಯುಗವನ್ನು ತೆರೆದರು. ಅವರು ಗಜಲುಗಳನ್ನೂ ಕಸೀದಗಳನ್ನೂ ಪರಿಷ್ಕರಿಸಿ ಅವುಗಳ ಕ್ಷೇತ್ರವನ್ನು ವಿಸ್ತರಿಸಿದರು. ಪ್ರಖ್ಯಾತ ಶೃಂಗಾರರಸಯುಕ್ತ, ಸೂಫೀಭಾವಪರಿಪ್ಲುತ, ದಾರ್ಶನಿಕ ಮತ್ತು ನೈತಿಕ ಕಾವ್ಯಪ್ರಕಾರಗಳ ಜೊತೆಗೇ ನೈಸರ್ಗಿಕ, ರಾಷ್ಟ್ರೀಯ, ರಾಜಕೀಯ ಮತ್ತು ಸಾಂಸ್ಕೃತಿಕ ವಸ್ತುಗಳೂ ಉದಿಸಿದುವು. ಆಜ಼ಾದನದು ಇತರರಿಗೆ ಅನುಕರಿಸಲು ಅಸಾಧ್ಯವಾದ ಒಂದು ವಿಶಿಷ್ಟ ಶೈಲಿ. ಹಾಲಿಯ ಜೊತೆಗೆ ಈತನೂ ಉರ್ದು ಸಾಹಿತ್ಯದ ಮೇಲೆ ದೂರವ್ಯಾಪಿಯೂ ಬಹು ಪರಿಣಾಮಕಾರಿಯೂ ಆದ ಪ್ರಭಾವವನ್ನು ಬೀರಿದ ಹೊಸ ಪ್ರಕಾರಗಳನ್ನು ಬಳಕೆಗೆ ತಂದ ಕೀರ್ತಿಗೆ ಭಾಗಿಯಾಗಿದ್ದಾನೆ.

ಮೀರತ್ತಿನ ಮೌಲ್ವಿ ಮುಹಮ್ಮದ್ ಇಸ್ಮಾಯೀಲ್ (1844–1917) ಮುನ್ಷಿ ದುರ್ಗಾ ಸಹಾಯ್ ಸರೂರ್ (1873–1910). ಸೈಯದ್ ಅಕ್ಬರ್ ಹುಸೇನ್ ಅಕ್ಬರ್ (1846–1921). ಬ್ರಿಜ್ ನಾರಾಯಣ ಚಕ್‌ಬಸ್ತ್ (1882–1926) ಮುಂತಾದವರು ಆಧುನಿಕ ಯುಗದ ಶ್ರೇಷ್ಠ ಪ್ರತಿಭಾಶಾಲಿಯಾದ ಡಾ. ಸರ್ ಮುಹಮ್ಮದ್ ಇಕ್ಬಾಲ್ (1875–1938) ಎಂಬ ಮಹಾಕವಿಗೆ ಮುಂಚಿನ ಕೆಲವು ಶ್ರೇಷ್ಠ ಕವಿಗಳು ಇಕ್ಬಾಲನ ಆಶ್ಚರ್ಯಕರವಾದ ಉರ್ದು ಮತ್ತು ಪರ್ಷಿಯನ್ ಕವಿತೆಗಳು ಜನರ ಮನಸ್ಸನ್ನು ಪರಿವರ್ತನಗೊಳಿಸುವುದರಲ್ಲಿ ತುಂಬ ಸಮರ್ಥವಾದವು. ಇಕ್ಬಾಲ್ ಶ್ರೇಷ್ಠ ವಿಚಾರಶೀಲ ಮತ್ತು ದಾರ್ಶನಿಕ **(ನೋಡಿ– ಇಕಬಾಲ್– ಮುಹಮದ್)**. ಮುಂದಿನ ಕವಿಗಳು ಆತನ ಮೇಲುಪಂಕ್ತಿಯನ್ನು ಅನುಸರಿಸಿದರು. ಅವರು ತಮ್ಮ ಕವಿತೆಗಳಲ್ಲಿ ವಾಸ್ತವಿಕತೆಗೆ ಹೆಚ್ಚು ಗಮನವಿತ್ತರು. ಸೈಯದ್ ಫ಼ಜ಼ಲುಲ್ ಹಸರತ್ ಮೋಹಾನಿ (1875–1951) ಗೊಂಡಾವಿನ ಅಸಘರ್ ಹುಸೇನ್ ಅಸಘರ್ (1884–1935), ಬದಾಯೂನಿನ ಷಾವಕತ್ ಆಲಿಖಾನ್ ಫಾನಿ (1879–1941) ಮತ್ತು ಮುರಾದಾಬಾದಿನ ಅಲಿ ಸಿಕಂದರ್ ಜಿಗರ್ (1890–1960) ಎಂಬುವರು ಭಾವಗೀತೆಗಳಲ್ಲಿ ಹೊಸಪ್ರವೃತ್ತಿಗಳನ್ನು ತೆರೆದು ಪ್ರೇಯಸಿಯ ದೇಹಾಂಗವರ್ಣನೆ ಮೊದಲಾದ ಹಳೆಯ ಸಂಪ್ರದಾಯಗಳ ಶೃಂಖಲೆಯಿಂದ ಅದನ್ನು ಪಾರುಗೊಳಿಸಿದರು. ಹೈದರಾಬಾದಿನ ಅಂಜದ್ ಹುಸೇನ್ ಅಂಜದ್ (1886–1961) ಸರಳವಾಗಿಯೂ ಸರಾಗವಾಗಿಯೂ ಓಡುವ ಚೌಪದಿಗಳನ್ನು ರಚಿಸಿ ಪ್ರಖ್ಯಾತನಾದ. ಆತನೊಬ್ಬ ದೊಡ್ಡ ಉಪದೇಶಕ, ಆತನ ಕವಿತೆಗಳ ತುಂಬ ನೀತಿವಾಕ್ಯಗಳಿವೆ.

19ನೆಯ ಶತಮಾನ ಮುಗಿಯುವ ಹೊತ್ತಿಗೆ ಉರ್ದು ಗದ್ಯದಲ್ಲಿ ಮಹತ್ತರವಾದ ಬದಲಾವಣೆ ಕಂಡುಬಂತು. ಅನೇಕ ಮಾಸ, ವಾರ, ದಿನಪತ್ರಿಕೆಗಳು ಉರ್ದು ಭಾಷೆ ಮತ್ತು ಸಾಹಿತ್ಯ ಪ್ರಸಾರಕ್ಕಾಗಿ ಹುಟ್ಟಿಕೊಂಡುವು. ಮುನಿಷಿ ನೌಲ್ ಕಿಶೋರ್ (1836–95) ಲಖ್‌ನೌದಲ್ಲಿ ತನ್ನ ಅಚ್ಚಿನ ಯಂತ್ರವನ್ನು ಸ್ಥಾಪಿಸಿದ. ಇದು ಉರ್ದು ಭಾಷೆ ಮತ್ತು ಸಾಹಿತ್ಯದ ಮೇಲೆ ತುಂಬ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿತು. ಈತ ಪ್ರಾಯಶಃ ಎಲ್ಲ ಉರ್ದುಕವಿಗಳ ಕವನ ಸಂಗ್ರಹಗಳನ್ನೂ ಪ್ರತಿಷ್ಠಿತ ಸಾಹಿತಿಗಳು ರಚಿಸಿದ ದೊಡ್ಡ ದೊಡ್ಡ ಪ್ರೇಮ ಮತ್ತು ಸಾಹಸದ ಕಥೆಗಳನ್ನೂ ಕಥಾಪ್ರಸಂಗಗಳನ್ನೂ ಪ್ರಕಟಿಸಿದ. ಲಖ್‌ನೌದ ಓಧ್ ಅಖ್‌ಬಾರ್ ಮತ್ತು ಔಧ್‌ಪಂಚ್ ಎಂಬ ದಿನ ಮತ್ತು ವಾರಪತ್ರಿಕೆಗಳು, ದೆಹಲಿಯ ಅಷ್ರಫುಲ್ ಅಖಾಬಾರ್. ಲಾಹೋರಿನ ಪೈಸಾ ಅಖ್‌ಬಾರ್, ಬೊಂಬಾಯಿಯ ಖುಷ್ಪುಲ್ ಅಖ್‌ಬಾರ್. ಮದ್ರಾಸಿನ ಷಾಂಸುಲ್ ಅಖ್‌ಬಾರ್. ಬೆಂಗಳೂರಿನ ಕಾಸಿಮುಲ್ ಅಖ್‌ಬಾರ್— ಇವು ಉರ್ದು ಓದುಗರ ವಲಯವನ್ನು ವಿಸ್ತರಿಸಿ ಅವರನ್ನು ಅದರ ಸಾಹಿತ್ಯದತ್ತ ಸೆಳೆದುವು. ಪಂಡಿತ ರತನನಾಥ್ ಸರ್‌ಷಾರ್ (1847–1902) ಎಂಬಾತ ಒಬ್ಬ ಲೇಖಕ. ಆತ ಅನೇಕ ಕೃತಿಗಳನ್ನು ಉರ್ದುವಿನಲ್ಲಿ ರಚಿಸಿದ್ದಾನೆ. ಫಸಾನ್–ಎ–ಆಜ಼ಾದ್ ಎಂಬುದು ಶೈಲಿಗೂ ಭಾಷೆಗೂ ಪ್ರಖ್ಯಾತವಾದದ್ದು. ಈತನ ಗ್ರಂಥಗಳ ಪೈಕಿ ಈತ ತನ್ನ ಕಾಲದ ಸಮಾಜದ ಅನೇಕ ಮುಖಗಳನ್ನೂ ನೈಜವಾಗಿ ರೇಖಿಸಿದ್ದಾನೆ. ಮೌಲ್ವಿ ಅಬ್ದುಲ್ ಹಲೀಂ ಷರರ್ (1860–1326) ಅನೇಕ ಕಾದಂಬರಿಗಳನ್ನೂ ಸಣ್ಣಕತೆಗಳನ್ನೂ ರಚಿಸಿ ಖ್ಯಾತನಾಗಿದ್ದಾನೆ.

ಮುನ್ಷಿ ಪ್ರೇಮಚಂದ್‌ನ (1880–1936) ನಿಜನಾಮ ಧನಪತರಾಯ್. ಈತ ಸಣ್ಣ ಕತೆಗಳ ಮತ್ತು ಕಾದಂಬರಿಗಳ ಕ್ಷೇತ್ರದಲ್ಲಿ ತುಂಬ ಹೆಸರುವಾಸಿಯಾದವ. ಯಾವ ಪೂರ್ವಾಗ್ರಹಗಳಿಗೂ ಒಳಗಾಗದೆ ಈತ ತನ್ನ ಕಾಲದ ರೈತರು. ಭೂಮಾಲೀಕರು. ಜಹಗೀರದಾರರು ಮತ್ತು ಜಮೀನುದಾರರ ಸಮಸ್ಯೆಗಳನ್ನು ತನ್ನ ಕೃತಿಗಳಲ್ಲಿ ಚರ್ಚಿಸಿದ್ದಾನೆ. ಭಾರತೀಯ ಜನರ ವಿಷಯದಲ್ಲಿ ಪ್ರೇಮಚಂದನ ತಿಳಿವಳಿಕೆ, ಮಾನವೀಯತೆ ಮತ್ತು ಶಬ್ದಗಳ ಮೇಲಿನ ಅಸಾಧಾರಣವಾದ ಪ್ರಭುತ್ವ—ಇವು ಈತನ ಉರ್ದು ಬರೆವಣಿಗೆಯನ್ನು ಆದರ್ಶಕ್ಕೇರಿಸಿದವು. 1936ರಲ್ಲಿ ಈತ ಸ್ವರ್ಗಸ್ಥನಾಗುವ ವೇಳೆಗೆ ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ ಈತನೇ ಉತ್ತಮೋತ್ತಮ ಕಾದಂಬರಿಕಾರ ಮತ್ತು ಸಣ್ಣಕತೆಗಳ ಲೇಖಕನೆಂಬ ಪರಿಗಣನೆಗೆ ಭಾಜನನಾಗಿದ್ದ.

ಅಂಜುಮನ್ ತರಕ್ಕಿ ಉರ್ದು ಎಂಬ ಹೆಸರಿನ ಒಂದು ದೊಡ್ಡ ಸಂಶೋಧನಾಲಯವನ್ನು 1903ರಲ್ಲಿ ಹೈದರಾಬಾದಿನಲ್ಲಿ ತೆರೆಯಲಾಯಿತು. ಮೌಲಾನಾ ಷಿಬ್ಲಿ ನೊಮಾನಿ ಎಂಬ ಪ್ರಖ್ಯಾತ ಸಾಹಿತಿ ಮತ್ತು ವಿಮರ್ಶಕ ಇದರ ಮೊದಲ ಕಾರ್ಯದರ್ಶಿ. 1913ರಲ್ಲಿ ಮೌಲ್ವಿ ಅಬ್ದುಲ್ ಹಕ್ (1870–1961) ಕಾರ್ಯದರ್ಶಿಯಾದಾಗ ಇದು ತುಂಬ ಅಭಿವೃದ್ಧಿಗೆ ಬಂತು. ಇದರ ಆಡಳಿತ ಕಚೇರಿಯನ್ನು ಹೈದರಾಬಾದಿನಿಂದ ಔರಂಗಾಬಾದಿಗೆ ವರ್ಗಾಯಿಸಲಾಯಿತು. ಉರ್ದು ಎಂಬ ತ್ರೈಮಾಸಿಕ ಪತ್ರಿಕೆಯನ್ನು 1921ರಲ್ಲಿ ಹೊರಡಿಸಲಾಯಿತು. ಇದು 1948ರವರೆಗೂ ನಿರಂತರವಾಗಿ ಪ್ರಕಟವಾಗುತ್ತಿತ್ತು. ಮೌಲ್ವಿ ಅಬ್ದುಲ್ ಹಕ್ ಹಳೆಯ ಉರ್ದು ಹಸ್ತ ಪತ್ರಿಕೆಗಳನ್ನೆಲ್ಲ ಕಲೆಹಾಕಿ ಸಂಪಾದಿಸಿ ವಿದ್ವತ್ಪೂರ್ಣ ಉಪೋದ್ಘಾತಗಳನ್ನು ಬರೆದು ಇದರಲ್ಲಿ ಪ್ರಕಟಿಸುತ್ತಿದ್ದ. ಈತ ಒಂದು ಘನವಾದ ಉರ್ದು–ಇಂಗ್ಲಿಷ್ ನಿಘಂಟನ್ನು ಪ್ರಕಟಿಸಿದ. ಹಕ್ ತಾನೇ ಸ್ವತಃ ಒಂದು ಸಂಸ್ಥೆಯನ್ನು ಹುಟ್ಟು ಹಾಕಿದ ಈ ಸಂಶೋಧನಾಲಯದ ಶಾಖೆಗಳನ್ನು ದೇಶಾದ್ಯಂತ ಸ್ಥಾಪಿಸಲು ಎಲ್ಲ ಕಡೆಯಿಂದ ಅನೇಕ ವಿದ್ವಾಂಸರ ಸಹಕಾರವನ್ನು ಪಡೆದ. 1938ರ ಅಕ್ಟೋಬರ್ ತಿಂಗಳಲ್ಲಿ ಅಂಜುಮನ್ ಅನ್ನು ದೆಹಲಿಗೆ ವರ್ಗಾಯಿಸಲಾಯಿತು. ಮತ್ತು ಹಮಾರಿ ಜ಼ಬಾನ್ ಎಂಬ ಪತ್ರಿಕೆಯನ್ನು 1941ರಲ್ಲಿ ಹೊರಡಿಸಲಾಯಿತು. ಈ ಪತ್ರಿಕೆ ಈಗಲೂ ಅಲಿಘರಿನಿಂದ ಪ್ರಕಟವಾಗುತ್ತಿದೆ. ಉರ್ದು ಭಾಷೆಗೂ ಸಾಹಿತ್ಯಕ್ಕೂ ಈತ ಮಾಡಿದ ಸೇವೆಯನ್ನು ಪುರಸ್ಕರಿಸಿ ಭಾರತೀಯರು ಈತನಿಗೆ ಬಾಬಾ–ಎ–ಉರ್ದು (ಉರ್ದು ಭಾಷೆಯ ತಂದೆ) ಎಂಬ ಬಿರುದನ್ನು ಸಲ್ಲಿಸಿದರು. ದರ್ ಆಲ್–ಮುಸ್ ಫೀಸ್ ಅಥವಾ ಷಿಬ್ಲಿ ಅಕೆಡಮಿ ಎಂಬ ಮತ್ತೊಂದು ಇಂಥದೇ ಸಂಶೋಧನಾಲಯವನ್ನು ಷಿಬ್ಲಿಯೇ ಆಜ಼ಮ್‌ಗಢದಲ್ಲಿ 1914ರಲ್ಲಿ ಸ್ಥಾಪಿಸಿದ. ಇಲ್ಲಿ ಪ್ರಮುಖವಾದ ಧಾರ್ಮಿಕ ಹಾಗೂ ಸಾಹಿತ್ಯದ ಸಂಶೋಧನೆಗಳನ್ನು ನಡೆಸಲಾಯಿತು.

ಭಾರತದ ಮಾಜಿ ವಿದ್ಯಾಮಂತ್ರಿ ಮೌಲಾನಾ ಅಬುಲ್ ಕಲಾಂ ಅಜ಼ಾದ್ (1889–1958) ಒಬ್ಬ ದೊಡ್ಡ ವಿದ್ವಾಂಸ, ವಾಗ್ಮಿ ಮತ್ತು ಉರ್ದು ಬರಹಗಾರ. ಉರ್ದು ಗದ್ಯದಲ್ಲಿ ಈತನದೇ ಒಂದು ಅನುಕರಣೀಯವಾದ ವಿಶಿಷ್ಟ ಶೈಲಿ. ಈತ ಅಲ್–ಹಿಲಾಲ್ ಮತ್ತು ಅಲ್–ಬಲಾಗ್ ಎಂಬ ಪತ್ರಿಕೆಗಳನ್ನು ಕಲ್ಕತ್ತೆಯಲ್ಲಿ ಪ್ರಾರಂಭಿಸಿದ. **(ನೋಡಿ– ಅಜ಼ಾದ್,– ಮೌಲಾನಾ–ಅಬುಲ್–ಕಲಾಂ)**.

ಇಂಗ್ಲಿಷ್ ಮತ್ತಿತರ ಭಾಷೆಗಳಲ್ಲಿ ಅನೇಕ ವಿಷಯಗಳ ಮೇಲಿನ ಉತ್ಕೃಷ್ಟ ಕೃತಿಗಳನ್ನು ಉರ್ದುವಿಗೆ ಭಾಷಾಂತರಿಸಲು ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯ 1917ರಲ್ಲಿ ದಾರುಲ್ ತರ್ಜುಮಾ ಎಂಬ ಭಾಷಾಂತರ ಇಲಾಖೆಯನ್ನು ಸ್ಥಾಪಿಸಿತು. ಈ ಪುಸ್ತಕಗಳನ್ನು ಹೈದರಾಬಾದ್ ಸಂಸ್ಥಾನದ ಶಾಲೆಗಳಲ್ಲೂ ಕಾಲೇಜುಗಳಲ್ಲೂ ಬೇರೆ ಬೇರೆ ದರ್ಜೆಗಳಿಗೆ ಪಠ್ಯ ಪುಸ್ತಕಗಳನ್ನಾಗಿ ಇಡಲಾಗಿತ್ತು. ಉರ್ದುವಿನಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಪರಿಭಾಷಾ ಶಬ್ದಕೋಶವನ್ನು ರಚಿಸಲು ಯಶಸ್ವಿ ಪ್ರಯತ್ನಗಳನ್ನು ಕೈಗೊಳ್ಳಲಾಯಿತು.

1921ರ ಅಸಹಕಾರ ಚಳವಳಿಯ ಕಾಲದಲ್ಲಿ ಜಾಮಿಯ ಮಿಲ್ಲಿಯ ಎಂಬ ಶುಲ್ಕರಹಿತ ರಾಷ್ಟ್ರೀಯ ವಿದ್ಯಾಸಂಸ್ಥೆಯೊಂದನ್ನು ದೆಹಲಿಯಲ್ಲಿ ಸ್ಥಾಪಿಸಬೇಕೆಂದು ನಿಶ್ಚಯಿಸಿದರು. ಈ ಸಂಸ್ಥೆಯಿಂದ ವಿವಿಧ ವಿಷಯಗಳ ಮೇಲೆ ಶ್ರೇಷ್ಠ ದರ್ಜೆಯ ಗ್ರಂಥಗಳು ಪ್ರಕಟವಾದುವು. ಇಂದಿಗೂ ಈ ಕಾರ್ಯ ಮುಂದುವರಿದಿದೆ. ಹೈದರಾಬಾದಿನ ಇದಾರಾ ಅದಬಿಯಾತೆ ಉರ್ದು (1925) ಅಲಹಾಬಾದಿನ ಹಿಂದೂಸ್ತಾನಿ ಅಕೆಡಮಿ (1927), ದೆಹಲಿಯ ನದಿವತುಲ್ ಮುಸನ್ನಿಫೀನ್ (1938) – ಇವು ಇತರ ಸಂಶೋಧನ ಕೇಂದ್ರಗಳು.

20ನೆಯ ಶತಮಾನ ತನ್ನ ಪ್ರಥಮ ಚತುರ್ಭಾಗದ ಅಂತ್ಯವನ್ನು ಮುಟ್ಟುತ್ತಿರುವಾಗ ರೊಮ್ಯಾಂಟಿಸಿಸಂ, ರ್‍ಯಾಡಿಕಲಿಸಂ ಮತ್ತು ರ್‍ಯಾಷನಲಿಸಂ ಎಂಬ ಮೂರು ಸಾಹಿತ್ಯ ಪಂಥಗಳು ಅನೇಕ ವಿಧಗಳಲ್ಲಿ ಪ್ರಕಟವಾಗುತ್ತಿದ್ದುವು. ಸ್ವಾತಂತ್ರ್ಯಕ್ಕಾಗಿ ಮೊದಲಾದ ರಾಷ್ಟ್ರೀಯ ಹೋರಾಟ ಒಂದು ಹೊಸ ಘಟ್ಟ ಪ್ರವೇಶಿಸುತ್ತಿತ್ತು. ಅಂತಾರಾಷ್ಟ್ರೀಯ ದೃಶ್ಯವೂ ಬೇಗ ಬೇಗ ಬದಲಾಯಿಸುತ್ತಿತ್ತು. ಅಲ್ಲಲ್ಲಿ ಅತೃಪ್ತಿಯ ಸೂಚನೆಗಳೂ ಸಾಮಾಜಿಕ ಧಾರ್ಮಿಕ ಮತ್ತು ಸಾಹಿತ್ಯಿಕ ತತ್ತ್ವಗಳಿಗೆ ವಿರುದ್ಧವಾಗಿ ಕಾಲ್ಪನಿಕ ಪ್ರತಿಭಟನೆಗಳೂ ತಲೆದೋರುತ್ತಿದ್ದುವು. ತರುಣರು ತಮ್ಮ ಬಾಳುವೆ ಮತ್ತು ಪ್ರಣಯದ ರೀತಿಗಳಲ್ಲಿ ಸ್ವಾತಂತ್ರ್ಯವನ್ನು ಬಯಸಿದರು.

ಅವರು ತಮ್ಮ ಬರೆಹಗಳಿಗೆ ಒಂದು ತರದ ಹೊಸತನವನ್ನೂ ಉಲ್ಲಾಸವನ್ನೂ ಧ್ಯೇಯ ಸಂಪನ್ನತೆಯನ್ನೂ ತಂದರು. ತಮ್ಮ ಶೈಲಿ, ಶಬ್ದ ಮತ್ತು ಶಬ್ದಪುಂಜಗಳ ರೀತಿ ರೂಪ ಸೌಂದರ್ಯಗಳಲ್ಲಿ ಅವರು ತುಂಬ ಎಚ್ಚರಿಕೆ ವಹಿಸಿದರು. ಆದರೆ ಅವರ ಭಾವಗಳು ಆಳವಾಗಿರಲಿಲ್ಲ, ನೀತಿಯ ವಿಷಯದಲ್ಲಿ ಅವರ ಉತ್ಸಾಹ ಕಡಿಮೆ, ಉನ್ನತ ವಿಚಾರಗಳಿಗೂ ಅವರಲ್ಲಿ ಆಸ್ಪದ ಅಲ್ಪವಾಗಿತ್ತು. ಫ್ರೆಂಚ್, ಇಂಗ್ಲಿಷ್ ಮತ್ತು ರಷ್ಯನ್ ಬರೆಹಗಾರರ ಮೂಲಕೃತಿಗಳಿಂದಲೂ ಭಾಷಾಂತರಗಳಿಂದಲೂ ಅವರು ಪ್ರಭಾವಿತರಾಗಿದ್ದರು. ಹಳೆಯದಾವುದೂ ತಮಗೆ ಬೇಡವೆಂಬ ಮನೋಭಾವವನ್ನು ತಳೆದು ಪಾಶ್ಚಾತ್ಯ ಸಾಹಿತ್ಯ ಸಂಪ್ರದಾಯಗಳಲ್ಲಿ ಮಗ್ನರಾಗಿದ್ದ ತರುಣ ಬರಹಗಾರರ ತಂಡವೊಂದು ಉರ್ದು ಓದುಗರಿಗೂ ಅಂದಿನವರೆಗೂ ತಿಳಿಯದಿದ್ದ ವಿಷಯಗಳ ಮೇಲೆ ಕಥೆಗಳನ್ನೂ ಕಾದಂಬರಿಗಳನ್ನೂ ರಚಿಸತೊಡಗಿತು. ತಮ್ಮ ಕಥೆಗಳು ತಂತ್ರದಲ್ಲಿ ಕೊನೆಮುಟ್ಟಿವೆಯೆಂದೂ ಕಲ್ಪನೆಯಲ್ಲಿ ಪರಿಣಿತವಾಗಿದೆಯೆಂದೂ ಅವರೇ ಒಪ್ಪಿಕೊಳ್ಳುತ್ತಿರಲಿಲ್ಲ ಆದರೆ ತಮ್ಮ ವಸ್ತುಗಳಲ್ಲೂ ರೂಪಗಳಲ್ಲೂ ಒಂದು ಹೊಸ ನಿಟ್ಟನ್ನು ತೋರುತ್ತವೆ—ಎಂದಷ್ಟನ್ನು ಮಾತ್ರ ಹೇಳುತ್ತಿದ್ದರು. ಜೇಮ್ಸ್ ಜಾಯ್ಸ್, ಫ್ರಾಯ್ಡ್, ಮಾರ್ಕ್ಸ್, ಗಾರ್ಕಿ, ಡಿ. ಎಚ್, ಲಾರೆನ್ಸ್ ಮತ್ತು ಟಾಲ್ಸ್ಟಾಯ್—ಇವರೆಲ್ಲರ ಬರಹಗಳೂ ಬೆರಕೆಯಾಗಿಹೋಗಿ ಓದುಗರ ಮತ್ತು ಬರಹಗಾರರ ಮುಂದೆ ನೋಟದ ಹೊಸ ತಿರುವುಗಳನ್ನೇ ತೆರೆದವು. ಮೊದಮೊದಲಿನ ಈ ಪ್ರಯತ್ನಗಳು ಜಯಗಳಿಸದಿದ್ದರೂ ಮುಂದಿನ ಬರಹಗಳ ಗೆಲುವಿಗೆ ಇವು ನಾಂದಿಯಾದವು. ಉರ್ದು ಸಾಹಿತ್ಯದ ಇತಿಹಾಸದಲ್ಲಿ 1936ನೆಯ ಇಸವಿ ಗಮನಾರ್ಹವಾದ ವರ್ಷ. ಅದು ಸಾಹಿತ್ಯವೊಂದಕ್ಕೆ ಅಲ್ಲ, ಇಡೀ ನಾಡಿಗೇ ಮಹತ್ತ್ವಪೂರ್ಣವಾದದ್ದು. ಏಕೆಂದರೆ ಆ ವರ್ಷದಲ್ಲೇ ಪ್ರಗತಿಶೀಲ ಲೇಖಕರ ಚಳವಳಿ ಒಂದು ಸ್ಪಷ್ಟ ರೂಪವನ್ನು ತಳೆದುದು. ಅದರ ಮೊದಲ ಸಮ್ಮೇಳನ ಲಖನೌದಲ್ಲಿ 1936ರ ಏಪ್ರಿಲ್ ತಿಂಗಳಲ್ಲಿ ಸಮಾವೇಶಗೊಂಡಿತು. ಮುನ್ಷಿ ಪ್ರೇಮ್‌ಚಂದ್ ಅದರ ಅಧ್ಯಕ್ಷ. ಸಮ್ಮೇಳನ ಉರ್ದುವಿನಲ್ಲಿನ ಉದ್ದೇಶ ರಹಿತ, ಅಸ್ಪಷ್ಟಾರ್ಥ ಶುದ್ಧರೂಪನಿಷ್ಠ ಲೇಖನಗಳ ಮೇಲೆ ಯುದ್ಧವನ್ನು ಘೋಷಿಸಿ ಒಂದು ಪ್ರಕಟಣೆಯನ್ನು ಹೊರಡಿಸಿತು. ನೋಟದ ಹರವನ್ನು ವಿಸ್ತರಿಸಿ ಲೇಖಕರ ಸೃಷ್ಟಿಶಕ್ತಿ ವಿಕಸಿಸುವಂತೆ ಮಾಡುವ ವಾಸ್ತವತೆ, ವಿಚಾರನಿಷ್ಠೆ ಮತ್ತು ನವಕಲಾಕುಶಲ ಸಾಹಿತ್ಯ ರೂಪಾನ್ವೇಷಣೆ — ಮುಂತಾದ ಮೌಲ್ಯಗಳಿಗೆ ವಿಶೇಷ ಗಮನಕೊಡಬೇಕೆಂದು ಒತ್ತಿ ಹೇಳಿತು.. ಇಕ್ಬಾಲನ ಅನಂತರ ಉರ್ದುಸಾಹಿತ್ಯದ ಶ್ರೇಷ್ಠ ಕವಿ ಎನಿಸಿದ ಷಬ್ಬೀರ್ ಹಸನ್‌ಖಾನ್ ಜೋಷ್ ಮಲಿಹಾಬಾದಿ ಎಂಬಾತ ತನ್ನ ವಿಶಿಷ್ಟ ಕೌಶಲವನ್ನೂ ಕಾಲವನ್ನೂ ಪ್ರಣಯ, ಪ್ರಕೃತಿಪ್ರೇಮ, ಮಾನವೀಯತೆ, ಮದಿರಾಪ್ರಮದಾ ಪ್ರಶಂಸೆ ಮುಂತಾದ ಶೃಂಗಾರ ಭಾವಗಳಿಗೆ ಮೀಸಲಿಟ್ಟು ಕವಿತೆಗಳನ್ನು ರಚಿಸುತ್ತಿದ್ದ ತನ್ನದೇ ಆದ ರಂಜಕ ಮಾರ್ಗದಲ್ಲಿ ಕ್ರಾಂತಿಪರವಾದ ಸ್ವಾತಂತ್ರ್ಯ, ಪ್ರಗತಿ ಮತ್ತು ಸಮಾನತಾಭಾವಗಳತ್ತ ತಿರುಗಿದ, ಆತನ ರುದ್ರಪ್ರತಿಭೆ, ಭಾಷೆ ಮತ್ತು ಶೈಲಿಯ ಪ್ರಭುತ್ವಗಳು ಇತರ ಕವಿಗಳನ್ನು ಪ್ರಭಾವಿಸಿದುವು. ಫೈಜ಼್, ಮಜ಼ಾಜ಼್, ಆಲಿಸರ್ದಾರ್, ಜಾಫ್ರಿ, ಅಖ್ತರ್, ಷೀರಾನಿ, ಆನಂದ್ ನಾರಾಯಣ ಮುಲ್ಲಾ ಮುಖದೂಮ್ ಮೊಹ್ಯುದ್ದೀನ್ ಫಿರಾಜ್ ಗೋರಖ್‌ಪೂರಿ ಮತ್ತು ಇತರರು ಪರಕೀಯರ ಆಡಳಿತ, ಅಜ್ಞಾನ, ಬಡತನ, ದಬ್ಬಾಳಿಕೆ ಮತ್ತು ಯುದ್ಧಗಳನ್ನು ತೆಗಳುತ್ತ ಹೊರಬಂದರು. ಅವರು ಕ್ರಾಂತಿಯನ್ನೂ ಜನಪ್ರೀತಿಯನ್ನೂ ಹಾಡಿ ಹರಸಿದರು.

ಕಥೆಗಾರರ ಪೈಕಿ ಕೃಷ್ಣ ಚಂದ್ರ, ರಾಜೇಂದ್ರಸಿಂಗ್, ಬೇದಿ, ಇಸಮತ್ ಚುಗ್‌ತಾಯಿ, ಖ್ವಾಜಾ ಅಹಮದ್ ಅಬ್ಬಾಸ್, ಅಲಿ ಅಬ್ಬಾಸ್, ಹುಸೇನಿ, ಹಯತುಲ್ಲ, ಅನ್‌ಸಾರಿ, ಸಅದತ್ ಹಸನ್ ಮಂಟೋ, ಸಾದಿಕ್ ಹುಸೇನ್ ಸರ್‌ಧನವಿ, ತೀರ್ಥರಾಮ್ ಫಿರೊಝ್‌ಪುರಿ, ಅಹಮದ್ ನದೀಂ ಕಾಸಿಮಿ, ಅಜ಼ೀಜ಼್ ಅಹಮದ್, ರೈಸ್ ಅಹಮದ್ ಜಾಫರಿ ಮತ್ತು ಇತರರನೇಕರು ಹೆಸರುವಾಸಿಯಾಗಿದ್ದಾರೆ. ಪ್ರೊಮಸೂದ್ ಹಸನ್ ರಜ಼್ ವಿ, ನೈಯಾಜ್ ಫತೇಪುರಿ. ಅಲ್ ಅಹಮದ್ ಸರೂರ್, ಪ್ರೊ. ರಷೀದ್ ಅಹಮದ್ ಸಿದ್ದಿಕಿ ಎಂಬುವರು ವಿಮರ್ಶೆಯಲ್ಲಿ ಪ್ರಖ್ಯಾತರಾಗಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಉರ್ದು ಭಾರತ ರಾಜ್ಯಾಂಗದಲ್ಲಿ ಪರಿಗಣಿತವಾಗಿರುವ 14 ಭಾಷೆಗಳಲ್ಲಿ ಒಂದು. ಭಾರತದಲ್ಲಿ ಉರ್ದುಪ್ರಾಂತ್ಯ ಯಾವುದೂ ಇಲ್ಲ. ಅದರೆ ದೇಶದ ಬಹುಭಾಗದ ಜನ ಈ ಭಾಷೆಯನ್ನು ಆಡಿ ಅರ್ಥಮಾಡಿಕೊಳ್ಳುತ್ತಿದ್ದಾರೆ. ಈ ಭಾರತೀಯ ಭಾಷೆ ಭಾರತದ ಸುತ್ತಮುತ್ತಲ ದೇಶಗಳಾದ ಇರಾನ್, ಆಫ್‌ಘಾನಿಸ್ತಾನ, ಅರೇಬಿಯ, ಸಿಲೋನ್, ಬರ್ಮ ಮತ್ತು ಪೂರ್ವ ಆಫ್ರಿಕ ಹಾಗೂ ಪಾಕಿಸ್ತಾನಗಳಲ್ಲಿ ಪ್ರಚಲಿತವಿದೆ. ದೇಶದ ಎಲ್ಲ ಕಡೆಗಳಲ್ಲೂ ಉರ್ದು ಪತ್ರಿಕೋದ್ಯಮವಿದೆ. ನೂರಾರು ದಿನ. ಎರಡು ದಿನ. ವಾರ ಮತ್ತು ಪಕ್ಷಪತ್ರಿಕೆಗಳೂ ಉರ್ದುವಿನಲ್ಲಿ ಪ್ರಕಟವಾಗುತ್ತಿವೆ. ನಿಯತಕಾಲಿಕಗಳು ಲಂಡನ್, ಏಡನ್ ಮತ್ತು ಪೂರ್ವ ಆಫ್ರಿಕ ನಗರಗಳಿಂದ ಪ್ರಕಟವಾಗುತ್ತಿವೆ. ದೇಶದ ಬಹುಪಾಲು ಎಲ್ಲ ನಗರಗಳಲ್ಲೂ ಉರ್ದುಪುಸ್ತಕಗಳು ಪ್ರಕಟವಾಗುತ್ತಿವೆ. ಬಹುಪಾಲು ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಉರ್ದು ಪೀಠಗಳಿದ್ದು ಅವುಗಳಲ್ಲಿ ಸ್ನಾತಕೋತ್ತರ ಮತ್ತು ಸಂಶೋಧನಾವಕಾಶಗಳಿವೆ. ಮಾಸ್ಕೋ. ಮದೀನ, ಪ್ಯಾರಿಸ್ ಮತ್ತು ಲಂಡನ್ ವಿಶ್ವವಿದ್ಯಾನಿಲಯಗಳಂಥ ಕೆಲವು ವಿದೇಶ ವಿಶ್ವವಿದ್ಯಾನಿಲಯಗಳಲ್ಲಿ ಸ್ವತಂತ್ರವಾಗಿ ಉರ್ದು ಅಧ್ಯಾಪನ ಮತ್ತು ಸಂಶೋಧನಾವಕಾಶಗಳಿವೆ. ಪಾಕಿಸ್ತಾನ ಉರ್ದುವನ್ನು ತನ್ನ ರಾಷ್ಟ್ರಭಾಷೆಯಾಗಿ ಅಳವಡಿಸಿಕೊಂಡಿದೆ. ಪಾಕಿಸ್ತಾನದಲ್ಲಿ ಉರ್ದುವನ್ನು ತನ್ನ ಪ್ರದೇಶದ ಭಾಷೆಯೆಂದು ಹೇಳಿಕೊಳ್ಳುವ ಯಾವ ಪ್ರಾಂತ್ಯವೂ ಇಲ್ಲ. ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಉರ್ದು ದಶಕಗಳ ಕಾಲ ಎಲ್ಲ ತರಗತಿ ಮಟ್ಟದಲ್ಲೂ ಬೋಧನಮಾಧ್ಯಮವಾಗಿದ್ದುದಲ್ಲದೆ ಯಶಸ್ವಿ ಪ್ರಯೋಗವೂ ಆಯಿತು. ಉರ್ದು ಸಾಹಿತ್ಯಕ್ಕೆ ಮುಸ್ಲಿಮರಷ್ಟೇ ಹಿಂದೂಗಳೂ ಸೇವೆ ಸಲ್ಲಿಸಿದ್ದಾರೆ. ಇದು ಕೇವಲ ಮುಸ್ಲಿಂ ಭಾಷೆಯಲ್ಲ. ಮುಸ್ಲಿಂ ಸಾಹಿತ್ಯವೂ ಅಲ್ಲ. ಉರ್ದು ಸಂಸ್ಕೃತಿ. ಹಿಂದೂ ಮುಸ್ಲಿಂ ಸಂಸ್ಕೃತಿಯ ಮಿಶ್ರಣವಾದ ಭಾರತೀಯ ಸಂಸ್ಕೃತಿ. ಉರ್ದು ಮುದ್ರಣ ಇನ್ನೂ ಬರೆವಣಿಗೆಯಲ್ಲಿ ನಡೆಯುತ್ತಿದೆ. ಉರ್ದುವಿನ ಅಚ್ಚುಮೊಳೆಗಳಿದ್ದರೂ ಉರ್ದು ಮುದ್ರಣಕ್ಕೆ ನಸ್ತಾಲಿಕ್ ರೀತಿಯ ಪರ್ಷಿಯನ್ ಮೂಲದ ಬರೆವಣಿಗೆಯನ್ನು ಉಪಯೋಗಿಸುತ್ತಿದ್ದಾರೆ. ಅಚ್ಚಿನ ಮೊಳೆಯಿಂದ ಮುದ್ರಿಸುವುದು ಇನ್ನೂ ಜನಪ್ರಿಯವಾಗಿಲ್ಲ. ಪ್ರಪಂಚದ ಜನಸಂಖ್ಯೆಯಲ್ಲಿ ಉರ್ದು ಆಡುಭಾಷೆಯಾಗಿ ಮೂರನೆಯ ಸ್ಥಾನ ಗಳಿಸಿದೆ. (ಎಂ.ವೈ.ಕೆ.)

**ಉರ್ವಶಿ:** ಭಾರತೀಯ ವೇದಪುರಾಣ ಕಾವ್ಯಗಳಲ್ಲಿ ಕೋರೈಸುತ್ತಿರುವ, ರುದ್ರ ರಮಣೀಯ ವ್ಯಕ್ತಿತ್ವ ಹಾಗೂ ಚಾರಿತ್ರ್ಯವನ್ನುಳ್ಳ ಒಬ್ಬ ಅಪ್ಸರೆ. ಋಗ್ವೇದ ಸಂಹಿತದಲ್ಲಿ ಸಂವಾದರೂಪದಲ್ಲಿ ಮಂತ್ರಿತವಾಗಿರುವ ಉರ್ವಶೀ–ಪುರೂರವರ ಕಥೆ ಶತಪಥ ಬ್ರಾಹ್ಮಣ, ಯಜುರ್ವೇದಕಾರಕ, ಸದ್ಗುರು ಶಿಷ್ಯರ ಸರ್ವಾನುಕ್ರಮಣಿಯ ವ್ಯಾಖ್ಯಾನ, ವಾಯು, ವಿಷ್ಣು. ಮತ್ಸ್ಯಪುರಾಣಗಳು ಹಾಗು ಬೃಹದ್ದೇವತಾ, ಮಹಾಭಾರತ, ಆದಿಪರ್ವ, ಕಥಾಸರಿತ್‌ಸಾಗರಗಳಲ್ಲಿ ಬಗೆ ಬಗೆಯಾಗಿ ರೂಪುಗೊಂಡು ಕಾಳಿದಾಸನ ವಿಕ್ರಮೋರ್ವಶೀಯ ನಾಟಕದಲ್ಲಿ ವಿಪ್ರಲಂಭ ಶೃಂಗಾರದ ರಮ್ಯ ಕಥೆ ಮಾತ್ರವಾಗಿ ಉಳಿಯುತ್ತದೆ. ಇತ್ತೀಚಿನ ದಿನಗಳಲ್ಲಿ ಮಹರ್ಷಿ ಅರವಿಂದರ ಖಂಡಕಾವ್ಯವೊಂದರಲ್ಲಿ ಈ ಕಥೆಯೇ ಸಾವಯವ ಪೂರ್ಣಶಿಲ್ಪವಾಗಿ, ಕೊಂಚ ಮಟ್ಟಿಗೆ ವೇದಕಥೆಯ ನಿಶಿತೋಜ್ವಲತೆಯನ್ನೂ ಕಾಳಿದಾಸ ನಾಟಕಕಥೆಯ ರಮ್ಯತೆಯನ್ನೂ ಮೈಗೂಡಿಸಿಕೊಂಡಿದೆ, ಎಷ್ಟೇ ಅಮರ್ತ್ಯವಾದುದಾದರೂ ಅಲಭ್ಯವಾದುದಾದರೂ ಉರ್ವಶಿಯ ಪ್ರಣಯಲಾಭ ಪುರೂರವನಿಗಾಗುತ್ತದೆ. ಆದರದಕ್ಕೆ ಆತ ಕೊಟ್ಟ ಬೆಲೆ ಅನಂತಪತನ–ಎಂಬುದು ಅರವಿಂದರ ದರ್ಶನ. ಕವಿವರ್ಯ ಠಾಕೂರರಿಗೆ ಉರ್ವಶಿ ಅನಂತ ಯೌವನವಾಗಿ ವಿಶ್ವದ ಅನಾದಿಯಾದ ಏಕೈಕ ಪ್ರೇಯಸಿಯಾಗಿ, ಸೃಷ್ಟಿಯ ಸೌಂದರ್ಯದ ಅಂತರಂಗವಾಗಿ ಮರ್ತ್ಯಮಾನವ ಹೃದಯದಲ್ಲಿ ನಾನಾ ಭಾವತರಂಗವೆಬ್ಬಿಸುವ ಪ್ರೇರಣೆಯಾಗಿ ಕಾಣುತ್ತಾಳೆ.

ಋಗ್ವೇದ ಸಂಹಿತದ 18 ಋಕ್‌ಗಳಲ್ಲಿ ಮಿಂಚಿರುವುದು ಉರ್ವಶೀ ಪುರೂರವರ ಸಮಾಗಮಾನಂತರದ ವಿಯೋಗಸಂಧಿಯ ಕಥೆ. ಪುರೂರವನಿಗೆ ಪ್ರಿಯಕರಳಾಗಿದ್ದ ಈ ಅಪ್ಸರೆ ತನ್ನ ಮಾವನಿಗೆ ಅನ್ನಪಾನಾದಿಗಳನ್ನು ಸಮಯಕ್ಕೆ ತಕ್ಕಂತೆ ಒದಗಿಸುತ್ತ ರಾತ್ರಿ ಹಗಲೆನ್ನದೆ ನಾಲ್ಕು ವರ್ಷಕಾಲ ಸಂಸಾರಮಾಡಿಕೊಂಡಿರುತ್ತಾಳೆ. ಪತಿಯನ್ನು ತನ್ನ ಬಸಿರಿನಲ್ಲಿ ಪುತ್ರರೂಪದಲ್ಲಿ ಹೊತ್ತಿರುತ್ತಾಳೆ. ಆದರೂ ಮರ್ತ್ಯನಿಗೆ ದೀರ್ಘಲಭ್ಯಳಾಗದ ಈ ಅಮೃತಾಸು ಕಾಮಿನಿ, ಸೂರ್ಯೋದಯ ನಂತರದಲ್ಲಿ ಕರಗುವ ಉಷೆಯಂತೆ, ಕೈ ಹಿಡಿತಕ್ಕೆ ಸಿಕ್ಕದ ಗಾಳಿಯಂತೆ ಪುರೂರವನಿಗೆ ದಕ್ಕದಾಗುತ್ತಾಳೆ ದ್ಯುಲೋಕದಿಂದ ಮಿಂಚಿನಂತೆರಗಿ ಬಂದು ಆ ದಿವ್ಯಲೋಕದ ಉದಕವನ್ನು ತಂದಿತ್ತು ತನ್ನನ್ನು ಅಗಲುತ್ತಿರುವ ಈ ವಿದುಷಿ ಅಪ್ಸರೆಯನ್ನು ಪುರೂರವ ಬಗೆಬಗೆಯಾಗಿ ಬೇಡಿಕೊಳ್ಳುತ್ತಾನೆ; ಹಸಿದ ತೋಳಗಳಿಗೆ ತಾನು ಉಣಿಸಾಗುವುದಾಗಿಯೂ ಮೃತ್ಯುವಿನ ತೊಡೆಗೆ ತಲೆಯೊಡ್ಡುವುದಾಗಿಯೂ ಅಂಗಲಾಚುತ್ತಾನೆ. ಅಂತರಿಕ್ಷವನ್ನೆಲ್ಲ ತುಂಬುಬೆಳಕಿನಿಂದ ತುಂಬುವ ಆ ಅಬ್ದೇವತೆ ಉರ್ವಶಿಯನ್ನು ಮಾನವಶ್ರೇಷ್ಠನಾದ (ವಸಿಷ್ಠ) ಪುರೂರವ ಮತ್ತೆ ಪಡೆಯುವ ಆಶಯ ತೋರಿ ಬೇಡುತ್ತಾನೆ. ಆದರೆ ದೃಢಮನಸ್ಕಳಾದ ಉರ್ವಶಿ ಆಗ ಘೋರೆಯಾಗಿ ಹೆಣ್ಣಿನ ಸ್ನೇಹ ಚಿರವಲ್ಲವೆಂದು ಆತನನ್ನು ಝಳಪಿಸುತ್ತಾಳೆ. ಹಾಗೂ ತಾನು ಮಾತ್ರ ಇನ್ನು ಮಾನವರಿಗೆ ಅಲಭ್ಯಳೆಂದೂ ಸ್ವರ್ಗದಲ್ಲಿ ಮಾತ್ರ ಪುರೂರವ ತನ್ನನ್ನು ಕೂಡುವನೆಂದೂ ಸ್ಪಷ್ಟಪಡಿಸುತ್ತಾಳೆ.

ಋಗ್ವೇದದ ಅನಂತರದ ಶತಪಥ ಬ್ರಾಹ್ಮಣ ಈ ವೇದಕಥೆಯ ಪೂರ್ವೋತ್ತರ ಸ್ವರೂಪಗಳನ್ನು ಕಲ್ಪಿಸುತ್ತದೆ. ಇಲ್ಲಿನ ಉರ್ವಶಿ ಪುರೂರವನನ್ನುಳಿದು ಹೋದ ಅನಂತರ ಅವನ ಗೋಳನ್ನು ಕೇಳಲಾರದೆ ಮನಕರಗಿ ಒಂದು ರಾತ್ರಿ ಮಾತ್ರ ಅವನನ್ನು ಕೂಡಿ ಗರ್ಭಿಣಿಯಾಗುತ್ತಾಳೆ. ಮಹಾಭಾರತ, ಬ್ರಹ್ಮಾಂಡ ಪುರಾಣಗಳಲ್ಲಿ ಬರುವ ಪುರೂರವ ಪರಾಕ್ರಮಿಯಾದರೂ ಸಾಧು ಸಂತರಿಗೆ ಹಿಂಸಕನಾಗಿದ್ದು ಶಕ್ತಿಹೀನನಾಗುತ್ತಾನೆ. ಆಮೇಲೆ ಗಂಧರ್ವಲೋಕದಿಂದ ಯಜ್ಞಾರ್ಥವಾಗಿ ಅಗ್ನಿಯನ್ನು ತಂದು ಪೂಜಿಸಿ ಉರ್ವಶಿಯ ನ್ನೊಲಿದು ಆಯುವ ಮೊದಲಾದ ಆರು ಮಕ್ಕಳನ್ನು ಪಡೆಯುತ್ತಾನೆ. ಚತುರ್ವರ್ಣದ ಎಲ್ಲರಿಂದಲೂ ಅತಿಯಾಗಿ ಕಂದಾಯವನ್ನು ವಸೂಲು ಮಾಡುತ್ತಿದ್ದುದರಿಂದ ಪುರೂರವ ದುರ್ಗತಿ ಹೊಂದಿದನೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿದೆ.

ಈ ವೇದಕಥೆ ನಮ್ಮವರೇ ಆದ ಕವಿಗಳಿಗೆ ಪುರಾಣಕಾರರಿಗೆ ಬೇರೆಬೇರೆ. ಅನುಭವವನ್ನು ತಂದಂತೆ ಪಾಶ್ಚಾತ್ಯ ವಿದ್ವಾಂಸರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಅರ್ಥವನ್ನು ನೀಡಿದೆ. ಉರ್ವಶಿ–ಪುರೂರವ ಎಂದರೆ ಮಿಂಚು ಗುಡುಗು ಎಂದು ಯಾಕರ ವ್ಯಾಖ್ಯೆ. ಉರ್ವಶಿ ಎಂದರೆ ಮಹಾಯಶಸ್ವಿನಿ, ಸುಂದರ ತೊಡೆಗಳಿಂದ ಸುಖಾಸ್ಪದೆ, ಮಹಾಕಾಮಿನಿ ಎಂಬ ಮೂರು ಬಗೆಯ ನಿರ್ವಚನವನ್ನು ಅವರೇ ನೀಡುತ್ತಾರೆ. ಅರಣಿಗಳಿಂದ ಯಜ್ಞಾಗ್ನಿ ಮಂಥನ ಮಾಡುವುದಕ್ಕೆ ಇವರು ಶತಪಥ ಬ್ರಾಹ್ಮಣದಲ್ಲಿ ಸಂಕೇತವಾಗುತ್ತಾರೆ. ಮಾನವ

ಸಂಭೋಗಕ್ಕೂ ಈ ಉರ್ವಶೀ ಪುರೂರವ ಮಂಥನ (ಅಗ್ನಿ ಮಂಥನ) ಸಂಕೇತವಾಗುತ್ತದೆ (ಬೃಹದಾರಣ್ಯಕ ಉಪನಿಷತ್). ಪಾಶ್ಚಾತ್ಯ ವೇದವಿದ್ವಾಂಸ ಮ್ಯಾಕ್ಸ್‌ಮುಲ್ಲರ್ ಅವರಿಗೆ ಉರ್ವಶೀ–ಪುರೂರವ ಕಥಾನಕ ಉಷೆ ಸೂರ್ಯರ ನಿತ್ಯ ಪ್ರಣಯದ ಯೋಗಾಯೋಗಕ್ಕೆ ಸಂಕೇತವಾಗಿದೆ. ಉರ್ವಶಿ ಪುರೂರವನನ್ನು ಪ್ರೀತಿಸುವುದೇ ಸೂರ್ಯೋದಯ. ಉಷೆಯೇ ಉರ್ವಶಿ; ಸೂರ್ಯ ಪುರೂರವ. ನಗ್ನ ಪುರೂರವನನ್ನು ಕಂಡು ಮರೆಯಾಗುವ ಉರ್ವಶಿಯಂತೆ ಸ್ಪಷ್ಟ ಸೂರ್ಯನನ್ನು ಕಂಡು ಉಷೆ ಕರಗುತ್ತಾಳೆ; ಮತ್ತೆ ಪುರೂರವ ಉರ್ವಶಿಯರ ಸಮಾಗಮ ಸಾಯಂಸಂಧ್ಯೆಯಲ್ಲಿ. ಮ್ಯಾಕ್ಸ್‌ಮುಲ್ಲರ್ ಅವರ ಈ ರಮ್ಯಕಲ್ಪನೆಯೆ ವಿಲ್ಸನ್ ಅವರದೂ ಆಗಿರುವಂತೆ ತೋರುತ್ತದೆ. ಆದರೆ ಕೀತ್ ಅವರಿಗೆ ಈ ಯಾವ ಅರ್ಥವೂ ಸ್ಫುರಿಸುವುದಿಲ್ಲ. ಡಿ.ಡಿ. ಕೋಸಾಂಬಿ ಅವರಾದರೂ ಇದರಲ್ಲಿ ಸಾಮಾಜಿಕ ಸ್ಥಿತ್ಯಂತರಗಳ ಸೂಚನೆಯನ್ನು ಕಾಣುತ್ತಾರೆ. ಮಾತೃಪ್ರಧಾನ ಸಮಾಜವನ್ನು ಸ್ಥಿತ್ಯಂತರಗಳ ಸೂಚನೆಯನ್ನು ಕಾಣುತ್ತಾರೆ. ಮಾತೃಪ್ರಧಾನ ಸಮಾಜವನ್ನು ಪಿತೃಪ್ರಧಾನ ವ್ಯವಸ್ಥೆ ಆಕ್ರಮಿಸಲಿದ್ದ ಸಂಕ್ರಮಣ ಕಾಲದಲ್ಲಿದ್ದವನೆ ಪುರೂರವ. ಪುರೂರವ ತನ್ನನ್ನು ಮತ್ತೆ ಕೂಡಬೇಕಾದರೆ ಪುನರ್ಜನ್ಮವೆತ್ತಿ ಗಂಧರ್ವನಾಗಿ ಬರಬೇಕೆಂದು ಚೊಚ್ಚಲತಾಯಿ ಉರ್ವಶಿ ಹೇಳುವುದನ್ನು ನೋಡಿದರೆ ಒಬ್ಬ ಮಗ ಹುಟ್ಟಿದ ಅನಂತರ ತಂದೆ ತನ್ನನ್ನು ತಾನು ಬಲಿಕೊಟ್ಟುಕೊಳ್ಳಬೇಕೆಂಬ ಸಾಮಾಜಿಕ ನಿಯಮ ಅಂದು ಇದ್ದಿರಬಹುದೆಂದು ಕೋಸಂಬಿಯವರ ಊಹೆ. ಅಲ್ಲದೆ ಅವರಿಗೆ ಋಗ್ವೇದದ ಉರ್ವಶೀ–ಪುರೂರವರ ಸಂವಾದ ಗಂಡಿನ ಬಲಿದಾನದ ಪಳೆಯುಳಿಕೆಯಾಗಿ ತೋರುತ್ತದೆ.

ಯಾರಿಗೆ ಹೇಗೆ ಕಂಡರೂ ಈ ಮಿಂಚಿನಂಥ ಉರ್ವಶೀ–ಪುರೂರವರ ಪ್ರಣಯಕಥೆ ಮಹಾಭಾರತದಲ್ಲಿ ಅದೇ ವಂಶದ ವೀರಪುತ್ರನಾದ ಅರ್ಜುನನನ್ನು ಇಂದ್ರೇಚ್ಛೆಯಂತೆ ಮೋಹಿಸಿ ಹತಾಶಳಾಗಿ ಶಪಿಸುವ ಗತಿ ಬರುತ್ತದೆ. (ಈ ಕಥೆ ಮಹಾಭಾರತದ ಸುಕ್ತಂಕರ್ ಪರಿಷ್ಕೃತ ಮುದ್ರಣದಲ್ಲಿಲ್ಲದಿದ್ದರೂ ಸಾಮಾನ್ಯ ಪ್ರತಿಯಲ್ಲಿ ಇದ್ದೇ ಇದೆ). ಪಂಪಕವಿಯಲ್ಲಿ ಅರ್ಜುನನಿಗೆ ಶಾಪ ಕೊಟ್ಟವಳು ಉರ್ವಶಿಯಲ್ಲ, ರಂಭೆಯೆಂಬ ಅಪ್ಸರೆ, ತೆಲುಗಿನ ನನ್ನಯ್ಯ ಭಾರತದಲ್ಲಿ ಉರ್ವಶಿ ಅರ್ಜುನ ಪ್ರಸಂಗವೇನೋ ಸ್ವಲ್ಪ ವಿಸ್ತಾರವಾಗಿಯೇ ಬರುತ್ತದಾದರೂ ಅದು ಮಹೋಜ್ವಲ ರೂಪ ತಾಳುವುದು ಕುಮಾರವ್ಯಾಸ ಭಾರತದಲ್ಲಿ, ಅಲ್ಲಿ ಬರುವ ಕುಪಿತ ಉರ್ವಶಿ ಋಗ್ವೇದ ಸಂಹಿತದ ಅಪ್ಸರೆಯ ರುದ್ರಸ್ಮಿತವನ್ನೇ ಮೆರೆಯುತ್ತಾಳೆ. ಇಂದ್ರಕೀಲ ಪರ್ವತದಿಂದ ಅಮರಾವತಿಗೆ ಹೋಗಿ ಇಂದ್ರನ ಆತಿಥ್ಯದಲ್ಲಿದ್ದ ಅರ್ಜುನನನ್ನು ಮೋಹಿಸಿ ತನ್ನಿಷ್ಟಾರ್ಥ ನೆರವೇರದಿರಲು ಈಕೆ ಆತನನ್ನು ನಪುಂಸಕನಾಗೆಂದು ಶಪಿಸುತ್ತಾಳೆ. ನಂಜುಂಡ ಕವಿ ತನ್ನ ಕುಮಾರರಾಮನನ್ನು ಅರ್ಜುನನ ಅವತಾರವೆಂದೂ ಉರ್ವಶಿಯನ್ನು ರತ್ನಾಜಿಯೆಂದು ಕಲ್ಪಿಸಿಕೊಂಡಿದ್ದಾನೆ.

ಋಗ್ವೇದದ ಉಷೋದಯದೊಡನೆ ಕಣ್ತೆರೆದು ಬಂದ ಈ ಅಪ್ಸರೆಯಾದರೂ ಯಾರ ಮಗಳು? ತಪೋನಿರತರಾಗಿದ್ದ ತಮ್ಮನ್ನು ಕೆದಕಲು ಬಂದ ಅಪ್ಸರಗಣಕ್ಕೆ ನಾಚಿಕೆ ಉಂಟು ಮಾಡಲು ನಾರಾಯಣ ಋಷಿ ತನ್ನ ತೊಡೆಯನ್ನು ಕೆರೆದು ಸೃಷ್ಟಿಸಿದ ಅಪೂರ್ವಸುಂದರಿಯೆ ಈಕೆ. ಆದರೆ ರವೀಂದ್ರನಾಥ ಠಾಕೂರರು ಹೇಳುತ್ತಾರೆ–ಎಂದೂ ನೀನು ಮುಗುಳಾಗಿರಲಿಲ್ಲವೆ, ಬಾಲಕಿಯಾಗಿರಲಿಲ್ಲವೆ. ಅನಂತ ಯೌವನೆ?. . . . ತಾಯಿ ಅಲ್ಲ, ಕನ್ಯೆಯಲ್ಲ, ವಧುವಲ್ಲ ಸುಂದರಿ ಹೇ ರೂಪಸಿ, ಹೇ ನಂದನವಾಹಿನಿ–ಎಂದು (ಮಾಸ್ತಿಯವರ ಗ್ರಂಥದಿಂದ). ಈ ನಿತ್ಯ ಕನ್ಯೆ, ಚಿರತರುಣಿ ಕೂಡ ಅವರಿಗೊಮ್ಮೆ ಅಸ್ತಾಚಲವಾಹಿನಿಯಾಗಿ ಕಾಣುತ್ತಾಳೆ.

(ಎಸ್.ಎನ್.ಎಸ್.ಎಚ್.)

**ಉಲುಘ್ ಖಾನ್:** ಅಲ್ಲಾವುದ್ದೀನ್ ಖಿಲ್ಜಿಯ ಸಹೋದರ, ಅವನು ರಾಜನಾಗಲು ಈತ ಸಹಾಯ ಮಾಡಿದುದಲ್ಲದೆ ಅನಂತರ ಅವನ ರಾಜ್ಯ ವಿಸ್ತರಣೆಗೂ ನೆರವಾದ. ಅಲ್ಲಾವುದ್ದೀನನ ಆಳ್ವಿಕೆಯ ಆರಂಭದಲ್ಲಿ ಭಾರತದ ವಾಯವ್ಯ ಭಾಗವನ್ನು ಮುತ್ತಿದ ಮಂಗೋಲರನ್ನು ಎದುರಿಸಿದ. 1297ರಲ್ಲಿ ಸುಲ್ತಾನನ ಆದೇಶದಂತೆ ಗುಜರಾತ್ ದೇಶದ ಮೇಲೆ ದಂಡೆತ್ತಿ ಹೋಗಿ ಅಲ್ಲಿಯ ದೊರೆ ಎರಡನೆಯ ಕರ್ಣದೇವರಾಯನನ್ನು ಸೋಲಿಸಿ ಆತನ ಹೆಂಡತಿ ಕಮಾಲಾದೇವಿಯನ್ನು ಅಪಹರಿಸಿಕೊಂಡು ಬಂದನೆಂದೂ. ಕರ್ಣದೇವರಾಯನೂ ಆತನ ಮಗಳು ದೇವಲದೇವಿಯೂ ದೇವಗಿರಿಯ ರಾಜನಾದ ರಾಮಚಂದ್ರದೇವನ ಆಶ್ರಯಪಡೆದರೆಂದೂ ಹೇಳಲಾಗಿದೆ. 1299ರಲ್ಲಿ ಈತ ನಜ್ಘರತ್ ಖಾನನೊಂದಿಗೆ ರಣತಂಬೂರಿಗೆ ಮುತ್ತಿಗೆ ಹಾಕಿದಾಗ ಅಲ್ಲಿನ ರಾಣಾ ಹಮೀರ್ ದೇವ ಇವರನ್ನು ಧೈರ್ಯದಿಂದ ಎದುರಿಸಿದ. ಯುದ್ಧದಲ್ಲಿ ನಜ್ಘರತ್ ಖಾನ್ ಮಡಿದ, ಉಲುಘ್‌ಖಾನ್ ಓಡಿಹೋದ. ಮರುವರ್ಷ ರಣತಂಬೂರನ್ನು ಅಲ್ಲಾವುದ್ದೀನನ ಕಡೆಯವರು ವಶಪಡಿಸಿಕೊಂಡರು. ಉಲುಘ್ ಖಾನ್ ರಣತಂಬೂರಿನ ಆಡಳಿತಾಧಿಕಾರಿಯಾಗಿ ನೇಮಕಗೊಂಡ. ಆ ವರ್ಷವೇ ಈತನು ನಿಧನನಾದ. (ಎಂ.ಡಿ.ಎನ್.; ಜಿ.ಆರ್.ಆರ್.)

**ಉಲೂಕ:** 1 ಮಹಾಭಾರತದಲ್ಲಿ ಶಕುನಿಯ ಮಗ, ಕುರುಕ್ಷೇತ್ರ ಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ ದುರ್ಯೋಧನ ಇವನನ್ನು ಯುಧಿಷ್ಠಿರನ ಸಮೀಪಕ್ಕೆ ದೂತನನ್ನಾಗಿ ಕಳಿಸುತ್ತಾನೆ. ಯುದ್ಧದಲ್ಲಿ ಹೋರಾಡಿ ಪೌರುಷವನ್ನು ತೋರಿಸಬೇಕೆಂದೂ ಗೆದ್ದರೆ ಮಾತ್ರ ರಾಜ್ಯಲಾಭವೆಂದೂ ಸೋತರೆ ವನವಾಸವೆಂದೂ ದುರ್ಯೋಧನ ಕಳಿಸಿದ ಸಂದೇಶದ ತಾತ್ಪರ್ಯ. ಮೊದಲದಿನ ಚೇದಿರಾಜನೊಡನೆ ಯುದ್ಧ ಮಾಡುತ್ತಾನೆ. ಕಡೆಯಲ್ಲಿ ಸಹದೇವನಿಂದ ಹತನಾಗುತ್ತಾನೆ. ಶಕುನಿ, ಕೈತವ, ಸೌಬಲಸುತ, ಕಿತವ ಇವು ನಾಮಾಂತರಗಳು. 2. ಇಂದ್ರನ ಹೆಸರುಗಳಲ್ಲೊಂದು. 3. ಒಬ್ಬ ಯಕ್ಷ. 4. ಪ್ರಾಚೀನನಾದ ಋಷಿಯೊಬ್ಬನ ಹೆಸರು. 5. ಉತ್ತರ ಭಾರತದಲ್ಲಿನ ಒಂದು ದೇಶ. ಇದನ್ನು ಬೃಹಂತನೆಂಬ ರಾಜ ಆಳುತ್ತಿದ್ದನೆಂದು ಮಹಾಭಾರತದಲ್ಲಿ ಹೇಳಿದೆ. (ಬಿ.ಕೆ.ಎಸ್.)

**ಉಲೂಪಿ:** ಅರ್ಜುನನ ಹೆಂಡತಿಯರಲ್ಲೊಬ್ಬಳು. ಕೌರವ್ಯನೆಂಬ ನಾಗನ ಮಗಳು. ಇವರ ಮಗ ಇರಾವಂತ. ಹನ್ನೆರಡು ವರ್ಷ ತೀರ್ಥಯಾತ್ರೆ ಮಾಡಬೇಕಾಗಿ ಬಂದ ಅರ್ಜುನ ನಾನಾ ತೀರ್ಥಕ್ಷೇತ್ರಗಳನ್ನೂ ನದೀತೀರಗಳನ್ನೂ ಸಂದರ್ಶಿಸುತ್ತಾ ಗಂಗಾದ್ವಾರಕ್ಕೆ ಬಂದಾಗ ಆತನನ್ನು ಕಂಡು ಮೋಹಿತಳಾದ ಉಲೂಪಿ ತನ್ನ ಲೋಕವಾದ ಪಾತಾಳಕ್ಕೆ ಕರೆದುಕೊಂಡು ಹೋಗುತ್ತಾಳೆ. 12 ವರ್ಷದ ವನವಾಸದಲ್ಲಿರುವ ಅರ್ಜುನನ ಧಾರ್ಮಿಕ ಸಂಕೋಚಗಳನ್ನು ದೂರಮಾಡಿ ಅವನನ್ನು ಮದುವೆಯಾಗುತ್ತಾಳೆ. ಮುಂದೆ ಇವಳನ್ನು ಕಾಣುವುದು ಅಶ್ವಮೇಧ ಪರ್ವದಲ್ಲಿಯೇ. ಯಜ್ಞಾಶ್ವವನ್ನು ಹಿಂಬಾಲಿಸಿ ಮಣಿಪುರಕ್ಕೆ ಬಂದ ಅರ್ಜುನ ತನ್ನ ಮುಂದೆ ವಿನೀತನಾಗಿ ಬಂದೆರಗಿದ ಪುತ್ರ ಬಭ್ರುವಾಹನನನ್ನು ಹೀನೈಸುತ್ತಿರುವುದನ್ನು ಕೇಳಿ ಕೆರಳಿದ ಈಕೆ ನಾಗಲೋಕದಿಂದ ಭೂಮಿಯನ್ನು ಭೇದಿಸಿಕೊಂಡು ಬಂದು ತನ್ನ ಸವತಿಯ ಮಗನನ್ನು ತಂದೆಯೆದುರು ಕ್ಷತ್ರಿಯ ಧರ್ಮಾನುಸಾರವಾಗಿ ಯುದ್ಧ ಮಾಡೆಂದು ಪ್ರಚೋದಿಸುತ್ತಾಳೆ. ಭಯಂಕರ ಯುದ್ಧಾನಂತರದಲ್ಲಿ ಸತ್ತು ಬಿದ್ದ ಅರ್ಜುನನನ್ನು ಕಂಡು ಗೋಳಿಡುತ್ತ ಪ್ರಾಯೋಪವೇಶ ವ್ರತ ಕೈಗೊಳ್ಳಲಿರುವ ಚಿತ್ರಾಂಗದೆ, ನಿರ್ವಿಕಾರವಾಗಿರುವ ಉಲೂಪಿಯನ್ನು ಕಂಡು ಸಂದೇಹಿಸುತ್ತಾಳೆ. ಬಭ್ರುವಾಹನನೂ ಮಲತಾಯಿಯ ಉದ್ದೇಶವನ್ನು ಶಂಕಿಸುತ್ತಾನೆ. ಅನಂತರ ಉಲೂಪಿ ತರಿಸಿದ ನಾಗಮಣಿಯಿಂದೆದ್ದ ಅರ್ಜುನನಿಗೂ ಅವಳ ವರ್ತನೆ ವಿಸ್ಮಯವಾಗುಳಿಯುತ್ತದೆ. ಕಡೆಗೆ ಅವಳು ಎಲ್ಲ ರಹಸ್ಯವನ್ನೂ ತಿಳಿಸುತ್ತಾಳೆ. ಶಿಖಂಡಿಯನ್ನು ತೋರಿ ಅಧರ್ಮದಿಂದ ಭೀಷ್ಮರನ್ನು ಕೊಂದುದಕ್ಕೆ ದುಃಖಿತಪ್ತರಾದ ವಸುಗಳೂ ಗಂಗೆಯೂ ಅರ್ಜುನನ ಮರಣವನ್ನು ಘೋಷಿಸಿದುದನ್ನು ಕೇಳಿಸಿಕೊಂಡಿದ್ದ ಈಕೆ ತನ್ನ ತಂದೆಯ ಮೂಲಕ ಅದಕ್ಕೆ ವಿಶಾಪವನ್ನು ಗಳಿಸಿಕೊಂಡಿರುತ್ತಾಳೆ. ಅದರ ಫಲ, ಬಭ್ರುವಾಹನನ ಕೈಯಲ್ಲಿ ಅರ್ಜುನನಿಗೆ ಮರಣಾಭಾಸ. ಆಮೇಲೆ ಅರ್ಜುನನ ಅಪ್ಪಣೆಯಂತೆ ಅಶ್ವಮೇಧಯಾಗಾರ್ಥವಾಗಿ ಹಸ್ತಿನಾವತಿಗೆ ಚಿತ್ರಾಂಗದೆ ಬಭ್ರುವಾಹನರೊಡನೆ ತೆರಳಿ ಕುಂತಿ ದ್ರೌಪದಿ ಸುಭದ್ರೆಯರಿಂದ ಸಂಭಾವಿತಳಾಗುತ್ತಾಳೆ.

ಪಾಂಡವರೆಲ್ಲರೂ ರಾಜ್ಯತ್ಯಾಗ ಮಾಡಿ ಮಹಾಪ್ರಸ್ಥಾನವನ್ನರಸಿ ಹೊರಟಾಗ ಉಳಿದೆಲ್ಲರೂ ತುಸು ದೂರ ಅವರನ್ನನುಸರಿಸಿ ಹಿಂದಿರುಗುತ್ತಾರೆ; ಚಿತ್ರಾಂಗದೆ ಮಣಿಪುರಕ್ಕೆ ತೆರಳುತ್ತಾಳೆ. ಆದರೆ ಮಹಾಸತಿ ಗಂಗೆಯಲ್ಲಿ ಸ್ವರ್ಗಮಾರ್ಗವನ್ನು ಕಂಡುಕೊಳ್ಳುತ್ತಾಳೆ. ಈ ವಿವರಗಳು ಮಹಾಭಾರತದಲ್ಲಿ ಇವೆ. (ಎಸ್.ಎನ್.ಎಸ್.ಎಚ್.)

**ಉಲೇಮಾ:** ಇಸ್ಲಾಮೀ ಪಂಡಿತರು ; ಅಪಾರ ಜ್ಞಾನ(ಇಲ್ಮ್) ಹೊಂದಿರುವವರು; ದೈವಜ್ಞರು; ಧರ್ಮಸೂತ್ರಗಳನ್ನೆಲ್ಲ ಚೆನ್ನಾಗಿ ತಿಳಿದವರು; ನ್ಯಾಯವಿದರು; ತತ್ತ್ವಪ್ರಯೋಗ ಗಳೆರಡರಲ್ಲೂ ಪರಿಣತರು; ಬೋಧಕರು.

ಮುಸ್ಲಿಂ ಜಗತ್ತಿನಲ್ಲಿ ಪಂಡಿತರದೇ ಪರಮಸ್ಥಾನ. ಕುರಾನಿನಲ್ಲಿ ಹೇಳಿರುವ ವಿಧಿಗಳನ್ನೂ ಕಾಲಾನುಗುಣವಾಗಿ ಈ ಗ್ರಂಥದಿಂದ ಹೊಮ್ಮಿ ಬೆಳೆದು ಶಾಸ್ತ್ರಜ್ಞರಿಂದ ಸೃಷ್ಟಿಯಾಗಿ ಪಂಡಿತವರೇಣ್ಯರಿಂದ ಅಂಗೀಕೃತವಾಗಿರುವ ಎಲ್ಲ ಸೂತ್ರಗಳನ್ನೂ ಬಲ್ಲವರಾದ ಇವರದೇ ಈ ವಿಚಾರಗಳಲ್ಲಿ ಕೊನೆಯ ಮಾತು. ಎಲ್ಲ ಜ್ಞಾನಿಗಳನ್ನೂ ಉಲೇಮಾ ಎನ್ನುವರಾದರೂ ನೀತಿ ನಡೆವಳಿಕೆ ನ್ಯಾಯವಿಚಾರಗಳಲ್ಲಿ ನಿರ್ಣಯ ನೀಡುವ ಅಧಿಕಾರ ಹೊಂದಿರುವವರನ್ನೇ ಹೀಗೆ ಸಂಬೋಧಿಸುವುದು ವಾಡಿಕೆ.

ಮುಸ್ಲಿಂ ರಾಜ್ಯಗಳಲ್ಲಿ ಈ ವಿಚಾರಗಳಿಗಾಗಿ ಪಂಡಿತಾಧಿಕಾರಿಗಳ ಮಂಡಲಿಗಳಿರುತ್ತವೆ. ಈ ಮಂಡಲಿಯನ್ನು ಉಲೇಮಾ ಎನ್ನುವರು. ಈಜಿಪ್ಟಿನಲ್ಲಿ ನಾಲ್ಕು ನ್ಯಾಯಪಂಥಗಳ ಮುಖ್ಯರೂ ಮುಖ್ಯ ನ್ಯಾಯಾಧೀಶನೂ ಷರೀಫರ ಮುಖ್ಯಸ್ಥನೂ ಇತರರೂ ಉಲೇಮಾ ಮಂಡಲಿಯ ಸದಸ್ಯರಾಗಿರುತ್ತಿದ್ದರು.

ಉಲೇಮಾ ಬಹುವಚನ ಶಬ್ದ. ಇದರ ಏಕವಚನ ಅಲೀಂ, ಅರೀಫ್ ಎನಿಸಿಕೊಳ್ಳುವವನು ಅಲೀಂಗಿಂತ ಭಿನ್ನ. ಅಲೀಮನ ಜ್ಞಾನಕ್ಕೆ ಸಂಪ್ರದಾಯವೂ ತರ್ಕವೂ ಆಧಾರ; ಅರೀಫ್ ದ್ರಷ್ಟಾರ, ಮುಮುಕ್ಷು.

**ಉಲ್ಕೆ:** ಒಂದು ಸಣ್ಣ ಕಣ ಭೂಮಿಯ ವಾಯುಮಂಡಲವನ್ನು ಸೆಕೆಂಡಿಗೆ 60–70 ಕಿಮೀ ವೇಗದಿಂದ ಪ್ರವೇಶಿಸಿದಾಗ ಕಾಣುವ ದೃಶ್ಯ (ಮೀಟಿಯರ್). ಕಣದ ಹೆಸರು ಉಲ್ಕಾಶಿಲೆ (ಮೀಟಿಯೊರಾಯಿಡ್). ರೂಢಿಯ ಮಾತಿನಲ್ಲಿ ಉಲ್ಕೆಗಳನ್ನು ಬೀಳುವ ನಕ್ಷತ್ರ ಎಂಬುದಾಗಿ ಜನಸಾಮಾನ್ಯರು ವರ್ಣಿಸುವುದಿದೆ. ವಾಸ್ತವಿಕವಾಗಿ ಈ ಕಾಯಗಳಿಗೂ ನಕ್ಷತ್ರಗಳಿಗೂ ಯಾವ ಸಂಬಂಧವೂ ಇಲ್ಲ. ರಾತ್ರಿಯ ಆಕಾಶದಲ್ಲಿ ಕಾಣಿಸಿಕೊಳ್ಳುವ ಉಲ್ಕೆಗಳ ಪೈಕಿ ಸಾಸಿವೆ ಕಾಳಿಗಿಂತ ಹೆಚ್ಚು ಗಾತ್ರದ ಘನಕಾಯಗಳು ತೀರ ವಿರಳ. ಅಷ್ಟು ಪುಟ್ಟವಾದರೂ ಅವು ದೊಡ್ಡ ಗ್ರಹಗಳಂತೆಯೇ ನಿರ್ದಿಷ್ಟ ಕಕ್ಷೆಗಳಲ್ಲಿ ಸೂರ್ಯನ ಸುತ್ತ ಸಂಚರಿಸುತ್ತಿರುತ್ತವೆ. ಇವೇ ಉಲ್ಕಾಶಿಲೆಗಳು. ಇವುಗಳಿಗೆ ಸಾಮಾನ್ಯವಾಗಿ ಭೂಸಂಪರ್ಕವಿಲ್ಲ. ಭೂಮಿ ಕೂಡ ನಿರಂತರ ಸೂರ್ಯಪರಿಭ್ರಮಣ ಮಾಡುತ್ತಿರುವುದರಿಂದ ಚರ ಉಲ್ಕಾಶಿಲೆಗಳು ವೇಗವಾಗಿ ಭೂವಾಯುಮಂಡಲಕ್ಕೆ ಡಿಕ್ಕಿ ಹೊಡೆಯುವ ಆಕಸ್ಮಿಕಗಳಿಗೆ ಕೊರತೆಯಿಲ್ಲ. ಈ ಆಕಸ್ಮಿಕಗಳ ಫಲವೇ ಪ್ರಜ್ವಲಿಸುವ ಉಲ್ಕೆಗಳು.

ಸೆಕೆಂಡ್ ಒಂದಕ್ಕೆ 60–70 ಕಿಮೀಗಳಷ್ಟು ಅಧಿಕ ಸಾಪೇಕ್ಷ ವೇಗಗಳಿಂದ ಉಲ್ಕಾಕಲ್ಪಗಳು ವಾಯುಮಂಡಲವನ್ನು ಭೇದಿಸಬಲ್ಲವು. ಇಂಥ ಸಂಘಟನೆಯ (ಇಂಪ್ಯಾಕ್ಟ್) ಪ್ರಥಮ ಪರಿಣಾಮಗಳು ಗೋಚರಕ್ಕೆ ಬರುವಾಗ ಸಾಧಾರಣ ಉಲ್ಕೆಯೊಂದು ಭೂಮಿಯ ಮೇಲ್ಮೈಯಿಂದ 100–130 ಕಿಲೋಮೀಟರ್ ಎತ್ತರದಲ್ಲಿರುತ್ತದೆ. ಅಲ್ಲಿ ವಾಯುಮಂಡಲ ಭೂ ಮೇಲ್ಮೈ ಬಳಿಗಿಂತ ಹತ್ತಾರು ಕೋಟಿ ಪಾಲು ವಿರಳವಾಗಿರುವುದಾದರೂ ವಾಯುವಿನ ಅಣುಗಳು ಆಗಲೇ ಸಾಕಷ್ಟು ಸಂಖ್ಯೆಯಲ್ಲಿ ಉಲ್ಕಾಕಲ್ಪಕ್ಕೆ ಬಡಿಯುತ್ತಿರುವುವು. ತತ್ಫಲವಾಗಿ ಉಲ್ಕಾಕಲ್ಪದ ಸ್ಫಟಿಕಜಾಲದೊಳಗಿನ (ಕ್ರಿಸ್ಟಲ್ ಲ್ಯಾಟಿಸ್) ಪರಮಾಣುಗಳು ಹೆಚ್ಚು ಹೆಚ್ಚು ರಭಸದಿಂದ ಕಂಪಿಸತೊಡಗಿ ಬಲುಬೇಗನೆ ಆ ಕಲ್ಪ ಕುದಿಯುವ ಉಷ್ಣತೆಯನ್ನು ಮುಟ್ಟುವುದು. ಬಳಿಕ ಅದರ ಆವಿಗೂ ಗಾಳಿಗೂ ನಡೆಯುವ ಸಂಘಟನೆಯಲ್ಲಿ ಇವೆರಡರ ದ್ರವ್ಯಗಳ ಕೋಟ್ಯನುಕೋಟಿ ಅಣು ಪರಮಾಣುಗಳೂ ಉದ್ರಿಕ್ತಸ್ಥಿತಿಗಳಿಗೆ (ಎಕ್ಸೈಟೆಡ್ ಸ್ಟೇಟ್ಸ್) ತಲುಪಿ ಅವು ಎಲೆಕ್ಟ್ರಾನ್ ಮತ್ತು ಧನ ಅಯಾನುಗಳಾಗಿ ಛಿದ್ರಗೊಳ್ಳುತ್ತವೆ. ಉಲ್ಕೆಗಳು ಪ್ರಜ್ವಲಿಸಲು ಪ್ರಧಾನ ಕಾರಣ ಉದ್ರಿಕ್ತ ಸ್ಥಿತಿಗಳಲ್ಲಿರುವ ಅಣುಪರಮಾಣುಗಳು. ಮಾಮೂಲು ಸ್ಥಿತಿಗೆ ಹಿಂತಿರುಗುವಾಗ ಮತ್ತು ಪ್ರತ್ಯೇಕಗೊಂಡ ಎಲೆಕ್ಟ್ರಾನ್ ಮತ್ತು ಅಯಾನುಗಳು ಅಣುಪರಮಾಣುಗಳಾಗಿ ಪುನಸ್ಸಂಯೋಗಗೊಳ್ಳುವಾಗ ಉತ್ಪನ್ನವಾಗುವ ಬೆಳಕು. ವಿರಳೀಕೃತ ವಾತಾವರಣದಲ್ಲಿ ಎಲೆಕ್ಟ್ರಾನ್ ಮತ್ತು ಆಯಾಮಗಳು ಸಾಕಷ್ಟು ನಿಧಾನವಾಗಿ ಪುನಸ್ಸಂಯೋಗ ಗೊಳ್ಳುವ ಸಾಧ್ಯತೆಯಿರುವುದರಿಂದ ಅನೇಕ ವೇಳೆ ಉಲ್ಕಾಕಲ್ಪವೊಂದರ ಸಾಗಣೆಯ ಬಳಿಕವೂ ಕೆಲಕ್ಷಣಗಳವರೆಗೆ ಅದರ ಮಾರ್ಗರೇಖೆ ನಸುಪ್ರಕಾಶವನ್ನು ಸೂಸುವುದುಂಟು. ಉಲ್ಕೆಗಳ ಹಾದಿಯಲ್ಲಿ ರೂಪಗೊಳ್ಳುವಾಗ ಉತ್ಪನ್ನವಾಗುವ ಬೆಳಕು. ವಿರಳೀಕೃತ ವಾತಾವರಣ ದಲ್ಲಿ ಎಲೆಕ್ಟ್ರಾನ್ ಮತ್ತು ಆಯಾನುಗಳು ಸಾಕಷ್ಟು ನಿಧಾನವಾಗಿ ಪುನಸ್ಸಂಯೋಗಗೊಳ್ಳುವ



ನಕ್ಷತ್ರಗಳ ಹಿನ್ನೆಲೆಯಲ್ಲಿ ಉಲ್ಕೆಯೊಂದು ಹಾಯುತ್ತಿರುವ ದೃಶ್ಯ

ಎಲೆಕ್ಟ್ರಾನ್–ಅಯಾನ್ ವ್ಯೂಹಗಳು ಸೆಕೆಂಡಿಗೆ ಆರೆಂಟು ಕೋಟಿ ಆವರ್ತಸಂಖ್ಯೆಯ ವಿದ್ಯುತ್ಕಾಂತೀಯ ತರಂಗಗಳನ್ನು (ಎಲೆಕ್ಟ್ರೋಮ್ಯಾಗ್ನೆಟಿಕ್ ವೇವ್ಸ್) ಚೆನ್ನಾಗಿ ಪ್ರತಿಫಲಿಸಬಲ್ಲವು. ಇದರಿಂದ ರಾಡಾರ್ ಟೆಲಿಸ್ಕೋಪುಗಳು ಕೇವಲ ರಾತ್ರಿವೇಳೆಯಲ್ಲಷ್ಟೇ ಅಲ್ಲದೆ ನಡುಹಗಲಿನಲ್ಲೂ ಉಲ್ಕೆಗಳ ಸಾಗಣೆಯನ್ನು ಗುರುತಿಸುತ್ತವೆ. ಇಂದು ಉಲ್ಕೆಗಳ ಅಧ್ಯಯನದಲ್ಲಿ ಬಳಕೆಯಾಗುತ್ತಿರುವ ಉಪಕರಣಗಳ ಪೈಕಿ ರಾಡಾರಿಗೆ ಅಗ್ರಸ್ಥಾನವುಂಟು.

ಸಾಧಾರಣ ಉಲ್ಕಾಕಲ್ಪಗಳು ಭೂ ಮೇಲ್ಮೈನಿಂದ ಅರುವತ್ತು ಎಪ್ಪತ್ತು ಕಿಲೋ ಮೀಟರ್ ಎತ್ತರವನ್ನು ತಲುಪುವಷ್ಟರಲ್ಲಿ ದೂಳು ಮಿಶ್ರಿತವಾದ ಆವಿಯ ರೂಪಕ್ಕೆ ಸಂಪೂರ್ಣವಾಗಿ ಪರಿವರ್ತನೆಗೊಂಡು ವಾಯುಮಂಡಲದೊಂದಿಗೆ ಬೆರೆತುಹೋಗುತ್ತವೆ. ಆದರೆ ಅಧಿಕ ದ್ರವ್ಯರಾಶಿ ಇರುವ ಅಗ್ನಿಗೋಳಗಳೆಂಬ (ಬೋಲೈಡ್ಸ್, ಫೈರ್ ಬಾಲ್ಸ್) ಹೆಸರಿನ ಉಲ್ಕಾಕಲ್ಪಗಳು ಕೆಲವೊಮ್ಮೆ ತುಸು ದಟ್ಟವೇ ಆಗಿರುವ ಇನ್ನೂ ತಗ್ಗಿನ ವಾಯುಸ್ತರಗಳನ್ನು ಕೂಡ ಪ್ರವೇಶಿಸುವುದುಂಟು. ಈ ಸ್ತರಗಳಲ್ಲಿ ಉಲ್ಕಾಕಲ್ಪಗಳ ಚಲನೆಗೆ ಪ್ರಚಂಡ ಪ್ರತಿರೋಧವಿದ್ದು ಅಲ್ಲಿ ಅಗ್ನಿಗೋಳಗಳು ತಮ್ಮ ವೇಗವನ್ನು ಅತಿ ತ್ವರೆಯಿಂದ ಕಳೆದುಕೊಳ್ಳತೊಡಗುವುವು. 50 ಕಿ.ಮೀ ಗಿಂತ ತಗ್ಗಿನಲ್ಲಿ ಅತಿಶಬ್ದಾತೀತ ವೇಗದಿಂದ (ಹೈಪರ್ಸಾನಿಕ್ ಸ್ಪೀಡ್–ಶಬ್ದವೇಗದ ಐದರಷ್ಟಕ್ಕಿಂತ ಹೆಚ್ಚಾದ ವೇಗಗಳಿಗೆ ಈ ಹೆಸರುಂಟು) ಚಲಿಸುವ ಅಗ್ನಿಗೋಳ ತನ್ನ ಹಾದಿಯಲ್ಲಿನ ವಾಯುರಾಶಿಯನ್ನು ಕ್ಷಿಪ್ರವಾದ ಉಷ್ಣಾಪರಕ ಸಂಕೋಚನೆಗೆ (ಎಡಿಯಾಬ್ಯಾಟಿಕ್ ಕಂಪ್ರೆಷನ್) ಗುರಿಪಡಿಸಿ ಧಕ್ಕೆಯ ಅಲೆಯೆಂದು (ಷಾಕ್ ವೇವ್) ಕರೆಯಲಾಗುವ ಒಂದು ಬಗೆ ವಿಚ್ಛಿನ್ನತೆಯನ್ನು (ಡಿಸ್ಕಂಟಿನ್ಯುಯಿಟಿ) ವಾಯುಮಂಡಲದಲ್ಲಿ ಏರ್ಪಡಿಸುತ್ತದೆ. ಇದರಿಂದಾಗಿ ಅಗ್ನಿಗೋಳಗಳ ಉಜ್ವಲ ಪ್ರಕಾಶ ಹಾಗೂ ಅತ್ಯಧಿಕ ಉಷ್ಣತೆಗಳ ಜೊತೆಗೆ ಅನೇಕ ವೇಳೆ ಗುಡುಗಿನಂಥ ಶಬ್ದಗಳೂ ಉತ್ಪನ್ನವಾಗುತ್ತವೆ. ಇಷ್ಟೆಲ್ಲ ಆದರೂ ಇನ್ನೂ ವಾಯುಮಂಡಲದಲ್ಲಿರುವಾಗಲೇ ಬಹಳಷ್ಟು ಅಗ್ನಿಗೋಳಗಳು ಸಂಪೂರ್ಣವಾಗಿ ಕುದಿದು ಆವಿ, ಧೂಮಗಳ ರೂಪದಲ್ಲಿ ನಾಶವಾಗುವುವು. ಛಿದ್ರವಾದರೂ ಪೂರ್ಣವಾಗಿ ದೂಳೀಪಟವಾಗದೆ ಭೂ ಮೇಲ್ಮೈವರೆಗೆ ಪಯಣಿಸುವ ಸಾಮರ್ಥ್ಯ ಭಾರೀ ತೂಕವನ್ನುಳ್ಳ ಎಲ್ಲೋ ಕೆಲವು ಅಗ್ನಿಗೋಳಗಳಿಗೆ ಮಾತ್ರ ಉಂಟು. ಭೂ ಮೇಲ್ಮೈಯನ್ನು ಮುಟ್ಟಿದ ತರುವಾಯ ಇಂಥ ಬೃಹದಗ್ನಿಗೋಳಗಳ ಅವಶೇಷಗಳೂ ಉಲ್ಕಾಪಿಂಡಗಳೆನಿಸಿಕೊಳ್ಳುತ್ತವೆ. (ಮೀಟಿಯೊರೈಟ್ಸ್).

ಉಲ್ಕಾಪಿಂಡಗಳಲ್ಲಿ ಕೊನೆಗಾಣುವ ಉಲ್ಕಾಕಲ್ಪಗಳು ವಾಯುಮಂಡಲವನ್ನು ಪ್ರವೇಶಿಸುವ ಮುನ್ನ ನೂರಾರು ಕಿಲೋಗ್ರಾಮುಗಳಿಂದ ಹಿಡಿದು ನೂರಾರು ಟನ್ನುಗಳಿಗೂ ಮೀರಿದ ತೂಕವನ್ನು ಪಡೆದಿರಬಹುದು. ಅವುಗಳ ಗಾತ್ರ ವೈವಿಧ್ಯ ಒಂದೆರಡು ಘನಮೀಟರು ಗಳಿಂದ ಹಿಡಿದು ನೂರಾರು ಘನಮೀಟರುಗಳ ವರೆಗೆ ಇರಬಹುದು. ಉಲ್ಕಾಕಲ್ಪಗಳ ಗಾತ್ರಶ್ರೇಣಿಯ ಇನ್ನೊಂದು ತುದಿಯಲ್ಲಾದರೋ 0.1 ಮಿಲಿಮೀಟರಿಗಿಂತ ಕಡಿಮೆ ವ್ಯಾಸವನ್ನೂ 0.0001 ಮಿಲಿಗ್ರಾಮಿಗಿಂತ ಕಡಿಮೆ ತೂಕವನ್ನೂ ಹೊಂದಿರುವ ಸೂಕ್ಷ್ಮಕಣಗಳೂ ಕಂಡುಬರುತ್ತವೆ. ಇಂಥ ದೂಳಿ ಉಲ್ಕಾಕಲ್ಪಗಳು ವಾಯುವಿನ ಅಣುಗಳ ಸಂಘಟನೆಗೆ ಸಿಕ್ಕಿ ತಮ್ಮ ವೇಗವನ್ನು ಕಳೆದುಕೊಳ್ಳುವಾಗ ಬೆಳಗುವುದು ಸಹ ಇಲ್ಲ. ಬಾಹ್ಯಾಂತರಿಕ್ಷದಲ್ಲಿ ದೂಳಿಉಲ್ಕಾಕಲ್ಪಗಳ ಸಂಚಾರವಿರುವುದಕ್ಕೆ ಪ್ರತ್ಯಕ್ಷವಾದ ಪ್ರಥಮ ರುಜುವಾತು ದೊರೆತದ್ದು ಅಂತರಿಕ್ಷಗಾಮಿ ರಾಕೆಟ್ಟುಗಳ ಮುಖಾಂತರವೇ. ಅದೇ ಸೂರ್ಯಾಸ್ತಮಯದ ಬಳಿಕ ಹಾಗೂ ಸೂರ್ಯೋದಯಕ್ಕೆ ಪೂರ್ವಭಾವಿಯಾಗಿ ಆಕಾಶದಲ್ಲಿ ಕಂಡುಬರುವ ತ್ರಿಕೋಣಾಕಾರದ ರಾಶೀ ಚಕ್ರ ಪ್ರಭೆ (ಜೋಡಿಯಾಕಲ್ ಲೈಟ್). ಭಾರಿ ಭಾರಿ ಪರ್ವತಗಳ ಉನ್ನತ ಶಿಖರಗಳ ಮೇಲೆ ಸಂಗ್ರಹವಾಗುವ ದೂಳಿದ್ರವ್ಯ ಮುಂತಾದ ಪರೋಕ್ಷ ಆಧಾರಗಳಿಂದ ರಾಕೆಟ್ ಪ್ರಯೋಗಗಳಿಗೆ ಮುಂಚೆಯೇ ಖಗೋಲವಿಜ್ಞಾನಿಗಳೂ ದೂಳಿ ಉಲ್ಕಾಕಲ್ಪನೆಗಳ ಇರುವಿಕೆಯ ಬಗ್ಗೆ ಅರಿತಿದ್ದರು. ದೂಳಿ ಉಲ್ಕಾಕಲ್ಪಗಳು ವಾಯುಮಂಡಲದ ಮೂಲಕ ಹಾಯ್ದು ಭೂಮಿಯ ಮೇಲ್ಮೈಗೆ ಇಳಿಯಲು ಹಲವಾರು ದಿವಸಗಳ ಅವಧಿಯನ್ನು ತೆಗೆದುಕೊಳ್ಳಬಹುದು. ಪ್ರಜ್ವಲಿಸುವ ಉಲ್ಕಾಕಲ್ಪಗಳ ಬಾಷ್ಪೀಕರಣದಿಂದ (ವೇಪರೈಸೇಷನ್) ಉತ್ಪನ್ನವಾಗುವ ದೂಳಿನ ಕಣಗಳು ಸಹ ಇದೇ ರೀತಿ ವಾಯುಮಂಡಲದಲ್ಲಿ ಬಲು ಕಾಲ ತೇಲಾಡುತ್ತಿರುತ್ತವೆ. ವಾತವರಣದಲ್ಲಿರುವ ನೀರಾವಿ ಇಂಥ ಉಲ್ಕಾಕಲ್ಪಗಳ ಮೇಲೆ ಸುಲಭವಾಗಿ ದ್ರವೀಕೃತವಾಗಬಲ್ಲುದು. ಆದ್ದರಿಂದ ಭೂಮಿಯ ಗತ ಇತಿಹಾಸದಲ್ಲೂ ಇಂದೂ ಈ ನಮ್ಮ ಗ್ರಹದ ಮೇಲೆ ಮಳೆ ಉಂಟಾಗುತ್ತಿರುವ ಪರಿಸ್ಥಿತಿಗೆ ಉಲ್ಕಾಕಲ್ಪಗಳ ಸಲ್ಲಿಕೆ ಗಮನಾರ್ಹವಾಗಿರುವ ಸಾಧ್ಯತೆಯುಂಟು.

ಉಲ್ಕಾಕಲ್ಪಗಳ ಸೃಷ್ಟಿರಹಸ್ಯಕ್ಕೆ ಸೌರವ್ಯೂಹದಲ್ಲಿ ಬೇರೆ ಎರಡು ವರ್ಗಗಳಿಗೆ ಸೇರಿದ ಕಾಯಗಳೊಂದಿಗೆ ನಿಕಟಸಂಬಂಧ ಇರುವಂತೆ ಕಂಡುಬರುವುದು–ಕ್ಷುದ್ರ ಗ್ರಹಗಳು ಮತ್ತು ಧೂಮಕೇತುಗಳು. (ಆ್ಯಸ್ಟಿರಾಯ್ಡ್ ಅಂಡ್ ಕಾಮೆಟ್ಸ್) ಕ್ಷುದ್ರಗ್ರಹಗಳು ದೃಢವಾದ ಘನಕಾಯಗಳು. ಅವು ಸಾಮಾನ್ಯವಾಗಿ ಮಂಗಳ ಮತ್ತು ಗುರು ಕಕ್ಷೆಗಳ ನಡುವೆ ಸೂರ್ಯಪರಿಭ್ರಮಣ ಮಾಡುತ್ತವೆ. ಈ ಕ್ಷುದ್ರಗ್ರಹಗಳ ನಡುವೆ ಪದೇ ಪದೇ ಸಂಭವಿಸ ಬಹುದಾದ ಸಂಘಟನೆಗಳಿಂದ ಅವು ಇನ್ನೂ ಕಿರಿದಾದ ಕಾಯಗಳಾಗಿ ಒಡೆಯುತ್ತ ಹೋಗಬಹುದು. ಉಲ್ಕಾಕಲ್ಪಗಳ ಪೈಕಿ ದೃಢರಚನೆಯ ಲಕ್ಷಣಗಳನ್ನುಳ್ಳವು ಇಂಥ ಅವ್ಯಾಹತ ವಿಭಜನೆಗಳಿಂದ ಜನಿಸಿರುವ ಅತ್ಯಂತ ಕಿರಿಯ ಕ್ಷುದ್ರಗ್ರಹಗಳಿರಬಹುದು. ವಿಶಿಷ್ಟವಾಗಿ ಉಲ್ಕಾಪಾತಗಳಲ್ಲಿ ಪರ್ಯವಸಾನ ಹೊಂದುವ ಉಲ್ಕಾಕಲ್ಪಗಳನ್ನು ಈ ಎಣಿಕೆಯಲ್ಲಿ ಕಿರು ಕ್ಷುದ್ರಗ್ರಹಗಳೆಂದು ಪರಿಗಣಿಸಲು ಅಡ್ಡಿ ಇಲ್ಲ; ಉಳಿದ ಉಲ್ಕಾಕಲ್ಪಗಳ ಪೈಕಿಯೂ ಈ ಬಳಗಕ್ಕೆ ಸೇರುವಂಥವು ಸಾಕಷ್ಟಿರಬಹುದು.

ಕಿರುಕ್ಷುದ್ರಗ್ರಹಗಳ ತಂಡಕ್ಕಿಂತಲೂ ಅಧಿಕ ಸಂಖ್ಯಾತವಾದ ಉಲ್ಕಾಕಲ್ಪಗಳ ಇನ್ನೊಂದು ವಂಶಕ್ಕೆ ಧೂಮಕೇತುಗಳೊಡನೆ ಬಾಂಧವ್ಯ ಇದೆ. ಧೂಮಕೇತುಗಳು ತಮ್ಮ ಕಕ್ಷಾಸಂಚಾರದಲ್ಲಿ ಸೂರ್ಯನಿಗೆ ಸಾಕಷ್ಟು ಸಮೀಪವಾಗಿ ಹಾದುಹೋದಾಗಲೆಲ್ಲ ಅಸಮಾನ ಗುರುತ್ವಾಕರ್ಷಣೆ ಅಧಿಕ ಉಷ್ಣತೆ ಮುಂತಾದ ಕೆಲವು ಭೌತ ಸನ್ನಿವೇಶಗಳ ಫಲಿತಾಂಶವಾಗಿ ಈ ಆಕಾಶಕಾಯಗಳಿಗೆ ಸೇರಿದ ಒಂದಷ್ಟು ದ್ರವ್ಯಭಾಗ ಇವುಗಳ ಆಂತರಿಕ ಸಂಸಕ್ತಿಯನ್ನು (ಕೊಹಿಶನ್) ಭೇದಿಸಿಕೊಂಡು ಬಾಹ್ಯಾಂತರಿಕ್ಷದಲ್ಲಿ ಚದರಿಹೋಗುವುದು. ಹೀಗೆ ಚದುರುವ ದ್ರವ್ಯದಲ್ಲಿ ಅನಿಲಗಳಂಥ ಸೂಕ್ಷ್ಮ ಕಣ ಸಮುದಾಯಗಳಷ್ಟೇ ಅಲ್ಲದೆ ಚಿಕ್ಕ ಘನಕಾಯಗಳೂ ಇರಬಹುದು. ದೃಢರಚನೆಯಿಲ್ಲದ ಈ ಚಿಕ್ಕ ಘನಕಾಯಗಳೇ ಉಲ್ಕಾಕಲ್ಪಗಳ ಎರಡನೆಯ ಬಳಗದ ಘಟಕಗಳು.

**ಉಲ್ಕಾಪಿಂಡಗಳು:** ಮೊದಲನೆಯ ಬಳಗದ ಉಲ್ಕಾಕಲ್ಲಗಳಲ್ಲಿ ಪ್ರಧಾನವಾದವು ಉಲ್ಕಾಪಿಂಡಗಳು. ಉಲ್ಕಾಪಿಂಡವೆಂದ ಮಾತ್ರಕ್ಕೆ ಆಕಾಶದಿಂದ ಉಲ್ಕಾಕಲ್ಲವೊಂದು ಅವಿಭಕ್ತವಾಗಿ ಬಿದ್ದು ಭೂಮೇಲ್ಮೈಯಲ್ಲಿ ಬಂಡೆಯಂತೆ ಉಳಿದುಕೊಳ್ಳಬೇಕೆಂದೇನಿಲ್ಲ. ವಾಯುಮಂಡಲದಲ್ಲಿ ಉಲ್ಕಾಕಲ್ಲಗಳು ಬಹುಮಟ್ಟಿಗೆ ನಶಿಸಿಹೋಗುತ್ತವೆ. ಹಾಗೂ ಅನೇಕವೇಳೆ ಛಿದ್ರಗೊಳ್ಳುತ್ತವೆ. ಅಲ್ಲದೆ ಕೆಲವು ವೇಳೆ ಉಲ್ಕಾಕಲ್ಲವೊಂದು ಸೆಕೆಂಡಿಗೆ ನಾಲ್ಕಾರು



ಉತ್ತರ ಅಮೆರಿಕದ ಅರಿಜ಼ೋನದಲ್ಲಿರುವ ವರ್ತುಲಾಕಾರದ ಕುಳಿ

ಕಿಲೋಮೀಟರುಗಳಷ್ಟು ಅಧಿಕ ವೇಗದಿಂದ ಭೂಮೇಲ್ಮೈಯನ್ನು ಅಪ್ಪಳಿಸಬಹುದು. ಹಾಗಾದಲ್ಲಿ ಅದರ (ಹಾಗೂ ಅದು ತಾಗಿದ ಮಣ್ಣಿನ) ಬಹಳಷ್ಟು ಬಾಗವೆಲ್ಲ ಹಠಾತ್ತನೆ ಬಾಷ್ಪೀಕೃತವಾಗಿ ಆಸ್ಫೋಟಕವೇಗದಿಂದ ಎಲ್ಲೆಡೆಗಳಿಗೂ ಚದುರಿಹೋಗುವುದು. ಇಂಥ ಆಸ್ಫೋಟನೆಗಳ ಫಲವಾಗಿ ಭೂಮಿಯ ಮೇಲೆ ದೊಡ್ಡ ದೊಡ್ಡ ಕುಳಿಗಳು (ಕ್ರೇಟರ್ಸ್) ಏರ್ಪಡಬಹುದು. ಈಶಾನ್ಯ ಅರಿಜ಼ೋನದಲ್ಲಿರುವ (ಉತ್ತರ ಅಮೆರಿಕ) ವರ್ತುಲಾಕಾರದ ಭಾರಿ ಕುಳಿಯೊಂದು ಸು. 10 ಸಹಸ್ರ ವರ್ಷಗಳ ಹಿಂದೆ ಈ ರೀತಿಯಲ್ಲಿ ಆಗಿರಬೇಕೆಂದು ನಂಬಲಾಗಿದೆ. ಅದರ ವ್ಯಾಸ ಒಂದೂಕಾಲು ಕಿಲೊಮೀಟರುಗಳು ಮತ್ತು ಅಂಚಿನಿಂದ ತಳಭಾಗಕ್ಕಿರುವ ಆಳ 175 ಮೀಟರುಗಳು. ಕುಳಿಯ ಅಂಚು ನೆರೆಯ ಪ್ರದೇಶದ ಸರಾಸರಿ ಭೂಮಟ್ಟದಿಂದ ಸು. 40 ಮೀ. ಗಳಷ್ಟು ಎತ್ತರದಲ್ಲಿದೆ. ಕುಳಿ ಹೊಸದಾಗಿ ಉತ್ಪನ್ನವಾದಾಗ ಪರಿಮಾಣಗಳು ಇನ್ನೂ ಅಧಿಕವಾಗಿದ್ದಿರುವುದರಲ್ಲಿ ಸಂಶಯವಿಲ್ಲ. ಇಂಥ ಕುಳಿಗೆ ಕಾರಣಭೂತ ವಾದ ಉಲ್ಕಾಕಲ್ಲ ಲಕ್ಷಾಂತರ ಟನ್ನುಗಳಷ್ಟು ತೂಕದ್ದೂ ಲಕ್ಷಾಂತರ ಘನಮೀಟರುಗಳಷ್ಟು ಗಾತ್ರದ್ದೂ ಆಗಿತ್ತೆಂದು ಅಂದಾಜು ಮಾಡಲಾಗಿದೆ. ಅದೇ ಅರಿಜ಼ೋನ ಕುಳಿಯ ನೆರೆಯಲ್ಲಿ ದೊರಕಿರುವ ಉಲ್ಕಾದ್ರವ್ಯವೆಲ್ಲ ಚಿಕ್ಕ ಚಿಕ್ಕಚೂರುಗಳ ರೂಪದಲ್ಲಿದೆ. ಅವುಗಳ ಪೈಕಿ 600 ಕಿಲೋಗ್ರಾಂ ತೂಕದ್ದೇ ಅತಿ ದೊಡ್ಡದು. ಉಳಿದ ಉಲ್ಕಾದ್ರವ್ಯದ ಭಾರಿ ಬಂಡೆಯೊಂದು ಕುಳಿಯ ನೆಲದೊಳಗಡೆ ಹುದುಗಿದೆಯೆಂದು ಭಾವಿಸಲು ಸಾಕಷ್ಟು ಆಧಾರಗಳೇನಿಲ್ಲ.

ತಮ್ಮ ಮೂಲಗಾತ್ರಕ್ಕೆ ಹೋಲಿಸಿದಾಗ ಸಾಕಷ್ಟು ದೊಡ್ಡ ಅವಶೇಷಗಳನ್ನು ಭೂಮಿಯ ಮೇಲೆ ಉಳಿಸುವ ಉಲ್ಕಾಕಲ್ಲಗಳು ಸೆಕೆಂಡಿಗೆ ಒಂದು ಕಿಲೋಮೀಟರಿಗಿಂತ ಕಡಿಮೆ ಸಾಪೇಕ್ಷ ವೇಗಗಳಿಂದ ಭೂ ಮೇಲ್ಮೈಗೆ ತಾಕುತ್ತವೆ. ನೂರಾರು ಟನ್ ತೂಕದ ಈ ಬಗೆಯ ಉಲ್ಕಾಕಲ್ಲವೊಂದರ ಅವಶೇಷಗಳು ಸಿಖೋತ್–ಆಲಿನ್ ಪರ್ವತಗಳ (ಆಗ್ನೇಯ ಸೈಬೀರಿಯ, ಸೋವಿಯತ್ ರಷ್ಯ) ಪಡುವಣ ಚಾಚಿನ ಪ್ರದೇಶದಲ್ಲಿ (1947 ಫೆಬ್ರವರಿ 12ರಂದು ಬೆಳಗ್ಗೆ ಹತ್ತೂವರೆ ಗಂಟೆ ಹೊತ್ತಿಗೆ) ಬಿದ್ದವು (ಆಕಾಶದಲ್ಲಿ ಈ ಉಲ್ಕಾಪಿಂಡಕ್ಕೆ ಸಂಬಂಧಿಸಿದ ಅಗ್ನಿಗೋಳದ ಪ್ರಕಾಶ ಸೂರ್ಯನನ್ನೇ ಮೀರಿಸಿತ್ತು.) ಆ ಸ್ಥಳದಲ್ಲಿ ದೊರೆತ ಅಧಿಕ ಸಂಖ್ಯೆಯ ಉಲ್ಕಾವಶೇಷಗಳ ಪೈಕಿ ಅತಿ ದೊಡ್ಡದು ಒಂದೂಮುಕ್ಕಾಲು ಟನ್ ತೂಗುತ್ತದೆ. ದಾಖಲೆಯಲ್ಲಿರುವ ಬಿಡಿ ಉಲ್ಕಾವಶೇಷಗಳ ಪೈಕಿ ಅತಿ ದೊಡ್ಡದು ನೈಋತ್ಯ ಆಫ್ರಿಕದ ಗ್ರೂಚ್ ಫಾಂಟಿನ್ ಜಿಲ್ಲೆಯಲ್ಲಿ (ಭಾಗಶಃ ನೆಲದಲ್ಲಿ ಹುದುಗಿಕೊಂಡು) ಬಿದ್ದಿದೆ: ಪಶ್ಚಿಮ ಹೋಬಾ ಎಂಬ ಹೆಸರಿನ ಈ ಉಲ್ಕಾಪಿಂಡದ ಅಂದಾಜು ತೂಕ ಐವತ್ತು ಟನ್ನುಗಳು. ಗ್ರೀನ್‌ಲೆಂಡಿನಲ್ಲಿ ಬಿದ್ದಿದ್ದ 31 ಟನ್ ತೂಕದ ಎರಡನೆಯ ಅತಿ ದೊಡ್ಡ ಉಲ್ಕಾಪಾತವನ್ನು ಇಂದು ಅಮೇರಿಕನ್ ಮ್ಯೂಸಿಯಂ–ಹೇಡನ್ ಪ್ಲಾನೆಟೇರಿಯಂನಲ್ಲಿ ಪ್ರದರ್ಶನಕ್ಕಿಡಲಾಗಿದೆ; ಅದರ ಹೆಸರು ಅಹ್ನಿಗಿಟೋ. ಹೋಬಾ ಮತ್ತು ಅಹ್ನಿಗಿಟೋಗಳು ಭೂಮಿಗೆ ಯಾವಾಗ ಬಿದ್ದುವೆಂಬ ಬಗ್ಗೆ ದಾಖಲೆಗಳಿಲ್ಲ.

ಉಲ್ಕಾಪಿಂಡಗಳ ಪೈಕಿ ಮುಖ್ಯವಾಗಿ ಅಯೋಲ್ಕಗಳು (Iron meterites) ಮತ್ತು ಶಿಲೋಲ್ಕಗಳು (Stony meterites) ಎಂಬ ಎರಡು ವರ್ಗಗಳನ್ನು ಗುರುತಿಸಬಹುದು. (ಇವೆರಡು ವರ್ಗಗಳ ದ್ರವ್ಯಗಳು ಮಿಶ್ರಿತವಾಗಿರುವ ಉಲ್ಕಾಪಿಂಡ ಸಹ ಉಂಟು. ಅವಕ್ಕೆ stony-ironಗಳೆಂದು ಹೆಸರು. ಅಯೋಲ್ಕಗಳ ದ್ರವ್ಯವೆಲ್ಲ ಬಲುಮಟ್ಟಿಗೆ ಕಬ್ಬಿಣ (80–95% ಭಾಗ) ಮತ್ತು ನಿಕಲ್ (5–20% ಭಾಗ) ಲೋಹಗಳ ಮಿಶ್ರಣವಾಗಿರುತ್ತದೆ. ಮೇಲೆ ಉಲ್ಲೇಖಿಸಿರುವ ಉಲ್ಕಾಪಿಂಡಗಳೆಲ್ಲವೂ ಈ ವರ್ಗಕ್ಕೆ ಸೇರಿದವು; ಅವುಗಳ ಸಾಂದ್ರತೆ ಘನಸೆಂಟಿಮೀಟರಿಗೆ 8–9 ಗ್ರಾಂಗಳಷ್ಟು, ಶಿಲೋಲ್ಕಗಳಾದರೋ ಆಮ್ಲಜನಕ. ಸಿಲಿಕಾನ್, ಮೆಗ್ನೀಸಿಯಂ, ಕಬ್ಬಿಣ, ಅಲ್ಯುಮಿನಿಯಂ, ಕ್ಯಾಲ್ಸಿಯಂ, ಸೋಡಿಯಂ ಮುಂತಾದ ಧಾತುಗಳನ್ನೊಳಗೊಂಡಿದ್ದು ಸ್ಥೂಲವಾಗಿ ಭೂಮಿಯ ಮೇಲಿರುವ ಕಲ್ಲುಗಳನ್ನು ಹೋಲುತ್ತವೆ; ಇವುಗಳ ಸಾಂದ್ರತೆ ಘನಸೆಂಟಿಮೀಟರಿಗೆ $2\frac{1}{2}-3$ ಗ್ರಾಂಗಳಷ್ಟು ಮಾತ್ರ. 1948 ಫೆಬ್ರವರಿ 18ರಂದು ನೆಬ್ರಾಸ್ಕದಲ್ಲಿ ಬಿದ್ದ ಒಂದು ಟನ್ ತೂಕದ ಭಾರಿ ಶಿಲೋಲ್ಕವನ್ನು ನವ ಮೆಕ್ಸಿಕೋ ವಿಶ್ವವಿದ್ಯಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಉಲ್ಕಾಪಿಂಡಗಳಲ್ಲಿ ಗೋಚರಿಸುವಂಥ ಆಂತರಿಕ ರಚನಾ ವಿನ್ಯಾಸಗಳು ಅದೇ ರಾಸಾಯನಿಕ ಘಟಕಗಳೂ ಭೂಮೇಲ್ಮೈ ಬಳಿ ರೂಪಿಸಲು ಶಕ್ಯವಿರುವ ಘನಕಾಯಗಳಲ್ಲಿ ಕಂಡುಬಾರದೆ ಇರುವುದರಿಂದ ಅಯೋಲ್ಕ ಶಿಲೋಲ್ಕಗಳಿಗೂ ಭೂಮಿಯ ಮೇಲಿರುವ ಸ್ಥಳೀಯ ಶಿಲೆಗಳಿಗೂ ಭೇಧ ಗುರುತಿಸಲು ಸಾಧ್ಯವಾಗುವುದು. ಉಲ್ಕಾಕಲ್ಲುಗಳು ಪ್ರಾಯಶಃ ಭೂಮೇಲ್ಮೈಯಲ್ಲಿರುವುದಕ್ಕಿಂತ ದುರ್ಬಲ ವಾದ ಗುರುತ್ವ ಕ್ಷೇತ್ರದಲ್ಲಿ ರೂಪು ತಳೆದಿರಬೇಕೆಂಬುದು ಕೆಲವು ವಿಜ್ಞಾನಿಗಳ ಊಹೆಯಾಗಿದೆ.

ಅನೇಕ ಶಿಲೋಲ್ಕಗಳು ಕಾಂಡ್ರ್ಯೂಲುಗಳೆಂಬ ವಿವಿಧ ಖನಿಜಾಂಶಗಳನ್ನೊಳಗೊಂಡ ಪುಟ್ಟ ಪುಟ್ಟ ಗೋಳಾಕೃತಿಯ ಘಟಕಗಳಿಂದ ರಚಿತವಾಗಿವೆ. ಇಂಥ ಶಿಲೋಲ್ಕಗಳಿಗೆ ಕಾಂಡ್ರೈಟುಗಳೆಂದು ಹೆಸರು. ಕಾಂಡ್ರೈಟುಗಳ ಪೈಕಿ ಇಂಗಾಲಭರಿತ ಉಲ್ಕಾಶಿಲೆಗಳೆಂಬ (ಕಾರ್ಬನೇಶಿಯಸ್ ಮೀಟಿಯೊರೈಟ್ಸ್) ಒಂದು ಚಿಕ್ಕ ಉಪವರ್ಗವುಂಟು. ಇವುಗಳಲ್ಲಿ ಜೀವರಾಸಾಯನಿಕ ರಚನೆಗಳಿಗೆ ಮೂಲಭೂತವಾದ ಕೆಲವು ಇಂಗಾಲಯುತ ಬೃಹದಣುಗಳೂ ಪತ್ತೆಯಾಗಿರುವುದರಿಂದ ಇಂಗಾಲಭರಿತ ಉಲ್ಕಾಶಿಲೆಗಳೂ ವೈಜ್ಞಾನಿಕ ಕುತೂಹಲವನ್ನು ಕೆರಳಿಸಿವೆ. (ಅರ್ಧ ಕಿಲೋಗ್ರಾಂ ಅವಶೇಷ ತೂಕವಿದ್ದ ಒಂದು ಇಂಗಾಲಿಕ ಉಲ್ಕಾಶಿಲೆ ಭಾರತದ ಹರಿಪುರದಲ್ಲಿ 1921ರ ಜನವರಿ 17ರಂದು ಬಿತ್ತು.) ಅನುಕೂಲ ಸನ್ನಿವೇಶಗಳು ದೊರೆತೊಡನೆ ಜೀವವನ್ನು ಅಂಕುರಗೊಳಿಸುವಂಥ ಜೀವರಾಸಾಯನಿಕ ಅಣುಸಮುದಾಯಗಳ ಹಂಚಿಕೆ ವಿಶ್ವದಲ್ಲಿ ಸಾಕಷ್ಟು ವ್ಯಾಪಕವಾಗಿರಬಹುದಾದ ಸಾಧ್ಯತೆಯನ್ನು ಈ ಇಂಗಾಲಭರಿತ ಉಲ್ಕಾ ಶಿಲೆಗಳು ಸೂಚಿಸಿವೆ.

ಜ಼ೋನ ಉಲ್ಕಾಪಿಂಡದ ಒಂದು ಚೂರು

ಇಂದಿಗೂ ರಹಸ್ಯಮಯವಾಗಿ ಉಳಿದುಕೊಂಡಿರುವ ಸಹಸ್ರಾರು ಟನ್ ಮೂಲ ತೂಕದ ಒಂದು ಭಾರಿ ಉಲ್ಕಾಕಲ್ಲ ತುಂಗಸ್ಕ ನದಿಯ (ಮಧ್ಯ ಸೈಬೀರಿಯ, ರಷ್ಯ) ಅರಣ್ಯ ಪ್ರದೇಶದಲ್ಲಿ 1908ರ ಜೂನ್ 30ರಂದು ಬೆಳಗ್ಗೆ 7 ಗಂಟೆ ಹೊತ್ತಿಗೆ ಬಿತ್ತು. ಅದು ಬಿದ್ದ ಸ್ಥಳ ಅದೃಷ್ಟವಶಾತ್ ನಿರ್ಜನವಾಗಿದ್ದರೂ ಹಗಲಿನಲ್ಲೇ ಗುಡುಗುತ್ತ ಕಾಣಿಸಿಕೊಂಡ ಅಗ್ನಿಗೋಳದ ಉಜ್ವಲ ಪ್ರಕಾಶದಿಂದಲೂ ಅದು ಭೂಮಿಗೆ ಬಡಿದಾಗ ಉಂಟಾದ ಧಕ್ಕೆಯಿಂದಲೂ ನೂರಾರು ಕಿಲೊಮೀಟರ್ ದೂರದಲ್ಲಿ ವಾಸವಾಗಿದ್ದ ಸೈಬೀರಿಯದ ರೈತರು ತಲ್ಲಣಿಸಿಹೋದರು. ಜನರ ಅಂಧಶ್ರದ್ಧೆಯ ಫಲವಾಗಿ ಈ ಘಟನೆಯ ಬಗ್ಗೆ ಕೂಡಲೇ ಯಾವ ಸ್ಥಳ ಪರೀಕ್ಷೆಗಳೂ ನಡೆಯಲಿಲ್ಲ. 1927ರ ತರುವಾಯ ಈ ಉಲ್ಕಾಕಲ್ಲ ಬಿದ್ದ ಪ್ರದೇಶವನ್ನು ಅಮೂಲಾಗ್ರವಾಗಿ ಶೋಧಿಸಿದ ವಿಜ್ಞಾನಿಗಳಿಗೆ ಮಣ್ಣಿನಲ್ಲಿ ಬೆರೆತ ಉಲ್ಕಾದೂಳಿಯ ವಿನಾ ಬೇರಾವ ವಿಶೇಷಗಳೂ ದೊರಕಲಿಲ್ಲ. ಬಿದ್ದ ಉಲ್ಕಾಕಲ್ಲ ಕೂಡಲೇ ಸಂಪೂರ್ಣವಾಗಿ ಬಾಷ್ಪೀಕೃತವಾಗಿರಬೇಕೆಂದು ಇದರಿಂದ ವ್ಯಕ್ತವಾಗುವುದು. ಅಯೋಲ್ಕ

ಶಿಲೋಲ್ಕಗಳಂಥ ದೃಢರಚನೆಯ ಘನಕಾಯಗಳ ಸಂಬಂಧದಲ್ಲಿ ಈ ಬಗೆಯ ಸಂಪೂರ್ಣ ಬಾಷ್ಪೀಕರಣದ ಸಾಧ್ಯತೆ ಸಂದೇಹಾಸ್ಪದವೆಂದು ಕೆಲವರ ಅಭಿಮತ; ಬದಲು ತುಂಗಸ್ಕ ಉಲ್ಕಾಕಲ್ಪ ನಿಜಕ್ಕೂ ಒಂದು ಪುಟ್ಟ ಧೂಮಕೇತುವೇ ಆಗಿರಬಹುದು. ನೀರು, ಅಮೋನಿಯ, ಮೀಥೇನ್ ಮುಂತಾದ ದ್ರವ್ಯಗಳ ಮಂಜುಗಡ್ಡೆಗಳಿಂದ ರಚಿತವಾಗಿರುವ ಧೂಮಕೇತು ಭೂಮಿಯೊಂದಿಗೆ ಸಂಘಟಿಸಿದಾಗ ಪೂರ್ಣವಾಗಿ ಬಾಷ್ಪೀಕೃತವಾಗಿ ಹೋಗುವುದು ಹೆಚ್ಚು ಸಂಭವನೀಯ. ಈ ವಾದ ನಿಜ ಸ್ಥಿತಿಯನ್ನು ಪ್ರತಿಬಿಂಬಿಸುವುದಾದರೆ ತುಂಗಸ್ಕ ಉಲ್ಕಾಕಲ್ಪವನ್ನು ಕಿರು ಕ್ಷುದ್ರ ಗ್ರಹಗಳ ಬಳಗಕ್ಕೆ ಸೇರಿಸುವಂತಿಲ್ಲ.



ಸೈಬೀರಿಯದ ಸ್ಲಿಮ್ ನದಿಯ ಬಳಿ ದೊರೆತ ಉಲ್ಕಾಪಿಂಡ

ಉಲ್ಕಾವೃಷ್ಟಿಗಳು ಮತ್ತು ಅನಿರ್ದಿಷ್ಟ ಉಲ್ಕೆಗಳು: ಧೂಮಕೇತು ಸಂಬಂಧವಾದ ಎರಡನೆಯ ಬಳಗದ ಉಲ್ಕಾಕಲ್ಪಗಳು ಪ್ರಾರಂಭದಲ್ಲಿ ತಮ್ಮ ತಮ್ಮ ಮಾತೃಧೂಮಕೇತುಗಳ ನೆರೆಯಲ್ಲೇ ಚಲಿಸುವುವು. ಈ ರೀತಿ ಧೂಮಕೇತುವೊಂದರಿಂದ ಪ್ರತ್ಯೇಕಗೊಂಡ ಅಪಾರ ಸಂಖ್ಯೆಯ ಉಲ್ಕಾಕಲ್ಪಗಳು ಆ ಧೂಮಕೇತುವಿನ ಕಕ್ಷೆಯ ಅಕ್ಕಪಕ್ಕಗಳಲ್ಲಿ ಕೆಲಕಾಲ ಗುಂಪಾಗಿ ಸೂರ್ಯಪರಿಭ್ರಮಣೆ ಮಾಡಬಹುದು. ಆದರೆ ಬಿಡಿಕಾಯಗಳು ಸೂರ್ಯನಿಂದ ಬೇರೆ ಬೇರೆ ದೂರಗಳಲ್ಲಿ ಬೇರೆ ಬೇರೆ ಕೋನವೇಗಗಳಿಂದ (ಆಂಗ್ಯುಲರ್ ವೆಲಾಸಿಟೀಸ್) ಚಲಿಸಬೇಕಾಗುವುದು. ಆದ್ದರಿಂದ ಮೊದಲಲ್ಲಿ ಹೆಚ್ಚು ಕಡಿಮೆ ಒಟ್ಟಾಗಿ ಚಲಿಸುತ್ತಿದ್ದ ಉಲ್ಕಾಕಲ್ಪಗಳು ಕ್ರಮೇಣ ಅವುಗಳ ಸರಾಸರಿ ಕಕ್ಷೆಯ ಎಲ್ಲ ಪ್ರದೇಶಗಳಿಗೂ ಏಕರೂಪವಾಗಿ ಹರಡಿಕೊಳ್ಳುತ್ತವೆ. ಅತ್ತ ಮಾತೃಧೂಮಕೇತುವಾದರೋ ತನ್ನ ಕಕ್ಷಾಸಂಚಾರದಲ್ಲಿ ಸೂರ್ಯನ ಬಳಿ ಹಾದುಹೋದ ಒಂದೊಂದು ಸಲವೂ ಸ್ವಲ್ಪ ಸ್ವಲ್ಪ ಕ್ಷಯಿಸಿ ಕೆಲವು ನೂರು ಪ್ರದಕ್ಷಿಣೆಗಳು ಮುಗಿಯುವ ವೇಳೆಗೆ ನಿರ್ನಾಮವಾಗಿ ಹೋಗಬಹುದು. ಅನಂತರ ಅದರ ಕಕ್ಷೆಯ ಆಚೀಚೆಯಲ್ಲಿ ಬಿಡಿ ಉಲ್ಕಾಕಲ್ಪಗಳಷ್ಟೇ ಸಂಚರಿಸತೊಡಗುವುವು. ಹೀಗೆ ಅವುಗಳ ಜೀವಿತ ಕಾಲದಲ್ಲೂ ಆ ತರುವಾಯವೂ ಪರಸ್ಪರ ಅತಿ ಸನ್ನಿಹಿತವಾಗಿ ಕಕ್ಷೆಗಳಲ್ಲಿ ಸೂರ್ಯಪರಿಭ್ರಮಣೆ ಮಾಡುವ ಅಪಾರ ಸಂಖ್ಯೆಯ ಉಲ್ಕಾಕಲ್ಪಗಳಿಗೆ ಧೂಮಕೇತುಗಳು ಜನ್ಮ ನೀಡುತ್ತವೆ. ಇಂಥ ಸಹಚರ ಉಲ್ಕಾಕಲ್ಪಗಳ ಮೇಳಗಳಿಗೆ ಉಲ್ಕಾಪ್ರವಾಹಗಳೆಂದು (ಮೀಟಿಯರ್ ಸ್ಟ್ರೀಂ) ಹೆಸರು. ಉಲ್ಕಾಪ್ರವಾಹವೊಂದರಲ್ಲಿ ಇನ್ನೂ ಒಟ್ಟೊಟ್ಟಾಗಿ ಚಲಿಸುತ್ತಿರುವ ಉಲ್ಕಾಕಲ್ಪಗಳ ದಟ್ಟವಾದ ಗುಂಪುಗಳಿದ್ದರೆ ಅಂಥ ಗುಂಪುಗಳಿಗೆ ಉಲ್ಕಾವಳಿಗಳೆಂದು (ಮೀಟಿಯರ್ ಸ್ವಾರ್ಮ್) ಹೆಸರು. ಈಗತಾನೆ ತಿಳಿಸಿರುವಂತೆ ಉಲ್ಕಾವಳಿಗಳೂ ಕ್ರಮೇಣ ಉಲ್ಕಾಪ್ರವಾಹದುದ್ದಕ್ಕೂ ಹರಡಿ ಮಾಯವಾಗುತ್ತವೆ. ಇದಕ್ಕಿಂತಲೂ ದೀರ್ಘತರ ಕಾಲಾವಧಿಗಳಲ್ಲಿ ದೊಡ್ಡ ದೊಡ್ಡ ಗ್ರಹಗಳ ಅನಿರ್ದಿಷ್ಟ ಗುರುತ್ವಾಕರ್ಷಣೆಯ ಫಲವಾಗಿ ಉಲ್ಕಾಪ್ರವಾಹದ ಅಡ್ಡವಿಸ್ತಾರ ಸಹ ಹೆಚ್ಚಾಗುತ್ತ ಬಂದು ಪ್ರವಾಹದಲ್ಲಿದ್ದ ಉಲ್ಕಾಕಲ್ಪಗಳು ಕೊನೆಗೆ ಚದುರಿಹೋಗಬಹುದು. ಆಕಾಶದಲ್ಲಿ ಅಲ್ಲೊಂದು ಇಲ್ಲೊಂದರಂತೆ ಕಾಣಿಸಿಕೊಳ್ಳುವ ಅನಿರ್ದಿಷ್ಟ ಉಲ್ಕೆಗಳು (ಸ್ಪೊರ್ಯಾ ಮೀಟಿಯರ್ಸ್) ಹೀಗೆ ಚಲ್ಲಾಪಿಲ್ಲಿಯಾದ ಉಲ್ಕಾಕಲ್ಪಗಳನ್ನು ಪ್ರತಿನಿಧಿಸುತ್ತವೆ.

ತನ್ನ ವಾರ್ಷಿಕ ಚಲನೆಯಲ್ಲಿ ಭೂಮಿ ಆಗಾಗ್ಗೆ ಕೆಲವು ಉಲ್ಕಾಪ್ರವಾಹ ಉಲ್ಕಾವಳಿಗಳ ಮುಖಾಂತರ ಹಾದು ಹೋಗುತ್ತವೆ. ಅಂಥ ಒಂದೊಂದು ಸಂದರ್ಭದಲ್ಲೂ (ಸಾಮಾನ್ಯವಾಗಿ ಕೆಲವು ದಿವಸಗಳ ಅವಧಿಯಲ್ಲಿ) ಆಯಾ ಉಲ್ಕಾಪ್ರವಾಹ ಉಲ್ಕಾವಳಿಗೆ ಸೇರಿದ ಕೋಟ್ಯನುಕೋಟಿ ಉಲ್ಕಾಕಲ್ಪಗಳು ವಾತಾವರಣದೊಂದಿಗೆ ಸಂಘಟಿಸುವುದರಿಂದ ಅಲ್ಲಿ ಎಂದಿನ ಸರಾಸರಿಗಿಂತ ಹಲವಾರು ಪಾಲು ಅಧಿಕವಾದ ದರಗಳಲ್ಲಿ ಉಲ್ಕೆಗಳುಂಟಾಗುತ್ತವೆ. ಇಂಥ ಘಟನೆಗಳಿಗೆ ಉಲ್ಕಾವೃಷ್ಟಿಗಳೆಂದು (ಮೀಟಿಯರ್ ಷವರ್ಸ್) ಹೆಸರು. ಪ್ರವಾಹದಲ್ಲಿ ಭೂಮಿಯ ಬಳಿಗೆ ಆಗಮಿಸುವ ಉಲ್ಕಾಕಲ್ಪಗಳೆಲ್ಲವೂ ಬಲುಮಟ್ಟಿಗೆ ಪರಸ್ಪರ ಸಮಾನಾಂತರವಾಗಿ ಚಲಿಸುತ್ತಿರುವುದರಿಂದ ವಾಯುಮಂಡಲದಲ್ಲಿ ಅವು ಬೆಳಗಿದಾಗ ಪ್ರಕಾಶಕ್ಕೆ ಬರುವ ಮಾರ್ಗರೇಖೆಗಳೂ ಸಮಾನಾಂತರವಾಗಿರುವುವು. ಈ ಮಾರ್ಗರೇಖೆಗಳ ದೃಗ್ವಿಕ್ಷೇಪಗಳೆಲ್ಲವೂ (ಪರ್ಸ್‌ಪೆಕ್ಟಿವ್ ಪ್ರೊ. ಜೆಕ್ಷನ್ಸ್) ಆಗಸದಲ್ಲಿ ಒಂದೆಡೆಯಿಂದಲೇ ಅಪಗಮಿಸಿ ಬಂದಂತೆ (ಡೈವರ್ಜ್) ನಮಗೆ ಕಾಣಿಸಿಕೊಳ್ಳುತ್ತವೆ. (ರೈಲುಕಂಬಿಗಳು ದೂರದಲ್ಲಿ ಕೂಡಿಕೊಳ್ಳುವಂತೆ ಕಾಣುವುದೂ ಇಂಥದೆ ಒಂದು ದೃಗ್ವಿಕ್ಷೇಪಜನ್ಯ ಭ್ರಾಂತಿ). ಈ ರೀತಿ ಪ್ರತಿ ಉಲ್ಕಾವೃಷ್ಟಿಗೂ ಒಂದು ಅಪಗಮನನಾಭಿ ಅಥವಾ ಮೂಲಬಿಂದುವಿರುತ್ತದೆ. ಅದರ ಹೆಸರು ಕಾಂತಿನೇಮಿ (ರೇಡಿಯೆಂಟ್). ಉದಾಹರಣೆಗೆ ವರ್ಷವರ್ಷವೂ ಹೆಚ್ಚು ಕಡಿಮೆ ಖಚಿತವಾಗಿ ಆಗಸ್ಟ್ ತಿಂಗಳ ಎರಡನೆಯ ವಾರದಲ್ಲಿ ಕಾಣಿಸಿಕೊಳ್ಳುವ ಪರ್‌ಸೀಡ್ ಉಲ್ಕಾವೃಷ್ಟಿಯ ಕಾಂತಿನೇಮಿ ಗ್ಯಾಮಪರ್ಸೀ ಎಂಬ ನಕ್ಷತ್ರದ ದಿಸೆಯಲ್ಲಿದೆ. ಅಕ್ಟೋಬರ್ ತಿಂಗಳ ಮೂರನೆಯ ವಾರಾಂತ್ಯ ನಾಲ್ಕನೆಯ ವಾರದ ಆದಿಯಲ್ಲಿ ಕಾಣಿಸುವ ಓರ್ಯೆಯನಿಡ್ ವೃಷ್ಟಿಯದು ಆರ್ದ್ರಾ (ಬೆಟೆಲ್ ಜೂಸ್) ನಕ್ಷತ್ರದ ನೇರದಲ್ಲಿದೆ; ಮತ್ತು ಡಿಸೆಂಬರ್ ಎರಡನೆಯ ವಾರಾಂತ್ಯ ಮೂರನೆಯ ವಾರದ ಆದಿಯಲ್ಲಿ ಗೋಚರಿಸುವ ಜೆಮಿನಿಡ್ ವೃಷ್ಟಿಯದು ಪುನರ್ವಸು ಕ್ಯಾಸ್ಟರ್ ತಾರೆಯ ನೇರದಲ್ಲಿದೆ. ಪಕ್ವಕಾಲದಲ್ಲಿ ನೋಡಿದಾಗ ಈ ವೃಷ್ಟಿಗಳು ಒಂದೆರಡು ಮಿನಿಟುಗಳಿಗೊಂದರಂತೆ ಉಲ್ಕೆಗಳ ಮಳೆ ಸುರಿಸುತ್ತವೆ. ವೀಕ್ಷಣ ಸ್ಥಳದಲ್ಲಿ ಉಲ್ಕಾವೃಷ್ಟಿಯೊಂದು ಗೋಚರಿಸಬೇಕಿದ್ದರೆ ಅದರ ಕಾಂತಿನೇಮಿ ಕ್ಷಿತಿಜದ ಮೇಲಿದ್ದಾಗಲೆಲ್ಲ ಉಲ್ಕಾವೃಷ್ಟಿ ಪ್ರಾರಂಭವಾಗಿರಲೇಬೇಕೆಂಬ ನಿಯಮವಾಗಲೀ ಪ್ರಾರಂಭವಾಗಿದ್ದಲ್ಲಿ ಗೋಚರಿಸುವ ಉಲ್ಕೆಗಳಲ್ಲಿ ನೇಮಿಯ ಸಮೀಪದಲ್ಲೇ ಉದ್ಭವಿಸಬೇಕೆಂಬ ನಿಯಮವಾಗಲೀ ಇಲ್ಲ; ವೃಷ್ಟಿಯ ಉಲ್ಕೆಗಳು ಆಕಾಶದಲ್ಲಿ ಎಲ್ಲಿಬೇಕಾದರೂ ಬೆಳಗಾಗಬಹುದು.

ನಿರ್ದಿಷ್ಟ ಉದ್ದೇಶವಿಲ್ಲದೆ ಆಕಾಶದತ್ತ ನೋಡುವ ವೀಕ್ಷಕರ ಗಮನವನ್ನು ಸೆಳೆಯಬೇಕಿದ್ದಲ್ಲಿ ಅವರ ದೃಷ್ಟಿರೇಖೆಗಳ ಆಚೀಚೆ ಪಾರ್ಶ್ವಗಳಲ್ಲಿ ಉದ್ಭವಿಸುವ ಉಲ್ಕೆಗಳು ಸಾಮಾನ್ಯವಾಗಿ ಮೂರನೆಯ ಕಾಂತಿಯ ಕ್ಷೇತ್ರಗಳಿಗಿಂತ (ಥರ್ಡ್ ಮ್ಯಾಗ್ನಿಟ್ಯೂಡ್‌ಸ್ಟಾರ್ಸ್) ಹೆಚ್ಚು ಕಾಂತಿಯುತವಾಗಿರಬೇಕಾಗುವುದು. ಉಲ್ಕಾವೃಷ್ಟಿರಹಿತ ಅಮಾವಾಸ್ಯೆ ರಾತ್ರಿಯ ಹತ್ತು ಗಂಟೆಗಳ ಅವಧಿಯಲ್ಲಿ ಉಪಕರಣಗಳ ನೆರವಿಲ್ಲದೆ ವೀಕ್ಷಕನೊಬ್ಬ 60–70 ಇಂಥ ಉಲ್ಕೆಗಳನ್ನು ಗುರುತಿಸಬಲ್ಲ, ಅವುಗಳಲ್ಲಿ ಬಹುವೆಲ್ಲ ನಡುರಾತ್ರಿಯ ತರುವಾಯವೇ ಕಾಣಿಸಿಕೊಳ್ಳುತ್ತವೆ. ಆದರೆ ಇಡೀ ವಾಯುಮಂಡಲದ ವ್ಯಾಪ್ತಿಯೊಳಗೆ ಇದೇ ಅವಧಿಯಲ್ಲಿ ಇಷ್ಟೇ ಕಾಂತಿಯನ್ನುಳ್ಳ ಸು. ಒಂದುಕೋಟಿ ಉಲ್ಕಾಕಲ್ಪಗಳು ಜ್ವಲಿಸಿ ಹೋಗಿರುತ್ತದೆ. ಅವುಗಳ ಪೈಕಿ ಐದಾರು ಉಲ್ಕಾಪಿಂಡಗಳಿರಬಹುದು. ದೃಷ್ಟಿ ರೇಖೆಗಳನ್ನು ಹೆಚ್ಚು ಕಡಿಮೆ ಸಂಧಿಸುವ ಉಲ್ಕೆಗಳು ಇವಕ್ಕಿಂತ 10–20 ಪಾಲು ಕ್ಷೀಣವಾಗಿ ಬೆಳಗಿದರೂ ವೀಕ್ಷಕರ ಗೋಚರಕ್ಕೆ ಬರುತ್ತವೆ; ದೂರದರ್ಶಕಗಳಲ್ಲಿ ಇನ್ನೂ ನೂರಾರು ಪಾಲು ಕಾಂತಿಹೀನವಾದ ಉಲ್ಕೆಗಳು ಸಹ ಕಾಣಿಸಿಕೊಳ್ಳಬಲ್ಲವು. ಈ ರೀತಿ ವಾಯುಮಂಡಲದಲ್ಲಿ ಬೆಳಗುವ ಉಲ್ಕಾಕಲ್ಪಗಳು ದಿನಂಪ್ರತಿ ಇಪ್ಪತ್ತು ಟನ್ ಹೊಸದ್ರವ್ಯವನ್ನು ಭೂಮಿಗೆ ಚೆಲ್ಲುತ್ತಿವೆ. ಬೆಳಗದೆಯೇ ಆಗಮಿಸುವ ದೂಳಿ ಉಲ್ಕಾಕಲ್ಪಗಳಾದರೋ ಭೂಮಿಯ ತೂಕವನ್ನು ದಿನವೊಂದಕ್ಕೆ ಸಹಸ್ರಾರು ಟನ್ನುಗಳಂತೆ ಹೆಚ್ಚಿಸುತ್ತಿವೆಯೆಂದು ಅಂದಾಜು ಮಾಡಲಾಗಿದೆ. ಇವೆಲ್ಲವುಗಳ ಮೊತ್ತವಾಗಿ ಭೂಮಿತ್ರಿಜ್ಯ $10^9$ ವರ್ಷಗಳಲ್ಲಿ ಸುಮಾರು ಒಂದು ಅಂಗುಲದಷ್ಟು ಹೆಚ್ಚಾಗುವುದು. ಭೂಮಿಯ ಕಕ್ಷಾವೇಗ $10^6$ ವರ್ಷಗಳಲ್ಲಿ ಸುಮಾರು $10^{-3}$ಸೆಕೆಂಡ್ ಕಡಿಮೆಯಾಗುವುದು. ಈ ಅಂಕಿ ಅಂಶಗಳು ಭೂಮಿಯ ಅಗಾಧ ವ್ಯಾಪ್ತಿಯನ್ನು ಪ್ರತಿಬಿಂಬಿಸುತ್ತವಷ್ಟೇ ವಿನಾ ಅಂತರಿಕ್ಷವಾಹನಗಳ ಚಲನೆಗೆ ತೀವ್ರ ಆತಂಕವನ್ನೊಡ್ಡುವಷ್ಟು ದಟ್ಟವಾದ ಉಲ್ಕಾಕಲ್ಪಗಳ ಸಂದಣಿಯೇನೂ ಬಾಹ್ಯಾಕಾಶದಲ್ಲಿಲ್ಲ. ಇಂದಿನ ಅಂತರಿಕ್ಷ ನೌಕೆಗಳು ಚಿಕ್ಕ ಪಟ್ಟ ಉಲ್ಕಾಕಲ್ಪಗಳಿಂದ ಖಗೋಲಯಾಂತ್ರಿಕವನ್ನು ಸಮರ್ಪಕವಾಗಿ ರಕ್ಷಿಸಬಲ್ಲವು. ಸಾಕಷ್ಟು ದೊಡ್ಡ ಉಲ್ಕಾಕಲ್ಪಗಳಿಂದ ಅಪೂರ್ವವಾಗಿ ಸಂಭವಿಸಬಹುದಾದ ಹಾನಿಗಳನ್ನು ಸರಿಪಡಿಸುವ ಏರ್ಪಾಡುಗಳ ಬಗ್ಗೆ ಚಿಂತನೆ ಅವಶ್ಯವಾಗುವುದು. ಅಂತರಿಕ್ಷ ನಿಲ್ದಾಣಗಳಂಥ (ಸ್ಪೇಸ್ ಸ್ಟೇಶನ್ಸ್) ದೀರ್ಘಾವಧಿ ಯೋಜನೆಗಳಲ್ಲಿ ಮಾತ್ರವೇ. (ಎಸ್.ಆರ್.ಎಂ.)

**ಉಲ್ಘು ಖಾನ್:** ಚಂಗೇಸ್‌ಖಾನನ ಮನೆತನಕ್ಕೆ ಸೇರಿದವ. 1292ರಲ್ಲಿ ಜಲಾಲುದ್ದೀನ್ ಖಿಲ್ಜಿಯ ಆಳ್ವಿಕೆಯಲ್ಲಿ ಭಾರತದ ವಾಯವ್ಯಭಾಗವನ್ನು ಮುತ್ತಿದ ಪ್ರಬಲವಾದ ಮುಂಗೋಲರ ಗುಂಪಿನ ನಾಯಕ. ಆಗ ಸುಲ್ತಾನನ ಸೈನ್ಯ ಮಂಗೋಲರ ದಾಳಿಯನ್ನು ಸಾಹಸದಿಂದ ಎದುರಿಸಿ ಸೋಲಿಸಿತು. ನಡೆದ ಒಪ್ಪಂದದ ಪ್ರಕಾರ ಮಂಗೋಲ್ ಸೈನ್ಯ ಭಾರತದಿಂದ ಹಿಂದಿರುಗಿತು. ಉಲ್ಘು ಖಾನ್ ಮತ್ತು ಆತನ ಹಿಂಬಾಲಕರಲ್ಲನೇಕರು ಇಸ್ಲಾಂ ಮತವನ್ನು ಸ್ವೀಕರಿಸಿ ದೆಹಲಿಯ ಸಮೀಪದಲ್ಲಿ ನೆಲೆಸಿದರು. ಇವರಿಗೆ ನ್ಯೂ ಮುಸ್ಲಿಮ್ಸ್ ಎಂದು

ಹೆಸರಾಯಿತು. ಇವರು ಕ್ರೂರಿಗಳು. ಆಗಾಗ ಸುಲ್ತಾನನಿಗೆ ತೊಂದರೆಯನ್ನುಂಟು ಮಾಡುತ್ತಿದ್ದರು. ಅಲ್ಲಾವುದ್ದೀನ್ ಸುಲ್ತಾನನಾದ ಮೇಲೆ (1296) ಉಲ್ಗು ಖಾನ್ ಮತ್ತು ಆತನ ಮುಖ್ಯ ಸಂಬಂಧಿಗಳನ್ನೆಲ್ಲ ಕಣ್ಣು ಕೀಳಿಸಿ ಸೆರೆಯಲ್ಲಿಡಿಸಿದ. ತನ್ನ ಸಿಂಹಾಸನಾಪಹರಣಕ್ಕೆ ಒಳಸಂಚು ನಡೆಸುತ್ತಿದ್ದರೆಂಬ ಕಾರಣಕ್ಕಾಗಿ ಅಲ್ಲಾವುದ್ದೀನ್ ಸುಮಾರು ಮೂವತ್ತು ಸಾವಿರ ನ್ಯೂ ಮುಸ್ಲಿಮರನ್ನು ಒಂದೇ ದಿನದಲ್ಲಿ ಕತ್ತರಿಸಿಹಾಕಿಸಿದನೆಂದು ಹೇಳಲಾಗಿದೆ. (ಜಿ.ಆರ್.ಆರ್.)

**ಉಲ್ಲಾಸ:** ಮಾನವನ ಸಂತುಷ್ಟ ಭಾವಗಳ ಪೈಕಿ ಒಂದು, ಪ್ರಸನ್ನತೆ, ಹಿಗ್ಗು, ಬೀಗು–ಎಂದೂ ಕರೆಯುವುದಿದೆ. ಮಕ್ಕಳು ಹುಟ್ಟಿದ ಕೂಡಲೇ ಅವುಗಳಲ್ಲಿ ಉಲ್ಲಾಸ ಕಾಣಿಸಿಕೊಳ್ಳುವುದಿಲ್ಲವೆಂಬುದು ಮನುಷ್ಯನ ಭಾವಜೀವನದ ಬೆಳವಣಿಗೆಯನ್ನು ಅಭ್ಯಸಿಸಿದ ಮನೋವಿಜ್ಞಾನಿಗಳ ತೀರ್ಮಾನವಾಗಿದೆ. ಹುಟ್ಟಿದ ಮಗು ಯಾವುದೇ ಬಗೆಯ ಪ್ರಚೋದನೆಗೆ ಒಳಪಟ್ಟರೂ ಶರೀರೋದ್ರೇಕದ ಮೂಲಕ ಮಾತ್ರ ಪ್ರತಿಕ್ರಿಯೆ ತೋರಿಸಬಲ್ಲುದು. ಆದರೆ ಮಗು ಬೆಳೆದಂತೆ, ಹೆಚ್ಚು ಹೆಚ್ಚು ಕಲಿಯತೊಡಗಿದಂತೆ ಬೇರೆ ಬೇರೆ ಭಾವಗಳನ್ನು ಅನುಭವಿಸುವ ಶಕ್ತಿ ಪಡೆಯುತ್ತದೆ. ಕ್ರಮೇಣ ಸಾಮಾನ್ಯ ಶರೀರೋದ್ರೇಕ ಸಂಕಟ (ಡಿಸ್ಟ್ರೆಸ್) ಮತ್ತು ಆನಂದ (ಡಿಲೈಟ್) ಎಂಬೆರಡು ಭಾವಗಳು ತಲೆದೋರುತ್ತವೆ. ಮುಂದೆ ಮಕ್ಕಳಲ್ಲಿ ಮತ್ತು ದೊಡ್ಡವರಲ್ಲಿ ಕಂಡು ಬರುವ ಎಲ್ಲ ಭಾವಗಳಿಗೂ ಇವು ತಳಹದಿಯಾಗುತ್ತವೆ ಬೆಳವಣಿಗೆ ಮತ್ತು ಕಲಿಕೆ ಮುಂದುವರಿದಂತೆ ಆನಂದ ಭಾವದಿಂದ ಕವಲೊಡೆದುಕೊಂಡು ಬೇರೊಂದು ಸ್ವತಂತ್ರ ಭಾವ ಎನ್ನಿಸಿಕೊಳ್ಳುವುದೇ ಉಲ್ಲಾಸ. ಅನೇಕ ಮನೋವಿಜ್ಞಾನಿಗಳ ಪ್ರಕಾರ ಉಲ್ಲಾಸವನ್ನು ಸುಮಾರು ಹನ್ನೆರಡು ತಿಂಗಳಿನ ಮಗುವಿನಲ್ಲಿ ಗುರುತಿಸಬಹುದು. ಉಲ್ಲಾಸ ಬೇರೆ ಯಾವ ವಿಶಿಷ್ಟ ಭಾವಕ್ಕೂ ಎಡೆ ಮಾಡಿಕೊಡುವಂತೆ ಕಂಡುಬರುವುದಿಲ್ಲ. ಇದು ಹೆಚ್ಚು ಸಂಕೀರ್ಣವಾಗಬಹುದು. ಅಷ್ಟೇ.

ಶಾರೀರಿಕ ದೃಷ್ಟಿಯಿಂದ ದೊಡ್ಡವರಲ್ಲಿ ಎಲ್ಲ ಭಾವಗಳೂ ನರಮಂಡಲದ ಅತಿ ಎಚ್ಚರದ (ಅರೌಸಲ್) ಸ್ಥಿತಿಗಳು. ಆದರೆ ಆರು ತಿಂಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ನರಮಂಡಲ ಎಚ್ಚರದ ಎರಡೇ ಅವಸ್ಥೆಗಳನ್ನು ತೋರಿಸುತ್ತದೆ; ನೋವು, ಚಳಿ, ಹಸಿವೆ ಇತ್ಯಾದಿ ಅನಾನುಕೂಲ ಸ್ಥಿತಿಯಲ್ಲಿ ನರಮಂಡಲ ಅತಿ ಎಚ್ಚರದ ಸ್ಥಿತಿಗೆ ಹೋಗುತ್ತದೆ: ಎತ್ತಿಕೊಂಡಾಗ, ಹಾಲೂಡುವಾಗ, ಒಟ್ಟಿನಲ್ಲಿ ಮಗು ಸಂತೃಪ್ತವಾದಾಗ ನರಮಂಡಲದ ಎಚ್ಚರ ಕನಿಷ್ಠಮಟ್ಟಕ್ಕೆ ಇಳಿಯುತ್ತದೆ. ಅಂದರೆ ಆರು ತಿಂಗಳವರೆಗೂ ಮಕ್ಕಳಲ್ಲಿ ಸಂತುಷ್ಟ ಭಾವ ಕಡಿಮೆ ಎಚ್ಚರದ ಸ್ಥಿತಿಯಲ್ಲೂ ಅಸಂತುಷ್ಟ ಭಾವ ಅತಿ ಎಚ್ಚರದ ಸ್ಥಿತಿಯಲ್ಲೂ ಇರುತ್ತದೆ. ಆದರೆ ಒಂದು ವರ್ಷದ ಹೊತ್ತಿಗೆ ಅನಂತರ ಸಂತುಷ್ಟಸ್ಥಿತಿಯಲ್ಲೂ ನರಮಂಡಲ ಅತಿಯಾಗಿ ಎಚ್ಚರಗೊಳ್ಳುತ್ತದೆ. ಅಂದರೆ ಬೆಳವಣಿಗೆ ಮುಂದುವರಿದಂತೆಲ್ಲ ಆನಂದ, ಸಂತೋಷ, ಉತ್ಸಾಹ, ಕೋಪ, ತಾಪ, ಸಂಕಟ, ನೋವು ಇತ್ಯಾದಿ ಎಲ್ಲ ಭಾವಗಳನ್ನು ಅನುಭವಿಸುವಾಗಲೂ ನರಮಂಡಲ ಉದ್ರೇಕಗೊಳ್ಳುತ್ತದೆ. ಹೀಗೆ ಉಲ್ಲಾಸ ಕೂಡ ನರಮಂಡಲದ ಎಚ್ಚರಸ್ಥಿತಿಗಳಲ್ಲಿ ಒಂದು, ವ್ಯಕ್ತಿಯೊಬ್ಬ ಉಲ್ಲಾಸ, ಆನಂದಗಳನ್ನು ಅನುಭವಿಸುತ್ತಿದ್ದಾನೊ ಅಥವಾ ಸಂಕಟ, ಕೋಪಗಳನ್ನು ಅನುಭವಿಸುತ್ತಿದ್ದಾನೊ ಎಂಬುದು ಮುಖ್ಯವಾಗಿ ಯಾವ ಪ್ರಚೋದನೆಗಳು, ಸನ್ನಿವೇಶಗಳು ನರಮಂಡಲವನ್ನು ಚುರುಕುಗೊಳಿಸುತ್ತಿವೆ–ಎಂಬುದನ್ನು ಅವಲಂಬಿಸುತ್ತದೆ. ಜೀವದ ಬೆಳವಣಿಗೆ ಮತ್ತು ಪರಿಸರದ ತರಬೇತಿ–ಇವುಗಳ ಪರಿಣಾಮದಿಂದ ಕೆಲವು ತರದ ಪ್ರಚೋದನೆಗಳು ಆನಂದ ಮತ್ತು ಉಲ್ಲಾಸದಾಯಕವಾಗಿಯೂ ಕೆಲವು ತರದ ಪ್ರಚೋದನೆಗಳು ಸಂಕಟ ಮತ್ತು ತಾಪದಾಯಕವಾಗಿಯೂ ತೋರುತ್ತವೆ.

ಆರೋಗ್ಯಕರವಾದ ಮತ್ತು ಹೆಚ್ಚು ಸಾಮಾನ್ಯವಾದ ಉಲ್ಲಾಸ ಭಾವದ ಬಗ್ಗೆ ದುರದೃಷ್ಟವಶಾತ್ ಹೆಚ್ಚು ಮನೋವೈಜ್ಞಾನಿಕ ಸಂಶೋಧನೆ ಆಗಿಲ್ಲ. ಆಗಿರುವ ಹೆಚ್ಚಿನ ಸಂಶೋಧನೆ ಉನ್ಮಾದದ–ಅಂದರೆ ವಿಷಾದ ಮನೋವಿಕೃತಿಯಲ್ಲಿ ಕಾಣಿಸಿಕೊಳ್ಳುವ ಅತಿ ಉಲ್ಲಾಸದ–ಬಗ್ಗೆ ಮಾತ್ರ. ಗಂಭೀರ ಸ್ವರೂಪ ಪಡೆಯುವ ಈ ಮನೋರೋಗದಲ್ಲಿ ರೋಗಿ ಒಮ್ಮೆ ಉನ್ಮತ್ತನಾಗಿ ಇನ್ನೊಮ್ಮೆ ವಿಷಣ್ಣನಾಗಿ ವರ್ತಿಸುತ್ತಾನೆ. ಈ ರೋಗಿ ಉನ್ಮತ್ತಸ್ಥಿತಿಯಲ್ಲಿರುವಾಗ ಅನುಭವಿಸುವ ಮುಖ್ಯವಾದ ಭಾವವೆಂದರೆ ಅವಾಸ್ತವಿಕವಾದ ಉಲ್ಲಾಸ. ಉನ್ಮತ್ತರೋಗಿ ಈ ಅತಿಯಾದ ಉಲ್ಲಾಸ, ಕಾರಣವಿಲ್ಲದ ಖುಷಿ, ಅರ್ಥವಿಲ್ಲದ ಆನಂದ, ಹಿಡಿತಡೆ ಇಲ್ಲದ ಉತ್ಸಾಹ, ಅಪಾರವಾದ ಹೆಮ್ಮೆ, ಹುಚ್ಚುಧೈರ್ಯ, ಕೆಟ್ಟ ಶಕ್ತಿಸಾಮರ್ಥ್ಯ–ಇವುಗಳಿಂದಾಗಿ ತನಗೂ ಜನರಿಗೂ ಅಪಾಯಕಾರಿಯಾಗುತ್ತಾನೆ. ಪರಿಣಾಮವಾಗಿ ಈ ರೋಗಿಗಳನ್ನು ಆಸ್ಪತ್ರೆಗೆ ಸೇರಿಸಬೇಕಾಗುತ್ತದೆ. **(ನೋಡಿ– ಉನ್ಮಾದರೋಗ)**

ಕೆಲವು ರಾಸಾಯನಿಕ ದ್ರವ್ಯಗಳು, ಔಷಧಿಗಳು ಆರೋಗ್ಯವಂತರಲ್ಲೂ ಕೃತಕವಾಗಿ ಉಲ್ಲಾಸವನ್ನು ಉಂಟುಮಾಡುತ್ತವೆ. ಮಧ್ಯಮ ಅಂತಿಮ ಪರಿಣಾಮ ನರಮಂಡಲವನ್ನು ಹತ್ತಿಕ್ಕುವಂಥದಾದರೂ ಸ್ವಲ್ಪ ಪ್ರಮಾಣದಲ್ಲಿ ಸ್ವೀಕರಿಸಿದ ಮೊದಲ ಹಂತದಲ್ಲಿ ಉಲ್ಲಾಸ ಉಂಟಾಗುತ್ತದೆ. ಹಾಗೆಯೇ ಕೊಕೇನ್, ಗಾಂಜ, ಅಫೀಮು, ಮಾರ್ಫೀನ್, ಇತ್ಯಾದಿ ದ್ರವ್ಯಗಳು ಉಲ್ಲಾಸಕಾರಿಗಳು. **(ನೋಡಿ– ಆಲ್ಕೊಹಾಲ್–ಪಾನೀಯಗಳು) : (ನೋಡಿ– ಕುಡುಕತನ).**

ಅಭೀಷ್ಟಸಿದ್ಧಿಯಾದಾಗ, ಹಿರಿದನ್ನು ಸಾಧಿಸಿದಾಗ, ಪುರಸ್ಕಾರ ಪಡೆದಾಗ, ಪ್ರಶಂಸೆಗೆ ಪಾತ್ರನಾದಾಗ, ತನ್ನನ್ನು ಎಲ್ಲರೂ ಪ್ರೀತಿಸುತ್ತಾರೆ, ಗೌರವಿಸುತ್ತಾರೆ ಎಂಬ ಭಾವ ಪುಷ್ಟಿಗೊಂಡಾಗ ಮನುಷ್ಯ ಉಲ್ಲಾಸಗೊಳ್ಳುತ್ತಾನೆ. ಸಹಜವಾದ ಆರೋಗ್ಯಕರವಾದ ಉಲ್ಲಾಸ ಒಳ್ಳೆಯ ವ್ಯಕ್ತಿತ್ವದ ಲಕ್ಷಣ. ವಾಸ್ತವಿಕತೆಗೆ ಹೊಂದಿಕೊಂಡಾಗ ಈ ಭಾವ ಅನೇಕ ಸಾಧನೆಗಳಿಗೆ ಮೂಲವಾಗಬಹುದು. ಮಕ್ಕಳಲ್ಲಿ ಉಲ್ಲಾಸ ಭಾವವನ್ನು ಉತ್ತೇಜಿಸುವುದು ಒಳ್ಳೆಯದು. ಸದಾಕಾಲವೂ ಅವರನ್ನು ಉಲ್ಲಾಸಿತರನ್ನಾಗಿಟ್ಟಲ್ಲಿ ಅವರ ವ್ಯಕ್ತಿತ್ವ ಸರ್ವತೋಮುಖವಾಗಿ ಬೆಳೆಯುತ್ತದೆ. (ಎಂ.ಎನ್.ಎಚ್.)

**ಉಲ್ಲಾಳ:** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನಲ್ಲಿ ಮಂಗಳೂರಿನಿಂದ 8ಕಿಮೀ ದೂರದಲ್ಲಿ ನೇತ್ರಾವತಿ ದಕ್ಷಿಣ ದಂಡೆಯ ಮೇಲಿರುವ ಊರು. ಇಂದು ಮಂಗಳೂರು ಪಟ್ಟಣದ ಸಮೂಹದಲ್ಲೇ ಸೇರಿಹೋಗಿದೆ.

ಪುತ್ತಿಗೆಯ ಚೌಟ ಅರಸುಮನೆತನದ ಒಂದು ಶಾಖೆಯ ರಾಜರು ಉಲ್ಲಾಳವನ್ನು ಆಳುತ್ತಿದ್ದರು. ಇಲ್ಲಿಯ ಸೋಮನಾಥ ಅವರ ಕುಲದೇವರು. 16ನೆಯ ಶತಮಾನದಲ್ಲಿ ರಾಜ್ಯಭಾರ ಮಾಡುತ್ತಿದ್ದ ಅಬ್ಬಕ್ಕ ಈ ಶಾಖೆಯಲ್ಲಿ ಪ್ರಸಿದ್ಧಳು. ವಿದೇಶಿಯರ ಬಲವನ್ನು ಮುರಿಯಲು ಸರ್ವಪ್ರಯತ್ನಮಾಡಿದ ಈ ವೀರರಾಣಿ ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದಳು. ಆಕೆಯ ತರುವಾಯ ಉಲ್ಲಾಳ ರಾಜ್ಯವನ್ನಾಳಿದ ಆಕೆಯ ಮಗಳು ಕಾರ್ಕಳದ ಅರಸರೊಡನೆ ಯುದ್ಧ ಮಾಡಿ ಸತ್ತಳು. ಆಕೆಯ ಮಗ ಚಿಕ್ಕರಾಯ (1606–28) ಬಿದನೂರು ವೆಂಕಟಪ್ಪನಾಯಕನ ನೆರವನ್ನು ಪಡೆದು ಕಾರ್ಕಳದ ಅರಸನನ್ನು ಸೋಲಿಸಿದ (1608). ಭೋಜರಾಜನ ಆಳ್ವಿಕೆಯಲ್ಲಿ (1630–44) ಉಲ್ಲಾಳ ಬಿದನೂರು ಸಂಸ್ಥಾನಕ್ಕೆ ಸೇರಿತು.

ಉಲ್ಲಾಳದಲ್ಲಿ ಕೋಟೆ ಮತ್ತು ಅರಮನೆಯ ಅವಶೇಷಗಳಿವೆ. ಸೋಮನಾಥ ದೇವಾಲಯದಲ್ಲಿ ಇಟಾಲಿಯನ್ ಶೈಲಿಯ ಹಲವು ಸುಂದರ ಶಿಲ್ಪಗಳಿವೆ. ಊರಿನಿಂದ ಸು.9ಕಿಮೀ ದೂರದಲ್ಲಿ ಉಲ್ಲಾಳ ಅರಸರ ಭದ್ರತಾಣವಾಗಿದ್ದ ಉಚ್ಚಿಲ ಕೋಟೆ ಮತ್ತು ಮಣೇಲ ಅರಮನೆ ಇವೆ. ಕಾರ್ಕಳದ ಭೈರರಸ ಒಡೆಯರೂ ಇಲ್ಲಿ ಅರಮನೆಗಳನ್ನು ಕಟ್ಟಿದ್ದರೆಂದು ಹೇಳಿಕೆ.

ಉಲ್ಲಾಳದಲ್ಲಿರುವ ಸೈಯದ್ ಮಹಮ್ಮದ್ ಷರೀಫ ಮದನೀ ಅವರ ದರ್ಗಾ ಬಹು ಪ್ರಸಿದ್ಧ. ಈ ಸಂತರು ಸು.400 ವರ್ಷಗಳ ಹಿಂದೆ ಮದೀನದಿಂದ ಬಂದು ಇಲ್ಲಿನ ಮೇಲಂಗಡಿ ಮಸೀದಿಯಲ್ಲಿ ನೆಲಸಿ ಇಲ್ಲಿಯೇ ಮದುವೆಯಾಗಿ ಅನೇಕ ಪವಾಡಗಳನ್ನು ಮೆರೆಸಿ ಜನಮನ್ನಣೆ ಗಳಿಸಿದರೆಂದು ಪ್ರತೀತಿ. ಇವರ ಗೌರವಾರ್ಥ ಐದು ವರ್ಷಗಳಿಗೊಮ್ಮೆ ಉರುಸ್ ನಡೆಯುತ್ತದೆ. ಎಲ್ಲ ಜಾತಿಮತಗಳ ಜನ ಇಲ್ಲಿಗೆ ಬರುತ್ತಾರೆ. ಸಂತರ ಮರಣಾನಂತರ ಕಟ್ಟಿದ ದರ್ಗಾ ನಾಲ್ಕು ಬಾರಿ ಪುನರ್ನಿರ್ಮಾಣವಾಯಿತು. ಇಂದು ಇರುವ ಭವ್ಯ ಕಟ್ಟಡ 1970ರ ರಚನೆ. ಈ ದರ್ಗಾದ ಆಡಳಿತವರ್ಗ ಅರಬ್ಬೀ ಕಾಲೇಜು ಮತ್ತು ಪ್ರೌಢಶಾಲೆಯನ್ನು ನಡೆಸುತ್ತಿದೆ. 16ನೆಯ ಶತಮಾನದಲ್ಲಿ ಫ್ರಾನ್ಸಿಸ್ಕನ್ ಪಾದ್ರಿಗಳು ಕಟ್ಟಿಸಿದ ಚರ್ಚ್ ನಗರದಲ್ಲಿದೆ. ಕವಿ ಉಲ್ಲಾಳ ಮಂಗೇಶರಾಯರು ಈ ಊರಿನವರು. (ವಿ.ಜಿ.ಕೆ.)

**ಉಶೀನರ:** 1 ಯಾದವ ವಂಶದ ಒಬ್ಬ ದೊರೆಯ ಹೆಸರು. 2 ಚಂದ್ರವಂಶದ ಅನುಕುಲದಲ್ಲಿ ಜನಿಸಿದ ಒಬ್ಬ ರಾಜ. ಭೋಜ ದೇಶವನ್ನು ಆಳುತ್ತಿದ್ದ. ಯಯಾತಿಯ ಮಗಳಾದ ಮಾಧವಿ ಇವನ ಪತ್ನಿ, ತ್ಯಾಗಶೀಲನೆಂದು ಪ್ರಸಿದ್ಧನಾಗಿರುವ ಶಿಬಿ ಚಕ್ರವರ್ತಿ ಇವನ ಮಗ. 3 ಭಾಗವತದ ಪ್ರಕಾರ ಅನುರಾಜನ ಕುಲದಲ್ಲಿ ಜನಿಸಿದ ಸೃಂಜಯನ ಮಗನಾದ ಮಹಾಮನಸನ ಮಗ. 4 ಒಂದು ದೇಶದ ಹೆಸರು. (ಬಿ.ಕೆ.ಎಸ್.)

**ಉಷಸ್:** ಉಷೆ, ಉಷಾದೇವಿ ಎಂದು ಪ್ರಸಿದ್ಧಳಾಗಿರುವ ವೈದಿಕ ದೇವತೆ. ಮುಂಬೆಳಗಿನ ಸಾಮ್ರಾಜ್ಞಿ, ಜ್ಯೋತಿರ್ಮಂಡಲಗಳಲ್ಲೆಲ್ಲ ಅತ್ಯಧಿಕವಾದ ತೇಜಸ್ಸುಳ್ಳವಳು. ದೇವಮಾತೆಯಾದ್ದರಿಂದ ದೇವತೆಗಳಿಗೂ ಪೂಜ್ಯಳು. ಇವಳ ಸ್ವರೂಪ ಎರಡು ವಿಧ. ಜಗತ್ತನ್ನು ಆಕರ್ಷಿಸುವ ಭವ್ಯವಾದ ಲೌಕಿಕ ಸ್ವರೂಪ ಒಂದಾದರೆ, ಗುಹ್ಯವೂ ಸತ್ಯಾತ್ಮಕವೂ ಆದ ದಿವ್ಯಸ್ವರೂಪ ಮತ್ತೊಂದು.

ವಸ್ತ್ರಾಲಂಕಾರಗಳಿಂದ ಭೂಷಿತಳಾದ ಪತ್ನಿ ಪತಿಯ ಆಗಮನವನ್ನು ನಿರೀಕ್ಷಿಸುವಂತೆ ಉಷೆ ನಾನಾ ವರ್ಣಾತ್ಮಕವಾದ ದಿವ್ಯ ಪ್ರಭೆಯಿಂದ ಶೋಭಿಸುತ್ತ ಪತಿಯಾದ ಆದಿತ್ಯನನ್ನು ನಿರೀಕ್ಷಿಸುತ್ತಿದ್ದಾಳೆ. ಸ್ನಾನಮಾಡಲಿಳಿದ ಸುಂದರ ತರುಣಿ ಲಜ್ಜೆಯಿಂದ ಬಳುಕುತ್ತ ಮೇಲೆದ್ದು ಬರುವಂತೆ ಆಕರ್ಷಕವಾದ ರೂಪವುಳ್ಳ ಈಕೆ ತನ್ನ ದಿವ್ಯ ಸೌಂದರ್ಯವನ್ನು ಪ್ರಕಾಶಪಡಿಸುತ್ತ ಅಂತರಿಕ್ಷದಲ್ಲಿ ಆವಿರ್ಭವಿಸುತ್ತಾಳೆ. ನರ್ತನಮಾಡುವ ಸ್ತ್ರೀಯಂತೆ ರೂಪಲಾವಣ್ಯಗಳನ್ನು ತೋರಿಸುತ್ತಾಳೆ. ಹೀಗೆಂದು ಉಷೆಯನ್ನು ಬಣ್ಣಿಸಲಾಗಿದೆ.

ಕೇವಲ ಚಿತ್ತಾಕರ್ಷಕವಾದ ಸೌಂದರ್ಯ ಮಾತ್ರವಲ್ಲದೆ ಜಗದುಪಕಾರಕವಾದ ತೇಜಸ್ಸನ್ನೂ ಈಕೆ ಹೊಂದಿದ್ದಾಳೆ. ತಾಯಿ ಮಕ್ಕಳನ್ನು ಆದರದಿಂದ ಭೋಜನಕ್ಕೆ ಎಬ್ಬಿಸುವಂತೆ ಜಗತ್ತನ್ನು ಎಚ್ಚರಗೊಳಿಸಿ ಕಾರ್ಯನಿರತವಾಗುವಂತೆ ಮಾಡುತ್ತಾಳೆ. ಅಜ್ಞಾನನಾಶಕಳಾಗಿ ಜ್ಞಾನಪ್ರೇರಕಳಾಗುತ್ತಾಳೆ. ಋತುಮಾರ್ಗವನ್ನನುಸರಿಸಿ ದಿವ್ಯ ನಿಯಮವನ್ನು ಪಾಲಿಸಿ ದೇವಮಾನವಾದಿಗಳಿಗೆಲ್ಲ ಮಾರ್ಗದರ್ಶಕಳಾಗಿದ್ದಾಳೆ.

ಆದರೆ, ಲೋಕಕ್ಕೆಲ್ಲ ಚೈತನ್ಯವನ್ನೂ ಬೆಳಕನ್ನೂ ಕೊಟ್ಟು ಜೀವಕಳೆಯನ್ನು ತುಂಬತಕ್ಕ ಉಷೆ ತಾನು ಮಾತ್ರ ನಿತ್ಯತಾರುಣ್ಯವನ್ನು ಹೊಂದಿ ತನ್ನೆದುರಿಗೆ ಹುಟ್ಟಿ ಬೆಳೆದ ಸಕಲ ಜಂತುಗಳಿಗೂ ಮುಪ್ಪನ್ನುಂಟುಮಾಡಿ ಮೃತರಾಗುವಂತೆ ಮಾಡುತ್ತಾಳೆ. ಈ ವಿಷಯದಲ್ಲಿ ಇವಳಿಗೆ ಕರುಣೆಯೇ ಇಲ್ಲ.

ಶಾಶ್ವತಳಾದ ಈ ಉಷಸ್ಸಿನ ಸೊಬಗನ್ನು ನೋಡಿ ಆನಂದಿಸಿದ ಹಿಂದಿನವರೆಲ್ಲ ಕಣ್ಮರೆಯಾದರು. ಮುಂದಿನವರ ಗತಿಯೂ ಇಷ್ಟೆ. ಆದರೆ, ಈಕೆ ಮಾತ್ರ ನಿತ್ಯಳೂ ನಿತ್ಯತಾರುಣ್ಯ ಸೌಂದರ್ಯವುಳ್ಳವಳೂ ಆಗಿದ್ದು, ಲೋಕಯಾತ್ರೆಯಲ್ಲಿ ನಿತ್ಯ ಮತ್ತು ಅನಿತ್ಯ ತತ್ತ್ವಗಳೆರಡಕ್ಕೂ ಸಂಬಂಧಿಸಿದ್ದಾಳೆ.

ಉಷಸ್ಸಿನ ಭೌತಿಕಸ್ವರೂಪವನ್ನು ತಕ್ಕಮಟ್ಟಿಗೆ ಎಲ್ಲರೂ ಅರಿಯಬಹುದು. ಆದರೆ ಇವಳ ಅಲೌಕಿಕವಾದ ದಿವ್ಯತ್ತ್ವವನ್ನರಿಯಲು ಸತ್ಯವಂತರೂ ಮೇಧಾವಿಗಳೂ ಮಂತ್ರ ತತ್ತ್ವವನ್ನರಿತವರೂ ಆದ ಅಂಗಿರಸಾದಿ ಋಷಿಗಳಿಂದ ಮಾತ್ರ ಸಾಧ್ಯ. ಆದಿತ್ಯನ ಸ್ವರೂಪವೆಷ್ಟು ಗಂಭೀರವೋ ಉಷಸ್ಸಿನ ಸ್ವರೂಪವೂ ಅಷ್ಟೇ ಗಂಭೀರ. ಜಗತ್ಪೂಜ್ಯವಾದ ದಿವ್ಯತತ್ತ್ವದ ಪ್ರತೀಕವಾದ್ದರಿಂದ ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿಃ ಎಂದು ಈಕೆಯನ್ನು ಪ್ರಶಂಸಿಸಲಾಗಿದೆ. ಈ ವರ್ಣನೆಗಳೆಲ್ಲವೂ ವೇದಾದಿ ಪ್ರಮಾಣ ಗ್ರಂಥಗಳಲ್ಲಿವೆ. (ಜಿ.ಎಸ್.ಸಿ.)

**ಉಷಾಂಶು:** 1. ರಹಸ್ಯ ಎಂಬ ಅರ್ಥದಲ್ಲಿ ಈ ಪದದ ಪ್ರಯೋಗವನ್ನು ಋಗ್ವೇದದಲ್ಲಿ ಕಾಣಬಹುದು (10;83.7.) ಮನುಸ್ಮೃತಿಯ ಪ್ರಕಾರ ಇದು ಪ್ರಣವಾದಿ ತ್ರಿವಿಧ ಜಪಯಜ್ಞದ ಒಂದು ಬಗೆ. ಯತ್ಸಮೀಪಸ್ಥೋऽಪಿ ಪರೋ ನ ಶೃಣೋತಿ ತದುಪಾಂಶು (ಯಾವುದು ಸಮೀಪದಲ್ಲಿದ್ದವರಿಗೂ ಕೇಳಿಸುವುದಿಲ್ಲವೋ ಅದೇ ಉಪಾಂಶು) ಎಂದು ಇದಕ್ಕೆ ವಿವರಣೆಯನ್ನು ಕೊಟ್ಟಿದ್ದಾರೆ. ಈ ಹೆಸರುಳ್ಳ ಜಪದ ಕ್ರಮ ಹೀಗಿದೆ:

ಜಿಹ್ವೋಷ್ಠೌ ಚಾಲಯೇತ್ ಕಿಂಚಿದ್ದೇವತಾಗತಮಾನಸಃ
ನಿಜಶ್ರವಣಯೋಗ್ಯಃ ಸ್ಯಾದುಪಾಂಶುಃ ಸ ಜಪಃ ಸ್ಮೃತಃ

ನಾಲಗೆ ತುಟಿಗಳನ್ನು ಸ್ವಲ್ಪ ಮಾತ್ರ ಚಲಿಸಿ, ಆಯಾ ದೇವತೆಯಲ್ಲಿ ಮಗ್ನವಾದ ಮನಸ್ಸಿನಿಂದ ಕೂಡಿ ತಾನು ಮಾತ್ರ ಆಲಿಸುವಷ್ಟು ಮಾಡಿದ ಜಪವೇ ಉಪಾಂಶು. ಉಪಾಂಶುಜಪ ವಾಚಿಕಜಪಕ್ಕಿಂತ ಹತ್ತರಷ್ಟೂ ಮಾನಸಿಕಜಪದ ಹತ್ತನೆಯ ಒಂದು ಭಾಗದಷ್ಟೂ ಫಲಪ್ರದವೆನಿಸಿದೆ. ಯಾಗಕಾಲದಲ್ಲಿ ಯಜುರ್ವೇದ ಮಂತ್ರಗಳನ್ನು ಉಪಾಂಶುವಾಗಿ ಉಚ್ಚರಿಸಬೇಕೆಂದು ವಿಧಿ.

2. ಸೋಮದ ಆಹುತಿಯ ಒಂದು ಬಗೆ. (ಬಿ.ಕೆ.ಎಸ್.; ಎಸ್.ಎನ್.ಕೆ.)

**ಉಷಾ ನವರತ್ನರಾಮ್ :** 1939–2000. ಕನ್ನಡದ ಜನಪ್ರಿಯ ಕಾದಂಬರಿಕಾರ್ತಿ. ಇವರು 1939 ನವೆಂಬರ್ 23ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಎಂ.ವಿ. ಸುಬ್ಬರಾವ್, ತಾಯಿ ಶಾಂತಾಬಾಯಿ. ಬೆಂಗಳೂರಿನ ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು. ಪತ್ರಿಕೋದ್ಯಮ, ಡಿಪ್ಲೊಮ, ಹರ್ಬಲ್ ಬ್ಯೂಟಿಕೇರ್‌ನಲ್ಲಿ ಸರ್ಟಿಫಿಕೇಟ್ ಕೋರ್ಸ್ ಮಾಡಿದ್ದ ಇವರು ಅನಂತರ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಇವರಿಗೆ ಕರ್ಣಾಟಕ ಸಂಗೀತ, ಭರತನಾಟ್ಯದಲ್ಲಿ ಪ್ರವೇಶವಿತ್ತು. ಫ್ರೆಂಚ್, ಜರ್ಮನ್ ಹಾಗೂ ಸಂಸ್ಕೃತವನ್ನು ಬಲ್ಲವರಾಗಿದ್ದರು. ಬೆಂಗಳೂರಿನ ಚಾಮರಾಜಪೇಟೆಯ ಮಹಿಳಾ ಸೇವಾ ಸಮಾಜದ ಶಾಲೆಯಲ್ಲಿ ಅಧ್ಯಾಪಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಓದುತ್ತಿದ್ದ ಕಾಲಕ್ಕೇ ಬರೆಯುವ ಹವ್ಯಾಸವನ್ನು ರೂಢಿಸಿಕೊಂಡಿದ್ದರು. ತಮ್ಮಲ್ಲಿ ಫ್ರೆಂಚ್ ಕಲಿಯಲು ಬಂದ ನವರತ್ನರಾಮ್ ಎಂಬವರೊಡನೆ ಪ್ರೇಮಾಂಕುರವಾಗಿ ಅವರನ್ನೇ ಮದುವೆಯಾದರು (1963). ಇಲ್ಲಿಂದ ಮುಂದೆ ಉಷಾ ನವರತ್ನರಾಮ್ ಆಗಿ ಬರೆಹಗಾರ್ತಿಯಾಗಿ ಗುರುತಿಸಿಕೊಂಡರು. ಮದುವೆಯ ಅನಂತರ ನವರತ್ನರಾಮ್ ಫ್ರಾನ್ಸಿಗೆ ಹೋಗಿ ಅಲ್ಲಿಂದ ತಮ್ಮ ನಲ್ಲೆಗೆ ಬರೆದ ಪತ್ರಗಳು ಪ್ಯಾರಿಸ್ಸಿನಿಂದ ಪ್ರೇಯಸಿಗೆ ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಗೊಂಡು ಜನಪ್ರಿಯವಾಗಿದೆ.

ಇವರು ಸುಮಾರು ಎಂಬತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಎರಡು ಕಥಾಸಂಕಲನಗಳೂ ಸೇರಿದಂತೆ ತೊಂಬತ್ತಕ್ಕೂ ಹೆಚ್ಚು ಸಣ್ಣ ಕತೆಗಳನ್ನು ರಚಿಸಿದ್ದಾರೆ. ಒಂದು ಕಾಲದಲ್ಲಿ ಕನ್ನಡದಲ್ಲಿ ಉಷಾ ನವರತ್ನರಾಮ್ ಅವರ ಕಥೆ ಕಾದಂಬರಿಗಳನ್ನು ಪ್ರಕಟಿಸದ ವಾರ ಹಾಗೂ ಮಾಸಿಕ ಪತ್ರಿಕೆಗಳೇ ಇರಲಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಆ ಸಂದರ್ಭದಲ್ಲಿ ಅಪಾರ ಓದುಗರ ಮೆಚ್ಚುಗೆಗೆ ಪಾತ್ರರಾಗಿದ್ದ ಇವರನ್ನು ಕಾದಂಬರಿಗಳ ಕಾರ್ಖಾನೆ ಎಂದು ಕರೆದದ್ದೂ ಉಂಟು. ಪತ್ರಿಕೆಗಳ ಅಗತ್ಯಕ್ಕೆ ತಕ್ಕಂತೆ ಓದುಗರನ್ನು ಆಕರ್ಷಿಸಬಲ್ಲ ಸೆಳೆತ ಇವರ ಬರೆಹದ ಶೈಲಿಯಾಗಿತ್ತು. ಹೊಂಬಿಸಿಲು ಇವರ ಮೊದಲ ಕಾದಂಬರಿ (1970). ಯೌವನದ ಹೊನಲಲ್ಲಿ, ಬಂಧನ, ಹ್ಯಾಪಿ ಬರ್ತಡೇ, ಹಕ್ಕಿ ಹಾರುತಿದೆ, ಹೃದಯ ಮಿಲನ, ದೋಣಿ ಸಾಗಲಿ ಮುಂದೆ ಹೋಗಲಿ, ಒಲವಿನ ಬದುಕು, ಕಂಡು ಕಂಡು ನೀ ಎನ್ನ, ಕರುಣಾಳು ಬಾ ಬೆಳಕೆ, ಇಲ್ಲೇ ಸ್ವರ್ಗ, ಹೊಸರಾಗ – ಇವು ಇವರ ಕೆಲವು ಕಾದಂಬರಿಗಳು. ಎಲ್ಲರಿಗೂ ಸುಲಭವಾಗಿ ದಕ್ಕಬಲ್ಲ ಪ್ರೀತಿಯ ಕನಸುಗಳನ್ನು, ಒಂದು ರೀತಿಯ ಭ್ರಾಮಕ ಜಗತ್ತನ್ನು ಇವರು ತಮ್ಮ ಕಾದಂಬರಿಗಳಲ್ಲಿ ನಿರ್ಮಿಸಿದರು. ಪ್ರೀತಿಯ ಕನಸನ್ನು ಕಾಣುವ ಹದಿಹರೆಯದ ಎಳೆಯರು, ಯುವಕ ಯುವತಿಯರ ಒಂದು ಹೊಸವರ್ಗವೇ ಇಲ್ಲಿ ನಿರ್ಮಿತಗೊಂಡಿತ್ತು. ಪ್ರೇಮ, ಕಲ್ಪನೆಯ ಪ್ರೇಮ ಇವರ ಕಾದಂಬರಿಗಳ ಜಗತ್ತು; ಕೇಂದ್ರ ಬಿಂದು. ನಗರ ಕೇಂದ್ರಿತ ಮಧ್ಯಮ ವರ್ಗದ ಹಗಲುಗನಸಿನ ಬದುಕು ಭಾವನೆಗಳಿಗೆ ಇವರು ತಮ್ಮ ಕಾದಂಬರಿಗಳಲ್ಲಿ ಕಾಮನಬಿಲ್ಲು ರಚಿಸಿದರು. ಸಾಮಾಜಿಕ ಪಿಡುಗಾಗಿರುವ ವೇಶ್ಯಾವೃತ್ತಿ ಕುರಿತ ಹಗಲುಗನಸು, ಕ್ಯಾಬರೆ ನರ್ತಕಿಯೊಬ್ಬಳ ಶೋಚನೀಯ ಬದುಕಿನ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂಬ ಕಾದಂಬರಿಗಳು ಇವರ ವಿಭಿನ್ನ ಆಲೋಚನೆಯನ್ನು ಮುಂದಿಡುತ್ತವೆ. ಅಪಾರ ಓದುಗರ ಮೆಚ್ಚುಗೆ, ಪ್ರೀತಿಗೆ ಪಾತ್ರವಾಗಿದ್ದ ಹೊಂಬಿಸಿಲು, ಬಂಧನ ಎಂಬ ಕಾದಂಬರಿಗಳು ಚಲನಚಿತ್ರಗಳಾಗಿಯೂ ಇವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟಿವೆ.

ಇವರು ಕಾದಂಬರಿಕಾರ್ತಿಯಾಗಿ ಅಷ್ಟೇ ಅಲ್ಲದೆ ಪತ್ರಿಕೋದ್ಯಮದಲ್ಲೂ ಅನುಭವ ಪಡೆದಿದ್ದರು. ಕೆಲಕಾಲ ಗೆಳತಿ ಎಂಬ ಪಾಕ್ಷಿಕ ಪತ್ರಿಕೆಯ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದ್ದರು. ಸೌಂದರ್ಯದ ಬಗ್ಗೆ, ಪ್ರಾಣಿಗಳ ಬಗ್ಗೆ ವಿಶೇಷ ಆಸಕ್ತಿ, ಪ್ರೀತಿ ಇಟ್ಟುಕೊಂಡಿದ್ದ ಇವರು ಸೌಂದರ್ಯ ಸಂಕಿರಣ, ನನ್ನಮರಿ ಮುದ್ದುಮರಿ ಹಾಗೂ ಪಾಕಶಾಸ್ತ್ರ ಕುರಿತಂತೆ ಸವಿ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಹಲವು ಪ್ರಶಸ್ತಿಗಳು ದೊರೆಕಿವೆ. ಅತ್ಯುತ್ತಮ ಲೇಖಕಿ ಪ್ರಶಸ್ತಿ (1975), ಅತ್ಯುತ್ತಮ ಉಪಾಧ್ಯಾಯಿನಿ ಪ್ರಶಸ್ತಿ (1975), ರಾಜ್ಯೋತ್ಸವ ಪ್ರಶಸ್ತಿ (1982) –ಇವು ಕೆಲವು ಮುಖ್ಯ ಪ್ರಶಸ್ತಿಗಳು. ಇವರು 2000 ಅಕ್ಟೋಬರ್ 1ರಂದು ನಿಧನ ಹೊಂದಿದರು. *

**ಉಷಾ ಸುಂದರರಾಜ್:** 1942–. ಪ್ರಸಿದ್ಧ ಟೇಬಲ್ ಟೆನ್ನಿಸ್ ಆಟಗಾರ್ತಿ. ಅರ್ಜುನ ಪ್ರಶಸ್ತಿ ವಿಜೇತರು. 1942 ಮಾರ್ಚ್ 1ರಂದು ಬೆಂಗಳೂರಿನಲ್ಲಿ ಜನಿಸಿದರು. ಮಲ್ಲೇಶ್ವರಂ ಹೆಣ್ಣು ಮಕ್ಕಳ ಪ್ರೌಢಶಾಲೆ, ಮೌಂಟ್ ಕಾರ್ಮಲ್ ಕಾಲೇಜು ಹಾಗೂ ಸೆಂಟ್ರಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದರು. ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1961ರಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿ ರೂಪುಗೊಂಡು ಸತತ 7 ವರ್ಷಗಳ ತನಕ ರಾಷ್ಟ್ರೀಯ ಅಗ್ರ ಶ್ರೇಯಾಂಕ ಪಟ್ಟಿಯಲ್ಲಿ ತಮ್ಮ ಹೆಸರನ್ನು ಉಳಿಸಿಕೊಂಡಿದ್ದರು. ಇದರಲ್ಲಿ ಸತತ 4 ಬಾರಿ ರಾಷ್ಟ್ರೀಯ ಅಗ್ರ ಶ್ರೇಯಾಂಕ ಪಟ್ಟಿಯಲ್ಲಿ 2ನೆಯ ಸ್ಥಾನವನ್ನು ಪಡೆದಿದ್ದರು. 5 ಬಾರಿ ಅಗ್ರ ಶ್ರೇಯಾಂಕ ಪಟ್ಟಿಯಲ್ಲಿ ಮೊದಲಿಗರಾಗಿದ್ದರು. ಕರ್ನಾಟಕ ರಾಜ್ಯದ ಚಾಂಪಿಯನ್ನಾಗಿ ರಾಜ್ಯ ರ್‍ಯಾಂಕಿಂಗ್ ಪ್ರಶಸ್ತಿಯನ್ನು ಸತತ 21 ವರ್ಷಗಳ ಕಾಲ ತಮ್ಮ ಹೆಸರಿನಲ್ಲಿ ಉಳಿಸಿಕೊಂಡಿದ್ದು ದಾಖಲೆಯಾಗಿದೆ. ಇವರ ಈ ಸಾಧನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಇವರು ಕರ್ನಾಟಕ ರಾಜ್ಯದ ಮಹಿಳಾ ತಂಡದ ನಾಯಕಿಯಾಗಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಭಾಗವಹಿಸಿದ್ದಾರೆ. ಇವರು ಅನೇಕ ಬಾರಿ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಆಟಗಾರರಾಗಿ ಮತ್ತು ತಂಡದ ನಾಯಕರಾಗಿ ಭಾರತವನ್ನು ಮುನ್ನಡೆಸಿದ್ದಾರೆ. ಏಷ್ಯನ್ ಚಾಂಪಿಯನ್ ಷಿಪ್, ವರ್ಲ್ಡ್ ಚಾಂಪಿಯನ್‌ಷಿಪ್, ಕಾಮನ್‌ವೆಲ್ತ್ ಚಾಂಪಿಯನ್ ಷಿಪ್–ಇವು ಕೆಲವು ಮುಖ್ಯ ಕ್ರೀಡಾಕೂಟಗಳು. ಕೀನ್ಯ ಹಾಗೂ ಉಗಾಂಡಗಳಿಗೆ ಭಾರತ ತಂಡ ಪ್ರವಾಸ ಕೈಗೊಂಡಾಗ ಇವರು ನಾಯಕಿಯಾಗಿದ್ದರು. ಇವರು ತರಬೇತುದಾರರಾಗಿಯೂ ಉತ್ತಮ ಕೆಲಸ ನಿರ್ವಹಿಸಿದ್ದಾರೆ. ಭಾರತೀಯ ಹೆಣ್ಣು ಮಕ್ಕಳ ತಂಡ ಜಪಾನ್ ಪ್ರವಾಸ ಕೈಗೊಂಡಾಗ ಮತ್ತು ಭಾರತೀಯ ಮಹಿಳೆಯರ ತಂಡ ಸಿಯೋಲ್ ಏಷ್ಯನ್ ಗೇಮ್ಸ್ ಹಾಗೂ ಚೀನದ ಏಷ್ಯನ್ ಚಾಂಪಿಯನ್‌ಷಿಪ್ ಪಂದ್ಯಾಟಗಳಲ್ಲಿ ಭಾಗವಹಿಸಿದ ಸಂದರ್ಭಗಳು ಪ್ರಮುಖವಾದವು.

ಭಾರತೀಯ ಟೇಬಲ್ ಟೆನ್ನಿಸ್ ಫೆಡರೇಷನ್ ಅನೇಕ ಸಂದರ್ಭಗಳಲ್ಲಿ ಇವರ ತಾಂತ್ರಿಕ ಪರಿಣತಿಯ ಅನುಭವದ ಪ್ರಯೋಜನ ಪಡೆದುಕೊಂಡಿದೆ. ಇವರು ಭಾರತದ ಪ್ರತಿನಿಧಿಯಾಗಿ ಹಿರೋಷಿಮ ಮತ್ತು ನಾಗಸಾಕಿ ಹಾಗೂ ಒಸಾಕದಲ್ಲಿ ನಡೆದ ಮಹಿಳೆಯರ ಟೇಬಲ್ ಟೆನ್ನಿಸ್ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಇವರು ಕರ್ನಾಟಕದ ಪ್ರತಿಷ್ಠಿತ ಕ್ರೀಡಾಪುರಸ್ಕಾರವಾದ ಏಕಲವ್ಯ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿದ್ದರು. 1996ರ ಅಟ್ಲಾಂಟಾ ಒಲಿಂಪಿಕ್ಸ್‌ಗೆ ಕರ್ನಾಟಕದ ಪ್ರತಿನಿಧಿಯಾಗಿ ಹೋಗಿದ್ದರು. ಇವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ. 1966ರಲ್ಲಿ ಕರ್ನಾಟಕದ ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ ದೊರೆತಿದೆ. ಇದೇ ವರ್ಷ ಭಾರತ ಸರ್ಕಾರ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ. ಈ ಪ್ರಶಸ್ತಿ ಪಡೆದ ಮಹಿಳೆಯರಲ್ಲಿ ಇವರೇ ಮೊದಲಿಗರು. (ಎಸ್.ಆರ್.ಯು.)

**ಉಷೆ:** ಬಾಣಾಸುರನ ಮಗಳು. ಶ್ರೀ ಕೃಷ್ಣನ ಮೊಮ್ಮಗನೂ ಪ್ರದ್ಯುಮ್ನನ ಮಗನೂ ಆದ ಅನಿರುದ್ಧನ ಹೆಂಡತಿ. ಒಮ್ಮೆ ನಿದ್ರಿಸುತ್ತಿದ್ದಾಗ ಸ್ವಪ್ನದಲ್ಲಿ ಎಂದೂ ಕಂಡರಿಯದ ಅನಿರುದ್ಧನೊಡನೆ ರಮಿಸಿ ಎಚ್ಚರಗೊಂಡು ಆತನನ್ನು ಎದುರಿನಲ್ಲಿ ಕಾಣದೆ ವೇದನೆಯಿಂದ ಖಿನ್ನಳಾಗಿರುವುದನ್ನು ಸಖಿಯರು ಗಮನಿಸುತ್ತಾರೆ. ಅವರಲ್ಲಿ ಒಬ್ಬಳಾದ ಬಾಣಾಸುರನ ಮಂತ್ರಿ ಕುಂಭಾಂಡನ ಪುತ್ರಿ ಚಿತ್ರಲೇಖೆ ಉಷೆಯನ್ನು ಪ್ರಶ್ನಿಸಿ ಅವಳ ಖಿನ್ನತೆಗೆ ಕಾರಣವಾದ ಸ್ವಪ್ನವೃತ್ತಾಂತವನ್ನು ಕೇಳಿ ತಿಳಿದು ಅವಳ ರಮಣನನ್ನು ಹೇಗಾದರೂ ಎಲ್ಲಿದ್ದರೂ

ಕರೆತರುವುದಾಗಿ ಆಶ್ವಾಸನೆ ನೀಡುತ್ತಾಳೆ. ಬಳಿಕ ದೇವತೆಗಳು ಗಂಧರ್ವರು ಮತ್ತು ರಾಮಕೃಷ್ಣಾದಿಯಾದ ಯದುವಂಶದ ಅರಸರ ಚಿತ್ರಗಳನ್ನು ಬರೆದು ಅವರಲ್ಲಿ ಯಾರೊಡನೆ ರಮಿಸಿದಳೆಂಬುದನ್ನು ತಿಳಿಯಲು ಪ್ರಯತ್ನಿಸಿ ಕೊನೆಯಲ್ಲಿ ಅನಿರುದ್ಧನ ಚಿತ್ರವನ್ನು ಕಂಡು ಉಷೆ ಲಜ್ಜಿತಳಾದುದನ್ನು ಗಮನಿಸಿ ಆತನೇ ಅವಳ ರಮಣನೆಂದು ತಿಳಿಯುತ್ತಾಳೆ. ಬಳಿಕ ಚಿತ್ರಲೇಖೆ ತನ್ನ ಯೋಗಮಹಿಮೆಯಿಂದ ದ್ವಾರಕಾನಗರಿಯಲ್ಲಿ ಸುಖವಾಗಿ ಮಲಗಿದ್ದ ಅನಿರುದ್ಧನನ್ನು ಶೋಣಿತಪುರಕ್ಕೆ ಕರೆತಂದು ಉಷೆಯ ಹತ್ತಿರ ಬಿಡಲು ಅನಿರುದ್ಧನೊಡನೆ ಆಕೆ ಬಹುಕಾಲ ಗೋಪ್ಯವಾಗಿ ಸುಖದಿಂದಿರುತ್ತಾಳೆ. ಕೆಲವು ಕಾಲದ ಮೇಲೆ ಬಾಣಾಸುರನಿಗೆ ಈ ಸಮಾಚಾರ ತಿಳಿದು ಅನಿರುದ್ಧನನ್ನು ಸೆರೆಯಲ್ಲಿಡುತ್ತಾನೆ. ಈ ವಿಚಾರವನ್ನು ತಿಳಿದ ಕೃಷ್ಣ ಬಾಣಾಸುರನೊಡನೆ ಯುದ್ಧ ಮಾಡಿ ಆತನನ್ನು ಸೋಲಿಸಿ ಉಷೆಯನ್ನೂ ಅನಿರುದ್ಧನನ್ನೂ ತನ್ನ ನಗರಿಗೆ ಕರೆದುಕೊಂಡು ಹೋಗುತ್ತಾನೆ. (ಎಸ್.ಎನ್.ಕೆ.)

**ಉಷ್ಟ್ರ ಪಕ್ಷಿ:** ಅತಿ ದೊಡ್ಡ ಪಕ್ಷಿ (ಆಸ್ಟ್ರಿಚ್). ಗಂಡು ಸು. 2.5 ಮೀ ಎತ್ತರವೂ 10 ಕೆಜಿ ತೂಕವೂ ಇರುತ್ತದೆ. ಹೆಣ್ಣು ಸ್ವಲ್ಪ ಕಿರಿಯದು. ಹಾರಲಾಗದ ಪಕ್ಷಿ ಇದು. ಆದರೆ ಬಲು ವೇಗವಾಗಿ ಓಡಬಲ್ಲುದು. ವಾಸಸ್ಥಳ ಸಾಮಾನ್ಯವಾಗಿ ಅರೇಬಿಯ ಮತ್ತು ಆಫ್ರಿಕ



ದೇಶಗಳ ಮರಳು ಕಾಡುಗಳು. ನಿಯರ‍್ನಿತೀಸ್ ಉಪವರ್ಗದ ಈ ಪ್ರಾಣಿಯ ಶಾಸ್ತ್ರನಾಮ ಸ್ಟ್ರುಥಿಯೋ ಕ್ಯಾಮೆಲಸ್. ಉಷ್ಟ್ರಪಕ್ಷಿಯ ರೆಕ್ಕೆಗಳಲ್ಲಿ ಹಲವು ಟೊಳ್ಳುಕಾಂಡದ ದಪ್ಪ ಗರಿಗಳಿವೆ. ತಲೆ ಸಣ್ಣದು. ಕತ್ತು ಉದ್ದ, ಎರಡರ ಮೇಲೂ ಗರಿಗಳ ಹೊದಿಕೆಯಿಲ್ಲ. ಅಗಲವಾದ ಚಪ್ಪಟೆಯಾದ ಕೊಕ್ಕೂ ಉದ್ದವೂ ಬಲವೂ ಆದ ಕಾಲುಗಳನ್ನೂ ಹೊಂದಿದೆ. ಇವಕ್ಕೂ ಗರಿಗಳ ಹೊದಿಕೆಯಿಲ್ಲ. ಎರಡು ಕಾಲುಬೆರಳುಗಳು ಮಾತ್ರ ಇವೆ. ಕೆಳಭಾಗದಲ್ಲಿ ಮೆತ್ತೆ ಇದೆ. ಒಂದು ಕಾಲುಬೆರಳು ಮತ್ತೊಂದಕ್ಕಿಂತ ಉದ್ದವಾಗಿದೆ. ಇವನ್ನು ಸರ್ವಭಕ್ಷಕಗಳೆಂದು ಕರೆದರೂ ತಿನ್ನುವುದು ಸಾಮಾನ್ಯವಾಗಿ ಗಿಡಗಂಟೆಗಳನ್ನೇ. ಬಹುಪತ್ನಿತ್ವ ಹೆಚ್ಚು. ಅನೇಕ ಹೆಣ್ಣುಗಳು ಒಂದು ಗಂಡು ಇರುವ ಗುಂಪುಗಳಲ್ಲಿ ವಾಸಿಸುವುದು ಪದ್ಧತಿ. ಸಾಮಾನ್ಯವಾಗಿ ಒಂದು ಹೆಣ್ಣು ಹಕ್ಕಿ ಒಂದು ಸಲಕ್ಕೆ ಒಂದು ಮೊಟ್ಟೆ ಇಡುತ್ತದೆ. ಇದನ್ನು ಗಂಡು ಮೊದಲೇ ತೋಡಿದ ಬಿಲಗಳಲ್ಲಿ ಅಡಗಿಸುತ್ತದೆ. ಮೊಟ್ಟೆಗಳಿಗೆ ಕಾವುಕೊಟ್ಟು ಕಾಪಾಡುವ ಕೆಲಸವನ್ನು ಎರಡೂ ಹಕ್ಕಿಗಳು ನಿರ್ವಹಿಸುತ್ತವೆ. ಮರಿ ಹುಟ್ಟಿದಾಗಲೇ ಅದಕ್ಕೆ ಗರಿಗಳ ಹೊದಿಕೆ ಇರುತ್ತದೆ. ಅದು ಸ್ವತಂತ್ರವಾಗಿ ತಿರುಗಾಡಿ ತಾಯಿತಂದೆಗಳ ಸಹಾಯವಿಲ್ಲದೆ ಆಹಾರವನ್ನು ಹುಡುಕಿಕೊಳ್ಳಬಲ್ಲುದು. ಗಂಡು ಹಕ್ಕಿಗಳಿಗೆ ಮಾಂಸಯುತವಾದ ಶಿಶ್ನವಿದೆ. ಹಾಗೆ ಹೆಣ್ಣುಹಕ್ಕಿಗಳಲ್ಲಿ ಹೆಂಬುಲ್ಲ(ಕ್ಲಿಟೋರಿಸ್) ಉಂಟು. ಇವು ವಿಕಾಸದಲ್ಲಿ ಮೀಸೋಜೋಯಿಕ್ ಯುಗದ ಅಂತ್ಯದಲ್ಲಿ ಕಾಣಿಸಿಕೊಂಡವು. (ಹೆಚ್.ಬಿ.ಡಿ)

**ಉಷ್ಣ:** ಒಂದು ವ್ಯವಸ್ಥೆಯಲ್ಲಿನ ಅಸಂಖ್ಯಾತ ಅಣುಗಳ ಚಲನೆಯ ಸಮಗ್ರ ಪರಿಣಾಮವಾಗಿ ಪ್ರಕಟವಾಗುವ ಶಕ್ತಿಯ ಒಂದು ರೂಪ (ಹೀಟ್). ಉಷ್ಣದ ಅಳತೆ (ಎಂದರೆ ಬಿಸಿಯ ಮಟ್ಟ) ಉಷ್ಣತೆ (ಟೆಂಪರೇಚರ್); ಉಷ್ಣತಾವ್ಯತ್ಯಾಸವಿರುವ ಎರಡು ವ್ಯವಸ್ಥೆಗಳಲ್ಲಿ ಒಂದರಿಂದ ಇನ್ನೊಂದಕ್ಕೆ ವರ್ಗವಾಗುವ ಶಕ್ತಿಯೇ ಉಷ್ಣ. ಈ ವರ್ಗಾವಣೆ ಅಧಿಕ ಉಷ್ಣತೆಯ ಉಗಮದಿಂದ ಕಡಿಮೆ ಉಷ್ಣತೆಯ ಗ್ರಾಹಕದೆಡೆಗೆ ನಡೆಯುವುದು. ಉಷ್ಣಶಕ್ತಿಯ ಈ ಚಲನೆಗೆ ಉಷ್ಣವಹನವೆಂದು ಹೆಸರು.

**ಉಷ್ಣದ ಮೂಲಗಳು:** ಮನುಷ್ಯ ಕಂಡುಹಿಡಿದ ಉಷ್ಣದ ಪ್ರಥಮ ಮೂಲ ಬೆಂಕಿ. ಚಳಿ ಹಾಗೂ ಕಾಡುಪ್ರಾಣಿಗಳಿಂದ ರಕ್ಷಣೆ; ಆಹಾರವನ್ನು ಬೇಯಿಸುವುದು; ಲೋಹೋಪಕರಣಗಳ ಹಾಗೂ ಆಯುಧಗಳ ತಯಾರಿಕೆ ಇತ್ಯಾದಿ ಕೆಲಸಗಳಲ್ಲಿ ಅವನಿಗೆ ಬೆಂಕಿಯ ಉಪಯೋಗವಿತ್ತು. ಉಷ್ಣಶಕ್ತಿಯ ಉತ್ಪಾದನೆ ಹಾಗೂ ಉದ್ದೇಶಪೂರಿತ ಬಳಕೆ ಇವುಗಳ ಪರಿಣಾಮವಾಗಿ ನಾಗರಿಕತೆ ಬೆಳೆಯುತ್ತ ಬಂದಿದೆ. ಮನುಷ್ಯನಿಗೆ ಉಷ್ಣದ ನೈಸರ್ಗಿಕ ಮೂಲ ಸೂರ್ಯ. ಖನಿಜವಸ್ತುಗಳಾದ ಕಲ್ಲಿದ್ದಲು, ಪೆಟ್ರೋಲುಗಳೂ ಕಟ್ಟಿಗೆ ಸೊಪ್ಪುಸದೆಗಳೂ ಉಷ್ಣಮೂಲಗಳೇ ಆದರೂ ಅಂತಿಮವಾಗಿ ಅವು ಸೂರ್ಯೋಷ್ಣದ ಸಂಗ್ರಾಹಕಗಳೇ ಆಗಿವೆ. ಯಾಂತ್ರಿಕಶಕ್ತಿ ಉಷ್ಣಶಕ್ತಿಯಾಗಿ ಮಾರ್ಪಡುವುದನ್ನು ಸುಲಭವಾಗಿ ಗಮನಿಸಬಹುದು. ವಸ್ತುಗಳನ್ನು ಪರಸ್ಪರ ಉಜ್ಜಿದಾಗ (ಉದಾಹರಣೆಗೆ ಎರಡು ಮರದ ತುಂಡುಗಳನ್ನು ಉಜ್ಜಿದಾಗ ಇಲ್ಲವೇ ನಮ್ಮ ಅಂಗೈಗಳನ್ನು ಉಜ್ಜಿಕೊಂಡಾಗ), ಸುತ್ತಿಗೆಯಿಂದ ಅಡಿಗಲ್ಲಿನ ಮೇಲೆ ಹೊಡೆದಾಗ ಉಷ್ಣ ಉತ್ಪಾದನೆ ಆಗುವುದೆಂಬುದು ತಿಳಿದಿದೆ. ಇನ್ನು ಜಡವಸ್ತುಗಳ ಪರಮಾಣುಗಳನ್ನು ವಿದಳನಗೊಳಿಸಿದಾಗ ಇಲ್ಲವೆ ಹಗುರವಾದ ವಸ್ತುಗಳನ್ನು ಸಂಲಯನಗೊಳಿಸಿದಾಗ ಸಹ ಉಷ್ಣ ಉತ್ಪತ್ತಿಯಾಗುವುದು.

**ಸಿದ್ಧಾಂತಗಳು:** ಉಷ್ಣದ ಗುಣಲಕ್ಷಣಗಳನ್ನೂ ವರ್ತನೆಯನ್ನೂ ಅನುಸರಿಸಿ ಎರಡು ಭಿನ್ನ ಸಿದ್ಧಾಂತಗಳನ್ನು ಮುಂದಿಡಲಾಗಿದೆ—ಕೆಲೋರಿಕ್ ಸಿದ್ಧಾಂತ, ಚಲನ ಸಿದ್ಧಾಂತ.

ಕೆಲೊರಿಕ್ ಸಿದ್ಧಾಂತ: ಉಷ್ಣ ಒಂದು ತರಲ (ಫ್ಲೂಯಿಡ್), ಇದು ಅತಿಸೂಕ್ಷ್ಮ, ತೂಕರಹಿತ, ನಾಶರಹಿತ. ಆದರೆ ವೇಗಸಹಿತವಸ್ತು ಎಂಬ ಪರಿಕಲ್ಪನೆಯಿಂದ ಈ ಸಿದ್ಧಾಂತವನ್ನು ಹೆಣೆದಿದ್ದಾರೆ. ಒಂದು ವಸ್ತುವನ್ನು ಕಾಯಿಸುವುದು ಎಂದರೆ ಉಷ್ಣತರಲದ ಅತಿಸೂಕ್ಷ್ಮ ಕಣಗಳಿಂದ ಅನಂತಸೂಕ್ಷ್ಮ ಕಣಗಳ ನಡುವಿನ ಎಲ್ಲ ಪ್ರದೇಶದ ಆಕ್ರಮಣ ಎಂದು ವಿವರಿಸಿದರು. ಅದೇ ರೀತಿ ವಸ್ತುವನ್ನು ತಣ್ಣಗಾಗಿಸಿದಾಗ ಉಷ್ಣ ತರಲದ ಕಣಗಳು ಆಕ್ರಮಿತ ಪ್ರದೇಶಗಳಿಂದ ಹಿಂದೆ ಸರಿಯುವುವು. ಮಂಜುಗೆಡ್ಡೆ ನೀರಾಗುವುದು ಮೊದಲಿನ ಕಾರಣದಿಂದಾದರೆ ನೀರು ಮಂಜುಗೆಡ್ಡೆಯಾಗುವುದು ಎರಡನೆಯ ಕಾರಣದಿಂದ ಎಂಬ ವಿವರಣೆ ತರ್ಕಕ್ಕೆ ಸಮಾಧಾನ ನೀಡಿತು. ಆದರೆ ಇಲ್ಲೇ ಕೆಲೊರಿಕ್ ಸಿದ್ಧಾಂತ ಒಂದು ಹೊಸ ಪರಿಸ್ಥಿತಿ ಎದುರಿಸಬೇಕಾಯಿತು—ಮಂಜುಗಡ್ಡೆಯ ಉಷ್ಣತೆಯೂ 0° ಸೆ. ಅದೇ ಪ್ರಕಾರ ಅದರಿಂದ ದೊರೆತ ನೀರಿನ ಉಷ್ಣತೆಯೂ 0° ಸೆ. ಅದೇ ಪ್ರಕಾರ ಅದರಿಂದ ದೊರೆತ ನೀರಿನ ಉಷ್ಣತೆಯೂ ಅದರಿಂದ ದೊರೆತ ಆವಿಯ ಉಷ್ಣತೆಯೂ ಸಮಾನವಾಗಿರುವುವು (100° ಸೆ.). ಹಾಗಾದರೆ ಈ ಘಟನೆಗಳಲ್ಲಿ ವಸ್ತುವನ್ನು ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಪರಿವರ್ತಿಸಲು ಒದಗಿಸಿದ ಉಷ್ಣದ (ಕೆಲೋರಿಕ್ಕಿನ) ಗತಿ ಏನಾಯಿತು? ಗುಪ್ತೋಷ್ಣ (ಲೇಟೆಂಟ್ ಹೀಟ್) ಎಂಬ ಪರಿಕಲ್ಪನೆ ಕೆಲೋರಿಕ್ ಸಿದ್ಧಾಂತದ ವ್ಯಾಪ್ತಿಯಲ್ಲಿರಲಿಲ್ಲ. ಇದು 19ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಪರಿಸ್ಥಿತಿ. ಅದೇ ವೇಳೆಯಲ್ಲಿ ಕೌಂಟ್ ರಮ್‌ಫರ್ಡ್(1753–1814) ಮಾಡಿದ ಒಂದು ಪ್ರಯೋಗ ಕೆಲೊರಿಕ್ ಸಿದ್ಧಾಂತವನ್ನು ಪೂರ್ಣವಾಗಿ ಸಮಾಧಿಮಾಡಿತು. ಅವನು ಲೋಹದ ಹಾಳೆಗಳನ್ನು ಉಕ್ಕಿನ ಅಲಗಿನ ಬೈರಿಗೆಯಿಂದ ಕೊರೆಯುತ್ತಿದ್ದ. ಈ ಕ್ರಿಯೆಯಲ್ಲಿ ಅಪಾರ ಉಷ್ಣ ಜನಿಸುವುದನ್ನು ಕಂಡ. ಅವನ ಕೆಲಸ ಕೋಣೆಯ ಹಿತಕರ ಉಷ್ಣತೆಯಲ್ಲೇ ನಡೆದಿದ್ದರೂ ಇಷ್ಟೊಂದು ಉಷ್ಣ ಎಲ್ಲಿಂದ ಬಂದಿರಬಹುದು? ಉಷ್ಣ ತರಲವಾಗಿದ್ದು ದ್ರವ್ಯದ (ಮ್ಯಾಟರ್) ಒಂದು ರೂಪವಾಗಿದ್ದಿದ್ದರೆ ಅದು ಕೊರೆತದಲ್ಲಿ ರಚಿತವಾಯಿತು ಎಂಬ ಊಹೆ ದೋಷಯುಕ್ತವೆಂದೆನಿಸಿತು. ದ್ರವವನ್ನು ರಚಿಸಲೂ ಸಾಧ್ಯವಿಲ್ಲ, ನಾಶಗೊಳಿಸಲೂ ಸಾಧ್ಯವಿಲ್ಲ ಎಂಬ ನಿಯಮವನ್ನು ಅಂದರೆ ದ್ರವ್ಯತ್ವದ ನಿತ್ಯತ್ವದ ನಿಯಮವನ್ನು—ವಿಜ್ಞಾನಿಗಳು ಆ ಮೊದಲೇ ಅಂಗೀಕರಿಸಿದ್ದರು. ಈ ನಿಯಮಕ್ಕೆ ರಮ್‌ಫರ್ಡನ ಪ್ರಯೋಗದಿಂದ ಲಭಿಸಿದ ಅನುಭವ ವ್ಯತಿರಿಕ್ತವಾಗಿತ್ತು. ಆದ್ದರಿಂದ ಉಷ್ಣ ತರಲವಲ್ಲ, ಅದು ವಸ್ತುವಲ್ಲ. ಕೆಲೊರಿಕ್ ಸಿದ್ಧಾಂತ ಸಾಧುವಲ್ಲ ಎಂದು ವಿಜ್ಞಾನಿಗಳು ತೀರ್ಮಾನಿಸಿದರು.

**ಚಲನಶಕ್ತಿ ಸಿದ್ಧಾಂತ:** ಇದರ ಪ್ರಕಾರ ಯಾಂತ್ರಿಕಶಕ್ತಿ ಮತ್ತು ಅದನ್ನು ಉಪಯೋಗಿಸುವುದರಿಂದ ಉದ್ಭವವಾಗುವ ಉಷ್ಣ ಇವುಗಳಲ್ಲಿ ಸಂಬಂಧವಿದೆಯೆಂದು ಪ್ರಯೋಗಗಳು ತೋರಿಸಿಕೊಟ್ಟಿವೆ. ಇದಲ್ಲದೆ ವಿಶಿಷ್ಟ ಪರಿಮಾಣದ ಯಾಂತ್ರಿಕಶಕ್ತಿಯನ್ನು ಉಪಯೋಗಿಸಿದಾಗ ಅದಕ್ಕನುಗುಣವಾಗಿ ಉಷ್ಣ ನಿರ್ಮಾಣವಾಗುವುದೆಂದು ಅಥವಾ ಅದೇ ಪ್ರಕಾರವಾಗಿ ಇದೇ ಉಷ್ಣದಿಂದ ಯಾಂತ್ರಿಕಶಕ್ತಿಯನ್ನು ಉತ್ಪಾದಿಸಿದಾಗ ಮೊದಲಿನಷ್ಟೇ ಶಕ್ತಿ ಉದ್ಭವಿಸುವುದೆಂದು ಕಂಡುಬಂದಿದೆ. ಯಾಂತ್ರಿಕಶಕ್ತಿ ಮತ್ತು ಉಷ್ಣ ಇವುಗಳ ಸಂಬಂಧ ಸ್ಥಾಪಿಸಲು ಬೇರೆ ಬೇರೆ ಪ್ರಯೋಗಗಳನ್ನು ಮಾಡಲಾಯಿತು. ಇವುಗಳಲ್ಲಿಯ ಎರಡು ಪ್ರಯೋಗಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ. ಮೊದಲಿಗೆ ಜೌಲ್ ಎಂಬ ವಿಜ್ಞಾನಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಉಷ್ಣವನ್ನು ಪಡೆದು ಯಾಂತ್ರಿಕ ಶಕ್ತಿ–ಉಷ್ಣಗಳ ನಡುವಿನ ಸಂಬಂಧವನ್ನು ಎಂದರೆ ಎಷ್ಟು ಯಾಂತ್ರಿಕ ಶಕ್ತಿಯನ್ನು ಉಪಯೋಗಿಸಿದರೆ ಎಷ್ಟು ಉಷ್ಣ ಉತ್ಪನ್ನವಾಗುವುದೆಂಬುದನ್ನು ನಿರ್ಧರಿಸಿದ (1840). ಇನ್ನೊಂದು ಪ್ರಯೋಗದಲ್ಲಿ ರಾಟೆಯಿಂದ ತೂಗುಬಿಟ್ಟ

ತೂಕದ ಕಲ್ಲುಗಳು ನೀರಿನಲ್ಲಿ ಇರಿಸಿದ ಹುಟ್ಟಿನಾಕಾರದ ಸಲಕರಣೆಯನ್ನು ತಿರುಗಿಸುವಂತೆ ಮಾಡಿ ಇಲ್ಲಿ ಉತ್ಪನ್ನವಾದ ಉಷ್ಣ ಮತ್ತು ಇದನ್ನು ದೊರಕಿಸಲು ವ್ಯಯಿಸಿದ ಯಾಂತ್ರಿಕಶಕ್ತಿ ಇವನ್ನು ತಿಳಿದು ಯಾಂತ್ರಿಕಶಕ್ತಿ–ಉಷ್ಣಗಳೊಳಗಿನ ಸಂಬಂಧವನ್ನು ಕಂಡುಹಿಡಿಯಲಾಯಿತು. ಇಂಥ ಪ್ರಯೋಗಗಳ ಫಲಿತಾಂಶಗಳು ಒಂದಕ್ಕೊಂದು ಪೂರಕವಾಗಿದ್ದುದರಿಂದ ಚಲನಶಕ್ತಿ ಸಿದ್ಧಾಂತ ಗ್ರಾಹ್ಯವೆನ್ನಿಸಿತು.

**ಉಷ್ಣವರ್ಗಾವಣೆ:** ಉಷ್ಣ ಚಲನಶಕ್ತಿಯ ಒಂದು ರೂಪ, ಇದರ ವರ್ಗಾವಣೆ ಮೂರು ವಿಧಗಳಲ್ಲಿ ನಡೆಯುತ್ತದೆ.–ವಹನ (ಕಂಡಕ್ಷನ್), ನಯನ (ಕನ್ವೆಕ್ಷನ್), ವಿಕಿರಣ (ರೇಡಿಯೇಷನ್). ಭಿನ್ನ ಉಷ್ಣತೆಗಳ ನಡುವೆ ಮಾತ್ರ ಈ ವರ್ಗಾವಣೆ ಸಾಧ್ಯ. ಚಲನೆಯ ದಿಶೆ ಅಧಿಕ ಉಷ್ಣತೆಯ ಉಗಮದಿಂದ ಕಡಿಮೆ ಉಷ್ಣತೆಯ ಗ್ರಾಹಕದೆಡೆಗೆ.

ವಹನ: ಪರಮಾಣುಗಳ ಅಥವಾ ಅಣುಗಳ ಅಂತರಕ್ರಿಯೆಗಳಿಂದ ಉಷ್ಣವಹನ ನಡೆಯುತ್ತದೆ. ಉಷ್ಣ ಮೂಲದ ಅತಿನಿಕಟದಲ್ಲಿರುವ ವಸ್ತುವಿನ ಅಣುಗಳು ಹೆಚ್ಚು ಶಕ್ತಿಯುತವಾಗಿ ಕಂಪಿಸುತ್ತವೆ. ಇದರಿಂದ ನೆರೆ ಅಣುಗಳೊಂದಿಗೆ ತಾಕಲಾಟಗಳು (ಕೊಲಿಷನ್ಸ್) ಹೆಚ್ಚಿ ಅವೂ ಕಂಪಿಸತೊಡಗುವುವು. ಹೀಗೆ ಕಂಪನಗಳ ಪರಂಪರಯೇ ಉಷ್ಣಮೂಲದಿಂದ ಆರಂಭಿಸಿ ಮಾಧ್ಯಮದ ಮೂಲಕ ಮುಂದೆ ಮುಂದೆ ಸಾಗುತ್ತದೆ. ಇಂಥ ಕಂಪನಗಳಲ್ಲಿ ಯಾವ ಅಣುವೂ ತನ್ನ ಮೂಲಸ್ಥಾನದಿಂದ ವಿಚಲಿತವಾಗುವುದಿಲ್ಲ: ಬದಲು, ಅದರ ಮೂಲಸ್ಥಾನವನ್ನು ಕೇಂದ್ರವಾಗಿಟ್ಟು ಕಂಪಿಸುತ್ತದೆ. ಆದ್ದರಿಂದ ಉಷ್ಣವಹನದಲ್ಲಿ ಮಾಧ್ಯಮ ವಸ್ತುವಿನ ಅಣುಗಳ ಸ್ಥಾನಗಳು ಬದಲಾಗುವುದಿಲ್ಲ; ಆದರೆ ಉಷ್ಣ ಮಾತ್ರ ವರ್ಗವಾಗುತ್ತಲೇ ಇರುವುದು. ಲೋಹದ ಸರಳಿನ ಒಂದು ತುದಿಯನ್ನು ಕಾಯಿಸಿದಾಗ ಕ್ರಮೇಣ ಇನ್ನೊಂದು ತುದಿಯೂ ಬೆಚ್ಚಗಾಗಿ ಕಾಯುವುದರ ಕಾರಣ ಉಷ್ಣವಹನ. ಒಂದು ಅಪಾರದರ್ಶಕ ಘನವಸ್ತುವಿನ ಮೂಲಕ ಉಷ್ಣವನ್ನು ವರ್ಗಾಯಿಸಲು ಇರುವ ಏಕೈಕ ವಿಧಾನವೆಂದರೆ ವಹನ. ವಹನತೆ (ಕಂಡಕ್ಟಿವಿಟಿ) ಒಂದೊಂದು ವಸ್ತುವಿನಲ್ಲಿ ಒಂದೊಂದು ತೆರನಾಗಿದೆ—ಲೋಹಗಳಲ್ಲಿ ಇದು ಕನಿಷ್ಠ.

**ನಯನ :** ಒಂದು ತರಲದ (ಫ್ಲೂಯಿಡ್) ಅಣುಗಳ ಬೆರಕೆಯಿಂದ ಉಷ್ಣನಯನ ನಡೆಯುತ್ತದೆ. ಎಂದರೆ ಅಣುಗಳು ಸ್ವತಃ ಚಲಿಸಿ ಉಷ್ಣವನ್ನು ಮಾಧ್ಯಮದಲ್ಲಿ ಹರಡುವ ವಿಧಾನ ನಯನ. ಉದಾಹರಣೆಗೆ ಒಂದು ಪಾತ್ರೆಗೆ ನೀರು ತುಂಬಿಸಿ ಅದನ್ನು ಕಾಯಲು ಬೆಂಕಿಯ ಮೇಲೆ ಇಟ್ಟಾಗ ಪಾತ್ರೆಯ ತಳದಲ್ಲಿರುವ ನೀರಿನ ಅಣುಗಳು ಉಷ್ಣದೊಡನೆ ನಿಕಟಸಂಪರ್ಕ ಪಡೆದು ಕಾದು ಹಗುರವಾಗಿ (ಸಾಂದ್ರತೆ ಕಡಿಮೆಯಾಗಿ) ಮೇಲೆ ಏರಲು ತೊಡಗುವುವು. ಕಾದ ಅಣುಗಳು ಹೀಗೆ ಮೇಲೆ ಸಾಗುವಾಗ ತಣ್ಣಗಿನ ತೂಕದ (ಸಾಂದ್ರತೆ ಹೆಚ್ಚು) ಅಣುಗಳು ತಳದೆಡೆಗೆ ಇಳಿಯುವುವು. ಮತ್ತೆ ಮೊದಲಿನ ಕ್ರಿಯೆಯ ಪುನರಾವರ್ತನೆ. ಉಷ್ಣವರ್ಗಾವಣೆ ಇಲ್ಲಿ ನಡೆದದ್ದು ಅಣುಗಳ ಕಂಪನದಿಂದಲ್ಲ, ಚಲನೆಯಿಂದ. ದ್ರವ ಮತ್ತು ಅನಿಲಸ್ಥಿತಿಯಲ್ಲಿರುವ ವಸ್ತುಗಳಲ್ಲಿ ಮಾತ್ರ ನಯನರೀತಿಯ ಉಷ್ಣವರ್ಗಾವಣೆ ನಡೆಯುತ್ತದೆ. ಕೊಠಡಿಯನ್ನು ಬೆಚ್ಚಗಿಡಲು ಅಧಿಕೋಷ್ಣತೆಯಲ್ಲಿರುವ ಉಗಿಯನ್ನು ನಾಳಗಳ ಮೂಲಕ ಕೋಣೆಯಲ್ಲಿ ಹರಿಸುತ್ತಾರೆ. ಆಗ ನಾಳಗಳ ಹೊರಮೈ ಕಾದು ಕೊಠಡಿ ಬೆಚ್ಚಗಾಗುವುದು. ಈ ಕ್ರಿಯೆ ಉಷ್ಣನಯನಕ್ಕೆ ಒಂದು ಉದಾಹರಣೆ. **(ನೋಡಿ– ನಯನ–ಉಷ್ಣತೆ)**.

ವಿಕಿರಣ: ಮಾಧ್ಯಮದಾವಶ್ಯಕತೆಯೇ ಇಲ್ಲದೆ ಉಷ್ಣದ ವರ್ಗಾವಣೆ. ಸೂರ್ಯನಿಂದ ಭೂಮಿಗೆ ಬೆಳಕು ಮುಂತಾದ ಶಕ್ತಿರೂಪಗಳೊಂದಿಗೆ ಉಷ್ಣವೂ ಬರುವುದು ಇದಕ್ಕೊಂದು ನಿದರ್ಶನ. ಇಲ್ಲಿ ಉಷ್ಣ ವಿದ್ಯುತ್ಕಾಂತ ತರಂಗಗಳ ಒಂದು ರೂಪವಾಗಿ ವರ್ತಿಸುತ್ತದೆ; ಅದರ ವೇಗ ಬೆಳಕಿನ ವೇಗಕ್ಕೆ ಸಮ (ಸೆಕೆಂಡಿಗೆ 3 ಲಕ್ಷ ಕಿಮೀ.). ವಹನ ಮತ್ತು ನಯನ ವೇಗಗಳು ಈ ವೇಗಕ್ಕಿಂತ ಅದೆಷ್ಟೋ ಕಡಿಮೆ. ಪ್ರಸರಣದಿಂದ ಚಲಿಸುವ ಉಷ್ಣಶಕ್ತಿ ವಿದ್ಯುತ್ಕಾಂತ ತರಂಗಗಳ ಸಕಲಗುಣಗಳನ್ನು ಪ್ರದರ್ಶಿಸುತ್ತದೆ — ಚಲನೆ ಸರಳರೇಖೆಯಲ್ಲಿ, ವಕ್ರೀಭವನ ಮತ್ತು ಪ್ರತಿಫಲನ (ರಿಫ್ರ್ಯಾಕ್ಷನ್ ಅಂಡ್ ರಿಫ್ಲೆಕ್ಷನ್) ಗುಣಗಳಿವೆ. ಎರಡು ವಸ್ತುಗಳ ನಡುವೆ ಉಷ್ಣತೆಗಳ ಅಂತರ ಇರುವವರೆಗೂ ವಿಕಿರಣ ಕ್ರಿಯೆ ನಡೆದೇ ಇರುತ್ತದೆ.

(ಕೆ.ಎಸ್.ಎಸ್.ಎ.)

**ಉಷ್ಣಗತಿ ವಿಜ್ಞಾನ:** ಉಷ್ಣ ಮತ್ತು ಕಾರ್ಯಗಳಲ್ಲಿರುವ ಪರಸ್ಪರ ಸಂಬಂಧ, ವಿವಿಧ ಪರಿಸ್ಥಿತಿಗಳಲ್ಲಿ ಉಷ್ಣದ ಹರಿವಿನ ಪರಿಣಾಮ ಇವುಗಳ ಅಧ್ಯಯನ ಹರಿವಿನ (ಥರ್ಮೋಡೈನಮಿಕ್ಸ್). ಅವಿಪರ್ಯಯ (ಇರ್ರಿವರ್ಸಿಬಲ್) ಕ್ರಿಯೆಗಳೆಂಬ ವಾಸ್ತವಿಕ ಮತ್ತು ವಿಪರ್ಯಯ (ರಿವರ್ಸಿಬಲ್) ಕ್ರಿಯೆಗಳೆಂಬ ಆದರ್ಶೀಕೃತ ಕ್ರಿಯೆಗಳ ನಡುವೆ ಸ್ಪಷ್ಟ ಮತ್ತು ವ್ಯವಸ್ಥಿತ ವ್ಯತ್ಯಾಸವನ್ನು ಉಷ್ಣಗತಿವಿಜ್ಞಾನ ಮಾಡುವುದು. ನಾಲ್ಕು ಮೂಲಭೂತ ನಿಯಮಗಳನ್ನು ಆಧರಿಸಿ ಇವನ್ನು ವ್ಯವಸ್ಥಿತವಾಗಿ ರೂಪಿಸಲಾಗಿದೆ. ಅವು (ಉಷ್ಣಗತಿವಿಜ್ಞಾನದ) ಶೂನ್ಯ ನಿಯಮ (ಜ಼ೀರೊತ್ ಲಾ) ಮೊದಲನೆಯ ನಿಯಮ. ಎರಡನೆಯ ನಿಯಮ ಮತ್ತು ಮೂರನೆಯ ನಿಯಮ, ಪ್ರತಿಯೊಂದು ನಿಯಮವೂ ಅನುಭವಜನ್ಯ ಭಾವನೆಗಳ ಸಾಮಾನ್ಯೀಕರಣ (ಜನರಲೈಸೇಷನ್). ಆದ್ದರಿಂದ ಇವನ್ನು ಉಷ್ಣಗತಿವಿಜ್ಞಾನದ ಸ್ವತಸ್ಸಿದ್ಧಗಳು (ಆಕ್ಸಿಯಮ್ಸ್) ಎಂದು ಹೇಳಬಹುದು. ಹಾಗಿದ್ದರೂ ಇದರ ಪೂರ್ಣ ವಿಕಾಸ ಇವನ್ನು ಮಾತ್ರ ಅವಲಂಬಿಸಿಲ್ಲವಾದ್ದರಿಂದ ಉಷ್ಣಗತಿವಿಜ್ಞಾನವನ್ನು ಸ್ವತಸ್ಸಿದ್ಧಗಳಿಂದ ಬೆಳೆಸಿದ ಒಂದು ವಿಜ್ಞಾನ ವಿಭಾಗ (ಆಕ್ಸಿಯೋಮ್ಯಾಟಿಕ್ ಸೈನ್ಸ್) ಎನ್ನುವಂತಿಲ್ಲ.

ಉಷ್ಣಗತಿವಿಜ್ಞಾನದ ನಿಯಮಗಳನ್ನು ನೇರವಾಗಿ ಮತ್ತು ಪೂರ್ಣವಾಗಿ ಪ್ರಯೋಗಗಳ ಸಹಾಯದಿಂದ ತಾಳೆ ನೋಡಲು ಸಾಧ್ಯವಿಲ್ಲ. ಕೆಲವು ಪರಿಮಿತ ಪ್ರಯೋಗಗಳನ್ನು ಮಾಡಿ ದೊರೆತ ಫಲಿತಾಂಶಗಳ ಒಟ್ಟಾರೆ ಸಾಮಾನ್ಯೀಕರಣಗಳು ಈ ನಿಯಮಗಳು. ಇವುಗಳ ಅನ್ವಯದಿಂದ ಲಭಿಸಿರುವ ಯಾವ ಪರಿಣಾಮವೂ ಇದುವರೆಗೆ ವಿಫಲವಾಗಿಲ್ಲದಿರುವುದೇ ಈ ದಿಟ್ಟತನದ ಮುನ್ನಡೆಗೆ ದೊರೆತಿರುವ ಯಶಸ್ಸು.

ವಾಸ್ತವಿಕ ಪದಾರ್ಥಗಳ ಉಷ್ಣಗತೀಯ ಗುಣಗಳ ಜ್ಞಾನ ಇಲ್ಲಿ ಆವಶ್ಯಕ. ಇವನ್ನು ನೇರವಾಗಿ ಅಳೆಯಬಹುದು. ಅಥವಾ ಭೌತವಿಜ್ಞಾನದ ಇತರ ಶಾಖೆಗಳಲ್ಲಿ ಲಭಿಸಿದ ಅನುಭವದ ಆಧಾರದಿಂದ ಉಪಯೋಗಿಸಿಕೊಳ್ಳಬಹುದು. ಇಂಥ ಗುಣಗಳನ್ನು ಸೈದ್ಧಾಂತಿಕವಾಗಿ ಮೌಲ್ಯಮಾಪನ ಮಾಡಲು ಉಷ್ಣಗತಿವಿಜ್ಞಾನ ವಿಧಾನಗಳನ್ನು ಸೂಚಿಸುವುದಿಲ್ಲ. ಅಂಥ ಹೊಣೆ ಇದರ ವ್ಯಾಪ್ತಿಯಲ್ಲಿಲ್ಲ. ಇದು ಹೇಗೇ ಇರಲಿ, ಒಂದು ಪದಾರ್ಥದಲ್ಲಿ ಕೆಲವೊಂದು ವಿಶಿಷ್ಟ ಗುಣಗಳು ಸಂಗಮಿಸಿರಬೇಕಾದರೆ ಆ ಗುಣಗಳು ಉಷ್ಣಗತಿ ವಿಜ್ಞಾನದ ಮೂಲಭೂತ ನಿಯಮಗಳಿಗೆ ವಿರುದ್ಧವಾಗಿರಬಾರದು; ಆದ್ದರಿಂದ ಈ ವಿಜ್ಞಾನ ಬೇರೆ ಬೇರೆ ವಿಭಾಗಗಳಲ್ಲಿ ಲಭಿಸುವ ಗುಣಗಳು ಸಂಗತವಾಗಿವೆಯೇ ಇಲ್ಲವೇ ಎಂದು ನಿರ್ಧರಿಸುವ ಶಿಷ್ಟಮಾನಕದಂತಿದೆ.

ಭಾವನೆಗಳು, ಸ್ವತಸ್ಸಿದ್ಧ ವ್ಯಾಖ್ಯೆಗಳು ಅನುಭವದ ಹೇಳಿಕೆಗಳು: ಅಭ್ಯಾಸ ಅಥವಾ ಪರಿಶೀಲನೆಯಲ್ಲಿರುವ ವಿಶ್ವದ ಉಳಿದ ಅಂಶವನ್ನು—ಎಂದರೆ ನಮ್ಮ ಅಭ್ಯಾಸಕ್ಕೆ ಒಳಪಡದ ಅಂಶವನ್ನು—ಆವರಣಗಳು (ಸರೌಂಡಿಂಗ್ಸ್) ಎನ್ನುತ್ತೇವೆ. ಬೃಹದ್ವಿಶ್ವದ ನಿರ್ದೇಶಕಗಳಿಂದ ಅಥವಾ ಗುಣಗಳಿಂದ ವಿವರಿಸಲು ಸಾಧ್ಯವಾಗುವಂತೆ ಉಷ್ಣಗತಿವಿಜ್ಞಾನದ ವ್ಯವಸ್ಥೆಗಳನ್ನು ಆರಿಸಿಕೊಳ್ಳುತ್ತೇವೆ. ಇಂಥ ವ್ಯವಸ್ಥೆಯಲ್ಲಿನ ಒಂದೊಂದು ಅಣುವಿನ ಅಥವಾ ಯಾವುದೇ ಒಂದು ವಿಶಿಷ್ಟ ಅಂಶದ ವರ್ತನೆ ಇಲ್ಲಿ ಮುಖ್ಯವಲ್ಲ–ಬಲು ದೊಡ್ಡ ಸಂಖ್ಯೆಯಲ್ಲಿರುವ ಅಣುಗಳ ಸಮಗ್ರವರ್ತನೆಯ ಸರಾಸರಿ ಪರಿಣಾಮ ಏನು ಎನ್ನುವುದು ಇಲ್ಲಿನ ವಿಚಾರ. ಇಲ್ಲಿ ಎರಡು ವಿಧದ ಗುಣಗಳಿವೆ—ತೀವ್ರಗುಣಗಳು, ವ್ಯಾಪಕಗುಣಗಳು. ಮೊದಲಿನವು ರಾಶಿಯಿಂದ ಸ್ವತಂತ್ರವಾಗಿವೆ; ಎರಡನೆಯವು ರಾಶಿಯನ್ನು ಹೊಂದಿವೆ. ಉದಾಹರಣೆಗೆ, ಒತ್ತಡ ಮತ್ತು ಉಷ್ಣತೆಗಳು ತೀವ್ರಗುಣಗಳು; ನಿರ್ದಿಷ್ಟ ಘನಗಾತ್ರ ವ್ಯಾಪಕಗಳು. ಬೇರೆ ಎಲ್ಲ ಚರಗಳನ್ನೂ ಪ್ರಯೋಗಶಾಲೆಯ ಚರಗಳಿಗೆ ಅಥವಾ ಉದ್ದ, ಘನಗಾತ್ರ, ಒತ್ತಡ, ಉಷ್ಣತೆ ಮುಂತಾದ ಗುಣಗಳಿಗೆ ಸಂಬಂಧಿಸುವಂತೆ ಮಾಡುವುದು ಉಷ್ಣಗತಿ ವಿಜ್ಞಾನದ ವ್ಯವಸ್ಥಿತ ನಿರೂಪಣೆಯಲ್ಲಿನ ಪ್ರಧಾನ ಉದ್ದೇಶಗಳಲ್ಲಿ ಒಂದು. ಇವುಗಳ ಪೈಕಿ ಉಷ್ಣತೆ ಮತ್ತು ತತ್ಸಂಬಂಧ ಉಷ್ಣದ ಭಾವನೆಗಳಿಗೆ ಇಲ್ಲಿ ಸ್ಪಷ್ಟವಾದ ವ್ಯಾಖ್ಯೆ ನೀಡಬೇಕು.

ಒಂದು ವ್ಯವಸ್ಥೆ ಇತರ ವ್ಯವಸ್ಥೆಗಳೊಡನೆ ಉಷ್ಣಸಮತೋಲದಲ್ಲಿದೆಯೇ ಇಲ್ಲವೇ ಎಂದು ನಿರ್ಧರಿಸುವ ಗುಣವನ್ನು ಆ ವ್ಯವಸ್ಥೆಯ ಉಷ್ಣತೆ (ಟೆಂಪರೇಚರ್) ಎಂದು ಕರೆಯುತ್ತೇವೆ. ಈ ರೀತಿಯ ಸ್ಪಷ್ಟನೆಯಿಂದ ಉಷ್ಣತೆಯ ಸಮತೋಲ ಮತ್ತು ಉಷ್ಣದ ಸಮತೋಲ ಎನ್ನುವ ಎರಡು ಭಾವನೆಗಳನ್ನು ಪರಸ್ಪರ ಅಗಲದಂತೆ ಒಂದುಗೂಡಿಸಿದಂತಾಗುವುದು. ಬಾಹ್ಯ ನಿಯಮಗಳು ಬದಲಾಗದೇ ಇದ್ದಾಗ ವ್ಯವಸ್ಥೆ ಆಗ ಸಮತೋಲದಲ್ಲಿರುವುದು) ಅಂಥ ಗುಣಗಳಿಂದ ವ್ಯವಸ್ಥೆಗಳನ್ನು ವಿವರಿಸಬಹುದೆಂಬುದು ಅನುಭವವೇದ್ಯ ಸಂಗತಿ. ಈ ಹೇಳಿಕೆಯ ಪ್ರಕಾರ ವ್ಯವಸ್ಥೆಗಳು ತಮ್ಮ ಆವರಣಗಳೊಡನೆ ಅಥವಾ ಅವುಗಳೊಡನೆ ಸಂಪರ್ಕಗೊಂಡಿರುವ ಇತರ ವ್ಯವಸ್ಥೆಗಳೊಡನೆ ಪರಸ್ಪರಕ್ರಿಯೆ (ಇಂಟರ್ಆಕ್ಷನ್) ನಡೆಸುತ್ತವೆ. ಇಂಥ ಪರಸ್ಪರ ಕ್ರಿಯೆಗಳು ಸಾಕಷ್ಟು ಸಲ ನಡೆದ ತರುವಾಯ ಗುಣಗಳು ಸ್ಥಿರ ಬೆಲೆಗಳನ್ನು ಪಡೆಯುತ್ತವೆ. ಇನ್ನೂ ನಿಖರವಾಗಿ ಹೇಳುವುದಾದರೆ ವ್ಯವಸ್ಥೆಗೆ ಎರಡು ವಿಧವಾದ ಗೋಡೆಗಳನ್ನು ಅಥವಾ ಗಡಿಗಳನ್ನು ನಾವು ವಿಧಿಸುತ್ತೇವೆ. ಮೇಲೆ ಹೇಳಿದಂಥ ಬೇರೆ ಬೇರೆ ವ್ಯವಸ್ಥೆಗಳಲ್ಲಿನ ಎಲ್ಲ ಸಂಪರ್ಕಗಳನ್ನೂ ಎಲ್ಲ ಪರಸ್ಪರ ಕ್ರಿಯೆಗಳನ್ನೂ ಈ ಗಡಿಗಳ ವಾಹಕದ ಮೂಲಕ ಒಂದು ನಿಶ್ಚಿತಮಟ್ಟದಲ್ಲಿ ಅಥವಾ ಆದರ್ಶದಲ್ಲಿ ರೂಪಿಸಿ ತಿಳಿಯುವುದು ಸಾಧ್ಯವಿದೆ. ಒಂದು ವ್ಯವಸ್ಥೆಯ ಗೋಡೆಗಳನ್ನು ಕದಲಿಸದಿದ್ದಾಗ, ಅದರ ಆವರಣಗಳಲ್ಲಿ ಎಂಥ ಬದಲಾವಣೆಯಾದರೂ ಆ ವ್ಯವಸ್ಥೆಯ ಗುಣಗಳ ಸಮತೋಲ ಬೆಲೆಗಳು ಬದಲಾವಣೆಗೊಳ್ಳದೇ ಇದ್ದರೆ ಅಂಥ ಗೋಡೆಗಳನ್ನು ಅಪಾರಣೀಯ ಗೋಡೆಗಳೆಂದು (ಎಡಿಯಾಬ್ಯಾಟಿಕ್ ವಾಲ್ಸ್) ಕರೆಯುತ್ತೇವೆ. ಅಂದರೆ ಇವು ಒಳಗಿನ ಉಷ್ಣವನ್ನು ಹೊರಗೆ ಬಿಡುವುದಿಲ್ಲ. ಹೊರಗಿನ ಉಷ್ಣವನ್ನು ಒಳಗೆ ಸೇರಿಸುವುದಿಲ್ಲ. ಹಾಗಲ್ಲದೆ ಒಂದು ವ್ಯವಸ್ಥೆಗೆ ಉಷ್ಣಪಾರಕ ಗೋಡೆಗಳಿದ್ದರೆ (ಡೈಯಥರ್ಮಿಕ್ ವಾಲ್ಸ್) ಅವು ಅಲುಗಲಿ, ಅಲುಗದಿರಲೀ ಆ ವ್ಯವಸ್ಥೆಯೂ ಅದರ ಸುತ್ತಲಿನ ಆವರಣಗಳೂ ಪರಸ್ಪರ ಪ್ರಭಾವದಿಂದ ಸಮತೋಲ ಬೆಲೆಗಳನ್ನು ಪಡೆಯುತ್ತವೆ. ಅಂದರೆ ಇಂಥ ಉಷ್ಣಪಾರಕ ಗೋಡೆಯ ಒಂದು ಪಾರ್ಶ್ವದ ಬೆಲೆಗಳು ಇನ್ನೊಂದು ಪಾರ್ಶ್ವದ ಬೆಲೆಗಳನ್ನು ಪ್ರಭಾವಗೊಳಿಸುತ್ತವೆ. ದಪ್ಪವಾಗಿರುವ ಕಲ್ನಾರಿನ ಗೋಡೆಗಳಿಂದ ಮಾಡಿದ ಒಂದು ಪೆಟ್ಟಿಗೆಯೊಳಗೆ ಸ್ವಲ್ಪ ಅನಿಲವನ್ನು ತುಂಬಿಸಿಟ್ಟರೆ ಆ ಪೆಟ್ಟಿಗೆಯ ಹೊರಗೆ ಶೈತ್ಯವಿರಲಿ ಉಷ್ಣವಿರಲಿ ಅದರ ಗೋಡೆಗಳನ್ನು ಅಲುಗಿಸದಿದ್ದರೆ ಅನಿಲದ ಘನಗಾತ್ರ ಮತ್ತು ಒತ್ತಡಗಳ ಬೆಲೆಗಳು ಸ್ಥಿರವಾಗಿ ಉಳಿಯುವುವು. ಇಂಥ ಪೆಟ್ಟಿಗೆಯ–ಹಾಗಲ್ಲದೆ ಈ ಪೆಟ್ಟಿಗೆಯನ್ನು ತೆಳುವಾದ ತಾಮ್ರದ ಅಥವಾ ಬೆಳ್ಳಿಯ ತಗಡಿನಿಂದ ಮಾಡಿದ್ದಾದರೆ ಪೆಟ್ಟಿಗೆಯ ಹೊರಗಿನ ಹವೆಯಲ್ಲಿ ಉಂಟಾಗುವ ಅತ್ಯಲ್ಪ ವ್ಯತ್ಯಾಸದಿಂದಲೂ ಒಳಗಿನ ಅನಿಲ ಪ್ರಭಾವಿತವಾಗುವುದು. ಇದು ಗೋಡೆಗಳ ಕದಲಿಕೆ

ಅಥವಾ ನಿಶ್ಚಲತ್ವವನ್ನು ಅವಲಂಬಿಸಿರುವುದಿಲ್ಲ. ಈ ಪ್ರಭಾವದ ಪರಿಣಾಮ ಒಳಗೆ ಮತ್ತು ಹೊರಗೆ ಸಮತೋಲ ಬರುವವರೆಗೂ ಇರುವುದು. ಇಂಥ ಪೆಟ್ಟಿಗೆಯ ಹೆಸರು ಉಷ್ಣವನ್ನು ಕುರಿತಾಗಿ ತೆರೆದಿರುವ ಅಪಾರಣೀಯ ಪೆಟ್ಟಿಗೆ. ಒಂದು ಅಪಾರಣೀಯ ಗೋಡೆಯೊಂದಿಗೆ ಸಂಪರ್ಕದಲ್ಲಿರುವ ಎರಡು ಅಥವಾ ಹೆಚ್ಚು ವ್ಯವಸ್ಥೆಗಳಲ್ಲಿನ ಹಲವಾರು ನಿರ್ದಿಷ್ಟ ನಿರ್ದೇಶಕಗಳ (ಅಥವಾ ಗುಣಗಳ) ಬೆಲೆಗಳಲ್ಲಿ ಉಂಟಾಗುವ ಸಮತೋಲ ಸ್ಥಿತಿ ಉಷ್ಣಸಮತೋಲ.

ಉಷ್ಣತಾಸಮತೋಲನ ಮತ್ತು ಉಷ್ಣಸಮತೋಲ ಎನ್ನುವ ಎರಡು ಭಾವನೆಗಳೂ ಒಂದಕ್ಕೊಂದು ಬೆಸುಗೆಗೊಂಡಿವೆ. ಇಂಥ ಬೆಸುಗೆಯನ್ನು ಉಷ್ಣಗತಿವಿಜ್ಞಾನದ ಒಂದನೆಯ ಸ್ವತಸ್ಸಿದ್ಧ ವ್ಯಾಖ್ಯೆ ಅಥವಾ ಶೂನ್ಯ ನಿಯಮ ವಿಶದೀಕರಿಸುತ್ತದೆ: ಎರಡು ವ್ಯವಸ್ಥೆಗಳು ಮೂರನೆಯ ಒಂದು ವ್ಯವಸ್ಥೆಯೊಡನೆ ಉಷ್ಣಸಮತೋಲದಲ್ಲಿದ್ದರೆ ಅವು ಪರಸ್ಪರ ಉಷ್ಣತಾ ಸಮತೋಲದಲ್ಲಿರುತ್ತವೆ. ಈ ನಿಯಮ ಸೆಂಟಿಗ್ರೇಡ್ ಮತ್ತು ಫ್ಯಾರನ್ಹೀಟ್ ಎಂಬ ಎರಡು ಪ್ರಾಯೋಗಿಕವಾದ ಉಷ್ಣತಾಮಾನಗಳನ್ನು ಸಿದ್ಧಪಡಿಸಲು ಸಹಾಯಕವಾಗುವುದು. ನಾವು ಒಂದು ಉಷ್ಣತಾಮಾಪಕವನ್ನು ತೆಗೆದುಕೊಂಡು ಅದು ಕ್ರಮವಾಗಿ, ಕರಗುತ್ತಿರುವ ಬರ್ಫದೊಡನೆಯೂ ಕುದಿನೀರಿನೊಡನೆಯೂ ಉಷ್ಣತಾಸಮತೋಲದಲ್ಲಿರುವಂತೆ ಪ್ರಯೋಗ ನಡೆಸುತ್ತೇವೆ. ಆಯಾ ಪ್ರಯೋಗದಲ್ಲಿನ ಪಾದರಸದ ಎತ್ತರಗಳನ್ನು ಗುರುತಿಸುತ್ತೇವೆ. ಬೇರೆ ಯಾವುದೇ ಬರ್ಫದೊಳಗೆ ಅಥವಾ ಕುದಿನೀರಿನಲ್ಲೂ ಅದನ್ನು ಮುಳುಗಿಸಿದರೆ ಆ ಮಾಪಕ ಇಂದಿನ ಎತ್ತರಗಳನ್ನೇ ಅಥವಾ ಗುರುತುಗಳನ್ನೇ ಸೂಚಿಸಬೇಕು. ಇವೆರಡು ಮಿತಿಗಳ ನಡುವೆ ನಾವೊಂದು ಪ್ರಾಯೋಗಿಕ ಉಷ್ಣತಾಮಾನವನ್ನು ರಚಿಸಬಹುದು ಮತ್ತು ಅದರಿಂದ ಬೇರೆ ಎಲ್ಲ ವ್ಯವಸ್ಥೆಗಳ ಉಷ್ಣತೆಗಳನ್ನೂ ಅಳತೆ ಮಾಡಬಹುದು. ಈ ಪ್ರಯೋಗದಲ್ಲಿ ನಾವು ಮಿತಿಗಳನ್ನು ನಿರ್ಧರಿಸಲು ಕರಗುತ್ತಿರುವ ಬರ್ಫ, ಕುದಿನೀರು ಮುಂತಾದ ಪದಾರ್ಥಗಳನ್ನು ಅವಲಂಬಿಸಿದ್ದೇವೆ. ಮುಂದಿನ ಹೆಜ್ಜೆ, ಇಂಥ ಪದಾರ್ಥಗಳನ್ನೂ ಅವುಗಳ ಸಹಾಯದಿಂದ ರಚಿತವಾದ ಉಷ್ಣತಾಮಾಪಕವನ್ನೂ ಉಪಯೋಗಿಸದೆ ಒಂದು ಪ್ರತ್ಯೇಕ ಸ್ವತಂತ್ರ ಉಷ್ಣತಾ ಮಾನವನ್ನು ಪಡೆಯುವುದು. ಇದನ್ನು ಪಡೆಯುವುದು ಸಾಧ್ಯವಾದರೆ ಅದು ಸರ್ವೋತ್ಕೃಷ್ಟವಾಗಿರುವುದು, ಇಂಥ ಶುದ್ಧ ಉಷ್ಣತಾಮಾನವನ್ನು ಪಡೆಯಲು ಉಷ್ಣಗತಿವಿಜ್ಞಾನದ ಎರಡನೆಯ ಸೂತ್ರವನ್ನು ಅವಲಂಬಿಸುತ್ತೇವೆ.

ಒಂದು ವ್ಯವಸ್ಥೆ ಅದರ ಆವರಣಗಳೊಂದಿಗೆ ನಡೆಸುವ ಪರಸ್ಪರ ಕ್ರಿಯೆಗಳಲ್ಲೂ ರಾಶಿಯ ವಿನಿಮಯವನ್ನಲ್ಲದೇ ಬೇರೆ ಎರಡು ವಿಧಗಳನ್ನೂ ಉಷ್ಣಗತಿ ವಿಜ್ಞಾನ ಪರಿಶೀಲಿಸುವುದು. ಇವುಗಳಲ್ಲಿ ಒಂದನೆಯದು ಕಾರ್ಯ(ವರ್ಕ್). ಒಂದು ಬಲದ ಪ್ರಯೋಗದಿಂದ ಒಂದು ವ್ಯವಸ್ಥೆ ಸ್ಥಳಾಂತರಗೊಂಡರೆ ಅಲ್ಲಿ ಕಾರ್ಯ ನಡೆಯಿತು ಎನ್ನುತ್ತೇವೆ. ಬಲದ ದಿಕ್ಕು, ಸ್ಥಳಾಂತರದ ದಿಕ್ಕು ಬೇರೆ ಬೇರೆಯಾಗಿರುವುದು ಸಾಧ್ಯ. ಬಲ ಮತ್ತು ಬಲದ ದಿಕ್ಕಿನಲ್ಲಿ ಸ್ಥಳಾಂತರದ ಘಟಕ (ಕಾಂಪೊನೆಂಟ್) ಇವೆರಡರ ಗುಣಲಬ್ಧ ನಡೆದ ಕಾರ್ಯದ ಬೆಲೆ.

ಅಂದರೆ $\delta w = FdS$ .... (1)

ಇಲ್ಲಿ $\delta w$ ಕೆಲಸದ ಪರಿಮಾಣದ ಒಂದು ಅವಕಲನ (ಡಿಫರೆನ್ಷಿಯಲ್).

F ಬಲ, dS ಸ್ಥಳಾಂತರದ ಅವಕಲನ.

ಕೊಂತವಿರುವ ಒಂದು ಸಿಲಿಂಡರಿನೊಳಗೆ ಸ್ವಲ್ಪ ಅನಿಲರಾಶಿಯನ್ನು ತುಂಬಿಸಿಟ್ಟಿದೆಯೆಂದು ಊಹಿಸೋಣ. ಈ ಅನಿಲರಾಶಿಯ ಮೇಲೆ ಕಾರ್ಯ ನಡೆಸಿದರೆ (1)ನ್ನು ಹೀಗೆ ಬರೆಯಬಹುದು:

$\delta w = FdS = PAdS = PaV$ .... (2)

ಇಲ್ಲಿ P ಕೊಂತದ ಮೇಲಿನ ಒತ್ತಡ A ಅದರ ಕ್ಷೇತ್ರಫಲ ಮತ್ತು V ಒಳಗೆ ತುಂಬಿಸಿದ ಅನಿಲರಾಶಿಯ ಘನಗಾತ್ರ.

ಮೇಲೆ ಹೇಳಿದ ಉದಾಹರಣೆ ಮತ್ತು (2) ನೆಯ ಸಮೀಕರಣ ಹಲವಾರು ಮುಖ್ಯ ವಿಚಾರಗಳನ್ನು ವಿಶದೀಕರಿಸುತ್ತದೆ: (a) ಕೊಂತದ ಒಳಗೆ ಅಥವಾ ಹೊರಗೆ ಚಲಿಸುವುದರ ಮೂಲಕ ಅನಿಲ ಅದರ ಆವರಣಗಳೊಂದಿಗೆ, ಪರಸ್ಪರಕ್ರಿಯೆ ನಡೆಸುವಂತೆ ಮಾಡುವುದರಿಂದ ಉಷ್ಣಗತಿವಿಜ್ಞಾನದಲ್ಲಿ ಕಾರ್ಯ ಕೇವಲ ಬಾಹ್ಯಕಾರ್ಯ (ಆ ವ್ಯವಸ್ಥೆಯ ಮಟ್ಟಿಗೆ ಬಾಹ್ಯ ಆಗಿದೆ. ಆದ್ದರಿಂದ ಇಂಥ ಕಾರ್ಯವನ್ನು ವ್ಯವಸ್ಥೆಯ ಹೊರಗೆ ತೂಕದ ಏರಿಕೆ ಅಥವಾ ಇಳಿಕೆ ಎಂದು ಪರಿಗಣಿಸಬಹುದು. (b)ಈ ಬಾಹ್ಯ ಸಂಬಂಧದ ಕಾರಣದಿಂದ ವ್ಯವಸ್ಥೆಯ ಗುಣಗಳ ಮೇಲೆ ಮಾತ್ರ ಕಾರ್ಯ ಅವಲಂಬಿಸದೆ ಕಾರ್ಯದ ನಿರ್ವಹಣೆಯನ್ನೂ ಅವಲಂಬಿಸಿದೆ. ಆದ್ದರಿಂದ ಈ ಕಾರ್ಯವನ್ನು ಒಂದು ಅನಿಷ್ಕೃಷ್ಟ ಅವಕಲನ (ಇನ್‌ಎಕ್ಸ್ಯಾಕ್ಟ್ ಡಿಫರೆನ್ಷಿಯಲ್) ಎಂದು ಕರೆದಿದೆ (ಹೀಗಾಗಿ $\delta w$ ಎಂಬ ಸಂಕೇತ). (c) ಈ ಸಮೀಕರಣದ ಅನುಕಲನ (ಇಂಟೆಗ್ರೇಷನ್) ಮಾಡಬೇಕಾದರೆ Vಯೊಡನೆ Pಯಲ್ಲಿ ಉಂಟಾಗುವ ಬದಲಾವಣೆ ತಿಳಿದಿರಬೇಕು. ಇಂಥ ಸಂಬಂಧದ ಹೆಸರು ಸ್ಥಿತಿಸಮೀಕರಣ (ಈಕ್ವೇಷನ್ ಆಫ್ ಸ್ಟೇಟ್). ಒಂದು ಅನಿಲಕ್ಕೆ ಈ ಸಮೀಕರಣದ ರೂಪ

$\int(P, V, T) = 0$ .... (3)

ಎಂದಿದೆ. ಇಲ್ಲಿ T ನಿರಪೇಕ್ಷ ಉಷ್ಣತೆ (ಆ್ಯಬ್ಸಲ್ಯೂಟ್ ಟೆಂಪರೇಚರ್). ಇದು ಹೇಗಿದ್ದರೂ ಸ್ಥಿತಿ ಸಮೀಕರಣಗಳು ಸಮತೋಲ ಪರಿಸ್ಥಿತಿಯ ಸಂಬಂಧಗಳು. ಆದ್ದರಿಂದ ಒಂದು ಸ್ಥಿತಿಸಮೀಕರಣವನ್ನು ಉಪಯೋಗಿಸಿ (2)ನೆಯ ಸಮೀಕರಣದ ಅನುಕಲನ ನಡೆಸುವುದರಲ್ಲಿ ಅನಿಲ ಎಲ್ಲ ಕಾಲಗಳಲ್ಲಿಯೂ ಸಮತೋಲದಲ್ಲಿಯೇ ಇತ್ತು ಎನ್ನುವ ಭಾವನೆ ಅಧ್ಯಾಹಾರವಾಗಿದೆ. ಅಂದರೆ, ಕೊಂತ ಅನಂತಸೂಕ್ಷ್ಮ ದೂರವನ್ನು (ಎನ್‌ಫಿನಿಟೆಸಿಮಲ್ ಡಿಸ್ಟೆನ್ಸ್) ಅತಿನಿಧಾನವಾಗಿ ಚಲಿಸಬೇಕು: ಈ ಮಂದಚಲನೆಯಲ್ಲಿ ಅನಿಲದ ಸಮತೋಲಸ್ಥಿತಿ ವ್ಯತ್ಯಾಸಗೊಳ್ಳಬಾರದು; ಹಾಗಿದ್ದರೆ ಮಾತ್ರ (3)ನ್ನು (2)ರಲ್ಲಿ ಬಳಸಿಕೊಂಡು ಅನುಕಲನವನ್ನು ನಡೆಸಬಹುದು. ಇಂಥ ವಿಶಿಷ್ಟಕ್ರಮದಲ್ಲಿ ನಿರ್ವಹಿಸಿದ ಪ್ರಕ್ರಿಯೆಗಳ (ಪ್ರೋಸೆಸಸ್) ಹೆಸರು ಅರೆಸ್ಥಿತಿಕ್ರಿಯೆಗಳು (ಕ್ವಾಸಿ ಸ್ಟ್ಯಾಟಿಕ್ ಪ್ರೋಸೆಸಸ್) ಅಥವಾ ವಿಪರ್ಯಯ ಕ್ರಿಯೆಗಳು. ಉಷ್ಣಗತಿವಿಜ್ಞಾನ ಒಂದು ಸಮತೋಲ ವಿಜ್ಞಾನ, ಅದು ವ್ಯವಸ್ಥೆಗಳ ಅಂತಿಮಸ್ಥಿತಿಗಳನ್ನು ಮಾತ್ರ ಪರಿಶೀಲಿಸುವುದು. ಮೇಲಿನ ಉದಾಹರಣೆಯಲ್ಲಿ ಕೊಂತವನ್ನು ಫಕ್ಕನೆ ತಳ್ಳಿಬಿಟ್ಟರೆ ಅನಿಲದ ಮೇಲೆ ವೇಗೋತ್ಕರ್ಷದ ಬಲಗಳು ಪರಿಣಾಮ ಬೀರುವುವು. ಆಗ P ಮತ್ತು V ಗಳ ನಡುವಿನ ಸಂಬಂಧವನ್ನು ವಿವರಿಸಲು ಒಂದು ಸ್ಥಿತಿ ಸಮೀಕರಣ ಸಾಲದಾಗುವುದು. ಆಗ P ಯನ್ನು ತಿಳಿಯಲು ವಾಯುಗತಿವಿಜ್ಞಾನದ (ಏರೋಡೈನಮಿಕ್ಸ್) ತತ್ತ್ವಗಳು ಬೇಕಾಗುವುವು; ಇಲ್ಲಿ P ಸಮಗ್ರ ವ್ಯವಸ್ಥೆಯಲ್ಲಿ ಒಂದೇ ಆಗಿರುವುದಿಲ್ಲ. ಈ ಸಮಸ್ಯೆ ಉಷ್ಣಗತಿವಿಜ್ಞಾನದ ವ್ಯಾಪ್ತಿಯಿಂದ ಹೊರಗೆ ಇದೆ. ಕಾಲದೊಂದಿಗೆ ಸಹಜವಾಗಿ ವ್ಯತ್ಯಾಸಗೊಳ್ಳುವ ಗುಣಗಳನ್ನುಂಟುಮಾಡುವ ಈ ಕ್ರಮಗಳಲ್ಲಿ ಸಮಗ್ರ ವ್ಯವಸ್ಥೆಯನ್ನು ವಿವರಿಸುವುದು ಸಾಧ್ಯವಿಲ್ಲ. ಈ ಕಾರಣದಿಂದ ಇಂಥ ಕ್ರಮಗಳನ್ನು ಉಷ್ಣಗತಿವಿಜ್ಞಾನದ ಗುಣಗಳಿಂದ ಮಾತ್ರ ವಿವರಿಸಲಾಗುವ ಉತ್ಪನ್ನಗಳು ಎನ್ನುವುದಿಲ್ಲ; ಬದಲು ಇವನ್ನು ಅವಿಪರ್ಯಯ ಕ್ರಿಯೆಗಳು ಎಂದು ಕರೆದಿದೆ.

ಒಂದನೆಯ ನಿಯಮ: ಒಂದು ವ್ಯವಸ್ಥೆಯನ್ನು ಮೂಲಸ್ಥಿತಿಯಿಂದ ಅಂತಿಮ ಸ್ಥಿತಿಗೆ ಉಷ್ಣಾಪಾರಕಕ್ರಿಯೆಗಳಿಂದ ಮಾತ್ರ ಬದಲಾಯಿಸುವುದು ಸಾಧ್ಯವಾದರೆ, ಇವೆರಡು ಸ್ಥಿತಿಗಳನ್ನು ಸೇರಿಸುವಂಥ ಎಲ್ಲ ಉಷ್ಣಾಪಾರಕ ಪಥಗಳಲ್ಲಿಯೂ ನಡೆದಿರುವ ಕಾರ್ಯ ಒಂದೇ ಆಗಿರುವುದು. ಇದು ಶಕ್ತಿ ಸಂರಕ್ಷಣೆಯ ನಿಯಮ.

ಸಾಮಾನ್ಯವಾಗಿ ಕಾರ್ಯ ಒಂದು ಅನಿಷ್ಕೃಷ್ಟ ಅವಕಲನವೆಂದೂ ಅದು ಕಾರ್ಯ ನಡೆಯುವ ಪಥವನ್ನು ಅವಲಂಬಿಸಿದೆ ಎಂದೂ ಈಗ ತಾನೇ ತೋರಿಸಿದೆ. ಯಾವ ಕ್ರಿಯೆಯ ಕಾರ್ಯ ನಿಷ್ಕೃಷ್ಟ ಅವಕಲನವಾಗಿದೆಯೋ ಮತ್ತು ಕಾರ್ಯ ನೆರವೇರಿಕೆಯ ವಿಧಾನವನ್ನು ಅವಲಂಬಿಸದೆ ಅಂತಿಮಸ್ಥಿತಿಗಳನ್ನು ಮಾತ್ರ ಅವಲಂಬಿಸಿದೆಯೋ ಅದನ್ನೇ ಮೊದಲನೆಯ ನಿಯಮ ಸ್ಪಷ್ಟವಾಗಿ ತಿಳಿಸುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ವ್ಯವಸ್ಥೆಗೆ ಉಷ್ಣಾಪಾರಕ ಗೋಡೆಗಳಿದ್ದರೆ ಅವನ್ನು ಚಲಿಸುವುದರ ಮೂಲಕ ಮಾತ್ರ ಕಾರ್ಯವನ್ನು ನಡೆಸಬಹುದು. ಇಂಥ ಕಾರ್ಯ ವಿಪರ್ಯಯ ಅಥವಾ ಅವಿಪರ್ಯಯ ಆಗಿರಲಿ, ವ್ಯವಸ್ಥೆಯ ಮೇಲೆ ಅಥವಾ ಅದರಿಂದ ಆಗಿರಲಿ, ಅಂತಿಮಸ್ಥಿತಿಗಳು ಆಗಿರುವವರೆಗೆ ನಡೆಸಿದ ಕಾರ್ಯದ ಮೊತ್ತ ಒಂದೇ ಆಗಿರುತ್ತದೆ. ಹೀಗೆ ಕಾರ್ಯವನ್ನು ನಡೆಸುವ ಪಥವನ್ನು ಅವಲಂಬಿಸದೆ ಅಂತಿಮಸ್ಥಿತಿಗಳನ್ನು ಮಾತ್ರ ಅವಲಂಬಿಸಿರುವಂಥ ಹೊಸಮಾದರಿಯ ಕಾರ್ಯದ ಹೆಸರು ವ್ಯವಸ್ಥೆಯ ಆಂತರಿಕ ಶಕ್ತಿಯ ಬದಲಾವಣೆ (ಚೇಂಜ್ ಆಫ್ ಇಂಟರ್ನಲ್ ಎನರ್ಜಿ)

ಒಂದನೆಯ ನಿಯಮ $\int_1^2 \delta W = \Delta U_{2-1}$ .....(4)

ಇಲ್ಲಿ $\Delta U_{2-1}$ ಎರಡು ಸ್ಥಿತಿಗಳಾದ (1) ಮತ್ತು (2)ರಲ್ಲಿ ಆಂತರಿಕ ಶಕ್ತಿಯಲ್ಲಿನ ವ್ಯತ್ಯಾಸ ($\Delta$)ಅಥವಾ ಸ್ಥಿತಿ (1) ದತ್ತವಾದಾಗ ನಿರಪೇಕ್ಷ ಆಂತರಿಕ ಶಕ್ತಿ ಮತ್ತು

$\oint \delta W = 0 = \Delta U$ .....(5)

(ಇದು ನಿಷ್ಕೃಷ್ಟ ಅವಕಲನವಾಗಿರುವುದರಿಂದ)

ಈಗ ನಾವು ಈ ಕ್ರಮದ ಮೇಲೆ ಅಪಾರಣೀಯತೆಯ (ಏಡಿಯಬ್ಯಾಟಿಸಿಟಿ) ನಿರ್ಬಂಧವನ್ನು ಕಳಚಿದರೆ, (1)ನೆಯ ಸ್ಥಿತಿಯಿಂದ (2)ನೆಯ ಸ್ಥಿತಿಗೆ ಆಗುವ ಆಂತರಿಕ ಶಕ್ತಿಯ ಬದಲಾವಣೆ ಮೊದಲಿನಂತೆಯೇ ಇರುತ್ತದೆ. ಆದರೆ ಈ ಸಲ ನಡೆದ ಕಾರ್ಯ ಈ ಬದಲಾವಣೆಯನ್ನು ಕೊಡಲಾರದು.

$$\int_1^2 \delta W \neq \Delta U_{2-1} \quad .....(6)$$

ಹೀಗೆ ಕಾರ್ಯ ಮತ್ತು ಆಂತರಿಕ ಶಕ್ತಿ ಇವುಗಳ ನಡುವೆ ಇರುವ ಭಿನ್ನತೆಯನ್ನು ಉಷ್ಣ ಎಂದು ಹೆಸರಿಸುತ್ತೇವೆ. ಆದ್ದರಿಂದ ಉಷ್ಣದ ವ್ಯಾಖ್ಯೆಯನ್ನು ಹೀಗೆ ಬರೆಯಬಹುದು: ಒಂದು ವ್ಯವಸ್ಥೆ (ಬೇರೆ ಉಷ್ಣತೆಯಲ್ಲಿರುವ) ಅದರ ಆವರಣಗಳೊಂದಿಗೆ ಅಪಾರಣೀಯವಲ್ಲದ ರೀತಿಯಲ್ಲಿ ಸಂಪರ್ಕದಲ್ಲಿದ್ದಾಗ ಇವೆರಡರ ಅಂತಿಮ ಸ್ಥಿತಿಗಳಲ್ಲಿ, ನಡೆದ ಕಾರ್ಯದಿಂದ ವಿವರಿಸಲಾಗದ, ಆಂತರಿಕ ಶಕ್ತಿವ್ಯತ್ಯಾಸವೇ ಉಷ್ಣ. ಅಥವಾ ಸರಳವಾಗಿ ಹೇಳುವುದಾದರೆ ಸಾಗಣೆಯಲ್ಲಿರುವ ಶಕ್ತಿಯೇ ಉಷ್ಣ ಮತ್ತು ಒಂದು ವ್ಯವಸ್ಥೆಗೆ ಅದರ ಆವರಣಗಳೊಂದಿಗಿರುವ ಎರಡನೆಯ ಪರಸ್ಪರ ಸಂಪರ್ಕ ಉಷ್ಣ:

ಒಂದನೆಯ ಸೂತ್ರ $\int_1^2 (\delta Q - \delta W) = \Delta U$ .....(7a)

(ಸಾಮಾನ್ಯ)

(ಇಲ್ಲಿ Q ಉಷ್ಣ. ಇದು ಸಹ ಅನಿಷ್ಕೃಷ್ಟ ಅವಕಲನ)

$$\oint (\delta Q - \delta W) = 0 = \Delta U \quad .....(7b)$$

$$dU = \delta Q - \delta W \quad ......(7c)$$

ಉಷ್ಣ ಮತ್ತು ನಡೆದ ಕಾರ್ಯ ಇವುಗಳ ಚಿಹ್ನೆಗಳನ್ನು ಕುರಿತಾದ ಸಂಪ್ರದಾಯ ಒಂದನೆಯ ಸೂತ್ರದ ಪರ್ಯಾಯ ಹೇಳಿಕೆಯಿಂದ ಒಂದು ವ್ಯವಸ್ಥೆಯ ಆಂತರಿಕ ಶಕ್ತಿಯ ಬದಲಾವಣೆ [(2)ನೆಯ ಸ್ಥಿತಿ—(1)ನೆಯ ಸ್ಥಿತಿ] ಆ ವ್ಯವಸ್ಥೆ ಹೀರಿಕೊಂಡ ಉಷ್ಣದಿಂದ ನಡೆಸಿದ ಕಾರ್ಯವನ್ನು ಕಳೆದದ್ದಕ್ಕೆ ಸಮಾನ

$$\Delta U_{2-1} = +Q - (+W) \quad .....(8)$$

ಇದು ಸತ್ಯವಾಗುವಂತೆ ಇದೆ. ಇದು ಎರಡನೆಯ ಸೂತ್ರ. ಇದಕ್ಕೆ ಎರಡು ಪರಸ್ಪರಸಮಾನ ಪರ್ಯಾಯ ಹೇಳಿಕೆಗಳಿವೆ.

ಕೆಲ್ವಿನ್–ಪ್ಲಾಂಕ್ ಹೇಳಿಕೆ: ಒಂದು ಉಷ್ಣಶೇಖರಣೆಯ ಮೂಲದಿಂದ ಉಷ್ಣವನ್ನು ಹೀರಿಕೊಳ್ಳುತ್ತ ಅದರ ಸಮಾನ ಬೆಲೆಯ ಕಾರ್ಯವನ್ನು ಬೇರೆ ಯಾವ ವಿಧದ ಪರಿಣಾಮವೂ ಆಗದಂತೆ ಚಕ್ರೀಯವಾಗಿ ನಿರ್ವಹಿಸುವಂಥ ಯಾವ ಯಂತ್ರವನ್ನೂ ನಿರ್ಮಿಸುವುದು ಸಾಧ್ಯವಿಲ್ಲ.

**ಕ್ಲಾಸಿಯಸ್ ಹೇಳಿಕೆ:** ಒಂದು ತಣ್ಣಗಿನ ವಸ್ತುವಿನಿಂದ ಇನ್ನೊಂದು ಬಿಸಿಯಾದ ವಸ್ತುವಿಗೆ ಬೇರೆ ಯಾವ ಪರಿಣಾಮವೂ ಆಗದಂತೆ ಉಷ್ಣವನ್ನು ವರ್ಗಾಯಿಸುವಂಥ ಯಾವ ಚಕ್ರೀಯ ಸಾಧನವನ್ನೂ ರಚಿಸುವುದು ಸಾಧ್ಯವಿಲ್ಲ.

ಎರಡನೆಯ ನಿಯಮದ ಅನುಮಿತಗಳನ್ನು ಹೀಗೆ ಬರೆಯಬಹುದು: 1 ಎರಡು ಉಷ್ಣಶೇಖರಣೆಯ ಮೂಲಗಳಿವೆ. ಪ್ರತಿಯೊಂದರ ಉಷ್ಣತೆ ಸ್ಥಿರವಾಗಿಯೂ ಸಮವಾಗಿಯೂ ವ್ಯಾಪಿಸಿದೆ. ಇವೆರಡು ಆಕರಗಳ ನಡುವೆ ಅವೇ ಉಷ್ಣತೆಗಳ ನಡುವೆ ಕಾರ್ಯಮಾಡುವಂಥ ವಿಪರ್ಯಯ ಯಂತ್ರದ ದಕ್ಷತೆಯನ್ನು (ಎಫಿಷಿಯೆನ್ಸಿ) ಮೀರಿಸುವಂಥ ಯಾವ ಯಂತ್ರವನ್ನೂ ರಚಿಸುವುದು ಸಾಧ್ಯವಿಲ್ಲ (ಕಾರ್ನೋ ಪ್ರಮೇಯ). 2 ಯಾವುದೇ ಎರಡು ಶೇಖರಣೆಯ ಮೂಲಗಳ ನಡುವೆ ಕೆಲಸ ಮಾಡುವ ಎಲ್ಲ ವಿಪರ್ಯಯ ಯಂತ್ರಗಳ ದಕ್ಷತೆಯೂ ಒಂದೇ ಆಗಿದೆ. 3 ಉಷ್ಣಮಾಪಕ ಪದಾರ್ಥವನ್ನು ಅವಲಂಬಿಸದಂಥ ಒಂದು ಉಷ್ಣತಾಮಾನವನ್ನು ನಿರೂಪಿಸಬಹುದು—(a) ಶುದ್ಧಮಾನದಲ್ಲಿ ಋಣ ಉಷ್ಣತೆಗಳನ್ನು ತಲುಪುವುದು ಅಸಾಧ್ಯ. (b) ಉಷ್ಣಬಂಧ (ಹೀಟ್ ಇನ್ಸುಲೇಷನ್) ಸಂಪೂರ್ಣವಾಗಿ ಇರದಂಥ ಒಂದು ಪರಿಮಿತ ವ್ಯವಸ್ಥೆಗೆ ನಿರಪೇಕ್ಷಮಾನದಲ್ಲಿ ಶೂನ್ಯ ಉಷ್ಣತೆಯನ್ನು ತಲುಪುವುದು ಅಸಾಧ್ಯ. 4 ಕ್ಲಾಸಿಯಸನ ಅಸಮಾನತೆ: ಚಕ್ರೀಯ ಕಾರ್ಯನಿರ್ವಹಣೆಯನ್ನು ಒಂದು ವ್ಯವಸ್ಥೆ ಮಾಡುವಾಗ ಚಕ್ರದ ಸುತ್ತಲೂ $\delta Q/T$ ಇದರ ಅನುಕಲನ ಶೂನ್ಯಕ್ಕಿಂತ ಕಡಿಮೆ; ಅಥವಾ ಪರಮಾವಧಿ ಪರಿಸ್ಥಿತಿಯಲ್ಲಿ ಶೂನ್ಯಕ್ಕೆ ಸಮಾನವಾಗಿರುವುದು. 5 ಯಾವುದೇ ಒಂದು ವಿಪರ್ಯಯ ಕ್ರಿಯೆಗೆ $\delta Q/T$ ಇದರ ಅನುಕಲನ ಶೂನ್ಯವಾಗಿದೆ; ಮತ್ತು ತತ್ಪರಿಣಾಮವಾಗಿ ಯಾವುದೇ ಒಂದು ಆಧಾರ ಸ್ಥಿತಿಯಿಂದ ಇನ್ನೊಂದು ಆಧಾರಸ್ಥಿತಿ 1ರ ವರೆಗೆ $\delta Q/T$ ಇದರ ಅನುಕಲನದ ಹೆಸರು ಎಂಟ್ರೊಪಿ S (**ನೋಡಿ– ಅಲಭ್ಯತೆ; ಎಂಟ್ರೊಪಿ**). 6 ಒಂದು ಬೇರ್ಪಡಿಸಲ್ಪಟ್ಟ ವ್ಯವಸ್ಥೆಯ ಎಂಟ್ರೊಪಿ ಏರುವುದು, ಅಥವಾ ಪರಮಾವಧಿ ಸ್ಥಿತಿಯಲ್ಲಿ ಸ್ಥಿರವಾಗಿರುವುದು.

ಒಂದನೆಯ ನಿಯಮಕ್ಕಿಂತ ಎರಡನೆಯ ನಿಯಮ ಅದರ ಹೇಳಿಕೆಯಲ್ಲಿ ಹೆಚ್ಚು ಗಹನವಾಗಿದೆ ಎಂದು ಕೂಡಲೇ ಗ್ರಹಿಸಬಹುದು. ಒಂದನೆಯ ನಿಯಮ U ಎನ್ನುವ ಒಂದು ಗುಣವನ್ನು ನಿರೂಪಿಸುವಾಗ ಎರಡನೆಯ ನಿಯಮವು S ಎನ್ನುವ ಇನ್ನೊಂದು ಗುಣವನ್ನು ನಿರೂಪಿಸುವುದು. ಆದರೆ ಎರಡನೆಯದು ಈ ನಿರೂಪಣೆಯನ್ನು ಹಲವಾರು ನಕಾರಾತ್ಮಕ ಹೇಳಿಕೆಗಳಿಂದ ಮಾಡುವುದು. ಇಂಥ ಹೇಳಿಕೆಗಳಲ್ಲಿ ಅನಂತರ ಉಷ್ಣಶೇಖರಣೆಗಳ ಇರವು ಮತ್ತು ಅವುಗಳ ಉಪಯೋಗ, ಉಷ್ಣ ಯಂತ್ರಗಳು, ಚಕ್ರೀಯ ಅಥವಾ ವಿಪರ್ಯಯ ಶೀಲ ಕ್ರಿಯೆಗಳು ಇತ್ಯಾದಿಗಳು ಇವೆಯೆಂದೂ ಮೊದಲೇ ಊಹಿಸಿಕೊಳ್ಳಲಾಗುವುದು. ಇಂಥ ಸಾಧನಗಳನ್ನು ಬಳಸುವುದರಿಂದ ಈ ನಿಯಮ ಕೆಲವು ಕ್ರಿಯೆಗಳನ್ನು ಸಂಪೂರ್ಣವಾಗಿ ನಿಷೇಧಿಸುವುದು.

ಅನುಮಿತಗಳ ಸಾಧನೆಗಳು ವಿರೋಧಾಭಾಸ ಕ್ರಿಯೆಗಳನ್ನು ಊಹಿಸಿ ಎರಡನೆಯ ನಿಯಮದ ಸಹಾಯದಿಂದ ಈ ಊಹೆ ಸಂಗತವಲ್ಲ, ಆಭಾಸ ಪರಿಸ್ಥಿತಿಗೆ ಕೊಂಡೊಯ್ಯುವುದು ಎಂದು ಸಿದ್ಧಪಡಿಸಿದ ಊಹೆ ತಪ್ಪು, ಆದ್ದರಿಂದ ಅನುಮಿತಗಳು ಸರಿ ಎಂದು ಸಾಧಿಸಲಾಗುತ್ತದೆ.

**ಎಂಟ್ರೊಪಿ:** ಇದು ಒಂದು ವ್ಯತ್ಯಾಸವನ್ನು ಸೂಚಿಸುತ್ತದೆ; ಇದೊಂದು ನಿಷ್ಕೃಷ್ಟ ಅವಕಲನ. ಇದರ ಬೆಲೆ ಒಂದು ವಿಪರ್ಯಯ ಕ್ರಿಯೆಗೆ $\delta Q/T$ಯ ಅನುಕಲನ. ಕಾರ್ಯವನ್ನು ಮಾಡುತ್ತಿರುವ ಯಾವುದೇ ಒಂದು ಯಂತ್ರ ಅಥವಾ ಸಮುದಾಯದಲ್ಲಿ ಪ್ರಯೋಜನಕಾರಿಯಾದ ಕಾರ್ಯ ನಡೆಸಲು ಲಭ್ಯವಿರುವ ಶಕ್ತಿಗೆ ಎಂಟ್ರೊಪಿಯನ್ನು ನೇರವಾಗಿ ಸಂಬಂಧಿಸಬಹುದು. ಒಂದು ವ್ಯೂಹದಲ್ಲಿಯ ಉಷ್ಣಶಕ್ತಿಯನ್ನು ಯಾಂತ್ರಿಕ ಶಕ್ತಿಯಾಗಿ ಮಾರ್ಪಡಿಸುವಲ್ಲಿ ಕಾರ್ಯಕ್ಕೆ ಒದಗದ ಶಕ್ತಿಯ ಪರಿಮಾಣ. ಇದನ್ನು ಜಡೋಷ್ಣವೆನ್ನಬಹುದು. ಇಂಥ ಸನ್ನಿವೇಶದಲ್ಲಿ ಎಂಟ್ರೊಪಿ ಬಹಳ ಪ್ರಯೋಜನಕಾರಿಯಾಗಿದೆ. ಒಂದು ಚಕ್ರೀಯ ಕ್ರಿಯೆಯಲ್ಲಿ ಶಕ್ತಿ ಸಂರಕ್ಷಣೆಯಿದೆ. (ಕನ್ಸರ್ವೇಷನ್ ಆಫ್ ಎನರ್ಜಿ) ಎಂದು ಒಂದನೆಯ ಸೂತ್ರ ತಿಳಿಸುವಾಗ. ಎರಡನೆಯ ಸೂತ್ರ ಇಂತಿಷ್ಟೇ —ಇದಕ್ಕಿಂತ ಹೆಚ್ಚು ಎಲ್ಲ—ಶಕ್ತಿ, ಪ್ರಯೋಜನಕಾರೀ ಕಾರ್ಯವೆಸಗಬಲ್ಲುದು ಎಂದು ತಿಳಿಸುವುದು. ಅಂದರೆ ಒಂದು ಚಕ್ರೀಯ ಕ್ರಿಯೆಯಲ್ಲಿ ದಕ್ಷತೆಗಳು ಎಂದೂ ಶೇಕಡ ನೂರು ಆಗಲಾರವು ಎಂದಾಗುತ್ತದೆ. ಇದಲ್ಲದೆ ಎಂಟ್ರೊಪಿಗೆ ಇನ್ನೊಂದು ಮೂಲಭೂತ ವೈಶಿಷ್ಟ್ಯವಿದೆ. ಇದನ್ನು ಯಾದೃಚ್ಛಿಕತೆಯ (ರ‍್ಯಾಂಡಂನೆಸ್) ಒಂದು ಅಳತೆ ಎಂದು ಗ್ರಹಿಸಬಹುದು. ನಿಸರ್ಗದಲ್ಲಿ ಸ್ವಾಭಾವಿಕವಾಗಿ ನಡೆಯುವ ಎಲ್ಲ ಕ್ರಿಯೆಗಳಿಗೂ (ಇವು ಅವಿಪರ್ಯಯ ಕ್ರಿಯೆಗಳು) ಯಾದೃಚ್ಛಿಕತೆ ಎಂದರೆ ಎಂಟ್ರೊಪಿಯನ್ನು ಹೆಚ್ಚಿಸುವ ದಿಕ್ಕಿನಲ್ಲಿ ಸಾಗುವ ಪ್ರವೃತ್ತಿಯಿದೆ. ಒಂದು ಒಣಗಿದ ಮರದ ತುಂಡು ಉರಿದು ಇತರ ಅನೇಕ ವಸ್ತುಗಳ ಜೊತೆಗೆ ಇಂಗಾಲದ ಡೈಆಕ್ಸೈಡ್ ಮತ್ತು ನೀರಿನ ತೇವ ನೀಡಿದರೆ ವಿಶ್ವದ ಯಾದೃಚ್ಛಿಕತೆ ಹೆಚ್ಚುವುದು. ಈಗ ಮರ ಸುಟ್ಟಾಗ ಹರಡಿಹೋದ ಎಲ್ಲ ಅನಿಲ ಇತ್ಯಾದಿಗಳನ್ನು ಒಟ್ಟು ಸೇರಿಸಿ ಯವುದೋ ಒಂದು ವಿಧಾನದಿಂದ (ಚಕ್ರವನ್ನು ಪೂರ್ಣ ಮಾಡುವುದರ ಮೂಲಕ) ಮರದ ತುಂಡನ್ನು ಮರಳಿ ಪಡೆಯುವುದು ಸಾಧ್ಯವೆಂದಿಟ್ಟುಕೊಂಡರೆ, ಎರಡನೆಯ ಸೂತ್ರ ತಿಳಿಸುವ ಪ್ರಕಾರ ಶಕ್ತಿಯ ಅಲ್ಪಾಂಶ ನಮಗೆಂದೂ ಕಾರ್ಯಕ್ಕಾಗಿ ಲಭಿಸಲಾರದಂತೆ ನಷ್ಟವಾಗಿ ಹೋಗಿರುವುದು.

ಉಷ್ಣಬಂಧ ಸಂಪೂರ್ಣವಾಗಿ ಇರದಿದ್ದರೆ ಅಂಥ ಸಾಧನೆಯಲ್ಲಿ ಎಂದೂ ಉಷ್ಣತೆಯನ್ನು ನಿರಪೇಕ್ಷ ಶೂನ್ಯಕ್ಕೆ ಒಯ್ಯುವುದು ಸಾಧ್ಯವಿಲ್ಲ ಎಂದು ಅನುಮಿತ (3b) ತಿಳಿಸುತ್ತದೆ. ಇಂಥ ಒಂದು ಪರಿಷ್ಕೃತ ಸಾಧನೆಯ ರಚನೆ ಸಾಧ್ಯವೆಂದು ವಾದಕ್ಕಾಗಿ ಒಪ್ಪಿಕೊಂಡರೂ ಅಲ್ಲಿಯೂ ಉಷ್ಣತೆಯನ್ನು ನಿರಪೇಕ್ಷ ಶೂನ್ಯಕ್ಕೆ ಒಯ್ಯುವುದು ಸಾಧ್ಯವಿಲ್ಲ ಎಂದು ಉಷ್ಣಗತಿವಿಜ್ಞಾನದ ಮೂರನೆಯ ನಿಯಮ ತಿಳಿಸುತ್ತದೆ.

ಮೂರನೆಯ ನಿಯಮ: ಯಾವುದೇ ವ್ಯವಸ್ಥೆಯ ಉಷ್ಣತೆಯನ್ನು ಎಷ್ಟೇ ಪರಿಷ್ಕಾರವಾದ ಯಾವುದೇ ವಿಧಾನದಲ್ಲಿ ಪರಿಮಿತ ಸಂಖ್ಯೆಯ ಕ್ರಿಯೆಗಳಿಂದ ನಿರಪೇಕ್ಷಶೂನ್ಯಕ್ಕೆ ಇಳಿಸುವುದು ಸಾಧ್ಯವಿಲ್ಲ. (ನಮಗೆ ಒಂದು ಸಂಪೂರ್ಣ ಉಷ್ಣಬಂಧವಿರುವ ಸಾಧನೆಯಿದ್ದಿದ್ದರೆ ಎರಡನೆಯ ಸೂತ್ರದ ಪ್ರಕಾರ ಈ ಸಾಧ್ಯತೆ ಇದೆ ಎಂದು ಹೊಳೆಯುವುದು. ಆದ್ದರಿಂದ ಈ ಪ್ರತ್ಯೇಕವಾದ ಮೂರನೆಯ ಸೂತ್ರ).

ಸ್ವತಸ್ಸಿದ್ಧ ಭಾವನೆಯ ವೈಶಾಲ್ಯವನ್ನು ಮೇಲಿನ ಹೇಳಿಕೆ ವಿಶದಪಡಿಸುವುದಿಲ್ಲ; ಒಂದು ಮಿತಿಯಲ್ಲಿ ಅದನ್ನು ಹೇಳಿದೆ. ಇದರ ಸಮಾನಾರ್ಥದ ಹೇಳಿಕೆ ಹೀಗಿದೆ: ಉಷ್ಣತೆ ಶೂನ್ಯಗಾಮಿಯಾದಂತೆ ಒಂದು ಸಂಕುಚಿತ ವ್ಯವಸ್ಥೆಯ (ಕಂಡೆನ್ಸ್ಡ್ ಸಿಸ್ಟಂ) (ಸ್ಪಷ್ಟವಾಗಿ ಹರಳುರೂಪದ ಪದಾರ್ಥಗಳ) ಯಾವುದೇ ಸ್ಥಿರ ಉಷ್ಣತೆ, ವಿಪರ್ಯಯ ಕ್ರಿಯೆಗೆ ಹೊಂದಿಸಿರುವ ಎಂಟ್ರೊಪಿ ವ್ಯತ್ಯಾಸವೂ ಶೂನ್ಯಗಾಮಿಯಾಗುತ್ತದೆ.

ಇದು ವಿಶೇಷವಾಗಿ ಸಂಖ್ಯಾತ್ಮಕ ಉಷ್ಣಗತಿವಿಜ್ಞಾನದಲ್ಲಿ (ಸ್ಟ್ಯಾಟಿಸ್ಟಿಕಲ್ ಥರ್ಮೊಡೈನಮಿಕ್ಸ್) ಉಪಯುಕ್ತವಾಗಿದೆ. ಎಂಟ್ರೊಪಿಯಲ್ಲಿನ ವ್ಯತ್ಯಾಸಗಳು ಶೂನ್ಯದ ಸಮೀಪದಲ್ಲಿ ಶೂನ್ಯಗಾಮಿ ಆಗುವುದರಿಂದ ಎಂಟ್ರೊಪಿ Sನ್ನು ಶೂನ್ಯದಲ್ಲಿ ಶೂನ್ಯ ಎಂದೇ ಆರಿಸಿಕೊಳ್ಳುವುದು ಅನುಕೂಲ.

$$S=0, \ T=0 \quad ...(9)$$

ಈ ಮಟ್ಟದಿಂದ ಶುದ್ಧ ಎಂಟ್ರೊಪಿಗಳನ್ನು ಗಣನೆ ಮಾಡುವುದು ಯೋಗ್ಯ ಕ್ರಮ. ಎಂಟ್ರೊಪಿಯ ಕ್ರಮ–ಅಕ್ರಮ ಭಾವನೆಗೂ ಇದು ಹೊಂದುವುದು. ಏಕೆಂದರೆ ಬಲು ಪಾಲು ಪದಾರ್ಥಗಳೂ T ಶೂನ್ಯಗಾಮಿಯಾಗುತ್ತಿದ್ದಂತೆ ತಮ್ಮನ್ನು ತಾವು ಕ್ರಮವಾಗಿ ಇಟ್ಟುಕೊಳ್ಳಲು ಪ್ರಯತ್ನಿಸುವುವು.

ಉಷ್ಣಗತಿವಿಜ್ಞಾನ ಅನ್ವಯಗಳು: ಈ ವಿಜ್ಞಾನದ ನಿಯಮಗಳು ನಿರೂಪಿಸುವ ನಿಷ್ಕೃಷ್ಟ ಅವಕಲನಗಳು ಅಂತಿಮ ಸ್ಥಿತಿಗಳ ಉತ್ಪನ್ನಗಳು ಮಾತ್ರ ಆಗಿರುವುದರಿಂದ ಹಲವಾರು ಕ್ರಮಗಳನ್ನು ಉಷ್ಣಗತಿವಿಜ್ಞಾನದ ಸಹಾಯದಿಂದ ವಿಭಜಿಸಬಹುದು. ಇಲ್ಲಿ ಮಾಡಬೇಕಾದುದಿಷ್ಟೇ — ವಿಪರ್ಯಯ ಕ್ರಿಯೆಯಲ್ಲಿ ಉಂಟಾಗಿರಬಹುದಾದ ಬದಲಾವಣೆ ಗಳನ್ನು ಗಣನೆ ಮಾಡಬೇಕು (ಸ್ಥಿತಿ ಸಮೀಕರಣಗಳ ಸಹಾಯದಿಂದ). ಈ ಬದಲಾವಣೆಗಳು ಅವಿಪರ್ಯಯ ಕ್ರಿಯೆಗಳಿಗೆ ಇರುವ ಬದಲಾವಣೆಗಳಿಗೆ ಸಮಾನವಾಗಿವೆ. ಇಂಥ ಕ್ರಿಯೆಗಳ ದಕ್ಷತೆಗಳನ್ನು ಅಳೆಯಲು ಎರಡನೆಯ ನಿಯಮದ ಅನುಮಿತಗಳೊಂದಿಗೆ ಎಂಟ್ರೊಪಿಯ ಭಾವನೆಯನ್ನೂ ಉಪಯೋಗಿಸಿಕೊಳ್ಳಲಾಗುವುದು. ಹೀಗೆ ಒಂದನೆಯ ಮತ್ತು ಎರಡನೆಯ ನಿಯಮಗಳ ಸಹಾಯದಿಂದ ಕೇವಲ ಅಂತಿಮಸ್ಥಿತಿಗಳನ್ನು ಅರಿಯುವುದರ ಮೂಲಕ ಸಂಕೀರ್ಣ ಪ್ರಕ್ರಿಯೆಗಳನ್ನು ವಿಭಜಿಸಬಹುದು (ಫೀಸಿಬಿಲಿಟಿ ಅನ್ಯಾಲಿಸಿಸ್).

ನಿಯಮಗಳ ಉಪಯೋಗವನ್ನು ಸುಲಭಗೊಳಿಸಲು ಬೇರೆ ಕೆಲವು ಉತ್ಪನ್ನಗಳನ್ನು ನಿರೂಪಿಸಲಾಗಿದೆ: ಎಂಥಾಲ್ಪಿ (ನೋಡಿ) H, ಹೆಲ್ಮ್ ಹೋಲ್ಟ್ಸ್ ಸ್ವತಂತ್ರ ಶಕ್ತಿ F, ಮತ್ತು ಜಿಬ್ಸ್ ಉತ್ಪನ್ನ G ನಿರೂಪಣೆಗಳು ಹೀಗಿವೆ:

H=U+PV . . . (10)

F=U−TS . . . (11)

G=H−TS . . . (12)

ಇಲ್ಲಿ H ಎನ್ನುವುದು (S,P)ಗಳ ಲಾಕ್ಷಣಿಕ ಉತ್ಪನ್ನ (ಕ್ಯಾರೆಕ್ಟರಿಸ್ಟಿಕ್ ಫಂಕ್ಷನ್); F ಎನ್ನುವುದು (T,V)ಗಳ ಲಾಕ್ಷಣಿಕ ಉತ್ಪನ್ನ ಮತ್ತು G ಎನ್ನುವುದು (P,T)ಗಳ ಲಾಕ್ಷಣಿಕ ಉತ್ಪನ್ನ, S ಮತ್ತು Pಗಳು ನಿಯಂತ್ರಿತವಾದಾಗ (ಅಥವಾ ಗೊತ್ತಿರುವಾಗ) H ಬಲು ಉಪಯುಕ್ತವಾಗಿರುವುದು. ಇಂಥ ಸಮಸ್ಯೆಗಳು ಪ್ರವಾಹ ಸಮಸ್ಯೆಗಳು (ಫ್ಲೋ ಪ್ರಾಬ್ಲಮ್ಸ್) ಎಂಬ ಹೆಸರಿನಿಂದ ಸಂಕೋಚಕಗಳು (ಕಂಪ್ರೆಸರ್ಸ್), ಹಬೆಯ ತಿರುಬಾನಿಗಳು ಮುಂತಾದುವುಗಳಲ್ಲಿ ಬಲು ಸಾಮಾನ್ಯವಾಗಿ ಬರುವುವು. ಹೆಲ್ಮ್ ಹೋಟ್ಸ್ ಸ್ವತಂತ್ರ ಶಕ್ತಿ Fಎನ್ನುವುದು V ಸಾಮಾನ್ಯವಾಗಿ ಸ್ಥಿರವಾಗಿರುವ ಬೇಚ್ ಕೆಮಿಕಲ್ ರಿಯಾಕ್ಟರುಗಳಲ್ಲಿ ಅತ್ಯುಪಯುಕ್ತವಾಗಿದೆ. ಸಾಮಾನ್ಯವಾಗಿ P ಮತ್ತು Tಗಳು ನಿಯಂತ್ರಿತವಾಗಿರುವ ಕ್ರಮಗಳಾದ ಪ್ರವಾಹ ರಿಯಾಕ್ಟರುಗಳಲ್ಲಿ (ಫ್ಲೋ ರಿಯಾಕ್ಟರ್ಸ್) ಜಿಬ್ಸ್ ಉತ್ಪನ್ನ G ಉಪಯುಕ್ತವಾಗಿದೆ. ಹೀಗೆ ಈ ಉತ್ಪನ್ನಗಳೂ ಇದೇ ರೀತಿಯಲ್ಲಿ ಪಡೆದ ಇತರ ಹಲವಾರು ಉತ್ಪನ್ನಗಳೂ (ಉದಾಹರಣೆಗೆ ಸ್ಥಿರ ಒತ್ತಡ ಮತ್ತು ಸ್ಥಿರ ಘನಗಾತ್ರ ಗ್ರಾಹ್ಯೋಷ್ಣಗಳು, ರಾಸಾಯನಿಕ ವಿಭವ ಇತ್ಯಾದಿ) ಉಷ್ಣಗತಿವಿಜ್ಞಾನಿಗಳು ಬಳಸುವ ಸಾಧನಗಳು. (ಎಸ್.ಎನ್.ಸಿ.)

**ಉಷ್ಣಗತಿವಿಜ್ಞಾನದ ವಿವರಣೆ:** ಚಲನಶಕ್ತಿಯಿಂದ ಉಷ್ಣವನ್ನೂ ಉಷ್ಣದಿಂದ ಚಲನಶಕ್ತಿಯನ್ನೂ ಪಡೆಯುವುದಕ್ಕೆ ಪಾಲಿಸಬೇಕಾದ ನಿರ್ಬಂಧಗಳು ಮತ್ತು ಅವುಗಳ ಪರಿಣಾಮಗಳು ಇವುಗಳ ಅಧ್ಯಯನ ಈ ಶಾಸ್ತ್ರದ ವ್ಯಾಪ್ತಿಗೆ ಸೇರಿದೆ. ಘರ್ಷಣೆಯನ್ನು (ಫ್ರಿಕ್ಷನ್) ಎದುರಿಸಿ ಕಾರ್ಯವನ್ನು ನಡೆಸಿದಾಗ ಉತ್ಪತ್ತಿಯಾಗುವ ಉಷ್ಣದ ಪರಿಮಾಣದ ಅಳತೆಯಿಂದ ಉಷ್ಣಕ್ಕೂ ಕಾರ್ಯಕ್ಕೂ ಇರುವ ಸಂಬಂಧ ತಿಳಿಯಿತು. ಇದನ್ನು ಮೊದಲನೆಯ ನಿಯಮ ವ್ಯಕ್ತಪಡಿಸುತ್ತದೆ. ವಿಲೋಮವಾಗಿ, ಎಂದರೆ ಉಷ್ಣದಿಂದ ಚಲನಶಕ್ತಿಯನ್ನು ಪಡೆಯುವ ಸಾಧ್ಯತೆಯ ಅಧ್ಯಯನದಿಂದ ಎರಡನೆಯ ನಿಯಮ ಪ್ರಕಟವಾಯಿತು.

**ನಿರಂತರ ಚಲನೆ:** ಮೊದಲನೆಯ ನಿಯಮ ತಿಳಿಯುವವರೆಗೆ ಯಂತ್ರವಿಜ್ಞಾನಿಗಳು ಒಂದು ಕನಸು ಕಾಣುತ್ತಿದ್ದರು. ನಿರಂತರ ಚಾಲನ ಯಂತ್ರದ (ಪರ್ಪೆಚುಯಲ್ ಮೋಷನ್ ಮೆಷೀನ್) ನಿರ್ಮಾಣ. ಒಮ್ಮೆ ಪ್ರಾರಂಭಿಸಿದ ತರುವಾಯ ಬಾಹ್ಯಮೂಲಗಳಿಂದ ಶಕ್ತಿ ಪಡೆಯದೇ ತಾನಾಗಿ ಕಾರ್ಯವೆಸಗಬಲ್ಲ ಯಂತ್ರ ನಿರಂತರ ಚಲನ ಯಂತ್ರ ಎಂದರೆ, ಇಂಥ ಒಂದು ಯಂತ್ರ ಕಾರ್ಯ ಎಸಗಲು ತೊಡಗಿದರೆ ಮತ್ತೆ ಎಂದೂ ನಿಲ್ಲದು ಎಂದಾಯಿತು. ಇದೊಂದು ಇಂಧನರಹಿತ ಯಂತ್ರ: ಈ ಗುರಿಯನ್ನು ಲಕ್ಷ್ಯದಲ್ಲಿಟ್ಟು ನಾನಾ ಯಂತ್ರಗಳನ್ನು ಬೇರೆ ಬೇರೆ ಕಾಲಗಳಲ್ಲಿ ರಚಿಸಿದರು. ಆದರೆ ಅವು ಯಾವುವೂ ಕಾರ್ಯೋದ್ಯುಕ್ತವಾಗಲು ಸಮರ್ಥವಾಗಲಿಲ್ಲ. ನಿಸರ್ಗವೇ ಇಂಥ ವ್ಯಯರಹಿತ ಕಾರ್ಯವನ್ನು ವಿರೋಧಿಸುತ್ತಿದೆ ಅನ್ನಿಸಿತು.

ಮೂರು ದರ್ಜೆಯ ನಿರಂತರ ಚಲನೆಗಳಿವೆ. ಮೊದಲನೆಯ ದರ್ಜೆಯ ಯಂತ್ರ ಅದರ ಒಂದೊಂದು ಕಾರ್ಯಚಕ್ರದಲ್ಲಿಯೂ ಮುಂದಿನ ಚಕ್ರಕ್ಕೆ ಬೇಕಾಗುವಷ್ಟು ಅಥವಾ ಸ್ವಲ್ಪ ಹೆಚ್ಚು ಶಕ್ತಿಯನ್ನು ಉತ್ಪಾದಿಸಬಲ್ಲುದಾಗಿರಬೇಕು.



ಚಿತ್ರ–1



ಚಿತ್ರ–2

ಚಿತ್ರ 1 ಮತ್ತು 2 ಇಂಥ ಎರಡು ಊಹಾರಚನೆಗಳು. ಮೊದಲನೆಯದರಲ್ಲಿನ ತರ್ಕ ಹೀಗಿದೆ—ದೊಡ್ಡ ಪಾತ್ರೆಯಲ್ಲಿ ಹೆಚ್ಚು ನೀರಿದೆ; ಆದುದರಿಂದ ಅದರ ತೂಕ ಹೆಚ್ಚು; ಹೀಗಾಗಿ ಅದು ಕಿರಿಯ ನಾಳದ ಮೂಲಕ ತ್ವರಿತಗತಿಯಿಂದ ಸರಿದು ಬಾಗುಗಳಲ್ಲಿ ಸಹಜವಾಗಿ ತಿರುಗಿ ಮೇಲೇರಿ ಪುನಃ ದೊಡ್ಡಪಾತ್ರೆಗೆ ಮರಳಬೇಕು; ಆದ್ದರಿಂದ ಇಲ್ಲಿನ ಚಲನೆ ನಿರಂತರವಾಗಿರಬೇಕು. ಎರಡನೆಯದರಲ್ಲಿನ ತರ್ಕ ಹೀಗಿದೆ–ಚಕ್ರ ತಿರುಗಿದಂತೆ ಅದರ ಅಚ್ಚನ್ನು ಕುರಿತು ಕೆಳಭಾಗದ ಗುಂಡುಗಳ ಭ್ರಾಮಕ (ಟಾರ್ಕ್) ಮೇಲಿನವುಗಳಿಗಿಂತ ಹೆಚ್ಚು; ಈ ಭ್ರಾಮಕ ಚಕ್ರ ತಿರುಗುವ ದಿಶೆಯಲ್ಲಿಯೇ ಇದೆ: ಆದ್ದರಿಂದ ಚಕ್ರದ ಆವರ್ತನ ನಿರಂತರವಾಗಿರಬೇಕು. ವಾಸ್ತವಿಕವಾಗಿ ಹೀಗೆ ನಡೆಯುವುದಿಲ್ಲ. ಇದರ ಕಾರಣವನ್ನು ಶಾಸ್ತ್ರೀಯವಾಗಿ ವಿವರಿಸಲು ಸಾಧ್ಯವಾದದ್ದು ಉಷ್ಣಗತಿವಿಜ್ಞಾನದ ಮೊದಲನೆಯ ನಿಯಮವನ್ನು ರೂಪಿಸಿದ ಮೇಲೆಯೇ. ಈ ನಿಯಮದ ವ್ಯಾಪಕಾರ್ಥ ಹೀಗಿದೆ: ಶೂನ್ಯದಿಂದ ಶಕ್ತಿಯನ್ನು ನಿರ್ಮಿಸಬಲ್ಲ ಯಾವ ಘಟನೆಯೂ ನಿಸರ್ಗದಲ್ಲಿ ಇಲ್ಲ; ಶಕ್ತಿಯನ್ನು ಒಂದು ವ್ಯವಸ್ಥೆಯಿಂದ ಇನ್ನೊಂದು ವ್ಯವಸ್ಥೆಗೆ ವರ್ಗಾಯಿಸಬಹುದು; ಆದರೆ ಮೊತ್ತದಲ್ಲಿ ಶಕ್ತಿ ಸ್ಥಿರವಾಗಿರುತ್ತದೆ: ಎಂದರೆ ಶಕ್ತಿಯ ಸ್ಥಾಯಿತ್ವದ ನಿಯಮವನ್ನು ಇದು ಪ್ರತಿಪಾದಿಸುತ್ತದೆ.

ಎರಡನೆಯ ದರ್ಜೆಯ ನಿರಂತರ ಚಲನೆಯಲ್ಲಿ ಅಂಥ ಒಂದು ಯಂತ್ರ ಉಷ್ಣಶಕ್ತಿಯನ್ನು ಸಂಪೂರ್ಣವಾಗಿ ಇತರ ಶಕ್ತಿರೂಪಗಳಿಗೆ ಪರಿವರ್ತಿಸಲು ಸಮರ್ಥವಾಗಿರಬೇಕು. ಒಂದು ವೇಳೆ ಇಂಥ ಒಂದು ಯಂತ್ರವನ್ನು ಅಳವಡಿಸಿದರೆ ಅದು ಸಮುದ್ರದ ನೀರನ್ನು ಬೇಕಾದಷ್ಟು (ಯಾವ ಖರ್ಚೂ ಇಲ್ಲದೆ) ತೆಗೆದುಕೊಂಡು ಅದರಲ್ಲಿ ಲೀನವಾಗಿರುವ ಉಷ್ಣಶಕ್ತಿಯನ್ನು ಹೀರಿಕೊಳ್ಳುತ್ತದೆ; ಇದನ್ನು ಇತರ ಶಕ್ತಿರೂಪಗಳಿಗೆ ಪೂರ್ಣವಾಗಿ ಪರಿವರ್ತಿಸಿ ಒಂದಿಷ್ಟು ಅಂಶದಿಂದ ನಾವೆಯ ಚಲನೆಯನ್ನೂ ಉಳಿದ ಅಂಶದಿಂದ ಯಂತ್ರದ ಕಾರ್ಯವನ್ನೂ ನಿರ್ವಹಿಸುತ್ತದೆ. ಉಷ್ಣರಹಿತ ಸಮುದ್ರದ ನೀರು ಬರ್ಫವಾಗುವುದಷ್ಟೆ. ಅದನ್ನು ಪುನಃ ಸಮುದ್ರಕ್ಕೆ ಎಸೆದುಬಿಟ್ಟರಾಯಿತು! ಹೀಗೆ ಇಂಧನರಹಿತ ನೌಕಾಯಾನ ಸಾಧ್ಯವಾಗಬೇಕು. ಅದೇ ರೀತಿ ಇಂಧನರಹಿತ ವಾಯುಯಾನವೂ ಸಾಧ್ಯವಾಗಬೇಕು. 19ನೆಯ ಶತಮಾನದ ಮಧ್ಯದಲ್ಲಿ ಉಷ್ಣಗತಿ ವಿಜ್ಞಾನದ ಎರಡನೆಯ ನಿಯಮ ಸ್ಥಾಪಿತವಾಗುವವರೆಗೂ ಇಂಥ ಒಂದು ಯಂತ್ರದ ನಿರ್ಮಾಣದ ಸಾಧ್ಯತೆಯ ವಿಚಾರದಲ್ಲಿ ಆಶಾಭಾವನೆಯಿತ್ತು. ಎರಡನೆಯ ನಿಯಮದ ಪ್ರಕಾರ ಒಂದು ವಿಷಯ ಸ್ಪಷ್ಟವಾಗುತ್ತದೆ–ಒಂದು ಮೂಲದಿಂದ ಉಷ್ಣವನ್ನು ಹೀರಬೇಕಾದರೆ ಆ ಮೂಲಕ್ಕಿಂತ ಕಡಿಮೆ ಉಷ್ಣತೆಯ ಇನ್ನೊಂದು ಗ್ರಾಹಕ ಇರಬೇಕು. ಸಮುದ್ರದ ನೀರಿನಿಂದ ಉಷ್ಣವನ್ನು ಹೀರಿಕೊಳ್ಳಲು ಅದಕ್ಕಿಂತ ಕಡಿಮೆ ಉಷ್ಣತೆಯ ಇನ್ನೊಂದು ಗ್ರಾಹಕ ಇರಬೇಕು. ಸಮುದ್ರದ ನೀರಿನಿಂದ ಉಷ್ಣವನ್ನು ಹೀರಿಕೊಳ್ಳಲು ಅದಕ್ಕಿಂತ ಕಡಿಮೆ ಉಷ್ಣತೆಯ ಒಂದು ಗ್ರಾಹಕವನ್ನು ಕೃತಕವಾಗಿ ನಾವೆಯಲ್ಲಿ ರಚಿಸಬೇಕಾಗುತ್ತದೆ; ಎಂದರೆ ಈ ಕಾರ್ಯದಲ್ಲಿ ಸಾಕಷ್ಟು ಶಕ್ತಿವ್ಯಯವಾಗುತ್ತದೆ. ಇನ್ನು ಸಮುದ್ರದಿಂದ ನೀರನ್ನು ಪಡೆಯಲು. ಉಪಯೋಗಾನಂತರ ಬರ್ಫಗಳನ್ನು ಸಮುದ್ರಕ್ಕೆ ಎಸೆಯಲು ಸ್ವಲ್ಪ ಶಕ್ತಿಯನ್ನು ವ್ಯಯಿಸಬೇಕು. ಇಷ್ಟೆಲ್ಲ ಆದಮೇಲೆ ಉಳಿಯುವ ಉಷ್ಣಶಕ್ತಿಯ ಪ್ರಮಾಣವನ್ನು ಪರಿಶೀಲಿಸಿದರೆ ಮೊದಲು ಹೂಡಿದ ಶಕ್ತಿಯೇ ಹಿಂದೆ ಬಂದಿರುವುದಿಲ್ಲ ಎಂದು ಅರಿವಾಗುವುದು. ಎಂದರೇನಾಯಿತು? ಸಮುದ್ರದ ನೀರಿನಿಂದ ಉಷ್ಣಶಕ್ತಿಯನ್ನು ಪಡೆಯುವ ಸಾಹಸದಲ್ಲಿ ವ್ಯಯಿಸಿದ ಶಕ್ತಿ ಗಳಿಸಿದ ಉಷ್ಣಶಕ್ತಿಗಿಂತ ಹೆಚ್ಚು (**ನೋಡಿ– ಕಾರ್ನೋ**).

ಮೂರನೆಯ ದರ್ಜೆಯ ನಿರಂತರ ಚಲನೆಯ ಅಸಾಧ್ಯತೆ ಉಷ್ಣಗತಿವಿಜ್ಞಾನದಿಂದ ಸಾಧಿತವಾದದ್ದಲ್ಲ. ಯಂತ್ರದಲ್ಲಿ ಯಾವುದೇ ವಿಧವಾದ ಅಸ್ಥಾಯೀ ಬಲಗಳು (ನಾನ್‌ಕನ್ಸರ್ವಟಿವ್ ಫೋರ್ಸಸ್) ಇಲ್ಲದಿದ್ದಲ್ಲಿ–ಉದಾಹರಣೆಗೆ ಘರ್ಷಣೆ–ಒಮ್ಮೆ ಪ್ರಾರಂಭವಾದದ್ದು ಸತತವಾಗಿ ಕಾರ್ಯೋದ್ಯುಕ್ತವಾಗಿರಬೇಕು. ಇಂಥ ನಿರಂತರ ಚಲನೆಯ ಅಸಾಧ್ಯತೆ ಉಷ್ಣಗತಿವಿಜ್ಞಾನದ ಯಾವುದೇ ನಿಯಮದ ಉಲ್ಲಂಘನೆಯಿಂದ ಸ್ಥಿರಪಡುವುದಿಲ್ಲ; ಬದಲು ವಾಸ್ತವಿಕ ಪರಿಸ್ಥಿತಿಯಲ್ಲಿ ಘರ್ಷಣೆಯಂಥ ವಿರುದ್ಧ ಬಲಗಳನ್ನು (ಮೃದುಚಾಲಕಗಳ ನೆರವಿನಿಂದ) ಕಡಿಮೆ ಮಾಡಬಹುದೇ ವಿನಾ ಪೂರ್ಣವಾಗಿ ನಿವಾರಿಸಲಾಗುವುದಿಲ್ಲ. ಇಂದು ನಿರಂತರ ಚಲನೆಯ ಭಾವನೆಗೆ ಕೇವಲ ಐತಿಹಾಸಿಕ ಮಹತ್ತ್ವ ಮಾತ್ರ ಇದೆ.

ಉಷ್ಣಗತಿವಿಜ್ಞಾನದ ಎರಡನೆಯ ನಿಯಮದ ಯಾಥಾರ್ಥ್ಯ: ಭೌತವಿಜ್ಞಾನದಲ್ಲಿ ಮತ್ತು ಭೌತರಸಾಯನವಿಜ್ಞಾನದಲ್ಲಿ ಉಷ್ಣಗತಿವಿಜ್ಞಾನದ ಎರಡನೆಯ ನಿಯಮದಿಂದ ನಿಗಮನ ಮಾಡಿರುವ ಅನೇಕ ಫಲಿತಾಂಶಗಳ ಯಾಥಾರ್ಥ್ಯ ಪ್ರಾಯೋಗಿಕ ಪರೀಕ್ಷೆಗಳಿಂದ ಸ್ಥಿರಪಟ್ಟಿದೆ. ಉದಾಹರಣೆಗೆ ಕುದಿಯುವ ಬಿಂದು ಮತ್ತು ಕರಗುವ ಬಿಂದುಗಳ ಮೇಲೆ ಒತ್ತಡದ ಪ್ರಭಾವವನ್ನು ತಿಳಿಸುವ ಕ್ಲಾಸಿಯಸ್–ಕ್ಲಾಪಿರಾನ್ ಸಮೀಕರಣ: ರಾಸಾಯನಿಕ ಸಮಸ್ಥಿತಿ ಸ್ಥಿರಾಂಕಗಳ (ಈಕ್ವಿಲಿಬ್ರಿಯಂ ಕಾನ್‌ಸ್ಟೆಂಟ್ಸ್) ಬೆಲೆಗಳು: ವಿಯೋಜನೆಯ ಡಿಗ್ರಿ (ಡಿಗ್ರಿ ಆಫ್ ಡಿಸೋಸಿಯೇಷನ್); ವಿದ್ಯುತ್ಕೋಶಗಳ ವಿದ್ಯುಚ್ಚಾಲನ ಬಲಗಳ ಬೆಲೆಗಳು; ರಶ್ಮಿ ಪ್ರಸಾರದ ಸ್ಟೀಫನ್–ಬೋಲ್ಟ್ಜ್‌ಮನ್ ನಿಯಮ–ಇವೇ ಮುಂತಾದುವು. ಈ ನಿಯಮದಿಂದ ವಿನಾಯಿತಿಗೊಂಡಿರುವ ಯಾವ ಭೌತ ಅಥವಾ ರಾಸಾಯನಿಕ ಘಟನೆಯನ್ನೂ ಇದುವರೆಗೆ ಕಂಡುಹಿಡಿಯಲಾಗಿಲ್ಲ. ಭೌತವಿಜ್ಞಾನದಲ್ಲಿ ಇದುವರೆಗೆ ಅನಾವರಣವಾಗಿರುವ ತತ್ತ್ವಗಳಲ್ಲಿ ಅತ್ಯಂತ ಮೂಲಭೂತವಾದವು ಮೊದಲನೆಯ ಮತ್ತು ಎರಡನೆಯ ನಿಯಮಗಳು. ರಾಂಕೈನ್ ಯಂತ್ರ, ಒಟ್ಟೋ ಯಂತ್ರ, ಡೀಸೆಲ್ ಯಂತ್ರ ಮುಂತಾದುವುಗಳ ದಕ್ಷತೆಯ ಅಧ್ಯಯನಕ್ಕೆ ಉಷ್ಣಗತಿವಿಜ್ಞಾನದ ಎರಡನೆಯ ನಿಯಮವೇ ಆಧಾರ (**ನೋಡಿ– ಕೆಲ್ವಿನ್–ಉಷ್ಣತಾಮಾನ–ಪದ್ಧತಿ**). (ಎಚ್.ಎಸ್.ವಿ.)

**ಉಷ್ಣಜನ್ಯ ವಿದ್ಯುಚ್ಛಕ್ತಿ:** ಕೆಲವು ವಿದ್ಯುದ್‌ವಾಹಕ ಹರಳುಗಳ ಉಷ್ಣತಾಮಟ್ಟಗಳಲ್ಲಿ ಬದಲಾವಣೆ ಉಂಟುಮಾಡಿದಾಗ ಜನಿಸುವ ಶಕ್ತಿ (ಪೈರೋ ಎಲೆಕ್ಟ್ರಿಸಿಟಿ). ಇದನ್ನು ವಿದ್ಯುದ್ಧ್ರುವೀಕರಣ (ಎಲೆಕ್ಟ್ರಿಕ್ ಪೋಲರೈಸೇಷನ್) ಅಥವಾ ಘನ ಸೆಂಟಿಮೀಟರಿಗೆ ದ್ವಿಧ್ರುವಮಹತ್ವಾಂಕದಿಂದ (ಡೈಪೋಲ್ ಮೊಮೆಂಟ್ ಪರ್ ಸಿ.ಸಿ.) ಅಳೆಯುವರು. ಕೆಲವು ಅವಾಹಕಗಳಲ್ಲಿ ಉಷ್ಣತೆಯನ್ನು $\Delta T$ ಬದಲಾಯಿಸಿದಾಗ ಹುಟ್ಟುವ ವಿದ್ಯುದ್ಧ್ರುವೀಕರಣ $\Delta P$, $\Delta T$ ಅನಂತ ಸೂಕ್ಷ್ಮವಾಗಿರುವಾಗ

$$P = P_i T \ldots\ldots\ldots\ldots\ldots i = 1,2,3$$

ಸಮೀಕರಣದಿಂದ ತತ್ಸಂಬಂಧ $\Delta P$ ನ್ನು ಅಳೆಯಬಹುದು. $\Delta 1, \Delta 2, \Delta 3$ ಇವು ಪರಸ್ಪರ ಲಂಬವಾಗಿರುವ ಮೂರು ದಿಶೆಗಳಲ್ಲಿ $\Delta P$ ಯ ಘಟಕಗಳು (ಕಾಂಪೊನೆಂಟ್ಸ್). ಈ ಪರಿಮಾಣದ ಹೆಸರು ಉಷ್ಣಜನ್ಯವಿದ್ಯುತ್ಪರಿಣಾಮ (ಪೈರೋ ಎಲೆಕ್ಟ್ರಿಕ್ ಎಫೆಕ್ಟ್) $p_1$, $p_2$, $p_3$ ಇವು ಉಷ್ಣಜನ್ಯವಿದ್ಯುತ್ತಿನ ಆಯಾ ದಿಕ್ಕಿನ ಗುಣಕಗಳು (ಪೈರೋ ಎಲೆಕ್ಟ್ರಿಕ್ ಕೋಎಫಿಷಂಟ್ಸ್). ಒಂದು ಹರಳಿನಲ್ಲಿ ಈ ಪರಿಣಾಮವಿರಬೇಕಾದರೆ ಅದಕ್ಕೆ ನಿಶ್ಚಿತವಾದ ಧ್ರುವಾಕ್ಷ ಇರಬೇಕು. 32 ವರ್ಗಗಳ ಹರಳುಗಳಲ್ಲಿ 10ಕ್ಕೆ ಮಾತ್ರ ಈ ವೈಶಿಷ್ಟ್ಯವಿದೆ. ಟಾರ್ಮಾಲಿನ್, ಟಾರ್ಟಾರಿಕ್ ಆಮ್ಲ ಮತ್ತು ಕಬ್ಬಿನಿಂದ ಮಾಡಿದ ಸಕ್ಕರೆ ಈ 10ರಲ್ಲಿ ಸೇರಿವೆ.

ಉಷ್ಣದ ಕಾರಣವಾಗಿ ಹರಳಿನ ವಿಕಾಸ ಅದರ ರಚನೆಯ ವೈಶಿಷ್ಟ್ಯದಿಂದಾಗಿ ನಿರ್ಬಂಧಿತವಾಗಿರುವುದೋ ಅಥವಾ ಅನಿರ್ಬಂಧಿತವಾಗಿದೆಯೋ ಎನ್ನುವುದರ ಮೇಲೆ ಉಷ್ಣಜನ್ಯವಿದ್ಯುತ್ತಿನ ಪರಿಣಾಮ ಅವಲಂಬಿಸಿದೆ. ನಿರ್ಬಂಧಿತವಾಗಿದ್ದಲ್ಲಿ ಆ ಹರಳಿನಲ್ಲಿ ಪ್ರಾಥಮಿಕ (ಪ್ರೈಮರಿ) ಉಷ್ಣಜನ್ಯವಿದ್ಯುತ್ ತೋರಿಬರುವುದು. ಅನಿರ್ಬಂಧಿತವಾಗಿದ್ದಲ್ಲಿ ಅಂಥ ಹರಳಿನಲ್ಲಿ ಪ್ರಾಥಮಿಕ ಪರಿಣಾಮದ ಮೇಲೆ ದ್ವಿತೀಯಕ ಪರಿಣಾಮವೂ ಕಂಡುಬರುತ್ತದೆ. ದ್ವಿತೀಯಕ ಪರಿಣಾಮದ ಹೆಸರು ಸಂಮರ್ದ ವಿದ್ಯುತ್ಪರಿಣಾಮ (ಪೀಜ಼ೊ ಎಲೆಕ್ಟ್ರಿಕ್ ಎಫೆಕ್ಟ್.). ಕಾರಣ, ಇದು ಉಷ್ಣತಾವಿಕಾಸದಿಂದ ಹುಟ್ಟುವ ಸಂಮರ್ದದ ದೆಸೆಯಿಂದ ಹುಟ್ಟುತ್ತದೆ.

ಅಣುವಾದದ ಪ್ರಕಾರ ಪ್ರಾಥಮಿಕ ಪರಿಣಾಮ ಹರಳುಗಳಲ್ಲಿ ಎಲೆಕ್ಟ್ರಾನುಗಳ ವಿತರಣೆ ಬದಲಾಗುವುದರಿಂದ ಹುಟ್ಟುತ್ತದೆ. ದ್ವಿತೀಯಕ ಪರಿಣಾಮ ಧನ ಮತ್ತು ಋಣ ಅಯಾನುಗಳ ಸ್ಥಳಾಂತರದಿಂದ ಹುಟ್ಟುತ್ತದೆ. (ಎಂ.ಐ.ಎಸ್.)

**ಉಷ್ಣತೆ:** ವಸ್ತುವಿನ ಉಷ್ಣದ ಮಟ್ಟ (ಟೆಂಪರೇಚರ್) ವಸ್ತುವಿನ ಬಿಸಿತನ ವಸ್ತುವಿನಲ್ಲಿನ ಅಣು, ಪರಮಾಣು ಅಥವಾ ಅಯಾನ್‌ಗಳ ಚಲನಶಕ್ತಿಯ ಪ್ರಮಾಣ ಸೂಚಕ. ನಿಖರವಾಗಿ ಎರಡು ವಸ್ತುಗಳ ನಡುವೆ ಉಷ್ಣವರ್ಗಾವಣೆಯನ್ನು ನಿಯಂತ್ರಿಸುವ ಆಯಾ ವಸ್ತುವಿನ ಗುಣ ಅದರ ಉಷ್ಣತೆ; ಅಥವಾ ಎರಡು ವ್ಯವಸ್ಥೆಗಳು ಉಷ್ಣಗತೀಯ ಸಮತೋಲದಲ್ಲಿ (ಥರ್ಮೊಡೈನಮಿಕ್ ಈಕ್ವಿಲಿಬ್ರಿಯಂ) ಇವೆಯೇ ಎಂದು ನಿರ್ಧರಿಸುವ ಅವುಗಳ ಗುಣ. ಒಂದು ವಸ್ತುವಿನಿಂದ ಇನ್ನೊಂದು ವಸ್ತುವಿಗೆ ಉಷ್ಣವರ್ಗಾವಣೆಯಾದರೆ ಮೊದಲಿನದರ ಉಷ್ಣತೆ ಎರಡನೆಯದರ ಉಷ್ಣತೆಗಿಂತ ಹೆಚ್ಚು. ಉಷ್ಣವರ್ಗಾವಣೆ ನಡೆಯದೇ ಇದ್ದರೆ ಅವುಗಳ ಉಷ್ಣತೆಗಳು ಸಮಾನವಾಗಿವೆ ಅಥವಾ ಅವು ಉಷ್ಣಗತಿಯ ಸಮತೋಲನದಲ್ಲಿವೆ.

**ಉಷ್ಣಮಾಪಕ:** ಉಷ್ಣತೆಯನ್ನು ಅಳೆಯುವ ಸಾಧನ (ಥರ್ಮಾಮೀಟರ್). ಅಳೆಯುವ ಕ್ರಿಯೆಯ ಹೆಸರು ಉಷ್ಣತಾಮಾಪನ (ಥರ್ಮಾಮಿಟ್ರಿ). ವಸ್ತುವಿನ ಉಷ್ಣವನ್ನು ಅವಲಂಬಿಸಿ ಅದರ ಉಷ್ಣತೆ ಇದೆ. ಇದನ್ನು ಅಳೆಯಲು ಬಳಸುವ ವಸ್ತುವಿನಲ್ಲಿ ನಾವು ನಿರೀಕ್ಷಿಸುವ ಗುಣಗಳು–ಉಷ್ಣತೆಯ ಏರಿಳಿತಗಳಿಗೆ ಅನುಸಾರವಾಗಿ ಅದರ ಒಂದು ಗುಣ ಸ್ಪಂದಿಸಬೇಕು; ಈ ಸ್ಪಂದನವನ್ನು ಸುಲಭವಾಗಿ ಗುರುತಿಸುವಂತಿರಬೇಕು; ಇಂಥ ವಸ್ತುವಿನಿಂದ ರಚಿಸುವ ಉಷ್ಣತಾಮಾಪಕ ರಚನೆ ಮತ್ತು ಉಪಯೋಗಗಳ ದೃಷ್ಟಿಯಿಂದ ಸಮರ್ಪಕವಾಗಿರಬೇಕು. ಪಾದರಸ ಇಂಥ ಒಂದು ವಸ್ತು; ಉಷ್ಣತೆಯ ಏರಿಳಿತಗಳನ್ನು ಅನುಸರಿಸಿ ಸಮಪ್ರಮಾಣದ ವ್ಯಾಕೋಚನ–ಸಂಕೋಚನ ಶೀಲತೆ ಅದಕ್ಕಿದೆ ; ಪಾದರಸದ ಈ ಗುಣವನ್ನು ಸುಲಭವಾಗಿ ಗುರುತಿಸಬಹುದು. ಉಷ್ಣತಾಮಾಪಕದಲ್ಲಿ ಉದ್ದೇಶಕ್ಕೆ ಅನುಗುಣವಾಗಿ 'ಗಾಜಿನಲ್ಲಿ–ದ್ರವ', ದ್ವಿಲೋಹೀಯ, ಅನಿಲ ಹಾಗೂ ರೋಧ ಉಷ್ಣತಾಮಾಪಕಗಳೆಂಬ ನಾನಾ ಪ್ರಕಾರಗಳುಂಟು.

ಪಾದರಸ ಉಷ್ಣತಾಮಾಪಕ: ಪಾದರಸದಿಂದ ಉಷ್ಣತಾಮಾಪಕವನ್ನು ರಚಿಸುವ ಕ್ರಮ ಹೀಗಿದೆ: ಒಂದು ಕೊನೆ ಮುಚ್ಚಿರುವ ಮತ್ತು ಸಮನಾದ ರಂಧ್ರವಿರುವ ತೆಳುಗಾಜಿನ ಲೋಮನಾಳವನ್ನು ತೆಗೆದುಕೊಂಡು ಆ ಕೊನೆಯನ್ನು ಕಾಯಿಸಿ ತೆರೆದ ಕೊನೆಯಿಂದ ಗಾಳಿ ಊದಬೇಕು. ಆಗ ಮುಚ್ಚಿದ ಕೊನೆ ಉಬ್ಬಿ ಬುರುಡೆ ಆಕಾರ ತಳೆಯುವುದು. ತರುವಾಯ ತೆರೆದ ಭಾಗಕ್ಕೆ ಒಂದು ರಬ್ಬರ್ ನಾಳವನ್ನು ಸಿಕ್ಕಿಸಿ ಅದರ ಮೇಲೆ ಲಾಳಿಕೆಯ ಸಹಾಯದಿಂದ ಪಾದರಸ ಹುಯ್ಯಬೇಕು. ಬುರುಡೆಯನ್ನು ಈಗ ಕಾಯಿಸಿದರೆ ಅದರೊಳಗಿನ ಗಾಳಿ ಲೋಮನಾಳದಲ್ಲಿ ಮೇಲೆ ಸಾಗಿ ಪಾದರಸದ ಮೂಲಕ ತಪ್ಪಿಸಿಕೊಳ್ಳುತ್ತದೆ. ಹೀಗೆ ಖಾಲಿಯಾದ ಬುರುಡೆಯಲ್ಲಿ ಸ್ವಲ್ಪ ಪಾದರಸ ತುಂಬುವುದು. ಇದೇ ಪ್ರಯೋಗವನ್ನು ಹಲವಾರು ಸಲ ಆವರ್ತಿಸಿ ಬುರುಡೆಯನ್ನು ಪೂರ್ಣವಾಗಿ ಪಾದರಸದಿಂದ ತುಂಬಬೇಕು. ಕೊನೆಯಲ್ಲಿ ಬುರುಡೆಯನ್ನು ಇನ್ನೊಮ್ಮೆ ಕಾಯಿಸಿದರೆ ಪಾದರಸದ ಸ್ತಂಭ ಇಡೀ ಲೋಮನಾಳವನ್ನು ಆಕ್ರಮಿಸಿ ಅದರೊಳಗಿನ ಗಾಳಿಯನ್ನು ಪೂರ್ಣವಾಗಿ ಹೊರಗೆ ತಳ್ಳುತ್ತದೆ. ಈಗ ಲೋಮನಾಳದ ತೆರೆದ ಭಾಗವನ್ನು ಮೊಹರು ಮಾಡಬೇಕು. ಬುರುಡೆ ತಣಿದಂತೆ ಪಾದರಸ ಸಂಕೋಚಗೊಂಡು ಲೋಮನಾಳದಿಂದ ಬುರುಡೆಯೊಳಕ್ಕೆ ಸರಿಯುತ್ತದೆ. ಹೀಗೆ ತಯಾರಿಸಿದ ಉಷ್ಣತಾಮಾಪಕವನ್ನು ಕ್ರಮಾಂಕಿಸುವ ವಿಧಾನದ ಮೊದಲ ಹೆಜ್ಜೆಯಾಗಿ ಬುರುಡೆಯನ್ನು ಕರಗುತ್ತಿರುವ ಮಂಜುಗೆಡ್ಡೆಯೊಳಗೆ (ಒಂದು ವಾಯುಭಾರ ಒತ್ತಡದಲ್ಲಿ) ಮುಳುಗಿಸಲಾಗುವುದು. ಕೆಲವು ಕ್ಷಣಗಳಲ್ಲಿಯೇ ಬುರುಡೆ ಮತ್ತು ಮಂಜುಗಡ್ಡೆ ಉಷ್ಣಗತೀಯ ಸಮತೋಲನವನ್ನು ತಲುಪುತ್ತವೆ; ಎಂದರೆ, ಅವುಗಳ ಉಷ್ಣತೆಗಳು ಸಮಾನವಾಗಿರುವುವು. ಆಗ ಪಾದರಸಸ್ತಂಭ ಏರಿರುವ ಮಟ್ಟವನ್ನು ಗುರುತಿಸಬೇಕು. ತರುವಾಯ ಬುರುಡೆಯನ್ನು ಅಷ್ಟೇ ವಾಯುಭಾರ ಒತ್ತಡದಲ್ಲಿ ಕುದಿಯುವ ನೀರಿನಲ್ಲಿ ಮುಳುಗಿಸಬೇಕು. ಬುರುಡೆಯೂ ಕುದಿಯುವ ನೀರೂ ಉಷ್ಣಗತೀಯ ಸಮತೋಲಕ್ಕೆ ಬರುವಾಗ ಪಾದರಸಸ್ತಂಭ ಏರಿರುವ ಮಟ್ಟವನ್ನು ಗುರುತಿಸಬೇಕು. ಆದ್ದರಿಂದ ಒಂದು ವಾಯುಭಾರ ಒತ್ತಡದಲ್ಲಿ (ಇದು ಶಿಷ್ಟ ಒತ್ತಡ) ಮಂಜುಗೆಡ್ಡೆ ಕರಗುವ ಉಷ್ಣತೆ ಮತ್ತು ನೀರು ಕುದಿಯುವ ಉಷ್ಣತೆ ಎಂಬ ಎರಡು ಮಿತಿಗಳನ್ನು ಗುರುತಿಸಿದಂತಾಯಿತು. ಸೆಂಟಿಗ್ರೇಡ್ ಮಾನಕ ಪದ್ಧತಿಯಲ್ಲಿ ಕನಿಷ್ಠ ಮಿತಿಯನ್ನು 0 ಎಂದೂ ಗರಿಷ್ಠ ಮಿತಿಯನ್ನು 100 ಎಂದೂ ಗುರುತಿಸಿ ಅಂತರವನ್ನು ಒಂದು ನೂರು ಸಮಾನ ಭಾಗಗಳಾಗಿ ವಿಭಾಗಿಸಿ ನಾಳದ ಮೇಲೆ ಅನುಕ್ರಮ ಗುರುತುಗಳನ್ನು ಮಾಡುತ್ತಾರೆ. ಫ್ಯಾರನ್ ಹೈಟ್ ಮಾನಕ ಪದ್ಧತಿಯಲ್ಲಿ ಕನಿಷ್ಠ ಮಿತಿ 32 ಎಂದೂ ಗರಿಷ್ಠ ಮಿತಿ 212 ಎಂದೂ ಗುರುತಿಸಿ ಅಂತರವನ್ನು 180 ಸಮಾನಭಾಗಗಳಾಗಿ ವಿಭಾಗಿಸಿ ನಾಳವನ್ನು ಕ್ರಮಾಂಕಿಸಿರುತ್ತಾರೆ. ಒಂದು ವಸ್ತುವಿನ ಉಷ್ಣತೆ ಸೆಂಟಿಗ್ರೇಡ್ ಪದ್ಧತಿಯಲ್ಲಿ C, ಫ್ಯಾರನ್ ಹೈಟ್ ಪದ್ಧತಿಯಲ್ಲಿ F ಆಗಿದ್ದರೆ ಅವುಗಳ ನಡುವಿನ ಸಂಬಂಧ

$$\frac{C}{100} = \frac{F-32}{100}$$

ಎಂಬ ಸಮೀಕರಣದಿಂದ ನಿರ್ಣಯವಾಗುವುದು. ಆದ್ದರಿಂದ

$$C = \frac{5}{9}(F-32) \text{ ಅಥವಾ } \quad F = \frac{9C}{5} + 32$$

ಪಾದರಸ ದ್ರವರೂಪದಲ್ಲಿ ಉಳಿದಿರುವ ಉಷ್ಣತಾಮಿತಿಗಳೊಳಗೆ ಮಾತ್ರ ಇಂಥ ಉಷ್ಣತಾಮಾಪಕ ಯಶಸ್ವಿಯಾಗಿ ಕೆಲಸ ಮಾಡಬಲ್ಲುದು, ಪಾದರಸ–39° ಸೆ. ಗ್ರೇಡಿನಲ್ಲಿ ಘನೀಭವಿಸುತ್ತದೆ. 356° ಸೆ. ಗ್ರೇಡಿನಲ್ಲಿ ಆವಿಯಾಗುತ್ತದೆ. ಆದ್ದರಿಂದ ಈ ಮಿತಿಗಳ ಒಳಗೆ ಮಾತ್ರ ಪಾದರಸ ಉಷ್ಣತಾಮಾಪಕ ಉಪಯುಕ್ತ. ಇವುಗಳಿಂದ ಅತೀತ ಉಷ್ಣತೆಗಳನ್ನು ಅಳೆಯಲು ಬೇರೆ ವಿಧದ ಉಷ್ಣತಾಮಾಪಕಗಳನ್ನು ರಚಿಸಬೇಕು.

ಪಾದರಸವೊಂದೇ ಅಲ್ಲ, ಆಲ್ಕೋಹಾಲ್, ಪೆಂಟೇನ್ ಮುಂತಾದ ದ್ರವಗಳನ್ನು ಸಹ ಉಷ್ಣತಾಮಾಪಕದ ರಚನೆಯಲ್ಲಿ ಬಳಸಬಹುದು. ಇಂಥವುಗಳಿಂದ ಸು. 185° ಸೆ. ಗ್ರೇ. ನಿಂದ 950° ಸೆ. ಗ್ರೇಡ್. ವರೆಗಿನ ಉಷ್ಣತೆಗಳನ್ನು ಅಳೆಯಬಹುದು.

ಇಲ್ಲಿ ಹೆಸರಿಸಬಹುದಾದ ಇತರ ಉಷ್ಣತಾಮಾಪಕಗಳು: ಲಿಕ್ವಿಡ್–ಇನ್–ಗ್ಲಾಸ್ ಉಷ್ಣತಾಮಾಪಕ, ಬೈಮೆಟಾಲಿಕ್ ಉಷ್ಣತಾಮಾಪಕ, ಫಿಲ್ಡ್–ಸಿಸ್ಟಂ ಉಷ್ಣತಾಮಾಪಕ, ವಿದ್ಯುದುಷ್ಣತಾಮಾಪಕ ಇತ್ಯಾದಿ.

ಉತ್ತಾಪಮಾಪಕ: 500° ಸೆ. ಗ್ರೇ. ಗಿಂತ ಮೇಲಿನ ಉಷ್ಣತೆಗಳನ್ನು ಅಳೆಯಲು ಬಳಸುವ ಸಾಧನ (ಪೈರಾಮಿಟರ್). ಅಳೆಯುವ ಕ್ರಿಯೆಯ ಹೆಸರು ಉತ್ತಾಪಮಾಪನ (ಪೈರಾಮಿಟ್ರಿ). **(ನೋಡಿ– ಉಷ್ಣಮಾಪನ).**

**ನಿರಪೇಕ್ಷ ಉಷ್ಣತೆ:** –273° ಸೆ. ಗ್ರೇ. ಅನ್ನು ಶೂನ್ಯವೆಂದು ಭಾವಿಸಿ ಅಲ್ಲಿಂದ ವಸ್ತುಗಳ ಉಷ್ಣತೆಗಳನ್ನು ಅಳೆಯುವಾಗ ದೊರೆಯುವ ಸಂಖ್ಯೆ (ಆಬ್ಸಲ್ಯೂಟ್ ಟೆಂಪರೇಚರ್). ಇದನ್ನು ಬರೆಯುವ ಕ್ರಮ °K (ಕೆಲ್ವಿನ್ ಶಬ್ದದ ಮೊದಲ ಇಂಗ್ಲಿಷ್ ಅಕ್ಷರವಾಗಿ K ಬಂದಿದೆ). ಇದರ ಪ್ರಕಾರ ಮಂಜುಗೆಡ್ಡೆ ಕರಗುವ ಉಷ್ಣತೆ 273° K (0° ಸೆ. ಅಥವಾ 32° ಫ್ಯಾ.). ನೀರು ಕುದಿಯುವ ಉಷ್ಣತೆ 373° K (100° ಸೆ. ಅಥವಾ 212° ಫ್ಯಾ.). ಸಾಮಾನ್ಯವಾಗಿ ನಿರಪೇಕ್ಷ ಉಷ್ಣತೆಯನ್ನು T ಸಂಕೇತದಿಂದಲೂ ಸೆಂಟಿಗ್ರೇಡ್ ಉಷ್ಣತೆಯನ್ನು t ಸಂಕೇತದಿಂದಲೂ ಸೂಚಿಸಲಾಗುವುದು ಆಗ $T=t+273$.

$$\text{ಈಗ } t = C = \frac{5}{9}(F-32) \text{ ಆಗಿರುವುದರಿಂದ } T = \frac{5}{9}(F-32) + 273$$

ಎಂದು ಸುಲಭವಾಗಿ ತಿಳಿಯಬಹುದು. ಉಷ್ಣತೆ ಏರಿದಂತೆ ಒಂದು ವಸ್ತು ಅವ್ಯಾಹತವಾಗಿ ವ್ಯಾಕೋಚನಗೊಳ್ಳುತ್ತದೆ. ಈ ವ್ಯಾಕೋಚನಕ್ಕೆ ಪ್ರಾಯಶಃ ಮೇಲುಮಿತಿ ಎಂಬುದೇ ಇಲ್ಲ. ಉಷ್ಣತೆ ತಗ್ಗಿದಂತೆ ವಸ್ತು ಸಂಕೋಚಗೊಂಡರೂ ಇದಕ್ಕೆ ಒಂದು ಕೆಳಮಿತಿ ಇದ್ದೇ ಇದೆ ಎಂದು ಗಣನೆಗಳಿಂದ ತಿಳಿಯಿತು. ಈ ಕೆಳಮಿತಿಯ ಬೆಲೆ–273° ಸೆ. ಎಂದು ತಿಳಿದುದರಿಂದ ಅದನ್ನೇ ಆಧಾರಬಿಂದುವಾಗಿ ಬಳಸಿಕೊಂಡು ಉಷ್ಣತೆಗಳನ್ನು ಅಳತೆ ಮಾಡುವ ನಿರಪೇಕ್ಷ ಮಾನ (ಆ್ಯಬ್ಸಲ್ಯೂಟ್ ಸ್ಕೇಲ್) ರೂಢಿಗೆ ಬಂತು. ಈ ನಿರಪೇಕ್ಷ ಶೂನ್ಯದ ಅತಿನಿಖರ ಬೆಲೆ–273.16° ಸೆ. (ಕೆ.ಎಸ್.ಎಸ್.ಎ.)

**ಉಷ್ಣದ ಪರಿಮಾಣ:** ನಿಶ್ಚಿತ ರಾಶಿ ಇರುವ ವಸ್ತುವಿಗೆ ನಿಶ್ಚಿತ ಪರಿಮಾಣದ ಉಷ್ಣವನ್ನು ಒದಗಿಸಿದಾಗ ಅದರ ಉಷ್ಣತೆ ಹಲವು ಡಿಗ್ರಿಗಳಷ್ಟು ಏರುವುದು. ಉಷ್ಣದ ಪರಿಮಾಣವನ್ನು ಎರಡರಷ್ಟು ಮಾಡಿದಾಗ ಅಥವಾ ವಸ್ತುವಿನ ರಾಶಿಯನ್ನು ಅದರ ಅರ್ಧಕ್ಕೆ ಇಳಿಸಿದಾಗ ಸಾಮಾನ್ಯವಾಗಿ ಉಷ್ಣತೆ ಮೊದಲಿನದರ ಎರಡರಷ್ಟಾಗುತ್ತದೆ. ಎಂದರೆ, ವಸ್ತುವಿನ ರಾಶಿ, ಒದಗಿಸಿದ ಉಷ್ಣ, ವಸ್ತುವಿನ ಉಷ್ಣತೆ ಇವುಗಳಲ್ಲಿ ಒಂದು ಸರಳ ಸಂಬಂಧವಿದೆ. ಸಮಾನ ಪರಿಮಾಣದ ಉಷ್ಣವನ್ನು ಸಮಾನ ತೂಕದ ಭಿನ್ನ ವಸ್ತುಗಳಿಗೆ ಪ್ರತ್ಯೇಕವಾಗಿ ಒದಗಿಸಿದಾಗ ಅವುಗಳ ಉಷ್ಣತೆಗಳ ಏರಿಕೆಗಳು ಭಿನ್ನವಾಗಿರುತ್ತವೆ. ಆದ್ದರಿಂದ ಇವು ಉಷ್ಣಪರಿಮಾಣದಲ್ಲಿ ಬೇರೆ ಬೇರೆ ಆಗಿರಬೇಕು. ಹೀಗಾಗಿ ಉಷ್ಣಪರಿಮಾಣವನ್ನು ನಿಷ್ಕೃಷ್ಟವಾಗಿ ಅಳೆಯಲು ಒಂದು ಮಾನ ಅನಿವಾರ್ಯವಾಯಿತು. ಇದನ್ನು ಕ್ಯಾಲರಿಮಾನ

ದಿಂದ ಸೂಚಿಸಿದೆ. ಅದರ ವ್ಯಾಖ್ಯೆ ಹೀಗಿದೆ: 1 ಗ್ರಾಂ ತೂಕದ ನೀರನ್ನು 14.5° ಸೆ. ಉಷ್ಣತೆಯಿಂದ 15.5°ಸೆ. ಉಷ್ಣತೆಗೆ ಏರಿಸಲು ಒದಗಿಸಬೇಕಾದ ಉಷ್ಣದ ಪರಿಮಾಣ 1 ಕ್ಯಾಲರಿ. ಇದು cgs ವ್ಯವಸ್ಥೆಯಲ್ಲಿ, ಬ್ರಿಟಿಷ್ (fps) ವ್ಯವಸ್ಥೆಯಲ್ಲಿ 1 ಪೌಂಡು ತೂಕದ ನೀರನ್ನು 32° ಫ್ಯಾ. ಉಷ್ಣತೆಯಿಂದ 212° ಫ್ಯಾ. ಉಷ್ಣತೆಗೆ ಏರಿಸಲು ಬೇಕಾಗುವ ಉಷ್ಣದ 1/180ನೆಯ ಭಾಗ 1 ಬ್ರಿಟಿಷ್ ಉಷ್ಣ ಏಕಮಾನ (ಬ್ರಿಟಿಷ್ ಥರ್ಮಲ್ ಯೂನಿಟ್, ಬಿಟಿಯು). ನೀರಿನ ಉಷ್ಣತೆಯನ್ನು 1°ಯಷ್ಟು ಏರಿಸಲು ಒದಗಿಸಬೇಕಾದ ಉಷ್ಣಪರಿಮಾಣ ವಿವಿಧ ಉಷ್ಣತೆಗಳಲ್ಲಿ ಅತ್ಯಲ್ಪವಾಗಿ ವ್ಯತ್ಯಾಸವಾಗುವುದರಿಂದ ಕ್ಯಾಲರಿಯ ವ್ಯಾಖ್ಯೆಯನ್ನು ಬರೆಯುವಾಗ ಉಷ್ಣತಾಮಿತಿಗಳನ್ನು ನಿರೂಪಿಸುವುದು ಅಗತ್ಯ. ಉಷ್ಣಪರಿಮಾಣವನ್ನು ಉಷ್ಣತಾಮಿತಿಗಳನ್ನು ತಿಳಿಸದೇ ಅಳೆಯುವುದು ಸಾಧ್ಯವಾಗಿಲ್ಲ. 100° ಸೆ. ನಲ್ಲಿರುವ 1 ಗ್ರಾಂ ನೀರಿನ ಉಷ್ಣತೆಯನ್ನು 50° ಸೆಂ. 100°ಸೆ.ಗೆ ಏರಿಸಲು ಬೇಕಾಗುವ ಉಷ್ಣದ ಪರಿಮಾಣ 50 ಕ್ಯಾಲೊರಿಗಳು ಎಂದು ಹೇಳಬಹುದು. ಆದ್ದರಿಂದ ನೀರಿನ ಉಷ್ಣತಾಮಿತಿಗಳ ವ್ಯತ್ಯಾಸವನ್ನು ಅದರ ರಾಶಿಯಿಂದ ಗುಣಿಸಿ ದೊರೆಯುವ ಗುಣಲಬ್ಧದಷ್ಟು ಕ್ಯಾಲೊರಿಗಳು ನೀರನ್ನು ಅದರ ಪ್ರಾರಂಭದ ಉಷ್ಣತೆಯಿಂದ ಅಂತಿಮ ಉಷ್ಣತೆಗೆ ಏರಿಸಿವೆ ಎಂದಾಯಿತು.

**ಗ್ರಾಹ್ಯೋಷ್ಣ:** ಒಂದು ಗ್ರಾಂ ತೂಕದ ವಸ್ತುವಿನ ಉಷ್ಣತೆಯನ್ನು 1° ಸೆ. ನಷ್ಟು ಏರಿಸಲು ಬೇಕಾಗುವ ಉಷ್ಣ ಪರಿಮಾಣ (ಸ್ಪೆಸಿಫಿಕ್ ಹೀಟ್). ಈಗ ಇದನ್ನು ವಿಶಿಷ್ಟ ಉಷ್ಣ ಎಂದು ಕರೆಯುತ್ತಾರೆ. ಇದರ ಅಳತೆ ಕ್ಯಾಲೊರಿಗಳಲ್ಲಿ. ಈ ಪರಿಕಲ್ಪನೆಯನ್ನು ಮಂಡಿಸಿದವ (1760) ಸ್ಕಾಟ್ಲೆಂಡಿನ ರಸಾಯನ ವಿಜ್ಞಾನಿ ಜೋಸೆಫ್ ಬ್ಲ್ಯಾಕ್ (1728–99). ಭಿನ್ನ ವಸ್ತುಗಳ ಗ್ರಾಹ್ಯೋಷ್ಣಗಳು ಭಿನ್ನವಾಗಿವೆ. ನೀರಿನ ಗ್ರಾಹ್ಯೋಷ್ಣ 1 ಎಂಬುದು (14.5°–15.5° ಸೆ. ಶ್ರೇಣಿಯಲ್ಲಿ) ಸ್ಪಷ್ಟ. ಉಷ್ಣತಾ ಶ್ರೇಣಿ ವ್ಯತ್ಯಾಸಗೊಂಡಂತೆ ಒಂದೇ ವಸ್ತುವಿನ ಗ್ರಾಹ್ಯೋಷ್ಣ ವ್ಯತ್ಯಾಸವಾಗುತ್ತದೆ. ಇದು ಅತ್ಯಲ್ಪ. ಸಾಮಾನ್ಯ ಮಿತಿಗಳಲ್ಲಿ ಘನ ಮತ್ತು ದ್ರವ ವಸ್ತುಗಳ ಗ್ರಾಹ್ಯೋಷ್ಣಗಳು ಸರಿ ಸುಮಾರಾಗಿ ಸ್ಥಿರವಾಗಿರುತ್ತವೆ.

ಕೆಲವು ವಸ್ತುಗಳ ಗ್ರಾಹ್ಯೋಷ್ಣಗಳನ್ನು ಇಲ್ಲಿ ಬರೆದಿದೆ.

| **ವಸ್ತು** | **ಗ್ರಾಹ್ಯೋಷ್ಣ (ಕಿ.ಗ್ರಾಂ–ಸೆ.)** |
|---|---|
| ಅಲ್ಯೂಮಿನಿಯಮ್ | 0.220 |
| ತಾಮ್ರ | 0.0922 |
| ಚಿನ್ನ | 0.0306 |
| ಕಬ್ಬಿಣ | 0.108 |
| ಸೀಸ | 0.0308 |
| ಬೆಳ್ಳಿ | 0.0565 |

ಅಲ್ಯೂಮಿನಿಯಂನ ಗ್ರಾಹ್ಯೋಷ್ಣ ಸರಿ ಸುಮಾರಾಗಿ 0.22 ಎಂದರೆ ಅರ್ಥವಿಷ್ಟು: 100° ಸೆ. ಉಷ್ಣತೆಗೆ ಕಾಯಿಸಿದ 1 ಗ್ರಾಂ ತೂಕದ ಅಲ್ಯೂಮಿನಿಯಂ ತುಂಡನ್ನು 9° ಸೆ. ಉಷ್ಣತೆಯಲ್ಲಿರುವ 100 ಗ್ರಾಂ ನೀರಿನಲ್ಲಿ ಥಕ್ಕನೆ ಮುಳುಗಿಸಬೇಕು. ತುಂಡಿನಲ್ಲಿದ್ದ ಉಷ್ಣ ಆ ಕ್ಷಣ ನೀರಿಗೆ ವರ್ಗಾವಣೆಗೊಂಡು ನೀರಿನ ಉಷ್ಣತೆ ಏರುತ್ತದೆ. ಇದನ್ನು ಅಳತೆ ಮಾಡಿದಾಗ 0.22° ಸೆ. ಎಂದು ತಿಳಿಯುವುದು. ಆದ್ದರಿಂದ 100 ಗ್ರಾಂ ನೀರನ್ನು 0° ಯಿಂದ 0.22° ಸೆ. ಉಷ್ಣತೆಗೆ ಏರಿಸಲು ಬೇಕಾಗುವಷ್ಟು ಉಷ್ಣವನ್ನು ಅಂದರೆ 22 ಕ್ಯಾಲೊರಿ ಉಷ್ಣವನ್ನು ಅಲ್ಯೂಮಿನಿಯಮ್ ತುಂಡು ಕಳಕೊಂಡಿತು. ಅದೇ ವೇಳೆ ತುಂಡಿನ ಉಷ್ಣತೆ 100° ಸೆ.ನಿಂದ 0.22° ಸೆ.ಗೆ ಇಳಿಯಿತು. ಅಂದರೆ 22 ಕ್ಯಾಲರಿಗಳ ನಷ್ಟದಿಂದ ತುಂಡಿನ ಉಷ್ಣತೆಯಲ್ಲಿ ಆದ ಇಳಿತ 99.78° ಸೆ. ಹೀಗೆ 22 ಕ್ಯಾಲರಿ ಉಷ್ಣ 1 ಗ್ರಾಂ ಅಲ್ಯೂಮಿನಿಯಮ್ಮಿನ ಉಷ್ಣತೆಯನ್ನು 99.78° ಸೆಂ.ನಷ್ಟು ಏರಿಸಲು ಶಕ್ತವೆಂದು ತಿಳಿಯುತ್ತದೆ. ಆದ್ದರಿಂದ ಅಲ್ಯೂಮಿನಿಯಮ್ಮಿನ ಗ್ರಾಹ್ಯೋಷ್ಣ 22/99.78. ಸ್ಥೂಲವಾಗಿ ಇದು 0.22 ಆಗುತ್ತದೆ.

ವಸ್ತು ವಸ್ತುಗಳಲ್ಲಿ ಗ್ರಾಹ್ಯೋಷ್ಣ ಬೇರೆ ಬೇರೆ ಆಗಿರಲು ಒಂದು ಕಾರಣ ಅವುಗಳ ಪರಮಾಣುಗಳ ಭಿನ್ನ ಭಾರಗಳು, ಉದಾಹರಣೆಗೆ, ಸೀಸದ ಪರಮಾಣುವಿನ ಭಾರ (207.21) ಅಲ್ಯೂಮಿನಿಯಮ್ ಪರಮಾಣುವಿನ ಭಾರದ (26.98) ಸುಮಾರು 7.7 ರಷ್ಟು ಇದೆ. ಇದರಿಂದಾಗಿ 1 ಗ್ರಾಂ ತೂಕದ ಸೀಸದ ತುಂಡಿನಲ್ಲಿ ಅಷ್ಟೇ ತೂಕದ ಅಲ್ಯೂಮಿನಿಯಮ್ ತುಂಡಿನಲ್ಲಿರುವ ಪರಮಾಣುಗಳ $\frac{1}{7.7}=\frac{10}{77}$ ರಷ್ಟು ಪರಮಾಣುಗಳು ಮಾತ್ರ ಇವೆ. ಆದ್ದರಿಂದ ನಿಶ್ಚಿತ ತೂಕದ ಅಲ್ಯೂಮಿನಿಯಮ್ಮಿನ ಉಷ್ಣತೆಯನ್ನು 1°ಸೆ. ಏರಿಸಲು ಒದಗಿಸಬೇಕಾಗುವ ಉಷ್ಣಕ್ಕಿಂತ ಕಡಿಮೆ ಉಷ್ಣವನ್ನು ಅಷ್ಟೇ ತೂಕದ ಸೀಸಕ್ಕೆ ಒದಗಿಸಿ ಅಷ್ಟೇ ಉಷ್ಣತಾವೃದ್ಧಿಯನ್ನು ಪಡೆಯಬಹುದು. ಅಂದರೆ ಸೀಸದ ಗ್ರಾಹ್ಯೋಷ್ಣ ಅಲ್ಯೂಮಿನಿಯಂನದಕ್ಕಿಂತ ಕಡಿಮೆ. ಆ ಮೊದಲೇ ಪ್ರಾಯೋಗಿಕವಾಗಿ ಒಂದು ನಿಯಮವನ್ನು ತಿಳಿಯಲಾಗಿತ್ತು: ಘನ ಸ್ಥಿತಿಯಲ್ಲಿರುವ ಒಂದು ಧಾತುವಿನ ಪರುಮಾಣುಭಾರ ಮತ್ತು ಗ್ರಾಹ್ಯೋಷ್ಣಗಳ ಗುಣಲಬ್ಧ ಒಂದು ಸ್ಥಿರಾಂಕ; ಇದರ ಬೆಲೆ ಸರಿ ಸುಮಾರಾಗಿ 6.3 ಡ್ಯೂಲಾಂಗ್ ಮತ್ತು ಪೆಟಿ ಎಂಬ ಸ್ಥಿರಾಂಕ; ಇದರ ಬೆಲೆ ಸರಿ ಸುಮಾರಾಗಿ 6.3. ಡ್ಯೂಲಾಂಗ್ ಮತ್ತು ಪೆಟಿ ಎಂಬ ವಿಜ್ಞಾನಿಗಳು ಈ ನಿಯಮಕ್ಕೆ ತಾತ್ತ್ವಿಕ ಸಮರ್ಥನೆಯನ್ನು ಒದಗಿಸಿದರು (1819). ಈ ಗುಣಲಬ್ಧವನ್ನು ಪರಮಾಣು ಉಷ್ಣ (ಅಟಾಮಿಕ್ ಹೀಟ್) ಎಂದು ಕರೆಯಲಾಗಿದೆ. ಆದ್ದರಿಂದ ಒಂದು ಧಾತುವಿನ ಪರಮಾಣುಭಾರ (W) ತಿಳಿದಿದ್ದರೆ ಅದರ ಗ್ರಾಹ್ಯೋಷ್ಣವನ್ನು (s) ಸುಲಭವಾಗಿ ಬರೆಯಬಹುದು. $sW=6.3$

$s=6.3/W$

ಉದಾಹರಣೆಗೆ, ತವರದ ಪರಮಾಣು ಭಾರ 118.7. ಆದ್ದರಿಂದ ಅದರ ಗ್ರಾಹ್ಯೋಷ್ಣ $\frac{6.3}{118.7}=0.0531.$ ಸಂಯುಕ್ತ ವಸ್ತುಗಳಿಗೆ ಈ ಸೂತ್ರ ಅನ್ವಯವಾಗುವುದಿಲ್ಲ.

ಕೆಲವು ಧಾತುಗಳ ಗ್ರಾಹ್ಯೋಷ್ಣ, ಪರಮಾಣು ಭಾರ ಮತ್ತು ಪರಮಾಣು ಉಷ್ಣಗಳನ್ನು ಇಲ್ಲಿ ಬರೆದಿದೆ.

| ಧಾತು | ಗ್ರಾಹ್ಯೋಷ್ಣ s | ಪರಮಾಣುಭಾರ W | ಪರಮಾಣು ಉಷ್ಣ sW |
|---|---|---|---|
| 1 | 2 | 3 | 4 |
| ಅಲ್ಯೂಮಿನಿಯಮ್ | 0.2200 | 26.98 | 5.94 |
| ಆರ್ಸೆನಿಕ್ | 0.0827 | 74.96 | 6.22 |
| ಬಿಸ್ಮತ್ | 0.0303 | 208.00 | 6.30 |
| ಕ್ಯಾಲ್ಸಿಯಂ | 0.1570 | 40.08 | 6.30 |
| ತಾಮ್ರ | 0.0922 | 63.54 | 5.90 |
| ಚಿನ್ನ | 0.0306 | 197.00 | 6.00 |
| ಬೆಳ್ಳಿ | 0.0565 | 107.88 | 6.10 |
| ಸೀಸ | 0.0308 | 207.21 | 6.40 |
| ಕಬ್ಬಿಣ | 0.1080 | 55.85 | 6.00 |
| ನಿಕ್ಕಲ್ | 0.1050 | 58.71 | 6.30 |
| ತವರ | 0.0531 | 118.70 | 6.30 |
| ಸತು | 0.0928 | 65.38 | 6.10 |

ಅನಿಲಗಳಲ್ಲಿ ಗ್ರಾಹ್ಯೋಷ್ಣ: ದ್ರವ ಮತ್ತು ಘನ ವಸ್ತುಗಳಿಗೆ ಉಷ್ಣವನ್ನು ಒದಗಿಸಿದರೆ ಅವುಗಳ ಘನಗಾತ್ರ ಅಥವಾ ಒತ್ತಡಗಳಲ್ಲಿ ಗಮನಾರ್ಹ ಬದಲಾವಣೆಗಳು ಉಂಟಾಗುವುದಿಲ್ಲ. ಆದರೆ ಅನಿಲಗಳ ಪರಿಸ್ಥಿತಿಯೇ ಬೇರೆ. ನಿಯತ ತೂಕದ ಅನಿಲವನ್ನು ಕಾಯಿಸಿದಾಗ, ಅದರ ಘನಗಾತ್ರ ಸ್ಥಿರವಾಗಿದ್ದಲ್ಲಿ ಒತ್ತಡವೂ, ಒತ್ತಡ ಸ್ಥಿರವಾಗಿದ್ದಲ್ಲಿ ಘನಗಾತ್ರವೂ ವೃದ್ಧಿಸುತ್ತವೆ. ಆದ್ದರಿಂದ ಅನಿಲಗಳ ಗ್ರಾಹ್ಯೋಷ್ಣವನ್ನು ವಿವರಿಸುವಾಗ ಎರಡು ಪ್ರತ್ಯೇಕ ಸಂದರ್ಭಗಳನ್ನು ಅವಲೋಕಿಸಬೇಕು.

1 ಗ್ರಾಂ ತೂಕದ ಅನಿಲವನ್ನು, ಅದರ ಘನಗಾತ್ರ ಸ್ಥಿರವಾಗಿರುವಂತೆ ವಿಧಿಸಿ, ಉಷ್ಣತೆ 1° ಸೆ. ಏರಿಸಲು ಒದಗಿಸಬೇಕಾದ ಉಷ್ಣ (ಕ್ಯಾಲರಿಯಲ್ಲಿ ಅಳತೆ) ಆ ಅನಿಲದ ಸ್ಥಿರ ಘನಗಾತ್ರ ಗ್ರಾಹ್ಯೋಷ್ಣ. ಇವರ ಸಂಕೇತ $C_v$ ಇಲ್ಲಿ ಉಷ್ಣತೆಯೊಡನೆ ಅನಿಲಕ್ಕೆ ಹಿಗ್ಗುವ ಅವಕಾಶವಿಲ್ಲದಿರುವುದರಿಂದ ಅದರ ಆಂತರಿಕ ಒತ್ತಡ ಏರುತ್ತದೆ. ಎಂದರೆ ಒದಗಿಸಿದ ಉಷ್ಣ ಅನಿಲದ ಆಂತರಿಕ ಶಕ್ತಿಯಾಗಿ ಪರಿಣಮಿಸುವುದು.

1 ಗ್ರಾಂ ತೂಕದ ಅನಿಲವನ್ನು, ಅದರ ಒತ್ತಡ ಸ್ಥಿರವಾಗಿರುವಂತೆ ವಿಧಿಸಿ, ಉಷ್ಣತೆ 1° ಸೆ. ಏರಿಸಲು ಒದಗಿಸಬೇಕಾದ ಉಷ್ಣ (ಕ್ಯಾಲರಿಯಲ್ಲಿ ಅಳತೆ) ಆ ಅನಿಲದ ಸ್ಥಿರ ಒತ್ತಡ ಗ್ರಾಹ್ಯೋಷ್ಣ. ಇದರ ಸಂಕೇತ $C_p$. ಇಲ್ಲಿ ಉಷ್ಣತೆಯೊಡನೆ ಅನಿಲಕ್ಕೆ ಹಿಗ್ಗುವ ಅವಕಾಶ (ಒತ್ತಡ ಸ್ಥಿರವಾಗಿದ್ದು) ಉಂಟು, ಎಂದರೆ ಬಾಹ್ಯ ಒತ್ತಡದ ವಿರುದ್ಧ ಅನಿಲ ಕಾರ್ಯವೆಸಗಬೇಕಾಗುವುದು, ಇದಕ್ಕೆ ಬೇಕಾಗುವ ಶಕ್ತಿಯನ್ನು ಅದು ತಾನು ಪಡೆದ ಉಷ್ಣದಿಂದಲೇ ವ್ಯಯಿಸುತ್ತದೆ.

ಸ್ಥಿರ ಒತ್ತಡ ಗ್ರಾಹ್ಯೋಷ್ಣ ($C_p$) ಸ್ಥಿರ ಘನಗಾತ್ರ ಗ್ರಾಹ್ಯೋಷ್ಣಕ್ಕಿಂತ ($C_v$) ಅಧಿಕವಾಗಿದೆ.

ಘನಸ್ಥಿತಿ ವಸ್ತುಗಳ ಗ್ರಾಹ್ಯೋಷ್ಣ ಕಂಡುಹಿಡಿಯುವಿಕೆ: m' ರಾಶಿಯ ವಸ್ತುವನ್ನು $t_1^0$ ಸೆ. ಉಷ್ಣತೆಗೆ ಕಾಯಿಸಿ m' ರಾಶಿಯ ನೀರಿನಲ್ಲಿ ಮುಳುಗಿಸಬೇಕು. ನೀರಿನ ಆರಂಭದ ಉಷ್ಣತೆ $t_2^0$ ಸೆ. ಆಗಿದ್ದು, ವಸ್ತುವನ್ನು ಮುಳುಗಿಸಿದ ತರುವಾಯ ಅದು (ನೀರು ಮತ್ತು ವಸ್ತುವಿನ ಮಿಶ್ರಣ) $t_3^0$ ಸೆ. ಆದರೆ, ಈ ಏರಿಕೆ ವಸ್ತುವಿನಿಂದ ನೀರಿಗೆ ದೊರೆತ ಉಷ್ಣ ಶಕ್ತಿಯ ಪರಿಣಾಮ ಎನ್ನುವುದು ಸ್ಪಷ್ಟ. ವಸ್ತುವಿನಿಂದ ನಷ್ಟವಾದ ಉಷ್ಣವನ್ನು ನೀರು ಪೂರ್ಣವಾಗಿ ಹೀರಿಕೊಳ್ಳುತ್ತದೆ ಎಂದು ಭಾವಿಸಿದರೆ ಈ ಕೆಳಗಿನ ಸಮೀಕರಣಗಳು ದೊರೆಯುತ್ತದೆ:

ವಸ್ತು ಕಳೆದುಕೊಂಡು ಉಷ್ಣ =ms($t_1$-$t_3$) ಇಲ್ಲಿ s ವಸ್ತುವಿನ ಗ್ರಾಹ್ಯೋಷ್ಣ; ನೀರು ಹೀರಿಕೊಂಡ ಉಷ್ಣ $=m'\times 1\times (t_3-t_2)$ ನೀರಿನ ಗ್ರಹ್ಯೋಷ್ಣ 1.

$$\therefore ms(t_1-t_3)=m_1(t_3-t_2)$$

$$\therefore s=\frac{m'(t_3-t_2)}{m(t_1-t_3)}$$

ಹೀಗೆ ತಾತ್ತ್ವಿಕವಾಗಿ ವಸ್ತುವಿನ ಗ್ರಾಹ್ಯೋಷ್ಣ s ನ್ನು ಕಂಡುಹಿಡಿಯಬಹುದು. ನೀರನ್ನು ತುಂಬಿ ಇಟ್ಟ ಪಾತ್ರೆಯ ಹೆಸರು ಕ್ಯಾಲರಿಮಾಪಕ, ಕಾಯಿಸಿದ ವಸ್ತುವನ್ನು ನೀರಿನಲ್ಲಿ ಮುಳುಗಿಸಿದಾಗ ಕ್ಯಾಲರಿಮಾಪಕದ ಉಷ್ಣತೆಯೂ ಮಿಶ್ರಣದ ಉಷ್ಣತೆಗೆ ಏರುತ್ತದೆ. ಆದ್ದರಿಂದ s ನ್ನು ನಿರ್ಧರಿಸುವ ಸಮೀಕರಣದಲ್ಲಿ ಈ ಅಂಶವನ್ನೂ ತರದಿದ್ದರೆ ಫಲಿತಾಂಶ ಪರಿಷ್ಕಾರವಾಗದು. ಕ್ಯಾಲರಿಮಾಪಕದ ರಾಶಿ M ಆಗಿದ್ದರೆ ಅದು ಹೀರಿಕೊಂಡ ಉಷ್ಣ MXPX($t_3$-$t_2$), ಇಲ್ಲಿ p ಕ್ಯಾಲರಿಮಾಪಕದ ಗ್ರಾಹ್ಯೋಷ್ಣ.

$$\therefore ms(t_1-t_3)=m'(t_3-t_2)+M(t_3-t_2)$$

$$\therefore s=\frac{(m'+mp)(t_3-t_2)}{m(t_1-t_3)}$$

ದ್ರವ್ಯ ವಸ್ತುಗಳ ಗ್ರಾಹ್ಯೋಷ್ಣ ಕಂಡುಹಿಡಿಯುವಿಕೆ: ಮೇಲೆ ವಿವರಿಸಿದ ವಿಧಾನವೇ ಇಲ್ಲಿ ಅನ್ವಯವಾಗುತ್ತದೆ. ಕ್ಯಾಲರಿಮಾಪಕದಲ್ಲಿ ದ್ರವವನ್ನು ತುಂಬಬೇಕು. ಅದರೊಡನೆ ರಾಸಾಯನಿಕ ಕ್ರಿಯೆ ಎಸಗದ ಒಂದು ಘನವಸ್ತುವನ್ನು ಕಾಯಿಸಿ ಈ ದ್ರವದಲ್ಲಿ ಮುಳುಗಿಸಬೇಕು. ಘನವಸ್ತುವಿನ ಗ್ರಾಹ್ಯೋಷ್ಣ (s) ತಿಳಿದಿದ್ದರೆ ಈ ಕೆಳಗಿನ ಸಮೀಕರಣಗಳು ಬರುತ್ತವೆ.

ಘನವಸ್ತುವಿನ ರಾಶಿ m, ಗ್ರಾಹ್ಯೋಷ್ಣ s, ಅದನ್ನು ದ್ರವದಲ್ಲಿ ಮುಳುಗಿಸುವ ಮೊದಲಿನ ಉಷ್ಣತೆ $t_1^0$ಸೆ. ಮುಳುಗಿಸಿದ ತರುವಾಯದ ಮಿಶ್ರಣದ ಉಷ್ಣತೆ $t_3^0$ ಸೆ. ಇವೆಲ್ಲವೂ ತಿಳಿದಿದೆ. ಆದ್ದರಿಂದ ಘನವಸ್ತು ಕಳೆದುಕೊಂಡ ಉಷ್ಣ ms($t_1$-$t_3$). ದ್ರವವಸ್ತುವಿನ ರಾಶಿ m', ಆರಂಭದ ಉಷ್ಣತೆ $t_2^0$ಸೆ. ಅಂತಿಮ ಮಿಶ್ರಣದ ಉಷ್ಣತೆ $t_3^0$ ಸೆ. ಆದ್ದರಿಂದ ದ್ರವವಸ್ತು ಗಳಿಸಿದ ಉಷ್ಣ $m'\sigma(t_3-t_2)$. ಇಲ್ಲಿ $\sigma$ ದ್ರವದ ಗ್ರಾಹ್ಯೋಷ್ಣ, ಇದನ್ನು ಕಂಡು ಹಿಡಿಯಬೇಕಾಗಿದೆ. ಇನ್ನು ಕ್ಯಾಲರಿಮಾಪಕ ಗಳಿಸಿದ ಉಷ್ಣ Mp($t_3$-$t_2$)

$$\therefore m\,s(t_1-t_3)=m'\sigma(t_3-t_2)+Mp\,(t_3-t_2)$$

$$\therefore \sigma=\frac{ms\,(t_1-t_3)}{m'\,(t_3-t_2)}-\frac{Mp}{m'}$$

ವಿದ್ಯುತ್ತನ್ನು ಉಪಯೋಗಿಸಿ ಗ್ರಾಹ್ಯೋಷ್ಣ ಕಂಡುಹಿಡಿಯುವಿಕೆ: ಬೇರೆ ಬೇರೆ ಉಷ್ಣತೆಗಳ ಮಿತಿಗಳಲ್ಲಿ ಗ್ರ್ರಾಹ್ಯೋಷ್ಣಗಳನ್ನು ಕಂಡುಹಿಡಿಯಲು ಈಚೆಗೆ ಬಳಕೆಗೆ ಬಂದಿರುವ ವಿಧಾನವಿದು. ಇಲ್ಲಿನ ತತ್ತ್ವವಿಷ್ಟು; ಯಾವ ವಸ್ತುವಿನ ಗ್ರಾಹ್ಯೋಷ್ಣವನ್ನು ತಿಳಿಯಬೇಕೆಂದಿರುವೆವೋ ಅದರೊಡನೆ ಉತ್ತಮ ರೀತಿಯಲ್ಲಿ ಸಂಪರ್ಕ ಇರುವ ವಿದ್ಯುದ್ವಾಹಕದಲ್ಲಿ ವಿದ್ಯುತ್ಪ್ರವಾಹವನ್ನು ಹರಿಸಿ ಉಷ್ಣತೆಯಲ್ಲಿನ ಏರಿಕೆಯನ್ನು ಕಂಡುಹಿಡಿಯುವುದು ಮತ್ತು ಈ ಏರಿಕೆಯಾಗಲು ಬಳಸಿದ ವಿದ್ಯುಚ್ಛಕ್ತಿ ಎಷ್ಟೆಂದು ತಿಳಿಯುವುದು. ಇಂಥ ಪ್ರಯೋಗಗಳಲ್ಲಿ ಪ್ಲಾಟಿನಂ ಉಷ್ಣಮಾಪಕಗಳನ್ನು ಬಳಸುವುದರಿಂದ ಉಷ್ಣತೆಗಳನ್ನು ನಿಷ್ಕೃಷ್ಟವಾಗಿ ಅಳೆಯಬಹುದು; ಕ್ಯಾಲರಿಮಾಪಕದ ಅಡಚಣೆ ಇಲ್ಲಿಲ್ಲ: ನೀರಿನ ಬಳಕೆಯಿಂದ ಉಂಟಾಗುವ ಕೆಲವು ಸಹಜ ತೊಂದರೆಗಳು ಇಲ್ಲಿ ನಿವಾರಣೆಯಾಗುವುವು; ಅನಿಲ, ದ್ರವ, ಘನ, ವಸ್ತುವಿನ ಈ ಮೂರು ಸ್ಥಿತಿಗಳಲ್ಲಿಯೂ ಉಷ್ಣತೆ ಬಲು ಕಡಿಮೆ ಇರುವಾಗಲೂ ಅವುಗಳ ಗ್ರಾಹ್ಯೋಷ್ಣಗಳನ್ನು ಕಂಡುಹಿಡಿಯಬಹುದು.

**ಗುಪ್ತೋಷ್ಣ:** 0° ಸೆ. ಉಷ್ಣತೆಯಲ್ಲಿರುವ ಬರ್ಫಕ್ಕೆ (ಮಂಜುಗಡ್ಡೆ) ಉಷ್ಣವನ್ನು ಒದಗಿಸಿದಂತೆ ಅದು ಕರಗಿ ನೀರಾಗುವವರೆಗೂ ಮಿಶ್ರಣದ ಉಷ್ಣತೆ ಏರುವುದೇ ಇಲ್ಲ: ಬದಲು 0°ಸೆ. ನಲ್ಲೇ ಸ್ಥಿರವಾಗಿ ಉಳಿದಿರುತ್ತದೆ. ನೀರಿಗೆ ಉಷ್ಣ ಒದಗಿಸಿದರೆ ಉಷ್ಣತೆ 100° ಸೆಂ. ವರೆಗೂ ಏರುತ್ತಾ ಹೋಗುವುದು. ಮುಂದೆ ಅದು ಕುದಿಯತೊಡಗುವುದು. ಆದರೆ ಉಷ್ಣತೆ ಮಾತ್ರ ಏರುವುದಿಲ್ಲ. ನೀರಿನ ಕೊನೆಯ ಕಣವೂ ಬಾಷ್ಪವಾಗಿ ಮಾಯವಾಗುವವರೆಗೂ ಈ ಕ್ರಿಯೆ ನಡೆದೇ ಇರುತ್ತದೆ. ನೀರಿನ ಉಷ್ಣತೆ ಮಾತ್ರ 100° ಸೆಂ.ನಲ್ಲಿ ಸ್ಥಿರವಾಗಿ ಉಳಿದಿರುವುದು, ಬರ್ಫ ನೀರಾಗುವವರೆಗೆ ಬರ್ಫಕ್ಕೂ ಕುದಿನೀರು ಪೂರ್ಣ ಬಾಷ್ಪವಾಗಿ ಮಾಯವಾಗುವವರೆಗೆ ಕುದಿನೀರಿಗೂ ಒದಗಿಸಿದ ಉಷ್ಣ ಆಯಾ ಸ್ಥಿತ್ಯಂತರ ಕ್ರಿಯೆಯಲ್ಲಿ ವಿನಿಯೋಗವಾಗಿರಬೇಕು ಎಂದು ಊಹಿಸುವುದು ಸಾಧುವಾಗಿದೆ. ಎಂದರೆ ಬರ್ಫಕ್ಕೆ ಒದಗಿಸಿದ ಉಷ್ಣ ಅದರ ಸ್ಥಿತ್ಯಂತರವಾದ ನೀರಿನಲ್ಲಿ ಗುಪ್ತವಾಗಿದೆ; ಅದೇ ರೀತಿ ಕುದಿನೀರಿಗೆ ಒದಗಿಸಿದ ಉಷ್ಣ ಅದರ ಸ್ಥಿತ್ಯಂತರವಾದ ಬಾಷ್ಪದಲ್ಲಿ ಗುಪ್ತವಾಗಿದೆ– ಇವೆರಡು ಪರಿಸ್ಥಿತಿಗಳಲ್ಲೂ ಒದಗಿಸಿದ ಉಷ್ಣ ಉಷ್ಣತೆಯ ಏರಿಕೆಯಿಂದ ಪ್ರಕಟಿತವಾಗುವುದಿಲ್ಲ. ಒಂದು ಗ್ರಾಂ ಬರ್ಫವನ್ನು ಪೂರ್ಣವಾಗಿ ನೀರಾಗಿಸಲು 80 ಕ್ಯಾಲರಿಗಳಷ್ಟು ಉಷ್ಣವನ್ನೂ ಒಂದು ಗ್ರಾಂ ಕುದಿನೀರನ್ನು ಪೂರ್ಣವಾಗಿ ಬಾಷ್ಪೀಕರಿಸಲು 539 ಕ್ಯಾಲರಿಗಳಷ್ಟು ಉಷ್ಣವನ್ನೂ ಒದಗಿಸಬೇಕು. ಈ ಉಷ್ಣವನ್ನು ಗುಪ್ತೋಷ್ಣವೆಂದು ಕರೆದಿದೆ. ಬರ್ಫದ ಅಣುಗಳ ಸಂಸಕ್ತಿ ಬಲಗಳು ಅತ್ಯಧಿಕವಾಗಿವೆ. ಆದ್ದರಿಂದಲೇ ಅದು ಒಂದು ದೃಢ ವಸ್ತುವಾಗಿ ಉಳಿದಿರುವುದು. ಬರ್ಫವನ್ನು ನೀರಾಗಿಸಬೇಕಾದಾಗ ಈ ಸಂಸಕ್ತಿ ಬಲಗಳನ್ನು ವಿರೋಧಿಸಿ ಅಣುಗಳನ್ನು ಸಡಿಲಗೊಳಿಸಬೇಕು. ಬರ್ಫಕ್ಕೆ ಒದಗಿಸಿದ ಉಷ್ಣಶಕ್ತಿ ಈ ಕ್ರಿಯೆಯಲ್ಲಿ ಪ್ರವೃತ್ತವಾಗಿ ವ್ಯಯವಾಗುವುದರಿಂದ ನೀರಿನ ಉಷ್ಣತೆ ಏರುವುದಿಲ್ಲ. ನೀರಿನಲ್ಲಿ ಅಣುಗಳ ಸಂಸಕ್ತಿ ಬಲಗಳು ಬರ್ಫದಷ್ಟು ತೀವ್ರವಾಗಿಲ್ಲ; ಇದೇ ರೀತಿ ಬಾಷ್ಪದ ಅಣುಗಳ ಸಂಸಕ್ತಿ ಬಲಗಳು ನೀರಿನಷ್ಟು ತೀವ್ರವಾಗಿಲ್ಲ. ವಾಸ್ತವಿಕವಾಗಿ ಈ ಗುಣಗಳು ಎಲ್ಲ ವಸ್ತುಗಳ ಸ್ಥಿತಿತ್ರಯಗಳಿಗೂ ಅನ್ವಯವಾಗುತ್ತವೆ. ಆದ್ದರಿಂದ ಪ್ರತಿಯೊಂದು ವಸ್ತುವಿಗೂ ದ್ರವೀಭವನದ ಗುಪ್ತೋಷ್ಣ (ಲೇಟೆಂಟ್ ಹೀಟ್ ಆಫ್ ಮೆಲ್ಟಿಂಗ್), ಬಾಷ್ಪೀಭವನದ ಗುಪ್ತೋಷ್ಣ (ಲೇಟೆಂಟ್ ಹೀಟ್ ಆಫ್ ವೇಪರೈಸೇಷನ್) ಎಂಬ ಎರಡು ಗುಪ್ತೋಷ್ಣಗಳಿವೆ. ಇವುಗಳ ಬೆಲೆಗಳು ಬೇರೆ ಬೇರೆ ವಸ್ತುಗಳಲ್ಲಿ ಬೇರೆ ಬೇರೆ ಆಗಿವೆ. ಭಾಷ್ಪ ಸ್ಥಿತಿಯಿಂದ ದ್ರವಸ್ಥಿತಿಗೆ ಅಥವಾ ದ್ರವಸ್ಥಿತಿಯಿಂದ ಘನಸ್ಥಿತಿಗೆ ಒಂದು ವಸ್ತುವನ್ನು ರೂಪಾಂತರಿಸುವಾಗ ಆಯಾ ಪರಿಸ್ಥಿತಿಗಳ ಗುಪ್ತೋಷ್ಣಗಳನ್ನು ವಸ್ತುವಿನಿಂದ ಹೊರತೆಗೆಯ (ಅಂದರೆ ಹೀರ) ಬೇಕಾಗುತ್ತದೆ. 100° ಸೆ. ಉಷ್ಣತೆಯಲ್ಲಿರುವ ನೀರಿನ ಭಾಷ್ಪದಿಂದ 100° ಸೆ. ಉಷ್ಣತೆಯ ಕುದಿನೀರು ಪಡೆಯುವಾಗ ಪ್ರತಿ ಗ್ರಾಂ ಬಾಷ್ಪದಿಂದಲೂ 539 ಕ್ಯಾಲೊರಿಗಳಷ್ಟು ಉಷ್ಣವನ್ನು ಹೀರಬೇಕಾಗುವುದು.

ವಸ್ತುಗಳು ದ್ರವೀಭವಿಸುವ ಮತ್ತು ಬಾಷ್ಪೀಭವಿಸುವ ಬಿಂದುಗಳು ಅವುಗಳ ಮೇಲಿನ ಒತ್ತಡದ ಪ್ರಮಾಣವನ್ನು ಸಹ ಅವಲಂಬಿಸಿವೆ. ಎಂದರೆ, ಒಂದು ನಿಯತ ಒತ್ತಡದಲ್ಲಿ ನೀರು 100° ಸೆ. ಉಷ್ಣತೆಯಲ್ಲಿ ಕುದಿಯುತ್ತದೆ. ಒತ್ತಡವನ್ನು ವ್ಯತ್ಯಾಸಗೊಳಿಸಿದರೆ ಕುದಿಬಿಂದು ಬದಲಾಗುವುದು. ಬರ್ಫ ಕರಗಿದೊಡನೆ ಸಂಕೋಚಗೊಳ್ಳುತ್ತದೆ. ಈಗ ಬರ್ಫದ ಮೇಲಣ ಒತ್ತಡವನ್ನು ಹೆಚ್ಚಿಸಿ ದ್ರವೀಭವಿಸುವಾಗ ಅದರ ಗಾತ್ರ ಸಂಕೋಚಗೊಂಡರೆ ಆ ವಸ್ತುವಿನ ಮೇಲಣ ಒತ್ತಡವನ್ನು ಹೆಚ್ಚಿಸಿದಾಗ ಅದರ ದ್ರವೀಭವನ ಬಿಂದು ಇಳಿಯುತ್ತದೆಂದಾಯಿತು. ಪ್ಯಾರಫಿನ್ ಮೇಣದಂಥ ಘನವಸ್ತು ದ್ರವೀಭವಿಸುವಾಗ ಅದರ ಗಾತ್ರ ಹಿಗ್ಗುತ್ತದೆ. ಈಗ ಅದೇ ವಸ್ತುವಿನ ಮೇಲಿನ ಒತ್ತಡವನ್ನು ಹೆಚ್ಚಿಸಿದಾಗ ಅದರ ದ್ರವೀಭವನ ಬಿಂದು ಏರುತ್ತದೆ. ಎಂದರೆ, ಒಂದು ಘನವಸ್ತು ದ್ರವೀಭವಿಸುವಾಗ ಅದರ ಗಾತ್ರ ವಿಕಾಸಗೊಂಡರೆ ಆ ವಸ್ತುವಿನ ಮೇಲಣ ಒತ್ತಡವನ್ನು ಹೆಚ್ಚಿಸಿದಾಗ ಅದರ ದ್ರವೀಭವನ ಬಿಂದು ಏರುವುದೆಂದಾಯಿತು. ಇಂಥ ಪ್ರಭೇದವನ್ನು ವಸ್ತುಗಳು ದ್ರವಸ್ಥಿತಿಯಿಂದ ಬಾಷ್ಪಸ್ಥಿತಿಗೆ ರೂಪಾಂತರಗೊಳ್ಳುವಾಗ ಮಾಡಬೇಕಾಗಿಲ್ಲ. ಕಾರಣ. ದ್ರವಸ್ಥಿತಿಯಿಂದ ಬಾಷ್ಪಸ್ಥಿತಿಗೆ ರೂಪಾಂತರಗೊಳ್ಳುವಾಗ ಎಲ್ಲ ವಸ್ತುಗಳ ಗಾತ್ರಗಳೂ ಹೆಚ್ಚುತ್ತವೆ. ಅಲ್ಲದೆ ದ್ರವದ ಕುದಿಯುವ ಬಿಂದು (ಬಾಷ್ಪೀಭವನ ಬಿಂದು) ದ್ರವದ ಮೇಲಣ ಒತ್ತಡವನ್ನು ಹೆಚ್ಚು ಮಾಡಿದಾಗ ಏರುವುದು ಮತ್ತು ಕಡಿಮೆಮಾಡಿದಾಗ ಇಳಿಯುವುದು. ಒತ್ತಡವನ್ನು ಬದಲಿಸಿ ಬರ್ಫವನ್ನು 0° ಸೆಂ.ಗಿಂತ ಕಡಿಮೆ ಅಥವಾ ಹೆಚ್ಚಿನ ಉಷ್ಣತೆಯಲ್ಲಿ ಕುದಿಯುವಂತೆ ಮಾಡಬಹುದು. ಸಾರಾಂಶವಿಷ್ಟೇ– ವಸ್ತುಗಳ ದ್ರವೀಭವನ ಹಾಗೂ ಬಾಷ್ಪೀಭವನ ಬಿಂದುಗಳ ಮೇಲೆ ಒತ್ತಡದ ಪ್ರಭಾವ ಇದ್ದೇ ಇರುತ್ತದೆ.

ಕರ್ಪೂರ, ಅಯೊಡೀನ್ ಮೊದಲಾದ ಘನವಸ್ತುಗಳು ಉಷ್ಣದ ಪರಿಣಾಮವಾಗಿ ಘನಸ್ಥಿತಿಯಿಂದ ನೇರವಾಗಿ ಬಾಷ್ಪಸ್ಥಿತಿಗೆ (ಅಂದರೆ ದ್ರವಸ್ಥಿತಿಯನ್ನು ತಾಳದೆಯೇ) ರೂಪಾಂತರಗೊಳ್ಳುವುವು. ಈ ಕ್ರಿಯೆಯ ಹೆಸರು ಉತ್ಪತನ (ಸಬ್ಲಿಮೇಷನ್). ಇಲ್ಲಿ ಬೇಕಾಗುವ ಉಷ್ಣದ ಹೆಸರು ಉತ್ಪತನ ಗುಪ್ತೋಷ್ಣ.

ಗುಪ್ತೋಷ್ಣದ ವ್ಯಾಖ್ಯೆಯನ್ನು ಹೀಗೆ ಬರೆಯಬಹುದು: ಘನಸ್ಥಿತಿಯಲ್ಲಿರುವ 1ಗ್ರಾಂ ವಸ್ತುವನ್ನು ಅದೇ ಉಷ್ಣತೆ ಮತ್ತು ಒತ್ತಡದಲ್ಲಿ (ಎಂದರೆ ಉಷ್ಣತೆ ಮತ್ತು ಒತ್ತಡಗಳನ್ನು ಬದಲಾಯಿಸದೆ) 1 ಗ್ರಾಂ ದ್ರವವಾಗಿ ರೂಪಾಂತರಿಸಲು ಬೇಕಾಗುವ ಉಷ್ಣ ಆ ವಸ್ತುವಿನ ದ್ರವೀಭವನ ಗುಪ್ತೋಷ್ಣ. ಇದೇ ಪ್ರಕಾರ. 1 ಗ್ರಾಂ ವಸ್ತುವನ್ನು ಅದೇ ಉಷ್ಣತೆ ಮತ್ತು ಒತ್ತಡದಲ್ಲಿ (ಎಂದರೆ ಉಷ್ಣತೆ ಮತ್ತು ಒತ್ತಡಗಳನ್ನು ಬದಲಾಯಿಸದೆ) 1 ಗ್ರಾಂ ಬಾಷ್ಪವಾಗಿ ರೂಪಾಂತರಿಸಲು ಬೇಕಾಗುವ ಉಷ್ಣ ಆ ವಸ್ತುವಿನ ಬಾಷ್ಪೀಭವನ ಗುಪ್ತೋಷ್ಣ. ಈ ಕ್ರಿಯೆಗಳು (ಘನ $\rightarrow$ ದ್ರವ $\rightarrow$ ಬಾಷ್ಪ) ವಿಪರ್ಯಯವೂ ಹೌದು (ಬಾಷ್ಪ $\rightarrow$ ದ್ರವ $\rightarrow$ ಘನ).

ಗುಪ್ತೋಷ್ಣವನ್ನು ಕಂಡುಹಿಡಿಯುವಿಕೆ: ತಾತ್ತ್ವಿಕವಾಗಿ ಗ್ರಾಹ್ಯೋಷ್ಣವನ್ನು ಕಂಡುಹಿಡಿಯಲು ಬಳಸಿದ ಪರಿಕಲ್ಪನೆಯೇ ಇಲ್ಲಿಯೂ ಉಪಯುಕ್ತವಾಗಿದೆ. ಬ್ಲ್ಯಾಕ್ ಎಂಬ ವಿಜ್ಞಾನಿ ನೀರಿನ ಗುಪ್ತೋಷ್ಣವನ್ನು ತಿಳಿಯಲು ಅನುಸರಿಸಿದ ವಿಧಾನ ಕುತೂಹಲಕಾರಿಯಾದದ್ದು. ಬರ್ಫದ ದೊಡ್ಡ ತುಂಡಿನಲ್ಲಿ ಒಂದು ಗುಳಿಯನ್ನು ಕೊರೆಯಬೇಕು. ಅದರಲ್ಲಿರುವ ನೀರಿನ ಅಂಶವನ್ನೆಲ್ಲ ಒರೆಸಿ ತೆಗೆದು ಗಾಳಿ ಶುಷ್ಕವಾಗಿರುವಂತೆ ಎಚ್ಚರವಹಿಸಬೇಕು. ಈಗ s ಗ್ರಾಹ್ಯೋಷ್ಣ, *m* ರಾಶಿ ಇರುವ ಒಂದು ವಸ್ತುವನ್ನು t° ಸೆ. ಉಷ್ಣತೆಗೆ ಕಾಯಿಸಿ ಇಟ್ಟು ಮೇಲೆ ಬರ್ಫವನ್ನು ಮುಚ್ಚಬೇಕು. ವಸ್ತು ತಣಿದ ಅನಂತರ

ಗುಳಿಯಿಂದ ಅದನ್ನು ಹೊರತೆಗೆದು ಅಲ್ಲಿ ಶೇಖರಗೊಂಡಿರುವ ನೀರಿನ ರಾಶಿ m'ನ್ನು ಅಳೆಯಬೇಕು. ಇಲ್ಲಿ ಬರ್ಫದ ಮತ್ತು ನೀರಿನ ಉಷ್ಣತೆಗಳು 0° ಸೆ. ನಿಂದ ಮೇಲೆ ಏರಿರುವುದಿಲ್ಲ. ವಸ್ತು ಕಳೆದುಕೊಂಡ ಉಷ್ಣ mst. ನೀರು ಪಡೆದ ಉಷ್ಣ m'I ಇಲ್ಲಿ $l$ ನೀರಿನ ಗುಪ್ತೋಷ್ಣ. mst=m'I ಆಗಿರುವುದರಿಂದ $l = \frac{mst}{m'}$ ಎಂದು ತಿಳಿಯುತ್ತೇವೆ. ಈ ಪ್ರಯೋಗ ತಾತ್ತ್ವಿಕವಾಗಿ ಎಷ್ಟೇ ಸಾಧುವಾದರೂ m'ನ್ನು ನಿಖರವಾಗಿ ತಿಳಿಯುವುದು ಕಷ್ಟಸಾಧ್ಯ. $l$ ತಿಳಿದಿರುವಾಗ ಮೇಲಿನ ಸೂತ್ರದಿಂದ sನ್ನು (ಗ್ರಾಹ್ಯೋಷ್ಣ) ಪಡೆಯಬಹುದು.

ಬರ್ಫ ಕರಗಿ ಅದೇ ಉಷ್ಣತೆಯ ನೀರಾಗಿ ರೂಪಾಂತರಿಸುವಾಗ ಅದರ ಗಾತ್ರ ನಿರ್ದಿಷ್ಟ ಪ್ರಮಾಣದಲ್ಲಿ ಸಂಕೋಚಗೊಳ್ಳುವುದು. ಹೀಗೆ ಸಂಕೋಚಗೊಂಡ ಗಾತ್ರವನ್ನು ಅಳೆದು ಎಷ್ಟು ಪರಿಮಾಣದ ಬರ್ಫ ಕರಗಿದೆ ಎಂದು ತಿಳಿಯಲು ಸಾಧ್ಯವಾಗುವುದು. ಈ ತತ್ತ್ವವನ್ನು ಅನುಸರಿಸಿ ನೀರಿನ, ಅದೇ ರೀತಿ ಉಗಿಯ ಗುಪ್ತೋಷ್ಣವನ್ನು ಕಂಡುಹಿಡಿಯಬಹುದು. ಬರ್ಫ ಕರಗಿ ನೀರಾಗಲು, ನೀರು ಕುದಿದು ಉಗಿಯಾಗಲು (ಉಷ್ಣತೆಗಳು ಬದಲಾಗಕೂಡದು) ಎಷ್ಟು ಗುಪ್ತೋಷ್ಣಗಳನ್ನು ಪಡೆಯುವುವೋ ಅಷ್ಟೇ ಗುಪ್ತೋಷ್ಣಗಳನ್ನು ಉಗಿ ದ್ರವೀಭವಿಸಿ ನೀರಾಗಲು, ನೀರು ಘನೀಭವಿಸಿ ಬರ್ಫವಾಗಲು (ಉಷ್ಣತೆಗಳು ಬದಲಾಗಕೂಡದು) ಕಳೆದುಕೊಳ್ಳುತ್ತವೆ.

**ಉಷ್ಣದ ಯಾಂತ್ರಿಕ ಸಾಮ್ಯ** (ಮೆಕ್ಯಾನಿಕಲ್ ಈಕ್ವಿವಲೆಂಟ್ ಆಫ್ ಹೀಟ್): ಸನ್ನೆಗಳು, ಇಳುಕಲು ತಳಗಳು, ಚಕ್ರಗಳು ಮುಂತಾದವುಗಳಿಂದ ರಚಿತವಾದ ಯಂತ್ರಗಳಲ್ಲಿ ಬಳಕೆಯಾಗುವ ಶಕ್ತಿಯ ರೂಪಗಳ ಹೆಸರು ವಿಭವ ಶಕ್ತಿ (ಪೊಟೆನ್ಷಿಯಲ್ ಎನರ್ಜಿ) ಮತ್ತು ಚಲನ ಶಕ್ತಿ (ಕೈನೆಟಿಕ್ ಎನರ್ಜಿ). ಇವೆರಡು ಶಕ್ತಿಗಳನ್ನು ಒಟ್ಟಾಗಿ ಯಾಂತ್ರಿಕ ಶಕ್ತಿ ಎಂದು ಕರೆಯುವುದಿದೆ. ಒಂದು ವ್ಯವಸ್ಥೆಯಲ್ಲಿ ಯಾಂತ್ರಿಕ ಶಕ್ತಿ ಸರಿಸುಮಾರಾಗಿ ಸ್ಥಿರವಾಗಿರುತ್ತದೆ, ಬಾಹ್ಯಬಲಗಳನ್ನು (ಎಂದರೆ ಘರ್ಷಣೆ, ಗಾಳಿ ಉಂಟುಮಾಡುವ ವಿರುದ್ಧ ಬಲಗಳು ಇತ್ಯಾದಿ) ಅಲಕ್ಷಿಸಿದರೆ ಈ ಸ್ಥಿರ ಯಾಂತ್ರಿಕಶಕ್ತಿ ವಿಭವ ಮತ್ತು ಚಲನಶಕ್ತಿಗಳ ನಡುವೆ ಬದಲಾಗುತ್ತ ಇರುತ್ತದೆ; ಅಥವಾ ಒಂದಷ್ಟು ಕಾರ್ಯರೂಪದಲ್ಲಿ ಪ್ರಕಟಗೊಂಡಿರುತ್ತದೆ ಎಂದು 17–18ನೆಯ ಶತಮಾನಗಳ ಅವಧಿಯಲ್ಲಿ ನಂಬಲಾಗಿತ್ತು. ಯಾಂತ್ರಿಕ ಶಕ್ತಿ ನಾಶವಾಗುವುದು ಸಾಧ್ಯವಿಲ್ಲವೆಂದು ಅಂದಿನ ಕಲ್ಪನೆ. ಆದರೆ ವಾಸ್ತವಿಕ ಪರಿಸ್ಥಿತಿಗೆ ಇದು ಹೊಂದಲಿಲ್ಲ. ಎತ್ತರದಿಂದ ಕೈಬಿಟ್ಟ ಒಂದು ಚಂಡು (ಗಾಳಿ ವಿರುದ್ಧ ಬಲ ಉಂಟುಮಾಡುವುದಿಲ್ಲವೆಂದು ಭಾವಿಸಿದಾಗಲೂ) ಮೊದಲಿನ ಎತ್ತರ ಏರುವುದಿಲ್ಲ; ಎರಡು ವಸ್ತುಗಳನ್ನು ಪರಸ್ಪರ ಉಜ್ಜಿದಾಗ ಘರ್ಷಣೆಯೂ ಅದರಿಂದ ಉಷ್ಣವೂ ಜನಿಸುತ್ತಿದ್ದುವು. ಮೊದಲಿನ ಉದಾಹರಣೆಯಲ್ಲಿ ಯಾಂತ್ರಿಕಬಲ ನಾಶಗೊಂಡಂತೆ ಅನ್ನಿಸಿದರೆ ಎರಡನೆಯ ಉದಾಹರಣೆಯಲ್ಲಿ ಅದು ಹೊಸತೊಂದು ಶಕ್ತಿಗೆ–ಉಷ್ಣಕ್ಕೆ–ಅನುಮಾಡಿಕೊಟ್ಟದ್ದು ಕಂಡುಬಂತು. ಅಂತೂ ಒಂದು ವಿಷಯ ಖಚಿತವಾಯಿತು–ಯಾಂತ್ರಿಕಶಕ್ತಿಯ ಸ್ಥಿರತೆಯ ನಿಯಮವನ್ನು ಕಾಪಾಡಲು ಆ ಯಾದಿಗೆ ವಿಭವಶಕ್ತಿ, ಚಲನಶಕ್ತಿ, ಕಾರ್ಯ ಇವುಗಳ ಜೊತೆಗೆ ಉಷ್ಣಶಕ್ತಿಯನ್ನೂ ಸೇರಿಸಬೇಕು. ಎಂದರೆ ಉಷ್ಣ ಯಾಂತ್ರಿಕಶಕ್ತಿಯನ್ನು ಉತ್ಪಾದಿಸಬಲ್ಲದು ಎಂದಾಯಿತು. ನಿಸರ್ಗದಲ್ಲಿ ಸೂರ್ಯೋಷ್ಣದಿಂದ ಕಾದನೀರು ಮೇಲೇರಿ ಮಳೆಯಾಗಿ ಬೀಳುವ ಘಟನೆ ಇದಕ್ಕೊಂದು ನಿದರ್ಶನ, ಮಾನವ ಉಗಿ (ಎಂದರೆ ಉಷ್ಣ) ಶಕ್ತಿಯನ್ನು ಯಾಂತ್ರಿಕ ಶಕ್ತಿಯಾಗಿ ಪರಿವರ್ತಿಸುವ ಹೊಸ ಆವಿಷ್ಕಾರವನ್ನು ಕಾಣುತ್ತಿದ್ದುದು 18ನೆಯ ಶತಮಾನದಲ್ಲಿಯೇ. ಈಗ ಉಷ್ಣ ಶಕ್ತಿ ಯಾಂತ್ರಿಕ ಶಕ್ತಿಯಾಗಿ ಪರಿವರ್ತಿತಗೊಳ್ಳುವುದು ಸಾಧ್ಯವಾದರೆ ಉಷ್ಣಶಕ್ತಿಯನ್ನು ಉಂಟುಮಾಡಬಲ್ಲ ಬೇರೆ ಯಾವುದೇ ಶಕ್ತಿಯೂ (ವಿದ್ಯುಚ್ಛಕ್ತಿ, ಕಾಂತತೆ ಇತ್ಯಾದಿ) ಕಾರ್ಯವೆಸಗಬೇಕು; ಅಂದರೆ ಶಕ್ತಿಯ ವಿವಿಧ ರೂಪಗಳನ್ನು ಕಾರ್ಯದ ವ್ಯಾಪ್ತಿಯಲ್ಲಿ ಪರಿಗಣಿಸಬೇಕು: ಯಾವಶಕ್ತಿಯನ್ನೂ ಅದರ ಪರಿವರ್ತನ ಕ್ರಿಯೆಯಲ್ಲಿ ಕಳೆದುಕೊಳ್ಳಲು ಸಾಧ್ಯವಿಲ್ಲ ಅದೇ ರೀತಿ ಹೊಸ ಶಕ್ತಿಯನ್ನು ಸೃಷ್ಟಿಸಲೂ ಸಾಧ್ಯವಿಲ್ಲ – ಈ ರೀತಿ ತರ್ಕಸರಣಿ ಬೆಳೆಯಿತು. ಶಕ್ತಿಯ ಸ್ಥಾಯಿತ್ವದ (ಕನ್‌ಸರ್ವೇಷನ್) ಈ ತರ್ಕವನ್ನು ಪ್ರಾಯೋಗಿಕವಾಗಿ ಸಾಧಿಸಲು ಪ್ರಯತ್ನ ಮಾಡಿದವ ಇಂಗ್ಲೆಂಡಿನ ಭೌತವಿಜ್ಞಾನಿ ಜೇಮ್ಸ್ ಪ್ರೆಸ್ಕಾಟ್ ಜೌಲ್ (1818–89) ಎಂಬಾತ. ಉಷ್ಣದ ಯಾಂತ್ರಿಕ ಸಮಾನವನ್ನು ಕಂಡುಹಿಡಿಯಬೇಕೆಂಬಯದು ಅವನ ಉದ್ದೇಶ. ಆತನ ಹೆಸರಿನಿಂದಲೇ ಪ್ರಸಿದ್ಧವಾಗಿರುವ ಪ್ರಯೋಗದ ರೂಪರೇಖೆಯಿಷ್ಟು–ನೀರು ತುಂಬಿದ ಉರುಳಿ (A), ಅದರೊಳಗೆ ಆವರ್ತಿಸುವ ಅಕ್ಷ, ಇದಕ್ಕೆ ಜೋಡಿಸಿರುವ ಹಲವಾರು ಹುಟ್ಟುಗಳು. ಅಕ್ಷ (B) ಮತ್ತು ಅದರೊಡನೆ ಹುಟ್ಟುಗಳು ಆವರ್ತಿಸುವಾಗ ನೀರು ಅವುಗಳೊಡನೆ ಆವರ್ತಿಸದಂತೆ ತಡೆಹಿಡಿಯಲು ಕೆಲವು ಪ್ರತಿಬಂಧಕಗಳನ್ನು ಉರುಳಿಯಲ್ಲಿ ಅಳವಡಿಸಲಾಗಿದೆ.

ಅಕ್ಷಕ್ಕೆ ಜೋಡಿಸಿರುವ ತೂಕದ ಗುಂಡು ನೆಲಕ್ಕೆ ಲಂಬವಾಗಿ ಇಳಿಯುವಾಗ ಅಕ್ಷ ಆವರ್ತಿಸುವಂತೆ ಇಲ್ಲಿನ ಏರ್ಪಾಡು. ಗುಂಡಿನ ತೂಕ, ಗುಂಡು ಲಂಬವಾಗಿ ಇಳಿದ ದೂರ ತಿಳಿದಿವೆ. ಆದ್ದರಿಂದ ಈ ಚಲನೆಯಿಂದ ನಡೆದ ಯಾಂತ್ರಿಕ ಕಾರ್ಯ ಎಷ್ಟೆಂಬುದು ತಿಳಿದಿದೆ. ಅಕ್ಷ ಮತ್ತು ಹುಟ್ಟುಗಳು ಆವರ್ತಿಸುವಾಗ ಅವುಗಳೊಡನೆ ಆವರ್ತಿಸಲಾಗದ ನೀರು ಘರ್ಷಣೆ ಬಲಗಳನ್ನು ಉತ್ಪಾದಿಸುತ್ತದೆ. ಇವುಗಳ ಪರಿಣಾಮವಾಗಿ ಉಷ್ಣ ಜನಿಸಿ ನೀರು ಕಾಯುತ್ತದೆ. ಉರುಳಿಯಲ್ಲಿರುವ ನೀರಿನ ಪರಿಮಾಣ, ಪ್ರಾರಂಭದ ಉಷ್ಣತೆ, ಅಂತಿಮ ಉಷ್ಣತೆ ಇವನ್ನು ತಿಳಿಯುವುದರ ಮೂಲಕ ಜನಿಸಿದ ಉಷ್ಣವನ್ನು ಗಣಿಸಬಹುದು. ಆದ್ದರಿಂದ ಇಂತಿಷ್ಟು ಕಾರ್ಯ ಇಂತಿಷ್ಟು ಉಷ್ಣಶಕ್ತಿಯನ್ನು ಉತ್ಪಾದಿಸಿದೆ ಎಂದು ವೇದ್ಯವಾದಂತಾಯಿತು. ಈ ಪ್ರಯೋಗವನ್ನು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಪುನರಾವರ್ತಿಸಿ ಪ್ರಯೋಗವಿಧಾನವನ್ನು ಪರಿಷ್ಕರಿಸಿ ಯಾಂತ್ರಿಕ ಕಾರ್ಯ ಮತ್ತು ತಜ್ಜನಿತ ಉಷ್ಣಶಕ್ತಿ ಇವುಗಳ ನಡುವೆ ಒಂದು ನೇರ ಸಂಬಂಧ ಸ್ಥಾಪಿಸಲು ಜೌಲ್ ಶಕ್ತನಾದ, ಅವನ ಮಾತಿನಲ್ಲಿ 1 ಪೌಂಡ್ ತೂಕ 772° ಗಳ ಮೂಲಕ ಮ್ಯಾಂಚೆಸ್ಟರಿನಲ್ಲಿ ನೆರವೇರಿಸುವ ಕಾರ್ಯವನ್ನು ನೀರಿನಲ್ಲಿ ಘರ್ಷಣೆಯ ಬಲಗಳನ್ನು ಉಂಟುಮಾಡಿ ಉಷ್ಣಶಕ್ತಿಯನ್ನು ಉತ್ಪಾದಿಸಲು ವ್ಯಯಿಸಿದರೆ ಅದು 1 ಪೌಂಡ್ ನೀರಿನ ಉಷ್ಣತೆಯನ್ನು 1° ಫ್ಯಾನಷ್ಟು ಏರಿಸುತ್ತದೆ.



ಜೌಲನ ಉಪಕರಣ

ಜೂಲನ ಪ್ರಯೋಗಗಳಿಂದ W=JH ಎಂದು ತಿಳಿಯಿತು. ಇಲ್ಲಿ W ಎಸಗಿದ ಕಾರ್ಯ, H ಉತ್ಪನ್ನವಾದ ಉಷ್ಣ, J ಉಷ್ಣದ ಯಾಂತ್ರಿಕ ಸಾಮ್ಯಾಂಕ ಅಥವಾ ಜೂಲನ ಸ್ಥಿರಾಂಕ. ಮೆಟ್ರಿಕ್ ಮಾನಪದ್ಧತಿಯಲ್ಲಿ 1 ಜೂಲ್=$10^7$ ಅರ್ಗ್‌ಗಳು. ಆದ್ದರಿಂದ J ಯ ಬೆಲೆ 4.18 ಜೂಲುಗಳು. ಎಂದರೆ, 1 ಕೆಲೊರಿ ಉಷ್ಣಶಕ್ತಿ 4.18 ಜೂಲುಗಳಷ್ಟು ಕಾರ್ಯಕ್ಕೆ ಸಮಾನ.

**ಕ್ಯಾಲೊರಿಮಾಪನ:** ಬೇರೆ ಬೇರೆ ವಸ್ತುಗಳ ಗ್ರಾಹ್ಯೋಷ್ಣ, ಗುಪ್ತೋಷ್ಣ ಮುಂತಾದುವನ್ನು ಕಂಡುಹಿಡಿಯುವ ಸಂದರ್ಭಗಳಲ್ಲಿ ಅವುಗಳ ಉಷ್ಣತೆಗಳನ್ನು ಅಳೆಯಬೇಕಾಗುವುದು. ಇಲ್ಲಿ ಅಳತೆಗಳು ನಿಷ್ಕೃಷ್ಟವಾಗಿರಬೇಕಾದದ್ದು ಅತ್ಯವಶ್ಯ. ಇಂಥ ಪ್ರಯೋಗಗಳಲ್ಲಿ ಕ್ಯಾಲೊರಿ ಮಾಪಕವೆಂಬ ತೀವ್ರವಾಹಕದ ಪಾತ್ರೆಯನ್ನು ಬಳಸುವ ಕಾರಣದಿಂದ ಈ ಅಭ್ಯಾಸವನ್ನು ಕೆಲೊರಿಮಾಪನಶಾಖೆಯೆಂದು ಕರೆಯುವುದು ವಾಡಿಕೆ.

ಕ್ಯಾಲೊರಿಮಾಪಕದ ಸಹಾಯದಿಂದ ವಸ್ತುಗಳ ಗ್ರಾಹ್ಯೋಷ್ಣಗಳನ್ನು ಕಂಡುಹಿಡಿಯಬಹುದು. (ಕೆ.ಎಸ್.ಎಸ್.ಎ.)

**ಉಷ್ಣಪರಿವರ್ತನೆ:** ಯಾವುದೇ ಪದಾರ್ಥಕ್ಕೆ ಉಷ್ಣ ಒದಗಿಸಿ ಅದನ್ನು ಬೇರೆ ಪದಾರ್ಥ ಅಥವಾ ಪದಾರ್ಥಗಳಾಗಿ ಪರಿವರ್ತಿಸುವ ಕ್ರಿಯೆ (ಪೈರಾಲಿಸಿಸ್). ಉಷ್ಣದೊಂದಿಗೆ ಬೇರೊಂದು ಪದಾರ್ಥವನ್ನೂ ಒದಗಿಸಿ ರಾಸಾಯನಿಕ ಪರಿವರ್ತನೆ ಉಂಟುಮಾಡಿದರೆ ಅದು ಉಷ್ಣಪರಿವರ್ತನೆ ಎನಿಸಿಕೊಳ್ಳುವುದಿಲ್ಲ. ಉದಾಹರಣೆಗೆ, ಪದಾರ್ಥವನ್ನು ಆಕ್ಸಿಜನ್ನಿನೊಂದಿಗೆ ಕಾಯಿಸಿದರೆ ಆಗಬಹುದಾದ ಪರಿವರ್ತನೆಗೆ ದಹನ (ಕಂಬಸ್ಚನ್) ಎಂದೂ ಹೈಡ್ರಾಜನ್ನಿನೊಂದಿಗೆ ಕಾಯಿಸಿದರೆ ಆಗಬಹುದಾದ ಪರಿವರ್ತನೆಗೆ ಹೈಡ್ರಾಜನೀಕರಣ (ಹೈಡ್ರಾಜಿನೇಷನ್) ಎಂದೂ ಹೆಸರು. ಆದರೆ ಹಾಗೆ ಒದಗಿಸಿದ ಪದಾರ್ಥ ರಾಸಾಯನಿಕ ಕ್ರಿಯೆಯಲ್ಲಿ ಪಾಲ್ಗೊಳ್ಳದೆ ಕೇವಲ ದ್ರಾವಕವಾಗಿ (ಸಾಲ್ವೆಂಟ್) ಅಥವಾ ವೇಗವರ್ಧಕವಾಗಿದ್ದುಕೊಂಡು (ಕ್ಯಾಟಲಿಸ್ಟ್) ಪರಿವರ್ತನೆಗೆ ನೆರವು ನೀಡಿದರೆ ಆಗಲೂ ಆ ಕ್ರಿಯೆ ಉಷ್ಣಪರಿವರ್ತನೆಯೇ. ಈ ಬಗೆಯ ಕ್ರಿಯೆಯಿಂದ ಉಂಟಾಗುವ ಪದಾರ್ಥಗಳೇನಿದ್ದರೂ ಮೂಲಪದಾರ್ಥದಲ್ಲಿನ ಅಣುಪರಮಾಣುಗಳ ಪುನರ್ಯೋಜನೆಯಿಂದ ಉಂಟಾದವು.

ಪದದ ಮೂಲ ಅರ್ಥಕ್ಕೆ ಪ್ರಾಶಸ್ತ್ಯ ನೀಡಿ ಉಷ್ಣದ ಸಹಾಯದಿಂದ ಯಾವ ಪದಾರ್ಥವನ್ನು ಪರಿವರ್ತಿಸಿದರೂ ಆ ಕ್ರಿಯೆಗೆ ಉಷ್ಣಪರಿವರ್ತನೆ ಎನ್ನಬಹುದು. ಆದರೆ ಸಾಮಾನ್ಯವಾಗಿ ಈ ಪದವನ್ನು ಬಳಸುವುದು ನೈಸರ್ಗಿಕವಾಗಿ ದೊರೆಯುವ ಸಂಕೀರ್ಣ ಇಂಗಾಲೀಯ ಪದಾರ್ಥಗಳ ವಿಷಯದಲ್ಲಿ ಮಾತ್ರ. ಪರಿವರ್ತನೆ ಹೊಂದುವ ಪದಾರ್ಥ ಒಂದೇ ಒಂದು ನಿರ್ದಿಷ್ಟ ಸಂಯುಕ್ತವಾಗಿದ್ದು, ಅದು ಕಾಯಿಸಿದಾಗ ಎರಡು ಅಥವಾ ಅನೇಕ ಧಾತು ಅಥವಾ ಸಂಯುಕ್ತಗಳಾಗಿ ಒಡೆದರೆ ಆ ಕ್ರಿಯೆಯನ್ನು ಉಷ್ಣವಿಭಜನೆ (ಥರ್ಮಲ್ ಡೀಕಾಂಪೊಸಿಷನ್) ಎನ್ನುವುದು ವಾಡಿಕೆ. ಔದ್ಯೋಗಿಕ ಕ್ಷೇತ್ರದಲ್ಲಿ ಇಂದು ಉಷ್ಣಪರಿವರ್ತನೆಗೆ ಗುರಿಪಡಿಸುವ ಪದಾರ್ಥಗಳೆಂದರೆ ಮುಖ್ಯವಾಗಿ ಕಲ್ಲಿದ್ದಲು, ಮರ, ಕಲ್ಲೆಣ್ಣೆ (ಪೆಟ್ರೋಲಿಯಂ) ಮತ್ತು ನಿಸರ್ಗಾನಿಲ.

ಔದ್ಯೋಗಿಕ ಪ್ರಾಮುಖ್ಯವುಳ್ಳ ಉಷ್ಣಪರಿವರ್ತನ ವಿಧಾನಗಳಲ್ಲಿ ಸಾಮಾನ್ಯವಾಗಿ ಹೆಚ್ಚಿನ ಉಷ್ಣತೆಯನ್ನು ಉಪಯೋಗಿಸುತ್ತಿರುತ್ತಾರೆ. ಒತ್ತಡ ಕೆಲವು ಸಂದರ್ಭಗಳಲ್ಲಿ ಹೆಚ್ಚಿಸುವುದು ಮತ್ತೆ ಕೆಲವು ಸಂದರ್ಭಗಳಲ್ಲಿ ಕಡಿಮೆ ಮಾಡುವುದೂ ಉಂಟು. ಉಷ್ಣ ಪರಿವರ್ತನೆಗೆ ಗುರಿಪಡಿಸುವ ಪದಾರ್ಥ ಘನಸ್ಥಿತಿಯಲ್ಲಿರಬಹುದು, ದ್ರವಸ್ಥಿತಿಯಲ್ಲಿರಬಹುದು, ಇಲ್ಲವೇ ಅನಿಲಸ್ಥಿತಿಯಲ್ಲೂ ಇರಬಹುದು. ಕಲ್ಲಿದ್ದಲನ್ನು ಅಧಿಕ ಉಷ್ಣತೆಯಲ್ಲಿ (800°–1000° ಸೆಂ.) ಕಾಯಿಸುವುದೂ ಉಂಟು; ಕಡಿಮೆ ತಾಪಮಾನದಲ್ಲಿ (500°–800° ಸೆಂ.)

ಕಾಯಿಸುವುದೂ ಉಂಟು. ಅದರಿಂದ ಬರುವ ಮುಖ್ಯ ಉತ್ಪನ್ನಗಳು ಕೋಕ್, ಕಲ್ಲಿದ್ದಲ ಅನಿಲ (ಕೋಲ್‌ಗ್ಯಾಸ್) ಮತ್ತು ಕಲ್ಲಿದ್ದಲು ಡಾಮರು (ಕೋಲ್‌ಟಾರ್). ಡಾಮರಿನಿಂದ ಬೆಂಜೀನ್, ಟಾಲ್ವೀನ್, ನ್ಯಾಫ್ತಲೀನ್, ಕ್ರೆಸಾಲುಗಳು ಮುಂತಾದ ರಾಸಾಯನಿಕಗಳನ್ನು ಬೇರ್ಪಡಿಸುತ್ತಾರೆ. ವರ್ಣದ್ರವಗಳು, ಔಷಧ ಪದಾರ್ಥಗಳು, ಪ್ಲಾಸ್ಟಿಕುಗಳು ಮುಂತಾದ ಅನೇಕ ಉಪಯುಕ್ತ ಪದಾರ್ಥಗಳ ತಯಾರಿಕೆಯಲ್ಲಿ ಈ ರಾಸಾಯನಿಕಗಳ ಉಪಯೋಗ ಇದೆ.

ಮರವನ್ನು ಉಷ್ಣಪರಿವರ್ತನೆಗೊಳಪಡಿಸುವುದು ಮುಖ್ಯವಾಗಿ ಇದ್ದಲಿನ ತಯಾರಿಕೆ, ಮೆಥೆನಾಲ್, ಅಸಿಟಿಕ್ ಆಮ್ಲ ಮತ್ತು ಅಸಿಟೋನುಗಳು ಇದರಲ್ಲಿ ಬರುವ ಮುಖ್ಯ ಉಪೋತ್ಪನ್ನಗಳು.

ಕಚ್ಚಾ ಕಲ್ಲೆಣ್ಣೆಯನ್ನಾಗಲೀ ಅದರ ಆಂಶಿಕ ಆಸವನದಿಂದ (ಫ್ರ್ಯಾಕ್ಷನಲ್ ಡಿಸ್ಟಿಲೇಷನ್) ಒದಗಿಬರುವ ಯಾವುದಾದರೊಂದು ಅಂಶವನ್ನಾಗಲೀ ಉಷ್ಣಪರಿವರ್ತನೆಗೆ ಒಳಪಡಿಸುವುದಕ್ಕೆ ಭೇದನೆ (ಕ್ರ್ಯಾಕಿಂಗ್)ಎಂಬ ಹೆಸರಿದೆ. ಏಕೆಂದರೆ ಈ ಕ್ರಿಯೆಯಲ್ಲಿ ದೊಡ್ಡ ದೊಡ್ಡ ಹೈಡ್ರೊಕಾರ್ಬನ್ ಅಣುಗಳನ್ನು ಭೇದಿಸಿ ಚಿಕ್ಕ ಚಿಕ್ಕ ಹೈಡ್ರೊಕಾರ್ಬನ್ ಅಣುಗಳಾಗಿ ಮಾಡುವುದೇ ಮುಖ್ಯ ರಾಸಾಯನಿಕ ಬದಲಾವಣೆ. ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಹೆಚ್ಚು ಬೇಡಿಕೆ ಇರುವ ಪೆಟ್ರೋಲ್ ಅಥವಾ ಗ್ಯಾಸೊಲೀನಿನಲ್ಲಿರುವುದು ಅಂಥ ಚಿಕ್ಕ ಚಿಕ್ಕ ಹೈಡ್ರೊಕಾರ್ಬನ್ ಅಣುಗಳು. ಆದ್ದರಿಂದ ಈ ಭೇದನೆ ವಿಧಾನದಿಂದ ಪೆಟ್ರೋಲ್ ಉತ್ಪತ್ತಿಯನ್ನು ಹೆಚ್ಚಿಸಬಹುದು. ಉಷ್ಣಭೇದನೆಯಲ್ಲಿ (ಥರ್ಮಲ್ ಕ್ರ್ಯಾಕಿಂಗ್) 500° ಸೆಂ. ನಿಂದ 600° ಸೆಂ. ಉಷ್ಣತೆಯನ್ನೂ 40 ರಿಂದ 70 ವಾಯುಭಾರಗಳಷ್ಟು ಒತ್ತಡವನ್ನೂ ಉಪಯೋಗಿಸುತ್ತಾರೆ. ವೇಗವರ್ಧಕಭೇದನೆಯಲ್ಲಿ (ಕೆಟಲಿಟಿಕ್ ಕ್ರ್ಯಾಕಿಂಗ್) ರಾಸಾಯನಿಕ ಪರಿವರ್ತನೆಗೆ ನೆರವು ನೀಡಲು ವೇಗವರ್ಧಕವನ್ನು ಬಳಸುವುದರಿಂದ 450° ಸೆ. ಉಷ್ಣತೆ ಮತ್ತು ಕೇವಲ 2–3 ವಾಯುಭಾರಗಳಷ್ಟು ಒತ್ತಡ ಸಾಕಾಗುತ್ತದೆ. ಪೆಟ್ರೋಲಿಯಂ ಭೇದನೆಯಿಂದ ಹೆಚ್ಚು ಪೆಟ್ರೋಲ್ ಉತ್ಪತ್ತಿಯಾಗುವುದರ ಜೊತೆಗೆ ಎಥಿಲೀನ್, ಪ್ರೊಪಿಲೀನ್, ಬ್ಯುಟಿಲೀನ್ ಮುಂತಾದ ಕೆಳ ಹೈಡ್ರೊಕಾರ್ಬನ್‌ಗಳು ಉಪೋತ್ಪನ್ನಗಳಾಗಿ ದೊರೆಯುತ್ತವೆ. ಇವುಗಳಿಂದ ಈಥೈಲ್ ಆಲ್ಕೊಹಾಲ್, ಗ್ಲೈಕಾಲ್, ಈಥರ್, ಪಾಲಿಥೀನ್, ಗ್ಲಿಸರಾಲ್, ಬ್ಯೂಟಾಡಯೀನ್ (ಕೃತಕ ರಬ್ಬರ್ ತಯಾರಿಕೆ) ಮುಂತಾದ ಅನೇಕ ಉಪಯುಕ್ತ ಪದಾರ್ಥಗಳನ್ನು ತಯಾರಿಸುತ್ತಾರೆ.

ನಿಸರ್ಗಾನಿಲದಿಂದ ಬೇರ್ಪಡಿಸಿದ ಮೀಥೇನ್, ಈಥೇನ್, ಪ್ರೊಪೇನ್ ಮತ್ತು ಬ್ಯೂಟೇನುಗಳನ್ನು ಉಷ್ಣಪರಿವರ್ತನೆಗೊಳಪಡಿಸಿದ ಇಂಗಾಲದ ಕಪ್ಪು, ಮೆಥನಾಲ್, ಫಾರ್ಮಾಲ್ಡಿಹೈಡ್, ಕ್ಲೋರೋಫಾರಂ ಮುಂತಾದ ಉಪಯುಕ್ತ ಪದಾರ್ಥಗಳನ್ನು ಉಪಯೋಗಿಸುತ್ತಾರೆ. (ಜಿ.ಆರ್.ಎಲ್.)

**ಉಷ್ಣಮಾಪನ:** ಉಷ್ಣತೆಯನ್ನು ಅಳೆಯುವ ಕ್ರಿಯೆ (ಥರ್ಮಾಮಿಟ್ರಿ), ಅಳೆಯುವ ಸಾಧನದ ಹೆಸರು ಉಷ್ಣತಾಮಾಪಕ. ಉಷ್ಣತಾಮಾಪಕದಲ್ಲಿ ಎರಡು ನಿಶ್ಚಿತ ಬಿಂದುಗಳಿವೆ: (i) ಒಂದು ಶಿಷ್ಟ ವಾಯುಭಾರ ಒತ್ತಡದಲ್ಲಿ ಕರಗುತ್ತಿರುವ ಶುದ್ಧ ಬರ್ಫದಲ್ಲಿ ಉಷ್ಣತಾಮಾಪಕವನ್ನು ಅದ್ದಿದಾಗ ಪಾದರಸ ಸ್ತಂಭ ಸೂಚಿಸುವ ಕೆಳಬಿಂದು; (ii) ಅಷ್ಟೇ ಒತ್ತಡದಲ್ಲಿ ಕುದಿಯುತ್ತಿರುವ ಶುದ್ಧ ನೀರಿನಲ್ಲಿ ಅದನ್ನು ಅದ್ದಿದಾಗ ಸ್ತಂಭ ಸೂಚಿಸುವ ಮೇಲುಬಿಂದು. (13.5951 ಗ್ರಾಂ/ಘ.ಸೆಂಮೀ. ಸಾಂದ್ರತೆ ಇರುವ ಪಾದರಸದ ಸ್ತಂಭವನ್ನು 760 ಮಿಮೀ. ಎತ್ತರಕ್ಕೆ ಗುರುತ್ವಾಕರ್ಷಣೆಯ ಬೆಲೆ 980.665 ಸೆಂಮೀ.ಸೆ. ಇರುವ ಸ್ಥಳದಲ್ಲಿ ಏರಿಸುವ ಒತ್ತಡವೇ ಒಂದು ಶಿಷ್ಟ ವಾಯುಭಾರ ಒತ್ತಡ: ಇದನ್ನು ಡೈನುಗಳಲ್ಲಿ ವ್ಯಕ್ತಪಡಿಸಬೇಕು.) ಈ ಬಿಂದುಗಳ ಹೆಸರು ಕ್ರಮವಾಗಿ ಬರ್ಫಬಿಂದು ಮತ್ತು ಉಗಿಬಿಂದು. ಇವೆರಡು ಬಿಂದುಗಳ ನಡುವಿನ ಅಂತರದ ಹೆಸರು ಮೂಲಾಂತರ (ಫಂಡಮೆಂಟಲ್ ಇಂಟರ್ವಲ್).

| ಉಷ್ಣಮಾಪ ಪದ್ಧತಿ | ಬರ್ಫಬಿಂದುವಿನ ಉಷ್ಣತೆ | ಉಗಿಬಿಂದುವಿನ ಉಷ್ಣತೆ | ಮೂಲಾಂತರದ ಎಷ್ಟನೆಯ ಅಂಶ 1'ಗೆ ಸಮಾನ |
|---|---|---|---|
| ಸೆಂಟಿಗ್ರೇಡ್, (C-ಸೆಲ್ಸಿಯಸ್) | 0° C | 100° C | 1/100 |
| ಫ್ಯಾರನ್ ಹೀಟ್ ,F | 32° F | 212°F | 1/180 |
| ರೇಒಮೂರ್,R | 0° R | 80° R | 1/80 |

ಇವುಗಳ ಪರಸ್ಪರ ಸಂಬಂಧ ಹೀಗಿದೆ:

$$\frac{C}{100} = \frac{F-32}{180} = \frac{R}{80}$$

ಒಂದು ಉಷ್ಣತಾಮಾಪಕದ ರಚನೆಯ ತಾತ್ತ್ವಿಕ ತಳಹದಿ ಹೀಗಿದೆ : ವಸ್ತುವಿನ ಮೇಲೆ ಉಷ್ಣ ಪ್ರಯುಕ್ತವಾದಾಗ (ಎಂದರೆ ವಸ್ತುವನ್ನು ಕಾಯಿಸಿದಾಗ) ಅದರಲ್ಲಿ ಭೌತ ಬದಲಾವಣೆಗಳುಂಟಾಗುತ್ತವೆ; ಬದಲಾವಣೆಯ ಸ್ವರೂಪ ವಸ್ತುವಿನ ರಚನೆ ಸ್ಥಿತಿಗಳನ್ನೂ ಅವಲಂಬಿಸಿವೆ; ಭೌತ ಬದಲಾವಣೆಯನ್ನು ಆಧರಿಸಿ ವಸ್ತುವಿನ ಉಷ್ಣತೆಯನ್ನು ಅಳೆಯಬಹುದು. ಸೆಂಟಿಗ್ರೇಡ್, ಫ್ಯಾರನ್‌ಹೀಟ್ ಮತ್ತು ರೇಒಮೂರ್ ಉಷ್ಣತಾಮಾನ ಪದ್ಧತಿಗಳು ಈ ರೀತಿ ರೂಪತಳೆದಂಥವು. ಆದರೆ ಉಷ್ಣಗತಿವಿಜ್ಞಾನದ (**ನೋಡಿ**) ಆಧಾರದ ಮೇಲೆ ರಚಿತವಾಗಿರುವ ಕೆಲ್ವಿನ್ ನಿರಪೇಕ್ಷಮಾನ ಯಾವುದೇ ವಸ್ತುವಿನ ಗುಣಲಕ್ಷಣಗಳನ್ನೂ ಅವಲಂಬಿಸಿಲ್ಲ. ಎಲ್ಲ ಒತ್ತಡಗಳಲ್ಲಿಯೂ ಬಾಯಿಲನ ನಿಯಮವನ್ನು ಪಾಲಿಸುವ ಆದರ್ಶ ಅನಿಲದ (ಐಡಿಯಲ್ ಗ್ಯಾಸ್) (**ನೋಡಿ– ಅಣುಚಲನವಾದ,–ವಸ್ತುವಿನ**) ಉಷ್ಣತಾಮಾನಕ್ಕೆ ನಿರಪೇಕ್ಷಮಾನ ಅತ್ಯುತ್ತಮ ವಿಧಾನವಾಗಿದೆ.



ವೈದ್ಯಕೀಯ ಉಷ್ಣಮಾಪಕ

ಭಿನ್ನ ಗುಣಗಳ ಆಧಾರದ ಮೇಲೆ ಉಷ್ಣ ಮಾಪನ ವಿಧಾನಗಳನ್ನು ಹೇಗೆ ರೂಪಿಸಲಾಗಿದೆ ಎಂಬುದನ್ನು ಮುಂದೆ ಹೇಳಿದೆ. ವಿಕಾಸ ಸಂಕೋಚನ ಗುಣವನ್ನು ಆಧರಿಸಿ ಉಷ್ಣಮಾಪನ 39° ಸೆ.ನಿಂದ 365° ಸೆಂ.ನವರೆಗೆ ಪಾದರಸವನ್ನೂ 200° ಸೆಂ. ವರೆಗಿನ ಭಿನ್ನ ಮಿತಿಗಳಲ್ಲಿ ಆಲ್ಕೊಹಾಲ್, ಟೋಲ್ವೀನ್, ಪೆಂಟೇನ್ ಮುಂತಾದುವನ್ನೂ ಉಪಯೋಗಿಸಿ ಉಷ್ಣತಾಮಾಪಕಗಳನ್ನು ರಚಿಸಬಹುದು. ಇಂಥವು ಸೂಚಿಸುವ ಉಷ್ಣಾಂಕಗಳು (ಉಷ್ಣತೆಯನ್ನು ಸೂಚಿಸುವ ಅಂಕಿಗಳು) ಎಲ್ಲ ಸಂದರ್ಭಗಳಲ್ಲಿಯೂ ನೈಜ ಉಷ್ಣತೆಯನ್ನು ಪೂರ್ಣವಾಗಿ ತಿಳಿಸುತ್ತವೆ ಎನ್ನಲಾಗುವುದಿಲ್ಲ. ಉದಾಹರಣೆಗೆ. 0°–50° ಅಂತರದಲ್ಲಿ ಉಷ್ಣಾಂಕಗಳು ನೈಜ ಉಷ್ಣತೆಯ ಪ್ರತೀಕಗಳಾಗಿದ್ದರೆ 400° ಮಿತಿ ದಾಟಿದಾಗ ಸರಾಸರಿ 0.5° ದೋಷ ತಲೆದೋರಬಹುದು. ಈ ಕೆಳಗಿನ ಕೆಲವು ಮುಖ್ಯ ಕಾರಣಗಳಿಂದ ಉಷ್ಣತಾಮಾಪನದಲ್ಲಿ ದೋಷಗಳು ಮೂಡುತ್ತವೆ. 1. ಲೋಮನಾಳದ ವ್ಯಾಸದಲ್ಲಿ ಭಿನ್ನತೆಗಳು. 2. ನಿಶ್ಚಿತ ಬಿಂದುಗಳನ್ನು (ಬರ್ಫಬಿಂದು, ಉಗಿಬಿಂದು) ಗುರುತಿಸುವಲ್ಲಿನ ಲೋಪಗಳು, 3. ಕೆಳ ಬಿಂದುವಿನ ಸ್ಥಾನಾಂತರತೆ, ಇದನ್ನು ಮೊದಲು ಸಮರ್ಪಕವಾಗಿಯೇ ಗುರುತಿಸಿದ್ದರೂ ಮುಂದೆ ಗಾಜಿನ ಸ್ವರೂಪ ವ್ಯತ್ಯಾಸದಿಂದ ಈ ಲೋಪ ಉಂಟಾಗುತ್ತದೆ. 4. ಆಂತರಿಕ ಒತ್ತಡದಿಂದ ಪಾದರಸದ ಅಥವಾ ಬಳಸಿದ ಇತರ ದ್ರವದ ಸ್ತಂಭದ ಕ್ರಮೇಣ ಇಳಿತ, ಉಷ್ಣತಾಮಾಪಕವನ್ನು ನೆಲಕ್ಕೆ ಲಂಬವಾಗಿ ಉಪಯೋಗಿಸಿದಾಗ ದ್ರವದ ಸ್ತಂಭದ ಮೇಲಿನ ಸ್ತರಗಳ ಒತ್ತಡ ಕೆಳಗಿನ ಸ್ತರಗಳ ಮೇಲೆ ಹೆಚ್ಚು ಹೆಚ್ಚಾಗಿ ಪತನವಾಗುತ್ತದೆ. ಆಗ ಸ್ತಂಭದ ಮೇಲು ಕೊನೆ ಸ್ವಲ್ಪವಾದರೂ ತಗ್ಗುವುದು. ಆದ್ದರಿಂದ ಉಷ್ಣತಾಮಾಪಕವನ್ನು ಮಟ್ಟಸವಾಗಿಟ್ಟು ಅಳತೆ ಮಾಡಿದಾಗ ದೊರೆಯುವ ಉಷ್ಣತಾಂಕ ಲಂಬವಾಗಿಟ್ಟು ಅಳತೆ ಮಾಡಿದಾಗ ದೊರೆಯುವ ಉಷ್ಣತಾಂಕಕ್ಕಿಂತ ಸ್ವಲ್ಪ ಹೆಚ್ಚು ಇರುವುದು.

ಒಂದು ವಸ್ತುವಿನ ನೈಜ ಉಷ್ಣತೆಯನ್ನು ತಿಳಿಯಬೇಕೆಂದಾಗ ಮೇಲಿನ ಲೋಪ ದೋಷಗಳ ಕಡೆ ಲಕ್ಷ್ಯವಿಡಬೇಕು.

ವೈದ್ಯಕೀಯ ಉಷ್ಣತಾಮಾಪಕ (ಕ್ಲಿನಿಕಲ್ ಥರ್ಮಾಮಿಟರ್): ಮನುಷ್ಯ ದೇಹದ ಉಷ್ಣತೆಯನ್ನು ಅಳೆಯಲು ಬಳಸುವ ಸಾಧನ. ಜ್ವರಮಾಪಕ ಎಂದೂ ಹೆಸರಿದೆ. 95° ಫ್ಯಾ.ನಿಂದ 110° ಫ್ಯಾ.ವರೆಗೆ ಇದರಲ್ಲಿ ಗುರುತುಗಳಿವೆ. 98.4° ಯಲ್ಲಿ ಒಂದು ಸ್ಪಷ್ಟ ಗುರುತಿದೆ— ಇದು ದೇಹದ ಸಾಮಾನ್ಯ ಉಷ್ಣತೆಯ ಮಟ್ಟ.

ಈ ಉಷ್ಣತಾಮಾಪಕದ ಬುರುಡೆಯನ್ನು ಬಾಯೊಳಗೆ ನಾಲಗೆಯ ಕೆಳಗೆ ಅಥವಾ ಕಂಕುಳಲ್ಲಿ ಇರಿಸಿದಾಗ ದೇಹದ ಉಷ್ಣತೆಯಿಂದ ವಿಕಾಸಗೊಳ್ಳುವ ಪಾದರಸ ಲೋಮನಾಳದ ಮೂಲಕ ಏರಿ ಅದರ ಸ್ತಂಭ ಒಂದು ಮಿತಿಯಲ್ಲಿ ನಿಲ್ಲುವುದು. ಈ ಕೊನೆ ಬಿಂದು ತೋರಿಸುವ ಗುರುತೇ ದೇಹದ ಉಷ್ಣತೆ. ಬುರುಡೆಯನ್ನು ದೇಹಸಂಪರ್ಕದಿಂದ ಸರಿಸಿದಾಗ ಪಾದರಸ ಸ್ತಂಭ ಸಂಕೋಚಗೊಂಡು ಹಿಂದಕ್ಕೆ ಇಳಿಯಬೇಕು. ಆದರೆ ಲೋಮನಾಳದ ಆರಂಭದಲ್ಲಿ ಅದನ್ನೇ ಸ್ವಲ್ಪ ತಿರುಚಿ ಪಾದರಸದ ಹಿಂಜರಿತಕ್ಕೆ ಅಲ್ಲೊಂದು ಅಡಚಣೆ ರಚಿಸಲಾಗಿದೆ. ಹೀಗಾಗಿ ಏರಿದ ಸ್ತಂಭ ಅಲುಗಾಡದೇ ಅದೇ ಸ್ಥಾನದಲ್ಲಿ ನಿಂತಿರುವುದು. ಒಂದು ಅಯಸ್ಕಾಂತವನ್ನು ಉಷ್ಣತಾಮಾಪಕದ ಗಾಜಿನ ಮೇಲೆ ಬುರುಡೆಯೆಡೆಗೆ ಸರಿಸುವುದರ ಮೂಲಕ ಅಥವಾ ಬುರುಡೆ ಕೆಳಮುಖವಾಗಿರುವಂತೆ ಇನ್ನೊಂದು ಕೊನೆಯನ್ನು ಹಿಡಿದು ಕೊಡಹುವುದರ ಮೂಲಕ ಪಾದರಸ ಸ್ತಂಭವನ್ನು ಬುರುಡೆಗೆ ಮರಳುವಂತೆ ಮಾಡಬಹುದು.

ಗರಿಷ್ಠ ಮತ್ತು ಕನಿಷ್ಠ ಉಷ್ಣತಾಮಾಪಕ (ಮ್ಯಾಕ್ಸಿಮಂ ಆ್ಯಂಡ್ ಮಿನಿಮಮ್ ಥರ್ಮಾಮಿಟರ್): ದಿನದ ಗರಿಷ್ಠ ಮತ್ತು ಕನಿಷ್ಠ ಉಷ್ಣತೆಗಳನ್ನು ತೋರಿಸುವ ಸಾಧನ. ಇದರಲ್ಲಿ A ಯಿಂದ C ವರೆಗೆ ಆಲ್ಕೊಹಾಲ್, C ಯಿಂದ D ವರೆಗೆ ಪಾದರಸ, D ಯಿಂದ E ವರೆಗೆ ಆಲ್ಕೊಹಾಲ್ ಮತ್ತು E ಬುರುಡೆಯ ಮೇಲಿನ ಭಾಗದಲ್ಲಿ ಗಾಳಿ ತುಂಬಿವೆ.

$I_1$ ಮತ್ತು $I_2$ ಎಂಬ ಎರಡು ಸೂಚಕಗಳು ಪಾದರಸ ಸ್ತಂಭ ಏರಿದಂತೆ ಸೂಚಕಗಳು ಮೇಲೆ ಸರಿದು ಅಲ್ಲೆ ಗಾಜಿನ ಒಳಮೈಗೆ ಅಂಟಿ ನಿಲ್ಲುತ್ತವೆ–ಎಂದರೆ, ತರುವಾಯ ಸ್ತಂಭ ಕೆಳಗೆ ಸರಿದರೆ ಸೂಚಕ ಇಳಿಯುವುದಿಲ್ಲ. ಈ ಉಷ್ಣತಾಮಾಪಕದಲ್ಲಿ ಅಂಕಿಗಳು ಉಷ್ಣತೆಯನ್ನು ಫ್ಯಾರನ್‌ಹೀಟ್ ಮಾನದಲ್ಲಿ ಸೂಚಿಸುವುವು. ದಿನದ ಉಷ್ಣತೆ ಏರಿದಂತೆ ABC ವಿಭಾಗದ ಆಲ್ಕೋಹಾಲ್ ವಿಕಾಸಗೊಂಡು ಪಾದರಸವನ್ನು CD ದಿಶೆಯಲ್ಲಿ ತಳ್ಳುವುದು. ದಿನದ ಗರಿಷ್ಠ ಉಷ್ಣತೆಗೂ ಈ ತಳ್ಳುವಿಕೆಗೂ ಹೊಂದಾಣಿಕೆ ಇದೆ. ಆದ್ದರಿಂದ ಗರಿಷ್ಠ ಉಷ್ಣತೆಯ ವೇಳೆ ಪಾದರಸ ಸ್ತಂಭ DE ವಿಭಾಗದಲ್ಲಿ ಗರಿಷ್ಠ ಎತ್ತರಕ್ಕೆ ಏರಿರುತ್ತದೆ. ಆಗ $I_1$ ಸೂಚಕ ತೋರಿಸುವ ಅಂಕಿಯೆ ಗರಿಷ್ಠ ಉಷ್ಣತೆ. ಉಷ್ಣತೆ ತಗ್ಗಿದಂತೆ CBA ವಿಭಾಗದ ಆಲ್ಕೋಹಾಲ್ ಸಂಕೋಚಗೊಳ್ಳುವುದರಿಂದ ಪಾದರಸ ಸ್ತಂಭ CB ದಿಶೆಯಲ್ಲಿ ಮೇಲೆ ಏರುವುದು. ಕನಿಷ್ಠ ಉಷ್ಣತೆಯ ವೇಳೆ ಈ ಏರಿಕೆ ಗರಿಷ್ಠವಾಗಿರುತ್ತದೆ. ಆಗ $I_2$ ಸೂಚಕ ತೋರಿಸುವ ಅಂಕಿಯೇ ದಿನದ ಕನಿಷ್ಠ ಉಷ್ಣತೆ. ಗಾಜಿನ ಹೊರ ಭಾಗದಲ್ಲಿ ಅಯಸ್ಕಾಂತಗಳನ್ನು ಸರಿಸುವುದರ ಮೂಲಕ ಸೂಚಕಗಳನ್ನು ಪಾದರಸ ಸ್ತಂಭಗಳ ಮೇಲಂಚುಗಳ ಮೇಲೆ ಬರುವಂತೆ ಮಾಡುತ್ತಾರೆ.



ಗರಿಷ್ಠ ಮತ್ತು ಕನಿಷ್ಠ ಉಷ್ಣಮಾಪಕ

ವಿದ್ಯುನ್ನಿರೋಧ ಉಷ್ಣತಾಮಾಪಕಗಳು (ರೆಸಿಸ್ಟೆನ್ಸ್ ಥರ್ಮಾಮಿಟರ್ಸ್) ಸಾಮಾನ್ಯವಾಗಿ 300° ಸೆಂಟಿಗ್ರೇಡಿಗಿಂತ ಹೆಚ್ಚಿನ ಉಷ್ಣತೆಯನ್ನು ಅಳೆಯಲು ಪಾದರಸ ಉಷ್ಣತಾಮಾಪಕ ಅಷ್ಟು ಉಪಯುಕ್ತವಲ್ಲ. ಅನಿಲ ಉಷ್ಣತಾವಾಪಕಗಳನ್ನು ಇಲ್ಲಿ ಬಳಸಬಹುದು. ಆದರೆ ಇಲ್ಲಿಯೂ ಎದುರಾಗುವ ಪ್ರಾಯೋಗಿಕ ಅಡಚಣೆಗಳು ಬಹಳ ಇವೆ. ವಿದ್ಯುನ್ನಿರೋಧ ಉಷ್ಣತಾಮಾಪಕಗಳು ಇಂಥಲ್ಲಿ ಹೆಚ್ಚು ಪ್ರಾಯೋಗಿಕ ಮತ್ತು ಉಪಯುಕ್ತವಾಗಿವೆ. ಒಂದು ಲೋಹದ ತಂತಿಯ ಉಷ್ಣತೆಯ ಬದಲಾವಣೆಗಳನ್ನು ಅನುಸರಿಸಿ ಆ ತಂತಿಯ ವಿದ್ಯುನ್ನಿರೋಧದಲ್ಲಿ ಬದಲಾವಣೆಗಳುಂಟಾಗುವುವು. ಇದನ್ನು ನಿಷ್ಕೃಷ್ಟವಾಗಿ ಅಳೆಯಬಹುದು. ಈ ತಂತ್ರವನ್ನು ಉಪಯೋಗಿಸಿಕೊಂಡು ರಚಿಸುವ ಉಷ್ಣತಾಮಾಪಕದಲ್ಲಿ ಬಳಸುವ ಲೋಹದ ತಂತಿ ದೀರ್ಘಕಾಲ ಬೇರೆ ಬೇರೆ ಪ್ರದೇಶಗಳಲ್ಲಿ ಒಂದೇ ರೀತಿಯ ಬದಲಾವಣೆ ಗಳನ್ನು ವ್ಯಕ್ತಪಡಿಸಬೇಕು. ಇಲ್ಲವಾದರೆ ಅಸಂಬದ್ಧ ಫಲಿತಾಂಶಗಳು ದೊರೆತು ಮಾಪಕ ಅಪ್ರಯೋಜಕವಾಗುತ್ತದೆ. ಇದನ್ನು ಗಮನಿಸಿ ಪ್ಲಾಟಿನಂ ಲೋಹವನ್ನು ಇಂಥ ಮಾಪಕಗಳ ರಚನೆಯಲ್ಲಿ ಯಶಸ್ವಿಯಾಗಿ ಬಳಸಲಾಗಿದೆ. ಪ್ಲಾಟಿನಂ ವಿದ್ಯುನ್ನಿರೋಧ ಉಷ್ಣತಾಮಾಪಕವನ್ನು ಸಾಮಾನ್ಯವಾಗಿ 200° ಸೆ. ನಿಂದ 1,000° ಸೆ. ವರೆಗಿನ ಉಷ್ಣತೆಗಳ ಅಳತೆಯಲ್ಲಿ ಬಲು ನಿಷ್ಕೃಷ್ಟವಾಗಿ ಉಪಯೋಗಿಸಬಹುದು. ಆದರೆ ಈ ಮಾಪಕ ಅದರ ಪರಿಸರದ ಉಷ್ಣತೆಯ ಮಟ್ಟ ತಲುಪಲು ಕಾಲಾವಕಾಶ ಬೇಕು; ಇದರಲ್ಲಿ ಉಷ್ಣತೆಯನ್ನು ಅಳೆಯಲು ವೇಳೆ ಸಹ ಬೇಕು. ಆದ್ದರಿಂದ ಕ್ಷಿಪ್ರವಾಗಿ ಉಷ್ಣತೆಯನ್ನು ತಿಳಿಯಬೇಕೆಂದಿರುವಲ್ಲಿ ಈ ಉಷ್ಣತಾಮಾಪಕ ಪ್ರಯೋಜನಕಾರಿಯಲ್ಲ.

ಉಷ್ಣವಿದ್ಯುದ್ಯುಗ್ಮ ಉಷ್ಣತಾಮಾಪಕಗಳು (ಥರ್ಮೋಕಪಲ್ ಥರ್ಮೋಮೀಟರ್) ಎರಡು ಭಿನ್ನಲೋಹಗಳ ಸಂಧಿಸ್ಥಾನದಲ್ಲಿ (ಜಂಕ್ಷನ್) ಉಂಟಾಗುವ ವಿಭವವನ್ನು ಉಪಯೋಗಿಸಿಕೊಂಡು ಉಷ್ಣತಾವ್ಯತ್ಯಾಸವನ್ನು ಅಳೆಯುವ ಸಾಧನ. ಈ ಸಾಧನವನ್ನು ಜೋಡಣೆಗೆ ಉಪಯೋಗಿಸುವ ಒಂದು ತಂತಿ ಪ್ಲಾಟಿನಂ ಲೋಹದ್ದಾಗಿದ್ದರೆ ಇನ್ನೊಂದು ತಂತಿ 10% ರ್ಹೋಡಿಯಂ ಮಿಶ್ರಿತ ಪ್ಲಾಟಿನಂ ಲೋಹದ್ದಾಗಿರುವುದು. ಹಲವು ಸಂದರ್ಭಗಳಲ್ಲಿ ರ್ಹೋಡಿಯಂ ಬದಲು ಇರಿಡಿಯಂನ್ನು ಬಳಸುವುದುಂಟು. ಇಲ್ಲಿ ಜೋಡಣೆಗಳನ್ನು ಬಂಗಾರದಿಂದ ಬೆಸುಗೆ ಮಾಡಿರುವರು.

ಉತ್ತಾಪಮಾಪನ (ಪೈರಾಮಿತ್ರಿ); ಅತ್ಯಂತ ಹೆಚ್ಚಿನುಷ್ಣತೆಗಳನ್ನು ಅಳೆಯುವ ವಿಧಾನ. ಇಲ್ಲಿ ಎರಡು ವಿಧಾನಗಳಿವೆ–ವಿಕಿರಣ ವಿಧಾನ (ರೇಡಿಯೇಷನ್) ಮತ್ತು ದ್ಯುತಿವಿಧಾನ (ಆಪ್ಟಿಕಲ್). ಇವುಗಳಿಂದ ದೊರೆಯುವ ಅಳತೆಗಳು ಹೆಚ್ಚು ನಿಷ್ಕೃಷ್ಟವಾಗಿವೆ. ಯಾವುದೇ ಒಂದು ಅತ್ಯುಷ್ಣ ವಸ್ತುವಿನ ಉಷ್ಣತೆ 600° ಸೆ. ಇದ್ದಾಗ ಕೆಂಡದಂತೆ ಕೆಂಪಾಗಿ ಕಾಣುತ್ತಿದ್ದರೆ ಅದರ ಉಷ್ಣತೆಯನ್ನು ಏರಿಸಿದಂತೆ ಅದರ ಬಣ್ಣ ಕಿತ್ತಳೆಗೆ ತಿರುಗಿ ಮುಂದೆ 1,400° ಸೆ. ನಲ್ಲಿ ಬಿಳಿಯಾಗಿ ಪ್ರಕಾಶಿಸತೊಡಗುತ್ತದೆ. ಉಷ್ಣತೆಯ ಏರಿಕೆಯೊಡನೆ ಉಂಟಾಗುವ ಬಣ್ಣ ವ್ಯತ್ಯಾಸವೇ ದ್ಯುತಿವಿಧಾನ ಉತ್ತಾಪಮಾಪನದ ಹಿನ್ನೆಲೆಯ ಭಾವನೆ. 800°–1,400° ಸೆ. ಮಿತಿಯಲ್ಲಿ ಮೊದಲಿನ ಸಾಧನವನ್ನೂ 1,063°–1,400° ಸೆ. ಮಿತಿಯಲ್ಲಿ ಎರಡನೆಯ ಸಾಧನವನ್ನೂ ಉಪಯೋಗಿಸಬಹುದು. ಅಳೆಯಬೇಕಾಗಿರುವ ಉಷ್ಣತೆಯ ಮಿತಿಗಳನ್ನೂ ವಸ್ತುಗಳನ್ನೂ ಅನುಸರಿಸಿ ಉಷ್ಣತಾಮಾಪಕಗಳನ್ನು ನಿರ್ಮಿಸಲಾಗುವುದು. (ಕೆ.ಎಸ್.ಎಸ್.ಎ.)

**ಉಷ್ಣಯಂತ್ರ:** ಉಷ್ಣಶಕ್ತಿಯನ್ನು ಉಪಯುಕ್ತ ಯಾಂತ್ರಿಕ ಶಕ್ತಿಯಾಗಿ ಪರಿವರ್ತಿಸುವ ಸಾಧನ (ಹೀಟ್ ಎಂಜಿನ್). ಇಂಥ ಪರಿವರ್ತನೆ ಅವಿಚ್ಛಿನ್ನವಾಗಿರಬೇಕು. ಎಂಜಿನ್‌ನಲ್ಲಿ ಉಷ್ಣ ಇರಬೇಕಾದ ಮೂರು ಮುಖ್ಯ ಅಂಗಗಳು: 1 ಆಕರ (ಸೋರ್ಸ್). ಇದರಿಂದ ಯಾಂತ್ರಿಕ ಶಕ್ತಿಗೆ ಬೇಕಾಗುವ ಉಷ್ಣಶಕ್ತಿಯನ್ನು ಒದಗಿಸಲಾಗುವುದು. 2. ತೊಟ್ಟಿ (ಸಿಂಕ್). ಇದರ ಉಷ್ಣತೆಯ ಮಟ್ಟ ಆಕರದ ಮಟ್ಟಕ್ಕಿಂತ ಕಡಿಮೆ ಇರಬೇಕು. ಅನುಪಯುಕ್ತ ಉಷ್ಣಶಕ್ತಿಯನ್ನು ತೊಟ್ಟಿಗೆ ವಿಸರ್ಜಿಸಲಾಗುವುದು. 3 ಕ್ರಿಯಾಶೀಲ ವಸ್ತು (ವರ್ಕಿಂಗ್ ಸಬ್‌ಸ್ಟೆನ್ಸ್). ಸಾಧಾರಣವಾಗಿ ಇದು ಒಂದು ಅನಿಲವೋ, ಅನಿಲಗಳ ಮಿಶ್ರಣವೋ ಅಥವಾ ಹಬೆಯೋ ಇರಬಹುದು. ನೀರಿನ ಹಬೆಯ ಎಂಜಿನ್‌ನಲ್ಲಿ ಇದು ನೀರಿನ ಆವಿಯ ರೂಪದಲ್ಲಿರುತ್ತದೆ.

ಇವು ಮೂರು ಅಂಗಗಳೂ ಪರಸ್ಪರ ಪೂರಕವಾಗಿ ನೆರವೇರಿಸುವಂಥ ಒಂದು ಕ್ರಿಯಾಚಕ್ರವನ್ನು (ಸೈಕಲ್ ಆಫ್ ಆಪರೇಷನ್ಸ್) ರಚಿಸಬೇಕು. ಇಂಥ ಒಂದು ಚಕ್ರದಲ್ಲಿ ಕ್ರಿಯಾಶೀಲವಸ್ತು ಆಕರದಿಂದ ಉಷ್ಣವನ್ನು ಹೀರಿ ಸಾಕಾದಷ್ಟು ಪ್ರಮಾಣವನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸಿ ಉಳಿದ ಅನುಪಯುಕ್ತ ಶಕ್ತಿಯ ಪ್ರಮಾಣವನ್ನು ತೊಟ್ಟಿಗೆ ವಿಸರ್ಜಿಸುತ್ತದೆ.

ಆದರ್ಶ ಉಷ್ಣ ಎಂಜಿನ್ (ಐಡಿಯಲ್ ಹೀಟ್ ಎಂಜಿನ್): ಉಷ್ಣಶಕ್ತಿಗೂ (H) ಯಾಂತ್ರಿಕ ಶಕ್ತಿಗೂ (W) ಅನ್ವಯಿಸುವಂತೆ ಎರಡು ಮುಖ್ಯ ನಿಯಮಗಳಿವೆ. ಮೊದಲನೆಯ ನಿಯಮದ ಪ್ರಕಾರ W=JH. ಇಲ್ಲಿ J ಉಷ್ಣಶಕ್ತಿಯ ಯಾಂತ್ರಿಕ ಸಮಾನ (ಮೆಕಾನಿಕಲ್ ಈಕ್ವಿವಲೆಂಟ್ ಆಫ್ ಹೀಟ್). J=4.18 ಜೂಲುಗಳು. ಎರಡನೆಯ ನಿಯಮದ ಪ್ರಕಾರ ಒಂದು ಸ್ವಯಂ ಕ್ರಿಯಾತ್ಮಕ ಎಂಜಿನ್‌ನಲ್ಲಿ ನಡೆಯುವ ಒಂದು ಚಕ್ರದಲ್ಲಿ ಉಷ್ಣವನ್ನು ಕಡಿಮೆ ಉಷ್ಣತೆಯ ಮಟ್ಟದಿಂದ ಹೆಚ್ಚಿನ ಉಷ್ಣತೆಯ ಮಟ್ಟಕ್ಕೆ ವರ್ಗಾಯಿಸುವುದು ಅಸಾಧ್ಯ (**ನೋಡಿ– ಉಷ್ಣಗತಿವಿಜ್ಞಾನ**). ಈ ನಿಯಮಗಳನ್ನು ಅನುಸರಿಸಿ ಕಾರ್ನೋ ಎಂಬ ವಿಜ್ಞಾನಿ ಒಂದು ಆದರ್ಶ ಉಷ್ಣಎಂಜಿನ್‌ನ ಪರಿಕಲ್ಪನೆಯನ್ನೂ, ಅದಕ್ಕೆ ಸರಿದೂಗುವ ಆವರ್ತಚಕ್ರವನ್ನೂ ವಿವರಿಸಿದ್ದಾನೆ. ಇದು ಕಾರ್ನೋ ಚಕ್ರ (**ನೋಡಿ**) ಎಂದೂ ಪ್ರಸಿದ್ಧವಾಗಿದೆ.

ಕೆಲವು ವಾಸ್ತವಿಕ ಉಷ್ಣಯಂತ್ರಗಳ ಮಾದರಿಗಳು: 1 ನೀರಿನ ಆವಿಯಂತ್ರ ಜೇಮ್ಸ್‌ವಾಟ್ ಇದರ ಪ್ರಥಮ ನಿರ್ಮಾಪಕ: ಇದರಲ್ಲಿ ನೀರಿನ ಹಬೆ (ಉಗಿ– ಕ್ರಿಯೆಗಳಿಗೆ ಒಳಗಾಗುವ ಪ್ರಧಾನವಸ್ತು. ಅತಿ ಹೆಚ್ಚು ಒತ್ತಡದಲ್ಲಿ ಉತ್ಪನ್ನವಾಗುವ ನೀರಿನ ಆವಿಯನ್ನು ದೊಡ್ಡ ಗಾತ್ರದ ಆವಿಗೆಯಲ್ಲಿ (ಬಾಯ್ಲರ್) ಶೇಖರಿಸಿ ಅದನ್ನು ಯುಕ್ತ ಪ್ರಮಾಣ ಮತ್ತು ದರದಲ್ಲಿ ಬೇರೆ ಉರುಳಿಗೆ ಕವಾಟಗಳ ಮೂಲಕ ಹಾಯಿಸಿ ಯಾಂತ್ರಿಕಶಕ್ತಿಯನ್ನು ಪಡೆಯುವುದು ಇಲ್ಲಿನ ವಿಧಾನ (**ನೋಡಿ– ಉಗಿಯಂತ್ರ**) ಇದರ ದಕ್ಷತೆ ಸುಮಾರು 10% ಮಾತ್ರ.

2 ಹಬೆಯ ತಿರುಬಾನಿಗಳು: ಇವುಗಳಲ್ಲಿಯೂ ನೀರಿನ ಹಬೆಯೇ ಕ್ರಿಯೆ ಎಸಗುವುದು, ಇದರ ಶಕ್ತಿಯಿಂದ ನೇರವಾಗಿ ಭ್ರಮಣವನ್ನು ಉತ್ಪನ್ನ ಮಾಡುವಂತೆ ಯಂತ್ರಭಾಗಗಳನ್ನು ಅಳವಡಿಸಿದೆ. ಪಾರ್ಸನ್ಸ್ ಮತ್ತು ಡಿಲವಲ್ ಎಂಬ ವಿಜ್ಞಾನಿಗಳು ಇದರ ತತ್ತ್ವಗಳನ್ನು ತೋರಿಸಿಕೊಟ್ಟು ಹಲವಾರು ಮಾರ್ಪಾಡುಗಳನ್ನು ಮಾಡಿರುತ್ತಾರೆ. ಇದರ ದಕ್ಷತೆ ಸುಮಾರು 35%. ಅತಿ ವೇಗದ ಭ್ರಮಣ ಸರಾಗವಾಗಿಯೂ ಅವಿಚ್ಛಿನ್ನವಾಗಿಯೂ ನಡೆಯಲು ಈ ಯಂತ್ರ ಬಲು ಉಪಯುಕ್ತ. ವಿದ್ಯುಜ್ಜನಕ ಯಂತ್ರಗಳಲ್ಲಿಯೂ, ಸಾಗರನೌಕೆಗಳಲ್ಲಿಯೂ ಈ ಮಾದರಿಗಳ ಉಪಯೋಗ ಹೆಚ್ಚು.

3 ಅಂತರ್ದಹನ ಯಂತ್ರ: ಇದರ ನಿರ್ಮಾಣಕ್ಕೆ ಮುಖ್ಯ ಕಾರಣರು ಆಟ್ಟೋ, ಡೈಮ್ಲರ್ ಮೊದಲಾದವರು. ಇದರಲ್ಲಿ ಕಲ್ಲಿದ್ದಲು ಅನಿಲ ಅಥವಾ ಪೆಟ್ರೋಲ್, ಡೀಸಲ್ ಎಣ್ಣೆಯಂಥ ಸುಲಭವಾಗಿ ಆವಿಯ ರೂಪಕ್ಕೆ ಬರುವಂಥ ದ್ರವವನ್ನು ಮುಖ್ಯ ಇಂಧನವಾಗಿ ಉಪಯೋಗಿಸುತ್ತಾರೆ. ಈ ಎಣ್ಣೆಯ ಹಬೆಗಳು ಗಾಳಿಯೊಂದಿಗೆ ಮಿಶ್ರವಾಗಿ ವಿದ್ಯುತ್ಕಿಡಿಯಿಂದ ಆಸ್ಫೋಟನೆಗೊಂಡರೆ ಅದರಿಂದ ಉತ್ಪನ್ನವಾಗುವ ವಸ್ತುಗಳೇ ಕ್ರಿಯಾಶೀಲವಸ್ತುಗಳಂತೆ ಎಂಜಿನ್‌ಗಳಲ್ಲಿ ವರ್ತಿಸಿ ಯಾಂತ್ರಿಕ ಶಕ್ತಿಯಾಗಿ ಪರಿವರ್ತಿತವಾಗುತ್ತವೆ. ಈ ಯಂತ್ರಗಳಲ್ಲಿ ಒಂದು ಚಕ್ರದಲ್ಲಿ ನಾಲ್ಕು ಪಟ್ಟುಗಳು (ಫೋರ್ ಸ್ಟ್ರೋಕ್ಸ್) ಇರುತ್ತವೆ. (ಕೆ.ಎಸ್.ಐ.)

**ಉಷ್ಣರಾಸಾಯನಿಕವಿಜ್ಞಾನ:** ರಾಸಾಯನಿಕ ಕ್ರಿಯೆಗಳು, ದ್ರಾವಣಗಳ ತಯಾರಿಕೆ, ವಸ್ತುಗಳ ಭೌತಸ್ಥಿತಿಗಳ ಬದಲಾವಣೆಗಳು ಇಲ್ಲೆಲ್ಲ ನೆರವೇರುವ ಉಷ್ಣದ ಪರಿಣಾಮಗಳ ಶಾಸ್ತ್ರೀಯ ಅಭ್ಯಾಸ (ಥರ್ಮೋಕೆಮಿಸ್ಟ್ರಿ). ರಾಸಾಯನಿಕ ಕ್ರಿಯೆಗಳು ನಡೆದಾಗ ಉಷ್ಣ ವ್ಯತ್ಯಾಸಗಳು ಆಗುವುದು ಸಹಜ. ಉಷ್ಣತೆ, ಒತ್ತಡ ಇತ್ಯಾದಿ ಪ್ರಯೋಗಸ್ಥಿತಿಗೆ ಅನುಗುಣವಾಗಿ

ಪರಿವರ್ತಕಗಳಲ್ಲಿ ಗೊತ್ತಾದ ಶಕ್ತಿ ಇರುವುದು. ಕ್ರಿಯಾಂತ್ಯದಲ್ಲಿ ಫಲಿತ ವಸ್ತುಗಳು ಈ ಶಕ್ತಿಯನ್ನು ಧರಿಸಲು ಅಸಮರ್ಥವಾಗಿದ್ದರೆ ಹೆಚ್ಚುವರಿ ಶಕ್ತಿ ಉಷ್ಣದ ರೂಪದಲ್ಲಿ ಹೊರಬೀಳಲೇ ಬೇಕು. ಶಕ್ತಿ ನಿತ್ಯತ್ವ ನಿಯಮದ ಪ್ರಕಾರ ಇದು ಅನಿವಾರ್ಯ. ಉದಾಹರಣೆ:

$$N_{2(g)} + 3H_{2(g)} \rightarrow 2NH_{3(g)}; \Delta H = -22.8 \text{ ಕಿ.ಕೆ.}$$

ಇಂಥ ಕ್ರಿಯೆಗಳನ್ನು ಉಷ್ಣಜನಕ(ಎಕ್ಸೊಥರ್ಮಿಕ್) ಕ್ರಿಯೆಗಳು ಎನ್ನುತ್ತೇವೆ. ನೂತನ ಪರಿಸ್ಥಿತಿಯಲ್ಲಿ ಪರಿವರ್ತಕ ವಸ್ತುಗಳಿಗಿಂತ ಫಲಿತವಸ್ತುಗಳಿಗೆ ಹೆಚ್ಚು ಶಕ್ತಿಯನ್ನು ಮೈಗೂಡಿಸಿ ಕೊಳ್ಳುವ ತ್ರಾಣವಿದ್ದರೆ, ಆಗ ಉಷ್ಣ ಹೀರಲ್ಪಡುತ್ತದೆ. ಅಗತ್ಯ ಪ್ರಮಾಣದಲ್ಲಿ ಉಷ್ಣವನ್ನು ಬಾಹ್ಯಮೂಲಗಳಿಂದ ಒದಗಿಸಿದ ಹೊರತು ಕ್ರಿಯೆ ನಡೆಯುವುದಿಲ್ಲ. ಇವೇ ಉಷ್ಣಗ್ರಾಹಕ (ಎಂಡೋಥರ್ಮಿಕ್)ಕ್ರಿಯೆಗಳು. ಉದಾಹರಣೆ:

$$N_{2(g)} + 3H_{2(g)} \rightarrow 2NH_{3(g)}; \Delta H = -22.8 \text{ ಕಿ.ಕೆ.}$$

ಕ್ರಿಯೆಯಲ್ಲಿ ಉಷ್ಣ ಹೊರಬಿದ್ದರೆ ಪ್ರಯೋಗನಿರತರಾದ ನಮಗೆ ಶಕ್ತಿ ಸಂಪಾದನೆಯಾದಂತೆ ಭಾವಿಸಿ (+) ಧನಚಿಹ್ನೆಯನ್ನೂ ಉಷ್ಣ ಹೀರಲ್ಪಟ್ಟರೆ ನಮಗಾಗುವ ಶಕ್ತಿಯ ನಷ್ಟದ ದೃಷ್ಟಿಯಿಂದ (–) ಋಣ ಚಿಹ್ನೆಯನ್ನೂ ಹಾಕಿ ಸೂಚಿಸುವುದು ರೂಢಿಯಾಗಿತ್ತು. ಈಗ ಉಷ್ಣ ರಸಾಯನವಿಜ್ಞಾನ ಉಷ್ಣಗತಿವಿಜ್ಞಾನದ ಉಪಶಾಖೆಯೆಂದು ಅಂಗೀಕೃತವಾಗಿರುವುದರಿಂದ ತದ್ವಿರುದ್ಧ ಪದ್ಧತಿ ಆಚರಣೆಯಲ್ಲಿದೆ. ಉಷ್ಣಗತಿವಿಜ್ಞಾನದಲ್ಲಿ ಆವರಣಕ್ಕಿಂತ ವ್ಯವಸ್ಥೆಯ (ಸಿಸ್ಟಂ) ಮೇಲೆ ನಮ್ಮ ಗಮನ ಕೇಂದ್ರೀಕೃತವಾಗಿರುತ್ತದೆ. ಕ್ರಿಯಾವ್ಯವಸ್ಥೆಗೆ (ರೀ ಆಕ್ಟಿಂಗ್ ಸಿಸ್ಟಂ) ಉಷ್ಣ ಸಂಪಾದನೆಯಾದರೆ ಲಾಭವೆಂದೂ ಅದರಿಂದ ಉಷ್ಣ ಹೊರಬಿದ್ದರೆ ನಷ್ಟವೆಂದೂ ಪರಿಗಣಿಸುವುದು ತರ್ಕಬದ್ಧವಾಗಿದೆ.

ಈ ಉಷ್ಣ ವ್ಯತ್ಯಾಸಗಳು ಗಣನೀಯ ಪ್ರಮಾಣದಲ್ಲಿ ನಡೆಯುವುದರಿಂದ ಅವನ್ನು ಅಳೆಯಲು ಕಿಲೊ ಕೆಲೊರಿ (ಕಿ.ಕೆ. ಒಂದು ಸಾವಿರ ಕ್ಯಾಲೊರಿಗಳಿಗೆ ಸಮ) ಎಂಬ ಮಾನವನ್ನು ಬಳಸಬೇಕು. ಕ್ರಿಯೆಯಲ್ಲಿ ಭಾಗಿಗಳಾದ ವಸ್ತುಗಳ ಭೌತಸ್ಥಿತಿಗೂ ಅದರಲ್ಲಾಗುವ ಉಷ್ಣ ಬದಲಾವಣೆಗಳಿಗೂ ನಿಕಟ ಸಂಬಂಧವಿದೆ. ಇದನ್ನು ಮುಂದೆ ವಿವೇಚಿಸಲಾಗುವುದು. ಆದ್ದರಿಂದ ವಸ್ತುಸ್ಥಿತಿಯನ್ನು ಸೂಚಿಸಲು ಅನಿಲವಾಗಿದ್ದರೆ g, ದ್ರವವಾಗಿದ್ದರೆ L ಹಾಗೂ ಘನವಾಗಿದ್ದರೆ s ಎಂಬ ಅಕ್ಷರಗಳನ್ನು ಉಪಯೋಗಿಸುವರು. ಭಿನ್ನರೂಪತೆಯನ್ನು ಪ್ರದರ್ಶಿಸುವ ಮೂಲ ವಸ್ತುಗಳಾಗಿದ್ದರೆ, ಅದನ್ನೂ ಸೂಚಿಸುವುದು ಅಗತ್ಯ. ಉದಾಹರಣೆ:

C C

(ಗ್ರ್ಯಾಫೈಟ್) (s); (ವಜ್ರ) (s)

S S

(ಅಷ್ಟಮುಖಿ) (s); (ಸೂಜಿ) (s)

ದ್ರಾವಣಗಳನ್ನು ಸೂಚಿಸಲು ವಸ್ತುವಿನ ಸೂತ್ರದ ಬಲಪಾರ್ಶ್ವದಲ್ಲಿ ಅದರಡಿಯಲ್ಲಿ (aq) ಎಂದು ನಮೂದಿಸಬೇಕು. ವಾಡಿಕೆಯಲ್ಲಿರುವ ಮತ್ತೊಂದು ಮುಖ್ಯ ಸಂಪ್ರದಾಯದ ಪ್ರಕಾರ 25° ಸೆ. ಮತ್ತು 1 ವಾಯುಭಾರ (ಅಟ್ಮಾಸ್ಫಿಯರ್) ಒತ್ತಡದಲ್ಲಿ ತಮ್ಮ ಸ್ಥಿರರೂಪಗಳಲ್ಲಿರುವ ಎಲ್ಲ ಮೂಲವಸ್ತುಗಳ ಶಕ್ತಿ ಶೂನ್ಯ ಎಂದು ಭಾವಿಸಲಾಗುವುದು. ವಾಸ್ತವವಾಗಿ ಮೂಲವಸ್ತುಗಳಿಗೆ ಶಕ್ತಿ ಇಲ್ಲವೆಂದಲ್ಲ. ಆದರೆ ನಾವು ಉಷ್ಣ ಬದಲಾವಣೆಗಳನ್ನು ಅಂದರೆ ಶಕ್ತಿವ್ಯತ್ಯಾಸಗಳನ್ನು ಮಾತ್ರ ಗಮನಿಸುವುದರಿಂದ ವಸ್ತುಗಳ ನೈಜಶಕ್ತಿಯ ಬಗ್ಗೆ ನಮಗೆ ಆಸಕ್ತಿಯಿಲ್ಲ.

ಉಷ್ಣರಸಾಯನವಿಜ್ಞಾನದಲ್ಲಿ ಬಳಕೆಯಲ್ಲಿರುವ ಕೆಲವು ಪದಗಳು. 1 ಕ್ರಿಯೋಷ್ಣ (ಹೀಟ್ ಆಫ್ ರಿಆಕ್ಷನ್): ಪ್ರಸಕ್ತ ಕ್ರಿಯಾ ಸೂಚಕವಾದ ಸಮೀಕರಣ ವಿಧಿಸುವ ಪ್ರಕಾರ ತಮ್ಮ ಸ್ಥಿರರೂಪಗಳಲ್ಲಿರುವ ಗ್ರಾಂ ಅಣುತೂಕ. ವಸ್ತುಗಳು ಪರಸ್ಪರ ವರ್ತಿಸಿದಾಗ ಹೊರಬೀಳುವ ಅಥವಾ ಹೀರಲ್ಪಡುವ ಉಷ್ಣದ ಪ್ರಮಾಣ, ಉದಾಹರಣೆ:

$$2Mg_{(s)} + O_{2(g)} \rightarrow 2MgO_{(s)}; \Delta H = 291.6 \text{ ಕಿ.ಕೆ}$$

ಅಂದರೆ 48 ಗ್ರಾಂ ಘನರೂಪದ ಮ್ಯಾಗ್ನಿಸಿಯಂ 32 ಗ್ರಾಂ ಶುದ್ಧ ಆಕ್ಸಿಜನ್ ಅನಿಲದೊಡನೆ ಸಂಪೂರ್ಣವಾಗಿ ವರ್ತಿಸಿ 80 ಗ್ರಾಂ ಮ್ಯಾಗ್ನೀಸಿಯಂ ಆಕ್ಸೈಡಿನ ಘನವಸ್ತುವನ್ನು ಕೊಟ್ಟಾಗ 291.6 ಕಿ.ಕೆ.ಗಳಷ್ಟು ಉಷ್ಣ ಹೊರಬೀಳುತ್ತದೆ.

ಕ್ರಿಯೋಷ್ಣದ ಮೇಲೆ ಪ್ರಭಾವ ಬೀರುವ ಅಂಶಗಳು. (a) ಗಾತ್ರ ಅಥವಾ ಒತ್ತಡ ನಿಯಂತ್ರಣ: ಅನಿಲ ವಸ್ತುಗಳು ಪಾತ್ರವಹಿಸುತ್ತಿದ್ದರೆ ಕ್ರಿಯೆ ನಡೆದಾಗ ಗಾತ್ರ ನಿಯತವಾಗಿತ್ತೇ ಅಥವಾ ಒತ್ತಡ ನಿಯತವಾಗಿತ್ತೇ ಎಂಬುದನ್ನು ಸ್ಪಷ್ಟಪಡಿಸಬೇಕು. ಗಾತ್ರ ನಿಯತವಾಗಿದ್ದಾಗ ಆವರಣದ ವಿರುದ್ಧವಾಗಲೀ ಅಥವ ಪರವಾಗಲೀ ಕಾರ್ಯ ನಡೆಯುವುದಿಲ್ಲ. ಆದ್ದರಿಂದ ವ್ಯಕ್ತವಾದ ಉಷ್ಣ ಬದಲಾವಣೆ ಕ್ರಿಯೋಷ್ಣದ ನೈಜ ಮೌಲ್ಯವಾಗಿರುತ್ತದೆ. ಅದನ್ನು $H_v$ ಎಂದು ಸೂಚಿಸುವರು.

ಬಾಹ್ಯ ಒತ್ತಡ ಮಾತ್ರ ನಿಯತವಾಗಿದ್ದು ಅದರ ವಿರುದ್ಧ ಕ್ರಿಯಾ ವ್ಯವಸ್ಥೆ ವಿಕಾಸಗೊಂಡರೆ ಕ್ರಿಯೋಷ್ಣದ ಒಂದು ಭಾಗ ಇದಕ್ಕಾಗಿ ಅಪವ್ಯಯವಾಗುತ್ತದೆ. ನಿರ್ಗಮಿಸಿದ ಉಷ್ಣ ಕಡಿಮೆಯಾಗಿರುತ್ತದೆ. ಹಾಗೆಯೇ ವ್ಯವಸ್ಥೆ ಸಂಕುಚಿತವಾದರೆ ಆವರಣವೇ ಅದರ ವಿರುದ್ಧ ಕಾರ್ಯವೆಸಗುವುದರಿಂದ ವ್ಯಕ್ತವಾಗುವ ಉಷ್ಣ ನಿಜವಾದ ಕ್ರಿಯೋಷ್ಣಕ್ಕಿಂತ ಹೆಚ್ಚಾಗಿರುತ್ತದೆ. ಅದನ್ನು $H_p$ ಎಂದು ಸೂಚಿಸುವುದು ಪದ್ಧತಿ. ಇವೆರಡರ ಸಂಬಂಧ ಕೆಳಕಂಡ ಸಮೀಕರಣದಲ್ಲಿ ಅಡಕವಾಗಿದೆ.

$H_p = H_v - 2nT$ . .. .. .. ವ್ಯವಸ್ಥೆ ವಿಕಾಸವಾದಾಗ

$H_p = H_v + 2nT$ .. .. .. ವ್ಯವಸ್ಥೆ ಸಂಕುಚಿತವಾದಾಗ

(n= ಕ್ರಿಯೆಯಲ್ಲಿ ಹೆಚ್ಚು ಕಡಿಮೆಯಾದ ಗ್ರಾಂ ಅಣುಗಳ ಸಂಖ್ಯೆ, T=ನಿರಪೇಕ್ಷಮಾನದಲ್ಲಿ, ಕ್ರಿಯೆ ನಡೆದ ಉಷ್ಣತೆ).

(b) ಕ್ರಿಯಾಭಾಗಿಗಳ ವಸ್ತುಸ್ಥಿತಿ: ಉದಾಹರಣೆಗೆ, ನಿಯತ ಒತ್ತಡದಲ್ಲಿ, 2 ಗ್ರಾಂ ಹೈಡ್ರೋಜನ್ ಅನಿಲ 16 ಗ್ರಾಂ ಆಕ್ಸಿಜನ್ ಅನಿಲದೊಡನೆ ಸಂಪೂರ್ಣವಾಗಿ ಸಂಯೋಜಿಸಿದಾಗ ಉತ್ಪತ್ತಿಯಾದ ನೀರು ಯಾವ ಸ್ಥಿತಿಯಲ್ಲಿ ಇರುವುದೆಂಬುದನ್ನು ಆಧರಿಸಿ ಕ್ರಿಯೋಷ್ಣ ಹೆಚ್ಚು ಕಡಿಮೆಯಾಗುತ್ತದೆ. ಉದಾಹರಣೆ:

$$H_{2(g)} + \frac{1}{2}O_{2(g)} \Delta H_2O_{(g)}; \Delta H = -27.798 \text{ ಕಿ.ಕೆ}$$

$$H_{2(g)} + \frac{1}{2}O_{2(g)} \Delta H_2O_{(i)}; \Delta H = -67.137 \text{ ಕಿ.ಕೆ}$$

(ನೀರು)

ಹಬೆ ದ್ರವರೂಪಕ್ಕೆ ತಿರುಗಿದಾಗ, ಬಿಡುಗಡೆಯಾಗುವ 10.339 ಕಿ.ಕೆ. ಗುಪ್ತೋಷ್ಣವನ್ನೂ ಒಳಗೊಂಡಿರುವುದರಿಂದ ಎರಡನೆಯ ಸಂದರ್ಭದಲ್ಲಿ ಹೆಚ್ಚು ಉಷ್ಣ ನಿರ್ಗಮಿಸಿದಂತೆ ಕಾಣುತ್ತದೆ. ರಂಜಕವನ್ನು ಆಕ್ಸಿಜನ್ನಿನಲ್ಲಿ ಉರಿಸಿದಾಗಲೂ ಯಾವ ಭಿನ್ನರೂಪಭಾಗಿಯಾಗಿದೆ ಎಂಬುದಕ್ಕೆ ಅನುಗುಣವಾಗಿ ಇಂಥ ಉಷ್ಣವ್ಯತ್ಯಾಸ ಮೂಡುತ್ತದೆ. ಉದಾಹರಣೆ:

$P_{4(\text{ಬಿಳಿ})(s)} + 50_{2(g)} D P_4O_{10}$; DH=-720 ಕಿ.ಕೆ.

$P_{4(\text{ಕೆಂಪು})(s)} + 50_{2(g)} à P_4O_{10}$; DH=-702.4ಕಿ.ಕೆ.

124 ಗ್ರಾಂ. ಬಿಳಿ ರಂಜಕ ಪೂರಾ ಕೆಂಪು ರಂಜಕವಾದಾಗ 17.6 ಕಿ.ಕೆ. ಉಷ್ಣ ನಿರ್ಗಮಿಸುವುದೆಂದು ಇದರ ತಾತ್ಪರ್ಯ.

(c) ಉಷ್ಣತೆ: ಕ್ರಿಯೆ ನಡೆಯುವ ಉಷ್ಣತೆಯನ್ನು ಅವಲಂಬಿಸಿಯೂ ಉಷ್ಣ ಬದಲಾವಣೆಗಳಾಗುತ್ತವೆ. ಆದ್ದರಿಂದ ಅದನ್ನು ಸೂಚಿಸುವುದು ಅಗತ್ಯ. ಸೂಕ್ತ ನಿರ್ದೇಶನವಿಲ್ಲದಿದ್ದರೆ ಪ್ರಯೋಗಶಾಲೆಯ ಉಷ್ಣತೆಯಲ್ಲಿ ಕ್ರಿಯೆ ನಡೆಸಲಾಗಿದೆಯೆಂದು ಭಾವಿಸಬೇಕು.

(d) ದ್ರಾವಣರೂಪದಲ್ಲಿ ಕ್ರಿಯೆ: ಶುಷ್ಕ ವಸ್ತುಗಳ ನಡುವೆ ಕ್ರಿಯೆ ನಡೆದಾಗ ತೋರುವ ಉಷ್ಣವ್ಯತ್ಯಾಸಕ್ಕೂ ಅದೇ ವಸ್ತುಗಳು ದ್ರಾವಣದಲ್ಲಿ ವರ್ತಿಸಿದಾಗ ಆಗುವ ಉಷ್ಣಬದಲಾವಣೆಗೂ ಅಂತರವಿದೆ. ಹೈಡ್ರೋಜನ್ ಸಲ್ಫೈಡ್ ಮತ್ತು ಅಯೊಡೀನಿನ ವರ್ತನೆ ಇದಕ್ಕೆ ಸಾಕ್ಷಿ.

$H_2S_{(g)} + I_{2(s)} à 2HI_{(g)} + S$; DH=+17.215 ಕಿ.ಕೆ.

$H_2S_{(g)} + I_{2(s)} \rightarrow 2HI_{(g)} + S; \Delta H = -21.925$ ಕಿ.ಕೆ.

(ಪರ್ಯಾಪ್ತ ದ್ರಾವಣ) (ದ್ರಾವಣ)

2 ರಚನೋಷ್ಣ (ಹೀಟ್ ಆಫ್ ಫಾರ್ಮೇಷನ್): ತಮ್ಮ ಸ್ಥಿರರೂಪದಲ್ಲಿರುವ ಅಂಗಮೂಲವಸ್ತುಗಳು ಅಗತ್ಯ ಪ್ರಮಾಣದಲ್ಲಿ ಸಂಯೋಜಿಸಿ ಒಂದು ಗ್ರಾಂ ಅಣುತೂಕ ವಸ್ತುಗಳು ಮಾತ್ರ ರೂಪಿತವಾದಾಗ ನಿರ್ಗಮಿಸುವ ಅಥವಾ ಗ್ರಹಿಸಲ್ಪಡುವ ಉಷ್ಣದ ಪ್ರಮಾಣ. ಉದಾಹರಣೆ.

$$H_{2(g)} + \frac{1}{2}O_{2(g)} \rightarrow H_2O_{(l)}; \quad \Delta H = -68.137 \text{ ಕಿ.ಕೆ.}$$

3 ತಟಸ್ಥೋಷ್ಣ (ಹೀಟ್ ಆಫ್ ನ್ಯೂಟ್ರಲೈಸೇಷನ್): ಗ್ರಾಂ ಸಮಾನ ತೂಕ ಆಮ್ಲ ಮತ್ತು ಪ್ರತ್ಯಾಮ್ಲಗಳು ತುಂಬ ಜಲಮಿಶ್ರಿತ ದ್ರಾವಣದಲ್ಲಿ ಪರಸ್ಪರ ತಟಸ್ಥಗೊಳಿಸಿದಾಗ ಬಿಡುಗಡೆಯಾಗುವ ಉಷ್ಣದ ಪ್ರಮಾಣ. ಉದಾಹರಣೆ:

$HCI_{(aq)} + NaOH_{(aq)} \rightarrow NaCI_{(aq)} + H_2O; \Delta H = -13.7$ಕಿ.ಕೆ

$HCI_{(aq)} + NH_4OH_{(aq} \rightarrow NH_4CI_{(aq)} + H_2O; \quad \Delta H = -12.3$ಕಿ.ಕೆ.

ಪ್ರಬಲವಾದ ಯಾವುದೇ ಆಮ್ಲ ಮತ್ತು ಪ್ರತ್ಯಾಮ್ಲಗಳ ತಟಸ್ಥೋಷ್ಣ –13.7 ಕಿ.ಕೆ. ಗಳಾಗಿದ್ದು ನಿಯತವಾಗಿರುತ್ತದೆ ಎಂದು ಪ್ರಯೋಗಗಳಿಂದ ಸ್ಥಿರಪಟ್ಟಿದೆ. ಈ ಫಲಿತಾಂಶ ಅರೇನಿಯಸ್ಸನ ಅಯಾನುವಾದವನ್ನು ಸಮರ್ಥಿಸುತ್ತದೆ.

4 ದ್ರಾವಣೋಷ್ಣ (ಹೀಟ್ ಆಫ್ ಸೊಲ್ಯೂಷನ್): ಮತ್ತಷ್ಟು ನೀರು ಸೇರಿಸಿದರೂ ಉಷ್ಣತೆ ವ್ಯತ್ಯಾಸವಾಗದಷ್ಟು ತುಂಬ ನೀರಿನಲ್ಲಿ ಒಂದು ಗ್ರಾಂ ಅಣುತೂಕವಸ್ತು ವಿಲೀನವಾದಾಗ

ಹೊರಬೀಳುವ ಅಥವಾ ಹೀರಲ್ಪಡುವ ಉಷ್ಣದ ಪ್ರಮಾಣ. ಬಹುಪಾಲು ವಸ್ತುಗಳು ನೀರಿನಲ್ಲಿ ವಿಲೀನವಾದಾಗ ಉಷ್ಣವನ್ನು ಹೀರಿಕೊಳ್ಳುತ್ತವೆ. ಉದಾಹರಣೆ:

$NH_{3(g)}+aq \rightarrow NH_{3aq}$; $\Delta H$=-8.4ಕಿ.ಕೆ.

$NaOH_{(s)}+aq \rightarrow NaOH_{aq}$; $\Delta H$=-13.3ಕಿ.ಕೆ

$NaCI_{(s)}+aq \rightarrow NaCI_{aq}$; $\Delta H$=+1.2 ಕಿ.ಕೆ.

$KCI_{(s)}+aq \rightarrow KCI_{aq}$; $\Delta H$=+4.4 ಕಿ.ಕೆ.

5 ಸಂಯೋಜಿತ ಜಲೋಷ್ಣ (ಹೀಟ್ ಆಫ್ ಹೈಡ್ರೋಜನ್): ಒಂದು ಅಣುತೂಕ ನಿರ್ಜಲವಸ್ತು ಅಗತ್ಯ ಸಂಖ್ಯೆ ಗ್ರಾಂ ಅಣುತೂಕ ನೀರಿನೊಡನೆ ಕೂಡಿ ತನ್ನ ಜಲ ಸಂಯುಕ್ತವನ್ನು ಕೊಟ್ಟಾಗ ಹೊರಬೀಳುವ ಉಷ್ಣ ಪ್ರಮಾಣ. ಜಲಸಂಯುಕ್ತ ಮತ್ತು ಅದರ ನಿರ್ಜಲ ವಸ್ತುಗಳ ದ್ರಾವಣೋಷ್ಣಗಳಿಂದ ಇದನ್ನು ನಿರ್ಧರಿಸಬಹುದು. ಉದಾಹರಣೆ:

$CuSO_4.5H_2O+aq \rightarrow CuSO_{4aq}$; $\Delta H$=2.7445 ಕಿ.ಕೆ

$CuSO_4+5H_2O+aq \rightarrow CuSO_{4aq}$; $\Delta H$=015.7905 ಕಿ.ಕೆ.

ಆದ್ದರಿಂದ ತಾಮ್ರದ ಸಲ್ಫೇಟಿನ ಸಂಯೋಜನ ಜಲೋಷ್ಣ:

$\Delta H$=-18.535 ಕಿ.ಕೆ.

6 ದಹನೋಷ್ಣ (ಹೀಟ್ ಆಫ್ ಕಂಬಸ್ಚನ್): ಒಂದು ಗ್ರಾಂ ಅಣುತೂಕ ವಸ್ತು ಪೂರ್ಣವಾಗಿ ಉತ್ಕರ್ಷಿತವಾದಾಗ ಬಿಡುಗಡೆಯಾಗುವ ಉಷ್ಣದ ಪ್ರಮಾಣ. ಕೆಳಕಂಡ ಕ್ರಿಯೆಗಳನ್ನು ಗಮನಿಸಿ:

$C_2H_{2(g)}+2\ ½\ O_{2(g)} \rightarrow 2CO_{2(g)}+H_2O_{(g)}$; $\Delta H$=-300.6ಕಿ.ಕೆ.

$C_2H_{2(g)}+1\ ½\ O_{2(g)} \rightarrow 2CO_{(g)}+H2O_{(g)}$; $\Delta H$=-165.3ಕಿ.ಕೆ

ಎರಡನೆಯ ಸಂದರ್ಭದಲ್ಲಿ ಅಸಿಟಲಿನ್ ಪೂರ್ಣವಾಗಿ ಉತ್ಕರ್ಷಿತವಾಗಿಲ್ಲ. ಆದ್ದರಿಂದ ಅದರ ದಹನೋಷ್ಣ 300.6 ಕಿಲೊ ಕ್ಯಾಲೊರಿಗಳೇ ಹೊರತು 165.3 ಕಿಲೊ ಕ್ಯಾಲೊರಿಗಳಲ್ಲ.

ದಹನೋಷ್ಣ ನಿರ್ಣಯದ ವ್ಯಾಪ್ತಿ ಮತ್ತು ಉಪಯೋಗ (i) ಸಾವಯವ ವಸ್ತುಗಳ ರಚನೋಷ್ಣದ ನೇರ ನಿರ್ಣಯ ಅಸಾಧ್ಯ. ಆದರೆ ಅವುಗಳ ದಹನೋಷ್ಣವನ್ನು ನಿಖರವಾಗಿ ಕಂಡುಹಿಡಿಯಬಹುದು. ಇದರ ಸಹಾಯದಿಂದ, ಅವುಗಳ ರಚನೋಷ್ಣವನ್ನು ಗುಣಿಸಬಹುದು.

(ii) ಇಂಧನಗಳ ದಹನಶಕ್ತಿ ಮತ್ತು ಆಹಾರ ವಸ್ತುಗಳು ದೇಹಕ್ಕೆ ಒದಗಿಸಬಲ್ಲ ಶಕ್ತಿ ಪ್ರಮಾಣಗಳನ್ನು ನಿರ್ಣಯಿಸಬಹುದು.

(iii) ಸಾವಯವ ವಸ್ತುಗಳ ರಚನಾವಿನ್ಯಾಸವನ್ನು ತೀರ್ಮಾನಿಸಬಹುದು.

ಇದುವರೆಗೆ ವಿವರಿಸಿದ ವಿವಿಧ ರೀತಿಯ ಉಷ್ಣ ವ್ಯತ್ಯಾಸಗಳು ಎರಡು ನಿಯಮಗಳಿಗೆ ಬದ್ಧವಾಗಿ ನಡೆಯುತ್ತವೆ. ಇವುಗಳಿಗೆ ಶಕ್ತಿನಿತ್ಯತ್ವ ನಿಯಮವೇ ಆಧಾರ. ಅಂದರೆ ಇವು ಉಷ್ಣಗತಿಶಾಸ್ತ್ರದ ಮೊದಲನೆಯ ಪ್ರಮೇಯದ ಉಷ್ಣ ನಿಯಮಗಳೆಂದಾಯಿತು.

ಮೊದಲನೆಯ ನಿಯಮವನ್ನು ರೂಪಿಸಿದವರು ಲೆವಾಸಿಯೆ ಮತ್ತು ಲ್ಯಾಪ್ಲೇಸ್ ಎಂಬುವರು. ಆ ನಿಯಮದ ಪ್ರಕಾರ ಒಂದು ಸಂಯುಕ್ತವನ್ನು ಅದರ ಅಂಗಮೂಲ ವಸ್ತುಗಳಾಗಿ ವಿಭಜಿಸಲು ಅಗತ್ಯವಾದ ಉಷ್ಣ ಅವುಗಳ ಸಂಯೋಜನೆಯಿಂದ ಅದೇ ಸಂಯುಕ್ತವಾದಾಗ ಹೊರಬೀಳುವ ಉಷ್ಣಕ್ಕೆ ಸಮನಾಗಿರುತ್ತದೆ. ಇಲ್ಲದಿದ್ದರೆ ಒಂದು ಸಂಯುಕ್ತವನ್ನು ಅದರ ಅಂಗಮೂಲವಸ್ತುಗಳಿಂದ ತಯಾರಿಸಿ ಕೂಡಲೇ ವಿಭಜಿಸಿ ಅನಂತಶಕ್ತಿಯನ್ನು ಸೃಷ್ಟಿಸಬಹುದಾಗಿತ್ತು. ಶಕ್ತಿನಿತ್ಯತ್ವ ನಿಯಮದ ಪ್ರಕಾರ ಇದು ಅಸಾಧ್ಯ. ಆದ್ದರಿಂದ ಉಷ್ಣ ರಾಸಾಯನಿಕ ಸಮೀಕರಣಗಳನ್ನು ಬೀಜಗಣಿತ ರೀತ್ಯಾ ಧನ ಮತ್ತು ಋಣ ಚಿಹ್ನೆಗಳನ್ನು ಬದಲಾಯಿಸಿ ವಿಪರ್ಯಯವಾಗಿ ಬರೆಯಬಹುದು.

$S_{(ಅಷ್ಟಮುಖಿ)(s)}+O_{2(g)} \rightarrow SO_{2(g)}$ ; $\Delta H^0_{298}$=-70.96 ಕಿ.ಕೆ.

$SO_{2(g)} \rightarrow {}_{(ಅಷ್ಟಮುಖಿ)(s)}+O_{2(g)}$; $\Delta H^0_{298}$=+70.96ಕಿ.ಕೆ.

ಎಲ್ಲ ರಾಸಾಯನಿಕ ಕ್ರಿಯೆಗಳಿಗೂ ಇದು ಅನ್ವಯವಾಗುತ್ತದೆ.

$CO_{2(g)}+H_{2(g)} \rightarrow CO_{(g)}+H_2O_{(g)}$; $\Delta H^0_{298}$ =-0.68 ಕಿ.ಕೆ

$CO_{(g)}+H_2O_{(g)} \rightarrow CO_{2(g)}+H_{2(g)}$; $\Delta H^0_{298}$=+0.68ಕಿ.ಕೆ

ಎರಡನೆಯ ನಿಯಮವನ್ನು 1840ರಲ್ಲಿ ಜಿ.ಎಚ್.ಹೆಸ್ ಎಂಬಾತ ಪ್ರಯೋಗ ಫಲಿತಾಂಶಗಳಿಂದ ಪ್ರತಿಪಾದಿಸಿದ. ಅದೇ ಪ್ರಸಿದ್ಧವಾದ ನಿಯತೋಷ್ಣ ಸಂಕಲನ ನಿಯಮ (ಲಾ ಆಫ್ ಕಾನ್‌ಸ್ಟೆಂಟ್ ಹೀಟ್ ಸಮೇಷನ್). ಅದರ ಪ್ರಕಾರ ನಿರ್ದಿಷ್ಟ ರಾಸಾಯನಿಕ ಕ್ರಿಯೆ ನಡೆದಾಗ ಆಗುವ ಉಷ್ಣ ವ್ಯತ್ಯಾಸ ಕ್ರಿಯಾವಧಿಯನ್ನಾಗಲಿ ಅಥವಾ ಅದು ಒಳಗೊಂಡಿರುವ ಹಂತಗಳನ್ನಾಗಲಿ ಅವಲಂಬಿಸಿರುವುದಿಲ್ಲ: ಕ್ರಿಯಾಪೂರ್ವ ಮತ್ತು ಕ್ರಿಯೋತ್ತರ ಸ್ಥಿತಿಗಳಿಗೆ ಮಾತ್ರ ಅನುಗುಣವಾಗಿರುತ್ತದೆ. ಈ ನಿಯಮಕ್ಕೆ ತಾತ್ವಿಕ ಹಾಗೂ ಪ್ರಾಯೋಗಿಕ ಆಧಾರವಿದೆ.

ತಾತ್ವಿಕ ಸಮರ್ಥನೆ ಚಿತ್ರದಲ್ಲಿ ತೋರಿಸಿರುವಂತೆ ಒಂದು ರಾಸಾಯನಿಕ ವ್ಯವಸ್ಥೆಯ ಪೂರ್ವಸ್ಥಿತಿಯನ್ನು A ಬಿಂದು ಸೂಚಿಸಲಿ. ಅದು B ಬಿಂದುವಿನಿಂದ ಸೂಚಿತವಾದ ಸ್ಥಿತಿಯನ್ನು ತಲುಪಿತೆಂದು ಇಟ್ಟುಕೊಳ್ಳೋಣ. ಹೀಗಾಗಲು ಎರಡು ಭಿನ್ನ ಮಾರ್ಗಗಳಿವೆ. ಮೊದಲನೆಯ ಕ್ರಿಯಾಪಥದಲ್ಲಿ C ಮತ್ತು D ಬಿಂದುಗಳು ಸೂಚಿಸುವ ಎರಡು ಮಧ್ಯ ಸ್ಥಿತಿಯಿರಲಿ. ಈ ಮೂರು ಘಟ್ಟಗಳಲ್ಲಿ ಕ್ರಿಯೆ ನಡೆದಾಗ ಕ್ರಮವಾಗಿ x,y ಮತ್ತು z ಕ್ಯಾಲೊರಿಗಳಷ್ಟು ಉಷ್ಣ ಹೊರಬೀಳಲಿ. ಆಗ ಒಟ್ಟು ಕ್ರಿಯೆಯಲ್ಲಿ ಬಿಡುಗಡೆಯಾದ ಉಷ್ಣದ ಮೊತ್ತ (x+y+z) ಕ್ಯಾಲೊರಿಗಳಾಗುತ್ತದೆ.



ಎರಡನೆಯ ಕ್ರಿಯಾಪಥದಲ್ಲಿ E ಬಿಂದು ಸೂಚಿಸುವ ಒಂದೇ ಮಧ್ಯಸ್ಥಿತಿಯಿರಲಿ. ವ್ಯವಸ್ಥೆ A ಯಿಂದ E ತಲುಪಿದಾಗ a ಕ್ಯಾಲೊರಿಗಳಷ್ಟು ಉಷ್ಣವೂ ಮತ್ತು E ಯಿಂದ B ಮುಟ್ಟಿದಾಗ b ಕ್ಯಾಲೊರಿಗಳಷ್ಟು ಉಷ್ಣವೂ ಬಿಡುಗಡೆಯಾಗಲಿ. ಈಗ ಒಟ್ಟು ಕ್ರಿಯೆಯಲ್ಲಿ ಹೊರಬಿದ್ದ ಉಷ್ಣದ ಮೊತ್ತ (a+b) ಕ್ಯಾಲೊರಿಗಳಾಗುತ್ತದೆ. ಹೆಸ್‌ನ ನಿಯಮದ ಪ್ರಕಾರ (x+y+z)º(a+b). ತಾತ್ಕಾಲಿಕವಾಗಿ, ಹಾಗಿಲ್ಲವೆಂದು ಭಾವಿಸೋಣ. ಉದಾಹರಣೆಗೆ (a+b) ಯು x+y+z ಗಿಂತ ಹೆಚ್ಚಾಗಿರಲಿ. ನಾವು ಕ್ರಿಯಾವ್ಯವಸ್ಥೆಯನ್ನು A ಯಿಂದ B ಗೆ E ಮಾರ್ಗವಾಗಿ ಒಯ್ದರೆ (a+b) ಕ್ಯಾಲೊರಿಗಳಷ್ಟು ಉಷ್ಣ ಬಿಡುಗಡೆಯಾಗಬೇಕು. ಮತ್ತೆ B,C ಮೂಲಕ A ಗೆ ಮರಳಿದಾಗ (x+y+z) ಕ್ಯಾಲೊರಿಗಳಷ್ಟು ಉಷ್ಣ ಹೀರಲ್ಪಡಬೇಕು. ಆದ್ದರಿಂದ ಈ ಕ್ರಿಯಾಸರಣಿಯಲ್ಲಿ {(a+b)-(x+y+z)} ಕ್ಯಾಲೊರಿಗಳಷ್ಟು ನಿವ್ವಳ ಉಷ್ಣ ಸಂಪಾದನೆಯಾದಂತಾಯಿತು. ಹೀಗೆ ಈ ಕ್ರಿಯೆಯನ್ನು ಪುನರಾವರ್ತಿಸಿದರೆ ನಿರಾಯಾಸವಾಗಿ ಶೂನ್ಯದಿಂದ ಶಕ್ತಿ ಸೃಷ್ಟಿಸಿದಂತಾಗುತ್ತದೆ. ಶಕ್ತಿ ನಿತ್ಯತ್ವನಿಯಮದ ಪ್ರಕಾರ ಇದು ಸಾಧ್ಯವಿಲ್ಲ. ಆದ್ದರಿಂದ (a+b) ಮತ್ತು (x+y+z) ಪರಸ್ಪರ ಸಮನಾಗಿರಲೇಬೇಕು.

ಪ್ರಾಯೋಗಿಕ ಸಮರ್ಥನೆ: 56 ಗ್ರಾಂ ಕ್ಯಾಲ್ಸಿಯಂ ಆಕ್ಸೈಡನ್ನು 111 ಗ್ರಾಂ ಕ್ಯಾಲ್ಸಿಯಂ ಕ್ಲೋರೈಡುಳ್ಳ ದುರ್ಬಲ ದ್ರಾವಣಕ್ಕೆ ಪರಿವರ್ತಿಸಲು ಎರಡು ಭಿನ್ನ ಮಾರ್ಗಗಳಿವೆ.

| | |
|---|---|
| (i)ಕೊಟ್ಟಿರುವ ಕ್ಯಾಲ್ಸಿಯಂ ಆಕ್ಸೈಡನ್ನು ನೀರಿನ ಸಂಪರ್ಕದಲ್ಲಿ ಅರಳಿಸುವುದು–<br>$CaO_{(s)}+H_2O_{(l)} \rightarrow Ca(OH)_2$;<br>$\Delta H$=-15ಕಿ.ಕೆ<br>(ii) ಅರಳಿದ ಸುಣ್ಣಕ್ಕೆ ಧಾರಾಳವಾಗಿ ನೀರು ಸೇರಿಸಿ ದುರ್ಬಲ ದ್ರಾವಣ ಮಾಡುವುದು–<br>$Ca(OH)_2+aq \rightarrow Ca(OH)_{2(aq)}$;<br>$\Delta H$=-3ಕಿ.ಕೆ<br>(iii) ಲಭ್ಯವಾದ ಸುಣ್ಣದ ತಿಳಿನೀರಿಗೆ, ಎರಡು ಗ್ರಾಂ ಅಣುತೂಕ ಹೈಡ್ರೊಕ್ಲೋರಿಕ್ ಆಮ್ಲಸೇರಿಸಿ ತಟಸ್ಥಗೊಳಿಸುವುದು–<br>$Ca(OH)_{2(aq)}+2HCI_{(aq)} \rightarrow$<br>$CaCI_{2(aq)}+2H_2O$;<br>$\Delta H$=-28 ಕಿ.ಕೆ.<br>ಒಟ್ಟು ಉಷ್ಣವ್ಯತ್ಯಾಸ=-46ಕಿ.ಕೆ. | ಕ್ಯಾಲ್ಸಿಯಂ ಆಕ್ಸೈಡನ್ನು ನೇರವಾಗಿ ಅಪೇಕ್ಷಿತ ಪ್ರಮಾಣ ದುರ್ಬಲ ಹೈಡ್ರೊಕ್ಲೋರಿಕಾಮ್ಲಕ್ಕೆ ಸೇರಿಸುವುದು–<br>$CaO_{(s)}+2HCI_{(aq)} \rightarrow CaCI_{2(aq)}$<br>$+H_2O$; $\Delta H$=-46 ಕಿ.ಕೆ. |

ಎರಡು ವಿಧಾನಗಳಲ್ಲೂ ಉಷ್ಣ ವ್ಯತ್ಯಾಸ ಒಂದೇ ಆಗಿರುವುದರಿಂದ ನಿಯಮವನ್ನು ಸಮರ್ಥಿಸಿದಂತಾಯಿತು. ಹೆಸ್‌ನ ನಿಯಮದಿಂದ ಮತ್ತೊಂದು ಪ್ರಯೋಜನವಿದೆ—ಉಷ್ಣ ರಾಸಾಯನಿಕ ಸಮೀಕರಣಗಳನ್ನು, ಬೀಜಗಣಿತದಲ್ಲಿ ಮಾಡುವಂತೆ, ಕೂಡಿ ಕಳೆಯಬಹುದು. ತತ್ಫಲವಾಗಿ ಇತರ ಪ್ರಯೋಗ ವಿವರಗಳಿಂದ ಯಾವ ವಸ್ತುವಿನ ರಚನೋಷ್ಣವನ್ನಾದರೂ ಲೆಕ್ಕಹಾಕಬಹುದು. ಒಂದು ಸಂಯುಕ್ತ ಅದರ ಅಂಗಮೂಲ ವಸ್ತುಗಳಿಗೆ ವಿಭಜನೆಯಾದಾಗ ಉಷ್ಣ ಹೀರಲ್ಪಡುವುದೆಂದು ಈಗಾಗಲೇ ತಿಳಿದಿದ್ದೇವೆ. ಅಂತರಗ್ರಹ ಪ್ರಯಾಣಕ್ಕೆ ಬಳಸುವ ರಾಕೆಟ್ಟಿನ ರಚನೆಯಲ್ಲಿ ಈ ತತ್ತ್ವ ಸಹಾಯಕವಾಗಿದೆ. ತನ್ನ ಅಂತರಗ್ರಹ ಪ್ರಯಾಣದಿಂದ, ನೌಕೆ ಭೂಮಿಯ ವಾತಾವರಣವನ್ನು ಪುನಃ ಪ್ರವೇಶಿಸಿದಾಗ ಭೂಮಿಯ ಗುರುತ್ವಾಕರ್ಷಣೆಗೆ ಒಳಪಟ್ಟು ಅದರೆಡೆಗೆ ಭಯಂಕರ ವೇಗದಲ್ಲಿ ಧಾವಿಸುವ ಉಲ್ಕೆಗಳನ್ನು ಕಂಡಿದ್ದೇವೆ. ಅವು ಗಾತ್ರದಲ್ಲಿ ಬಲು ದೊಡ್ಡವಿರಬಹುದು. ಅಂಥ ವಸ್ತುಗಳೇ ಭೂವಾತಾವರಣದ ಘರ್ಷಣೆಯಿಂದ ಉರಿದು ಬೂದಿಯಾಗುವುದರಿಂದ ಆಗ ಹುಟ್ಟುವ ಉಷ್ಣದ ಪ್ರಮಾಣವನ್ನು ಊಹಿಸಿಕೊಳ್ಳಬಹುದು. ಅಂತರಿಕ್ಷನೌಕೆಗೂ ಇದೇ ಗತಿಯಾಗಬೇಕು. ಅದನ್ನು ತಪ್ಪಿಸಲು ನೌಕೆಯ ಹೊರಭಾಗಕ್ಕೆ ಪ್ಲಾಸ್ಟಿಕ್ ಹೊದಿಕೆ ಇರುತ್ತದೆ. ಇದನ್ನು ಶಿಲಾಕವಚ (ಅಬ್ಲೇಟಿವ್ ಷೀಲ್ಡ್) ಎನ್ನುವರು. ಪ್ಲಾಸ್ಟಿಕ್ ವಸ್ತುವಿನಲ್ಲಿ ಸರಪಳಿಯಂತೆ ಪೋಣಿಸಿರುವ ಉದ್ದವಾದ ಅಸಂಖ್ಯಾತ

ಅಣುಮಾಲೆಗಳಿರುತ್ತವೆ. ವಾತಾವರಣದ ಘರ್ಷಣೆಯಿಂದ ಹುಟ್ಟಿದ ಉಷ್ಣ ಈ ಅಣುಮಾಲೆಗಳನ್ನು ವಿಭಜಿಸಲು ತತ್‌ಕ್ಷಣ ವಿನಿಯೋಗವಾಗುವುದರಿಂದ ಅಂತರಿಕ್ಷನೌಕೆಯ ಉಷ್ಣತೆ ಅಪಾಯ ಮಟ್ಟ ತಲುಪದೆ, ಸುರಕ್ಷಿತವಾಗಿ ಧರೆಗೆ ಇಳಿಯುತ್ತದೆ. (ಎಚ್.ಜಿ.ಎಸ್.)

**ಉಷ್ಣಲೋಹವಿದ್ಯೆ:** ಖನಿಜಗಳಿಂದ ಆಯಾ ಲೋಹಗಳನ್ನು ಪಡೆಯುವ ಸಲುವಾಗಿ ಉನ್ನತ ತಾಪಮಾನದಲ್ಲಿ ರಾಸಾಯನಿಕ ಕ್ರಿಯೆಗಳನ್ನು ನಡೆಸುವ ತಂತ್ರ (ಪೈರೋ ಮೆಟಲರ್ಜಿ). ತಾಮ್ರವನ್ನು ಅದಿರಿನಿಂದ ಅಪಕರ್ಷಿಸಲು ಉಷ್ಣವನ್ನು ಬಳಸುವ ಪರಿಪಾಠ ಪ್ರ.ಶ.ಪೂ. 3000ಕ್ಕೆ ಹಿಂದೆಯೂ ಇತ್ತು. ರಸಾಯನ ವಿಜ್ಞಾನ ಬೆಳೆದಂತೆ ಉನ್ನತ ತಾಪಮಾನವನ್ನು ತಡೆಯಬಲ್ಲ ಯೋಗ್ಯ ವಸ್ತುಗಳು ರೂಪುಗೊಂಡಂತೆ ಮತ್ತು ಉಷ್ಣತಾ ನಿಯಂತ್ರಣ ಕಲೆ ಕರಗತವಾದಂತೆಲ್ಲ ಉಷ್ಣ ಲೋಹ ವಿದ್ಯೆಯ ತಂತ್ರಗಳೂ ಸುಧಾರಿತವಾಗಿ ಪರಿಪೂರ್ಣಗೊಂಡವು. 20ನೆಯ ಶತಮಾನದ ಮಧ್ಯಭಾಗದಲ್ಲಿ ಲೋಹೋತ್ಪತ್ತಿಗೆ ಇದೊಂದೇ ಪ್ರಮುಖ ವಿಧಾನವಾಗಿತ್ತು.

ಲೋಹೋತ್ಪತ್ತಿಗೆ ಉನ್ನತ ತಾಪಮಾನವನ್ನು ಬಳಸುವುದರಿಂದ ಹಲವು ಅನುಕೂಲಗಳಿವೆ. ಆಗ ರಾಸಾಯನಿಕ ಕ್ರಿಯಾವೇಗ ಹೆಚ್ಚುತ್ತದೆ. ಸಾಮಾನ್ಯ ತಾಪಮಾನದಲ್ಲಿ ಇಂಗಾಲದಿಂದ ಸೀಸದ ಆಕ್ಸೈಡಿನ ಮತ್ತು ಮ್ಯಾಗ್ನೀಸಿಯಂನಿಂದ ಟೈಟೇನಿಯಂ ಟೆಟ್ರ ಕ್ಲೋರೈಡಿನ ಅಪಕರ್ಷಣ ಮಂದಗತಿಯಲ್ಲಿ ಮುಂದುವರೆಯುವುದು. ಆದರೆ 600°-800°ಸೆ. ಉಷ್ಣತಾಮಿತಿಯಲ್ಲಿ ಗಣನೀಯವಾಗಿರುತ್ತದೆ. ರಾಸಾಯನಿಕ ಸಮಸ್ಥಿತಿ ಉಷ್ಣತೆಗೆ ಅನುಗುಣವಾಗಿರುವುದಷ್ಟೇ. ಉನ್ನತ ಉಷ್ಣತೆಯಲ್ಲಿ ಈ ಸಮತೋಲನ ಅಪೇಕ್ಷಿತ ದಿಕ್ಕಿನಲ್ಲಿ ವ್ಯತ್ಯಾಸವಾಗುವಂತೆ ಮಾಡಬಹುದು. ತತ್ಫಲವಾಗಿ ಕೆಳಮಟ್ಟದ ಉಷ್ಣದಲ್ಲಿ ಅಸಾಧ್ಯವೆನಿಸಿದ್ದ ಕ್ರಿಯೆಗಳು ಉನ್ನತ ತಾಪಮಾನದಲ್ಲಿ ನಡೆಯುವಂತಾಗುವುವು. ಸು. 900° ಸೆ. ನಲ್ಲಿ ವಾಯುವಿರುವುದು ಸಾಧ್ಯವೇ ಇಲ್ಲ. ಆದರೆ ತಾಪಮಾನ ಹೆಚ್ಚಿದರೆ ಇದೇ ಕ್ರಿಯೆ ಸಹಜವಾಗಿ ಜರುಗುವುದು. ಅದಿರುಗಳನ್ನು ಅಪಕರ್ಷಿಸಿದಾಗ ಸಿಲಿಕ ($SiO_2$), ಅಲ್ಯೂಮಿನಾ ($Al_2O_3$), ಕ್ಯಾಲ್ಸಿಯಂ ಆಕ್ಸೈಡ್($CaO$), ಫೆರಸ್ ಆಕ್ಸೈಡ್ ($FeO$) ಇತ್ಯಾದಿ ಕಶ್ಮಲಗಳು ಅಪಕರ್ಷಿತವಾಗದೆ ಲೋಹದೊಂದಿಗೆ ಉಳಿದುಬಿಡುವುವು. ಆದಾಗ್ಯೂ ಲಭ್ಯವಾದ ಲೋಹವು ದ್ರವ ಅಥವಾ ಆವಿಯ ರೂಪದಲ್ಲಿ ಇರುವುದರಿಂದ ಶೇಷವಸ್ತುಗಳಿಂದ ಅದನ್ನು ಬೇರ್ಪಡಿಸುವುದು ಸುಲಭ.

20ನೆಯ ಶತಮಾನದಲ್ಲಿ ಉಷ್ಣಲೋಹವಿದ್ಯಾ ಕ್ಷೇತ್ರದಲ್ಲಾಗಿರುವ ಅಗಾಧ ಪ್ರಗತಿಯ ಫಲವಾಗಿ ಈ ಕಲೆ ಇತರ ಆಧುನಿಕ ಲೋಹೋತ್ಪತ್ತಿ ವಿಧಾನಗಳ ಪೈಪೋಟಿಯನ್ನೂ ಸಹಿಸಿಕೊಂಡು ಜೀವಂತವಾಗಿದೆ. ಉನ್ನತ ಉಷ್ಣತೆಯಲ್ಲಿ ಜರುಗುವ ಕ್ರಿಯಾಸ್ವರೂಪದ ಅರಿವು, ಕುಲುಮೆಗಳಿಂದ ಉಷ್ಣ ಹಾಳಾಗದಂತೆ ಕಾಪಾಡುವ ಉತ್ತಮ ಅಸ್ತರಿಗಳ ತಯಾರಿಕೆ, ಕುಲುಮೆಗಳನ್ನು ಕಾಯಿಸಲು ವಿದ್ಯುದ್ವಿಧಾನದ ಬಳಕೆ, ಉಷ್ಣ ನಿಯಂತ್ರಿಸುವ ವಿದ್ಯುತ್ ಸಲಕರಣೆಗಳು, ಒತ್ತಡ ಮತ್ತು ನಿರ್ವಾತ ಸನ್ನಿವೇಶದಲ್ಲಿ ಕಾರ್ಯನಿರ್ವಹಿಸಬಲ್ಲ ಯಂತ್ರೋಪಕರಣಗಳ ನಿರ್ಮಾಣ, ಅಗ್ಗದ ಬೆಲೆಯಲ್ಲಿ ಆಕ್ಸಿಜನ್ನಿನ ಪೂರೈಕೆ ಮೊದಲಾದ ಸುಧಾರಣೆಗಳು ಗಮನಾರ್ಹವಾದವು. 1925–58ರ ಅವಧಿಯಲ್ಲಿ ಕಬ್ಬಿಣೇತರ ಲೋಹಗಳ ಉತ್ಪಾದನೆಯಲ್ಲೇ ಅನುಷ್ಠಾನಕ್ಕೆ ಬಂದಿರುವ ಆಧುನಿಕ ವಿಧಾನಗಳು ಅನೇಕ. ಅವುಗಳಲ್ಲಿ ಕೆಲವನ್ನು ಮಾತ್ರ ಮುಂದೆ ಹೆಸರಿಸಲಾಗಿದೆ. ಸತುವಿನ ಅದಿರನ್ನು ಕರಗಿಸಲು ಅಹರ್ನಿಶಿ ಕೆಲಸ ಮಾಡುವ ನಿಲುಗುಲುಮೆ (ವರ್ಟಿಕಲ್ ರಿಟಾರ್ಟ್) ಬಳಕೆಗೆ ಬಂದಿದೆ. ಅಶುದ್ಧ ಸತುವಿನ ಸಂಸ್ಕರಣಕ್ಕೆ ಅಂಶಬಾಷ್ಪೀಭವನ ಪದ್ಧತಿಯನ್ನು ಜಾರಿಗೆ ತರಲಾಗಿದೆ. ನಿರ್ವಾತ ಕುಲುಮೆಯಲ್ಲಿ ಮ್ಯಾಗ್ನೀಸಿಯಂ ಮತ್ತು ಕ್ಯಾಲ್ಸಿಯಂ ಲೋಹಗಳನ್ನು ಅತ್ಯಾಧುನಿಕ ಕ್ರೋಲ್ ವಿಧಾನದಿಂದ ಉತ್ಪಾದಿಸಲಾಗುತ್ತಿದೆ. ಕೀಳುದರ್ಜೆಯ ನಿಕ್ಕಲ್ ಅದಿರುಗಳನ್ನು ಕರಗಿಸುವ ಸಲುವಾಗಿಯೇ ಆಕ್ಸಿಜನ್ನಿನಲ್ಲಿ ಉರಿಸುವ ಮಿಂಚಿನ ವಿಧಾನ (ಫ್ಲಾಷ್ ಸ್ಮೆಲ್ಟಿಂಗ್) ಹುಟ್ಟಿಕೊಂಡಿದೆ. ಸತುವಿನ ತಯಾರಿಕೆಗೆ ಊದುಕುಲುಮೆಯ ಅನ್ವಯ ಮತ್ತೊಂದು ಪ್ರಮುಖ ಮೈಲಿಗಲ್ಲು. ಯುರೇನಿಯಂ, ಕೋಬಾಲ್ಟ್, ಬೆಳ್ಳಿ, ಬಿಸ್ಮತ್, ಪಾದರಸ, ಮಾಲಿಬ್ಡಿನಂ, ಬೆರಿಲಿಯಂ, ಟಂಗ್‌ಸ್ಟನ್, ಚಿನ್ನ, ಜಿರ್ಕೋನಿಯಂ, ಟ್ಯಾಂಟಲಂ, ನಿಯೋಬಿಯಂ ಮತ್ತು ಇತರ ಅಪ್ರಧಾನ ಲೋಹಗಳೂ ಉಷ್ಣ ಲೋಹವಿದ್ಯಾ ವಿಧಾನದಿಂದಲೇ ತಯಾರಿಸಲ್ಪಡುತ್ತಿವೆ. ಕಬ್ಬಿಣ, ಉಕ್ಕು, ಫೆರೊಮ್ಯಾಂಗನೀಸ್ ಮತ್ತು ಫೆರೊಕ್ರೋಮ್ ಮಿಶ್ರಲೋಹಗಳು ಇತ್ಯಾದಿಗಳ ತಯಾರಿಕೆಗೆ ಸಂಪೂರ್ಣವಾಗಿ ಈ ವಿಧಾನವನ್ನು ಅವಲಂಬಿಸಿದೆ. ಅದಿರಿನಿಂದ ಲೋಹದವರೆಗೆ ಉತ್ಪಾದನಾ ಕ್ರಮ ಪೂರ್ತಿಯಾಗಿ ಉಷ್ಣಲೋಹ ವಿದ್ಯಾತಂತ್ರವಾಗಿರಬಹುದು. ಇಲ್ಲವೆ ಮೊದಲ ಹಂತಗಳಲ್ಲಿ ಮಾತ್ರ ಉನ್ನತ ತಾಪಮಾನ ಬಳಸಿ ಮುಂದೆ ಜಲಲೋಹತಂತ್ರವನ್ನಾಗಲೀ (ಹೈಡ್ರೋಮೆಟಲರ್ಜಿ) ಅಥವಾ ವಿದ್ಯುಲ್ಲೋಹತಂತ್ರವನ್ನಾಗಲೀ (ಎಲೆಕ್ಟ್ರೋಮೆಟಲರ್ಜಿ) ಉಪಯೋಗಿಸಬಹುದುಂಟು.

ಉಷ್ಣಲೋಹವಿದ್ಯಾ ವಿಧಾನಗಳು ಮೂರು ರೀತಿಯವಾಗಿರಬಹುದು: 1. ಅಣಿಗೊಳಿಸುವ ಕ್ರಿಯೆಗಳು—ಕಚ್ಚಾವಸ್ತುವನ್ನು ಮುಂದಿನ ಕ್ರಿಯಾ ಹಂತಗಳಿಗೆ ಅನುವುಗೊಳಿಸುವುದು ಇವುಗಳ ಕರ್ತವ್ಯ. ಸಲ್ಫೈಡ್ ಅದಿರುಗಳನ್ನು ಹುರಿದು ಆಕ್ಸೈಡುಗಳಾಗಿ ಪರಿವರ್ತಿಸುವುದು ಇದಕ್ಕೆ ಉದಾಹರಣೆ. 2. ಅಪಕರ್ಷಣ ವಿಧಿಗಳು—ಸಂಯುಕ್ತಗಳನ್ನು ಮೂಲ ಲೋಹಕ್ಕೆ ಮಾರ್ಪಡಿಸುವ ಘಟ್ಟವಿದು. ಹೆಮಟೈಟ್ ಅದಿರನ್ನು ಬೀಡು ಕಬ್ಬಿಣವಾಗಿ ಅಪಕರ್ಷಿಸುವುದು ಇದಕ್ಕೆ ನಿದರ್ಶನ. 3 ಸಂಸ್ಕರಣ ಕ್ರಿಯೆಗಳು—ಇವುಗಳ ಅನ್ವಯದಿಂದ ಅಶುದ್ಧ ಲೋಹದಲ್ಲಿರುವ ಕಲ್ಮಶಗಳನ್ನು ಹೋಗಲಾಡಿಸಿ ಅದರ ಶುದ್ಧತೆಯನ್ನು ಹೆಚ್ಚಿಸಲಾಗುವುದು. ಉದಾ: ಅಶುದ್ಧ ಸತುವನ್ನು ಕುದಿಸಿದಾಗ ಅದರಲ್ಲಿದ್ದ ಕಬ್ಬಿಣ, ಸೀಸ ಮತ್ತು ಕ್ಯಾಡ್ಮಿಯಂ ಲೋಹಗಳು ಆವಿಯ ರೂಪದಲ್ಲಿ ಪಾರಾಗುವುವು. ಹಿಂದುಳಿದ ಸತು ಹೆಚ್ಚು ಶುದ್ಧವಾಗಿರುವುದು. ಮೇಲ್ಕಂಡ ಮೂರು ಪ್ರಧಾನ ಕ್ರಿಯಾವಿಧಿಗಳನ್ನು ಮುಂದೆ ಒಂದೊಂದಾಗಿ ವಿವೇಚಿಸಲಾಗುವುದು.

1 ಅಣಿಗೊಳಿಸುವ ಕ್ರಿಯೆಗಳು. ಸಲ್ಫೈಡುಗಳ ಹುರಿಯುವಿಕೆ: ಲೋಹದ ಸಲ್ಫೈಡುಗಳನ್ನು ಗಾಳಿ ಅಥವಾ ಆಕ್ಸಿಜನ್‌ನಲ್ಲಿ ಹುರಿದಾಗ ಆಯಾ ಲೋಹದ ಆಕ್ಸೈಡುಗಳು ಅಥವಾ ಸಲ್ಫೇಟುಗಳಾಗಿ ಗಂಧಕದ ಡೈಆಕ್ಸೈಡ್ ಬಿಡುಗಡೆಯಾಗುವುದು. ಎಚ್ಚರದಿಂದ ಹುರಿದರೆ ಆಗುವ ಪ್ರಯೋಜನಗಳನ್ನು ಮುಂದೆ ಪಟ್ಟಿ ಮಾಡಲಾಗಿದೆ.

(i) ಖನಿಜ ವಸ್ತು ಮುಂದೆ ಇಂಗಾಲ ಅಥವಾ ಇಂಗಾಲದ ಮಾನಾಕ್ಸೈಡಿನಿಂದ ಅಪಕರ್ಷಿತವಾಗಲು ಅನುಕೂಲಿಸುವುದು. ಲೋಹದ ಸಲ್ಫೈಡುಗಳಿಗಿಂತ ಆಕ್ಸೈಡುಗಳು ಈ ಅಪಕರ್ಷಣಕಾರಿಗಳ ವರ್ತನೆಗೆ ಸುಲಭವಾಗಿ ಮಣಿಯುವುವು. ಇದರ ಬಗ್ಗೆ ವಿವರಗಳು ಮುಂದೆ ಕೋಷ್ಟಕದಲ್ಲಿದೆ. (ಪುಟ 785)

(ii) ಅದಿರಿನಲ್ಲಿ ಘನ ಲೋಹಗಳಿರಬಹುದು. ಅವು ತಮ್ಮ ಸಲ್ಫೈಡುಗಳ ದ್ರವ ಮಿಶ್ರಣವಾಗಲು (ಇದನ್ನು ಮೆಟ್ಟೆ ಎಂದು ಕರೆಯುವರು) ಸಾಕಾಗುವಷ್ಟು ಮಾತ್ರ ಗಂಧಕ ಉಳಿಯುವುದು.

(iii) ಲಭ್ಯವಸ್ತು ಆಮ್ಲಾವಶೋಷಣೆಗೆ (ಆ್ಯಸಿಡ್ ಬೀಚಿಂಗ್) ಮತ್ತು ವಿದ್ಯುದ್ವಿಶ್ಲೇಷಣೆಗೆ ಹದಗೊಳ್ಳುವುದು. ಹೇಗೆಂದರೆ ಅವಶೋಷಣೆಗೆ ಸಲ್‌ಫ್ಯೂರಿಕ್ ಆಮ್ಲವನ್ನು ಉಪಯೋಗಿಸುವುದು ಸರ್ವೇಸಾಮಾನ್ಯ. ಅದರಲ್ಲಿ ಲೋಹದ ಆಕ್ಸೈಡುಗಳು ಲೀನವಾಗುವಷ್ಟು ಸರಾಗವಾಗಿ ಲೋಹದ ಸಲ್ಫೈಡುಗಳು ಆಗುವುದಿಲ್ಲ.

(iv) ಬಿಡುಗಡೆಯಾದ ಗಂಧಕದ ಡೈಆಕ್ಸೈಡನ್ನು ದ್ರವರೂಪಕ್ಕೆ ತರಬಹುದು ಅಥವಾ ಸಲ್ಫ್ಯೂರಿಕ್ ಆಮ್ಲವಾಗಿ ಪರಿವರ್ತಿಸಬಹುದು. ಈ ಉಪ ಉದ್ಯಮ ಲಾಭದಾಯಕವಾಗಿರಲಿ ಬಿಡಲಿ ಕಾನೂನಿನ ಪ್ರಕಾರ ಅದರ ವಿನಿಯೋಗವಾಗಲೇಬೇಕು. ಇಲ್ಲದಿದ್ದರೆ ಅದರ ಸೇವನೆಯಿಂದ ಸಾರ್ವಜನಿಕರ ಆರೋಗ್ಯಕ್ಕೆ ತೀವ್ರ ಹಾನಿಯಾಗುತ್ತದೆ. ಹುರಿಯುವಾಗ ನಡೆಯುವ ಕ್ರಿಯೆಯನ್ನು ಸಾಂಕೇತಿಕವಾಗಿ ಹೀಗೆ ಸೂಚಿಸಬಹುದು:

$$MS_{(s)} + {}^3/_2\ O_{2(g)} \rightarrow MO_{(s)} + SO_{2(g)}$$

ಸಾಮಾನ್ಯವಾಗಿ 650°–1000° ಸೆ. ತಾಪಮಾನ ಮಿತಿಯು ಹುರಿಯಲು ಬಹಳ ಪ್ರಶಸ್ತವಾದುದು. ರೋಸ್ಟರಿನಿಂದ ಹೊರಬೀಳುವ ಅನಿಲದಲ್ಲಿ ಆಕ್ಸಿಜನ್ ಕೊಂಚವಾದರೂ ಇರುವಂತೆ ನೋಡಿಕೊಂಡರೆ, ಈ ಕ್ರಿಯೆ ನಡೆದಾಗ ಉಷ್ಣ ಹುಟ್ಟುವುದು. ಸ್ವಲ್ಪ ಗಂಧಕದ ಟ್ರೈ ಆಕ್ಸೈಡ್ ಇದ್ದೇ ತೀರುವುದು.

$$SO_2 + \tfrac{1}{2}\ O_2 \rightarrow SO_3$$

ಉಷ್ಣವೇರಿದಂತೆ ಈ ಕ್ರಿಯೆಯ ಸಮತೋಲನ ಎಡದಿಂದ ಬಲಕ್ಕೆ ಸ್ಥಿತ್ಯಂತರವಾಗುವುದು. 1,000°ಸೆ. ಸನಿಹದಲ್ಲಿ ಗಂಧಕದ ಟ್ರೈ ಆಕ್ಸೈಡಿನ ಪ್ರಮಾಣ ಅತ್ಯಲ್ಪವಾಗಿರುತ್ತದೆ. ಕಡಿಮೆ ಉಷ್ಣತೆಯಲ್ಲಿ ಅದರ ಪ್ರಮಾಣ ಹೆಚ್ಚಾಗಿರುವುದರಿಂದ ಆಕ್ಸೈಡುಗಳಿಗಿಂತ ಸಲ್ಫೇಟುಗಳಾಗುವುದು ಹೆಚ್ಚು ಸಂಭವನೀಯ. ಸಾಮಾನ್ಯ ಬಳಕೆಯಲ್ಲಿರುವ ಹುರಿಯೊಡುಗಳಲ್ಲಿ ಮಲ್ಟಿಪಲ್ ಹಾರ್ತ್, ಫ್ಲೂಯಿಡ್ ಬೆಡ್ ಮತ್ತು ಫ್ಲಾಷ್ ರೋಸ್ಟರುಗಳೆಂದು ಮೂರು ವಿಧಗಳಿವೆ. ರೋಟರಿಗೆ ಒದಗಿಸುವ ಕಚ್ಚಾವಸ್ತು ನಯವಾದ ಹುಡಿಯಂತಿರಬೇಕು. ಅಂದರೆ 10ನೆಯ ಸಂಖ್ಯೆಯ ಜರಡಿಯ ಮೂಲಕ ಹರಿದು ಹೋಗುವಷ್ಟು ಸೂಕ್ಷ್ಮವಾಗಿದ್ದರೆ ಸಾಕು. ಹಾಗಿದ್ದರೆ ಹುರಿಯಲ್ಪಟ್ಟ ವಸ್ತುವೂ ಅಷ್ಟೇ ನಯವಾದ ಪುಡಿಯಾಗಿರುವುದು. ರೋಸ್ಟರು ಹೊರಹಾಕುವ ಅನಿಲಗಳಲ್ಲಿ ದೂಳಿನ ಅಂಶ ಹೆಚ್ಚಾಗಿರುತ್ತದೆ. ಇದನ್ನು ಸಂಗ್ರಹಿಸಿ ರೋಸ್ಟರಿಗೇ ಹಿಂತಿರುಗಿಸುವ ಪ್ರತ್ಯೇಕ ವ್ಯವಸ್ಥೆಯಿರುವುದು.

ಉಷ್ಣಲೋಹವಿದ್ಯಾಕ್ಷೇತ್ರಕ್ಕೆ ಫ್ಲೂಯಿಡ್ ಬೆಡ್ ರೋಸ್ಟರಿನ ಆಗಮನವಾದದ್ದು ಎರಡನೆಯ ಮಹಾಯುದ್ಧದ ತರುವಾಯ. ಘನ ಅನಿಲ ಕ್ರಿಯೆಗಳನ್ನು ನಡೆಸಲು ಇದು ಬಲು ಸಹಾಯಕ. ರೋಟರಿನ ತಳ ಸರಂಧ್ರ. ಇದರ ಮೂಲಕ ಗಾಳಿಯನ್ನು ಹಾಯಿಸಲಾಗುವುದು. ಹುರಿಯಲ್ಪಡುತ್ತಿರುವ ಕಣಗಳು ಗಾಳಿಯ ವೇಗದಿಂದ ಬುಡಮೇಲಾಗಿ ನಿಕಟ ಮಿಶ್ರಣ ಲಭಿಸುವುದು. ಅತಿ ಸೂಕ್ಷ್ಮಕಣಗಳು ಮಾತ್ರ ಅನಿಲಪ್ರವಾಹದೊಡನೆ ಪಾರಾಗುವುವು. ತಿರುಪುವಾಹಕವೊಂದು (ಸ್ಕ್ರೂ ಕನ್ವೇಯರ್) ಸಾಂದ್ರೀಕರಿಸಿದ ಸಲ್ಫೈಡಿನ ಅದಿರನ್ನು ನಿರಂತರವಾಗಿ ಪೂರೈಸುತ್ತಿರುತ್ತದೆ. ಬೆಡ್ಡಿನ ಮೇಲ್ಭಾಗದಲ್ಲಿರುವ ನಿಯೋಜಿತ ದ್ವಾರದ ಮೂಲಕ ಹುರಿಯಲ್ಪಟ್ಟ ದ್ರವವಸ್ತು ನಿರ್ಗಮಿಸುತ್ತದೆ. ಸಲ್ಫೈಡುಗಳ ದಹನದಿಂದ ಕ್ರಿಯೆಗೆ ಅಗತ್ಯವಾದ ಉಷ್ಣ ತಾನಾಗಿಯೇ ಒದಗುವುದು. ಸ್ವಯಂಚಾಲಿತ ಸಾಧನಗಳು ಬೆಡ್ಡಿನ ಮೇಲೆ

| ಅಪಕರ್ಷಣಕಾರಿಯ ಹೆಸರು | ಅಪಕರ್ಷಿಸುವ ಶಕ್ತಿ | | | ಉತ್ಪಾದಿಸುವ ಲೋಹ |
|---|---|---|---|---|
| | ಆಕ್ಸೈಡುಗಳನ್ನು | ಸಲ್ಫೈಡುಗಳನ್ನು | ಹ್ಯಾಲೈಡುಗಳನ್ನು | |
| ಇಂಗಾಲ (ಕೋಕ್) | ಉತ್ತಮ | – | – | Zn, Ni, Co, Sn |
| ಇಂಗಾಲದ ಮಾನಾಕ್ಸೈಡ್ (ಕೋಕಿನಿಂದ ಪಡೆದ) | ಮಧ್ಯಮ | – | – | Pb, Cu, Sn |
| ಹೈಡ್ರೊಜನ್ (ನೈಸರ್ಗಿಕ ಅನಿಲದಿಂದಾದ) | ಮಧ್ಯಮ | ಕನಿಷ್ಠ | ಮಧ್ಯಮ | Mo,W |
| ಕಬ್ಬಿಣ (ಚೂರುಪಾರು) | ಮಧ್ಯಮ | ಮಧ್ಯಮ | ಮಧ್ಯಮ | Cu, Pb, Sb |
| ಸಿಲಿಕಾನ್ (ಫೆರೋಸಿಲಿಕಾನ್) | ಉತ್ತಮ | ಮಧ್ಯಮ | ಮಧ್ಯಮ | Mg |
| ಅಲ್ಯೂಮಿನಿಯಂ | ಅತ್ಯುತ್ತಮ | ಮಧ್ಯಮ | ಉತ್ತಮ | Ca |
| ಸೋಡಿಯಂ | ಉತ್ತಮ | ಉತ್ತಮ | ಅತ್ಯುತ್ತಮ | Ti, Zr |
| ಮ್ಯಾಗ್ನೀಸಿಯಂ | ಅತ್ಯುತ್ತಮ | ಉತ್ತಮ | ಅತ್ಯುತ್ತಮ | Ti, Zr, Hf, Be, U |

ಆಗಿಂದಾಗ್ಗೆ ಸಿಂಪಡಿಸುವ ನೀರಿನಿಂದ ಉಷ್ಣತಾ ನಿಯಂತ್ರಣವಾಗುವುದು. ಬೆಡ್ಡಿನ ಮೂಲಕ ಹಾಯುವ ಅನಿಲದ ಪ್ರಮಾಣವನ್ನೂ ಉಷ್ಣತೆಯನ್ನೂ ಇಷ್ಟಾನುಸಾರ ನಿಯಂತ್ರಿಸುವುದು ಮತ್ತು ಕಾದ ಆವರಣದಲ್ಲಿ ಚಲಿಸುವ ಯಂತ್ರಭಾಗಗಳು ಇಲ್ಲದಿರುವುದು ಈ ಹುರಿಯೋಡಿನ ವೈಶಿಷ್ಟ್ಯಗಳು. 100ನೆಯ ಸಂಖ್ಯೆಯ ಜರಡಿಯಷ್ಟು ಸಣ್ಣ ಕಣಗಳನ್ನು ಕಾಯಿಸಿದಾಗ ಅಂಟಿಕೊಳ್ಳುವ ಜಿಗುಟು ಸ್ವಭಾವದ ವಸ್ತುಗಳನ್ನೂ ಹುರಿಯಲು ಇದು ತಕ್ಕುದಲ್ಲ. ಮಲ್ಟಿಪಲ್ ಹಾರ್ತ್ ರೋಸ್ಟರಿನ ಬೆಡ್ಡಿಗೆ ಉಷ್ಣನಿರೋಧಕ ಅಸ್ತರಿಯಿರುತ್ತದೆ. ಆದರ ಮೇಲೆ ಸಾರೀಕರಿಸಿದ ಅದಿರನ್ನು ಹರಡಿರುತ್ತಾರೆ. ಬಿಸಿಯಾದ ಅನಿಲಗಳು ಅದಿರಿನ ಮೇಲೆ ಹಾಯುವುವು. ಫ್ಲ್ಯಾಷ್ ರೋಸ್ಟರಿನಲ್ಲಿ ದಹನಕೋಶವಿರುವುದು. ಪುಡಿ ಮಾಡಿದ ಸಾಂದ್ರೀಕೃತ ಅದಿರನ್ನು ಈ ಕೋಶದೊಳಕ್ಕೆ ತೂರಲಾಗುವುದು.

ಸಿಂಟರಿಂಗ್: ಸೂಕ್ಷ್ಮ ಕಣಗಳನ್ನು ಒಂದುಗೂಡಿಸಿ ಸಾಕಷ್ಟು ದೊಡ್ಡವಾಗಿಸಿ, ಊದುಕುಲುಮೆ ಮತ್ತಿತರ ಅಪಕರ್ಷಣ ವಿಧಾನಗಳನ್ನು ಬಳಸಲು ಅನುಕೂಲಿಸುವ ಗಾತ್ರಕ್ಕೆ ತರುವುದು ಇದರ ಉದ್ದೇಶ. ಇದಕ್ಕಾಗಿ ಬಳಸುವ ಸಾಧನಕ್ಕೆ ಕೆಳಮುಖ ಗಾಳಿ ಸಂಚಾರಿ (ಡೌನ್‌ಡ್ರೇಫ್ಟ್) ಎಂದು ಹೆಸರು.

ಕ್ಲೋರೀನಿನ ಪ್ರಯೋಗ: ಟೈಟೇನಿಯಂ, ಜಿರ್ಕೋನಿಯಂ ಮೊದಲಾದ ಉಷ್ಣ ನಿರೋಧಿ ಲೋಹಗಳನ್ನು ಉತ್ಪಾದಿಸುವಾಗ ಅವುಗಳ ಆಕ್ಸೈಡುಗಳನ್ನು ಕ್ಲೋರೈಡುಗಳಾಗಿ ಮಾರ್ಪಡಿಸದೆ ವಿಧಿಯಿಲ್ಲ. ಏಕೆಂದರೆ ಈ ಲೋಹಗಳ ಆಕ್ಸೈಡುಗಳನ್ನು ನೇರವಾಗಿ ಅಪಕರ್ಷಿಸುವಂತಿಲ್ಲ. ಕ್ಲೋರೈಡುಗಳಾದರೆ ಸೋಡಿಯಂ ಅಥವಾ ಮೆಗ್ನೀಸಿಯಂನಿಂದ ಸುಲಭವಾಗಿ ಅಪಕರ್ಷಿತವಾಗುವುವು. ಟೈಟೇನಿಯಂ ಆಕ್ಸೈಡ್ ಕ್ಲೋರೀನಿನೊಡನೆ ವರ್ತಿಸಿದಾಗ ಟೈಟೇನಿಯಂ ಟೆಟ್ರಕ್ಲೋರೈಡ್ ಉಂಟಾಗುತ್ತದೆ.

$$TiO_{2(s)}+2C_{(s)}+2CI_{2(g)} \rightarrow TiCI_{4(g)}+2CO_{(g)}$$

ಇಂಗಾಲದ ಸಂಪರ್ಕದಲ್ಲಿ ಕ್ರಿಯೆ ಸರಾಗವಾಗಿ ಎಡದಿಂದ ಬಲಕ್ಕೆ ನಡೆಯುವುದು. ಆಗ ಹುಟ್ಟುವ ಅಲ್ಪ ಉಷ್ಣವೇ ಕ್ರಿಯೆಗೆ ಅಗತ್ಯವಾದ 800°–900° ಸೆ. ತಾಪಮಾನವನ್ನು ಉತ್ಪಾದಿಸಲು ಸಾಕಾಗಬಹುದು. ಸೂಕ್ಷ್ಮಕಣಗಳಿರುವ ಅದಿರಿನೊಡನೆ ವ್ಯವಹರಿಸುವ ಪ್ರಸಂಗದಲ್ಲಿ ಕ್ಲೋರೀನಿನ ಪ್ರಯೋಗಕ್ಕೆ ಫ್ಲೂಯಿಡ್ ಬೆಡ್ ರೋಸ್ಟರ್ ಅಗತ್ಯ. ಇದರ ಬದಲು ಫ್ಲ್ಯಾಷ್ ಕುಲುಮೆಯಾದರೂ ಆದೀತು. ಆಗ ಲೋಹದ ಆಕ್ಸೈಡ್ ಮತ್ತು ಇಂಗಾಲದ ಮಿಶ್ರಣದಿಂದ ಇಟ್ಟಿಗೆಗಳನ್ನು ಮಾಡಿಕೊಂಡು ಅನಂತರ ಅವುಗಳನ್ನು ಕ್ಲೋರಿನಿನ ವರ್ತನೆಗೆ ಒಡ್ಡಬೇಕಾಗುತ್ತದೆ. ಈ ಪ್ರಯೋಗಕ್ಕೆ ಹೆಚ್ಚು ಉಷ್ಣದ ಅಗತ್ಯವಿದೆ. ಅದನ್ನು ಒದಗಿಸಲು ಆಂತರಿಕ ವಿದ್ಯುದ್ವಿಧಾನವನ್ನು ಉಪಯೋಗಿಸುವರು.

ಕ್ಯಾಲ್ಸಿನೇಷನ್: ತೇವಾಂಶ ನಿವಾರಣೆ ಮತ್ತು ಹೈಡ್ರೇಟುಗಳ ಹಾಗೂ ಕಾರ್ಬೋನೇಟ್‌ಗಳ ವಿಭಜನೆ ಇದರ ಗುರಿ. ತೇವವಾದ ಸಾಂದ್ರೀಕೃತ ಸಲ್ಫೈಡುಗಳನ್ನು ಫ್ಲಾಷ್ ರೋಸ್ಟರಿನಲ್ಲಿ ಹುರಿಯುವ ಮುನ್ನ ಶುಷ್ಕಗೊಳಿಸುವುದು. ವಿದ್ಯುದ್ವಿಧಾನದಿಂದ ಅಲ್ಯೂಮಿನಿಯಂ ತಯಾರಿಸುವುದಕ್ಕೆ ಮುಂಚೆ ಅಲ್ಯೂಮಿನಿಯಂ ಟ್ರೈಹೈಡ್ರೇಟನ್ನು ಅಲ್ಯೂಮಿನಕ್ಕೆ ಪರಿವರ್ತಿಸುವುದು ಮತ್ತು ಪಿಡ್ಜನ್ ವಿಧಾನದಿಂದ ಮ್ಯಾಗ್ನೀಸಿಯಂ ಮಾಡುವಾಗ ಡಾಲೊಮೈಟನ್ನು ($CaCO_3$, $MgCO_3$) ಸುಟ್ಟ ಡಾಲೊಮೈಟಿಗೆ ($CaOMgO$) ಮಾರ್ಪಡಿಸುವುದು ಇದಕ್ಕೆ ನಿದರ್ಶನಗಳು. ಇದರ ಸಲುವಾಗಿ ಉರುಳು ಕುಲುಮೆ ಅಥವಾ ಹಿಂದೆಯೇ ವರ್ಣಿಸಿರುವ ಯಾವುದಾದರೂ ರೋಸ್ಟರನ್ನು ಉಪಯೋಗಿಸುವುದು ವಾಡಿಕೆ. ಕ್ಯಾಲ್ಸಿನೇಷನ್ ವಿಧಿ ಉಷ್ಣಗ್ರಾಹಕ ಕ್ರಿಯೆಯಾದುದರಿಂದ ಬಾಹ್ಯಮೂಲಗಳಿಂದ ಉಷ್ಣವನ್ನು ಹೊಂದಿಸಬೇಕಾಗುವುದು.

ಅಪಕರ್ಷಣ ವಿಧಿಗಳು: ಈ ಕ್ರಿಯೆಗಳು ಸಾಧಿಸಬೇಕಾದ ಗುರಿ ಸಂಯುಕ್ತ ಸ್ಥಿತಿಯಿಂದ ಮೂಲ ಲೋಹವನ್ನು ಬಿಡುಗಡೆ ಮಾಡಿ ಶೇಷವಸ್ತುವಿನಿಂದ ಬೇರ್ಪಡಿಸುವುದು ಉಪಯೋಗಿಸಿದ ಅಪಕರ್ಷಣಕಾರಿ ಉನ್ನತ ತಾಪಮಾನದಲ್ಲಿ ಅದಿರಿನ ಅನಪೇಕ್ಷಿತ ಭಾಗದೊಡನೆ ಮಾತ್ರ ವರ್ತಿಸುವಂತಿರಬೇಕು. MA ಒಂದು ಸಂಯುಕ್ತವಾದರೆ B ಎಂಬ ಸಂಪರ್ಕದಲ್ಲಿ ಕೆಳಕಂಡ ಕ್ರಿಯೆ ನಡೆದು BM° ಎಂಬ ಮೂಲಸ್ಥಿತಿಯಲ್ಲಿರುವ ಲೋಹ ಬಿಡುಗಡೆ ಹೊಂದಬೇಕು.

$$MA+B \rightarrow M^{\circ}+BA$$

ಕ್ರಿಯೆ ಸ್ವಾಭಾವಿಕವಾಗಿ ಎಡದಿಂದ ಬಲಕ್ಕೆ ನಡೆಯಬೇಕಾದರೆ ಕ್ರಿಯಾಸನ್ನಿವೇಶದಲ್ಲಿ BA ಸಂಯುಕ್ತ MA ಗಿಂತ ಹೆಚ್ಚು ಸ್ಥಿರವಾಗಿದ್ದರೆ ಮಾತ್ರ ಸಾಧ್ಯ. ಉಷ್ಣಗತಿಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ ಮೇಲಿನ ಕ್ರಿಯೆಯಲ್ಲಾಗುವ ಮುಕ್ತ–ಶಕ್ತಿಯ ವ್ಯತ್ಯಾಸ ಋಣಾತ್ಮಕವಾಗಿರಬೇಕು. ಸೂಕ್ತ ಅಪಕರ್ಷಣಕಾರಿಯ ಬಳಕೆ, ಕ್ರಿಯಾಭಾಗಿ ವಸ್ತುಗಳ ಪ್ರಬಲತೆಯ ಹೊಂದಾಣಿಕೆ ಮತ್ತು ಅಪೇಕ್ಷಿತ ಉಷ್ಣತೆಯ ಒತ್ತಡಗಳ ಉಪಯೋಗದಿಂದ ಈ ಗುರಿಯನ್ನು ಮುಟ್ಟಬಹುದು. ಅಪಕರ್ಷಣಕಾರಿಯನ್ನು ಆರಿಸುವಾಗ ಗಮನಿಸಬೇಕಾದ ಅಂಶಗಳು ಎರಡು: ಲೋಹಕ್ಕಿಂತ ಅದು ಅಗ್ಗವಾಗಿರಬೇಕು. BA ಲೋಹದಿಂದ ಸುಲಭವಾಗಿ ಬೇರ್ಪಡಿಸುವಂತಿರಬೇಕು.

ಅನಿಲರೂಪದಲ್ಲಿ ಲೋಹದ ಉತ್ಪಾದನೆ: ಅವ್ಯಾಸಕ್ತ ಲೋಹಗಳಾದ ಸತು, ಕ್ಯಾಡ್ಮಿಯಂ, ಪಾದರಸ, ಸೋಡಿಯಂ, ಪೊಟ್ಯಾಸಿಯಂ, ಕ್ಯಾಲ್ಸಿಯಂ, ಬೇರಿಯಂ ಮೊದಲಾದವುಗಳನ್ನು ಹೀಗೆ ಪಡೆಯಬಹುದು. ಶೇಷವಸ್ತುವಿನ ಸಂಪರ್ಕವಿಲ್ಲದಂತೆ ಲೋಹದ ಆವಿಯನ್ನು ಪ್ರತ್ಯೇಕಕೋಶದಲ್ಲಿ ದ್ರವ ಅಥವಾ ಘನರೂಪದಲ್ಲಿ ಸಾಂದ್ರೀಕರಿಸುವುದು ಈ ವಿಧಾನದ ವೈಶಿಷ್ಟ್ಯ.

ಸತುವಿನ ಆಕ್ಸೈಡನ್ನು ಇಂಗಾಲದಿಂದ ಅಪಕರ್ಷಿಸಿದಾಗ ಲೋಹ ಬರುವುದು. ಕೆಳಕಂಡ ಕ್ರಿಯೆ 1,200°–1,300° ಸೆ. ತಾಪಮಾನದಲ್ಲಿ ನಡೆಯುವುದರಿಂದ

$$ZnO_{(s)}+C_{(s)} \rightarrow Zn_{(g)}+CO_{(g)}$$

906° ಸೆ.ನಲ್ಲಿ ಕುದಿಯುವ ಸತು ಆವಿಯ ರೂಪದಲ್ಲಿರುವುದು ಸ್ವಾಭಾವಿಕ. ರಿಟಾರ್ಟುಗಳಿಗೆ ಗಾಳಿಯ ಪ್ರವೇಶವಿರಕೂಡದು. ಹೆಚ್ಚು ಬಳಕೆಯಲ್ಲಿರವುದು ಬೆಲ್ಜಿಯನ್ ಮಾದರಿಯ ರಿಟಾರ್ಟು. ಇದರ ಉತ್ಪಾದನಶಕ್ತಿ ಕಡಿಮೆ. ದಿನವೊಂದಕ್ಕೆ 18 ರಿಂದ 27 ಕೆಜಿ ಪೌಂಡು ಲೋಹಕ್ಕಿಂತ ಹೆಚ್ಚು ಕೊಡಲಾರದು. ರಿಟಾರ್ಟು ಮತ್ತು ಸಾಂದ್ರಕಗಳನ್ನು ಉಷ್ಣನಿರೋಧಕ ಮಣ್ಣಿನಿಂದ ಮಾಡಿರುತ್ತಾರೆ. ಒಂದು ಕುಲುಮೆಯಲ್ಲಿ ಇಂಥ ನೂರಾರು ರಿಟಾರ್ಟುಗಳನ್ನು ಸ್ವಲ್ಪ ಇಳಿಮುಖವಾಗಿ ಜೋಡಿಸಿರುತ್ತಾರೆ. ಕುಲುಮೆಯನ್ನು ಜ್ವಲನಾನಿಲದಿಂದ (ಪ್ರೊಡ್ಯೂಸರ್ ಗ್ಯಾಸ್) ಕಾಯಿಸಲಾಗುತ್ತದೆ. ರಿಟಾರ್ಟುಗಳನ್ನು ಭರ್ತಿಮಾಡಲು, ಸಾಂದ್ರಕಗಳನ್ನು ಖಾಲಿ ಮಾಡಲು ಮತ್ತು ಶೇಷವಸ್ತುಗಳ ನಿರ್ಮಲೀಕರಣಕ್ಕೆ ಸಹಾಯಕ ಸಿಬ್ಬಂದಿ ಅಗತ್ಯ. ಈಚೆಗೆ ಈ ಕಾರ್ಯನಿರ್ವಹಣೆಗೆ ಯಾಂತ್ರಿಕ ವ್ಯವಸ್ಥೆಯುಂಟು. ಸಾಂದ್ರಕಕ್ಕೆ ಗಾಳಿ ಪ್ರವೇಶಿಸದಂತೆ ಸಂಪೂರ್ಣವಾಗಿ ತಡೆಯುವುದು ಅಸಾಧ್ಯದ ಕೆಲಸ. ತತ್ಫಲವಾಗಿ ಲೋಹ ಸಾಂದ್ರೀಕರಣ ನಿರೀಕ್ಷಿತ ಪ್ರಮಾಣದಲ್ಲಿ ನಡೆಯುವುದಿಲ್ಲ. ಇದು ಈ ರಿಟಾರ್ಟ್ ವಿಧಾನದ ಮುಖ್ಯ ದೋಷ. ಆದ್ದರಿಂದ ಎಡೆಬಿಡದೆ ನಡೆಯುವ ನಿಲುಗುಲುಮೆಗಳ ಬಗ್ಗೆ ಒಲವು ಹೆಚ್ಚುತ್ತಿದೆ. ಈ ಕುಲುಮೆಗಳು ದಿನವೊಂದಕ್ಕೆ ಸರಾಸರಿ 5 ಟನ್ ಲೋಹ ನೀಡುವುವು. ವಿದ್ಯುದ್ವಿಧಾನದಿಂದ ಕಾಯಿಸಲ್ಪಡುವ ಕುಲುಮೆಗಳಾದರೆ 5 ಪಟ್ಟು ಹೆಚ್ಚು

ಲೋಹವನ್ನು ಉತ್ಪಾದಿಸುತ್ತವೆ. ಕಾರ್ಯ ನಿರ್ವಹಣೆಯಲ್ಲಿ ಮೇಲೆನಿಸಿದರೂ ಇವುಗಳ ಸ್ಥಾಪನೆಗೆ ಅಧಿಕ ಬಂಡವಾಳ ಹೂಡಬೇಕು. ಆದ್ದರಿಂದ ಆರ್ಥಿಕ ಕಾರಣಗಳಿಂದಾಗಿ ಇಂದಿಗೂ ಬೆಲ್ಜಿಯನ್ ವಿಧಾನ ಅಲ್ಲಲ್ಲಿ ಆಚರಣೆಯಲ್ಲಿದೆ.

ಎರಡನೆಯ ಮಹಾಯುದ್ಧಕ್ಕೆ ಮುಂಚೆ ಎಲ್.ಎಮ್. ಪಿಡ್ಜನ್ ಮ್ಯಾಗ್ನೀಸಿಯಂ ಮತ್ತು ಕ್ಯಾಲ್ಸಿಯಂ ತಯಾರಿಸಲು ನಿರ್ವಾತ ರಿಟಾರ್ಟ್ ವಿಧಾನವನ್ನು ಆಚರಣೆಗೆ ತಂದ. ಯುದ್ಧಕಾಲದಲ್ಲಿ ಮ್ಯಾಗ್ನೀಸಿಯಂ ತಯಾರಿಸಲು ಇದು ವಿಶೇಷವಾಗಿ ಬಳಕೆಯಲ್ಲಿತ್ತು. 1958 ರಿಂದ ಇದರ ಪ್ರಾಶಸ್ತ್ಯ ತಗ್ಗಿದೆ. ಮ್ಯಾಗ್ನೀಸಿಯಂ ಉತ್ಪಾದನೆಯಲ್ಲಿ ನಡೆಯುವ ಕ್ರಿಯೆ ಹೀಗಿದೆ:

$$2CaO_{(s)}+2MgO_{(s)}+Fe_x.Si_{(s)} \rightarrow 2Mg_{(g)}+xFe_{(s)}+(CaO)_2.SiO_{2(s)}$$

ಇಲ್ಲಿ ಉಪಯೋಗಿಸುವ ಕಚ್ಚಾವಸ್ತು ಸುಟ್ಟ ಡಾಲೊಮೈಟ್. ಫೆರೋ ಸಿಲಿಕಾನಿನ ರೂಪದಲ್ಲಿರುವ ಸಿಲಿಕಾನ್ ಅಪಕರ್ಷಣಕಾರಿಯಾಗಿ ವರ್ತಿಸುವುದು. ಕ್ರಿಯೆ 1,200° ಸೆ.ನಲ್ಲಿ ನಡೆಯುತ್ತದೆ. ಈ ಉಷ್ಣತೆಯಲ್ಲಿ ಸಮಸ್ಥಿತಿ ಏರ್ಪಟ್ಟಾಗ ಮ್ಯಾಗ್ನೀಸಿಯಂ ಆವಿಯ ಒತ್ತಡ ಕೇವಲ 34 ಮಿ.ಮೀ ಪಾದರಸದಷ್ಟಿರುವುದು. ಈ ಕಾರಣದಿಂದ ಮತ್ತು ಸಾಂದ್ರಕದಲ್ಲಿ ಮ್ಯಾಗ್ನೀಸಿಯಂ ಘನೀಭವಿಸಲು ಅನುಕೂಲಿಸುವಂತೆ ಕ್ರಿಯೆಯನ್ನು ನಿರ್ವಾತಸ್ಥಿತಿಯಲ್ಲಿ ನಡೆಸುವುದು ಅನಿವಾರ್ಯ. 1,200° ಸೆಂ.ಗ್ರೇ.ನಲ್ಲಿ ಒಂದು ವಾಯುಭಾರದಷ್ಟು ಒತ್ತಡ ವ್ಯತ್ಯಾಸವನ್ನು ಸಹಿಸಬೇಕಾದ್ದರಿಂದ ವಿಶೇಷ Cr.Ni.Fe ಮಿಶ್ರಲೋಹಗಳಿಂದ ಮಾಡಿದ ರಿಟಾರ್ಟೇ ಆಗಬೇಕು. ಬೆಲ್ಜಿಯನ್ ರಿಟಾರ್ಟ್‌ಗಳಂತೆ ಇವೂ ಚಿಕ್ಕವು. 3ಮೀ ಉದ್ದ ಮತ್ತು 254 ಮಿಮೀ ಒಳವ್ಯಾಸವುಳ್ಳವು. ಇಂಥ ಅನೇಕ ರಿಟಾರ್ಟುಗಳನ್ನು ಕುಲುಮೆಯೊಂದರಲ್ಲಿ ಸಮಮಟ್ಟವಾಗಿ ಜೋಡಿಸಿರುತ್ತಾರೆ. ಸರದಿಯ ಪ್ರಕಾರ ಅವು ಕಾರ್ಯೋನ್ಮುಖವಾಗುತ್ತವೆ. ರಿಟಾರ್ಟಿನ ತಂಪಾದ ತುದಿಗೆ ಸುಲಭವಾಗಿ ಹಾಕಿ ತೆಗೆದು ಮಾಡಬಹುದಾದ ಸಾಂದ್ರಕಗಳನ್ನು ಬಂಧಿಸಲಾಗುವುದು. ಈ ರಿಟಾರ್ಟುಗಳ ನಿರ್ವಹಣೆಯ ವೆಚ್ಚ ಹೆಚ್ಚು. ಇದು ಒಂದು ಅಸೌಕರ್ಯ. ಆದರೆ ಸಮುದ್ರದ ನೀರಿನಿಂದ ಮ್ಯಾಗ್ನೀಸಿಯಂ ತೆಗೆಯುವ ಡೌ ವಿಧಾನಕ್ಕಿಂತ ಇಲ್ಲಿ ದೊರೆಯುವ ಲೋಹ ಹೆಚ್ಚು ಪರಿಶುದ್ಧವಾಗಿರುತ್ತದೆ.

**ದ್ರವರೂಪದ ಲೋಹೋತ್ಪತ್ತಿ:** ಲೋಹ ತಯಾರಿಕೆಗೆ ವಿಶೇಷವಾಗಿ ಉಪಯೋಗಿಸುವ ವಿಧಾನವಿದೆ. ಸುಮಾರಾದ ದ್ರವೀಕರಣ ಬಿಂದುಗಳಿರುವ ಸುಲಭವಾಗಿ ಆವಿಯಾಗದ ಲೋಹಗಳಾದ ತಾಮ್ರ, ಸೀಸ, ತವರ, ನಿಕ್ಕಲ್, ಬೆಳ್ಳಿ, ಬಿಸ್ಮತ್, ಬೆರಿಲಿಯಂ, ಆಂಟಿಮೊನಿ, ಕೊಬಾಲ್ಟ್ ಮತ್ತು ಯುರೇನಿಯಮ್‌ಗಳ ತಯಾರಿಕೆಗೆ ಈ ವಿಧಾನ ಸಮರ್ಪಕ. ಲೋಹವೊಂದೇ ದ್ರವರೂಪದಲ್ಲಿದ್ದರೆ ಶೇಷವಸ್ತುವಿನಿಂದ ಬೇರ್ಪಡೆ ಕಷ್ಟವಲ್ಲ. ಇಳಿಜಾರಾದ ವೇದಿಕೆಯ ಮೇಲೆ ಸುರಿದರೆ ಸಾಕು, ದ್ರವಿತ ಲೋಹ ಶೇಷವಸ್ತುವನ್ನು ಹಿಂದುಳಿಸಿ ಹರಿದೋಡುವುದು. ಆದರೆ ಸಾಮಾನ್ಯವಾಗಿ ಅನುಸರಿಸುವ ಕ್ರಮವೇ ಬೇರೆ. ಸ್ರಾವಕಗಳನ್ನು (ಫ್ಲಕ್ಸಸ್) ಕೂಡಿಸಿ ಶೇಷವಸ್ತುವಿನೊಡನೆ ವರ್ತಿಸುವಂತೆ ಮಾಡಿದರೆ ದ್ರವರೂಪದ ಕಿಟ್ಟವಾಗುವುದು. ಇದನ್ನು ದ್ರವಿತ ಲೋಹದಿಂದ ಪ್ರತ್ಯೇಕಿಸುವುದು ಇನ್ನೂ ಸುಲಭ. ಇದಕ್ಕಾಗಿ ಊದುಕುಲುಮೆ, ಉಷ್ಣ ಪ್ರತಿಫಲನ ಕುಲುಮೆ ಮತ್ತು ವಿದ್ಯುತ್ ಕುಲುಮೆಗಳನ್ನು ಉಪಯೋಗಿಸುವುದು ವಾಡಿಕೆ.

ಕೋಕ್ ಅಥವಾ ಕಲ್ಲಿದ್ದಲನ್ನು ಅಪಕರ್ಷಣಕಾರಿಯಾಗಿ ಉಪಯೋಗಿಸಿದಾಗ ಉಷ್ಣ ಪ್ರತಿಫಲನ ಕುಲುಮೆಯ ಅಗತ್ಯ ಬೀಳುವುದು. ಈ ಕುಲುಮೆಗೆ ಉಷ್ಣನಿರೋಧಕ ಚಾವಣಿಯಿರುತ್ತದೆ. ಬೆಂಕಿಗೂಡಿನಿಂದ ಹೊರಟ ಉರಿ ಕಮಾನಿನಂತಿರುವ ಚಾವಣಿಯನ್ನು ಅನುಸರಿಸಿ ಸಾಗುವುದು. ಅದರಿಂದ ಉಷ್ಣ ಪ್ರತಿಫಲಿಸಿ ಚಾರ್ಜಿಗೆ ತಾಗುವುದು. ಅನಿಲ ಹಾಯುವ ವೇಗ ಅಷ್ಟು ತೀವ್ರವಾಗಿರುವುದಿಲ್ಲ. ಅದರ ಪ್ರಯುಕ್ತ ಸುಣ್ಣ ಉಪಯೋಗಿಸಿದರೂ ಬಾಧಕವಿಲ್ಲ. ಕುಲುಮೆಯ ಪಕ್ಕದಿಂದಾಗಲಿ ಅಥವಾ ಮೇಲಿನಿಂದಾಗಲಿ ಅಪಕರ್ಷಣಕಾರಿಯಿರುವ ಚಾರ್ಜನ್ನು ಸೇರಿಸಲಾಗುವುದು. ಕಿಟ್ಟ ಮತ್ತು ಲೋಹಗಳ ನಿರ್ಗಮನಕ್ಕಾಗಿಯೇ ಪ್ರತ್ಯೇಕದ್ವಾರಗಳು ಕುಲುಮೆಯ ಪಕ್ಕದಲ್ಲಿರುತ್ತವೆ. ಈ ಕುಲುಮೆಗಳನ್ನು ತಡೆಯಿಲ್ಲದೆ ಅಥವಾ ಸರದಿಯ ಪ್ರಕಾರ ಕೆಲಸಕ್ಕೆ ಹಚ್ಚಬಹುದು. 1–100 ಟನ್ ಲೋಹವನ್ನು ಉತ್ಪಾದಿಸುವ ಕುಲುಮೆಗಳೂ ಉಂಟು. ಪ್ರತಿಫಲನ ಕುಲುಮೆಯಲ್ಲಿ ಸ್ವಲ್ಪ ಮಟ್ಟಿಗಾದರೂ ಉತ್ಕರ್ಷಣ ವಾತಾವರಣವಿರುವುದು ಆವಶ್ಯಕ. ಇಲ್ಲದಿದ್ದರೆ ಇಂಧನ ಉರಿಯಲಾರದು. ಆದರೆ ವಿದ್ಯುತ್ ಕುಲುಮೆಯಲ್ಲಿ ಈ ನಿರ್ಬಂಧವಿಲ್ಲ. ನಮ್ಮ ಅಗತ್ಯಕ್ಕೆ ಅನುಗುಣವಾಗಿ ಉತ್ಕರ್ಷಣ ಅಥವ ಅಪಕರ್ಷಣ ವಾತಾವರಣವನ್ನು ಸೃಷ್ಟಿಸಿಕೊಳ್ಳಬಹುದು.

**ಘನರೂಪದಲ್ಲಿ ಲೋಹೋತ್ಪತ್ತಿ:** ಉನ್ನತ ದ್ರವೀಕರಣ ಬಿಂದುಗಳಿರುವ ಲೋಹಗಳ ತಯಾರಿಕೆಗೆ ಈ ವಿಧಾನ ಯೋಗ್ಯವಾಗಿದೆ. ಉದಾಹರಣೆಗೆ 3,400° ಸೆ. ನಲ್ಲಿ ದ್ರವಿಸುವ ಟಂಗ್‌ಸ್ಟನ್ ಮತ್ತು 2,620° ಸೆ. ನಲ್ಲಿ ದ್ರವಿಸುವ ಮಾಲಿಬ್ಡಿನಂ ನಮಗೆ ತಿಳಿದಿವೆ. ಟೈಟ್ಯಾನಿಯಂ ಮತ್ತು ಜಿರ್ಕೋನಿಯಂನಂಥ ದ್ರವಿತ ಲೋಹಗಳನ್ನು ಎದುರಿಸಬಲ್ಲ ಕುಲುಮೆಗಳ ಅಸ್ತರಿ ಅಲಭ್ಯವಾದಾಗಲೂ ಈ ವಿಧಾನಕ್ಕೆ ನಾವು ಶರಣು ಹೋಗಬೇಕು. ಇತರ ಅಪಕರ್ಷಣ ವಿಧಾನಗಳಿಗಿಂತ ಇದು ದುಬಾರಿ, ಪ್ರಯಾಸಕರ ಮತ್ತು ಸರದಿಯ ಪ್ರಕಾರ ಮಾತ್ರ ನಡೆಸಲು ಸಾಧ್ಯ. ಕ್ರೋಲ್ ವಿಧಾನದಿಂದ ಟೈಟ್ಯಾನಿಯಂ ತಯಾರಿಸುವಾಗ ನಾವು ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ದ್ರವರೂಪದ ಟಿಟ್ಯಾನಿಯಂ ಸಂಪರ್ಕದಲ್ಲಿ ಸುರಕ್ಷಿತವಾಗಿದ್ದು, ಅವನ್ನು ಕಲುಷಿತಗೊಳಿಸದಿರುವ ಉಷ್ಣನಿರೋಧಕ ವಸ್ತುವಿನ ಶೋಧವಿನ್ನೂ ಆಗಿಲ್ಲ. ಆದ್ದರಿಂದ ಲೋಹವನ್ನು ಘನರೂಪದಲ್ಲಿ ಕೆಳಮಟ್ಟದ ಉಷ್ಣತೆಯಲ್ಲಿ ಪಡೆಯಲು ಹವಣಿಸಬೇಕು. ಕ್ರೋಲ್ ವಿಧಾನದಲ್ಲಿ ಉಕ್ಕಿನ ಪಾತ್ರೆಯೊಂದಿದೆ. ಇದರ ಸ್ವಲ್ಪ ಭಾಗವನ್ನು ಮಾತ್ರ ಮ್ಯಾಗ್ನೀಸಿಯಂ ತುಂಡುಗಳಿಂದ ಭರ್ತಿಮಾಡಿ ಭದ್ರವಾಗಿ ಮುಚ್ಚಿ, ಅನಿಲ ಸೋರದಂತೆ ಮೊಹರು ಮಾಡಲಾಗುವುದು. ನೈಟ್ರೋಜನ್, ಆಕ್ಸಿಜನ್, ಇಂಗಾಲದ ಮಾನಾಕ್ಸೈಡ್ ಮತ್ತು ಡೈ ಆಕ್ಸೈಡ್ ಮೊದಲಾದ ಪರಿಚಿತ ಅನಿಲಗಳೆಲ್ಲ ಟಿಟ್ಯಾನಿಯಮನ್ನು ಕಲುಷಿತಗೊಳಿಸುವುವು. ಆದ್ದರಿಂದ ಪಾತ್ರೆಯಲ್ಲಿರುವ ಗಾಳಿಯನ್ನೆಲ್ಲ ಹೊರದೂಡಿ, ಅದರ ಬದಲು ಶುದ್ಧ ಆರ್ಗಾನ್ ಅಥವಾ ಹೀಲಿಯಮ್ಮನ್ನು ತುಂಬಬೇಕು. ಅನಂತರ ಕುಲುಮೆಯಲ್ಲಿಟ್ಟು 750° ಸೆ. ಉಷ್ಣತೆಗೆ ಕಾಯಿಸಲಾಗುವುದು. ಮ್ಯಾಗ್ನೀಸಿಯಂ ದ್ರವಿಸಿದ ಕೂಡಲೇ ಕೋಶಕ್ಕೆ ಶುದ್ಧವಾದ ದ್ರವಿತ ಟಿಟ್ಯಾನಿಯಂ ಟೆಟ್ರಕ್ಲೋರೈಡನ್ನು ನಿಯೋಜಿಸಿದ ದ್ವಾರದ ಮೂಲಕ ಬಿಡಲಾಗುವುದು. ಆಗ ಕೆಳಕಂಡ ಉಷ್ಣಜನಕಕ್ರಿಯೆ ನಡೆಯುವುದು:

$$TiCI_{4(g)}+2Mg_{(l)} \rightarrow Ti_{(s)}+2MgCI_{2(l)}$$

ಮ್ಯಾಗ್ನೀಸಿಯಂ ವಿನಿಯೋಗವಾದ ಹಾಗೆಲ್ಲ ಮ್ಯಾಗ್ನೀಸಿಯಂ ಕ್ಲೋರೈಡಿನ ಬಹುಪಾಲನ್ನು ಪಾತ್ರೆಯಲ್ಲಿರುವ ನಿರ್ಗಮನ ದ್ವಾರದ ಮುಖೇನ ವಿಸರ್ಜಿಸಲಾಗುವುದು. ಅನಂತರ ಕ್ರಿಯಾಪಾತ್ರೆಯನ್ನು ಸಾಮಾನ್ಯ ತಾಪಮಾನಕ್ಕೆ ತಣಿಸಿ, ಬಾಯಿ ತೆರೆದರೆ ಅದರಲ್ಲಿ ಟಿಟ್ಯಾನಿಯಂ, ಮ್ಯಾಗ್ನೀಸಿಯಂ ಕ್ಲೋರೈಡಿನ ಹರುಳುಗಳು ಹೆಣೆದುಕೊಂಡಿರುತ್ತವೆ. ಇದನ್ನು ಹೊರಕ್ಕೆ ತೆಗೆಯಲು ಕೊರೆಯುವ ಯಂತ್ರವನ್ನು ಉಪಯೋಗಿಸುವರು. ದುರ್ಬಲ ಆಮ್ಲದ ಅವಶೋಷಣೆಯಿಂದ ಅಥವಾ ನಿರ್ವಾತ ಬಾಷ್ಪೀಭವನದಿಂದ ಮ್ಯಾಗ್ನೀಸಿಯಂ ಮತ್ತು ಮ್ಯಾಗ್ನೀಸಿಯಂ ಕ್ಲೋರೈಡುಗಳು ನಿವಾರಣೆಯಾಗುವುವು. ಸುಮಾರು 1,500–3,000 ಪೌಂಡುಗಳಷ್ಟು ಟಿಟ್ಯಾನಿಯಂ ಒಂದೇ ಕಂತಿನಲ್ಲಿ ದೊರೆಯುವುವು.

ಮೂರು ಸಂಸ್ಕರಣ ವಿಧಿಗಳು: ಈ ಕ್ರಿಯೆಗಳನ್ನು ನಡೆಸಿ ಕಚ್ಚಾ ಲೋಹದಲ್ಲಿರುವ ಕಶ್ಮಲಗಳನ್ನು ಹೋಗಲಾಡಿಸಿ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾದ ನಿರ್ದಿಷ್ಟ ದರ್ಜೆಯ ಲೋಹವನ್ನು ಪಡೆಯಬಹುದು. ಹೀಗೆ ಮಾಡಲು ಮೂರು ಬಗೆಯ ವಿಧಾನಗಳಿವೆ.

(1) ಇವರಿಕೆ (ವಾಲಟಲೈಸೇಷನ್): ಕಶ್ಮಲವನ್ನಾಗಲೀ ಅಥವಾ ಲೋಹವನ್ನಾಗಲೀ ಅನಿಲರೂಪದಲ್ಲಿ ಪ್ರತ್ಯೇಕಿಸುವುದು ಇಲ್ಲಿಯ ಕ್ರಮ. ಅಶುದ್ಧ ಸತುವಿನಲ್ಲಿ ಅಲ್ಪಪ್ರಮಾಣ ಕಬ್ಬಿಣ ಮತ್ತು ಸೀಸಗಳಿರುವುದುಂಟು. ಅಂಶಬಾಷ್ಪೀಭವನ ಮಾಡಿದರೆ ಹೆಚ್ಚು ಅವ್ಯಾಸಕ್ತಿಯುಳ್ಳ ಸತು ಮಾತ್ರ ಪಾರಾಗಿ ಕಬ್ಬಿಣ ಮತ್ತು ಸೀಸಗಳು ಉಳಿಯುವುವು. ಅದೇ ಕಚ್ಚಾ ಸೀಸವನ್ನು ಕಾಯಿಸಿದಾಗ ಅದರಲ್ಲಿ ಕಶ್ಮಲರೂಪದಲ್ಲಿರುವ ಸತು ನಿರ್ಗಮಿಸಿ ಸೀಸ ಉಳಿಯುವುದು. ಆದರೆ ಈ ಸಂದರ್ಭದಲ್ಲಿ ನಿರ್ವಾತ ಬಾಷ್ಪೀಭವನ ಮಾಡಬೇಕಾಗುತ್ತದೆ.

ಅವ್ಯಾಸಕ್ತಿಯಿಲ್ಲದ ಲೋಹಗಳ ಸಂಸ್ಕರಣಕ್ಕಾಗಿಯೇ ಅಯೊಡೈಡ್ ವಿಧಾನ ರೂಪಿತವಾಗಿದೆ. ಉದಾಹರಣೆಗೆ $175^0$ ಸೆ.ಗ್ರೇ ಉಷ್ಣತೆಯಲ್ಲಿ ಕಚ್ಚಾ ಟಿಟ್ಯಾನಿಯಂನೊಡನೆ ಅಯೊಡಿನ್‌ನ ಆವಿ ವರ್ತಿಸುವಂತೆ ಮಾಡಿದರೆ

$$Ti_{(s)}+2I_{2(g)} \rightarrow TiI_{4(g)}$$

ಕಶ್ಮಲಗಳ ಬಹುಪಾಲು ಘನವಸ್ತುವಾಗಿ ಉಳಿಯುವುದು. ಟಿಟ್ಯಾನಿಯಂ ಟೆಟ್ರ ಅಯೊಡೈಡಿನ ಆವಿಯನ್ನು ವಿದ್ಯುದ್ವಿಧಾನದಿಂದ $1,300^0$–$1,400^0$ ಸೆ. ಉಷ್ಣತೆಯಲ್ಲಿಟ್ಟಿರುವ ತಂತಿಯ ಸಂಪರ್ಕಕ್ಕೆ ತಂದರೆ ಅದು ವಿಭಜಿಸಿ ಶುದ್ಧ ಟಿಟ್ಯಾನಿಯಂ ಉಳಿಯುವುದು. ಆವಿಯಾಗಿ ಹೋದ ಅಯೋಡೀನನ್ನು ಮತ್ತೆ ಉಪಯೋಗಿಸಿಕೊಂಡು ಈ ಕ್ರಮದ ಪುನಾರಾವರ್ತನೆ ಮಾಡುವರು. ಹೀಗೆ ಟಿಟ್ಯಾನಿಯಂ, ಜಿರ್ಕೋನಿಯಂ, ಹ್ಯಾಫ್ನಿಯಂ, ಸಿಲಿಕಾನ್ ಮತ್ತು ಇತರ ಲೋಹಗಳನ್ನು ತಯಾರಿಸುತ್ತಾರೆ.

(ii) ಕಸಗಟ್ಟಿಸುವುದು (ಡ್ರಾಸ್ಸಿಂಗ್): ಉಷ್ಣತೆ ವ್ಯತ್ಯಾಸವಾದಂತೆ ದ್ರವಿತ ಲೋಹದಲ್ಲಿ ಕಶ್ಮಲದ ದ್ರಾವ್ಯತೆಯೂ ಏರುಪೇರಾಗುವುದು. ದ್ರವಿತ ಲೋಹ ತಣಿದಂತೆಲ್ಲ ಕಶ್ಮಲ ಅದರ ಮೇಲೆ ಘನೀಭವಿಸಿ ತೇಲುವುದು. ಒತ್ತರಿಸಿದ ಕಸವನ್ನು ಕೆರೆದು ತೆಗೆಯಬಹುದು. ಕಚ್ಚಾ ತವರದಿಂದ ಕಬ್ಬಿಣವನ್ನೂ, ಕಚ್ಚಾ ಸೀಸದಿಂದ ತಾಮ್ರವನ್ನೂ ಉಚ್ಚಾಟಿಸುವುದು ಹೀಗೆಯೇ.

(iii) ಒತ್ತರ ವಿಧಾನ: ಇಲ್ಲಿ ಒತ್ತರಕಾರಿಯನ್ನು ದ್ರವಿತ ಕಚ್ಚಾ ಲೋಹಕ್ಕೆ ಕೂಡಿಸಲಾಗುವುದು. ಉದಾಹರಣೆಗೆ, ದ್ರವಿತ ಸೀಸಕ್ಕೆ ಗಂಧಕವನ್ನು ಸೇರಿಸಿ ತಾಮ್ರದ ಸಲ್ಫೈಡನ್ನು ಒತ್ತರಿಸಬಹುದು. ಪಾರ್ಕ್ ವಿಧಾನ ಮತ್ತೊಂದು ಉತ್ತಮ ನಿದರ್ಶನ. ಅಶುದ್ಧ ಸೀಸದಲ್ಲಿ ಅಲ್ಪ ಪ್ರಮಾಣದ ಚಿನ್ನ ಮತ್ತು ಬೆಳ್ಳಿ ಸೇರಿರುತ್ತವೆ. ಈ ಲೋಹ ಮಿಶ್ರಣವನ್ನು ಕರಗಿಸಿ ದ್ರವಿತ ಸತುವನ್ನು ಕೂಡಿಸಿದರೆ ಅದು ಚಿನ್ನ ಮತ್ತು ಬೆಳ್ಳಿಯೊಡನೆ ಅಂತರ್ಲೋಹ (ಇಂಟರ್‌ಮೆಟಾಲಿಕ್) ಸಂಯುಕ್ತಗಳನ್ನು ಉತ್ಪತ್ತಿಮಾಡುವುದು. ಇದನ್ನು ಪ್ರತ್ಯೇಕಿಸಿ ಕಾಯಿಸಿದರೆ ಸತು ಆವಿಯಾಗಿ ಘನಲೋಹಗಳು ಉಳಿಯುವುವು.

ಕಿಟ್ಟದಿಂದ ಸಂಸ್ಕರಣ: ದ್ರವಿತ ಕಚ್ಚಾ ಲೋಹವನ್ನು ಅದರೊಡನೆ ಬೆರೆಯದ ಮತ್ತೊಂದು ದ್ರವದೊಡನೆ ಕಾಯಿಸಲಾಗುವುದು. ಇದು ಕಿಟ್ಟ ಅಥವಾ ದ್ರವಿತ ಉಪ್ಪಾಗಿರಬಹುದು. ಆಗ ಕಶ್ಮಲಗಳು ಮಾತ್ರ ಉತ್ಕರ್ಷಿತವಾಗಿ ಕಿಟ್ಟ ಮಟ್ಟದಲ್ಲಿ ವಿಲೀನವಾಗುವುವು. ಅಂದರೆ ಲೋಹಕ್ಕಿಂತ ಕಶ್ಮಲಗಳು ಮಾತ್ರ ಉತ್ಕರ್ಷಿತವಾಗಿ ಕಿಟ್ಟದಲ್ಲಿ ವಿಲೀನವಾಗುವುವು. ಅಂದರೆ ಲೋಹಕ್ಕಿಂತ ಕಶ್ಮಲಗಳು ಹೆಚ್ಚು ಸರಾಗವಾಗಿ ಉತ್ಕರ್ಷಿತವಾಗುವ ಸಂದರ್ಭಗಳಲ್ಲಿ

ಮಾತ್ರ ಈ ವಿಧಾನ ಬಳಸಲು ಯೋಗ್ಯವಾಗಿದೆ. ಉದಾಹರಣೆಗೆ ದ್ರವಿತ ಕಚ್ಚಾ ತಾಮ್ರದ ಮೂಲಕ ಗಾಳಿಯನ್ನು ಊದಿದಾಗ ಉತ್ಪತ್ತಿಯಾಗುವ ಕಿಟ್ಟದಲ್ಲಿ ಪ್ರಧಾನವಾಗಿ ಕ್ಯೂಪ್ರಸ್ ಆಕ್ಸೈಡ್ ($Cu_2O$) ಇರುತ್ತದೆ. ಲೋಹದಲ್ಲಿದ್ದ ಕಬ್ಬಿಣ, ಸೀಸ, ಸತು, ತವರ, ಆರ್ಸೆನಿಕ್ ಮತ್ತು ಆಂಟಿಮೊನಿ ಆಕ್ಸೈಡುಗಳನ್ನು ಈ ಕಿಟ್ಟ ಹೀರುವುದು. ಚಿನ್ನ ಬೆಳ್ಳಿಗಳನ್ನು ಉತ್ಕರ್ಷಿಸುವುದು ತಾಮ್ರದಷ್ಟು ಸುಲಭವಲ್ಲ. ಆದ್ದರಿಂದ ಅವು ಹಾಗೆಯೇ ಉಳಿಯುವುವು. ಕಿಟ್ಟ ಸಂಸ್ಕರಣಕ್ಕೆ ಪ್ರತಿಫಲದ ಕುಲುಮೆಯಾದರೆ ಲೇಸು. ತಾಮ್ರ, ಸೀಸ, ಬೆಳ್ಳಿ ಮುಂತಾದ ಲೋಹಗಳನ್ನು ಸಂಸ್ಕರಿಸುವುದು ಹೀಗೆಯೇ.(ಎಚ್.ಜಿ.ಎಸ್.)

**ಉಷ್ಣವಲಯ:** ಸ್ಥೂಲವಾಗಿ ಉತ್ತರ ಅಕ್ಷಾಂಶ 23º27' ನಿಂದ ದಕ್ಷಿಣ ಅಕ್ಷಾಂಶ 23º 27' ವರೆಗೆ ಹಬ್ಬಿರುವ ಪ್ರದೇಶ (ಟ್ರಾಪಿಕಲ್ ಸೋನ್). ಈ ಎರಡು ಅಕ್ಷಾಂಶಗಳ ನಡುವೆ ಇರುವ ಪ್ರದೇಶದಲ್ಲಿ ವಾಸಿಸುವ ಜನಕ್ಕೆ ಸೂರ್ಯ ವರ್ಷಕ್ಕೆ ಎರಡು ಬಾರಿ ನೆತ್ತಿಯ ಮೇಲೆ ಬರುತ್ತದೆ; **(ನೋಡಿ– ಆರ್ಕ್‌ಟಿಕ್–ವೃತ್ತ)** ಭೂಮಧ್ಯರೇಖೆಯ ಮೇಲೆ




ನಕ್ಷೆ 1. ಸಮಭಾಜಕವೃತ್ತದ ಪ್ರದೇಶ

ಪ್ರತಿವರ್ಷವೂ ಮಾರ್ಚ್ 21 ಮತ್ತು ಸೆಪ್ಟಂಬರ್ 22 ರಂದು ಇರುತ್ತದೆ. ಆ ಎರಡು ದಿವಸಗಳಲ್ಲಿ ಹಗಲೂ ರಾತ್ರಿಯೂ ತಲಾ ಹನ್ನೆರಡು ಗಂಟೆ, ಸೂರ್ಯನ ಪ್ರಭಾವದಿಂದಾಗಿ ಇಲ್ಲಿ ಉಷ್ಣತೆ ಸಾಮಾನ್ಯವಾಗಿ ಅಧಿಕ. ಬೇಸಿಗೆ–ಚಳಿಗಾಲಗಳ ವ್ಯತ್ಯಾಸ ಕಡಿಮೆ. ಸಮುದ್ರಕ್ಕಿರುವ ದೂರ ಹಾಗೂ ಮಾರುತಗಳು ಬೀಸುವ ದಿಕ್ಕಿಗೆ ಅನುಗುಣವಾಗಿ ಮಳೆಯ ಪ್ರಮಾಣ ಬಲು ತೀವ್ರವಾಗಿ ವ್ಯತ್ಯಾಸವಾಗುತ್ತದೆ. ಜಗತ್ತಿನಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶಗಳೂ ಅತ್ಯಂತ ವಿಸ್ತಾರವಾದ ಮರುಭೂಮಿಗಳೂ ಇಲ್ಲಿವೆ. ನಿತ್ಯಹಸಿರೆಲೆಯ ದಟ್ಟ ವನಗಳಿಂದ ಹಿಡಿದು ಕುರುಚಲು ಗಿಡಗಳವರೆಗೆ ಇಲ್ಲಿ ನಾನಾ ಸಸ್ಯಸ್ತರಗಳನ್ನು ಕಾಣಬಹುದು. ಆದ್ದರಿಂದ ಈ ವಲಯದ ಇಡೀ ಪ್ರದೇಶಕ್ಕೆ ಸಮಾನವಾದ ಲಕ್ಷಣವೆಂದರೆ ಸೂರ್ಯನ ಪ್ರಖರತೆಯೊಂದೇ.

ಈ ಭಿನ್ನತೆಗಳಿಗೆ ಅನುಗುಣವಾಗಿ ಉಷ್ಣವಲಯವನ್ನು 1 ಸಮಭಾಜಕ ವೃತ್ತದ (ಭೂಮಧ್ಯರೇಖೆ) ಪ್ರದೇಶ, 2 ಉಷ್ಣವಲಯದ ಹುಲ್ಲುಗಾವಲಿನ ಪ್ರದೇಶ, 3 ಉಷ್ಣವಲಯದ ಮಾನ್‌ಸೂನ್ ಪ್ರದೇಶ ಮತ್ತು 4 ಉಷ್ಣ ಮರುಭೂಮಿಯ ಪ್ರದೇಶ ಎಂದು ನಾಲ್ಕು ಸ್ವಾಭಾವಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು.

ಉಷ್ಣವಲಯದ ಈ ಸ್ವಾಭಾವಿಕ ವಿಭಾಗಗಳನ್ನು ಮುಂದಿನ ನಕ್ಷೆಗಳಲ್ಲಿ ತೋರಿಸಲಾಗಿದೆ.

ಕರ್ಕಾಟಕ ಸಂಕ್ರಾಂತಿವೃತ್ತದಿಂದ (23º37' ಉ.) ಮಕರ ಸಂಕ್ರಾಂತಿವೃತ್ತದ (23º 27'ದ.) ವರೆಗಿನ ಪ್ರದೇಶವನ್ನು ಉಷ್ಣವಲಯವೆನ್ನಬಹುದಾದರೂ ವಾಸ್ತವವಾಗಿ ಕೆಲವು ಕಡೆಗಳಲ್ಲಿ ಇದೇ ಮಾದರಿ ವಾಯುಗುಣ ಈ ಎಲ್ಲೆಯನ್ನು ಮೀರಿ ಹಬ್ಬಿರುವುದೂ ಇನ್ನು ಕೆಲವು ಕಡೆಗಳಲ್ಲಿ ಇದೇ ಮಾದರಿ ಗಡಿಗಿಂತ ಇನ್ನೂ ಈಚೆಗೇ ಅಂತ್ಯವಾಗಿರುವುದೂ ಈ ನಕ್ಷೆಗಳಿಂದ ವೇದ್ಯವಾಗುತ್ತದೆ.

**ಸಮಭಾಜಕವೃತ್ತದ ಪ್ರದೇಶ:** ಈ ಪ್ರದೇಶ ಸಮಭಾಜಕವೃತ್ತದಿಂದ (ಭೂಮಧ್ಯರೇಖೆ) ದಕ್ಷಿಣೋತ್ತರ ಅಕ್ಷಾಂಶ 50ºಗಳವರೆಗೆ ಪ್ರಸರಿಸಿದೆ. ದಕ್ಷಿಣ ಅಮೆರಿಕದಲ್ಲಿರುವ ಅಮೆಜ಼ಾನ್ ನದಿಯ ಬಳಿಯ ಪ್ರದೇಶವೇ ಇದಕ್ಕೆ ಮಾದರಿಯಾಗಿರುವುದರಿಂದ ಇದನ್ನು ಅಮೆಜ಼ಾನ್ ಮಾದರಿಯ ಪ್ರದೇಶವೆಂದೂ ಕರೆಯುತ್ತಾರೆ.

ಈ ಪ್ರದೇಶದ ಒಂದು ವೈಲಕ್ಷಣ್ಯವೆಂದರೆ ಈ ವ್ಯಾಪ್ತಿಯಲ್ಲಿ ಎಲ್ಲೂ ಸಮುದ್ರಕ್ಕಿಂತ ಬಲು ದೂರದಲ್ಲಿರುವ ಭೂಭಾಗಗಳಿಲ್ಲ. ಇಲ್ಲಿ ವರ್ಷವೆಲ್ಲ ಹೆಚ್ಚು ಮಳೆ, ಬೆಳಿಗ್ಗೆ ಮಂಜು; ಮಧ್ಯಾಹ್ನ ಚುರುಕು ಬಿಸಿಲು; ಸಂಜೆಯ ವೇಳೆಗೆ ಮೋಡ, ಗುಡುಗು, ಮಳೆ, ಇದನ್ನು ಪರಿಸರಣ ಪರಿವಾಹಕ ಮಳೆಯೆನ್ನುತ್ತಾರೆ. ಸಮುದ್ರಕ್ಕೆ ಹತ್ತಿರದ ಪ್ರದೇಶಗಳಲ್ಲೂ ದ್ವೀಪಗಳಲ್ಲೂ ಸಮುದ್ರ ಮಂದ ಮಾರುತಗಳು ಯಾವಾಗಲೂ ಬೀಸುತ್ತಿರುವುದರಿಂದ ಹವಾಗುಣ ಹಿತಕರವಾಗಿದ್ದದೆ. ಸಮುದ್ರಕ್ಕೆ ತಕ್ಕ ಮಟ್ಟಿನ ದೂರದಲ್ಲಿರುವ ಕಾಡುಗಳ ನಡುವೆ ಮಾತ್ರ ಮಾರುತ ಹೆಚ್ಚಾಗಿ ಬೀಸುವುದಿಲ್ಲ. ವಾತಾವರಣದಲ್ಲಿನ ಅತಿಯಾದ ತೇವಾದಿಂದಾಗಿ ಉಷ್ಣತೆ ಎಲ್ಲೂ 55.6º ಸೆ. 100º ಫ್ಯಾ.ಗಿಂತ ಹೆಚ್ಚಾಗಿರುವುದಿಲ್ಲ. (ಉದಾ: ಎಕ್ವಡಾರ್) ಹವಾಗುಣ ಬಲು ತಂಪಾಗಿರುತ್ತದೆ.

ಸಸ್ಯವರ್ಗ: ಈ ಪ್ರದೇಶ ಸಾಮಾನ್ಯವಾಗಿ 200 ಗಳಿಗಿಂತಲೂ ಹೆಚ್ಚು ಮಳೆ ಪಡೆಯುವುದರಿಂದ ಇಲ್ಲಿ ನಿತ್ಯ ಹಸಿರಿನ ಸಸ್ಯಗಳು ಬೆಳೆಯುತ್ತವೆ. ಕೆಲವು ಮರಗಳು ಸುಮಾರು 45 ಮೀ. ಗಿಂತಲೂ ಎತ್ತರದವರೆಗೆ ಬೆಳೆದಿರುವುವು. ರಬ್ಬರು, ಮಹಾಗನಿ, ಬಿದಿರು ಮುಖ್ಯವಾದ ಸಸ್ಯಗಳು. ದಟ್ಟ ಕಾಡುಗಳಿರುವುದರಿಂದ ಬಗೆಬಗೆಯ ಕೋತಿಗಳೂ ವಿಷಪೂರಿತ ಕ್ರಿಮಿಕೀಟಗಳೂ ನಾನಾ ಬಣ್ಣಗಳ ಹಕ್ಕಿಗಳೂ ಇಲ್ಲಿ ವಾಸಿಸುತ್ತವೆ.

ಜನಜೀವನ: ಹೆಚ್ಚು ಶಾಖದಿಂದ ಮತ್ತು ದಟ್ಟಕಾಡುಗಳಿಂದ ಕೂಡಿದ ಪ್ರದೇಶ ಜನಜೀವನಕ್ಕೆ ಯೋಗ್ಯವಾಗಿಲ್ಲ. ಇಲ್ಲಿಯ ಮೂಲನಿವಾಸಿಗಳು ಕುಳ್ಳರು. ಬೇಟೆ ಇವರ ಮುಖ್ಯ ಕಸುಬು. ಕಾಂಗೋ ಪ್ರದೇಶದ ಜನ ಬಲು ಹಿಂದುಳಿದ ಜನಾಂಗ, ಅಮೆಜ಼ಾನ್ ಪ್ರದೇಶದ ಜನರ ಮುಖ್ಯ ಕಸುಬು ರಬ್ಬರ್ ಹಾಲಿನ ಶೇಖರಣೆ, ಈಸ್ಟ್ ಇಂಡೀಸ್, ಗಿನಿ ಪ್ರದೇಶಗಳಲ್ಲಿ ಮರಗಳನ್ನು ಕಡಿದು ಜೀವನ ನಡೆಸುತ್ತಾರೆ. ಸಮುದ್ರದ ತೀರಗಳಲ್ಲಿ ಜನಸಂಖ್ಯೆ ಹೆಚ್ಚು. ಇಲ್ಲಿ ತೋಟಗಾರಿಕೆ ಹೆಚ್ಚು. ಕೋಕೋ, ರಬ್ಬರ್, ತೆಂಗು, ಬಾಳೆಹಣ್ಣು, ಭತ್ತ ಕಬ್ಬು, ಮೆಕ್ಕೆಜೋಳ, ಜವೆ ಗೋದಿ ಮುಖ್ಯ ಕೃಷಿಗಳು ಉತ್ಪನ್ನಗಳು.

ಕೈಗಾರಿಕೆ: ಸುಲಭವಾಗಿ ಸಂಪನ್ಮೂಲಗಳನ್ನು ಪಡೆಯಲಾಗದಿರುವ ಮತ್ತು ಸಂಚಾರ ಸೌಕರ್ಯಗಳು ಉತ್ತಮವಾಗಿಲ್ಲದಿರುವ ಕಾರಣಗಳಿಂದ ಈ ಪ್ರದೇಶಗಳಲ್ಲಿ ಕೈಗಾರಿಕೆಗಳ ಪ್ರಗತಿ ಹೆಚ್ಚಾಗಿ ಆಗಿಲ್ಲ. ವಾಯುಗುಣ ಹಿತಕರವಲ್ಲ ಮತ್ತು ಖನಿಜಸಂಪತ್ತು ಹೆಚ್ಚಿಗೆ ಇಲ್ಲ. ಪೆಟ್ರೋಲಿಯಂ ಮತ್ತು ತವರ ಇಲ್ಲಿ ದೊರೆಯುವ ಮುಖ್ಯ ಖನಿಜಗಳು. (ಇವಕ್ಕೂ ವಾಯುಗುಣಕ್ಕೂ ಸಂಬಂಧವೇನೂ ಇಲ್ಲ) ಎಣ್ಣೆ ಶುದ್ಧೀಕರಣ ಮತ್ತು ಉದ್ಯಮಗಳು ವ್ಯಾಪಕವಾಗಿವೆ.

ಇಲ್ಲಿನ ಜನ ಮುಂದುವರಿದಿಲ್ಲ. ಪಟ್ಟಣಗಳ ಸಂಖ್ಯೆ ಕಡಿಮೆ. ಉಷ್ಣ ಪ್ರದೇಶಗಳಲ್ಲಿ ರೋಗರುಜಿನಗಳು ಹೆಚ್ಚು. ಸಿಡುಬು, ಪ್ಲೇಗ್, ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳು ಕಂಡುಬರುವುವು.

ಪ್ರದೇಶಗಳು: ದಕ್ಷಿಣ ಅಮೆರಿಕದ ಅಮೆಜ಼ಾನ್ ನದಿಯ ಬಯಲು, ಮಧ್ಯ ಆಫ್ರಿಕದ ಕಾಂಗೋ ನದಿಯ ಬಯಲು ಮತ್ತು ಆಗ್ನೇಯ ಏಷ್ಯ ದೇಶಗಳು ಸಮಭಾಜಕ ವೃತ್ತದ ಪ್ರದೇಶದ ಮುಖ್ಯ ಭೂಭಾಗಗಳು.

**ಉಷ್ಣವಲಯದ ಹುಲ್ಲುಗಾವಲಿನ ಪ್ರದೇಶ:** ಉಷ್ಣವಲಯದ ಒಂದು ಸ್ವಾಭಾವಿಕ ವಿಭಾಗ: ಉತ್ತರ ಅಕ್ಷಾಂಶ 5º ಯಿಂದ ಉತ್ತರಕ್ಕೂ ದಕ್ಷಿಣ ಅಕ್ಷಾಂಶ 5º ಯಿಂದ




ನಕ್ಷೆ 2. ಉಷ್ಣವಲಯದ ಹುಲ್ಲುಗಾವಲು

ದಕ್ಷಿಣಕ್ಕೂ 15ºಯ ವರೆಗೆ ಹಬ್ಬಿದೆ. ಇದನ್ನು ಸೂಡಾನ್ ಮಾದರಿ ಪ್ರದೇಶವೆಂದೂ ಕರೆಯುವುದುಂಟು. ಕಡಿಮೆ ತೇವಾಂಶ, ಒಣಹವೆ ಮತ್ತು ಕಡಿಮೆ ಋತುಭೇದಗಳಿಂದ ಕೂಡಿರುವುದು. ದಟ್ಟ ಕಾಡುಗಳಿಲ್ಲ. ಉದ್ದವಾದ ಹುಲ್ಲು ಸಾಮಾನ್ಯ.

**ವಾಯುಗುಣ:** ಈ ಪ್ರದೇಶಗಳ ಗಾಳಿ, ಉಷ್ಣತೆ, ಮಳೆ ಮತ್ತು ಸಸ್ಯಗಳಲ್ಲಿ ವ್ಯತ್ಯಾಸಗಳುಂಟು, ದಕ್ಷಿಣ ಒಳಭಾಗದಲ್ಲಿ ಹೆಚ್ಚು ತೇವಾಂಶ ಮತ್ತು ಕಡಿಮೆ ಉಷ್ಣತೆ, ಉತ್ತರ ಭಾಗದಲ್ಲಿ ಒಣಹವೆ ಮತ್ತು ಹೆಚ್ಚು ಉಷ್ಣತೆ. ವರ್ಷದ ಉಷ್ಣತೆಯ ಏರಿಳಿತದ ವ್ಯಾಪ್ತಿ 15º ಫ್ಯಾ. ಒಣಹವೆಯ ಕಾಲದಲ್ಲಿ ಸರಾಸರಿ ಉಷ್ಣತೆ 100º ಫ್ಯಾ.

ಈ ಪ್ರದೇಶ ವಾಣಿಜ್ಯ ಮಾರುತಗಳ ಹಾದಿಯಲ್ಲಿರುವುದರಿಂದ ಹೆಚ್ಚು ಪ್ರಬಲವಾದ ಗಾಳಿ ಬೀಸುತ್ತದೆ. ಪರ್ವತಪ್ರದೇಶಗಳಲ್ಲಿ ವಾರ್ಷಿಕ ಸರಾಸರಿ ಮಳೆ 175–200 ಸೆಂ.ಮೀ. ಮರುಭೂಮಿಯ ಅಂಚಿನ ಪ್ರದೇಶಗಳಲ್ಲಿ 25–40 ಸೆಂ.ಮೀ. ಸಾಮಾನ್ಯವಾಗಿ ವಸಂತ ಮತ್ತು ಬೇಸಿಗೆ ಕಾಲಗಳಲ್ಲಿ ಮಳೆಯಾಗುತ್ತದೆ. ಚಳಿಗಾಲದಲ್ಲಿ ಒಣಹವೆ, ಮರುಭೂಮಿ ಪ್ರದೇಶಗಳಲ್ಲಿ ಬಹಳ ಕಾಲದ ವರೆಗೆ ಒಣಹವೆ ಇರುವುದು.

ಸಸ್ಯವರ್ಗ: ಎತ್ತರವಾದ ಹುಲ್ಲು ಮತ್ತು ಅಲ್ಲಲ್ಲಿ ಮರಗಳು ಬೆಳೆಯುತ್ತವೆ. ಕೆಲವು ಪ್ರದೇಶಗಳಲ್ಲಿ ಹುಲ್ಲು 3 ಮೀಟರ್‌ಗಿಂತಲೂ ಹೆಚ್ಚು ಎತ್ತರ ಬೆಳೆದಿರುವುದುಂಟು. ವಸಂತಕಾಲದಲ್ಲಿ ಮಳೆಬಿದ್ದಾಗ ಹುಲ್ಲುಗಾವಲು ಹಸಿರಾಗಿಯೂ ಉಳಿದ ಕಾಲಗಳಲ್ಲಿ ಒಣಗಿ ಬೂದು ಬಣ್ಣದಿಂದಲೂ ಕೂಡಿರುತ್ತದೆ.

ಪ್ರಾಣಿವರ್ಗ: ಹುಲ್ಲು ಯಥೇಚ್ಛವಾಗಿರುವುದರಿಂದ ಜಿಂಕೆ ಜಿರಾಫೆಗಳೂ ಇವುಗಳನ್ನು ತಿನ್ನುವ ಹುಲಿ ಸಿಂಹಗಳೂ ಇಲ್ಲಿ ವಿಶೇಷ.

ಜನಜೀವನ: ಪಶುಪಾಲನೆ ಮತ್ತು ಬೇಟೆಗಾರಿಕೆ ಜನರ ಮುಖ್ಯ ಉದ್ಯೋಗ. ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಜನರ ವೃತ್ತಿ ವ್ಯವಸಾಯ, ಮೆಕ್ಕೆಜೋಳ. ಸಜ್ಜೆ, ಹತ್ತಿ, ಕಬ್ಬು, ಹಣ್ಣುಗಳನ್ನು ಬೆಳೆಯುತ್ತಾರೆ. ಸರೋವರ ಮತ್ತು ಸಮುದ್ರ ಪ್ರದೇಶಗಳಲ್ಲಿ ಮೀನುಗಾರಿಕೆ ಮುಖ್ಯ ಕಸಬು. ಈ ಪ್ರದೇಶ ಇನ್ನೂ ಬಲುಮಟ್ಟಿಗೆ ಹಿಂದುಳಿದಿದೆ.

**ಉಷ್ಣವಲಯದ ಮಾನ್ಸೂನ್ ಪ್ರದೇಶ:** ಇದು ಉಷ್ಣವಲಯದ ಹುಲ್ಲುಗಾವಲಿನ ಪೂರ್ವಕ್ಕಿದೆ. ಎರಡರ ವಾಯುಗುಣವೂ ಒಂದೇ ಬಗೆ. ಎರಡೂ ಉಷ್ಣವಲಯದಲ್ಲೆ ಇವೆ. ಎರಡರಲ್ಲೂ ಬಿಸಿ ಬೇಸಿಗೆ, ಈ ಕಾಲದಲ್ಲೇ ಮಳೆ, ಚಳಿಗಾಲ ಒಣಹವೆ, ಆಗ ಅತಿಯಾದ ಚಳಿಯೇನೂ ಇರುವುದಿಲ್ಲ, ಆದರೆ ಉಷ್ಣವಲಯದ ಹುಲ್ಲುಗಾವಲು ಪ್ರದೇಶದಲ್ಲಿ ಸಹಜಮಾರುತಗಳಿಂದ ಮಳೆಯಾಗುತ್ತದೆ. ಇಲ್ಲಿ ಹಾಗಲ್ಲ. ಸಹಜಮಾರುತಗಳ ದಿಕ್ಕೆ ಸಂಪೂರ್ಣ ಬದಲಾಗುವುದರಿಂದ ಇಲ್ಲಿ ಮಳೆ ಬೀಳುತ್ತದೆ. ಭಾರತ, ಪಾಕಿಸ್ತಾನ, ಮಯನ್ಮಾರ್ ಥೈಲಾಂಡ್, ಕ್ಯಾಂಬೋಡಿಯ, ಲಾವೋಸ್, ಬಾಂಗ್ಲಾದೇಶ, ವಿಯಟ್ನಾಂ, ದಕ್ಷಿಣ ಚೀನಗಳು ಅಪ್ಪಟ ಮಾನ್ಸೂನ್ ಪ್ರದೇಶಗಳು. ಮಧ್ಯ ಹಾಗೂ ಉತ್ತರ ಚೀನವನ್ನೂ ಜಪಾನನ್ನೂ ಮಾನ್ಸೂನ್ ನಾಡುಗಳೆಂದೇ ಕರೆಯುವ ವಾಡಿಕೆಯಿದೆ. ಏಕೆಂದರೆ ಅಲ್ಲಿ ಮಳೆಯಾಗುವುದೂ ಇದೇ ವಿಧಾನದಿಂದ. ಆದರೆ ಅವು ಉಷ್ಣವಲಯದ ಮೇರೆಯಿಂದ ಆಚೆಗಿವೆ. ಪೂರ್ವ ಆಫ್ರಿಕ ಮತ್ತು ಉತ್ತರ ಆಸ್ಟ್ರೇಲಿಯಗಳ ಅಂಚಿನ ಭಾಗಗಳೂ ಅಮೆರಿಕದ ನೆಲದ ಕೆಲವು ತುಣುಕುಗಳೂ ಮಾನ್ಸೂನ್ ನಾಡುಗಳು.

ವಾಯುಗುಣ: ಅರಬ್ಬೀ ಭಾಷೆಯಲ್ಲಿ ಮಾನ್ಸೂನ್ ಎಂದರೆ ಋತು. ಋತುಗಳಿಗೆ ಅನುಗುಣವಾಗಿ ಮಾರುತಗಳು ದಿಕ್ಕು ಬದಲಿಸಿಕೊಂಡು ಬೀಸುತ್ತವೆ. ಇದನ್ನಾಧರಿಸಿ ಮಳೆ ಹಂಚಿಕೆಯಾಗುತ್ತದೆ. ಮಾನ್ಸೂನ್ ನಾಡುಗಳ ಮಾರುತ ಎಂಬ ಅರ್ಥದಲ್ಲಿ ಭೂಗೋಳ ಶಾಸ್ತ್ರಜ್ಞರು ಈ ಶಬ್ದ ಬಳಸುತ್ತಾರೆ. ಭಾರಿ ಖಂಡಭಾಗಗಳ ತುದಿಯಲ್ಲಿರುವ ಈ ನಾಡುಗಳಲ್ಲಿ




ನಕ್ಷೆ 3. ಮುಖ್ಯ ಮಾನ್ಸೂನ್ ಪ್ರದೇಶ

ಬೇಸಗೆಯಲ್ಲಿ ಸೂರ್ಯ ನೆತ್ತಿಯ ಮೇಲೆ ಪ್ರಜ್ವಲಿಸುವಾಗ ನೆಲ ಕಾಯ್ದು, ಬಿಸಿಗಾಳಿ ಮೇಲೇರುತ್ತದೆ, ಕಡಿಮೆ ಒತ್ತಡದ ಈ ಪ್ರದೇಶಕ್ಕೆ ಮೋಡ ತುಂಬಿದ ಮಳೆ ಮಾರುತಗಳು ಸಮುದ್ರದ ಕಡೆಯಿಂದ ಧಾವಿಸಿ ಬರುತ್ತವೆ ; ಪರಿಣಾಮವಾಗಿ ಇಲ್ಲಿ ಭಾರಿ ಮಳೆಯಾಗುತ್ತದೆ. ಇದಕ್ಕೆ ಪ್ರತಿಯಾಗಿ ಚಳಿಗಾಲದಲ್ಲಿ ಸಹಜಮಾರುತಗಳು ಬೀಸಿದರೂ ಅವು ಸಾಮಾನ್ಯವಾಗಿ ಸಮುದ್ರದ ಕಡೆಯಿಂದ ಬರುವುದಿಲ್ಲವಾದ್ದರಿಂದ ಹೆಚ್ಚಿನ ಮಳೆ ತರುವುದಿಲ್ಲ.

ಭಾರತದಲ್ಲಿ ನಾಲ್ಕು ಋತುಗಳಿವೆ: 1 ಡಿಸೆಂಬರಿನಿಂದ ಫೆಬ್ರವರಿಯವರೆಗೆ ಚಳಿಗಾಲ: ಮಳೆಯಿಲ್ಲ. 2 ಮಾರ್ಚಿಯಿಂದ ಮೇ ತಿಂಗಳ ವರೆಗೆ ಬೇಸಿಗೆಕಾಲ ; ನೆಲ ಕಾಯುತ್ತದೆ ; ಮಳೆಯಿಲ್ಲ. 3 ಜೂನಿನಿಂದ ಸೆಪ್ಟೆಂಬರ್ ವರೆಗೆ ಮಳೆಗಾಲ. ವಾತವರಣ ತಂಪಾಗುತ್ತದೆ. ಉಷ್ಣತೆ ಇಳಿಯುತ್ತದೆ, ಮಳೆ ಹೆಚ್ಚು, 3. ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ. ಹವಾಗುಣ ಅಸ್ಪಷ್ಟವಾಗಿರುತ್ತದೆ. ಪೂರ್ವ ಕರಾವಳಿಗೆ ಮಳೆಬೀಳುತ್ತದೆ. ಮಾನ್ಸೂನ್ ನಾಡುಗಳನ್ನು ಮಳೆಗೆ ಅನುಗುಣವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸ ಬಹುದು: 1. ವರ್ಷಕ್ಕೆ 100 ಸೆಂ.ಮೀ ಗಳಿಗಿಂತ ಹೆಚ್ಚು ಮಳೆಯಾಗುವ ಪ್ರದೇಶ. ಭೂಮಧ್ಯರೇಖೆಯ ಪ್ರದೇಶದ ಮಾದರಿಯ ನಿತ್ಯ ಹಸಿರೆಲೆಯ ಸಸ್ಯಸಮೃದ್ಧವಾಗಿದೆ. 2. 50–100 ಸೆಂ.ಮೀ. ಮಳೆಬೀಳುವ ಪ್ರದೇಶ. ಮಾನ್ಸೂನ್ ಪರ್ಣಪಾತೀಸಸ್ಯ, ಬಿಸಿ ಒಣಗಾಲದಲ್ಲಿ ಇವುಗಳ ಎಲೆ ಉದುರುತ್ತವೆ. 3. 25–50 ಸೆಂ.ಮೀ. ಗಳವರೆಗೆ ಮಳೆಯಾಗುವ ಪ್ರದೇಶ. ಪೊದೆ, ಕುರುಚಲು ಬೆಳೆಯುತ್ತವೆ. 4.25 ಮೀ. ಗಳಿಗಿಂತ ಕಡಿಮೆ ಮಳೆ ಬೀಳುವ ಪ್ರದೇಶ; ಮರುಭೂಮಿ, ಅರೆಮರುಭೂಮಿ.




ನಕ್ಷೆ 4. ಉಷ್ಣಮರುಭೂಮಿ

ಆನೆ, ಹುಲಿ, ಕಾಂಗರೂ, ಕಪಿ, ಹಾವು, ಹಕ್ಕಿ, ನೀರಾನೆ, ಮೊಸಳೆ, ಕ್ರಿಮಿಕೀಟ—ಇವು ಈ ಪ್ರದೇಶದ ಮುಖ್ಯ ಪ್ರಾಣಿಗಳು. ಈ ಪ್ರದೇಶಗಳಲ್ಲಿ ವ್ಯವಸಾಯವೇ ಮುಖ್ಯ ಜೀವನ, ಜನಸಾಂದ್ರತೆ ಬಹಳ ಹೆಚ್ಚು ಪ್ರಪಂಚದ ಜನಸಂಖ್ಯೆಯಲ್ಲಿ ¼ಭಾಗದಷ್ಟು ಜನಸಂಖ್ಯೆ ಈ ಪ್ರದೇಶಗಳಲ್ಲಿ ಕಂಡುಬರುತ್ತದೆ. ಫಲವತ್ತಾದ ನದೀ ಬಯಲುಗಳು ವ್ಯವಸಾಯಕ್ಕೆ ಯೋಗ್ಯವಾಗಿದ್ದು ಹೆಚ್ಚು ಜನಸಂಖ್ಯೆಯಿಂದ ಕೂಡಿವೆ. ಈ ಪ್ರದೇಶದ ನದೀ ಬಯಲುಗಳನ್ನು ಮಾನವನ ನಾಗರಿಕತೆಯ ತೊಟ್ಟಿಲು ಎಂದು ಕರೆಯಲಾಗಿದೆ. ಅರಣ್ಯಗಳು ವಿವಿಧ ಸಂಪನ್ಮೂಲಗಳನ್ನು ಹೊಂದಿವೆ. ಸಾಲ್, ತೇಗ, ಶ್ರೀಗಂಧ, ಮೇಣ, ಅರಗು, ಅಂಟುರಾಳ ಮುಖ್ಯವಾದ ಉತ್ಪನ್ನಗಳು. ಪಶುಪಾಲನೆ ಹೆಚ್ಚು ಪ್ರಾಮುಖ್ಯ ಪಡೆದಿಲ್ಲ.

ವ್ಯವಸಾಯವನ್ನು ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಲು ಅನೇಕ ಅಂಶಗಳು ಸಹಕಾರಿಯಾಗಿವೆ: 1 ಮಣ್ಣು ಫಲವತ್ತಾಗಿರುವುದು: 2 ವಾಯುಗುಣ ವರ್ಷವೆಲ್ಲ ಹಿತಕರವಾಗಿರುವುದು: 3 ನೀರಾವರಿ ಸೌಲಭ್ಯ: 4 ಹೆಚ್ಚು ಜನಸಂಖ್ಯೆ, ಬತ್ತ, ಗೋದಿ, ಹತ್ತಿ, ಕಬ್ಬು, ಎಣ್ಣೆ ಕಾಳುಗಳು, ಚಹ, ಕಾಫಿ, ಸೆಣಬು ಮುಖ್ಯ ಬೆಳೆಗಳು, ಚಹ ಮತ್ತು ಸೆಣಬುಗಳದು ಸಮಾನ ಪ್ರಾಮುಖ್ಯ.

**ಉಷ್ಣ ಮರುಭೂಮಿ:** ಉಷ್ಣವಲಯದ ಹುಲ್ಲುಗಾವಲಿನ ಪ್ರದೇಶದಿಂದ ಮೇರುವಿನ (ಧ್ರುವ) ಕಡೆಗೆ ಹಬ್ಬಿರುವ ಪ್ರದೇಶ, ಇದರ ಅಂಚಿನಿಂದ ಮಧ್ಯ ಅಕ್ಷಾಂಶದ ಮರು ಭೂಮಿ ಮುಂದುವರಿಯುವುದನ್ನೂ ಈ ಪ್ರದೇಶ ಉಷ್ಣವಲಯದ ಸ್ಥೂಲ ಎಲ್ಲೆಗಿಂತ ಆಚೆಗೆ ಹಬ್ಬಿರುವುದನ್ನೂ ಗಮನಿಸಬೇಕು. ಉಷ್ಣವಲಯದ ಸೆರಗಿನಲ್ಲಿ ಹಬ್ಬಿರುವ ಹೆಚ್ಚು ಒತ್ತಡ ಪಟ್ಟೆಯ ಮೇಲೆ ಈ ನಾಡುಗಳಿವೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ಮಾರುತಗಳು ಇಲ್ಲಿಂದ ಹೊರಕ್ಕೆ ಬೀಸುತ್ತವೆ. ಆದ್ದರಿಂದ ಮಳೆಯಿಲ್ಲ, ಬೇಸಿಗೆಯಲ್ಲಿ ಈ ಪ್ರದೇಶ ಬಹಳ ಕಾಯುವುದರಿಂದ ವಾಯುವಿನ ಒತ್ತಡ ತಗ್ಗುವುದು ಸಾಧ್ಯ. ಆದರೆ ಆಗ ಈ ಪ್ರದೇಶದೊಳಕ್ಕೆ ಬೀಸುವ ಮಾರುತ ತರಬಹುದಾದ ತೇವ ಹನಿಯೊಡೆದಿರುವುದಕ್ಕೆ ಇಲ್ಲಿನ ಅತ್ಯುಷ್ಣತೆಯೇ ಮುಖ್ಯ ಕಾರಣ. ರಾತ್ರಿ ಸ್ವಲ್ಪ ಮಂಜೂ ಆಗೊಮ್ಮೆ ಈಗೊಮ್ಮೆ ಗುಡುಗು ಸಿಡಿಲುಗಳಿಂದ ಕೂಡಿದ ಬಿರುಗಾಳಿ ಮಳೆಯೂ ಬೀಳುವುದುಂಟು.

ನಿರ್ಮಲ ಆಕಾಶ, ಅತಿ ಬಿಸಿಲು, ಕೊರೆಯುವ ಚಳಿಯ ರಾತ್ರಿ, ಅನಾವೃಷ್ಟಿ—ಇವು ಇಲ್ಲಿನ ವಾಯುಗುಣದ ಮುಖ್ಯ ಲಕ್ಷಣಗಳು. ಆಗಾಗ್ಗೆ ಮಾರುತ ಬಹಳ ವೇಗವಾಗಿ ಬೀಸುತ್ತದೆ.

ಈ ಪ್ರದೇಶದ ಉಷ್ಣತೆ ಯಾವಾಗಲೂ ಹೆಚ್ಚು, ಇದು ಬೆಳಗ್ಗೆ 47–53°ಸೆ. ಮಧ್ಯಾಹ್ನ 58–61°ಸೆ. ಇರುತ್ತದೆ. ಪ್ರಪಂಚದಲ್ಲೇ ಅತ್ಯಂತ ಉಷ್ಣತೆಯ ಸ್ಥಳ ಇರುವುದು ಈ ಪ್ರದೇಶದಲ್ಲಿ.

ಮರುಭೂಮಿಯ ವಾಯುಗುಣದಲ್ಲಿ ಯಾವ ಸಸ್ಯಗಳೂ ಬೆಳೆಯಲು ಅವಕಾಶವಿಲ್ಲ. ಈ ಮರುಭೂಮಿಗಳು ವಿಶಾಲವಾದ ಮರಳುರಾಶಿಗಳಿಂದ ಕೂಡಿವೆ. ತೇವವಿರುವೆಡೆಯಲ್ಲಿ ಹುಲ್ಲು, ಖರ್ಜೂರ, ಕಳ್ಳಿ ಬೆಳೆಯುತ್ತವೆ. ಉಷ್ಣವಲಯದ ಹುಲ್ಲುಗಾವಲಿನ ಕಡೆಯ ಅಂಚಿನಲ್ಲಿ ಅಷ್ಟಿಷ್ಟು ಹುಲ್ಲೂ, ಮೆಡಿಟರೇನಿಯನ್ ಕಡೆಯಂಚಿನಲ್ಲಿ ಕುರುಚಲು ಸಸ್ಯಗಳೂ ಬೆಳೆಯುತ್ತವೆ. ಮರಳುಗಾಡುಗಳಲ್ಲಿ ನರಿ ಮತ್ತು ಒಂಟೆಗಳೂ ಕೆಲವು ಜಾತಿಗಳ ಹಕ್ಕಿಗಳೂ ಜೀವಿಸುತ್ತವೆ.

ಪ್ರಾಣಿ, ಸಸ್ಯ ಮತ್ತು ಜನ ಅಭಿವೃದ್ಧಿ ಹೊಂದಲು ಇಲ್ಲಿನ ಪರಿಸ್ಥಿತಿ ಸಹಕಾರಿಯಾಗಿಲ್ಲ. ಓಯಸಿಸ್‌ಗಳು ಕಂಡುಬರುವ ಪ್ರದೇಶಗಳಲ್ಲಿ ಕೆಲವು ಜನ ನೆಲೆಸಿ ವ್ಯವಸಾಯದಲ್ಲಿ ತೊಡಗಿದ್ದಾರೆ. ಮರುಭೂಮಿಯ ಪ್ರದೇಶಗಳಲ್ಲಿ ಜನಸಂಖ್ಯೆ ಅತಿ ವಿರಳ. ಮರುಭೂಮಿಗಳಲ್ಲಿ ಮೂರು ಬಗೆಯ ಜನ ವಾಸಿಸುತ್ತಾರೆ.

1 ಸದಾ ಸಂಚಾರಿಗಳು, ಮರುಭೂಮಿಯ ಒಂದಂಚಿನಿಂದ ಇನ್ನೊಂದಂಚಿಗೆ ಸರಕು ಸಾಗಿಸಿ ಮಾರಾಟ ಮಾಡುವವರು, ಇಂಥವರು ದರೋಡೆಕಾರರೂ ಆಗಿರುವುದುಂಟು.

2 ನೀರಿನ ವಸತಿ (ಓಯಸಿಸ್) ಇರುವ ಪ್ರದೇಶಗಳಲ್ಲಿ ಸ್ಥಿರವಾಗಿ ನೆಲೆಸಿರುವವರು. ಬೇಸಾಯ, ಪಶುಪಾಲನೆ ಇವರ ಕಸಬು.

3. ಖನಿಜ ಸಂಪತ್ತು ಇರುವೆಡೆಗಳಲ್ಲಿ ನೆಲೆಸಿದ್ದಾರೆ. ಗಣಿ ಉದ್ಯಮದಲ್ಲಿ ನಿರತರಾಗಿರುವ ಗಣಿಕಾರರು. (ಪಿ.ಎಚ್.)

**ಉಷ್ಣವಲಯದ ವೈದ್ಯ:** ಉಷ್ಣವಲಯದ ವಾಯುಗುಣಕ್ಕೂ ಜನರಿಗೂ ವಿಶಿಷ್ಟವಾಗಿರುವ ರೋಗರುಜಿನಗಳ ಪರಿಶೀಲನೆ, ಚಿಕಿತ್ಸೆ, ನಿರೋಧಗಳನ್ನು ಕುರಿತ ವೈದ್ಯಶಾಸ್ತ್ರದ ವಿಭಾಗ (ಟ್ರಾಪಿಕಲ್ ಮೆಡಿಸನ್). ಉಷ್ಣವಲಯದ ಅನೇಕ ರೋಗಗಳು ಅಲ್ಲಿಗೇ ಮಿತಿಗೊಳ್ಳದೆ ಸಮಶೀತೋಷ್ಣವಲಯಗಳಲ್ಲೂ ಕಾಣುವುವು. ಉಷ್ಣವಲಯಕ್ಕೆ ವಿಶೇಷವಾಗಿರುವ ರೋಗಗಳು ಇಲ್ಲಿರುತ್ತವೆ. ಉಷ್ಣವಲಯದವೆಂದು ಕೆಲವು ರೋಗಗಳು ಹೆಸರಾಗಲು ಹಲವು ಕಾರಣಗಳಿವೆ.

ಹಿಂದಿನ ಕಾಲದಲ್ಲಿ ಈಜಿಪ್ಟ್, ಭಾರತ, ಚೀನ ದೇಶಗಳಲ್ಲಿ ವೈದ್ಯಶಾಸ್ತ್ರ ಆಗಿನ ಕಾಲಕ್ಕೆ ಬಹುಮಟ್ಟಿಗೆ ಮುಂದುವರಿದಿತ್ತು. ಇಂದು ಮುಂದುವರಿದ ನಾಡುಗಳು ಎನಿಸಿಕೊಂಡಿರುವವರಲ್ಲಿ ವೈದ್ಯ ಇಷ್ಟು ಬೆಳೆದಿರಲಿಲ್ಲ. 1415ರಲ್ಲಿ ಪೂರ್ವ ದೇಶಗಳಿಗೆ ದಾರಿ ಗೊತ್ತಾಗಿ, 15ನೆಯ ಶತಮಾನದ ಕೊನೆಯಲ್ಲಿ ಕೇಪ್ ಭೂಶಿರವನ್ನು ಸುತ್ತಿಕೊಂಡು ಪಶ್ಚಿಮದವರು ಪೂರ್ವ ದೇಶಗಳಿಗೆ ಬರುವಂತಾಯಿತು. ಕಂಡುಹಿಡಿದ ಹೊಸಹೊಸ ನಾಡುಗಳೊಡನೆ ವ್ಯಾಪಾರ ವಿನಿಮಯಗಳು ಹೆಚ್ಚಿದವು. ಆಗ ಕೇವಲ ನೀರು, ಭೂಮಿಗಳ ಮೇಲೆ ಸಾಗಬೇಕಾಗಿತ್ತು. ಬಹಳ ಕಾಲದ ಹಡಗಿನ ಪ್ರಯಾಣದಲ್ಲಿ ಪ್ರಯಾಣಿಕರನ್ನು ನೋಡಿಕೊಳ್ಳಲು ವೈದ್ಯರು ನೇಮಕವಾಗಿದ್ದರು. ಹೀಗೆ ಬಂದುಹೋದ ವೈದ್ಯರಲ್ಲಿ ಬಹಳ ಮಂದಿ ಚುರುಕಾಗಿದ್ದು ತಾವು ಕಂಡ ಹೊಸ ವಿಷಯಗಳನ್ನೆಲ್ಲ ಗುರುತಿಸುತ್ತ ಬಂದರು. ಇನ್ನು ಕೆಲವರು ಇಲ್ಲೇ ನೆಲೆಸಿ ತಮ್ಮ ಅನುಭವಗಳನ್ನು ಬರೆದಿಟ್ಟರು. ಹೀಗೆ ಉಷ್ಣವಲಯದ ಭೂಗೋಳ, ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ, ಜನರ ನಡೆವಳಿಕೆಗಳು, ನಂಬಿಕೆಗಳು, ರೋಗಗಳು, ವೈದ್ಯಪದ್ಧತಿಗಳ ವಿಚಾರಗಳು ರಾಶಿಬಿದ್ದುವು. ಪಶ್ಚಿಮ ದೇಶಿಗರು ಬಂದು ನೆಲೆಸಿ ತಮ್ಮ ಹುಟ್ಟೂರಲ್ಲಿ ಕಾಣದ, ಹೊಸದಾಗಿ ಕಂಡ ರೋಗಗಳನ್ನೆಲ್ಲ ವಿವರಿಸಿದರು. ಈ ಹೊಸವನ್ನೆಲ್ಲ ಗುರುತಿಸಲು ಒಂದು ಹೊಸ ಹೆಸರು ಬೇಕಾಯಿತು. ಇಂಥವನ್ನು ಉಷ್ಣವಲಯದ ರೋಗಗಳು, ಉಷ್ಣವಲಯದ ವೈದ್ಯ ಎಂದರು.

ಕಳೆದ ಕೆಲವು ಶತಮಾನಗಳಿಂದ ಅನೇಕ ರೋಗಗಳ ಮಾದರಿಯೂ ಆಗುವಿಕೆಯೂ ಬದಲಾಗಿವೆ. ಒಂದೆಡೆಯ ಜನರಲ್ಲಿ ನೆಲೆಸಿ ಆಗಾಗ್ಗೆ ತಲೆಯೆತ್ತುವ ಇಲ್ಲವೇ ಸಾಂಕ್ರಾಮಿಕಗಳಾಗಿ ಬರುವ ಬೇನೆಗಳು ಹಿಂದೆ ಪ್ರಪಂಚದಲ್ಲಿ ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದ್ದರೂ ಈಗೀಗ ಬಹುಮಟ್ಟಿಗೆ ಉಷ್ಣವಲಯದಲ್ಲಿ ಮಾತ್ರ ಇನ್ನೂ ತೋರುತ್ತಿವೆ. ಆ ಬಗೆಯ ರೋಗಗಳು ಮುಂದುವರಿದ ನಾಡುಗಳಲ್ಲಿ ಈಗ ಹೇಳಹೆಸರಿಲ್ಲದಂತೆ ಆಗಿರುವುದಕ್ಕೆ ಚಳಿ, ಕೊರೆವ ಹವೆಯೇ ಕಾರಣವಲ್ಲ. ತಪ್ಪದೆ ರೋಗಿಗಳ ಬೇರ್ಪಡಿಕೆ, ರೋಗ ತಡೆವ ಕ್ರಮಗಳು, ಜೀವನ ಮಟ್ಟದ ಏರಿಕೆ, ಚೆನ್ನಾಗಿ ಚೊಕ್ಕಟಗೊಳಿಸುವಿಕೆ, ಆರೋಗ್ಯ ಸೂತ್ರಗಳ ಪಾಲನೆ, ಒಳ್ಳೆಯ ಪುಷ್ಟಿದಾಯಕ ಆಹಾರವೇ ಮುಖ್ಯ ಕಾರಣಗಳು.

ಉಷ್ಣವಲಯದ ರೋಗಗಳೆಂದು ಬೆಟ್ಟು ಮಾಡಿ ತೋರುವಂತೆ ಯಾವ ರೋಗಗಳ ಗೊತ್ತಾದ ಲಕ್ಷಣಗಳನ್ನೂ ಹೇಳುವಂತಿಲ್ಲ. ಹಾಗಾದರೆ ಎಂಥ ರೋಗಗಳನ್ನು ಉಷ್ಣವಲಯದವು ಎನ್ನಬೇಕು? ಉಷ್ಣವಲಯದಲ್ಲೆ ಇರುವವರು ಸಾಮಾನ್ಯವಾಗಿ ಅನುಭವಿಸುವ ರೋಗಗಳನ್ನು ಹೀಗೆ ಹೆಸರಿಸುವುದು ಮೊದಲು ಸರಿಯೆನ್ನಿಸಬಹುದು. ಆದರೆ ಪ್ರಪಂಚದಲ್ಲಿ ಈಗಿನ ಸರಾಗವಾದ ಪ್ರಯಾಣಗಳ, ವಲಸೆಗಳ ಹೆಚ್ಚಿನ ಅನುಕೂಲಗಳು ಇರುವಾಗ ಉಷ್ಣವಲಯದವೆಂಬ ರೋಗಗಳು ಎಲ್ಲೆಲ್ಲೂ ಬೇಗನೆ ಹರಡಿಕೊಂಡಿವೆ. ಆದ್ದರಿಂದ, ಉಷ್ಣವಲಯದ್ದು ಎನ್ನುವುದು ಕೇವಲ ಕೃತಕ. ರೂಢಿ, ವಾಡಿಕೆ, ಹಳೆಯ ನಂಬಿಕೆಗಳಿಂದ ಈ ಹೆಸರು ಇನ್ನೂ ಉಳಿದಿದೆ ಅಷ್ಟೆ. ಉಷ್ಣವಲಯದಲ್ಲಿ ಕಾಣದ ರೋಗಗಳು ಬಹಳವಿಲ್ಲ. ಚಳಿ ದೇಶಗಳಲ್ಲಿನ ರೋಗಗಳು ಇಲ್ಲೂ ಅಷ್ಟೇ ಸಾಮಾನ್ಯ. ಉಷ್ಣವಲಯದಲ್ಲಿ ಎಲ್ಲೆಲ್ಲೂ ಬಹಳವಾಗಿರುವ ಕೆಲವು ಗೊತ್ತಾದ ಲಕ್ಷಣಗಳಿರುವ ರೋಗಗಳಿಗೆ ಈ ಹೆಸರು ಕೊಡುವುದೆಂದರೆ, ರೋಗಗಳು ಯಾವಾಗಲೂ ಒಂದೇ ತೆರನಾಗಿ ಇರವುವು ಎಂಬುದನ್ನು ಗಮನಿಸಿಬೇಕು. ಉಷ್ಣದೇಶಗಳಲ್ಲಿ ಹಿಂದಿನಿಂದಲೂ ಬಹಳ ಸಾವುನೋವುಗಳಿಗೆ ಕಾರಣವಾಗಿದ್ದ ಮಲೇರಿಯದ ಪಿಡುಗು ಈಗ ಅಡಗಿಹೋಗುತ್ತಿದೆ. ಅಲ್ಲದೆ ಈ ರೋಗಗಳೂ ಒಂದೆಡೆಯಲ್ಲಿ ಇರುವುದಾದರೆ ಇನ್ನೊಂದೆಡೆ ಇರವು. ಒಂದೊಂದು ಕಾಲದಲ್ಲೂ ಬಗೆಬಗೆಯಾಗಿ ಇರುತ್ತವೆ.

ಉಷ್ಣವಲಯದ ರೋಗಗಳಲ್ಲಿ ಎದ್ದು ಕಾಣುವ ಒಂದು ಗುಣವೆಂದರೆ, ಅವು ಒಂದು ಜೀವಿಯಿಂದ ಇನ್ನೊಂದಕ್ಕೆ ಸಾಗಣೆಯಾಗುವ ಕ್ರಮ. ಇದು ಸರಳವೂ ಅಲ್ಲ. ನೇರವೂ ಅಲ್ಲ, ಇಲ್ಲಿ ಪರಪಿಂಡಿಯೊಂದೇ ಅಲ್ಲ, ಸೋಂಕುವಾಹಕ ಕೀಟ, ನಡುವರ್ತಿ ಪರೋಪಜೀವಿ ಇಲ್ಲವೇ ರೋಗಾಣುವಿನ ಆಗರ ಇವನ್ನೆಲ್ಲ ಗಮನಿಸಲೇಬೇಕು. ಗೊತ್ತಾದ ಸೋಂಕುವಾಹಕಗಳ ಸಂದಣೆ ಇರುವೆಡೆಗಳಲ್ಲಿ ಉಷ್ಣವಲಯದ ರೋಗಗಳು ಬಹುಮಟ್ಟಿಗೆ ಹೆಚ್ಚಾಗಿರುವುವು. ಕೀಟಗಳಲ್ಲಿ ಬಹುಪಾಲು ಕೊಳಚೆ ಜಾಗಗಳು, ಹಳ್ಳಿ ಪಳ್ಳಿಗಳಲ್ಲೇ ನೆಲೆಸಿರುತ್ತವೆ. ಇವುಗಳ ಪೈಕಿ ಕೆಲವು ತಿಂಡಿ ತಿನಿಸುಗಳನ್ನು ಸೋಂಕಿನಿಂದ ಕುಲಗೆಡಿಸುವುದು ಕೇವಲ ಇವುಗಳ ಕೊಳಕುತನದಿಂದ, ಆದರೆ ಇನ್ನು ಕೆಲವು ಬೇಗೆ, ಕಾವಿನಿಂದ ಎಷ್ಟೋ ವೇಳೆ ಮೈತುಂಬ ಬಟ್ಟೆ ಹೊದೆಯುವಂತಿರದ ಸಂದರ್ಭಗಳಲ್ಲಿ ಮೈಯ ತೆರೆದ ಭಾಗಗಳನ್ನು ಕೀಟಗಳು ಕಡಿಯಲು ಅವಕಾಶವಾಗುತ್ತದೆ.

ಉಷ್ಣವಲಯದಲ್ಲಿ ಸೋಂಕುಗಳ ಮುಖ್ಯ ಮೂಲವಾಗಿರುವುದು ನೀರು. ಸೆಕೆ, ಬೆವರಿಕೆಗಳಿಂದ ದಿನವೂ ಮೈತೊಳೆದುಕೊಳ್ಳಬೇಕಾಗುತ್ತದೆ. ಕುಡಿಯಲೂ ಬಟ್ಟೆ ಒಗೆಯಲೂ ತೊಳೆಯಲೂ ಒಳ್ಳೆಯ ನೀರು ಬೇಕು. ಮಲಮೂತ್ರಾದಿಗಳಿಂದ ಕೊಳಕಾಗಿ ಸೋಂಕು ಒಬ್ಬರಿಂದೊಬ್ಬರಿಗೆ ಹರಡಲು ನೀರಿನಿಂದ ಇನ್ನೂ ಅನುಕೂಲ, ಸುಲಭ.

ಉಷ್ಣವಲಯದಲ್ಲಿ ಸಾಮಾನ್ಯವಾಗಿರುವ ಸಮತೂಕದ ಆಹಾರದ ಕೊರತೆಯಿಂದ ದೇಹದ ರೋಗನಿರೋಧಶಕ್ತಿ ಕಡಿಮೆಯಾಗಿ ಜನರು ರೋಗಗಳಿಗೆ ಸುಲಭವಾಗಿ ತುತ್ತಾಗುವಂತಿರುವರು. ಜೀವನ ಮಟ್ಟ ಕಡಿಮೆ, ಅಲ್ಲದೆ ಅಪ್ಪಟ ಆಹಾರ ವಸ್ತುಗಳು ಸಿಗದೆ ಇನ್ನಷ್ಟು ಪುಷ್ಟಿಗೆಡುವರು. ಇದರಿಂದ ಅನೇಕರು ಆಹಾರ ನ್ಯೂನತೆಯಿಂದಾಗಿ ಕೊರತೆಗೀಡಾಗುತ್ತಾರೆ.

ಉಷ್ಣವಲಯದ ರೋಗಗಳು ಬರುವುದಕ್ಕೂ ಇರುವುದಕ್ಕೂ ಹರಡುವುದಕ್ಕೂ ಹೋಗುವುದಕ್ಕೂ ಚಳಿದೇಶಗಳ ಹವೆಗಿಂತಲೂ ಹೆಚ್ಚಾಗಿ, ಒಂದು ನಾಡಿನ ಮಳೆ ಸುರಿತ, ನೀರಿನ ಪೂರೈಕೆಯ ವಿಧಾನ, ನೆಲದ ಲಕ್ಷಣ, ಪರಿಸರಗಳೇ ಮುಖ್ಯ ಕಾರಣಗಳು.

ಇನ್ನೂ ಹೆಚ್ಚಾಗಿ, ಮಾನಸಿಕ ಅಂಶಗಳಿಂದ, ರೋಗಗಳು ನಿರ್ಧಾರವಾಗುತ್ತವೆ. ವರ್ಷವೆಲ್ಲ ಎಲ್ಲಾದರೂ ಒಂದುಕಡೆ, ಜಾತ್ರೆ, ಮೇಳ, ಯಾತ್ರೆ, ಯಾಗ, ಪೂಜೆ ಪುರಸ್ಕಾರಗಳಿಗಾಗಿ ಜನರು ಗುಂಪುಗೂಡುವರು. ಸರಳ ಆರೋಗ್ಯ ನಿಯಮಗಳನ್ನೂ ಪಾಲಿಸದ ಸಮಾಜದ ನಡೆವಳಿಕೆಗಳು, ಆರೋಗ್ಯದ ವಿಚಾರವಾಗಿ ಉದಾಸೀನತೆ, ತಿಳಿಗೇಡಿತನ, ಕುರುಡು ನಂಬಿಕೆಗಳು, ಬಡತನ—ಇವೆಲ್ಲ ಉಷ್ಣವಲಯದ ರೋಗಿಗಳನ್ನೇ ಅಲ್ಲದೆ ಉಳಿದೆಲ್ಲವನ್ನೂ ಈಡಾಗಿಸುತ್ತವೆ. ಸಾವಿರಾರು ವರ್ಷಗಳಿಂದಲೂ ಭೂಮಿಯ ಮೇಲ್ಮೈ ಅಷ್ಟೇನೂ ಬದಲಾಗಿಲ್ಲ. ಒಂದೆಡೆಯ ಪ್ರಾಣಿ, ಸಸ್ಯಕೋಟಿಯೂ ಅಷ್ಟೇನೂ ಬದಲಾಯಿಸಿಲ್ಲ. ಬದಲಾವಣೆ ಆಗಿರುವುದೆಲ್ಲ ಜನರ ಸಮಾಜದ, ಹಣಕಾಸಿನ ಸ್ಥಿತಿಗಳಲ್ಲಿ ಮಾತ್ರ.

ಮೂಲಗಳನ್ನು ಗಮನಿಸಿದರೆ, ಉಷ್ಣವಲಯದ ರೋಗಗಳು ಮೂರು ಅಂಶಗಳಿಗೆ ಸಂಬಂಧಿಸಿವೆ ಎನ್ನಬಹುದು: ಸೋಂಕುವಾಹಕ, ಕೀಟವಾಹಕ, ಕೀಟಗಳು, ನೀರಿನ ಪೂರೈಕೆ, ಆಹಾರದ ಪೂರೈಕೆ. ಆದ್ದರಿಂದ ಉಷ್ಣವಲಯದ ವೈದ್ಯ ಎಂದರೆ ವೈದ್ಯಶಾಸ್ತ್ರದಲ್ಲಿ ಭೂಗೋಳಕ್ಕೂ ಅಲ್ಲಿನ ಹವಾಗುಣಕ್ಕೂ ಸಂಬಂಧಿಸದೆ, ಜನರ ಜೀವನಮಟ್ಟ, ಚೊಕ್ಕತನದ ತಿಳಿವಳಿಕೆ, ಪಾಲನೆಗಳಿಗೆ ಸಂಬಂಧಿಸಿರುವುದು.

ಉಷ್ಣತೆಯ ಪರಿಣಾಮಗಳು: ಸುಡುತ್ತಿರುವ ಬಿಸಿಲಿಗೊಡ್ಡಿದ ಚರ್ಮ ಬಣ್ಣಗೆಡುವುದು. ಚರ್ಮದಲ್ಲಿ ಕಾರಳ್ಳು (ವಾರ್ಟ್), ಚರ್ಮದುರಿತ (ಡರ್ಮಟೈಟಿಸ್), ಏಡಿಗಂತಿ (ಕ್ಯಾನ್ಸರ್) ಆಗಬಹುದು. ಮೂತ್ರಮಂಡಲದಲ್ಲಿ ಕಲ್ಲುಗಳು ಕೂಡಬಹುದು. ವಿಪರೀತ ಬಿಸಿಲಿನ ಝಳಕ್ಕೆ ಮೈಯೊಡ್ಡಿದರೆ ಸೂರ್ಯತಾಪಾಘಾತ (ಸನ್‌ಸ್ಟ್ರೋಕ್)ವಾಗಿ ಜ್ವರ ಬರಬಹುದು. ಬೆವರು ಸಾಲೆ (ಪ್ರಿಕ್ಲಿಹೀಟ್) ಎದ್ದು ಗುಳ್ಳೆಗಳಾಗಬಹುದು. ಹುಡುಗಿಯರು 12–13 ವಯಸ್ಸಿನವರಾಗುವ ಮೈನೆರೆಯುವರು.

ಮೊದಲೇ ವಿಷಕಾರಕಗಳು: ಕೆಲವು ಬಗೆಯ ಬೇಳೆಕಾಳುಗಳಿಂದ ತೊಗರಿಬೇಳೆ ವಿಷ (ಲ್ಯಾತಿರಿಸಂ) ಆಗುತ್ತದೆ. ದತ್ತೂರದಂಥ ವಿಷಕಾರಕ ಗಿಡಗಳಿಂದ ಅಪ್ಪಿತಪ್ಪಿ ವಿಷವೇರಿಕೆ ಆಗುವುದು, ವಿಷಜಂತುಗಳಾದ ನಾಗರ, ಕೊಳಕು ಮಂಡಲ ಮುಂತಾದ ಹಾವು, ಚೇಳು, ಜೇಡ, ವಿಷಪೂರಿತ ಮೀನು, ಜೇನುಹುಳು, ಜಿಗಣೆ ಮುಂತಾದುವುಗಳ ಕಡಿತಗಳು ಎಷ್ಟೋ ವೇಳೆ ಹಾನಿಕಾರಕ ಇಲ್ಲವೇ ಮಾರಕ.

ಸೋಂಕಿನ ರೋಗಗಳು: ಜನರ ಆಹಾರ ಪಾನೀಯಗಳಲ್ಲಿ ಎಚ್ಚರ, ಚೊಕ್ಕಟತನ ಇಲ್ಲವಾದರೆ, ಕಾಲರ, ವಿಷಮಶೀತಜ್ವರ (ಟೈಫಾಯ್ಡ್), ಆಮಶಂಕೆ, ಅತಿಸಾರ ಕಾಮಾಲೆಗಳ ತೆರನ ಸೋಂಕು ರೋಗಗಳು ರೋಗಿಗಳ ಮಲಮೂತ್ರಗಳಿಂದ ನೇರವಾಗೊ ಬಳಸಾಗೊ ತಿನ್ನುವ ಆಹಾರಗಳ ಮೂಲಕ ಅಂಟುತ್ತವೆ. ಮುಖ್ಯವಾಗಿ ನೊಣಗಳು, ಎಲ್ಲೆಂದರಲ್ಲಿ ಮಲಮೂತ್ರ ಮಾಡುವಿಕೆ, ಕೊಳಕು ನೀರು, ಮೈ ಕೈಕಾಲುಗಳ ಕೊಳಕುತನ, ರೋಗದಿಂದ ನರಳುವ ರೋಗಾಣುಗಳೂ ಮುಖ್ಯಕಾರಣಗಳು. ಏಕಾಣುಜೀವಿಗಳ ಸಂಪರ್ಕದಿಂದ ಕೆಟ್ಟಿರುವ ಆಹಾರ ಸೇವನೆಯಿಂದ ವಾಂತಿಭೇದಿಗಳಾಗಿ ಕೆಲವು ವೇಳೆ ಜೀವಕ್ಕೆ ಅಪಾಯವಾಗುವುದುಂಟು.

ರೋಗಿಗಳ ಹತ್ತಿರ ಇರುವವರಿಗೂ ಅಕ್ಕಪಕ್ಕದವರಿಗೂ ಹರಡುವ ರೋಗಗಳು ಸಿಡುಬು, ದಡಾರ, ಗಂಟಲಮಾರಿ (ಡಿಫ್ತೀರಿಯ) ಮಿದುಳುಪೊರೆಯುರಿತ (ಮೆನಿಂಜೈಟಿಸ್), ಮಂಗಬಾವು (ಮಂಪ್ಸ್), ಕ್ಷಯ, ಕುಷ್ಠ, ರವೆಗಣ್ಣು (ಟ್ರಾಕೋಮ), ಕಜ್ಜಿ, ತುರಿ, ಹುಳುಕಡ್ಡಿ (ರಿಂಗ್‌ವರ್ಮ್), ಮೇಹ ರೋಗಗಳು ಇವು ಕೊಳಚೆ ಪ್ರದೇಶಗಳಲ್ಲಿ ಸುಲಭವಾಗಿ ಹರಡುತ್ತ ಬೇರೂರುವುವು. ಕೆಲವು ವೇಳೆ ಸಾಂಕ್ರಾಮಿಕ ಮಟ್ಟಕ್ಕೇರುವುದೂ ಉಂಟು.

ಹಳದಿ ಜ್ವರ, ಡೆಂಗೆ, ಕಾಳಜ್ವರ (ಕಾಲಾ ಅಜ಼ಾರ್) ಮಲೇರಿಯ, ಎಳೆಕೀಟ ಬೇನೆ (ಫೈಲೇರಿಯಾಸಿಸ್) ಇವು ಸೊಳ್ಳೆಗಳ ಕಡಿತದಿಂದಲೂ ಉಣ್ಣೆ ಹೇನುಗಳು ಕಡಿಯುವುದರಿಂದಲೂ ಸೊಕ್ಕಿನ (ಟೈಫಸ್) ಜ್ವರವೂ ಕ್ಯಾಸನೂರು ಕಾಡಿನ ಜ್ವರವೂ ಬರುತ್ತವೆ.

ಸಣ್ಣ ಪ್ರಾಣಿಗಳಿಂದ ಹರಡುವ ರೋಗಗಳು ಹಲವಾರಿವೆ: ಇಲಿಗಳು ಪ್ಲೇಗನ್ನು ರೋಗಿಯಿಂದ ಚೆನ್ನಾಗಿರುವವರಿಗೆ ಹರಡುತ್ತದೆ. ಕುಂದಿಲಿ ಜ್ವರ (ಟ್ಯುಲರೀಮಿಯ) ಕುಂದಿಲಿಗಳಿಂದಲೂ ಪುರುಳಿಬೇನೆ (ಸಿಟ್ಟಕೋಸಿಸ್) ಗಿಣಿಗಳಿಂದಲೂ ಆಡು, ದನ, ಹಂದಿಗಳಿಂದ ಬ್ರೂಸೆಲ್ಲಬೇನೆಯೂ (ಬ್ರೂಸೆಲ್ಲ) ದನ ಕುರಿಗಳಿಂದ ನೆರಡಿ (ಆಂತ್ರಾಕ್ಸ್) ರೋಗವೂ ಹಂದಿಗಳಿಂದ ನೀರ್ದೊಟ್ಟು ಜಿಟ್ಟೆಯೂ (ಹೈಡ್ಯಾಟಿಡ್ ಸಿಸ್ಟ್) ಬಾವಲಿ, ನರಿ, ನಾಯಿ ಕಡಿತಗಳಿಂದ ನಾಯಿ ಹುಚ್ಚೂ (ಹೈಡ್ರೊಫೋಬಿಯ) ಬರುವುವು.

ರಕ್ತ ಕೊರೆ, ಆಹಾರ ಕೊರೆ: ಉಷ್ಣವಲಯದ ರಕ್ತಕೊರೆಗೆ (ಅನೀಮಿಯ) ಹಲವಾರು ಕಾರಣಗಳಿವೆ. ಬಡತನದೊಂದಿಗೆ ದೊಡ್ಡ ಕುಟುಂಬವಿದ್ದರೆ ಆಹಾರ ಸಾಕಷ್ಟು ಎಲ್ಲರಿಗೂ ಸಿಗದೆ, ಪುಷ್ಟಿಗೆಟ್ಟು, ಆಹಾರದಲ್ಲಿ ಇರಬೇಕಾದ ಕಬ್ಬಿಣ, ಪ್ರೋಟೀನುಗಳು, ಜೀವಾತುಗಳ ಕೊರೆಯಿಂದ ಬರಬಹುದು. ಯೋಜನೆಯಿಲ್ಲದ ಕುಟುಂಬ ವೃದ್ಧಿಯಿಂದ ಹೆಂಗಸು ಬಡಕಲಾಗಿ ಕ್ಷಯದ ತೆರನ ಮೇಹ ರೋಗಗಳಿಗೆ ಈಡಾಗುವಳು. ಕರುಳುಗಳಲ್ಲಿ ಕೊಕ್ಕೆ ಹುಳುಗಳು ಸೇರಿಕೊಂಡು ಗುಣಿತವಾದ ಮೇಲೆ ಒಳಗೇ ರಕ್ತ ಹೀರಿಬಿಡುವುದರಿಂದಲೂ ರಕ್ತ ಕೊರೆ ಆಗುವುದು ಸಾಮಾನ್ಯ. ರಕ್ತ ಕೊರೆಗೆ ಮಲೇರಿಯ ಒಂದು ಸಾಮಾನ್ಯ ಕಾರಣವಾಗಿತ್ತು.

ಪ್ರೋಟೀನುಗಳ, ಮುಖ್ಯವಾಗಿ ಪ್ರಾಣಿಜನ್ಯ ಪ್ರೋಟೀನುಗಳ ಕೊರೆಯಿಂದ ಬಡ ಕೂಸುಗಳಲ್ಲಿ ಕ್ವಾಷಿಯಾರ್ಕರ್ ಬರುತ್ತದೆ. ದೊಡ್ಡವರಲ್ಲಿ ಉಷ್ಣವಲಯದ ಭೇದಿ (ಸ್ಪ್ರೂ), ಈಲಿಯ ಅರಿಶಿನಾರಿಗೆ (ಲಿವರ್ ಸಿರೋಸಿಸ್) ಇವು ಹೆಚ್ಚು. ಜೀವಾತುಗಳ ಮಿತಿಮೀರಿದ ಕೊರೆಯಿಂದೇಳುವ ಕಾಯಿಲೆಗಳೆಲ್ಲ ಉಷ್ಣವಲಯದಲ್ಲಿ ಅಪಾರ. ಬಡವರಲ್ಲೇ ಅಲ್ಲದೆ ಬಲ್ಲಿದರಲ್ಲೂ ಈ ಕೊರೆಗಳು ಕಾಣಬರುತ್ತವೆ. ಬಡಬಡಕಲು (ಬೆರಿಬೆರಿ), ಕಾರ್ದೊಗಲು (ಪೆಲ್ಲಾಗ್ರ), ಕೈಕಾಲು ಉರಿ, ಬಾಯಿಹುಣ್ಣು, ನರ ದುರ್ಬಲತೆಗಳೂ ನೀಚಗೊರೆ (ಸ್ಕರ್ವಿ), ಎಲುಮುರುಟು (ರಿಕೆಟ್ಸ್), ಪಾರಪಟಲ ಮೆತುವೆ (ಕೆರಾಟೊಮೆಲೇಸಿಯ) ಇವು ಜೀವಾತುಗಳ ಕೊರೆಯಿಂದಾದ ಕಾಯಿಲೆಗಳು. ಸುಣ್ಣಾಂಶದ ಕೊರೆಯಿಂದ ಎಲುಕಳಲು (ಆಸ್ಟಿಯೊಮೇಲೇಸಿಯ) ಬಸುರಿ, ಬಾಣಂತಿಯರಲ್ಲಿ ಹೆಚ್ಚು.

ಪ್ರಪಂಚದ ಉಳಿದೆಡೆಗಳಲ್ಲಿ ಕಾಣಬರುವ ಗುಂಡಿಗೆ, ಕೀಲುರೋಗಗಳು ರಕ್ತನಾಳ ಬೇನೆಗಳು, ರಕ್ತದ ಒತ್ತಡವೇರಿಕೆ, ಸಿಹಿಮೂತ್ರ, ಪುಪ್ಪುಸದ ಕಾಯಿಲೆಗಳು, ನರಗಳ ಬೇನೆ, ಏಡಿಗಂತಿಗಳು, ಇಲ್ಲೂ ಇವೆ.
(ಆರ್.ಡಿ.ಎಂ.)

**ಉಷ್ಣವಲಯದ ವ್ಯವಸಾಯ**: ಕರ್ಕಾಟಕ ಸಂಕ್ರಾಂತಿ (ಟ್ರಾಪಿಕಲ್ ಅಗ್ರಿಕಲ್ಚರ್) ವೃತ್ತಕ್ಕೂ ಮಕರ ಸಂಕ್ರಾಂತಿ ವೃತ್ತಕ್ಕೂ ನಡುವೆ ಇರುವ ಪ್ರದೇಶವಾದ ಉಷ್ಣವಲಯದಲ್ಲಿ ನಡೆಯುತ್ತಿರುವ ಎಲ್ಲ ಬಗೆಯ ಕೃಷಿಕಾರ್ಯ, ಪಶುಪೋಷಣೆ (ಟ್ರಾಪಿಕಲ್ ಅಗ್ರಿಕಲ್ಚರ್) ಭೂಮಿಯ ಒಟ್ಟು ನೆಲದ ವಿಸ್ತೀರ್ಣದಲ್ಲಿ ಸುಮಾರು ಕಾಲು ಭಾಗ ಉಷ್ಣವಲಯದಲ್ಲಿದೆ. ಇಡೀ ವಿಶ್ವದ ಪ್ರಜಾಸಂಖ್ಯೆಯ ಮೂರರಲ್ಲೊಂದು ಭಾಗ ವಾಸಿಸುವುದು ಈ ವಲಯದಲ್ಲಿ. ಈ ಜನರಲ್ಲಿ ಬಹುಸಂಖ್ಯಾತರಿಗೆ ಬೇಸಾಯದಿಂದಲೇ ಜೀವನ. ಆದ್ದರಿಂದ ಉಷ್ಣವಲಯದ ವ್ಯವಸಾಯದ ಪ್ರಾಮುಖ್ಯ ಎಷ್ಟೆಂದು ಹೇಳಬೇಕಾಗೇ ಇಲ್ಲ.

ಉಷ್ಣವಲಯದ ವಾಯುಗುಣವನ್ನು ಎಷ್ಟು ಖಚಿತವಾಗಿ ಗುರುತಿಸಬಹುದೋ ಅಷ್ಟೇ ಖಚಿತವಾಗಿ ಇಲ್ಲಿನ ಬೇಸಾಯವನ್ನೂ ಗುರುತಿಸುವುದು ಸಾಧ್ಯ. ಉಷ್ಣವಲಯದ ಬೇಸಾಯ ಪ್ರದೇಶಕ್ಕೂ ಅಧಿಕ ಅಕ್ಷಾಂಶದ ಪ್ರದೇಶಕ್ಕೂ ನಡುವೆ ಸಾಮಾನ್ಯವಾಗಿ ಪರ್ವತಶ್ರೇಣಿಗಳೂ ಮರುಭೂಮಿಗಳೂ ಅಡ್ಡ ಹಾಯ್ದಿವೆಯಾದ್ದರಿಂದ ಈ ಬೇಸಾಯ ಪ್ರದೇಶ ಇತರ ವಾಯುಗುಣಗಳ ವ್ಯವಸಾಯ ಪ್ರದೇಶಗಳಿಗಿಂತ ಪ್ರತ್ಯೇಕವಾಗಿದೆ. ಆದರೆ ಬ್ರೆಜ಼ಿಲ್, ಭಾರತ, ಚೀನಗಳಲ್ಲಿ ಈ ಬಗೆಯ ಪ್ರತ್ಯೇಕತೆ ಇಲ್ಲವಾದ್ದರಿಂದ ಅಲ್ಲಿ ಇದು ಎಲ್ಲಿ ಕೊನೆಗೊಳ್ಳುವುದೆಂದು ನಿಷ್ಕೃಷ್ಟವಾಗಿ ನಿರ್ಣಯಿಸುವುದು ಕಷ್ಟಸಾಧ್ಯ. ಉಷ್ಣವಲಯದ ಬೆಳೆಗಳೂ ಬೇಸಾಯ ಪದ್ಧತಿಗಳೂ ಈ ವಲಯದ ಹೊರಗಿನ ಪ್ರದೇಶಗಳಲ್ಲೂ ಅಲ್ಲಲ್ಲಿ ಕಂಡುಬರುವುದುಂಟು.

ಉಷ್ಣವಲಯದ ಹವಾಗುಣ ಪ್ರಾಣಿಗಳಿಗೂ ಸಸ್ಯಗಳಿಗೂ ಬಲು ಉತ್ತೇಜಕ. ಇವು ಇಲ್ಲಿ ವರ್ಣವೈವಿಧ್ಯಪೂರಿತವಾಗಿವೆ. ಆದರೆ ಒಂದೊಂದು ಪ್ರದೇಶದಲ್ಲೂ ಹಲವಾರು ಅಥವಾ ಎಲ್ಲ ಬಗೆಯ ಬೆಳೆ ತೆಗೆಯುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಅನುಗುಣವಾದ ಪರಿಸರ (ಎನ್‍ವಿರಾನ್‍ಮೆಂಟ್) ಇಲ್ಲಿ ಕಂಡುಬರುವುದಿಲ್ಲ. ಉಷ್ಣತೆಯೇನೋ ಇಲ್ಲಿ ಅನುಕೂಲಕರ. ಎತ್ತರ ಪ್ರದೇಶಗಳಲ್ಲಿ ಸಮಶೀತೋಷ್ಣವಲಯದ ಫಸಲು ತೆಗೆಯಬಹುದು. ಏನೂ ಬೆಳೆಯದಷ್ಟು ಚಳಿಯಿರುವ ಎತ್ತರ ಪ್ರದೇಶ ಬಲು ಕಡಿಮೆ. ಮಾರಕ ಹಿಮ ಬೀಳುವ ಸ್ಥಳಗಳೂ ಅತ್ಯಲ್ಪ.

ಉಷ್ಣವಲಯ ಪ್ರದೇಶದಲ್ಲಿ ವರ್ಷಪೂರ್ತಿ ಉಷ್ಣತೆಯ ವ್ಯತ್ಯಾಸ ಕಡಿಮೆ. ಹಗಲು ರಾತ್ರಿಗಳ ಉಷ್ಣದ ಅಂತರ ಕೆಲವೆಡೆಗಳಲ್ಲಿ ಹೆಚ್ಚು. ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಮಳೆಯ ಹೊಡೆತದಿಂದ ನೆಲದ ಲವಣಾಂಶ ಕೊಚ್ಚಿ ಹೋಗಿರುವುದುಂಟು. ಮಳೆಯ ನೀರಿನಿಂದ ಎಲೆ, ಮೊದಲಾದವು ಕೊಳೆತು ಗಿಡದ ಬೇರಿಗೆ, ಸೇರುತ್ತದೆ. ಅನೇಕ ಕಡೆಗಳಲ್ಲಿ ವರ್ಷವೆಲ್ಲ ಮಳೆ. ಹೆಚ್ಚಾಗಿ ಮಳೆ ಬೀಳುವಲ್ಲಿ ಗಿಡಗಂಟೆ ಸೊಂಪಾಗಿ ಬೆಳೆದಿರುವುದುಂಟು. ಆದರೆ ಬೇಸಾಯಕ್ಕೆ ಅನುಕೂಲ ಕಡಿಮೆ.

ಅಧಿಕ ಮಳೆ ಮತ್ತು ಹೆಚ್ಚು ಉಷ್ಣತೆಯಿರುವುದರಿಂದ ಸಸ್ಯಗಳು ವರ್ಷವಿಡೀ ಬೆಳೆಯುತ್ತಲೇ ಇರಲು ಅನುಕೂಲವಿದೆ. ಅಂಥ ಪ್ರದೇಶಗಳಲ್ಲಿ ದಟ್ಟಕಾಡುಗಳು ಬೆಳೆಯುವುದು ಸಹಜ. ಬೆಳೆಸಿನ ತೀವ್ರತೆ ಸಮಶೀತೋಷ್ಣವಲಯಕ್ಕಿಂತ ಹೆಚ್ಚು. ಇಲ್ಲಿ ನೆಲದ ಮೇಲೆ ಹರಡುವ ಎಲೆ ಕಸಕಡ್ಡಿಗಳು ಬಹುಕಾಲ ಹಾಗೇ ಉಳಿಯದೆ ಸೂಕ್ಷ್ಮಾಣುಗಳ ಸಹಾಯದಿಂದ ಸಸ್ಯ ಆಹಾರಾಂಶಗಳಾಗಿ ಮಾರ್ಪಾಟಾಗಿ, ಅದೇ ಸಸ್ಯಗಳ ಬೆಳವಣಿಗೆಗೆ ಪೋಷಕವಾಗುತ್ತವೆ. ಇದರಿಂದಲೇ ಫಲವತ್ತು ಕ್ಷಯಿಸದೆ ಹಾಗೇ ಉಳಿದಿರುವಂತೆ ತೋರಿ, ಅಲ್ಲಿಯ ಭೂಪ್ರದೇಶ ಅತ್ಯಂತ ಫಲವತ್ತೆಂಬ ಭ್ರಮೆಯಾಗುತ್ತದೆ. ಆದರೆ ಅದು ನಿಜವಲ್ಲ, ಫಲವತ್ತು ದಟ್ಟವಾಗಿ ಮರ ಗಿಡಗಳನ್ನು ಬೆಳೆಸಿದರೆ ಮಾತ್ರ ಸಾಧ್ಯ ಅವನ್ನು ಕಡಿದು ನಾಶಪಡಿಸಿದಲ್ಲಿ ಗೊಬ್ಬರವಾಗಲು ಸಾಕಾದಷ್ಟು ಸಾವಯವ ಸಾಮಗ್ರಿ ದೊರಕದೆ ಯಾವುದೇ ಬೆಳೆಸು ಕುಂಠಿತವಾಗುತ್ತದೆ. ಆದ್ದರಿಂದಲೇ ಅನೇಕ ವ್ಯವಸಾಯ ಯೋಜನೆಗಳು ಇಲ್ಲಿ ನಿಷ್ಫಲವಾಗುತ್ತವೆ. ಅತೀವ ಮಳೆ ಮತ್ತು ಉಷ್ಣತೆ, ಕೀಟ ಮತ್ತಿತರ ಉಪದ್ರವಕಾರಿಗಳ ವೃದ್ಧಿಗೆ ಅನುಕೂಲವಾಗಿ ಜನ ಮತ್ತು ಜಾನುವಾರುಗಳಿಗೆ ಹೆಚ್ಚಿನ ತೊಂದರೆಯಾಗುತ್ತದೆ.

ಉಷ್ಣವಲಯದಲ್ಲಿ ಜ್ವಾಲಾಮುಖಿಗಳಿಂದ ಉತ್ಪನ್ನವಾದ ಜಾವಾದ ಕೆಲಭಾಗ, ಫಿಲಿಪೀನ್ಸ್, ಮಧ್ಯ ಅಮೆರಿಕ ಮುಂತಾದೆಡೆ ಅಡಿಯಲ್ಲಿ ಲಾವಾರಸದ ಕಲ್ಲುಗಳಿಂದ ಮೇಲಿನ ಪೋಷಕಾಂಶಗಳು ತೂರಿ ಹೋಗದೆ ಫಲವತ್ತಾಗಿ ಉಳಿದು ಉತ್ತಮ ವ್ಯವಸಾಯ ಯೋಗ್ಯ ಪ್ರದೇಶಗಳಾಗಿವೆ. ಅಲ್ಲದೆ ಅದೇ ಪ್ರದೇಶದಲ್ಲಿ ಎತ್ತರಕ್ಕೆ ಹೋದಂತೆ ವಾಯುಗುಣ ಮಾರ್ಪಟ್ಟು ಸಮಶೀತೋಷ್ಣವಾಗಿ, ಉಷ್ಣವಲಯದಲ್ಲಿದ್ದರೂ ಸಮಶೀತೋಷ್ಣವಲಯಕ್ಕೆ ಒಗ್ಗುವ ಸಸ್ಯಗಳೇ ಬೆಳೆಯುತ್ತವೆ. ಆದರೆ ಅಲ್ಲಿನ ಹಗಲು ರಾತ್ರಿಗಳ ಹವಾಗುಣಗಳ ಅಂತರ ಹೆಚ್ಚಾಗಿರುವುದರಿಂದ ಸ್ವಲ್ಪ ಮಾರ್ಪಾಟು ಹೊಂದಿರುತ್ತವೆ.

ಇದರಿಂದಲೇ ಈ ಪ್ರದೇಶದಲ್ಲಿ ಬೆಳೆಯ ವೈವಿಧ್ಯ ಅಧಿಕ. ತೆಂಗು, ಅಡಿಕೆ, ಕೋಕೋ, ಕಬ್ಬು, ಸಣಬು, ಮನಿಲಾ ಮತ್ತು ಇತರ ನಾರುಗಳು, ವಿವಿಧ ಔಷಧ ಸಸ್ಯಗಳು, ಕೀಟನಾಶಕ ಗಿಡಗಳು ಮೆಣಸು, ಲವಂಗ, ಜಾಯಿಕಾಯಿ, ದಾಲ್ಚಿನ್ನಿ ಮುಂತಾದ ಸಂಬಾರ ಪದಾರ್ಥಗಳೂ, ವಿವಿಧ ಎಣ್ಣೆ ಉತ್ಪಾದಕ ವೃಕ್ಷ ಮತ್ತು ಸಸ್ಯಗಳೂ ಬತ್ತ ಮುಂತಾದ ಧಾನ್ಯಗಳೂ ವಿಪುಲವಾಗಿ ಬೆಳೆಯುತ್ತವೆ. ಮನೆಗೆ ಉಪಯುಕ್ತವಾದ ವಿವಿಧ ಜಾತಿ ಮರಗಳು–ಬೀಟೆ, ಸಾಗವಾನಿ, ಮಹಾಗನಿ–ಇಲ್ಲಿ ಹೆಚ್ಚು. ರಬ್ಬರ್, ಗಟಪರ್ಚ, ಡೆಕೆಲ್ ಅಂಬು, ರಾಳ, ಅರಗು ಮುಂತಾದವು ಇಲ್ಲಿನ ಮುಖ್ಯ ಉತ್ಪನ್ನ ಪರಂಗಿಗಳು, ಬಾಳೆ, ಅನಾನಾಸ್, ದೂರಿಯಾನ್, ಮಾಂಗೊಸ್ಟೀನ್, ಮಾವು, ಹಲಸು ಮುಂತಾದ ಬಹು ಜನಪ್ರಿಯ ಹಣ್ಣುಗಳ ವೈವಿಧ್ಯ ಉಷ್ಣವಲಯದಲ್ಲಿ ಮಾತ್ರ ಸಾಧ್ಯ; ಹಾಗೂ ಅನುಕೂಲತೆ ಏರ್ಪಡಿಸಿದಲ್ಲಿ ಹತ್ತಿ, ಮುಸುಕಿನ ಜೋಳ, ತಂಬಾಕು, ಸಿಸಾಲ ನಾರು ಇತ್ಯಾದಿ ಬಹು ಸಮರ್ಪಕವಾಗಿ ಬೆಳೆಯುತ್ತವೆ.

ಇಲ್ಲಿನ ಹಿಂದುಳಿದ ವ್ಯವಸಾಯ ಮಾರ್ಗವೆಂದರೆ ಒಂದು ಪ್ರದೇಶವನ್ನು ಗುರುತಿಸಿ ಅಲ್ಲಿ ಕಾಡು ಕಡಿದು ಒಣಗಿಸಿ ಸುಟ್ಟು, ಮಳೆ ಬಂದಾಗ ಮೇಲ್ಮಣ್ಣನ್ನು ಕೆದಕಿ ಬೆಳೆ ಇಡುವುದು. ಇಲ್ಲಿನ ಬೆಳೆ ಸಾಮಾನ್ಯವಾಗಿ ನಾರು ಸಂಬಂಧವಾದದ್ದು ಅಥವಾ ಹೊಗೆಸೊಪ್ಪು. ಕಡಿದಾದ ಕಣಿವೆಗಳಲ್ಲೂ ಬದು ಹಾಕಿ ಇದೇ ಮಾರ್ಗ ಅನುಸರಿಸುವರು. ಇನ್ನೂ ಬೇರು ಮುಂತಾದವು ಇರುವುದರಿಂದ ನೇಗಿಲ ಉಪಯುಕ್ತತೆ ಸಾಧ್ಯವಿಲ್ಲ. ಆದ್ದರಿಂದ ಎಲ್ಲಿ ಜನ ಮತ್ತು ಭೂಪ್ರದೇಶದ ಅಭಾವವಿಲ್ಲವೋ ಅಲ್ಲಿ ಮಾತ್ರ ಈ ಪದ್ಧತಿ ಅನುಸರಿಸಲು ಸಾಧ್ಯ. ಒಂದೆರಡು ಬೆಳೆ ತೆಗೆದು ಫಲವತ್ತು ಕಡಿಮೆಯಾದೊಡನೆ ಅಲ್ಲಿ ಪುನಃ ಕಾಡು ಎಬ್ಬಿಸಿ, ಬೇರೊಂದು ಸ್ಥಳವನ್ನು ಆರಿಸಿ ಅದೇ ಮಾರ್ಗವನ್ನನುಸರಿಸುತ್ತಾರೆ. ಎರಡು ಮೂರು ವರ್ಷಕ್ಕಿಂತ ದೀರ್ಘಕಾಲ ಅದನ್ನು ಅನುಸರಿಸಬೇಕಾದಲ್ಲಿ ಗೊಬ್ಬರ ಒದಗಿಸಬೇಕಾಗುತ್ತದೆ.

ಕಡಿಮೆ ಮಳೆ ಬೀಳುವ–ವರ್ಷದಲ್ಲಿ ಸ್ವಲ್ಪಕಾಲ ಒಣಹವೆ ಇರುವ–ಕಡೆಗಳಲ್ಲೂ ಫಲವತ್ತಿನ ಅಭಾವ, ಕ್ರಿಮಿಕೀಟ ಮುಂತಾದ ಎಲ್ಲ ಪ್ರತಿಕೂಲಗಳೂ ಇವೆ. ಜತೆಗೆ ನೀರಾವರಿಯ ಸೌಲಭ್ಯವಿಲ್ಲದೆ ವರ್ಷವೆಲ್ಲ ಬೆಳೆಯ ಕೆಲಸ ನಡೆಸುವುದು ಇಲ್ಲಿ ಸಾಧ್ಯವಿಲ್ಲ. ಪಶುಸಂಪತ್ತಿನ ವೃದ್ಧಿಗೆ ಅಡಚಣೆಯೂ ಅನೇಕ ರೋಗಗಳ ಹಾವಳಿಯೂ ಇಲ್ಲುಂಟು.

ಉಷ್ಣವಲಯದಲ್ಲಿ ಅನೇಕ ಪ್ರಾಣಿಗಳನ್ನು ಸಾಕುತ್ತಾರೆ. ಅನೇಕ ಕಡೆಗಳಲ್ಲಿ ಹಂದಿಯೇ ಊರಿನ ಜಾಡಮಾಲಿ. ಕೋಳಿ, ಆಡು, ಕುರಿ(ಎತ್ತರದ ನೆಲದಲ್ಲಿ ಕಡಿಮೆ ಮಳೆ ಬೀಳುವೆಡೆಯಲ್ಲಿ), ಹಸು, ಎಮ್ಮೆ ಇವು ಸಾಮಾನ್ಯ. ಕುದುರೆಯನ್ನು ಬೇಸಾಯಕ್ಕೆ ಉಪಯೋಗಿಸುವುದು ಅಮೆರಿಕ ಹಾಗೂ ಮುಸ್ಲಿಂ ರಾಷ್ಟ್ರಗಳಲ್ಲಿ ಮಾತ್ರ.

ನೀರು ಹರಿಯುವ ತಗ್ಗು ಪ್ರದೇಶದಲ್ಲಿ ಬತ್ತ ಬೆಳೆಯುತ್ತಾರೆ. ಮೇಲಿನಿಂದ ಹರಿದು ಬರುವ ನೀರಿನಲ್ಲೂ ಆಹಾರಾಂಶವಿದ್ದು ಬತ್ತ ಚೆನ್ನಾಗಿ ಬೆಳೆಯುತ್ತದೆ. ಇದಕ್ಕೆ ಹೆಚ್ಚಿನ ಗೊಬ್ಬರವನ್ನೂ ಒದಗಿಸಲಾಗುತ್ತದೆ. ಸ್ವಲ್ಪ ಇಳಿಜಾರಾದ ವಿಸ್ತಾರ ಪ್ರದೇಶಗಳಲ್ಲಿ ಹೆಚ್ಚಾಗಿ ಮುಸುಕಿನ ಜೋಳ, ಗೋಧಿ, ಜೋಳ, ಹತ್ತಿ, ಮುಂತಾದುವನ್ನೂ ಬೆಳೆಯಲಾಗುತ್ತದೆ. ಇಲ್ಲಿ ಪೋಟ ನೇಗಿಲಿನ ಬಳಕೆಯಿದೆ.

ಮೆಣಸು, ಬಾಳೆ, ಮರಗೆಣಸು, ಅನಾನಾಸ್ ಮುಂತಾದವನ್ನು ಸಾಂದ್ರ ಬೇಸಾಯವನ್ನನುಸರಿಸಿ ತೋಟದ ಬೆಳೆಯಾಗಿ ಬೆಳೆಯಲಾಗುತ್ತದೆ. ಏನೇ ಪ್ರತಿಕೂಲಗಳಿದ್ದರೂ ಉಷ್ಣ ಹವೆಯಲ್ಲಿ ವ್ಯವಸಾಯವೇ ಪ್ರಧಾನ. ನೆಲ, ಜಲ, ಉಷ್ಣತೆ–ಎಲ್ಲವೂ ಹದವಾಗಿರುವಲ್ಲಿ ಸಾಂದ್ರ ಬೇಸಾಯ ಸಾಮಾನ್ಯ. ಅಂಥಲ್ಲಿ ಜನಸಂಖ್ಯೆಯ ಒತ್ತಡ ಹೆಚ್ಚು, ಏಷ್ಯದ ಅನೇಕ ನದೀಬಯಲುಗಳು ಪುರಾತನ ನಾಗರೀಕತೆಗಳ ತೊಟ್ಟಿಲುಗಳು. (ಎಂ.)

**ಉಷ್ಣವಿಭಜನೆ ಮತ್ತು ಉಷ್ಣವಿಯೋಜನೆ:** ಎರಡು ಬಗೆಯ ರಾಸಾಯನಿಕ ಬದಲಾವಣೆಗಳು (ಥರ್ಮಲ್ ಡೀಕಾಂಪೊಸಿಷನ್ ಮತ್ತು ಥರ್ಮಲ್ ಡಿಸೋಸಿಯೇಷನ್). ಒಂದು ನಿರ್ದಿಷ್ಟ ರಾಸಾಯನಿಕ ಸಂಯುಕ್ತವನ್ನು ಕಾಯಿಸಿದಾಗ ಅದು ವಿಭಜಿಸಿ ಎರಡು ಅಥವಾ ಅನೇಕ ಧಾತು ಅಥವಾ ಸಂಯುಕ್ತಗಳನ್ನು ಉತ್ಪತ್ತಿ ಮಾಡಿದರೆ ಆ ಕ್ರಿಯೆಗೆ ಉಷ್ಣವಿಭಜನೆ ಎಂದು ಹೆಸರು. ಇದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು.

$2HgO \rightarrow 2Hg + O_2$

$NH_4\ NO_3 \rightarrow N_2O + 2H_2O$

$(NH_4)_2\ Cr_2O_7 \rightarrow N_2 + Cr_2O_3 + 4H_2O$

ಇತ್ಯಾದಿ

ಉಷ್ಣದ ನೆರವಿನಿಂದ ಆಗುವ ಈ ಕ್ರಿಯೆ ವಿಪರ್ಯಯವಾಗಬಲ್ಲುದಾದರೆ ಅಂದರೆ ಉತ್ಪನ್ನ ಪದಾರ್ಥಗಳು ಕಡಿಮೆ ಉಷ್ಣದಲ್ಲಿ ಪುನಃ ಸಂಯೋಗ ಹೊಂದಿ ಮೂಲ ಪದಾರ್ಥವನ್ನು ಉತ್ಪತ್ತಿಮಾಡುವುದಾದರೆ ಆ ಕ್ರಿಯೆಗೆ ಉಷ್ಣವಿಯೋಜನೆ ಎಂದು ಹೆಸರು. ಇದಕ್ಕೆ ಕೆಲವು ನಿದರ್ಶನಗಳು——

$$2HI \underset{}{\overset{\text{ಉಷ್ಣ}}{\rightleftarrows}} H_2 + I_2$$

$$PCl_5 \overset{\text{ಉಷ್ಣ}}{\rightleftarrows} PCl_3 + Cl_2$$

$$NH_4Cl \overset{\text{ಉಷ್ಣ}}{\rightleftarrows} NH_3 + HCl$$

ಇತ್ಯಾದಿ (ಜೆ.ಆರ್.ಎಲ್.)

**ಉಷ್ಣಸಂಸ್ಕರಣ:** ಲೋಹ ಮತ್ತು ಮಿಶ್ರಲೋಹಗಳಲ್ಲಿ ಯುಕ್ತ ಗುಣಗಳನ್ನು ಪಡೆಯಲು ಅವುಗಳನ್ನು ಕಾಯಿಸುವ ಮತ್ತು ತಣಿಸುವ ವಿಧಿ (ಹೀಟ್ ಟ್ರೀಟ್‌ಮೆಂಟ್). ಅಧಿಕ ತಾಪಮಾನಕ್ಕೆ ಕಾಯಿಸಿ ನಿರ್ದಿಷ್ಟ ದರದಲ್ಲಿ ತಣಿಸುವ ಈ ಕ್ರಮದಿಂದ ಲೋಹಗಳ ಮತ್ತು ಮಿಶ್ರಲೋಹಗಳ ಉಪಯುಕ್ತವಾದ ಗುಣಲಕ್ಷಣಗಳನ್ನು ಉತ್ತಮಗೊಳಿಸಬಹುದು. ಕಾಯಿಸುವ ತಾಪಮಾನದ ಮಟ್ಟ ಮತ್ತು ತಣಿಸುವ ದರಗಳು ವಸ್ತುವಿನ ರಚನೆ ಮತ್ತು ನಾವು ಅಪೇಕ್ಷಿಸುವ ಲಕ್ಷಣಗಳನ್ನು ಅವಲಂಬಿಸಿವೆ. ವಿವಿಧ ಉಷ್ಣತಾ ಚಕ್ರಗಳನ್ನು ಬಳಸಿಕೊಳ್ಳುವ ಮತ್ತು ವ್ಯಾಪಾರ ದೃಷ್ಟಿಯಿಂದ ಪ್ರಧಾನವಾಗಿರುವ ಉಷ್ಣಸಂಸ್ಕರಣ ವಿಧಾನಗಳ ಹೆಸರು ಹೀಗಿವೆ: (a) ಹದಮಾಡುವಿಕೆ (ಅನೀಲಿಂಗ್), (b) ಸಹಜಸ್ಥಿತಿಗೆ ತರುವಿಕೆ (ನಾರ್ಮಲೈಸಿಂಗ್), (c) ಅದ್ದಿ ತಣಿಸುವಿಕೆ (ಕ್ವೆಂಚಿಂಗ್). (d) ಗಡಸು ಮಾಡುವಿಕೆ (ಹಾರ್ಡನಿಂಗ್) (e) ತೀಕ್ಷ್ಣತೆ ಕಡಿಮೆ ಮಾಡುವಿಕೆ (ಟೆಂಪರಿಂಗ್) (f)ಇಂಗಾಲ ಅಥವ ಇಂಗಾಲ ಸಂಯುಕ್ತ ಪೂರಣ (ಕಾರ್ಬೊರೈಸಿಂಗ್), (g) ಪೊರೆ ಗಡಸು ಮಾಡುವಿಕೆ (ಕೇಸ್ ಹಾರ್ಡನಿಂಗ್).

ಹದಮಾಡುವಿಕೆ: ಹದಮಾಡುವ ತಾಪಮಾನದಲ್ಲಿ ವಸ್ತುವನ್ನು ಸ್ವಲ್ಪ ಹೊತ್ತು ಇಟ್ಟು ನಿಧಾನವಾಗಿ ತಣಿಸುವ (ಕುಲುಮೆಯಲ್ಲಿ ತಣಿಸುವ) ಉಷ್ಣಸಂಸ್ಕರಣ ಕ್ರಿಯೆ. ತಾಪಮಾನದ ಮಟ್ಟ ಮತ್ತು ತಣಿಸುವ ದರ ಇವು ನಾವು ತೆಗೆದುಕೊಂಡಿರುವ ವಸ್ತು ಮತ್ತು ನಮ್ಮ ಉದ್ದೇಶ ಇವನ್ನು ಅವಲಂಬಿಸಿವೆ. ವಸ್ತುವನ್ನು ಸ್ವಲ್ಪ ಕಾಯಿಸುವಷ್ಟರಲ್ಲೇ ಅದರಲ್ಲಿ ಸಮರೂಪತ್ವ (ಹೊಮೊಜಿನೀಇಟಿ) ಬರುವ ಹಾಗೆ ಉಷ್ಣತೆಯನ್ನು ಆರಿಸಲಾಗುವುದು. ಎರಕಗಳಲ್ಲಿ ವೃಕ್ಷಾಕೃತಿ ರಚನೆಗಳ (ಡೆಂಡ್ರೈಟಿಕ್ ಸ್ಟ್ರಕ್ಚರ್ಸ್) ತೊಲಗಿಸುವುದಕ್ಕೂ ಉತ್ತಮಗೊಂಡ ಯಾಂತ್ರಿಕ ಲಕ್ಷಣಗಳುಳ್ಳ ಸಮರೂಪ ಸಮ ಅಕ್ಷೀಯ ರಚನೆಯನ್ನು ಕಲ್ಪಿಸುವುದಕ್ಕೂ ಇಂಥ ಹದಮಾಡುವಿಕೆಯನ್ನು ಉಪಯೋಗಿಸಲಾಗುವುದು. ಹದಮಾಡುವಿಕೆಯಿಂದ ಕೆಳಗಿನವುಗಳನ್ನು ಸಾಧಿಸಬಹುದು: (1) ಎರಕ ಹೊಯ್ಯುವುದರಿಂದ ಹಿಂದಿನ ಉಷ್ಣಸಂಸ್ಕರಣಗಳಿಂದ ಮತ್ತು ಶೀತ ಉಷ್ಣದ ಪರಿಣಾಮವಾಗಿ ಉಂಟಾಗುವ ಒಳಗಿನ ಒತ್ತಡಗಳನ್ನು ತೊಲಗಿಸುವಿಕೆ. (2) ಸೂಕ್ತವಾದ ಪರಮಾಣು ರಚನೆಗಳನ್ನು ಕಲ್ಪಿಸುವುದರಿಂದ ಶೀತದಲ್ಲಿ ಕೆಲಸ ಮಾಡಲ್ಪಟ್ಟ ಲೋಹ ಮತ್ತು ಮಿಶ್ರಲೋಹಗಳ ಸುಲಭ ನಮ್ಯತೆಯನ್ನು (ಮ್ಯಾಲಿಯೆಬಿಲಿಟಿ) ಉತ್ತಮಗೊಳಿಸುವುದು.

ಸಹಜಸ್ಥಿತಿಗೆ ತರುವಿಕೆ: ಹದಮಾಡುವಿಕೆಯ ಕ್ರಿಯೆಯಲ್ಲಿ ತಣಿಸುವ ದರವನ್ನು ಏರಿಸಿ ವಸ್ತುವಿನ ಕಣಗಳ ಗಾತ್ರವನ್ನು ಸುಧಾರಿಸುವುದು. ರಚನೆಯನ್ನು ಹೆಚ್ಚು ಸಮರೂಪವಾಗಿ ಮಾಡುವುದು ಮತ್ತು ಎರಕ ಹೊಯ್ಯುವುದರಿಂದಲೂ ಎಂದಿನ ಕೆಲಸದ ಆಚರಣೆಯಿಂದಲೂ ಲೋಹದಲ್ಲಿ ಉಂಟಾದ ತ್ರಾಸವನ್ನು ತೊಲಗಿಸುವುದು. ಸೂಕ್ತವಾದ ತಾಪಮಾನಕ್ಕೆ ಕಾಯಿಸಿ, ಗಾಳಿಯಲ್ಲಿ ತಣಿಸುವ ಈ ಕಾರ್ಯಾಚರಣೆಯಿಂದ ಉತ್ತಮವಾದ ಯಾಂತ್ರಿಕ ಲಕ್ಷಣಗಳು ಉಂಟಾಗುವುವು.

ಅದ್ದಿ ತಣಿಸುವಿಕೆ: ಅಧಿಕ ತಾಪಮಾನಕ್ಕೆ ಕಾಯಿಸಿ ತ್ವರಿತವಾಗಿ ತಣಿಸಲು ದ್ರವ ಮಾಧ್ಯಮದಲ್ಲಿ ಅದ್ದುವ ವಿಧಾನ. ತಣಿಸಲು ಅನಿಲ ಮಾಧ್ಯಮವನ್ನೂ ಬಳಸಬಹುದು. ಇಂಥ ಮಾಧ್ಯಮಕ್ಕೆ ಅಧಿಕ ಗ್ರಾಹ್ಯೋಷ್ಣ ಮತ್ತು ಉಷ್ಣ ವಾಹಕತ್ವ ಇರಬೇಕು. ತಣಿಯುವುದರ ಈ ಗುಣಗಳ ಮೇಲೆ ಅವಲಂಬಿಸಿದೆ. ದ್ರವಮಾಧ್ಯಮ ಯೋಗ್ಯವಾದದ್ದು. ಅದರಿಂದ ಮಾಧ್ಯಮದ ಉಷ್ಣತೆ ಅಧಿಕವಾಗಿ ಏರುವುದಿಲ್ಲ. ಅಲ್ಲದೆ ಲೋಹದ ಮೇಲ್ಮೈಯ ಮೇಲೆ ಉಂಟಾಗುವ ಗುಳ್ಳೆಗಳು ನಿವಾರಣೆಗೊಳ್ಳುವುವು. ಆಸ್ಟೆನೆಟಿಕ್ ಮಾದರಿಯ ಉಕ್ಕಿನ ವಿನಾ ಮಿಕ್ಕ ಉಕ್ಕುಗಳಲ್ಲಿ ಅದ್ದಿ ತಣಿಸುವುದರಿಂದ ಆಸ್ಟೆನೈಟಿನಿಂದ ಪರ್ಲೈಟ್ ರೂಪ ಪರಿವರ್ತನೆ ಅಡಗಿಸಲ್ಪಟ್ಟು ಕೊನೆಗೆ ಉಂಟಾಗುವ ರಚನೆಯಲ್ಲಿ ಒಂದು ಗಟ್ಟಿಯಾದ ಬೈನೆಟ್ ಅಥವಾ ಮಾರ್ಟೆಂರ್ಸೈಟ್ ಅನ್ನುವ ಅಂಶ ಇರುವುದು. ಸಾಮಾನ್ಯವಾಗಿ ಉಪಯೋಗಿಸುವ ಅದ್ದುವ ದ್ರವಗಳೆಂದರೆ ಎಣ್ಣೆ ಅಥವಾ ನೀರು. ಮೊದಲನೆಯದು ಸೌಮ್ಯ; ಕೊಂಕು ಮತ್ತು ಉಳಿಕೆಯ ತ್ರಾಸಗಳನ್ನು ಇದು ತಡೆಗಟ್ಟಬಲ್ಲುದು. ಎರಡನೆಯದು ಅದರಲ್ಲೂ ಉಪ್ಪಿನ ನೀರು ತೀವ್ರವಾದ ಅದ್ದಿ ತಣಿಸುವ ಮಾಧ್ಯಮ.

ಗಡಸು ಮಾಡುವಿಕೆ: ಉಕ್ಕನ್ನು ಅದರ ಅವಧಿಕ ತಾಪಮಾನದ ಶ್ರೇಣಿಗಿಂತ (ಕ್ರಿಟಿಕಲ್ ರೇಂಜ್ ಆಫ್ ಟೆಂಪರೇಚರ್) ಸ್ವಲ್ಪ ಹೆಚ್ಚು ಕಾಯಿಸಿ ವಿಸರಣೆ (ಡಿಫ್ಯೂಷನ್) ಪೂರ್ಣವಾಗುವವರೆಗೆ ತಡೆದಿದ್ದು ಎಣ್ಣೆ ಅಥವಾ ಗಾಳಿ ಅಥವಾ ನೀರಿನಂಥ ಯುಕ್ತ ಮಾಧ್ಯಮದಲ್ಲಿ ಫಕ್ಕನೆ ಅದ್ದಿ ತಣಿಸುವ ವಿಧಾನ. ಈ ಕ್ರಿಯೆ ಉಕ್ಕಿನ ಗಡುಸುತನವನ್ನು (ಹಾರ್ಡ್‌ನೆಸ್) ಹೆಚ್ಚಿಸುವುದು. ಅಲ್ಲದೆ ಇಲ್ಲಿ ತಣಿಯುವುದರ ಆಸ್ಟೆನೈಟಿನಿಂದ ಪರ್ಲೈಟ್ ರೂಪವರ್ತನೆಯನ್ನು ನಿವಾರಿಸಿ ಮಾರ್ಟೆಂರ್ಸೈಟ್ ರಚನೆಯನ್ನು ಉಕ್ಕಿಗೆ ನೀಡಲು ಶಕ್ತವಾಗಿದೆ. ಈ ಗುರಿ ಸಾಧಿಸಲು ಅವಶ್ಯವಾಗುವ ಕನಿಷ್ಠ ತಣಿಯುವಿಕೆಯ ದರದ ಹೆಸರು ಅವಧಿ ತಣಿಯುವಿಕೆ ದರ (ಕ್ರಿಟಿಕಲ್ ಕೂಲಿಂಗ್ ರೇಟ್).

ಕಬ್ಬಿಣರಹಿತ ಮಿಶ್ರಲೋಹಗಳನ್ನು ಸೂಕ್ತ ಉಷ್ಣ ಸಂಸ್ಕರಣದಿಂದ ಗಡಸು ಮಾಡಬಹುದು. ಡ್ಯೂರಾಲ್ಯುಮಿನಿಯಮ್ ಮಾದರಿಯ ಮಿಶ್ರಲೋಹವನ್ನು ಸುಮಾರು $500^0$ ಸೆಂಟಿಗ್ರೇಡಿನಿಂದ ಅದ್ದಿ ತಣಿಸಿದರೆ ಅದು ಸಾಧಾರಣ ಉಷ್ಣತಾಶ್ರೇಣಿಯಲ್ಲಿ ಸ್ವಲ್ಪ ಕಾಲಾವಧಿಯಲ್ಲಿ ನಿಧಾನವಾಗಿ ಗಡಸಾಗುವುದು. ಈ ಪ್ರಕ್ರಿಯೆಯ ಹೆಸರು ಕಾಲದಿಂದ ಗಡಸಾಗುವಿಕೆ (ಏಜ್ ಹಾರ್ಡನಿಂಗ್). ಈ ಕ್ರಮದಲ್ಲಿ ಅದ್ದಿ ತಣಿಸುವ ಮಿಶ್ರಲೋಹವನ್ನು ಪುನಃ ಸುಮಾರು $166^0$ ಸೆಂಟಿಗ್ರೇಡಿಗೆ ಕಾಯಿಸಿ ಕಾಲವನ್ನು ತ್ವರಿತಗೊಳಿಸಬಹುದು. ಇದಕ್ಕೆ ಕೃತಕವಾಗಿ ಹಳತು ಮಾಡುವ ಪ್ರಯೋಗ (ಆರ್ಟಿಫಿಷಿಯಲ್ ಏಜಿಂಗ್) ಎಂದು ಹೆಸರು. ಇವೆರಡಕ್ಕೂ ಅನ್ವಯಿಸಬಹುದಾದ ಶಬ್ದವೆಂದರೆ ಒತ್ತರದ ಗಡಸಾಗುವಿಕೆ (ಪ್ರೆಸಿಪಿಟೇಟ್ ಹಾರ್ಡನಿಂಗ್). ಏಕೆಂದರೆ ಮೂಲಲೋಹದಲ್ಲಿ ಒಂದು ಮಿಶ್ರ ಅಂಶದ ಕರಗುವಿಕೆಯ ಬದಲಾವಣೆಯಾಗುವುದರಿಂದ ಗಡಸುತನ ಉಂಟಾಗುವುದು. ಲೋಹ ಮತ್ತು ಮಿಶ್ರಲೋಹಗಳ ಗಡಸುತನವನ್ನು ಶೈತ್ಯದಲ್ಲಿ ಕೆಲಸಮಾಡುವುದರಿಂದಲೂ ಹೆಚ್ಚಿಸಬಹುದು.

ತೀಕ್ಷ್ಣತೆ ಕಡಿಮೆ ಮಾಡುವಿಕೆ: ಯಂತ್ರಶಿಲ್ಪದ ಹಲವಾರು ಪ್ರಯೋಗಗಳಿಗೆ ಪೂರ್ತಿಯಾಗಿ ಗಡಸುಮಾಡಿದ ಉಕ್ಕು ಸಾಧಾರಣವಾಗಿ ಬಹಳ ಗಡಸಾಗಿಯೂ ಅನೇಕ ವೇಳೆ ಪೆಡಸಾಗಿಯೂ (ಬ್ರಿಟಲ್) ಇರುವುದು. ಇಂಥ ಉಕ್ಕುಗಳನ್ನು ಅದರಲ್ಲೂ ಮಿಶ್ರಲೋಹದ ಉಕ್ಕುಗಳನ್ನೂ ತೀಕ್ಷ್ಣತೆ ಕಡಿಮೆ ಮಾಡುವ ವಿಧಾನಕ್ಕೆ ಒಳಪಡಿಸುವುದರಿಂದ ಗಡಸುತನ ಮತ್ತು ಪೆಡಸುತನ ಕಡಿಮೆಯಾಗಿ ಕಾಠಿಣ್ಯ (ಟಫ್‌ನೆಸ್) ಉತ್ತಮವಾಗುವುದರಿಂದ ಅದರ ಯಾಂತ್ರಿಕ ಗುಣಗಳನ್ನು ಬದಲಾಯಿಸಬಹುದು. ಈ ಸಂಸ್ಕಾರದಿಂದ ಕರ್ಷಕ ಸಾಮರ್ಥ್ಯ (ಟೆನ್ಸೈಲ್ ಸ್ಟ್ರೆಸ್ಟ್) ಕಡಿಮೆಯಾಗುವುದು. ಆದರೆ ತನ್ಯಗುಣ (ತಂತಿ ಎಳೆಯುವಿಕೆ, ಡಕ್ಟಿಲಿಟಿ) ಉತ್ತಮಗೊಳ್ಳುವುದು. ಲೋಹವನ್ನು ಪರಿವರ್ತನಶ್ರೇಣಿಗಿಂತ ಕೆಳಗಿನ ಮಟ್ಟದ ಸೂಕ್ತ ತಾಪಮಾನದವರೆಗೆ ಕಾಯಿಸುವುದು, ಅದೇ ತಾಪಮಾನದಲ್ಲಿ ಲೋಹದ ಗಾತ್ರ ಮತ್ತು ಗರಿಷ್ಠ ಅಡ್ಡ ಕೊಯ್ತದ ಅನುಸಾರ ತಕ್ಕಷ್ಟು ಕಾಲ ಹಿಡಿದಿಟ್ಟು ಗಾಳಿಯಲ್ಲಿ ತಣಿಸುವುದು– ಇವು ಈ ಸಂಸ್ಕರಣೆಯ ಮುಖ್ಯ ಕ್ರಮಗಳು.

ಇಂಗಾಲ ಅಥವಾ ಇಂಗಾಲ ಸಂಯುಕ್ತಪೂರಣ: ಕಡಿಮೆ ಇಂಗಾಲವುಳ್ಳ ಉಕ್ಕನ್ನು ಅಧಿಕ ಉಷ್ಣತೆಯಲ್ಲಿ ಘನ, ದ್ರವ ಅಥವಾ ಅನಿಲರೂಪದ ಇಂಗಾಲಯುಕ್ತ ಮಾಧ್ಯಮದ ಸಂಪರ್ಕದಿಂದ ಉಕ್ಕಿನ ಮೇಲ್ಮೈನ ಪದರದಲ್ಲಿ ಇಂಗಾಲವನ್ನು ಸೇರಿಸುವ ವಿಧಾನವೇ ಇಂಗಾಲಪೂರಣ. ಸಾಮಾನ್ಯವಾಗಿ ಉಪಯೋಗಿಸುವ ಮಾಧ್ಯಮಗಳು ಇದ್ದಲು, ಸಯನೈಡುಗಳು ಮತ್ತು ಇಂಗಾಲದ ಮಾನಾಕ್ಸೈಡ್. ಪ್ರಯೋಗದ ಅವಧಿಯನ್ನೂ ಹತೋಟಿಯಲ್ಲಿಟ್ಟು ಇಂಗಾಲ ಪ್ರವೇಶದ ಆಳವನ್ನು ಮತ್ತು ಪದರದಲ್ಲಿ ಇಂಗಾಲದ ಕೇಂದ್ರೀಕರಣವನ್ನು ಬದಲಾಯಿಸಬಹುದು. ಉಕ್ಕನ್ನು ನಿರುತ್ಕರ್ಷಿಸಲಾಗಿದ್ದರೆ (ಡೀಆಕ್ಸಿಡೈಸ್) (ಉದಾಹರಣೆಗೆ ಅಲ್ಯುಮಿನಿಯಂ ಸೇರಿಸುವುದರಿಂದ) ಎಂದರೆ ಅದರಿಂದ ಆಕ್ಸಿಜನ್ನನ್ನು ತೆಗೆದಿದ್ದರೆ ಉಕ್ಕಿನ ಅಂತರ್ಭಾಗದ ರಚನೆ ಸೂಕ್ಷ್ಮ ಕಣಸಮೂಹದಿಂದ ಕೂಡಿರುತ್ತದೆ: ಆದ್ದರಿಂದ ಇಂಗಾಲಪೂರಣದ ಉಷ್ಣತೆಯಿಂದ ಅದ್ದಿ ತಣಿಸುವುದು ಸಮಂಜಸವಾಗಿರುತ್ತದೆ.

ಪೊರೆ ಗಡಸು ಮಾಡುವಿಕೆ: ಕಡಿಮೆ ಇಂಗಾಲವಿರುವ ಉಕ್ಕಿನ ಮೇಲ್ಭಾಗದಲ್ಲಿ ಗಟ್ಟಿಯಾದ ಪೊರೆ ಕಲ್ಪಿಸುವ ವಿಧಾನ ಇದು. ಕಡಿಮೆ ಇಂಗಾಲದ ಉಕ್ಕನ್ನು ಇಂಗಾಲ ಅಥವಾ ಇಂಗಾಲಯುಕ್ತ ಮಾಧ್ಯಮದಲ್ಲಿ ಅವಧಿಕ ವ್ಯಾಪ್ತಿಗಿಂತ ಅಧಿಕ ಉಷ್ಣತೆಗೆ

ಕಾಯಿಸುವುದರಿಂದ ಇದನ್ನು ಸಾಧಿಸಬಹುದು. ಪೊರೆಯಲ್ಲಿನ ಅತ್ಯಧಿಕ ಇಂಗಾಲ ಸಂಗ್ರಹದಿಂದ ಗಟ್ಟಿಯಾದ ಮತ್ತು ಸವೆಯದಂಥ ಮೇಲ್ಭಾಗ ಉಂಟಾಗುವುದು. ವಸ್ತುವನ್ನು ಗಡಸುಮಾಡಿದ ತರುವಾಯ ಎರಡು ವಿವಿಧ ಉಷ್ಣತೆಗಳಲ್ಲಿ ಅದ್ದಿ ತಣಿಸುವುದು ಸಾಮಾನ್ಯ ಅಭ್ಯಾಸ. ಎಂದರೆ ಮೆತ್ತಗಿರುವ ಅಂತರ್ಭಾಗವನ್ನು ಸಂಸ್ಕರಿಸುವುದಕ್ಕೆ $900^0$ ಸೆಂ.ನಿಂದ ಮತ್ತೊಂದು ಸಲ ಮೇಲಿನ ಪೊರೆಯನ್ನು ಗಟ್ಟಿ ಮಾಡುವುದಕ್ಕೆ $700^0$ ಸೆಂ. ನಿಂದಲೂ ಪ್ರಾರಂಭಿಸುವುದುಂಟು. ಈ ಕ್ರಿಯೆಗಳ ಪರಿಣಾಮವಾಗಿ ಗಡಸುಪೊರೆಯಿರುವ ಹಾಗೂ ಮತ್ತು ತನ್ಯವಾದ ಅಂತರ್ಭಾಗ ವಸ್ತುವಿನಲ್ಲಿ ಉಂಟಾಗುವುದು. (ಜಿ.ಬಿ.)

**ಉಸಿರಾಟ:** ಜೀವಿ ಪರಿಸರದೊಡನೆ ಅನಿಲಗಳನ್ನು ವಿನಿಮಯಿಸಿಕೊಳ್ಳುವ ಕ್ರಿಯೆ (ರೆಸ್ಪಿರೇಷನ್). ಶ್ವಸನ ಕ್ರಿಯೆ ಅಥವಾ ಉಚ್ಛ್ವಾಸ ನಿಶ್ವಾಸಕ್ರಿಯೆಯೆಂದು ಸಹ ಹೇಳುವುದಿದೆ. ಇದುಪ್ರಾಣಿ, ಸಸ್ಯ ಪ್ರಪಂಚಗಳಿಗೆ ಸಾಮಾನ್ಯವಾದ ಚಟುವಟಿಕೆ. ಇದರ ಸ್ಥೂಲ ಕ್ರಿಯಾತಂತ್ರ ಹೀಗಿದೆ – ಪರಿಸರದ ಆಕ್ಸಿಜನ್ ($o_2$) ಜೀವಿಯ ದೇಹವನ್ನು ಪ್ರವೇಶಿಸುತ್ತದೆ; ಉಪಾಪಚಯ ದಲ್ಲಿ (ಮೆಟಬಾಲಿಸಂ) ಭಾಗವಹಿಸಿ ಶಕ್ತ್ಯುತ್ಪಾದನೆ ಮಾಡುತ್ತದೆ. ಕಾರ್ಬನ್ ಡೈಆಕ್ಸೈಡ್ ($co_2$) ಮುಂತಾದ ಜೀವಿಗೆ ಬೇಡವಾದ ಉಪೋತ್ಪನ್ನಗಳು ಜನಿಸುತ್ತವೆ; ಜೀವಿ ಇವನ್ನು ವಿಸರ್ಜಿಸುತ್ತದೆ. ಜೀವಿಯ ಸಕಲ ಚಟುವಟಿಕೆಗಳೂ ಶಕ್ತ್ಯಾಧಾರಿತವಾಗಿರುವು ದರಿಂದ ಉಸಿರಾಟ ಬದುಕಿಗೆ ಅನಿವಾರ್ಯ. ಆದ್ದರಿಂದ ಉಸಿರಾಟ ಬದುಕು ರೂಢಿಯಲ್ಲಿ ಹೀಗೆ ಪರ್ಯಾಯ ಶಬ್ದಗಳಾಗಿಯೇ ಬಳಕೆಯಾಗುತ್ತಿವೆ ಎಂಬುದು ಸ್ವಯಂ ವೇದ್ಯ. ಅಭ್ಯಾಸದ ಸೌಕರ್ಯದ ದೃಷ್ಟಿಯಿಂದ ಈ ವಿಷಯವನ್ನು ಮೂರು ಮುಖ್ಯ ಶೀರ್ಷಿಕೆಗಳಲ್ಲಿ ಬರೆದಿದೆ – ಪ್ರಾಣಿಗಳಲ್ಲಿ ಉಸಿರಾಟ, ಮನುಷ್ಯರಲ್ಲಿ ಉಸಿರಾಟ, ಸಸ್ಯಗಳಲ್ಲಿ ಉಸಿರಾಟ.

**ಪ್ರಾಣಿಗಳಲ್ಲಿ ಉಸಿರಾಟ:** ಬೆಂಕಿಯು ಪರಿಸರದಿಂದ ಆಮ್ಲಜನಕ ($o_2$)ವನ್ನು ಪಡೆದು ಉರಿದು (ಅಂದರೆ ಉತ್ಕರ್ಷಣೆಗೊಂಡು, ಆಕ್ಸಿಡೈಸ್) ಉಷ್ಣ (ಅಂದರೆ ಒಂದು ವಿಧದ ಶಕ್ತಿ), $co_2$ ಇತ್ಯಾದಿಗಳನ್ನು ಕೊಡುವುದಷ್ಟೇ, ಪ್ರಾಣಿಗಳ ಉಸಿರಾಟದ ಮೂಲತತ್ತ್ವವೂ ಇದೇ. ಗಾಳಿಯಲ್ಲಿನ ಆಮ್ಲಜನಕ ($o_2$) ಉಚ್ಛ್ವಾಸದಲ್ಲಿ ದೇಹವನ್ನು ಹೊಗುವುದು: ಉತ್ಕರ್ಷಣಕ್ರಿಯೆಯಲ್ಲಿ ಭಾಗವಹಿಸಿ ಶಕ್ತಿಯನ್ನು ಬಿಡುಗಡೆಮಾಡುವುದು; ಈ ಕ್ರಿಯೆಯಲ್ಲಿ ($co_2$) ಮುಂತಾದ ಉಪೋತ್ಪನ್ನಗಳು ಜನಿಸುವುವು; ನಿಶ್ವಾಸದಲ್ಲಿ $co_2$ ನಿಷ್ಕ್ರಮಿಸುವುದು. ಎಂದರೇನಾಯಿತು? ಬೆಂಕಿ ಉರಿಯಲು ಬೇಕಾಗುವ ಉಷ್ಣತೆಗಿಂತ ನೂರಾರು ಡಿಗ್ರಿ ಕಡಿಮೆ ಉಷ್ಣತೆಯಲ್ಲಿ ಪ್ರಾಣಿ ದೇಹಗಳಲ್ಲಿನ ಉತ್ಕರ್ಷಣೆಗಳು ನಡೆಯುತ್ತವೆ. ಆದರೆ ಎರಡು ಕಡೆಗಳಲ್ಲಿಯೂ ನಡೆಯುವ ಕ್ರಿಯೆ ಒಂದೇ. ಆದರೆ ಕಡಿಮೆ ಉಷ್ಣತೆಯಲ್ಲಿ ಈ ಕ್ರಿಯೆ ನಡೆಯುವುದಕ್ಕೆ ಎಲ್ಲ ಜೀವಿಗಳ ಊತಕಗಳಲ್ಲಿರುವ ಕಿಣ್ವಗಳೇ ಕಾರಣ.

**ಉಸಿರಾಟದ ವಿಕಾಸ:** ಅಮೀಬ ಮತ್ತು ಇತರ ಏಕಕೋಶಕ ಜೀವಿಗಳಲ್ಲಿ ಉಸಿರಾಟ ಬಲು ಸರಳ ರೀತಿಯದು, ಅವುಗಳ ದೇಹವನ್ನು ಅಂದರೆ ಕೋಶವನ್ನು ಆವರಿಸಿರುವ ತೆಳುಪೊರೆಯ ಮೂಲಕ ಹೊರಗಿನ ಗಾಳಿಯಲ್ಲಿರುವ $o_2$ ದೇಹದೊಳಕ್ಕೂ ಒಳಗಿನ $co_2$ ಪ್ರಸರಣ ಪ್ರಕ್ರಿಯೆ ಮೂಲಕ ಹೊರಕ್ಕೂ ಸಾಗುತ್ತ ಉಸಿರಾಟ ನೆರವೇರುತ್ತದೆ. ಕೆಳವರ್ಗದ ಕೆಲವು ಬಹುಕಣಜೀವಿಗಳಲ್ಲೂ (ಮೆಟೋಜೋವ) ಭೂ ಮತ್ತು ಜಲಚರ ಪ್ರಾಣಿಗಳಲ್ಲೂ ಇಂಥ ಉಸಿರಾಟ ಕ್ರಮವಿದೆ. ದೇಹ ಒಂದು ಮಿತಿಯಲ್ಲಿದ್ದು ಪೊರೆಗಳು ಒಂದು ಸ್ಥಿತಿಯಲ್ಲಿರುವಾಗ (ವ್ಯಾಸ 0.5–1.0 ಮಿಮೀ. ಗಾತ್ರದಲ್ಲಿ ಇರುವಾಗ) ಈ ನೇರ ವಿನಿಮಯ ಸಾಕು. ಆದರೆ ದೇಹ ಗಾತ್ರ ವೃದ್ಧಿಸಿದಂತೆ (ವಿಕಾಸದ ವಿವಿಧ ಹಂತಗಳಲ್ಲಿ ಇದು ನಡೆಯಿತಷ್ಟೆ) ಈ ಕ್ರಮ ದೇಹಕ್ರಿಯೆಗಳಿಗೆ ಸಾಕಾಗುವಷ್ಟು $o_2$ಅನ್ನು ಪೂರೈಸಲು ಸಮರ್ಥವಾಗಲಿಲ್ಲ. ಇದರ ಪರಿಣಾಮವಾಗಿ ಬಹುಪಾಲು ಮೇಲುವರ್ಗದ ಬಹುಕಣ ಜೀವಿಗಳಲ್ಲಿ ವಿಶಿಷ್ಟ ಉಸಿರಾಟ ವ್ಯವಸ್ಥೆಯೂ ಅದರೊಂದಿಗೆ ವಿಶಿಷ್ಟ ರಕ್ತಪರಿಚಲನಾ ವ್ಯವಸ್ಥೆಯೂ ರೂಪುಗೊಂಡಿವೆ. ಉಸಿರಾಟಕ್ಕೆ ನಾಲ್ಕು ಮುಖ್ಯ ಏರ್ಪಾಡುಗಳು ವಿಕಸಿಸಿರುವುದನ್ನು ಇಲ್ಲಿ ಗುರುತಿಸಬಹುದು.

1. ಪೊರೆಗಳ ಮೂಲಕ ಅನಿಲಗಳ ವಿಸರಣ (ಡಿಫ್ಯೂಷನ್): ಏಕಕೋಶಕ ಜೀವಿಗಳಲ್ಲಿ ಉಸಿರಾಟ ನಡೆವ ವಿಧಾನವಿದು. ಸ್ಪಂಜಿನಂಥ ಪ್ರಾಣಿಗಳ ಗೂಡುಗಳಲ್ಲಿ ಸಾಗರದ ನೀರು ಹರಿದು ಇಂಥ ಉಸಿರಾಟ ಪರಿಣಾಮಕಾರಿಯಾಗುತ್ತದೆ. ಇನ್ನು ಕೆಲವು ಪ್ರಾಣಿಗಳಲ್ಲಿ ಚರ್ಮವೇ ಉಸಿರಾಟದ ಸ್ವಲ್ಪ ಹೊಣೆಯನ್ನು ಕೆಲವು ವಿಶಿಷ್ಟ ಅವಯವಗಳೊಡನೆ ಹೊತ್ತು ಸಹಕರಿಸುವುದುಂಟು. ಅತಿಶೀತ ಸನ್ನಿವೇಶಗಳಲ್ಲಿ ಹಾವು, ಮೀನುಗಳು, ಕಪ್ಪೆಗಳು ಪೊರೆಯ ಮೂಲಕ ತಕ್ಕಷ್ಟು ಮೊತ್ತದಲ್ಲಿ $o_2$ ಅನ್ನು ಪಡೆಯುತ್ತವೆ. ಉಷ್ಣತೆ ಏರಿದಂತೆ ಇವೇ ಪ್ರಾಣಿಗಳು ಕಿವಿರುಗಳ ಮತ್ತು ಪುಪ್ಪುಸಗಳ ನೆರವಿನಿಂದ ಉಸಿರಾಡುತ್ತವೆ. ಮಾನವನಲ್ಲೂ ಇತರ ಸ್ತನಿಗಳಲ್ಲೂ ಚರ್ಮದ ಮೂಲಕ ನಡೆಯುವ ಒಟ್ಟು ಉಸಿರಾಟದ 1% ಮಾತ್ರವಿರಬಹುದೆಂದು ಅಂದಾಜು.

2. ಚರ್ಮಕ್ಕಿಂತ ಹೆಚ್ಚು ಪರಿಣಾಮಕಾರಿ ಅಂಗಗಳು ಕಿವಿರುಗಳು, ಸಾಮಾನ್ಯವಾಗಿ ಇವು ದೇಹದ ಒಳಗಿರುತ್ತವೆ. (ಕಪ್ಪೆಯ ಜೀವನದ ಒಂದು ಹಂತದಲ್ಲಿ ಹೊರಗಿರುತ್ತವೆ.). ಇವು ಅಲುಗಬಲ್ಲವು. ಕಿವಿರುಗಳ ಮೂಲಕ ನೀರು ಹರಿಯುವಾಗ ಒಳಗಿನ ರಕ್ತನಾಳಗಳು ಅದರಿಂದ $o_2$ ಅನ್ನು ಹೀರಿಕೊಂಡು ಉಸಿರಾಡಿಸುತ್ತವೆ. ಇಂಥ ಉಸಿರಾಟ ಸಮರ್ಪಕವಾಗಿ ನೆರವೇರಲು ಚರ್ಮ ಅಥವಾ ಕಿವಿರು ಒದ್ದೆಯಾಗಿರುವುದು ಅವಶ್ಯ.

3. ಪ್ರಾಣಿಗಳು ಕಾಲಾಂತರದಲ್ಲಿ ನೆಲದ ಮೇಲೆ ಬಾಳಲು ತೊಡಗಿದಾಗ ಪರಿಸ್ಥಿತಿ ಬದಲಾಯಿತು. ವಾಯುಮಂಡಲದಿಂದ ನೇರವಾಗಿ $o_2$ ಅನ್ನು ಪಡೆಯಲು, ವಿನಿಮಯಿಸಲು ಹೊಸ ಅಂಗಗಳೇ ಬೇಕಾದುವು. ಹೀಗೆ ಪುಪ್ಪುಸಗಳ ವಿಕಾಸವಾಯಿತು. ಈ ವಿಕಾಸದ ಪ್ರಥಮ ಹಂತವನ್ನು ಆಫ್ರಿಕದ ಬಸವನಹುಳುವಿನ ಪುಪ್ಪುಸದಲ್ಲಿ ನೋಡಬಹುದು. ಪುಪ್ಪುಸದ ಬಸವನಹುಳುವೆಂದೇ ಅದರ ಹೆಸರು. ಪುಪ್ಪುಸದ ಘನಗಾತ್ರ ಸುಮಾರು ಅರ್ಧಲೀಟರು. ಇದೊಂದು ವಿಸರಣಪುಪ್ಪುಸ (ಡಿಫ್ಯೂಷನ್‌ಲಂಗ್). ಮೇಲುವರ್ಗದ ಪ್ರಾಣಿಗಳಲ್ಲಿ ಶಕ್ತಿಯ ವ್ಯಯ ಹೆಚ್ಚು. ಆದ್ದರಿಂದ $o_2$ ವಿನ ಅಗತ್ಯ ಹೆಚ್ಚು. ಇದನ್ನು ಪೂರೈಸಲು ಪುಪ್ಪುಸದೊಳಗೆ ಆಲ್ವಿಯೋಲಸ್ ಎಂಬ ಮಡಿಕೆ ಅಥವಾ ವಿಭಾಗಗಳು ರೂಪುಗೊಂಡು ವಿಸರಣ ಪ್ರದೇಶದ ಸಲೆ ಹೆಚ್ಚುತ್ತ ಹೋಗುವುದು. ಜೊತೆಗೆ ಹೊರಗಿನ ಗಾಳಿಯನ್ನು ಒಳಗೆ ಸೇದುವುದಕ್ಕೂ ಒಳಗಿನ ಗಾಳಿಯನ್ನು ಹೊರಗೆ ನೂಕುವುದಕ್ಕೂ ಸಹಾಯಮಾಡಬಲ್ಲ ಅಂಗರಚನೆಯೂ ಸಿದ್ಧಿಸುತ್ತದೆ. ಕಪ್ಪೆಯ ಪುಪ್ಪುಸದಲ್ಲಿ ಕೇವಲ ಕೆಲವೇ ವಿಭಾಗಗಳಿದ್ದರೆ ಮೇಲುವರ್ಗದ ಪ್ರಾಣಿಗಳಾದ ಸ್ತನಿಗಳಲ್ಲಿ ಅವು ಅಸಂಖ್ಯಾತವಾಗಿವೆ, ಪಕ್ಷಿಗಳ ಪುಪ್ಪುಸಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಉಸಿರಾಡಲು ತಕ್ಕ ರಚನೆ ಉಂಟು. ಪುಪ್ಪುಸಗಳಿಂದ ನೀಳ ಕೋಶಗಳು ಹೊರಟು ದೇಹದ ಭಾಗದೊಳಕ್ಕೆ ಚಾಚಿಕೊಂಡಿರುವುದರಿಂದಲೂ ಆಲ್ವಿಯೋಲಸ್‌ಗಳು ನೀಳವಾಗಿ ಹರಡಿಕೊಂಡಿರುವುದರಿಂದಲೂ ಇದು ಸಾಧ್ಯವಾಗಿದೆ.

4. ನಾಲ್ಕನೆಯ ವಿಧದ ಉಸಿರಾಟ ವ್ಯವಸ್ಥೆ ಕೀಟಗಳಲ್ಲಿ ಕಂಡುಬರುತ್ತದೆ. ಇವುಗಳಲ್ಲಿರುವ ಕಿರಿದಾದ ಗಾಳಿ ತುಂಬಿದ ಹಲವಾರು ಕವಲುಗಳಿರುವ ಉಸಿರ್ನಾಳಗಳು ದೇಹವನ್ನು ವ್ಯಾಪಿಸಿ ಹೊರಭಾಗಕ್ಕೆ ತೆರೆದಿರುತ್ತವೆ. ರಕ್ತವನ್ನು ಸ್ಥಳೀಯವಾಗಿಯೇ ಶುದ್ಧೀಕರಿಸಲು ಇವು ನೆರವಾಗುವುವು. ಇಂಥ ಒಂದು ಕ್ರಿಯಾಸರಣಿ ಕೀಟಗಳ ದೃಷ್ಟಿಯಿಂದ ಸಮರ್ಪಕ ಎನಿಸಿದರೂ ಇದೇ ಅವುಗಳ ಗಾತ್ರಮಿತಿಗೆ ಕಾರಣವಾಗಿದೆ.

ಉಸಿರ್ನಾಳಗಳು, ಪುಪ್ಪುಸಗಳು, ಎದೆ, ಪುಪ್ಪುಸಗಳ ಆವರಣ, ಎದೆಯನ್ನು ಹಿಗ್ಗಿಸಿ ಕುಗ್ಗಿಸುವ ಮಾಂಸಖಂಡಗಳು, ಈ ಅಂಗಗಳಿಗೆ ಸಂಬಂಧಪಟ್ಟ ಅಂತರ್ವಾಹಿ ಮತ್ತು ಬಹಿರ್ವಾಹಿ ನರಗಳು ಇವಿಷ್ಟು ಸಸ್ತನಿಗಳ ಉಸಿರಾಟದ ಅಂಗಗಳು. ಮೂಗಿನ ಡೊಗರು, ಗಂಟಲ ಕುಹರ, ಧ್ವನಿಪೆಟ್ಟಿಗೆ, ಉಸಿರ್ನಾಳ ಅದರ ಎರಡು ಕವಲುಗಳು–ಇವು ಗಾಳಿಯ ದಾರಿಗಳು. ಇವೆಲ್ಲ ಪುಪ್ಪುಸಗಳಿಗೆ ಗಾಳಿ ಸತತವಾಗಿ ಪ್ರವೇಶಿಸಲು ಅನುಕೂಲವಾಗುವಂತೆ ರಚಿತವಾಗಿವೆ. ಮೂಗಿನ ಡೊಗರಿನ ಲೋಳೆಗೂಡಿದ ನಯಚರ್ಮ ಆರ್ದ್ರವಾಗಿದೆ; ಅದರಲ್ಲಿ ಬಹುನಾಳಗಳಿವೆ. ಸೇದುವ ಗಾಳಿಯನ್ನು ಬೆಚ್ಚಗೆ ಮಾಡಿ ಆರ್ದ್ರತೆಯನ್ನು ಕೊಡುವುದಕ್ಕೆಂದೇ ಅದರೊಳಗೆ ಅನೇಕ ಗ್ರಂಥಿಗಳಿವೆ. ಉಸಿರ್ನಾಳಕ್ಕೂ ಅನ್ನನಾಳಕ್ಕೂ ಗಂಟಲ ಕುಹರ ಒಂದೇ ದಾರಿ, ಸ್ನಾಯು, ಮೃದ್ವಸ್ಥಿ ಮತ್ತು ಕವಾಟಕೋಶಗಳಿಂದ ಧ್ವನಿಪೆಟ್ಟಿಗೆ ರಚಿತವಾಗಿದೆ. ಉಸಿರ್ನಾಳದ ಗೋಡೆಗಳಲ್ಲಿ ಮೃದ್ವಸ್ಥಿಗಳ ಅಸಂಪೂರ್ಣವಾದ ಉಂಗುರಗಳಿದ್ದು ನಾಳ ಯಾವಾಗಲೂ ತೆರೆದೇ ಇರುವಂತೆ ಮಾಡುತ್ತವೆ. ನಾಳದಲ್ಲಿ ಲೋಳೆಯನ್ನು ಸ್ರವಿಸುವ ಅನೇಕ ಗ್ರಂಥಿಗಳಿವೆ. ಅದರ ಹೊರ ಚರ್ಮವನ್ನು ಸ್ಪಂದನಲೋಮಾಂಗಗಳು ಅಂಚುಗಟ್ಟಿವೆ. ಈ ಗ್ರಂಥಿಗಳಿಂದ ಒಸರುವ ದ್ರವ ಮತ್ತು ಸ್ಪಂದನ ಲೋಮಾಂಗಗಳು ದೂಳು ಮತ್ತು ಇತರ ಪರಕೀಯ ವಸ್ತುಗಳು ಶ್ವಾಸಕೋಶಕ್ಕೆ ಹೋಗದಹಾಗೆ ತಡೆಯುತ್ತವೆ.

ಪುಪ್ಪುಸಗಳನ್ನು ಸೂಕ್ಷ್ಮ ಚರ್ಮದಿಂದ ಮಾಡಿರುವ ಸ್ಥಿತಿಸ್ಥಾಪಕ ಶಕ್ತಿಯುಳ್ಳ ಮತ್ತು ಅನೇಕ ಗೂಡುಗಳಿಂದ ಕೂಡಿದ ಚೀಲಗಳೆಂದು ಹೇಳಬಹುದು, ಶ್ವಾಸದ್ವಾರಗಳ ಮೂಲಕ ಅವುಗಳಿಗೆ ಅಡೆತಡೆಯಿಲ್ಲದೆ ಗಾಳಿಯ ಸಂಪರ್ಕ ಏರ್ಪಟ್ಟಿದೆ. ಈ ಗೂಡುಗಳ ಗೋಡೆಗಳಲ್ಲಿ ಶ್ವಾಸಾಂಗದ ಹೊರ ಪೊರೆಯ ಒಂದೇ ಪದರವಿದೆ. ಲೋಮನಾಳಗಳ ಒಳಪೊರೆಯಲ್ಲಿನ ಈ ಜೀವಕೋಶಗಳ ಪದರದ ಮೂಲಕ ಗೂಡುಗಳಲ್ಲಿರುವ ಗಾಳಿಗೂ ಸುತ್ತಮುತ್ತಲಿನ ಲೋಮನಾಳಗಳಲ್ಲಿರುವ ರಕ್ತಕ್ಕೂ ಅನಿಲ ವಿನಿಮಯ ಜರುಗುತ್ತದೆ. ಪುಪ್ಪುಸಗಳು ತಾವು ನೆಲೆಗೊಂಡಿರುವ ಎದೆ ಭಾಗದ ಕುಹರಕ್ಕಿಂತ ಗಾತ್ರದಲ್ಲಿ ಬಲು ಚಿಕ್ಕವು. ಒಳಗಿರುವ ಗಾಳಿಯಿಂದ ಅವು ಯಾವಾಗಲೂ ಉಬ್ಬಿಕೊಂಡಿರುತ್ತವೆ.

ಉಚ್ಛ್ವಾಸವೆಂದರೆ ಎದೆಯ ಪ್ರದೇಶ ಮತ್ತು ಪುಪ್ಪುಸಗಳು ಹಿಗ್ಗಿ ಹೊರಗಿನ ಗಾಳಿ ಒಳಕ್ಕೆ ಪ್ರವೇಶಿಸುವಿಕೆ. ಗೋಳಾಕಾರವಾಗಿರುವ ವಪೆ ತನ್ನ ಭಾಗವನ್ನು ಕಿರಿದುಮಾಡಿಕೊಂಡು ಸಂಕೋಚಗೊಂಡು ಎದೆ ಎಲುಬುಗಳು ಮುಂದಕ್ಕೆ ಹೊರಚಾಚಿಕೊಳ್ಳುವಂತೆ ಮಾಡುವುದ ರಿಂದ ಎದೆಯ ಪ್ರದೇಶ ಹಿಗ್ಗುತ್ತದೆ. ಆಗ ಒಳಗಿನ ಗಾಳಿಯ ಒತ್ತಡ ಸ್ವಲ್ಪ ಕಡಿಮೆಯಾಗುವುದ ರಿಂದ ಹೊರಗಿನ ಗಾಳಿ ಒಳಕ್ಕೆ ನುಗ್ಗಿ ಉಚ್ಛ್ವಾಸಕ್ರಿಯೆ ಏರ್ಪಡುತ್ತದೆ. ಎದೆ ಮತ್ತು ಪುಪ್ಪುಸಗಳು ಕುಗ್ಗಿ ಅಲ್ಲಿನ ಗಾಳಿ ಹೊರಕ್ಕೆ ಬಂದಾಗ ನಿಶ್ವಾಸಕ್ರಿಯೆ ಜರುಗುತ್ತದೆ. ಗಾಳಿಯನ್ನು ಒಳಕ್ಕೆ ಸೆಳೆದುಕೊಂಡಾಗ ಹಿಗ್ಗಿದ ಎದೆ ಮತ್ತಾವ ಪ್ರಯತ್ನವೂ ಇಲ್ಲದೆ ಉಚ್ಛ್ವಾಸದಲ್ಲಿ ನಿಯುಕ್ತವಾದ ಅಂಗಗಳ ಬರಿ ಸ್ಥಿತಿಸ್ಥಾಪಕ ಶಕ್ತಿಯಿಂದಲೇ ತನ್ನ ಪೂರ್ವಸ್ಥಿತಿಗೆ ಮರಳಬಹುದು. ವಪೆಯ ಸ್ನಾಯು ಮತ್ತು ಎದೆಗೂಡಿನ ಎಲುಬುಗಳು ಇತರ ಸ್ನಾಯುಗಳು, ನರಗಳು ತಮಗೆ ಕೊಡುವ ಉತ್ತೇಜನದ ಮೂಲಕ ಉಸಿರಾಟವನ್ನು ಲಯಬದ್ಧವಾಗಿ ನಡೆಯುವಂತೆ ಮಾಡುತ್ತವೆ.

ಸಾಮಾನ್ಯವಾದ ಉಸಿರಾಟ ಆಗಾಗ ತನ್ನ ದಾರಿಯಿಂದ ವಿಚಲಿತವಾಗಬಹುದು. ಆದರೆ ಅದರಿಂದ ಆರೋಗ್ಯ ಕೆಟ್ಟಿದೆಯೆಂದಾಗಲೀ ಕೆಟ್ಟಿಲ್ಲವೆಂದಾಗಲೀ ಖಚಿತವಾಗಿ ಹೇಳಲು ಬರುವುದಿಲ್ಲ. ಹೊಟ್ಟೆಯ ಉಚ್ಛ್ವಾಸದಲ್ಲಿ ಉಸಿರು ಹೊರಗೆ ಹೋಗುವಾಗಲೆಲ್ಲ ಹೊಟ್ಟೆ ಚಲಿಸುವುದು ಕಂಡುಬರುತ್ತದೆ. ಉಚ್ಛ್ವಾಸ ನಡೆದಾಗಲೆಲ್ಲ ಹೊಟ್ಟೆ ಮುಂದಕ್ಕೆ ಉಬ್ಬಿಕೊಳ್ಳುತ್ತದೆ. ನಿಶ್ವಾಸದಲ್ಲಿ ತಟ್ಟನೆ ಹಿಂದಕ್ಕೆ ಸೆಳೆದುಕೊಳ್ಳುತ್ತದೆ. ವಪೆ ಕುಗ್ಗುವುದರಿಂದಲೂ ಹೊಟ್ಟೆಯ ಗೋಡೆಯ ಸ್ಥಿತಿಸ್ಥಾಪಕ ಶಕ್ತಿಯಿಂದಲೂ ಹೀಗೆ ಆಗುತ್ತದೆ. ಉಸಿರಾಟದಲ್ಲಿ ಪಕ್ಕೆಲುಬುಗಳು ಹೆಚ್ಚಾಗಿ ಚಲಿಸುತ್ತವೆ, ಉಸಿರಾಡುವುದು ಕಷ್ಟವಾದಾಗ ಮಾತ್ರ ಇದು ಕಂಡುಬರುತ್ತದೆ. ಉಸಿರ್ನಾಳ ಮತ್ತು ಅದರ ಬೃಹತ್ ಶಾಖೆಯ ಮೇಲುಗಡೆ ಕೇಳಿಬರುವ ಗಂಟಲುಸಿರಾಟ ಪುಪ್ಪುಸ ಗಿಡಿದುಕೊಂಡಾಗ ಉಂಟಾಗುತ್ತದೆ. ಉಸಿರಾಟವನ್ನು ಆಗಗೊಳಿಸುವ ಸಾಮಾನ್ಯ ಸ್ನಾಯುಗಳು ರಕ್ತಕ್ಕೆ ಸಾಕಾಗುವಷ್ಟು ಗಾಳಿಯನ್ನು ಒದಗಿಸಲು ಸೋತು ಸಹಾಯಕ ಸ್ನಾಯುಗಳು ನೆರವಿಗೆ ಒದಗಿ ಬರಬೇಕಾದ ಪ್ರಸಂಗದಲ್ಲಿ ಬಲವಂತದ ಉಸಿರಾಟ ತೋರುವುದು. ಕೆಲವು ವಿಷಗಳು ಪ್ರಯುಕ್ತವಾದಾಗ ಉಸಿರಾಟ ಕಿರಿದಾಗುತ್ತದೆ. ಚೈನ್‌ಸ್ಟ್ರೋಕ್ ಉಸಿರಾಟ ಎಂದರೆ ದೊಡ್ಡ ದೊಡ್ಡ ಗೊರಕೆಗಳನ್ನು ಬಿಡುವುದು ಮತ್ತು ಸ್ವಲ್ಪ ಹೊತ್ತು ಉಸಿರಾಡದಿರುವುದು ಮಿದುಳು, ರಕ್ತ ಪರಿಚಲನಾಂಗವ್ಯೂಹ ಅಥವಾ ಮೂತ್ರಜನಕಾಂಗಗಳ ವ್ಯಾಧಿಗಳಲ್ಲೂ ಇದು ಸಾಮಾನ್ಯ.

ಉಸಿರಾಟ ಜರುಗುವ ಅನೇಕ ಪರಿಸ್ಥಿತಿಗಳಲ್ಲಿ ಒಳಕ್ಕೂ ಹೊರಕ್ಕೂ ಸರಿದಾಡುವ ಗಾಳಿಯ ಪರಿಮಾಣವನ್ನು ಅನಿಲಮಾಪಕದಿಂದ (ಗ್ಯಾಸೋಮೀಟರ್) ಅಳೆಯಬಹುದು. ಮನುಷ್ಯನ ವಿಷಯದಲ್ಲಿ ಯಾವುದೋ ಒಂದು ರೂಪದ ಉಸಿರಾಟ ಮಾಪಕವನ್ನು (ರೆಸ್ಪಿರೋಮೀಟರ್) ಉಪಯೋಗಿಸುತ್ತಾರೆ. ಈ ಕೆಳಗೆ ಕೊಟ್ಟಿರುವ ಸಂಖ್ಯೆಗಳು ಒಳಗೆ ತೆಗೆದುಕೊಂಡ ಗಾಳಿಯ ಪರಿಮಾಣವನ್ನೂ ಹೊರಕ್ಕೆ ಬಿಟ್ಟ ಗಾಳಿಯ ಪರಿಮಾಣವನ್ನೂ ತೋರಿಸುತ್ತವೆ. ಪ್ರಾಣಿಗಳ ವಿಷಯದಲ್ಲಿ ಇಂಥ ಮೌಲ್ಯಗಳನ್ನು ನಿರ್ದಿಷ್ಟವಾಗಿ ಕಂಡುಹಿಡಿದಿಲ್ಲ. ಏಕೆಂದರೆ ಇವನ್ನು ಇಂಥ ಪ್ರಯೋಗಗಳಿಗೆ ಗುರಿಮಾಡಿ ಪರಿಮಾಣಗಳನ್ನು ಖಚಿತವಾಗಿ ತಿಳಿದುಕೊಳ್ಳುವುದು ಕಷ್ಟ. ಈ ಸಂಖ್ಯೆಗಳು ಸರಾಸರಿ ಲೆಕ್ಕಗಳನ್ನು ಮಾತ್ರ ಹೇಳುತ್ತವೆ. ವ್ಯಕ್ತಿಶಃ ಇವು ಬಹಳವಾಗಿ ವ್ಯತ್ಯಾಸ ಹೊಂದಬಹುದು.

**ಭರತದ ಗಾಳಿ:** ಒಂದು ಉಸಿರಾಟ ಪ್ರಕರಣದಲ್ಲಿ ಒಳಗೆ ತೆಗೆದುಕೊಂಡು ಅಥವಾ ಹೊರಗೆಬಿಟ್ಟ ಗಾಳಿಯ ಪರಿಮಾಣ. ಇದರ ಬೆಲೆಗಳು ಹೀಗಿವೆ: ಮನುಷ್ಯ 500 ಮಿ.ಲೀ. ಕುದುರೆ 6,000 ಮಿ.ಲೀ., ಹಸು 3,800 ಮಿ.ಲೀ., ಆಡು 310 ಮಿ.ಲೀ., ಕುರಿ 200 ಮಿ.ಲೀ., ನಾಯಿ 176 ಮಿ.ಲೀ. ಕೆಲಸವಿಲ್ಲದೆ ಕುಳಿತಿರುವಾಗ (ಸುಮಾರಾಗಿ) ಶರೀರದ ತೂಕಕ್ಕೆ ಅನುಗುಣವಾಗಿ ಭರತದ ಗಾಳಿ ಬದಲಾಯಿಸುತ್ತದೆ. ಅದನ್ನು ಈ ಕೆಳಗಣ ಸೂತ್ರದಲ್ಲಿ ನಿರೂಪಿಸಬಹುದು.

ಭರತದ ಗಾಳಿ (ಮಿ.ಲೀ.)=0,0074 **X** ತೂಕ (ಗ್ರಾಂ).

ಕುಂಭಕದಲ್ಲಿನ ಪೂರಕ ಶ್ವಾಸದ ಪ್ರಮಾಣ: ಒಂದು ಸಾಮಾನ್ಯವಾದ ಉಸಿರೆಳೆತದ ತರುವಾಯ ಶಕ್ತಿಯಿದ್ದಷ್ಟು ಆಳವಾಗಿ ಉಸಿರೆಳೆದುಕೊಂಡಾಗ ಒಳಕ್ಕೆ ಸರಿಯುವ ಗಾಳಿಯ ಪರಿಮಾಣ. ಇದರ ಬೆಲೆಗಳು ಹೀಗಿವೆ. ಮನುಷ್ಯ ಸುಮಾರು 2,000 ಮಿ.ಲೀ., ಕುದುರೆ 1,200 ಮಿ.ಲೀ., ಕುರಿ 340–1140 ಮಿ.ಲೀ., ಶಕ್ತಿಯಿದ್ದಷ್ಟು ಒಳಗೆಳೆದುಕೊಂಡು ಶಕ್ತಿಯಿದ್ದಷ್ಟು ಹೊರಹಾಕುವ ಗಾಳಿಗಳ ಪರಿಮಾಣದ ಹೆಸರು ಪುಪ್ಪುಸದ ಪ್ರಾಣ ತ್ರಾಣ. ಇದರ ಬೆಲೆಗಳು ಹೀಗಿವೆ: ಮನುಷ್ಯ 3,700 ಮಿ.ಲೀ., ಕುದುರೆ 30,000 ಮಿ.ಲೀ., ಕುರಿ 800–1,540 ಮಿ.ಲೀ.,

**ಉಳಿಕೆಯ ಗಾಳಿ:** ಕುಂಭಕದ ಗಾಳಿಯನ್ನು ಹೊರ ಹಾಕಿದ ಮೇಲೆ ಪುಪ್ಪುಸಗಳು ಮುದುರಿಹೋಗುವುದಿಲ್ಲ: ಅವುಗಳಲ್ಲಿ ತಕ್ಕಷ್ಟು ಗಾಳಿ ಇದ್ದೇ ಇರುತ್ತದೆ. ಇದಕ್ಕೆ ಉಳಿಕೆಗಾಳಿ ಎಂದು ಹೆಸರು. ಅದು ಮನುಷ್ಯನಲ್ಲಿ ಸರಾಸರಿ 1,500 ಮಿ.ಲೀ. ನಷ್ಟಿದೆ. ಕುದುರೆಯಲ್ಲಿ ಸುಮಾರು 1,200 ಮಿ.ಲೀ., ಶ್ವಾಸನಾಳ ತೆರೆದ ಬಳಿಕ ಪುಪ್ಪುಸಗಳು ಮುದುರಿಕೊಂಡು ಅನಂತರ ಆ ಕೋಶಗಳಲ್ಲಿ ಉಳಿದುಕೊಂಡಿರುವ ಗಾಳಿಯ ಹೆಸರು ಕನಿಷ್ಠ ಮಿತಿಯ ಗಾಳಿ (ಮಿನಿಮಮ್ ಏರ್). ಈ ಗಾಳಿ ಇರುವುದರಿಂದಲೇ ಪುಪ್ಪುಸಗಳನ್ನು ನೀರಿನಲ್ಲಿ ಇರಿಸಿದಾಗ ಮುಳುಗದೆ ತೇಲುತ್ತವೆ.

**ಮಿನಿಟ್ ಪರಿಮಾಣ:** ಒಂದು ಮಿನಿಟಿನಲ್ಲಿ ನಡೆಯುವ ಉಸಿರಾಟದ ಸಂಖ್ಯೆಯಿಂದ ಭರತದ ಗಾಳಿಯನ್ನು ಗುಣಿಸಿದರೆ ಉಸಿರಾಟದ ಮಿನಿಟ್ ಪರಿಮಾಣ ದೊರೆಯುತ್ತದೆ. ನಾಯಿಗಳಲ್ಲಿ ಇದರ ಸರಾಸರಿ ಸುಮಾರು 4,000.

**ಉಸಿರಾಟದ ಪುನರಾವರ್ತನೆ:** ಒಂದು ಮಿನಿಟಿನಲ್ಲಿ ಎಷ್ಟು ಸಲ ಉಸಿರಾಡುತ್ತದೆ ಎಂಬುದರ ಲೆಕ್ಕ. ವಿಶ್ರಾಂತಿಯಲ್ಲಿರುವ ಉನ್ನತಸ್ತರದ ಪ್ರಾಣಿಗಳಲ್ಲೂ ಮನುಷ್ಯನಲ್ಲೂ ಪುನರಾವರ್ತನ ಸಂಖ್ಯೆಗಳು ಹೀಗಿವೆ: ಕುದುರೆ 8–16; ನಾಯಿ 10–30; ಎತ್ತು 10–30; ಬೆಕ್ಕು 20–30; ಕರೆವ ಹಸು 18–28; ಕೋಳಿ 15–30; ಕುರಿ ಮತ್ತು ಆಡು 12–20; ಮನುಷ್ಯ 12–20; ಹಂದಿ 8–18. ಉಸಿರಾಟದ ಪುರಾವರ್ತನೆ ಅನೇಕ ಬದಲಾವಣೆಗಳಿಗೆ ಆಕರವಾಗಿದೆ. ಇವು ದೇಹದ ಗಾತ್ರ, ವಯಸ್ಸು, ವ್ಯಾಯಾಮ, ಭಾವೋದ್ರೇಕ, ಪರಿಸರದ ಉಷ್ಣಮಾನ, ಗರ್ಭಧಾರಣೆ, ಹೊಟ್ಟೆ ತುಂಬುವ ಜಾಗದ ಅಳತೆ, ಅದರಲ್ಲೂ ಮೆಲುಕು ಹಾಕುವ ಪ್ರಾಣಿಗಳಲ್ಲಿ ಮೊದಲು ಹೊಟ್ಟೆಯ ಪರಿಮಾಣ ಮುಂತಾದ ಅಂಶಗಳನ್ನು ಅವಲಂಬಿಸಿವೆ.

**ಮನುಷ್ಯರಲ್ಲಿ ಉಸಿರಾಟ:** ಉಚ್ಛ್ವಾಸ ಗಾಳಿಯಲ್ಲಿನ ದೂಳಿನ ದೊಡ್ಡ ಕಣಗಳನ್ನು ಮೂಗಿನ ಕೂದಲುಗಳು ತಡೆದು ಸೋಸಿ ಒಳಬಿಡುತ್ತವೆ. ಗಂಟಲು ಕುಳಿಯ (ಫ್ಯಾರಿಂಕ್ಸ್) ಮೂಲಕ ಇದು ಸಾಗುವಾಗ ಬೆಚ್ಚಗಾಗಿ ತೇವಗೂಡಿ ಉಸಿರ್ನಾಳಕ್ಕೆ ಬರುವ ಹೊತ್ತಿಗೆ ಇದರಲ್ಲಿ ನೀರಿನ ಆವಿ ತುಂಬಿರುವುದು.



**ಚಿತ್ರ 1. ಎದೆಗೂಡಿನಲ್ಲಿ ಪುಪ್ಪುಸಗಳು ಅಳವಟ್ಟಿರುವ ರೀತಿ**

ಉಸಿರ್ನಾಳ ಎಡಕ್ಕೂ ಬಲಕ್ಕೂ ಪಂಗುಸಿರ್ನಾಳ (ಬ್ರಾಂಕಸ್) ಮುಖ್ಯ ಕಾಂಡಗಳಾಗಿ ಕವಲೊಡೆದು ಮತ್ತು ಕವಲೊಡೆಯುತ್ತ ದ್ವಿತೀಯಕ ಪಂಗುಸಿರ್ನಾಳಗಳು, ನವಿರುಸಿರ್ನಾಳಗಳು (ಬ್ರಾಂಕಿಯೋಲ್ಸ್) ಪುಪ್ಪುಸದ ಮೊದಲ ಕಿರಿಹಾಲೆಗೆ (ಲಾಬ್ಯೂಲ್) ಹೋಗುವ ಉಸಿರಾಟದ ನವಿರುಸಿರ್ನಾಳಗಳಾಗಿ ಕೊನೆಗೊಳ್ಳುತ್ತವೆ. ಈ ಕಿರಿಹಾಲೆಯೇ ಕೆಲಸಮಾಡುವ ಪುಪ್ಪುಸದ ಘಟಕ. ಗಾಳಿಗೂ ರಕ್ತಕ್ಕೂ ನಡುವೆ $o_2$, $co_2$ ವಿನಿಮಯವಾಗುವ ಸುಮಾರು 30 ಕೋಟಿ ಗಾಳಿಗೂಡುಗಳಿಗೆ ಒಳಗೆ ಗಾಳಿ ಹಂಚಿಕೆಯಾಗುತ್ತದೆ. ಒಂದು ಮಿ.ಮೀ. ಗಾತ್ರದಲ್ಲಿ 5–10 ಇರುವ ಗಾಳಿಗೂಡುಗಳು ಮುಖ್ಯವಾಗಿ ಗಾಳಿಯಲ್ಲಿ ತೂಗಿಬಿದ್ದಿರುವ ಲೋಮನಾಳಗಳ ಕಟ್ಟುಗಳು, ಇದರ ಮೇಲ್ಮೈಯ ತುಂಬ ಮುಚ್ಚಿರುವುದು. ಈ ರಕ್ತನಾಳಗಳ ಒಟ್ಟು ಉದ್ದವನ್ನು 2,400 ಕಿ.ಮೀ. ಎಂದು ಲೆಕ್ಕ ಹಾಕಿದೆ. ವಿಸರಣೆಗೊಳ್ಳುವ ಮೇಲ್ಮೈ 45 ಚದರ ಮೀಟರುಗಳಷ್ಟು ಹರಡಿದ್ದರೂ ಅದರ ದಪ್ಪ ಒಬ್ಬನಲ್ಲಿ 0.5–2.5 ಮೈಕ್ರಾನುಗಳಷ್ಟು (ಮಿಲಿಮೀಟರಿನ ಸಾವಿರ ಅಂಶ) ಇರುವುದು ಆರಾಮವಾಗಿರುವಾಗ ಒಂದೊಂದು ಲೋಮನಾಳದಲ್ಲಿ 0.9 ಸೆಕೆಂಡಿಗೊಂದು ಬಾರಿ ಹೊಸ ರಕ್ತ ಬರುವುದು. ದುಡಿಯುತ್ತಿರುವಾಗ ಸೆಕೆಂಡಿಗೆ 3 ಬಾರಿ ಬರುತ್ತದೆ. ಸುಮ್ಮನಿದ್ದಾಗ ಪುಪ್ಪುಸಗಳ ಮೂಲಕ ರಕ್ತ ಮಿನಿಟಿಗೆ 5 ಲೀಟರೂ ಜೋರಾಗಿ ಗರಡಿ, ಸಾಮು ಮಾಡುವಾಗ ಇದರ ನಾಲ್ಕೈದರಷ್ಟೂ ಪ್ರವಹಿಸುವುದು. ವಿಶ್ರಾಂತಿ ಪಡೆಯುತ್ತಿರುವಾಗ ಗಾಳಿಗೂಡುಗಳಿಗೆ ನುಗ್ಗುವ ಗಾಳಿ 4 ಲೀ: ಅಂಗ ಸಾಧನೆಯಲ್ಲಿ ಇದು 100 ಲೀಟರುಗಳನ್ನು ಮೀರುವುದು **(ನೋಡಿ– ಉಸಿರಾಟದ–ಮಂಡಲದ–ಅಂಗರಚನೆ)**.



**ಚಿತ್ರ 2. ಎದೆಗೂಡಿನ ಎಲುಬುಗಳ ಪಕ್ಕದ ನೋಟ. ಉಸಿರೆಳೆದುಕೊಂಡು ಬಿಟ್ಟಾಗಿನ ಆಕಾರ ಬದಲಾವಣೆಗಳನ್ನು ತೋರಿಸಿದೆ. ತಗಡಿನ ತೊಟ್ಟಿಯ ಹಿಡಿಯನ್ನು ಪಕ್ಕಕ್ಕೆ ಎತ್ತಿದರೆ ಅಡ್ಡಗಲ ಹೆಚ್ಚುವುದು.**

ಪುಪ್ಪುಸದಲ್ಲಿ ಆಕ್ಸಿಜನ್ ಮತ್ತು ಇಂಗಾಲದ ಡೈಆಕ್ಸೈಡ್ ವಿಸರಣೆ; ಮನುಷ್ಯನ ಪುಪ್ಪುಸಗಳಲ್ಲಿ ಗಾಳಿಯಲ್ಲಿರುವ $o_2$ ಪ್ರಮಾಣ ರಕ್ತದಲ್ಲಿನ ಅದೇ ಪ್ರಮಾಣಕ್ಕಿಂತ ಸದಾ ಹೆಚ್ಚು ಎಂದು ಪ್ರಯೋಗಗಳಿಂದ ತಿಳಿದಿದೆ. ವಿಸರ್ಜಿಸಲಾಗುವ $Co_2$ ಅನ್ನು ಕುರಿತು

ಹೇಳುವಾಗ ಈ ಹೇಳಿಕೆ ವಿಪರ್ಯಯವಾಗುತ್ತದೆ. ಆದ್ದರಿಂದ ಮನುಷ್ಯನ ಉಸಿರಾಟದಲ್ಲಿಯೂ ವಿಸರಣೆಯೇ ಮೂಲಕಾರಣ ಎಂದು ರುಜುವಾತಾದಂತಾಯಿತು. ಗೊತ್ತಾದ ಉಷ್ಣತೆಯಲ್ಲಿ ಒಂದು ಅನಿಲದ ಸಾಂದ್ರತೆಯನ್ನು ಆಂಶಿಕ ಒತ್ತಡಗಳಲ್ಲಿ (ಪಾರ್ಷಿಯಲ್ ಪ್ರೆಷರ್ಸ್) ಪಾದರಸದ ಮಿಲಿಮೀಟರುಗಳಲ್ಲಿ ಹೇಳುವುದು ವಾಡಿಕೆ. ವಿರಾಮದಲ್ಲಿ ಪುಪ್ಫುಸದಲ್ಲಿನ



ಚಿತ್ರ 3. ಆರೋಗ್ಯವಂತನ ಒಂದು ಬಾರಿಯ ಉಸಿರಾಟ ಚಕ್ರದಲ್ಲಿನ, ಪುಪ್ಫುಸದೊಳಗಿನ ಗಾಳಿಗೂಡೊಳಗಣ ಒತ್ತಡ, ಅಳ್ಳೆಪೊರೆಯೊಳಗಣ ಒತ್ತಡ, ಉಸಿರೆಳೆದುಕೊಂಡ ಗಾಳಿಯ ಘನ ಅಳತೆಗಳು.

ಗಾಳಿಯಲ್ಲಿರುವ $o_2$ವಿನ ಬಳಕೆ ಏರಿದಂತೆಲ್ಲ ಈ ವಿಸರಣೆಯ ಓಟ (ಗ್ರೇಡಿಯಂಟ್) ಹೆಚ್ಚುತ್ತ ಜೋರಾದ ವ್ಯಾಯಾಮದಲ್ಲಿ 50 ಮಿಮೀ.ಗೆ ಏರಬಹುದು. ಇಷ್ಟು ದೊಡ್ಡ ಸರಾಸರಿ ಓಟ ಇದ್ದರೂ ಪುಪ್ಪಸದಿಂದ ಹೊರಡುವ ರಕ್ತದಲ್ಲಿನ $o_2$ ಆಂಶಿಕ ಒತ್ತಡ ಎಂದಿನಂತೆ ಪುಪ್ಫುಸದಲ್ಲಿನ ಗಾಳಿಯಲ್ಲಿ ಇರುವುದಕ್ಕಿಂತ ಕೇವಲ ಕೆಲವೇ ಮಿ.ಮೀ. ಗಳಷ್ಟು ಕಡಿಮೆ ಇರುತ್ತದೆ. ಏಕೆಂದರೆ ಪುಪ್ಫುಸದ ಲೋಮನಾಳದಲ್ಲಿನ $o_2$ರ ಸರಾಸರಿ ಆಂಶಿಕ ಒತ್ತಡ ಸಿರದ (ವೀನಸ್) ಮತ್ತು ಧಮನಿಯ (ಆರ್ಟೀರಿಯಲ್) ರಕ್ತಗಳ ಆಂಶಿಕ ಒತ್ತಡಗಳ ನಡುವೆ ಎಲ್ಲೋ ಇರುವುದು.

**ಮನುಷ್ಯನಲ್ಲಿ ಉಸಿರಾಟದ ಕ್ರಿಯಾತಂತ್ರ** : ಎದೆಗೂಡಿನ ಪೊಳ್ಳಿನ ಘನಗಾತ್ರದ (ವಾಲ್ಯೂಂ) ವ್ಯತ್ಯಾಸಗಳಿಂದ ಪುಪ್ಫುಸದ ಒಳಕ್ಕೂ ಹೊರಕ್ಕೂ ಗಾಳಿ ಸಾಗುತ್ತದೆ.

ಪುಪ್ಫುಸಗಳು ಮಾತ್ರ ತಾವಾಗಿಯೇ ಕುಗ್ಗುವುದೂ ಇಲ್ಲ, ಹಿಗ್ಗುವುದೂ ಇಲ್ಲ. ಹಾಗೆಯೇ ಬಿಟ್ಟರೆ ಅವು ಮುದುರುವ ಸ್ವಭಾವದವು. ಎದೆಗೂಡಿನ ಪೊಳ್ಳು ಹೇಗೆ ಆಡಿದರೆ ಇವೂ ಹಾಗೇ ಆಡುತ್ತವೆ. ಆದ್ದರಿಂದಲೇ ಉಸಿರಾಡಲು ಶಕ್ತಿ ಇರುವುದೆಲ್ಲ ಪುಪ್ಫುಸಗಳ ಹೊರಗಿರುವ ಸ್ನಾಯುಗಳಲ್ಲೇ. ಎದೆಗೂಡು ಪೊಳ್ಳಿನ ತಳದಲ್ಲಿರುವ ಬಲವಾದ ಸ್ನಾಯುಪದರವಾದ ವಪೆ, ಎದೆಗೂಡು ಒಡಲು ಇವುಗಳ ಅನೇಕ ಸ್ನಾಯುಗಳೇ ಅವು. ಒಂದೊಂದು ಸಲದ ಉಚ್ಛ್ವಾಸದಲ್ಲೂ ಸುಮಾರು ಅರೆ ಲೀಟರಿನಷ್ಟು ಗಾಳಿ ಒಳಹೋಗುವುದು. ಉಸಿರೆಳೆದುಕೊಳ್ಳುವಾಗ ಎರಡು ಯಾಂತ್ರಿಕ ಕೆಲಸಗಳಾಗುತ್ತವೆ. ಮೊದಲಾಗಿ ವಪೆಯ (ಫ್ರೆನಿಕ್)ನರದ ಮೂಲಕ ಇಳಿದು ಬರುವ ಆಘಾತಗಳು (ಇಂಪಲ್ಸಸ್) ವಪೆ ಕುಗ್ಗಿ ಕೆಳಸರಿಯುವಂತೆ ಮಾಡುವುವು. ವಪೆಯ ಕುಗ್ಗು ಅರೆಯಂಗುಲ ವಪೆಯ ಮೇಲ್ಮೈಯ ಸಲೆ 250 ಚ.ಸೆಂಮೀ.

ಆದ್ದರಿಂದ ಸುಮಾರು 300 ಮಿ.ಲೀಗಳಷ್ಟು ಗಾಳಿ ಈ ವಿಧಾನದಿಂದ ಒಳಹೋಗುವುದು. ಎರಡನೆಯದಾಗಿ ಕಶೇರು ಸ್ತಂಭಕ್ಕೆ ಅಂಟಿರುವ ಸ್ನಾಯುಗಳ ಹಲವಾರು ಜೋಡಿಗಳು ಮುಂದಕ್ಕೂ ಕೆಳಗಡೆಗೂ ಚಾಚಿ ಪಕ್ಕೆಲುಬುಗಳಿಗೆ ತಗುಲಿಕೊಂಡು, ಉಸಿರೆಳೆದುಕೊಳ್ಳುವಾಗ ಪಕ್ಕೆಲುಬುಗಳನ್ನು ಮೇಲೆತ್ತಿ ಎದೆಗೂಡಿನ ಒಳಗಣ ಘನಗಾತ್ರವನ್ನು ಹೆಚ್ಚಿಸುವುವು, ಈ ವಿಧಾನದಲ್ಲಿ ಸುಮಾರು 200 ಮಿ.ಲೀ. ಗಾಳಿ ಒಳಸೇರುತ್ತದೆ. ಪಕ್ಕೆಲುಬುಗಳು ಕಮಾನಾಗಿ ಬಾಗಿರುವಿಕೆ, ಅವುಗಳ ಒಟ್ಟು ರಚನೆ ಇತ್ಯಾದಿಗಳಿಂದಾಗಿ ಒಳಗಿನ ಗಾತ್ರ ಆದಷ್ಟು ಹೆಚ್ಚಾಗಿರುವಂಥ ಏರ್ಪಾಡಿದೆ. ಅಲ್ಲದೆ ಪಕ್ಕೆಲುಬುಗಳನ್ನು ಮೇಲೆತ್ತಿದರೆ ಎದೆಗೂಡಿನ ಮುಂದು ಹಿಂದಣ ವ್ಯಾಸ ಹೆಚ್ಚಿ ಅದರ ಅಗಲ ಜಾಸ್ತಿಯಾಗುವುದು. ಇವೆಲ್ಲ ಏರ್ಪಾಡುಗಳು ಆದಷ್ಟು ಹೆಚ್ಚು ಪ್ರಮಾಣದ ಗಾಳಿ ಒಳಸೇರಲು ಸಹಕಾರಿಗಳಾಗಿವೆ. ಒಬ್ಬ ಆರೋಗ್ಯವಂತ ಮನುಷ್ಯನಲ್ಲಿ ಉಚ್ಛ್ವಾಸ ಮುಗಿದೊಡನೆ ಮಿದುಳಿನಲ್ಲಿರುವ ಉಸಿರಾಟ ನಿಯಂತ್ರಣ ಕೇಂದ್ರ ತನ್ನ ಕೆಲಸವನ್ನು ನಿಲ್ಲಿಸುತ್ತದೆ. ತತ್‌ಕ್ಷಣ ಪುಪ್ಫುಸಗಳ ಕುಗ್ಗು ಸೆಳೆತದಿಂದ ಎದೆಗೂಡು ಕುಸಿದು ಮುದುರುತ್ತದೆ: ಎಂದರೆ ನಿಶ್ವಾಸಕ್ಕೆ ಎಡೆ ಮಾಡಿಕೊಡುತ್ತದೆ.



ಚಿತ್ರ 4. ಪುಪ್ಫುಸದ ಘನ ಅಳತೆಗಳು, ಅಳವುಗಳು

ಉಸಿರಾಟದ ವ್ಯವಸ್ಥೆಯ ಕೆಲವುಭಾಗಗಳಲ್ಲಿನ ಜಲಸ್ಥಿತಿ ಒತ್ತಡಗಳನ್ನು (ಹೈಡ್ರೋಸ್ಟ್ಯಾಟಿಕ್ ಪ್ರೆಷರ್ಸ್) ಉಚ್ಛ್ವಸಿಸಿದ ಅಥವಾ ನಿಶ್ವಸಿಸಿದ ಗಾಳಿಯ ಘನಗಾತ್ರ ಮತ್ತು ಗಾಳಿ ಪ್ರವಹಿಸುವ ದರ ಇವುಗಳೊಡನೆ ಅಳೆದು ಉಸಿರಾಟದ ಕ್ರಿಯಾತಂತ್ರವನ್ನು ನಿರ್ಧರಿಸಿದ್ದಾರೆ. ಇದರಿಂದ ಪುಪ್ಫುಸಗಳ ಹಲವಾರು ಗುಣಗಳನ್ನು ಪರಿಮಾಣಾತ್ಮಕವಾಗಿ ತಿಳಿಯಲು ಸಾಧ್ಯವಾಗಿದೆ.



ಚಿತ್ರ 5. ಹಾಲ್ಡೇನ್ ಕೊಳವಿಯೊಂದಿಗಿನ ಮಾದರಿ ಕೊಳವೆ

ಪುಪ್ಫುಸದ ಘನಗಾತ್ರಗಳು: 70 ಕಿ.ಗ್ರಾಂ. ತೂಕದವನ ಪುಪ್ಫುಸದಲ್ಲಿ 5.25 ಲೀ.ಗಳಷ್ಟು ಗಾಳಿ ಹಿಡಿಯುತ್ತದೆ. ಇದು ಒಟ್ಟು ಪುಪ್ಫುಸದ ಗಾತ್ರ. ಇದನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಲಾಗಿದೆ.

ಜೀವಾಳದ ಗಾತ್ರ (ವೈಟಲ್ ಕೆಪ್ಯಾಸಿಟಿ) ಮತ್ತಿತರ ಪುಪ್ಫುಸದ ಘನಗಾತ್ರಗಳ ಅಳತೆ ಪುಪ್ಫುಸದ ರೋಗಗಳಲ್ಲಿ ಮುಖ್ಯವಾದ ನಿದಾನದ ವಿಧಾನ.

ಡಾಲ್ಟನ್ನನ ಆಂಶಿಕ ಒತ್ತಡಗಳ ನಿಯಮ ಮತ್ತು ಉಸಿರಾಟಕ್ಕೆ ಅದರ ಅನ್ವಯ: ದೇಹದೊಳಗೆ ಅನಿಲವಿನಿಮಯವನ್ನು ಅರ್ಥವಿಸಲು ಅನಿಲಗಳ ಕೆಲವು ಭೌತ ಗುಣಗಳನ್ನು ಅರಿಯಬೇಕು. $o_2$ ರಂಥ ಒಂದು ಅನಿಲ ಹೀಮೋಗ್ಲೋಬಿನ್‌ಗಳೊಡನೆ ಕೂಡಿ ಅಲ್ಲಿ ವಿಸರಣೆಗೊಂಡು ಊತಕಗಳವರೆಗೂ ಸಾಗಿತೇ ಇಲ್ಲವೇ ಎಂಬ ಅಂಶ ಆ ಅನಿಲದ ಅನುಸಾಂದ್ರತೆಯನ್ನು ಅವಲಂಬಿಸಿದೆ.

ವಾತಾವರಣದ ಗಾಳಿಯನ್ನು ವಿಶ್ಲೇಷಿಸಲಾಗಿದೆ. ಅದರಲ್ಲಿರುವ ಬೇರೆ ಬೇರೆ ಅನಿಲಗಳ ಘನಗಾತ್ರಗಳನ್ನು 100 ಘನಗಾತ್ರಗಳ ಒಣಗಾಳಿಯ ಪ್ರಮಾಣದಲ್ಲಿ ಅಳೆದಿದ್ದಾರೆ. ಈ ಪ್ರಕಾರ $o_2$ 20.94%. $co_2$ 0.03%, ನೈಟ್ರೋಜನ್ ಇತ್ಯಾದಿ ಅನಿಲಗಳು 79.03% ಇವೆಯೆಂದು ತಿಳಿದಿದೆ. ಈ ಸೇಕಡಾ ಸಂಖ್ಯೆಗಳು ಭೂಮಿಯ ಎಲ್ಲೆಡೆಗಳಲ್ಲಿಯೂ

ಮಾತ್ರವಲ್ಲ, ಸು. 40 ಕಿಮೀ. ಎತ್ತರದ ಸಕಲ ಔನ್ನತ್ಯಗಳಲ್ಲಿಯೂ ಸ್ಥಿರವಾಗಿಯೇ ಇವೆ. ಅಂದ ಮಾತ್ರಕ್ಕೆ ಒಂದು ಅನಿಲದ ಅಣು ಸಾಂದ್ರತೆಯನ್ನು ಅದರ ಸೇಕಡಾ ಇರವು ಮಾತ್ರ ನಿರ್ಧರಿಸುವುದಿಲ್ಲ. 8 ಕಿಮೀ. ಎತ್ತರ ಏರಿದವನು ಉಸಿರಾಟಕ್ಕೆ ಸಾಕಷ್ಟು $co_2$



ಚಿತ್ರ 6. ಮಾನವ ರಕ್ತದ ಇಂಗಾಲ ಡೈ ಆಕ್ಸೈಡಿನ ಬೇರ್ಪಡಿಕೆ ಕೊಂಕು ಗೆರೆಗಳು. ಮೇಲಿನ ಎರಡು ಗೆರೆಗಳ ನಡುವಿನ ಚುಕ್ಕೆಗೆರೆ ಮೈಯಲ್ಲಿ ಆಗುವುದನ್ನು ಮಾತ್ರ ಸೂಚಿಸುವುದು.

ಪ್ರಮಾಣ 20.94%, ಸಮುದ್ರಮಟ್ಟದಲ್ಲಿರುವಷ್ಟೇ ! ಮನುಷ್ಯ ಚಡಪಡಿಸುವುದರ ಕಾರಣ ಆ ಎತ್ತರದಲ್ಲಿ $co_2$ ಅಣುಗಳ ವಿರತಳತೆ, ಅನಿಲಗಳ ಈ ವರ್ತನೆಯ ಕಾರಣವನ್ನು ಡಾಲ್ಟನ್ (1788–1844) ವಿವರಿಸಿದ್ದಾನೆ.



ಚಿತ್ರ 7. ಮೈಕಾವಿನ ಮಟ್ಟದಲ್ಲಿ, ಆಮ್ಲಜನಕದ ಬೇರ್ಪಡಿಕೆಯ ಮೇಲೆ ಇಂಗಾಲ ಡೈ ಆಕ್ಸೈಡಿನ ಪರಿಣಾಮವನ್ನು ತೋರಿಸಿದೆ.

ಆಕ್ಸಿಜನ್ ಮತ್ತು ಇಂಗಾಲದ ಡೈಆಕ್ಸೈಡುಗಳನ್ನು ರಕ್ತ ಸಾಗಿಸುವ ವಿಧಾನ: ಒಬ್ಬ ಸಾಮಾನ್ಯ ಮನುಷ್ಯ ವಿಶ್ರಮಿಸುತ್ತಿರುವಾಗ ಪ್ರತಿ ಮಿನಿಟಿನಲ್ಲಿಯೂ 250 ಮಿ.ಲೀ ನಷ್ಟು ಶುದ್ಧ $o_2$ನ್ನು ಉಚ್ಛ್ವಸಿಸುತ್ತಾನೆ ಮತ್ತು ಸುಮಾರಾಗಿ ಅಷ್ಟೇ $co_2$ ನ್ನು ನಿಶ್ವಸಿಸುತ್ತಾನೆ.

ಆಹಾರ ಪದಾರ್ಥಗಳ ಉತ್ಕರ್ಷಣೆಯಲ್ಲಿನ ಅತಿ ಮುಖ್ಯ ಉಪೋತ್ಪನ್ನ ಈ $co_2$. ಇವೆರಡು ಅನಿಲಗಳನ್ನು ರಕ್ತದಲ್ಲಿ ಒಯ್ಯುವ ಪ್ರಧಾನವಾಹನ ಅತಿ ಚಟುವಟಿಕೆ ಇರುವ ಹಿಮೋಗ್ಲೋಬಿನ್. ಇದೊಂದು ವಿಶಿಷ್ಟ ಸ್ವರೂಪದ ರಾಸಾಯನಿಕ ಪದಾರ್ಥ. ಜೀವವಿಕಾಸದ ಮುನ್ನಡೆಯಲ್ಲಿ ಜನಿಸಿರುವ ಒಂದು ಆಶ್ಚರ್ಯಕರ ವಸ್ತು. ಕೆಂಪು ರಕ್ತ ಕಣಗಳಲ್ಲಿ ಇದರ ಇರ್ಕೆ. ($o_2$) ಮತ್ತು ಹೀಮೊಗ್ಲೋಬಿನ್ನಿನಕ್ರಿಯೆ ವಿಪರ್ಯಯವೂ ಆಗಿದೆ.

$Hb + O_2$ $\qquad$ $HbO_2$

ಹಿಮೊಗ್ಲೋಬಿನ್ ಆಕ್ಸಿಜನ್ $\qquad$ (ಹಿಮೊಗ್ಲೋಬಿನ್ ಆಕ್ಸಿಜನ್)

95% ರಷ್ಟು $o_2$ನ್ನು ಈ ರೀತಿ ಒಯ್ಯಲಾಗುತ್ತದೆ. ಉಳಿದುದು ರಕ್ತದಲ್ಲಿ ಲೀನವಾಗಿರುವುದು. ರಕ್ತಕ್ಕೆ $o_2$ ಅಧಿಕವಾಗಿ ಸೇರಿದಂತೆ $co_2$ನ್ನು ಅದು ಹೊರದೂಡುವುದು; ವಿಲೋಮವಾಗಿ $co_2$ ಅಧಿಕವಾಗಿ ಸೇರಿದಂತೆ $o_2$ನ್ನು ಅದು ಹೊರದೂಡುವುದು (ಎರಡನೆಯ ಹೇಳಿಕೆಯ ಹೆಸರು ಬೋರ್ ಪರಿಣಾಮ, ಮೊದಲಿನದು ಇದರ ವಿಲೋಮೋಕ್ತಿ). ಬೋರ್ ಪರಿಣಾಮಾನುಸಾರ ರಕ್ತದಿಂದ ಹೊರದೂಡಲ್ಪಟ್ಟ $co_2$ ಊತಕಗಳಿಗೆ ಪೂರೈಕೆಗೊಳ್ಳುವುದು. ಬೋರನ ವಿಲೋಮ ಪರಿಣಾಮಾನುಸಾರ $co_2$ ಬಿಡುಗಡೆ ಹೊಂದಿ ಉಸಿರಾಟದ ಚಕ್ರ ಪೂರ್ಣವಾಗುತ್ತದೆ.

ಉಸಿರಾಟದ ಕೇಂದ್ರ ಹಾಗೂ ನಿಯಂತ್ರಣ: ಮಿದುಳಿನ ತಳಗಡೆಯ ಮಿದುಳುಕಾಂಡದಲ್ಲಿ (ಮೆಡುಲ ಆಬ್ಲಾಂಗೇಟ) ಒಂದು ಗಜ್ಜುಗ ಗಾತ್ರದ ವಿಶಿಷ್ಟ ಕೇಂದ್ರವಿದೆ. ನರತಂತುಗಳು



ಚಿತ್ರ 8. ಪುಪ್ಪುಸದಲ್ಲಿ ಇಂಗಾಲ ಡೈ ಆಕ್ಸೈಡು ಹೊರಬಿದ್ದು ಆಮ್ಲಜನಕ ಒಳಹೋಗುವಾಗ ರಕ್ತದಲ್ಲಾಗುವ ಮುಖ್ಯ ಬದಲಾವಣೆಗಳು

ಅಡ್ಡಾದಿಡ್ಡಿ ಹೆಣೆದುಕೊಡು ಒಂದು ಜಾಲ ಇಲ್ಲಿ ರಚಿತವಾಗಿದೆ. ಇದೇ ಉಸಿರಾಟದ ಕೇಂದ್ರ. 19ನೆಯ ಶತಮಾನದಲ್ಲಿಯೇ ಈ ಸಂಗತಿ ವೇದ್ಯವಾಯಿತು.

ಉಸಿರಾಟದ ಕೇಂದ್ರ ಉಸಿರಾಟವನ್ನು, ಆದ್ದರಿಂದ ಜೀವನವನ್ನೇ ನಿಯಂತ್ರಿಸುತ್ತದೆ; ಉಸಿರಾಟಕ್ಕೆ ಸಂಬಂಧಿಸಿದ ಸಕಲ ಸ್ನಾಯುಗಳ ಕ್ರಿಯೆಯನ್ನೂ ನಿಯಂತ್ರಿಸಿ ನಿರ್ವಹಿಸುವ ಕೇಂದ್ರವಿದು. ಇದರ ಕ್ರಿಯಾವಿಧಾನವನ್ನು ಅರಿಯಲು ಮೂರು ಪ್ರಯೋಗಗಳನ್ನು (ಪ್ರಾಣಿಗಳ ಮೇಲೆ) ಮಾಡಲಾಯಿತು: 1. ಕೆಲವು ನಿರ್ದಿಷ್ಟ ಭಾಗಗಳನ್ನು ತೆಗೆಯುವುದರ ಅಥವಾ ನಿರ್ಮೂಲನದ ಪರಿಣಾಮಗಳು; 2. ವಿದ್ಯುದಾಘಾತಗಳಿಂದ ಅಥವಾ ರಾಸಾಯನಿಕ ದ್ರಾವಣಗಳನ್ನು ಚುಚ್ಚುವುದರಿಂದ ಉಂಟಾಗುವ ಪ್ರಚೋದನೆಯ ಪರಿಣಾಮಗಳು; 3.ಚುರುಕಾಗಿರುವ ಎಲ್ಲ ನರಕಣಗಳಿಂದ ಏಳುವ ವಿದ್ಯುತ್ತಿನ ಆಘಾತಗಳನ್ನು (ಇಂಪಲ್ಸ್) ಗುರುತಿಸುವುದು. ಇಷ್ಟೆಲ್ಲ ಶೋಧನೆಗಳು ಆಗಿದ್ದರೂ ಉಸಿರಾಟದ ನರಕಣಗಳಲ್ಲಿ ಪ್ರಾರಂಭದಲ್ಲಿ ಆಘಾತಗಳು ಹೇಗೆ ಹುಟ್ಟುತ್ತವೆ, ಉಸಿರಾಟದ ಗತಿಗೆ ತಕ್ಕನಾಗಿ ಈ ಆಘಾತಗಳಲ್ಲಿ ತಾಳಗತಿ ಇರುವುದು ಹೇಗೆ ಎಂಬ ವಿವರಗಳು ತಿಳಿದಿಲ್ಲ., ಮೊದಲು ಆಘಾತಗಳು ಹುಟ್ಟಲು ಹಿಮ್ಮರಿವ ಚಟುವಟಿಕೆ (ರಿಫ್ಲೆಕ್ಸ್ ಆಕ್ಟಿವಿಟಿ) ಕಾರಣವಾಗಬಹುದು.



ಚಿತ್ರ 9. ಉಸಿರಾಟದ ತಾಳಗತಿಯನ್ನು ನಿಯಂತ್ರಿಸುವ ಕೇಂದ್ರಗಳೊಂದಿಗೆ ಇರುವ ನರಗಳ ಸಂಬಂಧ. ಗಾಳಿತಿಳಿವಿನ (ಗಾ). ನೀಳುಸಿರೆಳೆವ (ನೀ), ಉಸಿರು ಬಿಡುವ (ಉಬಿ) ಉಸಿರೆಳೆವ (ಉಎ), ಕೇಂದ್ರಗಳನ್ನು ತೋರಿಸಿದೆ. ಬೇರೆ ಬೇರೆ ಮಟ್ಟಗಳಲ್ಲಿ ಕತ್ತರಿಸಿದರೆ, ಉಸಿರಾಟದ ಮೇಲಿನ ಪರಿಣಾಮಗಳನ್ನೂ ತೋರಿಸಿದೆ.

ಯಾರಿಗಾದರೂ ಕಾಲಿಗೆ ಮುಳ್ಳು ತಗುಲಿದರೆ ನರದ ಆಘಾತಗಳು ಬೆನ್ನುಹುರಿ ಮೂಲಕ ಮೇಲೇರಿ ಚಾಲಕ ನರಕಣಗಳನ್ನು ಚೋದಿಸುವುದರಿಂದ ರಿಫ್ಲೆಕ್ಸ್ ಪ್ರತಿಕ್ರಿಯೆಯ ಫಲವಾಗಿ ಕಾಲನ್ನು ಮನುಷ್ಯ ತಾನಾಗಿ ಎತ್ತಿಕೊಳ್ಳುವನು. ಮಿದುಳುಕಾಂಡದ ಕೇಂದ್ರಗಳು ಸ್ವಯಂ ಕ್ರಿಯಾಶೀಲಗಳಲ್ಲ, ಕೇವಲ ಬೇರೆ ಬೇರೆ ಅರಿವಿನ ನರಗಳು ರಿಫ್ಲೆಕ್ಸ್ ಪ್ರತಿಕ್ರಿಯೆಯಾಗಿ ಚೋದಿಸುವುದರಿಂದ ಕೆಲಸ

ಮಾಡುತ್ತವೆಂದು ಮಾರ್ಷಲ್ ಹಾಲ್ ಹೇಳಿದ (1832). ಮೊಗಕ್ಕೆ ತಣ್ಣೀರನ್ನು ಎರಚಿದಾಗ, ಚಳಿಕೊರೆವ ನೀರಲ್ಲಿ ಮುಳುಗಿದಾಗ, ಪ್ರಯೋಗದ ಪ್ರಾಣಿಯಲ್ಲಿ ಕೆಲವು ನರಗಳನ್ನು ಕಿವುಚಿದಾಗಲೆಲ್ಲ ಸರಕ್ಕನೆ ಉಸಿರೆಳೆದುಕೊಳ್ಳುವ ಹಾಗೆ ಆಗುವುದೇ ಇದರ ಉದಾಹರಣೆ.



**ಚಿತ್ರ 10.** ನರಸೇತು, ಮಿದುಳುಕಾಂಡಗಳಲ್ಲಿರುವ 'ಉಸಿರಾಟ ಕೇಂದ್ರ' ಒಂದರ ಮೇಲೊಂದು ತೋರುವ ಬದಲಾಗಿ ಉಸಿರುಬಿಡುವ, ಉಸಿರೆಳೆವ ಕೇಂದ್ರಗಳನ್ನು ಬೇರೆಯಾಗಿ ತೋರಿಸಿದೆ. ಗಾಳಿತಿಳಿವಿನ (ಗಾ). ನೀಳುಸಿರೆಳೆವ (ನಿ), ಕೇಂದ್ರಗಳಿಗೂ ಇದಕ್ಕೂ ನಿಕಟ ಸಂಬಂಧಗಳಿವೆ.

ರಿಫ್ಲೆಕ್ಸ್ ಚಟುವಟಿಕೆ ಉಸಿರಾಟವನ್ನು ಗಮನಾರ್ಹವಾಗಿ ಪ್ರಭಾವಗೊಳಿಸಿದರೂ ಅದೇ ಉಸಿರಾಟದ ಪ್ರಧಾನ ಪ್ರೇರಕವಲ್ಲ ಎಂದು ಮುಂದಿನ ಪ್ರಯೋಗಗಳಿಂದ ತಿಳಿಯಿತು.

ಉಸಿರಾಟದ ರಾಸಾಯನಿಕ ನಿಯಂತ್ರಣ; ಮೈಗೆ $o_2$ ಅನ್ನು ಒದಗಿಸಿ $co_2$ ಅನ್ನು ವಿಸರ್ಜಿಸುವುದು ಉಸಿರಾಟದ ಕೆಲಸ. ಒಂದು ಜೀವಿಯ ದೇಹದಲ್ಲಿರುವ ಬಲು ಸಂಕೀರ್ಣ ಅವಯವಗಳ ಉಳಿವಿಗೆ ಅತ್ಯಾವಶ್ಯಕವಾದ ಆಂತರಿಕ ಪರಿಸರದ ಸ್ಥಿತಿಯನ್ನು ಕಾಯ್ದಿಡುವುದರಲ್ಲಿ ಈ ವ್ಯವಸ್ಥೆಯ ಪಾತ್ರ ಬಲು ಪ್ರಮುಖವಾದದ್ದು. ಪರಿಸರದಲ್ಲಿ $o_2$ವಿನ ಕೊರತೆ ಮತ್ತು $co_2$ವಿನ ಏರಿಕೆ ಆಗದಂತೆ ಅದು ಎಚ್ಚರಿಕೆ ವಹಿಸುವುದು. ಉಚ್ಛ್ವಾಸದ ಪರಿಮಾಣವನ್ನು ನಿಯಂತ್ರಿಸಲು ಯುಕ್ತವಾಗಿ ಸ್ಪಂದಿಸಿ ಉಸಿರಾಟ ವ್ಯವಸ್ಥೆಯನ್ನು ಸೂಕ್ತವಾಗಿ ನಿಯಂತ್ರಿಸಲು ಸಮರ್ಥವಾಗುತ್ತದೆ – ಇದೊಂದು ವಿಧದ ರಾಸಾಯನಿಕ ಕ್ರಿಯೆ. ಆದ್ದರಿಂದ ಇದನ್ನು ಉಸಿರಾಟದ ರಾಸಾಯನಿಕ ನಿಯಂತ್ರಣ ಎಂದೇ ಕರೆಯುವುದುಂಟು. ಒಂದು ಕೋಣೆಯೊಳಗಿನ ಉಷ್ಣತೆಯನ್ನು ಉಷ್ಣನಿಯಂತ್ರಕ ಒಂದೇ ಮಟ್ಟದಲ್ಲಿ ಇರಿಸುವಂಥ ಒಂದು ಕಾರ್ಯ ಉಸಿರಾಟದ ರಾಸಾಯನಿಕ ನಿಯಂತ್ರಣ.

ಕೆಲವೇ ಮಿನಿಟುಗಳ ಹೊತ್ತು $co_2$ ಇಲ್ಲದಂತಾದರೆ ಮಾನವ ಸಾಯುವನಾದರೂ ಪುಪ್ಪುಸದ ಗಾಳಿಯಾಟವನ್ನು $o_2$ ವಿಗಿಂತಲೂ $co_2$ವಿನ ಒತ್ತಡ ನಿಯಂತ್ರಿಸುವುದೆಂದು ಹಾಲ್ಡೇನ್ ಮತ್ತು ಪ್ರೀಸ್ಟ್ಲಿ ಕಂಡುಹಿಡಿದರು (1905). ಧಮನಿಯ ರಕ್ತದಲ್ಲಿರುವ $o_2$ ಮತ್ತು $co_2$ವಿನ ಒತ್ತಡಗಳಷ್ಟೇ ಇರುವ ಗಾಳಿಗೂಡಿನ ಅನಿಲವನ್ನು ಪಡೆವ ಒಂದು ವಿಧಾನವನ್ನು ತಯಾರಿಸಿ ಕಡಲಮಟ್ಟದಿಂದ ಬೇರೆ ಬೇರೆ ಎತ್ತರಗಳಲ್ಲೂ ಆಮೇಲೆ ಬೇರೆ ಬೇರೆ ಭಾರಮಾಪಕ ಒತ್ತಡಗಳಲ್ಲೂ ಕೊನೆಗೆ ಕೆಲವು ಉಸಿರಾಟದ ಬೇನೆಗಳ ಚಿಕಿತ್ಸೆಗಾಗಿ ಜೋಡಿಸಿದ ಒತ್ತುಗಾಳಿಕೋಣೆಗಳಲ್ಲೂ ಆರೋಗ್ಯವಂತರಿಂದ ಪಡೆದ ನೂರಾರು ಮಾದರಿಗಳ ಬಿಡಿಪರೀಕ್ಷೆ ಮಾಡಿದರು. ಈ ಪ್ರಯೋಗಗಳು ಉಸಿರಾಟದ ಶರೀರ ಕ್ರಿಯಾವಿಜ್ಞಾನದಲ್ಲಿ (ಫಿಸಿಯಾಲಜಿ) ಹೆಸರಾಗಿವೆ. ಸೇದಿಕೊಳ್ಳುವ ಉಸಿರಿಗೆ ತುಸು $co_2$ನ್ನು ಸೇರಿಸಿದಾಗ ಇದು ಇನ್ನಷ್ಟು ದಿಟವೆನ್ನಿಸಿತು 3% ನ್ನು ಸೇರಿಸಿದಾಗ ಪುಪ್ಪುಸದ ಗಾಳಿಯಾಟ ದುಪ್ಪಟ್ಟಾಯಿತು. ಕೊಂಚ $co_2$ ವನ್ನು ಸೇರಿಸಿದರೇ ಗಾಳಿಯಾಟ ಎರಡರಷ್ಟಾದರೆ $co_2$ವಿನ ಪರಿಮಾಣವನ್ನು ಇಳಿಸಿದರೆ ಉಸಿರೇ ನಿಲ್ಲಬೇಕೆಂದು ಹಾಲ್ಡೇನ್ ಶಂಕಿಸಿದ. ಇದಕ್ಕಾಗಿ ಕೆಲವರು ಬಲು ಆಳವಾಗಿ ಬೇಗ ಬೇಗನೆ ಉಸಿರಾಡುವಂತೆ ಮಾಡಿ ಗಾಳಿಗೂಡಲ್ಲಿರುವ $co_2$ವಿನ ಒತ್ತಡ



**ಚಿತ್ರ 11.** ಉಸಿರಾಟದ ಹತೋಟಿಯಲ್ಲಿ ಹಿಮ್ಮುರಿಗಳ ಪಾತ್ರ

ಎಂದಿನ 40 ಮಿ.ಮೀ ಮಟ್ಟದಿಂದ 10–15 ಮಿ.ಮೀ ಮಟ್ಟಕ್ಕೆ ಇಳಿಸಿದರು. ಹೀಗೆ ಎಷ್ಟು ಹೊತ್ತು ಇಳಿಸಿದ್ದರೋ ಅಷ್ಟು ಹೊತ್ತು (ಕೆಲವು ಮಿನಿಟುಗಳು) ಉಸಿರು ನಿಂತೇ ಹೋಗಿತ್ತು. ಇವರಿಗೆ 5% $co_2$ ಕೂಡಿದ ಗಾಳಿಯನ್ನು ಉಸಿರಾಡಲು ಕೊಟ್ಟಾಗ, ಉಸಿರು ನಿಲ್ಲಲಿಲ್ಲವಾದ್ದರಿಂದ ಈ ಅಂಶದ ಪಾತ್ರ ಖಚಿತವಾಯಿತು.

ಬಹಳವೆಂದರೆ $co_2$ ಉಸಿರಾಟದ ಬಲು ದುರ್ಬಲವಾದ ಚೋದಕ. ಏರಿಸಿದ $co_2$ ವಿನ ಪರಿಣಾಮಕರವಲ್ಲ ಎಂದು ಹಾಲ್ಡೇನ್ ಒತ್ತಿ ಹೇಳಿದ, 1800–2200ಮೀ ಗಳ ಎತ್ತರದಲ್ಲಿ ಆಗುವಂತೆ ಗಾಳಿಗೂಡಲ್ಲಿರುವ ಒತ್ತಡ ಎಂದಿನ 100 ಮಿ.ಮೀ. ಮಟ್ಟದಿಂದ 70 ಮಿ.ಮೀ.ಗಳಿಗೆ ಇಳಿವ ತನಕ ಪುಪ್ಪುಸದ ಗಾಳಿಯಾಟ ಹೆಚ್ಚಲಿಲ್ಲ. ಇಲ್ಲೂ ಏರುಸಿರಾಟಕ್ಕೆ $co_2$ ಕಾರಣವಲ್ಲ, ಏಕೆಂದರೆ $o_2$ ಕೊರೆಯಲ್ಲಿ ಅದರ ಒತ್ತಡ 10 ಮಿ.ಮೀ. ಮೀರಿ ತಗ್ಗಿರುವುದು, ಯಾರೂ ಮಾಡಿ ತೋರದದ್ದರೂ $o_2$ ಕೊರೆಯಿಂದ ಮಿದುಳುಕಾಂಡದ ಉಸಿರಾಟದ ಕೇಂದ್ರದಲ್ಲಿ ತಯಾರಾಗುವ ಲ್ಯಾಕ್ಟಿಕ್ ಆಮ್ಲ ಚೋದಕವಾಗಿರಬಹುದೆಂಬ ಸೂಚನೆ ಬಂದಿತು. ಆದರೆ ಈ ಕೇಂದ್ರದಲ್ಲಿ $co_2$ ಹೆಚ್ಚಿನ ಪ್ರಭಾವ ತೋರುವುದೆಂದು ಎಷ್ಟೋ ಕಾಲದಿಂದ ತಿಳಿದಿದೆ. ಆದ್ದರಿಂದ $o_2$ ಕೊರೆಯೂ ಅಲ್ಲೇ ವರ್ತಿಸಬೇಕು. ಕುತ್ತಿಗೆಯಲ್ಲಿರುವ ತಲೆಗೊರಳ (ಕ್ಯಾರೊಟಿಡ್) ಧಮನಿಗಳಿಂದ ಏಳುವ ಉಸಿರಾಟದ ಹಿಮ್ಮುರಿಗಳು ಇರುವುದನ್ನು ಸಿ.ಹೇಮನ್ಸ್ ಮತ್ತು ಅವನ ಸಂಗಡಿಗರು ತೋರುವ ತನಕ (1930) ಇದು ಖಚಿತವಿರಲಿಲ್ಲ. ಸಾಮಾನ್ಯ ತಲೆಗೊರಳ ಧಮನಿ ಒಳಗಣ ಹೊರಗಣ ಕವಲುಗಳಾಗುವೆಡೆಯಲ್ಲಿ ಮೊದಲಾಗಿ ರಕ್ತದ ಒತ್ತಡವನ್ನು ನಿಯಂತ್ರಿಸುವುದರಲ್ಲೂ ಉಸಿರಾಟದ ಮೇಲಿನ ಪ್ರಭಾವದಲ್ಲೂ ಮುಖ್ಯವೆನಿಸುವ ಒತ್ತಡಗ್ರಾಹಕಗಳ (ಪ್ರೆಸ್ಸೋರಿಸೆಪ್ಟರ್ಸ್) ಒಂದು ಸಮುದಾಯವಿದೆ. ಎರಡನೆಯದಾಗಿ ಧಮನಿಯ ರಕ್ತದಲ್ಲಿನ $o_2$ ಒತ್ತಡದಿಳಿತಕ್ಕೂ ಕೊಂಚಮಟ್ಟಿಗೆ $co_2$ವಿನ ಒತ್ತಡದೇರಿಕೆಗೂ ಆಮ್ಲತೆಗೂ ಈಡಾಗುವ ರಸಾಯನ ಗ್ರಾಹಕಗಳ (ಕೆಮೊರಿಸೆಪ್ಟರ್ಸ್) ಒಂದು ಸಮುದಾಯವೂ ಅಲ್ಲಿದೆ. ಮಹಾಧಮನಿಯ (ಅಯೋರ್ಟ) ಕಮಾನಿನಲ್ಲೂ ಇದೇ ತೆರನ ಒತ್ತಡ ಮತ್ತು ರಸಾಯನ ಗ್ರಾಹಕಗಳ ಸಮುದಾಯಗಳಿವೆ. ಈ ತಲೆಗೊರಳಿನ ಮಹಾಧಮನಿಯ ಸಮುದಾಯಗಳಲ್ಲಿ ದುಂಡನೆಯ ಮೇಲ್ಪೊರೆಯಿಂದ (ಎಪಿಥೀಲಿಯಾಯ್ಡ್) ಗ್ರಾಹಕ ಜೀವಕಣಗಳೂ ಅಪಾರ ನರಗಳೂ ಧಮನಿ ರಕ್ತದ ವಿಪರೀತ ಪೂರೈಕೆಯೂ ಇವೆ. ರಕ್ತದಲ್ಲಿನ $co_2$ರ ಒತ್ತಡ ಸಾಕಷ್ಟು ಇಳಿದಕೂಡಲೇ ಗ್ರಾಹಕಗಳ ಜೀವಕಣಗಳಲ್ಲಿ ಆಘಾತಗಳು ಹುಟ್ಟುತ್ತವೆ. ಇವು ಮಿದುಳುಕಾಂಡದ ಉಸಿರಾಟದ ಕೇಂದ್ರಗಳಿಗೆ ನರಗಳ ಮೂಲಕ ಸಾಗಿ ಆ ಕೇಂದ್ರಗಳ ಚಟುವಟಿಕೆಯನ್ನು ಏರಿಸಿ ಪುಪ್ಪುಸದ ಗಾಳಿಯಾಟ ವನ್ನು ಹೆಚ್ಚಿಸುವುವು. ಮಾನವನಲ್ಲಿ ಇರುವುದರ ಅದಲುಬದಲಾಗಿ ಹಲ್ಲಿಗಳು, ಹಾವುಗಳು, ಮೀನುಗಳಲ್ಲಿ ಉಸಿರಾಟದ ನಿಯಂತ್ರಣಕ್ಕೆ $co_2$ಗಿಂತಲೂ $o_2$ವಿನ ಒತ್ತಡವೇ ಕಾರಣ.

**ಉಸಿರಾಟದ ಕೇಂದ್ರಕ್ಕೆ ದೊರೆಯುವ ರಾಸಾಯನಿಕ ಚೋದನೆಯ ಸ್ವರೂಪ:**

ಉಸಿರಾಟದ ಹತೋಟಿಯಲ್ಲಿ $co_2$ವಿನ ಮುಖ್ಯಪಾತ್ರವನ್ನು ಹಾಲ್ಡೇನ್ ತೋರಿಸಿದ ಮೇಲೆ ಶರೀರವಿಜ್ಞಾನಿಗಳು ಅದರ ಕೆಲಸದ ವಿಧಾನವನ್ನು ತಿಳಿಯಲು ಯತ್ನಿಸಿದರು. ಧಮನಿಯಲ್ಲಿನ ಒತ್ತಡದೊಂದಿಗೆ ಆಮ್ಲತೆಯ ಏರಿಕೆಯನ್ನೂ ಹೊಸ ತಂತ್ರಗಳಿಂದ ಅಳೆವಂತಾದ ಮೇಲೆ $co_2$ವಿನ ಒತ್ತಡಕ್ಕಿಂತಲೂ ಧಮನಿಯ ಹೈಡ್ರೊಜನ್ ಅಯಾನಿನ ಸಾಂದ್ರತೆಯಿಂದಲೇ ಪುಪ್ಪುಸದ ಗಾಳಿಯಾಟದ ನಿಯಂತ್ರಣ ಆಗುವುದೆಂದು ಎಚ್.ವಿಂಟರ್‌ಸ್ಟೀನೂ ಹಾಲ್ಡೇನೂ ನಂಬಿದರು. ಸಿಹಿಮೂತ್ರದಲ್ಲಿ (ಡಯಬೆಟೀಸ್) ಇದ್ದಂತೆ ಜೀವವಸ್ತುಕರಣದ ಆಮ್ಲತೆಯಲ್ಲಿ $co_2$ ವಿನ ಒತ್ತಡ ಎಂದಿನ 40 ಮಿ.ಮೀ. ಮಟ್ಟಕ್ಕಿಂತ ತಗ್ಗಿದರೂ ಉಸಿರಾಟ ಹೆಚ್ಚುವುದು ಈ ವಿಚಾರಕ್ಕೆ ಒತ್ತಾಸೆಯಾಯಿತು. ಇನ್ನೂ ಕೆಲವು ಪ್ರಯೋಗಗಳಿಂದ ತಿಳಿದುಬಂದಿರುವಂತೆ $co_2$ ರಕ್ತದ ಆಮ್ಲತೆಯನ್ನು ಹೆಚ್ಚಿಸುವ ಗುಣದೊಂದಿಗೆ ಉಸಿರಾಟವನ್ನು ಚೆನ್ನಾಗಿ ಚೋದಿಸುವುದು ಎನ್ನಬಹುದು. ಎಂ.ಎಚ್. ಜೇಕಬ್ಸನ ಪ್ರಯೋಗಗಳಿಂದ (1920) ಉಸಿರಾಟದ ಕೇಂದ್ರದ ಜೀವಕಣದೊಳಗಿನ ಆಮ್ಲತೆಯೂ ಧಮನಿಯ ರಕ್ತದಲ್ಲಿರುವುದೂ ತೀರ ಬೇರೆ ಬೇರೆ ಆಗಿರಬಹುದೆಂದು ಗೊತ್ತಾಗಿದೆ.

ಇಷ್ಟೆಲ್ಲ ಶೋಧನೆಗಳಾದರೂ ಉಸಿರಾಟ ಕೇಂದ್ರಕ್ಕೆ ಮತ್ತೆಲ್ಲೂ ಕಾಣದ ರಾಸಾಯನಿಕ ಚೋದನೆಯ ವಿಚಾರವಾಗಿ ಎರಡು ಅಭಿಪ್ರಾಯ ತಂಡಗಳಿವೆ. ನೀಲ್ಸನ್ ಮುಂದಾಳಾಗಿರುವ ಒಂದು ತಂಡದವರು $co_2$ ವಿನ ಆಂಶಿಕ ಒತ್ತಡವೇ ಚೋದನೆ ಎನ್ನುವರು. ಆಮ್ಲತೆಯಿಂದ ಉಸಿರಾಟಕೆ ಕೇಂದ್ರ $co_2$ವಿನ ಒತ್ತಡಕ್ಕೆ ಇನ್ನೂ ಸುಲಭವಾಗಿ ಈಡಾಗುವುದೇ ಜೀವವಸ್ತುಕರಣದ ಆಮ್ಲತೆಗೆ ಕಾರಣ ಎನ್ನುತ್ತಾರೆ. ಇನ್ನೊಂದು ತಂಡದವರು ಜೀವಕಣದೊಳಗಣ ಕ್ಷಾರಾಮ್ಲಾಂಕ ಕಾರಣ ಎನ್ನುವರು, ಈ ಸಿಕ್ಕನ್ನು ಬಿಡಿಸಲು ಜೆ.ಎಸ್.ಗ್ರೇ. ಎಂಬಾತ ಹಲವು ಅಂಶಗಳ ಕಲ್ಪನೆಯನ್ನು ಮುಂದಿಟ್ಟಿದ್ದಾನೆ. ಒಂದೊಂದು ರಾಸಾಯನಿಕ ಚೋದನೆಯೂ ಒಂದೊಂದು ಬಗೆ. ಒಂದು ಮಟ್ಟದ ಉಸಿರಾಟಕ್ಕೆ $co_2$ವಿನ ಒತ್ತಡ, ಆಮ್ಲತೆ, $o_2$ ಕೊರೆಯಲ್ಲಿ $o_2$ವಿನ ಆಂಶಿಕ ಒತ್ತಡ ಹೀಗೆ ಗೊತ್ತಾದ ಚೋದನೆಗಳ ಸಂಕಲಿತ ಪ್ರಭಾವವೇ ಕಾರಣ. ಗ್ರೇ ಹೇಳಿದಂತೆ ಯಾವುದೊಂದೂ ಚೋದನೆಯಿಲ್ಲ. ಆದರೆ ಮೂರೂ ಸೇರಿದರೆ ಪ್ರಭಾವ ತೋರುವುದು. (ವಿ.ಆರ್.ವಿ.ಎಚ್.)

**ಸಸ್ಯಗಳಲ್ಲಿ ಉಸಿರಾಟ:** ಮೂಲತತ್ತ್ವದಲ್ಲಿ ಪ್ರಾಣಿಗಳಲ್ಲಿನ ಉಸಿರಾಟಕ್ಕೂ ಸಸ್ಯಗಳಲ್ಲಿನ ಉಸಿರಾಟಕ್ಕೂ ವ್ಯತ್ಯಾಸವಿಲ್ಲ–ಗಾಳಿಯಿಂದ ಆಕ್ಸಿಜನ್ನನ್ನು ಸ್ವೀಕರಿಸಿ ಆಂತರಿಕ ಉತ್ಕರ್ಷಣಕ್ರಿಯೆಗಳಲ್ಲಿ ಅದನ್ನು ಬಳಸಿಕೊಂಡು ಶಕ್ತಿಯನ್ನೂ ಕಾರ್ಬನ್ ಡೈಆಕ್ಸೈಡ್ ಮುಂತಾದ ಉಪೋತ್ಪನ್ನಗಳನ್ನೂ ವಿಸರ್ಜಿಸುವುದು. ಉಸಿರಾಟದ ವಿಧಾನ ಮಾತ್ರ ಬೇರೆ. ಪುಪ್ಪುಸಗಳು, ಕಿವಿರುಗಳು ಮುಂತಾದ ಉಸಿರಾಟದ ವಿಶಿಷ್ಟ ಅವಯವಗಳು ಸಸ್ಯಗಳಲ್ಲಿಲ್ಲ. ಸಸ್ಯದ ಪ್ರತಿಯೊಂದು ಜೀವಕೋಶವೂ ನೇರವಾಗಿಯೇ ಉಸಿರಾಟ ಕ್ರಿಯೆಯಲ್ಲಿ ಭಾಗವಹಿಸುತ್ತದೆ. ಇಲ್ಲಿ ಉಸಿರಾಟದ ಬಹಿರಂಗ ಪ್ರಮಾಣವೆಂದರೆ ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡುಗಳ ವಿನಿಮಯ. ಸಾಮಾನ್ಯವಾಗಿ ಬಹುಪಾಲು ಸಸ್ಯಗಳಲ್ಲಿ ಉಸಿರಾಟ $o_2$ ನೆರವಿನಿಂದಲೇ ನಡೆಯುತ್ತದೆ. ಇದಕ್ಕೆ ವಾಯುಶ್ವಸನ ಉಸಿರಾಟ (ಏರೋಬಿಕ್ ರೆಸ್ಪಿರೇಷನ್) ಎಂದು ಹೆಸರು. ಕೆಲವು ಬ್ಯಾಕ್ಟೀರಿಯಾ, ಯೀಸ್ಟ್ ಸಸ್ಯ – ಇವುಗಳಲ್ಲಿ $o_2$ ನೆರವಿಲ್ಲದೇ ಉಸಿರಾಟ ನಡೆಯುತ್ತದೆ. ಇದು ಅವಾಯುಶ್ವಸನ (ಅನೇರೋಬಿಕ್) ಉಸಿರಾಟ.

ವಾಯುಶ್ವಸನ ಉಸಿರಾಟ: ಇಲ್ಲಿ ನೆರವೇರುವ ಮುಖ್ಯ ಮತ್ತು ಅನಿವಾರ್ಯ ಕ್ರಿಯೆಯೆಂದರೆ ಆಹಾರವಸ್ತುವಿನ (ಸಾಮಾನ್ಯವಾಗಿ ಗ್ಲೂಕೋಸ್ ಮುಂತಾದ ಕಾರ್ಬೋಹೈಡ್ರೇಟುಗಳು) ಉತ್ಕರ್ಷಣೆ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಆಗಿ ಅದರ ಪರಿವರ್ತನೆ ಮತ್ತು ಶಕ್ತಿಯ ಬಿಡುಗಡೆ. ಉತ್ಕರ್ಷಣಕ್ರಿಯೆಗೆ ಅಗತ್ಯವಾದ ಆಕ್ಸಿಜನ್ನನ್ನು ಸಸ್ಯ ತನ್ನ ಪರಿಸರದಿಂದ ಪಡೆಯುತ್ತದೆ.

$$C_6H_{12}O_6+6O_2 \rightarrow 6CO_2+6H_2O+673 \text{ ಕಿ.ಕ್ಯಾಲೊರಿಗಳು}$$

ಮೇಲಿನ ಸಾಂಕೇತಿಕ ನಿರೂಪಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದು ದ್ಯುತಿಸಂಶ್ಲೇಷಣ ಕ್ರಿಯೆಯ ವಿರುದ್ಧವಾಗಿದೆಯೆಂದು ತಿಳಿಯುವುದು. ಇದು ಹೇಗೇ ಇರಲಿ, ಉಸಿರಾಟ ಬಲು ಸಂಕೀರ್ಣ ಮತ್ತು ಹಲವಾರು ಬಗೆಯ ರಾಸಾಯನಿಕ ಕ್ರಿಯೆಗಳಿಂದ ಕೂಡಿದೆ. ಉತ್ಕರ್ಷಣೆಯ ಅಂಗವಾಗಿ ಹೊರಬರುವ ಉಷ್ಣರೂಪದ ಶಕ್ತಿಯನ್ನು ಸಸ್ಯ ಕ್ರಮೇಣ ಹಂತಹಂತವಾಗಿ ಪಡೆದು ತನ್ನ ವಿವಿಧ ಚಟುವಟಿಕೆಗಳಿಗೋಸ್ಕರ ಸಂಗ್ರಹಿಸಿಟ್ಟು ಬೇಕಾದಾಗ ಬಳಸಿಕೊಳ್ಳುವುದು. ಬೆಳವಣಿಗೆ, ಕಾಂಡದಲ್ಲಿ ರಾಸಾಯನಿಕಗಳ ಸಾಗಣೆ, ಹಲವಾರು ಸಂಶ್ಲೇಷಣ ಕಾರ್ಯಗಳು ಮುಂತಾದುವು ಸಸ್ಯದ ಪ್ರತಿಯೊಂದು ಜೀವಕೋಶದ ನೂರಾರು ವಿಶೇಷ ಕಣಗಳಲ್ಲಿ ಅಡಕವಾಗಿರುವ ಕೆಲವು ವಿಶಿಷ್ಟ ರೀತಿಯ ಕಿಣ್ವಗಳು (ಎಂಜೈಮುಗಳು) ನಿಯಂತ್ರಿಸುತ್ತವೆ. ಈ ಕಣಗಳಿಗೆ ಮೈಟೊಕಾಂಡ್ರಿಯಗಳೆಂದು ಹೆಸರು. ಉಸಿರಾಟದ ಮುಖ್ಯ ಹಂತಗಳು ಮೈಟೋಕಾಂಡ್ರಿಯಗಳಲ್ಲೇ ನಡೆಯುತ್ತವೆನ್ನಲಾಗಿದೆ.

ಸಾಮಾನ್ಯವಾಗಿ ಉಸಿರಾಟದಲ್ಲಿ ಕಾರ್ಬೋಹೈಡ್ರೇಟುಗಳು ಮಾತ್ರವೇ ಭಾಗವಹಿಸುವುವಾದರೂ ಕೆಲವು ಬಾರಿ ಪ್ರೋಟೀನ್ ಮತ್ತು ಕೊಬ್ಬುಗಳು ಸೇರುವುದುಂಟು. ಕಾರ್ಬೋಹೈಡ್ರೇಟುಗಳು ಭಾಗವಹಿಸಿದಾಗ ಬಳಕೆಯಾಗುವ $o_2$ ಪರಿಮಾಣ ವಿಸರ್ಜಿತವಾಗುವ $co_2$ ವಿನ ಪರಿಮಾಣಕ್ಕೆ ಸಮನಾಗಿದೆ. (ಅಂದರೆ ಈ ಪರಿಮಾಣಗಳ ನಿಷ್ಪತ್ತಿ 1:1 ಎಂದಾಯಿತು), ಬದಲಾಗಿ ಸಾವಯವಾಮ್ಲಗಳು (ಆರ್ಗ್ಯಾನಿಕ್ ಆ್ಯಸಿಡ್ಸ್) ಭಾಗವಹಿಸಿದಾಗ ನಿಷ್ಪತ್ತಿಯ ಬೆಲೆ 1ಕ್ಕಿಂತ ಹೆಚ್ಚಾಗಿರುವುದು. ಈ ನಿಷ್ಪತ್ತಿಯ ಹೆಸರು ಉಸಿರಾಟದ ಗುಣಾಂಕ. ಒಂದು ಸಸ್ಯದ ಉಸಿರಾಟದಲ್ಲಿ ಬಳಕೆಯಾಗುವ ವಸ್ತು ಯಾವುದು ಎಂಬುದನ್ನು ಈ ಗುಣಾಂಕದ ಮೂಲಕ ಕಂಡುಹಿಡಿಯಬಹುದು.

**ಉಸಿರಾಟದ ದರ:** ಇದು ಬೇರೆ ಬೇರೆ ಅಂಗಗಳಲ್ಲಿ ಮತ್ತು ಅಂಗಾಂಶಗಳಲ್ಲಿ ಬೇರೆ ಬೇರೆ. ಜೀವಕೋಶಗಳು ತ್ವರಿತವಾಗಿ ವಿಭಜನೆ ಹೊಂದುತ್ತಿರುವ ಸ್ಥಳಗಳಾದ ಬೇರಿನ ತುದಿಗಳು, ಕಾಂಡದ ತುದಿಗಳು ಮೊಳೆಯತ್ತಿರುವ ಬೀಜಗಳು, ಇಲ್ಲೆಲ್ಲ ಸಾಮಾನ್ಯವಾಗಿ ಉಸಿರಾಟ ಏರು ದರದಲ್ಲಿರುವುದು. ಒಣಗಿದ ಬೀಜಗಳು, ಹಣ್ಣೆಲೆಗಳು ಇಲ್ಲೆಲ್ಲ ದರ ಕಡಿಮೆ. ಉಸಿರಾಟದ ದರವನ್ನು ನಿಯಂತ್ರಿಸುವ ಪ್ರಧಾನ ಅಂಶಗಳು – ವಾತಾವರಣದಲ್ಲಿರುವ ಆಕ್ಸಿಜನ್ ಪ್ರಮಾಣ, ಇಂಗಾಲದ ಡೈಆಕ್ಸೈಡಿನ ಪ್ರಮಾಣ, ಉಸಿರಾಟದಲ್ಲಿ ಬಳಕೆಯಾಗುವ ಆಹಾರ ವಸ್ತುಗಳ ದೊರಕುವಿಕೆ ಮತ್ತು ಉಷ್ಣತೆ.

ವಾತಾವರಣದಲ್ಲಿನ ಉಷ್ಣತೆ ಹೆಚ್ಚಿದಂತೆಲ್ಲಾ ಉಸಿರಾಟದ ದರವೂ ಹೆಚ್ಚುತ್ತದೆ. ಸಾಮಾನ್ಯವಾಗಿ $0^0$ ಸೆ. ನಿಂದ ಮೇಲಕ್ಕೆ ಉಷ್ಣತೆ ಹೆಚ್ಚಾದಂತೆ ಉಸಿರಾಟವೂ ಹೆಚ್ಚುತ್ತ ಬಂದು $30^0$–$40^0$ ಸೆ. ಗಳೊಳಗೆ ಅದರ ಪರಮಾವಧಿ ದರ ಹುಟ್ಟಿ ಅಲ್ಲಿಂದ ಮೇಲಕ್ಕೆ ಕುಂಠಿತಗೊಳ್ಳುತ್ತ ಹೋಗಿ ಕೊನೆಗೆ ನಿಂತೇ ಹೋಗುತ್ತದೆ. ಹೆಚ್ಚಿನ ಉಷ್ಣತೆಯಲ್ಲಿ ಉಸಿರಾಟ ನಿಲ್ಲಲು ಉಸಿರಾಟದ ಕಿಣ್ವಗಳು ವಿರೂಪಗೊಳ್ಳುವುದೇ ಕಾರಣ. ಸಾಮಾನ್ಯವಾಗಿ $0^0$–$45^0$ ಸೆ. ಉಷ್ಣತೆಯ ಶ್ರೇಣಿಯಲ್ಲಿ ಉಸಿರಾಟ ಪ್ರತಿ $10^0$ ಸೆ. ಉಷ್ಣತೆಯ ಹೆಚ್ಚಳಕ್ಕೆ ದ್ವಿಗುಣಗೊಳ್ಳುತ್ತದೆ. ವಾತಾವರಣದಲ್ಲಿನ $o_2$ವಿನ ಪ್ರಮಾಣ ಹೆಚ್ಚಾದಂತೆ ಉಸಿರಾಟವೂ ಹೆಚ್ಚುತ್ತ ಹೋಗುವುದೆಂದು ಕಂಡುಬಂದಿದೆ. ಉಸಿರಾಟದಲ್ಲಿ ಬಳಕೆಯಾಗುವ ಆಹಾರ ವಸ್ತುಗಳ (ಮುಖ್ಯವಾಗಿ ಕಾರ್ಬೋಹೈಡ್ರೇಟುಗಳು) ದೊರಕುವಿಕೆಯೂ ಒಂದು ಮುಖ್ಯವಾದ ಅಂಶ. ಅವುಗಳ ಪರಿಮಾಣ ಹೆಚ್ಚಿದಂತೆ ಉಸಿರಾಟವೂ ಹೆಚ್ಚಾಗುತ್ತದೆ. ಆದರೆ ಪರಿಸರದಲ್ಲಿನ $co_2$ವಿನ ಪ್ರಮಾಣ ಮಾತ್ರ ಉಸಿರಾಟದ ದರದ ವಿರುದ್ಧವಾದ ಪರಿಣಾಮವನ್ನುಮಾಡುತ್ತದೆ. $co_2$ ವಿನ ಪ್ರಮಾಣ ಹೆಚ್ಚಾದರೆ ಉಸಿರಾಟದ ದರ ಕಡಿಮೆಯಾಗುತ್ತದೆ.

ಉಸಿರಾಟಕ್ಕೆ ಅತ್ಯಗತ್ಯವಾದ $o_2$ವನ್ನು ಸಸ್ಯಗಳು, ಪರಿಸರದಿಂದ ಪಡೆಯುತ್ತವೆ. ಭೂಮಿಯ ಮೇಲಿನ ಸಸ್ಯಗಳು ತಮ್ಮ ಎಲೆಗಳ ಕೆಳಭಾಗದಲ್ಲಿರುವ ಅಸಂಖ್ಯಾತ ಅತಿ ಸೂಕ್ಷ್ಮವಾದ ರಂಧ್ರಗಳ (ಸ್ಟೋಮ) ಮುಖಾಂತರ $o_2$ನ್ನು ಹೀರಿಕೊಳ್ಳುತ್ತವೆ. ಉಸಿರಾಟದಲ್ಲಿ ಪ್ರಮುಖವಾಗಿ ವ್ಯಕ್ತವಾಗುವ ಅನಿಲಗಳ ವಿನಿಮಯ ಈ ರಂಧ್ರಗಳ ಮೂಲಕವೇ ನಡೆಯುವುದು. ಹಗಲಿನಲ್ಲಿ ಇವು ತೆರೆದುಕೊಂಡಿರುತ್ತವೆ. ರಾತ್ರಿಯಲ್ಲಿ ಸಾಮಾನ್ಯವಾಗಿ ಮುಚ್ಚಿಕೊಂಡಿರುತ್ತವೆ ಪ್ರತಿಯೊಂದು ರಂಧ್ರವೂ ಒಂದೊಂದು ಪುಟ್ಟ ಸ್ಥಳಾವಕಾಶಕ್ಕೆ ಪ್ರವೇಶದ್ವಾರ. ಅಲ್ಲದೆ ಎಲೆಯ ಒಳಗಡೆಯಿರುವ ಜೀವಕೋಶಗಳ ನಡುವೆ ಸಣ್ಣ ಅವಕಾಶಗಳಿದ್ದೂ ಅವೆಲ್ಲ ಪರಸ್ಪರ ಕೂಡಿಕೊಂಡಿರುತ್ತವೆ. ಹೀಗಾಗಿ ಎಲೆಗಳೊಳಗೆ ಬೇಕಾದಷ್ಟು ಸ್ಥಳಾವಕಾಶವಿದ್ದು ಅದರಲ್ಲೆಲ್ಲ $o_2$ ತುಂಬಿಕೊಳ್ಳಬಹುದಾಗಿದೆ. ಉಸಿರಾಟ ಸದಾಕಾಲ ನಡೆಯುತ್ತಿರುವುದರಿಂದ, ಸಸ್ಯಗಳು ಹಗಲಿನಲ್ಲಿ ರಂಧ್ರಗಳ ಮುಖಾಂತರ ವಾತಾವರಣದಿಂದ $o_2$ನ್ನು ಹೀರಿಕೊಂಡು ರಾತ್ರಿಯಲ್ಲಿ ಸ್ಥಳಾವಕಾಶಗಳಲ್ಲಿ ಶೇಖರವಾದ $o_2$ ವನ್ನು ಉಪಯೋಗಿಸಿಕೊಂಡು ಉಸಿರಾಟವನ್ನು ಸಾಗಿಸುತ್ತವೆ. ನೀರಿನಲ್ಲಿ ವಾಸಿಸುವ ಸಸ್ಯಗಳು ನೀರಿನಲ್ಲಿ ಕರಗಿರುವ $o_2$ ವನ್ನು ಉಪಯೋಗಿಸಿಕೊಳ್ಳುತ್ತವೆ.

**ಉಸಿರಾಟದ ಕ್ರಿಯಾತಂತ್ರ:** ಇದನ್ನು ನಾಲ್ಕು ಮುಖ್ಯ ಹಂತಗಳಾಗಿ ವಿಂಗಡಿಸಬಹುದು: 1. ಫಾಸ್ಫಾರಿಲೇಷನ್. 2. ಗ್ಲೈಕಾಲಿಸಿಸ್, 3. ಸಿಟ್ರಿಕ್ ಆಮ್ಲದ ಅಥವಾ ಕ್ರೆಬ್ಸ್ ಚಕ್ರ, 4.ಅಂತಿಮೋತ್ಕರ್ಷಣಗಳು(ಟರ್ಮಿನಲ್ ಆಕ್ಸಿಡೇಶನ್ಸ್). ಮೊದಲನೆಯ ಹಂತದಲ್ಲಿ ಕಾರ್ಬೋಹೈಡ್ರೇಟುಗಳು ಮುಖ್ಯವಾಗಿ ಗ್ಲೂಕೋಸ್ ಎರಡು ಫಾಸ್ಪೇಟ್ ಗುಂಪುಗಳೊಂದಿಗೆ ನಿರ್ದಿಷ್ಟ ರೀತಿಯಲ್ಲಿ ಕೂಡಿಕೊಂಡು ಫ್ರಕ್ಟೋಸ್ 1–6 ಡೈ ಫಾಸ್ಫೇಟ್ ಎಂಬ ವಸ್ತುವಾಗಿ ಮಾರ್ಪಾಟಾಗುತ್ತದೆ. ಆರಂಭದಲ್ಲಿ ಯಾವುದೇ ಕಾರ್ಬೋಹೈಡ್ರೇಟ್ ಇದ್ದರೂ ಅದು ಮೊದಲು ಗ್ಲೂಕೋಸ್ ಆಗಿ ಬದಲಾವಣೆ ಹೊಂದಿ ಆಮೇಲೆ ಫ್ರಕ್ಟೋಸ್–1–6, ಡೈ ಫಾಸ್ಫೇಟ್ ಆಗುತ್ತದೆ. ಎರಡನೆಯ ಹಂತವಾದ ಗ್ಲೈಕಾಲಿಸಿಸಿನಲ್ಲಿ ಮೇಲೆ ಹೇಳಿದ ವಸ್ತು ಎರಡಾಗಿ ಒಡೆದು ಎರಡು ಪೈರುವಿಕ್ ಆಮ್ಲದ ಅಣುಗಳಾಗಿ ಬದಲಾವಣೆ ಹೊಂದುತ್ತದೆ. ಮೂರನೆಯ ಹಂತದಲ್ಲಿ ಪೈರುವಿಕ್ ಆಮ್ಲ ಉತ್ಕರ್ಷಿಸುತ್ತದೆ. ಮೊದಲನೆಯದಾಗಿ ಅದು ಜೀವಕೋಶಗಳಲ್ಲಿ ಮೊದಲೇ ಉಪಸ್ಥಿತವಿರುವ ಆಕ್ಸಾಲ್ ಅಸಿಟಿಕ್ ಆಮ್ಲ ಎಂಬ ರಾಸಾಯನಿಕದೊಂದಿಗೆ ಸಂಯೋಗಿಸಿ ಸಿಟ್ರಿಕ್ ಆಮ್ಲವಾಗಿ ಪರಿವರ್ತನೆಗೊಳ್ಳುತ್ತದೆ. ಆಮೇಲೆ ಈ ಆಮ್ಲ ಹಲವಾರು ಹಂತಗಳಲ್ಲಿ ವಿಭಿನ್ನರೀತಿಯ ಆಮ್ಲಗಳಾಗಿ ಬದಲಾವಣೆಗೊಂಡು ಕೆಲವೊಂದು ನಿರ್ದಿಷ್ಟ ಹಂತಗಳಲ್ಲಿ ಹೈಡ್ರೊಜನ್ ಮತ್ತು $co_2$ನ್ನು ಕಳೆದುಕೊಂಡು ಮತ್ತೆ ಆಕ್ಸಾಲ್ ಅಸಿಟಿಕ್ ಆಮ್ಲದ ರೂಪಕ್ಕೆ ಬರುತ್ತದೆ. ಈ ಕಾರಣಕ್ಕಾಗಿಯೇ ಈ ಹಂತವನ್ನು ಸಿಟ್ರಿಕ್ ಆಮ್ಲದ ಚಕ್ರವೆಂದು ಕರೆಯುತ್ತಾರೆ. ಪ್ರತಿಯೊಂದು ಸಾರಿ ಹೈಡ್ರೊಜನ್ ಪರಮಾಣುಗಳು ಬಿಡುಗಡೆಯಾದಾಗಲೂ ಅವು ನಿಕೊಟಿನಮೈಡ್–ಅಡನೈನ್–ಡೈನ್ಯೂಕ್ಲಿಯೊಟೈಡ್ ಮತ್ತು ನಿಕೊಟಿನಮೈಡ್–ಅಡನೈನ್–ಡೈನ್ಯೂಕ್ಲಿಯೊಟೈಡ್ ಫಾಸ್ಫೇಟ್ (NAD ಮತ್ತು NADP) ಎಂಬ ವಸ್ತುಗಳೊಂದಿಗೆ ಸೇರಿಕೊಂಡು ಅವುಗಳನ್ನು ಅಪಕರ್ಷಿಸುತ್ತವೆ. ಇದರ ಜೊತೆಗೇ

ಶಕ್ತಿಯ ಸ್ವಲ್ಪ ಭಾಗವನ್ನೂ ಕೊಂಡೊಯ್ಯುತ್ತವೆ. ಹೀಗಾಗಿ ಮೊದಲು ಪೈರುವಿಕ್ ಆಮ್ಲದಲ್ಲಿದ್ದ ಶಕ್ತಿಯೆಲ್ಲ ಈಗ NAD ಮತ್ತು NADPಗಳಲ್ಲಿ ಅಡಕಗೊಳ್ಳುತ್ತದೆ. ನಾಲ್ಕನೆಯ ಹಂತದಲ್ಲಿ NAD ಮತ್ತು NADPಗಳಲ್ಲಿರುವ ಹೈಡ್ರೊಜನ್ ಹಂತ ಹಂತವಾಗಿ ಸೈಟೊಕ್ರೋಮ್ ಮತ್ತು ಫ್ಲೇವೋ ಪ್ರೋಟೀನ್ ಎಂಬ ವಸ್ತುಗಳ ಮುಖಾಂತರ $O_2$ ವರ್ಗಾವಣೆ ಹೊಂದಿ ನೀರಾಗಿ ಮಾರ್ಪಾಟಾಗುತ್ತದೆ. ಹಾಗೆಯೇ ಅವುಗಳಲ್ಲಿರುವ ಶಕ್ತಿಯ ಭಾಗ ಅಡೆನೊಸಿನ್ ಟ್ರೈ ಫಾಸ್ಫೇಟುಗಳೆಂಬ (ATP) ರಾಸಾಯನಿಕಗಳ ತಯಾರಿಕೆಯಲ್ಲಿ ಬಳಕೆಗೊಂಡು ಶಕ್ತಿಸಂಪನ್ನ ವಸ್ತುಗಳಾದ ATPಗಳು ತಯಾರಾಗುತ್ತವೆ. ಹೀಗೆ ಮೊದಲು ಗ್ಲೂಕೋಸ್ ಅಣುವಿನಲ್ಲಿದ್ದ ಶಕ್ತಿ ಉಸಿರಾಟ ಕ್ರಿಯೆಯ ಕೊನೆಗೆ ATPಗಳಿಗೆ ವರ್ಗಾವಣೆ ಹೊಂದಿರುತ್ತದೆ. ಒಂದು ಗ್ಲೂಕೋಸ್ ಅಣು ಸಂಪೂರ್ಣ ಉತ್ಕರ್ಷಿಸಿದಾಗ 38 ATP ಅಣುಗಳು ತಯಾರಾಗುತ್ತವೆ ಎಂದು ಲೆಕ್ಕ ಹಾಕಿದ್ದಾರೆ.

ಉಸಿರಾಟವನ್ನು ಮುಖ್ಯವಾಗಿ ನಾಲ್ಕು ಹಂತಗಳೆಂದು ವಿಂಗಡಿಸಲಾಗಿದ್ದರೂ ಪ್ರತಿಯೊಂದರಲ್ಲಿಯೂ ಹಲವಾರು ಸಣ್ಣ ಘಟ್ಟಗಳಿದ್ದು ಒಂದೊಂದನ್ನೂ ಒಂದೊಂದು ಬಗೆಯ ಕಿಣ್ವ ನಿಯಂತ್ರಿಸುತ್ತದೆ. (ಕೆ.ಬಿ.ಎಸ್.)

**ಉಸಿರಾಟದ ಮಂಡಲದ ಅಂಗರಚನೆ:** ಸ್ಥೂಲವಾಗಿ ಗಾಳಿ ಸಂಚರಿಸುವ ಮಾರ್ಗಗಳು, ಪುಪ್ಪುಸಗಳು ಮತ್ತು ಅವುಗಳಲ್ಲಿ ಗಾಳಿಯನ್ನು ತುಂಬುವ ಇತರ ಅವಯವಗಳು: ವಿವರವಾಗಿ—ಮೂಗು, ಗಂಟಲು, ಗಂಟಲುಕುಳಿ (ಫ್ಯಾರಿಂಕ್ಸ್), ಧ್ವನಿನಾಳ (ಲ್ಯಾರಿಂಕ್ಸ್), ಉಸಿರ್ನಾಳ (ಟ್ರೇಕಿಯಾ), ವಾಸನಾಂಗಗಳು, ಉಸಿರ್ನಾಳದ ಕವಲುಗಳು, ಗಾಳಿಯ ಗೂಡುಗಳು(ಪಲ್ಮನರಿ ಆಲ್ವಿಯೋಲೈ) ಪುಪ್ಪುಸಗಳು, ತಿದಿಯಂತಿರುವ ಎದೆಗೂಡು (ತೊರ್‍ಯಾಕ್ಸ್), ಕತ್ತು ಎದೆ ಹೊಟ್ಟೆಗಳ ಸ್ನಾಯುಗಳು ಮತ್ತು ವಪೆ, ಸ್ನಾಯುಗಳನ್ನು ನಿಯಂತ್ರಿಸುವ ಮಿದುಳ ಕಾಂಡ (ಮೆಡ್ಯುಲ ಆಬ್ಲಾಂಗೇಟ)—ಇವಿಷ್ಟರ ಸಮುದಾಯ (ಅನಾಟಮಿ ಆಫ್ ದಿ ರೆಸ್ಪಿರೇಟರಿ ಸಿಸ್ಟಂ). ವಪೆ ಸ್ನಾಯುಗಳ ಕುಗ್ಗುವಿಕೆಯಿಂದ ಎದೆ

ಚಿತ್ರ 1. ಉಸಿರಾಟದ ದಾರಿಗಳು

ಗೂಡು ಹಿಗ್ಗಿ ಮೂಗಿನ ಮೂಲಕ ಗಾಳಿ ನುಗ್ಗಿ ಪುಪ್ಪುಸಗಳನ್ನು ಉಬ್ಬಿಸುತ್ತದೆ. ಸ್ನಾಯುಗಳು ಸಡಿಲವಾದಾಗ ಎದೆಗೂಡು ಕುಗ್ಗಿ ಪುಪ್ಪುಸಗಳಲ್ಲಿರುವ ಗಾಳಿ ಹೊರಹೋಗುತ್ತದೆ.

ಉಸಿರಿನ ಮಾರ್ಗಗಳು: 1. ಮೂಗು (ನೇಸಲ್ ಕ್ಯಾವಿಟಿ): ಮೂಗಿನ ಒಳಭಾಗ ತಳದಲ್ಲಿ (ಬಾಯಂಗುಳದ ಮೇಲೆ) 5 ಸೆಂ.ಮೀ. ಉದ್ದ 5 ಸೆಂ.ಮೀ. ಅಗಲವಾಗಿದೆ. ಮೇಲ್ಭಾಗದ ಅಗಲ 5 ಮಿಮೀ. ಇದರ ಮಧ್ಯೆ ತೆಳು ಮೂಳೆಗಳು ಮತ್ತು ಮೃದ್ವಸ್ಥಿ (ಕಾರ್ಟಿಲೇಜ್) ಇರುವ ತಡಿಕೆ (ಸೆಪ್ಟಂ) ಇದೆ. ಪಕ್ಕಗಳಲ್ಲಿ ಸ್ವಲ್ಪ ಮಡಚಿಕೊಂಡ ಸುರುಳಿ ತೆಳುಮೂಳೆಗಳಿವೆ. (ಶಂಖ). ಮೂಗಿಗೆ ಸೇರಿದ ಮೂಳೆಗಳು ಒಟ್ಟು 11. ಇವನ್ನು ಬೆಚ್ಚಗಿರುವ ಕೆಂಪು ಲೋಳೆಪೊರೆ ಮುಚ್ಚಿದೆ. ಕೆಳಸುರುಳಿ ಮೂಳೆಗಳ ಮೇಲಿರುವ ಪೊರೆ ಹೆಚ್ಚು ರಕ್ತನಾಳಗಳಿಂದ ದಪ್ಪವಾಗಿದೆ. ಮೂಗಿನಲ್ಲಿ ಹೆಚ್ಚು ರಕ್ತನಾಳಗಳಿವೆ. ಇವುಗಳಲ್ಲಿ ಚಲಿಸುವ ಬಿಸಿರಕ್ತದಿಂದ ಉಚ್ಛ್ವಾಸದ ಗಾಳಿ ಬಿಸಿಯಾಗುತ್ತದೆ. ಅದಕ್ಕೆ ಹಬೆಯ ಅಂಶವೂ ಸೇರುತ್ತದೆ. ಲೋಳೆಪೊರೆಯ ಅಂಚಿನಲ್ಲಿ ಮತ್ತು ಹೊಳ್ಳೆಗಳಲ್ಲಿರುವ ಕೂದಲಲ್ಲಿ ದೂಳು ಮತ್ತು ಕ್ರಿಮಿಗಳು ಅಂಟಿಕೊಂಡು ಗಾಳಿ ಬಿಸಿಯಾಗುತ್ತದೆ. ಅದಕ್ಕೆ ಹಬೆಯ ಅಂಶವೂ ಸೇರುತ್ತದೆ. ಲೋಳೆಪೊರೆಯ ಅಂಚಿನಲ್ಲಿ ಮತ್ತು ಹೊಳ್ಳೆಗಳಲ್ಲಿರುವ ಕೂದಲಲ್ಲಿ ದೂಳು ಮತ್ತು



ಚಿತ್ರ 2. ಮೂಗಿನ ಪೊಳ್ಳಿನ ಒಂದು ಪಕ್ಕದ ಗೋಡೆ

ಕ್ರಿಮಿಗಳು ಅಂಟಿಕೊಂಡು ಗಾಳಿ ಶೋಧನೆಗೊಳ್ಳುತ್ತದೆ. ಮೂಗಿನ ಪಕ್ಕ ಮೂಳೆಗಳಲ್ಲಿ ಗಾಳಿಗೂಡುಗಳು (ಪ್ಯಾರನೇಸಲ್ ಏರ್ ಸೈನಸಸ್) ಧ್ವನಿವರ್ಧಕವಾಗಿ ಮೂಳೆಗಳನ್ನು ಹಗುರವಾಗಿಸಿ ಉಸಿರಿನ ಕಾವು ಹೆಚ್ಚಲು ಸಹಾಯಕವಾಗಿವೆ. ನೆಗಡಿಯಾದಾಗ ಈ ಗೂಡುಗಳಲ್ಲಿ ಕಫ ತುಂಬಿಕೊಂಡರೆ ಧ್ವನಿ ಕುಗ್ಗುವುದು. ಘ್ರಾಣೇಂದ್ರಿಯ ಗಾಳಿಯ ಪ್ರವಾಹದಲ್ಲಿಲ್ಲ; ಬದಲು ಮೇಲುಗಡೆ ಸುರಕ್ಷಿತವಾಗಿದೆ. ಗಾಳಿಯನ್ನು ಸ್ವಲ್ಪ ವೇಗದಿಂದ ತೆಗೆದುಕೊಂಡರೆ ವಾಸನೆ ಹೆಚ್ಚು ಚೆನ್ನಾಗಿ ತಿಳಿಯುತ್ತದೆ.

ಚಿತ್ರ 3. ದನಿನಾಳದ ಹೊರನೋಟ

2. ಗಂಟಲು ನಾಳ (ಫ್ಯಾರಿಂಕ್ಸ್). ಇದು ಆಹಾರ ಮತ್ತು ಗಾಳಿಗಳ ಮಾರ್ಗ. ನುಂಗುವಾಗ ಉಸಿರು ನಿಲ್ಲುತ್ತದೆ. ಉಸಿರಾಡುವಾಗ ನುಂಗಲಾಗುವುದಿಲ್ಲ. ಗಂಟಲಿನಲ್ಲಿ ಮೂಗು ಬಾಯಿ ಮತ್ತು ಧ್ವನಿನಾಳಗಳು ತೆರೆಯುತ್ತವೆ.

3. ಧ್ವನಿನಾಳ (ಲ್ಯಾರಿಂಕ್ಸ್). ಇದು ಕೂಗು ಕೊಳವೆ. ಇದರ ಭಿತ್ತಿಯಲ್ಲಿ ಮೃದ್ವಸ್ಥಿಗಳಿರುವುದ ರಿಂದ ಕೊಳವೆ ಚಪ್ಪಟೆಯಾಗದೆ ಗಾಳಿ ಸಲೀಸಾಗಿ ಓಡಾಡುವುದು. ಇದರೊಳಗೆ ಬಲ ಮತ್ತು ಎಡ ಧ್ವನಿ ತಂತುಗಳಿವೆ (ವೋಕಲ್ ಕಾರ್ಡ್ಸ್). ಧ್ವನಿ ಹೊರಡ ಬೇಕಾದಾಗ ಇವು ಒಂದುಗೂಡಿ ಒಂದು ಚಿಕ್ಕ ಕಿಂಡಿಯ (ಗ್ಲಾಟಿಸ್) ಮೂಲಕ ಗಾಳಿ ಹೊರಕ್ಕೆ ಒತ್ತಡದಿಂದ ಬರಬೇಕು. ಆಗ ಇವು ಕಂಪಿಸಿ ಹುಟ್ಟುತ್ತದೆ. ಮಾತಾಡುವಾಗ ಧ್ವನಿನಾಳವನ್ನು ಮುಟ್ಟಿದರೆ ಒಳಗೆ ಅದು ಕಂಪಿಸಿದ್ದನ್ನು ಸುವುದು ಗೊತ್ತಾಗುತ್ತದೆ. ಹೆಡೆಯಂತಿರುವ ಕಿರು ನಾಲಗೆ (ಎಪಿಗ್ಲಾಟಿಸ್) ಗಂಟಲಲ್ಲಿ ಗೋಮಾಳೆಯ (ಆ್ಯಡಮ್ಸ್ ಆಪಲ್) ಮೇಲಿದೆ.

4. ಉಸಿರ್ನಾಳ: ಇದು ಧ್ವನಿನಾಳದಿಂದ ಕೆಳಕ್ಕೆ ಮುಂದುವರಿಯುತ್ತದೆ. ಗಂಟಲಿನ ಮಧ್ಯೆ ಕೆಳಭಾಗದಲ್ಲಿ ಎದೆಚೆಕ್ಕೆಯ ಮೇಲೆ ಮೃದ್ವಸ್ಥಿ ಉಂಗುರಗಳು ಕೈಗೆ ಸಿಗುತ್ತವೆ. ಸ್ವಲ್ಪ ಅಮುಕಿದರೆ ಕೆಮ್ಮು ಹುಟ್ಟಬಹುದು. ಸುಮಾರು 14 ಮೃದ್ವಸ್ಥಿಯ ಉಂಗುರಗಳಿರುವುದರಿಂದ ನಾಳ ಮುಚ್ಚಿ ಕೊಳ್ಳುವುದಿಲ್ಲ; ತಡೆಯಿಲ್ಲದೆ ಓಡಾಡುತ್ತದೆ. ಉಸಿರ್ನಾಳ ಸಡಿಲವಾಗಿರುವುದರಿಂದ

ಅಕ್ಕಪಕ್ಕಕ್ಕೆ ಆಡಬಲ್ಲದು. ಸ್ನಾಯುಗಳಿಂದ ಉದ್ದವಾಗಿ ಸಣ್ಣಗಾಗಬಲ್ಲುದು ಅಥವಾ ಕುರುಚಾಗಬಲ್ಲದು. ಗಂಟಲಿನಲ್ಲಿ ಇದರ ಉದ್ದ 2.5 ಸೆಂಮೀ. ಮತ್ತು ಎದೆಯಲ್ಲಿ 7.5 ಸೆಂಮೀ. ವ್ಯಾಸ ಗಂಡಸಿನಲ್ಲಿ 2 ಸೆಂ.ಮೀ. ಹೆಂಗಸಿನಲ್ಲಿ 1.5 ಸೆಂಮೀ. ಇದರ ಮೇಲೆ ಕಿವಿಯಿಟ್ಟು ಅಥವಾ ಕೊಳವೆಯ ಮೂಲಕ ಆಲಿಸಿದರೆ ಉಸಿರಾಡುವು ದನ್ನು ಕೇಳಬಹುದು. ಗಾಳಿಯಲ್ಲಿ ಬತ್ತದ ಪೈರು ಆಡುವಂತೆ ಸಣ್ಣ ಕೂದಲಂತಿರುವ ಭಾಗಗಳು ಇದರ ಲೋಳೆಪೊರೆಯ ಮೇಲೆ ಕಫದೊಡನೆ ಧೂಳನ್ನು ಮೇಲಕ್ಕೆ ತಳ್ಳುತ್ತವೆ.



ಚಿತ್ರ 4. ದನಿನಾಳದ ಸೀಳುನೋಟ

ಮಹಾಧಮನಿ (ಅಯೋರ್ಟ) ಎಂಬ ದೊಡ್ಡ ರಕ್ತನಾಳ ಸಾಮಾನ್ಯವಾಗಿ ಸಿಫಿಲಿಸ್ ಎಂಬ ಮೇಹರೋಗದಿಂದ ಉಬ್ಬಿ ಗಾಳಿಕೊಳವೆಯನ್ನು ಅದುಮುವುದರಿಂದ ಉಸಿರಾಟ ಕಷ್ಟವಾಗುವುದು. ಅನ್ನನಾಳವನ್ನು ಅದುಮುವುದರಿಂದ ನುಂಗುವುದು ಕಷ್ಟವಾಗುವುದು ಮತ್ತು ರೆಕರೆಂಟ್ ಲ್ಯಾರಿಂಜಿಯಲ್ ನರ್ವ್ ಎಂಬ ಧ್ವನಿನಾಳದ ನರವನ್ನು ಅದುಮುವುದರಿಂದ ಧ್ವನಿ ಸರಿಯಾಗಿ ಹುಟ್ಟದೆ ಗಂಟಲು ಕಟ್ಟಿದಂತಾಗುವುದು.

5. ಉಸಿರ್ನಾಳದ ಶಾಖೆಗಳು (ಬ್ರೋಂಖೈ): ಎದೆಯ ಭಾಗದ ಉಸಿರ್ನಾಳ 7.5 ಸೆಂ.ಮೀ. ಇದೆ. ಇದು ಮೊದಲ ಬಲ ಮತ್ತು ಎಡ ಶಾಖೆಗಳಾಗಿ (ಪ್ರೈಮರಿ ಬ್ರೋಂಖೈ) ಒಡೆಯುತ್ತದೆ. ಬಲ ಶಾಖೆ ಬಲಪುಪ್ಫುಸ ದಲ್ಲೂ ಎಡಶಾಖೆ ಎಡಪುಪ್ಫುಸದಲ್ಲೂ ಎರಡೆರಡಾಗಿ 20–25 ಸಲ ಕವಲೊಡೆಯುತ್ತವೆ.

ಪುಪ್ಫುಸಗಳು (ಶ್ವಾಸಕೋಶಗಳು; ಲಂಗ್ಸ್): ಬಲ ಮತ್ತು ಎಡ ಎಂದು ಎರಡು ಎದೆಯ ಇಕ್ಕೆಲಗಳಲ್ಲಿವೆ. ಉಸಿರೆಳೆದಾಗ ಗಾಳಿ ತುಂಬುವುದರಿಂದ ಇವು ಉಬ್ಬುತ್ತವೆ. ಉಸಿರ್ನಾಳದ ಪ್ರತಿ ಸಣ್ಣ ಕೊನೆಯ ಶಾಖೆಗೆ ಹಲವು ಸಣ್ಣ ಗಾಳಿ ಬುಡ್ಡೆಗಳು ಸೇರಿಕೊಂಡಿವೆ. ಬುಡ್ಡೆಗಳ ಮೇಲೆ ಸೂಕ್ಷ್ಮ ರಕ್ತನಾಳಗಳ ಬಲೆಯಿದೆ. ಬಲೆಯ ಕಣ್ಣುಗಳು ನಾಳಗಳಿಗಿಂತ ಚಿಕ್ಕವು. ಬಲೆಯನ್ನು ತೆಳುವಾಗಿ ಹರಡಿದ್ದೇ ಆದರೆ ಅದರ ವಿಸ್ತೀರ್ಣ ಸಾವಿರಾರು ಚದರಡಿಗಳಷ್ಟೆಂದು ಲೆಕ್ಕ ಹಾಕಲಾಗಿದೆ. ಅಂದರೆ ರಕ್ತ ಬಹಳ ತೆಳುವಾಗಿಯೂ ವಿಶಾಲವಾ ಗಿಯೂ ಪುಪ್ಫುಸಗಳಲ್ಲಿ ಹರಡಲ್ಪಟ್ಟು ಗಾಳಿಗೆ ಒಡ್ಡಲಾಗುತ್ತದೆ. ಗಾಳಿಗೂ ರಕ್ತಕ್ಕೂ ನಡುವೆ ಇರುವ ಪೊರೆ ಬಲು ತೆಳು. ಇದರ ಮೂಲಕ ಪುಪ್ಫುಸಕ್ಕೆ ಬರುವ ಮಲಿನ ರಕ್ತದಲ್ಲಿ ಇಂಗಾಲದ ಡೈಆಕ್ಸೈಡ್ (ಇಂಗಾಲಾಮ್ಲ, $CO_2$) ಮತ್ತು ಉಷ್ಣ ಕ್ಷಣದಲ್ಲಿ ಗಾಳಿಯನ್ನು ಸೇರಿ ಗಾಳಿಯಲ್ಲಿ ಹೆಚ್ಚಿರುವ ಆಕ್ಸಿಜನ್ (ಆಮ್ಲಜನಕ, $O_2$) ರಕ್ತವನ್ನು ಸೇರುತ್ತದೆ. ರಕ್ತ ಹೃದಯದ (ಹಾರ್ಟ್) ಬಲಹೃತ್ಕುಕ್ಷಿಯಿಂದ (ರೈಟ್ ವೆಂಟ್ರಿಕಲ್) ಹೊರಟು ಪುಪ್ಫುಸಗಳಲ್ಲಿ ಕಲ್ಮಷಗಳನ್ನು ಕಳೆದುಕೊಂಡು ಆಕ್ಸಿಜನ್ನನ್ನು ಪಡೆದು ಎಡಹೃತ್ಕರ್ಣ ಮತ್ತು ಅಲ್ಲಿಂದ ಎಡಹೃತ್ಕುಕ್ಷಿ ಸೇರಿ ಮಹಾಧಮನಿಯ (ಅಯೋರ್ಟ) ಶಾಖೆಗಳಲ್ಲಿ ದೇಹದ ಎಲ್ಲ ಭಾಗಗಳಿಗೂ ಹೋಗಿ ಬಲಹೃತ್ಕರ್ಣಕ್ಕೆ ಹಿಂತಿರುಗುತ್ತದೆ. ಬಲ ಪುಪ್ಫುಸದಲ್ಲಿ ಹತ್ತು ಮತ್ತು ಎಡ ಪುಪ್ಫುಸದಲ್ಲಿ ಒಂಬತ್ತು ಉಸಿರ್ನಾಳಗಳ ಗೊಂಚಲುಗಳಿವೆ (ಬ್ರೋಂಖೋ ಪಲ್ಮನರಿ ಸೆಗ್ಮೆಂಟ್ಸ್). ಹಲವು ವೇಳೆ ಕ್ರಿಮಿರೋಗ ಒಂದು ಗೊಂಚಲಿನಲ್ಲೇ ಇರುವುದರಿಂದ ಅಷ್ಟನ್ನು ಮಾತ್ರ ಶಸ್ತ್ರಕ್ರಿಯೆಯಿಂದ ತೆಗೆದುಹಾಕಲು ಸಾಧ್ಯ. ದೊಡ್ಡ ಗೊಂಚಲುಗಳ ಸ್ಥಾನಗಳು ಪುಪ್ಫುಸಗಳ ಮೇಲೆ ಕಾಣುವುದಿಲ್ಲ. ಆದರೆ ಅವನ್ನು ಗುರುತಿಸಬಹುದು.


ಚಿತ್ರ 5. ದನಿನಾಳದ ತಂತುಗಟ್ಟುವುದು, ಹಿಂದಿನಿಂದ ಕಂಡಂತೆ



ಚಿತ್ರ 6. ಕನ್ನಡಿಯ ಮೂಲಕ ದನಿನಾಳದ ಒಳನೋಟ

ಪುಪ್ಫುಸದ ಮೇಲ್ಭಾಗ ಸಣ್ಣಗಿದೆ. ಕೆಳಭಾಗ ಅಗಲವಾಗಿದೆ. ಇದು ಉಬ್ಬಿ ಕುಗ್ಗಲು ಇದರ ಸುತ್ತಲೂ 2 ಪದರಗಳ ಅಳ್ಳೆಪೊರೆಯ ಚೀಲವಿದೆ (ಪ್ಲೂರಲ್ ಸ್ಯಾಕ್). ಹೊರಪೊರೆ ಎದೆಯ ಭಿತ್ತಿಗೆ ಮತ್ತು ಮಧ್ಯ ತಡಿಕೆಗೆ ಅಂಟಿಕೊಂಡಿದೆ. ಒಳಪೊರೆ ಪುಪ್ಫುಸಕ್ಕೆ ಅಂಟಿಕೊಂಡಿದೆ. ಪೊರೆಗಳ ನಡುವೆ ತೆಳುವಾಗಿ ಹರಡಿದ ಅಂಟು ನೀರಿದೆ. ಇದರಿಂದ ಒಳಪೊರೆ ಹೊರಪೊರೆಯ ಮೇಲೆ ನುಣ್ಣಗೆ ಉಜ್ಜಲು ಅನುಕೂಲವಾಗುತ್ತದೆ.

ಬಲಪುಪ್ಫುಸದಲ್ಲಿ ಮೂರು ಮತ್ತು ಎಡಪುಪ್ಫುಸದಲ್ಲಿ ಎರಡು ಹಾಲೆಗಳಿವೆ (ಲೋಬ್ಸ್). ಪುಪ್ಫುಸದ ಹೊರಪಕ್ಕ ಉಬ್ಬಿದೆ. ಒಳಪಕ್ಕ ಸುಮಾರಾಗಿ ಚಪ್ಪಟೆಯಾಗಿ ಹೃದಯ, ಅನ್ನನಾಳ, ಉಸಿರ್ನಾಳ ಮತ್ತು ದೊಡ್ಡ ರಕ್ತನಾಳಗಳಿರುವ ಎದೆಯ ಮಧ್ಯದ ತಡಿಕೆಯ (ಮೀಡಿಯಾಸ್ಟೈನಂ) ಮೇಲೆ ನುಣ್ಣಗೆ ಉಜ್ಜುತ್ತದೆ. ಒಳಪಕ್ಕದ ಮಧ್ಯೆಯಿರುವ ಪುಪ್ಫುಸನಾಭಿಯಲ್ಲಿ (ಹೈಲಂ ಆಫ್ ಲಂಗ್) ಉಸಿರ್ನಾಳದ ಬಲ ಅಥವಾ ಎಡಶಾಖೆ ಶುದ್ಧ ಮತ್ತು ಮಲಿನ ರಕ್ತನಾಳಗಳು ಹಾಯುತ್ತವೆ. ಪುಪ್ಫುಸದ ತಳ ವಪೆಯ ಮೇಲೆ ಆಡುತ್ತದೆ. ನಾಭಿಯ ಮಟ್ಟದಿಂದ ಕೆಳಕ್ಕೆ ಉಸಿರ್ನಾಳಗಳ $^2/_3$ ಭಾಗದಷ್ಟಿದೆ. ಪುಪ್ಫುಸಗಳಲ್ಲಿ ರೋಗವಿರುವ ಸ್ಥಳಗಳನ್ನು ಈಗಿನ ಮೂರು ವಿಧಾನಗಳಿಂದ ಕಂಡುಹಿಡಿಯಬಹುದು:



ಚಿತ್ರ 7. ದನಿತಂತುಗಳ, ಸಟ್ಟುಗಿ ಮೆಲ್ಲೆಲುಬುಗಳ ಚಲನೆಗಳು
1. ಸರಾಗದ ಉಸಿರಾಟದಲ್ಲಿ, 2. ಒತ್ತಿ ಉಸಿರು ಬಿಡುವಾಗ, 3. ಮಾತಾಡುವ ಮುನ್ನ

(i) ಎದೆಯ ಎಕ್ಸ್‌ಕಿರಣಚಿತ್ರಗಳನ್ನು ಪರೀಕ್ಷಿಸುವುದು. (ii) ಬ್ರಾಂಕೋಸ್ಕೋಪ್ ಎಂಬ ಕೊಳವೆಯಂತಿರುವ ದುರ್ಬೀನಿನ ಮೂಲಕ ಉಸಿರ್ನಾಳಗಳ ಬಾಯಿಗಳನ್ನು ನೇರವಾಗಿ ಕಣ್ಣಿನಿಂದ ನೋಡುವುದು. (iii) ಬ್ರಾಂಕೋಗ್ರಾಮ್ ಉಸಿರ್ನಾಳಗಳಲ್ಲಿ ಎಕ್ಸ್‌ಕಿರಣಗಳು ಕೂರಲಾಗದ ವಿಶೇಷದ್ರವವನ್ನು (ಸಾಧಾರಣವಾಗಿ ಸ್ವಲ್ಪ ಅಯೋಡೀನನ್ನು ಕರಗಿಸಿದ ಗಸಗಸೆ ಎಣ್ಣೆ) ತುಂಬಿ ಎದೆಯ ಎಕ್ಸ್‌ಕಿರಣ ಚಿತ್ರಗಳನ್ನು ತೆಗೆದು ಪರೀಕ್ಷಿಸುವುದು.

ಪುಪ್ಪುಸಗಳ ಸೂಕ್ಷ್ಮರಚನೆ: ಉಸಿರ್ನಾಳಗಳ ಕೊನೆಯ ಶಾಖೆಗಳ (ಟರ್ಮಿನಲ್ ಬ್ರೊಂಖಿಯೋಲ್ಸ್. ಸು. 20ನೆಯ ಸಲ ಕವಲೊಡೆದವು) ವ್ಯಾಸ 0.2–0.7 ಸೆಂಮೀ. ಇವುಗಳ ಲೋಳ್ಪೊರೆಯ ಮೇಲೆ ಆಡುವ ಸಣ್ಣ ಕೂದಲು ಇರುವ ಜೀವಕಣಗಳ ಪೊರೆ ಇದೆ (ಸ್ಯೂಡೋಸ್ಟ್ರಾಟಿಫೈಡ್ ಸೈಲಿಯೇಟೆಡ್ ಕಾಲಮ್ನರ್ ಎಪಿಥೇಲಿಯಂ). ಇವುಗಳ ಭಿತ್ತಿಯಲ್ಲಿ ಮೃದ್ವಸ್ಥಿಯ ತುಣುಕುಗಳಿವೆ. ರಕ್ತಕ್ಕೂ ಗಾಳಿಗೂ ನಡುವೆ ದಪ್ಪ ಪೊರೆಯಿರುವುದ ರಿಂದ ಇವುಗಳಲ್ಲಿ ಅನಿಲಗಳ ವಿನಿಮಯವಾಗುವುದಿಲ್ಲ. ಇವು ಸಣ್ಣಗಾಗಲು ಭಿತ್ತಿಯಲ್ಲಿ ಸ್ನಾಯು ಜಾಲವಿದೆ. ಸ್ನಾಯುಗಳು ಸೆಟೆದುಕೊಂಡರೆ ಗೂರಲು ಉಂಟಾಗುತ್ತದೆ. ಇವು 3–4 ಬಾರಿ ಎರಡೆರಡಾಗಿ ಕವಲೊಡೆದ ಮೇಲೆ ಉಸಿರ್ನಾಳಗಳಾಗುತ್ತವೆ. (ರೆಸ್ಪಿರೇಟರಿ ಬ್ರೋಂಖಿಯೋಲ್ಸ್). ಉಸಿರ್ನಾಳಗಳ ಭಿತ್ತಿಯಲ್ಲಿ ಮೃದ್ವಸ್ಥಿಯಿಲ್ಲ. ಇವುಗಳ ಪೊರೆ ಕೂದಲಿಲ್ಲದ ಘನಜೀವಕಣಗಳ ಪೊರೆ (ಕ್ಯೂಬಾಯ್ಡಲ್ ಎಪಿಥಿಲಿಯಂ). ಪ್ರತಿ ಉಸಿರ್ನಾಳ ಕವಲೊಡೆಯುವುದರಿಂದ ಉಸಿರ್ನಾಳ ಗೊಂಚಲಾಗುತ್ತದೆ. ಪ್ರತಿ ಉಸಿರ್ನಾಳದಿಂದ 2–11 ಬುಡ್ಡೆಕೊಳವೆಗಳು (ಆಲ್ವಿಯೋಲರ್ ಡಕ್ಟ್ಸ್) ಹೊರಟುಕೊಳ್ಳುತ್ತವೆ. ಪ್ರತಿ ಬುಡ್ಡೆ ಕೊಳವೆಗೆ 5–6 ಬುಡ್ಡೆಚೀಲಗಳು (ಆಲ್ವಿಯೊಲರ್‌ಸ್ಯಾಕ್ಸ್) ಅಂಟಿಕೊಂಡಿವೆ. ಪ್ರತಿ ಬುಡ್ಡೆಚೀಲದ ಮೇಲೆ ಹಲವು ಬಹುಫಲಕ (ಪಾಲಿ ಹೆಡ್ರಲ್) ಬುಡ್ಡೆಗಳಿವೆ. ಹೀಗೆ ಒಂದು ಪುಪ್ಪುಸದಲ್ಲಿ 30–40 ಕೋಟಿ ಬುಡ್ಡೆಗಳು (ಸಣ್ಣ ಗಾಳಿಗೂಡು) ಇವೆಯೆಂದು ಲೆಕ್ಕಹಾಕಲಾಗಿದೆ. ಪ್ರತಿ ಬುಡ್ಡೆಯ ವ್ಯಾಸ 1/5–1/4 ಮಿಮೀ. ಇದು ಬಲು ತೆಳುವಾದ ಜೀವಕಣಗಳ ಪೊರೆಯಿಂದಾದುದು. ಇದರ ಮೇಲೆ ಸೂಕ್ಷ್ಮ ರಕ್ತನಾಳಗಳ ಒತ್ತಾದ ಬಲೆಯಿದೆ ; ರಕ್ತಕ್ಕೂ ಗಾಳಿಗೂ ನಡುವೆ ಇರುವ ಪೊರೆಯ ದಪ್ಪ ಒಂದು ಮಿಲಿಮೀಟರಿನ 2500 ಭಾಗಗಳಲ್ಲಿ ಒಂದರಷ್ಟಿದೆ.



ಚಿತ್ರ 8. ಉಸಿರ್ನಾಳದ ಅಡ್ಡಕೊಯ್ತ
1. ಬಾಸೆಗೂಡಿದ ಕಂಬಾಕಾರಿ ಮೇಲ್ಪೊರೆ
2. ಲೋಳೆಸುರಿಕ ಗ್ರಂಥಿಗಳು
3. ಮೆಲ್ಲೆಲುಬು, 4. ತಂತುಕಣ ಪದರ

ನೂರಾರು ಉಸಿರ್ನಾಳಗಳ ಗೊಂಚಲಿನ ಗಾತ್ರ 1–2½ ಸೆಂಮೀ. ಇದು ಪುಪ್ಪುಸದ ಮೇಲೆ ವಕ್ರ ಬಹುಭುಜದಂತೆ (ಇರೆಗ್ಯುಲರ್ ಪಾಲಿಗನ್) ಕಾಣುತ್ತದೆ. ಹೀಗೆ ಕೊನೆಯ ಶಾಖೆಗಳ ಗೊಂಚಲುಗಳು ಹೇರಳವಾಗಿದ್ದರೂ ಪುಪ್ಪುಸದ ಅತಿ ತೆಳುವಾದ ಚೂರು ಸೂಕ್ಷ್ಮದರ್ಶಿನಿಯಲ್ಲಿ ಗಾಳಿಗೂಡುಗಳಿರುವ ಸೂಕ್ಷ್ಮ ಬಲೆಯಂತೆ ಕಾಣುತ್ತದೆ. ಪುಪ್ಪುಸದ ಮೇಲೆ ಅದರ ನಾಭಿಯನ್ನು ಬಿಟ್ಟು ಮಿಕ್ಕೆಲ್ಲ ಭಾಗಗಳಲ್ಲೂ ತೆಳುವಾದ ಪಾರದರ್ಶಕ ಪೊರೆ ಇದೆ (ಪಲ್ಮನರಿ ಪ್ಲೂರ). ಇದರ ಕೆಳಗೆ ನಾರು ಮಾಂಸದ ಕವಚವಿದೆ. ನಾರುಮಾಂಸದಲ್ಲಿ ಸ್ಥಿತಿಸ್ಥಾಪಕತೆ ಇರುವ ತಂತುಗಳೂ ಇವೆ. ಉಸಿರ್ನಾಳಗಳ ನಡುವೆಯೂ ಸ್ಥಿತಿಸ್ಥಾಪಕ ತಂತುಗಳ ನಡುವೆಯೂ ಈ ನಾರಿನ ಮಾಂಸವಿದೆ. ಸ್ಥಿತಿಸ್ಥಾಪಕ ತಂತುಗಳಿಂದ ಪುಪ್ಪುಸ ರಬ್ಬರ್ ಬಲೂನಿನಂತೆ ಯಾವಾಗಲೂ ಸಣ್ಣಗಾಗಲು ಪ್ರಯತ್ನಿಸುತ್ತಿರುತ್ತದೆ. ಪುಪ್ಪುಸದಲ್ಲಿ ಉಸಿರ್ನಾಳಗಳೊಡನೆ ರಕ್ತನಾಳಗಳೂ ಕವಲೊಡೆಯುತ್ತವೆ. ಹೃದಯದಿಂದ ಬರುವ ರಕ್ತನಾಳ ಕವಲೊಡೆದು ಗಾಳಿಯ ಗೂಡುಗಳ ಮೇಲೆ ಸೂಕ್ಷ್ಮ ರಕ್ತನಾಳಗಳ ಒತ್ತಾದ ಬಲೆಯಾಗುತ್ತದೆ. ಶುದ್ಧಗೊಂಡ ಆಕ್ಸಿಜನ್ನನ್ನು ಪಡೆದ ರಕ್ತ ಶುದ್ಧ ರಕ್ತನಾಳಗಳ ಮೂಲಕ ಎಡಹೃತ್ಕರ್ಣವನ್ನು ಸೇರುತ್ತದೆ. ದುಗ್ಧನಾಳಗಳ ಕವಲುಗಳೂ ಒಂದುಗೂಡುತ್ತ ಗಾಳಿ ಕೊಳವೆ ಕವಲೊಡೆಯುವ ಸ್ಥಳದಲ್ಲಿರುವ ಗ್ರಂಥಿಗಳನ್ನು (ಬ್ರಾಂಖೋ ಪಲ್ಮನರಿ ಲಿಂಫ್ ನೋಡ್ಸ್) ಸೇರುತ್ತವೆ.

ಪುಪ್ಪುಸದ ಬೆಳವಣಿಗೆ: ಗರ್ಭಾವಸ್ಥೆಯ 25ನೆಯ ದಿವಸದ ಹೊತ್ತಿಗೆ ಭ್ರೂಣ ಸು.4 ಮಿಮೀ. ಉದ್ದವಿರುವಾಗ ಅದರ ಗಂಟಲಿನ ತಳದಲ್ಲಿ ಒಂದು ಸಣ್ಣ ಕಾಲುವೆಯಾಗಿ (ಧ್ವನಿನಾಳ ಉಸಿರ್ನಾಳದ ಕಾಲುವೆ; ಲ್ಯಾರಿಂಗೊಟ್ರೇಕಿಯಲ್ ಗ್ರೂವ್) ಒಂದೆರಡು ದಿವಸಗಳಲ್ಲಿ ಇದರ ಪಕ್ಕಗಳಲ್ಲಿ ಎರಡು ಉಬ್ಬುಗಳಾಗಿ ಪುಪ್ಪುಸಗಳ ಮೂಲ ರೂಪಗಳು (ಲಂಗ್‌ಬಡ್ಸ್) ಕಾಣಿಸಿಕೊಳ್ಳುತ್ತವೆ. ಇದೇ ನಿರ್ಧಾರಕಾಲ. ಒಂದು ಕಡೆ ಉಬ್ಬು ಆಗದಿದ್ದಲ್ಲಿ ಆ ಕಡೆ ಪುಪ್ಪುಸ ಬೆಳೆಯುವುದಿಲ್ಲ. ತಾಯಿ ಇಲಿಗಳಿಗೆ ಜೀವಾತು ಎ ಇಲ್ಲದಿರುವ ಆಹಾರವನ್ನು ಕೊಡುವುದರಿಂದ ಅವುಗಳ ಮರಿಗಳಲ್ಲಿ ಹೀಗಾಗುವುದನ್ನು ಪ್ರಯೋಗಶಾಲೆಗಳಲ್ಲಿ ನೋಡಬಹುದು. 31ನೆಯ ದಿವಸದ ಹೊತ್ತಿಗೆ ಬಲ ಮತ್ತು ಎಡ ಪುಪ್ಪುಸಾಂಕುರಗಳಿಂದ ಶಾಖೆಗಳು ಬೆಳೆಯುತ್ತವೆ. ಈ ಕಾಲದಲ್ಲಿ ಧ್ವನಿನಾಳ ಗಂಟಲಿನಿಂದಲೂ ಉಸಿರ್ನಾಳ ಅನ್ನನಾಳದಿಂದಲೂ ಬೇರ್ಪಡುತ್ತವೆ. ಬಲಗಡೆ 10 ಶಾಖೆಗಳು ಎಡಗಡೆ 9 ಶಾಖೆಗಳು ಎರಡೆರಡಾಗಿ ಕವಲೊಡೆಯುತ್ತ 36ನೆಯ ದಿವಸದ ಹೊತ್ತಿಗೆ ಬಲದಲ್ಲಿ 10 ದೊಡ್ಡ ಗೊಂಚಲುಗಳು ಮತ್ತು ಎಡಗಡೆ 9 ಆಗಿ ಪುಪ್ಪುಸಗಳ ಮೇಲೆ ಸಣ್ಣ ಗುಳ್ಳೆಗಳಂತೆ ಕಾಣುತ್ತವೆ. 40ನೆಯ ದಿವಸಕ್ಕೆ ಇನ್ನೂ ಹೆಚ್ಚು ಕವಲುಗಳಾಗಿ ದ್ರಾಕ್ಷಿಯ ದೊಡ್ಡ ಗೊಂಚಲುಗಳಂತಾಗುತ್ತವೆ.




ಚಿತ್ರ 9. ಉಸಿರಾಡುವ ದಾರಿಗಳ ಮೆಲ್ಲೆಲುಬುಗಳು, ಪಂಗುಸಿರ್ನಾಳಗಳ ಕವಲುಗಳು

ನಾಲ್ಕನೆಯ ತಿಂಗಳ ಕೊನೆಯವರೆಗೂ ಶಾಖೆಗಳಾಗುವುದು ಮುಂದುವರಿಯುತ್ತದೆ. ಇದುವರೆಗೂ ಗ್ರಂಥಿಕಾಲ (ಗ್ಲ್ಯಾಂಡ್ಯುಲರ್ ಪೀರಿಯಡ್). ಏಕೆಂದರೆ ಶಾಖೆಗಳ ಜೀವಕಣಗಳು ದೊಡ್ಡದಾಗಿ ಒಳಗೆ ಸ್ಥಳ ಕಡಿಮೆಯಿರುತ್ತದೆ. ಕವಲೊಡೆಯುವುದು ಸುಮಾರು 17 ಸಲ ನಡೆಯುತ್ತದೆ. ಕೊನೆಯ ಎಂಟು ಸಲ ಆದವುಗಳಲ್ಲಿ ಘನ (ಕ್ಯೂಬಾಯ್ಡಲ್) ಜೀವಕಣಗಳ ತೆಳುವಾದ ಪೊರೆಯಿರುತ್ತದೆ. ಮೊದಲು ಆದವುಗಳಲ್ಲಿ ಜೀವಕಣಗಳು ಉದ್ದವಾಗಿರುತ್ತವೆ (ಕಾಲಮ್ನರ್ ಎಪಿಥೀಲಿಯಂ). 4 ರಿಂದ 6ನೆಯ ತಿಂಗಳ ವರೆಗೆ ನಾಳಗಳ ಕಾಲ (ಕೆನಾಲಿ ಕ್ಯುಲರ್ ಪೀರಿಯಡ್). ಇದರಲ್ಲಿ ಕೊನೆಯ ಶಾಖೆಗಳಲ್ಲಿ ಸೂಕ್ಷ್ಮನಾಳಗಳು ಬೆಳೆಯುತ್ತವೆ. ಇವೇ ಜನನದ ಅನಂತರ ಗಾಳಿ ತುಂಬಿಕೊಳ್ಳುವ ಸಣ್ಣ ಬುಡ್ಡೆಗಳಾಗುವುವು. 6 ತಿಂಗಳಿಗೇ ಮಗು ಹುಟ್ಟಿದರೆ ಅದು ಉಸಿರಾಡಿ ಜೀವಿಸಲು ಈ ಸೂಕ್ಷ್ಮನಾಳಗಳಿಂದ ಸಾಧ್ಯ. 7ನೆಯ ತಿಂಗಳಿಂದ ಪ್ರಸವದ ಬುಡ್ಡೆಗಳ ಕಾಲ (ಆಲ್ವಿಯೋಲರ್ ಪೀರಿಯಡ್). ಇದರಲ್ಲಿ ಸೂಕ್ಷ್ಮರಕ್ತ ನಾಳಗಳು ಬುಡ್ಡೆಗಳ ಮೇಲೆ ಬೆಳೆಯುತ್ತವೆ. ಈ ಕಾಲದಲ್ಲಿ ಹುಟ್ಟಿದ ಮಗು ಬದುಕಬಲ್ಲುದು.



ಚಿತ್ರ 10. ಪಂಗುಸಿರ್ನಾಳ–ಪುಪ್ಪುಸಗಳ ತುಂಡುಗಳು

ಜನನ ಇನ್ನೊಂದು ಪರ್ವಕಾಲ. ಮೊದಲನೆಯ ಉಸಿರಿನಿಂದ ಪುಪ್ಫುಸವೆಲ್ಲ ಪೂರ್ತಿ ಅರಳುವುದಿಲ್ಲ. ಇದಕ್ಕೆ ಕೆಲವು ದಿವಸಗಳು ಅಥವಾ ವಾರಗಳು ಬೇಕಾಗುವುವು. ಕೆಲವು ವೇಳೆ ಪುಪ್ಫುಸದ ಕೆಲವು ಭಾಗಗಳು ಅರಳದೇ ವಯಸ್ಸಾದ ಮೇಲೂ ಗಾಳಿ ತುಂಬಿಕೊಳ್ಳದಿರ




ಚಿತ್ರ 11. ಕೊಟ್ಟಕೊನೆಯ ನವಿರುಸಿರ್ನಾಳ ಕವಲೊಡೆವ ರೀತಿ

ಬಹುದು. ಪೂರ್ಣಗರ್ಭಕ್ಕೆ ಮೊದಲೇ ಹುಟ್ಟುವ ಅಥವಾ ತಾಯಿಯ ಹೊಟ್ಟೆ ಕೊಯ್ದು ತೆಗೆದ ಮಕ್ಕಳ ಗಾಳಿಬುಡ್ಡೆಗಳಲ್ಲಿ ಕೆಲವೇಳೆ ಲೋಳೆ ಪೊರೆಯಿದ್ದು ಉಸಿರಾಡುವುದು ಸಾಧ್ಯವಾಗದಿರಬಹುದು. ಹೀಗಾಗುವುದು ಮಗು ಗರ್ಭಕೋಶದ ಒಳಗಿನ ನೀರನ್ನು



ಚಿತ್ರ 12. ಮಾನವ ಪುಪ್ಫುಸದ ಅಡ್ಡಕೊಯ್ತ. 30ರಷ್ಟು ದೊಡ್ಡದಾಗಿಸಿದ್ದು 1. ಪುಪ್ಫುಸದ ಅಳ್ಳೆಪೊರೆ, 2. ಪುಪ್ಫುಸದ ರಕ್ತನಾಳಗಳು, 3. ಕೊಟ್ಟಕೊನೆಯ ನವಿರುಸಿರ್ನಾಳ, 4. ಗಾಳಿಗೂಡು, 5. ಗಾಳಿಚೀಲ

ಕುಡಿಯುವುದರಿಂದಲೋ ಅಥವಾ ಯಾವುದೋ ಕಾರಣದಿಂದಲೋ ಎಂಬುದು ಇನ್ನೂ ತಿಳಿದಿಲ್ಲ. ಜನನದ ಅನಂತರ ಉಸಿರ್ನಾಳಗಳು ತೆಳುವಾಗಿ ಉದ್ದವಾಗುವುದರಿಂದಲೂ ಶಾಖೆಗಳು ಹೆಚ್ಚುವುದರಿಂದಲೂ ಗಾಳಿ ಬುಡ್ಡೆಗಳು ದೊಡ್ಡವಾಗುವುದರಿಂದಲೂ ಪುಪ್ಫುಸ ಬೇಗ ಬೆಳೆಯುತ್ತದೆ. ಜನನದ ಹೊತ್ತಿಗೆ 17 ಸಲ ಕವಲೊಡೆದ ಉಸಿರ್ನಾಳಗಳು ಪ್ರಾಯದ ಹೊತ್ತಿಗೆ ಒಟ್ಟು 25 ಸಲ ಕವಲೊಡೆದಿರುತ್ತವೆ. ಇದು ಹೇಗಾಗುತ್ತದೆಂಬುದನ್ನು ತಿಳಿಯಲು ಇನ್ನೂ ಸಾಧ್ಯವಾಗಿಲ್ಲ.




ಚಿತ್ರ 13. ಪಂಗುಸಿರ್ನಾಳದ ಕೊನೆಯ ಕವಲುಗಳು.

ಪುಪ್ಫುಸಗಳಲ್ಲಿ ಗಾಳಿಯನ್ನು ತುಂಬುವ ಉಸಿರಾಟದ ಅಂಗಗಳು. 1. ಎದೆಯ ಎಲುಬಿನ ಗೂಡು (ಥೊರಾಸಿಕ್ ಕೇಜ್): ಹಿಂದೆ 12 ಬೆನ್ನೆಲುಬುಗಳು (ಥೊರಾಸಿಕ್ ವರ್ಟಿಬ್ರೇ), ಮುಂದೆ ಎದೆಚಕ್ಕೆ (ಸ್ಟರ್ನಂ) ಮತ್ತು ಪಕ್ಕಗಳಲ್ಲಿ 12 ಜೊತೆ ಪಕ್ಕೆಲುಬುಗಳಿಂದ (ರಿಬ್ಸ್) ಎದೆಯ ಗೂಡು ಆಗಿದೆ. ಇದರಲ್ಲಿ ಮುಖ್ಯವಾಗಿ ಪುಪ್ಫುಸಗಳು ಹೃದಯ ಮತ್ತು ದೊಡ್ಡ ರಕ್ತನಾಳಗಳು ರಕ್ಷಣೆ ಹೊಂದಿವೆ. ಪಕ್ಕೆಲುಬುಗಳ ಹಿಂದಿನ ಕೊನೆಗಳು ಮತ್ತು ಬೆನ್ನೆಲುಬುಗಳ ನಡುವೆ ಕೀಲುಗಳಿದ್ದು ಪಕ್ಕೆಲುಬುಗಳು ಹಿಂದಿನಿಂದ ಕೆಳಕ್ಕೆ ಓರೆಯಾಗಿ ಮತ್ತು ಪಕ್ಕಕ್ಕೆ ಬಾಗಿರುವುದರಿಂದ ಅವನ್ನು ಸ್ನಾಯುಗಳು ಮೇಲಕ್ಕೆತ್ತಿದಾಗ ಅವುಗಳ ಮುಂದಿನ ಕೊನೆಗಳು ಎದೆ ಚಕ್ಕೆಯನ್ನು ಮೇಲಕ್ಕೆ ಮತ್ತು ಮುಂದಕ್ಕೆ ಒಯ್ಯುತ್ತವೆ. ಹೀಗಾದಾಗ ಗೂಡು ಹಿಗ್ಗಿ ಹಿಂದುಮುಂದಿನ ಮತ್ತು ಪಕ್ಕಪಕ್ಕದ ವ್ಯಾಸಗಳು ಹೆಚ್ಚುತ್ತವೆ. ಆಗ ಹೊರಗಿನ ಗಾಳಿ ಎಲ್ಲ ದಿಕ್ಕುಗಳಿಂದಲೂ ಒಳಗಿನ ಶೂನ್ಯವನ್ನು ಆಕ್ರಮಿಸಲು ಯತ್ನಿಸಿ ಇರುವ ಒಂದೇ ದಾರಿಯಾದ ಮೂಗು, ಗಂಟಲು, ಗಾಳಿಕೊಳವೆಗಳ ಮಾರ್ಗವಾಗಿ ಪುಪ್ಫುಸಗಳೊಳಕ್ಕೆ ನುಗ್ಗಿ ಅವನ್ನು ಹಿಗ್ಗಿಸುತ್ತದೆ. ಹೀಗೆ ಉಸಿರಾಟದಲ್ಲಿ ಪದೇ ಪದೇ ಆಗುವುದರಿಂದ ಪುಪ್ಫುಸಗಳಲ್ಲಿರುವ ಗಾಳಿ ಒಳಕ್ಕೆ ನುಗ್ಗಿದ ಹೊರಗಾಳಿಯೊಡನೆ ಬೆರೆತು ಸ್ವಲ್ಪ ಸ್ವಲ್ಪವಾಗಿ ಆಚೆಹೋಗಿ ಕಾರ್ಬನ್ ಡೈ ಆಕ್ಸೈಡ್, ಆವಿ ಮತ್ತು ಉಷ್ಣಗಳನ್ನು ಕಳೆದುಕೊಂಡು ಪುಪ್ಫುಸಗಳಲ್ಲಿ ಓಡುತ್ತಿರುವ ರಕ್ತ ಹೀರುತ್ತಿರುವುದರಿಂದ ಖರ್ಚಾಗುತ್ತಿರುವ ಆಕ್ಸಿಜನ್ನನ್ನು ತುಂಬಿಕೊಳ್ಳುತ್ತದೆ.



ಚಿತ್ರ 14. ಎದೆಗೂಡಿನಲ್ಲಿ ಪುಪ್ಫುಸಗಳ, ಅಳ್ಳೆಪೊರೆಗಳ ಸಂಬಂಧಗಳು (ಬಲಗಡೆ ಮುಂದಣ ನೋಟ) 1. ಸಮತಲದ ಸೀಳುವೆ, 2. ಐಮೂಲೆಯ ಸೀಳುವೆ, 3. ಬಲಪುಪ್ಫುಸದ ಕೆಳ ಅಂಚು, 4. ಬಲ ಅಳ್ಳೆಪೊರೆ ಚೀಲದ ಕೆಳ ಅಂಚು, 5. ಎಡಪುಪ್ಫುಸದ ಗುಂಡಿಗೆಯ ಕಚ್ಚು, 6. ಎದೆಚಕ್ಕೆ, 7. ಪುಪ್ಫುಸ, 8. ಪಕ್ಕೆಲುಬು, 9. ಮೆಲ್ಲೆಲುಬು, 10. ಬೆನ್ನೆಲುಬು, 11. ಉಸಿರ್ನಾಳ

2. ವಪೆ (ಡಯಾಫ್ರಂ): ಸಸ್ತನಿಗಳಲ್ಲಿ ಮಾತ್ರ ಇರುವ ಸ್ನಾಯು. ಇದು ಎದೆ ಹೊಟ್ಟೆಗಳ ನಡುವೆ ಇರುವ ತಡಿಕೆ. ಪುಪ್ಪುಸಗಳು ತಮ್ಮ ಸಹಜ ಸ್ಥಿತಿಸ್ಥಾಪಕ ಶಕ್ತಿಯಿಂದ ಸಣ್ಣಗಾಗಲು ಯಾವಾಗಲೂ ಯತ್ನಿಸುತ್ತಿರುವುದರಿಂದ ಹೊರಗಾಳಿಯ ಒತ್ತಡಕ್ಕಿಂತ ಎದೆಯೊಳಗೆ ಒತ್ತಡ ಕಡಿಮೆಯಾಗಿದೆ. ಇದರಿಂದ ಹೊರಗಾಳಿ ಉದರವನ್ನು ಒತ್ತಿ ಉದರಾಂಗಗಳನ್ನು




ಚಿತ್ರ 15. ಎದೆಗೂಡಿನಲ್ಲಿ ಉಸಿರಾಟದಲ್ಲಿ ವಪೆಯ ಚಲನೆ

ವಪೆಯೊಡನೆ ಎದೆಯ ಗೂಡಿನೊಳಕ್ಕೆ ಸದಾ ತಳ್ಳುತ್ತಿರುತ್ತದೆ. ವಪೆಯ ಸ್ನಾಯು ಕುಗ್ಗಿದಾಗ ಉದರಾಂಗಗಳು ಕೆಳಕ್ಕೆ ತಳ್ಳಲ್ಪಟ್ಟು ಹೊಟ್ಟೆಯುಬ್ಬಿ ಎದೆಗೂಡಿನ ಆಳ ಹೆಚ್ಚಿ ಹೊರಗಾಳಿ ಮೂಗಿನ ಮೂಲಕ ಪುಪ್ಪುಸಗಳನ್ನು ಉಬ್ಬಿಸುತ್ತದೆ. ಉಸಿರಾಟದಲ್ಲಿ ವಪೆಯ ಪಾತ್ರವೇ ಹೆಚ್ಚು. ಇದು ಸೆಟೆದಾಗ ಎದೆಯ ಆಳವನ್ನು ಹೆಚ್ಚಿಸುವುದು ಮಾತ್ರವಲ್ಲದೆ ಕೆಳಗಿನ ಪಕ್ಕೆಲುಬುಗಳ ಮುಂದಿನ ಕೊನೆಗಳನ್ನು ಮೇಲಕ್ಕೆತ್ತುವುದರಿಂದ ಎದೆಯ ವ್ಯಾಸಗಳನ್ನೂ ಹೆಚ್ಚಿಸುವುದು.



ಚಿತ್ರ 16.

ವಪೆ ಕುಗ್ಗಿದಾಗ ಪುಪ್ಪುಸದಲ್ಲಿ ಉಸಿರು ತುಂಬುವುದರ ರೀತಿ. ತಳವಿಲ್ಲದ ಗಾಜಿನ ಸೀಸೆಯಲ್ಲಿ ಎರಡು ರಬ್ಬರ್ ಬುಡ್ಡೆಗಳನ್ನು ಇರಿಸಿ, ವಪೆಯಂತಿರುವ ರಬ್ಬರ್ ಪದರದ ತಳವನ್ನು ಕೆಳಕ್ಕೆಳೆದರೆ ಗಾಳಿ ಒಳನುಗ್ಗಿ ಬುಡ್ಡೆಗಳು ಊದಿಕೊಳ್ಳುತ್ತವೆ.

3. ಪಕ್ಕೆಲುಬುಗಳ ನಡುವೆ ಇರುವ ಸ್ನಾಯುಗಳು (ಇಂಟರ್‌ಕೋಸ್ಟಲ್ ಮಸಲ್ಸ್) ಪಕ್ಕೆಲುಬುಗಳನ್ನು ಮೇಲಕ್ಕೆತ್ತಿ ಎದೆಯ ವ್ಯಾಸಗಳನ್ನು ಹೆಚ್ಚಿಸುತ್ತವೆ.

4. ಮಿದುಳಿನ ಭಾಗವಾದ ಮೆಡುಲ ಆಬ್ಲಾಂಗೇಟ ಎಂಬುದರಲ್ಲಿರುವ ಉಸಿರಾಟದ ಕೇಂದ್ರ, ಶ್ವಾಸಸ್ನಾಯುಗಳ ಕಾರ್ಯಗಳು ವ್ಯಕ್ತಿಯ ಅರಿವಿಲ್ಲದೆ ತಾಳಹಾಕಿದಂತೆ ನಿರಂತರವಾಗಿ ಸಾಗುವಂತೆ ನಿಯಂತ್ರಿಸುತ್ತದೆ. ಅಷ್ಟೇ ಅಲ್ಲದೆ ಇದು ಉಸಿರಾಟದ ವೇಗವನ್ನೂ ಆವಶ್ಯಕವಾದಂತೆ ಹೆಚ್ಚು ಕಡಿಮೆ ಮಾಡುತ್ತದೆ. ರಕ್ತದಲ್ಲಿ ಇಂಗಾಲದ ಡೈ ಆಕ್ಸೈಡಿನ ಅಂಶ ಹೆಚ್ಚಿದರೆ (ಉದಾಹರಣೆಗೆ, ದೇಹಶ್ರಮದಲ್ಲಿ) ಇದು ಉಸಿರಾಟದ ವೇಗವನ್ನೂ ಆಳವನ್ನೂ ಹೆಚ್ಚಿಸುತ್ತದೆ. ಆಕ್ಸಿಜನ್ ಅಂಶ ಕಡಿಮೆಯಾದರೆ (ಉದಾಹರಣೆಗೆ, ನಿದ್ರೆಯಲ್ಲಿ) ವೇಗವನ್ನು ತಗ್ಗಿಸುತ್ತದೆ.

5. ವಿಶೇಷ ಉಸಿರಾಟದ ಸ್ನಾಯುಗಳು (ಮಸಲ್ಸ್ ಆಫ್ ಎಕ್ಸ್‌ಟ್ರ ಆರ್ಡಿನರಿ ರೆಸ್ಪಿರೇಷನ್) ಮಾತಾಡುವುದು, ಕೆಮ್ಮುವುದು, ಸೀನುವುದು, ಮುಕ್ಕುವುದು, ವಾಂತಿ ಮಾಡುವುದು ಮುಂತಾದ ಕಾರ್ಯಗಳಲ್ಲಿ ಹೊಟ್ಟೆ ಎದೆಗಳಲ್ಲಿ ಒತ್ತಡ ಹೆಚ್ಚುವಂತೆಯೂ ಬಿರುಸಿನಿಂದ ಉಸಿರನ್ನು ತೆಗೆದುಕೊಳ್ಳುವಾಗ ಎದೆಹೊಟ್ಟೆಗಳ ಒತ್ತಡ ಬಹಳ ಕಡಿಮೆಯಾಗುವಂತೆಯೂ ಮಾಡುತ್ತವೆ. ಒತ್ತಡವನ್ನು ಹೆಚ್ಚಿಸುವುದರಲ್ಲಿ ಉದರ ಸ್ನಾಯುಗಳ ಪಾತ್ರ ಹೆಚ್ಚು, ಒತ್ತಡವನ್ನು ತಗ್ಗಿಸುವುದರಲ್ಲಿ ವಪೆಯ ಪಾತ್ರ ಹೆಚ್ಚು. (ಎಂ.ಡಿ.)

**ಉಸಿರಾಟದ ಮಂಡಲದ ರೋಗಗಳು:** ಮೂಗು, ಅದರ ಹೆಚ್ಚಿನ ಎಲುಗುಳಿಗಳು (ಸೈನಸಸ್), ಗಂಟಲ್ಕುಳಿ (ಫ್ಯಾರಿಂಕ್ಸ್), ಧ್ವನಿನಾಳ, ಉಸಿರ್ನಾಳ, ಪಂಗುಸಿರ್ನಾಳ (ಬ್ರಾಂಕಸ್), ಕೊನೆಯದಾಗಿ ಪುಪ್ಪುಸಗಳಲ್ಲಿ ಎಲ್ಲಾದರೂ ಹತ್ತುವ ರೋಗಗಳಿವು. ಮೊದಲಿಂದ ಕೊನೆಯತನಕ ಉದ್ದಕ್ಕೂ ಲೋಳ್ಪೊರೆ (ಮ್ಯುಕೋಸ) ಒಂದೇ ಸಮನಾಗಿದೆ. **(ನೋಡಿ– ಉಸಿರಾಟದ–ಮಂಡಲದ–ಅಂಗರಚನೆ; ಅಳ್ಳೆಪರೆಯ–ರೋಗಗಳು; ಉಸಿರಾಟ)**

ಅಡಚಣೆಗಳಂತಿರುವ ಮೂಗಿನ ಬುಗರಿಕಗಳನ್ನು (ಟರ್ಬಿನೇಟ್ಸ್) ಹಾಯ್ದು ಒಳಬರುವಾಗ ಗಾಳಿ ಬೆಚ್ಚಗಾಗಿ ತೇವಗೂಡುವುದು. ಮೂಗಿನ ಒಳವರಿಯಾದ ಲೋಳ್ಪೊರೆಯಲ್ಲಿ ಬಲು ಚೆನ್ನಾಗಿ ರಕ್ತ ಹರಿವುದೇ ಇದರ ಮುಖ್ಯ ಕಾರಣ. ಆದ್ದರಿಂದಲೇ ಸೋಂಕಿನಿಂದಲೋ ಒಗ್ಗದಿಕೆಯಿಂದಲೋ (ಅಲರ್ಜಿ) ಲೋಳ್ಪೊರೆ ಊದಿಕೊಂಡರೆ ಹೀಗಾಗುವುದು ತಪ್ಪುವುದು. ಒಳಸೇರಿಕೊಳ್ಳುವ ಗಾಳಿಯಲ್ಲಿ ದೂಳುಕಣಗಳಿದ್ದರೆ ಮೂಗಿನಲ್ಲೇ ಸಿಕ್ಕಿಬಿದ್ದು ಆಮೇಲೆ ಸೀನಿದಾಗ ಹೊರಬೀಳುತ್ತವೆ. ಗಂಟಲುಕುಳಿಯ ಸುತ್ತಲೂ ಇರುವ ಮೆಂಡಿಕೆಗಳು, ಮೂಗಳ್ಳೆಗಳ (ಟಾನ್ಸಿಲ್ ಅಡೆನಾಯ್ಡ್ಸ್) ರೂಪದ ಹಾಲುರಸತೆರ ಊತಕ (ಲಿಂಫಾಯ್ಡ್ ಟಿಷ್ಯೂ) ಅಲ್ಲಿಂದ ಮುಂದಕ್ಕೆ ಸೋಂಕು ಒಳನುಗ್ಗದಂತೆ ತಡೆಹಿಡಿಯುತ್ತವೆ. ಉಸಿರ್ನಾಳ, ಪಂಗುಸಿರ್ನಾಳಗಳಲ್ಲಿನ ಬಲು ಕಿರಿಯ ಕೂದಲಂತಿರುವ ಬಾಸೆಗಳು (ಸಿಲಿಯ) ಘುಪ್ಪುಸದಿಂದ ಹೊರಗಡೆ ಅಲುಗಾಡಿ ಬೀಸುವುದರಿಂದ ಹೆರವಸ್ತು ಏನು ಹೊಕ್ಕರೂ ಗಂಟಲುಕುಳಿ ಕಡೆಗೆ ತಳ್ಳಿದಂತಾಗುವುದು. ಕ್ಯಾಕರಿಸಿ ಉಗುಳಿದಾಗ ಕೆಮ್ಮಿದಾಗ ಅಲ್ಲಿಂದ ಹೊರಬೀಳುತ್ತದೆ. ವಿಷಕಾರಕಗಳು ಬಾಸೆಗಳನ್ನು ನಿಧಾನಿಸುವಂತೆ ಆಡದಂತೆ ಮಾಡಬಹುದು. ಯಾವ ಕಾರಣದಿಂದಲಾದರೂ ಮೈನೀರ್ಗಳೆತ (ಡಿಹೈಡ್ರೇಷನ್) ಆದರೆ, ಸೋಂಕು ಹತ್ತಿದರೆ ಸುರಿತ ತೀರ ಗಟ್ಟಿದುವಾಗಿ ಬಾಸೆಗಳು ಸರಾಗವಾಗಿ ಆಡದಂತಿರಲೂಬಹುದು. ಕೆಲವು ಕೆಡಕಿನ ಪದಾರ್ಥಗಳು ಘುಪ್ಪುಸಗಳ ಗಾಳಿಗೂಡುಗಳನ್ನೇ ಹೊಕ್ಕರೆ, ಕೂಡಲೇ ಹೊರದೂಡಲಾಗದಿದ್ದರೂ ವಿಶೇಷ ಜೀವಕಣಗಳು ಅವನ್ನು ಸುತ್ತುಗಟ್ಟಿ ಒಡೆಕೆಡವಿ ಬಾಸೆಗಳ ಹರಿವಿಗೆ ಹಾಕುವುವು. ಹೆರವಸ್ತುಗಳು ಸೋಂಕಿನ ಸುರಿತಗಳನ್ನು ಬಲವಂತದಿಂದ ಹೊರತೆಗೆವ ಯತ್ನವೇ ಕೆಮ್ಮು. ಈ ಯಾಂತ್ರಿಕತೆಗಳಲ್ಲಿ ಯಾವುದಕ್ಕೆ ಅಡ್ಡಿಯಾದರೂ ರೋಗಕ್ಕೆ ದಾರಿ. ಇವಲ್ಲದೆ ಪೋಷಣೆ, ಚೋದನಿಕಗಳು (ಹಾರ್ಮೋನ್ಸ್), ಅನುಭವಿಸಿದ ರೋಗ, ಚಳಿಗೂಡ್ಡಿಕೆ, ಅರಿವಳಿಕೆಯಿಂದ (ಅನೀಸ್ತೀಸಿಯ) ಅರಿವಿಲ್ಲದಿರುವಿಕೆ, ಅಮಲೇರಿಕೆ ಇತ್ಯಾದಿಗಳಿಂದ ಒಂದು ತಾವಿನಲ್ಲೋ ಇಡೀ ಮೈಯಲ್ಲೋ ರೋಗತಡೆವ ಬಲದ ಇಳಿವೂ ಮುಖ್ಯ.

**ಸೋಂಕುಗಳು:** ವಿಷಕಣ ರೋಗಗಳು: ಉಸಿರಾಟ ಮಂಡಲದ ರೋಗಕಾರಕ ಗಳಾಗಿ ವಿಷಕಣಗಳನ್ನು (ವೈರಸಸ್) ಗುರುತಿಸುವುದೂ ಪತ್ತೆಹಚ್ಚುವುದೂ ಸುಲಭವಲ್ಲ. ಹಲವಾರು ಬೇರೆ ಬೇರೆ ರೋಗಗಳಿಗೂ ಒಂದೇ ವಿಷಕಣ ಕಾರಣವಾಗಿರಬಹುದು. ಹಲವಾರು ಬೇರೆ ಬೇರೆ ವಿಷಕಣಗಳಿಂದ ಒಂದೇ ರೋಗ ಕಾಣಿಸಿಕೊಳ್ಳಬಹುದು. ಸಂಶೋಧನೆಗಳು ನಡೆದು ಇನ್ನೂ ಹೊಸ ವಿಷಕಣಗಳು ಗೊತ್ತಾಗುತ್ತಿವೆ.

ಉರಿಶೀತದ (ಇನ್‌ಫ್ಲೂಯೆಂಜ) ಕಾವುಕಾಲ (ಇನ್ಕುಬೇಷನ್ ಪೀರಿಯಡ್) ಮೊಟಕಾಗಿದ್ದು ಸಾಂಕ್ರಾಮಿಕವಾಗಿ ಕಾಣಿಸಿಕೊಂಡರೂ 1918, 1957ರಲ್ಲಿ ಕಂಡಂತೆ ಮಹಾ ಸಾಂಕ್ರಾಮಿಕವಾಗದಿದ್ದರೆ ಅಷ್ಟಾಗಿ ಇದು ದಿನವೂ ಲೆಕ್ಕಕ್ಕೆ ಬರದ ಬೇನೆ. ಉರಿಶೀತದ ವಿಷಕಣದಿಂದಾಗುವ ಘುಪ್ಪುಸುರಿತಕ್ಕೆ (ನ್ಯೂಮೋನಿಯ) ಸರಿಯಾದ ಚಿಕಿತ್ಸೆಯೇ ಇಲ್ಲ. ಸಿಡುಬು, ಹಳದಿಜ್ವರ, ನಾಯಿ ಹುಚ್ಚುಗಳ (ರೇಬೀಸ್) ಎದುರು ಇರುವಂಥ ಪೂರ್ತಿ ನಿರೋಧಕ ವಿಧಾನ ಇಲ್ಲಿಲ್ಲ. ಆದರೆ ಆಗ ಕಂಡಿರುವ ಸೋಂಕಿಗೆ ಕಾರಣವಾದ ವಿಷಕಣದ ತಳಿ ಲಸಿಕೆಯಲ್ಲಿ ಸೇರಿದ್ದರೆ ಮಾತ್ರ ರೋಗ ಎದುರಾಗಿರುವ ರೋಧವಸ್ತುಗಳು (ಅಂಟಿಬಾಡೀಸ್) ಅದೇ ತಳಿಯ ಇನ್ನೊಂದು ಮಾದರಿಯ ಎದುರಾಗಿ ಕೆಲಸಕ್ಕೆ ಬರವು. ಉರಿಶೀತದ ಎದುರಿನ ಮರೆವಣಿ (ಇಮ್ಯೂನಿಟಿ) ಬಹುಕಾಲ ಇರದು.**(ನೋಡಿ– ಉರಿಶೀತ)**

ಸಣ್ಣ ಸಾಂಕ್ರಾಮಿಕವಾಗಿ ಬರುವ, ಕಾಕ್ಸ್‌ಸಾಕಿ ಬಿ ವಿಷಕಣದಿಂದಾಗುವ ಪಕ್ಕೆಶೂಲೆ (ಪ್ಲೂರೊಡೈನಿಯ) ಇನ್ನೊಂದು ವಿಷಕಣರೋಗ. ಉಸಿರೆಳೆದುಕೊಂಡರಂತೂ ಎದೆ ಉರಿ ಜೋರಾಗುವುದು.

ಚಿಕಿತ್ಸೆ ಗೊತ್ತಿಲ್ಲದ, ಮೊದಲ ಬೇಮಾದರಿ (ಪ್ರೈಮರಿ ಎಟಿಪಿಕಲ್) ಘುಪ್ಪುಸುರಿತಕ್ಕೆ ಒಂದಕ್ಕಿಂತಲೂ ಹೆಚ್ಚು ವಿಷಕಣಗಳು ಕಾರಣ: ಬಿಳಿಯ ರಕ್ತಕಣಗಳ ಅಂಕಿ ಎಂದಿನಂತಿದ್ದು ಬೇರೆ ರೋಗಗಳಲ್ಲಿ ಅಷ್ಟಾಗಿರದ ತಣ್ಣ ರಕ್ತಂಟಣಿಕಗಳೂ (ಹೀಮಗ್ಲೂಟಿನಿನ್ಸ್) ರೋಧವಸ್ತುಗಳೂ ಈ ರೋಗದಲ್ಲಿ ಕಾಣಬರುತ್ತವೆ.

ರಿಕೆಟ್ಸ್ ರೋಗಾಣುಗಳ ಪುಪ್ಪುಸುರಿತಗಳು: ರಿಕೆಟ್ಸಿಯ ಪ್ರೋವಜ಼ೆಕಿಯೈನಿಂದಾಗಿ ಪ್ರಪಂಚದಲ್ಲಿ ಎಲ್ಲೆಡೆಯಲ್ಲಿಯೂ ಹರಡಿರುವ ಕೂರೆಗಳಿಂದ ಅಂಟುವ ಸೊಕ್ಕಿನ (ಟೈಫಸ್) ಜ್ವರದಲ್ಲಿ ಇಪುಪ್ಪುಸುರಿತ (ಬ್ರಾಂಕೊ ನ್ಯುಮೋನಿಯ) ಆಗಬಹುದು. ಮೊತ್ತಮೊದಲು ಆಸ್ಟ್ರೇಲಿಯದಲ್ಲಿ ಗೊತ್ತಾದ ಕ್ಯು ಜ್ವರದ ಅನೇಕ ರೋಗಿಗಳಲ್ಲೂ ಪುಪ್ಪುಸುರಿತ ಏಳಬಹುದು. ಪ್ರಯೋಗಾಲಯದಲ್ಲಿ ಈ ರೋಗಾಣುಗಳನ್ನು ಬಳಸುವವರಲ್ಲೂ ಸೋಂಕು ಹತ್ತಿರುವ ಕುರಿ, ದನ, ಮೇಕೆ ಸಾಕುವುದರಲ್ಲೂ ಉಸಿರೆಳೆತದ ಕಸಬಿನ ಬೇನೆಯೂ ಇದೆ. ಇದು ಯೂರೋಪ್, ಅಮೆರಿಕ, ಆಫ್ರಿಕ, ನಡು ಏಷ್ಯ, ಪನಾಮಗಳಲ್ಲಿ ಸಾಮಾನ್ಯ. ಕ್ಲೋರಾಂಫೆನಿಕಾಲ್, ಟೆಟ್ರಸೈಕ್ಲೀನುಗಳಿಂದ ಈ ರೋಗ ವಾಸಿಯಾಗುವುದು.

ದಂಡಾಣುಜೀವಿಕ ಸೋಂಕುಗಳು: ರಕ್ತಲಯಿಕ ಸರಕಾಯ್ಜೀಜಿಗಳೂ (ಹೀಮೋಲಿಟಿಕ್ ಸ್ಟ್ರೆಪ್ಟೊಕಾಕೈ) ಗುತ್ತಿಕಾಯ್ಜೀಜಿಗಳೂ (ಸ್ಟೆಫೈಲೊಕಾಕೈ) ಗಾಳಿ ಕಾಯ್ಜೀವಿಗಳಿಂದ (ನ್ಯೂ.–ಮೊಕಾಕೈ) ಮೂಗಂಟಲಿನ (ನೇಸೊಫ್ಯಾರಿಂಕ್ಸ್) ಸಾಮಾನ್ಯ ದಂಡಾಣುಜೀವಿಕ (ಬೆಸಿಲರಿ) ಸೊಂಕುಗಳು ಹತ್ತುತ್ತವೆ.

ಮೂತ್ರಪಿಂಡದ ಸೋಂಕುಗಳೂ ಕೀಲುವಾತದ (ರುಮ್ಯಾಟಿಕ್) ಜ್ವರದ ಕೆರಳೂ ಇದರಿಂದ ಆಗಬಹುದಾದ ಕೀಲುವಾತದ ಗುಂಡಿಗೆ ರೋಗ ಇವೆಲ್ಲ ತೀವ್ರ ರೋಗಗಳು. ದೂರದ ಅಂಗಗಳಲ್ಲಿ ಕಾಣಿಸಿಕೊಳ್ಳುವುದರಿಂದ ಸರಕಾಯ್ಜೀವಿಗಳಿಂದೇಳುವ ಗಂಟಲುರಿಗಳು (ಸೋರ್‌ಥ್ರೋಟ್ಸ್) ಬಲು ಮುಖ್ಯವಾದುವು. ಈ ರೋಗಾಣುಗಳನ್ನು ಚೆನ್ನಾಗಿ ಅಣಗಿಸುವ ಪೆನಿಸಿಲಿನ್ ಮದ್ದು ಇರುವುದು ಪುಣ್ಯವೇ ಸರಿ. ರೋಗವನ್ನು ಎಳೆಯದರಲ್ಲೇ ಕಂಡುಕೊಳ್ಳುವುದು ಮುಖ್ಯ. ಕೀಲುವಾತದ ಜ್ವರ ಆಗಾಗ್ಗೆ ಅನುಭವಿಸುವವರಿಗೆ ಚಳಿಗಾಲದಲ್ಲಿ ರೋಗ ತಡೆವ ಮದ್ದಿನ ಚಿಕಿತ್ಸೆ ಮಾಡಬೇಕು.

ಪುಪ್ಪುಸುರಿತಗಳಲ್ಲಿ ಬೇಗನೆ ಜೋರಾಗುವ ಹಲವೇಳೆ ಸಾಯಿಸುವ ಗುತ್ತಿಕಾಯ್ಜೀವಿಕ ಸೋಂಕುಗಳು ಕೆಡುಕಿನವು. ಆದರೆ ಚಿಕಿತ್ಸೆಯಲ್ಲಿ ಬಳಸುವ ಪ್ರಬಲವಾದ ಜೀವವಿರೋಧಕಗಳಿಗೂ ಜಗ್ಗದ ಗುತ್ತಿಕಾಯ್ಜೀವಿಗಳು ತಲೆಹಾಕುತ್ತಿರುವುದು ಈಗೀಗ ದೊಡ್ಡ ತೊಡಕಾಗುತ್ತಿದೆ. ಈ ತೆರೆದ ಸೋಂಕುಗಳು ಬಲು ಮಟ್ಟಿಗೆ ಆಸ್ಪತ್ರೆಗಳಲ್ಲಿ, ಬಟ್ಟೆ ಬರೆ, ಪಾತ್ರೆ ಪರಿಕರಗಳು, ಕೆಲಸಗಾರರ ಮೂಗು, ಗಂಟಲು, ಉಗುರುಸಂದುಗಳಿಂದ ಅಂಟುತ್ತವೆ. ಇದಕ್ಕಾಗಿ ಮುಂದುವರಿದ ನಾಡುಗಳ ಅನೇಕ ಆಸ್ಪತ್ರೆಗಳಲ್ಲಿ ತಲೆದೋರುವ ಈ ಬಗೆಯ ಸೋಂಕು ರೋಗದ ವಿಚಾರಣೆ ನಡೆಸಿ ಮತ್ತೆ ಹಾಗಾಗದಂತೆ ತಡೆವ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳಲು ಸಮಿತಿಗಳಿವೆ.

ಗಾಳಿಕಾಯ್ಜೀವಿಕ ಪುಪ್ಪುಸುರಿತಗಳು ಎರಡನೆಯ ಮಹಾಯುದ್ಧದ ಹಿಂದಿದ್ದಷ್ಟು ಸಾಮಾನ್ಯವಾಗಿಲ್ಲ. ರೋಗವೇ ಇಳಿದುಹೋಯಿತೋ, ಈಗ ದೊರೆವ ಗುಣಕಾರಕ ಜೀವಿರೋಧಕಗಳಿಂದ ಮನೆಗಳಲ್ಲೇ ಗುಣವಾಗುತ್ತಿವೆಯೋ ಗೊತ್ತಿಲ್ಲ. ಫ್ರೀಡ್‌ಲ್ಯಾಂಡರನ ಪುಪ್ಪುಸುರಿತ ಬಹುವಾಗಿ ಮುದುಕರಲ್ಲೂ ಕುಡುಕರಲ್ಲೂ ವಿಪರೀತ ಪುಷ್ಟಿಗೆಟ್ಟಿರುವವರಲ್ಲೂ ಕಟ್ಟುನಿಟ್ಟಿನ ರೋಗ. **(ನೋಡಿ– ಏಕಾಣುಜೀವಿಕ,–ಸೋಂಕಿನ–ರೋಗಗಳು)**

ಕ್ಷಯ: ಸಾಮಾನ್ಯವಾಗಿ ಪುಪ್ಪುಸಗಳಿಗೆ ಹತ್ತುವ ಈ ರೋಗದಿಂದ ಸಾಯುವವರ ಸಂಖ್ಯೆ ಕಡಿಮೆ ಆಗುತ್ತಿದ್ದರೂ ಮೂಡಲ ಯೂರೋಪ್, ಏಷ್ಯಗಳಲ್ಲಿ ಇದರ ಹಾವಳಿ ಇನ್ನೂ ತಗ್ಗಿಲ್ಲ. ಜನಸಂದಣಿ ದಟ್ಟವಾಗಿರುವ ಹಿಂದುಳಿದ ನಾಡುಗಳಲ್ಲಿ ಈ ರೋಗವನ್ನು ಸರಿಯಾಗಿ ಪತ್ತೆಹಚ್ಚದೆ, ಅಂಕೆಅಂಶಗಳು ಸರಿಯಾಗಿಲ್ಲದ್ದರಿಂದ ಈ ಸಮಸ್ಯೆಯ ಹರವಿನ ಕಲ್ಪನೆ ಸರಿಯಾಗಿ ಸಿಕ್ಕುವಂತಿಲ್ಲ. ಇಂದಿನ ಮದ್ದು ಚಿಕಿತ್ಸೆ ಒಳ್ಳೆಯ ಗುಣಕಾರಿಯಾದ್ದರಿಂದ ಕ್ಷಯದಿಂದಾಗುವ ಸಾವುಗಳ ಲೆಕ್ಕಕ್ಕಿಂತಲೂ ರೋಗಿಗಳ ಎಣಿಕೆಯಿಂದ ನಿಜಸ್ಥಿತಿ ಅರಿವಾಗುವುದು. ಆಸ್ಪತ್ರೆಗೆ ಸೇರಿಸದೆಯೇ ಮನೆಯಲ್ಲಿ ಮಾಡುವ ಮದ್ದಿನ ಚಿಕಿತ್ಸೆಯಿಂದ ಬಹಳ ಮಂದಿ ರೋಗಿಗಳಿಗೆ ಕಾಯಿಲೆ ವಾಸಿಯಾಗುತ್ತಿದೆ. **(ನೋಡಿ– ಕ್ಷಯ–2)**

ಅಣಬೆ ರೋಗಗಳು: ಕೆಲವು ನಾಡುಗಳಲ್ಲಿ ಇವುಗಳ ಕೇಂದ್ರ ಜನಾಂತರ (ಎಂಡೆಮಿಕ್) ಆಗಿದ್ದು ಅನೇಕವು ಪುಪ್ಪುಸಕ್ಕೂ ಹತ್ತುತ್ತವೆ. ಅಮೆರಿಕದ ತೆಂಕಲಲ್ಲಿ ಜಾಲರಸಣಬೇನೆ (ಹಿಸ್ಟೊಪ್ಲಾಸ್ಮೋಸಿಸ್) ಸೋಂಕು ಶಾಲಾಮಕ್ಕಳಲ್ಲಿ ಕ್ಷಯಕ್ಕಿಂತಲೂ ಹೆಚ್ಚಾಗಿದೆ. ಆ ನಾಡುಗಳಲ್ಲಿ ಇದೊಂದು ದೊಡ್ಡ ಸಮಸ್ಯೆ. ಬಲುಮಟ್ಟಿಗೆ ಇದೂ ಕ್ಷಯದ ಹಾಗೇ ವರ್ತಿಸುವುದು. ಇದರ ರೋಗ ಚಿಕಿತ್ಸೆಯಲ್ಲಿ ಆಂಫೊಟೆರಿಸಿನ್ ಬಿ ಗುಣಕಾರಕ. ಮೆಲುಪಿನದಾಗಿ ಎಲ್ಲೆಲ್ಲೂ ಹರಡಿದಾಗ ಆಗುವ ಸಾಸಿವೆತರ ಸುಣ್ಣಗೂಡಿಕೆಗಳು (ಮಿಲಿಯರಿ ಕ್ಯಾಲ್ಸಿಫಿಕೇಷನ್ಸ್) ಕೆಲವು ವರ್ಷಗಳ ಕಾಲ ಎಕ್ಸ್–ಕಿರಣಗಳಲ್ಲಿ ಕಾಣುತ್ತಿರುವುವು. ಕೋಳಿಮರಿಗಳ, ಬಾವಲಿಗಳ ಹಿಕ್ಕೆಗಳಿಂದಲೂ ಕೆಲವಡೆ ಸಾಂಕ್ರಾಮಿಕಗಳು ಏಳುವುದುಂಟು.

ಪಡುವಲ ಅಮೆರಿಕ, ತೆಂಕಲ ಅಮೆರಿಕದ ಕೆಲವೆಡೆಗಳಲ್ಲಿ ಕಾಯಣಬೇನೆ (ಕಾಕ್ಸಿಡಿಯಾಯ್ಡಿಸ್) ಸೋಂಕು ಹರಡಿದೆ. ಕೆಲವರಿಗೆ ರೋಗಲಕ್ಷಣಗಳು ಹೊರಕಾಣದಿದ್ದರೂ ದೂಳಿನ ಮೂಲಕ ಬಲುಪಾಲು ಎಲ್ಲರಿಗೂ ಅಂಟಿರುವುದು. ಸುಮಾರು ಅರೆಪಾಲು ಜನರಲ್ಲಿ ಉಸಿರಾಟದ ರೋಗಲಕ್ಷಣಗಳು ತೋರುತ್ತವೆ. ಇದರಿಂದಾಗುವ ಪುಪ್ಪುಸ ಉರಿತ ಪೂರ್ತಿ ಗುಣವಾಗಬಹುದು. ಇಲ್ಲವೆ ತೆಳುಗೋಡೆಯ ವಿಶೇಷ ಪೊಳ್ಳುಗಳು ಪುಪ್ಪುಸದಲ್ಲಿ ಉಳಿಯಬಹುದು. ಪೊಳ್ಳಿನ ಗೂಡುಗಳು ಸಣ್ಣವಾಗಿದ್ದರೆ ಮುಚ್ಚಿಹೋಗುತ್ತವೆ. ದೊಡ್ಡವುಗಳಿಂದ ರಕ್ತಬೆರೆತ ಕಫ ಕೆಮ್ಮಿದಾಗ ಬೀಳಬಹುದು. ಕೆಲವೇಳೆ ಈ ಗೂಡುಗಳು ಒಡೆಯಲೂಬಹುದು. ಇದಕ್ಕಾಗಿಯೇ ಶಸ್ತ್ರಕ್ರಿಯೆ ಆಗಬೇಕು ಎನ್ನುವುದು. ಆಂಫೊಟೆರಿಸಿನ್ ಮದ್ದು ಕೆಲವೇಳೆ ಗುಣಕಾರಿ. ಅದರಲ್ಲೂ ಒಣಕಲ, ದೂಳೇಳುವ ಕಾಲಗಳಲ್ಲಿ ಜನಾಂತರ ರೋಗ ಇರುವೆಡೆಗೆ ಹೋಗದಿರುವುದೇ ರೋಗದಿಂದ ತಪ್ಪಿಸಿಕೊಳ್ಳುವ ಉಪಾಯ.

ಅನೇಕರ ಬಾಯಿಗಳಲ್ಲಿರುವ ಅಣಬೆಯಾದ ದನದ ಕಿರಣಣಬೆಯಿಂದ (ಆಕ್ಟಿನೊಮೈಸಿಸ್ ಬೊವಿಸ್) ಏಳುವ ಕಿರಣಬೇನೆ (ಆಕ್ಟಿನೊಮೈಕೋಸಿಸ್), ನೊಕಾರ್ಡ್‌ಬೇನೆ (ನೊಕಾರ್ಡಿಯೋಸಿಸ್), ಮೊಳೆಯಣ ಬೇನೆ (ಬ್ಲಾಸ್ಟೊಮೈಕೋಸಿಸ್) ಕೂಡ ಪುಪ್ಪುಸಗಳ ರೋಗಗಳಲ್ಲಿ ಸೇರಿವೆ. ಕಿರಣಬೇನೆಯ ಹುಣ್ಣುಗಳು ಎದೆಗೂಡನ್ನು ಕೊರೆದು ಒಳಹೋಗುವಂತಿರುವುವು. ಈ ಬೇನೆಗೆ ಕೆಲವೇಳೆ ಪೆನಿಸಿಲಿನ್, ಸಲ್ಫಡಯಜ಼ೀನುಗಳಿಂದ ಅನುಕೂಲ. ನೊಕಾರ್ಡ್‌ಬೇನೆಗೆ ಸಲ್ಫರ್ ಮದ್ದುಗಳು ಸಾಕು. ಮೊಳೆಯಣಬೇನೆಗೆ ಆಂಫೊಟೆರಿಸಿನ್ ಬಿ ಸರಿಯಾದ ಮದ್ದು. ಕುರುಗಳು ಎದ್ದಿದ್ದರೆ ಕೀವು ಹೊರಡಿಸಬೇಕು. ಮೊಟಕಾಯ್ಜೀವಿಬೇನೆ (ಕ್ರಿಪ್ಟೊಕಾಕೋಸಿಸ್) ತುಸು ನೆಗಡಿ ಕೆಮ್ಮಿಂದ ಮೊದಲಾಗಿ ಆಮೇಲೆ ಪುಪ್ಪುಸಗಳಿಗೂ ಹರಡಿಕೊಂಡು ಮಿದುಳ್ಪೊರೆಯುರಿತಕ್ಕೂ (ಮೆನಿಂಜೈಟಿಸ್) ಹೋಗಬಹುದು. ಆಂಫೊಟೆರಿಸಿನ್ ಬಿ ಯಿಂದ ಸ್ವಲ್ಪ ಚೇತರಿಸಿಕೊಂಡರೂ ಈ ರೋಗದಲ್ಲಿ ಸಾವು ಸಾಮಾನ್ಯ.**(ನೋಡಿ– ಅಣಬೆ–ಸೊಂಕುಗಳು)**

ತೀವ್ರಹಠಾತ್ ಉಸಿರಾಟ ಲಕ್ಷಣಾವಳಿ (ಸಾರ್ಸ್) ಕಿರೀಟಮಾದರಿಯ ವೈರಸ್ ರೋಗ ಎರಡರಿಂದ ಹತ್ತು ದಿನಗಳ ಕಾಲ ಹುದುಗಿ ಕುಳಿತು ತುಂಬ ಹೆಚ್ಚಿನ ಜ್ವರ, ಒಣಕೆಮ್ಮು, ಚಳಿ, ತೀವ್ರತೆರ ಉಬ್ಬಸ ಮತ್ತು ಕಫದ ಲಕ್ಷಣಗಳೊಡನೆ ಪ್ರಕಟಗೊಳ್ಳುತ್ತದೆ. ಈ ರೋಗ ಈಚೆಗೆ ಚೀನಾದ ದಕ್ಷಿಣ ಭಾಗ, ಹಾಂಗ್‌ಕಾಂಗ್, ವಿಯೆಟ್ನಾಂ ಸಿಂಗಪುರಿನಲ್ಲಿ ಕಾಣಿಸಿಕೊಂಡು ಜಗತ್ತಿನ ಗಮನ ಸೆಳೆಯಿತು. ಈ ರೋಗಿಗಳನ್ನು ಬೇರ್ಪಡಿಸಿ ಇರಿಸಿ ಚಿಕಿತ್ಸೆಗೊಳಪಡಿಸಬೇಕು.

**ಮಿಕ್ಕ ರೋಗಗಳು:** ಪರಪಿಂಡಿಗಳ ಮುಸುರಿಕೆ: ಈಜಿಪ್ಟ್ ಬ್ರೆಜ಼ಿಲ್ ಮತ್ತಿತರ ದೇಶಗಳಲ್ಲಿ ಪುಪ್ಪುಸದ ಬೇರೂರಿದ ಸೀಳೊಡಲಿ ಬೇನೆ (ಷಿಸ್ಟೊಸೋಮಿಯಾಸಿಸ್) ಸಾಮಾನ್ಯ. ಜಪಾನು, ಚೀನ, ಫಿಲಿಪ್ಪೈನ್ಸ್, ಆಫ್ರಿಕ, ಡಚ್, ಗಯಾನ, ವೆಸ್ಟ್‌ಇಂಡೀಸ್ಸಿನ ಹಲವಾರು ದ್ವೀಪಗಳಲ್ಲಿ ಎಲ್ಲೆಲ್ಲೂ ರಕ್ತದಲ್ಲಿನ ಎಳೆಹುಳುಗಳ (ಬ್ಲಡ್ ಫ್ಲೂಕ್ಸ್) ಸೋಂಕುಗಳಾಗುತ್ತಿವೆ. ಸೋಂಕು ಹೊತ್ತಿರುವ ಬಸವನಹುಳುಗಳಿರುವ ಕೊಳ, ಕೆರೆ, ಹೊಳೆಗಳಲ್ಲಿ ಮಜ್ಜನ, ಒಳಗಿಳಿದು ನಿಂತು ಬಟ್ಟೆ ಒಗೆತಗಳಿಂದ ಸೋಂಕಿಗೆ ಈಡಾಗುವರು.

ಚಲಕಣಬೇನೆ (ಅಮೀಬಿಯಾಸಿಸ್) ಪ್ರಪಂಚದಲ್ಲಿ ಎಲ್ಲೆಲ್ಲೂ ಇದ್ದರೂ ಉಷ್ಣವಲಯದಲ್ಲಿ ಅದರಲ್ಲೂ ಕೊಳಕು ಹೆಚ್ಚಿರುವೆಡೆ ಇದು ವಿಪರೀತ. ಕೊಳಕಾಗಿ ಸೋಂಕುಹತ್ತಿರುವ ನೀರು, ಅಂಥ ನೀರಲ್ಲಿ ಅದ್ದಿದ, ತೊಳೆದ ಕಚ್ಚಾ ಆಹಾರ ತಿಂಡಿಗಳನ್ನು ಬಿಟ್ಟುಬಿಡುವುದೇ ನಿರೋಧಕ ಉಪಾಯ. ಈಲಿಯಲ್ಲಿ ಎದ್ದ ಚಲಕಣದ ಕುರು ಬಲ ಪುಪ್ಪುಸಕ್ಕೂ ಹರಡಿಕೊಳ್ಳಬಹುದು. **(ನೋಡಿ– ಆಮಶಂಕೆ)**

ಒಗ್ಗದಿಕೆಯ ರೋಗಗಳು: ರಕ್ತನಾಳ ಚಾಲಕ ಮೂಗುರಿತ (ವೇಸೊಮೋಟಾರ್ ರೈನೈಟಿಸ್). ಅಂದರೆ ನೆಗಡಿ, ಕರಡ ಜ್ವರ (ಹೆ ಫೀವರ್), ಕೆಲವೇಳೆ ಗೂರಲು ಇವು ಮೂರು ಉಸಿರಾಟ ಮಂಡಲದ ಸಾಮಾನ್ಯ ಒಗ್ಗದಿಕೆಯ (ಆಲರ್ಜಿಕ್) ರೋಗಗಳು.

ಮೂಗಿನಿಂದ ಅಪಾರ ನೀರು ಸುರಿಸುವ ರಕ್ತನಾಳ ಚಾಲಕ ಮೂಗುರಿತ ಯಾವಾಗಲಾದರೂ ಕಾಣಬಹುದು. ಪರಾಗಗಳು ಒಣಗಿ ದೂಳಿನಲ್ಲಿ ಹರಡುವ ಕಾಲದಲ್ಲಿ ಮಾತ್ರ ಕರಡ ಜ್ವರ ಕಾಣಿಸಿಕೊಳ್ಳುತ್ತದೆ. ಇದ್ದಕ್ಕಿದ್ದ ಹಾಗೆ ಸೀನು, ಕಣ್ಣು ಮೂಗಿನ ಉರಿತ, ಕಣ್ಣು ಮೂಗುಗಳಿಂದ ನೀರು ಸುರಿವುದು. ಇದರಿಂದ ಅಪಾಯವಿಲ್ಲವಾದರೂ ಸುಮ್ಮನೆ ಸತಾಯಿಸುತ್ತದೆ. ನಿದ್ರೆ ಹಸಿವುಗಳನ್ನು ಕೆಡಿಸುವುದು. ಅಲ್ಲದೆ ಮೂಗಿನ ನಿಜಗೆಲಸಕ್ಕೆ ಅಡ್ಡಿಯಾಗಿ ಸೋಂಕು ಅಂಟಲು ನೆರವಾಗುತ್ತದೆ.

ಉಸಿರಾಟದ ರೋಗಗಳಲ್ಲಿ ಬಲು ಕಟ್ಟುನಿಟ್ಟಿನ ರೋಗವಾದ ಗೂರಲಿನಲ್ಲಿ ಪಂಗುಸಿರ್ನಾಳದ ಗೋಡೆಗಳಲ್ಲಿನ ನಯ ಸ್ನಾಯುಗಳ ಸೆಡೆತದಿಂದಾಗಿ ಮೇಲಿಂದ ಮೇಲೆ ಉಬ್ಬಸ ಎಳೆಯುತ್ತಿರುವುದು. ಪಂಗುಸಿರ್ನಾಳ ಕಲೆಗಟ್ಟಿದ್ದರೆ (ಸ್ಕಾರಿಂಗ್), ಗಂತಿ (ಟ್ಯೂಮರ್) ಎದ್ದಿದ್ದರೆ, ಹುಣ್ಣಾಗಿದ್ದರೆ, ಉಬ್ಬಸದ ಸೇದು ಎದೆಯ ಒಂದು ಪಕ್ಕದಲ್ಲಿ ಮಾತ್ರ ತೋರಿದರೆ ಗೂರಲಿನಲ್ಲಿ ಇಬ್ಬದಿಗಳಲ್ಲೂ ಬಿಟ್ಟು ಬಿಟ್ಟು ಬದಲಾಯಿಸುತ್ತಿರುವುದು ವಿಶೇಷ. ಗಟ್ಟಿಯಾಗಿ ಅಂಟುವ ಲೋಳೆ ಸುರಿಕೆಗಳನ್ನು ಕೆಮ್ಮಿ ಹೊರಡಿಸುವುದು ಕಷ್ಟ. ಒಗ್ಗದಿಕೆಗೆ ಧೂಳು, ಪುಕ್ಕ, ಗರಿಗಳಂಥ ಗಾಳಿಯಲ್ಲಿನ ತರತರದ ವಸ್ತುಗಳು ಬಲುಮಟ್ಟಿಗೆ ಕಾರಣ. ಅದರಲ್ಲೂ ನಡುವಯಸ್ಸಲ್ಲಿ ಗೂರಲು ಕಾಣಿಸಿಕೊಂಡರೆ ಒಳಗೇ ಸೇರಿರುವ ಏಕಾಣುಜೀವಿಗಳೇ ಕಾರಕಗಳು. ಸಾಮಾನ್ಯ ಕಾರಣಗಳು ಹಲವಾರಿವೆ. ಗೂರಲಿನ ಉಬ್ಬಸ ಕೆರಳಲು ಮನಸ್ಸು ಕೆಡುವುದು, ಬೆಳಗೋ ಸಂಜೆಯೋ ಹವೆಯ ಕಾವು ಇದ್ದಕ್ಕಿದ್ದ ಹಾಗೆ ಬದಲಾಯಿಸಿಕೆ ಇಲ್ಲವೆ ಉಸಿರಾಟದ ಸೋಂಕು ಕಾರಣಗಳು. ಉಬ್ಬಸದಲ್ಲಿ ಗಾಳಿಸಂಕಟ ಜೋರು, ಉಸಿರು ಬಿಟ್ಟಾಗ, ಸೆಡೆತದ ಸೇದಿಕೆ ಪಂಗುಸಿರ್ನಾಳಗಳು ಕಿರಿದಾಗುವುದನ್ನೂ ಮೋಟಾಗುವುದನ್ನೂ ಎಂದಿಗಿಂತಲೂ ಹೆಚ್ಚಿಸುವುದಲ್ಲದೆ, ಕಿರಿಯ ಪಂಗುಸಿರ್ನಾಳಗಳ ಸೆಡೆತದಿಂದ, ಚೆಂಡು ಕವಾಟದಿಂದ ಮುಚ್ಚಿದಂತಾಗಿ, ಉಸಿರು ಒಳಹೋಗುವುದಾದರೂ ಹೊರಬರಲು ಬಲು ಕಷ್ಟವಾಗುತ್ತದೆ. ಲೋಳೆತರನ ಸುರಿಕೆಗಳು ನಿಜವಾಗಿಯೂ ಕೆಲವು ಪಂಗುಸಿರ್ನಾಳಗಳನ್ನು ಮುಚ್ಚಿಹಾಕಬಹುದು. ರೋಗ ಒಂದೊಂದು ವೇಳೆ ಜೀವಕ್ಕೇ ಕುತ್ತಾಗುವ, ಗೂರಲಿನ ನೆಲೆಯೂರಿಕೆಗೆ (ಸ್ಟೇಟಸ್ ಅಸ್ತ್ಮಾಟಿಕಸ್) ಬಲಿಯಾಗಬಹುದು. ಕಾರ್ಟಿಕೊಸ್ಟಿರಾಯ್ಡ್ ಮದ್ದುಗಳಿಂದ ಈ ರೋಗಿಗಳು ಬದುಕುತ್ತಿದ್ದಾರೆ. ಇದರಲ್ಲಿ ಗೂರಲಿನ ಉಬ್ಬಸ ತುಸುಕಾಲವೂ

ಬಿಡುವಿಲ್ಲದೆ ಸೇದುತ್ತಿರುವುದು. ಬಲುಮಟ್ಟಿಗೆ ಗೂರಲುಬ್ಬಸವನ್ನು ಬೀಟಾ ಆಡ್ರಿನರ್ಜಿಕ್ ಗ್ರಾಹಕಗಳನ್ನು ಪುರಸ್ಕರಿಸುವ ಔಷಧಿಗಳು ಅದೇ ತೆರನ ಇತರ ಮದ್ದುಗಳಿಂದಲೂ ಚೆನ್ನಾಗಿ ಅಣಗಿಸಬಹುದು. ಅಲ್ಲದೆ ಒಗ್ಗದಿಕೆ ಜನಕಗಳ (ಅಲರ್ಜೆನ್ಸ್) ಸೋಂಕುಗಳು ಹವೆಯ ಕಾವಿನ ಏರಿಳಿತಗಳಿಂದ ದೂರವಿದ್ದು ಮನಸ್ಸನ್ನು ನಿರಾಳವಾಗಿ ನೆಮ್ಮದಿಯಲ್ಲಿ ಇಟ್ಟುಕೊಳ್ಳುವುದರಿಂದ ಉಬ್ಬಸ ಬಾರದಂತೆ ತಡೆಯಬಹುದು. ಗೂರಲು ಸಂಪೂರ್ಣವಾಗಿ ವಾಸಿಯಾಗದ ಕಾಯಿಲೆ. ಆದರೆ ಸಾಕಷ್ಟು ಎಚ್ಚರದಿಂದ ಅದು ಹೊರದೋರದಂತೆ ಅಣಗಿಸಿಡಬಹುದು. ಮೇಲಿಂದ ಮೇಲೆ ಗೂರಲುಬ್ಬಸ ಕಾಡುತ್ತಿದ್ದರೆ ಸಾಮಾನ್ಯವಾಗಿ ಅಪಾಯಕರವಲ್ಲವಾದರೂ ಕೆಲವರಲ್ಲಿ ವರ್ಷಾನುಗಟ್ಟಳೆ ನರಳಿಸುತ್ತಿದ್ದರೆ ಪುಪ್ಪುಸ ಗಾಳಿಬುಡ್ಡೆಗಳು ಭಗ್ನಗೊಂಡು ಮಿತಿಮೀರಿ ಹಿಗ್ಗಿದಂತಾಗಿ ಗಾಳಿಯುಬ್ಬಟೆ (ಎಂಫಿಸೀಮ) ರೋಗ ತೋರುವುದು.

ಬೇರೂರಿದ ಪಂಗುಸಿರ್ನಾಳುರಿತ, ಗಾಳಿಯುಬ್ಬಟೆ: ಕೂರಾದ ಪಂಗುಸಿರ್ನಾಳುರಿತ (ಅಕ್ಯೂಟ್ ಬ್ರಾಂಕೈಟಿಸ್) ಮೇಲಿಂದ ಮೇಲೆ ಆಗುತ್ತಿದ್ದರೆ, ಕಫ ಬೀಳುವ, ಕೆಮ್ಮುಗೂಡಿದ ಬೇರೂರಿದ (ಕ್ರಾನಿಕ್) ಪಂಗುಸಿರ್ನಾಳುರಿತಕ್ಕೆ ದಾರಿಯಾಗುವುದು. ಹೀಗೆ ಕಫ ಬಿದ್ದು, ಒಂದೇ ಸಮನೆ ಕೆಮ್ಮುತ್ತಿದ್ದರೆ ಉಸಿರಾಟದ ಬೇನೆ ಆಗಾಗ್ಗೆ ಕೆರಳಿ, ಕೆಲವೇಳೆ ಜ್ವರ ಕಫ ಕಳೆತವೂ ಇರುತ್ತವೆ. ಕೊನೆಗೆ ಸೇದುವ ಗೊರಗುಡಿಕೆ ಕೇಳುವುದು. ಬಹು ಮಂದಿಯಲ್ಲಿ ಗಾಳಿಗೂಡುಗಳ ಗೋಡೆಗಳು ತೆಳುವಾಗಿ ಪುಪ್ಪುಸಗಳು ಮಿತಿಮೀರಿ ಉಬ್ಬಿಕೊಂಡು ಗಾಳಿಯುಬ್ಬಟೆ ಆಗುವುದು. ಬರುಬರುತ್ತ ಏರುಸಿರು ಹೆಚ್ಚಿಕೊಂಡು ಆಮೇಲೆ ತುಸು ದುಡಿದರೂ ಏರುಸಿರುಬಿಡುವಂತಾಗುತ್ತದೆ. ಪುಪ್ಪುಸಗಳನ್ನು ಬಲು ಊನಯಿಸುವ ಈ ಮಹಾ ರೋಗ ಬಹಳವಾಗಿಬಿಟ್ಟು ರೋಗಿ ಪೂರ್ತಿಯಾಗಿ ಕೈಲಾಗದವನಾಗುತ್ತಾನೆ. ಕೊನೆಗೆ ಗುಂಡಿಗೆಯ ಸೋಲುವೆಯಿಂದಲೋ (ಹಾರ್ಟ್‌ಫೈಲ್ಯೂರ್) ಇದ್ದಕ್ಕಿದ್ದ ಹಾಗೆ ಸೋಂಕು ಹತ್ತಿಯೋ ಸಾಯುವನು. ಪಂಗುಸಿರ್ನಾಳದ ಸೆಡೆತವನ್ನು ಮದ್ದುಗಳು ಶಮನಗೊಳಿಸುತ್ತವೆ. ಗಾಳಿಯುಬ್ಬಟೆ ರೋಗಿಗಳು ಆಗಾಗ್ಗೆ ಅನುಭವಿಸುವ ಪುಪ್ಪುಸುರಿತಕ್ಕೆ ಬಲು ಒಳ್ಳೆ ಮದ್ದುಗಳಿದ್ದರೂ ಅವು ಪೂರ್ತಿ ಗುಣಕಾರಿಗಳಲ್ಲ. ಎಳೆಯವರಲ್ಲಿ ಈ ರೋಗವನ್ನು ಕಂಡುಕೊಳ್ಳುವುದು ಸುಲಭವಲ್ಲ. ಇದರ ಕಾರಣ ಖಚಿತವಿಲ್ಲದ್ದರಿಂದ ಉಸಿರ್ನಾಳಗಳನ್ನು ಕೆರಳಿಸದಂತೆ, ಕೆಮ್ಮು ಬರಿಸದಂತೆ ಕೈಗೊಳ್ಳುವ ಶಮನ ಚಿಕಿತ್ಸೆಗಳು ರೋಗತಡೆಗೆ ನೆರವಾಗುತ್ತವೆ. ಮುಖ್ಯವಾಗಿ ಬೇರೂರಿದ ಪಂಗುಸಿರ್ನಾಳುರಿತ ಚಳಿದೇಶಗಳ ಬೇನೆಯಾದರೂ ಉಷ್ಣದೇಶಗಳಲ್ಲಿ ಗೋಚರಿಸುತ್ತದೆ.

ಪುಪ್ಪುಸಗಳಲ್ಲಿ ಕಸದಿಂದ ಏಳುವ ರೋಗಗಳು: ಕೈಗಾರಿಕೆಯ ಕಸಬುಗಳಲ್ಲಿ ಮತ್ತು ಗಣಿಗಾರಿಕೆಯಲ್ಲಿ ಎದ್ದ ದೂಳು ಉಸಿರ ಮೂಲಕ ಒಳಹೊಕ್ಕು ಪುಪ್ಪುಸಗಳಲ್ಲಿ ಕೂಡಿಕೊಳ್ಳುವುದರಿಂದ ತಂತುಗೂಡಿಸಿ ನಾರಿನಂತೆ ಆಗಿಸುವುದೇ ಪುಪ್ಪುಸದೂಳು ಬೇನೆಗಳು (ನ್ಯೂಮೊಕೋನಿಯೋಸಸ್). ಬೆಣಚುಕಲ್ಲಿನ ಸುಣ್ಣನೆಯ ಪುಡಿದೂಳು ಉಸಿರಲ್ಲಿ ಒಳಹೋಗುವುದರಿಂದ ಏಳುವ ಸಿಲಿಕಬೇನೆಯೇ (ಸಿಲಿಕೋಸಿಸ್) ಬಲುಮುಖ್ಯ ಪುಪ್ಪುಸದೂಳುಬೇನೆ. ಕಲ್ಲು ಗಣಿಗಳ ಕೆಲಸಗಾರರಲ್ಲಿ ಇದು ಕಾಣುವುದು ಸಾಮಾನ್ಯ. ಬರಬರುತ್ತ ಪುಪ್ಪುಸುವೆಲ್ಲ ತಂತುಗೂಡುವುದರೊಂದಿಗೆ (ಫೈಬ್ರೋಸಿಸ್) ಗಾಳಿಯುಬ್ಬಟೆ ಆಗುವುದೇ ದುರ್ಬಲತೆಗೆ ಕಾರಣ. ಸಿಲಿಕಬೇನೆಯವರು ಕ್ಷಯರೋಗಕ್ಕೆ ಸುಲಭವಾಗಿ ಈಡಾಗುವರು. ಹತ್ತಿ ಎಕ್ಕುವ, ಹತ್ತಿದಾರ ಬಳಸುವ ಗಿರಣಿಗಳ ಕೆಲಸಗಾರರಲ್ಲಿ ಪುಪ್ಪುಸುಗಳಲ್ಲಿ ಅರಳೆ ದೂಳು ಕಣಗಳು ಕೂಡುವುದರಿಂದ ಅರಳೆ ಬೇನೆ (ಬಿಸಿನೋಸಿಸ್) ಏಳಬಹುದು. ಕಲ್ನಾರಿನ ಎಳೆಗಳ ದೂಳಿನಲ್ಲಿ ಕೆಲಸ ಮಾಡುವವರಲ್ಲಿ ಕಲ್ನಾರುಬೇನೆ (ಆಸ್ಬೆಸ್ಟೋಸಿಸ್) ತೋರಬಹುದು. ವರ್ಷಗಟ್ಟಳೆ ಹೀಗೆ ಆಗುತ್ತಿದ್ದಲ್ಲಿ ಪುಪ್ಪುಸಗಳ ತೆಳುಕವಚವಾದ ಅಳ್ಳೆಪೊರೆ (ಪ್ಲೂರ) ಗುಂಡಿಗೆ ಸುತ್ತೊರೆಗೂ (ಪೆರಿಕಾರ್ಡಿಯಂ) ಹರಡಿಕೊಂಡು ಗುಂಡಿಗೆ ಸೋಲಬಹುದು.

ಪುಪ್ಪುಸಗಳಲ್ಲಿ ಒಂದು ಬಾರಿ ತಂತುಗೂಡಿಬಿಟ್ಟರೆ ಸರಿಯಾದ ಚಿಕಿತ್ಸೆಯೇ ಇಲ್ಲದ್ದರಿಂದ ಆ ತೆರನ ದೂಳುಗಳು ಉಸಿರಲ್ಲಿ ಒಳಹೋಗದಂತೆ ತಕ್ಕ ಮುಸುಕು ಗಾಳಿಯಾಟಗಳನ್ನು ಏರ್ಪಡಿಸುವುದು ಮುಖ್ಯ. ಪ್ರತಿದೀಪ್ತಿಶೀಲ (ಫ್ಲೂರಸೆಂಟ್) ದೀಪಗಳ ತಯಾರಿಕೆಯಲ್ಲಿ ಬಹುವಾಗಿ ಬೆರಿಲಿಯಮ್ಮಿನ ಮಿನುರಂಜಿಗಳು (ಫಾಸ್ಫರ್ಸ್) ಉಸಿರಲ್ಲಿ ಸೇದಿಕೊಳ್ಳುವುದರಿಂದ ಆಗುವ ಬೆರಿಲಿಯಂ ಬೇನೆಯಲ್ಲಿ ಉಸಿರು ಕಟ್ಟಿದಂತಾಗುತ್ತದೆ. ಬೆರಿಲಿಯಂ ಬಳಸುವ ಕಾರ್ಖಾನೆ ಸುತ್ತಮುತ್ತ ಮನೆಗಳಲ್ಲಿ ಇರುವವರಲ್ಲೂ ಈ ಬೇನೆ ಕಂಡಿದೆ. ಕೈಗಾರಿಕೆಯ ವಿಧಾನಗಳನ್ನು ಈಚೆಗೆ ಬದಲಾಯಿಸಿದ್ದರಿಂದ ಈ ಬೇನೆ ಅಷ್ಟಾಗಿಲ್ಲ. ಸ್ಟಿರಾಯ್ಡ್ ಚೋದನಿಕಗಳ (ಹಾರ್ಮೋನ್ಸ್) ಚಿಕಿತ್ಸೆಯಿಂದ ಅಣಗಿಸಬಹುದು. ಹೀಗೆ ಈರಾಣುವಿನ (ಡೈಯಟೋಮೇಸಿಯಸ್) ಮಣ್ಣುಗಳು, ನುಣ್ಣನೆಯ ತವರದ ಪುಡಿ ಮುಂತಾದವಕ್ಕೆ ಒಡ್ಡುವುದರಿಂದಲೂ ಕೆಲವೇಳೆ ಪುಪ್ಪುಸದೂಳು ಬೇನೆಗಳು ಏಳುತ್ತವೆ.

ಬೇರೆ ಬೇರೆ ಬಗೆಗಳ ದೂಳಿನ, ಬೂಜಿನ ಜೀವಿಗಳ ಪದಾರ್ಥಗಳಲ್ಲಿ ಕೆಲಸ ಮಾಡುವುದರಿಂದ ಬರುವ ಕೂರಾದ ಪುಪ್ಪುಸುರಿತಕ್ಕೆ ರೈತನ ಪುಪ್ಪುಸ ಎನ್ನುವುದುಂಟು. ಮೇಲಿಂದ ಮೇಲೆ ಒಡ್ಡುತ್ತಿದ್ದರೆ ಬೇನೆ ಮರುಕಳಿಸುವುದು. ಒಳ್ಳೆಯ ಬೇಸಾಯಗಾರರಲ್ಲಿ ಏಳುವ ಮತ್ತೊಂದು ಅಸಾಧಾರಣ ಕಾಯಿಲೆ ಹಗೇವು ತುಂಬುಗರ ರೋಗ (ಸೈಲೊ ಫಿಲ್ಲರ್ಸ್ ಡಿಸೀಸ್). ನೈಟ್ರೋಜನ್ನಿನ ಕೆಲವು ಆಕ್ಸೈಡುಗಳನ್ನು ಉಸಿರಲ್ಲಿ ತೆಗೆದುಕೊಳ್ಳುವುದೇ ಕಾರಣ. ಕಬ್ಬಿನ ಸಿಪ್ಪೆಯ ಒಣಗಿದ ದೂಳಿಂದ ಹೀಗೇ ಕಬ್ಬಿಪ್ಪೆಬೇನೆ (ಬಗಸ್ಸೋಸಿಸ್) ಏಳುತ್ತದೆ. **(ನೋಡಿ– ಅಪಾಯಕರ–ವೃತ್ತಿಗಳು)**

ಕಸುಬಿನವಲ್ಲದವು: ಉಸಿರಾಟದ ರೋಗಲಕ್ಷಣಗಳು ಇಲ್ಲದ, ಇಲ್ಲವೇ ತುಸು ಮಾತ್ರವಿದ್ದು ಅನೇಕವೇಳೆ ಎದೆಗೂಡಿನ ಎಕ್ಸ್–ಕಿರಣಚಿತ್ರದಲ್ಲಿ ಇಕ್ಕೆಡೆಗಳಲ್ಲೂ ಸೋಜಿಗಕಾರಕ ವಾಗಿ ಅಸಹಜತೆಗಳು ಕಾಣುವ ಪುಪ್ಪುಸಗಳ ರೋಗ ಮಾಂಸದ ಬೇನೆ (ಸಾರ್ಕಾಯ್ಡೋಸಿಸ್) ಕಾರಣಕಾರಕ ತಿಳಿದಿಲ್ಲ. ಅಮೆರಿಕದಲ್ಲಿ ಪೀತದಾರು ಕಾಡುಗಳಲ್ಲಿನ ಹೂದೂಳಿಗೂ ಈ ರೋಗಕ್ಕೂ ಜಂಟಿಹಾಕುತ್ತಿರುವರು. ಇತ್ತೀಚೆಗೆ ಇಡುಗಂಟುಬೇನೆ (ತಿಸಾರೋಸಿಸ್) ಆಗಿರುವ ವರದಿಗಳಿವೆ. ಕೂದಲನ್ನು ಅಂಟಿಕೂಡುವಂತೆ ಬೃಹದಣುಗಳಿರುವ (ಮ್ಯಾಕ್ರೊಮಾಲಿ ಕ್ಯೂಲ್ಸ್) ರಾಳಗಳ ಸಿಂಪಡಿಕದ (ಸ್ಪ್ರೇ) ಬಳಕೆಯಿಂದ ಅದನ್ನು ಸಿಂಪಡಿಸುವವನಲ್ಲಿ ರಾಳದ ಈ ಬೃಹದಣುಗಳು ಪುಪ್ಪುಸುಗಳಲ್ಲಿ ಸೇರಿಕೊಳ್ಳುವುದರಿಂದ ಏಳುವ ಬೇನೆಯಿದು.

ಏಡಿಗಂತಿ: 1930ರ ಸುಮಾರಿನಿಂದ ಈಚೆಗೆ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯ, ಕೆನಡ, ಡೆನ್ಮಾರ್ಕ್, ಜಪಾನು, ತುರ್ಕಿಗಳಲ್ಲಿ ಪುಪ್ಪುಸದ ಏಡಿಗಂತಿಗಳು (ಕ್ಯಾನ್ಸರ್) ಹೆಚ್ಚಾಗಿದ್ದುವು. ಭಾರತದಲ್ಲಿ ಈ ರೋಗ ಈಚೆಗೆ ವಿಶೇಷವಾಗಿ ತೋರಿಬರುತ್ತದೆ. ಅದು ಗಂಡಸರಲ್ಲಿ ಹೆಚ್ಚಾಗಿದ್ದು, ಏಡಿಗಂತಿ ತೀರ ಸಾಮಾನ್ಯವಾಗಿತ್ತು. ಹೊಗೆಬತ್ತಿ ಸೇದಿಕೆಗೂ ಇದಕ್ಕೂ ಇರುವ ನಿಕಟ ಸಂಬಂಧವನ್ನು ಇಂಗ್ಲೆಂಡ್, ಅಮೆರಿಕಗಳಲ್ಲಿ ಎಷ್ಟೋ ಮಂದಿ ಶೋಧಕರು ತೋರಿದ್ದಾರೆ. ಹಳ್ಳಿಗಳಿಗಿಂತಲೂ ನಗರಗಳಲ್ಲಿ ಹೆಚ್ಚಾಗಿರುವುದರಿಂದ ಗಾಳಿಯ ಕೊಳಕನ್ನೂ ಪರಿಶೀಲಿಸಬೇಕು. ಪುಪ್ಪುಸದ ಏಡಿಗಂತಿ ಮೈಯಲ್ಲಿ ದೂರದ ಇತರ ಅಂಗಗಳಿಗೆ ಹರಡಿಕೊಳ್ಳುವ ಮೊದಲೇ ಶಸ್ತ್ರಕ್ರಿಯೆಯಿಂದ ಬುಡಮಟ್ಟ ತೆಗೆದುಹಾಕುವುದೇ ಮುಖ್ಯ ಚಿಕಿತ್ಸೆ. ಹೀಗೆ ಮಾಡಿದರೂ ಐದು ವರ್ಷಗಳು ಬದುಕುವವರು ನೂರಕ್ಕೆ ಹತ್ತು ಮಂದಿಯೂ ಇಲ್ಲ. ಒಂದು ಬಗೆಯ ತೀವ್ರತರ ಗಂತಿಗೆ ರಸಾಯನ ಚಿಕಿತ್ಸೆ ಇಲ್ಲವೇ ವಿಕಿರಣ ಚಿಕಿತ್ಸೆ ಹೆಚ್ಚು ಉಪಯುಕ್ತ. (ಡಿ.ಎಸ್.ಎಸ್.; ಕೆ.ಎಸ್.ಎಸ್.ಎಚ್.)

**ಉಸಿರ್ನಾಳ:** ಗಂಟಲ ಕುಳಿಯಿಂದ ಕೆಳಗಿಳಿದು, ದನಿನಾಳದ ಕೆಳಗೆ ಆರಂಭವಾಗಿ ಎದೆಯಲ್ಲಿ ಪಂಗುಸಿರ್ನಾಳಗಳಾಗಿ (ಬ್ರಾಂಕೈ) ಕವಲೊಡೆದು, ಪುಪ್ಪುಸಗಳಿಗೆ ಉಸಿರನ್ನು ಸಾಗಿಸುವ ನಾಳ (ಟ್ರೇಕಿಯ). ಕುತ್ತಿಗೆಯ ಮುಂಭಾಗದಲ್ಲಿ ಕೆಳಗಡೆ ಒಂದು ಭಾಗವೂ ಉಳಿದ ಭಾಗ ಎದೆಯೊಳಗೂ ಇರುವುದು. (ಎಂ.ಡಿ.)

**ಉಸಿರ್ನಾಳಕೊಯ್ಸೀಳಿಕೆ:** ಉಸಿರ್ನಾಳವನ್ನು ಕೊಯ್ದು ಸೀಳುವ ಶಸ್ತ್ರಕ್ರಿಯೆ (ಟ್ರೇಕಿಯಾಟೊಮಿ). ಗಂಟಲಲ್ಲಿ ಏನಾದರೂ ಸಿಕ್ಕಿಕೊಂಡೋ ಗಾಯ ಪೆಟ್ಟುಗಳಿಂದಲೋ ರೋಗದಿಂದಲೋ ಆತಂಕವಾಗಿ, ಸರಾಗವಾಗಿ ಮೂಗಿನ ಮೂಲಕ ಉಸಿರಾಡದಂತಾದರೆ, ಉಸಿರು ಒಳಹೊಕ್ಕು ಬರುವಂತೆ ಲೋಹ ಕೊಳವೆ ತೂರಿಸಿಡಲು ಉಸಿರ್ನಾಳದಲ್ಲಿ ಮಾಡುವ ದಾರಿಯಿದು. ಗಂಟಲಮಾರಿ (ಡಿಫ್ತೀರಿಯಾ) ರೋಗದಲ್ಲಿ ಬೇಗನೆ ಚಿಕಿತ್ಸೆ ಆಗದಿದ್ದರೆ ಹೀಗೆ ಆತಂಕವಾಗುವುದು ಸಾಮಾನ್ಯ. ಧ್ವನಿನಾಳದಲ್ಲಿ ಗಂಟು ಬೆಳೆದುಕೊಂಡು ಅಡಚಣೆ ಆಗುವುದುಂಟು. ಆಗ ಉಸಿರ್ನಾಳ ಕೊಯ್ಸೀಳಿಕೆ ಮಾಡಬೇಕಾಗುತ್ತದೆ. ಬೆಳ್ಳಿಯ ಕೊಳವೆ ಒಂದು ಕಂಡಿಯಲ್ಲಿ ಇರಿಸಿದಲ್ಲೇ ಇರುವುದು. ಆಗಾಗ್ಗೆ ಹೊರತೆಗೆದು ಲೋಳೆಯನ್ನು ಒರಸಿ ತೊಳೆದಿಡಲು ಇದರೊಳಗೆ ಇನ್ನೊಂದು ಕೊಳವೆ ಇರುವುದು. ಉಸಿರ್ನಾಳ ಎಳೆಗೂಸುಗಳಲ್ಲಿ ಜೀವಾಳದ (ವೈಟಲ್) ಅಂಗಗಳೊಂದಿಗೆ ಆಳದಲ್ಲಿದ್ದರೂ ಬೆಳೆದವರಲ್ಲಿ ಮುಂಗತ್ತಿನ ಕೆಳಭಾಗದಲ್ಲಿ ಸುಲಭವಾಗಿ ಕೈಯಿಂದ ಮುಟ್ಟುವಂತಿರುವುದು. ಈ ಶಸ್ತ್ರಕ್ರಿಯೆಯಲ್ಲಿನ ಮುಖ್ಯ ಅಪಾಯವೆಂದರೆ ಅಲ್ಲಿ ಅಡ್ಡಹಾಯುವ ರಕ್ತನಾಳಗಳಿಂದ ಆಗಬಹುದಾದ ರಕ್ತಸುರಿತ. (ಡಿ.ಎಸ್.ಎಸ್.)

**ಉಸುಬಿನ ನೊಣ:** ಫ್ಲೆಬೊಟೊಮಸ್ ಜಾತಿಯ ನೊಣ. ಕೀಟವರ್ಗಕ್ಕೆ ಸೇರಿದ ಡಿಪ್ಟರ ಗಣದ ಸೈಕೊಡಿಡೆ ಕುಟುಂಬಕ್ಕೆ ಸೇರಿದೆ. ಇವು ಸಣ್ಣ ನೊಣಗಳು. ಉದ್ದ 11/2 –4 ಮಿ.ಮೀ.ಗಳಷ್ಟು ದೇಹದ ಮೇಲೆ ಕೂದಲಿನ ಹೊದಿಕೆ ಇದೆ. ಹೆಣ್ಣು ನೊಣಗಳಲ್ಲಿ ಮಾತ್ರ ಚುಚ್ಚುವ ಅಂಗಗಳಿವೆ. ಇವು ಕೆಲವು ಸರೀಸೃಪಗಳ ಮತ್ತು ಸ್ತನಿಗಳ ರಕ್ತವನ್ನಲ್ಲದೆ

ಮನುಷ್ಯನ ರಕ್ತವನ್ನೂ ಹೀರುವುವು. ಕೆಲವು ಪ್ರಭೇದಗಳ ಗಂಡುನೊಣಗಳು ರಾತ್ರಿಯ ಕಾಲದಲ್ಲಿ ಗಾಳಿ ಹೆಚ್ಚಾಗಿ ಬೀಸದಿರುವಾಗ ಚುರುಕಾಗಿರುತ್ತವೆ. ಹಗಲು ಗಿಡಮರಗಳ ಮತ್ತು ಕಟ್ಟಗಳ ಕತ್ತಲುಪ್ರದೇಶಗಳಲ್ಲಿ ವಾಸಿಸುತ್ತವೆ. ಸಾಧಾರಣವಾಗಿ ಸದ್ದಿಲ್ಲದೆ ನಿಧಾನವಾಗಿ ಹಾರುತ್ತವೆ. ಕಲ್ಲುಗಳ ಕೆಳಗೆ, ಮರದ ಪೊಟರೆ, ಬಿಲ, ಇರುಕು ಜಾಗ, ಲಾಯ, ಕೋಳಿಗಳ ಗೂಡು–ಮುಂತಾದ ಪ್ರದೇಶಗಳಲ್ಲಿ, ಕತ್ತಲಿರುವ ತೇವವಿರುವ ಮತ್ತು ಪದಾರ್ಥಗಳು ಕೊಳೆಯುತ್ತಿರುವ ಸ್ಥಳಗಳಲ್ಲಿ ಮೊಟ್ಟೆಯಿಡುತ್ತವೆ. ನೀರಿನಲ್ಲಿ ಮೊಟ್ಟೆಗಳನ್ನಿಡುವುದಿಲ್ಲ. ಇಂಥ ಜಾಗಗಳಲ್ಲಿ ಲಾರ್ವಗಳಿಗೆ ಆಹಾರ ಸಿಗುತ್ತದೆ. ಜೀವನಚಕ್ರ ಪೂರ್ತಿಯಾಗಲು ಸಾಧಾರಣವಾಗಿ 7–10 ವಾರಗಳು ಬೇಕು.

ಫ್ಲೆಬೊಟೊಮಸ್ ಜಾತಿಯ ಪ್ರಭೇದಗಳು ಉಸುಬಿನ ನೊಣದ ಜ್ವರವನ್ನುಂಟು ಮಾಡುವ ಒಂದು ಜಾತಿಯ ಕ್ರಿಮಿಯನ್ನು ಹರಡಿ ಆ ಸಾಂಕ್ರಾಮಿಕಕ್ಕೆ ಕಾರಣವಾಗಿವೆ. (ನೋಡಿ– ಉಸುಬಿನ–ನೊಣದ–ಜ್ವರ). ಕಾಲಾ ಅಸಾರ್ ರೋಗ ಮೆಡಿಟರೇನಿಯನ್, ದಕ್ಷಿಣ ರಷ್ಯ, ಭಾರತ, ಚೀನ, ಮಧ್ಯ ಆಫ್ರಿಕ ಮತ್ತು ದಕ್ಷಿಣ ಅಮೆರಿಕದ ಕೆಲವು ಪ್ರದೇಶಗಳಲ್ಲಿ ಕಾಣಬರುತ್ತವೆ. ಈ ರೋಗ ಲೀಷ್ಮಾನಿಯ ಎಂಬ ಸೂಕ್ಷ್ಮಜೀವಿಗಳಿಂದ ಉಂಟಾಗುವುದು. ಪೌರಸ್ತ್ಯ ಹುಣ್ಣು ಸಹ ಲೀಷ್ಮೇನಿಯ ಸೂಕ್ಷ್ಮಜೀವಿಗಳಿಂದ ಉಂಟಾಗುವುದು. ಈ ರೋಗ ಚರ್ಮಕ್ಕೆ ಸೀಮಿತವಾಗಿದೆ. ಇದಕ್ಕೆ ದೆಹಲಿ ಬೊಬ್ಬೆ ಅಥವಾ ಬಾಗ್ದಾದ್ ಬೊಬ್ಬೆ ಎಂದು ಹೆಸರು.

ಎಸ್ಪುಡಿಯ ರೋಗ ನಾಸಿಕ ಮತ್ತು ಬಾಯಪ್ರದೇಶಗಳಲ್ಲಿ ಲೀಷ್ಮೇನಿಯ ಸೂಕ್ಷ್ಮಜೀವಿಗಳಿಂದ ಉಂಟಾಗುವುದು. ಓರೋಯ ಜ್ವರ ಮತ್ತು ಪೆರ್ರುಗ ಪೆರುಯಾನ ರೋಗಗಳು ಬ್ಯಾಕ್ಟೀರಿಯದಿಂದ ಉಂಟಾಗುವುವು. ಈ ರೋಗಗಳು ದಕ್ಷಿಣ ಅಮೆರಿಕದಲ್ಲಿ ಕಾಣಬರುವುವು. ಓರೋಯ ಜ್ವರದಿಂದ ಅನೀಮಿಯವೂ ಪೆರ್ರುಗ ಪೆರುಯಾನದಿಂದ ಚರ್ಮದ ಮೇಲೆ ಗಂಟುಗಳೂ ಬರುವುವು. (ಎನ್.ವಿ.ಎ.)

**ಉಸುಬಿನ ನೊಣದ ಜ್ವರ:** ಉಸುಬಿನ ನೊಣ ಹರಡುವ ಒಂದು ಬಗೆಯ ವಿಷಕಣದಿಂದ (ವೈರಸ್) ಬರುವ ಜ್ವರ (ಸ್ಯಾಂಡ್‌ಫ್ಲೈ ಫೀವರ್). ಮೂರರಿಂದ ಐದು ದಿನಗಳವರೆಗೆ ಜ್ವರವಿರುತ್ತದೆ. ಕೆಂಪೇರಿದ ಮುಖ, ನೀರು ತುಂಬಿದ ಕಣ್ಣುಗಳು, ಕೀಲು ಬೆನ್ನು ಕೈಕಾಲುಗಳಲ್ಲಿ ನೋವು, ತಲೆ ನೋವು–ಇವು ರೋಗ ಲಕ್ಷಣಗಳು. ಜ್ವರ ಇದ್ದಕ್ಕಿದ್ದ ಹಾಗೆ 40.5ಲಿಅ(105ಲಿಈ)ಗೆ ಏರಬಹುದು. ಚಳಿ, ನಡುಕ ಸಾಮಾನ್ಯ. ಜ್ವರ ಇಳಿಯುವಾಗ ಮೈಯೆಲ್ಲ ವಿಪರೀತ ಬೆವರುತ್ತದೆ. ರೋಗಿ ನಿತ್ರಾಣಿಯಾಗುವನು, ಚೇತರಿಸಿಕೊಳ್ಳುವುದು ನಿಧಾನ. ಬೆಳಕಿಗೆ ಕಣ್ಣುಬಿಡದಂತಾಗಿ ಕಣ್ಣೀರು ಸುರಿವುದು, ಮಂಕುತನ, ಹಸಿವುನಾಶ, ಓಕರಿಕೆ, ಕೆಲವೇಳೆ ವಾಂತಿ ಇರಬಹುದು. ಈ ರೋಗ ಸಾಮಾನ್ಯವಾಗಿ ಮಾರಕವಲ್ಲ. ಸೊಳ್ಳೆ ನಿರೋಧಕ ಮದ್ದುಗಳ ಸಿಂಪಡಿಕೆಯಿಂದ ಇದರ ಹಾವಳಿ ಬಹುಮಟ್ಟಿಗೆ ಅಡಗಿದೆ. ಭೂಮಧ್ಯಸಮುದ್ರದ ಕರಾವಳಿ, ಈಜಿಪ್ಟ್, ಪ್ಯಾಲಿಸ್ಟೈನ್, ಇರಾಕ್, ಸಿರಿಯ, ಭಾರತದ ಈಶಾನ್ಯ ರಾಜ್ಯಗಳು, ಮಧ್ಯ ಅಲ್ಲವೆ ದಕ್ಷಿಣ ಅಮೆರಿಕಗಳಲ್ಲಿ ಈ ರೋಗ ಸ್ಥಾನಿಕವೆನಿಸಿದೆ (ಎಂಡೆಮಿಕ್). ಭಾರತದಲ್ಲಿ ಮುಖ್ಯವಾಗಿ ಗಿರಿಜನರಾದ ಗೂರ್ಖ, ಡೋಗ್ರ ಜನರಲ್ಲಿ ಹೆಚ್ಚು.

ಸಾಮಾನ್ಯವಾಗಿ, ವಸಂತ, ಶರತ್ಕಾಲಗಳಲ್ಲಿ ಈ ರೋಗ ಕಾಣಿಸಿಕೊಳ್ಳುವುದು. ಕೆಲವೇಳೆ, ಬೇಸಗೆಯಲ್ಲಿ ಇದು ಸಾಂಕ್ರಾಮಿಕವಾಗಬಹುದು. ಇದ್ದಕ್ಕಿದ್ದಂತೆ ಜ್ವರ ಸಿಡಿವಂತೆ ಹರಡಿಕೊಳ್ಳುವುದುಂಟು. ಒಂದು ಬಾರಿ ಜ್ವರ ಬಂದು ಹೋದರೆ, ಕೆಲಕಾಲವಾದರೂ ಮತ್ತೆ ಬಾರದು. ಸ್ಥಾನಿಕವಾಗಿ ರೋಗವಿರುವ ಊರಿಗೆ ಹೊಸದಾಗಿ ಬಂದವರಿಗೆ ಸುಲಭವಾಗಿ ಹತ್ತುತ್ತದೆ. ರೋಗಕ್ಕೆ ಆಸರೆ ಇನ್ನೊಬ್ಬ ರೋಗಿಯೆ ಹೊರತು, ಬೇರೆ ಪ್ರಾಣಿಗಳಲ್ಲ, ಆರೋಗ್ಯವಂತರೂ ಅಲ್ಲ.

ರೋಗ ಹೊಮ್ಮುವ ಅವಧಿ (ಇಂಕ್ಯುಬೇಷನ್ ಪೀರಿಯಡ್) 5–7 ದಿನಗಳು. ಜ್ವರದ ಹಿಂದಿನ ದಿನ. ಆಮೇಲಿನ 1–2 ದಿನಗಳು ಮಾತ್ರ ವಿಷಕಣಗಳು ರಕ್ತದಲ್ಲಿರುವುವು. ಆಗ ಉಸುಬಿನ ನೊಣ ರೋಗಿಯ ರಕ್ತ ಹೀರಿದ್ದರೆ ಮಾತ್ರ ಅದರಿಂದ ಇನ್ನೊಬ್ಬರಿಗೆ ಹರಡಬಹುದು. ಒಂದು ಬಾರಿ ಸೋಂಕಿನ ವಿಷಕಣಗಳು ಈ ನೊಣದಲ್ಲಿ ಸೇರಿಬಿಟ್ಟರೆ, ವಾರ ಕಳೆದ ಮೇಲೆ ಬೇರೆಯವರಿಗೆ ಸೋಂಕು ಅಂಟಿಸುವಂತಾಗುತ್ತದೆ. ಆಮೇಲೆ ಆ ನೊಣ ಸಾಯುವತನಕ ಸೊಂಕು ಹತ್ತಿಸುತ್ತಲೇ ಇರುವುದು. ಈ ನೊಣಗಳು ಹೆಚ್ಚು ದೂರ ಹಾರಲಾರವು. ಸುಮಾರು 100 ಮೀಟರು ಒಳಗೇ ಇಡೀ ಬಾಳನ್ನು ಕಳೆಯುತ್ತವೆ. ಬಹುಮಟ್ಟಿಗೆ ನೆರಳು, ಕತ್ತಲುಗಳಲ್ಲಿ, ಬೆಚ್ಚಗೆ ತಂಪಾಗಿರುವ ಸಂದುಗಳಲ್ಲಿ ವಾಸಿಸುತ್ತವೆ. ಹೆಣ್ಣು ನೊಣಗಳು ಮಾತ್ರ ಸೊಂಕು ಅಂಟಿಸುವುವು. ಉಸುಬಿನ ನೊಣಗಳಲ್ಲಿ ಫ್ಲೆಬೊಟೊಮಸ್ ಪಪ್ಪಾಟಾಸಿಯೈ ಜಾತಿಯದು ಮಾತ್ರ ಈ ರೋಗ ಹರಡುತ್ತದೆ.

ಪ್ರಯೋಗಾಲಯ ಪರೀಕ್ಷೆಯಿಂದ ಈ ರೋಗವನ್ನು ಖಚಿತಗೊಳಿಸಬಹುದು. ಕೇವಲ ರೋಗ ಲಕ್ಷಣಗಳಿಂದ ಗುರುತಿಸಬೇಕು. ಸಾಂಕ್ರಾಮಿಕದಲ್ಲಿ ಗುರುತಿಸುವುದು ಸುಲಭವಾದರೂ ಕೆಲವೇಳೆ ಉರಿಶೀತ (ಇನ್‌ಫ್ಲೂಯೆಂಜ಼), ಡೆಂಗೆ ಜ್ವರಗಳೆಂದು ತಪ್ಪು ತಿಳಿಯುವುದುಂಟು. ಇದರಲ್ಲಿ ರಕ್ತದ ಬಿಳಿಕಣಗಳು ಕುಗ್ಗಿರುವುವಲ್ಲದೆ ಮೈಮೇಲೆ ದದ್ದುಗಳು ಏಳವು.

ಬಹುಕಾಲ ಉಳಿವ ಕೀಟನಾಶಕಗಳನ್ನು ಸಿಂಪಡಿಸಿ ಈ ನೊಣಗಳು ಬೆಳೆಯದಂತೆ ಮಾಡಿ ಸಾಯಿಸಬೇಕು. ರಾತ್ರಿ ಹೊತ್ತು ಇವುಗಳ ಚಟುವಟಿಕೆ ಬಲು ಜೋರು. ಬಟ್ಟೆ ಮುಚ್ಚಿರುವ ಚರ್ಮಕ್ಕೆ ಅತಿಗಂಧದ (ಸಿಟ್ರೊನೆಲ್ಲ) ಎಣ್ಣೆಯಿರುವ ಮುಲಾಮನ್ನು ಹಚ್ಚಿಕೊಂಡರೆ ಈ ನೊಣಗಳು ಕಚ್ಚವು. ಪಂಕ ಬೀಸಣಿಗೆಗಳಿಂದ ಗಾಳಿಯಾಡುತ್ತಿದ್ದರೆ ನೊಣಗಳು ಹತ್ತಿರ ಸುಳಿಯವು. ಸಾಮಾನ್ಯ ಸೊಳ್ಳೆ ಪರದೆಗಳ ಮೂಲಕ ಈ ನೊಣಗಳು ಸುಲಭವಾಗಿ ತೂರಿಬಿಡುತ್ತವೆ. ಆದ್ದರಿಂದ ಚದರಂಗುಲಕ್ಕೆ 45 ಕಣ್ಣುಗಳಿರುವ ಬಲೆಯನ್ನು ಬಳಸಬೇಕು. ಇದು ತೆಳ್ಳನೆಯ ಬಟ್ಟೆಯಂತೆ ಇರುವುದರಿಂದ ಒಳಗಡೆ ಗಾಳಿಯಾಡದೆ ಹಿತವೆನ್ನಿಸದು. ರೋಗಿಗಳಾದರು ಇದನ್ನು ಬಳಸಬೇಕು. ಚಿಕಿತ್ಸೆಗೆ, ರೋಗ ಲಕ್ಷಣ ಶಮನ ವಿಧಾನಗಳ ಹೊರತು, ರೋಗಾಣುವನನ್ನು ಅಡಗಿಸುವ ಮದ್ದುಗಳೇ ಇಲ್ಲ. **(ನೋಡಿ– ಉಸುಬಿನ–ನೊಣ)** (ಎಚ್.ಎಸ್.ಎಸ್.ಎಸ್.;ಆರ್.ಎಸ್.ವಿ.)

**ಉಸ್ಮಾನ್ (ಊತ್ಮಾನ್)I:** 1259–1326. ತುರ್ಕಿಯ ಉಸ್ಮಾನ್‌ಲೀ ಅಥವಾ ಆಟೋಮನ್ ಜನರ ಮುಖಂಡ. ಅವರ ಅಭ್ಯುದಯಕ್ಕೆ ಬಹಳಮಟ್ಟಿಗೆ ಕಾರಣನಾದವ. ಆಟೋಮನ್ ಚಕ್ರವರ್ತಿ ವಂಶದ ಮೂಲಪುರುಷ. ಈ ಜನರಿಗೆ ಆಟೋಮನ್ ಎಂಬ ಹೆಸರು ಬಂದದ್ದೂ ಇವನಿಂದಲೇ.

13ನೆಯ ಶತಮಾನದ ಅಂತ್ಯಕಾಲದಲ್ಲಿ ಬಿಜ಼ಾನ್‌ಟಿಯಂ ಕ್ರೈಸ್ತ ಸಾಮ್ರಾಜ್ಯ ಶಿಥಿಲಗೊಂಡಿತ್ತು. ಆಗ ಏಷ್ಯ ಮೈನರಿನಲ್ಲಿ ತುರ್ಕಿಯ ಅಮೀರರನೇಕರು ಸ್ವತಂತ್ರ ಪಾಳೆಯಪಟ್ಟುಗಳನ್ನು ಸ್ಥಾಪಿಸಿಕೊಂಡಿದ್ದರು. ಅಂಥ ಅಮೀರರಲ್ಲಿ ಉಸ್ಮಾನ್ ಒಬ್ಬ. ಈತ ತನ್ನ ಜೊತೆಯ ಅಮೀರರನ್ನು ಕೂಡಿಕೊಂಡು ಬಿಜ಼ಾನ್‌ಟಿಯಂ ಮೇಲೆ ದಾಳಿಮಾಡಿ ಅದನ್ನು ವಶಪಡಿಸಿಕೊಂಡ. ತನ್ನ ಜೀವಿತದ ಕೊನೆಯವರೆಗೂ ಸಾಮ್ರಾಜ್ಯವಿಸ್ತರಣೆಯೇ ಈತನ ಕಾರ್ಯವಾಗಿತ್ತು. ಇವನ ಸಾಧನೆಯೇ ಮುಂದೆ ಬೆಳೆದು ಬಾಳಿದ ಆಟೋಮನ್ ಚಕ್ರಾಧಿಪತ್ಯಕ್ಕೆ ನಾಂದಿಯಾಯಿತೆನ್ನಬಹುದು. *

**ಉಸ್ಮಾನ್ II:** 1603–22. ತುರ್ಕಿಯ ಆಟೋಮನ್ ಸುಲ್ತಾನ. ಇಸ್ತಾನ್‌ಬುಲ್‌ನಲ್ಲಿ ಇವನ ಜನನ. ತಂದೆ ಒಂದನೆಯ ಅಹಮ್ಮದ್. ಈತ 14ನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದ (1618). ಈತ ಶಕ್ತಿಶಾಲಿ, ಮಹತ್ವಾಕಾಂಕ್ಷಿ. ಪೋಲೆಂಡಿನಲ್ಲಿರುವ ಹೋಟಿನ್ನಿನ ಮೇಲೆ ಈತ ನಡೆಸಿದ ದಾಳಿ ವಿಫಲವಾಯಿತು. ಏಕೆಂದರೆ ಇವನ ಜನರೇ ಆದ ಜಾನಿಝೂರಿಗಳು ಹಿಡಿತ ತಪ್ಪಿ ಎದುರು ಬಿದ್ದರು. ಇವರಿಗೆ ತಕ್ಕ ಶಾಸ್ತಿಮಾಡಬೇಕೆಂದು ಈತ ಅವರ ಸಂಬಳದಲ್ಲಿ ಕಡಿತ ಮಾಡಿದ. ಇವರು ಒಂದೆಡೆ ಸೇರುವುದನ್ನು ತಪ್ಪಿಸುವ ಉದ್ದೇಶದಿಂದ ಪಾನಕೇಂದ್ರಗಳನ್ನೆಲ್ಲ ಮುಚ್ಚಿಸಿದ. ಆದರೆ ಈ ಕ್ರಮಗಳಿಂದ ಅವರು ಇನ್ನೂ ಉದ್ರೇಕಗೊಂಡರು. ಮೆಕ್ಕಕ್ಕೆ ಹೋಗಿ ಅಲ್ಲಿಂದ ಹೊಸ ಸೈನ್ಯ ತಂದು ಇವರನ್ನು ಮಣಿಸಬೇಕೆಂಬ ಉಸ್ಮಾನನ ಹಂಚಿಕೆ ವಿಫಲವಾಯಿತು. ಸುಲ್ತಾನನ ಈ ಹಂಚಿಕೆಯನ್ನು ಅರಿತ ವಿರೋಧಿಗಳು ದಂಗೆಯೆದ್ದು ಉಸ್ಮಾನನನ್ನು ಸಿಂಹಾಸನದಿಂದ ತಳ್ಳಿದರಲ್ಲದೆ ಮರುದಿನ ಇಸ್ತಾನ್‌ಬುಲ್‌ನ ದುರ್ಗವೊಂದರಲ್ಲಿ ಈತನನ್ನು ಕೊಂದರು. *

**ಉಸ್ಮಾನ್ III** : 1699–1757. ತುರ್ಕಿಯ ಆಟೋಮನ್ ಸುಲ್ತಾನ. ಎರಡನೆಯ ಮುಸ್ತಾಫನ ಮಗ. ಅಣ್ಣ ಒಂದನೆಯ ಮಹಮ್ಮದ್ ಸತ್ತಾಗ ಈತ ಪಟ್ಟಕ್ಕೆ ಬಂದ (1754). ಆಗ ಇವನಿಗೆ ಐವತ್ತು ವರ್ಷ. ಅದುವರೆಗೂ ಒಂಟಿಯಾಗಿಯೇ ಜೀವನ ಸಾಗಿಸಿದ್ದ. ಈತ ಗಾಬರಿಯ ಮನುಷ್ಯ; ಸಂಪ್ರದಾಯಪ್ರಿಯ. ಈತನ ಉದ್ದೇಶ ಒಳ್ಳೆಯದಾದರೂ ಮಾಡಿದ್ದೊಂದೂ ನೆಟ್ಟಗಾಗಲಿಲ್ಲ. ಅಧಿಕಾರಕ್ಕೆ ಬಂದೊಡನೆ ತನಗೆ ಸಲ್ಲಬೇಕಾಗಿದ್ದ ಕಪ್ಪಕಾಣಿಕೆ ನಿಲ್ಲಿಸಿದ.

ಉಸ್ಮಾನ್ ಸ್ತ್ರೀದ್ವೇಷಿ. ಅವರು ಬಣ್ಣ ಬಣ್ಣದ ಬಟ್ಟೆ ಧರಿಸಬಾರದೆಂದು ಆಜ್ಞಾಪಿಸಿದ. ವಾರಕ್ಕೆ ನಾಲ್ಕು ದಿನ ಅವರು ಮನೆಯಲ್ಲೇ ಇರಬೇಕೆಂಬುದು ಈತನ ಕಟ್ಟಾಜ್ಞೆ. ಕ್ರೈಸ್ತಪ್ರಜೆಗಳು ಎಂಥ ಉಡುಪು ಧರಿಸಬೇಕೆಂಬುದನ್ನೂ ಈತ ನಿಷ್ಕರ್ಷಿಸಿದ. ಮಹಾವಜೀರರ ಬಗ್ಗೆ ಈತನಿಗೆ ಅಷ್ಟೇನೂ ಒಳ್ಳೆಯ ಭಾವನೆ ಇರಲಿಲ್ಲ. ಅವರ ಹಕ್ಕುಗಳನ್ನು ಈತ ಕಸಿದುಕೊಂಡದ್ದಲ್ಲದೆ ಅವರಲ್ಲಿ ಹಲವರನ್ನು ಕೊಲೆ ಮಾಡಿಸಿದ.

**ಉಸ್ಮಾನಾಬಾದ್:** ಹಿಂದೆ ಹೈದರಾಬಾದ್ ಸಂಸ್ಥಾನದಲ್ಲಿದ್ದು ಈಗ ಮಹಾರಾಷ್ಟ್ರಕ್ಕೆ ಸೇರಿರುವ ಒಂದು ಪಟ್ಟಣ. ಅದೇ ಹೆಸರಿನ ಜಿಲ್ಲೆಯ ಕೇಂದ್ರ. ಜನಸಂಖ್ಯೆ 80625 (2001). ಸೊಲ್ಲಾಪುರದಿಂದ ಉತ್ತರಕ್ಕೆ 56 ಕಿಮೀ. ದೂರದಲ್ಲಿದೆ. ಎರಡು ಮೈಲಿ ದೂರದಲ್ಲಿ ಕೆಲವು ವೈಷ್ಣವ–ಜೈನ ಗವಿಗಳುಂಟು. ಇವನ್ನು 5–6ನೆಯ ಶತಮಾನಗಳಲ್ಲಿ ಕೊರೆಯಲಾಯಿತೆಂದು ಊಹಿಸಲಾಗಿದೆ.

ಜಿಲ್ಲೆಯ ವಿಸ್ತೀರ್ಣ 14,255 ಚ.ಕಿಮೀ. ಜನಸಂಖ್ಯೆ 1,472,258 (2001). ಜನಸಾಂದ್ರತೆ ಚ.ಕಿಮೀ.ಗೆ 259 ಜನರು. ಈ ಜಿಲ್ಲೆಯಲ್ಲಿ ವರ್ಷಕ್ಕೆ ಸರಾಸರಿ 84 ಸೆಂ.ಮೀ. ಮಳೆಯಾಗುತ್ತದೆ. ಕಾಡೇ ಇಲ್ಲದ ಈ ಜಿಲ್ಲೆಯ ಮುಖ್ಯ ಬೆಳೆಗಳು ಜೋಳ, ಗೋಧಿ, ಬತ್ತ, ಹತ್ತಿ, ನೆಲಗಡಲೆ ಮತ್ತು ಸಜ್ಜೆ. ಉಸ್ಮಾನಾಬಾದಿಗೆ 19 ಕಿಮೀ. ಮೈಲಿ ದೂರದಲ್ಲಿ ಇರುವ ಥೈರ್ ಎಂಬುದು ಹಿಂದೂಗಳ ಯಾತ್ರಾಸ್ಥಳ. ಇಲ್ಲಿ ಸಂತ ಗೊರೊಬನ ಮಂದಿರ ಇದೆ. ಪ್ರತಿ ವರ್ಷವೂ ನಡೆಯುವ ಜಾತ್ರೆಯ ಸಮಯದಲ್ಲಿ ಭಕ್ತರು ಹೆಚ್ಚು ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಹಿಂದೂ ರಾಜನೊಬ್ಬ ಕಟ್ಟಿಸಿದ ಕೋಟೆ ಇತಿಹಾಸ ಪ್ರಸಿದ್ಧವಾದದ್ದು. ಇದನ್ನು ಬಹಮನಿ ಅರಸರೂ ಬಿಜಾಪುರದ ಷಾಹಿ ದೊರೆಗಳೂ ವಶಪಡಿಸಿಕೊಂಡಿದ್ದರು. ಇಲ್ಲಿ ಹರಿಯುವ ಬೋರಿ ನದಿಯ ಅಣೆಕಟ್ಟಿನ ನೀರು ಕೋಟೆಯೊಳಗಿನ ಪಾನೀ ಮಹಲಿನ ಚಾವಣಿಯ ಮೇಲೆ ಹರಿದು ಹೋಗುವುದೊಂದು ವೈಶಿಷ್ಟ್ಯ. ಈ ಕಟ್ಟೆಯನ್ನೂ ಮಹಲನ್ನೂ ಕಟ್ಟಿಸಿದವ ಎರಡನೆಯ ಇಬ್ರಾಹಿಂ ಅದಿಲ್ ಷಾ.

ಲಾತೂರ್ ಈ ಜಿಲ್ಲೆಯ ಒಂದು ಮುಖ್ಯ ವಾಣಿಜ್ಯ ಕೇಂದ್ರ. 2 ಸೆಪ್ಟೆಂಬರ್ 1993ರಲ್ಲಿ ಸಂಭವಿಸಿದ ಭೂಕಂಪದಿಂದ ಹೆಚ್ಚು ಹಾನಿಗೊಳಗಾಗಿತ್ತು. *

**ಉಸ್ಮಾನಿಯಾ ವಿಶ್ವವಿದ್ಯಾಲಯ:** ಭಾರತದಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯಗಳಲ್ಲಿ ಒಂಬತ್ತನೆಯದು. ಸ್ಥಾಪನೆ 1918. ಆಂಧ್ರ ಪ್ರದೇಶದ ಹೈದರಾಬಾದಿನಲ್ಲಿದೆ. ಏಳನೆಯ ನಿಜ಼ಾಮ ಸರ್ ಮೀರ್ ಉಸ್ಮಾನ್ ಅಲಿಖಾನ್ ಇದರ ಸ್ಥಾಪಕ. ಆದುದರಿಂದಲೇ ಸಂಸ್ಥೆಗೆ

ಆ ಹೆಸರು. ಆಗಿನ ಹೈದರಾಬಾದ್ ಸರ್ಕಾರದ ರಾಜ್ಯಭಾಷೆಯಾದ ಉರ್ದುವನ್ನು ಬೋಧನ ಮಾಧ್ಯಮವನ್ನಾಗಿ ಬಳಸಿದುದು ಈ ವಿಶ್ವವಿದ್ಯಾಲಯದ ಒಂದು ವೈಶಿಷ್ಟ್ಯ. ಹೈದರಾಬಾದಿನಿಂದ ಸುಮಾರು ಮೂರು ಮೈಲಿ ದೂರದ ಅಡಿಕ್‌ಮೇಟಿನಲ್ಲಿ 1,600 ಎಕರೆಯ ನಿವೇಶನವನ್ನು ಇದಕ್ಕೆ ಆರಿಸಲಾಯಿತು. ಮುಖ್ಯ ಕಟ್ಟಡವನ್ನು 1939ರಲ್ಲಿ, 30 ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಲಾಯಿತು. ವಾಸ್ತುಶಿಲ್ಪದ ದೃಷ್ಟಿಯಿಂದ ಈ ಕಟ್ಟಡ ಸುಂದರವಾಗಿದೆ. ಈಗ ಇಲ್ಲಿ ಆರ್ಟ್ಸ್ ಅಂಡ್ ಕಾಮರ್ಸ್ ಕಾಲೇಜ್ ಇದೆ. ವಿಜ್ಞಾನ ಭಾಗದ ಕಟ್ಟಡಗಳು, ಗ್ರಂಥಾಲಯ, ಲಾ ಕಾಲೇಜು, ಅತಿಥಿ ಮಂದಿರ, ವಿದ್ಯಾರ್ಥಿ ನಿಲಯಗಳು, ವಿಶ್ವವಿದ್ಯಾಲಯದ ಕಾರ್ಯಸೌಧ ಮೊದಲಾದ ಕಟ್ಟಡಗಳು ಅಂದವಾಗಿ ಶೋಭಿಸುತ್ತಿವೆ.

225 ವಿದ್ಯಾರ್ಥಿಗಳು, 25 ಜನ ಅಧ್ಯಾಪಕರಿಂದ ಈ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಈಗ ಇದು ಹರವಾಗಿ ಬೆಳೆದಿದೆ. 65ಕ್ಕಿಂತ ಹೆಚ್ಚು ಕಾಲೇಜುಗಳು ಇದರ ಆಡಳಿತಕ್ಕೆ ಒಳಪಟ್ಟಿವೆ. ಈಗ ಸು. 300,000 ವಿದ್ಯಾರ್ಥಿಗಳು ಈ ವಿ.ವಿ. ನಿಲಯದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಸು. 5,000 ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಜರ್ಮನ್, ಫ್ರೆಂಚ್, ಪರ್ಷಿಯನ್, ಮರಾಠಿ, ಅರ‍್ಯಾಬಿಕ್, ರಷ್ಯನ್, ಸಂಸ್ಕೃತ, ತಮಿಳು, ತೆಲುಗು, ಉರ್ದು ಮೊ. ವಿಭಾಗಗಳಲ್ಲದೆ. ಮಾನವಿಕಗಳು, ವಿಜ್ಞಾನಗಳು, ಸಮಾಜ ವಿಜ್ಞಾನಗಳು, ಎಂಜಿನಿಯರಿಂಗ್, ವೈದ್ಯವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ ಮೊದಲಾದ ವಿಷಯಗಳಲ್ಲಿ ಶಿಕ್ಷಣ ನೀಡಲಾಗುತ್ತದೆ. ಈ ವಿ.ವಿ. ನಿಲಯಕ್ಕೆ ಯು.ಜಿ.ಸಿ. ನ್ಯಾಕ್ (NAAC) ಸಮಿತಿಯು ಪಂಚತಾರಾ ದರ್ಜೆಯನ್ನು ನೀಡಿದೆ.

ಮೊದಲಿನಿಂದಲೂ ಸರ್ಕಾರದ ಅಂಗವಾಗಿದ್ದು, 1948ರಲ್ಲಿ ಸ್ವತಂತ್ರ ಆಡಳಿತಕ್ಕೆ ಒಳಪಟ್ಟಿತು. 1918ರಿಂದ ಸುಮಾರು 1954ರವರೆಗೆ ಉರ್ದು ಇಲ್ಲಿಯ ಬೋಧನ ಮಾಧ್ಯಮವಾಗಿತ್ತು. ಈ 35 ವರ್ಷಗಳಲ್ಲಿ, ಎಲ್ಲ ವಿಷಯಗಳನ್ನೂ, ಉರ್ದುವಿನಲ್ಲಿಯೇ ಪಾಠ ಹೇಳಿಕೊಡುತ್ತಿದ್ದರು. ಅವುಗಳಲ್ಲಿ ವಿಜ್ಞಾನ, ವೈದ್ಯಶಾಸ್ತ್ರ, ಯಂತ್ರಶಾಸ್ತ್ರ ಮುಂತಾದವು ಮುಖ್ಯವಾದುವು. ಉರ್ದುವಿನಲ್ಲಿ ಎಲ್ಲ ಪಾರಿಭಾಷಿಕ ಶಬ್ದಗಳನ್ನೂ ರೂಪಿಸಿಕೊಳ್ಳಲಾಗಿತ್ತು. ಎಲ್ಲ ವಿಷಯಗಳಿಗೂ ಉರ್ದುವಿನಲ್ಲಿ ಗ್ರಂಥಗಳು ದೊರೆಯುತ್ತಿದ್ದವು. ಇವೆಲ್ಲಕ್ಕೂ ಅಣಿ ಮಾಡಿಕೊಟ್ಟ ವಿಶ್ವವಿದ್ಯಾನಿಲಯದ ಅಂದಿನ ಭಾಷಾಂತರ ವಿಭಾಗದ ಕಾರ್ಯ ಸ್ತುತ್ಯವಾದುದು.

ಉಸ್ಮಾನಿಯಾ ವಿಶ್ವವಿದ್ಯಾಲಯ

ಕನ್ನಡ ವಿಭಾಗ ಈ ವಿಶ್ವವಿದ್ಯಾಲಯದ ಆರಂಭದಿಂದಲೂ ಇದೆ. 1933ರ ವರೆಗೆ, ಈ ವಿಭಾಗದಲ್ಲಿ, ಒಬ್ಬ ಅಧ್ಯಾಪಕ ಮಾತ್ರ ಇದ್ದ. ಪ್ರೊ.ಡಿ.ಕೆ.ಭೀಮಸೇನರಾಯರು ಈ ವಿಭಾಗದ ಮುಖ್ಯಸ್ಥರಾದ ಮೇಲೆ (1934) ಕನ್ನಡ ವಿಭಾಗ ವಿಸ್ತೃತಗೊಂಡಿತು. ಸ್ನಾತಕೋತ್ತರ ಹಾಗೂ ಸಂಶೋಧನ ವಿಭಾಗಗಳನ್ನು ತೆರೆಯಲಾಯಿತು. ಕರ್ನಾಟಕ ಸಂಘದ ಚಟುವಟಿಕೆಗಳನ್ನು ವ್ಯಾಪಕಗೊಳಿಸಿ ತಾವರೆ ಎಂಬ ವಾರ್ಷಿಕ ಪತ್ರಿಕೆಯನ್ನು ಕನ್ನಡ ವಿಭಾಗದಿಂದ ಹೊರಡಿಸಿದುದಲ್ಲದೆ ಹೈದರಾಬಾದಿನ 6–7 ಕಾಲೇಜುಗಳಲ್ಲೂ ಗುಲ್ಬರ್ಗ, ರಾಯಚೂರು, ಯಾದಗಿರಿ ಕಾಲೇಜುಗಳಲ್ಲೂ ಕನ್ನಡ ಅಧ್ಯಯನಕ್ಕಾಗಿ ಎಲ್ಲ ವ್ಯವಸ್ಥೆಯನ್ನೂ ಮಾಡಲಾಯಿತು. (ಆರ್.ಆರ್.ಕೆ.)

**ಉಸ್ತಿಕಾಯಿ:** ಸೊಲನೇಸೀ ಕುಟುಂಬಕ್ಕೆ ಸೇರಿದ ಪೊದೆಸಸ್ಯ. ಸುಂಡೆಕಾಯಿ ಪರ್ಯಾಯ ನಾಮ. ಕಾಯಿ ಕಹಿ. ಕೆಲವರು ಇದನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಸಸ್ಯಕ್ಕೆ ಔಷಧ ಗುಣವಿದೆ. ಆಸ್ತಮಾ, ಕ್ಷಯಗಳಿಗೆ ಆಯುರ್ವೇದೀಯ ಔಷಧಿಗಳನ್ನು ಇದರಿಂದ ತಯಾರು ಮಾಡುತ್ತಾರೆ. ಇದೊಂದು ಬಹುವಾರ್ಷಿಕ ಸಸ್ಯ. ಸುಮಾರು 1.7–2ಮೀ ಈ ರೋಮಗಳು ಎತ್ತರ ಬೆಳೆಯುವುದು. ಎಳೆಯ ಕಾಂಡ ಮತ್ತು ಎಲೆಗಳ ಮೇಲೆ ನಯವಾದ ಬಿಳಿಬಣ್ಣದ ರೋಮಗಳಿರುತ್ತವೆ. ಗಿಡ ಬಲಿತಾಗ ಈ ರೋಮಗಳು ಮಾಯವಾಗುವುವು. ಕಾಂಡ ಮತ್ತು ಎಲೆಗಳ ಮೇಲೆ ಹಿಂದಕ್ಕೆ ಬಾಗಿದ ಮುಳ್ಳುಗಳಿವೆ. ಎಲೆ ರೋಮಪೂರಿತ. ಆಕಾರ ಆಯತ. ತೊಟ್ಟಿದೆ. ತುದಿಯಲ್ಲಿರುವ

ಅಂತ್ಯಾರಂಭಿ ಹೂಗೊಂಚಲಿನಲ್ಲಿ ಅನೇಕ ಹೂಗಳಿರುವುವು. ಇದನ್ನು ಬೀಜಗಳಿಂದ ವೃದ್ಧಿ ಮಾಡಬಹುದು. (ಡಿ.ಎಂ.)

**ಉಳಿತಾಯ:** ಅನುಭೋಗ ವರ್ಜನೆ: ಭವಿಷ್ಯದ ಬಳಕೆಗಾಗಿ ಪ್ರಸಕ್ತ ವರಮಾನದಲ್ಲಿ ಒಂದು ಭಾಗವನ್ನು ಎತ್ತಿಡುವ ಕ್ರಿಯೆ; ಅನುಭೋಗ ಹಾಗೂ ತೆರಿಗೆಗಳ ಪಾವತಿಗಾಗಿ ಖರ್ಚು ಮಾಡಿದ ಮೇಲೆ ಉಳಿಯತಕ್ಕದ್ದು (ಸೇವಿಂಗ್). ವರಮಾನವನ್ನು ಪಡೆಯುವ ವ್ಯಕ್ತಿಗಳು, ಕುಟುಂಬಗಳು, ವ್ಯಾಪಾರಿ ಸಂಸ್ಥೆಗಳೇ ಮುಂತಾಗಿ ಯಾರಾದರೂ ಉಳಿತಾಯ ಮಾಡುವುದು ಸಾಧ್ಯ. ವ್ಯಕ್ತಿ ಸಂಸ್ಥೆಗಳಿಗಿಂತ ಭಿನ್ನವಾಗಿರುವ ಸರ್ಕಾರ ವೆಚ್ಚ ಮಾಡದೆ ಉಳಿಸಿದ್ದನ್ನು ಉಳಿತಾಯವೆನ್ನಬಹುದು ಎಂಬ ಬಗ್ಗೆ ಅರ್ಥಶಾಸ್ತ್ರಜ್ಞರಲ್ಲಿ ಒಮ್ಮತವಿಲ್ಲ. ಆದರೆ ಒಟ್ಟು ರಾಷ್ಟ್ರ ಒಟ್ಟು ವರಮಾನಗಳಿಂದ ಅವುಗಳ ಖರ್ಚು ಹಾಗೂ ತೆರಿಗೆಗಳನ್ನೆಲ್ಲ ಕಳೆದರೆ ಉಳಿಯುವುದೇ ರಾಷ್ಟ್ರೀಯ ಉಳಿತಾಯ.

ಉಳಿತಾಯಕ್ಕೂ ವರಮಾನಕ್ಕೂ ನೇರ ಸಂಬಂಧವುಂಟು. ವರಮಾನ ಹೆಚ್ಚಿದಷ್ಟೂ ಹೆಚ್ಚು ಉಳಿತಾಯ ಸಾಧ್ಯ. ಉಳಿತಾಯ ಮಾಡುವ ಪ್ರವೃತ್ತಿಯೂ ಬಡ್ಡಿಯ ದರವೂ ಉಳಿತಾಯದ ಇನ್ನೆರಡು ಮುಖ್ಯ ನಿರ್ಣಾಯಕಗಳು. ಒಂದು ಕೊನೆಯಲ್ಲಿ ವರಮಾನಕ್ಕೂ ಉಳಿತಾಯಕ್ಕೂ ಸಂಬಂಧವಿರುವ ಹಾಗೆ ಇನ್ನೊಂದು ಕೊನೆಯಲ್ಲಿ ಉಳಿತಾಯಕ್ಕೂ ಬಂಡವಾಳ ನಿಯೋಜನೆಗೂ ಸಂಬಂಧವುಂಟು. ಇದು ಒಂದು ಅರ್ಥವ್ಯವಸ್ಥೆಯ ವರಮಾನದ ನಿರ್ಣಾಯಕಗಳಲ್ಲೊಂದು. ಈ ಕಾರಣದಿಂದಲೇ ಉಳಿತಾಯಕ್ಕೆ ಆರ್ಥಿಕವಾಗಿ ಹೆಚ್ಚಿನ ಮಹತ್ತ್ವವುಂಟು. ಉಳಿತಾಯವಾದ ಹಣ ನಿಜಬಂಡವಾಳವಾಗಿ ಪರಿವರ್ತನೆ ಹೊಂದಿದಾಗಲೇ, ಎಂದರೆ ಅದನ್ನು ಉತ್ಪಾದನೆಯಲ್ಲಿ ತೊಡಗಿಸುವುದು ಸಾಧ್ಯವಾದಾಗಲೇ, ಅದು ಸಾರ್ಥಕವಾಗುತ್ತದೆ. ಆಗಲೇ ಅದು ಉಳಿತಾಯವೆನಿಸಿಕೊಳ್ಳುತ್ತದೆ. ಆದರೆ ಹೀಗೆ ತೊಡಗಿಸುವುದು ಸಾಧ್ಯವಾಗದಂತೆ ಬೈತಿಟ್ಟ ಹಣ ಉಳಿತಾಯವೆನಿಸುವುದಿಲ್ಲ. ಅದು ಸಮಾಜಘಾತಕ ಶಾಸ್ತ್ರ ದೃಷ್ಟಿಯಿಂದ ಬಲು ಮುಖ್ಯ. ಜಿಪುಣನಾದವ ಹಣವನ್ನು ಬೈತಿಟ್ಟಾಗ ಅವನಿಗೆ ಅದರಲ್ಲೇ ತೃಪ್ತಿ. ಪ್ರಕೃತದಲ್ಲಿ ಅನುಭೋಗಿಸದೆ ವರಮಾನವನ್ನು ಹಿಡಿದಿಟ್ಟಾಗ ಇದು ಸಂಕೇತಿಸುವ ಪ್ರಮಾಣದ ಸರಕು ಸೇವೆಗಳನ್ನು ಹಿಮ್ಮೊಗನಾಗಿ ತಿರುಗಿಸಿದಂತಾಗುತ್ತದೆ. ಕೆರೆಯ ನೀರನ್ನು ಕೆರೆಗೆ ಚೆಲ್ಲದ ಈ ಕ್ರಮದಿಂದ ಆರ್ಥಿಕ ಚಟುವಟಿಕೆಯ ತಾಳ ತಪ್ಪುತ್ತದೆ; ಹಾಳತ ಕೆಡುತ್ತದೆ.

**ಉಳಿತಾಯದ ಉದ್ದೇಶಗಳು:** ವ್ಯಕ್ತಿಗಳು ಮಾಡುವ ಉಳಿತಾಯಗಳ ಹಿಂದೆ ಇರುವ ನಾನಾ ಬಗೆಯ ಉದ್ದೇಶಗಳನ್ನು ಕುರಿತು ಅರ್ಥಶಾಸ್ತ್ರಜ್ಞರು ದೀರ್ಘವಿವೇಚನೆ ನಡೆಸಿದ್ದಾರೆ. ದೀರ್ಘ ಭವಿಷ್ಯದಲ್ಲಿ ಉದ್ಭವಿಸುವ ಅಗತ್ಯಗಳ ಪೂರೈಕೆಗಾಗಿ ಸಾಮಾನ್ಯವಾಗಿ ಎಲ್ಲರೂ ಉಳಿತಾಯ ಮಾಡುತ್ತಾರೆ. ಮುಪ್ಪಡಸಿ, ಸಂಪಾದನೆಯ ಶಕ್ತಿ ಕುಂದಿ, ವರಮಾನ ಕಡಿಮೆಯಾದಾಗ ಅಥವಾ ನಿಂತೇ ಹೋದಾಗ ಜೀವನ ಭರಿಸುವ ಸಲುವಾಗಿಯೋ ಮಕ್ಕಳ ವಿದ್ಯಾಭ್ಯಾಸ, ಮದುವೆ ಮುಂತಾದವಕ್ಕಾಗಿಯೋ ಮಾಡಿದ್ದು ಈ ಬಗೆಯ ದೀರ್ಘಕಾಲಿಕ ಉಳಿತಾಯ. ಅನತಿದೂರಕಾಲದಲ್ಲೇ ಹೆಚ್ಚು ಬೆಲೆಯ ವಸ್ತುಗಳನ್ನು ಕೊಳ್ಳುವ ಉದ್ದೇಶದಿಂದಲೂ ಉಳಿತಾಯ ಮಾಡುವುದು ಸಾಮಾನ್ಯವಾಗಿದೆ. ಸರ್ಕಾರ

ನಿರ್ವಹಿಸುತ್ತಿರುವ ನಾನಾ ಸಾಮಾಜಿಕ ಸುರಕ್ಷತಾ ಕಾರ್ಯಕ್ರಮಗಳಿಂದಲೂ ನಾನಾ ವ್ಯಾಪಾರ ಸಂಸ್ಥೆಗಳು ನೀಡುತ್ತಿರುವ ಕಂತಿನ ಮಾರಾಟ ಸೌಲಭ್ಯದಿಂದಲೂ ಈ ಉದ್ದೇಶ ಸ್ವಲ್ಪ ಕುಂಠಿತವಾಗಿದೆಯೆನ್ನಬಹುದು.

ಭವಿಷ್ಯದಲ್ಲಿ ಸಂಭವಿಸಬಹುದಾದ ಆಕಸ್ಮಿಕ ಘಟನೆಗಳಿಂದಾಗಿ ವರಮಾನ ಕಡಿಮೆಯಾಗ ಬಹುದು: ಜೊತೆಗೆ ಇವುಗಳಿಂದಾಗಿ ವೆಚ್ಚ ಹೆಚ್ಚಬಹುದು. ಇಂಥ ಸಂದರ್ಭಗಳನ್ನೆದುರಿಸಲು ಈಗಿನಿಂದಲೇ ಉಳಿತಾಯ ಮಾಡಬೇಕು ಎಂಬ ಉದ್ದೇಶದಿಂದಲೂ ಉಳಿತಾಯ ಕಾರ್ಯ ಜರುಗುತ್ತದೆ. ಉದಾ: ಕುಟುಂಬದಲ್ಲಿ ಮುಖ್ಯವಾಗಿ ಸಂಪಾದನೆಮಾಡುತ್ತಿದ್ದ ವ್ಯಕ್ತಿ ಯಾವುದಾದರೂ ಅಪಘಾತಕ್ಕೆ ತುತ್ತಾಗಿ ಸಂಪಾದನೆ ಮಾಡುವ ಶಕ್ತಿ ಕಳೆದುಕೊಳ್ಳಬಹುದು. ಮುಂದೆ ಸ್ಥಿತಿ ಉತ್ತಮಗೊಳ್ಳುವವರೆಗೂ ಅವನ ಮತ್ತು ಸಂಸಾರದ ಪೋಷಣೆಗೆ ಉಳಿತಾಯ ಮಾಡಿದ ಹಣವಿಲ್ಲದಿದ್ದರೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಅನೇಕರು ಇದನ್ನು ಗಮನದಲ್ಲಿಟ್ಟುಕೊಂಡು ಉಳಿತಾಯ ಮಾಡುತ್ತಾರೆ. ಇದಲ್ಲದೆ ಕುಟುಂಬದಲ್ಲಿ ಕೆಲವರು ಒಂದೇ ಸಮನೆ ಅನಾರೋಗ್ಯದಿಂದ ನರಳುವ ಪರಿಸ್ಥಿತಿ ಬರಬಹುದು. ಅಂಥ ಸಮಯದಲ್ಲಿ ಉಳಿತಾಯದ ಹಣವಿದ್ದರೆ ಬಹಳ ಅನುಕೂಲ ಎಂಬ ಭಾವನೆಯಿಂದ ಉಳಿತಾಯ ಸಾಗುತ್ತದೆ.

ಉಳಿತಾಯ ಮಾಡುವುದರಿಂದ ಮುಂದೆ ಅಧಿಕ ವರಮಾನ ಪಡೆದು ಸುಖಜೀವನ ನಡೆಸಬಹುದು ಎಂಬ ಆಶೆಯೂ ಅನೇಕರಲ್ಲಿ ಇರುತ್ತದೆ. ತಾನು ಉಳಿಸಿದ ಹಣದಿಂದ ಒಂದು ಹೊಸ ವ್ಯಾಪಾರ ತೆರೆಯಬಹುದು. ವರಮಾನ ಬರುವಂಥ ಇನ್ನಾವುದಾದರೂ ರೂಪದಲ್ಲಿ ಆಸ್ತಿ ಮಾಡಬಹುದು ಎಂಬ ನಿರೀಕ್ಷೆ ಇರುವುದುಂಟು. ಆಸ್ತಿ ಮಾಡಲು ಅಥವಾ ವ್ಯಾಪಾರಮಾಡಲು ಸಾಧ್ಯವಾಗದೆ ಹೋದರೂ ತಾನು ಉಳಿಸಿದ ಹಣದಿಂದ ಬಡ್ಡಿ ಸಂಪಾದಿಸಬಹುದು ಎಂಬ ಖಾತರಿಯಾದರೂ ಇರುತ್ತದೆ. ಅದಕ್ಕಾಗಿಯಾದರೂ ಅನೇಕರು ಉಳಿತಾಯ ಮಾಡುತ್ತಾರೆ.

ಆಸ್ತಿ ಸಂಪಾದಿಸಿದರೆ ಅಥವಾ ಹಣವನ್ನು ಉಳಿತಾಯ ಮಾಡಿ ಅದರ ಮೂಲಕ ವರಮಾನ ಹೆಚ್ಚಿಸಿಕೊಂಡರೆ ತಮಗೆ ಸಮಾಜದಲ್ಲಿ ಗೌರವಸ್ಥಾನ ದೊರೆಯುತ್ತದೆಂಬುದೂ ಉಳಿತಾಯದ ಹಿಂದಿರುವ ಇನ್ನೊಂದು ಉದ್ದೇಶ.

ಈ ಉದ್ದೇಶವನ್ನು ಪರಿಶೀಲಿಸಿದಾಗ ಒಂದು ವಿಷಯ ಎದ್ದು ಕಾಣುತ್ತದೆ. ಉಳಿತಾಯವೆಂಬುದು ಪ್ರಕೃತದ ಕ್ರಿಯೆ. ಇದರ ಹಿಂದಿನ ಉದ್ದೇಶ–ಪ್ರೇರಣೆ–ಭವಿಷ್ಯಕ್ಕೆ ಸಂಬಂಧಿಸಿದ್ದು. ಮುಂದೆ ತನ್ನ ಉಪಯೋಗಕ್ಕೆ ಬರಲಿ ಎಂಬ ಉದ್ದೇಶದಿಂದಲೇ ಈಗ ತನಗೆ ಬರುವ ವರಮಾನದಲ್ಲಿ ವ್ಯಕ್ತಿ ಸ್ವಲ್ಪ ಭಾಗ ಉಳಿತಾಯ ಮಾಡಲು ಯತ್ನಿಸುತ್ತಾನೆ.

**ಉಳಿತಾಯ ಪ್ರವೃತ್ತಿ:** ಮುಂದಿನ ಸೌಲಭ್ಯಕ್ಕಾಗಿ ಇಂದು ಪಡೆಯಬಹುದಾದ ಸೌಲಭ್ಯಗಳ ತ್ಯಾಗ ಮಾಡಬೇಕೆಂಬುದು ಉಳಿತಾಯದ ಅವಿಭಾಜ್ಯ ಷರತ್ತಾದರೂ ಅದಕ್ಕೆ ಅಷ್ಟೇ ಸಾಲದು. ಒಬ್ಬ ವ್ಯಕ್ತಿ ತನ್ನ ಮುಂದಿನ ಉಪಯೋಗಕ್ಕಾಗಿ ಇಂದು ಉಳಿತಾಯ ಮಾಡಬೇಕೆಂಬ ಆಸೆ ಇಟ್ಟುಕೊಂಡಿರಬಹುದು. ಆದರೆ ಮುಂದೆ ತನ್ನ ಜೀವನ ನಡೆಸಲು ಸರ್ಕಾರ ಕೆಲವು ಸೌಕರ್ಯಗಳನ್ನು ಕಲ್ಪಿಸಿದೆಯೆಂಬುದನ್ನು ಅರಿತೊಡನೆಯೆ ಆತ ಉಳಿತಾಯ ಮಾಡದೆ ಹೋಗಬಹುದು. ಆದ್ದರಿಂದ ಉಳಿತಾಯ ಮಾಡಬೇಕಾದರೆ ವ್ಯಕ್ತಿಯಲ್ಲಿ ಉಳಿತಾಯದ ಒಲವು ಅಥವಾ ಪ್ರವೃತ್ತಿಯೂ ಇರಬೇಕು. ಭವಿಷ್ಯತ್ತಿನ ಚಿಂತನೆಯೊಂದರಿಂದಲೇ ಈ ಉಳಿತಾಯ ಪ್ರವೃತ್ತಿ ಉದ್ಭವಿಸುವುದಿಲ್ಲ. ಸಾಮಾಜಿಕ ರಾಜಕೀಯ ಆರ್ಥಿಕ ಮಾನಸಿಕವಾದ ನಾನಾ ಪ್ರವೃತ್ತಿಗಳು ಇದನ್ನು ನಿಯಂತ್ರಿಸುತ್ತಿರುತ್ತವೆ. ಪ್ರತಿಯೊಬ್ಬ ವ್ಯಕ್ತಿಯ ಈಗಿನ ವರಮಾನ ಮತ್ತು ಮುಂದೆ ಅವನಿಗೆ ಬರಬಹುದಾದ ವರಮಾನ, ಸಮಾಜದ ಸ್ಥಿತಿಗತಿ ಇವೆಲ್ಲ ಆತನ ಉಳಿತಾಯದ ಮೇಲೆ ಪರಿಣಾಮ ಉಂಟು ಮಾಡುತ್ತವೆ. ಉಳಿತಾಯಕ್ಕೆ ಶಕ್ತಿ–ಪ್ರವೃತ್ತಿಗಳೆರಡೂ ಮುಖ್ಯವೆನ್ನಬಹುದು.

ಒಂದು ಸಮಾಜದಲ್ಲಿ ಉಳಿತಾಯ ಪ್ರವೃತ್ತಿ ವಿವಿಧರೀತಿಯ ಜನರಲ್ಲಿ ವಿವಿಧ ರೂಪದಲ್ಲಿ ಇರುತ್ತದೆ. ಅಧಿಕ ವರಮಾನ ಪಡೆಯುವವರು ಅನೇಕ ಸಂದರ್ಭಗಳಲ್ಲಿ ಕಡಿಮೆ ವರಮಾನ ಬರುವವರಿಗಿಂತ ಹೆಚ್ಚು ಉಳಿತಾಯ ಮಾಡುವ ಮನೋಭಾವ ಹೊಂದಿರುತ್ತಾರೆ. ತಾವು ಉಳಿತಾಯ ಮಾಡಿದ ಹಣವನ್ನು ಸರಿಯಾದ ಕಡೆ ಇಟ್ಟು ಅದರಿಂದ ವರಮಾನ ಪಡೆಯುವ ವಿಧಾನಗಳನ್ನು ತಿಳಿದುಕೊಂಡಿರುತ್ತಾರೆ. ತಮ್ಮ ಉಳಿತಾಯವನ್ನು ಭದ್ರವಾಗಿ ಇಡುವ ವಿಧಾನ ಅವರಿಗೆ ಗೊತ್ತಿರುತ್ತದೆ. ಉಳಿತಾಯ ಮಾಡುವುದರಿಂದ ಸಮಾಜದಲ್ಲಿ ಯಾವ ರೀತಿ ಗೌರವ ಮತ್ತು ಅಧಿಕಾರ ಪಡೆಯಬಹುದು ಎಂಬುದನ್ನೂ ಅವರಿಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಅವರಿಗೆ ತಮ್ಮ ನಿತ್ಯಜೀವನ ಸಾಗಿಸಲು ಬೇರೆ ಅನೇಕ ಸೌಕರ್ಯಗಳಿರುವುದರಿಂದ ಅವರಲ್ಲಿ ಉಳಿತಾಯ ಶಕ್ತಿ ಹೆಚ್ಚು. ಆದ್ದರಿಂದ ಇಂಥವರಲ್ಲಿ ಉಳಿತಾಯ ಪ್ರವೃತ್ತಿ ಅಧಿಕವಾಗಿರುವುದರಲ್ಲಿ ಆಶ್ಚರ್ಯವಿಲ್ಲ.

ಗ್ರಾಮಸ್ಥರಿಗೂ ಪಟ್ಟಣಿಗರಿಗೂ ಒಂದು ವೇಳೆ ಒಂದೇ ಮಟ್ಟದ ವರಮಾನ ಬರುತ್ತಿದ್ದರೂ ಪಟ್ಟಣಿಗರಿಗಿಂತ ಗ್ರಾಮಸ್ಥರಲ್ಲಿ ಉಳಿತಾಯ ಪ್ರವೃತ್ತಿ ಹೆಚ್ಚಾಗಿರುತ್ತದೆ. ಇದಕ್ಕೆ ಅನೇಕ ಕಾರಣಗಳುಂಟು. ಗ್ರಾಮಾಂತರ ಪ್ರದೇಶದವರ ವರಮಾನ ಪಟ್ಟಣಿಗರದಕ್ಕಿಂತ ಹೆಚ್ಚು ಅನಿಶ್ಚಿತ. ಆದ್ದರಿಂದ ಅವರು ಹೆಚ್ಚು ಉಳಿತಾಯ ಮಾಡುವುದು ಅನೇಕವೇಳೆ ಅನಿವಾರ್ಯ. ತಮ್ಮ ಉಳಿತಾಯದಿಂದ ವರಮಾನ ಹೆಚ್ಚಿಸಿಕೊಳ್ಳಲು ಅವರಿಗೆ ಅನೇಕ ಅವಕಾಶಗಳಿವೆ. ಜಮೀನುಗಳನ್ನು ಹೊಸದಾಗಿ ಕೊಳ್ಳಬಹುದು: ಹೊಸ ಜಾನುವಾರುಗಳನ್ನು ಮತ್ತು ವ್ಯವಸಾಯ ಉಪಕರಣಗಳನ್ನು ಕೊಂಡು ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿ ಕೊಳ್ಳಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ಆಸ್ತಿ ಮಾಡಿಕೊಂಡರೂ ಸಮಾಜದಲ್ಲಿ ಹೆಚ್ಚಿಗೆ ಮನ್ನಣೆ ದೊರೆಯುತ್ತದೆ. ಇಷ್ಟೇ ಅಲ್ಲ. ಅವರ ಜೀವನಮಟ್ಟ ಸರಳವಾಗಿರುವುದರಿಂದ ಅವರು ಹೆಚ್ಚು ಉಳಿತಾಯ ಮಾಡಲು ಸಾಧ್ಯವಾಗುತ್ತದೆ.

ಉಳಿತಾಯ ಮಾಡಬೇಕೆಂಬ ಮನಸ್ಸು ಜನರಲ್ಲಿ ಮೂಡುವುದಕ್ಕೆ ಕಾರಣವಾಗಿ ಇನ್ನೂ ಅನೇಕ ಅಂಶಗಳಿವೆ. ವಿವೇಕ, ದೂರದೃಷ್ಟಿ, ಸಾಂಸಾರಿಕ ಕರ್ತವ್ಯದ ಬಗ್ಗೆ ಶ್ರದ್ಧೆ ಇತ್ಯಾದಿ ವೈಯಕ್ತಿಕ ಗುಣಗಳು ಉಳಿತಾಯ ಮಾಡುವುದರಲ್ಲಿ ಮುಖ್ಯವಾಗಿ ಇರಬೇಕು. ಸಂಸಾರದ ಭವಿಷ್ಯ ಬೇಡಿಕೆಗಳಿಗೋಸ್ಕರ ಉಳಿತಾಯ ಮಾಡಬೇಕೆನ್ನುವ ಹಾಗೆಯೇ ಸಾಮಾನ್ಯ ವ್ಯಾಪಾರ ವ್ಯವಹಾರ ನಡೆಯಿಸುವುದಕ್ಕೂ ವಿಶೇಷ ಲಾಭಾಕಾಂಕ್ಷೆಯಿಂದ ಸಟ್ಟಾ ವ್ಯಾಪಾರ ಮಾಡುವುದಕ್ಕೂ ಉಳಿತಾಯ ಮಾಡುವ ಮನಸ್ಸಾಗುವುದೂ ಉಂಟು.

ಉಳಿತಾಯ ಶಕ್ತಿ ಒಂದು ದೇಶದ ಜನರ ವರಮಾನವನ್ನೇ ಅವಲಂಬಿಸಿರುತ್ತದೆ. ಅಧಿಕ ವರಮಾನವಿದ್ದಷ್ಟೂ ಉಳಿತಾಯ ಶಕ್ತಿ ಹೆಚ್ಚುತ್ತ ಹೋಗುತ್ತದೆ.

**ಉಳಿತಾಯಕ್ಕೆ ತಕ್ಕ ವಾತಾವರಣ:** ಜನರಲ್ಲಿ ಉಳಿತಾಯ ಮನೋಭಾವ ಮತ್ತು ಉಳಿತಾಯ ಶಕ್ತಿ ಇದ್ದರೂ ಅವರು ಉಳಿತಾಯ ಮಾಡುವಂತೆ ಮಾಡಲು ಪ್ರೇರೇಪಿಸುವ ಪರಿಸ್ಥಿತಿಯೂ ದೇಶದಲ್ಲಿರಬೇಕು. ತಾವು ಈಗ ಉಳಿತಾಯ ಮಾಡಿದ ವರಮಾನ ಮುಂದೆ ತಮಗೆ ಅವಶ್ಯಕವೆನಿಸಿದಾಗ ಉಪಯೋಗಕ್ಕೆ ದೊರೆಯುತ್ತದೆ ಎಂಬ ಭರವಸೆ ಇರಬೇಕು. ಇಂಥ ಭರವಸೆ ಜನರಿಗೆ ಉಂಟಾಗಬೇಕಾದರೆ ದೇಶದಲ್ಲಿ ಸುಭದ್ರ ಸರ್ಕಾರ ಇರಬೇಕು. ಜನ ಉಳಿಸಿದ ಹಣವನ್ನು ಸುಭದ್ರವಾಗಿ ಇಡಲು ಬ್ಯಾಂಕುಗಳು ಉಪಯೋಗಕ್ಕೆ ಬರುತ್ತವೆ. ಕೆಲವರು ಉಳಿಸಿದ ವರಮಾನವನ್ನು ಆಸ್ತಿಪಾಸ್ತಿ ಕೊಳ್ಳವುದಕ್ಕಾಗಿ ಉಪಯೋಗಿಸುತ್ತಾರೆ. ಆಸ್ತಿಪಾಸ್ತಿ ಮಾಡಿದರೆ ಮುಂದೆ ತಮ್ಮ ಮತ್ತು ತಮ್ಮ ಮಕ್ಕಳ ಉಪಯೋಗಕ್ಕೆ ಬರುತ್ತದೆ ಎಂಬ ಭರವಸೆಯೇ ಈ ಬಗೆಯ ಉಳಿತಾಯಕ್ಕೆ ಆಧಾರ. ಆದ್ದರಿಂದ ಸರ್ಕಾರ ಜನರ ಖಾಸಗಿ ಸ್ವತ್ತಿಗೆ ರಕ್ಷಣೆ ಕೊಡುವಂತಿರಬೇಕು. ಬ್ಯಾಂಕುಗಳಲ್ಲಿ ಇಟ್ಟ ಹಣ ಜನರಿಗೆ ಖಂಡಿತ ವಾಪಸ್ಸು ದೊರಕುತ್ತದೆ ಎಂಬ ಭಾವನೆ ಮೂಡಬೇಕು. ಪ್ರತಿಯೊಬ್ಬ ವ್ಯಕ್ತಿಗೂ ತಾನು ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ ಎಂಬ ಭರವಸೆ ಇರಬೇಕು. ಇದಕ್ಕೆ ತಕ್ಕ ವಾತಾವರಣವನ್ನು ಸರ್ಕಾರ ಕಲ್ಪಿಸಿಕೊಡಬೇಕು. ಸರ್ಕಾರ ಜನರಿಗೆ ಎಲ್ಲ ವಿಧವಾದ ಸೌಕರ್ಯಗಳನ್ನೂ ಕಲ್ಪಿಸಿಕೊಡುವಂಥ ಶಕ್ತಿ ಉಳ್ಳದ್ದಾಗಿರಬೇಕು. ಬ್ಯಾಂಕುಗಳ ಮತ್ತು ಇತರ ಹಣಕಾಸಿನ ಸಂಸ್ಥೆಗಳ ಸೌಲಭ್ಯಗಳನ್ನು ದೇಶದ ಎಲ್ಲ ಕಡೆಯೂ ಕಲ್ಪಿಸುವುದೂ ಅಗತ್ಯ. ಇದರಿಂದ ಉಳಿತಾಯ ಮಾಡಲು ಜನರನ್ನು ಪ್ರೇರೇಪಿಸಿದಂತಾಗುತ್ತದೆ.

ಬಡ್ಡಿಯ ದರ: ಇಷ್ಟೇ ಮುಖ್ಯವಾಗಿ ಈಗಿನ ಸಮಾಜದಲ್ಲಿ ಉಳಿತಾಯಕ್ಕೆ ಪ್ರೇರೇಪಣೆ ಮಾಡುವುದು ಬಡ್ಡಿಯ ದರ. ಈಗಿನ ವಾತಾವರಣದಲ್ಲಿ ಅನೇಕರು ತಾವು ಉಳಿಸಿದ ವರಮಾನವನ್ನು ತಮ್ಮ ಹತ್ತಿರವೇ ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲ. ತಾವು ಉಳಿತಾಯ ಮಾಡಿದ ವರಮಾನ ಮುಂದೆ ತಮ್ಮ ಉಪಯೋಗಕ್ಕೆ ಬರುವ ತನಕ ಅದನ್ನು ಬೇರೆಯವರ ಉಪಯೋಗಕ್ಕೆ ಕೊಟ್ಟು ಲಾಭ ಸಂಪಾದಿಸಲು ಪ್ರಯತ್ನಿಸುತ್ತಾರೆ. ಸಮಾಜದಲ್ಲಿ ಬಡ್ಡಿಯ ದರ ಬಹಳ ಕಡಿಮೆ ಇದ್ದರೆ ಅನೇಕರು ಉಳಿತಾಯ ಮಾಡುವ ಗೋಜಿಗೇ ಹೋಗುವುದಿಲ್ಲ. ಸಾಲ ಕೊಟ್ಟು ಕಡಿಮೆ ಬಡ್ಡಿದರ ಸಂಪಾದಿಸುವ ಬದಲು ಉಳಿತಾಯ ಮಾಡುವುದೇ ಬೇಡ ಎಂಬ ಮನೋಧರ್ಮವನ್ನು ಅನೇಕರು ತಾಳುತ್ತಾರೆ. ಆದರೆ ಸಮಾಜದ ದೃಷ್ಟಿಯಿಂದ ಉಳಿತಾಯ ಅಗತ್ಯ. ಆದ್ದರಿಂದ ಉಳಿತಾಯ ಮಾಡುವವರ ಸಂಖ್ಯೆಯನ್ನು ಹೆಚ್ಚಿಸಬೇಕಾದರೆ ಆಕರ್ಷಕವಾದ ಬಡ್ಡಿ ದರವನ್ನು ದೊರಕಿಸಿಕೊಡುವುದು ಅತ್ಯಾವಶ್ಯಕ. ಸ್ವತಂತ್ರ ಸಮಾಜದಲ್ಲಿ ಇತರ ಪದಾರ್ಥಗಳ ಬೆಲೆಗಳಂತೆ ಹಣದ ಮೇಲಣ ಬಡ್ಡಿಯ ದರವೂ ಅದಕ್ಕಿರುವ ಬೇಡಿಕೆ ಹಾಗೂ ಸರಬರಾಜುಗಳನ್ನೇ ಅವಲಂಬಿಸಿರುತ್ತದೆ. ಬಡ್ಡಿಯು ಆಕರ್ಷಕವಾಗಿದ್ದರೆ ಶ್ರೀಮಂತರಿಂದ ಹಿಡಿದು ತೀರ ಬಡವರ್ಗದವರೆಗಿನ ಎಲ್ಲ ಜನರೂ ತಮ್ಮ ಶಕ್ತ್ಯಾನುಸಾರ ಉಳಿತಾಯ ಮಾಡಲು ಯತ್ನಿಸುತ್ತಾರೆ. ಇದರಿಂದ ಸಮಾಜದಲ್ಲಿ ಉಳಿತಾಯ ಹೆಚ್ಚಾಗಲು ಕಾರಣವಾಗುತ್ತದೆ.

**ಭಾರತದಲ್ಲಿ:** ಉಳಿತಾಯಕ್ಕೆ ಉತ್ತೇಜನ ನೀಡಲು ಬಲು ಹಿಂದಿನಿಂದಲೂ ಅನೇಕ ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. ಅಂಚೆ ಕಚೇರಿಗಳು ಬಹಳ ಕಾಲದಿಂದಲೂ ಉಳಿತಾಯ ಬ್ಯಾಂಕುಗಳ ಕೆಲಸ ನಿರ್ವಹಿಸುತ್ತಿವೆ. ಸಣ್ಣ ಪ್ರಮಾಣದಲ್ಲಿ ಉಳಿತಾಯ ಮಾಡಿದವರಿಗೂ ಭದ್ರತೆ ಒದಗಿಸಲು ಅಂಚೆ ಕಚೇರಿಗಳು ಈ ಕಾರ್ಯಕೈಗೊಂಡವು. ಇವು ಸರ್ಕಾರದ ಅಧೀನದಲ್ಲಿರುವುದರಿಂದ ಜನರಿಗೆ ತಮ್ಮ ಹಣದ ಭದ್ರತೆಯ ವಿಷಯದಲ್ಲಿ ಯಾವ ಅಂಜಿಕೆಯೂ ಇರುವುದಿಲ್ಲವೆಂಬ ಕಾರಣದಿಂದ ಈ ಕಾರ್ಯಕ್ರಮ ಕೈಗೊಳ್ಳಲಾಯಿತು.

ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಂದ ಉಳಿತಾಯ ಶೇಖರಿಸಲು ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕುಗಳನ್ನು ಸ್ಥಾಪಿಸುವ ಕಾರ್ಯ ಆರಂಭವಾಗಿದೆ. ಸ್ಟೇಟ್ ಬ್ಯಾಂಕು, ವಿವಿಧ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಈ ದೃಷ್ಟಿ ಇಟ್ಟುಕೊಂಡೇ ತಮ್ಮ ಶಾಖೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭಿಸುತ್ತಿವೆ. ಇದಲ್ಲದೆ ಜನರು ಉಳಿತಾಯ ಮಾಡಿದ ಹಣವನ್ನು ಸಮಾಜದ ಉಪಯೋಗಕ್ಕಾಗಿ ದೊರಕಿಸಿಕೊಳ್ಳಲು

ಜೀವವಿಮಾ ಕಾರ್ಪೊರೇಷನ್ ಅನೇಕ ರೀತಿಯ ಕ್ರಮಕೈಗೊಂಡಿದೆ. ಕಡಿಮೆ ವರಮಾನ ಬರುವ ವರ್ಗದವರೂ ಜೀವವಿಮೆಯಲ್ಲಿ ಹಣ ತೊಡಗಿಸುವುದರ ಮೂಲಕ ತಮ್ಮ ಉಳಿತಾಯವನ್ನು ಭದ್ರವಾಗಿ ಕಾಪಾಡಿಕೊಳ್ಳಬಹುದಾಗಿದೆಯಲ್ಲದೆ ಭವಿಷ್ಯವನ್ನು ಸುರಕ್ಷಿಸಬಹುದಾಗಿದೆ.

ಕೆಲರು ತಮಗೆ ಅವಕಾಶ ದೊರೆತಾಗ ಉಳಿತಾಯ ಮಾಡಬೇಕು ಎನ್ನುವ ಆಸೆ ಇಟ್ಟುಕೊಂಡಿರುತ್ತಾರೆ. ತಮಗೆ ತೊಂದರೆ ಒದಗಿದಾಗ ತಾವು ಉಳಿತಾಯ ಮಾಡಿದ ಹಣವನ್ನು ಸುಲಭವಾಗಿ ವಾಪಸು ತೆಗೆದುಕೊಳ್ಳುವಂತಿರಬೇಕು ಎಂಬ ಅಭಿಲಾಷೆ ಇರುತ್ತದೆ. ಜೊತೆಗೆ ಉಳಿತಾಯ ಬ್ಯಾಂಕುಗಳಲ್ಲಿ ತಮ್ಮ ಉಳಿತಾಯವನ್ನು ಇಟ್ಟರೆ ದೊರೆಯುವ ಬಡ್ಡಿ ದರಕ್ಕಿಂತ ಹೆಚ್ಚಿಗೆ ಸಂಪಾದಿಸಬೇಕು ಎನ್ನುವ ಅಭಿಲಾಷೆ ಕೂಡ ಇರುವುದುಂಟು. ಇಂಥ ವರ್ಗದ ಜನರ ಉಳಿತಾಯವನ್ನೂ ಸಮಾಜದ ಹಿತಕ್ಕಾಗಿ ಉಪಯೋಗಿಸಿಕೊಳ್ಳಲು ಯೂನಿಟ್ ಟ್ರಸ್ಟ್ ಸ್ಥಾಪಿತವಾಗಿದೆ.

**ಉಳಿತಾಯದ ಉಪಯೋಗ ಮತ್ತು ಮಹತ್ತ್ವ:** ಉಳಿತಾಯ ಒಂದು ಸಮಾಜದ ಆರ್ಥಿಕಾಭಿವೃದ್ಧಿಗೆ ಅತ್ಯಾವಶ್ಯಕ. ಉಳಿತಾಯವಿಲ್ಲದಿದ್ದರೆ ಆ ಸಮಾಜದಲ್ಲಿ ಬಂಡವಾಳ ಕೂಡುವುದಿಲ್ಲ. ಬಂಡವಾಳ ಶೇಖರಣೆಯಾಗದಿದ್ದರೆ ಆರ್ಥಿಕಾಭಿವೃದ್ಧಿಯಾಗುವುದಿಲ್ಲ. ಆದ್ದರಿಂದ ಒಂದು ದೇಶದ ಆರ್ಥಿಕಾಭಿವೃದ್ಧಿಗೆ ಉಳಿತಾಯ ಬಹುಮುಖ್ಯವಾದ ಮತ್ತು ಸಹಾಯಕಾರಿಯಾದ ಅಂಶ ಎಂದು ಹೇಳಬಹುದು.

ಈಗ ಪ್ರಪಂಚದಲ್ಲಿ ಆರ್ಥಿಕಾಭಿವೃದ್ಧಿ ಸಾಧಿಸಿರುವ ಪಾಶ್ಚಾತ್ಯ ದೇಶಗಳ ಇತಿಹಾಸವನ್ನು ನೋಡಿದರೆ ಉಳಿತಾಯದ ಪ್ರಭಾವ ಕಂಡುಬರುತ್ತದೆ. ಆದ್ದರಿಂದಲೇ ಉಳಿತಾಯವನ್ನು ಹೆಚ್ಚಿಸಲು ಹಿಂದುಳಿದ ದೇಶಗಳಲ್ಲಿ ಸತತ ಪ್ರಯತ್ನಮಾಡಲಾಗುತ್ತಿದೆ. ಆರ್ಥಿಕ ಚಟುವಟಿಕೆಗಳ ಏರಿಳಿತಗಳಿಗೂ ಉಳಿತಾಯದ ಏರಿಳಿತಗಳೇ ಕಾರಣ. ಸಾಕಷ್ಟು ಉಳಿತಾಯ ದೊರೆಯದೆ ಹೋದರೆ ಸಮಾಜದಲ್ಲಿ ಬಂಡವಾಳದ ಅಭಾವ ಉಂಟಾಗಿ ಆರ್ಥಿಕ ಕ್ಷೇತ್ರದಲ್ಲಿ ತೊಂದರೆಗಳು ಉದ್ಭವಿಸುತ್ತವೆ. ಇದೇ ರೀತಿ ಹಣದ ಉಳಿತಾಯ ಹೆಚ್ಚಾಗಿ ಅದು ಬಂಡವಾಳವಾಗಿ ನಿಯೋಜನೆಯಾಗದೆ ಹೋದರೆ ಆಗಲೂ ಸಮಸ್ಯೆಗಳು ತಲೆದೋರುತ್ತವೆ. ವ್ಯಾಪಾರ ಚಕ್ರದ ಏರು–ತಗ್ಗುಗಳ ಹಿಂದೆ ಉಳಿತಾಯದ ಉಬ್ಬು–ತಗ್ಗುಗಳನ್ನು ಕಾಣಬಹುದಾಗಿದೆ. ಆದುದರಿಂದ ಎಲ್ಲ ದೇಶಗಳಲ್ಲೂ ಈಗ ಉಳಿತಾಯವನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿ ನಿಯಂತ್ರಿಸಲು ಸತತ ಪ್ರಯತ್ನ ಮಾಡಲಾಗುತ್ತಿದೆ. (ಎಸ್.ಪಿ.ಎಸ್.)

**ಉಳಿತಾಯ–ನಿಯೋಜನ ಸಿದ್ಧಾಂತ:** ಒಂದು ಅರ್ಥವ್ಯವಸ್ಥೆಯಲ್ಲಿ ಪಾತ್ರವಹಿಸುವ ಉಳಿತಾಯ ಹಾಗೂ ಬಂಡವಾಳ ನಿಯೋಜನೆಗಳ ಸಂಬಂಧ ಹಾಗೂ ಪರಿಣಾಮಗಳನ್ನು ಕುರಿತು ನಡೆಸಿದ ವಿವೇಚನೆ, ಸಿದ್ಧಾಂತ (ಸೇವಿಂಗ್–ಇನ್ವೆಸ್ಟ್‌ಮೆಂಟ್ ಥಿಯೊರಿ). ಅನುಭೋಗಿಸಲ್ಪಡದೆ ಉಳಿದ ವರಮಾನವೇ ಉಳಿತಾಯವಾದರೆ (**ನೋಡಿ– ಉಳಿತಾಯ**). ಒಂದು ಗೊತ್ತಾದ ಅವಧಿಯಲ್ಲಿ ಉತ್ಪಾದನ ವಸ್ತುಗಳ ದಾಸ್ತಾನಿನ ನಿವ್ವಳ ಹೆಚ್ಚಳವೇ ಬಂಡವಾಳ ಯೋಜನೆ.

ಉಳಿತಾಯವೂ ನಿಯೋಜನೆಯೂ ಒಂದೇ ಅಲ್ಲವೆಂಬುದು ಕೇನ್ಸನಿಗೆ ಮುಂಚಿನ ಅರ್ಥಶಾಸ್ತ್ರಜ್ಞರ ದೃಷ್ಟಿಯಾಗಿತ್ತು. ಸಮತೋಲ ಸ್ಥಿತಿಯಲ್ಲಿ ಮಾತ್ರ ಇವೆರಡೂ ಒಂದೇ ಆಗಿರುವುದು ಸಾಧ್ಯವೆಂಬುದು ಇವರ ಅಭಿಪ್ರಾಯ. ಒಂದು ಸಮಾಜದಲ್ಲಿ ಉಳಿತಾಯ ಮಾಡುವವರೂ ಬಂಡವಾಳ ನಿಯೋಜನೆ ಮಾಡುವವರೂ ಬೇರೆ ಬೇರೆ ಜನ. ಆದ್ದರಿಂದ ಈ ಎರಡೂ ಗುಂಪಿನ ಜನರ ಕ್ರಿಯೆಗಳಲ್ಲಿ ಸಮತೆ ಏರ್ಪಡುವುದು ಕೇವಲ ಆಕಸ್ಮಿಕ ಎಂಬುದು ಇವರ ವಾದ. ಒಂದು ಅರ್ಥ ವ್ಯವಸ್ಥೆಯಲ್ಲಿ ಉಳಿತಾಯ ಯೋಜನೆಗಳ ನಡುವೆ ಸರ್ವದಾ ಒಂದು ಬಗೆಯ ಓಟ ಸ್ಪರ್ಧೆ ನಡೆಯುತ್ತಿರುತ್ತದೆ; ಕೆಲವು ಸಮಯಗಳಲ್ಲಿ ನಿಯೋಜನೆ ಮುಂದಾಗಿ ಓಡುತ್ತಿರುತ್ತದೆ; ಉಳಿತಾಯ ಅದರ ಬೆನ್ನಟ್ಟಿ ನಡೆಯುತ್ತದೆ. ಇದು ಅರ್ಥವ್ಯವಸ್ಥೆಯ ಉತ್ಕರ್ಷ ಕಾಲ. ಕೊನೆಗೂ ಒಂದೆಡೆಯಲ್ಲಿ ನಿಯೋಜನೆಯನ್ನು ಉಳಿತಾಯ ಸಂಧಿಸುತ್ತದೆ. ಆ ಕ್ಷಣದಲ್ಲಿ ಇವೆರಡೂ ಸಮ. ಅದು ಸಮತೋಲ ಸ್ಥಿತಿ. ಆದರೆ ಆ ಸ್ಥಿತಿ ಬೇಗ ಬದಲಾಗುತ್ತದೆ. ಉಳಿತಾಯ ಮುಂದುವರಿಯುತ್ತದೆ. ಆದರೆ ನಿಯೋಜನೆ ಹಿಂದೆ ಬೀಳುತ್ತದೆ. ಇದು ಹಿಂಜರಿತದ ಪರಿಸ್ಥಿತಿ. ಈ ಕುಗ್ಗುವಿಕೆ ಮುಂದುವರಿದು ಕೊನೆಗೆ ಮುಗ್ಗಟ್ಟು ಸಂಭವಿಸಬಹುದು. ಇದು ಪರಮಾವಧಿ ಮುಟ್ಟಿದಾಗ ನಿಯೋಜನೆ ಮತ್ತೆ ಮುಂದುವರಿಯುತ್ತದೆ. ಹೀಗೆ ಉಳಿತಾಯಕ್ಕೂ ನಿಯೋಜನೆಗೂ ನಡುವೆ ವಿರಸ ಇರುವುದು ಸಾಮಾನ್ಯ.

ಒಂದು ಅರ್ಥವ್ಯವಸ್ಥೆಯಲ್ಲಿ ಉದ್ಯಮಿಗಳೂ ಇತರರೂ ಉಳಿತಾಯ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಇದರ ಜೊತೆಗೆ ಉದ್ಯಮಿಗಳು ಬ್ಯಾಂಕುಗಳಿಂದಲೂ ಹಣ ಸಾಲ ಪಡೆದು ಅದನ್ನೂ ನಿಯೋಜಿಸುತ್ತಾರೆ. ಆದ್ದರಿಂದ ಒಟ್ಟು ಉಳಿತಾಯಕ್ಕಿಂತ ಒಟ್ಟು ನಿಯೋಜನೆ ಅಧಿಕವಾಗಿರುತ್ತದೆ. ಹೀಗೆಂಬುದೂ ಒಂದು ವಾದ.

ಉಳಿತಾಯವೂ ನಿಯೋಜನೆಯೂ ಸಮವಾಗಿಯೇ ಇರಬೇಕೆಂಬುದಾಗಿ ಕೇನ್ಸ್ ವಾದಿಸಿದ್ದಾನೆ. ಒಂದು ದೇಶದ ಆರ್ಥಿಕ ಚಟುವಟಿಕೆಯ ಫಲವಾಗಿ ಉದ್ಭವಿಸಿದ ಎಲ್ಲ ವರಮಾನಗಳ ಮೊತ್ತವೇ ರಾಷ್ಟ್ರೀಯ ವರಮಾನ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವರಮಾನದಲ್ಲಿ ಒಂದು ಭಾಗವನ್ನು ಅನುಭೋಗಕ್ಕಾಗಿ ಖರ್ಚು ಮಾಡುತ್ತಾನೆ. ಮಿಕ್ಕಿದ್ದು ಉಳಿತಾಯ.

ರಾಷ್ಟ್ರೀಯ ವರಮಾನ = ಅನುಭೋಗ ವಸ್ತುಗಳಿಗಾಗಿ ಮಾಡಿದ ಖರ್ಚು + ಉಳಿತಾಯವಾದ ಹಣ

ಎಂದರೆ –

ವರಮಾನ = ಅನುಭೋಗ + ಉಳಿತಾಯ

ಆದ್ದರಿಂದ –

ಉಳಿತಾಯ = ವರಮಾನ – ಅನುಭೋಗ

ಆದರೆ ಒಂದು ದೇಶದಲ್ಲಿ ಉತ್ಪಾದನೆಯ ಎಲ್ಲ ಅನುಭೋಗ ವಸ್ತುಗಳನ್ನೂ ಉತ್ಪಾದಕ ವಸ್ತುಗಳನ್ನೂ (ನಿಜಬಂಡವಾಳ ಅಥವಾ ನಿಯೋಜನೆ) ಕೂಡಿಸಿದರೆ ದೊರಕುವ ಉತ್ಪಾದನೆಯ ಮೊತ್ತವೇ ರಾಷ್ಟ್ರೀಯ ವರಮಾನ :

ರಾಷ್ಟ್ರೀಯ ವರಮಾನ = ಉತ್ಪಾದನೆಯಾದ ಅನುಭೋಗ ವಸ್ತುಗಳ ಮೊತ್ತ + ಉತ್ಪಾದನೆಯಾದ ಬಂಡವಾಳ ವಸ್ತುಗಳ ಮೊತ್ತ.

ವರಮಾನ = ಅನುಭೋಗ + ನಿಯೋಜನೆ

ಆದ್ದರಿಂದ –

ನಿಯೋಜನೆ = ವರಮಾನ – ಅನುಭೋಗ

ವರಮಾನದಿಂದ ಅನುಭೋಗ ಕಳೆದರೆ ಉಳಿದದ್ದೇ ಉಳಿತಾಯವೂ ಹೌದು, ನಿಯೋಜನೆಯೂ ಹೌದು.

ಆದ್ದರಿಂದ –

ಉಳಿತಾಯ = ನಿಯೋಜನೆ

ಮೇಲಣ ವಿವೇಚನೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಹಲವಾರಿವೆ. ವರಮಾನ, ಅನುಭೋಗ, ಉಳಿತಾಯ, ನಿಯೋಜನೆ ಇವುಗಳ ಬಗ್ಗೆ ಕೇನ್ಸ್ ನೀಡಿರುವ ವ್ಯಾಖ್ಯೆಗಳನ್ನು ಅಂಗೀಕರಿಸಿದಾಗ ಉಳಿತಾಯವೂ ನಿಯೋಜನೆಯೂ ಒಂದೇ ಎಂಬ ತೀರ್ಮಾನಕ್ಕೆ ಬಂದಂತಾಗುತ್ತದೆ. ಇಲ್ಲಿ ನಡೆದಿರುವ ಆರ್ಥಿಕ ವಿವೇಚನೆ, ಸೂಕ್ಷ್ಮ (ಮೈಕ್ರೊ) ವಿಧಾನದ್ದಲ್ಲ, ಸಮಗ್ರ (ಮ್ಯಾಕ್ರೊ) ವಿಧಾನದ್ದು. ಇಲ್ಲಿ ಉಳಿತಾಯ, ನಿಯೋಜನೆ, ವರಮಾನ, ಅನುಭೋಗ ಎಲ್ಲವೂ ವ್ಯಷ್ಟಿಯದಲ್ಲ, ಸಮಷ್ಟಿಯದು. ಒಬ್ಬ ವ್ಯಕ್ತಿಯನ್ನು ತೆಗೆದುಕೊಂಡರೆ ಆತ ಮಾಡುವ ಉಳಿತಾಯಕ್ಕೂ ನಿಯೋಜನೆಗೂ ಹೊಂದಾಣಿಕೆಯಿಲ್ಲದಿರಬಹುದು. ಆದರೆ ಇಡೀ ವ್ಯವಸ್ಥೆಯನ್ನೇ ತೆಗೆದುಕೊಂಡರೆ ಇವೆರಡೂ ಸಮನಾಗಿರಬೇಕಾದದ್ದು ಅನಿವಾರ್ಯ.

ಯಾವುದಾದರೂ ಒಂದು ಕಾಲದಲ್ಲಿ ಸಾಮಾಜಿಕರು ಅನುಭೋಗದಲ್ಲಿ ಕಡಿತ ಮಾಡಿದ್ದಾದರೆ ಆಗ ಅಷ್ಟು ಅನುಭೋಗ ವಸ್ತುಗಳು ಅನುಭೋಗಿಗಳಿಗೆ ಮಾರಾಟವಾಗದೆ ಉಳಿಯುತ್ತದೆ. ಇವು ನಿಯೋಜಿತ ವಸ್ತುಗಳ ಶ್ರೇಣಿಗೆ ಸೇರಿಕೊಳ್ಳುತ್ತವೆ. ಆಗ ಅಷ್ಟರಮಟ್ಟಿಗೆ ನಿಯೋಜನೆಯ ಮೊತ್ತ ಅಧಿಕವಾದಂತೆಯೇ ಸರಿ.

ಉಳಿತಾಯವೂ ನಿಯೋಜನೆಯೂ ಪರಸ್ಪರ ಸಮನಾಗಿರುವುದೆಂಬ ಕೇನ್ಸನ ವಾದವನ್ನು ಅರ್ಥಶಾಸ್ತ್ರಜ್ಞರನೇಕರು ಬಹಳ ಕಾಲ ಒಪ್ಪಿಕೊಳ್ಳಲಿಲ್ಲ. ಇಲ್ಲವೆಂಬುದನ್ನು ಸರ್ ಡೆನಿಸ್ ರಾಬರ್ಟ್‌ಸನ್, ಪ್ರೊ. ಓಹ್ಲಿನ್ ಮುಂತಾದವರು ಕಾಲ ವಿಶ್ಲೇಷಣೆಯ ವಿಧಾನದಿಂದ ತೋರಿಸಿಕೊಟ್ಟಿದ್ದಾರೆ.

ಉಳಿತಾಯ, ನಿಯೋಜನೆ ಇವು ಕಾಲಾನುಗುಣವಾದವುಗಳು. ಒಂದು ಕಾಲಕ್ಕೆ ಸಂಬಂಧಿಸಿದಂತೆ ಮಾತ್ರವೇ ಇವೆರಡರ ಮೊತ್ತಗಳನ್ನೂ ಅಳೆಯುವುದೂ ಹೋಲಿಸುವುದೂ ಸಾಧ್ಯ. ಹಿಂದೆ ಕೈಗೂಡಿದ ಅಥವಾ ವಾಸ್ತವವಾದ ಉಳಿತಾಯ–ನಿಯೋಜನೆಗಳಿಗೂ ನಿರೀಕ್ಷಿತ ಅಥವಾ ಉದ್ದೇಶಿತ ಉಳಿತಾಯ–ನಿಯೋಜನೆಗಳಿಗೂ ಇರುವ ವ್ಯತ್ಯಾಸಗಳನ್ನು ಇಲ್ಲಿ ಪ್ರಮುಖವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಉಳಿತಾಯದ ಮೊತ್ತಕ್ಕಿಂತ ನಿರೀಕ್ಷಿತ ಅಥವಾ ಉದ್ದೇಶಿತ ನಿಯೋಜನೆ ಅಧಿಕವಾದ ಪಕ್ಷದಲ್ಲಿ ಇದರಿಂದ ಹೆಚ್ಚು ವರಮಾನ ಬರುತ್ತದೆ; ತತ್ಫಲವಾಗಿ ಉಳಿತಾಯವೂ ಅಧಿಕಗೊಳ್ಳುತ್ತದೆ. ನಿಯೋಜನೆಗೆ ಉಳಿತಾಯ ಸಮನಾಗಿ ಮತ್ತೆ ಇವೆರಡರ ಸಮತೋಲ ಸ್ಥಾಪಿತವಾಗುತ್ತದೆ. ವಾಸ್ತವ ನಿಯೋಜನೆಗಿಂತ ಉಳಿತಾಯ ಹೆಚ್ಚಾದಾಗಲೂ ವರಮಾನ ಕಡಿಮೆಯಾಗಿ, ತತ್ಫಲವಾಗಿ ಉಳಿತಾಯವೂ ತಗ್ಗಿ ಸಮತೆ ಏರ್ಪಡುವುದು ಅನಿವಾರ್ಯ.(**ನೋಡಿ– ಉದ್ಯೋಗ–ಮೀಮಾಂಸೆ**) (ಸಿ.ಕೆ.ಆರ್.)

**ಉಳಿತಾಯ ಪತ್ರಗಳು :** ಸಣ್ಣ ಉಳಿತಾಯಗಾರರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸರ್ಕಾರ ಮಾರಾಟ ಪತ್ರಗಳು (ಸೇವಿಂಗ್ ಸರ್ಟಿಫಿಕೇಟ್ಸ್). ಇವುಗಳ ಮೇಲೆ ನೀಡುವ ಬಡ್ಡಿಗೆ ಸಾಮಾನ್ಯವಾಗಿ ವರಮಾನ ತೆರಿಗೆಯಿಂದ ವಿನಾಯಿತಿ ಇರುತ್ತದೆ. ಇವನ್ನು ಸಣ್ಣ ಧನಮಾನಗಳಲ್ಲಿ ಮಾರಬಹುದು. ನಿಗದಿಯಾದ ವರ್ಷಗಳ ಅವಧಿ ಮುಗಿದ ಮೇಲೆ ಪತ್ರದ ಹಣವನ್ನು ಉಳಿತಾಯದಾರನಿಗೆ ಹಿಂದಿರುಗಿಸಲಾಗುತ್ತದೆ. ನಿರ್ಧರಿಸಲಾದ ದರದಲ್ಲಿ ಬಡ್ಡಿಯ ಹಣವನ್ನು ಪತ್ರದ ಅಸಲಿಗೆ ಸೇರಿಸಲಾಗುತ್ತದೆ. ಪತ್ರದ ನಿಗದಿಯಾದ ಅವಧಿಯವರೆಗೆ–ಅಥವಾ ಅದಕ್ಕಿಂತ ಮುಂಚೆ ಅದನ್ನು ಮುರಿಸಿ ನಗದು ಪಡೆಯುವವರಿಗೆ– ಬಡ್ಡಿಯುಂಟು. ಬ್ರಿಟನ್ನಿನಲ್ಲಿ ಪ್ರಪ್ರಥಮವಾಗಿ ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ನೀಡಿದ್ದು ಒಂದನೆಯ ಮಹಾಯುದ್ಧದ ಕಾಲದಲ್ಲಿ (1916). ಭಾರತದಲ್ಲಿ 1917ರ ಏಪ್ರಿಲ್ ಒಂದರಂದು ಪ್ರಥಮವಾಗಿ 5 ವರ್ಷಗಳ ಕಚೇರಿ ನಗದು ಪತ್ರಗಳನ್ನು (ಪೋಸ್ಟ್ ಆಫೀಸ್ ಕ್ಯಾಷ್

ಸರ್ಟಿಫಿಕೇಟ್ಸ್) ನೀಡಲಾಯಿತು. ಬಡ್ಡಿಯದರ ಏರಿಸಿದಾಗ ಬೇಡಿಕೆ ಹೆಚ್ಚಿ, ಇಳಿಸಿದಾಗ ತಗ್ಗುತ್ತಿದ್ದ ಈ ಪತ್ರಗಳ ನೀಡಿಕೆ ಕೊನೆಗೊಂಡದ್ದು 1947ರಲ್ಲಿ. 1940ರಲ್ಲಿ ರಾಷ್ಟ್ರದ ರಕ್ಷಣೆಗಾಗಿ ಹಣದ ಅವಶ್ಯಕತೆ ಉಂಟಾದಾಗ ಸರ್ಕಾರ ರಕ್ಷಣಾ ಉಳಿತಾಯ ಪತ್ರಗಳನ್ನು ಜಾರಿಗೆ ತಂದಿತು. ಈ ಪತ್ರಗಳನ್ನು ನಗದು ಹಣಕ್ಕೆ ಪರಿವರ್ತಿಸಿಕೊಳ್ಳದಿರುವಂತೆ ಕಡ್ಡಾಯದ ಕಾಲದ ಮಿತಿ ಇರಲಿಲ್ಲ. 1ನೆಯ ಅಕ್ಟೋಬರ್ 1943ರಲ್ಲಿ ರಕ್ಷಣಾ ಉಳಿತಾಯ ಪತ್ರಗಳ ಬದಲು 12 ವರ್ಷದ ರಾಷ್ಟ್ರೀಯ ಉಳಿತಾಯ ಪತ್ರಗಳು ಜಾರಿಗೆ ಬಂದುವು. ಈ ಪತ್ರಗಳನ್ನು 3 ವರ್ಷಗಳವರೆಗೂ ನಗದಿಗೆ ಪರಿವರ್ತಿಸಲು ಅವಕಾಶವಿರಲಿಲ್ಲ. 5 ಮತ್ತು 7ವರ್ಷಗಳ ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಚಲಾವಣೆಗೆ ನೀಡಲಾದದ್ದು 1948ರಲ್ಲಿ. ಭಾರತದ ಅಭಿವೃದ್ಧಿಯೋಜನೆ ಪ್ರಾರಂಭವಾದ ಮೇಲೆ ಅದಕ್ಕಾಗಿ ಹಣ ಪಡೆಯಲು ನೀಡಿದವು ರಾಷ್ಟ್ರೀಯ ಯೋಜನಾ ಪತ್ರಗಳು.

1970ರ ಮಾರ್ಚ್‌ನಲ್ಲಿ ಉಳಿತಾಯಪತ್ರಗಳ ಮಾರಾಟದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಯಿತು. ಹಿಂದೆ ನೀಡಲಾಗಿದ್ದ 12 ವರ್ಷಗಳ ರಾಷ್ಟ್ರೀಯ ರಕ್ಷಣಾ ಪತ್ರಗಳ, 10 ವರ್ಷಗಳ ರಕ್ಷಣಾ ಠೇವಣಿ ಪತ್ರಗಳ ಮತ್ತು 10 ವರ್ಷಗಳ ರಾಷ್ಟ್ರೀಯ ಉಳಿತಾಯ ಪತ್ರಗಳ ಮಾರಾಟ ರದ್ದುಗೊಳಿಸಿ ಅವುಗಳ ಬದಲು ವಿವಿಧ ಮೌಲ್ಯಗಳ ವಿವಿಧ ಬಡ್ಡಿ ದರಗಳ ಏಳು ವರ್ಷಗಳ ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ನೀಡಲಾಯಿತು. ಒಂದು ಕನಿಷ್ಠ ಅವಧಿಯವರೆಗೆ ಇವನ್ನು ಮುರಿಸುವಂತಿಲ್ಲ. ಉಳಿತಾಯ ಪತ್ರಗಳ ಮಾರಾಟದಿಂದ ಬಂದ ಹಣವನ್ನು ಸರ್ಕಾರ ಅಭಿವೃದ್ಧಿ ಕಾರ್ಯಗಳಿಗೂ ರಾಷ್ಟ್ರದ ರಕ್ಷಣಾಶಕ್ತಿಯನ್ನು ಹೆಚ್ಚಿಸುವುದಕ್ಕೂ ವೆಚ್ಚಮಾಡುತ್ತಿದೆ. (ಎ.ಸಿ.ಆರ್.)

**ಉಳಿತಾಯ ಪ್ರವೃತ್ತಿ:** ವರಮಾನ ನಿರ್ಣಾಯಕವಾದ ಮಾನಸಿಕ ಪ್ರಭಾವಗಳಲ್ಲೊಂದು; ಉಳಿತಾಯ ಮಾಡಬೇಕೆಂಬ ವ್ಯಕ್ತಿಯ ಉತ್ಸುಕತೆ (ಪ್ರೊಪೆನ್ಸಿಟಿ ಟು ಸೇವ್). ಕೇನ್ಸನ ಆರ್ಥಿಕ ಸಿದ್ಧಾಂತದ ಮೂಲ ಸಾಮಗ್ರಿಗಳಲ್ಲಿ ಇದೂ ಒಂದು. ಒಬ್ಬ ವ್ಯಕ್ತಿಯ ಒಟ್ಟು ವರಮಾನಕ್ಕೂ ಅನುಭೋಗ ವೆಚ್ಚಗಳಿಗಾಗಿ ಬಳಸದಿರುವ ವರಮಾನ ಭಾಗಕ್ಕೂ ಇರುವ ಶೇಕಡ ಸಂಬಂಧವನ್ನು ಸೂಚಿಸುವ ಸಾಂಖ್ಯಿಕೀಯ (ಸ್ಟಾಟಿಸ್ಟಿಕಲ್) ಪದಪುಂಜವಾಗಿ ಇದನ್ನು ಕೇನ್ಸ್ ಮೊದಲು ಬಳಸಿದ. 19ನೆಯ ಶತಮಾನದ ಅಭಿಜಾತ ಪಂಥದ ಅರ್ಥಶಾಸ್ತ್ರಜ್ಞರಾದ ಲಾಡರ್ ಡೇಲ್ ಮತ್ತು ಮಾಲ್ಥಸರು ಈ ಪ್ರವೃತ್ತಿಯನ್ನು ಕುರಿತ ಸ್ಥೂಲ ಕಲ್ಪನೆ ಹೊಂದಿದ್ದುಂಟು. ಆದರೆ ಕೇನ್ಸನ ಜನರಲ್ ಥಿಯೊರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಅಂಡ್ ಮನಿ ಎಂಬ ಪುಸ್ತಕ ಪ್ರಕಟವಾಗುವವರೆಗೂ (1936) ಇದಕ್ಕೆ ಅಷ್ಟೇನೂ ಪ್ರಾಮುಖ್ಯ ಇದ್ದಿರಲಿಲ್ಲ.

ಉಳಿತಾಯ ಪ್ರವೃತ್ತಿಗೆ ಹೊಂದಿಕೊಂಡ ಇನ್ನೊಂದು ಪದಪುಂಜವೆಂದರೆ ಅನುಭೋಗ ಪ್ರವೃತ್ತಿ. ಬಂದ ವರಮಾನದಲ್ಲಿ ಬಯಕೆಯ ಪೂರೈಕೆಗಾಗಿ ಬಳಸಿಕೊಂಡದ್ದು ಅನುಭೋಗ ವೆಚ್ಚ; ಬಳಸದಿದ್ದದ್ದು ಉಳಿತಾಯ. ಆದ್ದರಿಂದ ಉಳಿತಾಯ ಪ್ರವೃತ್ತಿಯೂ ಅನುಭೋಗ ಪ್ರವೃತ್ತಿಯೂ ಅವಳಿ-ಜವಳಿಗಳು. ಒಂದರ ಬೆನ್ನಿಗೆ ಇನ್ನೊಂದು ಅಂಟಿಕೊಂಡೇ ಬಂದದ್ದು. ಅನುಭೋಗ ಪ್ರವೃತ್ತಿಯನ್ನರಿಯುವುದರಿಂದ ಉಳಿತಾಯ ಪ್ರವೃತ್ತಿಯನ್ನರಿಯುವುದು ಸಾಧ್ಯ.

ಒಬ್ಬನ ವರಮಾನ ಹೆಚ್ಚಿದಂತೆಲ್ಲ ಆತನ ಉಳಿತಾಯ ಹೆಚ್ಚುವುದೆಂಬುದನ್ನೂ ಉಳಿತಾಯ ಹೆಚ್ಚಿದಾಗ ವರಮಾನವೂ ಅಧಿಕವಾಗುವುದೆಂಬುದನ್ನೂ ಉಳಿತಾಯ ಪ್ರವೃತ್ತಿಯ ವಿವೇಚನೆಯಿಂದ ತಿಳಿದುಕೊಳ್ಳಬಹುದು. ಈ ಸಂದರ್ಭದಲ್ಲಿ ಗಮನಿಸಬೇಕಾದ ಒಂದು ಸ್ವಾರಸ್ಯದ ಸಂಗತಿಯೆಂದರೆ, ವರಮಾನ ಹೆಚ್ಚಿದಾಗ ಅನುಭೋಗ ಉಳಿತಾಯಗಳೆರಡೂ ಹೆಚ್ಚುವುವಾದರೂ ಉಳಿತಾಯ ಹೆಚ್ಚುವ ವೇಗದಲ್ಲಿ ಅನುಭೋಗ ಏರುವುದಿಲ್ಲ. ಪ್ರತಿಯೊಂದು ವರಮಾನ ಘಟಕ ಹೆಚ್ಚಿದಾಗಲೂ ಅದರ ಹಿಂದೆಯೇ ಅಧಿಕವಾಗುವ ಅಂಚಿನ ಅನುಭೋಗ ಪ್ರವೃತ್ತಿಗಿಂತಲೂ ಹೆಚ್ಚಿನ ವೇಗದಲ್ಲಿ ಉಳಿತಾಯ ಪ್ರವೃತ್ತಿ ಏರುತ್ತದೆ. ಇದನ್ನು ಪು.813ರಲ್ಲಿರುವ ಕೋಷ್ಟಕದ ಸಹಾಯದಿಂದ ಸ್ಪಷ್ಟಪಡಿಸಬಹುದು.

ಅದೇ ಕೋಷ್ಟಕದಲ್ಲಿ ಒಬ್ಬ ವ್ಯಕ್ತಿಯ ವರಮಾನ 3,000 ರೂ. ಗಳಿಂದ 10,000 ರೂ.ಗಳವರೆಗೆ ಒಂದೊಂದು ಸಾರಿಗೆ 1,000 ರೂ.ಗಳಂತೆ ಅಧಿಕವಾಗುತ್ತದೆಯೆಂದು ಊಹಿಸಿಕೊಂಡು, ಇಂಥ ಪ್ರತಿಯೊಂದು ವೃದ್ಧ್ಯಂಶದಲ್ಲೂ ಆ ವ್ಯಕ್ತಿ ಎಷ್ಟು ಅನುಭೋಗ ವೆಚ್ಚ ಮಾಡುತ್ತಾನೆ (ಅಂಚಿನ ಅನುಭೋಗ ಪ್ರವೃತ್ತಿ), ಎಷ್ಟು ಉಳಿತಾಯ ಮಾಡುತ್ತಾನೆ (ಅಂಚಿನ ಉಳಿತಾಯ ಪ್ರವೃತ್ತಿ) ಎಂಬುದನ್ನು ತೋರಿಸಿದೆ. ಆ ವ್ಯಕ್ತಿಯ ವರಮಾನ 3,000 ರೂ. ಇದ್ದಾಗ ಆತನ ಅನುಭೋಗ ವೆಚ್ಚ 3,110 ರೂ. ಆಗಿದೆ. ಪ್ರತಿಯೊಬ್ಬನೂ ಆತನ ವರಮಾನವೆಷ್ಟೇ ಇರಲಿ, ಅನುಭೋಗಕ್ಕಾಗಿ ಒಂದು ಕನಿಷ್ಠ ವೆಚ್ಚ ಮಾಡಲೇಬೇಕಾದ್ದು ಅನಿವಾರ್ಯ. ಇಲ್ಲಿ ಆತ ವರಮಾನಕ್ಕಿಂತ 110 ರೂ. ಹೆಚ್ಚಾಗಿ ವೆಚ್ಚ ಮಾಡಿದ್ದಾನೆ. ಸಾಲ ಮಾಡಿಯೋ ಹಿಂದಿನ ಉಳಿತಾಯವನ್ನು ಕರಗಿಸಿಯೋ ಆತ ಈ ವೆಚ್ಚ ತೂಗಿಸಬೇಕಾದೀತು. ಈ ಘಟ್ಟದಲ್ಲಿ ಆತನ ಉಳಿತಾಯ ಧನಾತ್ಮಕವಾದದ್ದು (–110 ರೂ.)

ಆ ವ್ಯಕ್ತಿಯ ವರಮಾನ 3,000 ರೂ.ಗಳಿಂದ 4,000 ರೂ.ಗಳಿಗೆ ಏರಿದಾಗ (ವೃದ್ಧ್ಯಂಶ 1,000 ರೂ.) ಆತನ ಅನುಭೋಗ ವೆಚ್ಚವೂ 4,000 ರೂ. ಆಗಿರುತ್ತದೆ. ಆತನ ವರಮಾನ 1,000 ರೂ. ಗಳಷ್ಟು ಹೆಚ್ಚಾದಾಗ ಅವನ ವೆಚ್ಚ 890 ರೂ.ಗಳಷ್ಟು ಏರುತ್ತದೆ. ಆತನ ಅಂಚಿನ ಅನುಭೋಗ ಪ್ರವೃತ್ತಿ $\frac{890}{1000}$ ಅಥವಾ 0.89. ಆತನಿಗೆ 3,000 ರೂ. ವರಮಾನವಿದ್ದಾಗ –110 ರೂ. ಆತನ ನಿವ್ವಳ ಉಳಿತಾಯವಾಗಿತ್ತು. ಈಗ ಆತನ ಉಳಿತಾಯ 0. ಎಂದರೆ ಈಗ ಅವನ ಉಳಿತಾಯ ಪ್ರವೃತ್ತಿ $\frac{110}{1000}$ ಅಥವಾ 0.11.

ಆತನ ವರಮಾನ 5,000 ರೂ. ಗಳಿಗೆ ಏರಿದಾಗ (ವೃದ್ಧ್ಯಂಶ 1,000 ರೂ.) ಅನುಭೋಗ ವೆಚ್ಚ 4,850 ರೂ.; ಅಂಚಿನ ಅನುಭೋಗ ಪ್ರವೃತ್ತಿ $\frac{850}{1000}$ ಅಥವಾ 0.85. ಹಿಂದಿನ ಘಟ್ಟದಿಂದ ಈ ಘಟ್ಟಕ್ಕೆ ಅವನ ನಿವ್ವಳ ಉಳಿತಾಯ 150 ರೂ.; ಅಂಚಿನ ಉಳಿತಾಯ ಪ್ರವೃತ್ತಿ $\frac{150}{1000}$ ಅಥವಾ 0.15.

ವರಮಾನ 5,000 ರೂ. ಗಳಿಂದ 6,000 ರೂ.ಗಳಿಗೆ ಏರಿದಾಗ ವೆಚ್ಚ 5,600 ರೂ.: ಹಿಂದೆ ಮಾಡುತ್ತಿದ್ದ ವೆಚ್ಚವಾದ 4,850 ರೂ. ಗಳಿಗಿಂತ ಈಗ ಅದು 750ರೂ. ಅಧಿಕ, ಆದ್ದರಿಂದ ಅವನ ಅಂಚಿನ ಅನುಭೋಗ ಪ್ರವೃತ್ತಿ $\frac{750}{1000}$ ಅಥವಾ 0.75.

ಈ ಘಟ್ಟದಲ್ಲಿ ಆತನ ಉಳಿತಾಯ 400 ರೂ. ಇದು ಹಿಂದಿನ ಘಟ್ಟದ ಉಳಿತಾಯವಾದ 150 ರೂ. ಗಳಿಗಿಂತ 250 ರೂ. ಅಧಿಕ. ಆತನ ಅಂಚಿಯ ಉಳಿತಾಯ ಪ್ರವೃತ್ತಿ 250/1000 ಅಥವಾ 0.25.

ಇದೇ ರೀತಿ ಮುಂದಿನ ವರಮಾನದ ಹೆಚ್ಚಳಗಳಿಗೂ ಆತನ ಅನುಭೋಗ ಪ್ರವೃತ್ತಿ ಮತ್ತು ಉಳಿತಾಯ ಪ್ರವೃತ್ತಿಗಳ ಅಂಕಗಳನ್ನು ಕೊಟ್ಟಿದೆ.

1. ಒಬ್ಬ ವ್ಯಕ್ತಿಯ ಒಟ್ಟು ವರಮಾನದ (Y) ಒಂದು ಭಾಗ ಅನುಭೋಗ ವೆಚ್ಚ (C); ಉಳಿದ ಭಾಗವೇ ಉಳಿತಾಯ (S) :

ಒಟ್ಟು ಉಳಿತಾಯ

ಸರಾಸರಿ ಉಳಿತಾಯ ಪ್ರವೃತ್ತಿ $= \frac{S}{Y}$

ಒಟ್ಟು ವರಮಾನ

2. ವರಮಾನದ ಪ್ರತಿಯೊಂದು ಮಧ್ಯಂಶವನ್ನೂ 1 ಎಂದು ಇಟ್ಟುಕೊಂಡರೆ ಅದರ ಒಂದು ಭಿನ್ನಾಂಶವೇ ಅಂಚಿನ ಅನುಭೋಗ ವೆಚ್ಚ ($\Delta c$): ಇನ್ನೊಂದು ಭಿನ್ನಾಂಶವೇ ಅಂಚಿನ ಉಳಿತಾಯ ($\Delta s$) :

$\Delta y - \Delta c = \Delta s$ ಆದ್ದರಿಂದ

ಅಂಚಿನ ಉಳಿತಾಯ ಪ್ರವೃತ್ತಿ $= \frac{\Delta s}{\Delta y}$

$$= 1 - \frac{\Delta c}{\Delta y}$$

3. ವರಮಾನ ಹೆಚ್ಚಿದಂತೆ ಅಂಚಿನ ಅನುಭೋಗ ಪ್ರವೃತ್ತಿ ಇಳಿಯುತ್ತ ಸಾಗುತ್ತದೆ: ಅಂಚಿನ ಉಳಿತಾಯ ಪ್ರವೃತ್ತಿ ಏರುತ್ತ ನಡೆಯುತ್ತದೆ.

ಹಿಂದಿನ ಕೋಷ್ಟಕದಲ್ಲಿ ಕೊಟ್ಟಿರುವ ಅಂಕಿಗಳ ಆಧಾರದ ಮೇಲೆ ಅನುಭೋಗ ಹಾಗೂ ಉಳಿತಾಯ ಪ್ರವೃತ್ತಿಗಳನ್ನು ತೋರಿಸುವ ನಕ್ಷೆ ರಚಿಸುವುದು ಸಾಧ್ಯ.

ನಕ್ಷೆ 1ರಲ್ಲಿ ವಿವಿಧ ವರಮಾನಗಳ ಘಟ್ಟಗಳಲ್ಲಿನ ಅನುಭೋಗ ಉಳಿತಾಯಗಳನ್ನು ತೋರಿಸಲಾಗಿದೆ. ವರಮಾನ ಗಳಿಸುತ್ತಿರುವ ವ್ಯಕ್ತಿ ಒಂದು ಪಕ್ಷ ತನಗೆ ಬಂದ ವರಮಾನವನ್ನೆಲ್ಲ ಅನುಭೋಗಕ್ಕಾಗಿ ವೆಚ್ಚ ಮಾಡುವುದಾದರೆ ಆಗ ವರಮಾನದ ಎಲ್ಲ ಘಟ್ಟಗಳಲ್ಲೂ ಅವನ ವರಮಾನ ಹಾಗೂ ಅನುಭೋಗ ವೆಚ್ಚಗಳು ಸಮ ಸಮನಾಗಿರುತ್ತವೆ. ಆಗ ಆತನ ಅನುಭೋಗ ರೇಖೆ OX ಮತ್ತು OY ಗಳ ನಡುವೆ $45^0$ ಕೋನ ಸೃಷ್ಟಿಸಿ ನೇರವಾಗಿ ಸಾಗುತ್ತದೆ (OM). ಆದರೆ ವಾಸ್ತವವಾಗಿ ಅವನ ವರಮಾನಕ್ಕೂ ಅನುಭೋಗಕ್ಕೂ ಅಂತರವುಂಟು. ಹಿಂದಿನ ಕೋಷ್ಟಕದಲ್ಲಿ ಕೊಟ್ಟಿರುವಂತೆ 3,000 ರೂ. ವರಮಾನದ ಘಟ್ಟದಲ್ಲಿ (A) ಆತನ ವರಮಾನಕ್ಕಿಂತ ಅನುಭೋಗವೆಚ್ಚ ಹೆಚ್ಚು. ಆಗ ಸಂಭವಿಸುವುದು ಪ್ರತ್ಯುಳಿತಾಯ (ಡಿಸ್-ಸೇವಿಂಗ್). ಮುಂದಣ ವರಮಾನ ಘಟ್ಟದಲ್ಲಿ (B) ವರಮಾನವೂ ಅನುಭೋಗವೂ ಸಮ. ಅಲ್ಲಿಂದಾಚೆಯ ಘಟ್ಟಗಳಲ್ಲಿ (C,D,E,F,G,H) ವರಮಾನಕ್ಕಿಂತ ಅನುಭೋಗವೆಚ್ಚ ಕಡಿಮೆ. ಇವನ್ನೆಲ್ಲ PN ರೇಖೆ ಪ್ರತಿನಿಧಿಸುತ್ತದೆ.

A ವರಮಾನ ಘಟ್ಟದಲ್ಲಿ ಅನುಭೋಗದ $45^0$ ಯ ರೇಖೆಯ ಮೇಲೆ, ಎಡಗಡೆಗೆ ಇದೆ (ಪ್ರತ್ಯುಳಿತಾಯ). ಘಟ್ಟದಲ್ಲಿ $45^0$ ಯ ರೇಖೆಯೂ ಅನುಭೋಗ ರೇಖೆಯೂ ಸಂಧಿಸುತ್ತವೆ. (ವರಮಾನ-ಅನುಭೋಗ ಸಮ). ಇದು ಮುಂದಿನ ಘಟ್ಟಗಳಲ್ಲಿ ವರಮಾನ ರೇಖೆಗೂ $45^0$ ರೇಖೆಗಿಂತ ಕೆಳಕ್ಕೆ ಬಲಗಡೆಗೆ ಸಾಗಿದೆ. (ಉಳಿತಾಯ-ಉದಾಹರಣೆ : 7,000 ಘಟ್ಟ). ಒಂದು ವರಮಾನ ಘಟ್ಟದಲ್ಲಿ $45^0$ ಯ ರೇಖೆಗೂ ಅನುಭೋಗ ರೇಖೆಗೂ ಇರುವ ದೂರದಿಂದ ಉಳಿತಾಯದ ಅಥವಾ ಪ್ರತ್ಯುಳಿತಾಯದ ಪರಿಮಾಣವನ್ನರಿಯಬಹುದು. (ಉದಾಹರಣೆ : 7,000 ರೂ. ವರಮಾನ ಹಂತದಲ್ಲಿ ತಳಕ್ಕೆ ಲಂಬವಾಗಿ ಎಳೆದ ರೇಖೆಯ ಮೇಲೆ E ಗೂ $45^0$ ಯ ರೇಖೆಗೂ ನಡುವಣ ದೂರ.)

# ಉಳಿತಾಯದ ಬಗೆಗಳು

ಉಳಿತಾಯ ಪ್ರವೃತ್ತಿ

| ತೆರಿಗೆ ಕೊಟ್ಟ ಮೇಲೆ ಉಳಿಯುವ ವರಮಾನ | ಅನುಭೋಗ ವೆಚ್ಚ | ಅಂಚಿನ ಅನುಭೋಗ ವೆಚ್ಚ | ನಿವ್ವಳ ಉಳಿತಾಯ (1) – (2) | ಅಂಚಿನ ಉಳಿತಾಯ ಪ್ರವೃತ್ತಿ |
|---|---|---|---|---|
| (1) | (2) | (3) | (4) | (5) |
| ರೂ | ರೂ | | ರೂ | |
| A 3000 | 3110 | – | –110 | – |
| B 4000 | 4000 | $\frac{890}{1000} = 0.89$ | 0 | $\frac{110}{1000} = 0.11$ |
| C 5000 | 4850 | $\frac{850}{1000} = 0.85$ | +150 | $\frac{150}{1000} = 0.15$ |
| D 6000 | 5600 | $\frac{759}{1000} = 0.79$ | +400 | $\frac{250}{1000} = 0.25$ |
| E 7000 | 6240 | $\frac{640}{1000} = 0.64$ | +760 | $\frac{360}{1000} = 0.36$ |
| F 8000 | 6830 | $\frac{590}{1000} = 0.59$ | +1170 | $\frac{410}{1000} = 0.41$ |
| G 9000 | 7360 | $\frac{530}{1000} = 0.53$ | +1640 | $\frac{470}{1000} = 0.47$ |
| H 10000 | 7850 | $\frac{490}{1000} = 0.49$ | +2150 | $\frac{510}{1000} = 0.51$ |

ನಕ್ಷೆ–1ರಲ್ಲಿ ಅನುಭೋಗ ಉಳಿತಾಯಗಳೆರಡೂ ವ್ಯಕ್ತವಾಗುತ್ತವೆ. ಉಳಿತಾಯವನ್ನೇ ಪ್ರತ್ಯಕ್ಷವಾಗಿ ನಕ್ಷೆ 2ರಲ್ಲಿ ತೋರಿಸಿದೆ :

ಪ್ರತ್ಯುಳಿತಾಯದ ಘಟ್ಟದಲ್ಲಿ ಉಳಿತಾಯ ರೇಖೆ X ಅಕ್ಷದ ಕೆಳಕ್ಕಿರುವುದನ್ನು ಗಮನಿಸಬೇಕು.



ನಕ್ಷೆ 1

**ಉಳಿತಾಯ ಪ್ರವೃತ್ತಿಯ ಪ್ರಾಮುಖ್ಯ:** ಕೇನ್ಸ್ ನೀಡಿರುವ ಸಮಗ್ರ ಆರ್ಥಿಕ ವಿಶ್ಲೇಷಣೆಯ ಮುಖ್ಯ ಸಾಧನಗಳಲ್ಲಿ ಉಳಿತಾಯ ಪ್ರವೃತಿಯನ್ನು ಕುರಿತಾದ ವಿವೇಚನೆಯೂ ಒಂದು. ಸದೃಢ ಆರ್ಥಿಕಾಭಿವೃದ್ಧಿ ಸಾಧಿಸಬೇಕೆಂಬ ಉದ್ದೇಶ ಹೊಂದಿರುವ ಭಾರತದಂಥ ಪ್ರಜಾಸತ್ತಾತ್ಮಕ ರಾಷ್ಟ್ರಗಳ ದೃಷ್ಟಿಯಲ್ಲಿ ಈ ಬಗೆಯ ವಿವೇಚನೆಯೂ ಅಧ್ಯಯನವೂ ಬಹಳ ಮುಖ್ಯ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅನುಭೋಗ ಪ್ರವೃತ್ತಿ ಹೆಚ್ಚಿನ ಮಟ್ಟದಲ್ಲಿದ್ದು ಉಳಿತಾಯ ಕಡಿಮೆಯಾಗಿರುವುದರಿಂದ ಬಂಡವಾಳ ನಿಯೋಜನೆ ಕುಂಠಿತವಾಗುತ್ತದೆ. ಆದ್ದರಿಂದ ಈ ರಾಷ್ಟ್ರಗಳಲ್ಲಿ ಉಳಿತಾಯ ಪ್ರವೃತ್ತಿ ಹೆಚ್ಚಿಸುವುದು ಸರ್ಕಾರದ ಅತ್ಯಂತ ಜರೂರಿನ



ನಕ್ಷೆ 2

ಕರ್ತವ್ಯ. ಆದರೆ ವರಮಾನದ ಮಟ್ಟವೇ ತುಂಬ ಕೆಳಗಿದ್ದು, ಪ್ರತ್ಯುಳಿತಾಯದ ಪರಿಸ್ಥಿತಿಯಿದ್ದರೆ ಆಗ ಒತ್ತಾಯ–ಪ್ರಚಾರಗಳೇ ಮುಂತಾದ ಮಾರ್ಗಗಳಿಂದ ಉಳಿತಾಯ ಪ್ರವೃತ್ತಿ ಬೆಳಸುವುದು ಸಾಧ್ಯವಾಗುವುದಿಲ್ಲ. ಉಳಿತಾಯ ಪ್ರವೃತ್ತಿ ಹೆಚ್ಚದೆ ಬಂಡವಾಳ ನಿಯೋಜನೆ, ಉತ್ಪಾದನೆ, ಉದ್ಯೋಗ, ವರಮಾನಗಳು ಹೆಚ್ಚುವುದಿಲ್ಲ. ವರಮಾನ ಹೆಚ್ಚದೆ ಉಳಿತಾಯ ಪ್ರವೃತ್ತಿ ಹೆಚ್ಚುವುದಿಲ್ಲ. ಉಳಿತಾಯ ವರಮಾನಗಳು ಪರಸ್ಪರ ಅನುಚರಿಗಳು. ಇದು ಸಮಸ್ಯೆ. (ಎಸ್.ಎನ್.ಎ.)

**ಉಳಿತಾಯದ ಬಗೆಗಳು:** ಉಳಿತಾಯದಿಂದ (**ನೋಡಿ–ಉಳಿತಾಯ**) ಅನುಭೋಗ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗುವುದರಿಂದ, ಅನುಭೋಗವನ್ನು ಕಡಿಮೆ ಮಾಡಿ ನಿಜ ಬಂಡವಾಳವನ್ನು ಹೆಚ್ಚಿಸುವ ಎಲ್ಲ ಕ್ರಮಗಳೂ ಉಳಿತಾಯವೇ. ಒಂದು ಉತ್ಪಾದನ ಸಂಸ್ಥೆಯಲ್ಲಿ ಕೈಕೊಳ್ಳುವ ಮಿತವ್ಯಯದ ಕ್ರಮಗಳಿಂದ ಉತ್ಪಾದನೆಯ ಖರ್ಚಿನಲ್ಲಿ ಸಂಭವಿಸುವ ಇಳಿತಾಯವೂ ಅಂತಿಮವಾಗಿ ಉಳಿತಾಯವೇ ಆಗುತ್ತದೆ. ಸುಲಭವಾಗಿ ಗುರುತಿಸಬಹುದಾದ ಉಳಿತಾಯದ ಬಗೆಗಳು ಇವು: 1. ವೈಯಕ್ತಿಕ ಉದ್ದೇಶಗಳಿಗಾಗಿ ವ್ಯಕ್ತಿಗಳು ಸ್ವಂತ ಇಚ್ಛೆಯಿಂದ ಮಾಡುವ ಉಳಿತಾಯ, 2. ಕಂಪನಿಗಳ ಉಳಿತಾಯ: ಗಳಿಸಿದ ಲಾಭವನ್ನೆಲ್ಲ ಷೇರುದಾರರಿಗೆ ಹಂಚದೆ ತಡೆದಿಟ್ಟು ಅದನ್ನು ಉದ್ಯಮಕ್ಕೆ ಮತ್ತೆ ಹರಿಯಿಸುವಂತೆ ಮಾಡುವುದು. ಈ ಬಗೆಯ ಉಳಿತಾಯವೂ ಆಯಾ ಕಂಪನಿಗಳ ಸ್ವಂತ ಇಚ್ಛೆಗೇ ಬಿಟ್ಟದ್ದು. 3 ಕಡ್ಡಾಯದ ಉಳಿತಾಯ: ಸರ್ಕಾರ ಉದ್ದೇಶಪೂರ್ವಕವಾಗಿ ತೆರಿಗೆಗಳನ್ನೇರಿಸಿ ಜನರ ಅನುಭೋಗವನ್ನು ಮೊಟಕು ಮಾಡಿದಾಗ ಸಂಭವಿಸುವ ಉಳಿತಾಯ (ಕಂಪಲ್ಸರಿ ಸೇವಿಂಗ್). 4. ಹಿತಮಿತವಾದ

ಹಣದುಬ್ಬರ ಪರಿಸ್ಥಿತಿಯಿದ್ದು, ಬೆಲೆಗಳ ಏರಿಕೆಗೆ ಅನುಗುಣವಾಗಿ ವ್ಯಕ್ತಿಗಳ ವರಮಾನಗಳೂ ಹೆಚ್ಚದಿದ್ದ ಸಂದರ್ಭದಲ್ಲಿ ಅನುಭೋಗ ವಸ್ತುಗಳಿಗೆ ಬೇಡಿಕೆ ತಗ್ಗುವುದರಿಂದ ಸಂಭವಿಸುವ ಉಳಿತಾಯ : ಇದು ಬಲವಂತ ಉಳಿತಾಯ (ಫೋರ್ಸ್ಡ್ ಸೇವಿಂಗ್).

ಭಾರತದಲ್ಲಿ ಸಂಸ್ಥೆಗಳ ಉಳಿತಾಯ ವ್ಯಕ್ತಿಗಳ ಉಳಿತಾಯಕ್ಕಿಂತ ಅಧಿಕವಾಗಿದೆ. ವ್ಯಕ್ತಿಗಳ ಉಳಿತಾಯವನ್ನು ಪ್ರೋತ್ಸಾಹಿಸಲು ಭಾರತ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ. 1950–51ರಲ್ಲಿ ರಾಷ್ಟ್ರೀಯ ಉಳಿತಾಯ ರಾಷ್ಟ್ರೀಯ ವರಮಾನದ 51/2%ಯಷ್ಟಿದ್ದದ್ದು 1965–66ರಲ್ಲಿ 101/2%ಗೆ ಏರಿತ್ತು. ಆದರೆ 1967–68ರಲ್ಲಿ 8%ಕ್ಕೆ ಇಳಿದು 1968–69ರ ವೇಳೆಗೆ 9%ಕ್ಕೆ ಏರಿತು. ಮುಂದಿನ ಐದು ವರ್ಷಗಳ ಅವಧಿಯಲ್ಲಿ ಇದನ್ನು 12.6%ಕ್ಕೆ ಏರಿಸಬೇಕೆಂಬುದು ಭಾರತದ ನಾಲ್ಕನೆಯ ಯೋಜನೆಯ ಗುರಿ. ಆದಾಗ್ಯೂ ಆರ್ಥಿಕ ಅಭಿವೃದ್ಧಿಯ ಯೋಜಿತ ಪ್ರಮಾಣವನ್ನು ಗಮನಿಸಿದರೆ ಇದು ಸಾಲದೆನ್ನಬಹುದು. ಉಳಿತಾಯದ ಕೊರತೆ ತುಂಬಲು ವಿದೇಶೀ ಬಂಡವಾಳ ಅಗತ್ಯವಾಗಿದೆ. (ಸಿ.ಸಿ.ಪಿ.)

**ಉಳಿತಾಯ ಬಾಂಡುಗಳು:** ಸರ್ಕಾರ ನೀಡುವ ಸಾಲಪತ್ರಗಳಲ್ಲಿ ಒಂದು ಬಗೆ (ಸೇವಿಂಗ್ಸ್ ಬಾಂಡ್ಸ್). ಉಳಿತಾಯವನ್ನು ಪ್ರೇರೇಪಿಸುವುದು ಈ ನೀಡಿಕೆಗಳ ಮುಖ್ಯೋದ್ದೇಶ. ಭಾರತದಲ್ಲಿ ಎರಡನೆಯ ಮಹಾಯುದ್ಧ ಕಾಲದಲ್ಲಿ ರಕ್ಷಣಾ ಉಳಿತಾಯ ಬ್ಯಾಂಕುಗಳನ್ನು ಸ್ಥಾಪಿಸಿ ರಕ್ಷಣಾ ಬಾಂಡುಗಳನ್ನು ಮಾರಾಟ ಮಾಡಲಾಗುತ್ತಿತ್ತು. ಯುದ್ಧ ಮುಗಿದ ಒಂದು ವರ್ಷದ ಅನಂತರ ಇವುಗಳ ಹಣ ಹಿಂತಿರುಗಿಸಬೇಕೆಂದು ಆಗಿನ ಯೋಜನೆ. ಯುದ್ಧಾನಂತರ ದಲ್ಲಿ ಇವುಗಳ ಮಾರಾಟವನ್ನು ರದ್ದು ಮಾಡಲಾಯಿತು.

1963ರಲ್ಲಿ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ಮಾರಾಟ ಮಾಡುತ್ತಿದ್ದ ಬಹುಮಾನ ಬಾಂಡುಗಳು ಇನ್ನೊಂದು ಉದಾಹರಣೆ. ಈ ವ್ಯವಸ್ಥೆಯನ್ನು ಅದೇ ವರ್ಷದ ಕೊನೆಯಲ್ಲಿ ರದ್ದುಗೊಳಿಸಲಾಯಿತು. (ಎ.ಸಿ.ಆರ್.)

**ಉಳಿತಾಯ ಬ್ಯಾಂಕು:** ಸೂಕ್ತ ಬಡ್ಡಿದರಗಳ ಮೇಲೆ ಸಣ್ಣ ಠೇವಣಿಗಳನ್ನು ಸ್ವೀಕರಿಸುವ ಸಂಸ್ಥೆ (ಸೇವಿಂಗ್ಸ್ ಬ್ಯಾಂಕ್). ಹೀಗೆ ಮಾಡಿದ ಠೇವಣಿಯ ಹಣವನ್ನು ಕೆಲವು ನಿಬಂಧನೆಗಳಿಗೆ ಅನುಗುಣವಾಗಿ ಹಿಂದಕ್ಕೆ ತೆಗೆದುಕೊಳ್ಳುವ ಅವಕಾಶವಿರುತ್ತದೆ. ಭವಿಷ್ಯದಲ್ಲಿ ವೆಚ್ಚಮಾಡುವ ಉದ್ದೇಶದಿಂದ ಹಣ ಕೂಡಿಡುವವರಿಗೆ ಇದೊಂದು ಸಾಧನವಾಗಿ ಪರಿಗಣಿತವಾಗಿದೆಯಾದರೂ ಉಳಿತಾಯ ಸಂಗ್ರಹವೊಂದೇ ಇದರ ಕಾರ್ಯಭಾರವಲ್ಲ. ಇದು ಈ ಹಣವನ್ನು ಇತರರಿಗೆ ಸಾಲವಾಗಿ ಕೊಡುವ ಕೆಲಸವನ್ನೂ ನಿರ್ವಹಿಸುತ್ತದೆ. ಆದ್ದರಿಂದ ಇದು ಅರ್ಥವ್ಯವಸ್ಥೆಯಲ್ಲಿನ ಒಂದು ಮುಖ್ಯ ಕೊಂಡಿ. ಇದು ಸಾಲ ಕೊಡುವವರಿಗೂ ಸಾಲ ಪಡೆಯುವವರಿಗೂ ಸಂಬಂಧ ಕಲ್ಪಿಸುತ್ತದೆ. ಸಾಲ ನೀಡುವ ಕೆಲಸವನ್ನೂ ಇದು ಮಾಡದಿದ್ದರೆ ಈ ರೂಪದಲ್ಲಿ ಉಳಿಯುವುದೇ ಸಾಧ್ಯವಿರುತ್ತಿರಲಿಲ್ಲ. ಅನುಭೋಗವನ್ನು ಮೊಟಕುಮಾಡಿ ಉಳಿತಾಯ ಮಾಡಬಯಸುವವರಿಂದ ಹಣ ಪಡೆದು, ಹೆಚ್ಚು ವೆಚ್ಚ ಮಾಡಬಯಸುವವರಿಗೆ ಹಣ ನೀಡುವ ಈ ಸಂಸ್ಥೆಯ ಪಾತ್ರ ಇಂದಿನ ವ್ಯವಸ್ಥೆಯಲ್ಲಿ ಬಲು ಉಪಯುಕ್ತವಾದದ್ದು. ಅನುಭೋಗಕ್ಕಾಗಿ ವಿನಿಯೋಗವಾಗಬಹುದಾಗಿದ್ದ ಆರ್ಥಿಕ ಸಾಧನಗಳಲ್ಲಿ ಒಂದು ಭಾಗವನ್ನು ಬಂಡವಾಳ ಶೇಖರಣೆಯತ್ತ ತಿರುಗಿಸುವ ಹೊಣೆ ಈ ಸಂಸ್ಥೆಯದು.

ಉಳಿತಾಯ ಬ್ಯಾಂಕಿನಂತೆ ಇನ್ನೂ ಅನೇಕ ಸಂಸ್ಥೆಗಳು ಇಂಥದೇ ಕಾರ್ಯ ನಿರ್ವಹಿಸು ತ್ತವೆ. ವಾಣಿಜ್ಯ ಬ್ಯಾಂಕುಗಳ ಉಳಿತಾಯ ವಿಭಾಗಗಳೂ ಗೃಹನಿರ್ಮಾಣ ಸಾಲಸಂಘಗಳು, ಉಳಿತಾಯ ಸಾಲ ಸಂಘಗಳು, ನಿಯೋಜನ ಸಂಸ್ಥೆಗಳೇ ಮುಂತಾದವೂ ಸಹಕಾರ ಸಂಘಗಳೂ ನಾನಾ ಸಂಸ್ಥೆಗಳು ನಿರ್ವಹಿಸುತ್ತಿರುವ ಉಳಿತಾಯ ಯೋಜನೆಗಳೂ ಕೆಲವು ಉದಾಹರಣೆಗಳು.

ಉಳಿತಾಯ ಬ್ಯಾಂಕುಗಳ ಸ್ಥಾಪನೆಗೆ ಇತಿಹಾಸದ ಕೆಲವು ಶಕ್ತಿ–ಪ್ರವೃತ್ತಿಗಳು ಕಾರಣ. ಅರ್ಥವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ತಮಗೆ ಅಗತ್ಯವಾದ ಎಲ್ಲವನ್ನೂ ತಾವೇ ಉತ್ಪಾದಿಸುವುದರ ಬದಲು ತಮಗೆ ಯಾವುದರಲ್ಲಿ ಹೆಚ್ಚು ನೈಪುಣ್ಯವಿದೆಯೋ ಅಂಥ ಕಾರ್ಯದಲ್ಲಿ ಮಾತ್ರ ನಿರತರಾಗುವುದು ಸಾಧ್ಯವಾದದ್ದು ಪದಾರ್ಥ ವಿನಿಮಯ ವ್ಯವಸ್ಥೆಯಿಂದ. ಇದಕ್ಕೆ ಅನುವಾಗಿ ಒದಗಿದ್ದೇ ಹಣದ ವ್ಯವಸ್ಥೆ. ಹಣದ ಸರಬರಾಯಿ ಸುಸೂತ್ರವಾಗಿ ನಡೆಯುವ ಹಾಗೆ ನೋಡಿಕೊಳ್ಳುವ ನಾನಾ ಉದ್ದರಿ ಸಂಸ್ಥೆಗಳು ಹುಟ್ಟಿಕೊಂಡವು. ಇವುಗಳಲ್ಲಿ ಉಳಿತಾಯ ಬ್ಯಾಂಕೂ ಒಂದು.

ಬಂಡವಾಳ ವ್ಯವಸ್ಥೆಯಲ್ಲಿ ಪ್ರತಿಯೊಬ್ಬನಿಗೂ ತನಗೆ ತಾನೇ ಹೊಣೆಗಾರನಾಗುವುದು ಅನಿವಾರ್ಯ. ಅನಿಶ್ಚಿತ ಪರಿಸ್ಥಿತಿಗಳಿಗಾಗಿ ಭವಿಷ್ಯದಲ್ಲಿ ಆಗಿಂದಾಗ್ಗೆ ಸಂಭವಿಸುವ ಕಷ್ಟನಷ್ಟಗಳಲ್ಲಿ ಕೈಗಾವಲಾಗಿರಲು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ದುಡಿಮೆಯಿಂದ ಗಳಿಸಿದ ವರಮಾನದಲ್ಲಿ ಸ್ವಲ್ಪ ಭಾಗವನ್ನು ಕ್ರಮವಾಗಿ ಉಳಿಸಿ ಕೂಡಿಡುವ ಅಗತ್ಯ ವ್ಯಕ್ತವಾಯಿತು. ಇಂಥ ಸ್ವಾವಲಂಬಿ ವ್ಯಕ್ತಿಗೆ ಉಳಿತಾಯ ಬ್ಯಾಂಕು ನೆರವಾಗುತ್ತದೆ.

ಉಳಿತಾಯ ಸಂಸ್ಥೆಗಳ ಸ್ಥಾಪನೆಯ ಆವಶ್ಯಕತೆಯನ್ನು ಕುರಿತು ಮೊಟ್ಟಮೊದಲಿಗೆ ತರ್ಕಬದ್ಧವಾಗಿ ವಾದಿಸಿದ ಕೀರ್ತಿ ಹ್ಯೂಗ್ಸ್ ದ ಲೆಸ್ತರ್ ಎಂಬ ಫ್ರೆಂಚ್ ಪ್ರಜೆಗೆ ಸಲ್ಲುತ್ತದೆ. ಬಡವರ ಸ್ಥಿತಿ ಸುಧಾರಿಸುವಂತೆಯೂ ಶ್ರೀಮಂತರು ಭಿಕ್ಷೆ ನೀಡುವಂಥ ಪ್ರಸಂಗ ಬಾರದಂತೆಯೂ ಮಾಡಲು ಇವು ಅಗತ್ಯವೆಂದು ಆತ ವಾದಿಸಿದ. 17ನೆಯ ಶತಮಾನದ ಇಂಗ್ಲಿಷ್ ಬರೆಹಗಾರ ಡೇನಿಯಲ್ ಡೆಫೋ ಕೂಡ ಮಿತವ್ಯಯದ ಅನುಕೂಲಗಳ ಬಗ್ಗೆ ಒಂದು ದೊಡ್ಡ ಲೇಖನವನ್ನೇ ಬರೆದ. ಫ್ರೆಂಚರೂ ಇಂಗ್ಲಿಷರೂ ಉಳಿತಾಯದ ಬಗ್ಗೆ ಬರೆವಣಿಗೆಯ ಕಾರ್ಯದಲ್ಲಿ ನಿರತರಾಗಿದ್ದಾಗ ಯುರೋಪಿನ ಇತರ ದೇಶಗಳಲ್ಲಿ ಪೌರಸಭಾ ಗಿರವಿಯಂಗಡಿಗಳಲ್ಲಿ ಉಳಿತಾಯ ಬ್ಯಾಂಕುಗಳ ಉದ್ಭವವಾಗುತ್ತಿತ್ತು. ಪೌರಸಭಾ ಉಳಿತಾಯ ಬ್ಯಾಂಕುಗಳು ಹುಟ್ಟಿದ್ದು ಹೀಗೆಯೇ. ಬಹುಶಃ ಇದೇ ಕಾಲಕ್ಕೆ ಜರ್ಮನಿಯಲ್ಲಿ ಖಾಸಗಿ ಉಳಿತಾಯ ಬ್ಯಾಂಕುಗಳು ಜನಿಸಿದವು. ಇವುಗಳಲ್ಲಿ ಮೊದಲನೆಯದರ ಜನ್ಮವಾದದ್ದು ಹ್ಯಾಂಬರ್ಗಿನಲ್ಲಿ (1778).

**ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ:** ವಲಸೆಗಾರರಲ್ಲಿ ಮಿತವ್ಯಯ ಮತ್ತು ಸ್ವಾವಲಂಬನೆ ಪ್ರವೃತ್ತಿಗೆ ಉತ್ತೇಜನ ಕೊಡಲು ಕೆಲವು ಉಪಕಾರ ಮನೋಭಾವದ ವ್ಯಕ್ತಿಗಳು 19ನೆಯ ಶತಮಾನದ ಪ್ರಾರಂಭದಲ್ಲಿ ಉಳಿತಾಯ ಬ್ಯಾಂಕುಗಳನ್ನು ಸ್ಥಾಪಿಸಿದರು. ಇಂದು ಅಲ್ಲಿ ಪರಸ್ಪರ (ಮ್ಯೂಚುಯಲ್) ಉಳಿತಾಯ ಬ್ಯಾಂಕುಗಳೂ ಅಂಚೆ ಉಳಿತಾಯ ವ್ಯವಸ್ಥೆಯೂ ವಾಣಿಜ್ಯ ಬ್ಯಾಂಕುಗಳ ಉಳಿತಾಯ ಠೇವಣಿ ಇಲಾಖೆಗಳೂ ಈ ಕೆಲಸ ನಿರ್ವಹಿಸುತ್ತಿವೆ. ಪರಸ್ಪರ ಉಳಿತಾಯ ಬ್ಯಾಂಕುಗಳು ಸಾರ್ವಜನಿಕರಿಂದ ಉಳಿತಾಯ ಠೇವಣಿ ಸ್ವೀಕರಿಸಿ ನಿರ್ದಿಷ್ಟವಾದ ಮತ್ತು ಸುರಕ್ಷಿತವಾದ ಕ್ಷೇತ್ರಗಳಲ್ಲಿ ಬಂಡವಾಳ ಹೂಡುತ್ತವೆ. ಬಂದ ಲಾಭವನ್ನು ಠೇವಣಿದಾರರಿಗೆ ಹಂಚಲಾಗುತ್ತದೆ. ಇಲ್ಲಿ ಷೇರುದಾರರು ಇಲ್ಲವಾದ್ದರಿಂದ, ಖರ್ಚು ಕಳೆದು ಉಳಿದ ಆದಾಯವನ್ನು ಠೇವಣಿದಾರರಿಗೆ ಬಡ್ಡಿಯ ರೂಪದಲ್ಲಿ ಹಂಚಲಾಗುತ್ತದೆ. ಉಳಿತಾಯಕ್ಕೆ ಪ್ರೋತ್ಸಾಹ ನೀಡಿ, ಇದನ್ನು ಉಪಯುಕ್ತವೂ ಲಾಭದಾಯಕವೂ ಸುರಕ್ಷಿತವೂ ಆದ ರೀತಿಯಲ್ಲಿ ಬಂಡವಾಳವಾಗಿ ನಿಯೋಜಿಸುವುದರಲ್ಲಿ ಇವುಗಳು ವಹಿಸಿರುವ ಪಾತ್ರ ಪ್ರಮುಖವಾದದ್ದು. ಆ ದೇಶದಲ್ಲಿ ಅಂಚೆಯ ಉಳಿತಾಯ ವ್ಯವಸ್ಥೆ ಪ್ರಾರಂಭವಾದದ್ದು 1910ರಲ್ಲಿ. ವಾಣಿಜ್ಯ ಬ್ಯಾಂಕುಗಳೂ ಉಳಿತಾಯ ಠೇವಣಿ ಸ್ವೀಕರಿಸುತ್ತವೆ.

**ಇಂಗ್ಲೆಂಡಿನಲ್ಲಿ:** ಪ್ರಥಮ ಉಳಿತಾಯ ಬ್ಯಾಂಕು ಪ್ರಾರಂಭವಾದದ್ದು ರೂತ್‌ವೆಲ್ಲಿಯಲ್ಲಿ (1810). ಈ ಬ್ಯಾಂಕುಗಳು ಸ್ವೀಕರಿಸಿದ ಠೇವಣಿಯನ್ನು ಸರ್ಕಾರಿ ಸಾಲ ಪತ್ರಗಳಲ್ಲಿ ನಿಯೋಜಿಸು ತ್ತವೆ. ಈ ಬ್ಯಾಂಕುಗಳ ಆಡಳಿತವನ್ನು ನ್ಯಾಸಧಾರಿಗಳು (ಟ್ರಸ್ಟೀಸ್) ನೋಡಿಕೊಳ್ಳುತ್ತಾರೆ. ಇವರು ಯಾವ ಸಂಭಾವನೆಯನ್ನೂ ಸ್ವೀಕರಿಸುವುದಿಲ್ಲ. ಠೇವಣಿ ಹಣಕ್ಕೆ ಬಡ್ಡಿ ದೊರೆಯುತ್ತದೆ.

ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳ ಬೆಳೆವಣಿಗೆಯಾದದ್ದು 1861 ರಿಂದ ಈಚೆಗೆ. ಇವು ಉಳಿತಾಯಗಾರರಿಂದ ಠೇವಣಿ ಸ್ವೀಕರಿಸುವುದಲ್ಲದೆ ರಾಷ್ಟ್ರೀಯ ಉಳಿತಾಯ ಪತ್ರಗಳನ್ನೂ ರಾಷ್ಟ್ರೀಯ ಅಭಿವೃದ್ಧಿ ಬಾಂಡುಗಳನ್ನೂ ಮಾರಾಟ ಮಾಡುತ್ತವೆ.

**ಭಾರತದಲ್ಲಿ:** ಬ್ಯಾಂಕುಗಳ ಬೆಳೆವಣಿಗೆಯಾದದ್ದು ಇತ್ತೀಚೆಗೆ. 19ನೆಯ ಶತಮಾನದಲ್ಲಿ ಭಾರತದ ಕೆಲವು ನಗರಗಳಲ್ಲಿ ಮಾತ್ರವೇ ಬ್ಯಾಂಕುಗಳಿದ್ದುದರಿಂದ ಇವುಗಳ ವ್ಯವಹಾರ ಬಹಳ ಮಂದಿಗೆ ತಿಳಿದೇ ಇರಲಿಲ್ಲ. ಇದರಿಂದಾಗಿ ಅನೇಕರು ತಾವು ಉಳಿಸಿದ ಹಣವನ್ನು ಬಚ್ಚಿಡುತ್ತಿದ್ದರು; ಅಥವಾ ಅದನ್ನು ಚಿನ್ನ ಬೆಳ್ಳಿಗಳ ರೂಪದಲ್ಲಿ ಇಡುತ್ತಿದ್ದರು. ಕಾನೂನು ಮತ್ತು ರಕ್ಷಣೆಯ ವ್ಯವಸ್ಥೆ ದೇಶದಲ್ಲಿ ಅಷ್ಟೇನೂ ಪ್ರಬಲವಾಗಿಲ್ಲದ್ದರ ಕಾರಣ ವ್ಯಕ್ತಿಗಳ ಜೀವ ಮತ್ತು ಆಸ್ತಿಗೆ ಸಾಕಷ್ಟು ಭದ್ರತೆ ಇರಲಿಲ್ಲ. ಆಗ ಅಂದಿನ ಬ್ರಿಟಿಷ್ ಸರ್ಕಾರಕ್ಕೆ ಆರ್ಥಿಕ ಅಭಿವೃದ್ಧಿಗೂ ಆಡಳಿತ ಮತ್ತು ರಕ್ಷಣಾ ವೆಚ್ಚಕ್ಕೂ ಹಣದ ಅವಶ್ಯಕತೆ ಕಂಡುಬಂದಿತ್ತು. ಇಂಥ ಸನ್ನಿವೇಶದಲ್ಲಿ ಅಲ್ಪ ಉಳಿತಾಯಕ್ಕೆ ಉತ್ತೇಜನ ನೀಡಿ ಅದನ್ನು ಉಪಯುಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಆಲೋಚಿಸಿ ಉಳಿತಾಯ ಬ್ಯಾಂಕುಗಳ ಸ್ಥಾಪನೆಗೆ ಗಮನ ಕೊಡಲಾಯಿತು. ಸರ್ಕಾರದ ಆದೇಶದ ಮೇರೆಗೆ ಕೋಲ್ಕತ್ತ, ಚೆನ್ನೈ ಮತ್ತು ಮುಂಬಯಿ ಪ್ರೆಸಿಡೆನ್ಸಿ ಬ್ಯಾಂಕುಗಳು 1833, 1834 ಮತ್ತು 1835ರಲ್ಲಿ ಉಳಿತಾಯ ಸೌಕರ್ಯವನ್ನೊದಗಿಸಲು ಪ್ರಾರಂಭಿಸಿದವು. ಜನರ ಉಳಿತಾಯ ಸಂಗ್ರಹಿಸುವ ಸಲುವಾಗಿ 1870ರಲ್ಲಿ ದೇಶದ ನಾನಾ ಭಾಗಗಳಲ್ಲಿ (ಚೆನ್ನೈ, ಮುಂಬಯಿ ಮತ್ತು ಕೋಲ್ಕತ್ತ ಬಿಟ್ಟು) ಜಿಲ್ಲಾ ಉಳಿತಾಯ ಬ್ಯಾಂಕುಗಳು ಮೊದಲಾದವು. ಈ ಬ್ಯಾಂಕುಗಳ ಠೇವಣಿಯ ಗರಿಷ್ಠ ಮಿತಿಯನ್ನು 3,000 ರೂ. ಗಳಿಂದ 5,000 ರೂ.ಗಳಿಗೆ ಹೆಚ್ಚಿಸಿದ್ದು 1874ರಲ್ಲಿ. ಅಂಚೆ ಕಚೇರಿಗಳಲ್ಲೂ ಉಳಿತಾಯ ಬ್ಯಾಂಕುಗಳನ್ನು ಸ್ಥಾಪನೆ ಮಾಡುವುದರ ಬಗ್ಗೆ ಆಲೋಚನೆ ನಡೆದದ್ದು ಈ ಕಾಲದಲ್ಲೇ. ಇವು ಇಂಗ್ಲೆಂಡಿನ ಬ್ಯಾಂಕುಗಳ ಮಾದರಿಯಲ್ಲೇ ಸ್ಥಾಪಿತವಾದವು (1882). 1886ರಲ್ಲಿ ಜಿಲ್ಲಾ ಉಳಿತಾಯ ಬ್ಯಾಂಕುಗಳನ್ನು ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳೊಡನೆ ವಿಲೀನಗೊಳಿಸಲಾಯಿತು.

ಭಾರತದಲ್ಲಿ ಉಳಿತಾಯ ಬ್ಯಾಂಕುಗಳ ಪ್ರಗತಿಗೆ ಅಡ್ಡಿಯಾಗಿರುವ ಅಂಶಗಳು ಅನೇಕ. ಕಳೆದ ಎರಡು ಮಹಾಯುದ್ಧಗಳ ಕಾಲದಲ್ಲಿ ಅನೇಕ ಠೇವಣಿದಾರರು ತಮ್ಮ ಹಣ ಹಿಂತೆಗೆದುಕೊಂಡರು. ಭದ್ರತೆಯ ಭರವಸೆ ಕಡಿಮೆಯಾದದ್ದೂ ಹಣದ ಮೌಲ್ಯದಲ್ಲಿ ವ್ಯತ್ಯಾಸವಾದದ್ದೂ ಇದಕ್ಕೆ ಕಾರಣ. 1914ರ ಪ್ರಾರಂಭದಲ್ಲಿ ಉಳಿತಾಯ ಬ್ಯಾಂಕುಗಳ ಠೇವಣಿಯ ಮೊತ್ತ 24 ಕೋಟಿ ರೂ. ಇದ್ದದ್ದು ಆ ವರ್ಷದ ಕೊನೆಯ ವೇಳೆಗೆ ಅದು 15 ಕೋಟಿ ರೂ. ಗಳಿಗೆ ಇಳಿಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಕೇವಲ ಎರಡೇ ವರ್ಷಗಳಲ್ಲಿ ಠೇವಣಿಗಳ ಮೊತ್ತ 81 ಕೋಟಿ ರೂ.ಗಳಿಂದ 59 ಕೋಟಿ ರೂ.ಗಳಿಗೆ ಇಳಿಯಿತು. ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಉಳಿತಾಯಗಾರರು ಹಣವನ್ನು ಬ್ಯಾಂಕಿನಲ್ಲಿಡದೆ ಬೈತಿಡುವ ಪ್ರವೃತ್ತಿಗೆ ಬಲಿಯಾಗುವುದುಂಟು. 1926ರ ಆರ್ಥಿಕ ಕುಸಿತದ ಕಾಲದಲ್ಲಿ ಬ್ಯಾಂಕುಗಳ ಠೇವಣಿಯ ಮೊತ್ತ ಗಣನೀಯವಾಗಿ ಕಡಿಮೆಯಾಯಿತು. ಕ್ಷಾಮ ಸಂಭವಿಸಿದಾಗಿನ

ಅನುಭವವೂ ಇದೇ ಬಗೆಯದು. ದೇಶದ ವಿಭಜನೆಯ ಕಾಲದಲ್ಲೂ ಬ್ಯಾಂಕು ಠೇವಣಿಗಳಿಗೆ ಬಲವಾದ ಪೆಟ್ಟು ಬಿತ್ತು. ಅಂದಿನಿಂದ ಪ್ರತಿವರ್ಷವೂ ಉಳಿತಾಯ ಬ್ಯಾಂಕುಗಳ ಸಂಖ್ಯೆ ಹೆಚ್ಚಾಗುತ್ತ ಬಂದಿದೆ.

**ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು:** ಸಾರ್ವಜನಿಕರಿಗೆ ಅನೇಕ ರೀತಿಯ ಸೌಕರ್ಯ ಒದಗಿಸಿ ಉಳಿತಾಯಕ್ಕೆ ಉತ್ತೇಜನ ನೀಡುತ್ತವೆ. ಭಾರತದಲ್ಲಿ ಅಂಚೆ ಕಚೇರಿಗಳಲ್ಲಿ ಉಳಿತಾಯ ಖಾತೆ ಆರಂಭಿಸಬಹುದು. ಠೇವಣಿ ಇಟ್ಟ ಹಣಕ್ಕೆ ಬಡ್ಡಿ ಕೊಡಲಾಗುತ್ತದೆ. ಬಡ್ಡಿಯ ಹಣದ ಮೇಲೆ ವರಮಾನ ತೆರಿಗೆ ವಿಧಿಸುವುದಿಲ್ಲ. ಠೇವಣಿ ಹಣಕ್ಕೆ ಸಂಪತ್ತಿನ ತೆರಿಗೆಯಿಂದ ವಿನಾಯಿತಿಯುಂಟು. ಠೇವಣಿದಾರರಿಗೆ ಈ ಬ್ಯಾಂಕುಗಳು ಸಾಲ ಕೊಡುವ ಪದ್ಧತಿಯಿಲ್ಲ. ಈ ಹಣವನ್ನು ಸರ್ಕಾರವೇ ರಾಷ್ಟ್ರ ನಿರ್ಮಾಣ ಕಾರ್ಯಕ್ಕಾಗಿ ಉಪಯೋಗಿಸಿ ಕೊಳ್ಳುತ್ತದೆ. ಈಚೆಗೆ ಠೇವಣಿದಾರರಿಗೆ ಚೆಕ್ಕುಗಳ ಸೌಲಭ್ಯ ಒದಗಿಸಲಾಗಿದೆ.

ಉಳಿತಾಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳು ನಾನಾ ಬಗೆಯ ಠೇವಣಿ ಯೋಜನೆಗಳನ್ನು ಜಾರಿಗೆ ತಂದಿವೆ. ಮಕ್ಕಳಲ್ಲಿ ಉಳಿತಾಯವನ್ನು ಪ್ರೋತ್ಸಾಹಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ. ಸಾರ್ವಜನಿಕರು ಉಳಿತಾಯ ಮಾಡುವುದನ್ನು ಪ್ರೋತ್ಸಾಹಿಸಲು ಮತ್ತು ಅದರ ಅನುಕೂಲಗಳನ್ನು ಅವರಿಗೆ ಮನವರಿಕೆ ಮಾಡಲು ರಾಷ್ಟ್ರೀಯ ಉಳಿತಾಯ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ.

**ವಾಣಿಜ್ಯ ಬ್ಯಾಂಕುಗಳು:** ಸಣ್ಣ ಉಳಿತಾಯಕ್ಕೆ ಪ್ರೋತ್ಸಾಹ ಕೊಡುವ ಸಲುವಾಗಿ ವಾಣಿಜ್ಯ ಬ್ಯಾಂಕುಗಳಲ್ಲೂ ಉಳಿತಾಯ ಖಾತೆಗಳನ್ನು ತೆರೆಯಲಾಗಿದೆ. ಕನಿಷ್ಠ ರೂ. 500 ಠೇವಣಿಯನ್ನಿಟ್ಟು ಈ ಖಾತೆ ತೆರೆಯಬಹುದು. ಚೆಕ್ಕಿನ ಮೂಲಕ ವ್ಯವಹಾರ ಮಾಡುವುದಾದರೆ ಕನಿಷ್ಠ 50 ರೂ. ಠೇವಣಿಯನ್ನಿಟ್ಟಿರಬೇಕು. ಠೇವಣಿದಾರರಿಗೆ ಆದರೆ ಉಳಿತಾಯ ಠೇವಣಿದಾರರಿಗೆ ಠೇವಣಿಯ ಮೇಲೆ ಸಾಲ ದೊರೆಯುವುದಿಲ್ಲ.

**ಭವಿಷ್ಯ:** ಕಳೆದ ಒಂದೂವರೆ ಶತಮಾನದಲ್ಲಿ ಉಳಿತಾಯ ಬ್ಯಾಂಕುಗಳ ಉದ್ದೇಶ ಮತ್ತು ಕಾರ್ಯಾಚರಣೆಗಳಲ್ಲೂ ಉಳಿತಾಯಮಾಡುವ ವ್ಯಕ್ತಿಗಳ ಉದ್ದೇಶಗಳಲ್ಲೂ ಬದಲಾವಣೆಗಳಾಗಿವೆ. ಪ್ರಾರಂಭದಲ್ಲಿ ಉಳಿತಾಯ ಬ್ಯಾಂಕುಗಳು ಕೇವಲ ಉಪಕಾರ ಮನೋಭಾವದಿಂದ ಸ್ಥಾಪಿತವಾದವು. ಈಗ ಇವು ಲಾಭ ಗಳಿಸುವ ಸಂಸ್ಥೆಗಳಾಗಿವೆ. ಮೊದಲು ಉಳಿತಾಯ ಬ್ಯಾಂಕುಗಳು ಸರ್ಕಾರಕ್ಕೆ ಮಾತ್ರ ಸಾಲ ಕೊಡುತ್ತಿದ್ದವು. ಈಗ ಅನೇಕ ದೇಶಗಳಲ್ಲಿ ಇವು ಉದ್ಯಮ ಸಂಸ್ಥೆಗಳಿಗೂ ಸಾಲ ಕೊಟ್ಟು ಲಾಭಗಳಿಸುತ್ತಿವೆ. ಉಳಿತಾಯ ಮಾಡುವ ಉದ್ದೇಶಗಳಲ್ಲೂ ಅನೇಕ ಬದಲಾವಣೆಗಳಾಗಿವೆ. ಸಾಮಾನ್ಯವಾಗಿ ಭವಿಷ್ಯದಲ್ಲಿ ನಿಶ್ಚಿಂತೆಯಿಂದ ಇರಲು ವ್ಯಕ್ತಿಗಳು ತಮ್ಮ ಆದಾಯದಲ್ಲಿ ಸ್ವಲ್ಪಭಾಗವನ್ನು ಉಳಿತಾಯ ಮಾಡುತ್ತಾರೆ. ಆದರೆ ಈಗ ಅನೇಕ ದೇಶಗಳಲ್ಲಿ ಸರ್ಕಾರವೇ ವ್ಯಕ್ತಿಯ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡಿರುವುದರಿಂದ ವ್ಯಕ್ತಿಗಳು ತಮ್ಮ ಭವಿಷ್ಯದ ಬಗ್ಗೆ ಅಷ್ಟೇನೂ ಚಿಂತಿಸಬೇಕಾಗಿಲ್ಲ. ಸಾಲ ಸೌಲಭ್ಯ, ಕಂತು ಮಾರಾಟ ಮುಂತಾದವುಗಳ ಬೆಳವಣಿಗೆಯಿಂದ ಉಳಿತಾಯದ ಬಗ್ಗೆ ವ್ಯಕ್ತಿಗಳಲ್ಲಿ ಸ್ವಲ್ಪಮಟ್ಟಿನ ಉದಾಸೀನತೆ ಕಂಡುಬರುತ್ತಿದೆ. ಕೈಯ ರೊಕ್ಕವ ಕೊಂಡು ಕಡದ ಲೆಕ್ಕವನಳಿಸುವ ಮನೋಭಾವವುಳ್ಳವರು ಮಿತವ್ಯಯವೂ ಒಂದು ಸದ್ಗುಣವೆಂದು ನಂಬುವುದಿಲ್ಲ. ಆದರೆ ಭವಿಷ್ಯದ ಬಗ್ಗೆ ಭರವಸೆ ಸಾಧ್ಯವಿಲ್ಲದ ವ್ಯವಸ್ಥೆಗಳಲ್ಲೆಲ್ಲ ವ್ಯಕ್ತಿಗತ ಉಳಿತಾಯದ ಮಹತ್ತ್ವವಿದ್ದೇ ಇರುತ್ತದೆ. ಅರ್ಥವ್ಯವಸ್ಥೆಯ ಬೆನ್ನೆಲುಬಾದ ಬಂಡವಾಳದ ಬೆಳವಣಿಗೆಯ ದೃಷ್ಟಿಯಿಂದ ವೈಯಕ್ತಿಕವಾಗಿಯೋ ಸಾಂಸ್ಥಿಕವಾಗಿಯೋ ಉಳಿತಾಯ ಅತ್ಯಗತ್ಯ. ಪಚನಕ್ರಿಯೆಯಿಂದ ಶರೀರದ ಅಂಗಾಂಗಳಿಗೆ ಶಕ್ತಿ ಕೂಡಿಕೊಳ್ಳುವ ತೆರನಾಗಿ ಉಳಿತಾಯವೂ ಒಂದು ಸಹಜ ಪ್ರಕ್ರಿಯೆಯಾಗಿ ಮುಂದುವರಿದೇ ತೀರುತ್ತದೆ. (ಎ.ಸಿ.ಆರ್.)

## ಉಳುಕು (ಸೆಳೆತ):

ಸಾಮಾನ್ಯವಾಗಿ ಕೈಕಾಲುಗಳ ಸ್ನಾಯುಗಳಲ್ಲಿ, ಕೆಲವೊಮ್ಮೆ ಒಳಾಂಗಗಳ ಸ್ನಾಯುಗಳಲ್ಲೂ ಯಾವ ಮುನ್ಸೂಚನೆಯಿಲ್ಲದೆ ಸೆಳೆತ ಉಂಟಾಗಿ ಅಲ್ಲಿ ನೋವಾಗುವುದುಂಟು. ಸ್ನಾಯುಗಳು ಸಂಕೋಚನಗೊಳ್ಳುತ್ತವೆ ಅವು ಸೇದುತ್ತವೆ. ಇಂತಹ ಸೆಳೆತಕ್ಕೆ ಕೆಲವರು ಉಳುಕು ಅಥವಾ ಚಳುಕು ಎಂದು ಕರೆಯುವುದು ಸಮಂಜಸವೆನಿಸುವುದಿಲ್ಲ. ಮುಟ್ಟಾಗುವಾಗ ಕೆಳ ಹೊಟ್ಟೆಸೆಳೆತ, ಕರುಳುಗಳ ಸುತ್ತಣ ಸ್ನಾಯುಗಳ ಸೆಳೆತದಿಂದಾಗುವ ನೋವು, ರಕ್ತನಾಳಗಳ ಸ್ನಾಯುಗಳ ಸಂಕೋಚನದಿಂದಾಗುವ ಕೈಕಾಲು ಸೇದುವಿಕೆ, ಜಠರದ ಸೆಳೆತಗಳು ಆಗಾಗ ಕಂಡುಬರುತ್ತವೆ. ಕುತ್ತಿಗೆಯ ಸ್ನಾಯು ಒಂದರಲ್ಲಿ ಹೀಗೆ ಬಿಟ್ಟು ಬಿಟ್ಟು ಸೆಡೆತವಾಗುವುದರಿಂದ ಸೊಟ್ಟಕತ್ತು ಇಲ್ಲವೆ ಉರುಗುಗೊರಲು ಉಂಟಾಗಿ ತಲೆ ಎದುರು ಪಕ್ಕಕ್ಕೆ ಬಾಗುವುದು.

ಕೈಕಾಲುಗಳ ಸೆಳೆತಕ್ಕೆ ಹಲವಾರು ಕಾರಣಗಳಿವೆ. ಈಜುವವರಲ್ಲಿ ಮಿತಿಮೀರಿದ ದಣಿವಿನಿಂದ ಕೈಕಾಲುಗಳು ಸೋತು ಹೋಗಿ ಸಹಾಯ ಸಿಗದಿದ್ದರೆ ನೀರಿನಲ್ಲಿ ಮುಳುಗಿ ಹೋಗಬಹುದು. ಇದೇ ರೀತಿ ಫುಟ್‌ಬಾಲ್, ಬಾಸ್ಕೆಟ್ ಬಾಲ್, ಹಾಕಿ ಅಥವಾ ಇನ್ನಿತರ ಆಟಗಾರರಲ್ಲಿ ಪ್ರಚಂಡ ಚಟುವಟಿಕೆಯಿಂದ ಕೈಯೋ ಕಾಲೋ ಸೋತು ಕುಕ್ಕರಿಸಿ ಬೀಳುವಂತಾಗುವುದು. ಇಲ್ಲಿ ಸ್ನಾಯು ಸೆಳೆತಕ್ಕಿಂತ ಸ್ನಾಯು ಬಳಲಿಕೆ (ಮಸಲ್ ಫಟೀಗ್) ಕಾಣುತ್ತೇವೆ.

ಎಷ್ಟೋವೇಳೆ ಮಲಗಿದ್ದವರ ಕಾಲಿನ ಮೀನು ಖಂಡದಲ್ಲಿ (ಕಾಫ್) ಜೋರಾಗಿ ಸೆಳೆತ ಮೂಡಿದಾಗ ನೋವಿನಿಂದಾಗಿ ಎಚ್ಚರಗೊಳ್ಳುವಂತಾಗುತ್ತದೆ. ಹಿಂದಿನ ದಿನ ವ್ಯಕ್ತಿ ಆಯಾಸದ ಕೆಲಸ ಮಾಡಿದ್ದರೆ ಇಂತಹದ್ದು ಕಾಣುವುದು ಸಾಮಾನ್ಯ. ಈ ಸ್ನಾಯು ಸೆಳೆತದ ನೋವು ತಾನಾಗಿಯೇ ಕಡಿಮೆಯಾಗಬಹುದು ಇಲ್ಲವೆ ನೋವು ಶಮನ ಮಾಡುವ ಔಷಧಿ ಸೇವಿಸಬೇಕಾಗುತ್ತದೆ. ಕಾಲಿನ ಧಮನಿಗಳು ಸಂಕುಚನಗೊಂಡರೆ ವ್ಯಕ್ತಿ ಒಂದಿಷ್ಟು ದೂರ ಹೆಜ್ಜೆ ಹಾಕುತ್ತಿರುವಂತೆ ಕಾಲಿನ ಖಂಡದಲ್ಲಿ ಸೆಳೆತ ಪ್ರಾರಂಭಿಸುತ್ತದೆ. ನೋವು ಹೆಚ್ಚಾಗುತ್ತದೆ. ವಿಶ್ರಾಂತಿ ಪಡೆದು ಮತ್ತೆ ನಡೆಯಲು ಸಾಧ್ಯವಾಗುತ್ತದೆ. ಇದಕ್ಕೆ ಕುಂಟುನಡೆ (ಇಂಟರ ಮಿಟೆಂಟ್‌ಕ್ಲಾಡಿ ಕೇಷನ್) ಎನ್ನುತ್ತಾರೆ. ಧೂಮಪಾನಿಗಳಲ್ಲಿ, ತಂಬಾಕು ಸೇವಿಸುವವರಲ್ಲಿ ಮಾತ್ರ ಕಾಣುವ ಈ ರೋಗದಿಂದಾಗಿ ಕಾಲಿನ ಬೆರಳು, ಪಾದ, ಮುಂಗಾಲುಗಳು ಹಂತ ಹಂತವಾಗಿ ರಕ್ತಹೀನತೆಯ ಅಳಿಗೊಳಪಕ್ಕೆ (ಗ್ಯಾಂಗ್ರೀನ್) ತುತ್ತಾಗುತ್ತವೆ. ಆಗ ಬೆರಳಾಗಲಿ, ಪಾದವಾಗಲಿ ಇಲ್ಲವೆ ಮುಂಗಾಲಾಗಲಿ ಎಲ್ಲಿಯವರೆಗೆ ರಕ್ತನಾಳಗಳು ಮುಚ್ಚಿಕೊಂಡಿರುತ್ತವೆಯೋ ಆ ಭಾಗದಲ್ಲಿ ಅಂಗಕಡಿತದ ಶಸ್ತ್ರಕ್ರಿಯೆ ಮಾಡಬೇಕಾಗುತ್ತದೆ.

ವಿಪರೀತ ಬೆವರಿದಾಗ ದೇಹದೊಳಗಿಂದ ನೀರು, ಉಪ್ಪು ಕಳೆದು ಹೋಗಿ ಕೈ.ಕಾಲು, ಹೊಟ್ಟೆಯ ಸ್ನಾಯುಗಳಲ್ಲಿ ಬೇಗೆಯ ಸೆಳೆತ ಕಾಣಿಸುತ್ತದೆ. ಮುಮ್ಮಡಿಸುವ ಸ್ನಾಯುಗಳಲ್ಲಿ ಇಂತಹ ಸೆಳೆತ ಸಾಮಾನ್ಯವಾಗಿ ಜೋರಾಗಿರುತ್ತದೆ. ಸ್ನಾಯುಗಳು ಗಂಟು ಗಂಟಾಗಿ ಕಾಣಬಹುದು. ಚರ್ಮ ತಣ್ಣಗೆ ಬಿಳಚಿಕೊಂಡಿರುತ್ತದೆ. ಸಾಕಷ್ಟು ನೀರು ಉಪ್ಪನ್ನು ಕೊಟ್ಟು ಕೂಡಲೇ ಉಪಚರಿಸಬೇಕು. ಕ್ಷಾರತೆಯಿಂದ (ಆಲ್ಕಲೋಸಿಸ್) ನರಗಳ ಸ್ನಾಯುಗಳ ಉದ್ರೇಕ ಹೆಚ್ಚಿ ಕೈಕಾಲುಗಳ "ಸ್ನಾಯು ಸೆಟೆತ" (ಟೆಟನಿ) ಆಗುತ್ತದೆ. ಆಗ ರಕ್ತದಲ್ಲಿನ ಸುಣ್ಣಾಂಶದ ಮಟ್ಟ ಬಹಳಷ್ಟು ಕುಸಿಯುತ್ತದೆ. ರಕ್ತದೊಳಗೆ ಕಾಲ್ಸಿಯಂ ನೀಡಿದರೆ ಕೂಡಲೇ ವಾಸಿಯಾಗುತ್ತದೆ.

ಸ್ನಾಯುಗಳ ಸೆಳೆತಗಳನ್ನು ಹಲವಾರು ರೋಗಗಳಲ್ಲಿ ಕಾಣುತ್ತೇವೆ. ಹಲನರ ಜಡ್ಡು (ಮಲ್ಟಿಪಲ್ ಸ್ಕ್ಲೀರೋಸಿಸ್), ಪಾರ್ಕಿನ್ಸನ್ ರೋಗಗಳಲ್ಲಿ ಸಾಮಾನ್ಯವಾಗಿ ಸ್ನಾಯು ಸೆಳೆತ ಕಾಣಿಸುತ್ತದೆ. ದಿನ ನಿತ್ಯದ ಕೆಲಸ ಮಾಡುವಾಗ, ಕಸುಬಿನ ಕೆಲಸ ನಿರ್ವಹಿಸುವಾಗ ಒಂದೇ ಸಮನೆ ಬಳಕೆಯಾಗುವ ಕೆಲವು ಸ್ನಾಯುಗಳು ಬಳಲಿ ಸೆಳೆತಕ್ಕೊಳಗಾಗುತ್ತವೆ. ಪ್ರಾರಂಭದಲ್ಲಿ ಕೈಲಿರುವ ಕೆಲಸ ಮಾಡಲು ಹೋದಾಗ ಕಷ್ಟವಾಗುತ್ತದೆ. ಬರುಬರುತ್ತ ನೋವು ಜೋರಾಗಿ ತೊಂದರೆಯಾಗುತ್ತದೆ. ಬರೆಯುವವರಿಗೆ ಲೇಖನಿ ಸರಾಗವಾಗಿ ಸಾಗುವುದಿಲ್ಲ, ಟೈಪು ಮಾಡುವವರಿಗೆ ಸರಿಯಾದ ಗುಂಡಿ ಒತ್ತಲು ಆಗುವುದಿಲ್ಲ, ನೇಕಾರನಿಗೆ ಬಟ್ಟೆ ನೇಯಲಾಗುವುದಿಲ್ಲ; ಶಿಲ್ಪಿ ಕೈ ಕಟ್ಟಿ ಕುಳಿತುಕೊಳ್ಳುವಂತಾಗಬಹುದು. ಹೀಗೆ ಅನೇಕಾನೇಕ ಕಸುಬಿನವರು ಸ್ನಾಯು ಸೆಳೆತಕ್ಕೊಳಗಾಗಿ ನೋವು ಅನುಭವಿಸುವುದಲ್ಲದೆ ಮಾನಸಿಕ ರೋಗಕ್ಕೆ ಒಳಗಾಗಬಹುದು. ಕಸುಬು ಬದಲಾಯಿಸುವುದರಿಂದ ಸೆಳೆತ ಕಡಿಮೆಯಾಗುವ ಸಂಭವವಿದೆ. ಆದರೂ ಸ್ನಾಯು ಸೆಳೆತದ ನಿಜಕಾರಣ ಕಂಡುಕೊಂಡು ತಕ್ಕ ಚಿಕಿತ್ಸೆ ನೀಡಬೇಕು. (ಡಿ.ಇ.)

## ಉಳುಮೆ, ಉಳುಮೆಯ ಸಾಧನಗಳು:

ನೆಲವನ್ನು ಬೀಜ ಬಿತ್ತನೆಗೆ ಮತ್ತು ಗಿಡದ ಬೆಳವಣಿಗೆಗೆ ಹದಮಾಡುವ ಕೆಲಸಕ್ಕೆ ಉಳುಮೆ ಎಂದು ಹೆಸರು. ಈ ಕೆಲಸಕ್ಕೆ ಸಾಧನಗಳಾಗಿ ಅನೇಕ ಮುಟ್ಟುಗಳನ್ನೂ, ಯಂತ್ರೋಪಕರಣಗಳನ್ನೂ ಬಳಸುತ್ತಾರೆ. ಆದಿಮಾನವನಿಗೆ ವ್ಯವಸಾಯವೇ ಗೊತ್ತಿಲ್ಲದ ಒಂದು ಕಾಲವಿತ್ತು. ಆಗವನು ತನ್ನ ಆಹಾರಕ್ಕಾಗಿ ಬೇಟೆಯಾಡುತ್ತಿದ್ದ. ಇಲ್ಲವೇ ಬೆಳೆದ ಗಿಡಮರಗಳ ಹಣ್ಣು ಹಂಪಲು, ಸೊಪ್ಪು ಸೊದೆ, ಗೆಡ್ಡೆಗೆಣಸುಗಳನ್ನು ಆಯ್ದು ತಿನ್ನುತ್ತಿದ್ದ. ನೀರಿನ ಆಶ್ರಯವಿರುವಲ್ಲಿ ನೆಲದ ಮೇಲೆ ಬೀಜವನ್ನು ಎರಚಿ ಗಿಡ ಬೆಳೆಸುವ ವಿಧಾನವನ್ನು ಕ್ರಮೇಣ ಆತ ಕಲಿತ. ಬೆಳೆಯುತ್ತಿದ್ದ ಗಿಡಗಳನ್ನು ಜೋಪಾನಿಸುವ ಕೆಲಸವನ್ನೂ ಪ್ರಾರಂಭಿಸಿದ. ಅನಂತರ ತನಗೆ ಆಗ ಲಭ್ಯವಿದ್ದ ಮರದ ಇಲ್ಲವೆ ಕಲ್ಲಿನ ಚೂಪಾದ ಆಯುಧದಿಂದ ನೆಲವನ್ನು ಅಲ್ಪ ಸ್ವಲ್ಪ ಅಗೆದು ಬೀಜ ಬಿತ್ತಲು ಪ್ರಾರಂಭಿಸಿದ. ಈಗಿನ ನೇಗಿಲಿನ ತುದಿಯಲ್ಲಿ ಲೋಹದ ಚೂಪಾದ ಕುಳ ಇರುವುದನ್ನು ನಾವು ಇಲ್ಲಿ ನೆನೆಯಬಹುದು. ಕೃಷಿಯ ಪ್ರಾಮುಖ್ಯ ಹೆಚ್ಚಿದಂತೆ ಉಳುಮೆಯ ಕ್ರಮವೂ ಸುಧಾರಿಸಿತು. ಎತ್ತು, ಕೋಣ, ಕುದುರೆ, ಒಂಟೆ ಮೊದಲಾದ ಪ್ರಾಣಿಗಳನ್ನು ಕೃಷಿ ಕೆಲಸಗಳಿಗೆ ಬಳಸುವ ಅಭ್ಯಾಸ ಹೆಚ್ಚಿತು. ಬಿತ್ತನೆ, ಕಳೆ ಕೀಳುವುದು, ನೀರು ಕೊಡುವುದು, ಕಟಾವು, ಕೇರುವುದು, ದಾಸ್ತಾನು, ಸರಬರಾಜು–ಹೀಗೆ ಒಂದೊಂದು ಕೆಲಸಕ್ಕೂ ಅಗತ್ಯವಾಗಬಲ್ಲ ಮುಟ್ಟುಗಳು, ಯಂತ್ರೋಪಕರಣಗಳು ಈಗ ಬಳಕೆಗೆ ಬಂದಿವೆ. ಈ ಲೇಖನದಲ್ಲಿ ಉಳುಮೆ ಮತ್ತು ಉಳುಮೆಯ ಸಾಧನಗಳ ವಿಷಯವನ್ನು ಪ್ರಸ್ತಾಪಿಸಿದೆ **(ನೋಡಿ– ಕೃಷಿ)**.

ತಲೆತಲಾಂತರದ ಅನುಭವದಿಂದ ಬಂದ ಸಾಗುವಳಿಯ ವಿಷಯಜ್ಞಾನ ಮತ್ತು ಸಾಧನಗಳೇ ಈಗ ಸುಮಾರು 70 ವರ್ಷಗಳವರೆವಿಗೂ ಬೇಸಾಯದ ಎಲ್ಲ ಕ್ರಮಗಳಿಗೂ ಸಾಮಾನ್ಯವಾಗಿ ತಳಹದಿಯಾಗಿತ್ತು. ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕಾ ಯುಗದ ಆವಿರ್ಭಾವ ಬೇಸಾಯದ ಕೆಲಸಕ್ಕೆ ಬೇಕಾದ ಜನ ಸಹಾಯದ ಅಭಾವಕ್ಕೆ ಕಾರಕವಾಯಿತು. ಕೂಲಿಯ ದರಗಳೂ ಹೆಚ್ಚಿದವು. ಉಳುಮೆ ಕೆಲಸಗಳಲ್ಲಿ ಮನುಷ್ಯನ ದುಡಿಮೆಯನ್ನು ಕಡಿಮೆ

ಮಾಡಲು ಯಂತ್ರ ಸಾಧನಗಳನ್ನು ಉಪಯೋಗಿಸಿಕೊಳ್ಳಬಹುದೇ ಎಂಬ ವಿಷಯದತ್ತ ಜನರ ಗಮನ ಹರಿಯಿತು. ಈ ರೀತಿ ವ್ಯವಸಾಯೋತ್ಪನ್ನದ ವೆಚ್ಚ ಇಳಿಸಿಕೊಳ್ಳುವ ಸಾಧ್ಯಾಸಾಧ್ಯತೆಯನ್ನು ಕುರಿತ ಚಿಂತನೆ ಪ್ರಾರಂಭವಾಯಿತು.

ಉಳುಮೆಯ ಮುಖ್ಯ ಉದ್ದೇಶ ಬೀಜ ಮೊಳೆಯುವುದಕ್ಕೆ ಹದವಾದ, ಸಡಿಲವಾದ, ಮೆತ್ತನೆಯ ಮಣ್ಣನ್ನು ಒದಗಿಸುವುದೇ ಆಗಿದೆ. ಹಾಗೆ ಮಾಡಿದಾಗ ಮೊಳೆತ ಬೀಜ ಸಸಿಯಾಗಿ ಬೆಳೆದು ಫಲಕೊಡಲು ಅನುಕೂಲವಾದ ಸನ್ನಿವೇಶ ಏರ್ಪಡುತ್ತದೆ. ಪ್ರಾಸಂಗಿಕವಾಗಿ



ಅಲಗು ಕುಂಟೆ

ನೆಲದಲ್ಲಿನ ಕಳೆಗಳೂ, ಕೂಳೆಗಳೂ ಹೊರಬಂದು ಮಣ್ಣಿನಲ್ಲಿ ಸೇರಿ ಕೊಳೆತು ಗೊಬ್ಬರವಾಗುತ್ತವೆ. ಬಿದ್ದ ನೀರು ಹರಿದು ಹೋಗದೆ ಇಂಗಿ ಮಣ್ಣಿನ ತೇವವನ್ನು ಹೆಚ್ಚಿಸುತ್ತದೆ. ಹಾಕಿದ ಗೊಬ್ಬರ, ಸುಣ್ಣ, ಜಿಪ್ಸಂ ಮೊದಲಾದವು ಮಣ್ಣಿನಲ್ಲಿ ಚೆನ್ನಾಗಿ ಬೆರೆಯುತ್ತವೆ. ಮಿಗಿಲಾಗಿ ಉತ್ತ ಮಣ್ಣಿನಲ್ಲಿ ಗಾಳಿ ಚೆನ್ನಾಗಿ ಆಡುತ್ತದೆ. ಗಾಳಿಯಾಡುವುದರಿಂದ ಮೇಲ್ಮೈಯಲ್ಲಿನ ತೇವ ಆರಿ ಮಣ್ಣಿನ ಶಾಖ ಹೆಚ್ಚುತ್ತದೆ. ಹದವಾದ ಶಾಖ ಉಂಟಾದಲ್ಲಿ ಮಾತ್ರ ಬೀಜ ಮೊಳೆತು ಸಸ್ಯ ಬೆಳೆಯುವುದು ಸಾಧ್ಯ. ಬೇಸಾಯದ ನೆಲ ಸಡಿಲವಾಗಿ ಮಣ್ಣು ಹುಡಿ ಹುಡಿಯಾಗಿದ್ದು ಹರಳು ಹರಳಾಗಿದ್ದು, ಬೀಜ ಮೊಳೆಯುವುದಕ್ಕೆ, ಸಸ್ಯ ಬೆಳವಣಿಗೆಗೆ ಹದವಾಗಿದ್ದಾಗ ಅಂಥ ನೆಲ ಸೆಬ್ಬೆಯಲ್ಲಿದೆ ಎನ್ನುತ್ತಾರೆ. ಆ ಮಣ್ಣನ್ನು ಬೆರಳುಗಳ ಮಧ್ಯದಲ್ಲಿ ತೆಗೆದುಕೊಂಡು ಉಜ್ಜಿದಾಗ, ಅದು ಮೆದುವಾಗಿದ್ದು, ಪುಡಿಯಾಗುತ್ತದೆ. ಮಣ್ಣು ಸಡಿಲವಾಗಿರುವುದರಿಂದ ಕಣಗಳ ಮಧ್ಯದ ಅಂತರ ಹೆಚ್ಚುತ್ತದೆ. ಹದವಾದ ಕಣಜೋಡಣೆ ಇದ್ದು ಕಣಾಂತರ ಸಾಕಷ್ಟಿರುವುದರಿಂದ, ಗಾಳಿ ಆಡಲು ತೇವ ಉಳಿಯಲು ಸಹಾಯವಾಗುತ್ತದೆ. ಬಿದ್ದ ನೀರು ಮಣ್ಣಿನೊಳಗೆ ಇಳಿದು ಇಂಗುವುದರಿಂದ ಮಣ್ಣು ಕೊಚ್ಚಿ ಹೋಗುವುದು ತಪ್ಪುತ್ತದೆ. ಉತ್ತು ಸಡಿಲವಾದ ಮಣ್ಣಿನಲ್ಲಿ ಸಂಯುಕ್ತ ಕಣಗಳು ಮತ್ತು ಹುಡಿಮಣ್ಣು ಎರಡೂ ಇರುತ್ತವೆ. ಇಂಥ ಪರಿಸ್ಥಿತಿ ಸಸ್ಯದ ಬೆಳವಣಿಗೆಗೆ ಹಿತಕರ. ಬೇರು ಹರಡುವುದಕ್ಕೆ, ಗಾಳಿ ತೂರುವುದಕ್ಕೆ, ಸೂಕ್ಷ್ಮಜೀವಿಗಳ ಹಾಗೂ ರಾಸಾಯನಿಕ ಕ್ರಿಯೆಯಿಂದ ಬಿಡುಗಡೆಯಾಗಿ ಸಸ್ಯಕ್ಕೆ ಒದಗುವ ಪೋಷಕಾಂಶಗಳ ಹೀರುವಿಕೆಗೆ, ಕಣಾಂತರ ಹೆಚ್ಚಿದಷ್ಟೂ ಸಹಕಾರಿ. ಉಳುವುದರಿಂದ, ಕ್ರಿಮಿಕೀಟಗಳ ಮೊಟ್ಟೆಗಳು ನಾಶವಾಗುತ್ತವೆ.

ಮಣ್ಣಿನ ಸೆಬ್ಬೆ ಅಥವಾ ಹದ, ಮಣ್ಣಿನ ಗುಣ ಮತ್ತು ಪೈರಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ರಾಗಿ, ಈರುಳ್ಳಿ, ಮಸಾಲೆಸೊಪ್ಪು ಮುಂತಾದ ಸಣ್ಣ ಬೀಜವುಳ್ಳ ಪೈರುಗಳಿಗೆ ಬಹಳ ಮೃದುವಾದ ಭೂಮಿ ಬೇಕು. ಈ ಬೀಜಗಳು ಒರಟುಭೂಮಿಯಲ್ಲಿ ಮೊಳೆಯುವುದಿಲ್ಲ. ಅದೇ ಜೋಳ, ಹತ್ತಿ, ಕಡಲೆಗಳ ಬೀಜ ಮೊಳೆಯಬೇಕಾದರೆ ಒರಟು ಭೂಮಿ ಅಗತ್ಯ.

ಕೆಂಪುಮಣ್ಣು ಗೋಡು ಅಥವಾ ಮರಳಿನಿಂದ ಕೂಡಿರುತ್ತದೆ. ಆದ್ದರಿಂದ ಸುಲಭವಾಗಿ ಹುಡಿಯಾಗುತ್ತದೆ. ಮೊದಲ ಮಳೆಯಲ್ಲೇ ಈ ಮಣ್ಣಿನಲ್ಲಿ ಬಿತ್ತನೆ ಸಾಧ್ಯ. ಕಪ್ಪುಮಣ್ಣಿನಲ್ಲಿ ಜೇಡಿ ಹೆಚ್ಚು. ನೆಲ ಹೆಂಟೆ ಹೆಂಟೆಯಾಗಿದ್ದಾಗ ಬಿದ್ದ ಮಳೆ ಮೇಲ್ಮೈಯಲ್ಲಿ ನಿಂತು ಒಳಗೆ ಇಳಿಯುವುದು ಸಾಧ್ಯ. ಪದೇ ಪದೇ ಉತ್ತು ಮೇಲ್ಮೈ ತುಂಬಾ ಹದವಾಗಿದ್ದರೆ, ಮಳೆ ಆದಮೇಲೆ ಮಣ್ಣಿನ ಮೇಲ್ಮೈ ಗಟ್ಟಿಯಾಗುತ್ತದೆ. ಮುಂದೆ ಬಿದ್ದ ಮಳೆ ಮಣ್ಣಿನೊಳಗೆ ಇಳಿಯದೆ ಮೇಲೆ ಹರಿದು ಹಾಳಾಗುತ್ತದೆ.

ಭೂಮಿಯನ್ನು ಉಳಬೇಕಾದರೆ ಒಂದು ಹದವಾದ ತೇವದ ಮಟ್ಟ ಅಗತ್ಯ. ಹಾಗಿದ್ದರೆ ಮಾತ್ರ ಮಣ್ಣು ಹುಡಿಹುಡಿಯಾಗುತ್ತದೆ. ಉಳುಮೆಯ ಶ್ರಮವೂ ಹೆಚ್ಚಿರುವುದಿಲ್ಲ. ಈ ಹದ ಕಂಡುಕೊಳ್ಳುವುದಕ್ಕೆ ಕೈಯಿಂದ ಉಂಡೆ ಮಾಡಿ, ಎದೆ ಎತ್ತರದಿಂದ ಕೆಳಗೆ ಬಿಡಬೇಕು. ಅದು ಪುಡಿ ಪುಡಿಯಾದಲ್ಲಿ, ಉಳುಮೆಗೆ ಹದ ಸರಿಯಾಗಿರುತ್ತದೆ. ತೇವ ಹೆಚ್ಚಾಗಿದ್ದರೆ ಉಂಡೆ ಮಣ್ಣು ಚಪ್ಪಟೆಯಾಗುತ್ತದೆ. ತೇವ ತೀರ ಕಡಿಮೆಯಿದ್ದಾಗ ಉಂಡೆ ಕಟ್ಟುವುದು ಆಗುವುದಿಲ್ಲ. ರೈತರು ಅನುಭವದಿಂದ ಉಳುಮೆಗೆ ಹದವಾದ ತೇವ ಇದೆಯೆ ಇಲ್ಲವೆ ಎನ್ನುವುದನ್ನು ನಿರ್ಧರಿಸಬಲ್ಲರು.

ಮೊದಲ ಉಳುಮೆ: ಪೈರು ಕೊಯಿಲಾದ ಮೇಲೆ ಮುಂದಿನ ಬಿತ್ತನೆಯವರೆಗಿನ ಎಲ್ಲ ಉಳುಮೆ ಕೆಲಸಗಳಿಗೆ ಪೂರ್ವಭಾವಿ ಉಳುಮೆ ಎನ್ನುತ್ತಾರೆ. ಇದರ ಮುಖ್ಯ ಉದ್ದೇಶ, ಭೂಮಿ ಸಡಿಲವಾಗಿದ್ದು ಹುಡಿ ಹುಡಿಯಾಗಿದ್ದು, ಬೀಜ ಮೊಳೆತು, ಸಸ್ಯ ಬೆಳೆಯುವುದಕ್ಕೆ ಹಿತಕರ ವಾತಾವರಣ ಕಲ್ಪನೆ. ಈ ಕೆಲಸಕ್ಕೆ ಹೊರದೇಶಗಳಲ್ಲಿ ವಿವಿಧ ಸಲಕರಣೆಗಳನ್ನು ಬಳಸುತ್ತಾರೆ. ಭಾರವಾದ ನೇಗಿಲಿನಿಂದ ಭೂಮಿಯನ್ನು ಉತ್ತು ಮಣ್ಣನ್ನು ಹೆಂಟೆ ಹೆಂಟೆಯಾಗಿ ಮಾಡುತ್ತಾರೆ. ಅನಂತರ ಕುಂಟೆ ಹೊಡೆದು ಹೆಂಟೆಯನ್ನು ಒಡೆದು ಭೂಮಿ ಹಸನು ಮಾಡುತ್ತಾರೆ. ಕುಂಟೆ ಹಲ್ಲುಗಳು ಮಣ್ಣಿನ ಒಳಗಡೆ ಇಳಿದು ಹೆಂಟೆ ಸಣ್ಣ ಸಣ್ಣ ಚೂರುಗಳಾಗುತ್ತವೆ. ಅನಂತರ ಹಲುಬೆ ಹೊಡೆದು ಮಣ್ಣನ್ನು ಹದ ಮಾಡುತ್ತಾರೆ. ಕೆಲ ಸಂದರ್ಭಗಳಲ್ಲಿ ರೋಣಗಲ್ಲನ್ನು ಹಾಯಿಸಿ ಹೆಂಟೆ ಪುಡಿ ಮಾಡಿ ಬಿತ್ತನೆಗೆ ನೆಲ ಹದ ಮಾಡುತ್ತಾರೆ. ಈ ವಿಧದ ಮುಟ್ಟುಗಳ ಬಳಕೆಯ ಉದ್ದೇಶ ಹಂತ ಹಂತವಾಗಿ ಮಣ್ಣನ್ನು ಕೃಷಿ ಮಾಡಿ ಅದನ್ನು ಹದಕ್ಕೆ ತರುವುದೇ ಆಗಿದೆ. ಸಾಮಾನ್ಯವಾಗಿ ಭಾರತದಲ್ಲಿ ಉಳುಮೆಗೆ ಮುಖ್ಯ ಸಾಧನ ನೇಗಿಲು. ಪದೇ ಪದೇ ನೇಗಿಲು ಹಾಯಿಸಿ ಮಣ್ಣನ್ನು ಬಿತ್ತನೆಗೆ ಹದ ಮಾಡುತ್ತಾರೆ. ಪೂರ್ವಭಾವಿ ಕೃಷಿ ಸಹಜವಾಗಿ ಪೈರು, ಮಣ್ಣಿನ ಗುಣ, ಹವಾಗುಣ ಮತ್ತು ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಕೃಷಿ ಪದ್ಧತಿಗಳನ್ನವಲಂಬಿಸಿರುತ್ತದೆ. ಸೂಕ್ಷ್ಮ ಬೆಳೆಗಳಾದ ಹೊಗೆಸೊಪ್ಪು ಮುಂತಾದವಕ್ಕೆ ಭೂಮಿ ಹೆಚ್ಚು ಹಸನಾಗಿರಬೇಕು. ಜೇಡಿಮಣ್ಣಿನ ಉಳುಮೆಗೆ ತೇವ ಒಂದು ಹದವಾದ ಮಟ್ಟದಲ್ಲಿರುವುದು ಅತ್ಯಗತ್ಯ. ಉಳುಮೆಯ ಆಳ ಸಹ ಮಳೆಯ ಪ್ರಮಾಣವನ್ನವಲಂಬಿಸಿರುತ್ತದೆ. ಮಳೆ ಕಡಿಮೆ ಇರುವ ಸನ್ನಿವೇಶಗಳಲ್ಲಿ ಆಳವಾಗಿ ಉತ್ತರೆ ಮಣ್ಣಿನ ತೇವ ಆರಿಹೋಗುತ್ತದೆ. ತೋಟಗಳಲ್ಲಿ ಪದೇ ಪದೇ ಕೃಷಿ ಮಾಡಿ ಭೂಮಿಯನ್ನು ಸೆಬ್ಬೆಯಲ್ಲಿಡುವುದು ಲಾಭದಾಯಕ. ಸಾಮಾನ್ಯವಾಗಿ ಬೇಸಗೆಯಲ್ಲಿ, ಮೊದಲ ಮಳೆ ಬಂದಾಗ ಉಳುಮೆ ಪ್ರಾರಂಭವಾಗುತ್ತದೆ. ಅದಾದಮೇಲೆ ಬಿತ್ತನೆಯ ಮಳೆ ಬರುವವರೆಗೂ ಅನುಕೂಲವಾದಷ್ಟು ಸಲ ಉಳುತ್ತಾರೆ. ಹೊಲಗಳನ್ನು ಎರಡು ಮೂರು ಬಾರಿಯಾದರೂ ಉಳುವುದು ಸಾಧಾರಣ. ತೀವ್ರ ಬೇಸಾಯ ಜಾರಿಯಲ್ಲಿರುವೆಡೆ ನಾಲ್ಕು, ಐದು ಸಲ ಉಳುವುದು ರೂಢಿ. ನೀರಾವರಿ ಬೇಸಾಯಕ್ಕೆ ತಯಾರಿಸುವ ಭೂಮಿಗಳಲ್ಲಿ ಬಿತ್ತನೆಗೆ ಮುಂಚೆ ನೀರು ಹಾಯಿಸುವುದಕ್ಕೆ ಬೇಕಾದಂತೆ ಕಾಲುವೆಗಳನ್ನು, ದಿಂಡುಗಳನ್ನು ಮತ್ತು ಬಿತ್ತನೆ ಸಾಲುಗಳನ್ನು ಇಲ್ಲವೆ ಪಾತಿಗಳನ್ನು ಮಾಡುತ್ತಾರೆ.

ಬತ್ತದ ಗದ್ದೆಗಳಲ್ಲಿ 5–8 ಸೆಂ.ಮೀ. ಆಳದ ನೀರು ಯಾವಾಗಲೂ ನಿಲ್ಲುವುದು ಅಗತ್ಯ. ಮೊದಲ ಬಾರಿ ನೀರು ಕಟ್ಟಿ ಉಳುಮೆ ಆದಮೇಲೆ, ಪುನಃ ನೀರು ನಿಲ್ಲಿಸಿ ತುಳಿದು ಕೆಸರು ಮಾಡುತ್ತಾರೆ. ಹೀಗೆ ಮಾಡುವುದರಿಂದ, ನೇಗಿಲ ಆಳಕ್ಕಿಂತ ಕೆಳಗಿರುವ ಮಣ್ಣು




ದೇಶೀ ನೇಗಿಲು : 1. ದಿಂಡು (ಬುಡ), 2. ಹಿಡಿಕೆ, 3. ಮೇಳಿ (ಮೆಟ್ಟುಗೋಲು), 4. ಕುಳ (ಗುಳ), 5. ಜಿಗಳೆ, 56. ಈಸು.

ಇನ್ನೂ ಹೂತು, ನೀರು ಬಸಿಯುವುದು ಕಡಿಮೆಯಾಗುತ್ತದೆ; ಗದ್ದೆಯಲ್ಲಿ ನೀರು ನಿಲ್ಲುವುದು ಸಾಧ್ಯವಾಗುತ್ತದೆ. ಮೊದಲ ಉಳುಮೆಯ ಸಮಯದಲ್ಲಿಯೇ ಹೊಂಗೆ ಮುಂತಾದ ಹಸಿರೆಲೆ ಗೊಬ್ಬರಗಳನ್ನು ಭೂಮಿಯಲ್ಲಿ ಸೇರಿಸುತ್ತಾರೆ. ಅದು 2–3 ವಾರಗಳಲ್ಲಿ ಕೊಳೆತು ಮಣ್ಣಿನೊಡನೆ ಸೇರುತ್ತದೆ. ಮತ್ತೆ ಒಂದೆರಡು ಬಾರಿ ಭೂಮಿಯನ್ನು ಉತ್ತು ಮಟ್ಟಸದ ಹಲಗೆಯ ಬಳಕೆಯಿಂದ ಸಮ ಮಾಡುತ್ತಾರೆ. ಹೀಗೆ ಮಾಡುವುದರಿಂದ ನೀರು ಎಲ್ಲ ಭಾಗಗಳಲ್ಲೂ ಒಂದೇ ಮಟ್ಟದಲ್ಲಿ ನಿಲ್ಲುವುದು ಸಾಧ್ಯವಾಗುತ್ತದೆ.

ಭೂ ಸಾಗುವಳಿ: ಸಾಗುವಳಿಗೆ ಬಳಸುವ ಉಪಕರಣಗಳನ್ನು ಕೆಲಸದ ಉದ್ದೇಶದ ಆಧಾರದ ಮೇಲೆ ಮುಖ್ಯವಾಗಿ ಮೂರು ಗುಂಪು ಮಾಡಬಹುದು : 1. ಗಡುಸಾದ ನೆಲವನ್ನು ಸಡಿಲ ಮಾಡಿ ಹೆಂಟೆಯನ್ನು ಬಿಡಿಸುವಂಥವು. 2. ಹೆಂಟೆಯನ್ನು ಒಡೆದು ಪುಡಿಮಾಡುವಂಥವು. 3. ಪುನಃ ಮೇಲ್ಮಣ್ಣನ್ನು ಪೈರಿಗೆ ಅಗತ್ಯವಾದಂತೆ ಸಮವಾಗಿ ಹರಡುವಂಥವು ಇಲ್ಲವೆ ಮಟ್ಟಸಮಾಡಿ ಒತ್ತುಗೂಡಿಸುವಂಥವು. ಮೊದಲ ಕೆಲಸಕ್ಕೆ ಹೆಚ್ಚು ಶ್ರಮ ಅಗತ್ಯ. ಇದಕ್ಕೆ ನೇಗಿಲನ್ನು ಬಳಸುತ್ತಾರೆ. ಅನಂತರ ಹರಗಿ ಇಲ್ಲವೆ ಕುಂಟೆ ಹೊಡೆದು ಹೆಂಟೆಯನ್ನು ಪುಡಿ ಮಾಡಬಹುದು.

# ಉಳುಮೆಯ ಸಾಧನಗಳು

ನೇಗಿಲು: ಇದು ದೇಶಾದ್ಯಂತ ಬಳಕೆಯಲ್ಲಿರುವ ಅತಿಮುಖ್ಯ ಸಾಗುವಳಿ ಸಾಧನ. ದೇಶೀ ನೇಗಿಲುಗಳು ಎಲ್ಲ ಭಾಗಗಳಲ್ಲೂ ಹೆಚ್ಚು ಕಡಿಮೆ ಒಂದೇ ರೀತಿ ಇರುತ್ತವೆ. ಭೂಲಕ್ಷಣ ಮತ್ತು ಆ ಭಾಗದಲ್ಲಿ ದೊರೆಯುವ ಎತ್ತುಗಳ ಸಾಮರ್ಥ್ಯಗಳಿಗೆ ತಕ್ಕಂತೆ ನೇಗಿಲುಗಳ ಗಾತ್ರ ವ್ಯತ್ಯಾಸವಾಗುತ್ತದೆ. ಎರೆ ಭೂಮಿ ಬಹಳ ಜಿಗುಟಾದ್ದರಿಂದ ಆ ಪ್ರದೇಶಗಳಲ್ಲಿ ನೇಗಿಲುಗಳು ದೊಡ್ಡದಾಗಿರುತ್ತವೆ.



ಸುಧಾರಿಸಿದ ರಂಟೆ (ಸೀಮೆ ನೇಗಿಲು)

ನೇಗಿಲನ್ನು ಮನುಷ್ಯ ಯಾವಾಗ ಕಂಡುಹಿಡಿದ ಎನ್ನುವ ವಿಷಯದಲ್ಲಿ ದಾಖಲೆ ಸಿಕ್ಕುವುದು ಕಷ್ಟ. ಪ್ರಪಂಚದ ಎಲ್ಲ ಭಾಗಗಳಲ್ಲೂ 18ನೆಯ ಶತಮಾನದ ಮಧ್ಯಭಾಗದವರೆಗೂ ಮರದ ನೇಗಿಲೇ ಬಳಕೆಯಲ್ಲಿತ್ತು. ಕಬ್ಬಿಣದ ಗುಳ ಸೇರಿಸಿದ ನೇಗಿಲುಗಳ ಉಪಯೋಗ ಯುರೋಪಿನ ಕೆಲಭಾಗಗಳಲ್ಲಿ ಆಮೇಲೆ ಬಳಕೆಗೆ ಬಂತು. 18ನೆಯ ಶತಮಾನದ ಉತ್ತರಾರ್ಧದಲ್ಲಿ ಮೊದಲ ಬಾರಿಗೆ ಕಬ್ಬಿಣದ ನೇಗಿಲುಗಳು ಇಂಗ್ಲೆಂಡಿನಲ್ಲಿ ತಯಾರಾದವು. ಭಾರತದಲ್ಲಿ ಇವುಗಳ ಬಳಕೆ ಸುಮಾರು 1920ರ ಸಮಯದಲ್ಲಿ ಆಯಿತಾದರೂ ರೈತರಿಗೆ ಇವು ಅಷ್ಟು ಪ್ರಿಯವಾಗಿಲ್ಲ. ಕಾರಣ ಅದರ ಹೆಚ್ಚಿನ ಬೆಲೆ. ಹಳ್ಳಿಯಲ್ಲೇ ತಯಾರಾದ ನಾಡು ನೇಗಿಲೇ ಅವರಿಗೆ ಕೊಳ್ಳಲು ಸುಲಭ.

ಮರದ ನೇಗಿಲು: ನೇಗಿಲ ಬುಡ ಅಥವಾ ದಿಂಡು ಮಾಡುವುದಕ್ಕೆ ಬಾಗಿದ ಜಾಲಿಮರದ ತುಂಡನ್ನು ಉಪಯೋಗಿಸುವುದು ಸಾಮಾನ್ಯ. ತುಂಡಿನ ಎರಡು ಬಾಹುಗಳ ಮಧ್ಯ ಕೋನ $135^0$ ಇರುತ್ತದೆ. ಈ ಬುಡಕ್ಕೆ ಒಂದು ಮಟ್ಟಗೋಲು ಅಥವಾ ಮೇಳಿ ಸೇರಿಸುತ್ತಾರೆ. ಮುಂದಕ್ಕೆ ಸಾಗಲು ಅನುಕೂಲವಾಗುವಂತೆ ಚಾಲಕದಂಡ ಅಥವಾ ಈಸು (ಷ್ಯಾಫ್ಟ್ ಪೋಲ್) ಸೇರಿಸಲ್ಪಟ್ಟಿರುತ್ತದೆ. ಬುಡದ ಕೆಳಬಾಹುವನ್ನು ಬೆಣೆಯಾಕಾರಕ್ಕೆ ಕೆತ್ತಿ ಅದರ ಕೊನೆಗೆ ಚಪ್ಪಟೆಯಾದ ಕಬ್ಬಿಣದ ಪಟ್ಟಿ ಅಥವಾ ಗುಳವನ್ನು ಬಂಧಿಸಿರುತ್ತಾರೆ. ಇದೇ ನೆಲವನ್ನು ಚುಚ್ಚಿ ಸಡಿಲಪಡಿಸುವ ಸಾಧನ. ಕೆಸರುಗದ್ದೆಗಳಲ್ಲಿ ಹಗುರವಾದ ನೇಗಿಲನ್ನು ಬಳಸುತ್ತಾರೆ. ಹೊಲ ಮತ್ತು ತೋಟದ ಉಳುಮೆಗೆ ಸ್ವಲ್ಪ ಭಾರವಾದ ನೇಗಿಲು ಹೆಚ್ಚು ಪ್ರಯೋಜನಕಾರಿ.

ಭೂಮಿಯನ್ನು ನೇಗಿಲಿನಿಂದ ಉತ್ತಾಗ, ಗುಳ ಮಣ್ಣಿನಲ್ಲಿ ಮುಂದೆ ಸಾಗಿದಂತೆ ನೇಗಿಲ ಸಾಲು ಏರ್ಪಡುತ್ತದೆ. ಭೂಮಿ ಸೀಳು ಬಿಟ್ಟು ಸೀಳಿನ ಎರಡು ಕಡೆಯೂ ಮಣ್ಣು ಒತ್ತಾಗುತ್ತದೆ. ಎರಡು ಸಾಲುಗಳ ಮಧ್ಯೆ ಇರುವ ನೆಲ ಉಳುಮೆಯಾಗದೆ ಹಾಗೆ ಉಳಿಯುತ್ತದೆ. ನಾಲ್ಕಾರು ಬಾರಿ ಉತ್ತಾಗಲೇ ಭೂಮಿ ಎಲ್ಲೆಡೆ ಸಡಿಲವಾಗುವುದು ಸಾಧ್ಯ. ಉಳುಮೆಯಿಂದ 10–12 ಸೆಂ.ಮೀ ಅಂಗುಲ ಆಳದ ಮಣ್ಣು ಸಡಿಲವಾಗುತ್ತದೆ. ಸಾಲಿನ ಆಳ ಮತ್ತು ಅಗಲ ಸಾಮಾನ್ಯವಾಗಿ ಒಂದು ನೇಗಿಲಿಗೆ ಒಂದೇ ರೀತಿ ಇರುತ್ತದೆ. ನೇಗಿಲ ಬುಡವನ್ನು ಸ್ವಲ್ಪ ಹಿಂದಕ್ಕೆ ಸರಿಸಿ, ನೊಗ ಮತ್ತು ದಿಂಡುಗಳನ್ನು ಸೇರಿಸುವ ಈಸುಮರದ ಉದ್ದವನ್ನು ಹೆಚ್ಚಿಸಿದಾಗ ಸಾಲಿನ ಆಳ ಸ್ವಲ್ಪಮಟ್ಟಿಗೆ ಹೆಚ್ಚಾಗುತ್ತದೆ. ಈಸುಮರವನ್ನು ಕಿರಿದು ಮಾಡಿದಾಗ ಸಾಲಿನ ಆಳ ಕಡಿಮೆಯಾಗುತ್ತದೆ.

ಭಾರತದ ಬಹುಮಂದಿ ರೈತರ ಹತ್ತಿರ ಇರುವ ಏಕೈಕ ಸಾಧನ ನೇಗಿಲು. ಉತ್ತ ಭೂಮಿಯನ್ನು ಹಸನು ಮಾಡುವುದು, ಎರಚಿದ ಗೊಬ್ಬರವನ್ನು ಭೂಮಿಯಲ್ಲಿ ಸೇರಿಸುವುದು, ಮಧ್ಯಂತರ ಸಾಗುವಳಿ, ಪೈರು ಒತ್ತಾಗಿದ್ದಾಗ ವಿರಳ ಮಾಡುವುದಕ್ಕೆ, ಕಳೆಕೀಳುವಿಕೆ ಮತ್ತಿತರ ಅನೇಕ ಕಾರ್ಯಗಳಿಗೆ ನೇಗಿಲನ್ನು ಬಳಸುವುದು ಸಾಮಾನ್ಯ. ನೇಗಿಲನ್ನು ವಿವಿಧ ರೀತಿಯ ಮಣ್ಣುಗಳ ಸಾಗುವಳಿಗೆ ಉಪಯೋಗಿಸಬಹುದು. ತೇವ ಸಾಕಷ್ಟಿರಬೇಕು, ಅಷ್ಟೆ. ಮಳೆ ಬಂದು ಭೂಮಿಯಲ್ಲಿ ತೇವ ಆರುವುದಕ್ಕೆ ಮುಂಚೆ ಉಳುಮೆ ಮಾಡಿ ಮುಗಿಸುವುದು ಮಳೆ ಅನಿಶ್ಚಿತವಿರುವ ಪ್ರದೇಶಗಳಲ್ಲಿ ಅತಿಮುಖ್ಯ. ದೇಶೀ ನೇಗಿಲನ್ನು ಹಳ್ಳಿಯಲ್ಲೇ ಒದಗುವ ಸಾಧನಗಳಿಂದ ತಯಾರು ಮಾಡಬಹುದು. ವೆಚ್ಚ ತೀರ ಕಡಿಮೆ. ಕೆಟ್ಟು ಕೂತರೆ ಹಳ್ಳಿಯ ಬಡಗಿ ತತ್‌ಕ್ಷಣ ಸರಿ ಮಾಡಬಲ್ಲ. ಅದನ್ನು ಚೆನ್ನಾಗಿ ಇಟ್ಟುಕೊಳ್ಳುವುದು ಏನೂ ಕಷ್ಟದ ಕೆಲಸವಲ್ಲ. ಭಾರತದ ರೈತರಿಗಂತೂ ಇದು ಬಹಳ ಸುಲಭ ಸಾಧನ.

ಕಬ್ಬಿಣದ ನೇಗಿಲು: ಪಾಶ್ಚಾತ್ಯ ದೇಶಗಳಲ್ಲಿ ಕಬ್ಬಿಣದ ನೇಗಿಲು ಬಳಕೆಗೆ ಬಂದಿದ್ದು ಸು. 18ನೆಯ ಶತಮಾನದ ಮಧ್ಯ ಭಾಗದಲ್ಲಿ. ಇದು ಸಮಕೋನ ತ್ರಿಕೋನಾಕೃತಿಯ ನಿಲವನ್ನು ಹೊಂದಿದೆ. ತಳ ಮತ್ತು ಪಕ್ಕಗಳ ಮಧ್ಯ ಸಮ ಕೋನಾಂತರವಿರುತ್ತದೆ. ಅವು ಮಣ್ಣನ್ನು ತ್ರಿಕೋನಾಕಾರದಲ್ಲಿ ಛೇದಿಸುತ್ತವೆ. ಹೀಗೆ ಕತ್ತರಿಸಿದ ಮಣ್ಣು, ನೇಗಿಲ ಬೆಣೆಗೆ ಪಕ್ಕದಲ್ಲಿ ಸಜ್ಜಿಸಿರುವ, ಬಾಗಿ ತಿರುಚಿದ ಕಬ್ಬಿಣದ ಉಂಗುರದ ಕ್ರಿಯೆಯಿಂದ, ಅದಕ್ಕೆ ಎದುರಾಗಿ ಪಕ್ಕದಲ್ಲಿ ಬೀಳುತ್ತದೆ.

ಮರದ ನೇಗಿಲಿಗೂ ಕಬ್ಬಿಣದ ನೇಗಿಲಿಗೂ ಇರುವ ವ್ಯತ್ಯಾಸ ಹೀಗಿದೆ. ಕಬ್ಬಿಣದ ನೇಗಿಲನ್ನು ಬಳಸಿದಾಗ ಸಡಿಲವಾದ ಮಣ್ಣು ಒಂದೇ ಪಕ್ಕಕ್ಕೆ ಬೀಳುತ್ತದೆ. ಬಿಡಿಸಿದ ಮಣ್ಣಿನ ಭಾಗ ಆಯಾಕಾರದ್ದಾಗಿರುತ್ತದೆ. ಮರದ ನೇಗಿಲಿನಿಂದ ಬಿಡಿಸಿದ ಮಣ್ಣಿನ ಹೆಂಟೆ ತ್ರಿಕೋನಾಕಾರದ್ದು ಮತ್ತು ಅದು ಸಾಲಿನ ಎರಡು ಕಡೆಯೂ ಬೀಳುತ್ತದೆ. ಎರಡು ಸಾಲಿನ ಮಧ್ಯದ ಭಾಗ ಉಳುಮೆಯಾಗಿರುವುದಿಲ್ಲ. ಕಬ್ಬಿಣದ ನೇಗಿಲಿನಿಂದ ಆಯಾಕಾರದ ಮಣ್ಣಿನ ಹೆಂಟೆಗಳು ಬಿಡುಗಡೆಯಾಗಿ ಸಾಲಿನ ಮಧ್ಯೆ ಉಳುಮೆಯಾಗದ ಜಾಗ ಏನೂ ಉಳಿಯುವುದಿಲ್ಲ. ನೇಗಿಲಿನ ಮುಖ್ಯ ಭಾಗಗಳು, ಗುಳ ಮತ್ತು ಮಗುಚು ಹಲಗೆಗಳ ರಚನೆಗಳಲ್ಲಿ ಕೆಲಸಕ್ಕೆ ಅಗತ್ಯವಾದಂತೆ ವ್ಯತ್ಯಾಸ ಮಾಡಿಕೊಳ್ಳುವ ಸೌಲಭ್ಯವೂ ಉಂಟು.

ಅಲಗು ಕುಂಟೆ: ನೇಗಿಲಿಗೆ ಬದಲು ಮೊದಲ ಉಳುಮೆಗೆ, ಮಳೆ ಕಡಿಮೆ ಇರುವ ಪ್ರದೇಶಗಳಲ್ಲಿ ಇದನ್ನು (ಬ್ಲೇಡ್ ಹ್ಯಾರೊ) ಉಪಯೋಗಿಸುತ್ತಾರೆ. 15 ಸೆಂ.ಮೀ ಅಂಗುಲ ಗಾತ್ರದ ಮರದ ತುಂಡು ಇದರ ಮುಖ್ಯ ಅಂಗ. ಇದಕ್ಕೆ ಮಟ್ಟುಗೋಲು, ಈಸುಮರ ಮತ್ತು ಅಲಗುಗಳನ್ನು ಸಜ್ಜಿಸಿರುತ್ತಾರೆ. ಅಲಗು 1 ಮೀ. ಅಡಿ ಉದ್ದ, 7.5 ಸೆಂ.ಮೀ. ಅಂಗುಲ ಅಗಲ, 1.5 ಸೆಂ.ಮೀ. ಅಂಗುಲ ದಪ್ಪ ಇರುತ್ತದೆ. ಅಗತ್ಯಕ್ಕೆ ಅನುಕೂಲವಾಗುವಂತೆ ಈ ಕುಂಟೆಯ ಅಂಗಗಳನ್ನು ವ್ಯತ್ಯಾಸ ಮಾಡಬಹುದು. ನೇಗಿಲ ಗುಳ ಕತ್ತರಿಸಿದಂತೆ ಕುಂಟೆಯಿಂದ ಸಾಲು ಉಳುಮೆಯಾಗುವುದಿಲ್ಲ. ಅದಕ್ಕೆ ಬದಲು, ಅಲಗು 3–4 ಅಂಗುಲ ಆಳದಲ್ಲಿ ಭೂಮಿಯಲ್ಲಿ ಹರಿದು ಮಣ್ಣು ಇರುವೆಡೆಯೆ ಸಡಿಲವಾಗುತ್ತದೆ. ಮೇಲ್ಪೈಯಲ್ಲಿನ ಕಳೆಗಳು ನಾಶವಾಗುತ್ತವೆ. ಹಿಂದಿನ ಪೈರಿನ ಕೂಳೆಗಳಿದ್ದಲ್ಲಿ ಅವು ಹಾಗೆಯೇ ಮೇಲ್ಪದರದಲ್ಲೇ ಹೊದಿಕೆಯಂತೆ ಉಳಿಯುತ್ತವೆ.

ಜಂತು ಕುಂಟೆ: ಈ ಸಜ್ಜಿಗೆ ಅನೇಕ ಹಲ್ಲುಗಳಿರುತ್ತದೆ. ಇವು ಹೆಂಟೆಯೊಳಗೆ ಇಳಿದು ಅವನ್ನು ಪುಡಿ ಮಾಡುತ್ತವೆ. ಈ ಹಲ್ಲುಗಳನ್ನು 18–22 ರಿಂದ ಸೆಂ.ಮೀ. ಅಂತರದಲ್ಲಿ ಸಜ್ಜಿಸಿರುತ್ತಾರೆ. ಇವುಗಳ ಉದ್ದ 22–30 ಸೆಂ.ಮೀ. ಕಬ್ಬಿಣದ ನೇಗಿಲಿನಿಂದ ಉತ್ತು ದೊಡ್ಡ ಹೆಂಟೆ ಇದ್ದಾಗ ಮಾತ್ರ ಕುಂಟೆಯನ್ನು ಬಳಸುತ್ತಾರೆ.



ನಾಡ ಹಲುಬೆ

ಹಲುಬೆ: ಇದಕ್ಕೂ ಅನೇಕ ಹಲ್ಲುಗಳಿರುತ್ತವೆ. ಕುಂಟೆ ಹೊಡೆದಾಗ ಮೇಲೆ ಉಳಿದಿರ ಬಹುದಾದ ಸಣ್ಣ ಹೆಂಟೆಗಳನ್ನು ಹುಡಿ ಮಾಡಿ, ಭೂಮಿಯನ್ನು ಬಿತ್ತನೆಗೆ ಹದಮಾಡಲು ಇದರಿಂದ ಅನುಕೂಲ. ಹಲ್ಲುಗಳ ಮಧ್ಯದ ಅಂತರ 5–7.5 ಸೆಂ.ಮೀ. ಇದ್ದು 10 ಸೆಂ.ಮೀ ಗಿಂತ ಹೆಚ್ಚಿರುವುದಿಲ್ಲ. ಹಲುಬೆಯಲ್ಲಿ ಅನೇಕ ವಿಧ. ತುದಿಯಲ್ಲಿ ಹಲ್ಲುಗಳು, ಮೊಳೆ, ಬಾಚಿ, ಇಲ್ಲವೇ ಬಿಲ್ಲೆಗಳು ಇರಬಹುದು. ಸಾಲುಬೆಳೆಗಳ ಮಧ್ಯದಲ್ಲಿ ಕೃಷಿ ಮಾಡಲು ಸೂಕ್ತರೀತಿಯಲ್ಲಿ ಸಜ್ಜಿಸಿರುವ ಹಲುಬೆಗಳು ಬಳಕೆಯಲ್ಲಿವೆ.

ಈ ಎಲ್ಲ ಸಲಕರಣೆಗಳ ಕೆಲಸಕ್ಕೂ ಎತ್ತೇ ಆಧಾರ. ಅನೇಕ ಕಡೆ ಬರಡು ಹಸುಗಳು ಕೋಣಗಳು ಮತ್ತು ಕತ್ತೆಗಳನ್ನು ಬಳಸುತ್ತಾರೆ. ಪಶ್ಚಿಮ ರಾಷ್ಟ್ರಗಳಲ್ಲಿ ಕುದುರೆಗಳ ಬಳಕೆ ಹೆಚ್ಚು. ಅರೇಬಿಯದಂಥ ಮರುಭೂಮಿ ಪ್ರದೇಶದಲ್ಲಿ ಒಂಟೆಗಳ ಬಳಕೆ ಇದೆ. ಈಗೀಗ ಬೇಸಾಯದ ಕೆಲಸಕ್ಕೆ ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆ. ಎತ್ತುಗಳ ಬದಲು ಟ್ರ್ಯಾಕ್ಟರ್ ಬಳಕೆ ಹೆಚ್ಚು. ಹಾಗೆಯೇ ಬತ್ತದ ಗದ್ದೆಗಳನ್ನು ಉಳುವುದಕ್ಕೆ ಯಾಂತ್ರಿಕ ನೇಗಿಲು ರೂಢಿಗೆ ಬಂದಿದೆ.

ಉಳುಮೆಯ ಕೆಲಸಗಳಿಗಾಗಿ ಬಳಸುವ ಯಂತ್ರಗಳಲ್ಲಿ ಟ್ರ್ಯಾಕ್ಟರಿನದು ಬಲು ಮುಖ್ಯ ಪಾತ್ರ. ಆಡು ಮುಟ್ಟದ ಗಿಡವಿಲ್ಲವೆನ್ನುವಂತೆ ಹೊಲದಲ್ಲಿ ಟ್ರ್ಯಾಕ್ಟರಿನಿಂದ ಮಾಡಲಾಗದ ಕೆಲಸವೇ ಇಲ್ಲವೆಂದು ಹೇಳಬಹುದು. ಬೀಜ ಬಿತ್ತಲು ನೆಲ ಹದಮಾಡುವುದರಿಂದ ಹಿಡಿದು ಬೆಳೆದ ಬೆಳೆಯ ಕೊಯ್ಲು ಮಾಡಿ ಧಾನ್ಯವನ್ನು ಶೇಖರಿಸಿ ಮನೆಗೆ ತರುವವರೆಗಿನ ಎಲ್ಲ ಕೆಲಸಗಳಿಗೂ ಇದನ್ನು ಬಳಸಬಹುದು.

ಟ್ರ್ಯಾಕ್ಟರ್ ಮೊದಲು ಕಾಣಿಸಿಕೊಂಡದ್ದು ಅಮೆರಿಕದಲ್ಲಿ, ಸುಮಾರು 1880ರ ಹೊತ್ತಿಗೆ. ಆದರೆ ಟ್ರ್ಯಾಕ್ಟರ್ ಎಂಬ ಪದ ಬಳಕೆಗೆ ಬಂದದ್ದು 1906ರಿಂದೀಚೆಗೆ. ಮೊದಮೊದಲು ಇದನ್ನು ಭಾರ ಸಾಗಿಸಲಷ್ಟೇ ಉಪಯೋಗಿಸುತ್ತಿದ್ದರು. ಕಾಲ ಕಳೆದಂತೆ ಕೃಷಿ ಕೆಲಸಗಳಿಗಾಗಿಯೇ ಇದರ ಉಪಯೋಗ ಹೆಚ್ಚಿತ್ತು ಸಾಮಾನ್ಯವಾಗಿ ಕೃಷಿಕೆಲಸಗಳಲ್ಲಿ ಸಂದರ್ಭೋಚಿತವಾಗಿ ಉಳುವ, ಬಿತ್ತುವ, ಕೊಯ್ಯುವ, ಬೀಜಗಳನ್ನು ಬೇರ್ಪಡಿಸುವುದೇ ಮೊದಲಾದ ಕೆಲಸಗಳಿಗೆ ಬೇಕಾಗುವ ಯಂತ್ರಭಾಗಗಳನ್ನು ಟ್ರ್ಯಾಕ್ಟರಿನ ಹಿಂದೆ ಜೋಡಿಸಿ ಬಳಸುತ್ತಾರೆ. ಹೊಲದಲ್ಲಿ ಉಳಿದ ದಂಟು ಮತ್ತು ಹುಲ್ಲನ್ನು ರಾಶಿಹಾಕಲೂ ಇದನ್ನು ಉಪಯೋಗಿಸಬಹುದು.

ಇದರ ಬಳಕೆಯಿಂದ ಕೃಷಿ ಕೆಲಸಗಳಿಗಾಗಿ ಖರ್ಚಾಗುವ ಅಪಾರ ಕೂಲಿಯನ್ನೂ ಕೆಲಸದ ವೇಳೆಯನ್ನೂ ತಗ್ಗಿಸಬಹುದು. ಒಬ್ಬ ಮನುಷ್ಯ 20 ಅಶ್ವ ಸಾಮರ್ಥ್ಯದ ಒಂದು ಟ್ರ್ಯಾಕ್ಟರನ್ನು ಉಪಯೋಗಿಸಿ 200 ಜನರ ಕೆಲಸವನ್ನು ನಿಭಾಯಿಸಬಲ್ಲ. ಭಾರತದಲ್ಲಿ ಇತ್ತೀಚೆಗೆ ರೈತರು ಆಧುನಿಕ ಯಂತ್ರಗಳನ್ನು ಬಳಸಲು ಸರ್ಕಾರ ಪ್ರೋತ್ಸಾಹಿಸುತ್ತಿದೆ. ಬ್ಯಾಂಕುಗಳ ಮೂಲಕ ಟ್ರ್ಯಾಕ್ಟರುಗಳನ್ನು ಹಂಚುವ ವ್ಯವಸ್ಥೆ ಮಾಡಿದೆ. (ಬಿ.ಎ.ಎ.)

**ಉಳುವಿ:** ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಸುಪ ತಾಲ್ಲೂಕಿನ ದಕ್ಷಿಣಕ್ಕೆ 32 ಕಿಮೀ. ದೂರದಲ್ಲಿ ಯಲ್ಲಾಪುರಕ್ಕೆ ಸಮೀಪದಲ್ಲಿರುವ ಒಂದು ಗ್ರಾಮ. ಪುರಾತನ ಸ್ಥಳ; ದುರ್ಗಮ ಪ್ರದೇಶ. ಜನಸಂಖ್ಯೆ 735 (2001). ಅಣಶಿ ಘಟ್ಟದ ಹಾಗೂ ಸುಪದ ಮೇಲಿಂದ ಇಲ್ಲಿಗೆ ಬರಲು ಎರಡು ಅರಣ್ಯ ಮಾರ್ಗಗಳಿವೆ. ಗವಿಮಠ ಎನ್ನುವ ಸ್ಥಳದಲ್ಲಿ ಕೆಲವು ಹಳೆಯ ಗುಹೆಗಳಿವೆ. ಇವು ವೀರಶೈವ ಸಾಧುಗಳವಾಗಿರಬೇಕು. ಒಂದಕ್ಕೆ ಬಸವಣ್ಣನವರ ಸಹೋದರಿ



ಚೆನ್ನಬಸವೇಶ್ವರ ದೇವಾಲಯ

ಎನ್ನಲಾದ ಅಕ್ಕನಾಗಮ್ಮನ ಗವಿ ಎನ್ನುತ್ತಾರೆ. ವಡ್ಡಕಲದಲ್ಲಿ ಒಂದು ಹಳೆಯ ಕಟ್ಟಡವಿದೆ. ಇದರ ಬದಿಗೆ ಕೆರೆಯಿದ್ದು ಸದಾಕಾಲ ನೀರು ತುಂಬಿರುತ್ತದೆ. ಪೂರ್ವಕ್ಕೆ ಇನ್ನೊಂದು ಕೆರೆಯಿದೆ. ಇದರಲ್ಲಿ ಸದಾಕಾಲ ನೀರಗುಳ್ಳೆಗಳು ಮೇಲಕ್ಕೆ ಬರುತ್ತಿರುತ್ತವೆ. ಯಾತ್ರಿಕರು ಇಲ್ಲಿ ಮೀಯುತ್ತಾರೆ. ಉಳುವಿ ಶಬ್ದದ ಅರ್ಥ ನಾನು ಇಲ್ಲಿ ಉಳಿಯುವೆ ಎಂದಾಗುತ್ತದೆ. ಆದರೆ ಇದರ ಇತಿಹಾಸ ಸ್ಪಷ್ಟವಿಲ್ಲ. 12ನೆಯ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಯಾದ ಮೇಲೆ ವೀರಶೈವರು ಯಲ್ಲಾಪುರ ಮತ್ತು ಗಣೇಶನ ಗುಡಿ ರಸ್ತೆಯಿಂದ ಉಳುವಿಯನ್ನು ಪ್ರವೇಶಿಸಿದರು. ಆಗ ಇದನ್ನು ವೃಷಾಪುರ ಎನ್ನಲಾಗುತ್ತಿತ್ತು. ವಲಸೆ ಬಂದ ಶರಣರ ಮಾರ್ಗದರ್ಶಿಗಳಾಗಿ ಚೆನ್ನಬಸವಣ್ಣ, ಅಕ್ಕನಾಗಮ್ಮ ಮುಂತಾದ ಇನ್ನೂ ಅನೇಕ ಶರಣರೂ ವಚನಕಾರರೂ ಇಲ್ಲಿಗೆ ಬಂದರು. ಇಲ್ಲಿಯೇ ವೀರಶೈವ ಧರ್ಮದ ಭವಿಷ್ಯತ್ತಿನ ಬಗ್ಗೆ ಯೋಜನೆಗಳನ್ನು ರೂಪಿಸಿ ಧರ್ಮಪ್ರಚಾರ ಕೈಕೊಳ್ಳಲಾಯಿತು. ಚೆನ್ನಬಸವಣ್ಣ ಇಲ್ಲಿ ಲಿಂಗೈಕ್ಯನಾದ.

ಹೈದರನಿಗಿಂತ ಪೂರ್ವದಲ್ಲಿ ಈ ಪ್ರದೇಶವನ್ನು ಒಬ್ಬ ಹರಿಜನ ಆಳುತ್ತಿದ್ದ. ವೀರಭದ್ರ ಹೊಂಡದ ಹತ್ತಿರ ಇರುವ ಆತನ ಮನೆಯನ್ನು ಇಂದೂ ಗುರುತಿಸಬಹುದು. ಹೈದರ್ ಈತನನ್ನು ಗೆದ್ದು ಈ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡ.

ಟಿಪ್ಪುವಿನ ತರುವಾಯ ಬಾರ್ದೆ ಬಾಬುರಾವ್ ಎಂಬಾತ ಇಲ್ಲಿ ತುಂಬ ಪ್ರಭಾವ ಬೀರಿದ. ಆತ ಕಟ್ಟಿಸಿದ ಒಂದು ಸಣ್ಣ ಕೋಟೆ ಈಗಲೂ ಅಸ್ತಿತ್ವದಲ್ಲಿದೆ. ಇದರ ಸಮೀಪದಲ್ಲಿರುವ ಬಾಳ್ಗೂರ ಕುಣಂಗ ಎಂಬ ಹಳ್ಳಿ ದೊಡ್ಡ ವ್ಯಾಪಾರಕೇಂದ್ರ. *

**ಉಳುವಿಯ ಮಹಾಮನೆ:** ಚೆನ್ನಬಸವಣ್ಣನವರ ಸಮಾಧಿ ಇರುವ ಸ್ಥಳಕ್ಕೆ ಈ ಹೆಸರಿದೆ. ಕಲ್ಯಾಣದಲ್ಲಿದ್ದ ಬಸವಣ್ಣನವರ ಮನೆಯಲ್ಲಿ 1,96,000ಶರಣರಿಗೆ ಆಶ್ರಯ ನೀಡಿ ದಾಸೋಹ ನಡೆಸಿದ್ದರಿಂದ ಅದನ್ನು ಮಹಾಮನೆ ಎಂದು ಕರೆಯಲಾಯಿತೆಂದು ವೀರಶೈವ ಸಾಹಿತ್ಯ ಗ್ರಂಥಗಳು ಹೇಳುತ್ತವೆಯಷ್ಟೆ. ಅಂಥ ಕಟ್ಟ ಕಡೆಯ ದಾಸೋಹ ನಡೆದದ್ದು ಇಲ್ಲಿ. ಶಿವರಾತ್ರಿ ಅಮಾವಾಸ್ಯೆಯ ಪೂರ್ವದ ಪೂರ್ಣಿಮೆಯಂದೂ ಪ್ರತಿವರ್ಷ ಇಲ್ಲಿ ಜಾತ್ರೆ ನಡೆಯುತ್ತದೆ. ಮಾರ್ಗಗಳು ಕಷ್ಟದಾಯಕವಾಗಿದ್ದರೂ ಯಾಂತ್ರಿಕರೂ ಜಾತ್ರೆಗೆ ಕಿಕ್ಕಿರಿದು ನೆರೆಯುತ್ತಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಂದಲೂ ಸಹಸ್ರಗಟ್ಟಲೆ ಬಂದು ಸೇರುತ್ತಾರೆ. (ಬಿ.ಎಸ್.)

**ಉಳ್ಳೂರ್:** 1877–1949. ಕುಮಾರನ್ ಆಶಾನ್, ವಳ್ಳತ್ತೋಳ್ ಕವಿಗಳಷ್ಟೇ ಶ್ರೇಷ್ಠರೂ ಅವರ ಸಮಕಾಲೀನರೂ ಆಗಿದ್ದ ಕವಿಗಳು ಉಳ್ಳೂರ್ ಎಸ್.ಪರಮೇಶ್ವರಯ್ಯ ಅವರು. ಮಲೆಯಾಳ ಸಾಹಿತ್ಯದಲ್ಲಿ ಇವರ ಸ್ಥಾನ ದೊಡ್ಡದು. 1897ರಲ್ಲಿ ಪದವೀಧರರಾಗಿ ಅಧ್ಯಾಪಕ ವೃತ್ತಿಯನ್ನು ಕೈಗೊಂಡು ಕೆಲಸದಲ್ಲಿದ್ದುಕೊಂಡೇ ಬಿ.ಎಲ್. ಮತ್ತು ಎಂ.ಎ. ಪದವಿಗಳನ್ನು ಪಡೆದುಕೊಂಡು ಸರ್ಕಾರದ ಅನೇಕ ಇಲಾಖೆಗಳಲ್ಲಿ ಕೆಲಸಮಾಡಿ ಕಡೆಯಲ್ಲಿ ಲ್ಯಾಂಡ್ ರೆವಿನ್ಯೂ ಇನ್ಸ್‌ಪೆಕ್ಟರಾಗಿ ನಿವೃತ್ತರಾದರು. ವಲಿಯ ಕೋಯಿತ್ತಂಬುರಾನ್ ಕವಿಯ ಪ್ರಮುಖ ಅನುಯಾಯಿಯಾಗಿದ್ದುಕೊಂಡು ಸಾಹಿತ್ಯದಲ್ಲಿ ಅಭಿಜಾತ ಸಂಪ್ರದಾಯನಿಷ್ಠರಾಗಿದ್ದ ವರಿವರು. ದ್ವಿತೀಯಾಕ್ಷರ ಪ್ರಾಸದ ವಾದವಿವಾದದಲ್ಲಿ ಅವರು ಬಲು ದಿಟ್ಟ ನಿಲವನ್ನು ತಾಳಿದರು. ಉಮಾಕೇರಳವೆಂಬ ಮಹಾಕಾವ್ಯ ಆ ನಿಲುವಿನ ಫಲಶ್ರುತಿ, ಕಾಲಕ್ರಮದಲ್ಲಿ ಅವರ ಕಾವ್ಯ ಅನೇಕ ಪರಿವರ್ತನೆಗಳಿಗೆ ವಿಧೇಯವಾಯಿತು. ಇವರು ಕಾವ್ಯರಚನೆಗೆ ಪ್ರಾರಂಭ ಮಾಡಿದಾಗ ಕುಮಾರನ್ ಆಶಾನ್, ವಳ್ಳತ್ತೋಳ್ ಮೊದಲಾದ ಉತ್ಕೃಷ್ಟ ಕವಿಗಳು ತಮ್ಮ ಗಾನಸುಧೆಯಿಂದ ಮಲೆಯಾಳಿಗಳನ್ನು ತಣಿಸಿದ್ದರು. ಒಂದು ಕಾಲದಲ್ಲಿ ತಾವು ಅನುಪೇಕ್ಷಣೀಯವೆಂದು ಭಾವಿಸಿದ್ದ ದ್ವಿತೀಯಾಕ್ಷರ ಪ್ರಾಸ ಜನಾಭಿರುಚಿಯನ್ನನುಸರಿಸಿ ಅಗಣ್ಯವಾಗುತ್ತದೆಂಬುದನ್ನು ಕಂಡೊಡನೆಯೇ ಉಳ್ಳೂರ್ ಅದನ್ನು ತ್ಯಜಿಸಿದರು. ವಳ್ಳತ್ತೋಳ್ ಕವಿ ದ್ರಾವಿಡ ವೃತ್ತಗಳಲ್ಲಿ ಕವಿತಾರಚನೆ ಮಾಡಿ ಕೇರಳೀಯರ ಪ್ರೀತಿಪಾತ್ರರಾಗಿರುವುದನ್ನು ಮನಗಂಡು ಅವರು ಆ ಬಗೆಯ ಕಾವ್ಯ ನಿರ್ಮಿತಿಯನ್ನೂ ಮಾಡಿದರು.

ಉಮಾಕೇರಳದ ಬಳಿಕ ಇವರು ರಚಿಸಿದ ಕಾವ್ಯಗಳೆಲ್ಲ ಸಂಕಲಿತವಾಗಿ ಹೊರಬಂದಿವೆ. ಅರುಣೋದಯಂ, ತಾರಾಹಾರಂ, ಕಿರಣಾವಲಿ, ರತ್ನಮಾಲಾ, ಮಣಿಮಂಜೂಷ, ಹೃದಯ ಕೌಮುದಿ, ತರಂಗಿಣಿ, ಕಲ್ಪಶಾಖಿ, ಅಮೃತಧಾರ, ದೀಪಾವಲಿ, ಚಿತ್ರಶಾಲ, ತಪ್ತಹೃದಯ–ಎಂಬುವೇ ಆ ಸಂಕಲನಗಳು. ಇವಲ್ಲದೆ ಕರ್ಣಭೂಷಣಂ, ಪಿಂಗಳ, ಭಕ್ತಿದೀಪಿಕ ಮೊದಲಾದ ಖಂಡಕಾವ್ಯಗಳನ್ನು ಇವರು ರಚಿಸಿದ್ದಾರೆ. ಸುಜಾತೋದ್ವಾಹಂ ಚಂಪೂ, ಮಂಗಳಮಂಜರಿ, ವಂಜೀಶಗೀತ ಮುಂತಾದ ಹಳೆಯ ಬಗೆಯ ಕಾವ್ಯಗಳ ರಚನೆಯೂ ಅವರಿಂದ ನಡೆದಿದೆ. ತಾರಾಹಾರವೆಂಬ ಕವನ ಸಂಗ್ರಹದಲ್ಲಿ ಬರುವ 'ಮಣಿತ್ತುಳ್ಳಿ' (ಮಳೆಹನಿ) ಎಂಬ ಕವನ ಉಳ್ಳೂರರ ಕಲಾವೈಭವಕ್ಕೆ ಪರಮ ಸಾಕ್ಷಿಯಾಗಿದೆ. ಆಕಾಶದಿಂದ ನೆಲಕ್ಕೆ ಬೀಳಲಿರುವ ಮಳೆಯ ಹನಿಯನ್ನು ಅನೇಕಾನೇಕ ಸೌಂದರ್ಯ ಪ್ರತೀಕಗಳೊಡನೆ ಉಳ್ಳೂರ್ ಉಪಮಿಸುತ್ತಾರೆ, ಉತ್ಪ್ರೇಕ್ಷಿಸುತ್ತಾರೆ. 'ವೀಣ ಪೂ' (ಬಿದ್ದ ಹೂ) ಕವನದಲ್ಲಿ ಕುಮಾರನ್ ಆಶಾನ್ ಮಾಡಿರುವಂತೆ ಮಳೆಹನಿಯ ಮೂಲಕ ಮನುಷ್ಯ ಜೀವನವನ್ನು ಚಿತ್ರೀಕರಿಸಲು ಯತ್ನಿಸಿದ್ದಾರೆ. (ಕೆ.ಕೆ.ಎಸ್.)

**ಊ** ಕನ್ನಡ ವರ್ಣಮಾಲೆಯಲ್ಲಿ ಆರನೆಯ ಅಕ್ಷರ. ಸ್ವರ. ಸ್ವತಂತ್ರವಾಗಿ ಪ್ರಾಚೀನ ಶಾಸನಗಳಲ್ಲಿ ದೊರಕುವುದು ಬಹು ವಿರಳ. ಆದುದರಿಂದ ವಿಕಾಸವನ್ನು ಗಮನಿಸುವುದು ಕಷ್ಟ. ವ್ಯಂಜನಗಳ ಜೊತೆಗೆ ಸೇರಿಕೊಂಡಾಗ ಎರಡು ಸಣ್ಣರೇಖೆಗಳನ್ನು ವ್ಯಂಜನದ ಕೆಳಗೆ ಇಲ್ಲವೇ ಪಕ್ಕದಲ್ಲಿ ಬರೆಯುವುದರಿಂದ ಇದು ಸೂಚಿತವಾಗುತ್ತಿತ್ತು. ಅಶೋಕನ ಕಾಲದ ಬ್ರಾಹ್ಮೀಲಿಪಿಯಲ್ಲಿ ಇದನ್ನು ಕಾಣಬಹುದು. ಕಾಲಕ್ರಮದಲ್ಲಿ ಎರಡು ಕೊಂಡಿಗಳನ್ನು ಅಕ್ಷರದ ಪಕ್ಕದಲ್ಲಿ ಬರೆಯುವ ಪ್ರವೃತ್ತಿ ರೂಢಿಸಿತು.




ಈ ಅಕ್ಷರ ಪಶ್ಚಸಂವೃತ ಗೋಲ ದೀರ್ಘಸ್ವರಧ್ವನಿಯನ್ನು ಸೂಚಿಸುತ್ತದೆ. (ಎ.ವಿ.ಎನ್.)

**ಊಟಿ: ನೋಡಿ–ಉದಕಮಂಡಲ.**

**ಊಡಮ್:** ಅಕ್ಯಾಂತೊಟೆರಿಜಿಯೈ ಗಣದ ಪರ್ಸಿಡೇ ಕುಟುಂಬಕ್ಕೆ ಸೇರಿದ ಮೀನುಗಳ ಒಂದು ಜಾತಿ. ಇಂಗ್ಲಿಷ್ ಹೆಸರು *ಗೆರೆಸ್*. ಇವು ಎಲುಬು ಮೀನುಗಳು. ಉಷ್ಣವಲಯದ ಸಮುದ್ರವಾಸಿಗಳು. ಕೆಲವು ಪ್ರಭೇದಗಳು ಸಿಹಿನೀರಿಗೆ ವಲಸೆಹೋಗುತ್ತವೆ. ಬಣ್ಣ ಬೆಳ್ಳಿಯಂತೆ. 25 ಸೆಂ.ಮೀ. ಉದ್ದ ಮೀರದ ದೇಹವನ್ನು ನಯವಾದ ಹುರುಪುಗಳು ಮುಚ್ಚಿವೆ. ಇವು ಲೋಮಾಂಗಗಳು. ಚಾಚಿಕೊಂಡಿರುವ ಬಾಯನ್ನು ಹೊರಕ್ಕೆ ಅದುಮಿದಾಗ ಜೋತುಬೀಳುತ್ತವೆ. ಹಲ್ಲುಗಳು ದುರ್ಬಲವಾಗಿವೆ. ಬಾಯ ಅಂಗುಳ ದಂತರಹಿತವಾಗಿದೆ. ಕಣ್ಣುಗಳು ದೊಡ್ಡವು. ಮೇಲುರಕ್ಕೆಯ ಎರಡು ಭಾಗಗಳು ಆಳವಾಗಿ ಸೀಳಿಕೊಂಡು ಬೇರೆ ಬೇರೆಯಾಗಿವೆ. ಬಾಲದ ರೆಕ್ಕೆ ಎರಡು ಕವಲಾಗಿದೆ. ಕಿವಿರು ಕವಚದ ಮುಂಭಾಗದಲ್ಲಿ ಸಾಮಾನ್ಯವಾಗಿ ಮುಳ್ಳುಗಳಿರುವುದಿಲ್ಲ. ಗೆರೆಸ್ ಜಾತಿಯಲ್ಲಿ ಸು. 30 ಪ್ರಭೇದಗಳಿವೆ. ಇವುಗಳೆಲ್ಲ ಸಾಧಾರಣವಾಗಿ ಒಂದೇ ರೀತಿಯ ಹೋಲಿಕೆಗಳಿರುವುದರಿಂದ ಇವನ್ನು ವರ್ಗೀಕರಿಸುವುದು ಬಲು ಕಷ್ಟ. *ಗೆರೆಸ್ ಆಲ್ಬಿಸ್ಪಿನಿಸ್* ಮೀನು ಗಂಗಾನದಿಯ ಮುಖದಲ್ಲಿ ಸಿಗುತ್ತದೆ. (ಎನ್.ವಿ.ಎ.)

**ಊದಿ:** ಮಧ್ಯಪ್ರಮಾಣದ, ಹರಡಿದ ಹಂದರದ, ದಪ್ಪ ಕೊಂಬೆಗಳ, ಪರ್ಣಪಾತಿ ಮರ (ಒಡೈನ ವೊಡಿಯರ್). ಗುಗುಲ್ ಎಂದೂ ಹೆಸರು. ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದೆ. ತೊಗಟೆ ಮಂದ ಬೂದು ಬಣ್ಣದ್ದು ಮೇಲೆಲ್ಲ ಅಸಮರೂಪಕ ಹೊಪ್ಪಳಿಕೆಗಳಿವೆ. ಒಳಮೊಗ ಕಿರುಗೆಂಪು. ಭಾರತದ ಕಾಡುಗಳಲ್ಲಿ ಇದರ ವ್ಯಾಪನೆಯಿದೆ. ಡಿಸೆಂಬರಿನಿಂದ ಜೂನ್‌ವರೆಗೆ ದೀರ್ಘಕಾಲ ಎಲೆಯಿಲ್ಲದೆ ಮರ ಬೋಳಾಗಿರುವುದು. ಮಾರ್ಚ್–ಏಪ್ರಿಲ್‌ನಲ್ಲಿ ಹೂಗಳು ಮೂಡಿ, ಮೇ–ಜೂನ್ ತಿಂಗಳಲ್ಲಿ ಕಾಯಿಗಳು ಮಾಗುವುವು. ಚೌಬೀನೆಯ ಕೆಚ್ಚು ಕುಯ್ದ ಹೊಸದರಲ್ಲಿ ಎಳೆಗೆಂಪಿನಿಂದಿದ್ದು ಕ್ರಮೇಣ ಕಪ್ಪುಛಾಯೆ ಹೊಂದಿ, ಹಲಗೆಗಳಿಗೆ, ವ್ಯವಸಾಯ ಉಪಕರಣಗಳಿಗೆ ಉಪಯುಕ್ತವಾಗಿರುವುದು. ತೊಗಟೆಯಿಂದ ಬರುವ ಅಂಟನ್ನು ಔಷಧಿಗೆ ಬಳಸುತ್ತಾರೆ. (ಎ.ಕೆ.)

**ಊದುಕುಲುಮೆ: ನೋಡಿ–ಉಕ್ಕು.**

**ಊದುತುಪಾಕಿ:** ಉದ್ದದ ಕೊಳವೆಯ ಮೂಲಕ ಬಲಪೂರಿತವಾಗಿ ಗಾಳಿಯನ್ನು ಊದಿ ಅದರ ಇನ್ನೊಂದು ಕೊನೆಯಲ್ಲಿ ಸಿಕ್ಕಿಸಿರುವ ವಿಷಯುಕ್ತ ಅಲಗನ್ನು ಗುರಿಯೆಡೆಗೆ ಎಸೆಯಲು ಉಪಯೋಗಿಸುವ ಸಲಕರಣೆ (ಬ್ಲೋಗನ್). ಆದಿಜನಾಂಗಗಳ ಆಯುಧಗಳ ಪೈಕಿ ಇದೊಂದು. ತುಪಾಕಿ ಎಂದೂ ಕರೆದಿದ್ದರೂ ವಾಸ್ತವವಾಗಿ ಇದೊಂದು ಉದ್ದವಾದ (6'–15') ಮರದ ಕೊಳವೆ. ಬಾಯ ಹತ್ತಿರದ ವ್ಯಾಸ 1", ಮೂತಿಯ ತುದಿಯಲ್ಲಿ ¼". ಮಲೆಯ ದೇಶದ ಬೋರ್ನಿಯೊ ದ್ವೀಪದಲ್ಲಿ ದೊರೆವ ಹಗುರು ಆದರೆ ಗಟ್ಟಿಯಾದ ಮರವನ್ನು ಕೊರೆದು ಈ ಕೊಳವೆಯನ್ನು ಮಾಡುತ್ತಾರೆ. ಅಲಗುಗಳ ಉದ್ದ 8" ಅಥವಾ 9". ಅವುಗಳ ತುದಿ ಬಹಳ ಮೊನಚು; ಅಲ್ಲಿಗೆ ಹರಿತ ಮತ್ತು ಚೂಪಾದ ಮೂಳೆಯ ಅಥವಾ ಲೋಹದ ವಿಷಯುಕ್ತ ಅಲಗನ್ನು ಪೋಣಿಸಿರುತ್ತಾರೆ. ಮಲೆಯ ಪರ್ಯಾಯ ದ್ವೀಪದ ಬೋರ್ನಿಯೊದಲ್ಲಿನ ಕಾಡು ಜನ ಇಂಥ ತುಪಾಕಿಯನ್ನು ಉಪಯೋಗಿಸುತ್ತಾರೆ. ದಕ್ಷಿಣ ಅಮೆರಿಕದಲ್ಲಿ ದುಷ್ಟ ಮೃಗಗಳನ್ನು ಕೊಲ್ಲುವುದಕ್ಕೂ ಇವನ್ನು ಉಪಯೋಗಿಸುತ್ತಾರೆ. (ಎ.ಎನ್.ಎಸ್.ಎಂ.)

**ಊದುಬತ್ತಿ:** ಸಾಂಬ್ರಾಣಿ, ಹಾಲುಮಡ್ಡಿ, ಗಂಧದಪುಡಿ ಮುಂತಾದ ಸುವಾಸನೆ ಬೀರುವ ವಸ್ತುಗಳ ಸರಿಯನ್ನು ಬಳಿದು ಮಾಡಿರುವ ಕಡ್ಡಿ, ಅಗರಬತ್ತಿ, ಸುವಾಸನೆ ಕಡ್ಡಿ. (ಇನ್‌ಸೆನ್ಸ್ ಸ್ಟಿಕ್), ಗಂಧದಕಡ್ಡಿ, ಸಾಂಬ್ರಾಣಿಕಡ್ಡಿ, ಜಾಸ್ ಸ್ಟಿಕ್ ಎಂದೂ ಕರೆಯುತ್ತಾರೆ. ದೇವಸ್ಥಾನಗಳಲ್ಲಿ, ಮುಂಜಿ ಮತ್ತು ಮದುವೆ ನಡೆಯುವ ಸ್ಥಳಗಳಲ್ಲಿ ಮತ್ತು ಸಭೆಗಳು ನಡೆಯುವ ಸ್ಥಳಗಳಲ್ಲಿ ಮತ್ತು ಇತರ ಶುಭ ಸಮಾರಂಭಗಳಲ್ಲಿ, ದಿನನಿತ್ಯ ಮನೆಮನೆಗಳಲ್ಲಿ ಸಾಂಬ್ರಾಣಿ ಧೂಪ, ಗಂಧದಕಡ್ಡಿಗಳನ್ನು ವಾಡಿಕೆಯಾಗಿ ಉರಿಸುತ್ತಾರೆ. ಸುವಾಸನೆಯನ್ನು ಬೀರುವ ಇವುಗಳ ಹೊಗೆ ವಾತಾವರಣದ ಸೂಕ್ಷ್ಮಕ್ರಿಮಿಗಳನ್ನು ನಾಶಮಾಡಿ ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಾತ್ಕಾಲಿಕವಾಗಿ ತಡೆಯುತ್ತದೆ. ಪ್ರಾಯಶಃ ಈ ಉದ್ದೇಶದಿಂದಲೇ ಹಾಗೂ ಬಾಣಂತಿಯರ ಹಾಗೂ ರೋಗಿಗಳ ಕೊಠಡಿಗಳಲ್ಲಿ ಸಾಂಬ್ರಾಣಿ (ಗಮ್ ಬೆಂಜೋಯಿನ್) ಹೊಗೆಯನ್ನು ಹಾಕಿರುತ್ತಾರೆ. ಚಿತ್ತೈಕಾಗ್ರತೆಯಿಂದ ದೇವರ ಧ್ಯಾನ ಮಾಡಲು ಈ ಸುವಾಸನೆ ನೆರವಾಗುತ್ತದೆ. ಹಿಂದಿನ ಕಾಲದಲ್ಲಿ ಹಲಗಾರತಿಯ ಕೆಂಡದಮೇಲೆ ದಶಾಂಗದ ಪುಡಿ ಉದುರಿಸಿ, ಬೇಕಾದ ಸುವಾಸನೆಯನ್ನು ಪಡೆಯುತ್ತಿದ್ದರು. ಈ ಸುಗಂಧ ವಾತಾವರಣವನ್ನು ಪಡೆಯಲು ಈಗ ಊದುಬತ್ತಿಯನ್ನು ಬಳಸಲಾಗುತ್ತಿದೆ.



ಊದುಬತ್ತಿಯನ್ನು ತಯಾರಿಸಲು ಬೇಕಾದ ಪದಾರ್ಥಗಳನ್ನು ಅರೆಯುವ ಯಂತ್ರ

ಪುರಾತನ ಕಾಲದಲ್ಲಿ ಊದುಬತ್ತಿ ಕೈಗಾರಿಕೆ ತಂಜಾವೂರು ಮತ್ತು ಅದರ ಸುತ್ತಮುತ್ತಲ ಊರುಗಳಲ್ಲಿ ಅಭಿವೃದ್ಧಿ ಹೊಂದಿತ್ತು. ಹಿಂದಿನ ಕಾಲದ ಸುಲ್ತಾನರೂ ಮಹಾರಾಜರೂ ಇದನ್ನು ಹೇರಳವಾಗಿ ಬಳಸುತ್ತಿದ್ದರು. ಸುಲ್ತಾನರ ರಾಜ್ಯದಲ್ಲಿ ಈ ಕೈಗಾರಿಕೆಗೆ ಇದ್ದ ಪ್ರೋತ್ಸಾಹದಿಂದ, ಮುಸಲ್ಮಾನರು ಊದುಬತ್ತಿಗಳನ್ನು ತಯಾರಿಸುವ ಕಲೆಯನ್ನು ತಮ್ಮದಾಗಿಸಿಕೊಂಡಿದ್ದರು. ಎಷ್ಟೋ ತಲೆಮಾರುಗಳ ಹಿಂದೆ, ಊದುಬತ್ತಿಯನ್ನು ತಯಾರಿಸುವ ಕಲೆ ಕರ್ನಾಟಕ ರಾಜ್ಯವನ್ನು ಪ್ರವೇಶಿಸಿತು. ಆಗಿನ ಮೈಸೂರಿನ ರಾಜರು ಈ ಕಲೆಗೆ ಪ್ರೋತ್ಸಾಹ ಕೊಟ್ಟಿದ್ದರಿಂದ, ಈ ಕೈಗಾರಿಕೆ ಶಾಶ್ವತವಾಗಿ ನೆಲೆಸಿ, ಈ ವಸ್ತುವಿನ ತಯಾರಿಕೆಯಲ್ಲಿ ಮೈಸೂರು ಸಂಸ್ಥಾನ ವಿಶ್ವವಿಖ್ಯಾತಿ ಪಡೆಯಿತು. ಬೆಂಗಳೂರು, ಮೈಸೂರು, ಚಿಂತಾಮಣಿ, ಚನ್ನಪಟ್ಟ ಮುಂತಾದ ಸ್ಥಳಗಳು ಊದುಬತ್ತಿ ತಯಾರಿಕೆಯಲ್ಲಿ ಗಣ್ಯಸ್ಥಾನವನ್ನು ಪಡೆದಿವೆ.

ಸ್ವಾಮಿ ವಿವೇಕಾನಂದ ಮತ್ತು ಇತರ ಸನ್ಯಾಸಿಗಳು ಅಮೆರಿಕಕ್ಕೆ ಭೇಟಿ ಕೊಟ್ಟಾಗ, ಊದುಬತ್ತಿ ಅಲ್ಲಿ ಹೆಚ್ಚು ಪ್ರಚಾರವನ್ನು ಗಳಿಸಿತು. ಈಚೆಗೆ, ಹಿಪ್ಪಿ ಮತ್ತು ಬೀಟಲ್‌ಗಳನ್ನು ಸಹ ಈ ಊದುಬತ್ತಿ ಆಕರ್ಷಿಸಿತ್ತು. ಇತ್ತೀಚೆಗೆ ಬಗ್ಗೆ ಪ್ರಪಂಚದಾದ್ಯಂತ ಹೆಚ್ಚಿರುವ ಯೋಗಾಭ್ಯಾಸ ಊದು ಬತ್ತಿಯನ್ನು ಹೆಚ್ಚಾಗಿ ಪರಿಚಿತಗೊಳಿಸಿದೆ.

ಊದುಬತ್ತಿ ಕೈಗಾರಿಕೆಯಲ್ಲಿ ವಿವಿಧ ಬೇರುಗಳು, ಮರಗಳು, ಬೀಜಗಳು, ತೊಗಟೆಗಳು, ಎಲೆಗಳು, ಗೋಂದುಗಳು, ಹೂಗಳು ಇತ್ಯಾದಿ ಅನೇಕ ಕಚ್ಚಾ ವಸ್ತುಗಳನ್ನು ಬಳಸುತ್ತಾರೆ. ಮರಗಳಲ್ಲಿ ಮುಖ್ಯವಾದುವು ಗಂಧ, ಅಗರು ಮತ್ತು ದೇವದಾರು. ಬೇರುಗಳಲ್ಲಿ ಮುಖ್ಯವಾದುವು ಲಾವಂಚ ನಲ್ ಮತ್ತು ಕಲೋಮಸ್. ತೊಗಟೆಗಳಲ್ಲಿ ಮುಖ್ಯವಾದವು ದಾಲ್ಚಿನ್ನಿ, ಕಪೂರಕಚ್ರಿ, ಬೀಜಗಳಲ್ಲಿ ಮುಖ್ಯವಾದುವು ಆಮ್‌ಬ್ರೆಟ್ಟೆ, ಅನಿಬೀಜ, ಕಸ್ತೂರಿ, ಮೆಲೊ, ಅಜವಾನ, ಗೌಲ, ಏಲಕ್ಕಿ. ಎಲೆಗಳಲ್ಲಿ ಮುಖ್ಯವಾದುವು ದವನ, ಪಚ್‌ಚೌಲಿ. ಹೂಗಳಲ್ಲಿ ಮುಖ್ಯವಾದುವು ಒಣಗಿದ ಗುಲಾಬಿ ಮೊಗ್ಗು, ಕೇಸರಿ, ಜಾಜಿ, ಬಕುಳ, ಲಾರೆನ್ಸ್, ಕೇದಗೆ, ಸಂಪಿಗೆ ಇದಲ್ಲದೆ ಇದಕ್ಕೆ ಬಳಸುವ ಇತರ ವಸ್ತುಗಳೆಂದರೆ ಕಲ್ಲುಹೂ, ಓಕ್ ಮಾಸ್, ಸ್ಟೈರಾಕ್ಸ್, ಬೆನ್‌ಜೋಯಿನ್, ಮಿರ್, ಒಲಿಬಾನಮ್, ಹಾಲುಮಡ್ಡಿ, ಗೋಂದು ಮತ್ತು ರೇಸಿನ್. ಪ್ರಕೃತಿಯಲ್ಲಿ ದೊರೆಯುವ ಅತ್ಯಂತ ಬೆಲೆಬಾಳುವ ಸುಗಂಧ ವಸ್ತುಗಳೆಂದರೆ ಕಸ್ತೂರಿ, ಪುನುಗು ಮತ್ತು ಅಂಬರ್.

ಈ ಮೇಲಿನ ಕಚ್ಚಾ ಪದಾರ್ಥಗಳನ್ನು ಸಾಮಾನ್ಯವಾಗಿ ಊದುಬತ್ತಿ ಕೈಗಾರಿಕೆಯನ್ನೇ ಕುಲಕಸುಬಾಗುಳ್ಳವರು ಬಳಸುತ್ತಾರೆ. ಕಸ್ತೂರಿ, ಪುನುಗು ಇತ್ಯಾದಿ ಪ್ರಕೃತಿದತ್ತ ಸುವಾಸನೆ ಕೊಡುವ ವಸ್ತುಗಳನ್ನು ಇತ್ತೀಚೆಗೆ ಕೃತಕ ರೀತಿಯಲ್ಲಿ ತಯಾರಿಸುತ್ತಿದ್ದಾರೆ. ಈ ಕೃತಕ ವಸ್ತುಗಳ ಬೆಲೆ ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಎಲೆ, ಬೇರು, ತೊಗಟೆ ಮತ್ತು ರೆಸಿನ್‌ಗಳಿಂದ ಸುಗಂಧ ಎಣ್ಣೆಗಳನ್ನು ಬಟ್ಟಿ ಇಳಿಸಿ ಊದುಬತ್ತಿಯಲ್ಲಿ ಬಳಸುತ್ತಾರೆ. ಕೃತಕ ರೂಪದಲ್ಲಿ ತಯಾರಾದ ಸುಗಂಧ ಎಣ್ಣೆಗಳೂ ಹೇರಳವಾಗಿ ದೊರೆಯುತ್ತವೆ. ಎರಡನೆಯ ಮಹಾಯುದ್ಧ ಮುಗಿದ ಅನಂತರ ಊದುಬತ್ತಿ ಕೈಗಾರಿಕೆಯಲ್ಲಿ ಪ್ರಕೃತಿಯಿಂದ ದೊರಕುವ ಸುವಾಸನೆ ಎಣ್ಣೆಗಳ ಬಳಕೆ ಹೆಚ್ಚಿದೆ.

ಊದುಬತ್ತಿಯ ಪೊಟ್ಟಣ ಕಟ್ಟುವುದು

ತಾನು ಬಳಸುವ ಪುಡಿಗಳ ಮಿಶ್ರಣ, ಪ್ರಮಾಣ ಮತ್ತು ತಯಾರಿಸುವ ರೀತಿ–ಈ ವಿಷಯವನ್ನು ಪ್ರತಿಯೊಬ್ಬ ಊದುಬತ್ತಿ ತಯಾರಕನೂ ರಹಸ್ಯವಾಗಿ ಇಟ್ಟಿರುತ್ತಾನೆ. ಕಚ್ಚಾ ಪದಾರ್ಥಗಳನ್ನು ಸಣ್ಣಗೆ ಪುಡಿಮಾಡಿ, ಅಂಟು ಮರದ ತೊಗಟೆಯ ಪುಡಿಯ ಜೊತೆ ವಿವಿಧ ರೀತಿಯಿಂದ ಬೆರೆಸಿ, ಕಡೆಗೆ ತೆಳ್ಳಗಿರುವ ಬಿದಿರಿನ ಕಡ್ಡಿಗೆ ಈ ಮಿಶ್ರಣವನ್ನು ಹಚ್ಚಿ ಒಣಗಿಸುತ್ತಾರೆ. ಬಳಸಿರುವ ಕಚ್ಚಾ ಪದಾರ್ಥಗಳು, ಕಡ್ಡಿಯ ಉದ್ದ ಮತ್ತು ಗಾತ್ರಗಳಿಗೆ ತಕ್ಕಂತೆ ಬತ್ತಿ ಉರಿಯುವ ಕಾಲ ವ್ಯತ್ಯಾಸವಾಗುತ್ತದೆ. ಉತ್ತಮ ದರ್ಜೆಯ ಊದುಬತ್ತಿಗಳನ್ನು ತಯಾರಿಸಲು ವಿವಿಧ ವಿಧಾನಗಳನ್ನು ಅನುಸರಿಸುತ್ತಾರೆ.

**ತಯಾರಿಸುವ ವಿಧಾನ:** ಮೊಟ್ಟಮೊದಲು ಕೆಂಪು ಮರದ ಪುಡಿ, ಬಿಳಿಯ ಚಿಪ್ಪಿನ ಪುಡಿ (ವೈಟ್ ಚಿಪ್ ಪೌಡರ್), ಇದ್ದಲು ಪುಡಿ, ಗಂಧದಪುಡಿ ಮತ್ತು ಮಸಾಲೆಪುಡಿ ಇವನ್ನು–ತೂಕ ಮಾಡಿ ಅನಂತರ ಜರಡಿಯಾಡಿಸಿ, ಉತ್ತಮದರ್ಜೆಯ ನುಣುಪಾದ ಪುಡಿಯನ್ನು ಮಾಡಿಕೊಳ್ಳಬೇಕು. ಕೆಲವು ಸುಗಂಧಯುಕ್ತ ರಾಸಾಯನಿಕ ವಸ್ತುಗಳನ್ನು (ಕೊಮರಿನ್ ಹರಳುಗಳು, ಗುಲಾಬಿ ಹರಳುಗಳು, ವೆನಿಲಿನ್ ಇತ್ಯಾದಿ) ಪುಡಿಮಾಡಿ, ಮೇಲೆ ಹೇಳಿರುವ ನುಣುಪಾದ ಪುಡಿಯ ಜೊತೆ ಬೆರೆಸಬೇಕು. ಈ ಮಿಶ್ರಣಕ್ಕೆ ಶಿಲಾರಸ ಮತ್ತು ಸಾಂಬ್ರಾಣಿಯನ್ನು ಬೆರೆಸಬೇಕು. ಉತ್ತಮ ದರ್ಜೆಯ ನಯವಾದ ಸರಿ ಪಡೆಯಲು ಸ್ವಲ್ಪ ಜೇನುತುಪ್ಪವನ್ನು ಹಾಕಬೇಕು. ಸರಿಯಾದ ಪ್ರಮಾಣದಲ್ಲಿ ನೀರನ್ನು ಉಪಯೋಗಿಸ ಬಹುದು. ಈಗ ಈ ಮಿಶ್ರಣಕ್ಕೆ ವಿವಿಧ ಸುಗಂಧಗಳ ಮಿಶ್ರಣವೊಂದನ್ನು ಹಾಕಿ ಚೆನ್ನಾಗಿ ಬೆರೆಸಬೇಕು. ನಯವಾದ ಮತ್ತು ಮೃದುವಾದ ಸರಿ ತಯಾರಾದ ಅನಂತರ, ಕೈಯಲ್ಲಿ ಹಿಡಿಯುವಷ್ಟು ಮುದ್ದೆಯನ್ನು ಮಾಡಿಕೊಳ್ಳಬೇಕು.

ಅನಂತರ ಬಿದಿರಿನ ಕಡ್ಡಿಗಳನ್ನು ಆರಿಸಬೇಕು. ಈ ಕಡ್ಡಿಗಳ ಒಂದು ಕಡೆಯ ಭಾಗದಲ್ಲಿ ಬೇಕಿದ್ದಲ್ಲಿ (ಸು. 2.5 – 3.5 ಸೆಂ.ಮೀ ವರೆಗೆ) ಬಣ್ಣಗಳನ್ನು (ಕೆಂಪು, ಹಸಿರು ಇತ್ಯಾದಿ) ಬಳಿಯಬೇಕು. ಈ ಕಡ್ಡಿಗಳ ಮೇಲೆ ಮೊದಲೇ ತಯಾರಿಸಿದ ಮುದ್ದೆಯ ಮಸಾಲೆಯನ್ನು ಸಮಾನ ರೀತಿಯಲ್ಲಿ ಹಚ್ಚಬೇಕು. ಮೊದಲು ಕಡ್ಡಿಯ ಮೇಲೆ ಮಸಾಲೆಯನ್ನು ಹಚ್ಚಿ, ಅದನ್ನು ನುಣುಪಾದ ಮರದ ಹಲಗೆಯ ಮೇಲೆ ಅದುಮಿ, ಅನಂತರ ಕಡ್ಡಿಯನ್ನು ಉರುಳಿಸಬೇಕು. ಅಭ್ಯಾಸ ಮತ್ತು ಅನುಭವ ಬಂದ ಮೇಲೆ, ಒಂದು ಸಲಕ್ಕೆ ಅನೇಕ ಕಡ್ಡಿಗಳಿಗೆ ಮಸಾಲೆ ಹಚ್ಚಿ, ಮರದ ಹಲಗೆಯ ಮೇಲೆ ಉರುಳಿಸಿ, ಒಂದೇ ಸಮನಾದ ಊದಿನ ಕಡ್ಡಿಗಳನ್ನು ಪಡೆಯಬಹುದು. ಅನುಭವಿ ಕೆಲಸಗಾರನೊಬ್ಬ, ಒಂದು ಗಂಟೆಯಲ್ಲಿ 550 ಗ್ರಾಂನಿಂದ 1 ಕಿಲೊಗ್ರಾಂನಷ್ಟು ಊದುಬತ್ತಿಯನ್ನು ತಯಾರಿಸಬಹುದು. ಕಡ್ಡಿಗಳ ಮೇಲಿನ ಮಸಾಲೆ ಮಿಶ್ರಣ ದೊಡ್ಡದಾಗಿಯೂ ಮತ್ತು ದಪ್ಪನಾಗಿಯೂ ಇರಬೇಕಾದರೆ, ಮಸಾಲೆ ಸರಿ ಶಕ್ತಿಯುತವಾಗಿಯೂ ಗಟ್ಟಿಯಾಗಿಯೂ ಇರಬೇಕು. ಊದುಬತ್ತಿಗೆ ಅಪೇಕ್ಷಿತ ಬಣ್ಣ ಬರಬೇಕಾದರೆ, ಸುರ್ವ ಬಣ್ಣದ ಪುಡಿಯನ್ನು ಮರದ ಹಲಗೆಯ ಮೇಲೆ ಹಾಕಿಕೊಂಡು, ಬತ್ತಿಯನ್ನು ಅದರ ಮೇಲೆ ಉರುಳಿಸಬೇಕು. ಇಷ್ಟು ಮಾಡಿದಾಗ, ಊದುಬತ್ತಿ ಒದ್ದೆಯಾಗಿರುತ್ತದೆ. ಇದನ್ನು ಗಾಳಿಯಲ್ಲಿ ಬಿಟ್ಟು ಒಣಗಿಸಬೇಕು. ಉರಿ ಬಿಸಿಲಿಗೆ ಬಿಡಬಾರದು. ಮೊದಲ ಸಲ ಕಡ್ಡಿಗೆ ಹಚ್ಚಿದ ಮಸಾಲೆ ಸರಿಯಾಗಿ ಅಂಟಿಕೊಳ್ಳದಿದ್ದರೆ ಕಡ್ಡಿಗಳನ್ನು ಒಣಗಿಸಿದ ಮೇಲೆ ಪುನಃ ಮಸಾಲೆ ಹಚ್ಚಿ ಹಲಗೆಯ ಮೇಲೆ ಅದುಮಿ ಉರುಳಿಸಿದರೆ, ಸಮನಾದ ಬತ್ತಿ ಸಿಗುತ್ತದೆ. ಒಣಗಿದ ಊದುಬತ್ತಿಯ ಮೇಲೆ ಸುಗಂಧವನ್ನು ಹಚ್ಚುತ್ತಾರೆ. ಇಲ್ಲವೆ ಸಿಂಪಡಿಸುತ್ತಾರೆ, ಇಲ್ಲವೇ ಸುಗಂಧ ದ್ರವ್ಯದಲ್ಲಿ ಅದ್ದುತ್ತಾರೆ. ಅನಂತರ ತೂಕಮಾಡಿ, ಸುರುಳಿ ಮಾಡಿ ಪಾರದರ್ಶಕ ಕಾಗದಗಳಲ್ಲಿ ಸುತ್ತಿ ರಟ್ಟಿನ ಡಬ್ಬಿಗಳಲ್ಲಿ ಅಥವಾ ತಗಡಿನ ಕೊಳವೆಗಳಲ್ಲಿ ಪ್ಯಾಕ್ ಮಾಡುತ್ತಾರೆ. ಪೊಟ್ಟಣದ ಮೇಲೆ ಹೆಸರು ಮುದ್ರಿಸಿದ ಕಾಗದ ಅಂಟಿಸಿ, ಜಲ್ಲಿ ಕಾಗದದಿಂದ ಸುತ್ತುತ್ತಾರೆ.

ಉತ್ತಮ ದರ್ಜೆಯ ಮಸಾಲೆ ಊದುಬತ್ತಿಯಲ್ಲಿ ಸುಗಂಧ ಮತ್ತು ಪರಿಮಳ ಕೊಡುವ ವಸ್ತುಗಳನ್ನು ಚೆನ್ನಾಗಿ ಬೆರೆಸಿ ಇತರ ಕಚ್ಚಾ ಪದಾರ್ಥಗಳ ಜೊತೆ ಚೆನ್ನಾಗಿ ಅರೆದು, ಬರುವ ಮಸಾಲೆ ಮುದ್ದೆಯನ್ನು ತೆಳ್ಳಗಿನ ಬಿದಿರಿನ ಕಡ್ಡಿಗಳಿಗೆ ಅಂಟಿಸುವರು. ಜವಾಜಿ ಊದುಬತ್ತಿಯಲ್ಲಿ, ಮೊದಲು ಬಿದಿರಿನ ಕಡ್ಡಿಗೆ ಗೋಂದು ಹಾಕಿ, ಇದ್ದಲು ಪುಡಿ ಮತ್ತು ಗಂಧದ ಪುಡಿಯನ್ನು ಅಂಟಿಸುತ್ತಾರೆ. ಕಡೆಗೆ ಈ ಕಡ್ಡಿಯನ್ನು ಸುಗಂಧದ ವಸ್ತುವಿನಲ್ಲಿ ನೆನೆಸಿಟ್ಟು, ಕೆಲವು ನಿಮಿಷಗಳ ಅನಂತರ ಪ್ಯಾಕ್ ಮಾಡುತ್ತಾರೆ ಇತ್ತೀಚಿನ ದಿನಗಳಲ್ಲಿ ಮಸಾಲೆ ಬತ್ತಿಗಳಿಗಿಂತ ಜವಾಜಿ ಬತ್ತಿಗಳಿಗೆ ಬೇಡಿಕೆ ಹೆಚ್ಚಾಗಿದೆ.

ಉತ್ತಮ ದರ್ಜೆಯ ಮಸಾಲೆ ಊದುಬತ್ತಿಯ ಗುಣ ಅದರ ಮಸಾಲೆಯನ್ನು ಅವಲಂಬಿಸಿದೆ. ಒಳ್ಳೆಯ ಮಸಾಲೆಯನ್ನು ತಯಾರಿಸಲು ಕೆಳಗಿನ ಮಾದರಿಸೂತ್ರದಲ್ಲಿ ಕೊಟ್ಟಿರುವಂತೆ ಕಚ್ಚಾ ಪದಾರ್ಥಗಳನ್ನು ಯುಕ್ತ ಪ್ರಮಾಣದಲ್ಲಿ ತೆಗೆದುಕೊಂಡು, ಚೆನ್ನಾಗಿ ಕುಟ್ಟಿ ನುಣುಪಾದ ಪುಡಿಯನ್ನು ತಯಾರಿಸಬೇಕು. ಪುಡಿಯನ್ನು ಬಟ್ಟೆಯಲ್ಲಿ ಸೋಸಬೇಕು. ಚೆನ್ನಾಗಿ ಸೋಸಿದ ಈ ಮಿಶ್ರಣದ ಪುಡಿಯೇ ಊದುಬತ್ತಿ ತಯಾರಿಕೆಗೆ ಮುಖ್ಯವಾದ ದಿನಸು. ಇದನ್ನು ಮಸಾಲೆ ಅಥವಾ ಸಾಂಬ್ರಾಣಿ ಎಂದು ಕರೆಯುತ್ತಾರೆ. ಯಾವುದೇ ಜಾತಿಯ ಉತ್ತಮ ಊದುಬತ್ತಿ ತಯಾರಿಸಬೇಕಾದರೆ, ಈ ಮಸಾಲೆಯನ್ನು ಸಿದ್ಧಪಡಿಸಿ ಕೊಂಡು, ಒಂದು ಡಬ್ಬಿಯಲ್ಲಿ ಇಟ್ಟುಕೊಂಡಿರಬೇಕು. ಅನಂತರ ಎಲ್ಲ ವಸ್ತುವನ್ನೂ ಸಣ್ಣದಾಗಿ ಅರೆಯಬೇಕು. ಗಟ್ಟಿಯಾದರೆ ಸ್ವಲ್ಪ ಪನ್ನೀರನ್ನು ಪುನಃ ಹಾಕಿ ಚೆನ್ನಾಗಿ ಅರೆಯಬೇಕು. ಮಸಾಲೆ ಬೆಣ್ಣೆಯಂತೆ ಮಂದವಾಗಿರಬೇಕು. ಹೆಚ್ಚಿಗೆ ಪನ್ನೀರು ಹಾಕಿ ಮಸಾಲೆಯನ್ನು ತೆಳ್ಳಗೆ ಮಾಡಬಾರದು. ಅನಂತರ ಈ ಮಿಶ್ರಣವನ್ನು ಸಿದ್ಧವಿರುವ ಬಿದಿರಿನ ಕಡ್ಡಿಗಳಿಗೆ ಹಚ್ಚಬೇಕು.

ಇದೇ ರೀತಿ ಸಾಮಗ್ರಿಗಳನ್ನು ಬದಲಾಯಿಸಿಕೊಂಡು, ಪುನುಗಿನ ಊದುಬತ್ತಿ, ಕಸ್ತೂರಿ ಊದುಬತ್ತಿ ಮತ್ತು ಸಾದಾ ಊದುಬತ್ತಿಗಳನ್ನು ತಯಾರಿಸುತ್ತಾರೆ.

ಮಸಾಲ ಬತ್ತಿ, ಜವಾಜಿ ಬತ್ತಿ, ದರಬಾರ್ ಬತ್ತಿ, ಪುನುಗಿನ ಬತ್ತಿ ಇತ್ಯಾದಿ ಇತ್ಯಾದಿ ಅನೇಕ ರೀತಿಯ ಊದುಬತ್ತಿಗಳಿವೆ. ವಿವಿಧ ಜಾತಿಗಳನ್ನು ಸೂಚಿಸಿ, ಗಿರಾಕಿಗಳನ್ನು ಆಕರ್ಷಿಸಲು, ಹಸಿರು, ಕೆಂಪು, ಕಪ್ಪು ಮತ್ತು ಹಳದಿ ಬಣ್ಣದ ಊದುಬತ್ತಿಗಳು ಇರುತ್ತವೆ. ಊದುಬತ್ತಿಯ ಕಡ್ಡಿಗಳು ತೆಳ್ಳಗೂ ಮತ್ತು ದಪ್ಪಗೂ ಇರುತ್ತವೆ. ಕಡ್ಡಿಗಳ ಉದ್ದ: 20–30 ಸೆಂ.ಮೀ.

**ಊದುಬತ್ತಿಯ ರಫ್ತು:** ಊದುಬತ್ತಿಯನ್ನು ಮುಂಬಯಿ, ಚೆನ್ನೈ, ಕೊಚ್ಚಿ, ಕೋಲ್ಕತ ಮುಖಾಂತರ ಹೊರಗಿನ ದೇಶಗಳಿಗೆ ರಫ್ತು ಮಾಡುತ್ತಾರೆ. ಭಾರತ ಸುಮಾರು ಕೋಟ್ಯಾಂತರ ರೂಪಾಯಿಗಳ ಬೆಲೆಯ ಊದುಬತ್ತಿಗಳನ್ನು ವಿದೇಶಗಳಿಗೆ ಕೊಡುತ್ತದೆ. ಅಮೆರಿಕದಲ್ಲಿ ಈ ಬತ್ತಿಗಳು ಜಾಸ್ ಕಡ್ಡಿಗಳು ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿವೆ. 1968–70ರಲ್ಲಿ ಸು. 80 ದೇಶಗಳಿಗೆ ಭಾರತದ ಊದುಬತ್ತಿ ರಫ್ತಾಗಿದೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ. 70 ಭಾಗವನ್ನು ಕರ್ನಾಟಕ ರಾಜ್ಯ ಒದಗಿಸುತ್ತದೆ. ಬೆಂಗಳೂರಿನಲ್ಲಿಯೇ ಹೆಚ್ಚು ಉತ್ಪಾದಕರು ಇದ್ದಾರೆ. ಸು. ಲಕ್ಷಾಂತರ ಜನ (ಬಹುಭಾಗ ಹೆಂಗಸರು) ತಮ್ಮ ಜೀವನೋಪಾಯಕ್ಕೆ ಈ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ.

ಒಟ್ಟು ರಫ್ತಿನಲ್ಲಿ ಕರ್ನಾಟಕ ರಾಜ್ಯ (ಬೆಂಗಳೂರು, ಮೈಸೂರು) ಶೇ. 70 ಭಾಗವನ್ನೂ ಮಹಾರಾಷ್ಟ್ರ, ತಮಿಳುನಾಡು ಮತ್ತು ಇತರ ರಾಜ್ಯಗಳು ಶೇ. 30 ಭಾಗವನ್ನೂ ಒದಗಿಸುತ್ತವೆ.

ಭಾರತವಲ್ಲದೆ ಚೀನ, ಜಪಾನು, ಥೈಲೆಂಡ್, ವಿಯಟ್ನಾಂ ಇತ್ಯಾದಿ ದೇಶಗಳು ಊದುಬತ್ತಿ ತಯಾರಿಸುತ್ತವೆ. ಬಿದಿರಿನ ಕಡ್ಡಿಗಳನ್ನು ಉಪಯೋಗಿಸದೆ ಹಾಗೆಯೇ ಯಂತ್ರದ ಸಹಾಯದಿಂದ ಊದುಬತ್ತಿಗಳನ್ನು ನಮ್ಮಲ್ಲಿ ಶಾವಿಗೆಯನ್ನು ತೆಗೆಯುವಂತೆ ತಯಾರಿಸುತ್ತಾರೆ.

ಅರ್ಜೆಂಟಿನ ದೇಶ ಇಂಥ ಕಡ್ಡಿಯನ್ನು ತಯಾರಿಸಿ, ಅಕ್ಕಪಕ್ಕದ ದೇಶಗಳಿಗೆ ರಫ್ತು ಮಾಡುತ್ತದೆ. ಹಾಂಗ್‌ಕಾಂಗ್‌ನಲ್ಲೂ ಈ ಉದ್ಯಮ ಬೆಳೆದಿದೆ. ಊದುಬತ್ತಿಯ ಉತ್ಪಾದನೆಯಲ್ಲಿ ಜಪಾನ್ ಸಾಕಷ್ಟು ಮೇಲಿನ ಸ್ಥಾನಗಳಿಸಿದ್ದರೂ ಭಾರತ, ಚೀನ ಮತ್ತು ಹಾಂಗ್‌ಕಾಂಗ್‌ನಿಂದ ಊದುಬತ್ತಿಯನ್ನು ಆಮದು ಮಾಡಿಕೊಳ್ಳುತ್ತಿದೆ. ಈ ಉದ್ಯಮದಲ್ಲಿ ಭಾರತಕ್ಕೆ ಉತ್ತಮ ಭವಿಷ್ಯವಿದೆ. ಏಡನ್, ಇಥಿಯೋಪಿಯ, ಫಿಜಿ, ಕೀನ್ಯ, ಮಲೇಷ್ಯ, ಮಾರಿಷಸ್, ನೇಪಾಲ, ಸೌದಿ ಅರೇಬಿಯ, ಸಿಂಗಪುರ, ಸೂಡಾನ್, ಉಗಾಂಡ, ಯುನೈಟೆಡ್ ಕಿಂಗ್‌ಡಮ್

# ಊದುಬತ್ತಿ

ಮಸಾಲೆ ಬತ್ತಿ ತಯಾರಿಸಬೇಕಾದರೆ ಮೇಲೆ ತಿಳಿಸಿದ ಮುಖ್ಯ ಸಾಮಗ್ರಿ ತೆಗೆದುಕೊಂಡು ಈ ಕೆಳಗಿನ ವಸ್ತುಗಳನ್ನು ಅದಕ್ಕೆ ಸೇರಿಸಬೇಕು.

**ಮಾದರಿ ಸೂತ್ರ**

| ಪ್ರತಿವಸ್ತು ಪ್ರಮಾಣ 29.07 ಗ್ರಾಂ | ಪ್ರತಿವಸ್ತು ಪ್ರಮಾಣ 58.15 ಗ್ರಾಂ | ಪ್ರತಿವಸ್ತು ಪ್ರಮಾಣ 81.41 ಗ್ರಾಂ | ಪ್ರತಿವಸ್ತು ಪ್ರಮಾಣ 116.3 ಗ್ರಾಂ | ಪ್ರತಿವಸ್ತು ಪ್ರಮಾಣ 174.45 ಗ್ರಾಂ | ಪ್ರತಿವಸ್ತು ಪ್ರಮಾಣ 232.6 ಗ್ರಾಂ |
|---|---|---|---|---|---|
| 1 ಸಾಬೂನು<br>2 ಜಾಪತ್ರೆ | 3 ಕೋಟಿಚಂದನ<br>4 ಗೌಲ<br>5 ಜಾಜಿಕಾಯಿ<br>6 ಏಲಕ್ಕಿ | 7 ಕಿನೇರಿಪಟ್ಟಿ<br>8 ತಾಳೀಸಪತ್ರೆ<br>9 ಚಂಗಲಕೋಷ್ಟ<br>10 ಅತಿಮಧುರ<br>11 ಲವಂಗ | 12 ಸಜ್ಜರಸ<br>13 ಲವಂಗ ಚಕ್ಕೆ<br>14 ಬಿಳಿಮಸ್ತಕಿ | 15 ಅನಾರಸ ಹೂ<br>16 ನಖನಾಗ ಕೇಸರಿ<br>17 ಗುಲಾಬಿ ಹೂ | 18 ಸಂಪಿಗೆಮೊಗ್ಗು<br>19 ಲವಂಗಪತ್ರೆ<br>20 ದೇಶಾವರ<br>21 ಕಲ್ಲು ಹೂ<br>22 ಲಾಮಂಚ<br>23 ಮುಡಿದಾಳ<br>24 ಕಚೋದ<br>25 ಬಾವಂಚೆ ಬೀಜ<br>26 ಸಣ್ಣ ರಾಶ್ಮೆ<br>27 ಪಚ್ಚೆ ಸೊಪ್ಪು<br>28 ತುಪ್ಪದದೇವದಾರು |

ಈ ಮಸಾಲೆ ಚೂರ್ಣಕ್ಕೆ ಕೆಳಗಿನ ವಸ್ತುಗಳನ್ನು ಸೇರಿಸಿ, ಮಿಶ್ರಣವನ್ನು ಪನ್ನೀರಿನ ಪಾತ್ರೆಯಲ್ಲಿ ಹಾಕಿ ಸ್ವಲ್ಪ ಹೊತ್ತು ನೆನೆ ಇಡಬೇಕು.

**ಮೇಲಿನ ಮಸಾಲೆಗೆ ಕೂಡಿಸುವ ವಸ್ತುಗಳು**

| ಪ್ರತಿವಸ್ತು ಪ್ರಮಾಣ 11.63 ಗ್ರಾಂ | ಪ್ರತಿವಸ್ತು ಪ್ರಮಾಣ 14.53 ಗ್ರಾಂ | ಪ್ರತಿವಸ್ತು ಪ್ರಮಾಣ 23.26 ಗ್ರಾಂ | ಪ್ರತಿವಸ್ತು ಪ್ರಮಾಣ 58.15 ಗ್ರಾಂ | ಪ್ರತಿವಸ್ತು ಪ್ರಮಾಣ 145.3 ಗ್ರಾಂ | ಪ್ರತಿವಸ್ತು ಪ್ರಮಾಣ 174.45 ಗ್ರಾಂ | ಪ್ರತಿವಸ್ತು ಪ್ರಮಾಣ 232.6 ಗ್ರಾಂ |
|---|---|---|---|---|---|---|
| ಜೇನುತುಪ್ಪ | ಪುನುಗು ಚೆಟ್ಟು | ಕಲ್ಲುಸಕ್ಕರೆ<br>ಶಿಲಾರಸ<br>ಬಿಳಿ ಹಾಲುಮಡ್ಡಿ | ಜಾಲಿಯ ಅಂಟು<br>ಬೆಲ್ಲ | ಶ್ರೀಗಂಧವನ್ನು ಸಾಣೆಕಲ್ಲಿನ ಮೇಲೆ ತಿಕ್ಕಿದಾಗ ಬಂದ ದ್ರವ | ಕವಡ ಲೋಭಾನ | ಮೇಲಿನ ಮಸಾಲೆ ಚೂರ್ಣ, ಪುಳ್ಳೆ ದೇವದಾರು ಕಟ್ಟಿಗೆಯಿಂದ ತಯಾರಿಸಿದ ಇದ್ದಲು |

| ಪ್ರತಿವಸ್ತು ಪ್ರಮಾಣ 0.7 ಗ್ರಾಂ | ಪ್ರತಿವಸ್ತು ಪ್ರಮಾಣ 1.4 ಗ್ರಾಂ | ಪ್ರತಿವಸ್ತು ಪ್ರಮಾಣ 11.63 ಗ್ರಾಂ | ಪ್ರತಿವಸ್ತು ಪ್ರಮಾಣ 14.53 ಗ್ರಾಂ | ಪ್ರತಿವಸ್ತು ಪ್ರಮಾಣ 23.26 ಗ್ರಾಂ | ಪ್ರತಿವಸ್ತು ಪ್ರಮಾಣ 26.16 ಗ್ರಾಂ | ಪ್ರತಿವಸ್ತು ಪ್ರಮಾಣ 81.41 ಗ್ರಾಂ | ಪ್ರತಿವಸ್ತು ಪ್ರಮಾಣ 93.04 ಗ್ರಾಂ | ಪ್ರತಿವಸ್ತು ಪ್ರಮಾಣ 116.3 ಗ್ರಾಂ |
|---|---|---|---|---|---|---|---|---|
| ಉತ್ತಮಕಸ್ತೂರಿ<br>ಜವಾಜಿ | ಕೇಸರಿ<br>ಪುನುಗು | ಪಚ್ಚ ಕರ್ಪೂರ | ಕಸ್ತೂರಿಗೆಡ್ಡೆ | ಬಿಳಿಹಾಲುಮಡ್ಡಿ<br>ಶಿಲಾರಸ<br>ಜಾಲಿಯಅಂಟು<br>ಕಲ್ಲುಸಕ್ಕರೆ | ಪುನುಗು ಚೆಟ್ಟಿ | ಕವಡ ಲೋಭಾನ | ಮೇಲಿನ ಮಸಾಲೆ | ಇದ್ದಲು |

ಮತ್ತು ಅಮೆರಿಕ ಸಂಯುಕ್ತಸಂಸ್ಥಾನ – ಇವು ಪ್ರಮುಖ ಆಮದುಗಾರರು. ಭಾರತದ ಆರ್ಥಿಕ ಭದ್ರತೆಯಲ್ಲಿ ಊದುಬತ್ತಿ ಉದ್ಯಮ ಪ್ರಮುಖ ಪಾತ್ರ ವಹಿಸಿದೆ. ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದೆ. ಹೆಂಗಸರು ತಮ್ಮ ಮನೆಗೆ ಊದುಬತ್ತಿಯ ಮಸಾಲೆಯನ್ನು ತೆಗೆದುಕೊಂಡು ಹೋಗಿ, ಸಂಸಾರದವರೆಲ್ಲ ಸೇರಿ, ಊದುಬತ್ತಿ ತಯಾರಿಸಿ ಕೂಲಿ ಸಂಪಾದಿಸುತ್ತಾರೆ. ಕೆಲಸಗಾರರು ಗುತ್ತಿಗೆಯ ಪ್ರಕಾರ ಸಂಪಾದನೆ ಮಾಡುತ್ತಾರೆ. ಚುರುಕಾಗಿ ಕೆಲಸ ಮಾಡುವವ 8 ಗಂಟೆಯಲ್ಲಿ 8 ಕಿಲೋ ಊದುಬತ್ತಿ ತಯಾರಿಸಿ ಸು. 100 ರೂಪಾಯಿಗಳನ್ನು ಗಳಿಸುತ್ತಾರೆ.

ಬಿದಿರಿನ ಕಡ್ಡಿಗಳನ್ನು ಮಾಡುವುದು ಮತ್ತು ರಟ್ಟಿನ ಕೊಳವಿಗಳನ್ನು ತಯಾರಿಸುವುದು– ಇವೆರಡೂ ಊದುಬತ್ತಿಯ ತಯಾರಿಕೆಯನ್ನು ಅವಲಂಬಿಸಿರುವ ಗೃಹಕೈಗಾರಿಕೆಗಳು.

ಕರ್ನಾಟಕ ರಾಜ್ಯದಲ್ಲಿ 300 ಹೆಚ್ಚು ಊದುಬತ್ತಿ ಕಾರ್ಖಾನೆಗಳಿವೆ. ಬೆಂಗಳೂರು, ಮೈಸೂರು, ಚಿಂತಾಮಣಿ, ಕೋಲಾರ ಮತ್ತು ಬೆಳಗಾಂವಿ–ಇವು ಪ್ರಮುಖ ಸ್ಥಳಗಳು.

ಕರ್ನಾಟಕ ರಾಜ್ಯದಲ್ಲಿ ಸು. 400 ಕೋಟಿ ರೂ.ನಷ್ಟು ಊದುಬತ್ತಿ ಉತ್ಪಾದನೆಯಾಗುತ್ತದೆ. ಬೌದ್ಧರು, ಮುಸ್ಲಿಮರು ಮತ್ತು ರೋಮನ್ ಕೆಥೊಲಿಕರು ಇರುವ ದೇಶದಲ್ಲೆಲ್ಲ ಈ ವಸ್ತುವನ್ನು ಸುಲಭವಾಗಿ ಮಾರಬಹುದು. ಊದುಬತ್ತಿಗೆ ಭಾರಿ ಬೇಡಿಕೆ ಇರುವ ಸ್ಥಳಗಳೆಂದರೆ ಅಮೆರಿಕ, ಭಾರತ ಖಾರಿ ದೇಶಗಳು (Galf contries) ಮತ್ತು ಜಪಾನ್ ಉತ್ಪತ್ತಿಯಲ್ಲಿ, ಬಳಕೆಯಲ್ಲಿ ಮತ್ತು ರಫ್ತಿನಲ್ಲಿ ಭಾರತ ಅಗ್ರಗಣ್ಯ ಸ್ಥಾನ ಪಡೆದಿದೆ. ಪಾಕಿಸ್ತಾನದವರು ತಾವೇ ತಯಾರಿಸುತ್ತಾರೆ. ಸಿಂಗಪುರದಲ್ಲಿ ಚೀನಿಯರು, ಸುಗಂಧ ಕಡ್ಡಿ ತಯಾರಿಸುತ್ತಾರೆ. ಥೈಲೆಂಡ್ ತನ್ನ ಆವಶ್ಯಕತೆಯನ್ನು ತಾನೇ ಪೂರೈಸಿಕೊಳ್ಳುತ್ತದೆ. ಅಮೆರಿಕದ ಸಂಯುಕ್ತಸಂಸ್ಥಾನ ತಾನು ತಯಾರಿಸುವುದರ ಜೊತೆಗೆ ಹೊರಗಿನಿಂದ ಆಮದು ಮಾಡಿಕೊಳ್ಳುತ್ತದೆ.

ಕೆಳಗಿನ ಪಟ್ಟಿಯಿಂದ ಭಾರತದ ರಫ್ತು ಪ್ರಮಾಣ ಗೊತ್ತಾಗುತ್ತದೆ.

ಊದುಬತ್ತಿ ರಫ್ತು

| ವರ್ಷ | ಆಮದು ಮಾಡಿಕೊಳ್ಳುವ ದೇಶ ಸಂಖ್ಯೆ | ರಫ್ತು ಆದ ಊದುಬತ್ತಿ ಬೆಲೆ (ಲಕ್ಷ ರೂ.ಗಳಲ್ಲಿ) |
|---|---|---|
| 2003–04 | 135 | 220 ಕೋಟಿ |
| 2004–05 | 135 | 216 ಕೋಟಿ |
| 2005–06 | 135 ದೇಶಗಳು | 250 ಕೋಟಿ |
| 2006–07 | 135 ದೇಶಗಳು | 280 ಕೋಟಿ |

ಮೈಸೂರಿನ ಸೈಕಲ್ ಬ್ರಾಂಡ್ ಅಗರಬತ್ತಿಗಳು 6–7 ದಶಕಗಳಿಂದಲೂ ಹಲವಾರು ಬಗೆಯ ಅಗರಬತ್ತಿಗಳನ್ನು ತಯಾರಿಸಿ ಭಾರತದ ಅತಿದೊಡ್ಡ ಅಗರಬತ್ತಿ ಕೈಗಾರಿಕಾ ಘಟಕವೆಂದು ವಿಶ್ವವಿಖ್ಯಾತವಾಗಿದೆ. (ಎಚ್.ಜಿ.ಎಂ.)

**ಊನ:** ಸತ್ತ ವರ್ಷದಲ್ಲಿ ಮಾಡುವ ಹದಿನಾರು ಶ್ರಾದ್ಧಗಳಲ್ಲಿ ನಾಲ್ಕು: ಊನಮಾಸಿಕ, ತ್ರೈಪಾಕ್ಷಿಕ, ಊನ ಷಾಣ್ಮಾಸಿಕ, ಊನಾಬ್ದಿಕ. ಈ ನಾಲ್ಕು ಶ್ರಾದ್ಧಗಳನ್ನು ವಿಹಿತ ಕಾಲದಲ್ಲಿ ಮಾಡದೆ ಬಿಟ್ಟರೆ ಇತರ ಶ್ರಾದ್ಧಗಳಂತೆ ಇವನ್ನು ಮುಂದೆ ಕಾಲಾಂತರದಲ್ಲಿ ಮಾಡುವಂತಿಲ್ಲ. ಬಿಟ್ಟರೆ ಇವು ಊನ(ಲೋಪ)ವಾದಂತೆಯೇ. ಇದರಿಂದಲೇ ಇವಕ್ಕೆ ಈ ಹೆಸರು ಬಂದಿದೆ. ಊನಮಾಸಿಕವನ್ನು ತಿಂಗಳಿಗೆ ಮೂರು ದಿನ ಕಡಿಮೆ ದಿನಗಳಲ್ಲಿ ಎಂದರೆ ಮರಣದಿನದಿಂದ 27 ದಿನಗಳ ಮೇಲೆ 30 ದಿನಗಳೊಳಗೂ ತ್ರೈಪಕ್ಷಿಕವನ್ನು 40 ದಿನಗಳ ಮೇಲೆ ಮೂರು ಪಕ್ಷಗಳು ಎಂದರೆ 45 ದಿನಗಳೊಳಗೂ ಊನಷಾಣ್ಮಾಸಿಕವನ್ನು 170 ದಿನಗಳ ಮೇಲೆ 180 ದಿನಗಳೊಳಗೂ ಊನಾಬ್ದಿಕವನ್ನು 340 ದಿನಗಳ ಮೇಲೆ 355 ದಿನಗಳೊಳಗೂ ಮಾಡಬೇಕು. ಆ ವರ್ಷ ಮಧ್ಯದಲ್ಲಿ ಅಧಿಕಮಾಸ ಬಂದರೆ ಊನಾಬ್ದಿಕವನ್ನು 355 ದಿನಗಳೊಳಗೆ ಮಾಡಬೇಕಾಗುತ್ತದೆ.

ತ್ರಿಪುಷ್ಕರ ನಂದತಿಥಿ ಚತುರ್ದಶಿ ಅಮಾವಾಸ್ಯೆ ಶುಕ್ರವಾರ ಕೃತ್ತಿಕೆ ಆಶ್ಲೇಷ ಜ್ಯೇಷ್ಠ ಮೂಲ ಪುಬ್ಬೆ ಪೂರ್ವಾಷಾಢ ಪೂರ್ವಾಭಾದ್ರ ನಕ್ಷತ್ರಗಳು–ಇವುಗಳಲ್ಲಿ ಊನಶ್ರಾದ್ಧವನ್ನು ಮಾಡಕೂಡದು. ದ್ವಿತೀಯೆ ದ್ವಾದಶೀ ತಿಥಿಗಳು, ಉತ್ತರೆ ವಿಶಾಖೆ ಉತ್ತರಾಷಾಢ ಪೂರ್ವಾಭಾದ ನಕ್ಷತ್ರಗಳು, ಭಾನು ಮಂಗಳ ಶನಿವಾರಗಳು–ಈ ತಿಥಿ ವಾರ ನಕ್ಷತ್ರಗಳ ಸೇರುವಿಕೆಗೆ ತ್ರಿಪುಷ್ಕರವೆಂದು ಹೆಸರು. ಪ್ರಥಮೆ ಷಷ್ಠಿ ಏಕಾದಶೀ ಈ ಮೂರೂ ನಂದತಿಥಿಗಳು. ಈ ನಿಷಿದ್ಧ ಕಾಲವನ್ನು ಬಿಟ್ಟು ಉಳಿದ ನಿಯತಕಾಲಿಕವಾದ ದಿನಗಳಲ್ಲಿ ಊನಶ್ರಾದ್ಧಗಳನ್ನು ಮಾಡಬೇಕು. (ಎಸ್.ಎನ್.ಕೆ.)

**ಊನೈಕೆ, ರೂಪುಗೆಡಿಕೆ:** ದೇಹದ ಯಾವುದಾದರೊಂದು ಅಂಗವನ್ನು, ಅಂಗಭಾಗವನ್ನು ತೆಗೆದುಹಾಕುವುದನ್ನು ಊನೈಕೆಯೆಂದೂ (ಮ್ಯೂಟಿಲೇಷನ್) ಒಟ್ಟಾರೆ ಆಕಾರವನ್ನು ಕೆಡಿಸುವ ಕ್ರಿಯೆಯನ್ನು ರೂಪುಗೆಡಿಕೆಯೆಂದೂ (ಡಿಫಾರ್ಮೇಷನ್) ಕರೆಯಬಹುದು. ಇಂಥವು ಜೀವನದಲ್ಲಿ ಆಕಸ್ಮಾತ್ತಾಗಿ ಆಗುವುದೂ ಉಂಟು. ಇಲ್ಲವೇ ಉದ್ದೇಶಪೂರ್ವಕವಾಗಿ ಈ ಕ್ರಿಯೆಗಳನ್ನು ದೇಹದ ಮೇಲೆ ಪ್ರಯೋಗಿಸುವುದೂ ಉಂಟು. ಇರಿತ, ಕೊಯ್ತ, ಕತ್ತರಿಸುವಿಕೆ, ತೂತುಮಾಡುವುದು, ಬರೆಹಾಕುವುದು, ತರಚುವುದು, ಅಂಟಿಸಿ ಹೊಲಿಯುವುದು, ಹೊರ ವಸ್ತುಗಳನ್ನು ಒಳ ತೂರುವುದು, ಅಮುಕುವುದು, ಕಿವುಚುವುದು, ಉಬ್ಬಿಸುವುದು, ಸೀಳಿ ಅಗಲಿಸುವುದು, ದೊಡ್ಡದಾಗಿಸುವುದು, ರಂಗು ಬಳಿಯುವುದು–ಇವು ಊನೈಕೆ ಮತ್ತು ರೂಪುಗೆಡಿಕೆಯ ಕೆಲವು ವಿಧಗಳು.

ಮೇಲೆ ತಿಳಿಸಿರುವಂತೆ ಇಂಥ ಸೊಟ್ಟು ಡೊಂಕುಗಳು ಅಕಸ್ಮಾತ್ತಾಗಿ ಆಗಬಹುದು. ಇಲ್ಲವೇ ದಿನನಿತ್ಯದ ನಡವಳಿಕೆಗಳಿಂದಲೂ ಆಗಬಹುದು. ಬಹು ಬಿಗಿಯಾದ ಬೂಟುಗಳನ್ನು ಹಾಕುವುದರಿಂದ ಪಾದಗಳು ಸಣ್ಣಗೂ ಸೊಟ್ಟಗೂ ಆಗುತ್ತವೆ. ಎಷ್ಟೋ ವೇಳೆ ಬೂಟುಗಳನ್ನು ಹಾಕದಿರುವುದರಿಂದಲೂ ಹೀಗಾಗುತ್ತದೆ. ತೊಟ್ಟಿಲು, ಜೋಳಿಗೆ, ತಲೆದಿಂಬುಗಳ ವಿಕಾರಗಳಿಂದ ಮಕ್ಕಳ ಹಿಂದಲೆ ಡೊಂಕಾಗಿರುವುದನ್ನು ಕಾಣಬಹುದು. ನೆಲದಲ್ಲಿ ಚಕ್ಕಳ ಬಕ್ಕಳ ಹಾಕಿ ಕೂಡುವವರ ಅನೇಕ ಕೀಲುಗಳು ಸವೆಯುತ್ತವೆ. ಹೆಚ್ಚಾಗಿ ಕುದುರೆ ಸವಾರಿಯನ್ನು ಮಾಡುವವರ ಕಾಲುಗಳು ಕಮಾನಿನಂತೆ ಬಾಗಿ ಬಿಡುತ್ತವೆ. ಮೂಟೆ ಹೊರುವವನ ಬೆನ್ನಿನ ಸ್ನಾಯುಗಳು, ಸೌದೆ ಒಡೆವವನ ಅಂಗೈಗಳು ದದ್ದುಗಟ್ಟುತ್ತವೆ. ಕೂತು ಓದುವವನ ಬೆನ್ನು ಬಾಗಿ ಹೋಗುತ್ತದೆ. ಇನ್ನು ಮತೀಯ ಸಂಪ್ರದಾಯದಂತೆ ಕೆಲವರು ಮುಡಿ ಕೊಡುತ್ತಾರೆ. ಕೆಲವರು ಉಗುರು ಬೆಳೆಸುತ್ತಾರೆ. ಮತ್ತೆ ಕೆಲವರು ಹರಕೆಗೆಂದು ಬಾಯಿ ಬೀಗ ಹಾಕಿಕೊಳ್ಳುತ್ತಾರೆ. ಇನ್ನೂ ಕೆಲವು ಜನರಲ್ಲಿ ತಮ್ಮ ತಂಡದ ಗುರುತುಗಳನ್ನು ಮುದ್ರೆಯ ರೂಪದಲ್ಲಿ ಮೈಮೇಲೆ ಒತ್ತಿಕೊಳ್ಳುವ ಪದ್ಧತಿ ಇದೆ. ವೈಧವ್ಯ, ಹೇಡಿತನ, ದಂಡನೆಗಳಿಗಾಗಿ ತಲೆ ಬೋಳಿಸುವ, ಕಿವಿ ಕೊಯ್ಯುವ, ಬಣ್ಣ ಬಳಿಯುವ, ಊನಮಾಡಿ ರೂಪುಗೆಡಿಸುವ ವಿಧಾನಗಳು ಹಿಂದಿನಿಂದ ಬಳಕೆಯಲ್ಲಿವೆ.

ದಂಡನೆ ಅಥವಾ ಶಾಸ್ತ್ರವಿಧಿಯಾಗಿ ಊನೈಕೆ ಮತ್ತು ರೂಪುಗೆಡಿಕೆಯ ಕ್ರಮಗಳನ್ನು ಬಳಸುತ್ತಿದ್ದುದರ ಜೊತೆಗೆ ಅವನ್ನು ಸುರೂಪವನ್ನು ಪಡೆಯಲೂ ಬಳಸುತ್ತಿದ್ದರೆಂದು ಹೇಳಬಹುದು. ಆದಿವಾಸಿಗಳಿಂದ ಹಿಡಿದು ಇಪ್ಪತ್ತನೆಯ ಶತಮಾನದವರೆಗೆ ವಿವಿಧ ದೇಶಗಳ ಜನ ಬಳಸುತ್ತಿದ್ದ ವಿಧಾನಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸ್ಥೂಲವಾಗಿ ಹೇಳಿದೆ.

ಆಫ್ರಿಕದ ಹಲವು ತಂಡಗಳಲ್ಲಿ ಮೈನೆರೆದ ಹುಡುಗಿಯರಿಗೆ ಕೆಲವು ದಿನಗಳ ಕಾಲ ವಿಶಿಷ್ಟ ಸ್ನಿಗ್ಧಾಹಾರಗಳನ್ನು ಕೊಟ್ಟು ಅವರ ದೇಹ ಕೊಬ್ಬಿ ಉಬ್ಬುವಂತೆ ಮಾಡುತ್ತಿದ್ದರು. ಇದು ಒಟ್ಟಾರೆ ದೇಹಕ್ಕೆ ಸಂಬಂಧಿಸಿದ ವಿಷಯ. ಪೂರ್ವ ದೇಶಗಳಲ್ಲಿ ಅರಮನೆಗಳಲ್ಲೂ ಇಂಥ ಪದ್ಧತಿ ಇತ್ತು. ಹಚ್ಚೆ ಹೊಯ್ಯುವುದರಿಂದ ಗಾಯಗೊಳಿಸಿ ಕಲೆಗಟ್ಟಿಸುವುದರಿಂದ ಚರ್ಮದ ಊನೈಕೆ ಆಗುತ್ತದೆ.

ಹಚ್ಚೆ ಹೊಯ್ಯುವಾಗ (ಟಟೂ) ಚರ್ಮದಡಿಯಲ್ಲಿ ಬಣ್ಣ ಸೇರುತ್ತದೆ. ಸಾಮಾನ್ಯವಾಗಿ ಅಲಂಕಾರಕ್ಕಾಗಿ ಕಲೆಗಟ್ಟಿಸಿ ಕಲೆಗಂತಿ (ಕೀಕಲಾಯ್ಡ್) ಎಬ್ಬಿಸುವುದೂ ಉಂಟು. ಹಚ್ಚೆ ಹೊಯ್ದರೆ ಕರಿಯ ಚರ್ಮಗಳಲ್ಲಿ ಎದ್ದು ಕಾಣದ್ದರಿಂದ, ಆಫ್ರಿಕ, ಆಸ್ಟ್ರೇಲಿಯ, ನ್ಯೂಗಿನಿ, ಟಾಸ್ಮೇನಿಯಗಳ ಆದಿವಾಸಿಗಳಲ್ಲಿ ಕಲೆಗಟ್ಟಿಸುವುದೇ ವಾಡಿಕೆ. ಚರ್ಮವನ್ನು ಕೊಯ್ದು ಗಾಯ ಮಾಯಲು ಬಿಡದಂತೆ ಕೆರಳುವ ವಸ್ತುವನ್ನು ಹುದುಗಿಸಿಟ್ಟು ಗಾಯದಕಲೆ ಇನ್ನೂ ಜೋರಾಗುವಂತೆ ಮಾಡುವರು. ಕೆಲವೇಳೆ ಇದಕ್ಕಾಗಿಯೂ ಯಾವ ಕಾಯಿಲೆ ತಟ್ಟದಂತೆ ತಡೆಯಲೂ ಸೆಳವು ಬಾರದಂತೆ ಮಾಡಲೂ ಬರೆ ಹಾಕುವುದುಂಟು. ಚರ್ಮದಡಿಯಲ್ಲಿ ವಸ್ತುಗಳನ್ನು ಇಡುವುದು ಇನ್ನೊಂದು ವಿಧಾನ. ದಕ್ಷಿಣ ಆಫ್ರಿಕ ಗಣಿ ಕೆಲಸಗಾರರು ವಜ್ರಗಳನ್ನು ಕದ್ದು ಸಾಗಿಸುವುದು ಹೀಗೇ. ಯುನಾನಿನಲ್ಲಿ ಒಡವೆಗಳನ್ನು ಹೀಗೆ ಎದೆ, ಕೊರಳುಗಳ ಚರ್ಮದಲ್ಲಿ ಪಯಣಿಗರು ಬಚ್ಚಿಡುವರಂತೆ. ಬರ್ಮೀಯರು ಬಗೆಬಗೆಯ ಮಾಯಾ ತಾಯಿತಿಗಳನ್ನು ಚರ್ಮದಡಿಯಲ್ಲಿ ಇಟ್ಟುಕೊಳ್ಳುವರು.

ಕೂದಲು ಅಷ್ಟಾಗಿ ಬೆಳೆಯದ ಜನರಲ್ಲಿ, ಮೊಗದ ಮತ್ತು ಮೈಮೇಲಿನ ಕೂದಲನ್ನು ಕಿತ್ತು ಹಾಕುವರು. ಮಂಗೋಲಿಯನ್ ಕುಲದ ಗಂಡಸರು ತಮ್ಮ ಗಡ್ಡದ ಕೂದಲನ್ನು ಚಿಮುಟ, ಜೋಡಿ ಕಪ್ಪೆ ಚಿಪ್ಪುಗಳು ಇಲ್ಲವೇ ನಾಣ್ಯಗಳಿಂದ ಆಗಾಗ್ಗೆ ತೆಗೆಯುತ್ತಿರುವರು. ಈಗಿನ ಕಾಲದ ಹೆಂಗಸರು ರಾಸಾಯನಿಕ ಮತ್ತಿತರ ವಿಧಾನಗಳಿಂದ ಕೂದಲನ್ನು ತೆಗೆಯುವುದೂ ಊನಯಿಕೆಯೆ. ಕೆಲವರು ಯಾವಾಗಲೂ ಒಂದೇ ಕಡೆಯಲ್ಲಿ ಬೈತಲೆ ತೆಗೆದು ಕೂದಲು ಬೆಳೆವ ದಿಕ್ಕನ್ನೇ ಬದಲಿಸುವುದೂ ಒಂದು ರೀತಿಯ ರೂಪುಗೆಡಿಕೆ.

ಪುರಾತನರು ತಲೆಯ ಸಹಜ ಮಾಟವನ್ನು ತಿದ್ದುತ್ತಿದ್ದುದೂ ಗೊತ್ತಾಗಿದೆ. ತಲೆಗೆ ಬಿಗಿಸಿದ ಪಟ್ಟಿಗಳಿಂದ ತಲೆಗಳು ಕೋಳವೆ ಆಕಾರ ಪಡೆಯುತ್ತಿದ್ದವು. ಆಸ್ಟ್ರೇಲಿಯ, ಓಷಿಯೇನಿಯಗಳನ್ನು ಬಿಟ್ಟರೆ, ಉಳಿದ ಎಲ್ಲ ಖಂಡಗಳಲ್ಲೂ ತಲೆಯ ಸೊಟ್ಟುಗಳು ವಾಡಿಕೆಯಾಗಿದ್ದವು. ಸಹರ ಕೆಳಗಿನ ಆಫ್ರಿಕ, ದಕ್ಷಿಣ ಭಾರತ, ಉತ್ತರ ಅಮೆರಿಕ, ಉತ್ತರ ಯೂರೋಪುಗಳಲ್ಲಿ ಮಾತ್ರ ಅಷ್ಟಾಗಿಲ್ಲ. ಫ್ರಾನ್ಸ್, ಇಂಡೋನೇಷ್ಯ, ಬಡಗಣ ಆಫ್ರಿಕಗಳಲ್ಲಿ ಇದು ಈಗಲೂ ರೂಢಿಯಲ್ಲಿದೆ.

ದಕ್ಷಿಣ ಅಮೆರಿಕದ ಆದಿವಾಸಿಗಳು, ಮಲೇಷಿಯಯನ್ನರು ಭಾರತ ಮತ್ತು ಆಫ್ರಿಕದವರು, ಒಡವೆ ವಸ್ತು ತೊಡಲು ಮೂಗನ್ನೂ ಮೂಗು ಕಂಬವನ್ನೂ ತೂತಿಡುವುದು ಸಾಮಾನ್ಯ. ಹಿಂದಿನ ಕಾಲದಲ್ಲಿ ಎಷ್ಟೋ ಕಡೆ, ಹಾದರ ಮಾಡಿದವರ ಮೂಗನ್ನು ದಂಡನೆಯಾಗಿ ಕತ್ತರಿಸಿ ಹಾಕುತ್ತಿದ್ದರು. ಇಂದಿನ ಪ್ಲಾಸ್ಟಿಕ್ ಶಸ್ತ್ರವೈದ್ಯದಲ್ಲಿ ಮೂಗನ್ನು ಚೆನ್ನಾಗಿ ಕಾಣಬೇಕೆಂದು ಊನಗೊಳಿಸುವುದುಂಟು.

ಆಫ್ರಿಕ, ದಕ್ಷಿಣ ಅಮೆರಿಕದ ಆದಿವಾಸಿಗಳಲ್ಲಿ ಅಲಂಕಾರದ ಓಲೆಯನ್ನೋ ಬೇರೆ ಒಡವೆಯನ್ನೋ ಇಡಲು ಕೆಳದುಟಿಗೆ ತೂತಿಟ್ಟುಕೊಳ್ಳುತ್ತಿದ್ದರು. ಎಸ್ಕಿಮೋಗಳಲ್ಲೂ ಈ ಪದ್ಧತಿ ಇತ್ತು. ಇದರ ಚೆನ್ನಾದ ಮಾದರಿ ಮಧ್ಯ ಆಫ್ರಿಕದ ಸಾರಾ ತಂಡದ ಹೆಂಗಸರಲ್ಲಿ ಕಾಣುವುದು. ತುಟಿಗಳನ್ನು ಕಟವಾಯಿಗಳನ್ನು ಹರಿದು ಮೇಲ್ದುಟಿಯನ್ನು ಸುಮಾರು ಏಳಂಗುಲಗಳ ವ್ಯಾಸದ ತಟ್ಟೆಗಳ ನಡುವೆ ಅಮುಕಿಟ್ಟು ಹಿಗ್ಗಲಿಸುವರು. ಕೆಲವೇಳೆ, ಕೆಳದುಟಿಯನ್ನು 20–25 ಸೆಂ.ಮೀ ಅಂಗುಲಗಳ ಅಗಲಕ್ಕೂ ಹಿಗ್ಗಿಸುವುದುಂಟು. ಕೆನ್ನೆಗಳಲ್ಲಿ ಒಡವೆ ತೊಟ್ಟುಕೊಳ್ಳಲು ತೂತಿಡುವುದು ಸಾಮಾನ್ಯವಲ್ಲ.

ಪುರಾತನ ಪೆರು, ಆಸ್ಟ್ರೇಲಿಯದ ಅನಾಗರಿಕರು, ಆಫ್ರಿಕದ ಕೆಲವು ತಂಡಗಳು, ಮಲೇಷಿಯ ಮತ್ತು ಇತರೆಡೆಗಳಲ್ಲಿ ಒಂದು ಅಥವಾ ಅನೇಕ ಬಾಚಿ ಹಲ್ಲುಗಳನ್ನು ತೆಗೆದು ಹಾಕುತ್ತಾರೆ. ಆಫ್ರಿಕದಲ್ಲಿ ಮುರಿದೋ ಪುರಾತನ ಮೆಕ್ಸಿಕೋ, ಮಧ್ಯ ಅಮೆರಿಕಗಳಲ್ಲಿ ಉಜ್ಜಿ ಹಾಕೋ ಹಲ್ಲುಗಳನ್ನು ಅಲಂಕರಿಸುವುದು ವಾಡಿಕೆಯಾಗಿತ್ತು. ಇಂಡೋನೇಷ್ಯದಲ್ಲಿ ಹಲ್ಲುಗಳ ಮೇಲೆ ಚಿತ್ರ ಕೊರೆಯುವುದುಂಟು. ಬೆಲೆಯಾದ ಕಲ್ಲುಗಳಿಂದಲೋ ಚಿನ್ನದಿಂದಲೋ ಹಲ್ಲು ತುಂಬಿಸುವುದು. ಟೋಪಿ ಕಟ್ಟಿಸುವುದು, ರಿಪೇರಿ ಮಾಡಿಸುವುದು ಈಗಿನ ವಾಡಿಕೆ. ಭಾರತದಲ್ಲಿ ಕೆಲವೆಡೆ ಹಲ್ಲುಗಳ ನಡುವೆ ಗೂಟವನ್ನು ಇರಿಸುವರು. ದಕ್ಷಿಣ ಭಾರತ, ಬರ್ಮ, ಕೆಲವು ಮಲೇಷಿಯ ತಂಡಗಳಲ್ಲಿ ಹಲ್ಲಿಗೆ ಕಪ್ಪು ಹಚ್ಚುವರು.

ಪುರಾತನ ಆಜ್ಟೆಕ್, ಮಾಯ ಆದಿವಾಸಿಗಳು ಮುದುಪಾಗಿ ನಾಲಗೆಯಲ್ಲಿ ಮುಳ್ಳುಗಳನ್ನು ಚುಚ್ಚಿಕೊಳ್ಳುತ್ತಿದ್ದರು. ಆಸ್ಟ್ರೇಲಿಯ ಕೆಲವು ತಂಡಗಳಲ್ಲಿ ದೀಕ್ಷೆ ಬಿಡಿಸುವಾಗ ನಾಲಗೆ ಕೆಳಗೆ ಕೊಯ್ದು ರಕ್ತ ಕಾರಿಸುತ್ತಿದ್ದರು. ಯುರೋಪು, ಆಫ್ರಿಕಗಳಲ್ಲಿ ಹಿಂದಿನ ಕಾಲದಲ್ಲಿ ದಂಡನೆಯಾಗಿ ನಾಲಗೆಯನ್ನೇ ಕೊಯ್ದು ಹಾಕುತ್ತಿದ್ದರು.

ಪುರಾತನ ಮಾಯ ಆದಿವಾಸಿಗಳು ಮೆಳ್ಳಗಣ್ಣೇ ಚೆಂದವೆಂದೆನಿಸಿ, ಹಸುಗೂಸಿನ ಕಣ್ಣುಗಳ ನಡುವೆ ಬೊಂಬೆಯನ್ನು ನೇತುಹಾಕುತ್ತಿದ್ದರು. 1950ರ ಸುಮಾರಿನಲ್ಲಿ ಕಕೇಷಿಯನ್ನರಂತೆ ಕಾಣಬೇಕೆಂಬ ಗೀಳಿಂದ ಜಪಾನಿನ ಜನ ಒಳಕುಡಿಗಣ್ಣಿನ ಪೊರೆಯನ್ನು ತೆಗೆಸಿಕೊಳ್ಳುತ್ತಿದ್ದರು. ದಂಡನೆಯಾಗಿ ಕಣ್ಣು ಕುರುಡು ಮಾಡುವುದು ಪೂರ್ವಕಾಲದಿಂದಲೂ ಗೊತ್ತಿದೆ.

ಒಡವೆ ಇಟ್ಟುಕೊಳ್ಳಲು ಕಿವಿಚುಚ್ಚಿಸಿಕೊಳ್ಳುವುದು ಪ್ರಪಂಚದಲ್ಲಿ ಎಲ್ಲೆಲ್ಲೂ ರೂಢಿಯಲ್ಲಿದೆ. ಕೆಲವೆಡೆಗಳಲ್ಲಂತೂ ಭಾರವಾದ ಒಡವೆ ಹಾಕಿ ಜಗ್ಗಿಸಿ ಹಿಗ್ಗಿಸುವುದುಂಟು. ಮುಸ್ಲಿಂ ಹೆಂಗಸರಲ್ಲಿರುವಂತೆ ಕಿವಿಯ ಅಂಚಿನಲ್ಲಿ ತೂತಿಡುವುದು ಅಷ್ಟು ಸಾಮಾನ್ಯವಲ್ಲ. ಹಾದರದ ದಂಡನೆಯಾಗಿ ಕಿವಿಗಳನ್ನು ಕೊಯ್ದು ಹಾಕುವುದೂ ವಾಡಿಕೆಯಲ್ಲಿತ್ತು.

ಹಿತ್ತಾಳೆ ಸುರುಳಿ ಬಳೆಗಳನ್ನು ಕೊರಳಿಗೇರಿಸಿಕೊಂಡು ಸು. 45 ಸೆಂ.ಮೀ. ಅಡಿ ಎತ್ತರಕ್ಕೆ ಕೊರಳನ್ನು ಎತ್ತರಿಸಲು ಬರ್ಮದ ಷಡಾಂಗ್ ತಂಡದ ಜನ ಹೆಸರಾದವರು. ಇದರಿಂದ ಎದೆಗೂಡಿನ ನಾಲ್ಕಾದರೂ ಬೆನ್ನು ಮೂಳೆಗಳು ಇದರೊಳಕ್ಕೆ ತೂರುತ್ತಿದ್ದುವು.

19ನೆಯ ಶತಮಾನದ ಮೊದಲಿನ ತನಕ ಯುರೋಪಿನ ಹೆಂಗಸರು ಗುತ್ತನಾಗಿ ಬಿಗಿಸುತ್ತಿದ್ದ ಒಳಕುಪ್ಪಸದಿಂದ, ಶಾಶ್ವತವಾಗಿ, ಕೆಲವೇಳೆ ಹಾನಿಕರವಾಗಿ ಎದೆಗೂಡು ಸೊಟ್ಟಾಗಿ ಒಳಾಂಗಗಳಿಗೂ ಅಪಾಯವಾಗುತ್ತಿತ್ತು. ಮೊಲೆಗಳ ಆಕಾರ ಚೆಂದಗಾಣಿಸುವಂತೆ ಹಿಂದಿನ ಕಾಲದಲ್ಲಿ ಒತ್ತಿಡುತ್ತಿದ್ದರು ಇಲ್ಲವೇ ಉಬ್ಬಿಸುತ್ತಿದ್ದರು. ಚರಿತ್ರೆಯಲ್ಲಿ ಹೆಸರಾದ ಅಮೆಝಾನ್ ಸ್ತ್ರೀಯರು ಬಾಣಬಿಡಲು ಅಡ್ಡಬರುವುದೆಂದು ಬಲಗಡೆ ಮೊಲೆಯನ್ನು ತೆಗೆದುಹಾಕುತ್ತಿದ್ದರಂತೆ. ಕೆಲವು ಮತಾಚರಣೆಗಳಿಗಾಗಿ ರಷ್ಯದ ಒಂದು ಕ್ರೈಸ್ತ ಪಂಗಡದವರಲ್ಲಿ, ಹಿಂದಿನ ಕಾಲದಲ್ಲಿ ಮೊಲೆ ತೊಟ್ಟುಗಳನ್ನೋ ಮೊಲೆಗಳನ್ನೋ ತೆಗೆಸಿಕೊಳ್ಳುತ್ತಿದ್ದರು. ಹಮ್ಮುರಬಿಯ ಸೂತ್ರಗಳ ಪ್ರಕಾರ ದಂಡನೆಗಾಗಿ ಮೊಲೆಗಳನ್ನು ಕಿತ್ತುಹಾಕುತ್ತಿದ್ದರು.

ಸುನತಿ (ಸರ್ಕಂಸಿಷನ್) ಮಾಡುವುದು ಊನೈಕೆಯ ಪ್ರಸಿದ್ಧ ಉದಾಹರಣೆ. ಆಸ್ಟ್ರೇಲಿಯದ ಆದಿವಾಸಿಗಳಲ್ಲಿ ಹರೆಯಕ್ಕೆ ಬಂದವನ ಶಿಶ್ನದ ತಳದಲ್ಲಿ ಉದ್ದಕ್ಕೂ ಹರಿದು ಮೂತ್ರನಾಳ ತೆರೆದಿಡುವುದು ಸಾಮಾನ್ಯ. ಅಮೆಝಾನ್, ಫಿಜಿ, ಜನರಲ್ಲಿ ಚಿಕಿತ್ಸೆಗಾಗಿ ಹೀಗೆ ಮಾಡುವುದುಂಟು. ಆಲ್ಜೀರಿಯ, ಈಜಿಪ್ಟ್, ಆದಿವಾಸಿಗಳಲ್ಲಿ ಒಂದು ಪಕ್ಕದ ತರಡನ್ನು (ವೃಷಣ) ವಾಡಿಕೆಯಾಗಿ ತೆಗೆದುಹಾಕುತ್ತಾರೆ. ಮುಸ್ಲಿಮರ ರಾಣೀವಾಸದ ಪರಿಚಾರಿಕೆಯ ಗಂಡಸರ ಎರಡೂ ಕಡೆಯ ತರಡುಗಳನ್ನೂ ತೆಗೆಯುವುದು ವಾಡಿಕೆಯಲ್ಲಿತ್ತು. ಹಲವಾರು ಶತಮಾನಗಳತನಕ ರೋಮನ್ ಚರ್ಚುಗಳಲ್ಲಿನ ಸಣ್ಣಗಂಟಲಿನ ಗಂಡಸರು, ಹಲವಾರು ಪುರಾತನ ಭೂಮಧ್ಯ ಸಮುದ್ರದ ಕರಾವಳಿ ನಾಡುಗಳು, ಮೆಸೊಪೊಟೇಮಿಯ, ಚೀನಗಳಲ್ಲಿನ ಗುಲಾಮರು, ರಾಜಸೇವಕರು, ಪೂಜಾರಿಗಳಿಗೂ ಇದೇ ಗತಿಯಾಗುತ್ತಿತ್ತು. ಹಾದರದ ದಂಡನೆಯಾಗಿ ಕೂಡ ಮಧ್ಯ ಆಫ್ರಿಕ, ಬ್ಯಾಬಿಲೋನಿಯ, ಪುರಾತನ ಈಜಿಪ್ಟ್, ಚೀನಗಳಲ್ಲಿ ತರಡುಗಳೆರಡನ್ನೂ ತೆಗೆದುಬಿಡುತ್ತಿದ್ದರು. ಸೆಲೆಬಸ್ ಬೋರ್ನಿಯೊ ದ್ವೀಪಗಳ ಕೆಲವು ಪಂಗಡಗಳ ಬಹುಮಂದಿ ಗಂಡಸರು ಅವರೊಡನೆ ಕೂಡುವವರಿಗೆ ಇನ್ನಷ್ಟು ಕಾಮ ಕೆರಳಿಸಲು, ಸುಮಾರು ಒಂದೂವರೆ ಅಂಗುಲಗಳ ಉದ್ದದ, ಕೊನೆಗಳು ಗುಬ್ಬಿಯಾಗಿರುವ, ತೆಳು ಕಂಬಿಯನ್ನು ತಮ್ಮ ಶಿಶ್ನದಲ್ಲಿ ತೂತುಮಾಡಿ ಸಿಕ್ಕಿಸಿಕೊಳ್ಳುತ್ತಿದ್ದರಂತೆ. ಸೆಲೆಬಸ್‌ನ ಆಲ್ಫೂರರು ಇದೇ ಕೆಲಸಕ್ಕಾಗಿ ಶಿಶ್ನದ ಮುಂಗೊನೆಯ ಚರ್ಮದಡಿ ಕಲ್ಲುಚೂರುಗಳನ್ನು ತೂರಿಸಿಡುತ್ತಿದ್ದರಂತೆ. ಆಫ್ರಿಕ, ಪುರಾತನ ಈಜಿಪ್ಟ್, ಭಾರತ, ಮಲೇಷ್ಯ, ಆಸ್ಟ್ರೇಲಿಯ, ರಷ್ಯಗಳ ಕೆಲವು ಪಂಗಡಗಳಲ್ಲಿ ಇಡೀ ಚಂದ್ರನಾಡಿಯನ್ನು (ಕ್ಲೈಟೋರಿಸ್) ಒಂದು ಭಾಗವನ್ನೂ ಕೆಲವೇಳೆ ಯೋನಿದುಟಿಗಳನ್ನೋ (ಲೇಬಿಯ), ಗೊಟ್ಟಿಯನ್ನೋ (ಮ್ಯಾನ್ಸ್ ವೆನೆರಿಸ್) ಅವೆರಡನ್ನೋ ಕೊಯ್ದು ತೆಗೆಯುತ್ತಿದ್ದರು. ಅಲ್ಲದೆ, ಹೀಗೆ ಏನೂ ಕೊಯ್ದು ತೆಗೆದುಹಾಕದೆ, ಹೊರ ಜನನಾಂಗಗಳನ್ನು ಸೀಳುವುದು ಮೆಕ್ಸಿಕೋ, ದಕ್ಷಿಣ ಅಮೆರಿಕಗಳ ಆದಿವಾಸಿಗಳಲ್ಲೂ ಮತ್ತೆ ಕೊಯ್ದು ಬಿಡಿಸುವ ತನಕ ಯಾರೊಂದಿಗೂ ಅಂಗಸಂಗ ಆಗದಿರುವಂತೆ ಯೋನಿ ಕಿರುದುಟಿಗಳ ನಡುವೆ ಸಣ್ಣ ತೂತು ಬಿಟ್ಟು ಕೊಯ್ದು ಅಂಟಿಸುವುದು ಪೂರ್ವ ಆಫ್ರಿಕ, ಅರಬ್ಬರಲ್ಲೂ ವಾಡಿಕೆಯಿತ್ತು. ಆಸ್ಟ್ರೇಲಿಯದ ಕೆಲವು ಆದಿವಾಸಿಗಳಲ್ಲಿ ಯೋನಿಕಂಡಿಯನ್ನು ಕೊಯ್ದು ಹಿಗ್ಗಲಿಸುವುದೂ ಕೆಲವೆಡೆಗಳಲ್ಲಿ ಯೋನಿದುಟಿಗಳನ್ನು ಉದ್ದ ಸೀಳುವುದೂ ಹೀಗೆ ನೀಳವಾಗಿ ದೊಡ್ಡದಾಗಿ ಊದಿಕೊಂಡ ಯೋನಿದುಟಿಗಳಲ್ಲಿ ತೂತುಮಾಡಿ ದನಿಮಾಡುವ ವಸ್ತುಗಳನ್ನು ತಗುಲಿಹಾಕುವುದೂ ಕೃತಕವಾಗಿ ಯೋನಿಪೊರೆ (ಹೈಮನ್) ಹರಿದು ಹಾಕುವುದೂ ವಾಡಿಕೆಯಲ್ಲಿದ್ದವು.

ಕೈಕಾಲುಗಳಿಗೆ ಬಿಗಿ ಪಟ್ಟಿಗಳನ್ನು ಸುತ್ತಿ ಕಿವುಚುವುದರಿಂದ ಉಳಿದ ಭಾಗಗಳೂ ಶಾಶ್ವತವಾಗಿ ಊದಿಕೊಳ್ಳುತ್ತವೆ. ಈ ಪದ್ಧತಿ ಪೂರ್ವ ಆಫ್ರಿಕದ, ದಕ್ಷಿಣ ಅಮೆರಿಕದ ಜನರಲ್ಲೂ ನೈಜೀರಿಯದಲ್ಲೂ ವಾಡಿಕೆಯಲ್ಲಿದೆ. ಈ ಶತಮಾನದ ಮೊದಲಿನ ತನಕ ಚೀನದ ಅನೇಕ ಹೆಂಗಸರು ತಮ್ಮ ಕಾಲುಗಳಿಗೆ ಬಿಗಿಯಾಗಿ ಪಟ್ಟಿಗಳನ್ನು ಸುತ್ತುತ್ತಿದ್ದರು. ಇದರಿಂದ ಕಾಲುಗಳು ಮೋಟಾಗಿ ಸಣ್ಣಗಾಗುತ್ತಿದ್ದವು. ಅಲಾಸ್ಕದವರೂ ಕೊಂಚಮಟ್ಟಿಗೆ ಹೀಗೇ ಮಾಡುತ್ತಿದ್ದರು. ಉತ್ತರ ಅಮೆರಿಕದ ಆದಿವಾಸಿಗಳು, ಆಸ್ಟ್ರೇಲಿಯದ ಅನಾಗರಿಕರು, ಕಾಡುಜನರು, ಹಾಟೆಂಟಾಟರು, ನಿಕೋಬರ್, ಫಿಜಿ, ನ್ಯೂಗಿನಿ ಜನರಲ್ಲೂ ಇಡೀ ಬೆರಳನ್ನೋ ಬೆರಳ ಭಾಗವನ್ನೋ ಬಲಿಯಾಗಿ ಇಲ್ಲವೇ ಅಳಲಿಗಾಗಿ ಕತ್ತರಿಸಿಕೊಳ್ಳುತ್ತಿದ್ದರು. (ಡಿ.ಎಸ್.ಎಸ್.)

**ಊನ್‌ಗಾರೆತಿ ಜೊಸೆಪ್ಪಿ:** ಸ್ವೇಚ್ಛಾ ಸಂಕೇತವಿಧಾನ (ಫ್ಯೂಚರಿಸಂ) ಅನುಸರಿಸುವ ಇಟಲಿಯ ನವ್ಯಕವಿಗಳಲ್ಲೊಬ್ಬ. ಹುಟ್ಟಿದ್ದು ಅಲೆಕ್ಸಾಂಡ್ರಿಯಾದಲ್ಲಿ (1888). ಬ್ರೆಜಿಲ್ಲಿನ ಸಾವೊಪಾಲೊದಲ್ಲಿ ಇಟಾಲಿಯನ್ ಸಾಹಿತ್ಯ ವಿಭಾಗದ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ. ಪ್ಯಾರಿಸ್ಸಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಫ್ರೆಂಚ್ ಸಂಕೇತಕವಿಗಳ (ಸಿಂಬಲಿಸ್ಟ್) ಪ್ರಭಾವಕ್ಕೊಳಗಾಗಿ, ಮೊದಲ ಮಹಾಯುದ್ಧದಲ್ಲಿ ಆದ ಅನುಭವಗಳಿಂದ ಪ್ರಚೋದನೆ ಪಡೆದು ಗೂಢ ವಿಚಾರಗಳನ್ನೊಳಗೊಂಡ ಕಾವ್ಯಗಳನ್ನು ಹೊಸ ಶೈಲಿಯಲ್ಲಿ ಬರೆದ. ನವ್ಯಕಾವ್ಯ ಮಾಧ್ಯಮವೊಂದನ್ನು ಸಾಧಿಸಲು ಹೊರಟ ಕವಿಗಳಲ್ಲಿ ಈತ ಮುಖ್ಯನಾದವ. ಉಳಿದ ಕವಿಗಳು ಸಾಧಿಸಲಾರದೇ ಹೋದ ಭಾವತೀಕ್ಷ್ಣತೆ, ವಿಚಾರ ಸಂಕೀರ್ಣತೆ ಇವನಿಗೆ ಫಲಿಸಿವೆಯೆಂದು ಹೇಳಬಹುದು. (ಎಚ್.ಕೆ.ಆರ್.)

**ಊರುಗೋಡೆ:** ಕಮಾನು ಸೇತುವೆಯ ಅಥವಾ ಇತರ ಸಾಲು ಕಮಾನು ಕಟ್ಟಡಗಳ ಕೊನೆಯ ಕಂಬಗಳಿಗೆ ಆಶ್ರಯವಾಗಿರುವ ಗೋಡೆಗಳು (ಅಬಟ್‌ಮೆಂಟ್, ಗುದ್ದುಗ). ಈ ಗೋಡೆಯ ಮೇಲೆ ಕಮಾನಿನ ಮೂಲಕ ಓರೆಯಾಗಿ ಬರುವ ಹೊರೆಯ ಪ್ರಭಾವದಿಂದ ಗೋಡೆಯು ಹಿಂದಕ್ಕೆ ಬೀಳುವ ಸಂಭವವಿರುವುದರಿಂದ ಇದರ ಅಡ್ಡಸೀಳು ವಿಷಮ ಚತುರಶ್ರ (ಟ್ರ್ಯಾಪೆಝೋಡಿಕಲ್) ಆಗಿರುತ್ತದೆ. ಅಂದರೆ, ಇದರ ದಪ್ಪ, ಕಮಾನು ಬಂದು ಸೇರುವ ಮಟ್ಟದಲ್ಲಿರುವುದಕ್ಕಿಂತ ಬುಡದಲ್ಲಿ ಅಧಿಕವಾಗಿರುತ್ತದೆ. ಓರೆಯಾಗಿ ಬೀಳುವ ಕಮಾನಿನ ಒತ್ತಡ ತೂಕವಾಗಿ ಬೀಳುವ ಊರೆಗೋಡೆಯ ಮತ್ತು ಅದರ ಮೇಲ್ಭಾಗದ ಕಟ್ಟಡದ ಭಾರ ಇವೆರಡರ ಪರಿಣಾಮ ತೂಕವಾಗಿದ್ದರೆ (ವರ್ಟಿಕಲ್) ಗೋಡೆ ಮೇಲಿನಿಂದ ಕೆಳಗಿನವರೆಗೆ ಒಂದೇ ದಪ್ಪನಾಗಿರಬಹುದು. ಅದಿಲ್ಲದೆ ಪರಿಣಾಮ ಓರೆಯಾಗಿದ್ದರೆ ಗೋಡೆಯ ಬುಡದಲ್ಲಿ ತುಯ್ತದ ಒತ್ತಡ (ಟೆನ್‌ಸೈಲ್) ಉಂಟಾಗಿ ಗೋಡೆ ಬಿರಿಯುವ ಸಂಭವವಿರುತ್ತದೆ. ಇದನ್ನು ತಡೆಯುವುದಕ್ಕಾಗಿಯೇ ಗೋಡೆಯ ಬುಡದ ದಪ್ಪವನ್ನು ಹೆಚ್ಚಿಸಬೇಕಾಗುತ್ತದೆ. ಕಮಾನುಗಳಿಲ್ಲದ ಸೇತುವೆಗೂ ಗೋಡೆಯ ಹಿಂಭಾಗದಲ್ಲಿ ವಿಷಮ ಚತುರಸ್ರವಾಗಿಯೇ ಇರಬೇಕಾಗುತ್ತದೆ. ಕಾರಣ, ಈ ಗೋಡೆಯ ಹಿಂಭಾಗದಲ್ಲಿ ಬಳಿಸಾರುವ ರಸ್ತೆಗಾಗಿ ಮಣ್ಣಿನ ಏರಿ ಇರುವುದರಿಂದ ಈ ಏರಿಯ ಮಣ್ಣು ಊರೆಗೋಡೆಯ ಮೇಲೆ ಪಾರ್ಶ್ವ ಒತ್ತಡವನ್ನೂ ಹೂಡುತ್ತದೆ. ಈ ಒತ್ತಡಕ್ಕಾದರೂ ಊರೆಗೋಡೆಯನ್ನು ಬಲಪಡಿಸಬೇಕಾಗುತ್ತದೆ. ಕಟ್ಟಡದ ಕಮಾನು ಅರ್ಧಚಕ್ರಾಕಾರವಾಗಿದ್ದರೆ ಊರೆಗೋಡೆಯ ಮೇಲೆ ಓರೆ ಒತ್ತಡವಿರುವುದಿಲ್ಲ. ಸೇತುವೆ ಕಟ್ಟಡಗಳ ಊರೆಗೋಡೆಗಳ ಎರಡೂ ಪಾರ್ಶ್ವಗಳಲ್ಲೂ ಮಂದವಾದ ರೆಕ್ಕೆ ಗೋಡೆಗಳನ್ನು ಕಟ್ಟಿರುತ್ತಾರೆ. ಈ ಗೋಡೆಗಳು ಊರೆಗೋಡೆಗಳಿಗೆ ಹೆಚ್ಚು ಹತೋಟಿಯಲ್ಲಿಟ್ಟುಕೊಳ್ಳಲೂ ನೀರಿನ ಪ್ರವಾಹವನ್ನು ಸೇತುವೆ ಕಣ್ಣುಗಳೆಡೆಗೆ ತಿರುಗಿಸುವುದಕ್ಕೂ ಅನುವಾಗುತ್ತವೆ. (ಕೆ.ಎಸ್.ಕೆ.)



ಊರುಗೋಡೆ (ಊ)

**ಊರುಬಾಡು ಬೇನೆ:** ಏಕಾಣು ಜೀವಿಯಾದ (ಊರುಬಾಡು ಕದಿರುಜೀವಿ) ಕ್ಲಾಸ್ಟ್ರಿಡಿಯಂ ಬಾಟುಲೈನಂ ಎಂಬ ಬ್ಯಾಕ್ಟೀರಿಯ ಸ್ರವಿಸುವ ಜೀವವಿಷದ (ಟಾಕ್ಸಿನ್) ಸೇವನೆಯಿಂದ ಆಗುವ ಒಂದು ಬಗೆಯ ಆಹಾರವಿಷ (ಬಾಟುಲಿಸಂ). ಆಹಾರ ಕೆಡದಂತಿರಿಸಲು ಡಬ್ಬಿ ತುಂಬುವಾಗ ಸಾಕಷ್ಟು ಎಚ್ಚರ ಇಲ್ಲವಾದರೆ ಆಗುವ ಅಪಾಯಕರ ಸೋಂಕಿದು. ಈ ರೋಗ ಹತ್ತಿದವರಲ್ಲಿ ಬಹಳ ಮಂದಿ ಸಾಯುವರು. ರುಚಿ, ವಾಸನೆ ಕೆಟ್ಟಿರುವ ಡಬ್ಬಿ ಆಹಾರವನ್ನು ಬಳಸದಿರುವುದೇ ಇದನ್ನು ತಪ್ಪಿಸುವ ಮುಖ್ಯ ಉಪಾಯ. ಆಹಾರ ಸೇವಿಸಿದ **(ನೋಡಿ– ಆಹಾರ–ವಿಷವೇರಿಕೆ,–ಏಕಾಣುಜೀವಿಕ)** 12–30 ಗಂಟೆಯೊಳಗೆ ವಿಷಲಕ್ಷಣಗಳು ಪ್ರಕಟವಾಗುತ್ತವೆ. ಬಾಟುಲೈನಂ ವಿಷಕ್ಕೆ ಒಳಗಾದವರಿಗೆ ತುರ್ತಾಗಿ ಬಾಟುಲೈನಂ ಪ್ರತಿವಿಷ ನೀಡಿ ಚಿಕಿತ್ಸೆ ಮಾಡುತ್ತಾರೆ. (ಡಿ.ಎಸ್.ಎಸ್.)

**ಊರೆಕಟ್ಟು:** ಸೇತುವೆಯ ಕಮಾನು, ಗುಮ್ಮಟ, ಪ್ರಬಲಿತಕಾಂಕ್ರೀಟಿನ ತೊಲೆಗಳು, ಚಪ್ಪಡಿಗಳು, ಗೋಡೆಗಳು, ತೊಟ್ಟಿಗಳು– ಮೊದಲಾದ ಕಟ್ಟಡಗಳನ್ನು ಕಟ್ಟುವಾಗ ಅವುಗಳಿಗೆ ತಾತ್ಕಾಲಿಕ ಆಧಾರವಾಗಿ ಉಪಯೋಗಿಸುವ ಮರದ ಅಥವಾ ಉಕ್ಕಿನ ಚೌಕಟ್ಟು (ಸೆಂಟ್ರಿಂಗ್). ಸಣ್ಣ ಕೆಲಸಗಳಿಗೆ ಕೊಡುವ ಆಧಾರಗಳನ್ನು ಕಾಲಾವಧಿ ಎಂದು ಕರೆಯುತ್ತಾರೆ.

ಹಾಸನ ಜಿಲ್ಲೆಯ ರಾಮನಾಥಪುರದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಲ್ಲಿನ ಕಂಬಗಳ ನಡುವೆ 9ಮೀ ಕಣ್ಣಿನ (ಸ್ಪ್ಯಾನ್) ನಯವಾದ ಕಲ್ಲಿನ ವೃತ್ತ ಖಂಡಾಕೃತಿಯ (ಸೆಗ್ಮೆಂಟಲ್) 21 ಕಮಾನುಗಳನ್ನು ಕಟ್ಟಿದಾಗ (1936) ಮರದ ಊರೆಕಟ್ಟುಗಳನ್ನು ಉಪಯೋಗಿಸಲಾಯಿತು. ಕಮಾನಿನ ಮಧ್ಯದಲ್ಲಿ ಎತ್ತರ ಕಂಬದಿಂದ ಅದು ಚಿಮ್ಮುವ ಮಟ್ಟದಿಂದ 2ಮೀ ಕಲ್ಲಿನ ಮಂದ 1ಮೀ. ಈ ಊರೆಕಟ್ಟಿನ ರಚನೆ ಹೀಗಿದೆ: ಹೊಳೆಯ ತಳದ ಮೇಲೆ ಅಷ್ಟು ಎತ್ತರದಲ್ಲಿ ಅಂತರಾಳದಲ್ಲಿ ಕಮಾನುಗಳನ್ನು ಕಟ್ಟಬೇಕು. ಅದಕ್ಕಾಗಿ ಸಂಪೂರ್ಣವಾದ ಕಮಾನಿನ ಕಲ್ಲುಗಳ ಮತ್ತು ಕೆಲಸದ ಜನರ ಭಾರವನ್ನು ತಾತ್ಕಾಲಿಕವಾಗಿ ಹೊರುವ ಮರದ ಆಸರೆಕಟ್ಟುಗಳನ್ನು (ಟ್ರಸ್) 2ಮೀ ಅಂತರದಲ್ಲಿ ನಿಲ್ಲಿಸಬೇಕು. ಕಂಬಗಳ ಪಕ್ಕಗಳಲ್ಲಿ ಇದೇ ಅಂತರದಲ್ಲಿ ಹೊರಕ್ಕೆ ಚಾಚುವ ಕಲ್ಲುಗಳ ಮೇಲೆ 0.30ಮೀ ಅಗಲ 203.2ಮಿಮೀ

ಮಂದವಾದ ಒಂದೇ ಮರವನ್ನು ಎಳೆದು ಅದರ ಮೇಲೆ ಮರಳಿನಿಂದ ತುಂಬಿದ ವಿಶಿಷ್ಟವಾದ ತಾಂಡವಾಳದ ಗುಂಡಾದ ಪೆಟ್ಟಿಗೆಗಳನ್ನಿಟ್ಟು ಅವುಗಳ ಮೇಲೆ ಎತ್ತುಯಂತ್ರದ (ಡೆರಿಕ್) ಮೂಲಕ ಆಸರೆಕಟ್ಟನ್ನು ಜಾಗರೂಕವಾಗಿ ಎತ್ತಿ ಲಂಬವಾಗಿ ಮರಗಳಿಂದ ಬಿಗಿದು ನಿಲ್ಲಿಸುತ್ತಾರೆ. ಎರಡು ಆಸರೆಕಟ್ಟುಗಳ ನಡುವೆ ಮರದ ತುಂಡುಗಳನ್ನು (ಲ್ಯಾಗಿಂಗ್ಸ್) ಮೇಲಿನ ಅಂಚಿನಲ್ಲಿ ಹಲ್ಲು ಹಲ್ಲಾಗಿ ಕಾಣುವ ಅವಕ್ಕಾಗಿ ಮಾಡಿದ ಜಾಗದಲ್ಲಿ ಕೂರಿಸುತ್ತಾರೆ. ಇಷ್ಟು ಪೂರ್ವಭಾವಿಯಾದ ಕೆಲಸಕ್ಕೆ ಆಸರೆಕಟ್ಟು (**ನೋಡಿ– ಆಸರೆಕಟ್ಟು**) ಎನ್ನುತ್ತಾರೆ. ಅದರ ಮೇಲೆ ಚಿಮ್ಮುವ ಮಟ್ಟದಿಂದ ವರಸೆಗಳಲ್ಲಿ ಸುರ್ಕಿಗಾರೆಯಿಂದ ಕೂರಿಸಿ ಕಮಾನಿನ ನೆತ್ತಿಗೆ ಬಂದ ಮೇಲೆ ನಡುಕಲ್ಲಿನ ವರಸೆಯನ್ನು (ಕೀಸ್ಟೋನ್) ದಪ್ಪವಾದ ಹುಣಸೆಮರದ ದಿಮ್ಮಿಗಳಿಂದ ಬಿಡಿಸಿ ಬಿಗಿಯಾಗಿ ಕೂರಿಸುತ್ತಾರೆ. ಮೂರನೆಯ ದಿವಸ ಮರಳಿನ ಪೆಟ್ಟಿಗೆಯಿಂದ ಮರಳನ್ನು ಕೆದಕಿ ಹೊರಕ್ಕೆ ತೆಗೆದರೆ ಆಸರೆಕಟ್ಟು ಕಮಾನನ್ನು ಬಿಟ್ಟು ಕೊಂಚ ಕೆಳಕ್ಕೆ ಇಳಿಯುತ್ತದೆ. ಅದನ್ನು ಇಳಿಸಿ ಮುಂದಿನ ಕಮಾನಿಗೆ ಸಾಗಿಸುತ್ತಾರೆ.

ಸೇತುವೆಯ ಮೇಲೆ ವಾಹನಗಳ ಮತ್ತು ಜನರ ಸಂಚಾರವಿದ್ದರೆ ನೀರಾವರಿಯ ನಾಲೆ ಹೊಳೆಯನ್ನು ದಾಟುವಾಗ ಕಟ್ಟಡದ ಮೇಲುಗಾಲುವೆಯಲ್ಲಿ (ಆಕ್ವಿಡಕ್ಟ್) ನೀರು ಹರಿಯುತ್ತದೆ. ನೀರಾವರಿಯ ಕೆಲಸಗಳಲ್ಲಿ ಕಮಾನುಗಳನ್ನು ಕಟ್ಟುವಾಗ ಆಸರೆ ಕಟ್ಟುಗಳನ್ನು ಸಾಮಾನ್ಯವಾಗಿ ಉಪಯೋಗಿಸುವುದಿಲ್ಲ. ಹೊಳೆಯ ತಳದಿಂದ ಬಲವಾದ ಮರದ ಕಂಬಗಳನ್ನು ನಿಲ್ಲಿಸಿ ಮೇಲುಗಡೆ ಮರದ ತುಂಡುಗಳನ್ನು ಮಟ್ಟವಾಗಿ ಎಳೆದು, ಹಗ್ಗಗಳಿಂದ ಕಟ್ಟಿ ಅದರ ಮೇಲೆ ಮಣ್ಣನ್ನು ತುಂಬಿ ಮೇಲುಭಾಗವನ್ನು ಕಮಾನಿನ ಒಳಭಾಗಕ್ಕೆ (ಇಂಟ್ರಡಾರ್) ಸರಿಯಾಗಿ ಗಾರೆಯಿಂದ ನಯವಾಗಿ ಮಾಡಿ ಅದರ ಮೇಲೆ ಮೊದಲೇ ತಯಾರಿಸಿದ ಕಮಾನಿನ ಕಲ್ಲುಗಳಿಂದ ಕಮಾನನ್ನು ಎರಡು ಕಂಬಗಳ ಕಡೆಗಳಿಂದಲೂ ಕಟ್ಟಿ ಮಧ್ಯೆ ನಡುಕಲ್ಲಿನ ವರಸೆಯನ್ನು ಹುಣಸೇ ಮರದ ದಿಮ್ಮಿಗಳಿಂದ ಬಡಿದು ಪ್ರಬಲಿತವಾಗಿ ಕೂರಿಸುತ್ತಾರೆ.

ಗುಮ್ಮಟಗಳನ್ನು (ಡೋಮ್ಸ್) ಕಟ್ಟುವಾಗ ಸಾಮಾನ್ಯವಾಗಿ ಆಸರೆಕಟ್ಟನ್ನು ಉಪಯೋಗಿಸಲಾಗುವುದಿಲ್ಲ. ಮೈಸೂರು ನಗರದಲ್ಲಿ ಶ್ರೀ ಕೃಷ್ಣರಾಜ ಒಡೆಯರ ಕ್ಯಾನೊಪಿಯನ್ನು ಕೆಂಪು ಕಲ್ಲಿನಿಂದ ಕಟ್ಟಿದಾಗ (1946) ಕೆಳಗಡೆಯಿಂದ ಕಂಬಗಳ ಮಟ್ಟದವರೆಗೂ ದಿಂಡಿಗದ ಮರಗಳನ್ನು ನಿಲ್ಲಿಸಿ ಮೇಲುಗಡೆ ಮರಗಳನ್ನು ಮಟ್ಟವಾಗಿ ಎಳೆದು ಅದರ ಮೇಲೆ ಮಣ್ಣನ್ನು ತುಂಬಿ ಹೊರಭಾಗವನ್ನು ಗುಮ್ಮಟದ ಆಕಾರಕ್ಕೆ ಹೊಂದಿಸಿ ಗಾರೆಯಿಂದ ನಯ ಮಾಡಿ ಅದರ ಮೇಲೆ ಗುಮ್ಮಟದ ಕಲ್ಲುಗಳನ್ನು ಸಿಮೆಂಟಿನ ಗಾರೆಯಲ್ಲಿ ಕೂರಿಸಿ ಕೆಲವು ದಿನಗಳವರೆಗೆ ಬಿಟ್ಟು ಆಮೇಲೆ ಕೆಳಗಿನ ಆಧಾರವನ್ನು ತೆಗೆದಿದ್ದಾರೆ.

ಪ್ರಬಲಿತ ಕಾಂಕ್ರೀಟಿನ ಕಟ್ಟಡಗಳಿಗೆಲ್ಲ ವಿಶಿಷ್ಟವಾದ ಕಾಲಾವಧಿ ಬೇಕಾಗುತ್ತದೆ. ಮನೆಗಳಲ್ಲಿ ಮಾಡುಗಳನ್ನು ಕಟ್ಟುವಾಗ ನೆಲದ ಮೇಲೆ ಸರಿಯಾದ ಎತ್ತರಕ್ಕೆ ಮರದ ಗುಂಡುಗಂಬಗಳನ್ನು ನಿಲ್ಲಿಸಿ ಅವುಗಳ ಮೇಲೆ ಮಟ್ಟವಾಗಿ ನಯವಾದ ಮರದ ಹಲಗೆಗಳನ್ನು ಎಳೆಯುತ್ತಾರೆ. ಹಲಗೆಗಳ ಮೇಲೆ ಸಂಧಾನಕ್ಕೆ ತಕ್ಕಂತೆ ಉಕ್ಕಿನ ಕಂಬಿಗಳನ್ನು ಬಗ್ಗಿಸಿ ಜೋಡಿಸಿ ಬಿಗಿದು, ಅದರ ಮೇಲೆ ಒಂದೇ ದಿನ ಸಿಮೆಂಟ್ ಕಾಂಕ್ರೀಟನ್ನು ಬೇಕಾದ ಮಟ್ಟಕ್ಕೆ ತುಂಬುತ್ತಾರೆ. ಕಾಲಾವಧಿಯನ್ನು 10 ದಿವಸಗಳಿಂದ ಎರಡು ವಾರಗಳವರೆಗೆ ಕಾಂಕ್ರೀಟ್ ಗಟ್ಟಿಯಾಗುವವರೆಗೂ ಬಿಟ್ಟು ಆಮೇಲೆ ತೆಗೆದುಹಾಕುತ್ತಾರೆ. ಈಚೆಗೆ ಮರದ ಹಲಗೆಗಳಿಗೆ ಬದಲಾಗಿ ಮತ್ತೆ ಮತ್ತೆ ಬಳಸಬಹುದಾದ ಉಕ್ಕಿನ ತಗಡುಗಳನ್ನು ದೊಡ್ಡ ಕಟ್ಟಡಗಳಲ್ಲಿ ಉಪಯೋಗಿಸುತ್ತಾರೆ.

ನಗರಗಳಿಗೆ ನೀರಿನ ಸರಬರಾಜಿಗಾಗಿ ತಣಿಸುವ ಕೊಳಗಳ (ಸೆಟ್ಲಿಂಗ್ ಟ್ಯಾಂಕ್ಸ್) ಮತ್ತು ಸೋಸಕಗಳ (ಫಿಲ್ಟರ್ಸ್) ಗೋಡೆಗಳನ್ನು ಸಾಮಾನ್ಯವಾಗಿ ಪ್ರಬಲಿತ ಕಾಂಕ್ರೀಟಿನಿಂದ ಕಟ್ಟುತ್ತಾರೆ. ಆಗ ಗೋಡೆಯ ಎರಡು ಪಕ್ಕಗಳಲ್ಲೂ ಹೊರಗಡೆ ನಯವಾದ ಮರದ ಹಲಗೆಗಳನ್ನು ನಿಲ್ಲಿಸಿ ಅಡ್ಡಪಟ್ಟಿಗಳಿಂದ ಪ್ರಬಲಿತಪಡಿಸಿ ಒಳಗಡೆ ಕಾಂಕ್ರೀಟನ್ನು ತುಂಬುವಾಗ ಹಲಗೆಗಳು ಕೊಂಚವೂ ಕದಲದ ಹಾಗೆ ಹಿಂದುಗಡೆಯಿಂದ ಬಲವಾದ ಊರೆಗಳನ್ನು ಕೊಡುತ್ತಾರೆ.

ನಗರಗಳಲ್ಲಿ ಶುದ್ಧವಾದ ಕುಡಿಯುವ ನೀರನ್ನು ಅಲ್ಲಲ್ಲಿ ಶೇಖರಿಸಿಡುವ ಪ್ರಬಲಿತ ಕಾಂಕ್ರೀಟಿನ ಗುಂಡನೆಯ ಕೊಳಗಳನ್ನು ಸೂಕ್ತವಾದ ಅಡಿಪಾಯದ ಮೇಲೆ ಕಟ್ಟುತ್ತಾರೆ. ಆ ಎತ್ತರದ ಮೇಲೆ ವರ್ತುಲಾಕಾರದ ಕೊಳಗಳಿಗಾಗಿ ಕಟ್ಟುವ ಆಧಾರ ತಾತ್ಕಾಲಿಕವಾದರೂ ಒಳಗಡೆ ಉಕ್ಕನ್ನು ಜೋಡಿಸಿ ಕಾಂಕ್ರೀಟನ್ನು ತುಂಬುವಾಗ ಆಕಾರ ಕೊಂಚವೂ ಕೆಡದ ಹಾಗೆ ಮಾಡುವುದು ಸುಲಭವಲ್ಲ. ಇಂಥ ಕೆಲಸಗಳಲ್ಲಿ ಕಾಲಾವಧಿಗಳನ್ನು ಕಟ್ಟುವುದೇ ಒಂದು ಪ್ರಮುಖ ಕೆಲಸ. (ಎಚ್.ಸಿ.ಕೆ.)

**ಊರೆಗಳು ಬಂಧನಗಳು:** ಯಂತ್ರೋತ್ಪಾದನೆಯ ಕಾರ್ಯವಿಧಾನದಲ್ಲಿ ಬಿಡಿಭಾಗಗಳನ್ನು ಉತ್ಪಾದಿಸುವಾಗ ಉಪಕರಣಗಳ ಬಳಕೆಯನ್ನು ನಿಯೋಜಿಸಲು ಬಳಸುವ ಸಾಧನಗಳು (ಜಿಗ್ಸ್ ಅಂಡ್ ಫಿಕ್ಸ್‌ಚರ್ಸ್) ರೂಪಿಸಬೇಕಾದ ಯಂತ್ರ ಭಾಗಗಳನ್ನು ನಿರ್ದಿಷ್ಟಸ್ಥಾನದಲ್ಲಿರಿಸಿ ಕತ್ತರಿಸುವ ಸಾಧನಗಳನ್ನು (ಕಟಿಂಗ್ ಟೂಲ್ಸ್) ಸರಿಯಾಗಿ ನಿರ್ದೇಶಿಸುವುದು ಊರೆಗಳ ಕೆಲಸ. ಇವುಗಳಲ್ಲಿ ಬುಷಿಂಗ್ ಎಂಬ ಸಾಧನ ಉಪಕರಣಗಳನ್ನು ಸರಿಯಾಗಿ ನಿರ್ದೇಶಿಸುತ್ತದೆ. ಕೊರೆಯುವ (ಬೋರಿಂಗ್) ನಯಮಾಡುವ (ಮಿಲ್ಲಿಂಗ್) ಮುಂತಾದ ಕೆಲಸಗಳಲ್ಲೂ ಇದರ ಬಳಕೆ ಇದೆ. ರೂಪಿಸಬೇಕಾದ ಯಂತ್ರಭಾಗಗಳನ್ನು ಸರಿಯಾದ ಸ್ಥಾನದಲ್ಲಿರಿಸಿ ಯಂತ್ರ ಕ್ರಿಯೆಗೆ (ಮೆಷಿನಿಂಗ್) ಅನುಗೊಳಿಸುವುದು ಬಂಧನಗಳ ಕೆಲಸ. ಕೊಯ್ಯುವ ಸಾಧನಗಳನ್ನು ಬಂಧನ ನಿರ್ದೇಶಿಸದು, ಆದರೆ ಸಾಣೆಹಿಡಿಯುವ (ಗ್ರೈಂಡಿಂಗ್) ಮತ್ತು ಬೆಸುಗೆಹಾಕುವ (ವೆಲ್ಡಿಂಗ್) ಕೆಲಸಗಳಲ್ಲಿ ಇವುಗಳ ಉಪಯೋಗ ಉಂಟು. ರೂಪಿಸುವ ಯಂತ್ರಭಾಗಗಳನ್ನು ಮೊದಲಬಾರಿ ಮತ್ತು ಅನುಕ್ರಮವಾಗಿ ಊರೆ ಅಥವಾ ಬಂಧನಗಳಲ್ಲಿ ಇರಿಸುವುದರ ಮೇಲೆ, ಊರೆ ಅಥವಾ ಬಂಧನಗಳ ನಿಷ್ಕೃಷ್ಟತೆ (ಆ್ಯಕ್ಯುರೆಸಿ) ಅವಲಂಬಿಸಿದೆ. ಕಾರ್ಯವಿಧಾನದ ವಿವಿಧ ಹಂತಗಳಲ್ಲಿ ಮೊದಲನೆಯ ಊರೆ ಅಥವಾ ಬಂಧನ ಯಂತ್ರಭಾಗದ ಮೇಲೆ ಗುರುತಿನ ಬಿಂದುವನ್ನು (ಲೊಕೇಟಿಂಗ್ ಪಾಯಿಂಟ್) ಗುರುತಿಸುತ್ತದೆ. ಈ ಬಿಂದು ಒಂದು ತೂತಾಗಿರಬಹುದು ಅಥವಾ ಕಾರ್ಯ ವಿಧಾನಕ್ಕನುಗುಣವಾಗಿ ಇನ್ನಾವುದೇ ಆಕೃತಿಯಾಗಿರಬಹುದು. ಇದನ್ನೇ ಆಮೇಲೆ ಅನುಕ್ರಮವಾಗಿ ಬರುವ ಊರೆ ಮತ್ತು ಬಂಧನಗಳಲ್ಲಿ ಬಳಸಲಾಗುವುದು. (ಎಂ.ಎನ್.ಸಿ.)

**ಊರ್ಮಿಳೆ:** ಲಕ್ಷ್ಮಣನ ಸತಿ. ಜನಕರಾಜನ ಔರಸಪುತ್ರಿ. ವಾಸ್ತವವಾಗಿ ಇವಳು ಜಾನಕಿ; ಆದರೆ ಆ ಹೆಸರಿನಿಂದ ಪ್ರಸಿದ್ಧವಾದವಳು, ಜನಕರಾಜನ ಸಾಕುಮಗಳು ಸೀತೆ. ರಾಮಲಕ್ಷ್ಮಣರಿಗೆ ಸೀತಾ ಊರ್ಮಿಳೆಯರು ಧರ್ಮಸಂಬಂಧ ಸದೃಶರಾಗಿ, ಸದೃಶರೂಪಸಂಪದರಾಗಿ ಇದ್ದಾರೆಂದು ಋಷಿ ವಿಶ್ವಾಮಿತ್ರನೇ ಜನಕರಾಜನಿಗೆ ಹೇಳಿ ಅವರ ಮದುವೆಯನ್ನು ನಿರ್ಧರಿಸುತ್ತಾನೆ. ಸೀತಾದೇವಿಯನ್ನು ಶ್ರೀರಾಮನಿಗೆ ಧಾರೆಯೆರೆದ ಕೈಯಲ್ಲೇ ಅದೇ ರೀತಿಯಲ್ಲೇ ಜನಕರಾಜ ಊರ್ಮಿಳೆಯನ್ನು ಲಕ್ಷ್ಮಣನಿಗೆ ಧಾರೆಯೆರೆಯುತ್ತಾನೆ– ಲಕ್ಷ್ಮಣಾಗಚ್ಛ, ಭದ್ರಂತೇ! ಊರ್ಮಿಲಾಮುದ್ಯತಾಂ ಮಯಾ. ಪ್ರತೀಚ್ಛ ಪಾಣಿಂ ಗೃಹ್ಣೀಷ್ವ; ಮಾಭೂತ್ ಕಾಲಸ್ಯ ಪರ್ಯಯ:! ಎಂದು. ಮುಂದೆ ತನ್ನೊಡನೆ ವನವಾಸಕ್ಕೆ ಬರುತ್ತಿರುವ ಲಕ್ಷ್ಮಣನಿಗೆ ರಾಮ ಹೇಳುತ್ತಾನೆ. ನಿನ್ನ ಮನದನ್ನರಿಗೆಲ್ಲ ಹೇಳಿಬಿಟ್ಟು ಬಾ ಎಂದು! ಪ್ರಾಯಶಃ ವಾಲ್ಮೀಕಿ ಇಲ್ಲಿ ಊರ್ಮಿಳೆಯನ್ನು ಗಮನದಲ್ಲಿಟ್ಟುಕೊಂಡಿರಬೇಕು. ರಾಮ ಲಕ್ಷ್ಮಣ ಸೀತೆಯರು ವನವಾಸವನ್ನು ಕೈಕೊಂಡಾಗ ಊರ್ಮಿಳೆ ಅಯೋಧ್ಯೆಯಲ್ಲೇ ಉಳಿಯುತ್ತಾಳೆ. ಪತಿವಿರಹದಿಂದ ಅವಳು ಪಟ್ಟ ಪಾಡೇನು, ಮುಂದೆ ಅವಳಿಗೆ ಏನಾಯಿತು ಎಂಬ ವಿವರಗಳು ವಾಲ್ಮೀಕಿಯ ರಾಮಾಯಣದಲ್ಲಿ ಬರುವುದಿಲ್ಲ.

ಕವಿ ರವೀಂದ್ರರು ಕಾವ್ಯದ ಅನಾದರ ಎಂಬ ತಮ್ಮೊಂದು ವಿಮರ್ಶೆಯಲ್ಲಿ ಊರ್ಮಿಳೆಯ ಬಗ್ಗೆ ಸಹಾನುಭೂತಿಯಿಂದ ಬರೆದಿದ್ದಾರೆ. ಉಷೋದಯದ ಪೂರ್ವದಿಗಂತದಲ್ಲಿ ಮೂಡುವ ತಾರೆ ಸೂರ್ಯೋದಯಾನಂತರದ ತುಂಬು ಬೆಳಕಿನಲ್ಲಿ ಮುಳುಗಿಹೋಗುವಂತೆ, ಸೀತಾದೇವಿಯ ಕಣ್ಣೀರಿನಲ್ಲಿ ಊರ್ಮಿಳಾದೇವಿ ಸಂಪೂರ್ಣವಾಗಿ ಕೊಚ್ಚಿಹೋದಳೆಂದು ನಿಟ್ಟುಸಿರಿಟ್ಟಿದ್ದಾರೆ. ವಾಲ್ಮೀಕಿ ಮಹಾಕವಿ ತನ್ನ ಕಲ್ಪನಾಶಕ್ತಿಯ ಕರುಣಜಲವೆಲ್ಲವನ್ನೂ ಸೀತಾದೇವಿಯ ಪುಣ್ಯಾಭಿಷೇಕದಲ್ಲಿಯೇ ಮುಗಿಸಿಬಿಟ್ಟಿದ್ದಾನೆ. ಕಳೆಗುಂದಿದ ಮುಖವುಳ್ಳವಳೂ ಸಮಸ್ತ ಐಹಿಕ ಸುಖದಿಂದ ವಂಚಿತಳೂ ಆಗಿ ಸೀತಾದೇವಿಯ ಛಾಯೆಯಲ್ಲಿ ಅವಕುಂಠನವತಿಯಾಗಿ ನಿಂತಿರುವ ಮತ್ತೊಬ್ಬ ರಾಜಕುಮಾರಿಯ ಚಿರದುಃಖದಿಂದ ತಪ್ತವಾದ ನಮ್ರಲಲಾಟದ ಮೇಲೆ ತನ್ನ ಕಮಂಡಲುವಿನ ಒಂದು ತೊಟ್ಟು ನೀರನ್ನೂ ಚಿಮುಕಿಸಿಲ್ಲವಲ್ಲ–ಎಂದು ಉದ್ಗರಿಸುತ್ತಾರೆ. ಅನಂತರ ಆಧುನಿಕ ಭಾರತೀಯ ಸಾಹಿತ್ಯದಲ್ಲಿ ಊರ್ಮಿಳೋದಯವಾಗುತ್ತದೆ. ಉತ್ತರದ ಹಿಂದೀ ಕವಿಗಳಲ್ಲಿ ಮೈಥಿಲೀಶರಣಗುಪ್ತರು, ಬಾಲಕೃಷ್ಣವರ್ಮರು ಊರ್ಮಿಳಾ ಕಾವ್ಯಗಳನ್ನೇ ರಚಿಸಿದರೆ, ದಕ್ಷಿಣದಲ್ಲಿ ಭಾರತಿ ಅವರು ತಪಸ್ವಿನೀ ಎಂಬ ನಾಟಕವನ್ನೂ ಪು.ತಿ.ನ. ಅವರು ಬೀಳ್ಕೊಡಿಗೆ ಎಂಬ ಕಿರುನಾಟಕವನ್ನೂ ಕೀರ್ತಿನಾಥ ಕುರ್ತುಕೋಟಿಯವರು ಊರ್ಮಿಳಾ ಭಾವಗೀತವನ್ನೂ ಬರೆದಿದ್ದಾರೆ. ಕುವೆಂಪು ಅವರು ಆಕೆಯನ್ನು ಕುರಿತು ಅಷ್ಟಷಟ್ಪದಿಯ ಕುಸುಮಾಂಜಲಿ ನೀಡಿದರೇ ಹೊರತು ಪ್ರತ್ಯೇಕ ಕಾವ್ಯವನ್ನೇ ರಚಿಸುವ ಗೋಜಿಗೆ ಹೋಗಲಿಲ್ಲ. ಶ್ರೀರಾಮಾಯಣದಲ್ಲಿ ಈ ಮಹಾಸತಿಯ ಪಾತ್ರವೆಂಥದು ಎಂಬುದರ ಸ್ಪಷ್ಟ ದರ್ಶನವಿರುವ ಈ ಕವಿ ತಮ್ಮ ಶ್ರೀರಾಮಾಯಣದರ್ಶನಂ ಮಹಾಕಾವ್ಯದಲ್ಲಾದರೂ ಈಕೆಯನ್ನು ತೋರುವುದು ಕಡೆಯಲ್ಲಿ ಒಮ್ಮೆ ಮಾತ್ರವೇ. ಪರೋಕ್ಷವಾಗಿ ಊರ್ಮಿಳೆಯ ಚಿತ್ರ ಇನ್ನೆರಡು ಮೂರು ಬಾರಿ ಮಾತ್ರ ಸುಳಿದರೂ ಆಕೆಯ ಅದೃಶ್ಯ ತೇಜಃಪುಂಜದಿಂದ ಇಡೀ ಕಾವ್ಯದ ಘಟನೆಯೆಲ್ಲ ಮಿಂದು ಕಾಂತವಾಗುತ್ತದೆ. ಊರ್ಮಿಳಾ ಲಕ್ಷ್ಮಣರ ಅನರುಕ್ತ ತ್ಯಾಗದ ಮಹಿಮೆಯನ್ನು ಸೀತಾರಾಮರು ಕಲ್ದವಸಿಯ ಮೂಲಕ ತಿಳಿದು ತಮ್ಮ ಜೀವನ ಸಂಯಮವನ್ನು ಜಾಗೃತಗೊಳಿಸಿಕೊಳ್ಳುವ ಪ್ರಸಂಗವಾಗಲಿ, (ಶ್ರೀರಾಮಾಯಣದರ್ಶನಂ– ಕುಣಿದಳುರಿಯ ಊರ್ವಶಿ) ಅಯೋಧ್ಯೆಗೆ ಹಿಂತಿರುಗಿದ ಸೀತಾರಾಮ ಲಕ್ಷ್ಮಣರನ್ನು ದೂರದಿಂದ ಸ್ವಾಗತಿಸಲು ತನ್ನ ತಪೋವನದ ತವರನ್ನುಳಿದು ಮಿಂದು ಮಡಿಯುಡಲು ಹೊರಟ ಊರ್ಮಿಳೆ ತಂಗಿ ಮಾಂಡವಿಗೆ "ಚಿಃ ! ಕಡಲ್ಗಿದಿರ್ ಪನಿಗೇಂ ಪ್ರದರ್ಶನಂ? ದೇವರ ತಪಕ್ಕಿದಿರ್ ನಮ್ಮದೊರ್ ತೃಣಮಲ್ತೆ; ಸಂತೋಷ ಸಮಯದೊಳ್ ತೋರ್ಪುದನುಚಿತವೆಮ್ಮ ಕಷ್ಟಮಂ; ತನ್ನ ತಾನು ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ; ಮೇಣ್‌ತಪಕ್ಕೆ ಕೇಳ್, ತಂಗೆ, ಪರಮಪ್ರಯೋಜನಂ!" ಎಂದು ನುಡಿಯುವ ಪ್ರಸಂಗವಾಗಲಿ, ಊರ್ಮಿಳಾ ದೇವಿಯನ್ನು ದೇವತಾಪ್ರತಿಮೆಯಾಗಿ ಮೂರ್ತೀಭವಿಸುವಲ್ಲಿ ಯಶಸ್ವಿಯಾಗಿರುವಂತೆ ಯಾವ ಪ್ರತ್ಯೇಕ ಸಮಗ್ರ ಕಾವ್ಯವೂ ಆಗದಿರಬಹುದು. ಸಂಯಮ ತಪಸ್ಸಿನ ಮಹಿಮಾಜ್ಯೋತಿಯಾದ ಊರ್ಮಿಳೆಯ ಪಾತ್ರವೈಭವ ಧ್ವನಿವ್ಯಂಜಿತವಾಗುವಂತೆ ವಿಸ್ತೃತವರ್ಣನೆಯಿಂದಾಗದು. ಮೌನವನ್ನು ಮಾತಿನಿಂದ, ಸಂಯಮವನ್ನು ದುಂದುಗಾರಿಕೆಯಿಂದ ಸಾಧಿಸುವುದಾದರೂ

ಹೇಗೆ? ಊರ್ಮಿಳಾ ಪಾತ್ರದ ಮಹತ್ತ್ವನಿದ್ದರೂ ರಾಮಾಯಣ ಮಹಾಗೀತದಲ್ಲಿ ಶ್ರುತಿಯಂತೆ ಅಶ್ರುತವಾಗಿರುವುದರಲ್ಲಿಯೆ ಹೊರತು, ಆಕೆಯನ್ನೇ ಮುನ್ನೆಲೆಯ ಗಾನವನ್ನಾಗಿ ಮಾಡಿ ಉಳಿದ ವಾದ್ಯಮೇಳವನ್ನು ಮುಳುಗಿಸುವುದರಲ್ಲಿಲ್ಲ. ಈ ದೃಷ್ಟಿಯಿಂದ ಶ್ರೀ ಕುವೆಂಪು ಅವರ ಸೃಷ್ಟಿ ಅನನ್ಯ ಶ್ರೇಷ್ಠವಾದುದು.

ಊರ್ಮಿಳೆ ತಪಸ್ವಿನಿಯೆ ಆಗಬೇಕೆ, ಬರಿಯ ವಿರಹಿಣಿಯೇಕಾಗಬಾರದು, ಎಂಬುದಕ್ಕೆ ವಾಲ್ಮೀಕಿಗಳೇ ಸೂಚ್ಯ ಉತ್ತರವಿತ್ತಿದ್ದಾರೆ. ಜಾನಪದ ಕಥೆಗಳೂ ಈಕೆಯನ್ನು ತಪಸ್ವಿನಿಯನ್ನಾಗಿಯೆ ಕಲ್ಪಿಸಿವೆ. ಒಂದು ಕಥೆಯ ಪ್ರಕಾರ, ಊರ್ಮಿಳೆ ಲಕ್ಷ್ಮಣನಿಗಾಗಿ ಬಿಸಿನೀರು ಹಿಡಿದು ಬಾಗಿಲಿಗೆ ಬಂದವಳು ರಾಮ ವನವಾಸದ ಸುದ್ದಿ ತಿಳಿದು ಹಾಗೆಯೇ ಅಲ್ಲೇ ಪತಿಯ ಆಗಮನಕ್ಕಾಗಿ ಕಾದು ನಿಲ್ಲುತ್ತಾಳೆ. ವನವಾಸದಿಂದ ಬಂದ ಪತಿಯ ಕಾಲಿಗೆ ಅದೇ ತಂಬಿಗೆಯ ಬಿಸಿ ನೀರೆರೆದು ಎದುರುಗೊಳ್ಳುತ್ತಾಳೆ. ಮತ್ತೊಂದು ಕಥೆಯ ಪ್ರಕಾರ, ಆಕೆ ವನವಾಸ ವಾರ್ತೆ ತಿಳಿದಾಗ ಸ್ನಾನ ಮಾಡುತ್ತಿರುತ್ತಾಳೆ. ಪತಿ ಹಿಂಬರುವ ತನಕ ಅಲ್ಲೆ ಒದ್ದೆ ಮಡಿಯಲ್ಲಿರುತ್ತಾಳೆ. ವಾಸ್ತವವಾಗಿಯೂ ಅವಳು ಗೃಹತಪಸ್ವಿನಿಯೆ. (ಎಸ್.ಎನ್.ಎಸ್.ಎಚ್.)

**ಊರ್ವಶಿ: ನೋಡಿ– ಉರ್ವಶಿ.**

**ಊಲಂಟ್, ಯೋಹನ್ ಲುಡ್‍ವಿಗ್:** 1787–1862. ಜರ್ಮನ್ ಸಾಹಿತ್ಯ ಚರಿತ್ರೆಯಲ್ಲಿ ಖ್ಯಾತನಾಮರಾದ ಕವಿ ಶ್ರೇಣಿಗೆ ಸೇರಿದವ. ಆದರೂ ಈತನ ಕಾವ್ಯಧಾರೆ ಅಲ್ಪಕಾಲದ್ದಾಗಿತ್ತು. 1834ರ ಅನಂತರದ ಕಾಲದಲ್ಲಿ ಕಾವ್ಯಸ್ಫೂರ್ತಿ ಪ್ರಕಾಶಕ್ಕೆ ಬರದೇ ಹೋಯಿತು. ಕೊನೆಯ ವರ್ಷಗಳಲ್ಲಿ ಈತ ಭಾಷಾಶಾಸ್ತ್ರದ ಅಧ್ಯಯನವನ್ನು ಮಾತ್ರ ಮುಂದುವರಿಸಿದ. ಜರ್ಮನಿಯ ಪ್ರಾಚೀನ ಕವಿಗಳು ಮತ್ತು ಪ್ರಾಚೀನ ಕಾವ್ಯಗಳ ವಿಮರ್ಶೆ ನಡೆಯುತ್ತಿದ್ದ ಕಾಲವದು. ಅದರಲ್ಲಿ ಈತನ ಆಸಕ್ತಿ ಮತ್ತು ಅಧ್ಯವ್ಯವಸಾಯ ಹೆಚ್ಚಿನದಾಗಿದೆ. 1822ರಲ್ಲಿ ಈತ ಪ್ರಕಟಿಸಿದ ಫ್ರಾನ್ಸ್ ದೇಶದ ಆಷನ್ ಇತಿಹಾಸ ಕಾವ್ಯಗಳನ್ನು ಕುರಿತು– ಎಂಬ ಪ್ರಬಂಧ ಈತನ ವಿದ್ಯಾಪ್ರೌಢಿಮೆಯನ್ನು ಎತ್ತಿತೋರಿಸುತ್ತದೆ. ಕಾವ್ಯ, ಕಾವ್ಯದ ಇತಿಹಾಸ, ನಾಟಕ ರಚನೆ, ವಿಮರ್ಶೆಗಳೇ ಈತನ ವಿಶಿಷ್ಟವಾದ ಗುಣಗಳಲ್ಲ. ರಾಜಕಾರಣದಲ್ಲೂ ಪಾತ್ರವಹಿಸಿದ ಈತ ಸುಧಾರಕರ ಗುಂಪಿಗೆ ಸೇರಲು ಅರ್ಹನಾಗಿದ್ದಾನೆ. 1812–14ರ ಕಾಲದಲ್ಲಿ ಸ್ವೆಬಿಯ ಪ್ರಾಂತ್ಯದ ನ್ಯಾಯಮಂತ್ರಿಯ ಕಾರ್ಯದರ್ಶಿಯಾಗಿ ಈತ ಕೆಲಸ ಮಾಡಿದ. ಇದಕ್ಕೆ ಮೊದಲು ಟೀಬಿಂಗೆನ್ ನಗರವನ್ನು ಪ್ರಾಂತ್ಯಶಾಸನಸಭೆಯಲ್ಲಿ ಪ್ರತಿನಿಧಿಸಿದ್ದ.

ಟೀಬಿಂಗೆನ್ ವಿಶ್ವವಿದ್ಯಾನಿಲಯದ ಕಾರ್ಯದರ್ಶಿಯ ಪುತ್ರನಾಗಿ ಜನಿಸಿ, ಟೀಬಿಂಗೆನ್ ವಿದ್ಯಾಲಯದಲ್ಲೂ ಅನಂತರ ಹೀಡೆಲ್‍ಬರ್ಗ್ ಮತ್ತು ಪ್ಯಾರಿಸ್ ನಗರಗಳಲ್ಲೂ ಈತ ಕಾಯಿದೆಯ ಅಭ್ಯಾಸ ಮಾಡಿದ. ಕಾವ್ಯಗಳಿಂದ ಉತ್ತೇಜಿತನಾಗಿ ತನ್ನ 20ನೆಯ ವರ್ಷದಿಂದಲೇ ಕಾವ್ಯರಚನೆಯನ್ನು ಪ್ರಾರಂಭಿಸಿದನೆಂದು ತಿಳಿದುಬರುತ್ತದೆ. ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡುತ್ತಿರುವಾಗಲೇ ಪ್ರಾಚೀನ ಮತ್ತು ಮಧ್ಯಕಾಲದ ಕಾವ್ಯ ಮತ್ತು ಕಾವ್ಯಶಾಸ್ತ್ರಾಧ್ಯಯನವನ್ನೂ ಮುಂದುವರಿಸಿದ. ಪ್ಯಾರಿಸ್ ನಗರದಲ್ಲಿದ್ದ ಕಾಲದಲ್ಲಿ ಅಲ್ಲಿಯ ಪ್ರಸಿದ್ಧವಾದ ನ್ಯಾಷನಲ್ ಬಿಬ್ಲಿಯೋಥೆಕ್ ಗ್ರಂಥಭಂಡಾರ ಈತನ ಕಾವ್ಯ ವಿಮರ್ಶಾಧ್ಯಯನಕ್ಕೆ ಪುಷ್ಟಿಯನ್ನು ನೀಡಿತೆಂದು ಜರ್ಮನ್ ಸಾಹಿತ್ಯಾಭ್ಯಾಸಿಗಳು ಹೇಳಿದ್ದಾರೆ. ಸ್ವದೇಶಕ್ಕೆ ಮರಳಿದ ಮೇಲೆ ಟೀಬಿಂಗೆನ್ ವಿಶ್ವವಿದ್ಯಾನಿಲಯದಲ್ಲೇ ನ್ಯಾಯಶಾಸ್ತ್ರಾಧ್ಯಾಪಕನಾದ. ರಾಜಕೀಯದಲ್ಲಿ ಭಿನ್ನಾಭಿಪ್ರಾಯವುಳ್ಳವನಾಗಿ ಆ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಪ್ರತಿನಿಧಿಸಭೆಗೆ ಆಯ್ಕೆಯಾದ. ಪ್ರತಿನಿಧಿಯಾಗಿದ್ದ ಕಾಲದಲ್ಲಿ ಯಾವ ಕಾವ್ಯವನ್ನೂ ನಿರ್ಮಿಸಲಾಗಲಿಲ್ಲ. 1819–29ರ ವರೆಗೆ ಕಾವ್ಯರಚನೆ ನಡೆಯಲಿಲ್ಲ. ಮುಂದೆ 1829–34ರ ವರೆಗೆ ಮಾತ್ರ ಈತನಿಗೆ ಆ ಕೆಲಸ ಸಾಧ್ಯವಾಯಿತು.

ಈತ ಐತಿಹಾಸಿಕ ಲಾವಣಿಗಳಿಗಾಗಿ ಪ್ರಸಿದ್ಧಿ ಪಡೆದಿದ್ದಾನೆ. 1815 ಮತ್ತು 1817ರಲ್ಲಿ ತಾಯ್ನಾಡಿನ ಕವಿತೆಗಳು ಎಂಬ ಜಾನಪದ ಗೀತಸಂಕಲನಗಳನ್ನು ಪ್ರಕಟಿಸಿದ. ಈತನ ಸ್ವಂತ ರಚನೆಗಳೆಂದರೆ ಪರಿವ್ರಾಜಕ, ಎಡೆನ್‍ಹಾಲನ ಅದೃಷ್ಟ– ಮುಂತಾದವು.

ರಾಜಕೀಯ ಕವಿಯನ್ನು ನುಂಗಿ ನೀರು ಕುಡಿಯುತ್ತದೆ–ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಊಲಂಟನ ವಿಷಯದಲ್ಲಂತೂ ಇದು ಸರ್ವವಿಧದಲ್ಲೂ ಸರಿಯಾದ ಮಾತು. (ಕೆ.ಕೆ.ಐ.)

**ಊಸರವಳ್ಳಿ:** ರೆಪ್ಟೀಲಿಯ ವರ್ಗದ ಸ್ಕ್ವಮೇಟ ಗಣದ ಕೆಮಿಲಿಯಾನಿಡೀ ಕುಟುಂಬದ ಒಂದು ಬಗೆಯ ಹಲ್ಲಿ. ಭಾರತದಲ್ಲಿ ಕೆಮಿಲಿಯಾನ್ ಜೀಲಾನಿಕಸ್ ಎಂಬ ಒಂದು ಪ್ರಭೇದ ಮಾತ್ರ ಕಂಡುಬರುತ್ತದೆ. ಇದರ ರೂಢಿನಾಮ ಗೋಸುಂಬೆ. ಇದು ಪರಿಸರಕ್ಕೆ ಅನುಗುಣವಾಗಿ ಹೊಂದಿಕೊಂಡು ತನ್ನ ಬಣ್ಣವನ್ನು ಬದಲಾಯಿಸುತ್ತದೆ. ಆಫ್ರಿಕ, ಮಡಗಾಸ್ಕರ್, ಅರೇಬಿಯ, ಭಾರತದ ಗಂಗಾ ನದಿಯ ದಕ್ಷಿಣ ಹಾಗೂ ಪಶ್ಚಿಮಕ್ಕೆ ಹಬ್ಬಿದ ಇವುಗಳ ಆವಾಸ, ಪಶ್ಚಿಮದಲ್ಲಿ ಪಾಕಿಸ್ತಾನದ ಪೇಶಾವರದವರೆಗೂ ಹಬ್ಬಿದೆ. ದಕ್ಷಿಣ ಭಾರತದಾದ್ಯಂತ ಮತ್ತು ಶ್ರೀಲಂಕದಲ್ಲಿ ಸಹ ಇವನ್ನು ಕಾಣಬಹುದು. ಊಸರವಳ್ಳಿಯ ಪ್ರತಿ ಕಾಲಿನ ಎರಡನೆಯ ಮತ್ತು ಮೂರನೆಯ ಬೆರಳುಗಳು ಕೂಡಿ ಸಂಯುಕ್ತಾಂಗುಲಿಯಾಗಿದೆ. ಇಂತಹ ಸಂಯುಕ್ತ ರಚನೆ ಎದುರು ಬದರಿನ ರಚನೆ ಹೊಂದಿದ್ದು, ಕೊಂಬೆರೆಂಬೆಗಳನ್ನು ಭದ್ರವಾಗಿ ಹಿಡಿದು ಜಿಗಿಯಲು ಉಪಯುಕ್ತವಾಗಿದೆ. ಬಾಲ ಸುರುಳಿಯ ಹಾಗೆ ಸುತ್ತಿಕೊಂಡು ಬಲವಾಗಿ ಹಿಡಿದುಕೊಳ್ಳಬಲ್ಲ ಗ್ರಹಣಾಂಗ. ಇವೆಲ್ಲವೂ ಊಸರವಳ್ಳಿಯನ್ನು ಮರಗಳ ಮೇಲೆ ಜೀವಿಸಲು ಸೂಕ್ತ ಜೀವಿಯನ್ನಾಗಿಸಿದೆ. ಗುಂಡಗೆ ಮತ್ತು ಪರಸ್ಪರ ಸ್ವತಂತ್ರವಾಗಿ ಚಲಿಸುವ ಒಂದು ಜೊತೆ ಹೊರಚಾಚಿದ ಕಣ್ಣುಗಳಿವೆ. ಕಣ್ಣನ್ನು ರಕ್ಷಿಸಲು ನಿಕ್ಟಿಟೇಟಿಂಗ್ ಪೊರೆ ಎಂಬ ತೆಳು ಪೊರೆ ಇದೆ. ನಾಲಿಗೆಯ ತುದಿಯಲ್ಲಿ ಅಂಟುದ್ರವ ಸ್ರವಿಸುವ ಉಬ್ಬಿದ ಭಾಗವಿದೆ. ನಾಲಿಗೆಯನ್ನು ಕ್ಷಣಾರ್ಧದಲ್ಲಿ ಹೊರಚಾಚಿ ಆಹಾರವನ್ನು ಬೇಟೆಯಾಡಬಲ್ಲದು. ಇದರ ನಾಲಿಗೆಯ ಉದ್ದ 30 ಸೆಂಟಿಮೀಟರ್‌ವರೆಗೆ ಬೆಳೆದ ದಾಖಲೆ ಇದೆ.



ಊಸರವಳ್ಳಿ ಅಥವಾ ಗೋಸುಂಬೆಯ ಬಣ್ಣ ಬದಲಾವಣೆ ಗಾದೆಮಾತು. ಆದರೆ ಇದು ಅತಿಶಯೋಕ್ತಿ ಮಾತ್ರ. ಈ ಬಣ್ಣ ಬದಲಾಯಿಸುವ ಕ್ರಿಯೆ ಹಲ್ಲಿಯ ಜಾತಿಯಲ್ಲಿ ಸುತ್ತಲಿನ ಪರಿಸರ ಪ್ರಭಾವದಿಂದ ಉಂಟಾಗುತ್ತದೆ. ಊಸರವಳ್ಳಿಯಲ್ಲಿ ಈ ಕ್ರಿಯೆ ಕೆಲಮಟ್ಟಿಗೆ ಅದರ ಕಣ್ಣುಗಳ ಹಿಡಿತದಲ್ಲಿದೆ. ಬೆಳಕು, ಶಾಖ ಮತ್ತು ಶರೀರಕ್ರಿಯೆ ಈ ವರ್ಣವ್ಯತ್ಯಾಸಕ್ಕೆ ಮುಖ್ಯಕಾರಣಗಳು. ಈ ಪ್ರಾಣಿಯ ಮೂಲವರ್ಣ ಕಂದು ಅಥವಾ ಹಸುರು, ಇದರ ಮಧ್ಯೆ ಅಲ್ಲಲ್ಲಿ ಕಪ್ಪು ಚುಕ್ಕೆಗಳೂ ಅಕ್ಕಪಕ್ಕಗಳಲ್ಲಿ ನಸುಕಂದು ಬಣ್ಣದ ಮಚ್ಚೆಗಳೂ ಇವೆ. ಕತ್ತಲೆಯಲ್ಲಿ ಇದರ ಬಣ್ಣ ಬಿಳುಪು ಮತ್ತು ಹಳದಿಯ ಮಚ್ಚೆಗಳಿಂದ ಕೂಡಿದಂತೆ ಕಾಣುವುದು. ಬಿಸಿಲಿನಲ್ಲಿ ನಸು ಕಪ್ಪುಬಣ್ಣದಿಂದ ಕೂಡಿರುವಂತೆ ತೋರುವುದು. ಹೆಚ್ಚು ಶಾಖವಿದ್ದಾಗ ಹಸಿರಾಗಿ ಕಂಡರೆ ಕಡಿಮೆ ಶಾಖವಿರುವಾಗ ತೆಳು ಕಂದುಬಣ್ಣದಿಂದಲೂ ಹಳದಿ ಚುಕ್ಕೆಗಳಿಂದಲೂ ಕೂಡಿರುವುದು. ಉದ್ವೇಗಗೊಂಡಾಗ ತೆಳುವಾದ ಬಣ್ಣವಿರುವ ಭಾಗಗಳು ಕಪ್ಪುಬಣ್ಣಕ್ಕೆ ತಿರುಗುವುವು.

ಊಸರವಳ್ಳಿ ಅಂಡಜ. ನೆಲದಲ್ಲಿ ಗುಳಿತೋಡಿ ಮೊಟ್ಟೆ ಇಡುವ ಇದು ಒಮ್ಮೆಗೆ ಸು.22–33 ಮೊಟ್ಟೆ ಇಡುತ್ತದೆ. ಸು. 9 ತಿಂಗಳ ನಂತರ ಮರಿಗಳು ಹೊರಬರುತ್ತವೆ. ದಕ್ಷಿಣ ಆಫ್ರಿಕದ ಕೆಲವು ಜಾತಿಯವು ಮೊಟ್ಟೆಗಳನ್ನು ತಮ್ಮ ಶರೀರದಲ್ಲೇ ಇಟ್ಟುಕೊಂಡು ಅವು ಒಡೆದ ಮೇಲೆ ಮರಿಗಳನ್ನು ಈಯುತ್ತವೆ.

ಊಸರವಳ್ಳಿಯ ತಲೆಯ ಮೇಲ್ಭಾಗದಲ್ಲಿ ಮುಳ್ಳಿನಂಥ ರಚನೆಗಳಿವೆ. ಇವು ಕೆಲವಲ್ಲಿ ದೊಡ್ಡದಾಗಿ ಬೆಳೆದು ಕೋಡುಗಳಂತೆ ಕಾಣಿಸಿಕೊಳ್ಳುವುವು. ಇವುಗಳ ಸಂಖ್ಯೆ ಒಂದೊಂದು ಜಾತಿಯಲ್ಲಿಯೂ ಬೇರೆ ಬೇರೆಯಾಗಿರುತ್ತದೆ. (ಬಿ.ಎನ್.ಎ.)

**ಊಹೆ:** ಆಧಾರಭಾವನೆ ಎಂಬ ವಿಜ್ಞಾನ ಪರಿಭಾಷೆಗೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ಬಳಕೆಯಲ್ಲಿರುವ ಪದ (ಹೈಪಾತಿಸಿಸ್). ಪುರಾಣ, ಮತ, ಕಲೆಗಳು ಈ ಮಾರ್ಗವನ್ನು ಅನುಸರಿಸುತ್ತವೆ. ವಿಜ್ಞಾನಿಗಳು ಅನುಸರಿಸುವ ಅರ್ಥಕಲ್ಪನೆಯ ಮಾರ್ಗ ಇದರಿಂದ ಭಿನ್ನವಾದದ್ದು. ಕಲೆಯ ಕಲ್ಪನೆ ಪ್ರತಿಭೆಗೆ ಅಧೀನ. ರಾಹುಕೇತುಗಳ ಕಥೆಯಿಂದ ಗ್ರಹಣ ಕಾರಣವನ್ನು ಅರ್ಥೈಸಿರುವುದು ಇದಕ್ಕೊಂದು ದೃಷ್ಟಾಂತ. ವಿಜ್ಞಾನಿಯ ಅರ್ಥಕಲ್ಪನೆ ಬೌದ್ಧಿಕವಾದದ್ದು, ತರ್ಕನಿಯಮಗಳಿಗೆ ಅಧೀನವಾದದ್ದು. ಕಾರ್ಯಕಾರಣಗಳಿರುವ ನಿಯತ ಸಂಬಂಧವನ್ನು ವ್ಯಕ್ತಪಡಿಸುವುದೇ ಅದರ ಗುರಿ. ವಿಜ್ಞಾನ ಕೊಡುವ ಅರ್ಥ ವಿವರಣೆ ಒಂದೇ ಆಗಿರಬೇಕು ಮತ್ತು ಅದು ರುಜುವಾತಾಗಿರಬೇಕು; ವಾಸ್ತವ ವಿಷಯಗಳಿಗೆ ತಾಳೆ ಬೀಳಬೇಕು. ಗ್ರಹಣದ ವಿಚಾರವಾಗಿಯೂ ಅವರು ಕೊಡುವ ಅರ್ಥವಿವರಣೆ ಒಂದೇ ಆಗಿರಬೇಕು, ಆಗಿದೆ. ಸೂರ್ಯನಿಗೂ ಭೂಮಿಗೂ ನಡುವೆ ಚಂದ್ರ ಬಂದಾಗ, ಸೂರ್ಯನಿಗೂ ಚಂದ್ರನಿಗೂ ನಡುವೆ ಭೂಮಿ ಬಂದಾಗ ಗ್ರಹಣಗಳಾಗುತ್ತವೆ ಎಂಬುದು ವಿಜ್ಞಾನದ ತಿಳಿವಳಿಕೆ. ಆದರೆ ಗ್ರಹಣಕ್ಕೆ ಕಾರಣವನ್ನು ಹೇಳುವಲ್ಲಿ ಒಂದೊಂದು ಜನಾಂಗದವರು, ಒಂದೊಂದು ಮತದವರು ತಮ್ಮದೇ ಆದ ಕಟ್ಟುಕಥೆಗಳನ್ನು (ಮಿತ್ಸ್) ಹೇಳುತ್ತಾರೆ.**(ನೋಡಿ– ಆಧಾರಭಾವನೆ)** (ಜಿ.ಎಚ್.)

**ಊಳಿಗಮಾನ್ಯ ವ್ಯವಸ್ಥೆ:** ಸಾಮಾನ್ಯ ಅರ್ಥದಲ್ಲಿ ಒಬ್ಬ ಮನುಷ್ಯ ಇನ್ನೊಬ್ಬನಿಗೆ ಅಧೀನನಾಗಿರುವಂಥ ವೈಯಕ್ತಿಕ ಸಂಬಂಧಗಳಿರುವ ಮತ್ತು ಭೂಸ್ವಾಮ್ಯ ಹಕ್ಕುಗಳನ್ನು ಅನುಕ್ರಮವಾಗಿ ಪಡೆದಿರುವ ವ್ಯವಸ್ಥೆ. ಪಾಲನೆ ಪೋಷಣೆ ಮಾಡುವ ಒಂದು ಪಕ್ಷಕ್ಕೂ ಸೇವೆ ವಿಧೇಯತೆ ತೋರುವ ಇನ್ನೊಂದು ಪಕ್ಷಕ್ಕೂ ನಡುವಣ ವೈಯಕ್ತಿಕ ಸಂಬಂಧಸೂಚಕವಾದ ಮಧ್ಯಯುಗೀಣ ನ್ಯಾಯವ್ಯವಸ್ಥೆಯೆಂಬುದು ಈ ಪದದ (ಫ್ಯೂಡಲಿಸಂ) ವಿಶಿಷ್ಟಾರ್ಥ. ಈ ಸಂಬಂಧಗಳು ಆ ಕಾಲದಲ್ಲಿದ್ದ ಸ್ವತ್ತನ್ನು ಕುರಿತಾದ ನ್ಯಾಯವನ್ನೇ ಅಲ್ಲದೆ ಮಧ್ಯಯುಗದ ದೇಶಗಳ ಇಡೀ ರಾಜ್ಯರಚನೆಯ ಮೇಲೆಯೇ ತೀವ್ರ ಪರಿಣಾಮವನ್ನುಂಟುಮಾಡಿದ್ದುವು.

ಊಳಿಗಮಾನ್ಯ ಸಮಾಜವೆಂದಾಗ ಇಂದಿನದಕ್ಕಿಂತ ಭಿನ್ನವಾದ ಒಂದು ವಿಶಿಷ್ಟ ನಾಗರಿಕತೆಯೇ ಕಣ್ಣುಮುಂದೆ ಬಂದು ನಿಲ್ಲುತ್ತದೆ. ಆ ಕಾಲದಲ್ಲಿದ್ದ ಪ್ರಭುಗಳ, ಜೀತಗಾರರ ಮತ್ತು ಉಂಬಳಿಗಳ ಚಿತ್ರ ಮೂಡುವುದು ಮಾತ್ರವಲ್ಲ; ಇಂಥ ಸಮಾಜ ವ್ಯವಸ್ಥೆಯಲ್ಲಿ ಅಧಿಕಾರನಿರತವಾದ ಆಡಳಿತಗಾರರೂ ಸೈನಿಕರೂ ರಾಷ್ಟ್ರವೆಂಬ ಅಮೂರ್ತಕಲ್ಪನೆಗೆ ಸೇವೆ

ಸಲ್ಲಿಸುವವರಲ್ಲ; ಇವರಿಗೂ ಇವರ ಮೇಲ್ಪಟ್ಟ ಪ್ರಭುವಿಗೂ ಇರುವ ವೈಯಕ್ತಿಕ ಹಾಗೂ ವಿಶಿಷ್ಟ ಸಂಬಂಧಗಳಿಗಾಗಿ ಇವರು ಈ ಬಗೆಯ ಕರ್ತವ್ಯ ನಿರತರಾಗಿರುತ್ತಾರೆ. ಇವರಿಗೆ ಪ್ರತಿಫಲ ಸಲ್ಲುವುದು ವಂಶಪಾರಂಪರ್ಯವಾಗಿ ಇವರು ಅನುಭವಿಸಿಕೊಂಡು ಬರುವ ಭೂಮಾನ್ಯಗಳಿಂದ. ಇಂತಿಂಥ ಭೂಮಾನ್ಯ ಪಡೆದಿರುವವರು ಇಂತಿಂಥ ಸೇವೆ ಸಲ್ಲಿಸಬೇಕೆಂಬುದು ನಿಗದಿಯಾಗಿರುವುದರಿಂದ ಆಯಾ ಕರ್ತವ್ಯ ನಿರ್ವಹಿಸುವವರು ಆಯಾ ಸ್ಥಾನಗಳಲ್ಲಿರುವುದು ಒಂದು ದೃಷ್ಟಿಯಲ್ಲಿ ಆಕಸ್ಮಿಕ.ಸೇವೆಗೂ ವ್ಯಕ್ತಿಗೂ ಸಂಬಂಧವೆನ್ನುವುದಕ್ಕಿಂತ ಸೇವೆಗೂ ಹಿಡುವಳಿಗೂ ಸಂಬಂಧವೆನ್ನುವುದು ಹೆಚ್ಚು ಸೂಕ್ತ. ಸಾರ್ವಜನಿಕಾಧಿಕಾರವೇ ಒಡೆದು ವಿಕೇಂದ್ರೀಕೃತವಾಗಿರುವುದು ಈ ವ್ಯವಸ್ಥೆಯ ಮುಖ್ಯ ಲಕ್ಷಣ.

ನೆಲದೊಡೆಯರು ರೈತರನ್ನು ಅಸ್ವತಂತ್ರಗೊಳಿಸಿ ಅವರ ಮೇಲೆ ರಕ್ಷಣೆ, ನ್ಯಾಯವಿತರಣೆ, ಸುಂಕ ತೆರಿಗೆ ವಸೂಲಿ ಮುಂತಾದ ನಾನಾ ಅಧಿಕಾರಗಳನ್ನು ಚಲಾಯಿಸುವ ಮೆನೋರಿಯಲ್ ಪದ್ಧತಿಗೂ ಊಳಿಗಮಾನ್ಯ ವ್ಯವಸ್ಥೆಗೂ ಐತಿಹಾಸಿಕ ಸಂಬಂಧವಿದೆ. ಈ ವ್ಯವಸ್ಥೆಯಲ್ಲಿ ದೇಶಕ್ಕೆಲ್ಲ ರಾಜನೇ ಒಡೆಯ, ಅವನ ಕೆಳಗೆ ದೊಡ್ಡ ಪಾಳೆಯಗಾರರು, ಅವರ ಅಧೀನದಲ್ಲಿ ಚಿಕ್ಕ ಪಾಳೆಯಗಾರರು, ಕೊನೆಯ ಹಂತದಲ್ಲಿ ಜೀತಗಾರರು. ಇವರಲ್ಲಿ ಪರಸ್ಪರ ಮುಖ್ಯ ಸಂಬಂಧ ಭೂಮಾನ್ಯಕ್ಕೆ ಪ್ರತಿಯಾಗಿ ಊಳಿಗವೃತ್ತಿ ಮಾಡುವುದು, ಸೈನ್ಯಸೇವೆಸಲ್ಲಿಸುವುದು, ಈ ಅನುಕ್ರಮದ ಹೊರಗಿದ್ದ ಕ್ರೈಸ್ತ ಮಠಾಧಿಕಾರಿಗಳೂ ಜೀತಗಾರರಲ್ಲದ ಸ್ವತಂತ್ರ ಜನರೂ ಈ ವ್ಯವಸ್ಥೆಯ ಪ್ರಭಾವಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಒಳಗಾದರು. ಇದರ ವ್ಯಾಪ್ತಿ ಸರ್ವತೋಮುಖವಾಗಿ, ಸಾಮಾಜಿಕ, ನೈತಿಕ, ಧಾರ್ಮಿಕ ಭಾವನೆಗಳನ್ನೂ ಒಳಗೊಂಡ ಹೊಸದೊಂದು ಸಂಸ್ಕೃತಿಯೇ ಉದ್ಭವಿಸಿರುವುದನ್ನು ಕಾಣಬಹುದು. ಸ್ಥೂಲವಾಗಿ 9ನೆಯ ಶತಮಾನದಿಂದ 13ನೆಯ ಶತಮಾನದವರೆಗಿನ ಕಾಲ ಊಳಿಗಮಾನ್ಯದ್ದೆನ್ನಬಹುದು.

ಮೇನರ್ ಅಥವಾ ಜಹಗೀರು ವ್ಯವಸ್ಥೆಯ ಕೇಂದ್ರವಾಗಿ ಮೇನರಿನ ಒಡೆಯನ– ಪ್ರಭುವಿನ–ಭವನ, ಅದರ ಸುತ್ತ ಅವನಿಗೆ ಸೇರಿದ ಗ್ರಾಮಸಮೂಹ. ಕೆಲವು ಜಮೀನುಗಳು ಮಾತ್ರ ಅವನಿಗೆ ಸ್ವಂತ, ಉಳಿದವು ಜೀತದಾರರಿಗೆ ಊಳಿಗಮಾನ್ಯವಾಗಿ ಸೇರಿದ್ದು. ಭೂಮಿ ಇವರಿಗೆ ಅನುಭವ ಬಾಧ್ಯಸ್ಥವೇ ಹೊರತು ಸ್ವಂತವಲ್ಲ. ಇವರ ಕಾಲಾನಂತರ ಚಾಲ್ತಿಯಲ್ಲಿ ಇದು ಇವರ ವಾರಸುದಾರರಿಗೆ ಸೇರುತ್ತಿತ್ತು. ಜೀತಗಾರರು ಗುಲಾಮರಲ್ಲದಿದ್ದರೆ ಅವರಿಗೆ ಭೂಮಿಯನ್ನು ಬಿಟ್ಟು ಹೋಗುವ ಹಕ್ಕಿರಲಿಲ್ಲ. ಜಮೀನನ್ನು ಸಾಗುವಳಿಗೆ ಪಡೆದದ್ದಕ್ಕೆ ಮಾಡಬೇಕಾದ ಪ್ರತಿಸೇವೆಯೆಂದರೆ ಬೆಳೆ ಪಶುಧನಗಳ ಒಂದಂಶ ಸಲ್ಲಿಕೆ, ನಿರ್ದಿಷ್ಟ ಕಾಲಗಳಲ್ಲಿ ಪ್ರಭುವಿನ ಸ್ವಂತ ಜಮೀನಿನ ವ್ಯವಸಾಯಕ್ಕೆ ಉಚಿತಸೇವೆ, ಸೈನ್ಯ ಸೇವೆ ಮೊದಲಾದವು. ಪ್ರಭುಗಳ ಕರ್ತವ್ಯಗಳೆಂದರೆ ಜಹಗೀರಿನ ರಕ್ಷಣೆ, ವ್ಯಾಜ್ಯಗಳ ತೀರ್ಪು, ಜನರ ಸೌಖ್ಯಕ್ಕೆ ಅಗತ್ಯವಾದ ಸಾಮಾಜಿಕ ಆರ್ಥಿಕ ವ್ಯವಸ್ಥೆಗಳ ನಿರ್ವಹಣೆ, ಸಮಾಜ ಸಂಪ್ರದಾಯಬದ್ಧವಾದ್ದರಿಂದ ಪ್ರಭುಗಳು ಸ್ವಚ್ಛಂದವರ್ತಿಗಳಾಗಲೂ ಜೀತಗಾರರು ತೀವ್ರಗಾಮಿಗಳಾಗಲೂ ಅವಕಾಶ ಕಡಿಮೆಯಿತ್ತು.

ತಾತ್ತ್ವಿಕವಾಗಿ ರಾಜನೇ ದೇಶಕ್ಕೆಲ್ಲಾ ಒಡೆಯನಾಗಿದ್ದು ಜನರೆಲ್ಲ ಅವನ ಅಧೀನರಾದರೂ ವಾಸ್ತವವಾಗಿ ಪ್ರಭುಗಳ ಸಮೂಹದಲ್ಲಿ ಈತ ಅಗ್ರ. ಸ್ವಂತಕ್ಕೆ ಸೇರಿದ ಮೇನರುಗಳಿಂದ ಈತ ವರಮಾನ ಪಡೆಯುತ್ತಿದ್ದ. ಊಳಿಗಮಾನ್ಯ ಕರಾರಿನ ಪ್ರಕಾರ ಪ್ರಭುಗಳು ಸುಸಜ್ಜಿತ ಯೋಧರೊಡನೆ ರಾಜನಿಗೆ ಸೈನ್ಯಸೇವೆ ಸಲ್ಲಿಸಬೇಕಿತ್ತು. ನಿರ್ದಿಷ್ಟ ವೇಳೆಗಳಲ್ಲಿ ಹಣಕಾಸು ಕೊಡಬೇಕಿತ್ತು. ಆದರೆ ಇವುಗಳ ಸಂಗ್ರಹಣ ರಾಜನ ಪ್ರಭಾವಕ್ಕೆ ತಕ್ಕಂತಿತ್ತು. ಹಲವು ವೇಳೆ ರಾಜನಿಗಿಂತ ಅವನ ಅಧೀನದಲ್ಲಿದ್ದ ಪ್ರಭುಗಳೇ ಹೆಚ್ಚು ಶ್ರೀಮಂತರಾಗಿಯೂ ಪ್ರಭಾವಶಾಲಿಯಾಗಿಯೂ ಇರುತ್ತಿದ್ದರು. ಆ ಕಾಲದಲ್ಲಿ ರಾಜನಿಷ್ಠೆಗೆ ಪ್ರಧಾನ ಸ್ಥಾನವಿರಲಿಲ್ಲ. ಪ್ರತಿಯೊಬ್ಬರೂ ಯಾರಿಗೆ ವಿನಿನ್ನವನುಹಿ ಎಂದು ಮಾತಿತ್ತರೂ ಅವರಿಗೆ ಅನುಕೂಲವಾಗಿ ನಡೆಯುವುದೇ ಆಗಿನ ನೀತಿಸೂತ್ರವಾಗಿತ್ತು. (ಎಸ್.ವಿ.ಡಿ.)

ಪ್ರಭುಗಳ ವರ್ಗದ ಅನಂತರದ ವರ್ಗವೇ ಆಶ್ರಿತ ವರ್ಗ. ಇವರು ನೇರವಾಗಿ ಪ್ರಭುಗಳ ಅಧೀನಕ್ಕೆ ಒಳಪಟ್ಟಿದ್ದರು; ಅವರಿಂದ ದೊರೆತ ಭೂಮಿಯ ಮೇಲ್ವಿಚಾರಣೆಯ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಭೂಮಿಯಿಂದ ಬರುತ್ತಿದ್ದ ಗೇಣಿಯೇ ಈ ವರ್ಗದ ಮುಖ್ಯ ಆದಾಯ. ಪ್ರಭುಗಳಿಂದ ದೊರಕಿದ ಭೂಮಿಗೆ ಪ್ರತಿಯಾಗಿ ಆಶ್ರಿತರು ಅವರಿಗೆ ಅನೇಕ ಬಗೆಯ ಕೈಂಕರ್ಯ ಸಲ್ಲಿಸುತ್ತಿದ್ದರು. ಸೈನಿಕ ಸೇವೆಗೆ ಇವರು ಸದಾ ಸಿದ್ಧರಾಗಿರಬೇಕಾದ್ದದ್ದು ಅವಶ್ಯ. ಇಂಥ ಸೈನಿಕ ಸೇವೆ ಸಾಮಾನ್ಯವಾಗಿ ನಲವತ್ತು ದಿನಗಳ ಮಿತಿಗೆ ಒಳಗಾಗಿತ್ತು. ಪ್ರವಾಸಕ್ಕಾಗಲಿ ಅಥವಾ ಬೇಟೆಗಾಗಲಿ ಪ್ರಭು ಹೊರಟಾಗ ಅವನಿಗೆ ಸಹಾಯ ಮತ್ತು ಸತ್ಕಾರ ನೀಡುವುದೂ ಅವರು ಯುದ್ಧದಲ್ಲಿ ಕೈಸೆರೆಯಾದಲ್ಲಿ ಅವರ ಬಿಡುಗಡೆಗೆ ಹಣ ತೆರುವುದೂ ಪ್ರಭುವಿನ ಮಗಳ ಮದುವೆಯಾದಾಗ, ಅವನ ಮಗ ಸೈನಿಕ ಶಿಕ್ಷಣ ಮುಗಿಸಿ ಯೋಧ ಪದವಿ ಗಳಿಸಿದಾಗ, ಆಶ್ರಿತ ಅವನಿಗೆ ಅಪಾರ ಕಾಣಿಕೆ ಸಲ್ಲಿಸಬೇಕಾಗಿತ್ತು. ತನ್ನ ಧನಿಗೆ ಸಹಾಯ ನೀಡುವುದಷ್ಟೇ ಆಶ್ರಿತನ ಕರ್ತವ್ಯವಲ್ಲ; ಯಥೋಚಿತ ಸಲಹೆ ನೀಡುವುದೂ ಅವನ ಒಂದು ಕರ್ತವ್ಯ.

ಊಳಿಗಮಾನ್ಯ ಪದ್ಧತಿಯಲ್ಲಿ ಕಟ್ಟಕಡೆಯ ವರ್ಗವೇ ಗೇಣಿದಾರರ, ಜೀತಗಾರರ ಮತ್ತು ಕೃಷಿ ಕಾರ್ಮಿಕರ ವರ್ಗ. ಈ ವರ್ಗದವರು ಅಸಂಖ್ಯಾತರು, ನೇರವಾಗಿ ಕೃಷಿ ಕೆಲಸದಲ್ಲಿ ನಿರತರಾಗಿದ್ದವರು, ಗೇಣಿದಾರರ ಮತ್ತು ಜೀತಗಾರರ ಸ್ಥಿತಿಗತಿಗಳನ್ನು ನಿರ್ದಿಷ್ಟವಾಗಿ ವಿವರಿಸಲು ಸಾಧ್ಯವಿಲ್ಲ. ಏಕೆಂದರೆ ಅವರ ಸ್ಥಿತಿಗತಿಗಳಲ್ಲಿ ಕಾಲಕಾಲಕ್ಕೂ ವ್ಯತ್ಯಾಸಗಳಿದ್ದುವು. ಒಂದು ದೃಷ್ಟಿಯಲ್ಲಿ ಗೇಣಿದಾರರ ಜೀವನ ಆಧುನಿಕ ಕೂಲಿಗಾರರ ಜೀವನಕ್ಕಿಂತ ಉತ್ತಮವಾಗಿತ್ತೆಂದು ಹೇಳಬಹುದು. ಆತನಿಗೆ ತನ್ನ ಗೇಣಿಯ ಪೂರ್ಣ ರಕ್ಷಣೆಯಿತ್ತು. ಪ್ರಭು ಆತನಿಂದ ಭೂಮಿಯನ್ನು ಸ್ವೇಚ್ಛೆಯಾಗಿ, ಸಂಪ್ರದಾಯಕ್ಕೆ ವಿರುದ್ಧವಾಗಿ ಕಿತ್ತುಕೊಳ್ಳುವ ಹಾಗಿರಲಿಲ್ಲ. ಆಸ್ತಿಯ ಉತ್ತರಾಧಿಕಾರದ ಹಕ್ಕೂ ತಂದೆಯಿಂದ ಮಗನಿಗೆ ವಂಶಪಾರಂಪರ್ಯವಾಗಿ ಸಾಮಾನ್ಯವಾಗಿ ಯಾವ ಅಡಚಣೆಯೂ ಇಲ್ಲದೆ ನಡೆದುಬರುತ್ತಿತ್ತು. ಗೇಣಿದಾರ ಬಹುಮಟ್ಟಿಗೆ ರಕ್ಷಣೆಯನ್ನೂ ಸ್ವಲ್ಪಮಟ್ಟಿನ ಜೀವನಾನುಕೂಲಗಳನ್ನೂ ಹೊಂದಿದ್ದ, ಆದರೆ ತನ್ನ ಧನಿಯನ್ನು ಸದಾ ಅವಲಂಬಿಸಿರಬೇಕಾಗಿತ್ತು. ಪ್ರತಿ ಗಳಿಗೆಯೂ ತನ್ನ ಧನಿಯ ಸುಖ ಸಂತೋಷಗಳಿಗಾಗಿ ಶ್ರಮಿಸುವುದು ಅವನ ಕರ್ತವ್ಯ. ಧನಿ ಅವನ ಮೇಲೆ ಹಾಕುವ ಕರಕ್ಕೆ ಯಾವ ಮಿತಿಯೂ ಇರಲಿಲ್ಲ. ಬಲವಂತ ಬಿಟ್ಟಿ ಸೇವೆಗೂ ಮಿತಿಯಿರಲಿಲ್ಲ. ಇದರಿಂದ ಅವನ ಆರ್ಥಿಕ ಪರಿಸ್ಥಿತಿಗಳಿಗೆ ಪ್ರತಿಕೂಲವೊದಗುತ್ತಿದ್ದುದಲ್ಲದೆ ಅನೇಕ ವೇಳೆ ಸ್ವಕಾರ್ಯಗಳಿಗೆ ಸಮಯವೇ ಉಳಿಯುತ್ತಿರಲಿಲ್ಲ. ಜಗಳ ಸಂಭವಿಸಿದಾಗ ಪ್ರಭುವಿನ ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಯಾಗಿ, ಆತ ಹಾಕಿದ ದಂಡ ತೆರಬೇಕಾಗಿತ್ತು. ಹೀಗೆ ಗೇಣಿದಾರ ವರ್ಗದ್ದು ಪಾರತಂತ್ರ್ಯದ ಜೀವನ. ಅನೇಕ ವೇಳೆ ಅಸಹನೀಯ ಕಷ್ಟ ಅನುಭವಿಸಬೇಕಾಗಿದ್ದ ಈ ಜನ ಸಂಪ್ರದಾಯ ಬಲದಿಂದ ಅದಕ್ಕೆ ಬಂಧಿತರಾಗಿದ್ದರು. (ಎಚ್.ಆರ್.)

ಸಾಮಾಜಿಕ ದೃಷ್ಟಿಯಿಂದ ಇದು ಆದರ್ಶವೀರರ ಯುಗ. ತಾವು ಆಶ್ರಯಿಸಿದ್ದ ನಾಯಕರಲ್ಲಿ ಭಕ್ತಿಯಿಂದಲೂ ನಿಷ್ಠೆಯಿಂದಲೂ ನಡೆದುಕೊಳ್ಳುವುದೂ ಮಹಿಳೆಯರ ಗೌರವವನ್ನು ಕಾಪಾಡುವುದೂ ದೀನ ದುರ್ಬಲರ ರಕ್ಷಣೆಯಲ್ಲಿ ಮುಂದಾಗಿರುವುದೂ ತಮ್ಮ ಆದರ್ಶ ಮಹಿಳೆಯರಲ್ಲಿ ಅನುಕೂಲವಾಗಿ ವರ್ತಿಸುವುದೂ ವೀರೋಚಿತ ವರ್ತನೆಗಳಾಗಿದ್ದುವು. ಶಸ್ತ್ರಾಭ್ಯಾಸ, ಯುದ್ಧ ತರಬೇತು, ನಾಯಕರ ಆಸ್ಥಾನಗಳ ನಡೆವಳಿ, ಮಲ್ಲಯುದ್ಧ ಕ್ರೀಡಾಯುದ್ಧಗಳ ನಿಯಮಗಳು– ಇವೇ ಇವರ ವಿದ್ಯಾಕ್ರಮದಲ್ಲಿ ಮುಖ್ಯವಾಗಿದ್ದುವು. ಶಾಸ್ತ್ರಜ್ಞಾನ ಗೌಣವೆನಿಸಿತ್ತು, ಹಲವಾರು ಶ್ರೀಮಂತ ವೀರರು ನಿರಕ್ಷರರಾಗಿಯೇ ಇದ್ದರು.

ಈ ಅಸಂಯುಕ್ತ ಸಮಾಜ ವ್ಯವಸ್ಥೆ ಆ ಕಾಲಕ್ಕೆ ಉಚಿತವಾಗಿದ್ದರೂ ಇದರಲ್ಲಿ ಅನೇಕ ಲೋಪದೋಷಗಳಿದ್ದುವು. ಅನಾಗರಿಕ ದಾಳಿಕಾರರ ಹಾವಳಿ ಅಡಗಿದರೂ ಪದೇ ಪದೇ ಪ್ರಭುಗಳ ನಡುವೆ ನಡೆಯುತ್ತಿದ್ದ ಹೋರಾಟಗಳಿಂದ ದೇಶದಲ್ಲಿ ಪೂರ್ಣ ಶಾಂತಿ ಏರ್ಪಡಲಿಲ್ಲ. ವ್ಯಾಪಾರ ವಾಣಿಜ್ಯಕ್ಕೆ ಅನುಕೂಲ ಕಡಿಮೆ. ಜನರ ದೃಷ್ಟಿ ಸ್ಥಳೀಯ, ಸಂಕುಚಿತ. ಈ ವಾತಾವರಣದಲ್ಲಿ ಸಂಸ್ಕೃತಿಯ ಬೆಳವಣಿಗೆ ಮಂದವಾಗಿದ್ದರಲ್ಲಿ ಆಶ್ಚರ್ಯವಿಲ್ಲ. ಆದರೂ ಇದನ್ನು ಕತ್ತಲೆಯ ಕಾಲವೆಂದು ಭಾವಿಸುವುದು ಸೂಕ್ತವಲ್ಲ. ದಾಳಿ ಮಾಡಲು ಬಂದ ಅನಾಗರಿಕನನ್ನು ಈ ಕಾಲದ ಜನ ತಡೆಗಟ್ಟಿ ಸುಸಂಸ್ಕೃತರನ್ನಾಗಿ ಪರಿವರ್ತಿಸಿ ಪುನರುಜ್ಜೀವನಕ್ಕೆ ತಳಹದಿ ಹಾಕಿದ್ದಲ್ಲದೆ ವಿಶ್ವ ಸಂಸ್ಕೃತಿಗೂ ಉತ್ತಮ ಸೇವೆ ಸಲ್ಲಿಸಿದ್ದಾರೆ. ಫ್ರಾನ್ಸಿನ ಕೆಥೆಡ್ರಲ್‌ಗಳೂ ಡಾಂಟೆಯ ದಿ ಡಿವೈನ್ ಕಾಮೆಡಿಯಂಥ ಉದಾತ್ತ ಕಾವ್ಯಗಳೂ ಈ ವ್ಯವಸ್ಥೆ ನೀಡಿರುವ ಉತ್ಕೃಷ್ಟ ಕಾಣಿಕೆಗಳು.

ವಿಶ್ವದ ಪ್ರತಿಯೊಂದು ಮಹಾ ನಾಗರಿಕತೆಯ ಇತಿಹಾಸದಲ್ಲೂ ಒಂದಲ್ಲೊಂದು ಘಟ್ಟದಲ್ಲಿ ಊಳಿಗಮಾನ್ಯ ಅವಸ್ಥೆಯನ್ನು ಕಾಣಬಹುದೆಂಬುದು ತೌಲನಿಕ ಇತಿಹಾಸದಿಂದ ವೇದ್ಯವಾಗಿರುವ ಸಂಗತಿ. ಊಳಿಗಮಾನ್ಯ ವ್ಯವಸ್ಥೆಯೂ ಬಂಡವಾಳ ವ್ಯವಸ್ಥೆಯೂ ಸಮಾಜವಾದಿ ವ್ಯವಸ್ಥೆಯೂ ಪ್ರತಿಯೊಂದು ಜನಾಂಗದ ಆರ್ಥಿಕ ಸಾಮಾಜಿಕ ಅಭಿವೃದ್ಧಿಯಲ್ಲಿ ಅನುಕ್ರಮವಾಗಿ ಬರುವ ಮೂರು ಘಟ್ಟಗಳೆಂಬುದು ಮಾರ್ಕ್ಸ್‌ವಾದದ ಸಿದ್ಧಾಂತ. ಕೆಲವು ರಾಜಕೀಯ ಹಾಗೂ ಮಾನಸಿಕ ಪರಿಸ್ಥಿತಿಗಳಿಂದಾಗಿ ಊಳಿಗಮಾನ್ಯ ವ್ಯವಸ್ಥೆ ಉದ್ಭವಿಸುವುದೆಂಬುದು ಈ ತೌಲನಿಕ ವಿವೇಚನೆಯಿಂದ ಮೂಡಿಬರುವ ವಿಚಾರ. ವಿಶಾಲ ಪ್ರದೇಶದ ಆಡಳಿತ ನಡೆಸಲು ಅಗತ್ಯವಾದ ಭೌತಿಕ ಮಾನಸಿಕ ಪರಿಸರವಾಗಲಿ ಸೌಲಭ್ಯವಾಗಲಿ ಇಲ್ಲದಂಥ ಪರಿಸ್ಥಿತಿಯಲ್ಲಿ ಒಂದು ದೊಡ್ಡ ಸಾಮ್ರಾಜ್ಯದ ನಿರ್ಮಾಣವಾದಾಗ ಅದರ ಫಲವಾಗಿ ಊಳಿಗಮಾನ್ಯ ವ್ಯವಸ್ಥೆ ಉದ್ಭವಿಸಬಹುದು. ರಾಷ್ಟ್ರದ ಕಲ್ಪನೆಯಾಗಲಿ, ಒಗ್ಗಟ್ಟನ್ನು ಸಾಧಿಸುವ ಬಿಗಿಯಾಗಲಿ ಸಾರಿಗೆ ಸಂಪರ್ಕವಾಗಲಿ ಇಲ್ಲದಾಗ ಈ ಬಗೆಯ ವ್ಯವಸ್ಥೆ ಬರುವ ಸಂಭವವುಂಟು. ಭಾರತದಲ್ಲಿ ಔರಂಗಜೇಬನ ಅನಂತರ ಇಂಥ ಪರಿಸ್ಥಿತಿ ಏರ್ಪಟ್ಟಿತ್ತೆನ್ನಬಹುದು. ಅನಾಗರಿಕ ಸ್ಥಿತಿಯಿಂದ ಆಧುನಿಕ ರಾಷ್ಟ್ರವಾಗಿ ಪರಿವರ್ತನೆಗೊಳ್ಳುವಾಗ ಪ್ರತಿಯೊಂದು ಜನಾಂಗದಲ್ಲೂ ಊಳಿಗಮಾನ್ಯ ವ್ಯವಸ್ಥೆ ತಲೆಯೆತ್ತುವ ಅಪಾಯವಿದೆ. ಆದರೆ ಆರ್ಥಿಕ ಸಾಮಾಜಿಕ ಬೆಳವಣಿಗೆಯ ಹಾದಿಯಲ್ಲಿ ಊಳಿಗಮಾನ್ಯ ಪದ್ಧತಿ ಸಂಭಾವ್ಯವೇ ಹೊರತು ಅನಿವಾರ್ಯವೇನೂ ಅಲ್ಲ. ಅದನ್ನು ಹಾರಿಸಿ ಮುಂದಿನ ಘಟ್ಟ ಅಡರುವುದು ಸಾಧ್ಯ. ಹೊರ ಸಂಪರ್ಕವಿಲ್ಲದೆ ಸ್ಥಗಿತವಾದ ಕೃಷಿಕ ಅರ್ಥವ್ಯವಸ್ಥೆಗಳಲ್ಲಿ ಊಳಿಗಮಾನ್ಯ ಲಕ್ಷಣಗಳಿರುವ ಸೈನಿಕ ಶ್ರೀಮಂತ ನಿರಂಕುಶ ಪ್ರಭುತ್ವಗಳನ್ನು ಇಂದಿಗೂ ಕಾಣಬಹುದು. (ಎಸ್.ವಿ.ಡಿ.)

**ಊಳಿಗಮಾನ್ಯ ವ್ಯವಸ್ಥೆಯ ಇತಿಹಾಸ:** ಯುರೋಪಿನಲ್ಲಿ ಊಳಿಗಮಾನ್ಯ ವ್ಯವಸ್ಥೆ 8ನೆಯ ಶತಮಾನದಲ್ಲಿ ನಿರ್ದಿಷ್ಟ ರೂಪ ತಳೆದು 18ನೆಯ ಶತಮಾನದ ಅಂತ್ಯದವರೆಗೂ ತನ್ನ ಪ್ರಭಾವವನ್ನು ಅಬಾಧಿತವಾಗಿ ಹಬ್ಬಿಸಿತ್ತು. 8ನೆಯ ಶತಮಾನಕ್ಕೂ ಬಲು ಹಿಂದೆ, ರೋಮನ್ ಚಕ್ರಾಧಿಪತ್ಯದ ಕಾಲದಲ್ಲೇ, ಈ ವ್ಯವಸ್ಥೆಯ ಮೂಲಗಳನ್ನು ಕಾಣಬಹುದು.

ರೋಮನ್ ಸಾಮ್ರಾಜ್ಯದ ಅವನತಿ ಮತ್ತು ಪತನ ಕಾಲದಲ್ಲಿ ಏರ್ಪಟ್ಟ ಅಶಾಂತಿ ಮತ್ತು ಅರಾಜಕತೆ ಇದರ ಉಗಮಕ್ಕೆ ನಾಂದಿಯಾಯಿತೆಂದು ಹೇಳಬಹುದು. ಕೇಂದ್ರಾಡಳಿತ ಕ್ಷೀಣಿಸಿ ಸಣ್ಣಪುಟ್ಟ ರಾಜ್ಯಗಳ ಮತ್ತು ಪಾಳೆಯಪಟ್ಟುಗಳ ಏಳಿಗೆಗೆ ತೆರವು ಮಾಡಿಕೊಟ್ಟಿತು. ನಿರಂತರ ಅಂತರ್ಯುದ್ಧಗಳಲ್ಲಿ ತೊಡಗಿ, ರಾಜಕೀಯ ಆರ್ಥಿಕ ದುರ್ಬಲತೆಗೆ ಕಾರಣವಾಗಿ ಬಲಹೀನವಾಗಿದ್ದ ರಾಜ್ಯಗಳು ತಮ್ಮ ಪ್ರಜೆಗಳಿಗೆ ಪರಕೀಯರ ಮತ್ತು ಅನಾಗರಿಕರ ದಾಳಿಯ ವಿರುದ್ಧ ರಕ್ಷಣೆ ಒದಗಿಸಲು ಅಸಮರ್ಥವಾಗಿದ್ದವು. ಸದಾ ಯುದ್ಧಭೀತಿಗೊಳಗಾಗಿದ್ದ ಆಗಿನ ಜನ ತಮ್ಮ ಜೀವದ ರಕ್ಷಣೆಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಿದ್ದರು. ಮಧ್ಯಯುಗದಲ್ಲಿ ಜನರಿಗಿದ್ದ ಏಕಮೇವ ಆಸ್ತಿಯೆಂದರೆ ಭೂಮಿ. ಅಂಥ ಭೂಮಿಯನ್ನು ತಮ್ಮ ಜೀವಕ್ಕೆ ರಕ್ಷಣೆಯನ್ನೊದಗಿಸುವ ಸಮರ್ಥ ವ್ಯಕ್ತಿಗೆ ಒಪ್ಪಿಸಿ ರಕ್ಷಣೆ ಪಡೆದರು. ಇದರಿಂದ ಊಳಿಗಮಾನ್ಯ ಪದ್ಧತಿಗೆ ಭೂಮಿಯೇ ಅಸ್ತಿಭಾರವಾಯಿತು.

ರೋಮನ್ ಸಾಮ್ರಾಜ್ಯ ಕಾಲದಲ್ಲಿ ಶಕ್ತರಾಗಿದ್ದ ಕೆಲವರು ಯುದ್ಧವೀರರಾಗಿದ್ದರು. ಕೆಲವು ಖಾಸಗಿ ಭೂಮಿಗಳು ಇವರ ಒಡೆತನದಲ್ಲಿದ್ದುವು. ಇವುಗಳ ಮೇಲೆ ಸರ್ಕಾರದ ಅಧಿಕಾರವಿಲ್ಲದ್ದರಿಂದ ಇವರು ಈ ನೆಲವನ್ನು ಯಾರಿಗೆ ಬೇಕಾದರೂ ಕೊಡಬಹುದಾಗಿತ್ತು. ಈ ಕಾರಣದಿಂದ ಇವರು ತಮ್ಮ ಸುತ್ತಲೂ ನಿಷ್ಠಾವಂತ ಯೋಧರ ಗುಂಪುಗಳನ್ನು ಕಟ್ಟಿಕೊಂಡಿದ್ದರು. ಮುಂದೆ ಎರಡನೆಯ ಶತಮಾನದ ವೇಳೆಗೆ ಇದು ಸಾಮಾನ್ಯ ಪದ್ಧತಿಯಾಯಿತು. ದೈಹಿಕ ಶಕ್ತಿಯುಳ್ಳ ಕಡಿಮೆ ದರ್ಜೆಯ ಜನರನೇಕರು ತಮ್ಮ ಸೇವೆಯನ್ನು ಬಲಿಷ್ಠ ಪ್ರಭುಗಳಿಗೆ ಮುಡಿಪಾಗಿಡುವ ಪದ್ಧತಿ ರೂಪುಗೊಂಡಿತು. ಇವರ ನಿಷ್ಠೆಗೆ ಪ್ರತಿಯಾಗಿ ಇವರನ್ನು ಪಾಲಿಸಿ ಪೋಷಿಸುವ ಹೊಣೆ ಪ್ರಭುವಿನದಾಗಿತ್ತು. ಮೊದಮೊದಲು ಆತ ಇವರಿಗೆ ನೆಲವನ್ನು ದಾನವಾಗಿ ಕೊಡುತ್ತಿದ್ದ. ಮುಂದೆ ಅದನ್ನು ಅನುಭವಿಸುವ ಹಕ್ಕನ್ನು ಮಾತ್ರ ಕೊಡುವ ಪದ್ಧತಿ ಬೆಳೆಯಿತು. ಒಡೆತನ ಪ್ರಭುವಿನಲ್ಲೇ ಉಳಿದಿತ್ತು. ಫ್ರ್ಯಾಂಕಿಷ್ ದೊರೆಗಳಲ್ಲೊಬ್ಬರಾದ ಚಾರಲ್ಸ್ ಮಾರ್ಟೆಲ್ಲನ ಕಾಲದಲ್ಲೇ ಈ ಹೊಸ ಪದ್ಧತಿ ಜಾರಿಗೆ ಬಂದದ್ದು. ಜರೂರು ಪರಿಸ್ಥಿತಿ ಒದಗಿದ್ದಾಗ ಈ ದೊರೆ ಚರ್ಚಿನ ಭೂಮಿ ವಶಪಡಿಸಿಕೊಂಡು ಅವನ್ನು ಜೀತಗಾರರಿಗೆ ಕೊಟ್ಟಿದ್ದಲ್ಲದೆ ಸ್ವಂತ ನೆಲವನ್ನೂ ಇದೇ ರೀತಿ ಹಂಚಿದ. ದೊರೆಯ ಉದಾಹರಣೆಯನ್ನೇ ಇತರ ಪ್ರಭುಗಳೂ ಅನುಸರಿಸಿದರು.

ಫ್ರ್ಯಾಂಕಿಷ್ ದೊರೆಗಳು ಯುರೋಪಿನಲ್ಲಿ ತಮ್ಮ ರಾಜ್ಯ ವಿಸ್ತರಿಸಿದಂತೆ ಈ ವ್ಯವಸ್ಥೆ ಇತರ ಕಡೆಗಳಿಗೂ ಹಬ್ಬಿತು. ಹನ್ನೊಂದನೆಯ ಶತಮಾನದ ವೇಳೆಗೆ ಇಂಗ್ಲೆಂಡ್ ಸ್ಕಾಟ್ಲೆಂಡ್ ಐರ್ಲೆಂಡ್‌ಗಳಲ್ಲೂ ಇದು ಸಾಮಾನ್ಯವಾಯಿತು. ಧರ್ಮಯುದ್ಧಗಳಲ್ಲಿ ಐರೋಪ್ಯ ಕ್ರೈಸ್ತರು ಜಯಿಸಿದ ಪೂರ್ವದ ಕಡೆಯ ನಾಡುಗಳಲ್ಲೂ ಊಳಿಗಮಾನ್ಯ ವ್ಯವಸ್ಥೆ ಬೇರೂರಿತೆನ್ನಬಹುದು. ಆದರೆ ಯುರೋಪಿನ ಕೆಲವು ಭಾಗಗಳಲ್ಲಿ ಊಳಿಗಮಾನ್ಯ ವ್ಯವಸ್ಥೆ ಬರಲೇ ಇಲ್ಲ. ಅವು ಸಾಮೂಹಿಕ ಪದ್ಧತಿಯಿಂದ ನೇರವಾಗಿ ಆಧುನಿಕ ವ್ಯವಸ್ಥೆಗೆ ಜಾರಿಕೊಂಡವು.

ಊಳಿಗಮಾನ್ಯ ವ್ಯವಸ್ಥೆಯ ಆಂತರಿಕ ಬೆಳೆವಣಿಗೆಯಾದದ್ದು ಒಂಬತ್ತನೆಯ ಶತಮಾನದಲ್ಲಿ. ಭೂಮಾನ್ಯ ವಂಶಪಾರಂಪರ್ಯವಾದದ್ದು ಆಗಲೇ. ಮುಂದೆ ಕ್ರಮೇಣ ಊಳಿಗಮಾನ್ಯ ವ್ಯವಸ್ಥೆಯನ್ನು ಸೆಳೆದಿಟ್ಟಿದ್ದ ಕೇಂದ್ರ ಶಕ್ತಿ ಕ್ಷೀಣಿಸಿತು. ದೊರೆ ದುರ್ಬಲನಾದ. ಸ್ಥಳೀಯ ಪ್ರಭುಗಳು ಸ್ವತಂತ್ರವಾಗಿ ಬಲಿಷ್ಠರಾಗಿ ತಂತಮ್ಮ ಪ್ರಾದೇಶಿಕ ರಾಜ್ಯಗಳನ್ನು ಕಟ್ಟಿಕೊಂಡರು. 12ನೆಯ ಶತಮಾನದ ವೇಳೆಗೆ ಈ ವ್ಯವಸ್ಥೆಯ ಸಾಮಾಜಿಕ ಪ್ರಾಬಲ್ಯವೂ ಕುಂದಲಾರಂಭಿಸಿತೆನ್ನಬಹುದು. ನಾನಾ ಬಗೆಯ ವಿರುದ್ಧ ಶಕ್ತಿಗಳ ಆಘಾತ ಒದಗಲಾರಂಭಿಸಿತು. ಕೇಂದ್ರ ಪ್ರಾಬಲ್ಯವುಳ್ಳ ರಾಷ್ಟ್ರಗಳ ಉದಯವೂ ರೋಮನ್ ಮಾದರಿಯಲ್ಲಿ ಸಂಬಳ ಪಡೆಯುವ ಅಧಿಕಾರಿಗಳ ಹಾಗೂ ಸೈನ್ಯದ ಸೃಷ್ಟಿಯೂ ಪ್ರಭು–ಜೀತಗಾರ ಸಂಬಂಧದ ಬದಲು ದೊರೆ–ಪ್ರಜೆ ಸಂಬಂಧದ ಬೆಳೆವಣಿಗೆಯೂ ಆರ್ಥಿಕ ಶಕ್ತಿಯುಳ್ಳ ನಗರಗಳ ಉದಯವೂ ಇದರ ಕ್ಷೀಣಗತಿಗೆ ಕೆಲವು ಕಾರಣಗಳು. ಮೇನರಿನ ಪದ್ಧತಿ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಕೊಂಡಿದ್ದರಿಂದ ಹಳೆಯ ಶ್ರೀಮಂತರ ಪ್ರಭಾವ ಕುಗ್ಗಿತು. ವಾಣಿಜ್ಯ ವಹಿವಾಟುಗಳಿಂದ ಹಣವಂತರಾದವರನೇಕರು ನೆಲವನ್ನೂ ಇತರ ಸ್ವತ್ತುಗಳಂತೆ ಕೊಳ್ಳಲಾರಂಭಿಸಿದಾಗ ಈ ವ್ಯವಸ್ಥೆಯ ಕಟ್ಟು ಸಡಿಲವಾಯಿತು. ಆದರೂ ಊಳಿಗಮಾನ್ಯ ವ್ಯವಸ್ಥೆಯ ಕೆಲವು ನ್ಯಾಯಪದ್ಧತಿಗಳು 20ನೆಯ ಶತಮಾನದವರೆಗೂ ಉಳಿದುಕೊಂಡು ಬಂದುವೆನ್ನಬಹುದು.

ಊಳಿಗಮಾನ್ಯ ವ್ಯವಸ್ಥೆಯಲ್ಲಿ ಅಧಿಕಾರ ಸ್ಥಳೀಯ ಶಕ್ತ ವ್ಯಕ್ತಿಗಳಲ್ಲಿ ಹಂಚಿಕೆಯಾಗಿರುತ್ತಿದ್ದುದರಿಂದ ಅನಾಯಕತ್ವ ಪ್ರವೃತ್ತಿಯುಳ್ಳ ಸಡಿಲತೆಯೇ ಊಳಿಗಮಾನ್ಯ ವ್ಯವಸ್ಥೆಯ ಒಂದು ಅವಶ್ಯ ಲಕ್ಷಣವೆಂದು ಇತಿಹಾಸಕಾರರ ಸಾಮಾನ್ಯ ಭಾವನೆ. ಆದರೆ ವಾಸ್ತವವಾಗಿ ಎಲ್ಲ ಸಂದರ್ಭಗಳಲ್ಲೂ ಪರಿಸ್ಥಿತಿ ಹೀಗಿದ್ದಿತು. ಈ ವ್ಯವಸ್ಥೆಯ ಮೇಲೆ ಕುಳಿತ ದೊರೆಯ ವೈಯಕ್ತಿಕ ಸಾಮರ್ಥ್ಯವನ್ನೇ ಇದು ಬಹಳ ಮಟ್ಟಿಗೆ ಅವಲಂಬಿಸಿತ್ತು. ಆಂತರಿಕವಾಗಿ ಈ ವ್ಯವಸ್ಥೆಯಲ್ಲಿ ಅನಾಯಕತ್ವದ ಲಕ್ಷಣಗಳೇನೂ ಇರಲಿಲ್ಲ. ವೈಯಕ್ತಿಕ ಸಂಬಂಧಗಳಿಂದ ಮಾತ್ರವೇ ವಿಶಾಲ ಚಕ್ರಾಧಿಪತ್ಯದ ಏಕತೆಯನ್ನು ಕಾಪಾಡುವುದು ಸಾಧ್ಯವಾಗಿದ್ದ ಆ ಕಾಲದಲ್ಲಿ ಈ ವ್ಯವಸ್ಥೆ ಅನೇಕ ಸಾರಿ ಒಗ್ಗಟ್ಟಿನ ಸಾಧನವಾಗಿತ್ತು. 12, 13ನೆಯ ಶತಮಾನಗಳಲ್ಲಿ ಫ್ರೆಂಚ್ ದೊರೆಗಳು ಬಾಡಿದ ಹೂವಿನ ದಳಗಳಂತೆ ಉದುರಿ ಹೋಗಲಿದ್ದ ಪ್ರದೇಶಗಳನ್ನು ಒಂದಾಗಿ ಪವಣಿಸಲು ಊಳಿಗಮಾನ್ಯ ವ್ಯವಸ್ಥೆಯ ಸೂತ್ರವನ್ನೇ ಬಳಸಿಕೊಂಡರೆಂಬುದು ಉಲ್ಲೇಖನಾರ್ಹ.

ಪಾಶ್ಚಾತ್ಯ ನಾಗರಿಕತೆ ಹಾಗೂ ಸಮಾಜಗಳ ಮೇಲೆ ಊಳಿಗಮಾನ್ಯ ವ್ಯವಸ್ಥೆಯ ಪ್ರಭಾವ ಬಲು ಆಳವಾದದ್ದು. ಸ್ವಾಮಿನಿಷ್ಠೆಯೂ ಸ್ಥೈರ್ಯ ಸಾಹಸಗಳ ಬಗ್ಗೆ ಏರ್ಪಟ್ಟ ಸಂಹಿತೆಯೂ ಈ ವ್ಯವಸ್ಥೆಯ ಸಲ್ಲಕ್ಷಣಗಳು. ಸೈನಿಕ ಶ್ರೀಮಂತವರ್ಗದ ರಚನೆ ಈ ವ್ಯವಸ್ಥೆಯ ಇನ್ನೊಂದು ಲಕ್ಷಣ. ಬಾಹ್ಯ ಶತ್ರುಗಳಿಂದ ಜನರನ್ನು ಇವರು ರಕ್ಷಿಸುತ್ತಿದ್ದರಾದರೂ ಈ ವರ್ಗದವರು ಪರಸ್ಪರವಾಗಿ ಸಣ್ಣಪುಟ್ಟ ಕದನಗಳಲ್ಲಿ ನಿರತರಾಗಿದ್ದುದರಿಂದ ಪದೇ ಪದೇ ಶಾಂತಿಭಂಗವಾಗುತ್ತಿತ್ತು. ಬಲಿಷ್ಠನದೇ ನ್ಯಾಯವೆನಿಸುತ್ತಿತ್ತು. ಯುದ್ಧಾಡಳಿತ ನಿರತವಾದ ಮೇಲುವರ್ಗದ ಬೆಳೆವಣಿಗೆಯಿಂದ ಶ್ರೀಸಾಮಾನ್ಯರ ಪ್ರಾಮುಖ್ಯ ಬಲುಮಟ್ಟಿಗೆ ಕಡಿಮೆಯಾಯಿತು. ಆರ್ಥಿಕ ಬೆಳೆವಣಿಗೆಯೂ ಕುಂಠಿತವಾಗಿತ್ತು. ಧಣಿ–ಸೇವಕ, ಶ್ರೀಮಂತ–ಸಾಮಾನ್ಯ, ಅಧಿಕಾರ–ಹಕ್ಕು, ಈ ದ್ವಂದ್ವಗಳ ನಡುವೆ ಘರ್ಷಣೆ ಸಂಭವಿಸಿ ಸಮಾಜಕ್ಕೆ ಆದರ್ಶವೆನಿಸಿದ ಕ್ರಾಂತಿಕಾರಿ ಭಾವನೆಗಳು ರೂಪುಗೊಳ್ಳಲು ಈ ವ್ಯವಸ್ಥೆಯೂ ಕಾರಣವೆನ್ನಬಹುದು.

(ಎಚ್.ಆರ್.)

**ಊಳಿಗಮಾನ್ಯ ನ್ಯಾಯಪದ್ಧತಿ:** ನೆಲ ಪ್ರಾಣಗಳ ರಕ್ಷಣೆಗಾಗಿ ದುರ್ಬಲನಾದವನು ಸಬಲನನ್ನಾಶ್ರಯಿಸುವ ಮನೋಭಾವದ ಫಲವಾಗಿ ಬೆಳೆದ ಊಳಿಗಮಾನ್ಯ ವ್ಯವಸ್ಥೆ ಕ್ರಮೇಣ ಹೇಗೆ ಇಡೀ ಸಮಾಜದ ಒಗ್ಗಟ್ಟಿನ ಸಾಧನವಾಯಿತೆಂಬುದು ಹಿಂದಿನ ಲೇಖನಗಳಲ್ಲಿ ವ್ಯಕ್ತವಾಗಿದೆ. ಇದರ ಪರಿಣಾಮವಾಗಿ ವಿಶಿಷ್ಟವಾದ ಒಂದು ನ್ಯಾಯವ್ಯವಸ್ಥೆಯೂ ರೂಪಿತವಾಗಿತ್ತು. ಪ್ರಾಣರಕ್ಷಣೆಗಾಗಿ ರಕ್ಷಕ–ರಕ್ಷಿತರಲ್ಲಿ ಆಗುವ ಒಡಂಬಡಿಕೆ ಅಥವಾ ಒಪ್ಪಂದವನ್ನು ಪ್ಯಾಟ್ರೊಸಿನಿಯಂ ಎಂಬುದಾಗಿಯೂ, ಸ್ವತ್ತಿನ(ಭೂಮಿ) ರಕ್ಷಣೆಗಾಗಿ ಮಾಡಿಕೊಂಡ ಒಪ್ಪಂದವನ್ನು ಪ್ರಿಕೇರಿಯಂ ಎಂಬುದಾಗಿಯೂ ಕರೆಯುತ್ತಿದ್ದರು.

ಒಡೆಯ ಜೀತಗಾರ ಸಂಬಂಧ ಯಾವ ರೀತಿ ಸ್ಥಿರವಾಗಿತ್ತೆಂಬುದನ್ನು ಈ ಕೆಳಗಿನಂತೆ ವರ್ಣಿಸಲಾಗಿದೆ: ಜೀತಗಾರ ಒಡೆಯನ ಮುಂದೆ ಮೊಳಕಾಲೂರಿ ಕುಳಿತು ಮಣಿದು, ಒಡೆಯನ ಕೈಯಲ್ಲಿ ತನ್ನ ಕೈಹಾಕಿ ದಾಸ್ಯ ಒಪ್ಪಿಕೊಳ್ಳುತ್ತಿದ್ದ. ಮಣಿದವನು ಮೇಲೆದ್ದು ನಿಂತು ತಾನು ಕೈಂಕರ್ಯವೆಸಗುವುದಾಗಿ ಪ್ರಮಾಣ ಮಾಡಿ ಹೇಳುತ್ತಿದ್ದ. ಆಗ ಒಡೆಯ, ತಾನು ಅವನಿಗೆ ಕೊಡುವ ಕಾಣಿಕೆಯನ್ನು ವಿಧಿಪೂರ್ವಕವಾಗಿ ಅನುಗ್ರಹಿಸುತ್ತಿದ್ದ. ಎಲ್ಲಿಯವರೆಗೆ ಜೀತಗಾರ ತಾನು ಪ್ರಮಾಣಪೂರ್ವಕವಾಗಿ ಒಪ್ಪಿಕೊಂಡು ಸೇವೆಯನ್ನು ಸಲ್ಲಿಸುವನೋ ಅಲ್ಲಿಯವರೆಗೆ ಒಡೆಯನಿತ್ತ ಕಾಣಿಕೆಗೆ ಈತ ಹಕ್ಕುದಾರ. ಇದು ವಂಶಪಾರಂಪರ್ಯವಾಗಿ ಸಾಗುತ್ತಿತ್ತು.

ಈ ವ್ಯವಸ್ಥೆಯ ಅಡಿಯಲ್ಲಿ ಹಳೆಯ ಕಾಲದ ಸ್ಥಳೀಯ ನ್ಯಾಯಾಲಯಗಳು ಮರೆಯಾಗಿ ಪ್ರತಿಯೊಬ್ಬ ಪ್ರಭುವೂ ಒಂದು ಪ್ರತ್ಯೇಕ ನ್ಯಾಯಾಲಯ ಏರ್ಪಡಿಸಿಕೊಂಡ. ಇಪ್ಪತ್ತನೆಯ ಶತಮಾನದಲ್ಲಿ ಶಾಸನಗಳಿಗೆ ಇರುವಷ್ಟು ಬಲ ಮಧ್ಯಯುಗದಲ್ಲಿ ಈ ಪದ್ಧತಿಗೆ ಇತ್ತು. ಪ್ರತಿಯೊಂದನ್ನೂ ಒಂದು ಕ್ರಮಕ್ಕೆ ಒಳಪಡಿಸುವಷ್ಟು ಶಕ್ತಿ ಸರ್ಕಾರಕ್ಕೆ ಆಗ ಇರಲಿಲ್ಲ. ಮೇಲಿನಿಂದ ಕೆಳಕ್ಕೆ ಪರಸ್ಪರ ಕರ್ತವ್ಯಸೇವೆಗಳ ಅಸ್ತಿವಾದದ ಮೇಲೆಯೇ ಇಡೀ ನ್ಯಾಯವ್ಯವಸ್ಥೆ ನಿಂತಿತ್ತು. ನೆಲ ಹೊಂದಿದ್ದ ಮಾತ್ರಕ್ಕೆ ಏನನ್ನಾದರೂ ಮಾಡಬಹುದೆಂಬ ಅಧಿಕಾರ ಯಾರಿಗೂ ಇರಲಿಲ್ಲ. ನೆಲದ ಸ್ವಾಮ್ಯದೊಂದಿಗೆ ಇತರರ ಬಗ್ಗೆ ಕೆಲವು ಕರ್ತವ್ಯಗಳೂ ಇದ್ದುವು. ಯುದ್ಧಕಾಲದಲ್ಲಿ ಜೀತಗಾರನಿಗೆ ರಕ್ಷಣೆ ನೀಡಬೇಕಾದ್ದು ಒಡೆಯನ ಕರ್ತವ್ಯ. ಇಬ್ಬರು ಜೀತಗಾರರ ನಡುವಣ ವ್ಯಾಜ್ಯದ ತೀರ್ಮಾನ ಪ್ರಭುವಿನ ನ್ಯಾಯಾಲಯದಲ್ಲಿ ನಡೆಯುವುದು ಸಂಪ್ರದಾಯವಾಗಿತ್ತು. ಜೀತಗಾರನ ಮೇಲೆ ಪ್ರಭುವಿನ ಅಧಿಕಾರವಿತ್ತಾದರೂ ಆತ ಪದೇ ಪದೇ ಸಂಪ್ರದಾಯದ ಕಟ್ಟು ಮುರಿದಾಗ ಆತನ ಅಧಿಪತಿ ಅವನಿಂದ ವಿವರಣೆ ಕೇಳಿದ ಸಂದರ್ಭಗಳೂ ಉಂಟು. ಮುಖ್ಯವಾಗಿ ಇಂಗ್ಲೆಂಡಿನಲ್ಲಿ ದೊರೆಯ ನ್ಯಾಯಾಸ್ಥಾನದಲ್ಲಿ ರೈತನ ದೂರಿನ ವಿಚಾರಣೆಗೂ ಅವಕಾಶವಿತ್ತು.

ಮೇನರಿನ ಪ್ರಭುವೂ ಜೀತಗಾರನಂತೆಯೇ ಇದ್ದ. ಅವನೂ ನೆಲದ ಮೇಲೆ ಪರಮಾಧಿಕಾರ ಹೊಂದಿರಲಿಲ್ಲ. ಆತ ಮೇಲ್ಪಟ್ಟ ಪ್ರಭುವಿನ ಬಾಡಿಗೆದಾರ. ಜೀತಗಾರ, ಅರ್ಧ ಸ್ವತಂತ್ರ ರೈತ ಮತ್ತು ಸ್ವತಂತ್ರ ರೈತರ ಹಿಡುವಳಿಯ ಹಕ್ಕು ಪ್ರಭುವಿನಿಂದ ಬರುತ್ತಿತ್ತು. ಪ್ರಭುವಿಗೆ ಅವನ ಮೇಲ್ಪಟ್ಟ ಶ್ರೀಮಂತನಿಂದಲೂ ಆತನಿಗೆ ದೊರೆಯಿಂದಲೂ ಈ ಹಕ್ಕು ದೊರೆತಿರುತ್ತಿತ್ತು. ಕೆಲವು ವೇಳೆ ಈ ಕ್ರಮ ಇನ್ನೂ ಮುಂದುವರಿದು, ಒಬ್ಬ ದೊರೆ ಇನ್ನೊಬ್ಬ ದೊರೆಯಿಂದ ಈ ಹಕ್ಕು ಪಡೆದಿದ್ದ. ಗೇಣಿದಾರರು ತಮ್ಮಿಚ್ಛೆಯಂತೆ ನೆಲವನ್ನು ವಿನಿಯೋಗಿಸುವಂತಿರಲಿಲ್ಲ. ಇದಕ್ಕೆ ತಮ್ಮ ಅಧಿಪತಿಯ ಒಪ್ಪಿಗೆ ಅಗತ್ಯವಿತ್ತು. ಅವನಿಗೆ ಕಾಣಿಕೆ ಒಪ್ಪಿಸಿ ಅನಂತರ ಇನ್ನೊಬ್ಬರಿಗೆ ಅವನ್ನು ವರ್ಗಾಯಿಸಬಹುದಿತ್ತು. ಜೀತಗಾರನ ಉತ್ತರಾಧಿಕಾರಿ ಪಿತ್ರಾರ್ಜಿತ ಪಡೆಯಲು ಪ್ರಭುವಿಗೆ ಕಾಣಿಕೆ ಕೊಡಬೇಕಾಗಿತ್ತು. ಪ್ರಭುವಿನ ಉತ್ತರಾಧಿಕಾರಿಯೂ ಪಿತ್ರಾರ್ಜಿತ ಹಕ್ಕು ಪಡೆಯಲು ತನ್ನ ಅಧಿಪತಿಗೆ ತೆರಿಗೆ ಕೊಡಬೇಕಾಗಿತ್ತು. ಒಬ್ಬ ಗೇಣಿದಾರ ಸತ್ತಾಗ ಅವನ ಉತ್ತರಾಧಿಕಾರಿ ವಯಸ್ಕನಾಗಿರದಿದ್ದರೆ ಆತ ಪ್ರಾಪ್ತವಯಸ್ಕನಾಗುವವರೆಗೂ ಆತನ ಹಕ್ಕು ಪ್ರಭುವಿನ ಕೈಯಲ್ಲಿರುತ್ತಿತ್ತು.

ಉತ್ತರಾಧಿಕಾರಿಣಿಗಳು ಪ್ರಭುವಿನ ಒಪ್ಪಿಗೆ ಪಡೆಯದೆ ಮದುವೆಯಾಗುವಂತಿರಲಿಲ್ಲ. ವಿಧವೆ ಮದುವೆಯಾಗಲು ಪ್ರಭುವಿಗೆ ದಂಡ ತೆರಬೇಕು. ವಿಧವೆ ವಿವಾಹವಾಗದಿರಬೇಕೆಂದು ಬಯಸಿದಾಗ ಆಕೆ ಮದುವೆಯಾಗಬೇಕೆಂದು ಪ್ರಭು ಒತ್ತಾಯಪಡಿಸಬಹುದಿತ್ತು. ಅದರಿಂದ

ತಪ್ಪಿಸಿಕೊಳ್ಳಬೇಕಿದ್ದರೆ ಅದಕ್ಕಾಗಿಯೂ ಕಾಣಿಕೆ ಆಕೆ ತೆರಬೇಕಿತ್ತು. ನಾನಾ ಪ್ರಭುಗಳ ಪ್ರತ್ಯೇಕ ನ್ಯಾಯಾಲಯಗಳಿದ್ದುದರಿಂದ ಆಗಿನ ಕಾಲದ ನ್ಯಾಯವ್ಯವಸ್ಥೆ ಬಲು ತೊಡಕಿನದಾಗಿತ್ತೆಂದೇ ಹೇಳಬಹುದು. ನ್ಯಾಯಾಲಯದ ರುಸುಮುಗಳು ಆದಾಯ ಮೂಲಗಳಾಗಿದ್ದುದರಿಂದ ಈ ದೃಷ್ಟಿಯಿಂದಲೂ ಇವನ್ನು ಸ್ಥಾಪಿಸಲಾಗುತ್ತಿತ್ತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ಪಷ್ಟವಾಗಿ ರೂಪುಗೊಂಡ ಊಳಿಗಮಾನ್ಯ ವ್ಯವಸ್ಥೆ ಭಾರತದಲ್ಲಿ ಎಂದೂ ರೂಪುಗೊಳ್ಳಲಿಲ್ಲ. ಪಾಳೆಯಗಾರಿಕೆ ಪದ್ಧತಿಯಲ್ಲಿ ಈ ವ್ಯವಸ್ಥೆಯ ಲಕ್ಷಣಗಳನ್ನು ಕಾಣಬಹುದಾ ದರೂ ಇದರಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಕಟ್ಟುನಿಟ್ಟುಗಳಾಗಲಿ ನ್ಯಾಯನೈಷ್ಠುರ್ಯವಾಗಲಿ ಕಾಣಬರುವುದಿಲ್ಲ. (ಕೆ.ಪಿ.)

ಋ ಕನ್ನಡ ವರ್ಣಮಾಲೆಯ ಏಳನೆಯ ಅಕ್ಷರ. ಇದರ ಬ್ರಾಹ್ಮೀಲಿಪಿಯ ಸ್ವರೂಪ ದೊರಕಿಲ್ಲ. ಸಾಮಾನ್ಯವಾಗಿ ಕನ್ನಡದಲ್ಲಿ ಈ ಅಕ್ಷರದ ಬಳಕೆ ಬಹು ಕಡಿಮೆ. ಋಷಿ, ಋಣ ಮುಂತಾದ ಸಂಸ್ಕೃತದ ಶಬ್ದಗಳು ಬಂದಾಗ ಮಾತ್ರ ಇದರ ಉಪಯೋಗ. ಅಲ್ಲೂ ತದ್ಭವ ರೂಪಗಳಾದ ರಿಸಿ, ರಿಣ ಮುಂತಾದುವು ಬಂದು ಬಿಡುತ್ತವೆ. ವ್ಯಂಜನದೊಂದಿಗೆ ಸೇರಿ ಬಂದಾಗ ಮಾತೃಕೆ, ಗೃಹ ಮೊದಲಾದ ಶಬ್ದಗಳಲ್ಲಿ ಇದರ ನಿಷ್ಕೃಷ್ಟ ಉಪಯೋಗ ಉಂಟು. ವರ್ಣಮಾಲೆಯ ಎಂಟನೆಯ ಅಕ್ಷರವಾದ ೠಕಾರದ ಬಳಕೆಯಂತೂ ಕನ್ನಡದಲ್ಲಿ ಇಲ್ಲವೇ ಇಲ್ಲ. ಸಂಸ್ಕೃತದಲ್ಲಿ ಈ ಅಕ್ಷರದಿಂದ ಮೊದಲಾಗುವ ಪದಗಳು ತೀರ ವಿರಳ. 6ನೆಯ ಶತಮಾನದ ಕದಂಬರಾಜ ಇಮ್ಮಡಿ ಕೃಷ್ಣವರ್ಮನ ಶಾಸನದಲ್ಲಿ ದೊರಕಿರುವ, ಋ ಕಾರದ ರೂಪವೇ ಬಹುಶಃ ಅತಿ ಪ್ರಾಚೀನವಾದುದೆಂದು ಹೇಳಬಹುದು. ಕದಂಬ ಕಾಲದ ಈ ಅಕ್ಷರದ ಸ್ವರೂಪ, ಅದೇ ಕಾಲದ ಮ ಎನ್ನುವ ಅಕ್ಷರವನ್ನು ಬಹುವಾಗಿ ಹೋಲುತ್ತದೆ. 12ನೆಯ ಶತಮಾನದ ಕಲ್ಯಾಣಿ ಚಾಲುಕ್ಯರ ಶಾಸನಗಳಲ್ಲಿ, ಈ ಅಕ್ಷರ ಭು ಎಂಬುದನ್ನು ಬಹುವಾಗಿ ಹೋಲುತ್ತದೆ. ಇದೇ ರೂಪ ಮುಂದುವರಿದು 18 ನೆಯ ಶತಮಾನದಲ್ಲಿ ಈಗಿರುವ ರೂಪಕ್ಕೆ ಬಹು ಸಮೀಪವಾಗಿ ಕಂಡರೂ ಒಂದು ಕೊಂಡಿ ಹೆಚ್ಚಾಗಿರುವುದನ್ನು ಗಮನಿಸಬೇಕು.

ಕನ್ನಡ ವರ್ಣಮಾಲೆಯ ಏಳು ಎಂಟನೆಯ ಅಕ್ಷರಗಳಾದ ಹ್ರಸ್ವ ದೀರ್ಘ ಋ, ೠ, ವ್ಯಂಜನ ಹಾಗೂ ಅರ್ಧ ಸ್ವರ ಲಕ್ಷಣಗಳನ್ನೊಳಗೊಂಡ ಮೃದು ಧ್ವನಿಗಳನ್ನು ಸೂಚಿಸುತ್ತವೆ. (ಎ.ವಿ.ಎನ್.)

**ಋಕ್:** ದೇವತೆಗಳ ಸ್ತುತಿರೂಪವಾದ ಒಂದು ವೈದಿಕಮಂತ್ರ; ಛಂದೋಬದ್ಧವಾಗಿರುತ್ತದೆ. ಒಂದು ನಿರ್ದಿಷ್ಟಕ್ರಮದಲ್ಲಿ ಜೋಡಿಸಿರುವ ಇಂಥ ಮಂತ್ರಗಳ ಸಮುದಾಯ ಋಗ್ವೇದವೆನಿಸಿಕೊಂಡಿದೆ. ದೇವತಾಪ್ರಶಂಸೆ ಪ್ರಾರ್ಥನೆಗಳನ್ನೊಳಗೊಂಡಿರುವ ಈ ಮಂತ್ರಗಳು ಕೇವಲ ವಿಹಿತಕರ್ಮವನ್ನನುಸರಿಸಿ ಬಂದ ಸಾಮ ಯಜಸ್ಸುಗಳಿಂದ ಬೇರೆಯಾಗಿವೆ **(ನೋಡಿ– ಋಗ್ವೇದ).** (ಬಿ.ಕೆ.ಎಸ್.)

**ಋಗ್ವೇದ:** ಇಂಡೋ–ಯುರೋಪಿಯನ್ ಭಾಷೆಗಳಲ್ಲೆಲ್ಲ ಪ್ರಾಚೀನತಮವಾದ ಜ್ಞಾನರಾಶಿ. ಛಂದೋಬದ್ಧವಾಗಿದ್ದರೂ ಐತಿಹಾಸಿಕ ಕವಿತೆಯಲ್ಲ. ಮಹಾಕಾವ್ಯವೂ ಅಲ್ಲ. ಋಷಿಗಳೂ ಋಷಿವಂಶದವರೂ ತಮ್ಮ ಮನೆತನಗಳಲ್ಲಿ ಅನೂಚಾನವಾಗಿ ಬಂದ ಮಂತ್ರಸೂಕ್ತಗಳನ್ನು ಒಟ್ಟುಗೂಡಿಸಿರುವ ಒಂದು ಸಂಕಲನ ಅಥವಾ ಸಂಹಿತೆ. ದೇವತೆಗಳ ತೃಪ್ತ್ಯರ್ಥವಾಗಿ ಯಜ್ಞಕಾಲದಲ್ಲಿ ಉಚ್ಚರಿಸಲಾಗುತ್ತಿದ್ದ ಪ್ರಾರ್ಥನೆಗಳೇ ಮಂತ್ರಗಳು. ಋಕ್ ಎಂದರೆ ದೇವತಾಸ್ತುತಿ ರೂಪವಾದ ಪದ್ಯ; ವೇದವೆಂದರೆ ಶ್ರುತಿ, ಛಂದಸ್ಸು, ಜ್ಞಾನ. ಆದ್ದರಿಂದ ಪ್ರಧಾನವಾಗಿ ಋಗ್ವೇದ ದೇವತಾಸ್ತುತಿರೂಪವಾದ ಜ್ಞಾನ. ಭಾರತದ ಧಾರ್ಮಿಕ ಸಂಸ್ಕೃತಿಗೆಲ್ಲ ಋಗ್ವೇದವೇ ಬುನಾದಿ.

**ಕಾಲ:** ಋಗ್ವೇದ ಅನಾದಿ, ನಿತ್ಯ ಮತ್ತು ಅಪೌರುಷೇಯವೆಂದು ಭಾವಿಸುವುದು ವೈದಿಕಸಂಪ್ರದಾಯ. ಆದರೆ ಆಧುನಿಕ ವಿದ್ವಾಂಸರೂ ಸಂಶೋಧಕರೂ ಒಂದೂವರೆ ಶತಮಾನಗಳ ಕಾಲ ಋಗ್ವೇದ ಸಂಸ್ಕೃತಿಯ ಅಧ್ಯಯನ ಮಾಡಿ ಮಾನವನ ಇತಿಹಾಸದಲ್ಲಿ ಋಗ್ವೇದದ ಸ್ಥಾನವನ್ನೂ ಕಾಲವನ್ನೂ ನಿರ್ದೇಶಿಸಲು ಯತ್ನಿಸಿದ್ದಾರೆ. ಇವರಲ್ಲಿ ರೋಟ್, ಮ್ಯಾಕ್ಸ್‌ಮ್ಯುಲರ್, ಓಲ್ಡೆನ್‌ಬರ್ಗ್, ಲುಡ್ವಿಗ್, ಗ್ರಾಸ್‌ಮನ್, ಗೆಲ್ಡನರ್, ಪಿಷೆಲ್ ಮುಂತಾದ ಜರ್ಮನ್ ವಿದ್ವಾಂಸರು ಅಗ್ರಗಣ್ಯರೆನ್ನಬಹುದು. ತುಲನಾತ್ಮಕ ಭಾಷಾಶಾಸ್ತ್ರದ ಆಧಾರದ ಮೇಲೆ ಇವರು ಋಗ್ವೇದ ಭಾಷೆಗೂ ಪ್ರಾಚೀನ ಇರಾನ್ ದೇಶದ ಅವೆಸ್ತ ಎಂಬ ಧರ್ಮಗ್ರಂಥದ ಭಾಷೆಗೂ, ಇನ್ನೂ ಆಚೆಗೆ ಗ್ರೀಕ್, ಲ್ಯಾಟಿನ್ ಮತ್ತು ತಜ್ಜನ್ಯ ಐರೋಪ್ಯ ಭಾಷೆಗಳಿಗೂ ಇರುವ ಗಾಢವಾದ ಶಬ್ದಾರ್ಥಸಾಮ್ಯಗಳನ್ನು ಅನುಲಕ್ಷಿಸಿ, ವೇದರಚನೆ ಮಾಡಿದವರು ಇವೆಲ್ಲ ಭಾಷೆಗಳಿಗೂ ಮೂಲವಾದ ಭಾಷೆಯೊಂದನ್ನಾಡುತ್ತಿದ್ದಿರಬೇಕೆಂದೂ ಅದನ್ನು ಇಂಡೋ–ಯುರೋಪಿಯನ್ ಭಾಷೆಯೆನ್ನಬಹುದೆಂದೂ ಊಹಿಸಿದ್ದಾರೆ. ಆರ್ಯರ ಮೂಲನಿವಾಸ ಮಧ್ಯ ಏಷ್ಯ ಇಲ್ಲವೇ ಮಧ್ಯ ಯೂರೋಪ್ ಇದ್ದಿರಬೇಕೆಂದೂ ಅವರು ಕ್ರಮಕ್ರಮವಾಗಿ ದಿಕ್ಕುದಿಕ್ಕಿಗೆ ವಲಸೆ ಹೋಗುತ್ತ ಒಂದು ಕವಲಾಗಿ ಇರಾನಿನಲ್ಲೂ ಇನ್ನೊಂದು ಕವಲಾಗಿ ಭಾರತದ ಪಂಜಾಬ್ ಪ್ರಾಂತ್ಯದಲ್ಲೂ ಮೊದಲು ನೆಲೆಸಿರಬೇಕೆಂದು ತೀರ್ಮಾನಿಸಿದ್ದಾರೆ. ಹೀಗೆ ಅವರು ಕವಲೊಡೆದ ಕಾಲ ಪ್ರ.ಶ.ಪೂ.1300 ಕ್ಕಿಂತ ಈಚಿನದಾಗಿರಲಾರದೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಎಷ್ಟು ಪ್ರಾಚೀನವಿದ್ದಿರಬಹುದೆನ್ನುವ ಬಗೆಗೆ ಮತಭೇದಗಳಿವೆ. ಯಾಕೊಬಿ, ತಿಲಕ್ ಮುಂತಾದವರು ಪ್ರ.ಶ.ಪೂ. 4500ಕ್ಕಿಂತ ಹಿಂದೆ ಆಗಿರಬೇಕೆನ್ನಲು ಜ್ಯೋತಿಶ್ಶಾಸ್ತ್ರದ ಆಧಾರವನ್ನು ಕೊಡುತ್ತಾರೆ. ಆದರೆ ಇರಾನಿ ಭಾಷೆಯೂ ಋಗ್ವೇದ ಭಾಷೆಯೂ ಮೂರು ನಾಲ್ಕು ಸಾವಿರಗಳಷ್ಟು ದೀರ್ಘಾವಧಿಯವರೆಗೆ ಬೆಳೆಯದೆ ಹಾಗೆಯೇ ಉಳಿದು ಶಬ್ದಾರ್ಥಸಾಮ್ಯಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆಂದು ನಂಬಲು ಭಾಷಾಶಾಸ್ತ್ರದ ಪ್ರವೀಣರು ಸಿದ್ಧರಿಲ್ಲ.

ಹೀಗೆ ಋಗ್ವೇದಮಂತ್ರಗಳನ್ನು ಭಾರತದಲ್ಲಿ ಸಂಹಿತೆಯಾಗಿ ಒಟ್ಟುಮಾಡಿದ ಕಾಲ ಪ್ರ.ಶ.ಪೂ 700ಕ್ಕಿಂತ ಈಚೆಗಲ್ಲವೆಂದೂ ಆದರೆ ಮಂತ್ರಗಳ ರಚನಾ ಕಾಲ ಅದಕ್ಕೂ ಕನಿಷ್ಠಪಕ್ಷ 800 ವರ್ಷಗಳ ಮುಂಚೆ ಎಂದರೆ ಪ್ರ.ಶ.ಪೂ. 1500 ಎಂದೂ ಪ್ರಾಯೋಗಿಕವಾಗಿ ಒಪ್ಪುತ್ತಾರೆ. ವಿಂಟರ್‌ನಿಟ್ಸ್ ಮುಂತಾದವರು ಇದನ್ನು ಧಾರಾಳವಾಗಿ ಪ್ರ.ಶ.ಪೂ. 2000 ಅಥವಾ 2500ರ ವರೆಗೂ ಒಯ್ಯಬಹುದೆನ್ನುತ್ತಾರೆ. ಏನೇ ಇರಲಿ, ಈ ಸಂಶೋಧನೆಗಳ ಪ್ರಕಾರ ಋಗ್ವೇದ ಮಂತ್ರಗಳಲ್ಲಿ ಕೆಲವಾದರೂ ಭಾರತದ ಹೊರಗೆ, ಎಂದರೆ, ಆರ್ಯರು ಭಾರತವರ್ಷದಲ್ಲಿ ಕಾಲಿಡುವ ಮುನ್ನವೇ ರಚಿತವಾಗಿದ್ದಿರಬೇಕೆಂದು ಸ್ಪಷ್ಟವಾಗುತ್ತದೆ. ಮುಂದೆ ವಿಕಾಸಗೊಂಡ ಮಿಕ್ಕ ವೇದಸಂಹಿತೆಗಳು, ಬ್ರಾಹ್ಮಣಗಳು, ಉಪನಿಷತ್ತುಗಳು– ಇವೆಲ್ಲ ಒಂದು ವಿಸ್ತಾರ ಭಂಡಾರವೇ ಸರಿ–ಎಲ್ಲವೂ ಪ್ರ.ಶ.ಪೂ. 500ರಲ್ಲಿ ಪ್ರಚಾರಕ್ಕೆ ಬಂದ ಬೌದ್ಧಧರ್ಮಕ್ಕಿಂತ ಪ್ರಾಚೀನವೆಂಬುದು ನಿರ್ವಿವಾದ. ಆದ್ದರಿಂದ ವೇದ ಸಾಹಿತ್ಯದ ಈ ವಿಪುಲ ವಿಕಾಸವನ್ನು ಸಮರ್ಥಿಸಲು ಒಂದೆರಡು ಸಾವಿರ ವರ್ಷಗಳ ಅವಧಿಯೇನೂ ಹೆಚ್ಚಲ್ಲವೆಂದು ತಿಳಿದುಬರುತ್ತದೆ. ಋಗ್ವೇದದ ಕಾಲದ ಇತಿಮಿತಿಗಳ ಬಗೆಗೆ ಹೀಗೆ ವಿದ್ವಾಂಸರು ಮಾಡಿರುವ ಈ ಊಹೆಗಳೇ ಹೊರತು ಆ ಪ್ರಾಚೀನಯುಗದಲ್ಲಿ ನಿರ್ಣಾಯಕವೆನಿಸಬಲ್ಲ ಪ್ರಬಲತರ ಪ್ರಮಾಣಗಳು. ಇನ್ನೂ ದುರ್ಲಭವೆನಿಸಿವೆ. ಹರಪ್ಪ, ಮಹೆಂಜೊದಾರೊ ಮುಂತಾದೆಡೆಗಳಲ್ಲಿ ಮಾಡಿದ ಉತ್ಖನನಗಳು ಸಿಂಧೂ ಸಂಸ್ಕೃತಿ ವೇದಪೂರ್ವವೆಂಬ ಅಭಿಪ್ರಾಯಕ್ಕೇ ಪುಷ್ಟಿಯಿತ್ತಿವೆ. ಇಷ್ಟಾದರೂ ಭಾರತೀಯ ಸಂಪ್ರದಾಯನಿಷ್ಠರು ಈ ಊಹೆಗಳೆಲ್ಲ ನಿರಾಧಾರವೆಂದೂ ಭಾರತವೇ ಆರ್ಯಸಂಸ್ಕೃತಿಯ ಉದ್ಗಮ ಸ್ಥಾನವೆಂದೂ ಇಲ್ಲಿಂದಲೇ ಆರ್ಯರು ದೇಶಾಂತರಗಳಿಗೆ ವಲಸೆಹೋಗಿರಬಹುದೆಂದೂ ವೇದಕಾಲ ಸೃಷ್ಟಿಯಷ್ಟೇ ಪ್ರಾಚೀನವೆಂದೂ ವಾದಿಸುವುದುಂಟು.

**ಋಗ್ವೇದ ಸಂಹಿತೆಯ ಉದಯ ಮತ್ತು ವಿಕಾಸ:** ಆರ್ಯರು ಭಾರತದಲ್ಲಿ ಕಾಲಿಟ್ಟಾಗ ಅವರು ತಮ್ಮೊಡನೆ ತಂದ ಧರ್ಮದಲ್ಲಿ ಅನೇಕ ದೇವತೆಗಳಿದ್ದರು; ದೇವತೆಗಳೆಲ್ಲ ಪ್ರಾಯೋಗಿಕವಾಗಿ ಮನುಷ್ಯ ತನ್ನಂತೆ ಕಲ್ಪಿಸಿದ ನಿಸರ್ಗ ಶಕ್ತಿಗಳು. ಅವರಲ್ಲಿ ದ್ಯೌಸ್ ಎಂಬ ದೇವತೆ ತನ್ನಂತೆ ಪ್ರಾಚೀನವಾದ ಇಂಡೋ–ಯುರೋಪಿಯನ್ ಕಾಲಕ್ಕೆ ಸೇರಿದವನಾದರೆ; ಮಿತ್ರ, ವರುಣ, ಇಂದ್ರ ಮುಂತಾದ ದೇವತೆಗಳೂ ಇಂಡೋ–ಇರಾನಿಯನ್ ಕಾಲಕ್ಕೆ ಸೇರಿದವರು. ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸುವುದೂ ಸೋಮರಸಗಳನ್ನು ಬಳಸಿ ಯಜ್ಞ ಮಾಡುವುದೂ ಆರ್ಯರ ಧರ್ಮ ವಿಧಿಗಳಾಗಿದ್ದುವು. ದೇವತೆಗಳ ಸ್ತೋತ್ರಗಳನ್ನು ಛಂದೋಬದ್ಧವಾಗಿ ರಚಿಸುವ ಕಲೆಯೂ ಅವರಿಗಾಗಲೇ ಸಿದ್ಧಿಸಿತ್ತು; ಏಕೆಂದರೆ ಅವೆಸ್ತದಲ್ಲೂ ಋಗ್ವೇದಕ್ಕೆ ಸಂವಾದಿಯಾದ ಸೂಕ್ತಗಳು ಕಾಣಸಿಗುತ್ತವೆ. ಅಗ್ನಿಯಲ್ಲಿ ಆಹುತಿಗೈದ ಆಜ್ಯಾದಿ ಹವಿಸ್ಸು,

ಅರ್ಪಿಸಿದ ಸೋಮರಸ–ಇವುಗಳ ನಿವೇದನಕಾಲದಲ್ಲಿ ಅಂಗವಾಗಿ ದೇವತಾಸೂಕ್ತಗಳಿಗೆ ಸ್ಥಾನವಿತ್ತು. ಋಗ್ವೇದದಲ್ಲಿ ಉಳಿದುಬಂದಿರುವ ಅತಿ ಪ್ರಾಚೀನ ಸೂಕ್ತಗಳೆಲ್ಲ ಕೆಲವೇ ಋಷಿ ಕುಲಗಳ ರಚನೆಗಳೆನ್ನಬಹುದು. ಇವು ಪುರೋಹಿತ ಮನೆತನಗಳಲ್ಲಿ ಪರಂಪರಾ ಪ್ರಾಪ್ತವಾಗುತ್ತಿದ್ದವು. ಬೇರೆ ಬೇರೆ ಪುರೋಹಿತ ಮನೆಗಳು ತಂತಮ್ಮ ರೀತಿಯಿಂದ ಸೂಕ್ತಪಾಠದ ಪರಂಪರೆಯನ್ನು ಬಾಯಿಂದಲೇ ಬಾಯಿಗೆ ನಡೆಸಿಕೊಂಡು ಬರುತ್ತಿದ್ದ ಕಾರಣ ಎಷ್ಟೋ ಪಾಠಭೇದಗಳಿಗೂ ಶಾಖಾಂತರಗಳಿಗೂ ಅವಕಾಶವಾಯಿತು. ಬೇರೆ ಬೇರೆ ಋಷಿಕುಲಗಳ ಆಸ್ತಿಯಾಗಿದ್ದ ಸೂಕ್ತಗಳನ್ನೆಲ್ಲ ಒಂದೆಡೆ ಸಂಗ್ರಹಿಸಿದಾಗ ಋಗ್ವೇದ ಸಂಹಿತೆಯ ಮೂಲ ಸಿದ್ಧವಾಯಿತೆನ್ನಬಹುದು. ಈ ಮೂಲಕ್ಕೆ ಹಿಂದೂ ಮುಂದೂ ಮತ್ತಷ್ಟು ಸಂಗ್ರಹಗಳು ಸೇರಿಕೊಂಡ ಮೇಲೆ ನಮಗಿಂದು ಉಪಲಬ್ಧವಿರುವ ಋಗ್ವೇದ ಸಂಹಿತೆಯ ಆಕಾರ ಬಂದಿದೆ. ಈ ಸಂಹಿತೆಯ ಕಾಲ ಬ್ರಾಹ್ಮಣಗಳ ರಚನಾಕಾಲದ ಅನಂತರ ಮತ್ತು ಉಪನಿಷತ್‌ಗಳ ಕಾಲಕ್ಕೆ ಮುಂಚೆ ಎಂದು ವಿದ್ವಾಂಸರ ತರ್ಕ. ಆದ್ದರಿಂದ ಸು. ಪ್ರ.ಶ.ಪೂ.700 ಎಂದು ಮೆಕ್ಡೊನೆಲ್ ಅವರು ನಿರ್ಣಯಿಸುತ್ತಾರೆ.

ಸಂಹಿತಾಕಾರರು ಕರ್ಣಪರಂಪರೆಯಿಂದ ಬಂದ ವೇದಸೂಕ್ತಗಳನ್ನು ಅಳವಡಿಸುವಾಗ ಕೆಲವೊಂದು ಉತ್ತರಕಾಲೀನ ಸಂಧಿನಿಯಮಗಳನ್ನು ಅನುಸರಿಸಿದ್ದು ಕಾಣುತ್ತದೆ. ಉದಾಹರಣೆಗೆ ಏ ಓ ಕಾರಗಳ ಮುಂದೆ ಬರುವ ಅಕಾರಕ್ಕೆ ಲೋಪ ಬರುತ್ತದೆ. ಒಮ್ಮೊಮ್ಮೆ ಈ ಹೊಸ ಸಂಧಿಗಳ ಒತ್ತಾಯದಿಂದ ಮೂಲದ ಛಂದಸ್ಸಿನ ಓಟಕ್ಕೆ ಹಾನಿಬರುವುದೂ ಉಂಟು. ಹೀಗೆ ಒಮ್ಮೆ ಸಂಹಿತಾ ಪಾಠವನ್ನು ಗೊತ್ತುಪಡಿಸಿದ ಮೇಲೆ, ಆ ಪಾಠದ ಸಂರಕ್ಷಣೆಗಾಗಿ ಹಲವಾರು ಯೋಜನೆಗಳನ್ನು ಕೈಗೊಂಡರು. ಇಡಿಯ ಋಗ್ವೇದ ಸಂಹಿತೆಯನ್ನೆಲ್ಲ ಪದಚ್ಛೇದ ಮಾಡಿ, ಸಂಧಿಪೂರ್ವದಲ್ಲಿದ್ದ ರೂಪಗಳನ್ನು ಮಾತ್ರ ತೋರಿಸುವ ಹಾಗೂ ಸಮಾಸ, ಪ್ರತ್ಯಯಾದಿಗಳನ್ನು ವಿಂಗಡಿಸುವ ಪಾಠವೇ ಪದಪಾಠ. ಇದನ್ನು ಶಾಕಲ್ಯ ರಚಿಸಿದ. ಒಂದು ದೃಷ್ಟಿಯಿಂದ ಇದನ್ನು ಋಗ್ವೇದದ ಮೇಲಿನ ಮೊದಲ ಭಾಷ್ಯವೆನ್ನಬಹುದು. ಇದರಂತೆ ಹಿಂದಕ್ಕೂ ಮುಂದಕ್ಕೂ ನಿಯತವಾಗಿ ಪುನರಾವೃತ್ತಿ ಮಾಡುವ ಕ್ರಮ, ಜಟಾ, ಘನ ಮುಂತಾದ ಪಾಠಗಳೂ ಅಧ್ಯಯನಕ್ರಮದಲ್ಲಿ ಉಂಟು. ಇವೇ ಮುಂತಾದ ವಿವರಗಳೆಲ್ಲ ಅನುಕ್ರಮಣಿಯೆಂಬ ವೇದಾಂತ ಗ್ರಂಥಗಳಲ್ಲಿ ಬರುತ್ತವೆ. ಋಗ್ವೇದದ ಪ್ರತಿ ಸೂಕ್ತದಲ್ಲಿ ಇಂತಿಷ್ಟೇ ಋಕ್ಕುಗಳಿವೆಯೆಂಬ ನಿರ್ಣಯ ಕೂಡ ಅಲ್ಲಿಯೇ ಇದೆ. ಈ ರಕ್ಷಣೋಪಾಯಗಳ ಫಲವಾಗಿ ಋಗ್ವೇದಪಾಠ ಇಂದಿನವರೆಗೆ ಅಸ್ಖಲಿತವಾಗಿ ಮೂರು ಸಾವಿರ ವರ್ಷಗಳ ಕಾಲವಾದರೂ ಹಾಗೆಯೇ ಅಧ್ಯಯನ ಪರಂಪರೆಯಲ್ಲಿ ಉಳಿದು ಬಂದಿದೆ. ವಿಶ್ವದ ಇತಿಹಾಸದಲ್ಲಿಯೇ ಇದೊಂದು ಅದ್ಭುತವೆನ್ನಬಹುದು.

**ಭಾಷೆ:** ಋಗ್ವೇದಸೂಕ್ತಗಳ ಭಾಷೆ ಸಂಸ್ಕೃತ ಭಾಷೆಯ ಅತ್ಯಂತ ಪ್ರಾಚೀನ ರೂಪವೆನ್ನ ಬಹುದು. ಈ ಭಾಷೆಯ ಉತ್ತರಕಾಲೀನ ಸ್ವರೂಪವನ್ನೇ ಪರಿಷ್ಕೃತ ಸಂಸ್ಕೃತವೆನ್ನುತ್ತಾರೆ. ಪ್ರ.ಶ.ಪೂ. ನಾಲ್ಕನೆಯ ಶತಮಾನದ ಕಡೆಗೆ ಪಾಣಿನಿಯ ವ್ಯಾಕರಣ ಪರಿಷ್ಕರಿಸಿದ ಅನಂತರ ಬಂದ ಸ್ವರೂಪ ಅದು. ಪಾಣಿನಿಯ ಸಂಸ್ಕೃತಕ್ಕೂ ಋಗ್ವೇದದ ಸಂಸ್ಕೃತಕ್ಕೂ ಇರುವ ವ್ಯತ್ಯಾಸವನ್ನು ಪ್ರಾಕೃತ ಹಾಗೂ ಸಂಸ್ಕೃತ ಭಾಷೆಗಳ ವ್ಯತ್ಯಾಸದೊಡನೆ ಹೋಲಿಸಬಹುದು. ಮುಂದಿನ ಸಂಸ್ಕೃತದಲ್ಲಿ ಇಲ್ಲದ ಎಷ್ಟೋ ಶಬ್ದರೂಪಗಳು ವೈದಿಕಭಾಷೆಯಲ್ಲಿವೆ. ನಾಮ ಹಾಗೂ ಸರ್ವನಾಮಗಳ ವಿಭಕ್ತಿಪ್ರತ್ಯಯಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿವೆ. ಧಾತುಸಾಧಿತ ಅವ್ಯಯಗಳ ಸಂಖ್ಯೆಯೂ ಅಧಿಕತರ. ಧಾತುರೂಪಗಳಲ್ಲಂತೂ ಸಂಸ್ಕೃತಕ್ಕಿಂತ ಹೆಚ್ಚಿನ ಸಮೃದ್ಧಿಯನ್ನು ಕಾಣುತ್ತೇವೆ. ಉದಾಹರಣೆಗೆ–ಸಂಸ್ಕೃತದಲ್ಲಿ ಅದೃಶ್ಯವಾದ ಲೇಟ್ ಲಕಾರವು (ಭವಾತಿ ಇತ್ಯಾದಿ) ವೇದಭಾಷೆಯಲ್ಲಿ ಹೇರಳವಾಗಿ ಪ್ರಯುಕ್ತವಾಗಿದೆ. ಸಂಸ್ಕೃತದಲ್ಲಿರುವ ತುಮ್ ಎಂಬ ಒಂದು ಪ್ರತ್ಯಯದ ಬದಲು ವೇದದಲ್ಲಿ ಹನ್ನೆರಡು ರೀತಿಯ ಪ್ರತ್ಯಯಗಳಿವೆ. ಸಂಸ್ಕೃತಭಾಷೆಯಲ್ಲಿ ಊರ್ಜಿತವಿಲ್ಲದ ಉದಾತ್ತ, ಅನುದಾತ್ತ, ಸ್ವರಿತ, ಎಂಬ ಸ್ವರೋಚ್ಚಾರ ವೈಶಿಷ್ಟ್ಯಗಳು ವೇದಭಾಷೆಯ ವೈಚಿತ್ರ್ಯವಾಗಿವೆ. ವೇದದ ಸಂಧಿನಿಯಮಗಳು ಕೂಡ ಸಂಸ್ಕೃತಕ್ಕಿಂತ ಕೆಲವೊಮ್ಮೆ ಭಿನ್ನವಾಗಿವೆ. ಋಗ್ವೇದದಲ್ಲಿ ಏ, ಓ ಕಾರಗಳಿಗೆ ಪರವಾಗುವ ಆಕಾರ ಉಚ್ಚರಿಸಲ್ಪಡುತ್ತದೆ; ಸಂಸ್ಕೃತದಲ್ಲಿ ಲುಪ್ತವಾಗುತ್ತದೆ. ಆದ್ದರಿಂದ ಸಂಸ್ಕೃತಭಾಷೆಯ ಐತಿಹಾಸಿಕ ಅಧ್ಯಯನಕ್ಕೆ ಋಗ್ವೇದ ಭಾಷೆಯ ಅಭ್ಯಾಸ ಅಗತ್ಯವೆನ್ನಬೇಕು.

**ವಿಷಯ ಸಂಗ್ರಹ:** ಋಗ್ವೇದದಲ್ಲಿ 1,017 ಸೂಕ್ತಗಳಿವೆ; ಸಂಕ್ಷಿಪ್ತವೆನ್ನಲಾದ 11 ವಾಲಖಿಲ್ಯ ಸೂಕ್ತಗಳನ್ನೂ ಸೇರಿಸಿದರೆ 1,028. ಒಟ್ಟು ಎಲ್ಲ ಸೂಕ್ತಗಳಲ್ಲಿ ಬರುವ ಋಕ್ಕುಗಳ ಸಂಖ್ಯೆ ಸು. 10,600 ಎಂದರೆ ಒಂದು ಸೂಕ್ತಕ್ಕೆ ಸರಾಸರಿ ಹತ್ತು ಋಕ್ಕುಗಳೆನ್ನಬಹುದು. ಎಲ್ಲಕ್ಕಿಂತ ಚಿಕ್ಕ ಸೂಕ್ತದಲ್ಲಿ ಒಂದೇ ಋಕ್ಕಿದ್ದರೆ, ಎಲ್ಲಕ್ಕಿಂತ ದೊಡ್ಡ ಸೂಕ್ತದಲ್ಲಿ 58 ಋಕ್ಕುಗಳಿವೆ. ಗ್ರೀಸ್‌ದೇಶದ ಹೋಮರನ ಎರಡೂ ಮಹಾಕಾವ್ಯಗಳಷ್ಟು ಋಗ್ವೇದದ ಗಾತ್ರವೆಂದು ಲೆಕ್ಕಮಾಡಿದ್ದಾರೆ.

ಋಗ್ವೇದವನ್ನು ಎರಡು ಕ್ರಮಗಳಿಂದ ವಿಭಾಗಿಸುವುದುಂಟು. ಒಂದು ಅಷ್ಟಕ, ಅಧ್ಯಾಯ, ವರ್ಗವೆಂಬ ವಿಂಗಡಣೆ. ಇಡಿಯ ಋಗ್ವೇದದ ಅಷ್ಟಮಾಂಶ ಒಂದಷ್ಟಕ. ಪ್ರತಿ ಅಷ್ಟಕದಲ್ಲೂ ಎಂಟು ಅಧ್ಯಾಯಗಳು. ಒಂದೊಂದು ಅಧ್ಯಾಯದಲ್ಲೂ ಐದಾರು ಋಕ್ಕುಗಳು ಸೇರಿ ಆದ ವರ್ಗಗಳಿರುತ್ತವೆ. ಈ ಯಾಂತ್ರಿಕ ಕ್ರಮಕ್ಕಿಂತ ವಿದ್ವಾಂಸರು ಹೆಚ್ಚಾಗಿ ಬಳಸುವ ವಿಭಾಗಕ್ರಮವೆಂದರೆ ಮಂಡಲ ಮತ್ತು ಸೂಕ್ತವೆಂಬುದು. ಋಗ್ವೇದದಲ್ಲಿ ಒಟ್ಟು ಹತ್ತು ಮಂಡಲಗಳಿವೆ.

ಈ ಹತ್ತು ಮಂಡಲಗಳಲ್ಲಿ 2 ರಿಂದ 7 ಎಂದರೆ ಒಟ್ಟು ಆರು ಮಂಡಲಗಳು ಒಂದು ನಿಯಮಕ್ಕೆ ಅನುಗುಣವಾಗಿವೆ. ಒಂದೇ ಋಷಿಕುಲದವರ ಪರಂಪರೆಯಲ್ಲಿ ಬಂದ ಸೂಕ್ತಗಳು ಸೇರಿ ಒಂದು ಮಂಡಲವೆನಿಸಿವೆ. ಆದ್ದರಿಂದ ಇವಕ್ಕೆ ಮನೆತನದ ಮಂಡಲವೆನ್ನುವರು (ಫ್ಯಾಮಿಲಿ ಬುಕ್). ಉದಾಹರಣೆಗೆ ಮೂರನೆಯ ಮಂಡಲ ವಿಶ್ವಾಮಿತ್ರ ಋಷಿಯ ಮತ್ತು ಅವನ ವಂಶೀಯರದು. ಇವುಗಳಲ್ಲಿ ಸೂಕ್ತಗಳನ್ನು ಒಂದೇ ಅನುಕ್ರಮದಲ್ಲಿ ಜೋಡಿಸಿದೆ. ಮೊದಲು ಅಗ್ನಿಸೂಕ್ತಗಳು, ಆಮೇಲೆ ಇಂದ್ರಸೂಕ್ತಗಳು, ಬಳಿಕ ಮಿಕ್ಕ ದೇವತಾಸೂಕ್ತಗಳು–ಎಂಬುದೇ ಈ ಅನುಕ್ರಮ. ಈ ದೇವತಾ ಸೂಕ್ತಗಳಲ್ಲಿ ಕೂಡ ಋಕ್ಸಂಖ್ಯೆಯ ಇಳಿಕೆಯ ಕ್ರಮಾನುಸಾರ ಅವನ್ನು ಜೋಡಿಸಿರುವುದು ಕಾಣುತ್ತದೆ. ಎರಡನೆಯ ಮಂಡಲ ಆರಂಭವಾಗುವುದು ಹತ್ತು ಅಗ್ನಿಸೂಕ್ತಗಳಿಂದ. ಮೊದಲ ಅಗ್ನಿಸೂಕ್ತದಲ್ಲಿ 16 ಋಕ್ಕುಗಳಾದರೆ ಕಡೆಯದರಲ್ಲಿ ಆರೇ ಋಕ್ಕುಗಳು. ಅಲ್ಲದೆ ಮಂಡಲದಿಂದ ಮಂಡಲಕ್ಕೆ ಒಟ್ಟು ಸೂಕ್ತಸಂಖ್ಯೆ ಏರಿಕೆಯ ಕ್ರಮದಲ್ಲಿದೆ. 2ನೆಯ ಮಂಡಲದಲ್ಲಿ 43 ಸೂಕ್ತಗಳು, 3ರಲ್ಲಿ 62, ಆರರಲ್ಲಿ 75, ಏಳರಲ್ಲಿ 104. ಈ ಆರು ಮಂಡಲಗಳೇ ಋಗ್ವೇದ ಸಂಹಿತೆಯ ಮೂಲಕೇಂದ್ರವೆನ್ನಬಹುದು.

ಈ ಮನೆತನದ ಮಂಡಲಗಳ ಹಿಂದಕ್ಕೆ ಮೊದಲನೇ ಮಂಡಲವನ್ನೂ, ಮುಂದಕ್ಕೆ ಕಾಣ್ವವಂಶದವರ ಮಂಡಲವಾದರೂ ಅಗ್ನಿ, ಇಂದ್ರಾದಿ ಸೂಕ್ತಾನುಕ್ರಮವಿಲ್ಲದ 8ನೆಯ ಮಂಡಲವನ್ನೂ ಕೇವಲ ಸೋಮ ಅಥವಾ ಪವಮಾನ ಸೂಕ್ತಗಳನ್ನುಳ್ಳ 9ನೆಯ ಮಂಡಲವನ್ನು ಅದರ ಅನಂತರವೂ ಎಲ್ಲಕ್ಕಿಂತ ಕಡೆಗೆ ಹತ್ತನೆಯ ಮಂಡಲವನ್ನೂ ಸೇರಿಸಿ ಇಂದಿನ ಋಗ್ವೇದಸಂಹಿತೆಯ ಸ್ವರೂಪ ಬಂದಿದೆಯೆಂದು ಸಂಶೋಧಕರ ಸಿದ್ಧಾಂತ.

ಋಗ್ವೇದ ಸೂಕ್ತಗಳಿಗೆಲ್ಲ ಮುಖ್ಯವಾದ ವಿಷಯವೆಂದರೆ ದೇವತಾಸ್ತುತಿ. ಅಗ್ನಿ, ಇಂದ್ರ, ವರುಣ, ಸವಿತೃ, ರುದ್ರ, ಮಿತ್ರ, ಸೂರ್ಯ, ವಿಶ್ವೇದೇವತೆಗಳು–ಮುಂತಾದ ಪ್ರಸಿದ್ಧ ದೇವತೆಗಳಲ್ಲದೆ ದ್ಯಾವಾಪೃಥಿವೀ, ಮಿತ್ರಾವರುಣಾ, ಉಷಾಸಾನಕ್ತಾ ಮುಂತಾದ ದ್ವಂದ್ವದೇವತೆಗಳೂ ಇಲ್ಲಿ ಸ್ತುತರಾಗಿದ್ದಾರೆ. ಅದಿತಿ, ವಾಕ್, ರಾತ್ರಿ, ಅರಣ್ಯಾನೀ ಮುಂತಾದ ಸ್ತ್ರೀದೇವತೆಯರೂ ಇದ್ದಾರೆ; ಶ್ರದ್ಧಾ, ಮನ್ಯು ಮುಂತಾದ ಅಮೂರ್ತ ದೇವತೆಗಳೂ ಇದ್ದಾರೆ. ದೇವತಾಸ್ತೋತ್ರಕ್ಕೆ ಋಗ್ವೇದ ಮೀಸಲಾಗಿದ್ದರೂ ಅಲ್ಲಲ್ಲಿ ಲೌಕಿಕಜೀವನಕ್ಕೆ ಸಂಬಂಧಿಸಿದ ಸೂಕ್ತಗಳೂ ಒಂದೊಂದು ಕಾಣಬರುತ್ತವೆ. ದ್ಯೂತಕರನ ಪ್ರಲಾಪಸೂತ್ರ ಇದಕ್ಕೆ ಉತ್ತಮ ನಿದರ್ಶನ. ಅಸ್ಯವಾಮೀಯ ಮುಂತಾದ ಸಮಸ್ಯಾತ್ಮಕ ಸೂಕ್ತಗಳೂ ಉಂಟು. ದೇವತೆಗಳು ಬಂದು ಮಾತಾಡುವ ಸಂವಾದಸೂಕ್ತಗಳೂ ಉಂಟು. ಪಿತೃಕರ್ಮವನ್ನು ಕುರಿತ ಸೂಕ್ತಗಳೂ ಉಂಟು. ವಿಶ್ವದ ಸೃಷ್ಟಿಯನ್ನು ಕುರಿತ ಸೂಕ್ತಗಳೂ ಉಂಟು. ವೈಯಕ್ತಿಕ ದಾನಶೂರರನ್ನು ಹೊಗಳುವ ದಾನಸ್ತುತಿಗಳುಂಟು. ಪ್ರತಿಯೊಂದು ಮಂಡಲದಲ್ಲೂ ವಿಶಿಷ್ಟ ಯಜ್ಞಾಂಗವಾದ ಆಪ್ರೀಸೂಕ್ತವೂ ಉಂಟು.

**ಛಂದಸ್ಸು:** ಒಂದೂ ಅಪವಾದವಿಲ್ಲದೆ ಋಗ್ವೇದಸೂಕ್ತಗಳೆಲ್ಲ ಛಂದೋಬದ್ಧವಾಗಿವೆ. ಒಂದು ಸೂಕ್ತದಲ್ಲಿ ಸಾಮಾನ್ಯವಾಗಿ ನಾಲ್ಕು ಪಾದಗಳಿರುವ ಹತ್ತು ಋಕ್ಕುಗಳು ಅಥವಾ ಮಂತ್ರಗಳಿರುತ್ತವೆ. ಒಮ್ಮೊಮ್ಮೆ ಒಂದು ಋಕ್ಕಿನಲ್ಲಿ ಮೂರು ಪಾದಗಳಿರಬಹುದು; ಅಥವಾ ಐದು ಪಾದಗಳಿರಬಹುದು. ಋಕ್ಕಿನ ಒಂದು ಪಾದದಲ್ಲಿ ಎಂಟು ಇಲ್ಲವೆ ಹನ್ನೊಂದು ಇಲ್ಲವೆ ಹನ್ನೆರಡು ಅಕ್ಷರಗಳಿರುವುದು ಹೆಚ್ಚು. ಸಮಾನ ಅಕ್ಷರ ಸಂಖ್ಯೆಯ ಪಾದಗಳಿಂದಲೇ ಒಂದು ಋಕ್ಕು ಬದ್ಧವಾಗಿರುವುದು ವಾಡಿಕೆ. ಕೆಲವೊಂದು ಅಪ್ರಸಿದ್ಧ ಛಂದಸ್ಸುಗಳಲ್ಲಿ ಮಾತ್ರ ಅನಿಯತ ಅಕ್ಷರಸಂಖ್ಯೆಯ ಪಾದಗಳು ಇರಬಹುದು. ಒಟ್ಟು ಋಗ್ವೇದದಲ್ಲಿ ಬಳಕೆಯಾಗಿರುವ ಛಂದಸ್ಸುಗಳ ಸಂಖ್ಯೆ 15; ಆದರೂ ಇವುಗಳಲ್ಲಿ ಏಳು ಮಾತ್ರ ಪ್ರಚುರವೆನ್ನಬಹುದು. ಎಲ್ಲಕ್ಕಿಂತ ಹೆಚ್ಚು ಪ್ರಯುಕ್ತವಾಗಿರುವ ಛಂದಸ್ಸುಗಳೆಂದರೆ ತ್ರಿಷ್ಟುಭ್ (4×11 ಅಕ್ಷರಗಳು), ಗಾಯತ್ರೀ (3×8) ಮತ್ತು ಜಗತೀ (4×12). ಋಗ್ವೇದದ ಮೂರನೆಯ ಎರಡು ಭಾಗ ಇವುಗಳಿಂದಲೇ ಆಗಿದೆ. ಮುಂದಿನ ಸಂಸ್ಕೃತ ಛಂದಸ್ಸುಗಳಿಗೂ ವೈದಿಕ ಛಂದಸ್ಸುಗಳೇ ಮೂಲ. ಆದರೆ ವೈದಿಕ ಛಂದಸ್ಸಿನಲ್ಲಿ ಪಾದದ ಕಡೆಯ ನಾಲ್ಕೈದು ಅಕ್ಷರಗಳಿಗೆ ಮಾತ್ರ ಗುರುಲಘುನಿಯಮವಿದೆಯೇ ವಿನಾ ಮಿಕ್ಕ ಅಕ್ಷರಗಳಿಗೆ ಇಲ್ಲ. ಮೂರು ಋಕ್ಕುಗಳು ಸೇರಿದ್ದಕ್ಕೆ ತೃಚವೆನ್ನುವರು. ಸಂಮಿಶ್ರ ಛಂದೋಬಂಧಗಳಿಗೆ ಪ್ರಗಾಥವೆಂದು ಹೆಸರು.

**ಕಾವ್ಯಗುಣ:** ಸೂಕ್ತಗಳ ಪದಶಯ್ಯೆ ಲಾಲಿತ್ಯ ಹಾಗು ಸರಳ ಸೌಕುಮಾರ್ಯಗಳಿಂದ ತುಂಬಿದೆ. ಎರಡಕ್ಕಿಂತ ಹೆಚ್ಚು ಪದಗಳು ಕೂಡಿ ಆಗುವ ಸಮಾಸಗಳಿಲ್ಲ. ಈ ಕೃತಿಗಳ ಪ್ರಾಚೀನತೆಯನ್ನು ಲಕ್ಷ್ಯದಲ್ಲಿಟ್ಟಾಗ ಅಲ್ಲಿ ಕಾಣಬರುವ ಛಂದೋ ನೈಪುಣ್ಯ ಹಾಗೂ ಭಾಷಾಪ್ರಭುತ್ವ ನಮ್ಮನ್ನು ಅಚ್ಚರಿಗೊಳಿಸುತ್ತವೆ. ಆದರೆ ವಿಶೇಷತಃ ಇವು ಪುರೋಹಿತ ವರ್ಗದವರ ರಚನೆಗಳಾಗಿದ್ದು, ಆಗಲೇ ಪರಿಷ್ಕೃತವಾಗಿದ್ದ ಯಾಗವಿಧಿಗೆ ಅಂಗವಾಗಿ ಉದ್ದಿಷ್ಟವಾಗಿರುವುದರಿಂದ, ಇಲ್ಲಿಯ ಕಾವ್ಯ ನೈರ್ಮಲ್ಯಕ್ಕೆ ಚ್ಯುತಿಬರುವಷ್ಟು ಮಟ್ಟಿಗೆ ಯಜ್ಞ ವಿವರಗಳ ಉಲ್ಲೇಖ ಬಂದು ಬಿಡುತ್ತದೆ. ಮುಖ್ಯವಾಗಿ ಯಜ್ಞದ ದೇವತೆಗಳಾದ ಅಗ್ನಿ ಹಾಗೂ ಸೋಮರನ್ನು ಕುರಿತ ಸೂಕ್ತಗಳಲ್ಲಿ ಈ ಮಾತು ಒಡೆದು ಕಾಣುತ್ತದೆ. ಇಲ್ಲೆಲ್ಲ ಕಾವ್ಯಧಾರೆ ಯಜ್ಞಕಲ್ಪನೆಗಳ ಮರೆಯಲ್ಲಿ ಹಿಂಜರಿಯುತ್ತದೆ, ಧಾರ್ಮಿಕ ಭಾವನೆಯೇ ಮುಂದಾಗುತ್ತದೆ.

ಇಷ್ಟಾದರೂ ದೇವತೆಗಳೇ ಸಾಧಾರಣವಾಗಿ ನಿಸರ್ಗ ಶಕ್ತಿಗಳ ಸಾಕ್ಷಾತ್ ಸಂಪರ್ಕವುಳ್ಳವ ರಾಗಿರುವುದರಿಂದ, ದೇವತಾಸ್ತೋತ್ರಗಳು ಸಹಜವಾಗಿಯೇ ಬಹು ಮನೋಹರ ಹಾಗೂ ಭವ್ಯೋಜ್ವಲ ಚಿತ್ರಗಳಿಂದ ಸುಂದರವಾಗಿ ಕಂಗೊಳಿಸುತ್ತವೆ. ಎಲ್ಲ ಸೂಕ್ತಗಳಲ್ಲೂ ಒಂದೇ

ರೀತಿಯ ಕಾವ್ಯಗುಣವೆನ್ನುವಂತಿಲ್ಲವಾದರೂ ವಿಶಿಷ್ಟ ಸೂಕ್ತಗಳಲ್ಲಿಯ ಕಾವ್ಯಗುಣ ಮಾತ್ರ ಉಚ್ಚ ಶ್ರೇಣಿಯದಾಗಿದ್ದು ಎಂಥವರನ್ನಾದರೂ ತಲೆದೂಗಿಸುವಂತಿದೆ. ಋಗ್ವೇದದಲ್ಲೆಲ್ಲ ಕಾವ್ಯಗುಣದಲ್ಲಿ ಉತ್ಕೃಷ್ಟವಾದ ಸೂಕ್ತಗಳೆಂದರೆ ಉಷಸ್ ದೇವತೆಯ ಸೂಕ್ತಗಳೆನ್ನಬಹುದು. ವಿಶ್ವದ ಯಾವುದೇ ಸಾಹಿತ್ಯದಲ್ಲಿ ಇದಕ್ಕಿಂತ ಉನ್ನತದರ್ಜೆಯ ಭಾವಲಹರಿಗಳು ದುರ್ಲಭ ವೆಂದು ಬಲ್ಲವರು ಉದ್ಗರಿಸಿದ್ದಾರೆ. ಹಾಗೆಯೇ, ಇಂದ್ರವೃತ್ರರ ಕಾಳಗದ ವರ್ಣನೆಗೆ ಹೊರಟ ಕೆಲವು ಸೂಕ್ತಗಳು ವೀರರಸ ಪ್ರತಿಪಾದನೆಯಲ್ಲಿ ಗಣನೀಯವಾದ ಯಶಸ್ಸನ್ನು ಸಾಧಿಸಿವೆ. ಮರುದ್ದೇವತೆಗಳನ್ನು ಕುರಿತ ಸೂಕ್ತಗಳಲ್ಲಿ ಗುಡುಗು ಸಿಡಿಲುಗಳ ಆರ್ಭಟವನ್ನು ಶಬ್ದಚಿತ್ರಗಳಲ್ಲಿ ಅಮರವಾಗಿ ಸೆರೆಹಿಡಿಯುವ ಕಲೆಯಿದೆ. ಪರ್ಜನ್ಯ ಸೂಕ್ತದಲ್ಲಿ ಜಲಪ್ರಳಯದ ರಮ್ಯ ಅವಿಷ್ಕಾರವಿದೆ. ಋತುಧರ್ಮಗಳ ಪ್ರವರ್ತಕನೂ ನಿಯಾಮಕನೂ ಆದ ವರುಣದೇವನ ಸ್ತೋತ್ರಗಳಲ್ಲಿ ಉನ್ನತಮಟ್ಟದ ಕಾವ್ಯಧಾರೆ ನೀತಿವ್ಯವಸ್ಥೆಯ ಯಶೋಗಾನಕ್ಕೆ ಮೀಸಲಾಗಿದೆ. ಅದರಂತೆ ದೇವತಾಕಥೆಗಳ ಅಂಗವಾಗಿ ಬರುವ ಸಂವಾದಸೂಕ್ತಗಳು ನಾಟಕೀಯ ಸ್ವಾರಸ್ಯ ವನ್ನೂ ಭಾಷಾಚಮತ್ಕಾರವನ್ನೂ ಹೊರಸೂಸುತ್ತವೆ. ಮುಂದಿನ ನಾಟಕಗಳ ಉಗಮವನ್ನು ಇಲ್ಲಿಯೇ ವಿದ್ವಾಂಸರು ಸೂಚಿಸುತ್ತಾರೆ. ಗೋವುಗಳನ್ನು ಅಪಹರಿಸಿದ ಪಣಿಗಳಿಗೂ ಸರಮೆಗೂ ನಡೆಯುವ ಸಂವಾದ ಹಾಗು ಯಮ–ಯಮಿಯರ ಸಂವಾದಗಳನ್ನು ಉದಾಹರಣೆಯಾಗಿ ಹೇಳಬಹುದು. ಜೂಜುಗಾರನ ಪ್ರಲಾಪವಂತೂ ಕರುಣಾಜನಕವಾದ ಲೌಕಿಕಕಾವ್ಯದ ಕಕ್ಷೆಯಲ್ಲಿಯೇ ಸೇರುವಂತಿದೆ. ಮೃತ್ಯುವನ್ನು ಕುರಿತ ವಿಚಾರಗಳು ರುದ್ರಗಂಭೀರ ವಾತಾವರಣ ವನ್ನು ಹೇಗೆ ನಿರ್ಮಿಸಬಲ್ಲವೆನ್ನಲು ಪಿತೃಸೂಕ್ತವನ್ನು ಉದಾಹರಿಸಬಹುದು. ಸೃಷ್ಟಿವಿಚಾರವನ್ನು ಕುರಿತ ಸೂಕ್ತ ಗಂಭೀರ ತಾತ್ತ್ವಿಕ ಚಿಂತನೆಗಳು ಹೇಗೆ ರಮಣೀಯ ಕಾವ್ಯರೂಪದಲ್ಲಿ ಮೈದಾಳಬಹುದೆಂಬುದನ್ನು ನಿದರ್ಶಿಸುವ ಸಾಕ್ಷಿಯಾಗಿದೆ.

**ಅರ್ಥನಿರ್ಣಯ:** ಇಷ್ಟೊಂದು ಪ್ರಾಚೀನ ಕಾಲದ ರಚನೆಯಾದ ಋಗ್ವೇದಕ್ಕೆ ಅರ್ಥಮಾಡುವುದರಲ್ಲಿ ನಾವೆಷ್ಟು ಕೃತಕೃತ್ಯರಾದೇವೆಂಬ ಪ್ರಶ್ನೆಯೇಳುವುದು ಸಹಜ. ಈ ಸಮಸ್ಯೆ ಎಷ್ಟೇ ಜಟಿಲವಾಗಿ ಕಂಡರೂ ಈ ವೇದದ ಬಹಳಷ್ಟು ಅಂಶ ಇಂದು ಸಮರ್ಪಕವಾಗಿ ಅರ್ಥವಿಸಲ್ಪಟ್ಟಿದೆಯೆನ್ನಬಹುದು. ಇದಕ್ಕೆ ವಿಶ್ವದ ಅನೇಕ ವಿದ್ವಾಂಸರ ಅವಿಶ್ರಾಂತ ಸಂಶೋಧನ ಪ್ರಯತ್ನಗಳೇ ಕಾರಣ. ಇಂದು ಕೂಡ ಇನ್ನೂ ತೃಪ್ತಿಕರವಾಗಿ ಅರ್ಥ ಬಗೆಹರಿಯದ ಕೆಲವೊಂದು ಅಂಶಗಳಿರುವುದು ನಿಜವೇ. ಆದರೆ ಪ್ರಥಮ ವೇದಾರ್ಥಯತ್ನವಾದ ನಿರುಕ್ತವನ್ನು ಬರೆದ ಯಾಸ್ಕನ ಕಾಲಕ್ಕೇ (ಪ್ರ.ಶ.ಪೂ. 500) ಈ ರೀತಿಯ ಸಂಶಯ ತಪ್ಪಿರಲಿಲ್ಲ. ನಿರರ್ಥಕಾ ಹಿ ಮಂತ್ರಾಃ – ಎಂದು ವಾದಿಸಿದ ಕೌತ್ಸನ ಅಭಿಪ್ರಾಯವನ್ನು ಯಾಸ್ಕನೇ ಪೂರ್ವಪಕ್ಷವಾಗಿ ಉಲ್ಲೇಖಿಸಿದ್ದಾನೆ.

ಪ್ರ.ಶ. 19ನೆಯ ಶತಮಾನದವರೆಗೆ ಋಗ್ವೇದದ ಅರ್ಥಗ್ರಹಣಕ್ಕೆ ಪ್ರ.ಶ.14ನೆಯ ಶತಮಾನದಲ್ಲಿ ಸಾಯಣಾಚಾರ್ಯರು ಬರೆದ ವೇದಭಾಷ್ಯವೊಂದೇ ಸಮರ್ಪಕ ಆಧಾರವೆಂದು ಸಂಪ್ರದಾಯವಾದಿಗಳೂ ವಿದ್ವಾಂಸರೂ ತಿಳಿಯುತ್ತಿದ್ದರು. ಆದರೆ ಸಾಯಣರು ಎಷ್ಟೋ ವೇಳೆ ತಮ್ಮ ಕಾಲದ ಯಜ್ಞಪ್ರಕ್ರಿಯೆಯ ಅರ್ಥಗಳನ್ನು ಆ ವಿವರಗಳೇ ಅಸ್ತಿತ್ವದಲ್ಲಿಲ್ಲದ ಕಾಲದ ಮಂತ್ರಗಳಿಗೂ ಅನ್ವಯಿಸಿರುವರೆಂಬುದನ್ನು ಜರ್ಮನ್ ಸಂಶೋಧಕರು ಎತ್ತಿ ತೋರಿಸಿದ್ದಾರೆ. ಅಸುರ ಶಬ್ದಕ್ಕೆ ಸಾಯಣರು ಒಮ್ಮೆ ಅಸುರಕ್ಷಕನಾದ ದೇವ ಎಂದರೆ ಇನ್ನೊಮ್ಮೆ ಅಸುನಾಶಕನಾದ ರಾಕ್ಷಸನೆನ್ನುತ್ತಾರೆ. ಒಮ್ಮೆ ಪರ್ಜನ್ಯನೆನ್ನುತ್ತಾರೆ. ಇನ್ನೊಮ್ಮೆ ಹೋತೃವೆನ್ನುತ್ತಾರೆ. ಮತ್ತೊಮ್ಮೆ ಮಳೆ ನೀರೆನ್ನುತ್ತಾರೆ. ಹೀಗೆ ಒಂದೇ ಶಬ್ದಕ್ಕೆ ಮನಬಂದಂತೆ ನಾನಾರ್ಥಗಳನ್ನು ಬರೆಯುತ್ತ ಹೋಗುವ ಸಾಯಣರಿಗೆ ವೇದಾರ್ಥಸಂಪ್ರದಾಯದ ಖಚಿತ ಜ್ಞಾನವಿರಲಿಲ್ಲವೆಂದೇ ಅನುಮಾನಿಸುವವರಿದ್ದಾರೆ. ಮೂಲಸಂಪ್ರದಾಯ ಯಾಸ್ಕನಿಗೂ ಹಿಂದೆಯೇ ಭಾರತದಲ್ಲಿ ಲುಪ್ತವಾಗಿದ್ದಿರಬೇಕೆಂದು ಆಧುನಿಕ ವಿದ್ವಾಂಸರ ತರ್ಕ. ಅದು ಎರಡು ಸಾವಿರ ವರ್ಷಗಳ ಬಳಿಕ ಬಂದ ಸಾಯಣರಿಗೆ ಪರಿಚಿತವಾಗಿರುವುದು ಅಸಂಭವ. ಆದ್ದರಿಂದ ಆಧುನಿಕ ವಿದ್ವಾಂಸರು ಋಗ್ವೇದದಿಂದಲೇ ಋಗ್ವೇದವನ್ನು ಅರ್ಥೈಸಬೇಕೆಂಬ ಹೊಸ ದೃಷ್ಟಿಕೋನದಿಂದ ಹೊರಟು ಋಗ್ವೇದದ ಪದಸೂಚಿಗಳನ್ನೂ ಅನುಕ್ರಮಣಿಗಳನ್ನೂ ನಿರ್ಮಿಸಿದ್ದಾರೆ. ಹೊಸದಾಗಿ ತುಲನಾತ್ಮಕ ಭಾಷಾವ್ಯಾಕರಣಗಳನ್ನೂ ಬರೆದಿದ್ದಾರೆ. ತಾವೇ ಅರ್ಥವನ್ನು ಸಮೀಚೀನವೆಂದೂಹಿಸಿ ಶಬ್ದಕೋಶಗಳನ್ನು ರಚಿಸಿದ್ದಾರೆ. ತುಲನಾತ್ಮಕ ದೇವತಾಕಥೆಗಳ ಅಭ್ಯಾಸ. ತುಲನಾತ್ಮಕ ಧರ್ಮಗಳ ಅಭ್ಯಾಸ, ಮುಂತಾದವುಗಳ ನೆರವಿನಿಂದ ಎಷ್ಟೋ ಅಜ್ಞಾತ ವಿವರಗಳ ಮೇಲೆ ಹೊಸ ಸಂಶೋಧನೆಯ ಬೆಳಕು ಬೀರಿ ಕತ್ತಲೆಯನ್ನು ಕಳೆದಿದ್ದಾರೆ. ವಿದ್ವಾಂಸರ ಲೇಖನಗಳ ಪಟ್ಟಿಯೇ ಮೂರು ಸಂಪುಟಗಳನ್ನು ಮೀರುವಷ್ಟು ಇಂದು ಬೆಳೆದಿದೆ. ಇನ್ನೂ ಬೆಳೆಯುತ್ತಿದೆ. **(ಕೆ.ಕೆ.)**

**ಋಗ್ವೇದದಲ್ಲಿ ಧಾರ್ಮಿಕ ಭಾವನೆ:** ಋಗ್ವೇದೀಯ ಆರ್ಯರು ಪ್ರಕೃತಿಯ ಅದ್ಭುತಗಳ ಹಿಂದೆ ಪ್ರಚ್ಛನ್ನ ಶಕ್ತಿಯೊಂದಿದೆ ಎಂದು ಅರಿತು ಇಂಥ ಪ್ರಾಕೃತಿಕ ಶಕ್ತಿಗಳ ಅಭಿಮಾನಿ ದೇವತೆಗಳನ್ನು ಕೃತಜ್ಞತೆಯಿಂದ ಸ್ತುತಿಸೈದರು. ಕತ್ತಲನ್ನು ಹೋಗಲಾಡಿಸಿ ಬೆಳಕನ್ನು ಗೆದ್ದುಕೊಡುವ, ಮೋಡಗಳಲ್ಲಿ ಸ್ಥಗಿತವಾಗಿರುವ ಮಳೆಯನ್ನು ಬಿಡಿಸಿ ವರ್ಷಿಸುವಂತೆ ಮಾಡುವ ಶಕ್ತಿಗೆ ಇಂದ್ರನೆಂದರು. ತಮಗೆ ಅತ್ಯುಪಯುಕ್ತವಾದ ಅಂತೆಯೇ ತಾವು ಅರ್ಪಿಸಿದ ತುಪ್ಪ ಇತ್ಯಾದಿ ಆಹುತ ವಸ್ತುಗಳನ್ನು ದೇವತೆಗಳಿಗೆ ಮುಟ್ಟಿಸುವ ಶಕ್ತಿಗೆ ಅಗ್ನಿಯೆಂದೂ ಗಾಳಿಗೆ ವಾಯುವೆಂದೂ ಇದೇ ರೀತಿ ಮಿತ್ರ, ಬೃಹಸ್ಪತಿ, ಸವಿತೃ, ಪರ್ಜನ್ಯ ಮುಂತಾಗಿ ಅನೇಕ ಶಕ್ತಿಗಳನ್ನು ಭಾವಿಸಿಕೊಂಡು, ಕೆಲವು ವೇಳೆ ಅವುಗಳಿಗೆ ಮಾನವತ್ವಾರೋಪಣೆಯನ್ನೂ ಮಾಡಿ, ಅರ್ಚಿಸಿ ಸ್ತುತಿಸಿದರು. **(ನೋಡಿ–ಇಂದ್ರ)** ಹೀಗೆ ಋಗ್ವೇದವೆಲ್ಲವೂ ಇಂಥ ಅಭಿಮಾನಿ ದೇವತೆಗಳ ಸ್ತೋತ್ರ ಸಮುಚ್ಚಯ.

ಇಂಥ ದೇವತೆಗಳ ಸಮೂಹವನ್ನು ಸ್ವರ್ಗ, ಅಂತರಿಕ್ಷ ಮತ್ತು ಭೂಮಿ–ಇವುಗಳಿಗೆ ತಕ್ಕಂತೆ ಸ್ವರ್ಗೀಯ ದೇವತೆಗಳು, ಅಂತರಿಕ್ಷ ದೇವತೆಗಳು ಮತ್ತು ಭೂಮಿ ದೇವತೆಗಳೆಂದು ವಿಂಗಡಿಸಬಹುದು. ದ್ಯೌಃ, ವರುಣ, ಮಿತ್ರ, ಸೂರ್ಯ, ಸವಿತೃ, ಪೂಷನ್, ಅಶ್ವಿನಿಗಳು, ಉಷಸ್, ರಾತ್ರಿ–ಇವು ಸ್ವರ್ಗೀಯ ದೇವತೆಗಳು. ಇಂದ್ರ, ಅಪಾಂನಪಾತ್, ರುದ್ರ, ಮರುತ್ತುಗಳು, ವಾಯು, ಪರ್ಜನ್ಯ ಮತ್ತು ಅಪಃ (ಜಲಾಭಿಮಾನಿ ದೇವತೆ)– ಇವು ಅಂತರಿಕ್ಷ ದೇವತೆಗಳು. ಪೃಥಿವಿ, ಅಗ್ನಿ ಮತ್ತು ಸೋಮ ಇವು ಭೌಮದೇವತೆಗಳು. ಕೆಲವು ಸದ್ಯಭಿಮಾನಿ ದೇವತೆಗಳೂ ಈ ಕೊನೆಯ ಗುಂಪಿಗೆ ಸೇರಿರುತ್ತಾರೆ.

ಮುಖ್ಯವಾದ ದೇವತೆಗಳು ಮೂವತ್ತುಮೂರು; ಮೇಲೆ ಹೇಳಿದ ಒಂದೊಂದು ಗುಂಪಿಗೆ ಹನ್ನೊಂದು. ಮೂಲತಃ ಇವೆಲ್ಲವೂ ಪ್ರಕೃತಿಯ ನಾನಾ ಶಕ್ತಿಗಳ ಅಭಿಮಾನಿ ದೇವತೆಗಳು ಎಂದು ಮೇಲೆಯೇ ಹೇಳಿದೆ. ಆದ್ದರಿಂದ ಈ ದೇವತಾಭಾವನೆ ಕೇವಲ ಸಾಂಕೇತಿಕವಾದುದು. ಉದಾಹರಣೆಗೆ, ಅಗ್ನಿಯ ಜ್ವಾಲೆಗಳು ಅಗ್ನಿದೇವತೆಯ ನಾಲಗೆಗಳು ಅಥವಾ ಜಟೆಗಳು. ಸೂರ್ಯಕಿರಣಗಳು ಆತನ ಕರಗಳು. ದೇವತೆಗಳಲ್ಲಿ ಕೆಲವರು ಮೊದಲು ಉತ್ಪತ್ತಿಯಾದವರು. ಕೆಲವರು ಆಮೇಲೆ. ಅವರಲ್ಲಿ ಕೆಲವರು ಮಕ್ಕಳು. ಅವರೂ ಮೊದಲು "ಮರ"ರೇ. ಅನಂತರ ಸೋಮರಸವನ್ನು ಕುಡಿದು ಅಮರರಾದರು. ಅವರ ಸ್ಥಾನ ಸ್ವರ್ಗ. ತ್ರಿದಿವ ವಿಷ್ಣುವಿನ ಅತ್ಯುಚ್ಚಪದ(ಪರಮಪದ).

ಯಜ್ಞದಲ್ಲಿ ದೇವತೆಗಳಿಗೆ, ಹಾಲು, ಬೆಣ್ಣೆ ಅಥವಾ ತುಪ್ಪ, ಧಾನ್ಯಗಳು, ಮಾಂಸ ಇತ್ಯಾದಿಗಳನ್ನು ಆರ್ಯರು ಅರ್ಪಿಸುತ್ತಿದ್ದರು. ದೇವತೆಗಳು ಅಶ್ವಗಳನ್ನು ಹೂಡಿದ ರಥಾರೂಢ ರಾಗಿ ಬಂದು ಅಗ್ನಿಯ ಮೂಲಕ ಅದನ್ನು ಸ್ವೀಕರಿಸುವರೆಂಬ ನಂಬಿಕೆ ಬೆಳೆದಿತ್ತು. ಸೋಮರಸ ದೇವತೆಗಳ ಅಚ್ಚುಮೆಚ್ಚಿನ ಪಾನೀಯ. ಅದನ್ನು ಕುಡಿದು ಅವರು ತೃಪ್ತರಾಗಿ ಯಜ್ಞ ಮಾಡಿದವರಿಗೆ ಅಶ್ವಗಳು, ಗೋವುಗಳು, ವೀರರಾದ ಪುತ್ರರು, ದೀರ್ಘಾಯಸ್ಸು– ಇತ್ಯಾದಿಗಳನ್ನು ಹರಸುತ್ತಿದ್ದರು. ಅನಾರ್ಯರ ಮೇಲೆ ಆರ್ಯರು ಮಾಡುತ್ತಿದ್ದ ಯುದ್ಧದಲ್ಲಿ ದೇವತೆಗಳ, ಅದರಲ್ಲೂ ಅತಿ ಮುಖ್ಯನಾದ ಇಂದ್ರನ ಸಹಾಯ ಅಪಾರವಾದುದು.

ದೇವತೆಗಳಿಗೆ ಕೆಲವು ವಿಶಿಷ್ಟ ಗುಣಗಳಿವೆ. ಅವರ ಶಕ್ತಿ (ಕ್ರತು) ಮಹತ್ತರವಾದುದು. ಪ್ರಕೃತಿಯ ಕ್ರಿಯೆಗಳು ನಿಯಮಬದ್ಧವಾಗಿ ನಡೆಯುವಂತೆ ಮಾಡುವವರು ಅವರು. ವಿಶ್ವದ ಆಗುಹೋಗುಗಳ, ಚಲನವಲನಗಳ ಹಿನ್ನೆಲೆಯಲ್ಲಿ, ಮೂಲದಲ್ಲಿ, ಋತವೆಂಬ ಶಕ್ತಿಯಿದೆ **(ನೋಡಿ–ಋತ)**. ಆ ಋತಶಕ್ತಿಯನ್ನು ಪಾಲಿಸಿ ಪೋಷಿಸಿ ನಡೆಸಿಕೊಂಡು ಬರುವವರು ಋತ–ಗೋಪ್ತರಾದ ದೇವತೆಗಳು. ದೇವತೆಗಳಿಗೂ ಋತಕ್ಕೂ ಇರುವ ಸಂಬಂಧ ತುಂಬ ಮುಖ್ಯವಾದದ್ದು. ಋತವನ್ನು ಮೂರು ರೀತಿಯಲ್ಲಿ ಭಾವಿಸಲಾಗಿದೆ. ವಿಶ್ವದಲ್ಲಿ ಕಾಣುವ ಕ್ರಮ, ನಿಯಮವೆಂಬುದು ಋತದ ಒಂದು ಮುಖ. ಸರಿಯಾದ ನಿಯಮಬದ್ಧವಾದ ನಡೆವಳಿಕೆ ಎಂಬುದು ಋತದ ಇನ್ನೊಂದು ಮುಖ. ದೇವತೆಗಳು ಈ ಎರಡೂ ಬಗೆಯ ನಿಯಮಪಾಲಕರು. ವಿಶ್ವದ ಕ್ರಿಯೆಯೂ ಮಾನವನ ನಡೆವಳಿಕೆಯೂ ತಪ್ಪದಂತೆ ಅದನ್ನೂ ಕಾಯುತ್ತಾರೆ. ಋತ ಎಂದರೆ ಧರ್ಮ ಎಂಬುದು ಅದರ ಮೂರನೆಯ ಮುಖ. ಇದು ವೇದದ ಆಚಿನ ಕಾಲದ್ದಾದರೂ ತುಂಬ ಪ್ರಾಮುಖ್ಯ ಪಡೆಯಿತು. ದುಷ್ಟಶಕ್ತಿಗಳನ್ನು ದಮನ ಮಾಡಿ, ಸಕಲ ಚರಾಚರವಸ್ತುಗಳನ್ನೂ ತಮ್ಮ ಅಧೀನಪಡಿಸಿಕೊಂಡು ವಿಶ್ವಕಲ್ಯಾಣವನ್ನು ಆಗಮಾಡುವುದು ದೇವತೆಗಳ ವೈಶಿಷ್ಟ್ಯ. ಅನೃತ, ಪಾಪ, ಅವರ ಶಿಕ್ಷೆಗೊಳಗಾಗುತ್ತವೆ.

**ಏಕದೇವತಾ ಭಾವನೆ:** ಶಕ್ತಿ, ಜ್ಞಾನ, ಕಾಂತಿ, ದಯೆ ಮುಂತಾದ ಸುಗುಣಗಳು ಎಲ್ಲ ದೇವತೆಗಳಿಗೂ ಸಮಾನವಾಗಿರುವುದರಿಂದ ಇಬ್ಬಿಬ್ಬರು ದೇವತೆಗಳು ಒಟ್ಟಿಗೆ ಸ್ತುತರಾಗುತ್ತಾರೆ. ಮಿತ್ರಾವರುಣ, ಇಂದ್ರಾಗ್ನಿ, ದ್ಯಾವಾಪೃಥಿವೀ– ಹೀಗೆ. ಕ್ರಮೇಣ ಎಲ್ಲ ಗುಣಗಳು ಎಲ್ಲ ದೇವತೆಗಳಲ್ಲೂ ಇರುವುದರಿಂದ ಎಲ್ಲ ಒಂದೇ ಎಂದು ಭಾವಿಸುವುದೂ ಸಹಜ. ಹೀಗೆ ಅದಿತಿ, ಪ್ರಜಾಪತಿಗಳಲ್ಲಿ ಎಲ್ಲ ದೇವತೆಗಳೂ ಅಡಗಿದ್ದಾರೆ ಎಂಬುದರಿಂದ ದೇವರು ಒಬ್ಬನೇ, ನಾಮ ಹಲವು ಎಂಬ ಭಾವನೆ ಮೂಡಿಬರುತ್ತದೆ. ಋಗ್ವೇದದ ಮಂತ್ರವೊಂದು ಒಬ್ಬನೇ ಆದ ಆದಿತ್ಯನನ್ನು ಇಂದ್ರನೆಂದೂ ಮಿತ್ರನೆಂದೂ ವರುಣನೆಂದೂ ಅಗ್ನಿಯೆಂದೂ ಕರೆಯುತ್ತದೆ. ಇವನೇ ದಿವ್ಯಾತ್ಮನೂ ಶ್ರೇಷ್ಠವಾದ ಪತನವುಳ್ಳವನೂ ಆದ ಗುರುತ್ಮಂತನಾಗಿದ್ದಾನೆ. ಮೇಧಾವಿಗಳಾದ ವಿಪ್ರರು ಏಕಾತ್ಮನಾದ ಒಬ್ಬ ಪರಮಾತ್ಮನನ್ನೇ ಅಗ್ನಿಯೆಂದೂ ಯಮನೆಂದೂ ಮಾತರಿಶ್ವನೆಂದೂ ನಾನಾ ವಿಧವಾಗಿ ಕರೆಯುತ್ತಾರೆ– ಎಂದು ವೇದ ಘೋಷಿಸುತ್ತದೆ. ಹೀಗೆ ಒಬ್ಬನೇ ಪರದೇವತೆ ಎಂಬ ಭಾವದಿಂದ ಪ್ರಕೃತಿಯೇ ವಿಶ್ವವೇ ದೇವರು ಎಂಬ ಭಾವನೆ ಉತ್ಪನ್ನವಾಗಿ, ಮುಂದೆ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗುವ ಪರಬ್ರಹ್ಮತತ್ತ್ವದ ಆರಂಭ ಇಲ್ಲಿಯೇ ಕಂಡುಬರುತ್ತದೆ. ಅನೇಕ ದೇವತಾತತ್ತ್ವದಿಂದ ಏಕದೇವತ್ವಭಾವ ತಾನಾಗಿಯೇ ಬೆಳೆದು ಕೊನೆಗೆ ವಿಶ್ವದೇವತ್ವತತ್ತ್ವದಲ್ಲಿ ಅಂತರ್ಗತವಾಗುತ್ತದೆ.

**ಲೌಕಿಕ ವಿಚಾರಗಳು:** ಋಗ್ವೇದ ದೇವತಾಸ್ತುತಿ ರೂಪದ ಮಂತ್ರಗಳನ್ನು ಬಹುಮಟ್ಟಿಗೆ ಒಳಗೊಂಡಿದ್ದರೂ ಅದರಲ್ಲಿ ಆರ್ಯರ ಸಂಸ್ಕೃತಿಯನ್ನು ಪರೋಕ್ಷವಾಗಿ ಸೂಚಿಸುವ ಅನೇಕ ಸೂಕ್ತಗಳಿವೆ. ಒಂದು ಮತ್ತು ಹತ್ತನೆಯ ಮಂಡಲಗಳಲ್ಲಿ ಇಂಥ ಸೂಕ್ತಗಳು

ಹೆಚ್ಚು. ಈ ಮಂಡಲಗಳು ಆಮೇಲೆ ಋಗ್ವೇದ ಸಂಹಿತೆಗೆ ಸೇರಿಸಲ್ಪಟ್ಟುವೆಂಬುದಕ್ಕೆ ಇದೂ ಒಂದು ಕಾರಣ. ಹತ್ತನೆಯ ಮಂಡಲದ 85ನೆಯ ಸೂಕ್ತ ವೈವಾಹಿಕ ವಿಧಿಗೆ ಸಂಬಂಧಿಸಿದ್ದು. ಹದಿನಾಲ್ಕರಿಂದ ಹದಿನೆಂಟನೆಯ ಸೂಕ್ತ ಪೂರ್ತಾ ಐದು ಸೂಕ್ತಗಳು ಉತ್ತರಕ್ರಿಯೆಗೆ ಸಂಬಂಧಿಸಿದವು. ಕಡೆಯದಂತೂ ವೈದಿಕ ಆರ್ಯರ ಉತ್ತರಕ್ರಿಯೆಗೆ ಸಂಬಂಧಿಸಿದ ಕಟ್ಟುಪಾಡುಗಳ ವಿಚಾರದಲ್ಲಿ ಸಾಕಷ್ಟು ವಿಷಯಗಳನ್ನು ತಿಳಿಸುತ್ತದೆ.

ಭಾರತೀಯ ಸಂಸ್ಕೃತ ನಾಟಕದ ಹುಟ್ಟನ್ನೂ ಸಹ ಋಗ್ವೇದದಲ್ಲಿ ಗುರುತಿಸಬಹುದು. ಮರ್ತ್ಯಲೋಕದ ಪ್ರೇಮಿ ಪುರೂರವನಿಗೂ ಅಮರ್ತ್ಯ ಲೋಕದ ಸುಂದರಿ ಅಪ್ಸರೆ ಊರ್ವಶಿಗೂ ಪ್ರೇಮ ಅಂಕುರವಾಗಿ ಫಲಿಸಿತೆನ್ನುವಾಗ ಆಕೆ ಆತನನ್ನು ಕೈಬಿಡುವ ಸಂದರ್ಭವನ್ನೂ ಸೂಚಿಸುವ ಸಂವಾದ ಸೂಕ್ತವೊಂದು ಮುಂದೆ–ಸಹಸ್ರ ವರ್ಷಗಳಿಗಿಂತಲೂ ಮುಂದೆ–ಮಹಾಕವಿ ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ ವಸ್ತುಬೀಜ. ಹೀಗೆಯೇ ತಂಗಿ ಯಮಿ ಋತವನ್ನು (ಧರ್ಮ) ತಿಳಿದ ತನ್ನ ಅಣ್ಣ ಯಮನಲ್ಲಿ ಕಾಮಾತುರಳಾಗಿ, ಬೇಡಿ ತಿರಸ್ಕೃತಳಾಗುವ ಯಮ–ಯಮೀ ಸಂವಾದ ಸೂಕ್ತ ಮತ್ತೊಂದು.

ನಾಲ್ಕು ಸೂಕ್ತಗಳು ನೀತಿಬೋಧಕವಾದವು. ಇವುಗಳಲ್ಲಿ ಜೂಜುಗಾರನ ಅಳಲು ಕಾವ್ಯದೃಷ್ಟಿಯಿಂದಲೂ ಸ್ವಾರಸ್ಯವಾಗಿದೆ. ಸತ್ಕಾರ್ಯ ಮಾಡಿದರೆ ಸಿಗುವ ಸತ್ಫಲ, ಸುಸಂಸ್ಕೃತ ಪ್ರಜ್ಞಾಯುಕ್ತ ವಾಕ್ ತತ್ತ್ವದ ಮಹತ್ತ್ವ, ಮಾನವರು ಸಂಪದನ್ವೇಷಣೆ ಮಾಡುವ ವಿವಿಧ ಮಾರ್ಗಗಳು– ಮುಂತಾದವನ್ನು ಹೇಳುವ ಸೂಕ್ತಗಳು ಉಳಿದ ಮೂರು.

ಒಗಟುಗಳು, ಸಮಸ್ಯೆಗಳನ್ನೊಡ್ಡುವ ಸೂಕ್ತಗಳು ಎರಡು. ಹೆಸರು ಹೇಳದೆ ಕೃತಿಗಳನ್ನು ಇಲ್ಲವೇ ಮಹಿಮೆಯನ್ನು ವರ್ಣಿಸಿ ಹೆಸರನ್ನು ಊಹಿಸಲು ಬಿಡುವ ಸೂಕ್ತ ಒಂದು. ಸಾಂಕೇತಿಕವಾದ ಮತ್ತು ಗೂಢವಾದ ಭಾಷೆಯಲ್ಲಿ ಆದಿತ್ಯ ಕಾಲ ಮುಂತಾದ ದೇವತಾವಿಶೇಷಗಳಿಗೆ ಸಂಬಂಧಿಸಿದ ಒಗಟುಗಳನ್ನೊಳಗೊಂಡ ಐವತ್ತೆರಡು ಮಂತ್ರಗಳ ದೀರ್ಘಸೂಕ್ತ ಮತ್ತೊಂದು. ಎರಡೂ ಮನೋರಂಜಕವಾಗಿವೆ.

ವಿಶ್ವಸೃಷ್ಟಿಗೆ ಸಂಬಂಧಿಸಿದಂತೆ ಬಹು ವಿಧವಾಗಿ ಚರ್ಚೆ ನಡೆದು ವಿಧವಿಧವಾದ ಉತ್ತರಗಳು ಅನೇಕ ಸೂಕ್ತಗಳಲ್ಲಿ ಕಂಡುಬರುತ್ತವೆ. ಮೊದಲು ಈ ಎಲ್ಲ ಏನಾಗಿತ್ತು? ಮೊದಲು ಇದ್ದುದೇನು? ಎಂಬ ಪ್ರಶ್ನೆ ಆ ಪುರಾತನ ಕಾಲದಲ್ಲೇ ಹುಟ್ಟಿ, ಋಷಿ ಕವಿಗಳು ಮನೀಷೆಯಿಂದ ಹೃದಯದಲ್ಲಿ ಹುಡುಕಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ದಾನಸ್ತುತಿಗಳೆಂಬ ಕೆಲವು ಸೂಕ್ತಗಳು ಹಲವು ಋಷಿಕುಲಗಳ, ಯಜ್ಞಗಳನ್ನು ಮಾಡಿಸಿ ಉದಾರಬುದ್ಧಿಯಿಂದ ಭೂದಾನಗಳನ್ನಿತ್ತ ರಾಜರುಗಳ ಕುಲಗೋತ್ರಗಳು, ವೈದಿಕ ಆರ್ಯಕುಲ ನೆಲೆಸಿದ್ದ ಸ್ಥಳವಿಶೇಷಗಳು ಮುಂತಾದ ಚಾರಿತ್ರಿಕ ಅಂಶಗಳನ್ನೊಳಗೊಂಡಿವೆ.

ಇಷ್ಟೇ ಅಲ್ಲದೆ ಋಗ್ವೇದದ ಸೂಕ್ತಗಳಿಂದ ಆರ್ಯರು ನೆಲೆಸಿದ್ದ ಪ್ರದೇಶಗಳ ನದಿಗಳು ಸಸ್ಯ ಮತ್ತು ಪ್ರಾಣಿವರ್ಗ, ಮೂಲ ನಿವಾಸಿಗಳಿಗೂ ಅವರಿಗೂ ನಡೆಯುತ್ತಿದ್ದ ನಿರಂತರ ಯುದ್ಧಗಳು, ಆರ್ಯರ ಸಾಮಾಜಿಕ ಜೀವನ, ಸ್ತ್ರೀಯರ ಸ್ಥಿತಿಗತಿಗಳು, ಅವರ ಉಡುಗೆ ತೊಡುಗೆ, ಆಭರಣಗಳು, ಆಹಾರ ಪಾನೀಯಗಳು ಅವರ ಕಸಬುಗಳು, ದ್ಯೂತ, ನೃತ್ಯ ಸಂಗೀತ ಇತ್ಯಾದಿ ವಿನೋದಗಳು– ಮುಂತಾದ ಅನೇಕ ವಿಷಯಗಳು ಗೊತ್ತಾಗುತ್ತವೆ.

**ವೇದಭಾಷ್ಯ ಮತ್ತು ವೇದ ಸಂರಕ್ಷಣೆ:** ಇಷ್ಟು ಮಹತ್ತರವೂ ಕಾಲದ ದೃಷ್ಟಿಯಿಂದ ಅತಿ ಪುರಾತನವೂ ಆದ ವೇದವನ್ನು ಇಂದಿನವರು ಅರ್ಥ ಮಾಡಿಕೊಳ್ಳುವುದಾದರೂ ಹೇಗೆ? ವೇದದ ಮಂತ್ರಗಳು ಅನರ್ಥಕ, ಅನುಪಪನ್ನಾರ್ಥಕ, ವಿಪ್ರತಿಷಿದ್ಧಾರ್ಥಕ, ಅವಿಸ್ಪಷ್ಟಾರ್ಥಕ ಎಂಬುದಾಗಿ ತನಗಿಂತ ಹಿಂದಿನವನಾದ ಕಾಶ್ಯನೆಂಬುವನ ಅಭಿಪ್ರಾಯವೆಂದು ನಿರುಕ್ತಕಾರ ಯಾಸ್ಕ ಕ್ರಿಸ್ತಪೂರ್ವ ಐದಾರು ಶತಮಾನಗಳ ಹಿಂದೆಯೇ ಹೇಳುತ್ತಾನೆ.

ಆದ್ದರಿಂದ ವೇದಾರ್ಥವನ್ನು ಸುಸ್ಪಷ್ಟ ಮಾಡಿಕೊಳ್ಳುವ ಪ್ರಯತ್ನ ಮೊಟ್ಟಮೊದಲು ಬ್ರಾಹ್ಮಣಗಳಲ್ಲಿ ಪ್ರಾರಂಭವಾಗಿ ಆಯಾ ವೇದದ ಪ್ರಾತಿಶಾಖ್ಯಗಳು ಮೇಲೆ ಹೇಳಿದ ಯಾಸ್ಕನ ನಿಘಂಟು ಮತ್ತು ನಿರುಕ್ತ, ಕಾತ್ಯಾಯನ ಎಂಬುವನಿಂದ ರಚಿತವಾದ ಸರ್ವಾನುಕ್ರಮಣಿ ಮತ್ತು ಬೃಹದ್ದೇವತಾ ಗ್ರಂಥಗಳು, ಪ್ರಸಕ್ತಶಕದಿಂದೀಚೆಗೆ ಬಂದ ಪೂರ್ವಮೀಮಾಂಸಾ ಮತ್ತು ವೇದಾಂತದರ್ಶನಕಾರರು, ಸ್ಕಂದಸ್ವಾಮಿ, ವೆಂಕಟಮಾಧವ–ಇವರ ಭಾಷ್ಯ ಮತ್ತು ಈ ಎಲ್ಲ ಪ್ರಯತ್ನಗಳಿಗೂ ಕಿರೀಟಪ್ರಾಯವಾಗಿ ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರ ಸಂಸ್ಥಾನ ಸ್ಥಾಪನೆಯಾದ ತರುವಾಯ ಶ್ರೀವಿದ್ಯಾರಣ್ಯರ ಸಹೋದರನೂ ಅಚ್ಚ ಕನ್ನಡಿಗನೂ ಆದ ಸಾಯಣಾಚಾರ್ಯನ ವೇದಾರ್ಥ ಪ್ರಕಾಶವೆಂಬ ಜಗದ್ವಿಖ್ಯಾತ ಪ್ರಯತ್ನ–ಮೊದಲಾದವಲ್ಲಿ ಮೈತುಂಬಿಕೊಂಡು ಪರಿಪೂರ್ಣವಾಗಿದೆ. ಸಂಪ್ರದಾಯಬದ್ಧವಾದ ಈ ಪೌರಸ್ತ್ಯ ಪ್ರಯತ್ನಕ್ಕೆ ಜರ್ಮನಿಯ ಪ್ರಸಿದ್ಧ ಸಂಸ್ಕೃತಜ್ಞರಾದ ರಡಾಲ್ಫ್ ರಾಥ್, ಆಟೋ ಬೋಟ್ಲಿಂಗ್, ಆಲ್‌ಬರ್ಟ್ ವೀಬರ್, ಮ್ಯಾಕ್ಸ್‌ಮುಲರ್, ಥಿಯೊಡರ್ ಜೌಫ್ರೆಕ್ಟ್ ಅವರೂ ಮ್ಯೂಯಿರ್ ಪಿಷೆಲ್ ಗೆಲ್ಡ್‌ನರ್ ಹಾಗೂ ಮಾರಿಸ್ ಬ್ಲೂಮ್‌ಫೀಲ್ಡ್, ಗ್ರಾಸ್‌ಮನ್, ಬ್ಯೂಲರ್, ಬೆನ್ಫೆ, ಯಾಕೊಬಿ– ಮುಂತಾದವರೂ ಭಾರತೀಯರೇ ಆದ ಸ್ವಾಮಿ ದಯಾನಂದ ಮಹರ್ಷಿ, ಲೋಕಮಾನ್ಯ ಬಾಲಗಂಗಾಧರ ತಿಲಕ್, ರಾಮಕೃಷ್ಣ ಗೋಪಾಲ ಭಂಡಾರಕರ್, ಕನ್ನಡಿಗರಾದ ಎ.ವೆಂಕಟಸುಬ್ಬಯ್ಯ, ಆರ್.ಶಾಮಶಾಸ್ತ್ರಿ–ಮೊದಲಾದವರೂ ನವೀನವೂ ವೈಜ್ಞಾನಿಕವೂ ಆದ ದೃಷ್ಟಿಯಲ್ಲಿ ವೇದಾರ್ಥ ಪರಿಶೀಲನೆಗೆ ತೊಡಗಿ ಬಹಳ ಉಪಯುಕ್ತವಾದ ಸಂಶೋಧನೆಗಳನ್ನು ನಡೆಸಿದ್ದಾರೆ.

ಅನಾದಿಕಾಲದಿಂದ ಗುರುವಿನಿಂದ ಶಿಷ್ಯನಿಗೆ ಬಾಯಿಪಾಠದ ಮೂಲಕ ಶ್ರುತವಾಗಿ ಬಂದ ವೇದದಲ್ಲಿ ಇದ್ದದ್ದು ಬಿಟ್ಟುಹೋಗಿ, ಇಲ್ಲದ್ದು ಬಂದು ಸೇರಿಕೊಳ್ಳಬಹುದಾಗಿತ್ತು. ಆದರೆ ಋಗ್ವೇದ–ಬಹುಮಟ್ಟಿಗೆ ಇತರ ವೇದಗಳೂ ಕೂಡ–ಪ್ರಾಯಶಃ ಮೊದಲು ಹೇಗಿತ್ತೋ ಇಂದಿಗೂ ಹಾಗೆಯೇ ಸಾಧ್ಯವಾದುದಕ್ಕೆ ವೇದದ ಪದ, ಅಕ್ಷರ, ಮಾತ್ರೆ, ಸ್ವರ–ಇವುಗಳಾವುದರಲ್ಲೂ ಎಳ್ಳಷ್ಟು ವ್ಯತ್ಯಾಸವಾದರೂ ಕಗ್ಗತ್ತಲೆಯ ನರಕವಾಸ ಸಿದ್ಧ ಎಂಬ ನಂಬಿಕೆಯೇ ಕಾರಣ. ಮಂತ್ರವನ್ನು ಅಪಸ್ವರದಲ್ಲಿ ಹಾಡಿದರೆ ಹಾಗೆ ಹಾಡಿದವನ ಪಿತೃಗಳಿಗೆಲ್ಲರಿಗೂ ದುರ್ಗತಿ ಎಂಬ ಭಯ, ಪವಿತ್ರವೂ ಋಷಿಕುಲಪ್ರದತ್ತವೂ ಆದ ವೇದ ಐಹಿಕಾಮುಷ್ಮಿಕ ಸೌಖ್ಯವೆರಡಕ್ಕೂ ವರಪ್ರಾಯವಾದುದೆಂಬ ಸಾತ್ತ್ವಿಕ ಭಾವನೆ–ಮುಂತಾದವು ವೇದದ ಪದಗಳೂ ಸ್ವರಗಳೂ ಇಂದೂ ಶುದ್ಧವಾಗಿಯೇ ಉಳಿಯಲು ಕಾರಣ.

ಇಷ್ಟಲ್ಲದೆ ಋಗ್ವೇದದಲ್ಲಿ ಇರುವ ಮಂತ್ರಗಳ, ಪಾದಗಳ, ಪದಗಳ, ಅಕ್ಷರಗಳ, ಋಷಿಗಳ, ದೇವತೆಗಳ, ಛಂದಸ್ಸುಗಳ ಸಂಖ್ಯೆ, ಹೆಸರು ಇತ್ಯಾದಿಗಳನ್ನು ಸೂಚಿಸುವ ಅನುಕ್ರಮಣಿಗಳೆಂಬ ಅತ್ಯಮೂಲ್ಯ ಗ್ರಂಥಗಳು ಮತ್ತು ಪಠನ ಕ್ರಮದಲ್ಲಿಯ ಪದಪಾಠ, ಕ್ರಮಪಾಠ, ಜಟಾಪಾಠ ಮತ್ತು ಘನಪಾಠ ವಿಧಾನಗಳು ವೇದರಕ್ಷಣೆಗಾಗಿ ನಿರ್ಮಾಣವಾದವು. (ಸಿ.ಜಿ.ಪಿ.)

**ಸಾಮಾಜಿಕ ಅಂಶಗಳು:** ವೇದದಲ್ಲಿ ಹೇರಳವಾಗಿ ಕಾಣುವುದು ಮತ ಮತ್ತು ರಾಜಕೀಯಕ್ಕೆ ಸಂಬಂಧಪಟ್ಟ ವಿಷಯಗಳು. ಆದರೂ ಅಂದಿನ ಸಾಮಾಜಿಕ ಸ್ಥಿತಿಗತಿಗಳನ್ನು ರೀತಿನೀತಿಗಳನ್ನು ಕುಟುಂಬ ಜೀವನದ ವಿವರಗಳನ್ನು ತಿಳಿಯಲು ಸಾಕಷ್ಟು ಆಧಾರಗಳು ಅಲ್ಲಿ ದೊರೆಯುತ್ತವೆ. ಮತೀಯ ಭಾವನೆಗಳು ಆರ್ಯರ ಬೆನ್ನಲ್ಲಿ ಬಂದುವಾದ್ದರಿಂದ ಅವು ಪ್ರಮುಖವಾಗಿರುವುದು ಸಹಜವೇ. ವೇದದ ಕಾಲದ ಆರ್ಯರು ಸಿಂಧೂ ಮತ್ತು ಗಂಗಾನದಿಗಳ ಬಯಲಿನಲ್ಲಿ ಸುರಕ್ಷಿತವಾಗಿ ನೆಲೆಸುತ್ತಿದ್ದ ಕಾಲವಾದ್ದರಿಂದ ರಾಜಕೀಯಕ್ಕೂ ಯುದ್ಧಕ್ಕೂ ಪ್ರಮುಖತೆ ದೊರೆತಿರುವುದು ಸಹಜವೇ. ಆ ಕಾರ್ಯದಲ್ಲಿ ಯುದ್ಧದ ದೇವತೆಯಾದ ಇಂದ್ರನಿಗೆ ಪ್ರಾಶಸ್ತ್ಯ ಬಂದಿರುವುದೂ ಸಹಜವೇ. ಆದರೆ ಎಲ್ಲರೂ ಯುದ್ಧದೇವತೆಗಳಲ್ಲ. ಅನೇಕ ದೇವತೆಗಳು ಜನರ ಧರ್ಮ, ಕುಶಲವಿದ್ಯೆಗಳು, ಗೃಹಜೀವನ, ಕಲೆಗಳು, ವಿನೋದಗಳು ಇತ್ಯಾದಿಗಳಿಗೆ ಹೆಚ್ಚು ಸಂಬಂಧಪಟ್ಟವರು. ಈ ವಿಷಯಗಳಿಗೆ ಮೀಸಲಾದ ಮಂತ್ರಗಳಿಲ್ಲವಾದ್ದರಿಂದ ಈ ದೇವತೆಗಳನ್ನು ಕುರಿತ ಸೂಕ್ತಗಳಿಂದ ಈ ವಿಚಾರಗಳನ್ನು ಕುರಿತು ಬರುವ ಒಂದೊಂದು ಮಾತಿನಿಂದ ಆ ಕಾಲದ ಜೀವನದ ಅಂಶಗಳನ್ನು ಊಹಿಸಬೇಕಾಗಿದೆ.

ವೇದದ ಕಾಲದಲ್ಲಿ ಕುಟುಂಬ ಜೀವನಕ್ಕೆ ತುಂಬ ಮನ್ನಣೆ ಇತ್ತು. ಅಗ್ನಿಯನ್ನು ಪೂಜಿಸುವುದು ಪ್ರತಿಯೊಂದು ಕುಟುಂಬದ ಆದ್ಯ ಕರ್ತವ್ಯವಾಗಿತ್ತು. ಇದಲ್ಲದೆ ಪಕ್ಷಗಳಲ್ಲಿ, ಮಾಸಗಳಲ್ಲಿ, ವರ್ಷದ ಆರಂಭದಲ್ಲಿ ಮಾಡುವ ಕರ್ಮಗಳೂ ಉಂಟು. ಅತಿಥಿ ಸತ್ಕಾರ ಒಂದು ಮುಖ್ಯ ಕರ್ಮ. ಅತಿಥಿ ಮನೆಗೆ ಬಂದಾಗ ಅವನಿಗೆ ಅರ್ಘ್ಯವನ್ನು ಕೊಡಬೇಕು. ಅತಿಥಿಯ ಕಾಲು ತೊಳೆದು ಕೈಗೆ ಅರ್ಘ್ಯವನ್ನರ್ಪಿಸಿದ ತರುವಾಯ ಅವನಿಗೆ ಹಾಲು, ಮೊಸರು, ಹಣ್ಣು, ಜೇನುತುಪ್ಪ ಮತ್ತು ತುಪ್ಪ ಬೆರೆಸಿದ ಮಧುಪರ್ಕವನ್ನು ಅರ್ಪಿಸಬೇಕು. ಅನಂತರ ಅವನಿಗಾಗಿ ಒಂದು ಹಸುವಿನ ಕರುವನ್ನು ಕೊಂದು ಅದರಿಂದ ಮಾಡಿದ ಭಕ್ಷ್ಯವನ್ನು ಬಡಿಸುತ್ತಿದ್ದರು. ಅತಿಥಿ ಕರುವನ್ನು ಕೊಲ್ಲುವುದು ಬೇಡವೆಂದರೆ ಬೇರೆಯ ಮಾಂಸದಿಂದ ಮಾಡಿದ ಭಕ್ಷ್ಯಗಳನ್ನು ಬಡಿಸುತ್ತಿದ್ದರು.

ಕುಟುಂಬದವರು ಆಚರಿಸುವ ಕರ್ಮಗಳಲ್ಲಿ ಮನೆ ಕಟ್ಟುವ ಮೊದಲಲ್ಲಿ ಮತ್ತು ಗೃಹಪ್ರವೇಶದ ಕಾಲದಲ್ಲಿ ಮಾಡುವ ಕರ್ಮಗಳು ಬಹುಮುಖ್ಯವಾದುವು. ಮನೆಕಟ್ಟುವ ಸ್ಥಳದ ಸುತ್ತಿನಲ್ಲಿ ಅಶ್ವತ್ಥ, ಬೇವು ಮುಂತಾದ ಗಿಡಗಳಿರಕೂಡದು. ಮನೆಯ ಸುತ್ತ ನೀರು ಹರಿಸಲು ಅನುಕೂಲವಿರಬೇಕು. ಪಾಯವನ್ನು ತೆಗೆಯುವಾಗ ಭೂ ದೇವತೆಗೆ ಪೂಜೆ ಸಲ್ಲಿಸಬೇಕು. ಗೋಡೆಗಳನ್ನು ಕಟ್ಟುವ ಮುಂಚೆ ಒಂದು ಕಲ್ಲಿಗೆ ಅಭಿಷೇಕ ಮಾಡಿ, ಅದನ್ನು ಪಾಯದಲ್ಲಿ ಹುದುಗಿಸಬೇಕು. ಮನೆಯ ಭಾಗಗಳನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಬೇಕು. ಅಡುಗೆಯ ಮನೆಯಿಂದ, ನೀರುಮನೆಯಿಂದ ನೀರು ಹೊರಕ್ಕೆ ಹೋಗಲು ಅನುಕೂಲವಿರಬೇಕು. ನಡುಮನೆ ಉತ್ತರ ದಿಕ್ಕಿಗಿರಬೇಕು. ತಲೆ ಬಾಗಿಲು ಪಶ್ಚಿಮಕ್ಕಿರಬೇಕು. ಅಗ್ನಿಹೋತ್ರ ಮುಂತಾದ ಕರ್ಮಗಳನ್ನು ಮಾಡಲು, ಊಟ ಮಾಡಲು ಒಂದು ಮರೆಯಾದ ಕೋಣೆ ಇರಬೇಕು.

ಮನೆಯನ್ನು ಕಟ್ಟಿ ಮುಗಿಸಿದ ಮೇಲೆ ದೇವತೆಯಾದ ವಾಸ್ತೋಷ್ಪತಿಗೂ ಹತ್ತು ದಿಕ್ಕುಗಳಿಗೂ ಬಲಿ ಅರ್ಪಿಸಬೇಕು. ಗೃಹಪ್ರವೇಶ ಮಾಡಿದ ಮೇಲೆ ಪ್ರತಿವರ್ಷವೂ ಆ ದೇವತೆಗೆ ಬಲಿ ಕೊಡುವುದುಂಟು. ಗೃಹ ಪ್ರವೇಶದ ಕಾಲದಲ್ಲಿ ಸಂತರ್ಪಣೆ ನಡೆಸುವುದು ಅತ್ಯಗತ್ಯ. ಮನೆ ಕಟ್ಟಿದಾಗ ನಡೆಸಿದಂತೆಯೇ ಒಂದು ತೋಪನ್ನು ನಿರ್ಮಿಸಿದಾಗಲೂ ಬಾವಿ, ಕೊಳ, ಕಟ್ಟೆ ಕೆರೆಗಳನ್ನು ಕಟ್ಟಿದಾಗಲೂ ವರುಣ ದೇವತೆಗೆ ಬಲಿಯನ್ನು ಅರ್ಪಿಸಬೇಕು.

ಉಳುಮೆಯ ಕಾಲದಲ್ಲೂ ಬಿತ್ತನೆಯ ಕಾಲದಲ್ಲೂ ಫಸಲನ್ನು ಒಕ್ಕಣೆ ಮಾಡುವ ಕಾಲದಲ್ಲೂ ಬಲಿ ಅರ್ಪಿಸುತ್ತಿದ್ದುದು ಸಾಮಾನ್ಯ. ಇಲಿಗಳ ದೇವತೆಗಳಿಗೂ ತಪ್ಪದೆ ಬಲಿ ಅರ್ಪಿಸುತ್ತಿದ್ದರು. ದನಗಳಿಗೆ ರಕ್ಷಣೆ ದೊರೆಯಲೆಂದು ಅವುಗಳ ಸಂತಾನ ವರ್ಧಿಸಲೆಂದು ವರ್ಷವರ್ಷವೂ ದೇವತೆಗಳಿಗೆ ಬಲಿ ಅರ್ಪಿಸುತ್ತಿದ್ದರು. ಕಾರ್ತೀಕ ಮಾಸದಲ್ಲಿ ಊರಿಗೊಂದು ಗೂಳಿಯನ್ನು ಬಿಡುವ ಸಂಪ್ರದಾಯವಿತ್ತು. ಪ್ರಸಿದ್ಧರಾದ ಗುರುಗಳಿಗೆ ಮತ್ತು ಹಿರಿಯರಿಗಾಗಿ ಏರ್ಪಡಿಸಿದ್ದ ಸ್ಮಾರಕ ಪ್ರದೇಶಗಳಲ್ಲಿ ವರ್ಷವರ್ಷವೂ ಬಲಿಯನ್ನರ್ಪಿಸುವುದು ರೂಢಿಯಲ್ಲಿತ್ತು.

ಗೃಹಸ್ಥರು ನಡೆಸಬೇಕಾದ ಕರ್ಮಗಳಲ್ಲಿ ಜಾತಕರ್ಮ, ನಾಮಕರಣ, ಚೌಲ, ಉಪನಯನ, ವಿವಾಹ ಮತ್ತು ಅಂತ್ಯಕ್ರಿಯೆಗಳು ಮುಖ್ಯವಾದುವು. ನಾಮಕರಣದ ಕಾಲದಲ್ಲಿ ಪ್ರತಿಯೊಂದು ಮಗುವಿಗೂ ಎರಡು ಹೆಸರುಗಳನ್ನು ಕೊಡುತ್ತಿದ್ದರು. ಒಂದು ಹೆಸರು ತಂದೆ ತಾಯಿಗೆ ಮಾತ್ರ ತಿಳಿದ ಹೆಸರು. ಇದನ್ನು ಬಹುಗೋಪ್ಯವಾಗಿ ಕಾದಿಟ್ಟುಕೊಂಡಿರುತ್ತಿದ್ದರು. ಇದೇ ಮಗುವಿನ ನಿಜವಾದ ಹೆಸರು. ಈ ಹೆಸರಿನಲ್ಲಿ ಮಾಟ ಮುಂತಾದವುಗಳನ್ನು ಮಾಡಿದಾಗಲೇ ಆ ಮಗುವಿಗೆ ಅಪಾಯ ಉಂಟಾಗುತ್ತಿತ್ತಾದ ಕಾರಣ ಅವರು ಅದನ್ನು ಬಹಿರಂಗಪಡಿಸುತ್ತಿರಲಿಲ್ಲ. ಎರಡನೆಯ ಹೆಸರು ವ್ಯಾವಹಾರಿಕವಾದದ್ದು.

ಚೌಲವನ್ನು ಬ್ರಾಹ್ಮಣರು ಮಗುವಿನ ಮೂರನೆಯ ವರ್ಷದಲ್ಲೂ ಕ್ಷತ್ರಿಯರು ಐದನೆಯ ವಯಸ್ಸಿನಲ್ಲೂ ವೈಶ್ಯರು ಏಳನೆಯ ವಯಸ್ಸಿನಲ್ಲೂ ನಡೆಸುತ್ತಿದ್ದರು. ಅವರವರ ಮನೆತನದ ಸಂಪ್ರದಾಯಕ್ಕನುಗುಣವಾಗಿ ಕೂದಲನ್ನು ಬಿಡಿಸುತ್ತಿದ್ದರು. ತಮ್ಮ ಪ್ರವರದಲ್ಲಿ ಎಷ್ಟು ಋಷಿಗಳನ್ನು ಸೇರಿಸಿಕೊಂಡಿದ್ದಾರೋ ಆ ಸಂಖ್ಯೆಗೆ ಅನುಗುಣವಾಗಿ ಕೂದಲನ್ನು ಬಿಡಿಸಿ ಗಂಟು ಹಾಕುತ್ತಿದ್ದರು. ಬ್ರಾಹ್ಮಣರು ಬಾಲಕನ ಎಂಟನೆಯ ವಯಸ್ಸಿನಲ್ಲೂ ಕ್ಷತ್ರಿಯರು ಹನ್ನೊಂದನೆಯ ವಯಸ್ಸಿನಲ್ಲೂ ವೈಶ್ಯರು ಹನ್ನೆರಡನೆಯ ವಯಸ್ಸಿನಲ್ಲೂ ಉಪನಯನವನ್ನು ನಡೆಸುತ್ತಿದ್ದರು. ಬ್ರಾಹ್ಮಣರು ಹದಿನಾರು ವರ್ಷಗಳೊಳಗೆ, ಕ್ಷತ್ರಿಯರು ಇಪ್ಪತ್ತೈದು ವರ್ಷಗಳೊಳಗೆ, ವೈಶ್ಯರು ಇಪ್ಪತ್ತನಾಲ್ಕನೆಯ ವರ್ಷಗಳೊಳಗೆ ಉಪನಯನ ಮಾಡಬೇಕು. ಹಾಗೆ ಉಪನಯನವಾಗದವ ಕರ್ಮಭ್ರಷ್ಟನಾಗಿ ಕುಲದಲ್ಲಿನ ತನ್ನ ದರ್ಜೆಯನ್ನು ಕಳೆದುಕೊಳ್ಳುತ್ತಿದ್ದ. ಉಪನಯನ ಪ್ರತಿಯೊಬ್ಬನ ಹೊಸ ಹುಟ್ಟಿಗೆ ದಾರಿ. ಒಬ್ಬೊಬ್ಬನೂ ವಿದ್ಯೆಯ ಮೂಲಕ ರೂಪಿಸಿಕೊಂಡ ಆತ್ಮನೇ ಅವನ ನಿಜವಾದ ಆತ್ಮ. ವಿದ್ಯಾಭ್ಯಾಸ ಮುಗಿಸಿದ ಮೇಲೆ ಸ್ನಾತಕನಾಗಿ ಹೊಸ ರೀತಿಯ ಉಡುಪನ್ನು ತೊಡುತ್ತಿದ್ದ. ದೇಹವನ್ನು ಅಲಂಕರಿಸಿಕೊಳ್ಳುತ್ತಿದ್ದ. ದೇಹಕಾಂತಿ ಕೆಡದಂತೆ ಅದನ್ನು ಮಳೆಬಿಸಿಲುಗಳಿಂದ ರಕ್ಷಿಸಿಕೊಳ್ಳುತ್ತಿದ್ದ. ಕಾಲಿಗೆ ಅಪಾಯವಾಗದಂತೆ ಪಾದರಕ್ಷೆಯನ್ನು ಮೆಟ್ಟುತ್ತಿದ್ದ.

ಇಂಥವ ಗೃಹಸ್ಥನಾಗಲು ತನ್ನ ಗುರುಹಿರಿಯರ ಮಾತಾಪಿತೃಗಳ ಒಪ್ಪಿಗೆ ಪಡೆದು ಅವರ ನೆರವಿನಿಂದ ಕನ್ಯೆಯನ್ನು ಪಡೆಯಬಹುದಾಗಿತ್ತು. ಕ್ಷತ್ರಿಯನಿಗೆ ಗಂಧರ್ವ ಅಥವಾ ಸ್ವಯಂವರ ರೀತಿಯ ವಿವಾಹ ಶ್ರೇಷ್ಠ. ವೈಶ್ಯ ತನ್ನ ಐಶ್ವರ್ಯದಿಂದ ಕನ್ಯೆಯನ್ನು ಪಡೆಯ ಬಹುದು. ಇದು ಎಲ್ಲಕ್ಕಿಂತಲೂ ಕೆಳದರ್ಜೆಯ ವಿವಾಹ ಕ್ರಮ. ಬ್ರಾಹ್ಮಣ ತನ್ನ ವರ್ಣದ ಕನ್ಯೆಯನ್ನಲ್ಲದೆ ಕ್ಷತ್ರಿಯ, ವೈಶ್ಯ ಅಥವಾ ಶೂದ್ರಕನ್ಯೆಯೊಬ್ಬಳನ್ನು ಮದುವೆಯಾಗಲೂ ಅವಕಾಶವಿತ್ತು. ಕ್ಷತ್ರಿಯ ತನ್ನ ವರ್ಣದವಳ ಜೊತೆಗೆ, ವೈಶ್ಯ ಅಥವಾ ಶೂದ್ರ ವರ್ಣದ ಕನ್ಯೆಯನ್ನು ಪಡೆಯಬಹುದಾಗಿತ್ತು. ವೈಶ್ಯ ತನ್ನ ವರ್ಣದ ಕನ್ಯೆಯನ್ನಲ್ಲದೆ ಶೂದ್ರ ಕನ್ಯೆಯೊಬ್ಬಳನ್ನು ಪಡೆಯಬಹುದಾಗಿತ್ತು.

ವಿವಾಹ ಹೆಣ್ಣಿನ ಮನೆಯಲ್ಲಿ ನಡೆಯುವ ಸಂಪ್ರದಾಯವಿತ್ತು. ಈ ಸಂದರ್ಭದಲ್ಲಿ ಹೆಣ್ಣಿನ ಮನೆಯ ನಾಲ್ಕು ಅಥವಾ ಎಂಟು ಸುಮಂಗಲಿಯರು ಹೆಣ್ಣು ಗಂಡುಗಳ ಸುತ್ತ ನರ್ತನ ಮಾಡುತ್ತಿದ್ದುದು ಗಮನಾರ್ಹ ವಿಷಯ. ಅವರಿಗೆ ವರನ ಕಡೆಯವರು ಉಡುಗೊರೆ ಅಥವಾ ಸುವರ್ಣವನ್ನು ಕೊಡುತ್ತಿದ್ದರು. ಮದುವೆಯಾದ ಅನಂತರ ಹೆಣ್ಣನ್ನು ಗಂಡನ ಮನೆಗೆ ಕರೆದುಕೊಂಡು ಬಂದು ಮದುವೆಯಾದ ನಾಲ್ಕನೆಯ ದಿನ ನಿಷೇಕವನ್ನು ಏರ್ಪಡಿಸುತ್ತಿದ್ದರು.

ಮದುವೆಯಾದ ಹೆಣ್ಣು ತನ್ನ ಮಾವನ ಮತ್ತು ಗಂಡನ ಮನೆಯನ್ನು ಸೇರಿದಾಗ ಆ ಮನೆಯ ಯಜಮಾನಿಯಾಗುತ್ತಿದ್ದಳು; ಮಾವನಿಗೂ ನಾದಿನಿಗೂ ಮೈದುನನಿಗೂ ಒಡತಿಯಾಗುತ್ತಿದ್ದಳು. ಮುದಿತನದವರೆಗೂ ಗಂಡನೊಡನೆ ಬಾಳಬೇಕೆಂಬುದು ಅವಳ ಮಹದಾಶಯ. ಹತ್ತು ಗಂಡುಮಕ್ಕಳನ್ನು ಪಡೆದ ಮೇಲೆ ಅವಳು ತನ್ನ ಗಂಡನನ್ನು ಹನ್ನೊಂದನೆಯ ಮಗುವಿನಂತೆ ಪಾಲಿಸಿ ಪೋಷಿಸುವಂತಾಗಲೆಂದು ಇಂದ್ರನನ್ನು ಪ್ರಾರ್ಥಿಸುವ ಒಂದು ಮಂತ್ರವಿದೆ. ಒಟ್ಟಿನಲ್ಲಿ ಋಗ್ವೇದ ಕಾಲದ ಕುಟುಂಬ ಜೀವನ ಆಶಾಪೂರ್ಣವಾದದ್ದು. ಒಂದು ರೀತಿಯಲ್ಲಿ ಅದು ತುಂಬುಜೀವನ; ಹಾಡು, ನೃತ್ಯದಿಂದ ತುಂಬಿದ ಜೀವನ. ಮದುವೆಯ ಕಾಲದಲ್ಲಿ ನೃತ್ಯ ಅದರ ಒಂದು ಮುಖ್ಯ ಅಂಗವಾಗಿತ್ತೆಂಬುದನ್ನು ಗಮನಿಸಿದ್ದೇವೆ. ಈ ಕಲೆಗಳು ಕುಟುಂಬದ ಹೆಣ್ಣುಮಕ್ಕಳ ದಿನಚರಿಯ ವಿನೋದಗಳಾಗಿದ್ದವು. ಕವನಗಳನ್ನು ಕಟ್ಟುವುದು, ಹಾಡುಗಳನ್ನು ಹಾಡುವುದು ತನ್ನ ಮನೆಯ ಒಂದು ಕಸುಬೆಂದು ಋಗ್ವೇದದ ಒಂದು ಸೂಕ್ತದಲ್ಲಿ ಒಬ್ಬ ಹೇಳಿಕೊಂಡಿದ್ದಾನೆ. ನೃತ್ಯ ಕೇವಲ ಹೆಣ್ಣುಮಕ್ಕಳ ವಿನೋದ ಮಾತ್ರವಾಗಿರಲಿಲ್ಲ. ಗಂಡಸರೂ ಕೋಲಿನ ನೃತ್ಯದಲ್ಲಿ ಭಾಗವಹಿಸುತ್ತಿದ್ದರು. ನಾಟ್ಯಮಾಡುವ ಗಂಡಸನ್ನು ವಿನೃತಹಿನೆಂದೂ ಹೆಣ್ಣನ್ನೂ ವಿನೃತುಹಿವೆಂದೂ ಕರೆಯುತ್ತಿದ್ದರು. ಹೆಂಗಸರು ಜರಿಯ ಸೀರೆಯನ್ನುಟ್ಟು ಕಂಚುಕವನ್ನು ಧರಿಸದೆ ನರ್ತಿಸುತ್ತಿದ್ದರು. ಹಾಸ್ಯರೂಪವಾದ ನೃತ್ಯವೂ ರೂಢಿಯಲ್ಲಿತ್ತು.

ಋಗ್ವೇದ ಪದ್ಯಗಳು ಬಹುತೇಕ ದೇವತೆಗಳ ಸ್ತೋತ್ರಕ್ಕೆ ಮೀಸಲಾಗಿದ್ದರೂ ಕೆಲವು ಸ್ತೋತ್ರಗಳು ಕೇವಲ ವಿವರಣೆಗಳಾಗಿರದೆ, ಭಾವಪ್ರದವಾಗಿಯೂ ವರ್ಣಯುಕ್ತವಾಗಿಯೂ ಇವೆ. ಉಷಸ್ಸನ್ನು ವರ್ಣಿಸುವ ಸ್ತೋತ್ರಗಳು ಕಾವ್ಯದಂತೆ ರಮ್ಯವಾಗಿವೆ. ಜೂಜುಗಾರನ ಅಳಲು ಎಂಬ ಒಂದು ಮಂತ್ರ ಇಂದಿನ ಭಾವಗೀತೆಯನ್ನು ಹೋಲುತ್ತದೆ. ಇವುಗಳ ಛಂದಸ್ಸಿನಲ್ಲಿ ಇರುವ ಕಾವ್ಯಬಲ ಅದ್ಭುತವಾದದ್ದು. ಕೇವಲ ಶಬ್ದದಿಂದಲೇ ಅತಿಶಯ ಭಾವಪ್ರಕಾಶನ ಮಾಡುವ ಶಕ್ತಿ ಬಹುಶಃ ಅನೇಕ ಕಾವ್ಯಗಳಲ್ಲಿ ಕೂಡ ಇರುವುದಿಲ್ಲ. ಇವುಗಳಲ್ಲದೆ ಲೋಕಾನುಭವಗರ್ಭಿತವಾದ ಪದ್ಯಗಳೂ ಹಾಡುಗಳೂ ವೇದದ ಕಾಲದಲ್ಲಿ ಯಥೇಚ್ಛವಾಗಿ ಇವೆ. ವಿವಾಹ ಕಾಲದಲ್ಲಿ ಹೆಂಗಸರು ಹಾಡುಗಳನ್ನು ಹೇಳುತ್ತಿದ್ದರು. ಅಶ್ವಮೇಧದ ಕಾಲದಲ್ಲಿ ಪುರೋಹಿತರು ನಾಲ್ಕು ದಿವಸಗಳ ಕಾಲ ಕೆಲವು ವೇಳೆ ಒಂದು ವರ್ಷದ ಪರ್ಯಂತ ಹಿಂದಿನ ರಾಜರ ಕಥೆಗಳನ್ನು ಹೇಳುತ್ತಿದ್ದರು. ಇವಕ್ಕೆ ಪರಿಪಾಲ್ಯ ಅಖ್ಯಾಯನಗಳೆಂದು ಹೆಸರು. ರಾಜವಂಶದವನೊಬ್ಬ ತಾನೇ ಕಟ್ಟಿದ ಮೂರು ಗಾಥೆಗಳನ್ನು ತಂತಿ ವಾದ್ಯದ ಶ್ರುತಿಗೆ ಸೇರಿದಂತೆ ಹಾಡುತ್ತಿದ್ದ. ಅಂಥ ಸಾಹಿತ್ಯ ಜನರ ಬಾಯಿಯಲ್ಲಿ ಮಾತ್ರ ಜೀವಂತವಾಗಿದ್ದ ಸಾಹಿತ್ಯ. ಅವುಗಳ ಆಯಸ್ಸು ಒಂದೆರಡು ತಲೆಮಾರುಗಳಿಗೆ ನಿಗದಿಯಾದದ್ದು. ಬರವಣಿಗೆ ಮತ್ತು ಅಚ್ಚಿನ ಸೌಕರ್ಯವಿರುವ ಈಗಿನ ಕಾಲದಲ್ಲೂ ಜನ ಕಟ್ಟಿದ ಕಥೆಗಳಲ್ಲಿ ಹಾಡುಗಳಲ್ಲಿ ಮತ್ತು ಕವನಗಳಲ್ಲಿ ಉಳಿಯುವವು ಬಹು ಸ್ವಲ್ಪ.

ಋಗ್ವೇದದಲ್ಲಿ ಕೆಲವು ಸಂಭಾಷಣಾ ರೂಪದ ಸೂಕ್ತಗಳಿವೆ. ಅವುಗಳಲ್ಲಿ ಪ್ರಸಿದ್ಧವಾದುದು ಊರ್ವಶಿ-ಪುರೂರವಸರದು. ಇದೇ ನಾಟಕಪ್ರಕಾರದ ಮೂಲವಾಗಿ ತೋರುತ್ತದೆ. ಯಜುರ್ವೇದದ ಕಾಲಕ್ಕಾಗಲೆ ನಾಟಕ, ನಾಟ್ಯಗಳನ್ನು ವೃತ್ತಿಯಾಗುಳ್ಳ ನಟರ ವರ್ಗವೊಂದು ಸೃಷ್ಟಿಯಾಗಿತ್ತು.

ಋಗ್ವೇದದಲ್ಲಿ ಹೆಸರಿಸಿರುವ ಮೂವತ್ತು ಕಲೆಗಳಲ್ಲಿ ಹಾಡು, ಕವಿತೆ, ನೃತ್ಯ, ಗೀತ, ವೇಣುವಾದನ, ಶಂಖನಾದ, ಕೊಂಬನ್ನು ಊದುವುದು, ನಗಾರಿ ಬಾರಿಸುವುದು, ಕೋಲಾಟ, ವಾಸ್ತುಶಿಲ್ಪ- ಇವು ಮುಖ್ಯವಾದುವು. ಇವುಗಳಲ್ಲದೆ ರತ್ನ ಮತ್ತು ಚಿನ್ನದ ಒಡವೆಗಳನ್ನು ಮಾಡುವುದು, ಜರತಾರಿ ಬಟ್ಟೆಗಳನ್ನು ನೇಯುವುದು, ಕಸೂತಿ ಕೆಲಸ, ಹೂ ಕಟ್ಟುವುದು, ಕಾಡಿಗೆ ಮಾಡುವುದು, ರಥಗಳ ನಿರ್ಮಾಣ, ಹಗ್ಗ ಹೊಸೆಯುವುದು, ಚರ್ಮವನ್ನು ಹದ ಮಾಡಿ ಹೊಲೆಯುವುದು, ಕಮ್ಮಾರನ ಮತ್ತು ಕುಂಬಾರನ ಕಲೆ, ಬಿಲ್ಲನ್ನು ತಯಾರಿಸುವುದು, ಕುದುರೆಯನ್ನು ಪಳಗಿಸುವುದು ಮುಂತಾದ ಉಪಯುಕ್ತ ಕಲೆಗಳು ವಿಶೇಷವಾಗಿ ಪ್ರಚಾರದಲ್ಲಿದ್ದವು. ಸಂಗೀತಕ್ಕಾಗಿ ಉಪಯೋಗಿಸುತ್ತಿದ್ದ ವಾದ್ಯಗಳು ಮೂರು-ಮೃದಂಗ, ಕೊಳಲು ಕರ್ಕರಿ ಎಂಬ ತಂತಿ ವಾದ್ಯ. ಆಗಿನ ಕಾಲದವರೆಗೆ ಏಳು ಸ್ವರಗಳೂ ಮತ್ತು ಅವುಗಳ ಆರೋಹಣ ಅವರೋಹಣ ವಿಧಾನವೂ ತಿಳಿದಿತ್ತೆಂದು ಹೇಳಬಹುದು.

**ರಾಜ, ರಾಜ್ಯವ್ಯವಸ್ಥೆ:** ವೇದಕಾಲದಲ್ಲಿ ರಾಜಕೀಯ ಪರಿಸ್ಥಿತಿ ಹೇಗಿತ್ತು ಎಂಬುದನ್ನು ನಿರ್ದಿಷ್ಟವಾಗಿ ತಿಳಿಯುವುದು ಕಷ್ಟ ಏಕೆಂದರೆ ಇದನ್ನು ಉಲ್ಲೇಖಿಸಬೇಕೆಂಬುದು ವೇದಕರ್ತೃಗಳ ಉದ್ದೇಶವಾಗಿರಲಿಲ್ಲ. ಆದ್ದರಿಂದ ಅಲ್ಲಲ್ಲಿ ಪ್ರಾಸಂಗಿಕವಾಗಿ ಬರುವ ಕೆಲವು ಸೂಚನೆಗಳಿಂದ ಈ ವಿಷಯಗಳನ್ನು ತಿಳಿಯಬಹುದಾಗಿದೆ. ಜನ, ವಿಶಃ, ಗ್ರಾಮ- ಈ ಮೂರು ಅಂದಿನ ರಾಜ್ಯದ ಮುಖ್ಯ ವಿಭಾಗಗಳಾಗಿದ್ದುವು. ಜನ ಎಂದರೆ ಇಡೀ ರಾಜ್ಯದ ಪ್ರಜೆಗಳು. ಬೇರೆ ಬೇರೆ ಸಜಾತರ ಗುಂಪಿಗೆ ವಿಶಃ ಎಂಬ ಹೆಸರಿದ್ದಿರಬಹುದು. ವಿಶರು ಎಂದರೆ ಯೋಧಪತಿಗಳು, ವಿಶಃಪತಿ ಎಂದರೆ ಸೈನ್ಯಾಧಿಪತಿ ಎಂದು ಅರ್ಥೈಸುವವರೂ ಇದ್ದಾರೆ. ವಿಶರ ಗುಂಪಿಗಿಂತ ಸಣ್ಣದು ಗ್ರಾಮ, ಹಲವು ಸಂಸಾರಗಳಿಂದ ಕೂಡಿದ್ದು. ಇವರೆಲ್ಲರೂ ಸಜಾತರೋ ಅಲ್ಲವೋ ಎಂಬುದು ಖಚಿತವಾಗಿ ತಿಳಿಯದು. ಗ್ರಾಮಣಿಗಳು ಎಂದರೆ ಗ್ರಾಮನಾಯಕರ ಸಜಾತರು. ಸಮಾನದ ಒಪ್ಪಿಗೆಯಿಂದ ಆಯ್ದು ಬಂದವರು ಎಂದು ಕೆಲವು ಕಡೆ ಹೇಳಿದೆ. ಸಂಸಾರದ ಮುಖ್ಯಸ್ಥನೇ ಕುಲಪ. ಜನರನ್ನು ಉಲ್ಲೇಖಿಸುವಾಗ ಅನು, ಪುರು, ದ್ರುಹ್ಯು, ಯದು, ತುರ್ವಶ, ಭರತರು, ಮದ್ರರು, ಯಾದವರು- ಮುಂತಾದ ಪುರಾಣ ಪ್ರಸಿದ್ಧರ ಹೆಸರುಗಳು ಬರುತ್ತವೆ.

ಸಾಮಾನ್ಯವಾಗಿ ಒಂದೊಂದು ಜನಕ್ಕೂ ಒಬ್ಬೊಬ್ಬ ರಾಜನಿದ್ದ. ಅಲ್ಲಲ್ಲಿ ಅನೇಕ ರಾಜಮನೆತನಗಳನ್ನು ಹೆಸರಿಸಲಾಗಿದೆ. ರಾಜರಲ್ಲಿ ಮೊದಲನೆಯವ ಮನು. ಅನಂತರ ಇಕ್ಷ್ವಾಕು, ಪುರೂರವ, ಇಲಾ, ಪುರು-ಹೀಗೆ ಮನುವಂಶಪರಂಪರೆ ಬೆಳೆದಿದೆ. ರಾಜತ್ವ ಹೇಗೆ ಹುಟ್ಟಿತು ಎಂಬ ಪ್ರಶ್ನೆಗಳಿಗೆ ಸೂಕ್ತಗಳಲ್ಲಿ ಸ್ಪಷ್ಟ ಉತ್ತರ ದೊರೆಯುತ್ತದೆ. ದೇವತೆಗಳು ನಾಯಕನಿಲ್ಲದೆ ತಮಗೆ ಮತ್ತೆ ಮತ್ತೆ ಸೋಲಾಗುತ್ತಿದೆಯೆಂದು ತಿಳಿದಮೇಲೆ ಇಂದ್ರನನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡು ವಿಜಯಿಗಳಾದರು. ಆರ್ಯರು ಮನುವನ್ನು ತಮ್ಮ ರಾಜನನ್ನಾಗಿ ಪಡೆದಾಗ ಅವರಿಗೆ ಯುದ್ಧದಲ್ಲಿ ಜಯ ಲಭಿಸಿತು. ಹೀಗೆ ಯುದ್ಧದ ಫಲವಾಗಿ ರಾಜತ್ವ ಹುಟ್ಟಿತೆಂದು ತೋರುತ್ತದೆ. ರಾಜತ್ವ ವಂಶಪಾರಂಪರ್ಯವೇ ಎಂಬ ವಿಷಯದಲ್ಲಿ ಎರಡು ಅಭಿಪ್ರಾಯಗಳಿವೆ. ಅವನು ಜನರಿಂದ ಆಯ್ಕೆಯಾಗಿ ರಾಜನಾಗುತ್ತಿದ್ದನೆಂದೂ ವಂಶಪಾರಂಪರ್ಯವಾಗಿ ಅವನಿಗೆ ಪಟ್ಟ ಲಭಿಸುತ್ತಿತ್ತೆಂದೂ ಹೇಳಲಾಗಿದೆ. ಋಗ್ವೇದ ಕಾಲದಲ್ಲಿ ರಾಜನ ಆಯ್ಕೆ ಬಳಕೆಯಲ್ಲಿತ್ತೆಂದು ಕಾಣುತ್ತದೆ. ರಾಜನಾದ ಮೇಲೆ ಆತ ತನ್ನ ಕೆಲಸವನ್ನು ನೆರವೇರಿಸಲು ಸಭೆ ಮತ್ತು ಸಮಿತಿಗಳ ನೆರವನ್ನು ಪಡೆಯುತ್ತಿದ್ದಂತೆ ಕೆಲವು ಸೂಕ್ತಗಳಲ್ಲಿ ಸೂಚನೆಯಿದೆ. ಇಲ್ಲಿ ಸಭೆಯೆಂದರೆ ಹಳ್ಳಿಯ ಜನರ ಸಭೆಯೆಂದು ಜ಼ಿಮ್ಮರ್ ಎಂಬ ಪಂಡಿತ ಅಭಿಪ್ರಾಯಪಡುತ್ತಾನಾದರೂ ಲಡ್ವಿಗ್ ಎಂಬ ಇನ್ನೊಬ್ಬ ಪಂಡಿತ ಅದು ಶ್ರೀಮಂತರ ಸಭೆ ಎಂದು ಹೇಳಿರುವ ಅಭಿಪ್ರಾಯ ಗ್ರಾಹ್ಯವಾಗಿದೆ. ಅದು ಋಗ್ವೇದ ಕಾಲದಲ್ಲಿ ಗೌರವಸ್ಥರ, ಪ್ರಮುಖರ ಸಭೆಯಾಗಿದ್ದಿರಬೇಕು. ಬಹುಶಃ ರಾಜ್ಯಾಭಿಷೇಕ ಕಾಲದಲ್ಲಿ, ದೇಶಕ್ಕೆ ವಿಪತ್ತು ಉಂಟಾದ ಕಾಲದಲ್ಲಿ ಇಡೀ ಜನರ ಯೋಗಕ್ಷೇಮವನ್ನು ಕುರಿತು ಮಂತ್ರಾಲೋಚನೆ ನಡೆಸಬೇಕಾದ ಸಮಯದಲ್ಲಿ ಸಮಿತಿ ಸೇರುತ್ತಿತ್ತೆಂದು ತೋರುತ್ತದೆ. ಯುದ್ಧಕಾಲದಲ್ಲಂತೂ

ಇದು ಅತಿ ಮುಖ್ಯವಾಗುತ್ತಿತ್ತು. ರಾಜನ ಪ್ರಾಬಲ್ಯ ಹೆಚ್ಚಿದಂತೆಲ್ಲ ಸಮಿತಿಯ ಪ್ರಾಮುಖ್ಯ ಕಡಿಮೆಯಾಗಿರಬೇಕು. ಮೊದಮೊದಲು ದಸ್ಯುಗಳೊಡನೆ ಹೋರಾಟ ತೀವ್ರವಾಗಿದ್ದ ಕಾಲದಲ್ಲಿ ಆರ್ಯರಲ್ಲಿ ಅಂತಃಕಲಹವಿರಲಿಲ್ಲವೆಂದು ತೋರುತ್ತದೆ. ಶತ್ರುದಮನ ಪೂರ್ಣವಾಗಿ, ಶಾಂತಿ ಏರ್ಪಟ್ಟಾಗ ಮುಖಂಡತ್ವದ ವಿಚಾರದಲ್ಲಿ ಒಳಜಗಳಗಳು ಪ್ರಾರಂಭವಾಗಿರಬೇಕು. ಆಗ ರಾಜನನ್ನು ಆಯ್ಕೆ ಮಾಡುವ ವಿಧಾನವನ್ನು ಕೈಬಿಟ್ಟು ವಂಶಪಾರಂಪರ್ಯವಾಗಿ ಅದನ್ನು ನಡೆಸಿಕೊಂಡು ಬರುವ ಕ್ರಮ ಏರ್ಪಟ್ಟಿರಬೇಕು. ಹಾಗಾದಾಗ ರಾಜನ ಮಹಿಮೆಗೆ ಮತ್ತು ಅಧಿಕಾರಕ್ಕೆ ಜನರ ಬೆಂಬಲಕ್ಕಿಂತಲೂ ದೇವತೆಗಳ ಆಶೀರ್ವಾದ ಮುಖ್ಯವಾಗುತ್ತ ಬಂದಿರಬೇಕು. ಆಗ ಪುರೋಹಿತ ವರ್ಗ ಪ್ರಾಮುಖ್ಯವನ್ನು ಪಡೆಯಿತೆಂದು ಕಾಣುತ್ತದೆ. ಪುರೋಹಿತ ರಾಜರಲ್ಲಿ ಅಗ್ನಿ, ಸೋಮ, ವನಸ್ಪತಿ, ಬೃಹಸ್ಪತಿ, ರುದ್ರ, ವರುಣ, ಮಿತ್ರಾವರುಣ ಮುಂತಾದ ದೇವತೆಗಳ ಶಕ್ತಿಗಳನ್ನೆಲ್ಲ ಅವಾಹನೆ ಮಾಡುತ್ತಾನೆ. ಆಗ ರಾಜ ಇಂದ್ರ ಸಮಾನನಾಗುತ್ತಾನೆ. ಮುಂದೆ ಪುರೋಹಿತನ ಬೆಂಬಲದಿಂದಲೂ ಯಜ್ಞಯಾಗಾದಿಗಳಿಂದಲೂ ಪೂತನಾಗಿ ದೇವತೆಯೇ ಆಗುತ್ತಾನೆ. ಸಾಮ್ರಾಜ್ಯದಾಹ ಮತ್ತು ನಿರಂಕುಶ ಪ್ರಭುತ್ವದ ಪ್ರತಿಷ್ಠೆಗಳು ಅವನಲ್ಲಿ ಹುಟ್ಟಿಕೊಳ್ಳುತ್ತವೆ. ಹಾಗಾದರೂ ಬ್ರಾಹ್ಮಣರು ರಾಜನ ಅಧೀನರಾಗದೆ ಸೋಮದೇವತೆಯನ್ನು ತಮ್ಮ ಪ್ರಭುವನ್ನಾಗಿ ಮಾಡಿಕೊಳ್ಳುತ್ತಾರೆ. ಈ ಪರಿಸ್ಥಿತಿ ಬಹುಕಾಲ ಮುಂದುವರಿಯಿತೆಂದು ಕಾಣುತ್ತದೆ. ಹೀಗೆ ವೇದಗಳಲ್ಲಿ ಅಲ್ಲಲ್ಲಿ ಬರುವ ಸೂಚನೆಗಳಿಂದ ಅಂದಿನ ರಾಜಕೀಯ ಜೀವನ ಹೇಗಿತ್ತೆಂಬುದನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದು.

(ಜಿ.ಎಚ್.)

**ಋಣ:** ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಇನ್ನೊಬ್ಬ ವ್ಯಕ್ತಿ ಅಥವಾ ಇನ್ನೊಂದು ಸಂಸ್ಥೆಗೆ ಕೊಡಬೇಕಾದ ನಿಷ್ಕೃಷ್ಟ ಹಣದ ಮೊತ್ತ (ಡೆಟ್). ಇದನ್ನು ಪಾವತಿ ಮಾಡಬೇಕಾದವನು ಋಣಿ; ಪಡೆಯ ಬೇಕಾದವನು ಧನಿ. ಬರಬೇಕಾದ ಬಾಕಿಯೆಂದು ಹೇಳಲಾದ ಹಣವನ್ನು ಖಚಿತವಾಗಿ ಗೊತ್ತುಪಡಿಸದಿದ್ದರೆ ವಾಸ್ತವವಾಗಿ ಅದು ಋಣವಲ್ಲ; ಹಾನಿಪೂರ್ತಿಗಾಗಿ ಮಾಡಿದ ಕೇಳಿಕೆ. ಹಾನಿಪೂರ್ತಿಗಾಗಿ ದಾವೆ ಹಾಕುವ ಹಕ್ಕು ಕೂಡ ಋಣವಲ್ಲ. ಆದರೆ ಯಾವೊಂದು ನ್ಯಾಯಾಲಯದ ಡಿಕ್ರಿ ಅಥವಾ ಆಜ್ಞೆಯನ್ವಯ ಸಂದಾಯವಾಗಬೇಕಾದ ಹಣ ನಿರ್ಣೀತ ಋಣ. ಪಾಲಿಗಾಗಿ ಹಾಕಿದ ದಾವೆಯನ್ನು ಋಣಗಳಿಗಾಗಿ ಹಾಕಿದ ದಾವೆಯೆಂದು ಪರಿಗಣಿಸುವುದಿಲ್ಲ. ಋಣಗಳು ಎರಡು ಬಗೆ: ಕೂಡಲೇ ಸಂದಾಯವಾಗಬೇಕಾದವು ಒಂದು ಬಗೆ. ಸದ್ಯದಲ್ಲಿ ಅಸ್ತಿತ್ವದಲ್ಲಿದ್ದರೂ ಮುಂದೆ ಸಂಭವಿಸುವ ನಿಶ್ಚಿತವಾದ ಘಟನೆ ಅಥವಾ ದಿನದವರೆಗೆ ಒತ್ತಾಯಪಡಿಸಲು ಸಾಧ್ಯವಿಲ್ಲದಂಥದು ಭವಿಷ್ಯತ್ ಋಣ. ಇದು ಆಗಂತುಕ ಅಥವಾ ಅವಲಂಬಕ (ಕಂಟಿಂಜೆಂಟ್) ಋಣಕ್ಕಿಂತ ಭಿನ್ನವಾದದ್ದು. ಯಾವುದಾದರೂ ಷರತ್ತನ್ನು ಪೂರೈಸುವವರೆಗೂ ಅಥವಾ ನಿಶ್ಚಿತವಲ್ಲದ ಘಟನೆ ಸಂಭವಿಸುವವರೆಗೂ ಅಥವಾ ನಿಶ್ಚಿತವಲ್ಲದ ಘಟನೆ ಸಂಭವಿಸುವವರೆಗೂ ಅಸ್ತಿತ್ವಕ್ಕೇ ಬಾರದ ಋಣವೇ ಆಗಂತುಕ ಅಥವಾ ಅವಲಂಬಕ ಋಣ. ವೈಯಕ್ತಿಕವಾಗಿ ಹಣ ಪಾವತಿ ಮಾಡಬೇಕಾದ ಋಣಿಯ ಮೇಲೆ ಕ್ರಮಕೈಗೊಳ್ಳುವ ಹಕ್ಕನ್ನು ಧನಿ ಹೊಂದಿರುವುದರ ಜೊತೆಗೆ ಋಣದ ವಸೂಲಿಗಾಗಿ ಬೇರೆ ಯಾವುದಾದರೂ ಹಕ್ಕನ್ನು ಅಥವಾ ಸಾಧನವನ್ನು ಋಣಿಯಾದವನ್ನು ಹೊಂದಿದ್ದರೆ ಅದು ಈಡು ಅಥವಾ ಆಧಾರ ಎನಿಸಿಕೊಳ್ಳುತ್ತದೆ. ಈ ಈಡು ಧನಿಗೆ ವಹಿಸಿಕೊಟ್ಟ ಅಥವಾ ಧನಿಯೇ ಪಡೆದುಕೊಂಡ ವ್ಯಕ್ತಿಗತ (ಪರ್ಸನಲ್) ಅಥವಾ ವಸ್ತುಗತ (ರಿಯಲ್) ಸ್ವತ್ತಿನ ಹಕ್ಕಿನ ರೂಪದಲ್ಲಿರಬಹುದು; ಇಲ್ಲವೇ ಋಣಪಾವತಿಯ ಭರವಸೆ (ಜಾಮೀನು) ನೀಡಿರುವ ಮೂರನೆಯ ವ್ಯಕ್ತಿಯೊಬ್ಬನ ವಿರುದ್ಧ ಹಕ್ಕಾಗಿರಬಹುದು.

(ಎಲ್.ಎಸ್.ಜೆ.)

ಋಣದ ವ್ಯಾಖ್ಯೆ ಮತ್ತು ಅದರ ವ್ಯಾಪ್ತಿಯನ್ನು ಕುರಿತು ವಿವೇಚಿಸುವಾಗ ಯಾವೊಂದು ಕಾಯಿದೆಯನ್ವಯ ಋಣಗಳ ಹಕ್ಕು ಬಾಧ್ಯತೆಗಳು ಉದ್ಭವಿಸುತ್ತವೋ ತತ್‌ಸಂಬಂಧದಲ್ಲಿ ಅಂಥ ಕಾಯಿದೆಯಲ್ಲಿ, ಆ ಶಬ್ದಕ್ಕೆ ಕೊಟ್ಟ ನೇರ ಅಥವಾ ಪರ್ಯಾಯ ಸ್ಪಷ್ಟೀಕರಣವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಸಂದರ್ಭದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ಋಣದ ಬಗ್ಗೆ ಮಾಡಿರುವ ಕಾಯಿದೆಗಳನ್ನು ಪರಾಮರ್ಶಿಸಬೇಕಾಗುತ್ತದೆ. ಹಿಂದೂ ಮತ್ತು ಇಸ್ಲಾಮೀ ನ್ಯಾಯಸೂತ್ರಗಳು, ಸ್ಥಿರ ಸ್ವತ್ತಿನ ಪರಭಾರೆ ಅಥವಾ ಹಸ್ತಾಂತರವನ್ನು ಕುರಿತ ಕಾಯಿದೆ. ಕರಾರುಗಳಿಗೆ ಅನ್ವಯವಾಗುವ ಕಾಯಿದೆ, ಹಣದ ಲೇವಾದೇವಿ ವ್ಯವಹಾರಕ್ಕೆ ಸಂಬಂಧಿಸಿದ ಕಾಯಿದೆ. ಒತ್ತೇದಾರರ ಬಗೆಗಿನ ಕಾಯಿದೆ, ಋಣಗಳ ಸಂಧಾನದ ಕಾಯಿದೆ, ಋಣಗಳ ಅಂಗೀಕಾರಕ್ಕೆ ಸಂಬಂಧಿಸಿದ ನಿಯಮಗಳು, ವಾರಸುದಾರರಿಲ್ಲದ ಸ್ವತ್ತುಗಳಿಗೆ ಅನ್ವಯವಾಗುವ ಕಾಯಿದೆ, ವಿಪರೀತ ಬಡ್ಡಿಗಳನ್ನು ಕುರಿತ ಕಾಯಿದೆ, ಕೃಷಿಕ ಋಣ ವಿಮೋಚನಾ ಸಹಾಯಕ ಕಾಯಿದೆಗಳು, ಸ್ಥಳಾಂತರಿತ ವ್ಯಕ್ತಿಗಳ ಋಣಗಳ ಹೊಂದಾಣಿಕೆಗಳ ಸಂಬಂಧದ ಕಾಯಿದೆಗಳು, ದಿವಾಳಿತನಕ್ಕೆ ಸಂಬಂಧಿಸಿದ ಕಾಯಿದೆಗಳು, ಅವಧಿ ನಿರ್ಣಯ ಕಾಯಿದೆ ವ್ಯವಹಾರ ಪ್ರಕ್ರಿಯಾ ಸಂಹಿತೆ– ಮುಂತಾದವು ಋಣಗಳ ಸ್ವರೂಪವನ್ನು ಅವುಗಳ ವಸೂಲಿಯನ್ನು ನಿಯಂತ್ರಣಗೊಳಿಸುತ್ತವೆ.

**ಭಾರತದಲ್ಲಿ:** ಭಾರತ ದೇಶಕ್ಕೆ ಋಣ ಮತ್ತು ಋಣವಸೂಲಿಗಳನ್ನು ಕುರಿತ ನ್ಯಾಯಿಕ ಕಲ್ಪನೆಗಳು ಹೊಸವೇನೂ ಅಲ್ಲ. ಅತ್ಯಂತ ಪ್ರಾಚೀನ ಕಾಲದಿಂದಲೂ ಋಣ ಮಾಡುವ ಮತ್ತು ಅದನ್ನು ತೀರಿಸುವ ಅಭ್ಯಾಸ ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವುದಲ್ಲದೆ, ಇದನ್ನು ಹಿಂದೂ ನ್ಯಾಯ ಪದ್ಧತಿಯಲ್ಲಿ ಅಂಗೀಕರಿಸಲಾಗಿದೆ. ಮನುಸ್ಮೃತಿಯ ಕಾಲಕ್ಕೂ ಮುಂಚಿತವಾಗಿಯೇ ಋಣ ವಸೂಲಿಯ ಪ್ರಕ್ರಿಯಾ ನಿಯಮಗಳು ಕೂಡ ಆಚರಣೆಯಲ್ಲಿದ್ದವು. ಋಣವನ್ನು ಸಂದಾಯ ಮಾಡದಿರುವುದು ಕೇವಲ ಒಂದು ವ್ಯಾವಹಾರಿಕ ಒಪ್ಪಂದದ ಉಲ್ಲಂಘನೆಯಷ್ಟೇ ಅಲ್ಲ. ಅದೊಂದು ಪಾಪವೆಂದೂ ಋಣಿಯಾದವನು ಋಣ ಸಂದಾಯ ಮಾಡದಿದ್ದರೆ ಸಾಲ ಕೊಟ್ಟವನ ಮನೆಯಲ್ಲಿ ಗುಲಾಮನಾಗಿಯೋ ಸೇವಕನಾಗಿಯೋ ಅಥವಾ ಇನ್ನಾವುದೋ ರೂಪದಲ್ಲಿ ಋಣ ತೀರಿಸಬೇಕಾಗುತ್ತದೆಯೆಂದೂ ಬೃಹಸ್ಪತಿ ಹೇಳಿದ್ದಾನೆ. ಮನು, ಗೌತಮ, ಬೋಧಾಯನ, ಆಪಸ್ತಂಬ, ಬೃಹಸ್ಪತಿ, ವಸಿಷ್ಠ, ವಿಷ್ಣು, ನಾರದ ಮತ್ತು ಅನೇಕ ಹಿಂದೂ ಧರ್ಮಶಾಸ್ತ್ರಕಾರರು ಋಣ ಮತ್ತು ಋಣವಸೂಲಿಗಳ ಬಗ್ಗೆ ವಿವರವಾಗಿ ಹೇಳಿದ್ದಾರೆ. ಈ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಉಲ್ಲೇಖವಿದೆ. ಬಂಗಾಳ ಮತ್ತು ಅದರ ನಿಕಟ ಪ್ರದೇಶದಲ್ಲಿ ದಾಯಭಾಗ ನ್ಯಾಯಸೂತ್ರಗಳು ಮತ್ತು ಭಾರತದ ಇತರ ಪ್ರದೇಶಗಳಲ್ಲಿ ಮಿತಾಕ್ಷರ ನ್ಯಾಯಸೂತ್ರಗಳು ಆಚರಣೆಯಲ್ಲಿವೆ. ಈ ಎರಡೂ ರೀತಿಯ ನ್ಯಾಯಸೂತ್ರಗಳು ಬೇರೆ ಬೇರೆಯಾಗಿವೆ. ದಾಯಭಾಗ ನ್ಯಾಯಸೂತ್ರಗಳ ಮೇರೆಗೆ ದಾಯಾದಿ ಅಥವಾ ವಾರಸುದಾರ ಮೃತನ ಸ್ವತ್ತಿನಲ್ಲಿ ಅವಿಭಕ್ತ ಕುಟುಂಬದ ಸ್ವತ್ತಿನಲ್ಲಿ ಹಿತಾಸಕ್ತಿ ಹೊಂದುವುದರಿಂದ ಮೃತನ ಋಣಗಳನ್ನು ಅವು ಅವ್ಯಾವಹಾರಿಕವೇ ವ್ಯಾವಹಾರಿಕವೇ ಎಂಬ ಪ್ರಶ್ನೆ ಎತ್ತದೆ ತೀರಿಸಬೇಕು. ಆತನ ಋಣಗಳಿಗೆ, ಮಕ್ಕಳೂ ಮೊಮ್ಮಕ್ಕಳೂ ವೈಯಕ್ತಿಕವಾಗಿ ಜವಾಬುದಾರರಲ್ಲ.

ಅವಿಭಕ್ತ ಕುಟುಂಬದ ದಾಯಾದ್ಯಕ್ಕೆ ಸೇರಿದ ಆಸ್ತಿ, ಅಂಥ ಕುಟುಂಬದ ಋಣಗಳು ಅಥವಾ ಅವುಗಳ ವಸೂಲಿಗಳ ನಿಯಮಗಳು ಮಿತಾಕ್ಷರ ನ್ಯಾಯ ಸೂತ್ರಗಳ ವೈಶಿಷ್ಟ್ಯವಾಗಿವೆ. ತಂದೆ ಇಲ್ಲವೆ ಅವಿಭಕ್ತ ಕುಟುಂಬದ ಯಜಮಾನ ಅಥವಾ ಅಂಥ ಕುಟುಂಬದ ಕಾರ್ಯನಿರ್ವಹಣೆಯನ್ನು ಹೊತ್ತಿರುವ ಯಾವೊಬ್ಬ ದಾಯಾದಿ ಋಣಗಳಿಗೆ ಕಾರಣನಿರಬಹುದು. ಇತರ ದಾಯಾದಿಗಳೂ ಋಣಗಳಿಗೆ ಕಾರಣರಿರಬಹುದು. ಪೋಷಕ ತನ್ನ ಸಂರಕ್ಷಣೆಯಲ್ಲಿರುವ ಅಪ್ರಾಪ್ತ ವಯಸ್ಕನ ಆವಶ್ಯಕತೆ ಅಥವಾ ಅವನ ಆಸ್ತಿಯ ರಕ್ಷಣೆ ಮತ್ತು ಅಭಿವೃದ್ಧಿಗಳಿಗಾಗಿ ಋಣ ಮಾಡಬಹುದು.

ಮೃತ ತಂದೆ ಮಾಡಿದ ಋಣಗಳಿಗೆ ಮಕ್ಕಳು ಎಷ್ಟರ ಮಟ್ಟಿಗೆ ಹೊಣೆ ಎಂಬ ಪ್ರಶ್ನೆ ಉದ್ಭವಿಸಿದಾಗ, ಮೃತನಿಗೆ ಸ್ವಾರ್ಜಿತ ಆಸ್ತಿ ಇತ್ತೆ ಅಥವಾ ಪಿತ್ರಾರ್ಜಿತ ಆಸ್ತಿ ಇತ್ತೆ ಎನ್ನುವುದು ಮುಖ್ಯವಲ್ಲ. ಸಂದಾಯವಾಗಬೇಕಾದ ಋಣಗಳು ವ್ಯಾವಹಾರಿಕ ಋಣಗಳೋ ಅವ್ಯಾವಹಾರಿಕ ಋಣಗಳೋ ಎಂಬುದನ್ನು ವಿವೇಚಿಸುವುದು ಮುಖ್ಯ. ಧಾರ್ಮಿಕ ಅಥವಾ ಯೋಗ್ಯವೆಂದು ಪರಿಗಣಿಸಲು ಬಾರದ್ದು ಅವ್ಯಾವಹಾರಿಕ ಎಂದು ಅಪರಾರ್ಕ ಹೇಳಿದ್ದಾನೆ. ಉತ್ತಮ ನೀತಿಗೆ ವಿರೋಧವಾದ ಕಾರಣಗಳಿಗಾಗಿ ಮಾಡಿದ ಋಣವೇ ಅವ್ಯಾವಹಾರಿಕ ಋಣ ಎಂದು ಕೋಲ್‌ಬ್ರುಕ್ ಹೇಳಿರುವ ವ್ಯಾಖ್ಯೆ ಸ್ಮೃತಿಗಳಲ್ಲಿ ಆ ಬಗ್ಗೆ ಹೇಳಿರುವ ಲಕ್ಷಣಗಳಿಗೆ ಅತಿ ಹತ್ತಿರವಾಗಿದೆ. ಆಪರಾಧಿಕ ಕಾರಣಗಳಿಂದಾಗಿ ಮಾಡಿದ ಋಣಗಳು, ಆಪರಾಧಿಕ ಸ್ವರೂಪದ ಧನಾಪಹರಣದ ಸಂಬಂಧದ ಋಣಗಳು, ಸುಳ್ಳುದಾವೆಗಳ ಖರ್ಚುವೆಚ್ಚಗಳು, ಕಳವು ಮಾಡಿದ ಹಣದ ಬಗೆಗಿನ ಡಿಕ್ರಿ, ಅಪರಾಧದ ವಿಚಾರಣೆಯಲ್ಲಿ ಹಾಕಿದ ದಂಡಗಳು, ದುರ್ಭಾವನಾಪೂರ್ಣ ಅಭಿಯೋಗ, ವಿಶ್ವಾಸದ್ರೋಹಾಪರಾಧ, ಜೂಜಾಟ, ಕುಡಿತ ಮತ್ತು ಕಾಮುಕ ಕಾರಣಗಳಿಗಾಗಿ ಮಾಡಿದ ಋಣಗಳು ಅವ್ಯಾವಹಾರಿಕ ಋಣಗಳೆಂಬ ಕಾರಣದ ಮೇಲೆ ಅವನ್ನು ಅವಶ್ಯವಾಗಿ ಸಂದಾಯ ಮಾಡಬೇಕಾದ ಕರ್ತವ್ಯದಿಂದ ಮಕ್ಕಳು ಪಾರಾಗಬಹುದು.

ಅವಿಭಕ್ತ ಕುಟುಂಬದ ಸ್ವತ್ತಿನಲ್ಲಿನ ಮಕ್ಕಳ ಭಾಗಕ್ಕೆ ಅಥವಾ ಅವರ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ಅವರಿಗೆ ತಂದೆಯ ಋಣದ ಹೊರೆ ಇದ್ದೇ ಇರುತ್ತದೆ. ನೈತಿಕವಾಗಿ ಇದು ಕರ್ತವ್ಯ. ಆದರೆ ಇಂಥ ಹೊರೆಯನ್ನು ತಪ್ಪಿಸಬೇಕಾದಲ್ಲಿ ಈ ಋಣ ಅನೈತಿಕ ಅಥವಾ ವಿಧಿಬಾಹಿರ. ಎಂದರೆ ಅವ್ಯಾವಹಾರಿಕ ಋಣವೆಂಬುದಾಗಿ ರುಜುವಾತು ಮಾಡಬೇಕಾದ್ದು ಮಕ್ಕಳ ಹೊಣೆಯಾಗಿರುತ್ತದೆ. ಅನೈತಿಕ ಅಥವಾ ವಿಧಿಬಾಹಿರ ಉದ್ದೇಶಗಳಿಗೂ ಋಣಗಳಿಗೂ ಇರುವ ನೇರ ಅಥವಾ ಪರೋಕ್ಷ ಸಂಬಂಧವನ್ನು ಸ್ಥಿರಪಡಿಸಬೇಕು. ತಂದೆ ಅಪ್ರಾಪ್ತವಯಸ್ಕನಾಗಿದ್ದಾಗ ಬರೆದು ಕೊಟ್ಟ ವಾಗ್ದಾನ ಪತ್ರಕ್ಕೆ ಮಕ್ಕಳು ಹೊಣೆಯಲ್ಲ; ಆದರೆ ಪ್ರಾಪ್ತವಯಸ್ಸಿಗೆ ಬಂದ ಮೇಲೆ ಅದನ್ನು ಅಂಗೀಕರಿಸಲಾಗಿದ್ದರೆ ಮಕ್ಕಳು ಹೊಣೆಯಾಗುತ್ತಾರೆ.

ಋಣಗಳ ವಸೂಲಿಗೆ ಅವಧಿ ನಿರ್ಣಯ ಕಾಯಿದೆಯ (ಲಿಮಿಟೇಷನ್ ಆ್ಯಕ್ಟ್) ಮೇರೆಗೆ ಅವಧಿಯನ್ನು ನಿಗದಿಗೊಳಿಸಲಾಗಿದೆ. ಮಕ್ಕಳ ಕರ್ತವ್ಯ ಪರಿಪಾಲನೆಯ ದೃಷ್ಟಿಯಿಂದ ಸಂದಾಯ ಮಾಡಬೇಕಾದ ಋಣಗಳನ್ನು ಬಿಟ್ಟು ಇತರ ಋಣಗಳ ಸಂಬಂಧದಲ್ಲಿ ಹಿಂದೂ ನ್ಯಾಯಶಾಸ್ತ್ರ ಕೆಲವು ಪರಿಮಿತಿಗಳನ್ನು ಹಾಕಿತ್ತು. ವ್ಯಾವಹಾರಿಕ ಮತ್ತು ಅವಿಭಕ್ತ ಕುಟುಂಬದ ಆವಶ್ಯಕತೆಗಳಿಗಾಗಿ ಪೂರ್ವಜರು ಋಣ ಮಾಡಿದ್ದರೆ ಮಕ್ಕಳು ಮೊಮ್ಮಕ್ಕಳು ತಮ್ಮ ಪಿತ್ರಾರ್ಜಿತ ಸ್ವತ್ತಿನಲ್ಲಿನ ತಮ್ಮ ಹಿತಾಸಕ್ತಿಗಳ ಮಟ್ಟಿಗೆ ಹೊಣೆಯಾಗಿರುತ್ತಾರೆ. ಈ ನಿಯಮ ವಾರಸುದಾರರಿಗೂ ಅನ್ವಯವಾಗುತ್ತದೆ. ತಂದೆ ತೀರಿದ ಮೇಲೆ ಆತನ ಋಣಗಳ ಸಂದಾಯಕ್ಕಾಗಿ ಆತನ ಮಕ್ಕಳ ಹಿತಾಸಕ್ತಿಗಳನ್ನು ಅವರ ಪಿತಾಮಹ ಪರಭಾರೆ ಮಾಡಲಾರ. ಆದರೆ ತಂದೆ ತನ್ನ ಜೀವಿತ ಕಾಲದಲ್ಲಿ ತನ್ನ ಸ್ವಾರ್ಜಿತ ಮತ್ತು ಪಿತ್ರಾರ್ಜಿತ ಸ್ವತ್ತನ್ನು ತನ್ನ

ಮತ್ತು ಪೂರ್ವಜರ ಋಣಗಳ ಸಂದಾಯಕ್ಕಾಗಿ ಈಡು ಮಾಡಬಹುದು. ಅಥವಾ ಮಾರಬಹುದು. ಆದರೆ ಮಕ್ಕಳು ವಿಭಾಗಮಾಡಿಕೊಂಡ ಅನಂತರ ತಂದೆ ಋಣ ಮಾಡಿದರೆ, ಋಣಕ್ಕೆ ಅವರು ಹೊಣೆಯಲ್ಲ.

ಅವಿಭಕ್ತ ಕುಟುಂಬದ ಕಾರ್ಯನಿರ್ವಹಣೆಯ ಜವಾಬ್ದಾರಿ ಇಲ್ಲದ ದಾಯಾದಿ ತನ್ನ ಸ್ವಂತಕ್ಕಾಗಿ ಮಾಡಿದ ಋಣಗಳನ್ನು ಅವನ ಪಾಲಿನ ಸ್ವತ್ತು ಅಥವಾ ಹಿತಾಸಕ್ತಿಗಳಿಂದ ಸಾಲಿಗರು ವಸೂಲಿಮಾಡಿಕೊಳ್ಳಬಹುದು. ಋಣಿಯ ಜೀವಿತ ಕಾಲದಲ್ಲಿ ಒಂದು ವೇಳೆ ಆತ ಸ್ವತ್ತನ್ನು ಈಡುಮಾಡಿ ಸಾಲತೆಗೆದುಕೊಂಡಿದ್ದರೆ, ದಾಯಭಾಗ ನ್ಯಾಯಸೂತ್ರಗಳು ಅನ್ವಯವಾಗುವ ಪ್ರದೇಶಗಳಲ್ಲಿ ಇಂಥ ಸ್ವತ್ತಿನ ಮಾರಾಟಕ್ಕೆ ಡಿಕ್ರಿ ಪಡೆಯಬಹುದು. ಕುಟುಂಬದ ಅವಶ್ಯಕತೆ ಅಥವಾ ಅದರ ಆಸ್ತಿಯ ರಕ್ಷಣೆ ಮತ್ತು ಪುರೋಭಿವೃದ್ಧಿಗೆ ಋಣ ಮಾಡಿದ್ದರೆ, ಇಲ್ಲವೆ ಸಾಲಕೊಟ್ಟವನು ಆ ಬಗ್ಗೆ ಸರಿಯಾಗಿ ವಿಚಾರಣೆ ಮಾಡಿ ಕೊಟ್ಟಿದ್ದರೆ ಅಂಥ ಕುಟುಂಬದ ಎಲ್ಲ ಸ್ವತ್ತೂ ಋಣಪಾವತಿಗೆ ಹೊಣೆಯಾಗಿರುತ್ತದೆ. ದಾಯಾದಿಗಳು ಅಂಥ ಋಣಕ್ಕೆ ಸಮ್ಮತಿ ಕೊಟ್ಟಿದ್ದರೆ ಅವರು ಸ್ವತ್ತಿನಲ್ಲಿನ ತಮ್ಮ ಹಿತಾಸಕ್ತಿಗಳ ಮಟ್ಟಿಗೆ ಹೊಣೆಯಾಗಿರುತ್ತಾರೆ. ಆಮೇಲೆ ಸ್ವತ್ತು ವಿಭಾಗ ಮಾಡಿಕೊಂಡರೂ ಸಾಲ ಕೊಟ್ಟವನು ಎಲ್ಲರ ಮೇಲೆ ದಾವೆ ಹಾಕಿ ಋಣಗಳನ್ನು ವಸೂಲಿ ಮಾಡಿಕೊಳ್ಳಬಹುದು. ಯಜಮಾನ ಅಥವಾ ಕುಟುಂಬದ ಕಾರ್ಯನಿರ್ವಹಣೆಯ ಜವಾಬ್ದಾರಿ ಹೊತ್ತ ದಾಯಾದಿ ಮಾಡಿದ ಋಣಗಳು ಕೇವಲ ಕುಟುಂಬದ ಉದ್ದೇಶಗಳಿಗಾಗಿ ಮಾಡಿದ ಋಣಗಳೆಂದು ಅಧ್ಯಾಹೃತವಲ್ಲ. ಕುಟುಂಬದ ಕಾರ್ಯನಿರ್ವಹಣೆಯ ಜವಾಬ್ದಾರಿ ಇಲ್ಲದ ದಾಯಾದಿಗಳ ಋಣಗಳಿಗೆ ಇತರ ದಾಯಾದಿಗಳೂ ಕುಟುಂಬದ ಸ್ವತ್ತಿನಲ್ಲಿನ ಅವರ ಹಿತಾಸಕ್ತಿಗಳೂ ಹೊಣೆಯಾಗಿರುವುದಿಲ್ಲ.

ಧನಿಯಾದವನು ಋಣಿಯ ವಿರುದ್ಧವಾಗಿಯೋ ಅವನ ಮಕ್ಕಳ ಅಥವಾ ವಾರಸುದಾರರ ವಿರುದ್ಧವಾಗಿಯೋ ದಾವೆ ಹಾಕಬಹುದು. ಎಲ್ಲ ರೀತಿಯ ಋಣಗಳ ವಸೂಲಿಗಳ ಬಗ್ಗೆ ಅವಧಿ ನಿರ್ಣಯ ಕಾಯಿದೆಯಲ್ಲಿ ಅವಧಿಗಳನ್ನು ನಿಗದಿಗೊಳಿಸಲಾಗಿದೆ. ಋಣಕ್ಕೆ ಈಡು ಅಥವಾ ಆಧಾರದ ಭದ್ರತೆ ಇದ್ದರೆ, ಅಂಥ ಸಂದರ್ಭಗಳಿಗೂ ಅವಧಿಗಳನ್ನು ನಿಗದಿಗೊಳಿಸಲಾಗಿದೆ. ಈ ಬಗ್ಗೆ ದಾವೆ ಹಾಕುವ ಪ್ರಕ್ರಿಯೆಯನ್ನು ಕುರಿತು ವ್ಯವಹಾರ ಪ್ರಕ್ರಿಯಾ ಸಂಹಿತೆಯಲ್ಲಿ ಹೇಳಲಾಗಿದೆ. ಋಣಗಳ ವಸೂಲಿಗಾಗಿ ಋಣಿಯ ವಿರುದ್ಧ ಡಿಕ್ರಿ ಪಡೆದಿದ್ದಾಗ ಆತ ತೀರಿಹೋದರೆ ವ್ಯವಹಾರ ಪ್ರಕ್ರಿಯಾ ಸಂಹಿತೆಯ 53ನೆಯ ಪ್ರಕರಣದನ್ವಯ ಆತನ ಮಕ್ಕಳ ಅಥವಾ ವಾರಸುದಾರರ ವಿರುದ್ಧ ಕ್ರಮ ಜರುಗಿಸಬಹುದು. ಋಣಗಳ ಸಂದಾಯದ ಸಂಬಂಧದಲ್ಲಿ ತಂದೆಯ ಹೆಸರಿಗೆ ತಂದ ಡಿಕ್ರಿಯಲ್ಲಿ ಮಕ್ಕಳ ಹಿತಾಸಕ್ತಿಗಳನ್ನು ಜಪ್ತಿ ಮಾಡಿದ್ದರೆ ತಂದೆಯ ಋಣ ಅವ್ಯಾವಹಾರಿಕವೆಂದು ಕಾರಣ ಕೊಟ್ಟು ಮಕ್ಕಳು ವ್ಯವಹಾರ ಪ್ರಕ್ರಿಯಾ ಸಂಹಿತೆಯ (ಸಿವಿಲ್ ಪ್ರೊಸೀಜರ್ ಕೋಡ್) 21ನೆಯ ಆದೇಶದ 38ನೆಯ ನಿಯಮದನ್ವಯ ತಮ್ಮ ಹಿತಾಸಕ್ತಿಗಳ ಮಾರಾಟವನ್ನು ವಿರೋಧಿಸಬಹುದು. ಈ ವಿರೋಧವನ್ನು ನ್ಯಾಯಾಲಯ ಒಪ್ಪಿದರೆ ಸಾಲ ಕೊಟ್ಟವನು ಒಂದು ವರ್ಷದೊಳಗೆ ಅಂಥ ಆಜ್ಞೆಯನ್ನು ವಿರೋಧಿಸಿ ಹೊಸ ದಾವೆ ಹಾಕಬೇಕು. ಮಕ್ಕಳ ವಿರೋಧವನ್ನು ತಳ್ಳಿಹಾಕಿದರೆ, ಅಂಥ ಅವಧಿಯೊಳಗಾಗಿ ಅದೇ ಸಂಹಿತೆಯ 21ನೆಯ ಆದೇಶದ 63ನೆಯ ನಿಯಮದನ್ವಯ ದಾವೆ ಹಾಕಬೇಕು. ಧನಿಯಾದವನು ಪಡೆದ ಡಿಕ್ರಿಯ ಸಂಬಂಧದ ಋಣ ತಮ್ಮ ತಂದೆ ಮಾಡಿದ ಋಣವಲ್ಲವೆಂಬುದು ಮಕ್ಕಳ ಧೋರಣೆಯಾದರೆ ಆ ಬಗ್ಗೆ ಹೊಸ ದಾವೆ ಹಾಕಬೇಕು. ಈಡು ಅಥವಾ ಆಧಾರದ ಮೂಲಕ ಋಣಗಳ ಹಣಕ್ಕೆ ಭದ್ರತೆ ಇದ್ದು ಆ ಸಂಬಂಧದಲ್ಲಿ ಧನಿ ಡಿಕ್ರಿ ಪಡೆದಿದ್ದರೆ ತತ್ಸಂಬಂಧದ ಋಣ ಅನೈತಿಕ ಅಥವಾ ವಿಧಿ ಬಾಹಿರವಾಗಿದ್ದಲ್ಲಿ ಆ ವಿಷಯವನ್ನು ಮಾರಾಟದ ಘೋಷಣೆಯ ಕಾಲಕ್ಕೆ ಅಥವಾ ಅದಕ್ಕೂ ಮುಂಚೆ ಕೊಳ್ಳುವವರ ಗಮನಕ್ಕೆ ತಂದು ಹೊಸ ದಾವೆ ಹಾಕಬೇಕು.

**ಇಸ್ಲಾಮೀ ನ್ಯಾಯದಲ್ಲಿ:** ಋಣಗಳ ಬಗ್ಗೆ ಇಸ್ಲಾಮೀ ನ್ಯಾಯಸೂತ್ರಗಳು ಹಿಂದೂ ನ್ಯಾಯ ಸೂತ್ರಗಳಿಂದ ಸ್ವಲ್ಪ ಭಿನ್ನವಾಗಿವೆ. ಪತಿ ಪತ್ನಿಗೆ ಕೊಡಬೇಕಾಗುವ ಮಹರ್ ಹಣ ಋಣವಾಗಿ ಪರಿಣಮಿಸಬಹುದು. ಮಹರ್ ಋಣ ಇಸ್ಲಾಮೀ ನ್ಯಾಯದನ್ವಯದ ಒಂದು ವಿಶಿಷ್ಟ ಋಣ. ಅದನ್ನು ಪತಿಯ ಜೀವಿತಕಾಲದಲ್ಲಿ ಅಥವಾ ಆತನ ಮರಣಾನಂತರ ಪಡೆಯಬಹುದು. ಮೃತನ ಸ್ವತ್ತನ್ನು ಪಾಲಿಗೆ ಹಾಕುವುದಕ್ಕೆ ಮುಂಚೆ ಮಹರ್ ಋಣವನ್ನು ಸಂದಾಯ ಮಾಡಬೇಕೆಂದು ಆತನ ಪತ್ನಿ ಹೇಳಬಹುದು ಮತ್ತು ಪಡೆಯಬಹುದು. ಅಂಥ ಹಣವನ್ನು ಆಕೆ ಸ್ವತಃ ಪಡೆಯಬಹುದು ಅಥವಾ ಹಾಗೆ ಪಡೆಯುವ ಹಕ್ಕನ್ನು ಬೇರೊಬ್ಬರಿಗೆ ವಹಿಸಿಕೊಡಬಹುದು. ಬಡ್ಡಿ ಸ್ವೀಕರಿಸುವುದನ್ನು ನಿಷೇಧಿಸುವ ಇಸ್ಲಾಮೀ ನ್ಯಾಯಸೂತ್ರ ಈಗ ಧಾರ್ಮಿಕ ನೀತಿಯಾಗಿ ಉಳಿದಿದೆ. ಅಪ್ರಾಪ್ತ ವಯಸ್ಸಿನವರು ಕೂಡ ಬಡ್ಡಿಗಳ ಕಾಯಿದೆ ಪ್ರಕಾರ ಋಣಗಳ ಜೊತೆಗೆ ಯೋಗ್ಯವಾದ ಬಡ್ಡಿ ಕೊಡಬೇಕು. ಪೋಷಕ ತನ್ನ ಸಂರಕ್ಷಣೆಯಲ್ಲಿರುವ ಅಪ್ರಾಪ್ತ ವಯಸ್ಕನ ಪರವಾಗಿ ಋಣಗಳನ್ನು ಮಾಡಬಹುದು. ಋಣಗಳ ಅವಧಿ ಮುಗಿದಿದ್ದರೆ ಆತ ಅದನ್ನು ಹೆಚ್ಚಿಸಲಾರ.

ಮೃತನ ಸ್ವತ್ತು ಋಣಗಳ ಸಂದಾಯಕ್ಕೂ ವಾರಸುದಾರರ ಪಾಲಿಗೂ ಮತ್ತು ರಿಕ್ತಗಳಿಗೂ ವಿತರಣೆಯಾಗುತ್ತದೆ. ಆದರೆ ಋಣಗಳ ಸಂದಾಯಕ್ಕೆ ಆದ್ಯತೆಯುಂಟು. ಋಣಗಳು ಸಂದಾಯವಾಗಿಲ್ಲವೆಂಬ ಕಾರಣಕ್ಕಾಗಿ ಮೃತನ ಸ್ವತ್ತಿಗೆ ವಿಭಾಗವನ್ನು ಮುಂದೂಡಬೇಕಿಲ್ಲ. ಏಕೆಂದರೆ ಇಸ್ಲಾಮೀ ನ್ಯಾಯದನ್ವಯ ಮೃತನ ಸ್ವತ್ತು ಆತನ ವಾರಸುದಾರರಿಗೆ ಕೂಡಲೇ ಪ್ರಾಪ್ತವಾಗುತ್ತದೆ. ಮತ್ತು ಹಾಗೆ ಪ್ರಾಪ್ತವಾಗುವ ಸ್ವತ್ತಿನಲ್ಲಿನ ಹಿತಾಸಕ್ತಿಗಳ ಪ್ರಮಾಣದಲ್ಲಿ ಆತನ ಋಣಗಳಿಗೆ ಅವು ಹೊಣೆಯಾಗಿರುತ್ತವೆ. ವಾರಸುದಾರರು ಆತನ ಋಣಗಳಿಗೆ ವೈಯಕ್ತಿಕವಾಗಿ ಹೊಣೆಯಲ್ಲ. ಧನಿಯಾದವನು ಎಲ್ಲ ವಾರಸುದಾರರ ಮೇಲೆ ತನಗೆ ಬರಬೇಕಾದ ಋಣಗಳ ಸಂದಾಯಕ್ಕೆ ದಾವೆ ಹಾಕಿದಾಗ ಮೃತನ ಸ್ವತ್ತು ಇನ್ನೂ ವಿಭಾಗವಾಗದೆ ಇದ್ದರೆ ಅಂಥ ಒಟ್ಟು ಸ್ವತ್ತಿನ ಮೇಲೆ ಡಿಕ್ರಿ ಪಡೆಯಬಹುದು. ಅಂಥ ಸಂದರ್ಭದಲ್ಲಿ ವಾರಸುದಾರರು ತಮ್ಮ ತಮ್ಮ ಪಾಲಿಗೆ ಬರಬೇಕಾದ ಪಾಲು ಮತ್ತು ಋಣ ಇವುಗಳ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಡಿಕ್ರಿ ಪಡೆಯುವ ಮುನ್ನ ಸ್ವತ್ತು ವಿಭಾಗವಾಗಿದ್ದರೆ ಎಲ್ಲ ವಾರಸುದಾರರ ವಿರುದ್ಧ ಅವರವರ ಹೊಣೆಯನ್ನು ಅರಿತು ಡಿಕ್ರಿ ಪಡೆಯಬೇಕು. ಒಬ್ಬ ವಾರಸುದಾರ ಇನ್ನೊಬ್ಬ ವಾರಸುದಾರನ ಪಾಲಿಗೆ ಬರುವ ಸ್ವತ್ತನ್ನು ಅಥವಾ ಹಿತಾಸಕ್ತಿಗಳನ್ನು ಮೃತನ ಋಣಗಳ ಸಂದಾಯಕ್ಕಾಗಿ ಕೂಡ ಪರಭಾರೆ ಮಾಡಲು ಬರುವುದಿಲ್ಲ. ಮೃತನ ಸ್ವತ್ತಿನ ಸಂಬಂಧದಲ್ಲಿ ಆತನ ಋಣಗಳ ಸಂದಾಯಕ್ಕೆ ಆತನ ವಾರಸುದಾರರ ಋಣಗಳ ಸಂದಾಯಕ್ಕಿಂತ ಹೆಚ್ಚು ಮಹತ್ತ್ವ ಕೊಡಲಾಗುತ್ತದೆ.

ಮರಣಶಯ್ಯೆಯಲ್ಲಿದ್ದಾಗ ಕೂಡ ಮುಸ್ಲಿಮರು ಋಣಗಳನ್ನು ಅಂಗೀಕರಿಸಬಹುದು. ಅಂಥ ಋಣಗಳ ಸಂಬಂಧದಲ್ಲಿ ಇತರ ಸಾಕ್ಷ್ಯವಿಲ್ಲದಿದ್ದರೆ ಉಳಿದ ಹಣಗಳನ್ನು ತೀರಿಸಿದ ಮೇಲೆ ಅವುಗಳನ್ನು ತೀರಿಸಬೇಕು. ಹಾಗೆ ಅಂಗೀಕರಿಸಿದ ಋಣಗಳು ವಾರಸುದಾರನೊಬ್ಬನ ಪರವಾಗಿ ಇದ್ದರೆ ಇತರ ವಾರಸುದಾರರು ಒಪ್ಪದಿದ್ದಲ್ಲಿ ಅಂಥ ಋಣಗಳ ಸಂದಾಯದ ಪ್ರಶ್ನೆ ಉದ್ಭವಿಸುವುದಿಲ್ಲ. ಮೃತನ ಸ್ವತ್ತಿನ ವ್ಯವಹಾರವನ್ನು ನೋಡಿಕೊಳ್ಳಲು ವ್ಯವಸ್ಥಾಪಕನನ್ನು ನೇಮಕ ಮಾಡದಿದ್ದರೆ ಅಂಥ ಸ್ವತ್ತಿನ ಹೊಣೆಯಾಗಿರುವ ಋಣಗಳ ಸಂದಾಯವನ್ನೊಳಗೊಂಡು ಅದರ ವ್ಯವಹಾರವನ್ನು 1925ರ ಭಾರತೀಯ ಉತ್ತರಾಧಿಕಾರದ ಕಾಯಿದೆಯ ಮೇರೆಗೆ ನಡೆಸಲಾಗುತ್ತದೆ.

**ದಿವಾಳಿತನ, ಋಣವಸೂಲಿ:** ದಿವಾಳಿತನಕ್ಕೆ ಸಂಬಂಧಿಸಿದ ಕಾಯಿದೆಗಳನ್ವಯ ಋಣಿ ದಿವಾಳಿ ತೆಗೆಯಬಹುದು. ಧನಿ ಅಂಥವನಿಗೆ ಈಡು ಅಥವಾ ಆಧಾರದ ಮೇಲೆ ಸಾಲ ಕೊಟ್ಟಿದ್ದರೆ ಆ ಸ್ವತ್ತನ್ನು ಒಪ್ಪಿಸಿ, ದಿವಾಳಿ ಕಾಯಿದೆಗಳ ಮೇರೆಗೆ ಬರಬಹುದಾದ ಪ್ರಮಾಣದಲ್ಲಿ ಋಣಸಂದಾಯವನ್ನು ಸ್ವೀಕರಿಸಬೇಕು; ಇಲ್ಲವೇ ಬೇರೆ ಕ್ರಮ ಜರುಗಿಸಿ ಈಡಾದ ಅಥವಾ ಆಧಾರದ ಸ್ವತ್ತಿನ ಮಾರಾಟದಿಂದ ಹಣ ಪಡೆಯಬಹುದು. ಯಾವುದೇ ರೀತಿಯ ಈಡು ಅಥವಾ ಆಧಾರ ಇಲ್ಲದ ಋಣಗಳ ಸಂಬಂಧದಲ್ಲಿ ನಿಗದಿಗೊಳಿಸಿದ ಅವಧಿಯೊಳಗೆ ಧನಿಗಳು ಅದನ್ನು ಸ್ವೀಕರಿಸದಿದ್ದರೆ, ಆ ಋಣಗಳಿಗಾಗಿ ಆಮೇಲೆ ಬೇರೆ ದಾವೆ ಹಾಕಲು ಬರುವುದಿಲ್ಲ. ಈ ಕಾಯಿದೆಗಳಲ್ಲಿ ಋಣಗಳ ಸಂದಾಯದ ತಾರತಮ್ಯವನ್ನೂ ಹೇಳಲಾಗಿದೆ. ದಿವಾಳಿತನದ ಸಂಬಂಧವಾಗಿ ಕಾರ್ಯವಾಹಿಯ ಖರ್ಚು ವೆಚ್ಚಗಳಿಗಾಗಿ ಹಣ ಉಳಿಸಿಕೊಂಡು, ಸರ್ಕಾರಕ್ಕೆ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ಕೊಡಬೇಕಾದ ಋಣವನ್ನು ಸಂದಾಯ ಮಾಡಲಾಗುವುದು. ದಿವಾಳಿ ತೆಗೆಯುವ ಪೂರ್ವದಲ್ಲಿನ ನಾಲ್ಕು ತಿಂಗಳಲ್ಲಿ ಸಲ್ಲಿಸಿದ ಸೇವೆಯ ನಿಮಿತ್ತ ದಿವಾಳಿ ತೆಗೆದವನ ನೌಕರರಿಗೆ ಒಂದು ಗೊತ್ತಾದ ಮಿತಿಯನ್ನು ಮೀರದ ವೇತನ ಅಥವಾ ಕೂಲಿಗಳನ್ನು ಕೊಡಲಾಗುವುದು. ಉಳಿದ ಹಣದಲ್ಲಿ ಇತರ ಋಣಗಳನ್ನು ಅನುಪಾತ ಕ್ರಮದಲ್ಲಿ ಸಂದಾಯ ಮಾಡಲಾಗುವುದು. ಪಾಲುದಾರಿಕೆಗೆ ಸಂಬಂಧಿಸಿದ ಋಣಗಳ ಸಂದಾಯವನ್ನು ದಿವಾಳಿಗೆ ಸಂಬಂಧಿಸಿದ ಮಟ್ಟಿಗೆ ಈ ಕಾಯಿದೆಗಳಲ್ಲಿ ಹೇಳಲಾಗಿದೆ. ಋಣಗಳ ವಸೂಲಿಯ ವಿಷಯದಲ್ಲಿ ಋಣಿಯೂ ಧನಿಯೂ ತನ್ನ ತನ್ನ ಹಕ್ಕುಬಾಧ್ಯತೆಗಳನ್ನು ದೃಢೀಕರಿಸಲು, ವಸೂಲಿ ತಡೆಯಲು ಅಥವಾ ವಸೂಲಿ ಮಾಡಿಕೊಳ್ಳಲು ಅನುಸರಿಸಬೇಕಾಗುವ ಪ್ರಕ್ರಿಯಾ ನಿಯಮಗಳು ಭಾರತದ ಸರ್ವ ನಾಗರಿಕರಿಗೂ ಒಂದೇ ಬಗೆಯಾಗಿವೆ. ಇವುಗಳನ್ನು ವ್ಯವಹಾರ ಪ್ರಕ್ರಿಯಾ ಸಂಹಿತೆಯಲ್ಲಿ ಹೇಳಲಾಗಿದೆ. (ಎಲ್.ಎಸ್.ಜಿ.)

**ಋಣತ್ರಯ:** ದೇವಋಣ, ಋಷಿಋಣ, ಪಿತೃಋಣವೆಂದು ಮೂರು ಬಗೆಯಾಗಿರುವ ಅಲೌಕಿಕ ಋಣ. ಜೀವನ ನಿರ್ವಹಣೆಗಾಗಿ ಮನುಷ್ಯ ಮಾಡುವ ಸಾಲ ಲೌಕಿಕವಾದುದು. ಇದು ಈ ಲೇಖನದ ವ್ಯಾಪ್ತಿಗೆ ಒಳಪಡದು. ಹುಟ್ಟುವಾಗಲೇ ದೇವತೆಗಳಿಗೂ ಋಷಿಗಳಿಗೂ ಪಿತೃಗಳಿಗೂ ಮನುಷ್ಯ ಋಣಿಯಾಗಿರುತ್ತಾನೆ. ಈ ಮೂರು ಋಣಗಳನ್ನು ತೀರಿಸದ ಹೊರತು ಮೋಕ್ಷ ದೊರೆಯುವುದಿಲ್ಲ ಎಂದು ಶ್ರುತಿ ಉದ್ಘೋಷಿಸುತ್ತದೆ. ಯಜ್ಞಗಳನ್ನು ಮಾಡಿ ದೇವಋಣವನ್ನು ತೀರಿಸಬೇಕು. ಯಜ್ಞ ಮಾಡಲು ಅಶಕ್ತನಾದರೆ ದೇವತಾಪೂಜೆ, ವ್ರತೋಪವಾಸಾದಿಗಳಿಂದ ಇದು ತೀರುತ್ತದೆ. ಬ್ರಹ್ಮಚರ್ಯ ನಿಯಮಪಾಲನೆ, ವೇದಾಧ್ಯಯನ, ಶಾಸ್ತ್ರಾಭ್ಯಾಸ ತಪಸ್ಸುಗಳಿಂದ ಋಷಿಋಣ ತೀರುತ್ತದೆ. ಪುತ್ರಪ್ರಾಪ್ತಿ, ಶ್ರಾದ್ಧ ನಿರ್ವಹಣೆಗಳಿಂದ ಪಿತೃಋಣ ತೀರುತ್ತದೆ. *

**ಋಣದ್ವಿಪದೀಯ ವಿತರಣೆ:** ದ್ವಿಪದೀಯ ವಿತರಣೆಯಂತೆಯೇ ಆದರೆ ಋಣ ಘಾತಾಂಕವಿರುವ ಸಂಭವ ವಿತರಣೆ (ನೆಗೆಟಿವ್ ಬೈನಾಮಿಯಲ್ ಡಿಸ್ಟ್ರಿಬ್ಯೂಷನ್). ಇದರ ವಿಹಿತ (ಕಟ್ಟಳೆ–ಕ್ಯಾನೊನಿಕಲ್) ರೂಪ ಹೀಗಿದೆ:

$$\Pr = \binom{k+r-1}{r}\frac{a^r}{(1+a)^{k+r}}, a > o, k \geq 1$$

$$r = 0, 1, 2, \ldots\ldots\ldots\ldots\infty.$$

ದ್ವಿಪದೀಯ ಬೃಹತ್ ಸಮಷ್ಟಿ (ಲಾರ್ಜ್ ಬೈನಾಮಿಯಲ್ ಪಾಪ್ಯುಲೇಷನ್) ಒಂದರಲ್ಲಿ A ಎಂಬ ಗುಣವುಳ್ಳ ವಸ್ತುಗಳ ಅನುಪಾತ θ ಇರಲಿ $(0 < \theta < 1)$. ಈ ಸಮಷ್ಟಿಯಿಂದ A ಗುಣವುಳ್ಳ ವಸ್ತುಗಳು ದೊರೆವತನಕ ಒಮ್ಮೆ ಒಂದು ವಸ್ತುವಿನಂತೆ ನಮೂನೀಕರಣ (ಸ್ಯಾಂಪ್ಲಿಂಗ್) ಮಾಡುತ್ತ ಹೋದರೆ ನಮೂನೆಯ ಗಾತ್ರ k+X ಆಗುವುದರ (X = 0,1,2.......) ಸಂಭಾವ್ಯತೆಯನ್ನು ಗಣನೆ ಮಾಡೋಣ. ಒಟ್ಟು k ಬಾರಿ A ಗುಣವುಳ್ಳ ವಸ್ತುವನ್ನು ಪಡೆಯಲು (k + X) ಆಯ್ಕೆಗಳು ಬೇಕಾಗುತ್ತವೆ. ಎಂದರೆ, ಮೊದಲನೆಯ (k + X-1) ಬಾರಿಗಳಲ್ಲಿ (k - 1) ಸಲ ಯಾವ ಕ್ರಮದಲ್ಲಾಗಲಿ A ಗುಣವುಳ್ಳ ವಸ್ತು ಆಯ್ಕೆಯಾಗಿರಬೇಕು ಮತ್ತು ಇದರ ಮುಂದಿನ ಸಾರಿ A ಗುಣವುಳ್ಳ ವಸ್ತು ಆಯ್ಕೆಯಾಗಬೇಕು. ಈ ಎರಡು ಸ್ವತಂತ್ರ ಘಟನೆಗಳಲ್ಲಿ ಮೊದಲನೆಯದರ ಸಂಭಾವ್ಯತೆ $\binom{k+X-1}{k-1}\theta\, k^{-1}(1-\theta)^X$ ಇರುವುದು; ಮತ್ತು ಎರಡನೆಯದರ ಸಂಭಾವ್ಯತೆ $\theta$ ಇರುವುದು. ಈ ಘಟನೆಗಳು ಪರಸ್ಪರ ಸ್ವತಂತ್ರವಾಗಿರುವ ಕಾರಣ ಎರಡೂ ಏಕಕಾಲಿಕವಾಗಿ ಸಂಭವಿಸುವ ಸಂಭಾವ್ಯತೆ ಅವುಗಳ ಬೇರೆ ಬೇರೆ ಸಂಭಾವ್ಯತೆಗಳ ಗುಣಲಬ್ಧಕ್ಕೆ ಸಮವಾಗಿರುವುದು.

ಅಂದರೆ ಆಗುವುದು. ಇದರಲ್ಲಿ X ಗೆ ಕ್ರಮವಾಗಿ 0, 1, 2, ....... ಬೆಲೆಗಳನ್ನು ಆದೇಶಿಸಿದರೆ ಅವಕ್ಕೆ ಸಂವಾದಿಯಾದ (ಕರೆಸ್ಪಾಂಡಿಂಗ್) ಸಂಭಾವ್ಯತೆಯನ್ನು ಕಂಡುಹಿಡಿಯಬಹುದು. X ಸಂಭವ ಚರದ ಬೆಲೆ ಆಗುವುದರ ಸಂಭಾವ್ಯತೆಯನ್ನು P(X=r) ಎಂದು ಸಾಂಕೇತಿಕವಾಗಿ ಬರೆಯುತ್ತೇವೆ. ಇದನ್ನೇ $P_r$ ಎಂದೂ ಬರೆಯುವುದುಂಟು. ಇದನ್ನನುಸರಿಸಿ ಮೇಲೆ ಕಾಣಿಸಿದ ಫಲವನ್ನು

$$P_r = \binom{k+r-1}{r}\theta^k\,(1-\theta)^r$$

ಎಂದು ನಿರೂಪಿಸಬಹುದು. ಈ ಬೆಲೆ $\theta^k\,[1-t(1-\theta)]^{-k}$ ಎಂಬ ಪದಾವಳಿಯನ್ನು ಅನಂತಶ್ರೇಣಿಯ (ಇನ್‌ಫಿನಿಟ್ ಸೀರೀಸ್) ರೂಪದಲ್ಲಿ ಅಭಿವ್ಯಕ್ತಿಸಿದಾಗ $t^r$ ಪದದ ಗುಣಕವಾಗಿರುವುದೆಂಬುದನ್ನು ಗಮನಿಸಿ. ಅಂದರೆ, $\theta^k\,[1-t(1-\theta)]^{-k}$ ಎಂಬುದು ಋಣದ್ವಿಪದೀಯ ವಿತರಣೆಯ ಸಂಭಾವ್ಯತೆಯ ಜನಕ ಉತ್ಪನ್ನ (ಪ್ರಾಬಬಿಲಿಟಿ ಜನರೇಟಿಂಗ್ ಫಂಕ್ಷನ್) ಆಗುವುದು. ಇದರಲ್ಲಿ

$\theta = \dfrac{1}{1+a}$ ಮತ್ತು $1-\theta = \dfrac{a}{1+a}, (a > 0)$

ಎಂದು ಆದೇಶಿಸಿ ಸರಳೀಕರಿಸಲು ಕಟ್ಟಳೆ ರೂಪ ದೊರೆಯುವುದು. $\theta$ದ ವ್ಯಾಪ್ತಿ ಇರುವುದರಿಂದ a ಯ ವ್ಯಾಪ್ತಿ ಇರುವುದು.

ಯಥಾಕ್ರಮ ಗಣನೆ ಮಾಡಲು ಇದರ ಜಡವೇಗಗಳು (ಮೊಮೆಂಟುಗಳು), $\mu_1^1 = ka, \mu_2^1 = ka \quad [1 + a(1+k)]$. ಆದ್ದರಿಂದ $\mu_2 = ka + ka^2$ ಪ್ರಯೋಗಾತ್ಮಕ ವೀಕ್ಷಣೆಗಳಿಗೆ ಹೊಂದಿಕೆಯಾಗುವಂತೆ ಋಣದ್ವಿಪದೀಯ ವಿತರಣೆಯನ್ನು ಪೊರ್ದಿಸಲು (ಟುಫಿಟ್) ಈ ಸಾಮ್ಯಗಳು ಉಪಯೋಗಕ್ಕೆ ಬರುತ್ತವೆ.

ಮೇಲೆ ಹೇಳಿದ ಪ್ರತಿಚಯನದಲ್ಲಿ ಕೊನೆಯ ಆಯ್ಕೆ ಯಾವಾಗಲೂ A ಗುಣವುಳ್ಳದ್ದಾಗಿರುವುದರಿಂದ, ಅದನ್ನು ಬಿಟ್ಟು ಉಳಿದ ಆಯ್ಕೆಗಳು ಯಾದೃಚ್ಛಿಕವಾಗಿರುವುದರಿಂದ ಉಕ್ತ ನಮೂನೆಯ (ಸ್ಯಾಂಪಲ್) ಪ್ರಾಯಿಕತೆ (ಲೈಕ್‌ಲಿಹುಡ್)

$$L = \binom{k+r-1}{r}\theta^{k-1}(1-\theta)^r$$

ಇರುವುದು. ಗರಿಷ್ಠತಮ ಪ್ರಾಯಿಕತೆ (ಮ್ಯಾಕ್ಸಿಮಂ ಲೈಕ್‌ಲಿಹುಡ್) ಸಿದ್ಧಾಂತದ ಮೇರೆಗೆ $\theta$ದ ಅಂದಾಜನ್ನು ಮತ್ತು $\dfrac{\partial^2 L}{\partial \theta^2} < 0$ ಎಂಬ ಸಂಬಂಧಗಳಿಂದ ಕಂಡುಹಿಡಿಯಬಹುದು. Lನ ಅಭಿವ್ಯಕ್ತಿಯನ್ನು ಆದೇಶಿಸಿ, ಸರಳೀಕರಿಸಲು $\dfrac{k-1}{\theta} - \dfrac{r}{1-\theta} = 0$. ಆದ್ದರಿಂದ $\theta = \dfrac{k-1}{k+r-1}$ ಎಂಬುದು $\theta$ ದ ಗರಿಷ್ಠತಮ ಪ್ರಾಯಿಕ ಅಂದಾಜು (ಮ್ಯಾಕ್ಸಿಮಂ ಲೈಕ್‌ಲಿಹುಡ್ ಎಸ್ಟಿಮೇಟ್) ಆಗುವುದು.

ಪ್ರಕಾರಾಂತರ ವ್ಯುತ್ಪತ್ತಿ: ಮಧ್ಯಕ (ಮೀನ್) ë ಇರುವ ಪೋಸೋನ್ (Poisson) ವಿತರಣೆಯನ್ನು ಅನುಸರಿಸುವ X ಯಾದೃಚ್ಛಿಕ ಚರವನ್ನು (ರ್‍ಯಾಂಡಂ ವೇರಿಯೆಬಲ್) ಪರಿಶೀಲಿಸೋಣ. ಈಗ ë ಅಚರವಾಗಿರದೆ ಚರವಾಗಿದ್ದು ë ವಿವರ್ತ (k, a) ಪ್ರಾಚಲಗಳಿರುವ (ಪ್ಯರಾಮೀಟರ್ಸ್)

ಎಂಬ ಗಾಮ (gamma) ವಿತರಣೆಯನ್ನು ಪಾಲಿಸುವುದಾದರೆ X, ëಗಳ ಜಂಟಿ ಸಂಭಾವ್ಯತೆಯ ವಿತರಣೆಯನ್ನು (ಜಾಯಿಂಟ್ ಪ್ರಾಬ್ರಬಿಲಿಟಿ ಡಿಸ್ಟ್ರಿಬ್ಯೂಷನ್) ಹೀಗೆ ನಿರೂಪಿಸಬಹುದು.

$$P(X,\lambda) = \frac{k^a}{\Gamma(a)} e^{-k\lambda}\,\lambda^{a-1}\,d\lambda e^{-\lambda}\,\frac{\lambda^x}{x|}$$

ಇದರಲ್ಲಿ ëವನ್ನು ಸಮಾಸಕಲನಿಸಿ ತೊಡೆದು ಹಾಕಲು (ಇಂಟಿಗ್ರೇಟಿಂಗ್ ಔಟ್ ë) Xನ ಅನಿರ್ಬಂಧಿತ ವಿತರಣೆ ದೊರೆಯುವುದು. ಹೀಗೆ

$$P(X = x) = \frac{\Gamma(x+k)a^x}{\Gamma(k)x+|(1+a)^{k+x}} = \binom{k+x-1}{x}\frac{a^z}{(1+a)^{k+x}}$$

ಇದೇ ಋಣದ್ವಿಪದೀಯ ವಿತರಣೆಯ ಕಟ್ಟಳೆ ರೂಪವಾಗುವುದು.

ವೀಕ್ಷಣೆಗಳಿಗೆ ಋಣದ್ವಿಪದೀಯ ವಿತರಣೆಯನ್ನು ಪೊರ್ದಿಸುವಿಕೆ: ಕಾರ್ಖಾನೆಗಳಲ್ಲಾಗುವ ಅಪಘಾತಗಳ (ಇಂಡಸ್ಟ್ರಿಯಲ್ ಆಕ್ಸಿಡೆಂಟ್ಸ್) ಅಂಕಿಸಂಖ್ಯೆಗಳು ಸಾಮಾನ್ಯವಾಗಿ ಪೋಸೋನ್ ವಿತರಣೆಗೆ ಹೊಂದಿಕೆಯಾಗಿರುವುವು. ಆದರೆ ಕೆಲವು ಸಂದರ್ಭಗಳಲ್ಲಿ ಈ ಪೊರ್ದಿಕೆ ಅಷ್ಟು ಹಾಳಿತವಾಗುವುದಿಲ್ಲ.

ದ್ವಿಪದೀಯ ವಿತರಣೆಗೆ ಅನ್ವಯಿಸುವ ಒಂದು ಪ್ರಮೇಯವನ್ನು ಇಲ್ಲಿ ಪ್ರಸ್ತಾಪಿಸಿ, ಇದಕ್ಕೆ ಸಂವಾದಿಯಾದ ಋಣದ್ವಿಪದೀಯ ವಿತರಣೆಗೆ ಸಂಬಂಧಿಸಿದ ಪ್ರಮೇಯವನ್ನು ನಿರೂಪಿಸುತ್ತೇವೆ.

X, Y ಸ್ವತಂತ್ರ ವಿವರ್ತಗಳು $(\pi, n_1), (\pi, n_2)$ ಪ್ರಾಚಲಗಳಿರುವ ದ್ವಿಪದೀಯ ವಿತರಣೆಗಳನ್ನು ಅನುಸರಿಸುತ್ತವೆ. ಆದರೆ X + Y ದತ್ತವಾದಾಗ X, Y ಗಳ ನಿರ್ಬಂಧಿತ ವಿತರಣೆ (ಕಂಡಿಷನಲ್ ಡಿಸ್ಟ್ರಿಬ್ಯೂಷನ್)

$$\binom{n_1}{x}\binom{n_2}{y} \Big/ \binom{n_1+n_2}{x+y}$$

ಎಂಬ ಹೈಪರ್ ಜ್ಯಾಮಿತೀಯ (ಹೈಪರ್‌ಜೊಮೆಟ್ರಿಕ್) ಶ್ರೇಣಿಯ ಪದವಾಗಿರುವುದು. ಇದು ðಯಿಂದ ಸ್ವತಂತ್ರವಾಗಿದೆ.

ಋಣದ್ವಿಪದೀಯ ವಿತರಣೆಗೆ ಅನ್ವಯಿಸುವ ಸಂವಾದಿ ಪ್ರಮೇಯವನ್ನು ಹೀಗೆ ನಿರೂಪಿಸಬಹುದು: $(a,k_1), (a,k_2)$ ಪ್ರಾಚಲಗಳಿರುವ ಋಣದ್ವಿಪದೀಯ X, Y ವಿವರ್ತಗಳು ಸ್ವತಂತ್ರವಾಗಿದ್ದರೆ X + Y ದತ್ತವಾದಾಗ X, Y ಗಳ ನಿರ್ಬಂಧಿತ ವಿತರಣೆ $\binom{X+Y}{X}\dfrac{B(k_1+X, k_2+Y)}{B(k_1+k_2)}$ ಎಂಬ ಋಣ ಹೈಪರ್ ಜ್ಯಾಮಿತೀಯ ವಿತರಣೆಯಾಗಿರುವುದು. ಇಲ್ಲಿ B ಎಂಬುದು ಬೀಟ ಉತ್ಪನ್ನವನ್ನು ಸೂಚಿಸುತ್ತದೆ. ಈ ವಿತರಣೆ a ಪ್ರಾಚಲದಿಂದ ಸ್ವತಂತ್ರವಾಗಿರುವುದೆಂಬುದು ಗಮನಾರ್ಹ. (ಎಂ.ಎ.ಜೆ.)

**ಋಣ ನಿರ್ವಹಣೆ:** ಋಣ ನಿರ್ವಹಣೆಯು (ಡೆಟ್ ಮ್ಯಾನೇಜ್‌ಮೆಂಟ್) ಒಂದು ವಿಶಿಷ್ಟ ಕಲೆ. ಋಣ ನಿರ್ವಹಣೆ, ಅಸಲು ಮತ್ತು ಬಡ್ಡಿಗಳ ಸಕಾಲಿಕ ಮರುಪಾವತಿ, ಪಾವತಿಯನ್ನು ಸರಿಯಾಗಿ ಯೋಜಿಸುವುದರಿಂದ ಉಂಟಾಗುವ ಪ್ರಯೋಜನಗಳು, ಇರುವ ಎಲ್ಲ ಸಾಲಗಳನ್ನು ಸರಿಯಾಗಿ ಯೋಜಿಸಿ, ಸಮಷ್ಟಿಯಾಗಿ ಎಲ್ಲ ಸಾಲಗಳನ್ನು ಸುಲಭವಾಗಿ ನಿರ್ವಹಣೆಯ ಸ್ಥಿತಿಗೆ ತಂದುಕೊಳ್ಳುವುದು. ಈ ಸಾಲ ನಿರ್ವಹಣೆಯು ವೈಯಕ್ತಿಕವಾಗಿ ಆಗಬಹುದು, ಒಂದು ಸಣ್ಣ ಸಂಸ್ಥೆಯಿಂದ ಹಿಡಿದು, ಕಂಪನಿ, ಸಾರ್ವಜನಿಕ ಉದ್ಯಮ, ಸರ್ಕಾರ, ಭಾರತೀಯ ರಿಸರ್ವ್ ಬ್ಯಾಂಕ್ ಮೊದಲಾದವುಗಳಿಂದ ವ್ಯವಸ್ಥಿತವಾಗಿ ನಿರ್ವಹಿಸಲ್ಪಡುವ ಈ ಸಾಲ ನಿರ್ವಹಣೆಯು ಹಣ ನೀತಿಯ ಒಂದು ಮುಖ್ಯ ವಿಧಾನವಾಗಿದೆ.

ಸಾಲ ನಿರ್ವಹಣೆಯು ದೇಶದ ಸಾರ್ವಜನಿಕ ಆರ್ಥಿಕ ವ್ಯವಸ್ಥೆಯ ಒಂದು ಬಹು ಮುಖ್ಯ ಕಾರ್ಯವಾಗಿದೆ. ಇದಕ್ಕೆ ಸರಿಯಾಗಿ ಸ್ಥಿತಿಯ ಅರಿವು, ಸಂಸ್ಥೆಯ ಬಲಪಡಿಸುವ ವಿವಿಧ ವಿಧಾನಗಳು, ಸ್ವ ಸಾಮರ್ಥ್ಯದ ಅಭಿವೃದ್ಧಿ, ತರಬೇತಿ ಮುಂತಾದವುಗಳು. ಪರಿಣಿತ ಸಾಲ ನಿರ್ವಹಣಾ ವ್ಯಕ್ತಿ / ತಂಡ ಇಲ್ಲಿ ಅವಶ್ಯಕವಾಗಿದೆ.

ಪ್ರಸಕ್ತ 2005–06 ವರ್ಷದ ಆರ್ಥಿಕ ನೀತಿಯಲ್ಲಿ ಸರ್ಕಾರದ ಸಾಲ ನಿರ್ವಹಣೆಯ ಕಾರ್ಯವಿಧಾನಗಳನ್ನು ಪುನಃ ಪರಿಶೀಲಿಸಿ ಬಲಪಡಿಸುವ ಬಗ್ಗೆ ಒತ್ತುಕೊಡಲಾಗಿದೆ. ಆರ್ಥಿಕ ನೀತಿ ಮತ್ತು ಸಾಲ ನಿರ್ವಹಣಾ ನೀತಿಗಳನ್ನು ಪ್ರತ್ಯೇಕಿಸಿ ಕಾರ್ಯನಿರ್ವಹಣಾ ವಿಧಾನವನ್ನು ರೂಪಿಸಲು ಬಂದಿರುವ ಅಭಿಪ್ರಾಯಕ್ಕೆ ಮಾನ್ಯತೆ ನೀಡಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಸದ್ಯದಲ್ಲಿ ಹೊಸ ಹಣಕಾಸಿನ ಮಾರುಕಟ್ಟೆ ವಿಭಾಗವನ್ನು ಪ್ರಾರಂಭಿಸಿದೆ. ಈ ಹಣಕಾಸಿನ ಮಾರುಕಟ್ಟೆ ವಿಭಾಗದ ಕಾರ್ಯಗಳು ಈ ಕೆಳಗಿನಂತಿವೆ: 1. ಹಣಕಾಸಿನ ಕಾರ್ಯಗಳಾದ (ಅ) ತೆರೆದ ಹಣಕಾಸಿನ ಕಾರ್ಯಾಚರಣೆ (ಓಪನ್ ಮಾರ್ಕೆಟ್ ಆಪರೇಷನ್) (ಬ) ದ್ರವ್ಯತ್ವ ಹೊಂದಾಣಿಕೆ ಸೌಲಭ್ಯ (ಲಿಕ್ವಿಡಿಟಿ ಅಡ್ಜಸ್ಟ್‌ಮೆಂಟ್ ಫೆಸಿಲಿಟಿ) ಹಾಲಿ ದ್ರವ್ಯತ್ವ ಸೌಲಭ್ಯಗಳು (ಸ್ಟಾಂಡಿಂಗ್ ಲಿಕ್ವಿಡಿಟಿ ಫೆಸಿಲಿಟೀಸ್) ಮತ್ತು ಮಾರುಕಟ್ಟೆ ಸ್ಥಿರೀಕರಣ ಯೋಜನೆ (ಮಾರ್ಕೆಟ್ ಸ್ಟೆಬಿಲೈಸೇಷನ್ ಸ್ಕೀಮ್) (2) ಹಣ ಮಾರುಕಟ್ಟೆಯ ಸಾಧನ (ಉಪಕರಣ) ಗಳಾದ ಅಲ್ಪಕಾಲದ / ನೋಟೀಸಿನ / ಸಾವಧಿಯ ಹಣ, ಮಾರುಕಟ್ಟೆ ರಿಪೊ, ಅನುಬಂಧೀಕರಣಗೊಳಿಸಿರುವ (ಕೊಲ್ಲಾಟರಲೈಸ್ಡ್) ಸಾಲ ಕೊಳ್ಳುವ ಮತ್ತು ಕೊಡುವ ನಿರ್ಬಂಧಗಳು, ವಾಣಿಜ್ಯ ಸಂಲೇಖ ಪತ್ರ (ಕಮರ್ಷಿಯಲ್ ಪೇಪರ್), ಠೇವಣಿ ಪ್ರಮಾಣ ಪತ್ರ (ಸರ್ಟಿಫಿಕೇಟ್ ಆಫ್ ಡಿಪಾಸಿಟ್) ಹಾಗು (3) ಹಣ ಚಲಾವಣೆಯ ಉಸ್ತುವಾರಿ (ಮಾನಿಟರಿಂಗ್ ಆಫ್ ಮನಿ) ಕಾರ್ಯಗಳು.

ನಮ್ಮ ರಿಸರ್ವ್ ಬ್ಯಾಂಕ್ ಸಾರ್ವಜನಿಕ ಸಾಲವನ್ನು ನಿರ್ವಹಿಸುತ್ತದೆ ಮತ್ತು ಕೇಂದ್ರ ಹಾಗು ರಾಜ್ಯ ಸರ್ಕಾರಗಳ ಪರವಾಗಿ ತನಗೆ ದತ್ತವಾದ ಅಧಿಕಾರವನ್ನು ಬಳಸಿ ಹೊಸ ಸಾಲಗಳನ್ನು ನೀಡುತ್ತದೆ. ಸರ್ಕಾರಗಳ ಪರವಾಗಿ ನಗದು ಹಾಗು ದ್ರವ್ಯತ್ವಗಳನ್ನು ನಿರ್ವಹಿಸುತ್ತದೆ. ವಿವಿಧ ರೀತಿ, ನೀತಿ, ಸಾಧನಗಳಿಂದ ಸಾಲ ಮುಂಗಡಗಳನ್ನು ಆಡಳಿತಾತ್ಮಕವಾಗಿ ನಿರ್ವಹಿಸುತ್ತದೆ. ಈ ಒಳಗಿನ (ದೇಶೀಯ) ಸಾಲ ನಿರ್ವಹಣೆಯ ಕಾರ್ಯ ಕೇಂದ್ರವು ಈ ಸಾಲ ನಿರ್ವಹಣೆಯ ಕಾರ್ಯವನ್ನು ಮಾಡುತ್ತದೆ. ಸರ್ಕಾರಿ ಸಾಲಪತ್ರಗಳನ್ನು ಆಗಿಂದಾಗ್ಗೆ ಲಿಲಾವು ಮಾಡುವುದು, ಹೊಸ ಪತ್ರಗಳನ್ನು ಪರಿಚಯಿಸುವುದು, ಅವಧಿ ತುಂಬಿದ ಸಾಲ ಪತ್ರಗಳ ವಿಲೇವಾರಿ ಕಾರ್ಯ ನಿರ್ವಹಿಸುವುದು, ಸರ್ಕಾರದ ಪ್ರತಿಭೂತಿಗಳ ಆಳ ಮತ್ತು ದ್ರವ್ಯತ್ವಗಳನ್ನು ಉತ್ತಮಗೊಳಿಸುವುದು, ದ್ವಿತೀಯ ಮಾರುಕಟ್ಟೆಯನ್ನೂ ನಿರ್ವಹಿಸುವುದು ಮೊದಲಾದವುಗಳನ್ನು ನೋಡಿಕೊಳ್ಳುತ್ತದೆ.

ಆರ್ಥಿಕ ನೀತಿಯನ್ನು ಪಾಲನೆ ಮಾಡುವುದರೊಂದಿಗೆ ದ್ರವ್ಯತ್ವ ಕಾರ್ಯವಿಧಾನದ ಉಸ್ತುವಾರಿ ಮಾಡುವಾಗ ಮತ್ತು ಬೇಕೆಂದಾಗ ಇತರ ಸಾಧನೋಪಕರಣಗಳಾದ ತೆರೆದ ಮಾರುಕಟ್ಟೆಯ ಕಾರ್ಯವಿಧಾನಗಳು, ರೆಪೋಸ್, ವಿರುದ್ಧದ ರಿಪೋಸ್‌ಗಳು ಮೊದಲಾದವುಗಳ ಮೂಲಕ ದ್ರವ್ಯತ್ವ ಕಾರ್ಯಕ್ಷಮತೆಯನ್ನು ನೋಡಿಕೊಳ್ಳುವುದು. *

**ಋಣಪರಿವರ್ತನೆ:** ಸರ್ಕಾರ ತೀರಿಸಬೇಕಾಗಿರುವ ಹಳೆಯ ಸಾಲಕ್ಕೆ ಪ್ರತಿಯಾಗಿ ಹೊಸ ಸಾಲ ಪತ್ರಗಳ ನೀಡಿಕೆ (ಡೆಟ್ ಕನ್ವರ್ಷನ್). ಹೊಸ ಸಾಲ ಎತ್ತುವಾಗ ಸರ್ಕಾರ ಅದೇ ಮೊತ್ತದಲ್ಲಿ ಸ್ವಲ್ಪ ಭಾಗವನ್ನು ಆ ವರ್ಷ ತೀರಿಸಬೇಕಾದ ಸಾಲದ ಪರಿವರ್ತನೆಗಾಗಿ ಮೀಸಲಿಡಬಹುದು. ಹಳೆಯ ಸಾಲಪತ್ರ ಹೊಂದಿರುವವರು ಅದರ ಹಣವನ್ನು ಹಿಂದಕ್ಕೆ ಪಡೆಯುವ ಬದಲು ಅದನ್ನು ಹೊಸ ಸಾಲದಲ್ಲಿ ತೊಡಗಿಸಬಹುದು. ಸಾಲ ತೀರುವೆಯ ಕಾಲ ಬರುವ ಮೊದಲೇ ಬೇಕಾದರೂ ಸರ್ಕಾರ ಇಂಥ ಅವಕಾಶವನ್ನು ಸಾಲ ಕೊಟ್ಟವರಿಗೆ ಒದಗಿಸುವುದೂ ಉಂಟು.

ಋಣಪರಿವರ್ತನೆಯಿಂದ ಸರ್ಕಾರಕ್ಕೂ ಸಾರ್ವಜನಿಕರಿಗೂ ಅನುಕೂಲವುಂಟು–ಎಂಬ ಅಭಿಪ್ರಾಯವಿದೆ. ಸಾಲ ತೀರುವೆಯ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರಕುವುದೆಂಬುದೇ ಸರ್ಕಾರದ ದೃಷ್ಟಿಯಲ್ಲಿ ಇದರ ಮುಖ್ಯ ಪ್ರಯೋಜನ. ಹೆಚ್ಚು ಬಡ್ಡಿಯ ಸಾಲದಿಂದ ಕಡಿಮೆ ಬಡ್ಡಿಯ ಸಾಲಕ್ಕೆ ಪರಿವರ್ತನೆ ಮಾಡುವುದೇ ಸಾಮಾನ್ಯವಾದ್ದರಿಂದ ಸರ್ಕಾರಕ್ಕೆ ಇದರಿಂದ ಬಡ್ಡಿಯ ಹೊರೆ ಕಡಿಮೆಯಾಗುತ್ತದೆ. ಈ ಉದ್ದೇಶಕ್ಕಾಗಿಯೇ ಋಣಪರಿವರ್ತನೆ ಕೈಗೊಂಡಿರುವ ನಿದರ್ಶನಗಳಿವೆ. ಹಳೆಯ ಸಾಲದ ಬಡ್ಡಿಯ ದರಕ್ಕಿಂತ ದೇಶದಲ್ಲಿ ಪ್ರಚಲಿತವಿರುವ ಬಡ್ಡಿಯ ದರ ಕಡಿಮೆಯಾಗಿದ್ದರೆ ಇದರ ಉಪಯೋಗ ಪಡೆಯುವ ಸಲುವಾಗಿ ಸರ್ಕಾರ ಪರಿವರ್ತನೆಯ ಸಾಲ ನೀಡಿ ತನ್ನ ಕwey ವೆಚ್ಚ ಇಳಿಸಿಕೊಳ್ಳಬಹುದು. ಆದರೆ ಇದರಿಂದ ದೊರಕುವ ಪರಿಹಾರ ಅತ್ಯಲ್ಪವೆಂದು ಹಿಂದಿನ ಅನುಭವದಿಂದ ವೇದ್ಯವಾಗುತ್ತದೆ. ಬ್ರಿಟನ್ನಿನಲ್ಲಿ 1932ರಲ್ಲಿ ಕೈಗೊಂಡ ಋಣಪರಿವರ್ತನೆಯಿಂದ (5%ರ ಸಾಲಗಳನ್ನು 3 1/2%ಯ ಸಾಲಕ್ಕೆ) ವಾರ್ಷಿಕ ಬಡ್ಡಿಯ ವೆಚ್ಚದಲ್ಲಿ ಮೂರು ಕೋಟಿ ಪೌಂಡುಗಳಷ್ಟು ಕಡಿಮೆಯಾದರೂ ಇದು ಸರ್ಕಾರದ ವಾರ್ಷಿಕ ಬಡ್ಡಿ ಪಾವತಿಯ 1/15ರ ಮತ್ತು 1/16ರ ನಡುವೆ ಇತ್ತು. ಈ ಅಲ್ಪ ಪರಿಹಾರ ದೊರಕಬೇಕಾದರೂ ಹೆಚ್ಚು ಬಡ್ಡಿಯ ಸಾಲವನ್ನು ಕಡಿಮೆ ಬಡ್ಡಿಯ ಸಾಲಕ್ಕೆ ಪರಿವರ್ತಿಸಲು ಅನುಕೂಲವಾದ ಪರಿಸ್ಥಿತಿ ಇರಬೇಕು. ಅಂದರೆ ಮಾರುಕಟ್ಟೆಯಲ್ಲಿ ಬಡ್ಡಿಯ ದರ ಕಡಿಮೆಯಾಗಿರಬೇಕು. ಬಡ್ಡಿಯ ದರ ಏರುತ್ತಿರುವ ಸಂದರ್ಭದಲ್ಲಿ ಹೆಚ್ಚಿನ ಬಡ್ಡಿಯ ದರ ಉಳ್ಳ ಸಾಲಕ್ಕೆ ಮಾತ್ರ ಪರಿವರ್ತನೆ ಸಾಧ್ಯ. ಇಂಥ ಪರಿವರ್ತನೆಯಿಂದ ಋಣ ತೀರುವ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರಕುವುದಷ್ಟೇ ಪ್ರಯೋಜನ. ಋಣಪರಿವರ್ತನೆಯಿಂದ ಬಡ್ಡಿಯ ಹೊರೆ ಕಡಿಮೆ ಮಾಡುವ ಉದ್ದೇಶ ಇಂಥ ಸಂದರ್ಭದಲ್ಲಿ ಸಫಲವಾಗುವುದಿಲ್ಲ. ಋಣಪರಿವರ್ತನೆಯಿಂದ ಬಡ್ಡಿಯ ಹೊರೆ ಕಡಿಮೆಯಾಗುವಂತಿದ್ದರೆ ಅದರಿಂದ ತೆರಿಗೆದಾರರಿಗೂ ಅನುಕೂಲವುಂಟು. ಬಡ್ಡಿಯ ಪಾವತಿಗಾಗಿ ಜನರ ಮೇಲೆ ಬೀಳುವ ತೆರಿಗೆಯ ಭಾರ ಇಳಿಯುತ್ತದೆ. ಸರ್ಕಾರಕ್ಕೆ ಸಾಲ ಕೊಟ್ಟಿರುವ ಸಾರ್ವಜನಿಕರಿಗೂ ಋಣಪರಿವರ್ತನೆಯಿಂದ ತೊಂದರೆಯಿಲ್ಲವೆಂಬ ಅಭಿಪ್ರಾಯವಿದೆ. ಸಾಲದ ಬಡ್ಡಿಯ ದರ ಕಡಿಮೆಯಾಗುವುದಾದರೂ ಅದು ಸಾಮಾನ್ಯವಾಗಿ ದೇಶದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿಯೇ ಇರುತ್ತದೆ. ಅದರ ವರಮಾನ ಕಡಿಮೆಯಾದರೂ ಅದಕ್ಕೆ ತಕ್ಕಂತೆ ತೆರಿಗೆಯ ಭಾರವೂ ಇಳಿಯುವುದರಿಂದ ಅವರಿಗೆ ಒಟ್ಟಿನಲ್ಲಿ ಹೆಚ್ಚಿನ ನಷ್ಟ ಸಂಭವಿಸಲಾರದು. (ಬಿ.ಎಸ್.ಎಸ್.ಎ.)

**ಋಣಿಕೆ ಟಿಪ್ಪಣಿ:** ಸ್ಥೂಲವಾಗಿ ಬಿಕರಿಪಟ್ಟಿಯನ್ನೇ (ಇನ್‌ವಾಯ್ಸ್) ಹೋಲುವ ಒಂದು ದಾಖಲೆ; ಒಬ್ಬನ ಲೆಕ್ಕಪುಸ್ತಕಗಳಲ್ಲಿ ಇನ್ನೊಬ್ಬನ ಲೆಕ್ಕವನ್ನು ಇಂತಿಷ್ಟು ಋಣಿಸಲಾಗಿದೆಯೆಂದು (ಡೆಬಿಟೆಡ್) ಮೊದಲನೆಯವನು ಎರಡನೆಯವನಿಗೆ ತಿಳಿಸುವ ಟಿಪ್ಪಣಿ (ಡೆಬಿಟ್ ನೋಟ್).

ಮಾರಾಟವಾದ ಸರಕುಗಳನ್ನು ಕಳಿಸುವಾಗ ಮಾರಾಟಗಾರ ಖರೀದಿದಾರನಿಗೆ ಬಿಕರಿಪಟ್ಟಿ ಕಳಿಸುತ್ತಾನೆ. ಇದರಲ್ಲಿ ಸಂಬಂಧಪಟ್ಟ ಸರಕುಗಳ ವಿವರಗಳಿದ್ದು ಖರೀದಿದಾರ ಮಾರಾಟಗಾರನಿಗೆ ಕೊಡಬೇಕಾದ ಮೊಬಲಗು ನಮೂದಾಗಿರುತ್ತದೆ. ಈ ಮೊಬಲಗು ತಪ್ಪಾಗಿರಬಹುದು; ಸರಿಯಾದ ಮೊತ್ತಕ್ಕಿಂತ ಹೆಚ್ಚಾಗಿಯಾಗಲಿ ಕಡಿಮೆಯಾಗಿಯಾಗಲಿ ಇರಬಹುದು. ಮೊಬಲಗು ಕಡಿಮೆಯಾಗಿದ್ದಾಗ ಸರಿಯಾದ ಮೊತ್ತಕ್ಕೂ ಬಿಕರಿಪಟ್ಟಿಯಲ್ಲಿ ಸೂಚಿಸಲಾಗಿರುವ ಮೊಬಲಗಿಗೂ ಇರುವ ವ್ಯತ್ಯಾಸದ ಹಣವನ್ನು ಖರೀದಿದಾರ ಬಿಕರಿದಾರನಿಗೆ ಕೊಡಬೇಕಾಗುತ್ತದೆ. ಬಿಕರಿದಾರ ಖರೀದಿದಾರನ ಲೆಕ್ಕವನ್ನು ಈ ಹಣಕ್ಕೆ ಋಣಿಸಿ ಈ ತಿದ್ದುಪಡಿಯನ್ನು ಖರೀದಿದಾರನ ತಿಳಿವಳಿಕೆಗಾಗಿ ಟಿಪ್ಪಣಿಯ ರೂಪದಲ್ಲಿ ಕಳುಹಿಸಿಕೊಡುತ್ತಾನೆ.

ಒಂದು ವೇಳೆ ಬಿಕರಿಪಟ್ಟಿಯಲ್ಲಿ ಸರಿಯಾದ ಮೊಬಲಗಿಗಿಂತ ಹೆಚ್ಚು ಸೂಚಿತವಾಗಿದ್ದರೆ ಆಗ ಬಿಕರಿದಾರ ಈ ವ್ಯತ್ಯಾಸಕ್ಕೆ ಖರೀದಿದಾರನ ಲೆಕ್ಕವನ್ನು ಧನಿಸಲಾಗಿದೆ ಎಂದು ತಿಳಿಸಿ ಖರೀದಿದಾರನಿಗೆ ಟಿಪ್ಪಣಿ ಕಳುಹಿಸಬಹುದು (ಇದು–ಧನಿಕ ಟಿಪ್ಪಣಿ); ಅಥವಾ ಇದನ್ನು ಖರೀದಿದಾರನೇ ಕಂಡುಹಿಡಿದರೆ ಆತ ತನ್ನ ಪುಸ್ತಕದಲ್ಲಿ ಬಿಕರಿದಾರನ ಲೆಕ್ಕದಲ್ಲಿ ಇಷ್ಟು ಹಣ ಋಣಿಸಲಾಗಿದೆಯೆಂದು ಬಿಕರಿದಾರನಿಗೆ ತಿಳಿಸಬೇಕಾಗಬಹುದು. ಇದು ಋಣಿಕೆ ಟಿಪ್ಪಣಿ ಕಳಿಸಬೇಕಾದ ಇನ್ನೊಂದು ಸಂದರ್ಭ.

ಎರಡನೆಯದಾಗಿ ಬಿಕರಿದಾರನಿಂದ ಖರೀದಿದಾರ ಕೊಂಡ ಸರಕನ್ನು ಯಾವುದಾದರೂ ಯೋಗ್ಯಕಾರಣಗಳಿಗಾಗಿ ಬಿಕರಿದಾರನಿಗೆ ಹಿಂದಿರುಗಿಸಿದಾಗ ಋಣಿಕೆ ಟಿಪ್ಪಣಿ ಕಳಿಸುತ್ತಾನೆ. ಇಂಥ ಖರೀದಿ ವಾಪಸಾತಿ (ಪರ್ಚೇಸ್ ರಿಟರ್ನ್ಸ್) ಸಂದರ್ಭದಲ್ಲಿ ಕಳಿಸುವ ಋಣಿಕೆ ಟಿಪ್ಪಣಿಯಲ್ಲಿ ವಾಪಸು ಕಳಿಸುತ್ತಿರುವ ಸರಕಿನ ವಿವರಗಳೂ ಋಣಿಕೆ ಟಿಪ್ಪಣಿ ನಮೂದಾಗಿರುತ್ತವೆ.

ಮೂರನೆಯದಾಗಿ ಬಿಕರಿಪಟ್ಟಿಯಲ್ಲಿ ನಮೂದಾಗಿರುವ ಸರಕುಗಳಲ್ಲಿ ಕೆಲವು ತಲುಪದಿದ್ದರೆ ಅಥವಾ ಹಾನಿಗೊಂಡಿದ್ದರೆ ಕಡಿಮೆ ಬಿದ್ದಿರುವ ಸರಕಿನ ಬಗ್ಗೆ ಖರೀದಿದಾರನ ಋಣಿಕೆ ಟಿಪ್ಪಣಿ ಕಳಿಸುತ್ತಾನೆ. ಇದೇ ರೀತಿ, ಒಪ್ಪಂದದಲ್ಲಿ ಇಲ್ಲದ ವೆಚ್ಚವಾವುದಾದರೂ ಬಿಕರಿಪಟ್ಟಿಯಲ್ಲಿ ಸೇರಿದ್ದರೆ ಅದನ್ನು ಸರಿಪಡಿಸಲೂ ಖರೀದಿದಾರ ಋಣಿಕೆ ಟಿಪ್ಪಣಿ ಕಳಿಸುತ್ತಾನೆ.

ಬಿಕರಿ–ಖರೀದಿಗಳೇ ಅಲ್ಲದೆ ಬೇರೆ ಬಗೆಯ ವ್ಯವಹಾರಗಳಲ್ಲೂ ಒಬ್ಬನ ಪುಸ್ತಕಗಳಲ್ಲಿ ಇನ್ನೊಬ್ಬನ ಲೆಕ್ಕವನ್ನು ಋಣಿಸಿದಾಗ ಋಣಿಕೆಪಟ್ಟಿ ಕಳಿಸುವ ವಾಡಿಕೆಯಿದೆ. ಉದಾಹರಣೆ: ಬ್ಯಾಂಕು ವ್ಯವಹಾರಗಳಲ್ಲಿ ಗ್ರಾಹಕನ ಲೆಕ್ಕವನ್ನು ಋಣಿಸುವಾಗ.

ಋಣಿಕೆ ಟಿಪ್ಪಣಿಯಲ್ಲಿ ಕ್ರಮಸಂಖ್ಯೆಯೂ ಋಣಿಕೆ ಟಿಪ್ಪಣಿ ಕಳಿಸುವವನ ಹಾಗೂ ಋಣಿಕೆಗೆ ಒಳಗಾದವನ ಪೂರ್ಣ ವಿಳಾಸಗಳೂ ಇದ್ದು, ಋಣಿಕೆ ಪಡೆದವನನ್ನು ಉದ್ದೇಶಿಸಿ ಕಳಿಸಲಾಗುತ್ತದೆ.

ಇಂಥ ಒಂದು ಋಣಿಕೆ ಟಿಪ್ಪಣಿಯ ಮಾದರಿಯನ್ನು ಮುಂದೆ ಕೊಟ್ಟಿದೆ.

ಋಣಿಕೆ ಟಿಪ್ಪಣಿ ಸಂ. 5

ದೂರವಾಣಿ : 96789 — 37, ಮಂಡಿಪೇಟೆ

ತಂತಿ: " ಕೊಂಡಯ್ಯ " — ದಾವಣಗೆರೆ

ಶ್ರೀ ಮಾರಪ್ಪನವರು, — ಋಣಿ

15, ಸಂತೇಪೇಟೆ,

ಮೈಸೂರು.

ಕೊಂಡಯ್ಯ ಅವರಿಗೆ

| ದಿನಾಂಕ | ವಿವರ | | ಮೊಬಲಗು |
|---|---|---|---|
| 1970 ಜ. 6 | 4ನೆಯ ಜನವರಿ 1970ರ ಬಿಕರಿಪಟ್ಟಿ ಸಂ.49ರಲ್ಲಿ ಕಂಡು ಬಂದ ತಪ್ಪಿಗಾಗಿ | ರೂ. | ರೂ. ಪೈ. 16 00 16 00 |

(ಡಿ.ಎನ್.ಎಸ್.ಎಂ.)

**ಋಣಿ ರಾಷ್ಟ್ರ:** ಬಡ್ಡಿ ಮತ್ತು ಲಾಭಾಂಶಗಳ ರೂಪದಲ್ಲಿ ಇತರ ದೇಶಗಳಿಂದ ಪಡೆಯುವ ಮೊತ್ತಕ್ಕಿಂತ ಅಧಿಕ ಮೊತ್ತವನ್ನು ಈ ರೂಪದಲ್ಲಿ ಆ ದೇಶಗಳಿಗೆ ತೆರುವ ದೇಶ (ಡೆಟರ್‌ನೇಶನ್). ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಸಾಮಾನ್ಯವಾಗಿ ಈ ಅವಸ್ಥೆಯಲ್ಲಿರುತ್ತವೆ. ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿನ ಎಲ್ಲ ಜನಾಂಗಗಳ ಕ್ಷೇಮಾಭ್ಯುದಯ ಸಾಧನೆಯೇ ಇತ್ತೀಚಿನ ಆರ್ಥಿಕ ಸಮಸ್ಯೆ. ಪ್ರಪಂಚದ ಎಲ್ಲ ರಾಷ್ಟ್ರಗಳೂ ಅವುಗಳ ಅವಶ್ಯಕತೆಗಳಿಗನುಗುಣವಾಗಿ ಪ್ರಕೃತಿದತ್ತವಾದ ಸಂಪತ್ತು ಮತ್ತು ಇತರ ಉತ್ಪನ್ನಗಳ ಸೌಲಭ್ಯ ಹೊಂದಿರುವುದಿಲ್ಲ. ಆಹಾರ, ಬಟ್ಟೆ, ವಸತಿ ಮತ್ತು ಇತರ ಭೋಗಭಾಗ್ಯಗಳಿಗೆ ಬೇಕಾಗುವ ವಸ್ತುಗಳು ಸಾಮಾನ್ಯವಾಗಿ ಪ್ರಪಂಚದ ಎಲ್ಲ ಜನರಿಗೂ ಬೇಕು. ಆದರೆ, ಒಂದೊಂದು ದೇಶಕ್ಕೆ ಒಂದೊಂದು ರೀತಿಯ ನೈಸರ್ಗಿಕ ಉತ್ಪನ್ನ ಸಾಧನಗಳಿವೆ. ವಿಸ್ತಾರವಾಗಿ ಹರಡಿರುವ ಜನರ ಬೇಡಿಕೆಗಳ ಪೂರೈಕೆಯ ಸಲುವಾಗಿ ಈ ಉತ್ಪನ್ನ ಸಾಧನಗಳನ್ನು ರೂಢಿಸುವುದು ಆರ್ಥಿಕಾಭ್ಯುದಯದ ಸುಮಾರ್ಗ. ಈ ಗುರಿಯ ಸಾಧನೆಗಾಗಿ ನಡೆದಿರುವ ಆಧುನಿಕ ಪ್ರಯತ್ನಗಳಲ್ಲಿ ಅಂತರರಾಷ್ಟ್ರೀಯ ಶ್ರಮ ವಿಭಜನೆ ಮತ್ತು ಪರಸ್ಪರ ಅವಲಂಬನೆಗಳು ಅನಿವಾರ್ಯವಾಗಿವೆ. ಪ್ರತಿಯೊಬ್ಬರೂ ದಿನಚರಿಯಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಅನೇಕ ವಿದೇಶೀ ವಸ್ತುಗಳನ್ನೂ ಪರದೇಶೀಯರಿಗಾಗಿ ತಯಾರಿಸುವ ವಸ್ತುಗಳನ್ನೂ ಎಣಿಸಿದರೆ ಈ ಅಂಶ ವ್ಯಕ್ತವಾಗುತ್ತದೆ. ಪ್ರಪಂಚವೆಲ್ಲವೂ ಏಕೈಕ ಆರ್ಥಿಕಕ್ಷೇತ್ರವೆಂದು ಭಾವಿಸಿ ಜನಾಂಗಗಳ ಅನ್ಯೋನ್ಯ ಹಿತದೃಷ್ಟಿಯಿಂದ ಆರ್ಥಿಕ ಚಟುವಟಿಕೆಗಳನ್ನು ನಡೆಸುವುದೇ ಸಂಪೂರ್ಣ ಆರ್ಥಿಕ ಅಂತರರಾಷ್ಟ್ರೀಯತೆ ಎನ್ನಬಹುದು. ಈ ಸಂಪೂರ್ಣ ಆರ್ಥಿಕ ಅಂತರರಾಷ್ಟ್ರೀಯ ಧ್ಯೇಯದ ಹಿನ್ನೆಲೆಯಲ್ಲೇ ವಿಶ್ವಸಂಸ್ಥೆಯ ಆರ್ಥಿಕ ಅಂಗಸಂಸ್ಥೆಗಳು ರೂಪುಗೊಂಡಿವೆ. ಹೀಗೆ ಈ ಆರ್ಥಿಕ ಭಾಗಗಳು ದೇಶದ ಹಿತದೃಷ್ಟಿಯಿಂದ ಆರ್ಥಿಕ ವಿಕಾಸಕ್ಕಾಗಿ ಸಾಲ ಕೊಡುತ್ತವೆ. ಆರ್ಥಿಕ ಮಟ್ಟಗಳಲ್ಲಿ ಹಿಂದುಳಿದಿರುವ ರಾಷ್ಟ್ರಗಳು ಪಡೆಯುತ್ತಿರುವ ವಿಶ್ವಬ್ಯಾಂಕಿನ ಮತ್ತು ಅಂತರರಾಷ್ಟ್ರೀಯ ವಿನಿಮಯ ನಿಧಿಯ ಸಾಲಗಳೇ ಉದಾಹರಣೆಗಳು. ಈ ಸಂಸ್ಥೆಗಳು ಆರ್ಥಿಕ ವಿಕಾಸಕ್ಕೆ ಕೊಡುತ್ತಿರುವ ನೆರವಿನ ಜೊತೆಗೆ ಬಂಡವಾಳವಾದಿ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ಸಾಲವನ್ನು ಕೊಡುತ್ತಿವೆ. ಒಂದು ರಾಷ್ಟ್ರದ ಉದ್ಯಮಿಗಳು ಇನ್ನೊಂದು ರಾಷ್ಟ್ರದ ಉದ್ಯಮಗಳಲ್ಲಿ ಬಂಡವಾಳ ಹೂಡುವುದೂ ಮುಂದುವರಿದ ರಾಷ್ಟ್ರದ ಉದ್ಯಮಗಳ ಯಂತ್ರತಂತ್ರ ನೆರವನ್ನು ಹಿಂದುಳಿದ ರಾಷ್ಟ್ರ ಪಡೆಯುವುದೂ ಸಾಧ್ಯವಾಗುವಂತೆ ಈ ಎರಡು ರಾಷ್ಟ್ರಗಳ ಉದ್ಯಮಿಗಳೂ ಪರಸ್ಪರ ಸಹಯೋಗದ ಒಪ್ಪಂದ ಮಾಡಿಕೊಳ್ಳುವುದೂ ಸಾಮಾನ್ಯವಾಗಿವೆ. ಮುಂದುವರಿದ ರಾಷ್ಟ್ರದ ಉದ್ಯಮಿಗಳು ಹೀಗೆ ಹೂಡಿದ ಬಂಡವಾಳಕ್ಕೆ ಪ್ರತಿಯಾಗಿ ಬಡ್ಡಿ, ಲಾಭದಲ್ಲಿ ಪಾಲು ಅಥವಾ ಲಾಭಾಂಶವನ್ನು ಪಡೆಯುವುದು ಸಾಮಾನ್ಯ. ಒಂದು ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಸಾಲಗಳು ಒಂದು ಮುಖ್ಯ ಪಾತ್ರವನ್ನೇ ವಹಿಸಿವೆ.

ಒಂದು ರಾಷ್ಟ್ರದ ಸರ್ಕಾರ ಆರ್ಥಿಕಾಭಿವೃದ್ಧಿಗಾಗಿ ಪರರಾಷ್ಟ್ರಗಳಿಂದ ನೇರವಾಗಿ ಸಾಲ ಎತ್ತುವುದೂ ರೂಢಿಗೆ ಬಂದಿದೆ. ಬೇರೊಂದು ರಾಷ್ಟ್ರದ ಸರ್ಕಾರದಿಂದಾಗಲಿ ಅಲ್ಲಿನ ಮೂಲಗಳಿಂದಾಗಲಿ ಅಂತರರಾಷ್ಟ್ರೀಯ ಸಂಸ್ಥೆಗಳಿಂದಾಗಲಿ ಸಾಲ ಪಡೆಯಬಹುದು. ಇದು ಆ ರಾಷ್ಟ್ರದ ಸಾರ್ವಜನಿಕ ಋಣದ ಒಂದು ಭಾಗ. [ಸರ್ಕಾರ ಅಂತರ್ದೇಶೀಯವಾಗಿ ಎತ್ತುವ ಸಾಲವೇ ಸಾರ್ವಜನಿಕ ಋಣದ ಇನ್ನೊಂದು ಭಾಗ. ಇದಕ್ಕೆ ಸರ್ಕಾರ ನೇರವಾಗಿ ಬಡ್ಡಿ ತೆರುತ್ತದೆ. ಸರ್ಕಾರದ ಪ್ರವರ್ತನೆಯಿಂದ ಸ್ಥಾಪಿಸಲಾದ ಉದ್ಯಮಗಳಲ್ಲಿ ಈ ಬಂಡವಾಳ ನೇರವಾಗಿ ನಿಯೋಜನೆಯಾಗಿದ್ದರೆ ಕರಾರಿಗನುಗುಣವಾಗಿ ಆ ಸಂಸ್ಥೆಯಿಂದ ಹೊರ ದೇಶಕ್ಕೆ ಲಾಭಾಂಶ ಸಲ್ಲಬಹುದು. ಒಂದು ದೇಶದ ಸರ್ಕಾರವಾಗಲಿ ಖಾಸಗಿ ಉದ್ಯಮ ಸಂಸ್ಥೆಗಳಾಗಲಿ ಆ ದೇಶದೊಳಗಡೆಯೇ ಎಷ್ಟು ಸಾಲ ಎತ್ತಿದರೂ ಅದರ ಮೇಲೆ ಕೊಡುವ ಬಡ್ಡಿಯ ಹಣ ಆ ದೇಶದವರಿಗೇ ಸಲ್ಲುತ್ತದೆ. ಇದು ಆ ದೇಶದ ಗಡಿ ಬಿಟ್ಟು ಸಾಗುವುದಿಲ್ಲ. ಆದರೆ ವಿದೇಶೀ ಸಾಲ ಅಥವಾ ಬಂಡವಾಳ ನಿಯೋಜನೆ ಆ ಬಗೆಯದಲ್ಲ. ಇಲ್ಲಿ ಆಗುವ ಸಂಪತ್ತಿನ ವರ್ಗಾವಣೆ ಆಂತರಿಕವಲ್ಲ; ಅಂತರರಾಷ್ಟ್ರೀಯ. ಇದು ಬಲು ಮುಖ್ಯವಾದ ವ್ಯತ್ಯಾಸ. ಋಣಿ ರಾಷ್ಟ್ರದಿಂದ ಧನಿ ರಾಷ್ಟ್ರಕ್ಕೆ ಸಂದಾಯವಾದ ಕಂತು, ಬಡ್ಡಿ ಮುಂತಾದವು ಆ ದೇಶದ ಜನರ ಮೇಲೆ ನೇರವಾಗಿ ಹೊರಿಸಿದ ಭಾರ. ವಿದೇಶೀಯರು ಪಡೆದ ಹಣದಿಂದ ಅವರು ಋಣಿ ರಾಷ್ಟ್ರದ ಸರಕು ಸೇವೆಗಳ ಮೇಲೆ ಹಿಡಿತ ಹೊಂದಿದಂತಾಗುತ್ತದೆ. ಋಣಿ ರಾಷ್ಟ್ರದ ಸರಕು ಸೇವೆಗಳನ್ನು ಅವರು ಕೊಳ್ಳುವುದರಿಂದ ಅಷ್ಟರಮಟ್ಟಿಗೆ ಅವುಗಳ ಉಪಯೋಗ ಆ ರಾಷ್ಟ್ರದ ಜನರಿಗೆ ತಪ್ಪಿದಂತೆ. ವಿದೇಶೀ ಸಾಲ ಅಥವಾ ಬಂಡವಾಳ ನಿಯೋಜನೆ ಇಲ್ಲದಿದ್ದರೆ ಎಷ್ಟು ಸರಕು ಸೇವೆಗಳ ಉತ್ಪಾದನೆಯಾಗುತ್ತಿತ್ತೋ ಅದಕ್ಕೂ ಹೆಚ್ಚಿನ ಪರಿಮಾಣದಲ್ಲಿ ಇವುಗಳ ಉತ್ಪಾದನೆ ಸಾಧ್ಯವಾದಾಗ ಮಾತ್ರ ಇದು ಋಣಿ ರಾಷ್ಟ್ರಕ್ಕೆ ಲಾಭಕರ. ಇಲ್ಲದಿದ್ದರೆ ಇದು ರಾಷ್ಟ್ರದ ಜನರ ಮೇಲೆ ಪ್ರತ್ಯಕ್ಷವಾದ ಹೊರೆಯಾಗುತ್ತದೆ. ಎತ್ತಿದ ಸಾಲದ ಮೇಲೆ ಸರ್ಕಾರ ನೇರವಾಗಿ ಬಡ್ಡಿ ಹಾಗೂ ಕಂತು ಕೊಡಬೇಕಾಗಿ ಬಂದಾಗ ಇದಕ್ಕಾಗಿ ಸರ್ಕಾರ ಪ್ರಜೆಗಳ ಮೇಲೆ ಹೆಚ್ಚು ತೆರಿಗೆ ಹೇರಬೇಕಾಗಿ ಬರಬಹುದು. ಇದರಿಂದ ಜನರ ಉಳಿತಾಯ ಪ್ರವೃತ್ತಿಯೂ ಬಂಡವಾಳ ಶೇಖರಣೆಯೂ ಕಡಿಮೆಯಾಗಿ ಉತ್ಪಾದನೆ ಕುಂಠಿತಗೊಳ್ಳಬಹುದು.

ಆದ್ದರಿಂದ ಖಾಸಗಿ ವಲಯದಲ್ಲೆ ಆಗಲಿ ಸರ್ಕಾರಿ ವಲಯದಲ್ಲೆ ಆಗಲಿ ವಿದೇಶೀ ಬಂಡವಾಳದ ಅಥವಾ ಅಂತರರಾಷ್ಟ್ರೀಯ ಸಂಸ್ಥೆಗಳ ಸಾಲದ ನೆರವು ಪಡೆಯುವಾಗ ಇದರಿಂದ ಋಣಿ ರಾಷ್ಟ್ರಕ್ಕೆ ಅಂತಿಮವಾಗಿ ದೊರಕುವ ಪ್ರಯೋಜನವೆಷ್ಟೆಂಬುದನ್ನು ಕುರಿತು ವಿವೇಚಿಸುವುದು ಅವಶ್ಯವಾಗಿರುತ್ತದೆ.

ಪರ ರಾಷ್ಟ್ರಗಳಿಂದ ಪಡೆಯುವ ಋಣದ ತೀರುವೆಗಾಗಿ ಸುವ್ಯವಸ್ಥಿತ ನಿಧಿಯ ರಚನೆಯಾಗದಿದ್ದರೆ, ಈ ಹಣದಿಂದ ಲಾಭದಾಯಕ ನಿಯೋಜನೆಯಾಗದಿದ್ದರೆ ಈ ಸಾಲ ಅಪ್ರಯೋಜಕವಾಗುವುದಲ್ಲದೆ ಇದು ಋಣಿ ರಾಷ್ಟ್ರವನ್ನು ಅನಿರೀಕ್ಷಿತ ಆರ್ಥಿಕ ಮುಗ್ಗಟ್ಟಿಗೆ ಗುರಿಮಾಡುತ್ತದೆ. ಆದಾಗ್ಯೂ ಇಂಥ ಸಾಲಗಳನ್ನು ಅಭಿವೃದ್ಧಿ ಹೊಂದ ಬಯಸುವ, ಹೆಚ್ಚು ಬಂಡವಾಳವಿಲ್ಲದ ರಾಷ್ಟ್ರಗಳು ಪಡೆಯಲೇಬೇಕಾಗುತ್ತದೆ. ಈ ಸಾಲಗಳನ್ನು ಒದಗಿಸುವ ನಿಮಿತ್ತವಾಗಿ ಮತ್ತು ಹಿಂದುಳಿದ ರಾಷ್ಟ್ರಗಳ ಹಿತದೃಷ್ಟಿಯಿಂದ ಆಧುನಿಕ ಪ್ರಪಂಚದ ಆರ್ಥಿಕ ಕ್ಷೇತ್ರದಲ್ಲಿ ಅನೇಕಾನೇಕ ಯೋಜನೆಗಳೂ ಸಾಲಗಳನ್ನು ಒದಗಿಸುವ ಸಂಸ್ಥೆಗಳೂ ಜನಿಸಿವೆ. ಇವುಗಳಿಂದ ಒದಗಬಹುದಾದ ಸಾಲಗಳು ಬಹಳಮಟ್ಟಿಗೆ ನಿಗದಿಯಾದ ಸಾಲಗಳು, ಗೊತ್ತಾದ ಅಭಿವೃದ್ಧಿ ಕಾರ್ಯಗಳಿಗಾಗಿಯೇ ನೀಡಲಾದಂಥವು. ರಾಷ್ಟ್ರದ ಆರ್ಥಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟು ರಾಷ್ಟ್ರದ ಹಿತದೃಷ್ಟಿಯಿಂದ ನೆರವು ಸಾಲ ಪಡೆಯಬೇಕೆಂಬುದು ನಿರ್ವಿವಾದ.

*

**ಋತ:** ಋತವೆಂದರೆ ವಿಶ್ವನಿಯಮ, ವಿಶ್ವಕ್ರಮ ಮತ್ತು ನಿತ್ಯಸತ್ಯ. ವಿಶ್ವದ ಸಕಲ ವ್ಯಾಪಾರಗಳೂ ಒಂದು ಕ್ರಮಕ್ಕೆ, ನಿಯಮಕ್ಕೆ ಅಧೀನವಾಗಿವೆ. ಪ್ರಜ್ಞಾ ಚಕ್ಷುಸ್ಸಿಗೆ ಈ ಕ್ರಮದಲ್ಲಿ ಒಂದು ಲಯಬದ್ಧತೆ, ಒಂದು ಸೌಂದರ್ಯ ಗೋಚರವಾಗುತ್ತದೆ. ಈ ಲಯಬದ್ಧವಾದ ಸುಂದರವಾದ ವಿಶ್ವವ್ಯಾಪಾರಕ್ಕೆ ಪ್ರೇರಕವಾದ ಮೂಲ ಶಕ್ತಿಯೂ ಋತವೇ. ಆ ಮೂಲಶಕ್ತಿಯ ಅಭಿವ್ಯಕ್ತಿಯೇ ಪ್ರಕಾಶವೇ ಈ ಚರಾಚರ ಜಗತ್ತು. ಹೀಗೆ ಅಭಿವ್ಯಕ್ತವಾದ ಈ ಜಗತ್ತು ಋತಶಕ್ತಿಯ ಮತ್ತೊಂದು ರೂಪವಷ್ಟೇ. ಋತವೇ ಸತ್ಯ. ಸತ್ಯವೆಂದರೂ ಶಾಶ್ವತವಾದ ಅನಂತಸ್ಥಾಯಿಯಾದ ತತ್ತ್ವವೆಂದರ್ಥ. ಸತ್ಯವೆಂದರೆ ಅನಿತ್ಯಾತ್ಮಕವಾದ ಜಗತ್ತನ್ನೊಳಗೊಂಡ ನಿತ್ಯಾತ್ಮಕ ತತ್ತ್ವ ಎಂದು ಉಪನಿಷತ್ ಹೇಳುತ್ತದೆ.

ಆದುದರಿಂದ ಋತದ ಸ್ವರೂಪ ಎರಡು ವಿಧ. ಒಂದು–ವ್ಯತ್ಯಾಸವನ್ನು ಹೊಂದುವ ಜಗದ್ ವ್ಯವಹಾರಗಳ ನಡುವೆ ವ್ಯತ್ಯಾಸವನ್ನು ಹೊಂದದೆ ಸ್ಥಾವರವೂ ನಿತ್ಯನಿಯಾಮಕವೂ ಆಗಿರುವ ಆದಿಶಕ್ತಿ. ಎರಡನೆಯದು–ಜಗತ್ತನ್ನೆಲ್ಲ ವ್ಯಾಪಿಸಿಕೊಂಡು ಕಾಲದೇಶಗಳ ನಿಯಮವನ್ನು ಪಾಲಿಸುವ ವ್ಯಾವಹಾರಿಕ ಶಕ್ತಿ. ಎಂದರೆ ವಿಶ್ವದಲ್ಲಿ ಯಾವ ಯಾವ ವ್ಯವಹಾರಗಳು ನಡೆಯುವುವೋ ಅವೆಲ್ಲವೂ ಋತದ ನಿಯಮವನ್ನೇ ಅನುಸರಿಸುತ್ತಿವೆಯೆಂದರ್ಥ.

ಋತದ ಸಹಾಯದಿಂದಲೆ ಇಂದ್ರ, ವರುಣ, ಆದಿತ್ಯ, ಅಗ್ನಿಮಿತ್ರ ಮುಂತಾದ ದಿವ್ಯಶಕ್ತಿಗಳಿಗೆ ಸ್ಫೂರ್ತಿ ದೊರಕುವುದು; ಅನಂತವೂ ಗಂಭೀರವೂ ಆದ ದ್ಯಾವಾ ಪೃಥಿವಿಗಳ ಅಸ್ತಿತ್ವ ಮತ್ತು ವಿಸ್ತೃತಿಗೆ ಋತವೇ ಆಧಾರ; ಸಕಲ ಲೋಕಗಳೂ ಅವುಗಳ ಸಕಲ ವ್ಯಾಪಾರಗಳೂ ಋತಕ್ಕೆ ಅಧೀನವಾಗಿ ಅವುಗಳೆಲ್ಲ ಋತದಲ್ಲಿ ಅಂತರ್ಗತವಾಗಿವೆ; ಋತದ ಶಕ್ತಿ ಅಕ್ಷಯವಾದದ್ದು ಮತ್ತು ಅಕುಂಠಿತವಾದದ್ದು ಎಂದು ಶ್ರುತಿ ವರ್ಣಿಸುತ್ತದೆ. ಅಲ್ಲಿಗೆ ಋತಶಕ್ತಿಗೂ ಪರಂಜ್ಯೋತಿ ತತ್ತ್ವವಾದ ಪರಬ್ರಹ್ಮಕ್ಕೂ ತಾದಾತ್ಮ್ಯವನ್ನು–ಐಕ್ಯವನ್ನು–ಸ್ಥಾಪಿಸುತ್ತದೆಯೆಂದು ತೈತ್ತಿರೀಯ ಉಪನಿಷತ್ ತಿಳಿಸುತ್ತದೆ.

ಋತದ ಪಾಲನೆ ಯಜ್ಞದಿಂದ. ವಿಶ್ವವೆಲ್ಲ ಯಜ್ಞಮಯ. ಈ ವೈಶ್ವೀಯಜ್ಞ ಪಾಲನೆ, ಪೋಷಣೆ ಋತಗೋಪರಾದ ದೈವೀಶಕ್ತಿಗಳ ಮತ್ತು ಮಾನವರ ಅನ್ಯೋನ್ಯ ಭಾವನೆಯಿಂದ. ಅನ್ಯೋನ್ಯ ಭಾವಯನ್ತಃ ಶ್ರೇಯಃ ಪರಂ ಅವಾಪ್ಸ್ಯಥ ಎಂದು ಗೀತೆ ಬೋಧಿಸುತ್ತದೆ **(ನೋಡಿ– ಅವ್ಯವಸ್ಥೆ).** (ಸಿ.ಜಿ.ಪಿ.)

**ಋತುಗಳು:** ಕಾಂತಿವೃತ್ತದ ಮೇಲೆ ಸೂರ್ಯನ ನಾಲ್ಕು ನಿರ್ದಿಷ್ಟ ಸ್ಥಾನಗಳನ್ನು ಅವಲಂಬಿಸಿ ಉಂಟಾಗುವ ವರ್ಷದ ನಾಲ್ಕು ಸಹಜ ವಿಭಾಗಗಳು (ಸೀಸನ್ಸ್). ಯಾವುದೇ ಗ್ರಹಕ್ಕೆ ಬೆಳಕು ಉಷ್ಣ ಮೊದಲಾದ ಶಕ್ತಿದಾಯಕ ಆಕರ ಸೂರ್ಯ. ಸೂರ್ಯನಿಂದ ಪ್ರವಹಿಸುವ ಶಕ್ತಿ ಸರಿಸುಮಾರಾಗಿ ಏಕಪ್ರಕಾರವಾಗಿಯೇ ಇದ್ದರೂ ಗ್ರಹ ಅದನ್ನು ಅದೇ ದರದಲ್ಲಿ ಸ್ವೀಕರಿಸುತ್ತದೆ ಎನ್ನುವಂತಿಲ್ಲ. ಸ್ವೀಕರಣೆ ಮುಖ್ಯವಾಗಿ ನಾಲ್ಕು ಅಂಶಗಳನ್ನು ಅವಲಂಬಿಸಿದೆ– ಗ್ರಹ ಸೂರ್ಯನನ್ನು ಪರಿಭ್ರಮಿಸಲು ತೆಗೆದುಕೊಳ್ಳುವ ಕಾಲಾವಧಿ (ಇದು ಗ್ರಹದ ವರ್ಷ); ಸೂರ್ಯನಿಂದ ಗ್ರಹದ ಸರಾಸರಿ ದೂರ (ಇದು ಗ್ರಹದ ಕಕ್ಷೆಯ ತ್ರಿಜ್ಯ); ಗ್ರಹದ ಕಕ್ಷೆಯ ತಲ; ಗ್ರಹದ ಆವರ್ತನಾಕ್ಷದ ವಿನ್ಯಾಸ. ಭೂಮಿಯನ್ನು ಕುರಿತು ಈ ಅಂಶಗಳು ಹೀಗಿವೆ–ಒಂದು ವರ್ಷದ ಉದ್ದ 365.24 ದಿವಸಗಳು; ಕಕ್ಷೆಯ ತ್ರಿಜ್ಯ ಸುಮಾರು 15,60,00,000 ಕಿಮೀ; ಕಕ್ಷಾತಲ ಮತ್ತು ಆವರ್ತನಾಕ್ಷಗಳ ನಡುವಿನ ಕೋನ ಸು. 66°–33'. ಇದರ ಪರಿಣಾಮವಾಗಿ ಕ್ರಾಂತಿವೃತ್ತ (ಕಕ್ಷಾತಲ ಆಕಾಶವೃತ್ತವನ್ನು ಛೇದಿಸುವ ಮಹಾವೃತ್ತ) ಮತ್ತು ವಿಷುವದ್‌ವೃತ್ತಗಳ (ಆವರ್ತನಾಕ್ಷಕ್ಕೆ ಭೂಮಿ ಕೇಂದ್ರದ ಮೂಲಕ ಲಂಬವಾಗಿ ಎಳೆದ ಸಮತಲ ಆಕಾಶಗೋಳವನ್ನು ಛೇದಿಸುವ ಮಹಾವೃತ್ತ) ನಡುವಿನ ಕೋನ 23°27'. ಇವೆರಡು ವೃತ್ತಗಳೂ A, B ಬಿಂದುಗಳಲ್ಲಿ ಛೇದಿಸುತ್ತವೆ. A, B ಆಕಾಶಗೋಳದ ಒಂದು ವ್ಯಾಸ. ಇದರ ಕೇಂದ್ರಬಿಂದುವಿನಲ್ಲಿ ಭೂಮಿ (E) ಇದೆ. ಭೂಮಿವಾಸಿಗಳಾದ ನಮಗೆ ಸೂರ್ಯನ ತೋರ್ಕೆಯ ವಾರ್ಷಿಕ ಚಲನೆ ಕ್ರಾಂತಿವೃತ್ತದಮೇಲೆ

ಇದೆ. ಸೂರ್ಯ $AS_1B$ ಅರ್ಧವೃತ್ತದಲ್ಲಿ ಚಲಿಸುತ್ತಿರುವಾಗ ಉತ್ತರದಲ್ಲಿರುವಂತೆಯೂ (ಅದು ವಿಷುವದ್ವೃತ್ತದ ಉತ್ತರದಲ್ಲಿರುವುದರಿಂದ), $BS_2A$ ಅರ್ಧವೃತ್ತದಲ್ಲಿ ಚಲಿಸುತ್ತಿರುವಾಗ ದಕ್ಷಿಣದಲ್ಲಿರುವಂತೆಯೂ ಭಾಸವಾಗುತ್ತದೆ. ಇಷ್ಟು ಮಾತ್ರವಲ್ಲ. $S_2$ ರಿಂದ $S_1$ ವರೆಗೆ ಸೂರ್ಯನ ಚಲನೆ ಉತ್ತರಾಭಿಮುಖಿಯಾಗಿಯೂ $S_1$ ರಿಂದ $S_2$ವರೆಗೆ ದಕ್ಷಿಣಾಭಿಮುಖ ವಾಗಿಯೂ ಇದೆ. ಭೂಮಿವಾಸಿಗಳಿಗೆ ಈ ವ್ಯತ್ಯಾಸಗಳ ಪರಿಣಾಮಗಳು: (1) ಮಾರ್ಚಿ 21ರಂದು ಸೂರ್ಯನ ದೈನಂದಿನ ಪಥ (ಮೂಡಿ ಮುಳುಗುವ ವರೆಗಿನ ಆಕಾಶಪಥ) ವಿಷುವದ್ವೃತ್ತ. ಅಂದು ಸೂರ್ಯ ನೇರ ಪೂರ್ವ ಬಿಂದುವಿನಲ್ಲಿ ಮೂಡಿ ನೇರ ಪಶ್ಚಿಮ ಬಿಂದುವಿನಲ್ಲಿ ಮುಳುಗುತ್ತದೆ. ಹಗಲು ರಾತ್ರಿಗಳ ಉದ್ದ ಆ ದಿವಸ ಸಮಾನ. (2) ಮುಂದೆ ಸೂರ್ಯನ ದೈನಂದಿನ ಪಥಗಳು ಉತ್ತರಾಭಿಮುಖವಾಗಿ ಜಾರುತ್ತವೆ. ಜೂನ್ 21ರಂದು ಸೂರ್ಯನ ದೈನಂದಿನ ಪಥ ಅತಿ ಉತ್ತರಕ್ಕೆ ಸಾಗಿರುತ್ತದೆ. ಉತ್ತರಾರ್ಧಗೋಳದವರಿಗೆ ಅಂದು ಹಗಲಿನ ಉದ್ದ ಗರಿಷ್ಠ, ರಾತ್ರಿಯ ಉದ್ದ ಕನಿಷ್ಠ, ದಕ್ಷಿಣಾರ್ಧ ಗೋಳದವರೆಗೆ ಇದರ ವ್ಯತಿರಿಕ್ತ ಪರಿಸ್ಥಿತಿ, (3) ಮುಂಬರುವ ದಿವಸಗಳಲ್ಲಿ ದೈನಂದಿನ ಪಥಗಳು ದಕ್ಷಿಣದೆಡೆಗೆ ಸರಿಯುತ್ತವೆ. ಸೆಪ್ಟೆಂಬರ್ 21ರಂದು ಪಥ ಪುನಃ ವಿಷುವದ್ವೃತ್ತ. ಮಾರ್ಚಿ 21ರ ಪರಿಸ್ಥಿತಿಯ ಪುನರಾವರ್ತನೆ. (4) ಅನಂತರದ ದಿವಸಗಳಲ್ಲಿಯೂ ದೈನಂದಿನ ಪಥಗಳು ದಕ್ಷಿಣಾಭಿಮುಖವಾಗಿಯೇ ಜಾರುತ್ತಿರುತ್ತವೆ. ಡಿಸೆಂಬರ್ 21ರಂದು ಇದು ಅತಿದಕ್ಷಿಣದಲ್ಲಿರುವುದು. ಉತ್ತರಾರ್ಧ ಗೋಳದವರಿಗೆ ಇದರ ವ್ಯತಿರಿಕ್ತ ಪರಿಸ್ಥಿತಿ. (5) ತರುವಾಯ ದೈನಂದಿನ ಪಥಗಳು ಉತ್ತರದೆಡೆಗೆ ಸರಿಯುತ್ತವೆ. ಮಾರ್ಚಿ 21ರಂದು ಹಿಂದಿನ ವರ್ಷ ಸಂಭವಿಸಿದ ಪರಿಸ್ಥಿತಿಯ ಪುನರಾವರ್ತನೆ ಆಗುವುದು.




| ಅವಧಿ | ಸೂರ್ಯನ ದೈನಂದಿನ ಪಥ | ಹಗಲು ರಾತ್ರಿಗಳಲ್ಲಿ ವ್ಯತ್ಯಾಸ | |
|---|---|---|---|
| | | ಉತ್ತರಾರ್ಧ ಗೋಳದವರಿಗೆ | ದಕ್ಷಿಣಾರ್ಧ ಗೋಳದವರಿಗೆ |
| 1 | 2 | 3 | 4 |
| A ಬಿಂದು ಮಾರ್ಚ್ 21 | ವಿಷುವದ್ವೃತ್ತ | ಉದ್ದಗಳು ಸಮಾನ (ಹಗಲು=ರಾತ್ರಿ) | ಉದ್ದಗಳು ಸಮಾನ (ಹಗಲು=ರಾತ್ರಿ) |
| A ಯಿಂದ $S_1$ರ ವರೆಗೆ | ಉತ್ತರಕ್ಕೆ ಸರಿಯುತ್ತಿದೆ | ಹಗಲು ಏರುತ್ತಿದೆ; ರಾತ್ರಿ ತಗ್ಗುತ್ತಿದೆ (ಹಗಲು>ರಾತ್ರಿ) | ಹಗಲು ತಗ್ಗುತ್ತಿದೆ; ರಾತ್ರಿ ಏರುತ್ತಿದೆ (ಹಗಲು<ರಾತ್ರಿ) |
| $S_1$ ಬಿಂದು ಜೂನ್ 21 | ಅತಿ ಉತ್ತರದಲ್ಲಿದೆ | ಹಗಲು ಗರಿಷ್ಠ ; ರಾತ್ರಿ ಕನಿಷ್ಠ | ಹಗಲು ಕನಿಷ್ಠ ; ರಾತ್ರಿ ಗರಿಷ್ಠ |
| $S_1$ ರಿಂದ Bಯ ವರೆಗೆ | ದಕ್ಷಿಣಕ್ಕೆ ಸರಿಯುತ್ತಿದೆ | ಹಗಲು ತಗ್ಗುತ್ತಿದೆ; ರಾತ್ರಿ ಏರುತ್ತಿದೆ (ಹಗಲು>ರಾತ್ರಿ) | ಹಗಲು ಏರುತ್ತಿದೆ; ರಾತ್ರಿ ತಗ್ಗುತ್ತಿದೆ (ಹಗಲು<ರಾತ್ರಿ) |
| B ಬಿಂದು ಸೆಪ್ಟೆಂಬರ್ 21 | ವಿಷುವದ್ವೃತ್ತ | ಉದ್ದಗಳು ಸಮಾನ (ಹಗಲು=ರಾತ್ರಿ) | ಉದ್ದಗಳು ಸಮಾನ (ಹಗಲು=ರಾತ್ರಿ) |
| B ಯಿಂದ $S_2$ರ ವರೆಗೆ | ದಕ್ಷಿಣಕ್ಕೆ ಸರಿಯುತ್ತಿದೆ | ಹಗಲು ತಗ್ಗುತ್ತಿದೆ; ರಾತ್ರಿ ಏರುತ್ತಿದೆ (ಹಗಲು<ರಾತ್ರಿ) | ಹಗಲು ಏರುತ್ತಿದೆ; ರಾತ್ರಿ ತಗ್ಗುತ್ತಿದೆ (ಹಗಲು>ರಾತ್ರಿ) |
| $S_2$ ಬಿಂದು ಡಿಸೆಂಬರ್ 21 | ಅತಿ ದಕ್ಷಿಣದಲ್ಲಿದೆ | ಹಗಲು ಕನಿಷ್ಠ ; ರಾತ್ರಿ ಗರಿಷ್ಠ | ಹಗಲು ಗರಿಷ್ಠ ; ರಾತ್ರಿ ಕನಿಷ್ಠ |
| $S_2$ಯಿಂದ A ಯ ವರೆಗೆ | ಉತ್ತರಕ್ಕೆ ಸರಿಯುತ್ತಿದೆ | ಹಗಲು ಏರುತ್ತಿದೆ; ರಾತ್ರಿ ತಗ್ಗುತ್ತಿದೆ (ಹಗಲು<ರಾತ್ರಿ) | ಹಗಲು ತಗ್ಗುತ್ತಿದೆ; ರಾತ್ರಿ ಏರುತ್ತಿದೆ (ಹಗಲು>ರಾತ್ರಿ) |

ಋತುಗಳನ್ನು ಜನ ತಿಳಿಯುವುದು ಹವಾಪರಿಸ್ಥಿತಿಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದ. ಇವು ಪೂರ್ಣವಾಗಿ ಪ್ರಾದೇಶಿಕವಾಗಿವೆ. ಎಂದರೆ, ವರ್ಷದ ಯಾವುದೋ ದಿವಸದಲ್ಲಿ ಭೂಮಿಯ ಮೇಲಿನ ಎಲ್ಲ ಸ್ಥಳಗಳಲ್ಲಿಯೂ ಒಂದೇ ವಿಧದ ಹವೆ ಇರುವುದಿಲ್ಲ. ಅದರಲ್ಲೂ ಉತ್ತರಾರ್ಧಗೋಳಕ್ಕೂ ದಕ್ಷಿಣಾರ್ಧಗೋಳಕ್ಕೂ ತೀವ್ರ ವ್ಯತ್ಯಾಸಗಳಿವೆ. ಋತುಗಳ ಸ್ಥೂಲ ವಿವರಣೆಯನ್ನು ಕೆಳಗೆ ಕೊಟ್ಟಿದೆ.

| ವಿವರಣೆ | ಋತುವಿನ ಹೆಸರು | | ಅವಧಿ |
|---|---|---|---|
| | ಉತ್ತರಾರ್ಧ ಗೋಳ | ದಕ್ಷಿಣಾರ್ಧ ಗೋಳ | |
| ಮಾರ್ಚಿ 21ರಿಂದ ಜೂನ್ 21ರವರೆಗೆ. ಎಂದರೆ ಸೂರ್ಯ ವಸಂತ ವಿಷುವ ದ್ಬಿಂದುವನ್ನು (A) ಪ್ರವೇಶಿಸಿದ ಕ್ಷಣದಿಂದ ದಕ್ಷಿಣಾಯನ ಬಿಂದುವನ್ನು ($S_2$) ಪ್ರವೇಶಿಸುವ ವರೆಗಿನ ಅವಧಿ. | ವಸಂತ | ಶರತ್ | 92 ದಿ. 20 ಗಂ. 12ಮಿ. |
| ಜೂನ್ 21ರಿಂದ ಸೆಪ್ಟೆಂಬರ್ 21ರವರೆಗೆ, ಎಂದರೆ ಸೂರ್ಯ ಉತ್ತರಾಯಣವನ್ನು ($S_1$)ಪ್ರವೇಶಿಸಿದ ಕ್ಷಣದಿಂದ ತುಲಾ ವಿಷುವದ್ಬಿಂದುವನ್ನು (B) ಪ್ರವೇಶಿಸುವ ವರೆಗಿನ ಅವಧಿ | ಗ್ರೀಷ್ಮ | ಶಿಶಿರ | 93 ದಿ. 14 ಗಂ. 24ಮಿ. |
| ಸೆಪ್ಟೆಂಬರ್ 21ರಿಂದ ಡಿಸೆಂಬರ್ 21ರ ವರೆಗೆ, ಎಂದರೆ ಸೂರ್ಯ ತುಲಾ ವಿಷುವದ್ಬಿಂದುವನ್ನು (B) ಪ್ರವೇಶಿಸಿದ ಕ್ಷಣದಿಂದ ಉತ್ತರಾಯಣವನ್ನು ($S_2$) ಪ್ರವೇಶಿಸುವ ವರೆಗಿನ ಅವಧಿ | ಶರತ್ | ವಸಂತ | 89 ದಿ. 18 ಗಂ. 42ಮಿ. |
| ಡಿಸೆಂಬರ್ 21ರಿಂದ ಮಾರ್ಚಿ 21ರ ವರೆಗೆ. ಎಂದರೆ ಸೂರ್ಯ ಉತ್ತರಾ ಯಣ ಬಿಂದುವನ್ನು ($S_2$) ಪ್ರವೇಶಿಸಿದ ಕ್ಷಣದಿಂದ ವಸಂತ ವಿಷುವದ್ಬಿಂದುವನ್ನು (A) ಪ್ರವೇಶಿಸುವ ವರೆಗಿನ ಅವಧಿ | ಶಿಶಿರ | ಗ್ರೀಷ್ಮ | 89 ದಿ. 0 ಗಂ. 30 ಮಿ. |

ಇದುವರೆಗೆ ಹೇಳಿರುವ ಖಗೋಳೀಯ ಕಾರಣಗಳು ಸಾರ್ವತ್ರಿಕವಾದವು. ಸ್ಥಳೀಯ ಋತುಭೇದಗಳು ಆಯಾ ಸ್ಥಳಗಳ ಮೇಲೆ ಸೂರ್ಯನಿಂದ ಪಾತವಾಗುವ ಉಷ್ಣವನ್ನು ಅವಲಂಬಿಸಿಕೊಂಡಿವೆ. 24 ಗಂಟೆಗಳ ಒಂದು ದಿವಸದಲ್ಲಿ ಒಂದು ಸ್ಥಳ ಸೂರ್ಯನಿಂದ ಪಡೆಯುವ ಉಷ್ಣ ಮೂರು ಮುಖ್ಯ ಅಂಶಗಳನ್ನು ಅವಲಂಬಿಸಿದೆ. 1. ಸ್ಥಳವನ್ನೂ ಸೂರ್ಯನನ್ನೂ ಜೋಡಿಸುವ ರೇಖೆ ನೆಲದೊಡನೆ ರಚಿಸುವ ಕೋನ; 2. ಹಗಲಿನ ಉದ್ದ; 3. ಭೂಮಿ–ಸೂರ್ಯ ದೂರ.

ಜೂನ್ 21ರಂದು ಉತ್ತರಾರ್ಧಗೋಳದ ಮೂರು ವಿಶಿಷ್ಟ ಸ್ಥಳಗಳನ್ನು ಪರಿಶೀಲಿಸ ಬಹುದು. ಉಷ್ಣವಲಯದ ಒಂದು ಸ್ಥಳ (10° ಉ. ಅಕ್ಷಾಂಶ ಎಂದಿಟ್ಟುಕೊಳ್ಳಬಹುದು). ಉತ್ತರ ಸಮಶೀತೋಷ್ಣ ವಲಯದ ಒಂದು ಸ್ಥಳ (45° ಉ. ಅಕ್ಷಾಂಶ ಎಂದಿಟ್ಟುಕೊಳ್ಳ ಬಹುದು.), ಉತ್ತರ ಶೀತವಲಯದ ಒಂದು ಸ್ಥಳ (75°ಉ. ಅಕ್ಷಾಂಶ ಎಂದಿಟ್ಟುಕೊಳ್ಳ ಬಹುದು). ಭೂಮಿ–ಸೂರ್ಯ ದೂರ ಈ ಮೂರು ಸ್ಥಳಗಳಿಗೂ ಸರಿಸುಮಾರಾಗಿ ಒಂದೇ ಆಗಿದೆ. ಆದ್ದರಿಂದ ಉಳಿದ ಎರಡು ಅಂಶಗಳು ಆಯಾ ಸ್ಥಳಗಳು ಪಡೆಯುವ ಉಷ್ಣದ ಮೇಲೆ ಏನು ಪರಿಣಾಮ ಬೀರುತ್ತವೆ ಎಂಬುದನ್ನು ಪರಿಶೀಲಿಸಿದರೆ ಸಾಕು.

| ವಿವರ | 10° ಉ. ಅ. | 45° ಉ. ಅ. | 75° ಉ. ಅ. |
|---|---|---|---|
| ಸ್ಥಳ–ಸೂರ್ಯ ರೇಖೆ ನೆಲದೊಡನೆ ರಚಿಸುವ ಕೋನದ ಗರಿಷ್ಠ ಬೆಲೆ | 76°33' | 68°27' | 38°27' |
| ಹಗಲಿನ ಉದ್ದ | 12ಗಂ.35ಮಿ.20ಸೆ. | 15ಗಂ.25ಮಿ.36ಸೆ. | ಸತತ ಹಗಲು |

ಅಕ್ಷಾಂಶ ಏರಿದಷ್ಟೂ ಸೂರ್ಯಕಿರಣಗಳ ಬಾಗು ಹೆಚ್ಚಾಗುತ್ತದೆ. ಆದ್ದರಿಂದ ವಿಸರಣೆಯಿಂದ ಅಧಿಕ ಉಷ್ಣ ನಷ್ಟವಾಗಿ ಹೋಗಿ ಸ್ಥಳಕ್ಕೆ ಲಭಿಸುವ ಉಷ್ಣದ ಪರಿಮಾಣ ಕಡಿಮೆಯಾಗುವುದು. ಉನ್ನತ ಅಕ್ಷಾಂಶಗಳಲ್ಲಿ ಹಗಲಿನ ಉದ್ದ ಹೆಚ್ಚಾಗಿದ್ದರೂ ಉಷ್ಣವಿ ಸರಣೆಯ ಮೇಲೆ ಅದರ ಪ್ರಭಾವ ಪರಿಣಾಮಕಾರಿಯಲ್ಲ. ಆದ್ದರಿಂದ ಒಂದೇ ದಿವಸ

$10°$ ಉ. ಅಕ್ಷಾಂಶದಲ್ಲಿ ಕಡುಬೇಸಗೆಯ ಧಗೆ ಇರುವಾಗ $75°$ ಉ. ಅಕ್ಷಾಂಶದಲ್ಲಿ ಹಿತಕರ ಹವೆಯೇ ಇರಬಹುದು. ವಾಸ್ತವಿಕವಾಗಿ ಯಾವ ದಿವಸ ವಿಷುವದ್ವೃತ್ತದಿಂದ ಸೂರ್ಯನ ಕೋನ (ಸೂರ್ಯನ ಘಂಟಾವೃತ್ತಾಂಶವೆಂದು ಇದರ ಹೆಸರು) ಸ್ಥಳದ ಅಕ್ಷಾಂಶಕ್ಕೆ ಅತಿ ಸಮೀಪವಾಗಿರುವುದೋ ಅಂದು ಆ ಸ್ಥಳ ಪಡೆಯುವ ಉಷ್ಣ ಗರಿಷ್ಠವಾಗಿರುತ್ತದೆ.

ಚಿತ್ರದಿಂದ ಇನ್ನೊಂದು ವಿಷಯವನ್ನು ತಿಳಿಯಬಹುದು. ಸೂರ್ಯ–ಭೂಮಿ ದೂರ ಸೂರ್ಯೋಚ್ಚ ಬಿಂದುವಿನಲ್ಲಿ (A') ಭೂಮಿ ಇರುವಾಗ ಗರಿಷ್ಠವಾಗಿದೆ; ಸೂರ್ಯನೀಚ ಬಿಂದುವಿನಲ್ಲಿ (P) ಇರುವಾಗ ಕನಿಷ್ಠವಾಗಿದೆ.




ಈ ದಿವಸಗಳು ಸರಿಸುಮಾರಾಗಿ ಜುಲೈ 2 ಮತ್ತು ಜನವರಿ 2. ಆದ್ದರಿಂದ ಜನವರಿ ದಿವಸಗಳಂದು ಭೂಮಿ ಒಟ್ಟಾಗಿ ಪಡೆಯುವ ಉಷ್ಣ ಜುಲೈ ದಿವಸಗಳಂದು ಪಡೆಯುವುದಕ್ಕಿಂತ ಹೆಚ್ಚಾಗಿರಬೇಕಷ್ಟೆ–ಎಂದರೆ ಆ ದಿವಸಗಳಂದು ಸೆಕೆಗಾಲವಾಗಿರಬೇಕಷ್ಟೆ. ಆದರೆ ಪರಿಸ್ಥಿತಿ ತದ್ವಿಪರೀತವಾಗಿದೆ ! ಇದರ ಕಾರಣವಿಷ್ಟೇ. ಭೂಮಿಯ ಆವರ್ತನಾಕ್ಷ ಮತ್ತು ಕಕ್ಷಾತಲಗಳ ನಡುವಿನ ಕೋನ (66°33') ಸ್ಥಿರವಾಗಿಯೇ ಇರುವುದು; ಹೀಗಾಗಿ ನೀಚ ಬಿಂದುವಿಗೆ (P) ಭೂಮಿ ಬಂದಾಗ ಉತ್ತರಾರ್ಧಗೋಳ ಸೂರ್ಯಾವಿಮುಖವಾಗಿಯೂ ದಕ್ಷಿಣಾರ್ಧ ಗೋಳ ಸೂರ್ಯಾಭಿಮುಖವಾಗಿಯೂ ಉಚ್ಚಬಿಂದುವಿಗೆ (A') ಬಂದಾಗ ಉತ್ತರಾರ್ಧ ಗೋಳ ಸೂರ್ಯಾಭಿಮುಖವಾಗಿಯೂ ದಕ್ಷಿಣಾರ್ಧಗೋಳ ಸೂರ್ಯವಿಮುಖವಾಗಿಯೂ ಇರುತ್ತವೆ. ಭೂಮಿಯ ಮೇಲೆ ಸೂರ್ಯನ ಉಷ್ಣಪಾತವನ್ನು ಕುರಿತು ಹೇಳಿದ ಮೊದಲಿನ ಎರಡು ಕಾರಣಗಳ ಪ್ರಭಾವದಿಂದ ಉತ್ತರಾರ್ಧಗೋಳದವರಿಗೆ ಸೂರ್ಯ ಅತಿ ಸಮೀಪವಾದಾಗ ಅತ್ಯುಷ್ಣದ ಅನುಭವ ಆಗುವುದಿಲ್ಲ; ಅತಿ ದೂರವಾದಾಗ ಅತಿಶೈತ್ಯದ ಅನುಭವ ಆಗುವುದಿಲ್ಲ. ಭೂಮಂಡಲದ ಅಧಿಕ ಜನಸಂಖ್ಯೆ ಉತ್ತರಾರ್ಧಗೋಳದಲ್ಲಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಇದುವರೆಗಿನ ವಿವರಣೆಯ ಪ್ರಕಾರ ಉತ್ತರಾರ್ಧಗೋಳದವರ ಅತ್ಯುಷ್ಣ ದಿವಸ ಜೂನ್ 21, ಅತಿಶೈತ್ಯದ ದಿವಸ ಡಿಸೆಂಬರ್ 21 ಆಗಬೇಕೆಂದು ಭಾವಿಸುವುದು ಸಹಜ. ಆದರೆ ಬೇರೆ ಬೇರೆ ಪ್ರದೇಶಗಳ ಅಂಕಿ ಅಂಶಗಳ ಸಂಗ್ರಹಣೆಯಿಂದ ವಾಸ್ತವಿಕ ಪರಿಸ್ಥಿತಿ ಬೇರೆಯೇ ಎಂದು ತಿಳಿದಿದೆ. ಅತ್ಯುಷ್ಣದ ದಿವಸಗಳು ಜುಲೈ–ಆಗಸ್ಟ್‌ಗಳಲ್ಲಿಯೂ ಅತಿ ಶೈತ್ಯದ ದಿವಸಗಳು ಜನವರಿ–ಫೆಬ್ರವರಿಗಳಲ್ಲಿಯೂ ಬರುತ್ತವೆ. ಈ ವೈಪರೀತ್ಯದ ಕಾರಣ ಎರಡು: (1) ಆ ದಿವಸ ಸೂರ್ಯನಿಂದ ಪಡೆದುಕೊಂಡ ಉಷ್ಣ; (2) ಆ ದಿವಸ ವಿಸರಣೆಯಿಂದ ಕಳೆದುಕೊಂಡ ಉಷ್ಣ. ಮೊದಲಿನ ಅಂಶವನ್ನು ಕುರಿತು ವಿವರಣೆ ಈಗಾಗಲೇ ಹೇಳಿದೆ. ಎರಡನೆಯ ಅಂಶದ ವಿವರಣೆ–ಉಷ್ಣತೆ ಏರಿದಂತೆ ವಿಸರಣೆಯ ದರವೂ ಏರುತ್ತದೆ; ಜೂನ್ 21ರಂದು ಸ್ಥಳ ಪಡೆಯುವ ಉಷ್ಣ ಗರಿಷ್ಠವಾದರೂ ನೆಲ ಸಾಕಷ್ಟು ಕಾದಿರುವುದಿಲ್ಲ; ಆದ್ದರಿಂದ ಅಂದು ಉಷ್ಣತೆ ಸಾಕಷ್ಟು ಏರುವುದಿಲ್ಲ. ಮುಂದಿನ ಹಲವಾರು ವಾರಗಳಲ್ಲಿ ಲಭ್ಯ ಉಷ್ಣ ಕಡಿಮೆಯಾಗುತ್ತಿದ್ದರೂ ವಿಸರಣೆಯಿಂದ ಉಷ್ಣನಷ್ಟ ಸಾಕಷ್ಟು ನಡೆಯದೇ ಉಷ್ಣತೆ ಏರುತ್ತಲೇ ಹೋಗುವುದು. ಜುಲೈ–ಆಗಸ್ಟ್ ದಿವಸಗಳಲ್ಲಿ ಉಷ್ಣತೆ ಗರಿಷ್ಠ ಮಿತಿಯನ್ನು ತಲುಪುತ್ತದೆ. ಡಿಸೆಂಬರ್ 21ರಂದು ಲಭ್ಯ ಉಷ್ಣ ಕನಿಷ್ಠ; ಮತ್ತು ವಿಸರಣೆಯ ದರ ಲಭ್ಯ ಉಷ್ಣಕ್ಕಿಂತ ಹೆಚ್ಚು. ಮುಂದಿನ ದಿವಸಗಳಲ್ಲಿ ಲಭ್ಯ ಉಷ್ಣ ಕ್ರಮೇಣ ಏರಿದರೂ ವಿಸರಣೆಯ ದರ ಅದಕ್ಕಿಂತಲೂ ಹೆಚ್ಚಾಗಿಯೇ ಇರುವುದು. ಜನವರಿ–ಫೆಬ್ರವರಿ ದಿವಸಗಳಲ್ಲಿ ಇವುಗಳಲ್ಲಿ ಸಮತೋಲ ಬರುವುದು. ಅಂದು ಅತಿಶೈತ್ಯದ ದಿವಸ.

ಸ್ಥಳೀಯ ಋತುವಿನ ಮೇಲೆ ಪ್ರಭಾವಕಾರೀ ಅಂಶಗಳಲ್ಲಿ ಅಕ್ಷಾಂಶ ಒಂದು ಎಂದು ನೋಡಿದ್ದಾಯಿತು. ಇತರ ಪ್ರಭಾವಗಳು–ಸ್ಥಳದ ಔನ್ನತ್ಯ, ಭೌಗೋಳಿಕ ಪರಿಸ್ಥಿತಿ (ಕಾಡು, ಮರುಭೂಮಿ, ಜವುಗು ನೆಲ, ನೀರು, ಸಮುದ್ರಸಾಮೀಪ್ಯ, ಇತ್ಯಾದಿ). ಕರ್ನಾಟಕ ರಾಜ್ಯದ ಉದಾಹರಣೆ ತೆಗೆದುಕೊಂಡರೆ ಕರಾವಳಿ ಪ್ರದೇಶದಲ್ಲಿ ಜೂನಿನಲ್ಲಿ ಜಡಿಮಳೆ ಸುರಿಯುತ್ತಿರುವುದು; ಬಿಜಾಪುರ ಭಾಗದಲ್ಲಿ ಆಗ ಅಸಹನೀಯ ಸೆಕೆ ಇರುತ್ತದೆ. ಹೀಗೆ ಒಂದು ಸ್ಥಳದಲ್ಲಿ ಋತುವನ್ನು (ಹವೆಯನ್ನು) ನಿರ್ಧರಿಸುವ ಅಂಶಗಳು, ಹಲವಾರು; ಅವುಗಳ ಸಮಗ್ರ ಪರಿಣಾಮ ಬಲುಸಂಕೀರ್ಣ.

ಜನಜೀವನದ ಋತುಗಳು: ಯುರೋಪಿನ ದೇಶಗಳಲ್ಲಿ ಬೆಳೆಗಳ ವಾರ್ಷಿಕ ಚಕ್ರಕ್ಕೂ ಋತುಗಳಿಗೂ ತಾರ್ಕಣೆ ಕಲ್ಪಿಸಲಾಗಿದೆ. ಚಳಿಯಲ್ಲಿ ಸುಪ್ತಾವಸ್ಥೆ: ವಸಂತದಲ್ಲಿ ಬೀಜಾವಾಪನೆ: ಬೇಸಗೆಯಲ್ಲಿ ಬೆಳವಣಿಗೆ: ಶರತ್ತಿನಲ್ಲಿ ಸುಗ್ಗಿ. ಇದು ಬೇಸಾಯ ಚಕ್ರ. ಆದರೆ ವಾಸ್ತವವಾಗಿ ಋತುಗಳಿಗೂ ಈ ವ್ಯವಸಾಯ ಚಟುವಟಿಕೆಗಳಿಗೂ ನಿಖರವಾದ ತಾಳೆಯೇನೂ ಇಲ್ಲ. ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ ಉಷ್ಣತೆಯಲ್ಲಿ ತೀವ್ರ ವ್ಯತ್ಯಾಸವಾಗುವ ಕೆಲವು ಪ್ರದೇಶಗಳಲ್ಲಿ ಈ ವ್ಯತ್ಯಾಸಗಳಿಗೆ ಅನುಗುಣವಾಗಿ ಪ್ರಾಣಿಗಳ ಮೈ ಮೇಲಣ ಕೂದಲಿನ ಅಥವಾ ಪುಕ್ಕದ ಬಣ್ಣ ದಟ್ಟತೆಗಳು ವ್ಯತ್ಯಾಸವಾಗುತ್ತವೆ. ಈಜಿಪ್ಟಿನಲ್ಲಿ ನೈಲ್‌ನದಿಯ ಪ್ರವಾಹಕ್ಕೆ ತಕ್ಕಂತೆ ವ್ಯವಸಾಯ ಕಾರ್ಯ ನಿಯಂತ್ರಿತವಾಗುವುದರಿಂದ ಅಲ್ಲಿ ನದಿಯ ಆಯಾಕಾಲಗಳ ನೀರಿನ ಮಟ್ಟಗಳಿಗೆ ಅನುಸಾರವಾಗಿ ಋತುಗಳು ಹೆಸರು ತಳೆದಿವೆ. ಉತ್ತರ–ದಕ್ಷಿಣ ಮೇರು ಪ್ರದೇಶಗಳಲ್ಲಿ ವಸಂತ ಶರದೃತುಗಳು ಬಲು ಸಂಕ್ಷಿಪ್ತ. ಅಲ್ಲಿ ಬೇಸಗೆ–ಚಳಿಗಾಲಗಳೆಂಬವು ಎರಡೇ ಪ್ರಧಾನ ಬೇಸಗೆಗಿಂತ ಚಳಿಗಾಲ ಮೊಟಕು. ದಕ್ಷಿಣಕ್ಕೆ ಸಾಗಿದಂತೆ ನಾಲ್ಕು ಋತುಗಳೇ ಹೆಚ್ಚು ಖಚಿತವಾಗಿ ಕಾಣಿಸಿಕೊಳ್ಳಲಾರಂಭಿಸುತ್ತವೆ. ಖಂಡಾಂತರ ಪ್ರದೇಶಗಳಲ್ಲಿ ಒಂದು ಋತುವಿನಿಂದ ಇನ್ನೊಂದು ಋತುವಿಗೆ ಥಟ್ಟನೆ ವ್ಯತ್ಯಾಸವಾಗುತ್ತದೆ. ಸಮುದ್ರ ಸನಿಹದ ಪ್ರದೇಶಗಳಲ್ಲಿ ಉಷ್ಣತೆ ಏರುವುದೂ ಇಳಿಯುವುದೂ ನಿಧಾನವಾದ್ದರಿಂದ ಋತುಗಳ ಆಗಮನವೂ ನಿರ್ಗಮನವೂ ಬೇಗನೆಯೋ ತಡವಾಗಿಯೋ ಆಗಬಹುದು. ಉಪೋಷ್ಣ ವಲಯ ಪ್ರದೇಶಗಳಲ್ಲಿ ನಾಲ್ಕು ಋತುಗಳ ಮೇರೆಗಳು ಅಸ್ಪಷ್ಟ.

ಭಾರತೀಯ ಕ್ರಮದಲ್ಲಿ ಋತುಗಳು: ಆರು ವಿಧದ ಕಾಲ ವಿಭಾಗಗಳಲ್ಲಿ ಮೂರನೆಯ ವಿಭಾಗ ಋತು. ಇದರ ಪರಿಮಾಣ ವರ್ಷದ ಆರನೆಯ ಒಂದು ಭಾಗ. ಎಂದರೆ ಎರಡು ತಿಂಗಳುಗಳ ಕಾಲ. ಅಥವಾ ಅರುವತ್ತು ದಿವಸಗಳು. ಅಧಿಕಮಾಸ ಬರುವ ವರ್ಷಗಳಲ್ಲಿ ಈ ಮಾಸ ಬರುವ ಋತುವಿನ ದಿವಸ ಸಂಖ್ಯೆ ತೊಂಬತ್ತಾಗುತ್ತದೆ ಮೂರು ಮಾಸಗಳ ಕಾಲ; ಪ್ರಮಾಣ ಇದ್ದರೂ ಒಂದೇ ಹೆಸರಿನ ಎರಡು ಮಾಸಗಳನ್ನು ಒಂದೇ ತಿಂಗಳೆಂದು ಗಣನೆಗೆ ತೆಗೆದುಕೊಳ್ಳುವುದರಿಂದ ಈ ಋತುವಿನಲ್ಲಿ ಅರುವತ್ತು ದಿವಸಗಳ ಒಂದು ತಿಂಗಳು ಮತ್ತು ಮೂವತ್ತು ದಿವಸಗಳ ಮತ್ತೊಂದು ತಿಂಗಳು. ಹೀಗೆ ಎರಡು ತಿಂಗಳುಗಳಿರುತ್ತವೆ. ಈ ದಿವಸ ಸಂಖ್ಯೆ ಮಧ್ಯಮ ಮಾಸ ಗಣನೆಯಂತೆ. ಸ್ಫುಟ ಗಣನೆಯಲ್ಲಿ ಒಂದೆರಡು ದಿವಸಗಳು ಹೆಚ್ಚುಕಡಿಮೆ ಆಗುವುದುಂಟು.

ಒಂದು ವರ್ಷದಲ್ಲಿ ಒಟ್ಟು ಆರು ಋತುಗಳಿವೆ. ಚೈತ್ರಶುಕ್ಲ ಪ್ರಥಮ ದಿವಸದಿಂದ ವಸಂತಋತು ಪ್ರಾರಂಭವಾಗುತ್ತದೆ. ಇದು ವೈಶಾಖ ಮಾಸ ಅಮಾವಾಸ್ಯೆಯಂದು ಮುಗಿಯುತ್ತದೆ. ಜೇಷ್ಠ ಶುಕ್ಲ ಪಾಡ್ಯದ ದಿವಸ ಗ್ರೀಷ್ಮ ಋತು ಪ್ರಾರಂಭವಾಗಿ ಆಷಾಢ ಅಮಾವಾಸ್ಯೆಯ ದಿವಸ ಮುಗಿಯುತ್ತದೆ. ಶ್ರಾವಣ ಶುಕ್ಲ ಪ್ರಥಮ ದಿವಸ ವರ್ಷಋತು ಪ್ರಾರಂಭವಾಗಿ ಭಾದ್ರಪದ ತಿಂಗಳಿನ ಅಮಾವಾಸ್ಯೆಯಂದು ಮುಗಿಯುತ್ತದೆ. ಆಶ್ವಯುಜ ಶುಕ್ಲ ಪ್ರಥಮ ದಿವಸ ಶರದೃತು ಪ್ರಾರಂಭವಾಗಿ ಕಾರ್ತಿಕ ಮಾಸದ ಅಮಾವಾಸ್ಯೆಯಂದು ಮುಗಿಯುತ್ತದೆ. ಮಾರ್ಗಶಿರ ಶುಕ್ಲ ಪ್ರಥಮ ದಿವಸ ಹೇಮಂತ ಋತು ಪ್ರಾರಂಭವಾಗಿ ಪುಷ್ಯಮಾಸದ ಅಮಾವಾಸ್ಯೆಗೆ ಮುಗಿಯುತ್ತದೆ. ಮಾಘಮಾಸದ ಪ್ರಥಮ ದಿವಸ ಶಿಶಿರ ಋತು ಪ್ರಾರಂಭವಾಗಿ ಫಾಲ್ಗುನ ಮಾಸ ಅಮಾವಾಸ್ಯೆಯಂದು ಮುಗಿಯುತ್ತದೆ. ಈ ಆರು ಋತುಗಳಲ್ಲಿ ಸಾಮಾನ್ಯವಾಗಿ ಶಿಶಿರ, ವಸಂತ, ಗ್ರೀಷ್ಮ ಋತುಗಳು ಉತ್ತರಾಯಣಕ್ಕೂ ವರ್ಷ, ಶರತ್, ಹೇಮಂತ ಋತುಗಳು ದಕ್ಷಿಣಾಯನಕ್ಕೂ ಸೇರುತ್ತವೆ. ಹೀಗೆ ಶುಕ್ಲಪಕ್ಷಾದಿಯಿಂದ ಅಮಾವಾಸ್ಯೆಯವರೆಗೆ ಕಾಲಗಣನೆ ಮಾಡುವ ಈ ಋತು ವಿಭಾಗಕ್ಕೆ ಚಾಂದ್ರ ಋತುಗಳೆಂದು ಹೆಸರು.

ಸೌರಮಾನದಲ್ಲಿ ಋತುಗಳ ಕಾಲ : ಸೌರ ಋತುಗಳು ಇದರಂತೆ ಮೇಷ ರಾಶಿಗೆ ಸೂರ್ಯನು ಪ್ರವೇಶ ಮಾಡುವ ದಿವಸ ವಸಂತ ಋತುವಿಗೆ ಪ್ರಾರಂಭ. ಮಿಥುನ, ಸಿಂಹ, ತುಲಾ, ಧನುಸ್ಸು, ಕುಂಭ–ಈ ರಾಶಿಗಳಿಗೆ ಸೂರ್ಯ ಪ್ರವೇಶಿಸಿದಾಗ ಕ್ರಮವಾಗಿ ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಋತುಗಳು ಪ್ರಾರಂಭವಾಗುತ್ತವೆ. ಈ ಗಣನಾಕ್ರಮದಲ್ಲಿ ಋತುವಿನ ಕಾಲ ಅರುವತ್ತು ದಿವಸಗಳು. ಇದರಲ್ಲಿ ತೊಂಬತ್ತು ದಿವಸಗಳು ಬರುವ ಋತುವಿರುವುದಿಲ್ಲ. ಸೌರಮಾನದ ಪ್ರಕಾರ ಸೂರ್ಯ ಮೇಷ–ವೃಷಭ ರಾಶಿಗಳಲ್ಲಿ ಸಂಕ್ರಮಿಸುವಾಗ ಹುಟ್ಟುವ ವಸಂತ ಋತುವಿನಲ್ಲಿ ಗಿಡಮರಗಳು ಚಿಗುರುತ್ತವೆ. ಹೂ ಬಿರಿಯುತ್ತದೆ. ಮೋಡವಿಲ್ಲದ ಆಕಾಶ; ಸ್ವಚ್ಛ ನೀಲವರ್ಣ. ಇದನ್ನನುಸರಿಸಿ ಬರುವ ಗ್ರೀಷ್ಮ ಋತುವಿನಲ್ಲಿ ಬಿಸಿಲ ಬೇಗೆ. ಇದರ ಫಲವಾಗಿ ವಾಯುಮಂಡಲದಲ್ಲಿ ಆರ್ದ್ರತೆ ಕಡಿಮೆ; ನೀರಿನ ಅಂಶ ಕಳೆದುಕೊಂಡ ವಾಯುಮಂಡಲದ ಒತ್ತಡ ಕಡಿಮೆಯಾಗುತ್ತದೆ. ನೆರೆಹೊರೆಗಳಲ್ಲಿ ಸಾಗರಗಳ ಮೇಲೆ ಅಡರಿರುವ ವಾಯುಮಂಡಲದಲ್ಲಿ ಆರ್ದ್ರತೆಯೂ ಒತ್ತಡವೂ ಇದ್ದು ಅವು ತಗ್ಗು ಒತ್ತಡಗಳಿರುವೆಡೆಗೆ ನುಗ್ಗಿ ಬರುತ್ತವೆ. ಇದರಿಂದ ಮಳೆಯಾಗುತ್ತದೆ. ಹೀಗಾಗಿ ಗ್ರೀಷ್ಮಋತುವಿನಲ್ಲಿ ಅಂತರಿಕ್ಷದಲ್ಲಿ ಮೋಡ ಕವಿದಿರುತ್ತದೆ; ಪ್ರಾರಂಭದಲ್ಲಿ ಮಳೆ ಧಾರಾಕಾರಯಾಗಿಯೂ ಮಾರುತಗಳು ನೆಲೆಯೂರಿದಂತೆಲ್ಲ ಅಂತರಗಳಲ್ಲಿ ತುಂತುರು ತುಂತುರಾಗಿಯೂ ಸುರಿಯುತ್ತದೆ. ಗ್ರೀಷ್ಮ ಋತುವಿನ ಕೊನೆಯಲ್ಲಿ ಪ್ರಾರಂಭವಾಗುವ ಮಳೆ, ಗುಡುಗು

ಮಿಂಚು ಸಿಡಿಲುಗಳಿಂದ ಕೂಡಿರುವಂಥದು. ಅಲ್ಲದೆ ಈ ಋತುವಿನಲ್ಲಿ ಉಷ್ಣಾಧಿಕ್ಯದಿಂದ ವಾಯುವಿನ ಪರಿಸರಣವಾಗಿ ವಾಯುಮಂಡಲದ ಉನ್ನತವಲಯಗಳಲ್ಲಿ ಆರ್ದ್ರತೆಯ ಸಂಚಯವಾಗಿ ಧಾರೆಧಾರೆಯಾಗಿ ಮಳೆ ಸುರಿಯುತ್ತದೆ. ಹಗಲೆಲ್ಲ ಸೊರಗಿರುವ ರಣರಣ ಬಿಸಿಲ ಬೇಗೆ. ಸಂಜೆಯಾಗುತ್ತಲೆ ಕಾರ್ಮೋಡ ಕವಿದು ಸಿಡಿಲೊಡಗೂಡಿ ಸುರಿಯುವ ಧಾರಾಕಾರ ಮಳೆ. ಇದು ಗ್ರೀಷ್ಮಋತುವಿನ ವಿಶಿಷ್ಟ ಗುಣಲಕ್ಷಣ. ಆಷಾಢ ಮಾಸದಲ್ಲಿ ಬಿರುಸಾದ ಕುಳಿರ್ಗಾಳಿ ಬೀಸುತ್ತದೆ. ಆಷಾಢಮಾಸ ಕೊನೆಗೊಂಡು ಶ್ರಾವಣ ಮಾಸ ಕಾಲಿರಿಸುವ ವೇಳೆಗೆ ಭಾರತದಲ್ಲಿ ನೈಋತ್ಯಮಾರುತಗಳು ಪ್ರಾರಂಭವಾಗಿ ನೆಲೆಯೂರಿರುತ್ತವೆ. ಇವು ನೈಋತ್ಯದಲ್ಲಿರುವ ಅರಬ್ಬೀಸಮುದ್ರ ಮತ್ತು ಹಿಂದೂ ಮಹಾಸಾಗರಗಳಿಂದ ಬೀಸತೊಡಗಿ, ಈಶಾನ್ಯ ದಿಕ್ಕಿಗೆ ಚಲಿಸುತ್ತ, ದಕ್ಷಿಣ ಭಾರತ ಪರ್ಯಾಯದ್ವೀಪಕ್ಕೂ (ಅದರಲ್ಲೂ ವಿಶೇಷವಾಗಿ ಪಶ್ಚಿಮ ಕರಾವಳಿಯಲ್ಲಿ) ಲಂಕಾದ್ವೀಪಕ್ಕೂ ಮಳೆ ತರುತ್ತವೆ. ವರ್ಷಾಋತುವನ್ನನುಸರಿಸುವ ಶರದೃತು ಮಿಶ್ರ ಹವಾಗುಣ ತಳೆದಿರುವಂಥದು. ಹಗಲು ಬೆಚ್ಚಗಿದ್ದು ಇರುಳು ತಂಪಾಗಿರುತ್ತದೆ. ಹೇಮಂತ ಋತುವಿನಲ್ಲಿ ಚಳಿ ಪ್ರಾರಂಭ. ದಕ್ಷಿಣ ದೇಶದಲ್ಲಿ ಮಂಜು ಬೀಳುವ ಕಾಲ. ಉತ್ತರ ಭಾರತದಲ್ಲಂತೂ ಅಸಾಧ್ಯ ಚಳಿ. ಹಿಮಾಚಲ ಶೃಂಗಗಳ ಮೇಲೆ ಹಿಮ ಹೆಪ್ಪುಗಟ್ಟಿರುತ್ತದೆ. ಸೌರಮಾನದ ಪ್ರಕಾರ ಇದು ಧನುಸ್ಸು–ಮಕರ ಸಂಕ್ರಮಣಗಳ ಕಾಲ. ಇದನ್ನನುಸರಿಸಿ ಬರುವ ಶಿಶಿರಋತುವಿನಲ್ಲಿ ಮರಗಿಡಗಳ ಹಣ್ಣೆಲೆಗಳು ಉದುರಿ ಚಿಗುರೊಡೆಯತೊಡಗುತ್ತವೆ.

ಕಾಲಧರ್ಮಾನುಗುಣವಾಗಿ ಒಂದು ವರ್ಷದಲ್ಲಿ ಮೂರು ಋತುಗಳೆಂದೂ ಎರಡು ಋತುಗಳೆಂದೂ ಕೆಲವರು ಅಭಿಪ್ರಾಯಪಟ್ಟಿರುತ್ತಾರೆ. ಕಾರ್ತಿಕ, ಮಾರ್ಗಶಿರ, ಪುಷ್ಯ, ಮಾಘ– ಈ ನಾಲ್ಕು ತಿಂಗಳುಗಳ ಕಾಲಕ್ಕೆ ಶೀತವೆಂದೂ ಫಾಲ್ಗುಣ, ಚೈತ್ರ, ವೈಶಾಖ, ಜ್ಯೇಷ್ಠ ಈ ನಾಲ್ಕು ತಿಂಗಳುಗಳ ಕಾಲಕ್ಕೆ ಗ್ರೀಷ್ಮವೆಂದೂ ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ ಈ ನಾಲ್ಕು ತಿಂಗಳುಗಳ ಕಾಲಕ್ಕೆ ವರ್ಷ ಎಂದೂ ಕರೆಯುತ್ತಾರೆ. ಸ್ಮೃತಿಯಲ್ಲಿ ಕಾರ್ತಿಕ ಮೊದಲು ಆರು ತಿಂಗಳುಗಳ ಕಾಲಕ್ಕೆ ಶೀತವೆಂದೂ, ವೈಶಾಖ ಮೊದಲು ಆರು ತಿಂಗಳುಗಳ ಕಾಲಕ್ಕೆ ಗ್ರೀಷ್ಮ ಎಂದೂ ಎರಡು ವಿಭಾಗಗಳು ಮಾತ್ರ ಇರುವುದು ಕಂಡುಬರುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲಕ್ಕೂ ಋತುಕಾಲವೆಂದು ಹೆಸರಿದೆ.

ಹೆಂಗಸರು ಮುಟ್ಟಾದ ಬಳಿಕ ಹದಿನಾರು ದಿವಸಗಳ ಕಾಲ ಗರ್ಭಧರಿಸಲು ಸಮರ್ಥರಾಗಿರುತ್ತಾರೆ. ಈ ಕಾಲಕ್ಕೂ ಋತುಕಾಲವೆಂದು ಹೆಸರು.

ಶಿವ ಮತ್ತು ವಿಷ್ಣುವಿಗೂ ಋತು ಎಂಬ ನಾಮವಿದೆ. (ಐ.ಎಸ್.ಪಿ.;ಎಸ್.ಎನ್.ಕೆ.)

**ಋತುಪರ್ಣ:** ಇಕ್ಷ್ವಾಕು ವಂಶಕ್ಕೆ ಸೇರಿದವ. ಅಯುತಾಜಿಲ್ ಎಂಬ ರಾಜನ ಮಗ. ಅಯೋಧ್ಯೆಯ ರಾಜ, ನಳನ ಸ್ನೇಹಿತ. ಮಗ ಆರ್ತುಪರ್ಣಿ. ಅಕ್ಷ ಹೃದಯವನ್ನು ಅರಿತು ದ್ಯೂತವಾಡುತ್ತಿದ್ದವ. ನಳ ತನ್ನ ಮಡದಿಯನ್ನು ಮತ್ತೆ ಪಡೆಯಲು ಈತ ಮುಖ್ಯನಿಮಿತ್ತನಾದ. ಪರ್ಣಾದನೆಂಬ ಬ್ರಾಹ್ಮಣ ನಳನನ್ನು ಹುಡುಕಲು ಹೊರಟು ಇವನಲ್ಲಿಯೇ ನಳನನ್ನು ಪತ್ತೆ ಹಚ್ಚಿದ. ಇವನಲ್ಲಿಯೇ ಬಂದು ಸುದೇವ ದಮಯಂತೀಸ್ವಯಂವರ ವೃತ್ತಾಂತವನ್ನು ಪ್ರಕಟಪಡಿಸಿದ. ಅಕ್ಷಹೃದಯಜ್ಞನಾದುದರಿಂದ ಋತು ಪರ್ಣನ ಸ್ಮರಣೆಯಿಂದ ಕಲಿದೋಷನಿವೃತ್ತಿಯನ್ನು ಹೇಳಿದೆ. ಕಾರ್ಕೋಟಕಸ್ಯ ನಾಗಸ್ಯ ದಮಯನ್ತ್ಯಾನಲಸ್ಯಚ 1. ಋತುಪರ್ಣಸ್ಯ ರಾಜರ್ಷೇಃ ಕೀರ್ತನಂ ಕಲಿನಾಶನಂ॥ ದ್ಯೂತದಲ್ಲಿ ಋತುಪರ್ಣನಿಗೆ ಯಾವಾಗಲೂ ಪರಾಜಯವಾಗುತ್ತಿಲ್ಲ. ಇವನಿಂದ ಅಕ್ಷಹೃದಯವರಿತು ನಳ ಕಲಿಯ ಆವೇಶವನ್ನು ಗೆದ್ದು ಸರ್ವದೋಷನಿವೃತ್ತಿಯನ್ನು ಹೊಂದಿದ. ಹರಿವಂಶದಲ್ಲೂ ಮಹಾಭಾರತ ದಲ್ಲೂ ಋತುಪರ್ಣನ ಕಥೆ ಬರುತ್ತದೆ. (ಎನ್.ಎಸ್.ಆರ್.ಬಿ.)

**ಋತ್ವಿಕ್:** ಯಜ್ಞ ಯಾಗಾದಿ ಶ್ರೌತಕರ್ಮಗಳನ್ನು ನಡೆಸಿಕೊಡುವ ಪುರೋಹಿತ. ಆ ವಿಹಿತಕರ್ಮಗಳಲ್ಲಿ ಭಾಗವಹಿಸುವ ಅನೇಕ ಋತ್ವಿಜರಲ್ಲಿ ಹೋತೃ, ಉದ್ಗಾತೃ, ಅಧ್ವರ್ಯು, ಬ್ರಹ್ಮ–ಎಂಬುವರು ಪ್ರಧಾನರಾಗಿರುತ್ತಾರೆ. ಮೊದಲ ಮೂವರು ಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಪ್ರತಿನಿಧಿಸುತ್ತಾರೆ; ಬ್ರಹ್ಮನೆಂಬ ಋತ್ವಿಕ್ಕಿಗೆ ಯಾಗಾದಿಗಳ ಮೇಲ್ವಿಚಾರಣೆ ಸೇರಿದೆ. ಹೋತೃವು ಋಗ್ವೇದದಿಂದ ಪ್ರಶಂಸನ ರೂಪದಲ್ಲಿರುವ ಋಕ್ಕುಗಳನ್ನು **(ನೋಡಿ– ಋಕ್)** ಪಠಿಸಿ ದೇವತೆಗಳನ್ನು ಆಹ್ವಾನಿಸುತ್ತಾನೆ; ಯಾಗದಲ್ಲಿ ಬೇಕಾಗುವ ಸೋಮವನ್ನು ಸಿದ್ಧಪಡಿಸುವಾಗ, ಆಹುತಿ ಮಾಡುವ ಸಂದರ್ಭಗಳಲ್ಲಿ ಉದ್ಗಾತೃ ಸಾಮವೇದ ದಿಂದ ಸಾಮಗಳನ್ನು ರಾಗವಾಗಿ ಹೇಳುತ್ತಾನೆ; ಅಧ್ವರ್ಯು ಕಾರ್ಯನಿರ್ವಾಹಕನಾಗಿದ್ದು ಯಜುರ್ವೇದದಿಂದ ಯಜುಸ್ಸುಗಳನ್ನು ಉಚ್ಚರಿಸುತ್ತ ಎಲ್ಲ ನಿರ್ದಿಷ್ಟ ಕ್ರಿಯೆಗಳನ್ನೂ ಮಾಡುತ್ತಾನೆ. ಯಾಗದ ಮೇಲ್ವಿಚಾರಣೆಯನ್ನು ವಹಿಸಿಕೊಂಡು ಅದನ್ನು ರಾಕ್ಷಸಾದಿಗಳ ಪೀಡೆಯಿಂದ ರಕ್ಷಿಸುವುದು ಬ್ರಹ್ಮನ ಕೆಲಸ. (ಬಿ.ಕೆ.ಎಸ್.)

**ಋಭು:** ಬ್ರಹ್ಮಪುತ್ರ. ಪಾರಮಾರ್ಥಿಕವಾದ ಅದ್ವೈತ ತತ್ತ್ವಜ್ಞಾನವನ್ನು ಸ್ವಭಾವವಾಗಿಯೇ ಹೊಂದಿದವ. ಇವನಿಗೆ ಪುಲಸ್ತ್ಯ ಕುಮಾರನಾದ ನಿದಾಘನೆಂಬ ಬ್ರಾಹ್ಮಣನೊಬ್ಬ ಶಿಷ್ಯನಾಗಿದ್ದ. ಈ ಶಿಷ್ಯನಿಗೆ ಅದ್ವೈತವನ್ನುಪದೇಶಿಸಲು ಗುರು ಸಾವಿರಾರು ವರ್ಷಗಳು ಕಾದು ಕೇವಲ ಎರಡು ಬಾರಿ ಮಾತ್ರ ಉಪದೇಶ ಮಾಡಿದನೆಂದು ವಿಷ್ಣುಪುರಾಣದಲ್ಲಿ ಹೇಳಿದೆ. ಆರ್ಭಮಸಾಮ ಎಂಬ ಸಾಮದರ್ಶನ ಮಾಡಿದ ಋಷಿಯೊಬ್ಬನಿಗೂ ಇದೇ ಹೆಸರಿತ್ತು. ಋಭುಗಳೆಂದರೆ ದೇವತೆಗಳು; ಅವರಿಗೂ ಮಿಗಿಲಾದ ಉತ್ತಮ ಲೋಕದ ದೇವತೆಗಳು; ಚಾಕ್ಷುಷ ಮನ್ವಂತರದ ದೇವಗಣ; ಯಾಗಾಧಿಕಾರ ಹೊಂದಿದ ತ್ರಿವರ್ಣದವರಿಗಿಂತ ಕೆಳಗಿನವರು–ಎಂಬ ಅರ್ಥಗಳಿವೆ. (ಎನ್.ಎಸ್.ಆರ್.ಬಿ.)

**ಋಷಿ:** ದಿವ್ಯ ಜ್ಞಾನವನ್ನು ಪಡೆದ ಕವಿ; ಅಲೌಕಿಕ ದರ್ಶನ ಪಡೆದ ಮಹಾ ಪುರುಷ. ದಿವ್ಯಮಂತ್ರಗಳನ್ನು ಹಾಡುವವ. ಉದಾ–ಕುತ್ಸ, ವಸಿಷ್ಠ, ಅತ್ರಿ, ಅಗಸ್ತ್ಯ ಇತ್ಯಾದಿ. ಋಷಿಗಳು ದೇವಮಾನವ ಅಸುರ ವರ್ಗದಿಂದ ಭಿನ್ನರು. ವೇದಾದಿ ಪವಿತ್ರ ಗ್ರಂಥಗಳನ್ನು ಬರೆದವರು ಅಥವಾ ದೇವವಾಣಿಯಿಂದ ಅರಿತವರು. ಆದ್ದರಿಂದ ಇವರನ್ನು ಮಂತ್ರದ್ರಷ್ಟಾರರೆನ್ನಲಾಗಿದೆ. ವೇದದ ಪ್ರತಿ ಸೂಕ್ತದಲ್ಲೂ ದೇವತೆ, ಛಂದಸ್ಸು ಮತ್ತು ವಿನಿಯೋಗಗಳೊಂದಿಗೆ ಕರ್ತೃವಾದ ಋಷಿಯ ಹೆಸರನ್ನೂ ಹೇಳಿದೆ. ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠ– ಇವರು ಗೋತ್ರ ಋಷಿಗಳು. ಮರೀಚಿ, ಅತ್ರಿ, ಅಂಗಿರಸ್, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ– ಇವರು ಸಪ್ತರ್ಷಿ ಮಂಡಲದ ಏಳು ನಕ್ಷತ್ರರೂಪಿ ಋಷಿಗಳು. ಇವರೊಂದಿಗೆ ಮನು ಇನ್ನೂ ಮೂರು ಹೆಸರುಗಳನ್ನು (ಪ್ರಚೇತಸ, ಭೃಗು, ನಾರದ) ಸೇರಿಸಿ ಹತ್ತು ಮಂದಿಯನ್ನು ಪ್ರಜಾಪತಿಗಳು ಎಂದು ಹೆಸರಿಸಿದ್ದಾನೆ. ಋಷಿಗಳಲ್ಲಿ ದೇವರ್ಷಿ, ಬ್ರಹ್ಮರ್ಷಿ, ರಾಜರ್ಷಿ, ಮಹರ್ಷಿ, ಪರಮರ್ಷಿ, ಶ್ರುತರ್ಷಿ, ಕಾಂಡರ್ಷಿ ಎಂಬ ವೈವಿಧ್ಯವಿದೆ. (ಜಿ.ಎಚ್.)

**ಋಷ್ಯಮೂಕ:** ಋಷ್ಯವೆಂಬ ಮೃಗಜಾತಿ ನಾಲಗೆಯನ್ನು ಕಳೆದುಕೊಂಡ ಜಾಗ. ಪಂಪಾಸರೋವರದ ಮುಂಭಾಗದಲ್ಲಿರುವ ಪರ್ವತವಿದು. ಬಳ್ಳಾರಿ ಜಿಲ್ಲೆಯ ಆನೆಗೊಂದಿ ಯಿಂದ ಸುಮಾರು ಹನ್ನೆರಡು ಕಿ.ಮೀ. ದೂರದಲ್ಲಿ ತುಂಗಭದ್ರೆಯ ತೀರದಲ್ಲಿದೆಯೆಂದು ಹೇಳಲಾಗಿದೆ. ಋಕ್ಷರಜಾ ಎಂಬವನ ಮಗನಾದ ಸುಗ್ರೀವ ತನ್ನ ಅಣ್ಣನಾದ ವಾಲಿಯೊಡನೆ ವೈರ ಬೆಳೆದಾಗ ಆತ್ಮರಕ್ಷಣೆಗಾಗಿ ನಾಲ್ವರು ಆಪ್ತ ಕಪಿಗಳೊಡನೆ ಇಲ್ಲಿ ವಾಸವಾಗಿದ್ದ. ಶ್ರೀರಾಮನ ಮಡದಿಯಾದ ಸೀತೆಯನ್ನು ರಾವಣ ಅಪಹರಿಸಿದಾಗ ಅವಳನ್ನು ಹುಡುಕಲು ಹೊರಟಿದ್ದ ರಾಮಲಕ್ಷ್ಮಣರು ಕಬಂಧ ಎಂಬ ರಾಕ್ಷಸನಿಂದ ಸುಗ್ರೀವನ ವಿಚಾರವನ್ನು ಕೇಳಿ ಅವನನ್ನು ಸ್ನೇಹ ಮಾಡಿಕೊಳ್ಳಲು ಯೋಚಿಸುತ್ತಿರುವಾಗ ಆಂಜನೇಯನ ಮೂಲಕ ಇಲ್ಲಿಗೆ ಬಂದು ಕೆಲವು ಕಾಲ ವಾಸವಾಗಿದ್ದರು. ಇದು ಅತ್ಯಂತ ರಮಣೀಯವೂ ಪವಿತ್ರತೆಯಿಂದ ಕೂಡಿದುದೂ ಹೃದಯಕ್ಕೆ ನೆಮ್ಮದಿಯನ್ನು ತರುವಂಥದೂ ಆಗಿದ್ದು ಮೃಗಪಕ್ಷಿಗಳ ಆವಾಸಕ್ಕೂ ಋಷಿ ಮುನಿಗಳ ತಪಸ್ಸಿಗೂ ಬಹು ಯೋಗ್ಯವಾದ ಸ್ಥಳವೆಂದು ವರ್ಣಿತವಾಗಿದೆ. ಇದಕ್ಕೂ ಇದರ ಒಂದು ಭಾಗಕ್ಕೂ ಮಲಯವೆಂಬ ಹೆಸರಿದ್ದಿರಬೇಕೆಂದು ರಾಮಾಯಣದಿಂದ ಗೊತ್ತಾಗುತ್ತದೆ. ಇಲ್ಲಿಯೇ ರಾಮ–ಸುಗ್ರೀವರಿಬ್ಬರಿಗೂ ಅಗ್ನಿಸಾಕ್ಷಿಕಸಖ್ಯವು ಸಿದ್ಧವಾಯಿತು. ಸೀತಾಪಹರಣವಾಗುವಾಗ್ಗೆ ಆಕಾಶಮಾರ್ಗದಲ್ಲಿ ಸಾಗುತ್ತಿದ್ದ ಸೀತೆ ತನ್ನ ವಸ್ತ್ರಾಭರಣವನ್ನು ಗಂಟುಕಟ್ಟಿ ಈ ಪರ್ವತದ ನೇರದಲ್ಲೇ ಕೆಳಕ್ಕೆ ಬಿಸುಟಳು. ಶ್ರೀರಾಮ ವಾಲಿವಧಕ್ಕಾಗಿ ಇಲ್ಲಿಂದಲೇ ಹೊರಟ. ಕೂರ್ಮ ವಿಭಾಗ ಬೃಹತ್ಖಂಡದಲ್ಲಿ ಲಂಕೆಯ ದಕ್ಷಿಣ ಭಾಗಕ್ಕೆ ಇದು ಸೇರಿದೆಯೆಂದು ಹೇಳಿದೆ. (ಎನ್.ಎಸ್.ಆರ್.ಬಿ.)

**ಋಷ್ಯಶೃಂಗ:** ಜಿಂಕೆಯಂತೆ ಕೊಂಬುಳ್ಳ ಒಬ್ಬ ಋಷಿ. ಒಮ್ಮೆ ಪಾದ ಪ್ರಕ್ಷಾಳನಾರ್ಥ ನೀರಿಗಿಳಿದ ಕಾಶ್ಯಪವಂಶದ ವಿಭಾಂಡಕನೆಂಬ ಋಷಿ ಊರ್ವಶಿಯನ್ನು ಕಂಡು ಸ್ಖಲಿತನಾಗ ಲಾಗಿ ಶಾಪಗ್ರಸ್ತಳಾಗಿ ಜಿಂಕೆಯ ರೂಪವನ್ನು ಧರಿಸಿದ ದೇವಕನ್ಯೆಯೊಬ್ಬಳು ಅದೇ ಕಾಲಕ್ಕೆ ಅಲ್ಲಿಗೆ ಬಾಯಾರಿ ನೀರು ಕುಡಿಯಲು ಬಂದವಳು. ನೀರಿನೊಡನೆ ಆ ಋಷಿರೇತಸ್ಸನ್ನೂ ಕುಡಿದಳು. ಪರಿಣಾಮವಾಗಿ ಜಿಂಕೆಗೆ ಒಂದು ಗಂಡು ಮಗು ಹುಟ್ಟಿತು. ಜಿಂಕೆಯ ಗರ್ಭದಲ್ಲಿ ಜನಿಸಿದ ಆ ಮಗುವಿಗೆ ತಲೆಯಲ್ಲಿ ಕೊಂಬು ಇತ್ತು. ಇದರಿಂದ ಆ ಋಷಿಪುತ್ರನಿಗೆ ಋಷ್ಯಶೃಂಗ ಎಂದು ಹೆಸರು ಬಂತು. ತಂದೆಯನ್ನು ಬಿಟ್ಟು ಮತ್ತಾರನ್ನೂ ಕಂಡರಿಯದ ಋಷ್ಯಶೃಂಗ ಅನನ್ಯಮನಸ್ಕನಾಗಿ ಬ್ರಹ್ಮಚರ್ಯಧರ್ಮದಲ್ಲೇ ಇದ್ದ. ಇದೇ ಕಾಲಕ್ಕೆ ದಶರಥಮಹಾರಾಜನ ಬಂಧುವಾದ ಅಂಗದೇಶಾಧಿಪತಿ ಲೋ(ರೋ)ಮಪಾದ ಉಪಾಯ ದಿಂದ ಋಷ್ಯಶೃಂಗನನ್ನು ಬರಮಾಡಿಕೊಳ್ಳಲು ಅನಾವೃಷ್ಟಿ ಪೀಡಿತವಾದ ಅವನ ರಾಜ್ಯದಲ್ಲಿ ಸುವೃಷ್ಟಿಯಾಯಿತು. ಆ ಸಂತೋಷಕ್ಕಾಗಿ ಲೋಮಪಾದ ತನ್ನ ಸ್ನೇಹಿತನಾದ ದಶರಥ ಮಹಾರಾಜನ ಪುತ್ರಿಯೂ ತನ್ನ ಸಾಕುಮಗಳೂ ಆದ ಶಾಂತಳನ್ನು ಋಷ್ಯಶೃಂಗನಿಗೆ ಕೊಟ್ಟು ವಿವಾಹಮಾಡಿ ತನ್ನ ರಾಜ್ಯವನ್ನು ಆತನಿಗೆ ವಹಿಸಿದ.

ಕೆಲ ಕಾಲಾನಂತರ ದಶರಥ ತನ್ನ ಕುಲಗುರುವಾದ ವಸಿಷ್ಠನ ಆದೇಶದಂತೆ ಋಷ್ಯಶೃಂಗ ನನ್ನು ಕರೆತಂದು ಆತನಿಂದ ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿ ಯಜ್ಞಾಂತದಲ್ಲಿ ಅಗ್ನಿಯಿಂದ ಬಂದ ಚರುವನ್ನು ಭಕ್ಷಿಸಿ ನಾರಾಯಣಾವತಾರ ಸ್ವರೂಪರಾದ ರಾಮನೇ ಮೊದಲಾದ ನಾಲ್ಕು ಮಂದಿ ಮಕ್ಕಳನ್ನು ಪಡೆದ. ಋಷ್ಯಶೃಂಗ ಮಹಾಪ್ರತಾಪಿಯೂ ಯಜ್ಞನಿಷ್ಠೆಯುಳ್ಳವನೂ ಆಗಿದ್ದನೆಂದು ಪ್ರಸಿದ್ಧಿ. ಮಾರ್ಕಂಡೇಯ ಪುರಾಣದಂತೆ ಸಾವರ್ಣಿಕಮ ನ್ವಂತರದ ಸಪ್ತರ್ಷಿಗಳಲ್ಲಿ ಋಷ್ಯಶೃಂಗನೂ ಒಬ್ಬ. ಕನ್ನಡ ಜನಪದ ಸಾಹಿತ್ಯದಲ್ಲಿ ಋಷ್ಯಶೃಂಗನ ಕಥೆ ವಿಶಿಷ್ಟವಾದದ್ದು. (ಎಸ್.ಎನ್.ಕೆ.)

**ಋಷ್ಯಶೃಂಗಪುರ:** (ಕಿಗ್ಗ) ಚಿಕ್ಕ ಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಕಸಬೆ ಯಿಂದ ಸು.10ಕಿಮೀ ಪಶ್ಚಿಮಕ್ಕಿರುವ ಗ್ರಾಮ, ಹೋಬಳಿ ಕೇಂದ್ರ. ಈ ಗ್ರಾಮಕ್ಕೆ ಮರಕಲು ಎಂಬ ಹೆಸರೂ ಇದೆ.

ಇಲ್ಲಿರುವ ಶೃಂಗೇಶ್ವರ (ಋಷ್ಯಶೃಂಗೇಶ್ವರ) ದೇವಾಲಯ ಈ ಸುತ್ತಿನಲ್ಲಿ ಬಹು ಪ್ರಸಿದ್ಧವಾದುದು. ಇದು ದಕ್ಷಿಣ ಕರ್ನಾಟಕದ ಅತಿ ಪ್ರಾಚೀನ ದೇವಾಲಯಗಳಲ್ಲೊಂದು. ಇಲ್ಲಿರುವ ಆಳುಪ ವಂಶದ ಗುಣಸಾಗರ (ಸು.650–63) ಮತ್ತು ಚಿತ್ರವಾಹನ (ಸು.663–



ಋಷ್ಯಶೃಂಗೇಶ್ವರ ದೇವಾಲಯ

730) ಇವರ ಶಾಸನಗಳು ಈ ದೇವಾಲಯದ ಪ್ರಾಚೀನತೆಯನ್ನು ಸಾರುವುವಲ್ಲದೆ, ಅದು ಅಂದು ಕೀಟ್ಟಾನೇಶ್ವರದೇವಾಲಯ ಎಂದು ಪ್ರಸಿದ್ಧವಾಗಿತ್ತೆಂಬ ಅಂಶವನ್ನು ತಿಳಿಸುತ್ತವೆ. ದೇವಾಲಯದಲ್ಲಿ ಗರ್ಭಗೃಹ ಹಾಗೂ ಸುಕನಾಸಿ, ಪ್ರದಕ್ಷಿಣಾಪಥ, ನವರಂಗ, ಮುಖಮಂಟಪ ಮತ್ತು ಮುಂದೆ ನಂದಿಮಂಟಪವಿರುವ ಮುಖ್ಯ ಘಟಕವೂ ಇದರ ಸುತ್ತ ಎರಡು ಪ್ರಾಕಾರಗಳೂ ಇವೆ. ಗರ್ಭಗೃಹ, ಸುಕನಾಸಿ ಮತ್ತು ಪ್ರದಕ್ಷಿಣಾಪಥ ದೇವಾಲಯದ ಅತಿಪ್ರಾಚೀನ ಭಾಗಗಳು. ಇವೆಲ್ಲವನ್ನೂ ಸರಳವಾಗಿ ಕಟ್ಟಲಾಗಿದೆ. ಗರ್ಭಗೃಹದ ಬಾಗಿಲ ಇಕ್ಕೆಲದಲ್ಲಿ ಗಣಪತಿ ಮತ್ತು ಮಹಿಷಮರ್ದಿನಿ ದೇವರುಗಳಿರುವ ಚಿಕ್ಕ ಗುಡಿಗಳಿವೆ. ನವರಂಗದ ಕಂಬಗಳು ಬುಡದಲ್ಲಿ ಚೌಕವಾಗಿಯೂ ಯಷ್ಟಿ ಭಾಗದಲ್ಲಿ ಅಷ್ಟಮುಖವಾಗಿಯೂ ಇವೆ. ಕಂಬಗಳ ಮೇಲೆ ಬಹುಶಃ ಅನಂತರದ ಕಾಲದಲ್ಲಿ ಕೆತ್ತಿದ, ಕಾಳಿಂಗಮರ್ದನ, ಉಗ್ರನರಸಿಂಹ, ನರ್ತಕಿಯರು ಒಯ್ಯುತ್ತಿರುವ ಋಷ್ಯಶೃಂಗ ಮೊದಲಾದ ವಿಜಯನಗರಕಾಲೀನ ತೆಳು ಉಬ್ಬುಶಿಲ್ಪಗಳಿವೆ. ಮುಖಮಂಟಪ ಆರು ಕಂಬಗಳದು. ಇದೂ ಹೊಸ ಸೇರ್ಪಡೆ. ಇದರ ಮುಂದೆ ನಂದಿಮಂಟಪವಿದೆ. ಗರ್ಭಗೃಹದಲ್ಲಿರುವ ಲಿಂಗ ವಿಚಿತ್ರ ರೀತಿಯದು. ಇದು ಕಂಬದಂತೆ ಸು.4 ಅಡಿಗಳಷ್ಟು ಎತ್ತರವಾಗಿದ್ದು ಅದರ ಮೇಲೆ ಮೂರು ಕೋಡುಗಳು ಎದ್ದಿವೆ. ಈ ಲಿಂಗ ಪುರಾಣ ಪ್ರಸಿದ್ಧ ಋಷ್ಯಶೃಂಗನ ಹೆಸರಿನಲ್ಲಿ ಸ್ಥಾಪಿತವಾದುದೆಂದೂ (ಅಥವಾ ಆತ ಅದರಲ್ಲಿ ಐಕ್ಯವಾಗಿದ್ದಾನೆಂದೂ) ಮೇಲಿನ ಕೋಡುಗಳಲ್ಲಿ ಒಂದು ಅವನ ಭಾರ್ಯೆ, ಶಾಂತಾಳನ್ನೂ ಇನ್ನೆರಡು ಅವನ ಶೃಂಗಗಳನ್ನೂ ಪ್ರತಿನಿಧಿಸುತ್ತವೆಯೆಂದೂ ಐತಿಹ್ಯ. ಈ ಲಿಂಗ ರುದ್ರಾಕ್ಷ ಸ್ವರೂಪವಾದುದು. ಇದರ ಶಕ್ತಿಯಿಂದ ಹನ್ನೆರಡು ಯೋಜನ ವಿಸ್ತೀರ್ಣದಲ್ಲಿ ಹರಡಿದ್ದ ಕ್ಷಾಮ ನಿವಾರಿತವಾಯಿತು. ಋಷ್ಯಶೃಂಗ ಮತ್ತು ಶಾಂತಾ ಇಲ್ಲಿ ನಂದಿನೀ ನದಿಯ ದಡದಲ್ಲಿ ವಾಸಿಸುತ್ತಾರೆ ಎಂದು ಸ್ಥಳಪುರಾಣ ತಿಳಿಸುತ್ತದೆ. ದೇವಾಲಯದ ಪ್ರಾಕಾರದಲ್ಲಿ ನೈಋತ್ಯ ಭಾಗದಲ್ಲಿ ಒಂದು ಮಲ್ಲಿಕಾರ್ಜುನ ಗುಡಿ ಇದೆ. ಇದರ ಮುಂದಿರುವ ನಂದಿಮಂಟಪದಲ್ಲಿರುವ ನಂದಿ ವಿಗ್ರಹ ಬಹು ಸರಳವಾಗಿ ಸಹಜವಾಗಿ ನಿರೂಪಿತವಾಗಿದೆ. ಇದು ಪಲ್ಲವರ ಕಾಲದ ಶಿಲ್ಪ ಎಂದು ಅಭಿಪ್ರಾಯಪಡಲಾಗಿದೆ. (ಎಸ್.ಎನ್.)

ಎ ಕನ್ನಡ ವರ್ಣಮಾಲೆಯ ಒಂಬತ್ತನೆಯ ಅಕ್ಷರ. ಹ್ರಸ್ವ ಸ್ವರ. ಸಂಸ್ಕೃತದಲ್ಲಿ ಹ್ರಸ್ವ ಎಕಾರವಿಲ್ಲವಾಗಿ ಬ್ರಾಹ್ಮೀ ಲಿಪಿಯ ಲೇಖಗಳಲ್ಲಿ ಈ ಅಕ್ಷರದ ರೂಪ ದೊರೆಯದು. ಕನ್ನಡದಲ್ಲಿ ಈ ಲಿಪಿ ಮತ್ತು ಉಚ್ಚರಣೆ ಬಳಕೆಯಲ್ಲಿದ್ದರೂ ಪ್ರಾಚೀನ ಕನ್ನಡದ ಶಾಸನಗಳಲ್ಲಿ ಎ ಕಾರಕ್ಕೆ ಬದಲು ಏ ಕಾರವನ್ನೇ ಬಳಸಲಾಗಿದೆ. ಬಹುಶಃ ಇದು ಸಂಸ್ಕೃತ ಪ್ರಭಾವದಿಂದ ಆಗಿರಬಹುದು. ಬರವಣಿಗೆಯಲ್ಲಿ ಒಂದೇ ಅಕ್ಷರ ಕಂಡುಬಂದರೂ ಸಂದರ್ಭಕ್ಕೆ ತಕ್ಕಂತೆ ಹ್ರಸ್ವವಾಗಿಯೊ ದೀರ್ಘವಾಗಿಯೊ ಉಚ್ಚರಿಸುವ ವಾಡಿಕೆ ಇತ್ತು. ಲಿಪಿಯ ದೃಷ್ಟಿಯಿಂದ ಈ ಅಕ್ಷರದ ಹ್ರಸ್ವ ಮತ್ತು ದೀರ್ಘ ರೂಪಗಳಿಗಿರುವ ವ್ಯತ್ಯಾಸ ಯಾವಾಗ ರೂಢಿಗೆ ಬಂತು ಎಂದು ಹೇಳುವುದು ಕಷ್ಟ. 15ನೆಯ ಶತಮಾನದ ವಿಜಯನಗರ ಕಾಲದಲ್ಲಿ ವ್ಯಂಜನಾಕ್ಷರಗಳೊಂದಿಗಿನ ಎ ವರ್ಣದ ರೂಪ ಹೇಗಿತ್ತೆಂಬುದನ್ನು ಚಿತ್ರದಲ್ಲಿ ತೋರಿಸಿದೆ.

ವಿಜಯನಗರ : ಪ್ರ.ಶ. 15ನೆಯ ಶತಮಾನ




ಈ ಅಕ್ಷರ ಪೂರ್ವ ಅಗೋಲ ಅರ್ಧ ಸಂವೃತ ಹ್ರಸ್ವಸ್ವರವನ್ನು ಸೂಚಿಸುತ್ತದೆ.(ಎ.ವಿ.ಎನ್.)

**ಎಂಕಿಡು:** ಗಿಲ್ಗಾಮೆಷ್, ಸುಮೇರಿಯನ್ ಮತ್ತು ಬ್ಯಾಬಿಲೋನಿಯನ್ ಪುರಾಣ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಒಂದು ಕಥೆಯ ನಾಯಕ. ಮೊದಲಿಗೆ ಗಿಲ್ಗಾಮೆಷನನ್ನು ಸೋಲಿಸಲೆಂದೇ ಅರೂರು ಎಂಬ ಸುಮೇರಿಯನ್ ದೇವತೆಯಿಂದ ಸೃಷ್ಟಿಸಲ್ಪಟ್ಟ ಎಂಕಿಡು ಕಾಡಿನಲ್ಲಿ ದುಷ್ಟ ಪ್ರಾಣಿಗಳ ಜೊತೆಯಲ್ಲಿ ಬೆಳೆದು ಮಹಾ ಬಲಶಾಲಿಯೂ ವೀರನೂ ಆಗಿದ್ದು ಕಾಡುಪ್ರಾಣಿಗಳ ಗುಣಗಳನ್ನೇ ಹೊಂದಿದ್ದ. ಗಿಲ್ಗಾಮೆಷನಿಂದ ಕಳುಹಿಸಲಾದ ಒಬ್ಬ ವೇಶ್ಯೆಯಿಂದ ಆಕರ್ಷಿತನಾಗಿ ಪಟ್ಟಣಕ್ಕೆ ಬಂದಾಗ ಅವನ ಮತ್ತು ಗಿಲ್ಗಾಮೆಷರ ಮಧ್ಯೆ ಘೋರ ಕಾದಾಟ ನಡೆದರೂ ಯಾರೊಬ್ಬರೂ ಸೋಲದೆ ಕೊನೆಗೆ ಇಬ್ಬರೂ ಆಪ್ತಸ್ನೇಹಿತರಾದರು. ಅನಂತರ ಇವರು ಒಗ್ಗಟ್ಟಿನಿಂದ ಅನೇಕ ಸಾಹಸ ಕೆಲಸಗಳನ್ನು ಸಾಧಿಸಿದರು. ಸೆಡಾರ್ ಪರ್ವತಪ್ರದೇಶದಲ್ಲಿ ವಾಸವಾಗಿದ್ದ ಭಯಂಕರವಾದ ಹುವಾವ ಅಥವಾ ಹುಂಬಾಬನನ್ನು ಕೊಂದುದು ಈ ಸಾಹಸಗಳಲ್ಲೊಂದು. ಸುಮೇರಿಯನ್ ಮೂಲಗಳ ಪ್ರಕಾರ ಎಂಕಿಡು ಸಾಯಲೇ ಇಲ್ಲ. ಅಧೋಲೋಕಕ್ಕೆ ಹೋಗಿ, ಅಲ್ಲಿನ ನೀತಿನಿಯಮಗಳನ್ನು ಉಲ್ಲಂಘಿಸಿ ಅಲ್ಲಿಯೇ ಬಂಧಿತನಾದ. ಬ್ಯಾಬಿಲೋನಿಯನ್ ಗ್ರಂಥಗಳ ಪ್ರಕಾರ ಈತ ಮರಣ ಹೊಂದಲಾಗಿ ಗಿಲ್ಗಾಮೆಷ್ ತನ್ನ ಗೆಳೆಯನ ಸಾವಿಗಾಗಿ ಗೋಳಾಡಿದ. ಅಧೋಲೋಕದಿಂದ ಅಪ್ಪಣೆ ಪಡೆದು ಬಂದ ಎಂಕಿಡು ತನ್ನ ಗೆಳೆಯನಿಗೆ ಸತ್ತವರ ಪರಿಸ್ಥಿತಿಯನ್ನು ವರ್ಣಿಸಲಾಗಿ ವಿವಶನಾದ ಗಿಲ್ಗಾಮೆಷ್ ಅಮರತ್ವ ಪಡೆಯುವ ಪ್ರಯತ್ನದಲ್ಲಿ ನಿರತನಾದ. (ಬಿ.ಕೆ.ಜಿ.)

**ಎಂಗೆಲ್, ಎರ್ನ್ಸ್ಟ್:** 1821–1896. ಜರ್ಮನ್ ಸಂಖ್ಯಾಶಾಸ್ತ್ರಜ್ಞ. ಆರ್ಥಿಕ ವರ್ತನೆಯನ್ನು ಕ್ರಮಬದ್ಧವಾಗಿ ವಿಶ್ಲೇಷಣೆಮಾಡಲು ಪ್ರಪ್ರಥಮವಾಗಿ ಸಾಂಖ್ಯಿಕೀಯ ಅಧ್ಯಯನ ನಡೆಸಿದವನೀತ. ಡ್ರೆಸ್‍ಡೆನ್‍ನಲ್ಲಿ ಹುಟ್ಟಿದ ಎಂಗೆಲ್ ಜರ್ಮನಿಯ ಗಣಿವಿದ್ಯಾಲಯದಲ್ಲಿ ಶಿಕ್ಷಣ ಪಡೆದು ಪ್ಯಾರಿಸಿನ ಗಣಿಯೊಂದರಲ್ಲಿ ಉದ್ಯೋಗ ಹಿಡಿದ. ಅಲ್ಲಿ ಇವನಿಗೆ ಕುಟುಂಬಗಳ ಆಯ–ವ್ಯಯ ಅಧ್ಯಯನದಲ್ಲಿ ಆದ್ಯಪುರುಷನೆನಿಸಿದ ಫ್ರೆಡರಿಕ್ ಲಪ್ಲೇಯ ಪರಿಚಯವಾಯಿತು; ಈ ಪರಿಚಯ ಪ್ರಭಾವವಾಗಿ ಪರಿಣಮಿಸಿತು. ಎಂಗೆಲನ ಭಾವೀ ವಿಚಾರದೀಪ್ತಿಗೆ ಇದೇ ಮೂಲ. ಈತನ ಮೇಲೆ ಹೆಚ್ಚಿನ ಪ್ರಭಾವ ಬೀರಿದ ಇನ್ನೊಬ್ಬ ವ್ಯಕ್ತಿಯೆಂದರೆ ಬೆಲ್ಜಿಯಮ್ಮಿನ ಅಡಾಲ್ಫ್ ಕೇಟ್ಲೆ. ಅಳತೆಮಾಡಿ ತೋರಿಸಬಹುದಾದ ಸಾಮಾಜಿಕ ಸೂತ್ರಗಳನ್ನು ಕಂಡುಹಿಡಿಯಬಹುದೆಂಬುದು ಕೇಟ್ಲೆಯ ನಂಬಿಕೆಯಾಗಿತ್ತು. ಬೆಲ್ಜಿಯಮ್ಮಿನಲ್ಲಿ ಕೆಲಕಾಲ ಇದ್ದಮೇಲೆ ಎಂಗೆಲ್ ಜರ್ಮನಿಗೆ ಹಿಂದಿರುಗಿದ. ಸಂಖ್ಯಾಶಾಸ್ತ್ರವೇ ಈತನ ವೃತ್ತಿಯಾಯಿತು. ಸ್ಯಾಕ್ಸನಿ ಮತ್ತು ಪ್ರಷ್ಯಗಳಲ್ಲಿ ಈತ ಸಾಂಖ್ಯಿಕೀಯ ವಿಭಾಗದ ನಿರ್ದೇಶಕನಾಗಿದ್ದ (1850–1882).

ಅಂಕಿ–ಮಗ್ಗಿಯ ಗಣಿತದಲ್ಲಿ ಎಂಗೆಲನ ಆಸಕ್ತಿ ತೀವ್ರವಾಗಿತ್ತು. ಅಧಿಕೃತ ಅಂಕಿ–ಅಂಶಗಳ ಆಧುನಿಕ ಸಂಪ್ರದಾಯದ ಸ್ಥಾಪನೆಗಾಗಿ ಎಂಗೆಲ್ ಮಾಡಿದ ಪ್ರಯತ್ನ ಅಗಾಧ. ಇವು ತಮ್ಮ ಕಥೆಯನ್ನು ತಾವೇ ಹೇಳಿಕೊಳ್ಳುವ ಹಾಗಾಗಬೇಕು; ಇವು ಎಲ್ಲರಿಗೂ ಲಭ್ಯವಾಗಬೇಕು–ಎಂಬುದು ಈತನ ಕನಸು.

ಆಡಳಿತವನ್ನು ಪರಿಶುದ್ಧಗೊಳಿಸಬೇಕೆಂದೂ ಸಮಾಜಸುಧಾರಣೆಯಾಗಬೇಕೆಂದೂ ಎಂಗೆಲ್ ಬಹಳ ಶ್ರಮಿಸಿದ. ಜರ್ಮನಿಯ ವ್ಯವಸಾಯಕ್ಕೆ ರಕ್ಷಣೆ ನೀಡುವ ಬಿಸ್ಮಾರ್ಕನ ನೀತಿಯನ್ನು ವಿರೋಧಿಸಿ ಎಂಗೆಲ್ ಬರೆದ ಲೇಖನದಿಂದ ಆಡಳಿತಗಾರರಿಗೆ ಅಸಮಾಧಾನವಾಯಿತು. ಲೇಖನದಲ್ಲಿ ಎಂಗೆಲನ ಹೆಸರಿಲ್ಲದಿದ್ದರೂ ಇದು ಈತನೇ ಬರೆದದ್ದೆಂದು ಗೊತ್ತಾಯಿತು. ಎಂಗೆಲ್ ಕೆಲಸ ಕಳೆದುಕೊಂಡ. ಎಂಗೆಲ್‍ನ ಕೆಲಸ ಹೋದರೂ ಹೆಸರು ಹೋಗಲಿಲ್ಲ. ಅದು ಚಿರಾಯು, ಅರ್ಥಶಾಸ್ತ್ರಕ್ಷೇತ್ರಕ್ಕೆ ಸಂಬಂಧಿಸಿದಂತೆ ಈತ ರಚಿಸಿದ ಸೂತ್ರ ಎಂಗೆಲನ ಸೂತ್ರವೆಂದು ಪ್ರಸಿದ್ಧವಾಗಿದೆ (**ನೋಡಿ– ಎಂಗೆಲ್‍ನ–ಸೂತ್ರ**). ಒಬ್ಬನ

ವರಮಾನ ಹೆಚ್ಚಿದಂತೆಲ್ಲ ಆತ ಆಹಾರವಸ್ತುಗಳ ಮೇಲೆ ಮಾಡುವ ವೆಚ್ಚದ ಪ್ರಮಾಣ ತಗ್ಗುತ್ತದೆಯೆಂದು ಮುಂತಾಗಿ ಈತ ನೀಡಿದ ಸೂತ್ರ ವೈಚಾರಿಕ ಕ್ರಾಂತಿಯನ್ನೇ ಉಂಟುಮಾಡಿತೆನ್ನಬಹುದು. ಕಾರ್ಮಿಕರ ವರಮಾನ ಹೆಚ್ಚಿದರೆ ಆಹಾರ ಸಾಮಗ್ರಿಗೆ ಬೇಡಿಕೆಯೂ ಜನಸಂಖ್ಯೆಯೂ ಅತಿಯಾಗುತ್ತದೆ–ಎಂಬ ಧಾಟಿಯಲ್ಲಿ ಸಾಗುವ ಮಾಲ್ಥಸ್‌ನ ಅಂಜಿಕೆಗಳಿಗೆ ಈ ಸೂತ್ರಗಳು ಉತ್ತರ ರೂಪವೆನ್ನಬಹುದು.

ಆಹಾರವೆಚ್ಚಕ್ಕೆ ಸಂಬಂಧಿಸಿದ ಸೂತ್ರಗಳಂತೆ ವಸ್ತ್ರ ವಸತಿಗಳೇ ಮುಂತಾದ ಕ್ಷೇತ್ರಗಳ ವೆಚ್ಚಗಳ ಬಗ್ಗೆಯೂ ಸಾಮಾನ್ಯ ಸೂತ್ರ ರಚಿಸಬೇಕೆಂದು ಅನಂತರ ಅನೇಕರು ಪ್ರಯತ್ನ ನಡೆಸಿದರು. ಆದರೆ ಅವುಗಳ ವರ್ತನೆಗಳು ಆಹಾರದ ವಿಚಾರದಲ್ಲಿದ್ದಂತೆ ಸರಳವಲ್ಲ. ಆದ್ದರಿಂದ ಆ ಸೂತ್ರಗಳು ಇಷ್ಟೊಂದು ವ್ಯಾಪಕವಲ್ಲ.

ಒಂದು ಅಥವಾ ಹಲವು ವೆಚ್ಚದ ಬಾಬುಗಳಿಗೂ ವರಮಾನ ಅಥವಾ ಒಟ್ಟು ವೆಚ್ಚಕ್ಕೂ ಇರುವ ಸಂಬಂಧ; ಇದು ಎಂಗೆಲ್ ರೇಖೆ ಎಂದು ಪ್ರಸಿದ್ಧವಾಗಿದೆ. ಇದನ್ನೇ ಆಧರಿಸಿ ಕೇನ್ಸ್ ಅನುಭೋಗ ಅನುಚರಿಯನ್ನು ನಿರ್ಮಿಸಿದ್ದಾನೆ. ಆದರೆ ಎಂಗೆಲನಿಗೆ ಆ ಕಾಲದಲ್ಲಿ ಈ ವಿಧಾನ ಗೊತ್ತಿರಲಿಲ್ಲ. ಈ ಬಗ್ಗೆ ಕೇನ್ಸನ ಮನಶ್ಶಾಸ್ತ್ರೀಯ ಸೂತ್ರ ಎಂಗೆಲನ ಸೂತ್ರದ ವಂಶದಲ್ಲೇ ಬಂದ ಸಂತಾನವೆಂಬುದು ಸ್ವತಸ್ಸಿದ್ಧ.

ಅಂತೂ ಎಂಗೆಲ್ ತನ್ನ ಪರಿಮಿತ ಕ್ಷೇತ್ರದಲ್ಲೇ ಬಹಳಮಟ್ಟಿಗೆ ಮುಂದುವರಿದು ಕುಟುಂಬಗಳ ಆಯ–ವ್ಯಯದ ಬಗ್ಗೆ ಎಷ್ಟೋ ಕೆಲಸಮಾಡಿದ. ಈ ಬಗೆಯ ಲೆಕ್ಕಾಚಾರದಲ್ಲಿ ಗಂಡು, ಹೆಣ್ಣು, ವಯಸ್ಕ, ಶಿಶು ಮುಂತಾದ ಲಿಂಗಭೇದ ವಯೋಭೇದಗಳಿಗೆ ಅನುಗುಣವಾಗಿ ಅನುಸರಿಸಬೇಕಾದ ತೂಕದ ವಿಚಾರವಾಗಿ ಸಾಧಿಸಿರುವ ಮುನ್ನಡೆಗೆಲ್ಲ ಎಂಗೆಲನ ದುಡಿಮೆಯೇ ತಳಹದಿ. ಶಿಕ್ಷಣದ ಆರ್ಥಿಕ ಮುಖವನ್ನು ಕುರಿತೂ ತನ್ನ ಗ್ರಂಥವೊಂದರಲ್ಲಿ ಈತ ವಿಚಾರಮಾಡಿದ್ದಾನೆ.

ಅಮೆರಿಕದಲ್ಲೂ ಎಂಗೆಲನ ಹೆಸರು ಬಹಳ ವ್ಯಾಪಿಸಿತ್ತು. ಅಲ್ಲಿ ಈತನಿಗಿದ್ದ ಏಕಲವ್ಯಶಿಷ್ಯರು ಅನೇಕ. ಅಂತಾರಾಷ್ಟ್ರೀಯ ಸಾಂಖ್ಯಿಕೀಯ ಕಾಂಗ್ರೆಸಿನಲ್ಲಿ ಎಂಗೆಲ್ ಹೆಚ್ಚು ಆಸಕ್ತಿ ತಳೆದಿದ್ದ. ಮುಂದೆ ಇದರ ಸ್ಥಾನದಲ್ಲಿ ಹುಟ್ಟಿದ ಅಂತಾರಾಷ್ಟ್ರೀಯ ಸಾಂಖ್ಯಿಕೀಯ ಸಂಸ್ಥೆಯ (ಇಂಟರ್‌ನ್ಯಾಷನಲ್ ಸ್ಟ್ಯಾಟಿಸ್ಟಿಕಲ್ ಇನ್ಸ್‌ಟಿಟ್ಯೂಟ್) ಸ್ಥಾಪಕರ ಪೈಕಿ ಎಂಗೆಲನೂ ಒಬ್ಬ.

ಎಂಗೆಲನ ಆಸಕ್ತಿಯ ಹರವು ಬಲು ದೊಡ್ಡದು. ಸಂಖ್ಯಾಶಾಸ್ತ್ರ, ಆಡಳಿತ, ಸಮಾಜ ಸುಧಾರಣೆಗಳೇ ಅಲ್ಲದೆ ಕೈಗಾರಿಕೆ, ಕಾರ್ಮಿಕ ಜಗತ್ತು, ತೆರಿಗೆ, ವಿಮೆ, ಬ್ಯಾಂಕಿಂಗ್, ಯುದ್ಧ ಮುಂತಾದ ನಾನಾ ವಿಚಾರಗಳನ್ನು ಕುರಿತು ಈತ ವಿಪುಲವಾಗಿ ಬರೆದಿದ್ದಾನೆ. *

**ಎಂಗೆಲ್‌ನ ಸೂತ್ರ:** ಒಬ್ಬ ವ್ಯಕ್ತಿಯ ವರಮಾನ ಎಷ್ಟು ಕಡಿಮೆಯೋ ಆಹಾರದ ಮೇಲೆ ಆತ ಮಾಡುವ ಖರ್ಚಿನ ಪ್ರಮಾಣ ಅಷ್ಟೇ ಅಧಿಕ–ಎಂಬ ಸೂತ್ರ (ಎಂಗೆಲ್ಸ್ ಲಾ). 19ನೆಯ ಶತಮಾನದಲ್ಲಿ ಜೀವಿಸಿದ್ದ ಜರ್ಮನ್ ಅರ್ಥಶಾಸ್ತ್ರಜ್ಞ ಎಂಗೆಲ್ ಇದರ ಪ್ರತಿಪಾದಕನಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ (**ನೋಡಿ– ಎಂಗೆಲ್,–ಎರ್ನ್ಸ್ಟ್**).

ಜನ ತಮ್ಮ ವರಮಾನವನ್ನು ಹೇಗೆ ವಿನಿಯೋಗಿಸುತ್ತಾರೆಂಬುದು ಅರ್ಥಶಾಸ್ತ್ರದ ಒಂದು ಮುಖ್ಯ ಅಧ್ಯಯನ ವಿಷಯ. ವೆಚ್ಚ ಹಾಗೂ ಉಳಿತಾಯಗಳ ನಡುವೆ ವರಮಾನ ಹೇಗೆ ಹಂಚಿಕೆಯಾಗುವುದೆಂಬುದೂ ಜೀವನದ ಅಗತ್ಯಗಳು, ಸೌಕರ್ಯಗಳು ಹಾಗೂ ಭೋಗಸಾಧನಗಳಿಗಾಗಿ ಜನ ಯಾವ ಯಾವ ಪ್ರಮಾಣಗಳಲ್ಲಿ ಖರ್ಚು ಮಾಡುವರೆಂಬುದೂ ಅನೇಕ ಆರ್ಥಿಕ ಸಮಸ್ಯೆಗಳ ಪರಿಶೀಲನೆಗೆ ಮುಖ್ಯವಾಗಿವೆ. ಈ ವರಮಾನ ವಿನಿಯೋಗದ ಬಗ್ಗೆ ವ್ಯಕ್ತಿ–ವ್ಯಕ್ತಿಗೂ ವಿವಿಧ ವರಮಾನಗಳ ಗುಂಪುಗಳಿಗೂ ನಡುವೆ ವ್ಯತ್ಯಾಸವಿರುವುದು ಸ್ವಾಭಾವಿಕವಾದರೂ ಒಟ್ಟಿನಲ್ಲಿ ಒಂದು ಸಾರ್ವತ್ರಿಕ ಸ್ವಭಾವವನ್ನು ಗುರುತಿಸಿ ಅನುಭೋಗಿಗಳ ವರಮಾನ ಹಂಚಿಕೆಯನ್ನು ಕುರಿತ ಸಾಮಾನ್ಯ ಸೂತ್ರ ರಚಿಸಲು ಅನೇಕರು ಯತ್ನ ನಡೆಸಿದ್ದಾರೆ. ಇವುಗಳ ಪೈಕಿ ಎರ್ನ್ಸ್ಟ್ ಎಂಗೆಲ್ ಕೈಕೊಂಡ ಕುಟುಂಬ ವೆಚ್ಚದ ಪರಿಶೀಲನೆಯೂ ಇದರ ಆಧಾರದ ಮೇಲೆ ಈತ ನಿರೂಪಿಸಿರುವ ಸೂತ್ರವೂ ಹೆಚ್ಚು ಪ್ರಸಿದ್ಧವಾಗಿವೆ.

ಸ್ಯಾಕ್ಸನಿ ಎಂಬಲ್ಲಿನ ಕೆಳ, ಕಾರ್ಮಿಕ ಹಾಗೂ ಮಧ್ಯಮ ವರ್ಗಗಳ ಸಂಸಾರಗಳ ಖರ್ಚುಗಳ ಬಗ್ಗೆ 1857ರಲ್ಲಿ ಎಂಗೆಲ್ ನಡೆಸಿದ ಪರಿಶೀಲನೆಯ ಆಧಾರದ ಮೇಲೆ ಈತ ರಚಿಸಿರುವ ಕೋಷ್ಟಕವನ್ನು ಮುಂದೆ ಕೊಟ್ಟಿದೆ:

ಈ ಅಂಕಿಗಳ ಆಧಾರದ ಮೇಲೆ ಎಂಗೆಲ್ ಈ ಕೆಲವು ಸಾಮಾನ್ಯ ಪ್ರವೃತ್ತಿಗಳನ್ನು ನಿರೂಪಿಸಿದ್ದಾನೆ:

1. ವರಮಾನದ ಮಟ್ಟ ಕಡಿಮೆಯಿರುವಾಗ ಒಟ್ಟು ವೆಚ್ಚದಲ್ಲಿ ಆಹಾರದ ಖರ್ಚಿನ ಪ್ರಮಾಣವೇ ಅಧಿಕ.

2. ವರಮಾನ ಹೆಚ್ಚಿದಂತೆ ಆಹಾರದ ಖರ್ಚಿನ ಪ್ರಮಾಣ ಇಳಿಯುತ್ತಲೂ ಆರೋಗ್ಯ, ವಿದ್ಯಾಭ್ಯಾಸ ಮತ್ತು ಇತರ ಸೇವೆಗಳ ಬಗ್ಗೆ ಮಾಡುವ ಖರ್ಚಿನ ಪ್ರಮಾಣ ಏರುತ್ತಲೂ ಸಾಗುತ್ತವೆ.

3. ಉಡುಗೆ, ಬಾಡಿಗೆ, ಇಂಧನ, ದೀಪ ಇವುಗಳ ಮೇಲಿನ ಖರ್ಚಿನ ಪ್ರಮಾಣ ಎಲ್ಲ ವರಮಾನ ಮಟ್ಟಗಳಲ್ಲೂ ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ.

| ಖರ್ಚಿನ ಬಾಬ್ತು | ಕುಟುಂಬದ ಒಟ್ಟು ವೆಚ್ಚದಲ್ಲಿ ನಾನಾ ಬಾಬ್ತುಗಳ ಖರ್ಚುಗಳ ಪ್ರಮಾಣ | | |
|---|---|---|---|
| | 45 *l*–60 *l* ವರಮಾನ ಇರುವ ಕಾರ್ಮಿಕ ಕುಟುಂಬ | 90 *l* –120 *l* ವರಮಾನ ಇರುವ ಕಾರ್ಮಿಕ ಕುಟುಂಬ | 150 *l*–200 *l* ವರಮಾನ ಇರುವ ಮಧ್ಯಮವರ್ಗದ ಕುಟುಂಬ |
| 1. ಆಹಾರ ಮಾತ್ರ | 62.0% | 55.0% | 50.0% |
| 2. ಉಡುಗೆ | 16.0% | 18.0% | 18.0% |
| 3. ವಸತಿ | 12.0% | 12.0% | 12.0% |
| 4. ದೀಪ ಮತ್ತು ಇಂಧನ | 5.0% | 5.0% | 5.0% |
| 5. ವಿದ್ಯಾಭ್ಯಾಸ | 2.0% | 3.5% | 5.5% |
| 6. ಕಾನೂನಿನ ರಕ್ಷಣೆ ಹಾಗೂ ನ್ಯಾಯಾಲಯ ಖರ್ಚು | 1.0% | 2.0% | 3.0% |
| 7. ಆರೋಗ್ಯ ರಕ್ಷಣೆ | 1.0% | 2.0% | 3.0% |
| 8. ಸೌಕರ್ಯಗಳು ಮತ್ತು ವಿಹಾರ | 1.0% | 2.5% | 3.5% |
| ಒಟ್ಟು (ಶೇಕಡ) | 100.0 | 100.0 | 100.0 |

ಈ ಸೂತ್ರ ವಾಸ್ತವಸ್ಥಿತಿಗೆ ಅನುಗುಣವಾಗಿಯೇ ಇದೆಯೆಂದು ಹೇಳಬಹುದು. ಹೆಚ್ಚು ವರಮಾನವುಳ್ಳ ಸಿರಿವಂತರು ಜೀವನಾಗತ್ಯಗಳ ಮೇಲೆ ಮಾಡುವ ವೆಚ್ಚ ಕಡಿಮೆ ವರಮಾನವಿರುವ ಬಡವರು ಮಾಡುವ ವೆಚ್ಚಕ್ಕಿಂತ ಹೆಚ್ಚಾಗಿರಬಹುದಾದರೂ ಅವರವರ ಒಟ್ಟು ವರಮಾನಗಳಲ್ಲಿ ಇವಕ್ಕಾಗಿ ಬಡವರು ಮಾಡುವ ವೆಚ್ಚದ ಪ್ರಮಾಣ ಸಿರಿವಂತರ ವೆಚ್ಚದ ಪ್ರಮಾಣಕ್ಕಿಂತ ಹೆಚ್ಚಾಗಿರುತ್ತದೆ.

ಅನುಭೋಗ ಪ್ರವೃತ್ತಿಯನ್ನು ಕುರಿತ ಪ್ರಥಮ ಶಾಸ್ತ್ರೀಯ ಅಧ್ಯಯನವೆಂದು ಹೇಳಬಹುದಾದ ಈ ಅಧ್ಯಯನದ ತರುವಾಯ ಅನೇಕರು ಕೈಕೊಂಡಿರುವ ಅಧ್ಯಯನಗಳಿಗೆ ಇದು ಒಂದು ಮಾದರಿಯಾಗಿದೆ. ಇವೆಲ್ಲವೂ ಎಂಗೆಲನ ತೀರ್ಮಾನಗಳನ್ನೇ ಪುಷ್ಟೀಕರಿಸುತ್ತವೆ. ಅದರಿಂದಾಗಿ ಎಂಗೆಲನ ಸೂತ್ರಕ್ಕೆ ಅರ್ಥಶಾಸ್ತ್ರದಲ್ಲಿ ಹೆಚ್ಚಿನ ಮಾನ್ಯತೆಯುಂಟು. (ಎ.ಪಿ.ಎಸ್.)

**ಎಂಗೆಲ್ಕ್, ಗೆರ್‍ರಿಟ್:** 1900–1940. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ನಡುವಿನ ಕಾರ್ಮಿಕ ಕವಿಗಳಲ್ಲಿ ಪ್ರಮುಖ. ಒಂದನೆಯ ಮಹಾಯುದ್ಧದ ನಿರಾಸೆಯಿಂದ ಜರ್ಮನಿಯಲ್ಲಿ ದಲಿತ ಜನರ ವಕ್ತಾರರೆನಿಸಿದ ಕವಿಗಳ ಗುಂಪು ಮಾರ್ಕ್ಸ್‌ವಾದವನ್ನು ಒಪ್ಪಿಕೊಂಡಿತಷ್ಟೆ. ದಲಿತರ ಕಷ್ಟನಿಷ್ಠುರಗಳನ್ನೂ ಏಳಿಗೆಯ ವಿಧಾನಗಳನ್ನೂ ತಾನೇ ಕಾರ್ಖಾನೆಯ ಕಾರ್ಮಿಕನಾಗಿದ್ದ ಗೆರ್‍ರಿಟ್ ತುಂಬ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಹೆನ್ರಿಷ್ ಲೆರ್ಷ್, ಮ್ಯಾಕ್ಸ್ ಬಾರ್ಥೆಲ್ ಮತ್ತು ಗೆರ್‍ರಿಟ್–ಇವರು ಮಾರ್ಕ್ಸ್‌ವಾದದ ಜೊತೆಗೆ ಮಾನವವಾದವನ್ನೂ ತಮ್ಮ ಕಾವ್ಯಗಳಲ್ಲಿ ಒಡಮೂಡಿಸಿದ್ದಾರೆ. ಯುದ್ಧಪ್ರತಿಭಟನೆ ಮತ್ತು ಸಾಮಾಜಿಕ ಭ್ರಾತೃತ್ವಕ್ಕಾಗಿ ಇವರು ತಮ್ಮ ಕೃತಿಗಳಲ್ಲಿ ನಿರಂತರ ಪ್ರಚಾರಮಾಡಿದ್ದಾರೆ.

ಗೆರ್‍ರಿಟ್ ಒಂದನೆಯ ಮಹಾಯುದ್ಧದಲ್ಲಿ ಗಾಯಗೊಂಡು ಆಸ್ಪತ್ರೆಯೊಂದರಲ್ಲಿ ಅಸುನೀಗಿದ. ರಿದ್‌ಮುಸ್ ಡೆಸ್‌ನಾಯನ್ ಐರೋಪಾ (1921), ಬ್ರೀಫ್‌ಡರ್‌ಲೀಬೆ (1926), ಫೆರ್‌ಮಾಕ್ಟನಿಸ್ (1937)–ಇವು ಈತನ ಮುಖ್ಯ ಕೃತಿಗಳು. ಕೊನೆಯದು ಯುದ್ಧಕ್ಕೆ ಸಂಬಂಧಿಸಿದ ದಿನಚರಿ ಮತ್ತು ಪತ್ರಗಳ ಸಂಕಲನ. (ಎಸ್.ಎ.ಎನ್.)

**ಎಂಗೆಲ್ಸ್, ಫ್ರೆಡ್ರಿಕ್:** 1820–1895. ಸಾಮೂಹಿಕ ಸ್ವಾಮ್ಯವಾದಿ (ಕಮ್ಯೂನಿಸ್ಟ್). ಶ್ರಮಜೀವಿಗಳ ನಾಯಕ. ಕಾರ್ಲ್ ಮಾರ್ಕ್ಸ್‌ನೊಡನೆ ಸಹಕರಿಸಿ ಚಾರಿತ್ರಿಕ ಭೌತವಾದ ಬೆಳೆಸಿದ. ಜರ್ಮನಿಯ ಬಾರ್ಮೆನ್ ಕೈಗಾರಿಕಾ ಪಟ್ಟಣದಲ್ಲಿ 1820ರ ನವೆಂಬರ್ 28ರಂದು ಜನಿಸಿದ; ಲಂಡನ್ನಿನಲ್ಲಿ ಸತ್ತ ತಂದೆಯ ಎಂಟು ಮಕ್ಕಳ ಪೈಕಿ ಎಂಗೆಲ್ಸನೇ ಹಿರಿಯ. ತಂದೆ ಹತ್ತಿಗಿರಣಿಯೊಂದರ ಒಡೆಯ; ಇನ್ನೊಂದರ ಪಾಲುದಾರ; ವ್ಯವಹಾರವಿದ. ಎಂಗೆಲ್ಸ್ ಬೆಳೆದದ್ದು ಸಾಂಪ್ರದಾಯಿಕ ಮತದ ವಾತಾವರಣದಲ್ಲಿ. ಬಾರ್ಮೆನ್, ಎಲ್ಬರ್‌ಫೆಲ್ಡ್‌ಗಳಲ್ಲಿ ಈತ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮುಗಿಸಿದ ಮೇಲೆ ನ್ಯಾಯಶಾಸ್ತ್ರ ವ್ಯಾಸಂಗ ಮಾಡಬೇಕೆಂಬ ಉದ್ದೇಶದಿಂದ ಮೊದಲು ತನ್ನ ತಂದೆಯ ಉದ್ಯಮದಲ್ಲೂ ಅನಂತರ ಬ್ರೆಮೆನ್‌ನಲ್ಲೂ ವ್ಯಾಪಾರ ಸಮಸ್ಯೆಗಳನ್ನು ಕುರಿತು ಅಧ್ಯಯನ ನಡೆಸಿದ. ಆಮೇಲೆ ಒಂದು ವರ್ಷ ಸೈನ್ಯಸೇವೆಯನ್ನೂ ಸಲ್ಲಿಸಿದ್ದುಂಟು. ಅದೇ ಸಂದರ್ಭದಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಮತಧರ್ಮಗಳ ಇತಿಹಾಸವನ್ನು ವಿಶೇಷ ಅಧ್ಯಯನದ ವಿಷಯವಾಗಿ ಆಯ್ದುಕೊಂಡು ಅಭ್ಯಾಸ ಮಾಡಿದ.

ಅಲ್ಲಿ ಶೆಲ್ಲಿಂಗನ ವಿಜ್ಞಾನ ವಿರೋಧಿ ನಿಲುವನ್ನು ಅಂಧಶ್ರದ್ಧೆ ಮತ್ತು ಗುಲಾಮಿ ಭಕ್ತಿಯೆಂದು ಕಟುವಾಗಿ ಟೀಕಿಸಿದ ಎಂಗೆಲ್ಸ್, 1842ರಲ್ಲಿ ಮತ್ತೆ ತನ್ನ ವಾಣಿಜ್ಯ ತರಬೇತಿ ಮುಂದುವರಿಸಿ ತಂದೆಯ ಪ್ರತಿನಿಧಿಯಾಗಿ ಮ್ಯಾಂಚೆಸ್ಟರಿನಲ್ಲಿ (ಇಂಗ್ಲೆಂಡ್) ನೆಲೆಸಿ ಅರಳೆಯ ವ್ಯಾಪಾರದಲ್ಲಿ ನಿರತನಾದ. ಅದು ಹೆಚ್ಚು-ಕಡಿಮೆ ಎಂಗೆಲ್ಸನ ಬಾಳು ಕವಲೊಡೆದ ಕಾಲ. ಆಗಲೆ ಎಂಗೆಲ್ಸ್ ಹತ್ತಾರು ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿಕೊಂಡಿದ್ದ.

ಮಧ್ಯಮವರ್ಗದ ಕ್ಯಾಲ್ವಿನಿಸ್ಟ್ ದೈವಜ್ಞಾನಿಗಳ ಶ್ರದ್ಧಾಭಕ್ತಿ ಪುರಸ್ಸರವಾದ ತೃಪ್ತ ಮನೋಭಾವವೂ ಕುಡುಕ ಕಾರ್ಮಿಕವರ್ಗದ ಕಷ್ಟನಿಷ್ಠುರಗಳೂ ಎಳೆವಯಸ್ಸಿನ ಎಂಗೆಲ್ಸನ ಮೇಲೆ ತೀವ್ರ ಪರಿಣಾಮ ಬೀರಿದವು. ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲೇ ಈತ ಆಸ್ವಾಲ್ಡ್ ಎಂಬ ಲೇಖನ ನಾಮದಿಂದ ಈ ಪರಿಸ್ಥಿತಿಯನ್ನು ಬಣ್ಣಿಸಿ ಬರೆದ. ಆಗಲೇ ಎಂಗೆಲ್ಸನ ಬರೆವಣಿಗೆಯ ಶಕ್ತಿ ಪ್ರಕಟವಾಯಿತು. ಕ್ರಮಕ್ರಮವಾಗಿ ಎಂಗೆಲ್ಸ್ ಮತಶ್ರದ್ಧೆಯ ಮನೋಭಾವದಿಂದ ಸಿಡಿದು ದೂರ ಸಾಗಿದ. 1842ರಲ್ಲಿ ಇದು ಸಂಪೂರ್ಣ ವಾಯಿತು. ಈ ದೃಷ್ಟಿಯಿಂದಲೂ ಆ ವರ್ಷ ಎಂಗೆಲ್ಸನ ಬಾಳಿನಲ್ಲಿ ಮಹತ್ತ್ವದ್ದು. ವಿಶ್ವವಿದ್ಯಾನಿಲಗಳಿಂದ ಯಾವ ದೊಡ್ಡ ಪದವಿಯನ್ನೂ ಪಡೆಯದೆ ತನ್ನ ಮೇಧಾವಿತನವನ್ನು ಬೆಳಗಿಸಿರುವ ಮಹಾನ್ ಚಿಂತಕರ ಸಾಲಿನಲ್ಲಿ ಎಂಗೆಲ್ಸ್‌ಗೆ ಖಚಿತವಾದ ಸ್ಥಾನವಿದೆ.



1842ರಲ್ಲಿ ಎಂಗೆಲ್ಸ್ ಇಂಗ್ಲೆಂಡಿಗೆ ಬಂದಾಗ ಅಲ್ಲಿನ ರಾಜಕೀಯ ಸಾಮಾಜಿಕ ಸ್ಥಿತಿಗತಿಗಳು ಈತನ ತೀವ್ರ ಪರಿಶೀಲನೆಗೆ ಒಳಗಾದುವು. ಕಾರ್ಮಿಕ ಸ್ಥಿತಿ ಸುಧಾರಣೆಗಾಗಿ ಇಂಗ್ಲೆಂಡಿನಲ್ಲಿ ನಡೆಯುತ್ತಿದ್ದ ಚಳುವಳಿಗಳಿಂದ ಎಂಗೆಲ್ಸನ ಆಸಕ್ತಿ ಕೆರಳಿತು. ಅಲ್ಲಿನ ಪತ್ರಿಕೆಗಳಿಗೆ ಎಂಗೆಲ್ಸ್ ಲೇಖನ ಬರೆದ. ಯೂರೋಪಿನ ಪರಿಸ್ಥಿತಿಯ ಬಗ್ಗೆ ಕಣ್ಣಾರೆ ಕಂಡ ಅನುಭವಕ್ಕೆ ಆಗ ಈತ ಇಂಗ್ಲೆಂಡಿನ ಅರ್ಥಶಾಸ್ತ್ರಜ್ಞರ ವಿಚಾರಗಳನ್ನು ಜೋಡಿಸಿ ನೋಡಿದ. ಇಂಗ್ಲೆಂಡಿನ ಕೆಲಸಗಾರರ ಸ್ಥಿತಿಗತಿಗಳನ್ನು ಕುರಿತು ಒಂದು ಗ್ರಂಥವನ್ನೂ ಅರ್ಥಶಾಸ್ತ್ರವನ್ನು ವಿಮರ್ಶಿಸಿ ಇನ್ನೊಂದು ಗ್ರಂಥವನ್ನೂ ಬರೆದ. ಶ್ರಮಜೀವಿಗಳಿಗೆ ಉತ್ತಮ ಭವಿಷ್ಯವಿದೆಯೆಂದೂ ಇವರು ಚರಿತ್ರಾರ್ಹ ಚಳವಳಿ ಕೈಕೊಳ್ಳುವ ಅರ್ಹತೆ ಪಡೆದಿದ್ದಾರೆಂದೂ ಎಂಗೆಲ್ಸ್ ಈ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾನೆ. ಸಾಮಾಜಿಕ ಪ್ರಕ್ರಿಯೆಗಳಲ್ಲಿ ಅಡಗಿರುವ ಭೌತವಾದ ಪ್ರೇರಣೆಗಳನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ. ಕಾರ್ಲ್ ಮಾರ್ಕ್ಸನೂ ಹೆಗೆಲನ ಪಂಥದವನಾಗಿದ್ದ ಆರ್ನಾಲ್ಡ್ ರೂಜನೂ ಸಂಪಾದಿಸಿ ಪ್ರಕಟಿಸುತ್ತಿದ್ದ ಪತ್ರಿಕೆಯೊಂದಕ್ಕೆ ಎಂಗೆಲ್ಸ್ ಬರೆದ ಲೇಖನವೊಂದು (1844) ಮಾರ್ಕ್ಸನ ಗಮನ ಸೆಳೆಯಿತು. ವೈಜ್ಞಾನಿಕ ಸಮಾಜವಾದದ ಸಾಮಾನ್ಯ ತತ್ತ್ವಗಳನ್ನು ಈ ವಯಸ್ಸಿನಲ್ಲೇ ಈತ ಚೆನ್ನಾಗಿ ತಿಳಿದುಕೊಂಡಿದ್ದಾನೆಂದು ಮಾರ್ಕ್ಸ್ ಹೊಗಳಿದ. ಉದಾರವಾದಿ ಆರ್ಥಿಕ ಸಿದ್ಧಾಂತಗಳಲ್ಲಿನ ವಿರೋಧಾಭಾಸಗಳನ್ನು ಈತ ಇಲ್ಲಿ ಎತ್ತಿ ತೋರಿಸಿದ್ದಾನಲ್ಲದೆ, ಎಲ್ಲ ಆರ್ಥಿಕ ಘಟನೆಗಳೂ ಖಾಸಗಿ ಸ್ವತ್ತನ್ನೇ ಆಧರಿಸಿರುವುದರಿಂದ ಅದನ್ನು ರದ್ದು ಮಾಡಬೇಕೆಂದೂ ವಾದಿಸಿದ್ದಾನೆ. ಈ ಲೇಖನದಿಂದಾಗಿ ಮಾರ್ಕ್ಸ್-ಎಂಗೆಲ್ಸ್‌ರ ಪರಿಚಯ ಪತ್ರಮುಖೇನ ಬೆಳೆಯಿತು. ಅದೇ ವರ್ಷ ಇಬ್ಬರೂ ಪ್ಯಾರಿಸಿನಲ್ಲಿ ಭೇಟಿಯಾದರು. ಪ್ರಥಮ ಸಂದರ್ಶನದಲ್ಲೇ ಒಬ್ಬರನ್ನೊಬ್ಬರು ಸಂಪೂರ್ಣ ಅರಿತುಕೊಂಡರು; ಒಬ್ಬರೊಂದಿಗೊಬ್ಬರು ಬೆರೆತುಕೊಂಡರು.

ಕ್ಷಿಪ್ರದಲ್ಲೇ ಅವರಿಬ್ಬರಲ್ಲಿ ಅನುಪಮ ಸ್ನೇಹಭಾವ ಬೆಳೆಯಿತು. ಅಲ್ಲಿಂದ ಮುಂದೆ ಸುಮಾರು ನಲವತ್ತು ವರ್ಷಕಾಲ- ಕಾರ್ಲ್ ಮಾರ್ಕ್ಸನ ಅಂತ್ಯಕಾಲದವರೆಗೆ-ಇಬ್ಬರೂ ಸೇರಿ ಚಾರಿತ್ರಿಕ ಭೌತವಾದವನ್ನು ರೂಪಿಸಿದರಲ್ಲದೆ ಶ್ರಮಜೀವಿಗಳ ವಿಮೋಚನೆಗಾಗಿ ಕ್ರಾಂತಿಕಾರಿ ಚಳವಳಿ ಪ್ರಾರಂಭಿಸಿದರು. ಇವರು ಕೂಡಿ ಬರೆದ ಹೋಲಿ ಫ್ಯಾಮಿಲಿ ಎಂಬ ಗ್ರಂಥ 1844ರಲ್ಲೂ, ದಿ ಜರ್ಮನ್ ಐಡಿಯಾಲಜಿ 1846ರಲ್ಲೂ ಪ್ರಕಟವಾದವು.

1847ರಲ್ಲಿ ಇವರು ಸಾಮೂಹಿಕ ಸ್ವಾಮ್ಯವಾದಿ ಒಕ್ಕೂಟ (ಕಮ್ಯೂನಿಸ್ಟ್ ಲೀಗ್) ಸ್ಥಾಪಿಸಿದ್ದಲ್ಲದೆ ಮರುವರ್ಷ ಕಮ್ಯೂನಿಸ್ಟ್ ಪಕ್ಷದ ಪ್ರಣಾಳಿಕೆಯನ್ನು ಘೋಷಿಸಿದರು. ವಿಶ್ವದ ಕೆಲಸಗಾರರೇ, ಒಂದುಗೂಡಿ-ಎಂಬುದು ಇದರ ಮುಖ್ಯ ಘೋಷಣೆ. ಅದರ ಮನೋಜ್ಞ ಭಾಷೆ, ಪ್ರಬಲವಾದ ರೂಪಕಗಳು, ಕಾವ್ಯಾತ್ಮಕ ಶೈಲಿ ಮತ್ತು ಚಾರಿತ್ರಿಕ ವಿಶ್ಲೇಷಣೆಗಳು ಪ್ರಣಾಳಿಕೆಗೆ ಒಂದು ಅನನ್ಯತ್ವವನ್ನು ತಂದುಕೊಟ್ಟಿವೆ. ಮಾನವ ಜನಾಂಗದ ಭವಿಷ್ಯದ ಬಗೆಗಿನ ಕನಸು-ಕಾಳಜಿಗಳು, ಆ ಭವಿಷ್ಯದ ನಿರ್ಮಿತಿಗೆ ಸಂಘಟನೆಯ ಕೊಡುಗೆ, ಕಾರ್ಮಿಕ ವರ್ಗದ ಐತಿಹಾಸಿಕ ಪಾತ್ರ, ಸಾಮಾಜಿಕ ವಿಕಾಸದ ವೈಜ್ಞಾನಿಕ ವಿವರಣೆ ಮತ್ತು ಸಾಂದ್ರವಾದ ಮಾನವೀಯತೆಯ ಪ್ರಕಾಶ, ಇವೆಲ್ಲಾ ಪ್ರಣಾಳಿಕೆಯನ್ನು ಒಂದು ಅಸಾಧಾರಣ ಕೃತಿಯನ್ನಾಗಿ ಸಿವೆ. ಇದೇ ಕಾಲದಲ್ಲಿ ಎಂಗೆಲ್ಸ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಶ್ರಮಜೀವಿಗಳ ಪರವಾಗಿ ಪ್ರಜಾಪ್ರಭುತ್ವ ಪಕ್ಷದ ಬೆಂಬಲ ದೊರಕಿಸಿಕೊಂಡ. 1848ರ ಕ್ರಾಂತಿಯ ಅನಂತರ ಎಂಗೆಲ್ಸನೂ, ಮಾರ್ಕ್ಸನೂ ಕೊಲೋನ್‌ಗೆ ಹೋದರು. ಎಂಗೆಲ್ಸ್ ಅಲ್ಲಿ ಪತ್ರಿಕೆಯೊಂದರ ಸಂಪಾದಕನಾದ. ಮಾರ್ಕ್ಸನೇ ಈ ಪತ್ರಿಕೆಯ ಪ್ರಕಾಶಕ. ಮಾರ್ಕ್ಸನಿಗಿಂತ ಎಂಗೆಲ್ಸನಿಗೆ ಪತ್ರಿಕೋದ್ಯಮವೆಂಬುದು ನೀರು ಕುಡಿದ ಹಾಗೆ ಸುಲಭವಾಗಿತ್ತು. ಈ ಸಮಯದಲ್ಲಿ ಎಂಗೆಲ್ಸ್ ಬರೆದ ಲೇಖನಗಳಿಗಾಗಿ ಈತನನ್ನು ದಸ್ತಗಿರಿಮಾಡಲು ಅನೇಕ ಬಾರಿ ವಾರೆಂಟು ಹೊರಟಿತ್ತು. ಎಲ್ಬರ್‌ಫೆಲ್ಡಿನಲ್ಲಿ ನಡೆದ ಪ್ರಜೆಗಳ ಬಂಡಾಯವೊಂದರಲ್ಲಿ ಎಂಗೆಲ್ಸನ ಕೈಯೂ ಇತ್ತು. ಜರ್ಮನಿಯು ಐಕ್ಯಗೊಂಡು ಒಂದು ರಾಷ್ಟ್ರ ಪ್ರಭುತ್ವವಾಗ ಬೇಕೆಂಬುದು ಅಂದಿನ ಘೋಷಣೆಯಾಗಿತ್ತು, ಫ್ರಾಂಕ್‌ಫರ್ಟ್‌ನಲ್ಲಿದ್ದ ರಾಷ್ಟ್ರೀಯ ಶಾಸನಸಭೆಯು ಆ ನಿಟ್ಟಿನಲ್ಲಿ ಒಂದು ಸಂವಿಧಾನವನ್ನು ರೂಪಿಸಿತ್ತು. ಪ್ರಷ್ಯ ಮುಂತಾದ ಭಾಗಗಳ ಸರ್ಕಾರಗಳು ಅದನ್ನು ತಿರಸ್ಕರಿಸಿದ್ದರಿಂದ ಪ್ರಜಾಪ್ರಭುತ್ವವಾದಿಗಳು ಹೋರಾಟಕ್ಕಿಳಿದಿದ್ದರು. ಡ್ರೆಸ್ಡೆನ್‌ನಲ್ಲಿ ಆರಂಭವಾದ ಹೋರಾಟವು ಇಡೀ ದೇಶವನ್ನು ವ್ಯಾಪಿಸಿತು. ಬಾರ್ಮನ್‌ನ ಬಂಡುಕೋರರ ಅಪೇಕ್ಷೆಯಂತೆ ಎಂಗೆಲ್ಸ್ ನಾಯಕತ್ವವನ್ನು ತೊರೆಯಬೇಕಾಯಿತು. ಎಂಗೆಲ್ಸ್ ಎದೆಗುಂದಲಿಲ್ಲ. ಜರ್ಮನಿಯಲ್ಲಿ ಅಲ್ಲಲ್ಲಿ ನಡೆದ ಸಶಸ್ತ್ರ ದಂಗೆಗಳನ್ನು ಇಡೀ ಜರ್ಮನಿಗೇ ವಿಸ್ತರಿಸಿ ಕ್ರಾಂತಿ ಸಂಭವಿಸುವಂತೆ ಮಾಡಬೇಕೆಂದು ಈತನೂ ಮಾರ್ಕ್ಸನೂ ಕೂಡಿ ಶ್ರಮಿಸಿದರು. ಆದರೆ ಈ ಬಂಡಾಯವೂ ಮುರುಟಿಕೊಂಡಿತು. ಎಂಗೆಲ್ಸ್ ಆ ದೇಶ ಬಿಟ್ಟು ಲಂಡನ್ನಿಗೆ ಹೋಗಿ ಅಲ್ಲಿ ತನ್ನ ಈ ಅನುಭವಗಳನ್ನು ಕುರಿತು ಲೇಖನಮಾಲೆ ಬರೆಯುವುದರಲ್ಲಿ ಉದ್ಯುಕ್ತನಾದ. ಜರ್ಮನಿಯ ರೈತಯುದ್ಧವನ್ನು ಕುರಿತ ಕೃತಿ ಹೊರಬಿದ್ದದ್ದು ಲಂಡನ್ನಿನಲ್ಲಿ (1850). ರೈತರ ಕ್ಷೋಭೆಯಿಂದ ಜರ್ಮನಿಯಲ್ಲಿ ಕ್ರಾಂತಿ ಸಂಭವಿಸುವುದೆಂಬುದು ಈತನ ಆಸೆಯಾಗಿತ್ತು. ಮಾರ್ಟಿನ್ ಲೂಥರ್ ಮತ್ತು ಥಾಮಸ್ ಮುನ್ಸರ್ ನಡುವಿನ ವ್ಯತ್ಯಾಸವನ್ನು ನಿರೂಪಿಸುವ ಗ್ರಂಥದಲ್ಲಿ ಇದನ್ನು ಆಮೂಲಾಗ್ರವಾಗಿ ಪರಿಶೀಲಿಸಲಾಗಿದೆ. ರೈತಾಪಿ ಜನರನ್ನು ತೀವ್ರ ಹೋರಾಟಕ್ಕೆ ಸಜ್ಜುಗೊಳಿಸಿದ್ದ ಮುನ್ಸರನನ್ನು ಲೂಥರ್ ವಿರೋಧಿಸಿದ; ಅವನನ್ನು ಸೈತಾನನ ಪ್ರತಿನಿಧಿಯೆಂದು ಬಣ್ಣಿಸಿದ. ಅತ್ಯಂತ ಕ್ರಾಂತಿಕಾರಿ ಘಟ್ಟದಲ್ಲಿ ಜರ್ಮನಿಯ ರೈತಾಪಿ ಜನ ಸೋತುಹೋದರು. ಅದನ್ನು ಸ್ಮರಿಸುತ್ತಾ ಎಂಗೆಲ್ಸ್ ಮತ್ತೆ ಅಂತಹ ಸ್ಥಿತಿ ಮರುಕಳಿಸದಿರುವಂತೆ ಹೋರಾಟವನ್ನು ರೂಪಿಸಲು ಮುಂದಾದ. 1792ರ ಅನಂತರದ ಫ್ರೆಂಚ್ ಕ್ರಾಂತಿಯ ಯುದ್ಧಗಳನ್ನು ಕುರಿತು ಎಂಗೆಲ್ಸ್ ಅಭ್ಯಾಸ ನಡೆಸಿ, ಭಾವೀ ಕ್ರಾಂತಿಯ ಸೈನಿಕ ನಾಯಕತ್ವದ ಬಗ್ಗೆ ಅನೇಕ ರೂಪುರೇಷೆ ನೀಡಿದ. ಈ ಕುರಿತು ಎಂಗೆಲ್ಸ್ ಬರೆದ ಲೇಖನಗಳು ಮಾರ್ಕ್ಸನವೆಂದು ಆಗ ತಪ್ಪಾಗಿ ಬಗೆಯಲಾಗಿತ್ತು.

1854 ರಿಂದ 1870ರ ವರೆಗೆ ಎಂಗೆಲ್ಸ್ ಮ್ಯಾಂಚೆಸ್ಟರಿನಲ್ಲಿ ತನ್ನ ತಂದೆಯ ಉದ್ಯಮದಲ್ಲಿ ಮೊದಲು ಉದ್ಯೋಗಿಯಾಗಿಯೂ ಆಮೇಲೆ ಪಾಲುದಾರನಾಗಿಯೂ ಕೆಲಸ ಮಾಡಿದ. ಆ ಉದ್ಯಮದಲ್ಲೂ ಈತ ನಿಷ್ಣಾತ. ಆದರೆ ಇವನಿಗೆ ಅದರಲ್ಲಿ ಆಸ್ಥೆಯೇನೂ ಇರಲಿಲ್ಲ. ಈ ಕಾಲದಲ್ಲಿ ಎಂಗೆಲ್ಸ್ ಸೈನಿಕ ವಿಜ್ಞಾನ ಕುರಿತು ಬರೆದ ಲೇಖನಗಳಿಗೆ ಎಲ್ಲ ಕ್ಷೇತ್ರಗಳಿಂದಲೂ ಪ್ರಶಂಸೆ ಹರಿದು ಬಂತು. ಜನರಲ್ ಎಂದು ಈತನ ಸ್ನೇಹಿತರು ಇವನನ್ನು ಸಂಬೋಧಿಸ ಲಾರಂಭಿಸಿದರು. ಸೈನ್ಯದ ನಾನಾ ವಿಭಾಗಗಳನ್ನು ಕುರಿತು ನ್ಯೂ ಅಮೆರಿಕನ್ ವಿಶ್ವಕೋಶಕ್ಕೆ ಕೂಡ ಈತ ಲೇಖನಗಳನ್ನು ಬರೆದ. ನಾನಾ ದೇಶಗಳ ಸೈನಿಕ ಶಕ್ತಿಗಳ ಬಗ್ಗೆ ಎಂಗೆಲ್ಸ್ ಮಾಡಿರುವ ವಿವೇಚನೆ ಶಾಸ್ತ್ರೀಯವಾದದ್ದು. ಈ ಕಾಲದಲ್ಲಿ ಮಾರ್ಕ್ಸನೊಡನೆ ಈತ ಪತ್ರ ವ್ಯವಹಾರ ಇಟ್ಟುಕೊಂಡಿದ್ದ.

ಎಂಗೆಲ್ಸನ ಕಾರ್ಯ ಚಟುವಟಿಕೆಯ ಮುಂದಿನ ಘಟ್ಟ ಲಂಡನ್ನಿನಲ್ಲಿ (1870). 1864ರಲ್ಲಿ ಸ್ಥಾಪಿತವಾಗಿದ್ದ ಮೊದಲನೆಯ ಅಂತಾರಾಷ್ಟ್ರೀಯಕ್ಕೆ (ಫಸ್ಟ್ ಇಂಟರ್‌ನ್ಯಾಷನಲ್) ಈತ ಸದಸ್ಯನಾದ. ಈತ ಎರಡು ಗ್ರಂಥ ಬರೆದನಲ್ಲದೆ ಇಂಗ್ಲೆಂಡಿಗೆ ಹೋಗಿ ಮಾರ್ಕ್ಸನೊಡನೆ ಸಮಾಲೋಚನೆ ನಡೆಸಿ ಮೊದಲನೆಯ ಅಂತಾರಾಷ್ಟ್ರೀಯ ಸ್ಥಾಪಿಸಿದ. ಮಾರ್ಕ್ಸ್ ತನ್ನ ಮಹಾಗ್ರಂಥವಾದ ಬಂಡವಾಳ (Das Kapital) ಎಂಬ ಗ್ರಂಥವನ್ನು ಬೇಗ ಮುಗಿಸಲು ಅವನಿಗೆ ಎಲ್ಲ ಬಗೆಯ ಸಲಹೆ ಸಹಾಯ ನೀಡಿದವನು ಎಂಗೆಲ್ಸ್. ಮಾರ್ಕ್ಸನ ಮರಣಾನಂತರ ಈತ ಈ ಮಹಾಗ್ರಂಥದ ಎರಡನೆಯ ಮತ್ತು ಮೂರನೆಯ ಸಂಪುಟಗಳನ್ನು ಸಂಪಾದಿಸಿ ಅವುಗಳಿಗೆ ಒಂದು ವಿದ್ವತ್ಪೂರ್ಣವಾದ ಸಂಶೋಧನಾತ್ಮಕ ಮುನ್ನುಡಿ ಬರೆದು ಪ್ರಕಟಿಸಿದ. ತನ್ನ ಈ ಗ್ರಂಥಗಳನ್ನು ಯೂರೋಪಿನ ಇತರ ಭಾಷೆಗಳಿಗೆ ಅನುವಾದ ಮಾಡಲು ಈತ ಪಟ್ಟ ಶ್ರಮ ಅಗಾಧ. ಸ್ವತಃ ಯೂರೋಪಿನ ಹತ್ತು ಭಾಷೆಗಳಲ್ಲಿ ಎಂಗೆಲ್ಸನಿಗೆ ಪರಿಶ್ರಮವಿದ್ದದ್ದ ರಿಂದ ಈ ಗ್ರಂಥದ ಅನುವಾದಗಳು ಬಹಳ ಮಟ್ಟಿಗೆ ಯಶಸ್ವಿಯಾದುವೆನ್ನ ಬಹುದು. ಮಾರ್ಕ್ಸ್ ಪ್ರಣೀತ ಸಮಾಜವಾದದ ಬಗ್ಗೆ ಒಂದು ಪ್ರಮಾಣ ಗ್ರಂಥವಾದ ಆಂಟಿ-ಡ್ಯೂರಿಂಗ್ ರಚನೆ ಈತನ ದೊಡ್ಡ ಸಾಧನೆಗಳಲ್ಲೊಂದು. ಮಾರ್ಕ್ಸ್‌ವಾದಿ ತತ್ತ್ವಶಾಸ್ತ್ರದ ಪರಿಚಯ ಮಾಡಿಕೊಡುವ ಒಂದು ಮೌಲಿಕ ಗ್ರಂಥ ಇದು. ಸಾಮಾಜಿಕ ವಿಕಾಸದಲ್ಲಿ ಕೆಲವು ಅಬಾಧಿತ ನಿಯಮಗಳಿವೆಯೆಂಬುದನ್ನು ಪ್ರತಿಪಾದಿಸುತ್ತಾ ಗತಿತಾರ್ಕಿಕ ಭೌತವಾದದ ಮೂಲಸೂತ್ರಗಳನ್ನಿಲ್ಲಿ ವಿವರಿಸಲಾಗಿದೆ. ವಿರೋಧ ಧರ್ಮಗಳ (ಅಂದರೆ, ಸ್ವಭಾವಗಳ) ಐಕ್ಯತೆ ಮತ್ತು ಸಂಘರ್ಷ, ಪರಿಮಾಣಾತ್ಮಕ ಬದಲಾವಣೆಯಿಂದ ಗುಣಾತ್ಮಕ ಬದಲಾವಣೆ ಉಂಟಾಗುವುದು, ಮತ್ತು ನಿಷೇಧದ ನಿಷೇಧದಿಂದ ಕ್ರಮೇಣ ಉನ್ನತ ಹಂತಗಳತ್ತ ಸಾಗುವುದು-

ಇವು ಪ್ರಮುಖ ಸೂತ್ರಗಳೆಂದು ನಿರೂಪಿಸಲಾಗಿದೆ. ಈ ವಿಶ್ಲೇಷಣೆಯನ್ನು ಮುಂದುವರಿಸಿ ಪ್ರಾಕೃತಿಕ ವಿಜ್ಞಾನದ ಕ್ಷೇತ್ರಕ್ಕೂ ಎಂಗೆಲ್ಸ್ ಈ ಗತಿತಾರ್ಕಿಕತೆಯನ್ನು ಅನ್ವಯಿಸಿ ಅರ್ಥೈಸಿದನು. ಮಾರ್ಕ್ಸನ ಮರಣಕ್ಕೆ ಮುಂಚೆ ಎಂಗೆಲ್ಸ್ ಬರೆದ ಈ ವಿಷಯದ ಬೃಹತ್ ಗ್ರಂಥವೆಂದರೆ ಡೈಯಲೆಕ್ಟಿಕ್ಸ್ ಆಫ್ ನೇಚರ್ (1873–83). ದಿ ಆರಿಜಿನ್ ಆಫ್ ದಿ ಫ್ಯಾಮಿಲಿ, ಪ್ರೈವೇಟ್ ಪ್ರಾಪರ್ಟಿ ಅಂಡ್ ದಿ ಸ್ಟೇಟ್ (1884) ಎಂಬುದು ಮಾರ್ಕ್ಸನ ಕೊನೆಯಿಚ್ಛೆಗಳಲ್ಲೊಂದರ ಪೂರೈಕೆಗಾಗಿ ಈತ ಬರೆದದ್ದೆನ್ನಬಹುದು. ಲಡ್ವಿಗ್ ಫೇವರ್‌ಬಾಕ್ ಅಂಡ್ ದಿ ಔಟ್‌ಕಂ ಆಫ್ ಕ್ಲಾಸಿಕಲ್ ಜರ್ಮನ್ ಫಿಲಾಸಫಿ (1886) ಎಂಗೆಲ್ಸ್ ಬರೆದ ಇನ್ನೊಂದು ಪುಸ್ತಕ. ಇವೆರಡೂ ಚಾರಿತ್ರಿಕ ಭೌತವಾದದ ಪ್ರತಿಪಾದನೆಗಳು. ಕುಟುಂಬ ಹುಟ್ಟಿದಾಗ ಅದರಲ್ಲಿ ಹೆಂಗಸಿನ ಪಾತ್ರ ಪ್ರಧಾನವಾಗಿತ್ತು. ಕಾಲಾಂತರದಲ್ಲಿ ಗಂಡಸು ಪ್ರಬಲನಾದ. ಕೈಗಾರಿಕೆಯಲ್ಲಿ ಹೆಂಗಸರು ಕೆಲಸಗಾರರಾಗಿ ಸೇರಿದ ಮೇಲೆ, ಅವರು ಸ್ವತಂತ್ರರಾಗಲು ಅನುಕೂಲ ಸನ್ನಿವೇಶ ಒದಗಿದೆ–ಎಂಬುದು ಕುಟುಂಬ ಕುರಿತ ಗ್ರಂಥದ ವಿಚಾರದ ಧಾಟಿ. ಲ್ಯೂಯಿಸ್ ಹೆನ್ರಿ ಮೋರ್ಗನ್ನ "ಪ್ರಾಚೀನ ಸಮಾಜ" ಎಂಬ ಗ್ರಂಥದಿಂದ ವಿಶೇಷವಾಗಿ ಪ್ರೇರಿತವಾಗಿ ಎಂಗೆಲ್ಸ್ ಈ ಪುಸ್ತಕ ರಚಿಸಿದ್ದಾನೆ. ಆದರೆ ಸ್ವತಃ ತಾನು ಆ ಪುಸ್ತಕವನ್ನು ನೋಡಿರಲಿಲ್ಲ. ಚರಿತ್ರೆಯಲ್ಲಿ ಕಾಲಾನುಕ್ರಮವಾಗಿ ಬೆಳೆದುಬಂದ ಸಾಮಾಜಿಕ ಆರ್ಥಿಕ ಸಂರಚನೆಗಳಿಂದಾಗಿ ಸಮಾಜವು ವಿವಿಧ ಹಂತಗಳಲ್ಲಿ ಹಾದು ಬಂದಿದೆ. ಹೀಗೆ ವಿಕಸಿಸುವಾಗ ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವಗಳು ಹೊಮ್ಮಿವೆ; ಆದರೆ ಅವೇನೂ ಚಿರಂತನವಲ್ಲವೆಂದು ಎಂಗೆಲ್ಸ್ ಇಲ್ಲಿ ವಾದಿಸಿದ್ದಾನೆ.

ಮಾರ್ಕ್ಸ್–ಎಂಗೆಲ್ಸರ ಜೀವನ ಸಹಯೋಗ ಪ್ರಾರಂಭವಾಗುವುದಕ್ಕೂ ಮುಂಚಿನ ಇವರಿಬ್ಬರ ಅನುಭವಗಳೂ ಸ್ಥೂಲವಾಗಿ ಒಂದೇ ತೆರನಾಗಿದ್ದುವು. ಇಬ್ಬರದೂ ಒಂದೇ ಬಗೆಯ ಮನೋಭಾವ. ಇಬ್ಬರಿಗೂ ಕಾವ್ಯದಲ್ಲಿ ತೀವ್ರವಾದ ಅಭಿರುಚಿ. ಇಬ್ಬರೂ ಮತ ಸಂಪ್ರದಾಯಗಳನ್ನು ಪ್ರತಿಭಟಿಸಿದರು; ಹೆಗೆಲನ ವಾಮಪಂಥದಿಂದ ಆರಂಭಿಸಿ ಕಮ್ಯೂನಿಸಮ್ಮಿನಲ್ಲಿ ಕೊನೆಗೊಂಡರು. ತನ್ನ ಸುತ್ತಣ ಕಾರ್ಮಿಕರ ಕಷ್ಟ ಕಾರ್ಪಣ್ಯಗಳನ್ನು ಕಂಡು ಕಡುನೊಂದು ಎಂಗೆಲ್ಸ್ ಕ್ರಾಂತಿಯ ಹಾದಿ ಹಿಡಿದ. ಆದರೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರದು ವೈಜ್ಞಾನಿಕ ಮನೋಧರ್ಮ. ಕಾರ್ಮಿಕ ವರ್ಗದ ಕಡುಬಡತನದ ಕಾರಣದಿಂದ ಅನಿವಾರ್ಯವಾಗಿ ಅದು ಕ್ರಾಂತಿಯ ಮುಂಪಡೆಯಾಗುತ್ತದೆಯೆಂಬುದಾಗಿ ಮಾರ್ಕ್ಸ್ ಪರಿಭಾವಿಸಿದ್ದು ಆತನ ಶಾಸ್ತ್ರೀಯ ವಿವೇಚನೆಯ ಫಲ. ಮಾರ್ಕ್ಸನಿಗಿಂತ ಎಂಗೆಲ್ಸ್ ಹೆಚ್ಚು ಭಾವಪರವಶನಾಗುತ್ತಿದ್ದ. ಎಂಗೆಲ್ಸ್ ಮಾರ್ಕ್ಸನಿಗೆ ಎರಡನೆಯವ. ಎಂಗೆಲ್ಸನಿಗಿಂತ ಮಾರ್ಕ್ಸ್ ಅಗಾಧವಾಗಿ ಚಿಂತನಶೀಲನಾಗಿದ್ದ; ಆದರೆ ಇಬ್ಬರೂ ಸಮಾನ ಕ್ರಾಂತಿಕಾರಿ ಮನೋಧರ್ಮದವರು.

ಆದರೂ ಜ್ಞಾನೇತಿಹಾಸದಲ್ಲಿ ಇವರಿಬ್ಬರ ಸಹಯೋಗ ಮಿಗಿಲಾದದ್ದು. ಉದ್ಯಮಪತಿಯ ಪುತ್ರನಾಗಿದ್ದ ಎಂಗೆಲ್ಸ್ ಮಾರ್ಕ್ಸನಿಗೆ ಜೀವನಾಧಾರಿಯಾಗಿದ್ದ. ಈತನ ಮಿತ್ರನಿಷ್ಠೆ ಅನನ್ಯ. ಮಾರ್ಕ್ಸ್ ಮರಣಿಸಿದ ಮೇಲೂ ಅವನ ಕುಟುಂಬವನ್ನು ಈತ ರಕ್ಷಿಸಿದ. ಮಾರ್ಕ್ಸನ ಜ್ಞಾನಭಂಡಾರಕ್ಕೆ ಎಂಗೆಲ್ಸನೇ ಉತ್ತರಾಧಿಕಾರಿ; ಭಾಷ್ಯಕಾರ.

ಗಂಡುಹೆಣ್ಣುಗಳ ಸಂಬಂಧದ ಬಗ್ಗೆ ಮಾರ್ಕ್ಸನಂತೆ ಎಂಗೆಲ್ಸನೂ ಸಂಪ್ರದಾಯಬದ್ಧನಲ್ಲ. ಐರ್ಲೆಂಡಿನ ಒಬ್ಬ ಕಾರ್ಮಿಕ ಹೆಣ್ಣಿನೊಂದಿಗೆ (ಮೇರಿ ಬರ್ನ್ಸ್) ಈತ ಇಪ್ಪತ್ತು ವರ್ಷಕಾಲ ಅವಿವಾಹಿತ ಸಂಬಂಧ ಬೆಳೆಸಿದ್ದ. ಆಕೆ ಸತ್ತಮೇಲೆ (1863) ಅವಳ ತಂಗಿಯೊಡನೆಯೂ (ಲಿಜ಼ಿ) ಇಂಥ ಸಂಬಂಧವೇ ಮುಂದುವರಿಯಿತು. 1878ರಲ್ಲಿ ಆಕೆಯ ಮರಣಕಾಲದಲ್ಲಿ ಮಾತ್ರವೇ ಅವಳೊಂದಿಗೆ ವಿವಾಹವಿಧಿ ಪೂರೈಸಿದ್ದು.

ಈತ ಹೂಡಿದ ಕ್ರಾಂತಿಯುದ್ಧಗಳು ತಕ್ಷಣದಲ್ಲಿ ಸಫಲವಾಗಿದ್ದರೂ ಎಂಗೆಲ್ಸನಿಗೆ ಆ ಹಾದಿಯಲ್ಲಿ ನಂಬಿಕೆ ಹೋಗಿರಲಿಲ್ಲ. ಆದರೆ ಅವುಗಳ ವಿಧಾನ ಬದಲಾಗಬೇಕೆಂಬುದಾಗಿ ಈತ ನಂಬಿದ್ದ. ಕೆಲವು ಆದರ್ಶವಾದಿಗಳು ಮಾತ್ರವೇ ಸಂಚು ಹೂಡಿ ಗೆಲವು ಸಾಧಿಸುವುದು ಅಸಾಧ್ಯ, ಇದಕ್ಕೆ ಜನಜಾಗೃತಿ ಮುಖ್ಯ–ಎಂಬುದು ಈತನ ಕೊನೆಯರಿವು. ಬರಲಿದ್ದ ಮಹಾಯುದ್ಧವನ್ನೂ ಈತ ಮುಂಗಂಡಿದ್ದ. ಅನರ್ಥ ತಡೆಗಟ್ಟಲು ಶಸ್ತ್ರ ಸಂನ್ಯಾಸವಾಗಲೇ ಬೇಕೆಂದು ಎಂಗೆಲ್ಸ್ ಭಾವಿಸುತ್ತಿದ್ದ.

ಎಂಗೆಲ್ಸ್ ಕೇವಲ ಆರ್ಥಿಕ ಸಾಮಾಜಿಕ ತತ್ತ್ವದಲ್ಲಿ ಮಾತ್ರ ಆಸಕ್ತನೆಂಬುದು ಸಾಮಾನ್ಯ ಭಾವನೆ. ಪ್ರಕೃತಿ ತತ್ತ್ವಕ್ಕೆ ಸಂಬಂಧಪಟ್ಟ ಇವನ ಸಂಶೋಧನೆಗಳು ಅಷ್ಟಾಗಿ ಜನರ ಗಮನ ಸೆಳೆದಿಲ್ಲ. ಎಂಗೆಲ್ಸನ ಭೌತಪರತ್ವವೂ ಈತನ ಸಾಮಾಜಿಕ ತತ್ತ್ವದಷ್ಟೇ ಮುಖ್ಯ. ಹಳೆಯ ಭೌತವಾದಿಗಳಂತೆ ಭೌತಶಕ್ತಿ ಕೇವಲ ಯಾಂತ್ರಿಕವೆಂದು ಎಂಗೆಲ್ಸ್ ತಿಳಿದಿರಲಿಲ್ಲ. ಭೌತಿಕ ಸೃಷ್ಟ್ಯಾತ್ಮಕ; ಅದರ ಹೊಟ್ಟೆಯಲ್ಲಿ ಎಣಿಸಲಾಗದಷ್ಟು, ಎಂದೆಂದಿಗೂ ಮುಗಿಯದಷ್ಟು, ನೂತನ ರೂಪಗಳು ಹುದುಗಿವೆ–ಎಂಬುದು ಈತ ಪ್ರತಿಪಾದಿಸಿರುವ ನವೀನ ಭೌತಪರತ್ವ, ಜೀವನದ ಮುಖ್ಯ ಪುರುಷಾರ್ಥಗಳಾದ ಸತ್ಯ, ಸೌಂದರ್ಯ, ಸೌಕರ್ಯ, ಸೌಶೀಲ್ಯ, ಶಾಂತಿಗಳಿಗೆ ಭಾವನಾದಿಗಳು ನೀಡುವುದಕ್ಕಿಂತಲೂ ಒಂದು ಪಟ್ಟು ಮಿಗಿಲಾದ ಪ್ರಾಶಸ್ತ್ಯವನ್ನು ಇಲ್ಲಿ ನೀಡಲಾಗಿದೆ. ಡೈಯಲೆಕ್ಟಿಕ್ಸ್ ಆಫ್ ನೇಚರ್ ಎಂಬ ಗ್ರಂಥದಲ್ಲಿ ಈ ನವೀನ ತತ್ತ್ವದ ಸಮಗ್ರ ವಿವೇಚನೆಯಿದೆ.

(ಜಿ.ಎಚ್.ಆರ್.;ಜಿ.ಕೆ.ಎ.)

**ಎಂಗ್ಕೆ, ಜೋಹಾನ್ ಫ್ರಾನ್‌ಜ್:** 1791–1865. ಜರ್ಮನ್ ಖಗೋಳಶಾಸ್ತ್ರಜ್ಞ. ಜನನ ಹ್ಯಾಂಬರ್ಗಿನಲ್ಲಿ. ಗೊಟ್ಟಿಂಗೆನ್ನಿನಲ್ಲಿ ಗಾಸ್‌ನ ಶಿಷ್ಯನಾಗಿ ವಿದ್ಯಾಭ್ಯಾಸ ನಡೆಸಿದ. ನೆಪೋಲಿಯನ್ನನ ಕೊನೆಕೊನೆಯ ಯುದ್ಧಗಳಲ್ಲಿ ಭೂಸೈನ್ಯದಲ್ಲಿ ಅಧಿಕಾರಿಯಾಗಿದ್ದ. ಸೈನ್ಯದಿಂದ ಹಿಂತಿರುಗಿದ ಮೇಲೆ ಖಗೋಳಶಾಸ್ತ್ರ ಇವನ ಆಸಕ್ತಿಯ ವಿಷಯವಾಯಿತು. ಆಕಾಶಕಾಯಗಳ ಪಥಗಳನ್ನು ಗುಣಿಸುವ ಹೊಸ ವಿಧಾನವೊಂದನ್ನು ಈತ ಕಂಡುಹಿಡಿದ. ಅನಂತರ ಧೂಮಕೇತುಗಳ ಬಗ್ಗೆ ಅಧ್ಯಯನ ನಡೆಸಿ ಅದರಲ್ಲಿ ವಿಶೇಷ ಪರಿಶ್ರಮ ಪಡೆದ. 1786, 1795 ಮತ್ತು 1805ರಲ್ಲಿ ಕಾಣಿಸಿಕೊಂಡ ಧೂಮಕೇತವೂ ಹಾನ್ಸ್ 1818ರಲ್ಲಿ ತೋರಿಸಿದ ಧೂಮಕೇತುವೂ ಒಂದೇ ಎಂದು ತೋರಿಸಿಕೊಟ್ಟ. 1819ರಲ್ಲಿ ಇದರ ಕಕ್ಷೆಯನ್ನು ಗುಣಿಸಿದ. ಮುಂದೆ ಇದನ್ನು ಎನ್ಕೆ ಧೂಮಕೇತು (ಎಂಗ್ಕೇನ್ ಕಾಮೆಟ್) ಎಂದೇ ಕರೆಯಲಾಯಿತು. ಅಂದಿನವರೆಗೆ ಗುರುತಿಸಿದವುಗಳಲ್ಲಿ ಇದರ ಅವಧಿ (ಪೀರಿಯಡ್) ಹ್ರಸ್ವತಮವಾಗಿದೆ–ಕೇವಲ 3.3 ವರ್ಷಗಳು ಮಾತ್ರ. ಈ ಧೂಮಕೇತು ಬುಧಗ್ರಹ ಮತ್ತು ಸೂರ್ಯರ ನಡುವೆ ಹಾಯುವಾಗ ಸೂರ್ಯನಿಗೆ ಸಮೀಪವಾಗಿರುತ್ತದೆ. ಆಗ ಬುಧಗ್ರಹದ ಗುರುತ್ವಾಕರ್ಷಣೆಯಿಂದಾಗಿ ಧೂಮಕೇತುವಿನ ಪಥದಲ್ಲಾದ ಬದಲಾವಣೆಗಳನ್ನು ವೀಕ್ಷಿಸಿ ಎಂಗ್ಕೆ ಬುಧದ ದ್ರವರಾಶಿಯನ್ನು ಗುಣಿಸಿದ (1835). 1761 ಮತ್ತು 1769ರಲ್ಲಾದ ಶುಕ್ರಸಂಕ್ರಮಣಗಳನ್ನಾಧರಿಸಿ ಸೂರ್ಯನ ದೂರವನ್ನು ಗುಣಿಸಿದ (1824). ಈ ವಿಧಾನವನ್ನುಸರಿಸಿದವರಲ್ಲಿ ಈತನೇ ಮೊದಲಿಗ.

ಕೆಲಕಾಲ ಸೀಬರ್ಗ್ ವೀಕ್ಷಣಾಲಯದ ನಿರ್ದೇಶಕನಾಗಿದ್ದ. 1825ರಲ್ಲಿ ಬರ್ಲಿನ್ ವೀಕ್ಷಣಾಲಯದ ನಿರ್ದೇಶಕನಾಗಿ 40 ವರ್ಷದ ಕಾಲ ಅದೇ ಹುದ್ದೆಯಲ್ಲಿದ್ದ. (ಬಿ.ಎಸ್.ಎಸ್.)

**ಎಂಗ್ಲರ್, ಹೆನ್ರಿಕ್ ಗಸ್ಟಾಫ್ ಅಡಾಲ್ಫ್ :** 1844–1930. ಜರ್ಮನ್ ಸಸ್ಯವಿಜ್ಞಾನಿ. ಸಸ್ಯವರ್ಗೀಕರಣಪದ್ಧತಿ ಮತ್ತು ಸಸ್ಯಗಳ ಭೌಗೋಳಿಕ ವ್ಯಾಪನೆಯ ಶಾಸ್ತ್ರದಲ್ಲಿ ಪರಿಣಿತನೆಂದು ವಿಖ್ಯಾತನಾದವ. ಜರ್ಮನಿಯ ಸಾಗನ್ ಎಂಬಲ್ಲಿ 1844ರ ಮಾರ್ಚಿ 25ರಂದು ಜನಿಸಿದ. ಬ್ರೆಸ್ಲೊ ವಿಶ್ವವಿದ್ಯಾನಿಲಯದಿಂದ 1863ರಲ್ಲಿ ಸ್ನಾತಕ ಪದವಿಯನ್ನೂ 1866ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನೂ ಪಡೆದು ಆಮೇಲೆ ನಾಲ್ಕು ವರ್ಷಕಾಲ ಅಧ್ಯಾಪಕನಾಗಿ ಕೆಲಸಮಾಡಿದ. 1871 ರಿಂದ 1878ರ ವರೆಗೆ ಮ್ಯೂನಿಕ್‌ನ ಬೊಟಾನಿಕಲ್ ಇನ್ಸ್‌ಟಿಟ್ಯೂಟ್‌ನಲ್ಲಿ ಸಸ್ಯಸಂಗ್ರಹಗಳ ಪಾಲಕನಾಗಿದ್ದ. ಅನಂತರ ಕೀಲ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದು 1884ರಲ್ಲಿ ಬ್ರೆಸ್ಲೊ ವಿಶ್ವವಿದ್ಯಾಲಯದಲ್ಲಿ ಸಸ್ಯವಿಜ್ಞಾನದ ಪ್ರಾಧ್ಯಾಪಕ ಹಾಗೂ ಅಲ್ಲಿನ ಸಸ್ಯೋದ್ಯಾನದ ನಿರ್ದೇಶಕನಾಗಿ ನೇಮಕಗೊಂಡ. 1889ರಲ್ಲಿ ದಾಹ್ಲೆಮ್‌ನಲ್ಲಿರುವ ಬರ್ಲಿನ್ ಸಸ್ಯೋದ್ಯಾನದ ನಿರ್ದೇಶಕನಾದ. ಅಲ್ಲಿ 1921ರ ವರೆಗೂ ಇದ್ದು ಅತ್ಯಂತ ದಕ್ಷ ಆಡಳಿತಗಾರನೆನಿಸಿಕೊಂಡು ಆ ಉದ್ಯಾನದ ಖ್ಯಾತಿ ಪ್ರಪಂಚದ ಎಲ್ಲೆಡೆಗಳಲ್ಲೂ ಹರಡುವಂತೆ ಮಾಡಿದ. ಆ ಉದ್ಯಾನದ ನಿರ್ದೇಶಕನಾಗಿದ್ದ ಕಾಲದಲ್ಲಿ 1902, 1905 ಮತ್ತು 1913ರಲ್ಲಿ ಹೀಗೆ ಮೂರು ಬಾರಿ ಸಸ್ಯಸಂಗ್ರಹಣ ಮತ್ತು ಸಂಶೋಧನೆಗಾಗಿ ಆಫ್ರಿಕ ಖಂಡದಲ್ಲಿ ಪ್ರವಾಸಮಾಡಿದ. 1905ರಲ್ಲಿ ಭಾರತ ಮತ್ತು ಜಾವ ದೇಶಗಳಿಗೂ ಭೇಟಿ ನೀಡಿದ. ಅಲ್ಲದೆ 1913ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ರಷ್ಯ ಮತ್ತು ಜಪಾನ್ ದೇಶಗಳನ್ನೊಳಗೊಂಡಂತೆ ವಿಶ್ವಪರ್ಯಟನೆ ಮಾಡಿದ. 1930ರ ಅಕ್ಟೋಬರ್ 10ರಂದು ದಾಹ್ಲೆಮ್‌ನಲ್ಲಿ ನಿಧನನಾದ.

ಸಸ್ಯವರ್ಗೀಕರಣ ಮತ್ತು ಭೌಗೋಳಿಕ ಸಸ್ಯವಿಜ್ಞಾನದಲ್ಲಿ ಅಪಾರವಾದ ಪಾಂಡಿತ್ಯವನ್ನು ಪಡೆದಿದ್ದ. ಈತ ಸಸ್ಯಗಳ ಬಗ್ಗೆ ಆಳವಾಗಿ, ವಿಸ್ತಾರವಾಗಿ ಅಭ್ಯಾಸಮಾಡಿ ಹಲವಾರು ಪುಸ್ತಕಗಳನ್ನು ಬರೆದಿದ್ದಾನೆ. ಇವುಗಳಲ್ಲೆಲ್ಲ ಬಹಳ ಮುಖ್ಯವಾದ ಮತ್ತು ಪ್ರಸಿದ್ಧ ಕೃತಿಗಳೆಂದರೆ ದಿ ನಾಚುರೆಲಿಶೆನ್ ಫ್ಲಾಂಜ಼ನ್ ಫ್ಯಾಮಿಲಿಯೆನ್ (1887–1899) ಮತ್ತು ದಾಸ್ ಫ್ಲಾಂಜ಼ನ್‌ರಿಕ್ ಭಾಗಗಳು 1–102 (1900–1937). ಇವೆರಡನ್ನೂ ತನ್ನ ಸಹೋದ್ಯೋಗಿ ಕಾರ್ಲ್ ಪ್ರಾಂಟ್ಲ್‌ನ ಜೊತೆಗೂಡಿ ಸಂಪಾದಿಸಿದ್ದಾನೆ. ಇವುಗಳಲ್ಲಿ ಮೊದಲ ಪುಸ್ತಕದಲ್ಲಿ ತನ್ನದೇ ಆದ ಸಸ್ಯ ವರ್ಗೀಕರಣದ ತತ್ತ್ವಗಳನ್ನು ಪ್ರತಿಪಾದಿಸಿದ್ದಾನೆ. ಇವು ಮೂಲತಃ ಇವನಿಗಿಂತ ಕೆಲವು ವರ್ಷಗಳ ಹಿಂದೆ ಐಕ್ಲರ್ ಎಂಬ ವಿಜ್ಞಾನಿಯಿಂದ ಪ್ರತಿಪಾದಿತವಾಗಿದ್ದ ತತ್ತ್ವಗಳ ಮೇಲೆ ರೂಪಿತವಾಗಿದ್ದರೂ ಹಲವಾರು ಅಂಶಗಳಲ್ಲಿ ಬೇರೆಯಾಗಿದ್ದು ಪ್ರಪಂಚದ ಬಹುಪಾಲು ಸಸ್ಯಗಳಿಗೆ ಅನ್ವಯವಾಗುವಂತಿದ್ದುದರಿಂದ ಬಹುಬೇಗ ಇವನ ಸಸ್ಯವರ್ಗೀಕರಣ ವಿಧಾನವನ್ನು ವಿಜ್ಞಾನಿಗಳು ಬಳಸಲಾರಂಭಿಸಿದರು. ಎಂಗ್ಲರನ ಅಭಿಪ್ರಾಯದಂತೆ ಏಕದಳ ಸಸ್ಯಗಳಲ್ಲಿ ಆರ್ಕಿಡ್ ಸಸ್ಯಗಳು ಹುಲ್ಲಿನ ಜಾತಿಯ ಸಸ್ಯಗಳಿಗಿಂತ ಮುಂದುವರಿದವು ಮತ್ತು ದ್ವಿದಳಸಸ್ಯಗಳಲ್ಲಿ ದಳವಿಲ್ಲದ ಹೂವುಗಳ ಜಾತಿಗಳು ಮತ್ತು ಅಮೆಂಟಿಫೆರಿ ಮುಂತಾದ ವಂಶಗಳು ಅತ್ಯಂತ ವಿಕಾಸಹೊಂದಿವೆ. ಈ ಅಭಿಪ್ರಾಯಗಳನ್ನು ಈಚೆಗೆ ಬಹುಪಾಲು ಸಸ್ಯವಿಜ್ಞಾನಿಗಳು ಒಪ್ಪಿಕೊಂಡಿಲ್ಲವಾದರೂ ತನ್ನ ವೈಶಾಲ್ಯ, ಸುಸ್ಪಷ್ಟ ಪ್ರತಿಪಾದನೆಯಿಂದಾಗಿ ಎಂಗ್ಲರನ ಸಸ್ಯವರ್ಗೀಕರಣ ವಿಧಾನ ಇಂದು ಹೆಚ್ಚು ಬಳಕೆಯಲ್ಲಿದೆ.

ಮೇಲೆ ಹೇಳಿದ ಎರಡು ಗ್ರಂಥಗಳಲ್ಲದೆ, 1840–1906 ರ ಅವಧಿಯಲ್ಲಿ ಫ್ಲೋರಾ ಬೆಸಿಲಿಯೆನ್ಸಿಸ್, ಎ.ಡಿ. ಕೆಂಡೋಲ್‌ನ ಜೊತೆಗೂಡಿ ಬರೆದ ಮಾನೊಗ್ರಾಫಿಯ ಫೆನೆರೊಗೆಮೇರಮ್ ಎಂಬ ಗ್ರಂಥ ಮತ್ತು 1892ರಲ್ಲಿ ಮೊಟ್ಟಮೊದಲು ಪ್ರಕಾಶಿತವಾದ ಸಿಲಬಸ್ ಡರ್ ಫ್ಲಾಂಜ಼ನ್ ಫ್ಯಾಮಿಲಿಯೆನ್ ಎಂಬ ಪುಸ್ತಕಗಳೂ ಪ್ರಸಿದ್ಧವಾಗಿವೆ. ಕೊನೆಯ ಪುಸ್ತಕ ಅಮೂಲ್ಯವಾದ ಪರಾಮರ್ಶ ಗ್ರಂಥವಾಗಿದ್ದು ಹಲವಾರು ಆವೃತ್ತಿಗಳಲ್ಲಿ ಪ್ರಕಾಶಿತವಾಗಿದೆ. ಇವುಗಳೆಲ್ಲ ಅಲ್ಲದೆ ಎಂಗ್ಲರ್ ಹಲವಾರು ಏಕವಿಷಯ ಪ್ರಬಂಧಗಳನ್ನೂ ಆಫ್ರಿಕದ ಸಸ್ಯ ಸಂಪತ್ತಿನ ಮೇಲೆ ಪ್ರೌಢ ಪ್ರಬಂಧಗಳನ್ನೂ ಬರೆದಿದ್ದಾನೆ. 1880ರಿಂದ ತನ್ನ ಕೊನೆಗಾಲದ ವರೆಗೂ ಬೊಟಾನಿಶೆ ಜ಼ಾಹ್ರ್‌ಬ್ಯೂಹರ್ ಎಂಬ ಸಸ್ಯಶಾಸ್ತ್ರೀಯ ಪತ್ರಿಕೆಯ ಸಂಪಾದಕನಾಗಿಯೂ ಕೆಲಸ ಮಾಡಿದ.

(ಕೆ.ಬಿ.ಎಸ್.)

**ಎಂಗ್‌ಸ್ಟ್ರಮ್, ಆಲ್ಬರ್ಟ್ :** 1869–1940. ಸ್ವೀಡನ್ನಿನ ಅತ್ಯಂತ ಜನಪ್ರಿಯ ಕಥೆಗಾರ. ವ್ಯಂಗ್ಯಚಿತ್ರಕಾರ. ಹುಟ್ಟಿದುದು ಸ್ಮಾಲ್ಯಾಂಡಿನ ಸ್ಟೇಷನ್ ಮಾಸ್ತರರ ಮಗನಾಗಿ. ಸ್ಟಾಕ್‌ಹೋಮ್ ನಗರದಲ್ಲಿ ವ್ಯಂಗ್ಯಚಿತ್ರಕಾರನಾಗಿ ಉದ್ಯೋಗವನ್ನಾರಂಭಿಸಿದ. ತಾನು ಕಂಡ ತನ್ನೂರಿನ ಕೃಷಿಕರ ಮತ್ತು ಅಪ್‌ಲ್ಯಾಂಡ್ ಕಡಲತೀರದ ಬೆಸ್ತರ ಬದುಕನ್ನು ಚಿತ್ರಿಸುವ ಕಥೆಗಳನ್ನೂ ವ್ಯಂಗ್ಯಚಿತ್ರಗಳನ್ನೂ ಬರೆದು ಅಪರಿಮಿತ ಜನಪ್ರಶಂಸೆಯನ್ನು ಗಳಿಸಿದ.

ಕಥೆ ಹೇಳುವಲ್ಲಿ ಈತ ತಾನು ಬೆಳೆದ ನೆಲದ ಅಚ್ಚ ದೇಶೀಯತೆಯನ್ನು ವಿಪುಲವಾಗಿ ತಂದಿದ್ದಾನೆ. ಈತ ಸ್ವೀಡಿಷ್ ಜನರಿಗೆ ಸ್ವೀಡಿಷ್‌ನಲ್ಲಿ ನಗುವುದನ್ನು ಹೇಳಿಕೊಟ್ಟನೆಂಬ ಮಾತು ಇವನ ಕಾಲದಲ್ಲೇ ಜನಜನಿತವಾಗಿತ್ತು. ಸ್ಟ್ರಿಕ್ಸ್ (ಸ್ವೀಡನ್ನಿನ ಖ್ಯಾತ ನಾಟಕಕಾರ ಸ್ಟ್ರಿಂಡ್‌ಬರ್ಗನ ಎಳೆತನದ ಅಡ್ಡಹೆಸರು. ಲ್ಯಾಟಿನ್ನಿನಲ್ಲಿ ಗೂಬೆ ಎಂದು ಅರ್ಥ) ಎಂಬ ಹಾಸ್ಯಕ್ಕೆ ಮೀಸಲಾದ (ಕನ್ನಡದ ಕೊರವಂಜಿಯಂಥ) ಚಿಕ್ಕ ಮಾಸಿಕವನ್ನು ಆರಂಭಿಸಿ, ಅದರ ಸಂಪಾದಕನಾಗಿ ಕೆಲವು ವರ್ಷ ಇದ್ದ. ಮುಂದೆ ಲಲಿತಕಲೆಗಳ ರಾಯಲ್ ಅಕಾಡೆಮಿಯಲ್ಲಿ ಪ್ರಾಧ್ಯಾಪಕನಾಗಿಯೂ ಸ್ವೀಡಿಷ್ ಅಕಾಡೆಮಿಯ ಸದಸ್ಯನಾಗಿಯೂ ಸೇವೆ ಸಲ್ಲಿಸಿದ. 1941ರಲ್ಲಿ ಇವನ ಎಲ್ಲ ಕೃತಿಗಳೂ 28 ಸಂಪುಟಗಳಲ್ಲಿ ಪ್ರಕಟವಾದುವು. (ಕೆ.ಬಿ.ಪಿ.)

**ಎಂಜಿನ್:** ಉಷ್ಣಶಕ್ತಿಯನ್ನು ಉಪಯುಕ್ತ ಯಾಂತ್ರಿಕ ಚಲನೆಗೆ ಪರಿವರ್ತಿಸುವ ಸಾಧನ. ಗಮನಾರ್ಹ ಯಾಂತ್ರಿಕ ಸಾಮರ್ಥ್ಯವನ್ನು (ಮೆಕ್ಯಾನಿಕಲ್ ಪವರ್) ಪೂರೈಸುವುದು ಇದರ ವೈಶಿಷ್ಟ್ಯ. ಗಡಿಯಾರ ಚಲನೆಯನ್ನು ಉತ್ಪಾದಿಸುವ ಯಂತ್ರ; ವಿದ್ಯುಚ್ಛಕ್ತಿಯ ಮೋಟಾರ್ ಯಾಂತ್ರಿಕ ಸಾಮರ್ಥ್ಯವನ್ನು ಪೂರೈಸುವ ಯಂತ್ರ; ನೀರ್ಗಾಲಿ ಓಡುವ ನೀರಿನ ಚಲನಶಕ್ತಿಯನ್ನು ಯಾಂತ್ರಿಕ ಸಾಮರ್ಥ್ಯವಾಗಿ ಪರಿವರ್ತಿಸುವ ಯಂತ್ರ. ಆದರೆ ಇವು ಯಾವುವೂ ಎಂಜಿನುಗಳಲ್ಲ; ಕಾರಣ ಎಂಜಿನಿನ ವ್ಯಾಖ್ಯೆಯ ಪರಿಧಿಯೊಳಗೆ ಇವು ಬರುವುದಿಲ್ಲ. ಎಂಜಿನ್ನಿನ ಶಕ್ತಿಯ ಆಕರ ಉಷ್ಣ, ಉಷ್ಣದ ಪೂರೈಕೆ ಇಂಧನ ದಹನದಿಂದ. ಆದ್ದರಿಂದ ಇಂಧನವನ್ನು ದಹಿಸಿ ಅಥವಾ ಬೇರಾವುದೋ ವಿಧದಿಂದ ಇಂಧನವನ್ನು ಉಪಯೋಗಿಸಿ ಉಷ್ಣಶಕ್ತಿಯನ್ನು ಪಡೆದು ಅದನ್ನು ಯಾಂತ್ರಿಕ ಚಲನೆಗೆ ಪರಿವರ್ತಿಸುವ ಯಂತ್ರವೇ ಎಂಜಿನ್. ಮೋಟಾರ್ ಕಾರುಗಳು, ಉಗಿಬಂಡಿಗಳು, ವಿಮಾನಗಳು ಇತ್ಯಾದಿಗಳಲ್ಲಿ ಬಳಸುವ ಯಂತ್ರಗಳು ಎಂಜಿನುಗಳು.

ಸಾಮಾನ್ಯವಾಗಿ ಎಂಜಿನುಗಳಲ್ಲಿ ಎರಡು ವಿಧ: 1. ಬಹಿರ್ದಹನ ಎಂಜಿನುಗಳು; 2.ಅಂತರ್ದಹನ ಎಂಜಿನುಗಳು.

ಬಹಿರ್ದಹನ ಎಂಜಿನಿನಲ್ಲಿ ಇಂಧನದಹನಕಾರ್ಯ ಅದರ ಹೊರಗಡೆ ನಡೆಯುತ್ತದೆ. ಉಗಿ ಎಂಜಿನ್ ಇದಕ್ಕೆ ಉದಾಹರಣೆ. ಎಂಜಿನನ್ನು ನಡೆಸಲು ಬೇಕಾಗುವ ಉಗಿಯನ್ನು ಉತ್ಪಾದಿಸಲು ನೀರನ್ನು ಆವಿಗೆಯಲ್ಲಿ ಕಾಯಿಸಬೇಕು. ಸೌದೆ, ಕಲ್ಲಿದ್ದಲು, ಕೋಕುಗಳನ್ನು ಇಂಧನವಾಗಿ ಉಪಯೋಗಿಸುತ್ತಾರೆ.

ಅಂತರ್ದಹನ ಎಂಜಿನಿನಲ್ಲಿ ಇಂಧನದಹನ ಕಾರ್ಯ ಇದರ ಒಳಗಡೆ ಆಗುತ್ತದೆ. ಪೆಟ್ರೋಲ್, ಸೀಮೆಎಣ್ಣೆ, ಅನಿಲಗಳು, ಡೀಸಲ್ ಎಣ್ಣೆ ಇಲ್ಲಿನ ಇಂಧನಗಳು. ವಿವರಗಳಿಗೆ **ನೋಡಿ– ಅಂತರ್ದಹನ–ಎಂಜಿನ್ನುಗಳು.**

ಆಕಾರದ ಪ್ರಕಾರ ಎಂಜಿನುಗಳಲ್ಲಿ ಎರಡು ವಿಧ: ಸಪಾಟ (ಹಾರಿಜಾಂಟಲ್) ಎಂಜಿನ್ ಮತ್ತು ಲಂಬ (ವರ್ಟಿಕಲ್) ಎಂಜಿನ್. ಎಂಜಿನಿನ ಸಿಲಿಂಡರ್ ಅಕ್ಷರೇಖೆಗೆ ಸಮಾನಾಂತರವಾಗಿದ್ದರೆ ಅದು ಸಪಾಟ ಎಂಜಿನ್. ರೈಲ್ವೆಯ ಉಗಿ ಎಂಜಿನ್ ಇದಕ್ಕೊಂದು ಉದಾಹರಣೆ. ಎಂಜಿನಿನ ಸಿಲಿಂಡರ್ ಅಕ್ಷರೇಖೆಗೆ ಲಂಬವಾಗಿದ್ದರೆ ಅದು ಲಂಬ ಎಂಜಿನ್. ಸಾಮಾನ್ಯವಾಗಿ ಈ ಎಂಜಿನುಗಳೇ ಹೆಚ್ಚಾಗಿ ಬಳಕೆಯಲ್ಲಿವೆ.

ಸಿಲಿಂಡರುಗಳ ಸಂಖ್ಯೆಯ ಪ್ರಕಾರವೂ ಎಂಜಿನುಗಳನ್ನು ವಿಂಗಡಿಸಲಾಗಿದೆ: 1. ಒಂದು ಸಿಲಿಂಡರ್ ಎಂಜಿನ್ (ಸಿಂಗಲ್ ಸಿಲಿಂಡರ್ ಎಂಜಿನ್); 2. ಬಹುಸಿಲಿಂಡರ್ ಎಂಜಿನ್ (ಮಲ್ಟಿಸಿಲಿಂಡರ್ ಎಂಜಿನ್). ಬಹುಸಿಲಿಂಡರ್ ಎಂಜಿನುಗಳಲ್ಲಿ ಮೂರು ವಿಧದವು ಇವೆ: (i) ಸಹಪಂಕ್ತಿ (ಇನ್‌ಲೈನ್) ಎಂಜಿನ್; (ii) V ಎಂಜಿನ್ ; (iii) ತ್ರಿಜ್ಯ (ರೇಡಿಯಲ್) ಎಂಜಿನ್. ಸಹಪಂಕ್ತಿ ಎಂಜಿನುಗಳಲ್ಲಿ ಎಲ್ಲ ಸಿಲಿಂಡರುಗಳೂ ಒಂದೇ ಪಂಕ್ತಿಯಲ್ಲಿ ಇರುತ್ತವೆ. ಕಾರುಗಳ ಎಂಜಿನ್ ಇದಕ್ಕೆ ಉದಾಹರಣೆ. V ಎಂಜಿನುಗಳಲ್ಲಿ ಹಲವು ಸಿಲಿಂಡರುಗಳನ್ನು V ಆಕಾರದಲ್ಲಿ ಜೋಡಿಸಿ ಒಂದೇ ವಕ್ರದಂಡಕ್ಕೆ (ಕ್ರ್ಯಾಂಕ್‌ಷ್ಯಾಫ್ಟ್) ಸೇರಿಸಲಾಗಿರುತ್ತದೆ. ಹಡಗುಗಳಲ್ಲಿ ಉಪಯೋಗಿಸುವ ಎಂಜಿನುಗಳು ಈ ರೀತಿಯವೇ. ಇದರಿಂದ ಸ್ಥಳ ಉಳಿಯುತ್ತದೆ. ತ್ರಿಜ್ಯ ಎಂಜಿನುಗಳನ್ನು ವಿಮಾನಗಳು ಮಾತ್ರ ಉಪಯೋಗಿಸುತ್ತಾರೆ. ಪಂದ್ಯದ ಕಾರುಗಳಲ್ಲೂ ಉಪಯೋಗಿಸುವುದುಂಟು. 7 ರಿಂದ 28 ಸಿಲಿಂಡರುಗಳನ್ನು ವೃತ್ತದ ಪರಿಧಿಯಲ್ಲಿ ಜೋಡಿಸಿ ವೃತ್ತದ ಕೇಂದ್ರದಲ್ಲಿ ಇರುವ ವಕ್ರದಂಡಕ್ಕೆ ಸೇರಿಸಿರುತ್ತಾರೆ. **(ನೋಡಿ– ರಾಕೆಟ್; ಜೆಟ್–ಎಂಜಿನ್)**

**ಎರಡು ಘಾತದ ಎಂಜಿನುಗಳು (ಟೂ ಸ್ಟ್ರೋಕ್ ಎಂಜಿನ್ಸ್):** ಎಂಜಿನುಗಳನ್ನು ಅವುಗಳ ಕಾರ್ಯನಿರ್ವಹಣ ಆವರ್ತಕ್ಕನುಗುಣವಾಗಿ ಎರಡು ಘಾತದ ಹಾಗೂ ನಾಲ್ಕು ಘಾತದ ಎಂಜಿನುಗಳೆಂದು ವಿಭಾಗಿಸಿದೆ. ಅಂತರ್ದಹನ ಎಂಜಿನುಗಳು ಸಾಮಾನ್ಯವಾಗಿ ಏಕಕ್ರಿಯಾ ಎಂಜಿನುಗಳು. ಭರಣ (ಚಾರ್ಜ್) ಇವುಗಳಲ್ಲಿ ಕೊಂತದ ಒಂದು ಪಾರ್ಶ್ವದಲ್ಲಿ ಮಾತ್ರ ಕೆಲಸಮಾಡುತ್ತದೆ. ನಾಲ್ಕು ಘಾತದ ಎಂಜಿನಿನಲ್ಲಿ ಪ್ರತಿಯೊಂದು ಆವರ್ತದಲ್ಲಿಯೂ ಒಂದೇ ಒಂದು ಕಾರ್ಯಕಾರಿ ಘಾತ ಇದೆ; ಉಳಿದ ಮೂರು ನಿಷ್ಕಾರ್ಯಘಾತಗಳು (ಐಡ್ಲ್ ಸ್ಟ್ರೋಕ್ಸ್). ಇಲ್ಲಿ ಮೂರು ನಿಷ್ಕಾರ್ಯಘಾತಗಳಿಗೂ ಶಕ್ತಿಯನ್ನೊದಗಿಸಬೇಕಾಗುತ್ತದೆ. ನಾಲ್ಕು ಘಾತದ ಎಂಜಿನಿನಲ್ಲಿ ನಾಲ್ಕು ಘಾತಗಳಲ್ಲಿ ಸಂಪೂರ್ಣಗೊಳ್ಳುವ ಕಾರ್ಯನಿರ್ವಹಣಾವರ್ತ ಎರಡು ಘಾತದ ಎಂಜಿನುಗಳಲ್ಲಿ ಎರಡೇ ಘಾತಗಳಲ್ಲಿ ಪೂರ್ಣಗೊಳ್ಳುವುದರಿಂದ ಮೇಲ್ಕಂಡ ತೊಂದರೆ ತಪ್ಪುತ್ತದೆ. ಪ್ರತಿಯೊಂದು ಪರಿಭ್ರಮಣೆಗೂ (ರೆವಲ್ಯೂಷನ್) ಒಂದು ಸಕ್ರಿಯ ಘಾತ ಇರುವುದರಿಂದ ಒಂದೇ ಅಳತೆಯ ನಾಲ್ಕು ಘಾತದ ಎಂಜಿನಿನಲ್ಲಿ ಉತ್ಪನ್ನವಾಗುವ ಅಶ್ವಸಾಮರ್ಥ್ಯದ ಎರಡರಷ್ಟು ಎರಡು ಘಾತದ ಎಂಜಿನಿನಲ್ಲಿ ಉತ್ಪತ್ತಿಯಾಗುತ್ತದೆ. ಆದರೆ ಸಂಮಾರ್ಜನ ಕ್ರಿಯೆಗಳಲ್ಲಿ (ಸ್ಕ್ಯಾವೆಂಜಿಂಗ್ ಪ್ರೋಸೆಸಸ್) ಹೊಸಭರಣ ವ್ಯಯಗೊಳ್ಳುವುದರಿಂದ ಪ್ರಾಯೋಗಿಕವಾಗಿ ನಾಲ್ಕು ಘಾತದ ಎಂಜಿನಿನಲ್ಲಿ ಉತ್ಪನ್ನವಾಗುವ ಸಾಮರ್ಥ್ಯದ ಎರಡರಷ್ಟಾಗಿರುವುದಿಲ್ಲ. ಎರಡು ನಿಷ್ಕಾರ್ಯಘಾತಗಳು ಬಿಡಲ್ಪಡುತ್ತವೆ. ವಕ್ರದಂಡದ ಮೇಲೆ ಹೆಚ್ಚಿನ ಸಮನಾದ ಮಹತ್ವ (ಮೊಮೆಂಟ್) ಇರುತ್ತದೆ. ಎಂಜಿನನ್ನು ಸುಲಭವಾಗಿ ವಿಪರ್ಯಯಗೊಳಿಸಬಹುದು (ರಿವರ್ಸಿಬಲ್). ಯಾವುದೇ ಸ್ಥಾನದಲ್ಲಿ ಎಂಜಿನನ್ನು ಪ್ರವರ್ತಿಸಲು (ಸ್ಟಾರ್ಟ್) ಮೂರು ಸಿಲಿಂಡರುಗಳು ಸಾಕು. ಇದಕ್ಕೆ ಕಡಿಮೆ ಉದ್ದದ ವಕ್ರದಂಡ ಸಾಕು. ಸಮನಾದ ಭ್ರಾಮಕ (ಟಾರ್ಕ್) ತಿರುಚು ಆಂದೋಲನದ (ಟಾರ್ಷನಲ್ ಆಸಿಲೇಷನ್) ಅಪಾಯವನ್ನು ಮತ್ತು ಚಕ್ರದ (ಫ್ಲೈವೀಲ್) ಆಕಾರವನ್ನು ಕಡಿಮೆಗೊಳಿಸುತ್ತದೆ. ಉಜ್ಜಲು (ಗ್ರೈಂಡ್) ಕವಾಟಗಳಿಲ್ಲ.

ಘನಗಾತ್ರೀಯ ದಕ್ಷತೆ (ವಾಲ್ಯುಮೆಟ್ರಿಕ್ ಎಫಿಷಿಯನ್ಸಿ) ಕಡಿಮೆಯಾದದ್ದರಿಂದ ಹೆಚ್ಚಿನ ವೇಗಗಳಲ್ಲಿ ಈ ಎಂಜಿನುಗಳ ದಕ್ಷತೆ ಕಡಿಮೆ. ದಹನಗೊಳ್ಳದ ಅನಿಲ ಸಂಮಾರ್ಜನದಲ್ಲಿ ನಿಷ್ಕಾಸ ದ್ವಾರದ ಮೂಲಕ ಹೊರಹೋಗಿ ವ್ಯಯಗೊಳ್ಳುವುದರಿಂದ ಹೆಚ್ಚಿನ ಇಂಧನ ವ್ಯಯವಾಗುವುದು. ಅಷ್ಟೇ ಅಲ್ಲದೆ ಹೆಚ್ಚಿನ ಪ್ರಮಾಣದ ಮೃದುಚಾಲಕ ತೈಲವೂ (ಲೂಬ್ರಿಕೇಷನ್ ಆಯಿಲ್) ಬೇಕಾಗುತ್ತದೆ.

ಎರಡು ಘಾತದ ಎಂಜಿನಿನ ಕಾರ್ಯವಿಧಾನ ಈ ರೀತಿ ಇದೆ: ಮೊದಲ ಪಟ್ಟಿನ ಆರಂಭದಲ್ಲಿ ಕೊಂತ ತನ್ನ ಅತ್ಯಂತ ಎತ್ತರದ ಸ್ಥಾನದಲ್ಲಿರುತ್ತದೆ (ಚಿತ್ರ 1).



**ಎರಡು ಘಾತದ ಎಂಜಿನ್: E ನಿಷ್ಕಾಸ ದ್ವಾರ, I ಕ್ರ್ಯಾಂಕ್ ಕೇಸಿಗೆ ಪ್ರವೇಶ ದ್ವಾರ, C ಸಿಲಿಂಡರಿಗೆ ಪ್ರವೇಶದ್ವಾರ**

ಸಂಪೀಡನಗೊಂಡ ಪೆಟ್ರೋಲ್, ತೈಲ ಹಾಗೂ ವಾಯುಮಿಶ್ರಣವನ್ನು ಕೊಂತದಮೇಲೆ ದಹನಗೊಳಿಸಿದಾಗ ಕೊಂತ ಕೆಳಮುಖವಾಗಿ ತಳ್ಳಲ್ಪಡುತ್ತದೆ. ಈ ರೀತಿ ಕೆಳಗೆ ಚಲಿಸುವಾಗ, ನಿಷ್ಕಾಸ (ಎಕ್ಸಾಸ್ಟ್) ದ್ವಾರವನ್ನು ತೆರೆಯುತ್ತದೆ (ಚಿತ್ರ 2). ಸಿಲಿಂಡರಿನಲ್ಲಿ ಇನ್ನೂ ಹೆಚ್ಚಿನ ಸಂಮರ್ದದಲ್ಲಿ ದಹನಗೊಂಡ ಅನಿಲಗಳು ಈ ದ್ವಾರದ ಮೂಲಕ ಹೊರಹೋಗುತ್ತವೆ (ಚಿತ್ರ 3). ಕೊಂತ ಮತ್ತಷ್ಟು ಕೆಳಕ್ಕೆ ಚಲಿಸಿದಾಗ, ಅದರ ಮೇಲ್ತುದಿ ಪ್ರವೇಶದ್ವಾರವನ್ನು (ಇನ್‌ಲೆಟ್‌ಪೋರ್ಟ್) ತೆರೆಯುತ್ತದೆ (ಚಿತ್ರ 3). ಇದು ಹೊಸ ಪೆಟ್ರೋಲ್ ಹಾಗೂ ವಾಯುವಿನ ಮಿಶ್ರಣವನ್ನು (ಪ್ರವೇಶ ದ್ವಾರದ ಮೂಲಕ ಒಳಹೊಕ್ಕ) ಸಿಲಿಂಡರಿನೊಳಕ್ಕೆ ಪ್ರವೇಶಿಸುವಂತೆ ಮಾಡುತ್ತದೆ. ಉಳಿದಿರುವ ದಹನವಾಗದ ಅನಿಲಗಳು ಹೊರಹಾಕಲ್ಪಡುತ್ತವೆ. ಕೊಂತ ಎರಡನೆಯ ಘಾತಕ್ಕೆ ಮೇಲೆ ಬಂದಾಗ ಒಂದು ಕ್ಷಣ ಎಲ್ಲ ದ್ವಾರಗಳೂ ಮುಚ್ಚಲ್ಪಟ್ಟಿರುತ್ತವೆ (ಚಿತ್ರ 4). ಈ ಅವಧಿಯಲ್ಲಿ ಮಿಶ್ರಣ ಸಂಪೀಡನಗೊಳ್ಳುತ್ತದೆ. ಮತ್ತೊಮ್ಮೆ ಹೊಸ ಆವರ್ತನವೊಂದು ಆರಂಭವಾಗುತ್ತದೆ. ಈ ರೀತಿಯಲ್ಲಿ ವಕ್ರದಂಡದ ಒಂದು ಪರಿಭ್ರಮಣದಲ್ಲಿ ಆವರ್ತ ಸಂಪೂರ್ಣಗೊಳ್ಳುತ್ತದೆ. ಆದ್ದರಿಂದ ವಕ್ರದಂಡದ ಪ್ರತಿಯೊಂದು ಪರಿಭ್ರಮಣದಲ್ಲೂ ಒಂದೊಂದು ಕಾರ್ಯಕಾರಿ ಘಾತವಿದೆ.

ಹಿರಿಯ ಪ್ರಮಾಣದ ಎರಡು ಘಾತದ ಎಂಜಿನುಗಳಲ್ಲಿ ಸಂಮಾರ್ಜನವಿಧಾನ ಸಂಪೂರ್ಣಗೊಳ್ಳಲು ಹೆಚ್ಚಿನ ಪ್ರಮಾಣದ ಹೊಸ ವಾಯುವನ್ನು ಎಂಜಿನಿನ ಸಿಲಿಂಡರಿನೊಳಕ್ಕೆ ಬಿಡಬೇಕು. ಎಂಜಿನಿನ ಸಿಲಿಂಡರಿನಿಂದ ದಹನಗೊಂಡ ಅನಿಲಗಳನ್ನು ಹೊರತೆಗೆಯುವ ಕಾರ್ಯಕ್ಕೆ ಸಂಮಾರ್ಜನಕಾರ್ಯವೆಂದು ಹೆಸರು. ಇದು ಒಂದು ಶುದ್ಧೀಕರಣಕಾರ್ಯ. ಮತ್ತಷ್ಟು ಹೊಸಭರಣ (ಚಾರ್ಜ್–ಇಂಧನ ಮತ್ತು ವಾಯು) ಅಥವಾ ಸಂಪೀಡನಗೊಂಡ ವಾಯುವನ್ನು ಎಂಜಿನಿನ ಸಿಲಿಂಡರಿನೊಳಕ್ಕೆ ಪ್ರವಹಿಸುವಂತೆ ಮಾಡುವುದರ ಮೂಲಕ ಈ ಕೆಲಸ ಮಾಡಬಹುದು. ಎರಡು ಘಾತದ ಎಂಜಿನುಗಳಲ್ಲಿ ಹೆಚ್ಚಿನ ಮೊತ್ತದಲ್ಲಿರುವ ನಿಷ್ಕಾಸ ಅನಿಲಗಳನ್ನು ಸಂಮಾರ್ಜನಗೊಳಿಸಲು ಇರುವ ಅವಧಿ ಅಲ್ಪವಾದದ್ದರಿಂದ,

ಹೆಚ್ಚಿನ ಬಲ ಅಥವಾ ಸಾಕಷ್ಟು ಕಾಲಾವಧಿ ನೀಡಬೇಕು. ಆದ್ದರಿಂದ ಹೊಸಭರಣ ಅಥವಾ ಹೆಚ್ಚಿನ ವಾಯುವಿನ ರೂಪದಲ್ಲಿ ಎಂಜಿನಿನ ಅಧಿಕ ವಿಶೇಷಬಲವನ್ನು ನೀಡಲಾಗುವುದು. ಚೋಷಣ (ಸಕ್ಷನ್) ಮತ್ತು ನಿಷ್ಕಾಸಘಾತಗಳೆರಡೂ ಒಂದರಲ್ಲಿಯೇ ಜೊತೆಯಾಗಿರುವುದರಿಂದ, ಸಿಲಿಂಡರಿನಲ್ಲಿ ಸಂಮರ್ದ ವಾಯು ಸಂಮರ್ದಕ್ಕಿಂತ ಅಧಿಕವಾಗಿರುತ್ತದೆ. ಆದ್ದರಿಂದ ವಾಯುಮಂಡಲದ ಸಂಮರ್ದದಲ್ಲಿ ಹೊಸ ಭರಣವನ್ನು ಒಳಬಿಡಲಾಗುವುದಿಲ್ಲ. ಭರಣದ ಸಂಮರ್ದ ದಹನಗೊಂಡ ಅನಿಲಗಳ ಸಂಮರ್ದಕ್ಕಿಂತಲೂ ಅಧಿಕವಾಗಿರಬೇಕು. ಇದಕ್ಕಾಗಿ ಭರಣವನ್ನು ಒಳಬಿಡಲು ಪ್ರತ್ಯೇಕವಾದ ಸಂಪೀಡಕ (ಕಂಪ್ರೆಸರ್) ಒಂದನ್ನು ಉಪಯೋಗಿಸಬೇಕು; ಅಥವಾ ಭರಣವನ್ನೇ ಕ್ರ್ಯಾಂಕ್ ಕೇಸಿನಲ್ಲಿ ಸಂಪೀಡನಗೊಳಿಸಬೇಕು. ಸಣ್ಣ ಎಂಜಿನುಗಳಲ್ಲಿ ಎರಡನೆಯ ರೀತಿಯನ್ನೂ ದೊಡ್ಡ ಎಂಜಿನುಗಳಲ್ಲಿ ಮೊದಲನೆಯ ರೀತಿಯನ್ನೂ ಬಳಸುವರು. ಕೆಲವೊಮ್ಮೆ ಸಂಪೀಡಕವನ್ನು ಎಂಜಿನ್ ಚಾಲಿತಗೊಳಿಸುತ್ತದೆ.

(ಎಚ್.ಎಸ್.ಆರ್.)

**ನಾಲ್ಕು ಘಾತದ ಎಂಜಿನುಗಳು:** ಅಂತರ್ದಹನ ಎಂಜಿನುಗಳನ್ನು ಅವುಗಳ ಆವರ್ತನಕ್ರಿಯೆಗೆ ಅನುಗುಣವಾಗಿ ಹೀಗೆ ವಿಂಗಡಿಸಬಹುದು: ಎರಡು ಘಾತದವು ನಾಲ್ಕು ಘಾತದವು. ಎರಡು ಘಾತದ ಎಂಜಿನುಗಳಲ್ಲಿ ಕೊಂತದ ಎರಡು ಘಾತಗಳಿಗೆ ಒಂದು ಆವರ್ತ (ಸೈಕಲ್) ಸಂಪೂರ್ಣವಾದರೆ ನಾಲ್ಕು ಘಾತದವಲ್ಲಿ ಅದು ನಾಲ್ಕು ಘಾತಗಳಿಗೆ ಮಾತ್ರ ಸಂಪೂರ್ಣವಾಗುವುದು.




ನಾಲ್ಕು ಘಾತಕ ಎಂಜಿನಿನ ಕ್ರಿಯೆಯನ್ನು ಸೂಚಿಸುವ ರೇಖಾಚಿತ್ರ–ಒಳಘಾತವನ್ನು ಚಿತ್ರ 1ರಲ್ಲೂ, ಸಂಪೀಡನಾ ಘಾತವನ್ನು ಚಿತ್ರ 2ರಲ್ಲೂ, ವಿಸ್ಫೋಟಕ ಘಾತವನ್ನು ಚಿತ್ರ 3ರಲ್ಲೂ, ನಿಷ್ಕಾಸ ಘಾತವನ್ನು ಚಿತ್ರ 4ರಲ್ಲೂ ತೋರಿಸಿದೆ. ಚಿತ್ರಗಳಲ್ಲಿ I ಪ್ರವೇಶ ದ್ವಾರ, E ನಿಷ್ಕಾಸ ದ್ವಾರ ಮತ್ತು S ಕಿಡಿಬೆಣೆ.

ನಾಲ್ಕು ಘಾತದ ಆವರ್ತದ ತತ್ತ್ವ ರೋಚಾಸ್ ಎಂಬುವನಿಂದ ಪ್ರತಿಪಾದಿಸಲ್ಪಟ್ಟಿತು (1862). 1876ರಲ್ಲಿ ಓಟೊ ಎಂಬಾತ ಈ ತತ್ತ್ವವನ್ನು ಕಾರ್ಯರೂಪಕ್ಕೆ ಅಳವಡಿಸಿಕೊಂಡ. ಇದರ ಪ್ರಕಾರ ಕ್ರಿಯೆ ಎಸಗುವ ಎಂಜಿನುಗಳು ಪೆಟ್ರೋಲ್, ಡೀಸಲ್ ಅಥವಾ ಅನಿಲದ (ಗ್ಯಾಸ್) ಶಕ್ತಿಯಿಂದ ನಡೆಯುವುವು. ನಾಲ್ಕು ಘಾತ ಆವರ್ತದ ವಿವಿಧ ಹಂತಗಳನ್ನು ಚಿತ್ರ 2ರಲ್ಲಿ ತೋರಿಸಿದೆ. ಒಳ ಘಾತದಲ್ಲಿ (ಇನ್‌ಟೇಕ್ ಸ್ಟ್ರೋಕ್) ಕೊಂತ ಮೊದಲು ಕೆಳಗಿಳಿಯುವಾಗ ಪ್ರವೇಶ ಕವಾಟಗಳು (ಇನ್‌ಲೆಟ್ ವಾಲ್ವ್ಸ್) ತೆರೆದಿರುತ್ತವೆ. ಕೊಂತದ ಕೆಳಮುಖ ಚಲನೆಯಿಂದಾಗಿ ಉಂಟಾಗುವ ಆಂಶಿಕ ನಿರ್ವಾತದಿಂದಾಗಿ (ಪಾರ್ಷಿಯಲ್ ವ್ಯಾಕ್ಯೂಂ) ಹೊಸಭರಣ (ಚಾರ್ಜ್) ಸಿಲಿಂಡರನ್ನು ಪ್ರವೇಶಿಸುತ್ತವೆ. ಸಂಪೀಡನಾಘಾತದಲ್ಲಿ ಎರಡು ಕವಾಟಗಳು ಮುಚ್ಚಿದ್ದು ಕೊಂತ ಮೇಲ್ಮುಖವಾಗಿ ಚಲಿಸುತ್ತದೆ. ಈ ಚಲನೆ ಸಂಪೂರ್ಣಗೊಳ್ಳುವುದರಲ್ಲಿದ್ದಾಗ ವಿದ್ಯುತ್ ಕಿಡಿಯಿಂದಾಗಿ ಭರಣ ಪ್ರಜ್ವಲಿಸುತ್ತದೆ. ಇಲ್ಲಿಂದ ವಿಸ್ಫೋಟಕ (ಎಕ್ಸ್‌ಪ್ಲೋಷನ್ ಸ್ಟ್ರೋಕ್) ಪ್ರಾರಂಭವಾಗುತ್ತದೆ. ಎರಡು ಕವಾಟಗಳು ಮುಚ್ಚಿರುವುದರಿಂದಲೂ ಜ್ವಲನಗೊಂಡ ಭರಣ ವಿಕಾಸಗೊಳ್ಳುವುದರಿಂದಲೂ ಕೊಂತದ ಮೇಲೆ ಅನಿಲದ ಒತ್ತಡ ಉಂಟಾಗುತ್ತದೆ. ನಾಲ್ಕನೆಯದಾದ ನಿಷ್ಕಾಸ ಘಾತದಲ್ಲಿ (ಎಗ್‌ಸಾಸ್ಟ್ ಸ್ಟ್ರೋಕ್) ಕೊಂತ ಮೇಲ್ಮುಖವಾಗಿ ಚಲಿಸುತ್ತ ಈಗ ತೆರೆಯಲ್ಪಟ್ಟ ನಿಷ್ಕಾಸ ಕವಾಟಗಳ ಮೂಲಕ ದಹನೋತ್ಪನ್ನಗಳನ್ನು ಹೊರಹಾಕುತ್ತದೆ. ಬಳಿಕ ಇವುಗಳ ಪುನರಾವರ್ತನೆಯಾಗುತ್ತಿರುತ್ತದೆ. ಒಂದು ಆವರ್ತದಲ್ಲಿ ಆಂತರಿಕ, ಸಂಪೀಡನ, ವಿಸ್ಫೋಟನ ಮತ್ತು ನಿಷ್ಕಾಸಗಳೆಂಬ ನಾಲ್ಕು ಘಾತಗಳಿವೆ. ಅಲ್ಲದೆ ವಕ್ರದಂಡ (ಕ್ರ್ಯಾಂಕ್ ಷಾಫ್ಟ್) ಎರಡು ಸುತ್ತು ತಿರುಗಿರುತ್ತದೆ.

ನಾಲ್ಕು ಘಾತದ ಎಂಜಿನುಗಳಲ್ಲಿ ವಿಸ್ಫೋಟಕ ಘಾತದ ಸಂಖ್ಯೆ ಎರಡು ಘಾತದ ಎಂಜಿನುಗಳ ವಿಸ್ಫೋಟಕ ಘಾತದ ಸಂಖ್ಯೆಯ ಅರ್ಧಕ್ಕೆ ಸಮ. ಅವುಗಳಿಂದ ದೊರೆಯಬಹುದಾದ ಸಾಮರ್ಥ್ಯ (ಪವರ್) ಎರಡು ಘಾತದ ಎಂಜಿನುಗಳಿಂದ ಸಿಗಬಹುದಾದ ಸಾಮರ್ಥ್ಯದ ಅರ್ಧಕ್ಕೆ ಸಮ. ಆದರೆ ನಾಲ್ಕು ಘಾತದ ಎಂಜಿನುಗಳಲ್ಲಿ ಭರಣ ಮತ್ತು ನಿಷ್ಕಾಸಗಳು ಉತ್ತಮವಾಗಿದ್ದು ನಿಷ್ಕಾಸದಲ್ಲಿ ನಷ್ಟವಾಗುವ ಭರಣದ ಪ್ರಮಾಣ ಬಲು ಕಡಿಮೆ.

(ಕೆ.ಸಿ.ಜಿ.)

**ಏಕದಿಗ್ವಾಹಿ ಎಂಜಿನ್:** ಸಿಲಿಂಡರಿನ ಎರಡು ಮುಖಗಳ ನಡುವಣ ಉಷ್ಣತಾಶ್ರೇಣಿಯನ್ನು ಕಡಿಮೆ ಮಾಡುವುದರ ಮೂಲಕ ಸಿಲಿಂಡರಿನ ಸಂಘನನವನ್ನು (ಕಂಡೆನ್ಸೇಷನ್) ಕಡಿಮೆಗೊಳಿಸುವ ಸಾಧನ (ಯೂನಿಫ್ಲೋ ಎಂಜಿನ್). ಇದು ಸಂಯುಕ್ತ ಉರಿ ಎಂಜಿನಿನಂತೆಯೇ ಕಾರ್ಯ ನಿರ್ವಹಿಸುತ್ತದೆ. ಇದರ ಕಾರ್ಯನಿರ್ವಹಣಾ ವಿಧಾನವನ್ನು ಚಿತ್ರ 3ರಲ್ಲಿ ತೋರಿಸಿದೆ.




ಏಕದಿಗ್ವಾಹಿ ಎಂಜಿನ್: A ಯಂತ್ರ ಚಾಲಿತ ಕವಾಟ ಪ್ರದೇಶ, B ಕವಾಟ, ಸಂಗ್ರಾಹಕಕ್ಕೆ E ರೇಚಕ ಕವಾಟ

ಸಿಲಿಂಡರಿನ ಕೊನೆಯಲ್ಲಿ ಉಗಿಯ ಪ್ರವೇಶದ್ವಾರಗಳಿದ್ದು ನಿಷ್ಕಾಸದ್ವಾರ ಸಿಲಿಂಡರಿನ ಮಧ್ಯಭಾಗದಲ್ಲಿದೆ. ನಿಷ್ಕಾಸ ದ್ವಾರವನ್ನು ತೆರೆಯುವ ಹಾಗೂ ಮುಚ್ಚುವ ಕವಾಟವಾಗಿ ವರ್ತಿಸುವಷ್ಟು ಕೊಂತ ಉದ್ದವಾಗಿದೆ. ಕಾರ್ಯಾಚರಣೆಯಲ್ಲಿ ಬಾಹ್ಯಘಾತದ ಆರಂಭದಲ್ಲಿ ಯಂತ್ರಚಾಲಿತ ಕವಾಟದ A ಮೂಲಕ ಉಗಿ ಒಳಪ್ರವೇಶಿಸುತ್ತದೆ. ಕವಾಟದ ವೇಳೆಗಳನ್ನು ಹೊಂದಿ ತುಂಡಾಗುತ್ತದೆ (ಕಟ್ ಆಫ್). ಕೊಂತ ಚಲಿಸುವವರೆಗೆ ಉಗಿ ವಿಕಾಸಗೊಳ್ಳುತ್ತದೆ ಮತ್ತು ನಿಷ್ಕಾಸದ್ವಾರವನ್ನು ತೆರೆಯುತ್ತದೆ. ಸಂಗ್ರಾಹಕದಿಂದ (ಕಂಡೆನ್ಸರ್) ಉಂಟಾದ ಚೂಷಣದಿಂದ (ಸಕ್ಷನ್) ದ್ವಾರದ ಮೂಲಕ ವಿಕಾಸಗೊಳ್ಳುತ್ತದೆ.

ಬಾಹ್ಯಘಾತದ ಕೊನೆಯನ್ನು ಕೊಂತ ತಲುಪಿದಾಗ ಉಗಿ ಪ್ರವೇಶ ಕವಾಟ B ಯನ್ನು ತೆರೆಯುತ್ತದೆ; ಕೊಂತದ ವೇವ್ ಸೈಡನ್ನು ಪ್ರವೇಶಿಸುತ್ತದೆ ಮತ್ತು ತುಂಡಾಗುತ್ತದೆ (ಕಟ್‌ಆಫ್); ಸಿಲಿಂಡರಿನಲ್ಲಿ ಉಗಿ ಪ್ರಸಾರಗೊಳ್ಳುತ್ತದೆ ಮತ್ತು ಒಳಘಾತವನ್ನು (ಇನ್‌ಸ್ಟ್ರೋಕ್) ಉಂಟುಮಾಡುತ್ತದೆ. ನಿಷ್ಕಾಸ ಕವಾಟ ಇ ತೆರೆದು ತತ್‌ಕ್ಷಣ ಉಗಿ ಪ್ರಸಾರಗೊಳ್ಳುತ್ತದೆ. ಈ ರೀತಿಯಲ್ಲಿ ಆವರ್ತ ಪುನರಾವರ್ತನೆಗೊಳ್ಳುತ್ತದೆ: ಹೀಗೆ ಉಗಿ ಪ್ರವಾಹ ಏಕದಿಗ್ವಾಹಿಯಾಗಿರುತ್ತದೆ. ಮತ್ತು ಇತರ ಯಂತ್ರಗಳಂತೆ ನಿರ್ಗಮಿಸುವ ತಂಪಾದ ಉಗಿ ಸಿಲಿಂಡರಿನೊಡನೆ ಪ್ರವೇಶದ್ವಾರದಲ್ಲಿ ಸಂಪರ್ಕಕ್ಕೆ ಬರುವುದಿಲ್ಲ. ಇದು ಸಿಲಿಂಡರ್ ದ್ವಾರಗಳ ನಡುವಣ ಉಷ್ಣವ್ಯತ್ಯಾಸವನ್ನು ಕಡಿಮೆ ಮಾಡುತ್ತದೆ ಮತ್ತು ಸಂಘನನವನ್ನು ತಡೆಗಟ್ಟುತ್ತದೆ ಪ್ರವೇಶದ್ವಾರದಲ್ಲಿ ಉಷ್ಣತೆ 70° ಸೆಂ.ಗ್ರೇ. ಇದ್ದರೆ ಬಹಿರ್‌ದ್ವಾರದಲ್ಲಿ ಅದು 205° ಸೆ. ಇರುತ್ತದೆ. ಈ ಉಷ್ಣತಾ ವ್ಯತ್ಯಾಸ ಸಾಮಾನ್ಯ ಸರಳ ಉಗಿಯಂತ್ರದಲ್ಲಿ ಸಾಕಷ್ಟು ಸಂಘನನವನ್ನು ಉಂಟುಮಾಡುತ್ತದೆ.

**ಏಕಕ್ರಿಯಾತ್ಮಕ ಎಂಜಿನ್:** (ಸಿಂಗಲ್ ಆಕ್ಟಿಂಗ್ ಎಂಜಿನ್): ಪ್ರತ್ಯಾಗಾಮಿ ಪಂಪುಗಳು (ರೆಸಿಪ್ರೊಕೇಟಿಂಗ್ ಪಂಪ್ಸ್) ಮತ್ತು ಇತರ ಎಂಜಿನುಗಳನ್ನು ಏಕಕ್ರಿಯಾತ್ಮಕ ಮತ್ತು ದ್ವಿಕ್ರಿಯಾತ್ಮಕಗಳೆಂದು ವಿಂಗಡಿಸಬಹುದು. ಉಗಿ ತಿರುಬಾನಿಗಳ ಬಳಕೆಗೆ ಮೊದಲು ಏಕಕ್ರಿಯಾತ್ಮಕ ಉಗಿ ಎಂಜಿನುಗಳು ತೀವ್ರಗತಿಯ (ಹೈಸ್ಪೀಡ್) ಎಂಜಿನುಗಳಾಗಿ ಬಳಕೆಯಲ್ಲಿದ್ದುವು. ಈ ರೀತಿಯ ಎಂಜಿನುಗಳಲ್ಲಿ ಉಗಿ ಅಥವಾ ಇನ್ನಾವುದೇ ಇಂಧನವನ್ನು ಕೊಂತದ ಒಂದು ಪಾರ್ಶ್ವಕ್ಕೆ ಮಾತ್ರ ಕಳಿಸಲಾಗುವುದು. ಹಾಗಾಗಿ ಒಂದು ಸಂಪೂರ್ಣ ಪರಿಭ್ರಮಣದಲ್ಲಿ (ರೆವಲ್ಯೂಷನ್) ಸಂಯೋಜನಾ ದಂಡದ (ಕನ್ನೆಕ್ಟಿಂಗ್ ರಾಡ್) ಮೇಲೆ ಏಕಸಮಾನ ಒತ್ತಡವಿದ್ದೇ ಇರುತ್ತದೆ. ಸಂಯೋಜನಾದಂಡದ ಮೇಲೆ ಒತ್ತಡ ಪರ್ಯಾಯವಾಗಿ ಬೀಳುವುದನ್ನು ಇದು ನಿಲ್ಲಿಸುತ್ತದೆ. ಕ್ರ್ಯಾಂಕ್ ಪಿನ್ನಿನ ಮೇಲೆ ಅಮುಕುವ ಒತ್ತಡ ಬೀಳಬೇಕಲ್ಲದೆ ಎಳೆಯುವ ಒತ್ತಡ ಬೀಳಬಾರದು. ಇವುಗಳ ಅಸಮವಾದ ಭ್ರಮಣಾಂಕ (ಟಾರ್ಕ್) ಮತ್ತು ಕಡಿಮೆ ಪ್ರಮಾಣದ ಅಶ್ವಸಾಮರ್ಥ್ಯದಿಂದಾಗಿ ಇವು ಈಗ ಅಪ್ರಚಲಿತವಾಗಿವೆ. ಶಕ್ತಿಯನ್ನು ಶೇಖರಿಸಿ ಪ್ರತಿವರ್ತಿಘಾತದಲ್ಲಿ (ರಿಟರ್ನ್ ಸ್ಟ್ರೋಕ್) ಉಪಯೋಗಿಸಿಕೊಳ್ಳುವಂತೆ ಮಾಡಲು ಈ ಎಂಜಿನುಗಳಿಗೆ ಗತಿನಿಯಂತ್ರಕ ಗಾಲಿಗಳನ್ನು (ಫ್ಲೈವೀಲ್) ಸೇರಿಸುವುದು ಅಗತ್ಯ. ಕ್ರ್ಯಾಂಕಿನ ಒಂದು ಪರಿಭ್ರಮಣದಲ್ಲಿ ಒಂದೇ ಒಂದು ಸಾಮರ್ಥ್ಯಘಾತ (ಪವರ್ ಸ್ಟ್ರೋಕ್) ಇರುವುದರಿಂದ ಈ ಎಂಜಿನುಗಳು ಉತ್ಪಾದಿಸುವ ಶಕ್ತಿಯ ಪ್ರಮಾಣ ಕಡಿಮೆಯಿರುವುದು.

(ಎಚ್.ಎಸ್.ಆರ್.)

**ಎಂಟಮೀಬ:** ಪ್ರೋಟೊಜ಼ೋವ ವಂಶದ ರೈಜ಼ೊಪೋಡ ವರ್ಗದ ಅಮೀಬದ ಗಣದ ಏಕಕೋಶಕ ಪರಾವಲಂಬಿ ಜೀವಿ. ಕುಟುಂಬದ ಹೆಸರು ಎಂಡ ಅಮೀಡೆ. ಈ ಕುಟುಂಬಕ್ಕೆ ಸೇರಿದ ಜೀವಿಗಳೆಲ್ಲವೂ ಪರತಂತ್ರ ಜೀವನವನ್ನು ನಡೆಸುತ್ತವೆ. ಸಾಮಾನ್ಯವಾಗಿ ಕಶೇರುಕಗಳ ಮತ್ತು ಅಕಶೇರುಕಗಳ ಜೀರ್ಣಾಂಗಗಳೇ ಇವುಗಳ ವಾಸಸ್ಥಾನ. ಒಂದೇ ಜಾತಿಯ ಎಂಟಮೀಬಗಳು ನಾನಾ ರೀತಿಯ ಜೀವಿಗಳಲ್ಲಿರುವುದು ಇವುಗಳ ವಿಶಿಷ್ಟ ಲಕ್ಷಣ. ಗೆದ್ದಲು ಹುಳುವಿನ ಕರುಳಿನಿಂದ ಪ್ರೈಮೇಟುಗಳ ಜೀರ್ಣಾಂಗಗಳವರೆಗೆ ಇವುಗಳ ದಾಳಿ ನಡೆದಿದೆ. ಕೆಲವು ಎಂಟಮೀಬಗಳು ಆಶ್ರಯದಾತ ಜೀವಿಗಳಿಗೆ ಯಾವ ತೊಂದರೆಯನ್ನೂ ಕೊಡದೆ ಅವುಗಳಿಗೆ ಒಂದು ರೀತಿಯ ಅನುಕೂಲವನ್ನೇ ಮಾಡುತ್ತವೆ. ಆದರೆ *ಎಂಟಮೀಬ ಹಿಸ್ಟೊಲಿಟಿಕ* ಎಂಬ ಪ್ರಭೇದ ಮಾತ್ರ ಅತ್ಯಂತ ಹಾನಿಕಾರಕ. ಈ ಜೀವಿಗಳು ಮನುಷ್ಯನ ಕರುಳಿನಲ್ಲಿ ವಾಸಿಸುತ್ತವೆ. ಇವುಗಳ ದಾಳಿಯಿಂದ ಆಮಶಂಕೆ ಅಥವಾ ರಕ್ತಭೇದಿ ಎಂಬ ಭಯಂಕರ ರೋಗ ಬರುತ್ತದೆ. ಇವು ಕರುಳಿನ ಒಳಗೋಡೆಯನ್ನು ಘಾಸಿಗೊಳಿಸುತ್ತವೆ.

ಈ ಕೆಳಕಂಡ ಜೀವಿಗಳನ್ನು ಎಂಟಮೀಬಿಡೆ ಕುಟುಂಬಕ್ಕೆ ಸೇರಿಸಲಾಗಿದೆ. *ಎಂಟಮೀಬ ಹಿಸ್ಟೊಲಿಟಿಕ* ಎಂಬುದು ಮನುಷ್ಯನ ಕರುಳಿನಲ್ಲಿ ವಾಸಿಸುತ್ತದೆ; ಇದು ಹಾನಿಕಾರಕ. ಎಂ.ಕೋಲೈ ಎಂಬುದೂ ಮನುಷ್ಯನ ಕರುಳಿನಲ್ಲಿ ವಾಸಿಸುತ್ತದೆ. ಇದರಿಂದ ಯಾವ ತೊಂದರೆಯೂ ಇಲ್ಲ. ಎಂ.ಜಿಂಜಿವ್ಯಾಲಿಸ್ ಎಂಬುದು ಮನುಷ್ಯನ ವಸಡು ಮತ್ತು ಹಲ್ಲುಗಳ ಸಂದಿನಲ್ಲಿ ವಾಸಿಸುತ್ತದೆ. ಎಂ. ಬ್ಲಾಟ ಎಂಬುದು ಜಿರಳೆಯ ಜೀರ್ಣಾಂಗಗಳಲ್ಲಿ ಇರುತ್ತದೆ. ಎಂ. ರನಾರಂ ಕಪ್ಪೆಯ ಜೀರ್ಣಾಂಗಗಳಲ್ಲಿ ಇದೆ. ಎಂ. ಬೋವಿಸ್ ಎಂಬುದು ದನಗಳ ಕರುಳಿನಲ್ಲಿ ಇರುತ್ತದೆ. ಎಂ. ಓವಿಸ್ ಎಂಬುದು ಕುರಿಗಳ ಜೀರ್ಣಾಂಗಗಳಲ್ಲಿ ಕಂಡುಬರುತ್ತದೆ. ಎಂ.ಈಕ್ವೆ ಎಂಬುದು ಕುದುರೆಗಳ ಕರುಳಿನಲ್ಲಿ ಇದೆ.

ಈ ಎಲ್ಲ ಜೀವಿಗಳನ್ನು ಪರತಂತ್ರ ಅಮೀಬಗಳು ಎಂದು ಕರೆಯುತ್ತಾರೆ. ಇವು ತಮ್ಮ ರಚನೆಯಲ್ಲಿ ಸ್ವತಂತ್ರಜೀವಿಯಾದ ಅಮೀಬವನ್ನು ಹೋಲುತ್ತವೆ. ಆದರೆ ಸಂಕುಚಿತ ಸ್ಥಳಾವಕಾಶ (ಕಂಟ್ರಾಕ್ಟೈಲ್ ವ್ಯಾಕ್ಯೂಲ್) ಮಾತ್ರ ಇವುಗಳಲ್ಲಿಲ್ಲ.

*ಎಂಟಮೀಬ ಹಿಸ್ಟೊಲಿಟಿಕ:* ಇದರ ವಾಸ ಮನುಷ್ಯನ ದೊಡ್ಡ ಕರುಳಿನಲ್ಲಿ. ಇದರಿಂದ ಆಮಶಂಕೆ ಬರುತ್ತದೆ. ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಇದು ಹರಡಿದೆ. ಆದರೆ ಉಷ್ಣ ಮತ್ತು ಸಮಶೀತೋಷ್ಣ ವಲಯಗಳಲ್ಲಿ ಇದರ ಪ್ರಸಾರ ಅಧಿಕ. ಇದು ಕರುಳಿನ ಒಳಗೋಡೆಯ ಮ್ಯೂಕಸ್ ಪೊರೆಯನ್ನು ತನ್ನ ಶರೀರದಿಂದ ಉತ್ಪತ್ತಿಯಾಗುವ ಹಿಸ್ಟೊಲೈಸಿನ್ ಎಂಬ ಕಿಣ್ವದಿಂದ ಕರಗಿಸಿ ಕರುಳಿನ ಗೋಡೆಯಲ್ಲಿರುವ ಅನುಲೇಪಕ ಅಂಗಾಂಶವನ್ನು ನಾಶಗೊಳಿಸಿ ಗಾಯಗಳನ್ನು ಉಂಟುಮಾಡುತ್ತದಲ್ಲದೆ, ಸೋರುವ ರಕ್ತದಲ್ಲಿರುವ ಕೆಂಪುರಕ್ತಕೋಶಗಳನ್ನು ಹಿಡಿದು ತಿನ್ನುತ್ತದೆ.

**ಪ್ರಾಣಿಯ ರಚನೆ:** ಅಮೀಬ ಜೀವಿಯಂತೆ ಇದಕ್ಕೂ ನಿರ್ದಿಷ್ಟಾಕಾರದ ದೇಹವಿಲ್ಲ. ಶರೀರದಿಂದ ಹೊರ ಚಾಚುತ್ತಿರುವ ಒಂದೆರಡು ಮಿಥ್ಯ ಪಾದಗಳಿವೆ. ಪ್ರಾಣಿಯ ಸುತ್ತಳತೆ 1/400 ಅಥವಾ 1/600 ಅಂಗುಲದಷ್ಟು. ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಇವು ಜೀವರಸದ ತುಣುಕುಗಳಂತೆ ಕಾಣುತ್ತವೆ. ಶರೀರದ ಮಧ್ಯದಲ್ಲಿ ದುಂಡಗಿರುವ ನ್ಯೂಕ್ಲಿಯಸ್ ಇದೆ. ಕೋಶ ರಸ ತಿಳಿಯಾದ ಹೊರಭಾಗದಲ್ಲಿ ಎಕ್ಟೋಪ್ಲಾಸಂ ಎಂಬ ಭಾಗ ಮತ್ತು ಒಳಭಾಗದಲ್ಲಿ ತರಿ ತರಿಯಾದ ಎಂಡೋಪ್ಲಾಸಂ ಭಾಗ ಇವೆ. ಸಾಮಾನ್ಯವಾಗಿ ಒಂದು ಬಾರಿಗೆ ಒಂದು ಅಥವಾ ಎರಡೇ ಮಿಥ್ಯಪಾದಗಳನ್ನು ಇದು ಹೊರಚಾಚುತ್ತದೆ. ದುಂಡನಾಗಿರುವ ನ್ಯೂಕ್ಲಿಯಸಿನ ತೆಳುವಾದ ಪೊರೆಗೆ ಅಂಟಿದಂತೆ ಒಳಭಾಗದಲ್ಲಿ ಮಣಿಗಳ ಸಾಲಿನಂತಿರುವ ಕ್ರೊಮ್ಯಾಟಿಡ್ ವಸ್ತು ಉಂಟು. ನ್ಯೂಕ್ಲಿಯಸಿನ ಮಧ್ಯದಲ್ಲಿ ದುಂಡಗೆ ಕಾಳಿನಂತಿರುವ ಕ್ಯಾರಿಯೋಸೋಮ್ ಇದೆ. ಇದು ಕ್ರೊಮ್ಯಾಟಿನ್ ಮತ್ತು ಪ್ಲಾಸ್ಟಿನ್ ಎಂಬ ವಸ್ತುಗಳಿಂದಾಗಿದೆ.

ಕೋಶ ರಸದೊಳಗೆ ಆಹಾರ ಅವಕಾಶಗಳೂ (ಫುಡ್ ವ್ಯಾಕ್ಯೂಲ್) ಇವುಗಳೊಳಗೆ ಕೆಂಪು ರಕ್ತಕೋಶಗಳೂ ಇವೆ. *ಎಂಟಮೀಬ ಹಿಸ್ಟೊಲಿಟಿಕ*ದ ಆಹಾರ ಅವಕಾಶಗಳೊಳಗೆ ಕೆಂಪು ರಕ್ತಕೋಶಗಳಿರುವುದು ಒಂದು ವೈಶಿಷ್ಟ್ಯ. ಇದರಿಂದ ಇದನ್ನು ಸುಲಭವಾಗಿ ಪತ್ತೆಹಚ್ಚಬಹುದು. ಸಂಕುಚಿತ ಸ್ಥಳಾವಕಾಶ ಈ ಪ್ರಾಣಿಯಲ್ಲಿ ಇಲ್ಲವೇ ಇಲ್ಲ.

**ಜೀವನ ಚರಿತ್ರೆ:** ಕೇವಲ ನಿರ್ಲಿಂಗ ರೀತಿಯ ಸಂತಾನೋತ್ಪತ್ತಿ ಮಾತ್ರ ಇವುಗಳಲ್ಲಿದೆ. ವಯಸ್ಕ ಜೀವಿಯ ಶರೀರ ಇಬ್ಭಾಗವಾಗಿ ಸೀಳಿ, ಎರಡು ಸ್ವತಂತ್ರ ಜೀವಿಗಳು ಹುಟ್ಟುತ್ತವೆ. ಈ ಕ್ರಿಯೆಯ ಕಾಲದಲ್ಲಿ ನ್ಯೂಕ್ಲಿಯಸ್ ಕೂಡ ಎರಡು ಭಾಗಗಳಾಗಿ ಒಡೆಯುತ್ತದೆ. ಸಂತಾನೋತ್ಪತ್ತಿಯಿಂದಾಗಿ ಇವುಗಳು ಹೆಚ್ಚಿದ ಮೇಲೆ ಇವು ಕರುಳಿನ ಗೋಡೆಯನ್ನು ಬಿಟ್ಟು ಹೊರಬರುತ್ತವೆ. ಕರುಳಿಗೆ ತಲುಪಿದ ಇವು ತಮ್ಮ ಮಿಥ್ಯ ಪಾದಗಳನ್ನು ಒಳಗೆಳೆದುಕೊಂಡು ದುಂಡಗಾಗುತ್ತವೆ. ಇವುಗಳ ನ್ಯೂಕ್ಲಿಯಸ್ ಅತಿ ದೊಡ್ಡದು. ಆಗ ಶರೀರದ ಸುತ್ತಲೂ ಒಂದು ರಕ್ಷಾಕವಚ ನಿರ್ಮಾಣಗೊಳ್ಳುತ್ತದೆ. ಈ ಜೀವಿಯನ್ನು ಕೋಶಜೀವಿ (ಸಿಸ್ಟ್) ಎನ್ನುತ್ತಾರೆ. ಈ ಕೋಶಜೀವಿಯ ಒಳಗೆ ಆಹಾರ ಪದಾರ್ಥಗಳು ಶೇಖರಗೊಂಡಿರುತ್ತವೆ. ಗ್ಲೈಕೋಜನ್ ಮತ್ತು ಕ್ರೊಮ್ಯಾಟಿನ್ ವಸ್ತುಗಳು ಈ ರೀತಿಯ ಶೇಖರಗೊಂಡ ಆಹಾರ ಪದಾರ್ಥಗಳಲ್ಲಿ ಮುಖ್ಯವಾದುವು. ಕ್ರೊಮ್ಯಾಟಿನ್ ತುಂಡು ತುಂಡಾಗಿರುವ ಕಡ್ಡಿಗಳಂತೆ ಕಂಡುಬರುತ್ತದೆ. ಈ ಕೋಶಜೀವಿಯ ಒಳಗಡೆ ನ್ಯೂಕ್ಲಿಯಸ್ ಎರಡು ಬಾರಿ ವಿಭಜನೆಗೊಳ್ಳುತ್ತದೆ. ಇದರಿಂದಾಗಿ ನಾಲ್ಕು ಕೋಶಕೇಂದ್ರಗಳು ಹುಟ್ಟುತ್ತವೆ. ಕೋಶಜೀವಿ ಕೂಡಿಟ್ಟ ಆಹಾರವನ್ನು ಉಪಯೋಗಿಸಿಕೊಂಡು ಬದುಕುತ್ತದೆ. ಗ್ಲೈಕೋಜನ್ ಮತ್ತು ಕ್ರೊಮ್ಯಾಟಿನ್ ವಸ್ತುಗಳು ಇದರಿಂದಾಗಿ ಮಾಯವಾಗುತ್ತವೆ. ಈ ರೀತಿ ಇರುವ ಕೋಶಜೀವಿಗಳು ಮಲವಿಸರ್ಜನೆಯ ಮೂಲಕ ಹೊರಬರುತ್ತವೆ. ಇವು ತೇವ ಮತ್ತು ಉಷ್ಣಾಂಶವಿರುವ ಭೂಮಿಯಲ್ಲಿ ಬಹಳ ದಿನ ಬದುಕಬಲ್ಲವು.




1. ಎಂಟಮೀಬ ಹಿಸ್ಟಲಿಟಿಕ, 2. ಎಂಟಮೀಬ ಕೊಲೈ, 3. ಎಂಟಮೀಬ ಜಿಂಜಿವ್ಯಾಲಿಸ್

**ಹರಡುವಿಕೆ:** ಈ ಜೀವಿಗಳು ಒಬ್ಬರಿಂದೊಬ್ಬರಿಗೆ ಅಶುಚಿಯಾದ ನೀರು ಮತ್ತು ಆಹಾರ ಪದಾರ್ಥಗಳ ಸೇವನೆಯಿಂದ ಹರಡುತ್ತವೆ. ಇವುಗಳ ಪ್ರಸಾರಕ್ಕೆ ಮನೆಯ ನೊಣಗಳು ಸಹಾಯ ಮಾಡುತ್ತವೆ. ಹಸಿ ತರಕಾರಿ, ಹಲಸಿನ ತೊಳೆ, ಕೊಬ್ಬರಿ ಮಿಠಾಯಿ ಮುಂತಾದ ಆಹಾರ ಪದಾರ್ಥಗಳು ಇವುಗಳ ಪ್ರಸಾರಕ್ಕೆ ಸಹಾಯಕವಾಗುತ್ತವೆ. ಹಳ್ಳಿಗಾಡುಗಳಲ್ಲಿ ಇವುಗಳ ಪ್ರಸಾರ ತೀವ್ರಗತಿಯಲ್ಲಿ ನಡೆಯುತ್ತದೆ. ಪಟ್ಟಣಗಳಲ್ಲಿ ಸುಧಾರಿಸಿದ ಒಳಚರಂಡಿ ವ್ಯವಸ್ಥೆ ಮತ್ತು ಸುಧಾರಿಸಿದ ಕಕ್ಕಸುಗಳು ಇದ್ದರೆ ಪ್ರಸಾರ ತೀವ್ರವಾಗಿ ಆಗದು. ಗಾಳಿಯೂ ಇವುಗಳ ಪ್ರಸಾರಕ್ಕೆ ಸಹಾಯ ಮಾಡುತ್ತದೆ.

ಈ ರೀತಿಯ ಕೋಶಜೀವಿಗಳಿರುವ ಅಶುಚಿಯಾದ ಆಹಾರವನ್ನು ಮಾನವ ಸೇವಿಸಿದಾಗ ಇವು ಆತನ ಜೀರ್ಣಾಂಗವನ್ನು ತಲಪುತ್ತದೆ. ಸಣ್ಣ ಕರುಳಿನಲ್ಲಿ ನಾಲ್ಕು ನ್ಯೂಕ್ಲಿಯಸ್ ಇರುವ ಈ ಕೋಶಜೀವಿಯ ಗೋಡೆ ಕರಗಿ ಹೋಗುತ್ತದೆ. ಕೋಶರಸ ನ್ಯೂಕ್ಲಿಯಸ್

ಸಂಖ್ಯೆಗೆ ಅನುಗುಣವಾಗಿ ನಾಲ್ಕು ಭಾಗಗಳಾಗಿ ವಿಭಾಗ ಹೊಂದುತ್ತದೆ. ಈ ರೀತಿಯ ವಿಭಜನೆ ಕೋಶಜೀವಿಗೆ ಗೋಡೆ ಇದ್ದಾಗಲೇ ನಡೆಯಬಹುದು. ಹೀಗೆ ಬಿಡುಗಡೆಗೊಂಡ ಈ ಜೀವಿಗಳು ಸಣ್ಣಕರುಳಿನಿಂದ ದೊಡ್ಡ ಕರುಳಿಗೆ ಪ್ರವೇಶಿಸಿ ತಮ್ಮ ಸಂತಾನೋತ್ಪತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತವೆ.

**ರೋಗದ ಗುಣಲಕ್ಷಣಗಳು:** *ಎಂಟಮೀಬ ಹಿಸ್ಟೊಲಿಟಿಕ* ಕರುಳಿನ ಒಳಗೋಡೆಯ ಅಂಗಾಂಶವನ್ನು ಕಿಣ್ವಗಳ ಸಹಾಯದಿಂದ ನಾಶಮಾಡುತ್ತದೆ. ಇದರಿಂದಾಗಿ ಕರುಳಿನ ಗೋಡೆಯಲ್ಲಿ ಗಾಯಗಳಾಗುತ್ತವೆ. ಈ ಗಾಯಗಳಿಂದ ರಕ್ತ ಮತ್ತು ಆಮ ಹರಿಯಲಾರಂಭಿಸುತ್ತವೆ. ಮಲವಿಸರ್ಜನೆಯ ಕಾಲದಲ್ಲಿ ಭಾರಿ ಪ್ರಮಾಣದಲ್ಲಿ ರಕ್ತ ಮತ್ತು ಆಮ ಹೊರಬರುತ್ತವೆ. ಕೆಲವೊಂದು ಬಾರಿ ಈ ಜೀವಿಗಳು ರಕ್ತಪರಿಚಲನೆಯ ಮೂಲಕ ಶರೀರದ ವಿವಿಧ ಭಾಗಗಳನ್ನು ತಲುಪಿ ಆ ಭಾಗದ ರಕ್ತನಾಳಗಳನ್ನೊಡೆದು ಕೀವು ತುಂಬಿದ ವ್ರಣಗಳನ್ನುಂಟುಮಾಡುವುವು. ಈ ರೋಗ ಸಾಂಕ್ರಾಮಿಕವಾಗಿ ಹರಡುವುದು ಕೂಡ ಉಂಟು. ರೋಗಿ ನಿಶ್ಶಕ್ತನಾಗುತ್ತಾನೆ. ಹೊಟ್ಟೆನೋವು, ತಲೆನೋವು, ಮಲಬದ್ಧತೆ, ನರಮಾಂದ್ಯ–ಇವು ರೋಗದ ಮುಖ್ಯ ಲಕ್ಷಣಗಳು. ರೋಗ ಉಲ್ಬಣಗೊಂಡಾಗ ಭೇದಿ, ರಕ್ತದ ಹೆಪ್ಪುಗಳು ಜಾಸ್ತಿ ಕಾಣಿಸಿಕೊಳ್ಳುತ್ತವೆ. ಇದರ ಜೊತೆ ಈ ಜೀವಿಗಳು ಹೊರಬರುತ್ತವೆ. ಈ ರೋಗವನ್ನು ತಡೆಯಲು ಎಮಿಟಿನ್ ಸೂಜಿಮದ್ದು, ಬಿಸ್ಮತ್ ಅಯೊಡೈಡ್ ಮುಂತಾದ ಔಷಧಿಗಳನ್ನು ಉಪಯೋಗಿಸುತ್ತಾರೆ. ತಡೆಗಟ್ಟುವಾಗ ಶುಚಿತ್ವಕ್ಕೆ ಆದ್ಯ ಗಮನ ಅಗತ್ಯ. ತರಕಾರಿಗಳನ್ನು ಬೇಯಿಸಿ ಉಪಯೋಗಿಸುವುದು, ಬಿಸಿನೀರನ್ನು ಉಪಯೋಗಿಸುವುದು ಅತಿಮುಖ್ಯ.

ಎಂಟಮೀಬ ಕೊಲೈ: ಇದು ದೊಡ್ಡ ಕರುಳಿನಲ್ಲಿ ಪರತಂತ್ರ ಜೀವನವನ್ನು ನಡೆಸುತ್ತದೆ. ಪ್ರಪಂಚದ ಜನಾಂಗದ ಶೇ. 50ರಷ್ಟು ಜನರಲ್ಲಿ ಇದು ವಾಸಿಸುತ್ತಿದೆ ಎಂದು ತಿಳಿದುಬಂದಿದೆ. ಇದರಿಂದ ಯಾವ ತೊಂದರೆಯೂ ಇಲ್ಲ. ಕರುಳಿನಲ್ಲಿರುವ ಬ್ಯಾಕ್ಟೀರಿಯ ಜೀವಾಣುಗಳನ್ನು ತಿಂದು ಇದು ಬದುಕುತ್ತದೆ. ರಕ್ತ ಕೋಶಗಳನ್ನಾಗಲೀ ಅಂಗಾಂಶದ ಕೋಶಗಳನ್ನಾಗಲೀ ತಿನ್ನುವುದಿಲ್ಲ. ಈ ಪ್ರಾಣಿ *ಎಂಟಮೀಬ ಹಿಸ್ಟೊಲಿಟಿಕ*ಕ್ಕಿಂತ ಗಾತ್ರದಲ್ಲಿ ದೊಡ್ಡದು. ಎಕ್ಟೋಪ್ಲಾಸಂ ಮತ್ತು ಎಂಡೋಪ್ಲಾಸಂ ತಮ್ಮ ನಿರ್ದಿಷ್ಟತೆಯನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡಿವೆ. ನ್ಯೂಕ್ಲಿಯೋಲಸ್ ನ್ಯೂಕ್ಲಿಯಸಿನ ಮಧ್ಯಭಾಗದಲ್ಲಿರದೆ ಸ್ವಲ್ಪ ಪಕ್ಕಕ್ಕೆ ಸರಿದಿದೆ. ಈ ಜೀವಿಗಳ ಕೋಶಗಳಲ್ಲಿ ಎಂಟು ಕೋಶಕೇಂದ್ರಗಳಿರುತ್ತವೆ.

*ಎಂಟಮೀಬ ಜಿಂಜಿವ್ಯಾಲಿಸ್*: ಇವು ಮಾನವ ಜನಸಂಖ್ಯೆಯ ಶೇಕಡ 70ರಷ್ಟು ಜನರಲ್ಲಿ ಇವೆ. ವಸಡು ಮತ್ತು ಹಲ್ಲುಗಳ ಸಂದು ಇವುಗಳ ವಾಸಸ್ಥಾನ. ಹಲ್ಲುಗಳ ಸಂದುಗಳಲ್ಲಿ ಕೊಳೆಯುತ್ತಿರುವ ಆಹಾರ ಪದಾರ್ಥಗಳೂ ಬ್ಯಾಕ್ಟೀರಿಯಗಳೂ ಇವುಗಳ ಮುಖ್ಯ ಆಹಾರ. ಇವು ವಸಡಿಗೆ ಬರುವ ಪಯೋರಿಯ ಎಂಬ ರೋಗ ತರುತ್ತದೆ. ಒಬ್ಬರಿಂದೊಬ್ಬರಿಗೆ ಉಗುಳಿನ ಮೂಲಕ, ಎಂಜಲು ತಿನ್ನುವುದರ ಮೂಲಕ ಇವು ಹರಡುತ್ತವೆ. ಇವುಗಳ ಪ್ರಸಾರ ಮುತ್ತು ಕೊಡುವುದರ ಮೂಲಕ ತೀವ್ರಗತಿಯಲ್ಲಿ ನಡೆಯುತ್ತದೆ.

(ಜಿ.ಎಸ್.ಆರ್.)

**ಎಂಟಾಡ ಬಳ್ಳಿ:** ಲೆಗ್ಯೂಮಿನೋಸಿ ಕುಟುಂಬಕ್ಕೆ ಸೇರಿದ ಬೃಹತ್ ಅಡರುಸಸ್ಯಗಳ ಒಂದು ಜಾತಿ. ಏಷ್ಯ, ಆಫ್ರಿಕ ಮತ್ತು ಅಮೆರಿಕದ ಉಷ್ಣವಲಯ ಭಾಗದ ವನ್ಯಪ್ರದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಭಾರತದಲ್ಲಿರುವ ಈ ಜಾತಿಯ ಒಂದೇ ಪ್ರಭೇದವೆಂದರೆ ಎಂಟಾಡ ಫ್ಯಾಸಿಯೊಲಾಯ್ಡಿಸ್. ಹಿಮಾಲಯದ ಗಿರಿಕಂದರಗಳ ಅರಣ್ಯಗಳಲ್ಲಿ ಪೂರ್ವ ಮತ್ತು ಪಶ್ಚಿಮಘಟ್ಟಗಳ ಭಾಗಶಃ ನಿತ್ಯಹರಿದ್ವರ್ಣದ ಅರಣ್ಯಗಳಲ್ಲಿ ಬೆಳೆಯುವ ಈ ರಾಕ್ಷಸಬಳ್ಳಿ ಆರ್ಥಿಕ ಪ್ರಾಮುಖ್ಯವುಳ್ಳ ಅನೇಕ ಉತ್ತಮ ವೃಕ್ಷಗಳ ಬೆಳವಣಿಗೆಗೆ ಮಾರಕವಾದದ್ದೆಂದು ಅನೇಕ ಸಂರಕ್ಷಣಾಧಿಕಾರಿಗಳು ಹೇಳುತ್ತಾರೆ. ಇತ್ತೀಚೆಗಂತೂ ಪಶ್ಚಿಮಘಟ್ಟಗಳಿಂದ ಇವುಗಳ ಮೂಲೋತ್ಪಾಟನೆ ಮಾಡಲು ಅನೇಕ ಪ್ರಯತ್ನಗಳು ನಡೆದಿವೆ.

ಎಂಟಾಡ ಸಸ್ಯಕ್ಕೆ ಸಂಯುಕ್ತಪತ್ರಗಳಿವೆ. ಹೂಗಳು ಸ್ಪೈಕ್ ಮಾದರಿಯವು. ಬಣ್ಣ ಹಳದಿ. ಪರಾಗಸ್ಪರ್ಶಕ್ರಿಯೆ ಕೀಟಗಳಿಂದ. ಕಾಯಿ 3' ರಿಂದ 5' ಉದ್ದವಿದ್ದು 3" ರಿಂದ 4" ಅಗಲವಾಗಿರುತ್ತದೆ. ಕಾಯಲ್ಲಿ 5 ರಿಂದ 30 ಬೀಜಗಳಿರುತ್ತವೆ. ಕಂದು ಇಲ್ಲವೆ ನೇರಳೆ ಬಣ್ಣದ ಹೊರಕವಚವುಳ್ಳ ಈ ಬೀಜಗಳು ದುಂಡಗೆ ಸ್ವಲ್ಪ ಚಪ್ಪಟೆಯಾಗಿ ನೋಡಲು ಆಕರ್ಷಕವಾಗಿರುತ್ತವೆ.

ಬೀಜಗಳಿಗೆ ಜಂತುನಾಶಕಗುಣವಿದೆ. ಎರಡು ಬಗೆಯ ಸಪೋನಿನ್‌ಗಳನ್ನು ಬೀಜಗಳಿಂದ ಹೊರತೆಗೆಯಲಾಗಿದೆ. ಇವಕ್ಕೆ ರಕ್ತದ ಒತ್ತಡವನ್ನು ಕಡಿಮೆಮಾಡುವ ಗುಣವಿದೆ. ಬೀಜಗಳಲ್ಲಿರುವ ಎಣ್ಣೆಯನ್ನು (ಸೇ 7–12) ದೀಪಗಳನ್ನುರಿಸಲು ಉಪಯೋಗಿಸುತ್ತಾರೆ. ಬಿಳಿಯ ತಿರುಳಿನ ಅಂಶವನ್ನು (ತೂಕದಲ್ಲಿ ಶೇಕಡ 43 ಭಾಗ) ನೆನೆಸಿ, ಹುರಿದು ತಿನ್ನುತ್ತಾರೆ. ಮಲಯ ಮತ್ತು ಫಿಲಿಪೀನ್ಸ್‌ಗಳಲ್ಲಿ ಬೀಜ, ಕಾಂಡ ಮತ್ತು ತೊಗಟೆಗಳ ಪುಡಿಯನ್ನು ಬಟ್ಟೆ ಶುಭ್ರಗೊಳಿಸಲು ಸಾಬೂನಿಗೆ ಬದಲಾಗಿ ಉಪಯೋಗಿಸುತ್ತಾರೆ. ಬೀಜಗಳು, ಕಾಂಡ ಮತ್ತು ತೊಗಟೆಗಳು ಸ್ವಲ್ಪಮಟ್ಟಿಗೆ ವಿಷಪೂರಿತವಾಗಿರುತ್ತವೆ. ಭಾರತ, ದಕ್ಷಿಣ ಆಫ್ರಿಕ ಮತ್ತು ಫಿಲಿಪೀನ್ಸ್‌ಗಳಲ್ಲಿ ಇವನ್ನು ಮತ್ಸ್ಯವಿಷಗಳಾಗಿ ಬಳಸಲಾಗುತ್ತಿದೆ. ಈ ಸಸ್ಯದ ಎಲೆಗಳೆಂದರೆ ಆನೆಗಳಿಗೆ ಬಹುಪ್ರೀತಿ. ಒಮ್ಮೊಮ್ಮೆ ಅವು ಈ ಸಸ್ಯವನ್ನು ಹುಡುಕಿಕೊಂಡು ಕಾಡೆಲ್ಲೆಲ್ಲ ಅಲೆಯುವುದುಂಟು. ತೋಡರು ಮತ್ತು ಸೋಲಿಗರು ಕಾಂಡದಿಂದ ಒಸರುವ ರಸವನ್ನು ಗಾಯಗಳಿಗೆ ಔಷಧವಾಗಿ ಬಳಸುತ್ತಾರೆ. ಒಮ್ಮೊಮ್ಮೆ ಬೀಜಗಳ ಒಳ ತಿರುಳನ್ನೆಲ್ಲ ತೆಗೆದು ಅವುಗಳ ಹೊರಸಂಪುಟವನ್ನು ನಶ್ಯದ ಡಬ್ಬಗಳಾಗಿ ಉಪಯೋಗಿಸುವುದುಂಟು.

(ಎಸ್.ಎನ್.ಆರ್.)

**ಎಂಟಿಲೆಕಿ:** ಈ ತಾತ್ತ್ವಿಕ ಪದವನ್ನು ಮೊಟ್ಟಮೊದಲಿಗೆ ಉಪಯೋಗಿಸಿದವ ಅರಿಸ್ಟಾಟಲ್. ಅವನ ಪ್ರಕಾರ ಪ್ರತಿಯೊಂದು ವಸ್ತುವಿನಲ್ಲಿ ಅಂತಸ್ಥವಾಗಿರುವ ಆಧಾರದ್ರವ್ಯವನ್ನು ಕಾರ್ಯರೂಪಕ್ಕೆ ತಂದು ಆ ವಸ್ತುವಿನ ರೂಪಕ್ಕೆ ಕಾರಣವಾಗಬಲ್ಲ ಶಕ್ತಿ. ಅಂದರೆ ಯಾವುದಕ್ಕಾದರೂ ರೂಪನ್ನೋ ಪರಿಪೂರ್ಣತೆಯನ್ನೋ ಕೊಡಬಲ್ಲ ಶಕ್ತಿವಿಶೇಷ. ಈ ಶಕ್ತಿಯನ್ನು ದ್ರವ್ಯದ ಚೇತನ ಅಥವಾ ಆತ್ಮವೆಂದು ಭಾವಿಸಬಹುದು. ಹೀಗೆ ಭಾವಿಸಿದರೆ ಎಲ್ಲವೂ ಚೇತನ ಪ್ರೇರಿತ ವಸ್ತುಗಳೇ ಆಗಬೇಕಾಗುತ್ತದೆ. ಈ ಭಾವನೆ ಸರ್ವಾತ್ಮ ಅಥವಾ ಸಾರ್ವತ್ರಿಕ ಚೇತನವಾದವಾಗಿ ಪರಿಣಮಿಸುತ್ತದೆ. ಇದನ್ನು ಅರಿಸ್ಟಾಟಲ್ ಸ್ಪಷ್ಟವಾಗಿ ಹೇಳಲಿಲ್ಲ. ಆದರೆ ಇಪ್ಪತ್ತು ಶತಮಾನಗಳ ಅನಂತರ ಬಂದ ಲೈಬ್ನಿಟ್ಸ್ (1646–1716) ಎಂಬ ಪಾಶ್ಚಾತ್ಯ ಜರ್ಮನ್ ತತ್ತ್ವಶಾಸ್ತ್ರಜ್ಞ ಈ ಸರ್ವಾತ್ಮವಾದವನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ. ಆತ ಅರಿಸ್ಟಾಟಲನ ಎಂಟಿಲೆಕಿಯನ್ನು ಮೋನ್ಯಾಡ್ ಅಂದರೆ ಚಿದಣು ಎಂದು ಕರೆದಿದ್ದಾನೆ. ಅವನ ಪ್ರಕಾರ ಮೋನ್ಯಾಡ್ ಅಪೃಥಕ್ಕರಣೀಯ ಪರಮಾಣು. ಇರುವುವೆಲ್ಲ ಚಿದಣುಗಳಿಂದ ಕೂಡಿವೆ. ಇವುಗಳಲ್ಲಿ ಕೆಳಗಿನಿಂದ ಮೇಲಿನವರೆಗೆ ನಿರಂತರವಾಗಿ ಅನೇಕಾನೇಕ ದರ್ಜೆಗಳಿವೆ. ಅತ್ಯಂತ ಕೆಳಗಿನವು ಕಲ್ಲು ಮುಂತಾದುವು. ಎಲ್ಲಕ್ಕಿಂತ ಮೇಲಿನ ಮೋನ್ಯಾಡ್ ಈಶ್ವರ. ಈ ಪ್ರಧಾನ ಮೋನ್ಯಾಡನ್ನು ಉಳಿದವು ವಿವಿಧ ಪ್ರಮಾಣಗಳಲ್ಲಿ ಪ್ರತಿಬಿಂಬಿಸುತ್ತವೆ. (**ನೋಡಿ–ಆಧುನಿಕ–ಪಾಶ್ಚಾತ್ಯತತ್ತ್ವದ–ಮುನ್ನಡೆ; ಮೋನ್ಯಾಡ್**).

(ಜಿ.ಎಸ್.)

**ಎಂಟುಹಿಟ್ಟು:** ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಶಾಸನಗಳಲ್ಲಿ ಸಂಘಕ್ಕೆ ಪರ್ಯಾಯವಾಗಿ ಕೊತ್ತಳಿ, ಒಕ್ಕಲು, ಸಮಯ, ಹಿಟ್ಟು, ಸಂಖ್ಯೆಗಳು (30, 40, 50, 60, 500, 1000 ಇತ್ಯಾದಿ) ಬಳಕೆಯಾಗಿವೆ. ಇವುಗಳಲ್ಲಿ ಸಂಘಸೂಚಿಯಾಗಿ ಸಂಖ್ಯೆಗಳನ್ನೇ ಅಧಿಕವಾಗಿ ಉಪಯೋಗಿಸಲಾಗಿದೆ. ಅರುವತ್ತೊಕ್ಕಲು, ಐಯ್ವತ್ತೊಕ್ಕಲು, ಅಯ್ಯಾವೊಳೆ ಐನೂರ್ವರು, ಸಾಲಿಗಸಮಯ, ಎಂಟುಹಿಟ್ಟು, ಪಂಚಮಠ ಇವೇ ಮೊದಲಾದವು ಈ ಸಂಘ ಸಂಸ್ಥೆಗಳು. ಈ ಸಂಘ ಸೂಚಿ ಪದಗಳ ಪೂರ್ವಸ್ಥಾನದಲ್ಲಿ ಹೆಚ್ಚಾಗಿ ವೃತ್ತಿಸೂಚಿ ಪದಗಳಿರುತ್ತವೆ. ಉದಾ: ತಂಬುಲಿಗ ಸಾಸಿರ್ವರು, ತೆಲ್ಲಿಗರೈವತ್ತೊಕ್ಕಲು, ಸಾಲಿಗ ಸಮಯ ಇತ್ಯಾದಿ.

ಎಂಟುಹಿಟ್ಟು ಗ್ರಾಮದಲ್ಲಿಯ ಒಂದು ಪ್ರಮುಖ ಸಂಸ್ಥೆ. ಹೆಸರೇ ಸೂಚಿಸುವಂತೆ ಇದರಲ್ಲಿ ಎಂಟು ಜನ ಸದಸ್ಯರಿರುತ್ತಿದ್ದರು. ಇವರಲ್ಲಿ ಮೂವರು ಗ್ರಾಮಾಧಿಕಾರಿಗಳು ಮತ್ತು ಐವರು ಗ್ರಾಮದ ಪಂಚಕಾರುಕರ ಪ್ರತಿನಿಧಿಗಳು. ಮೂವರು ಗ್ರಾಮಾಧಿಕಾರಿಗಳೆಂದರೆ ಪ್ರಭು ಇಲ್ಲವೆ ಊರೊಡೆಯ, ಗೌಡ ಇಲ್ಲವೆ ಹೆಗ್ಗಡೆ–ಇವರಲ್ಲಿ ಒಬ್ಬ, ಸೇನಬೋವ ಮತ್ತು ತಳಾರ. ಪಂಚಕಾರುಕರೆಂದರೆ ಬಡಗಿ, ಕಮ್ಮಾರ, ಅಕ್ಕಸಾಲೆ, ಅಗಸ ಮತ್ತು ಅಂಬಿಗ. ಆದರೆ ಯಾವ ಗ್ರಾಮಗಳಲ್ಲಿ ಅಂಬಿಗನಿರುವುದಿಲ್ಲವೋ ಅಲ್ಲಿ ಅಂಬಿಗನ ಬದಲು ಕುಂಬಾರ, ಕಂಚುಗಾರ ಇಲ್ಲವೆ ತತ್ಸಮ ಕರ್ಮಕಾರ ಎಂಟುಹಿಟ್ಟು ಸಮಿತಿಯಲ್ಲಿ ಸಮಾವೇಶವಾಗುತ್ತಿರಬಹುದೆಂದು ಆರ್.ಎನ್.ಗುರವರವರ ಅಭಿಪ್ರಾಯ.

ಫ್ಲೀಟರು ಎಂಟುಹಿಟ್ಟು ಎಂಟು ಸಂಸ್ಥೆಗಳಾಗಿರಬೇಕೆಂದು ಊಹಿಸಿದರೆ,ಜಿ.ಎಸ್.ದೀಕ್ಷಿತರು ಇದು ಸ್ಥಾನಿಕ ಆಡಳಿತದ ಅಂಗವಾಗಿದ್ದಿತೆಂದು ಸೂಚಿಸಿದ್ದಾರೆ. ಸಂಸ್ಕೃತದಲ್ಲಿ ಈ ಸಮಿತಿಗೆ ಅಷ್ಟಪಿಷ್ಟ ಎಂದು ಹೆಸರು. ಅಷ್ಟಪಿಷ್ಟಾನ್ ಪಂಚಮಠಾನ್ ಸಂಪೂಜ್ಯ ಪುರಮಧ್ಯತಃ ಎಂದು ಬಿಜಾಪುರ ಶಾಸನವೊಂದರಲ್ಲಿ ಅಷ್ಟಪಿಷ್ಟವನ್ನು ಕುರಿತು ಗೌರವಯುಕ್ತ ಉಲ್ಲೇಖ ಬರುತ್ತದೆ. ಎಂಟುಹಿಟ್ಟು, ಮೂಲಿಗ, ಅಯ್ದುಹುರಿ, ಪರಿಗ್ರಹ ಮುಂತಾದ ಪಾರಿಭಾಷಿಕ ಪದಗಳು ದಾನದತ್ತಿ ಬಿಡುವ ಮತ್ತು ಪ್ರತಿಪಾದಿಸುವ ಸಂದರ್ಭಗಳಲ್ಲಿ ಸ್ಥಾನಮಾನ್ಯರೊಂದಿಗೆ ಉಕ್ತವಾಗಿವೆ. ಎಂಟುಹಿಟ್ಟು ಕೆಲವು ಶಾಸನಗಳಲ್ಲಿ ಹನ್ನಿಹಿಟ್ಟು, ಹಿಟ್ಟು, ಹಿಟ್ಟುದೆರೆ ಎಂದು ಬಳಕೆಯಾದರೆ ಇನ್ನು ಕೆಲವು ಶಾಸನಗಳಲ್ಲಿ ಹಿಟ್ಟುಕಾರ, ಹಿಟ್ಟಿನ ಎಂಬ ವಿಶೇಷ ರೂಪಗಳು ಬಳಸಲ್ಪಟ್ಟಿವೆ. ಈ ಎಲ್ಲ ಉಲ್ಲೇಖಗಳಿಂದ ಹಿಟ್ಟು ಸ್ಥಾನಿಕ ಆಡಳಿತದಲ್ಲಿ ಮಹತ್ತ್ವದ ಪಾತ್ರ ವಹಿಸುತ್ತಿದ್ದ ಪ್ರಾತಿನಿಧಿಕ ಸಂಸ್ಥೆಯಾಗಿರಬೇಕೆನಿಸುತ್ತದೆ. ಬಡಗಿ, ಕಮ್ಮಾರ, ಅಕ್ಕಸಾಲಿ, ಸೇನಬೋವ, ತಳವಾರ ಮುಂತಾದವರಿಗೆ ಹಿಟ್ಟಿನ ಹಾಗೂ ಹಿಟ್ಟುಕಾರ ಎಂಬ ವಿಶೇಷಣ ಬಳಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ತರ್ದವಾಡಿ ನಾಡಿನ ಮನಗೂಳಿ ಶಾಸನದಲ್ಲಿ ಹಿಟ್ಟಿನ ಗಳಿಯ ಬಾರಿಕನ ಉಲ್ಲೇಖವಿದೆ. ಕಿಟ್ಟೆಲ್‌ರ ಕನ್ನಡ–ಇಂಗ್ಲಿಷ್ ನಿಘಂಟುವಿನಲ್ಲಿ ಹಿಟ್ಟು ಎಂಬ ಪದಕ್ಕೆ ಆಹಾರ (ಜೀವನಾಧಾರ) ಎಂಬರ್ಥವಿದೆ. ಹಳ್ಳಿಯ ವಿವಿಧ ವೃತ್ತಿಕಾರರಿಗೆ ಅವರ ಸೇವೆಯ ಪ್ರತಿಫಲವಾಗಿ ಆಹಾರಧಾನ್ಯ ಅಂದರೆ ಹಿಟ್ಟನ್ನು ಕೊಡುತ್ತಿರಬೇಕು. ಅದರ ಸೂಚನೆ ಹಿಟ್ಟಿನ, ಹಿಟ್ಟುಕಾರ ಎಂಬ ವಿಶೇಷಣದಲ್ಲಿದೆ. ಈ ವ್ಯವಸ್ಥೆ ಪ್ರಾಚೀನ ಕಾಲ ದಿಂದಲೂ ರೂಢಿಯಲ್ಲಿರುವ ಇಂದಿನ ಆಯಗಾರ ಪದ್ಧತಿಯನ್ನು ಹೋಲುತ್ತದೆ.

ವಿದೇಶಿ ಪ್ರವಾಸಿ ಅಲ್ಬೆರೂನಿ ಶೂದ್ರರಿಂದ ಕೆಳಗೆ ಅಂತ್ಯಜರೆಂಬ ಜನರಿದ್ದರು. ಇವರು ಯಾವ ಜಾತಿಗೂ ಸೇರಿದವರಲ್ಲ. ಒಂದು ಕಸಬಿಗೆ ಅಥವಾ ವೃತ್ತಿಗೆ ಅಂಟಿಕೊಂಡಿರುವ ಇವರಲ್ಲಿ ಅಗಸ, ಚಮ್ಮಾರ, ಗಾರುಡಿಗ, ಕೊರಮ (ಬುಟ್ಟಿ ಹೆಣೆಯುವವ), ನಾವಿಕ, ಬೆಸ್ತ, ಬೇಡ ಮತ್ತು ನೇಯ್ಗೆಯವ ಎಂದು ಎಂಟು ವೃತ್ತಿ ಸಂಘಗಳು ಎಂದು ಹೇಳಿದ್ದಾನೆ. ಇಲ್ಲಿ

ಎಂಟುಹಿಟ್ಟಿನ ಸೂಚನೆಯಿರುವಂತಿದೆ. ಅನಂತರದಲ್ಲಿ ಮೇಲಿನ ಪಂಗಡಗಳಲ್ಲಿ ಪ್ರಾದೇಶಿಕವಾಗಿ ಬದಲಾವಣೆಯಾಗಿರಲು ಸಾಧ್ಯ. ಶಾಸನಗಳಲ್ಲಿ ಎಂಟುಹಿಟ್ಟು, ಹನ್ನಿಹಿಟ್ಟುಗಳೆಂಬ ಉಲ್ಲೇಖ ಗಳಿವೆ. ಊರ ಗೌಡ ಇಲ್ಲವೆ ಹೆಗ್ಗಡೆ ಎಂಟುಹಿಟ್ಟು ಸಮಿತಿಯ ಮುಖ್ಯಸ್ಥನಿರುತ್ತಿದ್ದ. ಯಾವ ಗ್ರಾಮಗಳಿಗೆ ಊರೊಡೆಯ ಅಥವಾ ಪ್ರಭು ಇರುತ್ತಿದ್ದನೋ ಅಂಥ ಹಳ್ಳಿಗಳಲ್ಲಿ ಆತನೆ ಈ ಸಮಿತಿಗೆ ಮುಖ್ಯಸ್ಥನಾಗಿರುತ್ತಿದ್ದ. ಒಂದು ಗ್ರಾಮದ ಬಡಗಿ ಅಥವಾ ಅಕ್ಕಸಾಲೆ ಅಂದರೆ ಆ ಸಮಾಜದ ಯಾವನಾದರೂ ಬಡಗಿ ಅಥವಾ ಅಕ್ಕಸಾಲೆ ಆಗಬಹುದು. ಆದರೆ ಹಿಟ್ಟಿನ ಬಡಗಿ ಅಥವಾ ಹಿಟ್ಟಿನ ಅಕ್ಕಸಾಲೆ ಎಂದರೆ ಎಂಟುಹಿಟ್ಟಿನ ಸದಸ್ಯನಾದ ಬಡಗಿ ಇಲ್ಲವೆ ಅಕ್ಕಸಾಲೆ ಎಂದು ಅರ್ಥವಾಗುವುದು. ಅದೇ ಪ್ರಕಾರ ಎಲ್ಲ ಸೇನಬೋವರು ಅಥವಾ ತಳಾರರು ಹಿಟ್ಟಿನ ಸೇನಬೋವರು ಇಲ್ಲವೆ ಹಿಟ್ಟುಕಾರ ತಳಾರರು ಆಗಲಾರರು. ಎಂಟುಹಿಟ್ಟು ಸಮಿತಿಯ ಸದಸ್ಯನಾದ ಸೇನಬೋವ ಇಲ್ಲವೆ ತಳಾರನಷ್ಟೇ ಹಿಟ್ಟಿನ ಸೇನಬೋವ, ಹಿಟ್ಟಿನ ತಳಾರನೆಂದು ಕರೆದುಕೊಳ್ಳಲು ಅರ್ಹನಾಗುತ್ತಿದ್ದ. ಬಡಗಿ ಊರ ಜನರ ಬಡಗಿತನ ಮಾಡಿದಲ್ಲಿ ಆತನಿಗೆ ಅವರಿಂದ ಆಯ ರೂಪದಲ್ಲಿ ಇಲ್ಲವೆ ಹಣದ ರೂಪದಲ್ಲಿ ಉತ್ಪನ್ನ ಬರುತ್ತಿತ್ತು. ಈ ಆದಾಯದ ಮೇಲೆ ಆತನಿಗೆ ಕಾರುವಾಣ ಅಥವಾ ಪಂಚಕಾರುಕದೆರೆ ಎಂಬ ತೆರಿಗೆಯನ್ನೂ ಕೊಡಬೇಕಾಗುತ್ತಿತ್ತು. ಆದರೆ ಆ ಬಡಗಿ ಹಿಟ್ಟುಕಾರನೂ ಆಗಿದ್ದ ಪಕ್ಷದಲ್ಲಿ ಎಂಟುಹಿಟ್ಟು ಸಮಿತಿಯ ಸಾರ್ವಜನಿಕ ಕಾರ್ಯ ಮಾಡಿದಾಗ ಆತನಿಗೆ ಸಲ್ಲುವ ಸಂಭಾವನೆಯ ಮೇಲೆ ಯಾವ ತೆರಿಗೆಯನ್ನು ಕೊಡಬೇಕಾಗುತ್ತಿದ್ದಿಲ್ಲ. ಇನ್ನು ಎಂಟುಹಿಟ್ಟಿನ ಸದಸ್ಯರಾಗಿ ಸಲ್ಲಿಸುವ ಸಾರ್ವಜನಿಕ ಸೇವೆಗಾಗಿ ಹಿಟ್ಟುಕಾರರಿಗೆ ಭೂಮಿಯನ್ನು ದಾನ ಬಿಡಲಾಗುತ್ತಿತ್ತು. *

**ಎಂಟೊಪ್ರಾಕ್ಟ:** ಆಳವಿಲ್ಲದ ನೀರಿನಲ್ಲಿ ಒಂಟೊಂಟಿಯಾಗಿ ಅಥವಾ ಸಾಮೂಹಿಕವಾಗಿ ಸಾಗರದ ಜೊಂಡು ಮುಂತಾದ ವಸ್ತುಗಳಿಗೆ ಅಂಟಿಕೊಂಡು ಜೀವಿಸುವ ಸಣ್ಣಪ್ರಾಣಿಗಳ ಒಂದು ವರ್ಗ, ಇವುಗಳಲ್ಲಿ ಅನೇಕ ಪ್ರಾಣಿಗಳು ಸ್ಪಾಂಜ್ ಮತ್ತು ಅಸಿಡಿಯ ಪ್ರಾಣಿದೇಹಕ್ಕೆ ಅಂಟಿಕೊಂಡು ಜೀವಿಸುತ್ತವೆ. ಇವುಗಳಲ್ಲಿ ಚಾಟಿಯಂಥ ಕೊಂಬುಗಳಿರುವುದರಿಂದ (ಟೆಂಟಿಕಲ್) ಇವನ್ನು ಹಿಂದೆ ಬಯೋಜೋವ ವಂಶಕ್ಕೆ ಸೇರಿಸಿತ್ತು. ಆದರೆ ಈ ಪ್ರಾಣಿಗಳಲ್ಲಿ ಬ್ರಯೊಜೋವಗಳಲ್ಲಿಲ್ಲದ ಕೆಲವು ವೈಶಿಷ್ಟ್ಯಗಳಿರುವುದರಿಂದ ಈಚೆಗೆ ಇವನ್ನು ಪ್ರತ್ಯೇಕ ವಂಶವೆಂದು ಪರಿಗಣಿಸಲಾಗಿದೆ. ಇದರಲ್ಲಿ ಪೆಡಿಸೆಲ್ಲೀನ, ಲಾಕ್ಸೊಸೋಮ, ಅರ್ನೈಟೆಲ್ಲ ಇತ್ಯಾದಿ ಕೆಲವು ಜಾತಿಗಳಿವೆ. ಅರ್ನೈಟೆಲ್ಲ ಗ್ರೇಸಿಲ್ಲಿಸ್ (ಉತ್ತರ ಅಮೆರಿಕ) ಅರ್ನೈಟೆಲ್ಲ ಇಂಡಿಕ (ಭಾರತ) ಈ ಎರಡು ಪ್ರಭೇದಗಳು ಸಿಹಿನೀರಿನಲ್ಲೂ ಮಿಕ್ಕವು ಸಾಗರದಲ್ಲೂ ಜೀವಿಸುತ್ತವೆ.




**A ಅರ್ನಟೆಲ್ಲ ಗ್ರ್ಯಾಸಿಲ್ಲಿಸ್ ಪ್ರಾಣಿ**

**B ಇದೇ ಪ್ರಾಣಿಯ ಜೀರ್ಣಾಂಗಗಳ ಜೋಡಣೆ:**

**1. ಬಾಯಿ, 2. ಗ್ಯಾಂಗ್ಲಿಯಾನ್, 3. ಜನನೇಂದ್ರಿಯ, 4. ಗುದದ್ವಾರ, 5. ರೆಕ್ಟಮ್, 6. ತೊಟ್ಟು 7. ಜಠರ, 8. ಟೆಂಟಿಕಲ್.**

ಎಂಟೊಪ್ರಾಕ್ಟಗಳಲ್ಲಿ ಪಾತ್ರೆಯಂಥ ದೇಹವನ್ನು, ಹಿಡಿ ಅಥವಾ ತೊಟ್ಟನ್ನೂ ಗುರುತಿಸ ಬಹುದು. ದೇಹಭಾಗದಲ್ಲಿ ಉದರವಿದೆ. ತೊಟ್ಟಿನ ಮೂಲಕ ಪ್ರಾಣಿ ಪದಾರ್ಥಗಳಿಗೆ ಅಂಟಿಕೊಂಡಿರುತ್ತದೆ. ದೇಹದ ಇನ್ನೊಂದು ತುದಿಯಲ್ಲಿ ಕೋಡುಗಳಿವೆ. ಆ ಕೋಡುಗಳ ಒಳಭಾಗದಲ್ಲಿ ಕೂದಲುಗಳಿವೆ. ಎಲ್ಲ ಕೋಡುಗಳನ್ನೂ ತಳದಲ್ಲಿ ಒಂದು ಪೊರೆ ಒಟ್ಟುಗೂಡಿಸಿದೆ. ಕೋಡುಗಳಿರುವ ತುದಿ ಪ್ರಾಣಿಯ ತಳಭಾಗ; ತೊಟ್ಟಿನ ಭಾಗವೇ ಬೆನ್ನು ಅಥವಾ ಮೇಲಿನಭಾಗ. ಕೊಂಬುಗಳನ್ನು ವೆಸ್ಟಿಬ್ಯೂಲ್ ಎಂಬ ಭಾಗಕ್ಕೆ ಸೆಳೆದುಕೊಳ್ಳಬಹುದು. ಕೋಡುಗಳ ವೃತ್ತದ ನಡುವೆಯಿರುವ ವೆಸ್ಟಿಬ್ಯೂಲಿನಲ್ಲಿ ಬಾಯೂ ಮಲದ್ವಾರವೂ ಇವೆ. ಕೊಂಬು ಮತ್ತು ವೆಸ್ಟಿಬ್ಯೂಲುಗಳನ್ನುಳಿದ ಮಿಕ್ಕ ದೇಹಭಾಗದ ಮೇಲೆಲ್ಲ ಒಂದು ಪೊರೆ ಇದೆ. ಇದಕ್ಕೂ ಒಳಗೆ ಮೇಲ್ತೊಕ್ಕೂ ಇನ್ನು ಒಳಗೆ ಲಂಬಸ್ನಾಯುಗಳಿಂದಾದ ಪದರವಿದೆ. ದೇಹದೊಳಗೆ ಇರುವ ಪೊಟರೆ ಒಂದು ರೀತಿಯ ಮಿಥ್ಯದೇಹಾವಕಾಶ. ಇದರಲ್ಲಿ ಲೋಳೆಯಂಥ ದ್ರವ ತುಂಬಿದೆ.

ಈ ಜೀವಿಗಳಲ್ಲಿ ಜೀರ್ಣಾಂಗ U ಆಕಾರದಲ್ಲಿದೆ; ಬಾಯಿ, ಅನ್ನನಾಳ, ಜಠರ ಕೋಶ, ಕಿರಿದಾದ ಕರುಳು, ಗುದನಾಳ ಮತ್ತು ಗುದದ್ವಾರಗಳು ಇವುಗಳ ಇತರ ಭಾಗಗಳು. ಜಠರದ ಎರಡು ಕಡೆಗಳಲ್ಲೂ ಪ್ರೊಟೊನೆಫ್ರಿಡಿಯ ಎಂಬ ವಿಸರ್ಜನಾಂಗಗಳಿವೆ. ಅವೆರಡೂ ಹಿಂಭಾಗದಲ್ಲಿ ಸೇರಿ ಒಂದು ನಾಳವಾಗಿ ಹೊರಕ್ಕೆ ತೆರೆಯುತ್ತದೆ.

ಜಠರದ ತಳಭಾಗದಲ್ಲಿ ಒಂದು ನರಮುಡಿಯಿದೆ. ಅದರಿಂದ ನರಗಳು ಕೊಂಬುಗಳಿಗೂ ತೊಟ್ಟು, ಜನನಾಂಗ ಮತ್ತು ದೇಹದ ಇತರ ಭಾಗಗಳಿಗೂ ಹೋಗಿರುತ್ತವೆ.

ಎಂಟೊಪ್ರಾಕ್ಟದ ಕೆಲವು ಪ್ರಾಣಿಗಳಲ್ಲಿ ಗಂಡು ಮತ್ತು ಹೆಣ್ಣು ಜನನಾಂಗಗಳೆರಡೂ ಉಂಟು; ಇಂಥ ದ್ವಿಲಿಂಗಿಗಳಲ್ಲಿ ಅಂಡಕೋಶದ ಹಿಂಭಾಗದಲ್ಲಿ ಒಂದು ಜೊತೆ ವೃಷಣಗಳು ಇರುತ್ತವೆ. ಅವೆರಡರ ನಾಳಗಳೂ ಎರಡು ಕಡೆಯಲ್ಲೂ ಸೇರುತ್ತವೆ; ಮತ್ತೆ ಅವೆರಡು ನಾಳಗಳೂ ಒಟ್ಟುಗೂಡಿ ಹೊರಕ್ಕೆ ತೆರೆಯುತ್ತವೆ.

ಭ್ರೂಣದ ಪ್ರಥಮ ಹಂತ ವೆಸ್ಟಿಬ್ಯೂಲಿನಲ್ಲೇ ಕಳೆಯುತ್ತದೆ. ಅನಂತರ ಈಜುವ ಡಿಂಭ ಅದರಿಂದ ಹೊರಬಂದು ಯಾವುದಾದರೂ ವಸ್ತುವಿಗೆ ಕಚ್ಚಿಕೊಂಡು ರೂಪ ಪರಿವರ್ತನೆ ಹೊಂದಿ ವಯಸ್ಕಜೀವಿಯ ಅಂಗಭಾಗಗಳನ್ನು ಪಡೆದುಕೊಳ್ಳುತ್ತದೆ. ಈ ಪ್ರಾಣಿಯ ಡಿಂಭ ಟ್ರೋಕೊಫೋರ್ ಡಿಂಭವನ್ನು ಸ್ವಲ್ಪಮಟ್ಟಿಗೆ ಹೋಲುವುದಾದರೂ ಹಲವು ವ್ಯತ್ಯಾಸಗಳನ್ನು ವ್ಯಕ್ತಪಡಿಸುತ್ತದೆ.

ಎಂಟೊಪ್ರಾಕ್ಟದ ಎಲ್ಲ ಪ್ರಾಣಿಗಳಲ್ಲೂ ನಿರ್ಲಿಂಗರೀತಿಯ ವಂಶಾಭಿವೃದ್ಧಿ ನಡೆಯುತ್ತದೆ. ಲಾಕ್ಸೊಸೋಮದಲ್ಲಿ ಕೇಲಿಕ್ಸಿನ ಮೇಲ್ಭಾಗದಲ್ಲಿ ಮೊಗ್ಗೆಗಳಂತೆ ಮೂಡಿ ಒಂದೊಂದು ಪದಾರ್ಥಗಳಿಗೆ ಅಂಟಿಕೊಂಡು ಸ್ವತಂತ್ರಜೀವನವನ್ನು ಆರಂಭಿಸುತ್ತದೆ. ಸಾಮೂಹಿಕ ಜೀವಿಯಾದ ಪೆಡಿಸೆಲ್ಲಿನದಲ್ಲಿ ತೊಟ್ಟಿನ ಬಳಿ ಮೊಗ್ಗುಗಳು ಮೂಡಿ ಅಲ್ಲೇ ಇರುತ್ತವೆ. ಆ ವೇಳೆಗೆ ಒಂದು ಗೋಡೆ ಉದ್ಭವಿಸಿ ಕನ್ಯಾಸಮೂಹವನ್ನು ಕಾಯಿ ಸಮೂಹದಿಂದ ಪ್ರತ್ಯೇಕಿಸುತ್ತದೆ. ಹೀಗೆ ನೂತನ ಸಮೂಹಜೀವನ ಆರಂಭವಾಗುತ್ತದೆ.

ಎಂಟೊಪ್ರಾಕ್ಟವನ್ನು ಹಿಂದೆ ಎಕ್ಟೊಪ್ರಾಕ್ಟದೊಡನೆ ಸೇರಿಸಿದ್ದುದು ಉಚಿತವಲ್ಲವೆಂಬುದು ಈಗ ಸ್ಪಷ್ಟಪಟ್ಟಿದೆ. ಏಕೆಂದರೆ ಎಕ್ಟೊಪ್ರಾಕ್ಟನಲ್ಲಿ ನಿಜವಾದ ದೇಹಾವಕಾಶವುಂಟು. ಜೊತೆಗೆ ಅದರಲ್ಲಿ ಮಲದ್ವಾರ ಕೋಡುಗಳ ವೃತ್ತದಿಂದ ಹೊರಗಿದೆ. ಇವೆರಡಕ್ಕೂ ಇರುವ ಸಾಮ್ಯಗಳಲ್ಲಿ ಕೂದಲಿಂದ ಆವೃತವಾದ ಕೋಡುಗಳು ಮತ್ತು 'U' ಆಕಾರದ ಜೀರ್ಣಾಂಗ ಇವು ಕೇವಲ ಬಾಹ್ಯಸಾಮ್ಯಗಳು ಮಾತ್ರ. ಈಚೆಗೆ ಎಂಟೊಪ್ರಾಕ್ಟ ಹೆಚ್ಚಾಗಿ ರೋಟಿಫೆರದ ವರ್ಗಕ್ಕೆ ಸಂಬಂಧಿಸಿದೆಯೆಂದು ಹೇಳಲಾಗುತ್ತಿದೆ. ರೋಟಿಫೆರದ ಕಾಲೊತೀಕೇಸಿಯ ಪಂಗಡ ಎಂಟೊಪ್ರಾಕ್ಟಗಳಂತೆ ಅಂಗರಚನೆಯನ್ನು ಪಡೆದಿರುವುದು ಮೇಲಿನ ಅಭಿಪ್ರಾಯವನ್ನು ಎತ್ತಿಹಿಡಿಯುತ್ತದೆ. (ಸಿ.ಎಂ.ಎಸ್.)

**ಎಂಟ್ರೊಪಿ:** ಒಂದು ಉಷ್ಣಗತಿಕ್ರಿಯೆಯಲ್ಲಿ (ಥರ್ಮೋಡೈನೆಮಿಕ್ ಪ್ರೋಸೆಸ್) ಪ್ರವಹಿಸುವ ಉಷ್ಣದ ಅಥವಾ ಒಂದು ಸಂಪರ್ಕಕ್ರಿಯೆಯಲ್ಲಿ ಸಾಗಣೆಗೊಂಡ ಸಂದೇಶದ ಒಂದು ಮಾನಕ. ಪ್ರಕೃತಿಯಲ್ಲಿ ಅವ್ಯವಸ್ಥೆಯೇ ಹೆಚ್ಚು. ವ್ಯವಸ್ಥೆ ಅತಿ ವಿರಳ. ನಿಶ್ಚಿತಾಕೃತಿಯ ಮಂಜುಗಡ್ಡೆಯ ಹರಳಿನಲ್ಲೂ ಅವ್ಯವಸ್ಥಿತವಾಗಿ ಹರಡಿರುವ ನೀರಿನಲ್ಲಿಯೂ ಇರುವ ಅಣುಗಳು ಒಂದೇ ತರದವು. ಆದರೆ ಹರಳುಗಳಲ್ಲಿ ಅಣುಗಳು ನಿಶ್ಚಿತ ಮತ್ತು ಓರಣವಾದ ಸಾಲುಗಳ ಕ್ರಮದಲ್ಲಿವೆ; ನೀರಿನಲ್ಲಿ ಹಾಗಿಲ್ಲ, ಬದಲು ಅಣುಗಳು ಸಿಕ್ಕಾಬಟ್ಟೆ ಚಲಿಸುತ್ತ ಸ್ವಚ್ಛಂದ ಚಲನೆಯನ್ನು ತೋರುತ್ತ ಅವ್ಯವಸ್ಥಿತವಾಗಿವೆ. ಇಲ್ಲಿನ ಕ್ರಮರಾಹಿತ್ಯದ ಕಾರಣ ದಿಂದಲೇ–ಎಂದರೆ ಯಾದೃಚ್ಛಿಕತೆಯಿಂದಲೇ– ದ್ರವದಲ್ಲಿ, ಇನ್ನು ಇದಕ್ಕಿಂತಲೂ ಹೆಚ್ಚಾಗಿ ಅದೇ ವಸ್ತುವಿನ ಆವಿಯಲ್ಲಿ, ಆ ವಸ್ತು ಹೆಪ್ಪುಗಟ್ಟಿದ್ದ ಸ್ಥಿತಿಗಿಂತ ಅಧಿಕ ಎಂಟ್ರೊಪಿ ಇದೆ ಎನ್ನುತ್ತಾರೆ. ಉಷ್ಣಗತಿಗೆ ಸಂಬಂಧಿಸಿದಾಗ ಅಧಿಕ ಉಷ್ಣತೆಯ ಅಣುವೊಂದು ಕಡಿಮೆ ಉಷ್ಣತೆಯ ಅಣುವಿನೊಡನೆ ಡಿಕ್ಕಿ ಹೊಡೆದು ತನ್ನ ಗತಿಶಕ್ತಿಯ ಒಂದಂಶವನ್ನು ಎರಡನೆಯ ಅಣುವಿಗೆ ಒದಗಿಸುವ ಸಂಭಾವ್ಯತೆಯೇ ಹೆಚ್ಚು. ಇದನ್ನೇ ಉಷ್ಣಗತಿಶಾಸ್ತ್ರದ ಎರಡನೆಯ ನಿಯಮವೂ ಸಾರುತ್ತದೆ. ಅಂತೂ ಇಂಥ ಕಾರ್ಯದಿಂದ ಸೀಮಿತ ಘನಗಾತ್ರದ ಅನಿಲವೇ ಇರಲಿ, ಆವಿಯೇ ಇರಲಿ ಅದರಲ್ಲಿ ಅಣುಗಳ ಯಾದೃಚ್ಛಿಕ ಚಲನವಲನಗಳ ಅವ್ಯವಸ್ಥೆ ಮತ್ತೂ ಹೆಚ್ಚುತ್ತ ಎಂಟ್ರೊಪಿಯೂ ಹೆಚ್ಚುವುದು ಎಂಬುದು ಸ್ಪಷ್ಟವಾಗುವುದು. ಹೀಗೆ ಎಂಟ್ರೊಪಿ ಕ್ರಮರಾಹಿತ್ಯ ಮತ್ತು ಯಾದೃಚ್ಛಿಕತೆಗಳ ಮಾನಕ ಎನ್ನುವುದು ಆಧುನಿಕ ಭೌತವಿಜ್ಞಾನದ ಅಭಿಪ್ರಾಯ. ಗಣಿತರೀತ್ಯಾ ಈ ಮಾತನ್ನು ಎರಡು ನಿದರ್ಶನಗಳಿಂದ ಪುಷ್ಟೀಕರಿಸಬಹುದು. ಪ್ರತ್ಯೇಕವಾಗಿದ್ದ ಎರಡು ಅನಿಲಗಳು ಅತಿ ವ್ಯಾಪನೆಗೊಳ್ಳುವಾಗ ಅಣುಗಳಲ್ಲಿ ಯಾದೃಚ್ಛಿಕ ಚಲನೆ ಮತ್ತು ಹಂಚಿಕೆಯಲ್ಲಿ ಅವಶ್ಯವಾಗಿಯೂ ಕ್ರಮರಾಹಿತ್ಯ ಹೆಚ್ಚುತ್ತದೆ. ಅಂದರೆ ಎಂಟ್ರೊಪಿ ಹೆಚ್ಚುತ್ತದೆ. ಮಂಜುಗಡ್ಡೆಯೊಂದು ಕರಗುವಾಗ ಅಣುಗಳಲ್ಲಿನ ಯಾದೃಚ್ಛಿಕತೆ ಮತ್ತು ಕ್ರಮರಾಹಿತ್ಯ ಹೆಚ್ಚುತ್ತ ಎಂಟ್ರೊಪಿ ಹೆಚ್ಚುತ್ತದೆ.

ಸಾಂಪ್ರದಾಯಿಕ ಪರಿಕಲ್ಪನೆ: ಇದುವರೆಗೆ ಬರೆದದ್ದು ಎಂಟ್ರೊಪಿಯ ಆಧುನಿಕ ಅರ್ಥ. ಆದರೆ ಈ ವಾದವನ್ನು ಮೊತ್ತಮೊದಲು ಬಳಸಿದವ ಕ್ಲಾಸಿಯಸ್, ಕಾರ್ನೊ ಪ್ರಸ್ತಾಪಿಸಿದ ಆದರ್ಶ ಅನಿಲದ ಎಂಜಿನ್ $T_1K$ ಉಷ್ಣತೆಯಲ್ಲಿ $Q_1$ ಉಷ್ಣವನ್ನು ಹೀರುತ್ತದೆ. ಮತ್ತು $T_2K$ ಉಷ್ಣತೆಯಲ್ಲಿ $Q_2$ ಉಷ್ಣವನ್ನು ಕಳೆದುಕೊಳ್ಳುತ್ತದೆ. ಅಲ್ಲದೆ ಈ ವಿಪರ್ಯಯ (ರಿವರ್ಸಿಬಲ್) ಕ್ರಿಯೆಗಳ ಆವರ್ತದಲ್ಲಿ $\frac{Q_1}{T_1}=\frac{Q_2}{T_2}$. ಇವನ್ನು ಎಂಜಿನಿನ ವಸ್ತುವಿನ

ಎಂಟ್ರೊಪಿಯಲ್ಲಿನ ಬದಲಾವಣೆಗಳೆಂದು ಕ್ಲಾಸಿಯಸ್ ಕರೆದ. ಸ್ಪಷ್ಟವಾಗಿ ಹೇಳುವುದಾದರೆ ಪ್ರತಿ ಗ್ರಾಂ ವಸ್ತುವಿಗೆ dQ ಎಂಬ ಅಲ್ಪ ಪರಿಮಾಣದ ಉಷ್ಣವನ್ನು $T^0$ ನಿರಪೇಕ್ಷ ಉಷ್ಣತೆಯಲ್ಲಿ (K) ಒದಗಿಸಿದಾಗ ಎಂಟ್ರೊಪಿಯ ಹೆಚ್ಚಳ $ds = \frac{dQ}{T}$. ವಿಪರ್ಯಯ ಬದಲಾವಣೆ ಎಂದರೆ ಹೆಜ್ಜೆ ಹೆಜ್ಜೆ ಮುಂದೆ ಹೋದಂತೆ ಇದನ್ನು ಹಿಮ್ಮೊಗವಾಗಿಯೂ ಸಾಧಿಸಲು ಬರುವ ಬದಲಾವಣೆ. ಇಂಥ ವಿಪರ್ಯಯ ಬದಲಾವಣೆಯ ವೇಳೆ ಉಷ್ಣ ಹೆಚ್ಚುಕಡಿಮೆಯಾಗಲೂಬಹುದು. A ಅವಸ್ಥೆಯಿಂದ B ಅವಸ್ಥೆಗೆ ವಸ್ತು ಬದಲಾವಣೆ ಹೊಂದಲು dQ ಉಷ್ಣವನ್ನು ಒದಗಿಸಿದಾಗ ಎಂಟ್ರೊಪಿಯ ಬದಲಾವಣೆ $\int_A^B dS = \int_A^B \frac{dQ}{T}$. ಇಲ್ಲವೆ SB - SA= ಎಂಟ್ರೊಪಿಯ ಬದಲಾವಣೆ $\int_A^B \frac{dQ}{T}$ ಎಂಬ ನಿಶ್ಚಿತ ಅನುಕಲನದ ಬೆಲೆಯಿಂದ ತಿಳಿಯುತ್ತದೆ.

ಈಗ ಕಾರ್ನೊಚಕ್ರೀಯ ಆವರ್ತದ ಸಮೋಷ್ಣತಾ (ಐಸೊಥರ್ಮಲ್) ಕ್ರಿಯೆಗಳಲ್ಲಿ $\frac{Q_1}{T_1} = \frac{Q_2}{T_2}$. ಆದರೆ $\frac{Q_1}{T_1}$ ಎಂಟ್ರೊಪಿಯ ಹೆಚ್ಚಳವಾದರೆ $\frac{Q_2}{T_2}$ ಇದರ ಕೊರತೆ. ಹೀಗೆ ಪೂರ್ತಿ ಆವರ್ತದಲ್ಲಿ ಎಂಟ್ರೊಪಿಯ ಬದಲಾವಣೆಯೂ ಶೂನ್ಯವೆನಿಸುವುದು. ಕಾರ್ನೊಚಕ್ರೀಯ ಆವರ್ತದಲ್ಲಿನ ಉಳಿದ ಎರಡು ಅಪಾರಣೀಯ (ಎಡಿಯಾಬೆಟಿಕ್) ಕ್ರಿಯೆಗಳಲ್ಲಿ ಅನಿಲಕ್ಕೆ ಉಷ್ಣವನ್ನು ಒದಗಿಸುವುದೂ ಇಲ್ಲ; ಅದರಿಂದ ಉಷ್ಣವನ್ನು ಹೀರುವುದೂ ಇಲ್ಲ. ಅಥವಾ dQ=ಶೂನ್ಯ. ಆದ್ದರಿಂದ ಇವುಗಳಲ್ಲಿ ಎಂಟ್ರೊಪಿ ಹೆಚ್ಚುಕಡಿಮೆಯಾಗಲಾರದು. ಅಂತೂ ಕಾರ್ನೊ ಚಕ್ರೀಯ ಆವರ್ತದಲ್ಲಿ ಆದರ್ಶ ಎಂಜಿನಿನ ಅನಿಲದ ಎಂಟ್ರೊಪಿಯ ಬದಲಾವಣೆ ಶೂನ್ಯ. ಇಷ್ಟರಲ್ಲಿ ಈ ಪದದ ಇನ್ನೊಂದು ಅರ್ಥವೂ ತನ್ನಂತೆಯೇ ಉಗಮಿಸುತ್ತದೆ. ಅಪಾರಣೀಯ ಬದಲಾವಣೆಗಳಲ್ಲಿ ಒತ್ತಡ, ಘನಗಾತ್ರಗಳು ಉಷ್ಣತೆಯಲ್ಲಿ ಬದಲಾಗುತ್ತವೆ. ಆದರೆ ಎಂಟ್ರೊಪಿ ಸ್ಥಿರವಾಗಿ ಉಳಿಯುತ್ತದೆ. ಈ ಕಾರಣದಿಂದಲೇ ಎಂಟ್ರೊಪಿ ಕೂಡ ವಸ್ತುಗಳ ಸ್ಪಷ್ಟ ಲಕ್ಷಣಗಳಲ್ಲೊಂದು. ಇದನ್ನು ಆಧರಿಸಿಯೇ ಅಪಾರಣೀಯ ಕ್ರಿಯೆಗಳನ್ನು ಸಮ ಎಂಟ್ರೊಪಿ (ಐಸೊ ಎಂಟ್ರೊಪಿಕ್) ಬದಲಾವಣೆಗಳೆಂದೂ ಕರೆಯುವುದಿದೆ.

ಪ್ರತಿಯೊಂದು ವಿಪರ್ಯಯಾವರ್ತದಲ್ಲೂ ಎಂಟ್ರೊಪಿಯ ಬದಲಾವಣೆ ಶೂನ್ಯ. ಚಿತ್ರದಲ್ಲಿ ABA ಒಂದು ಸಂವೃತ ಚಿತ್ರ (ಕ್ಲೋಸ್ಡ್ ಫಿಗರ್).



ಚಿತ್ರ 1

ಇದು ಒಂದು ವಿಪರ್ಯಯ ಆವರ್ತವನ್ನು ಚಿತ್ರಿಸುತ್ತದೆಂದು ಎಣಿಸಬಹುದು. ಸಮೋಷ್ಣತಾ ಮತ್ತು ಅಪಾರಣೀಯ ರೇಖೆಗಳನ್ನು ಮತ್ತು ಚಿಕ್ಕಪುಟ್ಟ ಸೂಚಕಚಿತ್ರಗಳನ್ನು (ಇಂಡಿಕೇಟರ್ಸ್) ಎಳೆದು ಪ್ರತಿಯೊಂದರಲ್ಲೂ ಕಾರ್ನೊಆವರ್ತಗಳನ್ನು ತಂದುಕೊಂಡರೆ ಒಟ್ಟಿನಲ್ಲಿ ABಯ ಉದ್ದಕ್ಕೂ ಕಾರ್ನೊಎಂಜಿನನ್ನು ತಂದುದಕ್ಕೆ ಸಮನಾಗುತ್ತದೆ. ಕಾರಣ, ಸಮೋಷ್ಣತಾರೇಖೆಯೊಂದರಲ್ಲಿ ಒಮ್ಮೆ ಒಂದಷ್ಟು ಉಷ್ಣ ಹೀರಲ್ಪಟ್ಟರೆ ತರುವಾಯದ ಆವರ್ತದಲ್ಲಿ ಅದೇ ರೇಖೆಯ ಮೇಲೆ ಅಷ್ಟೇ ಉಷ್ಣ ಸೃಜಿಸಲ್ಪಡುತ್ತದೆ. ಇನ್ನು ಪ್ರತಿ ಆವರ್ತದಲ್ಲೂ $\Sigma \frac{Q}{T} = 0$ ಇದ್ದು ಒಟ್ಟಿನ ಈ ವಿಪರ್ಯಯ ಆವರ್ತದಲ್ಲಿ ಎಂಟ್ರೊಪಿಯ ಬದಲಾವಣೆ ಅವಶ್ಯವಾಗಿಯೂ ಶೂನ್ಯವೇ.

$$\sum_{A \to B} \frac{Q}{T} + \sum_{B \to A} \frac{Q}{T} = 0$$

ಇಲ್ಲಿ A ಯಿಂದ B ಸ್ಥಿತಿಗೆ ಸ್ವೇಚ್ಛೆಯಿಂದ ಬೇಕಾದ ಪಥದಲ್ಲಿ ಚಲಿಸಬಹುದು. ಈ ಪಥ ವಿಪರ್ಯಯಧರ್ಮವುಳ್ಳದ್ದಾದರೆ ಖಂಡಿತಕ್ಕೂ ಇದೇ ಪಥದಲ್ಲಿ ಹಿಮ್ಮೊಗವಾಗಿ ಚಲಿಸಿ Aಗೆ ಬಂದಾಗ ಎಂಟ್ರೊಪಿ ಹಿಂದಿದ್ದಂತೆಯೇ ಇರುತ್ತದೆ. Aಯಲ್ಲಿನ ಎಂಟ್ರೊಪಿ $S_A$, B ಯಲ್ಲಿ ಇದು $S_B$ ಆಗಿದ್ದರೆ ಆಗ

$$\sum_{A \to B} \frac{Q}{T} = S_B - S_A \sum_{B \to A} \frac{Q}{T} = S_A - S_B$$

ಅಥವಾ ವಸ್ತುವಿನ ತತ್ಕಾಲೀನ ಸ್ಥಿತಿಯನ್ನು ಅಂದರೆ ಅದರ ಒತ್ತಡ, ಘನಗಾತ್ರ ಮತ್ತು ಉಷ್ಣತೆಗಳನ್ನು ಹೊಂದಿರುವ ಒಂದು ಧರ್ಮವನ್ನು ನಿರ್ವಹಿಸಲು ಬರುತ್ತದೆ. ಇದೇ ಎಂಟ್ರೊಪಿ ಎಂದು ಕ್ಲಾಸಿಯಸ್‍ನಿಂದ ನಾಮಕರಣ ಪಡೆಯಿತು. ಗ್ರೀಕ್ ಭಾಷೆಯಲ್ಲಿ ಈ ಶಬ್ದಕ್ಕೆ ಬದಲಾವಣೆ ಎಂದರ್ಥವಿದೆ.

ವಿಪರ್ಯಯ ಆವರ್ತಗಳಲ್ಲಿ ಎಂಟ್ರೊಪಿಯ ಬದಲಾವಣೆ ಶೂನ್ಯ. ಇನ್ನೂ ಒಂದು ವಿಚಾರ ಇಲ್ಲಿ ಸ್ಪಷ್ಟವಾಗುತ್ತದೆ. ತತ್ಕಾಲೀನ ಸ್ಥಿತಿಯನ್ನು ಹೊಂದಿ ಶಕ್ತಿಯಂತೆಯೇ ಎಂಟ್ರೊಪಿಯೂ ಸ್ಥಿರವಾಗಿರುವ ಬೆಲೆಯುಳ್ಳ ಮತ್ತು ಏಕಮಾತ್ರ ಬೆಲೆಯುಳ್ಳ ವಸ್ತುವಿನ ಲಕ್ಷಣ $S_A$ ಯು A ಸ್ಥಿತಿಯ ಎಂಟ್ರೊಪಿ dS ಎಂದಾಗ ಅವಶ್ಯವಾಗಿಯೂ ಶುದ್ಧ ಅವಕಲನ (ಪರ್ಫೆಕ್ಟ್ ಡಿಫರೆನ್ಷಿಯಲ್) ಎಂದರ್ಥ. ಒಂದು ವಸ್ತುವಿನ ಇಲ್ಲವೆ ವ್ಯವಸ್ಥೆಯ ಎಂಟ್ರೊಪಿ ಅದರಲ್ಲಿನ ವಸ್ತು ಸಂಚಯಕ್ಕೆ ಅನುಪಾತವಾಗಿದೆ ಮಾತ್ರವಲ್ಲ, ಇದರಲ್ಲಿ ಅನೇಕ ಪ್ರತ್ಯೇಕ ಭಾಗಗಳಿದ್ದರೆ ಪ್ರತ್ಯೇಕವಾಗಿ ಈ ಭಾಗಗಳ ಎಂಟ್ರೊಪಿಗಳಲ್ಲಿನ ಬದಲಾವಣೆಗಳು ಎಲ್ಲ ಸೇರಿಕೊಂಡು ಆ ವ್ಯವಸ್ಥೆಯ ಒಟ್ಟು ಎಂಟ್ರೊಪಿಯ ಬದಲಾವಣೆಗೆ ಕಾರಣವಾಗುತ್ತದೆ.

ಹೀಗೆ ಒಂದು ವ್ಯವಸ್ಥೆಗೆ dQ ಉಷ್ಣವನ್ನೊದಗಿಸಿದಾಗ ಇದು ತಾನೇ dW ಭೌತ ಕಾರ್ಯವನ್ನು ನಿರ್ವಹಿಸುವುದರೊಡನೆ ಆಂತರಿಕ ಶಕ್ತಿಯನ್ನು dU ನಷ್ಟು ಹೆಚ್ಚಿಸಲು ಕಾರಣವಾದರೆ dU=dQ+dW ಅಥವಾ dU=dQ=PdV, [dW= -pdV]. ಈಗ ಬದಲಾವಣೆಗಳು ವಿಪರ್ಯಯವಾದವುಗಳಾದರೆ ಎಂಟ್ರೊಪಿಯ ಹೆಚ್ಚಳ dS=dQ/T ಅಥವಾ dQ=TdS. $\therefore$ dU=TdS - pdV ಎಂಬುದು ಶುದ್ಧ ಅವಕಲನಗಳಲ್ಲಿ ಉಷ್ಣಗತಿ ಶಾಸ್ತ್ರದ ಪ್ರಥಮ ನಿಯಮವನ್ನು ಪ್ರತಿಪಾದಿಸುವ ಸಮೀಕರಣ. ಒಟ್ಟಿನಲ್ಲಿ ಹೇಳುವುದಾದರೆ (1) ಎಂಟ್ರೊಪಿಯ ಬದಲಾವಣೆ ಎಂಬುದು ಪದಾರ್ಥದ ಇತರ ಮುಖ್ಯ ಲಕ್ಷಣಗಳಂತೆಯೇ ಇರುವ ಇನ್ನೊಂದು ವಿಶಿಷ್ಟ ಲಕ್ಷಣ. dQ ಮತ್ತು T ಇವೆರಡೂ ಉಷ್ಣಗತಿಶಾಸ್ತ್ರದ ಎರಡು ಮುಖ್ಯ ಅಂಗಗಳಾಗಿವೆ. ಆದ್ದರಿಂದ dQ/T ಎಂಬುದು ವಸ್ತುವಿನ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಇರುವ ಬದಲಾವಣೆಯ ರೂಪರೇಖೆಗಳನ್ನೇನೂ ಹೊಂದಿರದೆ ಕೇವಲ ಆರಂಭ ಮತ್ತು ಅಂತ್ಯದ ಸ್ಥಿತಿಗಳನ್ನು ಮಾತ್ರ ಆಧರಿಸಿರುವ ಇನ್ನೊಂದು ಭೌತಲಕ್ಷಣ. ಇದು ಉಳಿದ ಒತ್ತಡ, ಉಷ್ಣತೆ ಮತ್ತು ಘನಗಾತ್ರಗಳಷ್ಟೇ ಮುಖ್ಯವಾದ ಅಂಗ. ಎಂಟ್ರೊಪಿ S, ಒತ್ತಡ P, ಘನಗಾತ್ರ V ಮತ್ತು ನಿರಪೇಕ್ಷ ಉಷ್ಣತೆ T–ಇವುಗಳು ಪರಸ್ಪರ ಸಂಬಂಧವುಳ್ಳ ಚರಗಳು. $\int ds = \int \frac{dQ}{T}$ ಎಂಬುದು ಎಂಟ್ರೊಪಿಯನ್ನು ವಿವರಿಸುವ ಸಮೀಕರಣ. (2) ಎಂಟ್ರೊಪಿಯ ಬದಲಾವಣೆ dS ಎಂಬುದು ಶುದ್ಧ ಅವಕಲನ. ವಿಪರ್ಯಯ ಬದಲಾವಣೆಗಳಲ್ಲಿ dS=dQ/T ಎಂಬುದು ಇನ್ನೊಂದು ಅವಶ್ಯ ನಿರ್ಬಂಧ. (3) ಉಷ್ಣವನ್ನು ಹೀರಿದಾಗ ವ್ಯವಸ್ಥೆಯೊಂದರ ಎಂಟ್ರೊಪಿ ಹೆಚ್ಚುತ್ತದೆ. ಉಷ್ಣವನ್ನು ವಿಸರ್ಜನೆಗೊಳಿಸಿದಾಗ ಇದು ಕಡಿಮೆಯಾಗುತ್ತದೆ. ಅಪಾರಣೀಯ ಬದಲಾವಣೆಗಳಲ್ಲಿ dQ=0 ಇದ್ದು ಎಂಟ್ರೊಪಿಯೂ ಬದಲಾವಣೆ ಹೊಂದುವುದಿಲ್ಲ. (4) ಈ ಹಿಂದೆ ಹೇಳಿದಂತೆ ಕಾರ್ನೊ ಆವರ್ತದಲ್ಲಿನ ಎಂಟ್ರೊಪಿಯ ಬದಲಾವಣೆಯನ್ನು (ಚಕ್ರೀಯ ಸಮಾಸಕಲನ $\oint ds$ ಆಗಿ) ಬರೆಯುತ್ತೇವೆ. ಇದರ ಬೆಲೆಯೂ ಶೂನ್ಯ; ಕಾರ್ನೊ ಆವರ್ತದಲ್ಲಿ ಮಾತ್ರವಲ್ಲದೆ ಇನ್ನಾವ ವಿಪರ್ಯಾಯ ಆವರ್ತದಲ್ಲಿ ಕೂಡ ಎಂಟ್ರೊಪಿಯ ಬದಲಾವಣೆ ಶೂನ್ಯ. ಇಂಥ ಕ್ರೋಢೀಕೃತ ಭಾವನೆಗಳಿಂದ ಹೊಸ ಹಲವಾರು ಭಾವನೆಗಳು ಅನುಮಿತವಾಗುತ್ತವೆ.

ಅವಿಪರ್ಯಯಸ್ಥ (ಇರ್‍ರಿವರ್ಸಿಬಲ್) ಬದಲಾವಣೆಗಳಲ್ಲಿ ಎಂಟ್ರೊಪಿಯ ಬದಲಾವಣೆ: ಭೌತಕಾರ್ಯಗಳ ನೆರವೇರಿಕೆಯಲ್ಲಿ ಘರ್ಷಣೆ ಮತ್ತು ಸ್ನಿಗ್ಧತೆ (ಫ್ರಿಕ್ಷನ್ ಅಂಡ್ ವಿಸ್ಕಾಸಿಟಿ) ಇವೆರಡು ನಾವು ಎದುರಿಸುವಂಥ ನೈಸರ್ಗಿಕ ಬಲಗಳು. ಇವನ್ನು ಎದುರಿಸುವಾಗ ಒಂದಷ್ಟು ಭೌತಕಾರ್ಯ ಜರುಗುತ್ತದೆ. ಇದು ಉಷ್ಣವನ್ನೂ ಒದಗಿಸುತ್ತದೆ. ಮುಖ್ಯವಾಗಿ ಇಂಥವು ವಿಪರ್ಯಯಶೀಲ ಕಾರ್ಯಗಳಲ್ಲ. ಅಂದರೆ ಕೊಂತವನ್ನು ಸಿಲಿಂಡರೊಂದರಲ್ಲಿ ಮೇಲೆಳೆದಾಗ ಘರ್ಷಣೆಯ ಕಾರಣ ಉಷ್ಣ ಉಂಟಾದಂತೆಯೇ ಅದನ್ನು ಕೆಳಗೆ ತಳ್ಳುವಾಗಲೂ ಉಷ್ಣವುಂಟಾಗುತ್ತದೆ. ಇಂಥ ವಿಪರ್ಯಯಶೀಲವಲ್ಲದ ಕ್ರಿಯೆಗಳು ಪ್ರಕೃತಿಯಲ್ಲಿ ಅಸಂಖ್ಯಾತವಾಗಿವೆ. ಇವುಗಳಲ್ಲೆಲ್ಲ ಎಂಟ್ರೊಪಿ ಏನಾಗುತ್ತದೆ? ಒಂದೆರಡು ಉದಾಹರಣೆಗಳಿಂದ ಈ ವಿಚಾರ ಸ್ಪಷ್ಟವಾಗುತ್ತದೆ; A ಹೆಚ್ಚಿನ ಉಷ್ಣತೆಯಲ್ಲಿಯೂ ($T_1$K) B ಕಡಿಮೆ ಉಷ್ಣತೆಯಲ್ಲಿಯೂ ($T_2$K) ಇರುವ ಎರಡು ವಸ್ತುಗಳಾಗಿರಲಿ. B ಯು A ಯಿಂದ ಉಷ್ಣವನ್ನು ಪಡೆಯುತ್ತದೆ ಎಂದು ಭಾವಿಸೋಣ. ಆಗ A ಯ ಎಂಟ್ರೊಪಿಯಲ್ಲಿನ ಕೊರತೆ $\frac{\Delta Q}{T_1}$; Bಯ ಎಂಟ್ರೊಪಿಯಲ್ಲಿನ ಹೆಚ್ಚಳ $\frac{\Delta Q}{T_1}, T_1 > T_2$ ಆದಕಾರಣ $\frac{\Delta Q}{T_2} > \frac{\Delta Q}{T_1}$ ಅಥವಾ ಈ ವ್ಯವಸ್ಥೆಯ ಅಂದರೆ ಹೆಚ್ಚಿನ ಉಷ್ಣತೆಯ ಸ್ಥಿತಿಯಿಂದ ಅವಿಪರ್ಯಯವಾಗಿ ಉಷ್ಣ ಕಡಿಮೆ ಉಷ್ಣತೆಯ ಸ್ಥಿತಿಗೆ ಹರಿದಾಗ ಎಂಟ್ರೊಪಿ $\Delta S = \Delta Q\left[\frac{1}{T_2} - \frac{1}{T_1}\right]$ ನಷ್ಟು ಹೆಚ್ಚುತ್ತದೆ.

# ಎಂಟ್ರೊಪಿ

$\Delta S$ ಧನಾತ್ಮಕವಾಗಿದೆ, ಶೂನ್ಯವಲ್ಲ. ಇಷ್ಟು ನೇರವಾಗಿ ಇಷ್ಟು ಥಕ್ಕನೆ ಇಂಥ ಉಷ್ಣದ ಚಲನೆ ಸಾಧ್ಯವೇ ಎಂಬ ಸಂದೇಹಕ್ಕೆ ಸಮಾಧಾನವಿದೆ; $T_1>T_2$ ಇದ್ದು A ಮತ್ತು B ಎಂಬ ಎರಡು ವಸ್ತುಗಳ ಉಷ್ಣಧಾರಿತ್ವಗಳು (ಹೀಟ್ ಕೆಪ್ಯಾಸಿಟಿ, ಉಷ್ಣತೆ 1K ಏರಲು ಬೇಕಾದ ಉಷ್ಣ) $H_1$ ಮತ್ತು $H_2$ ಇರಲಿ, ಥಕ್ಕನೆ A ಯಿಂದ B ಗೆ ಉಷ್ಣ ಹರಿದಾಗ ಅಪಾರಣೀಯ ಬದಲಾವಣೆಯೇ ಜರುಗುತ್ತದೆ. ಆದರೂ A ಯ $dT_1$ ರಷ್ಟು ಶೀತಲವಾದರೆ B ಯು $dT_2$ ರಷ್ಟು ಕಾವೇರುತ್ತದೆ.

$$H_1dT_1+H_2dT_2=0$$

$$\therefore H_1dT_1= -H_2dT_2$$

ಅಂದರೆ ಇಲ್ಲಿನ ಎಂಟ್ರೊಪಿಯ ಬದಲಾವಣೆ

, (ಕಾರಣ $T_1>T_2$) ಹೀಗೆ ಕ್ಷಣಕಾಲದಲ್ಲಿ ಅತ್ಯಲ್ಪ ಉಷ್ಣ A ಯಿಂದ B ಗೆ ಹರಿದಿದೆ ಎಂದರೂ ಈ ವ್ಯವಸ್ಥೆಯ ಎಂಟ್ರೊಪಿ ಹೆಚ್ಚುತ್ತದೆ.

ಎರಡು ಪ್ರತ್ಯೇಕ ಉಷ್ಣತೆಯಲ್ಲಿನ ವಸ್ತುಗಳನ್ನು ಆರಿಸಿ ಇವನ್ನು ಜೋಡಿಸಿದಾಗ ಎಂಟ್ರೊಪಿ ಹೆಚ್ಚುತ್ತದೆ ಎಂದು ಪರಿಶೀಲಿಸಲಾಯಿತು. ಒಂದೇ ವಸ್ತುವಿನ ವಿವಿಧ ಭಾಗಗಳು ಹೆಚ್ಚು ಕಡಿಮೆ ಉಷ್ಣತೆಯಲ್ಲಿದ್ದರೂ ಹೀಗೆಯೇ. ಈ ವಹನ, ನಯನ, ವಿಕಿರಣಗಳಿಂದ (ಕಂಡಕ್ಷನ್, ಕನ್ವೆಕ್ಷನ್ ಅಂಡ್ ರೇಡಿಯೇಷನ್) ಉಷ್ಣ ಹರಿದಾಗಲೂ ಒಟ್ಟು ಎಂಟ್ರೊಪಿ ಹೆಚ್ಚುತ್ತದೆ. ಅಥವಾ ವಿಪರ್ಯಯಶೀಲವಲ್ಲದ ಕ್ರಿಯೆಗಳಿಂದ– ವಹನ, ನಯನ ಮತ್ತು ವಿಕಿರಣಗಳಿಂದ–ಉಷ್ಣನಿರೋಧವುಳ್ಳ (ಹೀಟ್ ಇನ್ಸುಲೇಟೆಡ್) ವ್ಯವಸ್ಥೆಯಿಂದ ಎಂಟ್ರೊಪಿ ತನ್ನಷ್ಟಕ್ಕೆ ಹೆಚ್ಚುತ್ತದೆ.

ಎಂಟ್ರೊಪಿ ಮತ್ತು ಉಷ್ಣಗತಿಶಾಸ್ತ್ರದ ಎರಡನೆಯ ನಿಯಮ: ಪ್ರತಿಯೊಂದು ಅವಿಪರ್ಯಯಶೀಲ (ಇರ್ರಿವರ್ಸಿಬಲ್) ಕ್ರಿಯೆಯಿಂದಲೂ ಉಷ್ಣವ್ಯವಸ್ಥೆಯೊಂದರ ಎಂಟ್ರೊಪಿ ಹೆಚ್ಚುತ್ತದೆ. ಇಂಥ ವ್ಯವಸ್ಥೆಯ ಆವರಣದಲ್ಲೂ ಎಂಟ್ರೊಪಿ ಹೆಚ್ಚುತ್ತದೆ. ಈ ಹಿಂದೆ ಹೇಳಿದಂತೆ ನಿಸರ್ಗದ ಹೆಚ್ಚಿನ ಕ್ರಿಯೆಗಳೆಲ್ಲವೂ ಅವಿಪರ್ಯಯಶೀಲಗಳೇ: ಹಣ್ಣು ಮರದಿಂದ ಕೆಳಗೆ ಬೀಳುತ್ತದೆ. ನದಿಯ ನೀರು ತಗ್ಗಿಗೆ ಹರಿಯುತ್ತದೆ. ಕಬ್ಬಿಣ ತುಕ್ಕು ಹಿಡಿಯುತ್ತದೆ, ಮಂಜು ಕರಗುತ್ತದೆ, ಸಕ್ಕರೆ ನೀರಿನಲ್ಲಿ ಕರಗುತ್ತದೆ. ಇವೆಲ್ಲವೂ ಅವಿಪರ್ಯಯಶೀಲ ಕಾರ್ಯಗಳು. ಇಲ್ಲೆಲ್ಲ ಎಂಟ್ರೊಪಿ ಹೆಚ್ಚುತ್ತದೆ. ತನ್ನಂತೆಯೇ ಜರುಗತಕ್ಕ ಎಲ್ಲ ಕಾರ್ಯಗಳಲ್ಲೂ ಎಂಟ್ರೊಪಿ ಹೆಚ್ಚುತ್ತದೆ. ಇದಕ್ಕೆ ವಿರೋಧವಾಗಿ ಎಂಟ್ರೊಪಿ ಹೆಚ್ಚದಿರುವಂಥ ಯಾವ ನೈಸರ್ಗಿಕ ಕ್ರಿಯೆಯೂ ಇಲ್ಲ. ಈ ಸಂದರ್ಭದಲ್ಲಿ ಇಂಥ ಎಲ್ಲ ಕ್ರಿಯೆಗಳಲ್ಲೂ ಒಟ್ಟು ಶಕ್ತಿಯ ಹೆಚ್ಚಳ ಅಥವಾ ಹ್ರಾಸವಾಗುವುದಿಲ್ಲ. ಇಲ್ಲವೆ ಒಟ್ಟು ಶಕ್ತಿ ನಿರಂತರ ಸ್ಥಿರವೆಂಬ ಪ್ರಥಮ ನಿಯಮದೊಡನೆ ಉಷ್ಣಚಲನೆಯ ನಿಯಮವನ್ನು ಎಂಟ್ರೊಪಿಗೆ ಅನ್ವಯಿಸಿಕೊಂಡು ಹೀಗೆ ಹೇಳಬಹುದು : ನಿಸರ್ಗದ ಎಂಟ್ರೊಪಿ ಹೆಚ್ಚುತ್ತಲೇ ಇದ್ದು ಅಧಿಕತಮ ಬೆಲೆ ಪಡೆಯಲು ಹವಣಿಸುತ್ತದೆ.

ಎಂಟ್ರೊಪಿ ಮತ್ತು ಭೌತಶಕ್ತಿಯ ಲಭ್ಯತೆ ಮತ್ತು ಅಲಭ್ಯತೆ–**(ನೋಡಿ– ಅಲಭ್ಯತೆ):** $T_1^0>T_2^0>T_3^0$ ಯಲ್ಲಿರುವ ಮೂರು ಉಷ್ಣಮೂಲಗಳಿದ್ದು ಇವುಗಳಿಂದ ತಕ್ಕ ಎಂಜಿನೊಂದರ ಸಹಾಯದಿಂದ $T^0$ ಉಷ್ಣತೆಯಲ್ಲಿನ ಒಂದು ವಸ್ತುವಿಗೆ (ಅವೆಲ್ಲವುಗಳಿಗಿಂತಲೂ ಕಡಿಮೆ ಉಷ್ಣತೆಯಲ್ಲಿನ ವಸ್ತುವಿಗೆ) ಉಷ್ಣವನ್ನು ಹರಿಯಿಸುತ್ತೇವೆ ಎಂದು ಭಾವಿಸೋಣ. ಆಗ ನೇರವಾಗಿ ಮೊದಲನೆಯ ಮೂಲದಿಂದ ವಸ್ತುವಿಗೆ ಎಂಜಿನ್ ದ್ವಾರಾ ಹರಿಯಿಸಿದ ಉಷ್ಣದಿಂದ ಲಭಿಸಿದ ಶಕ್ತಿ $W_1 = Q\left[1-\frac{T}{T_1}\right]$. ಇಲ್ಲಿ Q ಮೂಲದಿಂದ ಪಡೆಯಲಾದ ಉಷ್ಣರೂಪದ ಶಕ್ತಿ.

ಈಗ $T_1^0$ಯ ಮೂಲದಿಂದ ವಹನ ಮೂಲಕ ಅವಿಪರ್ಯಯ ರೀತ್ಯಾ Q ಉಷ್ಣ $T_2^0$ ಮೂಲಕ್ಕೆ ಹರಿದು ಅಲ್ಲಿಂದ $T^0$ ವಸ್ತುವಿಗೆ ಉಷ್ಣವನ್ನು ಅದೇ ಎಂಜಿನ್ ದ್ವಾರಾ ಹರಿಸಲಾಗಿದೆ ಎಂದು ಭಾವಿಸೋಣ. ಆಗ ಇಂಥ ಕಾರ್ಯದಿಂದ ಲಭಿಸುವ ಶಕ್ತಿ $W_2 = Q\left[1-\frac{T}{T_2}\right]$. ಹಾಗೆಯೇ ಮೂರನೆಯ ಮೂಲಕ್ಕೆ ಉಷ್ಣ ಹರಿದು ಅಲ್ಲಿಂದ $T^0$ ಉಷ್ಣತೆಯ ವಸ್ತುವಿಗೆ ಶಕ್ತಿಯನ್ನೊದಗಿಸಿದಾಗ ಇದರ ಬೆಲೆ $W_3 = Q\left[1-\frac{T}{T_2}\right]$. $T_1>T_2>T_3$ ಇರುತ್ತ ಅವಶ್ಯವಾಗಿಯೂ $W_1>W_2>W_3$ ಅಂದರೇನು? ನಾವು ಆರಿಸಿಕೊಳ್ಳುವ ಮೂಲದ ಉಷ್ಣತೆ ಕಡಿಮೆ ಇದ್ದಂತೆ ನಮಗೆ ದೊರಕುವ ಶಕ್ತಿ ಕಡಿಮೆ ಆಗುತ್ತದೆ. ಮೂರು ಸಂದರ್ಭಗಳಲ್ಲಿ ನಾವು ಪಡೆದುಕೊಂಡ ಶಕ್ತಿಯ ಪರಿಮಾಣ ಒಂದೇ ಆದರೂ ನಮಗೆ ಉಪಯೋಗಕ್ಕೆ ಸಿಕ್ಕುವ ಶಕ್ತಿ ಕಡಿಮೆ ಆಗುತ್ತ ಬರುತ್ತದೆ. ಅಥವಾ ವಸ್ತುವಿನ ಉಷ್ಣತೆ ಕಡಿಮೆ ಆದಂತೆ ಇದರಿಂದ ನಮಗೆ ದೊರಕಬಹುದಾದ–ಲಭ್ಯ ಉಪಯುಕ್ತ–ಶಕ್ತಿ ಕಡಿಮೆ ಆಗುತ್ತದೆ. ಇದನ್ನೇ ಇನ್ನೊಂದು ಮಾತಿನಲ್ಲಿ–ತುಸು ಆಲಂಕಾರಿಕವಾಗಿಯಾದರೂ– ಅನ್ವರ್ಥವಾಗಿಯೂ ಶಕ್ತಿಯ ಅವನತಿ (ಡಿಗ್ರೆಡೇಷನ್) ಎನ್ನುತ್ತಾರೆ. ಶಕ್ತಿಯ ನಿರಂತರ ಅವನತಿಯನ್ನೇ ಉಷ್ಣಗತಿಶಾಸ್ತ್ರದ ಎರಡನೆಯ ನಿಯಮ ಸೂಚಿಸುತ್ತದೆ ಎಂದರೂ ತಪ್ಪಿಲ್ಲ.

$T_1^0$ ಉಷ್ಣತೆಯಿಂದ $T_2^0$ ಉಷ್ಣತೆಗೆ ಅವಿಪರ್ಯಯ ರೀತಿಯಲ್ಲಿ ಉಷ್ಣ ಹರಿದಾಗ ನಮಗೆ ಲಭ್ಯವಿರುವ ಶಕ್ತಿ ಹ್ರಾಸವಾಗುತ್ತದೆ. ಇಂಥ ಹ್ರಾಸ $\Delta W = Q\left[\frac{T}{T_2}-\frac{T}{T_1}\right] = QT\left[\frac{T_1-T_2}{T_1T_2}\right] > 0$. ಈ ಹ್ರಾಸ ನಿಜವಾಗಿದೆ ಎಂತಲೇ ಇದು ಧನಾತ್ಮಕವಾಗಿದೆ. ಇಷ್ಟರಲ್ಲಿ ಎಂಟ್ರೊಪಿ ಹೆಚ್ಚುತ್ತದೆ, ಈ ಹೆಚ್ಚಳ $\Delta S = \frac{Q}{T_2}-\frac{Q}{T_1} = Q\left[\frac{T_1-T_2}{T_1T_2}\right] > 0$. ಇವೆರಡನ್ನೂ ತುಲನೆ ಮಾಡಿದಾಗ $\Delta W=T\Delta S$. ಅಥವಾ ಲಭ್ಯಶಕ್ತಿಯ ಹ್ರಾಸ (ಇದನ್ನೇ ಅಲಭ್ಯಶಕ್ತಿ ಎನ್ನುತ್ತಾರೆ)= T X ಎಂಟ್ರೊಪಿಯ ಹೆಚ್ಚಳ.

ನಿಶ್ಚಿತ ಉಷ್ಣತೆ $T^0$ಯಲ್ಲಿ ಅಲಭ್ಯಶಕ್ತಿಯ ಪರಿಮಾಣ ಎಂಟ್ರೊಪಿಯ ಹೆಚ್ಚಳಕ್ಕೆ ಅನುಪಾತಿಕವಾಗಿದೆ. ಎಂಟ್ರೊಪಿ ಹೆಚ್ಚಿದಂತೆ ಅಲಭ್ಯಶಕ್ತಿಯೂ ಹೆಚ್ಚುತ್ತದೆ. ಇದರಿಂದಲೇ ಎಂಟ್ರೊಪಿಯನ್ನು ಅಲಭ್ಯತೆಯೆಂದೂ ಅದರ ಅಳತೆಯೆಂದೂ ಅನ್ವರ್ಥವಾಗಿ ಕರೆಯುತ್ತಾರೆ. ನಿಜಕ್ಕೂ ಎಂಟ್ರೊಪಿಯ ಹೆಚ್ಚಳವೇ ಅಲಭ್ಯತೆ ಇಲ್ಲವೆ ಅದರ ಅಳತೆ ಎನ್ನುವುದು ನಿಖರವಾದ ಅಂಶ.




ಚಿತ್ರ 2

ಎಂಟ್ರೊಪಿ ಸಂಬಂಧವಾದ ಹಿಂದಿನ ಮತ್ತು ಆಧುನಿಕ ಭಾವನೆಗಳ ತುಲನೆ: ಎಂಟ್ರೊಪಿ ಹೆಚ್ಚಳಕ್ಕೆ ಉಷ್ಣದ ಪೂರೈಕೆ ಕಾರಣವಾಗುತ್ತದೆ. ಉಷ್ಣದ ಹೆಚ್ಚಳದಿಂದ ಅಣುಗಳ ಚಲನೆ ಮತ್ತೂ ಅಸ್ತವ್ಯಸ್ತವಾಗುತ್ತ ಸ್ವಚ್ಛಂದಂತೆ ಹೆಚ್ಚುತ್ತದೆ. ಕ್ರಮಬದ್ಧತೆ ತೊಲಗುತ್ತ ಹೆಚ್ಚು ಸ್ವತಂತ್ರವಾದ ಯಾದೃಚ್ಛಿಕ ಚಲನೆ ಕಂಡು ಬರುತ್ತದೆ. ಉಷ್ಣವನ್ನು ತೆಗೆಯುವುದರಿಂದ ಎಂಟ್ರೊಪಿ ಕಡಿಮೆಯಾಗುತ್ತ ಇಂಥ ಅಣುಗಳ ಚಲನೆಯಲ್ಲಿನ ಯಾದೃಚ್ಛಿಕತೆ ಕಡಿಮೆಯಾಗುತ್ತ ಹೆಚ್ಚಿನ ಶಿಸ್ತು, ಕ್ರಮಬದ್ಧತೆಗಳು ತೋರುತ್ತವೆ. ಹಾಗಾದರೆ ಎಂಟ್ರೊಪಿಯ ಹೆಚ್ಚಳ ಕ್ರಮರಾಹಿತ್ಯವನ್ನೊದಗಿಸಿ, ಈ ಕಾರಣದಿಂದಲೇ ಆದರೂ ಲಭ್ಯಶಕ್ತಿಯಲ್ಲಿ ಹ್ರಾಸವನ್ನುಂಟು ಮಾಡುತ್ತದೆ. ಎಂಟ್ರೊಪಿಯ ಕೊರತೆ ಹೆಚ್ಚಿನ ಕ್ರಮವನ್ನುಂಟು ಮಾಡುತ್ತ ಅಣುಗಳ ಹೆಚ್ಚಿನ ಕ್ರಮಬದ್ಧತೆಯನ್ನುಂಟುಮಾಡುತ್ತ ಹೆಚ್ಚಿನ ಲಭ್ಯಶಕ್ತಿಯನ್ನೊದಗಿಸುತ್ತದೆ. ಹೀಗೆ ಅಲಭ್ಯತೆಯ ಹೆಚ್ಚಳ ಕೊರತೆಗಳೇ ಎಂಟ್ರೊಪಿಯ ಹೆಚ್ಚಳ ಮತ್ತು ಕೊರತೆಗಳು.

ಎಂಟ್ರೊಪಿ ಮತ್ತು ನಿರಪೇಕ್ಷ ಉಷ್ಣತೆಯ ರೇಖಾಚಿತ್ರ: ಉಷ್ಣಚಲನ ಸಂಬಂಧವಾದ ಬದಲಾವಣೆಗಳನ್ನು ಗ್ರಾಫ್ ಮೂಲಕ ಚಿತ್ರಿಸುವಲ್ಲಿ ಶುದ್ಧ ಭೌತವಿಜ್ಞಾನದಲ್ಲಿ ಘನಗಾತ್ರ ಮತ್ತು ಒತ್ತಡಗಳಲ್ಲಿ ಪ್ರಾಶಸ್ತ್ಯ ಕೊಟ್ಟಂತೆ ಎಂಜಿನಿಯರಿಂಗಿನಲ್ಲಿ ಎಂಟ್ರೊಪಿ ಮತ್ತು ಉಷ್ಣತೆಗಳಲ್ಲಿ ಪ್ರಾಧಾನ್ಯ ಕೊಟ್ಟು (TS) ಚಿತ್ರಗಳನ್ನೆಳೆಯುತ್ತಾರೆ. ಇದರ ಉಪಯುಕ್ತತೆಗಳು: ಇದರಲ್ಲಿ ಸಮೋಷ್ಣತಾ ರೇಖೆಗಳು ಎಂಟ್ರೊಪಿ ಅಕ್ಷಕ್ಕೆ ಸಮಾನಾಂತರ; ಅಪಾರಣೀಯ ರೇಖೆಗಳು ನಿರಪೇಕ್ಷ ಉಷ್ಣತಾಕ್ಷಕ್ಕೆ ಸಮಾನಾಂತರ. ಆದ್ದರಿಂದ ಈ ಕ್ರಮವನ್ನನುಸರಿಸಿದಾಗ ಕಾರ್ನೋಚಕ್ರೀಯಾವರ್ತ ಅವಶ್ಯವಾಗಿಯೂ ಆಯತಾಕಾರವಾಗಿದ್ದು, ಇದರ ವಿಸ್ತೀರ್ಣದ ನಿರ್ಣಯ ಸುಲಭ. ಈ ವಿಸ್ತೀರ್ಣ ಎಂಜಿನ್ ಒದಗಿಸುವ ಭೌತಕಾರ್ಯವೆಂದು ಬೇರೆ ಹೇಳುವ ಅವಶ್ಯವಿಲ್ಲ. ಇಂಥ ಚಿತ್ರದಲ್ಲಾದರೋ ವಿವಿಧ ಹೆಜ್ಜೆಗಳು–ರೇಖೆಗಳು–ಕೇವಲ ವಿಪರ್ಯಯ ಬದಲಾವಣೆಗಳನ್ನು ನಿರೂಪಿಸುತ್ತವೆಯೇ ವಿನಾ ಎಂದಿಗೂ ಅವಿಪರ್ಯಯ ಬದಲಾವಣೆಗಳನ್ನಲ್ಲ ಎಂಬುದನ್ನು ಮರೆಯಬಾರದು.

ಶೂನ್ಯ ಎಂಟ್ರೊಪಿ: ಇಷ್ಟರ ತನಕ ಎಂಟ್ರೊಪಿಯ ಬೆಲೆಯಲ್ಲಿನ ವ್ಯತ್ಯಾಸಗಳನ್ನು ಮಾತ್ರ ಗಮನಿಸಿದ್ದೇವೆಯೆ ವಿನಾ ಇದರ ಅಳತೆಯ ಆದಿಯಲ್ಲಿ ಇದರ ಶೂನ್ಯ ಬೆಲೆಯಾವುದೆಂಬುದನ್ನು ಗಮನಿಸಿಲ್ಲ. ಯಾಂತ್ರಿಕ ಇಲ್ಲವೆ ವೈದ್ಯುತ ವಿಭವ ಶಕ್ತಿಯ

(ಪೊಟೆನ್ಷಿಯಲ್ ಎನರ್ಜಿ) ಶೂನ್ಯವನ್ನು ಹೇಗೆ ಅರಿಯಲಾರೆವೋ ಹೇಗೆ ಅಲ್ಲಿ ಕೇವಲ ಸಾಪೇಕ್ಷ ಬೆಲೆಗಳನ್ನು ಮಾತ್ರ ಪರಿಶೀಲಿಸುವೆವೋ ಹಾಗೆಯೇ ಎಂಟ್ರೊಪಿಯ ಶೂನ್ಯ ಬೆಲೆಯನ್ನು ಸ್ಪಷ್ಟವಾಗಿ ಗುರುತಿಸಲಾರೆವು. ಆದರೆ ಅನುಕೂಲತೆಯ ದೃಷ್ಟಿಯಿಂದ, ನೀರಿನ ಸಂಬಂಧವಾದ ಎಂಟ್ರೊಪಿಯನ್ನು ಅಭ್ಯಸಿಸುವಾಗ $0^0$ ಸೆಂ.ಗ್ರೇ. ಮತ್ತು ಶಿಷ್ಟ ವಾತಾವರಣದ ಒತ್ತಡದ ಸಂದರ್ಭದಲ್ಲಿ ನೀರಿನ ಎಂಟ್ರೊಪಿ ಶೂನ್ಯವೆಂದು ಗ್ರಹಿಸಲಾಗುತ್ತದೆ.

ಇನ್ನು ಹಿಂದೆ ಪ್ರಸ್ತಾಪಿಸಿದ (T, S) ಚಿತ್ರದಲ್ಲಿ ಒಂದು ವ್ಯವಸ್ಥೆಯ ಉಷ್ಣಗತಿ ಸ್ಥಿತಿಯನ್ನು ಅದರ ಇನ್ನೊಂದು ಲಕ್ಷಣ P (ಇದು ಗಾತ್ರವೋ ಅತಿ ಕಡಿಮೆ ಉಷ್ಣತೆಗಳಲ್ಲಿ ಕಾಂತ ತೀವ್ರತೆಯೇ ಇರಬಹುದು) ಮತ್ತು T ಗೆ ಸಂಬಂಧಿಸಿ ಎಳೆದಾಗ $P_2$ ಅವಸ್ಥೆಯಿಂದ $P_1$ ಅವಸ್ಥೆಗೆ ಸಮೋಷ್ಣತೆ ಬದಲಾವಣೆಯನ್ನು ab ಸೂಚಿಸುವುದು. ಅನಂತರ b ಯಿಂದ c ಗೆ, ಅಂದರೆ bc ಪುನಃ $P_2$ ಅವಸ್ಥೆಗೆ bc ಉಷ್ಣಪಾರಕ ಬದಲಾವಣೆಯನ್ನು ಪಡೆವ ವ್ಯವಸ್ಥೆಯೊಂದು $T_1^0$ ಉಷ್ಣತೆಯಿಂದ $T_2^0$ ಉಷ್ಣತೆಗೆ ತಣೆಯುವುದು. ಈ ಕ್ರಿಯೆಯಿಂದ ಮೊದಲಿನ P ಅವಸ್ಥೆ ಪಡೆದರೂ T ಮತ್ತು S ಗಳು ಕಡಿಮೆಯಾಗುವುವು. ಇದನ್ನು ಹೀಗೆಯೇ ಮುಂದುವರಿಸುತ್ತ $0^0$ ಉಷ್ಣತೆಗೆ ಬರಲು ಪ್ರಯತ್ನಿಸಬಹುದು. $0^0$K ಉಷ್ಣತೆ ಹತ್ತಿರ ಬಂದಂತೆ ಈ ಕಾರ್ಯ ಕ್ಲಿಷ್ಟವಾಗುತ್ತದೆ. ಉಷ್ಣಗತಿಶಾಸ್ತ್ರದ ಮೂರನೆಯ ಸಿದ್ಧಾಂತವನ್ನು ಇಲ್ಲಿ ಸ್ಮರಿಸಬಹುದು. ನಿಶ್ಚಿತ ಸಂಖ್ಯೆಯ ಪರಿಕರ್ಮಗಳ (ಆಪರೇಷನ್) ಮೂಲಕ ಅವು ಎಷ್ಟು ಸ್ಪಷ್ಟ ಮತ್ತು ಸಾಧುವಾಗಿದ್ದರೂ (ನ್ಯೂನತೆಗಳಿಗೆ ಅವಕಾಶವಿಲ್ಲದಿದ್ದರೂ) $0^0$K ಶೀತ ಸ್ಥಿತಿಯನ್ನು (ನಿರಪೇಕ್ಷ ಶೂನ್ಯ ಡಿಗ್ರಿ) ಉಷ್ಣತೆಯನ್ನೂ ಎಂದೂ ಮುಟ್ಟಲಾರೆವು. ಹಾಗಾದರೆ ಇಂಥ ಹಲವು ಪರಿಕರ್ಮಗಳ ತರುವಾಯ $P_1P_2$ ರೇಖೆಗಳು ಹತ್ತಿರ ಬರುತ್ತ $0^0$K ಸ್ಥಿತಿಯಲ್ಲಿ ಏಕತ್ರ ಸೇರುವುವು. ಇವು ಅವಶ್ಯವಾಗಿಯೂ ಎಂಟ್ರೊಪಿ ಅಕ್ಷದಲ್ಲಿ ಶೂನ್ಯ ಡಿಗ್ರಿ ಕೆಲ್ವಿನಿನಲ್ಲೇ ($0^0$K) ಸೇರುವುವೇ ($0^0$K ಗಿಂತ ಕೆಳಗೆ ಹೋಗುವುದು ಅಸಾಧ್ಯವೆಂಬುದನ್ನು ಮರೆಯುವುದು) ವಿನಾ ಇದರ ಮೇಲಾಗಲೀ ಕೆಳಗಾಗಲೀ ಅಲ್ಲ. ಇದರಿಂದ $0^0$K ಹತ್ತಿರ ಬಂದಂತೆ ಯಾವ ವ್ಯವಸ್ಥೆಯ ಎಂಟ್ರೊಪಿಯೂ ಶೂನ್ಯದತ್ತ ಸಾಗುವುದು. ಅಥವಾ ಸ್ಪಷ್ಟವಾಗಿ ಹೇಳುವುದಾದರೆ ವ್ಯವಸ್ಥೆಯೊಂದರ ಉಷ್ಣತೆ $0^0$K ಯನ್ನು ಸಮೀಪಿಸಿದಂತೆ ಅದರ ಸಮೋಷ್ಣತಾ ಬದಲಾವಣೆಗಳಲ್ಲಿ ಎಂಟ್ರೊಪಿಯ ಬದಲಾವಣೆ ಶೂನ್ಯ. ಇಂಥ ಎರಡು ಇಲ್ಲವೆ ಹಲವು ವಕ್ರರೇಖೆಗಳು ಸಂಧಿಸುವ ಈ ಬಿಂದುವನ್ನು ಶೂನ್ಯ ಎಂಟ್ರೊಪಿ ಎಂದು ಕರೆಯಬಹುದು. $0^0$K ಯನ್ನು ಹೇಗೆ ತಲಪಲಾರೆವೋ ಹಾಗೆಯೇ ಶೂನ್ಯ ಎಂಟ್ರೊಪಿಯ ಅವಸ್ಥೆಯನ್ನು ತಲಪಲಾರೆವು ಎಂದೇ ಇದರ ಅರ್ಥ. ಇದೇ ಅಲ್ಲದೇ $0^0$K ಯಲ್ಲಿ ಪ್ರತಿ ಸ್ಫಟಿಕಾಕೃತಿಯ (ಕ್ರಿಸ್ಟಲೈನ್) ಘನ ವಸ್ತುವಿನ ಎಂಟ್ರೊಪಿ ಶೂನ್ಯವೆಂದೇ ಸಕಾರಣವಾಗಿ ಗ್ರಹಿಸಲಾಗಿದೆ.



ಚಿತ್ರ 3



ಚಿತ್ರ 4

ಎಂಟ್ರೊಪಿ ಮತ್ತು ಸುತ್ತಲಿನ ನಿರ್ಜೀವ ಮತ್ತು ಸಜೀವ ಜಗತ್ತು: ಈ ವಿಶ್ವದ ಒಟ್ಟು ಶಕ್ತಿ ಎಲ್ಲವೂ ಸ್ಥಿರ, ಅದರ ಎಂಟ್ರೊಪಿ ಮಾತ್ರ ಹೆಚ್ಚುತ್ತಲೇ ಇದೆ ಎಂದು ಮೊತ್ತಮೊದಲು ರೂಡೋಲ್ಫ್ ಕ್ಲಾಸಿಯಸ್ ಎಂಟ್ರೊಪಿಯನ್ನು ಸುತ್ತಲಿನ ವಸ್ತು ಪ್ರಪಂಚಕ್ಕೆ ಅನ್ವಯಿಸಿ ಪ್ರತಿಪಾದಿಸಿದ್ದಾನೆ. ವಿಶ್ವದ ವ್ಯಾಪ್ತಿಯ ವಿಚಾರ ಇಲ್ಲಿ ಅನಗತ್ಯ; ಆದರೂ ಇದರ ವಸ್ತುವೆಲ್ಲವೂ ಸೀಮಿತವೇ, ಎಂದರೆ ಇದು ಅವಶ್ಯವಾಗಿಯೂ ಸಂವೃತ ವ್ಯವಸ್ಥೆ (ಕ್ಲೋಸ್ಡ್ ಸಿಸ್ಟಂ) ಇದರ ವಿವಿಧ ನೈಸರ್ಗಿಕ ಇಲ್ಲವೆ ಕೃತಕ ಚಟುವಟಿಕೆಗಳ ಕಾರಣ ಲಭ್ಯ ಮತ್ತು ಉಪಯುಕ್ತ ಶಕ್ತಿ ಕಡಿಮೆಯಾಗುತ್ತಲಿದ್ದು ಅಲಭ್ಯಶಕ್ತಿ (ಎಂಟ್ರೊಪಿ) ಹೆಚ್ಚುತ್ತಲೇ ಇದೆ ಎಂದು ಇವನು ಸಾರಿದನಲ್ಲದೆ ಈ ಧರ್ಮ ವಿಶ್ವದ ಎಲ್ಲ ಭಾಗಗಳಿಗೂ ಅನ್ವಯಿಸುವಂಥ ಸತ್ಯ ಎಂದಿದ್ದಾನೆ. ಈತನ ಪ್ರತಿಪಾದನೆಯನ್ನು ಇವನ ಸಮಕಾಲೀನ ಹಾಗೂ ಅನಂತರದ ಗಿಬ್ಸ್, ಹೆಲ್ಮ್‌ಹೋಲ್ಟ್ಸ್, ಕ್ಲಾರ್ಕ್ ಮ್ಯಾಕ್ಸ್‌ವೆಲ್, ಲುಡ್ವಿಗ್ ಬೋಲ್ಟ್ಸ್‌ಮನ್ ಇವರೆಲ್ಲರೂ ತಂತಮ್ಮ ಗಣಿತ ಮತ್ತು ತಾತ್ತ್ವಿಕ ಸಾಧನೆಗಳಿಂದ ಅನುಮೋದಿಸಿದ್ದಾರೆ. ಇತ್ತೀಚೆಗೆ ವಿಶ್ವದಲ್ಲಿ ವಸ್ತು ಸೃಷ್ಟಿಯಾಗುತ್ತಲೇ ಇದೆ ಎಂಬ ಹೊಸ ಭಾವನೆಯೊಂದು ಪ್ರತಿಪಾದಿತವಾಗಿದ್ದು ಇಂಥ ಎಂಟ್ರೊಪಿಯ ಹೆಚ್ಚಳವನ್ನು ಎಲ್ಲ ವಿಶ್ವಕ್ಕೂ ಅನ್ವಯಿಸುವುದು ಸರಿಯೇ ಎಂಬ ಸಂದೇಹ ಬರುತ್ತದೆ. ಆದರೆ ನಮ್ಮ ಭಾಗದ ವಿಶ್ವಕ್ಕೆ, ಅಂದರೆ ಪ್ರಪಂಚಕ್ಕೆ ಎಂಟ್ರೊಪಿಯ ಹೆಚ್ಚಳ ಇಲ್ಲವೆ ಲಭ್ಯಶಕ್ತಿಯ ಸತತ ಹ್ರಾಸವನ್ನು ಸಾಧಾರಣವಾಗಿ ಅಂಗೀಕರಿಸಬಹುದು. ಪ್ರಪಂಚದ ಉದ್ದಗಲಕ್ಕೂ ಹರಡಿರುವ ಎಲ್ಲ ರೂಪದ ಶಕ್ತಿ ಕ್ರಮೇಣ ಕ್ಷಯಿಸುತ್ತ, ಕಡಿಮೆ ಆಗುತ್ತ ಬರುತ್ತಿದೆ. ಅಂತೂ ಪ್ರಪಂಚದ ಲಭ್ಯಶಕ್ತಿ ಶೂನ್ಯವೆನಿಸಿ ನಾಶಗೊಳ್ಳಲಿದೆ (ಲಯವಾಗಲಿದೆ) ಎಂಬ ಭಾವನೆ ಸ್ವೀಕೃತವಾಗಿದೆ (ಹೊಸ ವಸ್ತುವಿನ ಸೃಷ್ಟಿ, ಹೊಸ ಪ್ರಪಂಚದ ಸೃಷ್ಟಿ, ಪರಮಾಣುಗಳ ಬೀಜಜನ್ಯ ಶಕ್ತಿಯ ಸೃಷ್ಟಿ ಮತ್ತು ಹರಡುವಿಕೆ ಮೊದಲಾದವುಗಳನ್ನು ಕುರಿತ ಹೊಸ ಭಾವನೆಗಳು ಪೂರ್ತಿ ವಿಕಾಸಗೊಂಡಿಲ್ಲ. ಆದ್ದರಿಂದ ಈ ಭಾವನೆಯನ್ನು ಇಲ್ಲಿ ಪ್ರಸ್ತಾಪಿಸಿಲ್ಲ).

ಇದಿಷ್ಟು ನಿರ್ಜೀವ ಜಗತ್ತಿಗೆ ಸಂಬಂಧಿಸಿದ ವಿಚಾರವಾದರೆ ಜೀವಜಗತ್ತಿನಲ್ಲಿ ಎಂಟ್ರೊಪಿಯನ್ನು ಗುರುತಿಸಲಾರೆವೆ ಎಂಬುದು ಸ್ವಾಭಾವಿಕ ಪ್ರಶ್ನೆ. ನಿರ್ಜೀವ ಜಗತ್ತಿನಲ್ಲಿ ಪ್ರತಿ ಅವಿಪರ್ಯಯ ಚಟುವಟಿಕೆಯ ದೆಸೆಯಿಂದ ಎಂಟ್ರೊಪಿ ಹೆಚ್ಚುತ್ತಲೇ ಹೋಗುತ್ತದೆ; ಜೀವಿಯ ಹುಟ್ಟು, ಬೆಳೆವಣಿಗೆ ಇತರ ಜೈವಿಕ ಕಾರ್ಯಗಳೆಲ್ಲ ಅವಿಪರ್ಯಯ ಬದಲಾವಣೆಗಳು. ಇವುಗಳಲ್ಲಿ ಎಂಟ್ರೊಪಿಯನ್ನು ನಾವು ಗುರುತಿಸಿಕೊಂಡರೆ ಇಲ್ಲಿನ ಬದಲಾವಣೆ ನಿರ್ಜೀವ ಜಗತ್ತಿನ ಎಂಟ್ರೊಪಿ ಬದಲಾವಣೆಯ ತೀರ ವಿರುದ್ಧವೆಂದು ಸ್ಪಷ್ಟವಾಗಿ ಕಾಣುತ್ತದೆ. ಇಂಥ ಜೈವಿಕ ಚಟುವಟಿಕೆಗಳಲ್ಲಿ, ಸಸಿ ಮಣ್ಣಿನಿಂದ ಪೋಷಕ ದ್ರವ್ಯವನ್ನು ಹೀರುತ್ತದೆ. ಹೆಚ್ಚಿನ ಕ್ರಮ, ಶಿಸ್ತು ಮತ್ತು ವ್ಯವಸ್ಥೆಯಿಲ್ಲದ ವಿವಿಧ ಅಣುಗಳನ್ನು ಸುವ್ಯವಸ್ಥಿತವನ್ನಾಗಿ ಒದಗಿಸಿಕೊಂಡು ಇವನ್ನು ವ್ಯವಸ್ಥಿತವಾಗಿಯೇ ತನ್ನ ಅಂಗಗಳಿಗೆ ಕಳುಹುತ್ತದೆ. ಇದು ನಿಸರ್ಗದಲ್ಲಿ–ಮುಖ್ಯ ನಿರ್ಜೀವ ಪ್ರಪಂಚದಲ್ಲಿ ಜರುಗುತ್ತಲಿರುವ ಎಂಟ್ರೊಪಿಯ ವಿರುದ್ಧ ಲಕ್ಷಣದ ಋಣ ಎಂಟ್ರೊಪಿ ಎಂದರೆ ತಪ್ಪಾಗದು. ಜೀವಿಯ (ಅದು ಸಸಿಯೇ ಇರಲಿ, ಪ್ರಾಣಿಯೇ ಇರಲಿ) ವಿವಿಧ ಜೈವಿಕ ಚಟುವಟಿಕೆಗಳಿಂದ ಋಣ ಎಂಟ್ರೊಪಿ ಹೆಚ್ಚುತ್ತದೆ; ಕ್ರಮರಾಹಿತ್ಯ ಮತ್ತು ಅವ್ಯವಸ್ಥೆಗಳು ತೊಲಗುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಜೀವಜಗತ್ತಿನ ಎಂಟ್ರೊಪಿ ಋಣ ಲಕ್ಷಣವುಳ್ಳದು. ಮನುಷ್ಯ ಮತ್ತಿತರ ಪ್ರಾಣಿಗಳಲ್ಲಂತೂ ಬುದ್ಧಿಪ್ರೇರಿತವಾದ ಅನೇಕ ಚಟುವಟಿಕೆಗಳಲ್ಲಿ ಎಂಟ್ರೊಪಿಯ ಹೆಚ್ಚಳದ ಕಾರಣ ಜರುಗಲಿರುವ ಲಯ ಇಲ್ಲಿನ ನಾಶವನ್ನು ಪ್ರತಿಭಟಿಸುವ ಶಕ್ತಿಯನ್ನು ಜೀವಜಗತ್ತು ಪಡೆದಿದೆ ಎಂದೂ ಹೇಳಬಹುದು. ಜೀವಿ ಮರಣಾನಂತರ ಪುನಃ ನಿರ್ಜೀವ ಜಗತ್ತಿನ ಅಂಗವಾಗಿ ಪುನಃ ಎಂಟ್ರೊಪಿಯ ಹೆಚ್ಚಳಕ್ಕೆ ಕಾರಣವಾಗುವುದು. ಹೀಗೆಂದ ಬಳಿಕ ಜೀವಸೃಷ್ಟಿಯ ಕಾರ್ಯ, ಜೀವನ ಬೆಳವಣಿಗೆಗಳಲ್ಲಿನ ಎಂಟ್ರೊಪಿ ಋಣಾತ್ಮಕವೆನ್ನುವುದರಲ್ಲಿ ತಪ್ಪಿಲ್ಲ. (ಯು.ಎಲ್.ಎ.)

**ಎಂಡರ್ಸ್, ಜಾನ್ ಫ್ರಾಂಕ್ಲಿನ್:** 1897–1985. ಅಮೆರಿಕದ ಖ್ಯಾತ ಸೂಕ್ಷ್ಮಜೀವಿ ವಿಜ್ಞಾನಿ (ಮೈಕ್ರೊಬಯಾಲಜಿಸ್ಟ್). ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮೆಡಿಕಲ್ ಸ್ಕೂಲಿನಲ್ಲಿ ಬ್ಯಾಕ್ಟೀರಿಯಾಲಜಿ ಮತ್ತು ಸೋಂಕುರಕ್ಷಾವಿಜ್ಞಾನದ (ಇಮ್ಯುನಾಲಜಿ) ಪ್ರಾಧ್ಯಾಪಕ. ಊತಕಕೃಷಿಯಲ್ಲಿ (ಟಿಷ್ಯೂ ಕಲ್ಚರ್) ಬಹು ಪರಿಣಾಮಕಾರಿಯಾದ ನೂತನ ವಿಧಾನಗಳನ್ನು ಕಂಡುಹಿಡಿದು ಅದರ ಸಹಾಯದಿಂದ ಪೋಲಿಯೊ ವೈರಸ್ಸಿನ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟ. ಇದು ಮುಂದೆ ಅವನ ದೇಶೀಯನಾದ ಸಾಕ್‌ನಿಗೆ ಪೋಲಿಯೊ ನಿರೋಧಕ ವ್ಯಾಕ್ಸೀನನ್ನು ತಯಾರಿಸಲು ದಾರಿ ಮಾಡಿಕೊಟ್ಟಿತು. ವೈರಸ್ ಕೃಷಿವಿಧಾನಗಳ ಬಗ್ಗೆ ಎಂಡರ್ಸ್ ನಡೆಸಿದ ಸಂಶೋಧನೆಗಾಗಿ ಅವನಿಗೂ ಅವನ ಪ್ರಧಾನ ಸಹಸಂಶೋಧಕರಾದ ಥಾಮಸ್ ಎಚ್. ವೆಲರ್ ಮತ್ತು ಫ್ರೆಡರಿಕ್ ಸಿ. ರಾಬಿನ್ಸ್ ಅವರಿಗೂ 1954ರಲ್ಲಿ ವೈದ್ಯವಿಜ್ಞಾನದ

ನೊಬೆಲ್ ಪಾರಿತೋಷಕವನ್ನು ನೀಡಲಾಯಿತು. ಎಂಡರ್ಸ್ ಹುಟ್ಟಿದ್ದು 1897ರ ಫೆಬ್ರವರಿ 10ರಂದು. ಕನೆಕ್ಟಿಕಟ್ ಪ್ರಾಂತ್ಯದ ವೆಸ್ಟ್ ಹಾರ್ಟ್‌ಫರ್ಡ್ ಎಂಬಲ್ಲಿ. ಯೇಲ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಒಂದನೆಯ ಮಹಾಯುದ್ಧ ಪ್ರಾರಂಭವಾಯಿತು. ಹೀಗಾಗಿ ವಿದ್ಯಾಭ್ಯಾಸವನ್ನು ಅರ್ಧದಲ್ಲಿ ನಿಲ್ಲಿಸಿ ಸೈನಿಕ ಸೇವೆಗೆ ಸೇರಬೇಕಾಯಿತು. ಇದರಿಂದ ವಿಶ್ವವಿದ್ಯಾಲಯದ ಪದವಿ ಪಡೆಯುವುದು ತಡವಾಯಿತು. ನಂತರ ವ್ಯಾಸಂಗವನ್ನು ಮುಂದುವರಿಸಿದ್ದು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದಲ್ಲಿ ಸಂಶೋಧನ ಪದವಿಗಾಗಿ ವ್ಯಾಸಂಗ ಮಾಡುತ್ತಿದ್ದ ಎಂಡರ್ಸ್ ಕೊನೆಯ ಗಳಿಗೆಯಲ್ಲಿ ಕೆಲವು ಸ್ನೇಹಿತರಿಂದ ಪ್ರಭಾವಿತನಾಗಿ ವೈದ್ಯಕೀಯ ವ್ಯಾಸಂಗ ಕೈಗೊಂಡ. ಕೊನೆಗೆ 1930ರಲ್ಲಿ ಬ್ಯಾಕ್ಟೀರಿಯಾಲಜಿ ವಿಭಾಗದಲ್ಲಿ ಸಂಶೋಧನ ಪದವಿಗಳಿಸಿದ. ಅಂದಿನಿಂದ ಅದೇ ವಿಶ್ವವಿದ್ಯಾಲಯದ ವೈದ್ಯಶಾಲೆಯಲ್ಲಿ ಸೇವೆ ಸಲ್ಲಿಸಿದ.

ಪೌಷ್ಟಿಕಾಂಶಗಳಿರುವ ದ್ರಾವಣವನ್ನು ಉಪಯೋಗಿಸಿ ಬ್ಯಾಕ್ಟೀರಿಯಗಳನ್ನು ಗಾಜಿನ ತಟ್ಟೆಗಳಲ್ಲಿ ಬೆಳೆಸಬಹುದು. ಆದರೆ ವೈರಸ್‌ಗಳನ್ನು ಹಾಗೆ ಬೆಳೆಸುವುದು ಸಾಧ್ಯವಿಲ್ಲ. ಅವು ವೃದ್ಧಿಯಾಗುವುದು ಸಜೀವಗಳ ದೇಹದಲ್ಲಿ ಮಾತ್ರ. ಆದರೆ ಫಲಿತವಾದ (ಫರ್ಟಿಲೈಸ್ಡ್) ಕೋಳಿಮೊಟ್ಟೆಯ ಚಿಪ್ಪಿನಲ್ಲಿ ಒಂದು ರಂಧ್ರ ಮಾಡಿ ಒಳಗಿರುವ ಕೋಳಿಯ ಭ್ರೂಣವನ್ನು ಉಪಯೋಗಿಸಿಕೊಂಡು ಅದರಲ್ಲಿ ವೈರಸುಗಳನ್ನು ಬೆಳೆಸಬಹುದು.

ವೈರಸುಗಳನ್ನು ಬೆಳೆಸಲು ಬೇಕಾದ ಜೀವಂತ ಜೀವಕೋಶಗಳು ಒಟ್ಟು ಜೀವಿಯ ಅಥವಾ ಭ್ರೂಣದ ಭಾಗವಾಗಿರಬೇಕಿಲ್ಲ, ಒಂದು ಪೂರ್ಣ ಅಂಗದ ಭಾಗವಾಗಿಯೂ ಇರಬೇಕಾದ್ದಿಲ್ಲವೆಂದು ಎಂಡರ್ಸ್ ಮನಗಂಡ. ಕೋಳಿಯ ಭ್ರೂಣವನ್ನು ಅರೆದು ರಕ್ತದಲ್ಲಿ ತೇಲಿಬಿಟ್ಟು ಅದರಲ್ಲಿ ಗದ್ದಬಾವು (ಮಂಪ್ಸ್) ವೈರಸನ್ನು ಬೆಳೆಸುವುದರಲ್ಲಿ ಎಂಡರ್ಸ್, ವೆಲರ್ ಮತ್ತು ರಾಬಿನ್ಸ್ ಯಶಸ್ಸುಗಳಿಸಿದರು. ಹಿಂದೆ ಇದೇ ಪ್ರಯತ್ನ ಮಾಡಿದವರು ಯಶಸ್ವಿಯಾಗಿರಲಿಲ್ಲ. ಏಕೆಂದರೆ ಅದರಲ್ಲಿ ಬ್ಯಾಕ್ಟೀರಿಯಾಗಳೂ ಬೆಳೆದು ತೊಂದರೆ ಉಂಟುಮಾಡುತ್ತಿದ್ದುವು. ಎಂಡರ್ಸ್ ಮಾಡಿದ ಉಪಾಯವೆಂದರೆ, ಅದಕ್ಕೆ ಸ್ವಲ್ಪ ಪೆನಿಸಿಲಿನ್ ಬೆರೆಸಿದ್ದು. ಪೆನಿಸಿಲಿನ್ ಬ್ಯಾಕ್ಟೀರಿಯಗಳನ್ನು ನಾಶಮಾಡಿ ವೈರಸುಗಳ ವೃದ್ಧಿಗೆ ಅವಕಾಶ ಮಾಡಿಕೊಡುವುದೆಂದು ಎಂಡರ್ಸ್ ತೋರಿಸಿಕೊಟ್ಟ.

ತರುವಾಯ ಎಂಡರ್ಸ್ ತಂಡದವರು ಪೋಲಿಯೊಮಯೆಲಿಟಿಸ್ ವೈರಸ್ ಕಡೆ ಗಮನ ಹರಿಸಿದರು. ಪೋಲಿಯೊ ವೈರಸ್ ಜೀವಂತ ಕೋತಿ ಮತ್ತು ಮನುಷ್ಯರ ನರಗಳ ಅಂಗಾಂಶಗಳಲ್ಲಿ ಮಾತ್ರ ಬೆಳೆಯುವುದೆಂದು ತಿಳಿದಿತ್ತು. ಈ ತಂಡದವರು ಸತ್ತುಹುಟ್ಟಿದ (ಸ್ಟಿಲ್‌ಬಾರ್ನ್) ಶಿಶುವಿನ ಅಂಗಾಂಶವನ್ನು ಪಡೆದು ಅದಕ್ಕೆ ಪ್ರತಿಜೈವಿಕವನ್ನು (ಆಂಟಿಬಯೊಟಿಕ್) ಬೆರೆಸಿ ಅದರಲ್ಲಿ ಪೋಲಿಯೊ ವೈರಸನ್ನು ಬೆಳೆಸಿದರು (1949). ತರುವಾಯ ಇತರ ಬಗೆಯ ಅಂಗಾಂಶಗಳಲ್ಲೂ ಆ ವೈರಸನ್ನು ಬೆಳೆಸಿದರು. ಇಷ್ಟಾದಮೇಲೆ ಪೋಲಿಯೊ ವೈರಸನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಸಿ ಅದನ್ನು ಅಧ್ಯಯನ ಮಾಡಿ ಪೋಲಿಯೊ ನಿರೋಧಕ ವ್ಯಾಕ್ಸೀನ್ ತಯಾರಿಸುವುದು ಸಾಕ್‌ಗೆ ಸಾಧ್ಯವಾಯಿತು. ಇವರು ಸೆಪ್ಟೆಂಬರ್ 8, 1985 ರಂದು ನಿಧನರಾದರು. (ಜೆ.ಆರ್.ಎಲ್.)

**ಎಂಡಿಮಿಯಾನ್:** ಗ್ರೀಕ್ ಪುರಾಣಕಥೆಯೊಂದರ ನಾಯಕ: ಸುಂದರ ಕುರಿಗಾಹಿ ಅಥವಾ ಬೇಟೆಗಾರ ಯುವಕ. ಏಷ್ಯಮೈನರಿನ ಕೇರಿಯದ ಲ್ಯಾಟ್‌ಮಾಸ್ ಶಿಖರದ ಗುಹೆಯೊಂದರಲ್ಲಿ ಎಂಡಿಮಿಯಾನ್ ಚಿರನಿದ್ರೆಯಲ್ಲಿದ್ದಾಗ ಪ್ರತಿರಾತ್ರಿಯೂ ಇವನ ಬಳಿಗೆ ಚಂದ್ರದೇವತೆ ಸಿಲೀನೀ ಬರುತ್ತಿದ್ದಳಂತೆ. ಈತನಿಗೆ ಈ ನಿದ್ರೆ ಹೇಗೆ ಪ್ರಾಪ್ತಿಯಾಯಿತೆಂಬ ಬಗ್ಗೆ ಎರಡು ಅಭಿಪ್ರಾಯಗಳಿವೆ. ಸ್ವಇಚ್ಛೆಯಿಂದ ಈತ ನಿದ್ರೆಯಲ್ಲಿ ತೊಡಗಿದ್ದನೆಂಬುದು ಒಂದು ಮತ. ಜ಼ೂಸನ ಶಾಪದಿಂದ ಇವನಿಗೆ ಈ ಸ್ಥಿತಿ ಬಂತೆಂಬುದು ಇನ್ನೊಂದು ಹೇಳಿಕೆ.

ಎಂಡಿಮಿಯಾನ್ ಸೂರ್ಯನ ಮೂರ್ತೀಕರಣವಿರಬಹುದೆಂದೂ ಅವನ ನಿದ್ರೆ ಸೂರ್ಯ ಮುಳುಗಿದ್ದರ ಸಂಕೇತವೆಂದೂ ಹೇಳಲಾಗಿದೆ. ಇಂಗ್ಲಿಷ್ ಕವಿ ಕೀಟ್ಸ್ (1795–1821) ಈ ಕಥೆಯನ್ನು ಆಧರಿಸಿ ಎಂಡಿಮಿಯಾನ್ ಎಂಬ ನಾಲ್ಕು ಭಾಗಗಳ ದೊಡ್ಡ ಕವನವನ್ನು ಬರೆದಿದ್ದಾನೆ. *

**ಎಂಡೈವ್:** ಈ ಸಸ್ಯ ಕಂಪಾಸಿಟೆ ಕುಟುಂಬದ ಚಿಕೊರಿಯಮ್ ಜಾತಿಯ ಎಂಡೈವಿಯ ಪ್ರಭೇದಕ್ಕೆ ಸೇರಿದೆ. 2 ರಿಂದ 3 ಅಡಿ ಎತ್ತರ ಬೆಳೆಯುವ ಏಕಋತುವಿನ ಪರ್ಣಸಸಿ. ಗುಂಪಾಗಿರುವ ಇದರ ಎಲೆಗಳು ಹೂಗೊಂಚಲಿಗಿಂತ ಎತ್ತರವಾಗಿರುತ್ತವೆ. ಹೂಗೊಂಚಲು ನಸುಗೆಂಪು ಚಂಡಿನಂತಿರುತ್ತದೆ. ತರಕಾರಿ ಸಸ್ಯ ಇದರ ಎಳೆಯ ಎಲೆಗಳನ್ನು ಕೋಸಂಬರಿಯಾಗಿ ಬಳಸುತ್ತಾರೆ. ಇದರ ಉಗಮಸ್ಥಾನ ಭಾರತವಾದರೂ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಈಗ ಭಾರತದಲ್ಲೂ ಜನಪ್ರಿಯವಾಗುತ್ತಿದೆ. ಇದರ ಸೊಪ್ಪು ಲೆಟ್ಯೂಸ್‌ಗಿಂತ ಸ್ವಲ್ಪ ಒಗರು. (ಡಿ.ಎಮ್.)

**ಎಂಡೊಸ್ಕೋಪ್:** (a) ಸ್ವರಯಂತ್ರಮುಖ ಮತ್ತು ಸ್ವರತಂತುಗಳ ವಿವಿಧ ಸ್ಥಿತಿಯನ್ನಲ್ಲದೆ ಧ್ವನಿಗಳ ಮೂಲಸ್ಥಾನವನ್ನೂ ಅರಿಯಲು ಬಳಸುವ ಒಂದು ಯಂತ್ರ. ಹಿಗಿನಕ್ ಮತ್ತು ಮೈಕೊನಸೆಲಿ ವಿದ್ವಾಂಸರು ಇದನ್ನು ಕಂಡು ಹಿಡಿದವರು. ಬಾಯಿ ಮುಚ್ಚಿಕೊಂಡು ಉಚ್ಚಾರ ಮಾಡುತ್ತಿರುವಾಗಲೂ ಇದರಿಂದ ಸ್ವರಯಂತ್ರ, ಸ್ವರತಂತುಗಳ ವಿವಿಧ ಕಾರ್ಯ ಮತ್ತು ಅವುಗಳ ಸ್ಥಿತಿಯನ್ನು ಗಮನಿಸಬಹುದು. ಹೀಗೆ ವಿವಿಧ ಧ್ವನಿಗಳ ಉಚ್ಚಾರಸ್ಥಾನ ಪರೀಕ್ಷಣೆಯ ಅಧ್ಯಯನ ಕಾರ್ಯವನ್ನು ಸುಲಭವಾಗಿ ನಡೆಸಬಹುದು. ಇದನ್ನು ಕಂಡುಹಿಡಿಯುವ ಮೊದಲು ಲೆರಿಂಗೊಸ್ಕೋಪನ್ನು ಧ್ವನಿ ಅಧ್ಯಯನಕ್ಕಾಗಿ ಬಳಸಲಾಗುತ್ತಿತ್ತು. ಬೊಜ಼ಿನಿ, ಬೊಬಿಂಗ್‌ಟನ್, ಗರ್ಷಿಯ, ಟರ್ಕ್ ಮತ್ತು ಜೆರಮಕ್ ಎಂಬ ಧ್ವನಿ ವಿಜ್ಞಾನಿಗಳು ಈ ದರ್ಪಣವನ್ನು ಕಂಡುಹಿಡಿದರು. ಈ ಉಪಕರಣವನ್ನು ಧ್ವನಿ ಉಚ್ಚಾರ ಮಾಡುವ ವ್ಯಕ್ತಿಯ ಕಿರುನಾಲಿಗೆ ಮತ್ತು ಗಂಟಲಿನ ವರೆಗೆ ನೂಕಿ ಆ ದರ್ಪಣದ ಮೇಲೆ ಸ್ವರಯಂತ್ರ ಮತ್ತು ಸ್ವರತಂತುಗಳ ಪ್ರತಿಬಿಂಬ ಬೀಳುವಂತೆ ಮಾಡಿ, ಪ್ರತಿಬಿಂಬಗಳ ಆಧಾರದ ಮೇಲೆ ಸ್ವರಯಂತ್ರ, ಸ್ವರತಂತುಗಳ ಸ್ಥಿತಿ ಮತ್ತು ಆ ಧ್ವನಿಗಳ ಮೂಲಸ್ಥಾನವನ್ನು ಕಂಡುಹಿಡಿಯುತ್ತಿದ್ದರು. ಆದರೆ ಇದು ಧ್ವನಿಗಳ ಸ್ಥೂಲವಾದ ಅಧ್ಯಯನಕ್ಕೆ ಸಹಾಯಕವಾಗುತ್ತಿತ್ತೇ ವಿನಾ ಮತ್ತೇನಲ್ಲ. ಏಕೆಂದರೆ, ಬಾಯಲ್ಲೇ ಯಂತ್ರವನ್ನು ಇರಿಸಿಕೊಂಡು ಧ್ವನಿಗಳನ್ನು ಉಚ್ಚಾರ ಮಾಡುವುದರಿಂದ ಧ್ವನಿಯ ಸ್ವಾಭಾವಿಕತೆ ಇಲ್ಲವಾಗುತ್ತಿತ್ತು. ಇಂಥ ಅಸ್ವಾಭಾವಿಕ ಧ್ವನಿಗಳ ಅಧ್ಯಯನ, ವಿಶ್ಲೇಷಣೆ ಮತ್ತು ವರ್ಗೀಕರಣ ಅಷ್ಟೊಂದು ಸಮಂಜಸವೆನಿಸುವುದಿಲ್ಲ. ಅಲ್ಲದೆ, ಸ್ವರಯಂತ್ರ ಮತ್ತು ಸ್ವರತಂತುಗಳ ರೀತಿ ಪ್ರತಿಬಿಂಬದ ರೂಪದಲ್ಲಿ ಅಸ್ಪಷ್ಟವಾಗಿರುತ್ತಿದ್ದುದರಿಂದ, ಈ ವಿಧಾನದ ಅಧ್ಯಯನ ಮತ್ತಷ್ಟು ಅನುಮಾನಕ್ಕೆಡೆ ಮಾಡುತ್ತಿತ್ತು. ಧ್ವನಿಗಳನ್ನು ಸ್ವಾಭಾವಿಕವಾಗಿ ಬಾಯಿ ಮುಚ್ಚಿಯೋ ತೆರೆದೋ ಉಚ್ಚಾರ ಮಾಡುವಾಗ ಸ್ವರಯಂತ್ರ, ಸ್ವರಯಂತ್ರಮುಖ, ಸ್ವರತಂತು ಮತ್ತು ಧ್ವನಿಗಳ ಮೂಲ ಮುಂತಾದ ಪ್ರಮುಖ ಕ್ರಿಯೆಗಳನ್ನು ವೈಜ್ಞಾನಿಕ ಹಾಗೂ ಸೂಕ್ಷ್ಮವಾಗಿ ಅಧ್ಯಯನ ನಡೆಸಿ ಧ್ವನಿವಿಜ್ಞಾನದಲ್ಲಿ ಅವುಗಳ ವಿಶ್ಲೇಷಣೆ ಮತ್ತು ವರ್ಗೀಕರಣ ಮಾಡಲು ಪ್ರಸ್ತುತ ಎಂಡೊಸ್ಕೋಪ್ ಯಂತ್ರದ ಬಳಕೆ ಹೆಚ್ಚುತ್ತಿದೆ.

(b) ವೈದ್ಯಶಾಸ್ತ್ರ ಅಂತದರ್ಶಕ; ದೇಹದ ಅಥವಾ ಅಂಗದ ಒಳ ಭಾಗವನ್ನು ಪರಿಶೀಲಿಸಲು ಬಳಸುವ ಉಪಕರಣ. (ಕೆ.ಕೆ.ಜಿ.)

**ಎಂಥಾಲ್ಪಿ:** ಕ್ರಿಯೋದ್ಯುಕ್ತ ಮಂಡಲದ ಉಷ್ಣಪಿಡಿ (ಹೀಟ್ ಕಂಟೆಂಟ್) ಯಾವುದೇ ವ್ಯವಸ್ಥೆಯಲ್ಲಿ (ಎಂದರೆ ವಿವೇಚನೆಯಲ್ಲಿರುವ ಆಕಾಶಭಾಗ) ಅದರ ಆಂತರಿಕ ಶಕ್ತಿ (U) ಹಾಗೂ ವ್ಯವಸ್ಥೆಯ ಘನಗಾತ್ರ (V) ಮತ್ತು ಪರಿಸರಗಳು ಅದರ ಮೇಲೆ ಪ್ರಯುಕ್ತಿಸುವ ಒತ್ತಡದ (P) ಗುಣಲಬ್ಧದ ಮೊತ್ತ (ಎಂಥಾಲ್ಪಿ $H=U+VP$). ಈ ಶಬ್ದದ ಅರ್ಥ ಒಟ್ಟು ಉಷ್ಣಪರಿಮಾಣ. ಪ್ರತಿ ವ್ಯವಸ್ಥೆಯೂ ತನ್ನಲ್ಲಿನ ವಸ್ತುರಚನೆ ಮತ್ತು ವಿತರಣೆಯ ನಿಮಿತ್ತ ಪಡೆದಿರುವ ಶಕ್ತಿಯೇ ಇದರ ಆಂತರಿಕ ಶಕ್ತಿ. ಇದು ಇಲ್ಲವಾಗಿದ್ದರೆ ದ್ರವವೊಂದು ಘನವಸ್ತುವಾಗಿ ಹೆಪ್ಪುಗಟ್ಟುವಾಗ ಉಷ್ಣವನ್ನೊದಗಿಸಲಾರದು. ವೋಲ್ಟನ ಕೋಶದಲ್ಲಿ ಸಂಯುಕ್ತವೊಂದರ ರಾಸಾಯನಿಕ ವಿಭಜನೆಯಿಂದ ವಿದ್ಯುಚ್ಛಕ್ತಿ ಒದಗಲಾರದು. ಆಂತರಿಕ ಶಕ್ತಿಯ ಸಂಕೇತ U. ವ್ಯವಸ್ಥೆಯ ಚರಗಳಾಗಿರುವ P, V, T ಗಳನ್ನು U ಒಳಗೊಂಡಿದೆ. ಇನ್ನಷ್ಟು ಸ್ಪಷ್ಟವಾಗಿ ಹೇಳುವುದಾದರೆ ಎರಡು ಚರಗಳನ್ನು ಹೊಂದಿರಬಹುದಾದ ಉತ್ಪನ್ನವೇ ಆಂತರಿಕ ಶಕ್ತಿ. $U=f_1(P,T)$ ಇಲ್ಲವೇ $U=f_2(T,V)$ ಇಲ್ಲವೇ $U=f_3(V,P)$ ಎಂದು ಬರೆಯಬಹುದು. ಮುಖ್ಯವಾಗಿ ಒಂದು ವ್ಯವಸ್ಥೆಯ ವಿಶಿಷ್ಟ ರೀತಿಯಲ್ಲಿ ವಿಶಿಷ್ಟ ಬೆಲೆಯುಳ್ಳ ಅಧೀನಚರ ಎಂದು ಭಾವಿಸಬೇಕು. ಇಂಥ ಆಂತರಿಕ ಶಕ್ತಿಯೊಡನೆ ಮೇಲಣ ಪರಿಸರಗಳ ಒತ್ತಡ ಮತ್ತು ವ್ಯವಸ್ಥೆಯ ಘನಗಾತ್ರಗಳ ಗುಣಲಬ್ಧವೂ ಭೌತಕಾರ್ಯ ಇಲ್ಲವೆ ಶಕ್ತಿಯ ಅವಯವಗಳನ್ನೂ ಪಡೆದಿರುವ ಕಾರಣ ಇವನ್ನು ಸೇರಿಸಿ $U+PV$ ಎಂಬ ಒಟ್ಟು ಶಕ್ತಿಯನ್ನೇ ಉಷ್ಣದ ರೂಪದಲ್ಲಿ ಬರೆದಾಗ ಇದು ಎಂಥಾಲ್ಪಿ H ಎನಿಸುತ್ತದೆ. $H=U+PV$. ಇದು ಈ ವ್ಯವಸ್ಥೆಯ ಪೂರ್ತಿ ಉಷ್ಣಪರಿಮಾಣವೂ ಆಗಿದೆ ಎಂಬುದು ಸ್ಪಷ್ಟವಾಗಿದೆ. ಅವಕಲನಗಳನ್ನು ಬರೆದಾಗ ಇದು $dH=dU+PdV+VdP$ ಎಂದಾಗುವುದು.

ಒತ್ತಡ ಸ್ಥಿರವಿದ್ದು, ಇಲ್ಲವೇ ಘನಗಾತ್ರ ಸ್ಥಿರವಿದ್ದು ಈ ವ್ಯವಸ್ಥೆಯಲ್ಲಿ ಬದಲಾವಣೆಗಳು ಜರುಗುವ ಸಾಧ್ಯತೆ ಇದೆಯಷ್ಟೆ. ಘನಗಾತ್ರ ಸ್ಥಿರವಾಗಿದ್ದಲ್ಲಿ ಯಾವ ಭೌತಕಾರ್ಯಕ್ಕೂ ಅವಕಾಶವಿಲ್ಲ. ಒತ್ತಡ ಸ್ಥಿರವಾಗಿದ್ದಲ್ಲಿ ಭೌತಕಾರ್ಯ $PdV$ ಮತ್ತು $dH=dU+PdV$. ಈ ಸಂದರ್ಭದಲ್ಲಿ ಉಷ್ಣಗತಿಶಾಸ್ತ್ರದ ಮೊದಲನೆಯ ನಿಯಮದ ಪ್ರಕಾರ ವ್ಯವಸ್ಥೆಗೆ ಒದಗಿಸಿದ ಉಷ್ಣ $dQ=dU+$ಭೌತಕಾರ್ಯ ಎಂದಿರುವ ನಿಮಿತ್ತ ಒತ್ತಡ ಸ್ಥಿರವಾಗಿದ್ದಾಗ $dQ=dH$ ಇಲ್ಲವೆ ವ್ಯವಸ್ಥೆಯ ಉಷ್ಣಪರಿಮಾಣ ಅವಶ್ಯವಾಗಿಯೂ ಅದು ಹೀರಿಕೊಂಡ ಉಷ್ಣವೇ ಎಂಬುದು ಸ್ಪಷ್ಟವಾಗುತ್ತದೆ.

ಆದರ್ಶ ಅನಿಲಗಳ ಎಂಥಾಲ್ಪಿ: ಆದರ್ಶ ಅನಿಲವೊಂದನ್ನು ಅದರ ಮೂಲ ಗಾತ್ರದಿಂದ ಹೆಚ್ಚಿನ ಗಾತ್ರಕ್ಕೆ ವಿಕಸಿಸಲು ಬಿಟ್ಟಾಗ, ಅದರ ಉಷ್ಣತೆಯಲ್ಲಿ ಬದಲಾವಣೆಯೇನೂ ಕಂಡುಬರುವುದಿಲ್ಲ. ಮುಖ್ಯವಾಗಿ ಹೆಚ್ಚಿನ ಗಾತ್ರದಲ್ಲಿ ಒತ್ತಡ ಶೂನ್ಯವಾಗಿದ್ದರೆ $P=0$ ಇದ್ದು ಭೌತಕಾರ್ಯ ಶೂನ್ಯವೇ. $dQ$, $dW$ ಇವೆರಡೂ ಶೂನ್ಯವಾಗಿರುವ ಕಾರಣ $dU=0$. ಅಂದರೆ ಆಂತರಿಕ ಶಕ್ತಿ ಶೂನ್ಯ. ಅಲ್ಲದೆ

$\left(\frac{dU}{dV}\right)0$ ಆಗಲಿ $\left(\frac{dU}{dP}\right)0$ ಆಗಲಿ ಅವಶ್ಯವಾಗಿಯೂ

ಶೂನ್ಯ ಬೆಲೆಯವು. ಈಗ ಉಷ್ಣಪರಿಮಾಣ $U+PV$ ಆಗಿರುವುದರಿಂದ

$$\left(\frac{\delta H}{\delta P}\right)_T = \left(\frac{\delta U}{\delta P}\right)_T + \left[\frac{\partial (PV)}{\partial P}\right]_T$$

ಆದರ್ಶ ಅನಿಲಗಳಿಗೆಲ್ಲ ಸ್ಥಿರ ಉಷ್ಣತೆಯ ಸನ್ನಿವೇಶದಲ್ಲಿ PV=ಸ್ಥಿರ.

$$\therefore \left(\frac{\delta H}{\delta P}\right)_T = 0 \text{ ಮತ್ತು } \left(\frac{\delta H}{\delta V}\right)_T = 0$$

ಅಂದರೆ ಉಷ್ಣಪರಿಮಾಣ ಕೂಡ ಆಂತರಿಕ ಶಕ್ತಿಯಂತೆಯೇ ಆದರ್ಶ ಅನಿಲಗಳಲ್ಲೆಲ್ಲ ಒತ್ತಡ ಮತ್ತು ಘನಗಾತ್ರಗಳನ್ನು ಹೊಂದಿರುವುದಿಲ್ಲ.

ಇದೇ ಅಲ್ಲದೆ ಇನ್ನೆರಡು ವಿಚಾರಗಳೂ ಅನುಮಿತವಾಗುತ್ತವೆ. ಉಷ್ಣತೆಗೆ ಸಂಬಂಧಿಸಿ ಆಂತರಿಕ ಶಕ್ತಿಯ ಪಾರ್ಶ್ವಿಕ ಅವಕಲನ ಅನಿಲದ ಒಂದು (ಘನಗಾತ್ರ ಸ್ಥಿರವಿರುವ) ವಿಶಿಷ್ಟ ಉಷ್ಣವಾದರೆ ಉಷ್ಣತೆಗೆ ಸಂಬಂಧಿಸಿದ ಎಂಥಾಲ್ಪಿಯ ಪಾರ್ಶ್ವಿಕ ಅವಕಲನ ಅದರ ಒತ್ತಡ ಸ್ಥಿರವಾಗಿರುವಾಗಿನ ವಿಶಿಷ್ಟ ಉಷ್ಣ.

$$\left(\frac{\delta H}{\delta T}\right)_P = C_p, \left(\frac{\delta H}{\delta T}\right)_V = C_v$$

ಇದೇ ಅಲ್ಲದೆ ವ್ಯವಸ್ಥೆಯೊಂದು ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಬದಲಾವಣೆಗೊಂಡಾಗ ಆಂತರಿಕಶಕ್ತಿ ಮತ್ತು ಎಂಥಾಲ್ಪಿಗಳೆರಡೂ ಬದಲಾವಣೆಗೊಳ್ಳುವುವು. ಇಂಥ ಬದಲಾವಣೆಯ ಅಂಶಗಳು $C_p$ ಮತ್ತು $C_v$ ಗಳ ಬದಲಾವಣೆಗಳನ್ನೂ ಹೊಂದಿವೆ.

ರಾಸಾಯನಿಕ ಕ್ರಿಯೆಗಳಲ್ಲಿ ಉಷ್ಣಪರಿಮಾಣ: ಹೆಚ್ಚಿನ ರಾಸಾಯನಿಕ ಕ್ರಿಯೆಗಳು ನಿಶ್ಚಿತ ಒತ್ತಡದಲ್ಲಿ (ಎಂದರೆ ಒತ್ತಡ ಸ್ಥಿರವಾಗಿರುವಾಗ) ಜರುಗುವಂಥವು. ಇನ್ನು ಮುಚ್ಚಿದ ಪಾತ್ರೆಯೊಳಗೆ ನಡೆಸುವ ರಾಸಾಯನಿಕ ಕ್ರಿಯೆಗಳು ನಿಶ್ಚಿತ ಘನಗಾತ್ರಗಳಲ್ಲಿ ಜರುಗುವ ಕಾರ್ಯಗಳು. ಹೀಗೆ ಇವೆರಡು ಸಂದರ್ಭಗಳಲ್ಲಿ ಲಭಿಸುವ ಉಷ್ಣ ಪರಿಮಾಣಗಳನ್ನು $Q_p$ ಮತ್ತು $Q_v$ ಗಳೆಂದು ಬರೆಯುತ್ತಾರೆ.

$Q_p$=(ಫಲಿತ ಉಷ್ಣಪರಿಮಾಣ)–(ಆರಂಭದ ಉಷ್ಣಪರಿಮಾಣ)= (Uನಲ್ಲಿ ಬದಲಾವಣೆ) P+PX (ಘನಗಾತ್ರದ ಬದಲಾವಣೆ); ಮತ್ತು $Q_v$= (Uನಲ್ಲಿ ಬದಲಾವಣೆ)$_v$. ಅನಿಲಗಳಲ್ಲಿ $U_p$=$U_v$ ಹಾಗೆಯೇ ದ್ರವಗಳಲ್ಲಿ ಮತ್ತು ಘನವಸ್ತುಗಳಲ್ಲೂ ಇವುಗಳ ವ್ಯತ್ಯಾಸ ಅತ್ಯಂತ ಕಡಿಮೆಯಾಗಿರುವ ಕಾರಣ ಇವುಗಳಲ್ಲಿನ ಬದಲಾವಣೆಗಳನ್ನು ಸಮಾನವೆಂದೇ ಗ್ರಹಿಸಲಾಗುತ್ತದೆ. ಆದ್ದರಿಂದ $Q_p$-$Q_v$=PΔV ಎಂದೇ ಗ್ರಹಿಸುತ್ತಾರೆ. ಅಂತೂ ರಸಾಯನ ಶಾಸ್ತ್ರದ ಗ್ರಂಥಗಳಲ್ಲಿ ವಿವಿಧ ರಾಸಾಯನಿಕ ಕ್ರಿಯೆಗಳಲ್ಲಿನ ಉಷ್ಣಪರಿಮಾಣಗಳನ್ನು ಉಷ್ಣದ ಮಾನಗಳಲ್ಲಿ ವಿವಿಧ ಸಮೀಕರಣಗಳೊಡನೆ ಬರೆಯುವುದಿದೆ. ಉದಾಹರಣೆಗೆ ಉಷ್ಣಗ್ರಾಹಕ (ಎಂಡೋಥರ್ಮಿಕ್) ಕ್ರಿಯೆಯಲ್ಲಿ $N_2+O_2 \rightarrow 2NO$–4,200 ಕೆಲೊರಿ ಎಂದು ಹೀರಲ್ಪಟ್ಟ ಉಷ್ಣವನ್ನು–4,200 ಕೆಲೊರಿಗಳಲ್ಲಿ ಬರೆದರೆ, ಉಷ್ಣಜನಕ (ಎಕ್ಸೋಥರ್ಮಿಕ್) ಕ್ರಿಯೆಗಳಲ್ಲಿ ಇದನ್ನು ಧನಚಿಹ್ನೆಯಿಂದ ಬರೆಯುತ್ತಾರೆ.

$HCI+NaOH \rightarrow NaCI+H_20+13{,}400$ ಕೆಲೊರಿ

ಇನ್ನೂ ಹೆಚ್ಚಿನ ವಿವರಗಳನ್ನೊದಗಿಸುವ ಸಂದರ್ಭಗಳಲ್ಲಿ ವಿವಿಧ ರಾಸಾಯನಿಕ ವಸ್ತುಗಳು ಘನ, ದ್ರವ ಮತ್ತು ಅನಿಲಗಳ ರೂಪದಲ್ಲಿರುವುದೆಂದು ಸೂಚಿಸಿಕೊಳ್ಳಲಾಗುತ್ತದೆ: ಉದಾಹರಣೆಗೆ

$H_2$ (ಅನಿಲ)+½ $O_2$ (ಅನಿಲ) → $H_2O$ (ದ್ರವ) –68,300 ಕೆಲೊರಿ

ರಾಸಾಯನಿಕ ಕ್ರಿಯೆಗಳಲ್ಲಿನ ಉಷ್ಣಗಳನ್ನು ವಿವಿಧ ಸಂದರ್ಭಗಳಲ್ಲಿ ಪ್ರತ್ಯೇಕ ಹೆಸರುಗಳಿಂದ ಕರೆಯುತ್ತಾರೆ: 1. ಸಂಭವನ ಉಷ್ಣ; 2. ದಹನ ಉಷ್ಣ; 3. ರೂಪಾಂತರ ಉಷ್ಣ; 4. ವಿಲಯನ ಉಷ್ಣ; 5. ತಟಸ್ಥೀಕರಣ ಉಷ್ಣ, ಇತ್ಯಾದಿ.

ಸಂಭವನ ಉಷ್ಣ (ಹೀಟ್ ಆಫ್ ಫಾರ್ಮೇಷನ್): ಘಟಕ ಧಾತುಗಳಿಂದ ವಸ್ತು ಏರ್ಪಡುವಾಗ ಉಂಟಾಗುವ ಉಷ್ಣ ಇದನ್ನು ಗ್ರಾಂಮೋಲ್‌ಗೆ ಸರಿಯಾಗಿ ಬರೆಯುತ್ತಾರೆ. ಹೈಡ್ರೊಜನ್+ಆಕ್ಸಿಜನ್ → ನೀರು.

$H_2+O \rightarrow H_2O$

ಇಲ್ಲಿನ ಸಂಭವನ ಉಷ್ಣ–68.9 ಕಿಲೊ ಕೆಲೊರಿ. A ಧಾತು + B ಧಾತು → C ಸಂಯುಕ್ತವಸ್ತು ಸೂಚಕ. ಆಗ ಸಂಭವನ ಉಷ್ಣ =$H_C$-$H_A$-$H_B$ ಪ್ರತಿ ಧಾತುವಿನ ಉಷ್ಣಪರಿಮಾಣವನ್ನೂ ಶೂನ್ಯವೆಂದು ಗ್ರಹಿಸಿದರೆ ಸಂಭವನ ಉಷ್ಣ ಎಂದರೆ ಸಂಯುಕ್ತದ ಉಷ್ಣಪರಿಮಾಣ. ಇದರಿಂದ ವಿವಿಧ ಕ್ರಿಯೆಗಳಲ್ಲಿನ ಉಷ್ಣಗಳನ್ನು ಬರೆಯಬಲ್ಲೆವು.

ದಹನ ಉಷ್ಣ (ಹೀಟ್ ಆಫ್ ಕಂಬಶ್ಚನ್): ಒಂದು ಗ್ರಾಂಮೋಲ್ ವಸ್ತು ಸಂಪೂರ್ಣ ದಹಿಸುವಾಗ ಬಿಡುಗಡೆಯಾಗುವ ಉಷ್ಣ. ಮೇಲಿನ ನಿದರ್ಶನದಲ್ಲಿ ಹೈಡ್ರೊಜನಿನ ದಹನ ಉಷ್ಣ 68.9 ಕಿಲೊ ಕೆಲೊರಿಗಳು.

ರೂಪಾಂತರ ಉಷ್ಣ (ಹೀಟ್ ಆಫ್ ಟ್ರಾನ್ಸ್‌ಫರ್ಮೇಷನ್): ವಸ್ತುವೊಂದು ಕರಗುವಾಗ, ಆವಿಯಾಗುವಾಗ ಪಡೆಯುವ ಗುಪ್ತೋಷ್ಣ, ಬಹುರೂಪಗಳಲ್ಲಿರುವ (ಅಲೊಟ್ರೊಪಿ) ವಸ್ತುವೊಂದು ಒಂದು ರೂಪದಿಂದ ಮತ್ತೊಂದು ರೂಪವನ್ನು ಪಡೆವಾಗ ಹೀರುವ ಇಲ್ಲವೆ ಬಿಡುಗಡೆಗೊಳಿಸುವ ಉಷ್ಣ ಇವೆಲ್ಲ ರೂಪಾಂತರ ಉಷ್ಣಕ್ಕೆ ನಿದರ್ಶನಗಳು. ವಜ್ರ ಗ್ರಾಫೈಟಾಗಿ ಪರಿವರ್ತನೆ ಹೊಂದುವಾಗ ಅದರ ಒಟ್ಟು ಉಷ್ಣ 450 ಕೆಲೊರಿಗಳಷ್ಟು ಕಡಿಮೆಯಾಗುತ್ತದೆ. ಇದು ಇವುಗಳ ಎಂಥಾಲ್ಪಿಗಳ ವ್ಯತ್ಯಾಸ.

ವಿಲಯನ ಉಷ್ಣ (ಹೀಟ್ ಆಫ್ ಸಲ್ಯೂಷನ್): 1. ಗ್ರಾಂಮೋಲ್ ವಸ್ತು ದ್ರಾವಣವೊಂದರಲ್ಲಿ ವಿಲಯಗೊಳ್ಳುವಾಗ ಹೀರುವ ಇಲ್ಲವೆ ಬಿಡುಗಡೆಗೊಳಿಸುವ ಒಟ್ಟು ಉಷ್ಣಪರಿಮಾಣ. ವಸ್ತುವಿನ ವಿಲೀನತೆಯನ್ನೂ ವಿಲೀನವಸ್ತುವನ್ನೂ ಇದು ಅವಲಂಬಿಸಿದೆ.

ತಟಸ್ಥೀಕರಣದ ಉಷ್ಣ: 1 ಗ್ರಾಂಮೋಲ್ ಆಮ್ಲ 1 ಗ್ರಾಂಮೋಲ್ ಕ್ಷಾರವನ್ನು ತಟಸ್ಥಗೊಳಿಸುವಾಗ ಬಿಡುಗಡೆಗೊಳಿಸುವ ಉಷ್ಣ. ಉದಾಹರಣೆಗೆ

$NH_4OH+HCI \rightarrow NH_4CI+H_2O+12.3$ ಕಿ.ಕೆಲೊರಿ (ಯು.ಎಲ್.ಎ.)

**ಎಂಪೆಡೋಕ್ಲೀಸ್:** ?–ಮರಣ–ಸು.ಪ್ರ.ಶ.ಪೂ. ೪೩೦. ಪ್ರಾಚೀನ ಗ್ರೀಸಿನ ತತ್ತ್ವಜ್ಞಾನಿ. ಕಾರ್ಯಕುಶಲನಾದ ವೈದ್ಯ, ಭವಿಷ್ಯವಾದಿ. ಧರ್ಮೋಪದೇಶಕ. ಸಂಸಾರಕ್ಕೆ ಆದಿಯೂ ಇಲ್ಲ ಅಂತ್ಯವೂ ಇಲ್ಲ; ಜಗತ್ತೆಲ್ಲವೂ ಪೃಥ್ವಿ, ಜಲ, ತೇಜಸ್ ಮತ್ತು ವಾಯು ಎಂಬ ನಾಲ್ಕು ತತ್ತ್ವಗಳಿಂದ ಉಂಟಾಯಿತು ಎಂದು ಈತನ ಮತ. ಈ ತತ್ತ್ವಗಳು ಒಂದಕ್ಕೊಂದು ವಿಭಿನ್ನವಾದವು. ಈ ತತ್ತ್ವಗಳ ಸೂಕ್ಷ್ಮ ಅಂಶಗಳು ಒಂದರೊಡನೆ ಒಂದು ಮಿಲನವಾಗಿರುವುದ ರಿಂದ ಅನೇಕ ವಿಲಕ್ಷಣವಾದ ದ್ರವ್ಯಗಳು ಉತ್ಪನ್ನವಾಗುತ್ತವೆ. ತತ್ತ್ವಗಳ ಸಂಯೋಗ ಮತ್ತು ವಿಯೋಗಗಳಿಗೆ ಕಾರಣವಾದ ಎರಡು ಶಕ್ತಿಗಳಿವೆ. ಒಂದರ ಹೆಸರು ಪ್ರೇಮ ಮತ್ತೊಂದರ ಹೆಸರು ದ್ವೇಷ. ಪ್ರೇಮದ ಶಕ್ತಿಯಿಂದ ಪದಾರ್ಥಗಳಲ್ಲಿ ಆಕರ್ಷಣೆ ಹುಟ್ಟುತ್ತದೆ. ದ್ವೇಷದಿಂದ ವೈಷಮ್ಯ ಹುಟ್ಟುತ್ತದೆ. ಪೃಥ್ವಿಯ ಮೇಲೆ ಮೊದ ಮೊದಲು ಹುಟ್ಟಿದ ಜಂತುಗಳು ಕುರೂಪವಾಗಿದ್ದವು. ಕ್ರಮ ಕ್ರಮವಾಗಿ ಅವು ಒಳ್ಳೆಯ ರೂಪವನ್ನು ತಾಳಿದವು– ಎಂಬ ವಿಕಾಸವಾದವನ್ನು ಈತ ಪ್ರತಿಪಾದಿಸುತ್ತಾನಲ್ಲದೆ ಆಗಾಗ ಎಲ್ಲವೂ ಮತ್ತೆ ತಮ್ಮ ಮೊದಲ ಸ್ಥಿತಿಗೇ ಮರಳುತ್ತವೆ ಎಂದೂ ಹೇಳುತ್ತಾನೆ.

ಎಂಪೆಡೋಕ್ಲೀಸ್‌ನ ದರ್ಶನದ ಪ್ರಕಾರ ಒಂದೊಂದು ಇಂದ್ರಿಯವೂ ಅದಕ್ಕೆ ಸಮಾನವಾದ ಒಂದೊಂದು ತತ್ತ್ವವನ್ನು ಗ್ರಹಿಸಬಲ್ಲುದು. ಉದಾಹರಣೆಗೆ, ಕಣ್ಣಿನಲ್ಲಿ ಆಗ್ನೇಯ ತತ್ತ್ವ ಹೆಚ್ಚಾಗಿದೆ. ಅದರ ಸಲುವಾಗಿ ಕಣ್ಣಿನ ಮೂಲಕ ಪ್ರಭೆಯನ್ನು ಗ್ರಹಣ ಮಾಡುವುದು ಸಾಧ್ಯ. ಈ ತತ್ತ್ವಗಳಿಗೂ ಇಂದ್ರಿಯಗಳಿಗೂ ಇರುವ ಸಂಬಂಧವನ್ನು ವೈಶೇಷಿಕ ಸೂತ್ರಕಾರ ಕಣಾದ ಎತ್ತಿಹಿಡಿದಿದ್ದಾನೆ. (ಎಂ.ವೈ.)

**ಎಂಪ್ಸೆನ್, ವಿಲಿಯಮ್:** ಜನನ 1906–84. ಇಂಗ್ಲಿಷ್ ಕವಿ ಹಾಗೂ ವಿಮರ್ಶಕ. ಯಾರ್ಕ್‌ಷೈರಿನ ಹೌಡನ್ ಎಂಬಲ್ಲಿ ಜನಿಸಿದ. ಕೇಂಬ್ರಿಜ್‌ನಲ್ಲಿ ವಿದ್ಯಾಭ್ಯಾಸ ಮಾಡಿದ. 1931–1953ರವರೆಗೆ ಟೋಕಿಯೊ ಮತ್ತು ಪೀಕಿನ್‌ಗಳಲ್ಲಿ ಇಂಗ್ಲಿಷ್ ಪ್ರಾಧ್ಯಾಪಕನಾಗಿಯೂ ಮಧ್ಯೆ ಕೆಲವು ವರ್ಷ ಬಿ.ಬಿ.ಸಿ. ಪ್ರಸಾರ ಕೇಂದ್ರದಲ್ಲಿ ಕಲಾವಿದನಾಗಿಯೂ ಕೆಲಸ ಮಾಡಿದ. 1953ರಲ್ಲಿ ಷಫೀಲ್ಡ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕನಾದ. ಈತ ಮೂರು ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾನೆ. ಪೊಯೆಮ್ಸ್ (1935), ದಿ ಗ್ಯಾದರಿಂಗ್ ಸ್ಟಾರ್ಮ್ (1940) ಮತ್ತು ಕಲೆಕ್ಟೆಡ್ ಪೊಯೆಮ್ಸ್ (1935). ಅನೇಕ ವಿಷಯಗಳನ್ನು ಅಡಕವಾಗಿ, ಸಂಕ್ಷೇಪವಾಗಿ ಹೇಳುವುದೇ ಇವನ ಕಾವ್ಯಶೈಲಿ. ಒಳ್ಳೆಯ ವಿಮರ್ಶಕನೆಂದು ಇಂಗ್ಲೆಂಡಿನಲ್ಲಿ ಮಾತ್ರವಲ್ಲದೆ ಹೊರಗೂ ಹೆಸರುವಾಸಿಯಾಗಿದ್ದಾನೆ. ಇವನ ಕಾವ್ಯಗಳಲ್ಲಿ ಆಧ್ಯಾತ್ಮಿಕತೆ ಇದೆ.

ಇವನ ಕವನಗಳೇ ವಿಮರ್ಶೆ, ವಿಮರ್ಶೆಯೇ ಕವನ–ಹೀಗೆ ಇವನದೊಂದು ವಿನೂತನ ಶೈಲಿ. ಇವನ ಕವನಗಳಲ್ಲಿ ನಿರಾಶಾವಾದವೇ ಹೆಚ್ಚಾಗಿ ಕಂಡುಬಂದರೂ ಅಲ್ಲಲ್ಲಿ ಸಿಗುವ ಯಥಾರ್ಥವಾದ ಹಾಗೂ ಮಾನವಶಕ್ತಿ ಇವನಿಗೆ ಇಂಗ್ಲಿಷ್ ಕವಿಗಳಲ್ಲಿ ಅಮರತ್ವವನ್ನು ಒದಗಿಸಿಕೊಟ್ಟಿದೆ.

ಸೆವೆನ್ ಟೈಪ್ಸ್ ಆಫ್ ಆಂಬಿಗ್ಯುಯಿಟಿ (1930), ದಿ ಸ್ಟ್ರಕ್ಚರ್ ಆಫ್ ಕಾಂಪ್ಲೆಕ್ಸ್ ವರ್ಡ್ಸ್ (1951)– ಇವು ಈತನ ವಿಮರ್ಶಾಗ್ರಂಥಗಳು. (ವಿ.ಪಿ.)

ಎಂಪ್ಸೆನ್ ಕೇಂಬ್ರಿಜ್‌ನಲ್ಲಿ ಪ್ರಸಿದ್ಧ ನವ್ಯ ವಿಮರ್ಶಕ ಐ.ಎ. ರಿಚರ್ಡ್ಸ್‌ನ ವಿದ್ಯಾರ್ಥಿ, ರಿಚರ್ಡ್ಸ್ ಕಾವ್ಯದಲ್ಲಿ ಭಾಷೆಯ ಪಾತ್ರವನ್ನು ವಿಶ್ಲೇಷಿಸಿದ ಬಗೆಯಿಂದ ಪ್ರಭಾವಿತನಾದ. ಅವನು ತೀರಿಕೊಂಡ ನಂತರ 'ಯೂಸಿಂಗ್ ಬಯಾಗ್ರಫಿ' (1984) ಪ್ರಕಟವಾಯಿತು.

ಪ್ರಸಿದ್ಧ ಕೃತಿ 'ಸೆವೆನ್ ಟೈಪ್ಸ್ ಆಫ್ ಆಂಬಿಗ್ಯುಯಿಟಿ' ಬರೆದಾಗ ಎಂಪ್ಸನಿಗೆ 24 ವರ್ಷ. ಇಲ್ಲಿ 'ಆಂಬಿಗ್ಯುಯಿಟಿ' ಎನ್ನುವ ಪದದ ಬಳಕೆ ಸೂಕ್ತವಲ್ಲ; ಈ ಪದದ ಅರ್ಥ 'ಅರ್ಥಸಂದಿಗ್ಧತೆ'. ವಾಸ್ತವವಾಗಿ ಎಂಪ್ಸನ್ ವಿವರಿಸುವುದು 'ಮಲ್ಟಿಪಲ್ ಮೀನಿಂಗ್'– ಹೀಗೆ ಒಂದು ಸಾಹಿತ್ಯ ಕೃತಿಗೆ ಒಂದೇ ನಿರ್ದಿಷ್ಟ ಅರ್ಥ ಇರಬೇಕಾಗಿಲ್ಲ. ಅದರಲ್ಲಿ 'ಮಲ್ಟಿಪಲ್ ಮೀನಿಂಗ್'–ಅರ್ಥದ ಹಲವು ಪದರಗಳು ಇರುವುದು ಸಾಧ್ಯ ಎಂದು. *

**ಎಂಬಂತೆ ತತ್ತ್ವ: ನೋಡಿ– ಆ್ಯಸ್–ಇಫ್–ತತ್ತ್ವ; ವೈ ಹಿಂಗರ್, ಹ್ಯಾನ್ಸ್.**

**ಎಕನಾಮಿಕ್ ಟೈಮ್ಸ್, ದಿ:** ಭಾರತದ ಆರ್ಥಿಕ ಕ್ಷೇತ್ರದ ಮೊಟ್ಟ ಮೊದಲ ಇಂಗ್ಲಿಷ್ ದಿನಪತ್ರಿಕೆ. ಮುಂಬಯಿಂದ ಪ್ರಕಟವಾಗುತ್ತಿರುವ ಈ ಪತ್ರಿಕೆ ಸ್ಥಾಪನೆಯಾದದ್ದು 1961ರಲ್ಲಿ. ಭಾರತದಲ್ಲಿನ ಷೇರುಪೇಟೆ ವ್ಯವಹಾರ, ಆರ್ಥಿಕ ಚಟುವಟಿಕೆ, ಕೈಗಾರಿಕೆ, ವಾಣಿಜ್ಯ ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆ ವಿಚಾರಪೂರಿತ ಲೇಖನಗಳನ್ನೂ

ತಜ್ಞರ ಅಭಿಪ್ರಾಯಗಳನ್ನೂ ಸುದ್ದಿಗಳನ್ನೂ ಈ ಪತ್ರಿಕೆ ಪ್ರಕಟಿಸುತ್ತಿದೆ. ಟೈಮ್ಸ್ ಆಫ್ ಇಂಡಿಯ ಪತ್ರಿಕೆಗಳ ಗುಂಪಿನ ಬೆನೆಟ್ ಕೋಲ್‌ಮನ್ ಅಂಡ್ ಕಂಪನಿಯವರು ಪ್ರಕಟಿಸುತ್ತಿರುವ ಈ ಪತ್ರಿಕೆಗೆ ಪಿ.ಎಸ್.ಹರಿಹರನ್ ಪ್ರಥಮ ಸಂಪಾದಕರಾಗಿದ್ದರು. ಡಿ.ಕೆ.ರಾಂಗಣೇಕರ್

ಈಗಿನ ಸಂಪಾದಕರು. ಇದರ ವಾಚಕವೃಂದದಲ್ಲಿ ದೇಶದ ಆರ್ಥಿಕ ತಜ್ಞರೂ ಷೇರುಪೇಟೆ ವ್ಯವಹಾರಗಾರರೂ ಬಂಡವಾಳಗಾರರೂ ವ್ಯಾಪಾರಸ್ಥರೂ ಕೈಗಾರಿಕೋದ್ಯಮಿಗಳೂ ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರಗಳ ವಿದ್ಯಾರ್ಥಿಗಳೂ ಇದ್ದಾರೆ. ಈ ಪತ್ರಿಕೆಗೆ ಸು. 8 ಲಕ್ಷ ಓದುಗರಿದ್ದಾರೆ. ಸ್ವತಂತ್ರ ಭಾರತದ ಪತ್ರಿಕೋದ್ಯಮದ ಬೆಳವಣಿಗೆಯಲ್ಲಿ ಅಗತ್ಯವಾದ ವಿಚಾರವಿಮರ್ಶೆಗೆ ಅವಕಾಶ ಮಾಡಿಕೊಟ್ಟಿರುವ ಈ ಪತ್ರಿಕೆಯ ಹುಟ್ಟು ಬೆಳವಣಿಗೆಗಳು ದೇಶದ ಯೋಜನಾಬದ್ಧ ಆರ್ಥಿಕ ಪ್ರಗತಿಯ ಸಂಕೇತವಾಗಿದೆ. ವಿಶ್ವದ ಅನೇಕ ಆರ್ಥಿಕ ಪತ್ರಿಕೆಗಳೊಡನೆ ಇದು ಸಂಬಂಧ ಇಟ್ಟುಕೊಂಡಿದೆ. ಕೇಂದ್ರ ಕಾರ್ಯಾಲಯ ಮುಂಬೈ ಆಗಿದ್ದು, ದೆಹಲಿ, ಕೊಲ್ಕತ್ತ, ಅಹಮದಾಬಾದ್, ಬೆಂಗಳೂರು, ಚೆನ್ನೈ, ಹೈದರಾಬಾದ್, ಅಹ್ಮದಾಬಾದ್, ನಾಗ್ಪುರ್, ಚಂಡೀಘರ್ ಮತ್ತು ಪುಣೆ ಕೇಂದ್ರಗಳಿಂದ ಇದು ಏಕಕಾಲದಲ್ಲಿ ಪ್ರಕಟವಾಗುತ್ತದೆ. ಇದು ಜೂನ್ 2009ರಲ್ಲಿ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ 'ET ನೌ' ಎಂಬ ಟೆಲಿವಿಷನ್ ಚಾನಲನ್ನು ಆರಂಭಿಸಿತು. (ಬಿ.ಜಿ.ಟಿ.)

**ಎಕರ್‌ಮಾನ್, ಯೋಹಾನ್ ಪೇಟರ್:** 1792–1854. ಜರ್ಮನಿಯ ಪ್ರಸಿದ್ಧ ವಿದ್ವಾಂಸ ಮತ್ತು ಲೇಖಕ. ಗಯಟೆ ಕವಿಯ ಆಪ್ತಕಾರ್ಯದರ್ಶಿಯಾಗಿ ಬಹುಕಾಲ ಕೆಲಸಮಾಡಿದನಲ್ಲದೆ ಅವನೊಡನೆ ತಾನು ನಡೆಸಿದ ಸಂಭಾಷಣೆಗಳ ಅಮೂಲ್ಯ ವಸ್ತುಗಳನ್ನೊಳಗೊಂಡ ಗ್ರಂಥವನ್ನು ಬರೆದ. ಜನನ ವಿನ್ಸನ್ ಹಾನೊವರ್‌ನಲ್ಲಿ. ಕಾರ್ಪಣ್ಯ ಜೀವನ ನಡೆಸಿದವ. ಸ್ವಾತಂತ್ರ್ಯಯುದ್ಧದಲ್ಲಿ ಭಾಗವಹಿಸಿದ ಅನಂತರ ಯುದ್ಧಖಾತೆಯಲ್ಲೆ ಗುಮಾಸ್ತನಾಗಿ ಇದ್ದ. ಏತನ್ಮಧ್ಯೆ ಒಂದು ವರ್ಷ ಕಾಲ ಗೊಟ್ಟಿನ್ ಜೆನ್‌ನಲ್ಲಿ ವಿದ್ಯಾಭ್ಯಾಸ ಮಾಡಿದ. 1821ರಲ್ಲಿ ಒಂದು ಕವನ ಸಂಕಲನ ಪ್ರಕಟಿಸಿದ. 1823ರಲ್ಲಿ ಗಯಟೆಯ ದೃಷ್ಟಿಗೆ ಬಿದ್ದ. ಅನಂತರ ಗಯಟೆಯ ಆಹ್ವಾನದ ಮೇರೆ ವೀಮಾರ್‌ಗೆ ಬಂದು ಅವನ ಸಾಹಿತ್ಯ ಚಟುವಟಿಕೆಗಳಿಗೆ ಸಹಾಯಕನಾಗಿ ನಿಂತ. ಕೆಲಕಾಲ ಡ್ಯೂಕನ ಮೊಮ್ಮಗನಿಗೆ ಉಪಾಧ್ಯಾಯನಾಗಿಯೂ ಇದ್ದ.

ಈತ ಪ್ರಸಿದ್ಧನಾಗಿರುವುದು ಗಯಟೆ ಕವಿಯನ್ನು ಕುರಿತ ತನ್ನ ಗ್ರಂಥದಿಂದ (ಕಾನ್ವರ್ಸೇಷನ್ಸ್ ವಿತ್ ಗಯಟೆ). ಇದರಲ್ಲಿ ಗಯಟೆ ಮಹಾಕವಿಯ ಬಹು ಮುಖವಾದ ವಿಚಾರಧಾರೆಯ ಸೆಲೆಗಳನ್ನು ಗುರುತಿಸಬಹುದು. ಗಯಟೆಯ ಅನಂತರ ಆತನ ಅಪ್ರಕಟಿತ ಕೃತಿಗಳನ್ನು ಬೆಳಕಿಗೆ ತರಲು ಎಕರ್‌ಮಾನ್ ಬಹುವಾಗಿ ನೆರವಾದ. *

**ಎಕಿಡ್ನ:** ಮ್ಯಾಮೇಲಿಯ ವರ್ಗದಲ್ಲಿನ ತೀರ ಕೆಳಗಿನ ವರ್ಗವಾದ ಮಾನೊಟ್ರೀಮೇಟಕ್ಕೆ ಸೇರಿದ ಸ್ತನಿಗಳು. ಮೊಟ್ಟೆ ಇಡುವುದೇ ಇವುಗಳ ವೈಶಿಷ್ಟ್ಯ. ಆಸ್ಟ್ರೇಲಿಯ, ಟಾಸ್ಮೇನಿಯ ಮತ್ತು ನ್ಯೂಗಿನಿಗಳು ಇಂಥ ಪ್ರಾಣಿಗಳ ಮೂಲಸ್ಥಾನ. ಇವುಗಳ ದೇಹ ಬಲು ಭಾರ,



ಮುಳ್ಳುಹಂದಿಯಂತೆ ಕಾಣುವ ಎಕಿಡ್ನ

ಬಾಲ ಮೋಟು. ಕೂಗು ನೀಳವಾಗಿ ಚುರುಕಾಗಿರುತ್ತದೆ. ಹಲ್ಲಿಲ್ಲ, ಹುಳುಗಳೇ ಇವುಗಳ ಆಹಾರ. ನಾಲಗೆ ನೀಳವಾದ ಕೊಳವೆಯಂತಿದ್ದು ಅಂಟಾಗಿರುವುದರಿಂದ ಹುಳುಗಳ ಬೇಟೆಗೆ ಅನುಕೂಲವಾಗಿದೆ. ಕಾಲುಗಳು ಮೋಟು, ದಪ್ಪ ಪಾದದ ಬೆರಳುಗಳು ಉದ್ದವಾಗಿದ್ದು ನೆಲ ಅಗೆಯಲು ಅನುಕೂಲವಾಗಿವೆ. ಮೈಮೇಲೆ ಮುಳ್ಳುಹಂದಿಗಿರುವಂತೆ ಮುಳ್ಳುಗಳಿವೆ.

ಬೆಟ್ಟಗುಡ್ಡಗಳ ಮರಳು ಮತ್ತು ಕಲ್ಲು ನೆಲದಲ್ಲಿ ಇವುಗಳ ವಾಸ. ಭಯವಾದಾಗ ಚೆಂಡಿನಂತೆ ಸುರುಳಿಯಾಗಿ, ಮುಳ್ಳು ಮೇಲಾಗಿ ಕೂಡುತ್ತವೆ. ಅಥವಾ ಹುಡಿನೆಲವನ್ನು ಅಗೆದು ಒಳಸೇರುತ್ತವೆ. ಇವುಗಳ ದೃಷ್ಟಿ ಮಂದವಾದರೂ ಕಿವಿ, ಮೂಗುಗಳು ಸುಟಿಯಾಗಿವೆ. ರಾತ್ರಿ ಬೇಟೆಯಾಡುವುದೇ ಸಾಮಾನ್ಯ. ತನ್ನ ಹೊಟ್ಟೆಯ ಹೊರಭಾಗದಲ್ಲಿರುವ ಚೀಲಗಳಲ್ಲಿ ಮೊಟ್ಟೆಗಳನ್ನು ಇಟ್ಟುಕೊಂಡು ಕಾಪಾಡುತ್ತವೆ. ಮೊಲೆ ಹಾಲು ಚೀಲದಲ್ಲಿರುವ ಮರಿಗಳಿಗೆ ನೇರ ಒದಗುತ್ತದೆ.

ನೇರ ಮೂತಿಯ, ಐದು ಕಾಲುಬೆರಳಿನ ಎಕಿಡ್ನ ಪೂರ್ವ ಆಸ್ಟ್ರೇಲಿಯ, ಟಾಸ್ಮೇನಿಯ, ದಕ್ಷಿಣ ನ್ಯೂಗಿನಿಗಳಲ್ಲೂ ಡೊಂಕು ಮೂತಿಯ ಮೂರು ಕಾಲುಬೆರಳಿನ ಎಕಿಡ್ನ ನ್ಯೂಗಿನಿಯಲ್ಲೂ ವಾಸಿಸುತ್ತವೆ. (ಎಸ್.ಎನ್.ಕೆ.ಯು.)

**ಎಕಿಡ್ನೊಪ್‌ಸಿಸ್:** ಎಲೆಗಳಿಲ್ಲದೆ ಬೆಳೆಯುವ ಸುಂದರವಾದ ಕಳ್ಳಿಯ ಒಂದು ಜಾತಿ. ಆಸ್‌ಕ್ಲೆಪಿಯಡೇಸಿ ಕುಟುಂಬಕ್ಕೆ ಸೇರಿದೆ. ಈ ಸಸ್ಯಗಳು ಸರ್ಪಗಳಂತೆ ಬೆಳೆಯುವುದರಿಂದ ಎಕಿಡ್ನೊಪ್‌ಸಿಸ್ ಎಂದು ಹೆಸರು ಬಂದಿದೆ. ಇದರ ಕಾಂಡ ಹಲವು ಕೋನಗಳಿಂದ ಕೂಡಿದ್ದು ನುಲಿದುಕೊಂಡಿರುತ್ತದೆ. ಗಿಣ್ಣುಗಳಲ್ಲಿ ಗಂಟುಗಳು (ಟ್ಯುಬರ್‌ಕಲ್ಸ್) ಇರುತ್ತವೆ. ಕೋನಗಳ ಉಬ್ಬುಗಳ ಮೇಲೆ ಮೊಂಡಾದ ಅಥವಾ ಮೊನಚಾದ ಮುಳ್ಳುಗಳಿರುತ್ತವೆ. ಹೂವು ಚಕ್ರಾಕಾರ. ಐದು ಕೂಡುಭಾಗಗಳಿವೆ. ಮೆದುವಾಗಿವೆ; ಹಳದಿ, ನಸುಗೆಂಪು ಅಥವಾ ಕಂದುಬಣ್ಣದ್ದಾಗಿರುತ್ತದೆ. ಈ ಜಾತಿಯ ಸಸ್ಯಗಳು ಅರೇಬಿಯ, ಆಫ್ರಿಕದ ಉಷ್ಣವಲಯ ಭಾಗಗಳ ಮೂಲವಾಸಿಗಳು.

ಎ. ಸೆರೆಯಿಪೊರ್‌ಮಿಸ್ ಎಂಬ ಪ್ರಭೇದ ಸುಮಾರು 12' ಎತ್ತರ ಬೆಳೆಯುತ್ತದೆ; ಇದರ ಕಾಂಡಕ್ಕೆ ಎಂಟು ಕೋನಗಳಿರುತ್ತವೆ. ಪ್ರತಿ ಕೋನ ಮೊಂಡಾಗಿರುವ ಉಬ್ಬಿನ ಮೇಲೆ ಬಿಳಿಯ ಸಾಲುಚುಕ್ಕೆಗಳೂ ಅಲ್ಲಲ್ಲಿ ಗಂಟುಗಳೂ ಇರುತ್ತವೆ. ಕಾಂಡ ತುದಿಯಲ್ಲಿ ಹೂ ಬಿಟ್ಟಿರುತ್ತದೆ. ಹೊರಭಾಗ ಕಂದುಬಣ್ಣ, ಒಳಭಾಗ ಹಳದಿ ಬಣ್ಣ.

ಎ. ಡಮ್ಮಾನಿಯಾನ ಎಂಬುದು ಈ ಜಾತಿಯ ಇನ್ನೊಂದು ಪ್ರಭೇದ. ಇದರ ವಿವರಣೆ ಮೇಲಿನ ಪ್ರಭೇದದಂತೆಯೇ. ಆದರೆ ಇದರ ಹೂಗಳು ನಸುಗೆಂಪು ಮತ್ತು ಕಂದುಮಿಶ್ರಿತ ಬಣ್ಣದ್ದಾಗಿರುತ್ತವೆ.

ಎ. ಬೆಂಟ್ಲೈ: ಈ ಪ್ರಭೇದ 7'–8' ಎತ್ತರ ಬೆಳೆದು ಪಕ್ಕಕ್ಕೆ ರೆಂಬೆಗಳನ್ನು ಕೊಡುತ್ತದೆ. ರೆಂಬೆಗಳು ತುದಿಯಲ್ಲಿ ಜೋಡಿ ನಸುಗೆಂಪು ಹೂಗಳನ್ನು ಬಿಡುತ್ತವೆ.

ಎ. ಸೋಮಾಲೆನ್‌ಸಿಸ್: ಈ ಪ್ರಭೇದ ಸೋಮಾಲಿ ದೇಶದ ಮೂಲವಾಸಿ. ಕಾಂಡ ಕಾಲುವೆಗಳಿಂದ ಕೂಡಿರುತ್ತದೆ. ಇದು ತೊಟ್ಟಿಲ್ಲದ ಅತಿ ನಸುಗೆಂಪು ಬಣ್ಣದ ಮತ್ತು ಹಳದಿ ಚುಕ್ಕೆಗಳಿರುವ ಹೂಗಳನ್ನು ಬಿಡುತ್ತದೆ.(**ನೋಡಿ– ಕಳ್ಳಿ**). (ಡಿ.ಎಂ.)

**ಎಕಿನಾಯ್ಡಿಯ:** ಕಂಟಕಚರ್ಮಿ ವಂಶಕ್ಕೆ ಸೇರಿದ ಒಂದು ವರ್ಗ. ಇದರ ಶರೀರದ ಮೇಲೆ ಹೆಚ್ಚು ಕಡಿಮೆ ದುಂಡಾದ, ಗಟ್ಟಿಯಾದ ಕವಚವಿದೆ. ಈ ಕವಚ ಓರಣವಾಗಿ ಜೋಡಿಸಲ್ಪಟ್ಟ ತಟ್ಟೆಗಳಿಂದ ಆದದ್ದು. ತಟ್ಟೆಗಳ ಮೇಲೆ ಚಲಿಸುವ ಮುಳ್ಳುಗಳಿವೆ. ಈ ಪ್ರಾಣಿಗಳಿಗೆ ಕೈಕಾಲುಗಳಿಲ್ಲ. ಆದರೆ 5 ಜೋಡಿ ಸಾಲು ಕೊಳವೆ ಕಾಲುಗಳು ಶರೀರದ ಮೇಲ್ತೋನದಿಂದ ಕೆಳಕೋನದವರೆಗೂ ಇವೆ. 850 ಪ್ರಭೇದಗಳಿವೆ. 225 ಜಾತಿಗೆ ಸೇರಿದ 5,000 ಪಳಿಯುಳಿಕೆಗಳಿವೆ. ಈ ಪ್ರಾಣಿಗಳ ಶರೀರದಲ್ಲಿರುವ ಎಕಿನೊಕ್ರೋಮ್ ವರ್ಣದ್ರವ್ಯ ಬೇರೆ ಯಾವ ಎಕಿನೊಡರ್ಮೇಟ ವರ್ಗದಲ್ಲೂ ಇಲ್ಲ. ಅನೇಕ ಎಕಿಯ್ಡಿಯ ಜೀವಿಗಳು ಮಂಕು ಕಪ್ಪು ಬಣ್ಣದವಾಗಿದ್ದರೂ ಕೆಲವು ಉಜ್ವಲ ಛಾಯೆಯುಳ್ಳ ಕೆನ್ನೀಲಿ, ಕೆಂಪು, ಹಸಿರು ಅಥವಾ ಕಿತ್ತಳೆಬಣ್ಣದಾಗಿವೆ. ಮತ್ತೆ ಕೆಲವಕ್ಕೆ ಬಣ್ಣ ಬಣ್ಣದ ಗೀರುಗಳುಳ್ಳ ಮುಳ್ಳುಗಳಿರುತ್ತವೆ. ಸಮುದ್ರತಳದಲ್ಲಿ ವಾಸಿಸುವುದಕ್ಕೆ ಬಿಳಿಯ ಬಣ್ಣವಿರಬಹುದು.

ಈ ಪ್ರಾಣಿಗಳಲ್ಲಿ ಎರಡು ಮುಖ್ಯ ಪಂಗಡಗಳಿವೆ: ಎಂಡೊಸೈಕ್ಲಿಕ ಮತ್ತು ಎಕ್ಸೊಸೈಕ್ಲಿಕ. ಎಂಡೊಸೈಕ್ಲಿಕ ಪಂಗಡಕ್ಕೆ ಸೇರಿದ ಪ್ರಾಣಿಗಳ ಹೆಸರು ಹಾರ್ಟ್ ಕಡಲ ಕುಡಿಕೆ. ಎಕ್ಸೊಸೈಕ್ಲಿಕ ಪಂಗಡಕ್ಕೆ ಹಾಟ್ ಅರ್ಚಿನ್, ಸ್ಯಾಂಡ್ ಡಾಲರ್ ಮತ್ತು ಕೇಕ್ ಅರ್ಚಿನ್‌ಗಳನ್ನು ಸೇರಿಸಲಾಗಿದೆ. ಸೀ ಅರ್ಚಿನ್ನಿನ ಕವಚ ಗುಂಡು. ಎಕ್ಸೊಸೈಕ್ಲಿಕದ ಕವಚ ಚಪ್ಪಟೆ. ಕವಚದ ಮೇಲ್ಭಾಗದಲ್ಲಿ ಒಂದು ಗುಂಪಾಗಿ ಜೋಡಿಸಲ್ಪಟ್ಟಿರುವ ಹತ್ತು ತಟ್ಟೆಗಳಿವೆ. ಇದಕ್ಕೆ ಎಪಿಕಲ್ ಸಮೂಹ ಎಂದು ಹೆಸರು. ಇವುಗಳ ಮಧ್ಯದ ತಟ್ಟೆಗೆ ಪೆರಿಪ್ರಾಕ್ಟ ಎಂದು ಹೆಸರು. ಎಂಡೊಸೈಕ್ಲಿಕಗಳಿಗೆ ಆಸನದ್ವಾರ ಪೆರಿಪ್ರಾಕ್ಟದ ಮಧ್ಯದಲ್ಲಿರುತ್ತದೆ; ಎಕ್ಸೊಸೈಕ್ಲಿಕಗಳಿಗೆ ಪೆರಿಪ್ರಾಕ್ಟದ ಮತ್ತು ಎಪಿಕಲ್ ಸಮೂಹದ ಹೊರಗೆ ಇರುತ್ತದೆ. ಸ್ಯಾಂಡ್ ಡಾಲರಿನ ಕವಚ ತೆಳ್ಳನೆಯ ದುಂಡು ನಾಣ್ಯದಂತಿದೆ. ಹಾರ್ಟ್ ಅರ್ಚಿನ್ನಿನ ಕವಚ ಅಂಡಾಕಾರದ ದಿಂಬಿನಂತಿದೆ. ಇವುಗಳ ಬಾಯಿ ಶರೀರದ ಕೆಳಭಾಗದಲ್ಲಿದೆ. ಬಾಯಲ್ಲಿರುವ ಅಗಿಯುವ ಯಂತ್ರಕ್ಕೆ ಅರಿಸ್ಟಾಟಲನ ಲಾಟೀನು ಎಂದು ಹೆಸರು. ಇದು ಅನೇಕ ತುಂಡುಗಳಿಂದಾದ ಜಟಿಲವಾದ ಅಂಗ. ಇದರಲ್ಲಿ ಐದು ಬಲವಾದ ಹಲ್ಲುಗಳಿವೆ.

ಕವಚದ ಮೇಲೆ ಚಿಕ್ಕ ಆದರೂ ಬಿಗಿಯುಳ್ಳ ಅಂಗಗಳಿವೆ. ಇವಕ್ಕೆ ಪೆಡಿಸಲೇರಿಯ ಎಂದು ಹೆಸರು. ಇವು ಕಡ್ಡಿಯ ಮೇಲಿರುವ ಕೊಕ್ಕಿನಂತಿವೆ. ಕೊಕ್ಕಿನಲ್ಲಿ ಚಲಿಸುವ ಮೂರು ದವಡೆಗಳಿವೆ. ಕೆಲವಕ್ಕೆ ವಿಷಗ್ರಂಥಿ ಇವೆ. ತಮ್ಮ ಕವಚವನ್ನು ಮುಟ್ಟಿದ ಚಿಕ್ಕ ಪ್ರಾಣಿಗಳನ್ನಾಗಲಿ, ಪದಾರ್ಥಗಳನ್ನಾಗಲಿ ಇವು ಹಿಡಿದು ಹೊರಗೆ ಹಾಕುವುವು. ಇವು ತಮ್ಮ ಕವಚವನ್ನು ಸದಾ ಶುಭ್ರವಾಗಿಟ್ಟಿರುವುವು.

ಉಷ್ಣದೇಶದ ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳ ಕವಚದ ಮೇಲೆ ಟೊಳ್ಳಾದ ಮುಳ್ಳುಗಳಿವೆ. ಇವು ಬೇರೆ ಪ್ರಾಣಿಯ ಚರ್ಮವನ್ನು ಚುಚ್ಚಿದ ಮೇಲೆ ಮುರಿದು ಹೋದರೆ ವಿಷಕಾರಿ ಗಾಯಗಳನ್ನುಂಟುಮಾಡುವುವು. ಲಿಸ್ತೆನೊಸೋಮದ ಮುಳ್ಳುಗಳು ಮನುಷ್ಯನನ್ನು

ಕೊಲ್ಲಬಲ್ಲವು. ಆದರೆ ಅನೇಕ ಎಕಿನಾಯ್ಡಿಯಗಳು ನಿರುಪದ್ರವಿಗಳು. ಕೆಲವು ದ್ವೀಪಗಳಲ್ಲಿ ಇದನ್ನು ಆಹಾರವಾಗಿ ಬಳಸುತ್ತಾರೆ. ಮೊಟ್ಟೆಯಿಡುವ ಕಾಲದಲ್ಲಿ ಇವು ಬಹು ರುಚಿ ಎಂದು ನಂಬಿಕೆ. ಬಾರ್‌ಬಡಾಸ್ ದ್ವೀಪಗಳಲ್ಲಿ ಮೀನುಗಾರಿಕೆಯಂತೆ ಇವನ್ನು ಹಿಡಿಯುವುದೂ ಒಂದು ಉದ್ಯಮ.

ಎಕಿನಾಯ್ಡಿಯ ಸಮುದ್ರವಾಸಿಗಳು. ಕಡಲ ಚಿಳ್ಳೆಗಳು ಸಮುದ್ರ ತೀರದ ಬಂಡೆಗಳಲ್ಲಿ ವಾಸಿಸುತ್ತದೆ. ಇದು ಬಂಡೆಯನ್ನು ಕೊರೆಯಬಲ್ಲದು. ಇದರ ಮುಖ್ಯ ಆಹಾರ ಏಕಕೋಶ ಸಸ್ಯಗಳು. ಬಂಡೆಗಳಿಗೆ ಅಂಟಿರುವ ಸಣ್ಣ ಪ್ರಾಣಿಗಳನ್ನೂ ತಿನ್ನಬಹುದು. ಇದು ಒಂದು ವರ್ಷದಲ್ಲಿ ಪ್ರಾಯಕ್ಕೆ ಬಂದರೂ ಅನೇಕ ವರ್ಷ ಬೆಳೆಯುತ್ತ ಹೋಗುವುದು. ಇದರ ಆಯಸ್ಸು 5–6 ವರ್ಷ. ಕೆಲವು ಉಭಯಲಿಂಗಿಗಳಾಗಿದ್ದರೂ ಸಾಧಾರಣವಾಗಿ ಲಿಂಗಭೇದವಿದೆ. ಮರಿಹುಳು ಸಮುದ್ರದ ಮೇಲೆ ತೇಲುತ್ತದೆ. ಇದಕ್ಕೆ ಎಕಿನೊ ಪ್ಲೂಟಿಯಸ್ ಎಂದು ಹೆಸರು. ಕೆಲವು ಮುಳ್ಳುಗಳ ಬುಡದಲ್ಲಿ ಮರಿಮಾಡುವುವು. ಸೀ ಅರ್ಚಿನ್ ಮುಳ್ಳುಗಳ ಬುಡದಲ್ಲಿರುವ ಸ್ನಾಯುಗಳ ಸಹಾಯದಿಂದ ಮುಳ್ಳುಗಳನ್ನು ಊರಿಕೊಂಡು ನಿಧಾನವಾಗಿ ನಡೆಯುವುದು. ಮುರಿದುಹೋದ ಮುಳ್ಳುಗಳು ತಿರುಗಿ ಬೆಳೆಯುತ್ತವೆ. ಎಕ್ಸೊಸೈಕ್ಲಿಕ್ ಪಂಗಡದ ಪ್ರಾಣಿಗಳು ಸಮುದ್ರದ ಮರಳಿನಲ್ಲಿ ಹೂತುಕೊಂಡು ಮಣ್ಣಿನಲ್ಲಿ ಬೆರತಿರುವ ಪುಡಿಯಾದ ಆಹಾರವನ್ನು ತಿನ್ನುವುವು. ಅನೇಕವು ಸಾಮೂಹಿಕ ಜೀವಿಗಳು. ಕೆಲವು ಬೇಟೆಯಾಡುತ್ತವೆ. ಕೆಲವು ಕೊಳೆತ ಮಾಂಸ ತಿನ್ನುತ್ತವೆ.

ಕೆಲವು ಪ್ರಾಣಿಗಳು ಕಡಲ ಚಿಳ್ಳೆಯ ಕವಚವನ್ನು ತೂತುಮಾಡಿ ಅದರಲ್ಲಿ ಪರಾವಲಂಬಿಗ ಳಾಗಿ ಜೀವಿಸುತ್ತವೆ. ಏಡಿಕಾಯಿಗಳು ಗುದದ್ವಾರದಲ್ಲೋ ಕವಚದ ಮೇಲೋ ವಾಸಿಸಿಕೊಂಡು ಅದರ ಮುಳ್ಳುಗಳನ್ನೋ ಕೊಳವೆಕಾಲುಗಳನ್ನೋ ತಿಂದುಕೊಂಡಿರುತ್ತವೆ. ಕೆಲವು ಪ್ರಾಣಿಗಳು ಮುಳ್ಳುಗಳ ಮಧ್ಯೆ ರಕ್ಷಣೆ ತೆಗೆದುಕೊಳ್ಳುತ್ತವೆ. (ಎಸ್.ಎನ್.ಕೆ.ಯು.)

**ಎಕೈನೊಕ್ಲೋಆ:** ಗ್ರಾಮಿನಿ ಅಥವಾ ಪೊಯೇಸಿ ಕುಟುಂಬಕ್ಕೆ ಸೇರಿದ ವಾರ್ಷಿಕ ಅಥವಾ ಬಹುವಾರ್ಷಿಕ ಹುಲ್ಲು. ಪ್ರಪಂಚದ ಎಲ್ಲ ಉಷ್ಣಪ್ರದೇಶಗಳಲ್ಲೂ ಬೆಳೆಯುತ್ತದೆ. ಎತ್ತರ ಸಾಮಾನ್ಯವಾಗಿ $3/4$ ಮೀಟರಿನಿಂದ $1\frac{1}{4}$ ಮೀಟರು. ಕೆರೆ ಕೊಳಗಳ ಅಂಗಳದಲ್ಲಿ, ಕೆಲವೊಮ್ಮೆ ನೀರಿನಲ್ಲಿ ಅರ್ಧ ಮುಳುಗಿದಂತೆ, ಬತ್ತದ ಗದ್ದೆಗಳಲ್ಲಿ ಕಳೆಯಂತೆ ಬೆಳೆಯುತ್ತದೆ.

ದನಗಳಿಗೆ ಈ ಹುಲ್ಲು ಬಹು ಪ್ರಿಯ. ಅಲ್ಲದೆ ಇದರಲ್ಲಿ ಒಳ್ಳೆಯ ಪೌಷ್ಟಿಕಾಂಶಗಳಿರುವುದ ರಿಂದ ಹಸಿಯಾಗಿಯೂ ಒಣಗಿದ ಮೇಲೂ ದನಗಳಿಗೆ ಒಳ್ಳೆಯ ಮೇವು. ಹೀಗಾಗಿ ಅನೇಕ ಕಡೆ ಇದನ್ನು ಗೋಮಾಳಗಳಲ್ಲಿ ಬೆಳೆಸುತ್ತಾರೆ.

ಇದರಲ್ಲಿ ಹಲವಾರು ಪ್ರಭೇದಗಳಿದ್ದು ಭಾರತದಲ್ಲಿ ನಾಲ್ಕು ಪ್ರಭೇದಗಳು ಬೆಳೆಯುತ್ತವೆ. ಅವು ಎ. ಕೊಲೋನಮ್, ಎ. ಕ್ರಸ್–ಗಾಲಿ, ಎ. ಫ್ರಮಂಟೇಸಿಯ ಮತ್ತು ಎ. ಸ್ಟಾಗ್ನಿನ– ಇವನ್ನು ದನಗಳಿಗೆ ಮೇವಾಗಿ ಉಪಯೋಗಿಸುವುದಲ್ಲದೆ ಕಾಳನ್ನು ಬರಗಾಲದಲ್ಲಿ ಜನ ಆಹಾರವಾಗಿ ಉಪಯೋಗಿಸುತ್ತಾರೆ. ಈಜಿಪ್ಟಿನಲ್ಲಿ ಚೌಳು ನೆಲವನ್ನು ಕೃಷಿಯೋಗ್ಯಮಾಡಲು ಇದರ ಕೆಲವು ಪ್ರಭೇದಗಳನ್ನು ಬೆಳೆಸುತ್ತಾರೆ. (ಕೆ.ಬಿ.ಎಸ್.)

**ಎಕಿನೊಡರ್ಮೇಟ:** ಅಕಶೇರುಕಗಳಲ್ಲಿ ಅತಿಮುಖ್ಯವಾದ ಒಂದು ವಂಶ ಎಕಿನೊಡರ್ಮೇಟ. ಇವನ್ನು ಗುರುತಿಸುವುದು ಅತಿಸುಲಭ. ಇಂದು ಜೀವಂತವಾಗಿರುವ ಎಲ್ಲಾ ಎಕಿನೊಡರ್ಮೇಟ ಜೀವಿಗಳು ಕಡಲವಾಸಿಗಳು. ಶರೀರ ತ್ರಿಜ್ಯೀಯ ಸಮ್ಮಿತಿಯನ್ನು ಹೊಂದಿದೆ. ತಲೆ ಅಥವಾ ಮುಂತುದಿ ಈ ಜೀವಿಗಳಲ್ಲಿಲ್ಲ. ಶರೀರ ದುಂಡಗೆ ಅಥವಾ ನಾಳದಂತೆ ಅಥವಾ ನಕ್ಷತ್ರದಂತಿರುತ್ತದೆ. ಸಾಮಾನ್ಯವಾಗಿ ಶರೀರದಲ್ಲಿ ಐದು ಬಾಹುಗಳು ಇರುತ್ತವೆ. ಕೆಲವು ಬಾರಿ ಈ ಬಾಹುಗಳು ತಟ್ಟೆಯಂತಿರುವ ಶರೀರದ ಅಂಚಿನಿಂದ ಹುಟ್ಟಿಕೊಂಡಿರುತ್ತವೆ. ಈ ವಂಶಕ್ಕೆ ಸೇರಿದ ಹಾಲೋಥರಾಯ್ಡಿಯ ವರ್ಗದ ಜೀವಿಗಳನ್ನು ಬಿಟ್ಟರೆ ಮಿಕ್ಕೆಲ್ಲ ಜೀವಿಗಳಲ್ಲೂ ಚರ್ಮದಲ್ಲಿ ಅತಿಗಟ್ಟಿಯಾದ ಮುಳ್ಳಿನಂತಿರುವ ರಚನೆಗಳು, ತಟ್ಟೆಗಳು ಇವೆ. ಹಾಲೋಥೂರಿಯಾಗಳ ಚರ್ಮ ಒರಟು, ಮುಳ್ಳುಗಳಿಲ್ಲ.

ಡಿಂಬಾವಸ್ಥೆಯಲ್ಲಿ ಸಮಪಾರ್ಶ್ವ ದೇಹವನ್ನುಳ್ಳ ಹೊಂದಿದ್ದು ಪ್ರೌಢಾವಸ್ಥೆಯಲ್ಲಿ ಸಮಪಾರ್ಶ್ವಸ್ಥಿತಿ ಮಾಯವಾಗಿ ಶರೀರ ಪಂಚಭುಜಾಕೃತಿಯಂತಾಗುತ್ತದೆ. ಇವುಗಳಿಗೆ ನಿರ್ದಿಷ್ಟ ತಲೆ ಅಥವಾ ಮಿದುಳು ರೂಪಿತವಾಗಿಲ್ಲ. ಶರೀರದೊಳಗೆ ಸುಣ್ಣಮಿಶ್ರಿತವಾದ ಅಸ್ಥಿರಚನೆಯಿದೆ. ಈ ರಚನೆ ಬೇರ್ಪಟ್ಟಂತಿರುವ ಫಲಕಗಳಂತಿದೆ. ಮುಳ್ಳುಗಳಿರುವುದು ಸಾಮಾನ್ಯ. ಇವುಗಳಲ್ಲಿ ಜಲಪರಿಚಲನಾಂಗ ಎಂಬ ಅಂಗವಿದೆ. ಈ ಅಂಗ ದೇಹಾಂತರವಕಾಶ ದಿಂದ ಹುಟ್ಟಿ ಬರುತ್ತದೆ. ಹೊರಗಿನಿಂದ ನೀರು ತೆಗೆದುಕೊಳ್ಳಲು ಇದರಲ್ಲಿ ಒಂದು ಜಲ್ಲಡಿಯಂಥ ರಂಧ್ರವಿದೆ. ಒಳಸೇರಿದ ನೀರು ನಳಿಕೆಪಾದಗಳ ಮೂಲಕ ಹೊರಬರುತ್ತದೆ.

ಇತರ ಪ್ರಾಣಿಗಳಲ್ಲಿರುವಂತೆ ಮುಂತುದಿ ಹಿಂತುದಿಗಳಿಗೆ ಬದಲಾಗಿ ಈ ಪ್ರಾಣಿಗಳಲ್ಲಿ ಓರಲ್ ಮತ್ತು ಅಬೋರಲ್ ತುದಿಗಳಿವೆ. ತಟ್ಟೆಯಂತಿರುವ ಶರೀರದ ಮಧ್ಯಭಾಗದಲ್ಲಿ ಬಾಯಿ ಇದೆ. ಬಾಯಿಯಿರುವ ಭಾಗವನ್ನು ಓರಲ್ ಭಾಗವೆಂತಲೂ ಅದಕ್ಕೆ ವಿರುದ್ಧ ಭಾಗವನ್ನು ಅಬೋರಲ್ ಭಾಗವೆಂತಲೂ ಕರೆಯುತ್ತೇವೆ. ಅಬೋರಲ್ ಭಾಗದಲ್ಲಿ ಗುದದ್ವಾರ ಮತ್ತು ಮ್ಯಾಡ್ರಿಪೊರೈಟ್ ರಂಧ್ರಗಳಿವೆ. ಹಾಲೊಥೂರಾಯ್ಡಿಯಾಗಳಲ್ಲಿ ಶರೀರ ಸೌತೆಕಾಯಿನಂತಾಗಿ ಓರಲ್‌ಭಾಗ ಮುಂತುದಿಯಲ್ಲೂ ಅಬೋರಲ್‌ಭಾಗ ಹಿಂತುದಿಯಲ್ಲೂ ಇರುತ್ತದೆ. ಎಕಿನೊಡರ್ಮೇಟ ವಂಶದ ವರ್ಗಗಳಾದ ಆಸ್ಟೆರಾಯ್ಡಿಯ ಮತ್ತು ಎಕಿನಾಯ್ಡಿಯ ಜೀವಿಗಳು ತಮ್ಮ ಓರಲ್ ಭಾಗವನ್ನು ಭೂಮಿಗೆ ಆಸರೆಯಾಗಿಟ್ಟುಕೊಂಡು ಚಲಿಸುತ್ತವೆ. ಆದರೆ ಕ್ರೈನಾಯ್ಡಿಯ ವರ್ಗದಲ್ಲಿ ಮಾತ್ರ ಅವು ಭೂಮಿಗೆ ಅಂಟಿಕೊಂಡಿರಲಿ ಅಥವಾ ಇಲ್ಲದಿರಲಿ ಅಬೋರಲ್ ಭಾಗವನ್ನು ಭೂಮಿಗೆ ಆಸರೆಯಾಗಿಟ್ಟುಕೊಂಡು ಚಲಿಸುತ್ತವೆ. ಇವುಗಳಲ್ಲಿ ಓರಲ್ ಭಾಗ ಮೇಲುಮುಖವಾಗಿರುತ್ತದೆ. ಮಿಕ್ಕವುಗಳಲ್ಲಿ ಅಬೋರಲ್ ಭಾಗ ಮೇಲುಮುಖವಾಗಿರುತ್ತದೆ. ಎಕಿನೊಡರ್ಮ ಜೀವಿಯ ಶರೀರದ ಮೇಲೆ ಸರಿಯಾದ ಸಿಮಿಟ್ರಿಯಲ್ಲಿ ಜೋಡಿಸಿಕೊಂಡಿರುವಂತೆ ಐದು ಸಾಲುಗಳಿವೆ. ಇವು ತಗ್ಗಾದ ಹಳ್ಳದಂತೆ ಅಥವಾ ನೇಗಿಲಿನ ತೆರೆಯಂತೆ ಕಾಣುತ್ತಿರುತ್ತವೆ. ಇವನ್ನು ಆಂಬುಲ್ಯಾಕರಲ್ ಕಾಲುವೆಗಳೆನ್ನು ತ್ತೇವೆ. ಈ ಕಾಲುವೆಗಳ ಒಳಬುಡದಿಂದ ನಳಿಕೆಪಾದಗಳು ಹೊರಬರುತ್ತವೆ. ಈ ಪಾದಗಳು ಜಲಪರಿಚಲನೆಗೆ ಸೇರಿದ ಅಂಗಗಳು. ಆಂಬುಲ್ಯಾಕರಲ್‌ಗಳ ಮಧ್ಯೆಯಿರುವ ಸ್ಥಳಕ್ಕೆ ಇಂಟರ್ ಆಂಬುಲ್ಯಾಕರಲ್ ಅಥವಾ ಅಂತರತ್ರಿಜ್ಯಗಳೆಂದು ಹೆಸರು.



ಎಕಿನೊಡರ್ಮ ವಂಶದ ವಿವಿಧ ಜೀವಿಗಳು

ಎಕಿನೊಡರ್ಮ್‌ಗಳ ಶರೀರದ ಹೊರಹೊದಿಕೆಯಲ್ಲಿ ಹೊರದರ್ಮ, ಒಳದರ್ಮ ಮತ್ತು ಸೀಲಾಮಿನ ಎಪಿಥೀಲಿಯಂ ಪದರಗಳಿವೆ. ಒಳದರ್ಮದಲ್ಲಿ ಸುಣ್ಣಮಿಶ್ರಿತ ಅಸ್ಥಿಯಿದೆ. ಈ ಅಸ್ಥಿಯನ್ನು ಒಳದರ್ಮವೇ ಉತ್ಪತ್ತಿ ಮಾಡುತ್ತದೆ. ಅದರಿಂದ ಎಕಿನೊಡರ್ಮ್‌ಗಳಲ್ಲಿರುವ ಅಸ್ಥಿಯನ್ನು ಒಳಾಸ್ಥಿಯೆನ್ನುತ್ತೇವೆ. ಈ ಅಸ್ಥಿ ಅತ್ಯಂತ ಸುವ್ಯವಸ್ಥಿತ ರೀತಿಯಲ್ಲಿ ಬೆಸುಗೆಹಾಕಿದ ತಟ್ಟೆಗಳಂತಿರುವ ರಚನೆಗಳನ್ನೊಳಗೊಂಡಿದೆ. ಇದರಿಂದಾಗಿ ಶರೀರ ಒಂದು ಭದ್ರವಾದ ಪೆಟ್ಟಿಗೆಯಂತೆ ಕಾಣುತ್ತದೆ. ಈ ರೀತಿಯ ಕವಚ ಪೆಟ್ಟಿಗೆಯನ್ನು ಥೀಕ ಅಥವಾ ಟೆಸ್ಟ್



ಈವ್ಯಾಸ್ಟ್ರಿಯಸ್ ಟ್ರೋಸ್‌ಕಿಲೈ ಪ್ರಾಣಿ

ಎನ್ನುತ್ತೇವೆ. ಈ ಥೀಕ ಅಥವಾ ಟೆಸ್ಟ್ ಬೆಸುಗೆಯಿಲ್ಲದ ಆಸಿಕಲ್‌ಗಳೆಂಬ ರಚನೆಗಳಿಂದಲೂ ಆಗಿರಬಹುದು. ಹಾಲೊಥೂರಾಯ್ಡಿಯದಲ್ಲಿ ಈ ಆಸಿಕಲ್‌ಗಳು ನಶಿಸಿಹೋಗಿ ಅತಿಸೂಕ್ಷ್ಮವಾದ ಮುಳ್ಳಿನಂಥ ರಚನೆಗಳಿವೆ. ಅಸ್ಥಿತಟ್ಟೆ ಹಾಗೂ ಆಸಿಕಲ್‌ಗಳಲ್ಲದೆ ದಬ್ಬಳ ಅಥವಾ ಸೂಜಿಗಳಂಥ ಮುಳ್ಳುಗಳೂ ಈ ಜೀವಿಗಳಲ್ಲಿ ಸಾಮಾನ್ಯ. ಈ ರಚನೆಗಳಿಗೆಲ್ಲ ಮೇಲು ಹೊರದರ್ಮದ ಹೊದಿಕೆಯಿದೆ. ಒಳದರ್ಮದ ತಳದಲ್ಲಿ ಸ್ನಾಯುಗಳಿವೆ. ಹಾಲೊಥೂರಾಯ್ಡಿಯ ವರ್ಗದಲ್ಲಿ ಸ್ನಾಯುಗಳು ಚೆನ್ನಾಗಿ ಬೆಳೆದಿವೆ.

# ಎಕಿನೊಡರ್ಮೇಟ

ಪ್ರಾಣಿಜಗತ್ತಿನಲ್ಲೇ ಕಂಡುಬರದಿರುವ ಒಂದು ರೀತಿಯ ವಿಚಿತ್ರವಾದ ಅಂಗ ಎಕಿನೊಡರ್ಮೇಟ ವಂಶದಲ್ಲಿದೆ. ಇದೇ ಜಲಪರಿಚಲನಾಂಗ. ಈ ಅಂಗ ಸುವ್ಯವಸ್ಥಿತ ರೀತಿಯ ನಾಳಗಳನ್ನು ಹೊಂದಿದೆ. ಈ ನಾಳಗಳು ಆಂಬುಲ್ಯಾಕರಲ್ ಕಾಲುವೆಗಳ ತಳದಲ್ಲಿವೆ. ಈ ಕಾಲುವೆಗಳಲ್ಲಿ ನೀರು ಹರಿಯುತ್ತದೆ. ಜಲ ಪರಿಚಲನಾಂಗದ ಮುಖ್ಯಭಾಗಗಳೆಂದರೆ ಜಲರಂಧ್ರ, ಕಲ್ಲುಗಾಲುವೆ, ಉಂಗುರ ಕಾಲುವೆ ಮತ್ತು ರೇಡಿಯಲ್ ಕಾಲುವೆಗಳು ಹಾಗೂ ನಳಿಕೆಪಾದಗಳು. ಜಲರಂಧ್ರ ಸಾಮಾನ್ಯವಾಗಿ ಪ್ರಾಣಿಯ ಅಬೋರಲ್ ಭಾಗದಲ್ಲಿರುತ್ತದೆ. ತಟ್ಟೆಯಂತಿರುವ ಶರೀರದ ಇಂಟರ್ ರೇಡಿಯಲ್ ಭಾಗದಲ್ಲಿ ಇದು ಇದೆ. ಜಲರಂಧ್ರ ವೇನಾದರೂ ವಿಭಾಗವಾಗಿ ಜಲ್ಲಡಿಯಂತಾಗಿದ್ದರೆ ಅದನ್ನು ಮ್ಯಾಡ್ರಿಪೊರೈಟ್ ಎನ್ನುತ್ತೇವೆ. ಈ ರಂಧ್ರ ಕಲ್ಲುಗಾಲುವೆಗೆ ಸಂಪರ್ಕ ಕಲ್ಪಿಸುತ್ತದೆ. ಈ ನಾಳದ ಗೋಡೆಗಳು ಸುಣ್ಣ ಮುಂತಾದ ಲೇಪನಗಳಿಂದಾಗಿ ಗಟ್ಟಿಯಾಗಿರುವುದರಿಂದ ಇದಕ್ಕೆ ಕಲ್ಲುಗಾಲುವೆಯೆಂದು ಹೆಸರು ಬಂದಿದೆ. ಈ ಕಲ್ಲುಗಾಲುವೆ ಉಂಗುರ ಕಾಲುವೆಗೆ ಸಂಪರ್ಕ ಕಲ್ಪಿಸುತ್ತದೆ. ಉಂಗುರ ಕಾಲುವೆಯಿಂದ ರೇಡಿಯಲ್ ಕಾಲುವೆಗಳು ಹೊರಟು ಆಂಬುಲ್ಯಾಕರಲ್ ಕಾಲುವೆಗಳೊಳಕ್ಕೆ ಪ್ರವೇಶಿಸುತ್ತವೆ. ರೇಡಿಯಲ್ ಕಾಲುವೆಗಳ ಇಕ್ಕೆಲದಲ್ಲಿ ಚಿಕ್ಕ ಚಿಕ್ಕ ನಾಳಗಳಂತಿರುವ ಅಡ್ಡಕಾಲುವೆಗಳಿವೆ. ಈ ಅಡ್ಡಕಾಲುವೆಗಳನ್ನು ನಳಿಕೆ ಪಾದಗಳಲ್ಲಿ ಕೊನೆಗೊಳ್ಳುತ್ತವೆ. ನಳಿಕೆಪಾದದ ಬುಡದಲ್ಲಿ ಆಂಪುಲ್ಲ ಎಂಬ ಚೀಲದಂಥ ರಚನೆಯಿದೆ. ಈ ಆಂಪುಲ್ಲದಿಂದ ನಾಳದಂಥ ರಚನೆ ಹೊರಚಾಚಿದೆ. ಈ ನಾಳದ ತುದಿಯಲ್ಲಿ ಅಂಟು ಸಿಂಬಿಯಿದೆ. ಈ ಸಿಂಬಿಯ ಮಧ್ಯೆ ಸೂಕ್ಷ್ಮ ರಂಧ್ರವಿದೆ. ನಳಿಕೆಪಾದದ ಆಂಪುಲ್ಲದೊಳಗೆ ಒಂದು ಕವಾಟವಿದೆ. ಇದು ನೀರನ್ನು ಹಿಂದಕ್ಕೆ ಹೋಗದಂತೆ ತಡೆಗಟ್ಟುತ್ತದೆ. ಎರಡು ರೇಡಿಯಲ್ ಕಾಲುವೆಗಳ ಮಧ್ಯೆಯಿರುವ ಉಂಗುರಗಾಲುವೆಯ ಭಾಗದಲ್ಲಿ ಪೋಲಿಯನ್ ವೆಸಿಕಲ್ ಮತ್ತು



ಸಮುದ್ರ ಸೌತೆ ; 1 ಹೊರಭಾಗದ ಟೆಂಟಕಲ್, 2 ಒಳಭಾಗದ ಟೆಂಟಕಲ್, 3 ಕುತ್ತಿಗೆ ಭಾಗ

ಟೀಡ್‌ಮನ್ ಬಾಡಿಗಳೆಂಬ ರಚನೆಗಳಿವೆ. ನೀರು ಜಲರಂಧ್ರ ಅಥವಾ ಮ್ಯಾಡ್ರಿಪೊರೈಟ್ ರಂಧ್ರದ ಮೂಲಕ ಕಲ್ಲುಗಾಲುವೆಗೆ ಬರುತ್ತದೆ. ಕಲ್ಲುಗಾಲುವೆಯಿಂದ ಉಂಗುರಗಾಲುವೆಯನ್ನು ತಲಪಿ ಅಲ್ಲಿಂದ ರೇಡಿಯಲ್ ಕಾಲುವೆಗಳಿಗೆ ಹರಿಯುತ್ತದೆ. ಈ ಕಾಲುವೆಗಳಿಂದ ಅಡ್ಡಕಾಲುವೆ ಗಳ ಮೂಲಕ ನಳಿಕೆಪಾದಗಳ ಆಂಪುಲ್ಲ ಭಾಗವನ್ನು ತಲಪುತ್ತದೆ. ಆಂಪುಲ್ಲ ತುಂಬಿದಮೇಲೆ ಸಂಕುಚಿಸುತ್ತದೆ. ಇದರಿಂದಾಗಿ ನೀರು ಆಂಪುಲ್ಲ ಮುಂದಿರುವ ನಾಳದ ಮೂಲಕ ಬಿರುಸಿನಿಂದ ಹೊರ ಹೊಮ್ಮುತ್ತದೆ. ಈ ಕ್ರಿಯೆಯಿಂದಾಗಿ ಜೀವಿ ಮೆಲ್ಲನೆ ಚಲಿಸಲು ಸಾಧ್ಯವಾಗುತ್ತದೆ. ಇದಲ್ಲದೆ



ಎಕಿನೋಡರ್ಮೇಟ

ಜಲಪರಿಚಲನೆಯಿಂದ ಉಸಿರಾಟಕ್ಕೂ ಅನುಕೂಲವಾಗುತ್ತದೆ. ನೀರಿನಲ್ಲಿರುವ ಆಮ್ಲಜನಕವನ್ನು ತೆಗೆದುಕೊಂಡು ಇಂಗಾಲದ ಡೈಆಕ್ಸೈಡನ್ನು ಜೀವಿ ಹೊರಹಾಕುತ್ತದೆ. ಇದಲ್ಲದೆ ಆಹಾರ ಸಂಗ್ರಹಣೆಗೂ ಈ ನಳಿಕೆ ಪಾದಗಳು ಸಹಾಯಮಾಡುತ್ತವೆ. ಓಫಿಯುರಾಯ್ಡಿಯ ಹಾಲೊಥುರಾಯ್ಡಿಯ ಮತ್ತು ಕ್ರೈನಾಯ್ಡಿಯಗಳಲ್ಲಿ ಮ್ಯಾಡ್ರಿಪೊರೈಟ್ ರಂಧ್ರ ಓರಲ್ ಭಾಗದಲ್ಲಿವೆ.



ಜೊರೊಆಸ್ಟರ್ ಎವರಮ್ಯಾನ್ನಿ ಪ್ರಾಣಿ

ಕಂಟಕಚರ್ಮಿಗಳ ನರಮಂಡಲ ಕೆಳಮಟ್ಟದ್ದು, ಶರೀರದಲ್ಲಿ ನರಗಳ ಜಾಲಂದ್ರವಿದೆ. ಈ ಪ್ರಾಣಿಗಳಲ್ಲಿರುವ ನರಗಳ ಜಾಲಂದ್ರವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಈ ಮೂರು ಭಾಗಗಳು ಶರೀರದಲ್ಲಿ ಹಂತಹಂತವಾಗಿವೆ. ಅವು ಎಕ್ಟೊನ್ಯೂರಲ್ ಹಂತ. ಹೈಪೊನ್ಯೂರಲ್ ಹಂತ. ಎಂಟೊನ್ಯೂರಲ್ ಹಂತ. 1. ಎಕ್ಟೊನ್ಯೂರಲ್ ಹಂತ. ಜಾಲಂದ್ರ ಓರಲ್ ಭಾಗದಲ್ಲಿ ಅನ್ನನಾಳದ ಸುತ್ತಲೂ ಒಂದು ನರಮುಡಿಯನ್ನು ಹೊಂದಿದೆ. ಈ ನರಮುಡಿಯಿಂದ ನರಗಳು ಶರೀರದ ಪಂಚಭುಜಗಳಿಗೂ ಪಸರಿಸಿವೆ. ಪ್ರತಿ ಭುಜದಲ್ಲಿರುವ ನರ ಆಂಬುಲ್ಯಾಕ್ರದೊಳಗಿದ್ದು ಬಾಹುವಿನ ತುದಿಯವರೆಗೂ ಪಸರಿಸಿದೆ. ನರದಲ್ಲಿ ಅಲ್ಲಲ್ಲಿ ಗಂಟುಗಳಂಥ ಗ್ಯಾಂಗ್ಲಿಯಾಗಳಿವೆ. 2. ಹೈಪೊನ್ಯೂರಲ್ ಹಂತ ಶರೀರದ ಒಳಭಾಗದಲ್ಲಿ ಅಂದರೆ ಒಳದರ್ಮದ ಭಾಗದಲ್ಲಿದೆ. 3. ಎಂಟೊನ್ಯೂರಲ್ ಹಂತ ಅಬೋರಲ್ ಭಾಗದಲ್ಲಿದೆ. ಇವು ರಚನೆಯಲ್ಲಿ ಎಂಟೊನ್ಯೂರಲ್ ನರಜಲಾಂದ್ರವನ್ನೇ ಹೋಲುತ್ತವೆ. ಈ ವಂಶದಲ್ಲಿ ಚೆನ್ನಾಗಿ ಬೆಳೆದಿರುವ ಜ್ಞಾನೇಂದ್ರಿಯಗಳಿಲ್ಲ.



ಸಮುದ್ರ ಸೌತೆ ; 1 ಟೆಂಟಕಲ್ಲುಗಳು, 2 ಕುತ್ತಿಗೆ ಭಾಗ, 3 ನಳಿಕೆ ಪಾದಗಳು

ಎಕಿನೊಡರ್ಮ ಪ್ರಾಣಿಗಳಲ್ಲಿ ವಿಶಾಲವಾದ ದೇಹಾಂತರವಕಾಶವಿದೆ. ಈ ದೇಹಾಂತರಾ ವಕಾಶಕ್ಕೆ ಸೀಲಾಂ ಎಂದು ಹೆಸರು. ಈ ಪ್ರಾಣಿಗಳ ಸೀಲಾಂ ಎಂಟಿರೋಸೀಲಸ್ ರೀತಿಯಲ್ಲಿ ಬೆಳೆಯುತ್ತದೆ. ಈ ಅವಕಾಶದೊಳಗೆ ಜೀರ್ಣಾಂಗಗಳು, ಜನನಾಂಗಗಳು ಇವೆ. ಕ್ರೈನಾಯ್ಡಿಯ ವರ್ಗದಲ್ಲಿ ಮಾತ್ರ ಈ ದೇಹಾಂತರವಕಾಶದೊಳಗೆ ಬಲೆಯಾಕಾರಕ್ಕೆ ಬೆಳೆದ ಸಂಯೋಜಕ ಅಂಗಾಂಶದ ಬೆಳವಣಿಗೆಯಿದೆ. ಸೀಲಾಂ ಅಥವಾ ದೇಹಾಂತರವಕಾಶ ಮಧ್ಯದರ್ಮ ಮೂಲದಿಂದ ಹುಟ್ಟಿಬರುವ ಎಪಿಥೀಲಿಯಂ ಕೋಶಗಳ ಲೇಪನವನ್ನು ಹೊಂದಿರುತ್ತದೆ. ಇದಕ್ಕೆ ಪೆರಿಟೋನಿಯಂ ಎಂದು ಹೆಸರು. ಈ ಪೆರಿಟೋನಿಯಂ ಲೇಪನ ಜೀರ್ಣಾಂಗಗಳ ಹೊರಭಾಗದಲ್ಲೂ

ಇರುತ್ತದೆ. ಸೀಲಾಂನೊಳಕ್ಕೆ ಚಾಚಿಕೊಂಡಿರುವ ಈ ಅಂಗಗಳಿಗೆ ಮಿಸೆಂಟರಿಗಳು ಆಸರೆಯಾಗಿವೆ. ಬಹಳ ಎಕಿನೊಡರ್ಮ ಜೀವಿಗಳಲ್ಲಿ ಶುದ್ಧೀಕರಣಕ್ರಿಯೆ ಮತ್ತು ಉಸಿರಾಡುವ ಕ್ರಿಯೆಗಳಿಗೆ ಪ್ರತ್ಯೇಕವಾದ ಅಂಗಗಳಿಲ್ಲ. ಹಾಲೊಥುರಾಯ್ಡಿಯ ವರ್ಗದಲ್ಲಿ ಮಾತ್ರ ಉಸಿರಾಡಲು ಪ್ರತ್ಯೇಕ ವಾದ ಅಂಗವಿದೆ. ಮಿಕ್ಕವುಗಳಲ್ಲಿ ಉಸಿರಾಟಕ್ಕೆ ಸಂಪೂರ್ಣ ಶರೀರವೇ ಸಹಕರಿಸ ಬೇಕಾಗುತ್ತದೆ. ರಕ್ತಪರಿಚಲನಾಂಗದಲ್ಲಿ ನಿರ್ದಿಷ್ಟ ರೀತಿಯ ರಕ್ತನಾಳಗಳಿಲ್ಲದೆ ದೇಹಾಂತರಾವ ಕಾಶದಲ್ಲಿರುವ ಕೆಲವು ಕಾಲುವೆಗಳಲ್ಲಿ ರಕ್ತ ತುಂಬಿಕೊಂಡಿದೆ. ಈ ಕಾಲುವೆಗಳಲ್ಲಿ ನಾಳಗಳಿಲ್ಲ.



ಚಿತ್ರ 7. ಸಮುದ್ರ ಸೌತೆಯ ಒಳರಚನೆ: 1 ಹೊರಭಾಗದ ಟೆಂಟಕಲ್‌ಗಳು, 2. ಒಳಭಾಗದ ಟೆಂಟಿಕಲ್‌ಗಳು, 3. ಗಂಟಲು ಪಾದ, 4. ಮಾಂಸಖಂಡಗಳು, 5. ಉಂಗುರದಂತಿರುವ ತಟ್ಟೆಗಳು, 6. ನೀರುಂಗರ, 7. ಪೋಲಿಯನ್ ಚೀಲಗಳು, 8. ಕಲ್ಲುಗಾಲುವೆ, 9. ಮ್ಯಾಡ್ರಿಪೊರೈಟ್ ಭಾಗ, 10. ಅನ್ನನಾಳ, 11. ಜಠರ, 12. ಜನನೇಂದ್ರಿಯ ನಾಳ, 13. ಜನನೇಂದ್ರಿಯ, 14. ಸಣ್ಣಕರುಳು, 15. ನೀಳವಾಗಿರುವ ಮಾಂಸಖಂಡಗಳು, 16. ದೊಡ್ಡಕರುಳು, 17. ಮೀಸೆಂಟ್ರಿಗಳು, 18. ಸಣ್ಣಕರುಳು, 19. ಕ್ಲೊಯಕ ಭಾಗದ ಮಾಂಸಖಂಡಗಳು, 20. ಕ್ಲೊಯ್ಲಕ, 21. ಗುದದ್ವಾರ, 22. ಉಸಿರಾಟದ ಮರ

ಅನ್ನನಾಳದಲ್ಲಿ ಬಾಯಿ ಮತ್ತು ಗುದದ್ವಾರಗಳಿವೆ (ಕೆಲವು ಓಫಿಯೋರಾಯ್ಡಿಯ ಆಸ್ಟೆರಾಯ್ಡಿಯ ಜೀವಿಗಳಲ್ಲಿ ಗುದದ್ವಾರವೇ ಇಲ್ಲ). ಅನ್ನನಾಳ ಸಾಮಾನ್ಯವಾಗಿ ಸುರುಳಿ ಸುತ್ತಿಕೊಂಡಿರುತ್ತದೆ. ಬಾಯಿ ಓರಲ್ ಭಾಗದ ಮಧ್ಯೆಯೂ ಗುದದ್ವಾರ ಅಬೋರಲ್ ಭಾಗದ ಮಧ್ಯೆ ಅಥವಾ ಮಧ್ಯದಿಂದ ಸ್ವಲ್ಪ ಅತ್ತಕಡೆ ಇರುತ್ತದೆ. ಕ್ರೈನಾಯ್ಡಿಯಗಳಲ್ಲಿ ಬಾಯಿ ಮತ್ತು ಗುದದ್ವಾರಗಳು ಓರಲ್ ಭಾಗದಲ್ಲಿಯೇ ಇವೆ. ಬಹಳ ಇರ್‍ರೆಗ್ಯುಲರ್ ಎಕಿನಾಯ್ಡಿಯ ಮತ್ತು ಓಫಿಯುರಾಯ್ಡಿಯಗಳಲ್ಲಿ ಅನ್ನನಾಳ ಸುರುಳಿ ಸುತ್ತಿಕೊಂಡಿರದೆ ನೇರವಾಗಿ ಕೊಳವೆಯಂತೆಯೇ ಇದೆ. ಇವುಗಳಲ್ಲಿ ಜಠರ ಬಹಳ ದೊಡ್ಡದು. ಆಸ್ಟಿರಾಯ್ಡಿಯ ದಲ್ಲಿ ಜಠರ ಐದು ಬಾಹುಗಳಿಗೂ ಪಸರಿಸಿದೆ. ಈ ಜಠರ ಭಾಗಗಳ ಜೊತೆ ಸೊಂಪಾಗಿ ಬೆಳೆದ ಜಠರ ಗ್ರಂಥಿಗಳಿವೆ.

ಜನನಾಂಗ ಬಹಳ ಸರಳರೀತಿಯದು. ಒಂದೇ ಒಂದು ಜನನಾಂಗವಿದ್ದು ಅದು ಶರೀರದ ಸೌಷ್ಠವಕ್ಕೆ ತಕ್ಕಂತೆ ತನ್ನ ಸ್ಥಾನವನ್ನಲಂಕರಿಸಿಕೊಂಡಿದೆ. ಇದರ ರಂಧ್ರ ಜಲರಂಧ್ರ; ಗುದದ್ವಾರವಿರುವ ಇಂಟರ್‌ರೇಡಿಯಸ್ ಭಾಗದಲ್ಲಿದೆ. ಹಾಲೊಥುರಾಯ್ಡಿಯ ವರ್ಗದಲ್ಲಿ ಈ ಸ್ಥಿತಿ ಇಂದಿಗೂ ಇದೆ. ಆದರೆ ಇಂದಿನ ಮಿಕ್ಕ ಎಕಿನೊಡರ್ಮ‌ಗಳಲ್ಲಿ ಶರೀರದ ಸಮ್ಮಿತಿಗೆ ತಕ್ಕಂತೆ ಸಮ್ಮಿತೀಯ ಜನನಾಂಗಗಳಿವೆ. ಸಾಮಾನ್ಯವಾಗಿ ಹೆಣ್ಣು ಮತ್ತು ಗಂಡುಗಳೆಂಬ ಭೇದ ಈ ಪ್ರಾಣಿಗಳಲ್ಲಿದೆ. (ಕೆಲವು ಹಾಲೊಥುರಾಯ್ಡಿಯ ಮತ್ತು ಓಫಿಯುರಾಯ್ಡಿಯಗಳಲ್ಲಿ ದ್ವಿಲಿಂಗತ್ವವೂ ಇದೆ). ಆದರೆ ಗಂಡು ಹೆಣ್ಣುಗಳನ್ನು ಬಾಹ್ಯವಾಗಿ ಗುರುತಿಸಲಾಗುವುದಿಲ್ಲ. ಜನನಾಂಗಗಳಲ್ಲಿ ಉತ್ಪತ್ತಿಯಾಗುವ ರೇತಸ್ಸು ಮತ್ತು ಮೊಟ್ಟೆಗಳು ನೀರಿಗೆ ಬೀಳುತ್ತವೆ. ನಿಷೇಚನೆ ನೀರಿನಲ್ಲಿಯೇ ನಡೆಯುತ್ತದೆ. ನಿಷೇಚನಗೊಂಡ ಮೊಟ್ಟೆ ಬೆಳೆದು ಬಂದು ಲಾರ್ವಾವಾಗುತ್ತದೆ. ಎಕಿನೊಡರ್ಮ ವಂಶದ ಪ್ರತಿಜೀವಿಯ ಬೆಳವಣಿಗೆಯಲ್ಲೂ ಲಾರ್ವಾಸ್ಥಿತಿ ಇದ್ದೇ ಇರುತ್ತದೆ. ಈ ವಂಶದ ಲಾರ್ವಾ ಜೀವಿಗಳು (ಬೈಲ್ಯಾಟರಲ್) ಸಮಪಾರ್ಶ್ವಸ್ಥಿತಿಯನ್ನು ಹೊಂದಿರುತ್ತವೆ. ಆದರೆ ಈ ಸಮ್ಮಿತಿ ಲಾರ್ವಾ ಬೆಳೆದಂತೆ ಮಾಯವಾಗುತ್ತ ಬಂದು ರೂಪಾಂತರಗೊಂಡು ವಯಸ್ಕ ಜೀವಿಯಾಗುತ್ತದೆ. ಈ ವಯಸ್ಕಜೀವಿಯಲ್ಲಿ ತ್ರಿಜ್ಯೀಯ ಸಮ್ಮಿತಿ ಇದೆ.



ಕ್ಲೈಪಿಯಾಸ್ಟರ್
1. ಆಂಬುಲ್ಯಾಕರ, 2. ಮ್ಯಾಡ್ರಿಪೊರೈಟ್ ತಟ್ಟೆ, 3. ಪಾದಗಳು, 4. ಜನನೇಂದ್ರಿಯ ರಂಧ್ರಗಳು



ಆಂಟಿಡಾನ್



ಮೆಲ್ಲೀಟ (ಮರಳು ಪದಕ) : 1. ಲೂನ್ಯೂಲ್, 2. ದಳಗಳು, 3. ಜನನೇಂದ್ರಿಯ ರಂಧ್ರ 4. ಪಾದಗಳು

ಈಗ ಹೇಳಿರುವ ಎಲ್ಲ ಗುಣಲಕ್ಷಣಗಳು ಇಂದು ಬದುಕಿರುವ ಕಂಟಕ ಚರ್ಮಿಗಳಿಗೆ ಅನ್ವಯಿಸುತ್ತದೆ. ಹಿಂದಿದ್ದ ಜೀವಿಗಳು ತಮ್ಮ ಹೊರಕವಚ ಶರೀರದಿಂದಾಗಿ ಪಳೆಯುಳಿಕೆಗಳಾಗಿ

ಇಂದಿಗೂ ಸಿಕ್ಕುತ್ತವೆ. ಇವುಗಳ ಅಭ್ಯಾಸದಿಂದ ಈ ವಂಶದ ಬಹಳ ವಿಚಾರಗಳನ್ನು ಪೂರ್ಣವಾಗಿ ಅರಿಯಲು ಅನುಕೂಲವಾಗಿದೆ.




**ಆಂಟಿಡಾನ್ ಪ್ರಾಣಿಯ ಲಾರ್ವ**
**1. ಪಾದಗಳ ಮೇಲಿರುವ ಸ್ಪರ್ಶೇಂದ್ರಿಯಗಳು,**
**2. ಐದು ಪ್ರಾಥಮಿಕ ಬಾಹುಗಳು, 3. ಬಾಹುಗಳ ರೆಂಬೆಗಳು, 4. ಕವಲೊಡೆದ ರೆಂಬೆಗಳು**
**5. ಬಾಯಿಯ ಸುತ್ತ ಇರುವ ಉಬ್ಬು, 6. ಡೆಲ್ಟಾಯ್ಡ್ ತಟ್ಟೆಗಳು, 7. ರೇಡಿಯಲ್ ತಟ್ಟೆಗಳು**
**8. ಬುಡದ ತಟ್ಟೆಗಳು, 9. ತೊಟ್ಟು, 10. ಬುಡದ ಒಳಭಾಗದ ತಟ್ಟೆ, 11. ಬುಡ**

**ವರ್ಗೀಕರಣ:** ಎಕಿನೊಡರ್ಮ ವಂಶವನ್ನು ಎರಡು ಉಪವಂಶಗಳಾಗಿ ವರ್ಗೀಕರಿಸಲಾಗಿದೆ. 1. ಪೆಲ್‌ಮೆಟೋಜ಼ೋವ 2. ಎಲ್ಯುಥಿರೋಜ಼ೋವ.



**ಆರ್ಚಿನ್ನಿನ ಟೆಸ್ಟ್**

ಉಪವಂಶ 1 ಪೆಲ್‌ಮೆಟೋಜ಼ೋವ: ಕೇವಲ ಒಂದು ವರ್ಗವನ್ನು ಬಿಟ್ಟರೆ ಈ ವಂಶಕ್ಕೆ ಸೇರಿದ ಇತರ ವರ್ಗಗಳು ಇಂದು ಬದುಕಿಲ್ಲ. ಅವುಗಳ ಪಳೆಯುಳಿಕೆಗಳು ಮಾತ್ರ ಇವೆ. ಈ ಉಪವಂಶದ ಪ್ರಾಣಿಗಳು ಸಸ್ಯಗಳಂತೆ ನೆಲಕ್ಕಂಟಿಕೊಂಡು ಬೆಳೆಯುತ್ತವೆ. ನೇರವಾಗಿ ಅಬೋರಲ್ ಭಾಗವೇ ನೆಲಕ್ಕಂಟಿಕೊಂಡಿರಬಹುದು ಅಥವಾ ಈ ಭಾಗದಲ್ಲಿ ತೊಟ್ಟಿನಂಥ ರಚನೆಯಿದ್ದು ಅದರ ಸಹಾಯದಿಂದ ಇವು ನೆಲಕ್ಕಂಟಿಕೊಂಡಿರಬಹುದು. ಈ ತೊಟ್ಟಿನಂಥ ರಚನೆ ಸುಣ್ಣಮಿಶ್ರಿತ ತಟ್ಟೆಗಳನ್ನೊಳಗೊಂಡಿರುತ್ತದೆ. ಓರಲ್ ಭಾಗ ಮೇಲ್ಮುಖವಾಗಿರುತ್ತದೆ. ಶರೀರದಲ್ಲಿ ಗಟ್ಟಿಯಾದ ಪೆಟ್ಟಿಗೆಯಂಥ ಥೀಕ ಅಥವಾ ಟೆಸ್ಟ್ ಇದೆ; ಓರಲ್ ಭಾಗದಲ್ಲಿ




**ಕಡಲ ಬಳ್ಳಿ : 1. ಎರಡು ಸಾಲಿನಲ್ಲಿರುವ ಪಾದಗಳು, 2. ಪಾದಗಳ ಮಧ್ಯೆ ಇರುವ ಸ್ಥಳ**
**3. ಪಾದ, 4. ಪೆರಿಸ್ಟೋಮ್, 5. ಮುಳ್ಳುಗಳು**

ಬಾಯಿ ಮತ್ತು ಗುದದ್ವಾರಗಳೆರಡೂ ಇವೆ. ಆಂಬುಲ್ಯಾಕ್ರಗಳು ಆಹಾರವನ್ನು ಸಂಗ್ರಹಿಸುವ ಕಾಲುವೆಗಳಾಗಿವೆ. ಓರಲ್ ಭಾಗದಲ್ಲಿ ಚೆನ್ನಾಗಿ ಬೆಳೆದ ಬಾಹುಗಳಿವೆ. ಆಂಬುಲ್ಯಾಕ್ರಗಳು ಈ ಬಾಹುಗಳ ತುದಿಯವರೆಗೂ ಪಸರಿಸಿವೆ. ಈ ಕಾಲುವೆಗಳಲ್ಲಿರುವ ನಳಿಕೆಪಾದಗಳು ಆಹಾರವನ್ನು ಹಿಡಿಯಲು ಸಹಕರಿಸುತ್ತವೆ. ಎಂಟೊನ್ಯೂರಲ್ ನರಮಂಡಲ ಅಥವಾ ಆಬೋರಲ್ ನರಮಂಡಲ ಚೆನ್ನಾಗಿ ಬೆಳೆದಿದೆ. ಈ ಉಪವಂಶದಲ್ಲಿ ಐದು ವರ್ಗಗಳಿವೆ.

**ಕ್ರೈನಾಯ್ಡಿಯ:** ಈ ವರ್ಗ ಇಂದು ಬದುಕಿರುವ ಹಾಗೂ ನಾಶವಾಗಿರುವ ಪ್ರಾಣಿಗಳೆರಡನ್ನೂ ಒಳಗೊಂಡಿದೆ. ಈ ಪ್ರಾಣಿಗಳು ನೆಲಕ್ಕೆ ತೊಟ್ಟಿನಿಂದ ಅಂಟಿಕೊಂಡಿರುತ್ತವೆ. ಓರಲ್ ಭಾಗ ಮೇಲ್ಮುಖವಾಗಿರುತ್ತದೆ. ಶರೀರ ಪಂಚಮುಖವನ್ನು ಹೊಂದಿದೆ. ಥೀಕ



**ಕಡಲ ಬಳ್ಳಿ**

ರಂಧ್ರಗಳಿಲ್ಲದ ತಟ್ಟೆಗಳನ್ನೊಳಗೊಂಡಿದೆ. ಬದುಕಿರುವ ಪ್ರಾಣಿಗಳ ಬಾಹುಗಳು ಚಲಿಸುತ್ತವೆ. ಬಾಹುಗಳು ನಾನಾ ಭಾಗಗಳಾಗಿ ಚಿಲ್ಲೊಡೆದಿವೆ. ಇವುಗಳಲ್ಲಿ ಸಂಯುಕ್ತ ಎಲೆಯಲ್ಲಿರುವಂಥ ರಚನೆಗಳಿವೆ. ಬಾಹುಗಳ ತುದಿಯವರೆಗೂ ಆಂಬುಲ್ಯಾಕ್ರ ಇದೆ. ಬಾಯಿ ಓರಲ್ ಭಾಗದ ಮಧ್ಯೆ ಇದೆ. ಗುದದ್ವಾರ ಮಧ್ಯಭಾಗದಿಂದ ಸ್ವಲ್ಪ ಅತ್ತಕಡೆ ಇರುತ್ತದೆ. ಆರ್ಡೊವಿಷಿಯನ್ ಕಾಲದಿಂದ ಇಂದಿನವರೆಗೂ ಇವು ಪಸರಿಸಿವೆ. ಈ ವರ್ಗದಲ್ಲಿ ನಾಲ್ಕು ಗಣಗಳಿವೆ. ಗಣ

1. ಇನಾಡುನೇಟ. ಗಣ 2. ಫ್ಲೆಕ್ಸಿಬಿಲಿಯ, ಗಣ 3. ಕಾಮೆರೇಟ ಇವು ಗತವಂಶವಾಗಿವೆ. ಗಣ 4 ಆರ್ಟಿಕ್ಯುಲೇಟ. ಇದು ನಾಶವಾಗಿಹೋಗಿರುವ ಮತ್ತು ಬದುಕಿರುವ ಪ್ರಾಣಿಗಳೆರಡನ್ನೂ ಒಳಗೊಂಡಿದೆ.



ಸೈಕೇಥ್ರ ವೆರೂಕೋಸ ಪ್ರಾಣಿ

**ವರ್ಗ 1 ಹಾಲೊಥೂರಾಯ್ಡಿಯ:** ಇವನ್ನು ಸಮುದ್ರ ಸೌತೆಯೆಂದು ಕರೆಯಲಾಗಿದೆ. ಶರೀರ ಸೌತೆಕಾಯಂತಿದ್ದು ಒಂದು ತುದಿಯಲ್ಲಿ ಓರಲ್‌ಭಾಗವೂ ಮತ್ತೊಂದು ತುದಿಯಲ್ಲಿ ಅಬೋರಲ್ ಭಾಗವೂ ಇದೆ. ಒಂದೇ ಮುಖನಾಗಿ ನೆಲದ ಮೇಲೆ ಬಿದ್ದಿರುವುದರಿಂದ




ಓಫಿಕೋಮ
1. ಶರೀರ, 2. ಬಾಹುಗಳು, 3. ಬಾಹುವಿನ ಮೇಲಿರುವ ಮುಳ್ಳುಗಳು

ಶರೀರದ ಒಂದು ಭಾಗ ಚಪ್ಪಟೆಯಾಗಿರುತ್ತದೆ. ತ್ರಿಜ್ಯಿಯ ಸಮಿತಿಯನ್ನು ಕಳೆದುಕೊಂಡು ಸಮಪಾರ್ಶ್ವಸ್ಥಿತಿಯನ್ನು ಗಳಿಸುತ್ತಿರುವುದು ಕಂಡುಬರುತ್ತದೆ. ಓರಲ್‌ಭಾಗದಲ್ಲಿ ಬಾಯಿ ಇದೆ. ಬಾಯಿ ಸುತ್ತಲೂ ಟೆಂಟಕಲ್‌ಗಳಿವೆ. ಇವು ಜಲಪರಿಚಲನಾಂಗಕ್ಕೆ ಸಂಬಂಧ ಕಲ್ಪಿಸಿ ಕೊಂಡಿವೆ. ಶರೀರದ ಚರ್ಮ ಒರಟಾಗಿದೆ. ಒಳ ಅಸ್ಥಿ ನಶಿಸಿಹೋಗಿ ಸೂಕ್ಷ್ಮ ಮುಳ್ಳಿನಂಥ ರಚನೆಗಳಾಗಿದೆ. ನಳಿಕೆಪಾದಗಳು ಚಲನೆಗೆ ಸಹಾಯಮಾಡುತ್ತವೆ. ಕೆಲವು ಜೀವಿಗಳಲ್ಲಿ ಇವು ಇಲ್ಲವೇ ಇಲ್ಲ. ನಳಿಕೆಪಾದಗಳು ಆಂಬುಲ್ಯಾಕ್ರಗಳಲ್ಲಿಯೇ ಇರಬಹುದು. ಇಲ್ಲದಿದ್ದಲ್ಲಿ ಶರೀರದ ಎಲ್ಲ ಭಾಗದಲ್ಲೂ ಹರಡಿಕೊಂಡಿರಬಹುದು. ಜನನಾಂಗ ಒಂದೇ ಇರಬಹುದು; ಅಥವಾ ಎರಡಿದ್ದು ಬಹಳ ನಾಳಗಳಂಥ ರಚನೆಗಳನ್ನು ಹೊಂದಿರಬಹುದು. ಈ ವರ್ಗದಲ್ಲಿ ಐದು ಗಣಗಳಿವೆ.

**ವರ್ಗ 2. ಎಕಿನಾಯ್ಡಿಯ:** ಈ ಜೀವಿಗಳು ದುಂಡಗೆ ತಟ್ಟೆಯಂತೆ, ಕೋಳಿ ಮೊಟ್ಟೆಯಾ ಕಾರಕ್ಕೆ ಅಥವಾ ಹೃದಯದ ಆಕಾರಕ್ಕೆ ತಿರುಗಿವೆ. ಶರೀರದ ಮೇಲೆ ಚಲಿಸಬಲ್ಲ ಮುಳ್ಳುಗಳಿವೆ. ಟೆಸ್ಟ್ ಅಥವಾ ಥೀಕ ಗಟ್ಟಿಯಾದ ಪೆಟ್ಟಿಗೆಯಂತಿದೆ. ಇದಕ್ಕೆ ಕಾರಣ ಇದರಲ್ಲಿರುವ ಅಸ್ಥಿತಟ್ಟೆಗಳು ಬಿಗಿಯಾಗಿ ಬೆಸೆದುಕೊಂಡಿರುವುದೇ. ಶರೀರದಲ್ಲಿ ಆಂಬುಲ್ಯಾಕ್ರಲ್ ಭಾಗ ಮತ್ತು ಇಂಟರ್ ಆಂಬುಲ್ಯಾಕ್ರಲ್ ಭಾಗಗಳು ಎದ್ದುಕಾಣುತ್ತವೆ. ಆಂಬುಲ್ಯಾಕ್ರಲ್ ತಟ್ಟೆಗಳಲ್ಲಿ ಪಾದಗಳು ಹೊರಬರಲು ರಂಧ್ರಗಳಿವೆ. ಪಾದಗಳು ಚಲಿಸಲು ಸಹಕರಿಸುತ್ತವೆ. ಈ ಪ್ರಾಣಿಗಳನ್ನು ಕಡಲ ಚಿಳ್ಳೆಗಳೆನ್ನುತ್ತಾರೆ. ಆಂಬುಲ್ಯಾಕ್ರಲ್‌ಗಳು ಬಾಯಿಂದ ಅಬೋರಲ್ ದ್ವಾರದವರೆಗೂ ಇವೆ. ಬಾಯಿ ಓರಲ್‌ಭಾಗದ ಮಧ್ಯೆ ಇದ್ದು ಅದರ ಸುತ್ತಲೂ ಪೊರೆಯಂಥ ಪೆರಿಪ್ರಾಕ್ಟ್ ಇದೆ. ಜನನಾಂಗಗಳು ಪಂಚಮುಖವಾಗಿವೆ. ಈ ಜೀವಿಗಳು ಆರ್ಡೊವಿಷಿಯನ್ ಕಾಲದಿಂದ ಪ್ರಾರಂಭವಾಗಿ ಇಂದಿಗೂ ಇವೆ. ಈ ವರ್ಗ ಮೂರು ಉಪವರ್ಗಗಳನ್ನು ಹೊಂದಿದೆ.

**ವರ್ಗ 3. ಆಸ್ಟೆರಾಯ್ಡಿಯ:** ಚಪ್ಪಟೆಯಾಗಿರುವ ಪಂಚಮುಖಿ ಅಥವಾ ಬಾಹುಗಳುಳ್ಳ ಎಕಿನೊಡರ್ಮೇಟಗಳಿವು. ನಕ್ಷತ್ರದಂಥ ಶರೀರ ಮತ್ತು ಸಾಮಾನ್ಯವಾಗಿ ಐದು ಬಾಹುಗಳಿವೆ. ಓರಲ್ ಭಾಗವು ತಳಮುಖವಾಗಿದೆ. ನಳಿಕೆಪಾದಗಳು, ಜಲಪರಿಚಲನಾಂಗಗಳು ಚೆನ್ನಾಗಿ ಬೆಳೆದಿವೆ. ಆಂಬುಲ್ಯಾಕ್ರಗಳು ಐದಿದ್ದು ಹಳ್ಳದಂತೆ ಕಾಣುತ್ತವೆ. ಜೀರ್ಣಾಂಗ ಪ್ರತಿ ಬಾಹುವಿನೊಳಕ್ಕೂ ಪಸರಿಸಿವೆ. ಈ ವರ್ಗ ಐದು ಗಣಗಳನ್ನು ಹೊಂದಿದೆ.

**ವರ್ಗ 4. ಓಫಿಯೂರಾಯ್ಡಿಯ:** ಚಪ್ಪಟೆಯಾಗಿರುವ ಪಂಚಭುಜಾಕೃತಿಯುಳ್ಳ ಎಕಿನೊಡರ್ಮಗಳಿವು. ಸಾಮಾನ್ಯವಾಗಿ ತೆಳ್ಳಗಿರುವ ಐದು ಬಾಹುಗಳು ಇರುತ್ತವೆ. ಬಾಹುಗಳ ಚಲನೆ ಹಾವಿನ ಚಲನೆಯನ್ನು ಹೋಲುತ್ತದೆ. ಬಾಹುಗಳು ಕವಲೊಡೆದು ರೆಂಬೆಗಳನ್ನು ಹೊಂದಿರಬಹುದು. ಬಾಹುಗಳಲ್ಲಿ ಆಂಬೂಲ್ಯಾಕರದ ಕಾಲುವೆಗಳು ಇರುವುದಿಲ್ಲ. ಶರೀರ ಮತ್ತು ಬಾಹುಗಳು ಚಪ್ಪಟೆಯಾದ ತಟ್ಟೆಗಳಿಂದ ಆವೃತವಾಗಿವೆ. ಜೀರ್ಣಾಂಗ ಬಾಹುಗಳಿಗೆ ಪಸರಿಸುವುದಿಲ್ಲ. ಮ್ಯಾಡ್ರಿಪ್ಲೋರೈಟ್ ರಂಧ್ರ ಓರಲ್ ಭಾಗದಲ್ಲಿಯೇ ಇದೆ. ಈ ಜೀವಿಗಳು ಮಿಸಿಸಿಪಿಯನ್ ಕಾಲದಿಂದ ಪ್ರಾರಂಭವಾಗಿ ಇಂದಿನವರೆಗೂ ಇದೆ. (ಎಲ್.ಎಸ್.ಜಿ.)

**ಎಕಿನೊಮಾಸ್ಟಸ್:** ಯುಫೋರ್ಬಿಯೇಸಿ ಕುಟುಂಬದ ಸುಂದರವಾದ ಕಳ್ಳಿಗಳ ಶ್ರೇಣಿಗೆ ಸೇರಿದ ಕುರುಚಲ ಸಸ್ಯಜಾತಿ. ಕಾಂಡ ಕೊಳವೆಯಾಕಾರ. ಇದರ ಮೇಲೆ ಮೊನೆಚಾಗಿ ಆಕರ್ಷಕವಾಗಿರುವ ಮುಳ್ಳುಗಳು ನಿಬಿಡವಾಗಿ ಜೋಡಣೆಗೊಂಡಿವೆ. ಸುಳಿಯಾಕಾರದ ಉಬ್ಬುಗಳ ಮೇಲೆ ಇರುವ ಗಂಟುಗಳ ತುದಿಯ ರಂಧ್ರಗಳಿರುವ ಮುಳ್ಳು ಮತ್ತು ದಾರಗಳು ಹೊರಬಂದು ಇಡೀ ಸಸ್ಯವನ್ನು ಆವರಿಸಿರುತ್ತವೆ. ಒಂದು ಸಸ್ಯದಲ್ಲಿ ಸುಮಾರು 30 ಸುರುಳಿ ಉಬ್ಬುಗಳು ಇರುತ್ತವೆ. ಬಿರುಸಾದ ಮುಳ್ಳುಗಳ ಮಧ್ಯೆ ಕೆಂಪು ಅಥವಾ ಕಂದುಬಣ್ಣದ ಹೂಗೊಂಚಲುಗಳು ರಮ್ಯವಾಗಿ ಮೂಡಿರುತ್ತವೆ. ಹೂ ಬಿಡುವುದು ಸಾಮಾನ್ಯವಾಗಿ ಬೇಸಗೆಕಾಲದಲ್ಲಿ ಹಣ್ಣು ಬಿಲ್ಲೆಯಂತೆ ಗಾತ್ರದಲ್ಲಿ ಚಿಕ್ಕದಾಗಿದ್ದು, ಬಿಟ್ಟ ಅನಂತರ ಹೆಚ್ಚುಕಾಲ ಉಳಿಯದೆ ಒಣಗಿಹೋಗುತ್ತದೆ; ಅನಂತರ ಸೀಳಿ ಕಪ್ಪಾದ ಬೀಜಗಳನ್ನು ಹೊರತಳ್ಳುತ್ತದೆ.

ಎ.ಮ್ಯಾಕ್‌ಡೋವೆಲ್ಲಿ ಎಂಬ ಪ್ರಭೇದ ಈ ಜಾತಿಯ ಕಳ್ಳಿಗಳ ಪೈಕಿ ಅತ್ಯಂತ ಸುಂದರವಾದದ್ದು. ಇದರ ನುಸಿಹಸಿರು ಬಣ್ಣದ ಕಾಂಡ 4" ದಪ್ಪವಾಗಿ 6" ಎತ್ತರವಾಗಿದ್ದು, ಮೇಲುಭಾಗದಲ್ಲಿ 20 ಅಥವಾ ಹೆಚ್ಚು ಸುರಳಿಯಾಕಾರದಲ್ಲಿ ರಂಧ್ರಗಳು ಇದ್ದು ನಾರು ಹೊರಬಂದಿರುತ್ತದೆ. ರಂಧ್ರಗಳಲ್ಲಿ ಬಿರುಸಾದ ಮತ್ತು ಪ್ರಧಾನವಾಗಿರುವ ಮುಳ್ಳು ನಿಬಿಡವಾಗಿದೆ. ಸಸ್ಯದ ಮೇಲುಭಾಗದ ಮಧ್ಯೆಬಿಡುವ ನಸುಗೆಂಪು ಬಣ್ಣದ ಹೂ ಗೊಂಚಲು ಭವ್ಯವಾಗಿ ಕಾಣುತ್ತದೆ.

ಈ ಸಸ್ಯ ಉತ್ತರ ಅಮೆರಿಕದ ಮೆಕ್ಸಿಕೊ, ಟೆಕ್ಸಾಸ್ ಮತ್ತು ಅರಿಜೋನ ದೇಶಗಳ ಮೂಲವಾಸಿ. ಇದು ತನ್ನ ಉಗಮ ಸ್ಥಾನದಲ್ಲಿ ಒರಟಾಗಿ ಮತ್ತು ದೃಢಕಾಯವಾಗಿ ಬೆಳೆಯುತ್ತದಾದ್ದರಿಂದ ಇತರ ದೇಶಗಳಿಗೆ ಒಯ್ದು ಬೇಸಾಯ ಮಾಡುವಾಗ ಬಹಳ ಎಚ್ಚರಿಕೆ ವಹಿಸಬೇಕು. ಅನ್ಯ ಭೂಮಿಯಲ್ಲಿ ಇದನ್ನು ಬೆಳೆಯುವುದು ಕಷ್ಟ. ಆದರೆ ಒಮ್ಮೆ ನೆಲಕ್ಕೆ ಅಂಟಿತೆಂದರೆ ಯಾವ ಆತಂಕವೂ ಇಲ್ಲದೆ ಗಿಡ ಚಿಗುರಿ ಬೆಳೆಯುತ್ತದೆ. ಹವಾಗುಣಗಳ ವೈಪರೀತ್ಯವನ್ನು ಸಹಿಸುವುದಿಲ್ಲ. ಬೇಸಾಯ ಮರಳಿನಿಂದ ಕೂಡಿ ಸಡಿಲವಾಗಿರುವ ಮತ್ತು ಫಲವತ್ತಾಗಿರುವ ಮಣ್ಣಿನಲ್ಲಿ ಯಶಸ್ವಿಯಾಗುತ್ತದೆ. ಬೇಸಗೆಯಲ್ಲಿ ಧಾರಾಳವಾಗಿ ತೇವಾಂಶವಿರುವಂತೆಯೂ ಚಳಿಗಾಲದಲ್ಲಿ ಒಣವಾತಾವರಣವಿರುವಂತೆ ನೋಡಿಕೊಳ್ಳುವುದು ಅಗತ್ಯ.

ಹೆಚ್ಚಿನ ವಿವರಗಳಿಗೆ (**ನೋಡಿ– ಕಳ್ಳಿ**) (ಡಿ.ಎಂ.)

**ಎಕಿಯೂರಾಯ್ಡಿಯ:** ಸಮುದ್ರದಲ್ಲಿ ವಾಸಿಸುವ ಹುಳುಗಳ ಒಂದು ವಂಶ. ಹಿಂದೆ ಇದನ್ನು ವಲಯವಂತಗಳ ವಂಶದೊಂದಿಗೆ ಸೇರಿಸಲಾಗಿತ್ತು. ಹೆಚ್ಚಿನ ಮಾಹಿತಿ ದೊರಕಿದ ಮೇಲೆ ಇದನ್ನು ಪ್ರತ್ಯೇಕ ವಂಶವಾಗಿಯೇ ಪರಿಗಣಿಸಲಾಗಿದೆ. ಪ್ರೌಢಾವಸ್ಥೆಯಲ್ಲಿ ಈ ವಂಶದ ಹುಳುಗಳ ದೇಹ ಇತರ ಹುಳುಗಳಂತೆ ಸಂಧ್ಯಾಂತರ ಖಂಡಗಳಾಗಿ

ವಿಭಾಗವಾಗಿರುವುದಿಲ್ಲ. ದೇಹದ ಕೆಳಮೈಯಲ್ಲಿ ಕೆಲವು ವಲಯಗಳಲ್ಲಿ ಬಿರುಗೂದಲುಗಳಿರುತ್ತವೆ. ಇವು ಆಕಾರದಲ್ಲಿ ಕಂಬದಂತೆ ಅಥವಾ ಅಂಡದಂತೆ ಇವೆ. ಬಾಯಿ ದೇಹದ ಮುಂಭಾಗದಲ್ಲಿ ಇದೆ. ಬಾಯಿ ಮುಂದೆ ಉದ್ದವಾದ ಒಂದು ಸೊಂಡಲಿದೆ. ಕೆಲವು ಎಕಿಯೂರಾಯ್ಡಿಯಗಳಲ್ಲಿ ಸೊಂಡಿಲು ಚಿಕ್ಕದು. ಮಿಕ್ಕವುಗಳಲ್ಲಿ ಉದ್ದವಾಗಿದ್ದು ಸೂಕ್ಷ್ಮಗ್ರಾಹಿಯಾಗಿ, ಅಲುಗಾಡುತ್ತಿರುತ್ತದೆ. ಸೊಂಡಿಲಿನಲ್ಲಿರುವ ಅವಕಾಶ ದೇಹಾವಕಾಶದೊಂದಿಗೆ ಸಂಪರ್ಕ ಹೊಂದಿದೆ. ರಕ್ತನಾಳಗಳು, ಮುಚ್ಚಿದ ರೀತಿಯವಾಗಿವೆ. ಅನ್ನನಾಳದ ತಳಭಾಗದಲ್ಲಿ ನರರಜ್ಜುವಿದೆ. ಇದರಿಂದ ದೇಹದ ಭಾಗಗಳಿಗೆ ಜೋಡಿ ನರಗಳು ಹೊರಡುತ್ತವೆ. ದೇಹದ ಅಗ್ರಭಾಗದಲ್ಲಿ ನರಮುಡಿ ಇದ್ದು ಇದರಿಂದ ನರಗಳು ಸೊಂಡಿಲು ಮತ್ತು ದೇಹದ ಭಾಗಗಳಿಗೆ ಹೊರಡುತ್ತವೆ. ಗುದನಾಳಕ್ಕೆ ಹೊಂದಿರುವಂತೆ ಎರಡು ಅಂಧಾಂತಗಳಿರುತ್ತವೆ. ಇವಕ್ಕೆ ಗುದಕೋಶಕ ಎಂದೂ ಹೆಸರು. ಇವು ಸಾರಜನಕದ ವಿಸರ್ಜನೆಮಾಡುತ್ತವೆ.

ಜೀರ್ಣಾಂಗಗಳು: ಬಾಯಿ ಹಿಂಭಾಗದಲ್ಲಿರುವ ಗಂಟಲ ಕುಹರಕ್ಕೆ ತೆರೆಯುತ್ತದೆ. ಅದು ಎರಡು ಕೊಂಡಿಗಳಾಗಿ ವಿಸ್ತರಿಸಿಕೊಂಡಿದ್ದು ಅದರ ಹಿಂಭಾಗ ವಿಸ್ತಾರಗೊಂಡು ಅನ್ನನಾಳವಾಗುತ್ತದೆ. ಅದರ ಹಿಂದಿನ ತುದಿಯ ಭಾಗವೇ ಎದೆಯಚೀಲ. ಇವಿಷ್ಟೂ ಹೊರತೊಕ್ಕು ಒಳಚಾಚಿಕೊಂಡು ಆಗಿರುವ ಜೀರ್ಣಾಂಗದ ಭಾಗಗಳು; ಇನ್ನುಳಿದ ಜೀರ್ಣಾಂಗ ಮೂರು ಭಾಗವಾಗಿದೆ–ಮುಂದಿನ ಕರುಳು, ಮಧ್ಯದ ಕರುಳು, ಮತ್ತು ಹಿಂದಿನ ಕರುಳು. ಮಧ್ಯ ಕರುಳು ಕಿರಿದಾದ ಸಹಾಯಕನಾಳವನ್ನು ಹೊಂದಿದ್ದು ಜೀರ್ಣಕ್ಷೇತ್ರದ ವಿಸ್ತಾರವನ್ನು ಹೆಚ್ಚಿಸುವಂತಿದೆ. ಈ ಸಹಾಯಕನಾಳ ಈ ವಂಶದ ಪ್ರಾಣಿಗಳ ಒಂದು ವಿಶಿಷ್ಟ ಲಕ್ಷಣ. ಹಿಂದಿನ ಕರುಳು ಗುದನಾಳಕ್ಕೆ ತೆರೆಯುತ್ತದೆ. ಕರುಳಿನ ರಸದಲ್ಲಿ ಕ್ಷಾರವಸ್ತು, ಮೇದಸ್ಸು, ಸಸಾರಜನಕ ವಸ್ತುಗಳನ್ನು ಜೀರ್ಣಿಸಬಲ್ಲ ಕಿಣ್ವವೂ ಇರುತ್ತವೆ. ಪಿಷ್ಟಪದಾರ್ಥವನ್ನು ಜೀರ್ಣಿಸುವ ಕಿಣ್ವ ಈ ಪ್ರಾಣಿಯಲ್ಲಿ ಇರುವುದೇ ಎಂಬುದು ಇನ್ನೂ ನಿರ್ಧಾರವಾಗಿ ಗೊತ್ತಾಗಿಲ್ಲ.



**ಎಕಿಯೂರಾಯ್ಡಿಯ : ಬೊನಿಲಿಯ : A ಗಂಡು, B ಹೆಣ್ಣು. 1. ಜನನೇಂದ್ರಿಯ ರಂಧ್ರ, 2. ಶುದ್ಧೀಕರಣಾಂಗದ ಆಲಿಕೆ (ನೆಫ್ರೊಸ್ಟೋಮ್), 3. ರೇತಸ್ಸು, 4. ಅನ್ನನಾಳ, 5. ಬಾಯಿ, 6. ಅಂಡಾಶಯ, 7. ಗುದಚೀಲ, 8. ಗುದದ್ವಾರ, 9. ಸೊಂಡಿಲು**

ದೇಹಾವಕಾಶ ದ್ರವ: ಈ ದ್ರವದಲ್ಲಿ ಆಮ್ಲಜನಕದೊಡನೆ ಸಂಯೋಗವಾಗುವ ಹಿಮೋಗ್ಲೋಬಿನ್‌ನಂಥ ವಸ್ತುವುಂಟು. ಕೆಲವು ಪ್ರಭೇದಗಳಲ್ಲಿ ಇದು ಇಲ್ಲ. ದ್ರವದಲ್ಲಿ ಜಲಕಣಗಳು ತೇಲುತ್ತಿರುತ್ತವೆ. ಉಚ್ಛ್ವಾಸನಿಶ್ವಾಸ, ಶುದ್ಧೀಕರಣ ಮತ್ತು ಪೋಷಕ ಕಾರ್ಯಗಳನ್ನು ಈ ದ್ರವ ನಿರ್ವಹಿಸುತ್ತದೆ. ದೇಹಭಾಗ ಸಂಕುಚಿಸುತ್ತ ಹೋಗುವುದರಿಂದ ಚರ್ಮ ಆಮ್ಲಜನಕವನ್ನು ಹೀರಿಕೊಂಡು ಇಂಗಾಲದ ಡೈ ಆಕ್ಸೈಡನ್ನು ಹೊರದೂಡುತ್ತದೆ. ಈ ಪ್ರಾಣಿ ಒಂದೆಡೆ ನಿಶ್ಚೇಷ್ಟಿತವಾಗಿ ಅಡಗಿರುವಾಗ ಹೇಮೋಗ್ಲೋಬಿನ್ ಆಮ್ಲಜನಕವನ್ನು ಬಹು ನಿಧಾನವಾಗಿ ಒದಗಿಸಿ ಅಗತ್ಯಕಾಲಕ್ಕೆ ಸಂಗ್ರಹಿಸಿಟ್ಟಿರುತ್ತದೆ.

ವಿಸರ್ಜನಾಂಗಗಳು: ಗುದನಾಳಕ್ಕೆ ಒಂದುಜೊತೆ ಒಳ ತೊಕ್ಕಿನಿಂದ ಉಂಟಾಗುವ ಕೋಶಗಳು ತೆರೆಯುತ್ತವೆ. ಆಗತಾನೆ ರೂಪಪರಿವರ್ತನೆ ಹೊಂದಿದ ಡಿಂಬದಲ್ಲಿ ಈ ಕೋಶಗಳು ದೇಹಾವಕಾಶದೊಡನೆ ಸಂಪರ್ಕ ಹೊಂದಿರುತ್ತವೆ. ನೆಫ್ರೋಸ್ಟೋಮ್ ಎಂಬ ಎರಡು ನಾಳಗಳು ಅವೆರಡಕ್ಕೂ ಸಂಪರ್ಕ ಕಲ್ಪಿಸುತ್ತವೆ. ಪ್ರೌಢಾವಸ್ಥೆಯಲ್ಲಿ ಇಂಥ ನೆಫ್ರೋಸ್ಟೋಮ್ ಕೊಳವೆಗಳ ಸಂಖ್ಯೆ ಅಧಿಕವಾಗಿರುತ್ತದೆ. ಈ ಅಂಗಗಳು ವಿಸರ್ಜನಾ ಕಾರ್ಯದೊಂದಿಗೆ ಜೊತೆಗೆ ಉಸಿರಾಟವನ್ನೂ ನಿರ್ವಹಿಸುತ್ತವೆ.

ರಕ್ತಪರಿಚಲನಾಂಗ: ದೇಹದ ತಳಭಾಗದಲ್ಲಿ ನರದ ಕೆಳಗೆ ಉದ್ದಕ್ಕೂ ತಳದಲ್ಲಿ ಒಂದು ನಾಳ ಸಾಗುತ್ತದೆ; ಮುಂಭಾಗದಲ್ಲಿ ಅದು ಕತ್ತಿನ ಬಳಿ ಒಡೆದು ಒಂದು ಉಂಗುರದ ರೂಪ ತಾಳಿ ಪ್ರೋಸ್ಟೋಮಿಯಮ್ಮನ್ನು ಸುತ್ತುವರಿದಿದೆ. ಮಧ್ಯ ಕರುಳನ್ನು ಆವರಿಸಿಕೊಂಡು ಬರುವ ಮತ್ತೊಂದು ನಾಳದಿಂದ ಹೊರಡುವ ಮೇಲಿನ ರಕ್ತನಾಳ ದೇಹದುದ್ದಕ್ಕೂ ಹಾಯುತ್ತದೆ. ಆ ನಾಳ ರಕ್ತವನ್ನು ಮುಂಭಾಗಕ್ಕೆ ತಳ್ಳುತ್ತದೆ; ಹಾಗೆ ತಳ್ಳಿದ ರಕ್ತ ತಳಭಾಗದಲ್ಲಿರುವ ದೀರ್ಘನಾಳದ ಮುಂಭಾಗವನ್ನು ಸೇರುತ್ತದೆ. ಹೀಗೆ ರಕ್ತಚಲನೆಯ ನಾಳಗಳು ಪೂರ್ಣವಾಗಿ ಆವೃತವಾದ ನಾಳವ್ಯೂಹವೆನಿಸಿದೆ. ನರವ್ಯೂಹ ಮತ್ತು ಜ್ಞಾನೇಂದ್ರಿಯಗಳು: ತಳಭಾಗದಲ್ಲೊಂದು ನೀಳ ನರವಿದೆ. ಇದರಲ್ಲಿ ನರಮುಡಿಗಳಿಲ್ಲ. ಮುಂಭಾಗದಲ್ಲಿ ಎರಡಾಗಿ ಕವಲೊಡೆದು ಗಂಟಲನ್ನು ಸುತ್ತಿಕೊಂಡು ಪ್ರೋಸ್ಟೋಮಿಯಮ್ಮಿನ ಅಂಚುಗಳಿಗೆ ನರದ ಕವಲುಗಳನ್ನು ಕಳಿಸುತ್ತದೆ. ಮಿದುಳೆನ್ನಬಹುದಾದ ಯಾವ ಕೇಂದ್ರೀಕೃತ ನರಮುಡಿಯೂ ಇದರಲ್ಲಿ ಇಲ್ಲ. ಭ್ರೂಣಾವಸ್ಥೆಯಲ್ಲಿ ತಳದ (ಉದರದ) ನರ ಹೊರತೊಕ್ಕಿನ ಮಂದಗೊಂಡ ಆವರಣಗಳಿಂದ ಮೂಡಿ ರೂಪಪರಿವರ್ತನೆಗೆ ಮುನ್ನ ಹಲವು ನರಮುಡಿಗಳನ್ನು ಹೊಂದಿರುತ್ತದೆ. ಎಕಿಯೂರಸ್ಸಿನಲ್ಲಿ ಅಂಥ 16 ಕ್ಷಣಿಕ ನರಮುಡಿಗಳೂ ಯೂರಿಕಿಸ್‌ನಲ್ಲಿ 12 ನರಮುಡಿಗಳೂ ಕಂಡುಬರುತ್ತವೆ. ಮೇಲುತೊಕ್ಕಿನಲ್ಲಿ ಸ್ಪರ್ಶಶಕ್ತಿಯನ್ನೂ ರಾಸಾಯನಿಕ ಸಂವೇದನ ಶಕ್ತಿಯನ್ನೂ ಹೊಂದಿರುವ ಕೋಶಗಳು ಪ್ರೋಸ್ಟೋಮಿಯಮ್ಮಿನ ಅಂಚಿನಲ್ಲಿ, ಅಧಿಕಸಂಖ್ಯೆಯಲ್ಲಿವೆ. ಡಿಂಬಾವಸ್ಥೆಯಲ್ಲಿ ಬೆಳಕನ್ನು ಗುರುತಿಸಬಲ್ಲ ಕಣ್ಣಿನಂಥ ಕೇಂದ್ರಗಳು ಕಂಡುಬಂದರೂ ಪ್ರೌಢಾವಸ್ಥೆಯಲ್ಲಿ ನಶಿಸಿಹೋಗಿರುತ್ತದೆ.

ಬಿರುಗೂದಲುಗಳು: ಬಾಯ ಹಿಂಭಾಗದಲ್ಲಿ ಮಣ್ಣನ್ನು ಕೊರೆಯಲು ಶಕ್ತವಾಗಿರುವ ಕೆಳಮುಖದ ಎರಡು ಬಿರುಗೂದಲುಗಳುಂಟು. ಹಿಂಭಾಗದಲ್ಲಿ ಎರಡು ಅಪೂರ್ಣ ವೃತ್ತಗಳಲ್ಲಿ ಹರಡಿರುವ ಅನೇಕ ಸಣ್ಣಸಣ್ಣ ಬಿರುಗೂದಲುಗಳಿವೆ. ಕೊರೆದ ಮಣ್ಣನ್ನು ಚೊಕ್ಕಟಮಾಡಲು ಅವು ಉಪಯೋಗಕ್ಕೆ ಬರುತ್ತವೆ. ಪ್ರತಿ ಬಿರುಗೂದಲೂ ಒಂದೇ ಒಂದು ಕೋಶವಾಗಿದ್ದು ವಿಸರ್ಜಿತವಸ್ತುವಿನಿಂದ ಮೂಡಿರುತ್ತದೆ. ಈ ಬಿರುಗೂದಲುಗಳು ಎರೆಹುಳುಗಳ ಸೀಟೆಗಳನ್ನು ಹೋಲುತ್ತವೆ. ಕೂದಲನ್ನು ಚಲಿಸಲು ಅಗತ್ಯವೆನಿಸುವ ಸ್ನಾಯುಗಳು, ನೀರಿಸ್ ಪ್ರಾಣಿಯಲ್ಲಿರುವಂತೆ, ಇವುಗಳಲ್ಲೂ ಉಂಟು.

ವಂಶಾಭಿವೃದ್ಧಿ: ಬಾಯ ಹಿಂಭಾಗದಲ್ಲಿ ದೇಹದ ಗೋಡೆ ಸಂಕೋಚಗೊಂಡು ಒಂದು ಉಂಗುರದಂತಾಗಿ ಅದರ ಮುಂಭಾಗದಲ್ಲಿರುವ ವೃತ್ತಸ್ನಾಯು ಹಿಂಡಿದಂತಾಗಿ ಮುಂದಿನ ಭಾಗವನ್ನು ಹೊರನೂಕುತ್ತದೆ. ಆಗ ಹೊರಬಂದ ದೇಹ ಭಾಗ ಪ್ರತ್ಯೇಕಗೊಂಡು ಆಹಾರಸೇವನೆಯನ್ನು ಆರಂಭಿಸುತ್ತದೆ. ಇದು ಈ ಪ್ರಾಣಿಯ ವಂಶಾಭಿವೃದ್ಧಿಯ ಸೋಜಿಗ.

ಈ ವಂಶವನ್ನು ಮೂರು ಗಣಗಳಾಗಿ ವಿಭಾಗಿಸಲಾಗಿದೆ. ಇವುಗಳೆಂದರೆ ಗಣ

1: ಎಕಿಯೂರಿನ;

2: ಥೆಲೆಸ್ಮೇಟಿಡೆ;

3: ಬೊನಿಲ್ಲಿಡೆ.

ಎಕಿಯೂರಿಡ: ಸಾಮಾನ್ಯವಾಗಿ ಸಮುದ್ರಗಳಲ್ಲಿ ಜೀವಿಸುತ್ತವೆ. ಉದಾ: ಇರಿಯುರಿಯಸ್: ಇದಕ್ಕೆ ಸ್ಥಂಭಾಕೃತಿಯ ದೇಹವಿದೆ, ಈ ದೇಹಕ್ಕೆ ಹೊಂದಿಕೊಂಡಿರುವಂತೆ ಇರುವ ಒಂದು ಚಿಕ್ಕ ಸೊಂಡಿಲು ಇದೆ. ಲಿಂಗ ಭೇದವಿದ್ದರೂ ಬಾಹ್ಯರೂಪದಲ್ಲಿ ವ್ಯತ್ಯಾಸವಿಲ್ಲ. ದೇಹದ ಮುಂಭಾಗದಲ್ಲಿ ಒಂದು ಜೊತೆ ಪ್ರಮುಖ ಬಿರುಗೂದಲು ಮತ್ತು ಗುದದ್ವಾರದ ಹತ್ತಿರ ಮೂರು ನಾಲ್ಕು ಸುತ್ತು ಬಿರುಗೂದಲುಗಳೂ ಇವೆ.

ಥೆಲೆಸ್ಸೆಮಿಟಿಡಿ: ಉಷ್ಣವಲಯದ ಸಮುದ್ರಗಳಲ್ಲಿ ಜೀವಿಸುತ್ತವೆ. ಉದಾ: ಥಲೆಸ್ಸೆಮ ಇದಕ್ಕೆ ಚಿಕ್ಕ ಸೊಂಡಿಲಿರುತ್ತದೆ. ಆದರೆ ಗುದದ್ವಾರದ ಸುತ್ತಲು ಬಿರುಗೂದಲುಗಳು ಇರುವುದಿಲ್ಲ. ಮೂರು ಜೊತೆ ಶುದ್ಧೀಕರಣಕಾರ್ಯಮಾಡುವ ನಿಫ್ರಿಡಿಯಾಗಳಿವೆ. ಬಾಯಿಯ ಕೆಳಭಾಗದಲ್ಲಿ ಕಿವಿರುಗಳಂತಿರುವ ಕೋಡುಗಳು ಇವೆ. ಭಾರತದ ನದೀಮುಖಜಭೂಮಿಗಳಲ್ಲಿ ಈ ವಂಶಕ್ಕೆ ಸೇರಿದ ಪ್ರಾಣಿಗಳು ವಾಸಿಸುತ್ತವೆ.

ಬೊನೆಲ್ಲಿಡೆ: ಉದಾ: ಬೊನಿಲಿಯ. ಇದರ ಮುಖ್ಯ ಗುಣ–ಗಂಡು ಹೆಣ್ಣಿನಲ್ಲಿರುವ ರೂಪ ವಿವಿಧತೆ. ಹೆಣ್ಣು ಬೊನಿಲಿಯ ಕಡುಹಸಿರು ಬಣ್ಣದ ಅಂಡಾಕೃತಿಯ ಪ್ರಾಣಿ. ಇದರ ಸೊಂಡಿಲು ಸುಮಾರು 6 ಅಂಗುಲಕ್ಕಿಂತ ಉದ್ದವಾಗಿದ್ದು ಅದರ ತುದಿ ಇಬ್ಭಾಗವಾಗಿದೆ. ಇದರ ದೇಹದ ಕೆಳಭಾಗದಲ್ಲಿ ಎರಡು ಅಥವಾ ಹೆಚ್ಚು ಬಿರುಗೂದಲುಗಳಿರುತ್ತವೆ. ದೇಹದಲ್ಲಿ ಒಂದೇ ಒಂದು ನೆಫ್ರಿಡಿಯಾ ಇದ್ದು ಅದು ದೊಡ್ಡದಾಗಿ ಬೆಳೆದು ಗರ್ಭಕೋಶದ ಕಾರ್ಯವನ್ನು ಮಾಡುತ್ತದೆ. ಗುದದ್ವಾರದ ಹತ್ತಿರ ಅಂಡಾಕಾರದ ಗುದಕೋಶಗಳಿವೆ. ಇವುಗಳ ಮೇಲೆ ಕವಲೊಡೆದ ಸಣ್ಣನಾಳಗಳಿವೆ. ಇದು ಹರಿತ್ತಿನಂಥ ರಾಸಾಯನಿಕ ವಸ್ತು. ಇದಕ್ಕೆ ಬೊನೆಲ್ಲೈನ್ ಎಂದು ಕರೆಯುತ್ತಾರೆ. ಈ ಬಣ್ಣ ಎಚ್ಚರಿಕೆ ನೀಡುವ ವರ್ಣತಂತ್ರ ಎಂಬ ಅಭಿಪ್ರಾಯವಿದೆ.

ಗಂಡು ಬೊನಿಲಿಯಾ ಹೆಣ್ಣಿಗಿಂತ ಬಲು ಚಿಕ್ಕದು. ಇದು ಸೂಕ್ಷ್ಮಜೀವಿ; ಸೊಂಡಿಲಿಲ್ಲ. ಆದರೆ ಒಂದು ಜೊತೆ ಬಿರುಗೂದಲಿದೆ. ಗಂಡು ಹೆಣ್ಣಿನ ದೇಹವನ್ನೂ ಅಥವಾ ಅದರ ಸೊಂಡಿಲನ್ನೂ ಆಶ್ರಯಿಸಿ ಜೀವಿಸುತ್ತದೆ. ಈ ಪರತಂತ್ರ ಜೀವನದ ಫಲವಾಗಿ ಇದಕ್ಕೆ ಬಾಯಿಯಾಗಲೀ, ಗುದದ್ವಾರವಾಗಲೀ ಇರುವುದಿಲ್ಲ. ಇದರ ಜೀರ್ಣಾಂಗಗಳು ಕ್ಷೀಣಿಸಿವೆ. ಗಂಡು ಪ್ರೌಢಾವಸ್ಥೆಗೆ ಬಂದೊಡನೆಯೇ ಹೆಣ್ಣಿನ ಗರ್ಭಕೋಶದ ಹೊರ ಆವರಣದಲ್ಲಿ ನೆಲೆಸುತ್ತದೆ. ಭ್ರೂಣದ ಬೆಳವಣಿಗೆ ವಲಯವಂತಗಳ ಬೆಳವಣಿಗೆಯನ್ನು ಹೋಲುತ್ತದೆ. ಈ ಭ್ರೂಣ ಬೆಳೆದು ಡಿಂಬ (ಲಾರ್ವ)ವಾಗುತ್ತದೆ. ಈ ಡಿಂಬ ತಾಯಿಯ ದೇಹದಿಂದ ಹೊರಬಂದು ಸ್ವತಂತ್ರವಾಗಿ ಈಜಿ ಜೀವನ ನಡೆಸುತ್ತದೆ. ಇದು ಗಂಡಾಗಲೀ ಅಥವಾ ಹೆಣ್ಣಾಗಲೀ ಆಗುವ ಶಕ್ತಿಯನ್ನು ಪಡೆದಿರುತ್ತದೆ. ಲಾರ್ವ ಯಾವ ಹೆಣ್ಣಿನ ಸಂಪರ್ಕವನ್ನೂ ಪಡೆಯದೇ ಬೆಳೆದರೆ–ಅದರಲ್ಲಿ ರೂಪಪರಿವರ್ತನೆಯಾಗಿ ಹೆಣ್ಣಾಗುತ್ತದೆ. ಬಾಯಿಯ ಮುಂಭಾಗ ಉದ್ದವಾಗಿ ಬೆಳೆದು ಸೊಂಡಿಲಾಗುತ್ತದೆ. ಈ ಹೆಣ್ಣು ಬೆಳೆದು ಪ್ರೌಢಾವಸ್ಥೆಗೆ ಬರುತ್ತಿದ್ದಂತೆಯೇ ದೇಹದ ಕೆಳಭಾಗದಲ್ಲಿ ಬಿರುಗೂದಲುಗಳು ಬೆಳೆಯುತ್ತವೆ. ಆದರೆ ಯಾವುದಾದರೂ ಲಾರ್ವ ತನ್ನ ಸ್ವತಂತ್ರ ಜೀವನದ ಅನಂತರ ಹೆಣ್ಣು ಬೊನಿಲಿಯಾದ ದೇಹ ಅಥವಾ ಸೊಂಡಿಲಿನ ಸಂಪರ್ಕ ಪಡೆದರೆ ಅದು ಹೆಣ್ಣಿನ ಸೊಂಡಿಲಿಗೆ ಅಂಟಿಕೊಳ್ಳುತ್ತದೆ.

ಸೊಂಡಿಲಿನಲ್ಲಿ ಉತ್ಪತ್ತಿಯಾದ ಉದ್ದೀಪಕ ವಸ್ತು ಡಿಂಬವು ಹೆಣ್ಣಾಗಿ ರೂಪ ಪರಿವರ್ತನೆಯಾಗುವುದನ್ನು ತಡೆಹಿಡಿಯುತ್ತದಲ್ಲದೆ ಮರಿಹುಳುವಿನ ವ್ಯವಸ್ಥೆಯಲ್ಲಿಯೇ ಪುರುಷೇಂದ್ರಿಯಗಳ ಬೆಳವಣಿಗೆಗೆ ಕಾರಣವಾಗಿ ಗಂಡು ಬೊನಿಲಿಯಾ ಆಗುತ್ತದೆ. ಈ ಗಂಡು ಬೊನಿಲ್ಲಾ ಪ್ರೌಢಾವಸ್ಥೆಯನ್ನು ಹೊಂದಿದ ಅನಂತರ ಹೆಣ್ಣಿನ ಅನ್ನನಾಳದ ಮೂಲಕ ಗರ್ಭಕೋಶದ ಹೊರಾವರಣವನ್ನು ತಲುಪುತ್ತದೆ. ಹೀಗೆ ಬೊನಿಲಿಯಾದಲ್ಲಿ ಲಿಂಗನಿರ್ಧಾರವು ಪರಿಸರದ ಪ್ರಭಾವದಿಂದ ಪ್ರೇರಿತವಾಗಿರುತ್ತದೆ.

ಎಕಿಯುರಿಡ ವಂಶ ವಲಯವಂತಗಳ ವಂಶದೊಡನೆ ಅನೇಕ ಸಮಾನ ಗುಣಗಳನ್ನು ಹೊಂದಿದೆ. ಕೆಲವು ಗುಣಗಳಿಂದ ಇದು ಅವನತಿ ಹೊಂದಿದ ವಲಯವಂತವಾಗಿರಬಹುದೇ ಎಂಬ ಸಂಶಯ ಬರುತ್ತದೆ. ಆದರೆ ತನ್ನ ಇತರ ಗುಣಗಳಿಂದ ಇದು ಚಪ್ಪಟೆ ಹುಳುಗಳನ್ನೂ ಮೃದ್ವಂಗಿಗಳನ್ನೂ ಹೋಲುವುದನ್ನು ನೋಡಿದರೆ ಇದು ಇತರೆ ವಂಶಗಳಿಗಿಂತ ವಲಯವಂತಗಳಿಗೆ ಸಮೀಪವಾಗಿದೆ ಎಂದು ಮಾತ್ರ ಹೇಳಬಹುದು. (ಸಿ.ಎಂ.ಎಸ್.)

**ಎಕ್ಕ:** ಆಸ್‌ಕ್ಲೆ ಕುಟುಂಬಕ್ಕೆ ಸೇರಿದ ಆರು ಪ್ರಭೇದಗಳನ್ನೊಳಗೊಂಡ ಸಸ್ಯಜಾತಿ. ಇಂಗ್ಲಿಷಿನಲ್ಲಿ ಕ್ಯಾಲೊಟ್ರೋಪಿಸ್ ಎಂದು ಕರೆಯಲಾಗುವ ಈ ಜಾತಿಯ ಗಿಡಗಳು ಆಫ್ರಿಕ ಮತ್ತು ಏಷ್ಯ ಖಂಡಗಳ ಉಷ್ಣವಲಯಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆ. ಭಾರತದಲ್ಲಿ ಇದರ ಮೂರು ಪ್ರಭೇದಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾದವು ಎರಡು–ಕ್ಯಾಲೊಟ್ರೋಪಿಸ್ ಜೈಗ್ಯಾಂಷಿಯ ಮತ್ತು ಕ್ಯಾಲೊಟ್ರೋಪಿಸ್ ಪ್ರೊಸೆರ.

ಎಕ್ಕದ ಗಿಡದ ಎಲೆ, ಕಾಯಿಗಳು

ಈ ಗಿಡದ ಹೂ (ಅರ್ಕ) ಶಿವ ಮತ್ತು ಗಣೇಶನ ಪೂಜೆಗೆ ಶ್ರೇಷ್ಠವೆನ್ನುವ ನಂಬಿಕೆ ಇದೆ. ದೇವಸ್ಥಾನಗಳ ಆವರಣದಲ್ಲಿ ಇದನ್ನು ಬೆಳೆಸುತ್ತಾರೆ. ಮನೆಯ ಅವರಣಗಳಲ್ಲೂ ಇದನ್ನು ಬೆಳೆಸಿದರೆ ಒಳ್ಳೆಯದು ಎಂಬ ಭಾವನೆಯಿದೆ. ಬೆಳೆಸಬಾರದು, ಬೆಳೆಸಿದರೆ ಅಶುಭ ಎಂಬ ನಂಬಿಕೆಯೂ ಇದೆ. ಅಲ್ಲದೆ ಈ ಗಿಡವನ್ನೇ ಪೂಜಿಸುವುದೂ ರೂಢಿಯಲ್ಲಿದೆ. ಎಲೆ, ಬೇರು ಇತ್ಯಾದಿ ಭಾಗಗಳನ್ನು ಆಯುರ್ವೇದೀಯ ಔಷಧಪದ್ಧತಿಯಲ್ಲಿ ಉಪಯೋಗಿಸುತ್ತಾರೆ.

ಗಿಡ ದೊಡ್ಡ ಪೊದೆಯಾಗಿ ಅಥವಾ ಸಣ್ಣ ಮರವಾಗಿ ಎರಡೂವರೆಯಿಂದ ಮೂರು ಮೀಟರಿನ ಎತ್ತರಕ್ಕೆ ಬೆಳೆಯುತ್ತದೆ. ನೆಲದಮಟ್ಟಕ್ಕೆ ಇರುವ ಕಾಂಡದಿಂದ ಹಲವಾರು ಶಾಖೆಗಳು ಹೊರಟು ಸುಮಾರು ಒಂದೇ ಎತ್ತರಕ್ಕೆ ಬೆಳೆದು ಗಿಡ ಪೊದರಿನಂತೆ ಕಾಣುತ್ತದೆ. ಸಸ್ಯದ ಎಲ್ಲ ಭಾಗಗಳಲ್ಲೂ ಬಿಳಿಯಬಣ್ಣದ ಹಾಲು (ಲ್ಯಾಟೆಕ್ಸ್) ಇರುವುದು ಈ ಗಿಡದ ಮುಖ್ಯ ಲಕ್ಷಣ. ಗಿಡದ ಎಳೆಯ ಭಾಗಗಳು ಮತ್ತು ಎಲೆಗಳ ಬೆನ್ನು ಭಾಗ ಒಂದು ಬಗೆಯ ನವುರಾದ ಬಿಳಿಯಬಣ್ಣದ ಅರಳೆಯಂಥ ತುಪ್ಪಳದಿಂದ ಆವೃತವಾಗಿರುತ್ತವೆ. ಎಲೆಗಳು ಅಭಿಮುಖಜೋಡಣೆ ಹೊಂದಿದ್ದು ದೀರ್ಘ ಅಂಡಾಕಾರವಾಗಿ, ಕೊಂಚ ದಪ್ಪನಾಗಿರುತ್ತವೆ. ಅವುಗಳಿಗೆ ತೊಟ್ಟುಗಳಿಲ್ಲ. ಇದ್ದರೂ ತುಂಬ ಪುಟ್ಟನಾಗಿರುತ್ತವೆ. ಕೆಲವೊಮ್ಮೆ ಎಲೆಗಳ ಬುಡ ಕಾಂಡವನ್ನು ಸುತ್ತುವರಿದಿರುತ್ತವೆ. ಹೂಗಳು ಸೈಮೋಸ್ ರೀತಿಯ ಗೊಂಚಲುಗಳಲ್ಲಿದ್ದು, ನಸು ನೀಲಿ ಅಥವಾ ಬಿಳಿಯ ಬಣ್ಣದ್ದಾಗಿರುತ್ತವೆ. ಹೂತೊಟ್ಟಿನ ಮೇಲೂ ಬಿಳಿಯ ಬಣ್ಣದ ಸಣ್ಣಕೂದಲುಗಳಿರುತ್ತವೆ. ಪುಷ್ಪದಳಗಳು ಸಂಯುಕ್ತವಾಗಿದ್ದು ಪೂರ್ಣವಾಗಿ ಅರಳಿದ ಹೂವಿನಲ್ಲಿ ಕೊಂಚ ಹಿಂದಕ್ಕೆ ಬಾಗಿಕೊಂಡಿರುತ್ತವೆ. ಹೂವಿನ ಕೇಂದ್ರಭಾಗದಲ್ಲಿ ಐದು ಕೇಸರಗಳಿಂದ ರಚಿತವಾದ ಒಂದು ಪುಷ್ಪಮಕುಟವಿರುತ್ತವೆ. ಕೇಸರದಂಡಗಳೆಲ್ಲ ಕೂಡಿಕೊಂಡು ಒಂದು ಕೊಳವೆಯಂತಾಗಿ, ಅದರ ಹೊರಭಾಗದಿಂದ ಐದು ದಪ್ಪನಾದ ಹಾಲೆ (ಲೋಬ್ಸ್) ಗಳಿರುತ್ತವೆ. ಕೇಸರದ ಪರಾಗಕೋಶಭಾಗ ಐದು ಮೂಲೆಗಳನ್ನು ಹೊಂದಿದ್ದು ಮಕುಟದ ಅಗ್ರಭಾಗವಾಗಿದೆ. ಈ ಮಕುಟದ ಕೊಳವೆಯೊಳಗಿಂದ ಶಲಾಕೆ ಹೊರಡುತ್ತದೆ. ಶಲಾಕಾಗ್ರ ಮಕುಟದ ಅಗ್ರಭಾಗದೊಡನೆ ಸೇರಿಕೊಂಡಿರುತ್ತದೆ. ಅಂಡಾಶಯ ಎರಡು ಕಾರ್ಪೆಲ್‌ಗಳಿಂದ ಕೂಡಿದ್ದು ಅವು ಬುಡದಲ್ಲಿ ಬಿಡಿಬಿಡಿಯಾಗಿರುತ್ತವೆ. ಕಾಯಿ ಫಾಲಿಕಲ್ ಬಗೆಯವಾಗಿದ್ದು ಅದರೊಳಗೆ ನೂರಾರು ಸಣ್ಣ ಸಣ್ಣ ಬೀಜಗಳಿರುತ್ತವೆ. ಬೀಜಗಳ ಸುತ್ತ ಹತ್ತಿಯಲ್ಲಿರುವಂತೆ ಬಿಳಿಯ ಕೂದಲುಗಳಿರುತ್ತವೆ. ಇವು ಬೀಜಪ್ರಸರಣ ಕ್ರಿಯೆಗೆ ಅನುವಾಗುತ್ತವೆ.

ಎಕ್ಕದ ಹಾಲನ್ನು ಚರ್ಮ ಹದಮಾಡುವಾಗ ವಾಸನೆ ಮತ್ತು ಕೂದಲು ತೆಗೆದುಹಾಕಲು, ಚರ್ಮಕ್ಕೆ ಹಳದಿ ಬಣ್ಣಬರುವಂತೆ ಮಾಡಲು ಕೊಂಚಮಟ್ಟಿಗೆ ಉಪಯೋಗಿಸುತ್ತಾರೆ. ಇದನ್ನು ಎಲೆಕಳ್ಳಿಯ ರಸದೊಂದಿಗೆ ತೀವ್ರವಿರೇಚಕವಾಗಿ ಉಪಯೋಗಿಸುತ್ತಾರೆ. ಎಲೆಗಳನ್ನು ಟಿಂಕ್ಚರ್ ರೂಪದಲ್ಲಿ ಬಿಟ್ಟು ಬಿಟ್ಟು ಬರುವ ಜ್ವರದ ನಿವಾರಣೆಗೆ ಬಳಸುತ್ತಾರೆ. ಹೂವಿನ ಪುಡಿಯನ್ನು ಶೀತ, ಕೆಮ್ಮು, ಗೂರಲು ಮತ್ತು ಅಜೀರ್ಣ ದೋಷಗಳಲ್ಲಿ ಉಪಯೋಗಿಸುತ್ತಾರೆ. ಬೇರಿನ ತೊಗಟೆಯನ್ನು ಪುಡಿಮಾಡಿ ಆಮಶಂಕೆ ನಿವಾರಣೆಗೆ ಉಪಯೋಗಿಸುತ್ತಾರೆ. ಅಲ್ಲದೆ ಇದು ಲಘು ಪ್ರಮಾಣದಲ್ಲಿ ಕಫಹಾರಿ ಮತ್ತು ಸ್ವೇದಕಾರಿ. ಇದನ್ನು ಸರಿಯ ರೂಪದಲ್ಲಿ, ಆನೆಕಾಲು ರೋಗಿಗಳ ಚರ್ಮಕ್ಕೆ ಲೇಪಿಸುತ್ತಾರೆ.

ತೊಗಟೆಯಿಂದ ಒಂದು ಬಗೆಯ ಬಿಳಿಯ ರೇಷ್ಮೆಯಂಥ, ಬಹುಕಾಲ ಬಾಳಿಕೆ ಬರುವ ನಾರು ದೊರಕುತ್ತದೆ. ಇದು ಕರ್ಷಕ (ಟೆನ್ಸೈಲ್) ಬಲದಲ್ಲಿ ಹತ್ತಿಗಿಂತ ಉತ್ತಮವಾಗಿದ್ದು ಬಿಲ್ಲಿನ ಹೆದೆ, ಮೀನಿನ ಬಲೆ ಮತ್ತು ಟ್ವೈನ್‌ದಾರ ಮಾಡಲು ಬರುತ್ತದೆ. ಆದರೆ ಇದನ್ನು ಗಿಡದಿಂದ ಹೊರತೆಗೆಯುವುದು ಪ್ರಯಾಸದ ಕೆಲಸ.

ಬೀಜದ ಮೇಲೆ ಇರುವ ಮೃದುವಾದ, ಹೊಳಪುಳ್ಳ ಕೂದಲನ್ನು ಹಾಸಿಗೆ ದಿಂಬುಗಳಿಗೆ ಹೂರಣವಾಗಿ ತುಂಬಲು ಉಪಯೋಗಿಸುತ್ತಾರೆ. (ಕೆ.ಬಿ.ಎಸ್.)

**ಎಕ್ಕುವುದು:** ಸ್ವಾಭಾವಿಕ ಅಥವಾ ಕೃತಕ ಎಳೆಗಳಿಂದ (ಫೈಬರ್ಸ್) ದಾರವನ್ನು ತಯಾರಿಸುವಲ್ಲಿನ ಒಂದು ವಿಧಾನ (ಕಾರ್ಡಿಂಗ್). ಒಂದು ಕಡೆಯಿಂದ ಮತ್ತೊಂದು ಕಡೆ ರವಾನಿಸುವುದಕ್ಕೂ ಸಂಗ್ರಹಿಸಿಡುವುದಕ್ಕೂ ಅನುಕೂಲವಾಗುವಂತೆ ಹತ್ತಿ, ಉಣ್ಣೆ, ಕೃತಕ ಎಳೆ ಇತ್ಯಾದಿಗಳನ್ನು ಅಮುಕಿ ದಮ್ಮಸ ಮಾಡಿ ಸಣ್ಣ ಘನಾಕಾರದ ಬೇಲುಗಳಾಗಿ ಮಾಡುವರು. ಅನಂತರ ಗಿರಣಿಗಳಲ್ಲಿ ದಾರ ಮಾಡುವಾಗ ಮೊದಲು ಆ ಬೇಲುಗಳನ್ನು ಉಣ್ಣೆ, ಹತ್ತಿಯನ್ನು ಬೇರೆ ಮಾಡಿ ಯಂತ್ರಗಳ ಮೂಲಕ ಬಿಡಿ ಬಿಡಿಮಾಡಿ ಸಣ್ಣ ಸಣ್ಣ ಗೊಂಚಲುಗಳಾಗಿ ಮಾಡುವುದು ಮೊದಲ ಹಂತ. ಗೊಂಚಲುಗಳಲ್ಲಿರುವ ಒಂದೊಂದೇ ಎಳೆಯನ್ನು ಆ ಎಳೆಯ ಜೊತೆ ಇತರ ಎಳೆಗಳು ಬರದಿರುವಂತೆ ಎಳೆಯುತ್ತಾರೆ. ಅಂದರೆ ಪ್ರತಿ ಎಳೆಯೂ ಪ್ರತ್ಯೇಕ ಪ್ರತ್ಯೇಕವಾಗಿ ಬರುವಂತೆ ಈ ಕೆಲಸ ಸಾಗುತ್ತದೆ. ಇದರಿಂದ ಮುಂದಿನ ಕ್ರಮಗಳಲ್ಲಿ ಹಸನಾದ, ಏಕಪ್ರಕಾರದ ಗಟ್ಟಿ ದಾರವನ್ನು ತಯಾರಿಸಲು ಸಾಧ್ಯ. ತಕಲಿ ಅಥವಾ ಚರಕದಿಂದ ದಾರ ತೆಗೆಯುವಾಗ ಆಗಲೀ ದೊಡ್ಡ ದೊಡ್ಡ ಯಂತ್ರಗಳಿಂದ ದಾರ ಮಾಡುವಾಗ ಆಗಲೀ ಈ ವಿಧಾನ ಕಡ್ಡಾಯವಾಗಿ ನಡೆದೇ ನಡೆಯುತ್ತದೆ. ತಯಾರಾದ ದಾರಗಳು ಬೇರೆ ಬೇರೆ ಗಾತ್ರದಲ್ಲಿ (ಕೆಲವು ದಪ್ಪನಾಗೂ ಮತ್ತೆ ಕೆಲವು ತೆಳ್ಳಗೂ) ಇರುತ್ತಿವಾದ್ದರಿಂದ ಅವನ್ನು ಗುರುತಿಸಲು ಅವುಗಳಿಗೆ ಬೇರೆ ಬೇರೆ ನಂಬರುಗಳನ್ನು ಕೊಡಲಾಗುತ್ತದೆ. 20ನೆಯ ಸಂಖ್ಯೆಯ ನೂಲು 40ನೆಯ ಸಂಖ್ಯೆಯ ನೂಲು–ಮುಂತಾಗಿ ಬೇರೆ ಬೇರೆ ದರ್ಜೆಯವಿರುತ್ತವೆ. ನಂಬರು ಹೆಚ್ಚಾದಷ್ಟೂ ದಾರದ ದಪ್ಪ ಹೆಚ್ಚು. ಸಾಮಾನ್ಯವಾಗಿ ಒಂದು ಗೊತ್ತಾದ ತೂಕದ ದಾರದ ಮೇಲೆ ಈ ಸಂಖ್ಯೆಗಳನ್ನು ಗುರುತಿಸಿರುತ್ತಾರೆ. ಒಂದು ಸೆಂಟಿಮೀಟರ್ ಉದ್ದ ಇರುವ ದಾರದ ತೂಕ, ಆ ದಾರದಲ್ಲಿರುವ ಎಳೆಗಳ ಒಟ್ಟು ಸಂಖ್ಯೆಯಷ್ಟೇ ಇರುತ್ತದೆ. ಏಕಪ್ರಕಾರದ ದಾರ ಬರಬೇಕಾದಲ್ಲಿ, ಒಂದು ಗೊತ್ತಾದ ತೂಕದ ದಾರದಲ್ಲಿ ಅಷ್ಟೇ ಸಂಖ್ಯೆಯ ಎಳೆಗಳಿರಬೇಕು. ದಪ್ಪನೆಯ ದಾರದಲ್ಲಿ ಹೆಚ್ಚು ಸಂಖ್ಯೆಯ ಎಳೆಗಳೂ ತೆಳ್ಳನೆಯ ದಾರದಲ್ಲಿ ಕಡಿಮೆಸಂಖ್ಯೆಯ ಎಳೆಗಳೂ ಇರುತ್ತವೆ. ಆದ್ದರಿಂದ ಮುಖ್ಯವಾಗಿ ಒಂದು ಗುಂಪು ಅಥವಾ ಗೊಂಚಲಿನ ಎಳೆಗಳಿಂದ ದಾರ ಮಾಡಬೇಕಾದರೆ ಆ ಗುಂಪಿನಲ್ಲಿರುವ ಎಳೆಗಳನ್ನು ಕ್ರಮಕ್ರಮವಾಗಿ ಎಳೆದು ಜೋಡಿಸಿ ಒಂದುಗೂಡಿಸಿ ಉದ್ದವಾದ ಅಖಂಡವಾದ ಒಂದೇ ದಪ್ಪ ಉಳ್ಳ ದಾರವಾಗಿ ಪರಿವರ್ತಿಸಬೇಕು. ಇದರ ಕ್ರಮ ಹೀಗಿದೆ: ಗೊಂಚಲು ಗೊಂಚಲಾಗಿ ಗುಂಪು ಗುಂಪಾಗಿರುವ ಎಳೆಗಳನ್ನು ಅಖಂಡವಾದ ಒಂದೇ ದಟ್ಟವನ್ನು ಹೊಂದಿರುವ ನೀಳವಾದ ಹಂಜಿ (ಸ್ಲೈವರ್) ರೂಪಕ್ಕೆ ತಂದು, ಅನಂತರ ಅದನ್ನು ಸೇವಿಗೆ ಮಾಡುವಂತೆ ಕ್ರಮಕ್ರಮವಾಗಿ ತೆಳ್ಳತೆಳ್ಳಗೆ ಎಳೆದು (ಡ್ರಾಫ್ಟಿಂಗ್), ಬೇಕಾದಷ್ಟು ದಟ್ಟತೆಯಿರುವ ದಾರದ ರೂಪಕ್ಕೆ ತರಬೇಕು. ಈ ಕಾರ್ಯ ಯಶಸ್ವಿಯಾಗಬೇಕಾದರೆ ಆ ಹಂಜಿಯಲ್ಲಿರುವ ಎಳೆಗಳು ಗೊಂಚಲು ಗೊಂಚಲಾಗಿರದೆ ಬಿಡಿಬಿಡಿಯಾಗಿರ ಬೇಕಾದ್ದು ಅಗತ್ಯ. ಇಲ್ಲದಿದ್ದಲ್ಲಿ ಹಂಜಿಯನ್ನು ತೆಳ್ಳಗೆ ಮಾಡುವಾಗ ಎಳೆಯನ್ನು ಎಳೆದರೆ, ಎಳೆಗಳು ಗುಂಪು ಗುಂಪಾಗಿ ಬಂದು ಸರಿಯಾದ ದಾರವನ್ನು ಪಡೆಯುವುದು ಅಸಾಧ್ಯವಾಗುತ್ತದೆ. ಇದರಿಂದಾಗಿ ಎಳೆಗಳನ್ನು ಪೂರ್ವಭಾವಿಯಾಗಿ ಸಂಪೂರ್ಣ ಪ್ರತ್ಯೇಕಿಸುವ ವಿಧಾನದ (ಹಿಂಜುವುದು ಎಕ್ಕುವುದು) ಅಗತ್ಯ ಇಲ್ಲಿ ಕಂಡುಬರುತ್ತದೆ. ಈ ವಿಧಾನದಲ್ಲಿ ಕಚ್ಚಾ ಪದಾರ್ಥದಲ್ಲಿ ಉಳಿದಿರುವ ಕಸ ಕಡ್ಡಿ ಮುಂತಾದುವುಗಳು ಪ್ರತ್ಯೇಕಿಸಲ್ಪಟ್ಟು ಹಂಜು ಶುಭ್ರವಾಗುವುದಲ್ಲದೆ ಎಳೆಗಳೆಲ್ಲವೂ ಚೆನ್ನಾಗಿ ಮಿಶ್ರಗೊಂಡು

# ಎಕ್ಟೋಪ್ರಾಕ್ಟ

ಹಂಜಿ ಅಥವಾ ಹಾಳೆಯ ರೂಪದಲ್ಲಿ ಅಂತಿಮ ಪದಾರ್ಥ ದೊರೆಯಲು ಅವಕಾಶವಾಗುತ್ತದೆ. ಪಿಂಜಾರಿಗಳು ಒಂದು ಬಿಲ್ಲಿಗೆ ಒಂದು ದಾರ ಕಟ್ಟಿ ಗುಂಡಿನಿಂದ ಎಕ್ಕುವರು. ಚರಕದಲ್ಲಿ ಮತ್ತು ತಕಲಿಯಲ್ಲಿ ದಾರ ತೆಗೆಯುವರು ಕೈಯಿಂದ, ಬಿಲ್ಲಿನ ಸಹಾಯದಿಂದಲೂ ಆಧುನಿಕ ಯಂತ್ರಕ್ಕೆ ಸಮಾನವಾದ ಧೂನೈಮೊಡಿಯ ಎಂಬುವರ ಸಹಾಯದಿಂದಲೂ ಹತ್ತಿಯನ್ನು ಎಕ್ಕುವರು. ಗಿರಣಿಗಳಲ್ಲಿ ದೊಡ್ಡ ದೊಡ್ಡ ಯಂತ್ರಗಳನ್ನು ಬಳಸಲಾಗುತ್ತದೆ.

ಆಧುನಿಕ ಯಂತ್ರಗಳಲ್ಲಿ ಮುಖ್ಯವಾಗಿ ಎರಡು ನಮೂನೆಗಳಿವೆ: ಒಂದು ತಿರುಗು ಫ್ಲಾಟ್‍ಕಾರ್ಡ್, ಮತ್ತೊಂದು ರೋಲರ್ ಅಂಡ್ ಕ್ಲಿಯರರ್ ಕಾರ್ಡ್, ಹತ್ತಿಯನ್ನು ಎಕ್ಕುವಾಗ ಫ್ಲಾಟ್‍ಕಾರ್ಡ್ ಯಂತ್ರವನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಉಣ್ಣೆ ಮತ್ತು ಅಷ್ಟು ನಯವಲ್ಲದ ಇತರ ಒರಟು ಎಳೆಗಳಿಗೆ ರೋಲರ್ ಕಾರ್ಡ್‍ಯಂತ್ರವನ್ನು ಉಪಯೋಗಿಸಲಾಗುವುದು. ಹಾಳೆಯ ರೂಪದಲ್ಲಿರುವ ಹತ್ತಿ ಒಂದು ಫೀಡ್‍ರೋಲರ್ ಮೂಲಕ ನಿಧಾನವಾಗಿ ಮುಂದೆಸಾಗುತ್ತದೆ. ಯಂತ್ರದ ಈ ಭಾಗ 9" ಅಡ್ಡಳತೆಯುಳ್ಳದ್ದಾಗಿದ್ದು ನಿಮಿಷಕ್ಕೆ 450–500 ಸಲ ತಿರುಗುವುದಿದೆ. ಇದರ ಪರಿಧಿಯ ಮೇಲೆ ಹಲ್ಲುಗಳಿರುತ್ತವೆ. ಅನಂತರ ಈ ಭಾಗಕ್ಕೆ ಹೊಂದಿಕೊಂಡತ್ತಿದ್ದು 50" ಅಡ್ಡಳತೆಯ, ನಿಮಿಷಕ್ಕೆ 150 ಸಲ ಸುತ್ತುವ ಉರುಳೆ ಆಕಾರದ ರೋಲರಿನ ಮೇಲಿರುವ ಮುಳ್ಳುಗಳ ಕೊನೆ < ಆಕಾರದಲ್ಲಿ ಬಗ್ಗಿರುತ್ತವಲ್ಲದೆ ಮೊನಚಾಗಿಯೂ ಇರುತ್ತವೆ. ಇದರಿಂದಾಗಿ ಹತ್ತಿಯನ್ನು ಒಳಗಡೆಗೆ ಬಾಚುವುದು ಸಾಧ್ಯವಾಗುತ್ತದೆ. ಹತ್ತಿ ರೋಲರಿನ ಮೇಲ್ಭಾಗದಲ್ಲಿ ಚಾವಣಿಯಂತಿರುವ ಫ್ಲಾಟ್ ಎಂಬ ಪಟ್ಟಿಗಳಿವೆ. ಇವುಗಳಲ್ಲಿ ಸುಮಾರು 40–45 ಪಟ್ಟಿಗಳನ್ನು ಯಾವಾಗಲೂ ಸಿಲಿಂಡರ್ ಮೇಲ್ಭಾಗದಲ್ಲಿರುವಂತೆ ಅಳವಡಿಸಲಾಗಿದೆ. ಈ ಪಟ್ಟಿಗಳು ಮಿನಿಟಿಗೆ 2"ದಷ್ಟು ಮುಂದೆ ಚಲಿಸುತ್ತವೆ. ಒಂದೊಂದು ಫ್ಲಾಟಿನ ಮೇಲೆ ಉರುಳೆಯ ಮುಳ್ಳುಗಳಂತಿರುವ ಮುಳ್ಳುಗಳಿವೆ. ಇವು ಉರುಳೆ ಮುಳ್ಳುಗಳಿಗೆ ವಿರುದ್ಧ ದಿಕ್ಕಿನಲ್ಲಿ ಬಗ್ಗಿರುವವು. ಉರುಳೆ ಮುಳ್ಳುಗಳೂ ಫ್ಲಾಟ್‍ಮುಳ್ಳುಗಳೂ ಎದುರು ಬದರಾಗಿ ಹತ್ತಿರ ಹತ್ತಿರ ಇರುವುವು. ವೇಗವಾಗಿ ಚಲಿಸುವ ಸಿಲಿಂಡರಿನ ಮೇಲಿನ ಮುಳ್ಳುಗಳಿಂದ ಮುಂದಕ್ಕೆ ದೂಡಲ್ಪಟ್ಟ ಗೊಂಚಲು ಹತ್ತಿ ಇದಕ್ಕೆ ಎದುರುಭಾಗದಲ್ಲಿ ನಿಧಾನವಾಗಿ ಚಲಿಸುತ್ತಿರುವ ಫ್ಲಾಟ್ ಮೇಲಿನ ಮುಳ್ಳುಗಳಿಂದ ತಡೆಯಲ್ಪಡುತ್ತದೆ. ಹೀಗಾಗುವುದರಿಂದ ಉರುಳೆ ಮೇಲಿನ ಮುಳ್ಳುಗಳು ಫ್ಲಾಟ್ ಮೇಲಿನ ಮುಳ್ಳುಗಳಿಂದ ಹಿಡಿಯಲ್ಪಟ್ಟು ಹತ್ತಿಗೊಂಚಲುಗಳ ಮೂಲಕ ಪುನಃ ಪುನಃ ಮುಂದೆ ಹಾಯ್ದು, ಹತ್ತಿಯ ಎಳೆಗಳು ಪ್ರತ್ಯೇಕಗೊಳ್ಳುತ್ತವೆ. ಹೀಗೆ ಪ್ರತ್ಯೇಕಗೊಂಡ ಎಳೆಗಳು ಒಂದು ಹಾಳೆಯೋಪಾದಿಯಲ್ಲಿ ಮುಂದುವರಿದು ಡಾಫರ್ ಎಂಬ ಮತ್ತೊಂದು ರೋಲರ್ (ಇದರ ವ್ಯಾಸ 24", ಮಿನಿಟಿಗೆ 8–9 ಸುತ್ತು ಸುತ್ತುವುದು) ಮೇಲಿನ ಮುಳ್ಳುಗಳಿಗೆ ಅಂಟಿಕೊಳ್ಳುವುದು. ಈ ಡಾಫರಿನ ಮೇಲೆಯೂ ಸಿಲಿಂಡರ್ ಮೇಲಿರುವಂತೆಯೇ ಮುಳ್ಳುಗಳಿವೆ. ಈ ಭಾಗದಲ್ಲಿ ಎಕ್ಕಲ್ಪಟ್ಟ ಹತ್ತಿಯ ಹಾಳೆ ಸಿಲಿಂಡರಿನಿಂದ ಪ್ರತ್ಯೇಕಗೊಂಡು, ಮುಂದೆ ಒಂದು ಕೊಂಬೆಯ ಮೂಲಕ ಹಾಯ್ದು ಅದರಿಂದಲೂ ಪ್ರತ್ಯೇಕಗೊಳ್ಳುತ್ತದೆ. ಅನಂತರ ಒಂದು ರಂಧ್ರದ ಮೂಲಕ ಹಾಯ್ದು ಮತ್ತೆ ಒಟ್ಟುಗೂಡಲ್ಪಟ್ಟು ಒಂದು ಸಣ್ಣ ಪಟ್ಟಿಯ ರೂಪದಲ್ಲಿ (ಹಂಜಿ) ಅಖಂಡವಾಗಿ ಒಂದು ಕ್ಯಾನ್‍ಬಳಿಗೆ ಸುತ್ತಿಕೊಳ್ಳುತ್ತದೆ.

ರೋಲರ್ ಅಂಡ್ ಕ್ಲಿಯರರ್ ಕಾರ್ಡ್ ಯಂತ್ರದ ಕೆಲಸವೂ ಇದೇ ರೀತಿ ನಡೆಯುವುದು. ಸಿಲಿಂಡರ್ ಮೇಲೆ ಫ್ಲಾಟಿನ ಬದಲು 5–6 ಚಿಕ್ಕ ಚಿಕ್ಕ ರೋಲರುಗಳು ಇವೆ. ಫ್ಲಾಟುಗಳ ಸಂಖ್ಯೆ 40–45 ಇರುವೆಡೆ 5–6 ರೋಲರುಗಳಿಗಿಂತ ಹೆಚ್ಚು ರೋಲರುಗಳನ್ನು ಇರಿಸಲು ಸಾಧ್ಯವಿಲ್ಲ. ಈ ಯಂತ್ರವನ್ನು ಒರಟು ಹತ್ತಿ, ಉಣ್ಣೆ, ರೇಷ್ಮೆ ಜುಂಗು ಇತ್ಯಾದಿಗಳಿಂದ ದಟ್ಟನಾದ ಎಳೆಗಳನ್ನು ಮಾಡಲು ಉಪಯೋಗಿಸುವರು. ಇಂಥ ಯಂತ್ರಗಳು ಈಗ ಭಾರತದಲ್ಲೂ ತಯಾರಾಗುತ್ತಿವೆ. (ಎಸ್.ಎನ್.ಬಿ.)

**ಎಕ್ಟೋಪ್ರಾಕ್ಟ:** ಈ ವಂಶಕ್ಕೆ ಸೇರಿದ ಪ್ರಾಣಿಗಳು ಸೂಕ್ಷ್ಮ ಜೀವಿಗಳು, ತೊಟ್ಟು ಇರುವ ಸಂಘಜೀವಿಗಳು. ಇವು ದೇಹಾವಕಾಶವನ್ನು (ಸೀಲೋಮ್) ಹೊಂದಿವೆ. ಇವು ತಾವೇ ಸ್ರವಿಸಿರುವ ಲೋಳೆಯಂತಿರುವ ವಸ್ತುವಿಗೊ ಅಥವಾ ಗಟ್ಟಿಯಾದ ಹೊರಕವಚಕ್ಕೋ ಅಂಟಿಕೊಂಡಿರುತ್ತವೆ. ಇವಕ್ಕೆ ಅರ್ಧಚಂದ್ರಾಕೃತಿಯ ಶಿರಾಸ್ತ್ರ (ಲೋಫೊಫೋರ್) ಇದೆ. ಜೀರ್ಣಾಂಗ ಬಾಗಿದೆ. ಬಾಯಿ ಮತ್ತು ಗುದರಂಧ್ರಗಳೆರಡೂ ಒಂದರ ಹತ್ತಿರ ಮತ್ತೊಂದಿವೆ. ವಿಸರ್ಜನಾಂಗಗಳಾಗಲಿ ರಕ್ತಪರಿಚಲನಾಂಗಗಳಾಗಲಿ ಇಲ್ಲ.

ಎಕ್ಟೋಪ್ರಾಕ್ಟಗಳಲ್ಲಿ ಹೆಚ್ಚಿನ ವೈವಿಧ್ಯ ಇದೆ. ಜಿಮ್‍ನೋಲೆಮಾಟ ವರ್ಗ, ಫೈಲಾಕ್ಟೋಲೆಮಾಟ ವರ್ಗ ಎಂದು ಇವನ್ನು ಎರಡು ವರ್ಗಗಳಾಗಿ ವಿಭಾಗಿಸಲಾಗಿದೆ. ಮೊದಲನೆ ವರ್ಗದ ಪ್ರಾಣಿಗಳೆಲ್ಲ ಕಡಲವಾಸಿಗಳು. ಎರಡನೆಯ ವರ್ಗಕ್ಕೆ ಸಿಹಿ ನೀರಿನಲ್ಲಿ ವಾಸಿಸುವ ಬ್ರಯೋಜ಼ೋವಗಳೆಲ್ಲ ಸೇರಿವೆ.

ಹೆಚ್ಚು ವೈವಿಧ್ಯವನ್ನು ಹೊಂದಿದ್ದರೂ ಎಕ್ಟೋಪ್ರಾಕ್ಟಕ್ಕೆ ಸೇರಿದ ಪ್ರಾಣಿಗಳಿಗೆ ತಮ್ಮದೆ ಆದ ವೈಶಿಷ್ಟ್ಯಗಳುಂಟು. ಇವುಗಳಲ್ಲಿ ಬಹು ಪಾಲು ಸಂಘಜೀವಿಗಳು. ಇವು ಪ್ರಧಾನವಾಗಿ ಸಮುದ್ರದಲ್ಲಿರುತ್ತವೆ. ಕೆಲವು ಸಿಹಿ ನೀರಿನಲ್ಲೂ ಜೀವಿಸುತ್ತವೆ. ಉತ್ತರ ಸಮುದ್ರದಿಂದ ಹಿಡಿದು ದಕ್ಷಿಣ ಸಮುದ್ರದವರೆಗೆ ಇವು ಹರಡಿರುತ್ತವೆ. ಈ ಸಂಘ ಜೀವಿಗಳ ಗುಂಪನ್ನು ಝುಆರಿಯಂ ಎಂದು ಕರೆಯುತ್ತಾರೆ. ಝುಆರಿಯಂ ಹಲವಾರು ರೀತಿಯ ಗಟ್ಟಿ ವಸ್ತುಗಳಿಗೆ ಅಂದರೆ ಕಲ್ಲು, ಮೃದ್ವಂಗಿಗಳ ಚಿಪ್ಪು, ಪಾಚಿ, ಹಡಗುಗಳ ಹೊರಮೈ, ಹಡಗು ನಿಲ್ದಾಣದ ಆಸರೆಗಳು ಮೊದಲಾದ ವಸ್ತುಗಳಿಗೆ ಅಂಟಿಕೊಂಡಿರುತ್ತದೆ. ಕೆಲವು ಪ್ರಭೇದಗಳು (ಮೆಂಬ್ರನಿಪೊರ) ನೀರಿನಲ್ಲಿರುವ ಪಾಚಿಗೆ ಅಂಟಿರುವುದುಂಟು. ಎಕ್ಟೋಪ್ರಾಕ್ಟ ಜೀವಿಗಳು ಉದ್ದವಾಗಿರಬಹುದು, ಹಬ್ಬಿಕೊಂಡಿರುವುದು, ಅಂಟಿಕೊಂಡಿರಬಹುದು ಅಥವಾ ಮೃದ್ವಂಗಿಗಳ ಮತ್ತು ಬ್ರಾಕಿಯೋಪಾಡ್‍ನ ಚಿಪ್ಪುಗಳ ಒಳಗೆ ಕೊರೆದು ಹೊಕ್ಕಿರಬಹುದು.




**A ಎಕ್ಟೋಪ್ರಾಕ್ಟ ಜೀವಿಯ ದೇಹರಚನೆ: 1. ಬಾಯಿ, 2.ಗ್ಯಾಂಗ್ಲಿಯಾನ್, 3. ಗುದದ್ವಾರ, 4.ಕರುಳು, 5. ಅಂಡಾಶಯ, 6.ಜಠರ, 7. ಅಂಡಾಶಯ, 8. ಫ್ಯುನಿಕ್ಯುಲಸ್, 9. ವೃಷಣ, 10.ಶರೀರದ ಗೋಡೆ, 11.ಗಂಟಲು.**
**B ಬ್ಯುಗುಲದ ಆವಿಕ್ಯುಲೇರಿಯಂ 1. ಕೊಕ್ಕು, 2. ದವಡೆ, 3. ಆಕ್ಲೂಪಸ್ ಮಾಂಸಖಂಡ, 4. ಡಿವೇರಿಕೇಟರ್ ಮಾಂಸಖಂಡ, 5. ತೊಟ್ಟು, 6. ಒಳಾಂಗಣ**

ಅಂಟಿಕೊಂಡಿರುವುದಾದರೆ ಒಂದೇ ಪದರವಾಗಿರಬಹುದು ಅಥವಾ ಹಲವಾರು ಪದರದಿಂದ ಕೂಡಿರಬಹುದು. ಹಲವಾರು ಪದರವಿದ್ದರೆ ಸಾಕಷ್ಟು ದಪ್ಪವಾಗಿರುವುವು. ಉದ್ದವಾಗಿದ್ದರೆ ಜಡೆಯಾಕಾರದಲ್ಲಿರುವುವು. ಕವಲೊಡೆದ ಕೊಳವೆಯಂತೆಯೂ ಇರಬಹುದು. ಏಕರೀತಿಯ ಆಕಾರ ಹೊಂದಿದ್ದರೆ ಬಲೆಯಂತೆ ಇರಬಹುದು. ಪ್ರತಿ ಸಂಘಜೀವಿಯಲ್ಲೂ ಒಂದೇ




**A ಪ್ಲೂಮಟೆಲ್ಲ ಪಂಕ್ಟೀಟ, B ಪೆಕ್ಟಿನಟೆಲ್ಲ ಮ್ಯಾಗ್ನಿಫಿಕ, C ಕ್ರಿಸ್ಟೇಟೆಲ್ಲ ಮುಸಿಡೊ**

ನಮೂನೆಯ ರಚನೆ ಕಾಣುತ್ತದೆ. ಝುಆರಿಯಂ ಹಲವಾರು ಝುಯಿಡ್‍ಗಳ ಸಂಘಟನೆಯಿಂದ ಆಗಿದೆ. ಈ ಝುಯಿಡ್‍ಗಳು ಸೂಕ್ಷ್ಮಜೀವಿಗಳು. ಕೇವಲ ಕೆಲವೇ ಮಿಲಿಮೀಟರ್ ಉದ್ದವಾಗಿರುತ್ತವೆ. ಪ್ರತಿ ಝುಯಿಡ್‍ಗೂ ಎರಡು ಪದರಗಳ ಹೊರಕವಚವಿದೆ. ಇದಕ್ಕೆ ಝುಯೀಷಿಯಂ ಎನ್ನುತ್ತಾರೆ. ಈ ಝುಯೀಷಿಯಂನಲ್ಲಿಯೇ ಕೋಡುಗಳನ್ನು ಹೊಂದಿರುವ ಲೋಫೊಫೋರ್

ಮತ್ತು ಇತರ ಅಂಗಗಳು ಇರುತ್ತವೆ. ಇದರಲ್ಲಿರುವ ಅಂಗಗಳಿಗೆಲ್ಲ ಒಟ್ಟಿಗೆ ಪಾಲಿಪೈಡ್ ಎನ್ನುತ್ತಾರೆ. ಈ ಗುಂಪನ್ನು ಅವುಗಳ ಝುಯೀಷಿಯಮ್ ಮತ್ತು ಝುಯಿಡ್‌ನಲ್ಲಿರುವ ವೈವಿಧ್ಯವನ್ನು ಅನುಸರಿಸಿ ವರ್ಗೀಕರಿಸಲಾಗಿದೆ. ಟೀನೊಸ್ಟೊಮಾಟ ವರ್ಗದಲ್ಲಿ ಝುಯೀಷಿಯಂಗೆ ತೆಳುವಾದ ಕೈಟಿನ್ನಿನ ಹೊರಕವಚವಿದೆ. ಕೈಲೊಸ್ಟೊಮ್ಯಾಟದಲ್ಲಿ ಝುಯೀಷಿಯಂನ ಹೊರಕವಚ ಪೆಟ್ಟಿಗೆಯಂತಿದೆ. ಇದರ ತುತ್ತತುದಿಯ ಕೆಳಗೆ ಒಂದು ಚಿಕ್ಕರಂಧ್ರವಿದೆ. ಈ ರಂಧ್ರಕ್ಕೆ ಕೀಲಿರುವ ಮುಚ್ಚಳವಿದೆ. ಈ ಮುಚ್ಚಳಕ್ಕೆ ಆಪರ್‌ಕುಲಂ ಎನ್ನುತ್ತಾರೆ. ಭ್ರೂಣಕೋಶ ಅಂಡಕೋಶದ ರೀತಿಯಲ್ಲಿದೆ. ಆನ್‌ಸ್ಕ ವರ್ಗದಲ್ಲಿ ಝುಯೀಷಿಯಂನ ಮುಂಭಾಗದ ಗೋಡೆ ಹಿಗ್ಗಿ ಕುಗ್ಗುತ್ತದೆ.

ಝುಆಯಿಡ್‌ನ ಜೀವಂತ ಭಾಗ ಝುಯೀಷಿಯಂನ ಒಳಗಡೆ ಇರುತ್ತದೆ. ಇದಕ್ಕೆ ಕೋಡುಗಳುಳ್ಳ ಲೋಪೊಫೋರ್ ಇರುತ್ತದೆ. ಇದರ ಮುಖ್ಯ ಅಂಗಗಳ ಗುಂಪು ಝುಯೀಷಿಯಂನ ಒಳಗಡೆ ನೇತು ಹಾಕಿದಂತೆ ಇರುತ್ತದೆ. ಈ ಪಾಲಿಪೈಡಿಗೆ ಕೋಡಿನ ಕವಚವಿರುತ್ತದೆ. ಇದಕ್ಕೆ U ಆಕಾರದ ಜೀರ್ಣಾಂಗಗಳಿವೆ. ಇದರ ಬಾಯಿ ಕೋಡಿನ ವರ್ತುಳದಲ್ಲಿದೆ. ಆದರೆ ಇದರ ಗುದರಂಧ್ರ ಕೋಡಿನ ವರ್ತುಳದ ಹೊರವಲಯದಲ್ಲಿದೆ. ಜೀರ್ಣಾಂಗವನ್ನು ವಿವಿಧ ನಿಟ್ಟುಗಳಾಗಿ ವಿಂಗಡಿಸಬಹುದು. ಬಾಯಿ, ಗಂಟಲು, ಅನ್ನನಾಳ, ಜಠರ–ಹೀಗೆ. ಜಠರವನ್ನು ಕಾರ್ಡಿಯಾಕ್, ನೀಕಂ ಮತ್ತು ಪೈಲೊರಸ್ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಪೈಲೊರಸ್‌ನಿಂದ ಜೀರ್ಣಾಂಗನಾಳ ಗುದನಾಳವಾಗುತ್ತದೆ. ಕೋಡಿನ ವರ್ತುಳದ ಹೊರಗಡೆ ಇರುವ ಗುದರಂಧ್ರಕ್ಕೆ ಗುದನಾಳ ಸೇರುತ್ತದೆ. ಟೇನೋಸೈಟೂಟ ವರ್ಗದಲ್ಲಿ ಕಾರ್ಡಿಯಾಕ್ ಜಠರ, ಅರೆಯುವ ಅಂಗ ಗಿಝರ್ಡ್ ಆಗಿ ಪರಿವರ್ತನೆ ಹೊಂದಿರುತ್ತದೆ.

ನರಮಂಡಲದ ಮುಖ್ಯ ಮುಡಿ ಗಂಟಲಿನ ಅಥವಾ ಅನ್ನನಾಳದ ಹತ್ತಿರ ದೇಹಾವಕಾಶ ದಲ್ಲಿದೆ. ಇಲ್ಲಿಂದ ನರಗಳು, ಉಪನರಗಳು, ಕೋಡುಗಳು, ಹೊರಕವಚ, ಮಾಂಸದ ಪೊರೆ ಮತ್ತು ಜೀರ್ಣಾಂಗಗಳಿಗೆ ಹೋಗುತ್ತವೆ.

ಝುಯೀಷಿಯಂನಲ್ಲಿರುವ ಪ್ರಾಣಿಯ ಮುಂಭಾಗವನ್ನು ಹೊರಗೆ ತಳ್ಳಲು, ಹಿಂದಕ್ಕೆ ಎಳೆದುಕೊಳ್ಳಲು ಅನುಕೂಲವಾಗುವಂತೆ ಸ್ನಾಯುಗಳಿವೆ. ಹೊರ ಮೈ ಕವಚದಿಂದ ಹಿಡಿದು ಮುಂಭಾಗದ ಪೊರೆಯವರೆಗೆ ಅಡ್ಡಲಾಗಿ ಹಾದುಹೋಗಿರುವ ಈ ಸ್ನಾಯುಗಳಿಗೆ ಪೆರೈಟಲ್ ಸ್ನಾಯುಗಳೆನ್ನುತ್ತಾರೆ. ಇವು ಕೋಡಿನ ಕವಚವನ್ನು ಹೊರಕ್ಕೆ ತಳ್ಳಲು ಸಹಾಯ ಮಾಡುತ್ತವೆ. ಈ ಸ್ನಾಯುಗಳು ಒಂದೇ ಕಟ್ಟಿನವಾಗಿರಬಹುದು ಅಥವಾ ಹಲವಾರು ಕಟ್ಟುಗಳಿಂದ ಕೂಡಿರಬಹುದು. ಇವುಗಳ ಸಂಖ್ಯೆ ಬೇರೆ ಬೇರೆ ಎಕ್ಟೋಪ್ರಾಕ್ಟದಲ್ಲಿ ಬೇರೆ ಬೇರೆಯಾಗಿರುತ್ತದೆ. ಬುಗುಲ ಪ್ರಾಣಿಯಲ್ಲಿ ಇಪ್ಪತ್ತರಿಂದ ನಲವತ್ತು ಜೋಡಿಗಳಿವೆ. ಆದರೆ ವಿಕ್ಟೊರೆಲ್ಲದಲ್ಲಿ ಕೇವಲ ಆರು ಜೋಡಿ ಮಾತ್ರವಿದೆ. ಝುಯೀಷಿಯಂನ ಕವಾಟದ ಮುಚ್ಚಳವನ್ನು ಮುಚ್ಚಲು ಮತ್ತು ತೆರೆಯಲು ಅನುಕೂಲವಾಗುವಂತೆ ಅಕ್ಲುಸಾರ್ ಸ್ನಾಯುಗಳಿರುತ್ತವೆ. ಬಲಯುತವಾದ ರಿಟ್ರ್ಯಾಕ್ಟರ್ ಮತ್ತೊಂದು ಬಲಯುತವಾದ ಸ್ನಾಯು. ಇವು ಹೊರಗಿರುವ ಲೋಪೊಫೋರ್‌ಗೆ ಹೊಂದಿಕೊಂಡಿರುತ್ತವೆ. ಈ ಸ್ನಾಯುಗಳು ಸಂಕುಚಿತವಾದಾಗ ಹೊರಬಂದಿರುವ ಲೋಪೊಫೋರನ್ನು ಒಳಗೆ ಎಳೆದುಕೊಳ್ಳುತ್ತದೆ. ಈ ಸ್ನಾಯು ಸಂಕೋಚನಕ್ಕೆ ದೇಹದ ಒತ್ತಡದ ವ್ಯತ್ಯಾಸವೂ ಸಹಾಯ ಮಾಡುತ್ತದೆ.

ಎಕ್ಟೋಪ್ರಾಕ್ಟ ವಂಶದಲ್ಲಿನ ಪ್ರಬುದ್ಧವಾದ ವೈಶಿಷ್ಟ್ಯವೇನೆಂದರೆ ಅದರ ಝುಯಿಡ್‌ಗಳಲ್ಲಿನ ಬಹುರೂಪತೆ. ಇದು ಹೆಚ್ಚಾಗಿ ಕಂಡುಬರುವುದು ಜಿಮ್‌ನೋಲಿಮಾಟ ಮತ್ತು ಕೈಲೊಸ್ಟೊಮ್ಯಾಟಗಳಲ್ಲಿ. ಚೆನ್ನಾಗಿ ಬೆಳೆದ, ಆಹಾರ ತಿನ್ನುವ ಎಲ್ಲ ಅಂಗಾಂಗಗಳುಳ್ಳ ಪಾಲಿಪೈಡ್ ಹೊಂದಿರುವ ಝುಯಿಡ್‌ಗಳಿಗೆ ಆಟೊಝುಯಿಡ್ ಎನ್ನುತ್ತಾರೆ. ಮಾರ್ಪಾಟಾಗಿರುವ ವಿವಿಧ ನಮೂನೆಯ ಇತರ ಝುಯಿಡ್‌ಗಳಿಗೆ ಹೆಟರೊಝುಯಿಡ್ ಎನ್ನುತ್ತಾರೆ. ಹೆಟರೊಝುಯಿಡ್‌ನಲ್ಲಿ ಆಹಾರ ತೆಗೆದುಕೊಳ್ಳುವ–ಪೌಷ್ಟಿಕ ಮತ್ತು ಪ್ರಜನನ ಅಂಗಗಳು ಇರುವುದಿಲ್ಲ. ಈ ಹೆಟರೊಝು ಆಯಿಡ್‌ಗಳು ನಾಲ್ಕು ರೀತಿಯಲ್ಲಿವೆ. ಆವಿಕುಲೇರಿಯ, ವೈಬ್ರಾಕುಲ ಕಿನೋ ಝುಆಯಿಡ್ ಮತ್ತು ಕುಬ್ಜ ಝುಆಯಿಡ್.

ಕೈಲೊಸ್ಟೊಮ್ಯಾಟದಲ್ಲಿ ಆವಿಕುಲೇರಿಯ ಮಾದರಿಯ ಹೆಟರೊಝುಆಯಿಡ್‌ಗಳು ಹೆಚ್ಚಾಗಿವೆ. ಈ ಆವಿಕುಲೇರಿಯ ಮಿಕ್ಕ ಝುಆಯಿಡ್‌ಗಳ ಆಶ್ರಯದಲ್ಲಿ ಬೆಳೆಯುತ್ತವೆ. ಈ ಆವಿಕುಲೇರಿಯ ಮಾರ್ಪಟ್ಟ ಝುಯೀಷಿಯಂ. ಇವು ಝುಆಯಿಡ್‌ಗಿಂತ ಚಿಕ್ಕದಾಗಿಯೊ ಅಷ್ಟೆ ಗಾತ್ರವಾಗಿಯೊ ಅಥವಾ ಅದಕ್ಕಿಂತ ದೊಡ್ಡದಾಗಿಯೊ ಇರುತ್ತವೆ. ಇದಕ್ಕೆ ಹೊಂದಿಕೊಂ ಡಂತೆ ಒಂದು ಮುಚ್ಚಳ ಇರುತ್ತದೆ. ಝುಆಯಿಡ್‌ಗಿಂತ ಇದರ ಸ್ನಾಯುಗಳು ಸಂಕೀರ್ಣ, ಆವಿಕುಲೇರಿಯದ ಒಳಗಡೆ ಚೆನ್ನಾಗಿ ಬೆಳೆದ ಪಾಲಿಪೈಡ್ ಇರಬಹುದು ಅಥವಾ ಇಲ್ಲದಿರಬಹುದು. ಇವು ಚಿಕ್ಕದಾಗಿ ಆಟೊಝುಯಿಡ್‌ನ ಮೇಲಿದ್ದರೆ ಇದಕ್ಕೆ ಅಡ್ವೆನ್‌ಟಿಷಿಯಸ್ ಅಥವಾ ಡಿಂಪೆಂಡೆಂಟ್ ಆವಿಕುಲೇರಿಯ ಎಂದು ಕರೆಯುತ್ತಾರೆ. **ಬುಗುಲ** ಪ್ರಾಣಿಯಲ್ಲಿ ಈ ಆವಿಕುಲಕ್ಕೆ ಒಂದು ತೊಟ್ಟಿದ್ದು ಅದು ಹಕ್ಕಿಯ ತಲೆಯನ್ನು ಹೋಲುತ್ತದೆ. ಇದರ ಮುಚ್ಚಳ ದೊಡ್ಡದಾಗಿದ್ದರೆ ಕೆಳದವಡೆ ಎನ್ನುತ್ತಾರೆ. ಈ ಕೆಳದವಡೆ ತಗಲುವ ಆವಿಕುಲೇರಿಯದ ಭಾಗಕ್ಕೆ ರೋಸ್ಟ್ರಂ ಎನ್ನುತ್ತಾರೆ. ಇದು ಹಕ್ಕಿಯ ಮೇಲ್ಭಾಗದ ಕೊಕ್ಕನ್ನು ಹೋಲುತ್ತದೆ. ನಕ್ಷತ್ರ ಮೀನು ಮತ್ತು ಕಡಲ ಚಿಳ್ಳೆಯಲ್ಲಿರುವ ಚಿಮಟದಂಥ ಪೆಡಿಸಿಲ್ಲೇರಿಯ ಮಾಡುವ ಕೆಲಸವನ್ನೇ ಈ ಬುಗುಲದಲ್ಲಿ ಆವಿಕುಲೇರಿಯ ಮಾಡುತ್ತದೆ. ಇವು ಮೈಮೇಲೆ ಓಡಾಡುವ ಸಣ್ಣ ಸಣ್ಣ ಪ್ರಾಣಿಗಳನ್ನು ಹಿಡಿದು ಹಾಕುತ್ತವೆ. ಕೊಕ್ಕಿನಂತಿರುವ ಈ ಆವಿಕುಲೇರಿಯ ಬಗ್ಗುತ್ತ ಚಟುವಟಿಕೆಯಿಂದ ಅಲ್ಲಾಡುತ್ತಿದ್ದು ಹತ್ತಿರಕ್ಕೆ ಬಂದ ಸಣ್ಣ ಸಣ್ಣ ಪ್ರಾಣಿಗಳನ್ನು ಕತ್ತರಿಸಿ, ಝುಯೀಷಿಯಂನ ಹೊರ ಮೈಯನ್ನು ಶುಚಿಯಾಗಿಡುತ್ತದೆ. ತಮ್ಮ ಚಲನೆಯಿಂದ ಸಣ್ಣ ಪ್ರಾಣಿಗಳನ್ನು ಹಿಡಿದುಹಾಕಿ ಝುಯಿಡ್‌ಗೆ ಆಹಾರ ಸಂಗ್ರಹಣೆಗೆ ಸಹಾಯ ಮಾಡುತ್ತವೆ. ಜೊತೆಗೆ ಹೊರ ಮೈಯನ್ನು ಚೊಕ್ಕಟಮಾಡಿ ಹೆಚ್ಚು ಆಮ್ಲಜನಕ ವಿನಿಮಯ ನಡೆಯುವಂತೆಯೂ ದೇಹವರ್ಧನ ಕ್ರಿಯೆಯಿಂದ ಉಂಟಾದ ತ್ಯಾಜ್ಯ ವಸ್ತುಗಳು ದೇಹದಿಂದ ಹೊರಹೋಗು ವಂತೆಯೂ ಮಾಡುತ್ತವೆ.

ಆವಿಕುಲದಂತೆ ಸಹಾಯ ಮಾಡುವ ಮತ್ತೊಂದು ಎಂದರೆ ಹೆಟರೊಝುಆಯಿಡ್ ವೈಬ್ರಾಕುಲ. ಇದೂ ಮಾರ್ಪಾಟು ಹೊಂದಿದ ಝುಆಯಿಡ್. ಇದರಲ್ಲಿ ಮುಚ್ಚಳ ಉದ್ದನೆಯ ಸಿಬಿರಿನಂತೆ ಮಾರ್ಪಾಟಾಗಿರುತ್ತದೆ. ಈ ಸಿಬಿರು ಚಿಕ್ಕದಾದೊಂದು ಕೋಶದಲ್ಲಿ ಅಡಕವಾಗಿದ್ದು ಎಲ್ಲ ಕಡೆಗೂ ಸ್ವತಂತ್ರವಾಗಿ ತಿರುಗುವಂತೆ ಇದೆ. ಇವು ಆವಿಕುಲದ ಜೊತೆಯಲ್ಲಿ ನಿಯೋಜಿತ ಸ್ಥಾನದಲ್ಲಿರಬಹುದು ಅಥವಾ ಸ್ವತಂತ್ರವಾಗಿರಬಹುದು. ಆವಿಕುಲ ಮತ್ತು ವೈಬ್ರಾಕುಲ ಇವೆರಡರ ಚಲನೆ ಎಕ್ಟೋಪ್ರಾಕ್ಟದ ಮೈಮೇಲೆ ಕೊಳೆ ಸೇರದಂತೆ ನೋಡಿಕೊಳ್ಳುತ್ತವೆ. ಕೀನೊಝುಯಿಡ್‌ನಲ್ಲಿ ಮಾರ್ಪಾಟುಗಳು ಕಡಿಮೆ. ಇದರ ದೇಹಾವಕಾಶ ದೊಡ್ಡದು. ಇದರಲ್ಲಿ ಎಳೆಎಳೆಯಾದ ಅಂಗಾಂಶವಿದೆ. ಇದರಂತೆಯೇ ಕೆಲವು ಕುಬ್ಜ ಝುಆಯಿಡ್‌ಗಳೂ (ನ್ಯಾನೋಝುಆಯಿಡ್) ಇವೆ.

ಇದರ ಜನನೇಂದ್ರಿಯಗಳು ಕೇವಲ ಜನನಗ್ರಂಥಿಗಳನ್ನು ಮಾತ್ರ ಹೊಂದಿರುತ್ತವೆ. ಜನನಕೋಶಗಳನ್ನು ಗುಂಡಾದ ಆಕಾರ ಮತ್ತು ಅವು ಹೊಂದಿರುವ ದೊಡ್ಡದಾದ ನಡುಬೀಜ ದಿಂದ ಗುರುತಿಸಬಹುದು. ಈ ಜನನ ಕೋಶಗಳು ಜೀವಿಯ ಬೆಳವಣಿಗೆಯ ಕಾಲದಲ್ಲಿಯೆ ಜೀರ್ಣಾಂಗಗಳ ಕೆಳಗೂ ಹೊರಮೈಗೂ ಮಧ್ಯೆ ಇರುವ ಅವಕಾಶದಲ್ಲಿ ಬೆಳೆಯಲು ಪ್ರಾರಂಭವಾಗುತ್ತವೆ. ಇವುಗಳಲ್ಲಿ ಹೆಚ್ಚು ದ್ವಿಲಿಂಗಿಗಳು. ಪ್ರತಿ ಝುಆಯಿಡ್‌ನಲ್ಲಿ ಒಂದೆರಡು ಅಂಡಾಶಯಗಳೊ ಒಂದೆರಡು ವೃಷಣಗಳೊ ಇರುತ್ತವೆ. ಸಾಮಾನ್ಯವಾಗಿ ವೃಷಣ ಝುಯಿಡ್‌ನಲ್ಲಿರುವ ದೇಹಾವಕಾಶದ ಮುಂಭಾಗದಲ್ಲಿದ್ದರೆ ಅಂಡಾಶಯ ಅದೇ ಅವಕಾಶದ ಹಿಂಬದಿಯಲ್ಲಿರುತ್ತದೆ. ಆದರೆ ಇವು ಏಕಕಾಲದಲ್ಲಿ ಬಲಿಯದೆ, ಒಂದು ಮಾತ್ರ ಬೇಗ ಬಲಿಯುತ್ತದೆ. ಇದರಿಂದ ಸ್ವಕೀಯ ರೇತುಸ್ಪರ್ಶ ಆಗುವುದು ತಪ್ಪುತ್ತದೆ. ಕೆಲವು ಎಕ್ಟೋಪ್ರಾಕ್ಟಗಳು ಏಕಲಿಂಗ ಪ್ರಾಣಿಗಳು.

ಎಕ್ಟೋಪ್ರಾಕ್ಟದಲ್ಲಿ ಸಾಮಾನ್ಯವಾಗಿ ದೇಹದ ಒಳಗಡೆಯೇ ಗರ್ಭ ಕಟ್ಟುತ್ತದೆ. ಆದರೆ ಹೆಚ್ಚು ಪ್ರಾಣಿಗಳಲ್ಲಿ ಒಂದು ಭ್ರೂಣಕೋಶವಿದ್ದು ಅದರೊಳಗೆ ಗರ್ಭ ಬೆಳೆಯುತ್ತದೆ. ಈ ಭ್ರೂಣಕೋಶ ಗೆಡ್ಡೆಯಾಕಾರದಲ್ಲಿ ದೇಹದ ಹೊರಗೆ ಅಥವಾ ದೇಹಾವಕಾಶದಲ್ಲಿ ಬೆಳೆಯ ಬಹುದು. ಝುಯೀಷಿಯಂನಂಥ ಕೆಲವು ಪ್ರಾಣಿಗಳಲ್ಲಿ ಹೊರ ಆವರಣದಲ್ಲಿ ಓವಿಸೆಲ್ ಅಥವಾ ಈಸಿಯಂ ಎಂಬ ಭ್ರೂಣಕೋಶವಿರುತ್ತದೆ. ಇದು ಶಿರಾಸ್ತ್ರದ ಆಕಾರವಾಗಿದ್ದು ಕೆಲವು ಆಟೊ ಝುಆಯಿಡ್‌ನ ಮುಂಭಾಗದಲ್ಲಿ ಮೇಲುಗಡೆ ಇರುತ್ತದೆ. ಈ ಓವಿಸೆಲ್‌ನ ಬೆಳವಣಿಗೆ ಅಂಡಾಶಯ ಉತ್ಪತ್ತಿ ಮಾಡುವ ಕಣ್ವಗಳನ್ನು ಅನುಸರಿಸಿರುತ್ತದೆ. ಈ ಓವಿಸೆಲ್‌ನಲ್ಲಿ ಬೆಳೆದ ಭ್ರೂಣ ಮಂದೆ ಶಿಲಕಗಳಿಂದ ಕೂಡಿದ ಡಿಂಬವಾಗಿ ಮಾರ್ಪಾಡಾಗುತ್ತದೆ. ಈ ಡಿಂಬ ಬೆಳೆದ ಮೇಲೆ ಓವಿಸೆಲ್‌ನಿಂದ ಹೊರಗೆ ಬಂದ ನೀರು ಸೇರುತ್ತದೆ. ಮುಮ್ಮೊಲೆಯಾ ಕಾರದ ಈ ಡಿಂಬವನ್ನು ಸೈಫೊನಾಟಸ್ ಡಿಂಬ ಎನ್ನುತ್ತಾರೆ. ಇದು ಸುಮಾರು ಎರಡು ತಿಂಗಳವರೆಗೆ ಈಜಾಡಿಕೊಂಡಿದ್ದು ಅನಂತರ ಅನುಕೂಲವಾದ ಜಾಗಕ್ಕೆ ಅಂಟಿಕೊಂಡು ಅದರ ಹೊರ ಕವಚವನ್ನು ಕಳಚಿಕೊಂಡು ರೂಪ ಪರಿವರ್ತನೆ ಹೊಂದುತ್ತದೆ. ಭ್ರೂಣಕೋಶ ದಿಂದ ಹೊರಬಂದ ಡಿಂಬಗಳಲ್ಲಿ ಮಾತ್ರ ಈ ಸ್ವಚ್ಛಂದ ಜೀವನದ ಅವಧಿ ಕೇವಲ ಕೆಲವೇ ದಿವಸಗಳು. ತಲೆಯಲ್ಲಿರುವ ಅಲುಗಾಡುವ ಗರಿಗಳಿಂದ ಜಾಗವನ್ನು ಪರೀಕ್ಷಿಸಿ ಡಿಂಭಗಳು ಅಲ್ಲಿ ನೆಲಸುತ್ತವೆ. ಅವುಗಳ ಅದರುವ ಸ್ನಾಯು ಸಂಕೋಚದಿಂದ ಅಂಟಿನ ಕೋಶವನ್ನು ಹೊರದೂಡುತ್ತದೆ. ಗಟ್ಟಿ ಜಾಗದ ಮೇಲೆ ಅದು ಹರಡಿಕೊಂಡಾಗ ದೇಹದ ಇತರ ಭಾಗಗಳು ನಶಿಸಲು ಪ್ರಾರಂಭಿಸುತ್ತವೆ. ಅನಂತರ ಅದು ನೂತನವಾದ ಮೊದಲನೆಯ ಝುಆಯಿಡ್ ಆಗಿ ಮಾರ್ಪಾಡುತ್ತದೆ. ಇದಕ್ಕೆ ಆನ್‌ಸೆಸ್ಟ್ರುಲ್ಲ ಎಂದು ಹೆಸರು. ಈ ಆನ್‌ಸೆಸ್ಟ್ರುಲ್ಲದ ಪಾರ್ಶ್ವದಿಂದ ಹೊಸ ಹೊಸ ಝುಆಯಿಡ್‌ಗಳು ಮೊಗ್ಗು ಒಡೆದಂತೆ ಚಿಗುರುತ್ತವೆ. ಹೊಸ ಝುಆಯಿಡ್‌ಗಳ ಬೆಳವಣಿಗೆ ಈ ರೀತಿ ಪ್ರತಿ ಪ್ರಭೇದದಲ್ಲೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಕಠಿಣ ವಾತಾವರಣ ಉಂಟಾದಾಗ ಈ ಸಂಘಜೀವಿಗಳು ಕಂದುಬಣ್ಣದ ಪದಾರ್ಥವಾಗಿ ನಿಶ್ಚೇತನ ಸ್ಥಿತಿಗೆ ಇಳಿಯುತ್ತವೆ. ಮತ್ತೆ ಅನುಕೂಲ ವಾತಾವರಣ ಉಂಟಾದಾಗ ಇವು ಝುಯಿಡ್‌ಗಳಾಗಿ ಬದಲಾಗುತ್ತವೆ.

ಎಕ್ಟೋಪ್ರಾಕ್ಟವನ್ನು ಜಾಗರೂಕತೆಯಿಂದ ಪರೀಕ್ಷಿಸಿದ, ಬುಗೆ (1952) ಮತ್ತು ಬುಸ್‌ಲರ್ (1953) ಇವರು ಈ ಪ್ರಾಣಿಗಳು ಪ್ರೀ ಕೇಂಬ್ರಿಯನ್ ಕಾಲದಲ್ಲೇ ಚೆನ್ನಾಗಿ ವೃದ್ಧಿಯಾಗಿದ್ದವೆಂದು ನಿರ್ಧರಿಸಿದ್ದಾರೆ. ಆಗಲೇ ಇವು ಸಾಕಷ್ಟು ವೈವಿಧ್ಯವನ್ನು ಹೊಂದಿದ್ದು ಮೀಸೊಜೋಯಿಕ್ ಶಕದಲ್ಲಿ ಬಹಳ ಪ್ರವರ್ಧಮಾನಕ್ಕೆ ಬಂದಿದ್ದುವು. ಭ್ರೂಣ ಬೆಳವಣಿಗೆಯ ಕ್ರಮ, ಡಿಂಬ

ಲಕ್ಷಣಗಳು ಮತ್ತು ದೇಹ ರಚನೆಯ ವೈಶಿಷ್ಟ್ಯ–ಇವನ್ನು ವಿವೇಚಿಸಿದರೆ ಈ ಗುಂಪು ಫೋರೋನಿಡಕ್ಕೆ ನಿಕಟ ಸಂಬಂಧವನ್ನು ಹೊಂದಿದ್ದು ಪ್ರೋಟೊಸ್ಟೋಮಿಯ ಗುಂಪಿಗೆ ಸೇರುವುದೆಂದು ಹೈಮನ್ ನಿರ್ಧರಿಸಿದ್ದಾನೆ. (ಸಿ.ಎಂ.ಎಸ್.)

**ಎಕ್ಬತಾನ:** ಇರಾನಿನಲ್ಲಿ ಈಗಿನ ಹ್ಯಾಮದ್ಯಾನ್ ಪಟ್ಟಣವಿರುವಲ್ಲಿಯೇ ಇದ್ದ ಒಂದು ಪ್ರಾಚೀನ ನಗರ. ಪೂರ್ವ ಪರ್ಷಿಯನ್ ಭಾಷೆಯಲ್ಲಿ ಇದಕ್ಕೆ ಹಂಗ್ಮತಾನ ಎಂದರೆ ಸಭೆ ಸೇರುವ ಸ್ಥಳ ಎಂಬ ಅರ್ಥವಿತ್ತು. ಮೀಡಿಯದ ಮೊದಲ ದೊರೆ ಡೀಓಸೆಸ್ (ಪ್ರ.ಶ.ಪೂ. 8–7ನೆಯ ಶತಮಾನ) ಇದನ್ನು ಕಟ್ಟಿದನೆಂದು ಗ್ರೀಕ್ ಚರಿತ್ರಕಾರರ ಹೇಳಿಕೆ. ಆದರೆ ಇತ್ತೀಚೆಗೆ ಈ ಊರಿನ ಸಮೀಪದ ಕೆಲವು ಬಂಡೆಗಳ ಮೇಲೆ ಅಕಾಡಿಯನ್ನರ ಕಾಲದ ಕೆಲವು ಉಬ್ಬುಶಿಲ್ಪಗಳು ಬೆಳಕಿಗೆ ಬಂದಿರುವುದರಿಂದ, ಮೀಡರ ಕಾಲಕ್ಕೆ ಹಿಂದಿನಿಂದಲೂ ಇಲ್ಲಿ ವಸತಿಯಿತ್ತೆಂದು ಹೇಳಬಹುದಾಗಿದೆ. ಮೊದಲು ಇದು ಮೀಡರ ರಾಜಧಾನಿಯಾಗಿತ್ತು. ಪ್ರ.ಶ.ಪೂ. 550ರಲ್ಲಿ ಅಖಮೇನಿಯ ವಂಶದ ದೊರೆ ಸೈರಸ್ ಇದನ್ನು ವಶಪಡಿಸಿಕೊಂಡ ಮೇಲೆ ಪ್ರ.ಶ. 330 ರಲ್ಲಿ ಅಲೆಕ್ಸಾಂಡರನ ಕೈಸೇರುವವರೆಗೂ ಇದನ್ನು ಅಖಮೇನಿಯ ದೊರೆಗಳು ತಮ್ಮ ಬೇಸಗೆಯ ರಾಜಧಾನಿಯಾಗಿ ಮಾಡಿಕೊಂಡಿದ್ದರು. ಅನಂತರ ಪಾರ್ಥಿಯನ್ನರ ಕಾಲದಲ್ಲೂ ಅವರ ರಾಜಧಾನಿಗಳಲ್ಲೊಂದಾಗಿತ್ತು. ಅಖಮೇನಿಯ ರಾಜವಂಶದ ಡೇರಿಯಸ್ ಮತ್ತು ಅರ್ತಾಸರ್‌ಕ್ಸೀಸರ ಶಾಸನಗಳು ಇಲ್ಲಿ ದೊರಕಿವೆ.

ಹೀರಡಟಸ್ ಮತ್ತು ಪಾಲಿಬಿಯಸರು ಈ ನಗರವನ್ನು ವರ್ಣಿಸಿದ್ದಾರೆ. ನಗರದ ಸುತ್ತಲೂ ಏಳು ಸುತ್ತಿನ ಕೋಟೆ ಇದ್ದು ಮಧ್ಯದಲ್ಲಿ ದೊಡ್ಡ ಪ್ರಮಾಣದ ಅರಮನೆ ಇದ್ದಿತಂತೆ. ಅದನ್ನು ಐಶ್ವರ್ಯಾಗಾರವಾಗಿಯೂ ಬಳಸುತ್ತಿದ್ದರಂತೆ. ಈಗದು ಅಲ್ಪ ಪ್ರಮಾಣದಲ್ಲಿ ಪಳೆಯುಳಿಕೆಯಾಗಿ ನಿಂತಿದೆ. (ಎಸ್.ಎನ್.)

**ಎಕ್ಲೀಸಿಯ:** ಪ್ರಾಚೀನ ಗ್ರೀಕ್ ನಗರರಾಜ್ಯವೊಂದರ ನಾಗರಿಕರ ಸಭೆ. ಮೂಲತಃ ಗ್ರೀಕ್ ಭಾಷೆಯಲ್ಲಿ ಈ ಶಬ್ದಕ್ಕೆ ಆಹ್ವಾನಿತರ ಸಭೆ ಎಂಬ ಅರ್ಥವಿತ್ತು. ಸಾಮಾನ್ಯವಾಗಿ ಎಲ್ಲ ಗ್ರೀಕ್ ನಗರ ರಾಜ್ಯಗಳಲ್ಲೂ ಈ ಬಗೆಯ ಸಭೆಗಳಿದ್ದುವಾದರೂ ಇವುಗಳ ರಚನೆ ಹಾಗೂ ಅಧಿಕಾರಗಳಲ್ಲಿ ಭಿನ್ನತೆಗಳಿದ್ದುವು. ಕಾಲದಿಂದ ಕಾಲಕ್ಕೆ ಇವು ವ್ಯತ್ಯಾಸ ಹೊಂದುತ್ತಿದ್ದುವು. ಇದು ಪರಿಪುಷ್ಟವಾಗಿ ಬೆಳೆದು ಫಲಿಸಿದ್ದು ಅಥೆನ್ಸಿನಲ್ಲಿ.

ಪ್ರ.ಶ.ಪೂ. 632ರಲ್ಲಿ ಮೊಟ್ಟಮೊದಲಿಗೆ ಅಥೆನ್ಸ್ ಜನರ ಸಾಂಘಿಕ ವರ್ತನೆಯ ಆಧಾರಗಳು ಇತಿಹಾಸದಲ್ಲಿ ದೊರಕುತ್ತವೆ. ಅಥೆನ್ಸ್ ನಗರ ಅನೇಕ ರೀತಿಯ ರಾಜಕೀಯ ವ್ಯವಸ್ಥೆಗಳಲ್ಲಿ ಪ್ರಯೋಗ ನಡೆಸಿತ್ತು. ಮೊದಲಿಗೆ ರಾಜಪ್ರಭುತ್ವ ರೂಢಿಯಲ್ಲಿದ್ದು ಅನಂತರ ಶ್ರೀಮಂತ ಪ್ರಭುತ್ವ ಆಚರಣೆಗೆ ಬಂತು. ಇದರಲ್ಲಿ ಒಂಬತ್ತು ಅಧಿಕಾರಿಗಳ (ಆರ್ಕನ್ಸ್) ಮಂಡಲಿ ಆರಿಯಾಪಗಸ್ ಎಂಬ ಶ್ರೀಮಂತ ಸಭೆಯೂ ಜೊತೆಗೆ ಈ ಸಾಮಾನ್ಯ ಸಭೆಯೂ ಇದ್ದುವು. ಪ್ರ.ಶ.ಪೂ. 594ರಲ್ಲಿ ಸೋಲನ್ ಎಂಬ ಮಹಾನಾಯಕ ಅಥೆನ್ಸಿನಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಿ, ಹಲವಾರು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಜಾರಿಗೆ ತಂದದ್ದರಿಂದ ಎಕ್ಲೀಸಿಯದ ಕಾರ್ಯಕ್ಷೇತ್ರ ವಿಸ್ತಾರವಾಯಿತು. ಅದುವರೆಗೂ ಎಕ್ಲೀಸಿಯಕ್ಕೆ ಹೆಚ್ಚಿನ ಅಧಿಕಾರ ಇರಲಿಲ್ಲ. ಯಾರು ಬೇಕಾದರೂ ಇದರ ಸದಸ್ಯತ್ವ ಪಡೆಯುವುದು ಸಾಧ್ಯವಾಗುವಂತೆ ಸೋಲನ್ ನಿಯಮ ರಚಿಸಿದ್ದ. ಇದು ಅಧಿಕಾರಿಗಳನ್ನು ಚುನಾಯಿಸುವ ಮಂಡಳಿಯಾಗಿದ್ದುದಲ್ಲದೆ ನ್ಯಾಯಾಲಯವೂ ಆಗಿತ್ತು. ನ್ಯಾಯಾಲಯದ ರೂಪು ಪಡೆದಾಗ ಹೆಲಿಯ ಎಂದು ಇದರ ಹೆಸರು. ಆಡಳಿತಯಂತ್ರ ಜನಸಾಮಾನ್ಯರ ಹಿಡಿತದಲ್ಲೇ ಉಳಿಯುವಂತೆ ಮಾಡಲು ಇದು ಸಹಾಯಕವಾಗಿತ್ತಲ್ಲದೆ ಪ್ರಜಾಪ್ರಭುತ್ವದಲ್ಲಿ ಇದರ ಸ್ಥಾನ ಉನ್ನತವಾಗಿತ್ತು. (ಬಿ.ಎಂ.)

**ಎಕ್ವಡಾರ್:** ದಕ್ಷಿಣ ಅಮೆರಿಕದ ಒಂದು ಗಣರಾಜ್ಯ. ಈ ಖಂಡದ ಸ್ವತಂತ್ರ ರಾಜ್ಯಗಳ ಪೈಕಿ ಉರುಗ್ವೆಯನ್ನು ಬಿಟ್ಟರೆ ಇದೇ ಅತ್ಯಂತ ಚಿಕ್ಕದು. ಈ ರಾಜ್ಯದ ಉತ್ತರದಲ್ಲಿ ಕೊಲಂಬಿಯವೂ ಪಶ್ಚಿಮದಲ್ಲಿ ಪೆಸಿಫಿಕ್ ಸಾಗರವೂ ದಕ್ಷಿಣ–ಪೂರ್ವಗಳಲ್ಲಿ ಪೆರುವೂ ಇವೆ. ಈ ರಾಜ್ಯದ ಮೇಲೆ ಭೂಮಧ್ಯರೇಖೆ (ಇಕ್ವೇಟರ್) ಹಾದು ಹೋಗುವುದರಿಂದ ಇದಕ್ಕೆ ಈ ಹೆಸರು ಬಂದಿದೆ.

ಮೇಲ್ಮೈ ಲಕ್ಷಣ: ಆಂಡೀಸ್ ಪರ್ವತ ಶ್ರೇಣಿ ಈ ರಾಜ್ಯದಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿರುವುದರಿಂದ ಈ ರಾಜ್ಯದಲ್ಲಿ ಉಬ್ಬುತಗ್ಗುಗಳು ವಿಪರೀತ. ಇಲ್ಲಿ ಒಂದು ಕಡೆ ಅರೆಮರುಭೂಮಿಯೂ ಇನ್ನೊಂದು ಕಡೆ ದಟ್ಟಡವಿಯೂ ಮತ್ತೊಂದು ಕಡೆ ಸಮುದ್ರದಲ್ಲಿ ಕಾಲ್ತೊಳೆಯುವ ತಗ್ಗುನೆಲವೂ ಮಗುದೊಂದು ಕಡೆ ಅಮೆಝಾನ್ ನದಿಯ ಶಿರೋಭಾಗವೂ ಇವೆ. ಇವುಗಳ ನಡುವೆ ಆ್ಯಂಡೀಸ್ ಪರ್ವತ ನಿಂತಿದೆ. ಎಕ್ವಡಾರನ್ನು ಮೂರು ಸ್ವಾಭಾವಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು.

ಪಶ್ಚಿಮ ಕರಾವಳಿ: ಪೆಸಿಫಿಕ್ ಸಾಗರಕ್ಕೂ ಆಂಡೀಸ್ ಪರ್ವತ ಶ್ರೇಣಿಗೂ ನಡುವೆ ಇರುವ ಈ ಪ್ರದೇಶದ ಅಗಲ 32–185 ಮೈಲಿ. ದೇಶದ ಒಟ್ಟು ವಿಸ್ತೀರ್ಣದಲ್ಲಿ ಇದು ಕಾಲುಭಾಗದ ಪ್ರದೇಶವನ್ನೊಳಗೊಂಡಿದ್ದು ಇದರ ವಿಸ್ತೀರ್ಣ 272046 ಚಕಿಮೀ. 460ಮೀಗಳ ಎತ್ತರದಿಂದ, ಸಮುದ್ರಮಟ್ಟದವರೆಗೆ ಇಳಿಜಾರಾಗಿದೆ. ಈ ಭಾಗ ಮೆಕ್ಕಲು ಮಣ್ಣಿನಿಂದ ಕೂಡಿದ ಫಲವತ್ತಾದ ಪ್ರದೇಶವಾದ್ದರಿಂದ ವ್ಯವಸಾಯ ಯೋಗ್ಯ ನೆಲ. ಗ್ವಾಯಾಸ್ ಮತ್ತು ಎಸ್ಮರಾಲ್ಡಾಸ್ ಇಲ್ಲಿನ ಮುಖ್ಯನದಿಗಳು.

ಸಿಯೆರ ಅಥವಾ ಪರ್ವತಪ್ರದೇಶ: ಇದು ದೇಶದ ವಿಸ್ತೀರ್ಣದಲ್ಲಿ ದೇಶದ 1/4 ಭಾಗವನ್ನೊಳಗೊಂಡಿದೆ. ಇಲ್ಲಿ ಹಬ್ಬಿರುವ ಆ್ಯಂಡೀಸ್ ಪರ್ವತದಿಂದ ದಕ್ಷಿಣೋತ್ತರವಾಗಿ ದೇಶ ಇಬ್ಭಾಗವಾಗಿದೆ. ಆಂಡೀಸ್ ಪರ್ವತಪಂಕ್ತಿಗಳ ಅಗಲ 110–290 ಮೈಲಿ; ಉದ್ದ ಸುಮಾರು 645 ಕಿ.ಮೀ. ಈ ಪರ್ವತ ಪ್ರದೇಶ ದೇಶದ ಜಲ ವಿಭಾಜಕ ಕ್ಷೇತ್ರವಾದ್ದರಿಂದ ನದಿಗಳು ಪೂರ್ವಪಶ್ಚಿಮಾಭಿಮುಖವಾಗಿ ಹರಿಯುತ್ತವೆ. ಇಲ್ಲಿ ಅನೇಕ ಶಿಖರಗಳು 5500 ಕಿ. ಮೀ ಎತ್ತರ. ಇವು ಹಿಮಾಚ್ಛಾದಿತ. ಶಿಖರಗಳು ಪೈಕಿ ಚಿಂಬರಾಸೋ (6270 ಮೀ.) ಅತ್ಯುನ್ನತ. ಇದು ಸತ್ತ ಜ್ವಾಲಾಮುಖಿಯೊಂದರ ಟೊಪ್ಪಿಗೆ. ಆಂಡೀಸ್ ಪ್ರದೇಶವೇ ಜಗತ್ತಿನ ಜ್ವಾಲಾಮುಖಿಗಳ ಕ್ರಿಯೆಯ ಒಂದು ಮುಖ್ಯಕೇಂದ್ರ. ಇಲ್ಲಿ ಸುಮಾರು 20 ಜೀವಂತ




ಜ್ವಾಲಾಮುಖಿಗಳಿವೆ. ಕೋಟೊಪಾಕ್ಸಿ (5897 ಮೀ) ಪ್ರಪಂಚದ ಅತ್ಯುನ್ನತ ಜೀವಂತ ಅಗ್ನಿಪರ್ವತ. ಆಂಟಿಸಾನ, ಕಾಯಾಂಬೆ ತುಂಗುರಾವ, ಪಿಚೇಂಚ ಇತರ ಅಗ್ನಿಪರ್ವತಗಳು. ಈ ರಾಜ್ಯದಲ್ಲಿ ಭೀಕರ ಭೂಕಂಪಗಳು ಪದೇ ಪದೇ ಸಂಭವಿಸುತ್ತಿರುತ್ತವೆ.

ಕಾಡು ಪ್ರದೇಶ: ಇದು ದೇಶದ ಪೂರ್ವಭಾಗ. ಸಮುದ್ರ ಮಟ್ಟದಿಂದ 1220 ಮೀ ಎತ್ತರದಲ್ಲಿದೆ. ಅಮೆಝಾನ್ ನದಿಯ ಉಪನದಿಗಳ ಪಾತ್ರವನ್ನೊಳಗೊಂಡಿರುವ ಈ ಪ್ರದೇಶ ದಟ್ಟವಾದ ಕಾಡುಗಳಿಂದ ಆವೃತ. ದೇಶದ ಒಟ್ಟು ವಿಸ್ತೀರ್ಣದಲ್ಲಿ ಅರ್ಧಭಾಗವನ್ನು ಕ್ರಮಿಸಿಕೊಂಡಿರುವ ಈ ಪ್ರದೇಶ ಬಹಳ ಹಿಂದುಳಿದಿದೆ.

ವಾಯುಗುಣ, ಸಸ್ಯ, ಜನಜೀವನ ಇತ್ಯಾದಿ: ಈ ದೇಶದ ಮೇಲೆ ಸಮಭಾಜಕ ವೃತ್ತ ಹಾದುಹೋದರೂ ಇಲ್ಲಿ ಒಂದೇ ಮಾದರಿಯ ವಾಯುಗುಣ ಕಂಡುಬರುವುದಿಲ್ಲ. ಇದು ಎತ್ತರಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಪಶ್ಚಿಮತೀರ ಪ್ರದೇಶದಲ್ಲಿ ಉಷ್ಣತೆಯೂ ಮಳೆಯೂ ಹೆಚ್ಚು ಆದರೆ ಪ್ರಸ್ಥಭೂಮಿ ಹೆಚ್ಚು ತಂಪು; ಮಳೆ ಸುಮಾರು 50". ಎತ್ತರವಾದ ಶಿಖರಗಳನ್ನು ಹಿಮ ಕವಿದಿದೆ. ಇಲ್ಲಿನ ಸ್ವಾಭಾವಿಕ ಸಸ್ಯವರ್ಗ ಆಯಾಪ್ರದೇಶದ ಎತ್ತರ ಮತ್ತು ಮಳೆಯ ಪ್ರಮಾಣಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಮಳೆ ಹೆಚ್ಚಾಗಿ ಬೀಳುವ ತೀರಪ್ರದೇಶದಲ್ಲೂ ಪರ್ವತಪ್ರದೇಶದಲ್ಲೂ ಪೂರ್ವದ ಇನ್ನು ಕೆಲವು ಭಾಗಗಳಲ್ಲೂ ದಟ್ಟವಾದ ಕಾಡುಗಳಿವೆ. ಮಳೆ ಕಡಿಮೆ ಬೀಳುವ ಎತ್ತರ ಪ್ರದೇಶಗಳಲ್ಲೂ ಹುಲ್ಲುಗಾವಲುಗಳು ಹರಡಿವೆ. ಈ ದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇಕಡ 74 ಭಾಗ ಬೆಲೆ ಬಾಳುವ ಮರಗಳ ಕಾಡು.

ಒಳ್ಳೆಯ ಮಾರ್ಗಗಳಿಲ್ಲದ್ದರಿಂದ ಕಾಡಿನ ಉತ್ಪನ್ನಗಳನ್ನು ಹೆಚ್ಚು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಲಾಗುತ್ತಿಲ್ಲ. ವ್ಯವಸಾಯ, ಪಶುಪಾಲನೆ ಜನರ ಮುಖ್ಯ ಕಸುಬು. ಸೇ.50ರಷ್ಟು ಜನರು ವ್ಯವಸಾಯದಿಂದ ಜೀವಿಸುತ್ತಾರೆ. ಒಟ್ಟು ವಿಸ್ತೀರ್ಣದಲ್ಲಿ ಕೇವಲ ಶೇ. 10 ಭಾಗದಲ್ಲಿ ವ್ಯವಸಾಯ ಮಾಡಲಾಗುತ್ತಿದೆ. 5% ಭಾಗದಲ್ಲಿ ದನ ಕುರಿ ಸಾಕುತ್ತಾರೆ. ಈ ದೇಶದ ಮುಖ್ಯ ಬೆಳೆಗಳು ಗೋದಿ, ಬಾರ್ಲಿ, ಕಾಫಿ, ಬತ್ತ, ಬಾಳೆ, ಕೋಕೋ. ತೀರಪ್ರದೇಶದಲ್ಲಿ ಮೀನು ಹಿಡಿಯುವುದು ಮುಖ್ಯ ಕಸುಬು.

ಇಲ್ಲಿನ ಮುಖ್ಯ ಖನಿಜಗಳು ಚಿನ್ನ, ತಾಮ್ರ, ಕಬ್ಬಿಣ, ಜಿಪ್ಸಂ, ಗಂಧಕ, ಪೆಟ್ರೋಲ್, ಉಪ್ಪು. ಆದರೆ ಇವನ್ನು ಹೆಚ್ಚಾಗಿ ಉತ್ಪಾದಿಸಲಾಗುತ್ತಿಲ್ಲ. ದೇಶದ ಒಟ್ಟು ರಾಷ್ಟ್ರೀಯ ವರಮಾನದಲ್ಲಿ 2%ರಷ್ಟು ಮಾತ್ರ ಗಣಿಗಳಿಂದ ಬರುತ್ತದೆ. ಈ ದೇಶದ ನದಿಗಳು 9,69,150 ಕಿಲೋ ವಾಟ್ ವಿದ್ಯುಚ್ಛಕ್ತಿ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆಯಾದರೂ ಕೇವಲ 33,000 ಕೀಲೋ ವಾಟ್‌ನ್ನು ಮಾತ್ರ ಉತ್ಪಾದಿಸಲಾಗುತ್ತಿದೆ. ಇಲ್ಲಿನ ಮುಖ್ಯ ಕೈಗಾರಿಕೆಗಳೆಂದರೆ ಹತ್ತಿಯ ಮತ್ತು ಉಣ್ಣೆಯ ಗಿರಣಿಗಳೂ, ರಬ್ಬರ್, ಕಾಗದ ಮತ್ತು ಚರ್ಮದ ಕಾರ್ಖಾನೆಗಳೂ ಇವೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 23ರಷ್ಟು ಜನ ಕೈಗಾರಿಕೆಗಳಿಂದ ಜೀವಿಸುತ್ತಾರೆ. ರಾಷ್ಟ್ರೀಯ ವರಮಾನದಲ್ಲಿ ಶೇ. 16 ಭಾಗ ಕೈಗಾರಿಕೆಯದು. ಇಲ್ಲಿಂದ ರಫ್ತಾಗುವ ವಸ್ತುಗಳು ಮುಖ್ಯವಾಗಿ ಬಾಳೆ, ಕಾಫಿ, ಕೋಕೋ ಮತ್ತು ಇತರ ವ್ಯವಸಾಯೋತ್ಪನ್ನಗಳು. ಯಂತ್ರೋಪಕರಣ, ವಾಹನ, ಔಷಧಿ, ಗೋದಿ ಮುಂತಾದವು ಮುಖ್ಯ ಆಮದು ವಸ್ತುಗಳು.

ಎಕ್ವಡಾರಿನ ಜನಸಂಖ್ಯೆ 14,306,876(2010). ಇವರಲ್ಲಿ ಶೇ. 29 ಜನ ಪಟ್ಟಣಗಳಲ್ಲಿ ವಾಸ ಮಾಡುತ್ತಾರೆ. ಶೇ. 41 ಮಂದಿ ಮೆಸ್ಟಿಜೋಗಳು (ಐರೋಪ್ಯ ಹಾಗೂ ಬಣ್ಣದ ಜನಗಳ ಬೆರಿಕೆ), ಶೇ. 39 ಭಾರತೀಯರು, ಶೇ. 10 ಅಮೆರಿಂಡಿಯನ್ನರು, ಶೇ. 3 ನೀಗ್ರೋಗಳು. ನೂರರಲ್ಲಿ ತೊಂಬತ್ನಾಲ್ಕು ಮಂದಿ ರೋಮನ್ ಕೆಥೊಲಿಕರು. ಸ್ಪ್ಯಾನಿಷ್ ಇಲ್ಲಿನ ಸರ್ಕಾರಿ ಭಾಷೆ. ಸೇ. 93 ಜನ ಈ ಭಾಷೆ ಆಡುತ್ತಾರೆ. ಯುರೋಪಿಯನ್ ದೇಶದವರು ಶೇ. 7.

ಈ ದೇಶದಲ್ಲಿ ಸುಮಾರು 700 ಮೈಲಿಗಳ ಕಿರು ಅಂತರ (ನ್ಯಾರೋ ಗೇಜ್) ರೈಲು ಮಾರ್ಗಗಳಿವೆ. ಗ್ವಾಯಾಕೀಲ್–ಕೀಟೊ ಮಾರ್ಗ ಮುಖ್ಯವಾದ್ದು ಇಲ್ಲಿನ ರೈಲ್ವೆಯನ್ನು 1944ರಲ್ಲಿ ರಾಷ್ಟ್ರೀಕರಣಗೊಳಿಸಲಾಯಿತು. ಇಲ್ಲಿ ಸುಮಾರು 12,872 ಕಿ. ಮೀ ರಸ್ತೆಗಳಿವೆ. ಪ್ಯಾನ್–ಅಮೆರಿಕನ್ ಹೆದ್ದಾರಿ ಮುಖ್ಯವಾದ್ದು. ಇದು ಕೊಲಂಬಿಯದಿಂದ ಪೆರುವಿಗೆ ಈ ದೇಶದ ಮೂಲಕ ಹಾದುಹೋಗುತ್ತದೆ.

ಎಕ್ವಡಾರಿನ ರಾಜಧಾನಿ ಕೀಟೊ. ಇದು ಸುಮಾರು 2750 ಮೀ ಎತ್ತರದಲ್ಲಿ, ಹೆಚ್ಚು ಕಡಿಮೆ ಭೂಮಧ್ಯರೇಖೆಯ ಮೇಲೆ ಇದೆ. ಜನಸಂಖ್ಯೆ–1,619,146. ಗ್ವಾಯಾಕೀಲ್ ಮುಖ್ಯ ವ್ಯಾಪಾರ ಮತ್ತು ಕೈಗಾರಿಕಾಕೇಂದ್ರ ; ಅಲ್ಲದೆ ದೇಶದ ದೊಡ್ಡ ರೇವುಪಟ್ಟಣ. ಜನಸಂಖ್ಯೆ 2,291,158 ಕ್ವೆಂಗ್ಕಾ, ಮಾಂಟಾ, ಪ್ವೆರ್ಟೊ ಬೊಲೀವಾರ್ ಇತರ ಪಟ್ಟಣಗಳು.

(ಎಸ್.ಎನ್.ಎ.ಆರ್.)

**ಇತಿಹಾಸ:** ಎಕ್ವಡಾರ್ ನೆಲವನ್ನು ಐರೋಪ್ಯರು ಮೊಟ್ಟಮೊದಲು ಕಂಡದ್ದು 1526ರಲ್ಲಿ. ಆ ವರ್ಷದಲ್ಲಿ ಕೆಲವರು ಸ್ಪೇನಿಗರು ಪನಾಮ ಭೂಕಂಠದ ಬಳಿಯಿಂದ ಹಡಗಿನಲ್ಲಿ ಕುಳಿತು ಭೂಮಧ್ಯರೇಖೆಯ ದಕ್ಷಿಣಕ್ಕೆ ಪಶ್ಚಿಮತೀರದ ಗುಂಟ ಸಾಗಿ ಎಕ್ವಡಾರಿನಲ್ಲಿ ಕಾಲಿಟ್ಟರು. ಆಗ ಇಲ್ಲಿ ಅಧಿಕ ಸಂಖ್ಯೆಯಲ್ಲಿದ್ದ ಇಂಡಿಯನ್ನರು ಇವರನ್ನು ಸ್ನೇಹದಿಂದ ಸ್ವಾಗತಿಸಿದರು. ಆಗಲೇ ಎಕ್ವಡಾರಿನ ಆಧುನಿಕ ಇತಿಹಾಸ ಆರಂಭವಾದದ್ದು.

ಅದಕ್ಕೂ ಹಿಂದೆ ಇಲ್ಲಿ ಅನೇಕ ಆದಿವಾಸಿಗಳು ವಾಸಿಸುತ್ತಿದ್ದು ತಮ್ಮ ಸಂಸ್ಕೃತಿಗಳನ್ನು ಬೆಳೆಸಿಕೊಂಡಿದ್ದರು. ಇಲ್ಲಿನ ಎತ್ತರ ಪ್ರದೇಶದಲ್ಲಿ ಪಾಸ್ಟಲ್, ಕಾರಾಸ್, ಪಾನ್‌ಜ಼ಾಲಿಯೊಸ್, ಪುರುಹಾಸ್, ಕಾನಾರಿಸಿ, ಪಾಲ್ಟಾಸ್‌ಗಳೆಂಬ ಆರು ಭಾಷಾ ಗುಂಪುಗಳ ಜನರಿದ್ದರು. ಈ ಭಾಷೆಗಳು ಈಗ ಇಲ್ಲ. ಆಗಲೂ ಒಂದು ಗುಂಪಿನ ಭಾಷೆ ಇನ್ನೊಂದು ಗುಂಪಿನವರಿಗೆ ಅರ್ಥವಾಗುತ್ತಿರಲಿಲ್ಲ. ಇವರ ನಂಬಿಕೆಗಳೂ ಪದ್ಧತಿಗಳೂ ಪರಸ್ಪರ ಭಿನ್ನವಾಗಿದ್ದುವು. ಇವರೆಲ್ಲರೂ ಸ್ಥೂಲವಾಗಿ ಆಂಡೀಸ್ ಪ್ರದೇಶದ ಸಂಸ್ಕೃತಿಯವರು. ಬೇಸಾಯ ಇವರ ಕಸುಬು. ಪಶುಪಾಲನೆಯನ್ನೂ ನಡೆಸುತ್ತಿದ್ದರು. ಚಿನ್ನ, ಬೆಳ್ಳಿ ಕೆಲಸ, ಮಡಕೆಯ ತಯಾರಿಕೆ ಇವು ಇವರಿಗೆ ಗೊತ್ತಿದ್ದುವು.

ಪಶ್ಚಿಮತೀರದ ಹಾಗೂ ಪೂರ್ವ ನಾಡಿನ ಜನ ಇನ್ನೂ ಹಿಂದಿನವರು. ತೀರ ವಾಸಿಗಳಿಗೆ ಮೀನುಗಾರಿಕೆ, ಬೇಟೆಗಾರಿಕೆ ಮುಖ್ಯ ಉದ್ಯಮ. ಮೇಲ್ನಾಡುಗಳ ಬಟ್ಟೆ ಚಿನ್ನ ಬೆಳ್ಳಿಗಳಿಗೆ ಇವರು ಇವನ್ನು ಮಾರುತ್ತಿದ್ದರು. ತೀರದ್ವೀಪಗಳು ಇವರ ದೃಷ್ಟಿಯಲ್ಲಿ ಪವಿತ್ರ. ತಮ್ಮ ನಾಯಕರು ಸತ್ತರೆ ಅವರ ಸಮಾಧಿಗೆ ಈ ದ್ವೀಪಗಳು ಮೀಸಲಾಗಿದ್ದುವು. ತೀರಪ್ರದೇಶದ ಮೂಲವಾಸಿಗಳು ಕ್ರಮೇಣ ಕಣ್ಮರೆಯಾದರು. ಅಳಿದುಳಿದವರು ನೀಗ್ರೊಗಳೊಂದಿಗೂ ಇತರರೊಂದಿಗೂ ಬೆರೆತುಹೋದರು. ಪೂರ್ವದ ಜನ ತಮ್ಮ ಪ್ರತ್ಯೇಕತೆಯ ಕಾರಣದಿಂದ ತಮ್ಮತನವನ್ನು ಉಳಿಸಿಕೊಂಡರು.

15ನೆಯ ಶತಮಾನದ ಆದಿಕಾಲದಲ್ಲಿ ಕಾರಾಸರು ಉತ್ತರದವರ ಮೇಲೆ ಆಕ್ರಮಣ ನಡೆಸಿ ಅವರ ನೆಲ ಗೆದ್ದರು. ಮುಂದೆ ಇದು ದಕ್ಷಿಣದ ಕಡೆಯೂ ವಿಸ್ತರಿಸಿತು. ಈ ರಾಜ್ಯ ಮುಂದೆ ಇಂಕ ಸಾಮ್ರಾಜ್ಯಕ್ಕೆ ಮಣಿದು ಅದರ ಭಾಗವಾಯಿತು. ಈ ಸಾಮ್ರಾಜ್ಯಕ್ಕೆ ಎಲ್ಲೆಲ್ಲಿ ಪ್ರತಿಭಟನೆಯಿತ್ತೊ ಅಲ್ಲಿನ ಜನರೆಲ್ಲ ಉಚ್ಚಾಟನೆಗೊಳಗಾದರು. ಈ ಸಾಮ್ರಾಜ್ಯದ ಕಾಲದಲ್ಲಿ ಎಕ್ವಡಾರಿನ ಜನಜೀವನ ತಕ್ಕಮಟ್ಟಿಗೆ ಬದಲಾಯಿತು. ಮುಂದೆ ಇಂಕಕ್ಕೂ ಕೊನೆಗಾಲ ತಪ್ಪಲಿಲ್ಲ. ಆಗಲೇ ಸ್ಪೇನಿಗರು ಇಲ್ಲಿಗೆ ಬಂದದ್ದು.

16ನೆಯ ಶತಮಾನದ ಪೂರ್ವಾರ್ಧದಲ್ಲಿ ಇವರು ಇಲ್ಲಿಗೆ ಅಧಿಕ ಸಂಖ್ಯೆಯಲ್ಲಿ ಬಂದು ಕ್ರಮಕ್ರಮವಾಗಿ ಇಂಕದ ಬಲ ಕುಂದಿಸಿದರು. ಮೊದಮೊದಲು ಇಲ್ಲಿನ ಚಿನ್ನ ಬೆಳ್ಳಿಗಳಲ್ಲಿ ಆಸಕ್ತರಾಗಿದ್ದ ಸ್ಪೇನಿಗರು ಮುಂದೆ ಇಲ್ಲಿ ನೆಲಸಿ ಬೇಸಾಯದಲ್ಲೂ ಆಸಕ್ತಿ ತಳೆದರು. ಈ ಶತಮಾನದ ಅಂತ್ಯಕಾಲದ ವೇಳೆಗೆ ನಾಲ್ಕಾರು ನಗರಗಳು ಬೆಳೆದವು. ಇವುಗಳಲ್ಲಿ ಕೀಟೋ ಒಂದು.

ವಲಸೆಗಾರರಿಗೂ ಸ್ಪೇನಿನ ಆಡಳಿತಗಾರರಿಗೂ ನಡುವೆ ಕ್ರಮೇಣ ವಿರಸಗಳು ಬೆಳೆದವು. ಸ್ಪೇನಿನಿಂದ ಪ್ರತ್ಯೇಕವಾಗಿ ಸ್ವತಂತ್ರವಾಗಬೇಕೆಂಬ ಇವರ ಧ್ವನಿ ಮೊಟ್ಟಮೊದಲು ಕೇಳಿಸಿದ್ದು 1809ರ ಆಗಸ್ಟ್ 10ರಂದು, ಕೀಟೋದಲ್ಲಿ, ಪ್ರಾರಂಭದಲ್ಲಿ ಸ್ಪೇನ್ ಆಡಳಿತಗಾರರು ಇದನ್ನು ನಿರ್ದಯೆಯಿಂದ ದಮನ ಮಾಡಿದರೂ ಕ್ರಮೇಣ ಇದು ಉಗ್ರವಾಯಿತು. ಪೆರು ಕೊಲಂಬಿಯಗಳಿಂದ ಸೈನ್ಯಗಳು ಇಲ್ಲಿಗೆ ನುಗ್ಗಿ ಇದನ್ನು ಹತೋಟಿಗೊಳಪಡಿಸಲು ಯತ್ನಿಸಿದವು.

1830ರಲ್ಲಿ ಇದು ಕೊಲಂಬಿಯದಿಂದ ಪ್ರತ್ಯೇಕಗೊಂಡಾಗಲೇ ಸ್ವತಂತ್ರ ಎಕ್ವಡಾರಿನ ಇತಿಹಾಸ ಆರಂಭ. ಆಗ ರಾಷ್ಟ್ರಕ್ಕೊಂದು ಸಂವಿಧಾನ ಬಂತು. ಜನರಲ್ ಹ್ವಾನ್ ಜೋಸ್ ಫ್ಲೋರೆಸ್ ಪ್ರಥಮ ಅಧ್ಯಕ್ಷನಾಗಿ ಚುನಾಯಿತನಾದ.

ಫ್ಲೋರೆಸ್ ಎಕ್ವಡಾರಿನ ಪ್ರಜೆಯಾಗಿರಲಿಲ್ಲ. ಆತ ವೆನಿಜ಼್ವೀಲದವ. ಅಧ್ಯಕ್ಷನಾಗಿರುವವನು ತನ್ನ ಅಧ್ಯಕ್ಷಾವಧಿಯ ಮುಂದಿನ ಅವಧಿಯಲ್ಲೂ ಅಧ್ಯಕ್ಷನಾಗಿರಬಾರದೆಂಬ ಸಂವಿಧಾನ ನಿಯಮವನ್ನೇ ಇವನು ಬದಲಾಯಿಸಿ ಅಧಿಕಾರದಲ್ಲಿದ್ದ. ಇದರಿಂದ ದೇಶದಲ್ಲಿ ಕ್ರಾಂತಿಯುಂಟಾಗಿ ಕೊನೆಗೆ ಈತ ಪದಚ್ಯುತನಾಗಿ ದೇಶಭ್ರಷ್ಟನಾದ.

ಅಲ್ಲಿಂದ ಮುಂದಿನ 15 ವರ್ಷಗಳು ಬಲು ಅಸ್ಥಿರತೆಯ ಕಾಲ. ಆ ಕಾಲದಲ್ಲಿ ಐವರು ಅಧ್ಯಕ್ಷರು ಬಂದು ಹೋದರು. ಪೆರು, ಕೊಲಂಬಿಯಗಳೊಳಗೆ ಯುದ್ಧ ಸಂಭವಿಸಿತು. ಕೊನೆಗೆ (1861ರಲ್ಲಿ) ಗೇಬ್ರಿಯಲ್ ಗಾರ್ಕೀಯ ಅಧ್ಯಕ್ಷನಾದ. ಈತ 15 ವರ್ಷ ಅಧಿಕಾರದಲ್ಲಿದ್ದ. ದೇಶದ ಅಭಿವೃದ್ಧಿಗೆ ಈತ ಬಹಳಮಟ್ಟಿಗೆ ಶ್ರಮಿಸಿದ. ಕೆಥೊಲಿಕ್ ಧರ್ಮದ ತಳಹದಿಯ ಮೇಲೆ ದೇಶವನ್ನು ಒಗ್ಗೂಡಿಸಿದ ಈತ 1875ರಲ್ಲಿ ಕೊಲೆಗೀಡಾದ.

ಮುಂದಿನ ಇಪ್ಪತ್ತು ವರ್ಷ ಮತ್ತೆ ಡೋಲಾಯಮಾನ ಪರಿಸ್ಥಿತಿಯಿತ್ತು. 1897ರಲ್ಲಿ ಅಲ್ಫಾರೊ ಅಧ್ಯಕ್ಷನಾದ ಮೇಲೆ ದೇಶದಲ್ಲಿ ಉದಾರವಾದದ ಚಳವಳಿ ಪ್ರಬಲವಾಯಿತು. ಸರ್ಕಾರಕ್ಕೂ ಕೆಥೊಲಿಕ್ ಮತಕ್ಕೂ ಇದ್ದ ಸಂಬಂಧವನ್ನು ಬೇರ್ಪಡಿಸಿ ಲೌಕಿಕ ರಾಜ್ಯದ ತಳಹದಿ ಹಾಕಿದ್ದು ಈತನ ಸಾಧನೆ. ಈತನೂ ಕೊಲೆಗೀಡಾದ.

ಮುಂದೆಯೂ ಎಕ್ವಡಾರಿನ ಇತಿಹಾಸ ಸುಸೂತ್ರವಾಗಿ ನಡೆಯಲಿಲ್ಲ. ಆ ವೇಳೆಗೆ ಕರಾವಳಿಯ ಆರ್ಥಿಕ ಪ್ರಾಬಲ್ಯ ಹೆಚ್ಚಿ ರಾಜಕೀಯದಲ್ಲೂ ಅಲ್ಲಿನವರ ಪ್ರಭಾವ ಬೆಳೆಯಿತು. ಆದರೂ ಸರ್ಕಾರ ಮಾತ್ರ ಉದ್ದಕ್ಕೂ ಅಭದ್ರವಾಗಿಯೇ ಸಾಗಿತ್ತು. ಎಕ್ವಡಾರಿನಲ್ಲಿ ಅಲ್ಲಿಂದೀಚೆಗೆ ಅನೇಕ ಬಾರಿ ಕ್ಷಿಪ್ರಕ್ರಾಂತಿಗಳು ಸಂಭವಿಸಿವೆ. ಒಬ್ಬರಾದ ಮೇಲೆ ಒಬ್ಬರಂತೆ ಸೇನಾಧಿಕಾರಿಗಳು ಆಡಳಿತಸೂತ್ರ ವಹಿಸಿಕೊಂಡಿದ್ದಾರೆ. ಅಲ್ಲಿನ ಭೂಕಂಪಗಳಂತೆ ಆಡಳಿತದಲ್ಲೂ ಕಂಪನಗಳು ಸಾಮಾನ್ಯ.

*

**ಎಕ್ಸ್‌ಕಿರಣಗಳು:** ವಿದ್ಯುತ್ಕಾಂತ ತರಂಗಗಳಲ್ಲಿ ಸೇರಿವೆ (ಎಕ್ಸ್‌ರೇಸ್). ಇವುಗಳಲ್ಲಿ ನಿಯತಕಾಲಿಕವಾಗಿ ಬದಲಾಯಿಸುವ ವಿದ್ಯುತ್ ಮತ್ತು ಕಾಂತಕ್ಷೇತ್ರಗಳು ಪರಸ್ಪರವಾಗಿಯೂ ಪ್ರಸಾರದಿಕ್ಕಿಗೂ ಲಂಬವಾಗಿವೆ. ಪರ್ಯಾಯನಾಮ ರಂಟ್‌ಜನ್ ಕಿರಣಗಳು, ನಿಸರ್ಗದಲ್ಲಿ ಇವು ಬೆಳಕು ಮತ್ತು ವಿದ್ಯುತ್ಕಾಂತ ತರಂಗಗಳ ಇತರ ರೂಪಗಳಿಗೆ ಸರ್ವಸಮವಾಗಿವೆ (ಅತಿರಕ್ತ, ಅತಿನೇರಿಳೆ, ಅತಿಸೂಕ್ಷ್ಮ ಇತ್ಯಾದಿ ತರಂಗಗಳು).

**ಐತಿಹಾಸಿಕ ಹಿನ್ನಲೆ:** ಜರ್ಮನಿಯ ವುರ್ಜ಼್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕನಾಗಿದ್ದ ವಿಲ್‌ಹೆಲ್ಮ್ ಕಾನ್ರಾಡ್ ರಂಟ್‌ಜನ್ (1845–1923) (**ನೋಡಿ– ವಿಲ್‌ಹೆಲ್ಮ್,-ಕಾನ್ರಾಡ್–ರಂಟ್‌ಜನ್**) 1895ರ ನವೆಂಬರ್ ತಿಂಗಳಲ್ಲಿ ಆಕಸ್ಮಿಕವಾಗಿ ಎಕ್ಸ್‌ಕಿರಣಗಳನ್ನು ಕಂಡುಹಿಡಿದ. ಕ್ಯಾಥೋಡ್ ಕಿರಣಗಳನ್ನು ಅಭ್ಯಸಿಸುತ್ತಿದ್ದ ಪ್ರಪಂಚದ ವಿವಿಧ ಪ್ರಯೋಗಶಾಲೆಗಳಲ್ಲಿ ಎಕ್ಸ್‌ಕಿರಣಗಳಿದ್ದರೂ ಅಲ್ಲಿನ ವಿಜ್ಞಾನಿಗಳ ಗಮನಕ್ಕೆ ಅವು ಬಂದಿರಲಿಲ್ಲ. ಆಗಿನ ಭೌತ ಪ್ರಯೋಗಶಾಲೆಗಳಲ್ಲಿ ತೀವ್ರ ಗತಿಯಿಂದ ಸಂಶೋಧನೆ ನಡೆಯುತ್ತಿದ್ದುದು ಕ್ಯಾಥೋಡ್ ಕಿರಣಗಳಲ್ಲಿ. ಅಂತೆಯೇ ರಂಟ್‌ಜನ್ 1804ನೆಯ ಜೂನ್ ಮಾಸ ಕಳೆದಮೇಲೆ ಪ್ರಯೋಗಶಾಲೆಯಲ್ಲಿ ಈ ದಿಶೆಯಲ್ಲಿ ಸಂಶೋಧನೆ ಪ್ರಾರಂಭಿಸಿದ. ಅತಿ ಕಡಿಮೆ ಒತ್ತಡದ ಅನಿಲವಿರುವ ಗೈಸ್ಲರ ಕೊಳವೆಯ ಮೂಲಕ ವಿದ್ಯುತ್ಪ್ರೇರಕ ಸುರುಳಿಯಿಂದ ಉತ್ಪತ್ತಿ ಮಾಡಲಾದ ಹೆಚ್ಚಿನ ವಿಭವಾಂತರದಲ್ಲಿ ವಿದ್ಯುತ್ ಹರಿಯುವಂತೆ ಮಾಡಿದರೆ ಋಣವಿದ್ಯುತ್ ಧ್ರುವದ ಕಡೆಯಿಂದ ಧನವಿದ್ಯುತ್ ಕಡೆಗೆ ಅತಿಸೂಕ್ಷ್ಮ ಕಣಗಳಾದ ಕ್ಯಾಥೋಡ್ ಕಿರಣಗಳು ಚಲಿಸುವ ವಿಷಯ ರಂಟ್‌ಜನ್ ಈ ರಂಗಕ್ಕೆ ಕಾಲಿಡುವ ಮುನ್ನವೇ ತಿಳಿದಿತ್ತು. (**ನೋಡಿ– ಅಧೋವಾಟ–ಕಿರಣಗಳು**). ಜರ್ಮನಿ ದೇಶದ ಜೆ.ಪ್ಲಕ್ಕರ್ 1858–62ರ ವರೆಗೂ ಸತತವಾಗಿ ಕ್ಯಾಥೋಡ್ ಕಿರಣಗಳ ಗುಣಗಳನ್ನು ತಿಳಿಯಲು ಪ್ರಯೋಗ ಮಾಡುತ್ತಿದ್ದ. ಈ ಕಿರಣಗಳಿಂದ ಗಾಜಿನ ಕೊಳವೆ ಹೊಳೆಯುವುದನ್ನು

(ಗ್ಲೋ) 1858ರಲ್ಲಿ ಅವನು ನೋಡಿದ. ಹೊಳಪಿನ ಸ್ಥಳವನ್ನು ಅಯಸ್ಕಾಂತದಿಂದ ಬದಲಾಯಿಸಬಹುದೆಂಬುದನ್ನೂ ತಿಳಿದ. ಕ್ಯಾಥೋಡ್ ಕಿರಣಗಳ ವಿವಿಧ ಭೌತಗುಣಗಳನ್ನು ತಿಳಿಯಲು ಹಿಲರ್ಫ್, ಗೋಲ್ಡ್‌ಸ್ಟೈಟಾವನ್, ವಿಲಿಯಂ ಕ್ರೂಕ್ಸ್, ಹರ್ಟ್ಸ್, ಲೆನಾರ್ಡ್ ಮುಂತಾದವರು ಮಾಡಿದ್ದ ಎಲ್ಲ ಪ್ರಯೋಗಗಳನ್ನೂ ರಂಟ್‌ಜನ್ ಪುನಃ ಮಾಡಲು ಪ್ರಾರಂಭಿಸಿದ. ಮೇಲಿನ ಪ್ರಯೋಗಗಳಿಂದ ಕ್ಯಾಥೋಡ್ ಕಿರಣಕೊಳವೆಯಲ್ಲಿ ವಿದ್ಯುತ್ ಹರಿಯುವಾಗ ಅದರ ಪಕ್ಕದಲ್ಲಿಟ್ಟಿರುವ ಬೇರಿಯಂ ಪ್ಲಾಟಿನೊಸಯನೈಡ್ ಲೇಪನವಿರುವ ತೆರೆ ಮಿನುಗುವುದೆಂಬ ಫಲಿತಾಂಶ ರಂಟ್‌ಜನ್ನನ ಗಮನವನ್ನು ಸೆಳೆಯಿತು. ಈ ಪ್ರಯೋಗ ಪುನಃ ಮಾಡಲು ಗೈಸ್ಲರ್ ಕೊಳವೆಯನ್ನು ಕತ್ತಲೆ ಕೋಣೆಯಲ್ಲಿರಿಸಿರುವ ಒಂದು ಕಪ್ಪು ಪೆಟ್ಟಿಗೆಯ ಒಳಗಡೆ ಇರಿಸಿದ. ಕೊಳವೆಯನ್ನು ವಿದ್ಯುತ್ಪ್ರೇರಕ ಸುರುಳಿಗೆ ಸೇರಿಸಿ ವಿದ್ಯುತ್ಪ್ರವಾಹ ವಾಗುವಂತೆ ಮಾಡಿದಾಗ ಕೊಳವೆಯಿಂದ ಸುಮಾರು ಎರಡು ಮೀಟರ್ ದೂರದಲ್ಲಿರುವ ಬೇರಿಯಂ ಪ್ಲಾಟಿನೊಸಯನೈಡ್ ಲೇಪನವಿರುವ ಕಾಗದದ ಹಾಳೆ ಮಿನುಗುವುದು ಕಂಡಿತು. ಇಷ್ಟುದೂರ ಕ್ಯಾಥೋಡ್ ಕಿರಣಗಳು ಚಲಿಸಲಾರವು. ಆದ್ದರಿಂದ ಕ್ಯಾಥೋಡ್ ಕಿರಣಗಳು ಗಾಜಿಗೆ ತಾಕಿ ಒಂದು ರೀತಿಯ ತೀಕ್ಷ್ಣ ಕಿರಣ ಉತ್ಪತ್ತಿಯಾಗುವುದೆಂದು ರಂಟ್‌ಜನ್ ಸಾಧಿಸಿದ. ಕಿರಣಗಳ ಸ್ವರೂಪ ತಿಳಿಯದಿದ್ದುದರಿಂದ ಅವನ್ನು ಎಕ್ಸ್‌ಕಿರಣಗಳೆಂದು ಹೆಸರಿತ್ತ. ಪೆಟ್ಟಿಗೆಯಿಂದ ಇನ್ನೂ ಹೊರತೆಗೆಯದೆ ಇರುವ ಛಾಯಾ ಚಿತ್ರಫಲಕಗಳು, ಕ್ಯಾಥೋಡ್ ಕಿರಣಕೊಳವೆಯಿರುವ ಕೊಠಡಿಯಲ್ಲಿಟ್ಟಾಗ ಮಸಕಾಗುವುದನ್ನು ಇಂಗ್ಲೆಂಡಿನ ವಿಲಿಯಂ ಕ್ರುಕ್ಸ್ ಮತ್ತು ಎಫ್.ಜೆರ್‌ವಿಸ್ ಸ್ಮಿತ್ ನೋಡಿದ್ದರು. ಇಂಥದೇ ಒಂದು ರೀತಿಯ ಪರಿಣಾಮವನ್ನು 1890ರಲ್ಲಿ ಅಮೆರಿಕದ ಗುಡ್‌ಸ್ಪೀಡ್ ಎಂಬುವನೂ ನೋಡಿದ್ದ. ಆದರೆ ಅವು ಎಕ್ಸ್‌ಕಿರಣಗಳಿಂದ ಉಂಟಾದ ಪರಿಣಾಮಗಳೆಂದು ಅವರಿಗಂದು ತಿಳಿಯಲಿಲ್ಲ. ಆದ್ದರಿಂದ ಎಕ್ಸ್‌ಕಿರಣ ತುಂಡಿಗೆ ಅಥವಾ ಇನ್ನಾವುದಾದರೂ ವಸ್ತುವಿನ ಮೇಲೆ ಬಡಿದು ನಿಲ್ಲುವಂತೆ ಮಾಡಿದರೆ ಹೊರಹೊಮ್ಮುವ ಎಕ್ಸ್‌ಕಿರಣಗಳ ಅಧ್ಯಯನ ತತ್‌ಕ್ಷಣವೇ ಪ್ರಪಂಚದ ಸುಮಾರು ಎಲ್ಲ ಪ್ರಯೋಗಶಾಲೆಗಳಲ್ಲಿಯೂ ಪ್ರಾರಂಭವಾಯಿತು. ಈ ಸಂಶೋಧನೆ ಎಷ್ಟು ಪರಿಣಾಮಕಾರಿ ಯಾಗಿತ್ತೆಂದರೆ ಕಂಡುಹಿಡಿದ ಒಂದು ವರ್ಷದ ಅವಧಿಯಲ್ಲೇ ಎಕ್ಸ್‌ಕಿರಣಗಳನ್ನು ಕುರಿತು 49 ಪುಸ್ತಕಗಳೂ ವಿಜ್ಞಾನ ನಿಯತಕಾಲಿಕೆಗಳಲ್ಲಿ 1000ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಲೇಖನಗಳೂ ಪ್ರಕಟವಾದುವು. ಎಕ್ಸ್‌ಕಿರಣ ಸಂಶೋಧನೆಯಿಂದ ಪರಮಾಣು ಭೌತಶಾಸ್ತ್ರದಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತು.

**ಎಕ್ಸ್‌ಕಿರಣಗಳ ಉತ್ಪಾದನೆ:** ರಂಟ್‌ಜನ್ ಉಪಯೋಗಿಸಿದ ಉಪಕರಣಗಳನ್ನು ಚಿತ್ರದಲ್ಲಿ ತೋರಿಸಿದೆ. B ಗಾಜಿನ ಕೊಳವೆ. ಇದರಲ್ಲಿದ್ದ ಗಾಳಿಯನ್ನೆಲ್ಲ ವಾಯುರೇಚಕದ ಸಹಾಯದಿಂದ ತೆಗೆದು ಅದರಲ್ಲಿರುವ ಒತ್ತಡ ಅತಿ ಕಡಿಮೆಯಾಗದಂತೆ ಮಾಡಿದೆ. A ಮತ್ತು C ಅನುಕ್ರಮವಾಗಿ ಆನೋಡ್ ಮತ್ತು ಕ್ಯಾಥೋಡ್ (ಧನ ಮತ್ತು ಋಣ ವಿದ್ಯುತ್ ಧ್ರುವಗಳು).




**ಚಿತ್ರ 1**

ಇವುಗಳ ನಡುವೆ 40,000 ವೋಲ್ಟ್ ವಿಭವಾಂತರವನ್ನುಂಟುಮಾಡಿ ಕೊಳವೆಯಲ್ಲಿ ವಿದ್ಯುದ್ವಿಸರ್ಜನೆಯಾಗುವಂತೆ ಮಾಡಿದಾಗ ಕ್ಯಾಥೋಡಿನಿಂದ ಹೊರಬಂದ ಕ್ಯಾಥೋಡ್ ಕಿರಣಗಳು ಕೊಳವೆಯ ಅಗಲವಾದ ಪ್ರದೇಶದ ಮೇಲೆ ಬಿದ್ದು ವಿಶೇಷವಾದ ಹೊಳಪನ್ನುಂಟು ಮಾಡುವುದರ ಜೊತೆಗೆ ಎಕ್ಸ್‌ಕಿರಣಗಳ ಉತ್ಪಾದನೆಗೆ ಕಾರಣವಾಯಿತು. ಯಾವ ವಸ್ತುವೇ ಆಗಲಿ ಅದರ ಮೇಲೆ ಕ್ಯಾಥೋಡ್ ಕಿರಣಗಳು ಬಿದ್ದಾಗ ಎಕ್ಸ್‌ಕಿರಣಗಳು ಉತ್ಪತ್ತಿಯಾಗುವು ದೆಂಬ ಅಂಶ ಹೇಗೆ ವ್ಯಕ್ತವಾಗುತ್ತದೆ. ವಸ್ತು ಹೆಚ್ಚಿನ ಪರಮಾಣು ಭಾರವುಳ್ಳದ್ದಾಗಿದ್ದ ಪಕ್ಷದಲ್ಲಿ ಉತ್ಪತ್ತಿಯಾಗುವ ಎಕ್ಸ್‌ಕಿರಣಗಳ ತೀಕ್ಷ್ಣತೆಯೂ ಹೆಚ್ಚಾಗಿರುತ್ತದೆ.

ಇದೇ ರೀತಿಯಲ್ಲಿ ಸ್ವಲ್ಪ ಬದಲಾವಣೆಗಳನ್ನೊಳಗೊಂಡ ಅಲ್ಪ ಒತ್ತಡ ಅನಿಲಪೂರಿತ (ಲೋಪ್ರೆಶ್ಯರ್ ಗ್ಯಾಸ್ ಫಿಲ್ಡ್) ವಿದ್ಯುದ್ವಿಸರ್ಜಕ ಕೊಳವೆಯನ್ನು ತಯಾರಿಸಲಾಯಿತು. ಕ್ಯಾಥೋಡನ್ನು ನಿಮ್ನವಾಗಿರುವಂತೆ (ಕಾನ್‌ಕೇವ್ ಕ್ಯಾಥೋಡ್) ಮಾಡಿದಾಗ ಅದರಿಂದ ಹೊರಬಂದ ಕ್ಯಾಥೋಡ್ ಕಿರಣಗಳು ಒಂದು ಬಿಂದುವಿನಲ್ಲಿ ಕೇಂದ್ರೀಕೃತವಾಗಲು ಸಹಾಯವಾಗುತ್ತದೆ. ಈ ಬಿಂದು ಒಂದು ಗುರಿಯ (ಟಾರ್ಗೆಟ್) ಮೇಲಿರುವಂತೆ ಅಳವಡಿಸಿ ಎಕ್ಸ್‌ಕಿರಣಗಳನ್ನು ಉತ್ಪಾದಿಸಬಹುದು. ಗುರಿಯ ಮೇಲೆ ಕ್ಯಾಥೋಡ್ ಕಿರಣಗಳು ಕೇಂದ್ರೀಕೃತವಾದಾಗ ಅಲ್ಲಿ ಉಷ್ಣತೆ ಏರಿ ಲೋಹ ಕರಗಬಹುದು. ಆದ್ದರಿಂದ ಅತಿ ಹೆಚ್ಚಿನ ಕರಗುವ ಬಿಂದು ಇರುವ ಟಂಗ್‌ಸ್ಟನ್ ಅಥವಾ ಪ್ಲಾಟಿನಂ ಲೋಹದಿಂದ ಮಾಡಿದ ಗುರಿಯನ್ನು ಹೆಚ್ಚು ತೂಕವುಳ್ಳ ತಾಮ್ರದ ತುಂಡಿನಲ್ಲಿ (ಬ್ಲಾಕ್) ಸರಿಯಾದ ಸ್ಥಾನದಲ್ಲಿಡಬೇಕು.




**ಚಿತ್ರ 2**

ಇದರಿಂದ ಉತ್ಪತ್ತಿಯಾದ ಉಷ್ಣ ಚದರಲು ಸಹಾಯವಾಗುತ್ತದೆ. ತಾಮ್ರದ ತುಂಡನ್ನು ಆಂಟಿಕ್ಯಾಥೋಡ್ ಎಂದು ಕರೆಯುವುದುಂಟು. ಆನೋಡನ್ನು ಕೊಳವೆಯ ಒಂದು ಭಾಗದಲ್ಲಿ ಅಳವಡಿಸಿ ಆಂಟಿಕ್ಯಾಥೋಡಿಗೆ ತಂತಿಯ ಮೂಲಕ ಸೇರಿಸಬೇಕು. ಆನೋಡ್ ಮತ್ತು ಕ್ಯಾಥೋಡುಗಳ ನಡುವೆ ಪ್ರಯೋಗ ಮಾಡುವ ವಿಭವಾಂತರ ಕೊಳವೆಯಲ್ಲಿರುವ




**ಚಿತ್ರ 3 D ತಾಮ್ರದ ಸರಳು T ಗುರಿ F ಟಂಗ್‌ಸ್ಟನ್ ತಂತಿ C ಕ್ಯಾಥೋಡ್**

ಅನಿಲದ ಒತ್ತಡವನ್ನು ಅವಲಂಬಿಸುತ್ತದೆ. ಅನಿಲದ ಒತ್ತಡ ಕಡಿಮೆ ಇದ್ದಾಗ ಎಕ್ಸ್‌ಕಿರಣಗಳು ಉತ್ಪತ್ತಿಯಾಗಬೇಕಾದರೆ ಹೆಚ್ಚಿನ ವಿಭವಾಂತರ ಬೇಕಾಗುವುದು. ಈ ರೀತಿಯಲ್ಲಿ ಉತ್ಪತ್ತಿಯಾದ ಎಕ್ಸ್‌ಕಿರಣಗಳನ್ನು ಗಡಸು ಎಕ್ಸ್‌ಕಿರಣಗಳೆಂದು (ಹಾರ್ಡ್ ಎಕ್ಸ್‌ರೇಸ್) ಎಂದು ಕರೆಯುವರು. ಒತ್ತಡ ಕಡಿಮೆಯಿಲ್ಲದಿದ್ದಾಗ ಎಕ್ಸ್‌ಕಿರಣಗಳ ಉತ್ಪಾದನೆಗೆ ಬೇಕಾಗುವ ವಿಭವಾಂತರ ಕಡಿಮೆ ಪ್ರಮಾಣವುಳ್ಳದ್ದು. ಈ ಕಿರಣಗಳನ್ನು ಮೃದು ಎಕ್ಸ್‌ಕಿರಣಗಳೆಂದು (ಸಾಫ್ಟ್ ಎಕ್ಸ್‌ರೇಸ್) ಕರೆಯುವರು. ಇವುಗಳ ಶಕ್ತಿಯೂ ಕಡಿಮೆ. ಕೊಳವೆಯನ್ನು ಉಪಯೋಗಿಸುತ್ತ ಹೋದಂತೆ ಅನಿಲದ ಒತ್ತಡ ಕಡಿಮೆಯಾಗುತ್ತ ಕೊನೆಗೆ ಕಿರಣ ಕಠಿಣವಾಗುತ್ತದೆ. P ಎಂಬ ಪಾರ್ಶ್ವ ಕೊಳವೆಯಲ್ಲಿ ಕಲ್ನಾರು ಅಥವಾ ಹೈಡ್ರೊಜನಿನಿಂದ ಕೂಡಿದ ಪೆಲೇಡಿಯಂ ವಸ್ತುವನ್ನಿಟ್ಟು ಕ್ಯಾಥೋಡಿನೊಡನೆ ಸಂಪರ್ಕ ಹೊಂದುವಂತೆ ಮಾಡಿದಾಗ ಎಕ್ಸ್‌ಕಿರಣ ಕೊಳವೆ ಮೃದುವಾಗುತ್ತದೆ.

ಈ ತೊಡಕನ್ನು ನಿವಾರಿಸಲು ಕೂಲಿಡ್ಜ್ ಎಂಬ ವಿಜ್ಞಾನಿ ಮತ್ತೊಂದು ಎಕ್ಸ್‌ಕಿರಣ ಕೊಳವೆಯನ್ನು ರಚಿಸಿದ. F ಟಂಗ್‌ಸ್ಟನ್ ತಂತಿ. ಇದರ ತುದಿಗಳನ್ನು B ವಿದ್ಯುತ್‌ಕೋಶದ ಧ್ರುವಗಳಿಗೆ ಸೇರಿಸಿದೆ. T ಗುರಿ, ಇದನ್ನು ತಾಮ್ರದ ತುಂಡಿನಲ್ಲಿ ಅಳವಡಿಸಿದೆ. ತುಂಡಿನ ಸ್ವಲ್ಪ ಭಾಗ ಕೊಳವೆಯ ಹೊರಗಿರಬೇಕು. ಕೊಳವೆಯ ಒಳಭಾಗ ಶೂನ್ಯಪ್ರದೇಶವಾಗಿರಬೇಕು. ಟಂಗಸ್ಟನ್ ತಂತಿಯ ಮೂಲಕ ವಿದ್ಯುತ್ ಹರಿದಾಗ ಎಲೆಕ್ಟ್ರಾನುಗಳು ಹೊರಬೀಳುತ್ತವೆ. ಇವು ಗುರಿಯ ಮೇಲೆ ಬಿದ್ದಾಗ ಎಕ್ಸ್‌ಕಿರಣಗಳು ಉತ್ಪತ್ತಿಯಾಗುತ್ತದೆ. ತಾಮ್ರದ ತುಂಡಿನ ಸುತ್ತಲೂ ತಣ್ಣೀರು ಹರಿಯುವಂತೆ ಅಳವಡಿಸಿ ವಿದ್ಯುತ್‌ಕಣಗಳು ಗುರಿಯ ಮೇಲೆ ಬಿದ್ದಾಗ ಉಂಟಾಗುವ ಉಷ್ಣವನ್ನು ಹೀರುವಂತೆ ಮಾಡಿರುತ್ತಾರೆ. ಈ ಎಕ್ಸ್‌ಕಿರಣಗಳು ಕೊಳವೆಯನ್ನು ಉದ್ದೀಪಿಸಲು (ಎಕ್ಸೈಟ್) ಆವಶ್ಯಕವಾದ ವಿಭವಾಂತರವನ್ನು ವೋಲ್ಟೇಜ್ ವರ್ಧಿಸುವ ಪರಿವರ್ತಕದಿಂದ (ಸ್ಟೆಪ್ ಅಪ್ ಟ್ರಾನ್ಸ್‌ಫಾರ್ಮರ್) ಉಂಟುಮಾಡುತ್ತಾರೆ.

**ಎಕ್ಸ್‌ಕಿರಣಗಳ ಗುಣ ಲಕ್ಷಣಗಳು:** 1. ಇವು ಬೆಳಕಿನಂತೆ ವಿದ್ಯುತ್ಕಾಂತ ತರಂಗಗಳ ಗುಂಪಿಗೆ ಸೇರಿವೆ. 2. ಎಕ್ಸ್‌ಕಿರಣಗಳ ತರಂಗಾಂತರ (ವೇವ್ ಲೆಂತ್) ಅತಿಹ್ರಸ್ವ ($10^{-8}$ ಅಥವಾ ಆಂಗ್‌ಸ್ಟ್ರಾಮ್ ಏಕಮಾನ). ಆದ್ದರಿಂದ ಇವಕ್ಕೆ ಅಧಿಕ ಶಕ್ತಿ ಇದೆ. 3. ವಿದ್ಯುತ್ ಕ್ಷೇತ್ರದಲ್ಲಾಗಲೀ ಅಯಸ್ಕಾಂತ ಕ್ಷೇತ್ರದಲ್ಲಾಗಲೀ ಇವು ಬಾಗುವುದಿಲ್ಲ. ಇದರಿಂದ ಎಕ್ಸ್ ಕಿರಣಗಳು ಧ್ರುವೀಕರಣ (ಪೋಲರೈಸೇಷನ್) ಮತ್ತು ನಮನ (ಡಿಫ್ರಾಕ್ಷನ್)ಗೊಳ್ಳುತ್ತವೆ. ಎಕ್ಸ್‌ಕಿರಣಗಳ ಅತಿ ಮುಖ್ಯವಾದ ಗುಣಗಳೆಂದರೆ ತೀವ್ರತೆ (ಇಂಟೆನ್ಸಿಟಿ) ಮತ್ತು ಭೇದನ ಸಾಮರ್ಥ್ಯ (ಪೆನೆಟ್ರೇಟಿಂಗ್ ಪವರ್). ಎಕ್ಸ್‌ಕಿರಣಗಳ ತೀವ್ರತೆಯನ್ನು ಅಯಾನೀಕರಣ

ವಿಧಾನದಿಂದ ಗೊತ್ತುಪಡಿಸಬಹುದು. ಎಕ್ಸ್‌ಕಿರಣಗಳು ಅನಿಲಗಳ ಮೂಲಕ ಹಾದುಹೋಗುವಾಗ ಅನಿಲದ ಅಣುಗಳನ್ನು ಧನ ಮತ್ತು ಋಣವಿದ್ಯುತ್ ಅಯಾನುಗಳನ್ನಾಗಿ ವಿಭಜಿಸುತ್ತವೆ. ಇದಕ್ಕೆ ಅಯಾನೀಕರಣವೆಂದು ಹೆಸರು. ಚಿತ್ರದಲ್ಲಿ ತೋರಿಸಿರುವಂತೆ ಹಿತ್ತಾಳೆಯ ಪೆಟ್ಟಿಗೆಯ




ಚಿತ್ರ 4. T ಗುರಿ, W ಅಲ್ಯೂಮಿನಿಯಂ ಹಾಳೆ, I ಅಯಾನೀಕರಣ ಮಂದಿರ, R ತಂತಿ, D ಬಿರಡೆ E ವಿದ್ಯುನ್ಮಾಪಕ, B ವಿದ್ಯುತ್ ಕೋಶ

ಒಂದು ಭಾಗವನ್ನು ಅಲ್ಯೂಮಿನಿಯಂ ಲೋಹದ ತೆಳುವಾದ ಹಾಳೆಯಿಂದ ಮುಚ್ಚಿದೆ. ಮತ್ತೊಂದು ಭಾಗದಲ್ಲಿ ವಿದ್ಯುತ್‌ನಿರೋಧಕ ಬಿರಡೆಯ (ಇನ್ಸುಲೇಟೆಡ್ ಕಾರ್ಕ್) ಮೂಲಕ ಒಂದು ತಂತಿಯನ್ನು ತೂರಿಸಿ ಅದನ್ನು ವಿದ್ಯುನ್ಮಾಪಕಕ್ಕೆ (ಎಲೆಕ್ಟ್ರೋಮೀಟರ್ E) ಸೇರಿಸಿದೆ. 100 ವೋಲ್ಟ್ ವಿಭವಾಂತರವನ್ನುಂಟುಮಾಡಿ ಅಲ್ಯೂಮಿನಿಯಂ ಹಾಳೆಯ ಮೂಲಕ ಎಕ್ಸ್‌ಕಿರಣಗಳನ್ನು ಅಯಾನೀಕರಣ ಮಂದಿರದೊಳಗೆ (I) ಹಾಯಿಸಿದಾಗ ಅದರಲ್ಲಿರುವ ಅಣುಗಳು ಧನ ಮತ್ತು ಋಣ ವಿದ್ಯುತ್ ಅಯಾನುಗಳಾಗಿ ವಿಭಜನೆಗೊಳ್ಳುತ್ತವೆ. ಧನ ವಿದ್ಯುತ್ ಅಯಾನುಗಳು ಋಣವಿದ್ಯುತ್ ಹೊಂದಿರುವ ತಂತಿಯ ಕಡೆಗೆ ಸಾಗುತ್ತವೆ.




ಚಿತ್ರ 5

ಅಯಾನೀಕರಣ ವಿದ್ಯುತ್ ಪ್ರಮಾಣವನ್ನು (ಅಯನೈಸೇಷನ್ ಕರೆಂಟ್) ವಿದ್ಯುನ್ಮಾಪಕದಿಂದ ಅಳೆಯಬಹುದು. ವಿದ್ಯುತ್ ಧ್ರುವಗಳ ನಡುವೆ ಪ್ರಯೋಗ ಮಾಡುವ ವಿಭವಾಂತರ ಪ್ರಮಾಣವನ್ನು x–ಅಕ್ಷದ ಮೇಲೂ ಅಯಾನೀಕರಣ ವಿದ್ಯುತ್ ಪ್ರಮಾಣವನ್ನು y– ಅಕ್ಷದ ಮೇಲೂ ಸೂಚಿಸಿ ಚಿತ್ರ ರಚಿಸಿದರೆ ಚಿತ್ರ 5ರಲ್ಲಿ ತೋರಿಸಿರುವಂತೆ ರೇಖಾಚಿತ್ರ ಬರುತ್ತದೆ.

ವಿಭವಾಂತರ ಪ್ರಮಾಣ ಹೆಚ್ಚಿದಂತೆಲ್ಲ ಅಯಾನೀಕರಣ ವಿದ್ಯುತ್ ಹೆಚ್ಚುತ್ತ ಒಂದು ಪರ್ಯಾಪ್ತ ಮಿತಿಯನ್ನು (ಸ್ಯಾಚುರೇಷನ್ ಲಿಮಿಟ್) ಪಡೆಯುತ್ತದೆ. ಇದರಿಂದ ಅಯಾನೀಕರಣ ಮಂದಿರದಲ್ಲಿ ಉಂಟಾಗುವ ವಿದ್ಯುತ್ ಅಯಾನುಗಳ ಸಂಖ್ಯೆ ಎಕ್ಸ್‌ಕಿರಣಗಳ ತೀಕ್ಷ್ಣತೆಯನ್ನು ಅವಲಂಬಿಸುತ್ತದೆ ಎಂಬ ಅಂಶ ವ್ಯಕ್ತವಾಗುತ್ತದೆ.

**ವಸ್ತುಗಳ ಎಕ್ಸ್‌ಕಿರಣಗಳನ್ನು ಹೀರುವ ಸಾಮರ್ಥ್ಯ:** (ಅಬ್–ಸಾರ್ಪ್ಷಿವ್ ಪವರ್): ಇದು ಎಕ್ಸ್‌ಕಿರಣ ಕೊಳವೆಯಲ್ಲಿ ಉಪಯೋಗಿಸುವ ವಿಭವಾಂತರ ಪ್ರಮಾಣ ಮತ್ತು ಹೀರಿಕೊಳ್ಳುವ ವಸ್ತುವಿನ ಪರಮಾಣು ಸಂಖ್ಯೆಯನ್ನು ಅವಲಂಬಿಸಿದೆ. ಹೆಚ್ಚಿನ ಪರಮಾಣು ಸಂಖ್ಯೆಯುಳ್ಳ ವಸ್ತುವಿನ ಮೂಲಕ ಎಕ್ಸ್‌ಕಿರಣಗಳು ಹಾದುಹೋಗುವ ದೂರ ಕಡಿಮೆ. ವಸ್ತುಗಳ ಮೂಲಕ ಎಕ್ಸ್‌ಕಿರಣಗಳು ಹಾದುಹೋದಾಗ ದ್ವಿತೀಯ ವರ್ಗದ (ಸೆಕೆಂಡರಿ) ಎಕ್ಸ್‌ಕಿರಣಗಳು ಮತ್ತು ದ್ವಿತೀಯ ವರ್ಗದ ಎಲೆಕ್ಟ್ರಾನುಗಳು ಉತ್ಪತ್ತಿಯಾಗುವುವು. ಎಕ್ಸ್‌ಕಿರಣಗಳ ತೀವ್ರತೆ ಪ್ರಥಮವರ್ಗದ ಎಕ್ಸ್‌ಕಿರಣಗಳ ತೀವ್ರತೆಗಿಂತ ಕಡಿಮೆಯಾಗಿರುತ್ತದೆ. ದ್ವಿತೀಯ ವರ್ಗದ ಎಕ್ಸ್‌ಕಿರಣಗಳಲ್ಲಿ ಎರಡು ವಿಧ : 1. ಚದುರಿದ ಎಕ್ಸ್‌ಕಿರಣಗಳು (ಸ್ಕ್ಯಾಟರ್ಡ್ ಎಕ್ಸ್‌ರೇಸ್) 2. ಪ್ರತಿದೀಪ್ತಿ ಕಿರಣಗಳು (ಫ್ಲೂರಸೆಂಟ್ ರೇಸ್). ಚದುರಿದ ಎಕ್ಸ್‌ಕಿರಣಗಳ ತರಂಗಾಂತರ ಪ್ರಥಮ ವರ್ಗದ ಕಿರಣಗಳ ತರಂಗಾಂತರವನ್ನು ಅವಲಂಬಿಸಿದೆ. ಆದರೆ ಇದರ ಉತ್ಪತ್ತಿಗೆ ಕಾರಣವಾದ ವಸ್ತುವನ್ನು ಅವಲಂಬಿಸಿರುವುದಿಲ್ಲ. ಪ್ರತಿದೀಪ್ತಗಳು ಪ್ರಥಮವರ್ಗದ ಕಿರಣಗಳ ತರಂಗಾಂತರವನ್ನವಲಂಬಿಸಿದ ವಸ್ತುವನ್ನೇ ಅವಲಂಬಿಸುತ್ತವೆ. ಇವು ಆ ವಸ್ತುವಿನ ವೈಶಿಷ್ಟ್ಯವನ್ನು ಸೂಚಿಸುತ್ತವೆ.

ಎಕ್ಸ್‌ಕಿರಣಗಳನ್ನು ವಿದ್ಯುತ್ಕಾಂತ ತರಂಗಗಳೆಂದು ಭಾವಿಸಿದರೆ ಅಂಥ ತರಂಗಗಳು ವಸ್ತುವಿನ ಮೇಲೆ ಬಿದ್ದಾಗ ಅದರ ಪರಮಾಣುಗಳು ಎಲೆಕ್ಟ್ರಾನುಗಳಲ್ಲಿ ವೇಗೋತ್ಕರ್ಷವನ್ನುಂಟು ಮಾಡುತ್ತವೆ. ವಿದ್ಯುತ್ ಅಂಶವುಳ್ಳ ಈ ಕಣ ತರಂಗದ ವಿದ್ಯುತ್‌ಕ್ಷೇತ್ರದಲ್ಲಿ ವಿಕಿರಣ (ರೇಡಿಯೇಟ್) ಸೂಸಬೇಕು. ಎಲೆಕ್ಟ್ರಾನುಗಳು ಪ್ರಥಮ ವರ್ಗದ ಕಿರಣಗಳ ಪ್ರಭಾವದಲ್ಲಿ ಶಕ್ತಿ ಪ್ರಸಾರ ಮಾಡಬೇಕು. ಇದೇ ಚದರಿದ ಕಿರಣಗಳ ಉತ್ಪತ್ತಿಗೆ ಕಾರಣವಾಗುವುದು. ಎಕ್ಸ್‌ಕಿರಣಗಳು ವಸ್ತುಗಳ ಮೂಲಕ ಹಾದುಹೋದಾಗ ಅದರ ಶಕ್ತಿಯ ಸ್ವಲ್ಪಭಾಗ ವಸ್ತುವಿನಿಂದ ಎಲೆಕ್ಟ್ರಾನುಗಳನ್ನು ಹೊರದೂಡಲು ವ್ಯಯವಾಗುತ್ತದೆ. ಎಲೆಕ್ಟ್ರಾನನ್ನು ಕಳೆದುಕೊಂಡ ಪರಮಾಣು ಅಯಾನೀಕರಣ ಸ್ಥಿತಿಯಲ್ಲಿ ಇರುತ್ತದೆ. ಅದು ಪುನಃ ಮೊದಲಿನ ಸ್ಥಿತಿಗೆ ಬರುವ ಪ್ರಯತ್ನದಲ್ಲಿ ಶಕ್ತಿಯನ್ನು ಪ್ರಸರಿಸುತ್ತದೆ. ಇದೇ ದೃಗ್ಗೋಚರಕಾರೀ ಕಿರಣಗಳ ಉತ್ಪತ್ತಿಗೆ ಕಾರಣ.

ದ್ಯುತಿ ವಿದ್ಯುತ್ ಪರಿಣಾಮದ (ಫೋಟೋ ಎಲೆಕ್ಟ್ರಿಕ್ ಎಫೆಕ್ಟ್) ಪ್ರಕಾರ ಬೆಳಕು ಕ್ಷಾರೀಯ ಲೋಹಗಳ (ಆಲ್ಕಲಿ ಮೇಟಲ್ಸ್) ಮೇಲೆ ಬಿದ್ದಾಗ ಎಲೆಕ್ಟ್ರಾನುಗಳು ಹೊರ ಬೀಳುತ್ತವೆ. ಇದೇ ರೀತಿ ಎಕ್ಸ್‌ಕಿರಣಗಳೂ ಕ್ಷಾರೀಯ ಲೋಹಗಳ ಮೇಲೆ ಬಿದ್ದಾಗ ಎಲೆಕ್ಟ್ರಾನುಗಳು ಉತ್ಪತ್ತಿಯಾಗುವುವು. ಬೆಳಕಿನಂತೆ ಎಕ್ಸ್‌ಕಿರಣಗಳನ್ನು ಫೋಟಾನುಗಳು (ಶಕ್ತಿಕಣಗಳು) ಎಂದು ಭಾವಿಸಬಹುದು. v ಕಂಪನ ಸಂಖ್ಯೆಯನ್ನು ಸೂಚಿಸಿದರೆ h ಪ್ಲಾಂಕನ ನಿಯತಾಂಕವಾದರೆ ಕಣದ ಶಕ್ತಿ hv. ಅಂದರೆ ಎಕ್ಸ್‌ಕಿರಣಗಳು ಅವುಗಳ ತರಂಗಾಂತರಕ್ಕೆ ಅನುಗುಣವಾದ ಶಕ್ತಿಯನ್ನು ಹೊಂದಿ ಕಣಗಳಂತೆ ವರ್ತಿಸುತ್ತವೆ. ಎಕ್ಸ್‌ಕಿರಣಗಳು ವಸ್ತುವಿನ ಮೂಲಕ ಹಾದುಹೋಗುವಾಗ ಅದರ ಶಕ್ತಿಯ ಸ್ವಲ್ಪಭಾಗ ಎಲೆಕ್ಟ್ರಾನುಗಳನ್ನು ಹೊರಸೂಸುವುದರಲ್ಲಿ ವ್ಯಯವಾಗಿ ಬೇರೆ ದಿಕ್ಕಿನಲ್ಲಿ ಚದರಿಸಲ್ಪಡುತ್ತದೆ. ಚದರಿದ ಎಕ್ಸ್‌ಕಿರಣಗಳ ಕಂಪನ ಸಂಖ್ಯೆ ಅಥವಾ ತರಂಗಾಂತರ ಬದಲಾವಣೆಗೊಂಡಿರುತ್ತದೆ. ಪ್ರಧಾನ ಪ್ರೋಟಾನಿನ ತರಂಗಾಂತರವನ್ನಾಗಲಿ, ಅದು ಹಾದುಹೋಗುವ ವಸ್ತುವನ್ನಾಗಲೀ ಅವಲಂಬಿಸುವುದಿಲ್ಲ. ಒಟ್ಟಿನಲ್ಲಿ ಎಕ್ಸ್‌ಕಿರಣಗಳು ತರಂಗ ಮತ್ತು ಕಣ ಎಂಬ ಎರಡು ರೂಪದಲ್ಲಿವೆಯೆಂದು ಪರಿಗಣಿಸಬಹುದು.

**ವಿಶಿಷ್ಟ ಎಕ್ಸ್‌ಕಿರಣಗಳು:** ಯಾವುದೇ ಲಕ್ಷ್ಯವಸ್ತುಗಳಿಂದ ಉಂಟಾದ ಎಕ್ಸ್‌ಕಿರಣಗಳ ರೋಹಿತವನ್ನು ಬ್ರ್ಯಾಗ್‌ರೋಹಿತಮಾಪಕದಲ್ಲಿ ಪರೀಕ್ಷಿಸಿದಾಗ ಎರಡು ಮುಖ್ಯಾಂಶಗಳು



ಚಿತ್ರ 1

ಹೊರಬೀಳುತ್ತವೆ. $\theta$ ಹೆಚ್ಚಾದಂತೆ ಅಂದರೆ ೕ ಹೆಚ್ಚಾದಂತೆ ಎಕ್ಸ್‌ಕಿರಣಗಳ ತೀಕ್ಷ್ಣತೆ ಕಡಿಮೆಯಾಗುತ್ತದೆ. ಆದರೆ ಮಧ್ಯೆ ಕೆಲವು ಶಿಖರಗಳು (ಪೀಕ್ಸ್) ಕಾಣುತ್ತವೆ.

ಅಂದರೆ ಈ ರೋಹಿತ ಸಂತತವಾಗಿದ್ದು ಅದರ ಮೇಲೆ ಕೆಲವು ೕಗಳಲ್ಲಿ ಮಾತ್ರ ಹೆಚ್ಚು ತೀಕ್ಷಣತೆ ಇರುತ್ತದೆ. ಈ ೕ ಗಳಿರುವ ಕಿರಣಗಳ ಹೆಸರು ವಿಶಿಷ್ಟ ಎಕ್ಸ್‌ಕಿರಣಗಳು (ಕ್ಯಾರೆಕ್ಟರಿಸ್ಟಿಕ್ ಎಕ್ಸ್‌ರೇಸ್). ಇವು ಉಂಟಾಗುವ ಬಗೆ ಹೀಗಿದೆ. ಪರಮಾಣುವಿನ ಬೀಜದ (ನ್ಯೂಕ್ಲಿಯಸ್) ಸುತ್ತ ಎಲೆಕ್ಟ್ರಾನುಗಳು ಸುತ್ತುತ್ತಿವೆ. ಇವು ಕೆಲವು ಕವಚಗಳಲ್ಲಿ (ಶೆಲ್ಸ್) ಮಾತ್ರ ಸುತ್ತಲು ಸಾಧ್ಯವಿದೆ. ಬೀಜಕ್ಕೆ ಬಲು ಹತ್ತಿರವಾಗಿರುವ ಕವಚದ ಹೆಸರು K ಕವಚ. ಅನಂತರದ್ದು ಅನುಕ್ರಮವಾಗಿ L, M, N ಕವಚಗಳೆಂದು ಹೆಸರು. ಈ ಕವಚಗಳಲ್ಲಿ

ಸುತ್ತುವ ಎಲೆಕ್ಟ್ರಾನುಗಳ ಶಕ್ತಿಮಟ್ಟವನ್ನು ಚಿತ್ರದಲ್ಲಿ ತೋರಿಸಿದೆ. ಎಕ್ಸ್‌ಕಿರಣಗಳನ್ನು ಉತ್ಪತ್ತಿಮಾಡುವ ಎಲೆಕ್ಟ್ರಾನುಗಳು ಗುರಿವಸ್ತುವಿನ ಪರಮಾಣುಗಳ K–ಕವಚದ ಎಲೆಕ್ಟ್ರಾನುಗಳನ್ನು ಹೊರದೂಡುತ್ತವೆ ಎನ್ನೋಣ. ಆಗ ಆ ಎಲೆಕ್ಟ್ರಾನೊಂದರ ಸ್ಥಾನವನ್ನು




ಚಿತ್ರ 7

L–ಕವಚದಿಂದಾಗಲೀ M–ಕವಚದಿಂದಾಗಲೀ ಒಂದು ಎಲೆಕ್ಟ್ರಾನು ಬಂದು ಆಕ್ರಮಿಸಬಹುದು. ಈ ಕ್ರಿಯೆಯಲ್ಲಿ ಅದು ಕಳೆದುಕೊಳ್ಳುವ ಶಕ್ತಿ ಎಕ್ಸ್‌ಕಿರಣದ ರೂಪದಲ್ಲಿ ಹೊರಹೊಮ್ಮುತ್ತದೆ. ಇಂಥ ಕಿರಣಗಳು K ಪಂಕ್ತಿಗೆ ಸೇರಿದ ವಿಶಿಷ್ಟ ಎಕ್ಸ್‌ಕಿರಣಗಳು ಎನ್ನಿಸಿಕೊಳ್ಳುತ್ತವೆ. ಅಂತೆಯೇ L–ಕವಚದಲ್ಲಿನ ಖಾಲಿ ಜಾಗಗಳನ್ನು M, N ಕವಚಗಳಿಂದ ಬಂದ ಎಲೆಕ್ಟ್ರಾನುಗಳು ಆಕ್ರಮಿಸಿ L–ಪಂಕ್ತಿಗೆ ಸೇರಿದ ವೈಯಕ್ತಿಕ ಎಕ್ಸ್‌ಕಿರಣಗಳಿಗೆ ಕಾರಣವಾಗುತ್ತವೆ.

**ಮೇಸಿಕ್ ಎಕ್ಸ್‌ಕಿರಣಗಳು:** ಎಲೆಕ್ಟ್ರಾನಿಗಿಂತ ತೂಕವಾಗಿಯೂ ಪ್ರೋಟಾನಿಗಿಂತ ಹಗುರವಾಗಿಯೂ ಇರುವ ಅಸ್ಥಿರ ಮೂಲಕಣ ಮೇಸಾನ್ μ, ð, K ಎಂಬ ಮೂರು ವಿಧದ ಮೇಸಾನುಗಳಿವೆ. ಪ್ರತಿ ವಿಧದಲ್ಲಿಯೂ ಧನ ಮತ್ತು ಋಣ ವಿದ್ಯುತ್ಕಣಗಳಿವೆ. ಇವನ್ನು ಆಧುನಿಕ ಕಣವೇಗವರ್ಧಕಗಳಲ್ಲೂ ಉತ್ಪತ್ತಿ ಮಾಡಬಹುದು. ಋಣ ಮೇಸಾನುಗಳನ್ನು




ಚಿತ್ರ 8

ಒಂದು ವಸ್ತುವಿನಲ್ಲಿ ಹಾಯಿಸಿದರೆ ಅವು ಅಯಾನುತ್ಪತ್ತಿ ಮಾಡುತ್ತ (ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತ) ಮುಂದೆ ಸಾಗುತ್ತವೆ. ಮೇಸಾನಿನ ಶಕ್ತಿ ಬಹಳ ಕಡಿಮೆಯಾದಾಗ ವಸ್ತುವಿನ ಪರಮಾಣುವಿನ ಹೊರಕವಚದ ಎಲೆಕ್ಟ್ರಾನನ್ನು ಬದಲಿಸಿ ತಾನೇ ಬೀಜದ ಸುತ್ತಲೂ ಸುತ್ತತೊಡಗುತ್ತದೆ. ಇಂಥ ಪರಮಾಣುವಿನ ಹೆಸರು ಮೇಸಿಕ್ ಪರಮಾಣು. ಮೊದಲ ಹೊರ ಕವಚವನ್ನು ಆಕ್ರಮಿಸಿ ಮೇಸಾನು ಬರುಬರುತ್ತ ಒಳಗಣ ಕವಚಗಳ ಖಾಲಿಜಾಗಗಳನ್ನು ಆಕ್ರಮಿಸುತ್ತ ಹೋಗುತ್ತದೆ.

ಹೀಗೆ ಪ್ರತಿಬಾರಿಯೂ ಅದು ಕವಚ ಸ್ಥಾನಪಲ್ಲಟ ಮಾಡುವಾಗ ಸ್ವಲ್ಪ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಇದು ಎಕ್ಸ್ ರೂಪದಲ್ಲಿ ಹೊರಬೀಳುತ್ತದೆ. ಇದನ್ನು ಮೇಸಿಕ್ ಎಕ್ಸ್‌ಕಿರಣ ವೆನ್ನುತ್ತಾರೆ. ಚಿತ್ರ 8 ತವರದಲ್ಲಿ ì –ಮೇಸಿಕ್ ಎಕ್ಸ್ಕಿರಣಗಳ ರೋಹಿತವನ್ನು ತೋರಿಸುತ್ತದೆ. ಮೇಸಾನ್ ಎಲೆಕ್ಟ್ರಾನುಗಳಿಗಿಂತ ಸುಮಾರು 250ರಷ್ಟು ಹೆಚ್ಚು ತೂಕ ಇರುವುದರಿಂದ ಬೀಜದ ಸುತ್ತ ಅದರ ಕಕ್ಷಾ ತ್ರಿಜ್ಯ (ಯಾವುದೇ ಶಕಲ ಸಂಖ್ಯೆಗೆ ಸರಿಯಾಗಿ) ಎಲೆಕ್ಟ್ರಾನಿನದಕ್ಕಿಂತ ಸುಮಾರು 250ರಷ್ಟು ಕಡಿಮೆ ಇರುತ್ತದೆ. ಮೇಸಾನ್ ಪರಮಾಣುವಿನ n ಕಕ್ಷೆಯಲ್ಲಿ ಸುತ್ತುತ್ತಿದೆ ಎನ್ನೋಣ. ಈಗ ಅದರ ಬೋರ್‌ತ್ರಿಜ್ಯವನ್ನು ಈ ರೀತಿ ಬರೆಯಬಹುದು:

$$r_n = \frac{n^2h^2}{4\pi^2me^2Z}$$

ಇಲ್ಲಿ n=ಕಕ್ಷೆಯ ಶಕಲ ಸಂಖ್ಯೆ; h=ಪ್ಲಾಂಕನ ನಿಯಂತಾಂಕ; m=ಮೇಸಾನಿನ ಕಡಿಮೆಯಾದ ದ್ರವ್ಯರಾಶಿ; e= ಎಲೆಕ್ಟ್ರಾನಿಕ್ ವಿದ್ಯುದಂಶ; Z=ಪರಮಾಣುವಿನ ಪರಮಾಣು ಸಂಖ್ಯೆ.

$ð^-$ ಮೇಸಾನು (ತೂಕ 273 me) ತವರ (Z=50, A=120) ಪರಮಾಣುವಿನ ಮೊದಲ ಕಕ್ಷೆಯಲ್ಲಿ ಸುತ್ತುತ್ತಿದ್ದರೆ ಅದರ ಕಕ್ಷಾವ್ಯಾಸವನ್ನು ಮೇಲಿನ ಸಮೀಕರಣದ ಸಹಾಯದಿಂದ ಸುಮಾರು $7\times10^{-13}$ ಸೆಂ.ಮೀ. ಎಂದು ಗುಣಿಸಬಹುದು. ಆದರೆ ತವರ ಬೀಜದ ವ್ಯಾಸ ಸುಮಾರು $5\times10^{-13}$ ಸೆಂ.ಮೀ. ಅಂದರೆ ಬೀಜಕ್ಕೆ ಬಲು ಹತ್ತಿರವಾಗಿ ಮೇಸಾನ್ ಸುತ್ತುತ್ತಿದೆಯೆಂದಾಯಿತು. ಇನ್ನೂ ತೂಕದ ಪರಮಾಣುಗಳಲ್ಲಿ ಅದರ ಕಕ್ಷೆ ಬೀಜದೊಳಗೆ ಹಾದುಹೋಗುತ್ತದೆ. ಆದ್ದರಿಂದ ಮೇಸಿಕ್ ಎಕ್ಸ್‌ಕಿರಣಗಳ ಅಧ್ಯಯನ ಮೇಸಾನುಗಳ ಗುಣ ವಿಶೇಷಗಳನ್ನು ಹೊರಪಡಿಸುವುದೇ ಅಲ್ಲದೆ ಬೀಜದ ಗಾತ್ರ ಮತ್ತು ಅದರ ವಿದ್ಯುತ್ ಹಂಚಿಕೆಯನ್ನು ತಿಳಿಯಲು ಅನುಕೂಲವಾಗಿದೆ.

**ವಸ್ತುಗಳಲ್ಲಿ ಹೀರಿಕೆ:** (ಅಬ್‌ಸಾರ್ಪ್ಷನ್ ಇನ್ ಮ್ಯಾಟರ್) : $I_o$ ತೀವ್ರತೆ ಇರುವ ಸಮಾನಾಂತರ ಎಕ್ಸ್ ಕಿರಣಗಳನ್ನು x ಸೆಂ.ಮೀ. ದಪ್ಪದ ವಸ್ತುವಿನ ಮೂಲಕ ಹಾದು ಹೋಗುವಂತೆ ಮಾಡಿದಾಗ ಮೊದಲಿನ ದಿಕ್ಕಿನಲ್ಲಿ ಹೊರಬರುವ ಎಕ್ಸ್‌ಕಿರಣದ ತೀವ್ರತೆ $I=I_0e\text{-}\mu^x$ ಇಲ್ಲಿ μ ರೇಖಾಹೀರಿಕೆಯ ಗುಣಾಂಕ (ಲೀನಿಯರ್ ಅಬ್‌ಸಾರ್ಪ್ಷನ್ ಕೋಎಫಿಶಿಯೆಂಟ್).

ಎರಡು ವಿಧಾನಗಳಿಂದ ತೀವ್ರತೆ ಕಡಿಮೆಯಾಗುವುದು: 1. ಚದುರುವಿಕೆ (ಸ್ಕ್ಯಾಟರಿಂಗ್) 2. ಹೀರಿಕೆ ಕಾಂಪ್ಟನ್ ಪರಿಣಾಮದಿಂದ ವಸ್ತುವಿನಲ್ಲಿರುವ ಎಲೆಕ್ಟ್ರಾನುಗಳು ಎಕ್ಸ್‌ಕಿರಣಗಳನ್ನು ಚದುರಿಸುವುದರೊಡನೆ ಶಕ್ತಿ ಕುಂದಿಸುವುವು. ದ್ಯುತಿವಿದ್ಯುತ್ಪರಿಣಾಮದಿಂದ (ಫೋಟೋ ಎಲೆಕ್ಟ್ರಿಕ್ ಎಫೆಕ್ಟ್) ಎಕ್ಸ್‌ಕಿರಣಗಳ ಫೋಟಾನುಗಳು ಹೀರಲ್ಪಡುವುವು. ಈ ಕ್ರಿಯೆಯಲ್ಲಿ ನಿರ್ದಿಷ್ಟ ಶಕ್ತಿಯನ್ನು ಹೀರಿಕೊಂಡು K, L ಅಥವಾ M ಕವಚಗಳಲ್ಲಿರುವ ಎಲೆಕ್ಟ್ರಾನುಗಳೇ ಸ್ಥಾನಪಲ್ಲಟಗೊಂಡು ಆ ಸ್ಥಾನವನ್ನು ಆಕ್ರಮಿಸಲು ಬರುವ ಬೇರೆ ಕವಚದ ಎಲೆಕ್ಟ್ರಾನುಗಳಿಂದ ಉತ್ಪತ್ತಿಯಾದ ಮತ್ತೊಂದು ರೀತಿಯ ಎಕ್ಸ್‌ಕಿರಣಗಳು ಹೊರಬರುವುವು. ಇದರ ಹೆಸರು ಪ್ರತಿದೀಪ್ತಿ (ಫ್ಲೂರಸೆನ್ಸ್). ಆದ್ದರಿಂದ ರೇಖಾಹೀರಿಕೆ ಗುಣಾಂಕ ಷ =

μ =ó + ë ಎಂದರೆ, μ =ಚದರಿಕೆ ಗುಣಾಂಕ + ದ್ಯುತಿವಿದ್ಯುತ್ಪರಿಣಾಮ ಗುಣಾಂಕ. μ ವನ್ನು ಸಾಂದ್ರತೆಯಿಂದ ಭಾಗಿಸಿದರೆ ಜಡಾಂಶ ಹೀರಿಕೆ ಗುಣಾಂಕ ಬರುವುದು.

$$\frac{\mu}{p} = \frac{\sigma}{p} + \frac{\lambda}{p}$$

$$\mu_m = \sigma_m + \lambda_m$$

$\mu_m$ ವಸ್ತುವಿನ ಸಾಂದ್ರತೆಯನ್ನು ಅನುಸರಿಸುವುದಿಲ್ಲ ಮತ್ತು ಭೌತ ಅಥವಾ ರಾಸಾಯನಿಕ ಸ್ಥಿತಿಯನ್ನೂ ಅವಲಂಬಿಸಿರುವುದಿಲ್ಲ. ಅಂದರೆ μ ಬೆಲೆ ವ್ಯತ್ಯಾಸಗೊಂಡರೂ ವಸ್ತುವಿನ ಘನ, ದ್ರವ ಅಥವಾ ಅನಿಲಸ್ಥಿತಿಗಳಲ್ಲಿ $\mu_m$ ಬೆಲೆ ಮಾತ್ರ ಒಂದೇ ಆಗಿರುತ್ತದೆ. ಯಾವುದಾದರೂ ವಸ್ತುವಿನಲ್ಲಿ $\mu_m$ ಬೆಲೆ ಎಕ್ಸ್‌ಕಿರಣ ಶಕ್ತಿಯನ್ನವಲಂಬಿಸಿರುವುದು. ಎಕ್ಸ್‌ಕಿರಣಶಕ್ತಿ ಹೆಚ್ಚುತ್ತ ಹೋದಂತೆ $\mu_m$ ಬೆಲೆ ಚಿತ್ರ 9ರಲ್ಲಿ ತೋರಿಸಿರುವಂತೆ ವ್ಯತ್ಯಾಸಗೊಳ್ಳುವುದು.

ಕೆಲವು ನಿರ್ದಿಷ್ಟ ಶಕ್ತಿಗಳಲ್ಲಿ (ತರಂಗಾಂತರಗಳಲ್ಲಿ) $\mu_m$ ಬೆಲೆ ಶೀಘ್ರವಾಗಿ ಇಳಿಯುವುದು. ಈ ನಿರ್ದಿಷ್ಟ ಶಕ್ತಿಗಳಲ್ಲಿ ಎಕ್ಸ್‌ಕಿರಣಗಳು ವಸ್ತುವಿನ K, L ಅಥವಾ M ಕವಚಗಳಲ್ಲಿನ ಎಲೆಕ್ಟ್ರಾನುಗಳನ್ನು ಸ್ಥಾನಪಲ್ಲಟಗೊಳಿಸುವುವು. $\mu_m$ ಬೆಲೆ ಎಕ್ಸ್‌ಕಿರಣ ಕೊಳವೆಯ ವಿದ್ಯುತ್ ವಿಭವಾಂತರ ಮತ್ತು ವಸ್ತುವಿನ ಪರಮಾಣು ಸಂಖ್ಯೆಗಳನ್ನು ಅವಲಂಬಿಸಿರುತ್ತದೆ.

**ಉಪಯೋಗಗಳು:** 1. ಎಕ್ಸ್‌ಕಿರಣಗಳ ಸಹಾಯದಿಂದ ಒಂದು ವಸ್ತುವಿನ ಪರಮಾಣು ರಚನೆಯನ್ನು ಗೊತ್ತುಮಾಡಬಹುದು. ಒಂದು ವಸ್ತುವನ್ನು ಉದ್ದೀಪ್ತಗೊಳಿಸಿ (ಎಕ್ಸೈಟ್) ಅದರಿಂದ ಬರುವ ಬೆಳಕನ್ನು ಅಶ್ರಗದ (ಪ್ರಿಸಂ) ಮೂಲಕ ಹಾಯಿಸಿದಾಗ ವಸ್ತುವಿನ ವೈಶಿಷ್ಟ್ಯ ರೋಹಿತವನ್ನೇ (ಕ್ಯಾರೆಕ್ಟರಿಸ್ಟಿಕ್ ಸ್ಪೆಕ್ಟ್ರಂ) ರೋಹಿತಮಾಪಕದ ಸಹಾಯದಿಂದ ಗ್ರಹಿಸಬಹುದು. ವಸ್ತುವಿನ ರೋಹಿತಕ್ಕೂ ಅದರ ಪರಮಾಣು ರಚನೆಗೂ ನಿಕಟಸಂಬಂಧವಿದೆ. ಬ್ರ್ಯಾಗ್ ಎಂಬ ವಿಜ್ಞಾನಿ ಎಕ್ಸ್‌ಕಿರಣಗಳು ಉತ್ಪತ್ತಿಯಾಗುವ ಕೊಳವೆಯಲ್ಲಿ ವಸ್ತುವನ್ನು ಗುರಿಯಾಗಿ ಅಳವಡಿಸಿ ಹೆಚ್ಚಿನ ವೇಗವುಳ್ಳ ಎಲೆಕ್ಟ್ರಾನುಗಳು ಅದರ ಮೇಲೆ ಬೀಳದಂತೆ ಮಾಡಿ ಅದರಿಂದ ಉತ್ಪತ್ತಿಯಾಗುವ ಎಕ್ಸ್‌ಕಿರಣಗಳನ್ನು ಸೂಕ್ತವಾದ ಸೀಳುಗುಂಡಿಯ ಮೂಲಕ ಹಾಯಿಸಿ ರೋಹಿತಮಾಪಕದ ಅಶ್ರಗದ ತಟ್ಟೆಯ ಮೇಲೆ ಇಟ್ಟು ಕಲ್ಲುಪ್ಪಿನ ಹರಳಿನ ಮೇಲೆ ಬೀಳುವಂತೆ ಮಾಡಿದ. ಹರಳಿನಿಂದ ಹೊರಬರುವ ಎಕ್ಸ್ ಕಿರಣಗಳನ್ನು ಅಯಾನೀಕರಣ ಮಂದಿರದ ಮೂಲಕ ಹಾಯಿಸಿ ಅದರ ಶಕ್ತಿಯನ್ನು ಅಳೆದ. ಹರಳನ್ನು

ಅದರ ಸ್ಥಾನದಲ್ಲೇ ತಿರುಗಿಸುವ ಮೂಲಕ ಎಕ್ಸ್‌ಕಿರಣದ ನೇರಕ್ಕೂ ಹರಳಿಗೂ ಇರುವ ಓರಣದ ಕೋನವನ್ನು (ಗ್ಲ್ಯಾನ್ಸಿಂಗ್ ಆಂಗಲ್ಸ್) ವ್ಯತ್ಯಾಸ ಮಾಡುತ್ತ ಅದಕ್ಕನುಗುಣವಾಗಿ ಅಯಾನೀಕರಣ ಮಂದಿರವನ್ನು ತಿರುಗಿಸುತ್ತ ಬೇರೆ ಬೇರೆ ಓರಣದ ಕೋನವನ್ನು x–




**ಚಿತ್ರ 9**

ಅಕ್ಷದ ಮೇಲೂ ಅಯಾನೀಕರಣದ ತೀವ್ರತೆಯನ್ನು (ಇಂಟೆನ್ಸಿಟಿ) y–ಅಕ್ಷದ ಮೇಲೂ ಸೂಚಿಸಿದರೆ ಕೆಲವು ನಿರ್ದಿಷ್ಟ ಓರಣ ಕೋನಗಳಲ್ಲಿ ಮಾತ್ರ ಅಯಾನೀಕರಣ ವಿದ್ಯುತ್ ಪ್ರಮಾಣ ಪರಮಾವಧಿಯನ್ನು ಮುಟ್ಟುತ್ತದೆ. ಇದರಿಂದ ಹರಳಿನ ರಚನೆಯಲ್ಲಿ ಪರಮಾಣುಗಳು




**ಚಿತ್ರ 10.** **T ಎಕ್ಸ್ ಕಿರಣ ಆಕರ, $S_1$ $S_2$ $S_3$ ಸೀಳುಗುಂಡಿಗಳು, C ಹರಳು, I ಅಯಾನೀಕರಣ ಮಂದಿರ**

ನಿರ್ದಿಷ್ಟ ರೀತಿಯಲ್ಲಿ ಇರುತ್ತವೆ ಎಂಬುದು ಗೊತ್ತಾಗುವುದು. $\theta$ ಓರಣಕೋನವನ್ನೂ d ಪರಮಾಣುಗಳು ಜೋಡಿಸಲ್ಪಟ್ಟಿರುವ ಪರಸ್ಪರ ಸಮಾನಾಂತರ ಸಮತಲಗಳ ನಡುವೆ ಇರುವ ಅಂತರವನ್ನೂ n ನಮನವರ್ಗ (ಆರ್ಡರ್ ಆಫ್ ಡಿಫ್ರಾಕ್ಷನ್) ಮತ್ತು ë ಕಿರಣದ ತರಂಗಾಂತರವನ್ನೂ ಸೂಚಿಸಿದರೆ $2d \sin \theta = n$ë ಎಂಬುದೇ ಬ್ರ್ಯಾಗ್ ನಿಯಮ.

ಚಿತ್ರ 11ರಲ್ಲಿ ತೋರಿಸಿರುವಂತೆ $A_1$, $A_2$ ಮತ್ತು $A_3$ ಕ್ರಮವಾಗಿ $\theta_1$, $\theta_2$ ಮತ್ತು $\theta_3$ ಎಂಬ ನಿರ್ದಿಷ್ಟ ಓರಣ ಕೋನಗಳಲ್ಲಿ ಬರುವ ಪರಮಾವಧಿಗಳು. ಇವುಗಳ ಪಕ್ಕದಲ್ಲಿರುವ $B_1$, $B_2$ ಮತ್ತು $B_3$ ಎಂಬ ಪರಮಾವಧಿಗಳು ಮೂಲಕಿರಣದಲ್ಲಿರುವ ಇನ್ನಿತರ ತರಂಗಾಂತರಗಳಿಗೆ ಸಂಬಂಧಪಟ್ಟವು. $A_1$, $B_1$ ಮೊದಲನೆಯ ವರ್ಗಕ್ಕೂ $A_2$,$B_2$ ಎರಡನೆಯ ವರ್ಗಕ್ಕೂ $A_3$, $B_3$ ಮೂರನೆಯ ವರ್ಗಕ್ಕೂ ಸೇರಿದ ಪರಮಾವಧಿಗಳು. ಮೇಲಿನ ರೇಖಾಚಿತ್ರವನ್ನು ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ವ್ಯಕ್ತವಾಗುತ್ತವೆ. ರೋಹಿತರೇಖೆಯ ವರ್ಗ ಹೆಚ್ಚಾದಂತೆಲ್ಲ ಪ್ರತಿಫಲನ ಕಿರಣಗಳ ತೀವ್ರತೆ ಕಡಿಮೆಯಾಗುತ್ತದೆ. ಪರಮಾವಧಿಗಳ ಸ್ಥಾನ ಎಕ್ಸ್‌ಕಿರಣ ಕೊಳವೆಯಲ್ಲಿ ಉಪಯೋಗಿಸುವ ಗುರಿಯ ವಸ್ತುವನ್ನು ಅವಲಂಬಿಸಿರುತ್ತದೆ. ಪ್ರತಿಫಲನ ಕಿರಣಗಳ ತೀವ್ರತೆ ಶೂನ್ಯವಾಗದೆ ಒಂದು ಕನಿಷ್ಠ ಪ್ರಮಾಣವನ್ನು ಹೊಂದಿದೆ. ಇದರಿಂದ ಸಂತತ ರೋಹಿತದ (ಕಂಟಿನ್ಯೂಯಸ್ ಸ್ಪೆಕ್ಟ್ರಂ) ಮೇಲೆ ಈ ವೈಶಿಷ್ಟ್ಯ ರೋಹಿತ ಉಂಟಾಗಿದೆ ಎಂಬುದು ವ್ಯಕ್ತವಾಗುತ್ತದೆ.




**ಚಿತ್ರ 11**

ವಾನ್ ಲಾವೇ ಎಂಬ ಜರ್ಮನ್ ವಿಜ್ಞಾನಿ ಹರಳುಗಳನ್ನು ಉಪಯೋಗಿಸಿ ಎಕ್ಸ್ ಕಿರಣಗಳು ನಮನ (ಡಿಫ್ರಾಕ್ಷನ್)ಗೊಳ್ಳುತ್ತವೆ ಎಂಬುದನ್ನು ತೋರಿಸಿದ. ಎಕ್ಸ್‌ಕಿರಣಗಳ ತರಂಗಾಂತರ ಅತಿ ಕಡಿಮೆಯಾದುದರಿಂದ ($10^{-8}$ಸೆಂ.ಮೀ.) ಬೆಳಕನ್ನು ನಮನಗೊಳ್ಳುವಂತೆ ಮಾಡಲು ಉಪಯೋಗಿಸುವ ನಮನ ರೇಖಾಫಲಕವನ್ನು (ಡಿಫ್ರಾಕ್ಷನ್ ಗ್ರೇಟಿಂಗ್)




**ಚಿತ್ರ 12**

ಉಪಯೋಗಿಸಲು ಸಾಧ್ಯವಿಲ್ಲ. ಹರಳುಗಳಲ್ಲಿ ಪರಮಾಣುಗಳು ನಿರ್ದಿಷ್ಟ ರೀತಿಯಲ್ಲಿ ಇರುವುದರಿಂದಲೂ ಹರಳಿನ ಪರಸ್ಪರ ಎರಡು ಪರಮಾಣುಗಳ ನಡುವೆ ಇರುವ ಅಂತರ ಎಕ್ಸ್‌ಕಿರಣಗಳ ತರಂಗಾಂತರದಷ್ಟೇ ಇರುವುದರಿಂದಲೂ ಅವನ್ನು ನಮನಗೊಳ್ಳುವಂತೆ ಮಾಡಲು ಸಾಧ್ಯವಾಗುತ್ತದೆ. ಹರಳುಗಳನ್ನು ಮೂರು ಆಯಾಮಗಳ ವಕ್ರವಿಯೋಗ ರೇಖಾಫಲಕ (ತ್ರೀ ಡೈಮೆನ್ಷನಲ್ ಗ್ರೇಟಿಂಗ್) ಎನ್ನಬಹುದು. ಎಕ್ಸ್‌ಕಿರಣಗಳನ್ನು ಲಾವೇ ತೆಳುವಾದ ಹರಳುಗಳ ಮೂಲಕ ಹಾದು ಹೋಗುವಂತೆ ಮಾಡಿ ಅದರಿಂದ ಹಾದು ಬಂದ ಕಿರಣಗಳನ್ನು ಛಾಯಾಪಟಲದ ಮೇಲೆ ಬೀಳುವಂತೆ, ಮಾಡಿದ. ಛಾಯಾಪಟಲವನ್ನು ಸ್ಫುಟಗೊಳಿಸಿದಾಗ (ಡೆವಲಪ್ಡ್) ಪಟಲದ ಮಧ್ಯಭಾಗದಲ್ಲಿ ಒಂದು ಕಪ್ಪು ಚುಕ್ಕಿಯ ಸುತ್ತಲೂ ಅಷ್ಟು ಪ್ರಕಾಶವಿಲ್ಲದ ಅನೇಕ ಕಪ್ಪು ಚುಕ್ಕೆಗಳು ನಿರ್ದಿಷ್ಟ ಸ್ಥಾನದಲ್ಲಿ ಕಾಣಿಸಿಕೊಂಡವು. ಇವನ್ನು ಲಾವೇ ಚುಕ್ಕಿಗಳೆಂದು (ಲಾವೇ ಸ್ಪಾಟ್ಸ್) ಕರೆಯುವರು.

ವಿಲಿಯಂ ಬ್ರ್ಯಾಗ್ ಎಂಬಾತ ಈ ಚುಕ್ಕಿಗಳ ವಿಷಯವಾಗಿ ಸರಿಯಾದ ವಿವರಣೆ ಕೊಟ್ಟಿದ್ದಾನೆ. ಗೊತ್ತಾದ ಸಮತಲದಲ್ಲಿ ಅನುಕ್ರಮವಾಗಿ ಜೋಡಿಸಿರುವ ಪರಮಾಣುಗಳ ಮೇಲೆ ಎಕ್ಸ್‌ಕಿರಣಗಳು ಬಿದ್ದಾಗ ಈ ಪರಮಾಣುಗಳಿಂದ ಪ್ರತಿಫಲಿತ ಪರಸ್ಪರ ತರಂಗಗಳ ನಡುವೆ ಇರುವ ಪಥ ವ್ಯತ್ಯಾಸ (ಪಾತ್ ಡಿಫರೆನ್ಸ್) ಹಿಂದೆ ವಿವರಿಸಿದ $2d \sin \theta = n$ë ಎಂಬ ಬ್ರ್ಯಾಗ್ ನಿಯಮಕ್ಕೆ ಅನುಗುಣವಾಗಿರಬೇಕು. ಮೂಲಕಿರಣದಲ್ಲಿ ವಿವಿಧ ತರಂಗಾಂತರವುಳ್ಳ ಕಿರಣಗಳಿರುವುದರಿಂದ ಬೇರೆ ಬೇರೆ ಸಮತಲಗಳಲ್ಲಿ ಜೋಡಿಸಿರುವ ಪರಮಾಣುಗಳಿಂದ ಒಂದೊಂದು ತರಂಗ ಪ್ರಮಾಣದ ಕಿರಣಗಳು ಬ್ರ್ಯಾಗ್ ನಿಯಮಕ್ಕೆ ಅನುಗುಣವಾದ ನೇರದಲ್ಲಿ ನಮನಗೊಳ್ಳುತ್ತವೆ. ಮೋಸ್ಲಿ ಎಂಬ ವಿಜ್ಞಾನಿ 38 ಲೋಹಗಳನ್ನು ಎಕ್ಸ್‌ಕಿರಣ ಕೊಳವೆಯಲ್ಲಿ ಗುರಿಯನ್ನಾಗಿ ಉಪಯೋಗಿಸಿ ಅವುಗಳಿಂದ ಹೊರ ಸೂಸಿದ ರೋಹಿತಗಳನ್ನು

ಪರೀಕ್ಷಿಸಿ ತನ್ನದೇ ಆದ ಒಂದು ನಿಯಮವನ್ನು ಪ್ರತಿಪಾದಿಸಿದ. v ಎಕ್ಸ್‌ಕಿರಣದ ಆವರ್ತನ ಸಂಖ್ಯೆ(ಫ್ರೀಕ್ವೆನ್ಸಿ) Z ಲೋಹದ ಪರಮಾಣು ಸಂಖ್ಯೆ ಆಗಿದ್ದರೆ ಆಗ $v=a\,(Z-b)^2$ ಎಂಬುದೇ ಮೋಸ್ಲಿಯ ನಿಯಮ. a ಮತ್ತು b ನಿಯಂತಾಕಗಳು. ಆವರ್ತನ ಸಂಖ್ಯೆಯ ವರ್ಗಮೂಲವನ್ನು ($\sqrt{v}$)ರೇಖಾಚಿತ್ರದ (ಚಿತ್ರ 13) y–ಅಕ್ಷದ ಮೇಲೂ ಪರಮಾಣು ಸಂಖ್ಯೆಯನ್ನು (Z)x–ಅಕ್ಷದ ಮೇಲೂ ಸೂಚಿಸಿದರೆ ಸರಳರೇಖೆ ಬರುತ್ತದೆ.




ಚಿತ್ರ 13

ಇದಕ್ಕೆ ಮೋಸ್ಲಿಯ ಚಿತ್ರ ಎನ್ನುವರು. ಧಾತುಗಳ ವರ್ಗೀಕರಣದಲ್ಲಿ (ಆವರ್ತಕೋಷ್ಟಕ, ಪೀರಿಯಾಡಿಕ್ ಕ್ಲ್ಯಾಸಿಫಿಕೇಷನ್ ಆಫ್ ಎಲಿಮೆಂಟ್ಸ್) ಪರಮಾಣು ಭಾರಕ್ಕಿಂತ ಪರಮಾಣು ಸಂಖ್ಯೆಯೇ ಮುಖ್ಯವಾದದ್ದು ಎಂಬ ಅಂಶ ವ್ಯಕ್ತವಾಗುತ್ತದೆ. ಇಂಥ ತಿಳಿವಳಿಕೆಯ ನೆರವಿನಿಂದ ಆವರ್ತ ಕೋಷ್ಟಕದಲ್ಲಿ ಕೆಲವು ಹೊಸ ಧಾತುಗಳ ಸ್ಥಾನಗಳನ್ನು ಗೊತ್ತುಪಡಿಸಲು ಸಾಧ್ಯವಾಯಿತು.

ಎಕ್ಸ್‌ಕಿರಣಗಳಿಂದ ಕಲ್ಲುಪ್ಪು ಮತ್ತು ಪೆಟ್ಲುಪ್ಪಿನ ಒಳರಚನೆಯನ್ನು ಗೊತ್ತುಪಡಿಸಲಾಯಿತು. ಈ ಉಪ್ಪುಗಳು ಘನಾಕೃತಿ ತಳೆದಿವೆಯೆಂದೂ ಸೋಡಿಯಂ (ಅಥವಾ ಪೊಟ್ಯಾಸಿಯಂ) ಮತ್ತು ಕ್ಲೋರಿನ್ (ಅಯಾನುಗಳು) ಒಂದು ಘನ ಕಟ್ಟಡದಲ್ಲಿ ಕ್ರಮವಾಗಿ ಪರ್ಯಾಯಸ್ಥಾನವನ್ನು ಆಕ್ರಮಿಸಿದೆಯೆಂದೂ ತಿಳಿಯಲು ಸಾಧ್ಯವಾಯಿತು. ಘನರೂಪದಲ್ಲಿ ಸಹ ಸೋಡಿಯಂ ಘನ ವಿದ್ಯುತ್ ಕಣವಾಗಿಯೂ ಮತ್ತು ಕ್ಲೋರಿನ್ ಎಲೆಕ್ಟ್ರಾನ್ ಆಗಿಯೂ ಇದ್ದು ಇವುಗಳ ನಡುವೆ ಸ್ಥಾಯೀ ವಿದ್ಯುತ್ ಆಕರ್ಷಣ ಬಲ (ಎಲೆಕ್ಟ್ರೋಸ್ಟ್ಯಾಟಿಕ್ ಅಟ್ರ್ಯಾಕ್ಟಿವ್ ಫೋರ್ಸ್) ಇದ್ದು ಅವುಗಳ ಸಮಸ್ಥಿತಿಗೆ ಕಾರಣವಾಗುತ್ತವೆ ಎಂಬ ಅಂಶ ವ್ಯಕ್ತವಾಗುತ್ತದೆ.

ಒಂದು ವಸ್ತುವಿನ ಮೂಲಕ ಎಕ್ಸ್‌ಕಿರಣಗಳನ್ನು ಹಾಯಿಸಿದಾಗ ಆ ವಸ್ತುವಿನಲ್ಲಿರುವ ಪ್ರತಿ ಧಾತುವೂ ಅದಕ್ಕೆ ಸಂಬಂಧಿಸಿದಂತೆ ವಿಶಿಷ್ಟ ಎಕ್ಸ್‌ಕಿರಣಗಳನ್ನು ಉತ್ಪತ್ತಿಮಾಡುತ್ತದೆ. ಆದ್ದರಿಂದ ವಸ್ತುವಿನಿಂದ ಹೊರಬಂದ ಎಕ್ಸ್‌ಕಿರಣಗಳನ್ನು ಒಂದು ಸ್ಫಟಿಕ ರೋಹಿತಮಾಪಕದಲ್ಲಿ (ಕ್ರಿಸ್ಟಲ್ ಸ್ಪೆಕ್ಟ್ರೋಮೀಟರ್) ಪರೀಕ್ಷಿಸಿದರೆ ಅವುಗಳ ತರಂಗಾಂತರ ಮತ್ತು ತೀಕ್ಷ್ಣತೆಗಳು ಗೊತ್ತಾಗುತ್ತವೆ. ಇವುಗಳಿಂದ ಆ ವಸ್ತುವಿನಲ್ಲಿನ ವಿವಿಧ ಧಾತುಗಳನ್ನೂ ಅವುಗಳ ಪ್ರಮಾಣವನ್ನೂ ತಿಳಿಯಬಹುದು. ಈ ವಿಧದಿಂದ ಹತ್ತು ಲಕ್ಷದಲ್ಲಿ ಒಂದು ಪಾಲಿನಷ್ಟು ಇರುವ ಧಾತುವನ್ನೂ ಸಹ ನಿರ್ಧರಿಸಲು ಸಾಧ್ಯವಿದೆ.

ಏಕವರ್ಣೀಯ ಎಕ್ಸ್‌ಕಿರಣಗಳ (ಮಾನೊಕ್ರೊಮ್ಯಾಟಿಕ್) ನಿಮ್ನ ಕೋನ ಚದರಿಕೆಯ (ಲೋ ಆಂಗಲ್ ಸ್ಕ್ಯಾಟರಿಂಗ್) ಅಳತೆಗಳಿಂದ ವಸ್ತುವಿನಲ್ಲಿನ ತೂತುಗಳು, ವ್ಯತ್ಯಾಸಗಳು, ಸಂಧಿಗಳು ಮುಂತಾದವುಗಳ ಗಾತ್ರಗಳನ್ನು ಲೆಕ್ಕಹಾಕಬಹುದು.

ವಿವಿಧ ಸಂಯೋಜನೆಯ ಅಥವಾ ವಿವಿಧ ಸಾಂದ್ರತೆಯುಳ್ಳ ಒಂದು ವಸ್ತುವಿನ ಮೂಲಕ ಎಕ್ಸ್‌ಕಿರಣಗಳನ್ನು ಹಾಯಿಸಿದಾಗ ಅವು ವ್ಯತ್ಯಸ್ತವಾಗಿ ಹೀರಲ್ಪಡುತ್ತವೆ. ಅಂದರೆ ಹೆಚ್ಚು ಸಾಂದ್ರತೆಯ ಭಾಗಗಳಲ್ಲಿ ಹೆಚ್ಚಾಗಿಯೂ ಕಡಿಮೆ ಸಾಂದ್ರತೆಯ ಭಾಗಗಳಲ್ಲಿ ಕಡಿಮೆಯಾಗಿಯೂ ಹೀರಲ್ಪಡುತ್ತವೆ. ಆದ್ದರಿಂದ ಹೊರಬಂದ ಎಕ್ಸ್‌ಕಿರಣಗಳನ್ನು ಛಾಯಾ ಪಟಲದ ಮೇಲೆ ಬೀಳಿಸಿದಾಗ ವಿವಿಧ ಭಾಗಗಳಲ್ಲುಂಟಾದ ಹೀರಿಕೆಯನ್ನು ಅನುಸರಿಸಿ ಎಕ್ಸ್‌ಕಿರಣ ಛಾಯಾಚಿತ್ರವುಂಟಾಗುವುದು. ಇಂಥ ಚಿತ್ರಗಳಲ್ಲಿ ಮಾಂಸ ಖಂಡಗಳಿಂದ ಮತ್ತು ತುಂಬುರಕ್ತದಿಂದ ಕೂಡಿದ ಹೃದಯ ಗಾಳಿಯಿಂದ ತುಂಬಿರುವ ಶ್ವಾಸಕೋಶಗಳಿಗಿಂತ ಭಿನ್ನವಾಗಿ ಕಾಣುವುದು. ಕ್ಯಾಲ್ಸಿಯಂ ಫಾಸ್ಫೇಟಿನಿಂದ ಕೂಡಿದ ಎಲುಬುಗಳು ಸುತ್ತುಮುತ್ತಲಿನ ಮಾಂಸ ಖಂಡಗಳಿಗಿಂತ ಬೇರೆಯಾಗಿ ಕಾಣುವುವು. ಕ್ಯಾಲ್ಸಿಯಂ ಫಾಸ್‌ಫೇಟ್ ಹೆಚ್ಚು ಕಡಿಮೆ ಇದ್ದಷ್ಟೂ ಎಲುಬು ಹೆಚ್ಚು ಕಡಿಮೆಯಾಗಿ ಕಾಣವುದು. ಈ ಚಿತ್ರಗಳಿಂದ ವೈದ್ಯರು ರೋಗಗಳನ್ನು ಗುರುತಿಸಬಲ್ಲರು. ಅನ್ನನಾಳ, ಹೊಟ್ಟೆ ಮತ್ತು ಕರುಳುಗಳ ಭಾಗಗಳಲ್ಲಿನ ತೊಂದರೆ ಗುರುತಿಸಬೇಕಾದರೆ (ಅವು ಎಕ್ಸ್‌ಕಿರಣ ಛಾಯಾಚಿತ್ರದಲ್ಲಿ ಹಾಗೆಯೇ ಕಾಣಿಸುವುದಿಲ್ಲವಾದ್ದರಿಂದ) ಮೊದಲು ರೋಗಿಗೆ ಬೇರಿಯಂ ಸಲ್ಫೇಟನ್ನು ನೀರಿನಲ್ಲಿ ಕಲೆಸಿ ಕುಡಿಸುತ್ತಾರೆ. ಬೇರಿಯಂ ಸಲ್ಫೇಟ್ ಎಕ್ಸ್‌ಕಿರಣಗಳನ್ನು ಹೆಚ್ಚಾಗಿ ಹೀರುವುದರಿಂದ ಅದು ಹೋಗಿರುವ ಜಾಗಗಳು ಎಕ್ಸ್‌ಕಿರಣ ಛಾಯಾಚಿತ್ರದಲ್ಲಿ ಎದ್ದು ಕಾಣುತ್ತದೆ. ಎಕ್ಸ್‌ಕಿರಣ ಚಿತ್ರವನ್ನು ತೆಗೆಯುವ ಬದಲು ರೋಗಿಯನ್ನು ಎಕ್ಸ್‌ಕಿರಣಗಳು ಹೊರ ಹೊಮ್ಮುವ ಪಥದಲ್ಲಿ ನಿಲ್ಲಿಸಿ ಅವನ ಮುಂದೆ ಒಂದು ಸ್ಫುರಣ ಪರದೆಯನ್ನಿಟ್ಟರೆ ಅದರ ಮೇಲೆ ಎಕ್ಸ್‌ಕಿರಣ ಛಾಯೆ ಬೀಳುವುದು. ಈ ಛಾಯೆಯಲ್ಲಿ ರೋಗಿಯ ಕೆಲವು ಆಂತರಿಕ ಅವಯವಗಳ ಚಲನೆಯೂ ಕಾಣುತ್ತದೆ. ಉದಾಹರಣೆಗೆ, ಉಚ್ಛ್ವಾಸನಿಶ್ವಾಸ ಗಳಾಗುವ ಶ್ವಾಸಕೋಶಗಳಲ್ಲಿ ಉಂಟಾಗುವ ವ್ಯತ್ಯಾಸ ಕಾಣುತ್ತದೆ. ಈ ವಿಧಾನಕ್ಕೆ ಎಕ್ಸ್‌ಕಿರಣಗಳ ಸಹಾಯದಿಂದ ತೆಗೆಯುವ

**ಚಿತ್ರ 14. ದೋಷದಿಂದ ಕೂಡಿದ ಬೆಸುಗೆಯ ರೇಡಿಯೋಗ್ರಾಫ್ ಚಿತ್ರ**

ಪರದೆ ಮೇಲಿನ ಚಿತ್ರ (ಸ್ಕ್ರೀನಿಂಗ್) ಎಂದು ಹೆಸರು. ಇದರಲ್ಲಿ ಒಂದು ತೊಂದರೆ ಎಂದರೆ ರೋಗಿಗಳನ್ನು ಪರೀಕ್ಷಿಸುವ ವೈದ್ಯರು ಸದಾ ಎಕ್ಸ್‌ಕಿರಣಗಳಿಗೆ ಗುರಿಯಾಗಿರುವುದರಿಂದ ಅವುಗಳ ದುಷ್ಪರಿಣಾಮ ಅವರ ಮೇಲೂ ಉಂಟಾಗುತ್ತದೆ. ಎಕ್ಸ್‌ಕಿರಣಗಳು ಅವುಗಳ ಶಕ್ತಿಯನ್ನನುಸರಿಸಿ ಜೀವಿಗಳಲ್ಲಿ ವಿವಿಧ ದುಷ್ಪರಿಣಾಮವನ್ನುಂಟುಮಾಡುತ್ತವೆ. ಬಿಳಿಯರಕ್ತಕಣ ಗಳು ಕಡಿಮೆಯಾಗುವಿಕೆ, ಕೂದಲು ಉದುರುವಿಕೆ, ಚರ್ಮವ್ಯಾಧಿಗಳು, ನಿರ್ವೀರ್ಯತೆ ಮುಂತಾದುವು ಕಾಣಿಸಿಕೊಳ್ಳಬಹುದು. ಕೆಲವು ಪ್ರಾಣಿಗಳ ಜೀನುಗಳಲ್ಲಿ ಎಕ್ಸ್‌ಕಿರಣಗಳು ವಿಕೃತಿಗಳನ್ನು (ಮ್ಯುಟೇಶನ್ಸ್) ಉಂಟುಮಾಡುತ್ತವೆ. ಇದರಿಂದಾಗಿ ಅವುಗಳ ಸಂತಾನ ವಿಕಾರ ಸ್ವರೂಪಗಳನ್ನು ಹೊಂದುತ್ತವೆ. ಆದರೂ ಇಂಥ ವಿಕೃತಿಗಳನ್ನು ಕೆಲವು ಬೆಳೆಗಳಲ್ಲಿ ಉಂಟುಮಾಡಿ ಹೊಸ ತಳಿಗಳನ್ನೇ ಮಾಡಬಹುದು. ಕ್ಯಾನ್ಸರ್ ರೋಗವನ್ನು ತಡೆಗಟ್ಟಲು ಮತ್ತು ಕೆಲವು ಸಂದರ್ಭಗಳಲ್ಲಿ ಅದನ್ನು ಗುಣಪಡಿಸಲು ಎಕ್ಸ್‌ಕಿರಣಗಳು ಫಲಕಾರಿಯಾಗಿವೆ.

ವಸ್ತುಗಳನ್ನು ಬೆಸುಗೆ (ವೆಲ್ಡ್) ಮಾಡಿದಾಗ ಅದು ಸರಿಯಾಗಿ ಆಗಿದೆಯೆ ಇಲ್ಲವೇ ಎನ್ನುವುದು ಅದರ ಎಕ್ಸ್‌ಕಿರಣ ಛಾಯಾಚಿತ್ರದಿಂದ ಸ್ಪಷ್ಟವಾಗುವುದು. ಅಂತೆಯೇ ಎರಕ ಹೊಯ್ದ ವಸ್ತುಗಳಲ್ಲಿ ಮಧ್ಯೆ ಮಧ್ಯೆ ಗಾಳಿ ಸೇರಿಕೊಂಡಿದೆಯೇ ಇಲ್ಲವೇ ಎಂಬುದು ಕೂಡ ಎಕ್ಸ್‌ಕಿರಣ ಛಾಯಾಚಿತ್ರಗಳಲ್ಲಿ ಸ್ಪಷ್ಟವಾಗುತ್ತದೆ. ಪ್ರಾಚೀನ ಕಲಾವಸ್ತುಗಳ ಎಕ್ಸ್‌ಕಿರಣ ಚಿತ್ರಗಳಿಂದ ಅವುಗಳ ನೈಜತೆಯನ್ನು ನಿರ್ಧರಿಸಬಹುದು; ಮಾತ್ರವಲ್ಲ ಪುನಃಸ್ಪರ್ಶ ನವೇನಾದರೂ ನಡೆದಿದ್ದರೆ ಅದನ್ನು ಗುರುತಿಸಬಹುದು.

ಎಕ್ಸ್‌ಕಿರಣಗಳು ಕೆಲವು ರಾಸಾಯನಿಕ ಕ್ರಿಯೆಗಳನ್ನುಂಟುಮಾಡಬಲ್ಲವು. ಇಂಥ ಕ್ರಿಯೆಗಳಿಂದ ಅನೇಕ ಸಾವಯವ ಸಂಯುಕ್ತ ವಸ್ತುಗಳನ್ನು ರಚಿಸಲಾಗಿದೆ.

ಎಕ್ಸ್‌ಕಿರಣಗಳು ಘನಸ್ಥಿತಿ ಭೌತಶಾಸ್ತ್ರದ (ಸಾಲಿಡ್‌ಸ್ಟೇಟ್ ಫಿಸಿಕ್ಸ್) ಹಲವಾರು ಉಪಕರಣಗಳ ಬೆಳವಣಿಗೆಗೆ ಬಹಳ ಸಹಕಾರಿಯಾಗಿವೆ. **(ಬಿ.ಆರ್.ಜಿ.; ಪಿ.ವಿ.;ಕೆ.ಜಿ.)**

**ಎಕ್ಸ್‌ಕಿರಣಜನಿತ ಚರ್ಮರೋಗ:** (ರೋಡಿಯೋ ಡೆರ್ಮಟೈಟಿಸ್): ವಿಸರಣೆಯಾಗಲೀ (ರೇಡಿಯೇಶನ್) ಎಕ್ಸ್ ಕಿರಣಗಳಾಗಲೀ ಮಿತಿಮೀರಿ ಚರ್ಮಕ್ಕೆ ತಗುಲಿದರೆ ಸ್ವಲ್ಪ ಕಾಲಾನಂತರ ಚರ್ಮದ ಮೇಲೆ ಪ್ರತಿಕೂಲ ಪರಿಣಾಮಗಳು ಕಂಡುಬರುತ್ತವೆ. ಮೊದಲ ವಿಸ್ತರಣೆ ತಗುಲಲು ಆರಂಭವಾದಂದಿನಿಂದ ಪರಿಣಾಮ ತೋರಿಸಿರುವವರೆಗಿನ ಅವಧಿಯ ಹೆಸರು ಅವ್ಯಕ್ತಕಾಲಾವಧಿ (ಇನ್ಕುಬೇಶನ್ ಪೀರಿಯಡ್).

ಚರ್ಮಕ್ಕೆ ತಗುಲಿದ ವಿಸರಣೆಯ ಪ್ರಮಾಣಾನ್ವಯ ನಾಲ್ಕು ಮಟ್ಟಗಳಲ್ಲಿ ಚರ್ಮದ ಉರಿತವನ್ನು ವಿವರಿಸಬಹುದು.

1. ವಿಸರಣೆ ತಗುಲಿದ ಜಾಗದಲ್ಲಿ ನವೆ ಮತ್ತು ಉರಿಯಾಗಿ ಕೆಂಪೇರಿ ಎರಡು ವಾರಗಳ ಅನಂತರ ಚರ್ಮ ಸುಲಿಯುತ್ತದೆ. ಕೂದಲಿರುವ ಚರ್ಮವಾಗಿದ್ದರೆ ತಾತ್ಕಾಲಿಕವಾಗಿ ಕೂದಲು ಉದುರಿ ಹೋಗುವುದು. ಅಲ್ಪ ಪ್ರಮಾಣದಿಂದಾಗುವ ಈ ಪರಿಣಾಮದಿಂದ ಯಾವ ಶಾಶ್ವತ ಹಾನಿಯೂ ಆಗುವುದಿಲ್ಲ.

2. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವಿಸರಣೆ ತಗುಲಿದರೆ ಒಂದು ವಾರದ ಅನಂತರ ಚರ್ಮ ಕೆಂಪಾಗಿ ಊದುವುದು. ಹೀಗೆ ಮೂರು ನಾಲ್ಕು ವಾರಗಳಿರಬಹುದು. ಕೆಲವು ಕಾಲದ ಅನಂತರ ಚರ್ಮದಲ್ಲಿರುವ ಲೋಮರಕ್ತನಾಳಗಳು ಉಬ್ಬಿ ಗಂಟಿಕ್ಕಿದಂತಾಗುವುವು. ಚರ್ಮದ ಬಣ್ಣವೇರಿ ಹುರುಪೇಳುವುದು. ವಿಸರಣೆ ತಗಲಿದೆಡೆಗಳಲ್ಲಿ ಚರ್ಮ ಒಣಗಿ ಸೊರಗುತ್ತದೆ. ಈ ಬದಲಾವಣೆಗಳು ಶಾಶ್ವತ.

3. ಇದು ಮಿತಿ ಮೀರಿದ ಪ್ರಮಾಣದಲ್ಲಿ ವಿಸರಣೆ ತಗುಲಿದಾಗಿನ ಮಾರು ವರ್ತನೆ. ಸಣ್ಣ ಮತ್ತು ದೊಡ್ಡ ನೀರ್ಗುಳ್ಳೆಗಳಿರುವ ಉಗ್ರವಾದ ಈ ಪ್ರತಿಕ್ರಿಯೆ ತಾಕಿದೆಡೆಗಳಲ್ಲಿ ಸ್ಪಷ್ಟ ಬದಲಾವಣೆಗಳಿಂದ ಕೊನೆಗೊಳ್ಳುತ್ತದೆ.

4. ಸುಮಾರು 5–6 ವರ್ಷಗಳ ಅವ್ಯಕ್ತಕಾಲಾವಧಿಯ ಅನಂತರ ರಕ್ತನಾಳಗಳಲ್ಲಿ ಶಾಶ್ವತ ಬದಲಾವಣೆಗಳಾಗಿ ಅದರಿಂದ ತೀವ್ರವಾಗಿ ಊತಗಳ ಪೋಷಣೆ ಕುಗ್ಗಿ ಈ ಪರಿಣಾಮವಾಗಿ ಆಳದಲ್ಲಿ ನೋಯುವ ವಾಸಿಯಾಗದ ಗೊತ್ತಾದ ಅಂಚುಳ್ಳ, ಕಂದು ಇಲ್ಲವೇ ಹಳದಿ ಹಕ್ಕು ಕಟ್ಟಿದ ಗಾಯವಾಗುವುದು. ಚರ್ಮದ ಎಲ್ಲ ಪದರಗಳಲ್ಲೂ ಚರ್ಮದಡಿಯಲ್ಲಿರುವ ಅಂಗಾಂಶದಲ್ಲೂ ಈ ಉರಿತವಿರುತ್ತದೆ. ಉರಿತದ ಎಡೆಗಳಲ್ಲಿ ಕೊಂಚರ್ಮವಾಗಿ (ಕೆರಟೊಸಿಸ್) ಮಂದಗಟ್ಟಿರುವುದು ಮುಂದೆ ಕ್ಯಾನ್ಸರಾಗಿ ಪರಿವರ್ತಿಸಬಹುದು. ಪೆಟ್ಟಾಗಿರುವ ಚರ್ಮ ಬಿರಿದುಕೊಂಡು ವಾಸಿಯಾಗದ ಗಾಯಗಳು ಕಾಣಿಸಿಕೊಳ್ಳುತ್ತವೆ.

ಬೇರೂರಿದ ವಿಸರಣ ಚರ್ಮದುರಿತ: ಸಾಮಾನ್ಯವಾಗಿ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಪದೇ ಪದೇ ವರ್ಷಾಂತರಗಳು ವಿಸರಣೆ ಚರ್ಮದ ಮೇಲೆ ಬೀಳುತ್ತಿದ್ದರೆ ಅಂಥ ಚರ್ಮದಲ್ಲಿ ಈ ರೀತಿಯ ಮರುವರ್ತನೆ ಕಾಣುವುದು. ಇದು ಕೆಲವರಲ್ಲಿ ಅತಿಯಾಗಿರಬಹುದು. ಸಾಕಷ್ಟು ಎಚ್ಚರವಹಿಸಿದ ವೈದ್ಯರೂ ವಿಸರಣತಜ್ಞರು ಹಲವೇಳೆ ಇದಕ್ಕೆ ಬಲಿಯಾಗುವರು. ಅನೇಕರಲ್ಲಿ ಕೈ ಮತ್ತು ಕೈ ಬೆರಳುಗಳಲ್ಲೂ ಇದು ಕಾಣುವುದು. ಮೊದಲ ಚಿಹ್ನೆಗಳು ಚಳಿಗೊಡ್ಡಿದ ಚರ್ಮದಲ್ಲಿ ಉರಿ ಮತ್ತು ನವೆ, ಒಣಕಲು ಚರ್ಮ, ಕೂದಲು ಉದುರುವುದು, ಚರ್ಮ, ಕೀಲುಗಳ ಮೇಲೂ ಚರ್ಮದ ಮಡಿಕೆಗಳಲ್ಲೂ ಒಡೆಸೀಳಿ ಆಗುವ ಬಿರಿಕೆಗಳು (ಫಿಶ್ಶರ್ದ್), ಚರ್ಮ ಸುಕ್ಕಲಾಗಿ ತೆಳುವಾಗುವುದು. ಒಣಕಲ ಚುಕ್ಕೆಗಳೂ ಬಣ್ಣದ ಚುಕ್ಕೆಗಳೂ ಹಿಗ್ಗಿದ ರಕ್ತನಾಳಗಳೂ ಕಾಣುವುವು. ಇವುಗಳೊಂದಿಗೆ ಉಗುರುಗಳೂ ಬಣ್ಣಗೆಟ್ಟು ಚೂರಾಗುತ್ತವೆ. ಚರ್ಮ ಅಲ್ಲಲ್ಲಿ ಕೊಂಚರ್ಮವಾಗಿ ಮಂದಗಟ್ಟಿರುವುದು ಮುಂದೆ ಕ್ಯಾನ್ಸರಾಗಿ ಪರಿವರ್ತಿಸಬಹುದಾದ್ದರಿಂದ ಅಂಥ ಚರ್ಮವನ್ನು ಜೀವುಂಡಿಗೆ (ಬಯೋಪ್ಸಿ) ಹಾಕಿ ಪರೀಕ್ಷಿಸಬೇಕು.

ರೋಗಚಿಕಿತ್ಸೆ: ಕೂರಾದ ಚರ್ಮದುರಿತವನ್ನು ತೇವವಿರುವ ಬಟ್ಟೆಗಳಿಂದ ತೋಯಿಸಿ ಜಿಡ್ಡು ಪದಾರ್ಥಗಳನ್ನು ಹ್ಚುವುದರಿಂದ ಮೆತುಗೊಳಿಸುವ ಲೇಪನಗಳಿಂದ ಮೊದಮೊದಲಲ್ಲಿ ಉರಿ ನವೆಗಳನ್ನು ತಗ್ಗಿಸಬಹುದು. ಬೇರೂರಿದ ಉರಿತದಿಂದ ಚರ್ಮ ಗಾಯಗೊಳ್ಳದಿದ್ದರೆ ಈ ಮೆತು ಲೇಪನಗಳಿಂದಲೇ ಸರಿಹೋಗಬಹುದು. ಹಾಗಿಲ್ಲದೇ ವರ್ಷ ಕಳೆದರೂ ಸರಿಹೋಗದೇ ಇದ್ದರೆ ಅಂಥ ಚರ್ಮವನ್ನು ತೆಗೆದು ರೋಗಿಯ ಬೇರೆ ಭಾಗದಿಂದ ಆರೋಗ್ಯವಾದ ಚರ್ಮವನ್ನು ಶಸ್ತ್ರಚಿಕಿತ್ಸೆಯ ಮೂಲಕ ನಾಟಿ ಹಾಕಬೇಕು. ಕೊಂಚರ್ಮದಿಂದ ಮಂದವಾದ ಕೂಡಲೆ ವಿದ್ಯುತ್ ಸುಡಿಗೆಯಿಂದ ತೆಗೆದು ಹಾಕಬೇಕು. ಸಣ್ಣ ಸಣ್ಣ ಗಾಯಗಳು ವಾಸಿಯಾಗಬಹುದು. ಇವು ಬಹಳ ನೋಯುತ್ತವೆ. ಲೋಳೆಸರದ ತಿರುಳನ್ನು ಗಾಯಗಳಿಗೆ ಹಾಕಿ ಕಟ್ಟುವುದರಿಂದ ನೋವು ಇಳಿದು ಬೇಗ ವಾಸಿಯಾಗುವುದು. ದೊಡ್ಡ ಗಾಯಗಳು ಸಾಮಾನ್ಯ ಚಿಕಿತ್ಸೆಗೆ ಜಗ್ಗದಲ್ಲಿ ಅವನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದು ಹಾಕಿ ಬೇರೆ ಚರ್ಮ ನಾಟಿ ಹಾಕಬೇಕು.

ರೋಗ ನಿಧಾನಕ್ಕೆ ಮತ್ತು ಚಿಕಿತ್ಸೆಗೆ ವಿಸರಣೆಯನ್ನು ಎಕ್ಸ್ ಕಿರಣಗಳನ್ನೂ ಬಳಸುತ್ತೇವೆ. ಕೆಲವು ವೇಳೆ ಇವು ಬೇಡದ ಮಾರುವರ್ತನೆಗಳಾಗಿಸುತ್ತವೆ. ಇದರಲ್ಲಿ ತಾತ್ಕಾಲಿಕವಾದರೂ ಮತ್ತೆ ಕೆಲವು ಸ್ಥಿರವಾಗಿ ನಿಲ್ಲಬಹುದು. ಕೆಲವು ವೇಳೆ ಇವೇ ವಿಷಮವಾಗಿ ಪ್ರಾಣಕ್ಕೇ ಅಪಾಯವಾಗಬಹುದು. (ಡಿ.ಪಿ.ಜೆ.)

**ಎಕ್ಸ್‌ಕಿರಣ ಹರಳುಶಾಸ್ತ್ರ :** ಎಕ್ಸ್‌ಕಿರಣನಮನ ವಿಧಾನಗಳಿಂದ ಹರಳುಗಳ ರಚನೆಯ ಅಭ್ಯಾಸ (ಎಕ್ಸ್‌ರೇ ಕ್ರಿಸ್ಟಲ್ಲೋಗ್ರಫಿ). ಒಂದು ಹರಳಿನ ರಚನೆ ಹೀಗಿದೆ; ಪರಮಾಣುಗಳ



**ಚಿತ್ರ 1**

ಅಥವಾ ಪರಮಾಣು ಸಮುದಾಯಗಳ ಅಥವಾ ಅಣುಗಳ ಜಾಲ; ಇದು ಮೂರು ಆಯಾಮಗಳಲ್ಲಿರುವ ಒಂದು ಏರ್ಪಾಡು. ಜಾಲ ಪುನರಾವರ್ತಿಸುವಂತೆ ರಚನೆ ಉಂಟು. ಪ್ರತಿಯೊಂದು ಹರಳಿನ ಜಾಲದಲ್ಲಿ ಬೇರೆ ಬೇರೆಯಾದ ಕೋಶಪರಿಮಾಣಗಳಿವೆ. ಅಲ್ಲದೇ ಆಯಾ ಹರಳಿಗೆ ವಿಶಿಷ್ಟವಾದ ಸಮಾಂಗತೆ (ಸಿಮೆಟ್ರಿ) ಸಹ ಇದೆ. ಜಾಲದಲ್ಲಿ ಬೇರೆ ಬೇರೆ ಪರಮಾಣುಗಳು ನಿರ್ದಿಷ್ಟ ಜಾಗಗಳಲ್ಲಿ ನೆಲೆಸಿರುತ್ತವೆ. ಪರಮಾಣುಗಳ ಸ್ಥಾನ, ಹರಳಿನ ನಾನಾಮಟ್ಟದ ಸಮಾಂಗತೆ ಮತ್ತು ಕೋಶಪರಿಮಾಣಗಳನ್ನು ನಿರ್ಧರಿಸುವಿಕೆಯೇ ಹರಳುಶಾಸ್ತ್ರ.

ಎಕ್ಸ್‌ಕಿರಣಗಳ ತರಂಗಾಂತರ ಮತ್ತು ಹರಳಿನಲ್ಲಿ ಪರಮಾಣುಗಳ ನಡುವಿನ ಅಂತರ ಸುಮಾರು ಒಂದೇ ಪ್ರಮಾಣದಲ್ಲಿರುತ್ತವೆ. ಇದನ್ನು ಗಮನಿಸಿ ವಾನ್‌ಲಾವೇ ಹರಳುಗಳ ಮೂಲಕ ಎಕ್ಸ್‌ಕಿರಣಗಳನ್ನು ಹಾಯಿಸಿದಾಗ ನಮನ ರೇಖಾಫಲಕದಲ್ಲಿನ (ಡಿಫ್ರಾಕ್ಷನ್ ಗ್ರೇಟಿಂಗ್) ದ್ಯುತಿನಮನದಂತೆ ನಮನಪರಿಣಾಮ ಹೊಂದುತ್ತವೆಂದು ಸೂಚಿಸಿದ (1912).

ಎಕ್ಸ್‌ಕಿರಣಗಳನ್ನು ಹಾಯಿಸಿದಾಗ ಹರಳಿನಿಂದ ಹೊರಬರುವ ಪ್ರಥಮವರ್ಗದ ಎಕ್ಸ್‌ಕಿರಣದಷ್ಟೇ ಅಲ್ಲದೆ ನಮನಗೊಂಡ ಬೇರೆ ಬೇರೆ ಕಿರಣಗಳು ನಿರ್ದಿಷ್ಟಕೋನಗಳಲ್ಲಿ ಹೊರಬರುತ್ತವೆ.

ಹರಳು ಮೂರು ಆಯಾಮಗಳ ನಮನ ರೇಖಾಫಲಕದಂತೆ (ತ್ರೀ ಡೈಮೆನ್ಷನಲ್ ಡಿಫ್ರಾಕ್ಷನ್ ಗ್ರೇಟಿಂಗ್) ವರ್ತಿಸುವುದರಿಂದ ಈ ನಮನವುಂಟಾಗುತ್ತದೆಂದು ಲಾವೇ ಸೂಚಿಸಿದ. ಎಕ್ಸ್‌ಕಿರಣ ಹರಳಿನ ಮೂಲಕ ಹಾಯ್ದಾಗ ಆಕಾಶ ಜಾಲದ ಬಿಂದುಗಳಲ್ಲಿ (ಸ್ಪೇಸ್ ಲ್ಯಾಟ್ಟಿಸ್ ಪಾಯಿಂಟ್ಸ್) ಹರಡಿರುವ ಪರಮಾಣು ಗುಂಪುಗಳಲ್ಲಿನ ಪ್ರತಿಯೊಂದು ಪರಮಾಣು ವಿಕಿರಣದ ಸ್ವಲ್ಪಭಾಗವನ್ನು ಚದರಿಸುತ್ತದೆ. ಅದರಿಂದ ಹರಳಿನ ಪ್ರತಿಯೊಂದು ಜಾಲಕಬಿಂದು ಚದುರಿದ ತರಂಗಕಗಳ (ವೇವ್‌ಲೆಟ್ಸ್) ಕೇಂದ್ರವಾಗುತ್ತದೆ. ಹರಳುಜಾಲದಲ್ಲಿರುವ ಕ್ರಮಬದ್ಧ ಅಂತರದಿಂದ (ಸ್ಪೇಸಿಂಗ್) ಈ ಕೇಂದ್ರಗಳ ಮಧ್ಯೆ ನಿರ್ದಿಷ್ಟವಾದ ದಶೆ (ಫೇಸ್) ಸಂಬಂಧಗಳಿರುತ್ತವೆ. ಈ ಮೇಲಿನ ವಿಚಾರವನ್ನಾಧರಿಸಿ ಲಾವೇ ನಮನಕಿರಣವುಂಟಾಗಲು ಪಾಲಿಸಬೇಕಾದ ನಿಯಮಗಳನ್ನು ಕೊಟ್ಟಿರುತ್ತಾನೆ.

a (cos á –cos $i_1$) = $n_1$ë

b (cos â –cos $i_2$) =$n_2$ ë

c (cos ã–cos $i_3$) =$n_3$ ë . . .(1)

ಇವೇ ಲಾವೇ ಸಮೀಕರಣಗಳು. a, b, c ಗಳು ಹರಳಿನ ಮೂರು ಪ್ರಧಾನ ಅಕ್ಷಗಳಲ್ಲಿನ ಜಾಲಾಂತರಗಳು (ಲ್ಯಾಟ್ಟಿಸ್ ಸ್ಪೇಸಿಂಗ್). $i_1$, $i_2$, $i_3$ ಗಳು ಪತನ ತರಂಗ ಲಂಬರೇಖೆ a, b, c ಅಕ್ಷಗಳೊಡನೆ ಮಾಡುವ ಕೋನಗಳು. á, â, ã ಗಳು ನಮನ ತರಂಗಮುಖದ ಲಂಬರೇಖೆ a, b, c ಅಕ್ಷಗಳೊಡನೆ ಮಾಡುವ ಕೋನಗಳು.



**ಚಿತ್ರ 2**

ಈ ನಮನವನ್ನು ಡಬ್ಲ್ಯು.ಎಲ್.ಬ್ರ್ಯಾಗ್ ಬೇರೊಂದು ರೀತಿ ವಿವರಿಸುತ್ತಾನೆ. ಆಕಾಶಜಾಲದ ಬಿಂದುಗಳು ಒಂದೇ ರೀತಿಯ ಸಮಾಂತರವುಳ್ಳ ಸಮಾನಾಂತರ ಸಮತಲದಲ್ಲಿ ಹರಡಿರುವಂತೆ ಗಣಿಸಬಹುದು. ಸಮಾನಾಂತರ ಎಕ್ಸ್‌ಕಿರಣಗಳು ಸಮತಲಕ್ಕೆ ಒಂದು ಓರೆಕೋನದಲ್ಲಿ ಪತನವಾದಾಗ ಪ್ರತಿಯೊಂದು ಸಮತಲ ಪತನ ಕಿರಣದ ಸ್ವಲ್ಪ ಭಾಗವನ್ನು ಪ್ರತಿಫಲಿಸುತ್ತದೆ. ಹೈಗನ್ಸನ ಸಮತಲಪ್ರತಿಫಲನ ನಿಯಮದಂತೆ ಸಮತಲದಲ್ಲಿನ ಕೇಂದ್ರಗಳಲ್ಲಿ ಚದರಿದ ತರಂಗಕಗಳು ಸೇರುತ್ತವೆ. ಒಂದು ನಮನಕಿರಣ ಉಂಟಾಗುವುದಾದರೆ ಅದು ಹರಳಿನ ಸಮತಲದಿಂದುಟಾಗುವ ಪ್ರತಿಫಲನ ದಿಕ್ಕಿನಲ್ಲಾಗುತ್ತದೆ. ಪ್ರತಿಯೊಂದು ಸಮತಲದಿಂದ ಪ್ರತಿಫಲಿಸಲ್ಪಟ್ಟ ತರಂಗಗಳು ಒಂದೇ ದಶೆಯಲ್ಲಿದ್ದರೆ ಮಾತ್ರ ನಮನವಾಗುತ್ತದೆ; ಇಲ್ಲದಿದ್ದರೆ ವಿನಾಶೀವ್ಯತಿಕರಣವಾಗುತ್ತದೆ (ಡಿಸ್ಟ್ರಕ್ಟಿವ್ ಇಂಟರ್‌ಫಿಯರೆನ್ಸ್). ಒಂದು ಕಿರಣ ಪತನವಾದಾಗ ಬೇರೆ ಬೇರೆ ಸಮತಲಗಳಿಂದ ಪ್ರತಿಫಲಿಸಲ್ಪಟ್ಟ ಕಿರಣಗಳ ಮಧ್ಯೆ ಇರುವ ಪಥವ್ಯತ್ಯಾಸ 2dsinè. ಇಲ್ಲಿ è= ಓರೆಕೋನ (ಕಿರಣ ಸಮತಲಗಳ ಜೊತೆ ಮಾಡುವ ಕೋನ). d= ಸಮತಲಗಳ ಮಧ್ಯದ ಅಂತರ. ಆದರೆ ಒಂದೇ ಶ್ರೇಣಿಯ ಸಮತಲದಿಂದ ಪ್ರತಿಫಲನವಾಗಿ ರಚನಾತ್ಮಕ ವ್ಯತಿಕರಣ (ಕನ್ಸ್ಟ್ರಕ್ಟಿವ್ ಇಂಟರ್‌ಫಿಯರನ್ಸ್) ಆಗಬೇಕಾದರೆ ಅನುಸರಿಸಬೇಕಾದ ನಿಯಮ.

2dsinè=në . . .(2)

# ಎಕ್ಸ್‌ಕಿರಣ ಖಗೋಳವಿಜ್ಞಾನ

ಇದು ಲಾವೇ ಸಮೀಕರಣಗಳಿಗೆ ಗಣಿತರೀತಿಯಿಂದ ಸರಿಸಮನಾಗಿರುತ್ತದೆ. ಇದನ್ನು ಬ್ರ್ಯಾಗ್ ಸಮೀಕರಣವೆನ್ನುತ್ತಾರೆ. ಎಕ್ಸ್‌ಕಿರಣನಮನ ಛಾಯಾಚಿತ್ರದ ಸೂಕ್ಷ್ಮಪರಿಶೀಲನೆಯಿಂದ ಹರಳಿನ ರಚನೆಯನ್ನು ಕಂಡುಹಿಡಿಯಬಹುದು. ಕೋಶದ ಪರಿಮಾಣಗಳನ್ನು ನಮನ ಗರಿಷ್ಠಗಳ (ಡಿಫ್ರಾಕ್ಷನ್ ಮ್ಯಾಕ್ಸಿಮಂ) ಸ್ಥಾನದಿಂದಲೂ ಹರಳಿನ ಸಮಾಂಗತೆಯನ್ನು ನಮನ ಗರಿಷ್ಠಗಳ ವಿತರಣೆಯಿಂದಲು ಕಂಡುಹಿಡಿಯಬಹುದು. ಪ್ರತಿಯೊಂದು h, k, l ಪ್ರತಿಫಲನದ ಸಾಪೇಕ್ಷ ತೀಕ್ಷ್ಣತೆ ಕೋಶದಲ್ಲಿನ ಪರಮಾಣು ವಿತರಣೆಯನ್ನು ಅವಲಂಬಿಸಿದೆ. (h, k, l ಎಂಬುವು ಸಮತಲಗಳನ್ನು ಕ್ರಮವಾಗಿ ಸೂಚಿಸಲು ಮಿಲ್ಲರ್ ಸೃಷ್ಟಿಸಿದ ಮಿಲ್ಲರ್ ಸೂಚ್ಯಂಕಗಳು). ಸಾಧಾರಣವಾಗಿ ಚದರಿಸುವ ದ್ರವ್ಯದ ವಿತರಣೆಗೂ ಅದು ಉಂಟುಮಾಡುವ ನಮನ ಮಾದರಿಗೂ ಪರಸ್ಪರ ಸಂಬಂಧವಿದೆ. ಇವುಗಳಲ್ಲಿ ಯಾವುದಾದರೂ ಒಂದು ಪೂರ್ಣವಾಗಿ ಗೊತ್ತಿದ್ದರೆ ಮತ್ತೊಂದನ್ನು ಪೂರ್ಣವಾಗಿ ಕಂಡುಹಿಡಿಯಬಹುದು ಮತ್ತು ಗುಣಿಸಬಹುದು. ಇದನ್ನು ಮಾಡುವ ಗಣಿತ ಸಾಧನಕ್ಕೆ ಫೂರಿಯರ್ ಪರಿವರ್ತನ (ಟ್ರಾನ್ಸ್‌ಫಾರ್ಮ್) ಎನ್ನುತ್ತಾರೆ.

h, k, l=ಪ್ರತಿಫಲನ ಸೂಚಿ: (h, k, l)=h k l ಪ್ರತಿಫಲನದಲ್ಲಿ j ಪರಮಾಣುವಿನ ಚದರಿಸುವ ಶಕ್ತಿ. F(h, k, l)= h k l ಪ್ರತಿಫಲನದಲ್ಲಿ ಚದರಿಸಲ್ಪಟ್ಟ ವಿಕಿರಣದ ಕಂಪನ ವೈಶಾಲ್ಯ ಅಥವಾ ರಚನಾಪವರ್ತನ. x, y, z ಎಂಬುವು ಏಕಕೋಶದಲ್ಲಿ ಒಂದು ಬಿಂದುವಿನ ಸ್ಥಾನ ಸೂಚಿಸುವ ಸ್ಥಾನಾಂಕಗಳು. V=ಏಕಕೋಶದ ಗಾತ್ರ. b=ಏಕಕೋಶದ x, y, z ಸ್ಥಾನಾಂಕ ಸೂಚಿತಜಾಗದಲ್ಲಿನ ಸಾಂದ್ರತೆಗಳಾದರೆ ಹರಳಿನಲ್ಲಿ ದ್ರವ್ಯ ವಿತರಣೆ ಮತ್ತು ಅದು ಉಂಟುಮಾಡುವ ನಮನದ ಸಂಬಂಧಕೊಡುವ ಫೋರೆಯರ್ ಪರಿವರ್ತನ

$$F_{hkl} = \Sigma\, b_{hkl} \exp 2ði\,(hx+ky+lz) \qquad \ldots(3)$$

$$b_{xyz} = \frac{1}{V} \sum_{h} \sum_{k} \sum_{I} F_{hkl}\, exp\left[-2\pi i\left(hx+ky+lz\right)\right] \qquad \ldots(4)$$

ಬೇರೆ ಬೇರೆ ಪರಮಾಣುಗಳ ಚದರಿಸುವ ಶಕ್ತಿ ಗೊತ್ತಿದೆ. ಆದ್ದರಿಂದ ಒಂದು ಹರಳಿನ hkl ಪ್ರತಿಫಲನದಿಂದಾಗುವ ನಮನಕಿರಣದ ಕಂಪನವೈಫಲ್ಯವನ್ನು (3) ರಿಂದ ಕಂಡುಹಿಡಿಯಬಹುದು. ಸಾಧಾರಣವಾಗಿ ಕಂಪನವೈಶಾಲ್ಯ ಸಂಕೀರ್ಣವಾಗಿರುತ್ತದೆ. ಅದರ ಪರಿಮಾಣ $|F_{hkl}|$ ಮತ್ತು ದಶೆ ($\phi_{hkl}$). ಒಂದು ಹರಳಿನಲ್ಲಿನ ವಿತರಣೆ ಗೊತ್ತಿದ್ದರೆ ಅದರಿಂದ ಬರಬಹುದಾದ ನಮನ ಮಾದರಿಯನ್ನು ಸುಲಭವಾಗಿ ಗುರುತಿಸಬಹುದು. ಆದರೆ ಒಂದು ನಮನ ಮಾದರಿಯಿಂದ ರಚನೆಯನ್ನು ಸುಲಭವಾಗಿ ಹಾಗೂ ಪೂರ್ಣವಾಗಿ ಕಂಡುಹಿಡಿಯಲು ಬರುವುದಿಲ್ಲ. ಕಾರಣವೇನೆಂದರೆ ನಮಗೆ ಕಂಪನವೈಶಾಲ್ಯ ಪ್ರಮಾಣ ಪತ್ರ ಗೊತ್ತಾಗುತ್ತದೆ. ದಶೆಯ ಬಗ್ಗೆ ನಮನಛಾಯಾಚಿತ್ರದಿಂದ ಎಳ್ಳಷ್ಟೂ ಗೊತ್ತಾಗುವುದಿಲ್ಲ. ಆದ್ದರಿಂದ ರಚನೆಯನ್ನು ಪತ್ತೆ ಹಚ್ಚುವಾಗ ಬೇರೆ ಬೇರೆ ದಾರಿಗಳನ್ನು ಅನುಸರಿಸಬೇಕಾಗುತ್ತದೆ.

ಪರೀಕ್ಷಾ ಊಹೆ ಮತ್ತು ತಪ್ಪು ಸರಿಪಡಿಸುವ ವಿಧಾನ (ಟ್ರಯಲ್ ಅಂಡ್ ಎರ್ರರ್ ಮೆಥಡ್): ಛಾಯಾಚಿತ್ರದಲ್ಲಿ ಬರುವ ನಮನಬಿಂದುಗಳ ತೀಕ್ಷ್ಣತೆಯನ್ನು ಆ ಸಂದರ್ಭದಲ್ಲಿ ಬೇರೆ ಬೇರೆ ತಪ್ಪುಗಳಿಂದ ಉಂಟಾಗಬಹುದಾದ ತೀಕ್ಷ್ಣತಾ ವ್ಯತ್ಯಾಸವನ್ನು ತಿದ್ದಿ ಅಳತೆಮಾಡುವುದು ಮೊದಲಹೆಜ್ಜೆ. ನಮನ ಬಿಂದುಗಳ ವಿತರಣೆ ಮತ್ತು ಅವುಗಳ ಇರುವಿಕೆ, ಇಲ್ಲದಿರುವಿಕೆಗಳಿಂದ ಒಂದು ಪೂರ್ವಭಾವೀ ರಚನೆಯನ್ನು ಗೊತ್ತುಮಾಡಬೇಕು. ಅನಂತರ ಈ ರಚನೆಯಿಂದ ದಶೆಗಳನ್ನು ಲೆಕ್ಕದಲ್ಲಿಟ್ಟುಕೊಂಡು ರಚನಾಪವರ್ತನವನ್ನು ಗುಣಿಸಬೇಕು. ಪ್ರಾಯೋಗಿಕವಾಗಿ ಕಂಡುಹಿಡಿದಿದ್ದನ್ನೂ ತಾತ್ತ್ವಿಕವಾಗಿ ಗುಣಿಸಿದ್ದನ್ನೂ ಹೋಲಿಸಿ ಪೂರ್ವಭಾವೀ ರಚನೆಯನ್ನು ಸ್ವಲ್ಪ ಸ್ವಲ್ಪ ವ್ಯತ್ಯಾಸಮಾಡಿ ಎರಡೂ ಒಂದೇ ಬರುವವರೆಗೆ ಪುನರಾವರ್ತಿಸಬೇಕು. ಈ ರೀತಿ ಬಂದುದನ್ನು ಮುಂದಿನ ಪರೀಕ್ಷಾರಚನೆಯಲ್ಲಿ ಅಳವಡಿಸುವುದರಿಂದ ಹರಳಿನ ರಚನೆಯನ್ನು ಕಂಡುಹಿಡಿಯಬಹುದು.

ಹರಳುಗಳ ರಚನೆಯನ್ನು ಕಂಡುಹಿಡಿಯಲು ಇತರ ಕೆಲವು ವಿಧಾನಗಳಿವೆ: ಸುಮಾರಾಗಿ ಒಂದೇ ರಚನೆ ಇರಬಹುದಾದ ಬೇರೆ ಬೇರೆ ಹರಳುಗಳ ನಮನ ಚಿತ್ರಗಳನ್ನು ತುಲನೆ ಮಾಡುವುದು. ಒಂದು ಹರಳಿನಲ್ಲಿನ ಹೆಚ್ಚಿನ ಪರಮಾಣು ಸಂಖ್ಯೆಯುಳ್ಳ ಅಣುವಿನ ಸ್ಥಾನವನ್ನು ಕೇಂದ್ರವಾಗಿ ಗಣಿಸಿ ದಶೆಗಳನ್ನು ಕಂಡುಹಿಡಿದು ಇತರ ಅಣುಗಳ ಸ್ಥಾನಗಳನ್ನು ನಿರ್ಧರಿಸಬಹುದು. ನೇರವಾದ ಫೂರಿಯರ್ ವಿಶ್ಲೇಷಣೆ ಪ್ಯಾಟರ್‌ಸನ್ ವಿಶ್ಲೇಷಣೆ.

ಎಕ್ಸ್‌ಕಿರಣನಮನವನ್ನು ದಾಖಲೆ ಮಾಡುವಾಗ ನಾನಾ ರೀತಿಯಲ್ಲಿ ಛಾಯಾಚಿತ್ರಕಾಗದವನ್ನು ಅಳವಡಿಸಬಹುದು. ಬೇರೆಬೇರೆ ರೀತಿಯ ಛಾಯಾಗ್ರಾಹಕಗಳನ್ನು ಉಪಯೋಗಿಸಬೇಕು. ಪ್ರತಿಯೊಂದು ಛಾಯಾಗ್ರಾಹಕದಿಂದ ಬರುವ ಚಿತ್ರಗಳು ಹರಳಿನ ರಚನೆಯ ಬಗ್ಗೆ ಬೇರೆ ಬೇರೆ ಮಟ್ಟದ ತಿಳಿಯನ್ನು ನೀಡುತ್ತದೆ.

ಪೌಡರ್ ಕ್ಯಾಮೆರಾ: ಡಿಬಾಯ್, ಶೆರರ್ ಮತ್ತು ಹಲ್ ಎಂಬುವರು ನಿರ್ಮಿಸಿದ ಈ ಕ್ಯಾಮರಾದಿಂದ ಮುಖ್ಯವಾಗಿ ಏಕಕೋಶ ಆಯಾಮಗಳನ್ನು ಮಾತ್ರ ತಿಳಿಯಲು ಸಾಧ್ಯ. ಹರಳನ್ನು ಅರೆದು ಬಹು ಸೂಕ್ಷ್ಮಕಣಗಳನ್ನಾಗಿ ಮಾಡಿ ಅನಂತರ ಅಂಟಿಸುವ ವಸ್ತುವಿನ ಸಹಾಯದಿಂದ ಒಂದು ಕಡ್ಡಿಯಂತೆ ಮಾಡಬೇಕು. ಈಗ ಇದರ ಮೇಲೆ ಎಕ್ಸ್‌ಕಿರಣಗಳನ್ನು ಹಾಯಿಸಿದಾಗ ಛಾಯಾಚಿತ್ರಕಾಗದದ ಮೇಲೆ ನಮನರೆಗಳನ್ನು ಕಾಣುತ್ತೇವೆ. ಈ ಬಗೆಯ ಚಿತ್ರೀಕರಣದಿಂದ ಹರಳಿನ ಸಾಮಾನ್ಯ ರಚನೆಯನ್ನು ಕಂಡುಹಿಡಿಯಬಹುದು. ಇದರಲ್ಲಿ ಮುಂಭಾಗ ಪ್ರತಿಫಲನ ಹಾಗೂ ಹಿಂಭಾಗ ಪ್ರತಿಫಲನ–ಈ ಎರಡು ರೀತಿಯಿಂದಲೂ ಚಿತ್ರವನ್ನು ಗ್ರಹಿಸಬಹುದು.

ಲಾವೇ ವಿಧಾನ: ಇಲ್ಲಿ ವಸ್ತುವಿನ ಮೇಲೆ ಅವಿಚ್ಛಿನ್ನ ಎಕ್ಸ್‌ಕಿರಣವನ್ನು ಹಾಯಿಸುತ್ತಾರೆ. ನಮನಗೊಂಡ ಕಿರಣಗಳನ್ನು ಒಂದು ಸಮತಲ ಛಾಯಾಫಲಕದ ಮೇಲೆ ಗ್ರಹಿಸುತ್ತಾರೆ. ನಮನಚಿತ್ರದಲ್ಲಿ ವಸ್ತುವಿನ ಸಮಾಂಗತೆಯನ್ನು ಅವಲಂಬಿಸಿರುವ ಚುಕ್ಕೆಗಳ ವಿತರಣೆಯನ್ನು ಕಾಣಬಹುದು. ಇದರ ವಿಶ್ಲೇಷಣೆ ಸ್ವಲ್ಪ ಕಷ್ಟ. ಆದ್ದರಿಂದ ಹರಳಿನ ಸಮಾಂಗತೆಯನ್ನು ಪಡೆಯಲು ಮಾತ್ರ ಈ ವಿಧಾನವನ್ನು ಬಳಸಬಹುದು.

ಬ್ರ್ಯಾಗ್‌ನ ಎಕ್ಸ್‌ಕಿರಣ ರೋಹಿತ ಮಾಪಕ: ಇಲ್ಲಿ ಛಾಯಾಫಲಕದ ಮೇಲೆ ನಮನವನ್ನು ಗ್ರಹಿಸುವ ಬದಲು ಬೇರೆ ಬೇರೆ ಪತನಕೋನಗಳಲ್ಲಿ ಎಕ್ಸ್‌ಕಿರಣಗಳನ್ನು ಹಾಯಿಸಿ ನಮನ ಕಿರಣ ಗರಿಷ್ಠಗಳನ್ನು ಗೈಗರ್ ಗುಣಕಗಳಿಂದ ನೇರವಾಗಿ ಪತ್ತೆ ಹಚ್ಚುತ್ತಾರೆ. ಇದಕ್ಕೆ ದೊಡ್ಡದಾದ ನಿರ್ದಿಷ್ಟ ಮುಖಗಳುಳ್ಳ ಹರಳಿನ ಅವಶ್ಯಕತೆ ಇರುತ್ತದೆ.

ತಿರುಗುವ ಹರಳಿನ ವಿಧಾನ: ಇಲ್ಲಿ ಯಾಂತ್ರಿಕವಾಗಿ ತಿರುಗುವ ಹರಳಿನ ಮೇಲೆ ಎಕ್ಸ್‌ಕಿರಣ ಹಾಯಿಸಿದಾಗ ನಮನಗೊಂಡ ಕಿರಣಗಳನ್ನು ಹರಳಿನ ತಿರುಗುವ ಅಕ್ಷಕ್ಕೆ ಸಮಾನಾಂತರವಾಗಿ ವರ್ತುಲ ಸ್ತಂಭಾಕಾರದಲ್ಲಿ ಹರಳಿನ ಕೇಂದ್ರವಾಗಿರುವಂತೆ ಛಾಯಾಚಿತ್ರ ಕಾಗದವನ್ನು ಅಳವಡಿಸಲಾಗಿರುತ್ತದೆ. ನಮನವನ್ನು ಸಮತಲರೇಖಾಫಲಕದ ಮೇಲೂ ಪಡೆಯಬಹುದು. ಈ ಮಾದರಿಯ ಗ್ರಹಣದಿಂದ ಹರಳಿನ ಸಮಾಂಗತೆಯ ಬಗ್ಗೆ ಹರಳಿನ ಏಕಕೋಶ ಆಯಾಮ, ಏಕಕೋಶ ಮುಖಗಳು ಮಾಡುವ ಕೋನದ ಬಗ್ಗೆ ಮಾಹಿತಿ ಗಳಿಸಬಹುದು.

ಪುರಸ್ಸರಣ ವಿಧಾನ (ಪ್ರಿಸೆಶ್ಯನ್ ಮೆಥಡ್): ಇಲ್ಲಿ ಹರಳನ್ನು ನಿರ್ದಿಷ್ಟಕೋನಗಳ ಮಧ್ಯೆ ಎಕ್ಸ್‌ಕಿರಣದ ಅಕ್ಷದ ಮೇಲೆ ತೂಗಾಡುವಂತೆ ಮಾಡುತ್ತಾರೆ. ಈ ವಿಧಾನದಲ್ಲಿ ಬೇರೆ ಬೇರೆ hkl ಪ್ರತಿಫಲನಗಳು ದೂರದೂರಕ್ಕೆ ವಿಭಜಿಸಲ್ಪಡುವುದರಿಂದ ಹರಳಿನ ಬಗ್ಗೆ ಸುಲಭವಾಗಿ ಮಾಹಿತಿ ಪಡೆಯಬಹುದು. ಈ ವಿಧಾನದಿಂದ ಹರಳಿನ ಕೋಶ ಆಯಾಮ ಮತ್ತು ಸಮಾಂಗತೆಗಳ ಬಗೆಗಿನ ವಿಚಾರ ತಿಳಿಯುತ್ತದೆ.

ವೈಸೆನ್‌ಬರ್ಗ್‌ರವರ ಚಲಿಸುವ ಛಾಯಾಫಲಕ ವಿಧಾನ: ಇದರಲ್ಲಿ ಹರಳನ್ನು ಮಂದವಾಗಿ ತಿರುಗುವಂತೆ ಮಾಡುವುದಲ್ಲದೆ ಅದಕ್ಕೆ ಹೊಂದುವಂತೆ ಛಾಯಾಫಲಕವೂ ಚಲಿಸುವಂತೆ ಮಾಡಿರುತ್ತಾರೆ. ಇದರಿಂದ ಒಂದೇ ಸ್ಥಳದಲ್ಲಿ ಬೀಳಬಹುದಾದ ಬೇರೆ ಬೇರೆ ನಮನಕಿರಣಗಳನ್ನು ಹರಡುವಂತೆ ಮಾಡಬಹುದು. ಹೀಗೆ ಮಾಡುವುದರಿಂದ ಬರುವ ಒಂದು hkl ಪ್ರತಿಫಲನವನ್ನು ಎರಡು ಕೋನಗಳಿಂದ ಸೂಚಿಸಬೇಕಾಗುತ್ತದೆ. ಈ ವಿಧಾನದಿಂದ ಹರಳಿನ ಸಮಾಂಗತೆಯನ್ನು ಸುಲಭವಾಗಿಯೂ ಪೂರ್ಣವಾಗಿಯೂ ಕಂಡುಹಿಡಿಯಬಹುದು.

ಮೇಲೆ ಹೇಳಿದ ವಿಧಾನಗಳಲ್ಲದೆ ವಿಮುಖ ಕಿರಣವಿಧಾನ. ಸೂಕ್ಷ್ಮಕಿರಣ ವಿಧಾನ ಇವೇ ಮೊದಲಾದ ಇತರ ವಿಧಾನಗಳೂ ಇವೆ.

ಎಕ್ಸ್‌ಕಿರಣನಮನ ಹರಳಿನ ರಚನೆಯನ್ನೂ ಪತ್ತೆ ಹಚ್ಚುವಲ್ಲಿ ಸೂಕ್ಷ್ಮದರ್ಶಕವೆಂಬಂತಿದೆ. ಅಲ್ಲದೆ ಇದು ಹರಳಿನಲ್ಲಿರಬಹುದಾದ ಅಪರಿಪೂರ್ಣತೆ (ಇಂಪರ್ಫೆಕ್ಷನ್), ಕ್ರಮಾಕ್ರಮ ವ್ಯತ್ಯಾಸ (ಆರ್ಡರ್ ಡಿಸಾರ್ಡರ್ ಚೇಂಜಸ್) ಹಾಗೂ ಹರಳು ಕಟ್ಟಡದಲ್ಲಿನ ದೋಷಗಳನ್ನು (ಪ್ಯಾಕಿಂಗ್ ಡಿಫೆಕ್ಟ್ಸ್) ಕಂಡುಹಿಡಿಯುವಲ್ಲಿ ಪರಿಣಾಮಕಾರಿ ಅಸ್ತ್ರವಾಗಿದೆ. (ಜೆ.ಎಸ್.)

**ಎಕ್ಸ್‌ಕಿರಣ ಖಗೋಳವಿಜ್ಞಾನ:** ವಿಶ್ವದ ಎಕ್ಸ್‌ಕಿರಣಾಕರಗಳನ್ನು ಶೋಧಿಸಿ ಅಭ್ಯಸಿಸುವ ಖಗೋಳವಿಜ್ಞಾನ ವಿಭಾಗ (ಎಕ್ಸ್‌ರೇ ಆಸ್ಟ್ರಾನಮಿ). ನಕ್ಷತ್ರ, ಬ್ರಹ್ಮಾಂಡ (ಗ್ಯಾಲಕ್ಸಿ), ನೆಬ್ಯುಲ, ಕ್ವಾಸಾರ್, ಪಲ್ಸಾರ್ ಇವೆಲ್ಲವೂ ವಿದ್ಯುತ್ಕಾಂತ ತರಂಗಗಳನ್ನು ವಿಸರಿಸುವ ಆಕರಗಳು. ರೇಡಿಯೊ, ಅತಿರಕ್ತ, ದೃಗ್ಗೋಚರ ಬೆಳಕು, ಅತಿನೇರಿಳೆ, ಎಕ್ಸ್‌ಕಿರಣಗಳು, ಗಾಮಕಿರಣಗಳು ಮುಂತಾದ ವಿವಿಧ ವಿದ್ಯುತ್ಕಾಂತ ತರಂಗಗಳು ಅವುಗಳ ಆಕರಗಳಿಂದ ವಿಶ್ವದ ಎಲ್ಲೆಡೆಗೂ ಸೆಕೆಂಡಿಗೆ 3,00,000 ಕಿ.ಮೀ. ವೇಗದಿಂದ ಪ್ರವಹಿಸುತ್ತವೆ. ಒಂದು ಆಕರ ರೇಡಿಯೊ ಮುಂತಾದ (ಬೆಳಕಿನವರೆಗಿನ) ದೀರ್ಘ ತರಂಗಗಳನ್ನು ಮಾತ್ರ ವಿಸರಿಸಬಹುದು. ಇವು ಅತಿರಕ್ತ ಆಕರಗಳು. ಇನ್ನೊಂದು ಆಕರ ಅತಿನೇರಳೆ ಮುಂತಾದ (ಬೆಳಕಿನ ತರುವಾಯದ) ಹ್ರಸ್ವತರಂಗಗಳನ್ನು ಮಾತ್ರ ವಿಸರಿಸಬಹುದು. ಇವು ಅತಿನೇರಿಳೆ ಆಕರಗಳು. ಇವೆರಡು ವರ್ಗದ ಆಕರಗಳನ್ನು ಬರಿಗಣ್ಣಿಂದ ಅಥವಾ ದೂರ ಛಾಯಾಗ್ರಹಣದಿಂದ ಗುರುತಿಸುವಂತಿಲ್ಲ. ದೃಗ್ಗೋಚರ ಬೆಳಕನ್ನು ಇವು ಸೇರದಿರುವುದೇ ಇದರ ಕಾರಣ. ಇನ್ನು ಮೂರನೆಯ ವರ್ಗದ ಆಕರಗಳು ಬೆಳಕನ್ನೂ ಒಳಗೊಂಡಂತೆ ಇತರ ತರಂಗಗಳನ್ನೂ ವಿಸರಿಸಬಹುದು. ಇವು ದೃಗ್ಗೋಚರ ನಕ್ಷತ್ರಗಳು. ಸೂರ್ಯ ಒಂದು ಉದಾಹರಣೆ. ಆಕಾಶದಲ್ಲಿ ಕಾಣುವ ಮಿನುಗು ಚುಕ್ಕೆಗಳೆಲ್ಲವೂ ದೃಗ್ಗೋಚರ ನಕ್ಷತ್ರಗಳು.

ಒಂದು ಆಕರದಿಂದ ವಿಸರಿತವಾಗುವ ವಿದ್ಯುತ್ಕಾಂತ ತರಂಗಗಳು ಭೂತಲವನ್ನು (ಎಂದರೆ ವೀಕ್ಷಣಾಲಯವನ್ನು) ಪ್ರವೇಶಿಸಿ ತನ್ಮೂಲಕ ಆ ಆಕರದ ಇರವನ್ನು ವ್ಯಕ್ತಪಡಿಸಬೇಕು. ಇಲ್ಲಿ ಎದುರಾಗುವ ನಾಲ್ಕು ಮುಖ್ಯ ಸಮಸ್ಯೆಗಳನ್ನು ಮುಂದೆ ವಿವರಿಸಿದೆ. ಮೊದಲನೆಯದು ದೂರ. ವಿಶ್ವದ ಮಹಾ ವ್ಯಾಪ್ತಿಯಲ್ಲಿ ಅಸಂಖ್ಯಾತ ಆಕರಗಳಿಂದ ಹೊರಟ ತರಂಗಗಳು ಇನ್ನೂ ಭೂಮಿಯನ್ನು ತಲುಪದಿರುವುದು ಶಕ್ಯ. ಆದ್ದರಿಂದ ಅವೆಷ್ಟೋ ಆಕರಗಳ

ಇರವು ನಮಗೆ ತಿಳಿಯುವುದೇ ಇಲ್ಲ. ಎರಡನೆಯದಾಗಿ ಶಕ್ತಿಕ್ಷಯ. ಆಕರದಿಂದ ವಿಸರಿತವಾದ ತರಂಗ ಮೂಲತಃ ಶಕ್ತಿಹೀನವಾಗಿದ್ದರೆ ಅಥವಾ ಅತಿದೂರದಲ್ಲಿದ್ದು ದೂರಗಮನದಲ್ಲಿ ಶಕ್ತಿ ಕ್ಷಯಿಸಿದರೆ ಭೂತಲದಲ್ಲಿ ಅದನ್ನು ಗುರುತಿಸುವುದು ಕಷ್ಟ. ಮೂರನೆಯದಾಗಿ ತರಂಗ ಗಮಿಸುವ ಪಥದಲ್ಲಿ ಎದುರಾಗುವ ಅಡಚಣೆಗಳು ಮತ್ತು ಅವುಗಳ ಪ್ರಭಾವಗಳು. ಇವುಗಳ ಪರಿಣಾಮವಾಗಿ ಎಕ್ಸ್‌ಕಿರಣಗಳು ಭೂಮಿಯನ್ನು ತಲುಪದಿರಬಹುದು ಅಥವಾ ಪ್ರಭಾವಿತವಾಗಬಹುದು. ಕೊನೆಯದಾಗಿ ಭೂಪರಿಸರ. ಭೂಮಿಯನ್ನು ಆವರಿಸಿಕೊಂಡಿರುವ ಪರಿಸರವನ್ನು ಹಾಯ್ದು ತರಂಗ ಭೂತಲವನ್ನು ಮುಟ್ಟಬೇಕು. ನೆಲದಿಂದ ಸರಾಸರಿ 2.4 ಕಿ.ಮೀ. ಎತ್ತರದವರೆಗೆ ವಾಯುಮಂಡಲ (ಕ್ರಮೇಣ ವಿರಳವಾಗುತ್ತ) ವ್ಯಾಪಿಸಿದೆ. ಅಲ್ಲಿಂದ ಮೇಲೆ ವಾಯುಕಣಗಳು ತೀರ ವಿರಳವಾಗುತ್ತ ಹೋಗಿ 15–50 ಕಿ.ಮೀ. ವಲಯದಲ್ಲಿ ಒಂದು ಓಝೋನ್ ($O_3$)ಗೋಳ ಏರ್ಪಡುವುದು. ವಾಯುಮಂಡಲದ ಆಕ್ಸಿಜನ್ನಿಗೂ ($O_2$) ಸೂರ್ಯನಿಂದ ಪ್ರವಹಿಸುವ ಅತಿನೇರಳೆ ಕಿರಣಗಳಿಗೂ ನಡೆಯುವ ರಾಸಾಯನಿಕ ಕ್ರಿಯೆಯ ಪರಿಣಾಮ ಈ ಗೋಳ. ಓಝೋನ್ ಗೋಳದ ಭದ್ರಕವಚ ಸೌರವಿಸರಣೆಯನ್ನು ತಡೆದು ಸೋಸಿ, ಬೆಳಕು ಉಷ್ಣ ಮುಂತಾದ ತರಂಗಗಳನ್ನು ಮಾತ್ರ ಒಳಬಿಡುವುದು. ಎಂದರೆ, ಈ ಗೋಳ ಅತಿನೇರಳೆ ತರಂಗಗಳಿಗೆ ಅಪಾರಕ. ಓಝೋನ್ ಗೋಳದಿಂದ ಮೇಲಕ್ಕೆ ಇರುವ ಅಯಾನ್‌ಗೋಳದಲ್ಲಿ **(ನೋಡಿ)** ಗಾಳಿಯ ಅಣುಗಳು ಅಯಾನೀಕೃತ ಸ್ಥಿತಿಯಲ್ಲಿರುವುವು. 80 ಕಿ.ಮೀ.ಗಿಂತಲೂ ಎತ್ತರದಲ್ಲಿ ಈ ಪರಿಸ್ಥಿತಿ. ಇದು ಅಯಾನ್ ಮತ್ತು ಓಝೋನ್ ಗೋಳಗಳು ಒಟ್ಟಾಗಿ ಭೂಮಿಗೆ ತೊಡಿಸಿರುವ ಭದ್ರಕವಚದಂತಿದೆ. ಜೀವಿಗಳಿಗೆ ಅತ್ಯಪಾಯಕಾರಿಗಳಾದ ಅತಿನೇರಳೆ ತರಂಗಗಳನ್ನು ಈ ಕವಚ ತಡೆಹಿಡಿದು ನೀಡುವ ರಕ್ಷಣೆಗೆ ನಾವು ತೆರಬೇಕಾದ ದಂಡ ಆಕಾಶದ ಹಲವಾರು ವಿದ್ಯಮಾನಗಳನ್ನು ಕುರಿತ ನಮ್ಮ ಅಜ್ಞಾನ. ಈ ಕವಚ ವಿಶ್ವದ ಹಲವಾರು ಭಾಗಗಳನ್ನು ನಮ್ಮಿಂದ ಮುಚ್ಚಿಟ್ಟಿರುವ ಬಾಗಿಲು. ಇದರ ದೆಸೆಯಿಂದ ಸೂರ್ಯನಿಂದ, ಅದರಂ ತೆಯೇ ಇತರ ಆಕಾಶಕಾಯಗಳಿಂದ, ಭೂಮಿಗೆ ವಿಸರಿತವಾಗುವ ಎಕ್ಸ್‌ಕಿರಣ ಗಳು ನೆಲವನ್ನು ತಲಪುವುದೇ ಇಲ್ಲ.



**ಚಿತ್ರ 1. ಸೌರ ಎಕ್ಸ್ ಕಿರಣಗಳ ವಿಸರಣೆಯನ್ನು ಶೋಧಿಸಲು ನಿಯೋಜಿತವಾದ ಎಕ್ಸ್‌ಪ್ಲೋರರ್–11ರ ರೇಖಾಚಿತ್ರ**

ಎಕ್ಸ್‌ಕಿರಣ ಮನುಷ್ಯನಿದ್ದಲ್ಲಿಗೆ ಬರದಿದ್ದರೆ ಮನುಷ್ಯ ಅಥವಾ ಆತನ ಉಪಕರಣಗಳು ಎಕ್ಸ್‌ಕಿರಣಗಳ ತಡೆಬಾಗಿಲಿನವರೆಗೆ (80 ಕಿಮೀ. ಮತ್ತು ಮೇಲಿನ ಎತ್ತರ) ಹೋಗುವುದೇ ಸೂಕ್ತ ಪರಿಹಾರ. ರಾಕೆಟ್‌ಯಾನ ಆರಂಭವಾಗುವ ಮೊದಲು ಈ ಪ್ರಯೋಗ ಸಾಧ್ಯವಾಗುತ್ತಿರಲಿಲ್ಲ.

ಆರಂಭ: ಎಕ್ಸ್‌ಕಿರಣ ಖಗೋಳ ವಿಜ್ಞಾನದ ಆರಂಭ ತೀರ ಮಸುಕು, ಜರ್ಮನರಿಂದ ವಶಪಡಿಸಿಕೊಂಡ V2 ರಾಕೆಟ್ಟಿನಲ್ಲಿ ಒಂದು ಎಕ್ಸ್‌ಕಿರಣ ಕ್ಯಾಮರಾವನ್ನು ಅಳವಡಿಸಿ ಹಾರಿಸಲಾಯಿತು (1948). ಸೂರ್ಯನಿಂದ ವಿದ್ಯುತ್ಕಾಂತ ತರಂಗಗಳು ವಿಸರಿತವಾಗುತ್ತಿವೆ. ಇವುಗಳ ಪೈಕಿ ಎಕ್ಸ್‌ಕಿರಣಗಳು ಮುಂತಾದ ಅತಿನೇರಳೆ ತರಂಗಗಳು ಭೂತಲವನ್ನು ತಲಪುವುದಿಲ್ಲ. V2 ರಾಕೆಟ್ಟಿನಲ್ಲಿದ್ದ ಎಕ್ಸ್‌ಕಿರಣ ಕ್ಯಾಮರಾ ಸೌರ ಎಕ್ಸ್‌ಕಿರಣಗಳ ಇರವನ್ನು ದೃಢೀಕರಿಸಿತು. ನಕ್ಷತ್ರಗಳಿಂದಲೂ ಎಕ್ಸ್‌ಕಿರಣಗಳು ಸರಿತವಾಗುತ್ತಿರಬೇಕು ಎಂಬುದು ತಾರ್ಕಿಕವಾಗಿ ಸಾಧುವಾಗಿದ್ದರೂ ಪ್ರಾಯೋಗಿಕವಾಗಿ ಆ ಕಿರಣಗಳನ್ನು ಸಂಗ್ರಹಿಸಿ ಪರಿಶೀಲಿಸುವ ಸೂಕ್ಷ್ಮಗ್ರಾಹೀ ಉಪಕರಣಗಳು ಸಿದ್ಧವಾಗಿರಲಿಲ್ಲ. ಸೂರ್ಯನಾದ ತರುವಾಯ ಅತಿಸಮೀಪದ ನಕ್ಷತ್ರದ ದೂರವೇ ಸೂರ್ಯದೂರದ ಸುಮಾರು 2,82,000 ಪಾಲಿದೆ. ಹಾಗಿರುವಾಗ ಅತಿ ದೂರದ ಆಕರಗಳಿಂದ ವಿಸರಿತವಾಗಿ ಭೂಮಿಗೆ ತಲುಪುವ ಕಿರಣಗಳು ಅತಿಕ್ಷೀಣ ವಾಗಿರುವುದು ಸಹಜ. ಇವನ್ನು ಗ್ರಹಿಸುವ ಉಪಕರಣಗಳು ಅತಿಸೂಕ್ಷ್ಮಗ್ರಾಹಿಗಳಾಗಬೇಕಾದದ್ದು ಅನಿವಾರ್ಯ. ಹೀಗಾಗಿ ಆರಂಭದ ವರ್ಷಗಳಲ್ಲಿ ಸೌರ ಎಕ್ಸ್‌ಕಿರಣಗಳ ಅಭ್ಯಾಸವೇ ಮುಂದುವರಿಯಿತು. 1961ರ ಏಪ್ರಿಲ್ 27ರಂದು ಎಕ್ಸ್‌ಪ್ಲೋರರ್ 11 ಹೆಸರಿನ ವೈಜ್ಞಾನಿಕೋಪ ಗ್ರಹವನ್ನು ಈ ವಿಶಿಷ್ಟ ಉದ್ದೇಶದಿಂದ ಉಡಾಯಿಸಲಾಯಿತು. ಅಂದೇ ಎಕ್ಸ್‌ಕಿರಣ ಖಗೋಳವಿಜ್ಞಾನ ಅಧಿಕೃತವಾಗಿ ಜನ್ಮತಾಳಿತು. ಜೂನ್ 1962ರಲ್ಲಿ ರಿಕಾರ್ಡೊ ಗಿಯಾಕೋನಿ ಮತ್ತು ಆತನ ಸಂಗಡಿಗರು ನ್ಯೂ ಮೆಕ್ಸಿಕೋದಿಂದ ಒಂದು ಪುಟ್ಟ ಏರೋಬೀ ರಾಕೆಟ್ಟನ್ನು ಆಕಾಶದ ಎಕ್ಸ್‌ಕಿರಣ ವೀಕ್ಷಣೆಗೋಸ್ಕರ ಉಡಾಯಿಸಿದರು. ಮುಖ್ಯೋದ್ದೇಶ ಚಂದ್ರನಿಂದ ಪ್ರತಿಫಲಿತವಾಗುವ ಪ್ರತಿದೀಪ್ತಿಶೀಲ (ಫ್ಲೂರಸೆಂಟ್) ವಿಸರಣೆಯ ಅಭ್ಯಾಸ. ಆದರೆ ಈ ಪ್ರಯೋಗದಲ್ಲಿ ಚಂದ್ರನಿಂದ ಪ್ರತಿಫಲಿತವಾಗಿ ಬಂದ ಎಕ್ಸ್‌ಕಿರಣವೇನೂ ದೊರೆಯಲಿಲ್ಲ. ಬದಲು ಆಕಾಶಗಂಗೆಯ **(ನೋಡಿ)** ಕೇಂದ್ರ ಬಿಂದುವಿನ ದಿಕ್ಕಿನಿಂದ ಅತ್ಯಾಶ್ಚರ್ಯವೆನಿಸುವಷ್ಟು ಪ್ರಬಲ ಎಕ್ಸ್‌ಕಿರಣ ಸಂಜ್ಞೆಗಳು ದೊರೆತುವು.

ಏಪ್ರಿಲ್ 1963ರಲ್ಲಿ ಹರ್ಬರ್ಟ್ ಫ್ರೀಡ್‌ಮನ್ ಮತ್ತು ಸಂಗಡಿಗರು ನಡೆಸಿದ ಇನ್ನೊಂದು ರಾಕೆಟ್ ವೀಕ್ಷಣೆಯಲ್ಲಿ ಮೊದಲಿನ ವೀಕ್ಷಣೆಯಲ್ಲಿ ಲಭಿಸಿದ ಸುಳಿವು ಸ್ಥಿರವಾಯಿತು. ಆ ಪ್ರಬಲ ಎಕ್ಸ್‌ಕಿರಣ ಆಕರ ಆಕಾಶಗಂಗೆಯ ಕೇಂದ್ರದಿಂದ ಸುಮಾರು 20ಲಿ ದೂರವಿರುವ ವೃಶ್ಚಿಕ ರಾಶಿಯಲ್ಲಿದೆಯೆಂದು (ಸ್ಕಾರ್ಪಿಯನ್) ನಿರ್ಧರಿಸಿದರು. ಇದರ ಹೆಸರು ScoX1.

ಇದುವರೆಗೆ ಸಹಸ್ರಾರು ನಿರ್ದಿಷ್ಟ ಎಕ್ಸ್ ಕಿರಣಾಕರಗಳನ್ನು ವಿಶ್ವದ ವಿವಿಧ ಭಾಗಗಳಲ್ಲಿ ಶೋಧಿಸಲಾಗಿದೆ. ಅವುಗಳ ಕೆಲವು ವಿವರಗಳನ್ನು ಪು. 884ರಲ್ಲಿ ಬರೆದಿರುವ ಪಟ್ಟಿಯಲ್ಲಿ ಕೊಟ್ಟಿದೆ.

ಎಕ್ಸ್‌ಕಿರಣ ಖಗೋಳವಿಜ್ಞಾನದಲ್ಲಿ ಅನುಸರಿಸುವ ಮುಖ್ಯ ಘಟ್ಟಗಳು ಆರು:

1. ಹೊಸ ಆಕರಗಳ ಶೋಧನೆ. ಅವುಗಳ ಸ್ಥಾನಗಳನ್ನೂ ಸಾಮರ್ಥ್ಯಗಳನ್ನೂ ಸರಿಸುಮಾರಾಗಿ ಗುರುತಿಸಬೇಕು. ಒಂದು ಆಕರ ಅದೆಷ್ಟೇ ಸಾಮರ್ಥ್ಯಪೂರಿತವಾಗಿರಬಹುದು. ಆದರೆ ಭೂಮಿ ಮತ್ತು ಆಕರದ ನಡುವೆ ಇರುವ ಅಪಾರ ದೂರದ ಪರಿಣಾಮವಾಗಿ ಭೂಮಿಗೆ ದೊರೆಯುವುದು ಅತಿಕ್ಷೀಣ ವಿಸರಣೆ. ಇದನ್ನು ಸಂಗ್ರಹಿಸಿ, ವಿಶ್ಲೇಷಿಸಿ ನಿರ್ದಿಷ್ಟ ಆಕರಗಳ ನಿರ್ಣಯ ಮಾಡಬೇಕಾದರೆ ಉಪಕರಣಗಳ ನಿರಂತರ ಸುಧಾರಣೆ ಆಗಬೇಕು.

2. ಆಕರ ಸ್ಥಾನಗಳ ಖಚಿತ ನಿರ್ಧಾರ. ಎಕ್ಸ್‌ಕಿರಣ ಖಗೋಳವಿಜ್ಞಾನದಲ್ಲಿ ಆಸಕ್ತರಾಗಿರುವ ವಿವಿಧ ರಾಷ್ಟ್ರಗಳ, ವಿವಿಧ ಕಾಲಗಳ ವಿಜ್ಞಾನಿಗಳಲ್ಲಿ ವಾಹಕತ್ವವೇರ್ಪಡಲು ಇದು ಅತ್ಯಗತ್ಯ. ಸಾಮಾನ್ಯವಾಗಿ ಒಂದು ಎಕ್ಸ್ ಕಿರಣಾಕರವನ್ನು ಒಂದು ದೃಗ್ಗೋಚರ ಅಥವಾ ರೇಡಿಯೋ ನಕ್ಷತ್ರದೊಡನೆ ಅಥವಾ ತಿಳಿದಿರುವ ನೆಬ್ಯುಲದೊಡನೆ ಹೊಂದಿಸುವುದು ವಾಡಿಕೆ.

3. ಆಕರದ ಗಾತ್ರಮಾಪನ: ಅದು ವಿಸ್ತರಿಸಿಕೊಂಡಿದ್ದಲ್ಲಿ ಅದರ ರಚನೆಯ ನಿರ್ಧಾರ ಬಹುತೇಕವಾಗಿ ಎಕ್ಸ್ ಕಿರಣನಕ್ಷತ್ರಗಳು ಇತರ ನಕ್ಷತ್ರಗಳಂತೆ ಬಿಂದುರೂಪದಲ್ಲಿಯೇ ಇವೆ. ಆದರೆ ಸೂಕ್ಷ್ಮಾಭ್ಯಾಸದಿಂದ ಇವುಗಳ ಗಾತ್ರಗಳನ್ನೂ ವಿಸ್ತಾರಗಳನ್ನೂ ಅಳೆಯಬಹುದು. ಇದರಿಂದ ಎಕ್ಸ್‌ಕಿರಣ ದೃಗ್ಗೋಚರ ನಕ್ಷತ್ರಗಳಿಗಿಂತ ಭಿನ್ನರಚನೆಯವು ಎಂದು ತೀರ್ಮಾನಿಸಲು ಸಾಧ್ಯವಾಗಿದೆ. ScoX1ರ ಗಾತ್ರ ಕೋನದ 20 ಸೆಕೆಂಡುಗಳಿಗಿಂತಲೂ ಕಿರಿಯದೆಂದು TauX1ರ ಗಾತ್ರ ಕೋನದ 1–2 ಮಿನಿಟುಗಳಷ್ಟು ಇದೆಯೆಂದೂ ತಿಳಿದಿದೆ. ಇನ್ನು ಎಕ್ಸ್‌ಕಿರಣ ಬ್ರಹ್ಮಾಂಡಗಳ ಗಾತ್ರವಿಸ್ತಾರಗಳನ್ನೂ ನಿರ್ಧರಿಸಬಹುದು.

4. ಆಕರಗಳಿಂದ ವಿಸರಿತವಾಗುವ ಎಕ್ಸ್‌ಕಿರಣ ಮುಂತಾದ ವಿದ್ಯುತ್ಕಾಂತ ತರಂಗಗಳ ರೋಹಿತದ ಅಭ್ಯಾಸ. ಇದರಿಂದ ನಿರ್ದಿಷ್ಟ ಆಕರಗಳ ವಿಚಾರವಾಗಿಯೂ ಅವುಗಳ ವಿಷಯವಾಗಿಯೂ ವಿವರಗಳು ಲಭಿಸುವುವು.

5. ಆಕರದ ವಿಸರಣೆಯಲ್ಲಿ ತಲೆದೋರುವ ಏರಿಳಿತಗಳ ಅಭ್ಯಾಸ. ಆಕರದ ಸಾಮರ್ಥ್ಯ, ರಚನೆ, ಚಲನೆಯ ವೇಗ ಮುಂತಾದವುಗಳನ್ನು ಕುರಿತು ಇದು ಹೊಸ ಬೆಳಕು ಬೀರುತ್ತದೆ.

6. ಎಕ್ಸ್‌ಕಿರಣ ವಿಸರಣೆಯ ಧ್ರುವೀಕರಣದ ಅಭ್ಯಾಸ, ಎಕ್ಸ್‌ಕಿರಣಗಳು ಉಷ್ಣಮೂಲ ಜನ್ಯವೇ ಅಥವಾ ಆಕರದಲ್ಲಿ ಒಂದು ವಿಧದ ಸಿಂಕ್ರೋಟ್ರೋನ್ ಯಂತ್ರಕ್ರಿಯೆ ನಡೆಯುತ್ತಿದೆಯೇ ಎಂದು ಈ ಅಭ್ಯಾಸದಿಂದ ತಿಳಿಯಬಹುದು.

ಇಂದಿನವರೆಗೆ ನಡೆದಿರುವ ಶೋಧನೆಗಳು, ಆಕಾಶಗಂಗೆಯ ವ್ಯಾಪ್ತಿಯಿಂದ ಹೊರಗೆ ಇರುವ ಅಸಂಖ್ಯಾತ ಬ್ರಹ್ಮಾಂಡಗಳಿಂದ ವಿಸರಿತವಾಗಿ ಸಾಮೂಹಿಕವಾಗಿ ಬರುತ್ತಿರುವ ಅಸ್ಪಷ್ಟ ವಿಸರಣೆಯನ್ನು ಸಂಗ್ರಹಿಸಲಾಗಿದೆ. ನಿರ್ದಿಷ್ಟ ಆಕರಗಳು ಮಾತ್ರವಲ್ಲ. ಹಿನ್ನೆಲೆಯ ಆಕರಗಳಿಂದ ಸಾಮೂಹಿಕವಾಗಿ ವಿಸರಿತವಾಗಿ ಬರುತ್ತಿರುವ ಎಕ್ಸ್‌ಕಿರಣ ವಿಸರಣೆ ವೀಕ್ಷಣೆಗೆ ಹೊಸ ಹಿನ್ನೆಲೆಯನ್ನೂ ಆಯಾಮವನ್ನೂ ಒದಗಿಸಿ ಕೊಟ್ಟಿದೆ.

ಇದುವರೆಗೆ ತಿಳಿದಿರುವ ಆಕರಗಳಲ್ಲಿ ಹೆಚ್ಚಿನವು ಆಕಾಶಗಂಗೆಯ ಸಮೀಪದಲ್ಲಿಯೇ ಇವೆ. ಆದ್ದರಿಂದ ಅವು ಬಾಹ್ಯ ಬ್ರಹ್ಮಾಂಡಗಳಲ್ಲಿ ಇರದೇ ಸ್ಥಳೀಯ ಬ್ರಹ್ಮಾಂಡವಾದ ಆಕಾಶಗಂಗೆಯಲ್ಲಿಯೇ ಇರಬೇಕೆಂದು ಊಹಿಸಲಾಗಿದೆ. ಉಪಗ್ರಹಗಳಲ್ಲಿ ಅಳವಡಿಸಿದ ಸಂಕೀರ್ಣ ಉಪಕರಣಗಳ ನೆರವಿನಿಂದ ನಡೆಸಿದ ಶೋಧನೆಗಳಿಂದ ScoX1ರ ಸಾಮರ್ಥ್ಯದ 500ರಲ್ಲಿ 1 ಪಾಲು ಸಾಮರ್ಥ್ಯವಿರುವಂಥ ಅತ್ಯಲ್ಪ ಸಾಮರ್ಥ್ಯ ಆಕರಗಳನ್ನೂ ಶೋಧಿಸಿದ್ದಾರೆ. ವೃಶ್ಚಿಕ ಧನೂರಾಶಿಗಳ ಹಾಗೂ ಸಿಗ್ನಸ್ ನಕ್ಷತ್ರಪುಂಜದ ವಲಯದಲ್ಲಿ ಇವು ನಿಬಿಡವಾಗಿವೆಯೆಂದು ತಿಳಿಯಿತು. ಆಕಾಶಗಂಗೆಯ ಸುರುಳಿಯಾಕಾರದ ಹೊರವಲಯಗಳಲ್ಲಿ ಇವು ಹುದುಗಿಕೊಂಡಿರಬೇಕು. ಆದ್ದರಿಂದ ಇವುಗಳ ದೂರ ಹಲವಾರು ಸಾವಿರ ಜ್ಯೋತಿರ್ವರ್ಷಗಳೇ ಇರಬೇಕೆಂದು ಅಂದಾಜು. ಇಂಥ ಒಂದೊಂದು ಎಕ್ಸ್‌ಕಿರಣ ಆಕರದ ವಿಸರಣದರ $10^{29}$–$10^{30}$W (W = 1ವಾಟು = ಸೆಕೆಂಡಿಗೆ 1 ಜೌಲು ಸಾಮರ್ಥ್ಯ).

# ಎಕ್ಸ್‌ಕಿರಣ ಖಗೋಳವಿಜ್ಞಾನ

ನಕ್ಷತ್ರ ಪದವನ್ನು ಸಾಮಾನ್ಯವಾಗಿ ಅತ್ಯುಷ್ಣತೆಯಲ್ಲಿ ದೃಗ್ಗೋಚರ ಬೆಳಕನ್ನು ಬೀರುತ್ತಿರುವ ಅನಿಲ ಹಾಗೂ ಪ್ಲಾಸ್ಮಾರಾಶಿಗೆ ಬಳಸುವುದು ವಾಡಿಕೆ. ಈಗ ಇದರ ಅರ್ಥವನ್ನು ವಿಶಾಲಗೊಳಿಸಿ ರೇಡಿಯೊ ತರಂಗಗಳನ್ನು ವಿಸರಿಸುವ ಆಕರಗಳನ್ನು ರೇಡಿಯೊ ನಕ್ಷತ್ರಗಳೆಂದೂ, ಬೆಳಕನ್ನು ವಿಸರಿಸುವ ಆಕರಗಳನ್ನು ಎಕ್ಸ್‌ಕಿರಣನಕ್ಷತ್ರಗಳೆಂದೂ ಹೆಸರಿಸುತ್ತೇವೆ. ಸಂದರ್ಭ ಸ್ಪಷ್ಟವಾಗಿರುವಾಗ ನಕ್ಷತ್ರವೆಂಬ ಪದವೇ ಆಯಾ ಭಾವನೆಯನ್ನು ಪ್ರತಿನಿಧಿಸುತ್ತದೆ.

$10^{29}$–$10^{30}$W ವಿಸರಣದರವಿರುವ ಆಕರಗಳು ಎಕ್ಸ್‌ಕಿರಣ ನಕ್ಷತ್ರಗಳು. ಅವು ದೃಗ್ಗೋಚರಗಳಲ್ಲ. ನೆಲದಿಂದ 80 ಕಿ.ಮೀ. ಎತ್ತರ ದಾಟಿ ಎಕ್ಸ್‌ಕಿರಣ ಕ್ಯಾಮರಾಗಳ ನೆರವಿನಿಂದ ಈ ನಕ್ಷತ್ರಗಳ ಇರುವನ್ನು ಅರಿಯಬಹುದು. ಆಕಾಶಗಂಗೆಯಲ್ಲಿನ ಎಕ್ಸ್‌ಕಿರಣ ನಕ್ಷತ್ರಗಳು ಸಮಗ್ರವಾಗಿ ವಿಸರಿಸಬಹುದಾದ ವಿಸರಣೆಯನ್ನು ಸಂಖ್ಯಾಶಾಸ್ತ್ರದ ವಿಧಾನಗಳಿಂದ ಅಂದಾಜು ಮಾಡಿದ್ದಾರೆ. ಇದು $10^{32}$W ಗಳಷ್ಟಿರಬಹುದು. ವಿಶ್ವದಲ್ಲಿ ಆಕಾಶಗಂಗೆಯಂಥ ಅಸಂಖ್ಯಾತ ಬ್ರಹ್ಮಾಂಡಗಳಿವೆ. ನಮ್ಮ ಸೂರ್ಯನಿರುವ (ಅಂದರೆ ನಾವಿರುವ) ಆಕಾಶಗಂಗೆ ವಿಶ್ವದ ಒಂದು ಪ್ರಧಾನ ಅಥವಾ ಗಮನಾರ್ಹ ಅಂಶವೆಂದೇನೂ ಭಾವಿಸಬೇಕಾಗಿಲ್ಲ. ಆದ್ದರಿಂದ ಇಲ್ಲಿರುವಂಥ ಪರಿಸ್ಥಿತಿಯೇ ಇತರ ಸಕಲ ಬ್ರಹ್ಮಾಂಡಗಳಲ್ಲಿಯೂ ಇದೆಯೆಂದು ಭಾವಿಸುವುದೇ ಸಾಧುವಾದ ಕ್ರಮ. ಇದನ್ನು ಒಪ್ಪಿಕೊಂಡು ವಿಶ್ವದ ಬ್ರಹ್ಮಾಂಡಗಳಿಂದ ಸಮಗ್ರವಾಗಿ ವಿಸರಣೆಯಾಗುತ್ತಿರುವ ಎಕ್ಸ್‌ಕಿರಣಗಳ ಸಾಮರ್ಥ್ಯ $10^{32}$W ಗಳೆಂದು ಅಂದಾಜು ಮಾಡಿದ್ದಾರೆ. ಇದು ಬಿಡಿ ಬ್ರಹ್ಮಾಂಡಗಳ ಸಮಗ್ರ ವಿಸರಣೆಗಳ ಮೊತ್ತ. ಪ್ರತ್ಯೇಕವಾಗಿ ವಿಶ್ವದ ಎಕ್ಸ್‌ಕಿರಣಗಳ ವಿಸರಣೆಯನ್ನು ನಿರ್ಧರಿಸಲಾಗಿದೆ (ಹಿಂದೆ ವಿವರಿಸಿರುವ ಸಾಮೂಹಿಕ ಅಸ್ಪಷ್ಟ ವಿಸರಣೆ). ಇವೆರಡನ್ನು ಹೋಲಿಸಿ ನೋಡಿದಾಗ ಮೊದಲಿನದು ಎರಡನೆಯದಕ್ಕಿಂತ ಕಡಿಮೆ ಎಂದು ವೇದ್ಯವಾಯಿತು. ಅಂದರೇನಾಯಿತು? ಇನ್ನಷ್ಟು ಪ್ರಬಲ ಎಕ್ಸ್ ಕಿರಣಾಕರಗಳು ಬ್ರಹ್ಮಾಂಡಗಳಲ್ಲಿ (ಆದ್ದರಿಂದ ಆಕಾಶಗಂಗೆಯಲ್ಲಿ ಸಹ) ಹರಡಿಹೋಗಿರಬೇಕು, ಅವು ನಮ್ಮ ಗಮನಕ್ಕೆ ಇನ್ನೂ ಬಂದಿಲ್ಲ ಎಂದು ಅರ್ಥವಾಗುವುದು.

ಈಚೆಗೆ ವೀಕ್ಷಣೆಗಳನ್ನು ಇನ್ನಷ್ಟು ಪರಿಷ್ಕರಿಸಲಾಗಿದೆ. ಒಂದೊಂದು ಆಕರದ ಸ್ಥಾನ, ಸಾಮರ್ಥ್ಯವನ್ನು ನಿಖರವಾಗಿ ನಿರ್ಧರಿಸುವುದರ ಜೊತೆಗೆ ದೃಗ್ಗೋಚರ ನಕ್ಷತ್ರ ಅಥವಾ ನೆಬ್ಯುಲಗಳೊಡನೆ ಈ ಎಕ್ಸ್ ಕಿರಣನಕ್ಷತ್ರವನ್ನು ಹೊಂದಿಸಬಹುದೇ ಎಂಬ ವಿಚಾರ ಪರಿಶೀಲಿಸಲಾಗಿದೆ.

ಇಂಥ ಪ್ರಯೋಗಕ್ಕೆ ಒಂದು ಹೊಸ ಆಯಾಮ ಲಭಿಸಿದ್ದು ವೃಷಭರಾಶಿಯಲ್ಲಿ ಗುರುತಿಸಿರುವ TauX1 ಎಂಬ ಹೆಸರಿನ ಎಕ್ಸ್‌ಕಿರಣನಕ್ಷತ್ರದ ವೀಕ್ಷಣೆಯಿಂದ, ವೃಷಭರಾಶಿಯ ಹಿನ್ನೆಲೆಯಲ್ಲಿ ಟೆಲಿಸ್ಕೋಪಿನಿಂದ ಕಾಣುವ ನಳ್ಳಿ ಆಕಾರದ ಒಂದು ನೆಬ್ಯುಲವಿದೆ. ಆದ್ದರಿಂದ ಅದರ ಹೆಸರು ಕ್ರ್ಯಾಬ್ ನೆಬ್ಯುಲ. ಇದು ಒಂದು ಎಕ್ಸ್‌ಕಿರಣ ವಿಸರಣೆಯ ಆಕರ ಎಂದು ಮೊದಲೇ ತಿಳಿದಿತ್ತು. ಕೇವಲ ನೆಬ್ಯುಲವೇ ಇಷ್ಟು ಸಾಮರ್ಥ್ಯವಿರುವ ಎಕ್ಸ್‌ಕಿರಣಗಳನ್ನು ವಿಸರಣೆ ಮಾಡಲಾರದು: ಆದ್ದರಿಂದ ಆ ಆಕರ ನೆಬ್ಯುಲದಲ್ಲಿ ಹುದುಗಿಕೊಂಡಿರಬೇಕು ಎಂದು ತರ್ಕಿಸಿದರು. ಇನ್ನು ಈ ಆಕರ ಭೂಮಿಯಿಂದ ವೀಕ್ಷಿಸುವಂತೆ ಒಂದು ಬಿಂದು ರೂಪದಲ್ಲಿದೆಯೇ ಅಥವಾ ಅದಕ್ಕೆ ಗಮನಾರ್ಹ ಗಾತ್ರವಿದೆಯೇ ಎಂದು ನಿರ್ಧರಿಸುವುದು ಸಾಧ್ಯವಾದರೆ ಆಕರದ ಭೌತಲಕ್ಷಣಗಳನ್ನು ಸುಮಾರಾಗಿ ನಿರೂಪಿಸಬಹುದು. ಚಂದ್ರಬಿಂಬದ ಕಕ್ಷೆ ನಿಖರವಾಗಿ ತಿಳಿದಿದೆ: ಆದ್ದರಿಂದ ಯಾವಾಗ ಕ್ರ್ಯಾಬ್ ನೆಬ್ಯುಲವನ್ನು ಚಂದ್ರ ಸಂಕ್ರಮಿಸುವುದು ಎಂದು ಮೊದಲೇ ನಿರ್ಧರಿಸಲಾಯಿತು. 1964ರ ಜುಲೈ 7ರಂದು ಆ ಮುಹೂರ್ತ ಪ್ರಾಪ್ತವಾದಾಗ ಕ್ರ್ಯಾಬ್‌ನೆಬ್ಯುಲದಿಂದ ವಿಸರಿತವಾಗುವ ಎಕ್ಸ್‌ಕಿರಣಗಳಲ್ಲಿ ಉಂಟಾದ ಏರಿಳಿತಗಳನ್ನು ಅಳೆದರು. ಚಂದ್ರಬಿಂಬ ಕ್ರ್ಯಾಬ್‌ನೆಬ್ಯುಲವನ್ನು ಅಡ್ಡಹಾಯ್ದಂತೆ ವಿಸರಣೆ ಕ್ರಮೇಣ ಮಾಸಿ ಮಸಕಾಗಿ ಪುನಃ ಮೊದಲಿನ ಮಟ್ಟಕ್ಕೇ ಮರಳಿತು. ಆಕರ ಬಿಂದುರೂಪದಲ್ಲಿದ್ದಿದ್ದರೆ ಚಂದ್ರಬಿಂಬ ನೆಬ್ಯುಲವನ್ನು ಸಂಕ್ರಮಿಸುತ್ತಿದ್ದಾಗ ವಿಸರಣೆ ಹಠಾತ್ತಾಗಿ ನಿಂತುಹೋಗಬೇಕಾಗಿತ್ತು; ಹೀಗಾಗಲಿಲ್ಲ. ಆದ್ದರಿಂದ ಅದು ಬಿಂದುರೂಪದಲ್ಲಿಲ್ಲ; ಆಕರಕ್ಕೆ ಗಮನಾರ್ಹ ಗಾತ್ರವಿದೆಯೆಂದು ತರ್ಕಿಸಿದರು. ಈ ಗಾತ್ರ ಕೋನದ 1–2 ಮಿನಿಟ್ (ನೆಬ್ಯುಲ ನಮಗೆ ಕಾಣುವ ಗಾತ್ರದ 1/3ರಷ್ಟು)ಎಂದೂ ತಿಳಿಯಿತು. ಭೂಮಿಯಿಂದ ಕ್ರ್ಯಾಬ್ ನೆಬ್ಯುಲದ ದೂರ 6,000 ಜ್ಯೋತಿರ್ವರ್ಷವೆಂದು ಅಂದಾಜು.

ಕ್ರ್ಯಾಬ್ ನೆಬ್ಯುಲವನ್ನು ಕುರಿತು ಒಂದು ವಿವರಣೆ ಇಲ್ಲಿ ಅಪ್ರಸ್ತುತವಾಗದು. ಹಳೆಯ ಚೀನೀ ವರದಿಗಳ ಪ್ರಕಾರ 1054ರ ಜುಲೈ 4ರಂದು ಒಂದು ಅಪೂರ್ವ ನಕ್ಷತ್ರ ವೃಷಭರಾಶಿಯಲ್ಲಿ ಕಾಣಿಸಿಕೊಂಡಿತು. ಸುಮಾರು ಒಂದು ವರ್ಷದ ತರುವಾಯ ಇದು ಕ್ರಮೇಣ ಮಾಸಿ ಮಾಯವಾಯಿತು; ಈ ದಾಖಲೆ ಸೂಚಿಸಿದ ಪ್ರದೇಶದಲ್ಲಿ ಇಂದಿನ ಸೂಕ್ಷ್ಮೋಪಕರಣಗಳು ಕ್ರ್ಯಾಬ್ ನೆಬ್ಯುಲವನ್ನು ಗುರುತಿಸಿವೆ. ಅಂದು ಒಂದು ನಕ್ಷತ್ರ ನೋವ ಅಥವಾ ಮಹಾನೋವ ಆಗಿ ಆಸ್ಫೋಟಿಸಿರಬೇಕು; ಆದ್ದರಿಂದ ಅದರ ಬೆಳಕು ಥಕ್ಕನೆ ತೀವ್ರವಾಗಿ ಚೀನೀ ವೀಕ್ಷಕರಿಗೆ ಅಪೂರ್ವ ನಕ್ಷತ್ರದ ದರ್ಶನವಾಯಿತು. ಆ ನೋವ ನಕ್ಷತ್ರದ ಅವಶೇಷವೇ ಕ್ರ್ಯಾಬ್ ನೆಬ್ಯುಲ ಎಂದು ತೀರ್ಮಾನಿಸಿದ್ದಾರೆ. ನೆಬ್ಯುಲದ ವ್ಯಾಸ ಸುಮಾರು 3 ಜ್ಯೋತಿರ್ವರ್ಷಗಳು. ಸೆಕೆಂಡಿಗೆ 1,000 ಮೈಲುಗಳಂತೆ ಅದು ಹಿಗ್ಗುತ್ತಿದೆ. ನೆಬ್ಯುಲದ ಕೇಂದ್ರದಲ್ಲಿ ಒಂದು ಕ್ಷೀಣ ಅಸ್ಪಷ್ಟ ನಕ್ಷತ್ರವಿದೆಯೆಂದು ತಿಳಿದಿದೆ. ಅಂದು ಒಡೆದು ನೋವಾನಕ್ಷತ್ರವಾಗಿ ಬೆಳಕು ಬೀರಿದ ಆಕಾಶಕಾಯದ ಕಠಿಣ ತಿರುಳು ಇದಾಗಿರಬಹುದು. ಈ ನಕ್ಷತ್ರದ ದ್ರವ್ಯರಾಶಿ ಸೂರ್ಯನ ದ್ರವ್ಯರಾಶಿಯ ಸುಮಾರು 1.25ರಷ್ಟಿದೆ. ಇದನ್ನು ಆವರಿಸಿರುವ ಕ್ರ್ಯಾಬ್ ನೆಬ್ಯುಲದ ದ್ರವ್ಯರಾಶಿ ಸೂರ್ಯನ ದ್ರವ್ಯರಾಶಿಯ 10% ಮಾತ್ರವಿದೆ. ಆದ್ದರಿಂದ ನಕ್ಷತ್ರದಲ್ಲಿ ದ್ರವ್ಯ ಬಲು ಸಾಂದ್ರವಾಗಿ ಸಂಚಯನ ಗೊಂಡಿರಬೇಕು. ಇದೇ ಎಕ್ಸ್‌ಕಿರಣಗಳ (Tau XI) ಆಕರವೇ ಎನ್ನುವ ವಿಚಾರದಲ್ಲಿ ಖಚಿತವಾದ ಉತ್ತರ ನೀಡಲು ಸಾಧ್ಯವಾಗಿಲ್ಲ. ಎಕ್ಸ್‌ಕಿರಣಗಳ ಆಕರಗಳನ್ನು ಕುರಿತ ಮೂರು ಬೇರೆ ಬೇರೆ ಊಹೆಗಳನ್ನು ಇದುವರೆಗೂ ಲಭಿಸಿರುವ ಪುರಾವೆಗಳನ್ನು ಆಧರಿಸಿ ಮುಂದಿಡಲಾಗಿದೆ.

1. ನ್ಯೂಟ್ರಾನ್ ನಕ್ಷತ್ರಗಳಿಂದ ಇವು ವಿಸರಿತವಾಗುತ್ತವೆ. (ಅತ್ಯಂತ ಸಾಂದ್ರವಾಗಿ ಪೇರಿಸಲ್ಪಟ್ಟ ನ್ಯೂಟ್ರಾನುಗಳ ಸಮುದಾಯವೇ ನ್ಯೂಟ್ರಾನ್ ನಕ್ಷತ್ರ. ಇಂಥ ಒಂದು ನಕ್ಷತ್ರದ ಘನ ಅಂಗುಲದ ತೂಕ ಸುಮಾರು $10^{9}$ಟನ್. ಇದರ ಹೊರಮೈ ಉಷ್ಣತೆ $10^{7°}$ಸೆಂ.ಗ್ರೇ ಗಿಂತಲೂ ಹೆಚ್ಚು). ಬಲು ಹೆಚ್ಚಿನ ಉಷ್ಣತೆಯಲ್ಲಿರುವ ಈ ನಕ್ಷತ್ರಗಳು ಎಕ್ಸ್‌ಕಿರಣಗಳಿಗಿಂತ ಹೆಚ್ಚಿನ (ದೀರ್ಘತರ) ವಿದ್ಯುತ್ಕಾಂತ ತರಂಗಗಳನ್ನು ವಿಸರಿಸುವುದೇ ಇಲ್ಲ. ಈ ಊಹೆ ಅಷ್ಟೊಂದು ಸಮರ್ಪಕವಲ್ಲ ಎಂಬ ವಾದವೂ ಕೇಳಿಬರುತ್ತಿದೆ. ಒಂದು ನ್ಯೂಟ್ರಾನ್ ನಕ್ಷತ್ರ ಬಲು ಬೇಗ ಉಷ್ಣ ಕಳೆದುಕೊಂಡು ನಾಶವಾಗಿ ಹೋಗುವುದು. ಆದ್ದರಿಂದ ಇದುವರೆಗೆ ಗಮನಿಸಿರುವಷ್ಟು ದೀರ್ಘಕಾಲದ ಎಕ್ಸ್‌ಕಿರಣ ವಿಸರಣೆ ಒಂದು ನ್ಯೂಟ್ರಾನ್ ನಕ್ಷತ್ರದಿಂದ ಸಾಧ್ಯವಾಗದು.

2. $10^{8°}$ ಸೆಂ.ಗ್ರೇ. ಉಷ್ಣತೆಯಲ್ಲಿರುವ ಅಯಾನೀಕೃತ ಅನಿಲದಲ್ಲಿ ಎಲೆಕ್ಟ್ರಾನುಗಳು ಪ್ರೋಟಾನುಗಳಿಗಿಂತ 40 ಪಾಲು ಅಧಿಕವೇಗದಲ್ಲಿ ಚಲಿಸುತ್ತವೆ. ಇಂಥ ಯಾದೃಚ್ಛಿಕ ಚಲನೆಗಳಲ್ಲಿ ಪ್ರೋಟಾನುಗಳ ಸಮೀಪ ಹಾಯುವಾಗಲೆಲ್ಲ ಎಲೆಕ್ಟ್ರಾನುಗಳು ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಈ ಶಕ್ತಿ ಎಕ್ಸ್‌ಕಿರಣಗಳ ರೂಪದಲ್ಲಿ ವಿಸರಿತವಾಗುವುದು.

3. ಕಾಂತಬಲದ ಒಂದು ರೇಖೆಯನ್ನು (ಲೈನ್ ಆಫ್ ಮ್ಯಾಗ್ನೆಟಿಕ್ ಫೋರ್ಸ್) ಎಲೆಕ್ಟ್ರಾನ್ ಸುರುಳಿ ಸುತ್ತುತ್ತ ಚಲಿಸುತ್ತದೆ. ಈ ಚಲನೆಯಲ್ಲಿ ಅದು ಕಳೆದುಕೊಳ್ಳುವ ಶಕ್ತಿ ಎಕ್ಸ್ ಕಿರಣಗಳಾಗಿ ವಿಸರಿತವಾಗುತ್ತದೆ.




**1. S ಸೂರ್ಯ N ನ್ಯೂಟ್ರಾನ್ ನಕ್ಷತ್ರ**
**2. ಅಯಾನೀಕೃತ ಅನಿಲದಲ್ಲಿ ಎಲೆಕ್ಟ್ರಾನ್ ಪ್ರೋಟಾನುಗಳ ಯಾದೃಚ್ಛಿಕ ಚಲನೆ**
**3. ಕಾಂತಬಲದ ರೇಖೆಯನ್ನು ಎಲೆಕ್ಟ್ರಾನ್ ಸುರುಳಿ ಸುತ್ತುವುದು**

ಎರಡನೆಯ ಮತ್ತು ಮೂರನೆಯ ಊಹೆಗಳು ಒಂದು ದೃಷ್ಟಿಯಿಂದ ಸಮಸ್ಯೆಗೆ ಪರಿಹಾರ ಒದಗಿಸಿದರೆ ಇನ್ನೊಂದು ದೃಷ್ಟಿಯಿಂದ ಹೊಸ ಸಮಸ್ಯೆಗಳನ್ನು ಸೃಷ್ಟಿಸಿವೆ. ಪ್ರಬಲ ಎಕ್ಸ್ ಕಿರಣಗಳು ದೃಗ್ಗೋಚರ ಮೂಲಗಳಿಂದ ವಿಸರಿತವಾಗುತ್ತಿಲ್ಲವೆಂದು ಮಾತ್ರ ದೃಢವಾಗಿದೆ.

ಇನ್ನೂ ಒಂದು ಊಹೆಯನ್ನು ಫಿಲಿಫ್ ಮಾರಿಸನ್ ಮತ್ತು ಲೂಯ್ಗಿ ಸರ್ಟೋರಿ ಎಂಬುವರು ಮುಂದಿಟ್ಟಿದ್ದಾರೆ; ಮಹಾನೋವಾ ನಕ್ಷತ್ರದ ಅವಶೇಷಗಳೇ ಎಕ್ಸ್‌ಕಿರಣಗಳ ಆಕರಗಳು; ಇಂಥ ಒಂದು ನಕ್ಷತ್ರದ ಆಸ್ಫೋಟನೆಯಲ್ಲಿ ಉತ್ಪನ್ನವಾಗುವ ಬಲುಪಾಲು ಶಕ್ತಿ ಅಂತಿಮವಾಗಿ ಉಷ್ಣರೂಪಕ್ಕೆ ಪರಿವರ್ತಿತವಾಗಬೇಕು; ಇದರಿಂದ ಎಕ್ಸ್‌ಕಿರಣಗಳ ವಿಸರಣೆಗೆ ಅವಶ್ಯವಾಗುವ $10^{8}$–$10^{9}$ ಸೆಂ.ಗ್ರೇ. ಉಷ್ಣತೆ ಉಂಟಾಗುವುದು. TauX1ನ್ನು ಕುರಿತು ನಡೆಸಿದ ಪ್ರಯೋಗಗಳು ಈ ಊಹೆಯನ್ನು ಸಮರ್ಥಿಸಲಿಲ್ಲ.

ಭೌತವಾಗಿ ಅವು ಏನೇ ಆಗಿರಲಿ, ಅಂತೂ ಎಕ್ಸ್ ಕಿರಣ ನಕ್ಷತ್ರಗಳು ಒಂದು ವಿಶಿಷ್ಟ ಜಾತಿಗೆ ಸೇರಿದ ಆಕಾಶಕಾಯಗಳು. ನಮ್ಮ ಸಮೀಪದ ಎಕ್ಸ್ ಕಿರಣ ಆಕಾರವಾದ ಸೂರ್ಯನೊಡನೆ (ದೃಗ್ಗೋಚರ ನಕ್ಷತ್ರ) ಹೋಲಿಸುವಾಗ ಇವು ಗಮನಾರ್ಹವಾಗಿ ಭಿನ್ನವಾಗಿವೆ. ಇವು ವಿಸರಿಸುವ ಎಕ್ಸ್ ಕಿರಣಗಳ ರೋಹಿತಗಳಿಂದ ಈ ಕಿರಣಗಳು ಉಷ್ಣಮೂಲ ಜನ್ಯವೆಂದು ತಿಳಿದಿದೆ. ಸರಾಸರಿ $1.5\times10^{6°}$–$2\times10^{6°}$ ಕೆ ಉಷ್ಣತೆಯಲ್ಲಿರುವ ಸೌರ ಕಿರೀಟದಿಂದ (ಕೊರೋನ) ವಿಸರಿತವಾಗುವ ಎಕ್ಸ್ ಕಿರಣಗಳ ಮೊತ್ತ ಸಮಗ್ರವಾಗಿ ವಿಸರಿತವಾಗುವ ಸೌರಶಕ್ತಿಯ ಕೇವಲ $10^{-6}$ಅಂಶದಷ್ಟು. ಆದರೆ ScoX1ರ ವಿವರಗಳ ಪ್ರಕಾರ ಅದರ ಉಷ್ಣತೆ ಸೂರ್ಯನ ಉಷ್ಣತೆಯ 50ರಷ್ಟು ಹೆಚ್ಚು; ಮತ್ತು ಈ ಎಕ್ಸ್‌ಕಿರಣ ನಕ್ಷತ್ರದ ಸಮಗ್ರ ವಿಸರಣೆಯ 99 ಶೇ. ಭಾಗವೂ ಎಕ್ಸ್ ಕಿರಣಗಳೇ. ಈ ಅಂಶಗಳನ್ನು

ಗಮನಿಸಿದ ವಿಜ್ಞಾನಿಗಳು ಇನ್ನೊಂದು ಊಹೆಯನ್ನು ಮಂಡಿಸಿದ್ದಾರೆ. ಎಕ್ಸ್‌ಕಿರಣ ಆಕರ ಒಂದು ಯಮಳ ನಕ್ಷತ್ರ ವ್ಯವಸ್ಥೆ. ಇವುಗಳಲ್ಲಿ ಒಂದು ಸೂರ್ಯನಂಥ ಸಾಮಾನ್ಯ ನಕ್ಷತ್ರ; ಇನ್ನೊಂದು ನ್ಯೂಟ್ರಾನ್ ನಕ್ಷತ್ರ. ಇದು ಗಾತ್ರದಲ್ಲಿ ಕಿರಿಯದು; ಅದರ ದ್ರವ್ಯರಾಶಿ, ಸಾಂದ್ರತೆ, ಉಷ್ಣತೆ, ಅದರಿಂದ ವಿಸರಿತವಾಗುವ ಬೆಳಕು ಎಲ್ಲವೂ ಬಲು ಹೆಚ್ಚು. ಇಂಥ ಒಂದು ಯಮಳ ವ್ಯವಸ್ಥೆ ಪರಸ್ಪರ ಪರಿಭ್ರಮಿಸುವಾಗ ಸಾಧಾರಣ ನಕ್ಷತ್ರದಿಂದ ನ್ಯೂಟ್ರಾನ್ ನಕ್ಷತ್ರ ಅನಿಲವನ್ನು ತನ್ನೆಡೆಗೆ ಸೆಳೆದುಬಿಡುತ್ತದೆ. ಇದು ಅದರ ಸುತ್ತಲೂ ಸುರುಳಿಸುತ್ತುವ ಒಂದು ಅನಿಲ ಕವಚವಾಗುವುದು. ಇಂಥ ಕವಚದ ಒಳಮೈ ಅದರ ತೀವ್ರ ಉಷ್ಣತೆಯೊಡನೆ ನೇರ ಸಂಪರ್ಕಕ್ಕೆ ಬರುತ್ತದೆ. ಈ ಭಾಗದಲ್ಲಿ ಎಕ್ಸ್‌ಕಿರಣಗಳು ಉತ್ಪನ್ನವಾಗುತ್ತವೆ. ಕವಚದ ಹೊರವಲಯ ದೃಗ್ಗೋಚರ ಬೆಳಕನ್ನು ಬೀರುತ್ತದೆ. ಪ್ರಾಯೋಗಿಕವಾಗಿ ಇಂಥ ಒಂದು ಮಾದರಿಗೆ ಅಥವಾ ಊಹೆಗೆ ಅನೇಕಉದಾಹರಣೆಗಳು ಲಭ್ಯವಾಗಿವೆ.



ಚಿತ್ರ 3. A ಕಾಂತಕ್ಷೇತ್ರಗೆರೆಗಳು, B ವೀಕ್ಷಕ ನೋಡುವ ಎಕ್ಸ್‌ಕಿರಣ ಪ್ರೋಟಾನುಗಳು C ಎಲೆಕ್ಟ್ರಾನಿನ ಪಥ

1967ರಿಂದ ಈಚೆಗೆ TauX1 ಮತ್ತು ScoX1 ಇವುಗಳಿಗಿಂತ ಭಿನ್ನವಾದ ಎರಡು ಆಕರಗಳನ್ನು ಶೋಧಿಸಲಾಗಿದೆ. ScoX1ಕ್ಕಿಂತ ಸೆಂಟಾರಸ್ ಪುಂಜದಲ್ಲಿ ಗುರುತಿಸಿದ. CenX2 ಅದೆಷ್ಟೊ ಹೆಚ್ಚು ಸಾಮರ್ಥ್ಯ ಪೂರಿತವಾಗಿತ್ತು. ಈ ಶೋಧನೆ ಏಪ್ರಿಲ್ 1967ರಲ್ಲಿ ನಡೆಯಿತು. ಆದರೆ ಆರು ವಾರಗಳ ತರುವಾಯ ನಡೆಸಿದ ಶೋಧನೆಯಲ್ಲಿ ಅದೇ ಆಕರದ (CenX2) ಸಾಮರ್ಥ್ಯ 6 ಅಂಶಗಳಷ್ಟು ಕಡಿಮೆಯಾಗಿ ಹೋಗಿತ್ತು. ಮುಂದಿನ ಸೆಪ್ಟೆಂಬರಿನಲ್ಲಿ ಶೋಧನೆ ನಡೆಸಿದಾಗ ಈ ಆಕರವನ್ನು ಗುರುತಿಸಲೇ ಆಗಲಿಲ್ಲ. ಅಂದರೆ ಏಪ್ರಿಲಿನಲ್ಲಿ ಇದ್ದ ಸಾಮರ್ಥ್ಯದ 100 ಅಂಶಗಳಿಗಿಂತಲೂ ಹೆಚ್ಚಾಗಿ CenX2ರ ಸಾಮರ್ಥ್ಯ ತಗ್ಗಿತ್ತು ಎಂದಾಯಿತು. ಆರು ತಿಂಗಳುಗಳ ಕ್ಷಿಪ್ರ ಅವಧಿಯಲ್ಲಿ ಇಂಥ ತೀವ್ರ ವ್ಯತ್ಯಾಸವನ್ನು ಪ್ರದರ್ಶಿಸಿದ ಬೇರೆ ಎಕ್ಸ್‌ಕಿರಣ ನಕ್ಷತ್ರಗಳು ತಿಳಿದಿರಲಿಲ್ಲ. ಮುಂದೆ ನವೆಂಬರ್ 1968ರಲ್ಲಿ ಭಾರತದಿಂದ ಉಡಾಯಿಸಿದ ರಾಕೆಟ್‌ಕ್ಯಾಮರಾಗಳು ಇದೇ ಆಕರವನ್ನು ಪುನಃ ಗುರುತಿಸಿವೆ. ನೋವ ನಕ್ಷತ್ರಗಳ ಏರಿಳಿತಗಳಿಗೆ



ಚಿತ್ರ 4. ಒಂದು ಎಕ್ಸ್‌ಕಿರಣದ ಮಾದರಿ, A ಸೂರ್ಯದರ್ಜೆಯ ಒಂದು ನಕ್ಷತ್ರ, B ದೃಗ್ಗೋಚರ ಬೆಳಕು, C ಎಕ್ಸ್‌ಕಿರಣಗಳು, D ಅನಿಲತಟ್ಟೆ, E ಶ್ವೇತಕುಬ್ಜ ನಕ್ಷತ್ರ

ಇಂಥ ಆಕರಗಳನ್ನು ಹೋಲಿಸಿ ಇದನ್ನು ಎಕ್ಸ್‌ಕಿರಣ ನೋವ ನಕ್ಷತ್ರ ಎಂದು ಕರೆಯಲಾಗಿದೆ. ಸೆಂಟಾರಸ್–ಲೂಪಸ್ ಪುಂಜಗಳ ಗಡಿಯಲ್ಲಿ 1969ರ ಬೇಸಗೆಯಲ್ಲಿ ಇನ್ನೊಂದು ಎಕ್ಸ್‌ಕಿರಣ ನೋವವನ್ನು ಶೋಧಿಸಿದ್ದಾರೆ. ಜುಲೈನಲ್ಲಿ ಮೊದಲು ಕಂಡ ಈ ಆಕರ ScoX1ರ ಎರಡರಷ್ಟು ಸಾಮರ್ಥ್ಯವನ್ನು ಮುಂದಿನ ದಿವಸಗಳಲ್ಲಿ ಪ್ರದರ್ಶಿಸಿ ಅಕ್ಟೋಬರ್ ಹೊತ್ತಿಗೆ ಕಾಣದಾಯಿತು. ಮೂರು ವರ್ಷಗಳ ಕ್ಷಿಪ್ರಾವಧಿಯಲ್ಲಿ ಇಂಥ ಎರಡು ವೈಪರೀತ್ಯಗಳ ಶೋಧನೆಯನ್ನು ಗಮನಿಸಿ ಎಕ್ಸ್‌ಕಿರಣ ನೋವನಕ್ಷತ್ರಗಳು ವಿಶ್ವದ ಸಾಮಾನ್ಯ ವಿದ್ಯಮಾನವೇ ಆಗಿರಲಾರದೇ ಎಂಬ ಸಂದೇಹವನ್ನು ಮಂಡಿಸಲಾಗಿದೆ. ಈ ದಾರಿಯಲ್ಲಿನ ಶೋಧನೆ ಒಂದು ನಕ್ಷತ್ರದ ವಿಕಾಸದ ಹಾದಿಯಲ್ಲಿರುವ (ಸೂರ್ಯನಂಥ ಸಾಮಾನ್ಯ ನಕ್ಷತ್ರ–ರಕ್ತದೈತ್ಯನಕ್ಷತ್ರ–ಶ್ವೇತಕುಬ್ಜ ನಕ್ಷತ್ರ–ನೋವ ಮಹಾನೋವ ನಕ್ಷತ್ರ) ಹಲವಾರು ಕೊರೆಗಳಲ್ಲಿ ಕೆಲವನ್ನಾದರೂ ತುಂಬಬಹುದು ಎಂದು ಖಗೋಳವಿಜ್ಞಾನಿಗಳ ನಂಬಿಕೆ.

ಈಚೆಗೆ ಒಂದು ಎಕ್ಸ್‌ಕಿರಣ ಬ್ರಹ್ಮಾಂಡವನ್ನೇ (ಎಕ್ಸ್‌ರೇ ಗ್ಯಾಲಕ್ಸಿ) ಶೋಧಿಸಲಾಗಿದೆ. ಎಕ್ಸ್‌ಕಿರಣ ಖಗೋಳವಿಜ್ಞಾನದಲ್ಲಿ ಈ ಶೋಧನೆ ಅತ್ಯಂತ ಮಹತ್ತ್ವಪೂರ್ಣವಾದದ್ದು. ಕನ್ಯಾರಾಶಿಯ ದಿಕ್ಕಿನಲ್ಲಿರುವ ಈ ಆಕರವನ್ನು 1965ರ ಅನಂತರ ಪದೇ ಪದೇ ವಿಶೇಷ ಸೂಕ್ಷ್ಮೋಪಕರಣಗಳ ನೆರವಿನಿಂದ ಶೋಧಿಸಿ ವಿವರಗಳನ್ನು ಸಂಗ್ರಹಿಸಲಾಗಿದೆ. ಇದರಿಂದ ಬರುವ ಎಕ್ಸ್‌ಕಿರಣ ಸಂಜ್ಞೆ ಬಲು ದುರ್ಬಲ– ScoX1ರ 200 ಅಂಶಗಳಲ್ಲಿ 1 ಮಾತ್ರ. ಆದರೆ ಈ ಆಕರದ ದೂರ $5x10^7$ ಜ್ಯೋತಿರ್ವರ್ಷ (ScoX1ರ ದೂರ 300–1,000 ಜ್ಯೋತಿರ್ವರ್ಷ). ಆದ್ದರಿಂದ ಇದರ ಎಕ್ಸ್‌ಕಿರಣ ಸಾಮರ್ಥ್ಯ $10^{36}$Wಗಳೆಂದು ಅಂದಾಜು ಮಾಡಲಾಗಿದೆ. ಇದು ಅದೇ ಆಕರದ ರೇಡಿಯೋ ವಿಸರಣಸಾಮರ್ಥ್ಯದ 100 ಪಾಲಿನಷ್ಟು ಹೆಚ್ಚಿಗೆ ಇದೆ. ಈ ಆಕರವನ್ನು ಒಂದು ರೇಡಿಯೊಬ್ರಹ್ಮಾಂಡವೆಂದು ಇದುವರೆಗೆ ಪರಿಗಣಿಸಲಾಗಿತ್ತು. ಆದರೆ ಅದರ ಎಕ್ಸ್‌ಕಿರಣವಿಸರಣೆ ರೇಡಿಯೋಗಳು ವಿಸರಣೆಯ ಹಲವಾರು ಪಾಲು ಹೆಚ್ಚು ಇರುವುದರಿಂದ ಅದನ್ನು ಎಕ್ಸ್‌ಕಿರಣ ಬ್ರಹ್ಮಾಂಡವೆಂದೇ ಹೆಸರಿಸುವುದು ಅನುಚಿತವಲ್ಲ. ಎಕ್ಸ್ ಕಿರಣಗಳ ಅಧ್ಯಯನಕ್ಕಾಗಿ ನ್ಯೂಟನ್ ದೂರದರ್ಶಕ ಮೊದಲಾದ ಅನೇಕವು ಬಾಹ್ಯಾಂತರಿಕ್ಷದಲ್ಲಿ ಹಾರಿವೆ. ಇತ್ತೀಚಿನದು ಚಂದ್ರ ದೂರದರ್ಶಕ. ಗ್ಯಾಮ ಕಿರಣಗಳಿಗಾಗಿಯೂ ವಿಶೇಷ ಉಪಕರಣಗಳನ್ನು ಹಾರಿಸಲಾಗಿದೆ.

ಸೂರ್ಯನ ವಿಸರಣೆಗಳ ಹೊರತಾಗಿ ವಿಶ್ವದಿಂದ ಬರುವ ಗಾಮಕಿರಣಗಳನ್ನು ಇದುವರೆಗೂ ಖಚಿತವಾಗಿ ಕಂಡುಹಿಡಿಯಲು ಆಗಿಲ್ಲ. ಸೌರವ್ಯೂಹದ ಹೊರಗೆ ಗಾಮಕಿರಣ ವಿಸರಣೆ ಮಾಡುವ ನಿರ್ದಿಷ್ಟ ಆಕರಗಳ ಶೋಧನೆ ನಡೆಯುತ್ತಿದೆ. ಆದರೆ ವಿಶ್ವದ ಹಿನ್ನೆಲೆಯ ಗಲಭೆಯಲ್ಲಿ (ಬ್ಯಾಕ್‌ಗ್ರೌಂಡ್ ನಾಯ್ಸ್) ಗಾಮ ವಿಸರಣೆಯೂ ಸೇರಿದೆ ಎಂದು ಖಗೋಳ ವಿಜ್ಞಾನಿಗಳ ಮತ. ವಿಶ್ವದ ಸಕಲ ಬ್ರಹ್ಮಾಂಡಗಳ ಸಮಸ್ತ ವಿಸರಣೆಗಳ ಸಮಗ್ರ ಪರಿಣಾಮ ಹಿನ್ನೆಲೆಯ ಗಲಭೆ. ಆದ್ದರಿಂದ ಇದರಲ್ಲಿ ಎಕ್ಸ್‌ಕಿರಣಗಳ ಪಾತ್ರ ಎಷ್ಟು ಎಂದು ಖಚಿತವಾಗಿ ನಿರ್ಧಾರವಾಗದೆ ಮುಂದಿನ ಗಾಮವಿಸರಣೆಯ ಪಾತ್ರವನ್ನು ಅಂದಾಜು ಮಾಡುವುದು ಸುಲಭವಾಗುತ್ತದೆ. ಈ ದಿಶೆಯಲ್ಲಿ ಎಕ್ಸ್ ಮತ್ತು ಗಾಮಕಿರಣ ಖಗೋಳವಿಜ್ಞಾನಗಳು ಹೊಸ ಒಂದು ವಿಸ್ಮಯವಿಶ್ವವನ್ನೇ ನಮ್ಮ ಎದುರು ತೆರೆದಿವೆ. *

**ಎಕ್ಸ್‌ಪೊ:** ಇಂಗ್ಲಿಷಿನ ಎಕ್ಸ್‌ಪೊಸಿಷನ್ ಎಂಬ ಶಬ್ದದ ಸಂಕ್ಷಿಪ್ತರೂಪ. ಕಲೆ, ವಿಜ್ಞಾನ, ಕೈಗಾರಿಕೆ, ವಾಣಿಜ್ಯ ಮುಂತಾದ ನಾನಾಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯ ವ್ಯವಸ್ಥಿತ ಪ್ರದರ್ಶನ. ನಾನಾ ಸಾಧನೆಗಳ ಬಗ್ಗೆ ಸಾರ್ವಜನಿಕರಲ್ಲಿ ಆಸಕ್ತಿಯ ಪ್ರಚೋದನೆಯೂ ಉತ್ಪಾದನ ಪ್ರವರ್ತನೆಯೂ ವ್ಯಾಪಾರ ವಿಸ್ತರಣೆಯೂ ಇದರ ಉದ್ದೇಶ. ಸಂತೆ, ಜಾತ್ರೆ, ಪರಿಷೆಗಳಿಗೂ ಪ್ರದರ್ಶನಗಳಿಗೂ ಒಂದು ಮುಖ್ಯ ವ್ಯತ್ಯಾಸವುಂಟು. ಅವು ಸಾಮಾನ್ಯವಾಗಿ ಕ್ಲುಪ್ತ ಕಾಲಾವಧಿಯಲ್ಲಿ ಪುನರ್ಭವಿಸುತ್ತವೆ. ಆದರೆ ಪ್ರದರ್ಶನಗಳು ನಿಯತಕಾಲಿಕವಾಗಿಯೇ ಇರಬೇಕಾದುದಿಲ್ಲ. ಇವು ಹಲವು ತಿಂಗಳ ಕಾಲ ನಡೆಯಬಹುದು. ಸಂತೆ, ಜಾತ್ರೆ ಅಥವಾ ಪರಿಷೆ ಒಂದು ಹಂಗಾಮಿ ಮಾರುಕಟ್ಟೆ ವ್ಯಾಪಾರ ಪ್ರವರ್ತನೆಯೇ ಅದರ ಮುಖ್ಯೋದ್ದೇಶ. ಅದು ನಡೆಯುವ ಸ್ಥಳವೂ ಸಾಮಾನ್ಯವಾಗಿ ನಿರ್ದಿಷ್ಟ. ಆದರೆ ಪ್ರದರ್ಶನದಲ್ಲಿ ಭಾಗವಹಿಸುವವರಿಗೂ ಇದನ್ನು ಸಂದರ್ಶಿಸುವವರಿಗೂ ವ್ಯಾಪಾರೋದ್ದೇಶವೇ ಇರಬೇಕಾದುದಿಲ್ಲ. ಅದ್ಭುತರಮ್ಯವಾದ ಆಕರ್ಷಣೆಗಳನ್ನೊಡ್ಡಿ ಜನರನ್ನು ತನ್ನತ್ತ ಸೆಳೆದು, ಅವರ ಬುದ್ಧಿಗೆ ಆಹಾರವನ್ನೂ ಮನಸ್ಸಿಗೆ ಆಹ್ಲಾದವನ್ನೂ ಬೇಗುದಿಗೊಂಡ ಜೀವಕ್ಕೆ ವಿಶ್ರಾಂತಿಯನ್ನೂ ಪುನಶ್ಚೈತನ್ಯವನ್ನೂ ಎರೆಯುವ ಪ್ರದರ್ಶನಗಳು ಸಕಲ ವರ್ಗಗಳ ಭಿನ್ನರುಚಿಗಳ ಜನರ ಬೃಹತ್ ಸಮಾರಾಧನೆಯೆನಿಸಿ ಈ ಶತಮಾನದ ಜನಜೀವನದ ಮುಖ್ಯ ಸಂಸ್ಥೆಗಳಾಗಿ ಪರಿಣಮಿಸಿವೆ. ಇಲ್ಲಿ ಪ್ರದರ್ಶಿತವಾದ ಪದಾರ್ಥಗಳಿಗೂ ಕೈಗಾರಿಕೆಗಳಿಗೂ ಯಥೇಚ್ಛವಾದ ಪ್ರಚಾರ ಲಭಿಸುವುದರಿಂದ ಇವು ವಾಣಿಜ್ಯ ದೃಷ್ಟಿಯಿಂದಲೂ ಬಲು ಉಪಯುಕ್ತ. ಪ್ರವಾಸೋದ್ಯಮವನ್ನು ಬೆಳೆಯಿಸಿ, ಅಂತಾರಾಷ್ಟ್ರೀಯ ಸೌಹಾರ್ದ ಸ್ಥಾಪನೆಗೂ ವಿದೇಶೀ ವಿನಿಮಯ ಸಂಪಾದನೆಗೂ ಸಾಧನವಾಗಿ ಪರಿಣಮಿಸಿರುವ ಈ ಪ್ರದರ್ಶನಗಳು ನಾಗರಿಕತೆಯ ಪ್ರಗತಿಯ ದ್ಯೋತಕಗಳಾಗಿವೆ; ಭಾವೀ ವಿಶ್ವದ ಪಥಪ್ರದರ್ಶಕಗಳಾಗಿವೆ.

ಪರಿಷೆ (ಫೇರ್), ಪ್ರದರ್ಶನ(ಎಕ್ಸಿಬಿಷನ್, ಎಕ್ಸ್‌ಪೊಸಿಷನ್) ಎಂಬ ಶಬ್ದಗಳು ಸಮಾನಾರ್ಥಗಳೆಂಬಂತೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇವನ್ನು ಬಳಸುವುದುಂಟು. ಫ್ರಾನ್ಸ್, ಬ್ರಿಟನುಗಳಲ್ಲಿ ಹೀಗಲ್ಲ. ವಾಣಿಜ್ಯೋದ್ದೇಶದಿಂದ ವ್ಯವಸ್ಥೆಗೊಳಿಸಿದ್ದು ಪರಿಷೆ. ರಾಷ್ಟ್ರೀಯ ಅಂತಾರಾಷ್ಟ್ರೀಯ ವ್ಯಾಪ್ತಿಯುಳ್ಳದ್ದು ಪ್ರದರ್ಶನ. ಬ್ರಿಟನಿನಲ್ಲಿ ಎಕ್ಸಿಬಿಷನ್ ಎಂದು ಕರೆಯುವ ಇದನ್ನು ಫ್ರಾನ್ಸಿನಲ್ಲಿ ಎಕ್ಸ್‌ಪೊಸಿಷನ್ ಎಂಬ ಹೆಸರಿನಿಂದ ಕರೆಯುತ್ತಾರೆ.*

**ಎಕ್ಸ್‌ಪೊ ಪರಂಪರೆ:** ಎಕ್ಸ್‌ಪೊ ಎಂಬ ಸಂಕ್ಷಿಪ್ತ ನಾಮದ ಅಂತಾರಾಷ್ಟ್ರೀಯ ಬೃಹತ್ ಪ್ರದರ್ಶನಗಳು ಇಪ್ಪತ್ತನೆಯ ಶತಮಾನದ ಅರವತ್ತರ ದಶಕದಿಂದೀಚೆಗಿನ ವೈಶಿಷ್ಟ್ಯವಾದರೂ ಇವುಗಳ ಪರಂಪರೆ ಬಲು ದೊಡ್ಡದು. ಉಗಿಯಂತ್ರದಂಥ ವಿಜ್ಞಾನಾದ್ಭುತಗಳ

ಆವಿಷ್ಕಾರ. ವಿದ್ಯುಚ್ಛಕ್ತಿಯ ಸಜ್ಜಿಕೆ, ಸೂಯೆಜ್ ಪನಾಮಾ ಕಾಲುವೆಗಳಂಥ ವಾಸ್ತುಶಿಲ್ಪ ಸಾಹಸ ಮುಂತಾದವುಗಳ ಫಲವಾಗಿ ಉದಿಸಿದ ಅದಮ್ಯ ಆತ್ಮ ವಿಶ್ವಾಸವೂ ಸ್ಪರ್ಧೆಯ ಅಮಿತೋತ್ಸಾಹವೂ ಕಳೆದ ನೂರೈವತ್ತು ವರ್ಷಗಳಲ್ಲಿ ಇವುಗಳಿಗೆ ಅಭೂತಪೂರ್ವವಾದ ಚೈತನ್ಯವನ್ನೊದಗಿಸಿವೆ.

**ಸ್ಫಟಿಕ ಮಹಲು**: ಈ ಅಂತಾರಾಷ್ಟ್ರೀಯ ದೈತ್ಯ ಪ್ರದರ್ಶನಗಳ ನವಯುಗದ ಉದಯ ವಾದದ್ದು 1851ರಲ್ಲಿ; ಲಂಡನಿನ ಹೈಡ್ ಪಾರ್ಕಿನಲ್ಲಿ; ಗಾಜು ಕಬ್ಬಿಣಗಳಿಂದಲೇ ನಿರ್ಮಿಸಲಾದ ಸ್ಫಟಿಕ ಮಹಲಿನಲ್ಲಿ (ಕ್ರಿಸ್ಟಲ್ ಪ್ಯಾಲೇಸ್). ಅದು ವಿಕ್ಟೋರಿಯ ರಾಣಿಯ ಆಳ್ವಿಕೆಯ ಉಚ್ಛ್ರಾಯ ಕಾಲ. ಮಹಾಚಕ್ರಾಧಿಪತ್ಯವೊಂದರ ತಲೆಮಣಿಯಂತಿದ್ದ ಇಂಗ್ಲೆಂಡು ಆಗ ಕೈಗಾರಿಕಾ ಕ್ರಾಂತಿಯ ಮಹೋನ್ನತಿಯ ಘಟ್ಟ ಮುಟ್ಟಿತ್ತು. ಅಖಿಲ ರಾಷ್ಟ್ರಗಳ ಕೈಗಾರಿಕೆಯ ಮಹಾ ಪ್ರದರ್ಶನವೆಂದು ಕರೆಯಲಾದ ಈ ಪ್ರದರ್ಶನವನ್ನು ಸುಮಾರು 60,00,000 ಪ್ರೇಕ್ಷಕರು ಸಂದರ್ಶಿಸಿದರಂತೆ. ಇವರಲ್ಲಿ ಭಾಗವಹಿಸಿದ್ದ 13,000 ಪ್ರದರ್ಶನಕಾರರಲ್ಲಿ ಸುಮಾರು ಅರ್ಧ ಬ್ರಿಟಿಷೇತರರು. ಅಮೆರಿಕ ಸಂಯುಕ್ತಸಂಸ್ಥಾನ ಪ್ರದರ್ಶಿಸಿದ್ದ ವಸ್ತುಗಳ ಪೈಕಿ ಕೃತಕ ಹಲ್ಲುಗಳೂ ಕೋಲ್ಟನ ರಿವಾಲ್ವರು ಗುಡ್‌ಇಯರ್ ಇಂಡಿಯ ರಬ್ಬರು ಸರಕುಗಳೂ ಹೊಗೆಸೊಪ್ಪು ಮ್ಯಾಕ್‌ಕಾರ್ಮಿಕನ ಕೊಯ್ಲುಯಂತ್ರವೂ ಇದ್ದುವು. ಇವೆಲ್ಲವೂ ಆಗಿನ ಕಾಲದ ಕೌತುಕಗಳು ಹೇಗೋ ಹಾಗೆ ಪ್ರತೀಕಗಳೂ ಹೌದು.

ಈ ಬಗೆಯ ಅಂತಾರಾಷ್ಟ್ರೀಯ ಪ್ರದರ್ಶನಗಳ ದೀರ್ಘಪೀಳಿಗೆಯಲ್ಲೇ ಮೊದಲನೆಯ ದಾಗಿ ಪರಿಣಮಿಸಿದ ಈ ಪ್ರದರ್ಶನದ ಭವನವಾದ ಸ್ಫಟಿಕ ಮಹಲು ಆಮೇಲಣ ಅನೇಕ ಅಂತಾರಾಷ್ಟ್ರೀಯ ಪ್ರದರ್ಶನ ಭವನಗಳಿಗೆ ಮಾದರಿಯಾಗಿ ಪರಿಣಮಿಸಿತು. 1851 ಅಡಿ ಉದ್ದ, 456 ಅಡಿ ಅಗಲ, 66 ಅಡಿ ಎತ್ತರವಿದ್ದ ಈ ಭವನದ ವಿಸ್ತಾರ ಸುಮಾರು 8,00,000 ಚದರ ಅಡಿ. ಈಗಿನ ಅಂತಾರಾಷ್ಟ್ರೀಯ ಪ್ರದರ್ಶನಗಳ ಮಾನಕದ ಪ್ರಕಾರ ಇದು ಅಷ್ಟೇನೂ ಅಗಾಧವಲ್ಲವಾದರೂ ಆಗ ಇದೇ ಮಹಾದ್ಭುತ. ಜೋಸ್ ಪ್ಯಾಕ್ಸ್‌ಟನ್ನನ ನೀಲನಕ್ಷೆಗೆ ಅನುಗುಣವಾಗಿ ನಿರ್ಮಿತವಾದ ಈ ಭವನವನ್ನು ಆ ಪ್ರದರ್ಶನಾನಂತರದಲ್ಲಿ ಕಿತ್ತು ದಕ್ಷಿಣ ಲಂಡನಿನಲ್ಲಿ ಪುನರ್ನಿರ್ಮಿಸಲಾಯಿತು. ಗಾನಮಂದಿರವಾಗಿಯೂ ಪ್ರದರ್ಶನ ಭವನವಾಗಿಯೂ ಉಪಯುಕ್ತವಾಗಿದ್ದ ಈ ಮಹಲು 1936ರಲ್ಲಿ ಭಸ್ಮೀಭೂತವಾಯಿತು.

19ನೆಯ ಶತಮಾನದ ಉತ್ತರಾರ್ಧದಲ್ಲಿ ಅಂತಾರಾಷ್ಟ್ರೀಯ ಪ್ರದರ್ಶನಗಳ ಪೀಳಿಗೆ ಅತಿಯಾಗಿ ಬೆಳೆಯಿತೆನ್ನಬಹುದು. 1853ರಲ್ಲಿ ನ್ಯೂ ಯಾರ್ಕಿನಲ್ಲಿ ನಡೆಸಲಾದ ಪ್ರದರ್ಶನಕ್ಕೂ ಒಂದು ಸ್ಫಟಿಕ ಮಹಲಿನ ನಿರ್ಮಾಣವಾಗಿತ್ತು. ಆ ಮಹಾನಗರದ ಖಾಸಗಿ ಉದ್ಯಮಪತಿಗಳ ಪ್ರಯತ್ನದ ಫಲವಾಗಿ ಏರ್ಪಡಿಸಲಾಗಿದ್ದ ಈ ಪ್ರದರ್ಶನ ಯಶಃಪ್ರದವಾಗಲಿಲ್ಲ. ಅಮೆರಿಕವಲ್ಲದೆ 23 ರಾಷ್ಟ್ರಗಳು ಭಾಗವಹಿಸಿದ್ದ ಈ ಪ್ರದರ್ಶನದ ಭವನನಿರ್ಮಾಣ ನಿರ್ದುಷ್ಟವಾದದ್ದಾಗಿರಲಿಲ್ಲ. ಜೋರಾದ ಮಳೆ ಬಂದು, ಸೂರು ಸೋರಿ, ಪ್ರದಶಿತ ವಸ್ತುಗಳೆಲ್ಲ ನೆನೆದು ಹೋದುವು. ಪ್ರೇಕ್ಷಕರಂತೂ ಅಜ್ಜಿಬಜ್ಜಿಂಗಾದರು. ಸಂಘಟಕರಿಗೆ ನಷ್ಟ ತಟ್ಟಿ, ಉತ್ಸಾಹ ಒದ್ದೆಯಾಗಿ, ಬಹುಕಾಲ ಈ ಸಾಹಸಕ್ಕೆ ಕೈಹಾಕಬಾರದೆಂಬ ಮಟ್ಟಿಗೆ ಅವರಲ್ಲಿ ನಿರಾಶೆಮೂಡಿತು.

**ಪ್ಯಾರಿಸಿನಲ್ಲಿ**: ಎರಡು ವರ್ಷಗಳ ಅನಂತರ (1855) ಪ್ಯಾರಿಸಿನಲ್ಲಿ ನಡೆದ ಮಹಾಪ್ರದರ್ಶನ ದ್ದೊಂದು ಹೊಸ ಬಗೆಯ ವಿಕ್ರಮ. ಸರ್ಕಾರಿ ಪ್ರಯತ್ನದ ಫಲವಾಗಿ ಷಾನ್ಸ್-ಸೆಲೀಸೇ ಪ್ರದೇಶದಲ್ಲಿ ನಿರ್ಮಿತವಾದ ಪ್ಯಾಲೆ ದ ಲ ಇಂಡಸ್ಟ್ರೀಸ್ ಎಂಬ ಭವ್ಯಭವನದಲ್ಲಿ ಏರ್ಪಡಿಸಲಾದ ಈ ವಾಣಿಜ್ಯ ಮಂದಿರವನ್ನು 50,00,000ಕ್ಕೂ ಹೆಚ್ಚು ಮಂದಿ ಸಂದರ್ಶಿಸಿದರು. ಇದೊಂದು ಯಂತ್ರಗ್ಯಾಲರಿ, 'ಕೈಗಾರಿಕಾ ದೇಗುಲ'. ಸ್ಮಾರಕಶಿಲ್ಪ ಶೈಲಿಯಲ್ಲಿ, ಶಿಲಾಕುಂದಣದೊಳಗೆ ಗಾಜಿನ ಫಲಕಗಳನ್ನು ಕೂರಿಸಿ ಕಟ್ಟಲಾದ ಪ್ಯಾಲೆ ದ ಲ ಇಂಡಸ್ಟ್ರೀಸ್ ಪ್ರದರ್ಶನದಿಂದ ಮಂದಿರನಿರ್ಮಾಣ ಕಲೆಯಲ್ಲಿ ಹೊಸ ಸಮಪ್ರದಾಯವೊಂದು ರೂಢಿಗೆ ಬಂದದ್ದು ಮಾತ್ರವೇ ಅಲ್ಲ, ಆ ಭವನವಿಂದಿಗೂ ಇತಿಹಾಸದ ರಸನಿಮಿಷವೊಂದರ ಸ್ತಬ್ಧ ಚಿತ್ರದಂತೆ ಆಗಿನ ಮಹಾಸಾಧನೆಯನ್ನು ಘನೀಕರಿಸಿ ಧರಿಸಿ ನಿಂತಿದೆ.

ಇದಾದ ಹನ್ನೆರಡು ವರ್ಷಗಳ ಮೇಲೆ 1867ರಲ್ಲಿ ಪ್ಯಾರಿಸಿನಲ್ಲಿ ನಡೆದ ಪ್ರದರ್ಶನವೂ ಮಹತ್ತ್ವದ್ದೇ ಎನ್ನಬಹುದು. ಏಕೆಂದರೆ ಆಗ ತಾನೇ ಸೂಯೆಜ಼್ ಕಾಲುವೆಯ ನಿರ್ಮಾಣ ವಾಗಿತ್ತು. ಬಹುತೇಕ ಫ್ರೆಂಚ್ ಸಾಹಸದ ಈ ಕಾಲುವೆಯ ನಿರ್ಮಾಣದಿಂದ ಫ್ರೆಂಚ್ ಸಾಮ್ರಾಜ್ಯ ವೈಭವದ ಕೋಡೇ ಬೆಳೆದಿತ್ತು. ಆಗಿನ ಕಾಲದಲ್ಲಿ ಯುರೋಪನ್ನಾಳುತ್ತಿದ್ದ ಅರಸುಗಳನೇಕರು ಈ ಮಹಾಪ್ರದರ್ಶನಕ್ಕೆ ಆಗಮಿಸಿದ್ದರಿಂದ ಇದು ಅತ್ಯಧಿಕ ಪ್ರೇಕ್ಷಕರನ್ನಾಕರ್ಷಿಸಿತು.

19ನೆಯ ಶತಮಾನದಲ್ಲಿ ಪ್ಯಾರಿಸಿನಲ್ಲಿ ನಡೆದ ಇನ್ನೆರಡು ಪ್ರದರ್ಶನಗಳ ಪೈಕಿ ಮೊದಲನೆಯದು ಏರ್ಪಟ್ಟದ್ದು 1889ರಲ್ಲಿ. ಫ್ರಾನ್ಸಿನ ಮಹಾಕ್ರಾಂತಿಯ ಶತಾಬ್ದಿಯ ಸ್ಮಾರಕವಾದ ಈ ಪ್ರದರ್ಶನಕ್ಕಾಗಿಯೇ ಜಗತ್ಪ್ರಸಿದ್ಧ ಐಫೆಲ್ ಗೋಪುರದ ನಿರ್ಮಾಣವಾದದ್ದು (ನೋಡಿ- ಐಫಿಲ್ ಗೋಪುರ). ಇದರ ಸುತ್ತಮುತ್ತ ಏರ್ಪಟ್ಟ ಪ್ರದರ್ಶನ ಭವನಗಳ ಪೈಕಿ ಪ್ಯಾಲೆ ದ ಮಷೀನ್ಸ್ ಎಂಬ ಪ್ರಸಿದ್ಧ ಸೌಧವನ್ನು ನಿರ್ಮಿಸಿದ ಶಿಲ್ಪಿ ಎಂ. ಕಾಂಟಾಮಿನ್. ತಲಾ 480 ಅಡಿ ದೂರದಲ್ಲಿರುವ 20 ಆಸರೆ ಕಟ್ಟುಗಳ ಕೆಳಗೆ ನಿರಾತಂಕವಾಗಿ 1270 ಅಡಿಗಳ ಉದ್ದಕ್ಕೆ ಹಬ್ಬಿದ ಇದರ ಹಜಾರ ಆ ಕಾಲಕ್ಕೊಂದು ಶಿಲ್ಪಕೌತುಕವೆನಿಸಿತ್ತು.

**ಅಮೆರಿಕದಲ್ಲಿ**: ಈ ನಡುವೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲೂ ಅಂತಾರಾಷ್ಟ್ರೀಯ ಪ್ರದರ್ಶನಗಳಾದುವು. 1853ರ ಸ್ಫಟಿಕ ಮಹಲಿನ ಕಹಿ ಅನುಭವವಾದ ಮೇಲೆ ರಾಷ್ಟ್ರದ ಪ್ರಥಮ ಅಂತಾರಾಷ್ಟ್ರೀಯ ಮಹಾಪ್ರದರ್ಶನವೇರ್ಪಟ್ಟದ್ದು ಫಿಲಡೆಲ್ಫಿಯದಲ್ಲಿ (1876). ಅಮೆರಿಕನ್ ಸ್ವಾತಂತ್ರ್ಯ ಘೋಷಣೆಯ ಪ್ರಥಮ ಶತಾಬ್ದಿಯ ಆಚರಣೆಯ ಅಂಗವಾಗಿ, 236 ಎಕರೆಯ ನಿವೇಶನದಲ್ಲಿ ಸಿದ್ಧಪಡಿಸಲಾದ ಈ 'ಬೃಹತ್ ಬ್ರಹ್ಮಾಂಡ'ದಲ್ಲಿ (ಮೈಟಿ ಕಾಸ್ಮಾಸ್) 167 ಕಟ್ಟಡಗಳಿದ್ದು, ಒಟ್ಟು 30,000 ಪ್ರದರ್ಶಕರು ಭಾಗವಹಿಸಿದ್ದರು. ಇದರಲ್ಲಿ ಪಾಲ್ಗೊಳ್ಳಬೇಕೆಂದು ಅಮೆರಿಕನ್ ಅಧ್ಯಕ್ಷರ ವತಿಯಿಂದ ಕಳಿಸಲಾದ ಆಹ್ವಾನವನ್ನು ಮೂವತ್ತೈದು ದೇಶಗಳು ಪುರಸ್ಕರಿಸಿದುವು. ಅಲೆಕ್ಸಾಂಡರ್ ಗ್ರಹಾಂ ಬೆಲ್ಲನ ಟೆಲಿಫೋನ್, ವೆಸ್ಟಿಂಗ್‌ಹೌಸ್ ಏರ್ ಬ್ರೇಕ್, ಎಡಿಸನನ ಡ್ಯೂಪ್ಲೆಕ್ಸ್ ಟೆಲಿಗ್ರಾಫ್, ಟೈಪ್‌ರೈಟರ್, ಹೊಲಿಗೆ ಯಂತ್ರ – ಇವು ಪ್ರದರ್ಶಿತ ವಸ್ತುಗಳ ಪೈಕಿ ಕೆಲವು. ಇತಿಹಾಸ ಪ್ರಸಿದ್ಧವಾದ ಸ್ವಾತಂತ್ರ್ಯದ ಘಂಟೆಯನ್ನೂ ರಾಷ್ಟ್ರವೀರರ ಗಂಭೀರ ಚಿತ್ರಗಳನ್ನೂ ಸ್ಮರಿಸಿಕೊಳ್ಳುತ್ತ ಪ್ರದರ್ಶನಕ್ಕೆ ಬಂದ ಪ್ರೇಕ್ಷಕರು ಇಲ್ಲಿ ಯಂತ್ರಭೂಯಿಷ್ಠವಾದ ಹೊಸ ಯುಗದ ಮುಂಗಾಣ್ಕೆಯನ್ನೇ ಪಡೆದರೆನ್ನ ಬಹುದು. ಸುಮಾರು 80,00,000 ಮಂದಿಯನ್ನಾಕರ್ಷಿಸಿದ ಈ ಪ್ರದರ್ಶನ ಆರ್ಥಿಕವಾಗಿ

**ಎಕ್ಸ್‌ಪೊ '67 : ಫ್ರೆಂಚ್ ಮಂಟಪದ ನೆತ್ತಿಯ ತೋಟ**

ಲಾಭಪ್ರದವಾಗಲಿಲ್ಲವಾದರೂ ಅಂತರ್ಯುದ್ಧದ ಅನಂತರದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಭಾವೈಕ್ಯ ಸಾಧನೆಗೆ ಇದು ನೆರವಾಯಿತಲ್ಲದೆ ಆ ದೇಶದ ಸಾಮಾಜಿಕ ಕೈಗಾರಿಕಾ ಪ್ರಜ್ಞೆಯನ್ನು ಬಹಳಮಟ್ಟಿಗೆ ಜಾಗೃತಗೊಳಿಸಿತು.

1893ರಲ್ಲಿ ಷಿಕಾಗೋದಲ್ಲಿ ನಡೆದ ಪ್ರದರ್ಶನ ಇನ್ನೊಂದು ದೊಡ್ಡ ಮೈಲಿಗಲ್ಲು. ಅಮೆರಿಕದ ನೆಲದ ಮೇಲೆ ಕೊಲಂಬಸ್ ಪದಾರ್ಪಣ ಮಾಡಿದ್ದರ ನಾನೂರನೆಯ ವರ್ಷದ ಉತ್ಸವದ ನೆನಪಿಗಾಗಿ ವ್ಯವಸ್ಥೆಗೊಂಡ ಈ ಪ್ರದರ್ಶನವೂ ಫಿಲಡೆಲ್ಫಿಯದ ಪ್ರದರ್ಶನದಂತೆ ವಿಶಾಲೋದ್ಯಾನದ ನಡುವೆ ರೂಪುಗೊಂಡಿತ್ತು. ಮಿಷಿಗನ್ ಸರೋವರದ ಮುಖದ ಮೇಲೆ 686 ಎಕರೆ ನೆಲವನ್ನು ತಬ್ಬಿ ಹಬ್ಬಿದ ಆ ಶ್ವೇತನಗರದ ಭವ್ಯತೆಯನ್ನು ಉದ್ದೀಪನಗೊಳಿಸಿ ದ್ದೆಂದರೆ ಅಲ್ಲಿನ ವಿದ್ಯುತ್ತು. ರಾತ್ರಿಯ ವೇಳೆಯಲ್ಲಿ ಕಿನ್ನರಲೋಕದಂತೆ ಕಾಣುತ್ತಿದ್ದ ಅದರ ಕಟ್ಟಡಗಳು ಅಭಿಜಾತ ವಾಸ್ತುಶಿಲ್ಪದ ಬಗ್ಗೆ ಸಾರ್ವಜನಿಕರ ಆಸಕ್ತಿ ಕೆರಳಿಸಿದುವು. ಪ್ರಪ್ರಥಮ ಬಾರಿಗೆ ಲಾಭ ಗಳಿಸಿಕೊಟ್ಟ ಅಮೆರಿಕನ್ ಅಂತಾರಾಷ್ಟ್ರೀಯ ಪ್ರದರ್ಶನವಿದು.

**20ನೆಯ ಶತಮಾನ:** ಇಪ್ಪತ್ತನೆಯ ಶತಮಾನದಲ್ಲಿ ಏರ್ಪಡಿಸಲಾದ ಅಂತಾರಾಷ್ಟ್ರೀಯ ಪ್ರದರ್ಶನಗಳು ಅನೇಕಾನೇಕ. 1915ರ ಸ್ಯಾನ್ ಫ್ರಾನ್ಸಿಸ್ಕೋ ಪ್ರದರ್ಶನವಿಲ್ಲಿ ಉಲ್ಲೇಖನಾರ್ಹ. ಪನಾಮಾ ಕಾಲುವೆಯ ಪ್ರಾರಂಭೋತ್ಸವದ ಸವಿನೆನಪಿಗಾಗಿ ಪನಾಮಾ ಪಿಸಿಫಿಕ್ ಎಂದೇ ಇದರ ನಾಮಧೇಯ. ಕೈಗಾರಿಕೆಗಾಗಲಿ ವಿಜ್ಞಾನಕ್ಕಾಗಲಿ ಅತಿಯಾದ ಪ್ರಾಮುಖ್ಯ ನೀಡದೆ



ಎಕ್ಸ್‌ಪೊ' 67 : ಆರ್ನಾಲ್ಡೊ ಪೊಮೊಡೋರೋಕೃತ ಗೋಳ

ಸಾಂಸ್ಕೃತಿಕ ಮುಖವನ್ನೇ ಮುಂದೆ ಮಾಡಿಕೊಂಡಿದ್ದ ಈ ಪ್ರದರ್ಶನವನ್ನು ತೊಡಗಿಸಿದಾಗ ಒಂದನೆಯ ಮಹಾಯುದ್ಧ ನಡೆಯುತ್ತಿತ್ತಾದರೂ ಇದು ಅಯಶಸ್ವಿಯೇನೂ ಆಗಲಿಲ್ಲ. ಇಪ್ಪತ್ತು ಲಕ್ಷ ಡಾಲರ್ ಹೆಚ್ಚುವರಿಯಲ್ಲಿ ಮುಕ್ತಾಯಗೊಂಡ ಈ ಪ್ರದರ್ಶನಭವನಗಳ ಶಿಲ್ಪಗಳು ಮೂರಿಷ್–ಸ್ಪ್ಯಾನಿಷ್, ರೊಮನೆಸ್ಕ್ ಮತ್ತು ಇಟಾಲಿಯನ್ ಪುನರುಜ್ಜೀವನ ಶೈಲಿಗಳ ಸಂಗಮಗಳು.

ಅಮೆರಿಕದ ಷಿಕಾಗೋ ನಗರ ಮತ್ತೆ ಅಂತಾರಾಷ್ಟ್ರೀಯ ಪ್ರದರ್ಶನವೊಂದರ (1933–34) ನಿವೇಶನವಾಗಿತ್ತು. ಈ ನಗರಸ್ಥಾಪನೆಯ ಶತಾಬ್ದಿಯ ಸಮಯಕ್ಕೆ ಸರಿಯಾಗಿ ಇದನ್ನು ಏರ್ಪಡಿಸಲಾದ್ದರಿಂದ ಆ ನೂರು ವರ್ಷದ ವೈಜ್ಞಾನಿಕ, ತಾಂತ್ರಿಕ ಮತ್ತು ಶಿಲ್ಪೀಯ ಮುನ್ನಡೆಯ ನಿರೂಪಣೆಯೇ ಈ ಪ್ರದರ್ಶನದ ಮುಖ್ಯೋದ್ದೇಶ.

ಕ್ರಿಯಾತ್ಮಕ ಶಿಲ್ಪವೇ ಇಲ್ಲಿನ ಭವನಗಳ ವೈಶಿಷ್ಟ್ಯವಾಗಿತ್ತು ಸರಳ ಜ್ಯಾಮಿತೀಯ ಆಕಾರ, ಶುದ್ಧವರ್ಣಗಳ ನೇರ ಪ್ರಯೋಗ, ವೇಗದ ಯುಗದ ವೈಜ್ಞಾನಿಕ ಪ್ರಗತಿಯ ಮೂರ್ತರೂಪ, ಬೃಹದ್ಗಾತ್ರದ ಚಲನಾತ್ಮಕ ಪ್ರೇಕ್ಷಕ ಸಮೂಹಕ್ಕೆ ಇಂತಿಷ್ಟೂ ತ್ರಾಸದಾಯಕ ವಾಗದಿರುವಂತೆ ನೇರ್ಪುಗೊಂಡ ಕಟ್ಟಡ ವಿನ್ಯಾಸ, ಏಕಪ್ರಕಾರವಾದ ಬೆಳಕಿನ ನಿಯಂತ್ರಣ, ವಾತಾನುಕೂಲನ (ಏರ್–ಕಂಡಿಷನಿಂಗ್)–ಈ ಲಕ್ಷಣಗಳಿಂದಾಗಿ ಇದುದ ಹಿಂದಿನ ಪ್ರದರ್ಶನಗಳಿಗಿಂತ ಭಿನ್ನವಾದ ಮಾರ್ಗದಲ್ಲಿ ಮೊದಲ ಹೆಜ್ಜೆಯಿಟ್ಟಿತು.

ಇಡೀ ಅಮೆರಿಕವೇ ಅಭೂತಪೂರ್ವ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿದಾಗ ಏರ್ಪಟ್ಟಿದ್ದರೂ ಇದು ಲಾಭಪ್ರದವಾಗಿ ಪರಿಣಮಿಸಿದ್ದಕ್ಕೆ ಪ್ರದರ್ಶನ ಸಂಚಾಲಕರು ಅನುಸರಿಸಿದ ಕೆಲವು ಉಪಾಯಗಳು ಮುಖ್ಯ ಕಾರಣ. ಪ್ರದರ್ಶನದ ಪ್ರವೇಶ ಪತ್ರಗಳನ್ನು ಮುಂಗಡವಾಗಿಯೇ ಮಾರಾಟ ಮಾಡಿದ್ದರಿಂದ ಪ್ರೇಕ್ಷಕರು ಪ್ರದರ್ಶನದ ಆರಂಭ ಕಾಲದಿಂದಲೂ ಅಧಿಕಾಧಿಕ ಸಂಖ್ಯೆಯಲ್ಲಿ ಇದನ್ನು ಸಂದರ್ಶಿಸುವಂತೆ ಮಾಡಿ, ಅಂತ್ಯಕಾಲದ ತೊತ್ತಳದುಳಿತವನ್ನೂ ನಿರಾಶೆಯನ್ನೂ ನಿವಾರಿಸಿ ಇಡೀ ಪ್ರದರ್ಶನಾವಧಿಯ ಪ್ರವೇಶವನ್ನು ಕ್ರಮಗೊಳಿಸಲು ಸಾಧ್ಯವಾಯಿತು. ಪ್ರದರ್ಶನದ ಸ್ಥಳವನ್ನು ಪರದರ್ಶಕರಿಗೆ ಮುಫತ್ತಾಗಿ ಕೊಡುವ ಬದಲು ಅದನ್ನು ಅವರಿಗೆ ಮಾರಾಟ ಮಾಡಿದ್ದು ಅದೇ ಪ್ರಥಮ. ಇಂಥ ಪ್ರದರ್ಶನಗಳು ಬೃಹತ್ ವ್ಯವಹಾರ ಸಂಸ್ಥೆಗಳ ಪ್ರಚಾರದ ಮಹಾಸಾಧನಗಳೆಂದು ಮನವರಿಕೆಯಾದದ್ದು ಇದರ ಯಶಸ್ಸಿಗೆ ಇನ್ನೊಂದು ಕಾರಣ.

**ನಾಳಿನ ಜಗತ್ತು**: 20ನೆಯ ಶತಮಾನದ ಪ್ರಥಮಾರ್ಧ ಕಾಲದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನಡೆದ ಅತ್ಯಂತ ಗಮನಾರ್ಹ ಅಂತಾರಾಷ್ಟ್ರೀಯ ಪ್ರದರ್ಶನವೆಂದರೆ 1939–40ರಲ್ಲಿ ನ್ಯೂಯಾರ್ಕಿನಲ್ಲಿ ನಡೆದದ್ದು. ಆದರೂ ಆರ್ಥಿಕವಾಗಿ ಇದು ನಷ್ಟದಾಯಕವಾಯಿತು. ಅಮೆರಿಕಾಧ್ಯಕ್ಷ ಜಾರ್ಜ್ ವಾಷಿಂಗ್ಟನ್ನನ ಅಧ್ಯಕ್ಷತಾ ಸ್ವೀಕಾರದ ನೂರೈವತ್ತನೆಯ ವಾರ್ಷಿಕೋತ್ಸವದ ಸವಿನೆನಪಾಗಿ ಏರ್ಪಟ್ಟ ಇದಕ್ಕೆ 'ನಾಳಿನ ಜಗತ್ತು' ಎಂಬ ಧ್ಯೇಯವಾಕ್ಯ. ಇದರ ವಾಸ್ತುಶಿಲ್ಪ ಅತ್ಯಂತ ನವ್ಯ. ಝಗಝಗಿಸುವ ಪ್ರತಿಯೊಂದು ಪ್ರವೇಶಚೌಕದಿಂದಲೂ ಪ್ರದರ್ಶನದ ರಸಸ್ಥಾನಗಳೆಡೆಗೆ ಹರಿದು ಸಂಗಮಿಸುವ ವೃಕ್ಷರಾಜಿತ ಮಾರ್ಗಸಮೂಹ 728 ಅಡಿಯ, ತರಿಕೋನಾಕೃತಿಯ, ತುದಿಚೂಪಿನ ಶಲಾಕೆ–ಟ್ರೈಲಾನ್, 180 ಅಡಿ ವ್ಯಾಸದ ಸುತ್ತುಗೋಳ, ಗೋಪುರ–ಬರಲಿದ್ದ ಭವಿಷ್ಯದ ಪ್ರತೀಕ. ಇವೆಲ್ಲ ಪ್ರದರ್ಶನದ ಸೊಬಗನ್ನು ಇಮ್ಮಡಿಸಿದ್ದುವು. ಆದರೆ ದುರ್ದೈವ, ಪ್ರದರ್ಶನದ ಕಾಲಕ್ಕೆ ಸರಿಯಾಗಿ ಎರಡನೆಯ ಮಹಾಯುದ್ಧ ಸಂಭವಿಸಿದ್ದರಿಂದ ಇದರ ದ್ವಿತೀಯ ವರ್ಷದಲ್ಲಿ ಅನೇಕ ರಾಷ್ಟ್ರಗಳು ಭಾಗವಹಿಸಲಾಗಲಿಲ್ಲ. ಆದರೂ ಇದನ್ನು 4,49,32,978 ಪ್ರೇಕ್ಷಕರು ಸಮದರ್ಶಿಸಿದರೆಂಬುದು ಬಹು ದೊಡ್ಡ ವಿಕ್ರಮ.

**ರಾಜತಾಂತ್ರಿಕ ಒಡಂಬಡಿಕೆ:** 1851ರಲ್ಲಿ ಲಂಡನ್ನಿನ ಸ್ಫಟಿಕ ಮಹಲಿನಲ್ಲಿ ನಡೆದ ಪ್ರಥಮ ವಿಶ್ವಪ್ರದರ್ಶನವಾದಾಗಿನಿಂದ 1928ರ ವರೆಗೆ ಯಾವ ರಾಷ್ಟ್ರವಾದರೂ ಯಾವಾಗ ಬೇಕಾದರೂ ಅಂತಾರಾಷ್ಟ್ರೀಯ ಪ್ರದರ್ಶನಗಳನ್ನೇರ್ಪಡಿಸಬಹುದಿತ್ತು. ಇಂಥವುಗಳಲ್ಲಿ ಕೆಲವು ನಿಜಕ್ಕೂ ಅಂತಾರಾಷ್ಟ್ರೀಯವೆನಿಸಿಕೊಂಡಿದ್ದುವಾದರೂ ಹಲವು ರಾಷ್ಟ್ರೀಯ ಲಕ್ಷಣವುಳ್ಳ ಬೃಹತ್ ಪ್ರದರ್ಶನಗಳಾಗಿದ್ದುವು. ಈ ಕ್ಷೇತ್ರದಲ್ಲೊಂದು ಸುವ್ಯವಸ್ಥೆಯೇರ್ಪಡಿಸುವ ಉದ್ದೇಶದಿಂದ 1928ರಲ್ಲಿ ಪ್ಯಾರಿಸಿನಲ್ಲಿ 35 ರಾಷ್ಟ್ರಗಳು ರಾಜತಾಂತ್ರಿಕ ಒಡಂಬಡಿಕೆಯೊಂದಕ್ಕೆ ಸಹಿ ಹಾಕಿದುವು. ಅಂತರರಾಷ್ಟ್ರೀಯ ಪ್ರದರ್ಶನಗಳ ಮನ್ನಣೆ, ಪ್ರೋತ್ಸಾಹ ಮುಂತಾದ ಪ್ರಶ್ನೆಗಳ ಬಗ್ಗೆ ವ್ಯವಹರಿಸಲು ಅಂತರರಾಷ್ಟ್ರೀಯ ಪ್ರದರ್ಶನ ಬ್ಯೂರೊವಿನ ಸ್ಥಾಪನೆಯಾಯಿತು. ಈ ಮಂಡಲಿಯ ಪ್ರಕಾರ ಪ್ರದರ್ಶನಗಳು ಎರಡು ಬಗೆ : ಒಂದಕ್ಕಿಂತ ಹೆಚ್ಚು ಕ್ಷೇತ್ರಗಳ ಚಟುವಟಿಕೆಗಳನ್ನು ನಿರೂಪಿಸುವಂಥದು ಸಾರ್ವತ್ರಿಕ ಅಥವಾ ಸಾಧಾರಣ ಪ್ರದರ್ಶನ. ಯಾವುದಾದರೂ ಒಂದೇ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು ವಿಶೇಷ ಪ್ರದರ್ಶನ. ಇವನ್ನು ಇನ್ನೊಂದು ಬಗೆಯಾಗಿ ವಿಂಗಡಿಸುವುದೂ ಸಾಧ್ಯ. ಪ್ರದರ್ಶನದಲ್ಲಿ ಭಾಗವಹಿಸಲು ಆಹ್ವಾನಿತವಾದ ರಾಷ್ಟ್ರಗಳು ತಮ್ಮವೇ ಆದ ಪ್ರದರ್ಶನ ಮಂಟಪಗಳನ್ನು (ಪವಿಲ್ಯನ್) ಕಟ್ಟಬೇಕಾಗಬಹುದು. ಈ ಬಗೆಯ ಕಡ್ಡಾಯವಿಲ್ಲದ್ದು ಇನ್ನೊಂದು ಬಗೆ.

ಪ್ರದರ್ಶನ ನಿಯಂತ್ರಣದ ಸಲುವಾಗಿ ವಿಶ್ವವನ್ನು ಯುರೋಪ್, ಉತ್ತರ–ದಕ್ಷಿಣ ಅಮೆರಿಕ ಮತ್ತು ಉಳಿದ ಭಾಗ ಎಂದು ಮೂರು ವಲಯಗಳಾಗಿ ವಿಂಗಡಿಸಲಾಗಿದೆ: ಪ್ರಥಮ ಬಗೆಯ (ಆಹ್ವಾನಿತ ರಾಷ್ಟ್ರಗಳೇ ಪ್ರದರ್ಶನ ಮಂಟಪಗಳನ್ನು ಕಟ್ಟಬೇಕಾದ) ವಿಶ್ವಪ್ರದರ್ಶನವನ್ನು ಒಂದೇ ದೇಶದಲ್ಲಿ ಹದಿನೈದು ವರ್ಷಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಏರ್ಪಡಿಸುವಂತಿಲ್ಲ. ಒಂದೇ ವಲಯದಲ್ಲಿ ಒಂದನೆಯ ಬಗೆಯ ಎರಡು ಪ್ರದರ್ಶನಗಳ ನಡುವೆ ಕನಿಷ್ಠ ಪಕ್ಷ ಆರು ವರ್ಷಗಳ ಅವಧಿಯಾದರೂ ಇರಲೇಬೇಕು.

ಅಮೆರಿಕದ ವಾಷಿಂಗ್‌ಟನ್ ಸಂಸ್ಥಾನದ ಸಿಯಾಟಲಿನಲ್ಲಿ 1962ರಲ್ಲಿ ನಡೆದ 'ಶತಮಾನ 21' ಪ್ರದರ್ಶನವನ್ನು ಎರಡನೆಯ ವರ್ಗದ (ಆಹ್ವಾನಿತ ರಾಷ್ಟ್ರಗಳು ಮಂಟಪ ನಿರ್ಮಾಣ ಮಾಡಬೇಕಾಗಿಲ್ಲದ) ಸಾರ್ವತ್ರಿಕ ಪ್ರದರ್ಶನವೆಂದು ಈ ಮಂಡಲಿ ಮನ್ನಣೆ ನೀಡಿತು. ಕೇವಲ 74 ಎಕರೆ ಪ್ರದೇಶದಲ್ಲಿ ಇದು ಸಮಾವೇಶಗೊಂಡಿತು. ಆಕಾಶ ಯುಗದ ತಾಂತ್ರಿಕ

ಸಮಾಜವಾದೀ ಶೌರ್ಯ (ಶಿಲ್ಪಿ : ಐವಾನ್ ಛಾದ್ರೆ)

ವೈಜ್ಞಾನಿಕ ಸಾಧನೆಯ ನಿರೂಪಣೆಯೇ ಇದರ ಉದ್ದೇಶ. ಅಮೆರಿಕ ಸಂಯುಕ್ತ ಸಂಸ್ಥಾನದ ವಿಜ್ಞಾನ ಮಂಟಪಕ್ಕೆ ಆರು ಎಕರೆ ನೆಲ ಮೀಸಲಾಗಿತ್ತು. ಆಕಾಶಕಲ್ಪವೊಂದನ್ನು (ಸ್ಪೇಸೇರಿಯಂ) ಇಲ್ಲಿ ನಿರ್ಮಿಸಲಾಗಿತ್ತು. ಬ್ರಿಟಿಷ್ ಮಂಟಪ ಬೇರೆ ತರ. ಅದು ಆ ರಾಷ್ಟ್ರದ ಇತಿಹಾಸದ ಒಂದು ದೊಡ್ಡ ಅಧ್ಯಾಯ: ಒಂದನೆಯ ಎಲಿಜಬೆತಳ ಕಾಲದ ವರೆಗಿನ ಬ್ರಿಟಿಷ್ ಸಾಧನೆಯ ನಿರೂಪಣ. 600 ಅಡಿ ಎತ್ತರದ ಆಕಾಶಸೂಚಿ ಎಂಬ ಉಕ್ಕಿನ ತ್ರಿಪಾದಿ ಸ್ತಂಭವೇ ಈ ಪ್ರದರ್ಶನದ ಅತ್ಯದ್ಭುತ. ಈ ಗೋಪುರದ ಮೇಲ್ಪದಿಯಲ್ಲಿ ತಿರುಗುವ ಉಪಾಹಾರಗೃಹ.

ಸಿಯಾಟಲಿನಿಂದ ಪ್ರದರ್ಶನ ಸ್ಥಳಕ್ಕೆ ಪ್ರೇಕ್ಷಕರನ್ನು 94 ಸೆಕೆಂಡುಗಳಲ್ಲಿ ಸಾಗಿಸುತ್ತಿದ್ದ ಒಂಟಿ ಹಳಿ ರೈಲು (ಮಾನೊ ರೇಲ್) ಇನ್ನೊಂದು ಮುಖ್ಯ ಆಕರ್ಷಣೆ. 1964–65ರಲ್ಲಿ ನ್ಯೂ ಯಾರ್ಕಿನಲ್ಲಿ ಏರ್ಪಡಿಸಿದ್ದ ವಿಶ್ವಪ್ರದರ್ಶನಕ್ಕೆ ಪ್ಯಾರಿಸಿನ ಅಂತಾರಾಷ್ಟ್ರೀಯ ಪ್ರದರ್ಶನ ಬ್ಯೂರೋದ ಒಪ್ಪಿಗೆ ದೊರಕಲಿಲ್ಲ. ಅದೇ ದೇಶದ ಸಿಯಾಟಲಿನಲ್ಲಿ ಏರ್ಪಡಿಸಿದ್ದ ಪ್ರದರ್ಶನವಾಗಿ ಇನ್ನೂ ಹತ್ತು ವರ್ಷ ಕೂಡ ಆಗಿರಲಿಲ್ಲವೆಂಬುದೂ ಪ್ರದರ್ಶನದಲ್ಲಿ ಭಾಗವಹಿಸಲು ಆಹ್ವಾನಿತವಾದ ರಾಷ್ಟ್ರಗಳು ಭೂಶುಲ್ಕ ನೀಡಬೇಕೆಂಬ ಷರತ್ತೂ ಮನ್ನಣೆ ನಿರಾಕರಣೆಗೆ ಕೊಡಲಾದ ಕಾರಣ. ಆದರೂ ಈ ಪ್ರದರ್ಶನದಲ್ಲಿ 60 ರಾಷ್ಟ್ರಗಳು ಭಾಗವಹಿಸಿದ್ದುವು. ಉಕ್ಕಿನಲೆರಕ ಹೊಯ್ದ ಭೂಗೋಳದ ಬೃಹದಾಕೃತಿಯೇ ಈ ಪ್ರದರ್ಶನದ ರಸಸ್ಥಾನ.

ಅರ್ಮೆಂಗಾಲನ ಎತ್ತರದ ಮೂರ್ತಿಗಳು

**ಬ್ರಸಲ್ಸ್ ಪ್ರದರ್ಶನ**: ಬೆಲ್ಜಿಯಮಿನ ಬ್ರಸಲ್ಸ್ ನಗರದಲ್ಲಿ 1958ರ ಏಪ್ರಿಲ್ 17ರಿಂದ ಅಕ್ಟೋಬರ್ 19ರ ವರೆಗೆ ನಡೆದದ್ದು ಎರಡನೆಯ ಮಹಾಯುದ್ಧಾನಂತರ ಏರ್ಪಟ್ಟ ಮೊಟ್ಟಮೊದಲನೆಯ ಪ್ರಥಮವರ್ಗೀಯ ವಿಶ್ವಪ್ರದರ್ಶನ. ಬ್ರಿಟನ್, ಅಮೆರಿಕ, ಸೋವಿಯತ್ ಒಕ್ಕೂಟ, ಫ್ರಾನ್ಸ್, ಇಟಲಿ, ಸ್ಪೇನ್, ಪೋರ್ಚುಗಲ್, ನೆದರ್ಲೆಂಡ್ಸ್, ನಾರ್ವೆ, ಲುಕ್ಸೆಂಬರ್ಗ್, ಸ್ವಿಟ್ಜರ್‌ಲೆಂಡ್, ಪಶ್ಚಿಮ ಜರ್ಮನಿ, ಚೆಕೊಸ್ಲೊವಾಕಿಯ, ಯುಗೋಸ್ಲಾವಿಯ, ತುರ್ಕಿ, ಫಿನ್ಲೆಂಡ್, ಕೆನಡ, ಜಪಾನ್, ಅರ್ಜೆಂಟೀನ, ಸಯಾಂ, ಮೊರಾಕೊ, ವ್ಯಾಟಿಕನ್–ಮುಂತಾದ 42 ದೇಶಗಳೂ ವಿಶ್ವಸಂಸ್ಥೆ, ಯುರೋಪ್ ಕೌನ್ಸಿಲ್, ಐರೋಪ್ಯ ಕಲ್ಲಿದ್ದಲು ಉಕ್ಕು ಸಮೂಹ, ಅಂತಾರಾಷ್ಟ್ರೀಯ ಸಂಸ್ಥೆಗಳೂ ಇದರಲ್ಲಿ ಭಾಗವಹಿಸಿದ್ದುವು. ಭಾರತ, ಚೀನ, ಸ್ವೀಡನ್, ಡೆನ್‌ಮಾರ್ಕ್, ಪೋಲೆಂಡ್–ಇವು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳದ ಕೆಲವು ರಾಷ್ಟ್ರಗಳು.

ಬ್ರಸಲ್ಸ್ ನಗರದ ವಾಯವ್ಯದಲ್ಲಿ 500 ಎಕರೆಯ ನಿವೇಶನದಲ್ಲಿ ರೂಪಗೊಂಡ ಪ್ರದರ್ಶನದಲ್ಲಿ ಬೆಲ್ಜಿಯನ್ ವಿಭಾಗ, ವಿದೇಶೀ ವಿಭಾಗ ಮತ್ತು ಅಂತಾರಾಷ್ಟ್ರೀಯ ಸಹಕಾರ ನಗರ–ಎಂದು ಮೂರು ಮುಖ್ಯ ವಲಯಗಳಿದ್ದುವು. ವಿದೇಶೀ ವಿಭಾಗದಲ್ಲಿ ಬ್ರಿಟಿಷ್, ಅಮೆರಿಕನ್, ಸೋವಿಯತ್, ಫ್ರೆಂಚ್, ಜರ್ಮನ್, ಡಚ್ ಮತ್ತು ವ್ಯಾಟಿಕನ್ ಮಂಟಪಗಳು ಬಲು ದೊಡ್ಡವು. ಇಡೀ ಪ್ರದರ್ಶನದಲ್ಲಿ ಎದ್ದು ಕಾಣುತ್ತಿದ್ದುದೆಂದರೆ ಪರಮಾಣುಕಲ್ಪಕ (ಆಟೋಮಿಯಂ) ಎಂಬ ಬೃಹದ್ರಚನೆ–ಪರಮಾಣು ಯುಗೀಣ ಮಾನವತೆಯ ಪ್ರತೀಕ; ಕಬ್ಬಿಣದ ಹರಳೊಂದನ್ನು 15 ಕೋಟಿಯಷ್ಟು ಹಿಗ್ಗಿಸಿದ ರೂಪ. ಇದರಲ್ಲಿ ತಲಾ 60 ಅಡಿ ವ್ಯಾಸದ ಒಂಬತ್ತು ಉಕ್ಕಿನ ಗೋಳಗಳು. ಇವುಗಳಲ್ಲಿ ಒಂದರೊಡನೊಂದನ್ನು ಸರಳುಗಳಿಂದಲೂ ಕೆಲವನ್ನು ತಿರುಗು ಮೆಟ್ಟಿಲುಗಳಿಂದಲೂ ಜಂಟಿಸಲಾಗಿತ್ತು. ಈ ಗೋಳಗಳ ಪೈಕಿ ಏಳು, ಪರಮಾಣುಶಕ್ತಿಯ ಶಾಂತಿಯುತ ಬಳಕೆಯ ನಿರೂಪಣೆಗೆ ಮೀಸಲು. ನೆಲದಿಂದ 340 ಅಡಿ ಎತ್ತರದಲ್ಲಿದ್ದ ಅತ್ಯುನ್ನತ ಗೋಳಗಳೆರಡು ಉಪಾಹಾರ ಮಂದಿರಗಳು. ಬ್ರಸಲ್ಸಿನ ಮುಖ್ಯ ಆಕರ್ಷಣೆಯಾಗಿ ಈ ಪರಮಾಣುಕಲ್ಪಕಗಳನ್ನು ಇಂದಿಗೂ ಉಳಿಸಿಕೊಳ್ಳಲಾಗಿದೆ.

ಇದಕ್ಕಾಗಿ ನಿರ್ಮಿಸಲಾದ ಅನೇಕ ಮಂಟಪಗಳು ಗಾಜಿನ ಪಂಜರದ ಮಾದರಿಯವು. ಲಘುತ್ವ ಪಾರದರ್ಶಿತ್ವ–ಇವು ಈ ಮಂಟಪಗಳ ವಿಶಿಷ್ಟ ಗುಣ. ಮುಖ್ಯವಾಗಿ ಫ್ರೆಂಚ್, ಜರ್ಮನ್, ಯುಗೋಸ್ಲಾವ್ ಮತ್ತು ಜಪಾನೀ ಮಂಟಪಗಳು ಇಂಥವು. ಇಟಲಿ, ನೆದರ್ಲೆಂಡ್ಸ್, ಫಿನ್ಲೆಂಡ್ ಮಂಟಪಗಳು ಹೆಚ್ಚು ಸಾಂಪ್ರದಾಯಿಕ, ಫಿನ್ಲೆಂಡಿನದು ಸಂಪೂರ್ಣವಾಗಿ ಮರದಿಂದ ನಿರ್ಮಿತವಾಗಿದ್ದು ಬಲು ಆಕರ್ಷಕವಾಗಿತ್ತು. ಸಣ್ಣ ಮಂಟಪಗಳ ಪೈಕಿ ಸಯಾಮಿನದು ಬಲು ಚೆಂದ : ಗಿರಿಸಾನು ಪ್ರದೇಶದ ದೇವಮಂದಿರದ ಹ್ರಸ್ವರೂಪೀ ಸುಂದರ ಶಿಲ್ಪ.

ಬ್ರಿಟಿಷ್ ಮಂಟಪದ್ದು ಬೃಹದಾಕಾರ. ಇದರಲ್ಲಿ ಎರಡು ವಿಭಾಗ ಒಂದೊಂದರದು ಒಂದೊಂದು ವೈಶಿಷ್ಟ್ಯ. ಒಂದು ಸಂಪ್ರದಾಯ ಭವನ. ಇಲ್ಲಿ ಕಂಡುಬರುತ್ತಿದ್ದದ್ದು ಬ್ರಿಟಿಷ್ ವೈಭವದ, ಬ್ರಿಟಿಷ್ ಸಂಪ್ರದಾಯದ ಚಿತ್ರೀಕರಣ, ಇನ್ನೊಂದು ತಂತ್ರಜ್ಞಾನಭವನ–ಬ್ರಿಟಿಷ್ ವಿಜ್ಞಾನ ಮತ್ತು ತಮತ್ರ ಸಾಧನೆಗಳ ನಿರೂಪಣ. ಹಾರ್ವೆಲ್ಲಿನ ಜೀಟದ (ಜೀರೋ–ಎನರ್ಜಿ ಥರ್ಮೋನ್ಯೂಕ್ಲಿಯರ್ ರಿಯಾಕ್ಟರ್), ಜಾಡ್ರೆಲ್ ಬ್ಯಾಂಕ್ ರೇಡಿಯೊ ದೂರದರ್ಶಕ ಇವುಗಳ ಮಾದರಿಗಳನ್ನು ಇಲ್ಲಿ ರಚಿಸಲಾಗಿತ್ತು. ಬ್ರಿಟಿಷ್ ಕೈಗಾರಿಕಾ ವಸ್ತುಗಳು, ಬ್ರಿಟಿಷರ ಜೀವನ ವಿಧಾನ, ಕಾಮನ್‌ವೆಲ್ತ್ ಪ್ರಗತಿ, ಬ್ರಿಟಿಷ್ ಆವಿಷ್ಕಾರಗಳು–ಇವನ್ನೂ ಇಲ್ಲಿ ಪ್ರದರ್ಶಿಸ ಲಾಗಿತ್ತು. ಇದರ ಪ್ರವೇಶದ್ವಾರಭವನದ ಮೇಲೆ ಎಪ್ಪತ್ತು ಅಡಿ ಎತ್ತರದ ಹರಳಿನಾಕಾರದ ಮೂರು ಗೋಪುರಗಳಿದ್ದುವು.

ಅಮೆರಿಕನ್ ಮಂಟಪವೊಂದು ವಿಶಾಲವರ್ತುಲ ಮಂದಿರ, ಉಕ್ಕು, ಕಂದು ಕಂಚು ಮತ್ತು ಪ್ಲಾಸ್ಟಿಕುಗಳಿಂದ ನಿರ್ಮಿತ. ಇದರ ಸುತ್ತಳತೆ ಸುಮಾರು ೪ ಮೈಲಿ ; ವಿಸ್ತೀರ್ಣ ಆರು ಎಕರೆ. ಅಮೆರಿಕನ್ ಜೀವನ ಸಂಸ್ಕೃತಿಗಳ ಸಕಲ ಮುಖಗಳೂ ಇಲ್ಲಿ ಚಿತ್ರಿತವಾಗಿದ್ದುವು. 1150 ಮಂದಿ ಕೂರಬಹುದಾದ ವಾತಾನುಕೂಲಿತ ರಂಗಮಂದಿರ ಇದರ ವೈಶಿಷ್ಟ್ಯ. ಪರಮಾಣುಶಕ್ತಿಯ ಶಾಂತಿಯುತ ಬಳಕೆಯ ನಿರೂಪಣೆಯೇ ಈ ಮಂಟಪದ ಮುಖ್ಯ ಗುರಿಯಾಗಿತ್ತು.

ಸೋವಿಯತ್ ಮಂಟಪವೂ ವೈಶಿಷ್ಟ್ಯಪೂರಿತ–ಅಲ್ಲಿಯ ಜನರ ಸಂಸ್ಕೃತಿಚಿತ್ರಕ, ವೈಜ್ಞಾನಿಕ ತಾಂತ್ರಿಕ ಕ್ಷೇತ್ರಗಳಲ್ಲಿ ಆ ದೇಶ ಸಾಧಿಸಿದ್ದ ಪ್ರಗತಿನಿರೂಪಕ. ರಷ್ಯನ್ ಸ್ಪುಟ್ನಿಕುಗಳ ನಿಜಾಕೃತಿಗಳೂ ಪ್ರಪ್ರಥಮ ಪರಮಾಣುಶಕ್ತಿಸಜ್ಜಿತ ನೀರ್ಗಲ್ಲುಭೇದಕವಾದ ಲೆನಿನ್ ನೌಕೆಯ ಮಾದರಿಯೂ ಇಲ್ಲಿ ಪ್ರದರ್ಶಿತವಾಗಿದ್ದುವು.

ವ್ಯಾಟಿಕನ್ ಮಂಟಪವೊಂದು ದೇವನಗರ. ರೋಮನ್ ಕೆಥೊಲಿಕ್ ಚರ್ಚಿನ ಅಂತಾರಾಷ್ಟ್ರೀಯ ಪಾತ್ರದ ನಿರೂಪಣೆಗೆ ಮೀಸಲಾದದ್ದು. ಜಬತೆಗೆ 2500 ಜನರಿಗೆ ಸ್ಥಳವಿರುವಂಥ ಚರ್ಚು ಚಲನಚಿತ್ರ ಮಂದಿರವೂ ಇಲ್ಲಿದ್ದುವು. ಪ್ರಪಂಚದ ಪ್ರಮುಖ ಕಲಾವಿದರ ಕಣ್ಣಿನಲ್ಲಿ ಯೇಸುಕ್ರಿಸ್ತ–ಎಂಬ ಒಂದು ಸಾಂಸ್ಕೃತಿಕ ಚಿತ್ರಮಾಲೆ ಬೇರೆ ಇತ್ತು. ಒಂದೇ ಸೂರಿನ ಅಡಿಯಲ್ಲಿ ಇಷ್ಟೊಂದು ಉದ್ಧಕಲಾಕೃತಿಗಳು ಹಿಂದೆಂದೂ ಸಂಗ್ರಹವಾಗಿರಲಿಲ್ಲ.

ಆತಿಥೇಯ ರಾಷ್ಟ್ರವಾಗಿದ್ದ ಬೆಲ್ಜಿಯಮಿನದು ಒಟ್ಟು 22 ಮಂಟಪಗಳು. ಇದರ ಜೊತೆಗೆ ಬೆಲ್ಜಿಯನ್ ಕಾಂಗೋ ವಿಭಾಗವೂ ಇತ್ತು. ಬೆಲ್ಜಿಯನ್ ಸಿವಿಲ್ ಎಂಜಿನಿಯರಿಂಗ್ ಮಂಟಪದ್ದು ವಿಶಿಷ್ಟವಾದ ವಿನ್ಯಾಸ. ಇದು ಚೆಕೊಸ್ಲೊವಾಕ್ ಮಂಟಪವೂ ಬ್ರಿಟಿಷ್ ಸರ್ಕಾರದ ಮಂಟಪವೂ ಅತ್ಯುತ್ಕೃಷ್ಟವಾದವೆಂದು ಅಂತಾರಾಷ್ಟ್ರೀಯ ತೀರ್ಪುಗಾರ ಮಂಡಳಿಯ ಮೆಚ್ಚುಗೆ ಗಳಿಸಿದುವು.

ಮಾನವೀಯತಾ ಸಮನ್ವಯ ಪಥ ಸೂಚಕವಾದ ಈ ರಮ್ಯಾದ್ಭುತ ಪ್ರದರ್ಶನಕ್ಕಾಗಿ ಸುಮಾರು 40,00,00,000 ಡಾಲರು ವೆಚ್ಚ ತಗುಲಿತು. ಇದನ್ನು ಪ್ರೇಕ್ಷಿಸಿದವರ ಸಂಖ್ಯೆ 2,60,00,000.

**ಎಕ್ಸ್‌ಪೊ 67**: ಎಕ್ಸ್‌ಪೊ ಎಂಬ ಜನಪ್ರಿಯ ಹೆಸರನ್ನು ಅಧಿಕೃತವಾಗಿ ಬಳಸಿದ ಕೆನಡದ ಮಾಂಟ್ರಿಯಲ್ ವಿಶ್ವಪ್ರದರ್ಶನ 1967ರ ಏಪ್ರಿಲ್ 27ರಿಂದ ಅಕ್ಟೋಬರ್ 27ರ ವರೆಗೆ ನಡೆಯಿತು. ಈ ಪ್ರದರ್ಶನದ ಅಂದಾಜು ವೆಚ್ಚ 75,00,00,000 ಡಾಲರುಗಳು. ಸೆಂಟ್ ಲಾರೆನ್ಸ್ ನದಿಯ ಎರಡು ದ್ವೀಪಗಳ ಮೇಲೆ 700 ಎಕರೆ ಪ್ರದೇಶದಲ್ಲಿ ಇದರ ಸಮಾವೇಶ. ಮಾನವ ಮತ್ತು ಅವನ ವಿಶ್ವ–ಎಂಬುದು ಇದರ ಅಂತಃಸೂತ್ರ. ಫ್ರೆಂಚ್ ಆಕಾಶಯಾನದಲ್ಲಿ ಆಸಕ್ತನಾಗಿದ್ದ ದಾರ್ಶನಿಕ ದಿವಂಗತ ಆಂಡ್ವಾನ್‌ದ ಸೆಂಟ್–ಎಕ್ಸೂಪರಿ ಬರೆದ ಪುಸ್ತಕವೊಂದರ ಶೀರ್ಷಿಕೆಯಿದು. ಕೆನಡ ಒಕ್ಕೂಟದ ಶತಮಾನೋತ್ಸವೇ ಈ ಪ್ರದರ್ಶನಕ್ಕೆ ನಿಮಿತ್ತ. 1958ರ ಬ್ರಸಲ್ಸ್ ಪ್ರದರ್ಶನಾನಂತರದ ಮಹತ್ವಪೂರ್ಣ ಪ್ರದರ್ಶನವೆಂದರೆ ಇದೇ.

ಎಕ್ಸ್‌ಪೊ 67ರಲ್ಲಿ ಭಾಗವಹಿಸಿದ್ದ ರಾಷ್ಟ್ರಗಳ ಸಂಖ್ಯೆ ಅರವತ್ತಕ್ಕೂ ಹೆಚ್ಚು. ಕೆನಡ, ಅಮೆರಿಕ ಸಂಯುಕ್ತಸಂಸ್ಥಾನ, ಸೊವಿಯತ್ ಒಕ್ಕೂಟ, ಬ್ರಿಟನ್, ಫ್ರಾನ್ಸ್‌ಗಳವು ಬೃಹದ್ ಮಂಟಪಗಳು. ಕೆನಡದ ಮಂಟಪ ಅತ್ಯಂತ ದೊಡ್ಡದು. ಇದಕ್ಕೆ ತಗಲಿದ ವೆಚ್ಚ 2,10,00,000 ಡಾಲರುಗಳು. ಪ್ರದರ್ಶನ ಪ್ರದೇಶದ ವಿಸ್ತಾರ 90,000 ಚ. ಅ. ಒಂಬತ್ತು ಪ್ರತ್ಯೇಕ

ಕಟ್ಟಡಗಳಿದ್ದ ಈ ವಿಭಾಗದ ಮುಖ್ಯ ರಚನೆಯೆಂದರೆ 1,000 ಟನ್ ತೂಕದ ಉಕ್ಕಿನ ಪಿರಮಿಡ್ಡು. ತಲೆಕೆಳಗಾಗಿ ಆಕಾಶದ ಕಡೆಗೆ ತೆರೆದ ಈ ರಚನೆಯ ಹೆಸರು ಕಟಿಮವಿಕ್; ಎಸ್ಕಿಮೋ ಭಾಷೆಯ ಚಾವಡಿ. ಅಮೆರಿಕ ಸಂಯುಕ್ತಸಂಸ್ಥಾನದ ಮಂಟಪದಲ್ಲಿ ಎದ್ದುಕಾಣುತ್ತಿದ್ದದ್ದೆಂದರೆ ದೈತ್ಯಾಕಾರದ ಭೂಕ್ಷೇತ್ರ ಗುಮ್ಮಟ (ಜೀಯೊಡೆಸಿಕ್ ಡೋಂ). 200 ಅಡಿ ಎತ್ತರದ ಈ ಗುಳ್ಳೆಯಲ್ಲಿ ಹಲವು ಅಕ್ರಿಲಿಕ್ ಷಡ್ಭುಜಗುಮ್ಮಟಗಳು ಸಮಾವೇಶಗೊಂಡಿದ್ದುವು. ಸೋವಿಯತ್ ಒಕ್ಕೂಟದ ಆಕರ್ಷಣೆಯೆಂದರೆ 70 ಪ್ರಯಾಣಿಕರು ಕೂಡಬಹುದಾಗಿದ್ದ ಅಣಕು ಆಕಾಶನೌಕೆ. ಚಂದ್ರನ ಮೈಯ ಬೃಹತ್ ಪ್ರತಿಕೃತಿಯೊಂದನ್ನು ಸುತ್ತುತ್ತಿದ್ದ ಈ ನೌಕೆಯಲ್ಲಿ ಕುಳಿತು ಭಾರರಾಹಿತ್ಯದ ಅನುಭವ ಪಡೆಯಬಹುದಿತ್ತು.

ಕೆನೆಡಿಯನ್ ಜನರ ಮೂಲಪುರುಷರ ತಾಯಿನಾಡುಗಳಾದ ಬ್ರಿಟನ್ ಫ್ರಾನ್ಸುಗಳ ಮಂಟಪಗಳದು ವಿಶೇಷ ಪಾತ್ರ. ಬ್ರಿಟಿಷ್–ಫ್ರೆಂಚ್ ಜನಜೀವನಸಾಧನೆಗಳ ನಾನಾ ಮುಖಗಳ ಪ್ರದರ್ಶಕಗಳಾಗಿದ್ದ ಈ ಮಂಟಪಗಳು ಈ ಎರಡು ರಾಷ್ಟ್ರಗಳಿಗೂ ಕೆನಡಕ್ಕೂ ನಡುವಣ ವಿಶಿಷ್ಟ ಬಾಂಧವ್ಯವನ್ನು ಎತ್ತಿ ಸಾರುತ್ತಿದ್ದುವು.



ಎಕ್ಸ್‌ಪೊ' 67 : ಜೆಕ್ ಮಂಟಪದ ಚಾವಣಿ : ಮೃತ್ಕಲಾ ಕೃತಿಗಳು

ಆಸ್ಟ್ರೇಲಿಯ, ಆಸ್ಟ್ರಿಯ, ಬಾರ್ಬಡಾಸ್, ಗಯಾನ, ಬೆಲ್ಜಿಯಂ, ಬರ್ಮ, ಸಿಂಹಳ, ಚೀನ (ಫಾರ್ಮೋಸ), ಕ್ಯೂಬ, ಚೆಕೊಸ್ಲೊವಾಕಿಯ, ಇಥಿಯೋಪಿಯ ಪಶ್ಚಿಮ ಜರ್ಮನಿ, ಗ್ರೀಸ್, ಹೈಟಿ, ಭಾರತ, ಇರಾನ್, ಇಸ್ರೇಲ್, ಇಟಲಿ, ಜಮೈಕ, ಜಪಾನ್, ಕೊರಿಯ, ಮಾರಿಷನ್, ಮೆಕ್ಸಿಕೋ, ಮೊನಾಕೊ, ನೆದರ್ಲೆಂಡ್ಸ್, ಸ್ವಿಟ್ಜರ್ಲೆಂಟ್, ಟ್ರೆನಿಡಾಡ್, ಟ್ಯುನೀಸಿಯ, ಥೈಲೆಂಡ್, ವೆನಿಜ್ವೇಲ, ಯುಗೊಸ್ಲಾವಿಯ–ಇವು ಇಲ್ಲಿ ಭಾಗವಹಿಸಿದ್ದ ಇತರ ಕೆಲವು ರಾಷ್ಟ್ರಗಳು. ಕೆಲವು ದೇಶಗಳ ಮಂಟಪಗಳಂತೂ ಅತ್ಯಾಕರ್ಷಕ. ಥೈಲೆಂಡು 18ನೆಯ ಶತಮಾನದ ಬೌದ್ಧ ದೇವಾಲಯವೊಂದರ ಪ್ರತಿಕೃತಿಯನ್ನೆ ರಚಿಸಿತ್ತು.

ಆಫ್ರಿಕದ ಅನೇಕ ಉದಿತೋದಿತ ರಾಷ್ಟ್ರಗಳಿಗೆ ಇದರಲ್ಲಿ ಭಾಗವಹಿಸಬೇಕೆಂಬ ಇಚ್ಛೆಯಿದ್ದರೂ ಅವಕ್ಕೆ ತಮ್ಮವೇ ಆದ ಮಂಟಪಗಳನ್ನು ನಿರ್ಮಿಸುವಷ್ಟು ಶಕ್ತಿ ಇರಲಿಲ್ಲವಾದ್ದರಿಂದ ಎಕ್ಸ್‌ಪೊ ಕಾರ್ಪೊರೇಷನ್ ಅವಕ್ಕಾಗಿಯೇ ಆಫ್ರಿಕ ಸ್ಥಲವೆಂಬ ಸಂಯುಕ್ತ ಮಂಟಪವೊಂದನ್ನು ನಿರ್ಮಿಸಿತ್ತು. ಕ್ಯಾಮರೂನ್, ಚಾಡ್, ಕಾಂಗೋ, ದಹೋಮಿ, ಗೇಬಾನ್, ಘಾನ, ಐವರಿ ಕೋಸ್ಟ್, ಕೀನ್ಯ, ಮಡಗಾಸ್ಕರ್, ನೈಜರ್, ನೈಜೀರಿಯ, ರುವಾಂಡ, ಸೆನೆಗಲ್, ಟಾನ್ಜೇನಿಯ, ಟೋಗೋ ಮತ್ತು ಉಗಾಂಡ ರಾಜ್ಯಗಳು ಈ ಮಂಟಪದಲ್ಲಿ ಸಮಾವೇಶಗೊಂಡಿದ್ದುವು. ಆಲ್ಜೀರಿಯ, ಕುವೈತ್, ಮೊರಾಕೊ, ಅರಬ್ ಸಂಯುಕ್ತ ಗಣರಾಜ್ಯ–ಈ ನಾಲ್ಕು ದೇಶಗಳದೂ–ಸಂಯುಕ್ತ ಮಂಟಪ. ಅಂತೆಯೇ ಡೆನ್ಮಾರ್ಕ್, ಫಿನ್ಲೆಂಡ್, ಐಸ್‌ಲೆಂಡ್, ನಾರ್ವೆ, ಸ್ವೀಡನ್–ಈ ಪಂಚರಾಜ್ಯಗಳೂ ಸಂಯುಕ್ತವಾಗಿ ಮಂಟಪ ರಚಿಸಿಕೊಂಡಿದ್ದುದು. ಅಂತಾರಾಷ್ಟ್ರೀಯ ಸಂಸ್ಥೆಗಳ ಪಾತ್ರವೂ ಗಮನಾರ್ಹ.

ವಿಶ್ವ ಕಲೆಯ ಮುನ್ನಡೆಯನ್ನು ಎತ್ತಿ ಸಾರಿದ್ದೇ ಮಾಂಟ್ರಿಯಲ್ ಪ್ರದರ್ಶನದ ಮುಖ್ಯ ಸಾಧನೆ. ಮೂರು ವರ್ಷ ಹಿಂದೆ ನ್ಯೂಯಾರ್ಕಿನಲ್ಲೇರ್ಪಟ್ಟಿದ್ದ ಪ್ರದರ್ಶನದಂತೆ ಇದು ವಾಣಿಜ್ಯದ ಪಲ್ಲವಿಯನ್ನು ಹಾಡಲಿಲ್ಲ. ಇಲ್ಲಿನ ಬೃಹತ್ ಗುಮ್ಮಟಗಳ ಮಿನಿ–ರೈಲುಗಳ ಧಿಮ್ಮೆನಿಸುವ ಥಳಕು ಬೆಳಕುಗಳ ನಡುವೆ ಹಲವು ಕೌತುಕಗಳು ಇಣಿಕಿ ಹಾಕುತ್ತಿದ್ದುವು. 20ನೆಯ ಶತಮಾನದ ಶಿಲ್ಪ ರೂಪಗಳಿಗೆ ಇದೊಂದು ತಾಣ. ಅರಿಸ್ಟೈಡ್ ಮೇಲಾಲನ 1908ರ ಡಿಸೈರ್‌ನಿಂದ (ಬಯಕೆ) ಹಿಡಿದು 1967ರಲ್ಲಿ ಸಸ್ಕಚೆವಾನಿನ ರಾಬರ್ಟ್ ಮರೆ ರಚಿಸಿದ ಜ್ಯಾಮಿತೀಯ ಡೈಯಡ್‌ನ (ಯುಗ್ಮ)ವರೆಗೆ ಅನೇಕ ಕೃತಿಗಳು ಇಲ್ಲಿ ಪ್ರದರ್ಶಿತವಾಗಿದ್ದುವು. ಆರು ಖಂಡಗಳಿಂದ ಬಂದ ಶಿಲ್ಪಿಗಳಿಂದ ಇಲ್ಲಿನ ಉದ್ಯಾನಗಳಿಗೂ ಮಂಟಪಗಳಿಗೂ ಕಲೆಯ ಶೋಭೆ ಬಂತೆನ್ನಬಹುದು. ಅಂತಾರಾಷ್ಟ್ರೀಯ ಶಿಲ್ಪೋದ್ಯಾನದಲ್ಲಿನ ರಷ್ಯನ್ ಶಿಲ್ಪಿ ಐವಾನ್ ಛಾದ್ರೆಯ ಸಮಾಜವಾದೀ ಶೌರ್ಯವನ್ನಾಗಲಿ, ಬ್ರಿಟಿಷ್ ಮಂಟಪದಲ್ಲಿನ ಮೇರಿಯೊ ಆರ್ಮೆಂಗಾಲನ ಎತ್ತರದ ಮೂರ್ತಿಶಿಲ್ಪಗಳನ್ನಾಗಲಿ, ಅಂತರರಾಷ್ಟ್ರೀಯ ನಿಕಲ್ ಚೌಕದಲ್ಲಿ ನೆಡಲಾಗಿದ್ದ ಸ್ಟೇನ್‌ಲೆಸ್ ಉಕ್ಕಿನ ಪ್ರತಿಮೆ 'ಮಾನವ'ನನ್ನಾಗಲಿ, (ಶಿಲ್ಪಿ: ಅಮೆರಿಕದ ಅಲೆಕ್ಸಾಂಡರ್ ಕಾಲ್ಡರ್) ಮರೆಯುವಂತಿಲ್ಲ.

ಎಕ್ಸ್‌ಪೊ 67ರಂದು ಬಹಳಮಟ್ಟಿಗೆ ಸಮಕಾಲೀನ ಶಿಲ್ಪ. ಪ್ರತಿಯೊಂದು ಪ್ರದರ್ಶನವೂ ಮಾನವನ ಪ್ರಗತಿಯ ಒಂದೊಂದು ಭಂಗಿ. ಇದರಲ್ಲಿ ಭಾಗವಹಿಸಿದ್ದ 62 ರಾಷ್ಟ್ರಗಳಲ್ಲಿ ಒಂದೊಂದೂ ಇತರ ರಾಷ್ಟ್ರಗಳೊಂದಿಗೆ ಕಲಾಸೀಮೆಯಲ್ಲಿ ತೀವ್ರ ಸ್ಪರ್ಧಿಸಿತ್ತು. ಅವುಗಳ ಮಂಟಪಗಳ ಮಾಡುಗಳ ತುಂಬ ಆಯಾ ದೇಶಗಳ ವಿಶಿಷ್ಟ ಶಿಲ್ಪಕೌಶಲಗಳೇ ಅವತಾರವೆತ್ತಿದ್ದುವು. ಪಶ್ಚಿಮ ಜರ್ಮನಿಯಂಥ ಕೆಲವು ರಾಷ್ಟ್ರಗಳಿಗಂತೂ ಪುಟ್ಟ ಶಿಲ್ಪವನಗಳನ್ನೇ ಸೃಷ್ಟಿಸುವ ಉತ್ಸಾಹ.

ಬ್ರಿಟನ್ನಿನ ಆರ್ಮೆಂಗಾಲ್ ರಚಿಸಿದ ಹತ್ತು ಮಂದಿ ತೆಳು ನೀಳ ಸ್ತ್ರೀ ಪುರುಷರದು ದಂಗುಬಡಿಸುವ ಮಾಟ. ಜೆಕ್ ಮಂಟಪದ ಚಾವಣಿಯ ಉದ್ಯಾನದ ಮನಸೆಳೆಯುವ ಮೂರ್ತಿಗಳ ಚಿತ್ರ ತೆಗೆಯಲು ಕ್ಯಾಮರಾ ವಿನೋದಿಗಳಿಗೆ ಅತೀವ ಉತ್ಸಾಹ, ವಿಶ್ವದ ಕಲೆ, ವಿಜ್ಞಾನ, ಸಂಸ್ಕೃತಿ, ನಾಗರಿಕತೆಗಳ ಭವ್ಯ ಚಿತ್ರಣವಾದ ಎಕ್ಸ್‌ಪೊ 67 ಮಾನವನ ಮತ್ತು ಅವನ ವಿಶ್ವದ ಸುಮಧುರ ಸಂಗಮದ ಪ್ರತೀಕವಾಗಿ ಪ್ರೇಕ್ಷಕರ ನೆನಪಿನಲ್ಲಿ ಚಿರಕಾಲ ಉಳಿಯುವ ಮಹಾ ಪವಾಡ; ಅಂತಾರಾಷ್ಟ್ರೀಯ ಸಹಕಾರದ ಐತಿಹಾಸಿಕ ರಸಘಟ್ಟ.

**ಎಕ್ಸ್‌ಪೊ 70**: ನನ್ನ ಹೆಸರು ಡೇಕು. ನಾನೊಬ್ಬ ರೋಬಾಟ್–ಮನುಷ್ಯ ಯಂತ್ರ. ವಿಶ್ವದ ಸಕಲ ರಾಷ್ಟ್ರಗಳಿಗೂ ಸ್ವಾಗತ.

ಹೀಗೆಂದು ಜಪಾನಿನ ಓಸಾಕ ನಗರದ ಸೆನ್ರಿ ಬೆಟ್ಟಗಳ ಬೋಗುಣಿಯ ನೆಲದಲ್ಲಿ ಬಣ್ಣಬಣ್ಣದ ಬೆಳಕು ಚೆಲ್ಲಿ ಹಬ್ಬಿದ ಎಕ್ಸ್‌ಪೊ 70ರ ರೋಬಾಟ್ ಚೌಕದಲ್ಲಿ ಸುಗಂಧದ ಬಿಳಿಹೊಗೆ ಚೆಲ್ಲುತ್ತ ವಿಶ್ವದ ಪ್ರೇಕ್ಷಕರನ್ನು ಆ ಯಂತ್ರ ಸ್ವಾಘತಿಸುತ್ತಿದ್ದಂತೆಯೇ 1970ರ ಮಾರ್ಚ್ 15ರಂದು ಏಷ್ಯದ ಈ ಪ್ರಥಮ ಮಹಾಪ್ರದರ್ಶನದ ಅನಾವರಣವಾಯಿತು.

ಇದಕ್ಕೆ ಸ್ವಲ್ಪ ಮುಂಚೆ ಜಪಾನಿನ ಚಕ್ರವರ್ತಿ ದಂಪತಿಗಳಿಂದ ಈ ಪ್ರದರ್ಶನದ ಉದ್ಘಾಟನೆಯಾಗಿತ್ತು. ಇದರಲ್ಲಿ ಭಾಗವಹಿಸುತ್ತಿದ್ದ 77 ರಾಷ್ಟ್ರಗಳ ಧ್ವಜಗಳು ಗಾಳಿಯಲ್ಲಿ ತೊನೆದಾಡುತ್ತಿದ್ದುವು.

ಈ 77 ರಾಷ್ಟ್ರಗಳ ಜೊತೆಗೆ 22 ಜಪಾನೀ ಖಾಸಗಿ ಕಂಪನಿಗಳೂ 4 ಅಂತಾರಾಷ್ಟ್ರೀಯ ಸಂಸ್ಥೆಗಳೂ ಪ್ರದರ್ಶನದಲ್ಲಿ ಭಾಗವಹಿಸಿದ್ದುವು. ಇವಲ್ಲದೆ ಅಮೆರಿಕದ ಮೂರು ರಾಜ್ಯಗಳ (ಹವಾಯಿ, ವಾಷಿಂಗ್ಟನ್, ಅಲಾಸ್ಕ), ಕೆನಡದ ಮೂರು ಪ್ರಾಂತ್ಯಗಳ (ಆಂಟೇರಿಯೊ, ಬ್ರಿಟಿಷ್ ಕೊಲಂಬಿಯ, ಕ್ವಿಬೆಕ್) ಮತ್ತು ಎರಡು ಅಮೆರಿಕನ್ ನಗರಗಳ (ಸ್ಯಾನ್ ಫ್ರಾನ್ಸಿಸ್ಕೊ ಮತ್ತು ಲಾಸ್ ಏಂಜಲೀಸ್) ಮಂಪಟಗಳಿದ್ದುವು.

ಓಸಾಕ ಜಪಾನಿನ ಎರಡನೆಯ ದೊಡ್ಡ ನಗರ. ಇದರ ಈಶಾನ್ಯಕ್ಕೆ 20 ಮೈಲಿ ದೂರದಲ್ಲಿ ಪ್ರದರ್ಶನ ನಿವೇಶನ. ಒಮ್ಮೆ ಜವುಗು ನೆಲವಾಗಿದ್ದದ್ದು ಈಗ ವಿಶ್ವದ ಕೋಟಿ ಕಣ್ಣುಗಳ ಕೂಡು ನೆಲ. ಭವಿಷ್ಯದ ಮಹಾಸಾಧನೆಗಳು ಮುಂದಾಗಿಯೇ ಜನ್ಮತಳೆದಂತೆ ತೋರುವ ಸನ್ನಿವೇಶ. ವಿಶ್ವ ಶಿಲ್ಪಿಗಳು ತಂತಮ್ಮ ಅಭಿವ್ಯಕ್ತಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿ ರಚಿಸಿದ ಪವಾಡ. ವೈವಿಧ್ಯ ತುಂಬಿದ ವೈಶಿಷ್ಟ್ಯ. ಮಾನವಪ್ರಗತಿ ಮತ್ತು ಮೈತ್ರಿ ಎಂಬುದು ಈ ಪ್ರದರ್ಶನದ ಅಂತಃ ಸೂತ್ರ.

ವಿಶ್ವದಲ್ಲಿ ಈವರೆಗೆ ಸಾಧಿಸಿರುವ ತಾಂತ್ರಿಕ ಮುನ್ನಡೆಗಳು ಅಸಂಖ್ಯಾತ. ಆದರೆ ಇವುಗಳ ತೀವ್ರ ವೇಗದೊಂದಿಗೆ ಮಾನವನೂ ಹೆಜ್ಜೆಯಿಕ್ಕುವುದೇ ಅಸಾಧ್ಯ. ಅನೇಕ ವೇಳೆ ಈ ನಾನಾ ಸಾಧನೆಗಳನ್ನು ಉನ್ನತೋದ್ದೇಶಗಳಿಗಾಗಿ ಬಳಸಿಕೊಂಡಿಲ್ಲದಿರುವುದು ದುರ್ದೈವದ ಸಂಗತಿ. ಆದ್ದರಿಂದ ಮಾನವನ ಪ್ರಗತಿಗೆ ಮೈತ್ರಿಯೇ ತಳಹದಿಯೆಂಬುದಾಗಿ ನಮ್ಮ ಭಾವನೆ. ಆದ್ದರಿಂದಲೇ ಈ ಪ್ರದರ್ಶನವನ್ನು ಮಾನವಪ್ರಗತಿ ಮತ್ತು ಮೈತ್ರಿ ಎಂದು ಕರೆಯುವುದು

ಉಚಿತವಾಗಿದೆ–ಎಂಬ ಪ್ರದರ್ಶನಾಧ್ಯಕ್ಷನ ಮಾತನ್ನೂ ಸಾರ್ಥಕಗೊಳಿಸಲು ಇಲ್ಲಿನ 117 ಪ್ರದರ್ಶನಮಂಟಪಗಳೂ ಶಕ್ತಿ ಮೀರಿ ಶ್ರಮಿಸಿದ್ದುವೆಂಬುದು ಸ್ವಯಂವೇದ್ಯ. ಎಕ್ಸ್‌ಪೊ 70ರಲ್ಲಿ ಮುಖ್ಯವಾಗಿ ಎರಡುಭಾಗಗಳಿದ್ದುವು. ಮೊದದಲನೆಯದು ಮುಖ್ಯಭಾಗ. ಎಲ್ಲ ಪರದರ್ಶನಮಂಟಪಗಳೂ ಸಂಕೇತವೂ ಕೃತಕ ಸರೋವರಗಳೂ ಮನೋರಂಜನೆಯ ತಾಣವೂ ಜಪಾನೀ ಉದ್ಯಾನವೂ ಆಡಳಿತ ವಿಭಾಗವೂ ತುಂಬಿದ್ದ ಈ ಭಾಗ ಗಿಜಿಗಿಜಿಸುವ ಜೇನುಗೂಡು. 'ಸೂರ್ಯಗೋಪುರ'ವೇ ಎಕ್ಸ್‌ಪೊ 70ರ ಸಂಕೇತಸ್ತಂಭ. ಇನ್ನೊಂದು ಭಾಗವಿಡೀ ವಾಹನ ನಿಲುದಾಣ, 21,500 ಕಾರುಗಳು ನಿಲ್ಲಬಹುದಾದ ವಿಶಾಲ ಪ್ರದೇಶ. ನಾಲ್ಕು ಮಹಾದ್ವಾರಗಳೂ ಇದ್ದುದು ಇಲ್ಲಿ.

ಈ ಪ್ರದರ್ಶನದ ನಾನಾ ಮಂಟಪಗಳು ಇತಿಹಾಸದ ಸ್ತಬ್ಧ ಚಿತ್ರಗಳು ಜೊತೆಗೆ ಬೆಳಕಿನ ತಳುಕು, ಶಬ್ಧದ ಝುಳುಕು. ಜಪಾನಿನ ಉಕ್ಕಿನ ಕೈಗಾರಿಕೆಯ ಮಂಟಪದ ಗೋಳಾಕಾರದ ಸಭಾಭವನದ ಗೋಡೆಯ ಸೂರುಗಳಲ್ಲಿನ 1300 ಧ್ವನಿವರ್ಧಕಗಳು ಕೇಳುಗರ ಮನಸ್ಸಿನ ಮೇಲೆ ಮಾಡುತ್ತಿದ್ದ ಪರಿಣಾಮ ಅಭೂತಪೂರ್ವ. ಇದು ಕಬ್ಬಿಣದ ಗೀತ–ಸ್ಟೀರಿಯೊ ಸಂಗೀತ.



ಎಕ್ಸ್‌ಪೊ' 67 : ನಿಕಲ್‌ಮಾನವ (ನಿರ್ಮಾತೃ : ಅಲೆಕ್ಸಾಂಡರ್ ಕಾಲ್ಡರ್)

ಸೋವಿಯತ್ ಮಂಟಪದ ಎತ್ತರ 335 ಅಡಿ. ಇದರ ತಲೆಯ ಮೇಲೆ ಕುಡುಗೋಲು–ಕೊಡತಿಯ ನಿಯಾನ್ ಬೆಳಕು. ಇದು ಲೆನಿನ್ ಶತಾಬ್ದಿಯಾದ್ದರಿಂದ ಇಲ್ಲಿ ಲೆನಿನ್ನನ ವೈಯಕ್ತಿಕ ವಸ್ತುಗಳ ಸಂಗ್ರಹವನ್ನು ಕಾಣಬಹುದಿತ್ತು. ಸೋವಿಯತ್ ಕ್ರಾಂತಿಯಿಂದ ಆಧುನಿಕ ಜಗತ್ತಿನ ಮೇಲೆ ಆಗಿರುವ ಪರಿಣಾಮದ ಶ್ರಣ ದೃಶ್ಯಾತ್ಮಕ ವಿವರಣೆಯೇ ಇದರ ಐತಿಹ್ಯ. ಈ ಪ್ರದರ್ಶನ ಏಷ್ಯದ್ದಾದ್ದರಿಂದ ಸೋವಿಯತ್ ಏಷ್ಯವಾದ ಸೈಬೀರಿಯದಲ್ಲಾಗುತ್ತಿರುವ ಅಗಾಧ ಪರಿವರ್ತನೆಗೆ ಇಲ್ಲಿ ಹೆಚ್ಚಿನ ಪ್ರಾಮುಖ್ಯ. ಅಮೆರಿಕನ್ ಮಂಟಪ ಮೇಲುಮುಖವಲ್ಲ; ಅಧೋಮುಖ. ಮೂರು ಅಂತಸ್ತುಗಳಾಗಿ ನೆಲದ ಅಡಿಗೆ ಇಳಿಯುವ ಈ ಮಂಟಪ ಸುಮಾರು ಒಂದು ಲಕ್ಷ ಚದರ ಅಡಿ ವಿಶಾಲವಾದ್ದು. ಫೈಬರ್ ಗಾಜಿನಿಂದ ರಚಿತವಾದ ಇದರ ಬೆಲೂನಿನಂಥ ಚಾವಣಿಗೆ ಒತ್ತಡದ ಗಾಳಿಯೇ ಆಧಾರ. ಅಮೆರಿಕನ್ ಜೀವನದ ಪ್ರಗತಿಯ ವಿವಿಧ ಮುಖಗಳನ್ನೆತ್ತಿ ತೋರುತ್ತಿದ್ದ ಈ ಮಂಟಪದ ಕೇಂದ್ರ ಆಕರ್ಷಣೆಯೆಂದರೆ ಚಂದ್ರಶಿಲೆ.

ಸ್ವಿಸ್ ಮಂಟಪವೊಂದು ಶಿಲ್ಪಕೌತುಕ : ಅಲ್ಯೂಮಿನಿಯಮಿನ ಕಲಾತ್ಮಕ ವೃಕ್ಷ. ಇದನ್ನು ಬೆಳಗುವ ಸಹಸ್ರಾರು ವಿದ್ಯುದ್ದೀಪಗಳು ಕೆಳಗಿನ ನೀರಿನ ಮೇಲೆ ರಚಿಸಿದ ಬಿಂಬ ಅತಿರಮ್ಯ. ನಾಲ್ಕು ತ್ರಿಭುಜ ಕನ್ನಡಿಗಳ ನಡುವಣ ಕೆನಡಿಯನ್ ಮಂಟಪದಲ್ಲಿ ಆಧುನಿಕ ಕೆನಡದ ಜನಜೀವನವನ್ನು ಕಾಣಬಹುದಿತ್ತು. ಆಧುನಿಕ ಭಾರತದ ಜನಜೀವನವನ್ನು ರೂಪಿಸುವ ಮಂಟಪವೂ ಈ ಪ್ರದರ್ಶನದಲ್ಲಿತ್ತು.

ಬರ್ಮದ ಮಂಟಪದ್ದು ಕಟ್ಟಮರಾನ್ ತೆಪ್ಪದ ಆಕಾರ. ಹವಾಯಿಯದೊಂದು ಅಗ್ನಿಪರ್ವತ. ಐವರಿ ಕೋಸ್ಟಿನದು ಆನೆಯ ದಂತಗಳ ಆಕೃತಿ. ಪರ್ಷಿಯನ್ ಖಾರಿಯ ಪುಟ್ಟ ಷೇಖ್ ರಾಜ್ಯದ್ದೂ ಇಲ್ಲೊಂದು ಮಂಟಪ. ಸ್ನೇಹ ಸಂಪಾದನೆಯ ಪ್ರಾಮಾಣಿಕ ಆಕಾಂಕ್ಷೆಯಿಂದ ಪ್ರದರ್ಶನಕ್ಕೆ ಬಂದ ಈ ಮಂಟಪದ ಬೆಡಗು ಸುತ್ತೆಲ್ಲ ಚೆಲ್ಲಿತ್ತು. ಬ್ರಿಟಿಷ್ ಕೊಲಂಬಿಯದ ಟಿಂಬರ್ ಭವನದಿಂದ ಹಿಡಿದು ಇಟಲಿಯ ನವೋನವ ಗಾಜು ಉಕ್ಕುಗಳ ತಂತ್ರ ವಿನ್ಯಾಸದವರೆಗೆ ಎಲ್ಲೆಲ್ಲೂ ಅದ್ಭುತ; ತಟ್ಟಿ ಕಲಿಸುವ ಶಿಕ್ಷಣ. ಕುಬ್ಜ ಮಾನವನ ಸೃಷ್ಟಿಯ ಮಹೌನ್ನತ್ಯ. ಇದಕ್ಕೆ ಅನುಗುಣವಾದ ನೂತನ ಸಮಾಜವನ್ನೂ ಮೈತ್ರೀಭಾವವನ್ನೂ ಬೆಳೆಯಿಸಿಕೊಳ್ಳಬೇಕೆಂಬ ಅರಿವು ತರಿಸುವ ದೃಶ್ಯಮಾಲೆ. ಏಷ್ಯದ ಅತ್ಯಂತ ಅಭಿವೃದ್ಧಿ ಹೊಂದಿದ ರಾಷ್ಟ್ರವಾದ ಜಪಾನಿನಲ್ಲಿ ಆರು ತಿಂಗಳ ಕಾಲ ನಡೆದ ಎಕ್ಸ್‌ಪೊ 70 ಏಷ್ಯದ ಪ್ರಪ್ರಥಮ ವಿಶ್ವಪ್ರದರ್ಶನ.

ವಿಶ್ವದ ನಾನಾ ಕಡೆಗಳಲ್ಲಿನ, ವಿವಿಧ ಅಭಿವೃದ್ಧಿ ಘಟ್ಟಗಳಲ್ಲಿನ ಜನತೆಯ ಮೈತ್ರಿ ಪ್ರಗತಿಗಳ ಸಂಕೇತವಾದ ಈ ಪ್ರದರ್ಶನದಲ್ಲಿ 1964–65ರ ನ್ಯೂ ಯಾರ್ಕ್ ಪ್ರದರ್ಶನದ ವಾಣಿಜ್ಯ ದೃಷ್ಟಿಯೂ ಎಕ್ಸ್‌ಪೊ 67ರ ಕಲಾದೃಷ್ಟಿಯೂ ಹಿತಮಿತವಾಗಿ ಬೆರೆತು, ಭವಿಷ್ಯ ವಿಶ್ವದ ಇಂದಿನ ಚಿತ್ರಣವಾಗಿ ವಿಜ್ಞಾನ–ಕಲೆಗಳ ಮಧುರ ಚೆಲ್ಲಾಟವಾಗಿ ವಿಶ್ವದ ಎಲ್ಲರ ಗಮನವನ್ನೂ ವಿಶೇಷವಾಗಿ ಸೆಳೆಯಿತು. ವಿಶ್ವಪ್ರಗತಿ ಮತ್ತು ಮೈತ್ರಿಗಳ ಸಂಕೇತವಾದ ಈ ಪ್ರದರ್ಶನದ ನೆನಪು ಚಿರಕಾಲ ಉಳಿಯುತ್ತದೆ.

**ಎಕ್ಸ್‌ಪೊ ಕಲೆ ಮತ್ತು ಶಿಲ್ಪ** : ವಿಜ್ಞಾನಾದ್ಭುತಗಳನ್ನೂ ತಾಂತ್ರಿಕ ಮುನ್ನಡೆಯನ್ನೂ ಅತ್ಯುತ್ಕೃಷ್ಟ ಪದಾರ್ಥಗಳನ್ನೂ ಪ್ರದರ್ಶಿಸಿ ವಿಶ್ವದ ಎಲ್ಲೆಡೆಗಳ ಜನರ ಕಣ್ಣಿಗೆ ಹಬ್ಬವೆನಿಸುವ ಎಕ್ಸ್‌ಪೊವಿನಿಂದ ಕಲೆ ಮತ್ತು ಶಿಲ್ಪಗಳ ಮೇಲೆ ಆಗುವ ಪರಿಣಾಮ ಅಗಾಧ. ಕಟ್ಟಡ ನಿರ್ಮಾಣದಲ್ಲಿ ಆಗುತ್ತಿರುವ ಅಸಾಧಾರಣ ಪ್ರಗತಿಗೆ ಇದೂ ಕಾರಣ. ಪ್ರದರ್ಶನ ಮಂಟಪದ ವಿಶಾಲ ಹಜಾರದ ಚಾವಣಿ ಚಳಿಗಾಳಿ ಮಳೆಬಿಸಿಲುಗಳಿಂದ ರಕ್ಷಣೆ ನೀಡಬೇಕು. ಆದರೆ ತೆರೆದಂತೆಯೂ ಇರಬೇಕು. ಆದ್ದರಿಂದ ಎಕ್ಸ್‌ಪೊ 70 ಪ್ರದರ್ಶನಕಾರರ ಚಾವಣಿಯುದ್ಧವೆಂದು ಪತ್ರಿಕೆಯೊಂದು ಬಣ್ಣಿಸಿರುವುದು ಅಕ್ಷರಶಃ ಸತ್ಯ. ಈ ಚಾವಣಿಗಳನ್ನು ಹೊರಲು ಅವಶ್ಯವೆನಿಸಿದ್ದ ದಪ್ಪನೆಯ ಬೋದುಗೆಗಳನ್ನೂ ಕಂಬಗಳನ್ನೂ ನಿವಾರಿಸಿಕೊಂಡು, ತಡೆಯಿಲ್ಲದೆ ಪಸರಿಸುವ ವಿಶಾಲ ಹಜಾರ ರಚಿಸುವುದೇ ಪ್ರದರ್ಶನಕಾರರು ಮೊದಲಿಂದಲೂ ಎದುರಿಸಿ ಪರಿಹರಿಸುತ್ತಿರುವ ಮುಖ್ಯ ಸಮಸ್ಯೆ. 1851ರಲ್ಲಿ ನಿರ್ಮಿಸಲಾದ ಸ್ಫಟಿಕ ಮಹಲಿನಿಂದ ಮೊದಲ್ಗೊಂಡು ಎಕ್ಸ್‌ಪೊ 70ರ ಅಮೆರಿಕನ್ ಮಂಟಪದವರೆಗೆ ಈ ಸಮಸ್ಯೆಯನ್ನು ಪರಿಹರಿಸಲು ಕೈಕೊಂಡಿರುವ ಕ್ರಮಗಳು ವಾಸ್ತುಶಿಲ್ಪದ ಬೆಳವಣಿಗೆಯಲ್ಲಿ ಸಂಭವಿಸಿರುವ ಅದ್ಭುತ ಪ್ರಗತಿಯ ದ್ಯೋತಕಗಳಾಗಿವೆ. 19ನೆಯ ಶತಮಾನದ ವಿಶಾಲ ಹಜಾರಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟವನು ಪ್ಯಾಕ್ಸ್‌ಟನ್. ಸ್ಫಟಿಕ ಮಹಲಿನ ವಿನ್ಯಾಸವೂ ನಿರ್ಮಾಣವೂ ಆಗಿನ ಕಾಲಕ್ಕೆ ನವ್ಯ. ಸಸ್ಯಗೃಹದ ಮಾದರಿಯ ಇಂಥ ಕಟ್ಟಡದ ಭಾಗಗಳೆಲ್ಲ ಮೊದಲೇ ನಿರ್ಮಿತ. ಎಲ್ಲೆಂದರಲ್ಲಿ ಕಟ್ಟುವ ಬಿಚ್ಚುವ ಸೌಕರ್ಯ ಇದರ ಒಂದು ವಿಶೇಷ. ಅನಂತರದ ಅನೇಕ ಪ್ರದರ್ಶನಭವನಗಳು ಇದೇ ಮಾದರಿಯನ್ನನುಸರಿಸಿದುವು. 1889ರಲ್ಲಿ ಪ್ಯಾರಿಸಿನಲ್ಲಿ ರಚಿಸಲಾದ ಐಫೆಲ್ ಗೋಪುರದಿಂದ ಕಬ್ಬಿಣದ ಹೊಸ ಉಪಯೋಗಗಳ ಪರಿಚಯ ಸಾಧ್ಯವಾಯಿತು.

ವಿಶ್ವಪರಿಸ್ಥಿತಿಯಿಂದಾಗಿ ಸ್ವಲ್ಪ ಕಾಲ ಹಿಂದೆ ಬಿದ್ದಿದ್ದ ಈ ನವ್ಯಪ್ರಯೋಗ ಒಂದನೆಯ ಮಹಾಯುದ್ಧಾನಂತರ ಕಾಲದಲ್ಲಿ ಮತ್ತೆ ಮುಂದುವರಿಯಿತು. 1925ರಲ್ಲಿ ಪ್ಯಾರಿಸಿನಲ್ಲಿ ನಡೆದ ಪ್ರದರ್ಶನದ ಭವನಗಳ ಕಟ್ಟುಗಾರಿಕೆಯಲ್ಲಿ ಆಧುನಿಕ ಮತ್ತು ಸಾಂಪ್ರದಾಯಿಕ ಶೈಲಿಗಳ ನಾನಾ ಬಗೆಗಳನ್ನು ಕಾಣಬಹುದಿತ್ತು. ಮೈಸ್ ವಾನ್ ಡರ್ ರೋಹನ ಪ್ರತಿಭೆಯ ಕೃತಿಯಾದ ಜರ್ಮನ್ ಮಂಟಪವೊಂದು ಗಮನಾರ್ಹ ಪ್ರಯೋಗ. 1939ರಲ್ಲಿ ನಡೆದ ನ್ಯೂ ಯಾರ್ಕ್ ಪ್ರದರ್ಶನದಲ್ಲಿ ನಿರ್ಮಿತವಾದ ಫಿನ್ನಿಷ್ ಮಂಟಪದ್ದು ಇನ್ನೊಂದು ಮುಖ್ಯ ಹೆಜ್ಜೆ. ಇದರ ಹಿಂದಿನ ಸ್ಫೂರ್ತಿ ಆಲ್ಟೊವಿನದು.

ಎರಡನೆಯ ಮಹಯುದ್ಧಾನಂತರ ಕಾಲದಲ್ಲಿ, ಮುಖ್ಯವಾಗಿ ಬ್ರಸಲ್ಸ್ ಪ್ರರ್ಶನದಿಂದೀಚೆಗೆ, ನಾನಾ ರಾಷ್ಟ್ರಗಳ ವೈಲಕ್ಷಣ್ಯಗಳೂ ಅವಕ್ಕೆಲ್ಲ ಸಮಾನವಾದ ಅಂತಾರಾಷ್ಟ್ರೀಯ ಚಿತ್ರಣ ಶೈಲಿಯೂ ಮಿಶ್ರವಾಗಿರುವುದನ್ನು ಕಾಣಬಹುದು. ಬ್ರಸಲ್ಸ್ ಪ್ರದರ್ಶನದ ಪರಮಾಣುಕಲ್ಪಕ (ಆಟೋಮಿಯಂ), ಎಕ್ಸ್‌ಪೊ '67ರ ಕೆನಡದ ಕಟಿಮವಿಕ್, ಅಮೆರಿಕದ ಭೂಕ್ಷೇತ್ರ ಗುಮ್ಮಟ ಮತ್ತು ಎಕ್ಸ್‌ಪೊ '70ರ ಸೋವಿಯತ್ ಅಮೆರಿಕನ್ ಜಪಾನೀ ಇಟಾಲಿಯನ್ ಕಟ್ಟಡಗಳು ವಾಸ್ತು ಶಿಲ್ಪದ ಜೊತೆಗೆ ಆಧುನಿಕ ತಾಂತ್ರಿಕ ಜೋಡಣೆಯ ಶ್ರೇಷ್ಠಫಲಗಳು–ಮುಂದಿನ ಶತಮಾನದಲ್ಲಿ ಸಾಮಾನ್ಯವಾಗಬಹುದಾದ ಕಟ್ಟಡದ ಇಂದಿನ ಕಾಣ್ಕೆಗಳು.

ಪೂರ್ವ ಪೂರ್ವವೇ, ಪಶ್ಚಿಮ ಪಶ್ಚಿಮವೇ; ಇವೆರಡೂ ಎಂದಿಗೂ ಸಂಗಮಿಸುವುದು ಸಾಧ್ಯ–ಎಂಬ ಕಿಪ್ಲಿಂಗ್ ಕವಿವಾಣಿ ಇವುಗಳಿಂದ ಸುಳ್ಳಾಗಿದೆ. ಇವು ವಿಶ್ವದ ನಾನಾ ಭಾಗಗಳ ಕಲಾಸಂಗಮವೆನ್ನಬಹುದು. 1851ರ ಸ್ಫಟಿಕ ಮಹಲಿನ ಮಾರ್ಗ ಇತರ ದೇಶಗಳಿಗೂ ಹಬ್ಬಿತು. ಆಪಾನೀಯರ ಒಳಾಂಗಣದ ಕಲಾಪ್ರಕಾರಗಳು ಫಿಲಡೆಲ್ಫಿಯ ಪ್ರದರ್ಶನದ ಮಾರ್ಗವಾಗಿ ಅಮೆರಿಕದಲ್ಲಿ ಜನಪ್ರಿಯವಾದುವು. ಕೊಲಂಬಿಯನ್ ಪ್ರದರ್ಶನದಿಂದಾಗಿ ಮೆಡಿಟರೇನಿಯನ್ ವಾಸ್ತುಶಿಲ್ಪ ಅಮೆರಿಕದ ಕಟ್ಟಡಗಳಲ್ಲೂ ಅವತಾರವೆತ್ತಿತು. ಷಿಕಾಗೋ, ನ್ಯೂ ಹಾರ್ಕ್, ಬ್ರಸಲ್ಸ್, ಮಾಂಟ್ರಿಯಲ್, ಒಸಾಕಗಳ ಅಮೂರ್ತ ಕಲಾವೈಶಿಷ್ಟ್ಯವೂ ತಂತ್ರ ವಿಜ್ಞಾನಗಳ ಜೋಡಣೆಯೂ ಉಪಯುಕ್ತತಾ ದೃಷ್ಟಿಯೂ ಮುಂದಿನ ಶತಮಾನದ ಕಡೆಗೆ ಬೆಟ್ಟು ಮಾಡಿ ತೋರಿಸುತ್ತಿವೆ. (ಎಚ್.ಎಸ್.ಕೆ.)

**ಎಕ್‌ಹಾರ್ಟ್, ಮೀಸ್ಟರ್:** 1260–1329. ಪ್ರಸಿದ್ಧ ಜರ್ಮನ್ ಅನುಭಾವಿ. ಡಾಮಿನಿಕನ್ ಎಂಬ ಧಾರ್ಮಿಕ ಪಂಥಕ್ಕೆ ಸೇರಿದವ. ಪ್ಯಾರಿಸ್‌ನಲ್ಲಿ ತತ್ತ್ವಶಾಸ್ತ್ರದ ಅಧ್ಯಾಪಕನಾಗಿಯೂ ಪಂಥದ ಪ್ರಮುಖ ಪ್ರತಿನಿಧಿಯಾಗಿಯೂ ಕೆಲಸ ಮಾಡಿದ. ಸ್ವಲ್ಪಕಾಲ ಸ್ಟ್ರಾಸ್‌ಬರ್ಗ್‌ನಲ್ಲೂ ಕೆಲವು ದಿನ ಕೊಲೋನಿನಲ್ಲೂ ಉಪದೇಶಕನಾಗಿದ್ದ. ಇಷ್ಟಾದರೂ ಈತನ ಕೆಲಸ ಕಾರ್ಯಗಳನ್ನು ಉಗ್ರವಾಗಿ ಟೀಕಿಸಿದವರಿಲ್ಲದಿರಲಿಲ್ಲ. ಕೊಲೋನಿನಲ್ಲಿ ಮಠಾಧಿಪತಿಯಾಗಿದ್ದ ಹೆನ್ರಿ ಎಕ್‌ಹಾರ್ಟ್‌ನನ್ನು ಪಾಷಂಡಿ ಎಂದು ದೂರಿದ. ಎಕ್‌ಹಾರ್ಟ್ ಪೋಪ್‌ಗೆ ಈ ಸುದ್ದಿಯನ್ನು ಮುಟ್ಟಿಸಿ ಈ ಅಪವಾದದಿಂದ ತನ್ನನ್ನು ಪಾರು ಮಾಡಬೇಕೆಂದು ಪ್ರಾರ್ಥಿಸಿದ. ಆದರೆ ಪೋಪ್ ಇವನ ಅಹವಾಲಿಗೆ ಕಿವಿಗೊಡಲಿಲ್ಲ, ಮಾತ್ರವಲ್ಲ. 1329ರಲ್ಲಿ ಇವನ

ಮೇಲೆ ಅಭಿಶಾಪ ಒಂದನ್ನು ಜಾರಿ ಮಾಡಿದ. ಆದರೆ ಇದನ್ನು ಜಾರಿಗೆ ತರುವುದರೊಳಗಾಗಿ ಎಕ್‌ಹಾರ್ಟ್ ತೀರಿಕೊಂಡ. ಎಕ್‌ಹಾರ್ಟನ ಅನುಭಾವ ಆದರ್ಶವಾದದಲ್ಲಿ ಸಂಪ್ರದಾಯಕ್ಕೆ ವಿರೋಧವಾದ ಕೆಲವು ಅಂಶಗಳಿದ್ದುವು. ಆದರೆ ಈತ ಈಶ್ವರನ ಅಸ್ತಿತ್ವದಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟಿದ್ದ. ಸತ್ ಮತ್ತು ಚಿತ್ ಒಂದೇ ತತ್ತ್ವವೆಂದು ಆತ ತಿಳಿದಿದ್ದ. ಜಗತ್ತಿಗೆಲ್ಲಕ್ಕೂ ಆದಿಕಾರಣನಾದ ಪರಮಪುರುಷ ಅವಜ್ಞಾನಸಗೋಚರನೆಂದು ಆತ ಬೋಧಿಸಿದ. ಅವನ ಸ್ವರೂಪವನ್ನು ಹೀಗೇ ಎಂದು ನಿರ್ಣಯಿಸುವುದು ಅಸಾಧ್ಯ. ಆದರೆ ಈ ಜಗತ್ತು ಅವನಿಂದಲೇ ಉತ್ಪನ್ನವಾದುದರಿಂದ ಇದು ಅವನ ಆವಿರ್ಭಾವವೆಂದು ಹೇಳಲು ಅಡ್ಡಿ ಇಲ್ಲ. ಎಲ್ಲವೂ ಪರಮಾತ್ಮನಿಂದಲೇ ಹೊರಹೊಮ್ಮಿ ಬಂದು ಮತ್ತೆ ಅವನ ಕಡೆಗೇ ಧಾವಿಸುತ್ತಿದೆ ಎಂಬುದು ಅವನ ತತ್ತ್ವಸಾರ. ದೇವರ ಸ್ವರೂಪವನ್ನು ಅರಿಯಲು ಅನುಮಾನ ಪ್ರಮಾಣದಿಂದಲ್ಲದಿದ್ದರೂ ಅಪರೋಕ್ಷ ಜ್ಞಾನದಿಂದ ಸಾಧ್ಯವೆಂದು ಎಕ್‌ಹಾರ್ಟನ ವಾದ.

ಎಕ್‌ಹಾರ್ಟ್ ತನ್ನ ಕಾಲದ ಜರ್ಮನ್ ಭಾಷೆಗೆ ಅನೇಕಾನೇಕ ಹೊಸ ತಾತ್ತ್ವಿಕ ಭಾವನಾಮಗಳನ್ನು ನೀಡಿದ್ದಾನೆ. (ಎಂ.ವೈ.)

**ಎಕ್‌ಹಾರ್ಡ್:** (?–973). ಪ್ರ.ಶ. 10ನೆಯ ಶತಮಾನದಲ್ಲಿ ಸ್ಯಾಕ್ಸನ್ ಚಕ್ರವರ್ತಿಗಳ ಕಾಲದ ಅತಿ ಪ್ರಮುಖ ಕವಿ. ಸೇಂಟ್ ಗಾಲನ ಮಠದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಪ್ರ.ಶ.935 ರಲ್ಲಿ ಲ್ಯಾಟಿನ್ ಭಾಷೆಯಲ್ಲಿ ವಾಲ್ಟೇರಿಯಸ್ ಮನುಫ್ರೆರ್ಟಿಸ್–ಎಂದರೆ ವಾಲ್ಟರನ ಕಥೆಯ ಮಹಾಕಾವ್ಯವೊಂದನ್ನು ರಚಿಸಿದ. ವರ್ಜಿಲನ ಈನಿಯಡ್ ಮತ್ತು ಇತರ ಲ್ಯಾಟಿನ್ ಕವಿಗಳ ಕೃತಿಗಳನ್ನು ಮಾದರಿಯಾಗಿಟ್ಟುಕೊಂಡಿದ್ದರೂ ವಾಲ್ಟೇರಿಯಸ್ ಮಹಾಕಾವ್ಯದಲ್ಲಿ ಜರ್ಮನ್ ಜನರ ವ್ಯಕ್ತಿತ್ವ, ವೀರನಿಟ್ಟು ಎದ್ದುಕಾಣುತ್ತದೆ. ಲ್ಯಾಟಿನ್ ಹೆಕ್ಸಮೀಟರಿನ ಛಂದಸ್ಸಿನಲ್ಲಿ ಬರೆದ ಈ ಕಾವ್ಯದ ವಸ್ತು ಜರ್ಮನಿಯಲ್ಲಿ ಪ್ರಚಲಿತವಾಗಿದ್ದ ಆಕ್ವಿಟೇನಿನ ವಾಲ್ಟರನ ಪುರಾಣ ಕಥೆ. ಸಂಚಾರೀಗಾಯಕರು ಹಾಡುತ್ತಿದ್ದ ಸಣ್ಣದೊಂದು ಕಥನಕವನ ಈ ಕೃತಿಗೆ ಸ್ಫೂರ್ತಿಕೊಟ್ಟಿತು. ವಾಲ್ಟರ್ ಮತ್ತು ಆತನ ವಧು ಹಿಲ್ಡೆಗುಂಡ್ ಇವರು ಹೂಣರ ದೆಸೆಯಿಂದ ತಪ್ಪಿಸಿಕೊಂಡು ಬಂದ ಅನಂತರದ ರೋಮಾಂಚಕ ಕಥೆಯಲ್ಲಿ ವಾಲ್ಟರನ ಶೌರ್ಯ, ಅವನ ಶತ್ರುಗಳಾದ ಹೇಗೆನ್, ಗಂಥರ್ ಇವರ ಕ್ರೌರ್ಯ, ಸ್ವಾರ್ಥ ಮತು ವಾಲ್ಟರನ ಪ್ರೇಯಿಸಿ ಹಿಲ್ಡೆಗುಂಡ್ ತೋರಿಸುವ ಸ್ಥಿರತೆ ಇವುಗಳ ಸುಂದರ ಚಿತ್ರಣವಿದೆ. ಈ ವೀರಗಾಥೆಯಲ್ಲಿ ವಿಸ್ತಾರವಾದ ಯುದ್ಧವರ್ಣನೆಯೇ ಅಲ್ಲದೆ ನಿಸರ್ಗದ ಚೆಲುವಿನ ಚಿತ್ರಣವೂ ತುಂಬಿಕೊಂಡಿದೆ. ಮಾನವೀಯತೆಯ ಆಳವಾದ ಬಣ್ಣವಿರುವ ಸನ್ನಿವೇಶಗಳೂ ಹೃದಯ ಕಲಕುವಂಥ ಭಾವೋದ್ರೇಕದ ಘಟನೆಗಳೂ ಬಹಳ ನಯವಾಗಿ ಚಿತ್ರಿತವಾಗಿವೆ. ಸಾಮಾನ್ಯ ಜನರ ಕಲ್ಪನೆಯ ಆದರ್ಶ ವ್ಯಕ್ತಿಗಳಿಗೆ ಜೀವಂತ ಮನುಷ್ಯರ ಸತ್ತ್ವವನ್ನು ಕವಿ ಈ ವೀರಗಾಥೆಯಲ್ಲಿ ಕೊಟ್ಟಿದ್ದಾನೆ. ಲ್ಯಾಟಿನ್ ಕವಚವಿದ್ದರೂ ಜರ್ಮನ್ ವ್ಯಕ್ತಿತ್ವವೇ ಹೃದಯವಾಗಿ ರುವ ಈ ಮಹಾಕಾವ್ಯ ನಿಜವಾಗಿ ಜರ್ಮನ್ ವೀರಗಾಥೆಯೇ. ಎಕ್‌ಹಾರ್ಡ್ ಬಳಸಿದ ಭಾಷೆ ಆ ಕಾಲದಲ್ಲಿ ಜನ ಆಡುತ್ತಿದ್ದ ಗಟ್ಟಿಗಡುಸಾದ ಲ್ಯಾಟಿನ್. ಈತನ ತೀರಿಕೊಂಡ 100ವರ್ಷದ ಅನಂತರ ಮತ್ತೊಬ್ಬ ನಾಲ್ಕನೆಯ ಎಕ್‌ಹಾರ್ಡ್ ಎಂಬಾತ ವಾಲ್ಟೇರಿಯಸ್ ಕಾವ್ಯವನ್ನು ತಿದ್ದಿ, ಅದರ ಲ್ಯಾಟಿನ್ ಭಾಷೆಯನ್ನು ಉತ್ತಮಗೊಳಿಸಲು, ಗ್ರಂಥಸ್ಥವಾಗಿಸಲು ಪ್ರಯತ್ನಿಸಿ ವಿಫಲನಾದ. ಎಕ್‌ಹಾರ್ಡ್‌ನ ಬಗ್ಗೆ ಹತ್ತೊಂಬತ್ತನೆಯ ಶತಮಾನದಲ್ಲಿ ಒಂದು ಕಾದಂಬರಿಯೂ ಇಪ್ಪತ್ತನೆಯ ಶತಮಾನದಲ್ಲಿ ಒಂದು ನಾಟಕವೂ ರಚಿತವಾಗಿವೆ.

(ಎಸ್.ಎ.ಎನ್.)

**ಎಚಿವೇರೀಯ:** ಮೆಕ್ಸಿಕೊ ದೇಶದ ಅಲಂಕಾರ ಸಸ್ಯ. ನಕಾಸೆಗಾರ ಅಟನಾಸಿಯೊ ಎಚೆವೇರೀಯ ಎಂಬುವನ ಸ್ಮರಣೆಗಾಗಿ ಗಿಡಕ್ಕೆ ಈ ಹೆಸರು.

ಇವು ರಸವುಳ್ಳ (ಸಕ್ಯುಲೆಂಟ್) ದೀರ್ಘಾವಧಿ ಸಸ್ಯಗಳು. ಎಲೆ ಅಗಲ, ದಪ್ಪ, ಚಪ್ಪಟೆ, ಮೆತು. ಗುಲಾಬಿ ಹೂವಿನಂತೆ ಜೋಡಣೆಯಾಗಿರುವ ಹೂಗಳನ್ನುಳ್ಳ ಇದರ ಪುಷ್ಪಮಂಜರಿ ಮಧ್ಯದ ತುದಿಯಲ್ಲಿ ಅಂತ್ಯಾರಂಭಿ, ಸ್ಪೈಕ್ ಅಥವಾ ಅಂಬೆಲ್ ಮಾದರಿಯದು. ಪುಷ್ಪಪತ್ರ 5; ಉದ್ದವಾಗಿ ಅಸಮವಾಗಿರುತ್ತದೆ; ಅಗಲ ಕಡಿಮೆ, ದಳಗಳು 5; ಬುಡದಲ್ಲಿ ಕೂಡಿಕೊಂಡಿರುತ್ತವೆ. ಕೇಸರಗಳು 10; ಇವುಗಳ ಪೈಕಿ ಐದು ಹೂದಳದ ಮಧ್ಯದವರೆಗೆ ಅಂಟಿಕೊಂಡಿರುತ್ತವೆ; ಉಳಿದ ಐದು ಬಿಡಿಯಾಗಿರುತ್ತವೆ ಅಥವಾ ತಳಭಾಗಕ್ಕೆ ಅಂಟಿಕೊಂಡಿರುತ್ತವೆ.

ಎಚೆವೇರಿಯ ಅಗವಾಯ್‌ಡೆಸ್ ಪ್ರಭೇದ ಕತ್ತಾಳೆ ಆಕಾರದಲ್ಲಿದೆ. ದಪ್ಪವಾದ ಅಗಲವಾದ, ಮೆದುವಾದ ಎಲೆಗಳು ಗುಲಾಬಿ ಹೂವಿನಂತೆ ಜೋಡಣೆಗೊಂಡಿವೆ. ಇವು 3" ಉದ್ದವಾಗಿ ತಿಳಿಹಸಿರು ಬಣ್ಣವಾಗಿವೆ. ಭಾರವಾದ ಹೂಗೊಂಚಲು ಸಸ್ಯದ ಮೇಲಿನ ಮಧ್ಯಭಾಗದಿಂದ ಇಳಿಬಿದ್ದಿರುತ್ತದೆ. ಗೊಂಚಲಿನ ತೊಟ್ಟು ಸುಮಾರು 1½ ಎತ್ತರ; ಹೂಗಳು ಹಳದಿ ಮಿಶ್ರಿತ ಕೆಂಪುಬಣ್ಣದವು. ಸಾಮಾನ್ಯವಾಗಿ ಚಳಿಗಾಲದಲ್ಲಿ ಅರಳುತ್ತವೆ. ಈ ಪ್ರಭೇದ ನಿಧಾನವಾಗಿ ಬೆಳೆಯುವ ಗುಣವುಳ್ಳದ್ದು. ಬೀಜಗಳಿಂದ ಸುಲಭವಾಗಿ ವೃದ್ಧಿಮಾಡಬಹುದು.

ಎಚೆವೇರೀಯ ಡೆರೆನ್‌ಬರ್ಜಿ ಪ್ರಭೇದ ಮಧ್ಯಮ ಗಾತ್ರದ, ರಸವುಳ್ಳ ಸಸ್ಯ. ಇದು ಅರಳುವುದಕ್ಕೆ ಪ್ರಾರಂಭಿಸಿದ ಡೇಲಿಯ ಮೊಗ್ಗಿನ ಆಕಾರದಲ್ಲಿದೆ. ಎಲೆಗಳದ್ದು ಚಮಚದಾಕಾರ; ತುದಿ ಸ್ವಲ್ಪ ಮೊನಚು; ಬಣ್ಣ ನಸು ಹಸಿರು; ಅಂಚುಗಳು ಕೆಂಪು ಬಣ್ಣ. ಇಡೀ ಎಲೆ ತಿಳಿ ಬೂದಿಬಣ್ಣದ ಮೇಣದಂತಿರುವ ಪೊರೆಯಿಂದ ಆವೃತವಾಗಿದೆ. ತುದಿಯಲ್ಲಿ ತುಂಡಾದ ಹೂಗೊಂಚಲಿದೆ. ಅದರ ಹೂಗಳ ಬಣ್ಣ ಹಳದಿ ಮಿಶ್ರಿತ ಕೆಂಪು.

ಎಚೆವೇರೀಯ ಎಲೆಗ್ಯಾನ್ಸ್ ಪ್ರಭೇದ ಬಹಳ ಸುಂದರವಾಗಿದೆ. ಇದು ಆಕಾರದಲ್ಲಿ ಎ. ಡೆರೆನ್‌ಬರ್ಜಿ ಪ್ರಭೇದವನ್ನು ಹೋಲುತ್ತದೆಯಾದರೂ ಗಾತ್ರದಲ್ಲಿ ದೊಡ್ಡದು. ಎಲೆಗಳು ವಿರುದ್ಧ ರಚನೆಯವು, ಆಕಾರ ಕರನೆಯಂತೆ. ಅಂಚುಗಳ ಬಣ್ಣ ಕೆಂಪು. ಕೆಲವು ವೇಳೆ ಎಲೆ ಅರೆ ಪಾರದರ್ಶಕ; ಸುಲಭವಾಗಿ, ಅಧಿಕ ಸಂಖ್ಯೆಯಲ್ಲಿ ಹೊಮ್ಮುವ ಕೊಂಬೆಗಳಿಂದ ಸಸ್ಯವನ್ನು ವೃದ್ಧಿಮಾಡಬಹುದು.

ಎಚೆವೇರೀಯ ಗಿಬ್ಬಿಫ್ಲೋರ ಪ್ರಭೇದ ದೊಡ್ಡ ಚಮಚದಾಕಾರದ ಸಸ್ಯವಾಗಿದ್ದು ತಳಭಾಗದಲ್ಲಿ ಉಬ್ಬಿರುತ್ತದೆ. ಹೂಗೊಂಚಲ ಗಣೆ ಸುಮಾರು 10ಮೀ ಎತ್ತರವಾಗಿ ಬೆಳೆದು, ತುದಿಯಲ್ಲಿ ಹಳದಿ ಮಿಶ್ರಿತ ಕೆಂಪು ಬಣ್ಣದ ಹೂಗಳನ್ನು ಬಿಡುತ್ತದೆ.

ಎಚೆವೇರೀಯ ಸೆಟೊಸ ಪ್ರಭೇದ ಗುಲಾಬಿ ಹೂವಿನಾಕಾರದಲ್ಲಿರುವ ಸುಂದರ ಸಸ್ಯ. ಎಲೆಗಳ ಮೇಲೆ ದೃಢವಾಗಿ ನವಿರಾಗಿರುವ ಮುಳ್ಳುಗಳು ಸಸ್ಯದ ಅಂದವನ್ನು ದ್ವಿಗುಣಗೊಳಿಸಿವೆ. ಎಲೆಗಳಿಗೆ ತೊಟ್ಟುಗಳಿಲ್ಲ. ಬಣ್ಣ ಹಸಿರು. ಒಂದೇ ಸಸ್ಯದಲ್ಲಿ ಹಲವು ಗೊಂಚಲುಗಳಿವೆ. ಇವುಗಳ ಮೇಲೂ ನವಿರಾದ ಮುಳ್ಳುಗಳಿವೆ. ಹೂಗಳ ಬಣ್ಣ ಕೆಂಪು. ಸಸ್ಯಗಳನ್ನು ಬೀಜಗಳಿಂದ ವೃದ್ಧಿ ಮಾಡಬಹುದು.

ಎಚೆವೇರೀಯ ಪಲ್ವಿನೇಟ ಪ್ರಭೇದದ ಎಲೆಗಳ ತೊಟ್ಟುಗಳು ಉಬ್ಬಿರುವುದರಿಂದ ಈ ಹೆಸರು ಬಂದಿದೆ. ಎಲೆ ಬುಡದಲ್ಲಿ ಕಿರಿದು. ತುದಿಯಲ್ಲಿ ಅಗಲ, ಚಪ್ಪಟೆ. ಮೇಲುಭಾಗದಲ್ಲಿ ನವಿರಾದ ರೋಮಗಳಿವೆ. ತಳಭಾಗದ ಹಳೆಯ ಎಲೆಗಳು ಕಂದು ಬಣ್ಣಕ್ಕೆ ತಿರುಗುವುದು ಈ ಪ್ರಭೇದದ ಸಾಮಾನ್ಯಗುಣ. ಎಲೆಯಂತಿರುವ ಕಾಂಡದ ತುದಿಯಲ್ಲಿ ಅಂತ್ಯಾರಂಭಿ ಹೂಗೊಂಚಲಿದೆ. (ಡಿ.ಎಂ.)

**ಎಚ್ಚಮನಾಯಕ:** ವಿಜಯನಗರ ಸಾಮ್ರಾಜ್ಯದ ಅನಂತರ ಚಂದ್ರಗಿರಿಯಲ್ಲಿ ಆಳುತ್ತಿದ್ದ ಅರವೀಡು ವಂಶದ ಅರಸರಲ್ಲೊಬ್ಬನಾದ ವೆಂಕಟರಾಯನ ಪ್ರೀತಿಯ ಸರದಾರ, ಸ್ವಾಮಿನಿಷ್ಠ ದೇಶಾಭಿಮಾನಿ.

ವೆಂಕಟರಾಯನ ಮರಣಾನಂತರ (1614) ಅವನ ಅಣ್ಣನ ಮಗ ರಂಗರಾಯ ಸಿಂಹಾಸನವನ್ನೇರಿದ. ಈತನೇ ರಾಜ್ಯಕ್ಕೆ ನಿಜವಾದ ಹಕ್ಕುದಾರ. ಈತನಿಗೆ ಎಚ್ಚಮನಾಯಕನ ಬೆಂಬಲವಿತ್ತು. ವೆಂಕಟರಾಯ ಬದುಕಿದ್ದಾಗ ಅವನಿಗೂ ಇದೇ ಅಭೀಪ್ಸವಿತ್ತು. ಆದರೆ ರಂಗರಾಯ ರಾಜನಾದದ್ದು ಜಗರಾಯನೆಂಬ ಸಾಮಂತರಾಜನಿಗೆ ಹಿಡಿಸಲಿಲ್ಲ. ಎಚ್ಚಮನಾಯಕನ ಗೈರುಹಾಜರಿಯಲ್ಲಿ ಜಗರಾಯ ಸೈನ್ಯ ಸಮೇತ ಅರಮನೆಗೆ ನುಗ್ಗಿದ. ರಂಗರಾಯನೂ ಅವನ ಪರಿವಾರದವರೂ ಬಂಧನಕ್ಕೊಳಗಾದರು. ಈ ವಿಷಯ ತಿಳಿದ ಎಚ್ಚಮನಾಯಕ ಎದೆಗುಂದದೆ ಬಲವಾದ ಸೈನ್ಯ ಕಟ್ಟಿ, ಜನರ ಬೆಂಬಲ ಪಡೆದು ಕಾರಾಗೃಹದಿಂದ ರಂಗರಾಯನ ಮಗ ಚಿನ್ನ ವೆಂಕಟರಾಯನನ್ನು ಕರೆತಂದು ಅವನನ್ನು ಜೋಪಾನವಾಗಿ ರಕ್ಷಿಸಿದ. ರಂಗರಾಯನನ್ನೂ ಅವನ ಪರಿವಾರದವರನ್ನೂ ಜಗರಾಯ ಕೊನೆಗೊಳಿಸಿದ ಸುದ್ದಿಯನ್ನು ಕೇಳಿ ಖತಿಗೊಂಡ ಎಚ್ಚಮನಾಯಕ ಶತ್ರುನೆಲೆಗೆ ಸೈನ್ಯ ಸಮೇತ ನುಗ್ಗಿ ಶೌರ್ಯದಿಂದ ಕಾದಾಡಿ ಎಲ್ಲರನ್ನೂ ಸದೆಬಡಿದ. ಅಳಿದುಳಿದ ಶತ್ರುಗಳು ಶರಣಾಗತರಾದರು.

ಎಚ್ಚಮನಾಯಕ ಅನ್ಯಾಕ್ರಾಂತವಾಗಿದ್ದ ಸಿಂಹಾಸನವನ್ನು ರಾಜವಂಶಕ್ಕೆ ಗಳಿಸಿಕೊಟ್ಟು ಕೀರ್ತಿ ಪಡೆದುದಲ್ಲದೆ ಕನ್ನಡಿಗರ ಸ್ವಾಮಿನಿಷ್ಠೆ, ಸಾಹಸಪರತೆ, ಧೈರ್ಯ, ಸ್ಥೈರ್ಯಗಳನ್ನು ಲೋಕಕ್ಕೆ ಮೆರೆದ. ಸ್ವಾಮಿಪುತ್ರನಾದ ಚಿನ್ನ ವೆಂಕಟರಾಯನಿಗೆ ವೈಭವದಿಂದ ಪಟ್ಟಾಭಿಷೇಕ ನೆರವೇರಿಸಿ ರಾಜ್ಯದಲ್ಲಿ ಶಾಂತಿಸ್ಥಾಪನೆ ಮಾಡಿದ. ಚಂದ್ರಗಿರಿಯ ರಾಜ್ಯ ಮತ್ತೆ ವೈಭವದಿಂದ ತಲೆಯೆತ್ತುವಂತಾಯಿತು. ಕನ್ನಡನಾಡಿನ ಇತಿಹಾಸದಲ್ಲಿ ಎಚ್ಚಮನಾಯಕನೊಬ್ಬ ಆದರ್ಶ ಪುರುಷ. ಈತನ ಬಗ್ಗೆ ರಚಿತವಾದ ನಾಟಕವೊಂದು ಕನ್ನಡ ವೃತ್ತಿರಂಗಭೂಮಿಯ ಮೇಲೆ ಕೀರ್ತಿ ಗಳಿಸಿದೆ. (ಸಿ.ಕೆ.ವೈ.ಡಿ.)

**ಎಜೆಕಿಯಲ್:** ಪ್ರ.ಶ.ಪೂ. ಸು.592. ಯೆಹೂದಿ ಪ್ರವಾದಿಗಳಲ್ಲಿ ಒಬ್ಬ. ಈತನ ಸಿದ್ಧಿ–ಸಾಧನೆಗಳನ್ನೊಳಗೊಂಡ ಗ್ರಂಥ ಬೈಬಲಿನಲ್ಲಿದೆ.

ಎಜೆಕೆಯೆಲನ ಗ್ರಂಥದ ರೂಪರೇಷೆಗಳು ಇತರ ಪ್ರವಾದಿಗಳ ಗ್ರಂಥಗಳಿಗಿಂತ ಸುವ್ಯವಸ್ಥಿತವಾಗಿವೆ. ಆದರೆ ಅನೇಕ ಪ್ರಕರಣಗಳ ಪುನರ್ ನಿರೂಪಣೆ, ಅಪೂರ್ವ ಘಟನಾವಳಿಗಳ ಮಧ್ಯೆ ಬರುವ ಸುದೀರ್ಘ ಉಪನ್ಯಾಸಗಳು–ಇತ್ಯಾದಿಗಳನ್ನು ವಿಶ್ಲೇಷಿಸಿದಾಗ, ಗ್ರಂಥವನ್ನು ಎಜೆಕಿಯೆಲನೇ ಬರೆದಿರಲಾರ; ಶಿಷ್ಯನೊಬ್ಬ ಗುರುವಿನ ಹೇಳಿಕೆಗಳನ್ನು, ಸಾಧನೆ–ಬೋಧನೆಗಳನ್ನು ಸಂಕಲನ ಮಾಡಿ ಕೃತಿರೂಪಕ್ಕೆ ಇಳಿಸಿರಬಹುದು ಎಂಬ ವಾದ ಬೈಬಲ್ ಶಾಸ್ತ್ರಜ್ಞರಲ್ಲಿ ಮಾನ್ಯವಾಗಿದೆ. ಆದರೆ ಆ ಶಿಷ್ಯ ಮೂಲದ ಸಂದೇಶಕ್ಕೆ ಹಾನಿಯಾಗದಂತೆ ಎಚ್ಚರ ವಹಿಸಿದ್ದಾನೆ.

ಪ್ರ.ಶ.ಪೂ. ಸು.587ರಲ್ಲಿ ಬ್ಯಾಬಿಲೋನಿಯದ ಆಳರಸರು ಯೆಹೂದ್ಯರನ್ನು ಬಗ್ಗುಬಡಿದು ತಮ್ಮ ರಾಜಧಾನಿಗೆ ಸೆರೆಯಾಳುಗಳನ್ನಾಗಿ ಕೊಂಡೊಯ್ದರು. ಪ್ರ.ಶ.ಪೂ. 593–587ರ ಅವಧಿಯಲ್ಲಿ ಎಜೆಕಿಯಲ್ ಬ್ಯಾಬಿಲೋನಿಯದಲ್ಲಿದ್ದು ಈ ಯೆಹೂದ್ಯ ದೇಶಭ್ರಷ್ಟರ ಮಧ್ಯೆ ಸೇವಾನಿರತನಾಗಿದ್ದನೆಂದು ಭಾವಿಸಲು ಎಜೆಕಿಯೆಲನ ಗ್ರಂಥವೇ ಆಧಾರ. ಪ್ರ.ಶ.ಪೂ. 587ಕ್ಕೆ ಮುಂಚಿತವಾಗಿ ಲೆಸ್ಟೈನಿನಲ್ಲಿದ್ದು ಅನಂತರ ಬ್ಯಾಬಿಲೋನಿಯಕ್ಕೆ ಈತ ಹೋಗಿದ್ದಿರಬಹುದೆಂಬ ವಾದವೂ ಇದೆ.

ಎಜೆಕಿಯೆಲನ ಬೋಧನೆ–ಸಾಧನೆಗಳನ್ನು ಪರಿಭಾವಿಸಿದಾಗ ಆತ ಪ್ರಭಾವಶಾಲಿ ವ್ಯಕ್ತಿತ್ವವುಳ್ಳವನಾಗಿದ್ದಿರಬೇಕೆಂದು ತೀರ್ಮಾನಿಸಬಹುದು. ಅವನದು ಯಾಜಕವೃತ್ತಿ. ದೇವಾಲಯದಲ್ಲಿ ಅವನಿಗೆ ಹೆಚ್ಚಿನ ಆಸಕ್ತಿ. ಗ್ರಂಥದ ತುಂಬ ದೇವಾಲಯವನ್ನು ಕುರಿತ ಉಲ್ಲೇಖಗಳಿವೆ, ಸಂದೇಶಗಳಿವೆ. ಪುರೋಹಿತನಾಗಿದ್ದುದರಿಂದ ನ್ಯಾಯ ನೀತಿಗಳ ಪರಿಪಾಲನೆಯಲ್ಲಿ ಈತ ತುಂಬ ಎಚ್ಚರ ವಹಿಸುತ್ತಿದ್ದ. ಎಜೆಕಿಯೆಲ್ ದಾರ್ಶನಿಕನೂ ಆಗಿದ್ದ. ಅನೇಕ ಕಡೆ ಇವನ ಭವಿಷ್ಯದರ್ಶನಕ್ಕೆ ಉದಾಹರಣೆಗಳಿವೆ. ಮಾಡಿದ ಅನಾಚಾರಕ್ಕಾಗಿ ಜೂಡಳಿಗೆ ಒದಗಿದ ಕಷ್ಟಗಳು, ಜೆರೂಸಲೆಂ ಆಕ್ರಮಣ, ಪತನ, ನವ ಜೆರೂಸಲೆಂನ ಕನಸು–ಇವು ಈ ಗ್ರಂಥದಲ್ಲಿ ವರ್ಣಿತವಾಗಿವೆ. ಸಚಿತ್ರ ಕಲ್ಪನಾವಿಲಾಸ ಹೇರಳವಾಗಿದ್ದರೂ ಈತನ ಶೈಲಿಯಲ್ಲಿ ವೈವಿಧ್ಯವಿಲ್ಲ. ಅದು ನೀರಸವಾಗಿದೆ, ಸತ್ತ್ವಹೀನವಾಗಿದೆ. ದೈವಿಕ ರಹಸ್ಯಗಳನ್ನು ಕುರಿತು ವಿಸ್ಮಯವನ್ನಷ್ಟೆ ಉಂಟುಮಾಡುವಂತಿದೆ. ಅದುವರೆಗೆ ಯೆಹೂದ್ಯರಲ್ಲಿ ಜನಜನಿತವಾಗಿದ್ದ ಸಾಮೂಹಿಕ ಪ್ರತಿಫಲದ ತತ್ತ್ವವನ್ನು (ಕಲೆಕ್ಟಿವ್ ರಿಟ್ರಿಬ್ಯೂಷನ್) ಎಜೆಕಿಯೆಲ್ ಒಪ್ಪುವುದಿಲ್ಲ. ವ್ಯಕ್ತಿ ತನ್ನ ಪಾಪಪುಣ್ಯಕ್ಕನುಗುಣವಾಗಿ ಪ್ರತಿಫಲ ಪಡೆಯುತ್ತಾನಲ್ಲದೆ ರಾಷ್ಟ್ರದ ಪಾಪಪುಣ್ಯಕ್ಕನುಗುಣವಾಗಿ ಅಲ್ಲ ಎಂದು ಸಾರಿದ. ಇವನು ಜೆರಿಮ್ಯೆಯನ ಬೋಧನೆಯಿಂದ ಪ್ರಭಾವಿತನಾಗಿದ್ದಂತೆ ತೋರುತ್ತದೆ. (ಡಿ.ವಿ.ವಿ.)

**ಎಜ್‌ವರ್ತ್ ಮರೈಯ:** 1767–1849. ಇಂಗ್ಲಿಷ್ ಕಾದಂಬರಿಕಾರ್ತಿಯರಲ್ಲಿ ಒಬ್ಬಳು. ಶಿಕ್ಷಣವೇತ್ತ, ಪರಿಶೋಧಕ ರಿಚರ್ಡ್ ಲೊವೆಲನ ಹಿರಿಯ ಮಗಳು. ಹುಟ್ಟಿದ್ದ ಬ್ಲ್ಯಾಕ್ ಬರ್ಟನ್‌ನಲ್ಲಿ. ಎಳೆಯ ವಯಸ್ಸಿನಿಂದಲೂ ಕಥೆ ಹೇಳುವಲ್ಲಿ ನಿಪುಣೆ ಎನಿಸಿದ್ದಳು. ತಂದೆಯೊಡನೆ ಸಹಕರಿಸಿ ಪ್ರ್ಯಾಕ್ಟಿಕಲ್ ಎಜ್ಯುಕೇಷನ್ (1798), ಎಸ್ಸೇ ಆನ್ ಐರಿಷ್ ಬುಲ್ಸ್ (1802) ಎಂಬ ಕೃತಿಗಳನ್ನು ರಚಿಸಿದಳು. ಈಕೆಯ ಎಲ್ಲ ಸ್ವಂತ ಕೃತಿಗಳಿಗೂ ತಂದೆಯಿಂದ ಸ್ಫೂರ್ತಿ ದೊರಕಿತು. 1795ರಿಂದ 1847ರವರೆಗಿನ ಕಾಲದಲ್ಲಿ ಈಕೆ ಬರೆದ ಗ್ರಂಥಗಳು 20 ಸಂಪುಟಗಳಷ್ಟಾಗುತ್ತವೆ. ಟೇಲ್ಸ್ ಫ್ರಮ್ ಫ್ಯಾಷನಬಲ್ ಲೈಫ್ ಮತ್ತು ಹ್ಯಾರಿಂಗ್ಟನ್‌ಗಳಲ್ಲದೆ ಅವರ ಐರಿಷ್ ಉದ್ಘಕೃತಿಗಳೆಂದರೆ ಕ್ಯಾಸೆಲ್ ರ್‍ಯಾಕ್ರೆಂಟ್ (1800), ದಿ ಆ್ಯಬ್ಸೆಂಟೀ (1812) ಮತ್ತು ಆರ್ಮಾಂಡ್ (1817). ಈಕೆಯ ಬರೆಹಗಳು ತುಂಬ ಉಪದೇಶಾತ್ಮಕವಾಗಿ ಕಂಡರೂ ನುಡಿ ಜಾಣ್ಮೆ, ತೀವ್ರ ಸುಖದುಃಖಗಳು, ಸಜೀವ ಸಂಭಾಷಣೆಗಳು, ನೇರ ಹಾಗೂ ಸುಲಭ ಶೈಲಿ, ಕಳೆಕಳೆಯಾದ ಸಹಜತೆ, ಆ ಕಾಲದ ನೈಜ ಚಿತ್ರಣ–ಇವುಗಳಿಂದಾಗಿ ಇಂದಿಗೂ ವ್ಯಾಸಂಗಯೋಗ್ಯವಾಗಿವೆ. ದಿ ಮೆಮಾಯಿರ್ಸ್ ಆಫ್ ರಿಚರ್ಡ್ ಲೊವೆಲ್ ಎಂಬುದು 1782ರ ವರೆಗಿನ ಈಕೆಯ ಆತ್ಮಕಥೆಯಾಗಿದೆ. ಈಕೆ ಮಕ್ಕಳಿಗಾಗಿ ಮಾರಲ್ ಟೇಲ್ಸ್ (1801), ಪಾಪ್ಯುಲರ್ ಟೇಲ್ಸ್ (1804), ಫ್ರ್ಯಾಂಕ್ (1822), ಹ್ಯಾರಿ ಅಂಡ್ ಲೂಸಿ (1825) ಮುಂತಾದ ಒಳ್ಳೆಯ ಪುಸ್ತಕಗಳನ್ನು ಬರೆದಿದ್ದಾಳೆ. (ಎಚ್.ವಿ.ಎಸ್.)

**ಎಟ್ಟುತ್ತೊಕ್ಕೈ:** ಪ್ರಾಚೀನ ತಮಿಳು ಸಾಹಿತ್ಯದ ಎಂಟು ಸಂಕಲನಗ್ರಂಥಗಳ ಸಾಮೂಹಿಕ ಹೆಸರು. ಹಲವಾರು ಕವಿಗಳ ಕೃತಿಗಳನ್ನು ಒರೆಹಚ್ಚಿ ಉತ್ತಮವಾದ ಕವನಗಳ ಸಂಗ್ರಹಗಳನ್ನು ಸಿದ್ಧಪಡಿಸುವ ರೂಢಿ ತಮಿಳುಸಾಹಿತ್ಯದ ಒಂದು ವೈಶಿಷ್ಟ್ಯ. ಇಂಥ ಎಂಟು ಕವಿತಾ ಸಂಗ್ರಹಗಳು ದೊರೆತಿವೆ. ಒಟ್ಟಾಗಿ ಅವುಗಳಿಗೆ ಎಟ್ಟು (ಎಂಟು) ತ್ತೊಕ್ಕೈ (ಸಂಗ್ರಹ) ಎಂದು ಹೆಸರು: 1 ನಟ್ರಿಣ್ಣೈ 2 ಕುರುಂತೊಕ್ಕೈ 3 ಐಂಕುರುನೂರು 4 ಪದಿಟ್ರುಪ್ಪತ್ತು 5 ಪರಿಪಾಡಲ್ 6 ಕಲಿತ್ತೊಕ್ಕೈ 7 ಅಹನಾನೂರು 8 ಪುರನಾನೂರು.

ಆಗಿನ ಕಾಲದ ಚರಿತ್ರೆ, ಸಾಮಾಜಿಕ ಸ್ಥಿತಿಗತಿ, ಯುದ್ಧಪ್ರಣಾಲಿ, ಉದ್ಯೋಗ, ವ್ಯಾಪಾರ, ಆರ್ಥಿಕ ಪ್ರಗತಿ, ಜನಜೀವನ, ಪ್ರಣಯ, ದಾಂಪತ್ಯ–ಇವುಗಳ ರೀತಿ ನೀತಿ ಮುಂತಾದವುಗಳನ್ನು ತಿಳಿಯಲು ಈ ಸಂಕಲನಗಳು ಸಹಾಯಕವಾಗಿವೆ. ಪದಿಟ್ರುಪ್ಪತ್ತು ಮತ್ತು ಪುರನಾನೂರು ಇವೆರಡೂ ಪುರಂ ವರ್ಗಕ್ಕೆ ಸೇರಿದ ಸಾಹಿತ್ಯ; ಅಂದರೆ ರಾಜ್ಯಾಡಳಿತ, ಯುದ್ಧ, ಧನಕನಕಾದಿ ಪಾಪಪುಣ್ಯಕಾರ್ಯ, ದಾನಧರ್ಮ ಮುಂತಾದ ವಿಷಯಗಳನ್ನು ಕುರಿತದ್ದು. ಉಳಿದ ಗ್ರಂಥಗಳು ಅಹಂ ವರ್ಗಕ್ಕೆ ಸೇರಿದ ಸಾಹಿತ್ಯ; ಅಂದರೆ ಹೃದಯದ ಭಾವಗಳು, ಸ್ತ್ರೀ–ಪುರುಷರ ಪ್ರೇಮ, ಅವರ ಪರಸ್ಪರ ಪ್ರೀತಿ, ಮಾತುಕತೆ, ಲಲ್ಲೆ, ವಿಯೋಗ, ವಿವಾಹ, ದಾಂಪತ್ಯಜೀವನ ಮುಂತಾದವನ್ನು ವರ್ಣಿಸುವುದು.

**ನಟ್ರಿಣ್ಣೈ:** ಇದರಲ್ಲಿ 192 ಕವಿಗಳ ಕವನಗಳು ಸೇರಿವೆ. ಅಹವಲ್ ಛಂದಸ್ಸಿನಲ್ಲಿ 8 ಪಂಕ್ತಿಗಳಿಂದ 12 ಪಂಕ್ತಿಗಳವರೆಗಿನ ಉದ್ದವುಳ್ಳ 400 ಭಾವಗೀತೆಗಳ ವಿಶೇಷ ಗುಣ. ಪ್ರಾಚೀನ ತಮಿಳರ ಜೀವನದ ನಸುನೋಟ ಈ ಕವನಗಳಿಂದ ದೊರೆಯುವುದು. ಪಾಂಡ್ಯ ರಾಜನಾದ ಮಾರನ್‌ವಳುದಿ ಎಂಬವನ ಆದೇಶದಿಂದ ಈ ಗ್ರಂಥದ ಸಂಕಲನೆಯಾಯಿತು.

**ಕುರುಂತೊಕ್ಕೈ:** ಇದು ಕಿರುಗವನಗಳ ಸಂಗ್ರಹ. 204 ಕವಿಗಳ ರಚನೆಯಿಂದ ಆಯ್ದು ತೆಗೆದ 402 ಭಾವಗೀತೆಗಳು ಇದರಲ್ಲಿ ಸೇರಿವೆ. ಎಲ್ಲ ಹಾಡುಗಳೂ ಅಹವಲ್ ಛಂದಸ್ಸಿನಲ್ಲಿವೆ. ಉದ್ದ 4 ರಿಂದ 8 ಪಂಕ್ತಿಗಳಷ್ಟು, ಪ್ರೇಮದ ಮತ್ತು ನಲ್ಲ–ನಲ್ಲೆಯರ ಒಲುಮೆಗಳ ಮನಮೋಹಕವಾದ ವರ್ಣನೆಗಳು ಇದರಲ್ಲಿ ದೊರೆಯುತ್ತವೆ. ಪಾರಿಕ್ಕೋ ಎಂಬ ಕವಿ ಈ ಸಂಗ್ರಹವನ್ನು ಸಿದ್ಧಗೊಳಿಸಿದ.

**ಐಂಕುರುನೂರು:** ಇದರಲ್ಲಿ 500 ಕಿರಿಯ ಭಾವಗೀತೆಗಳು ಅಂದರೆ 3 ರಿಂದ 6 ಪಂಕ್ತಿಗಳ ಉದ್ದದ ಚುಟುಕ ಗೀತೆಗಳು ಸೇರಿವೆ. ಕೂಡಲೂರ್ ಕಿಳಾರ್ ಎಂಬ ಕವಿ ಇದರ ಸಂಗ್ರಹಕಾರ.

ಕುರುಂಚಿ (ಮಲೆನಾಡು), ಮರುದಂ (ಬಯಲು, ಮೈದಾನ ಅಥವಾ ಬೆಳವಲು ಸೀಮೆ), ನೆಯ್ದಲ್ (ಕರಾವಳಿ), ಮುಲ್ಲೈ (ಕಾಡು), ಮತ್ತು ಪಾಲೈ (ಮರಳುಗಾಡು)–ಪ್ರಾಚೀನ ತಮಿಳುನಾಡಿನ ಈ ಬಗೆಯ ಭೌಗೋಳಿಕ ವಿಭಾಗಗಳನ್ನು (ತಿಣೈ) ಪ್ರೇಮದ ಪ್ರತಿ ಸ್ಥಿತಿಗೂ ಹೊಂದಿಕೆಯಾಗುವಂತೆ ಇಲ್ಲಿ ಮಾಡಲಾಗಿದೆ. ಹೇಗೆಂದರೆ, ನಲ್ಲ–ನಲ್ಲೆಯರ ಸಂದರ್ಶನ ಮತ್ತು ಸಂಗಮವೇ ಕುರುಂಚಿ. ಇನಿಯಳ ಮುನಿಸು–ಮರುದಂ, ತನ್ನ ಪ್ರಿಯನ ಅಗಲಿಕೆಯಿಂದ ಕೊರಗುವುದು–ನೆಯ್ದಲ್. ಯುದ್ಧ ಅಥವಾ ಬೇರೆ ಕೆಲಸದ ಮೇಲೆ ಪರಸ್ಥಳಕ್ಕೆ ತೆರಳಿದ ತನ್ನ ಗಂಡನ ಬರವಿಗಾಗಿ ಕಾದಿರುವಿಕೆ–ಮುಲ್ಲೈ. ಪ್ರೇಮಿಗಳ ಅಗಲಿಕೆ ಅಥವಾ ವಿಯೋಗ–ಪಾಲೈ. (ಸಾಮಾನ್ಯವಾಗಿ ಅಗಲಿಕೆಯನ್ನು ಎಲ್ಲ ತಿಣೈಗಳಿಗೂ ಹೊಂದಿಸುವುದುಂಟು). ಒಬ್ಬೊಬ್ಬ ಕವಿ ಒಂದೊಂದು ತಿಣೈಗೆ ಸಂಬಂಧಿಸಿದ 100 ಗೀತೆಗಳನ್ನು ರಚಿಸಿದ್ದಾನೆ. ಚುಟುಕದ ಗೀತೆಗಳಾಗಿದ್ದರೂ ಇವುಗಳ ಶೈಲಿ, ಅಲಂಕಾರ ಮತ್ತು ಭಾವಗಳು ಅಸದೃಶವಾಗಿವೆ.

**ಪದಿಟ್ರುಪ್ಪತ್ತು:** ಇದರಲ್ಲಿ ಪುರಂ ವರ್ಗಕ್ಕೆ ಸೇರಿದ ಹತ್ತು ಹಾಡುಗಳಿವೆ. ಹತ್ತು ಕವಿಗಳು ಒಬ್ಬೊಬ್ಬರೂ ಬೇರೆ ಬೇರೆ ಚೇರರಸರನ್ನು ಕುರಿತು ಹಾಡಿದ ಹತ್ತು ಹಾಡುಗಳು ಈ ಸಂಗ್ರಹದಲ್ಲಿವೆ. ಇವುಗಳ ಪೈಕಿ ಮೊದಲ ಹತ್ತು ಹಾಡುಗಳು ಅಪ್ರಾಪ್ಯ. ತಮಿಳು ಸಂಘ ಕಾಲದಲ್ಲಿನ ಚೇರನಾಡು ಮತ್ತು ಚೇರರಾಜರುಗಳ ವಿಷಯವಾಗಿ ಅನೇಕ ಅಮೂಲ್ಯ ಐತಿಹಾಸಿಕ ಸಾಮಗ್ರಿಗಳು ಈ ಸಂಕಲನದಿಂದ ದೊರೆಯುತ್ತವೆ.

**ಪರಿಪಾಡಲ್:** ಈ ಸಂಗ್ರಹದಲ್ಲಿ ಪರಿಪಾಡಲ್ ಎಂಬ ಛಂದಸ್ಸಿನಲ್ಲಿ ರಚಿತವಾದ 70 ಹಾಡುಗಳಿವೆ. ಆದರೆ ಇವುಗಳಲ್ಲಿ 22 ಮಾತ್ರ ಪೂರ್ತಿ ದೊರೆತಿವೆ. ವಿಷ್ಣುವಿನ ಸ್ತುತಿಯಾಗಿ 6, ಮುರುಗನ ಸ್ತುತಿಯಾಗಿ 8, ವೈಗೈ ನದಿಯನ್ನು ಕುರಿತಂತೆ 8 ಹಾಡುಗಳು ಇವೆ. ಸ್ವರಪ್ರಸ್ತಾರಹಾಕಿ ಇವನ್ನು ಸಂಗೀತಕ್ಕೆ ಅನುಗೊಳಿಸಲಾಗಿದೆ.

**ಕಲಿತ್ತೊಕ್ಕೈ:** ಬೇರೆ ಬೇರೆ ಐದು ಕವಿಗಳ ರಚನೆಗಳಿಂದ ಆಯ್ದು ತೆಗೆದ 150 ಹಾಡುಗಳು ಈ ಸಂಗ್ರಹದಲ್ಲಿವೆ. ಎಲ್ಲ ಹಾಡುಗಳೂ ಕಲಿ ಛಂದಸ್ಸಿನಲ್ಲಿವೆ; ಅದರಿಂದಲೇ ಈ ಸಂಗ್ರಹಕ್ಕೆ ಈ ಹೆಸರು ಬಂದಿದ್ದು. ಕುರುಂಚಿ ತಿಣೈ, ಮರುದಂ, ನೆಯ್ದಲ್, ಮುಲ್ಲೈತಿಣೈ ಮತ್ತು ಪಾಲೈ ರಚನೆಗಳಿಂದ ಆಯ್ದವು ಈ ಸಂಕಲನದಲ್ಲಿರುವ ಹಾಡುಗಳು. ಇದರಲ್ಲಿ ಬರುವ ಪ್ರೇಮಗೀತೆಗಳು ಕಿವಿಗೆ ಇಂಪಾಗಿರುವುದಲ್ಲದೆ, ಪ್ರಾಕೃತಿಕ ದೃಶ್ಯಗಳ ವರ್ಣನೆ ಬಲು ಸುಂದರವಾಗಿಯೂ ಸಾರಗರ್ಭಿತವಾಗಿಯೂ ಅರ್ಥಪುಷ್ಟಿಯುಳ್ಳದ್ದಾಗಿಯೂ ಸಮೀಚೀನ ಉಪಮೆ, ರೂಪಕಗಳಿಂದ ಕೂಡಿದ್ದಾಗಿಯೂ ಇದ್ದು ಕಾವ್ಯರಸವನ್ನು ಸೂಸುತ್ತಿವೆ.

**ಅಹನಾನೂರು:** ಪ್ರಣಯಸಂಬಂಧವಾದ 400 ಹಾಡುಗಳು ಈ ಸಂಗ್ರಹದಲ್ಲಿವೆ. ಇದರಲ್ಲಿನ ಗೀತೆಗಳು 13 ರಿಂದ 31 ಪಂಕ್ತಿಗಳಷ್ಟು ಉದ್ದವಾಗಿವೆ. ಇವನ್ನು 154 ಕವಿಗಳ ರಚನೆಗಳಿಂದ ಸಂಕಲನ ಮಾಡಲಾಗಿದೆ. ಈ ಗ್ರಂಥದಲ್ಲಿನ 400 ಹಾಡುಗಳನ್ನೂ ಮೂರು ಖಂಡಗಳಾಗಿ ವಿಂಗಡಿಸಿರುವರು. ಮೊದಲ 120 ಹಾಡುಗಳ ಪರಿಚ್ಛೇದಕ್ಕೆ ಕಳಿಟ್ರಿಯಾನೈ ನಿರೈ ಎಂದು (ಗಂಡಾನೆಗಳ ಓರಣ) ಹೆಸರು. 121 ರಿಂದ 300 ರವರೆಗಿನ ಹಾಡುಗಳ ಪರಿಚ್ಛೇದಕ್ಕೆ ಮಣಿಮಿಡೈಪವಳಂ ಎಂದು (ಮಣಿಗಳನ್ನೆಡೆಯಿರಿಸಿದ ಹವಳದ ಸರ) ಹೆಸರು. ಕೊನೆಯ ನೂರು ಹಾಡುಗಳ ಪರಿಚ್ಛೇದಕ್ಕೆ ನಿತ್ತಿಲಕ್ಕೋವೈ (ಮುತ್ತಿನ ಹಾರ) ಎಂದು ಹೆಸರು.

ಉಕ್ಕಿರಪ್ಪೆರುವಳುದಿ ಎಂಬ ಅರಸನ ಸಲಹೆಯ ಮೇರೆಗೆ ರುದ್ರಶರ್ಮನೆಂಬ ಕವಿ ಈ ಸಂಗ್ರಹವನ್ನು ಅನುಗೊಳಿಸಿದ. ಈ ಹಾಡುಗಳಲ್ಲಿ ಅಚ್ಚುಮೆಚ್ಚಿನ ಪ್ರಕೃತಿ ವರ್ಣನೆ, ರುಚಿಕಟ್ಟಾದ ಉಪಮೆಗಳು, ಭಾವಪೂರಿತ ವಿಚಾರಗಳು, ಮಾತಿನ ನಯ– ಎಲ್ಲವೂ ತುಂಬಿವೆ. ಇತಿಹಾಸ ಸಂಬಂಧವಾದ ಪ್ರಾಸ್ತಾವಿಕ ಸೂಚನೆಗಳೂ ಅಲ್ಲಲ್ಲಿ ದೊರೆಯುತ್ತವೆ. ಉದಾಹರಣೆಗೆ, ಒಂದು ಹಾಡಿನ ಭಾಷಾಂತರ ಹೀಗಿದೆ: "ಧರ್ಮದ ಹಾದಿ ತಪ್ಪದ ಬಾಳು, ಎಂದೂ ಪರರ ಬಳಿ ಸಾರದ ಭಾಗ್ಯ ಇವೆರಡೂ ಧನದಿಂದೊದಗುವುದು, ರನ್ನೆ"–ಅನ್ನುತ ಎಮ್ಮ ಕರಿಯ ಐಗಾಲಹೆರಳನ್ನು ಸವರಿದವರ ಅಗಲಿಕೆಯಿಂದ ನಾವು ತಾಪಪಟ್ಟರೂ ತಮ್ಮ ಕರ್ತವ್ಯವನ್ನವರು ಪಾಲಿಸಲಿ ! ಗೆಳತಿ ! ಇದನ್ನು ಪಾಲೈಪಾಡಿಯ ಪೆರುಂಕಡುಂಗೋ ಎಂಬ ಕವಿ ಹಾಡಿದ್ದಾನೆ.

**ಪುರನಾನೂರು:** ಅಹವಲ್ ಛಂದಸ್ಸಿನಲ್ಲಿ ಬೇರೆ ಬೇರೆ 150 ಕವಿಗಳು ಬರೆದ 400 ಕವನಗಳು ಈ ಸಂಗ್ರಹದಲ್ಲಿವೆ. ತಮಿಳುನಾಡಿನ ಪ್ರಾಚೀನ ಅರಸರು, ಮಂತ್ರಿಗಳು, ದಂಡನಾಯಕರು, ಪಾಳೆಯಗಾರರು, ವೀರಕಲಿಗಳು–ಇವರನ್ನು ಕುರಿತ ಅನೇಕ ವಿಷಯಗಳನ್ನು ಈ ಕವನಗಳಲ್ಲಿ ಪ್ರಸ್ತಾಪಿಸಲಾಗಿದೆ. ಆಗಿನ ನಾಗರಿಕತೆ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ, ಆಳ್ವಿಕೆ, ಕವಿಗಳ ಗೌರವಾನ್ವಿತಸ್ಥಾನ ಇವನ್ನು ತೋರಿಸುವ ಕೈಗನ್ನಡಿಯಂತಿವೆ, ಈ ಹಾಡುಗಳು. ಕಣಿಯನ್ ಪೂಂಗುನ್ರನಾರ್ ಎಂಬ ಕವಿಯ ಕೃತಿಯೊಂದರ ಭಾಷಾಂತರ ಹೀಗಿದೆ : ಯಾವುದೂ ಊರೇ ಯಾವರೂ ಕೆಳೆಯರೇ; ಕೇಡುಂನಲ್ಮೆಯುಂ ಪರರೀಯೇ ಬಾರ; ನೋವು– ತಣ್ಪು ಎಂಬವು ಅಂತೇ ತೆರದವು; ಸಾಯುವುದೂ ಹೊಸತಲ್ಲ; ಬಾಳುವುದು ಸವಿಯೆನೆ ನಲಿಯುತುಮಿಲ್ಲ; ಮುನಿಸಿನಿಂ ಕರಕಷ್ಟವೆಂದೂ ಅನ್ನೆವು; ಮಿಂಚಿನೊಂದಿಗೆ ಬಾಂದಳದಿಂ ತಣ್ಬನಿಗರೆದು ಸಂತತಂ ಬಂಡೆಯನ್ನಪ್ಪಳಿಸಿ ಭೋರ್ಗರೆವ ನೆರೆಹೆಬ್ಬೊಳೆಯ

ನೀರ್ಬಟ್ಟಿಯೊಳ್ ಪೋಪ ತೆಪ್ಪವಂ ಪೋಲ್ಗುಂ ಹರಣಂ ವಿಧಿದೂಡೆ ಹರಿವುದೆನೆ ಸುಜ್ಞಾನಿಗಳ ಉಪದೇಶಗಳಿಂ ಮನಗಂಡೆಮಾಡೊಡೆ ಗಣ್ಯರಾದ ಹಿರಿಯರನ್ನು ಮೆಚ್ಚುವುದೂ ಇಲ್ಲ ಕಿರಿಯವರನ್ನು ತೆಗಳುವುದು ಸುತರಾಂ ಇಲ್ಲ.

ಸಂಗ್ರಹದ ಈ ಎಂಟು ಗ್ರಂಥಗಳಿಗೂ ಕವನಗಳನ್ನು ನೀಡಿರುವ ಕವಿಗಳ ಸಂಖ್ಯೆ ಸುಮಾರು 740. ಇವರಲ್ಲಿ ಹಲವಾರು ಅರಸು ಮನೆತನಕ್ಕೆ ಸೇರಿದವರು, ಕೆಲವರು ಮಹಿಳೆಯರು. ಇದರಿಂದ ಆಗಿನ ಕಾಲದಲ್ಲಿ ಸಾಹಿತ್ಯದ ಬಗ್ಗೆ ಅಭಿರುಚಿ ಹೇಗಿತ್ತು, ಕವಿಗಳ ಸ್ಥಾನಮಾನ ಏನಿತ್ತು ಎಂಬುದು ಚೆನ್ನಾಗಿ ಗೊತ್ತಾಗುತ್ತದೆ. ತಮಿಳು ಸಾಹಿತ್ಯದ ಪ್ರಾಚೀನತೆ ಮತ್ತು ಸಮೃದ್ಧಿ ನಿಜವಾಗಿಯೂ ಬೆರಗುಗೊಳಿಸುವಂಥದು. (ಎಂ.ವಿ.ಜೆ.)

**ಎಟ್ನ:** ಸಿಸಿಲಿಯ ಪೂರ್ವ ತೀರದಲ್ಲಿರುವ ಪ್ರಸಿದ್ಧ ಜೀವಂತ ಅಗ್ನಿಪರ್ವತ. ಮೊಂಗಿಬೆಲ್ಲೊ ಸ್ಥಳೀಯ ಹೆಸರು. ಸು.1165ಕಿ.ಮೀ. ಹರಡಿದೆ. ಇದು ಸುತ್ತಲೂ ಉಗುಳಿದ ಲಾವಾ ಮತ್ತು ಬೂದಿ ಅನೇಕ ಕಡೆ ಫಲವತ್ತಾದ ಮಣ್ಣಾಗಿ ರೂಪಾಂತರಗೊಂಡಿದೆ. ನಿಯತವಲ್ಲದಿದ್ದರೂ ಇದರ ಆಕಾರ 40ಕಿಮೀ ವ್ಯಾಸದ ಒಂದು ಶಂಕುವಿನಂತಿದೆ. ಬುಡ ದೀರ್ಘವೃತ್ತಾಕಾರವಾಗಿದೆ. ಇಳಿಜಾರಿನಲ್ಲಿ ಅನೇಕ (ಸು. 260) ಚಿಕ್ಕ ಚಿಕ್ಕ ಶಂಕುವಿನಾಕಾರದ ಗುಡ್ಡಗಳು ಎದ್ದಿವೆ. ಮೂಲ ಶಿಖರ ಸು.3260ಮೀ ಎತ್ತರ. ಇದರ ಆಕಾರ ಎತ್ತರಗಳು ಆಗಿಂದಾಗ್ಗೆ ಆಗುವ ಸಿಡಿತಗಳಿಂದಾಗಿ ಸತತವಾಗಿ ಬದಲಾಗುತ್ತಿರುತ್ತದೆ. 2940ಮೀ ಎತ್ತರದಲ್ಲಿ ಒಂದು ವೀಕ್ಷಣಾಲಯವನ್ನು ಸ್ಥಾಪಿಸಲಾಗಿದೆ (1887). ಸುತ್ತಲಿನ ಪ್ರದೇಶದಲ್ಲಿ ಶೀತೋಷ್ಣ ವಾಯುಗುಣವಿದ್ದು ಫಲವತ್ತಾಗಿದೆ. ಇದನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು: (i) ತೀರದಿಂದ 460ಮೀ ವರೆಗಿನ ಪ್ರದೇಶ: ಇಲ್ಲಿ ಬಾಳೆ, ಕಬ್ಬು, ಅಂಜೂರ, ಕಿತ್ತಳೆ ಪ್ರಮುಖ ಬೆಳೆ. (ii) 2940ಮೀ ವರೆಗಿನ ಪ್ರದೇಶ: ದ್ರಾಕ್ಷಿ, ಆಲಿವ್ ಇಲ್ಲಿನ ಬೆಳೆಗಳು. ಈ ಎರಡು ಪ್ರದೇಶಗಳಲ್ಲಿ ಅಧಿಕ ಜನಸಾಂದ್ರತೆಯಿದೆ. (iii) 1830ಮೀ ವರೆಗಿನ ಪ್ರದೇಶ: ಓಕ್, ಪೈನ್ ಮರಗಳಲ್ಲದೆ ಬಾರ್ಲಿ, ಮುಸುಕಿನ ಜೋಳವನ್ನು ಬೆಳೆಯುತ್ತಾರೆ. (iv) 1830ಮೀ ಮೀರಿದ ಪ್ರದೇಶ: ವರ್ಷವೆಲ್ಲ ಹಿಮಾಚ್ಛಾದಿತವಾಗಿರುವುದರಿಂದ ಉಪಯುಕ್ತವಾದ ಬೆಳೆ ಇಲ್ಲ.

ಐತಿಹಾಸಿಕವಾಗಿ ಇಲ್ಲಿಯ ವರೆಗೆ ಸು.150ಕ್ಕೂ ಹೆಚ್ಚು ಸಿಡಿತಗಳನ್ನು ಗುರುತಿಸಲಾಗಿದೆ. ಪ್ರ.ಶ.ಪೂ. 475ರ ಸಿಡಿತ ಈವರೆಗೆ ಗೊತ್ತಾದುವುಗಳಲ್ಲಿ ಮೊದಲಿನದು. 17, 18, 19ನೆಯ ಶಮಾನದಲ್ಲಿ ಸರಾಸರಿ 20–25 ಸಿಡಿತಗಳಾದುವು; ಇವುಗಳ ಅಂತರ 4 ರಿಂದ 5 ವರ್ಷಗಳು. ಅನಂತರದ ಸಿಡಿತಗಳ ಅಂತರ 7–8 ವರ್ಷಗಳು. 1069, 1669ರ ಸಿಡಿತಗಳಿಂದ ಅಪಾರ ಹಾನಿ ಆಯಿತು. 1669ರಲ್ಲಾದ ಸಿಡಿತದಿಂದಾಗಿ ಕಾಟಾನಿಯ ಪಟ್ಟಣದ ಬಹುಪಾಲು ನಾಶವಾಯಿತು. *

**ಎಡ:** ಪ್ರಾಚೀನ ಸ್ಕ್ಯಾಂಡಿನೇವಿಯದ ಪುರಾಣ, ಪುಣ್ಯಕಥೆ, ಪುರಾತನದ ಚರಿತ್ರೆ ಮತ್ತು ಕಾವ್ಯಲಕ್ಷಣಶಾಸ್ತ್ರಗಳನ್ನೊಳಗೊಂಡ ಎರಡು ಹಿರಿಯ ಗ್ರಂಥಗಳು. ಒಂದಕ್ಕೆ ಕಿರಿಯ ಅಥವಾ ಗದ್ಯ ಎಡ ಎಂದೂ ಇನ್ನೊಂದಕ್ಕೆ ಹಿರಿಯ ಅಥವಾ ಕಾವ್ಯ ಎಡ ಎಂದೂ ಹೆಸರು. ಇವು ಐಸ್ಲೆಂಡಿನಲ್ಲಿ ಸುಮಾರು 13ನೆಯ ಶತಮಾನದಲ್ಲಿ ರಚಿತವಾದುವೆಂದು ತಿಳಿದುಬಂದಿದೆ.

ಗದ್ಯ ಎಡ ಐಸ್ಲೆಂಡಿನ ಒಬ್ಬ ಮುಖ್ಯಸ್ಥ ಸ್ನೋರಿ ಸ್ಟ್ಯುರ್ಲ್ಯೂಸನ್‌ನ (1179–1241) ರಚನೆ. 14ನೆಯ ಶತಮಾನದ ಆದಿಯಲ್ಲಿ ದೊರೆತ ಇದರ ಹಸ್ತಪ್ರತಿಯನ್ನು ಸ್ವೀಡನ್ನಿನ ಉಪ್ಸಾಲ ವಿಶ್ವವಿದ್ಯಾನಿಲಯದ ಗ್ರಂಥಾಗಾರದಲ್ಲಿ ರಕ್ಷಿಸಿಟ್ಟಿದ್ದಾರೆ.

ಪುರಾತನಕಥೆಗಳ ಸಂಗ್ರಹ ಎಂಬುದಕ್ಕಾಗಿ ಎಡ (ಐಸ್ಲೆಂಡ್ ಭಾಷೆಯಲ್ಲಿ ಮುತ್ತಜ್ಜಿ) ಎಂಬ ಹೆಸರು ಬಂದಿರಬಹುದು. ಗ್ರಂಥಕರ್ತ ಸ್ನೋರಿಯ ಊರಿನ ಹೆಸರು ಒಡ್ಡಿ ಎಂಬುದರಿಂದ ಎಡ ಬಂದಿರಲಿಕ್ಕೂ ಸಾಕು. ಆದರೆ ಹೆಚ್ಚು ಸಮಂಜಸವಾದ ವಿವರಣೆ ಇನ್ನೊಂದಿದೆ. ಊರ್ ಎಂಬ ಪದದಿಂದ ಎಡ ನಿಷ್ಪನ್ನವಾಗಿರಬೇಕು. ಈ ಮಾತಿಗೆ ಕಾವ್ಯ, ಕಾವ್ಯಮೀಮಾಂಸೆ ಎಂಬ ಅರ್ಥ ಇದೆ. ಮುಖ್ಯವಾಗಿ ಕಾವ್ಯ ಲಕ್ಷಣಶಾಸ್ತ್ರ ಎನ್ನಬಹುದಾದ ಈ ಗ್ರಂಥಕ್ಕೆ ಎಡ ಎಂಬ ಹೆಸರು ಉಚಿತವಾಗಿ ಕಾಣುತ್ತದೆ.

ಗದ್ಯ ಎಡದಲ್ಲಿ ನಾಲ್ಕು ಭಾಗಗಳಿವೆ. ಮೊದಲ ಭಾಗದಲ್ಲಿ ಹಳೆಯ ನಾರ್ಸ್ ದೇವರುಗಳ ಪುರಾಣ ಕಥೆಗಳು, ಪುರಾತನ ಗ್ರೀಕ್ ವೀರರಾದಿಯಾಗಿ ಅನೇಕ ವೀರಪುರುಷರ ವೃತ್ತಾಂತಗಳು ಇವೆ. ನಾರ್ಸ್ ಕಾವ್ಯವನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಪೌರಾಣಿಕ ಹಿನ್ನೆಲೆಯಲ್ಲಿ ಕಾವ್ಯದ ವಸ್ತುವಿನ ಜಿಜ್ಞಾಸೆ ಎರಡನೆಯ ಭಾಗದಲ್ಲಿದೆ. ಮಧ್ಯಮಯುಗದ ಅನೇಕ ಉದ್ಗ್ರಂಥಗಳಲ್ಲಿರುವಂತೆಯೇ ಇಲ್ಲೂ ನಿರೂಪಣೆಯೆಲ್ಲ ಸಂಭಾಷಣಾರೂಪದಲ್ಲಿದೆ. ದೇವರುಗಳನ್ನು ಕುರಿತ ಪ್ರಾಚೀನ ಸ್ಕ್ಯಾಂಡಿನೇವಿಯ ಪದ್ಯಗಳೇ ಇಲ್ಲಿನ ಅನೇಕ ವಿಚಾರಗಳಿಗೆ ಆಧಾರ. ಮೂರನೆಯ ಭಾಗದಲ್ಲಿ ಕಾವ್ಯದ ಉಗಮದ ಕಥೆ ಮತ್ತು ಭಾಷೆಯನ್ನು ಕುರಿತ ಚರ್ಚೆ ಇದೆ. ಸ್ಕ್ಯಾಂಡಿನೇವಿಯ ಕಾವ್ಯಭಾಷೆಯ ವಿಶಿಷ್ಟ ಲಕ್ಷಣಗಳನ್ನೂ ಅಲಂಕಾರಗಳನ್ನೂ ವಿವರಿಸಲಾಗಿದೆ. ಈ ಭಾಷೆಯ ವಿಶಿಷ್ಟತೆ ರೂಪಕ ನುಡಿಗಟ್ಟುಗಳಲ್ಲಿ ಕಾಣುತ್ತದೆ. ಐಸ್ಲೆಂಡಿನ ಮತ್ತು ಪ್ರಾಚೀನ ಕಾವ್ಯದ ಇತಿಹಾಸದ ಬಗ್ಗೆ ಬೇಕಾದಷ್ಟು ವಿಷಯ ಇದರಿಂದ ತಿಳಿಯುತ್ತದೆ. ಆಲಂಕಾರಿಕ ಪದಗಳ ವಿವರಣೆಗೆ 9 ರಿಂದ 12ನೆಯ ಶತಮಾನದವರೆಗಿನ ಹಿರಿಯ ಕವಿಗಳ ಕಾವ್ಯಗಳಿಂದ ಉದಾಹರಣೆಗಳನ್ನು ಕೊಟ್ಟಿರುವುದರಿಂದ ಕೇವಲ ಶ್ರುತಿರೂಪದಲ್ಲಿದ್ದ ಅಮೂಲ್ಯ ಕಾವ್ಯಗಳ ಭಾಗಗಳು ಲಿಖಿತವಾಗಿ ದೊರೆಯುವಂತಾಗಿವೆ. ನಾಲ್ಕನೆಯ ಭಾಗದಲ್ಲಿ ವಿವಿಧ ಬಗೆಯ ಕವನಗಳ, ಛಂದೋರೂಪಗಳು, ಒಂದೊಂದರ ವಿಶಿಷ್ಟ ಲಕ್ಷಣಗಳ ವಿವರಣೆ ಬರುತ್ತದೆ. ಪ್ರಾಚೀನ ನಾರ್ಸ್ ಕಾವ್ಯಾಭ್ಯಾಸಿಗಳಿಗೆ ಇದೊಂದು ಅಮೂಲ್ಯ ಆಕರವಾಗಿದೆ. ಕಥನ ಕಲೆಯ ಉತ್ಕೃಷ್ಟ ಮಾದರಿಗಳು ಈ ಗ್ರಂಥದಲ್ಲಿ ಸಿಗುತ್ತವಾದರೂ ಇಲ್ಲಿನ ಪುರಾಣ ವಿಷಯಗಳು ಅಷ್ಟು ಶುದ್ಧವಾಗಿಲ್ಲವೆಂದು ವಿದ್ವಾಂಸರ ಅಭಿಪ್ರಾಯ.

11–12ನೆಯ ಶತಮಾನದ ಐಸ್ಲೆಂಡ್ ಇತಿಹಾಸಕಾರ ಸೀಗ್‌ಫೂಸನ್ ಸಂಗ್ರಹಿಸಿ ಸಂಪಾದಿಸಿದ ಕೃತಿ ಎಂಬುದಕ್ಕಾಗಿ ಸೀಮುಂಡನ ಎಡ ಎಂದೂ ಕರೆಯುತ್ತಾರೆ. ಆದರೆ ಇದರ ಸಂಕಲನ ಅವನ ಕಾಲದಿಂದೀಚೆಗೆ ಆದದ್ದು. 13ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಇದರ ಹಸ್ತಪ್ರತಿ ಸಿದ್ಧವಾಯಿತು. 17ನೆಯ ಶತಮಾನದಲ್ಲಿ ಐಸ್ಲೆಂಡಿನ ಬಿಷಪ್ ಬ್ರಿನ್ಯೋಲ್ಫ್ ಸ್ವೀನ್ಸನ್ನನ ಬಳಿ ಈ ಗ್ರಂಥ ದೊರೆಯಿತು. ಈಗ ಕೋಪನ್‌ಹೇಗನ್ ರಾಯಲ್ ಗ್ರಂಥಭಂಡಾರದಲ್ಲಿ ಇದನ್ನು ರಕ್ಷಿಸಿಡಲಾಗಿದೆ. ಎರಡು ಗುಂಪುಗಳಾಗಿ ವಿಂಗಡಿಸಬಹುದಾದ ಇದರ ಪದ್ಯಗಳಲ್ಲಿ ಮೊದಲ ಗುಂಪು ಬೇರೆ ಬೇರೆ ಕಾಲಗಳಲ್ಲಿ ರಚಿತವಾದ ವಿವಿಧ ಛಂದೋರೂಪದ ಪದ್ಯಗಳನ್ನೊಳಗೊಂಡು ಪೌರಾಣಿಕ ಮತ್ತು ವೀರಯುಗದ ಕಾವ್ಯಸಂಗ್ರಹವಾಗಿದೆ. ಉತ್ತರದ ದೇವರುಗಳ ಕಥೆ, ಸೃಷ್ಟಿಯಾದಿಯಿಂದ ಜಗತ್ತಿನ ವಿಲಯದವರೆಗಿನ ವೃತ್ತಾಂತ– ಇವು ಇಲ್ಲಿನ ಕವನಗಳ ವಸ್ತು. ನೈತಿಕ ಹಾಗೂ ಧಾರ್ಮಿಕ ನೀತಿ ನಿಯಮಗಳನ್ನು ಉಪದೇಶಿಸುತ್ತ ತನ್ನ ಅತುಲ ಮಹಿಮೆಯನ್ನೂ ಮಂತ್ರ ಶಕ್ತಿಯನ್ನೂ ಓಡಿನ್ ದೇವರು ಹೇಳುತ್ತಿರುವ ಹಾಗೆ ಕೆಲವು ಪದ್ಯಗಳಿವೆ. ಹೀಗೆಯೆ ಬೇರೆ ಬೇರೆ ದೇವರುಗಳ ತತ್ತ್ವೋಪದೇಶಗಳೂ ಮಹಿಮೆಗಳೂ ವರ್ಣಿತವಾಗಿವೆ. ಎರಡನೆಯ ಗುಂಪಿನಲ್ಲಿ ಜರ್ಮ್ಯಾನಿಕ್ ಜನಾಂಗದವರ ಹಲವು ವೀರಪುರುಷರ ಕಥೆಗಳಿವೆ. ಜರ್ಮ್ಯಾನಿಕ್ ಸಾಹಿತ್ಯವೃಕ್ಷದ ಬೇರೆ ಯಾವ ಶಾಖೆಯಲ್ಲೂ ಎಡಕ್ಕಿಂತ ಬೃಹತ್ತಾದ ಕಾವ್ಯ ಇನ್ನೊಂದಿಲ್ಲ. (ಕೆ.ಬಿ.ಪಿ.)

**ಎಡಿನ್‌ಬರೊ:** ಸ್ಕಾಟ್ಲೆಂಡಿನ ಮುಖ್ಯಪಟ್ಟಣ. ಮಿಡ್‌ಲೋಥಿಯನ್ ಪ್ರದೇಶದ ಆಡಳಿತ ನಗರವೂ ಆಗಿದ್ದು ಸ್ಕಾಟ್ಲೆಂಡಿನ ಆಗ್ನೇಯ ಭಾಗದಲ್ಲಿ ಫರ್ತ್–ಆಫ್–ಫೋರ್ತ್ ತೀರಪ್ರದೇಶದಲ್ಲಿ 259ಚಕಿಮೀ. ವಿಸ್ತಾರವಾಗಿದೆ. ಗ್ಲಾಸ್ಗೋ ನಗರದ ಪೂರ್ವಕ್ಕೆ 16ಕಿಮೀ ಮತ್ತು ಲಂಡನ್‌ನಿಂದ ಉತ್ತರಕ್ಕೆ 250ಮೀ ದೂರದಲ್ಲಿದೆ. ಜನಸಂಖ್ಯೆ 486,120(2010). ಪೂರ್ವದಿಕ್ಕಿನಿಂದ ನೋಡುವಾಗ ಸಮುದ್ರ ಮಟ್ಟದಿಂದ 488ಕಿಮೀ ಅಡಿಗಳೆತ್ತರದ ಅರ್ಥರನ ಸ್ಥಾನವೆಂಬ ಗುಡ್ಡದ ಮುಂಭಾಗದಲ್ಲಿ ಕೋಟೆಯೂ ಹಳೆಯ ನಗರವೂ ಕೋಟೆಯ ಉತ್ತರಕ್ಕೆ ಜಾರ್ಜಿಯನ್ ಕಾಲದ ಹೊಸ ನಗರವೂ ಕಾಣುತ್ತದೆ.

ನೆರೆಹೊರೆಯ ಬುರ್ಡ್‌ಹೌಸಿನ ಸುಣ್ಣಕಲ್ಲು, ಹೇಯ್‌ಲ್ಸ್, ಸ್ಲೇಟ್‌ಫರ್ಡ್, ಗ್ರಾಂಪಿನ್ ಮತ್ತು ಕ್ರೇಗ್‌ಲೀತ್ ಪ್ರದೇಶಗಳ ಮರಳು ಕಲ್ಲುಗಳನ್ನು ಈ ನಗರದ ಕಟ್ಟಡಗಳಿಗೆ ಉಪಯೋಗಿಸಲಾಗಿದೆ. ಪುರಾತನ ಕಾಲದಲ್ಲಿ ಭೂಮಿಯ ಸರಿಯುವಿಕೆಯಿಂದ ಮೇಲೆದ್ದ ಹಲವಾರು ಬೆಟ್ಟಗಳೂ ಅಗ್ನಿಪರ್ವತ ಸ್ಫೋಟದಿಂದ ಹುಟ್ಟಿಕೊಂಡ ಕೆಲವು ಗುಡ್ಡಗಳೂ ನಗರದ ಪರಿಸರದಲ್ಲಿ ಕಂಡುಬರುತ್ತವೆ. ಪ್ಲಿಸ್ಟೋಸೀನ್ ಹಿಮಪ್ರವಾಹಕ್ಕೆ ಸಿಲುಕಿ ಒಡೆದು ಈ ಬೆಟ್ಟಗುಡ್ಡಗಳು ಈಗಿನ ರೂಪವನ್ನು ಪಡೆದಿವೆ.

ಸಾಹಿತ್ಯದಲ್ಲಿ ಡುನ್‌ಡಿನೆ ಎಂದೂ, ಉತ್ತರ ಅಥವಾ ಆಧುನಿಕ ಅಥೆನ್ಸ್ ಎಂದೂ ಹೆಸರಾಗಿರುವ ಈ ನಗರದಲ್ಲಿ ಉತ್ತಮ ಶೈಲಿಯ ಅನೇಕ ಭವನಗಳಿರುವುದಲ್ಲದೆ ಐತಿಹಾಸಿಕ, ಕಲಾತ್ಮಕ ಮತ್ತು ಪ್ರಾಕೃತಿಕ ವಿಶೇಷಗಳೂ ಇವೆ. 1947ರಲ್ಲಿ ಸಂಗೀತ ನೃತ್ಯ, ನಾಟಕ ಮತ್ತು ಕಲಾಪ್ರದರ್ಶನಗಳಿಗೆ ಮೀಸಲಾದ ಎಡಿನ್‌ಬರೊ ಅಂತಾರಾಷ್ಟ್ರೀಯ ಉತ್ಸವ ಪ್ರಾರಂಭವಾಯಿತು.

ಪುರಾತನ ಕಾಲದಿಂದಲೂ ಇಲ್ಲಿ ಜನವಸತಿಯಿದ್ದುದಾಗಿ ಹೇಳಲಾದರೂ ರೋಮನ್ನರ ಕಾಲದಲ್ಲೂ ಈ ನಗರದ ವಿಷಯವೇನೂ ಗೊತ್ತಾಗಿಲ್ಲ. ಪ್ರ.ಶ.6ನೆಯ ಶತಮಾನದಲ್ಲಿ ಇದರ ಉಲ್ಲೇಖವಿದೆ. 1058–93ರ ಕಾಲದಲ್ಲಿ ಆಳಿದ ಮೂರನೆಯ ಮಾಲ್ಕಾಮನ ಕಾಲದಲ್ಲಿ ಆತ ತನ್ನ ರಾಣಿ ಸಂತ ಮಾರ್ಗರೆಟಳೊಡನೆ ಇಲ್ಲಿ ವಾಸಿಸುತ್ತಿದ್ದುದಾಗಿಯೂ ಆಕೆಯ ಸ್ಮಾರಕಾರ್ಥವಾಗಿ 12ನೆಯ ಶತಮಾನದ ಆದಿಭಾಗದಲ್ಲಿ ಒಂದು ಮಂದಿರವನ್ನು ಸ್ಥಾಪಿಸಿದುದಾಗಿಯೂ ಖಚಿತವಾಗಿ ತಿಳಿದುಬಂದಿದೆ. ಆ ಸ್ಮಾರಕ ಮಂದಿರ ಈಗಲೂ ಉಳಿದು ಬಂದಿದೆ. ಮೊದಲನೆಯ ಡೇವಿಡನ ಕಾಲದಲ್ಲಿ (1124–53) ನಗರ ಅಭಿವೃದ್ಧಿಹೊಂದಿ ಹೋಲಿರೂಡ್ ಚರ್ಚು ನಿರ್ಮಿತವಾಯಿತು. ಆ ಕಾಲದಲ್ಲಿ ಕ್ಯಾನನ್‌ಗೇಟ್ ಎಂಬ ಹೆಸರಿನಿಂದ ನಗರದರ್ಜೆಯನ್ನು ಪಡೆಯಿತೆಂದು ಹೇಳಲಾಗಿದ್ದರೂ ಒಂದನೆಯ ರಾಬರ್ಟ್ ಬ್ರೂಸ್ 1329ರಲ್ಲಿ ನೀಡಿದ ಸನ್ನದೇ ಈ ನಗರಕ್ಕೆ ಸಂಬಂಧಿಸಿದ ಅತ್ಯಂತ ಪುರಾತನ ದಾಖಲೆ. ಸ್ವಾತಂತ್ರ್ಯ ಸಮರದಲ್ಲಿ ಈ ಪ್ರದೇಶ ಅಡಿಗಡಿಗೆ ದಾಳಿಗಳನ್ನೆದುರಿಸಬೇಕಾಗಿ ಬಂದರೂ ಎರಡನೆಯ ಡೇವಿಡನ ಕಾಲದಲ್ಲಿ ಬಹುಮಟ್ಟಿಗೆ ಚೇತರಿಸಿಕೊಂಡಿತು. ಆವರೆವಿಗೂ ರಾಜಧಾನಿ ಪರ್ತ್ ನಗರದಲ್ಲಿದ್ದು ಎರಡನೆಯ ಜೇಮ್ಸನ ಕಾಲದಲ್ಲಿ (1437–60) ಎಡಿನ್‌ಬರೊಗೆ ವರ್ಗಾವಣೆಗೊಂಡಿತು. ಇಲ್ಲಿ ಪಾರ್ಲಿಮೆಂಟು ಸೇರುತ್ತಿದ್ದುದಲ್ಲದೆ ನಗರಸಭೆಯೂ ಸ್ಥಾಪಿತವಾಯಿತು. ಎರಡನೆಯ ರಾಜಮಾರ್ಗ ನಿರ್ಮಿತವಾಯಿತು. ಹೊಸ ಕೋಟೆಯ ಗೋಡೆ ಎದ್ದಿತು. ಅದರ ಅವಶೇಷಗಳನ್ನೂ ಈಗಲೂ ಕಾಣಬಹುದು.

ಮೂರನೆಯ ಜೇಮ್ಸನ ಕಾಲದಲ್ಲಿ ರಾಜಮನ್ನಣೆ ಪಡೆದು, 1583ರಲ್ಲಿ ನಾಲ್ಕನೆಯ ಜೇಮ್ಸನಿಂದ ನಗರಾಡಳಿತ ವ್ಯವಸ್ಥೆಗೊಳಿಸಲ್ಪಟ್ಟಿತು. 1532ರಲ್ಲಿ ನ್ಯಾಯಶಾಸ್ತ್ರ ಕಾಲೇಜು ಸ್ಥಾಪಿತವಾಯಿತು. 1544ರಲ್ಲಿ ಇಂಗ್ಲಿಷ್ ಸೈನ್ಯದ ದಾಳಿಗೊಳಗಾದರೂ ಸುಧಾರಿತ ಚರ್ಚಿನ ಮಹಾಧಿವೇಶನ ಇಲ್ಲಿ ಸೇರಿ ನಗರದ ಪ್ರಾಶಸ್ತ್ಯವನ್ನು ಹೆಚ್ಚಿಸಿತು. 1603ರಲ್ಲಿ ಸಂಭವಿಸಿದ ರಾಜಾಧಿಕಾರ ಐಕ್ಯದ ದಿಶೆಯಿಂದ ರಾಜಾಸ್ಥಾನ ಇಂಗ್ಲೆಂಡಿಗೆ ವರ್ಗಾವಣೆಗೊಂಡು ಇದರ ಘನತೆ ಕುಂದಿದರೂ 1633ರಲ್ಲಿ ಒಂದನೆಯ ಚಾರಲ್ಸ್ ಇದಕ್ಕೆ ನಗರಮನ್ನಣೆಯಿತ್ತು. ಸಂತ ಗೈಲ್ಸ್ ಚರ್ಚನ್ನು ಬಿಷಪನ ಅಧಿಕಾರ ಸ್ಥಾನವನ್ನಾಗಿ ಮಾಡಿದುದರಿಂದ ಇದರ ಮಹತ್ತ್ವ ಬೆಳೆಯಿತು. ಪಾರ್ಲಿಮೆಂಟ್ ಭವನ, ಹೆರಿಯಟ್ಟನ ವೈದ್ಯಶಾಲೆಗಳು ಟೆಲ್ಫರನ ಗೋಡೆ (ಪುರಾತನ ಕೋಟೆಯ ವಿಸ್ತರಣೆ) ಮೊದಲಾದವು ನಿರ್ಮಿತವಾದುವು. 1636–49ರ ಕಾಲದಲ್ಲಿ ನೆರೆಹೊರೆಯ ಹಲವು ಭಾಗಗಳು ಈ ನಗರದ ವ್ಯಾಪ್ತಿಗೆ ಸೇರಿದುವು. 1650ರ ಡನ್‌ಬಾರ್ ಕದನದಲ್ಲಿ ಎಡಿನ್‌ಬರೊ ಆಲಿವರ್ ಕ್ರಾಮ್‌ವೆಲನ ವಶವಾಯಿತು. 1707ರಲ್ಲಿ ಸ್ಕಾಟ್ಲೆಂಡು–ಇಂಗ್ಲೆಂಡುಗಳ ವಿಲೀನಶಾಸನ ಜಾರಿಗೆ ಬಂದುದರ ವಿರುದ್ಧ 1736ರಲ್ಲಿ ನಡೆದ ಜಾನ್‌ಪೋರ್ಟಿಯಸನ ದಂಗೆಗಳ ಫಲವಾಗಿ ನಗರದ ಮಹತ್ತ್ವ ನಶಿಸಿದರೂ 18ನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತೆ ಪ್ರಾಮುಖ್ಯಕ್ಕೆ ಬಂತು. ಮುಂದೆ ಸರ್ವತೋಮುಖವಾಗಿ ಬೆಳೆದುದೇ ಅಲ್ಲದೆ ಆಲಾನ್ ರ್ಯಾಮ್ಸೆ, ಹೆನ್ರಿ ರೇಬರ್ನ್, ರಾಬರ್ಟ್ ಆ್ಯಡಮ್, ಪ್ರಿ. ವಿಲಿಯಂ ರಾಬರ್ಟ್‌ಸನ್ ಮುಂತಾದ ಮಹಾವ್ಯಕ್ತಿಗಳ ವಾಸಸ್ಥಾನವಾಗಿ ಶೋಭಿಸಿತು. 1767ರ ಶಾಸನದ ಪ್ರಕಾರ ಹೊಸ ನಗರ ಜೇಮ್ಸ್ ಕ್ರೇಗನ ನಕ್ಷೆಗನುಸಾರವಾಗಿ ನಿರ್ಮಿತವಾಯಿತು. 19–20ನೆಯ ಶತಮಾನಗಳಲ್ಲಿ ಅನೇಕ ಕಟ್ಟಡಗಳು ನಿರ್ಮಿತವಾದುದಲ್ಲದೆ ಪ್ರಥಮ ಮತ್ತು ದ್ವಿತೀಯ ಜಾಗತಿಕ ಮಹಾಯುದ್ಧಗಳ ಅನಂತರ ಅನೇಕ ವಿಸ್ತರಣಗಳೂ ಸೇರಿ ನಗರ ಬಡಾಯಿಸುತ್ತಿದೆ.

ಕೋಟೆಯ ಸುತ್ತಲೂ ಪ್ರಸರಿಸಿರುವ ಹಳೆಯ ನಗರ ಪುರಾತನ ಮತ್ತು ಐತಿಹಾಸಿಕ ಅವಶೇಷಗಳ ಆಗರವಾಗಿದೆ. ಸುಮಾರು 11ನೆಯ ಶತಮಾನದಿಂದ ನಡೆದುಬಂದಿರುವ ಈ ನಗರ ಫೋರ್ತ್ ನದಿಯ ಮುಖಜಭೂಮಿಯಲ್ಲಿ ವಿಶಾಲವಾದ ಬಂಡೆಯೊಂದರ ತಪ್ಪಲು ಪ್ರದೇಶದಲ್ಲಿ ನೆಲೆಸಿದ್ದು ಸುತ್ತಲೂ ಕೋಟೆಯಿಂದ ಆವೃತವಾಗಿದೆ. ಸುಮಾರು ಆರನೆಯ ಶತಮಾನದಿಂದ ಕೋಟೆ ಬಳಕೆಯಲ್ಲಿದ್ದರೂ ಎಡೆಬಿಡದೆ ನಡೆದು ಬಂದ ವಸತಿಯ ಕಾರಣದಿಂದ 11ನೆಯ ಶತಮಾನಕ್ಕಿಂತಲೂ ಮೊದಲಿನ ಅವಶೇಷಗಳೇನೂ ಕಂಡುಬಂದಿಲ್ಲ. ಈಗ ಉಳಿದು ಬಂದಿರುವ ಪುರಾತನ ಕಟ್ಟಡಗಳನ್ನು ಬಹುಮಟ್ಟಿಗೆ ಜೀರ್ಣೋದ್ಧಾರ ಮಾಡಲಾಗಿದೆ. ಅವು ವಾಸ್ತುಶಿಲ್ಪ ದೃಷ್ಟಿಯಿಂದಲ್ಲದಿದ್ದರೂ ಐತಿಹಾಸಿಕ ದೃಷ್ಟಿಯಿಂದ ಮಹತ್ತ್ವ ಪಡೆದಿದೆ. 16ನೆಯ ಶತಮಾನದಲ್ಲಿ ಸ್ಕಾಟರ ರಾಣಿ ಮೇರಿಯ ಕಾಲದಿಂದ (1542–87) ಉಳಿದು ಬಂದಿರುವ ಕಟ್ಟಡಗಳೇ ಹೆಚ್ಚಾಗಿವೆ. ಇವುಗಳಲ್ಲಿ ಸಂತ ಮಾರ್ಗರೆಟ್ಟಳ ಸ್ಮಾರಕಮಂದಿರವೇ ಬಹಳ ಪುರಾತನವಾದುದು. ಸರಳ ಆಯಾಕಾರದ ಈ ಮಂದಿರದಲ್ಲಿ ಈಗಲೂ ಒಮ್ಮೊಮ್ಮೆ ಪ್ರಾರ್ಥನಾ ಸಭೆ ನಡೆಯುವುದುಂಟು. ಇದರ ಬಳಿಯಿರುವ ಗೋಪುರ ಭವನದ ಅವಶೇಷಗಳು ಮಧ್ಯಕಾಲೀನ ಸ್ಕಾಟಿನ ಕೋಟೆಗಳ ಶೈಲಿಗೆ ಸೇರಿವೆ. ಕೋಟೆಯ ಉನ್ನತ ಭಾಗದಲ್ಲಿನ ಕಟ್ಟಡಗಳನ್ನು ಅರಮನೆಯ ಆಯಾಕಾರದ ಪ್ರಾಂಗಣದಲ್ಲಿ ಕಟ್ಟಲಾಗಿದೆ. ಪೂರ್ವ ಭಾಗದಲ್ಲಿರುವ ಅರಮನೆಯ ಒಂದು ಭಾಗದಲ್ಲಿ 16ನೆಯ ಶತಮಾನಕ್ಕೆ ಸೇರಿದ ಸ್ಕಾಟರ ಕಿರೀಟ, ಅಧಿಕಾರದಂಡ, ಪಟ್ಟದಕತ್ತಿ ಮುಂತಾದ ರಾಜ ಚಿಹ್ನೆಗಳನ್ನು ನಿಕ್ಷೇಪಿಸಿಡಲಾಗಿದೆ. ಈ ಭಾಗದಲ್ಲೇ ಸ್ಕಾಟರರಾಣಿ ಮೇರಿ ಮತ್ತವಳ ತಾಯಿಯ ವಾಸಗೃಹಗಳೂ ಇವೆ. ಉತ್ತರ ಭಾಗದಲ್ಲಿ 12ನೆಯ ಶತಮಾನದ ಚರ್ಚೊಂದರ ನಿವೇಶನದಲ್ಲಿ. ಸರ್ ರಾಬರ್ಟ್ ಲೊರಿಮರನಿಂದ ರೂಪಿತವಾಗಿ 1927ರಲ್ಲಿ ಕಟ್ಟಲ್ಪಟ್ಟ ಸ್ಕಾಟರ ರಾಷ್ಟ್ರೀಯ ಸಂಗ್ರಾಮ ಸ್ಮಾರಕವಿದೆ. ಅರಮನೆಯ ಪ್ರಾಂಗಣದಲ್ಲಿ ಸ್ಕಾಟರ ಐಕ್ಯ ಸೇನಾಪಡೆಗಳ ವಸ್ತುಪ್ರದರ್ಶನ ಶಾಲೆ ಇದೆ. ಈ ದಿಬ್ಬದ ಮೇಲಿಂದ ಸುರುಳಿಯಂತೆ ಸುತ್ತಿಕೊಂಡು ಬರುವ ರಸ್ತೆಯ ಮೂಲಕ ಇಳಿದು ಬಂದರೆ 1574ರಲ್ಲಿ ಮಾರ್ಟನ್ನಿನ 4ನೆಯ ಜಮೀನ್ದಾರ ಜೇಮ್ಸ್ ಡೌಗ್ಲಸನಿಂದ ನಿರ್ಮಿತವಾದ ಅರ್ಧಚಂದ್ರಾಕೃತಿಯ ಬತೇರಿ ಇದೆ.

ಹಳೆಯ ನಗರದಲ್ಲಿ ಕೋಟೆಯ ಮುಂಭಾಗದಲ್ಲಿ ಒಂದನೆಯ ಡೇವಿಡನಿಂದ 1128ರಲ್ಲಿ ನಿರ್ಮಿತವಾಗಿ 1220ರ ಸುಮಾರಿನಲ್ಲಿ ಜೀರ್ಣೋದ್ಧಾರ ಹೊಂದಿದ ಅಗಸ್ಟಿನಿಯನ್ ಸಂಪ್ರದಾಯಕ್ಕೆ ಸೇರಿದ ಹೋಲಿರೂಡ್ ಕ್ರೈಸ್ತಮಠ ಆ ಕಾಲದ ಬ್ರಿಟಿಷ್ ವಾಸ್ತುಶಿಲ್ಪಗಳಲ್ಲಿ ಗಮನಾರ್ಹ ಸ್ಥಾನ ಪಡೆದಿದೆ. ಅದರ ನಿವೇಶನದ ಪಕ್ಕದಲ್ಲಿ 1505ರಲ್ಲಿ ನಾಲ್ಕನೆಯ ಜೇಮ್ಸನಿಗಾಗಿ ಕಟ್ಟಲ್ಪಟ್ಟ ಹೋಲಿರೂಡ್ ಅರಮನೆಯ ವಿಸ್ತರಣ ಕಾರ್ಯ 1671ರಲ್ಲಿ ನಡೆಯಿತು. ಈ ಕ್ರೈಸ್ತಮಠದ ಹಲವಾರು ಭಾಗಗಳಿಗೂ ರಾಣಿ ಮೇರಿಯ ಜೀವನಕ್ಕೂ ನಿಕಟ ಸಂಬಂಧವಿತ್ತು. ಹಳೆಯ ಗೋಪುರ ವಾಸ್ತವವಾಗಿ ಮಧ್ಯಯುಗಕ್ಕೆ ಸೇರುತ್ತಿದ್ದರೂ ಸುತ್ತಲಿನ ಅರಮನೆಯ ಭಾಗಗಳು ಅನಂತರದ ವಿಸ್ತರಣ ಕಾಲಕ್ಕೆ ಸೇರುತ್ತವೆ. ಈ ಅರಮನೆ ಬ್ರಿಟಿಷ್ ಚಕ್ರವರ್ತಿಯ ಸ್ಕಾಟ್ಲೆಂಡಿನ ಅಧಿಕೃತ ನಿವಾಸವಾಗಿದೆ.

ಹಳೆಯ ನಗರದಲ್ಲಿನ ವಾಸಗೃಹಗಳನ್ನು ಗಟ್ಟಿ ಭದ್ರವಾಗಿ ಮರದ ಸಾಮಾನುಗಳಿಂದ ಕಟ್ಟಲಾಗಿದೆ. ಇವುಗಳ ಮುಂಭಾಗದಲ್ಲಿ ಇಕ್ಕಟ್ಟಾದ ಅಂಗಳ, ಹಿಂಭಾಗದಲ್ಲಿ ವಿಶಾಲವಾದ ಕೈ ತೋಟಗಳಿವೆ. 17ನೆಯ ಶತಮಾನಕ್ಕಿಂತ ಮೊದಲಿನ ಕಟ್ಟಡಗಳು ಬಹುವಾಗಿ ಕಣ್ಮರೆಯಾಗಿ ಅನಂತರದ ಕಟ್ಟಡಗಳೇ ಈಗ ಕಾಣುತ್ತವೆ. ಈ ಭಾಗದಲ್ಲಿ ಪುರಾತನ ಕಾಲದ ಷೂಮೇಕರ್ಸ್ ಲ್ಯಾಂಡ್, ಬೈಬಲ್ ಲ್ಯಾಂಡ್, ವರ್ಲ್ಡ್ಸ್ ಎಂಡ್– ಮುಂತಾದ ಹೆಸರಿನ ಪ್ರದೇಶಗಳೂ ಲಾನ್ ಮಾರ್ಕೆಟ್, ಹೇ ಮಾರ್ಕೆಟ್, ಕೌಗೇಟ್, ಕ್ಯಾನನ್‌ಗೇಟ್ ಮುಂತಾಗಿ ಸ್ಥಳವೈಶಿಷ್ಟ್ಯವನ್ನು ಸೂಚಿಸುವ ಹೆಸರಿನ ಪ್ರದೇಶಗಳೂ ಇವೆ. ಹಳೆಯ ನಗರದ ಮುಖ್ಯ ಕಟ್ಟಡಗಳಲ್ಲಿ ನೆದರ್‌ಬೊ ಪೋರ್ಟ್, ಜಾನ್ ನಾಕ್ಸನ ಭವನ, ಸುಮಾರು 800 ವರ್ಷಗಳ ಸಂತ ಗೈಲ್ಸ್ ಚರ್ಚು, 1637ರಲ್ಲಿ ಕಟ್ಟಲಾದ ಟ್ರಾನ್ ಚರ್ಚು, ಟ್ರಿನಿಟಿ ಕಾಲೇಜಿನ ಚರ್ಚು, ಈಗ ವಸ್ತುಪ್ರದರ್ಶನ ಶಾಲೆಯಾಗಿರುವ ಟಾಲ್ಬೂತ್ (1591), ಹಂಟ್ಲಿ ಭವನ (17ನೆಯ ಶತಮಾನ), ಗ್ರೇ ಫ್ರಯರ್ಸ್ ಚರ್ಚು (1614)– ಇವು ಗಮನಾರ್ಹವಾದುವು.

17ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಹಳೆಯ ನಗರ ಹೆಚ್ಚು ಜನಭರಿತವಾದುದರಿಂದ 1753ರಲ್ಲಿ ವಾಸ್ತುಶಿಲ್ಪಿಗಳಾದ ಜಾನ್ ಮತ್ತು ರಾಬರ್ಟ್ ಆ್ಯಡಮ್ಸ್ ಸಹೋದರರ ನಕ್ಷೆಯ ಪ್ರಕಾರ ಹೊಸನಗರದ ನಿರ್ಮಾಣಕಾರ್ಯ ಪ್ರಾರಂಭವಾಯಿತು. 1760ನೆಯ ದಶಕದಲ್ಲಿ ಹೊಸ ಸೇತುವೆಯ ನಿರ್ಮಾಣವಾಗಿ ನಾರ್ತ್ ಲಾಕ್ ಅಣೆಕಟ್ಟನ್ನು ಒಣಗಿಸಿ ಈ ವಿಸ್ತಾರ ಪ್ರದೇಶವನ್ನು ಪರಿವರ್ತಿಸಿದಾಗ ಹೊಸ ನಗರ ಮುಕ್ತಾಯ ಘಟ್ಟವನ್ನು ತಲುಪಿತೆಂದು ಹೇಳಬಹುದು. ಹೊಸನಗರದ ಅನೇಕ ಕಟ್ಟಡಗಳು 1768–1850 ಮಧ್ಯಕಾಲದಲ್ಲಿ ನಿರ್ಮಿತವಾದುವು. ಇಲ್ಲಿನ ಅತ್ಯಂತ ಸುಂದರಭಾಗ ಚಾರ್ಲಾಟ್ ಚೌಕ. ಮೋರೆ ಪ್ರದೇಶ ಗ್ರೇಟ್ ಕಿಂಗ್ ಮಾರ್ಗ, ಸಂತ ಬರ್ನಾರ್ಡ್ ಕ್ರೆಸೆಂಟ್– ಇವು ಸಹ ಗಮನಾರ್ಹ ಪ್ರದೇಶಗಳು. ಮೆಲ್ವಿಲೇ ಮಾರ್ಗ, ಕ್ವೀನ್ ರಸ್ತೆ ಮತ್ತು ಹೆರಿಯಟ್ ಬೀದಿಗಳಲ್ಲಿ ವಾಸಗೃಹಗಳು ಹೆಚ್ಚಾಗಿವೆ. ಹೊಸನಗರದ ಮುಖ್ಯ ಮಾರ್ಗಗಳಾದ ಪ್ರಿನ್ಸ್ ರಸ್ತೆ, ಜಾರ್ಜ್ ರಸ್ತೆ ಮತ್ತು ಕ್ವೀನ್ ರಸ್ತೆಗಳನ್ನು ಅನೇಕ ಅಡ್ಡರಸ್ತೆಗಳು ಸೇರುತ್ತವೆ. ಎಡಿನ್‌ಬರೊದ ಪ್ರಮುಖ ವ್ಯಾಪಾರ ಉದ್ಯಮಗಳ ನೆಲೆಯಾದ ಪ್ರಿನ್ಸ್ ರಸ್ತೆಯ ಪೂರ್ವದ ಅಂಚಿನಲ್ಲಿ ಸ್ಕಾಟ್ಲೆಂಡಿನ ಸಾರ್ವಜನಿಕ ದಸ್ತಾವೇಜುಗಳ ಕಚೇರಿಯೂ ಜಾರ್ಜ್‌ರಸ್ತೆಯ ಪೂರ್ವದ ಅಂಚಿನ ಸಂತ ಆಂಡ್ರ್ಯೂ ಚೌಕದಲ್ಲಿ ಸ್ಕಾಟ್ಲೆಂಡಿನ ರಾಜ್ಯ ಬ್ಯಾಂಕೂ ಇವೆ.

ನಗರದ ಅನೇಕ ಉದ್ಯಾನವನಗಳಲ್ಲಿ ಮುಖ್ಯವಾದ ಪ್ರಿನ್ಸ್ ರಸ್ತೆಯ ದಕ್ಷಿಣಕ್ಕಿರುವ ಅದೇ ಹೆಸರಿನ ಉದ್ಯಾನವನದಲ್ಲಿ 19ನೆಯ ಶತಮಾನದ ಸಂತ ಕೊತ್ಬರ್ಟನ ಮತ್ತು ಈಚಿನ ಸಂತ ಜಾನನ ಎಪಿಸ್ಕೋಪಲ್ ಚರ್ಚುಗಳೂ ಸರ್ ವಾಲ್ಟರ್ ಸ್ಕಾಟನ ಸ್ಮಾರಕ, ರಾಯಲ್ ಸ್ಕಾಟ್ಸ್‌ಗ್ರೇ ಸ್ಮಾರಕ ಮತ್ತು ಅಮೆರಿಕನ್ ಸ್ಮಾರಕಗಳೂ ಪ್ರೇಕ್ಷಕಣೀಯ ಸ್ಥಳಗಳು. ಇವಲ್ಲದೆ ಸಸ್ಯವೈಜ್ಞಾನಿಕ ಉಪವನ ಕ್ಯಾಲ್ಟನ್ ಗುಡ್ಡದ ಮೇಲಿರುವ ಅನೇಕ ಐತಿಹಾಸಿಕ ಸ್ಥಳಗಳೂ ವೀಕ್ಷಣಾಲಯ (ಆಬ್ಸರ್ವೇಟರಿ) ಮತ್ತು ಅಪೂರ್ಣವಾಗಿರುವ ರಾಷ್ಟ್ರೀಯ ಸ್ಮಾರಕಗಳೂ ಇಲ್ಲಿವೆ. ನಗರದ ಪಶ್ಚಿಮ ಪರಿಸರದಲ್ಲಿ ಪ್ರಾಣಿ ಸಂಗ್ರಹಾಲಯವಿದೆ. 19ನೆಯ ಶತಮಾನದಲ್ಲಿ ಗ್ರೀಕ್ ಮತ್ತು ಗಾಥಿಕ್ ಶೈಲಿಗಳ ಪುನರ್ವಿಕಾಸ ಕಾಲದಲ್ಲಿ ಅನೇಕ ಚರ್ಚುಗಳೂ ಸಾರ್ವಜನಿಕ ಕಟ್ಟಡಗಳೂ ನಿರ್ಮಿತವಾದುವು. ಸ್ಕಾಟಿಷ್ ನ್ಯಾಷನಲ್ ಗ್ಯಾಲರಿ, ರಾಯಲ್ ಸ್ಕಾಟಿಷ್ ಅಕೆಡಮಿ, ರಾಯಲ್ ಹೈಸ್ಕೂಲಿನ ಕಟ್ಟಡಗಳು ಡೋರಿಕ್ ಮತ್ತು ಅಯೋನಿಕ್ ಶೈಲಿಯಲ್ಲಿವೆ. ನಗರದ ವೀಕ್ಷಣಾಲಯ ರಾಷ್ಟ್ರೀಯ ಸ್ಮಾರಕಗಳು ಡೋರಿಕ್ ಶೈಲಿಯ ಇತರ ನಿರ್ಮಾಣಗಳು.

ಪ್ರಮುಖ ವ್ಯಕ್ತಿಗಳ ನೆನಪಿಗಾಗಿ ನಿರ್ಮಿತವಾದ ಅನೇಕ ಸ್ಮಾರಕಗಳಲ್ಲಿ ಅಶ್ವಾರೂಢ ಎರಡನೆಯ ಚಾರಲ್ಸನ ಪ್ರತಿಮೆ. 6ಮೀ ಎತ್ತರದ ಗಾಥಿಕ್ ಶಿಖರವಿರುವ ಸರ್ ವಾಲ್ಟರ್ ಸ್ಕಾಟನ ಸ್ಮಾರಕ, ಸ್ಕಾಟನ ಅಮೃತಶಿಲೆಯ ಪ್ರತಿಮೆ. ಸಂತ ಆ್ಯಂಡ್ರೂ ಚೌಕದಲ್ಲಿರುವ ಟ್ರೋಜನ್ ಸ್ತಂಭದ ಮೇಲಿರುವ ಹೆನ್ರಿ ಡಂಡಾಸನ ಪ್ರತಿಮೆ, ಕ್ಯಾಲ್ಟನ್ ಗುಡ್ಡದ ಮೇಲಿರುವ ನೆಪೋಲಿಯನ್ನನ ಯುದ್ಧಗಳಲ್ಲಿ ಭಾಗವಹಿಸಿದ್ದ ಸ್ಕಾಟ್ ನಾವಿಕರ ಸ್ಮಾರಕ, ನೆಲ್ಸನ್ ಗೋಪುರ ಮತ್ತು ಸಣ್ಣ ಗ್ರೀಕ್ ದೇವಾಲಯ. ಹಳೆಯ ಕ್ಯಾಲ್ಟನ್ ಶ್ಮಶಾನದಲ್ಲಿರುವ ತತ್ತ್ವಜ್ಞಾನಿ ಡೇವಿಡ್ ಹ್ಯೂಮ್, ಏಬ್ರಹಾಮ್ ಲಿಂಕನ್ ಸ್ಮಾರಕಗಳು ಮುಖ್ಯವಾದುವು. ಆರನೆಯ ಜೇಮ್ಸ್‌ನ ಸನ್ನದಿಗನುಗುಣವಾಗಿ 1582ರಲ್ಲಿ ಎಡಿನ್‌ಬರೊ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಆ ಸಂಸ್ಥೆಯ ಸ್ಥಾಪಕರು ಕ್ರೇಗ್ ಮಿಲ್ಲರನ ವಿಲಿಯಂ ಮತ್ತು ಕ್ಲೆಮೆಂಟ್ ಲಿಟಲ್ ಸಹೋದರರು ಮತ್ತು ಜೇಮ್ಸ್ ಲಾಸನ್, ಆ ಸಂಸ್ಥೆಗೆ ಸೇರಿದಂತೆ ರಾಯಲ್ ಸ್ಕಾಟಿಷ್ ವಸ್ತುಸಂಗ್ರಹಾಲಯ, ಹೆರಿಯಟ್–ವಾಟ್ ಕಾಲೇಜು ಮತ್ತು ದಂತ ವೈದ್ಯಶಾಲೆಗಳಿವೆ. ಜಾರ್ಜ್ ಚೌಕದ ಬಳಿ ಪ್ರಸಿದ್ಧ ವೈದ್ಯವಿದ್ಯಾಲಯವೂ ಇದರ ಪರಿಸರದಲ್ಲಿ ಜಾರ್ಜ್ ವ್ಯಾಟ್ಸನ ಕಾಲೇಜೂ ರಾಯಲ್ ಇನ್‌ಫರ್ಮರಿ, ಪಶುವೈದ್ಯಶಾಲೆ, ವಿದ್ಯಾಶಿಕ್ಷಣ ಕಾಲೇಜು, ವ್ಯವಸಾಯ ಕಾಲೇಜು ಮತ್ತು ಕಲಾಶಿಕ್ಷಣ ಶಾಲೆಗಳೂ ಇವೆ. ವಿಜ್ಞಾನ ಶಿಕ್ಷಣಶಾಲೆಗಳು ಬಹುಮಟ್ಟಿಗೆ ಲಿಬರ್ಟನ್ನಿನಲ್ಲಿರುವ ರಾಜಭವನದಲ್ಲಿವೆ.

ಜೀರ್ಣಾವಸ್ಥೆಯಲ್ಲಿರುವ ಹಳೆಯ ವೀಕ್ಷಣಾಲಯ (1774) ಕ್ಯಾಲ್ಟನ್ ಗುಡ್ಡದ ಮೇಲೂ ನಗರದ ವೀಕ್ಷಣಾಲಯ ಅದರ ಪಾರ್ಶ್ವದಲ್ಲೂ ಇದ್ದು ಉಪಯೋಗದಲ್ಲಿರುವ ರಾಯಲ್ ಸಮೀಕ್ಷಾಮಂದಿರ (1896) ಬ್ಲ್ಯಾಕ್‌ಫರ್ಡ್ ಗುಡ್ಡದ ಮೇಲೂ ಸ್ಥಾಪಿತವಾಗಿದೆ. ನಿಕಲ್ಸನ್ ರಸ್ತೆಯಲ್ಲಿರುವ ಶಸ್ತ್ರವೈದ್ಯಕಾಲೇಜು, ಕ್ವೀನ್ ಮಾರ್ಗದಲ್ಲಿರುವ ವೈದ್ಯಕಾಲೇಜು, ಗ್ರಂಥಾಗಾರ ಮತ್ತು ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಸಂಗ್ರಹಾಲಯಗಳು ಇತರ ಮುಖ್ಯ ವೈಜ್ಞಾನಿಕ ಸಂಸ್ಥೆಗಳು. ಮತೀಯ ವಿದ್ಯೆಗಳನ್ನು ಬೋಧಿಸುವ ನ್ಯೂಕಾಲೇಜಿನಲ್ಲಿ ಐಕ್ಯ ಪ್ರೆಸ್‌ಬಿಟೇರಿಯನ್ ಮತ್ತು ಸ್ವತಂತ್ರ ಚರ್ಚು ಪಂಗಡಗಳ ತತ್ತ್ವಗಳನ್ನು ಬೋಧಿಸಲಾಗುತ್ತದೆ. ರಾಯಲ್

ಹೈಸ್ಕೂಲ್, ಎಡಿನ್‌ಬರೊ ಅಕೆಡೆಮಿ, ಫೆಟಿಸ್ ಕಾಲೇಜು- ಇವು ಪ್ರಮುಖ ವಿದ್ಯಾಕೇಂದ್ರಗಳು. ಜಾರ್ಜ್ ಹೆರಿಯಟ್ ಉಚಿತ ವೈದ್ಯಶಾಲೆ ಪ್ರಮುಖ ಸಾರ್ವಜನಿಕ ಸಂಸ್ಥೆಯಾಗಿದೆ. ಇವಲ್ಲದೆ ಅನಾಥಬಾಲಕ ಬಾಲಕಿಯರ ಔದ್ಯೋಗಿಕ ಶಿಕ್ಷಣ ಕೇಂದ್ರಗಳೂ ಉಚಿತ ವೈದ್ಯಶಾಲೆಗಳೂ ಹಲವಾರಿವೆ.

ಎಡಿನ್‌ಬರೊ ನಗರಾಡಳಿತಕ್ಕೆ ಮಸೆಲ್‌ಬರೊ ಮತ್ತು ಲೀತ್ ಬಂದರು ಪ್ರದೇಶಗಳು ಸೇರಿದ್ದು ನಗರವನ್ನು ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ. ಸ್ಕಾಟ್ಲೆಂಡು ವಿಭಾಗದ ರಾಜ್ಯ ಸಚಿವ (ಸೆಕ್ರೆಟರಿ ಆಫ್ ಸ್ಟೇಟ್) ಕಾರ್ಯಾಲಯ ಸಂತ ಆಂಡ್ರ್ಯೂಭವನದಲ್ಲಿದೆ. ನಗರಸಭೆಯ 71 ಸದಸ್ಯರಲ್ಲಿ 69 ಮಂದಿ ಚುನಾಯಿತ ಸದಸ್ಯರೂ ಉಳಿದಿಬ್ಬರು ಅಧಿಕೃತ ಸದಸ್ಯರೂ ಆಗಿರುವರು. ನಗರಸಭೆಯ ವಿವಿಧ ಅಧಿಕಾರಿಗಳನ್ನು ಸದಸ್ಯರೇ ಚುನಾಯಿಸುತ್ತಾರೆ. 1833ರ ಮಸೂದೆಯ ಪ್ರಕಾರ ಪ್ರತಿವರ್ಷವೂ ನಗರಸಭೆಯ ಅರ್ಧ ಭಾಗ ಸದಸ್ಯರನ್ನು ಚುನಾಯಿಸಲಾಗುತ್ತದೆ.

ಇಲ್ಲಿನ ಕೈಗಾರಿಕೆಗಳಲ್ಲಿ ಮದ್ಯದ ತಯಾರಿಕೆ, ಅಚ್ಚುಕಲೆ, ಪುಸ್ತಕಗಳ ರಕ್ಷಾಕವಚ ಜೋಡಿಸುವ ಉದ್ಯಮ, ರಬ್ಬರು, ಬಿಸ್ಕತ್ತು, ಮತ್ತಿತರ ತಿಂಡಿಗಳ ತಯಾರಿಕೆ, ಔಷಧ, ರಾಸಾಯನಿಕ ವಸ್ತು ಮತ್ತು ಗಾಜು ತಯಾರಿಕೆ ಇವು –ಮುಖ್ಯವಾದವು. ಹಡಗುಗಳ ನಿರ್ಮಾಣ, ರಿಪೇರಿ ಕೆಲಸ, ಕಂಬಿ–ಹಗ್ಗಗಳ ತಯಾರಿಕೆ, ಕಬ್ಬಿಣ ಮತ್ತು ಉಕ್ಕಿನ ಉದ್ಯಮ, ಕಾಗದ ತಯಾರಿಕೆ–ಇವು ಇತರ ಕೈಗಾರಿಕೋದ್ಯಮಗಳು. ಇತ್ತೀಚೆಗೆ ಎಲೆಕ್ಟ್ರಾನಿಕ್ ಉದ್ಯಮಗಳೂ ಬೆಳೆಯುತ್ತಿವೆ. 1960ನೆಯ ದಶಕದಲ್ಲಿ ಪ್ರವಾಸೋದ್ಯಮ ಬೆಳೆದು ವರ್ಷಂಪ್ರತಿ 75,000 ಮಂದಿ ಈ ನಗರಕ್ಕೆ ಭೇಟಿ ಕೊಡುತ್ತಿದ್ದಾರೆ. ವಾರ್ಷಿಕ ಅಂತಾರಾಷ್ಟ್ರೀಯ ಉತ್ಸವಕ್ಕೆ 90,000 ಮಂದಿ ಪ್ರವಾಸಿಗಳು ಬರುತ್ತಾರೆ. ದೇಶದ ವಿವಿಧಭಾಗಗಳಿಂದ ಬರುವ ರೈಲುಗಾಡಿಗಳೂ ಆರು ಮೈಲಿಗಳ ದೂರದಲ್ಲಿರುವ ಟರ್ನ್ ಹೌಸ್ ವಿಮಾನ ನಿಲ್ದಾಣವೂ ನಗರದಲ್ಲಿರುವ ಉತ್ತಮ ಮೋಟಾರು ಗಾಡಿಗಳ ವ್ಯವಸ್ಥೆಯೂ ಸಂಚಾರ ವಸತಿಯನ್ನು ಒದಗಿಸುತ್ತದೆ.

ಈ ನಗರದ ಪರಿಸರದಲ್ಲಿರುವ ಲೀತ್ ಬಂದರು ಸ್ಕಾಟ್ಲೆಂಡಿನ ಪೂರ್ವ ತೀರದಲ್ಲೇ ದೊಡ್ಡದಾದ ರೇವುಪಟ್ಟಣವಾಗಿದ್ದು ಫರ್ತ್–ಆಫ್–ಫೋರ್ತ್‌ನ ಸುರಕ್ಷಿತ ಪ್ರದೇಶದಲ್ಲಿ ಸಮುದ್ರದಿಂದ 30 ಮೈಲಿ ಒಳಪ್ರದೇಶದಲ್ಲಿದೆ. ಸಂಸದೀಯ ಶಾಸನದಿಂದ ಹುಟ್ಟಿದ ಆಡಳಿತ ಮಂಡಲಿಯ ಮೇಲ್ವಿಚಾರಣೆಯಲ್ಲಿರುವ ಈ ಪ್ರದೇಶದಲ್ಲಿ ಒಂದು ಹೊರ ಮತ್ತು ಒಂದು ಒಳ ರೇವೂ ಮೇಲ್ಸಾವಣಿಯಿರುವ ಆರು ಹಡಗುಕಟ್ಟೆಗಳೂ ಇತ್ತೀಚೆಗೆ ನಿರ್ಮಾಣವಾದ ಆಧುನಿಕ ಬಂದರೂ ಇವೆ. ಈ ಬಂದರಿನಿಂದ ಧಾನ್ಯ, ಸಿಮೆಂಟು, ಮರ, ಉಕ್ಕು–ಕಬ್ಬಿಣ ಮತ್ತು ಗೊಬ್ಬರ ಮುಖ್ಯವಾಗಿ ಆಮದಾಗುತ್ತವೆ. ಕಲ್ಲಿದ್ದಲು, ಕಾಗದ, ಬಿಯರ್, ಮದ್ಯ ಮುಂತಾದವು ರಫ್ತಾಗುತ್ತವೆ. (ಬಿ.ಕೆ.ಜಿ.)

**ಎಡಿನ್‌ಬರೊ ಡ್ಯೂಕ್ (ಫಿಲಿಪ್ ಮೌಂಟ್‌ಬ್ಯಾಟನ್):** ಜ. 1921–. ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತರಾಜ್ಯದ ರಾಣಿಯಾದ ಎರಡನೆಯ ಎಲಿಜಬೆತಳ ಪತಿ, ರಾಜಕುಮಾರ ಫಿಲಿಪ್. ಜನನ : 10ನೆಯ ಜೂನ್ 1921. ಗ್ರೀಸಿನ ರಾಜಕುಮಾರ ಆಂಡ್ರೂ ಮತ್ತು ರಾಜಕುಮಾರಿ ಆಲಿಸರ ಒಬ್ಬನೇ ಮಗ; ಇವರಿಗೆ ಹುಟ್ಟಿದ ಮಕ್ಕಳ ಪೈಕಿ ಕಿರಿಯ. ವಾವೆಯಲ್ಲಿ ಬ್ರಿಟನ್ನಿನ ವಿಕ್ಟೋರಿಯ ರಾಣಿಯ ಮರಿಮಗಳ ಮಗ; ಎರಡನೆಯ

ಎಡಿನ್‌ಬರೊ ಡ್ಯೂಕ್–ರಾಣಿ ಎಲಿಜಬೆತ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಾಧ್ಯಕ್ಷ ನಿಕ್ಸನ್ ಇವರ ನಡುವೆ

ಎಲಿಜಬೆತಳಿಗೆ ಮೂರು ತಲೆ ಹಿಂದಿನ ಸೋದರ ಸಂಬಂಧ. ಈ ಮನೆತನದ ವಿವಾಹ ಸಂಬಂಧಗಳು ಬೇರೆ ಬೇರೆ ಮನೆತನಗಳೊಡನೆ ಬೆಳೆದು ಬಂದಿದ್ದರ ಪರಿಣಾಮವಾಗಿ ಫಿಲಿಪನಲ್ಲಿ ಗ್ರೀಕ್ ರಕ್ತ ಹರಿಯುತ್ತಿಲ್ಲ. ಗ್ರೀಕ್ ಭಾಷೆಯೂ ಈತನಿಗೆ ಬಾರದು. ಈತ ಹುಟ್ಟಿದಾಗ ಗ್ರೀಸ್ ರಾಜಮನೆತನಕ್ಕೆ ದುರ್ದೆಶೆ ಬಂದಿತ್ತು; ಅದು ಮಸುಳಿತ್ತು. ಆದ್ದರಿಂದ ಫಿಲಿಪನ ಲಾಲನೆ, ಪಾಲನೆ ಶಿಕ್ಷಣಗಳು ವಿದೇಶಗಳಲ್ಲಿಯೇ ನಡೆದುವು. ಈತನನ್ನು ಇಂಗ್ಲೆಂಡಿಗೆ ಕರೆತಂದಾಗ ಈತನಿಗೆ ಎಂಟು ವರ್ಷ. ಚಿಕ್ಕಪ್ಪ ಅರ್ಲ್ ಮೌಂಟ್‌ಬ್ಯಾಟನ್ (ಬರ್ಮ) ಅವರ ಮನೆಯಲ್ಲೇ ಫಿಲಿಪ್ ಬೆಳೆದದ್ದು. ಚೀಯಾಮ್, ಸಲ್ಲೆಮ್ ಮತ್ತು ಗೋರ್ಡನ್‌ಸ್ಟೌನ್‌ಗಳಲ್ಲಿ ಫಿಲಿಪನ ಶಿಕ್ಷಣ ನಡೆಯಿತು. ಡಾರ್ಟ್‌ಮತ್‌ನಲ್ಲಿರುವ ರಾಯಲ್ ನೇವಲ್ ಕಾಲೇಜಿಗೆ ಸೇರಿದಾಗ ಇವನಿಗೆ 18 ವರ್ಷ ವಯಸ್ಸಾಗಿತ್ತು. 1910ರ ಜನವರಿಯಿಂದ ಎರಡನೆಯ ವಿಶ್ವಯುದ್ಧದ ಕೊನೆಯವರೆಗೆ ಪ್ರಾಚ್ಯ ಪ್ರದೇಶಗಳಲ್ಲೂ ಪೆಸಿಫಿಕ್ ಯುದ್ಧ, ಸಿಸಿಲಿ ಆಕ್ರಮಣ ಮತ್ತು ಮ್ಯಾಟಪಾನ್ ಭೂಶಿರದ ಬಳಿಯ ತೀವ್ರ ಸೈನಿಕ ಕಾರ್ಯಾಚರಣೆಗಳಲ್ಲೂ ಫಿಲಿಪ್ ಪಾಲ್ಗೊಂಡಿದ್ದ. ಗ್ರೀಕ್ ಸಿಂಹಾಸನಕ್ಕೆ ಹಕ್ಕುದಾರಿಕೆಯ ಶ್ರೇಣಿಯಲ್ಲಿ ಐದನೆಯವನಾಗಿದ್ದ ಈತ 1947ರ ಫೆಬ್ರವರಿ 28ರಂದು ಈ ಹಕ್ಕುದಾರಿಕೆಯನ್ನು ಬಿಟ್ಟುಕೊಟ್ಟು ತನ್ನ ತಾಯಿಯ ಮೌಂಟ್‌ಬ್ಯಾಟನ್ ಎಂಬ ವಂಶನಾಮ ತಳೆದು ಬ್ರಿಟಿಷ್ ಪೌರತ್ವಪಡೆದುಕೊಂಡ. 1947ರ ಜುಲೈ 9ರಂದು ಈತನಿಗೂ ರಾಜಕುಮಾರಿ ಎಲಿಜಬೆತಳಿಗೂ ವಿವಾಹದ ನಿಶ್ಚಿತಾರ್ಥ ಘೋಷಿಸಲಾಯಿತು. 1947ರ ನವೆಂಬರ್ 20ರಂದು ವೆಸ್ಟ್‌ಮಿನ್‌ಸ್ಟರ್ ಅಬೆಯಲ್ಲಿ ಇವರಿಬ್ಬರ ವಿವಾಹ ನಡೆಯಿತು. ಇದಕ್ಕೆ ಮುಂಚೆ, ಅಂದರೆ 1947ರ ನವೆಂಬರ್ 19ರಂದು, ಇವರಿಗೆ ಬ್ಯಾರನ್ ಗ್ರಿನಿಜ್ ಮೆರಿಯೊನೆತ್ ಅರ್ಲ್ ಮತ್ತು ಎಡಿನ್‌ಬರೊ ಡ್ಯೂಕ್ ಎಂಬ ಬಿರುದುಗಳನ್ನಿತ್ತು, ರಾಜಮನೆತನಕ್ಕೆ ತಕ್ಕ ಗೌರವ ಸಲ್ಲಿಸಲಾಯಿತು.

ವಿವಾಹಾನಂತರವೂ ರಾಯಲ್ ನೇವಿಯಲ್ಲಿ ಫಿಲಿಪ್ ತನ್ನ ಸೇವೆಯನ್ನು ಮುಂದುವರಿಸಿದ. ಈತನ ನೇತೃತ್ವದಲ್ಲಿದ್ದ ಮ್ಯಾಗ್‌ಪೈ ಯುದ್ಧನೌಕೆ ಮೆಡಿಟರೇನಿಯನ್ ಸಾಗರದಲ್ಲಿ ಕಾರ್ಯನಿರತವಾಗಿತ್ತು. ಆರನೆಯ ಜಾರ್ಜ್ ದೊರೆಯ ಸೂಚನೆಯ ಮೇರೆಗೆ ಈತ 1948ರಲ್ಲಿ ರಾಷ್ಟ್ರೀಯ ಕ್ರೀಡಾಗಾರಗಳ ಸಂಘದ (ನ್ಯಾಷನಲ್ ಪ್ಲೇಯಿಂಗ್ ಫೀಲ್ಡ್ಸ್ ಅಸೋಸಿಯೇಷನ್) ಅಧ್ಯಕ್ಷತೆಯನ್ನೊಪ್ಪಿಕೊಂಡ. ಇದರಿಂದಾಗಿ, ರಾಷ್ಟ್ರದ ಎಲ್ಲ ಭಾಗಗಳಲ್ಲಿಯ ಸ್ಥಳೀಯ ಸ್ಥಿತಿಗತಿ ವ್ಯವಹಾರ ಪ್ರವೃತ್ತಿಗಳ ಪ್ರತ್ಯಕ್ಷ ಪರಿಚಯ ಇವನಿಗೆ ದೊರೆಯಿತು. ವೈಜ್ಞಾನಿಕ ವಿಷಯಗಳಲ್ಲೂ ತರುಣ ಜನಾಂಗದ ಬಗ್ಗೆಯೂ ಈತ ಅಪಾರ ಆಸಕ್ತಿ ವಹಿಸಿದ. ವಿಜ್ಞಾನ ಮತ್ತು ತಂತ್ರಶಾಸ್ತ್ರಕ್ಕೆ ಬ್ರಿಟನ್ನಿನ ಕೊಡುಗೆ ಎಂಬ ವಿಷಯದ ಬಗ್ಗೆ 1951ರಲ್ಲಿ ಮಾಡಿದ ಬ್ರಿಟಿಷ್ ಅಸೋಸಿಯೇಷನ್ನಿನ ಅಧ್ಯಕ್ಷ ಭಾಷಣದಲ್ಲಿ ಈತನ ವೈಜ್ಞಾನಿಕ ಮತ್ತು ವ್ಯಾವಹಾರಿಕ ಒಲವು ವ್ಯಕ್ತವಾಗುತ್ತದೆ. ಬ್ರಿಟನ್ನಿನ ದೊರೆ ಆರನೆಯ ಜಾರ್ಜನ ಅನಾರೋಗ್ಯ ಹೆಚ್ಚುತ್ತ ಬಂದಂತೆ ಆತನ ಪರವಾಗಿ ಫಿಲಿಪ್ ಮತ್ತು ಎಲಿಜಬೆತ್ ಸಾರ್ವಜನಿಕ ಸಮಾರಂಭಗಳಲ್ಲಿ ಹೆಚ್ಚುಹೆಚ್ಚಾಗಿ ಭಾಗವಹಿಸಬೇಕಾಗಿ ಬಂತು. 1952ರಲ್ಲಿ ಇವರು ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರವಾಸದ ಮೊದಲ ಹಂತದಲ್ಲಿದ್ದಾಗ ಜಾರ್ಜ್ ದೊರೆಯ ಸಾವಿನ ಸುದ್ದಿ ಮುಟ್ಟಿತು. 1952ರ ಫೆಬ್ರುವರಿ 6ರಂದು ಎಲಿಜಬೆತ್ ಗದ್ದುಗೆಯನ್ನೇರಿದಾಗ ಆಕೆಯ ಅಧಿಕೃತ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ಬಂದದ್ದರಿಂದಲೂ ಕಾಮನ್‌ವೆಲ್ತ್ ಮತ್ತು ಇತರ ದೇಶಗಳ ಪ್ರವಾಸದಲ್ಲಿ ಆಕೆಯ ಒಡನಾಡಿಯಾಗಿರಬೇಕಾಗಿದ್ದುದರಿಂದಲೂ ನೌಕಾದಳದ ಹುದ್ದೆಯನ್ನು ಈತ ಬಿಟ್ಟು ಕೊಡಬೇಕಾಯಿತು. 1950–52ರಲ್ಲಿ ಈತ ಬ್ರಿಟಿಷ್ ಅಸೋಸಿಯೇಷನ್ನಿನ ಅಧ್ಯಕ್ಷನಾಗಿದ್ದ. 1953ರಲ್ಲಿ ಎಡ್‌ನ್‌ಬರೊ ವಿಶ್ವವಿದ್ಯಾನಿಲಯದ ಕುಲಪತಿಯಾದ. ತರುಣರ ಸೃಜನಾತ್ಮಕ ಸಾಧನೆಗೆ ಪ್ರೋತ್ಸಾಹ ನೀಡುವ ಸಲುವಾಗಿ 1956ರಲ್ಲಿ ಎಡ್‌ನ್‌ಬರೊ ಡ್ಯೂಕ್ ಬಹುಮಾನ ಯೋಜನೆ ಜಾರಿಗೆ ಬಂತು. 1956–57ರ ಶಿಶಿರದಲ್ಲಿ ಡ್ಯೂಕ್ ಪ್ರಮುಖ ವಿಶ್ವಪ್ರವಾಸ ಕೈಗೊಂಡಿದ್ದ. ಈ ಪ್ರವಾಸಾನಂತರ 1957ರಲ್ಲಿ ಈತನಿಗೆ ಇಂಗ್ಲೆಂಡಿನ ರಾಜಕುಮಾರ (ಪ್ರಿನ್ಸ್) ಎಂಬ ಅಭಿಧಾನವನ್ನಿತ್ತು ಗೌರವಿಸಲಾಯಿತು. ಈತನ ಎರಡನೆಯ ವಿಶ್ವಯಾತ್ರೆ 1959ರಲ್ಲಿ ಬೆಳೆಯಿತು.

ಆಕ್ಸ್‌ಫರ್ಡಿನಲ್ಲಿ 1956ರಲ್ಲಿ ಈತ ಔದ್ಯೋಗಿಕ ಕ್ಷೇತ್ರದ ಮಾನವೀಯ ಸಮಸ್ಯೆಗಳನ್ನು ಕುರಿತ ಸಮ್ಮೇಳನವೊಂದನ್ನು ವ್ಯವಸ್ಥೆಗೊಳಿಸಿದ. ಉದ್ಯೋಗ ಮತ್ತು ರಾಷ್ಟ್ರೀಯ ಸಾಮರ್ಥ್ಯದ ಬಗ್ಗೆ ಈತನಿಗೆ ತುಂಬ ಕಳಕಳಿಯುಂಟೆಂಬುದಕ್ಕೆ ಇದು ದ್ಯೋತಕ. ಎಲ್ಲ ಕಾಮನ್‌ವೆಲ್ತ್ ರಾಷ್ಟ್ರಗಳ ಔದ್ಯೋಗಿಕ ಕ್ಷೇತ್ರಗಳ ಆಡಳಿತ ಮಂಡಳಿಗಳ ಮತ್ತು ಕಾರ್ಮಿಕವರ್ಗಗಳ ಪ್ರತಿನಿಧಿಗಳನ್ನು ಆ ಸಮ್ಮೇಳನಕ್ಕೆ ಆಹ್ವಾನಿಸಲಾಗಿತ್ತು. ಈತ 1957ರಲ್ಲಿ ಮೆಲ್‌ಬೋರ್ನ್‌ನಲ್ಲಿ ನಡೆದ ಒಲಂಪಿಕ್ ಕ್ರೀಡಾಕೂಟವನ್ನು ಉದ್ಘಾಟಿಸಿದ. ತನ್ನ ಕಾರ್ಯಭಾರಗಳ ಸಂಪ್ರದಾಯದ ವಿಚಾರದಲ್ಲಿ ಈತ ತೋರುತ್ತಿದ್ದ ಸ್ವತಂತ್ರ ಸರಳ ಧೋರಣೆ ಹಲವು ಸಂಪ್ರದಾಯವಾದಿಗಳ ಟೀಕೆಗೊಳಗಾಯಿತು; ಜನಪ್ರಿಯ ಪತ್ರಿಕೆಗಳ ಅಸಮಾಧಾನವನ್ನೂ ಎದುರಿಸಬೇಕಾಗಿ ಬಂತು. ಆ ಪತ್ರಿಕೆಗಳ ಒಡೆಯರು ಈತನ ವಿದೇಶೀ ಸಂಬಂಧವನ್ನು ಒತ್ತಿ ಹೇಳತೊಡಗಿದ್ದರು. 1960ರಲ್ಲಿ ರಾಣಿ ಎಲಿಜಬತ್ ತನ್ನ ವಂಶನಾಮದೊಂದಿಗೆ ಮೌಂಟ್‌ಬ್ಯಾಟನ್ ಶಬ್ದವನ್ನು ಸೇರಿಸಿಕೊಳ್ಳುವ ವೈಯಕ್ತಿಕ ತೀರ್ಮಾನವನ್ನು ಕೈಗೊಂಡಾಗ ಜನತೆ ಆ ತೀರ್ಮಾನವನ್ನು ಉತ್ಸಾಹದಿಂದ ಸ್ವಾಗತಿಸಿದ್ದೇ ಫಿಲಿಪನ ರಾಷ್ಟ್ರವ್ಯಾಪ್ತಿ ಜನಪ್ರಿಯತೆಯ ದ್ಯೋತಕ. ಸ್ನೇಹಪರತೆ ಮತ್ತು ಅನೌಪಚಾರಿಕ ನಡವಳಿಕೆಗಳಿಂದ ಈತ ಇಷ್ಟೊಂದು ಲೋಕಪ್ರಿಯನಾಗಿದ್ದಾನೆ.

ಎಡಿನ್‌ಬರೊ ಡ್ಯೂಕನ ಭಾಷಣಗಳ ಎರಡು ಸಂಪುಟಗಳು ಕ್ರಮಶಃ 1957 ಮತ್ತು 1960ರಲ್ಲಿ ಬೆಳಕು ಕಂಡಿವೆ. ಈತ ಬರೆದ ಒಂದು ಗ್ರಂಥದ ಹೆಸರು ಬರ್ಡ್ಸ್‌ಫ್ರಮ್ ಬ್ರಿಟಾನಿಕ (1962). ರಾಜಕುಮಾರ ಚಾರ್ಲ್ಸ್ ಫಿಲಿಪ್ ಆರ್ಥರ್ ಜಾರ್ಜ್ ಈತನ ಮೊದಲ ಮಗ (ಜನನ: 14 ನವೆಂಬರ್ 1948). 1952ರಲ್ಲಿ ಎಲಿಜಬೆತ್ ಸಿಂಹಾಸನವೇರಿದಾಗ ಆತನಿಗೆ ಕಾರ್ನ್‌ವಾಲನ ಡ್ಯೂಕ್ ಪದವಿ ದೊರೆಯಿತು. ರಾಜಕುಮಾರಿ ಆನ್ ಎಲಿಜಬೆತ್ ಆಲಿಸ್ ಲೂಸಿ ಎರಡನೆಯ ಮಗಳು (ಜನನ: 15 ಆಗಸ್ಟ್ 1950). (ಪಿ.ಜಿ.ಡಿ.)

**ಎಡಿಸನ್, ಥಾಮಸ್ ಆಲ್ವ:** 1847–1931. ಅಮೆರಿಕದ ಖ್ಯಾತ ಸಂಶೋಧಕ. 2,500ಕ್ಕೂ ಮಿಕ್ಕ ವಿಶಿಷ್ಟ ಸಂಶೋಧನೆಗಳನ್ನು ಮಾಡಿದ ಖ್ಯಾತಿ ಇವನದು. ಜನನ ಅಮೆರಿಕದ ಒಹೈಓ ಪ್ರಾಂತ್ಯದ ಮಿಲಾನ್ ಎಂಬಲ್ಲಿ. ತಂದೆ ಹಾಲೆಂಡಿನವ, ತಾಯಿ ಸ್ಕಾಟ್ಲೆಂಡಿನವಳು. ಈತನ ತಂದೆ ತಾಯಿಗಳು ಇವನ ಏಳನೆಯ ವರ್ಷದಲ್ಲಿ ಮಿಲಾನ್ ಪಟ್ಟಣದಿಂದ ಮಿಚಿಗನ್ ಪ್ರಾಂತ್ಯದ ಹ್ಯೂರನ್ನಿಗೆ ಬಂದು ನೆಲೆಸಿದರು. ಅಲ್ಲಿನ ಶಾಲೆಯೊಂದರಲ್ಲಿ ನಡೆದ ಈತನ ಶಿಕ್ಷಣ ಕೇವಲ ಮೂರು ತಿಂಗಳ ಅವಧಿಯದು. ಮನೆಯಲ್ಲಿ ತಾಯಿಯಿಂದಲೇ ಹೆಚ್ಚಿನ ಪಾಠ. ಬಾಲ್ಯದಿಂದಲೂ ಇವನಿಗೆ ಪ್ರಯೋಗ ವಿಜ್ಞಾನದಲ್ಲಿ ಹೆಚ್ಚಿನ ಆಸಕ್ತಿಯಿದ್ದು ಮನೆಯ ನೆಲಮಾಳಿಗೆಯನ್ನೇ ತನ್ನ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದ್ದ. ಪ್ರಯೋಗಗಳ ಖರ್ಚಿಗಾಗಿ ತನ್ನ 12ನೆಯ ವರ್ಷದಲ್ಲಿ ಪೋರ್ಟ್ ಹ್ಯೂರನ್ – ಡಿಟ್ರಾಯ್ಟ್‌ಗಳ ನಡುವಿನ ಗ್ರ್ಯಾಂಡ್ ಟ್ರಂಕ್ ರೈಲ್ವೆಯಲ್ಲಿ ಥಾಮಸ್ ಪತ್ರಿಕೆಯನ್ನು ಮಾರಾಟಮಾಡಿ ಹಣ



ಎಡಿಸನ್ 1889ರಲ್ಲಿ ರಚಿಸಿದ ತನ್ನ ಮೊದಲ ಫಿಲ್ಮ್ ಪ್ರೊಜೆಕ್ಟರಿನೊಂದಿಗೆ

ಸಂಪಾದಿಸುತ್ತಿದ್ದ. ತನ್ನ 15ನೆಯ ವರ್ಷದ ಅನಂತರ ಬೇರೆ ಬೇರೆ ಪಟ್ಟಣಗಳಲ್ಲಿ ಟೆಲಿಗ್ರಾಫ್ ಅಪರೇಟರ್ ಆಗಿ ಕೆಲಸ ಮಾಡಿಯೂ ಹಣ ಗಳಿಸುತ್ತಿದ್ದ. ವಿರಾಮದ ವೇಳೆಯಲ್ಲಿ ಅಧ್ಯಯನ ಮತ್ತು ಪ್ರಯೋಗಗಳನ್ನು ನಡೆಸುತ್ತಿದ್ದುದುಂಟು. ಅಲ್ಲಿಂದ ಮುಂದೆ ಗ್ರಾಂಡ್–ಟ್ರಂಕ್ ಹೆರಾಲ್ಡ್ ಎಂಬ ಪತ್ರಿಕೆ ಹೊರಡಿಸಿ, ಅದಕ್ಕೆ ತಾನೇ ಸಂಪಾದಕ, ಮುದ್ರಕ ಮತ್ತು ಮಾರಾಟಗಾರನಾಗಿದ್ದ. ಈ ರೈಲ್ವೆಗೆ ಸೇರಿದ್ದ 400 ಮಂದಿ ಕೆಲಸಗಾರರು ಮತ್ತು ಪ್ರಯಾಣಿಕರೇ ಇವನ ಗ್ರಾಹಕರಾಗಿದ್ದರು. ರೈಲುಗಾಡಿಯ ಡಬ್ಬಿಯೊಂದನ್ನೇ ಮುದ್ರಣಾಲಯ ಮತ್ತು ಪ್ರಯೋಗಶಾಲೆಯನ್ನಾಗಿರಿಸಿಕೊಂಡಿದ್ದ. ಒಮ್ಮೆ ಅವನ ಆ ಡಬ್ಬಿಗೆ ಬೆಂಕಿ ಬಿದ್ದು ಅಲ್ಲಿದ್ದ ರಂಜಕವೆಲ್ಲವೂ ಹತ್ತಿಕೊಂಡು ಉರಿದು ಡಬ್ಬಿ ಹಾಳಾದ ಕಾರಣ, ಆ ಡಬ್ಬಿಯ ಮೇಲ್ವಿಚಾರಕ ಎಡಿಸನ್ನನನ್ನು ಆತನ ಕಿವಿ ಹಿಂಡಿ ಡಬ್ಬಿಯ ಹೊರ ಹಾಕಿದ. ಇದರಿಂದಾಗಿ ಎಡಿಸನ್ ಕಿವುಡನಾದ. 1867ರಲ್ಲಿ ಸ್ಟೇಷನ್ ಮಾಸ್ಟರೊಬ್ಬರ ಮಗುವೊಂದನ್ನು ರೈಲು ಅಪಘಾತದಿಂದ ಪಾರುಮಾಡಿದ. ತನ್ನ ಮಗುವನ್ನು ರಕ್ಷಿಸಿದ ಕೃತಜ್ಞತೆಗೆ ಆ ಸ್ಟೇಷನ್ ಮಾಸ್ಟರ್ ಎಡಿಸನ್ನನಿಗೆ ತಾರ್‌ಯಂತ್ರದ ತಂತ್ರವನ್ನು ತಿಳಿಸಿಕೊಟ್ಟ. ಇದರಿಂದಾಗಿ ತಾರ್‌ಯಂತ್ರದ ಕೆಲಸದಲ್ಲೇ ಎಡಿಸನ್ ಮುಂದುವರಿದು ಸ್ವಯಂಚಾಲಿತ ತಾರ್‌ಯಂತ್ರವನ್ನು ರಚಿಸಿದ. 1868ರಲ್ಲಿ ವಿದ್ಯುಚ್ಚಾಲಿತ ಮತ ದಾಖಲೆಯಂತ್ರಕ್ಕೆ (ಎಲೆಕ್ಟ್ರಿಕಲ್ ವೋಟ್ ರೆಕಾರ್ಡರ್) ತನ್ನ ಏಕಸ್ವವನ್ನು ಪಡೆದುಕೊಂಡ.

ಮುಂದೆ ಕೆಲವು ಕಾಲಾನಂತರ, ನಿರುದ್ಯೋಗಿಯಾಗಿ ನ್ಯೂಯಾರ್ಕಿಗೆ ಬಂದು ಗೋಲ್ಡ್ ಇಂಡಿಕೇಟರ್ ಎಂಬ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡ. ಅಲ್ಲಿ ಒಂದು ಯಂತ್ರದ ರಿಪೇರಿ ಕೈಗೊಂಡು ತನ್ನ ಕೌಶಲಪ್ರದರ್ಶನ ಮಾಡಿದನಾಗಿ ಆ ಕಂಪನಿಯವರು ಅವನನ್ನೇ ತಮ್ಮ ಕಂಪನಿಯ ವಿದ್ಯುತ್‌ಕೇಂದ್ರವಿಭಾಗದ ಮೇಲ್ವಿಚಾರಕನನ್ನಾಗಿ ನೇಮಿಸಿಕೊಂಡರು. ಅಲ್ಲಿ ಗೋಲ್ಡ್‌ಪ್ರಿಂಟರ್ ಎಂಬ ಯಂತ್ರವನ್ನು ರಚಿಸಿ ಮುಂದೆ ತಾನೇ ಖಾಸಗಿ ತಂತಿ–ಟಪಾಲು ವ್ಯವಸ್ಥೆಯನ್ನು ಪ್ರಾರಂಭಿಸಿದ. ವೆಸ್ಟರ್ನ್ ಯೂನಿಯನ್ ಎಂಬ ಸಂಸ್ಥೆ ಈ ಯಂತ್ರವನ್ನು 40,000 ಡಾಲರುಗಳನ್ನು ಕೊಟ್ಟು ಕೊಂಡಿತು. ಬಂದ ಹಣದಿಂದ ಎಡಿಸನ್ ನ್ಯೂಜರ್ಸಿಯ ನೇವಾರ್ಕದಲ್ಲಿ ತನ್ನದೇ ಆದ ಕಾರ್ಯಾಗಾರವೊಂದನ್ನು ಸ್ಥಾಪಿಸಿದ. ಇಲ್ಲಿ ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಸುದ್ದಿಗಳನ್ನು ತಂತಿಯ ಮೂಲಕ ಕಳುಹಿಸುವ ವಿಧಾನವನ್ನು ಕಂಡುಹಿಡಿದ. ಇದಾದ ಅನಂತರ ಸ್ಟಾಕ್ ಟಿಕರ್ಸ್, ಡೂಪ್ಲೆಕ್ಸ್, ಕ್ವಾಡ್ರೂಪ್ಲೆಕ್ಸ್ ಮತ್ತು ಸ್ವಯಂಚಾಲಿತ ಟೆಲಿಗ್ರಾಫ್ ವ್ಯವಸ್ಥೆಗಳು ಮತ್ತು ವಿದ್ಯುತ್ ಲೇಖಣಿ – ಇವು ಈತ ರೂಪಿಸಿ, ರಚಿಸಿದ ಇತರ ಯಂತ್ರ ಸಾಧನಗಳು. 1876ರಲ್ಲಿ ಮೆನ್ಲೋಪಾರ್ಕಿನ ವಿಶ್ವವಿಖ್ಯಾತ ಪ್ರಯೋಗಶಾಲೆಯನ್ನು ಸ್ಥಾಪಿಸಿದ. 1877–78ರಲ್ಲಿ ಈತ ಕಂಡುಹಿಡಿದ ಕಾರ್ಬನ್ ಟ್ರಾನ್ಸ್‌ಮಿಟರ್ ಯಂತ್ರದಿಂದಾಗಿ ಅಲೆಕ್ಸಾಂಡರ್ ಬೆಲ್‌ನ ಟೆಲಿಫೋನಿನ ಸುಧಾರಣೆ ಸಾಧ್ಯವಾಯಿತು. ಇದಾದ 10 ವರ್ಷಗಳ ಅನಂತರ ಇದೇ ದಿಶೆಯಲ್ಲಿ ಬಂದ ಮತ್ತೊಂದು ಯಂತ್ರ ಎಲೆಕ್ಟ್ರೋಮೋಟೋಗ್ರಾಫ್, ಫೋನೋಗ್ರಾಫ್ ವ್ಯವಸ್ಥೆಯಲ್ಲಿ ಈತ ನಡೆಸಿದ ಸುಧಾರಣೆಗಳಿಂದಾಗಿ ಮೆನ್ಲೋಪಾರ್ಕಿನ ಮಾಂತ್ರಿಕನೆಂಬುದಾಗಿ ಇವನು ಖ್ಯಾತಿಗೊಂಡ. ಫೋನೋಗ್ರಾಫ್ ಅಥವಾ ಮಾತನಾಡುವ ಯಂತ್ರವನ್ನೂ ಈತ ಸುಧಾರಿಸಿದ. ಧ್ವನಿಯನ್ನು ಕೇವಲ ಮುದ್ರಿಸುವುದಲ್ಲದೆ, ಪುನರ್ ನುಡಿಸುವುದರ ಬಗ್ಗೆಯೂ ಶ್ರಮಿಸಿದ. ಕಚೇರಿಗಳಲ್ಲಿ ಬಳಸುವ ಉಕ್ತಲೇಖನಯಂತ್ರ (ಎಡಿಫೋನ್) ಈತನ ಸಂಶೋಧನೆಯ ಫಲವೇ. 1879ರ ಅಕ್ಟೋಬರಿನಲ್ಲಿ ಪ್ರಜ್ವಲನ ದೀಪವೊಂದನ್ನು (ಇನ್‌ಕ್ಯಾಂಡಿಸೆಂಟ್ ಲ್ಯಾಂಪ್) ಕಂಡುಹಿಡಿದು, ಅದು 40 ಗಂಟೆಗಳಿಗೂ ಹೆಚ್ಚುಕಾಲ ಉರಿಯುವಂತೆ ಅದಕ್ಕೆ ವಿಶೇಷ ರೀತಿಯ ಮಾರ್ಪಾಡುಗಳನ್ನು ಮಾಡಿದ ಖ್ಯಾತಿ ಇವನದು. ವಿದ್ಯುದುತ್ಪಾದಕದಿಂದ (ಎಲೆಕ್ಟ್ರಿಕ್ ಡೈನಮೊ) ಹಿಡಿದು ವಿದ್ಯುತ್‌ಬಲ್ಬಿನವರೆಗಿನ ಸಮಗ್ರ ಸಾಮಗ್ರಿಗಳ ಸಂಘಟನೆಯನ್ನು ಎಡಿಸನ್ ಸಿದ್ಧಪಡಿಸಿದ. ಇದೇ ವೇಳೆಗೆ ಎಡಿಸನ್–ಪರಿಣಾಮ, ಎಲೆಕ್ಟ್ರಾನ್ ಮುಂತಾದುವುಗಳ ಬಗ್ಗೆ ಶೋಧನೆ ನಡೆಸಿ, ಮುಂದೆ ವೈರ್‌ಲೆಸ್ ರೇಡಿಯೋಗಳ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟ. 1891–1900ರ ವರೆಗೂ ಕಬ್ಬಿಣದ ಅದಿರುಗಳ ಸಾರೀಕರಣಕ್ಕೆ ಕಾಂತೀಯ ವಿಧಾನವೊಂದನ್ನು ರೂಪಿಸುವ ಕಾರ್ಯದಲ್ಲಿ ನಿರತನಾದ. 1900–1910ರ ವರೆಗೂ ನಡೆದ ಈತನ ಸಂಶೋಧನೆ ಒಂದು ನೂತನ ವಿದ್ಯುತ್‌ಕೋಶವೊಂದರ ಅಭಿವೃದ್ಧಿಗೆ ಸಂಬಂಧಿಸಿದ್ದು. ಕೈನೆಟೋಸ್ಕೋಪಿಕ್ ಕ್ಯಾಮೆರಾ ಎಂಬ ಬಿಂಬಗ್ರಾಹಿಯನ್ನು 1891ರಲ್ಲಿ ರಚಿಸಿದ. ಅದು ಕೇವಲ ಒಂದು ಸಣ್ಣ ಪೆಟ್ಟಿಗೆಯಾಕಾರದಲ್ಲಿದ್ದು, ಅದರೊಳಕ್ಕೆ ಫಿಲ್ಮನ್ನು ಹಾಕಿ, ಚಿತ್ರವನ್ನು ನೋಡಬಹುದಾಗಿದ್ದು, ಮುಂದೆ ಇವನ್ನೇ ಪರದೆಯ ಮೇಲೆ ಚಲನಚಿತ್ರವನ್ನು ಪ್ರದರ್ಶಿಸುವಂತೆಯೂ ಸುಧಾರಿಸಲಾಯಿತು. 1912ರಲ್ಲಿ ಇವನ ಕೈನೆಟೋಫೋನ್ ವಾಕ್‌ಚಲನಚಿತ್ರ ಉದ್ಯಮಕ್ಕೆ ಉಪಯೋಗವಾಯಿತು. 1875ರ ಡಿಸೆಂಬರ್ ತಿಂಗಳಿನ ಸೈನ್‌ಟಿಫಿಕ್ ಅಮೆರಿಕನ್ ನಿಯತಕಾಲಿಕದಲ್ಲಿ ಎಥಿರಿಕ್ ಫೋರ್ಸ್ ಎಂಬುದರ ಬಗ್ಗೆ ಒಂದು ದೊಡ್ಡ ಲೇಖನದಲ್ಲಿ ಇಂಗಾಲದ ಸ್ಥಳಗಳ ನಡುವೆ ಯಾವ ರೀತಿ ವಿದ್ಯುತ್ ಕಿಡಿಗಳು ಹಾಯುತ್ತವೆಯೆಂಬುದನ್ನು ವಿವರಿಸಿದ್ದಾನೆ.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಅಮೆರಿಕದ ನೌಕಾಪಡೆಯ ಸಲಹೆಗಾರ ಸಮಿತಿಯ ಮುಖ್ಯಸ್ಥನಾಗಿ ಸೇವೆ ಸಲ್ಲಿಸಿ, ಯುದ್ಧಕಾರ್ಯಕ್ಕಾಗಿ 40 ಹೊಸ ಹೊಸ ಉಪಕರಣಗಳನ್ನು ಒದಗಿಸಿಕೊಟ್ಟ. ಯುದ್ಧಾಭಿಮಾನಿಯಾದ ಈ ಸಂಶೋಧಕ 1869 ರಿಂದ 1910 ತನಕ 1,003 ಏಕಸ್ವಪೇಟೆಂಟ್‌ಗಳನ್ನು ಪಡೆದ. ಇವನ ಶೋಧನೆಗಳ ಸಲುವಾಗಿ ಲಕ್ಷಾಂತರ ಮಂದಿಗೆ ಉದ್ಯೋಗ ದೊರೆತು, ಕೋಟ್ಯಂತರ ಡಾಲರುಗಳ ಲಾಭ ಗಳಿಕೆಯ ಹೊಸ ಹೊಸ ಉದ್ದಿಮೆಗಳೇ ಹುಟ್ಟಿಕೊಂಡುವು. 1927ರಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್‌ಗೆ ಪ್ರವೇಶ ದೊರಕಿತು. 1928ರಲ್ಲಿ ಅಮೆರಿಕದ ಸಂಸತ್ತು (ಕಾಂಗ್ರೆಸ್) ಈತನಿಗೆ ಸ್ವರ್ಣಪದಕವನ್ನಿತ್ತು ಸನ್ಮಾನಿಸಿತು. ಇವನ ಎಲ್ಲ ಶೋಧನೆಗಳು 11,599,000,000 ಡಾಲರುಗಳಷ್ಟು ಬೆಲೆಬಾಳುತ್ತವೆಂದು ಹೇಳಿ, ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮುಂತಾದ ಯುರೋಪಿನ ರಾಷ್ಟ್ರಗಳು ಪದವಿ ಪದಕಗಳಿಂದ ಈ ವಿಶ್ವಕರ್ಮನನ್ನು ಗೌರವಿಸಿದುವು. (ಜಿ.ಕೆ.ಎ.)

**ಎಡೆಯೂರು:** ತುಮಕೂರು ಜಿಲ್ಲೆಯ ಕುಣಿಗಲು ತಾಲ್ಲೂಕಿನ ಒಂದು ಗ್ರಾಮ ಮತ್ತು ಯಾತ್ರಾಸ್ಥಳ. ಬೆಂಗಳೂರು–ಹಾಸನ ಹೆದ್ದಾರಿಯಲ್ಲಿ ಕುಣಿಗಲಿಗೆ ನೈಋತ್ಯದಲ್ಲಿ 19ಕಿಮೀ ದೂರದಲ್ಲಿದೆ. ಇಲ್ಲಿ 15ನೆಯ ಶತಮಾನದಲ್ಲಿದ್ದ ತೋಂಟದ ಸಿದ್ಧಲಿಂಗಸ್ವಾಮಿಗಳ ಸಮಾಧಿ ಇದೆ. ವೀರಶೈವ ಮಠ, ಚಿತಮಠ, ಸುಂದರವಾದ ತಟಾಕ ಮತ್ತು ಶಿಥಿಲವಾಗಿರುವ ವರದರಾಜಸ್ವಾಮಿ ದೇವಸ್ಥಾನ ಇತರ ಮುಖ್ಯ ಆಕರ್ಷಣೆಗಳು. ಎಡೆಯೂರು ವೀರಶೈವ ಧಾರ್ಮಿಕ ಕೇಂದ್ರವಾಗಿದ್ದರೂ ಎಲ್ಲ ಮತಗಳವರೂ ಈ ಕ್ಷೇತ್ರಕ್ಕೆ ಬರುತ್ತಾರೆ.

ಸಿದ್ಧಲಿಂಗೇಶ್ವರ ದೇವಾಲಯ ದ್ರಾವಿಡ ವಾಸ್ತುಶೈಲಿಯಲ್ಲಿದೆ. ದೇವಾಲಯದ ಮಹಾದ್ವಾರದ ಬಲಬದಿಯ ಪ್ರಾಂಗಣದಲ್ಲಿರುವ ಶಾಸನದಲ್ಲಿ ದಾನಿ ವಾಸದ ಚೆನ್ನವೀರಪ್ಪ ಒಡೆಯ ಈ ಮಂದಿರವನ್ನು ಕಟ್ಟಿಸಿದನೆಂದು ತಿಳಿದು ಬರುವುದಲ್ಲದೆ ಸಿದ್ಧಲಿಂಗ ಸ್ವಾಮಿಗಳ ಮಾಹಾತ್ಮ್ಯವೂ ವರ್ಣಿತವಾಗಿದೆ. ಈಗ ಶಾಸನದ ಬಲಬದಿಗೆ 6' ಎತ್ತರವಿರುವ ಶಿಲೆಯ ಮೇಲೆ ಎಡಗೈಯಲ್ಲಿ ಲಿಂಗವನ್ನಿಟ್ಟುಕೊಂಡು ಕುಳಿತಿರುವ ಸ್ವಾಮಿಗಳ, ನಿಂತಿರುವ ಚೆನ್ನವೀರಪ್ಪ ಮತ್ತು ಆತನ ಪತ್ನಿ ಪಾರ್ವತಮ್ಮ ಇವರ ಚಿತ್ರಗಳನ್ನು ಕಾಣಬಹುದು. ಮುಖಮಂಟಪ ಮತ್ತು ಹಜಾರದ ಚಾವಣಿಯ ಮೇಲೆ ಸಿದ್ಧಲಿಂಗಸ್ವಾಮಿಗಳ ಜೀವನದ ಹಲವು ದೃಶ್ಯಗಳನ್ನು

ಮತ್ತು ಶಿವನ ಇಪ್ಪತ್ತೈದು ಲೀಲೆಗಳನ್ನೂ ಚಿತ್ರಿಸಿ ಅವನ್ನು ಕನ್ನಡದಲ್ಲಿ ವಿವರಿಸಿದೆ. ಗದ್ದುಗೆಯ ಮೇಲೆ ಬೆಳ್ಳಿಯ ಕವಚವುಳ್ಳ ವಿಭೂತಿಲಿಂಗವೂ ಲೋಹದ ಉತ್ಸವಮೂರ್ತಿಯೂ ಇವೆ. ಇಲ್ಲಿ ಪ್ರತಿ ವರ್ಷ ಯುಗಾದಿ ಆದ ಅನಂತರ ರಥೋತ್ಸವ ಜರುಗುತ್ತದೆ. ಸಾಲು ಮರಗಳ

ಸಿದ್ಧಲಿಂಗೇಶ್ವರ ದೇವಾಲಯ

ತೋಪು ಮತ್ತು ಮಾರ್ಕೋನಹಳ್ಳಿಯ ಜಲಾಶಯದ ಹಿನ್ನೆಲೆಯಲ್ಲಿ ಇದೊಂದು ಸುಂದರ ನೆಲೆಯಾಗಿ ಹೆಚ್ಚು ಜನರನ್ನು ಆಕರ್ಷಿಸುತ್ತಿದೆ. (ಎಸ್.)

**ಎಡೆಯೂರು ಸಿದ್ದಲಿಂಗೇಶ್ವರ:** ಸು.1470. ಪ್ರಸಿದ್ಧ ವೀರಶೈವ ಯತಿ, ಗುರು ಹಾಗೂ ಕವಿ. ಷಟ್ಸ್ಥಲಜ್ಞಾನಸಾರಾಮೃತ ಎಂಬ ಗ್ರಂಥದ ಕರ್ತೃ. ಚಾಮರಾಜನಗರ ಜಿಲ್ಲೆಯ ಅದೇ ತಾಲ್ಲೂಕಿನ ಹರದನಹಳ್ಳಿ ಇವರ ಜನ್ಮಸ್ಥಳ. ಗುರು ಗೋಸಲ ಚೆನ್ನಬಸವೇಶ್ವರ.

ಇವರಿಗೆ ತೋಂಟದ ಸಿದ್ಧಲಿಂಗ ಯತಿ, ಸಿದ್ಧಲಿಂಗ ಶಿವಯೋಗಿ ಎಂಬ ಹೆಸರುಗಳೂ ಇವೆ. ಎಡೆಯೂರಿನ ಸಮೀಪದ ಕಗ್ಗೆರೆಯ ಹತ್ತಿರವಿರುವ ನಾಗಿಣೀನದಿ ತೀರದ ತೋಟದಲ್ಲಿ ಸು.12 ವರ್ಷಕಾಲ ಧ್ಯಾನಸ್ಥರಾಗಿದ್ದು ಶಿವಯೋಗದಲ್ಲಿದ್ದುದರಿಂದ ಇವರಿಗೆ ತೋಂಟದ ಎಂಬ ವಿಶೇಷಣ ರೂಢಿಗೆ ಬಂದಂತೆ ತಿಳಿಯುತ್ತದೆ. ಇವರು ವಿಜಯನಗರದ ವಿರೂಪಾಕ್ಷನ (1465–85) ಕಾಲದಲ್ಲಿದ್ದು ಅನೇಕ ಪವಾಡಗಳನ್ನು ಮೆರೆದ ಮಹಿಮಾಪುರುಷರೆಂದೂ ನಿರಂಜನ ಗಣೇಶನ ಅಪರಾವತಾರವಾಗಿದ್ದರೆಂದೂ ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣದಿಂದ ತಿಳಿದುಬರುತ್ತದೆ.

ಸಿದ್ಧಲಿಂಗೇಶ್ವರರು ಎಡೆಯೂರಿಗೆ ಬಂದು ನೆಲೆಸುವ ಮುನ್ನ ಸೌರಾಷ್ಟ್ರ, ಕೊಲ್ಲಿಪಾಕಿ, ಕೇದಾರ, ಚಿದಂಬರ, ಶ್ರೀರಂಗ, ಕಂಚಿ, ಕಾಳಹಸ್ತಿ, ಅರುಣಾಚಲ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಲ್ಲಿ ಕೆಲವು ಪವಾಡಗಳನ್ನು ಮೆರೆದು ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಅರುಣಾಚಲದ ರಾಜ ಇಂಥದೊಂದು ಪವಾಡವನ್ನು ಕಣ್ಣಾರೆ ಕಂಡು ಇವರ ಮಹಿಮೆಯನ್ನು ಮೆಚ್ಚಿ ವೀರಶೈವನಾಗಿ ಪರಿವರ್ತಿತನಾದಂತೆ ಪ್ರತೀತಿ ಇದೆ. ಒಮ್ಮೆ ಇವರು ಈಗಿನ ಸಿದ್ಧಗಂಗಾ ಕ್ಷೇತ್ರಕ್ಕೆ ಬಂದಾಗ ನೀರಿನ ಕ್ಷಾಮದಿಂದ ಬಳಲುತ್ತಿದ್ದ ಈ ನಾಡಿನಲ್ಲಿ ಇವರ ಪಾದಸ್ಪರ್ಶಮಾತ್ರದಿಂದ ಗಂಗೆ ಚಿಮ್ಮಿದಳೆಂದೂ ಅಂದಿನಿಂದ ಆ ಕ್ಷೇತ್ರಕ್ಕೆ ಸಿದ್ಧಗಂಗಾ ಕ್ಷೇತ್ರವೆಂದು ಹೆಸರಾಯಿತು ಎಂಬುದು ಇನ್ನೊಂದು ಪ್ರತೀತಿ. ಕುಣಿಗಲು ತಾಲ್ಲೂಕಿನ ಕಗ್ಗೆರೆಯಲ್ಲಿ 12 ವರ್ಷ ಶಿವಯೋಗದಲ್ಲಿದ್ದು ಅನಂತರ ಎಡೆಯೂರಿನ ಬಳಿಯ ಚಿತಾಮಠದಲ್ಲಿ ಕೆಲಕಾಲ ಕಳೆದು ಬೋಳಬಸವರಾಜೇಂದ್ರ ಎಂಬುವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿ ಇವರು ಎಡೆಯೂರಲ್ಲಿ ನಿರ್ವಿಕಲ್ಪ ಸಮಾಧಿ ಹೊಂದಿದರೆಂದು ಐತಿಹ್ಯಗಳು ತಿಳಿಸುತ್ತವೆ. ಇವರ ಜ್ಞಾಪಕಾರ್ಥವಾಗಿ ಈ ಊರಿನ ಬಳಿ ಕಟ್ಟಿಸಿದ ಸಿದ್ಧಲಿಂಗೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಈ ಯೋಗಿಯ ಮಹಿಮೆಯನ್ನು ಬಹಳವಾಗಿ ಕೊಂಡಾಡಿರುವ ಒಂದು ಶಿಲಾಶಾಸನವಿದೆ (1500). ಇದರಲ್ಲಿ ಇವರ ಶಿಷ್ಯರಲ್ಲಿ ಕೆಲವರ ಹೆಸರುಗಳನ್ನು ಉಲ್ಲೇಖಿಸಲಾಗಿದ್ದು, ಇವರಿಗಾಗಿ ಕೆಲಭಕ್ತರು ಈ ಊರಲ್ಲೇ ಒಂದು ಕಲ್ಲುಮಠ ಕಟ್ಟಿಸಿದಂತೆ ಹೇಳಿದೆ. ಚಿತ್ರದುರ್ಗದ ಶಾಸನದಲ್ಲಿ (1738) ಸಿದ್ಧಲಿಂಗೇಶ್ವರರ ವಚನವೊಂದು ಉಲ್ಲೇಖಿತವಾಗಿದೆ. ಇವರನ್ನು ಕುರಿತು ಶಾಂತೇಶನ ತೋಂಟದ ಸಿದ್ಧೇಶ್ವರನ ಪುರಾಣ, ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣ, ಸಿದ್ಧನಂಜೇಶನ ಭಾವರತ್ನಾಭರಣ (ಈ ಗ್ರಂಥ ದೊರೆತಿಲ್ಲ). ಹೇರಂಬನ ಸಿದ್ಧೇಶ್ವರ ಸಾಂಗತ್ಯ ಮೊದಲಾದ ಕೃತಿಗಳು ರಚಿತವಾಗಿವೆ. ಕರ್ತೃ ಗೊತ್ತಿಲ್ಲದ ತೋಂಟದ ಸಿದ್ಧೇಶ್ವರ ರಗಳೆಯಲ್ಲಿ ಇವರ ಪವಾಡಗಳನ್ನು ಬಣ್ಣಿಸಲಾಗಿದೆ. ಚೆನ್ನವೀರ ಜಂಗಮದೇವನ ಅಸಮಗ್ರ ಷಟ್ಸ್ಥಲ ವಲ್ಲಭದಲ್ಲಿ ಈ ಯತಿಯ ಚರಿತೆ ಮತ್ತು ಪವಾಡಗಳು ನಿರೂಪಿತವಾಗಿವೆ. ಎಡೆಯೂರಿನಲ್ಲಿ ಇರುವ ಇವರ ಗದ್ದುಗೆ ಶಿವಭಕ್ತರಿಗೆ ತೀರ್ಥಕ್ಷೇತ್ರವಾಗಿವೆ. ಸ್ವತಂತ್ರ ಸಿದ್ಧಲಿಂಗೇಶ್ವರ ಮತ್ತು ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಇವರ ಶಿಷ್ಯವರ್ಗಕ್ಕೆ ಸೇರಿದವರು.

ಷಟ್ಸ್ಥಲಜ್ಞಾನಸಾರಾಮೃತ ವಚನರೂಪದಲ್ಲಿದೆ. ಇದರಲ್ಲಿ 701 ವಚನಗಳೂ 7 ವೃತ್ತಗಳೂ ಇವೆ. ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೆ ಎಂಬುದು ಇವರ ವಚನಗಳ ಅಂಕಿತ. ಗ್ರಂಥದಲ್ಲಿ ಷಟ್ಸ್ಥಲ ವಿಚಾರ ವಿಸ್ತಾರವಾಗಿ ನಿರೂಪಿತವಾಗಿದೆ. ಶಿವಯೋಗದ ಸೂಕ್ಷ್ಮವಾದ ವಿವರಣೆ ಇದೆ. ಇವರ ವಚನಗಳು ವಿಶೇಷವಾಗಿ ಬೆಡಗಿನಿಂದ ಕೂಡಿದ್ದು, ಕೆಲವು ವಚನಗಳಲ್ಲಿ ಉತ್ತಮ ಸಾಹಿತ್ಯಗುಣ ಕಂಡುಬರುತ್ತದೆ. ಇವು ಸಾಧಕನ ಕಳವಳ ಆತ್ಮರೋದನಗಳಿಗಿಂತ ಸಿದ್ಧಪುರುಷನ ಪ್ರಶಾಂತತೆಗೆ ಹೆಸರಾಗಿವೆ. ಕಾಮದಿಂದ ಕರಗಿದೆನಯ್ಯಾ, ಕ್ರೋಧದಿಂದ ಕೊರಗಿದೆನಯ್ಯಾ, ಲೋಭಮೋಹಗಳಿಂದ ಅತಿನೊಂದೆನಯ್ಯಾ, ಮದಮತ್ಸರಗಳಿಂದ ಬೆದೆಬೆದೆ ಬೆಂದೆನಯ್ಯಾ, ಅಹಂಕಾರ ಮಮಕಾರದಿಂದ ಮತಿಮಂದನಾಗಿರ್ದೆನಯ್ಯಾ, ಇದು ಕಾರಣ ಎನ್ನ ಕಾಮಾದಿ ಷಡ್ವರ್ಗಂಗಳ ಕಳೆದು ಅಹಂಕಾರ ಮಮಕಾರಗಳ ಮಾಣಿಸಿ ನಿರಹಂಕಾರಿಯೆಂದೆನಿಸಯ್ಯಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ ಎಂಬ ವಚನ ಇವರ ಮಹೋನ್ನತ ವ್ಯಕ್ತಿತ್ವಕ್ಕೆ ಸುಲಲಿತ ವಿಚಾರಧಾರೆಗೆ ನಿದರ್ಶನವಾಗಿದೆ. ಇವರ ವಚನಗಳಿಗೆ ಅನುಭಾವ ಸಾಹಿತ್ಯದಲ್ಲಿ ಮಿಗಿಲಾದ ಸ್ಥಾನವಿದೆ. (ಜಿ.ಎಂ.)

**ಎಡೆಸ್ಟಿನ್:** ಪುಂಡಿ ಬೀಜದಲ್ಲಿರುವ ಗ್ಲಾಬ್ಯುಲಿನ್ ಜಾತಿಗೆ ಸೇರಿದ ಪ್ರೋಟೀನು. ಇದನ್ನು ಸ್ಫಟಿಕೀಕರಿಸಲಾಗಿದೆ. ಇದು ಮತ್ತು ಇದರ ಹೈಡ್ರೊಕ್ಲೋರೈಡು ನೀರಿನಲ್ಲಿ ವಿಲೀನವಾಗುವುದಿಲ್ಲ. ಎಲೆಕ್ಟ್ರಾನ್ ಸೂಕ್ಷ್ಮದರ್ಶನ, ಅತಿ ಅಪಕೇಂದ್ರೀಯತೆ (ಅಲ್ಟ್ರಾ ಸೆಂಟ್ರಿಫ್ಯೂಗೇಶನ್) ಮತ್ತು ಬೆಳಕು ಚದುರಿಕೆ (ಲೈಟ್ ಸ್ಕ್ಯಾಟರಿಂಗ್) ವಿಧಾನಗಳಿಂದ ಎಡೆಸ್ಟಿನ್ನಿನ ಅಣುತೂಕ 31,000–34,000 ಎಂದು ನಿರ್ಧರಿಸಲಾಗಿದೆ. (ಎಂ.ಆರ್.ಆರ್.)

**ಎಡೆಸ್ಸ:** ಈ ಹೆಸರಿನ ಎರಡು ನಗರಗಳಿವೆ. 1. ಮ್ಯಾಸಿಡೋನಿಯದ ಪ್ರಾಚೀನ ರಾಜಧಾನಿಯಾದ ಎಡೆಸ್ಸ ಆ ರಾಜ್ಯದ ಪೆಲ್ಲಾ ಪ್ರಾಂತ್ಯದ ಪ್ರಮುಖ ನಗರ. ಎಡೆಸ್ಸ ನಗರ ಮತ್ತು ಪೆಲ್ಲಾ ಪ್ರಾಂತ್ಯದ ಪೆಲ್ಲಾ ನಗರ – ಇವುಗಳಿಗೆ ಸೇರಿದ ಕ್ರೈಸ್ತ ಧರ್ಮಾಧಿಕಾರಿಯ ಪೀಠ ಈ ನಗರದಲ್ಲಿದೆ. ಸಲೋಂಕಿಯ–ಬಿಟೋಲ ರೈಲುಮಾರ್ಗದಲ್ಲಿ ಸಲೋಂಕಿಯಕ್ಕೆ ಪಶ್ಚಿಮ ಉತ್ತರ–ಪಶ್ಚಿಮದಲ್ಲಿ 111 ಕಿ.ಮೀ. ದೂರದಲ್ಲಿದೆ. ನಗರ ಲೂಧಿಯಾಸ್ ನದೀಕಣಿವೆಯ ಮೇಲ್ಭಾಗದಲ್ಲಿರುವ ಕಲ್ಲುಗುಡ್ಡವೊಂದರ ಮೇಲಿದೆ. ಇಲ್ಲಿ ಉಪವನಗಳು ಮತ್ತು ದ್ರಾಕ್ಷಿ ತೋಟಗಳು ಹೇರಳವಾಗಿರುವುದರಿಂದ ಹಿಂದೆ ಇದಕ್ಕೆ ಮೈದಾಸನ ತೋಟ ಎಂಬ ಹೆಸರು ಬಂದಿತ್ತು. ಗುಡ್ಡದ ಮೇಲಿಂದ ನಗರದ ಪೂರ್ವಭಾಗದಲ್ಲಿರುವ ಬಯಲು ಪ್ರದೇಶಕ್ಕೆ ಹರಿದು ಬರುವ ಝರಿಗಳ ರಮಣೀಯತೆ ಮತ್ತು ಜಲಸಮೃದ್ಧಿಯಿಂದಾಗಿ ಇದಕ್ಕೆ ಮಧ್ಯಯುಗದಲ್ಲಿ ವೊಡೆನ ಎಂಬ ಹೆಸರು ಬಳಕೆಯಲ್ಲಿತ್ತು. (ಸ್ಲಾವೋನಿಕ್ ಭಾಷೆಯಲ್ಲಿ ವೊಡ ಎಂದರೆ ನೀರು ಎಂದು ಅರ್ಥ). ಇದು ರಗ್ಗು, ಕಂಬಳಿ ಮುಂತಾದ ಜವಳಿ ಉದ್ಯಮದ ಕೇಂದ್ರವಾಗಿದೆ. ವ್ಯವಸಾಯ ಪ್ರಧಾನವಾದ ಪ್ರದೇಶವೂ ಹೌದು. ವಿಶೇಷವಾಗಿ ಹೊಗೆಸೊಪ್ಪು, ಗೋದಿ, ದ್ರಾಕ್ಷಿ ಮತ್ತಿತರ ಹಣ್ಣುಗಳನ್ನು ಬೆಳೆಯುತ್ತಾರೆ. ಹತ್ತಿ ಮತ್ತು ರೇಷ್ಮೆವಸ್ತ್ರಗಳ ಹಾಗೂ ಹಲವು ಬಗೆಯ ಆಹಾರವಸ್ತುಗಳ ಉತ್ಪಾದನೆ ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಹೀಗಾಗಿ, ಇದು ಪ್ರಮುಖ ಮಾರುಕಟ್ಟೆಯೂ ಆಗಿದೆ.

ಈ ನಗರಕ್ಕೆ ಏಗೆ ಎಂಬ ಹೆಸರಿತ್ತು ಎಂದು ಹೇಳಲಾಗಿದೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದರೂ ಪ್ರಾಚೀನ ಏಗೆನಗರ ಬಹುಶಃ ಆ ಸ್ಥಳದಲ್ಲಿಯೇ ಇದ್ದಿರಬೇಕೆಂದು ಹೇಳಲಾಗಿದೆ. ಪ್ರ.ಶ.ಪೂ. 5ನೆಯ ಶತಮಾನದಲ್ಲಿ ರಾಜಧಾನಿಯನ್ನು ಪೆಲ್ಲಾಕ್ಕೆ ವರ್ಗಾಯಿಸಿದಾಗಲೂ ಈ ನಗರ ಮ್ಯಾಸಿಡೋನಿಯಾದ ರಾಜರ ಸಾಂಪ್ರದಾಯಿಕ ಕೇಂದ್ರವಾಗಿ ಉಳಿಯಿತು. ಇದು ಈ ರಾಜರ ಸಮಾಧಿಸ್ಥಳ ಅಥವಾ ರುದ್ರಭೂಮಿಯೂ ಹೌದು. ಪ್ರ.ಶ.ಪೂ. 336ರಲ್ಲಿ ಎರಡನೆಯ ಫಿಲಿಪನನ್ನು ಕೊಲೆ ಮಾಡಲಾಯಿತು. ರೋಮನ್ನರ ಕಾಲದಲ್ಲಿ ವಿಯ ಎಗ್ನೇಷಿಯದ ರಂಗಭೂಮಿಗಳಲ್ಲೊಂದು ಈ ನಗರದಲ್ಲಿ ನೆಲೆಗೊಂಡಿತ್ತು. ಮುಂದೆ ಬಲ್ಗೇರಿಯನ್ನರೂ, ಬೈಜಾಂಟಿಯನ್‍ರು ಇದರ ಸಂಪತ್ತನ್ನು ಹಂಚಿಕೊಂಡರು. ಅನಂತರ 13ನೆಯ ಶತಮಾನದಲ್ಲಿ ಬೈಜಾಂಟಿಯನ್ ವಿರೋಧಿ ರಾಜ್ಯಗಳಾದ ಥೆಸ್ಸಾಲೋನಿಕ ಮತ್ತು ನಿಕಾಯಿ ರಾಜ್ಯಗಳು ಮತ್ತೆ ಇದರ ಸಂಪತ್ತನ್ನು ಹಂಚಿಕೊಂಡುವು. 14ನೆಯ ಶತಮಾನದಲ್ಲಿ ಇದು ಸರ್ಬಿಯನ್ನರ ವಶವಾಯಿತು. 1349ರಲ್ಲಿ ಆರನೆಯ ಜಾನ್ ಕ್ಯಾಂಟ ಕ್ಯೂಜೆನಸ್ ಇದನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಂಡಿದ್ದ. ಮುಂದೆ ಇದು ತುರುಷ್ಕರ ವಶವಾಯಿತು. 1912ರ ಅಕ್ಟೋಬರಿನಲ್ಲಿ ಇದು ಗ್ರೀಕ್ ಸಾಮ್ರಾಜ್ಯಕ್ಕೆ ಸೇರಿಹೋಯಿತು. ಎರಡನೆಯ ವಿಶ್ವಯುದ್ಧದಲ್ಲಿ ಜರ್ಮನ್ ಪಡೆಗಳು ಈ ನಗರವನ್ನು ಆಕ್ರಮಿಸಿಕೊಂಡಿದ್ದುವು. ಅನಂತರ ನಡೆದ ಅಂತರ್ಯುದ್ಧಕ್ಕೂ ಇದೇ ಹೋರಾಟದ ಕಣವಾಗಿತ್ತು.

2. ಸಿರಿಯ ಪ್ರಸ್ಥಭೂಮಿಯ ಉತ್ತರದ ಅಂಚಿನಲ್ಲಿರುವ ಪ್ರಾಚೀನ ನಗರ. ಮ್ಯಾಸಿಡೋನಿಯದ ಪ್ರಾಚೀನ ನಗರದ ಹೆಸರನ್ನೇ ಈ ನಗರಕ್ಕೂ ಇಡಲಾಯಿತು. ಅಲ್ಲಿಂದ ಬಂದ ವಲಸೆಗಾರರು ಇಲ್ಲಿ ನೆಲೆಸಿದುದೇ ಇದಕ್ಕೆ ಕಾರಣ. ಈ ಪ್ರದೇಶವೇ ಇಂದು ಉರ್ಫ ನಗರವಾಗಿ ಮಾರ್ಪಟ್ಟಿದೆ. ಇದು ಜೆರೂಸಲೆಮ್‍ಗೆ 430 ಮೈಲಿಗಳ ದೂರದಲ್ಲಿ, ಈಶಾನ್ಯದಲ್ಲಿ ಸ್ವಲ್ಪ ಉತ್ತರದಲ್ಲಿದೆ. ಮೊದಲಿಗೆ ಬಳಕೆಯಲ್ಲಿದ್ದ ಉರ್ಹಾಯಿ ಎಂಬ ಅರಾಮೇಯಿ ಶಬ್ದವೇ ಅದರ ಹಿಂದಿನ ಹೆಸರಿಗೆ ಮೂಲ. ಮೊದಲನೆಯ

ಸೆಲ್ಯೂಕಸ್ ಬಹುಶಃ ಪ್ರ.ಶ. 3ನೆಯ ಶತಮಾನದ ಮೊದಲಲ್ಲಿ ಎಡೆಸ್ಸ ನಗರವನ್ನು ಪುನರ್‌ನಿರ್ಮಿಸಿದಾಗ ಆ ಹೊಸ ನಗರಕ್ಕೆ ಹೊಸ ಹೆಸರಿಡಲಾಯಿತು. ನಗರದ ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದ ಪುರಾವೆಗಳಲ್ಲಿ ಒಂದೆಡೆ ಕ್ರೂರಿ ರಾಜನಾದ ನಿಮ್ರೋದನ ಕಥೆಗಳೂ ಮುಸ್ಲಿಂ ಪ್ರವಾದಿ ಏಬ್ರಹಾಮನ ಉಲ್ಲೇಖಗಳೂ ಕಾಣದೊರೆಯುತ್ತವೆ. ಮುಸ್ಲಿಂ ಸಂಪ್ರದಾಯದ ಪ್ರಕಾರ ಇದು ಏಬ್ರಹಾಮ್ ಹುಟ್ಟಿದ ಊರು. ಇಂದಿಗೂ ಗುಹೆಯೊಂದನ್ನು ತೋರಿಸಿ ಇಲ್ಲಿ ಏಬ್ರಹಾಮ್ ಹುಟ್ಟಿದನೆಂದು ಹೇಳುತ್ತಾರೆ. ನಗರದ ಅವಶೇಷಗಳಲ್ಲಿರುವ ಕಡಿದಾದ ಚಾಚುಕಲ್ಲೊಂದನ್ನು ತೋರಿಸಿ, ನಿಮ್ರೋದ್ ಏಬ್ರಹಾಮನು ಇಲ್ಲಿಂದ ತಳ್ಳಿಸಿ ಕೊಂದಿದ್ದನೆಂದು ಹೇಳುತ್ತಾರೆ. ಸೆಲ್ಯೂಕಸ್ ಈ ನಗರವನ್ನು ಪುನರ್ ನಿರ್ಮಿಸುವುದಕ್ಕೆ ಮುಂಚೆ ಇದು ಅಟರ್‌ಗಾಟಿಸ್ ಎಂಬ ಸಿರಿಯನ್ ದೇವತೆಯ ಉಪಾಸನಾ ಕೇಂದ್ರವಾಗಿತ್ತೆಂಬು ದಕ್ಕೆ ಆಧಾರಗಳಿವೆ. ಆಕೆಯ ಉಪಾಸನೆಗೆ ಸಂಬಂಧಿಸಿದ ಸಿಹಿನೀರು ಮೀನುಗಳ ಕೊಳವೊಂದಿದೆ. ಈ ಕೊಳದ ಮೀನುಗಳನ್ನು ಅತ್ಯಂತ ಪವಿತ್ರವಾದುದೆಂದು ಭಾವಿಸಲಾಗಿದೆ.

ಗ್ರೀಕರು ಪರ್ಷಿಯವನ್ನು ಗೆದ್ದ ಅವಧಿಯಲ್ಲಿ ಇದು ಮೊದಲ ಬಾರಿಗೆ ಐತಿಹಾಸಿಕವಾಗಿ ಪ್ರಮುಖಸ್ಥಾನ ಗಳಿಸಿತು. ಪ್ರ.ಶ.ಪೂ. 137 ರಿಂದ ಪ್ರ.ಶ. 216ರ ವರೆಗೆ ಇದು ಸ್ವತಂತ್ರ ಓಸ್ರೋನ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಪ್ರ.ಶ. 217ರಲ್ಲಿ ಇದು ರೋಮನ್ನರ ಕೈವಶವಾಯಿತು. ಆದರೆ ಸಂಪೂರ್ಣವಾಗಿ ಹೆಲೆನೀಕರಣಕ್ಕೆ ಒಳಗಾಗಲಿಲ್ಲ. ಸಿರಿಯನ್ ಭಾಷೆಯ ಪ್ರಮುಖ ಅಧ್ಯಯನ ಕೇಂದ್ರವಾಯಿತು. ಉತ್ತರ ಮೆಸಪೊಟೇಮಿಯ ಮತ್ತು ಮೆಡಿಟರೇನಿಯನ್ ವಲಯದಲ್ಲಿ ಇದ್ದುದರಿಂದ ಈ ನಗರ ಪಾರ್ಥಿಯ ಮತ್ತು ರೋಮ್‌ಗಳ ನಡುವಣ ಕದನದ ಕಣವಾಯಿತು. ಮುಂದೆ ಪ್ರ.ಶ. 609ರಲ್ಲಿ ಪರ್ಷಿಯನ್ನರು ಮತ್ತು ಪ್ರ.ಶ. 641ರಲ್ಲಿ ಮುಸಲ್ಮಾನರು ಈ ನಗರದ ಮೇಲೆ ಅಧಿಕಾರ ಹೊಂದಿದ್ದರು. ಗಾಡ್‌ಫ್ರೇ ಬೋಯಿಲೋನನ ನೇತೃತ್ವದಲ್ಲಿ ಧರ್ಮಯುದ್ಧ ನಡೆಸಿದ ಧರ್ಮಯೋಧರು 1097ರಲ್ಲಿ ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಪ್ರ.ಶ. 1144ರಲ್ಲಿ 25 ದಿನಗಳ ಕಾಲ ಮುತ್ತಿಗೆ ಹಾಕಿ ಮುಸ್ಲಿಮರು ಈ ನಗರವನ್ನು ಮತ್ತೆ ವಶಪಡಿಸಿಕೊಂಡರು. ಮುಂದೆ ಈಜಿಪ್ಷಿಯನ್ನರು, ಬೈಜಾಂಟೀಯನ್‌ರು, ಮಂಗೋಲರು, ತುರ್ಕೋಮನ್ನರು ಮತ್ತು ಪರ್ಷಿಯನ್ನರ ಕೈದಾಟಿ ಕೊನೆಗೆ ಪ್ರ.ಶ.1637ರಲ್ಲಿ ಇದು ತುರ್ಕಿಸ್ಥಾನದ ವಶವಾಯಿತು. ಬಹಳ ಮುಂಚಿತವಾಗಿಯೇ ಅಂದರೆ ಪ್ರ.ಶ. ಸುಮಾರು 150ರ ಹೊತ್ತಿಗೆ ಕ್ರೈಸ್ತಧರ್ಮ ಇಲ್ಲಿ ಬೇರು ಬಿಟ್ಟಿತ್ತು. ರಾಜ ಅಬ್ಗರ್ ಮತ್ತು ಕ್ರಿಸ್ತನ ನಡುವೆ ನಡೆದಿದ್ದಿತೆಂದು ಹೇಳಲಾದ ಪತ್ರವ್ಯವಹಾರವನ್ನು ಯೂಸೇಬಿಯಸ್ ಎಂಬುವರು ಪತ್ತೆಹಚ್ಚಿದ್ದಾರೆ. ಪ್ರ.ಶ.4ನೆಯ ಶತಮಾನದಿಂದ ಹಿಡಿದು ಇಸ್ಲಾಂ ಧರ್ಮ ತಲೆಯೆತ್ತುವವರೆಗೆ ಈ ನಗರ ಸಿರಿಯನ್ ಭಾಷೆಯ ಮತ್ತು ಕ್ರೈಸ್ತಧರ್ಮದ ಅಧ್ಯಯನಕ್ಕೆ ಮುಖ್ಯವಾದ ಕೇಂದ್ರವಾಗಿ ಪರಿಣಮಿಸಿತ್ತು. ಇಲ್ಲಿ ಅನೇಕ ಧರ್ಮಪ್ರಚಾರ ಶಾಲೆಗಳು ಮತ್ತು ಪ್ರಸಿದ್ಧ ಶಿಕ್ಷಣಸಂಸ್ಥೆಗಳೂ ಇದ್ದುವು. ಇದು ಸರಿಯದ ನಾಲ್ಕು ಮಹಾನಗರಗಳಲ್ಲಿ ಒಂದಾಗಿತ್ತು. ಆಂಟಿಯೋಕ್, ಡಮಾಸ್ಕಸ್, ನಿಸಿಬಿಸ್ ಎಂಬಿವೇ ಉಳಿದ ಮೂರು ಮಹಾನಗರಗಳು. ಇಂದು ಇದು ಪ್ರಮುಖ ವ್ಯಾಪಾರಕೇಂದ್ರವಾಗಿದೆ. ಹತ್ತಿಬಟ್ಟೆಗಳು, ಚರ್ಮದ ವಸ್ತುಗಳು ಮತ್ತು ಚಿನ್ನದ ಆಭರಣಗಳ ತಯಾರಿಕೆಗೆ ಹೆಸರಾಗಿದೆ.

ಎಡೆಸ್ಸ ನಗರದ ಪಶ್ಚಿಮಭಾಗದ ಕಡಿದಾದ ಮುಮ್ಮೈ ಪ್ರದೇಶದಲ್ಲಿರುವ ಅಶ್ವಶಾಲೆಗಳು, ಇಬ್ರಾಹಿಮ್–ಆಲ್–ಖಲೀಲನ ಮಸೀದಿಯ ಒಳ ಆವರಣದಲ್ಲಿರುವ ಗೋಪುರ, ವಿಶೇಷವಾಗಿ ದಕ್ಷಿಣಭಾಗದಲ್ಲಿ ಕಾಣಬರುವ ಗೋಡೆಗಳು, ಅಣೆಕಟ್ಟು ಮತ್ತು ಜಸ್ಟೀನಿಯನ್ ಮಾಡಿಸಿದ ಬಂಡೆಗಳ ನಡುವಣ ತೋಡುದಾರಿಗಳು–ಇವೇ ಈ ಪ್ರಾಚೀನ ನಗರದ ಮುಖ್ಯ ಅವಶೇಷಗಳು.

ಅಶ್ವಶಾಲೆಯ ಪ್ರದೇಶದಲ್ಲಿ ನಿಂತು ನೋಡಿದರೆ ನಗರದ ವಿಹಂಗಮ ನೋಟ ದೊರೆಯುತ್ತದೆ. ಮಧ್ಯಯುಗದಲ್ಲಿ ಕಟ್ಟಿದವೆಂದು ಹೇಳಲಾಗಿರುವ ಈ ಅಶ್ವಶಾಲೆಗಳು ಇಂದೂ ಸುಸ್ಥಿತಿಯಲ್ಲಿವೆ. ಗೋಡೆಗಳು ಗಟ್ಟಿಯಾಗಿವೆ. ಬಂಡೆಯನ್ನು ಕೊರೆದು ನಿರ್ಮಿಸಿರುವ ಆಳವಾದ ಕಂದಕಗಳು ಇವುಗಳಿಗೆ ರಕ್ಷಣೆಯನ್ನೊದಗಿಸುತ್ತವೆ. ಕೋಟೆಯಲ್ಲಿರುವ ಎರಡು ಕಾರಿಂಥಿಯನ್ ಸ್ತಂಭಗಳು ನಗರದ ಅನೇಕ ಭಾಗಗಳಿಗೆ ಚೆನ್ನಾಗಿ ಕಾಣಿಸುತ್ತವೆ. ಇವು ಡಯೋಸ್‌ಕ್ಯೂರಿ ಪಂಥಕ್ಕೆ ಸಂಬಂಧಿಸಿದವುಗಳೆಂದು ಹೇಳಲಾಗಿದೆ. ಇವು ಬೃಹತ್ ಕವಣೆಯಂತ್ರದ ಬಾಹುಗಳಾಗಿದ್ದುವೆಂದೂ ಕ್ರೂರಿಯಾದ ನಿಮ್ರೋದ್ ಪ್ರವಾದಿ ಏಬ್ರಹಾಮನನ್ನು ಕೊಂದಿದ್ದು ಈ ಕವಣೆಯಂತ್ರದಿಂದಲೇ ಎಂದೂ ಹೇಳಲಾಗಿದೆ.

ಕೋಟೆಗೆ ಕೊಂಚದೂರದಲ್ಲಿ ಕಾಣುವ ಬೆಟ್ಟಗಳ ಬಳಿ ಅಸಂಖ್ಯಾತ ಗುಹೆಗಳಿವೆ. ಇವುಗಳ ಪ್ರವೇಶದ್ವಾರದಲ್ಲಿ ಅಲಂಕಾರ ಮಾಡಿರುವುದು ಕಂಡುಬರುತ್ತದೆ. ಇವು ಬಂಡೆಯಲ್ಲಿ ತುಂಬ ಒಳಕ್ಕೆ ಚಾಚಿಕೊಂಡಿದ್ದು, ಕೆಲವೆಡೆಗಳಲ್ಲಿ ನೀರಿನ ತೊಟ್ಟಿಗಳಿವೆ. ಒಂದು ಗುಹೆಯಲ್ಲಿ ಪ್ರ.ಶ. 2 ಅಥವಾ 3ನೆಯ ಶತಮಾನದ್ದೆಂದು ಹೇಳಲಾಗಿರುವ ಸುಂದರವಾದ ಶಬಲ ಖಚಿತ ನೆಲಗಟ್ಟಿದೆ.

ಏಬ್ರಹಾಮ್ ಮಸೀದಿಯ ಒಳ ಆವರಣದಲ್ಲಿರುವ ಗೋಪುರ ಚದರಸ್ತಂಭವಾಗಿದ್ದು, ಸುಂದರವಾಗಿದೆ. ಇದು ಪವಿತ್ರ ಮೀನುಗಳ ಕೊಳದ ಬಳಿಯೇ ಇದೆ. ಇದು ಧರ್ಮಯುದ್ಧದ ಸ್ಮಾರಕವಾಗಿದ್ದಿರಬೇಕೆಂದು ಹೇಳಲಾಗಿದೆ. ನಗರದ ಗೋಡೆಗಳು ಜೀರ್ಣಾವಸ್ಥೆಯಲ್ಲಿವೆ. ಪಶ್ಚಿಮ ಮತ್ತು ನೈರುತ್ಯ ಭಾಗಗಳಲ್ಲಿ ಕೋಟೆ ಗೋಡೆಯ ಅವಿಚ್ಛಿನ್ನ ಸಾಲು ಮತ್ತು ದಿಡ್ಡಿಬಾಗಿಲು ಕಾಣದೊರೆಯುತ್ತವೆ. ಪ್ರವಾಹ ನಿಯಂತ್ರಣಕ್ಕಾಗಿ ಚಕ್ರವರ್ತಿ ಜಸ್ಟೀನಿಯನ್ ಕೈಗೊಂಡಿದ್ದ ಕಾರ್ಯಗಳ ಅವಶೇಷಗಳೇ ಎಡೆಸ್ಸದ ಅತ್ಯಂತ ಮುಖ್ಯ ಅವಶೇಷಗಳು. ಸ್ಕಿರ್ಟಸ್ ಝರಿ ಇಂದಿನ ಡೈಸಾನ್ ಎಡೆಸ್ಸಕ್ಕೆ ಜೀವವಾಹಿನಿಯಾಗಿತ್ತು. ನಗರಕ್ಕೆ ನಾಲ್ಕು ಮೈಲಿಗಳ ದೂರದಲ್ಲಿರುವ ಬಂಡೆಯ ಕೆಳಗಿರುವ ಆಳವಾದ ಕೊಳವೊಂದರಿಂದ ಇದು ಹುಟ್ಟಿಬರುತ್ತದೆ. ಆ ಬಂಡೆಯ ಮೇಲೆ ಒಂದು ಆರ್ಮೇನಿಯನ್ ಶಾಸನವೂ ಇದೆ. ಈ ಝರಿಯ ಸುಂದರ ಪ್ರವಾಹವೇ ಅಂಟಿಯೋಷಿಯ ಕಾಲಿರ್ಹೋಸ್ (ಸುಂದರ ಪ್ರವಾಹ) ಎಂಬ ಪರ್ಯಾಯನಾಮಕ್ಕೆ ಕಾರಣವಾಗಿದ್ದಿರಬೇಕು. ಇದರಲ್ಲಿ ಸಾಕಷ್ಟು ನೀರು ಹರಿಯುತ್ತಿರುತ್ತದೆಯಾದರೂ ಇದ್ದಕ್ಕಿದ್ದಂತೆಯೆ ಪ್ರವಾಹ ಉಕ್ಕಿಬರುವುದರಿಂದ ಈ ನಗರ ಅನೇಕ ಬಾರಿ ಕೊಚ್ಚಿಹೋಗಿದ್ದು ಉಂಟು. ಪ್ರ.ಶ. 6ನೆಯ ಶತಮಾನದಲ್ಲಿ ಚಕ್ರವರ್ತಿ ಜಸ್ಟೀನಿಯನ್ ಪ್ರವಾಹ ನಿಯಂತ್ರಣಕ್ಕೆ ಬಂದೋಬಸ್ತು ಮಾಡಿದಂದಿನಿಂದ ಈ ಹಾವಳಿ ಇಲ್ಲವಾಗಿದೆ. ಇದಕ್ಕಾಗಿ ಆತ ನಗರವನ್ನು ನದಿ ಪ್ರವೇಶಿಸುವ ಸ್ಥಳದಲ್ಲಿ ಒಂದು ಸಣ್ಣ ಅಣೆಕಟ್ಟನ್ನು ನಿರ್ಮಿಸಿದ. ನಿವೇಶನದ ಪೂರ್ವಭಾಗದಲ್ಲಿ ಸುಮಾರು ನೂರು ಅಡಿ ಆಳವಿರುವ ಕಾಲುವೆಯನ್ನು ತೋಡಿಸಿ ಪ್ರವಾಹ ಕಾಲದ ಹೆಚ್ಚಿನ ನೀರು ಅದರ ಮೂಲಕ ಹೊರಹೋಗುವಂತೆ ಮಾಡಿದ.

ಎಡೆಸ್ಸದ ದಕ್ಷಿಣಭಾಗದಲ್ಲಿ ಬೆಲಿಖ್‌ನದಿಯ ಕಣಿವೆಯಿದೆ. ಎಡೆಸ್ಸಕ್ಕೆ ಸುಮಾರು 48 ಕಿ.ಮೀ. ದೂರದಲ್ಲಿರುವ ರಸ್ ಅಲ್–ಐನ್ ಅಲ್ ಅರುಸನ ಚಿಲುಮೆಯಿಂದ ಉದ್ಭವಿಸುವ ಈ ನದಿ ಪ್ರಾಚೀನ ಹರ್ರಾನ್ ನಗರಕ್ಕೆ ನೀರನ್ನೊದಗಿಸುತ್ತಿತ್ತು. ಎಡೆಸ್ಸ ಮೇಲ್ದಂಡೆ ಯೋಜನೆಯ ಅನಂತರ ಈ ನಗರ ಪತನಾಭಿಮುಖಿಯಾಯಿತು. ಇವುಗಳ ಅವಶೇಷಗಳು ನಗರದ ಇತಿಹಾಸಕ್ಕೆ ಸಾಕ್ಷಿಯಾಗಿವೆ. (ಪಿ.ಜಿ.ಡಿ.)

**ಎಡ್ಜರ್‌ಟನ್, ಫ್ರಾಂಕ್‌ಲಿನ್:** 1885–1963. ಅಮೆರಿಕೆಯ ಸುಪ್ರಸಿದ್ಧ ಸಂಸ್ಕೃತಜ್ಞರಲ್ಲಿ ಒಬ್ಬ. ಮ್ಯೂನಿಕ್ ಮತ್ತು ಜೀನ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿ 1909ರಲ್ಲಿ ಸಂಶೋಧನ ಪ್ರಶಸ್ತಿಯನ್ನು ಗಳಿಸಿದ. ಜಾನ್ ಹಾಪ್‌ಕಿನ್ಸ್ ಫೆಲೊ ಆಗಿ ಮುಂದೆ ಅಲ್ಲಿಯೇ ಉಪಾಧ್ಯಾಯವೃತ್ತಿಯನ್ನು ಅವಲಂಬಿಸಿದ. 1909 ರಿಂದ 1915 ರವರೆಗೆ ಸಂಸ್ಕೃತ ಮತ್ತು ತುಲನಾತ್ಮಕ ಭಾಷಾಶಾಸ್ತ್ರದಲ್ಲಿ ಜಾನ್‌ಸ್ಟನ್ ವಿದ್ವಾಂಸವೃತ್ತಿಯನ್ನು ಗಳಿಸಿ, ಮುಂದೆ 1925ರವರೆಗೆ ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಉಪಪ್ರಾಧ್ಯಾಪಕ ನಾಗಿದ್ದು ಅಲ್ಲಿಯೇ ಪ್ರಾಧ್ಯಾಪಕನಾದ. ಈ ವೇಳೆಗೆ ಪ್ರಕಾಂಡಪಂಡಿತನೆಂದು ಖ್ಯಾತಿ ಗಳಿಸಿದ್ದ ಎಡ್ಜರ್‌ಟನ್ ಸಂಶೋಧಿತ ಪಂಚತಂತ್ರವನ್ನು ಎರಡು ಭಾಗಗಳಲ್ಲೂ ಸಂಪಾದಿತ ಶ್ರೀಮದ್‌ಭಗವದ್‌ಗೀತೆಯನ್ನೂ ಪ್ರಕಟಿಸಿದ. ಬತ್ತೀಸಪುತ್ಥಳೀ ಕಥೆಗಳೆಂದು ಪ್ರಸಿದ್ಧವಾಗಿರುವ ಶಕಪುರುಷ ವಿಕ್ರಮಾದಿತ್ಯನ ಕಥಾಸಂಕಲನವೊಂದು 1925ರಲ್ಲಿ ಪ್ರಕಟವಾಯಿತು. ಈ ಮಧ್ಯೆ ಈತ ಭಾರತಕ್ಕೆ ಎರಡು ಬಾರಿ ಬಂದಿದ್ದ.

1926 ರಿಂದ 1946ರವರೆಗೆ ಎರಡು ದಶಕಗಳ ಕಾಲ ಈತ ಯೇಲ್ ವಿಶ್ವವಿದ್ಯಾನಿಲಯ ದಲ್ಲಿ ಸಂಸ್ಕೃತ ಮತ್ತು ತುಲನಾತ್ಮಕ ಭಾಷಾಶಾಸ್ತ್ರದಲ್ಲಿ ಸ್ಯಾಲಿಸ್‌ಬರಿ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ. 1929ರಲ್ಲಿ ಪ್ರಕಾಶಗೊಂಡ ಮೀಮಾಂಸನ್ಯಾಯಪ್ರಕಾಶವೂ 1931ರಲ್ಲಿ ಪ್ರಕಟಿತವಾದ ಭಾರತೀಯ ಹಸ್ತಿಸಾಹಿತ್ಯ (ಎಲಿಫೆಂಟ್ ಲೋರ್ ಆಫ್ ದಿ ಹಿಂದೂಸ್) ಎಂಬ ಗ್ರಂಥವೂ ಎಂ. ಬ್ಲೂಮ್‌ಫೀಲ್ಡ್, ಎಂ.ಬಿ.ಎಮೆನೋ ಇವರುಗಳೊಡನೆ 1930, 1932 ಮತ್ತು 1934ರಲ್ಲಿ ಮೂರು ಬೃಹದ್ ಗ್ರಂಥಗಳಾಗಿ ಪ್ರಕಟಿತವಾದ ವೈದಿಕ ಪಾಠಾಂತರ ಗಳು ಎಂಬುದೂ ಈತನ ಬಹುಮುಖ ಪಾಂಡಿತ್ಯ ಮತ್ತು ಪ್ರತಿಭೆಗಳ ದ್ಯೋತಕಗಳು. ಪುಣೆಯ ಭಂಡಾರ್‌ಕರ್ ಸಂಶೋಧನ ಸಂಸ್ಥೆಯವರು ಕೈಗೊಂಡ ಮಹಾಭಾರತದ ಸಂಸ್ಕರಣ ಮಂಡಲಿಯ ವಿದ್ವತ್–ಸದಸ್ಯರಲ್ಲಿ ಒಬ್ಬರಾದ ಈತನ ಮಹಾಭಾರತದ ಸಭಾಪರ್ವವನ್ನು ಸಂಪಾದಿಸಿದ್ದಾನೆ. ಅಮೆರಿಕದ ಪ್ರಸಿದ್ಧ ವಿದ್ವತ್‌ಪತ್ರಿಕೆಯಾದ ಜರ್ನಲ್ ಆಫ್ ದಿ ಅಮೆರಿಕನ್ ಓರಿಯೆಂಟಲ್ ಸೊಸೈಟಿ ಎಂಬುದರ ಸಂಪಾದಕನಾಗಿ, ಬ್ರಿಟನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿ, ಪುಣೆಯ ಭಂಡಾರ್‌ಕರ್ ಓರಿಯೆಂಟಲ್ ಸೊಸೈಟಿ ಮತ್ತು ಪಾಟ್ನದ ಬಿಹಾರ್ ರಿಸರ್ಚ್ ಸೊಸೈಟಿ, ಅಮೆರಿಕನ್ ಫಿಲಸಾಫಿಕಲ್ ಸೊಸೈಟಿ ಮತ್ತು ಲಿಂಗ್ವಿಸ್ಟಿಕ್ ಸೊಸೈಟಿ ಆಫ್ ಅಮೆರಿಕ ಮುಂತಾದ ನಾನಾ ಪಂಡಿತ ಮಂಡಲಿಗಳಲ್ಲಿ ಸದಸ್ಯನಾಗಿ ಸೇವೆ ಸಲ್ಲಿಸಿರುವ ಈತ ಭಾಷಾಶಾಸ್ತ್ರ, ಭಾರತೀಯ ತತ್ತ್ವಶಾಸ್ತ್ರ, ಧರ್ಮಶಾಸ್ತ್ರ ಮತ್ತು ಸಂಸ್ಕೃತಶಾಸ್ತ್ರ–ಇವನ್ನು ಕುರಿತು ಅನೇಕ ವಿದ್ವತ್ ಪ್ರಬಂಧಗಳನ್ನು ಬರೆದಿದ್ದಾನೆ.

ಅಮೆರಿಕದ, ಅಷ್ಟೇಕೆ ವಿಶ್ವದ, ಪ್ರಸಿದ್ಧ ಸಂಸ್ಕೃತಜ್ಞನೂ ತನ್ನ ಬದುಕಿನ ವಾತಾವರಣವನ್ನೇ ಸಂಸ್ಕೃತಮಯವನ್ನಾಗಿ ಮಾಡಿಕೊಂಡು ತನ್ನ ಕಾರಿಗೂ ಪ್ರಿಯಂವದಾ ಎಂಬ ಹೆಸರಿಡುವಷ್ಟರ ಮಟ್ಟಿಗೆ ಸಂಸ್ಕೃತ ಪ್ರೇಮಿಯೂ ಆದ ಈತ ಹೊಸ ಪೀಳಿಗೆಯ ತರುಣ ವಿದ್ವಾಂಸರಿಗೆ ಮಾದರಿಯಾಗಿದ್ದಾನೆ. (ಸಿ.ಜಿ.ಪಿ.)

**ಎಡಿಂಗ್‌ಟನ್, ಸರ್ ಆರ್ಥರ್ ಸ್ಟ್ಯಾನ್ಲೆ:** 1882–1944. ಬ್ರಿಟನ್ನಿನ ಖಗೋಳವಿಜ್ಞಾನಿ. ಜನನ ಇಂಗ್ಲೆಂಡಿನ ವೆಸ್ಟ್‌ಮೋರ್‌ಲ್ಯಾಂಡಿನ ಕೆಂಡ್ಲ್ ಎಂಬಲ್ಲಿ. ವಿದ್ಯಾಭ್ಯಾಸ ಮ್ಯಾಂಚೆಸ್ಟರಿನ ಓವೆನ್ಸ್ ಕಾಲೇಜು ಮತ್ತು ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜುಗಳಲ್ಲಿ. ಟ್ರಿನಿಟಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಈತನಿಗೆ 1904ರಲ್ಲಿ ಪ್ರಥಮ ಶ್ರೇಣಿಯ ಪ್ರಥಮ ಸ್ಥಾನವೂ 1907ರಲ್ಲಿ ಸ್ಮಿತ್ ಬಹುಮಾನವೂ ದೊರೆತವು. ಅನಂತರ ಟ್ರಿನಿಟಿ ಕಾಲೇಜಿನ ಫೆಲೋ ಗೌರವ ಸಂದಿತು. ಗ್ರೀನಿಚ್ಚಿನ ರಾಯಲ್ ವೀಕ್ಷಣಾಲಯದಲ್ಲಿ ಮುಖ್ಯ ಸಹಾಯಕನಾಗಿ

1906–1913ರವರೆಗೆ ಕೆಲಸ ಮಾಡಿದ. 1913ರಲ್ಲಿ ಈತನನ್ನು ಕೇಂಬ್ರಿಜ್‌ನ ಖಗೋಳವಿಜ್ಞಾನ ಮತ್ತು ಪ್ರಾಯೋಗಿಕ ವಿಜ್ಞಾನ ವಿಭಾಗದ ಪ್ಲೂಮಿಯನ್ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆ ಮಾಡಲಾಯಿತು. 1914ರಲ್ಲಿ ಎಡಿಂಗ್‌ಟನ್ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ವೀಕ್ಷಣಾಲಯದ ನಿರ್ದೇಶಕನಾದ.

ಈತ ಮೊದಮೊದಲು ಬರೆದ ಪ್ರಬಂಧಗಳಲ್ಲಿ ನಾಕ್ಷತ್ರಿಕ ಚಲನೆ ಮತ್ತು ವಿವರಣೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಪ್ರಸ್ತಾಪವಿದೆ. ಇವನ ಮೊದಲ ಪುಸ್ತಕ ಸ್ಟೆಲ್ಲಾರ್ ಮುವ್‌ಮೆಂಟ್ ಅಂಡ್ ದಿ ಸ್ಟ್ರಕ್ಚರ್ ಆಫ್ ದಿ ಯೂನಿವರ್ಸ್ ಎಂಬುದು ಪ್ರಕಟವಾದದ್ದು 1914ರಲ್ಲಿ. ಈ ಪುಸ್ತಕದಲ್ಲಿ ತಾರಾಪುಂಜಗಳ ಚಲನೆಗೆ ಸಂಬಂಧಿಸಿದಂತೆ ಇರುವ ಒಂದು ವೈಜ್ಞಾನಿಕ ನಿರೂಪಣೆ ಪ್ರಾಯಶಃ ಈ ವಿಷಯಕ್ಕೆ ಇರುವಂಥ ವಿವರಣೆಗಳಲ್ಲೆಲ್ಲ ಅತ್ಯಂತ ಅಮೋಘವಾದುದು. ಪುಸ್ತಕದ ಕಡೆಯ ಅಧ್ಯಾಯ ಖಗೋಳೀಯ ಸಂಶೋಧನೆಯ ಅಡಿಗಲ್ಲಿನಂತಿದೆ. 1916ರಲ್ಲಿ ಈತ ನಕ್ಷತ್ರದ ಆಂತರಿಕ ರಚನೆಗೆ ಸಂಬಂಧಿಸಿದ ಮೂಲಭೂತ ಸಂಶೋಧನೆಗಳನ್ನು ಪ್ರಾರಂಭಿಸಿದ. ನಕ್ಷತ್ರಗಳ ಮೇಲ್ಮೈಗಳಿಂದ ಬೆಳಕಿನ ಮತ್ತು ಉಷ್ಣದ



ರೂಪದಲ್ಲಿ ಹೊರ ಹೊಮ್ಮುವ ಶಕ್ತಿ ಒಳಗೆಲ್ಲ ವಿಸರಣ ರೂಪವಾಗೂ ಪ್ರಸಾರವಾಗುತ್ತದೆ ಎಂಬುದು ಈತನ ಆಧಾರ ಭಾವನೆಯಾಗಿತ್ತು. ಎಲ್ಲ ನಕ್ಷತ್ರಗಳೂ ಅನಿಲದಿಂದೊಡ ಗೂಡಿದುವೆಂದು ಈತ ತೀರ್ಮಾನಕ್ಕೆ ಬಂದ. ನಕ್ಷತ್ರದ ತೂಕ ಮತ್ತು ಬೆಳಕುಗಳ ನಡುವೆ ಒಂದು ಸಂಬಂಧವಿದೆ ಎಂಬುದನ್ನು ಕಂಡು ಹಿಡಿದ. ಶ್ವೇತ ಕುಬ್ಜ ನಕ್ಷತ್ರಗಳ (ವೈಟ್ ಡ್ವಾರ್ಫ್ಸ್) ಸಾಂದ್ರತೆ ಮತ್ತು ನಕ್ಷತ್ರಾಂತರ ಮಾಧ್ಯಮಗಳ ಬಗ್ಗೆ ಇವನ ಪುಸ್ತಕದಲ್ಲಿ ಹೆಚ್ಚು ವಿವರಣೆಗಳಿವೆ. ದಿ ಇಂಟರ್‌ನಲ್ ಕಾನ್ಸ್‌ಟಿಟ್ಯೂಷನ್ ಆಫ್ ದಿ ಸ್ಟಾರ್ಸ್ (1926) ಎಂಬ ಇವನ ಪುಸ್ತಕ ಖಗೋಳವಿಜ್ಞಾನದ ಒಂದು ಶಾಸ್ತ್ರ ಗ್ರಂಥವಾಯಿತು. 1917 ರಿಂದಾಚೆಗೆ ಈತನಿಗೆ ಐನ್‌ಸ್ಟೈನ್ ಪ್ರತಿಪಾದಿಸಿದ ರಿಲೆಟಿವಿಟಿ ಸಿದ್ಧಾಂತದ ಬಗ್ಗೆ ಆಸಕ್ತಿ ಹುಟ್ಟಿತು. 1919ರಲ್ಲಿ ಸಂಭವಿಸಿದ ಪೂರ್ಣ ಸೂರ್ಯಗ್ರಹಣವನ್ನು ವೀಕ್ಷಿಸಲು ಹೊರಟ ತಂಡದ ನಾಯಕನಾಗಿದ್ದ. ರಿಲೆಟಿವಿಟಿ ಸಿದ್ಧಾಂತ ಇಂಗ್ಲಿಷ್ ಪ್ರಪಂಚದಲ್ಲಿ ಹೆಚ್ಚು ವ್ಯಾಪಕವಾಗಲು ಈತನ ಸ್ಪೇಸ್, ಟೈಮ್ ಅಂಡ್ ಗ್ರ್ಯಾವಿಟೇಷನ್ (1920), ದಿ ಮ್ಯಾಥಮ್ಯಾಟಿಕಲ್ ಥಿಯರಿ ಆಫ್ ರಿಲೆಟಿವಿಟಿ (1923) ಎಂಬ ಪುಸ್ತಕಗಳು ಸಹಕಾರಿಯಾದವು. ಸಾಮಾನ್ಯೀಕೃತ ರಿಲೆಟಿವಿಟಿ ಸಿದ್ಧಾಂತ ಮತ್ತು ಶಕಲ ಸಿದ್ಧಾಂತಗಳನ್ನು ವಿಲೀನಗೊಳಿಸಲು ಈತ 1930ರ ಅನಂತರ ಕೆಲಸಮಾಡಿದ. ವೀಕ್ಷಣೆಯನ್ನು ಮಾಡದೆಯೇ ನಿಸರ್ಗದ ಸ್ಥಿರಾಂಕಗಳ (ಕಾನ್ಸ್‌ಟೆಂಟ್ಸ್ ಆಫ್ ನೇಚರ್) ಮೌಲ್ಯವನ್ನು ಗೊತ್ತುಮಾಡುವುದು ಗಣಿತಾತ್ಮಕವಾಗಿ ಸಾಧ್ಯವೆಂಬುದನ್ನು ಈತ ನಂಬಿದ್ದ. ತಾತ್ತ್ವಿಕ ವಿಜ್ಞಾನಕ್ಕೆ ಈತನಿಗಿದ್ದ ಆಸಕ್ತಿಯ ಫಲದಿಂದಾಗಿ ಈ ಭಾವನೆ ಉತ್ಪನ್ನವಾಗಿದ್ದರೂ ಇದಕ್ಕೆ ವ್ಯಾಪಕ ಮನ್ನಣೆ ದೊರೆಯಲಿಲ್ಲ. ಭೌತವಿಜ್ಞಾನದ ಹೆಚ್ಚು ಭಾಗ ವೀಕ್ಷಣೆಯಿಂದ ದೊರೆತ ಅಂಕಿಅಂಶಗಳನ್ನು ಆಧರಿಸಿ ವಿಜ್ಞಾನಿ ಮಾಡುವ ಪ್ರತಿಪಾದನೆಯ ವಿಧಾನವನ್ನು ಪ್ರತಿಬಿಂಬಿಸುತ್ತದೆ ಎಂಬುದು ಎಡ್ಡಿಂಗ್‌ಟನ್ನನ ಅಭಿಪ್ರಾಯ. ಈ ದೃಷ್ಟಿ ರಿಲೆಟಿವಿಟಿ ಥಿಯೊರಿ ಆಫ್ ಪ್ರೋಟಾನ್ಸ್ ಅಂಡ್ ಎಲೆಕ್ಟ್ರಾನ್ಸ್ (1936), ದಿ ಕಾಂಬಿನೇಷನ್ ಆಫ್ ರಿಲೆಟಿವಿಟಿ ಥಿಯರಿ ಅಂಡ್ ಕ್ವಾಂಟಮ್ ಥಿಯರಿ (1943) ಮತ್ತು ಫಂಡಮೆಂಟಲ್ ಥಿಯರಿ (1946) (ಇವನ ಕಾಲಾನಂತರ ಸರ್ ಇ.ಟಿ. ವಿಟೇಕರ್ ಎಂಬವ ಸಂಪಾದಿಸಿದ್ದು) ಎಂಬ ಪುಸ್ತಕಗಳಲ್ಲಿ ಗಣಿತಾತ್ಮಕವಾಗಿ ನಿರೂಪಿತವಾಗಿದೆ. ದಿ ನೇಚರ್ ಆಫ್ ದಿ ಫಿಸಿಕಲ್ ವರ್ಲ್ಡ್ (1918) ಮತ್ತು ದಿ ಫಿಲಾಸಫಿ ಆಫ್ ಫಿಸಿಕಲ್ ಸೈನ್ಸ್ (1939) – ಇವು ಎಡಿಂಗ್‌ಟನ್ನನ ಮುಖ್ಯ ತಾತ್ತ್ವಿಕ ಬರೆಹಗಳು.

ಆಧುನಿಕ ಖಗೋಳವಿಜ್ಞಾನದ ಮೇಲೆ ಎಡಿಂಗ್‌ಟನ್ ನಡೆಸಿರುವ ಅಧ್ಯಯನ ಸಂಶೋಧನೆಗಳು ಈತನಿಗೆ ವಿಶೇಷ ಖ್ಯಾತಿಯನ್ನು ತಂದಿವೆ. ಜನಸಾಮಾನ್ಯರಿಗೂ ತಿಳಿಯುವಂಥ ಈತನ ಭಾಷಾಶೈಲಿ ಈತನನ್ನು ಜನಪ್ರಿಯಗೊಳಿಸಿದೆ. ತನ್ನ ಜೀವಮಾನದಲ್ಲಿ ಈತ ಅನೇಕ ಗೌರವಗಳನ್ನು ಸಂಪಾದಿಸಿದ್ದಾನೆ. 1930ರಲ್ಲಿ ಈತನಿಗೆ ನೈಟ್ ಬ್ಯಾಚೆಲರ್ ಗೌರವವೂ 1938ರಲ್ಲಿ ಆರ್ಡರ್ ಆಫ್ ಮೆರಿಟ್ ಗೌರವವೂ ಸಂದುವು. *

**ಎಡ್ವರ್ಡ್:** ಇಂಗ್ಲೆಂಡಿನ ಇತಿಹಾಸದಲ್ಲಿ ಈ ಹೆಸರಿನ ರಾಜರು ಒಟ್ಟು ಹನ್ನೊಂದು ಮಂದಿ: ನಾರ್ಮನ್ನರ ಆಕ್ರಮಣಕ್ಕೆ ಮೊದಲು ಮೂವರು; ಅನಂತರ ಎಂಟು ಜನ. ಇವರ ಪರಿಚಯಗಳನ್ನು ಮುಂದೆ ಕೊಟ್ಟಿದೆ.

**ಎಡ್ವರ್ಡ್ ದಿ ಎಲ್ಡರ್:** ಈತನು 899–924ರಲ್ಲಿ ಇಂಗ್ಲೆಂಡಿನ ದೊರೆಯಾಗಿದ್ದ. ಇವನ ತಂದೆ ಆಲ್ಫ್ರೆಡ್. ತಂದೆಯೊಂದಿಗೆ ಜಂಟಿಯಾಗಿ ಈತ ರಾಜ್ಯವಾಳಿದ. ಡೇನರೊಂದಿಗೆ ನಡೆದ ಯುದ್ಧದಲ್ಲಿ ಈತನ ಪಾತ್ರ ಹಿರಿದು. ಕ್ರಮೇಣ ಈತ ಹಂಬರ್ ನದಿಗೆ ದಕ್ಷಿಣದ ಇಡೀ ಪ್ರದೇಶದ ದೊರೆಯಾದ. ಹೊರಗಿನ ಶತ್ರುಗಳಿಂದ ಇಂಗ್ಲೆಂಡನ್ನು ರಕ್ಷಿಸಲು ಬಹಳವಾಗಿ ಪ್ರಯತ್ನಿಸಿದ. ಇವನೊಬ್ಬ ದಕ್ಷ ಸೇನಾನಾಯಕ; ಆಡಳಿತ ವಿಚಾರದಲ್ಲೂ ಸಮರ್ಥ. ಇಂಗ್ಲಿಷ್ ಚರ್ಚಿನ ಸಂಘಟನೆಯ ಕೆಲಸ ಇವನ ಕಾಲದಲ್ಲಿ ಮುಂದುವರಿಯಿತು. ನಾಣ್ಯಮುದ್ರಣ, ನ್ಯಾಯಪದ್ಧತಿ, ಸ್ಥಳೀಯ ಆಡಳಿತ– ಮುಂತಾದ ನಾನಾ ಕ್ಷೇತ್ರಗಳಲ್ಲಿ ತಕ್ಕಮಟ್ಟಿನ ಸುಧಾರಣೆ ತಂದವನು ಇವನೇ.

**ಎಡ್ವರ್ಡ್ ದಿ ಮಾರ್ಟರ್:** 975 ರಿಂದ 978ರ ವರೆಗೆ ಇಂಗ್ಲಿಷರ ದೊರೆ. ಈತ ಎಡ್ಗರನ ಮೊದಲನೆಯ ಹೆಂಡತಿಯ ಮಗ. ತಂದೆ ಸತ್ತಾಗ ಈತ ದೊರೆಯಾಗಬೇಕೆಂದು ಒಂದು ಪಕ್ಷವೂ ಇವನ ಮಲತಮ್ಮ ದೊರೆಯಾಗಬೇಕೆಂದು ಇನ್ನೊಂದು ಪಕ್ಷವೂ ಬಯಸಿದುವು. ಕೊನೆಗೆ ಈತನೇ ದೊರೆಯೆಂದು ಚುನಾಯಿತನಾದ.

ಇವನ ಕಿರು ಆಳ್ವಿಕೆಯ ಕಾಲದಲ್ಲಿ ನಾಡಿನಲ್ಲಿ ಬಹಳ ಅಶಾಂತಿಯಿತ್ತು. ಪ್ರತಿಗಾಮಿ ಪ್ರವೃತ್ತಿಗಳು ತಲೆಯೆತ್ತಿದ್ದವು. 978ರಲ್ಲಿ ಈತ ಕೊಲೆಗೆ ಈಡಾದ. ಯಾವ ಮರ್ಯಾದೆಯೂ ಇಲ್ಲದೆ ಇವನ ಶವವನ್ನು ಹೂಳಿಟ್ಟರು. ಆದರೆ ಒಂದು ವರ್ಷದ ಅನಂತರ ಈತನ ದೇಹದ ಉಳಿಕೆಗಳನ್ನು ಸಕಲ ಮರ್ಯಾದೆಗಳೊಡನೆ ಷಾಫ್ಟ್ಸ್‌ಬರಿಗೆ ವರ್ಗಾಯಿಸಲಾಯಿತು. ಅಲ್ಲಿ ಕೆಲವು ಪವಾಡಗಳು ಸಂಭವಿಸಿದುವೆಂದು ಪ್ರತೀತಿಯುಂಟು. ಇವನನ್ನು ಈತನ ಮಲತಾಯಿಯೇ ಕೊಲ್ಲಿಸಿದಳೆಂದು ನೂರುವರ್ಷದ ಅನಂತರ ಹುಟ್ಟಿಕೊಂಡ ದಂತಕತೆಗಳಿಗೆ ಆಧಾರ ದೊರಕಿಲ್ಲ. ಇವನನ್ನೂ ಒಬ್ಬ ಸಂತನೆಂದು ಪರಿಗಣಿಸಲಾಗಿದೆ.

**ಎಡ್ವರ್ಡ್ ದಿ ಕನ್‌ಫೆಸರ್:** 1003–1066. ಇಂಗ್ಲಿಷರ ದೊರೆ. ಜನನ ಆಕ್ಸ್‌ಫರ್ಡ್‌ಷೈರಿನ ಎಸ್ಲಿಷೆನಲ್ಲಿ. ತಂದೆ ಆಥೆಲ್‌ರೇಡ್. ಈತ ಬಾಲ್ಯವನ್ನು ಕಳೆದದ್ದು ಫ್ರಾನ್ಸಿನಲ್ಲಿ. ಇಂಗ್ಲೆಂಡಿಗೆ ಹಿಂದಿರುಗಿ ತನ್ನ ಮಲಸೋದರನ ಅನಂತರ ಪಟ್ಟಕ್ಕೆ ಬಂದ (1042). ಈತ ರಾಜ್ಯವನ್ನು

ಚೆನ್ನಾಗಿ ಆಳಿದ. ಇವನ ಕಾಲದಲ್ಲಿ ಪ್ರಜೆಗಳ ತೆರಿಗೆಯ ಭಾರ ಇಳಿಯಿತು. ನಾರ್ಮನ್ ಜನರ ಬಗ್ಗೆ ಎಡ್ವರ್ಡ್ ಪಕ್ಷಪಾತಿ ಯಾಗಿದ್ದನೆಂಬ ಕಾರಣದಿಂದ ಇಂಗ್ಲೆಂಡಿನ ಬಲಿಷ್ಠ ಶ್ರೀಮಂತ ಅರ್ಲ್ ಗಾಡ್‌ವಿನ್ ಈತನನ್ನು ಎದುರಿಸಿದ. ಎಡ್ವರ್ಡ್ ಜಗ್ಗಲಿಲ್ಲ. ಅರ್ಲನಿಗೂ ಆತನ ಸಂಸಾರಕ್ಕೂ ಗಡೀಪಾರಾಯಿತು. ಆದರೆ ಅವರು ಸ್ವಲ್ಪಕಾಲಾನಂತರ ಇಂಗ್ಲೆಂಡಿಗೆ ಮರಳಿದರು. ಈ ನಡುವೆ ನಾರ್ಮಂಡಿಯ ಡ್ಯೂಕ್‌ನಲ್ಲಿ ಎಡ್ವರ್ಡ್‌ನಿಗೆ ಅಭಿಮಾನ ಬೆಳೆದಿತ್ತು. ಡ್ಯೂಕನನ್ನೆ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡುವುದಾಗಿ ಎಡ್ವರ್ಡ್ ಆತನಿಗೆ ವಚನವಿತ್ತಿದ್ದ. ಆದರೆ ಇಂಗ್ಲೆಂಡಿನ ಸಿಂಹಾಸನಕ್ಕಾಗಿ ಅವನೊಂದಿಗೆ ನಾರ್ವೆಯ ಮೂರನೆಯ ಹ್ಯಾರಲ್ಡನೂ ಸ್ಪರ್ಧಿಸಿದ್ದ. ಅಷ್ಟರಲ್ಲಿ ಎಡ್ವರ್ಡನ ಮರಣ ಸನ್ನಿಹಿತವಾಯಿತು. ಸಾಯುವ ಮುನ್ನ ಈತ ಗಾಡ್ವಿನನ ಯೋಧಪುತ್ರ ಹ್ಯಾರಲ್ಡನನ್ನು ಉತ್ತರಾಧಿಕಾರಿಯೆಂದು ನೇಮಿಸಿದ. ಈತನ ಒಳ್ಳೆಯತನದಿಂದಾಗಿ ಇವನನ್ನು ಎಡ್ವರ್ಡ್ ದಿ ಕನ್‌ಫೆಸರ್ ಎಂದು ಕರೆಯುತ್ತಾರೆ. 1161ರಲ್ಲಿ ಈತನನ್ನು ಕ್ರೈಸ್ತ ಸಂತರ ಪಟ್ಟಿಗೆ ವಿಧಿಪೂರ್ವಕವಾಗಿ ಸೇರಿಸಲಾಯಿತು. *

**ಎಡ್ವರ್ಡ್ I:** 1239–1307. ಇಂಗ್ಲೆಂಡಿನ ದೊರೆ. ಮೂರನೆಯ ಹೆನ್ರಿಯ ಹಿರಿಯ ಮಗನಾಗಿ ವೆಸ್ಟ್‌ಮಿನ್‌ಸ್ಟರಿನಲ್ಲಿ ಹುಟ್ಟಿದ. 1272 ರಿಂದ 1307ರ ವರೆಗೂ ಆಳಿದ ಇವನಿಗೆ ಇಂಗ್ಲೆಂಡಿನ ಇತಿಹಾಸದಲ್ಲಿ ಪ್ರಮುಖ ಸ್ಥಾನವಿದೆ. ಇವನ ಕೆಲವು ಕಾನೂನು ಪ್ರಭಾವವನ್ನು ಇಂದಿಗೂ ಇಂಗ್ಲಿಷರ ಜನಜೀವನದಲ್ಲಿ ಗುರುತಿಸಬಹುದು. ಎಡ್ವರ್ಡ್ ಆಡಳಿತಕ್ಕೆ ಬಂದಾಗ ರಾಜ್ಯದಲ್ಲಿ ಅಂತರ್ಯುದ್ಧ ನಡೆದಿದ್ದು ರಾಜಪ್ರಭುತ್ವದ ಗೌರವ ಕುಂದಿತ್ತು. ಅಂಥ ಸಂದರ್ಭದಲ್ಲಿ ಈತ ಶೌರ್ಯ ಸ್ಥೈರ್ಯ ದಕ್ಷತೆ ಗಳಿಂದ ವಿರೋಧ ಶಕ್ತಿಗಳನ್ನು ಅಡಗಿಸಿ ತನ್ನ ಸ್ಥಾನವನ್ನು

ಬಲಪಡಿಸಿಕೊಂಡ. ನ್ಯಾಯಾಡಳಿತ ಪದ್ಧತಿಯಲ್ಲಿದ್ದ ದೋಷಗಳನ್ನು ನಿವಾರಿಸಲು ಅನೇಕ ಸುಧಾರಣೆ ಗಳನ್ನು ಜಾರಿಗೆ ತಂದ. ಇವನ ನ್ಯಾಯಪದ್ಧತಿಯ ಶ್ರೇಷ್ಠತೆ ಯಿಂದ ಇವನನ್ನು ಇಂಗ್ಲೆಂಡಿನ ಜಸ್ಟಿನಿಯನ್ ಎಂದು ಕರೆಯುತ್ತಾರೆ. ಈತ ಪ್ರಸಿದ್ಧ ಯೋಧನೂ ಆಗಿದ್ದ. ಆಗ ಕ್ರೈಸ್ತರಿಗೂ ಮುಸ್ಲಿಮರಿಗೂ ನಡೆಯುತ್ತಿದ್ದ ಧರ್ಮಯುದ್ಧಗಳಲ್ಲಿ ಭಾಗವಹಿಸಿ ಪರಾಕ್ರಮ ಮೆರೆದ. ಬ್ರಿಟನ್ನಿನ ಐಕ್ಯ ಸಾಧಿಸಲು ಯತ್ನಿಸಿದವರಲ್ಲಿ ಎಡ್ವರ್ಡ್ ಮೊದಲನೆ ಯವನೆಂದು ಹೇಳಬಹುದು. ಸ್ಕಾಟ್‍ಲೆಂಡ್ ಮತ್ತು ವೇಲ್ಸ್ ಯುದ್ಧದಲ್ಲಿ ಅದ್ಭುತ ವಿಜಯ ಗಳಿಸಿದ. ಆದರೆ ಸ್ವಾತಂತ್ರ್ಯಪ್ರಿಯರಾಗಿದ್ದ ಸ್ಕಾಟರು ಅನಂತರ ದಂಗೆಯೆದ್ದರು. ಈತ ಮಾಡಲ್ ಪಾರ್ಲಿಮೆಂಟ್ ಕೂಡಿಸಿ ಪ್ರಜೆಗಳ ಹಕ್ಕುಗಳಿಗೆ ಮನ್ನಣೆ ಕೊಟ್ಟ. ಈತ ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ಯುದ್ಧಗಳಲ್ಲಿ ಮಡಿದ. ಮಧ್ಯಯುಗದ ಅರಸರಲ್ಲೆಲ್ಲ ಈ ಎಡ್ವರ್ಡ್ ಶ್ರೇಷ್ಠನೆಂದು ಪರಿಗಣಿಸಲಾಗಿದೆ.

**ಎಡ್ವರ್ಡ್ II:** 1284–1327. ಇಂಗ್ಲೆಂಡಿನ ದೊರೆ. ಮೊದಲನೆಯ ಎಡ್ವರ್ಡನ ನಾಲ್ಕನೆಯ ಮಗ. ಅಣ್ಣ ಆಲ್ಫಾನ್ಸೊ 1284ರಲ್ಲಿ ಅಕಾಲ ಮರಣಕ್ಕೆ ತುತ್ತಾದಾಗ ಈತ ಪಟ್ಟಕ್ಕೆ ಬಂದ. ಒಡನೆಯೇ ಎಡ್ವರ್ಡ್ ತನ್ನ ತಂದೆಯ ವಿರೋಧಿಗಳೊಂದಿಗೆ ಸಖ್ಯ ಬೆಳೆಸಿದ. ದೇಶಭ್ರಷ್ಟನಾಗಿದ್ದ ಗ್ಯಾವೆಸ್ಟನನ್ನು ಕರೆಸಿಕೊಂಡು ಅವನಿಗೆ ಅರ್ಲ್ ಪದವಿ ಕೊಟ್ಟ. ಇವನ ಎರಡು ದಶಕಗಳ ಆಳ್ವಿಕೆಯಲ್ಲಿ ಬ್ಯಾರನ್ನುಗಳಿಗೂ (ಶ್ರೀಮಂತರು) ಇವನಿಗೂ ತಿಕ್ಕಾಟ ಹೆಚ್ಚಿತು. ಪಾರ್ಲಿಮೆಂಟು ಪ್ರಬಲವಾಯಿತು. ಎಡ್ವರ್ಡನಿಗೆ ದೇಹಬಲವಿತ್ತಾದರೂ ಈತ ಬುದ್ಧಿವಂತನಲ್ಲ; ರಾಜತ್ವದ ಠೇಂಕಾರವನ್ನು ಅರಿತವನಲ್ಲ. ಮಿತ್ರರ ಮಾತಿಗೆ ಕಿವಿಗೊಡುತ್ತಿದ್ದ. ಶ್ರೀಮಂತರು ಈತನನ್ನು ಮೂಲೆಗೊತ್ತಿ ತಾವೇ ಆಡಳಿತ ನಡೆಸಲಾರಂಭಿಸಿದರು. ಈತನ ರಾಣಿಯೇ ಇವನ ವಿರುದ್ಧ ಪಿತೂರಿ ನಡೆಸಿ ಇವನನ್ನು ಕೊಲ್ಲಿಸಿದಳು.

**ಎಡ್ವರ್ಡ್ III:** 1312–1377. ಎರಡನೆಯ ಎಡ್ವರ್ಡನಿಗೆ ಫ್ರಾನ್ಸಿನ ಇಸಬೆಲಳಲ್ಲಿ ಹುಟ್ಟಿದ ಈತ 1327ರಲ್ಲಿ ಇಂಗ್ಲೆಂಡಿನ ದೊರೆಯಾದ. ಈತ ಸಾಹಸಿ, ಶೂರ. ಚೆಸ್ಟರಿನ ಅರ್ಲನೆಂದು 1320ರಲ್ಲಿ ಪಾರ್ಲಿಮೆಂಟಿಗೆ ಆಹ್ವಾನಿತನಾಗಿ 1325ರಲ್ಲಿ ಡ್ಯೂಕ್ ಆದ. ಮುಂದೆ ಇವನ ತಂದೆ ರಾಜೀನಾಮೆ ಕೊಡಬೇಕಾಗಿ ಬಂದಾಗ ಈತನಿಗೆ ಪಟ್ಟ ಬಂತು. ಇವನ ಹೆಸರಿನಲ್ಲಿ ಈತನ ತಾಯಿಯೂ ಆಕೆಯ ಸಹಚರ ಮಾರ್ಟಿಮರನೂ ರಾಜ್ಯವಾಳುತ್ತಿದ್ದರು. ಎಡ್ವರ್ಡನಿಗೆ ಇದು ಸಹಿಸಲಿಲ್ಲ. ಕೊನೆಗೆ ರಹಸ್ಯವಾಗಿ ಅವರಿದ್ದಲ್ಲಿಗೆ ನುಗ್ಗಿ ಮಾರ್ಟಿಮರನನ್ನು ಕೈಸೆರೆ ಹಿಡಿದ. ತಾಯಿಯನ್ನು ಗೌರವದಿಂದಲೇ ಕಾಣಲಾಯಿತಾದರೂ ಆಕೆಯ ಪ್ರಭಾವ ಮುಗಿದು ಹೋಯಿತು. ಈತನ ಆಳ್ವಿಕೆಯಲ್ಲಿ ಇಂಗ್ಲೆಂಡ್–ಫ್ರಾನ್ಸ್‌ಗಳ ನಡುವೆ ನೂರು ವರ್ಷಗಳ ಯುದ್ಧ ಆರಂಭವಾಯಿತು. ಬಹಳ ಜನರನ್ನು ಆಹುತಿ ತೆಗೆದುಕೊಂಡು ಕರಾಳ ಮೃತ್ಯುವೆಂದು ಹೆಸರಾದ ಪ್ಲೇಗ್ ವ್ಯಾಧಿ ಇಂಗ್ಲೆಂಡಿನಲ್ಲಿ ಕಾಣಿಸಿಕೊಂಡದ್ದು ಇವನ ಕಾಲದಲ್ಲೇ. ಇದರಿಂದ ದುಡಿಮೆಗಾರರ ಸಂಖ್ಯೆ ಕಡಿಮೆಯಾಯಿತು. ಕಾರ್ಮಿಕರು ಹೆಚ್ಚು ಕೂಲಿ ಬಯಸಿದರು. ದೇಶದಲ್ಲಿ ಸಾಮಾಜಿಕ–ಆರ್ಥಿಕ ಪರಿವರ್ತನೆಗಳಾದವು.

**ಎಡ್ವರ್ಡ್ IV:** 1442–1483. ಇಂಗ್ಲೆಂಡಿನ ಯಾರ್ಕಿನ ಡ್ಯೂಕನಾಗಿದ್ದ ರಿಚರ್ಡನ ಮಗ. ಇಂಗ್ಲೆಂಡಿನ ದೊರೆಯಾಗಿದ್ದ ಆರನೆಯ ಹೆನ್ರಿಯನ್ನು ಸೋಲಿಸಿ 1461ರಲ್ಲಿ ದೊರೆಯಾದ. ಎಡ್ವರ್ಡನ ದಾಯಾದಿ ವಾರ್ವಿಕ್ ಫ್ರಾನ್ಸಿಗೆ ಓಡಿಹೋಗಿ ಆರನೆಯ ಹೆನ್ರಿಯ ಹೆಂಡತಿಯೊಂದಿಗೆ ಮರಳಿ ಇಂಗ್ಲೆಂಡಿಗೆ ದಂಡೆತ್ತಿ ಬಂದು ಎಡ್ವರ್ಡನನ್ನು ಸೋಲಿಸಿ ಆರನೆಯ ಹೆನ್ರಿಯನ್ನು ಸಿಂಹಾಸನದ ಮೇಲೆ ಕೂರಿಸಿದ. ಆದರೆ ಕೊನೆಗೂ ಅವರು ಎಡ್ವರ್ಡನಿಂದ ಸಂಪೂರ್ಣ ಸೋತರು. 1471ರಲ್ಲಿ ಹೆನ್ರಿ ಲಂಡನ್ನಿನ ಗೋಪುರದಲ್ಲಿ ಸಾವಿಗೀಡಾದಾಗ ಎಡ್ವರ್ಡನ ಆಳ್ವಿಕೆ ಸುಸೂತ್ರವಾಯಿತು. ಆದರೆ ಈತ ತನ್ನ 41ನೆಯ ವರ್ಷದಲ್ಲೇ ಸತ್ತ. ಅತಿಯಾದ ಭೋಗಜೀವನವೇ ಆತನ ಮೃತ್ಯುವಿಗೆ ಕಾರಣವಿದ್ದರೂ ಇರಬಹುದೆಂದು ಊಹಿಸಲಾಗಿದೆ. (ಎಂ.ವಿ.ಎಸ್.ಆರ್.)

**ಎಡ್ವರ್ಡ್ V:** 1470–1483. ಇಂಗ್ಲೆಂಡಿನ ಹುಡುಗ ದೊರೆ. ನಾಲ್ಕನೆಯ ಎಡ್ವರ್ಡನ ಬದುಕಿದ್ದ ಮಕ್ಕಳ ಪೈಕಿ ಹಿರಿಯ. 1483ರ ಏಪ್ರಿಲಿನಲ್ಲಿ ಪಟ್ಟಕ್ಕೆ ಬಂದ. ಅದೇ ವರ್ಷದ ಜೂನಿನಲ್ಲಿ ಈತನ ಆಳ್ವಿಕೆ ಮುಗಿಯಿತು. ಇಂಗ್ಲೆಂಡಿನ ಸಿಂಹಾಸನಕ್ಕಾಗಿ ಬಡಿದಾಡುತ್ತಿದ್ದವರಿಗೆ ಈ ಹುಡುಗ ಆಹುತಿಯಾದ. ಇವನ ಚಿಕ್ಕಪ್ಪಂದಿರಾದ ರಿಚರ್ಡ್ (ಗೌಸ್ಟರಿನ ಡ್ಯೂಕ್) ಮತ್ತು ಅರ್ಲ್ ರಿವರ್ಸ್ ರಾಜ್ಯಕ್ಕಾಗಿ ಆಸೆಪಟ್ಟರು. ಗೌಸ್ಟರ್ ಇವನನ್ನೂ ಇವನ ತಮ್ಮನನ್ನೂ ಲಂಡನ್ ಗೋಪುರದಲ್ಲಿ ಬಂಧಿಸಿಟ್ಟು ಅವರು ಅನೈತಿಕ ಪುತ್ರರೆಂದು ಸಾಧಿಸಿ, ಕೊನೆಗೆ ತಾನೇ ಮೂರನೆಯ ರಿಚರ್ಡ್ ಎಂಬ ವಿಧಾನದಲ್ಲಿ ಸಿಂಹಾಸನವನ್ನೇರಿದ. ಎಡ್ವರ್ಡನೂ ಇವನ ಸೋದರನೂ ನಿದ್ರಿಸುತ್ತಿದ್ದಾಗ ಉಸಿರು ಕಟ್ಟಿಸಿ ಗೌಸ್ಟರ್ ಇವರನ್ನು ಕೊಲ್ಲಿಸಿದನೆಂದು 20 ವರ್ಷಗಳ ನಂತರ ಸರ್ ಥಾಮಸ್ ಮೋರ ತೀರ್ಪು ನುಡಿದಿದ್ದಾನೆ. ಷೇಕ್ಸ್‌ಪಿಯರ್ ಮಹಾಕವಿಯ ರಿಚರ್ಡ್ III ಎಂಬ ನಾಟಕದಲ್ಲಿ ಇವರ ಬಾಳಿನ ದುರಂತ ಚಿತ್ರಿತವಾಗಿದೆ.

**ಎಡ್ವರ್ಡ್ VI:** 1537–1553. ಇಂಗ್ಲೆಂಡ್–ಐರ್ಲೆಂಡ್ ದೊರೆಯಾಗಿದ್ದ. 1547ರಲ್ಲಿ ಸಿಂಹಾಸನವೇರಿದ. ಎಂಟನೆಯ ಹೆನ್ರಿಯ ಒಬ್ಬನೇ ಮಗ. ತಾಯಿ ಜೇನ್ ಸೇಮೂರ್ (ಹೆನ್ರಿಯ ಮೂರನೆಯ ಹೆಂಡತಿ) ಎಡ್ವರ್ಡ್ ಹುಟ್ಟಿದ 12ನೆಯ ದಿನ ತೀರಿಕೊಂಡಳು. ಎಡ್ವರ್ಡ್ ದೃಢಕಾಯನಾಗಿರಲಿಲ್ಲ. ಆದರೂ ಈತನ ವಿದ್ಯಾಭ್ಯಾಸ ಬಲು ಕಟ್ಟುನಿಟ್ಟಾಗಿ ನಡೆಯಿತು. ಈತ ಲ್ಯಾಟಿನ್, ಗ್ರೀಕ್, ಫ್ರೆಂಚ್ ಭಾಷೆ ಕಲಿತ. ಪಟ್ಟಕ್ಕೆ ಬಂದಾಗ ಈತನಿಗೆ ಕೇವಲ ಒಂಬತ್ತು ವರ್ಷ. ಸಾಮರ್ಸೆಟ್ ಇವನ ರಕ್ಷಕನಾಗಿದ್ದ. ಮುಂದೆ ಈತನನ್ನು ಹಿಡಿತದಲ್ಲಿಟ್ಟುಕೊಳ್ಳಲು ಅನೇಕರು ಸ್ಪರ್ಧಿಸಿದರು. ಸಾಮರ್ಸೆಟನ ತಮ್ಮ ಇವನಿಗೆ ಹಣದ ಆಸೆ ತೋರಿಸಿದ. ವಾರ್ವಿಕಿನ ಅರ್ಲ್ ಆಗಿದ್ದ ಜಾನ್ ಡಡ್ಲಿ ಇವನ ಮನಸ್ಸಿನ ಮೇಲೆ ಪ್ರಭಾವ ಬೀರಿದ. ಸಾಮರ್ಸೆಟ್‌ನ ಅಧಿಕಾರ ಹೋಯಿತು. ಎಡ್ವರ್ಡನಿಗೆ ಆಡಳಿತದ ಪೂರ್ಣಾಧಿಕಾರವಿದೆಯೆಂದು ಘೋಷಿಸಲಾಯಿತು. ಡಡ್ಲಿಯೇ ದೊರೆಯ ಹೆಸರಿನಲ್ಲಿ ಅಧಿಕಾರ ಚಲಾಯಿಸುತ್ತಿದ್ದ. ಆದರೆ ಎಡ್ವರ್ಡ್ ಬಹುಕಾಲ ಬದುಕ ಲಿಲ್ಲ. ಇಪ್ಪತ್ತಾರನೆಯ ವಯಸ್ಸಿ ನಲ್ಲಿ ಆತ ಕ್ಷಯರೋಗಕ್ಕೆ ತುತ್ತಾದ. ಸಾಯುವ ಮುನ್ನ ಈತ ಬರೆದ ಉಯಿಲಿನಲ್ಲಿ ತನ್ನ ತಾಯಿ ಜೇನಳಿಗೆ (ಎರಡನೆಯ ಸಂಬಂಧದಲ್ಲಿ) ಹುಟ್ಟಿದ ಗಂಡು ಸಂತಾನಕ್ಕೆ ರಾಜ್ಯ ಸಲ್ಲಬೇಕೆಂದು ಬರೆದಿದ್ದನಾದರೂ ಡಡ್ಲಿಯ ಸಂಚಿನಿಂದ ಈ ಉಯಿಲಿಗೆ ಬೇರೆ ಅರ್ಥ ಬರುವಂತೆ ಇದನ್ನು ತಿದ್ದಲಾಯಿತು. ಜೇನಳಿಗೆ ಅಥವಾ ಆಕೆಯ ಗಂಡು ಸಂತಾನಕ್ಕೆ ಎಂಬುದಾಗಿ ವ್ಯಾಖ್ಯಾನಿಸಲಾಯಿತು.

ಅಲ್ಪಾಯು ಎಡ್ವರ್ಡನಲ್ಲಿ ಮಹಾ ಛಲಗಾರನಾಗುವ ಲಕ್ಷಣವಿತ್ತು. ಆ ಕಾಲದ ದುಷ್ಟ ಪ್ರವೃತ್ತಿಗಳನ್ನೆಲ್ಲ ಈತ ಅರಿತಿದ್ದ. ಎಡ್ವರ್ಡ್ ಹೆಚ್ಚು ಕಾಲ ಬದುಕಿದ್ದಿದ್ದರೆ ಇಂಗ್ಲೆಂಡಿನ ಇತಿಹಾಸವೇ ಬಹುಶಃ ಬೇರೆ ರೀತಿ ಇರುತ್ತಿತ್ತು. ದೊರೆಯ ದೈವೀ ಶಕ್ತಿಯಲ್ಲೂ ಪ್ರಾಟೆಸ್ಟಂಟ್‌ಮತದ ದೈವೀಸತ್ಯದಲ್ಲೂ ಈತನಿಗೆ ಅಗಾಧ ನಂಬಿಕೆ.

**ಎಡ್ವರ್ಡ್ VII:** 1841–1910, ಇಂಗ್ಲೆಂಡಿನ ದೊರೆ (1901–10). ವಿಕ್ಟೋರಿಯ ರಾಣಿಯ ಜ್ಯೇಷ್ಠಪುತ್ರ, ಐದನೆಯ ಜಾರ್ಜ್ ಇವನ ಮಗ. 60 ವರ್ಷಕಾಲ ಈತ ವೇಲ್ಸಿನ ರಾಜಕುಮಾರನಾಗಿದ್ದ. ಬ್ರಿಟಿಷ್ ಚಕ್ರಾಧಿಪತ್ಯದ ಉಚ್ಛ್ರಾಯಕಾಲದಲ್ಲಿ ಬದುಕಿದ್ದದ್ದು ಇವನ ಅದೃಷ್ಟ. ಒಂದನೆಯ ಮಹಾಯುದ್ಧ ಆರಂಭವಾಗುವ ವೇಳೆಗೆ ಈತ ತೀರಿ ಕೊಂಡ. ಬ್ರಿಟನ್ನಿನ ಲಾರ್ಡ್ಸ್ ಸಭೆಯ ತಡೆ (ವೀಟೊ) ಅಧಿಕಾರವನ್ನು ಮೊಟಕು ಮಾಡಲು

ಹರ್ಬರ್ಟ್ ಆಸ್ಕ್ವಿತ್ ಮಾಡಿದ ಪ್ರಯತ್ನಕ್ಕೆ ಇಷ್ಟ ವಿಲ್ಲದಿದ್ದರೂ ಈತ ಬೆಂಬಲ ನೀಡ ಬೇಕಾಯಿತು. ಯೂರೋಪ್ ಪ್ರವಾಸ ಮಾಡಿ, ಫ್ರಾನ್ಸಿನೊಡನೆ ಸ್ನೇಹ ಬೆಳೆಸಿ, ಇತರ ದೇಶಗಳೊಂದಿಗೆ ಕೌಲು ಮಾಡಿ ಕೊಂಡು ಬ್ರಿಟನ್ನಿನ ಅಂತಾರಾಷ್ಟ್ರೀಯ ಸೌಹಾರ್ದ ಬೆಳೆಸಲು ಈತನೂ ಕಾರಣ. ಎಡ್ವರ್ಡ್ ಷೋಕಿಯ ದೊರೆ. ಆಕರ್ಷಕ ಗಡ್ಡ, ನೀಟಾದ ಬೂಟು, ಎತ್ತರದ ಹ್ಯಾಟು, ಠೀಕು ಠಾಕು – ಇವು ಈತನ ಬಾಹ್ಯಲಕ್ಷಣ. ಬ್ರಿಟಿಷ್ ರಾಜಮನೆತನಕ್ಕೆ ಗಾಂಭೀರ್ಯದ ಗೌರವ ದೊರಕಿಸಿ ಕೊಡುವ ಎಲ್ಲ ಸಮಾರಂಭಗಳಲ್ಲೂ ಈತ ಹಾಜರಾಗುತ್ತಿದ್ದ. ಆದರೆ ಈತನ ಆಳ್ವಿಕೆಯ ಕೊನೆಗಾಲದ ವೇಳೆಗೆ ವಿಶ್ವದ ಪರಿಸ್ಥಿತಿ ಹದಗೆಟ್ಟಿತ್ತು. ಸೂರ್ಯ ಮುಳುಗದ ಸಾಮ್ರಾಜ್ಯ ದಲ್ಲೂ ಅಲ್ಲಲ್ಲಿ ಬಿರುಕುಗಳು ಬಾಯ್ದೆರೆಯುತ್ತಿದ್ದವು. ಇವುಗಳಿಂದಾಗಿ ಮಾನಸಿಕ ಗೊಂದಲಕ್ಕೆ ಈಡಾಗಿದ್ದ ಎಡ್ವರ್ಡ್ ದೊರೆ ಸಿಂಹಾಸನತ್ಯಾಗ ಮಾಡುವುದಾಗಿ ಪದೇ ಪದೇ ಹೇಳುತ್ತಿದ್ದ. ಆದರೆ ಸಿಂಹಾಸನತ್ಯಾಗ ಮಾಡಿದವನು ಇವನಲ್ಲ, ಈತನ ಮೊಮ್ಮಗ; ಅದೂ ಬೇರೆಯ ಕಾರಣಕ್ಕಾಗಿ.

ಎಡ್ವರ್ಡ್ ಭಾರತದ ಚಕ್ರವರ್ತಿಯೂ ಆಗಿದ್ದ. ಈತ ಸಿಂಹಾಸನವೇರಿದಾಗ ಭಾರತದ ವೈಸ್‌ರಾಯಿಯಾಗಿದ್ದ ಲಾರ್ಡ್ ಕರ್ಜನ್ ದೆಹಲಿಯಲ್ಲಿ ಒಂದು ದರ್ಬಾರು ಏರ್ಪಡಿಸಿ ಈ ವಾರ್ತೆಯನ್ನು ಘೋಷಿಸಿದ. ಭಾರತ ಸರ್ಕಾರವನ್ನು ಬ್ರಿಟಿಷ್ ರಾಜತ್ವ ವಹಿಸಿಕೊಂಡು ಐವತ್ತು ವರ್ಷಗಳಾದಾಗ (1908) ಆಚರಿಸಿದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಭಾರತದ ಪ್ರಜೆಗಳಿಗೂ ಮಹಾರಾಜರಿಗೂ ಈ ದೊರೆಯ ಒಂದು ಘೋಷಣೆ ಹೊರಡಿಸಲಾಗಿತ್ತು. ಅದರಲ್ಲಿ ಐವತ್ತು ವರ್ಷಗಳ ಆಡಳಿತದ ಸ್ವಪ್ರಶಂಸೆಯಿತ್ತಲ್ಲದೆ ಇಲ್ಲಿನ ಜನಕ್ಕೆ ಆಡಳಿತದಲ್ಲಿ ಹೆಚ್ಚು ಹೆಚ್ಚು ಪ್ರಾತಿನಿಧ್ಯ ದೊರಕಿಸಿಕೊಡುವ ಭರವಸೆಯೂ ಇತ್ತು. ಮುಂದೆ ಬರಲಿದ್ದ ಮಾರ್ಲೆ–ಮಿಂಟೋ ಸುಧಾರಣೆಗಳಿಗೆ ನಾಂದಿಯಾಗಿ 1909ರಲ್ಲಿ ಇಂಡಿಯ ಕೌನ್ಸಿಲುಗಳ ಕಾಯಿದೆ ಜಾರಿಗೆ ಬಂದಾಗ ದೊರೆ ಎಡ್ವರ್ಡನಿಗೆ ಈ ಸುಧಾರಣೆಗಳು ಅಷ್ಟೇನೂ ಹಿಡಿಸಲಿಲ್ಲ. ಆದರೆ ಮಂತ್ರಿಗಳ ಜವಾಬ್ದಾರಿಯ ನೀತಿಗೆ ಸಮ್ಮತಿಸುವಂಥ ವಿವೇಕ ಇವನಿಗಿತ್ತು.

**ಎಡ್ವರ್ಡ್ VIII**: 1936ರ ಜನವರಿ 20ರಂದು ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ದೊರೆಯಾಗಿ ಪಟ್ಟಾಭಿಷಿಕ್ತನಾಗಿ ಅದೇ ವರ್ಷದ ಡಿಸೆಂಬರ್ 11ರಂದು ರಾಜ್ಯತ್ಯಾಗಮಾಡಿದ. ಈತ ಐದನೆಯ ಜಾರ್ಜನ ಮಗ (ಜನನ : 1894) ಎಡ್ವರ್ಡ್ ಆಲ್ಬರ್ಟ್ ಕ್ರಿಶ್ಚಿಯನ್ ಜಾರ್ಜ್ ಆಂಡ್ರ್ಯೂ ಪ್ಯಾಟ್ರಿಕ್ ಡೇವಿಡ್ ಈತನ ಪೂರ್ಣನಾಮ.

ಎಂಟನೆಯ ಎಡ್ವರ್ಡ್ ಹುಟ್ಟಿದಾಗ ಏಳನೆಯ ಎಡ್ವರ್ಡ್ ಇನ್ನೂ ಬದುಕಿದ್ದ. ರಾಯಲ್ ನೌಕಾ ಶಿಕ್ಷಣಾಲಯದಲ್ಲಿ ಶಿಕ್ಷಣ ಪಡೆದ ಈತ 1911ರಲ್ಲಿ ವೇಲ್ಸ್ ರಾಜಕುಮಾರನಾದ. 1912ರಲ್ಲಿ ಆಕ್ಸ್‌ಫರ್ಡಿನಲ್ಲಿ ಸಾಮಾನ್ಯರ ಜೊತೆಯಲ್ಲಿ ಇವನಿಗೆ ಶಿಕ್ಷಣ ದೊರೆಯಿತು. ಆಗಿಂದಾಗ್ಗೆ ಈತ ರಾಜವೈಭವದ ಸಮಾರಂಭಗಳಲ್ಲಿ ಭಾಗವಹಿಸಬೇಕಾಗುತ್ತಿತ್ತು. ಆದರೆ ಮೊದಲಿಂದಲೂ ಇವುಗಳಲ್ಲಿ ಎಡ್ವರ್ಡನಿಗೆ ನಿರಾಸಕ್ತಿ. ಇವು ಕಾಲ, ಹಣ ಮತ್ತು ಶಕ್ತಿಗಳ ದುರ್ವ್ಯಯ ವೆಂದು ಈತನೇ ತನ್ನ ದಿನಚರಿಯಲ್ಲಿ ಒಂದೆಡೆ ಬರೆದುಕೊಂಡಿದ್ದಾನೆ. ಒಂದನೆಯ ಮಹಾಯುದ್ಧದಲ್ಲಿ ಈತನೂ ಸೇನೆಗೆ ದಾಖಲಾಗಿದ್ದ. ಆದರೆ ಇವನನ್ನು ಯುದ್ಧದ ಮುಂಚೂಣಿಗೆ ಕಳಿಸಲಿಲ್ಲ. ಈತ ಕೈಸೆರೆಯಾಗುವ ಸಂಭವಕ್ಕೆ ಎಡೆಕೊಡಬಾರದೆಂದು ವಿದೇಶಾಂಗ ಸಚಿವರ ಆತಂಕ. ತನಗೆ ಈ ಅವಕಾಶ ತಪ್ಪಿತೆಂದು ಎಡ್ವರ್ಡನ ದುಃಖ.

ಯುದ್ಧಾನಂತರದಲ್ಲಿ ಈತ ವಿಶ್ವಪರ್ಯಟನೆ ಮಾಡಿದ್ದಲ್ಲದೆ ದೊರೆತನಕ್ಕೆ ಅವಶ್ಯವಾದ ಎಲ್ಲ ಬಗೆಯಲ್ಲೂ ಸಜ್ಜುಗೊಂಡ.

1936ರಲ್ಲಿ ಐದನೆಯ ಜಾರ್ಜ್ ಸತ್ತಾಗ ಈತ ಎಂಟನೆಯ ಎಡ್ವರ್ಡ್ ದೊರೆಯೆಂದು ಸಾರಲಾಯಿತು. ದೊರೆ ಎಡ್ವರ್ಡನ ಪ್ರಥಮ ಭಾಷಣದ ಶ್ರೀಮದ್ಗಾಂಭೀರ್ಯದ ನಡುವೆ ಈತನ ವ್ಯಕ್ತಿತ್ವದ ಚಿತ್ರವೊಂದು ಇಣಿಕಿ ಹಾಕಿತ್ತು. ತಾನು ದೊರೆಯಾಗಿ ಮಾತಾಡುತ್ತಿದ್ದರೂ ತನ್ನ ಹಳೆಯ ವ್ಯಕ್ತಿತ್ವ ಬದಲಾಗಿಲ್ಲವೆಂದು ಅದರಲ್ಲಿ ಹೇಳಿಕೊಂಡ.

ಈ ವ್ಯಕ್ತಿತ್ವ ಬಲು ಬೇಗ ಎಡ್ವರ್ಡನ ಇಡೀ ದೇಹವನ್ನೇ ಆಕ್ರಮಿಸಿಕೊಂಡು ದೊರೆತನವನ್ನೇ ಮಸಕುಮಾಡಿತು. ಈತ ವಿಹಾರಾರ್ಥವಾಗಿ ಪ್ರವಾಸ ಕೈಕೊಂಡಿದ್ದಾಗ ದೊರೆಯ ಪರಿವಾರದಲ್ಲಿ ಶ್ರೀಮತಿ ವಾಲಿಸ್ ವಾರ್‌ಫೀಲ್ಡ್ ಸಿಂಪ್ಸನ್ ಎಂಬ ಮಹಿಳೆ ಯೊಬ್ಬಳಿದ್ದಳು. ಎಡ್ವರ್ಡ್ ಆಕೆಯಿಂದ ಆಕರ್ಷಿತನಾದ. ಇವರಿಬ್ಬರ ಕಲಾಪಗಳ ಬಗ್ಗೆ ಪತ್ರಿಕೆಗಳಲ್ಲಿ ಹುಯಿಲೆದ್ದಿತು.

ಶ್ರೀಮತಿ ಸಿಂಪ್ಸನ್ ತನ್ನ ಗಂಡನಿಂದ ವಿವಾಹವಿಚ್ಛೇದನ ಪಡೆಯುವಳೆಂಬ ಸುದ್ದಿಯೂ ಪ್ರಕಟವಾಯಿತು. ದೊರೆಯ ನಡೆವಳಿಕೆಯಿಂದ ಪ್ರಧಾನಿ ಬಾಲ್ಡ್‌ವಿನ್ ಆತಂಕಗೊಂಡ. ಆದರೆ ಎಡ್ವರ್ಡನ ಮನಸ್ಸು ಕದಲಲಿಲ್ಲ. ಆಕೆಯನ್ನು ಮದುವೆಯಾಗಿಯೂ ದೊರೆ ಯಾಗಿರುವುದು ಸಾಧ್ಯವಿಲ್ಲದಿದ್ದರೆ ದೊರೆತನವನ್ನೇ ಬಿಡಲು ಸಿದ್ಧ ವೆಂಬುದಾಗಿ ಹೇಳಿದ. ಮುಂದಿನ ಕೆಲವು ವಾರ ಬ್ರಿಟನ್ನಿನಲ್ಲಿ ವಿಪುಲವಾಗಿ ವಾದ–ವಿವಾದಗಳು ನಡೆದುವು. ಪ್ರೇಮ–ರಾಜತ್ವಗಳೆರಡನ್ನೂ ಉಳಿಸುವ ಸಲುವಾಗಿ ನಾನಾ ನಡುವಾರ್ಗಗಳು ಸೂಚಿತವಾದುವು. ಯಾವುವೂ ಫಲಿಸಲಿಲ್ಲ. ಕೊನೆಗೆ ತಾನು ಸಿಂಹಾಸನ ತ್ಯಾಗ ಮಾಡುವುದಾಗಿ ಎಡ್ವರ್ಡ್ ಘೋಷಿಸಿದ. ಪಾರ್ಲಿಮೆಂಟು ಒಪ್ಪಿಗೆ ಸೂಚಿಸಿತು. "ಫ್ಯೂರಿ" ಯುದ್ಧ ನೌಕೆಯಲ್ಲಿ ಕುಳಿತು ಎಡ್ವರ್ಡ್ ಬ್ರಿಟನ್ ಬಿಟ್ಟು ಹೊರಟ. ಈತನ ಸ್ಥಾನದಲ್ಲಿ ಸಿಂಹಾಸನಕ್ಕೆ ಬಂದ ಆರನೆಯ ಜಾರ್ಜ್ ಈತನಿಗೆ ವಿಂಡ್ಸರಿನ ಡ್ಯೂಕ್ ಪದವಿ ಪ್ರದಾನ ಮಾಡಿದ. ಮುಂದಿನ ವರ್ಷದ ಜೂನ್ 3ರಂದು ಸಿಂಪ್ಸನ್–ಎಡ್ವರ್ಡ್ ವಿವಾಹ ಜರುಗಿತು. ಈತ 'ಎ ಕಿಂಗ್ಸ್ ಸ್ಟೋರಿ' ಎಂಬ ಪುಸ್ತಕದಲ್ಲಿ ತನ್ನ ಅನುಭವಗಳನ್ನು ಕುರಿತು ಬರೆದಿದ್ದಾನೆ.

ಎಂಟನೆಯ ಎಡ್ವರ್ಡ್ ವೇಲ್ಸಿನ ರಾಜಕುಮಾರನಾಗಿದ್ದಾಗ ಭಾರತಕ್ಕೆ ಭೇಟಿ ನೀಡಿದ್ದ (1921). ಆದರೆ 1919ರ ಭಾರತದ ಸರ್ಕಾರ ಕಾಯಿದೆಯಿಂದ ಅತೃಪ್ತರಾಗಿದ್ದ ಭಾರತೀಯರು ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ ಚಳವಳಿ ಹೂಡಿ ಹರತಾಳ ಆಚರಿಸುತ್ತಿದ್ದರು. ನಿರ್ಜನವಾದ ಬೀದಿಗಳಲ್ಲಿ ಎಡ್ವರ್ಡನ ಮೆರವಣಿಗೆ ನಡೆಯಿತು. *

**ಎಡ್ವರ್ಡ್ಸ್, ಜೊನಾಥನ್**: 1703–1758. ಅಮೆರಿಕದ ಪ್ರಸಿದ್ಧ ಸಂತ, ತತ್ತ್ವಜ್ಞಾನಿ, ಕ್ಯಾಲ್ವಿನ್ನನ ಪಂಥದ ಪುನರುಜ್ಜೀವಕ ಮತ್ತು ಕ್ರೈಸ್ತಧರ್ಮ ಮೀಮಾಂಸಕ. ಇಂಗ್ಲೆಂಡಿನಿಂದ ಅಮೆರಿಕಕ್ಕೆ ವಲಸೆ ಹೋದ ಕುಟುಂಬ ಒಂದರಲ್ಲಿ 1703ನೆಯ ಅಕ್ಟೋಬರ್ 6ನೆಯ ತಾರೀಖು ಪೂರ್ವ ವಿಂಡ್ಸರ್‌ನಲ್ಲಿ ಜನಿಸಿದ. ತಂದೆ ಟಿಮೋಥಿ. ವಿಂಡ್ಸರಿನ ಚರ್ಚಿನ ಧರ್ಮಾಧಿಕಾರಿ (ಪಾಸ್ಟರ್). ಹದಿಮೂರನೆಯ ವಯಸ್ಸಿನವರೆಗೆ ಎಡ್ವರ್ಡನ ವಿದ್ಯಾಭ್ಯಾಸ ಮನೆಯಲ್ಲೇ ನಡೆಯಿತು. ಅಷ್ಟು ಸಣ್ಣ ವಯಸ್ಸಿನಲ್ಲೇ ಅವನು ಲ್ಯಾಟಿನ್, ಗ್ರೀಕ್ ಮತ್ತು ಹೀಬ್ರೂ ಭಾಷೆಗಳ ಪರಿಚಯ ಮಾಡಿಕೊಂಡಿದ್ದ. ಹದಿಮೂರನೆಯ ವಯಸ್ಸಿನಲ್ಲಿಯೇ ಕಾಲೇಜನ್ನು ಸೇರಿದ. ಕಾಲೇಜಿಗೆ ಸೇರಿದ ಎರಡನೆಯ ವರ್ಷ ಅವನಿಗೆ ಲಾಕ್‌ನ ಎಸ್ಸೇ ಕನ್ಸರ್ನಿಂಗ್ ಹ್ಯೂಮನ್ ಅಂಡರ್‌ಸ್ಟ್ಯಾಂಡಿಂಗ್ ಎಂಬ ಗ್ರಂಥ ಲಭಿಸಿತು. ಅದು ತನಗೆ ಲಭಿಸಿದ್ದು ಜಿಪುಣನಿಗೆ ಸುವರ್ಣನಿಧಿ ಸಿಕ್ಕಿದಷ್ಟು ಸಂತೋಷವಾಯಿತೆಂದು ತಾನೇ ಹೇಳಿಕೊಂಡಿದ್ದಾನೆ. ಅದೇ ಕಾಲದಲ್ಲಿ ನ್ಯೂಟನ್ನನ ಪ್ರಿನ್ಸಿಪಿಯ ಗ್ರಂಥವನ್ನೂ ಓದಿದ. 1720ರಲ್ಲಿ ಬಿ.ಎ. ಪದವಿಯನ್ನೂ 1723ರಲ್ಲಿ ಎಂ.ಎ. ಪದವಿಯನ್ನೂ ಗಳಿಸಿದ. 1727ರಲ್ಲಿ ನಾರ್ಥಾಮ್ಟನ್ ಚರ್ಚಿನಲ್ಲಿ ತನ್ನ ತಾತನ ಸಹೋದ್ಯೋಗಿಯಾದ. ಅದೇ ವರ್ಷ ಸಾರಾ ಪೀರ್‌ಪಾಂಟ್ ಎಂಬಾಕೆಯನ್ನು ಮದುವೆಯಾದ.

ಎಡ್ವರ್ಡ್ಸ್ ಬಾಲ್ಯದಿಂದ ಪ್ರಕೃತಿಯ ವೈಚಿತ್ರ್ಯವನ್ನು ಅವಲೋಕಿಸುವುದರಲ್ಲೂ ಇರವಿನ ವಿಚಾರಚಿಂತನದಲ್ಲೂ ಮಗ್ನನಾಗಿದ್ದ. ಹತ್ತು ವರ್ಷದ ಹುಡುಗನಾಗಿದ್ದಾಗಲೇ ಆತ್ಮದ ವಿಚಾರವಾಗಿ ಒಂದು ಪ್ರಬಂಧವನ್ನು ಬರೆದಿದ್ದ. ಕಾಲೇಜಿಗೆ ಸೇರುವುದಕ್ಕೆ ಮುಂಚೆ ಹಾರುವ ಜೇಡರಹುಳುವನ್ನು ಕುರಿತು ಒಂದು ಪ್ರಬಂಧವನ್ನು ಬರೆದಿದ್ದ. ಸುಮಾರು ಅದೇ ಕಾಲದಲ್ಲೇ ಕಾಮನಬಿಲ್ಲನ್ನು ಕುರಿತು ಇನ್ನೊಂದು ಲೇಖನವನ್ನೂ ಬರೆದಿದ್ದ. ಈ ಎರಡು ಲೇಖನಗಳೂ ಅವನ ತೀಕ್ಷ್ಣ ಅವಲೋಕನಶಕ್ತಿಗೆ ನಿದರ್ಶನಗಳು. ಹದಿನಾರನೆಯ ವಯಸ್ಸಿನಲ್ಲಿ ಇರವು(ಬೀಯಿಂಗ್) ಎಂಬ ತಾತ್ತ್ವಿಕ ಲೇಖನವನ್ನು ಬರೆದಿದ್ದ. ಕೇವಲ

ಅಭಾವ ಅಚಿಂತ್ಯ, ಯಾವುದನ್ನೇ ಆಗಲಿ ಇದೆ ಎಂದು ಹೇಳಬೇಕಾದರೆ ಅದು ಇಂದ್ರಿಯಾನುಭವದ ಗುಣಗಳಿಂದ ಅಥವಾ ಆಲೋಚನೆಯ ಭಾವನೆಗಳಿಂದ ಕೂಡಿರಬೇಕು. ಆದ್ದರಿಂದ ಮಾನಸಿಕ ಭಾವನೆಗಳನ್ನಾಗಲಿ ಇಂದ್ರಿಯಗಳ ಬಿಂಬಗಳನ್ನಾಗಲಿ ಬಿಟ್ಟು ಯಾವುದನ್ನೂ ಇರುವುದೆಂದು ಹೇಳಲಾಗುವುದಿಲ್ಲ. ಇರವು ಅರಿವಿಗೆ ಅಧೀನ. ವಿಶ್ವ ಚೇತನಮಯ, ಎಲ್ಲಕ್ಕೂ ಮೂಲವಾದದ್ದು ಈಶ್ವರಚೇತನ, ಸರ್ವವೂ ಈಶ್ವರಾಧೀನ. ಎಲ್ಲವೂ ಇರುವುದು ಅವನ ಅನುಗ್ರಹದಿಂದ. ದೇವರ ಮುನಿಸೂ ಅನುಗ್ರಹವೇ. ಇವನ ಈ ವಾದ ಬಹುಮಟ್ಟಿಗೆ ಬಾರ್ಕ್ಲೆ ವಾದವನ್ನು ಹೋಲುತ್ತದೆಯಾದರೂ ಇದನ್ನು ಬಾರ್ಕ್ಲೆಯ ನೆರವಿಲ್ಲದೆ ಸ್ವತಂತ್ರವಾಗಿ ನಿರೂಪಿಸಿದ್ದ. ಈ ಭಾವನಾವಾದ ಮುಂದೆ ಧರ್ಮಸಿದ್ಧಾಂತಕ್ಕೆ ತಳಹದಿಯಾಯಿತು.

ಅಮೆರಿಕಕ್ಕೆ ವಲಸೆ ಬಂದು ನೆಲೆಸಿದ್ದವರು ವಿಶೇಷವಾಗಿ ಕ್ಯಾಲ್ವಿನ್ನನ ಪಂಥದ ನಿರ್ಮಲರು. ಮೂಲ ವಲಸೆಗಾರರು ಕ್ಯಾಲ್ವಿನ್ನಿನ ನಿಯಮಗಳನ್ನು ತುಂಬ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಆದರೆ ಅವನ ನಾಲ್ಕನೆಯ ಸಂತತಿಯವರಲ್ಲಿ ನಿರ್ಮಲರ ನೀತಿ ಇಳಿಮುಖವಾಗಿತ್ತು; ಆಸ್ತಿಕತೆಯಲ್ಲದೆ ಸಾಮಾನ್ಯ ನೀತಿ ಕೂಡ ಸಡಿಲವಾಗಿತ್ತು. ಕ್ಯಾಲ್ವಿನ್‌ತತ್ತ್ವ ಮಸಕಾಗಿ ಆರ್ಮೀನಿಯ ತತ್ತ್ವ ತಲೆ ಎತ್ತಿತ್ತು. ಚರ್ಚುಗಳಲ್ಲಿ ಪ್ರಭುಭೋಜನಕ್ಕೆ ಆಧ್ಯಾತ್ಮಿಕ ಪರಿವರ್ತನೆ ಹೊಂದದವರನ್ನೂ ಸೇರಿಸುತ್ತಿದ್ದರು. ಮೊದಮೊದಲಲ್ಲಿ ಎಡ್ವರ್ಡ್ಸ್ ಈ ಪದ್ಧತಿಗೆ ಒಪ್ಪಿಗೆ ಇತ್ತಿದ್ದ. ಆದರೆ ಸ್ವಲ್ಪ ಕಾಲದಲ್ಲೇ ಅದು ಸರಿಯಲ್ಲವೆಂದು ಮನದಟ್ಟಾಯಿತು. ನಿರ್ಮಲ ಪಂಥದ ತತ್ತ್ವವನ್ನು ಪುನರುಜ್ಜೀವನಗೊಳಿಸಲು ಈತ ಇಪ್ಪತ್ತೂರು ವರ್ಷಗಳ ಕಾಲ ಶ್ರಮಿಸಿದ. ಈ ಕಾಲದಲ್ಲಿ ಈತ ಮಾಡಿದ ಧರ್ಮಪ್ರವಚನಗಳು (ಸರ್ಮನ್) ಅಮೆರಿಕದ ಚರ್ಚಿನ ಚರಿತ್ರೆಯಲ್ಲಿ ಪ್ರಸಿದ್ಧವಾದವು. ಅವುಗಳಿಗೆ ಆಧಾರ ಪುಸ್ತಕಗಳಿಲ್ಲ. ಸ್ವಂತ ಅನುಭವ – ನೇರವಾಗಿ ದೇವರಿಂದ ದೊರೆತ ಪ್ರೇರಣೆ. ಈತನ ಧರ್ಮಪ್ರವಚನಗಳು ಜನರಲ್ಲಿ ಭಕ್ತಿ ಉಕ್ಕಿ ಹರಿಯುವಂತೆ ಮಾಡಿದುವು. 1747ರಲ್ಲಿ ನಾರ್ಥಾಮ್ಟನ್ನಿನ ಆರಾಧನೆಯ ಗೋಷ್ಠಿಯ ಸಂಖ್ಯೆ ಆರುನೂರ ಇಪ್ಪತ್ತಕ್ಕೆ ಏರಿತು. ಆದರೆ ಈ ಗೋಷ್ಠಿಯವರಲ್ಲಿ ನಿಜವಾದ ಆತ್ಮಪರಿವರ್ತನೆ ಇಲ್ಲದ ಅನೇಕರು ಇದ್ದರು. ಇಂಥವರು ಪ್ರಭುಭೋಜನದಲ್ಲಿ ಭಾಗವಹಿಸುತ್ತಿದ್ದರು. ನಿಜವಾದ ಆತ್ಮಪರಿವರ್ತನೆ ಹೊಂದದವರು ಪ್ರಭುಭೋಜನದಲ್ಲಿ ಭಾಗವಹಿಸಲು ಅರ್ಹರಲ್ಲ. ಅವರಿಗೆ ಭಾಗವಹಿಸಲು ಅವಕಾಶವೀಯಕೂಡದೆಂದು ಎಡ್ವರ್ಡ್ಸ್ ಪಟ್ಟುಹಿಡಿದು ವಾದಿಸಿದ. ಇದು ಆರಾಧನೆಯ ಗೋಷ್ಠಿಯವರಿಗೆ ಹಿಡಿಸಲಿಲ್ಲ. ಈ ವಿಚಾರದಲ್ಲಿ ಎರಡು ವರ್ಷ ಕಾಲ ವಿವಾದ ನಡೆದು ಬಹುಮತ ಎಡ್ವರ್ಡ್ಸ್‌ಗೆ ವಿರೋಧವಾಯಿತು. 1750ನೆಯ ಜೂನ್ ಇಪ್ಪತ್ತನೆಯ ದಿನ ಗೋಷ್ಠಿಯವರು ಎಡ್ವರ್ಡ್ಸ್‌ನನ್ನು ಧರ್ಮಾಧಿಕಾರಿ ಪೀಠದಿಂದ ತೆಗೆದುಹಾಕಿದರು. ಹೀಗೆ ಸೋಲಾದರೂ ಇವನ ಅನಂತರ ಈ ಪಕ್ಷ ಊರ್ಜಿತವಾಯಿತು.

ಕೆಲವು ತಿಂಗಳ ತರುವಾಯ ಎಡ್ವರ್ಡ್ಸ್ ನಾಡಿನ ಗಡಿ ಪ್ರದೇಶದ ಸ್ಟಾಕ್‌ಬ್ರಿಜ್ ಎಂಬ ಒಂದು ಕೊಪ್ಪಲಿನಲ್ಲಿ ವಾಸಿಸುತ್ತ ಅಲ್ಲಿನ ರೆಡ್ ಇಂಡಿಯನರಲ್ಲಿ ಕ್ರೈಸ್ತಧರ್ಮ ಪ್ರಚಾರಮಾಡಿದ. ನಾರ್ಥಾಮ್ಟನ್‌ನಲ್ಲಿ ಧರ್ಮಾಧಿಕಾರಿಯಾಗಿದ್ದ ಕಾಲದಲ್ಲಿ ಈತ ಕ್ರೈಸ್ತಧರ್ಮ ಮೀಮಾಂಸೆಯ ವಿಚಾರವಾಗಿ ಬರೆಯಲು ವಿರಾಮವಿರಲಿಲ್ಲ. ಆ ವಿರಾಮ ಈಗ ಅವನಿಗೆ ದೊರೆಯಿತು. ಫ್ರೀಡಂ ಆಫ್ ದಿ ವಿಲ್ (1754), ಒರಿಜಿನಲ್ ಸಿನ್ (1768), ದಿ ಎಂಡ್ ಫಾರ್ ವಿಚ್ ಗಾಡ್ ಕ್ರಿಯೇಟೆಡ್ ದಿ ವರ್ಲ್ಡ್, ದಿ ನೇಚರ್ ಆಫ್ ಟ್ರೂ ವರ್ಚ್ಯು, ಹಿಸ್ಟರಿ ಆಫ್ ದಿ ವರ್ಕ್ ಆಫ್ ರಿಡೆಂಪ್ಷನ್ – ಮೊದಲಾದ ಗ್ರಂಥಗಳನ್ನೀತ ಬರೆದಿದ್ದಾನೆ. ಕೊನೆಯ ಮೂರು ಗ್ರಂಥಗಳು ಈತ ಗತಿಸಿದ ನಂತರ ಪ್ರಕಟವಾದುವು.

1757ರಲ್ಲಿ ಎಡ್ವರ್ಡ್ಸ್ ಪ್ರಿನ್ಸ್‌ಟನ್ ಕಾಲೇಜಿನ ಅಧ್ಯಕ್ಷನಾಗಲು ಒಪ್ಪಿಕೊಂಡ. ಆದರೆ ಅಧ್ಯಕ್ಷತೆಯನ್ನು ವಹಿಸಿಕೊಂಡ ಕೆಲವೇ ತಿಂಗಳುಗಳಲ್ಲಿ ಅವನಿಗೆ ಸಿಡುಬು ರೋಗ ತಗಲಿ 1758ರ ಮಾರ್ಚ್ 22ರಂದು ದೈವಾಧೀನನಾದ. ಎಡ್ವರ್ಡ್ಸ್ ಅಮೆರಿಕದ ಮತಮೀಮಾಂಸೆಗೆ ಸುಭದ್ರವಾದ ತಳಹದಿಯನ್ನು ಹಾಕಿದ. 19ನೆಯ ಶತಮಾನದವರೆಗೆ ಅಮೆರಿಕದ ಧರ್ಮಮೀಮಾಂಸೆಯ ಮೇಲೆ ಅವನ ಪ್ರಭಾವ ಜೀವಂತವಾಗಿತ್ತು.

(ಜಿ.ಎಚ್.)

**ಎಡ್ವರ್ಡ್ಸ್, ರಿಚರ್ಡ್:** 1522–1566. ಇಂಗ್ಲಿಷ್ ನಾಟಕಕಾರ, ಸಂಗೀತ ವಿದ್ವಾಂಸ, ಲೇಖಕ, ಸಂಗೀತ ರಚಕ. ಹುಟ್ಟಿದ್ದು ಸಾಮರ್‌ಸೆಟ್‌ಷೈರಿನಲ್ಲಿ. ಆಕ್ಸ್‌ಫರ್ಡಿನಲ್ಲಿ ವ್ಯಾಸಂಗಮಾಡಿ ಮಾಸ್ಟರ್ ಪದವಿ ಪಡೆದ (1547). ಲಿಂಕನ್ಸ್ ಇನ್‌ನಲ್ಲಿ ಇವನ ಡೇಮನ್ ಅಂಡ್ ಪಿಥಿಯಾಸ್ ನಾಟಕ ಪ್ರದರ್ಶಿತವಾಯಿತು (1564). ಪ್ಯಾರಡೈಸ್ ಆಫ್ ಡೇಂಟಿ ಡಿವೈಸಸ್ ಎಂಬ ಹೆಸರಿನಲ್ಲಿ ಈತ ಸಂಗ್ರಹಿಸಿದ ವಿವಿಧ ಕರ್ತೃಗಳ ರೂಪಕಭಾಗಗಳ ಗ್ರಂಥ ಇವನ ಮರಣಾನಂತರ ಅಂದರೆ 1576ರಲ್ಲಿ ಪ್ರಕಟವಾಯಿತು. ಷೇಕ್ಸ್‌ಪಿಯರ್ ಈತನ ಒಂದು ಕವನವನ್ನು ರೋಮಿಯೊ ಅಂಡ್ ಜ್ಯೂಲಿಯೆಟ್ ಎಂಬ ತನ್ನ ನಾಟಕದಲ್ಲಿ ಉದ್ಧರಿಸಿದ್ದಾನೆ.

(ಎನ್.ಎಸ್.ಎಲ್.)

**ಎಡ್‌ಸ್ಚ್‌ಮಿಡ್, ಕ್ಯಾಸಿಮಿಲ್:** 1890–1939. ಒಂದನೆಯ ಮಹಾಯುದ್ಧ ಮುಕ್ತಾಯವಾದೊಡನೆ ಅಭಿವ್ಯಕ್ತವಾದದ ಸಿದ್ಧಾಂತಗಳನ್ನು ಕ್ರೋಡೀಕರಿಸಿ, ಅವಕ್ಕೆ ಒಂದು ರೂಪ ಕೊಟ್ಟ ಜರ್ಮನಿಯ ಕವಿ, ವಿಮರ್ಶಕ. 1919ರಲ್ಲಿ ಈತನ ಪುಸ್ತಕ ಉಬರ್ ಡೆನ್ ವಿಕ್ಟರಿಸ್ಟೆನ್ ಎಕ್ಸ್‌ಪ್ರೆಷನಿಸ್ಮ್ ಪ್ರಕಟವಾದಾಗ ಅದು ಅಭಿವ್ಯಕ್ತವಾದಿಗಳ ಸಿದ್ಧಾಂತದ ಪತಾಕೆಯೆಂದು ಪರಿಗಣಿತವಾಯಿತು. ಹೊರಜಗತ್ತು ವಾಸ್ತವವೆಂಬುದನ್ನು ಅಲ್ಲಗಳೆದು, ಆ ಜಗತ್ತಿನ ತತ್ತ್ವ, ದರ್ಶನ ಮತ್ತು ಕಲೆಗಳ ದೃಷ್ಟಿಕೋನಗಳನ್ನು ನಿರಾಕರಿಸಿ, ತಮ್ಮೊಳಗೇ ಹೊಸತೊಂದು ವಾಸ್ತವತೆಯನ್ನು ಪ್ರತಿ ವ್ಯಕ್ತಿಯೂ ಅರಸಬೇಕು. ಅವ್ಯಕ್ತದೊಂದಿಗೆ ಮಾನವನಿಗೆ ಹೊಸತೊಂದು ಆಂತರಿಕ ಸಂಬಂಧವಿದೆ; ಅದನ್ನು ಅರಸಿ ಅನುಭಾವದ ಬಗೆಯಲ್ಲಿ ಮಸಕು ಮಸಕಾದರೂ ಪ್ರಬಲ ರೀತಿಯಲ್ಲಿ ಅಭಿವ್ಯಕ್ತಪಡಿಸಬೇಕೆಂಬುದೇ ಈತನ ವಾದದ ತಿರುಳು. ಮನುಷ್ಯನ ಮನಸ್ಸಿನ ಮೇಲೆ ಹೊರಜಗತ್ತು ಮೂಡಿಸುವ ಪ್ರಭಾವ ಮುಖ್ಯವಲ್ಲ. ಹೊರಜಗತ್ತಿನ ಮೇಲೆ ಮನುಷ್ಯನ ಮನಸ್ಸು ಚಾಚುವ ನೆರಳೇ ಮುಖ್ಯ– ಎಂಬ ತತ್ತ್ವವನ್ನು ಈತನ ವಿಮರ್ಶನ ಸಿದ್ಧಾಂತದ ಕೃತಿಯೂ ಕಾವ್ಯಗಳೂ ಸಾರುತ್ತವೆ. 1911ರಿಂದಲೇ ಜರ್ಮನಿಯಲ್ಲಿ ಈತನ ಮುಂದಾಳುತನದಲ್ಲಿ ಕೆಲಸಮಾಡುತ್ತಿದ್ದ ಅಭಿವ್ಯಕ್ತಿವಾದಿಗಳು 1919ರಲ್ಲಿ ಈತನ ಪುಸ್ತಕದಲ್ಲಿ ತಮ್ಮ ಸಿದ್ಧಾಂತಕ್ಕೆ ಸರಿಯಾದ ನೆಲೆ, ಬೆಲೆಯನ್ನು ಪಡೆದುಕೊಂಡು ಸಂಘಟಿತರಾದರು. (ಎಸ್.ಎ.ಎನ್.)

**ಎಣ್ಣೆ ಕಾಳುಗಳು:** ಎಣ್ಣೆಯನ್ನು ಕೊಡುವ ಸಸ್ಯಬೀಜಗಳು. ರೂಢಿಯಲ್ಲಿ ಶೇಂಗ, ಎಳ್ಳು, ಅಗಸೆ, ಔಡಲ, ಸಾಸಿವೆ ಮತ್ತು ಇವುಗಳ ಪ್ರಭೇದಗಳನ್ನು ಕುರಿತು ಬಳಸುವ ಪದ. ಎಣ್ಣೆ ಕಾಳುಗಳಿಂದ ಪಡೆಯುವ ಉಪೋತ್ಪನ್ನಗಳು ಸಾಮಾನ್ಯವಾಗಿ ದನಗಳಿಗೆ ಹಿಂಡಿ ಮತ್ತು ಸಸ್ಯಗಳಿಗೆ ಗೊಬ್ಬರ.

ಜಗತ್ತಿನಲ್ಲಿ ಎಣ್ಣೆ ಕಾಳುಗಳನ್ನು ಬೆಳೆಯುವ ಒಟ್ಟು ವಿಸ್ತೀರ್ಣ 80.15 ಮಿಲಿಯನ್ ಎಕರೆ; ಉತ್ಪನ್ನ 205.304 ಲಕ್ಷ ಟನ್. ಈ ಪೈಕಿ ಭಾರತದ ಕೊಡುಗೆಗಳು ಕ್ರಮವಾಗಿ 33.1 ಮಿ. ಎಕರೆ ಮತ್ತು 63.5 ಲಕ್ಷ ಟನ್. ಎಣ್ಣೆ ಕಾಳುಗಳ ಉತ್ಪಾದನೆಯಲ್ಲಿ ಭಾರತಕ್ಕೆ ಜಗತ್ತಿನಲ್ಲಿ ಪ್ರಥಮಸ್ಥಾನ. ಇಲ್ಲಿಂದ ವಿದೇಶಗಳಿಗೆ ರಫ್ತಾಗುವ ಸಾಮಗ್ರಿಗಳಲ್ಲಿ ಇವುಗಳ ಸ್ಥಾನ ಗಮನಾರ್ಹವಾದದ್ದು.

ಭಾರತದ ವ್ಯವಸಾಯ ಕ್ಷೇತ್ರದ 10% ಎಣ್ಣೆ ಕಾಳುಗಳ ಉತ್ಪಾದನೆಗೆ ಮೀಸಲಾಗಿದೆ. ಒಟ್ಟು ಬೆಳೆಗಳ ಶೇ. 12½ ಉತ್ಪತ್ತಿ ಎಣ್ಣೆ ಕಾಳುಗಳದೇ. ಶೇಂಗಾ, ಎಳ್ಳು, ಸಾಸಿವೆ ವಿಭಾಗಗಳಲ್ಲಿ ಭಾರತದ ಸ್ಥಾನ ಜಗತ್ತಿನಲ್ಲಿ ಪ್ರಥಮ; ಔಡಲ ವಿಭಾಗದಲ್ಲಿ ದ್ವಿತೀಯ (ಬ್ರೆಸಿಲ್ ಪ್ರಥಮ), ಅಗಸೆ ವಿಭಾಗದಲ್ಲಿ ಅಮೆರಿಕ, ಅರ್ಜೆಂಟೀನ, ಕೆನಡಗಳ ತರುವಾಯದ ನಾಲ್ಕನೆಯ ಸ್ಥಾನ. ಭಾರತದಲ್ಲಿ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ, ಮೈಸೂರು, ಉತ್ತರಪ್ರದೇಶ, ರಾಜಸ್ಥಾನ, ಪಂಜಾಬ್, ಒರಿಸ್ಸ, ಪಶ್ಚಿಮಬಂಗಾಲ, ಬಿಹಾರ, ಅಸ್ಸಾಂ, ಕೇರಳ ಮತ್ತು ಜಮ್ಮು–ಕಾಶ್ಮೀರ ಇವು ಎಣ್ಣೆ ಕಾಳುಗಳನ್ನು ಬೆಳೆಯುವ ಪ್ರಮುಖ ರಾಜ್ಯಗಳು. ಕರ್ನಾಟಕ ರಾಜ್ಯದಲ್ಲಿ ಭಾರತದ ಒಟ್ಟು ಎಣ್ಣೆಕಾಳಿನ ಕ್ಷೇತ್ರದ ಶೇ. 9 ರಷ್ಟಿದೆ. ಉತ್ಪತ್ತಿ ಶೇ. 10 ರಷ್ಟಿದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು ಬೆಳೆಗಳ ಕ್ಷೇತ್ರದ ಶೇ. 12 ರಷ್ಟು ಎಣ್ಣೆ ಕಾಳುಗಳ ಕ್ಷೇತ್ರವಿದೆ. ಈ ರಾಜ್ಯದಲ್ಲಿ ಮುಖ್ಯವಾಗಿ ಬೆಳೆಯುವ ಎಣ್ಣೆಕಾಳುಗಳು ಶೇಂಗ, ಔಡಲ, ಗುರೆಳ್ಳು, ಎಳ್ಳು, ಕುಸಬಿ, ಅಗಸೆ ಮತ್ತು ಸಾಸಿವೆ. (ಜಿ.ಬಿ.ಬಿ.)

**ಎಣ್ಣೆಗಳು, ಕೊಬ್ಬುಗಳು ಮತ್ತು ಮೇಣಗಳು:** ಇತಿಹಾಸ ಪೂರ್ವ ಕಾಲದಿಂದ ಮಾನವ ಪ್ರಕೃತಿದತ್ತವಾದ ಕೊಬ್ಬನ್ನು ಆಹಾರ ಮತ್ತು ಇತರ ಉದ್ದೇಶಗಳಿಗಾಗಿ ಬಳಸುತ್ತಿದ್ದಾನೆ. ಪ್ರ.ಪೂ. 1400ರಲ್ಲಿಯೇ ಈಜಿಪ್ಷಿಯನ್ನರು ತಮ್ಮ ರಥಗಳು ಸರಾಗವಾಗಿ ಓಡುವಂತೆ ಮಾಡಲು ಗಾಲಿಗೆ ಕೀಲೆಣ್ಣೆ ಸವರುತ್ತಿದ್ದ ಬಗ್ಗೆ ಉಲ್ಲೇಖವಿದೆ. ಮೇಣದ ಬತ್ತಿ, ಎಣ್ಣೆ, ಜೇನುಮೇಣ ಮತ್ತು ಮೇದಸ್ಸುಗಳಿಂದ ದೀಪ ಉರಿಸುವುದು ಸಹಸ್ರಾರು ವರ್ಷಗಳಿಂದ ರೂಢಿಯಲ್ಲಿದೆ. ಬೇಗ ಒಣಗುವ ಎಣ್ಣೆಗಳಿಂದ ಗೋಡೆಗಳ ಅಲಂಕರಣ ಮತ್ತು ಹಡಗುಗಳ ಹೊರಭಾಗ ತೇವನಿರೋಧಕವಾಗುವಂತೆ ಮಾಡುವುದು ಮಾನವನಿಗೆ ಹಿಂದಿನಿಂದ ಪರಿಚಿತವಾಗಿದ್ದ ಕಲೆ. ಮೇಣ ಅಥವಾ ಎಣ್ಣೆಯನ್ನು ಬಣ್ಣದೊಂದಿಗೆ ಎಮಲ್ಷನ್ ಮಾಡಿ, ಸಸ್ಯ ಅಂಟುಗಳಿಂದ ಸ್ಥಿರಗೊಳಿಸಿ, ಪ್ರಾಚೀನ ಚಿತ್ರಕಲೆಯಲ್ಲಿ ಬಳಸುತ್ತಿದ್ದರು. ಇವು ಆಧುನಿಕ ಎಮಲ್ಷನ್ ಪೇಂಟುಗಳನ್ನು ಹೋಲುತ್ತಿದ್ದುವು. ಖಾದ್ಯ ಎಣ್ಣೆಗಳ ಸಂಸ್ಕರಣದಲ್ಲಿ ಬಹಳ ಸುಧಾರಣೆಗಳಾಗಿದ್ದರೂ ಇತರ ಕೊಬ್ಬುಗಳ ಬಳಕೆ ಶತಮಾನಗಳ ಹಿಂದೆ ಇದ್ದಂತೆಯೇ ಉಳಿದಿರುವುದು ವಿಶೇಷ ಸಂಗತಿ. ಅಲ್ಪ ಸ್ವಲ್ಪ ಬದಲಾವಣೆಗಳಾಗಿರಬಹುದಷ್ಟೆ.

ಆಲಿವ್ ಎಣ್ಣೆಯೊಡನೆ ಲಿಥಾರ್ಜ್ (ಸೀಸದ ಮಾನಾಕ್ಸೈಡ್, Pbo) ಸೇರಿಸಿ ಕಾಯಿಸಿದರೆ ಗ್ಲಿಸರಾಲ್ ಬರುವುದೆಂದು ಷೀಲೆ 1779ರಲ್ಲೇ ಶೋಧಿಸಿದ್ದ. ಕೊಬ್ಬು ಮತ್ತು ಎಣ್ಣೆಗಳ ರಾಸಾಯನಿಕ ಸ್ವರೂಪವನ್ನು 1815ರಲ್ಲಿ ಮೊದಲು ಹೊರಗೆಡಹಿದ ಕೀರ್ತಿ ಮೈಕೆಲ್ ಯೂಜಿನ್ ಷೆವ್ರೆಲನಿಗೆ ಸಲ್ಲುವುದು. 1819ರಲ್ಲಿ ಜೆ.ಜೆ.ಇ.ಪೌಟೆ ಓಲಿಯಿಕಾಮ್ಲವನ್ನು ಇಲೇಡಿಕಾಮ್ಲವಾಗಿ ಮಾರ್ಪಡಿಸಿದುದು. 1828ರಲ್ಲಿ ಸಿ.ಎ.ಗಸರೋವ್ ಅಪರ್ಯಾಪ್ತ ದ್ರವ್ಯಾಮ್ಲಗಳನ್ನು ಘನಾಮ್ಲಗಳಿಂದ ಪ್ರತ್ಯೇಕಿಸಿದುದು. ಈ ಕ್ಷೇತ್ರದಲ್ಲಿ ಹೆಸರಾಂತ ಪ್ರಾಥಮಿಕ ಶೋಧನೆ ಎನಿಸಿಕೊಂಡಿದೆ. ಒಂದನೆಯ ಮಹಾಯುದ್ಧದ ತರುವಾಯ (1914–18) ಕೊಬ್ಬಿನ ಆಮ್ಲಗಳು ಮತ್ತು ಗ್ಲಿಸರೈಡುಗಳ ಬಗ್ಗೆ ವಿಜ್ಞಾನಿಗಳಲ್ಲಿ ಹೆಚ್ಚಿನ ಅರಿವು ಉಂಟಾಗಲು ಆರಂಭವಾಯಿತು. ಈಗ ಅವುಗಳ ಬಳಕೆ ಎಷ್ಟು ವ್ಯಾಪಕವಾಗಿದೆಯೆಂದರೆ ಕೊಬ್ಬಿನ ರಾಸಾಯನಿಕಗಳಿಗೆ ಸಂಬಂಧಿಸಿದ ಪ್ರತ್ಯೇಕ ಕೈಗಾರಿಕೆಯೇ ರೂಪುಗೊಳ್ಳುತ್ತಲಿದೆ.

ಬೆಣ್ಣೆ, ಲಾರ್ಡ್ ಎಂಬ ಹಂದಿಯ ಹೊಟ್ಟೆಯೊಳಗಿನ ಕೊಬ್ಬು, ಟ್ಯಾಲೋ ಎಂಬ ಪ್ರಾಣಿಗಳ ಮೇದಸ್ಸನ್ನು ಕರಗಿಸಿ ಪಡೆದ ಜಿಡ್ಡು ಪದಾರ್ಥ, ಕಾಡ್ ಲಿವರ್ ಎಣ್ಣೆ, ಷಾರ್ಕ್ ಲಿವರ್ ಎಣ್ಣೆ ಮುಂತಾದ ಮೀನಿನ ಎಣ್ಣೆಗಳು, ಸಸ್ಯಜನಿತ ನೆಲಗಡಲೆ, ಅಗಸೆ, ಕೊಬ್ಬರಿ ಮತ್ತು ಹರಳೆಣ್ಣೆಗಳು–ಇವೆಲ್ಲ ಎಸ್ಟರುಗಳು. ಅಂದರೆ ಆಲ್ಕೊಹಾಲ್ ಮತ್ತು ಆಮ್ಲಗಳ ಸಂಯೋಗದಿಂದ ಹುಟ್ಟಿದ ಲವಣಸದೃಶ ಸಾವಯವ ಸಂಯುಕ್ತಗಳು. ಇವುಗಳಲ್ಲಿರುವ ಆಲ್ಕೊಹಾಲಿಗೆ ಗ್ಲಿಸರಾಲ್ ಎಂದು ಹೆಸರು. ಅದರಲ್ಲಿ ಮೂರು ಹೈಡ್ರಾಕ್ಸಿಲ್ ಗುಂಪುಗಳಿವೆ (ಗ್ರೂಪ್ಸ್). ಅಂದರೆ ಟ್ರೈಹೈಡ್ರಿಕ್ ಆಲ್ಕೊಹಾಲ್ ಎಂದಾಯಿತು. ಪ್ಯಾರಫಿನ್ ವರ್ಗದ ಉನ್ನತ ಹೈಡ್ರೊಕಾರ್ಬನ್ನುಗಳಿಗೆ ಸಂಬಂಧಿಸಿದ ಕೆಲವು ಆಮ್ಲಗಳಿವೆ. ಅವು ಗ್ಲಿಸರಾಲಿನೊಂದಿಗೆ ಕೂಡಿ ಮೂರು ನೀರಿನ ಅಣುಗಳನ್ನು ಕಳೆದುಕೊಂಡು ಗ್ಲಿಸರೈಡುಗಳಾಗುತ್ತವೆ. ಸಸ್ಯದ ನೈಸರ್ಗಿಕ ಪ್ರಯೋಗಶಾಲೆಯಲ್ಲಿ ನಡೆಯುವ ಈ ಕ್ರಿಯೆಯನ್ನು ಕೆಳಕಂಡಂತೆ ಚಿತ್ರಿಸಿಕೊಳ್ಳಬಹುದು.

$CH_2O$ [H   HO] OCR        $\xrightarrow{-3H_2O}$  CH2O.OC.R
CH.O [H  +  HO] OCR                 CH.O.OC.R
$CH_2O$ [H   HO] OCR                $CH_2$.O.OC.R

ಗ್ಲಿಸರಾಲ್    ಉನ್ನತ ಪ್ಯಾರಾಫಿನ್ನಿಗೆ ಸಂಬಂಧಿಸಿದ ಆಮ್ಲ    ಟ್ರೈಗ್ಲಿಸರೈಡ್ (ಕೊಬ್ಬು ಅಥವಾ ತೈಲ)

ಈ ನೈಸರ್ಗಿಕ ಎಸ್ಟರಿಫಿಕೇಷನ್ ಕ್ರಿಯೆಯಲ್ಲಿ ಭಾಗವಹಿಸುವ ಪರ್ಯಾಪ್ತ ಆಮ್ಲಗಳಲ್ಲಿ ಸ್ಟಿಯರಿಕ್ ಮತ್ತು ಪಾಮಿಟಿಕ್ ಅಮ್ಲಗಳು ಮುಖ್ಯವಾದುವು.

ಸ್ಟಿಯರಿಕ್ ಆಮ್ಲ $CH_3(CH_2)_{15}CH_2.COOH$

ಪಾಮಿಟಿಕ್ ಆಮ್ಲ $CH_3(CH_2)_{13}CH_2.COOH$

ಆಮ್ಲದ ಭಾಗ ಕೆಲವು ವೇಳೆ ಅಪರ್ಯಾಪ್ತವಾಗಿರಬಹುದು. ಅಂದರೆ ಎರಡು ಇಂಗಾಲದ ಪರಮಾಣುಗಳ ನಡುವೆ ದ್ವಿಬಂಧವಿರಬಹುದು. ಅಂಥ ಆಮ್ಲಗಳನ್ನು ಕೆಳಗೆ ಹೆಸರಿಸಲಾಗಿದೆ.

ಓಲಿಯಿಕ್ ಆಮ್ಲ $CH_3.(CH_2)_7.CH{=}CH\text{-}(CH_2)_7.COOH$

ಲಿನೊಲಿಯಿಕ್ ಆಮ್ಲ $CH_3(CH_2)_4.CH{=}CH\text{-}(CH_2)\text{-}CH$
$=CH\text{-}(CH2)_7.COOH$

ಲಿನೊಲಿನಿಕ್ ಆಮ್ಲ $CH_3\text{-}CH_2\text{-}CH{=}CH\text{-}CH_2\text{-}CH$
$=CH\text{-}CH_2\text{-}CH{=}CH(CH_2)_7.COOH$

ಅರ್ಯಾಚಿಡೋನಿಕ್ ಆಮ್ಲ $CH_3.(CH_2)_4.CH{=}CH.CH_2(CH{=}CH\text{-}CH_2)_2$
$.CH{=}CH.(CH_2)_3.COOH$

ಮೊದಲು ಮೂರು ಅಪರ್ಯಾಪ್ತ ಆಮ್ಲಗಳಲ್ಲಿ 18 ಇಂಗಾಲದ ಪರಮಾಣುಗಳಿವೆ.

ಸಾಮಾನ್ಯ ಉಷ್ಣದಲ್ಲಿ ಎಣ್ಣೆಗಳು, ದ್ರವಗಳು, ಕೊಬ್ಬುಗಳು ಘನವಸ್ತುಗಳು. ಈ ಆಧಾರದಮೇಲೆ ನಾವು ಗ್ಲಿಸರೈಡುಗಳನ್ನು ವರ್ಗೀಕರಿಸುವಂತಿಲ್ಲ. ಏಕೆಂದರೆ ಕೊಬ್ಬರಿ ಎಣ್ಣೆಯನ್ನು ಚಳಿಗಾಲದಲ್ಲಿ ಗಟ್ಟಿಯಾಗುವುದರಿಂದ ಕೊಬ್ಬೆಂದೂ ಬೇಸಗೆಯಲ್ಲಿ ದ್ರವರೂಪದಲ್ಲಿರುವುದರಿಂದ ಎಣ್ಣೆಯೆಂದೂ ಕರೆಯಬೇಕಾಗುತ್ತದೆ. ಇದು ಆಭಾಸಕ್ಕೆಡೆಯಾಗುತ್ತದೆ. ಆದ್ದರಿಂದ ಅಪರ್ಯಾಪ್ತತೆ ಹೆಚ್ಚಾಗಿದ್ದರೆ ಎಣ್ಣೆಯೆಂದೂ ಕಡಿಮೆಯಾಗಿದ್ದರೆ ಕೊಬ್ಬೆಂದೂ ವಿಂಗಡಿಸುವುದು ಸಮಂಜಸವಾಗಿದೆ. ಅಪರ್ಯಾಪ್ತತೆ ಹೆಚ್ಚಿದಷ್ಟೂ ಕೊಬ್ಬಿನ ದ್ರವೀಕರಣ ಬಿಂದು ಕಡಿಮೆಯಾಗುವುದನ್ನು ಗಮನಿಸಿದರೆ ಇದು ವೇದ್ಯವಾಗುತ್ತದೆ. 20° ಸೆ. ಗಿಂತ ಕಡಿಮೆ ದ್ರವೀಕರಣ ಬಿಂದುವಿರುವ ವಸ್ತು ಕೊಬ್ಬು ಎನಿಸಿಕೊಳ್ಳುತ್ತದೆ. ಇತ್ತೀಚೆಗೆ ಎಣ್ಣೆಗಳಿಗೂ ಕೊಬ್ಬು ಎಂಬ ಪದದ ಅನ್ವಯಮಾಡುವುದು ರಸಾಯನ ವಿಜ್ಞಾನಿಗಳ ಪರಿಪಾಠವಾಗಿದೆ. ಇದು ಒಂದು ಅನುಕೂಲವೇ ಸರಿ. ಏಕೆಂದರೆ ಗ್ಲಿಸರೈಡುಗಳಲ್ಲದ ಖನಿಜ ಮತ್ತು ಸುಗಂಧ ತೈಲಗಳಿಗೂ ಇರುವ ಮೂಲ ವ್ಯತ್ಯಾಸ ಇದರಿಂದ ವ್ಯಕ್ತವಾಗುತ್ತದೆ.

ಆಮ್ಲಶೇಷಗಳೆಲ್ಲ ಸಜಾತೀಯವಾಗಿದ್ದರೆ ಸರಳ ಗ್ಲಿಸರೈಡುಗಳಾಗುತ್ತವೆ. ಉದಾಹರಣೆ:

| | | |
|---|---|---|
| $CH_2.O.OC.C_{17}H_{35}$ | $CH_2.O.OC.C_{15}H_{31}$ | $CH_2.O.OC.C_{17}H_{33}$ |
| \| | \| | \| |
| $CH.O.OC.\ C_{17}H_{35}$ | $CH.O.OC.\ C_{15}H_{31}$ | $CH.O.OC.\ C_{17}H_{33}$ |
| \| | \| | \| |
| $CH_2.O.OC.\ C_{17}H_{35}$ | $CH2.O.OC.\ C_{15}H_{31}$ | $CH2.O.OC.\ C_{17}H_{33}$ |
| ಟ್ರೈಸ್ಟಿಯರಿನ್ | ಟ್ರೈಪಾಮಿಟಿನ್ | ಟ್ರೈಓಲಿಯಿನ್ |

ಆಮ್ಲದ ಭಾಗಗಳು ವಿಜಾತಿಯವಾಗಿದ್ದರೆ ಮಿಶ್ರ ಗ್ಲಿಸರೈಡುಗಳು ಉಂಟಾಗುವುವು. ಉದಾಹರಣೆ:

| | | |
|---|---|---|
| á | $CH_2.O.OC.C_{17}H_{35}$ | $CH_2.O.OC.C_{15}H_{31}$ |
| â | $CH.O.OC.\ C_{15}H_{31}$ | $CH.O.OC.\ C_{17}H_{35}$ |
| á' | $CH_2.O.OC.\ C_{15}H_{31}$ | $CH_2.O.OC.\ C_{15}H_{31}$ |
| | á – ಸ್ಟಿಯರೊ ââ'– ಡೈಪಾಮಿಟಿನ್ | â – ಸ್ಟಿಯೆರೊ áá'–ಡೈಪಾಮಿಟಿನ್ |

ಇಂಥ ಗ್ಲಿಸರೈಡುಗಳ ಸಂಕೀರ್ಣ ಮಿಶ್ರಣದಿಂದ ತೈಲ ಅಥವಾ ಕೊಬ್ಬು ಉಂಟಾಗುತ್ತವೆ. áâá'ಮೂರು ಸ್ಥಾನಗಳಲ್ಲಿರುವ ಆಮ್ಲಗಳೂ ಬೇರೆ ಬೇರೆಯಾಗಿರಬಹುದು. ಆದ್ದರಿಂದ ಇಂಥ ಒಂದು ಕೊಬ್ಬಿನಲ್ಲಿ 18 ವಿವಿಧ ಗ್ಲಿಸರೈಡುಗಳಿರುವ ಸಾಧ್ಯತೆಯಿದೆ. ಮೂರಕ್ಕಿಂತಲೂ ಹೆಚ್ಚು ಆಮ್ಲಗಳು ಭಾಗವಹಿಸಿರಬಹುದು. ಉದಾಹರಣೆಗೆ ಬೆಣ್ಣೆಯ ಕೊಬ್ಬಿನಿಂದ 14 ವಿವಿಧ ಆಮ್ಲಗಳನ್ನು ಪಡೆದ ದಾಖಲೆಯಿದೆ. ಅವುಗಳಲ್ಲಿ ಮುಖ್ಯವಾದ ಆಮ್ಲಗಳನ್ನು ಕೆಳಗೆ ಪಟ್ಟಿಮಾಡಲಾಗಿದೆ.

| ಆಮ್ಲ | ಸೂತ್ರ | ದ್ರವೀಕರಣ ಬಿಂದು 0° ಸೆಂ.ಗ್ರೇ. | ಮೂಲ |
|---|---|---|---|
| ಬ್ಯುಟಿರಿಕ್ | $C_3H_7.COOH$ | –4.7 | ಬೆಣ್ಣೆ |
| ಕೆಪ್ರೋಯಿಕ್ | $C_5H_{11}.COOH$ | –2 | ಬೆಣ್ಣೆ, ಕೊಬ್ಬರಿಎಣ್ಣೆ |
| ಕೆಪ್ರಿಲಿಕ್ | $C_7H_{15}.COOH$ | 16 | ಬೆಣ್ಣೆ, ಪಾಮ್ ಎಣ್ಣೆ |
| ಕ್ಯಾಪ್ರಿಕ್ | $C_9H_{19}.COOH$ | 31.5 | ಬೆಣ್ಣೆ, ಕೊಬ್ಬರಿಎಣ್ಣೆ |
| ಲಾರಿಕ್ | $C_3H_7.COOH$ | 44 | ಬೆಣ್ಣೆ, ಕೊಬ್ಬರಿಎಣ್ಣೆ |
| ಮಿರಿಸ್ಟಿಕ್ | $C_{11}H_{23}.COOH$ | 58 | ಕೊಬ್ಬರಿಎಣ್ಣೆ |
| ಪಾಮಿಟಿಕ್ | $C_{13}H_{27}.COOH$ | 64 | ಪಾಮ್‌ಎಣ್ಣೆ, ಪ್ರಾಣಿಗಳ ಕೊಬ್ಬು |
| ಸ್ಟಿಯರಿಕ್ | $C_{15}H_{31}.COOH$ | 69.4 | ಕೊಬ್ಬುಗಳು, ಎಣ್ಣೆಗಳು |
| ಓಲಿಯಿಕ್ | $C_{17}H_{35}.COOH$ | 14 | ಕೊಬ್ಬುಗಳು, ಎಣ್ಣೆಗಳು |
| ಲಿನೊಲಿಯಿಕ್ | $C_{17}H_{33}.COOH$ | –11 | ಅಗಸೆಎಣ್ಣೆ, ಹತ್ತಿಬೀಜದ ಎಣ್ಣೆ |
| ಲಿನೊಲಿನಿಕ್ | $C_{17}H_{31}.COOH$ | | ಅಗಸೆ ಎಣ್ಣೆ |
| ರಿಸಿನ್ ಓಲಿಯಿಕ್ | $C_{17}H_{29}.COOH$ (ಇದರಲ್ಲಿ ಒಂದು ದ್ವಿಬಂಧವೂ ಒಂದು ಹೈಡ್ರಾಕ್ಸಿಲ್ ಗುಂಪೂ ಇವೆ.) | | ಹರಳೆಣ್ಣೆ |
| ಅರ್ಯಾಚಿಡೋನಿಕ್ | $C_{19}H_{31}.COOH$ (ಇದರಲ್ಲಿ ನಾಲ್ಕು ದ್ವಿಬಂಧಗಳಿವೆ) | | |

ಮುಖ್ಯವಾದ ಕೊಬ್ಬು ಮತ್ತು ತೈಲಗಳ ಪ್ರಸರಣ, ಉಪಯೋಗ ಇತ್ಯಾದಿ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

# ಎಣ್ಣೆಗಳು, ಕೊಬ್ಬುಗಳು ಮತ್ತು ಮೇಣಗಳು

ಸಸ್ಯತೈಲಗಳು

| ತೈಲ ಅಥವಾ ಕೊಬ್ಬು<br>1 | ಉತ್ಪಾದಿಸುವ ಮುಖ್ಯ ದೇಶಗಳು<br>2 | ಅಯೊಡೀನ್ ಮೌಲ್ಯ<br>3 | ಪ್ರಮುಖ ಉಪಯೋಗಗಳು<br>4 |
|---|---|---|---|
| ಒಣಗುವ ತೈಲಗಳು<br>ಪೆರಿಲ್ಲ | ಚೀನ, ಕೊರಿಯ, ಜಪಾನ್, ಭಾರತ | 193–208 | ಪೇಂಟ್, ವಾರ್ನಿಷ್ |
| ಅಗಸೆ | ಆರ್ಜಂಟೀನ, ಭಾರತ, ಉತ್ತರ ಅಮೆರಿಕ, ರಷ್ಯ | 175–205 | ಪೆಯಿಂಟ್, ವಾರ್ನಿಷ್, ಲಿನೋಲಿಯಂ, ಅಚ್ಚು ಮಾಡುವ ಶಾಯಿ |
| ಟಂಗ್ | ಚೀನ, ಜಪಾನ್, ಅಮೆರಿಕ ಸಂಯುಕ್ತ ಸಂಸ್ಥಾನಗಳು | 160–175 | ಪೆಯಿಂಟ್, ವಾರ್ನಿಷ್ |
| ಅಯ್ಸಿಸಿಕಾ | ಬ್ರೆಜಿಲ್ | 139–155 | ಪೆಯಿಂಟ್, ವಾರ್ನಿಷ್ |
| ಅರೆ ಒಣಗುವ ಎಣ್ಣೆಗಳು<br>ಗಸಗಸೆ | ಭಾರತ | 123–143 | ಮೆದುಸಾಬೂನು, ಮಸಾಲೆ ಎಣ್ಣೆ |
| ಕುಸುಬೆ | ಭಾರತ, ಅಮೆರಿಕ ಸಂಯುಕ್ತ ಸಂಸ್ಥಾನಗಳು | 130–150 | ಮಸಾಲೆ ಎಣ್ಣೆ ಅಂಟುಗಳು, ಪೆಯಿಂಟುಗಳು |
| ಸೋಯಾ ಅವರೆ | ಅಮೆರಿಕ ಸಂಯುಕ್ತ ಸಂಸ್ಥಾನಗಳು, ಚೀನ, ಮಂಚೂರಿಯ | 125–140 | ಆಹಾರ, ಪೆಯಿಂಟುಗಳು, ಅಂಟುಗಳು, ರಾಸಾಯನಿಕಗಳು |
| ಮುಸುಕಿನ ಜೋಳ | ಅಮೆರಿಕ ಸಂಯುಕ್ತ ಸಂಸ್ಥಾನಗಳು, ಆರ್ಜಂಟೀನ, ಯುರೋಪ್ | 115–130 | ಆಹಾರ |
| ಸೂರ್ಯಕಾಂತಿ | ದಕ್ಷಿಣ ಅಮೆರಿಕ, ರಷ್ಯ | 120–140 | ಆಹಾರ |
| ಹತ್ತಿಬೀಜ | ಅಮೆರಿಕ ಸಂಯುಕ್ತ ಸಂಸ್ಥಾನ, ಭಾರತ, ಈಜಿಪ್ಟ್, ಮೆಕ್ಸಿಕೋ | 100–116 | ಆಹಾರ, ಸಾಬೂನು |
| ಎಳ್ಳು | ಭಾರತ, ಈಜಿಪ್ಟ್ | 103–118 | ಆಹಾರ, ಸಾಬೂನು |
| ರೇಪ್ | ಈಸ್ಟ್ ಇಂಡಿಯಾ, ಯುರೋಪ್ | 94–102 | ಆಹಾರ, ಕೀಲೆಣ್ಣೆ |
| ಒಣಗದ ತೈಲಗಳು<br>ಬಾದಾಮಿ | ದಕ್ಷಿಣ ಯುರೋಪ್, ಉತ್ತರ ಆಫ್ರಿಕ | 93–100 | ಪರಿಮಳಗಳು, ವೈದ್ಯಕೀಯ, ಆಹಾರ |
| ಕಡಲೆಕಾಯಿ | ಭಾರತ, ಪಶ್ಚಿಮ ಆಫ್ರಿಕ, ಚೀನ, ಅಮೆರಿಕ ಸಂಯುಕ್ತ ಸಂಸ್ಥಾನ | 85–100 | ಆಹಾರ |
| ಆಲಿವ್ | ಮೆಡಿಟರೇನಿಯನ್ ತೀರ ಪ್ರದೇಶ, ಅಮೆರಿಕ ಸಂಯುಕ್ತ ಸಂಸ್ಥಾನ | 75–95 | ಆಹಾರ, ಸಾಬೂನು, ಕೀಲೆಣ್ಣೆ, ವೈದ್ಯಕೀಯ |
| ಹರಳು | ಭಾರತ, ಮೆಡಿಟರೇನಿಯನ್ ದೇಶಗಳು, ಬ್ರೆಜ಼ಿಲ್, ಅಮೆರಿಕ ಸಂಯುಕ್ತ ಸಂಸ್ಥಾನ | 80–90 | ವೈದ್ಯಕೀಯ, ಕೀಲೆಣ್ಣೆ, ರಾಸಾಯನಿಕಗಳು |

## ಎಣ್ಣೆಗಳು, ಕೊಬ್ಬುಗಳು ಮತ್ತು ಮೇಣಗಳು

ಪ್ರಾಣಿಗಳ ತೈಲಗಳು

| 1 | 2 | 3 | 4 |
|---|---|---|---|
| ಕಡಲ ಪ್ರಾಣಿಗಳಿಂದಾದ ತೈಲಗಳು | | | |
| ಸಾರ್ಡೀನ್ ಮೀನು | ಉತ್ತರ ಅಮೆರಿಕದ ಪಶ್ಚಿಮತೀರ, ಜಪಾನ್ | 170–190 | ಅಂಟುಗಳು, ಲಿನೋಲಿಯಂ,ಪೆಯಿಂಟುಗಳು, ಆಹಾರ, ಚರ್ಮ ಹದಮಾಡಲು |
| ಮೆನ್‌ಹೇಡನ್ | ಉತ್ತರ ಅಮೆರಿಕದ ಅಟ್ಲಾಂಟಿಕ್ ತೀರ | 140–173 | ಅಂಟುಗಳು, ಲಿನೋಲಿಯಂ, ಪೆಯಿಂಟುಗಳು, ಆಹಾರ, ಚರ್ಮ ಹದಮಾಡಲು |
| ಹೆರ್ರಿಂಗ್ ಮೀನು | ಉತ್ತರ ಸಮುದ್ರ, ಜಪಾನ್ | 120–145 | ಚರ್ಮ ಹದಮಾಡಲು, ಪೆಯಿಂಟುಗಳು, ಆಹಾರ |
| ಕಾಡ್‌ಲಿವರ್ | ಉತ್ತರ ಸಮುದ್ರ, ಉತ್ತರ ಅಮೆರಿಕದ ಪೂರ್ವತೀರ | 120–180 | ಜೀವಾತುಗಳು, ಚರ್ಮ ಹದಮಾಡಲು |
| ಷಾರ್ಕ್‌ಲಿವರ್ | ಉತ್ತರ ಅಮೆರಿಕದ ತೀರಪ್ರದೇಶಗಳು | 100–115 | ಜೀವಾತುಗಳು, ಚರ್ಮ ಹದಮಾಡಲು |
| ಸೀಲ್ | ಉತ್ತರ ಮತ್ತು ದಕ್ಷಿಣದ ಮೇರು ಪ್ರದೇಶಗಳು | 127–147 | ಆಹಾರ, ಸಾಬೂನು, ಚರ್ಮ ಹದಮಾಡಲು |
| ತಿಮಿಂಗಲ | ಉತ್ತರ ಮತ್ತು ದಕ್ಷಿಣದ ಮೇರು ಪ್ರದೇಶಗಳು | 110–150 | ಆಹಾರ, ಸಾಬೂನು, ಚರ್ಮ ಹದಮಾಡಲು |
| ಭೂಪ್ರಾಣಿಗಳು | | | |
| ದನದ ಪಾದ | ಅಮೆರಿಕ ಸಂ.ಸಂ., ದಕ್ಷಿಣ ಅಮೆರಿಕ, ಯುರೋಪ್ | 65–75 | ಕೀಲೆಣ್ಣೆ, ಉತ್ತಮದರ್ಜೆಯ ಚರ್ಮದ ತಯಾರಿಕೆ |
| ಸಸ್ಯಜನ್ಯ ಕೊಬ್ಬುಗಳು | | | |
| ಮಾಹುವಾ ಬೆಣ್ಣೆ | ಭಾರತ, ಮಲಯ | 53–67 | ಆಹಾರ, ಸಾಬೂನು, ಮೇಣದ ಬತ್ತಿ |
| ಷೀಯಾ ಬೆಣ್ಣೆ | ಪಶ್ಚಿಮ ಆಫ್ರಿಕ, ಸೂಡಾನ್ | 53–65 | ಆಹಾರ, ಸಾಬೂನು, ಮೇಣದ ಬತ್ತಿ |
| ಪಾಮ್ ಬೆಣ್ಣೆ | ಪಶ್ಚಿಮ ಆಫ್ರಿಕ | 50–60 | ಸಾಬೂನು, ಮೇಣದಬತ್ತಿ, ತವರ ಲೇಪನ ಉದ್ಯಮ |
| ಕೋಕೊ ಬೆಣ್ಣೆ | ವೆಸ್ಟ್ ಇಂಡೀಸ್ | 32–41 | ಚಾಕಲೇಟು, ವೈದ್ಯಕೀಯ, ಪರಿಮಳ ದ್ರವ್ಯಗಳು |
| ಬಬಸ್ಸು ಎಣ್ಣೆ | ಪಶ್ಚಿಮ ಆಫ್ರಿಕ | 9–18 | ಆಹಾರ, ಸಾಬೂನು, ರಾಸಾಯನಿಕಗಳು |
| ಕೊಬ್ಬರಿ ಎಣ್ಣೆ | ಫಿಲಿಫೈನ್ಸ್ ದ್ವೀಪಗಳು, ಭಾರತ, ಸಿಲೋನ್ | 8–10 | ಆಹಾರ, ಸಾಬೂನು, ರಾಸಾಯನಿಕಗಳು |
| ಜಪಾನ್ ಮೇಣ | ಚೀನ, ಭಾರತ, ಜಪಾನ್ | 5–17 | ಪಾಲಿಷುಗಳು |

# ಎಣ್ಣೆಗಳು, ಕೊಬ್ಬುಗಳು ಮತ್ತು ಮೇಣಗಳು

ಪ್ರಾಣಿಗಳ ಕೊಬ್ಬುಗಳು

| 1 | 2 | 3 | 4 |
|---|---|---|---|
| ಲಾರ್ಡ್ | ಅಮೆರಿಕ ಸಂಯುಕ್ತ ಸಂಸ್ಥಾನ, ಮಧ್ಯ ಯುರೋಪ್ | 45–70 | ಆಹಾರ, ಸಾಬೂನು, ವೈದ್ಯಕೀಯ, ರಾಸಾಯನಿಕಗಳು |
| ಎಲುಬು | ಅಮೆರಿಕ ಸಂಯುಕ್ತ ಸಂಸ್ಥಾನ, ಭಾರತ, ಯುರೋಪ್ | 46–56 | ಸಾಬೂನು, ಮೇಣದ ಬತ್ತಿ |
| ಟ್ಯಾಲೋ (ದನದ ಮಾಂಸದಿಂದ) | ಆರ್ಜಂಟೈನ, ಅಮೆರಿಕ ಸಂಯುಕ್ತ ಸಂಸ್ಥಾನ | 30–45 | ಆಹಾರ, ಸಾಬೂನು, ಮೇಣದಬತ್ತಿ, ರಾಸಾಯನಿಕಗಳು |
| ಟ್ಯಾಲೋ (ದನದ ಮಾಂಸದಿಂದ) | ಆಸ್ಟ್ರೇಲೇಷಿಯ | 25–45 | ಆಹಾರ ಸಾಬೂನು |
| ಬೆಣ್ಣೆ | ಅಮೆರಿಕ ಸಂಯುಕ್ತ ಸಂಸ್ಥಾನ, ವಾಯುವ್ಯ ಯುರೋಪ್, ಆಸ್ಟ್ರೇಲೇಷಿಯ, ಕೆನಡ | 25–40 | ಆಹಾರ |

ತೈಲಧಾರಕ ಊತಕಗಳಿಂದ (ಟಿಷ್ಯೂಸ್) ಕೊಬ್ಬನ್ನು ಪಡೆಯಲು ಮೂರು ವಿಧಾನಗಳಿವೆ – ದ್ರವೀಕರಣ, ಹಿಂಡುವಿಕೆ, ಸಂಸ್ಕರಣ.

ದ್ರವೀಕರಣ: ಇಂದಿಗೂ ಕೆಲವು ದೇಶಗಳಲ್ಲಿ ಅನುಸರಿಸಲಾಗುತ್ತಿರುವ ಈ ಹಳೆಯ ಪದ್ಧತಿಯ ಪ್ರಕಾರ ತೈಲಯುಕ್ತ ಫಲಗಳನ್ನು ಗುಡ್ಡೆಹಾಕಿ ಬಿಸಿಲಿನಲ್ಲಿ ಒಣಗಿಸಿದರೆ ಎಣ್ಣೆ ಹೊರಸೂಸುವುದು. ಈ ಕ್ರಮವನ್ನೇ ಸ್ವಲ್ಪ ಸುಧಾರಿಸಿ ಪಾಮ್ ಎಣ್ಣೆಯ ತಯಾರಿಕೆಗೆ ಬಳಸುತ್ತಾರೆ. ಪಾಮ್ ಹಣ್ಣುಗಳನ್ನು ಕೊಯ್ದ ತತ್‌ಕ್ಷಣ ನೀರಿನಲ್ಲಿ ಕುದಿಸಿದರೆ ಎಣ್ಣೆ ತೇಲುತ್ತದೆ. ಅದನ್ನು ಗೋರಿಕೊಳ್ಳಬಹುದು. ತಮ್ಮ ಕೊಬ್ಬಿನ ಅಂಶವನ್ನು ಸುಲಭವಾಗಿ ತ್ಯಜಿಸುವ ಆಲಿವ್ ಮತ್ತು ಪಾಮ್ ಜಾತಿಯ ಹಣ್ಣು ಮತ್ತು ಬೀಜಗಳಿಗೆ ಈ ವಿಧಾನ ಅನ್ವಯಿಸುತ್ತದೆ. ತಿಮಿಂಗಲದ ಎಣ್ಣೆ, ಹಂದಿಯ ಕೊಬ್ಬು, ಟ್ಯಾಲೋ ಮತ್ತು ಎಲುಬಿನ ಕೊಬ್ಬು ಮೊದಲಾದುವನ್ನು ಕೈಗಾರಿಕಾ ಪ್ರಮಾಣದಲ್ಲಿ ತಯಾರಿಸಲೂ ಈ ವಿಧಾನ ಅನ್ವಯಿಸುತ್ತದೆ. ಕೊಬ್ಬಿನ ಊತಕಗಳನ್ನು ಸಣ್ಣ ತುಂಡುಗಳಾಗಿ ಹೆಚ್ಚಿ, ಹಬೆ ಪಚನಕಾರಿಗಳಲ್ಲಿ ಅಥವಾ ತೆರೆದ ಕಡಾಯಿಗಳಲ್ಲಿ ಕುದಿಸಲಾಗುವುದು. ಆಗ ಕೋಶಗಳಿಂದ ಕೊಬ್ಬು ಬಿಡುಗಡೆಯಾಗಿ ನೀರಿನ ಮೇಲೆ ತೇಲುವುದು. ಅದನ್ನು ಗೋರಿಹಾಕಬಹುದು. ಉಳಿದ ವಸ್ತುವನ್ನು ಪ್ರಾಣಿಗಳಿಗೆ ತಿನಿಸಾಗಿ ಅಥವಾ ಗೊಬ್ಬರವಾಗಿ ಉಪಯೋಗಿಸುವರು.

ಹಿಂಡುವಿಕೆ: ಕುದಿಸುವ ವಿಧಾನ ಬಹಳಷ್ಟು ಬೀಜಗಳಿಂದ ಎಣ್ಣೆ ಪಡೆಯಲು ಸಮರ್ಪಕವಲ್ಲ. ಇಂಥ ಸಂದರ್ಭಗಳಲ್ಲಿ ಎಣ್ಣೆ ಧಾರಕ ಕೋಶ ರಚನೆಯನ್ನು ಛಿದ್ರಗೊಳಿಸಲು ಅರೆಯುವುದು, ಒತ್ತಡದಿಂದ ಗಟ್ಟಿಸುವುದು, ಹಿಂಡುವುದು ಇತ್ಯಾದಿ ಕ್ರಮಗಳು ಅನಿವಾರ್ಯವಾಗುತ್ತವೆ. ಇದಕ್ಕಾಗಿ ಒರಳಿನಲ್ಲಿ ಎಣ್ಣೆಬೀಜಗಳನ್ನು ರುಬ್ಬುವ ಗಾಣದ ಪದ್ಧತಿ ಬಂದಿದೆ. ಇಂದಿಗೂ ನಮ್ಮಲ್ಲಿ ಈ ವಿಧಾನ ಅಲ್ಲಲ್ಲಿ ಬಳಕೆಯಲ್ಲಿದೆ. ಕಾಲಕ್ರಮದಲ್ಲಿ ಈ ವಿಧಾನದಲ್ಲಿ ಅನೇಕ ಮಾರ್ಪಾಡುಗಳಾಗಿವೆ. ಆಧುನಿಕ ಒತ್ತಡ ವಿಧಾನದಲ್ಲಿ ಮೂರು ಹಂತಗಳಿವೆ: (i) ಅಯಸ್ಕಾಂತ ಪ್ರತ್ಯೇಕ ಸಾಧನದ ಸಹಾಯದಿಂದ ಲೋಹದ ಕಣಗಳನ್ನು ತೆಗೆದುಹಾಕುವುದು. (ii) ಅಗತ್ಯವಿದ್ದರೆ ತೊಗಟೆ ಬಿಡಿಸಿ ಚಿಪ್ಪನ್ನು ಬೇರ್ಪಡಿಸುವುದು. (iii)ತಿರುಳನ್ನು ಗಿರಣಿಗಳಲ್ಲಿ ಅರೆದು ಹಿಟ್ಟುಮಾಡುವುದು. (iv) ಕಾಯಿಸಿ ಅಥವಾ ಕಾಯಿಸದೆಯೇ ಸ್ಕ್ರೂಪ್ರೆಸ್ಸುಗಳಲ್ಲಿ ಹಿಂಡುವುದು.

ಕಾಯಿಸದೆ ಹೊರಡಿಸಿದ ಎಣ್ಣೆಯಲ್ಲಿ ಅತ್ಯಲ್ಪ ಪ್ರಮಾಣದ ಕಶ್ಮಲಗಳು ಇರುವುದರಿಂದ ಹೆಚ್ಚಿನ ಸಂಸ್ಕರಣವಿಲ್ಲದೆ, ಅದನ್ನು ಆಹಾರವಾಗಿ ಬಳಸಬಹುದು. ಅಂಥ ಎಣ್ಣೆಗಳನ್ನು ಹಸಿ ಎಣ್ಣೆಗಳು (ಕೋಲ್ಡ್–ಡ್ರಾನ್) ಎನ್ನುತ್ತಾರೆ. ಕಾಯಿಸಿ ಹಿಂಡಿದರೆ ಹೆಚ್ಚು ಎಣ್ಣೆಯನ್ನು ಹೊರಡಿಸಬಹುದು. ಆದರೆ ಅಂಥ ಎಣ್ಣೆಗೆ ದಟ್ಟವಾದ ಬಣ್ಣ ಪ್ರಾಪ್ತವಾಗುತ್ತದೆ. ಇದಕ್ಕೆ ಹಸಿ ಹರಳೆಣ್ಣೆ ನಿರ್ವರ್ಣವಾಗಿರುವುದೇ ಸಾಕ್ಷಿ. ಉಳಿದ ಹಿಂಡಿಯನ್ನು ಪ್ರಾಣಿಗಳ ಆಹಾರವಾಗಿಯೋ ಅಥವಾ ಗೊಬ್ಬರವಾಗಿಯೋ ವಿಲೆಮಾಡಲಾಗುವುದು.

ಲೀನಕಾರಿಗಳಿಂದ ಸಂಗ್ರಹಣ: ಒತ್ತಡ ವಿಧಾನದಿಂದ ಬಂದ ಹಿಂಡಿಯಲ್ಲಿ ಶೇ. 3 ರಿಂದ 15ರಷ್ಟು ಎಣ್ಣೆಯ ಅಂಶವಿದೆ. ಆ ಎಣ್ಣೆ ಹಿಂಡಿಗಿಂತ ಬೆಲೆ ಬಾಳುವಂತಿದ್ದರೆ ಲೀನಕಾರಿಗಳನ್ನುಪಯೋಗಿಸಿ ಅದನ್ನು ಬೇರ್ಪಡಿಸುವುದು ಲಾಭಕರವಾಗುತ್ತದೆ. ಇದಕ್ಕಾಗಿ ಪೆಟ್ರೋಲಿಯಂ ಉತ್ಪನ್ನಗಳಾದ ಪೆಟ್ರೋಲಿಯಂಈಥರ್, ಹೆಕ್ಸೇನ್, ಹೆಪ್ಟೇನ್ ಮುಂತಾದ ಹೈಡ್ರೋಕಾರ್ಬನ್ ದ್ರವಗಳು ಉಪಯೋಗವಾಗುತ್ತವೆ. ಇಂಥ ಲೀನಕಾರಿಕೆಗಳ ಬಳಕೆಯಿಂದ ಎಣ್ಣೆ ತಯಾರಿಕೆಯ ಕಾರ್ಖಾನೆಗಳಲ್ಲಿ ಅಗ್ನಿ ಪ್ರಕರಣಗಳು ಮತ್ತು ಆಸ್ಫೋಟನೆಗಳು ಪದೇ ಪದೇ ನಡೆಯುವುದುಂಟು. ಇವನ್ನು ತಪ್ಪಿಸಲು ಟ್ರೈಕ್ಲೋರೊ ಎಥಿಲೀನ್ ಮೊದಲಾದ ಕ್ಲೋರೀನ್‌ಯುಕ್ತ ಲೀನಕಾರಿಗಳನ್ನು ಬಳಸುವುದು ಒಮ್ಮೆ ಆಚರಣೆಯಲ್ಲಿತ್ತು. ಆದರೆ ಇವು ಲೋಹಾಂಶಗಳನ್ನೂ ಕರಗಿಸಿಕೊಂಡು ಎಣ್ಣೆಯನ್ನು ವಿಷಪೂರಿತವಾಗಿ ಮಾಡುತ್ತಿದ್ದುವು. ಆದ್ದರಿಂದ ಅವುಗಳ ಬಳಕೆ ಈಗ ನಿಂತಿದೆ. ಕೈಗಾರಿಕಾ ಪ್ರಮಾಣದಲ್ಲಿ ಎಣ್ಣೆ ತೆಗೆಯಬೇಕಾದಾಗ ಒತ್ತಡ ವಿಧಾನಕ್ಕಿಂತ ಲೀನಕಾರಿ ವಿಧಾನದಿಂದ ಮಿತವ್ಯಯ ಸಾಧನೆಯಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸೋಯಾ ಅವರೆಯಿಂದ ಎಣ್ಣೆ ತೆಗೆಯಲು ಕೇವಲ ಪೆಟ್ರೋಲಿಯಂ ಬೆಂಜೀನ್ ಉಪಯೋಗಿಸುತ್ತಿದ್ದಾರೆ. ಸೋಯಾ ಅವರೆಗಿಂತ ಹೆಚ್ಚು ಎಣ್ಣೆಯ ಅಂಶವಿರುವ ಬೀಜಗಳಾದರೆ ಪೂರ್ವಭಾವಿಯಾಗಿ ಅವನ್ನು ಒತ್ತಡದಿಂದ ಹಿಂಡಿ ಅನಂತರ ಲೀನಕಾರಿ ಗಳಿಂದ ಉಳಿದ ಎಣ್ಣೆಯನ್ನು ಗ್ರಹಿಸುವುದು ಸೂಕ್ತ.

ಮತ್ತೊಂದು ಆಧುನಿಕ ತೈಲಗ್ರಹಣ ವಿಧಾನದಲ್ಲಿ ನಿಯತ ಕುದಿಮಿಶ್ರಣದ ತತ್ತ್ವವನ್ನು ಅಳವಡಿಸಿಕೊಳ್ಳಲಾಗಿದೆ. ತೈಲಭರಿತ ಊತಕಗಳನ್ನು ನೆನೆಸಲಾಗುವುದು. ಅನಂತರ ಸೂಕ್ತ ಕ್ಲೋರೀನ್‌ಯುಕ್ತ ಲೀನಕಾರಿಯೊಡನೆ ಕುದಿಸುವರು. ನಿಯತ ಕುದಿಮಿಶ್ರಣವನ್ನು ತಣಿಸಿದರೆ ಅದು ದ್ರವೀಕರಿಸುವುದು. ಅದರಿಂದ ನೀರನ್ನು ತೆಗೆದುಹಾಕಿ ಲೀನಕಾರಿಯನ್ನು ಗ್ರಾಹಕ ಯಂತ್ರಕ್ಕೆ ಹಿಂತಿರುಗಿಸಲಾಗುವುದು. ಫಲಿತ ವಸ್ತುವಿನಲ್ಲಿ ಮೂಲ ಪದಾರ್ಥದಲ್ಲಿದ್ದ ಕೊಬ್ಬಿನ ಬಹುಭಾಗ ಅಡಗಿರುವುದು. ಕ್ಲೋರಿನೀಕೃತ ಲೀನಕಾರಿಗಳು ದುಬಾರಿಯಾದರೂ ಉನ್ನತ ಉಷ್ಣತೆಗೆ ಈಡು ಮಾಡದೆ ಸಾಂದ್ರಿತ ಕೊಬ್ಬು ದೊರೆಯುವುದರಿಂದ ಈ ವಿಧಾನ ಆಶಾದಾಯಕವಾಗಿದೆ.

ಸಂಸ್ಕರಣ: ಅವುಗಳ ಮೂಲ, ಗುಣ ಮತ್ತು ಉದ್ದೇಶಿತ ಬಳಕೆಗಳಿಗೆ ಅನುಗುಣವಾಗಿ ಕೊಬ್ಬುಗಳನ್ನು ಸಂಸ್ಕರಿಸಬೇಕಾಗುತ್ತದೆ. ಕೆಲವು ಕೊಬ್ಬುಗಳನ್ನು ಕೇವಲ ತಳವೂರಿಸಿ ಅಥವಾ ಶೋಧಿಸಿ ಉಪಯೋಗಿಸಿ ಬಿಡುವುದುಂಟು. ಹೆಚ್ಚು ಸಂಸ್ಕರಿಸದೆ ಉಪಯೋಗಿಸುವ ಖಾದ್ಯ ಎಣ್ಣೆಗಳೆಂದರೆ ಹಸಿ ಕಡಲೆಕಾಯಿ ಮತ್ತು ಕೊಬ್ಬರಿ ಎಣ್ಣೆಗಳು. ಅಗಾಧ ಪ್ರಮಾಣದ ಬೆಣ್ಣೆ ಮತ್ತು ಹಂದಿಯ ಕೊಬ್ಬನ್ನು ಸಹ ಕಡೆದು ಅಥವಾ ಕರಗಿಸಿ ವಿಶೇಷ ಸಂಸ್ಕರಣಕ್ಕೆ ಒಳಪಡಿಸದೆ ಉಪಯೋಗಿಸುತ್ತಾರೆ. ರುಚಿ ಮತ್ತು ವಾಸನೆ ರಹಿತವಾದ, ಸಂಗ್ರಹ ಮಾಡಿದಾಗ ಕೆಡದಂತಿರುವ, ಖಾದ್ಯ ಎಣ್ಣೆ ಮತ್ತು ಕೊಬ್ಬುಗಳಿಗೆ ಬೇಡಿಕೆ ಏರುತ್ತಿರುವುದರಿಂದ ನವೀನ ತೈಲಸಂಸ್ಕರಣ ತಂತ್ರಗಳು ಹುಟ್ಟಿಕೊಂಡಿವೆ.

ಕೊಬ್ಬಿನ ಬಣ್ಣ, ರುಚಿ ಮತ್ತು ವಾಸನೆಗಳಿಗೆ ಅದರಲ್ಲಿ ಗ್ಲಿಸರೈಡೇತರ ಅಂಶಗಳು ಕಾರಣ. ಇವುಗಳ ಪೈಕಿ ಮೇಣಗಳು, ಮೂಲ ಕೊಬ್ಬಿನ ಆಮ್ಲಗಳು, ವರ್ಣದ್ರವ್ಯಗಳು, ಫಾಸ್ಫೊಲೈಪಿಡ್ಡುಗಳನ್ನು ಹೆಸರಿಸಬಹುದು. ಕಾಸ್ಟಿಕ್ ಸೋಡ (NaOH) ಅಥವಾ ಸೋಡಾ ಬೂದಿ ($Na_2CO_3$)ಯೊಡನೆ 40°–85°. ಸೆಂ.ಗ್ರೇ. ಉಷ್ಣತೆಗೆ ಕೊಬ್ಬನ್ನು ಕಾಯಿಸು ವುದರಿಂದ ಈ ಅನಪೇಕ್ಷಿತ ವಸ್ತುಗಳ ಬಹುಭಾಗ ನಿವಾರಣೆಯಾಗುವುದು. ಈ ಶುದ್ಧೀಕರಣಕ್ಕಾಗಿಯೇ ನಿರ್ಮಿತವಾದ ಒಂದು ತೊಟ್ಟಿಯಿದೆ. ಕೊಬ್ಬಿನ ಆಮ್ಲಗಳು ಸಾಬೂನಿಗೆ ಪರಿವರ್ತನೆ ಹೊಂದಿ ಇತರ ಮಲಿನ ವಸ್ತುಗಳೊಂದಿಗೆ ತಳವೂರುವುವು. ಇವುಗಳ ಬೇರ್ಪಡೆಗೆ ಕೇಂದ್ರಾಪಗಮನ ಯಂತ್ರವನ್ನು ಉಪಯೋಗಿಸುವುದುಂಟು. ಅನಂತರ ಕೊಬ್ಬನ್ನು ನೀರಿನಿಂದ ತೊಳೆದು ಅದಕ್ಕಂಟಿರುವ ಕ್ಷಾರ ಮತ್ತು ಸಾಬೂನನ್ನು ಹೋಗ ಲಾಡಿಸಬೇಕು. ಸೋಡಾಬೂದಿ ಅಥವಾ ಅಮೋನಿಯದಿಂದ ಸಂಸ್ಕರಿಸಿದ ಎಣ್ಣೆಗಳನ್ನು ಸೋಡಿಯಂ ಹೈಡ್ರಾಕ್ಸೈಡಿನ ವರ್ತನೆಗೆ ಒಳಪಡಿಸಿದ ಹೊರತು ಅವುಗಳ ಬಣ್ಣ ಸುಧಾರಿಸುವುದಿಲ್ಲ. ಜಲಮಾರ್ಜನದ ಅನಂತರ ಎಣ್ಣೆಯನ್ನು ನಿರ್ವಾತ ಪರಿಸ್ಥಿತಿಯಲ್ಲಿ ಕಾಯಿಸಿ ಶುಷ್ಕಮಾಡಬೇಕು. ಇಂಥ ಸಂಸ್ಕರಿಸಿದ (ರಿಫೈನ್ಡ್) ಎಣ್ಣೆಯನ್ನು ನಯವಾಗಿ ಕೈಗಾರಿಕಾ ಉದ್ದೇಶಗಳಿಗೆ ಬಳಸಲಾಗುತ್ತದೆ. ಆದರೆ ಅದು ಆಹಾರಯೋಗ್ಯವಾಗಬೇಕಾದರೆ ಹೆಚ್ಚಿನ ಸಂಸ್ಕರಣ ಅಗತ್ಯ. ಸಾಮಾನ್ಯವಾಗಿ ಸಂಸ್ಕರಿತ ತೈಲಗಳು ತಟಸ್ಥ ವಸ್ತುಗಳು. ಅವುಗಳಿಗೆ ಬಣ್ಣ ಕಡಿಮೆ ಮತ್ತು ಕಮಟು ಹಿಡಿಯುವ ಪ್ರವೃತ್ತಿ ಹೆಚ್ಚು.

ತೈಲ ಸಂಸ್ಕರಣಕ್ಕೆ ಕ್ಷಾರೀಯ ವಸ್ತುಗಳಿಗೆ ಬದಲಾಗಿ ಸಲ್ಫ್ಯೂರಿಕ್ ಆಮ್ಲವನ್ನು ಬಳಸುವುದುಂಟು. ಆಗ ಕೊಬ್ಬಿನ ಆಮ್ಲಗಳ ಹೊರತು ಉಳಿದ ಕಶ್ಮಲಗಳು ನಿವಾರಣೆಯಾಗುವುವು. ಕೈಗಾರಿಕೆಯಲ್ಲಿ ಬಳಸುವ ಅಗಸೆ ಎಣ್ಣೆಗಳಂಥ ಎಣ್ಣೆಗಳಲ್ಲಿ ಆಮ್ಲಗಳ ಅಂಶ ಹೆಚ್ಚಿದ್ದರೆ ಬಾಧಕವಿಲ್ಲ. ಅಂಥ ಎಣ್ಣೆಗಳ ಶುದ್ಧೀಕರಣಕ್ಕೆ ಈ ಆಮ್ಲ ವಿಧಾನ ಅನುಕೂಲ. ಫಾಸ್ಫೊಲೈಪಿಡ್ಡುಗಳ ಭಾಗ ಕಡಿಮೆಯಿರುವ ಕೊಬ್ಬರಿ ಎಣ್ಣೆ ಇತ್ಯಾದಿಗಳ ಸಂಸ್ಕರಣಕ್ಕೆ ಉಗಿಯ ಪ್ರಯೋಗ ಸಾಧುವಾಗಿದೆ. ಉನ್ನತ ಉಷ್ಣಕ್ಕೆ ಕಾಯಿಸಿದ ಎಣ್ಣೆಯ ಮೂಲಕ ಶುದ್ಧ ಉಗಿಯನ್ನು ಹಾಯಿಸುವುದು ಪದ್ಧತಿ. ಇದರಿಂದ ಆಮ್ಲಗಳು ಉಗಿಯೊಡನೆ ಪಾರಾಗುವುವು. ಕೆಲವು ಸಂದರ್ಭಗಳಲ್ಲಿ ಎಣ್ಣೆಯಲ್ಲಿರುವ ಫಾಸ್ಫೊ ಲೈಪಿಡ್ಡುಗಳನ್ನು ತೊಡೆದು ಹಾಕಲು ಅಸಿಟಿಕ್ ಅನ್‌ಹೈಡ್ರೈಡನ್ನು ಬಳಸಿರುತ್ತಾರೆ. ಇದೂ ಉಗಿಯ ಪ್ರಯೋಗದಿಂದ ನಿವಾರಿಸಲ್ಪಡುತ್ತದೆ. ತೈಲಸಂಸ್ಕರಣಕ್ಕೆ ಬಳಸುವ ಇತರ ವಸ್ತುಗಳೆಂದರೆ ಪೆಟ್ರೋಲಿಯಂ ಬೆಂಜೀನ್, ಅಮೋನಿಯ, ಮೆಗ್ನೀಸಿಯಂ ಮತ್ತು ಕ್ಯಾಲ್ಸಿಯಂ ಆಕ್ಸೈಡುಗಳು, ಅಯಾನು ವಿನಿಯಮ ಅಂಟುಗಳು ಮತ್ತು ಕೆಲವು ಸಾವಯವ ಪ್ರತ್ಯಾಮ್ಲೀಯ ವಸ್ತುಗಳು.

ಕೆಲವು ಎಣ್ಣೆಗಳಲ್ಲಿ ಫಾಸ್ಫೊಲೈಪಿಡ್ಡುಗಳು ಗಣನೀಯ ಪ್ರಮಾಣದಲ್ಲಿವೆ. ಅಂಥ ಎಣ್ಣೆಗಳಿಗೆ ಕೊಂಚ ನೀರುಬೆರೆಸಿ ಕೇಂದ್ರಾಪಗಮನ ಯಂತ್ರದಲ್ಲಿಟ್ಟು ತಿರುಗಿಸಿದರೆ ಅಂಟು ಪದಾರ್ಥಗಳೂ ಫಾಸ್ಫೊಲೈಪಿಡ್ಡುಗಳೂ ಬೇರ್ಪಡುವುವು. ಮುಸುಕಿನ ಜೋಳ ಮತ್ತು ಸೋಯಾ ಅವರೆ ಎಣ್ಣೆಗಳಿಂದ ಹೀಗೆ ಬೇರ್ಪಡಿಸಿದ ವಸ್ತುಗಳನ್ನು ಲೆಸಿಥಿನ್ ಎಂಬ ವ್ಯವಹಾರನಾಮದಿಂದ ಚಾಕಲೇಟ್ ತಿನಿಸುಗಳು, ಪೇಂಟುಗಳು, ಮಾರ್ಗರಿನ್ ಇತ್ಯಾದಿಗಳ ತಯಾರಿಕೆಯಲ್ಲಿ ಎಮಲ್ಷನ್‌ಕಾರಿಗಳಾಗಿ ಉಪಯೋಗಿಸುತ್ತಾರೆ. ಅಂಟುರಹಿತ ಎಣ್ಣೆಯನ್ನು ಪೇಂಟುಗಳು ಮತ್ತು ಆಲ್ಕಿಡ್ ರೆಸಿನ್ನುಗಳನ್ನು ಮಾಡಲು ಬಳಸಬಹುದು; ಅಥವಾ ಕ್ಷಾರಗಳಿಂದ ಸಂಸ್ಕರಿಸಿ ಆಹಾರಯೋಗ್ಯವಾಗಿ ಮಾಡಬಹುದು.

ಚಲುವೆ ಮಾಡುವುದು: ತೈಲದ ಬಣ್ಣವನ್ನು ಇನ್ನೂ ಕಡಿಮೆ ಮಾಡಬೇಕಾಗಿದ್ದರೆ ಅದಕ್ಕಾಗಿಯೇ ಹಲವು ಚಲುವೆಕಾರಿಗಳಿವೆ. ಆಮ್ಲಮಿಶ್ರಿತ ಸೋಡಿಯಂ ಡೈಕ್ರೊಮೇಟ್, ಪರ್ಮ್ಯಾಂಗನೇಟುಗಳು, ಹೈಪೊಕ್ಲೋರೈಟುಗಳು ಮತ್ತು ಪರಾಕ್ಸೈಡುಗಳು ಈ ಕಾರ್ಯ ನಿರ್ವಹಿಸುತ್ತವೆ. ಖಾದ್ಯ ಎಣ್ಣೆಗಳಿಗೆ ಇವುಗಳನ್ನು ಪ್ರಯೋಗಿಸುವುದು ವಿರಳ. ಅಂಥ ಎಣ್ಣೆಗಳನ್ನು ಕಾಯಿಸಿ ಪಟುಗೊಳಿಸಿದ ಇಂಗಾಲ ಅಥವಾ ಮಣ್ಣುಗಳ ಸಂಪರ್ಕದಲ್ಲಿ ಬಿಡಲಾಗುವುದು. ಇವು ಎಣ್ಣೆಯಲ್ಲಿರುವ ಕ್ಲೋರೋಫಿಲ್ ಮತ್ತು ಕೆರೋಟಿನಾಯ್ಡುಗಳನ್ನು ಹೀರುವುವು. ಯಾವುದೇ ವಿಧಾನದಿಂದ ಚಲುವೆಗೊಳಿಸಿದರೂ ಎಣ್ಣೆಯ ಕಮುಟುಹಿಡಿಯುವ ಪ್ರವೃತ್ತಿ ವೃದ್ಧಿಯಾಗುವುದು. ಇದೊಂದು ಅನನುಕೂಲ.

ಸ್ಟಿಯರಿನ್ ನಿವಾರಣೆ: ಬೀಜದ ಕವಚದ ಮೇಲಿರುವ ಮೇಣ ತೈಲಗತವಾಗುವುದುಂಟು. ಶೀಘ್ರಶೀತಲೀಕರಣದಿಂದ ಅದನ್ನು ಬೇರ್ಪಡಿಸಬಹುದು. ಆದರೆ ಅದರಲ್ಲಿರುವ ಸ್ಟಿಯರಿನ್ ಬೇರ್ಪಡಲು ತೈಲವನ್ನು ನಿಧಾನವಾಗಿ ತಣಿಸಬೇಕು. ಆಗ ಮಾತ್ರ ಅದು ದಪ್ಪ ಹರಳುಗಳಾಗಿ ಶೋಧಿಸಲು ಅನುಕೂಲವಾಗುತ್ತದೆ. ಅಗಸೆ ಎಣ್ಣೆಯಿಂದ ಮೇಣವನ್ನು ತೆಗೆದ ಹೊರತು ಅದನ್ನು ಪೇಂಟುಗಳಿಗೆ ಬಳಸುವಂತಿಲ್ಲ. ಹಾಗೆಯೇ ಮೀನಿನ ಎಣ್ಣೆಗಳಿಂದ ಟ್ರೈಸ್ಟಿಯರಿನ್ ನಿವಾರಿಸಿದ ಅನಂತರವೇ ಅದು ಆಲ್ಕಿಡ್ ರೆಸಿನ್ನುಗಳ ತಯಾರಿಕೆಗೆ ಯೋಗ್ಯವಾಗುವುದು. ಹೀಗೆ ಸ್ಟಿಯರಿನ್ ಇಲ್ಲದ ಕಡಲೆಕಾಯಿ ಎಣ್ಣೆ ಕಡಿಮೆ ಉಷ್ಣತೆಯಲ್ಲಿಯೂ ದ್ರವರೂಪದಲ್ಲಿ ಇರಬಲ್ಲದು. ಬೇರ್ಪಡಿಸಿದ ಸ್ಟಿಯರಿನ್ನಿನಿಂದ ಮೇಣದಬತ್ತಿ ಮಾಡುತ್ತಾರೆ.

ಕೊಬ್ಬಿನ ಕ್ರಿಯಾವೈಶಿಷ್ಟ್ಯಗಳು. ಜಲವಿಶ್ಲೇಷಣೆ: ಇದಕ್ಕಾಗಿ ಸೋಡಿಯಂ ಅಥವಾ ಪೊಟ್ಯಾಸಿಯಂ ಹೈಡ್ರಾಕ್ಸೈಡ್ ಕ್ಷಾರಗಳನ್ನು ಬಳಸುವುದು ವಾಡಿಕೆ. ಆಗ ಗ್ಲಿಸರಾಲ್ ಬೇರ್ಪಡುತ್ತದೆ. ಕೊಬ್ಬಿನ ಆಮ್ಲ ಅದರ ಸೋಡಿಯಂ ಅಥವಾ ಪೊಟ್ಯಾಸಿಯಂ ಲವಣವಾಗುತ್ತದೆ. ಇದೇ ಸಾಬೂನು. ಆದ್ದರಿಂದ ಈ ಕ್ರಿಯೆಗೆ ಸಾಬೂನೀಕರಣ (ಸ್ಯಾಪೊನಿಫಿಕೇಷನ್) ಎಂದು ಹೆಸರಾಗಿದೆ. ಇದನ್ನು ವಿವರಿಸಲು ಟ್ರೈಸ್ಟಿಯರಿನ್ ಉದಾಹರಣೆಯಾಗಿ ಬಳಸಬಹುದು.

$$\begin{array}{lcl} CH_2.O.OC.C_{17}H_{35} & & CH_2.OH \\ | & & | \\ CH.O.OC.C_{17}H_{35} & \xrightarrow{3NaOH} & CH.OH+3C_{17}H_{35}.CO.ONa \\ | & & | \\ CH_2.O.OC.C_{17}H_{35} & & CH_2.OH \end{array}$$

ಟ್ರೈಸ್ಟಿಯರಿನ್ ಗ್ಲಿಸರಾಲ್ ಸೋಡಿಯಂ ಸ್ಟಿಯರೇಟ್ (ಸಾಬೂನು)

ಕೊಬ್ಬಿನ ಆಮ್ಲಗಳ ಸೋಡಿಯಂ ಲವಣಗಳ ಸಂಕೀರ್ಣ ಮಿಶ್ರಣವೇ ಸಾಬೂನು. ಪೊಟ್ಯಾಸಿಯಂ ಹೈಡ್ರಾಕ್ಸೈಡಿನಿಂದ ಜಲವಿಶ್ಲೇಷಣೆಗೊಳಿಸಿದಾಗ ಮೆದು ಸಾಬೂನು ದೊರೆಯುತ್ತದೆ. ಆಲ್ಕೊಹಾಲನ್ನು ಸೇರಿಸಿ ಪಾರದರ್ಶಕ ಗ್ಲಿಸರಿನ್ ಸಾಬೂನನ್ನೂ ಆಲಿವ್ ಎಣ್ಣೆಯಿಂದ ಕ್ಯಾಸ್ಟೀಲ್ ಸಾಬೂನನ್ನೂ ತಯಾರಿಸುವರು. ಪರಿಮಳ ದ್ರವ್ಯಗಳು ಆಕರ್ಷಕ ಬಣ್ಣಗಳು ಮತ್ತು ಕ್ರಿಮಿನಾಶಕಗಳನ್ನು ಸೇರಿಸಿ ಸಾಬೂನಿನ ಉಪಯುಕ್ತತೆಯನ್ನು ಹೆಚ್ಚಿಸಬಹುದು.

ಕೊಬ್ಬುಗಳ ಜಲವಿಶ್ಲೇಷಣೆಗೆ ಖನಿಜಾಮ್ಲ, ಒತ್ತಡದಲ್ಲಿರುವ ಉಗಿ ಅಥವಾ ಲೈಪೇಸ್ ಕಿಣ್ವ ಇದನ್ನು ಬಳಸಬಹುದು. ನ್ಯಾಫ್ಥಲೀನ್, ಓಲಿಯಿಕ್ ಆಮ್ಲ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣಕ್ಕೆ ಟ್ವಿಚೆಲ್ ಪರಿವರ್ತಕ ಎಂದು ಹೆಸರು, ಇದರೊಡನೆ ಕೊಬ್ಬನ್ನು ಉಗಿಯ ಉಷ್ಣತೆಗೆ ಒಡ್ಡಿದಾಗ ಕೊಬ್ಬಿನ ಆಮ್ಲಗಳು ಬೇಗ ಬಿಡುಗಡೆಯಾಗುತ್ತವೆ. ಕೈಗಾರಿಕೆಯಲ್ಲಿ ಈ ಕೊಬ್ಬಿನ ಆಮ್ಲಗಳಿಗೆ ವಿಶೇಷ ಮಹತ್ತ್ವವಿದೆ. ಜಿಂಕ್‌ಸ್ಟಿಯರೇಟನ್ನು ಅಂಗರಾಗಪುಡಿಗಳಲ್ಲಿ ಮತ್ತು ತೇವನಿರೋಧಕವಾಗಿ ಉಪಯೋಗಿಸುವುದನ್ನು ನೆನೆಯಬಹುದು.

ಪ್ರತಿಎಸ್ಟರೀಕರಣ (ಟ್ರಾನ್ಸ್‌ಎಸ್ಟರಿಫಿಕೇಷನ್): ಕೊಬ್ಬನ್ನು ಮೀಥೈಲ್ ಅಥವಾ ಈಥೈಲ್ ಆಲ್ಕೊಹಾಲಿನೊಡನೆ ಆಮ್ಲೀಯ ಅಥವಾ ಕ್ಷಾರೀಯ ವೇಗವರ್ಧಕಗಳ ಸಂಪರ್ಕದಲ್ಲಿ ಕಾಯಿಸಿದಾಗ ಅದರಲ್ಲಿರುವ ಗ್ಲಿಸರೈಡುಗಳು ಕೊಬ್ಬಿನ ಆಮ್ಲಗಳ ಮೀಥೈಲ್ ಅಥವಾ ಈಥೈಲ್ ಎಸ್ಟರುಗಳಾಗಿ ಪರಿವರ್ತಿತವಾಗುವುವು. ಈ ವಿಶೇಷ ಕ್ರಿಯೆಯನ್ನು ಪ್ರತಿಎಸ್ಟರೀಕರಣ ಎಂದು ಕರೆಯುವರು.

$$\begin{array}{lcl} CH_2.O.OC.C_{17}H_{35} & & CH_2.OH \;\; C_{17}H_{35}CO.OCH_3 \\ | & & \\ CH.O.OC.C_{17}H_{33}+3CH3.OH & \xrightarrow{\text{ಆಮ್ಲ}} & CH.OH+C_{17}H_{33}CO.OCH_3 \\ | & & \\ CH_2.O.OC.C_{15}H_{31} & & CH_2.OH \;\; C_{15}H_{31}CO.OCH_3 \end{array}$$

ಈ ಮೀಥೈಲ್ ಎಸ್ಟರುಗಳನ್ನು ಆಂಶಿಕ ಬಾಷ್ಪೀಕರಣದಿಂದ ಬೇರ್ಪಡಿಸಿ ಅನಂತರ ಜಲವಿಶ್ಲೇಷಣೆಮಾಡಿದರೆ ಮೂಲ ಆಮ್ಲಗಳು ದೊರೆಯುವುವು. ಕೊಬ್ಬಿನ ಆಮ್ಲಗಳನ್ನು ಗುರುತಿಸಲು ಈ ವಿಧಾನ ಸಹಾಯಕವಾಗಿದೆ.

ಅಪಕರ್ಷಣ: ಎಸ್ಟರುಗಳ ಅಪಕರ್ಷಣದಿಂದ ಆಲ್ಕೊಹಾಲುಗಳೂ ಲಭಿಸುವುವು. ಕೊಬ್ಬುಗಳೂ ಎಸ್ಟರುಗಳಾದುದರಿಂದ ಅವು ಅಪಕರ್ಷಣ ಹೊಂದಬೇಕು. ಹಾಗಾದಾಗ ಉದ್ದ ಸರಪಳಿ ರಚನೆಯುಳ್ಳ ಪ್ರೈಮರಿ ಆಲ್ಕೊಹಾಲುಗಳು ಹುಟ್ಟುತ್ತವೆ. ಇದಕ್ಕಾಗಿ ಬಳಸುವ ಅಪಕರ್ಷಣಕಾರಿಗಳೆಂದರೆ ಸೋಡಿಯಂ ಮತ್ತು ಆಲ್ಕೊಹಾಲ್, ತಾಮ್ರದ ಕ್ರೋಮೈಟ್ ($CuO.CuCr_2O_4$) ವೇಗವರ್ಧಕದ ಸಂಪರ್ಕದಲ್ಲಿರುವ ಹೈಡ್ರೊಜನ್ (200 ವಾಯುಭಾರ ಒತ್ತಡದಲ್ಲಿ ಮತ್ತು 250°...... ಸೆಂ.ಗ್ರೇ. ಉಷ್ಣತೆಯಲ್ಲಿ ಇತ್ಯಾದಿ. á – ಪಾಮಿಟೊ á'â ಡೈಲಾರಿನ್ ಅಪಕರ್ಷಿತವಾದಾಗ ಲಾರಿಲ್ ಮತ್ತು ಪಾಮಿಟಿಲ್ ಆಲ್ಕೊಹಾಲುಗಳೂ ಗ್ಲಿಸರಾಲೂ ಉತ್ಪತ್ತಿಯಾಗುವುವು.

$$\begin{array}{lcl} CH_2.O.OC.C_{15}H_{31} & & C_{15}H_{31}CH_2OH \;\; CH_2OH \\ | & & \qquad\qquad\quad | \\ CH.O.OC.C_{11}H_{23} & \longrightarrow & C_{11}H_{23}CH_2OH+CHOH \\ | & & \qquad\qquad\quad | \\ CH_2.O.OC.C_{11}H_{23} & & C_{11}H_{23}CH_2OH \;\; CH_2OH \end{array}$$

ಕೊಬ್ಬರಿ ಎಣ್ಣೆಯ ಅಪಕರ್ಷಣದಿಂದ ಬಂದ ಆಲ್ಕೊಹಾಲುಗಳ ಮಿಶ್ರಣದಲ್ಲಿ ಲಾರಿಲ್ ಆಲ್ಕೊಹಾಲಿನ ಪ್ರಮಾಣ ಅಧಿಕವಾಗಿರುತ್ತದೆ. ಸಾಬೂನಿಗೆ ಉತ್ತಮ ಬದಲಿ ವಸ್ತುಗಳೆಂದು ಹೆಸರಾಗಿರುವ ಮಾರ್ಜಕಗಳ (ಡಿಟರ್ಜೆಂಟ್ಸ್) ತಯಾರಿಕೆಗೆ ಈ ಉನ್ನತ ಆಲ್ಕೊಹಾಲುಗಳ ವಿನಿಯೋಗವಾಗುತ್ತಿದೆ.

ಕೊಳೆಯುವಿಕೆ: ಕೊಬ್ಬು ಹುಳಿಯಾಗಿ ದುರ್ವಾಸನೆ ಹುಟ್ಟಿದರೆ ಆಗ ಅದಕ್ಕೆ ಕಮಟು ಹಿಡಿದಿದೆ ಅಥವಾ ಕನರು ಬಂದಿದೆ ಎನ್ನುತ್ತೇವೆ. ದುರ್ಗಂಧಯುಕ್ತ ಆಮ್ಲಗಳು ಆಲ್ಡಿಹೈಡುಗಳು ಮತ್ತು ಕೀಟೋನುಗಳ ಉತ್ಪನ್ನದಿಂದ ಹೀಗಾಗುತ್ತವೆ. ಕನರು ವಾಸನೆಗೆ ಇನ್ನೂ ಹಲವಾರು ಕಾರಣಗಳಿರಬಹುದು. ಸೂಕ್ಷ್ಮ ಜೀವಾಣುಗಳ ಪ್ರೇರಣೆಯಿಂದ ಕೊಬ್ಬು ನಿಧಾನವಾಗಿ ಜಲವಿಶ್ಲೇಷಣೆ ಹೊಂದಿ ದುರ್ವಾಸನೆಯುಳ್ಳ $C_4$-$C_{10}$ ಆಮ್ಲಗಳಾಗಿರಬಹುದು. ಅಥವಾ ಈ ಆಮ್ಲಗಳು ಬೀಟಾ ಕೀಟಾನಿಕಾಮ್ಲಗಳಾಗಿ ಉತ್ಕರ್ಷಿತವಾಗಬಹುದು. ಇವು ಇಂಗಾಲದ ಡೈಆಕ್ಸೈಡ್‌ನ್ನು ಕಳೆದುಕೊಂಡು ಅಹಿತ ವಾಸನೆಯುಳ್ಳ ಕೀಟೋನುಗಳಾಗಿ ಪರಿವರ್ತಿತವಾಗಬಹುದು. ಈ ಕ್ರಿಯೆಗಳನ್ನು ಕೆಳಕಂಡಂತೆ ಚಿತ್ರಿಸಿಕೊಳ್ಳಬಹುದು.

$$CH_3.(CH_2)_8.COOH \xrightarrow{[O]} CH_3.(CH_2)_6.CO.CH_2.[COO]H$$

ಕ್ಯಾಪ್ರಿಕ್ ಆಮ್ಲ ಬೀಟಾ ಕೀಟಾನಿಕ್ ಆಮ್ಲ

$$\downarrow -CO$$

$$CH_3.(CH_2)_6.CO.CH_3$$

n–ಹೆಪ್ಟೈಲ್ ಮೀಥೈಲ್ ಕೀಟೋನ್

ವಾಯುಮಂಡಲದ ಆಕ್ಸಿಜನ್ನಿನ ಸಂಪರ್ಕದಲ್ಲಿ ಕೊಬ್ಬಿನ ಅಪರ್ಯಾಪ್ತ ಭಾಗ ಪೆರಾಕ್ಸೈಡುಗಳಾಗಿ ಉತ್ಕರ್ಷಿತವಾಗಿ ಅನಂತರ ಅವು ದುರ್ವಾಸನೆಯುಳ್ಳ ಆಲ್ಡಿಹೈಡುಗಳಿಗೆ ವಿಭಜಿಸುವುದು ಕನರು (ಕಮಟು) ನಾತಕ್ಕೆ ಪ್ರಧಾನ ಕಾರಣವೆಂದು ತೋರುತ್ತದೆ. ಇದನ್ನು ಟ್ರೈಓಲಿಯಿನ್ ಉದಾಹರಣೆಯಿಂದ ವಿವರಿಸಬಹುದು.

$$C_3H_5[O.OC.(CH_2)_7.CH{=}CH\text{-}(CH_2)_7.CH_3]_3$$
ಟ್ರೈ ಓಲಿಯಿನ್

$$\downarrow 2\,[O]$$

$$C_3H_5[O.OC.(CH_2)_7.CH\text{-}CH\text{-}(CH)_7.CH_3]_3$$
ಪೆರಾಕ್ಸೈಡ್

$$\text{O}-\text{O}$$

$$\downarrow$$

$$C_3H_5[O.OC.(CH_2)_7CHO]_3+3[OHC.(CH_2)_7.CH_3]$$
ಪೆಲಾರ್ಗೊನಾಲ್ಡಿಹೈಡ್

ಪರ್ಯಾಪ್ತ ಕೊಬ್ಬುಗಳು ಕಮಟು ಹಿಡಿಯದಿರಲು ಅವುಗಳಲ್ಲಿ ಅಪರ್ಯಾಪ್ತ ಗುಂಪುಗಳು ಇಲ್ಲದಿರುವುದೇ ಕಾರಣ. ಕಮಟು ಹಿಡಿಯುವುದನ್ನು ತಡೆಗಟ್ಟಲು ಕೊಬ್ಬಿನೊಡನೆ ಮೆಲೇಯಿಕ್ ಆನ್‌ಹೈಡ್ರೈಡಿನಂಥ ಉತ್ಕರ್ಷಣ ವಿರೋಧಿಗಳನ್ನು (ಆಂಟಿ ಆಕ್ಸಿಡೆಂಟ್ಸ್) ಮಿಶ್ರಣಮಾಡುವುದು ಪದ್ಧತಿ. ಕೊಬ್ಬು ಕಮಟು ಹಿಡಿದಿದೆಯೇ ಅಥವಾ ಇಲ್ಲವೇ ಎಂಬುದನ್ನು ಕ್ರೀಸ್ ಪರೀಕ್ಷೆಯಿಂದ ಪತ್ತೆ ಹಚ್ಚಬಹುದು. ಕೊಬ್ಬಿಗೆ ಈಥರ್, ಪ್ಲೋರೋ ಗ್ಲೂಸಿನಾಲ್ ಮತ್ತು ಹೈಡ್ರೋಕ್ಲೋರಿಕ್‌ಆಮ್ಲ ಸೇರಿಸಿದಾಗ ಕೆಂಪು ಬಣ್ಣ ಉಂಟಾದರೆ ಕೊಬ್ಬು ಕೊಳೆಯಲು ಆರಂಭವಾಗಿದೆ ಎಂದು ಖಚಿತವಾಗುತ್ತದೆ.

ಜಲಜನಕೀಕರಣ (ಹೈಡ್ರಾಜಿನೇಷನ್): ತೈಲಗಳಲ್ಲಿರುವ ಆಮ್ಲದ ಅಪರ್ಯಾಪ್ತ ಭಾಗವನ್ನು ಪರ್ಯಾಪ್ತಗೊಳಿಸಿ ಅವು ಕಮಟು ಹಿಡಿಯದಂತೆ ಮಾಡುವುದು ಇದರ ಉದ್ದೇಶ. ಮೊದಲು ಎಣ್ಣೆಯನ್ನು 175°–190° ಸೆಂ.ಗ್ರೇ. ಉಷ್ಣತಾಮಿತಿಗೆ ಕಾಯಿಸಬೇಕು. ಒತ್ತಡ 2 ವಾಯುಭಾರದಷ್ಟಿದ್ದರೆ ಸಾಕು. ಸೂಕ್ಷ್ಮ ಕಣಗಳ ರೂಪದಲ್ಲಿರುವ ನಿಕ್ಕಲ್ ವೇಗವರ್ಧಕ ಅಗತ್ಯ (0. 05–0. 10%). ಸಾಮಾನ್ಯವಾಗಿ, ಕೀಸಲ್ ಘರ್ ಮೇಲೆ ನಿಕ್ಕಲನ್ನು ಹರಡಿ ಉಪಯೋಗಿಸುವುದು ರೂಢಿ. ಈ ಸನ್ನಿವೇಶದಲ್ಲಿ ಹೈಡ್ರೋಜನ್ (ಜಲಜನಕ) ಹಾಯಿಸಿದರೆ, ದ್ವಿಬಂಧ ಸ್ಥಾನಗಳಲ್ಲಿರುವ ಇಂಗಾಲದ ಪರಮಾಣುಗಳಿಗೆ ಹೈಡ್ರೋಜನ್ನಿನ ಪರಮಾಣುಗಳು ಕೂಡಿ ಪರ್ಯಾಪ್ತಗೊಳಿಸುವುವು. ಪರಿಣಾಮವಾಗಿ, ಎಣ್ಣೆ ಹೆಪ್ಪಾಗುವುದು. ಮೂರು ದ್ವಿಬಂಧಗಳುಳ್ಳ ಲಿನೊಲಿಯಿಕ್ ಆಮ್ಲ ಮೊದಲೂ




**ಚಿತ್ರ 3. ಜಲಜನಕೀಕರಣಕ್ಕೆ ಉಪಯೋಗಿಸುವ ಸಾಧನ**
**ಚಿತ್ರದಲ್ಲಿ A ತೈಲ ಮತ್ತು ನಿಕ್ಕಲ್ ವೇಗವರ್ಧಕ E ಜಲಜನಕ E ಜಲಜನಕೀಕರಿಸಿದ ಮತ್ತು ಉಳಿದ ತೈಲ D ಉಪಯೋಗವಾಗದ ಜಲಜನಕ E ಉಗಿ.**

ಎರಡು ದ್ವಿಬಂಧಗಳಿರುವ ಲಿನೊಲಿಯಿಕ್ ಆಮ್ಲ ಅನಂತರವೂ ಒಂದು ದ್ವಿಬಂಧವಿರುವ ಓಲಿಯಿಕ್ ಆಮ್ಲ ಅಂತಿಮವಾಗಿಯೂ ಪರ್ಯಾಪ್ತಗೊಳ್ಳುವುವು. ತೈಲ ಪರ್ಯಾಪ್ತವಾದಂತೆಲ್ಲ ಅದರ ಸ್ನಿಗ್ಧತೆ ಹೆಚ್ಚುತ್ತ ಬರುವುದು. ಅದು ಅಪೇಕ್ಷಿತ ಮಟ್ಟ ತಲುಪಿದ ಕೂಡಲೇ ಜಲಜನಕೀಕರಣವನ್ನು ನಿಲ್ಲಿಸಲಾಗುವುದು. ಪ್ರಯೋಗ ಪರಿಸ್ಥಿತಿಯನ್ನು ನಿಯಂತ್ರಿಸುವುದರ ಮೂಲಕ ಇದನ್ನು ಸಾಧಿಸುವರು. ಉನ್ನತ ಉಷ್ಣತೆ, ಒತ್ತಡಗಳನ್ನೂ ಒಮ್ಮೆ ಉಪಯೋಗಿಸಿದ ವೇಗವರ್ಧಕವನ್ನೂ ಬಳಸಿದರೆ ಜನಜನಕೀಕರಣ ಕ್ರಮಬದ್ಧವಾಗಿ ನಡೆಯುವುದಿಲ್ಲ. ಅತಿ ಗಟ್ಟಿಯಾದ ಕೊಬ್ಬು ಬೇಕಾಗಿದ್ದರೆ ಮಾತ್ರ ಹೀಗೆ ಮಾಡುವರು. ಜಲಜನಕೀಕರಣದ ಅನಂತರ, ಬಿಸಿ ಎಣ್ಣೆಯನ್ನು ಶೋಧಿಸಿ ನಿಕ್ಕಲ್ ವೇಗವರ್ಧಕವನ್ನು ಸಂಗ್ರಹಿಸುವರು. ಜಲಜನಕೀಕರಣ ಕಾಲದಲ್ಲಿ ಮತ್ತೊಂದು ಮುಖ್ಯ ಬದಲಾವಣೆ ನಡೆಯುವುದು.

ಅಪರ್ಯಾಪ್ತ ಆಮ್ಲದ ಭಾಗಗಳಲ್ಲಿರುವ ಪರಮಾಣುಗಳ ಸ್ಥಾನಪಲ್ಲಟವಾಗಿ ಐಸೊಓಲಿಯಿಕ್, ಐಸೋಲಿನೊಲಿಯಿಕ್ ಮತ್ತು ಐಸೊ ಲಿನೋಸಿಕ್ ಮುಂತಾದ ಆಮ್ಲಗಳು ರೂಪುಗೊಳ್ಳುವುವು. ಮೂಲ ಆಮ್ಲಗಳಿಗಿಂತ ಇವುಗಳಿಗೆ ದ್ರವೀಕರಣ ಬಿಂದು ಹೆಚ್ಚು ಇರುವುದರಿಂದ ಹೆಪ್ಪುಗಟ್ಟುವ ಕ್ರಿಯೆಗೆ ಉತ್ತೇಜನ ದೊರೆತಂತಾಗುತ್ತದೆ. ಈ ಆಮ್ಲಗಳ ಉತ್ಪತ್ತಿಯನ್ನು ಅತಿರಕ್ತ (ಇನ್‌ಫ್ರಾರೆಡ್) ಕಿರಣಗಳ ಸಹಾಯದಿಂದ ಪತ್ತೆಹಚ್ಚಬಹುದು.

ಹತ್ತಿಬೀಜದ ಎಣ್ಣೆ ಪೂರ್ತಿಯಾಗಿ ಹೈಡ್ರೋಜನ್ನನ್ನು ಹೀರಿಕೊಳ್ಳುವಂತೆ ಮಾಡಿದರೆ 62° ಸೆಂ.ಗ್ರೇ. ಉಷ್ಣತೆಯಲ್ಲಿ ಕರಗುವ ಕೊಬ್ಬು ಲಭಿಸುತ್ತದೆ. ಜಲಜನಕೀಕರಣದಿಂದ ಎಣ್ಣೆಯ ಭೌತ ಮತ್ತು ರಾಸಾಯನಿಕ ಲಕ್ಷಣಗಳೂ ಬದಲಾಯಿಸುವುವು. ಅಂಥ ಎಣ್ಣೆಯನ್ನು ಬಹುಕಾಲ ಕೂಡಿಟ್ಟರೂ ಕೆಡುವುದಿಲ್ಲ. ಜಲಜನಕೀಕರಣಕ್ಕಾಗಿ ಉಪಯೋಗಿಸುವ ಯಂತ್ರೋಪಕರಣದ ವಿವರಗಳನ್ನು ಚಿತ್ರದಲ್ಲಿ ಕಾಣಬಹುದು.

ಎಣ್ಣೆಯನ್ನು ಅಪೂರ್ಣವಾಗಿ ಜಲಜನಕೀಕರಣ ಮಾಡಿದರೆ ವನಸ್ಪತಿ ತುಪ್ಪವಾಗುವುದು. ಲಭ್ಯ ವಸ್ತು, ನಮ್ಮ ಶರೀರದ ಉಷ್ಣತಾಮಟ್ಟವಾದ 37° ಸೆಂ.ಗ್ರೇ. ನಲ್ಲಿ ಕರಗುವಂತಿರಬೇಕು. ಇದಕ್ಕಿಂತ ಮೀರಿದ ಉಷ್ಣತೆಯಲ್ಲಿ ಕರಗುವ ಕೊಬ್ಬುಗಳು, ನಮ್ಮ ದೇಹದಲ್ಲಿ ಸುಲಭವಾಗಿ ಜೀರ್ಣವಾಗುವುದಿಲ್ಲ. ಭಾರತದಲ್ಲಿ ಕಡಲೇಕಾಯಿ ಎಣ್ಣೆಯಿಂದ ವನಸ್ಪತಿ ತುಪ್ಪ ತಯಾರಿಸುವುದು ವಾಡಿಕೆ. ಪ್ರಕೃತಿದತ್ತ ಬೆಣ್ಣೆ ಅಥವಾ ತುಪ್ಪದಲ್ಲಿ A ಜೀವಾತು ಇರುವುದರಿಂದ ವನಸ್ಪತಿಗೂ ಅದನ್ನು ಸೇರಿಸುತ್ತಾರೆ.

ಕೊಬ್ಬಿನ ಆಮ್ಲಗಳ ಬೇರ್ಪಡೆ: ಕೊಬ್ಬಿನ ಜಲವಿಶ್ಲೇಷಣೆಯಿಂದ ಲಭಿಸುವ ಆಮ್ಲಗಳು ಸಮೀಪ ಸಂಬಂಧಿಗಳು. ಅವುಗಳಲ್ಲಿರುವ ಇಂಗಾಲದ ಪರಮಾಣುಗಳ ಸಂಖ್ಯೆಯಲ್ಲಿರುವ ವ್ಯತ್ಯಾಸ ಅಲ್ಪ. ಗುಣ ಹೋಲಿಕೆ ಹೆಚ್ಚು. ಆದ್ದರಿಂದ ಪ್ರತ್ಯೇಕಿಸುವುದು ಕಷ್ಟ. ಸ್ಥೂಲವರ್ಗಗಳಿಗೆ ಮಾತ್ರ ಬೇರ್ಪಡಿಸಬಹುದು.

ಸಾಬೂನೀಕರಣದಲ್ಲಿ ಕೊಬ್ಬಿನ ಆಮ್ಲಗಳ ಸೋಡಿಯಂ ಅಥವಾ ಪೋಟ್ಯಾಸಿಯಂ ಲವಣಗಳು ದೊರೆಯುತ್ತವೆ. ಇವುಗಳೊಡನೆ ಖನಿಜಾಮ್ಲಗಳು ವರ್ತಿಸುವಂತೆ ಮಾಡಿ ಆಮ್ಲಗಳನ್ನು ಬಿಡುಗಡೆಮಾಡಬಹುದು. ಹತ್ತು ಅಥವಾ ಕಡಿಮೆ ಇಂಗಾಲದ ಪರಮಾಣು ಗಳಿರುವ ಆಮ್ಲಗಳು ಹಬೆಯ ಬಾಷ್ಪೀಭವನದಿಂದ ಬೇರ್ಪಡುವುವು. ಆದ್ದರಿಂದ ಮತ್ತಷ್ಟು ಸೂಕ್ಷ್ಮವಾಗಿ ವರ್ಗೀಕರಿಸಲು ಸಾಧ್ಯ. ಉಗಿಯೊಡನೆ ಹಾಯದ ಆಮ್ಲಗಳಲ್ಲಿ ಕೆಲವು ಮಾತ್ರ ಪರ್ಯಾಪ್ತವಾಗಿರುತ್ತವೆ. ಅವನ್ನು ಅಪರ್ಯಾಪ್ತ ಆಮ್ಲಗಳಿಂದ ವಿಂಗಡಿಸಲು ಆಯಾ ಸೀಸದ ಲವಣಗಳಿಗೆ ಮಾರ್ಪಡಿಸಲಾಗುವುದು. ಅಪರ್ಯಾಪ್ತ ಆಮ್ಲಗಳ ಸೀಸದ ಲವಣಗಳು ಈಥರಿನಲ್ಲಿ ದ್ರಾವ್ಯ. ಈ ತತ್ತ್ವಗಳನ್ನು ಆಧರಿಸಿ ಕೊಬ್ಬಿನ ಆಮ್ಲಗಳ ಬೇರ್ಪಡೆಗೆ ಕೆಳಕಂಡ ಕ್ರಮವನ್ನು ರೂಪಿಸಲಾಗಿದೆ.

1 ಕೊಬ್ಬು ಅಥವಾ ತೈಲ+ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣ → ಗ್ಲಿಸರಾಲ್ (ದ್ರವ)+ಎಲ್ಲ ಕೊಬ್ಬಿನ ಆಮ್ಲಗಳ ಸೋಡಿಯಂ ಲವಣಗಳು (ಘನವಸ್ತುಗಳು).

2 ಸೋಡಿಯಂ ಲವಣಗಳು+ಸಲ್ಫ್ಯೂರಿಕ್ ಆಮ್ಲ → ಕೊಬ್ಬಿನ ಆಮ್ಲಗಳು (ಕೆಲವು ದ್ರಾವ್ಯ; ಉಳಿದವು ಅದ್ರಾವ್ಯ)+ಸೋಡಿಯಂ ಸಲ್ಫೇಟ್ ದ್ರಾವಣ

3 ಕೊಬ್ಬಿನ ಆಮ್ಲಗಳ ಮತ್ತು ಸೋಡಿಯಂ ಸಲ್ಫೇಟಿನ ದ್ರಾವಣದ ಮಿಶ್ರಣವನ್ನು ಉಗಿಹಾಯಿಸಿ ಕುದಿಸಲಾಗುವುದು.

(a) ಉಗಿಯೊಡನೆ ಹಾಯುವ ಅಂಶ

| | | |
|---|---|---|
| (i) ನೀರಿನಲ್ಲಿ ದ್ರಾವ್ಯ | ... | ಬ್ಯುಟಿರಿಕ್ ಆಮ್ಲ |
| (ii) ನೀರಿನಲ್ಲಿ ಅದ್ರಾವ್ಯ | ... | ಕೆಪ್ರೋಯಿಕ್ ಕೆಪ್ರಿಲಿಕ್ ಮತ್ತು ಕ್ಯಾಪ್ರಿಕ್ ಆಮ್ಲಗಳು. |

(b) ಉಗಿಯೊಡನೆ ಹಾಯದ ಅಂಶ

ಇದಕ್ಕೆ ಈಥರ್ ಮತ್ತು ಸೀಸದ ಅಸಿಟೇಟ್ ದ್ರಾವಣ ಸೇರಿಸಿದರೆ ಒತ್ತರ ಬರುವುದು. ಶೋಧಿಸಿದರೆ ಸೀಸದ ಲವಣಗಳು ಬೇರ್ಪಡುವುವು.

(i) ಈಥರಿನಲ್ಲಿ ದ್ರಾವ್ಯವಾದ ಸೀಸದ ಲವಣಗಳು ... ಓಲಿಯಿಕ್ ಮತ್ತು ಇತರ ಅಪರ್ಯಾಪ್ತ ಆಮ್ಲಗಳು.

(ii) ಈಥರಿನಲ್ಲಿ ಅದ್ರಾವ್ಯವಾದ ಸೀಸದ ಲವಣಗಳು ... ಸ್ಟಿಯರಿಕ್, ಪಾಮಿಟಿಕ್ ಮೊದಲಾದ ಪರ್ಯಾಪ್ತ ಆಮ್ಲಗಳು.

4 ಹೈಡ್ರೋಜನ್ ಸಲ್ಫೈಡ್ ಹಾಯಿಸಿದರೆ ಸೀಸದ ಸಲ್ಫೈಡ್ ಒತ್ತರಿಸಿ ಕೊಬ್ಬಿನ ಆಮ್ಲಗಳು ಬಿಡುಗಡೆಯಾಗುವುವು. ಮಿಶ್ರಣವನ್ನು ಈಥರಿನಿಂದ ಸಂಸ್ಕರಿಸಿದರೆ ಆಮ್ಲಗಳು ಮಾತ್ರ ಕರಗುವುವು. ದ್ರಾವಣವನ್ನು ಬೇರ್ಪಡಿಸಿ ಈಥರನ್ನು ಆವಿಯಾಗಲು ಬಿಟ್ಟರೆ ಆಮ್ಲ ಉಳಿಯುವುದು. ಪರ್ಯಾಪ್ತ ಆಮ್ಲಗಳು ಘನರೂಪದಲ್ಲಿಯೂ ಅಪರ್ಯಾಪ್ತ ಆಮ್ಲಗಳು ದ್ರವಸ್ಥಿತಿಯಲ್ಲಿಯೂ ಇರುವುದರಿಂದ ಪ್ರತ್ಯೇಕಿಸುವುದು ಸುಲಭ.

ಕೊಬ್ಬಿನ ವಿಶ್ಲೇಷಣೆ: ಸಾಬೂನೀಕರಣ ಮೌಲ್ಯ (ಸಪೋನಿಫಿಕೇಷನ್ ವ್ಯಾಲ್ಯೂ): 1ಗ್ರಾಂ ಕೊಬ್ಬನ್ನು ಅಥವಾ ಎಣ್ಣೆಯನ್ನು ಸಂಪೂರ್ಣವಾಗಿ ಸಾಬೂನೀಕರಿಸಲು ಅಗತ್ಯವಾದ ಪೊಟ್ಯಾಸಿಯಂ ಹೈಡ್ರಾಕ್ಸೈಡಿನ ಮಿಲಿಗ್ರಾಂ ತೂಕ ಅದರ ಸಾಬೂನೀಕರಣ ಮೌಲ್ಯ.

ನಿರ್ದಿಷ್ಟ ತೂಕ ಕೊಬ್ಬನ್ನು ಅಗತ್ಯಕ್ಕಿಂತ ಹೆಚ್ಚು ಪ್ರಮಾಣ ಶಿಷ್ಟ (ಪ್ರಬಲತೆ ಗೊತ್ತಿರುವ) ಪೊಟ್ಯಾಸಿಯಂ ಹೈಡ್ರಾಕ್ಸೈಡ್ ದ್ರಾವಣದೊಡನೆ ಕುದಿಸಲಾಗುವುದು. ಆಗ ಕೊಬ್ಬು ಕ್ಷಾರದ ಒಂದು ಭಾಗವನ್ನು ತನ್ನ ಜಲವಿಶ್ಲೇಷಣೆಗೆ ಉಪಯೋಗಿಸಿಕೊಳ್ಳುವುದು. ಉಳಿದ ಕ್ಷಾರವನ್ನು ಶಿಷ್ಟ ಆಮ್ಲದೊಂದಿಗೆ ಫೀನಾಲ್ಫ್ಥ್ಯಾಲೀನ್ ಸೂಚಕದ ಸಹಾಯದಿಂದ ಅನುಮಾಪನ ಮಾಡಲಾಗುವುದು. ಅನಂತರ ಕೊಬ್ಬಿನ ಸಾಬೂನೀಕರಣ ಮೌಲ್ಯವನ್ನು ಗುಣಿಸಬಹುದು. ಟ್ರೈಬ್ಯುಟಿರಿನ್ ಉದಾಹರಣೆಯಾಗಿ ಇಟ್ಟುಕೊಂಡು ಮಾಡಿದ ಲೆಕ್ಕಾಚಾರದ ವಿಧಾನವನ್ನು ಕೆಳಗೆ ವಿವರಿಸಲಾಗಿದೆ.



ಹೀಗೆ 302.36 ಗ್ರಾಂ ಟ್ರೈಬ್ಯುಟರಿನ್ನನ್ನು ಜಲವಿಶ್ಲೇಷಣೆ ಮಾಡಲು 168.3 ಗ್ರಾಂ ಪೊಟ್ಯಾಸಿಯಂ ಹೈಡ್ರಾಕ್ಸೈಡ್ ಬೇಕಾಗಿದೆ. ಆದ್ದರಿಂದ 1 ಗ್ರಾಮನ್ನು ಜಲವಿಶ್ಲೇಷಣೆ ಮಾಡಲು 557 ಮಿ.ಗ್ರಾಂ. ಬೇಕಾಗುತ್ತದೆ. ಹೀಗೆ ಟ್ರೈಬ್ಯೂಟರಿನ್ನಿನ ಸಾಬೂನೀಕರಣ ಮೌಲ್ಯ 557.

ಅಯೊಡೀನ್ ಮೌಲ್ಯ: ಗ್ಲಿಸರೈಡಿನಲ್ಲಿರುವ ಒಂದೊಂದು ದ್ವಿಬಂಧವೂ ತಲಾ ಎರಡು ಅಯೊಡೀನ್ ಪರಮಾಣುಗಳನ್ನು ಕೂಡಿಸಿಕೊಂಡು ಪರ್ಯಾಪ್ತಗೊಳ್ಳಬಲ್ಲದು. ಒಂದು ದ್ವಿಬಂಧವಿರುವ ಓಲಿಯಿಕಾಮ್ಲದ ಗ್ಲಿಸರೈಡಿಗಿಂತ ಎರಡು ದ್ವಿಬಂಧವಿರುವ ಲಿನೋಲಿಯಿಕಾಮ್ಲದ ಗ್ಲಿಸರೈಡು, ಎರಡು ಪಟ್ಟು ಅಯೊಡೀನ್ ಹೀರಿಕೊಳ್ಳುವುದು ಸಹಜವೇ. 100ಗ್ರಾಂ ಕೊಬ್ಬು ಅಥವಾ ಎಣ್ಣೆ ಹೀರಿಕೊಳ್ಳುವ ಅಯೊಡೀನ್ (ಗ್ರಾಂನಲ್ಲಿ) ಅದರ ಅಯೊಡೀನ್ ಮೌಲ್ಯ. ಇದು ಕೊಬ್ಬು ಅಥವಾ ಎಣ್ಣೆಯ ಅಪರ್ಯಾಪ್ತತೆಯ ದ್ಯೋತಕವಾಗಿದೆ. ಟ್ರೈಸ್ಟಿಯರಿನ್ನಿನಂಥ ಪರ್ಯಾಪ್ತ ಗ್ಲಿಸರೈಡುಗಳು ಕೂಡಿಸಿಕೊಳ್ಳುವುದಿಲ್ಲ. ಆದ್ದರಿಂದ ಅವುಗಳ ಅಯೊಡೀನ್ ಮೌಲ್ಯ ಸೊನ್ನೆ. ಶುದ್ಧ ಅಪರ್ಯಾಪ್ತ ಎಣ್ಣೆಯಾದ ಗ್ಲಿಸರೈಲ್ ಟ್ರೈ ಓಲಿಯೇಟಿನ ಅಯೊಡೀನ್ ಮೌಲ್ಯವನ್ನು ಮುಂದೆ ತಾತ್ತ್ವಿಕವಾಗಿ ಗುಣಿಸಲಾಗಿದೆ.



ಆದ್ದರಿಂದ ಅಯೊಡೀನ್ ಮೌಲ್ಯ=86.88. ಹೋಲಿಕೆಗಾಗಿ ಮೂರು ಸರಳ ಗ್ಲಿಸರೈಡುಗಳ ಅಯೊಡೀನ್ ಮೌಲ್ಯವನ್ನು ಮುಂದೆ ಸೂಚಿಸಲಾಗಿದೆ.



ಅಯೊಡೀನ್ ಬದಲು ಅಯೊಡೀನ್ ಮಾನೊಕ್ಲೋರೈಡನ್ನು (ICI) ಉಪಯೋಗಿಸಿದರೆ ಪರ್ಯಾಪ್ತವಾಗುವಿಕೆ ಬೇಗ ನಡೆಯುವುದು. ಈ ಕ್ರಿಯೆಯನ್ನು ಕೆಳಕಂಡ ಸಮೀಕರಣ ಸೂಚಿಸುತ್ತದೆ.

$$(\text{-CH=CH-})+\text{ICI} \rightarrow (\text{-CHI-CHCI—})$$

ದ್ವಿಬಂಧದಲ್ಲಿ, ತಲಾ ಒಂದು ಅಯೊಡೀನ್ ಮತ್ತು ಕ್ಲೋರಿನ್ ಪರಮಾಣು ಸೇರುವುದು. ಅಯೊಡೈಡುಗಳಿಂದ ಒಂದು ಅಯೊಡೀನ್ ಪರಮಾಣುವನ್ನು ಪಲ್ಲಟಿಸಲು ಒಂದು ಕ್ಲೋರೀನಿನ ಪರಮಾಣು ಸಾಕು. ಆದ್ದರಿಂದ ಇಲ್ಲೂ ಅಯೊಡೀನ್ ಮೌಲ್ಯವನ್ನೇ ಗುಣಿಸಲಾಗುವುದು. ನಿರ್ದಿಷ್ಟ ತೂಕ ತೈಲವನ್ನು ಇಂಗಾಲದ ಟೆಟ್ರಕ್ಲೋರೈಡಿನಲ್ಲಿ ವಿಲೀನಗೊಳಿಸಿ ದ್ರಾವಣ ಮಾಡಿಕೊಳ್ಳಬೇಕು. ಹಾಗೆಯೇ ಅಯೊಡೀನ್ ಮಾನೊ ಕ್ಲೋರೈಡನ್ನು ಗ್ಲೇಷಿಯಲ್ ಅಸಿಟಕಾಮ್ಲದಲ್ಲಿ ವಿಲೀನ ಮಾಡುವರು. ಗೊತ್ತಾದ ಗಾತ್ರದ ಇದರ ದ್ರಾವಣವನ್ನು ಎಣ್ಣೆಯ ದ್ರಾವಣಕ್ಕೆ ಸೇರಿಸಿ ಕೆಲಕಾಲ ಬಿಡಬೇಕು. ಆಗ ಎಣ್ಣೆ ತನ್ನ ಶಕ್ತ್ಯನುಸಾರ ಅಯೊಡೀನ್ ಮಾನೋಕ್ಲೋರೈಡನ್ನು ಹೀರುವುದು. ಹೆಚ್ಚುವರಿ ಅಯೊಡೀನ್ ದ್ರಾವಣದಲ್ಲಿ ಉಳಿದಿರುತ್ತದೆ. ಇದಕ್ಕೆ ಪೊಟ್ಯಾಸಿಯಂ ಅಯೊಡೈಡಿನ ದ್ರಾವಣ ಹಾಕಿ ಶಿಷ್ಟ ಸೋಡಿಯಂ ಥಯೊಸಲ್ಫೇಟಿನೊಡನೆ ಪಿಷ್ಟ (ಸ್ಟಾರ್ಚ್) ಸೂಚಕದ ಸಹಾಯದಿಂದ ಅನುಮಾಪನ ಮಾಡಬಹುದು. ಇಲ್ಲಿ ನಡೆಯುತ್ತಿರುವ ರಾಸಾಯನಿಕ ಕ್ರಿಯೆಗಳು ಹೀಗಿವೆ.

$$ICI + KI \rightarrow KCI + I_2$$

$$2Na_2S_2O_3 + I_2 \rightarrow Na_2S_4O_6 + 2NaI$$

ಅಯೊಡೀನ್ ಮೌಲ್ಯದ ಆಧಾರದ ಮೇಲೆ ಎಣ್ಣೆಯನ್ನು ಮೂರು ಪ್ರಧಾನ ಗುಂಪುಗಳಾಗಿ ವಿಂಗಡಿಸುವರು.

ಒಣಗದ ಎಣ್ಣೆಗಳು: ಇವುಗಳ ಅಯೊಡೀನ್ ಮೌಲ್ಯ 90ಕ್ಕಿಂತ ಕಡಿಮೆ. ಗಾಳಿಗೆ ಒಡ್ಡಿದಾಗ ಒಣಗುವುದಿಲ್ಲ. ಇವುಗಳಲ್ಲಿರುವ ಪ್ರಧಾನ ಅಂಶ ಓಲಿಯಿಕ್ ಆಮ್ಲ. ಆಲಿವ್, ಕೊಬ್ಬರಿ, ಕಡಲೆಕಾಯಿ ಮತ್ತು ಹರಳೆಣ್ಣೆಗಳು ಈ ಗುಂಪಿಗೆ ಸೇರಿದ ಎಣ್ಣೆಗಳು.

ಅರೆ ಒಣಗುವ ಎಣ್ಣೆಗಳು: ಇವು ಮುಖ್ಯವಾಗಿ ಓಲಿಯಿಕ್ ಮತ್ತು ಲಿನೋಲಿಯಿಕ್ ಆಮ್ಲ ಭಾಗಗಳಿರುತ್ತವೆ. ಇವುಗಳ ಅಪರ್ಯಾಪ್ತತೆ ಹೆಚ್ಚಾಗಿದ್ದು ಅಯೊಡೀನ್ ಮೌಲ್ಯ 90–120 ಮಿತಿಯಲ್ಲಿರುತ್ತದೆ. ಗಾಳಿಯ ಸಂಪರ್ಕದಲ್ಲಿ ಅವು ಒಣಗುವುದು ನಿಧಾನ. ಹತ್ತಿಬೀಜದ ಮತ್ತು ಎಳ್ಳೆಣ್ಣೆ ಈ ವರ್ಗದ ಪ್ರಮುಖ ಎಣ್ಣೆಗಳು.

ಒಣಗುವ ಎಣ್ಣೆಗಳು: ಇವುಗಳ ಅಯೊಡೀನ್ ಮೌಲ್ಯ 120ಕ್ಕಿಂತ ಹೆಚ್ಚಾಗಿರುವುದು. ಇವುಗಳಲ್ಲಿ ಲಿನೋಲಿಯಿಕ್ ಮತ್ತು ಲಿನೊಲಿನಿಕ್ ಆಮ್ಲಗಳ ಪ್ರಮಾಣ ಅಧಿಕ. ಅಗಸೆ, ಗಸಗಸೆ ಮತ್ತು ಟಂಗ್ ಎಣ್ಣೆಗಳು ಇವುಗಳಲ್ಲಿ ಮುಖ್ಯವಾದವು. ತೆಳುವಾಗಿ ಲೇಪಿಸಿದಾಗ ಗಾಳಿಯ ಸಂಪರ್ಕದಲ್ಲಿ ಮೊದಲು ಅಂಟಾದರೂ ಕ್ರಮೇಣ ಶುಷ್ಕವಾದ ಸುಭದ್ರ ಪೊರೆಯ ರಚನೆಯುಂಟಾಗುವುದು. ಅಗಸೆ ಎಣ್ಣೆ ಪ್ರಧಾನವಾಗಿ ಪೇಂಟುಗಳಲ್ಲಿ ಬಳಕೆಯಾಗುತ್ತದೆ. ಇಂಥ ಎಣ್ಣೆಗಳನ್ನು ಒಳಗೊಂಡ ಪೇಂಟ್ ಮತ್ತು ವಾರ್ನಿಷುಗಳನ್ನು ಲೇಪಿಸುವುದು ಸುಲಭ. ಅಲ್ಲದೆ ಒಣಗಿದ ಮೇಲೆ ಬಲವಾದ ಸಾವಯವ ಪದರ ಏರ್ಪಡುವುದು. ಆ ಪದರದ ಮೂಲಕ ಬಣ್ಣ ಸಮನಾಗಿ ಹಂಚಿಹೋಗುವುದು. ಸೀಸ ಅಥವಾ ಮ್ಯಾಂಗನೀಸ್ ಲವಣಗಳು ಈ ಒಣಗುವ ಕ್ರಿಯೆಯನ್ನು ತ್ವರಿತಗೊಳಿಸುತ್ತವೆ. ಲೋಹದ ಆಕ್ಸೈಡ್ ಬೆರೆಸಿ ಕಾಯಿಸಿ ತಯಾರಿಸಿದ ಅಗಸೆ ಎಣ್ಣೆಗೆ ಕುದಿಸಿದ ಅಗಸೆ ಎಣ್ಣೆ ಎನ್ನುವರು. ಇದನ್ನೊಳಗೊಂಡ ಪೇಂಟ್ ಬಲು ಬೇಗ ಒಣಗುವುದು. ಉತ್ತಮ ಒಣಗುವ ಎಣ್ಣೆಯ ಮುಖ್ಯ ಲಕ್ಷಣಗಳೆಂದರೆ (i) ಎರಡು ಅಥವಾ ಮೂರು ದ್ವಿಬಂಧಗಳಿರುವ ಆಮ್ಲದ ಗ್ಲಿಸರೈಡುಗಳನ್ನು ಹೊಂದಿರುವುದು. (ii) ಆಮ್ಲದ ಇಂಗಾಲದ ಸರಣಿಯಲ್ಲಿ ಕ್ರಮವಾಗಿ ಎರಡು ದ್ವಿಬಂಧಗಳ ನಡುವೆ ಒಂದು ಏಕಬಂಧವಿರುವುದು. ಆಗ ಆ ಎಣ್ಣೆಗೆ ಆಕ್ಸಿಜನ್ ಹೀರುವ ಶಕ್ತಿ ಪ್ರಾಪ್ತಿಯಾಗಿ ಬೇಗನೆ ಒಣಗುತ್ತದೆ. ಕ್ರಮವರಿತ (ಕಾಂಜುಗೇಟೆಡ್) ದ್ವಿಬಂಧವಿರುವ ಟಂಗ್ ಎಣ್ಣೆ (ಅ. ಮೌ. 160) ಅಗಸೆ ಎಣ್ಣೆಗಿಂತ (ಅ. ಮೌ. 175) ಉತ್ತಮವಾಗಿ ಕಾರ್ಯನಿರ್ವಹಿಸಲು ಇದೇ ಕಾರಣ. ಅಗಸೆ ಎಣ್ಣೆಯ ಉತ್ಪಾದನೆಯಲ್ಲಿ ಭಾರತ ತೃತೀಯ ಸ್ಥಾನ ಪಡೆದಿದೆ. ಮೇಣಗಪಟ (ಆಯಿಲ್ ಕ್ಲಾತ್), ರೆಕ್ಸಿನ್ ಮತ್ತು ಲಿನೋನಿಯಂ ತಯಾರಿಕೆಯಲ್ಲಿ ಈ ಎಣ್ಣೆಗಳ ಪಾತ್ರವಿದೆ. ಉದಾಹರಣೆಗೆ ಕಾರ್ಕನ್ನು ಪುಡಿಮಾಡಿ ಕುದಿಸಿದ ಅಗಸೆ ಎಣ್ಣೆಯೊಡನೆ ಬೆರೆಸಿ ಮಿಶ್ರಣವನ್ನು ಪದರಗಳಾಗಿ ಒತ್ತಿ ಒಣಗಿಸಿದರೆ ಲಿನೋಲಿಯಂ ಆಗುತ್ತದೆ.

ರೈಷರ್ಟ್–ಮೈಸ್ಲ ಮೌಲ್ಯ: 5 ಗ್ರಾಂ ಕೊಬ್ಬಿನಿಂದ ಪಡೆಯಬಹುದಾದ ದ್ರಾವ್ಯ ಹಾಗೂ ಉಗಿಯೊಡನೆ ಹಾಯುವ ಕೊಬ್ಬಿನ ಆಮ್ಲಗಳನ್ನು ತಟಸ್ಥಗೊಳಿಸಲು ಅಗತ್ಯವಾದ ಡೆಸಿನಾರ್ಮಲ್ ಪ್ರಬಲತೆಯ ಕ್ಷಾರದ ಗಾತ್ರವನ್ನು ಮಿಲಿಮೀಟರುಗಳಲ್ಲಿ ಸೂಚಿಸುವ ಸಂಖ್ಯೆ. ಇದರ ನಿರ್ಣಯ ವಿಧಾನ ಹೀಗಿದೆ. ನಿರ್ದಿಷ್ಟ ತೂಕ ಕೊಬ್ಬನ್ನು ಗ್ಲಿಸರಾಲ್ ಮಾಧ್ಯಮದಲ್ಲಿ ಪೊಟ್ಯಾಸಿಯಂ ಹೈಡ್ರಾಕ್ಸೈಡಿನೊಂದಿಗೆ ಕಾಯಿಸಿ ಜಲವಿಶ್ಲೇಷಣೆಗೊಳಿಸ ಲಾಗುವುದು. ಮಿಶ್ರಣಕ್ಕೆ ದುರ್ಬಲ ಸಲ್ಫ್ಯೂರಿಕ್ ಆಮ್ಲವನ್ನು ಸೇರಿಸಿದರೆ ಕೊಬ್ಬಿನ ಆಮ್ಲಗಳು ಬಿಡುಗಡೆಯಾಗುವುವು. ಕುದಿಸಿದಾಗ 10 ಇಂಗಾಲದ ಪರಮಾಣುಗಳ ವರೆಗೆ ಹೊಂದಿರುವ ಆಮ್ಲಗಳೆಲ್ಲ ಉಗಿಯೊಡನೆ ಆವಿಯಾಗಿ ಹೋಗುವುವು. ಇವು ಸಾಂದ್ರೀಕರಿಸಿದ ದ್ರವ ದಲ್ಲಿರುವುವು. ಇವುಗಳ ಪೈಕಿ 4 ಇಂಗಾಲದ ಪರಮಾಣುಗಳಿರುವ ಬ್ಯುಟರಿಕ್ ಆಮ್ಲ

ನೀರಿನಲ್ಲಿ ದ್ರಾವ್ಯ, ಕ್ರಮವಾಗಿ 6, 8, 10 ಇಂಗಾಲದ ಪರಮಾಣುಗಳಿರುವ ಬ್ಯುಟಿರಿಕ್ ಆಮ್ಲ ನೀರಿನಲ್ಲಿ ದ್ರಾವ್ಯ. ಕ್ರಮವಾಗಿ, 6,8,10 ಇಂಗಾಲದ ಪರಮಾಣುಗಳಿರುವ ಕಪ್ರೋಯಿಕ್, ಕೆಪ್ರಿಲಿಕ್ ಮತ್ತು ಕ್ಯಾಪ್ರಿಕ್ ಆಮ್ಲಗಳು ನೀರಿನಲ್ಲಿ ಅದ್ರಾವ್ಯ. ಬಟ್ಟಿ ಇಳಿದ ದ್ರವವನ್ನು ಶೋಧಿಸಿದರೆ ಈ ಆಮ್ಲಗಳು ಬೇರ್ಪಡುವುವು. ಶೋಧಿತ ದ್ರವದಲ್ಲಿರುವ ಬ್ಯುಟಿರಿಕ್ ಆಮ್ಲದ ಪ್ರಮಾಣವನ್ನು ಡೆಸಿನಾರ್ಮಲ್ ಪೊಟ್ಯಾಸಿಯಂ ಹೈಡ್ರಾಕ್ಸೈಡಿನ ವಿರುದ್ಧ ಫೀನಾಫ್ತಲೀನ್ ಸೂಚಕದ ನೆರವಿನಿಂದ ಅನುಮಾಪನ ಮಾಡಿ ನಿರ್ಣಯಿಸಲಾಗುವುದು.

**ಪೊಲೆನ್ಸ್ಕೆ ಮೌಲ್ಯ:** ರೈಷೆರ್ಟ್–ಮೈಸ್ಲ್ ಮೌಲ್ಯದಂತೆಯೇ ಇದನ್ನೂ ನಿರ್ಧರಿಸಲಾಗುವುದು. ಆದರೆ ಇಲ್ಲಿ ಉಗಿಯೊಂದಿಗೆ ಬೇರ್ಪಟ್ಟ ಅದ್ರಾವ್ಯ ಆಮ್ಲಗಳನ್ನು ಆಲ್ಕೊಹಾಲಿನಲ್ಲಿ ವಿಲೀನಮಾಡಿ ಡೆಸಿನಾರ್ಮಲ್ ಕ್ಷಾರದೊಂದಿಗೆ ಅನುಮಾಪನ ಮಾಡುತ್ತೇವೆ. ಅಷ್ಟೇ ವ್ಯತ್ಯಾಸ. ಆದ್ದರಿಂದ 5 ಗ್ರಾಂ ಕೊಬ್ಬಿನಿಂದ ಪಡೆಯಬಹುದಾದ ಉಗಿಯೊಡನೆ ಆವಿಯಾಗುವ ಅದ್ರಾವ್ಯ ಕೊಬ್ಬಿನ ಆಮ್ಲಗಳನ್ನು ಸಂಪೂರ್ಣವಾಗಿ ತಟಸ್ಥಗೊಳಿಸಲು ಅಗತ್ಯವಾದ ಡೆಸಿನಾರ್ಮಲ್ ಕ್ಷಾರದ ಗಾತ್ರವನ್ನು ಮಿಲಿ ಲೀಟರ್‌ಗಳಲ್ಲಿ ಸೂಚಿಸುವ ಸಂಖ್ಯೆಗೆ ಅದರ ಪೊಲೆನ್ಸ್ಕೆ ಮೌಲ್ಯ ಎಂದು ಹೆಸರು.

ರೈಷೆರ್ಟ್–ಮೈಸ್ಲ್ ಮತ್ತು ಪೊಲೆನ್ಸ್ಕೆ ಮೌಲ್ಯಗಳ ಸಹಾಯದಿಂದ ಬೆಣ್ಣೆ ಮತ್ತು ತುಪ್ಪಗಳೊಡನೆ ಇತರ ವಸ್ತುಗಳು ಕಲಬೆರಕೆಯಾಗಿದ್ದರೆ, ಸುಲಭವಾಗಿ ಗುರುತಿಸಬಹುದು.

| ಕೊಬ್ಬು ಅಥವಾ ಎಣ್ಣೆ | ರೈಷೆರ್ಟ್–ಮೈಸ್ಲ್ ಮೌಲ್ಯ | ಪೊಲೆನ್ಸ್ಕೆ ಮೌಲ್ಯ |
|---|---|---|
| ಬೆಣ್ಣೆ | 19–36 | 1.50 |
| ತುಪ್ಪ (ಎಮ್ಮೆ) | <30 | 1–1.75 |
| ತುಪ್ಪ (ಹಸು) | <24 | 1.25–2.50 |
| ಕೊಬ್ಬರಿ ಎಣ್ಣೆ | 7 | 15–18 |
| ಮಾರ್ಗರಿನ್ | <1 | <1 |
| ವನಸ್ಪತಿ ಜಲಜನಕೀಕರಿಸಿದ ಎಣ್ಣೆ) | >1 | <1 |

ಬೆಣ್ಣೆಯಲ್ಲಿ ಟ್ರೈಬ್ಯುಟಿರಿನ್ ಇದೆ. ಜಲವಿಶ್ಲೇಷಣೆ ಹೊಂದಿದಾಗ ಇದು ಬ್ಯುಟಿರಿಕ್ ಆಮ್ಲವನ್ನು ಕೊಡುತ್ತದೆ. ಆದ್ದರಿಂದ ಬೆಣ್ಣೆ ಮತ್ತು ಅದರಿಂದಾದ ತುಪ್ಪಕ್ಕೆ ರೈಷೆರ್ಟ್–ಮೈಸ್ಲ್ ಮೌಲ್ಯ ಹೆಚ್ಚಾಗಿರುವುದು ಸ್ವಾಭಾವಿಕ. ಟ್ರೈಬ್ಯುಟಿರಿನ್ ಅಂಶವಿಲ್ಲದಿರುವ ಪ್ರಾಣಿಗಳ ಕೊಬ್ಬು ಅಥವಾ ವನಸ್ಪತಿಗಳಿಗೆ ಈ ಮೌಲ್ಯ ಕಡಿಮೆ. ತುಪ್ಪದೊಡನೆ ವನಸ್ಪತಿ ಬೆರೆಕೆಯಾಗಿದ್ದರೆ ರೈಷೆರ್ಟ್–ಮೈಸ್ ಮೌಲ್ಯ 24ಕ್ಕಿಂತ ಕಡಿಮೆ ಆಗಿರುವುದು. ಬೆಣ್ಣೆಗೆ ಕೊಬ್ಬರಿ ತುಪ್ಪ ಸೇರಿಸಿದ್ದರೆ ಮಿಶ್ರಣದ ಪೊರೆನ್ಸ್ಕೆ ಮೌಲ್ಯ ಬೆಣ್ಣೆಗಿಂತ ಹೆಚ್ಚಾಗಿರುತ್ತದೆ.

ಸಂಯೋಜಿತ ಕೊಬ್ಬು: ಪ್ಯಾರಫಿನ್ ಮೇಣವನ್ನು ಸೋಡಿಯಂ ಕಾರ್ಬೋನೇಟಿನ ದ್ರಾವಣದೊಡನೆ ಒತ್ತಡದಲ್ಲಿ ಸುಮಾರು 170ಲಿ ಸೆಂ.ಗ್ರೇ. ಉಷ್ಣತೆಗೆ ಕಾಯಿಸಿ ಗಾಳಿ ಹಾಯಿಸಿದರೆ ಬೆಸ ಸಂಖ್ಯೆಯ ಇಂಗಾಲದ ಪರಮಾಣುಗಳಿರುವ ($C_{13}$-$C_{19}$). ಕೊಬ್ಬಿನ ಆಮ್ಲಗಳು ಉತ್ಪತ್ತಿಯಾಗುವುವು. ಈ ಕ್ರಿಯೆಗೆ ಸೀಸ, ಮ್ಯಾಂಗನೀಸ್ ಮತ್ತು ವನೇಡಿಯಂ ಲೋಹಗಳು ವೇಗವರ್ಧಕಗಳಾಗಿ ವರ್ತಿಸುತ್ತವೆ. ಒಂದನೆಯ ಮಹಾಯುದ್ಧದ ಸಮಯದಲ್ಲಿ (1914–18) ಜರ್ಮನಿಗೆ ವಿದೇಶಗಳಿಂದ ಎಣ್ಣೆಬೀಜಗಳ ಸರಬರಾಜು ಕಡಿದುಹೋಯಿತು. ಆಗ ಉಂಟಾದ ಎಣ್ಣೆಯ ಕೊರತೆಯನ್ನು ನೀಗಲು ಆ ದೇಶ ಈ ವಿಧಾನವನ್ನು ರೂಪಿಸಿತು. ಗ್ಲಿಸರಾಲನ್ನು ಫರ್ಮೆಂಟೇಷನ್ ವಿಧಾನದಿಂದ ಮಾಡಿಕೊಂಡು ಅದನ್ನು ಕೊಬ್ಬಿನ ಆಮ್ಲಗಳೊಂದಿಗೆ ಮೊಹರಾದ ಕೊಳವೆಗಳಲ್ಲಿ 200°–260° ಸೆಂ.ಗ್ರೇ. ಉಷ್ಣತಾ ಮಿತಿಯಲ್ಲಿ ಕಾಯಿಸಿದರೆ ಕೊಬ್ಬು ದೊರೆಯುವುದು. ಮಾನೊ, ಡೈ ಮತ್ತು ಟ್ರೈಗ್ಲಿಸರೈಡುಗಳನ್ನು ಹೀಗೆ ಪಡೆಯಬಹುದು. ವರ್ಷವೊಂದಕ್ಕೆ ಪ್ರತಿಯೊಬ್ಬನೂ 3–4 ಕಿ.ಗ್ರಾಂ. ಕೊಬ್ಬನ್ನು ಮಲದೊಡನೆ ವಿಸರ್ಜಿಸುವನೆಂದು ಅಂದಾಜು ಮಾಡಲಾಗಿದೆ. ತನ್ನ ದೊಡ್ಡ ನಗರಗಳ ಗ್ರಾಮಸಾರದಲ್ಲಿ ವ್ಯರ್ಥವಾಗಿ ಹೋಗುತ್ತಲಿದ್ದ ಇಂಥ ಕೊಬ್ಬನ್ನು ಸಹ ಜರ್ಮನಿ ಆಗ ಸಂಸ್ಕರಿಸಿ ಸಂಪಾದಿಸಿತು. ಎರಡನೆಯ ಮಹಾ ಯುದ್ಧದ ಕಾಲದಲ್ಲಿ ಜರ್ಮನಿ ಫಿಷರ್–ಟ್ರೋಷ್ ವಿಧಾನದಿಂದ ಕೊರೆತ ಹೈಡ್ರೊಕಾರ್ಬನ್ನುಗಳನ್ನು ಉತ್ಕರ್ಷಿಸಿ ಆಮ್ಲಗಳನ್ನಾಗಿ ಮಾಡಿಕೊಂಡು ಅವುಗಳಿಂದ ಕೊಬ್ಬನ್ನು ಸಂಯೋಜಿಸಿತು.

ಕೊಬ್ಬಿನ ಮಹತ್ತ್ವ: ಇವು ಶಕ್ತಿದಾತ ಆಹಾರಾಂಶಗಳು. ಒಂದು ಗ್ರಾಂ ಕೊಬ್ಬಿನ ದಹನದಿಂದ 9,500 ಕೆಲೋರಿಗಳಷ್ಟು ಶಕ್ತಿ ನಮಗೆ ಉಷ್ಣದ ರೂಪದಲ್ಲಿ ಲಭ್ಯವಾಗುತ್ತದೆ. ಅದೇ ಒಂದು ಗ್ರಾಂ ಸಸಾರಜನಕ ಅಥವಾ ಶರ್ಕರ ಪಿಷ್ಟಾದಿಗಳಿಂದ ಕೇವಲ 4,000 ಕೆಲೋರಿಗಳಷ್ಟು ಶಕ್ತಿ ಉತ್ಪಾದನೆಯಾಗುತ್ತದೆ. ಕೊಬ್ಬಿಗೆ ಉಷ್ಣವಾಹಕ ಗುಣ ಕಡಿಮೆ. ಆದ್ದರಿಂದ ನಮ್ಮ ಶರೀರದಿಂದ ಉಷ್ಣ ಹೊರಬೀಳುವುದನ್ನು ಇದು ತಡೆಗಟ್ಟುತ್ತದೆ. ಶೀತಹವೆಯಲ್ಲಿ ಅಥವಾ ತಣ್ಣೀರಿನಲ್ಲಿ ವಾಸಿಸುವ ಕರಡಿ ಮತ್ತು ತಿಮಿಂಗಲಗಳ ಚರ್ಮದ ಅಡಿಯಲ್ಲಿ ಅಗಾಧಪ್ರಮಾಣದ ಕೊಬ್ಬಿನ ಸಂಗ್ರಹವಿದ್ದು, ಅವುಗಳ ದೇಹದಿಂದ ಉಷ್ಣ ನಷ್ಟವಾಗದಂತೆ ರಕ್ಷಿಸುತ್ತದೆ. ಜೇನುಗೂಡಿನಲ್ಲಿ ಶೇಖರಿಸುವ ಸಕ್ಕರೆಯ ಪಾಕ ಜಲಮಿಶ್ರಿತ ವಾಗದಂತೆ ಅಥವಾ ಕಲುಷಿತವಾಗದಂತೆ, ಅದರಲ್ಲಿರುವ ಮೇಣ ನೋಡಿಕೊಳ್ಳುತ್ತದೆ. ಕೊಬ್ಬಿನ ಅಥವಾ ಮೇಣದ ಹೊದಿಕೆಯಿರುವ ಎಲೆಗಳಿಂದ ನೀರು ನಷ್ಟವಾಗುವುದಿಲ್ಲ. ಸೇಬು ಮತ್ತು ಸಿಟ್ರಸ್ ಜಾತಿಯ ಹಣ್ಣುಗಳಿಗೆ ಇಂಥ ಮೇಣದ ಕವಚವಿರುತ್ತದೆ.

ಊತಕಗಳಿಂದ ಬೇರ್ಪಡಿಸಿದ ಕೊಬ್ಬುಗಳಲ್ಲಿ ಅಲ್ಪಪ್ರಮಾಣದ ಫಾಸ್ಫೊಲೈಪಿಡ್ಡುಗಳು, ಸ್ಟೆರಾಲುಗಳು, A, D, E ಜೀವಾತುಗಳು ಮತ್ತು ಕ್ಯಾರೊಟೀನುಗಳು ಇರುತ್ತವೆ. ಇವುಗಳ ಪೈಕಿ ಕೆಲವು ವಸ್ತುಗಳಿಗೆ ಬೆಳವಣಿಗೆಯನ್ನು ನಿಯಂತ್ರಿಸುವ ಸಾಮರ್ಥ್ಯವಿದೆ. ಇಂಥ ಪೋಷಕವಸ್ತುಗಳ ವಾಹಕವಾಗಿ ಕೊಬ್ಬು ನಮಗೆ ಉಪಕರಿಸುತ್ತಿದೆ. ಗ್ಲಿಸರೈಡುಗಳಲ್ಲಿ ಅಪರ್ಯಾಪ್ತ ಭಾಗವಿರುವುದರಿಂದಲೇ ಅವು ಜೀರ್ಣ ಹೊಂದಿ ರಕ್ತಗತವಾಗಬಲ್ಲವು ಎಂದು ಭಾವಿಸಲಾಗಿದೆ. ಶರ್ಕರ ಪಿಷ್ಟಾದಿಗಳು ಇದ್ದರೂ ಸಹ, ಆಹಾರದಲ್ಲಿ ಕೊಬ್ಬು ಇಲ್ಲದಿದ್ದರೆ ಇಲಿಗಳಲ್ಲಿ ಕೊರತೆಯ ರೋಗ ಲಕ್ಷಣಗಳು ಕಾಣಿಸಿಕೊಳ್ಳುವುವು. ಪಾದಗಳು ಮತ್ತು ಬಾಲಗಳು ಚಕ್ಕೆಗಟ್ಟಿ ಅವುಗಳಲ್ಲಿ ಹುರುಪೇಳುವುದು. ಹೀಗಾಗಲು ಅವುಗಳ ಆಹಾರದಲ್ಲಿ ಲಿನೊಲಿಯಿಕ್, ಲಿನೊಲಿನಿಕ್ ಮತ್ತು ಅರ್‍ಯಾಬಿಡೋನಿಕ್ ಆಮ್ಲಗಳ ಕೊರತೆ ಕಾರಣವೆಂದು ಗೊತ್ತಾಗಿದೆ. ಮಕ್ಕಳನ್ನು ಬಾಧಿಸುವ ಒಂದು ರೀತಿಯ ಇಸಬುರೋಗಕ್ಕೂ ಈ ಆಮ್ಲಗಳ ಕೊರತೆಗೂ ಸಂಬಂಧ ಕಲ್ಪಿಸುವುದುಂಟು. ವಿಕಿರಣಶೀಲ ಸಮಸ್ಥಾನಿಗಳಿಂದ ಗುರುತು ಮಾಡಿದ ಸ್ಟಿಯರಿಕ್ ಆಮ್ಲವನ್ನು ಒಳಗೊಂಡ ಆಹಾರವನ್ನು ಪ್ರಾಣಿಗಳಿಗೆ ತಿನ್ನಿಸಿದಾಗ ಅದರ ಒಂದು ಭಾಗ ಓಲಿಯಿಕ್‌ಆಮ್ಲವಾಗಿ ಪರಿವರ್ತಿತವಾಗುವುದು ತಿಳಿದಿದೆ. ಇದರಿಂದ ಪ್ರಾಣಿಶರೀರ ಓಲಿಯಿಕ್ ಆಮ್ಲವನ್ನು ಸ್ವತಃ ಸಂಯೋಜಿಸಬಲ್ಲುದು ಎಂದು ಗೊತ್ತಾಗುತ್ತದೆ. ಆದರೆ ಹೀಗೆಯೇ ಸಮಸ್ಥಾನಿಗಳಿಂದ ಗುರುತು ಹಬ್ಬಿದ ಕೊಬ್ಬಿನ ಆಮ್ಲಗಳಿಂದ ದೇಹ ಲಿಸೊಲಿಯಿಕ್, ಲಿನೊಲಿಯಿಕ್ ಮತ್ತು ಅರ್‍ಯಾಬಿಡೋನಿಕಾಮ್ಲಗಳನ್ನು ಮಾಡಿಕೊಂಡುದು ವ್ಯಕ್ತವಾಗಿಲ್ಲ. ಅಂದರೆ ನಮ್ಮ ಆಹಾರದ ಮೂಲಕ ಅವು ಒದಗಿದ ಹೊರತು ಕೊರತೆ ರೋಗಗಳು ಅನಿವಾರ್ಯವಾದ್ದರಿಂದ ಈ ಮೂರು ಆಮ್ಲಗಳು ಅಗತ್ಯ ಕೊಬ್ಬಿನ ಆಮ್ಲಗಳು ಎನಿಸಿಕೊಂಡಿವೆ.

ಆಹಾರ ಜಠರದಲ್ಲಿರುವವರೆಗೂ ನಮಗೆ ಹಸಿವು ತೋರುವುದಿಲ್ಲ. ಆಹಾರದಲ್ಲಿರುವ ಕೊಬ್ಬು ಈ ಕಾಲಾವಧಿಯನ್ನು ಹೆಚ್ಚಿಸುತ್ತದೆ. ಅದರಿಂದ ನಮಗೆ ತೃಪ್ತಿಯ ಭಾವನೆ ಹೆಚ್ಚು ಕಾಲ ಉಳಿಯುತ್ತದೆ.

ಜೀವಿಗಳಲ್ಲಿ ಕೊಬ್ಬುಗಳ ಸಂಯೋಜನೆ ಮತ್ತು ವಿನಿಯೋಗ: ಪಕ್ವವಾಗುವ ಕೊನೆಯ ಹಂತದಲ್ಲಿ ಬೀಜ ಮತ್ತು ಹಣ್ಣುಗಳಲ್ಲಿ ಕೊಬ್ಬು ರೂಪುಗೊಳ್ಳುತ್ತದೆ. ಅಪಕ್ವಸ್ಥಿತಿಯಲ್ಲಿ ಅವುಗಳಲ್ಲಿ ಶರ್ಕರ ಪಿಷ್ಟಾದಿಗಳು ಅಧಿಕವಾಗಿರುತ್ತವೆ. ಕಿಣ್ವಗಳು ಶರ್ಕರ ಪಿಷ್ಟಾದಿಗಳನ್ನು ಗ್ಲಿಸರಾಲ್ ಮತ್ತು ಕೊಬ್ಬಿನ ಆಮ್ಲಗಳಿಗಾಗಿ ಪರಿವರ್ತಿಸುವುವು. ಅನಂತರ ಅವು ಕೂಡುವುದರಿಂದ ಗ್ಲಿಸರೈಡುಗಳು ಹುಟ್ಟುವುವು. ಶರ್ಕರ ಪಿಷ್ಟಾದಿಗಳಿಂದ ಕೊಬ್ಬು ಉಂಟಾಗುತ್ತದೆ ಎಂಬ ಸಿದ್ಧಾಂತಕ್ಕೆ ವಿಕಿರಣಶೀಲ ಸಮಸ್ಥಾನಿಗಳ ನೆರವಿನಿಂದ ನಡೆಸಿದ ಪ್ರಯೋಗಗಳು ಬೆಂಬಲ ನೀಡುತ್ತವೆ. ವಿಕಿರಣಶೀಲ ಸಮಸ್ಥಾನಿಗಳಿರುವ ಅಸಿಟೇಟ್‌ಯುಕ್ತ ಆಹಾರವನ್ನು ಪ್ರಾಣಿಗಳಿಗೆ ಒದಗಿಸಿದಾಗ ಅವುಗಳ ಊತಕಗಳಲ್ಲಿ ಅಸಿಟೇಟು ಕೊಬ್ಬಿನ ಆಮ್ಲಗಳಿಗೆ ಮಾರ್ಪಡುವುದು ಕಂಡುಬಂದಿದೆ. ಕ್ರಿಯೆ ಇನ್ನೂ ಮುಂದುವರಿದು ಅಸಿಟೇಟು ಕೊಲೆಸ್ಟೆರಾಲ್ ಆಗುವುದೂ ವ್ಯಕ್ತವಾಗಿದೆ.

ನೈಸರ್ಗಿಕ ಕೊಬ್ಬುಗಳಲ್ಲಿರುವ ಆಮ್ಲಗಳಲ್ಲೆಲ್ಲ ಸಮಸಂಖ್ಯೆಯ ಇಂಗಾಲದ ಪರಮಾಣು ಗಳಿರುವುದು ಗಮನಾರ್ಹ. ಅದರಲ್ಲೂ 18 ಇಂಗಾಲದ ಪರಮಾಣುಗಳಿರುವ ಆಮ್ಲಗಳೇ ಹೆಚ್ಚಾಗಿರುವುದು ಮತ್ತೊಂದು ವೈಶಿಷ್ಟ್ಯ. ಆದ್ದರಿಂದ ಮೂರು ಗ್ಲೂಕೋಸ್ ($C_6H_{12}O_6$)ಅಣುಗಳಿಂದ ಅಥವಾ ಪಾಲಿಸ್ಯಾಕರೈಡುಗಳ $C_{18}$ ಚೌಕಟ್ಟಿನಿಂದ ಕೊಬ್ಬು ಆಗಿರಬಹುದೆಂದು ಒಮ್ಮೆ ಭಾವಿಸಲಾಗಿತ್ತು. ಆದರೆ ಎರಡು ಇಂಗಾಲದ ಪರಮಾಣುಗಳಿರುವ ಅಸಿಟೇಟ್ ಘಟಕಗಳಿಂದ ಕೊಬ್ಬು ಆಗಿರುವುದು ಹೆಚ್ಚು ಸಂಭವನೀಯ. ಸಸಾರಜನಕಗಳು ಅಥವಾ ಶರ್ಕತ ಪಿಷ್ಟಾದಿಗಳ ಉತ್ಕರ್ಷಣದಿಂದ ಅಸಿಟೇಟ್ ಆಗಬಹುದಾದ್ದರಿಂದ ಈ ಸಿದ್ಧಾಂತ ಆಕರ್ಷಕವಾಗಿದೆ. ಪ್ರಾಯಶಃ ಪಿತ್ತಜನಕಾಂಗದಲ್ಲಿ ಹೈಡ್ರೊಜನ್ ಸಂಯೋಗ ಮತ್ತು ವಿಯೋಗದ ಹಲವು ಕ್ರಿಯೆಗಳ ಫಲವಾಗಿ ಅಸಿಟೇಟಿನಿಂದಾದ ಕೊಬ್ಬುಗಳಲ್ಲಿ ದ್ವಿಬಂಧಗಳು ಮೂಡುವುವು. ಮುಂದೆ ಇತರ ಊತಕಗಳಲ್ಲಿ ಉತ್ಕರ್ಷಿತವಾಗಲು ಇದು ಅನುಕೂಲ.

ಸಂಗ್ರಹಿತ ಕೊಬ್ಬನ್ನು ಸಸ್ಯ ಭ್ರೂಣಗಳು ಹೇಗೆ ಬಳಸಿಕೊಳ್ಳುವುವು ಎಂಬುದು 1960 ರ ವರೆಗೆ ಪೂರ್ತಿಯಾಗಿ ವಿವರಿಸಲ್ಪಟ್ಟಿರಲಿಲ್ಲ. ಮೊಳೆಯುತ್ತಿರುವ ಭ್ರೂಣಗಳಲ್ಲಿ ಕಿಣ್ವಗಳು ಕೊಬ್ಬನ್ನು ಜಲವಿಶ್ಲೇಷಣೆಗೊಳಿಸಿ ಗ್ಲಿಸರಾಲ್ ಮತ್ತು ಕೊಬ್ಬಿನ ಆಮ್ಲಗಳಾಗಿ ಪರಿವರ್ತಿಸುವುವು ಎಂದು ಈಗ ಗೊತ್ತಾಗಿದೆ. ಇವು ಎರಡು ಅಥವಾ ನಾಲ್ಕು ಇಂಗಾಲದ ಪರಿಮಾಣುಗಳನ್ನು ಒಳಗೊಂಡ ಉತ್ಕರ್ಷಣ ವಿಧಿಗಳ ಮೂಲಕ ಅಂತಿಮವಾಗಿ ಇಂಗಾಲದ ಡೈಆಕ್ಸೈಡ್ ಮತ್ತು ನೀರಾಗಿ ಹೋಗುತ್ತವೆ.

ಪ್ರಾಣಿಗಳ ಆಹಾರಪಚನಪಥದಲ್ಲಿ ಲೈಪೇಸ್ ಎಂಬ ಕಿಣ್ವವಿರುವ ಪಚನಕಾರಿ ರಸಗಳಿರುತ್ತವೆ. ಇವು ಗ್ಲಿಸರೈಡುಗಳನ್ನು ಭಾಗಶಃ ಜಲವಿಶ್ಲೇಷಣೆ ಮಾಡಿ, ಎಮಲ್ಷನ್ ಸ್ಥಿತಿಗೆ ಬರುವುವು. ಉತ್ಪತ್ತಿಯಾದ ಗ್ಲಿಸರಾಲ್, ಕೊಬ್ಬಿನ ಆಮ್ಲಗಳು, ಉಳಿದ ಗ್ಲಿಸರೈಡುಗಳು ಮತ್ತು ಭಾಗಶಃ ಗ್ಲಿಸರೈಡುಗಳು, ಕರುಳಿನ ಪೊರೆಯ ಮೂಲಕ ಹೀರಲ್ಪಡುವುವು; ಮತ್ತೆ ಭಾಗಶಃ ಪುನಃ ಸಂಯೋಜಿಸಿ ಗ್ಲಿಸರೈಡುಗಳು ಮತ್ತು ಫಾಸ್ಫೊಲೈಪಿಡ್ಡುಗಳಾಗುವುವು. ಸೂಕ್ಷ್ಮ ಹನಿಗಳಾಗಿ ರಕ್ತದಲ್ಲಿ ಸೇರಿ, ಸಂಗ್ರಹ ಅಥವಾ ವಿನಿಯೋಗ ಕ್ಷೇತ್ರಗಳಿಗೆ ರವಾನೆಯಾಗುವುವು.

ಒಂದು ಪ್ರಾಣಿಯಲ್ಲಿರುವ ಕೊಬ್ಬಿನ ಗುಣ ಆ ಪ್ರಾಣಿ ಸೇವಿಸಿದ ಆಹಾರದಲ್ಲಿದ್ದ ಕೊಬ್ಬಿನ ಗುಣವನ್ನು ಅವಲಂಬಿಸಿದೆ. ಉದಾಹರಣೆಗೆ ಕಾಡ್ ಲಿವರ್ ಎಣ್ಣೆಯಿರುವ ಆಹಾರ ತಿಂದ ಹಂದಿಯ ಕೊಬ್ಬು ಮೃದುವಾಗಿಯೂ ಕೊಬ್ಬರಿ ಎಣ್ಣೆಯಿರುವ ಆಹಾರವನ್ನು ಒದಗಿಸಿದ ಹಸುವಿನ ಹಾಲಿನ ಕೊಬ್ಬು ಅದಕ್ಕೆ ಅನುಗುಣವಾಗಿಯೂ ಇರುತ್ತದೆ. ಆದ್ದರಿಂದ ಪ್ರಾಣಿಗಳ ಕೊಬ್ಬು ಕಿಣ್ವಗಳ ಸಹಾಯದಿಂದ ಸಂಯೋಜಿತವಾಗಿರಬಹುದು; ಅಥವಾ ಆಹಾರದಿಂದ ರೂಪಿತವಾಗಿರಬಹುದು. ಪರಿಣಾಮವಾಗಿ ಪ್ರಾಣಿಗಳ ಕೊಬ್ಬಿನಲ್ಲಿ ಈ ಎರಡು ಅಂಶಗಳೂ ಕೂಡಿರಬಹುದು. ಪ್ರಾಣಿದೇಹದಲ್ಲಿ ಸಂಯೋಜಿತವಾದ ಕೊಬ್ಬು ಅದರ ಜಾತಿಯನ್ನು ಅವಲಂಬಿಸಿದ್ದರೆ ಆಹಾರದಿಂದ ಪುನಾ ರೂಪಿತವಾದ ಕೊಬ್ಬು ಅದಕ್ಕೆ ಅನುಗುಣವಾಗಿರುವುದು ಸ್ವಾಭಾವಿಕ.

ಮಾನವದೇಹದಲ್ಲಿ ಕೊಬ್ಬಿನ ಪಚನ ಮತ್ತು ವಿನಿಯೋಗ: ನಮ್ಮ ಆಹಾರದಲ್ಲಿರುವ ಕೊಬ್ಬು ಬಾಯಿಯಲ್ಲಿ ವಿಭಜಿಸುವುದಿಲ್ಲ. ಲಾಲಾರಸ ಈ ಕೆಲಸ ಮಾಡಲಾರದು. ಸ್ವಲ್ಪಮಟ್ಟಿಗೆ ಜಠರರಸ ಈ ಕಾರ್ಯ ನಿರ್ವಹಿಸುತ್ತದೆ. ಸಣ್ಣಕರುಳಿನ ರಸಕ್ಕೆ ಕ್ಷಾರೀಯ ಸನ್ನಿವೇಶ ಅಗತ್ಯ. ಆದ್ದರಿಂದ ಇಲ್ಲಿ ಗಣನೀಯ ಪ್ರಮಾಣದ ಕೊಬ್ಬು, ಅದರ ಆಮ್ಲ ಮತ್ತು ಗ್ಲಿಸರಾಲುಗಳಿಗೆ ಜಲವಿಶ್ಲೇಷಣೆಯಾಗುತ್ತದೆ. ಕೊಬ್ಬನ್ನು ಜಲವಿಶ್ಲೇಷಣೆ ಮಾಡುವ ಕಿಣ್ವಗಳಿಗೆ ಲೈಪೇಸುಗಳೆಂದು ಹೆಸರು. ಮಾನವದೇಹಕ್ಕೆ ಮುಖ್ಯವಾಗಿ ಎರಡು ಲೈಪೇಸುಗಳು ಬೇಕು. ಮೊದಲನೆಯದು ಸ್ಟೆಪ್ಸಿನ್. ಇದು ಮೇದೋಜೀರಕದಲ್ಲಿ ಹುಟ್ಟುತ್ತದೆ. ಯಕೃತ್ತಿನಲ್ಲಿ (ಲಿವರ್) ಉತ್ಪಾದಿಸಲ್ಪಟ್ಟು ಪಿತ್ತಕೋಶದ (ಗಾಲ್ ಬ್ಲ್ಯಾಡರ್) ದಾಸ್ತಾನಾಗುವ ಕೆಲವು ವಸ್ತುಗಳಿವೆ. ಇವೇ ಪಿತ್ತಲವಣಗಳು (ಬೈಲ್ ಸಾಲ್ಟ್ಸ್). ಇವು ಸಾಬೂನಿನಂಥ ವಸ್ತುಗಳಾದ್ದರಿಂದ ಕೊಬ್ಬನ್ನು ಎಮಲ್ಷನ್ ಸ್ಥಿತಿಗೆ ತಂದು ಕರುಳಿನ ರಸದೊಡನೆ ಮಿಳಿತವಾಗುವಂತೆಯೂ ಕರುಳಿನ ಭಿತ್ತಿಗಳಲ್ಲಿ ಕೊಬ್ಬಿನೊಡನೆ ವರ್ತಿಸಬಲ್ಲ ಎರಡನೆಯ ಮುಖ್ಯ ಕಿಣ್ವ ಉತ್ಪತ್ತಿಯಾಗುವಂತೆಯೂ ಮಾಡುತ್ತವೆ. ಜಲವಿಶ್ಲೇಷಣೆಯ ಉತ್ಪನ್ನಗಳಾದ ಗ್ಲಿಸರಾಲ್ ಮತ್ತು ಕೊಬ್ಬಿನ ಆಮ್ಲಗಳನ್ನು ಕರುಳಿನ ಭಿತ್ತಿಗಳು ಹೀರಿಕೊಳ್ಳುತ್ತವೆ. ಅವು ಪುನಃ ಸಂಯೋಜಿಸಿ ಕೊಬ್ಬಾಗುತ್ತವೆ. ಆದರೆ ಮೂಲ ಆಹಾರದಲ್ಲಿದ್ದ ಕೊಬ್ಬೇ ಆಗಬೇಕೆಂಬ ನಿಯಮವಿಲ್ಲ. ಸಂಯೋಜಿತ ಕೊಬ್ಬುಗಳು ರಕ್ತ ಮತ್ತು ದುಗ್ಧರಸದ (ಲಿಂಫ್) ಮೂಲಕ ದೇಹದ ನಾನಾ ಭಾಗಗಳಿಗೆ ರವಾನೆಯಾಗುತ್ತದೆ. ಕೊಬ್ಬಿನ ಕೋಶಗಳಲ್ಲಿ ಅವು ಸಂಗ್ರಹವಾಗಬಹುದು. ಹೀಗೆ ಕೂಡಿದ ಕೊಬ್ಬು ನಿಷ್ಕ್ರಿಯವಾಗಿ ಉಳಿಯುವುದಿಲ್ಲ. ಅವ್ಯಾಹತವಾಗಿ ರೂಪಾಂತರ ಹೊಂದುತ್ತಿರುತ್ತದೆ.

ಕೊಬ್ಬುಗಳ ಉತ್ಕರ್ಷಣ: ದೇಹದಲ್ಲಿ ಕೊಬ್ಬುಗಳು ಇಂಗಾಲದ ಡೈಆಕ್ಸೈಡ್ ಮತ್ತು ನೀರಿಗೆ ಉತ್ಕರ್ಷಿತವಾಗಿ ಶಕ್ತಿನೀಡುತ್ತವೆ. ಗ್ಲಿಸರಾಲ್ ಮತ್ತು ಕೊಬ್ಬಿನ ಆಮ್ಲಗಳಿಗೆ ಜಲವಿಶ್ಲೇಷಿತವಾಗುವುದು ಮೊದಲ ಹಂತ. ಮುಂದೆ ಇವು ಉತ್ಕರ್ಷಣ ಹೊಂದುತ್ತವೆ. ಯಕೃತ್ತಿನಲ್ಲಿ ಗ್ಲಿಸರಾಲು ಗ್ಲೈಕೊಜನ್ನಾಗಿ ಪರಿವರ್ತಿತವಾಗಬಹುದು. ಇಲ್ಲವೇ ಶರ್ಕರಪಿಷ್ಟಾದಿಗಳಂತೆ ಮಧ್ಯವರ್ತಿಗಳ ಮೂಲಕ ಉತ್ಕರ್ಷಣ ಹೊಂದಬಹುದು.

ಬೀಟಾ ಉತ್ಕರ್ಷಣ (ನೂಪ್): ಕೊಬ್ಬಿನ ವಿನಿಯೋಗ ಮುಖ್ಯವಾಗಿ ಅದರಲ್ಲಿರುವ ಆಮ್ಲಗಳ ವಿನಿಯೋಗಕ್ಕೆ ಸಂಬಂಧಿಸಿದೆ. ಇವು ಪಿತ್ತಜನಕಾಂಗ ಮತ್ತು ಇತರ ಊತಕಗಳಲ್ಲಿ ಉತ್ಕರ್ಷಿತವಾಗುವುವು. ಈ ಉತ್ಕರ್ಷಣ ವಿಧಿಯಲ್ಲಿ ನಾಲ್ಕು ಹಂತಗಳಿದ್ದು â (ಬೀಟಾ) ಇಂಗಾಲದ ಪರಮಾಣು ಮುಖ್ಯ ಪಾತ್ರವಹಿಸುತ್ತದೆ. ಎರಡು ಇಂಗಾಲದ ಪರಮಾಣುಗಳಿರುವ ಅಸಿಟಿಕ್ ಆಮ್ಲ ಹಂತ ಹಂತವಾಗಿ ತೆಗೆಯಲ್ಪಡುತ್ತದೆ.

1 ಮೊದಲನೆಯ ಹಂತದಲ್ಲಿ áâ ಸ್ಥಾನಗಳಿಂದ ಹೈಡ್ರೊಜನ್ ತೆಗೆಯಲ್ಪಟ್ಟು áâ ಅಪರ್ಯಾಪ್ತ ಆಮ್ಲ ಉಂಟಾಗುತ್ತದೆ.




2 ಈಗ ಅಪರ್ಯಾಪ್ತ ಆಮ್ಲಕ್ಕೆ ನೀರು ಕೊಡುತ್ತದೆ.




3 ಬೀಟಾ ಹೈಡ್ರಾಕ್ಸಿ ಆಮ್ಲ ಹೈಡ್ರೋಜನನ್ನು ತಳೆದುಕೊಂಡು ಬೀಟಾ ಕೀಟಾನಿಕ್ ಆಮ್ಲವಾಗುವುದು.




4 ಬೀಟಾ ಕೀಟಾನಿಕ್ ಆಮ್ಲ ಶಿಥಿಲವಾಗಿ 16 ಇಂಗಾಲದ ಪರಮಾಣುಗಳಿರುವ ಪಾಮಿಟಿಕ್ ಮತ್ತು 2 ಇಂಗಾಲದ ಪರಮಾಣುಗಳಿರುವ ಅಸಿಟಿಕ್ ಆಮ್ಲಗಳಾಗುವುದು.




ಮೇಲ್ಕಂಡ ಕ್ರಿಯೆಗಳು ಪುನರಾವರ್ತನ ಕ್ರಮದಲ್ಲಿ ನಡೆದು ಪ್ರತಿಯೊಂದು ಸಲವೂ ಎರಡು ಇಂಗಾಲದ ಪರಮಾಣುಗಳು ಅಸಿಟಿಕ್ ಆಮ್ಲದ ರೂಪದಲ್ಲಿ ಕಳೆಯುತ್ತ ಹೋಗುವುವು. ನೀಳವಾದ ಕೊಬ್ಬಿನ ಆಮ್ಲದ ಸರಣಿ ತುಂಡಾಗುತ್ತ ಬರುವುದು. ಒಂದೊಂದು ಶ್ರೇಣಿಯಲ್ಲಿ ಉತ್ಪತ್ತಿಯಾದ ಅಸಿಟಿಕ್ ಆಮ್ಲವೂ ಅಸಿಟೈಲ್ ಸಹಕಿಣ್ವ ೦ ರೂಪದಲ್ಲಿ ಕ್ರೆಬ್ಸ್ ಚಕ್ರವನ್ನು ಪ್ರವೇಶಿಸಿ ಅಂತಿಮವಾಗಿ ಇಂಗಾಲದ ಡೈಆಕ್ಸೈಡ್ ಮತ್ತು ನೀರಿಗೆ ಉತ್ಕರ್ಷಿತವಾಗುವುದು.

$$CH_3COOH \xrightarrow{4[0]} 2CO_2+2H_2O$$

ಕೊಬ್ಬಿನ ಆಮ್ಲಗಳಲ್ಲಿ ಸಮ ಸಂಖ್ಯೆಯ ಇಂಗಾಲದ ಪರಮಾಣುಗಳು ಇರುವುವಷ್ಟೆ. ಹೀಗಾಗಿ ಅಂತ್ಯಪೂರ್ವಘಟ್ಟದಲ್ಲಿ ನಾಲ್ಕು ಇಂಗಾಲದ ಪರಮಾಣುಗಳಿರುವ ಬ್ಯುಟರಿಕ್ ಆಮ್ಲ ಪ್ರಾಪ್ತವಾಗುವುದು. ಅದು ಪುನಃ ಮೇಲ್ಕಂಡ ನಾಲ್ಕು ಹಂತದ ಕ್ರಿಯೆಗೆ ಒಳಗಾಗುವುದು.




ಮಧುಮೇಹ ರೋಗಸ್ಥಿತಿಯಲ್ಲಿ ಪಿತ್ತಜನಕಾಂಗಕ್ಕೆ ಅದರ ಶಕ್ತಿಮೂಲವಾದ ಶರ್ಕರ ಪಿಷ್ಟಾದಿಗಳು ಒದಗದೆ ಸೊರಗುವುದು. ಆಗ ದೇಹ ಕೊಬ್ಬನ್ನು ಉತ್ಕರ್ಷಿಸಿ ಅಗತ್ಯಶಕ್ತಿಯನ್ನು ಪಡೆಯಲು ಹವಣಿಸುತ್ತದೆ. ಈ ಸಂದರ್ಭದಲ್ಲಿ ಬೀಟ ಹೈಡ್ರಾಕ್ಸಿ ಬ್ಯುಟರಿಕ್ ಆಮ್ಲ ಅಸಿಟೋ ಅಸಿಟಿಕ್‌ಆಮ್ಲ ಮತ್ತು ಅಸಿಟೋನುಗಳು (ಇವುಗಳಿಗೆ ಅಸಿಟೋನ್ ಕಾಯಗಳು ಎನ್ನುತ್ತಾರೆ) ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗಿ ರೋಗಿಯ ಮೂತ್ರದಲ್ಲಿ ವಿಸರ್ಜಿಸಲ್ಪಡುವುವು. ರೋಗಿಯ ಉಸಿರಿನಲ್ಲೂ ಅಸಿಟೋನಿನ ಮಧುರವಾಸನೆ ಹತ್ತುವುದು. ಕೊಬ್ಬಿನ ಆಮ್ಲಗಳ ಬೀಟಾ ಉತ್ಕರ್ಷಣ ಸಿದ್ಧಾಂತಕ್ಕೆ ಇದೊಂದು ಸಾಕ್ಷಿಯಾಗಿದೆ.

ಕೀಟೋಸಿಸ್: ಆರೋಗ್ಯಸ್ಥಿತಿಯಲ್ಲೂ ಅಲ್ಪ ಪ್ರಮಾಣ ಅಸಿಟೋನ್ ಕಾಯಗಳು ಮೂತ್ರದಲ್ಲಿರಬಹುದು. ಆಹಾರದಲ್ಲಿ ಕೊಬ್ಬು ಹೆಚ್ಚಾಗಿದ್ದರೆ ಅಥವಾ ಮಧುಮೇಹ ರೋಗವಿದ್ದಾಗ ಅವುಗಳ ಅಂಶ ಗಣನೀಯವಾಗಿ ಏರುವುದು. ಮಾಂಸಖಂಡಗಳ ಊತಕಗಳಲ್ಲಿ, ಅವು ಸಾಮಾನ್ಯವಾಗಿ ವಿನಿಯೋಗವಾಗುವುವು. ಆದರೆ ನೂತನ ಪರಿಸ್ಥಿತಿಯಲ್ಲಿ

ಮಾಂಸಖಂಡಗಳು ಹೆಚ್ಚುವರಿ ಅಸಿಟೋನ್ ಕಾಯಗಳನ್ನು ಉಪಯೋಗಿಸಿಕೊಳ್ಳಲಾರದೆ ಉಳಿಸಿಬಿಡುವುವು. ಅವು ರಕ್ತಗತವಾಗಿ ಕೀಟೋಸಿಸ್ ರೋಗ ಪ್ರಾಪ್ತವಾಗುವುದು. ಅಸಿಟೊ ಅಸಿಟಿಕ್ ಮತು ಬೀಟಾ ಹೈಡ್ರಾಕ್ಸಿಬ್ಯುಟಿರಿಕ್ ಆಮ್ಲಗಳನ್ನು ಲವಣಗಳ ರೂಪದಲ್ಲಿ ಹೊರದೂಡಲು ದೇಹ ಯತ್ನಿಸುವುದು. ಇದಕ್ಕಾಗಿ ದೇಹದ ಎಲ್ಲ ಭಾಗಗಳಿಂದ ಕ್ಷಾರಾಂಶ ಬಳಸಲ್ಪಡುವುದು. ಪರಿಣಾಮವಾಗಿ ರಕ್ತದ ಕ್ಷಾರೀಯತೆ ತಗ್ಗಿ ಆಮ್ಲೀಯತೆ (ಆಸಿಡೋಸಿಸ್) ಎಂಬ ಸ್ಥಿತಿ ಏರ್ಪಡುವುದು.

ಹೀಗೆ ಕೊಬ್ಬಿನ ಆಮ್ಲದ ಭಾಗ ಕೀಟೋನ್ ಕಾಯಗಳ ಜನಕನಾದರೆ ಗ್ಲಿಸರಾಲ್ ಭಾಗ (ಟ್ರಯೋಸ್) ಶರ್ಕರ ಪಿಷ್ಟಾದಿಗಳಂತೆ ವರ್ತಿಸಿ ಅವುಗಳ ಜನನವನ್ನು ವಿರೋಧಿಸುವುದು. ಒಟ್ಟಿನಲ್ಲಿ ರಕ್ತದ ಕ್ಷಾರೀಯತೆಗೆ ಧಕ್ಕೆ ಬರುವುದಿಲ್ಲ.

ಮೇಣಗಳು: ಎಣ್ಣೆ ಎಂಬ ಪದದಂತೆ ಇದು ಸಹ ಅನಿಶ್ಚಯ ಅರ್ಥವುಳ್ಳ ಪದ. ರಾಸಾಯನಿಕ ದೃಷ್ಟಿಯಿಂದ ಇವೂ ಎಸ್ಟರುಗಳು. 24–36 ಇಂಗಾಲದ ಪರಮಾಣುಗಳಿರುವ ನೀಳ ಸರಣಿ ಆಮ್ಲಗಳೂ 16–36 ಇಂಗಾಲದ ಪರಮಾಣುಗಳಿರುವ ನೀಳ ಸರಣಿ ಮಾನೊಹೈಡ್ರಿಕ್ ಆಲ್ಕೊಹಾಲುಗಳೂ ಪಾಲ್ಗೊಂಡಿರುತ್ತವೆ. ವ್ಯಾವಹಾರಿಕವಾಗಿ ಮುಟ್ಟಿದರೆ ಜಾರುವ ಸ್ಪರ್ಶಭಾವವುಳ್ಳ ಮತ್ತು ಸುಲಭವಾಗಿ ದ್ರವಿಸುವ ವಸ್ತುಗಳಿಗೆ ಮೇಣಗಳೆಂದು ಹೆಸರು. ಹೀಗಾಗಿ ಎಸ್ಟರುಗಳಲ್ಲದ ಕೆಲವು ವಸ್ತುಗಳೂ ವಾಸ್ತವವಾಗಿ ಕೊಬ್ಬಾಗಿರುವ ವಸ್ತುಗಳೂ ಮೇಣಗಳೆಂದು ಕರೆಯಲ್ಪಡುತ್ತಿವೆ. ಉದಾಹರಣೆಗೆ, ಪ್ಯಾರಫಿನ್ ಮೇಣ ಹೈಡ್ರೊಕಾರ್ಬನ್ನುಗಳ ಮಿಶ್ರಣ. ಕಾರ್ಬೊ ಮೇಣ ಸಂಯೋಜಿತ ಪಾಲಿ ಈಥರ್. ಜಪಾನ್ ಮೇಣ ಒಂದು ಕೊಬ್ಬು. ಜೇನು ಮೇಣ ಮಾತ್ರ ನಿಜವಾದ ಮೇಣ. ಅದು ಪ್ರಧಾನವಾಗಿ ಮಿರಿಸಿಲ್ ಪಾಮಿಟೇಟ್ ಅದರ ಅಣುಸೂತ್ರ $C_{15}H_{31}.COOC_{31}H_{63}$ ನೈಸರ್ಗಿಕ ಮೇಣಗಳಲ್ಲಿರುವ ಆಲ್ಕೊಹಾಲುಗಳು ಮತ್ತು ಆಮ್ಲಗಳನ್ನು ಕೆಳಗೆ ಪಟ್ಟಿಮಾಡಲಾಗಿದೆ.

| ಹೆಸರು | ಸೂತ್ರ | ಮೇಣ |
|---|---|---|
| ಪಾಮಿಟಿಕ್ ಆಮ್ಲ | $C_{15}H_{31}.COOH$ | ಜೇನು ಮೇಣ, ಜಪಾನ್ ಮೇಣ ತಿಮಿಗೊಬ್ಬು (ಸ್ಪರ್ಮಸೆಟಿ) |
| ಸೆರೋಟಿಕ್ ಆಮ್ಲ | $C_{25}H_{51}.COOH$ | ಜೇನು ಮೇಣ, ಕಾರ್ನೌಬ, ಮಾಂಟನ್ ಮೇಣ |
| ಮೆಲಿಸಿಕ್ ಆಮ್ಲ | $C_{28}H_{57}.COOH$ | ಜೇನುಮೇಣ, ಮಾಂಟನ್ ಮೇಣ |
| ಸೀಟೈಲ್ ಆಲ್ಕೊಹಾಲ್ | $C_{16}H_{33}.OH$ | ತಿಮಿಗೊಬ್ಬು, ಕಡಲಹಂದಿ ಎಣ್ಣೆ |
| ಆಕ್ಟಡೆಕೈಲ್ ಆಲ್ಕೊಹಾಲ್ | $C_{18}H_{37}.OH$ | ತಿಮಿಗೊಬ್ಬು |
| ಓಲಿಯಲ್ ಆಲ್ಕೊಹಾಲ್ | $C_{18}H_{35}.OH$ | ತಿಮಿಗೊಬ್ಬು, ಕಡಲಹಂದಿ ಎಣ್ಣೆ |
| ಸೀರೈಲ್ ಆಲ್ಕೊಹಾಲ್ | $C_{26}H_{53}.OH$ | ಕೀಟ ಮೇಣ |
| ಮಿರಿಸಿಲ್ ಆಲ್ಕೊಹಾಲ್ | $C_{31}H_{63}.OH$ | ಜೇನುಮೇಣ, ಕಾರ್ನಾಬ ಮೇಣ |
| ಕೊಲೆಸ್ಟರಾಲ್ | – | ಉಣ್ಣೆಯ ಮೇಣ |

ಮೇಣಗಳು ಜೀವಕೋಶದ ಅಂಗಾಂಶವಾಗಿರುವುದು ವಿರಳ. ಬದಲು ಎಲೆಗಳ ಹೊರಪದರದಲ್ಲಿ ಮತ್ತು ಹಣ್ಣುಗಳ ಮೇಲಿದ್ದುಕೊಂಡು, ಅವುಗಳಿಗೆ ರಕ್ಷಾಕವಚವಾಗಿ ಕಾಪಾಡುವುವು. ಕೊಬ್ಬುಗಳನ್ನು ಸಾಬೂನೀಕರಿಸುವಷ್ಟು ಸುಲಭವಾಗಿ ಮೇಣಗಳನ್ನು ಜಲವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ. ಅವುಗಳ ದ್ರವೀಕರಣ ಬಿಂದುಗಳು 35°–100° ಸೆಂ.ಗ್ರೇ. ಉಷ್ಣತಾ ಮಿತಿಯಲ್ಲಿರುವುದರಿಂದ ಸುಭದ್ರವಾದ ಮತ್ತು ಮಿರುಗುವ ಪೊರೆಗಳನ್ನು ನೀಡಬಲ್ಲವು. ಆದ್ದರಿಂದ ಅನೇಕ ಬಗೆಯ ಮೆರುಗುಗಳಲ್ಲಿ ಅವು ಉಪಯೋಗಿಸಲ್ಪಡುತ್ತಿವೆ. ಇತರ ಭೌತಗುಣಗಳಲ್ಲಿ ಅವು ಕೊಬ್ಬನ್ನು ಹೋಲುತ್ತವೆ. ಕೊಬ್ಬುಗಳು ಲೀನವಾಗುವ ದ್ರವಗಳಲ್ಲೇ ಇವೂ ಲೀನವಾಗುತ್ತವೆ. ಕಾಗದದ ಮೇಲೆ ಜಿಡ್ಡಿನ ಗುರುತು ಬಿಡುತ್ತವೆ.

ಮೇಣಗಳಲ್ಲಿರುವ ಕೊಬ್ಬಿನ ಆಮ್ಲಗಳು ಬಲುಪಾಲು ಪರ್ಯಾಪ್ತವಾದುವು. ಲಾರಿಕ್ ಆಮ್ಲದಿಂದ ಹಿಡಿದು ಆಕ್ಟಟ್ರೈ ಅಕಾಂಡನೋಯಿಕ್ ಆಮ್ಲದ ವರೆಗೆ ($C_{37}H_{75}.COOH$) ಇರುವುದುಂಟು. $C_nH_{2n}+_1OH$ ಶ್ರೇಣಿಯ $C_{12}$-$C_{36}$ ಪರ್ಯಾಪ್ತ ಆಲ್ಕೊಹಾಲುಗಳು ಮೇಣಗಳಲ್ಲಿರುವುದನ್ನು ಗುರುತಿಸಲಾಗಿದೆ. ಉಣ್ಣೆಯ ಮೇಣದಲ್ಲಿರುವಂತೆ ಕೊಲೆಸ್ಟರಾಲ್ ಮತ್ತು ಸಂಬಂಧಿಗಳಿರಬಹುದು. ಪಾರ್ಶ್ವಸರಣಿ ರಚನೆಯುಳ್ಳ ಆಮ್ಲ ಮತ್ತು ಆಲ್ಕೊಹಾಲುಗಳನ್ನು ಕೆಲವು ಮೇಣಗಳಿಂದ ಪಡೆಯಲಾಗಿದೆ. ಆದರೆ ಈ ಆಲ್ಕೊಹಾಲುಗಳ ಪ್ರಮಾಣ ಅಲ್ಪ.

ಸಸ್ಯಮೇಣಗಳ ಪೈಕಿ ಕೈಗಾರಿಕಾ ಮಹತ್ತ್ವವಿರುವ ಕಾರ್ನೌಬ ಮೇಣವನ್ನು ಗಣನೀಯ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ. ಬ್ರೆಜಿಲ್ ದೇಶದಲ್ಲಿ ಬೆಳೆಯುವ ಪಾಮ್‌ಗಿಡದ ಎಲೆಗಳಿಂದ ಇದು ದೊರೆಯುತ್ತದೆ. ಇದು ಬಲು ಗಟ್ಟಿ. ಚೆನ್ನಾಗಿ ಮೆರಗು ಸ್ವೀಕರಿಸುವುದ ರಿಂದ ಹೊಳಪು ನೀಡುವ ವಸ್ತುಗಳಲ್ಲಿ ಬಳಕೆಯಾಗುತ್ತದೆ. ಟೆಕ್ಸಸ್ ಮತ್ತು ಮೆಕ್ಸಿಕೋ ದೇಶಗಳಲ್ಲಿ ವ್ಯಾಪಕವಾಗಿ ಬೆಳೆಯುವ ಕ್ಯಾಂಡೆಲಿಲ ಸಸ್ಯದಿಂದಲೂ ಇಂಥದೇ ಮೇಣ ದೊರೆಯುತ್ತದೆ. ಕಬ್ಬಿನ ಜಲ್ಲೆ ಮತ್ತು ಎಲೆಗಳಿಂದಲೂ ಒಂದು ವಿಧವಾದ ಮೇಣ ಸಿಕ್ಕುತ್ತದೆ. ಇದರಲ್ಲಿ ಅನೇಕ ಕಶ್ಮಲಗಳಿರುವುದರಿಂದ ಕಪ್ಪು ಛಾಯೆ ಹೊಂದಿರುತ್ತದೆ. ಇದನ್ನೂ ಮೆರಗುಗಳಲ್ಲಿ ಬಳಸುವುದುಂಟು. ಕ್ಯೂಟಿಕಲ್ ಮೇಣವಿರುವುದರಿಂದಲೇ ಸೇಬಿನ ಹಣ್ಣಿನ ಮೇಲ್ಮೈ ಅಷ್ಟು ನುಣುಪಾಗಿದ್ದು ಹೊಳೆಯುವುದು.

ಪ್ರಾಣಿಗಳ ಮೇಣದಲ್ಲಿ ಮುಖ್ಯವಾದುದೆಂದರೆ ಜೇನುಮೇಣ. ಇದು ಸಸ್ಯಮೇಣಗಳಿಗಿಂತ ಮೃದು. ಆದ್ದರಿಂದ ಮೆರಗುಗಳಲ್ಲಿ ಬಳಸಲು ಯೋಗ್ಯವಲ್ಲ. ಆದರೆ ತೇವ ನಿರೋಧಕಗಳನ್ನು ಇದರಿಂದ ತಯಾರಿಸಬಹುದು. ಕುರಿಯ ಉಣ್ಣೆಯನ್ನು ಸಂಸ್ಕರಿಸಿದಾಗ ಬರುವ ಮೇಣವನ್ನು ಶುದ್ಧಮಾಡಿ ಲೇನೊಲಿನ್ ಎಂಬ ಹೆಸರಿನಿಂದ ವೈದ್ಯಕೀಯದಲ್ಲಿ ಮತ್ತು ಅಂಗರಾಗಗಳಲ್ಲಿ ಬಳಸುತ್ತಿದ್ದಾರೆ; ಏಕೆಂದರೆ ಅದು ಬಹು ಬೇಗ ನಮ್ಮ ಚರ್ಮಗತವಾಗುತ್ತದೆ. ತಿಮಿಗೊಬ್ಬು ಪ್ರಧಾನವಾಗಿ ಕೀಲೆಣ್ಣೆಯಾಗಿ ವಿನಿಯೋಗವಾಗುವುದು. ಮೇಣಗಳ ಇತರ ಉಪಯೋಗಗ ಳೆಂದರೆ ಮೋಂಬತ್ತಿಗಳು, ಕಾರ್ಬನ್ ಕಾಗದ ಮತ್ತು ಧ್ವನಿಮುದ್ರಿಕೆ ಮಾಡುವ ತಟ್ಟೆಗಳ ತಯಾರಿಕೆ. (ಎಚ್.ಜಿ.ಎಸ್.)

**ಎಣ್ಣೆಮರ:** ಲೆಗ್ಯುಮಿನೋಸಿ ಕುಟುಂಬದ (ಫ್ಯಾಮಿಲಿ) ಒಂದು ಮರ (ಹಾರ್ಡ್‌ವಿಕಿಯ ಪಿನ್ನೇಟ). ವ್ಯಾಪಾರನಾಮ ಪಿನ್ನೇಟ. ನಿತ್ಯಹರಿದ್ವರ್ಣದ ದೊಡ್ಡ ಜಾತಿಯ ಮರ. ಎತ್ತರ 30 ಮೀಟರಷ್ಟು ಆಗಬಹುದು; ಸುತ್ತಳತೆ 4 ಮೀಟರ್ ಹೊಳಪು ಎಲೆಗಳು ದಕ್ಷಿಣ ಕನ್ನಡ, ಕೊಡಗಿನ ಕಾಡುಗಳಲ್ಲಿ ವಿಶೇಷವಾಗಿದೆ. ಚೌಬೀನೆಯಲ್ಲಿ ಮಾಸಲು ಬಿಳುಪಿನ ಬಿಳಿಮರ ಹೆಚ್ಚು. ಕಬ್ಬಿನ ಮರ ಕಂದುಗೆಂಪು. ಇದರಲ್ಲಿ ಒಂದು ಬಗೆಯ ತೈಲರಾಳ ಇದೆ. ಬಿಳಿಮರ ಬಾಳಿಕೆ ಬರುವುದಿಲ್ಲ. ರಕ್ಷಕ ಸಂಸ್ಕರಣೆಯಿಂದ ಮರದ ಬಾಳಿಕೆ ಏರುತ್ತದೆ; ಕೆಚ್ಚು ಚೆನ್ನಾಗಿ ಹದಗೊಳ್ಳುವುದು ಹಾಗೂ ಬಾಳಿಕೆ ಬರುವುದು. ಮರ ಸಾಕಷ್ಟು ಗಡಸು ಮತ್ತು ಗಟ್ಟಿ ಮರಗೆಲಸ ಸುಲಭ. ತೊಲೆ, ತೇರು, ಹೆಂಚು ಹಲಗೆ, ನೆಲಹಲಗೆ ಮತ್ತು ಪೀಠೋಪಕರಣಗಳಿಗೆ ಉಪಯುಕ್ತವಾದುದು. ಕಡೆತದ ಕೆಲಸಗಳಿಗೂ ಬರುತ್ತದೆ. ಆರಿಸಿದ ಚೌಬೀನೆ ಬೀರು ಇತ್ಯಾದಿ ಅಂದದ ಉಪಕರಣಗಳಿಗೂ ಉಪಯುಕ್ತ. (ಎ.ಕೆ.ಎಸ್.)

**ಎತಿರಿಜ್, ಸರ್ ಜಾರ್ಜ್:** 1635–1691. ರೆಸ್ಟೊರೇಷನ್ ಕಾಲದ ನಾಟಕಕಾರ ಹಾಗೂ ನುಡಿಜಾಣ. ನ್ಯಾಯಶಾಸ್ತ್ರದಲ್ಲೂ ತಕ್ಕಮಟ್ಟಿಗೆ ಪರಿಣತ. ಮೇಡನ್ ಹೆಡ್ಡಿನಲ್ಲಿ ಜನಿಸಿದ. ಕಾನ್‌ಸ್ಟಾಂಟಿನೋಪಲಿನಲ್ಲಿ ರಾಜನಿಯೋಗಿಯ ಕಾರ್ಯದರ್ಶಿಯಾಗಿ ಕೆಲಸಮಾಡಿದನಲ್ಲದೆ ತನ್ನ ಕೊನೆಯ ವರ್ಷಗಳನ್ನು ಪಾನ ಪ್ರಣಯಗಳಲ್ಲಿ ಕಳೆದ. ಈತ ಪ್ಯಾರಿಸಿನಲ್ಲಿ ಅಸುನೀಗಿದಂತೆ ತೋರುತ್ತದೆ. ಈತ ಅನೇಕ ರೆಸ್ಟೊರೇಷನ್ ನಾಟಕಗಳನ್ನು ಬರೆದಿದ್ದಾನೆ. ದಿ ಕಾಮಿಕಲ್ ರಿವೆಂಜ್ ಅಥವಾ ಲವ್ ಇನ್ ಎ ಟಬ್, ಷಿ ವುಡ್ ಇಫ್ ಷಿ ಕುಡ್ ಮತ್ತು ದಿ ಮ್ಯಾನ್ ಆಫ್ ಮೋಡ್ ಎಂಬ ನಾಟಕಗಳಲ್ಲಿ ಆಗಿನ ಕಾಲದ ಸಮಾಜವನ್ನು ಬಹಳ ಸೊಗಸಾಗಿ ಚಿತ್ರಿಸಿದ್ದಾನೆ. ಈ ಮೂರು ನಾಟಕಗಳೂ ಆಗಿನ ಕಾಲದಲ್ಲಿ ಬಹು ಜನಪ್ರಿಯವಾಗಿದ್ದವು. ಒಳಸಂಚು, ಗುಪ್ತ ಪ್ರಣಯಗಳ ಬಗ್ಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಥಮ ಬಾರಿಗೆ ನಾಟಕಗಳನ್ನು ಬರೆದ ಕೀರ್ತಿ ಈತನಿಗೆ ಸಲ್ಲುತ್ತದೆ. ಈ ಧಾಟಿಯಲ್ಲೇ ಮುಂದೆ ಷೆರಿಡನ್ ಮತ್ತು ಗೋಲ್ಡ್‌ಸ್ಮಿತ್ ಎಂಬ ನಾಟಕಕಾರರು ತಮ್ಮ ನಾಟಕಗಳನ್ನು ರಚಿಸಿದರು. ಫ್ರೆಂಚ್ ನಾಟಕಕಾರನಾದ ಮೋಲಿಯೇರನ ಪ್ರಭಾವವನ್ನು ಎತಿರಿಜ್‌ನಲ್ಲಿ ಕಾಣಬಹುದು. (ವಿ.ಪಿ.)

**ಎತ್ತಿಗೆ ಯಂತ್ರಗಳು:** ತೂಕವಾದ ಸಾಮಗ್ರಿಯನ್ನು ಒಂದು ಮಟ್ಟದಿಂದ ಇನ್ನೊಂದು ಮಟ್ಟಕ್ಕೆ ಎತ್ತಿ ಅಥವಾ ಇಳಿಸಿ ಇಡಲು ಬಳಸುವ ಯಾಂತ್ರಿಕ ಸಾಧನಗಳು (ಹಾಯಿಸ್ಟಿಂಗ್ ಮೆಷೀನ್ಸ್). ಗಣಿಯ ತಳದಿಂದ ನೆಲಮಟ್ಟಕ್ಕೆ ಅದುರಿನ ಸಾಗಣೆ, ಕಟ್ಟಡ ನಿರ್ಮಾಣಕಾಲದಲ್ಲಿ ಜನ ಮತ್ತು ಸಾಮಗ್ರಿಗಳ ಸಾಗಣೆ. ಹಡಗು, ರೈಲು ಮುಂತಾದೆಡೆಗಳಲ್ಲಿ ಸಾಮಾನು ಸರಂಜಾಮುಗಳ ಪೇರಿಕೆ ಅಥವಾ ಇಳಿಸಿಕೆ–ಇಲ್ಲೆಲ್ಲ ಎತ್ತಿಗೆ ಯಂತ್ರಗಳ ಪಾತ್ರ ಪ್ರಮುಖ ವಾದದ್ದು. ಯಂತ್ರ ಸ್ಥಿರ ಆಧಾರದ ಮೇಲೆ ಭದ್ರವಾಗಿ ತಳವೂರಿರುತ್ತದೆ; ಅದರ ಚಲಿಸುವ ಭಾಗಗಳು ಸಾಗಿಸಬೇಕಾದ ಸಾಮಗ್ರಿಯನ್ನು ಎತ್ತಿ ಸ್ಥಾನಾಂತರಗೊಳಿಸುತ್ತವೆ. ಆದ್ದರಿಂದ ಇಂಥ ಯಂತ್ರಗಳ ಕಾರ್ಯಕ್ಷೇತ್ರ ಸಹಜವಾಗಿಯೇ ಸೀಮಿತವಾಗಿದೆ. ಕ್ರೇನುಗಳು, ಎಲಿವೇಟರುಗಳು ಎತ್ತಿಗೆ ಯಂತ್ರಗಳಿಗೆ ಉದಾಹರಣೆಗಳಾದರೂ ಸಾಮಾನ್ಯವಾಗಿ ಈ ಪದವನ್ನು ಗಣಿಪ್ರದೇಶಗಳಲ್ಲಿ ಬಳಸುವ ಯಾಂತ್ರಿಕ ಸಾಧನಗಳಿಗೆ ಬಳಸುತ್ತಾರೆ.



ಕೋಪ್ ಎತ್ತಿಗೆಯಂತ್ರ : 1. ಸಿಲಿಂಡರ್, 2. ಕೋಪ್‌ರಾಟೆ, 3. ಪಂಜರ

ಎತ್ತಿಗೆ ಯಂತ್ರಗಳಲ್ಲಿ ಎರಡು ವಿಧದವು ಇವೆ–ವರ್ತುಲನಾಳಿ ಎತ್ತಿಗೆ ಯಂತ್ರ, ಕೋಪ್ ಎತ್ತಿಗೆಯಂತ್ರ.

ವರ್ತುಲನಾಳಿಯಲ್ಲಿ ಆವರ್ತಿಸುವ ಒಂದು ದೊಡ್ಡ ಸಿಲಿಂಡರಿದೆ. ಅದನ್ನು ಸುತ್ತಿಕೊಂಡಿರುವ ತಂತಿ ಹಗ್ಗವಿದೆ. ಸಿಲಿಂಡರು ಒಂದು ದಿಶೆಯಲ್ಲಿ ಆವರ್ತಿಸಿದಂತೆ ಅದನ್ನು ತಂತಿಹಗ್ಗ ಸುತ್ತುತ್ತ ಗಿಡ್ಡವಾಗುವುದು. ಪರಿಣಾಮವಾಗಿ ತಂತಿಯ ಬಿಡಿಕೊನೆಗೆ ಲಗತ್ತಿಸಿರುವ ಸಾಮಗ್ರಿ ಮೇಲೆ ಸಾಗುತ್ತದೆ. ವಿರುದ್ಧ ದಿಶೆಯಲ್ಲಿ ಆವರ್ತನೆ ಆದಾಗ ತಂತಿಹಗ್ಗ ಬಿಡುಗಡೆಗೊಳ್ಳುತ್ತ ಉದ್ದವಾಗುವುದು. ಆದ್ದರಿಂದ ಸಾಮಗ್ರಿ ಕೆಳಗೆ ಸಾಗುತ್ತದೆ. ಸಿಲಿಂಡರಿನ ಆವರ್ತನೆಯನ್ನು ಯಾಂತ್ರಿಕ ಶಕ್ತಿಯ ನೆರವಿನಿಂದ ಹತೋಟಿಯಲ್ಲಿ ಇಟ್ಟುಕೊಳ್ಳುತ್ತಾರೆ.

ಕೋಪ್ ಎತ್ತಿಗೆ ಯಂತ್ರದಲ್ಲಿ ವಿದ್ಯುಚ್ಛಕ್ತಿಯ ನೆರವಿನಿಂದ ಆವರ್ತಿಸುವ ಸಿಲಿಂಡರಿದೆ. ಸಿಲಿಂಡರಿಗೆ ತಂತಿಹಗ್ಗ ಸುತ್ತುವುದನ್ನು ತಪ್ಪಿಸಲು ಕೋಪ್ ರಾಟೆಯನ್ನು ಉಪಯೋಗಿಸುತ್ತಾರೆ. ಇಲ್ಲಿ ತಂತಿಹಗ್ಗ ಸಿಲಿಂಡರಿನ ಹಾಗೂ ಅಧಿಕ ಘರ್ಷಣೆ ಒದಗಿಸುವ ಕೋಪ್‌ರಾಟೆಯ ಮೂಲಕ (ಅವುಗಳಿಗೆ ಸುತ್ತದೆ) ಸಾಗುತ್ತದೆ. ಹಗ್ಗಕ್ಕೆ ಎಲ್ಲಿಯೂ ಬಿಡಿಕೊನೆಯಿಲ್ಲ. ಕೋಪ್‌ರಾಟೆಯ ಒಂದೊಂದು ಪಾರ್ಶ್ವದ ಹಗ್ಗದಲ್ಲಿ ಒಂದೊಂದು ಪಂಜರದಂತೆ ಜೋಡಿಸಿದೆ. ಸಿಲಿಂಡರ್ ಒಂದು ದಿಶೆಯಲ್ಲಿ ಆವರ್ತಿಸುವಾಗ ಒಂದು ಪಂಜರ ಮೇಲೂ ಇನ್ನೊಂದು ಪಂಜರ ಕೆಳಗೂ ಹೋಗುತ್ತದೆ; ಎದುರು ದಿಶೆಯಲ್ಲಿ ಆವರ್ತಿಸುವಾಗ ಇದರ ವಿರುದ್ಧ ಚಲನೆ ಉಂಟಾಗುತ್ತದೆ. ಅತಿ ಆಳದ ಮತ್ತು ಅಧಿಕ ಉತ್ಪಾದನ ಸಾಮರ್ಥ್ಯವಿರುವ ಗಣಿಗಳಲ್ಲಿ ಕೋಪ್ ವಿಧಾನ ಬಳಕೆಯಲ್ಲಿದೆ.

ಎತ್ತಿಗೆ ಸಂಕೇತಗಳು: ಗಣಿಕಾಯಿದೆಯ ಪ್ರಕಾರ ಭೂತಳಗಣಿಯ ಪ್ರತಿಮಟ್ಟದಲ್ಲಿಯೂ ಸಂಕೇತ ಸಾಧನಗಳನ್ನು ಅಳವಡಿಸಿರಲೇಬೇಕು. ಎತ್ತಿಗೆ ಕಾರ್ಯ ನಿರ್ವಹಿಸುವವರಿಗೆ (ಟ್ಯಾಂಕ್‌ಮೆನ್ ಎಂದು ಹೆಸರು) ವಿದ್ಯುಚ್ಛಕ್ತಿಯ ನೆರವಿನಿಂದ ಸಾಗುವ ಈ ಸಂಕೇತಗಳು ಪಂಜರದ ಚಲನೆಯನ್ನು ಕುರಿತು ಪ್ರತಿಮಟ್ಟದಲ್ಲಿಯೂ ಉಪಯುಕ್ತ ಸೂಚನೆಗಳನ್ನು ಒದಗಿಸುತ್ತವೆ. *

**ಎತ್ತು:** ಆರ್ಟಿಯೊಡ್ಯಾಕ್ಟೈಲ ವರ್ಗದ, ಬೋವಿಡೆ ಕುಟುಂಬಕ್ಕೆ ಸೇರಿದ, ಮೆಲುಕು ಹಾಕುವ ಸಸ್ತನಿ (ಆಕ್ಸ್). ಮೂಲ ಸ್ಯಾಕ್ಸನ್ ಭಾಷೆಯಲ್ಲಿ ಪಳಗಿಸಿದ ಗಂಡು ದನಕ್ಕೆ ಮಾತ್ರ ಈ ಹೆಸರನ್ನು ಬಳಸಲಾಗುತ್ತಿತ್ತು. ಮೃಗಾಲಯದವರು ಎತ್ತು, ಎಮ್ಮೆ, ಕಾಡೆಮ್ಮೆ, ಕಾಡುದನ ಇವೆಲ್ಲದಕ್ಕೂ ಈ ಪದವನ್ನು ಬಳಸುವು ದುಂಟು. ಕನ್ನಡ ಭಾಷೆಯಲ್ಲಿ ಎತ್ತು ಎಂಬ ಪದವನ್ನು ಹಿಡ ಮಾಡುವ ಹೋರಿ ದನಕ್ಕೆ ಮಾತ್ರ ಬಳಸುವುದು ವಾಡಿಕೆ. ಹಿಡ ಮಾಡುವ ಮುನ್ನ ಅದನ್ನು ಅನೇಕ ದೇಶಗಳಲ್ಲಿ ಹೋರಿ (ಬುಲ್) ಎಂಬ ಪ್ರತ್ಯೇಕ ಹೆಸರಿನಿಂದ ಕರೆಯುತ್ತಾರೆ. ಪ್ರಾಣಿಯನ್ನು ಸುಲಭವಾಗಿ ಪಳಗಿಸಿ ಹದ್ದುಬಸ್ತಿನಲ್ಲಿಟ್ಟುಕೊಂಡು ಕೆಲಸಕ್ಕೆ ಬಳಸಿಕೊಳ್ಳುವುದೂ ಚೆನ್ನಾಗಿ ಬೇಗ ಮೈಕಟ್ಟಿಕೊಳ್ಳುವಂತೆ ಮಾಡುವುದೂ ಹಿಡ ಮಾಡುವುದರ ಉದ್ದೇಶ.

ವ್ಯವಸಾಯದ ಕೆಲಸಕ್ಕೆ ಮಾನವ ಪಳಗಿಸಿಕೊಂಡ ಕಾಡುಪ್ರಾಣಿಗಳಲ್ಲಿ ಎತ್ತು ಮೊದಲ ಸುತ್ತಿಗೆ ಸೇರಿದ್ದೆಂದು ತಿಳಿದುಬಂದಿದೆ. ಹೀಗೆ ಪಳಗಿಸಿದ ಎತ್ತುಗಳ ಪಳೆಯುಳಿಕೆ ಯುರೋಪಿನಲ್ಲಿ ನಿಯೋಲಿಥಿಕ್ ಯುಗದಲ್ಲಿ ಹೇರಳವಾಗಿ ದೊರೆತಿವೆ. 3,500 ವರ್ಷಗಳ ಹಿಂದಿನಿಂದಲೂ ಈಜಿಪ್ಟ್, ಬ್ಯಾಬಿಲೋನಿಯ, ಭಾರತ ಇತ್ಯಾದಿ ದೇಶಗಳಲ್ಲಿ ಮಾನವ ಎತ್ತನ್ನು ಪಳಗಿಸಿ ಕೆಲಸಕ್ಕೆ ಬಳಸಿಕೊಂಡಿರುವನೆಂದು ಹೇಳಲು ಸಾಕಷ್ಟು ಆಧಾರಗಳು ದೊರೆತಿವೆ.

ಯುರೋಪಿನಲ್ಲಿ ದೊರೆತಿರುವ ಪಳೆಯುಳಿಕೆಗಳ ಆಧಾರದ ಮೇಲೆ ಹೇಳುವುದಾದರೆ ಮಾನವ ಪಳಗಿಸಿದ ಅತ್ಯಂತ ಪ್ರಾಚೀನ ಕಾಲದ ಎತ್ತು, ಯೂರೋಪಿನಲ್ಲಿ ಇಂದಿನ ಪಳಗಿಸಿದ ಎತ್ತಿಗಿಂತ ಸಣ್ಣ ರೂಪಿನದು. ಅದಕ್ಕೆ ಕೊಂಬುಗಳು ತುಂಡಾಗಿದ್ದವು. ಈ ವ್ಯತ್ಯಾಸವನ್ನು ಆಧಾರಮಾಡಿಕೊಂಡು ಮಾನವ ಪ್ರಪ್ರಥಮವಾಗಿ ಎತ್ತನ್ನು ಪಳಗಿಸಿದ್ದು ಯೂರೋಪಿನಲ್ಲಲ್ಲ, ಏಷ್ಯದಲ್ಲಿ ಎಂದು ವಾದಿಸುವುದುಂಟು. ಹಾಗೆ ಏಷ್ಯದಲ್ಲಿ ಪಳಗಿಸಿದ್ದ ಎತ್ತನ್ನು ನಿಯೋಲಿಥಿಕ್ ಮಾನವ ಯೂರೋಪಿಗೆ ವಲಸೆ ಹೋದಾಗ ತನ್ನೊಡನೆ ಕೊಂಡೊಯ್ದಿರುವುದು ಸಾಧ್ಯ. ಅನಂತರ ಕಂಚು ಬಳಕೆಗೆ ಬರುವ ಕಾಲಕ್ಕೆ ಯುರೋಪಿನಲ್ಲಿ ಬಹುಶಃ ಅಲ್ಲಿನ ಮತ್ತೊಂದು ತಳಿಯ ಕಾಡು ಎತ್ತುಗಳನ್ನು ತಂದು ಪಳಗಿಸಲಾರಂಭಿಸಿದಂತೆ ತೋರುತ್ತದೆ. ಭಾರತದ ಎತ್ತು ಯೂರೋಪಿನ ಎತ್ತಿಗಿಂತ ಭಿನ್ನವಾದ ವನ್ಯಪೂರ್ವಜರನ್ನು ಪಡೆದಿತ್ತೆ ಎಂಬುದು ಇನ್ನೂ ಇತ್ಯರ್ಥವಾಗಿಲ್ಲ.

ಎತ್ತು ಭಾರತದಂಥ ವ್ಯವಸಾಯವೇ ಮುಖ್ಯವಾದ ದೇಶದಲ್ಲಿ, ಬಹುಮುಖ್ಯ ಆರ್ಥಿಕ ಪ್ರಾಣಿ. ಸಾಧುವೆನಿಸಿರುವ ಈ ಪ್ರಾಣಿ ಸುಲಭವಾಗಿ ಕೆಲಸಕ್ಕೆ ಪಳಗುವುದರಿಂದ ಅದರಿಂದ ಬಗೆಬಗೆಯ ಕೆಲಸಗಳನ್ನು ಮಾಡಿಸುವುದು ಸುಲಭ. ಹೊಲದ ಉಳುಮೆ, ಸರಕುಸಾಗಣೆ, ಗಾಡಿಗೆ ಹೂಡುವುದು ಇತ್ಯಾದಿ ವ್ಯವಸಾಯದ ಮುಖ್ಯ ಕಾರ್ಯಗಳಿಗೆ ಎತ್ತನ್ನು ಬಳಸುವರು. ಎತ್ತುಗಳ ಸಂಖ್ಯೆ ಅಧಿಕವಾಗಿದ್ದಷ್ಟೂ ವ್ಯವಸಾಯದ ವಹಿವಾಟು ಹೆಚ್ಚೆಂದು ಭಾವಿಸುವುದುಂಟು. ಪ್ರತಿ 12 ಎಕರೆ ಸಾಗುವಳಿ ಭೂಮಿಗೂ ಕರ್ನಾಟಕ ರಾಜ್ಯದಲ್ಲಿ ಒಂದು ಜೊತೆ ಎತ್ತುಗಳಿರುವುದೆಂದು ದನಗಣತಿಯಿಂದ ತಿಳಿದುಬಂದಿದೆ. ಇದು ಸಾಲದು. ಸಮರ್ಪಕವಾಗಿ ವ್ಯವಸಾಯ ಮಾಡಿ ಆಹಾರೋತ್ಪತ್ತಿಯನ್ನು ಹೆಚ್ಚಿಸಲು ಪ್ರತಿ ಎಂಟು ಎಕರೆಗೆ ಒಂದು ಜೊತೆ ಎತ್ತು ಅಗತ್ಯ. ಕರ್ನಾಟಕ ರಾಜ್ಯದಲ್ಲಿ ಸಾಗುವಳಿಯಲ್ಲಿರುವ 63 ಲಕ್ಷ ಎಕರೆ ಭೂಮಿಯ ವ್ಯವಸಾಯಕ್ಕೆ ಕೇವಲ 3½ ಲಕ್ಷ ಜೊತೆ ಎತ್ತುಗಳು ಮಾತ್ರ ಇದ್ದು ಸಮರ್ಪಕವಾಗಿ ವ್ಯವಸಾಯ ಮಾಡಲು ಅವುಗಳ ಸಂಖ್ಯೆ ಹೆಚ್ಚಾಗ ಬೇಕಾಗಿದೆ. **(ನೋಡಿ–ಆರ್ಟಿಯೊಡ್ಯಾಕ್ಟೈಲ; ದನಗಳು)** (ಪಿ.ಎಸ್.ಆರ್.)



ಗಾಡಿ, ನೊಗಗಳಿಗೆ ಸರಿಹೋಗಬೇಕಾದರೆ ಎತ್ತಿಗೆ ಎತ್ತು ಜೋಡಿಯಾಗಬೇಕು, ಅಂಥದೊಂದು ಅಚ್ಚುಕಟ್ಟಾದ ಜೋಡಿಯನ್ನು ಚಿತ್ರದಲ್ಲಿ ಕಾಣಬಹುದು

# ಎಥಿಲೀನ್ – ಎಥಿಲೀನ್ ಡೈಅಮೀನ್ ಟೆಟ್ರ ಅಸಿಟೇಟ್

**ಎಥಿಲೀನ್:** ಆಲ್ಕೀನ್ ವರ್ಗಕ್ಕೆ ಸೇರಿದ ಆ್ಯಲಿಫ್ಯಾಟಿಕ್ ಹೈಡ್ರೋಕಾರ್ಬನ್, ರಾಸಾಯನಿಕಸೂತ್ರ $C_2H_4$. ಇದು ಅಪರ್ಯಾಪ್ತ ಸಂಯುಕ್ತವಾದ್ದರಿಂದ ಇದರಲ್ಲಿ ಎರಡು ಇಂಗಾಲದ ಪರಮಾಣುಗಳು ಸಿಗ್ಮ (ó) ಮತ್ತು ಪೈ (ð) ಬಂಧಗಳ ಮೂಲಕ ಸೇರಿಸಲ್ಪಟ್ಟಿವೆ (ದ್ವಿಬಂಧಗಳು–ಡಬಲ್ ಬಾಂಡ್ಸ್). ಎಥಿಲೀನ್ ರಚನೆಯನ್ನು ಮೂರು ಮಾದರಿಯಲ್ಲಿ ತೋರಿಸುವ ವಾಡಿಕೆಯಿದೆ. ð ಬಂಧ ó ಬಂಧಕ್ಕಿಂತ ದುರ್ಬಲವಾಗಿರುವುದರಿಂದ ಸುಲಭವಾಗಿ ಭೇದಿಸಲ್ಪಡುತ್ತದೆ. ಈ ಗುಣದಿಂದ ಎಥಿಲೀನ್ ಅಣುವಿನ ದ್ವಿಬಂಧಕ್ಕೆ ಕ್ಲೋರಿನ್, ಬ್ರೋಮಿನ್ ಹೈಡ್ರೊಜನ್ ಕ್ಲೋರೈಡ್, ಆಕ್ಸಿಜನ್ನುಗಳನ್ನು ಸೇರಿಸಬಹುದು.



ಚಿತ್ರ 1. ಚೆಂಡು ಮತ್ತು ಕಡ್ಡಿಗಳ ಮಾದರಿ




ಚಿತ್ರ 2. $\pi$ ಮತ್ತು  ಬಂಧನಗಳ ಮಾದರಿ



ಚಿತ್ರ 3. ಸ್ಫೂವರ್ಟನ ಮಾದರಿ

ಈ ಕ್ರಿಯೆಗಳಿಂದ ಎಥಿಲೀನ್ ಪರ್ಯಾಪ್ತ ಅಣುವಾಗಿ ಪರಿವರ್ತನೆಗೊಳ್ಳುತ್ತದೆ.

ಮೂಲಗಳು: ಪೆಟ್ರೋಲಿಯಂ ಮತ್ತು ನಿಸರ್ಗ ಅನಿಲದಲ್ಲಿ (ನ್ಯಾಚುರಲ್ ಗ್ಯಾಸ್) ಹಾಗೂ ನ್ಯಾಫ್ಥದಲ್ಲಿ ಎಥಿಲೀನ್ ದೊರೆಯುತ್ತದೆ. ಮೋಟಾರ್ ವಾಹನಗಳು ಉಗುಳುವ ಹೊಗೆಯಲ್ಲಿಯೂ ಅಲ್ಪ ಪ್ರಮಾಣದಲ್ಲಿ ಇದೆಯೆಂದು ಪತ್ತೆ ಮಾಡಲಾಗಿದೆ.

ತಯಾರಿಕೆ: ಪೆಟ್ರೋಲಿಯಂ ಮತ್ತು ನಿಸರ್ಗಾನಿಲಗಳನ್ನು ಅಧಿಕ ಉಷ್ಣತೆಯಲ್ಲಿ ಕಾಯಿಸಿದಾಗ (ಉತ್ತಾಪ ವಿಚ್ಛೇದನೆ–ಪೈರೋಲಿಸಿಸ್ ಕ್ರ್ಯಾಕಿಂಗ್) ಎಥಿಲೀನ್ ಉತ್ಪತ್ತಿಯಾಗುತ್ತದೆ. ಕಚ್ಚಾ ಪೆಟ್ರೋಲಿಯಂ ಎಣ್ಣೆಯ ಶುದ್ಧೀಕರಣದಲ್ಲಿ ಹೊರಬರುವ ಅನಿಲಗಳಲ್ಲಿ ಎಥಿಲೀನ್ ಹೆಚ್ಚಿನ ಪ್ರಮಾಣದಲ್ಲಿರುವುದು. ಔದ್ಯೋಗಿಕವಾಗಿ ಎಥಿಲೀನನ್ನು ಮೇಲೆ ಹೇಳಿದ ಅನಿಲಗಳಿಂದ ಆಸವನ (ಡಿಸ್ಟಿಲೇಷನ್) ಮತ್ತು ಅಧಿಶೋಷಣ ( ಆಡ್‌ಸಾರ್ಪ್ಷನ್) ವಿಧಾನಗಳಿಂದ ಪಡೆಯುತ್ತಾರೆ. ಪ್ರೋಪೈಲಿನ್ ಮತ್ತು ಬ್ಯೂಟಾಡಯೀನ್ ಅನಿಲಗಳನ್ನೊಳಗೊಂಡು ಅಶುದ್ಧವಾಗಿದ್ದರೂ ಈ ವಿಧಾನಗಳಿಂದ ಬರುವ ಎಥಿಲೀನನ್ನು ನೇರವಾಗಿ ಅನೇಕ ರಾಸಾಯನಿಕ ಕ್ರಿಯೆಗಳಿಗೆ ಉಪಯೋಗಿಸುತ್ತಾರೆ. ಶುದ್ಧವಾದ ಎಥಿಲೀನನ್ನು ಅಲ್ಪಪ್ರಮಾಣದಲ್ಲಿ ಮದ್ಯಸಾರದ ಆವಿಯನ್ನು ಪಟುಗೊಳಿಸಿದ (ಆಕ್ಟಿವೇಟೆಡ್) ಅಲ್ಯುಮಿನ (ಅಲ್ಯೂಮಿನಿಯಂ ಆಕ್ಸೈಡ್) ಮೇಲೆ ಹಾಯಿಸಿ ಪಡೆಯಬಹುದು.

ಭೌತಗುಣಗಳು: ಬಣ್ಣವಿಲ್ಲದ ಅನಿಲ, ವಿಶಿಷ್ಟವಾದ ಸುವಾಸನೆ ಮತ್ತು ರುಚಿಯುಳ್ಳದ್ದು. 3% ಪ್ರಮಾಣದ ಗಾಳಿಯೊಂದಿಗೆ ಸೇರಿದರೆ ಸ್ಫೋಟಕ ಮಿಶ್ರಣವುಂಟಾಗುತ್ತದೆ. ಕರಗುವ ಉಷ್ಣತೆ– 169° ಸೆಂ.ಗ್ರೇ. ಆವಿಯಾಗುವ ಉಷ್ಣತೆ– 1025° ಸೆಂ.ಗ್ರೇ. ಸಾಪೇಕ್ಷ ಸಾಂದ್ರತೆ 0° ಸೆಂಟಿಗ್ರೇಡಿನಲ್ಲಿ 0. 610. ಆವಿಯ ಸಾಂದ್ರತೆ (0° ಸೆಂ. ಗ್ರೇ. ಮತ್ತು 760 ಮಿ.ಮಿ. ಒತ್ತಡದಲ್ಲಿ ಗಾಳಿ=1) 0. 975. ದ್ರವಿಸುವ ಅವಧಿಕ ಉಷ್ಣತೆ (ಕ್ರಿಟಿಕಲ್ ಟೆಂಪರೇಚರ್) 9.5°. ಸೆಂಗ್ರೇ.

ರಾಸಾಯನಿಕ ಗುಣಗಳು: 1 ಎಥಿಲೀನ್ ಅಪರ್ಯಾಪ್ತ ಸಂಯುಕ್ತವಾದದ್ದರಿಂದ ಕೂಡಿಕೆ ಕ್ರಿಯೆಗಳನ್ನು ಹೊಂದುತ್ತದೆ. ಇದು ಅಪಕರ್ಷಕಾರಿಯಂತೆಯೂ ವರ್ತಿಸುತ್ತದೆ.

$$C_2H_4+Cl_2 \quad C_2H_4Cl_2$$

$$C_2H_4+HBr \rightarrow C_2H_5Br$$

$$C_2H_4+H_2 \xrightarrow[\text{ವೇಗವರ್ಧಕ}]{\text{ಪ್ಲಾಟಿನಂ}} C_2H_6$$

2 ಎರಡು ಹೈಡ್ರಾಕ್ಸಿಲ್ ಗುಂಪುಗಳನ್ನು ಸೇರಿಸಿ ಗ್ಲೈಕಾಲನ್ನು ರಚನೆ ಮಾಡಬಹುದು.

3 ಎಥಿಲೀನನ್ನು ಒತ್ತಡದಲ್ಲಿ ಆಕ್ಸಿಜನ್ನನೊಂದಿಗೆ ಕಾಯಿಸಿದಾಗ ಪಾಲಿ ಎಥಿಲೀನ್ ದೊರಕುತ್ತದೆ. ಇದರ ಅಣುತೂಕ ಸುಮಾರು 20,000 ಈ ಸಂಯುಕ್ತದಲ್ಲಿ ಅನೇಕ ಎಥಿಲೀನ್ ಅಣುಗಳು ಒಂದಕ್ಕೊಂದು ಸೇರಿ ಉದ್ದವಾದ ಸರಪಳಿಯನ್ನು ರಚಿಸುತ್ತವೆ.

$$nCH_2=CH_2 \xrightarrow[\text{ಉಷ್ಣ}]{\text{ಆಕ್ಸಿಜನ್ ಒತ್ತಡ}} \sim CH_2\text{-}(CH_2\text{-}CH_2\text{-}CH_{2n})\text{-}CH_2$$

ಉಪಯೋಗಗಳು: 1. ಎಥಿಲೀನನ್ನು ಮೂಲವಸ್ತುವನ್ನಾಗಿ ಉಪಯೋಗಿಸಿ ಟನ್ನುಗಟ್ಟಲೆ ಎಥಿಲೀನ್ ಡೈಕ್ಲೋರೈಡ್, ಪಾಲಿ ಎಥಿಲೀನ್, ಸ್ಟೈರೀನ್, ಎಥಿಲೀನ್ ಡೈಆಕ್ಸೈಡ್, ಅಸಿಟೈಲುಗಳು, EP ರಬ್ಬರು, ಈಥೈಲ್ ಆಲ್ಕೊಹಾಲ್ ಮತ್ತು ಇತರ ನೀಳವಾದ ರಚನೆಯುಳ್ಳ ಆಲ್ಕೊಹಾಲುಗಳನ್ನು ತಯಾರಿಸುತ್ತಾರೆ.

2 ಹಣ್ಣುಗಳಿಗೆ ಬಣ್ಣವನ್ನು ಕೊಡಲು ಮೊಳಕೆ ಮತ್ತು ತರಕಾರಿ ಮತ್ತು ಹಣ್ಣಿನ ಗಿಡಗಳ ಬೆಳವಣಿಗೆಯನ್ನು ತ್ವರಿತಗೊಳಿಸಲು ಹಣ್ಣಿನ ಮಾಗುವಿಕೆಯನ್ನು ತ್ವರಿತಗೊಳಿಸಲು ಎಥಿಲೀನಿನ ಉಪಯೋಗವಿದೆ. (ಎಥಿಲೀನ್ ಮತ್ತು ಆಕ್ಸಿಜನ್ನಿನ ಮಿಶ್ರಣದ ಜ್ವಾಲೆಯನ್ನು ಬೆಸುಗೆ ಹಾಕಲು ಮತ್ತು ಲೋಹವನ್ನು ಕತ್ತರಿಸಲು ಉಪಯೋಗಿಸುತ್ತಾರೆ. (ಎಚ್.ಎಸ್.ಎಸ್.)

**ಎಥಿಲೀನ್ ಆಕ್ಸೈಡ್:** $CH_2.O.CH_2$. ಇದಕ್ಕೆ ಎಪಾಕ್ಸಿ ಈಥೇನ್, ಆಕ್ಸಿರಾನ್ ಎಂಬ ಹೆಸರುಗಳೂ ಇವೆ. ಕ್ಲೋರೀನ್ ಕರಗಿಸಿದ ನೀರಿಗೆ 0°ಸೆಂ. ಉಷ್ಣತೆಯಲ್ಲಿ ಎಥಿಲೀನ್ ಅನಿಲವನ್ನು ಹಾಯಿಸಿ ಉತ್ಪತ್ತಿಯಾದ ಎಥಿಲೀನ್ ಕ್ಲೋರೊಹೈಡ್ರಿನನ್ನು ಸುಣ್ಣದೊಂದಿಗೆ ಬಟ್ಟಿ ಇಳಿಸಿ ಎಥಿಲೀನ್ ಆಕ್ಸೈಡ್ ತಯಾರಿಸುತ್ತಾರೆ.

$$CH_2=CH_2+HClO \rightarrow ClCH_2\text{-}CH_2OH$$

$$ClCH_2\text{-}CH_2OH \xrightarrow[\text{ಸುಣ್ಣ}]{-HCl} CH_2.O.CH_2$$

ಎಥಿಲೀನ್ ಮತ್ತು ಗಾಳಿಯ ಮಿಶ್ರಣವನ್ನು ಒತ್ತಡದಲ್ಲಿ $200^0$-$400^0$ ಸೆ. ಉಷ್ಣತೆಗೆ ಕಾಯಿಸಿದ ಬೆಳ್ಳಿಯ ಮೇಲೆ ಹಾಯಿಸುವುದು ಈಚೆಗೆ ಬಳಕೆಗೆ ಬಂದಿರುವ ಇನ್ನೊಂದು ವಿಧಾನ. ಎಥಿಲೀನ್ ಆಕ್ಸೈಡ್ ಬಣ್ಣವಿಲ್ಲದ ಅನಿಲ. ಇದರ ಕುದಿಬಿಂದು 14° ಸೆಂ. ನೀರಿನಲ್ಲಿ ಆಲ್ಕೊಹಾಲಿನಲ್ಲಿ ಮತ್ತು ಈಥರಿನಲ್ಲಿ ಇದು ದ್ರಾವ್ಯ. ಇದು ಒಳ್ಳೆಯ ಕೀಟನಾಶಕ. ಅನೇಕ ಸಾವಯವ ಸಂಯುಕ್ತಗಳ ಸಂಶ್ಲೇಷಣೆಯಲ್ಲಿ ಇದನ್ನು ಬಳಸುತ್ತಾರೆ. ನೀರಿನೊಡನೆ $200^0$ ಸೆಂ. ಉಷ್ಣತೆಯಲ್ಲಿ ವರ್ತಿಸಿ ಇದು ಗ್ಲೈಕಾಲನ್ನು ಉತ್ಪತ್ತಿ ಮಾಡುತ್ತದೆ.

$$CH_2.O.CH_2 \xrightarrow{H_2O} HOCH_2\text{-}CH_2OH$$

ಮೀಥೈಲ್ ಅಥವಾ ಈಥೈಲ್ ಆಲ್ಕೊಹಾಲುಗಳೊಡನೆ ವರ್ತಿಸಿ ಇದು ಮೀಥೈಲ್ ಸೆಲೊಸಾಲ್ವ್ ($HO.CH_2\text{-}CH_2\text{-}O\text{-}CH_3$) ಮತ್ತು ಈಥೈಲ್ ಸೆಲೊಸಾಲ್ವ್ ($HO.CH_2\text{-}CH_2\text{-}O\text{-}C_2H_5$) ಎಂಬ ದ್ರವ ಸಂಯುಕ್ತಗಳನ್ನು ಉತ್ಪತ್ತಿ ಮಾಡುತ್ತದೆ. ಈ ಸೆಲೊಸಾಲ್ವುಗಳಲ್ಲಿ ಸೆಲುಸೋಸ್ ಕರಗಬಲ್ಲದು. ಕೃತಕ ರಬ್ಬರ್ ತಯಾರಿಕೆಗೆ ಅಗತ್ಯವಾದ ರಾಸಾಯನಿಕಗಳಲ್ಲಿ ಒಂದಾದ ಅಕ್ರಿಲೊನೈಟ್ರಿಲ್ ($CH_2=CH.CN$) ಎಥಿಲೀನ್ ಆಕ್ಸೈಡಿನಿಂದ ತಯಾರಿಸುವ ಪ್ರಮುಖ ಉತ್ಪನ್ನಗಳಲ್ಲೊಂದು. (ಜಿ.ಆರ್.ಎಲ್.)

**ಎಥಿಲೀನ್ ಡೈಅಮೀನ್ ಟೆಟ್ರ ಅಸಿಟೇಟ್:** ಎಥಿಲೀನ್ ಡೈ ಅಮೀನ್ ಟೆಟ್ರ ಅಸೆಟಿಕ್ ಆಮ್ಲದ ಟೆಟ್ರ (ಅಂದರೆ ನಾಲ್ಕು) ಸೋಡಿಯಂ ಲವಣ. ಸಂಕ್ಷೇಪರೂಪ EDTA. ಎಥಿಲೀನ್ ಡೈ ಅಮೀನಿನೊಡನೆ ಫಾರ್ಮಾಲ್ಡಿಹೈಡ್ ಮತ್ತು ಸೋಡಿಯಂ ಸೈನೈಡುಗಳನ್ನಾಗಲೀ ಸೋಡಿಯಂ ಕ್ಲೋರ್‌ಅಸಿಟೇಟನ್ನಾಗಲೀ ಸಂಯೋಗಿಸುವಂತೆ ಮಾಡಿ EDTAಯನ್ನು ತಯಾರಿಸಲಾಗುತ್ತದೆ.



ಇಡಿಟಿಎ

EDTA ಸಂಯುಕ್ತ ಬಹುತೇಕ ಎಲ್ಲ ಲೋಹ ಮತ್ತು ಲೋಹ ಅಯಾನುಗಳೊಡನೆ ಸಂಯೋಗಿಸಿ ಅಯಾನುಗಳಾಗಿ ವಿಭಜನೆಗೊಳ್ಳದ (ನಾನ್ ಅಯಾನಿಕ್) ಕೀಲೇಟ್ ಸಂಕೀರ್ಣಗಳನ್ನು (ಕೀಲೇಟ್ ಕಾಂಪ್ಲೆಕ್ಸ್‌) ನೀಡುತ್ತದೆ. ಇವು ಸಾಕಷ್ಟು ಸ್ಥಿರವಾದವುಗಳಾದ್ದರಿಂದ EDTA ಸಂಯುಕ್ತ ಅನೇಕ ಲೋಹಗಳ ಪರಿಮಾಣ ವಿಶ್ಲೇಷಣಗಳಲ್ಲಿ

(ಕ್ವಾಂಟಿಟೇಟಿವ್ ಅನ್ಯಾಲಿಸಿಸ್) ಉಪಯೋಗಿಸಲಾಗುತ್ತಿರುವ ಬಹು ಜನಪ್ರಿಯ ಸಂಕೀರ್ಣಕಾರಕವಾಗಿದೆ (ಕಾಂಪ್ಲೆಕ್ಸಿಂಗ್ ಏಜೆಂಟ್). ದ್ರಾವಣದ ಆಮ್ಲೀಯತೆಯನ್ನು ಅನುಸರಿಸಿ ಈ ಸಂಯುಕ್ತ ನಿರ್ದಿಷ್ಟ ಲೋಹಗಳೊಡನೆ ಮಾತ್ರ ಸಂಯೋಗಿಸುವುದರಿಂದ ಲೋಹ ಅಥವಾ ಲೋಹ ಮಿಶ್ರಣಗಳ ವಿಶ್ಲೇಷಣೆಯನ್ನೂ ಸಾಧಿಸಬಹುದು. ಮತ್ತೆ ಹಲವು ಸಂದರ್ಭಗಳಲ್ಲಿ ಹಲವು ಅಸ್ಥಿರ ಸಂಕೀರ್ಣಗಳನ್ನು (ಅನ್‌ಸ್ಟೇಬಲ್ ಕಾಂಪ್ಲೆಕ್ಸಸ್) ಸ್ಥಿರಗೊಳಿಸಲು EDTAಯನ್ನು ಉಪಯೋಗಿಸಲಾಗುತ್ತದೆ. ಈವರೆಗೆ ಕ್ಯಾಲ್ಸಿಯಂ, ಮೆಗ್ನೀಸಿಯಂ, ಸತು, ತವರ, ಕಬ್ಬಿಣ, ತಾಮ್ರ, ಬೆಳ್ಳಿ, ಸೀಸ, ನಿಕಲ್, ಪಾದರಸ, ಬಿಸ್ಮತ್, ಮ್ಯಾಂಗನೀಸ್, ಸೋಡಿಯಂ, ಕೋಬಾಲ್ಟ್, ಥೋರಿಯಂ, ಜಿರ್ಕೋನಿಯಂ ಮತ್ತು ಹ್ಯಾಫ್ನಿಯಂ ಲೋಹ ಮತ್ತು ಲವಣಗಳ ಪರಿಮಾಣಾತ್ಮಕ ವಿಶ್ಲೇಷಣೆಗಳಲ್ಲಿ EDTA ಸಂಯುಕ್ತವನ್ನು ಉಪಯೋಗಿಸಲಾಗಿದೆಯೆಂದರೆ ಈ ಸಂಕೀರ್ಣಕಾರಕದ ಉಪಯುಕ್ತತೆಯ ವೈಶಾಲ್ಯದ ಅರಿವಾಗುತ್ತದೆ. ಇದನ್ನು ಬೇರೆ ಸಂದರ್ಭಗಳಲ್ಲಿಯೂ ಉಪಯೋಗಿಸುವ ಸಾಧ್ಯತೆಯನ್ನು ಇನ್ನೂ ಪರಿಶೀಲಿಸಲಾಗುತ್ತಿದೆ.

ಕೇವಲ ಲೋಹಗಳು ಮಾತ್ರವಲ್ಲದೆ ಫಾಸ್ಫೇಟ್ ಮತ್ತು ಹ್ಯಾಲೈಡ್ ಅಯಾನುಗಳ ಪರಿಮಾಣ ವಿಶ್ಲೇಷಣೆಯಲ್ಲಿಯೂ EDTA ಸಂಯುಕ್ತವನ್ನು ಉಪಯೋಗಿಸಬಹುದು. ಇಡಿಟಿಎ ಆಮ್ಲದ ಡೈಕ್ಯಾಲ್ಸಿಯಂ ಡೈ ಸೋಡಿಯಂ ಲವಣವನ್ನು ಕ್ಯಾಲ್ಸಿಯಂ ಕೊರತೆಯಿರುವ ರೋಗಿಗಳ ಚಿಕಿತ್ಸೆಯಲ್ಲೂ ಉಪಯೋಗಿಸಲಾಗುತ್ತದೆ. (ಕೆ.ಟಿ.ಎಸ್.)

**ಎಥಿಲೀನ್ ಡೈಕ್ಲೋರೈಡ್:** $ClCH_2$-$CH_2Cl$. ಎಥಿಲೀನ್ ಕ್ಲೋರೈಡ್ ಎಂಬ ಹೆಸರೂ ಇದೆ. ಎಥಿಲೀನ್ ಮತ್ತು ಕ್ಲೋರಿನುಗಳ ನೇರ ಸಂಯೋಗದಿಂದ ಇದನ್ನು ತಯಾರಿಸುತ್ತಾರೆ. ಎರಡು ಅನಿಲಗಳನ್ನೂ ಸರಿಯಾದ ಪ್ರಮಾಣದಲ್ಲಿ ಬೆರೆಸಿ, ಮಿಶ್ರಣವನ್ನು 80°–100° ಸೆಂ.ಗ್ರೇ. ಉಷ್ಣತೆಗೆ ಕಾಯಿಸಿದ ತಾಮ್ರ, ಕಬ್ಬಿಣ ಅಥವಾ ಜಲರಹಿತ ಕ್ಯಾಲ್ಸಿಯಂ ಕ್ಲೋರೈಡಿನ ಮೇಲೆ ಹಾಯಿಸಿದರೆ ಎಥಿಲೀನ್ ಡೈಕ್ಲೋರೈಡ್ ಉತ್ಪತ್ತಿಯಾಗುತ್ತದೆ.

$$C_2H_4+Cl_2 \rightarrow C_2H_4Cl_2$$

ಸೂಕ್ತವಾದ ಕ್ಲೋರಿನೀಕರಿಸಿದ ಒಂದು ಹೈಡ್ರೊಕಾರ್ಬನ್ನನ್ನು ದ್ರಾವಕವಾಗಿ ಉಪಯೋಗಿಸುವುದಾದರೆ ದ್ರಾವಣದಲ್ಲಿ 40° ಸೆಂ.ಗ್ರೇ. ಉಷ್ಣತೆಯಲ್ಲಿಯೇ ಈ ಕ್ರಿಯೆಯನ್ನು ಆಗಮಾಡಬಹುದು.

ಎಥಿಲೀನ್ ಡೈಕ್ಲೋರೈಡ್ ಬಣ್ಣವಿಲ್ಲದ ದ್ರವಪದಾರ್ಥ. ಇದರ ಕುದಿಬಿಂದು 84°ಸೆಂ. ಗ್ರೇ. ಇದು ಒಳ್ಳೆಯ ದ್ರಾವಕ (ಸಾಲ್ವೆಂಟ್). ಒಣ ಒಗೆತಕ್ಕ ಅಂದರೆ ಜಲರಹಿತಮಾರ್ಜನಕ್ಕೆ (ಡ್ರೈಕ್ಲೀನಿಂಗ್) ಇದನ್ನು ಬಳಸುತ್ತಾರೆ. ಮೋಟಾರು ವಾಹನಗಳ ಎಂಜಿನ್ನುಗಳಲ್ಲಿ ಆಗುವ ಕುಕ್ಕಾಟವನ್ನು (ನಾಕಿಂಗ್) ತಪ್ಪಿಸುವುದಕ್ಕಾಗಿ ಪೆಟ್ರೋಲಿಗೆ ಬೆರೆಸುವ ಈಥೈಲ್ ಫ್ಲ್ಯೂಯ್ಡಿನಲ್ಲಿ ಸಾಮಾನ್ಯವಾಗಿ 10% ಎಥಿಲೀನ್ ಡೈಕ್ಲೋರೈಡ್ ಇರುತ್ತದೆ. ಅಲ್ಲದೆ ಪ್ಲಾಸ್ಟಿಕ್ಕುಗಳ ತಯಾರಿಕೆಯಲ್ಲಿ ಬಳಸುವ ವೀನೈಲ್ ಕ್ಲೋರೈಡ್ ($CH_2$–$CHCl$) ಥಯೊಕಾಲ್–ಎ ಎಂಬ ಕೃತಕ ರಬ್ಬರ್, ಎಥಿಲೀನ್ ಡಯಮೀನ್ ($H_2N.CH_2$–$CH_2.NH_2$)ಇವನ್ನು ಎಥಿಲೀನ್ ಡೈಕ್ಲೋರೈಡಿನಿಂದ ತಯಾರಿಸುತ್ತಾರೆ. (ಜೆ.ಆರ್.ಎಲ್.)

**ಎಥಿಲೀನ್ ಡೈಬ್ರೋಮೈಡ್:** $BrCH_2$-$CH_2Br$. ಎಥಿಲೀನ್ ಬ್ರೋಮೈಡ್ ಎಂಬ ಹೆಸರೂ ಇದೆ. ಎಥಿಲೀನ್ ಮತ್ತು ಬ್ರೋಮೀನುಗಳ ನೇರ ಸಂಯೋಗದಿಂದ ಇದನ್ನು ತಯಾರಿಸುತ್ತಾರೆ. ಎಥಿಲಿನ್ ಅನಿಲವನ್ನೂ ಬ್ರೊಮಿನ್ ಆವಿಯನ್ನೂ ಬೆರೆಸಿ ಸೂಕ್ತವಾದ ವೇಗವರ್ಧಕಗಳ (ಕೈಟಾಲಿಸ್ಟ್ಸ್) ಮೇಲೆ ಹಾಯಿಸಿ ಇದನ್ನು ತಯಾರಿಸುತ್ತಾರೆ.

$$C_2H_4+Br_2 \rightarrow C_2H_4Br_2$$

ಸೂಕ್ತ ದ್ರಾವಕವನ್ನು ಉಪಯೋಗಿಸಿ ದ್ರಾವಣದಲ್ಲಿಯೂ ಈ ಕ್ರಿಯೆ ನಡೆಯಬಹುದು.

ಎಥಿಲೀನ್ ಡೈಬ್ರೋಮೈಡ್ ಬಣ್ಣವಿಲ್ಲದ ದ್ರವ. ಇದರ ಕುದಿಬಿಂದು 132° ಸೆಂ. ಗ್ರೇ. ಔದ್ಯೋಗಿಕ ಕ್ಷೇತ್ರಗಳಲ್ಲಿ ಇದಕ್ಕೆ ಅನೇಕ ಉಪಯೋಗಗಳಿವೆ. ಮೋಟಾರು ವಾಹನಗಳ ಎಂಜಿನ್ನುಗಳಲ್ಲಿ ಆಗುವ ಕುಕ್ಕಾಟವನ್ನು (ನಾಕಿಂಗ್) ತಪ್ಪಿಸಲು ಪೆಟ್ರೋಲಿಗೆ ಬೆರೆಸುವ ಈಥೈಲ್ ಫ್ಲ್ಯೂಯ್ಡಿನಲ್ಲಿ 25% ಎಥಿಲೀನ್ ಡೈಬ್ರೋಮೈಡ್ ಇರುತ್ತದೆ. ಅನೇಕ ಸಾವಯುವ ಸಂಯುಕ್ತಗಳ ಸಂಶ್ಲೇಷಣೆಯಲ್ಲಿ ಎಥಿಲೀನ್ ಡೈಬ್ರೋಮೈಡ್ ಬಳಕೆಯಾಗುತ್ತದೆ. ಆಹಾರ ಧಾನ್ಯಗಳ ಶೇಖರಣೆಯಲ್ಲಿ ಇದರ ಉಪಯೋಗವಿದೆ–ಧಾನ್ಯಗಳಿಗೆ ತಗಲುವ ಕೀಟಗಳ ನಿವಾರಣೆಗೆ ಧಾನ್ಯಗಳನ್ನೂ ಅವುಗಳನ್ನು ಶೇಖರಿಸಿಡುವ ಸ್ಥಳ, ಮೊದಲಾದವನ್ನೂ ಎಥಿಲೀನ್ ಡೈಬ್ರೋಮೈಡ್ ಆವಿಯಿಂದ ಸಂಸ್ಕರಿಸುತ್ತಾರೆ. (ಜೆ.ಆರ್.ಎಲ್.)

**ಎಥೆನಾಲ್ ಅಮೀನುಗಳು:** ಅಮೈನೋ ಆಲ್ಕೊಹಾಲುಗಳು (ಹೈಡ್ರಾಕ್ಸಿ ಅಮೈನುಗಳು); ಹೈಡ್ರೋಜನ್ ಪರಮಾಣುಗಳಲ್ಲಿ ಕನಿಷ್ಠ ಪಕ್ಷ ಒಂದನ್ನಾದರೂ ರ್ಯಾಡಿಕಲ್ 2–ಹೈಡ್ರಾಕ್ಸೆಥಿಲೀನಿನಿಂದ ($-CH_2CH_2OH$) ಬದಲು ಮಾಡಿದಂಥ ಅಮೋನಿಯ ($NH_3$) ಉತ್ಪನ್ನಗಳು. ಮೂರು ಎಥೆನಾಲ್ ಅಮೀನುಗಳಿವೆ. ಅವುಗಳ ದ್ರವೀಕರಣ ಬಿಂದು ಕಡಿಮೆ. ಬಣ್ಣವಿಲ್ಲದ ಘನವಸ್ತುಗಳು. ಜಲಾಭಿಮಾನಿಗಳು. ನೀರನ್ನು ಹೀರಿಕೊಂಡು ಗಟ್ಟಿಯಾದ ದ್ರವಗಳಂತಾಗುತ್ತವೆ. ವಿಶಿಷ್ಟವಾದ ಅಮೋನಿಯ ವಾಸನೆ ಹೊಂದಿದ್ದು ಪ್ರಬಲ ಪ್ರತ್ಯಾಮ್ಲಗಳಂತೆ ವರ್ತಿಸುವುವು. ನೀರು ಮತ್ತು ಆಲ್ಕೊಹಾಲಿನಲ್ಲಿ ದ್ರಾವ್ಯ. ಬೆಂಜೀನ್ ಮತ್ತು ಈಥರಿನಲ್ಲಿ ಅಲ್ಪದ್ರಾವ್ಯ. ಎಥೆನಾಲ್ ಅಮೀನುಗಳ ಭೌತಗುಣಗಳನ್ನು ಪಟ್ಟಿ ಮಾಡಲಾಗಿದೆ. (ಪುಟ 921) ಎಥಿಲೀನ್ ಕ್ಲೊರೊ ಹೈಡ್ರಿನ್ನನ್ನು ಘನರೂಪದ ಸೋಡಿಯಂ ಹೈಡ್ರಾಕ್ಸೈಡ್ ಅಥವಾ ಸುಟ್ಟ ಸುಣ್ಣದೊಡನೆ ಕಾಯಿಸಿದರೆ ಎಥಿಲೀನ್




ಆಕ್ಸೈಡ್ ಎಂಬ ವಸ್ತುವಾಗುತ್ತದೆ. ಇದನ್ನು ಪ್ರಬಲ ಅಮೋನಿಯ ದ್ರಾವಣದೊಡನೆ ಒತ್ತಡದಲ್ಲಿ ಕಾಯಿಸಿದರೆ ಎಥೆನಾಲ್ ಅಮೀನುಗಳಾಗುತ್ತವೆ. ಎಥಿಲೀನ್ ಆಕ್ಸೈಡಿನ ಪ್ರಮಾಣ ಹೆಚ್ಚಾಗಿದ್ದರೆ ಟ್ರೈ ಎಥೆನಾಲ್ ಅಮೀನೂ ಅಮೋನಿಯ ಪ್ರಮಾಣ ಹೆಚ್ಚಾಗಿದ್ದರೆ ಮಾನೊಸಂಯುಕ್ತವೂ ಲಭಿಸುತ್ತವೆ. ಎಥೆನಾಲ್ ಅಮೀನುಗಳು ಪ್ರಬಲ ಪ್ರತ್ಯಾಮ್ಲಗಳಂತೆ ವರ್ತಿಸುವುದರಿಂದ ಅನಿಲಮಿಶ್ರಣದಿಂದ ಇಂಗಾಲದ ಡೈಆಕ್ಸೈಡ್, ಹೈಡ್ರೊಜನ್ ಸಲ್ಫೈಡ್ ಮೊದಲಾದ ಆಮ್ಲೀಯ ಗುಣವಿರುವ ವಸ್ತುಗಳನ್ನು ಹೀರಿಕೊಳ್ಳುವುವು. ಅನಂತರ ಅಮೀನಿನ ದ್ರಾವಣವನ್ನು 50ಲಿ ಸೆಂ.ಗ್ರೇ. ಮೀರಿದ ಉಷ್ಣತೆಗೆ ಒಡ್ಡಿದರೆ ಹೀರಿಕೊಂಡಿದ್ದ ಆಮ್ಲೀಯ ಅನಿಲಗಳನ್ನು ಬಿಡುಗಡೆ ಮಾಡುವುವು. ಇದೇ ರೀತಿ ಆಮ್ಲೀಯ ಗುಣವುಳ್ಳ ಫೀನಾಲುಗಳನ್ನೂ ಬೇರ್ಪಡಿಸಬಹುದು. ಕೊಬ್ಬಿನ ಆಮ್ಲಗಳು ಎಥೆನಾಲ್ ಅಮೀನುಗಳೊಡನೆ ವರ್ತಿಸಿ ಸಾಬೂನುಗಳನ್ನು ಕೊಡುವುವು. ಮಾರ್ಜಕಗಳು, ಅಂಗರಾಗಗಳು ಮತ್ತು ಎಮಲ್ಷನ್‌ಕಾರಿಗಳ ತಯಾರಿಕೆಯಲ್ಲಿ ಇಂಥ ಸಾಬೂನುಗಳು ವಿನಿಯೋಗವಾಗುತ್ತಿವೆ. (ಎಚ್.ಜಿ.ಎಸ್.)

**ಎದೆಗೂಡು:** ಕೊರಳಿಗೂ ಹೊಟ್ಟೆಗೂ ನಡುವೆ ಇರುವ ಮುಂಡದ ಭಾಗ (ಥೊರ್ಯಾಕ್ಸ್). ಇದರ ಎಲುಗಟ್ಟಿನಲ್ಲಿ (ಸ್ಕೆಲಿಟನ್), 12 ಪಕ್ಕೆಲುಬುಗಳ ಜೋಡಿಗಳೂ ಎದೆಚಕ್ಕೆಯೂ (ಸ್ಟರ್ನಂ) 12 ಎದೆಗೂಡಿನ ಬೆನ್ನೆಲುಬುಗಳೂ ಇವೆ. ಇವಕ್ಕೆ ಸಂಬಂಧಿಸಿದಂತೆ ಅನೇಕ ಬಲವಾದ ಸ್ನಾಯುಗಳಿವೆ. ಕವಚವಾಗಿ ಕೊಬ್ಬೂ ಚರ್ಮದ ಊತಕಗಳೂ ಇವೆ. ಇದರ ಗಾತ್ರದ ಬದಲಾವಣೆಗಳಿಂದ ಉಸಿರಾಟ ಸಾಧ್ಯ. ಎದೆಗೂಡಲ್ಲಿರುವ ಮುಖ್ಯ ಅಂಗಗಳು ಉಸಿರಾಟ, ರಕ್ತಸುತ್ತಾಟದವು: ಪುಪ್ಪುಸಗಳು, ಉಸಿರ್ನಾಳ ಮತ್ತದರ ಕವಲುಗಳು, ಗುಂಡಿಗೆ ಮತ್ತದರ ದೊಡ್ಡ ರಕ್ತನಾಳಗಳು, ಹಾಲುರಸ ಸಾಗುನಾಳಗಳು (ಲಿಂಫ್ಯಾಟಿಕ್ ಡಕ್ಟ್ಸ್). ಕೆಳಗಿನ ತೆರಪಾದ ತಳದಲ್ಲಿ, ಸ್ನಾಯುಗೂಡಿನ ವಪೆ ಎದೆಗೂಡೊಳಕ್ಕೆ ಉಬ್ಬಿಕೊಂಡಿದೆ. ಮೇಲ್ಗಡೆ ಸಣ್ಣ ತೆರಪಿನಲ್ಲಿ ಕೊರಳಲ್ಲಿರುವ ಜೀವಾಳದ ರಚನೆಕಟ್ಟುಗಳು ಎದೆಗೂಡೊಳಕ್ಕೆ ತೂರಿಬರುತ್ತವೆ. **(ನೋಡಿ– ಉದರ, ಎಲುಬುಗಳು, ಕಶೇರುಗಳು)**

ಕೀಟಗಳ ಇಡೀ ಮೈಯಲಿನ ಮೂರು ತುಂಡುಗಳಲ್ಲಿ ಎದೆಗೂಡೂ ಒಂದು. ಇದರಲ್ಲಿನ 3 ಭಾಗಗಳಲ್ಲಿ ಒಂದೊಂದಕ್ಕೂ ಜೋಡಿ ಕಾಲುಗಳಿವೆ. ಹಿಂದಿನ 2 ಭಾಗಗಳಿಗೆ ಒಂದೊಂದು ಜೊತೆ ರೆಕ್ಕೆಗಳಿವೆ. (ಡಿ.ಎಸ್.ಎಸ್.,ಎಂ.ಡಿ.)

**ಎದೆ ಸೆರಬಿಗಿತ:** ಗುಂಡಿಗೆಯ ಮುಖ್ಯ ಪೋಷಕಗಳಾದ ಕಿರೀಟಿಕ ಧಮನಿಗಳಲ್ಲಿ (ಕಾರೊನರಿ ಆರ್ಟರೀಸ್) ರಕ್ತದ ಹರಿವಿನ ಕೊರೆಯಾದಾಗ, ಕೊಂಚ ಶ್ರಮದಿಂದಲೇ ಎದೆಯಲ್ಲಿ ತೋರುವ ನೋವಿನ ಶೂಲೆಯ ಕೆರಳಿಕೆ (ಅಂಜೈನಪೆಕ್ಟೊರಿಸ್). ಇದ್ದಕ್ಕಿದ್ದ ಹಾಗೆ, ಪ್ರಾಣಸಂಕಟವೆಂಬಂತೆ ಎದೆಯಲ್ಲಿ ಗುಂಡಿಗೆ ಇರುವೆಡೆಯ ಮೇಲೆ, ಸರಕ್ಕನೆ ನೋವು ಎದ್ದು ಎಲ್ಲ ದಿಕ್ಕುಗಳಲ್ಲೂ ಹರಡಿಕೊಳ್ಳುವುದು; ಹೊಟ್ಟೆ ಕಡೆಗೆ ಹೋಗದೆ. ಎಡತೋಳಿಗೆ ಹರಡುವುದೇ ಸಾಮಾನ್ಯ. ಇದರೊಂದಿಗೆ, ಎದೆ ಕಿವುಚಿ ಉಸಿರು ಸಿಕ್ಕಿಕೊಂಡಂತೆ ರೋಗಿ ನರಳುತ್ತಾನೆ. ಉಸಿರಾಟಕ್ಕಂತೂ ಏನೂ ತೊಂದರೆ ಇಲ್ಲ. ರೋಗಿ ಹಾಗೇ ಸೆಡೆತುಕೊಂಡು ಅಲುಗಾಡದೆ ನಿಲ್ಲುತ್ತಾನೆ. ಹಣೆ ತುಂಬ ಬೆವರು ಹನಿಗಳೇಳುತ್ತವೆ; ಬಿಳಿಚುತ್ತಾನೆ, ನಾಡಿ ದುರ್ಬಲವಾಗುತ್ತದೆ. ಇನ್ನೇನು ಸಾಯುವೆ ಎಂದುಕೊಳ್ಳುತ್ತಾನೆ. ರಕ್ತದ ಒತ್ತಡ ಏರುತ್ತದೆ. ಹೀಗೆ ಸುಸ್ತಾಗಿ ಕೆಲವು ಸೆಕೆಂಡುಗಳೂ ನಿಮಿಷಗಳೂ ಇರುವಲ್ಲೇ ದಣಿವಾರಿಸಿಕೊಂಡ ಮೇಲೆ, ಶೂಲೆಯ ಕೆರಳು ಇಳಿದು, ಅಷ್ಟೇ ಬೇಗನೆ ಚೇತರಿಸಿಕೊಳ್ಳುತ್ತಾನೆ. ಕಿರೀಟಿಕ ಧಮನಿಯಲ್ಲಿ ರೋಗ ಹರಡಿ ಅಡಚಣೆ ಹೆಚ್ಚಿದಂತೆಲ್ಲ, ಬರುಬರುತ್ತ ಕೊಂಚ ನಡೆದರೇ ರೋಗಿಗೆ ಎದೆ ಸೆರೆಬಿಗಿತದ ಶೂಲೆ

| ಅಮೀನಿನ ಹೆಸರು | ಅಣುಸೂತ್ರ | 20° ಸೆಂ.ಗ್ರೇ. ಉಷ್ಣತೆಯಲ್ಲಿ ಸಾಂದ್ರತೆ | ದ್ರವೀಕರಣ ಬಿಂದು °ಸೆಂ.ಗ್ರೇ. | ಕುದಿಯುವ ಬಿಂದು °ಸೆಂ. ಗ್ರೇ. | ಹಬೆಯೊಡನೆ ಹಾಯುವ ಗುಣ |
|---|---|---|---|---|---|
| ಮಾನೊ ಎಥೆನಾಲ್ ಅಮೀನ್ | $(HO.CH_2.CH_2)NH_2$ | 1.022 | 10.5 | 171 | ಉಂಟು |
| ಡೈ ಎಥೆನಾಲ್ ಅಮೀನ್ | $(HO.CH_2.CH_2)_2NH$ | 1.097 | 28.0 | 217 (150 ಮಿ. ಮೀ. ಒತ್ತಡದಲ್ಲಿ | ಇಲ್ಲ |
| ಟ್ರೈ ಎಥೆನಾಲ್ ಅಮೀನ್ | $(HO.CH_2.CH_3)_3N$ | 1.126 | 21.0 | 277 (150 ಮಿ. ಮೀ. ಒತ್ತಡದಲ್ಲಿ | ಇಲ್ಲ |

ತಲೆದೋರುವುದು. ಸಿಟ್ಟು, ಮುನಿಸು, ಚಿಂತೆಗಳಿಂದಲೂ ಹೀಗೆ ಕೆರಳಬಹುದು. ನಡು ವಯಸ್ಸಿಗೆ ಮುಂಚೆ ಅಷ್ಟಾಗಿ ಇದು ಕಾಣಿಸದು. ಹೆಂಗಸರಿಗಿಂತಲೂ ಗಂಡಸರಲ್ಲಿ ಹೆಚ್ಚು. ಬೇರೆಡೆಗಳ ಸ್ನಾಯುಗಳ ರಕ್ತ ಹರಿವಿನ ಕೊರೆ ಆದಾಗ ಉಳುಕು ಹಿಡಿದು ನೋವಿಡುವ ಹಾಗೇ ಎದೆ ಸೆರೆಬಿಗಿತ ಗುಂಡಿಗೆಯ ಸ್ನಾಯುವಿನ ಉಳುಕಿನ ಶೂಲೆಗೂ ಕಾರಣ. ಈ ಶೂಲೆ ಎಂದಿನಂತಿದ್ದರೆ, ಸಾಮಾನ್ಯ ವೈದ್ಯನಿಗೂ ಕಾರಣ ಗೊತ್ತಾಗುವುದು ಕಷ್ಟವಲ್ಲ. ಆದರೆ ಕೆಲವೇಳೆ ಇದು ಇಷ್ಟು ಸರಳವಾಗಿ ನೇರವಾಗಿರದು. ಆಗ ಗುಂಡಿಗೆಯ ವೈದ್ಯಪಟುವಿಂದಲೇ ಖಚಿತವಾಗಬೇಕು. (ಡಿ.ಎಸ್.ಎಸ್.)

**ಎನಾಮೆಲ್:** ಒಂದು ವಸ್ತುವಿನ ಮೈಮೇಲೆ ನುಣುಪು ಮತ್ತು ದೃಢವಾದ ಒಪ್ಪಕೊಡುವ ಲೇಪನ. ಗಾಜುಲೇಪನವೆಂದೂ ಕರೆಯುವುದಿದೆ. ಇದರಲ್ಲಿ ಎರಡು ಮುಖ್ಯ ವರ್ಗಗಳಿವೆ: (i) ಲೋಹ ಮತ್ತು ಮಣ್ಣಿನಿಂದ ಮಾಡಿದ ಪದಾರ್ಥಗಳ ಮೈಮೇಲೆ ಕರಗಿಸಿ ಘನವಸ್ತುಗಳಿಂದಾದ ಗಾಜಿನಂತಿರುವ ಮತ್ತು ರಾಸಾಯನಿಕ ವರ್ತನೆಯನ್ನು ನಿರೋಧಿಸುವ ವಿಟ್ರಿಯಸ್ ಅಥವಾ ಪೋರ್ಸಲಿನ್ ಎನಾಮೆಲುಗಳು. (ii) ವರ್ಣದ್ರವ್ಯಗಳು, ವಾರ್ನಿಷುಗಳು ಮತ್ತು ಲ್ಯಾಕರುಗಳನ್ನು ಒಳಗೊಂಡು, ಲೇಪಿಸಿದಾಗ ಒಣಗಿ, ಅಪೇಕ್ಷಿತ ಹೊಳಪು ಕೊಡುವ ದ್ರವಮಿಶ್ರಣಗಳು.

ಪೋರ್ಸಲಿನ್ ಎನಾಮೆಲುಗಳನ್ನು ಬಹುತೇಕ ಕಬ್ಬಿಣದ ಸಲಕರಣೆಗಳನ್ನು ಲೇಪಿಸಲು ಬಳಸುವರು. ಅಂಥ ಲೇಪನ ಪ್ರಬಲ ಕ್ಷಾರಗಳು ಮತ್ತು ಹೈಡ್ರೋಫ್ಲೋರಿಕ್ ಆಮ್ಲದ ಹೊರತು ಇತರ ಎಲ್ಲ ರಾಸಾಯನಿಕ ವಸ್ತುಗಳ ಸಂಪರ್ಕದಲ್ಲಿ ಸುರಕ್ಷಿತವಾಗಿರುತ್ತದೆ. ಆದ್ದರಿಂದ ರಾಸಾಯನಿಕ ಔಷಧ, ಆಹಾರ, ಪಾನೀಯ ಮತ್ತು ಕ್ಷೀರ ಕೈಗಾರಿಕೆಗಳಲ್ಲಿ ಉಪಯೋಗಿಸುವ ಉಪಕರಣಗಳನ್ನು ಸಾಮಾನ್ಯವಾಗಿ ಪೋರ್ಸಲಿನ್ ಎನಾಮೆಲ್ ಮಾಡುವರು. ಎನಾಮೆಲ್ ಮಾಡಿದ ಉಕ್ಕಿನಿಂದ ತಯಾರಿಸಿದ ವಸ್ತುಗಳಲ್ಲಿ ಒಲೆಗಳು, ಶೈತ್ಯಕಾರಕ ಯಂತ್ರಗಳು, ಮೇಜಿನ ಮೇಲ್ಭಾಗಗಳು, ವಣಿಕ ಮತ್ತು ವಾಸಗೃಹಗಳ ಆಲಂಕಾರಿಕ ಹೊರಭಾಗಗಳು ಮತ್ತು ಅಡುಗೆಮನೆಯ ಉಪಕರಣಗಳನ್ನು ಹೆಸರಿಸಬಹುದು. ಎನಾಮೆಲ್‌ಗೊಳಿಸಿದ ಬೀಡುಕಬ್ಬಿಣದಿಂದ ಸ್ನಾನದ ತೊಟ್ಟಿಗಳು ಮತ್ತು ಇತರ ನೈರ್ಮಲ್ಯ ಸಾಧನಗಳನ್ನು ತಯಾರಿಸುವರು.

ಎನಾಮೆಲ್ ಮಾಡುವ ಮುನ್ನ ಲೋಹಭಾಗಕ್ಕೆ ಅಂಟಿಕೊಂಡಿರುವ ಜಿಡ್ಡು ಮತ್ತು ಆಕ್ಸೈಡಿನ ಪದರಗಳನ್ನು ತೊಡೆದು ಹಾಕಿ ಸ್ವಚ್ಛಗೊಳಿಸಬೇಕು. ಅನಂತರ ಎನಾಮೆಲ್ಲಿನ ಫ್ರಿಟ್ (ಗಾಜಿನಂತಿರುವ ಮಿಶ್ರಣ) ತಯಾರಿಸಿಕೊಳ್ಳಬೇಕು. ಇದಕ್ಕೆ ಎರಡು ವಿಧವಾದ ವಸ್ತುಗಳು ಬೇಕು. ರಾಸಾಯನಿಕ ವರ್ತನೆಯನ್ನು ನಿರೋಧಿಸುವ ಗುಣವುಳ್ಳ ಆಮ್ಲೀಯ ಸ್ವಭಾವದ ಕ್ವಾರ್ಟ್ಸ್ ಮತ್ತು ಫೆಲ್‌ಸ್ಪಾರ್ ಖನಿಜಗಳು. ಎರಡನೆಯದಾಗಿ ಪ್ರಾತ್ಯಾಮ್ಲೀಯ ಸ್ವಭಾವದ ಬಿಳಿಗಾರ, ಫ್ಲೋರ್‌ಸ್ಪಾರ್, ಕ್ರಯೊಲೈಟ್, ಸೋಡಾಬೂದಿ ಸೋಡಿಯಂ ನೈಟ್ರೇಟ್ ಮತ್ತು ಲಿಥಾರ್ಜ್ (ಸೀಸದ ಮಾನಾಕ್ಸೈಡ್) ಮುಂತಾದ ಸ್ರಾವಕಗಳು (ಫ್ಲಕ್ಸಸ್). ಇವೆರಡನ್ನೂ ಒಟ್ಟಿಗೆ ಕರಗಿಸಿದರೆ ಫ್ರಿಟ್ ದೊರೆಯುವುದು.

ತೇವವಿಧಾನದಲ್ಲಿ ದ್ರವಿತ ಫ್ರಿಟ್ಟನ್ನು ನೀರಿಗೆ ಸುರಿಯುವರು. ಆಗ ಅದು ಹುಡಿಯಾಗುವುದು. ಇದರೊಂದಿಗೆ ನೀರು, ಜೇಡಿಮಣ್ಣು ಮತ್ತು ಅಪಾರದರ್ಶಕಕಾರಿಗಳಾದ (ಒಪೆಸಿಫೈಯರ್ಸ್) ತವರ, ಜಿರ್ಕೋನಿಯಂ ಅಥವಾ ಆಕ್ಸೈಡುಗಳನ್ನು ಸೇರಿಸಿ ಗಿರಣಿಯಲ್ಲಿ ಅರೆಯುವರು. ನೀರನ್ನುಳಿದು ಈ ಇತರ ವಸ್ತುಗಳ ಅಂಶ ಫ್ರಿಟ್ಟಿನ ತೂಕದ ಶೇ. 15ಕ್ಕಿಂತ ಹೆಚ್ಚು ಇರಲಾರದು. ಈ ಮಿಶ್ರಣಕ್ಕೆ ಸ್ಲಿಪ್ ಎಂದು ಹೆಸರು. ಇದು ಲೋಹದ ಮೈಮೇಲೆ ಸರಿಯಾಗಿ ರೂಪಗೊಳ್ಳಲು ಸೋಡಾಬೂದಿ ಮತ್ತು ಬಿಳಿಗಾರಗಳು ನೆರವಾಗುವುವು. ಎನಾಮೆಲ್ ಮಾಡಬೇಕಾದ ಭಾಗವನ್ನು ಸ್ಲಿಪ್ಪಿನಲ್ಲಿ ಅದ್ದಬಹುದು ; ಇಲ್ಲವೇ ಸ್ಲಿಪ್ಪನ್ನೇ ಲೋಹದ ಮೇಲೆ ಸಿಂಪಡಿಸಬಹುದು. ಒಣಗಿದ ಅನಂತರ ಲೇಪಿತ ಪದಾರ್ಥವನ್ನು ಎನಾಮೆಲ್ ಕುಲುಮೆಯಲ್ಲಿ ಸುಡಲಾಗುವುದು. ಈ ರೀತಿ 1–3 ಲೇಪನಗಳನ್ನು ಕೊಡುವುದು ವಾಡಿಕೆ. ಮೊದಲನೆಯ ಆಧಾರ ಪದರ ಕೋಬಾಲ್ಟ್ ಆಕ್ಸೈಡ್ ಆಗಿದ್ದರೆ ಲೇಪನ ಲೋಹಕ್ಕೆ ಬಲವಾಗಿ ಅಂಟಿಕೊಳ್ಳುವುದು.

ಶುಷ್ಕವಿಧಾನದಲ್ಲಿ ಫ್ರಿಟ್ಟನ್ನು ಅಪಾರದರ್ಶಕಕಾರಿಗಳು ಅಥವಾ ಬಣ್ಣಗಳೊಂದಿಗೆ ಗಿರಣಿಯಲ್ಲಿ ಅರೆಯಲಾಗುವುದು. ಆಗ ನಯವಾದ ಹುಡಿ ದೊರೆಯುತ್ತದೆ. ಮುಂಚೆಯೇ ತೇವ ವಿಧಾನದಿಂದ ಆಧಾರಲೇಪನ ಮಾಡಿದ ಪದಾರ್ಥದ ಮೇಲೆ ಈ ಪುಡಿಯನ್ನು ಉದುರಿಸುವರು. ಅನಂತರ ಎನಾಮೆಲ್ ಕುಲುಮೆಯಲ್ಲಿ ಸುಟ್ಟರೆ ಲೇಪನ ಪರಿಪೂರ್ಣ ವಾಗುವುದು.

ಆಮ್ಲನಿರೋಧಕ ಕಬ್ಬಿಣದ ಎನಾಮೆಲ್ಲುಗಳಲ್ಲಿ ಸಿಲಿಕ ಮತ್ತು ಫೆಲ್‌ಸ್ಪಾರ್ ಅಂಶ ಹೆಚ್ಚಾಗಿದ್ದು ಸ್ರಾವಕಗಳ ಅಂಶ ಕಡಿಮೆಯಾಗಿರುತ್ತದೆ. ಇವುಗಳಲ್ಲಿ ಟೈಟೇನಿಯಂ ಡೈಆಕ್ಸೈಡಿರುವುದು ಸಾಮಾನ್ಯ. ಎನಾಮೆಲ್ ಹೊಂದಿದ ವಸ್ತುವಿನ ಸ್ವಭಾವ ಮತ್ತು ಅದರ ಉದ್ದೇಶಿತ ಉಪಯೋಗವನ್ನು ಗಮನಿಸಿ ಅದನ್ನು ಸುಡುವ ಕಾಲಾವಧಿ ಮತ್ತು ಉಷ್ಣತೆಯನ್ನು ನಿರ್ಧರಿಸಬೇಕಾಗುತ್ತದೆ. ಉದಾಹರಣೆಗೆ ತೇವವಿಧಾನದಿಂದ ಎನಾಮೆಲ್ ಮಾಡಿದ ಬೀಡು ಕಬ್ಬಿಣವನ್ನು 625°–760°. ಸೆಂ.ಗ್ರೇ. ಉಷ್ಣತಾಮಿತಿಯಲ್ಲಿ 10–15 ಮಿನಿಟುಗಳ ಕಾಲ ಸುಡುವುದು ರೂಢಿ. ಕೆಲವು ಎನಾಮೆಲುಗಳನ್ನು 700°–870° ಸೆಂಟಿಗ್ರೇಡಿನಲ್ಲಿ 1–5 ಮಿನಿಟುಗಳವರೆಗೆ ಸುಟ್ಟರೆ ಸಾಕು. ಎನಾಮೆಲ್ ಪದರಕ್ಕೆ ಘಾಸಿಯಾಗದಂತೆ ಪದಾರ್ಥವನ್ನು ವಿರೂಪಗೊಳಿಸುವುದು ಸಾಧ್ಯವಿಲ್ಲ.

ವಾರ್ನಿಷ್ ಬಳಿದ ವಸ್ತು ಬಿಸಿಲಿನ ಝಳಕ್ಕೆ ಸಿಗುವಂತಿದ್ದರೆ ಆಗ ಬಣ್ಣಗಳನ್ನು ಕೂಡಿಸಿ ಬ್ರಷಿಂಗ್ ಎನಾಮೆಲ್ ಮಾಡುವರು. ಲೋಹಕ್ಕೆ ಇದರ ಲೇಪನವಾಗಿದ್ದು ಸೂಕ್ತ ಪ್ರಮಾಣದ ಮಿಶ್ರಣವಾಗಿದ್ದರೆ ಅದನ್ನು ಉನ್ನತ ಉಷ್ಣಕ್ಕೆ ಒಡ್ಡಬಹುದು. ಆಗ ಅದು ಬೇಯಿಸಿದ ಎನಾಮೆಲ್ ಎನಿಸಿಕೊಳ್ಳುತ್ತದೆ. ಇವು ಸಾವಯವ ವಸ್ತುಗಳಿಂದ ಕೂಡಿದ್ದು ನಿರವಯವ ವಸ್ತುಗಳಿರುವ ಪೋರ್ಸಲೀನು ಎನಾಮೆಲ್ಲುಗಳಿಗಿಂತ ಭಿನ್ನವಾದುವು.

ಲ್ಯಾಕರ್ ಎನಾಮೆಲುಗಳಲ್ಲಿ ಲ್ಯಾಕರ್ ಮತ್ತು ಬಣ್ಣ ಮಾತ್ರ ಇರುತ್ತವೆ. ಲೀನಕಾರಿ (ಸಾಲ್ವೆಂಟ್) ಆವಿಯಾದ ಕೂಡಲೇ ಮೇಲ್ಮೈ ಪೊರೆಯ ರಚನೆ ಪೂರ್ಣಗೊಂಡರೆ ಅದನ್ನು ಲ್ಯಾಕರ್ ಎನ್ನುತ್ತೇವೆ. ಆದರೆ ಸುಭದ್ರ ಪೊರೆಯ ರಚನೆಯಾಗಲು ರಾಸಾಯನಿಕ ಕ್ರಿಯೆಯೂ ನಡೆಯುವ ಅಗತ್ಯವಿದ್ದರೆ ಅದು ಲ್ಯಾಕರ್ ಎನಾಮೆಲ್ ಎನಿಸಿಕೊಳ್ಳುತ್ತದೆ. ಇದೇ ಅವೆರಡರ ನಡುವೆ ಇರುವ ಮೂಲ ವ್ಯತ್ಯಾಸ. ಸುಲಭ ವೆಚ್ಚದಲ್ಲಿ ವಸ್ತುವಿನ ಆದಷ್ಟು ಭಾಗದ ಮೇಲೆ ಶಾಶ್ವತವಾದ ಮತ್ತು ಬಲವಾದ ಪೊರೆಯನ್ನು ಮೂಡಿಸುವುದು ಲ್ಯಾಕರ್ ಎನಾಮೆಲಿನ ಉದ್ದೇಶ. ಆಟಿಕೆಗಳು (ಟಾಯ್ಸ್) ಮತ್ತು ಇತರ ಅಲ್ಪ ಬಾಳಿಕೆ ವಸ್ತುಗಳಿಗೆ ಉಪಯೋಗಿಸುವ ಎನಾಮೆಲುಗಳುಂಟು. ಇವುಗಳಲ್ಲಿ ಜಿಗುಟುಗುಣವುಳ್ಳ ಸೆಲ್ಯುಲೋಸ್ ಎಸ್ಟರುಗಳ ಅಂಶ ಕಡಿಮೆಯಿದ್ದು ಅಗ್ಗದ ಲೀನಕಾರಿಗಳು ಮತ್ತು ಒರಟು ಬಣ್ಣಗಳಿರುತ್ತವೆ. ಬಣ್ಣವನ್ನು ಮೊದಲು ಹರಳೆಣ್ಣೆಯಲ್ಲಿಯೂ ಅನಂತರ ಲ್ಯಾಕರನೊಂದಿಗೂ ಅರೆಯುವುದು ಪದ್ಧತಿ. ಬಾಲ್ ಗಿರಣಿ ಇದಕ್ಕೆ ಅನುಕೂಲ. ಇತ್ತೀಚೆಗೆ ತೀವ್ರ ವೇಗದ ಕಲಾಯ್ಡ್ ಗಿರಣಿಗಳು ಬಳಕೆಗೆ ಬಂದಿವೆ.

ವಸ್ತುವಿಗೆ ಲ್ಯಾಕರ್ ಎನಾಮೆಲ್ ಭದ್ರವಾಗಿ ಅಂಟಿಕೊಳ್ಳುವಂತೆ ಮಾಡುವುದೂ ಒಂದು ಸಮಸ್ಯೆ. ಬಣ್ಣ ಬೆರೆತಿರುವುದರಿಂದ ಮೂಲ ಲ್ಯಾಕರಿಗಿಂತ ಅದರ ಎನಾಮೆಲ್ಲಿನ ಅಂಟುಗುಣ ಕಡಿಮೆಯಾಗಿರುತ್ತದೆ. ತತ್ಫಲವಾಗಿ ಲೇಪನದ ಪೊರೆಯ ಭಿದುರತೆ ಹೆಚ್ಚುತ್ತದೆ. ಅಂಟುಗುಣ ಪದಾರ್ಥದ ಮೇಲ್ಮೈ ಲಕ್ಷಣಗಳನ್ನೂ ಅವಲಂಬಿಸಿರುವುದು. ಆದ್ದರಿಂದ ತೃಪ್ತಿಕರವಾದ ಲೇಪನವುಂಟಾಗಲು ಒಂದೊಂದು ವಸ್ತುವಿಗೆ ಅದಕ್ಕಾಗಿಯೇ ವಿಶಿಷ್ಟ ರೀತಿಯಲ್ಲಿ ತಯಾರಿಸಿದ ಎನಾಮೆಲ್ ಹೊಂದಿಕೊಳ್ಳಬೇಕಾಗುತ್ತದೆ. ಇದು ಮತ್ತೊಂದು ಸಮಸ್ಯೆ. ಮರ, ಹಿತ್ತಾಳೆ ಮತ್ತು ಕೆಲವು ದರ್ಜೆಯ ಉಕ್ಕುಗಳನ್ನು ಎನಾಮೆಲ್ ಮಾಡುವುದು ಸುಲಭ. ಆದರೆ ಅಲ್ಯೂಮಿನಿಯಂ ಮತ್ತು ತವರಗಳಿಗೆ ಮೂಲ ಲೇಪನದ ಜೊತೆಗೆ ಅನೇಕ ಒಪ್ಪಲೇಪನಗಳು (ಫಿನಿಷಿಂಗ್ ಕೋಟ್ಸ್) ಅಗತ್ಯ. ಬಣ್ಣದ ಲ್ಯಾಕರ್ ಎನಾಮೆಲ್ ಬಳಿದ ಮೇಲೆ ಬರೀ ಲ್ಯಾಕರಿನ ಅಂತಿಮ ಲೇಪನ ಮಾಡಿದರೆ ಗಾಜಿನಂತಿರುವ ಒಪ್ಪಕೊಡುತ್ತದೆ. ಕಪ್ಪು ಮತ್ತು ಕೆಂಪು ಬಣ್ಣಗಳಿಗೆ ಇದರ ಅಗತ್ಯವಿಲ್ಲ.

ಒಂದೇ ಲೇಪನ ಸಾಕಾಗುವುದರಿಂದ ಕಪ್ಪು ಮತ್ತು ಕೆಂಪು ಬಣ್ಣದ ಲ್ಯಾಕರ್ ಎನಾಮೆಲುಗಳಿಗೆ ಬೇಡಿಕೆ ಹೆಚ್ಚು. ದಾರ್ಢ್ಯ ಮತ್ತು ಮೃದುತ್ವ ಅದರ ಪ್ರಧಾನ ಗುಣಗಳು. ಲೇಪನ ಪಡೆದ ವಸ್ತುವನ್ನು ಬಗ್ಗಿಸುವ ಸಂದರ್ಭವಿದ್ದರೆ ಪ್ಲಾಸ್ಟಿಸೈಸರುಗಳನ್ನು (ಬಾಷ್ಪಗುಣ ಕಡಿಮೆಯಿರುವ ಲೀನಕಾರಿಗಳು) ಸೇರಿಸದೆ ವಿಧಿಯಿಲ್ಲ. ಅದರಲ್ಲೂ ಬಣ್ಣಬಂಧಿತ ಎನಾಮೆಲ್ ಪೊರೆ ಭಿದುರವಾಗಿರುವುದರಿಂದ ಅದರ ಅಗತ್ಯ ಇನ್ನೂ ಬಹಳ. ಪ್ಲಾಸ್ಟಿಸೈಸರುಗಳ ಅಂಶ ಹೆಚ್ಚಿದಷ್ಟೂ ಒಣಗುವ ಅವಧಿ ಹೆಚ್ಚಿ ಮೃದುವಾದ ಪೊರೆಯುಂಟಾಗುತ್ತದೆ.

ಉಷ್ಣ ನಿರೋಧನ ಮತ್ತು ದಾರ್ಢ್ಯಗಳಲ್ಲಿ ಪಿಂಗಾಣಿ ಎನಾಮೆಲುಗಳನ್ನು ಸರಿಗಟ್ಟಬಲ್ಲ ಸಾವಯವ ಎನಾಮೆಲುಗಳನ್ನು ಶೋಧಿಸುವ ಯತ್ನ ಸಾಗಿದೆ. ಹೀಗೆಯೇ ಪಿಂಗಾಣಿ ಎನಾಮೆಲ್ಲುಗಳನ್ನು ಕಡಿಮೆ ಉಷ್ಣದಲ್ಲಿ ಬೇಯಿಸಿ ಕೋಮಲವಾದ ಪದರ ಬಿಡಿಸುವ ಪ್ರಯತ್ನವೂ ನಡೆದಿದೆ. ಗೃಹೋಪಕರಣಗಳ ತಯಾರಿಕೆಯಲ್ಲಿ ಈ ಎರಡು ಬಗೆಯ ಎನಾಮೆಲುಗಳ ಬಳಕೆ ವ್ಯಾಪಕವಾಗಿದೆ. ವಿದ್ಯುತ್ ಒಲೆ ಅಥವಾ ಬಟ್ಟೆ ತೊಳೆಯುವ ಯಂತ್ರದ ಮೇಲೆ ಗೋಚರಿಸದಷ್ಟು ಅವುಗಳಲ್ಲಿ ಹೋಲಿಕೆ ಇರುತ್ತದೆ. ಸೂಕ್ಷ್ಮವಾಗಿ ಪರೀಕ್ಷಿಸಿದ ಹೊರತು ಅವೆರಡರ ನಡುವಣ ವ್ಯತ್ಯಾಸವನ್ನು ಸಾಮಾನ್ಯ ವೀಕ್ಷಕ ಕಂಡುಹಿಡಿಯಲಾರ. (ಎಚ್.ಜಿ.ಎಸ್.;ಆರ್.ಕೆ.ಎಸ್.)

**ಎನಿಯಸ್, ಕ್ವಿಂಟಸ್:** ಪ್ರಶ ಪೂ.ಸು. 239–169. ಪ್ರಾಚೀನ ರೋಮನರ ಶ್ರೇಷ್ಠ ಕವಿಗಳಲ್ಲಿ ಒಬ್ಬ. ಲ್ಯಾಟಿನ್ ಸಾಹಿತ್ಯ ಪ್ರವರ್ತಕರಲ್ಲಿ ಗಣ್ಯ. ಸಿಸಿರೊ ಯುಗಕ್ಕೆ ಮುಂಚಿನ ಮಹಾಕವಿ. ತಮ್ಮ ರಾಷ್ಟ್ರೀಯ ಸಾಹಿತ್ಯಕ್ಕೆ ಆತನೇ ಜನಕನೆಂದು ರೋಮನರು ನಂಬಿದ್ದರು. ದಿಟವಾಗಿ ಆ ಮರ್ಯಾದೆಗೆ ಎನಿಯಸ್ ಅರ್ಹನಾಗಿದ್ದ. ಇಟಲಿಯ ಒಂದು ಭಾಗವಾದ ರೂಡಿಯಿ ಅವನ ಜನ್ಮಸ್ಥಾನ. ಅವನ ತಾಯಿನುಡಿ ಅಸ್ಕನ್. ರೂಡಿಯಿ ಮೇಲೆ ಗ್ರೀಸಿನ ಪ್ರಭಾವವೂ ಇದ್ದದ್ದರಿಂದ ಅವನಿಗೆ ಗ್ರೀಕ್ ನುಡಿಯ ಪರಿಚಯವೂ ಆಗಿತ್ತು. ರೋಮನರ ಸೈನ್ಯಕ್ಕೆ ಸೇರಿ, ನೂರರ ನಾಯಕನಾಗಿ, ಸಾರ್ಡೀನಿಯದ ಕದನರಂಗದಲ್ಲಿ ಭಾಗವಹಿಸಿದ. ಅವನ ಯುದ್ಧಕೌಶಲವೂ ಮತ್ತಾವ ಗುಣಲಕ್ಷಣವೂ ಅಲ್ಲಿ ಮುಖ್ಯಾಧಿಕಾರಿ ಯಾಗಿದ್ದ ಕೇಟೊವನ್ನು ಆಕರ್ಷಿಸಿತು. ರೋಮಿಗೆ ಹಿಂತಿರುಗುವಾಗ ಕೇಟೊ ತನ್ನೊಡನೆ

ಎನಿಯಸ್ಸನ್ನು ಕರೆದುಕೊಂಡು ಹೋದ. ತನ್ನ ಮಿಕ್ಕ ಮೂವತ್ತು ಮೂವತ್ತೈದು ವರ್ಷವನ್ನೆಲ್ಲ ಎನಿಯಸ್ ರೋಮಿನಲ್ಲೇ ಕಳೆದ. ಆಸ್ಕನ್, ಗ್ರೀಕ್, ಲ್ಯಾಟಿನ್ ಈ ಮೂರು ಭಾಷೆಗಳಲ್ಲೂ ಆತ ಉತ್ಕೃಷ್ಟ ಪಾಂಡಿತ್ಯವನ್ನು ಸಂಪಾದಿಸಿಕೊಂಡು ತನಗೆ ಹೃದಯಗಳು ಮೂರು–ಎಂದು ಹೇಳಿಕೊಳ್ಳುತ್ತಿದ್ದನಂತೆ. ಉನ್ನತ ವಂಶಸ್ಥರೊಂದಿಗೂ ಧನವಂತರೊಂದಿಗೂ ಬೇಕಾದಷ್ಟು ಬಳಕೆಯಿದ್ದರೂ ಸಾಮಾನ್ಯ ಮಂದಿಯ ಕೇರಿಯಲ್ಲೇ ಆತ ನಿವಾಸ ಮಾಡಿಕೊಂಡು ಬಾಳುತ್ತಿದ್ದ. ಪಾಠ ಹೇಳುತ್ತ ಪುಸ್ತಕ ಬರೆಯುತ್ತ ತನ್ನ ಮಿತಜೀವನಕ್ಕೆ ಸಾಕಾದಷ್ಟು ದ್ರವ್ಯವನ್ನು ಅರ್ಜಿಸಿಕೊಂಡು ಸ್ವತಂತ್ರವಾಗಿ ಬಾಳಬೇಕೆಂಬುದೇ ಅವನ ದೃಢ ನಿರ್ಧಾರ. ಆ ಧ್ಯೇಯವನ್ನು ಕಾಪಾಡಿಕೊಂಡ.

ಎನಿಯಸ್ ರೋಮಿಗೆ ಕಾಲಿಟ್ಟ ಹೊತ್ತು ಅವನಿಗೆ ಶುಭಪ್ರದ ಸಮಯವಾಯಿತು. ಗ್ರೀಕ್ ರುದ್ರ ನಾಟಕಗಳನ್ನು ಲ್ಯಾಟಿನ್ನಿಗೆ ತಂದು ಉಚ್ಚ ಸಾಹಿತಿಗಳೆಂದೆನ್ನಿಸಿಕೊಂಡಿದ್ದ ಅಂಡ್ರಾನಿಕಸ್, ನೀವಿಯಸ್ ಇಬ್ಬರೂ ಕೆಲವು ಸಂವತ್ಸರಗಳ ಹಿಂದೆಯೇ ಸತ್ತುಹೋಗಿದ್ದರು. ತೆರವಾದ ಅವರ ಸ್ಥಾನ ಎನಿಯಸ್ಸನದಾಯ್ತು. ಹೀಗಾದರೂ ಆಗ ವಿನೋದನಾಟಕಕಾರ ಪ್ಲಾಟಸನ ಪ್ರಭಾವ ಅತಿಶಯವಾಗಿ ಹರಡಿತ್ತಾಗಿ, ಎನಿಯಸ್ ದೊಡ್ಡ ಸವಾಲೊಂದನ್ನು ಎದುರಿಸಬೇಕಾಯಿತು. ರಸಿಕರ ಅಭಿರುಚಿಯನ್ನು ರುದ್ರನಾಟಕದ ಕಡೆಗೆ ಸೆಳೆಯಬೇಕು, ತನ್ಮೂಲಕ ಉದಾತ್ತ ತತ್ತ್ವಗಳೂ ಮೇಲ್ಮಟ್ಟದ ಸಂಸ್ಕೃತಿಯೂ ಅವರಿಗೆ ಅಪೇಕ್ಷಣೀಯ ವಾಗುವಂತೆ ಮಾಡಬೇಕು. ಆ ಮಹತ್ಕಾರ್ಯಕ್ಕೆ ಅನುವಾಗಬಲ್ಲ ವಿದ್ವತ್ತೂ ಶಕ್ತಿಯೂ ಎನಿಯಸ್ಸಿನಲ್ಲಿತ್ತು. ಅಲ್ಲದೆ ಅನೇಕ ಕುಲೀನರೂ ಶ್ರೀಮಂತರೂ ಘನತತ್ತ್ವಗಳನ್ನು ಕಲಿಯಲು ಆತುರರಾಗಿದ್ದರು; ಸಂಸ್ಕೃತರೆನ್ನಿಸಿಕೊಳ್ಳುವ ಹೆಬ್ಬಯಕೆಯೂ ಅವರಲ್ಲಿ ಮೂಡಿ ಬಂದಿತ್ತು. ಆದ್ದರಿಂದ ಎನಿಯಸ್ಸನ ಕೆಲಸ ಅಷ್ಟೇನೂ ಕಷ್ಟಕರವಾಗಿರಲಿಲ್ಲ. ಪ್ರಚಂಡ ಪ್ರತಿಭೆಯೇನೂ ಅವನಲ್ಲಿ ಇಲ್ಲದಿದ್ದುದರಿಂದ, ಅವನ ಎತ್ತರ ಅವರಿಗೆ ನಿಲುಕಬಹುದಾಗಿದ್ದರಿಂದ, ಅವನ ಬರವಣಿಗೆ ಅವರ ಮೆಚ್ಚಿಕೆಗೆ ಪಾತ್ರವಾಗಿ, ಅವರಲ್ಲಿ ಜ್ಞಾನವಿಕಾಸವನ್ನುಂಟುಮಾಡಿತು.

ಉಪದೇಶಪ್ರಮುಖ ಪದ್ಯ, ವಿನೋದ ನಾಟಕ, ವಿಡಂಬನ ಕಾವ್ಯ, ಜಿಜ್ಞಾಸಾತ್ಮಕ ಪದ್ಯ, ನಾಟುನುಡಿ ಮುಂತಾದ ಹಲವು ಪ್ರಕಾರದ ಲೇಖನಗಳು ಎನಿಯಸ್ಸನಿಂದ ನಿರ್ಮಿತವಾದುವು. ಆದರೂ ಅವನಿಗೆ ಕೀರ್ತಿ ತಂದ ಕಾವ್ಯಪ್ರಭೇದಗಳು ಎರಡು: ರುದ್ರನಾಟಕ, ಪದ್ಯ ಬಖೈರು (ಅನಲ್ಸ್). ಅವನದೆಂದು ನಿಶ್ಚಯಿಸಿರುವ 25 ಗಂಭೀರ ನಾಟಕಗಳ ಪಟ್ಟಿಯಿದೆ. ಅವುಗಳಲ್ಲಿ ಒಂದೂ ಪೂರ್ತಿಯಾಗಿ ಉಪಲಬ್ಧವಾಗಿಲ್ಲ; ಪ್ರತಿಯೊಂದರಿಂದಲೂ ಚೂರುಪಾರು ಉಳಿದು ಬಂದಿದೆ. ಅಕಿಲೀಸ್, ಏಜ್ಯಾಕ್ಸ್, ಹೆಕೂಬ, ಅಂಡ್ರೊಮಕೆ, ಇಫಿಜೆನಯ–ಮೊದಲಾದ ಅಂಕಿತಗಳನ್ನು ಗಮನಿಸಿದರೆ, ಅವನ ನಾಟಕಗಳಲ್ಲಿ ಅರ್ಧ ಭಾಗ ಟ್ರಾಯ್ ಸಂಗ್ರಾಮಕ್ಕೆ ಸಂಬಂಧಿಸಿದವೆಂದು ತಿಳಿಯುತ್ತದೆ. ಅವನ ಮೀಡಿಯ ಎಂಬ ನಾಟಕ ಯೊರಿಪಿಡೀಸನ ಅದೇ ಹೆಸರಿನ ನಾಟಕದ ಚಾಚೂ ತಪ್ಪದ ಭಾಷಾಂತರ. ಇತರ ಕೆಲವು ನಾಟಕಗಳಲ್ಲೂ ಆ ಮಹಾ ನಾಟಕಕಾರನಿಗೆ ಅವನು ತುಂಬ ಋಣಿ. ಅಷ್ಟೇಕೆ, ಯೊರಿಪಿಡೀಸನೇ ಎನಿಯಸ್ಸನಿಗೆ ಮಾದರಿ, ಹೆಗ್ಗುರಿ. ಹೀಗಿದ್ದರೂ ಕೆಲವು ಪ್ರಧಾನಾಭಿಪ್ರಾಯಗಳಲ್ಲೂ ಒಟ್ಟಿನ ದೃಷ್ಟಿಕೋನದಲ್ಲೂ ಎನಿಯಸ್ ರೋಮ್‌ನವನೆಂಬುದು ಸುಸ್ಪಷ್ಟವಾಗಿ ಎದ್ದು ಕಾಣುತ್ತದೆ. ರೋಮನರ ಸಾಹಸ, ಶಿಸ್ತು, ಶ್ರಮಸಹಿಷ್ಣುತೆ, ನಿಷ್ಕಪಟತ್ವಗಳನ್ನು ಪೌರಾಣಿಕ ಗ್ರೀಕ್ ವೀರರಿಗೂ ಆತ ಅನ್ವಯಿಸುತ್ತಾನೆ.

ಚಿತ್ತ ಕದಡುವ ರಾಗೋದ್ರೇಕವನ್ನೂ, ಹೃದಯಸ್ಪರ್ಶಿಯಾಗುವಂಥ ಕರುಣರಸವನ್ನೂ ಪ್ರತಿಪಾದಿಸುವುದರಲ್ಲಿ ಎನಿಯಸ್ ಪ್ರವೀಣ. ಬಲಿಷ್ಠ ಸಂಭಾಷಣೆಗಳನ್ನು ಜೋಡಿಸುವುದರಲ್ಲೂ ಎತ್ತಿದ ಕೈ. ಭಾವ, ಭಾವನೆಗಳಿಗೆ ಅನುರೂಪವಾಗಿ ಛಂದಸ್ಸನ್ನು ಮಾರ್ಪಡಿಸುವ ಜಾಣ್ಮೆಯೂ ಅವನಲ್ಲಿ ತುಂಬಿತ್ತು. ನಾಟಕಗಳಲ್ಲಿ ಸಾಮಾನ್ಯವಾಗಿ ನಿಧಾನ ನಡಿಗೆಯ ತೂಕವಾದ ಪಂಕ್ತಿಗಳೇ ಹೆಚ್ಚು. ಉದ್ವೇಗದ ಸಂದರ್ಭ ಬಂದಾಗ ಛಂದೋಧೋರಣೆ ತ್ವರಿತಗೊಳ್ಳುತ್ತದೆ. ಆವೇಶ ಅತ್ಯಂತ ತೀವ್ರವಾಗಿ ಅನುಕಾರ್ಯದ ಆಂತರ್ಯ ವಿಪರೀತ ಉಕ್ಕೇರಿದಾಗ ಒಡೆದು ಹೋದಂತೆ ತೋರುವ ಪದಬಂಧ ಕೇಳಿ ಬರುತ್ತದೆ.

ರೋಮನರ ಪೂರ್ವ ಚರಿತ್ರೆಗೆ ಸೇರಿದ ಎರಡು ರೂಪಕಗಳನ್ನು ಎನಿಯಸ್ ರಚಿಸಿದ. ಅವು ಪ್ರಾಯಶಃ ಯಾವುದೋ ವಿಜಯೋತ್ಸವ ಸಮಾರಂಭಕ್ಕಾಗಿ ತಯಾರಾದವು. ಆದ್ದರಿಂದ ಆಲೋಚನೆಗಿಂತ ಹೆಚ್ಚಾಗಿ ದೃಶ್ಯಕ್ಕೆ ರುಚಿಯಾಗುವ ಅಂಶ ಅವುಗಳಲ್ಲಿ ತಾನೇ ತಾನಾಗಿದೆ. (ಎಸ್.ವಿ.ಆರ್.)

ಈತನ ಕಾವ್ಯಕೃತಿ ಹೋಮರನ ಶೈಲಿಯಲ್ಲಿದೆ. ಇದರ ವಸ್ತು ರೋಮಿನ ಇತಿಹಾಸ. ಹದಿನೆಂಟು ಆಶ್ವಾಸಗಳಿಂದ (ಆರುನೂರು ಪದ್ಯ) ಕೂಡಿದ ಈ ಕಾವ್ಯ ಉತ್ಕಟ ರಾಷ್ಟ್ರಪ್ರೇಮ ವನ್ನು ಉದ್ದೀಪನಗೊಳಿಸುವಂಥ ಅಮೋಘವಾದ ಕೃತಿ. ಗ್ರೀಕ್ ಕಾವ್ಯಗಳ, ನಾಟಕಗಳ ಕೇವಲ ಭಾಷಾಂತರವೋ ಅನುಕರಣೆಯೋ ಕಾಣುತ್ತಿದ್ದ ಲ್ಯಾಟಿನ್ ಸಾಹಿತ್ಯದಲ್ಲಿ ಮೊದಲ ಬಾರಿಗೆ ಸ್ವತಂತ್ರವಾದ ಮಹಾಕಾವ್ಯವೊಂದನ್ನು ರಚಿಸಿದ ಈತನಿಗೆ ಆದಿಕವಿ ಎಂಬ ಹೆಸರು ಬಂತು. ರೂಕ್ಷಾವಸ್ಥೆಯಲ್ಲಿದ್ದ ಲ್ಯಾಟಿನ್ ಭಾಷೆಗೆ ತನ್ನ ಲೇಖನಿಯಿಂದ ಕಾವ್ಯದ ಹದವನ್ನು ತಂದುಕೊಟ್ಟ ಕೀರ್ತಿಯೂ ಗ್ರೀಕಿನ ಹೆಕ್ಸಮೀಟರ್ ಛಂದಸ್ಸನ್ನು ಮೊಟ್ಟಮೊದಲಿಗೆ ಲ್ಯಾಟಿನ್ನಿಗೆ ಅಳವಡಿಸಿಕೊಂಡ ಹೆಚ್ಚಳವೂ ಇವನದು. ಲ್ಯಾಟಿನ್ ಭಾಷೆ ಹಾಗೂ ಸಾಹಿತ್ಯಗಳ ಮೇಲೆ ಈತ ಬೀರಿದ ಪ್ರಭಾವ ಗಾಢವಾದುದು. ಬಹಳ ಕಾಲದವರೆಗೂ ಅನೇಕ ಕವಿಗಳಿಗೆ ಈತನ ಕೃತಿಗಳಿಂದಲೇ ಸ್ಫೂರ್ತಿಯೊದಗಿತು. ವರ್ಜಿಲ್ ಕವಿಯೂ ಈತನಿಂದ ಪ್ರಭಾವಿತ ನಾಗಿದ್ದನೆಂಬ ಮಾತೂ ಇದೆ.

ಈತನ ಈ ಕಾವ್ಯದ ಕೆಲವು ತುಣುಕುಗಳು ಮಾತ್ರ ಉಳಿದುಬಂದಿವೆ.

ಈತ ತನ್ನ ಸಮಾಧಿಯ ಮೇಲೆ ಬರೆಯಲೆಂದು ತಾನೆ ಬರೆದಿಟ್ಟ ಚರಮವಾಕ್ಯ ಸ್ಮರಣೀಯವಾಗಿದೆ. ತನ್ನ ಕೃತಿಗಳ ಅಮರತೆಯ ಬಗ್ಗೆ ಎಂಥ ಆತ್ಮಪ್ರತ್ಯಯ ಇವನಿಗಿತ್ತು ಎಂಬುದಕ್ಕೆ ಈ ಮಾತೇ ಸಾಕ್ಷಿ: "ನನ್ನ ಸಾವಿಗಾಗಿ ಯಾರೂ ಅಳಬೇಕಾಗಿಲ್ಲ; ದುಃಖಿಸುತ್ತ ಅಂತ್ಯಸಂಸ್ಕಾರ ಮಾಡಬೇಕಾಗಿಲ್ಲ. ಏಕೆಂದರೆ ಜನರ ಬಾಯಿಂದ ಬಾಯಿಗೆ ಓಡಾಡುತ್ತ ನಾನು ಇನ್ನೂ ಬದುಕಿರುತ್ತೇನೆ." (ಕೆ.ಬಿ.ಪಿ.)

**ಎನ್‌ಸಿನ:** 1468–1529. ಸ್ಪೇನಿನ ಒಬ್ಬ ಕವಿ, ಸಂಗೀತಗಾರ, ಪ್ರಪ್ರಥಮ ನಾಟಕಕಾರ ರಲ್ಲೊಬ್ಬ. ನಿಬ್ರಿಜ ಎಂಬ ಸುಪ್ರಸಿದ್ಧ ಭಾಷಾಶಾಸ್ತ್ರಜ್ಞನ ಬಳಿ ವಿದ್ಯಾಭ್ಯಾಸ ನಡೆಸಿ, ಡ್ಯೂಕ್ ಆಫ್ ಆಲ್ಬ ಎಂಬ ಶ್ರೀಮಂತನ ಆಶ್ರಯ ಪಡೆದ. ಈತ ಬರೆದ ನಾಟಕಗಳನ್ನು ಮೊದಲ ಭಾರಿ ಆಲ್ಬನ ಅರಮನೆಯಲ್ಲಿ ಅಭಿನಯಿಸಲಾಯಿತು. ಸ್ವಂತ ಶ್ರಮ ಹಾಗೂ ಸಾಧನೆಯ ಫಲವಾಗಿ ಲಿಯಾನ್ ಎಂಬಲ್ಲಿನ ಚರ್ಚಿನ ಧಾರ್ಮಿಕಮಂಡಲಿಯ ಸದಸ್ಯತ್ವ ದೊರಕಿಸಿ ಕೊಂಡ. 1496ರಲ್ಲಿ ಈತ ರಚಿಸಿದ ಕ್ಯಾನ್ಸಿಯಾನೆರೊ ಎಂಬ ಉದ್ಗ್ರಂಥದಲ್ಲಿ ಕಾವ್ಯಕಲೆಯನ್ನು ಕುರಿತ ಪ್ರಬಂಧ, ಕೆಲವು ಉತ್ತಮ ಭಾವಗೀತೆಗಳು, ಸಾಂಪ್ರದಾಯಿಕವಾದ ನೀಳ್ಗವನಗಳು, ಧಾರ್ಮಿಕ ಹಾಗೂ ಅನೀತಿಯುತವಾದ ಎಂಟು ನಾಟಕಗಳೂ ಸೇರಿವೆ. ಈ ನಾಟಕಗಳಲ್ಲಿ ವಾಸ್ತವಿಕತೆ ಇದೆ. ಭಾಷೆ ಸುಂದರ ಹಾಗೂ ಸರಳ. ರೋಮ್ ಹಾಗೂ ಸಾಲಮಾಂಕ ನಗರಗಳಲ್ಲಿ ಅಭಿನಯಿಸಲಾದ ಇವನ ಹಲವು ನಾಟಕಗಳು ಫರ್ನಾಂಡೆಸ್ ವಿಸೆಂಟ್, ಟೊರೆಸ್ ನಹರೋ ಮುಂತಾದ ಇತರ ನಾಟಕಕಾರರ ಮೇಲೆ ಪ್ರಭಾವ ಬೀರಿದವೆನ್ನುತ್ತಾರೆ. ಒಳ್ಳೆಯ ಸಂಗೀತಗಾರನಾಗಿದ್ದ ಈತ ಹಲವು ಸೊಗಸಾದ ಕಲಾತ್ಮಕವಾದ ಗೀತಗಳನ್ನು ರಚಿಸಿದ್ದಾನೆ. (ಎಚ್.ಕೆ.ಆರ್.)

**ಎಪಾಕ್ಸಿ ರಾಳಗಳು:** ಎಪಾಕ್ಸೈಡ್ ಪುಂಜಗಳ



ಪಟುತ್ವದ ಆಧಾರದ ಮೇಲೆ ನಿರ್ಮಿತವಾದ ಉಷ್ಣದಿಂದ ಘನೀಭೂತವಾಗುವ (ಥರ್ಮೊಸೆಟಿಂಗ್) ರಾಳಗಳು. ಔದ್ಯೋಗಿಕವಾಗಿ ಎಪಿಕ್ಲೋರೋಹೈಡ್ರಿನ್ ಮತ್ತು ಬಿಸ್‌ಫೀನಾಲ್ A ಗಳ ಸಂಸ್ಕರಣದಿಂದ ತಯಾರಾಗುವ ರಾಳ ಹೆಚ್ಚು ಬಳಕೆಯಲ್ಲಿದೆ. ಆರೋಮ್ಯಾಟಿಕ್ ಸಂಯುಕ್ತವಾದ A ಬದಲು ಗ್ಲಿಸರಾಲ್ ಮುಂತಾದ ಆಲಿಫ್ಯಾಟಿಕ್ ಪಾಲಿಯಾಲುಗಳನ್ನು [ಒಂದಕ್ಕಿಂತ ಹೆಚ್ಚು ಸಂಖ್ಯೆಯ (OH) ಗುಂಪುಳ್ಳ ಆಲ್ಕೊಹಾಲ್] ಉಪಯೋಗಿಸಬಹುದು. ಇಂಥ ರಾಳಗಳ ಕೊನೆಯಲ್ಲಿ ಗ್ಲೈಸಿಟೈಲ್ ಈಥರ್ $\text{-O-CH}_2\text{-}\overline{\text{CH}_2\text{O-CH}_2}\text{-}$-ಗಳಿರುತ್ತದೆ. ಇವುಗಳಲ್ಲಿ (OH) ಪುಂಜಗಳ ಸಂಖ್ಯೆಯೂ ಹೆಚ್ಚು. ಇವನ್ನು ಅಮೀನುಗಳಿಂದ ಪಕ್ವಮಾಡಬಹುದು (ಕ್ಯೂರ್).

ಕುರ್ ಅಸಿಟಿಕ್ ಆಮ್ಲದಿಂದ ($CH_3CO.O.OH$) ಉತ್ಕರ್ಷಿತವಾದ ಬಹು ಓಲಿಫಿನುಗಳಿಂದ ಬಳಕೆಯಲ್ಲಿರುವ ಇನ್ನೊಂದು ಬಗೆಯ ಎಪಾಕ್ಸಿ ರಾಳಗಳು ತಯಾರಾಗುತ್ತವೆ. ಈ ಅಣುಗಳ ಕೊನೆಯಲ್ಲಿಯೂ ಒಳಭಾಗದಲ್ಲಿಯೂ ಅನೇಕ ಎಪಾಕ್ಸೈಡ್ ಗುಂಪುಗಳಿವೆ. ಇವನ್ನು ಅನ್‌ಹೈಡ್ರೈಡುಗಳಿಂದ (ತಮ್ಮ ಘಟಕಗಳಿಂದ ನೀರಿನ ಅಂಶಗಳನ್ನು ಕಳೆದುಕೊಂಡಿರುವ ಅಣುಗಳು) ಪಕ್ವಮಾಡಬಹುದಾದರೂ ಹೆಚ್ಚಿನ ಉಷ್ಣತೆಯನ್ನು ಒದಗಿಸಬೇಕಾಗುವುದು.

ಮಾರುಕಟ್ಟೆಯ ದೃಷ್ಟಿಯಿಂದ ಈ ಎರಡು ತರಹೆಯ ರಾಳಗಳನ್ನು ಅನೇಕ ಬಗೆಯ ಮಾರ್ಪಾಟುಗಳಿಗೆ ಗುರಿಮಾಡಲಾಗಿದೆ. ಈ ರಾಳಗಳಿಗೆ ಅಗ್ನಿನಿರೋಧಕ ಗುಣಗಳನ್ನು ಕೊಡಲು ಕ್ಲೋರೋಬಿಸ್‌ಫಿನಾಲ್ A ಯನ್ನು ಉಪಯೋಗಿಸುತ್ತಾರೆ. ಎಪಾಕ್ಸಿನೋವೊಲಾಕ್ ರಾಳಗಳನ್ನು ಎಪಿಕ್ಲೋರೋಹೈಡ್ರಿನ್ ಮತ್ತು ಫೀನಾಲ್ ಫಾರ್ಮಾಲ್ಡೀಹೈಡುಗಳ (ನೋವೊಲಾಕ್) ಪ್ರತಿಕ್ರಿಯೆಯಿಂದ ಪಡೆಯುತ್ತಾರೆ. ಈ ಬೃಹದಣುಗಳಲ್ಲಿ ಎಪಾಕ್ಸೈಡ್ ಗುಂಪು ಪುನರಾವೃತ್ತಿಗೊಳ್ಳುವುದರಿಂದ ಇವು ಎಪಿಕ್ಲೋರೋಹೈಡ್ರಿನ್ ರಾಳಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಉಷ್ಣವನ್ನು ತಡೆದುಕೊಳ್ಳಬಲ್ಲವು. ಆದ್ದರಿಂದ ಇವು ಉತ್ತಮದರ್ಜೆಯ ಅಂಟುಪದಾರ್ಥಗಳು (ಅಡ್‌ಹೆಸಿವ್).

ರಾಸಾಯನಿಕ ಪಟುತ್ವವುಳ್ಳ ಎಪಾಕ್ಸಿರಾಳಗಳು, ಸುಭದ್ರವಾದ ಅಡ್ಡಬಂಧಗಳಿರುವ (ಕ್ರಾಸ್ ಲಿಂಕೇಜಸ್), ಬಹ್ವಣು ಪಂಜರಗಳನ್ನು ರಚಿಸುತ್ತವೆಯಾದ್ದರಿಂದ ಇವು ಗಡುಸಾಗಿವೆ. ಉತ್ತಮದರ್ಜೆಯ ಅಂಟುವಸ್ತುಗಳು ರಾಸಾಯನಿಕ ಕ್ರಿಯೆಗಳಿಂದ ಹಾನಿಹೊಂದುವುದಿಲ್ಲ; ತುಕ್ಕು ಹಿಡಿಯುವುದಿಲ್ಲ. ಘನೀಭೂತವಾಗಿ ಪಕ್ವವಾಗುವುದರಿಂದ ಹೊರಹೊರಡುವ ವಸ್ತುಗಳ ಅಥವಾ ಅನಿಲಗಳ ಸಮಸ್ಯೆ ಇರುವುದಿಲ್ಲ. ಆದ್ದರಿಂದ ಎರಕಹೊಯ್ಯುವಾಗ ಶೂನ್ಯಪ್ರದೇಶಗಳ ಅಥವಾ ಅನಿಲದ ಗುಳ್ಳೆಗಳ ಬಂಧಕವಿಲ್ಲದೆ ದೊಡ್ಡ ಪ್ರಮಾಣದಲ್ಲಿ ಅಚ್ಚುಗಳನ್ನು ತಯಾರಿಸಬಹುದು. ಎರಕಹೊಯ್ದ ತರುವಾಯ ಕುಗ್ಗುವುದೂ ಇಲ್ಲ.

**ಉಪಯೋಗಗಳು:** ಮನೆಯಲ್ಲಿ ಉಪಯೋಗಿಸುವ ಸಲಕರಣೆಗೆ ಮೇಲ್ಪ್ರ ಲೇಪನೆಗೆ, ಅಂಟುಪದಾರ್ಥಗಳಂತೆ, ಟ್ಯಾಂಕುಗಳು, ಕೊಳವೆಗಳು, ವಿಮಾನದ ಭಾಗಗಳು–ಅದರಲ್ಲೂ ಲೋಹ, ಗಾಜು ಮತ್ತು ಪಿಂಗಾಣಿವಸ್ತುಗಳ–ಪದರಗಳನ್ನು ಜೋಡಿಸಲು, ಲೋಹಗಳನ್ನು ರೂಪಿಸುವ ಆಯುಧಗಳನ್ನು ಮತ್ತು ಅಚ್ಚುಗಳನ್ನು ಎರಕಹಾಕಲು, ವಿದ್ಯುತ್ ಸಲಕರಣೆಗಳನ್ನು ಹೊದಿಸಲು (ಎನ್‌ಕ್ಯಾಪ್ಸುಲೇಟ್) ಉಪಯೋಗಿಸುತ್ತಾರೆ. ಗಾಜಿನ ನೂಲಿಗಳ ಒತ್ತಾಸೆಯನ್ನು ಕೊಟ್ಟು ಒತ್ತಡ ಪಾತ್ರೆಗಳು (ಪ್ರೆಷ್ಯರ್ ವೆಸಲ್ಸ್), ರಾಕೆಟ್ಟಿನ ಕವಚ, ನೆಲಗಳ ಮತ್ತು ಗೋಡೆಗಳ ಮೇಲ್ಪ್ರ ವಸ್ತುವಾಗಿ ಮತ್ತು ನ್ಯೂಟ್ರಾನುಗಳಿಂದ ರಕ್ಷಿಸುವ ಕವಚವಸ್ತುವಾಗಿಯೂ ಉಪಯೋಗವಾಗುತ್ತವೆ. (ಎಚ್.ಎಸ್.ಎಸ್)

**ಎಪಿಕರ್ಮಸ್:** ಪ್ರಶ.ಪೂ. ಸು. 540–450. ಪ್ರಖ್ಯಾತಿ ಪಡೆದ ಪ್ರಾಚೀನ ಗ್ರೀಕರಲ್ಲಿ ಒಬ್ಬ. ವಿನೋದನಾಟಕಕಾರ. ಹಳೆಯ ವಿನೋದ ನಾಟಕ ಪ್ರಕಾರಕ್ಕೆ ಇವನೇ ಪಿತನೆಂಬ ಹೊಗಳಿಕೆ ಉಂಟು. ಹಾಗೂ ಪೈತಾಗರಸ್ ಪಂಥಕ್ಕೆ ಸೇರಿದ ದಾರ್ಶನಿಕನೂ ಹೌದು. ಅಷ್ಟೊಂದು ಪ್ರಸಿದ್ಧನಾಗಿದ್ದರೂ ಅವನ ಕೃತಿಗಳಲ್ಲಿ ಒಂದೂ ಉಪಲಬ್ಧವಿಲ್ಲ. ಸಿಕ್ಕಿರುವ ಚೂರುಪಾರುಗಳ ಮೊತ್ತವೂ ಅತಿ ಕಡಿಮೆ. ಅವನ ಜೀವಿತಕಾಲವಾಗಲಿ ಜೀವನದ ವಿವರಗಳಾಗಲಿ ಖಚಿತವಾಗಿ ತಿಳಿದುಬಂದಿಲ್ಲ. ಪ್ರಶ.ಪೂ.486 ಅವನ ಉಚ್ಛ್ರಾಯ ಸಮಯವೆಂದು ವಿದ್ವಾಂಸರು ಊಹಿಸಿದ್ದಾರೆ. ಕಸ್ ಎಂಬ ದ್ವೀಪದಲ್ಲಿ ಜನಿಸಿ, ಮೊದಲು ಮೆಗಾರಾಕ್ಕೆ ತೆರಳಿ ಕೆಲಕಾಲವಿದ್ದು, ಅನಂತರ ಸೈರಕ್ಯೂಸಿಗೆ ಹೋಗಿ ನೆಲಸಿದನೆಂದೂ, ಅಲ್ಲೇ 90ನೆಯ ವಯಸ್ಸಿನಲ್ಲಿ ಅವನಿಗೆ ಮರಣ ಒದಗಿತೆಂದೂ ಜನಶ್ರುತಿ ಹೇಳುತ್ತದೆ.

ಎಪಿಕರ್ಮಸನ ವಿನೋದನಾಟಕಗಳನ್ನು ಮೂರು ಗುಂಪಾಗಿ ವಿಭಾಗಿಸಿದ್ದಾರೆ. ಪ್ರಾಮಿತಿಯಸ್, ಸೈಕ್ಲೋಪ್ಸ್ ಮುಂತಾದ ವೀರೇತಿಹಾಸದ ಘಟನಾವಳಿಗಳನ್ನು ವಿಕಟಾನುಕರಣ ಮಾಡುವವು ಒಂದು ರಾಶಿ. ಸಾಮಾನ್ಯ ಬಾಳಿನ ಸಂಗತಿಗಳನ್ನು ಪರಿಹಾಸಗೈಯುವ ಮೂಕನಾಟಕಗಳು (ಮೈಮ್) ಎರಡನೆಯ ರಾಶಿ. ಮೂರನೆಯ ವಿಧದ ವಿರಚನೆಗಳನ್ನು ಸಂವಾದರೂಪದ ಪ್ರಬಂಧ–ಎನ್ನಬೇಕು. ಒಂದರಲ್ಲಿ ಗಂಡು ಬುದ್ಧಿ, ಹೆಣ್ಣು ಬುದ್ಧಿಗಳ ನಡುವೆ ವಾಗ್ವಾದ ನಡೆಯುತ್ತದೆ. ಅವನ ನಾಟಕಗಳು ತ್ವರೆ, ಓಡಾಟ, ಸಡಗರಗಳಿಂದ ತುಂಬಿರುತ್ತಿದ್ದವು. ಎರಡು ಮೂರು ಸುಧಾರಣೆಗಳನ್ನು ಎಸಗಿ ಈತ ವಿನೋದ ನಾಟಕವನ್ನು ಸ್ವಲ್ಪ ಮೇಲಕ್ಕೆ ಎತ್ತಿದ ನಿಜಾಂಶವನ್ನು ಮರೆಯಲಾಗದು. ಅಶ್ಲೀಲತೆಯನ್ನೂ ಗ್ರಾಮ್ಯ ಗೇಲಿಯನ್ನೂ ಆದಷ್ಟು ಈತ ತೊಡೆದು ಹಾಕಿದ: ಮೋದಗಾರರ ಕೂಟಕ್ಕೆ ಕೇಂದ್ರ ಸ್ಥಾನವನ್ನು ಕೊಟ್ಟು, ಸಂಭಾಷಣೆಯ ಹೊಣೆಗಾರಿಕೆಯನ್ನು ಅದಕ್ಕೆ ವಹಿಸಿ, ಒಂದು ರೀತಿಯ ಸಂವಿಧಾನ ವಿನೋದನಾಟಕದಲ್ಲೂ ಕಾಣಬರುವಂತೆ ಮಾಡಿದ. ಮೇಲಾಗಿ, ಈ ವ್ಯಕ್ತಿಯನ್ನು ಕುರಿತು ವೈಯಕ್ತಿಕ ವಿಡಂಬನವನ್ನು ಬದಿಗೊತ್ತಿ, ಪರಾವಲಂಬಿ, ಹಳ್ಳಿಗ, ದೃಶ್ಯಕುತೂಹಲಿ, ಮುಂತಾದ ಮನುಷ್ಯ ನಮೂನೆಗಳನ್ನು ಕೆತ್ತಿ ನಿಲ್ಲಿಸುವುದೇ ಅವನ ಉದ್ದೇಶವಾಗಿದ್ದಂತೆ ತೋರುತ್ತದೆ. ನಾಟಕಗಳಲ್ಲಿ ಘನವಾದ ಅಭಿಪ್ರಾಯಗಳು ಮತ್ತೆ ಮತ್ತೆ ಬರುತ್ತವೆ.

ವಿನೋದನಾಟಕದ ಶುದ್ಧಿ ತನ್ನ ಕೈಯಿಂದಲೇ ಆಯಿತೆಂದು ಅರಿಸ್ಟೋಫೆನೀಸ್ **(ನೋಡಿ)** ಹೇಳಿಕೊಂಡಿರುವುದು ಪೂರ್ಣ ಸತ್ಯವಲ್ಲ. ಅವನಿಗಿಂತ ಮುಂಚೆಯೇ ಎಪಿಕರ್ಮಸ್ ಆ ಉದ್ಯಮಕ್ಕೆ ಕೈ ಹಾಕಿದ್ದ; ಕೊಂಚಮಟ್ಟಿಗೆ ಸಾಧಿಸಿಯೂ ಇದ್ದ. ಆದರೂ ಕಲೆಗಾರಿಕೆಯ ದೃಷ್ಟಿಯಿಂದ ನೋಡಿದರೆ, ಎಪಿಕರ್ಮಸನ ವಿನೋದ ನಾಟಕದ ಛಂದಸ್ಸು ಸಡಿಲ, ಶಬ್ದಕೋಶ ಒರಟೊರಟು. (ಎಸ್.ವಿ.ಆರ್.)

**ಎಪಿಕ್ಟೆಟಸ್:** ಪ್ರಶ. ಸು. 68–138. ರೋಮ್ ದೇಶದ ದಾರ್ಶನಿಕ; ಸ್ಟೋಯಿಕ್ ಪಂಥಕ್ಕೆ ಸೇರಿದವ. ಉಪದೇಶಕನಾಗಿ ರೋಮಿನಲ್ಲಿ ವಾಸಿಸುತ್ತಿದ್ದ. ಪ್ರ. ಶ. 89ರಲ್ಲಿ ಡಾಮಿಷಿಯನ್ ಎಂಬ ಆಡಳಿತಗಾರ ದಾರ್ಶನಿಕರನ್ನೆಲ್ಲ ಇಟಲಿಯಿಂದ ಓಡಿಸಿಬಿಟ್ಟ. ಆಗ ಎಪಿಕ್ಟೆಟಸ್ ಎಪೈರಸ್‌ನಲ್ಲಿ ನಿಕೋಪೊಲಿಸ್ ಎಂಬಲ್ಲಿಗೆ ಹೋಗಿ ಮರಣಪರ್ಯಂತ ಅಲ್ಲೇ ನೆಲಸಿದ. ತನ್ನ ಇಡೀ ಜೀವಮಾನವೆಲ್ಲ ಕುಂಟುತನದ, ಕಡುಬಡತನದ ನೋವನ್ನು ಅನುಭವಿಸಿದ. ಅವನಿಗೆ ತುಂಬ ಶ್ರದ್ಧಾಭಕ್ತಿಯುಳ್ಳ ಎರಿಯನ್ ಎಂಬ ಶಿಷ್ಯನಿದ್ದ. ಎಪಿಕ್ಟೆಟಸನ ಉಪದೇಶಗಳ ಟಿಪ್ಪಣಿಗಳನ್ನು ಈತ ಬರೆದಿಟ್ಟ. ಅದಕ್ಕೆ ಕೈಪಿಡಿ ಎಂದು ಹೆಸರು. ಎಪಿಕ್ಟೆಟಸ್ ಬೋಧಿಸಿದ ನೀತಿ ಬಹಳ ಉದಾತ್ತವಾದುದು. ಅದರಲ್ಲಿ ಮುಖ್ಯವಾದವು ಇವು: ಜೀವನದಲ್ಲಿ ಬುದ್ಧಿಯೇ ನಮ್ಮ ದಾರಿಯ ದೀಪ. ಅದಕ್ಕೆ ಅನುಸಾರವಾದ ನಡೆಯೇ ಈಶ್ವರ ಮೆಚ್ಚುವಂಥದು. ನಮ್ಮ ಆತ್ಮಸಾಕ್ಷಿಗೆ ಅನುಸಾರವಾಗಿ ನಾವು ನಡೆದುಕೊಳ್ಳಬೇಕು. ತತ್ತ್ವಗಳನ್ನು ಅನುಷ್ಠಾನದಲ್ಲಿ ತರಲು ಸರ್ವಪ್ರಯತ್ನವನ್ನೂ ಮಾಡಬೇಕು. ಈಶ್ವರನು ನಮಗಾಗಿ ಏರ್ಪಡಿಸಿರುವ ಕಟ್ಟುಕಟ್ಟಳೆಗಳಿಗೆ ತಲೆಬಾಗಿ ನಡೆಯುವುದು ನಮ್ಮ ಕರ್ತವ್ಯ. ಜೀವನದಲ್ಲಿ ಸೌಶೀಲ್ಯವೊಂದೇ ಪರಮಹಿತವನ್ನು ಕೊಡಬಲ್ಲುದು. ಆದ್ದರಿಂದ ಬಾಳಿನಲ್ಲಿ ನೀತಿತತ್ತ್ವಗಳೇ ಅತಿ ಶ್ರೇಷ್ಠವಾದವು. ಮನುಷ್ಯ ಸುಖಿಯಾಗಲು ಇಂದ್ರಿಯಗಳನ್ನು ಸಂಯಮಗೊಳಿಸಿಕೊಳ್ಳಬೇಕಲ್ಲದೆ ಸುಖದುಃಖಗಳಿಗೆ ಉದಾಸೀನನಾಗಿರಲು ಅಭ್ಯಾಸಮಾಡಬೇಕು **(ನೋಡಿ– ಜೂನೋ; ಸ್ಟೋಯಿಕ್ ಪಂಥ)**. (ಎಂ.ವೈ.)

**ಎಪಿಕ್ಯೂರಸ್:** ಪ್ರಶ. ಪೂ. 342–270. ಗ್ರೀಕ್ ದಾರ್ಶನಿಕ, ಎಪಿಕ್ಯೂರಿಯನಿಸಮ್ ಎಂಬ ಸಿದ್ಧಾಂತದ ಸ್ಥಾಪಕ. ಈತ ಅಥೆನ್ಸಿನ ಪೌರ. ಹುಟ್ಟಿದ್ದು ಸೇಮಾಸ್‌ನಲ್ಲಿ, 323ರಲ್ಲಿ ಅಥೆನ್ಸ್ ನಗರಕ್ಕೆ ಬಂದ. ಅಲ್ಲಿಂದ ಕೊಲೊಫನ್ ಎಂಬ ಸ್ಥಳಕ್ಕೆ ತೆರಳಿದ. ಅಲ್ಲಿ ತಂದೆಯೊಂದಿಗೆ ಅಧ್ಯಾಪಕವೃತ್ತಿಯನ್ನು ಕೈಗೊಂಡ. ಮೊದಮೊದಲು ವ್ಯಾಕರಣದ ಪಾಠವನ್ನು ಹೇಳಿಕೊಡಲು ತೊಡಗಿದ. ಅನಂತರ ಅವನ ಆಸಕ್ತಿ ದರ್ಶನಶಾಸ್ತ್ರದ ಕಡೆಗೆ ಹೊರಳಿತು. 306ರಲ್ಲಿ ಮತ್ತೆ ಅಥೆನ್ಸ್‌ಗೆ ಬಂದ. ಅಲ್ಲೊಂದು ಉದ್ಯಾನವನವನ್ನು ಕೊಂಡು ಅಲ್ಲಿ ತನ್ನ ಶಾಲೆಯನ್ನು ಸ್ಥಾಪಿಸಿದ. ತನ್ನ ಅಂತ್ಯಕಾಲದವರೆಗೂ ಅಲ್ಲಿಯೇ ಇದ್ದ. ಈತ ರಾಜಕಾರಣದಲ್ಲಿ ಪ್ರವೇಶಿಸಲು ಒಡಂಬಡಲಿಲ್ಲ. ಎಲೆಯಮರೆಯ ಕಾಯಿಯಂತೆ ಅಗೋಚರನಾಗಿ ಬಾಳು–ಎನ್ನುವುದೇ ಇವರ ಜೀವನದ ಸೂತ್ರವಾಗಿತ್ತು. ಈತ ಒಳ್ಳೆಯ ಪೌರನಾಗಿದ್ದ, ಒಳ್ಳೆಯ ಸ್ನೇಹಿತನಾಗಿದ್ದ. ಆಹಾರ ವಿಹಾರಗಳಲ್ಲಿ ಬಹು ಮಿತ. ಇಹಲೋಕದಲ್ಲಿ ಒಳ್ಳೆಯ ಬಾಳು ಬಾಳಬೇಕೆಂಬುದು ಇವನ ಧ್ಯೇಯವಾಗಿತ್ತು. ತತ್ತ್ವಜಿಜ್ಞಾಸೆಯ ವ್ಯರ್ಥಾಲಾಪದಲ್ಲಿ ಕಾಲಕಳೆಯುವುದಕ್ಕಿಂತಲೂ ಜೀವನದ ಅನುಷ್ಠಾನದ ಕಡೆಗೆ ಹೆಚ್ಚು ಗಮನಕೊಡಬೇಕೆಂದು ಬೋಧಿಸಿದ. ಜೀವನದ ಗುರಿ ಸುಖ ಅನ್ನುವ ಮಾತನ್ನು ಈತ ಅದರ ಸಾಧಾರಣವಾದ ವಿಷಯಸುಖ ಅನ್ನುವ ಅರ್ಥದಲ್ಲಿ ಉಪಯೋಗಿಸಲಿಲ್ಲ. ಮನಶ್ಶಾಂತಿ ಇಲ್ಲದೆ ಸುಖ ಅಸಾಧ್ಯವೆಂದು ಬೋಧಿಸಿದ. ನಿಜವಾದ ಸುಖಕ್ಕೆ ಮನಸ್ಸಿನ ನೆಮ್ಮದಿ ಆವಶ್ಯಕವೆಂದ. ಈ ನೆಮ್ಮದಿ ತಮ್ಮ ಆಸೆಗಳನ್ನು ಕಡಿಮೆ ಮಾಡಿಕೊಳ್ಳುವುದರಿಂದ, ಆತ್ಮಸಂಯಮದಿಂದ, ಜೀವನವನ್ನು ಸರಳವಾಗಿ ಮಾಡಿಕೊಳ್ಳುವುದರಿಂದ ಪ್ರಾಪ್ತವಾಗುವುದೆಂದು ಇವನ ಅಭಿಪ್ರಾಯ. ಈತ ಸತ್ಸಂಗಕ್ಕೆ ತುಂಬಾ ಬೆಲೆ ನೀಡಿದ. ಇವನ ಜೀವನ ಸ್ವಲ್ಪಮಟ್ಟಿಗೆ ನಿವೃತ್ತಿಪರವಾಗಿತ್ತು. ಮನಶ್ಶಾಂತಿಯನ್ನು ಕೆಡಿಸುವ ಜನಸಂದಣಿಯಲ್ಲಿ ಈತ ಸೇರುತ್ತಿರಲಿಲ್ಲ. ಸ್ವಲ್ಪಮಟ್ಟಿಗೆ ಅನಾಸಕ್ತಿ ಮನಸ್ಸಿನ ಸುಖಶಾಂತಿಗಳಿಗೆ ಆವಶ್ಯಕವೆಂದು ಈತನ ತೀರ್ಮಾನ. ಪ್ರಧಾನತಃ ಈತ ಭೌತವಾದಿ. ಅಲೌಕಿಕವಾದ ವಿಷಯಗಳಲ್ಲಿ ಇವನಿಗೆ ಶ್ರದ್ಧೆ ಇರಲಿಲ್ಲ. ಇವನ ಭೌತವಾದ ಚಾರ್ವಾಕ ದರ್ಶನಕ್ಕೆ ಸದೃಶವಾಗಿದ್ದರೂ ವಿಷಯಸುಖವನ್ನೇ ಅರಸುವ ಚಾರ್ವಾಕ ಇವನಾಗಿರಲಿಲ್ಲ. ಇವನನ್ನು ಸುಶಿಕ್ಷಿತ ಚಾರ್ವಾಕನೆಂದು ಕರೆಯಬಹುದು. ಎಪಿಕ್ಯೂರಸನ ಬೋಧನೆಯನ್ನು ಎಪಿಕ್ಯೂರಿಯನಿಸಂ ಎಂದು ಕರೆಯುತ್ತಾರೆ. ಅತ್ಯುತ್ತಮವಾದ ಸುಖ, ಧರ್ಮ ಮತ್ತು ಶಾಂತಿಗಳಿಂದ ದೊರೆಯತಕ್ಕದ್ದು. ಅಂಥ ಸುಖವನ್ನು ಸಂಪಾದಿಸುವುದು ಮಾನವನ ಕರ್ತವ್ಯವೆಂದು ಗುರು ಬೋಧಿಸಿದರೂ ಅವನ ಅನುಯಾಯಿಗಳು ಈ ಸುಖದ ಸ್ವರೂಪವನ್ನು ಆಭಾಸಗೊಳಿಸಿ ಅದನ್ನು ಇಂದ್ರಿಯಭೋಗೇಚ್ಛೆಯನ್ನಾಗಿಸಿದರು. ಈಗ ರೂಢಿಯಲ್ಲಿರುವುದು ಈ ಆಭಾಸದ ಅರ್ಥವೇ. (ಎಂ.ವೈ.)

**ಎಪಿಗ್ರಾಫಿಯ ಇಂಡಿಕ:** ಭಾರತ ದೇಶದ ಇತಿಹಾಸ–ಸಂಸ್ಕೃತಿಗಳ ತಿಳಿವಳಿಕೆಗಾಗಿ ದೊರೆಯುವ ಅಸಂಖ್ಯಾತ ಶಾಸನಗಳ ಶಾಸ್ತ್ರೀಯ ಅಧ್ಯಯನಕ್ಕಾಗಿ ಸರ್ಕಾರದ ಸಹಾಯ ಮತ್ತು ನಿರ್ದೇಶನದಿಂದ ಪ್ರಕಟವಾಗುತ್ತಿರುವ ಪತ್ರಿಕೆ. ಮೊಟ್ಟಮೊದಲ ಸಂಚಿಕೆ ಕೇಂದ್ರಸರ್ಕಾರದ ಪುರಾತತ್ತ್ವಶಾಖೆಯ ಮಹಾನಿರ್ದೇಶಕರಾಗಿದ್ದ (ಡೈರೆಕ್ಟರ್ ಜನರಲ್ ಆಫ್ ಆರ್ಕಿಯಾಲಜಿ) ಜೇ. ಬರ್ಜೆಸನ ಸಂಪಾದಕತ್ವದಲ್ಲಿ 1888ರ ಅಕ್ಟೋಬರ್ ತಿಂಗಳಲ್ಲಿ ಪ್ರಕಟವಾಯಿತು. ಮೊದಲ ಸಂಪುಟ 1892ರಲ್ಲೂ, ಎರಡನೆಯ ಸಂಪುಟ 1894ರಲ್ಲೂ ಪ್ರಕಟವಾದವು. ಇವೆರಡು ಸಂಪುಟಗಳು ಸೂಪರ್ ರಾಯಲ್ ಚತುಷ್ಪತ್ರದ ಆಕಾರದಲ್ಲಿವೆ. ಅವುಗಳಲ್ಲಿ ಸಂಸ್ಕೃತ, ಪ್ರಾಕೃತ, ದ್ರಾವಿಡಭಾಷೆಗಳ ಶಾಸನಗಳನ್ನಲ್ಲದೆ ಅರಬ್ಬೀ ಮತ್ತು ಪರ್ಷಿಯನ್ ಶಾಸನಗಳನ್ನೂ ಪ್ರಕಟಿಸಲಾಗಿದೆ. ಅರಬ್ಬೀ ಮತ್ತು ಪರ್ಷಿಯನ್ ಶಾಸನಗಳ ಪ್ರಕಟಣೆಗಾಗಿ ಬೇರೆ ಏರ್ಪಾಡು ಮಾಡಬೇಕೆಂದೂ, ಎಪಿಗ್ರಾಫಿಯ ಇಂಡಿಕದಲ್ಲಿ ಕೇವಲ ಸಂಸ್ಕೃತ ಪ್ರಾಕೃತ ಹಾಗೂ ದ್ರಾವಿಡಭಾಷೆಗಳ ಶಾಸನಗಳನ್ನು ಪ್ರಕಟಿಸಬೇಕೆಂದೂ ಅನಂತರ ತೀರ್ಮಾನಿಸಲಾಯಿತು. ಈ ಪತ್ರಿಕೆಯ ಮೊದಲ ಸಂಪುಟಕ್ಕೆ ಸುಪ್ರಸಿದ್ಧ ಶಾಸನತಜ್ಞ (ಎಪಿಗ್ರಫಿಸ್ಟ್) ಹುಲ್ಷ್ ಸಹಾಯಕ ಸಂಪಾದಕನಾಗಿದ್ದ. ಈ ವಿದ್ವಾಂಸನ ಸಲಹೆಯಂತೆ ಎಪಿಗ್ರಾಫಿಯ ಇಂಡಿಕವನ್ನು ನಿಯತಕಾಲಿಕ ಪತ್ರಿಕೆಯಾಗಿ ಮೂರು ತಿಂಗಳಿಗೊಂದು ಸಂಚಿಕೆಯಂತೆ ಎಂಟು ಸಂಚಿಕೆಗಳನ್ನೊಳಗೊಂಡ ಸಂಪುಟವನ್ನು ಎರಡು ವರ್ಷಕ್ಕೊಮ್ಮೆ ಪ್ರಕಟಿಸಬೇಕೆಂದು ನಿರ್ಧರಿಸಲಾಯಿತು. ಪ್ರತಿಯೊಂದು ಸಂಚಿಕೆಯಲ್ಲಿ 48 ಪುಟಗಳಿರಬೇಕೆಂದೂ ಪ್ರತಿಯೊಂದು ಸಂಪುಟದ ಮೊದಲ ಏಳು ಸಂಚಿಕೆಗಳಲ್ಲಿ ಶಾಸನಗಳನ್ನೂ, ಎಂಟನೆಯ ಸಂಚಿಕೆಯಲ್ಲಿ ಅವುಗಳ ವಿಷಯಸೂಚಿಯನ್ನೂ (ಇಂಡೆಕ್ಸ್) ಪ್ರಕಟಿಸಬೇಕೆಂದು ತೀರ್ಮಾನಿಸಲಾಯಿತು. ಪತ್ರಿಕೆಯ ಆಕಾರವನ್ನು ಡೆಮ್ಮಿ ಚತುಷ್ಪತ್ರಕ್ಕೆ ಬದಲಾಯಿಸಲಾಯಿತು. ಇದೇ ರೀತಿಯಲ್ಲಿ ಪತ್ರಿಕೆಯ ಪ್ರಕಟನೆ 1894ರಿಂದ 1908ರವರೆಗೆ, ಅಂದರೆ ಮೂರನೆಯ ಸಂಪುಟದಿಂದ 9ನೆಯ ಸಂಪುಟದ ವರೆಗೆ ಹುಲ್ಷ್ ಪತ್ರಿಕೆಯ ಸಂಪಾದಕನಾಗಿ ಕೆಲಸಮಾಡಿ ಅದರ ಘನತೆಯನ್ನು ಹೆಚ್ಚಿಸಿದ. ತರುವಾಯ ಪತ್ರಿಕೆಯ ಸಂಪಾದಕತ್ವವನ್ನು 1906ರಲ್ಲಿ ಕೇಂದ್ರಸರ್ಕಾರದ ಶಾಸನತಜ್ಞನಾಗಿದ್ದ ಸ್ಟೆನ್ ಕೊನೊ ವಹಿಸಿಕೊಂಡ. ಅವನಾದ ಮೇಲೆ ಅನೇಕ ಭಾರತೀಯ ವಿದ್ವಾಂಸರು ಎಪಿಗ್ರಾಫಿಯ ಇಂಡಿಕದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ವಿ. ವೆಂಕಯ್ಯ, ಎಚ್. ಕೃಷ್ಣಶಾಸ್ತ್ರಿ, ಹೀರಾನಂದಶಾಸ್ತ್ರಿ, ಕೆ.ಎನ್. ದೀಕ್ಷಿತ್, ಎನ್.ಸಿ. ಚಕ್ರವರ್ತಿ, ಬಿ.ಸಿ. ಛಾಬ್ರಾ, ಎನ್. ಲಕ್ಷ್ಮೀನಾರಾಯಣರಾವ್ ಮತ್ತು ಡಿ.ಸಿ. ಸರ್ಕಾರರಂಥ ಸುಪ್ರಸಿದ್ಧ ವಿದ್ವಾಂಸರ ಸಂಪಾದಕತ್ವದಲ್ಲಿ ನಡೆದ ಈ ಪತ್ರಿಕೆ ಉಚ್ಚಮಟ್ಟದ

ಸಂಶೋಧನಾತ್ಮಕ ಪತ್ರಿಕೆಯೆಂದು ಇಡೀ ವಿಶ್ವದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಮೇಲೆ ಹೆಸರಿಸಿರುವ ಸಂಪಾದಕರಲ್ಲದೆ, ಈ ಪತ್ರಿಕೆಯಲ್ಲಿ ಜಿ. ಬ್ಯೂಲರ್, ಎಫ್. ಕೀಲ್‌ಹಾರ್ನ್, ಜೆ.ಎಫ್. ಫ್ಲೀಟ್, ಎಲ್.ಡಿ. ಬಾರ್ನೆಟ್, ಎಚ್. ಲ್ಯುಡರ್ಸ್ ಮುಂತಾದ ಪಾಶ್ಚಾತ್ಯ ವಿದ್ವಾಂಸರೂ ಡಿ.ಆರ್. ಸಾಹನಿ, ಡಿ.ಆರ್. ಭಂಡಾರಕರ್, ಆರ್.ಡಿ ಬ್ಯಾನರ್ಜಿ, ಎನ್. ಜಿ. ಮುಜುಂದಾರ್, ಆರ್.ಸಿ. ಮುಜುಂದಾರ್, ಕೆ.ವಿ. ಸುಬ್ರಹ್ಮಣ್ಯ ಅಯ್ಯರ್, ಎ.ಎಸ್. ಅಳ್ತೇಕರ್, ಸಿ.ಆರ್. ಕೃಷ್ಣಮಾಚಾರ್ಲು, ವಿ.ವಿ. ಮಿರಾಶಿ ಮತ್ತು ಆರ್.ಎಸ್. ಪಂಚಮುಖಿ ಮುಂತಾದ ಭಾರತೀಯ ವಿದ್ವಾಂಸರೂ ಅನೇಕ ಮಹತ್ತ್ವದ ಶಾಸನಗಳನ್ನೂ ಅವುಗಳ ಬಗ್ಗೆ ವಿದ್ವತ್ಪೂರ್ಣ ಲೇಖನಗಳನ್ನೂ ಪ್ರಕಟಿಸಿದ್ದಾರೆ. 1963ರಿಂದ ಈಚೆಗೆ ಪತ್ರಿಕೆಯ ಸಂಪಾದಕ ಜಿ.ಎಸ್. ಗಾಯ್. ಇದುವರೆಗೆ 43 ಸಂಪುಟಗಳೂ ಪ್ರಕಟವಾಗಿವೆ. ಇಡೀ ದೇಶದಲ್ಲಿ ಕೇವಲ ಶಾಸನಗಳ ಪ್ರಕಟನೆಗಾಗಿಯೇ ಮೀಸಲಾಗಿರುವ ಏಕೈಕವಾದ ನಿಯತಕಾಲಿಕ ಪತ್ರಿಕೆಯಾದ ಎಪಿಗ್ರಾಫಿಕ್ ಇಂಡಿಕ ಭಾರತೀಯ ಇತಿಹಾಸ-ಸಂಸ್ಕೃತಿಗಳ ಶಾಸ್ತ್ರೀಯ ಅಧ್ಯಯನಕ್ಕೆ ಅವಶ್ಯವಾದ ಮೂಲಸಾಮಗ್ರಿಗಳನ್ನೊದಗಿಸಿ ಕೊಡುವ ಅತ್ಯಮೂಲ್ಯವಾದ ಸಾಧನವಾಗಿದೆ. (ಜಿ.ಎಸ್.ಜಿ.)

**ಎಪಿಗ್ರಾಫಿಯ ಕರ್ಣಾಟಕ:** ಹೆಸರೇ ಸೂಚಿಸುವಂತೆ ಕರ್ಣಾಟಕದ ಶಾಸನಸಾಹಿತ್ಯ ಪ್ರಕಟನೆ ಮತ್ತು ವ್ಯಾಖ್ಯಾನಕ್ಕೆ ಮೀಸಲಾದ ಪತ್ರಿಕೆ. 1884ರಲ್ಲಿ ಮೈಸೂರು ಸರ್ಕಾರದ ಕಾರ್ಯದರ್ಶಿ ಮತ್ತು ಪುರಾತತ್ತ್ವನಿರ್ದೇಶಕರಾಗಿದ್ದ ಪ್ರಸಿದ್ಧ ವಿದ್ವಾಂಸ ಲೂಯಿ ರೈಸ್ ಹಳೆಯ ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶದಲ್ಲಿ ದೊರೆಯುವ ಅನೇಕ ಶಾಸನಗಳನ್ನು ಸಂಗ್ರಹಿಸಿ ಪ್ರಸಿದ್ಧಪಡಿಸಬೇಕೆಂಬ ಯೋಜನೆಯನ್ನು ಕೈಗೊಂಡು 1886ರಲ್ಲಿ ಕೊಡಗಿನ 23 ಶಾಸನಗಳನ್ನು ಎಪಿಗ್ರಾಫಿಯ ಕರ್ಣಾಟಿಕ ಎಂಬ ಹೆಸರಿನಿಂದ ಪ್ರಸಿದ್ಧಪಡಿಸಿದರು. ಇದೇ ಪತ್ರಿಕೆಯ ಮೊದಲ ಸಂಪುಟವಾಯಿತು. ಎರಡನೆಯ ಸಂಪುಟದಲ್ಲಿ ಶ್ರವಣಬೆಳಗೊಳದಲ್ಲಿ ದೊರೆತ ಸುಮಾರು 150 ಶಾಸನಗಳನ್ನು ಪ್ರಕಟಿಸಲಾಯಿತು (1889). ಇವೆರಡು ಸಂಪುಟಗಳ ಪ್ರಕಟನೆಯಿಂದ ಶಾಸನಗಳ ಅಧ್ಯಯನದ ಬಗ್ಗೆ ಹೆಚ್ಚಿನ ಆಸ್ಥೆಯುಂಟಾಗಿ 1890ರಲ್ಲಿ ಆಗಿನ ದಿವಾನರಾದ ಶೇಷಾದ್ರಿ ಅಯ್ಯರ್ ಅವರ ಸಲಹೆಯಂತೆ ಹಳೆಯ ಮೈಸೂರು ಸಂಸ್ಥಾನದಲ್ಲಿ ಪ್ರತ್ಯೇಕವಾದ ಪುರಾತತ್ತ್ವಶಾಖೆಯನ್ನು ಲ್ಯೂಯಿ ರೈಸರ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಆದ್ದರಿಂದ ಈ ಭಾಗದ ಪ್ರತಿಯೊಂದು ಜಿಲ್ಲೆಯಲ್ಲಿಯ ಶಾಸನಗಳ ಸಂಗ್ರಹ, ಅಧ್ಯಯನ ಮತ್ತು ಪ್ರಕಟನೆಯ ಕಾರ್ಯವನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲಾಯಿತು. ಮುಂದೆ ಸುಮಾರು 15 ವರ್ಷಗಳ ಅವಧಿಯಲ್ಲಿ ಎಪಿಗ್ರಾಫಿಯ ಕರ್ಣಾಟಿಕ ಪತ್ರಿಕೆಯ 3ನೆಯ ಸಂಪುಟದಿಂದ 12ನೆಯ ಸಂಪುಟದವರೆಗೆ ಮೈಸೂರು, ಹಾಸನ, ಕಡೂರು, ಶಿವಮೊಗ್ಗ, ಬೆಂಗಳೂರು, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಶಾಸನಗಳನ್ನು ಸಂಗ್ರಹಿಸಿ ಪ್ರಸಿದ್ಧಪಡಿಸಲಾಯಿತು. ಹೀಗೆ 1886ರಿಂದ 1906ರವರೆಗಿನ 20 ವರ್ಷಗಳ ಅವಧಿಯಲ್ಲಿ ರೈಸ್ ಈ ಪತ್ರಿಕೆಯಲ್ಲಿ 12 ಬೃಹತ್ ಸಂಪುಟಗಳನ್ನು ಸಂಪಾದಿಸಿ ಪ್ರಸಿದ್ಧಪಡಿಸಿದರು. ಈ ಸಂಪುಟಗಳಲ್ಲಿ ಹಳೆಯ ಮೈಸೂರು ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಸುಮಾರು 9,000 ಶಾಸನಗಳು ಅಚ್ಚಾಗಿವೆ. ಆಗಿನ ಮೈಸೂರು ಸರ್ಕಾರ ಸಾಧಿಸಿದ ಇಂಥ ಮಹತ್ಕಾರ್ಯವನ್ನು ಭಾರತ ದೇಶದ ಬೇರೆ ಯಾವ ಪ್ರಾಂತ್ಯವಾಗಲೀ ಸಂಸ್ಥಾನವಾಗಲೀ ಸಾಧಿಸಿಲ್ಲ. ಇಂಥ ಬೃಹತ್ ಯೋಜನೆಯನ್ನು ಕೈಗೊಂಡು ಕಾರ್ಯಗತ ಮಾಡಿದ ಶ್ರೇಯಸ್ಸು ಲ್ಯೂಯಿ ರೈಸರಿಗೆ ಸಲ್ಲುತ್ತದೆ. ಈ ಸಂಪುಟಗಳಲ್ಲಿ ಪ್ರಸಿದ್ಧಪಡಿಸಲಾದ ಶಾಸನಗಳ ಪಾಠವನ್ನು ಕನ್ನಡ ಮತ್ತು ರೋಮನ್ ಲಿಪಿಗಳಲ್ಲಿ ಕೊಟ್ಟಿದ್ದು ಅವುಗಳ ಇಂಗ್ಲಿಷ್ ಭಾಷಾಂತರವನ್ನೂ ಒದಗಿಸಲಾಗಿದೆ. ಇದಲ್ಲದೆ ಪ್ರತಿಯೊಂದು ಸಂಪುಟದಲ್ಲಿ ಪ್ರಸಿದ್ಧಪಡಿಸಿದ ಶಾಸನಗಳ ಮಹತ್ತ್ವವನ್ನು ಕುರಿತು ವಿಸ್ತೃತವಾದ ಮುನ್ನುಡಿಯನ್ನು ರೈಸರೇ ಬರೆದಿದ್ದಾರೆ. ಎಪಿಗ್ರಾಫಿಯ ಕರ್ಣಾಟಿಕದ 12 ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳು ಕರ್ಣಾಟಕದ ಇತಿಹಾಸ-ಸಂಸ್ಕೃತಿಗಳ ಅಧ್ಯಯನಕ್ಕೆ ತಳಹದಿಯಾಗಿದ್ದು ಕೆಲವು ಶಾಸನಗಳು ಇಡೀ ಭಾರತ ದೇಶದ ಇತಿಹಾಸ-ಸಂಸ್ಕೃತಿಗಳ ಮೇಲೆ ಮಹತ್ತ್ವದ ಬೆಳಕನ್ನು ಬೀರುತ್ತವೆ. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರ ಎಂಬಲ್ಲಿ ದೊರೆತ ಅಶೋಕ ಸಮ್ರಾಟನ ಶಾಸನಗಳಿಂದ ಮೌರ್ಯರ ಆಡಳಿತ ಮೈಸೂರಿನವರೆಗೂ ವಿಸ್ತರಿಸಿತ್ತೆಂದು ವಿಶದವಾಗುವುದು. ರೈಸ್ ನಿವೃತ್ತರಾದ ಮೇಲೆ 1914ರಲ್ಲಿ ಎಪಿಗ್ರಾಫಿಯ ಕರ್ಣಾಟಕದ ಮೊದಲ ಸಂಪುಟವನ್ನು ಪುನಃ ಪರಿಷ್ಕರಿಸಿ ಕೊಡಗಿನಲ್ಲಿ ದೊರೆತ ಹೆಚ್ಚಿನ ಶಾಸನಗಳನ್ನು ಸೇರಿಸಿ ವಿಸ್ತೃತವಾದ ಆವೃತ್ತಿಯನ್ನು ಪ್ರಸಿದ್ಧಪಡಿಸಿದರು. ತರುವಾಯ ಪುರಾತತ್ತ್ವಶಾಖೆಯ ನಿರ್ದೇಶಕರಾದ ಆರ್. ನರಸಿಂಹಾಚಾರ್ಯರು ಶ್ರವಣಬೆಳುಗೊಳದ ಎರಡನೆಯ ಸಂಪುಟವನ್ನು ಪುನಃ ಪರಿಶೀಲಿಸಿ ಸುಮಾರು 350 ಹೊಸ ಶಾಸನಗಳನ್ನು ಸೇರಿಸಿ ವಿಸ್ತೃತವಾದ ಆವೃತ್ತಿಯನ್ನು 922-23ರಲ್ಲಿ ಪ್ರಸಿದ್ಧಪಡಿಸಿದ್ದಾರೆ. ಈ ವಿದ್ವಾಂಸರು 1906ರಿಂದ 1922ರವರೆಗಿನ 16 ವರ್ಷಗಳ ತಮ್ಮ ಅಧಿಕಾರಾವಧಿಯಲ್ಲಿ ಸುಮಾರು 5,000 ಹೊಸ ಶಾಸನಗಳನ್ನು ಹಳೆಯ ಮೈಸೂರು ಭಾಗದ ಜಿಲ್ಲೆಗಳಲ್ಲಿ ಸಂಗ್ರಹಿಸಿ ಪ್ರಕಟನೆಗಾಗಿ ಸಿದ್ಧಪಡಿಸಿದರು. ಅವುಗಳಲ್ಲಿ ಕೆಲವು ಮಹತ್ತ್ವದ ಶಾಸನಗಳನ್ನು ತಾವು ಸಂಪಾದಿಸಿದ ವಾರ್ಷಿಕ ವರದಿಗಳಲ್ಲಿ ಪ್ರಸಿದ್ಧಪಡಿಸಿದ್ದಾರೆ. ಉಳಿದವನ್ನು ಎಪಿಗ್ರಾಫಿಯ ಕರ್ಣಾಟಿಕ ಪತ್ರಿಕೆಯ 14 ರಿಂದ 19ನೆಯ ಸಂಪುಟಗಳಲ್ಲಿ ಪ್ರಕಟಿಸಬೇಕೆಂದೂ ಯೋಚಿಸಲಾಗಿತ್ತು. ಈ ಪತ್ರಿಕೆಯ 13ನೆಯ ಸಂಪುಟದಲ್ಲಿ 1ರಿಂದ 12 ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳ ವಿಷಯಸೂಚಿಯನ್ನು ಪ್ರಸಿದ್ಧಪಡಿಸಬೇಕೆಂದು ಉದ್ದೇಶಿಸಿ ಡಾ. ಎಂ. ಎಚ್. ಕೃಷ್ಣ ಅವರು ಅದರ ಮೊದಲ ಭಾಗದಲ್ಲಿ ಅಕಾರದಿಂದ ಕಕಾರದವರೆಗಿನ ಶಬ್ದಗಳನ್ನು ಪ್ರ. ಶ. 1934ರಲ್ಲಿ ಪ್ರಕಟಿಸಿದರು. ಉಳಿದ ಶಬ್ದಗಳನ್ನೊಳಗೊಂಡ ಎರಡನೆಯ ಭಾಗ ಇದುವರೆಗೆ ಅಚ್ಚಾಗಿಲ್ಲ. ಈ ಪತ್ರಿಕೆಯ 14 ಮತ್ತು 15ನೆಯ ಸಂಪುಟಗಳಲ್ಲಿ ಮೈಸೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಶಾಸನಗಳನ್ನು ಡಾ. ಕೃಷ್ಣ ಅವರು 1943ರಲ್ಲಿ ಪ್ರಕಟಪಡಿಸಿದರು. ತುಮಕೂರು ಜಿಲ್ಲೆಯ ಶಾಸನಗಳನ್ನೊಳಗೊಂಡ 16ನೆಯ ಸಂಪುಟವನ್ನು ಪ್ರೊ. ನೀಲಕಂಠಶಾಸ್ತ್ರಿಗಳು 1956ರಲ್ಲೂ ಕೋಲಾರ ಜಿಲ್ಲೆಯ ಶಾಸನಗಳನ್ನೊಳಗೊಂಡ 17ನೆಯ ಸಂಪುಟವನ್ನು ಡಾ. ಎಂ.ಶೇಷಾದ್ರಿ ಅವರು 1965ರಲ್ಲೂ ಪ್ರಸಿದ್ಧಪಡಿಸಿದರು. ಅಂತು ಎಪಿಗ್ರಾಫಿಯ ಕರ್ಣಾಟಕ ಪತ್ರಿಕೆಯ ಒಟ್ಟು 17 ಸಂಪುಟಗಳು ಇದುವರೆಗೆ ಪ್ರಕಟವಾಗಿದ್ದು ಅವುಗಳಲ್ಲಿ ಸುಮಾರು 10,500 ಕ್ಕಿಂತಲೂ ಹೆಚ್ಚಿಗೆ ಶಾಸನಗಳು ಅಚ್ಚಾಗಿವೆ. ಈಚೆಗೆ ಕರ್ಣಾಟಿಕದಲ್ಲಿ ಹೊಸ ಶಾಸನಗಳು ದೊರೆತಿವೆ. ಹಳೆಯ ಶಾಸನಗಳ ಪುನರ್ ಪರಿಶೀಲನೆಯೂ ನಡೆಯುತ್ತಿದೆ. ಈ ದೃಷ್ಟಿಯಿಂದ ಎಪಿಗ್ರಾಫಿಯ ಕರ್ಣಾಟಿಕದ ಪರಿಶೋಧನೆ ಮತ್ತು ಪುನರ್‌ಮುದ್ರಣಗಳಿಗಾಗಿ ಬೃಹದ್‌ಯೋಜನೆಯೊಂದು ಸಿದ್ಧವಾಗುತ್ತಲಿದೆ. (ಜೆ.ಎಸ್.ಜಿ.)

**ಎಪಿಗ್ರಾಫಿಯ ಝೀಲೇನಿಕ:** ಸಿಂಹಳದ ಶಾಸನ ಸಾಹಿತ್ಯವನ್ನು ಪ್ರಕಟಿಸಲು ಪ್ರಾರಂಭವಾದ (1904) ನಿಯತಕಾಲಿಕ, ಸಿಂಹಳದ ಪುರಾತತ್ವ ಶಾಖೆಯ ಕಮಿಷನರ್ ಆದ (1890) ಎಚ್. ಸಿ. ಪಿ. ಬೆಲ್ ಎಂಬ ವಿದ್ವಾಂಸ ಆ ದ್ವೀಪದ ಪ್ರಾಚೀನ ಅವಶೇಷಗಳ ಸಂಶೋಧನೆಯಲ್ಲಿ ಮಹತ್ತ್ವದ ಕಾರ್ಯಗಳನ್ನು ಕೈಕೊಂಡು ಅನೇಕ ಶಾಸನಗಳನ್ನು ಕಂಡುಹಿಡಿದು ಅವನ್ನು ಪ್ರತ್ಯೇಕವಾದ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಸರ್ಕಾರಕ್ಕೆ ಸಲಹೆ ನೀಡಿದ. ಸರ್ಕಾರ ಅದರಂತೆ ವಿಕ್ರಮ ಸಿಂಗ್ ಎಂಬ ವಿದ್ವಾಂಸನನ್ನು ಸರ್ಕಾರದ ಶಾಸನತಜ್ಞನೆಂದು ನೇಮಿಸಿ ಅವನಿಗೆ ಆ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಡಲಾಯಿತು. ಆಗ್ಗೆ ವಿಕ್ರಮ್‌ಸಿಂಗ್ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನೆಂದು ನೇಮಿಸಲ್ಪಟ್ಟಿದ್ದರಿಂದ ಅಲ್ಲಿದ್ದುಕೊಂಡು ತನ್ನ ಹೊಸ ಕಾರ್ಯದ ಜೊತೆಗೆ ಈ ಪತ್ರಿಕೆಯ ಸಂಪಾದನೆಯ ಕೆಲಸವನ್ನು ನಿರ್ವಹಿಸಿದ. 1904ರಿಂದ 1927ರ ಅವಧಿಯಲ್ಲಿ ಈ ಪತ್ರಿಕೆಯ ಮೊದಲ ಮತ್ತು ಎರಡನೆಯ ಸಂಪುಟಗಳು ಅವನ ಸಂಪಾದಕತ್ವದಲ್ಲಿ ಪ್ರಕಟವಾದವು. ಈ ಸಂಪುಟಗಳಲ್ಲಿ ವಿಕ್ರಮ್‌ಸಿಂಗ್ ಪ್ರಸಿದ್ಧಪಡಿಸಿದ. ಶಾಸನಗಳೇ ಇವೆ. ಮುಂದೆ ಸಿಂಹಳ ಸರ್ಕಾರದ ಪುರಾತತ್ವ ಶಾಖೆಯ ಕಮಿಷನರಾಗಿ ಅಧಿಕಾರ ವಹಿಸಿಕೊಂಡ ಸುಪ್ರಸಿದ್ಧ ವಿದ್ವಾಂಸ ಎಸ್. ಪರನವಿತನ ಈ ಪತ್ರಿಕೆಯ ಸಂಪಾದಕನಾಗಿ 1929ರಿಂದ 1941ರ ಅವಧಿಯಲ್ಲಿ 3 ಮತ್ತು 4ನೆಯ ಸಂಪುಟಗಳನ್ನು ಪ್ರಸಿದ್ಧಪಡಿಸಿದ ಅವನ ಸಂಪಾದಕತ್ವದಲ್ಲಿಯೇ 1955ರಲ್ಲಿ 5ನೆಯ ಸಂಪುಟದ 1ನೆಯ ಸಂಚಿಕೆ, 1963ರಲ್ಲಿ 2ನೆಯ ಸಂಚಿಕೆ ಮತ್ತು 1965ರಲ್ಲಿ ಸಿ. ಇ. ಗೋದಕುಂಬುರನ ಸಂಪಾದಕತ್ವದಲ್ಲಿ ಅದೇ ಸಂಪುಟದ 3ನೆಯ ಸಂಚಿಕೆಗಳು ಪ್ರಕಟವಾಗಿವೆ. ಹಾಗೂ 1966ರಲ್ಲಿ ಈ ಸಂಪುಟಗಳ ವಿಷಯಸೂಚಿಯನ್ನೊಳಗೊಂಡ ಸಂಚಿಕೆ ಪ್ರಕಟವಾಗಿವೆ. ಹೀಗೆ ಪ್ರ.ಶ. 1904ರಲ್ಲಿ ಆರಂಭವಾದ ಈ ಪತ್ರಿಕೆಯ 5 ಸಂಪುಟಗಳು ಇದುವರೆಗೆ ಪ್ರಕಟವಾಗಿವೆ. ಅವುಗಳಲ್ಲಿ ಸಿಂಹಳದ್ವೀಪದ ಅನೇಕ ಮಹತ್ತ್ವದ ಶಾಸನಗಳು ಪ್ರಕಟವಾಗಿದ್ದು ಅಲ್ಲಿಯ ಇತಿಹಾಸ-ಸಂಸ್ಕೃತಿಗಳ ಅಧ್ಯಯನಕ್ಕೂ ಆ ದೇಶ ಐತಿಹಾಸಿಕ ಕಾಲದಲ್ಲಿ ಭಾರತದೊಡನೆ ಹೊಂದಿದ್ದ ನಿಕಟಸಂಪರ್ಕವನ್ನು ತಿಳಿದುಕೊಳ್ಳುವುದಕ್ಕೂ ಅತಿ ಉಪಯುಕ್ತವಾದ ಸಾಧನಗಳಾಗಿವೆ. (ಜಿ.ಎಸ್.ಜಿ.)

**ಎಪಿಗ್ರಾಫಿಯ ಬರ್ಮ್ಯಾನಿಕ:** ಬರ್ಮ ದೇಶದ ಚಾರಿತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಯಪಡಿಸುವ ಶಾಸನಗಳನ್ನು ಒಂದೆಡೆ ಸಂಗ್ರಹಿಸಿ ಪ್ರಸಿದ್ಧಪಡಿಸುವ ಸಲುವಾಗಿ ಹುಟ್ಟಿದ ನಿಯತಕಾಲಿಕ ಪತ್ರಿಕೆ. ಮೊದಲು ಮಾಯನ್ಮಾರಿನ ಶಾಸನ ವಿಷಯಗಳನ್ನೆಲ್ಲ ಎಪಿಗ್ರಾಫಿಯ ಇಂಡಿಕದ ಒಂದು ಭಾಗವಾಗಿ ಪ್ರಸಿದ್ಧಪಡಿಸಬೇಕೆಂದು ಆಲೋಚಿಸಲಾಗಿತ್ತು. ಆದರೆ ವಿಷಯಬಾಹುಳ್ಯ ಮತ್ತು ವೈಶಿಷ್ಟ್ಯಗಳನ್ನು ಗಮನಿಸಿ ಬರ್ಮೀಯ ವಿಷಯಗಳಿಗೆ ಪ್ರತ್ಯೇಕ ಪತ್ರಿಕೆಯೊಂದರ ಅಗತ್ಯವಿದೆಯೆಂಬ ಅಂಶ ಸ್ಪಷ್ಟವಾದ ಮೇಲೆ ಬರ್ಮ್ಯಾನಿಕ ಪತ್ರಿಕೆಯನ್ನು ಹೊರತರಲಾಯಿತು. ಈ ಪತ್ರಿಕೆಯ ಮೊದಲ ಸಂಪುಟ ಮಾಯನ್ಮಾರಿನ ಪುರಾತತ್ತ್ವಶಾಖೆಯ ಮುಖ್ಯಸ್ಥರಾದ ಡ್ಯುರಾಯಸೆಲ್ ಎಂಬ ವಿದ್ವಾಂಸನ ಸಂಪಾದಕತ್ವದಲ್ಲಿ ಪ್ರಕಟವಾಯಿತು (1919). ಇದರಲ್ಲಿ 1112ರ ಕಾಲದ ಮ್ಯಾಜೇದಿಯ ಶಾಸನಗಳ ಪಾಲಿ, ಪ್ಯು ತಲೈಂಗ (ಮೋ) ಮತ್ತು ಬರ್ಮ ಭಾಷೆಯಲ್ಲಿರುವ ಪ್ರತಿಗಳನ್ನು ಪ್ರಸಿದ್ಧಪಡಿಸಲಾಗಿದೆ. ಈ ಪತ್ರಿಕೆಯ ಕೇವಲ 4 ಸಂಪುಟಗಳು ಪ್ರಕಟವಾಗಿದ್ದು ನಾಲ್ಕನೆಯ ಸಂಪುಟ ಪ್ರಕಟವಾದ (1936) ಅನಂತರ ಪತ್ರಿಕೆಯನ್ನು ನಿಲ್ಲಿಸಲಾಯಿತು. (ಜಿ.ಎಸ್.ಜಿ.)

**ಎಪಿಡೆಂಡ್ರಮ್:** ಮರದ ಮೇಲೆ ಬೆಳೆಯುವ ಒಂದು ಜಾತಿಯ ಸಸ್ಯ. ಆರ್ಕಿಡೆಸಿಯ ಕುಟುಂಬದಲ್ಲಿ ಈ ಜಾತಿಯೇ ದೊಡ್ಡದು. ಇದರಲ್ಲಿ ಸಾವಿರಕ್ಕೂ ಹೆಚ್ಚು ಪ್ರಭೇದಗಳಿವೆ. ಹೂವುಗಳು ಸಂಕೀರ್ಣ ರೀತಿಯವಾಗಿದ್ದು ಬಹು ಸುಂದರವಾಗಿವೆ.

ಈ ಜಾತಿಯ ಆರ್ಕಿಡ್ಡುಗಳು ಸಾಮಾನ್ಯವಾಗಿ ಅಪ್ಪುಸಸ್ಯಗಳಾಗಿ ಬೆಳೆಯುತ್ತವೆ. ಕೆಲವು ನೆಲಸಸ್ಯ, ಶಿಲಾಸಸ್ಯಗಳಾಗಿಯೂ ಬೆಳೆಯುವುದುಂಟು. ಇವು ಬಹುವಾರ್ಷಿಕ ಸಸ್ಯಗಳು. ಈ ಕೆಲವಕ್ಕೆ ಗುಪ್ತಕಾಂಡ ಉಂಟು. ಕೆಲವಕ್ಕೆ ಇಲ್ಲ. ಈ ಕಾಂಡ ಗುಂಡಾಗಿ, ದಪ್ಪವಾದ ನಕಲಿಲಶುನವಾಗಿ ಬೆಳೆಯುತ್ತದೆ. ಎಲೆ ಮೃದು, ಚಪ್ಪಟೆಯಾಗಿದ್ದು ಕೊಳವೆ ಯಾಕಾರ, ಭರ್ಜಿಯಾಕಾರಗಳಲ್ಲಿವೆ. ಹೂ ಗೊಂಚಲು ಸಾಮಾನ್ಯವಾಗಿ ತುದಿಯಲ್ಲಿರುತ್ತದೆ. ಕೆಲವು ಸಾರಿ ಕಂಕುಳಲ್ಲಿರುವುದೂ ಉಂಟು. ಗೊಂಚಲು ಮಿಶ್ರ ಮಾದರಿಯದು. ಹೂಗಳ ಪ್ರಭೇದಗಳಿಗೆ ಅನುಸಾರವಾಗಿ ಬದಲಾಗುತ್ತದೆ. ಹೂಕಂಬಕ್ಕೆ ತುಟಿ ಅಂಟಿಕೊಂಡಿರುತ್ತದೆ. ಕಂಬದ ತುದಿಯಲ್ಲಿರುವ ಪರಾಗಕೋಶಗಳಲ್ಲಿ ಪರಾಗಚೀಲಗಳು ಇವೆ.

ಎಪಿಡೆಂಡ್ರಮ್ ಫ್ರ್ಯಾಗ್ರನ್ಸ್, ಈ ಪ್ರಭೇದ ಮಧುರ ವಾಸನೆಯನ್ನು ಬೀರುವುದರಿಂದ ಈ ಹೆಸರು. ನಕಲಿಲಶುನ ಕರನೆಯಾಕಾರದಲ್ಲಿದೆ. ಬಣ್ಣ ಹಳದಿ ಅಥವಾ ಹಸಿರು. ಎಲೆ ಒಂಟಿ. ಆಕಾರ ದೀರ್ಘವೃತ್ತದಂತೆ; ತುದಿ ಮೊಂಡು ಅಥವಾ ಮೊನಚು. ಒಂದು ಗೊಂಚಲಿನಲ್ಲಿ ಸುಮಾರು 2 ರಿಂದ 10 ಹೂಗಳು ಇರುತ್ತವೆ. ಹೂಗಳು ಹಳದಿ ಅಥವಾ ಹಸಿರು ಮಿಶ್ರಿತ ಬಿಳುಪು ಬಣ್ಣದವು. ವಾಸನೆ ಪ್ರಿಯ. ಕೆಲಜಾತಿಗಳಲ್ಲಿ ಅಪ್ರಿಯವೂ ಹೌದು. ತುಟಿ ಬಿಳುಪು ಅಥವಾ ತೆನೆ ಬಿಳುಪು. ಇದರ ಬುಡದಿಂದ ಊದಾ ಅಥವಾ ಕಡುಗೆಂಪು ಬಣ್ಣದ ಗೆರೆಗಳು ತುದಿಯ ಕಡೆಗೆ ಹರಿಯುತ್ತವೆ.

ಎಪಿಡೆಂಡ್ರಮ್ ಅಲಾಟಮ್: ಈ ಪ್ರಭೇದ ಎತ್ತರವಾಗಿ ಬೆಳೆಯುತ್ತದೆ. ನಕಲಿಲಶುನ ಬುಡದಲ್ಲಿ ಅಗಲವಾಗಿದ್ದು ತುದಿಯಲ್ಲಿ ಕಿರಿದಾಗಿದೆ. ಎಲೆ 2 ಅಥವಾ ಹೆಚ್ಚು, ಬುಡದಲ್ಲಿ ಕೊಳವೆಯಂತಿರುವ ತೊಟ್ಟುಗಳಿಂದ ಕೂಡಿದ್ದು ಒರಟಾಗಿ ಚರ್ಮದಂತೆ ಇದ್ದು, ನೀಳಾಕಾರ ಅಥವಾ ಭರ್ಜಿಯಾಕಾರದಲ್ಲಿದೆ. ಹೂಗೊಂಚಲು ಅಂತ್ಯಾರಂಭಿ ಅಥವಾ ಮಿಶ್ರ ಮಾದರಿಯದು. ಇವುಗಳ ಬಣ್ಣ, ಆಕಾರ ಮತ್ತು ಗಾತ್ರಗಳಲ್ಲಿ ಬಹಳ ವೈವಿಧ್ಯವುಂಟು. ಹೂ, ಎಲೆ ಮತ್ತು ಹೂದಳಗಳ ಬಣ್ಣ ಹಳದಿ ಮಿಶ್ರಿತ ಹಸಿರು.

ಎಪಿಡೆಂಡ್ರಮ್ ಪಾಲಿಯಾಂತಮ್: ಈ ಪ್ರಭೇದದ ಬಾಹ್ಯರೂಪರಚನೆಗಳಲ್ಲಿ ಬಹಳ ಭಿನ್ನತೆಯುಂಟು. ಸುಮಾರು 1' ರಿಂದ 4' ಎತ್ತರ; ಎಲೆಗಳಿಂದ ಆವರಿಸಲ್ಪಟ್ಟಿರುವುದರಿಂದ ಗೋಪ್ಯವಾಗಿರುತ್ತದೆ. ಎಲೆ ನೀಳಾಕಾರ, ಕದರಿನಾಕಾರ ಅಥವಾ ಭರ್ಜಿಯಾಕಾರದಲ್ಲಿದೆ. ಹೂಗೊಂಚಲು ಅಂತ್ಯಾರಂಭಿ. ಅಂಡಾಶಯಕ್ಕೆ ತೊಟ್ಟಿರುತ್ತದೆ. ಬಣ್ಣ ಬಿಳಪು ಮಿಶ್ರಿತ ಹಳದಿ, ಕಿತ್ತಲೆ ಮಿಶ್ರಿತ ಹಳದಿ, ಹಸಿರು ಮಿಶ್ರಿತ ಹಳದಿ, ಕಂದು ಮಿಶ್ರಿತ ಹಳದಿ ಮುಂತಾಗಿ ಹಲವು ತೆರ. ತುಟಿ ಆಳವಾಗಿ ಮೂರು ಭಾಗವಾಗಿದೆ. ಅದರ ಬಣ್ಣ ತಿಳಿಯಾಗಿರುವುದೂ ಉಂಟು. ತೀಕ್ಷ್ಣವಾಗಿರುವುದೂ ಉಂಟು. ಹೂದಳ ಆಕಾರದಲ್ಲಿ ದಾರದಂತೆ ಅಥವಾ ಚಮಚದಂತೆ.

ಎಪಿಡೆಂಡ್ರಮ್‌ಸಿಲಿಯರೆ: ಇದು ಹೆಚ್ಚಿನ ಬೇಸಾಯದಲ್ಲಿರುವ ಪ್ರಭೇದ. ಲಶುನ ಕದಿರು ಅಥವಾ ಕೊಳವೆಯಾಕಾರದಲ್ಲಿದೆ. ಬಣ್ಣ ಬೂದಿ ಮಿಶ್ರಿತ ಹಸಿರು. ಇದು ಭೂಮಿಯಲ್ಲಿ ಹರಿಯುವ ಗುಪ್ತಕಾಂಡದಿಂದ ಹೊರ ಬಂದಿರುತ್ತದೆ. ಎಲೆ ಒಂದರಿಂದ ಎರಡು, ಚರ್ಮದಂತೆ ಒರಟು. ಆಕಾರ ಅಂಡವೃತ್ತ ಅಥವಾ ಆಯತ. ಪ್ರಾಪ್ತವಯಸ್ಸಿಗೆ ಮುನ್ನವೇ ಕೆಲವೇಳೆ ಹೂ ಬಿಡುವುದುಂಟು. ಹೂ ಗೊಂಚಲು ತುದಿಯಲ್ಲಿರುತ್ತದೆ. ಗಾತ್ರದಲ್ಲಿ ಹೂ, ಚಿಕ್ಕವು. ಹೂ ಎಲೆ ಮತ್ತು ಹಳದಿ ಮಿಶ್ರಿತ ಹಸಿರು ಬಣ್ಣದವು. ತುಟಿ ಬಿಳುಪು, ಮಧ್ಯಭಾಗ ದಾರದಂತಿದೆ. (ಡಿ.ಎಂ.)

**ಎಪಿಡೋಟ್:** ಬಹುಮಟ್ಟಿಗೆ ಸುಣ್ಣಾಂಶವುಳ್ಳ ಜಲಜಶಿಲೆ ಮತ್ತು ಅಗ್ನಿಶಿಲೆಗಳು ರೂಪಾಂತರಗೊಂಡಾಗ ಆಗುವ ಒಂದು ಖನಿಜ. ಪಿಸ್ಟಸೈಟ್ ಎಂದೂ ಕರೆಯುತ್ತಾರೆ. ಈ ಖನಿಜದ ಹರಳುಗಳ ಮಾನೊಕ್ಲೈನಿಕ್ ವರ್ಗಕ್ಕೆ ಸೇರಿವೆ. ಅವಳಿ ಹರಳುಗಳೂ ಉಂಟು. ಅಲ್ಲದೆ ಫಲಕ, ಅಲುಗು ಮತ್ತು ಸೂಜಿಯೋಪಾದಿಯ ಆಕಾರಗಳೂ ಇವೆ. ಹಲವು ಬಾರಿ ಕಣಗಳ ಮುದ್ದೆಯಾಗಿಯೂ ದೊರೆಯುತ್ತದೆ.

ರಾಸಾಯನಿಕ ಸಂಯೋಜನೆಯಲ್ಲಿ ಇದು ಕ್ಯಾಲ್ಸಿಯಂ, ಅಲ್ಯೂಮಿನಂ ಮತ್ತು ಕಬ್ಬಿಣಾಂಶಗಳ ಸಿಲಿಕೇಟು. ಬಣ್ಣದಲ್ಲಿ ವಿವಿಧ ಛಾಯೆಯ ಹಸಿರುಗಳುಂಟು: ಬಹುಮಟ್ಟಿಗೆ ವಿಶಿಷ್ಟವಾದ ಪಿಸ್ತಾ ಹಸಿರು ಅಥವಾ ಹಳದಿ ಮಿಶ್ರಿತ ಹಸಿರು; ಕಪ್ಪು ಮಿಶ್ರಿತ ಹಸಿರು; ಹಲವು ಬಾರಿ ಕಪ್ಪು, ಕೆಂಪು, ಹಳದಿ, ಬಿಳಿ ಇತ್ಯಾದಿ. ಒರೆ ಬಣ್ಣವಿಲ್ಲದ್ದು ಅಥವಾ ಬೂದು ಛಾಯೆಯದು. ಸಾಮಾನ್ಯವಾಗಿ ಸೀಳು ಉತ್ತಮ ಬಗೆಯದು. ಬಿರಿತ ಅಸ್ಪಷ್ಟ ಭಿದುರತೆ ಉತ್ತಮ ಗಾಜು, ಮುತ್ತು ಗೋಂದುಗಳಂಥ ಹೊಳಪೂ ಉಂಟು. ವ್ಯಾಪ್ತಿ ಪಾರಕದಿಂದ ಅಪಾರದರ್ಶಕದವರೆಗೆ. ಬಹುಮಟ್ಟಿಗೆ ಮಿತಪಾರದರ್ಶಕ. ಕಾಠಿಣ್ಯ 6 ರಿಂದ 7. ಅಂದರೆ ಚಾಕುವಿನ ಅಲುಗಿನಿಂದ ಗೀರಬಹುದು. ಸಾಪೇಕ್ಷ ಸಾಂದ್ರತೆ 3.25 ರಿಂದ 3.5.

ಬಣ್ಣವನ್ನನುಸರಿಸಿ ಪುಷ್ಕಿನೈಟ್ ಮತ್ತು ಆಕ್ಮಟೈಟ್ (ಹಸಿರಿನ ವಿವಿಧ ಛಾಯೆಗಳು). ಬಕ್ಲಾಂಡೈಟ್ (ಕಪ್ಪು ಬಣ್ಣ), ವಿದಮೈಟ್ (ಹವಳದ ಕೆಂಪು ಮತ್ತು ಹಳದಿ), ಟಮಾವೈಟ್ (ಅಚ್ಚಹಸಿರು ಅಥವಾ ಹಳದಿ) ಎಂಬ ಬಗೆಗಳನ್ನೂ ರಾಸಾಯನಿಕ ಸಂಯೋಜನೆಗನು ಗುಣವಾಗಿ ಪೀಮಾಂಟೈಟ್ ಮತ್ತು ಸುರ್‍ಸೈಟ್ (ಮ್ಯಾಂಗನೀಸ್ ಅಂಶಯುಕ್ತ) ಮತ್ತು ಹ್ಯಾನ್‌ಕಾಕೈಟ್ (ಸೀಸ, ಮ್ಯಾಂಗನೀಸ್ ಮುಂತಾದ ಅಂಶಯುಕ್ತ) ಎಂಬ ಬಗೆಗಳನ್ನು ಗುರುತಿಸಲಾಗಿದೆ.

ನೈಸ್ (ಗೀರುಶಿಲೆ), ಷಿಸ್ಟ್ (ಪದರುಶಿಲೆ), ಮಾರ್ಬಲ್ (ಅಮೃತಶಿಲೆ) ಮುಂತಾದ ರೂಪಾಂತರ ವರ್ಗದ ಶಿಲೆಗಳಲ್ಲಿ ಎಪಿಡೋಟನ್ನು ಕಾಣಬಹುದು. ಅಲ್ಲದೆ ಗಾರ್ನೆಟ್, ಹಾರ್ನ್‌ಬ್ಲೆಂಡ್, ಆಗೇಟ್, ಬಯೋಟೈಟ್, ಸ್ಕ್ಯಾಪೊಲೈಟ್, ಪ್ಲೇಜಿಯೊಕ್ಲೇಸ್ ಮುಂತಾದ ಖನಿಜಗಳು ರಾಸಾಯನಿಕವಾಗಿ ಶಿಥಿಲಗೊಂಡಾಗಲೂ ಕಾಣಿಸಿಕೊಳ್ಳುತ್ತವೆ.

ಈ ಖನಿಜ ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತದಾದರೂ ರಷ್ಯದ ಯೂರಲ್ ಪರ್ವತ, ಮೊಕೊಸ್ಸವೇಕಿಯದ ವೊರೇವಿಯ, ಆಸ್ಟ್ರಿಯದ ಸಾಲ್ಸ್‌ಬರ್ಗ್ ಮತ್ತು ಟೈರಾಲ್ ಪ್ರಾಂತಗಳಲ್ಲಿ ಉತ್ತಮ ಹರಳುಗಳು ದೊರಕಿವೆ.

ಉತ್ತಮ ಛಾಯೆಯ ಪಾರದರ್ಶಕ ಹರಳುಗಳನ್ನು ಹಲವು ವೇಳೆ ಜವಾಹಿರಿಯಲ್ಲಿ ಉಪಯೋಗಿಸುವುದುಂಟು. (ಬಿ.ವಿ.ಜಿ.)

**ಎಪಿತೆಲಂತ:** ಗುಂಡಾಗಿರುವ ಕಳ್ಳಿಜಾತಿ. ಉತ್ತರ ಮೆಕ್ಸಿಕೊ ಮತ್ತು ದಕ್ಷಿಣ ಟೆಕ್ಸಾಸಿನ ಮೂಲವಾಸಿ. ಕಾಂಡದ ಮೇಲೆ ಮುಳ್ಳುಗಳು ಸಂಪೂರ್ಣವಾಗಿ ಕವಿದಿವೆ. ಸಸ್ಯದ ಮೇಲುಭಾಗದಲ್ಲಿ ದಾರವಿದೆ. ಬಲಿತ ಗಂಟುಗಳು ರಂಧ್ರಗಳಿಂದ ಹೂಕಾಣಿಸಿಕೊಳ್ಳುತ್ತದೆ. ಹೂ ಸಣ್ಣ ಬಿಳುಪು ಅಥವಾ ಕೆನೆಬಣ್ಣದ ನಕ್ಷತ್ರ ಆಕಾರದಲ್ಲಿದೆ. ಹಣ್ಣುಗಳು ಷಾಡ್ ಮಾದರಿಯವು. ಆಕಾರ ಗದೆಯಂತೆ. ಬಣ್ಣ ಕೆನೆ ಅಥವಾ ನಸುಗೆಂಪು.

ಎಪಿತೆಲಂತ ಮೈಕ್ರೊಮಿರಿಸ್ ಪ್ರಭೇದವನ್ನು ಅನೇಕ ಸಾರಿ ಮ್ಯಾಮಲೇರಿಯ ಕಳ್ಳಿಯೆಂದು ತಪ್ಪಾಗಿ ತಿಳಿಯುವ ಸಾಧ್ಯತೆ ಇದೆ. ಈ ಸಸ್ಯ ನಸುಗುಲಾಬಿ ಬಣ್ಣದ ಹೂ ಗಂಟುಗಳ ಕಂಕುಳುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸಸ್ಯ ಸಣ್ಣದಾಗಿ, ಗುಂಡಾಗಿದ್ದು ಬಿಳುಪು ಮಿಶ್ರಿತ ಹಳದಿಬಣ್ಣದ ಚಿಕ್ಕಮುಳ್ಳುಗಳಿಂದ ಆವೃತವಾಗಿದೆ. (ಡಿ.ಎಂ.)

**ಎಪಿಸೈಕ್ಲಾಯ್ಡ್:** ಒಂದು ಸ್ಥಿರವೃತ್ತದ ಪರಿಧಿಯಮೇಲೆ ಒಂದು ಚರವೃತ್ತ ಉರುಳುವಾಗ ಚರವೃತ್ತದ ಪರಿಧಿಯ ಮೇಲಿನ ಸ್ಥಿರಬಿಂದುವೊಂದು ರೇಖಿಸುವ ವಕ್ರರೇಖೆ. ಸರಳರೇಖೆಯ ಮೇಲೆ ಒಂದು ವೃತ್ತ ಉರುಳುವಾಗ ಆ ವೃತ್ತದ ವೃದ್ಧಿಸಿದ ಒಂದು ವ್ಯಾಸದ ಮೇಲಿನ ಒಂದು ಸ್ಥಿರಬಿಂದು ರೇಖಿಸುವ ವಕ್ರರೇಖೆಯನ್ನೂ ಇದೇ ಹೆಸರಿನಿಂದ ಕರೆಯುವುದುಂಟು. ಈ ಸಂದರ್ಭದಲ್ಲಿ ದೊರೆಯುವ ವಕ್ರರೇಖೆಯ ವಿಶೇಷ ರೂಪ ಸೈಕ್ಲಾಯ್ಡ್ ವಕ್ರರೇಖೆಯಾಗುತ್ತದೆ; ಸ್ಥಿರಬಿಂದುವನ್ನು ಒಂದು ವ್ಯಾಸಾಂತ ಬಿಂದುವಾಗಿ ಆರಿಸಿದರಾಯಿತು.



ಚಿತ್ರ 1

ಎಪಿಸೈಕ್ಲಾಯ್ಡಿನ ಸಮೀಕರಣವನ್ನು ಪಡೆಯುವ ವಿಧಾನ: ಸ್ಥಿರವೃತ್ತದ (C) ಕೇಂದ್ರ O, ತ್ರಿಜ್ಯ a ಆಗಿರಲಿ; ಚರವೃತ್ತದ (C') ಕೇಂದ್ರ A' ತ್ರಿಜ್ಯ b ಆಗಿರಲಿ. ಪ್ರಾರಂಭ ಸ್ಥಾನದಲ್ಲಿ ಇವೆರಡು ವೃತ್ತಗಳು ಸ್ಪರ್ಶಿಸುವ (ಬಾಹ್ಯಸ್ಪರ್ಶ) ಬಿಂದುವನ್ನೇ C' ಮೇಲಿನ ಸ್ಥಿರಬಿಂದುವೆಂದು (P) ಆರಿಸುತ್ತೇವೆ.



ಚಿತ್ರ 2

OPಯು x–ಅಕ್ಷ ಮತ್ತು O ಮೂಲಕ ಇದಕ್ಕೆ ಎಳೆದ ಲಂಬ y–ಅಕ್ಷ ಆಗಿರಲಿ. C' ವೃತ್ತ C ಮೇಲೆ ಉರುಳಿದಂತೆ P ಬಿಂದು C ವೃತ್ತವನ್ನು (ಎಂದರೆ ಅಕ್ಷಗಳನ್ನು) ಕುರಿತು ಒಂದು ವಕ್ರರೇಖೆಯನ್ನು ರೇಖಿಸುತ್ತದೆ. ಚಿತ್ರ 3ರಲ್ಲಿ Pಯ ಇಂಥ ಒಂದು ಸ್ಥಾನವನ್ನು (P'ನ್ನು) ಗುರುತಿಸಿದೆ. C' ವೃತ್ತದ ಕೇಂದ್ರ (ಚಿತ್ರ 3) ಈಗ A'. C,C' ವೃತ್ತಗಳ ಸ್ಪರ್ಶಬಿಂದು Q ವೃತ್ತಗಳ ಸಾಮಾನ್ಯ ಲಂಬ, Oxನ್ನು ಕುರಿತು $\theta$ ಕೋನ ಪರಿಭ್ರಮಿಸಿದೆ ಎಂದಿರಲಿ.



ಚಿತ್ರ 3

ಆದ್ದರಿಂದ $\angle xOA'=\theta$ ಇದೇ ಅವಧಿಯಲ್ಲಿ A'P' ತ್ರಿಜ್ಯ $y^{-}$ –ಅಕ್ಷದ ಸ್ಥಿರ ದಿಶೆಯೊಡನೆ ರಚಿಸುವ ಕೋನ $\phi$ ಆಗಿರಲಿ. ಆದ್ದರಿಂದ $\angle LA'P'=\phi$. C' ವೃತ್ತ C ಮೇಲೆ ಉರುಳಿರುವುದರಿಂದ

ಕಂಸ PQ=ಕಂಸ QP'

P' ಬಿಂದುವಿನ ನಿರ್ದೇಶಕಗಳು (x,y) ಆಗಿರಲಿ. ಆಗ

$$x = (a + b)\cos\theta - b\cos\left(\frac{a+b}{b}\right)\theta$$

$$y = (a + b)\sin\theta - b\sin\left(\frac{a+b}{b}\right)\theta$$



ಚಿತ್ರ 4

x ಮತ್ತು y ಗಳನ್ನು ಉರುಳು ಕೋನ $\theta$ದ ಮೂಲಕ ಸಂಬಂಧಿಸಿರುವ ಇವೆರಡು ಸಮೀಕರಣಗಳು ಎಪಿಸೈಕ್ಲಾಯ್ಡಿನ (Pಯ ಪಥದ) ಪ್ರಾಚಲ ಸಮೀಕರಣಗಳು (ಪ್ಯರಾಮೆಟ್ರಿಕ್ ಇಕ್ವೇಷನ್ಸ್). ಇಲ್ಲಿ $\theta$ ಪ್ರಾಚಲ.

ಪ್ರಾರಂಭಸ್ಥಾನದಲ್ಲಿ $\theta$=0. ಆಗ x=a, y=o ಎಂದು ಸುಲಭವಾಗಿ ಸಮೀಕರಣಗಳಿಂದ ಪಡೆಯಬಹುದು. ಇದು P ಬಿಂದು. ಎಪಿಸೈಕ್ಲಾಯ್ಡ್ ಪುನಃ C ವೃತ್ತವನ್ನು $P_1$ ಬಿಂದುವಿನಲ್ಲಿ ಸ್ಪರ್ಶಿಸಿದರೆ $OP_1$=a ಆಗಿರುವುದರಿಂದ ಆ ಬಿಂದುವಿನಲ್ಲಿ $x^2+y^2=a^2$. $P_1$ ಬಿಂದುವಿನಲ್ಲಿ $\cos\frac{a\theta}{b} = 1$

$$\therefore \frac{a\theta}{b} = 2n\pi, n\epsilon I$$

$$\therefore \theta = 2n.\frac{b\pi}{a}$$

$$\angle P_1O_x = \frac{2b\pi}{a}$$

$P_1$ ರ ಮುಂದಿನ ಸ್ಪರ್ಶಬಿಂದು $P_2$ ಆಗಿದ್ದರೆ $\angle P_2O_x = \frac{4b\pi}{a}$

ಇದೇ ರೀತಿ ಗಣನೆಯನ್ನು ಮುಂದುವರಿಸಬಹುದು. ಯಾವುದೇ ಎರಡು ಅನುಕ್ರಮ ಸ್ಪರ್ಶಬಿಂದುಗಳ ಅಂತರದಲ್ಲಿ ಇರುವ ಎಪಿಸೈಕ್ಲಾಯ್ಡಿನ ಭಾಗದ ಹೆಸರು ಒಂದು ಕಮಾನು (ಆರ್ಚ್). ಎಲ್ಲ ಕಾನೂನುಗಳು ಪರಸ್ಪರ ಸರ್ವಸಮವಾಗಿವೆ. $P_1$,$P_2$,$P_3$ ಇತ್ಯಾದಿ ಬಿಂದುಗಳಿಗೆ ಉಭಯಾಗ್ರ ಬಿಂದುಗಳೆಂದು (ಕಸ್ಪ್ಸ್) ಹೆಸರು. ಸಾಮಾನ್ಯವಾಗಿ ಕಮಾನುಗಳು ಪುನರಾವರ್ತಿಸುವುದಿಲ್ಲ. ಉರುಳುವೃತ್ತ C' ಸ್ಥಿರವೃತ್ತ Cಯ ಮೇಲೆ ಉರುಳಿದಂತೆ, ಅದು ಎಷ್ಟೇ ಪರಿಭ್ರಮಣೆಗಳನ್ನು ಮುಗಿಸಿದರೂ, ದೊರೆಯುವ ಕಮಾನುಗಳು ಬೇರೆಯೇ. C' ವೃತ್ತದ ಒಂದು ಪರಿಭ್ರಮಣಾನಂತರ ಕಮಾನುಗಳು ಪುನರಾವರ್ತಿಸಬೇಕಾದರೆ a, b ಗಳು ಒಂದು ವಿಶಿಷ್ಟ ನಿರ್ಬಂಧಕ್ಕೆ ಒಳಪಡಬೇಕಾಗುವುದು. $\theta = \frac{2nb\pi}{a}$ ಸಂಬಂಧದಲ್ಲಿ ಬಲಬದಿ 0,2ð,4ð.......(2kð,k $\varepsilon$ I ರೂಪದ) ಕೋನಗಳಾಗಿರಬೇಕು. ಆದ್ದರಿಂದ

ಒಂದು ಪೂರ್ಣಾಂಕವಾಗಿರಬೇಕು; ಅಂದರೆ bಯು aಯ ಒಂದು ಅಪವರ್ತ್ಯವಾಗಿರಬೇಕು, $b = al, (l\varepsilon I)$ ಆಗಿದ್ದರೆ ಆ ಎಪಿಸೈಕ್ಲಾಯ್ಡಿನಲ್ಲಿ ಕಮಾನುಗಳೂ ಅಷ್ಟೇ ಉಭಯಾಗ್ರಗಳೂ ಇವೆ; ಅಲ್ಲದೆ C' ವೃತ್ತದ ಒಂದು ಪರಿಭ್ರಮಣಾ ನಂತರ ಕಮಾನುಗಳು ಪುನರಾವರ್ತಿಸುತ್ತವೆ.

b=a ಒಂದು ವಿಶೇಷ ಪರಿಸ್ಥಿತಿ. ಈಗ ದೊರೆಯುವ ವಕ್ರರೇಖೆಯ ಹೆಸರು ಕಾರ್ಡಿಯಾಯ್ಡ್. **(ನೋಡಿ)**

ಒಂದು ಎಪಿಸೈಕ್ಲಾಯ್ಡ್ (ಅದರ ಸ್ಥಿರವೃತ್ತ C ಸಮೇತ) ಒಂದು ಸರಳರೇಖೆಯ ಮೇಲೆ ಉರುಳಿದರೆ C ಯ ಕೇಂದ್ರ O ಒಂದು ದೀರ್ಘವೃತ್ತವನ್ನು ರೇಖಿಸುತ್ತದೆ. ಈ ದೀರ್ಘವೃತ್ತದ ಹೆಸರು ಎಪಿಸೈಕ್ಲಾಯ್ಡಿನ ರೂಲೆಟ್ಟ್. **(ನೋಡಿ)** ಎಪಿಸೈಕ್ಲಾಯ್ಡಿನ ಲಂಬಸ್ಪರ್ಶಿತ **(ಇನವಲ್ಯೂಟ್; ನೋಡಿ–ಲಂಬಸ್ಪರ್ಶಿಕ)** ಇನ್ನೊಂದು ಸಮರೂಪದ ಎಪಿಸೈಕ್ಲಾಯ್ಡ್.

ಪ್ರ.ಶ.ಪೂ. 140ರಲ್ಲಿ ಗ್ರೀಕ್ ಖಗೋಳಜ್ಞ, ಹಿಪಾರ್ಕಸನಿಗೆ ಈ ವಕ್ರರೇಖೆಯ ಪರಿಚಯವಿತ್ತು. ಗೆರಾರ್ಡ್ ಡೆಸಾರ್ಗುಯೆಸ್ 1639ರಲ್ಲಿ ಈ ವಕ್ರರೇಖೆಯನ್ನು ವಿಶೇಷವಾಗಿ ಅಭ್ಯಸಿಸಿದ ಹಾಗೂ ಯಂತ್ರಗಳ ಗೇರ್ ಹಲ್ಲುಗಳ ರಚನೆಯಲ್ಲಿ ಇದರ ಗುಣಗಳನ್ನು ಅನ್ವಯಿಸಿದ. *

**ಎಪ್ರಿಕ:** ಲಿಲಿಯೇಸಿ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಸಸ್ಯ. ಇವು ಆಫ್ರಿಕ ದೇಶದ ಕೇಫ್ ಪ್ರಾವಿನ್ಸಿನ ಮೂಲವಾಸಿಗಳು. ಬಹುಮಟ್ಟಿಗೆ ಹವೊರ್ತಿಯ ಜಾತಿಯ ಸಸ್ಯಗಳನ್ನು ಹೋಲುತ್ತದೆ. ಮನೆಯ ಅಲಂಕಾರ ಸಸ್ಯವಾಗಿ ಕಲ್ಲೇರಿ ಸಸ್ಯವಾಗಿ ಇವುಗಳ ಬಳಕೆ ಸಾಮಾನ್ಯ. ಈ ಸಸ್ಯದಲ್ಲಿ ಎಲೆಯ ಗುಂಪುಗಳು ಕಾಂಡದಂತೆ ಮುಂದುವರಿದಿವೆ. ಎಲೆಯ ಅಂಚುಗಳಲ್ಲಿ ಉದ್ದಕ್ಕೂ ಹಲ್ಲುಗಳಂತಿರುವ ಮುಳ್ಳುಗಳಿವೆ.

ಎಪ್ರಿಕ ಅಸ್ಪೆರ: ಈ ಪ್ರಭೇದ ರಸಯುಕ್ತ, ದೀರ್ಘಾವಧಿ ಸಸ್ಯ. ಎಲೆಗಳು ಸುರುಳಿಗೊಂಡಿದೆ. ಬಣ್ಣ ಹಸಿರು, ಮೇಲುಭಾಗ ಒರಟು. ಕೆಳಭಾಗದಲ್ಲಿ ಎರಡು ಉಬ್ಬುಗಳು (ಕೀಲ್) ಇದ್ದು, ಇವುಗಳ ಮೇಲೆ ಗಂಟುಗಳಿವೆ.

ಎಪ್ರಿಕ ಬೈಕಾರಿನೇಟ: ಈ ಪ್ರಭೇದದ ಒತ್ತಿರಿಸಿದ ಒರಟು ಎಲೆಗಳು ತ್ರಿಕೋಣಾಕಾರವಾಗಿದೆ. ಬಣ್ಣ ನಸು ಹಸಿರು. ಅಂಚು ಮತ್ತು ತಳಭಾಗದಲ್ಲಿರುವ ಎರಡು ಉಬ್ಬುಗಳು ಸಮಾನಾಂತರವಾಗಿವೆ. ತುದಿ ಮೊನಚು. ಎತ್ತರಿಸಿದ ಬಿಳಿಯ ಗಂಟು ಸಾಲುಗಳು ಕೆಳಭಾಗದಲ್ಲೂ ಚಿಕ್ಕ ಬಿಳಿಯ ಗಂಟು ಸಾಲುಗಳು ಅಡ್ಡಲಾಗಿಯೂ ಇವೆ.

ಎಪ್ರಿಕ ಡೆಲ್ಟೋಯಿಡಿಯ: ಈ ಪ್ರಭೇದದ ಕಾಂಡ ನೆಲದ ಮೇಲೆ ಗುಲಾಬಿ ಹೂವಿನ ಆಕಾರದಲ್ಲಿದೆ. ತ್ರಿಕೋಣಾಕಾರದ ಹಸಿರು ಎಲೆಗಳು ಐದು ಸಾಲುಗಳಲ್ಲಿ ಹರಡಿದ್ದು ಮೆದುವಾಗಿವೆ. ಬಣ್ಣ ಹಸಿರು, ಅಂಚು ಗಟ್ಟಿ, ತುದಿ ಮೊನಚು.

ಎಪ್ರಿಕ ಪೆಂಟಗೋನ: ಈ ಪ್ರಭೇದದ ಕಾಂಡ ಗುಲಾಬಿ ಹೂವಿನಾಕಾರದಲ್ಲಿದೆ. ಒರಟಾಗಿರುವ, ಭರ್ಜಿಯಾಕಾರದ, ಹೊಳೆಯುವ, ನಸು ಹಸಿರು ಬಣ್ಣದ, ಮೊನಚು ತುದಿಯ ಎಲೆಗಳು ನೇರವಾಗಿರುವ ಐದು ಸಾಲುಗಳಲ್ಲಿವೆ. (ಡಿ.ಎಂ.)

**ಎಪ್ಸಮ್ ಲವಣ:** ನೈಸರ್ಗಿಕವಾಗಿ ದೊರೆಯುವ ಮೆಗ್ನೀಸಿಯಂ ಸಲ್ಫೇಟ್, $MgSO_4 7H_2O$. ಎಪ್ಸಮೈಟ್ ಪರ್ಯಾಯನಾಮ. ಇಂಗ್ಲೆಂಡಿನ ಸರ್ರೆ ಜಿಲ್ಲೆಯಲ್ಲಿ, ಲಂಡನ್ನಿಗೆ ನೈಋತ್ಯದಲ್ಲಿ ಹದಿನೈದು ಮೈಲಿ ದೂರದಲ್ಲಿರುವ, ಖನಿಜಯುಕ್ತ ಚಿಲುಮೆಗಳಿಗೆ ಹೆಸರಾದ ಎಪ್ಸಮ್ ಎಂಬ ಸ್ಥಳದಿಂದ ಈ ಹೆಸರು. ಈಗ ಕೃತಕವಾಗಿ ತಯಾರಿಸಿದ ಮೆಗ್ನೀಸಿಯಂ ಸಲ್ಫೇಟಿಗೂ ಈ ಹೆಸರು ಬಳಸುವುದುಂಟು.

ನೈಸರ್ಗಿಕವಾಗಿ ದೊರೆಯುವ ಎಪ್ಸಮ್ ಲವಣದ ಹರಳುಗಳು ಆರ್ಥೋರಾಂಬಿಕ್ ವರ್ಗಕ್ಕೆ ಸೇರಿದ್ದು ಸೂಜಿಯ ಆಕಾರದಲ್ಲಿರುತ್ತವೆ. ಕೆಲವು ವೇಳೆ ಬಹುದೊಡ್ಡ ಹರಳುಗಳು ಸಿಕ್ಕಿವೆ. ವಾಷಿಂಗ್ಟನ್ ಪ್ರಾಂತ್ಯದ ಆರ್ವಿಲ್ ಬಳಿ ಇರುವ ಕ್ರೂಗರ್ ಪರ್ವತದಲ್ಲಿ ದೊರೆತ ಹರಳುಗಳು ಹಲವಾರು ಅಡಿ ಉದ್ದ ಇದ್ದುವೆಂದು ವರದಿ. ಎಪ್ಸಮ್ ಹರಳಿನ ಬಣ್ಣ ರೇಷ್ಮೆಯಂತೆ ಮಾಸಲು ಬಿಳುಪು. ಸುಲಭವಾಗಿ ನೀರಿನಲ್ಲಿ ಕರಗುತ್ತದೆ ; ರುಚಿ ಬಲು ಕಹಿ.

ನಿಸರ್ಗದಲ್ಲಿ ದೊರೆಯುವ ಮ್ಯಾಗ್ನಸೈಟ್ ಅಥವಾ ಡಾಲಮೈಟ್ ಖನಿಜವನ್ನು ಸಲ್ಫ್ಯೂರಿಕ್ ಆಮ್ಲದಲ್ಲಿ ವಿಲೀನಿಸಿ ಮೆಗ್ನೀಸಿಯಂ ಸಲ್ಫೇಟನ್ನು ಕೃತಕವಾಗಿ ತಯಾರಿಸುತ್ತಾರೆ. ಇದನ್ನು ಭೇದಿ ಉಪ್ಪು ಎಂಬ ಹೆಸರಿನಲ್ಲಿ ಔಷಧಿಯಾಗಿ ಬಳಸುವುದಲ್ಲದೆ ಚರ್ಮ ಹದಮಾಡುವುದರಲ್ಲೂ, ಬಟ್ಟೆಗಳಿಗೆ ಬಣ್ಣಹಾಕುವುದು ಮತ್ತು ಬಟ್ಟೆ ಮುದ್ರಣದಲ್ಲೂ ಉಪಯೋಗಿಸುತ್ತಾರೆ. (ಜೆ.ಆರ್.ಎಲ್.)

**ಎಫಿಡ್ರ ಗಿಡ:** ನೇಟೇಸಿ ಕುಟುಂಬಕ್ಕೆ ಸೇರಿದ ಒಂದು ಪ್ರಭೇದ. ಹಾರ್ಸ್‌ಟೇಲ್ ಎಂಬ ಗಿಡಕ್ಕೆ ಪ್ಲಿನೀ ಇಟ್ಟ ಗ್ರೀಕ್ ಹೆಸರು. ಸಮಶೀತೋಷ್ಣ ವಲಯದ ಒಣಹವೆಯಲ್ಲಿ ಬೆಳೆಯುತ್ತದೆ. ಯಾರೂ ಹೆಚ್ಚಾಗಿ ಇವನ್ನು ವ್ಯವಸಾಯ ಮಾಡುತ್ತಿಲ್ಲ. ಸಸ್ಯಶಾಸ್ತ್ರೀಯ ಉದ್ಯಾನಗಳಲ್ಲಿ ಮಾತ್ರ ಕೆಲವೆಡೆ ಬೆಳೆಸುತ್ತಾರೆ. ಇವುಗಳ ಕಡುಗೆಂಪು ಬಣ್ಣದ ಹಣ್ಣುಗಳು ನೋಡಲು ಚೆನ್ನ. ಗಿಡ ಎತ್ತರ ಬೆಳೆಯುವುದು. ರೆಂಬೆಗಳು ಹೆಚ್ಚು. ನೋಡಲು ಪೊದೆಯಂತಿರುತ್ತದೆ. ಎಲೆ ತೆಳು, ಜೋಡಿಯಾಗಿವೆ. ದಕ್ಷಿಣ ಯೂರೋಪು, ಉತ್ತರ ಆಫ್ರಿಕ, ಏಷ್ಯ ಮತ್ತು ಅಮೆರಿಕದ ಉಷ್ಣವಲಯದ ಭಾಗಗಳಲ್ಲಿ 30 ಪ್ರಭೇದಗಳನ್ನು ಗುರುತಿಸಲಾಗಿದೆ. ಭಾರತದಲ್ಲಿ ಈ ಕೆಲವು ಪ್ರಭೇದಗಳು ಕಂಡುಬಂದಿವೆ: ಎಫಿಡ್ರ ಗೆರಾರ್ಡಿನ (ಕಾಶ್ಮೀರ, ಸಿಕ್ಕಿಂ), ಎಫಿಡ್ರ ಇಂಟರ್‌ಮೀಡಿಯ ವರ್ ಟಿಬೆಟಿಕ (ಕಾಶ್ಮೀರ, ಕುಲು ಕಣಿವೆ), ಎಫಿಡ್ರ ಪೋಲಿಯೇಟ (ದಕ್ಷಿಣ ಪಂಜಾಬ್, ರಾಜಾಸ್ತಾನ್) ಬೀಜಗಳಿಂದ, ತುಂಡುಗಳಿಂದ ಹೊಸಗಿಡಗಳನ್ನು ಪಡೆಯಬಹುದು. ಎಫಿಡ್ರ ವಲ್ಗ್ಯಾರಿಸ್




ಎಫಿಡ್ರ ಗಿಡ: 1. ರೆಂಬೆಗಳು
2. ಗಂಡು ಹೂ ಗೊಂಚಲು

ಮುಂತಾದ ಕೆಲವು ಪ್ರಭೇದಗಳಿಂದ ಮಾಹುವಾಂಗ್ ಎಂಬ ಔಷಧವನ್ನು ಚೀನೀಯರು ಬಹು ಹಿಂದಿನಿಂದಲೂ ತಯಾರಿಸುತ್ತಿದ್ದರು. ಗಿಡಕ್ಕೆ ವಯಸ್ಸಾದಂತೆಲ್ಲ ಅದರಲ್ಲಿ ಔಷಧಗುಣ ಹೆಚ್ಚುತ್ತದೆ. ನಾಲ್ಕು ವರ್ಷದ್ದಾಗಿದ್ದು ಹೂ ಬಿಡುವ ಗಿಡಗಳಲ್ಲಿನ ರೆಂಬೆಗಳಲ್ಲಿ ಎಫಿಡ್ರೀನ್ ಹೇರಳವಾಗಿರುತ್ತದೆ. ಎಫಿಡ್ರ ಮೇಜರ್ ಪ್ರಭೇದದಲ್ಲಿ ಮದ್ದಿನ ಪ್ರಮಾಣ ಬಲು ಹೆಚ್ಚೆಂದು ತಿಳಿದು ಬಂದಿದೆ. ಈಗ ಎಫಿಡ್ರೀನನ್ನು ಇನ್ನೂ ಸರಳವಾಗಿ ಕೃತಕ ವಿಧಾನಗಳಿಂದ ಪಡೆಯುತ್ತಾರೆ. 1887ರಲ್ಲೇ ನಗಾಯಿಎಂಬಾತ ಈ ಸಂಯುಕ್ತವನ್ನು ಕಂಡು ಹಿಡಿದನಾದರೂ ಇದರ ರೋಗನಿವಾರಕ ಗುಣಗಳನ್ನು ಪರಿಶೀಲಿಸಿದವ ಡಾ. ಷ್ಮಿಡ್ಟ್ (1929). ನೆಗಡಿ ಮತ್ತು ಇತರೆ ಬೇನೆಗಳಲ್ಲಿ ಮೂಗಿನಿಂದ ನೀರು ಸುರಿಸುವುದನ್ನು ತಪ್ಪಿಸಲು ರಕ್ತನಾಳಗಳು ಕುಗ್ಗುವಂತೆ ಮಾಡಲು, ಗೂರಲಿನ ಉಬ್ಬಸವನ್ನು ನಿಧಾನವಾಗಿ ಅಡಗಿಸಲು, ಬರದಂತೆ ತಡೆಯಲು ವೈದ್ಯರಲ್ಲಿ ಇದು ಬಳಕೆಯಲ್ಲಿದೆ. ಇದನ್ನು ಕೊಟ್ಟಾಗ ರಕ್ತ ಒತ್ತಡ ಏರುವುದಲ್ಲದೆ ಮಿದುಳಿನ ಚೋದನೆಯಾಗಿ ನಿದ್ದೆ ಕೆಡುತ್ತದೆ. (ಜಿ.ಆರ್.ಸಿ.;ಡಿ.ಎಸ್.ಎಸ್.;ಎಂ.ಆರ್.ಆರ್.)

**ಎಫಿಡ್ರ ನೊಣ:** ಸಂಧಿಪದಿಗಳ ವಂಶದ ಡಿಪ್ಟರ ಗಣದ ಎಫಿಡ್ರಿಡೆ ಕುಟುಂಬದ ನೊಣ. ರಚನೆಯಲ್ಲಿ ಡ್ರೊಸಾಫಿಲಿಡೆ ಕುಟುಂಬವನ್ನು ಹೋಲುತ್ತದೆ. ದೇಹದ ಉದ್ದ 1/16 ರಿಂದ 3/8 ಅಂಗುಲ. ಉಪ್ಪುನೀರಿನಲ್ಲಿ ಮೊಟ್ಟೆಯಿಡುತ್ತದೆ. ಅಲ್ಲೇ ಮೊಟ್ಟೆಯೊಡದು ಲಾರ್ವ ಹೊರಬಂದು ಕೋಶಾವಸ್ಥೆ ತಲುಪುತ್ತದೆ. ಆಗ ಅಲೆಗಳ ಹೊಡೆತದಿಂದಾಗಿ ಕೋಶ ದಡ ಮುಟ್ಟುತ್ತದೆ. ಇವನ್ನು ಆಯ್ದು ಒಣಗಿಸಿ ರೆಡ್ ಇಂಡಿಯನರು ಆಹಾರವಾಗಿ ಬಳಸುತ್ತಾರೆ. ಮೆಕ್ಸಿಕೋದ ಸುತ್ತಮುತ್ತ ಈ ನೊಣ ಅಧಿಕ ಪ್ರಮಾಣದಲ್ಲಿ ವಾಸಿಸುತ್ತದೆ. ನೊಣದ ಬಣ್ಣ ಕಪ್ಪು ಅಥವಾ ಕಂದುಗೆಂಪು. ಬಾಯಿ ಬಹಳ ಅಗಲ. ಕೆನ್ನೆಗಳು ಉಬ್ಬಿವೆ. ತಲೆಯ ತಳಭಾಗದಲ್ಲಿ ಬಾಯ ಒಳಾಂಗಗಳು ಆವರಿಸಿವೆ. ಸಿಲೋಪಪೆಟ್ರೋಲೈ ಎಂಬ ನೊಣದ ಲಾರ್ವಗಳು ಕಲ್ಲೆಣ್ಣೆ ಬಾವಿಗಳಲ್ಲಿ ವಾಸಿಸುತ್ತವೆ. ಇವು ಎಣ್ಣೆಬಾವಿಗೆ ಬೀಳುವ ಇತರ ಕೀಟಗಳನ್ನು ತಿಂದು ಬದುಕುತ್ತವೆ. ಕ್ಯಾಲಿಫೋರ್ನಿಯದ ವಿವಿಧ ತೈಲಪ್ರದೇಶಗಳಲ್ಲಿ ಇವು ಹೆಚ್ಚಾಗಿವೆ. (ಕೆ.ಎಂ.ವಿ.)

**ಎಫಿಮಿರಾಪ್ಟೆರ:** ರೆಕ್ಕೆಯುಳ್ಳ ಕೀಟಗಳ ಒಂದು ಗಣ. ಉದಾಹರಣೆ–ಮೇ ಫ್ಲೈ ಅಥವಾ ಡೇ ಫ್ಲೈ ಇವು ಅನೇಕ ರೀತಿಯಿಂದ ವಿಶಿಷ್ಟವಾಗಿವೆ. ಎಫಿಮಿರಾಪ್ಟೆರ ಎಂಬ ಹೆಸರು ಈ ಜೀವಿಗಳ ಕ್ಷಣಿಕಜೀವನ ವ್ಯಾಪ್ತಿಯನ್ನು ಸೂಚಿಸುತ್ತದೆ. ಇವುಗಳ ಶರೀರ ಬಲು ಮೃದು. ಮೀಸೆ ಬಹಳ ಚಿಕ್ಕದು. ಎರಡು ಜೊತೆ ತೆಳ್ಳನೆಯ ರೆಕ್ಕೆಗಳಿವೆ. ಹಿಂದಿನ




..........................

ಜೊತೆ ಬಹಳ ಚಿಕ್ಕದು. ಕೀಟ ಕುಳಿತಾಗ ರೆಕ್ಕೆಗಳೂ ಲಂಬವಾಗಿ ನಿಂತಿರುತ್ತವೆ. ಉದರದ ಹಿಂಭಾಗದಲ್ಲಿನ ಉದ್ದವಾದ ಗುದಕುದಿಂದ ಇವನ್ನು ಸುಲಭವಾಗಿ ಗುರುತಿಸಬಹುದು.

ಪ್ರೌಢಾವಸ್ಥೆಯಲ್ಲಿರುವ ಕೀಟಗಳು ಸಾಮಾನ್ಯವಾಗಿ ನೀರಿನ ಸುತ್ತಮುತ್ತ ಹಾರಾಡುತ್ತಿರುತ್ತವೆ. ಇವುಗಳ ಲಾರ್ವಾಗಳನ್ನು 'ನಿಂಫ್' ಎಂದು ಕರೆಯುತ್ತೇವೆ. ಇವು ಸಸ್ಯಾಹಾರಿಗಳಾಗಿದ್ದು, ನೀರಿನಲ್ಲಿರುವ ಸಸ್ಯಗಳ ಸಂಖ್ಯಾನಿಯಂತ್ರಣಕ್ಕೆ ಸಹಾಯಕಾರಿ. ಒಂದರಿಂದ ಮೂರು ವರ್ಷಗಳವರೆಗೂ ನಿಂಫ್ ಹಂತದಲ್ಲಿ ಜಲವಾಸಿಗಳಾಗಿದ್ದು ಸುಮಾರು 24 ಬಾರಿ ತಮ್ಮ ಹೊರಕವಚವನ್ನು ಕಳಚಿ ಪ್ರೌಢಾವಸ್ಥೆ ತಲುಪುತ್ತವೆ. ಬೆಳೆದ ಕೀಟ ಕೆಲ ಗಂಟೆಗಳು ಅಥವಾ ಒಂದೆರಡು ದಿನ ಬದುಕಿದ್ದರೆ ಹೆಚ್ಚು. ಮೊಟ್ಟೆ ಇಟ್ಟ ನಂತರ ಹೆಣ್ಣು ಅಸು ನೀಗುತ್ತದೆ. ಹೆಣ್ಣಿನೊಂದಿಗೆ ಕೂಡಿದ ನಂತರ ಗಂಡು ನೀರಿಗೆ ಬಿದ್ದು ಸಾಯುತ್ತದೆ.

ಎಫಿಮಿರಾಪ್ಟೆರ ಗಣದಲ್ಲಿ ಸುಮಾರು 1,800 ಪ್ರಭೇದಗಳನ್ನು ಗುರುತಿಸಿದ್ದಾರೆ. ಉತ್ತರ ಅಮೇರಿಕದಲ್ಲಿ 500 ಪ್ರಭೇದಗಳನ್ನು ಗುರುತಿಸಲಾಗಿದೆ. ಬ್ರಿಟಿಷ್ ದ್ವೀಪಗಳಲ್ಲಿ 48 ಪ್ರಭೇಧಗಳು ದೊರಕಿವೆ. ಏಷ್ಯ, ದಕ್ಷಿಣ ಅಮೆರಿಕ ಮತ್ತು ಆಫ್ರಿಕಗಳಲ್ಲಿ ಇನ್ನೂ ಅಜ್ಞಾತವಾಗಿರುವ ಪ್ರಭೇದಗಳು ವಿಪುಲವಾಗಿರುವಂತಿದೆ.

ಆಫ್ರಿಕಾದಲ್ಲಿರುವ ಅತ್ಯಂತ ದೊಡ್ಡದಾದ ವಿಕ್ಟೋರಿಯಾ ಸರೋವರವನ್ನು 'ಮೇ ಫ್ಲೈಗಳ ಸರೋವರ' ಎಂದೇ ಕರೆಯುತ್ತಾರೆ. ಕೆಲವೊಂದು ಋತುಗಳಲ್ಲಿ ಕೋಟ್ಯಂತರ ಮೇ ಫ್ಲೈಗಳು ಸರೋವರದ ಮೇಲೆ ಗುಂಪುಗೂಡಿ ಹಾರಾಡುವಾಗ ಬೆಂಕಿಯಿಲ್ಲದ ಹೊಗೆ ಎದ್ದಂತೆಯೇ ಕಾಣುತ್ತದೆ. ದಟ್ಟವಾದ ಮೋಡ ಕವಿದಂತಹ ಅನುಭವ ತರಿಸುವ ಈ ದೃಶ್ಯ ದೋಣಿವಿಹಾರ ಮತ್ತು ಮೀನುಹಿಡಿಯಲು ಅಡಚಣೆಯಾಗುವುದೆಂದು ಭಾವಿಸಲಾಗಿದೆ. ಈ ಹಾರಾಟ ಪ್ರಣಯಕೇಳಿ ನರ್ತನವಷ್ಟೇ. ಸರೋವರದ ಬಳಿ ವಾಸಿಸುವ ಜನ ದೊಡ್ಡ ದೊಡ್ಡ ಬಲೆಗಳನ್ನು ಬೀಸಿ ಮೇ ಫ್ಲೈಗಳನ್ನು ಹಿಡಿದು ಬೋಂಡದಂತಹ ಕರಿದ ತಿಂಡಿಯನ್ನು ಮಾಡಿ ತಿನ್ನುತ್ತಾರೆ. (ಜಿ.ಪಿ.ಸಿ.)

**ಎಫಿಮೆರಿಸ್: ನೋಡಿ– ಖಗೋಳ ಕೋಷ್ಟಕ.**

**ಎಬನಿಮರ:** ಡಯಾಸ್ಪೈರಸ್ ಎಂಬ ವೈಜ್ಞಾನಿಕ ಹೆಸರಿನ ಎಬಿನೇಸಿ ಕುಟುಂಬದ ಒಂದು ಪ್ರಮುಖ ವೃಕ್ಷಜಾತಿ. ಇದರಲ್ಲಿ ಸುಮಾರು 240 ಪ್ರಭೇದಗಳಿದ್ದು ಅವೆಲ್ಲ ಸಾಮಾನ್ಯವಾಗಿ ದೊಡ್ಡ ಮರಗಳಾಗಿವೆ ; ಕೆಲವು ಮಾತ್ರ ಪೊದರುಗಳು. ಮುಖ್ಯವಾಗಿ ಉಷ್ಣದೇಶಗಳಲ್ಲಿ ಕಂಡುಬರುತ್ತವೆ. ಭಾರತ ಮಲಯ ಮತ್ತು ಈಸ್ಟ್ ಇಂಡೀಸ್‌ಗಳಲ್ಲಿ ಅತಿ ಹೆಚ್ಚಾಗಿ ಹರಡಿವೆ. ಮತ್ತು ಕೆಲವು ಆಫ್ರಿಕದಲ್ಲೂ ಇವೆ. ಕಾಡು ಸಸ್ಯಗಳಲ್ಲಿ ಎಬನಿ ಅತಿ ಮುಖ್ಯವಾದುದು.



ಭಾರತದ ಕಾಡುಗಳಲ್ಲಿ ಸುಮಾರು 41 ಪ್ರಭೇದಗಳು ಕಂಡುಬಂದಿವೆ. ಅವೆಲ್ಲ ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ. ಎಬೆನಮ್ ಮೆಲನೊ, ಸೈಲಾನ್ ಬಕ್ಸಿಫೋಲಿಯ, ಕಾಕಿ, ಮಾಂಟಾನ, ಟೊಮಂಟೋಸ, ಕ್ಲೋರೋಕ್ಸೊಂಲಾನ್–ಈ ಪ್ರಭೇದಗಳೂ ದಕ್ಷಿಣಭಾರತದ ಡೆಕ್ಕನ್, ಅಸ್ಸಾಂ ಮತ್ತು ಬಂಗಾಳದ ಕಾಡುಗಳಲ್ಲಿ ಅತಿ ಹೆಚ್ಚಾಗಿ ಬೆಳೆಯುತ್ತವೆ. ಕೆಲವು ಪ್ರಭೇದಗಳು 60 ರಿಂದ 80 ಅಡಿಗಳಷ್ಟು ಎತ್ತರವಾಗಿದ್ದು ಮರದ ವ್ಯಾಸ 7 ಅಡಿಗಳವರೆಗೂ ಇದೆ. ಎಲೆಗಳು ಅಚ್ಚಹಸಿರಾಗಿದ್ದು ಸ್ವಲ್ಪ ಒರಟಾಗಿವೆ. ಹೂಗಳು ಸಾಮಾನ್ಯವಾಗಿ ಸಣ್ಣವಾಗಿದ್ದು ಏಕಲಿಂಗಿಯಾಗಿವೆ. ಹೆಣ್ಣು ಮತ್ತು ಗಂಡು ಪುಷ್ಪಗಳು ಒಂದೇ ಸಸ್ಯದಲ್ಲಿ ಅಥವಾ ಬೇರೆ ಬೇರೆ ಸಸ್ಯಗಳಲ್ಲಿ ಕಾಣಬರುತ್ತವೆ. ಗಂಡು ಹೂಗಳು 4 ರಿಂದ 16 ಅಥವಾ 64 ಕೇಸರುಗಳನ್ನೂ ಹೆಣ್ಣುಹೂಗಳು 4 ರಿಂದ 5 ಕೋಣೆಗಳುಳ್ಳ ಸಂಯುಕ್ತ ಅಂಡಾಶಯವನ್ನೂ ಹೊಂದಿವೆ. ಹಣ್ಣುಗಳು ಹಾಲಿನಿಂದ ಕೂಡಿ ರಸಭರಿತವಾ ಗಿದ್ದು ಸ್ವಲ್ಪ ಕಹಿಯಾಗಿವೆ.

ಡಯಾಸ್ಪೈರಸ್ ಮರಗಳ ಜಾತಿಯಲ್ಲಿ ಕಾಣಬರುವ ಎಲ್ಲ ಪ್ರಭೇದಗಳನ್ನೂ ಮುಖ್ಯವಾಗಿ ದಿಮ್ಮಿ ಮತ್ತು ಮರದಮುಟ್ಟು ಸಾಮಾನುಗಳನ್ನು ಮಾಡಲು ಉಪಯೋಗಿಸುತ್ತಾರೆ. ಅದರಲ್ಲೂ ವೈಜ್ಞಾನಿಕವಾಗಿ ಡಯಾಸ್ಪೈರಸ್ ಎಬೆನಮ್ ಎಂಬ ಕರಿಮರ ಬೇರೆ ಎಲ್ಲ ಪ್ರಭೇದಗಳಿಗಿಂತ ಉತ್ತಮವಾದದ್ದು. ಇದರಿಂದ ಮರದ ಸಾಮಾನುಗಳನ್ನು ಮಾಡುತ್ತಾರೆ. ಈ ಮರ ಮೈಸೂರಿನ ಹರಿದ್ವರ್ಣದ ಕಾಡುಗಳಲ್ಲಿದೆ. ಇದು ಗಟ್ಟಿಯಾದ ಮರದ ದಿಮ್ಮಿಯನ್ನು ಕೊಡುವುದಲ್ಲದೆ ತಿನ್ನಲು ಯೋಗ್ಯವಾದ ರಸಭರಿತ ಹಣ್ಣುಗಳನ್ನೂ ಕೊಡುತ್ತದೆ. ಪ್ರಕಾಶವಾಗಿ ಹೊಳೆಯುವ ಎಲೆಗಳನ್ನೂ ಬಣ್ಣದ ಹಣ್ಣುಗಳನ್ನೂ ಪಡೆದಿರುವುದರಿಂದ, ಉದ್ಯಾನ, ತೋಟ ಇತ್ಯಾದಿ ಸ್ಥಳಗಳಲ್ಲಿ ಅಲಂಕಾರವೃಕ್ಷವಾಗಿ ಇದನ್ನು ಬೆಳೆಸುತ್ತಾರೆ. ಕಾಂಡದ ಹೊರಭಾಗವನ್ನು ಕಿತ್ತುಹಾಕಿ, ಒಳಭಾಗದ ಕಪ್ಪಗಿರುವ ಸೇಗನ್ನು ಕೆಲಸಗಳಿಗೆ ಉಪಯೋಗಿಸುತ್ತಾರೆ. ಈ ಸೇಗಿಗೆ ಎಬನಿ ಎಂದು ಹೆಸರು.

ಡಯಾಸ್ಪೈರಸ್ ಮೆಲನೋಸೈಲಾನ್ (ಅಬನಾಸಿ ಅಥವಾ ದೀರ್ಘಪತ್ರಕ) ಮತ್ತು ಡ.ಟೊಮೆಂಡೋಸ ಎಂಬ ಹೆಸರಿನ ಪ್ರಭೇದಗಳ ಮರ ಗುಣದಲ್ಲಿ ಮೇಲೆ ಹೇಳಿದ ಕರಿಮರಕ್ಕೆ ಸರಿಸಮವಾಗಿರುತ್ತದೆ. ಆದರೆ ಸೇಗು ಭಾಗದಲ್ಲಿ ವಿಶೇಷ ರೀತಿಯ ಕಪ್ಪು ಕಪ್ಪಾದ ಚುಕ್ಕೆಗಳು ಅಥವಾ ಗೆರೆಗಳಿವೆ. ಜನಪ್ರಿಯವಾಗಿ ಮಾರ್ಬಲ್ ಮರ (ಡ.ಮರ್ಮೋರೇಟ) ಮತ್ತು ಕಲಮಾಂಡರ್ (ಡ.ಕ್ವಾಸಿಟ) ಎಂದು ಕರೆಯುವ ಮರಗಳ ಸೇಗುಭಾಗ ವಿವಿಧರೀತಿಯ ಮಚ್ಚೆಗಳಿಂದ ಆವೃತವಾಗಿದೆ.(**ನೋಡಿ– ಅಬನಾಸಿ**) ಎಬನಿಮರಗಳ ಬೆಳವಣಿಗೆಯ ಕಾಲದಲ್ಲಿ ಮರದ ಹೊರಭಾಗ (ಸ್ಯಾಪ್‌ವುಡ್) ಕ್ರಮೇಣ, ನಿಧಾನವಾಗಿ, ಒಳಭಾಗದ ಸೇಗು (ಹಾರ್ಟ್‌ವುಡ್) ಆಗಿ ಸ್ಥಿತ್ಯಂತರಗೊಳ್ಳುವುದು. ಈ ರೀತಿಯ ಬದಲಾವಣೆಯಾಗುವಾಗ,

ಅಂಗಾಂಶಗಳಲ್ಲಿರುವ ಲಿಗ್ನಿನ್ ಎಂಬ ದಾರುಪದಾರ್ಥ ರಾಸಾಯನಿಕ ದೃಷ್ಟಿಯಿಂದ ಅಲ್ಮಿಕ್ (ಆಮ್ಲ) ವಸ್ತುವಾಗುವುದೆಂದು ತಿಳಿದುಬಂದಿದೆ. ಕೆಲವು ಮರಗಳಲ್ಲಿ ಸೇಗುಭಾಗ ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತದೆ. ಎಬನಿ ಮರದ ದಿಮ್ಮಿಗಳಲ್ಲಿ ಸಾಮಾನ್ಯವಾಗಿ ಸೇಗು ಭಾಗ ಗಟ್ಟಿಯಾಗಿಯೂ ಅತಿ ಗಡುಸಾಗಿಯೂ ಇರುತ್ತದೆ. ಮರದ ಭಾಗವನ್ನು ಹದಮಾಡುವುದು ಕಷ್ಟ. ಆದರೂ ಮರದ ಸೇಗುಭಾಗ ದೀರ್ಘಕಾಲ ಬಾಳಿಕೆ ಬರುತ್ತದೆ. ಬಿದ್ದರೆ ಒಡೆದು ಹೋಗುವ, ಸೀಳುವ ಸಂದರ್ಭ ಹೆಚ್ಚು ಇದಕ್ಕೆ ಅಂದವಾಗಿ ಮೆರುಗು ಕೊಡಬಹುದು.

ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಎಬನಿ ಮರಗಳ ದಿಮ್ಮಿಯನ್ನು ಅಷ್ಟು ಹೆಚ್ಚಾಗಿ ಉಪಯೋಗಿಸದೇ ಇದ್ದರೂ ಕೆತ್ತನೆಯ ಸಾಮಾನುಗಳನ್ನು ಕೊರೆಯುವುದು. ಪೀಠಾಲಂಕಾರದ ಕೆಲಸ ಮತ್ತು ವಿವಿಧ ಸಂಗೀತೋಪಕರಣಗಳು, ಕೊಡೆಕೋಲುಗಳೂ, ಕೈಕೋಲುಗಳು, ಬ್ರಷ್ಷಿನ ಮೈಭಾಗಗಳು, ಸಂವಾದ ಅಲಮಾರಗಳು ಇತ್ಯಾದಿಗಳನ್ನು ಮಾಡಲು ಹೆಚ್ಚಾಗಿ ಉಪಯೋಗಿಸುತ್ತಾರೆ. ಮರದ ಹೊರಭಾಗ ಸಹ ಅನೇಕ ರೀತಿಯ ಕೆಲಸಗಳಿಗೆ ಉಪಯೋಗವಾಗುತ್ತದೆ. ಇದು ಜೀವಂತ ಮರದಲ್ಲಿ ತಿಳಿಬಣ್ಣವುಳ್ಳದ್ದಾಗಿದ್ದು ಗಾಳಿಗೆ ಬಿಟ್ಟರೆ ಅಥವಾ ಒಣಗಿಸಿದರೆ ಕೆಂಪುಮಿಶ್ರಿತ ಕಂದು ಬಣ್ಣಕ್ಕೆ ತಿರುಗುತ್ತದೆ. ಇದನ್ನು ಸುಲಭವಾಗಿ ಮರಗೆಲಸಗಳಿಗೆ ಉಪಯೋಗಿಸಬಹುದಾದರೂ ಹೆಚ್ಚಿನ ಭಾರ, ಅತಿ ಶೈತ್ಯಾಂಶ ಇತ್ಯಾದಿ ಕಠಿಣ ಪರಿಸ್ಥಿತಿಗಳನ್ನು ಇದು ತಡೆಯಲಾರದು. ಒಟ್ಟಿನಲ್ಲಿ ಕೆಲವು ಪ್ರಭೇದದ ಮರಗಳಲ್ಲಾದರೂ ಈ ಭಾಗ ಬಲವುಳ್ಳದ್ದಾಗಿ, ಗಡುಸಾಗಿ ಧಕ್ಕೆಯನ್ನು ಸಹಿಸಬಲ್ಲದ್ದಾಗಿ ಇರುತ್ತದೆ. ನಾಟ ವ್ಯಾಪಾರೋದ್ಯೋಮದಲ್ಲಿ ಹೆಸರುವಾಸಿಯಾದ ಅನೇಕ ಜಾತಿಗಳಲ್ಲಿ ಎಬನಿ ಮರವೂ ಮುಖ್ಯವಾದದ್ದು.

ಎಬನಿಯ ಹಲವು ಪ್ರಭೇದಗಳು ತಿನ್ನಲು ಯೋಗ್ಯವಾದ ರಸಭರಿತ ಹಣ್ಣುಗಳನ್ನು ಕೊಡುತ್ತವೆ. ಇವುಗಳಲ್ಲಿ ಡಯಾಸ್ಪೈರಸ್ ಕಾಕಿ ಮುಖ್ಯವಾದದ್ದು. ಇದನ್ನು ಕೆಗ್‌ಫಿಗ್, ಜಪಾನ್ ಪಾರ್ಸಿಮಾನ್, ಕಾಕಿ ಹಣ್ಣು (ಕಾಫಿ ಹಣ್ಣು) ಎಂದು ಮುಂತಾಗಿ ಕರೆಯುತ್ತಾರೆ. ಈ ಹಣ್ಣುಗಳನ್ನು ಜಪಾನ್ ಮತ್ತು ಚೀನದ ಜನ ವಿಶೇಷವಾಗಿ ಉಪಯೋಗಿಸುತ್ತಾರೆ. ಭಾರತದಲ್ಲಿ ಕಾಶ್ಮೀರ, ಕೋಲ್ಕತ್ತ, ಉದಕಮಂಡಲದ ಕೂನೂರ್, ಬೆಂಗಳೂರು ಇತ್ಯಾದಿ ಸ್ಥಳಗಳಲ್ಲಿ ಇದನ್ನು ಹಣ್ಣುಗಳಿಗಾಗಿ ಬೆಳೆಸುತ್ತಾರೆ. ಬೀಜಗಳನ್ನು ಕಾಫಿಗೆ ಬದಲಾಗಿ ಕೆಲವು ಕಡೆ ಉಪಯೋಗಿಸುತ್ತಾರೆ. ಭಾರತದ ಕಾಡುಗಳಲ್ಲಿ ಬೆಳೆಯುವ ಡ.ಟೊಮೆಂಟೋಸ್ ಮತ್ತು ಡ.ಮೆಲನೋಸ್ಪೈಲಾನ್ ಪ್ರಭೇದಗಳ ಹಣ್ಣುಗಳು ತಿನ್ನಲು ಯೋಗ್ಯವಾಗಿವೆ. ಇವುಗಳಲ್ಲದೆ, ಇತ್ತೀಚೆಗೆ ಡ.ಲೋಟಸ್, ಡ.ಡಿಸ್ಕಲರ್, ಇತ್ಯಾದಿ ಪ್ರಭೇದಗಳನ್ನು ಹಣ್ಣಿಗಾಗಿ ಬೆಳೆಯುವ ಯತ್ನ ನಡೆದಿದೆ. ಈ ಹಣ್ಣುಗಳಲ್ಲಿ ಸಾಕಷ್ಟು ಸಕ್ಕರೆ ಅಂಶವಿದ್ದು (ಶೇ.15) ಆಮ್ಲೀಯ ಅಂಶಗಳು ಕಡಿಮೆ ಇವೆ. ಟ್ಯಾನಿನ್ ವಸ್ತುಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿವೆ. ಆದುದರಿಂದಲೇ ಇವು ತಿನ್ನಲು ಸ್ವಲ್ಪ ಒಗರಾಗಿರುವುದಲ್ಲದೇ ಅಂಟಂಟಾಗಿವೆ. ಭಾರತದಲ್ಲಿ ಬೆಳೆಯುವ ಡ. ಎಂಬ್ರಿಯಾಕ್ಟೆರಿಸ್ ಎಂಬ ಪ್ರಭೇದದ ಹಣ್ಣುಗಳಲ್ಲಿ ಶೇ. 50ರಷ್ಟು ಪೆಕ್ಟಿನ್ ವಸ್ತುಗಳಿವೆ. ಈ ವಸ್ತುಗಳನ್ನು ಬಟ್ಟೆಯ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಾರೆ.

ಅನೇಕ ಎಬನಿಮರಗಳ ವಿವಿಧ ಭಾಗಗಳಾದ ಹಣ್ಣು, ಬೀಜ, ತೊಗಟೆ, ಟೊಂಗೆ, ಎಲೆ, ಹೂ, ಇತ್ಯಾದಿಗಳನ್ನು ಔಷಧಿಯಾಗಿ ಉಪಯೋಗಿಸುತ್ತಾರೆ. ಡ.ಮೆಲನೋಸ್ಪೈಲಾನ್ ಮರದ ಚಕ್ಕೆಯಿಂದ ಕಷಾಯ ತಯಾರಿಸಿ, ಡಯೋರಿಯ ಮತ್ತು ಕಣ್ಣುನೋವುಗಳನ್ನು ಶಮನಗೊಳಿಸಲು ಉಪಯೋಗಿಸುತ್ತಾರೆ. ಒಣಗಿದ ಹೂಗಳನ್ನು ಚರ್ಮರೋಗ, ಮೂತ್ರಪಿಂಡದ ರೋಗ, ರಕ್ತರೋಗ ಇತ್ಯಾದಿಗಳಿಗೆ ಉಪಯೋಗಿಸುತ್ತಾರೆ. ಡ.ಕ್ಯಾಂಡೋಲಿಯಾನ ಮರದ ತೊಗಟೆಯನ್ನು ಸಂಧಿವಾತರೋಗ ಮತ್ತು ಹುಣ್ಣುರೋಗಗಳಿಗೆ ಉಪಯೋಗಿಸುತ್ತಾರೆ. ಡ.ಪ್ಯಾನಿಕುಲೇಟ ಮರದ ಹಣ್ಣುಗಳನ್ನು ಸುಟ್ಟಗಾಯಗಳನ್ನು ಮಾಯಿಸಲೂ ರಕ್ತಶುದ್ಧಿಗೂ ಉಪಯೋಗಿಸುತ್ತಾರೆ. ಚಕ್ಕೆಯ ಪುಡಿ ಸಂಧಿವಾತರೋಗಕ್ಕೆ ಒಳ್ಳೆಯದು.

ಆಫ್ರಿಕದಲ್ಲಿ ಬೆಳೆಯುವ ಕೆಲವು ಎಬನಿಮರಗಳ ತೊಗಟೆಯಲ್ಲಿ ವಿಷ ಇರುತ್ತದೆ. ಡ.ಮಸ್ಪಿಲಿಫಾರ್ಮಿಸ್ ಮರದ ತೊಗಟೆ ಅನೇಕ ರೋಗಗಳಿಗೆ ಔಷಧಿಯಾಗಿದೆ. ಎಲೆಗಳ ಕಷಾಯದಿಂದ ಕುಷ್ಠರೋಗ ವಾಸಿಯಾಗುತ್ತದೆ. ಬೇರು ಹುಳು ಕಡ್ಡಿರೋಗಕ್ಕೆ ಒಳ್ಳೆಯದು. ಡ.ಬಟೋಕ್ಯಾನ ಮರದ ಭಾಗಗಳನ್ನು ಹಲ್ಲು ಸ್ವಚ್ಛ ಮಾಡುವುದಕ್ಕೂ ಮತ್ತು ಹಲ್ಲುಗಳಿಗೆ ಬಣ್ಣಕೊಡುವುದಕ್ಕೂ ಉಪಯೋಗಿಸುತ್ತಾರೆ. (ಕೆ.ಎಸ್.ಜೆ.)

**ಎ ಬಿ ಸಿ ರಾಷ್ಟ್ರಗಳು:** ರೋಮನ್ ಅಕ್ಷರಮಾಲೆಯ ಎ, ಬಿ ಮತ್ತು ಸಿ ಅಕ್ಷರಗಳಿಂದ ಆರಂಭವಾಗುವ ದಕ್ಷಿಣ ಅಮೆರಿಕನ್ ರಾಷ್ಟ್ರಗಳಾದ ಅರ್ಜೆಂಟೀನ್, ಬ್ರೆಜಿಲ್ ಮತ್ತು ಚಿಲಿ (ಎ.ಬಿ.ಸಿ. ಪವರ್ಸ್). ಪರಸ್ಪರ ಸ್ನೇಹ ಪ್ರಚೋದಕ ಭಾಷಣ, ಅಧಿಕೃತ ಸಂದರ್ಶನ ಮುಂತಾದುವುಗಳ ಮೂಲಕ ತಮ್ಮ ಮೈತ್ರಿ ಬೆಳೆಸಿಕೊಳ್ಳಬೇಕೆಂಬ ಉದ್ದೇಶದಿಂದ ಇವು 1905ರಲ್ಲಿ ಅನೌಪಚಾರಿಕ ಸಂಘವೊಂದನ್ನು ಸ್ಥಾಪಿಸಿಕೊಂಡು ಮುಂದೆ 1915ರಲ್ಲಿ ಈ ಬಗ್ಗೆ ಅಧಿಕೃತ ಕೌಲೊಂದಕ್ಕೆ ಸಹಿ ಹಾಕಿದವು. ಇವು ಸ್ಥಾಪಿಸಿಕೊಂಡ ಈ ಸಂಘಕ್ಕೆ ಈ ಹೆಸರು ಬಂದಿದೆ. ತಂತಮ್ಮಲ್ಲಿ ಯುದ್ಧ ಪರಿಸ್ಥಿತಿಯೇನಾದರೂ ಉದ್ಭವಿಸಿದರೆ ಇದರ ಹಿಂದಿನ ಕಾರಣಗಳ ನಿಷ್ಪಕ್ಷಪಾತ ತನಿಖೆ ನಡೆಸದೆ ಪರಸ್ಪರ ಯುದ್ಧದಲ್ಲಿ ತೊಡಗಬಾರದೆಂದು ಈ ಕೌಲಿನ ರಾಷ್ಟ್ರಗಳು ಪ್ರತಿಜ್ಞೆ ಮಾಡಿದ್ದುವು. ದಕ್ಷಿಣ ಅಮೆರಿಕದ ವ್ಯವಹಾರಗಳಲ್ಲಿ ಅಮೆರಿಕ ಸಂಯುಕ್ತಸಂಸ್ಥಾನ ಹಸ್ತಕ್ಷೇಪಮಾಡದಂತೆ ತಡೆಯುವುದೂ ಈ ಸಂಘಟನೆಯ ಉದ್ದೇಶಗಳಲ್ಲೊಂದಾಗಿತ್ತು. ಆದರೆ ಇದರ ಉದ್ದೇಶಗಳು ಯಾವುವೂ ಅಷ್ಟೇನೂ ಫಲಪ್ರದವಾಗಲಿಲ್ಲ. 1914ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಕ್ಕೂ ಮೆಕ್ಸಿಕೋವಿಗೂ ಯುದ್ಧ ನಡೆದಾಗ ಈ ಸಂಘದ ರಾಷ್ಟ್ರಗಳು ಇವುಗಳ ನಡುವೆ ರಾಜಿಮಾಡಿಸಲು ಯತ್ನಿಸಿದುವು. ನಯಾಗರ ಜಲಪಾತದ ಬಳಿ ಈ ಸಂಧಾನ ನಡೆಯಿತು. ಮೆಕ್ಸಿಕೋವಿನ ರಾಷ್ಟ್ರಪ್ರೇಮಿ ನಿಸ್ವಾರ್ಥಿ ಆದರ್ಶವಾದಿ ಅಧ್ಯಕ್ಷ ಡಾನ್ ಫ್ರಾನ್ಸಿಸ್ಕೊ ಮದೇರೊನನ್ನು ಕೊಲೆ ಮಾಡಿ ಅಧಿಕಾರಕ್ಕೆ ಬಂದಿದ್ದ ವಿಕ್ಟೋರಿಯಾನೂ ಹ್ಯೂವರ್ಟ್ ಅಮೆರಿಕ ಸಂಯುಕ್ತಸಂಸ್ಥಾನದ ಧ್ವಜಕ್ಕೆ ಸಲ್ಲಬೇಕಾಗಿದ್ದ ಗೌರವವನ್ನೂ ಸಲ್ಲಿಸದೆ ಹೋದ್ದರಿಂದ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ವಿಲ್ಸನ್ ಆ ದೇಶದ ಬಂದರನ್ನು ಹಿಡಿದುಕೊಂಡಿದ್ದ. ಈ ನೀತಿಗೆ ಕೊನೆಯಲ್ಲಿ ಜಯ ಲಭಿಸಿತು. ಹ್ಯೂವರ್ಟ್ ಪದಚ್ಯುತನಾಗಿ ದೇಶಭ್ರಷ್ಟನಾದ. ಎ.ಬಿ.ಸಿ. ರಾಷ್ಟ್ರಗಳ ಮಧ್ಯಸ್ಥಿಕೆಯಿಂದಾಗಿ ಇವೆರಡು ರಾಷ್ಟ್ರಗಳ ನಡುವೆ ಯುದ್ಧ ಸಂಭವಿಸಲಿಲ್ಲ.

ಹೊರಗಿನವರ ಕೈವಾಡವಿಲ್ಲದೆ ಪ್ರತಿಯೊಂದು ದೇಶವೂ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂಬ ತತ್ತ್ವ ನಯಾಗರ ಸಮ್ಮೇಳನದಲ್ಲಿ ಅಂಗೀಕೃತವಾಯಿತು. ಆದರೆ ಮುಂದೆ ಈ ತೀರ್ಮಾನವನ್ನು ಕಾರ್ಯಗತ ಮಾಡುವಲ್ಲಿ ಎ.ಬಿ.ಸಿ. ರಾಷ್ಟ್ರಗಳು ಆಸ್ಥೆ ವಹಿಸಲಿಲ್ಲ. 1933ರವರೆಗೆ ಈ ಸಂಘ ಯಾವ ಮಹತ್ತ್ವದ ಸಾಧನೆಯನ್ನೂ ಮಾಡಲಿಲ್ಲ. 1933ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ರೂಸ್‌ವೆಲ್ಟನ ಸಲಹೆಯ ಮೇರೆಗೆ ಕ್ಯೂಬದಲ್ಲಿ ಶಾಂತಿಯುತ ಸರ್ಕಾರವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಇದು ಅಯಶಸ್ವಿಯಾದ ದ್ದಲ್ಲದೆ 1939ರಲ್ಲಿ ಇದು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತು.

ಈ ತ್ರಿರಾಷ್ಟ್ರ ಸಂಘ ಮಹತ್ತ್ವವಾದದ್ದೇನನ್ನೂ ಸಾಧಿಸಲಾಗದಿದ್ದರೂ ಇದು ದೊಡ್ಡ ರಾಷ್ಟ್ರಗಳು ಸಣ್ಣ ರಾಷ್ಟ್ರಗಳ ವ್ಯವಹಾರಗಳಲ್ಲಿ ಕೈಹಾಕಬಾರದೆಂಬ ತತ್ತ್ವದ ಪ್ರತಿಪಾದನೆಯಾಗಿತ್ತು. ದಕ್ಷಿಣ ಅಮೆರಿಕನ್ ರಾಷ್ಟ್ರಗಳಿಗೂ ಆತ್ಮಾಭಿಮಾನವುಂಟೆಂಬುದನ್ನು ಇದು ಜಗತ್ತಿಗೆ ಸಾರಿತು. (ಜಿ.ಆರ್.ಕೆ.)

**ಎಬೋನೈಟ್:** ಅಧಿಕ ಗಂಧಕ ಬೆರೆತ ಬಿರುಸಾದ ರಬ್ಬರ್, ರಬ್ಬರ್ ಮತ್ತು ಗಂಧಕವನ್ನು ಬೆರೆಸಿ 140ಲಿ–160ಲಿ ಸೆಂ.ಗ್ರೇ. ಉಷ್ಣತೆಗೆ ಕಾಸಿ ಇದನ್ನು ತಯಾರಿಸಬಹುದು. ಸಾಮಾನ್ಯ ಉಷ್ಣತಾಮಿತಿಗಳಲ್ಲಿ ಬಿರುಸಾಗಿದ್ದು ಕಾಸಿದಾಗ ಮೃದುವಾಗುವುದು. ಸ್ಥಿತಿಸ್ಥಾಪಕತ್ವ ಗುಣವಿಲ್ಲ. ಗಡಸು ಮೈಗೀರುನಿರೋಧಕವಾಗಿದೆ. ಎರಕಹೊಯ್ದು ರಂಧ್ರ ಮಾಡಿ ಚೆನ್ನಾಗಿ ಹೊಳೆಯುವಂತೆಯೂ ಮಾಡಬಹುದು. ವಿದ್ಯುನ್ನಿರೋಧಕವಸ್ತು. ಹಲವಾರು ರಾಸಾಯನಿಕಗಳು ಇದರೊಡನೆ ವರ್ತಿಸುವುದಿಲ್ಲ. ರೇಡಿಯೊ, ತಾಂತ್ರಿಕ ಮುಂತಾದ ಉದ್ದಿಮೆಗಳಲ್ಲಿ ಹೆಚ್ಚಿನ ಉಪಯೋಗವಿದೆ. ರಸಾಯನೋದ್ಯಮದಲ್ಲಿ ರಕ್ಷಕ ಪದರವಾಗಿ ಉಪಯೋಗಿಸುವರು. ಅಚ್ಚುಹಾಕಿ ಕೋಶಪೆಟ್ಟಿಗೆ ಫೌಂಟನ್ ಪೆನ್ನು ಕೊಳವೆ, ಟೆಲಿಫೋನ್, ಹಣಿಗೆ, ತಂಬಾಕು ಚಿಲುಮೆ ಮುಂತಾದ ಹಲವಾರು ನಿತ್ಯೋಪಯೋಗಕಾರಿ ವಸ್ತುಗಳನ್ನು ಇದರಿಂದ ತಯಾರಿಸಬಹುದು. (ವಿ.ವಿ.ಜಿ.)

**ಎಬ್ನರ್–ಎಷನ್ ಬಾಕ್, ಮೇರಿ ವಾನ್:** 1830–1916. ಆಸ್ಟ್ರಿಯದ ಮೋರೇವಿಯ ಪ್ರಾಂತ್ಯದ ಪ್ರಸಿದ್ಧ ಲೇಖಕಿ. ಕಾಂಟ್ ಡುಬಸ್ಕಿಯ ಮಗಳಾದ ಈಕೆಯ ಕಾದಂಬರಿಗಳು ಮತ್ತು ಕಾವ್ಯಗಳು ಹಳ್ಳಿಗಾಡಿನ ನೈಜಚಿತ್ರಗಳಿಗಾಗಿ ಜರ್ಮನ್ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಪ್ರಾರಂಭದಲ್ಲಿ ಈಕೆ ದೊಡ್ಡ ದೊಡ್ಡ ರಂಗನಾಟಕಗಳನ್ನು ಬರೆದಳು. ಅವು ವಿಲೀನಗೊಂಡವು. 1875 ರಲ್ಲಿ ಈಕೆಯ ಸತ್ತ್ವ ಕಥೆಯೊಂದರಲ್ಲಿ ಕಾಣಿಸಿಕೊಂಡಿತು. 1876ರಲ್ಲಿ ಬೋಸೇನ ಎಂಬ ಕಾದಂಬರಿ ಮೋರೇವಿಯದ ಪ್ರಕೃತಿಯ ಹಿನ್ನೆಲೆಯನ್ನು ಜೀವಂತವಾಗಿ ಸೃಜಿಸಿತು. ಹಳ್ಳಿ ಮತ್ತು ಅರಮನೆಯ ಕಥೆಗಳು ಎಂಬ ಪುಸ್ತಕ 1883 ಮತ್ತು 1886ರಲ್ಲಿ ಎರಡು ಸಂಪುಟದಲ್ಲಿ ಪ್ರಕಟವಾಗಿ ಇವಳ ಸ್ಥಾನವನ್ನು ಭದ್ರಪಡಿಸಿದವು. ಈಕೆಯ ಕಾಂಬ್ರಾಂಬುಲಿ (1884) ಪ್ರಾಣಿಗಳ ಜೀವನದ ಬಗ್ಗೆ ಜರ್ಮನ್ ಭಾಷೆಯಲ್ಲಿ ಬಂದ ಅತ್ಯುತ್ತಮ ಮತ್ತು ಪ್ರಥಮ ಕಥಾಸಂಕಲನ. ಹತ್ತೊಂಬತ್ತನೆಯ ಶತಮಾನದ ಮೊದಲರ್ಧದ ಅರಮನೆಗಳು, ಪಾದ್ರಿಗಳ ಸಾಮಾನ್ಯ ಗೃಹಗಳು, ಹಳ್ಳಿಗಳ ಪಾನಮಂದಿರಗಳು, ಕೂಲಿಕುಂಬಳಿಯವರ ಬಡ ಗುಡಿಸಲುಗಳು–ಇವೆಲ್ಲ ಒಂದೇ ಬಗೆಯ ವಾಸ್ತವಿಕತೆಯಿಂದ ಚಿತ್ರಿತವಾಗಿಸಿ ಆಸ್ಟ್ರಿಯನ್ನರ ಉನ್ನತ ಮನೆತನಗಳ ಬಗ್ಗೆ ವಿಡಂಬನಾತ್ಮಕ ಚಾತುರ್ಯದಿಂದ ರಚಿಸಿದ ಕಾದಂಬರಿಗಳಲ್ಲಿ ಈಕೆಯ ಹಾಸ್ಯಪ್ರವೃತ್ತಿ ಕಾಣಿಸಿಕೊಂಡಂತೆ, ಬಡವರು, ದಬ್ಬಾಳಿಕೆಗೆ ಗುರಿಯಾದವರು ಮತ್ತು ಸಮಾಜಬಾಹಿರವಾದವರ ಬಗ್ಗೆ ಆಳವಾದ ಅರಿವು, ಅನುಕಂಪ ಎದ್ದು ಕಾಣುತ್ತವೆ. ನಗೆ ಸೂಸುವ ಅಲೆಮಾರಿಗಳ ಜೀವನ ಚಿತ್ರಿಸುವ ಉನ್ವರ್ ಬೆಸ್ಟರ್‌ಲಿಕ್ (ನಿರಾಶಾದಾಯಕ ಪ್ರಸಂಗ) 1910ರಲ್ಲಿ ಪ್ರಕಟವಾಯಿತು. ಮಾನವತೆಯೇ ಮೈವೆತ್ತಂತಿದೆ ಈ ಕೃತಿಯಲ್ಲಿ. ಹಳ್ಳಿಗಳಲ್ಲಿ ಪ್ರಚಲಿತವಾದ ಜಾನಪದ ಕಥೆಗಳಿಗೆ ಸಾಹಿತ್ಯಿಕ ರೂಪ ಕೊಟ್ಟ ಕೀರ್ತಿ ಈಕೆಯದು. ಅಫಾರಿಸ್ಮೆನ್ (1880) ಹಲವಾರು ಚಾಟೂಕ್ತಿಗಳ ಸಂಗ್ರಹ. ಚ್ವೇಕಾಂಟೆಸ್ಸೆನ್ ಬಹು ಜನಪ್ರಿಯ ಕೃತಿ. (ಎಸ್.ಎ.ಎನ್.)

**ಎಬ್ಬಿಂಗ್‌ಹೌಸ್, ಹೆರ್‌ಮನ್:** 1850–1908. ಪ್ರಯೋಗವೇ ಮನಶ್ಶಾಸ್ತ್ರದ ವಿವರಗಳಿಗೆ ಮುಖ್ಯ ಸಾಧನವೆಂದು ಹಟ ಹಿಡಿದು ವೈಜ್ಞಾನಿಕ ಸಂವಿಧಾನಗಳನ್ನು ಬಹುಮಟ್ಟಿಗೆ ಬಳಸಿದ ಪ್ರತಿಭಾಶಾಲಿಗಳಲ್ಲಿ ಒಬ್ಬ. ಮೊದಲು ಹಾಲೆ ವಿಶ್ವವಿದ್ಯಾನಿಲಯದಲ್ಲೂ ಅನಂತರ ಬ್ರೆಸ್ಲೊ ವಿಶ್ವವಿದ್ಯಾನಿಲಯದಲ್ಲೂ ಮನಶ್ಶಾಸ್ತ್ರದ ಪ್ರಾಧ್ಯಾಪಕನಾಗಿದ್ದ. 1885ರಲ್ಲಿ ಸ್ಮೃತಿಯ

ಮೇಲೆ ರಚಿಸಿದ ಗ್ರಂಥ ಈತನಿಗೆ ವಿಪುಲವಾದ ಯಶಸ್ಸನ್ನು ತಂದಿತು. ಸ್ಮರಣೆಯಲ್ಲಿ ಒದಗುವ ಎರಡು ಮುಖ್ಯ ವಿವರಗಳು ಪುನರಾವೃತ್ತಿ (ರೆಪಿಟಿಷನ್) ಮತ್ತು ಕಾಲ (ಟೈಂ); ಮೊದಲನೆಯದು ವಾಸನೆಗಳನ್ನು ಉತ್ಪಾದನೆ ಮಾಡಿ ದೃಢಪಡಿಸಿದರೆ, ಎರಡನೆಯದು ಅವನ್ನು ಅಳಿಸುತ್ತದೆ. ಅರ್ಥಗ್ರಹಣದಿಂದ ಶ್ರುತಿ ಊರ್ಜಿತವಾಗುತ್ತದೆ. ಕಲಿಯುವ ವಿವಿರಗಳ ನಡುವೆ ಇರುವ ಸಂಯೋಗಕ್ರಿಯೆ ಎಬ್ಬಿಂಗ್‌ಹೌಸನ ಸಂಶೋಧನೆಗಳಲ್ಲಿ ದೃಢಪಟ್ಟಿತು. 1905ರಲ್ಲಿ ಬರೆಯಲಾರಂಭಿಸಿದರೂ ಅಪೂರ್ಣವಾಗಿಯೇ ಉಳಿದ ಈತನ ಮನಶ್ಶಾಸ್ತ್ರದ ಮೂಲಾಧಾರಗಳ ಬಗೆಗಿನ ಒಂದು ಗ್ರಂಥದಲ್ಲಿ ದೇಹವಿಜ್ಞಾನಶಾಸ್ತ್ರವು ಮನಶ್ಶಾಸ್ತ್ರಕ್ಕೆ ಅನಿವಾರ್ಯವಾದ ಹಿನ್ನೆಲೆಯೆಂದು ರುಜುವಾತು ಮಾಡಲಾಗಿದೆ. ಈ ಗ್ರಂಥವನ್ನು 1913ರಲ್ಲಿ ಇ.ದುರ್ ಎಂಬ ಆತನ ಶಿಷ್ಯ ಪೂರ್ತಿ ಮಾಡಿ ಪ್ರಕಟಿಸಿದ. (ಎಸ್.ಕೆ.ಆರ್.)

**ಎಮರೀ:** ಕುರಂದ ಮ್ಯಾಗ್ನಟೈಟ್ ಮತ್ತು ಸ್ಪಿನೆಲ್ ಖನಿಜ ರೂಪಗಳು ಒಟ್ಟುಗೂಡಿ ಸಹಜವಾಗಿ ದೊರೆಯುವಂಥ ಖನಿಜ ಸಮುದಾಯ. ಈ ಬಗೆಯ ಕಲ್ಲು ಗ್ರೀಸ್ ದೇಶದಲ್ಲಿರುವ ಕೇಪ್ ಎಮರಿಯಲ್ಲಿ ಮೊದಲು ಗುರುತಿಸಲಾದುದರಿಂದ ಇದನ್ನು ಎಮರೀ ಎಂದು ಕರೆಯುವುದು ವಾಡಿಕೆಯಾಗಿದೆ. ಗ್ರೀಸ್, ತುರ್ಕಿ ಮತ್ತು ಅಮೆರಿಕ ದೇಶಗಳಲ್ಲಿನ ಎಮರೀ ಉತ್ತಮವೆಂದು ಪರಿಗಣಿಸಲ್ಪಟ್ಟಿದೆ. ವಜ್ರ, ಕುರಂದಗಳಂತೆ ಎಮರೀ ಅತಿ ಕಠಿಣವಾದ ಗಡುಸಾದ ಕಲ್ಲು. ಇದರ ಗಡಸುತನ ಮುಖ್ಯವಾಗಿ ಇದರಲ್ಲಿ ಸೇರಿರುವ ಕುರಂಗದ ಪ್ರಮಾಣದಿಂದ ಬರುತ್ತದೆ. ಎಮರೀ ದಪ್ಪ ಹರಳುಗಳನ್ನೊಳಗೊಂಡು ತರಕುತರಕಾಗಿರುವುದು, ಅಥವಾ ಸಣ್ಣ ಹರಳುಗಳು ಒಟ್ಟುಗೂಡಿ ನುಣುಪಾಗಿಯೂ ಇರಬಹುದು. ಇದು ಅತಿ ಹೆಚ್ಚಿನ ಉಷ್ಣವನ್ನು ತಡೆದುಕೊಳ್ಳಬಲ್ಲುದು. ಇಂಥ ಗುಣಗಳನ್ನೊಳಗೊಂಡಿರುವ ಕಾರಣ ದಿಂದಲೇ ಎಮರೀ ಸಾಣೆ ಹಿಡಿಯುವ ಕೆಲಸದಲ್ಲಿ ವಿಶೇಷವಾಗಿ ಉಪಯೋಗವಾಗುತ್ತದೆ. ಮುಖ್ಯವಾಗಿ ಚಕ್ರಗಳ ರೂಪದಲ್ಲಿ ಇಲ್ಲವೆ ವಿಧ ವಿಧ ಅಳತೆ ಪ್ರಮಾಣದ ಪುಡಿಗಳಾಗಿ ಸಾಣೆ ಹಿಡಿಯಲು, ಮೆರಗು ಕೊಡಲು ಇದನ್ನು ಉಪಯೋಗಿಸುತ್ತಾರೆ.

ಗ್ರೀಸಿನಲ್ಲಿರುವ ನಾಸಾಸ್‌ನಿಂದ ಬರುವ ಕಲ್ಲು ನಾಸಾಸ್ ಎಮರೀ ಎಂದು ಪ್ರಸಿದ್ಧವಾಗಿದೆ. ತುರ್ಕಿ ಮತ್ತು ಅಮೆರಿಕ ದೇಶಗಳಲ್ಲೂ ಎಮರಿಯನ್ನು ಉತ್ಪಾದಿಸುತ್ತಾರೆ. ಕುರಂದ ಕಲ್ಲು ಭಾರತ ದೇಶದ ಅನೇಕ ಪ್ರಾಂತಗಳಲ್ಲಿ ಸಿಕ್ಕುವುದಾದರೂ ಎಮರೀ ರೂಪದಲ್ಲಿ ಅದು ಮಾರಾಟವಾಗುತ್ತಿಲ್ಲ. ಎಮರೀ ಉಪಯೋಗವಾಗುವ ಕಡೆಗಳಲ್ಲೆಲ್ಲ ಕುರಂದ ಕಲ್ಲನ್ನು ಉಪಯೋಗಿಸಬಹುದು. ಹೆಚ್ಚಿನ ವಿವರಗಳಿಗೆ (**ನೋಡಿ– ಕುರಂದ**). (ಬಿ.ಪಿ.ಆರ್.)

**ಎಮರ್ಸನ್, ರಾಲ್ಫ್ ವಾಲ್ಡೊ:** 1803–1882. ಅಮೆರಿಕದ ಪ್ರಸಿದ್ಧ ಕವಿ, ಪ್ರಬಂಧಕಾರ ಮತ್ತು ತತ್ತ್ವಬೋಧಕ. ಹುಟ್ಟಿದ್ದು ಬಾಸ್ಟನ್ ನಗರದಲ್ಲಿ; ಸತ್ತದ್ದು ಕಾನ್ಕರ್ಡ್ ಗ್ರಾಮದಲ್ಲಿ (ಎರಡೂ ಮಸಾಚುಸೆಟ್ಸ್ ರಾಜ್ಯದಲ್ಲಿವೆ). 1817ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯಕ್ಕೆ ಸೇರಿ ಕಾಯಕದಿಂದ ಹಣ ಸಂಪಾದಿಸಿ ವಿದ್ಯಾವಂತನಾದ. 1828ರಲ್ಲಿ ಪಾದ್ರಿಯಾದ. ಆದರೆ ಸಂಪ್ರದಾಯಬದ್ಧವಾದ ಮತಬೋಧನೆಯಲ್ಲಿ ನಂಬಿಕೆಯಾಗಲಿ ಸಂತೋಷವಾಗಲಿ ಇಲ್ಲದ್ದರಿಂದ ಮೂರು ವರ್ಷಗಳ ಅನಂತರ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ ಇಂಗ್ಲೆಂಡಿಗೆ ಭೇಟಿ ಕೊಟ್ಟ. ಅಲ್ಲಿ ಅವನಿಗೆ ಕೋಲ್‌ರಿಜ್, ವರ್ಡ್ಸ್‌ವರ್ತ್, ಕಾರ್ಲೈಲ್ ಮೊದಲಾದ ಇಂಗ್ಲಿಷ್ ಸಾಹಿತಿಗಳ ಪರಿಚಯ ವಾಯಿತು. ಅವರ ಅನೇಕ ಭಾವಗಳು ಅವನ ಮೇಲೆ ಪ್ರಭಾವ ಬೀರಿದವು. ನೇಚರ್ (ನಿಸರ್ಗ) ಎಂಬ ಅವನ ಮೊದಲ ಪುಸ್ತಕ ಪ್ರಕಟವಾದುದು 1836ರಲ್ಲಿ. ಮಾರನೆಯ ವರ್ಷ ಅವನ ಇನ್ನೊಂದು ಖ್ಯಾತ ಪ್ರಬಂಧ ಅಮೆರಿ ಕನ್ ಸ್ಕಾಲರ್ (ಅಮೆರಿಕದ ವಿದ್ವಾಂಸ) ಪ್ರಕಟವಾಯಿತು. ಆಗಿಂದಾಗ್ಗೆ ಹೀಗೆ ರಚಿತವಾದ ಪ್ರಬಂಧಗಳ ಸಂಕಲನ ವೊಂದು 1841ರಲ್ಲೂ ಇನ್ನೊಂದು 1844ರಲ್ಲೂ ಹೊರಬಿದ್ದವು. 1847ರಲ್ಲೂ 1848ರಲ್ಲೂ ಮತ್ತೆ ಇಂಗ್ಲೆಂಡಿಗೆ ಹೋಗಿ ಬಂದು ಅಲ್ಲಿ ತಾನು ಕಂಡ ಜನರ ಮತ್ತು ತನಗಾದ ಅನುಭವಗಳ ಆಧಾರದ ಮೇಲೆ ಇಂಗ್ಲಿಷ್ ಜನರ ಗುಣಾವಗುಣಗಳನ್ನು ವಿವರಿಸುವ ಇಂಗ್ಲಿಷ್ ಟ್ರೇಟ್ಸ್ ಎಂಬ ತನ್ನ ಗ್ರಂಥವನ್ನು 1856ರಲ್ಲಿ ಪ್ರಕಟಿಸಿದ. ಅವನ ಮತ್ತೊಂದು ಪ್ರಸಿದ್ಧ ಕೃತಿ ರೆಪ್ರೆಸೆಂಟಿವ್ ಮೆನ್ (ಪ್ರಾತಿನಿಧಿಕ ವ್ಯಕ್ತಿಗಳು) 1862ರಲ್ಲಿ ಪ್ರಕಟವಾಯಿತು. ಈ ಮಧ್ಯೆ 1860ರಲ್ಲಿ ದಿ ಕಾಂಡಕ್ಟ್ ಆಫ್ ಲೈಫ್ (ಜೀವನದ ನಿರ್ವಹಣೆ) ಎಂಬ ಬರಹವೂ ಬೆಳಕನ್ನು ಕಂಡಿತ್ತು. ನೇಚರ್, ಸೆಲ್ಫ್ ರಿಲಯನ್ಸ್ (ಸ್ವಾವಲಂಬನೆ), ಹಿಸ್ಟರಿ (ಚರಿತ್ರೆ), ಅಮೆರಿಕನ್ ಸ್ಕಾಲರ್, ಓವರ್ ಸೋಲ್ (ಅಂತರಾತ್ಮ) ಎಂಬುವು ಅವನ ಅತ್ಯಂತ ಪ್ರಸಿದ್ಧ ಪ್ರಬಂಧಗಳು. ಎಮರ್ಸನ್ ಹತ್ತೊಂಬತ್ತನೇ ಶತಮಾನದ ಅಮೆರಿಕದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದ ಬೌದ್ಧಿಕ ಮತ್ತು ಆಧ್ಯಾತ್ಮಿಕ ಚಳವಳಿಯೊಂದರ ಜೀವಜ್ಯೋತಿಗಳಲ್ಲಿ ಒಬ್ಬನಾಗಿದ್ದ. ಸ್ವತಂತ್ರ ವಿಚಾರಪರತೆಯನ್ನೂ ಆತ್ಮಸಾಕ್ಷಿಯ, ಆಧ್ಯಾತ್ಮಿಕ ಜೀವನದ ಔನ್ನತ್ಯವನ್ನೂ ಎತ್ತಿಹಿಡಿದ ಟ್ರಾನ್ಸೆಂಡೆಂಟಲಿಸ್ಟ್ ಪಂಥದ ಪ್ರೇರಕ ಶಕ್ತಿಯೂ ಆಧಾರಸ್ತಂಭವೂ ಆಗಿದ್ದ. ಮನುಷ್ಯನ ಹಿರಿಮೆ ಇರುವುದು ಬುದ್ಧಿಶಕ್ತಿ, ವಿವೇಕ ಮತ್ತು ವೈಯಕ್ತಿಕತೆಗಳಲ್ಲೇ ಹೊರತು ಪ್ರಾಪಂಚಿಕ ಐಶ್ವರ್ಯ, ಭೋಗಾನುಭವಗಳಲ್ಲಲ್ಲ–ಎಂಬುದು ಅವನ ಬೋಧನೆ. ಪ್ರತಿ ವ್ಯಕ್ತಿಯೂ ತನ್ನ ಅಂತರಾತ್ಮದ ಪ್ರೇರಣೆಯಂತೆ ನಡೆಯಬೇಕೆಂದೂ ಅದರ ಫಲವಾಗಿ ಸಮಾಜವನ್ನು ಎದುರಿಸಬೇಕಾಗಿ, ಜಗತ್ತಿನ ಸಂಪ್ರದಾಯಗಳನ್ನು ಮುರಿಯ ಬೇಕಾಗಿ ಬಂದರೆ ಹಿಂಜರಿಯ ಬಾರದೆಂದೂ ಅವನ ವಾದ. ದೈವವಾಣಿಯ ಪ್ರತೀಕದಂತಿರುವ ಅಂತರ್ವಾಣಿಯ ಅನುಸರಣೆ ನಮ್ಮ ಆದ್ಯಕರ್ತವ್ಯವೆಂಬುದು ಅವನ ಪ್ರಮುಖ ತತ್ತ್ವ. ಸ್ವಾತಂತ್ರ್ಯ ಮತ್ತು ವೈಯಕ್ತಿಕತೆಗಳ ಶ್ಲಾಘನೆ ಅವನ ಜೀವಿತೋದ್ದೇಶವಾಗಿತ್ತು. ಸಹಜವಾಗಿಯೇ ರಾಜಕೀಯ ವಿಚಾರಗಳಲ್ಲೂ ಎಮರ್ಸನ್ ಸ್ವಾತಂತ್ರ್ಯಪ್ರೇಮಿಯಾಗಿದ್ದು, ನೀಗ್ರೋಗಳನ್ನು ಗುಲಾಮರಾಗಿಟ್ಟಿರುವ ಪದ್ಧತಿಯನ್ನು ವಿರೋಧಿಸಿದ. ಜಾನ್ ರಸ್ಕಿನ್‌ನಂತೆ ಎಮರ್‌ಸನ್ ಕೂಡ ಗಾಂಧೀಜಿಯವರ ಧೋರಣೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದಾನೆ.



ಎಮರ್ಸನ್ ಕವಿಯೂ ಆಗಿದ್ದ. ಪೊಯಮ್ಸ್ (1867), ಮೇ ಡೇ ಅಂಡ್ ಅದರ್ ಪೀಸಸ್ (1867)–ಎಂಬುವು ಅವನ ಎರಡು ಕವನ ಸಂಕಲನಗಳು. ಪ್ರಕೃತಿಪ್ರೇಮ, ಸ್ವಾತಂತ್ರ್ಯ ಪ್ರೇಮ, ಆಧ್ಯಾತ್ಮಿಕತೆಗಳು ಅವನ ಕಾವ್ಯದಲ್ಲಿ ಎದ್ದು ಕಾಣುವ ಗುಣಗಳು. ಭಗವದ್ಗೀತೆ, ಉಪನಿಷತ್ತುಗಳು, ಮೊದಲಾದ ಭಾರತೀಯ ಧಾರ್ಮಿಕಗ್ರಂಥಗಳ ಪ್ರಭಾವವನ್ನು ಅವನ ಕೃತಿಗಳಲ್ಲಿ ಕಾಣಬಹುದು. ಅವುಗಳಿಂದ ಅವನು ಅನೇಕ ವಾಕ್ಯಗಳನ್ನೂ ಶ್ಲೋಕಗಳನ್ನೂ ಉಲ್ಲೇಖಿಸುತ್ತಾನೆ. ಗೀತೆಯ ಸಾರದಂತಿರುವ ಅವನ ಬ್ರಹ್ಮ ಎಂಬ ಕವನ ಪ್ರಸಿದ್ಧವಾಗಿದೆ.

ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತನಾಗಿದ್ದ, ಆಗುತ್ತಿದ್ದ, ಅವನ ಕಾಲದ ಜನಕ್ಕೆ ಎಮರ್ಸನ್ನನ ಬೋಧನೆ ಮಾರ್ಗದರ್ಶಕವಾಯಿತು; ಶುದ್ಧ ಆದರ್ಶಗಳ ಆವಶ್ಯಕತೆಯನ್ನೂ ಹಿರಿಮೆಯನ್ನೂ ಅದು ಅವನ ಅರಿವಿಗೆ ತಂದಿತು. ಈ ಕಾರಣದಿಂದ ಎಮರ್ಸನ್‌ರ ಬರಹ ಸಮಕಾಲೀನ ಅಮೆರಿಕದವರಿಗೆ ಮಾತ್ರವಲ್ಲದೆ ಇತರರಿಗೂ ಮಾನ್ಯವಾಗಿರುತ್ತದೆ.

ಎಮರ್ಸನ್ನನ ಬರಹಗಳು ಬಹುಮಟ್ಟಿಗೆ ಪ್ರಬಂಧಗಳ ರೂಪದಲ್ಲಿವೆ. ಈ ಪ್ರಬಂಧಗಳಲ್ಲಿ ಅನೇಕವು ಅವನು ನಾನಾ ಕಡೆ ಮಾಡಿದ ಭಾಷಣಗಳು. ನಾಡು ನುಡಿಗಳಂಥ ವಾಕ್ಯಗಳಿಗೂ ಮನಮುಟ್ಟುವ ತರ್ಕಸರಣಿಗೂ ಅವುಗಳಲ್ಲಿ ವ್ಯಕ್ತವಾಗಿರುವ ಆತ್ಮವಿಶ್ವಾಸ ಆಶಾವಾದಿತ್ವಗಳಿಗೂ ಅವು ಹೆಸರಾದಂತಿವೆ. (ಎಂ.ಆರ್.; ಎಸ್.ಎಸ್.ಎಲ್.)

**ಎಮರ್ಸನ್ ಸಾಮರ್ಥ್ಯಾಧಾರಿತ ಕೂಲಿ ಯೋಜನೆ:** ಕೆಲಸಗಾರರು ಹೆಚ್ಚು ಉತ್ಪಾದಿಸು ವಂತೆ ಉತ್ತೇಜಿಸುವ ಉದ್ದೇಶದಿಂದ, ಕಾಲ ಮತ್ತು ಚಲನೆಗಳ ಅಧ್ಯಯನದ ವಿಶ್ಲೇಷಣೆಯ ಆಧಾರದ ಮೇಲೆ, ರೂಪಿತವಾದ ಕೂಲಿ ಯೋಜನೆಗಳಲ್ಲೊಂದು (ಎಮರ್ಸನ್ ಎಫಿಷಿಯೆನ್ಸಿ ಪ್ಲಾನ್). ಕೈಗಾರಿಕೆಯ ವೈಜ್ಞಾನಿಕ ವ್ಯವಸ್ಥಾಪನೆಯಲ್ಲಿ ಕೆಲಸಗಾರರ ಉತ್ಪಾದನ ಸಾಮರ್ಥ್ಯವನ್ನು ಕುರಿತು ಶಾಸ್ತ್ರೀಯವಾದ ಅಧ್ಯಯನ ನಡೆಸಿರುವ ಟೇಲರನ (1856–1915) ಸಹಚರಲ್ಲೊಬ್ಬ ನಾಗಿದ್ದ ಹ್ಯಾರಿಂಗ್‌ಟನ್ ಎಮರ್ಸನ್ ಇದನ್ನು ರಚಿಸಿದ್ದರಿಂದ ಇದಕ್ಕೆ ಆತನ ಹೆಸರೇ ಬಂದಿದೆ.

ಸಾಮಾನ್ಯವಾಗಿ ಕೆಲಸಗಾರರ ಅತ್ಯುಚ್ಚಸಾಮರ್ಥ್ಯದ 66 2/3% ರಷ್ಟು ಮಾತ್ರ ಉತ್ಪಾದನೆಯಲ್ಲಿ ವಿನಿಯೋಗವಾಗುತ್ತಿದ್ದುದನ್ನು ಈತ ಕಂಡುಹಿಡಿದಿದ್ದಾನೆ. ಸಾಮಾನ್ಯವಾಗಿ ಕಂಡುಬರುವ ಈ ಮಟ್ಟದಿಂದ ಅದನ್ನು ಶೇಕಡ 100ಕ್ಕೂ ಅನಂತರ ಇನ್ನೂ ಮಿಗಿಲಾಗಿಯೂ ಹೆಚ್ಚುವಂತೆ ಉತ್ತೇಜನ ನೀಡುವುದು ಈತನ ಕೂಲಿ ಯೋಜನೆಯ ಗುರಿ.

ಈ ಯೋಜನೆಯನ್ನು ಅಳವಡಿಸಲು ಮೊದಲಿಗೆ ಕೆಲವು ಸಿದ್ಧತೆ ಮಾಡಿಕೊಳ್ಳಬೇಕು. ವೈಜ್ಞಾನಿಕವಾಗಿ ಕಾಲ ಮತ್ತು ಚಲನೆಗಳ ಅಧ್ಯಯನ ನಡೆಸಿ, ಸಮಯಕ್ಕೆ ಸೂಕ್ತವಾದ ಕಾರ್ಯದ (ಟಾಸ್ಕ್) ಅಥವಾ ಕಾರ್ಯಕ್ಕೆ ಸೂಕ್ತವಾದ ಸಮಯದ ಪ್ರಮಾಣಿತ ಮಟ್ಟವನ್ನು ನಿಗದಿಗೊಳಿಸಬೇಕು. ಶೇಕಡ 66 2/3. ಮೀರಿದ ಸಾಮರ್ಥ್ಯಕ್ಕೆ ಕೊಡಲಾರಂಭವಾಗುವ ಉಚಿತಾರ್ಥದ ಕೋಷ್ಟಕವನ್ನು ಸಿದ್ಧಪಡಿಸಿಕೊಳ್ಳಬೇಕು.

ನಿಗದಿಗೊಳಿಸಿದ ಪ್ರಮಾಣಿತಮಟ್ಟದ ಅವಧಿಯಲ್ಲಿ ಕಾರ್ಯನಿರ್ವಹಿಸುವ ಕೆಲಸಗಾರರು ಶೇಕಡ 100 ರ ಸಾಮರ್ಥ್ಯ ತೋರಿದ್ದಾರೆಂದು ತಿಳಿಯಬೇಕು. ನಿಗದಿಗೊಳಿಸಿದ ಅವಧಿಗಿಂತ ಹೆಚ್ಚುಕಾಲ ತೆಗೆದುಕೊಂಡಂತೆಲ್ಲ ಅವನ ಸಾಮರ್ಥ್ಯ ಕಡಿಮೆ. ನಿಗದಿಗೊಳಿಸಿದ ಸಮಯಕ್ಕೆ ಮುಂಚೆಯೇ ಕಾರ್ಯನಿರ್ವಹಿಸಿದರೆ ಅವನು ಶೇಕಡ 100 ಕ್ಕಿಂತ ಹೆಚ್ಚು ಸಾಮರ್ಥ್ಯ ತೋರಿದ್ದಾನೆಂದು ಅರ್ಥ.

ಎಮರ್ಸನ್ ಸಾಮರ್ಥ್ಯಾಧಾರಿತ ಕೂಲಿಯೋಜನೆಯ ಲಕ್ಷಣಗಳನ್ನು ಈ ಕೆಳಗಿನಂತೆ ನಿರೂಪಿಸಬಹುದು.

1. ಪ್ರತಿ ಕೆಲಸಗಾರನಿಗೂ ಕೆಲಸದ ವೇಳೆಯ ಕೂಲಿ (ಟೈಂ ವೇಜ್) ದೊರಕುವ ಭರವಸೆಯಿದೆ.

2. ವೈಜ್ಞಾನಿಕವಾಗಿ ಕಾಲ ಮತ್ತು ಚಲನೆಗಳ ಅಧ್ಯಯನ ನಡೆಸಿ ಪ್ರಮಾಣ ನಿಷ್ಕರ್ಷೆ ಮಾಡಲಾಗಿರುತ್ತದೆ. ಈ ಯೋಜನೆಗೆ ಕಾರ್ಯ ಮತ್ತು ಯಂತ್ರೋಪಕರಣಗಳ ಪ್ರಮಾಣೀ ಕರಣ ಅವಶ್ಯ.

3. ಪ್ರಮಾಣೀಕರಣ ಮಟ್ಟದ ಶೇಕಡ 66 2/3 ರ ಸಾಮರ್ಥ್ಯದವರೆಗೆ ಕೇವಲ ವೇಳಾಕೂಲಿ ಕೊಡಲಾಗುತ್ತದೆ. ಈ ಮಟ್ಟಕ್ಕಿಂತ ಹೆಚ್ಚಿನ ಸಾಮರ್ಥ್ಯ ತೋರಿದರೆ ಕೂಲಿಯ ಜೊತೆಗೆ ಬೋನಸ್ ಕೊಡಲಾಗುತ್ತದೆ.

4 ಕೆಲಸಗಾರನ ಸಾಮರ್ಥ್ಯವನ್ನು ದಿನದ ಕೆಲಸದ ಮೇಲಾಗಲಿ ಪ್ರತಿಯೊಂದು ಕಾರ್ಯದ ನಿರ್ವಹಣೆಯ ಮೇಲಾಗಲಿ ನಿರ್ಧರಿಸುವುದಿಲ್ಲ; ಒಂದು ವಾರ, ಪಕ್ಷ ಇಲ್ಲವೆ ತಿಂಗಳ ಅವಧಿಯ ಒಟ್ಟು ಕೆಲಸದ ಮೇಲೆ ಇದನ್ನು ನಿರ್ಧರಿಸಲಾಗುತ್ತದೆ.

5. ಸಾಮರ್ಥ್ಯ-ಬೋನಸ್ ಕೋಷ್ಟಕವನ್ನು ಮೊದಲಿಗೇ ತಯಾರಿಸಿ ಇಟ್ಟುಕೊಳ್ಳಲಾಗುವುದು. ಉದಾಹರಣೆ :

ಸಾಮರ್ಥ್ಯ-ಬೋನಸ್ ಕೋಷ್ಟಕ

| ಸಾಮರ್ಥ್ಯ (%) (1) | ಉಚಿತಾರ್ಥ ಕಾಲದ ಕೂಲಿಯ ಸೇಖಡಾ ಪ್ರಮಾಣ (2) | ಸಾಮರ್ಥ್ಯ (%) (3) | ಉಚಿತಾರ್ಥ ಕಾಲದ ಕೂಲಿಯ ಶೇಕಡಾ ಪ್ರಮಾಣ (4) |
|---|---|---|---|
| 67 | 0.01 | 89 | 9.11 |
| 68 | 0.04 | 90 | 9.91 |
| 69 | 0.11 | 91 | 10.74 |
| 70 | 0.22 | 92 | 11.62 |
| 71 | 0.37 | 93 | 12.56 |
| 72 | 0.55 | 94 | 13.52 |
| 73 | 0.76 | 95 | 14.53 |
| 74 | 1.02 | 96 | 15.57 |
| 75 | 1.31 | 97 | 16.62 |
| 76 | 1.64 | 98 | 17.70 |
| 77 | 1.99 | 99 | 18.81 |
| 78 | 2.38 | 100 | 20.00 |
| 79 | 2.80 | 101 | 21.00 |
| 80 | 3.27 | 102 | 22.00 |
| 81 | 3.78 | 103 | 23.00 |
| 82 | 4.33 | 104 | 24.00 |
| 83 | 4.92 | 105 | 25.00 |
| 84 | 5.53 | 110 | 30.00 |
| 85 | 6.17 | 120 | 40.00 |
| 86 | 6.84 | 130 | 50.00 |
| 87 | 7.56 | 140 | 60.00 |
| 88 | 8.32 | | |

ಒಂದು ಕಾರ್ಯನಿರ್ವಹಣೆಯನ್ನು 12 ಗಂಟೆಗಳಿಗೆ ಪ್ರಮಾಣಿತಗೊಳಿಸಿದ್ದು ಒಬ್ಬ ಕೆಲಸಗಾರ ಅದನ್ನು ನಿರ್ವಹಿಸಲು 12 ಗಂಟೆ ತೆಗೆದುಕೊಂಡರೆ ಅವನ ಸಾಮರ್ಥ್ಯ ಶೇಕಡ 50; 10 ಗಂಟೆ ತೆಗೆದುಕೊಂಡರೆ ಶೇ. 120.

ಸಾಮರ್ಥ್ಯವನ್ನು ತಿಂಗಳ ಒಟ್ಟು ನಿರ್ವಹಣೆಯ ಮೇಲೆ ಲೆಕ್ಕ ಹಾಕುವದಿದ್ದು ಒಂದು ಗಂಟೆಗೆ 30 ಪೈ. ಕೂಲಿ ನಿಗದಿಯಾಗಿದೆಯೆಂದು ಭಾವಿಸಿಕೊಂಡು, ಒಬ್ಬ ಕೆಲಸಗಾರ ಒಂದು ತಿಂಗಳಲ್ಲಿ 240 ಗಂಟೆಗಳ ಕಾಲ ದುಡಿದು, ಅವನು ನಿರ್ವಹಿಸಿದ ಕಾರ್ಯಗಳು ನಿಗದಿಗೊಳಿಸಿದ ಪ್ರಮಾಣ ಮೇರೆಗೆ 210 ಗಂಟೆಗಳಲ್ಲಿ ಮಾಡಬಹುದಾದವಾಗಿದ್ದರೆ ಅವನ ಸಾಮರ್ಥ್ಯ $\frac{210}{240}\times 100$=87.5 ಆಗುತ್ತದೆ. ಅವನ ಕೂಲಿ 240x30 ಪೈ= ರೂ. 72.00. ಇದರ ಜೊತೆಗೆ, ಬೋನಸ್ ಕೋಷ್ಟಕದ ಪ್ರಕಾರ ಆತ ಪಡೆಯುವ ಬೋನಸ್ ಅವನ ಕೂಲಿಯ 7.94% ಆಗುತ್ತದೆ. ಅಂದರೆ ಬೋನಸ್ ರೂ. 5.72. ಆದ್ದರಿಂದ ಅವನ ಗಳಿಕೆ ರೂ. (72.00+5.72)=ರೂ. 77.72 ಆಗುತ್ತದೆ.

ಶೇಕಡ 100 ಕ್ಕಿಂತ ಹೆಚ್ಚು ಸಾಮರ್ಥ್ಯ ತೋರಿದರೆ ಕೆಲಸಗಾರನಿಗೆ ಅವನು ಉಳಿಸಿದ ಕಾಲದ ಕೂಲಿ ಹಾಗೂ ಅವನು ಗಳಿಸಿದ ಕಾಲದ ಕೂಲಿಯ ಶೇಕಡ 120 ರಷ್ಟನ್ನು ಕೊಡಲಾಗುತ್ತದೆ.

ಎಮರ್ಸನ್ ಯೋಜನೆಯ ಪ್ರಕಾರ ಕೆಲಸಗಾರನ ಗಳಿಕೆಯನ್ನು ಕಂಡುಹಿಡಿಯಲು ಈ ಕೆಳಗಿನ ಸೂತ್ರಗಳು ನೆರವಾಗುತ್ತವೆ:

$66^2/_3$% ರಿಂದ 100% ಸಾಮರ್ಥ್ಯದ ವರೆಗೆ:

E=RT+K (RT)

100%ಕ್ಕಿಂತ ಹೆಚ್ಚಿನ ಸಾಮರ್ಥ್ಯ ತೋರಿದರೆ:

E=RT+(S-T) R+0.20 RT

ಅಥವಾ

E=SR+0.20 RT

ಈ ಸೂತ್ರಗಳಲ್ಲಿ E = ಗಳಿಕೆ

R = ಕೂಲಿಯ ದರ (ಗಂಟೆಗೆ)

T = ಕೆಲಸಮಾಡಿದ ಕಾಲ

K = ಕೋಷ್ಟಕದಲ್ಲಿ ಸೂಚಿತವಾದ ಶೇಕಡ

S = ಪ್ರಮಾಣಿತ ಕಾಲಾವಧಿ

ಎಲ್ಲ ಉಚಿತಾರ್ಥ ಯೋಜನೆಗಳಲ್ಲಿರುವಂತೆ ಅಧಿಕ ಉತ್ಪನ್ನದ ಫಲದಲ್ಲಿ ದೊಡ್ಡಪಾಲನ್ನು ಕೆಲಸಗಾರ ಪಡೆಯುವನಾದ್ದರಿಂದ ಉತ್ಪಾದನೆಯನ್ನು ದೊಡ್ಡ ಪರಿಮಾಣದಲ್ಲಿ ಕೈಗೊಂಡು ಪ್ರತಿ ಸರಕಿಗೆ ತಗಲುವ ವೆಚ್ಚವನ್ನು ಕಡಿಮೆಮಾಡಿಕೊಳ್ಳಬೇಕಾಗುತ್ತದೆ. ಪ್ರಮಾಣಿತ ಮಟ್ಟ ಅತಿ ದಕ್ಷ ಕೆಲಸಗಾರನಿಗೆ ಮಾತ್ರ ನಿಲುಕುವಂತೆ ಅದನ್ನು ನಿಗದಿಗೊಳಿಸಬೇಕಾಗುತ್ತದೆ.

ಎಮರ್ಸನ್ ಯೋಜನೆಯಲ್ಲಿ ಕೆಲವು ಅನುಕೂಲಗಳಿವೆ : ಉಚಿತಾರ್ಥ ಸಾಕಷ್ಟು ಮೊದಲಿಗೇ ಆರಂಭವಾಗುವುದರಿಂದ ಕೆಲಸಗಾರರಿಗೆ ಮಾನಸಿಕ ತೃಪ್ತಿ ಇರುತ್ತದೆ. ಮೊದಲಿಗೆ ಸಣ್ಣ ಪ್ರಮಾಣದ ಉಚಿತಾರ್ಥ ಕೊಡಲಾಗುವುದರಿಂದ ಉತ್ಪಾದನೆ ಒಮ್ಮೆಗೇ ಏರಿಬಿಡುವುದಿಲ್ಲ. ಪ್ರಮಾಣಿತ ಮಟ್ಟ ತಲುಪುತ್ತಿರುವಂತೆ, ಆ ಮಟ್ಟ ಮೀರಿದಂತೆ ಉಚಿತಾರ್ಥದ ಪ್ರಮಾಣ ಶೀಘ್ರವಾಗಿ ಏರುವುದರಿಂದ ಸಾಮರ್ಥ್ಯದ ಏರಿಕೆ ಕ್ರಮೇಣ ಕಂಡುಬರುತ್ತದೆ. ಟೇಲರನ ಯೋಜನೆಯಲ್ಲಿದ್ದಂತೆ ಸ್ವಲ್ಪದರಲ್ಲಿ ಉಚಿತಾರ್ಥವನ್ನು ಕಳೆದುಕೊಳ್ಳುವ ಭಯ ಇರುವುದಿಲ್ಲ. ಕೆಲಸಗಾರನ ಸಾಮರ್ಥ್ಯವನ್ನು ತಿಂಗಳ ಕಾರ್ಯನಿರ್ವಹಣೆಯ ಮೇಲೆ ಲೆಕ್ಕಹಾಕುವುದರಿಂದ ಕೆಲಸಗಾರನಿಗೆ ಸಂಚಿತ ಫಲ ದೊರೆಯುತ್ತದೆ. ಅವನ ಸಾಮರ್ಥ್ಯವನ್ನು ಒಂದು ಕಾರ್ಯ ನಿರ್ವಹಣೆಯ ಮೇಲೇ ಅಳೆಯದೆ ಹೀಗೆ ಮಾಡುವುದರಿಂದ ಕೆಲಸಗಾರ ಒಂದು ದಿನ ಕಳೆದುಕೊಂಡ ಸಾಮರ್ಥ್ಯವನ್ನು ಇನ್ನೊಂದು ದಿನ ಸರಿಪಡಿಸಿಕೊಳ್ಳಬಹುದು. ಕೆಲಸಗಾರ ಕೆಲವು ಕಾರ್ಯಗಳನ್ನು ಚೆನ್ನಾಗಿ ನಿರ್ವಹಿಸಿ ಉಳಿದವನ್ನು ಕಡೆಗಣಿಸುವಂತಿಲ್ಲ. ಕೆಲವು ಒಳ್ಳೆಯ ನಿರ್ವಹಣೆಗಳು ಹಲವು ಕಳಪೆ ನಿರ್ವಹಣೆಗಳೊಂದಿಗೆ ಸೇರಿ ಒಟ್ಟಿನಲ್ಲಿ ಉಚಿತಾರ್ಥ ವಿಲ್ಲದೆಯೇ ಹೋಗಬಹುದೆಂಬುದು ಅವನಿಗೆ ತಿಳಿದಿರುತ್ತದೆ. ಆದ್ದರಿಂದ ಆತ ಪ್ರತಿ ಕಾರ್ಯನಿರ್ವಹಣೆಯಲ್ಲೂ ಉಚಿತಾರ್ಥ ಗಳಿಸುವ ಪ್ರಯತ್ನ ಮಾಡುತ್ತಾನೆ. ಎಮರ್ಸನ್ ಯೋಜನೆಯಲ್ಲಿ ಕೆಲವು ಅನಾನುಕೂಲಗಳಿವೆ.

ಎಲ್ಲ ಉದ್ಯಮಗಳಲ್ಲೂ ಈ ವಿಧಾನವನ್ನು ಅನುಕರಿಸಲಾಗುವುದಿಲ್ಲ. ಕಾರ್ಯ ಮತ್ತು ಯಂತ್ರೋಪಕರಣಗಳ ಪ್ರಮಾಣೀಕರಣ ಸರಳವಾದದ್ದಲ್ಲ. ಶ್ರಮದ ಮೇಲಿನ ವೆಚ್ಚ ಹೆಚ್ಚಿನದಾಗುತ್ತದೆ. ಏಕೆಂದರೆ ಉಚಿತಾರ್ಥ ಶೇ.67ರಷ್ಟು ಸಾಮರ್ಥ್ಯಕ್ಕೇ ಆರಂಭವಾಗುತ್ತದೆ. ಮೊದಲ ಹಂತಗಳಲ್ಲಿ ನೀಡುವ ಉಚಿತಾರ್ಥ ಕಡಿಮೆ ಪ್ರಮಾಣದ್ದಾದ್ದರಿಂದ ಸಾಕಷ್ಟು ಉತ್ತೇಜನ ದೊರೆಯದೆ ಇರಬಹುದು. ಯೋಜನೆಯ ನಿರ್ವಹಣೆ ಕಷ್ಟವಾಗುತ್ತದೆ. ಕೆಲಸಗಾರರಿಗೆ ಯೋಜನೆ ಅರ್ಥವಾಗುವುದಿಲ್ಲ. ಹೆಚ್ಚಿನ ಗುಮಾಸ್ತೆ ಕೆಲಸದ ಅಗತ್ಯ ಬೀಳುತ್ತದೆ.

(ಡಿ.ಎನ್.ಎಸ್.ಎಂ.)

**ಎಮಲ್ಷನ್:** ಒಂದು ದ್ರವವನ್ನು ಕುರಿತು ಅಮಿಶ್ರಣೀಯವಾದ (ಇಮ್ಮಿಸಿಬಲ್) ಇನ್ನೊಂದು ದ್ರವದಲ್ಲಿ ಮೊದಲಿನ ದ್ರವದ ಪರಿಕ್ಷೇಪಣ. ಆಲಿವ್ ಎಣ್ಣೆ ಮತ್ತು ನೀರು ಪರಸ್ಪರ ಮಿಳಿತವಾಗುವುದಿಲ್ಲ. ಇಂಥ ದ್ರವ ಜೋಡಿಯನ್ನು ತೀವ್ರವಾಗಿ ಕುಲಿಕಿದಾಗ ಒಂದು ದ್ರವ ಸೂಕ್ಷ್ಮ ಹನಿಗಳ ರೂಪದಲ್ಲಿ ಮತ್ತೊಂದರಲ್ಲಿ ಪರಿಕ್ಷೇಪಿತವಾಗುವುದು. ಇಂಥ ನಿಕಟ ದ್ರವಮಿಶ್ರಣವೇ ಎಮಲ್ಷನ್. ಹನಿಗಳಾಗಿ ಹಂಚಿಹೋಗಿರುವ ದ್ರವವನ್ನು ಪರಿಕ್ಷೇಪಿತ ವಸ್ತುವೆಂದೂ (ಡಿಸ್ಪರ್ಸ್ಡ್ ಫೇಸ್) ಅದನ್ನು ಲೀನಮಾಡಿಕೊಂಡಿರುವ ಮತ್ತೊಂದು ದ್ರವವನ್ನು ಪರಿಕ್ಷೇಪಣ ಮಾಧ್ಯಮವೆಂದೂ (ಡಿಸ್ಪರ್ಷನ್ ಮೀಡಿಯಂ) ಪರಿಗಣಿಸಲಾಗುವುದು. ಸಾಮಾನ್ಯವಾಗಿ ಒಂದು ದ್ರವ ನೀರಾಗಿದ್ದು ಮತ್ತೊಂದು ಎಣ್ಣೆಯಂಥ ವಸ್ತುವಾಗಿರುವ ಸಂದರ್ಭಗಳೇ ಹೆಚ್ಚು. ಹೀಗಾಗಿ ನೀರು-ಎಣ್ಣೆ ಎಮಲ್ಷನುಗಳೆಂದು ಎರಡು ಸ್ಥೂಲ

ವರ್ಗಗಳಾಗಿ ವಿಭಾಗಿಸುವುದು ರೂಢಿ. ಎಣ್ಣೆ ಪರಿಕ್ಷೇಪಣ ಮಾಧ್ಯಮವಾಗಿದ್ದರೆ ನೀರು/ಎಣ್ಣೆ ಎಮಲ್ಷನ್ ಎನಿಸಿಕೊಳ್ಳುತ್ತದೆ. ಇದಕ್ಕೆ ಬೆಣ್ಣೆ ಮತ್ತು ಕೋಲ್ಡ್ ಕ್ರೀಮ್ ಉದಾಹರಣೆಗಳು. ನೀರು ಪರಿಕ್ಷೇಪಣ ಮಾಧ್ಯಮವಾಗಿದ್ದರೆ ಎಣ್ಣೆ/ನೀರು ಎಮಲ್ಷನ್ ಪ್ರಾಪ್ತವಾಗುವುದು. ಇದಕ್ಕೆ ಹಾಲು, ವ್ಯಾನಿಷಿಂಗ್ ಕ್ರೀಮ್, ಸ್ಕಾಟ್ಸ್ ಎಮಲ್ಷನ್, ಫಿನೈಲ್ ಮತ್ತು ಲೈಸಾಲ್ ನಿದರ್ಶನಗಳು.

ಎಮಲ್ಷನಿನಲ್ಲಿರುವ ಕಣಗಳು ಕೊಲಾಯ್ಡ್ ಕಣಗಳಿಗಿಂತ ಗಾತ್ರದಲ್ಲಿ ದೊಡ್ಡವು. ಆದ್ದರಿಂದ ಸಾಮಾನ್ಯ ಸೂಕ್ಷ್ಮದರ್ಶಕ ಅಥವಾ ಭೂತಕನ್ನಡಿಯಿಂದ ಅವನ್ನು ನೋಡಬಹುದು. ಎರಡು ದ್ರವಗಳ ಪೈಕಿ ಯಾವುದು ಅಧಿಕ ಪ್ರಮಾಣದಲ್ಲಿದೆಯೋ ಅದು ಮಾಧ್ಯಮವಾಗಿ ವರ್ತಿಸಿ ಉಳಿದ ದ್ರವ ಪರಿಕ್ಷೇಪಿತವಾಗುವುದು. ಉದಾಹರಣೆಗೆ ಕೊಂಚ ನೀರನ್ನು ಹೆಚ್ಚು ನೈಟ್ರೊ ಬೆಂಜೀನಿನೊಡನೆ ಕುಲುಕಿದಾಗ ತೈಲ ಎಮಲ್ಷನೂ, ಸ್ವಲ್ಪ ನೈಟ್ರೊ ಬೆನ್ಸೀನನ್ನು ತುಂಬ ನೀರಿನೊಡನೆ ಕಡೆದಾಗ ಜಲ ಎಮಲ್ಷನೂ ದೊರೆಯುವುವು. ಆದರೆ ಇದೇನೂ ನಿಯಮವಲ್ಲ. ಸೂಕ್ತ ಪ್ರಯೋಗ ಪರಿಸ್ಥಿತಿಯಲ್ಲಿ ಶೇ. 70 ಪರಿಕ್ಷೇಪಿತ ವಸ್ತುವಿರುವ ಸಾಂದ್ರ ಎಮಲ್ಷನುಗಳನ್ನು ತಯಾರಿಸಬಹುದು. ಈ ಮಿತಿ ಮೀರಿದರೆ ಪರಿಕ್ಷೇಪಿತಕಣಗಳು ತಮ್ಮ ಗೋಳಾಕೃತಿಯನ್ನು ಕಳೆದುಕೊಂಡು ಬಹುಫಲಕಿಗಳಾಗುತ್ತವೆ. (ಪಾಲಿಹೆಡ್ರಲ್). ಸ್ನಿಗ್ಧತೆ ಹೆಚ್ಚುತ್ತದೆ. ಶೇ. 30 ಇನ್ನೊಂದು ದ್ರವ ಪರಿಕ್ಷೇಪಿತವಾಗಿರುವ ವಿರುದ್ಧ ನಮೂನೆಯ ಎಮಲ್ಷನ್ ಆಗಿಬಿಡುವುದುಂಟು.

ಎಮಲ್ಷನ್ ನಮೂನೆಯ ನಿರ್ಣಯದಲ್ಲಿ ಎರಡು ದ್ರವಗಳ ಮೇಲ್ಮೈ ಒತ್ತಡದ (ಸರ್ಫೇಸ್ ಟೆನ್ಷನ್) ಪಾತ್ರ ಕಡೆಗಣಿಸುವಂತಿಲ್ಲ. ನೀರಿನ ಮೇಲ್ಮೈ ಒತ್ತಡ ಹೆಚ್ಚಾಗಿದ್ದರೆ ಅದು ಗೋಳಾಕೃತಿಯ ಹನಿಗಳಾಗಲು ಹವಣಿಸುವುದು. ಆಗ ನೀರು ಎಣ್ಣೆ ಎಮಲ್ಷನ್ ಬರುವುದು ಹೆಚ್ಚು ಸಂಭವನೀಯ. ಕೆಳಕಂಡ ಸರಳ ಪ್ರಯೋಗಗಳಿಂದ ಎಮಲ್ಷನ್ ನಮೂನೆಯನ್ನು ಪತ್ತೆ ಹಚ್ಚಬಹುದು: (i) ಸಾರಗುಂದಿಸುವಿಕೆ (ಡೈಲ್ಯೂಷನ್). ಎಮಲ್ಷನಿಗೆ ನೀರು ಸೇರಿಸಿದಾಗ ಅದು ಸರಾಗವಾಗಿ ಲೀನವಾದರೆ ಎಣ್ಣೆ/ನೀರು ನಮೂನೆಯೆಂದೂ, ಬೇರೊಂದು ಪದರವಾಗಿ ಉಳಿದರೆ ನೀರು/ಎಣ್ಣೆ ನಮೂನೆಯೆಂದೂ ಗುರುತಿಸಬಹುದು. (ii) ಬಣ್ಣ ಪ್ರಯೋಗ. ತೈಲ ದ್ರಾವ್ಯವಾದ ಬಣ್ಣವೊಂದನ್ನು ಎಮಲ್ಷನಿನೊಂದಿಗೆ ಕುಲುಕಲಾಗುವುದು. ಸೂಕ್ಷ್ಮದರ್ಶಕದಲ್ಲಿ ಒಂದು ತೊಟ್ಟನ್ನು ಪರೀಕ್ಷಿಸಿದಾಗ ಬಣ್ಣದ ಹನಿಗಳು ಕಂಡರೆ ಎಣ್ಣೆ/ನೀರು ನಮೂನೆಯಿರಬೇಕು. ಪೂರಾ ಹಿನ್ನೆಲೆಯೇ ವರ್ಣರಂಜಿತವಾಗಿ ಗೋಚರಿಸಿದರೆ ವಿರುದ್ಧ ನಮೂನೆಯ ಎಮಲ್ಷನ್ ಎಂದು ಖಚಿತವಾಗುತ್ತದೆ. (iii) ತೈಲದ ಎಮಲ್ಷನ್ ಎಣ್ಣೆಯ ಮೇಲೆ ಸುಲಭವಾಗಿ ಹರಡುವುದು, ನೀರಿನ ಮೇಲೆ ಹರಡುವುದಿಲ್ಲ. (iv) ತೈಲ ಎಮಲ್ಷನುಗಳಿಗೆ ಸ್ನಿಗ್ಧತೆ ಹೆಚ್ಚು; ವಿದ್ಯುದ್ವಾಹಕ ಗುಣ ಕಡಿಮೆ.

ಎಮಲ್ಷನುಗಳು ಬಹುಕಾಲ ಸ್ಥಿರವಾಗಿ ಉಳಿಯದೆ ಎರಡು ಪದರಗಳಾಗಿ ಬೇರ್ಪಡುವುವು. ಆದ್ದರಿಂದ ಸ್ಥಿರ ಎಮಲ್ಷನುಗಳನ್ನು ಪಡೆಯಲು ಎಮಲ್ಷನ್‌ಕಾರಿಗಳನ್ನು ಅನಿವಾರ್ಯವಾಗಿ ಬಳಸಬೇಕಾಗುತ್ತದೆ. ಇವುಗಳಲ್ಲಿ ಎರಡು ವಿಧ:

(i) ಎಮಲ್ಷನ್ ಎಂದರೆ ಒಂದು ದ್ರವ ಮತ್ತೊಂದರಲ್ಲಿ ಸೂಕ್ಷ್ಮ ಹನಿಗಳ ರೂಪದಲ್ಲಿ ಹರಡಿರುವಿಕೆಯಾದ್ದರಿಂದ ಎರಡು ದ್ರವಗಳ ನಡುವೆ ಇರುವ ಕ್ಷೇತ್ರದ ವಿಸ್ತೀರ್ಣ ಅಪಾರವಾಗಿರುತ್ತದೆ. ಸಂಧಿಸ್ಥಳದ ಒತ್ತಡವೂ (ಇಂಟರ್‌ಫೇಶಿಯಲ್ ಟೆನ್ಷನ್) ಅಧಿಕವಾಗಿರುವುದು ಸಹಜ. ಈ ಒತ್ತಡವನ್ನು ತಗ್ಗಿಸಿಕೊಳ್ಳುವ ಯತ್ನದಲ್ಲಿ ಎಮಲ್ಷನ್ ಒಡೆದು ಎರಡು ದ್ರವಗಳೂ




ಸೋಡಿಯಂ ಓಲಿಯೇಟಿನಿಂದ ನೀರಿನಲ್ಲಿ ಪರಿಕ್ಷೇಪಿತವಾಗಿರುವ ಎಣ್ಣೆಯ ಹನಿ

ಕ್ಯಾಲ್ಸಿಯಂ ಮತ್ತು ಮ್ಯಾಗ್ನೀಸಿಯಂ ಓಲಿಯೇಟುಗಳಿಂದ ಆಲಿವ್ ಎಣ್ಣೆಯಲ್ಲಿ ಪರಿಕ್ಷೇಪಿತವಾಗಿರುವ ನೀರಿನ ಹನಿ.

ಕಾಡಿಗೆ ಕಣಗಳಿಂದ ಆವರಿಸಲ್ಪಟ್ಟು ಸೀಮೆಎಣ್ಣೆಯಲ್ಲಿ ಪರಿಕ್ಷೇಪಿತವಾಗಿರುವ ನೀರಿನ ಹನಿ.

ಬೇರ್ಪಡುತ್ತವೆ. ಸಂಧಿಸ್ಥಳದ ಒತ್ತಡವನ್ನು ತಗ್ಗಿಸಬಲ್ಲ ಮೂರನೆಯ ವಸ್ತುವೊಂದಿದ್ದರೆ, ಎಮಲ್ಷನ್ ಸ್ಥಿರವಾಗಿರಬಲ್ಲುದು ಎಂದು ಇದರಿಂದ ಸೂಚಿತವಾಗುತ್ತದೆ. ಸಾಬೂನಿಗೆ ಈ ಗುಣವಿರುವುದರಿಂದಲೇ ಅದು ಉತ್ತಮ ಎಮಲ್ಷನ್‌ಕಾರಿ ಎನಿಸಿಕೊಂಡಿದೆ. ಸಂಧಿಸ್ಥಳದ ಒತ್ತಡ ತಗ್ಗಿಸಿ ಸಾಬೂನು ಅಲ್ಲಿ ಸಂಗ್ರಹಗೊಳ್ಳುತ್ತದೆ. ಹನಿಗಳ ಸುತ್ತ ಸಾಬೂನಿನ ಕವಚ ಏರ್ಪಟ್ಟು ಅವು ಗರಣೆಗಟ್ಟುವುದು (ಕೊಯಲೆಸ್) ತಪ್ಪುವುದು. ಬಟ್ಟೆಯನ್ನು ತೊಳೆಯುವಾಗ ಅದಕ್ಕೆ ಅಂಟಿರುವ ಕೊಳೆಯನ್ನು ಮತ್ತು ಜಿಡ್ಡು ಪದಾರ್ಥಗಳನ್ನು ತತ್‌ಕ್ಷಣ ನೀರಿನಲ್ಲಿ ಎಮಲ್ಷನ್ ಮಾಡಿ ಕೊಂಡೊಯ್ಯುವುದೇ ಅದು ನಿರ್ವಹಿಸುವ ಪಾತ್ರ. ಸೋಡಿಯಂ ಓಲಿಯೇಟಿನಂಥ ಕ್ಷಾರಲೋಹದ ಸಾಬೂನು ನೀರು–ಸಾಬೂನು ಸಂಧಿಸ್ಥಳದ ಮೇಲ್ಮೈ ಒತ್ತಡವನ್ನು ಮಾತ್ರ ಗಣನೀಯವಾಗಿ ತಗ್ಗಿಸುವುದು. ಇದರಿಂದ ಸಾಬೂನಿನೊಡನೆ ಹೆಚ್ಚು ಸಂಧಿ ಒತ್ತಡ ಹೊಂದಿರುವ ಆಲಿವ್ ಎಣ್ಣೆ ಹನಿಗಳಾಗಿ ಎಣ್ಣೆ/ನೀರು ಎಮಲ್ಷನ್ ಉಂಟಾಗುವುದು. ಕ್ಯಾಲ್ಸಿಯಂ ಮತ್ತು ಮ್ಯಾಗ್ನೀಸಿಯಂ ಓಲಿಯೇಟುಗಳು ಎಣ್ಣೆ–ಸಾಬೂನು ಸಂಧಿಸ್ಥಳದ ಒತ್ತಡವನ್ನು ಮಾತ್ರ ಗಣನೀಯವಾಗಿ ತಗ್ಗಿಸುವುವು. ಈಗ ಸಾಬೂನಿನೊಡನೆ ಹೆಚ್ಚು ಸಂಧಿ ಒತ್ತಡ ಹೊಂದಿರುವ ನೀರು ಹನಿಗಳ ರೂಪಕ್ಕೆ ಬಂದು ನೀರು/ಎಣ್ಣೆ ಎಮಲ್ಷನ್ ಲಭಿಸುವುದು.

(ii) ಸೂಕ್ಷ್ಮಕಣಗಳ ರೂಪದಲ್ಲಿರುವ ಕೆಲವು ಘನ ವಸ್ತುಗಳು ಎರಡು ದ್ರವಗಳಿಂದಲೂ ಪೂರಾ ಒದ್ದೆಯಾಗುವುದಿಲ್ಲ. ಅವೂ ಎಮಲ್ಷನ್‌ಕಾರಿಗಳಾಗಿ ವರ್ತಿಸಬಲ್ಲವು. ಇಂಥ ವಸ್ತು ಕಾಡಿಗೆ (ಸೂಟ್). ಇದರ ಕಣಗಳು ಸೀಮೆಎಣ್ಣೆಯಿಂದ ಹೆಚ್ಚು ಒದ್ದೆಯಾಗುವುದರಿಂದ ನೀರು/ಎಣ್ಣೆ ಎಮಲ್ಷನ್ ಉಂಟುಮಾಡುವುದು. ಕಾಡಿಗೆಯ ಕಣಗಳು ನೀರಿನ ಹನಿಯ ಸುತ್ತ ಹೊದಿಕೆಯಂತೆ ಹೆಣೆದುಕೊಂಡಿರುವುದನ್ನು ಮೂರನೆಯ ಚಿತ್ರದಲ್ಲಿ ಕಾಣಬಹುದು.

ಎಮಲ್ಷನ್ನಿನ ಸ್ಥಿರತೆಗೆ ಎಮಲ್ಷನ್‌ಕಾರಿಯ ಕವಚದಾರ್ಢ್ಯ ಮತ್ತು ಪರಿಕ್ಷೇಪಿತ ಕಣಗಳು ಹೊತ್ತಿರುವ ವಿದ್ಯುದಂಶ ಮುಖ್ಯಕಾರಣ. ಆದ್ದರಿಂದ ಎಮಲ್ಷನ್ ಪಡೆಯಲು ಕೆಳಕಂಡ ಮಾರ್ಗಗಳನ್ನು ಅನುಸರಿಸಬಹುದು:

(i) ಎಮಲ್ಷನ್‌ಕಾರಿಯನ್ನು ನಾಶಪಡಿಸುವ ವಸ್ತುವಿನ ಸೇರ್ಪಡೆ. ಉದಾಹರಣೆಗೆ ಸಾಬೂನನ್ನು ನಾಶಮಾಡಲು ಆಮ್ಲವನ್ನು ಉಪಯೋಗಿಸಬಹುದು.

(ii) ಕಣಗಳು ಹೊತ್ತಿರುವ ವಿದ್ಯುದಂಶವನ್ನು ನಿವಾರಿಸುವ ಎಲೆಕ್ಟ್ರೊಲೈಟಿನ ದ್ರಾವಣವನ್ನೂ ಹಾಕುವುದು.

(iii) ಕುದಿಸುವುದು, ಶೈತ್ಯೀಕರಣ, ಕೇಂದ್ರಾಪಗಮನ ಯಂತ್ರದ ಬಳಕೆ ಮತ್ತು ಉನ್ನತ ವಿಭವ ಪರ್ಯಾಯ ವಿದ್ಯುತ್ತಿನ ಪ್ರಯೋಗ.

(iv) ನೀರು/ಎಣ್ಣೆ ಎಮಲ್ಷನಿಗೆ ನಿರ್ಜಲಕಾರಿ ಅಥವಾ ಆಲ್ಕೊಹಾಲ್ ಕೂಡಿಸುವುದು.

ಈ ಎಲ್ಲ ಅಂಶಗಳ ಪರಿಶೀಲನೆಯಿಂದ ಒಂದು ಮುಖ್ಯ ವಿಷಯ ಹೊರಬೀಳುತ್ತದೆ; ಎಮಲ್ಷನ್‌ಕಾರಿ ಪರಿಕ್ಷೇಪಿತ ಮಾಧ್ಯಮದಲ್ಲಿ ಹೆಚ್ಚು ದ್ರಾವ್ಯ ಮತ್ತು ಒದ್ದೆಯಾಗುವುದು ಇದೇ ಬ್ಯಾನ್‌ಕ್ರಾಫ್ಟನ ನಿಯಮ.

ನಿತ್ಯಜೀವನದಲ್ಲಿ ಹಾಗೂ ಕೈಗಾರಿಕೋದ್ಯಮಗಳಲ್ಲಿ ಎಮಲ್ಷನ್‌ಗಳ ಪಾತ್ರ ಹಿರಿದು. ಹಾಲು, ಮೊಟ್ಟೆಯ ಹಳದಿಭಾಗ (ಎಗ್ ಯೋಕ್) ಎಲ್ಲ ನಿಸರ್ಗದತ್ತ ಎಮಲ್ಷನುಗಳು. ಆಹಾರ, ವೈದ್ಯಕೀಯ ಮತ್ತು ಅಂಗರಾಗ ಉದ್ಯಮಗಳಲ್ಲಿ ಎಮಲ್ಷನುಗಳನ್ನು ತಯಾರಿಸಬೇಕಾಗುತ್ತದೆ. ಇದಕ್ಕಾಗಿ ಕೊಲಾಯ್ಡ್ ಗಿರಣಿ, ವೇಗವಾಗಿ ಚಲಿಸುವ ಕಡೆಗೋಲು ಮೊದಲಾದ ಸಾಧನಗಳನ್ನು ಬಳಸುವರು. ತಯಾರಿಕಾ ತಂತ್ರದ ಅಪ್ರಧಾನ ವಿವರಗಳೂ ಎಮಲ್ಷನಿನ ಸ್ವಭಾವವನ್ನು ನಿರ್ಣಯಿಸಬಹುದಾದ್ದರಿಂದ ಈ ಬಗ್ಗೆ ಎಚ್ಚರಿಕೆ ಅಗತ್ಯ. ಪರಿಕರಗಳನ್ನು ಬೆರೆಸಿದ ಕ್ರಮ ಮಿಶ್ರಣವನ್ನು ಕಡೆದ ಕಾಲಾವಧಿ ಮತ್ತು ವೇಗ, ಉಷ್ಣತಾನಿಯಂತ್ರಣದಲ್ಲಾದ ಸೂಕ್ಷ್ಮ ಏರುಪೇರು ಸಹ ಎಮಲ್ಷನಿನ ಮೇಲೆ ಪ್ರಭಾವ ಬೀರುತ್ತವೆ. ಎಮಲ್ಷನ್‌ಕಾರಿಯ ಪ್ರಮಾಣ ಮುಖ್ಯವಾಗಿ ಗಮನಿಸಬೇಕಾದ ವಿಷಯ. ಕೈಗಾರಿಕೆಯಲ್ಲಿ ಪ್ರಧಾನವಾಗಿ ಬಳಸುವ ಎಮಲ್ಷನ್‌ಕಾರಿಗಳೆಂದರೆ ಸಾಬೂನು ಮತ್ತು ಜಿಲೆಟಿನ್. ವೈದ್ಯಕೀಯದಲ್ಲಿ ಅರೇಬಿಕ್ ಅಂಟಿಗೆ ಪ್ರಾಶಸ್ತ್ಯ. ಅಹಿತ ರುಚಿಯುಳ್ಳ ಔಷಧವನ್ನು ತೈಲದಲ್ಲಿ ಪರಿಕ್ಷೇಪಿಸಿ ಕುಡಿಸಿದರೆ ರೋಗಿಗೆ ಅದರ ರುಚಿ ಹತ್ತದೆ ಸಹ್ಯವಾಗಿರುವುದು. ದೇಹಗತವಾದ ಅನಂತರ ಪ್ರಯೋಗಿಸಿದ ಮದ್ದು ನಿಧಾನವಾಗಿ ಬಿಡುಗಡೆಯಾಗಿ ಕಾರ್ಯೋನ್ಮುಖವಾಗಲೆಂಬ ಅಭಿಲಾಷೆ ವೈದ್ಯನಿಗಿದ್ದರೆ, ಆಗ ಅದನ್ನು ತೈಲದಲ್ಲಿ ಎಮಲ್ಷನ್ ಮಾಡಿಕೊಡುವುದು ಪದ್ಧತಿ. ಅನೇಕ ಕೈಗಾರಿಕೆಗಳಲ್ಲಿ ಸ್ಥಿರವಾದ ಎಮಲ್ಷನುಗಳನ್ನು ಒಡೆಯುವ ಅಗತ್ಯ ಬೀಳುತ್ತದೆ. ನೀರು/ಎಣ್ಣೆ ನಮೂನೆಯ ಕಚ್ಚಾ ಪೆಟ್ರೋಲಿಯಂ, ಉಣ್ಣೆಯಿಂದ ನೂಲು ತೆಗೆಯುವಾಗ ಬರುವ ಅದರ ಕೊಬ್ಬಿನ ಎಮಲ್ಷನ್, ಸಾವಯವ ದ್ರವಗಳನ್ನು ಹಬೆಬಾಷ್ಪೀಭವನ ಮಾಡಿದಾಗ ಹುಟ್ಟುವ ಎಮಲ್ಷನ್, ತೈಲಯಂತ್ರಗಳಲ್ಲಿ ಸಾಂದ್ರೀಕರಿಸುವ ಎಮಲ್ಷನುಗಳನ್ನು ಒಡೆಯದೆ ಗತ್ಯಂತರವಿಲ್ಲ. ಅದಕ್ಕಾಗಿ ಹಿಂದೆಯೇ ಸೂಚಿಸಿರುವ ಅನುಕೂಲವಾದ ಯಾವ ವಿಧಾನವನ್ನಾದರೂ ಉಪಯೋಗಿಸಬಹುದು. (ಎಚ್.ಜಿ.ಎಸ್.)

**ಎಮೆಟಿನ್:** ಇಪಿಕ್ಯಾಕುವಾನ ಸಸ್ಯದ ಒಣ ಬೇರಿನಿಂದ ತೆಗೆದ ಆಲ್ಕಲಾಯಿಡ್. ಈ ಸಸ್ಯ ಬ್ರೆಜಿಲ್ ಮತ್ತು ಮಧ್ಯ ಅಮೆರಿಕ ಪ್ರದೇಶಗಳ ಮೂಲದ್ದು. ಭಾರತದಲ್ಲಿ ಇದನ್ನು ಈಗ ಬೆಳೆಸುತ್ತಾರೆ. ಎಮೆಟಿನ್ ಅಸ್ಫಟಿಕ ರೂಪದ ಬಿಳಿ ಪುಡಿ. ಇದು ಆಲ್ಕೊಹಾಲ್, ಈಥರ್ ಮತ್ತು ಕ್ಲೋರೋಫಾರ್ಮ್‌ಗಳಲ್ಲಿ ಬಲು ಸುಲಭವಾಗಿ ಕರಗುತ್ತದೆ. ಇದರ ಕರಗುವ ಬಿಂದು $74^0$ ಸೆಂ. ಗ್ರೇ. ಸಂಕೇತ $C_{29}H_{40}O_4N_2$. ಇದರ ಹೈಡ್ರೊಕ್ಲೋರೈಡ್ ಬಿಸಿನೀರಿನಲ್ಲಿ ಬಣ್ಣವಿಲ್ಲದ ಮಸಕಾದ ಸೂಜಿ ಆಕಾರದ ಹರಳುಗಳಾಗಿಯೂ, ತಣ್ಣಗಿರುವ ಪರ್ಯಾಪ್ತ ದ್ರಾವಣದಿಂದ ದಪ್ಪವಾದ ಪಾರದರ್ಶಕ ಪ್ರಿಸ್ಮ್ ಹರಳುಗಳಾಗಿಯೂ ಬೇರ್ಪಡುತ್ತದೆ. ಅಲ್ಪಪರಿಮಾಣದಲ್ಲಿ ಕಫಹಾರಿವಾಗಿಯೂ (ಎಕ್ಸ್‌ಪೆಕ್ಟೊರೆಂಟ್) ಅಧಿಕ ಪರಿಮಾಣದಲ್ಲಿ ವಮನಕಾರಿಯಾಗಿಯೂ (ಎಮೆಟಿಕ್) ಇದರ ಗುಣವಿದೆ. ಆದರೆ ಎಂಟಮೀಬ ಹಿಸ್ಟೊಲಿಟಿಕ ಜೀವಿಯಿಂದ ಸಂಭವಿಸುವ ಆಮಶಂಕೆ ಮತ್ತು ಯಕೃತ್ತಿನ ಹುಣ್ಣುಗಳ ನಿವಾರಣೆಗಾಗಿ ಇದರ ಉಪಯೋಗ ಇದೆಲ್ಲಕ್ಕಿಂತ ಮುಖ್ಯವಾದುದು. ವಮನಕಾರಿಯಾಗಿ ಕೆಲಸಮಾಡುವಾಗ

ನೇರವಾಗಿ ಜಠರದ ಮೇಲೆ ಅಲ್ಲದೆ ಕೇಂದ್ರನರವ್ಯೂಹದ ಮೇಲೂ ಇದರ ಪ್ರಭಾವವಿದೆ. ಸೂಜಿಮದ್ದಾಗಿ ಉಪಯೋಗಿಸುವಾಗ ಎಮೆಟಿನ್ ಹೈಡ್ರೋಕ್ಲೋರೈಡನ್ನೂ, ಹೊಟ್ಟೆಗೆ ಕೊಡುವಾಗ ಎಮೆಟಿನ್ ಬಿಸ್ಮತ್ ಅಯೊಡೈಡನ್ನೂ ಬಳಸುತ್ತಾರೆ. ಇದನ್ನು ಕೃತಕವಾಗಿ ಸಂಶ್ಲೇಷಿಸಲಾಗಿದೆ. (ಎಂ.ಆರ್.ಆರ್.)

**ಎಮೆನೋ, ಎಂ ಬಿ:** ದ್ರಾವಿಡ ಭಾಷಾವಿಜ್ಞಾನಕ್ಷೇತ್ರದಲ್ಲಿ ಪ್ರಸಿದ್ಧರಾದ ವಿದ್ವಾಂಸರಲ್ಲಿ ಎಮೆನೋ ಎಂ.ಬಿ. ಒಬ್ಬ. ಮರ್ರೆ ಬಾರ್ನಸನ್ ಎಮಿನೋ ಪೂರ್ಣನಾಮ. ಕಾಲ್ಡ್‌ವೆಲ್‌ನಿಂದ ಆರಂಭವಾದ ದ್ರಾವಿಡ ಭಾಷಾವಿಜ್ಞಾನದ ಅಧ್ಯಯನ ಎಲ್.ವಿ.ರಾಮಸ್ವಾಮಿ ಅಯ್ಯರ್, ಜೂಲ್ ಬ್ಲಾಕ್, ಬರೋ ಹಾಗೂ ಎಮಿನೋ–ಇವರಿಂದ ಸುಭದ್ರ ಬುನಾದಿಯನ್ನು ಪಡೆಯಿತು. ಗ್ರಾಂಥಿಕ ಭಾಷೆಗಳಾದ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಮಾತ್ರವಲ್ಲದೆ ಇದೇ ಪರಿವಾರಕ್ಕೆ ಸೇರಿದ ಹತ್ತಾರು ಲಿಪಿರಹಿತ ಆದಿವಾಸಿ ಭಾಷೆಗಳ ಕುರಿತು (ನೀಲಗಿರಿ, ಮಧ್ಯ ಹಾಗೂ ಪೂರ್ವ ಭಾರತದ ಕಾಡುಗಳು, ಬಲೂಚಿಸ್ತಾನ ಮುಂತಾದೆಡೆಗಳಲ್ಲಿ ಕಂಡುಬರುವುವು) ವೈಜ್ಞಾನಿಕ ಅಧ್ಯಯನ ಹಾಗೂ ಸಂಶೋಧನೆ ನಡೆಸಿ ಅವುಗಳ ವರ್ಗೀಕರಣ ಮಾಡಿ ಅದರ ಆಧಾರದ ಮೇಲೆ ಮೂಲ ದ್ರಾವಿಡ ಭಾಷೆಯ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುವಂತೆ ಮಾಡಿದ ಕೀರ್ತಿ ಎಮೆನೋ ಅವರಿಗೆ ಸಂದಿದೆ. ಟಿ. ಬರೋ ಅವರ ಜೊತೆಗೂಡಿ ಈತ ರಚಿಸಿದ 'ದ್ರಾವಿಡ ಭಾಷೆಗಳ ವ್ಯುತ್ಪತ್ತಿಪದಕೋಶ' ದ್ರಾವಿಡ ಭಾಷಾವಿಜ್ಞಾನದ ಪ್ರಮುಖ ಕೃತಿಯಾಗಿದ್ದು ಸಂಶೋಧಕರಿಗೆ ಮಾರ್ಗದರ್ಶಿ.

ಕೆನಡ ದೇಶದ ಲೂಸೆನ್ ಬರ್ಗ್‌ನಲ್ಲಿ ಫೆಬ್ರವರಿ 28, 1904 ರಲ್ಲಿ ಜನಿಸಿದ ಎಮೆನೋ ತಮ್ಮ ಸ್ವಂತ ಊರಿನಲ್ಲಿಯೇ ಪ್ರಾರಂಭಿಕ ಶಿಕ್ಷಣವನ್ನು ಮುಗಿಸಿ, 1923 ರಲ್ಲಿ ಹ್ಯಾಲಿಫಾಕ್ಸಿನ ಡಾಲ್‌ಹೌಸಿ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಸಾಹಿತ್ಯವನ್ನು ಐಚ್ಛಿಕವಾಗಿ ಕಲಿತು ಪದವೀಧರ ರಾದರು. ಮುಂದೆ ಮೂರು ವರ್ಷ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಸಾಹಿತ್ಯದಲ್ಲಿ ಉನ್ನತ ವ್ಯಾಸಂಗ ಪಡೆದರು. ತರುವಾಯ ನ್ಯೂಹೇವನ್ನಿನ ಯೇಲ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾಗಿ ಎಜರ್‌ಟನ್, ಸ್ಟರ್ಟವಂಟ್ ಪ್ರೊಕೋಸ್ಚ್ ಮುಂತಾದ ಪ್ರಸಿದ್ಧ ಭಾಷಾತಜ್ಞರ ಬಳಿ ಐದಾರು ವರ್ಷ ಸಂಸ್ಕೃತ, ಗ್ರೀಕ್, ಲ್ಯಾಟಿನ್ ಮುಂತಾದ ಭಾಷೆಗಳ ಕುರಿತು ಆಳವಾದ ಅಧ್ಯಯನ ನಡೆಸಿ ಇಂಡೋ–ಯುರೋಪಿಯನ್ ಭಾಷಾವಿಜ್ಞಾನ ದಲ್ಲಿ ಪಾಂಡಿತ್ಯವನ್ನು ಗಳಿಸಿ, ಸ್ನಾತಕೋತ್ತರ ಸಂಶೋಧನ ಪ್ರಶಸ್ತಿಯನ್ನು ಪಡೆದರು. ಸಂಶೋಧಕರಾಗಿರುವಾಗಲೇ ಲ್ಯಾಟಿನ್ ಭಾಷೆಯ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸು ತ್ತಿದ್ದರು. ಸಂಶೋಧನ ಪ್ರಶಸ್ತಿ ಪಡೆದ ಮೇಲೂ ಅದೇ ವಿಶ್ವವಿದ್ಯಾನಿಲಯದಲ್ಲಿ ಸಂಶೋಧಕರಾಗಿ ಕೆಲಸಮಾಡಿದರು. ವಿಶ್ವವಿದ್ಯಾನಿಲಯ, ಅಮೆರಿಕನ್ ಕೌನ್ಸಿಲ್ ಆಫ್ ಲರ್ನೆಡ್ ಸೊಸೈಟೀಸ್, ಅಮೆರಿಕನ್ ಫಿಲಸಾಫಿಕಲ್ ಸೊಸೈಟಿ ಮುಂತಾದ ಸಂಘಸಂಸ್ಥೆಗಳು ಇವರ ಸಂಶೋಧನಾ ಕಾರ್ಯಕ್ಕೆ ಪ್ರೋತ್ಸಾಹ ನೀಡಿದವು. ಇವರಿಗೆ ಅಮೆರಿಕದ ಭಾಷಾವಿಜ್ಞಾನಿಗಳಾದ ಪ್ರಮುಖ ಫ್ರಾಂಝ್ ಬೋಅಸ್, ಸಪೀರ್ ಮತ್ತು ಬ್ಲೂಮ್‌ಫೀಲ್ಡ್–ಅವರಲ್ಲಿ ಶಿಷ್ಯವೃತ್ತಿ ಲಭಿಸಿತು. 1938–39 ರಲ್ಲಿ ಯೇಲ್ ವಿಶ್ವವಿದ್ಯಾಲಯದ ಮಾನವವಿಜ್ಞಾನ ಮತ್ತು ಭಾಷಾವಿಜ್ಞಾನಗಳ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿ 1940 ನಂತರ ಬರ್ಕ್ಲಿಯಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಸಂಸ್ಕೃತ ಹಾಗೂ ಸಾಮಾನ್ಯ ಭಾಷಾವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾ ಗಿಯೂ ವಿಭಾಗದ ಅಧ್ಯಕ್ಷ ಹಾಗೂ ಪ್ರಧಾನ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದರು. ಅಲ್ಲದೆ ಈ ಮಧ್ಯೆ ತಮ್ಮ ಸಂಯೋಜಿತ ಕಾರ್ಯಗಳಿಗಾಗಿ ಭಾರತ, ವಿಯಟ್ನಾಂ, ಬ್ರಿಟನ್ ಮುಂತಾದ ದೇಶಗಳಿಗೂ ಭೇಟಿ ನೀಡಿದರಲ್ಲದೆ, ಅಮೆರಿಕದ ಭಾಷಾವಿಜ್ಞಾನ ಸಂಸ್ಥೆಯ ಅಧ್ಯಕ್ಷರಾಗಿಯೂ ಭಾರತದ ಭಾಷಾವಿಜ್ಞಾನದ ಬೇಸಗೆ ಶಾಲೆಗಳ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿರುವರು.

1931–32ರಲ್ಲಿ ಎಜರ್‌ಟನ್ ಮತ್ತು ಬ್ಲೂಮ್‌ಫೀಲ್ಡರೊಡಗೂಡಿ 'ವೇದಿಕ್ ವೇರಿಯಂಟ್ಸ್' ಅಥವಾ 'ವೇದಗಳ ಪಾಠಭೇದಗಳು' ಕೃತಿಯ ಮೂರನೇ ಭಾಗವನ್ನು ಎಮೆನೋ ಪ್ರಕಟಿಸಿದರು. ಅಮೆರಿಕದ ವಿವಿಧ ಗ್ರಂಥಾಲಯಗಳಿಗೆ ಭೇಟಿ ನೀಡಿ ಭಾರತೀಯ ಭಾಷೆಗಳಲ್ಲಿನ ಪ್ರಕಟಿತ ಕೃತಿ ಹಾಗೂ ಭಾಷಾಂತರ ಕೃತಿಗಳ ಪಟ್ಟಿಯನ್ನು ಸಂಗ್ರಹಿಸಿ ಪ್ರಕಟಿಸಿದರು.

1933ರಲ್ಲಿ ಅಜ್ಞಾತ ದ್ರಾವಿಡ ಭಾಷೆಗಳ ರೂಪ ನಿಷ್ಕರ್ಷೆ ಹಾಗೂ ವಿವರಣಾ ವ್ಯಾಕರಣಗಳನ್ನು ರಚಿಸುವ ಉದ್ದೇಶದಿಂದ ಭಾರತಕ್ಕೆ ಬಂದು ಸತತ ಮೂರು ವರ್ಷ ಕಾಲ ಇಲ್ಲಿನ ಗುಡ್ಡಗಾಡುಗಳಲ್ಲಿನ ಆದಿವಾಸಿಗಳ ಜತೆ ಅಲೆದಾಡಿ, ಭಾಷಾ ವಿಜ್ಞಾನಿಗಳ ಕಣ್ಣಿಗೆ ಇನ್ನೂ ಅಗೋಚರವಾಗಿದ್ದ ತೊದ, ಕೋತ, ಕೊಡವ, ಕೊಲಾಮಿ ಮುಂತಾದ ಭಾಷೆಗಳ ಆಡುನುಡಿಗಳನ್ನು ಸಂಗ್ರಹಿಸಿದರು. ಈ ಮಹತ್ವದ ಸಂಶೋಧನೆಯ ಫಲವಾಗಿ 'ಕೋತ ಟೆಕ್ಸ್ಟ್ಸ್' ಆವರಣದಲ್ಲಿ ಎರಲಿ (ಕೋತ್ ಪಠ್ಯಗಳು) 'ನಾಲ್ಕು ಸಂಪುಟಗಳು', ಕೊಲಾಮಿ–ಒಂದು ದ್ರಾವಿಡ ಭಾಷಾ ಕೃತಿ ಹಾಗೂ ಅನೇಕ ಸಂಶೋಧನಾ ಲೇಖನಗಳು ಪ್ರಕಟವಾದವು. ದ್ರಾವಿಡ ಭಾಷಾವಿಜ್ಞಾನಕ್ಕೆ ಇವರ ಮತ್ತೊಂದು ಅಮೂಲ್ಯ ಕೊಡುಗೆಯೆಂದರೆ ಆಕ್ಸ್‌ಫರ್ಡಿನ ಟಿ. ಬರೋ ಅವರ ಜತೆಗೆ 1960ರಲ್ಲಿ ಪ್ರಕಟಿಸಿದ ಡ್ರವಿಡಿಯನ್ ಎಟಿಮೆಲಾಜಿಕಲ್ ಡಿಕ್ಷನರಿ ಅಥವಾ ದ್ರಾವಿಡಭಾಷಾ ವ್ಯುತ್ಪತ್ತಿಪದಕೋಶ ಪ್ರಕಟಣೆ. ಆರು ನೂರು ಪುಟಗಳುಳ್ಳ ಈ ಹೊತ್ತಿಗೆಯಲ್ಲಿ ದ್ರಾವಿಡ ಭಾಷೆಗಳಲ್ಲಿನ ನಾಲ್ಕೂವರೆ ಸಾವಿರ ಮೂಲಧಾತು ಮತ್ತು ಸುಮಾರು ಇಪ್ಪತ್ತು ಸೋದರಿ ಭಾಷೆಗಳಲ್ಲಿನ ಧಾತುಗಳಲ್ಲಿ ನಡೆದ ಪರಿವರ್ತನೆಗಳ ಸವಿಸ್ತಾರ ನಿರೂಪಣೆ ಇದೆ. ಗ್ರಾಂಥಿಕ ಭಾಷೆಗಳ ಪದಗಳನ್ನು ಮಾತ್ರವಲ್ಲದೆ ಎಮೆನೋ ಸಂಗ್ರಹಿಸಿದ ತೊದ, ಕೋತ, ಕೊಡವ, ಕೊಲಾಮಿ ಮುಂತಾದ ಭಾಷೆಗಳ ಪದಸಂಪತ್ತನ್ನು ಬರೋ ಸಂಗ್ರಹಿಸಿದರು. ಪರ್ಜಿ, ನಾಯಕಿ, ಗೋಂಡಿ, ಗದಬ ಇತ್ಯಾದಿ ಮಧ್ಯ ಹಾಗೂ ಉತ್ತರ ದ್ರಾವಿಡ ಭಾಷೆಗಳ ಪದಸಂಪತ್ತೂ ಇಲ್ಲಿ ಸಂಗ್ರಹವಾಗಿದ್ದು, ದ್ರಾವಿಡ ಭಾಷೆಗಳ ಪರಸ್ಪರ ಸಂಬಂಧವನ್ನು ಕಲ್ಪಿಸಿಕೊಳ್ಳಲು ಸಹಾಯಕವಾಗಿದೆ. ಈ ಕಾರ್ಯಕ್ಕಾಗಿ ಈ ಇಬ್ಬರು ವಿದ್ವಾಂಸರೂ ಭಾರತದರ್ಶನವನ್ನು ಮಾಡಿದ್ದಲ್ಲದೇ, ಬರೋ ಬರ್ಕ್ಲಿಗೂ ಎಮಿನೋ ಆಕ್ಸ್‌ಫರ್ಡಿಗೂ ಹೋಗಿ ಕೆಲವು ಕಾಲ ಜತೆಯಾಗಿ ಅಧ್ಯಯನ ಮಾಡಿ, ಕೆಲವು ಕಾಲ ಪತ್ರವ್ಯವಹಾರದ ಮೂಲಕ ಸಂಪಾದನ ಕಾರ್ಯ ನಡೆಸಿದರು. ಸುಮಾರು ಹತ್ತು ವರ್ಷಗಳ ಅವಿರತ ಶ್ರಮದಿಂದ ದ್ರಾವಿಡ ಭಾಷಾವಿಜ್ಞಾನಕ್ಕೆ ಈ ಕಾಣಿಕೆಯನ್ನು ಅರ್ಪಿಸಿದ್ದಾರೆ. ಇದಾದ ಒಂದು ವರ್ಷದೊಳಗೆ ದ್ರಾವಿಡ ಭಾಷೆಗಳು ಎರವಲು ಪಡೆದ ಆರ್ಯ ಪದಗಳ ಕೃತಿಯನ್ನು ಟಿ. ಬರೋ ಅವರ ಜತೆ ಎಮೆನೋ ಪ್ರಕಟಿಸಿದರು. ಅದೇ ವರ್ಷ ಬ್ರಾಹುಈ ಮತ್ತು 'ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ' ಕೃತಿಗಳು ಪ್ರಕಟಗೊಂಡವು. ಎಮಿನೋ ಅವರ ಉತ್ತಮ ಕೃತಿಗಳು. ಇತರ ಸೋದರಿ ಭಾಷೆಗಳಿಗಿಂತ ಭೌಗೋಳಿಕವಾಗಿ ದೂರದಲ್ಲಿರುವ ಬಲೂಚಿಸ್ತಾನದಲ್ಲಿ ಪ್ರಚಾರದಲ್ಲಿರುವ ಬ್ರಾಹುಈ ಭಾಷೆಯ ಈ ಅಧ್ಯಯನ ದ್ರಾವಿಡ ಭಾಷಾವಿಜ್ಞಾನದ ಸಂಶೋಧನೆಯಲ್ಲಿ ಹೊಸದೊಂದು ಮೈಲಿಗಲ್ಲು. ಇದಲ್ಲದೆ ದ್ರಾವಿಡ ಭಾಷೆ, ವಂಶ, ಜನಪದ ಸಾಹಿತ್ಯ ಹಾಗೂ ಸಂಸ್ಕೃತ ಭಾಷೆಗೆ ಸಂಬಂಧಪಟ್ಟ ನೂರಾರು ಲೇಖನಗಳನ್ನು ಇವರು ಪ್ರಕಟಿಸಿದ್ದಾರೆ. ಅಣ್ಣಾಮಲೈ ವಿಶ್ವವಿದ್ಯಾಲಯ ಪ್ರಕಟಿಸಿದ ಇವರ ಲೇಖನಗಳ ಸಂಗ್ರಹದಲ್ಲಿ ತೊದ, ಕೋತ ಮುಂತಾದ ಭಾಷೆಗಳನ್ನು ಕುರಿತ ಲೇಖನಗಳಲ್ಲದೆ 'ಭಾರತ–ಒಂದು ಭಾಷಾಕ್ಷೇತ್ರ' (ಇಂಡಿಯ–ಆ್ಯಸ್ ಎ ಲಿಂಗ್ವಿಸ್ಟಿಕ್ ಏರಿಯ), 'ಭಾರತ ಮತ್ತು ಭಾಷಾವಿಜ್ಞಾನ', (ಇಂಡಿಯ ಅಂಡ್ ಲಿಂಗ್ವಿಸ್ಟಿಕ್ಸ್), 'ಭಾರತದ ಭಾಷೆಗಳ ಪೂರ್ವ ಇತಿಹಾಸ' (ಲಿಂಗ್ವಿಸ್ಟಿಕ್ ಪ್ರಿ–ಹಿಸ್ಟರಿ–ಆಫ್ ಇಂಡಿಯ), 'ದ್ರಾವಿಡ ಭಾಷೆಗಳ ಸಂಬಂಧೀ ಪದಗಳು' (ಡ್ರವಿಡಿಯನ್ ಕಿನ್‌ಷಿಪ್ ಟರ್ಮ್ಸ್)–ಮುಂತಾದ ಲೇಖನಗಳಿವೆ.

ಎಮೆನೋ ಅವರ ವಿದ್ವತ್ತಿನ ವ್ಯಾಪ್ತಿ ಸಂಸ್ಕೃತ ಹಾಗೂ ದ್ರಾವಿಡ ಭಾಷೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ವಿಯಟ್ನಮೀಸ್ ಭಾಷೆಯ ಅಧ್ಯಯನ ಮಾಡಿ ಅದರಲ್ಲಿ ಸೈನಿಕರಿಗೆ ಬೇಕಾದ ಬೋಧನಾಸಾಮಗ್ರಿಗಳನ್ನೂ ಇವರು ತಯಾರಿಸಿದ್ದಾರೆ. ಅಮೆರಿಕದ ಆದಿವಾಸಿಗಳ ಭಾಷಾಪರಿವೀಕ್ಷಣೆಯನ್ನೂ ನಡೆಸಿರುವರು. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೋಧನೆ, ಮಾರ್ಗದರ್ಶನ ಮಾಡುವುದರ ಜತೆಗೆ ಸಂಶೋಧನಾ ಕ್ಷೇತ್ರಕ್ಕೂ ಸಾಕಷ್ಟು ಕಾಣಿಕೆಯನ್ನಿತ್ತು ಆಚಾರ್ಯಶ್ರೇಷ್ಠರೆಂದೇ ಪರಿಗಣಿಸಲ್ಪಟ್ಟಿರುವರು. (ಯು.ಪಿ.ಯು.)

**ಎಮ್‌ಡನ್:** ವಾಯವ್ಯ ಜರ್ಮನಿಯ ಹಾನೋವರ್ ಪ್ರದೇಶದ ಒಂದು ಪಟ್ಟಣ ಮತ್ತು ರೇವು ಪಟ್ಟಣ ಜನಸಂಖ್ಯೆ 51,692 (2006). ಇದ್ರ ವಿಸ್ತೀರ್ಣ 112.33 ಚ.ಕಿ.ಮೀ. ಎಮ್ಸ್ ನದೀಮುಖದಲ್ಲಿ ಮತ್ತು ಡೋರ್ಟ್‌ಮಂಟ್–ಎಮ್ಸ್ ಕಾಲುವೆಯ ಮೇಲಿದೆ. ಹ್ಯಾಂಬರ್ಗ್ ಮತ್ತು ಬ್ರಿಮೆನ್‌ಗಳಲ್ಲಿ ಬಿಟ್ಟರೆ ಇದೇ ಉತ್ತರ ಸಮುದ್ರದಲ್ಲಿ ಜರ್ಮನಿಯಲ್ಲಿನ ಅತ್ಯಂತ ದೊಡ್ಡ ಬಂದರು. ದೊಡ್ಡ ದೊಡ್ಡ ಹಡಗುಕಟ್ಟೆಗಳು ಇಲ್ಲಿವೆ. ಹೆರಿಂಗ್ ಎಂಬ ಒಂದು ಜಾತಿಯ ಮೀನಿನ ಮೀನುಗಾರಿಕೆ ಇಲ್ಲಿನ ವೈಶಿಷ್ಟ್ಯ. ಸಾಗಾಣಿಕೆಯ ವ್ಯಾಪಾರ (ಟ್ರಾನ್ಸಿಟ್ ಟ್ರೇಡ್) ಇಲ್ಲಿ ಅಧಿಕವಾಗಿ ನಡೆಯುತ್ತದೆ. ಹತ್ತನೆಯ ಶತಮಾನದಿಂದಲೂ ಇದರ ಬಗ್ಗೆ ದಾಖಲೆಗಳಿವೆ. 16ನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಗೆ ಏರಿತು. ಇದು ಮೊದಲು ಪೂರ್ವ ಫ್ರಿಸ್‌ಲೆಂಡಿಗೆ ಸೇರಿದ್ದು, 1744ರಲ್ಲಿ ಪ್ರಷ್ಯದ, 1815ರಲ್ಲಿ ಹಾನೋವರ್‌ನ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿತು. ಇಲ್ಲಿನ ಚರಿತ್ರಾರ್ಹವಾದ ಭವನಗಳೆಲ್ಲ ಎರಡನೆಯ ಮಹಾಯುದ್ಧಕಾಲದಲ್ಲಿ ನಾಶಗೊಂಡು, ಬಂದರು ಮಾತ್ರ ಉಳಿಯಿತು. *

**ಎಮ್ಮೆ:** ಸೀಳುಗೊರಸುಳ್ಳ, ಮೆಲಕು ಹಾಕುವ, ಸಸ್ತನಿಗಳಾದ ಆರ್ಟಿಯೊಡ್ಯಾಕ್ಟೈಲ ವರ್ಗಕ್ಕೆ ಸೇರಿದ ಪ್ರಾಣಿ. ಏಷ್ಯದ ಎಮ್ಮೆಯ ವೈಜ್ಞಾನಿಕ ಹೆಸರು ಬ್ಯುಬೆಲಸ್ ಬ್ಯುಬಾಲಿಸ್. ಇದರ ವ್ಯಾಪ್ತಿ ಈಜಿಪ್ಟಿನಿಂದ ಫಿಲಿಪೀನ್ಸ್‌ವರೆಗೆ. ಎಮ್ಮೆಗಳ ಮೂಲ ವಾಸಸ್ಥಾನ ಭಾರತ ಮತ್ತು ಆಫ್ರಿಕದ ಉತ್ತರ ಪ್ರದೇಶಗಳು. ಸುಮಾರು ಪ್ರ. ಶ. 600ರಲ್ಲಿ ಮೊಟ್ಟಮೊದಲು ಇಟಲಿ ದೇಶಕ್ಕೆ ಎಮ್ಮೆಗಳು ರವಾನೆಯಾದವು. ಈಗ ಫ್ರಾನ್ಸ್, ಹಂಗರಿ, ಸ್ಪೇನ್ ದೇಶಗಳಲ್ಲಿ ನೆಲೆಸಿವೆ. ಈಗಲೂ ಕಾಡೆಮ್ಮೆಗಳು ಭಾರತ ದೇಶದ ಪಶ್ಚಿಮ ಘಟ್ಟಗಳು, ಕೇರಳ, ಬಂಗಾಳ, ಅಸ್ಸಾಂ, ಒರಿಸ್ಸ, ಆಂಧ್ರಪ್ರದೇಶ, ನೇಪಾಳಗಳಲ್ಲಿ ಹುಲ್ಲು ಎತ್ತರವಾಗಿ ಬೆಳೆಯುವ

ಕಾಡುಪ್ರದೇಶಗಳಲ್ಲಿ ವಾಸಿಸುತ್ತಿವೆ. ಸಿಂಹಳ ದ್ವೀಪದಲ್ಲಿ ಪಳಗಿದ ಎಮ್ಮೆಗಳು ಪುನಃ ಕಾಡನ್ನು ಸೇರಿ ಕಾಡೆಮ್ಮೆಗಳಾಗಿ ಪರಿವರ್ತನೆಗೊಂಡಿವೆ. ಸಾವಿರಾರು ವರ್ಷಗಳಿಂದಲೂ ಮನುಷ್ಯನ ಜೊತೆಯಲ್ಲಿ ಎಮ್ಮೆಗಳು ಸಾಕುಪ್ರಾಣಿಗಳಾಗಿ ಜೀವಿಸುತ್ತಿವೆ.

ಎಮ್ಮೆಯ ಶರೀರ ಸ್ಥೂಲ, ಸುಮಾರು 2.5 ರಿಂದ 3 ಮೀಟರಿನಷ್ಟು ಉದ್ದ. 1.5 ರಿಂದ 1.8 ಮೀ. ಎತ್ತರ ಭಾರ 700 ರಿಂದ 800 ಕಿ. ಗ್ರಾಂ. ಚರ್ಮ ದಪ್ಪ, ಕೂದಲು ವಿರಳ. ಮೈ ಬಣ್ಣ ಬೂದು ಅಥವಾ ಕಪ್ಪು. 0.5 ರಿಂದ 1ಮೀ ಉದ್ದವಾದ ಬಾಲದ ತುದಿಯಲ್ಲಿ ಬಿರುಸಾದ ಕೂದಲಿನ ಗೊಂಡೆ ಇದೆ. ತಲೆಯ ಮೇಲಿನ ಕೊಂಬುಗಳು ಬುಡದಲ್ಲಿ ಅಗಲವಾಗಿದ್ದು ಹಿಮ್ಮೊಗವಾಗಿ ಒಳಗಡೆ ಬಾಗಿರುತ್ತವೆ. ಅಡ್ಡಸೀಳಿಕೆಯಲ್ಲಿ ಇವು

ಎಮ್ಮೆಗಳ ಹಿಂಡು

ತ್ರಿಕೋನಾಕಾರವಾಗಿವೆ. ಕೋಣದ ಕೊಂಬುಗಳು ಎಮ್ಮೆಯ ಕೊಂಬುಗಳಿಗಿಂತ ಭಾರವಾಗಿವೆ. ಕೊಂಬುಗಳ ಮೇಲೆ ಅಡ್ಡವಾದ ಸುಕ್ಕುಗಳಿವೆ. ಕಾಲಿನ ಗೊರಸುಗಳು ಪಸರಿಸಿರುವುದರಿಂದ ಎಮ್ಮೆಗಳು ಕೆಸರಿನಲ್ಲಿ ಸರಾಗವಾಗಿ ಓಡಾಡಬಲ್ಲವು. ನೀರಿನಲ್ಲಿ ನೆನೆಯುವುದು ಮತ್ತು ಕೆಸರಿನಲ್ಲಿ ಹೊರಳಾಡುವುದೆಂದರೆ ಇವುಗಳಿಗೆ ತುಂಬ ಇಷ್ಟ ಕೆಸರು ಮೈಗೆ ಅಂಟಿಕೊಳ್ಳುವುದ ರಿಂದ ನೊಣವೇ ಮುಂತಾದ ಕೀಟಗಳ ಬಾಧೆ ತಪ್ಪುತ್ತದೆ.

ಹುಲ್ಲು ಎಮ್ಮೆಗಳ ಮುಖ್ಯ ಆಹಾರ. ಸೊಪ್ಪು, ಎಲೆ ಮುಂತಾದವೂ ಆಗಬಹುದು. ಮೆಲಕು ಹಾಕಿ ಅಗಿದು ತಿನ್ನುವುದಕ್ಕೆ ಅನುಕೂಲವಾಗುವಂತೆ ಜಠರದಲ್ಲಿ ನಾಲ್ಕು ಭಾಗಗಳಿವೆ. ಎಮ್ಮೆಗಳು ಸಾಮಾನ್ಯವಾಗಿ ಆಹಾರವನ್ನು ಬೆಳಿಗ್ಗೆ, ಸಾಯಂಕಾಲ ಅಥವಾ ರಾತ್ರಿ ಮೇದು ಹಗಲಿನ ಬಹುವೇಳೆ ಮೆಲಕು ಹಾಕುತ್ತ, ನಿದ್ರಿಸುತ್ತ ಕಾಲಕಳೆಯುತ್ತವೆ.

ಋತು ಕಾಲದಲ್ಲಿ ಒಂದು ಕೋಣ ಹಲವಾರು ಎಮ್ಮೆಗಳಿಂದ ಕೂಡಿ ಒಂದು ಸಣ್ಣ ಸಂಸಾರವನ್ನು ಕಟ್ಟುತ್ತದೆ. ಸುಮಾರು ಹತ್ತು ತಿಂಗಳ ಅನಂತರ ಒಂದು ಅಥವಾ ಎರಡು ಕರುಗಳು ಹುಟ್ಟುತ್ತವೆ. ಹುಟ್ಟಿದ ಸ್ವಲ್ಪ ಸಮಯದಲ್ಲೇ ಕರು ತಾಯನ್ನು ಹಿಂಬಾಲಿಸುತ್ತದೆ. ಎಮ್ಮೆಯ ಜೀವಿತ ಅವಧಿ ಸುಮಾರು ಹದಿನೆಂಟು ವರ್ಷಗಳು.

ಎಮ್ಮೆಗಳು ಭಾರವಾದ ಸಾಮಾನುಗಳನ್ನು ಹೊರುತ್ತವೆ, ನೇಗಿಲು ಎಳೆಯುತ್ತವೆ. ಈ ಶ್ರಮದ ಕೆಲಸಕ್ಕಾಗಿಯೂ ತೊಗಲು, ಹಾಲು, ಮಾಂಸಗಳಿಗಾಗಿಯೂ ಇವನ್ನು ಸಾಕುತ್ತಾರೆ. ತೊಗಲಿನಿಂದ ಚರ್ಮದ ಪದಾರ್ಥಗಳನ್ನೂ ಕೊಂಬಿನಿಂದ ಬಾಚಣಿಗೆ ಮೊದಲಾದುವನ್ನೂ ಮಾಡುತ್ತಾರೆ. ಜೌಗು ಪ್ರದೇಶದಲ್ಲಿ ಎತ್ತುಗಳೂ ಒಗ್ಗದ ಕಾರಣ, ಎಮ್ಮೆಗಳು ವ್ಯವಸಾಯಕ್ಕೆ ಮುಖ್ಯವಾಗಿ ಬತ್ತವನ್ನು ಬೆಳೆಯುವ ಗದ್ದೆಗಳಲ್ಲಿ ಬಳಕೆಗೆ ಬಂದಿವೆ. ಇಂಡೋನೇಷ್ಯ, ಮಲಯ, ಚೀನಾ ದೇಶಗಳಲ್ಲಿ ಲಕ್ಷಾಂತರ ಎಮ್ಮೆಗಳು ಗದ್ದೆ ಕೆಲಸಗಳಿಗೆ ಒದಗಿವೆ.

ಹಾಲುಕರೆಯುವ ಎಮ್ಮೆಗಳಿಗೆ ತಮ್ಮ ಕರುಗಳ ಮೇಲೆ ತುಂಬ ಮಮತೆ; ತಮ್ಮನ್ನು ಸಾಕುವ ಯಜಮಾನರನ್ನು ಚೆನ್ನಾಗಿ ನೆನೆಪಿಟ್ಟುಕೊಳ್ಳುತ್ತವೆ; ಹಾಲುಕರೆಯುವ ಆಳು ಬದಲಾದಾಗ, ಆಹಾರದಲ್ಲಿ ಕ್ರಮರಾಹಿತ್ಯ ತಲೆದೋರಿದರೆ, ಪಕ್ಕದಲ್ಲಿ ವಾಸಿಸುವ ಜೊತೆಯ ಪ್ರಾಣಿ ಕಾಣದಾದಾಗ, ಕರೆಯುವ ಎಮ್ಮೆಯ ಹಾಲು ಇದ್ದಕ್ಕಿದ್ದ ಹಾಗೆ ಕಡಿಮೆಯಾಗುವುದುಂಟು; ಅದಕ್ಕೆ ಮೈಸ್ವಸ್ಥವಿಲ್ಲದಾಗಲೂ ಈ ಪರಿಣಾಮವಾಗುವುದುಂಟು; ಈ ಎಲ್ಲ ಕಾರಣಗಳಿಂದ ಎಮ್ಮೆಯ ಸಾಕಾಣಿಕೆ ತುಂಬ ಸೂಕ್ಷ್ಮ ರೀತಿಯ ಕಸಬೆಂದು ಹೇಳುವುದುಂಟು.

ಆಫ್ರಿಕದ ಎಮ್ಮೆಗಳು ಏಷ್ಯದ ಎಮ್ಮೆಗಳಿಗಿಂತ ಗಾತ್ರದಲ್ಲಿ ದೊಡ್ಡವು. ಹುಲ್ಲು ಮತ್ತು ಜೊಂಡು ಎತ್ತರವಾಗಿ ಬೆಳೆದು, ಅಡಗಿಕೊಳ್ಳಲು ಮರೆಯನ್ನು ಕೊಡುವಂಥ ಮತ್ತು ನೀರಿನ ವಸತಿ ದೊರಕುವಂಥ ಸಹಾರ ಮರುಭೂಮಿಯ ದಕ್ಷಿಣದಲ್ಲಿರುವ ಕಾಡುಪ್ರದೇಶಗಳಲ್ಲಿ ಇವು ಹಿಂಡುಹಿಂಡಾಗಿ ಸ್ವೇಚ್ಛೆಯಾಗಿ ವಾಸಿಸುತ್ತವೆ. ಆಫ್ರಿಕದ ಎಮ್ಮೆಗಳನ್ನು ಪಳಗಿಸಲು ಸಾಧ್ಯವಾಗಿಲ್ಲ. ಒಂದು ಹಿಂಡಿನಲ್ಲಿ ಹತ್ತಾರು ಪ್ರಾಣಿಗಳಿಂದ ಹತ್ತಿಪ್ಪತ್ತು, ನೂರಾರು ಪ್ರಾಣಿಗಳಿರ ಬಹುದು. ವಯಸ್ಸಾದ ಹೆಣ್ಣು ಎಮ್ಮೆ ಹಿಂಡಿನ ಮುಂದಾಳು. ಬೇಟೆಗೀಡಾಗಿರುವ ಅತ್ಯಂತ ಭಾರಿ ಮತ್ತು ಭಯಂಕರ ಪ್ರಾಣಿಗಳಲ್ಲಿ ಆಫ್ರಿಕದ ಕಾಡೆಮ್ಮೆ ಪ್ರಸಿದ್ಧವಾಗಿದೆ. ಇದರ ಬೇಟೆ ಬಹಳ ಪ್ರಯಾಸಕರ ಮತ್ತು ಅಪಾಯಕಾರಿ. ಗಾಯಹೊಂದಿದ ಅಥವಾ ರೇಗಿದ ಕಾಡೆಮ್ಮೆ ಯಾವ ಸೂಚನೆಯನ್ನೂ ಕೊಡದೆ ಹೊಂಚು ಹಾಕಿ ಬೇಟೆಗಾರರ ಮೈಮೇಲೆ ರಭಸದಿಂದ ನುಗ್ಗಿ ಮೇಲೆರಗುತ್ತದೆ. ಆಕ್ರಮಣ ಫಲಪ್ರದವಾಗದಿದ್ದಲ್ಲಿ ಬೇಟೆಗಾರರನ್ನು ಹಿಂಬಾಲಿಸಿ ವೈರ ಸಾಧಿಸಲು ಪ್ರಯತ್ನಿಸುತ್ತದೆ. ಇದು ಗಂಟೆಗೆ 57 ಕಿಮೀ. ವೇಗವಾಗಿ ಓಡಬಲ್ಲದು. ಮನುಷ್ಯನನ್ನು ಬಿಟ್ಟರೆ ಸಿಂಹವೊಂದೇ ತನ್ನ ಆಹಾರಕ್ಕಾಗಿ ಇದರ ಬೇಟೆಯಾಡುತ್ತದೆ.

ಸೆಲಿಬಸ್ ದ್ವೀಪಗಳಲ್ಲಿ ಕುಳ್ಳು ಜಾತಿಯ ಎಮ್ಮೆಗಳಿವೆ. ನೀರಿನ ವಸತಿಯಿರುವ ಮತ್ತು ಬಿದಿರು ಮೆಳೆಗಳಿರುವ ಕಾಡು ಪ್ರದೇಶದಲ್ಲಿ ಇವು ವಾಸಿಸುತ್ತವೆ. ಇವುಗಳ ದೇಹ ಗುಂಡುಗುಂಡಾಗಿದ್ದು, ಕಾಲು, ಬಾಲ ಕೊಂಬುಗಳು ಮೊಟಕಾಗಿರುತ್ತವೆ. ಚರ್ಮ, ಕೊಂಬು ಮತ್ತು ಮಾಂಸಕ್ಕಾಗಿ ಇವುಗಳ ಬೇಟೆ ಅತಿಯಾಗಿ ನಡೆಯುತ್ತಿರುವುದರಿಂದ, ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ. ನಾಗರಿಕತೆ ಮತ್ತು ಜನರ ಒತ್ತಡ ಹೆಚ್ಚುತ್ತ ಹೋದಂತೆ ಇವುಗಳ ಸಂಖ್ಯೆ ಕಡಿಮೆಯಾಗುತ್ತ ಬಂದಂತೆ ಕಾಣುತ್ತದೆ. ಉತ್ತರ ಅಮೆರಿಕದಲ್ಲಿ ಐರೋಪ್ಯರು ವಲಸೆ ಹೋದಾಗ ಸುಮಾರು 6 ಕೋಟಿ ಕಾಡೆಮ್ಮೆಗಳು ಇದ್ದುದಾಗಿಯೂ ವಲಸೆ ಹೋದ ಐರೋಪ್ಯರು ಈ ಎಮ್ಮೆಗಳನ್ನು ನಾಶಮಾಡಿದರೆಂದೂ ಹೇಳಲಾಗಿದೆ. ಭಾರತದಲ್ಲಿ ಎಮ್ಮೆಗಳನ್ನು ಅನೇಕ ಶತಮಾನಗಳಿಂದ ಪಳಗಿಸಿ ಸಾಕುತ್ತಿದ್ದಾರೆ. ಉತ್ಪತ್ತಿಯಾಗುವ ಹಾಲಿನ ಅರ್ಧ ಭಾಗದಷ್ಟು ಎಮ್ಮೆಗಳಿಂದ ಬರುತ್ತದೆ. ಪರದೇಶದ ಎಮ್ಮೆಗಳಿಗಿಂತ ಭಾರತ ಮತ್ತು ಪಾಕಿಸ್ತಾನದ ಎಮ್ಮೆಗಳು ಉತ್ಕೃಷ್ಟವಾದವು.

ಭಾರತದ ಎಮ್ಮೆಗಳಲ್ಲಿ ಮುಖ್ಯವಾಗಿ ಎಂಟು ಜಾತಿಗಳಿವೆ. ಈ ಎಲ್ಲ ಜಾತಿಗಳೂ ಹಾಲಿಗೆ ಹೆಸರಾಗಿವೆ. ಇವುಗಳಲ್ಲಿ ಮುರ್ರಾ ಜಾತಿ ಎಮ್ಮೆ ಎಲ್ಲ ಜಾತಿಗಿಂತ ಉತ್ಕೃಷ್ಟವಾದದ್ದು.

ಮುರ್ರಾ ಜಾತಿಯ ಎಮ್ಮೆಗಳು ಪಂಜಾಬ್ ರಾಜ್ಯದ ರೋಹಕ್, ಹಿಸ್ಸಾರ್, ಗುರ್‌ಗಾಂವ್ ಮತ್ತು ಕಾರ್ನಾಲ್ ಜಿಲ್ಲೆಗಳಲ್ಲಿ ಹೇರಳವಾಗಿವೆ. ಈ ಎಮ್ಮೆಗೆ ದಪ್ಪನೆಯ ಶರೀರ, ಸಣ್ಣತಲೆ, ಗುಂಗುರು ಸುಳಿಯಾಗಿರುವ ಮೋಟು ಕೋಡು, ಮೋಟಾದ ಕಾಲುಗಳು ಮತ್ತು ನೀಳವಾದ ಬಾಲ ಇವೆ. ಇವು ಒಂದು ಸೂಲಿನಲ್ಲಿ 3,000 ರಿಂದ 4,500 ಪೌಂಡು ಹಾಲು ಕೊಡುತ್ತವೆ.

ನೀಲಿ ರವಿ ಜಾತಿ ಎಮ್ಮೆಗಳು ಆಕಾರದಲ್ಲಿ ಮುರ್ರಾ ಜಾತಿಯ ಹಾಗೇ ಇವೆ. ಆದರೆ ಹಣೆ, ಕಾಲು ಗೊರಸು, ಬಾಲಗಳ ಮೇಲೆ ಬಿಳಿ ಕೂದಲಿದೆ. ಕಣ್ಣುಗಳು ಬೆಕ್ಕಿನ ಕಣ್ಣಿನಂತೆ. 250 ದಿವಸದ ಒಂದು ಸೂಲಿನ ಅವಧಿಯಲ್ಲಿ 3,000 ರಿಂದ 3,500 ಪೌಂಡು ಹಾಲು ಕೊಡುತ್ತವೆ. ಈ ಜಾತಿಯ ಎಮ್ಮೆಯ ವಾಸಸ್ಥಾನ ಪಾಕಿಸ್ತಾನದ ಮಾಂಟಿಗೋಮಾರಿ ಜಿಲ್ಲೆ ಮತ್ತು ಪಂಜಾಬಿನ ಫಿರೋಜ್‌ಪುರ ಜಿಲ್ಲೆ.

ಸುರ್ತಿ ಜಾತಿಯ ಎಮ್ಮೆಗಳು ಗುಜರಾತಿನ ಸಾಬರಮತಿ ನದಿಯ ದಡದಲ್ಲಿವೆ. ಕೋಡುಗಳು ಉದ್ದವಾಗಿ ಕುಡುಗೋಲಿನ ಆಕಾರದಲ್ಲಿ ಬೆನ್ನಿನಮೇಲೆ ಬಾಗಿ ನಿಂತಿರುತ್ತವೆ. ಹಣೆಯ ಮೇಲೆ ಮತ್ತು ಗಂಟಲ ಕೆಳಗೆ ಬಿಳಿ ಕೂದಲಿದೆ. ಒಂದು ಸೂಲಿಗೆ 3,500 ರಿಂದ 5,000 ಪೌಂಡು ಹಾಲು ಕರೆಯುತ್ತವೆ. ಬೆಣ್ಣೆಯ ಅಂಶ ಶೇ. 7.5.

ಜಾಫರಬಾದಿ ಜಾತಿಯ ಎಮ್ಮೆಗಳು ಕಾಠೇವಾಡದ ಭಾವನಗರದಲ್ಲಿ ಹೇರಳವಾಗಿವೆ. ಹಣೆ ಮತ್ತು ಕಾಲಿನ ಮೇಲೆ ಬಿಳಿ ಮಚ್ಚೆಗಳಿವೆ. ಕೋಡು ಸುಮಾರು ಒಂದು ಮೊಳದುದ್ದವಿದೆ. ದಿನವೊಂದಕ್ಕೆ 30 ರಿಂದ 40 ಪೌಂಡು ಹಾಲು ಕರೆಯುತ್ತವೆ. ಮೆಹಸಾನ ಜಾತಿಯ ಎಮ್ಮೆಗಳ ವಾಸಸ್ಥಾನ ಹಿಂದಿನ ಬರೋಡ ಸಂಸ್ಥಾನ. ಈ ಎಮ್ಮೆಗಳಲ್ಲಿ ಮುರ್ರಾ ಮತ್ತು ಸುರ್ತಿ ಲಕ್ಷಣಗಳೆರಡೂ ಕಾಣುತ್ತವೆ. ದಿನವೊಂದಕ್ಕೆ ಸುಮಾರು 25 ರಿಂದ 30 ಪೌಂಡು ಹಾಲುಕೊಡುತ್ತವೆ. ನಾಗಪುರಿ ಜಾತಿಯ ಎಮ್ಮೆಗಳು ನಾಗಪುರ, ವಾರ್ಧ ಮತ್ತು ಬೀರಾರ್ ಜಿಲ್ಲೆಗಳಲ್ಲಿ ಇವೆ. ಈ ಜಾತಿಯ ಕೋಣಗಳು ಕೆಲಸಕ್ಕೆ ಹೆಸರುವಾಸಿಯಾಗಿವೆ. ಎಮ್ಮೆಗಳು ದಿವಸಕ್ಕೆ ಸುಮಾರು 12 ರಿಂದ 16 ಪೌಂಡು ಹಾಲು ಕರೆಯುತ್ತವೆ. ಕೋಡು ಸುಮಾರು ಒಂದು ಗಜ ಉದ್ದವಿದ್ದು, ಬೆನ್ನಿನಮೇಲೆ ಬಾಗಿದೆ.

ಪರ್ಲಾಕಿಮಿಡಿ ಜಾತಿಯ ಎಮ್ಮೆಗಳು ಒರಿಸ್ಸ ರಾಜ್ಯದ ಪರ್ಲಾಕಿಮಿಡಿ ಸಂಸ್ಥಾನದಲ್ಲಿವೆ. ಈ ಜಾತಿಯ ಕೋಣಗಳು ಕೆಸರುಗದ್ದೆಯ ಉಳುಮೆಗೆ ಹೆಸರುವಾಸಿಯಾಗಿವೆ. ಎಮ್ಮೆಯ ಬಣ್ಣ ಕಂದು, ಕೋಡು ನೀಳವಾಗಿದೆ. ದಿನವೊಂದಕ್ಕೆ ಸರಾಸರಿ 10 ಪೌಂಡು ಹಾಲು ಕೊಡುತ್ತದೆ.

ತೋಡ ಜಾತಿಯ ಎಮ್ಮೆಗಳನ್ನು ನೀಲಗಿರಿಯಲ್ಲಿ ವಾಸಿಸುವ ತೋಡರು ಸಾಕುತ್ತಾರೆ. ಎಮ್ಮೆಗಳು ಆಕಾರದಲ್ಲೂ ಸ್ವಭಾವದಲ್ಲೂ ಕಾಡೆಮ್ಮೆಗಳನ್ನು ಹೋಲುತ್ತವೆ. ಹೆಗಲ ಮೇಲೆ ದಪ್ಪವಾದ ಕೂದಲು ಬೆಳೆದಿದೆ. ಕರಾವಿಗೆ ಹೆಸರಾಗಿವೆ (**ನೋಡಿ– ಆದಿವಾಸಿಗಳು; ಆರ್ಟಿಯೊಡ್ಯಾಕ್ಟೈಲ**). (ಕೆ.ಎಂ.ಕೆ.;ಆರ್.ಆರ್.)

**ಎರಕದ ಅಚ್ಚು: ನೋಡಿ– ಅಚ್ಚು, ಎರಕದ.**

**ಎರಕದ ಮನೆ:** ಲೋಹಗಳನ್ನು ಕರಗಿಸಿ ಉಪಯೋಗಕ್ಕೆ ಅನುಕೂಲವಾಗುವ ರೂಪ ಆಕಾರಗಳಿಗೆ ಪರಿವರ್ತಿಸುವ ಸ್ಥಳ (ಫೌಂಡ್ರಿ). ಮರಳು ಅಥವಾ ಇತರ ಪದಾರ್ಥಗಳಲ್ಲಿ ಅಚ್ಚನ್ನು ಮಾಡಿ ಅದರಲ್ಲಿ ಕರಗಿಸಿದ ಲೋಹವನ್ನು ಸುರಿದರೆ ಅಚ್ಚಿನ ಆಕಾರದ ಎರಕದ ಪದಾರ್ಥ ಸಿದ್ಧವಾಗುವುದು. ಎರಕ ಹುಯ್ಯಬೇಕಾದರೆ ಮುಖ್ಯವಾಗಿ ಅನುಸರಿಸಬೇಕಾದ ಕ್ರಮಗಳು ಮರ ಅಥವಾ ಇತರ ಪದಾರ್ಥಗಳಿಂದ ಎರಕದ ಒಂದು ಮಾದರಿಯ (ಪ್ಯಾಟರ್ನ್) ತಯಾರಿ; ಈ ಮಾದರಿಯನ್ನು ಒಂದು ಚೌಕಟ್ಟಿನಲ್ಲಿಟ್ಟು ಅದರ ಸುತ್ತಲೂ ಅಚ್ಚಿನ ಮರಳನ್ನು (ಮೋಲ್ಡಿಂಗ್ ಸ್ಯಾಂಡ್) ಘಟ್ಟಿಸುವುದು; ಘಟ್ಟಿಸಿದ ಮರಳು ಅಲ್ಲಾಡದಂತೆ ಜೋಪಾನವಾಗಿ ಮರದ ಮಾದರಿಯನ್ನು ಹೊರಕ್ಕೆ ತೆಗೆದುಕೊಳ್ಳುವುದು; ಲೋಹವನ್ನು ಕುಲುಮೆಯಲ್ಲಿ ಕರಗಿಸಿ ಆ ದ್ರವವನ್ನು ಮರಳಿನ ಮಾದರಿ ಇದ್ದ ಸ್ಥಳದಲ್ಲಿ ಸುರಿಯುವುದು; ಎರಕದ ಮೇಲ್ಮೈಯನ್ನು ಶುದ್ಧೀಕರಿಸುವುದು; ಎರಕ ಹುಯ್ದ ಪದಾರ್ಥಗಳಲ್ಲಿ ಇರಬೇಕಾದ

ಗುಣಗಳಿವೆಯೇ ಎಂದು ಪರೀಕ್ಷಿಸುವುದು. ಮನುಷ್ಯನಿಗೆ ತಿಳಿದಿರುವ ಬಹಳ ಹಳೆಯದಾದ ಮೂಲಭೂತ ಕೈಗಾರಿಕಾ ಪದ್ಧತಿಗಳಲ್ಲಿ ಎರಕ ಹುಯ್ಯುವುದು ಒಂದು. ಅಧಿಕ ಸಂಖ್ಯೆಯಲ್ಲಿ ಒಂದು ಪದಾರ್ಥ ಬೇಕಾದಾಗ ಅದನ್ನು ಎರಕ ಹುಯ್ದು ಸಿದ್ಧಮಾಡುವುದು ಬಹಳ ಅನುಕೂಲವಾದ ಪದ್ಧತಿ. ಒಂದು ಪದಾರ್ಥದ ಒಳಮೈ ಮತ್ತು ಹೊರಮೈಗಳ ಆಕಾರ ಭಿನ್ನವಾಗಿಯೇ ಇದ್ದರೆ ಆ ಪದಾರ್ಥವನ್ನು ಎರಕ ಹುಯ್ದು ತಯಾರಿಸಬಹುದು. ಕೆಲವು ಲೋಹಪದಾರ್ಥಗಳ ಧಾತು ಪ್ರಕೃತಿಯ ಕಾರಣ (ಮೆಟಲರ್ಜಿಕಲ್ ಪ್ರಾಪರ್ಟೀಸ್) ಅವನ್ನು ಕಾಸಿ ಬೇಕಾದ ರೂಪಕ್ಕೆ ತಟ್ಟುವ ವಿಧಾನ ಸಾಧ್ಯವಾಗುವುದಿಲ್ಲ; ಆದರೆ ಅವನ್ನು ಎರಕ ಹುಯ್ಯಬಹುದು. ಕಾಸಿ ಬಿಸಿಯಾಗಿದ್ದಾಗ ತಟ್ಟಿದ ಪದಾರ್ಥಗಳಿಗೆ ತಟ್ಟಿದ ದಿಕ್ಕಿನಲ್ಲಿನ ಕೆಲವು ಗುಣಗಳು (ಡೈರಕ್ಷನಲ್ ಪ್ರಾಪರ್ಟೀಸ್) ಇತರ ಭಾಗಗಳ ಗುಣಗಳಿಗಿಂತ ಬೇರೆ ಆಗಿರುವುವು. ಆದರೆ ಎರಕ ಹುಯ್ದ ಪದಾರ್ಥದಲ್ಲಿ ಇಡೀ ಮೈಯಲ್ಲಿ ಏಕರೀತಿಯ ಗುಣವಿರುವುದು. ಅತಿ ಸೂಕ್ಷ್ಮವಾದ ಪದಾರ್ಥಗಳನ್ನೂ ಅತಿ ದೊಡ್ಡ ಪದಾರ್ಥಗಳನ್ನೂ ಎರಕ ಹುಯ್ಯಬಹುದು. ಎರಕ ಹುಯ್ಯುವುದು ಪ್ರಾಚೀನ ಕಾಲದಿಂದ ಜನಪ್ರಿಯವಾಗುವುದಕ್ಕೆ ಇವು ಕೆಲವು ಕಾರಣಗಳು. ಕಬ್ಬಿಣ, ಉಕ್ಕು, ಹಿತ್ತಾಳೆ, ಕಂಚು ಮತ್ತು ಅಲ್ಯೂಮಿನಿಯಂ, ತಾಮ್ರ ಮತ್ತು ಮ್ಯಾಗ್ನೀಷಿಯಂ ಇವುಗಳ ಮಿಶ್ರ ಲೋಹಗಳು (ಅಲಾಯ್ಸ್) ಇವೇ ಮುಖ್ಯವಾಗಿ ಎರಕ ಹುಯ್ಯಲು ಉಪಯೋಗಿಸುವ ಲೋಹಗಳು.

ಮಾದರಿಮಾಡುವಿಕೆ (ಪ್ಯಾಟರ್ನ್ ಮೇಕಿಂಗ್): ಮಾದರಿಯೇ ಎರಕದ ಮೂಲ. ಅಚ್ಚಿನೊಳಗಿನ ಪೊಳ್ಳು (ಕ್ಯಾವಿಟಿ) ಮಾದರಿಯ ಪ್ರತಿರೂಪ. ಎರಕ ಹುಯ್ದ ಪದಾರ್ಥ ಈ ಪೊಳ್ಳಿನ ಪ್ರತಿರೂಪ. ಆದ್ದರಿಂದ ಮಾದರಿಯ ಸರಿಯಾದ ತಯಾರಿ ಎರಕ ಹುಯ್ಯುವುದರ ಮೊದಲ ಮುಖ್ಯ ಹೆಜ್ಜೆ. ಮಾದರಿಯನ್ನು ಒಂದೇ ಚೂರಿನಲ್ಲಿ ಮಾಡಿರಬಹುದು; ಇಲ್ಲವೇ ಅಚ್ಚುಹಾಕುವ (ಮೋಲ್ಡಿಂಗ್) ಅನುಕೂಲಕ್ಕಾಗಿ ಒಂದಕ್ಕಿಂತ ಹೆಚ್ಚು ಭಾಗವಾಗಿ ಮಾಡಿರ ಬಹುದು. ಮಾದರಿ ತಯಾರಿಕೆಯಲ್ಲಿ ವಿಶೇಷವಾಗಿ ಉಪಯೋಗಿಸುವ ಪದಾರ್ಥ ಮರ. ಕಾರಣ ಮರವನ್ನು ಯಾವ ಆಕಾರಕ್ಕೆ ಬೇಕಾದರೂ ಸುಲಭವಾಗಿ ಅಳವಡಿಸಬಹುದು; ಅಲ್ಲದೇ ಮರದ ಬೆಲೆ ಇತರ ವಸ್ತುಗಳಿಗೆ ಹೋಲಿಸಿದಾಗ ಕಡಿಮೆ. ತೇಗದ ಮರ ಈ ಕೆಲಸಕ್ಕೆ ಬಹಳ ಉಪಯುಕ್ತ. ಮರ ನೀರನ್ನು ಹೀರದಂತೆಯೂ ಮಾದರಿಯ ಮೇಲ್ಮೈ ನುಣುಪಾಗಿರುವಂತೆಯೂ ಮಾಡಲು ಮಾದರಿಗಳಿಗೆ ಶೆಲಾಕ್ ಅರಗನ್ನು ಅಥವಾ ವಾರ್ನಿಷ್ ಎಣ್ಣೆಯನ್ನು ಹಚ್ಚುತ್ತಾರೆ.

ಎರಕಹುಯ್ದ ಪದಾರ್ಥ ಅಧಿಕ ಸಂಖ್ಯೆಯಲ್ಲಿ ಬೇಕಾದಾಗ ಮರದ ಮಾದರಿಗಳಿಗಿಂತ ಲೋಹದ ಮಾದರಿಗಳು ಹೆಚ್ಚು ಅನುಕೂಲ. ಏಕೆಂದರೆ ಲೋಹದ ಮಾದರಿಗಳನ್ನು ಅನೇಕ ಸಲ ಉಪಯೋಗಿಸಿದರೂ ಅವುಗಳ ಆಕಾರ ಅಳತೆಗಳು ಹೆಚ್ಚು ಬದಲಾಗುವುದಿಲ್ಲ. ಅದಲ್ಲದೆ ಎರಕದ ಮನೆಯ ಒದ್ದೆ ಮರಳಿನಲ್ಲಿ ಮರದ ಮಾದರಿಯನ್ನು ಹೂತಿಟ್ಟಾಗ ನೀರನ್ನು ಹೀರಿ ಅದರ ಅಳತೆಗಳು ಹಿಗ್ಗಬಹುದು ಅಥವಾ ಮಾದರಿಯನ್ನು ಉಪಯೋಗಿಸದೆ ಕೆಲವು ದಿನ ತೆಗೆದಿಟ್ಟಾಗ ಮರದಲ್ಲಿದ್ದ ನೀರೆಲ್ಲ ಒಣಗಿಹೋಗಿ ಮಾದರಿಯ ಅಳತೆಗಳು ಕುಗ್ಗಬಹುದು. ಮರದ ಮಾದರಿಯ ಅಳತೆಗಳಲ್ಲಾಗುವ ಇಂಥ ವ್ಯತ್ಯಾಸಗಳು ಲೋಹದ ಮಾದರಿಗಳಲ್ಲಾಗುವುದಿಲ್ಲ.

ಮಾದರಿಯ ಅಳತೆಗಳು, ಎರಕದ ಪದಾರ್ಥದ ಅಳತೆಗಳಿಗಿಂತ ದೊಡ್ಡವಾಗಿರಬೇಕು. ಎರಕದ ಮನೆಯ ಮರಳಿನಲ್ಲಿದ್ದ ಮಾದರಿಯನ್ನು ಹೊರಕ್ಕೆ ತೆಗೆದು ಅದೇ ಜಾಗಕ್ಕೆ ಕರಗಿಸಿದ ಬಿಸಿಬಿಸಿ ಲೋಹವನ್ನು ಸುರಿದಾಗ ಆ ದ್ರವೀಭೂತವಾದ ಲೋಹ ಮೊದಲು ಘನೀಕರಿಸುವುದು ; ಅನಂತರ ಕ್ರಮೇಣ ಉಷ್ಣವನ್ನು ಕಳೆದುಕೊಳ್ಳುತ್ತ ತಣ್ಣಗಾಗುವುದು. ಎಲ್ಲ ಪದಾರ್ಥಗಳೂ, ಅದರಲ್ಲಿಯೂ ವಿಶೇಷವಾಗಿ ಲೋಹಗಳು, ಘನೀಕರಣಕಾಲದಲ್ಲಿ (ಸೊಲಿಡಿಫಿಕೇಷನ್) ಮತ್ತು ಆರುವಾಗ ಕುಗ್ಗುವುವು. ಆದುದರಿಂದ ಅಚ್ಚಿನೊಳಗೆ ಆರಿದ ಪದಾರ್ಥಗಳ ಅಳತೆಗಳು, ಅಚ್ಚಿನ ಅಳತೆಗಳಿಗಿಂತ ಕಡಿಮೆ ಇರುತ್ತವೆ. ಇದರಿಂದಾಗುವ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಅಚ್ಚಿನ ಅಳತೆಗಳು, ಅಂದರೆ ಅಚ್ಚಿನ ಮೂಲವಾದ ಮಾದರಿ ಅಳತೆಗಳು ಬೇಕಾದ ಎರಕದ ಪದಾರ್ಥದ ಅಳತೆಗಳಿಗಿಂತ ಜಾಸ್ತಿ ಇರಬೇಕು. ತಾಂಡವಾಳ (ಕ್ಯಾಸ್ಟ್ ಐರನ್) 1' ಗೆ ಸುಮಾರು $^1/_8$" ಕುಗ್ಗುವುದು. ಹಿತ್ತಾಳೆ ಕಂಚುಗಳು 1" ಗೆ ಸುಮಾರು $^1/_8$" – $^1/_4$" ವರೆಗೂ ಕುಗ್ಗುವುವು. ಉಕ್ಕು 1' ಗೆ $^1/_4$" ನಷ್ಟು ಕುಗ್ಗುವುದು. ಅಲ್ಯೂಮಿನಿಯಂ, ಮ್ಯಾಗ್ನೀಷಿಯಂ, ಲೋಹಗಳು ಇನ್ನೂ ಹೆಚ್ಚು ಕುಗ್ಗುವುವು. ಈ ಕಾರಣಕ್ಕಾಗಿ ಎರಕದ ಮನೆಯ ಅಡಿಗೋಲು ಸಾಧಾರಣ ಅಡಿಗೋಲಿಗಿಂತ ಬೇರೆ ತರಹದ್ದಿರುತ್ತದೆ. ಈ ಮಾದರಿ ಅಡಿಗೋಲಿನಲ್ಲಿ (ಪ್ಯಾಟರ್ನ್ ರೂಲ್) ಪ್ರತಿ ಅಡಿಯೂ ಸಾಧಾರಣ ಅಡಿಗಿಂತ ದೊಡ್ಡದಿದ್ದು ಅದನ್ನು 12 ಭಾಗ ಮಾಡಿರುತ್ತಾರೆ. ಇಂಥ ಪ್ರತಿ ಅಂಗುಲವೂ ಸಹ ಸಾಧಾರಣ ಅಂಗುಲಕ್ಕಿಂತ ದೊಡ್ಡದಿರುತ್ತದೆ. ಪ್ರತಿಲೋಹಕ್ಕೂ ಬೇರೆ ಬೇರೆ ಇಂಥ ಮಾದರಿ ಅಡಿಗೋಲು ಉಪಯೋಗಿಸಲಾಗುವುದು. ಮಾದರಿಯ ಅಳತೆಗಳು ದೊಡ್ಡದಾಗಿರಲು ಇನ್ನೊಂದು ಕಾರಣವೂ ಇದೆ. ಮರಳಿನ ಅಚ್ಚಿನಿಂದ ಹೊರತೆಗೆದ ಎರಕದ ಮೇಲ್ಮೈ ನುಣುಪಾಗಿರದೆ ಮರಳಿನಂತೆಯೇ ಒರಟಾಗಿರುತ್ತದೆ. ಇದನ್ನು ನುಣುಪು ಮಾಡುವಾಗ ಯಂತ್ರಗಳು ಸ್ವಲ್ಪ ಲೋಹವನ್ನು ಕೆರೆದು ಉಜ್ಜಿ ತೆಗೆದುಹಾಕುತ್ತವೆ. ಇದಕ್ಕಾಗಿ ಎರಕ ಹುಯ್ದ ಪದಾರ್ಥದ ಮೇಲೆ ಸ್ವಲ್ಪ ಲೋಹವನ್ನು ಬಿಟ್ಟಿರಬೇಕು. ಆದ್ದರಿಂದ ಅಚ್ಚಿನ ಅಳತೆಗಳು ಅಂದರೆ ಅಚ್ಚಿನ ಮೂಲವಾದ ಮಾದರಿ ಅಳತೆಗಳು ಸ್ವಲ್ಪ ದೊಡ್ಡವಿರಬೇಕು. ಹೀಗಾದರೆ ಮಾತ್ರ ಅಚ್ಚಿನಿಂದ ಹೊರತೆಗೆದು ಮೇಲ್ಮೈಯನ್ನು ಉಜ್ಜಿ ಕೆರೆದು ನುಣುಪು ಮಾಡಿದ ಮೇಲೆ ಎರಕದ ಪದಾರ್ಥಗಳು ಸೂಕ್ತ ಅಳತೆಗಳನ್ನು ಹೊಂದಿರುತ್ತವೆ.

ಲೋಹದ ಮಾದರಿಗಳನ್ನು ಮಾಡಿದಾಗ ಈ ಹೆಚ್ಚು ಅಳತೆಗಳನ್ನು ಎರಡು ಸಲ ಒದಗಿಸಬೇಕಾಗುತ್ತದೆ. ಏಕೆಂದರೆ ಒಂದು ಮರದ ಮಾದರಿಯನ್ನು ಮೊದಲು ಮಾಡಿ ಅದರಿಂದ ಒಂದು ಲೋಹದ ಮಾದರಿಯ ಎರಕ ಹುಯ್ದು ಈ ಲೋಹ ಮಾದರಿಯ ಸಹಾಯದಿಂದ ಮುಂದೆ ಎರಕ ಹುಯ್ಯುತ್ತಾರೆ. ಮಾದರಿಯನ್ನು ಎರಕಹುಯ್ಯುವಾಗ ಒಮ್ಮೆ ಮತ್ತು ಮಾದರಿಯಿಂದ ಎರಕ ತೆಗೆಯುವಾಗ ಇನ್ನೊಮ್ಮೆ ಹೀಗೆ ಒಟ್ಟು ಎರಡು ಸಲ ಹೆಚ್ಚು ಅಳತೆಯನ್ನು ಒದಗಿಸಬೇಕಾಗುತ್ತದೆ. **(ನೋಡಿ– ಅಚ್ಚು,–ಎರಕದ)**




**ಚಿತ್ರ 1. 1. ಪೊಳ್ಳು, 2. ಮಾದರಿಯ ಮೇಲರ್ಧ 3. ಮಾದರಿಯ ಕೆಳ ಅರ್ಧ, 4. ಕೊಂಬು**

ಒಳಗೆ ಪೊಳ್ಳಿರುವ ನೀರಿನ ಕೊಳವಿಯಂಥ ಎರಕದ ವಸ್ತು ಬೇಕಾದಾಗ ಮೇಲಿನ ವಿಧಾನದಲ್ಲಿ ಸ್ವಲ್ಪ ಮಾರ್ಪಾಡಾಗಬೇಕು. ಇದಕ್ಕೆ ಒಂದು ತೆರಚ್ಚು (ಕೋರ್) ಸಹ ಬೇಕು. ಇಂಥ ಕೊಳವಿಯನ್ನು ಎರಕಹುಯ್ಯುವ ವಿಧಾನಗಳನ್ನು ಚಿತ್ರಗಳಲ್ಲಿ ತೋರಿಸಿದೆ. ಚಿತ್ರ 1 ರಲ್ಲಿ ಒಳಗೆ ಪೊಳ್ಳಿರುವ ಎರಕದ ಕೊಳವಿ ಇದೆ. ಇದಕ್ಕೆ ಬೇಕಾದ ಮಾದರಿ ಎರಡು ಭಾಗಗಳಲ್ಲಿವೆ (ಮೇಲಿನ ಭಾಗ ಮತ್ತು ಕೆಳಗಿನ ಭಾಗ). ಮಾದರಿಗೆ ಎರಡು ಪಕ್ಕಗಳಲ್ಲೂ ಕೊಂಬುಗಳು (ಕೋರ್ ಪ್ರಿಂಟ್ಸ್) ಇವೆ. ಇದಕ್ಕೆ ಬೇಕಾದ ತೆರಪಚ್ಚು ಪೊಳ್ಳಿನ ಆಕಾರದಲ್ಲಿದೆ. ಇಲ್ಲಿ ಪೊಳ್ಳಿನ ವ್ಯಾಸ ಮತ್ತು ತೆರಪಚ್ಚಿನ ವ್ಯಾಸ ಒಂದೇ ಆಗಿವೆ. ತೆರಪಚ್ಚಿನ ಉದ್ದ ಮಾದರಿಯ ಉದ್ದದಷ್ಟು (ಕೊಂಬು ಸೇರಿ) ಇದೆ (ಚಿತ್ರ 2).



**ಚಿತ್ರ 2. ತೆರಪಚ್ಚು**

ಚಿತ್ರ 3 ರಲ್ಲಿ ಮಾದರಿಯ ಕೆಳ ಅರ್ಧವನ್ನು ಕೆಳಗಿನ ಪೆಟ್ಟಿಗೆಯ ಒಳಗಿಟ್ಟು ಸುತ್ತಲೂ ಮರಳನ್ನು ಘಟ್ಟಿಸಲಾಗಿದೆ. ಇದು ಮೊದಲನೆಯ ಹಂತ. ಎರಡನೆಯ ಹಂತದಲ್ಲಿ ಮಾದರಿಯ ಕೆಳ ಅರ್ಧದ ಸಮೇತ ಪೆಟ್ಟಿಗೆಯನ್ನು ತಿರುಗಿಸಿಟ್ಟು ಮಾದರಿಯ ಕೆಳ ಅರ್ಧದ ಮೇಲೆ ಮೇಲರ್ಧವನ್ನು ಇಟ್ಟು ಸುತ್ತಲೂ (ಮೇಲಿನ ಪೆಟ್ಟಿಗೆಯ ಒಳಗೆ) ಮರಳನ್ನು ಘಟ್ಟಿಸಲಾಗುವುದು; ಮತ್ತು ಇಳಿಕೊಳವಿ ಏರುಕೊಳವಿಗಳನ್ನು ಒದಗಿಸಲಾಗುವುದು. ಅನಂತರ ಮೇಲಿನ ಪೆಟ್ಟಿಗೆಯನ್ನು ಹೊರಕ್ಕೆ ತೆಗೆದು ಎರಡೂ ಪೆಟ್ಟಿಗೆಗಳಿಂದ ಮಾದರಿಯನ್ನು ಜೋಪಾನವಾಗಿ ಹೊರಕ್ಕೆ ತೆಗೆಯಲಾಗುವುದು. ಕೊನೆಯ ಹಂತದಲ್ಲಿ, ತೆರಪಚ್ಚನ್ನು ಮಾದರಿಯ ಕೊಂಬು ಇದ್ದ ಸ್ಥಳದಲ್ಲಿ ತಳವೂರುವಂತೆ ಇಡಲಾಗುವುದು. ಈಗ ಮೇಲಿನ ಪೆಟ್ಟಿಗೆಯನ್ನು ಸ್ವಸ್ಥಾನ ದಲ್ಲಿಟ್ಟರೆ ಅಚ್ಚು ಸಿದ್ಧವಾದಂತೆಯೇ. ಪೊಳ್ಳಿರಬೇಕಾದ ಸ್ಥಳವನ್ನು ತೆರಪಚ್ಚು ಆಕ್ರಮಿಸಿರುವುದರಿಂದ ಸುರಿದ ಲೋಹ ಅಲ್ಲಿಗೆ ಪ್ರವಹಿಸುವುದಿಲ್ಲ.




**ಚಿತ್ರ 3. ಚಿತ್ರದಲ್ಲಿ 1. ಮಾದರಿಯ ಕೆಳ ಅರ್ಧ 2. ಕೆಳಗಿನ ಪೆಟ್ಟಿಗೆ, 3. ಮೇಲಿನ ಪೆಟ್ಟಿಗೆ 4. ಮಾದರಿಯ ಕೊಂಬು ಇದ್ದ ಸ್ಥಳ, 5. ತೆರಪಚ್ಚು**

ತೆರಪಚ್ಚುಮಾಡುವುದು (ಕೋರ್ ಮೇಕಿಂಗ್): ಕರಗಿದ ಲೋಹದ ಒತ್ತಡದಲ್ಲಿ ತೆರಪಚ್ಚು ಮುರಿಯ ಬಾರದು. ಎತ್ತಿಟ್ಟಾಗ ಅದರ ಮರಳು ಉದುರಬಾರದು. ಆದ್ದರಿಂದ ಅದು ತಕ್ಕಷ್ಟು ಗಟ್ಟಿಯಾಗಿರಬೇಕು. ಇದಕ್ಕಾಗಿ ಅದನ್ನು ವಿಶೇಷ ತರಹದ ಮರಳಿನಲ್ಲಿ ತಯಾರಿಸಲಾಗುತ್ತದೆ. ಈ ಮರಳಿನಲ್ಲಿ ನದಿಮರಳು, ಅಗಸೆ ಎಣ್ಣೆಯಂಥ ಎಣ್ಣೆ ಇಲ್ಲವೆ ರಾಳಗುಗ್ಗಳಗಳಂಥ ಅಂಟುಗಳು, ಅಂಟುಮಣ್ಣು ಇರುತ್ತವೆ. ಈ ಮಿಶ್ರಣವನ್ನು ಚೆನ್ನಾಗಿ ಅರೆದು ತೆರಪಚ್ಚಿನ ಮರಳನ್ನು ಸಿದ್ಧಮಾಡುತ್ತಾರೆ. ತೆರಪಚ್ಚು ಮಾಡಲು ಎರಡು ಭಾಗವಾಗಿರುವ ಮರದ ಪೆಟ್ಟಿಗೆಯನ್ನು (ಕೋರ್ ಬಾಕ್ಸ್) ಉಪಯೋಗಿಸಲಾಗುವುದು. ಇದರಲ್ಲಿ ತೆರಪಚ್ಚಿನ ಆಕಾರದ ತಗ್ಗು ಇದೆ. ಪೆಟ್ಟಿಗೆಯ ಎರಡು ಭಾಗಗಳನ್ನು ಜೋಡಿಸಿ ತಗ್ಗಿನಲ್ಲಿ ವಿಶೇಷ ಮರಳನ್ನು ತುಂಬಲಾಗುವುದು. ಕೈಯಿಂದ ಇಲ್ಲವೇ ಒತ್ತಡದ ಗಾಳಿಯಿಂದ ಇಲ್ಲವೇ ಯಂತ್ರಗಳಿಂದ

ಈ ಮರಳನ್ನು ಚೆನ್ನಾಗಿ ಘಟ್ಟಿಸಲಾಗುವುದು. ಈಗ ಜೋಪಾನವಾಗಿ ಪೆಟ್ಟಿಗೆಯ ಎರಡು ಭಾಗಗಳನ್ನು ಬೇರ್ಪಡಿಸಿದರೆ ಮರಳು ತೆರಪಚ್ಚಿನ ಆಕಾರ ತಳೆದಿರುವುದು. ಇದನ್ನು ಜೋಪಾನವಾಗಿ ತಕ್ಕ ಆಕಾರದ ತಟ್ಟೆಗಳಲ್ಲಿಟ್ಟು (ಕೋರ್ ಪ್ಲೇಟ್ಸ್) ಒಲೆಗಳಲ್ಲಿ ಕಾಯಿಸಬೇಕು. ಆಗ ಎಣ್ಣೆಯಲ್ಲಿ ಆಂತರಿಕ ಮಾರ್ಪಾಡಾಗಿ ಅದು ಮರಳಿಗೆ ತಕ್ಕ ಬಂಧವನ್ನು ಒದಗಿಸುತ್ತದೆ. ಆದ್ದರಿಂದ ಇಂಥ ತೆರಪಚ್ಚು ಗಟ್ಟಿಯಾಗಿದ್ದು ಉಪಯೋಗಿಸುವಾಗ ಮುರಿಯುವುದಿಲ್ಲ. ಅನೇಕ ಗಂಟೆಗಳ ಕಾಲ ಒಲೆಯಲ್ಲಿ ಕಾಯಿಸಬೇಕೆಂಬುದೇ ಈ ವಿಧಾನದ ಅನಾನುಕೂಲತೆ. ಇನ್ನೊಂದು ವಿಧಾನದಲ್ಲಿ ಪೆಟ್ಟಿಗೆಯ ಒಳಗೆ ತುಂಬುವ ಮರಳು, ನದೀಮರಳು ಮತ್ತು ಸೋಡಿಯಂ ಸಿಲಿಕೇಟ್ ದ್ರವದ ಮಿಶ್ರಣ ಇದನ್ನು ಪೆಟ್ಟಿಗೆಯೊಳಗೆ ತುಂಬಿ ಇಂಗಾಲದ ಡೈಆಕ್ಸೈಡನ್ನು ಊದಿದರೆ ಒಂದೆರೆಡು ಮಿನಿಟುಗಳಲ್ಲೇ ಒಳಗಿನ ಮಿಶ್ರಣ ಗಟ್ಟಿಯಾಗುವುದು. ಈ ವಿಧಾನದಲ್ಲಿ ಮೇಲಿನ ವಿಧಾನದಲ್ಲಿದ್ದಂತೆ ಒಲೆಯಲ್ಲಿ ಕಾಯಿಸುವ ಆವಶ್ಯಕತೆಯೇ ಇಲ್ಲ. ಆದ್ದರಿಂದ ತೆರಪಚ್ಚುಗಳ ತಯಾರಿ ಶೀಘ್ರವಾಗಿ ಆಗುವುದು.



**ಚಿತ್ರ 4. ಚಿತ್ರದಲ್ಲಿ 1. ತೆರಪಚ್ಚಿನಾಕಾರದ ತಗ್ಗು 2. ಮರದ ಪೆಟ್ಟಿಗೆ, 3. ತೆರಪಚ್ಚು**

ಲೋಹ ಕರಗಿಸುವ ಪದ್ಧತಿ (ಮೆಲ್ಟಿಂಗ್): ಎರಕ ಹುಯ್ಯುವ ಲೋಹವನ್ನು ಕುಲುಮೆಗ ಳಲ್ಲಿ ಕರಗಿಸಿ ಕೊಳ್ಳಬೇಕು. ತಾಂಡವಾಳವನ್ನು ಸಾಮಾನ್ಯವಾಗಿ ಬಟ್ಟಿ ಒಲೆಗಳಲ್ಲಿ (ಕ್ಯುಪೋಲ) ಕರಗಿಸುತ್ತಾರೆ. ಒಲೆಯನ್ನು ಬೆಂಕಿ ನಿರೋಧಕ ಇಟ್ಟಿಗೆಗಳಿಂದ ಕಟ್ಟಿ ಕಬ್ಬಿಣದ ತಗಡಿನಿಂದ ಸುತ್ತಲೂ ಮುಚ್ಚಿರುತ್ತಾರೆ. ಇದರಲ್ಲಿ ಬೆಂಕಿಯನ್ನು ಹೊತ್ತಿಸಿ, ಅದರ ಮೇಲೆ ಕಲ್ಲಿದ್ದಲಿನ ಕಿಟ್ಟ, ಸುಣ್ಣಕಲ್ಲು ಮತ್ತು ಬೀಡು ಕಬ್ಬಿಣದ (ಪಿಗ್ ಐರನ್) ಗಟ್ಟಿಗಳನ್ನು ಕಬ್ಬಿಣದ ಚೂರುಪಾರುಗಳೊಡನೆ (ಸ್ಕ್ರ್ಯಾಪ್) ಒಂದರಮೇಲೆ ಒಂದರಂತೆ ಪದರ ಪದರವಾಗಿ ತುಂಬುತ್ತಾರೆ. ಇದು ಕೆಂಪಗೆ ಕಾದಮೇಲೆ ಈ ಪದರಗಳ ಮೂಲಕ ಗಾಳಿಯನ್ನು ಊದಿದರೆ ತಾಂಡವಾಳ ಒಲೆಯ ಕೆಳಭಾಗದಲ್ಲಿ ಕರಗಿ ನಿಂತಿರುತ್ತದೆ. ಸುಣ್ಣಕಲ್ಲು ಕಶ್ಮಲಗಳನ್ನೆಲ್ಲ ಸೇರಿಸಿಕೊಂಡು ಕರಗಿದ ಲೋಹದ ಮೇಲ್ಗಡೆ ತೇಲುತ್ತದೆ. ಹೀಗೆ ಕಶ್ಮಲಗಳನ್ನು ಬೇರ್ಪಡಿಸಬಹುದು. ಈ ತರಹದ ಬಟ್ಟಿಒಲೆ ಬಹು ಪುರಾತನವಾದದ್ದು ಮತ್ತು ಜನಪ್ರಿಯವಾದದ್ದು. ತೆರೆದ ಒಲೆಯ (ಓಪನ್ ಹಾರ್ತ್) ಕುಲುಮೆಗಳಲ್ಲಿ ಬೀಡು ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸಿ ಕರಗಿದ ಉಕ್ಕನ್ನು ಎರಕ ಹುಯ್ಯಲು ಉಪಯೋಗಿಸುತ್ತಾರೆ. ಈ ಕುಲುಮೆಯಲ್ಲಿ ಬೀಡುಕಬ್ಬಿಣ ಮತ್ತು ಉಕ್ಕಿನ ಚೂರುಗಳನ್ನು ಬಹಳ ಕಾಲ ಜ್ವಾಲೆಯ ಉಷ್ಣಕ್ಕೆ ಗುರಿಪಡಿಸುವುದರಿಂದ ಬೀಡು ಕಬ್ಬಿಣದಲ್ಲಿರುವ ಕಾರ್ಬನ್, ಮ್ಯಾಂಗನೀಸ್ ಮೊದಲಾದ ಧಾತುಗಳು ಉರಿದು ಹೋಗುತ್ತವೆ. ಕರಗಿದ ಲೋಹಕ್ಕೆ ತಕ್ಕಷ್ಟು ಫೆರೊ ಮ್ಯಾಂಗನೀಸ್ ಸೇರಿಸಿದರೆ ಅದು ಉಕ್ಕಾಗಿ ಪರಿವರ್ತನೆ ಹೊಂದುತ್ತದೆ. ಬೆಸ್ಸಿಯರ್ ಪರಿವರ್ತಕ ಕುಲುಮೆಗಳಲ್ಲಿ ಕರಗಿದ ಬೀಡುಕಬ್ಬಿಣದ ಮೂಲಕ ಗಾಳಿಯನ್ನು ಊದಿ ಅದರಲ್ಲಿರುವ ಕಶ್ಮಲಗಳನ್ನೆಲ್ಲ ಉರಿಸಿ ಕರಗಿದ ಶುದ್ಧ ಲೋಹಕ್ಕೆ ಫೆರೊಮ್ಯಾಂಗನೀಸ್ ಸೇರಿಸಿ ಉಕ್ಕು ತಯಾರಿಸುತ್ತಾರೆ.

ಲೋಹಗಳನ್ನು ಕರಗಿಸಲು ವಿದ್ಯುತ್ಕುಲುಮೆಗಳನ್ನು ಉಪಯೋಗಿಸುತ್ತಾರೆ. ಈ ಕುಲುಮೆಗಳಲ್ಲಿ ನಾನಾ ತರಹಗಳಿವೆ. ಒಂದು ವಿಧದ ಕುಲುಮೆಗಳಲ್ಲಿ ವಿದ್ಯುನ್ನಾಳಗಳಿಂದ ಕುಲುಮೆಯಲ್ಲಿರುವ ಲೋಹದ ಮೂಲಕ ವಿದ್ಯುತ್ತು ಪ್ರವಹಿಸುತ್ತದೆ. ಇನ್ನೊಂದು ವಿಧದ ಕುಲುಮೆಗಳಲ್ಲಿ ವಿದ್ಯುತ್ತು ವಿದ್ಯುನ್ನಾಳಗಳ ಮಧ್ಯೆ ಮಾತ್ರ ಪ್ರವಹಿಸುತ್ತದೆ. ಹೀಗೆ ಪ್ರವಹಿಸುವಾಗ ವಿಸರಣದಿಂದ (ರೇಡಿಯೇಷನ್) ಲೋಹಕ್ಕೆ ಉಷ್ಣವನ್ನು ಒದಗಿಸಿ ಅದನ್ನು ಕರಗಿಸಲಾಗುವುದು. ಇಂಥ ಕುಲುಮೆಗಳಲ್ಲಿ ವಿದ್ಯುತ್ತನ್ನು ಸೂಕ್ತರೂಪಕ್ಕೆ ಪರಿವರ್ತಿಸುವ ವಿಶೇಷ ಸಲಕರಣೆಗಳೂ ಬೇಕು. ಈಗೀಗ ಜನಪ್ರಿಯವಾಗುತ್ತಿರುವ ಮೆಯಿನ್ಸ್ ಕುಲುಮೆಗಳಲ್ಲಿ ವಿದ್ಯುತ್ತನ್ನು ಅದು ಸಿಕ್ಕುವ ಸ್ಥಿತಿಯಲ್ಲಿಯೇ ಉಪಯೋಗಿಸಬಹುದು.

ಕರಗಿಸುವ ಲೋಹದ ಪ್ರಮಾಣ ಕಮ್ಮಿ ಇದ್ದಾಗ ಅದನ್ನು ಮೂಸೆಗಳಲ್ಲಿ (ಕ್ರೂಸಿಬಲ್ಸ್) ತುಂಬಿ ಉರಿಯುತ್ತಿರುವ ಕಲ್ಲಿದ್ದಲು ಕಿಟ್ಟದಲ್ಲಿಟ್ಟು ಕರಗಿಸುತ್ತಾರೆ. ಅಲ್ಯೂಮಿನಿಯಂ, ತಾಮ್ರ, ಹಿತ್ತಾಳೆ ಮೊದಲಾದುವುಗಳನ್ನು ಸಣ್ಣ ಪ್ರಮಾಣದಲ್ಲಿ ಕರಗಿಸುವಾಗ ಈ ಪದ್ಧತಿ ಉಪಯೋಗದಲ್ಲಿದೆ. ಈ ಲೋಹಗಳು ಹೆಚ್ಚು ಪ್ರಮಾಣದಲ್ಲಿ ಬೇಕಾದ ಎಣ್ಣೆಯಿಂದ ಉರಿಯುವ ಕುಲುಮೆಗಳು ಬೆಂಕಿಯನ್ನು ತಾಕಿಸದೆ ಬರೀ ಜ್ವಾಲೆಯಿಂದ ಉಷ್ಣವನ್ನು ಒದಗಿಸುವ ಕುಲುಮೆಗಳು (ರಿವರ್ಬರೇಟಿಂಗ್ ಫರ್ನೇಸಸ್) ಮತ್ತು ವಿದ್ಯುತ್ ಕುಲುಮೆಗಳನ್ನು ಉಪಯೋಗಿಸಬಹುದು.

ಎರಕ ಹುಯ್ಯುವುದು: ಕರಗಿದ ಲೋಹವನ್ನು ಸಿದ್ಧವಾದ ಅಚ್ಚಿನೊಳಗೆ ಸುರಿಯುವುದೇ ಮುಂದಿನ ಹೆಜ್ಜೆ. ಅಚ್ಚನ್ನು ಒಂದೇ ಸಲ ಲೋಹದಿಂದ ತುಂಬಿಡಬೇಕು. ಇಲ್ಲದಿದ್ದರೆ ಬೇರೆ ಬೇರೆ ಸಾರಿ ಸುರಿದ ಲೋಹ ಒಂದರ ಜೊತೆ ಒಂದು ಹೊಂದಿಕೊಳ್ಳದೇ ಹೋಗಬಹುದು. ಕುಲುಮೆಗಳಲ್ಲಿ ಕರಗಿದ ಲೋಹವನ್ನು ಮೊದಲು ಒಂದು ಕೊಳಗದಲ್ಲಿ ಶೇಖರಿಸಿ ಕೂಡಲೇ ಅಚ್ಚಿನೊಳಗೆ ಸುರಿಯಬೇಕು. ಇಲ್ಲದಿದ್ದರೆ ಲೋಹದ ಉಷ್ಣ ಕಡಿಮೆ ಆಗಿ ಅದು ನಿರುಪಯುಕ್ತವಾಗುತ್ತದೆ. ಅಚ್ಚು ಸಣ್ಣದಾಗಿದ್ದರೆ ಒಬ್ಬ ಮನುಷ್ಯ ಒಂದು ಸೌಟಿನಲ್ಲಿ ಲೋಹರಸವನ್ನು ಎತ್ತಿ ಅಚ್ಚಿಗೆ ತುಂಬಬಹುದು. ಅಚ್ಚು ದೊಡ್ಡದಾಗಿದ್ದರೆ ಸೌಟಿಗೆ ಎರಡು ಹಿಡಿಗಳಿದ್ದು ಅದನ್ನು ಇಬ್ಬರು ಎತ್ತಬಹುದು. ಅಚ್ಚು ಬಲು ದೊಡ್ಡದಾಗಿದ್ದರೆ ಲೋಹವನ್ನು ದೊಡ್ಡ ಪಾತ್ರೆಗಳಲ್ಲಿ ತುಂಬಿ ಭಾರವನ್ನೆತ್ತುವ ಹಾಗೂ ಚಲಿಸುವ ಕಪ್ಪಿಗಳ ಮೂಲಕ (ಟ್ರಾವಲಿಂಗ್ ಕ್ರೇನ್ಸ್) ಅಚ್ಚುಗಳ ಸಮೀಪಕ್ಕೆ ಒಯ್ಯುವರು. ಅಲ್ಲಿ ಈ ಪಾತ್ರೆಗಳನ್ನು ಬಗ್ಗಿಸಿ ಅಚ್ಚನ್ನು ತುಂಬಬಹುದು. ಇಲ್ಲದಿದ್ದರೆ ಮುಚ್ಚಿರುವ ಅವುಗಳ ತಳವನ್ನು ತೆಗೆದು ತಳದಿಂದಲೇ ಲೋಹ ಪ್ರವಹಿಸುವಂತೆ ಮಾಡಿ ಅಚ್ಚನ್ನು ತುಂಬಬಹುದು. ಮೇಲೆ ಹೇಳಿದ ಕೊಳಗ, ಪಾತ್ರೆ, ಸೌಟುಗಳಿಗೆ ಕರಗಿದ ಲೋಹ ಅಂಟಿಕೊಂಡುಬಿಡುವುದು. ಇದನ್ನು ತಪ್ಪಿಸುವುದಕ್ಕಾಗಿ ಇವುಗಳ ಒಳಭಾಗಕ್ಕೆ ಉಷ್ಣ ನಿರೋಧಕ ಮಣ್ಣಿನ ತೆಳು ಗೋಡೆಯನ್ನು ಕಟ್ಟಿರಬೇಕು. ಈ ತರಹದ ಗೋಡೆ ಸಾಮಾನ್ಯವಾಗಿ ಒಂದು ದಿವಸದ ಉಪಯೋಗಾನಂತರ ಅಪ್ರಯೋಜಕವಾಗುವುದು. ಆದ್ದರಿಂದ ದಿನವೂ ಈ ಪದರವನ್ನು ಪಾತ್ರೆಗಳಿಗೆ ಕಟ್ಟಬೇಕು. ಈ ಮಣ್ಣಿನಲ್ಲಿರುವ ನೀರು ಕರಗಿದ ಲೋಹದೊಡನೆ ಬೆರೆಯಬಾರದು. ಆದ್ದರಿಂದ ಪದರವನ್ನು ಕಟ್ಟಿದ ತರುವಾಯ ಅದನ್ನು ಬೆಂಕಿಯಲ್ಲಿ ಕಾಯಿಸಿ ನೀರನ್ನು ಹೊರಡಿಸಿ ಬಿಡಬೇಕು. ಲೋಹವನ್ನು ಬಲು ನಿಧಾನವಾಗಿ ಸುರಿದರೆ ಅದು ಬೇಗ ಆರಿ ಗಟ್ಟಿಯಾಗುವುದು. ಇದರಿಂದ ಅಚ್ಚಿನೊಳಗಿರುವ ಲೋಹವೆಲ್ಲ ಒಂದುಗೂಡದೆ ಇರುವ ಸಂಭವ ಉಂಟು. ಬಲು ವೇಗದಿಂದ ಸುರಿದರೆ ಅಚ್ಚು ಮುರಿಯಬಹುದು. ಆದ್ದರಿಂದ ಲೋಹವನ್ನು ಬಲು ನಿಧಾನವಾಗಿಯಾಗಲೀ, ಇಲ್ಲವೇ ಬಲು ವೇಗವಾಗಿಯಾಗಲೀ ಸುರಿಯಬಾರದು. ಲೋಹದ ಉಷ್ಣ ಸಾಮಾನ್ಯವಾಗಿ ಹೆಚ್ಚಾಗಿರುವುದೇ ಒಳ್ಳೆಯದು. ಇಲ್ಲದಿದ್ದರೆ ಲೋಹ ಅಚ್ಚಿನಲ್ಲಿ ಹರಿಯುತ್ತಿರುವಾಗ ದಾರಿಯಲ್ಲೇ ಗಟ್ಟಿಯಾಗಿ ಮುಂದಕ್ಕೆ ಹರಿಯುವುದು ತಪ್ಪಬಹುದು. ಆದರೆ ವಿಪರೀತ ಹೆಚ್ಚಿನ ಉಷ್ಣವೂ ಒಳ್ಳೆಯದಲ್ಲ. ಏಕೆಂದರೆ ಇಂಥ ಲೋಹಕ್ಕೆ ಅಚ್ಚಿನ ಮರಳು ಅಂಟಿಕೊಂಡುಬಿಡುವುದು.

ಅಚ್ಚಿನೊಳಗೆ ಸುರಿದ ಲೋಹ ಆರಿದ ಮೇಲೆ ಅಚ್ಚನ್ನು ಮುರಿದು ಎರಕವನ್ನು ಹೊರಗೆ ತೆಗೆದು ಮರಳನ್ನು ಕೊಡವಿ ಇಳಿಕೊಳವಿ ಏರುಕೊಳವಿಗಳನ್ನು ಕತ್ತರಿಸಿ ಮೇಲ್ಮೈಯನ್ನು ಶುದ್ಧೀಕರಿಸಿ ಅದನ್ನು ಪರೀಕ್ಷಾಗೃಹಕ್ಕೆ ಕಳುಹಿಸಬೇಕು. ಇಲ್ಲಿ ಎರಕ ಹುಯ್ಯುವುದರಲ್ಲಿ ಏನಾದರೂ ದೋಷಗಳಿವೆಯೇ ಮತ್ತು ಎರಕದ ಲೋಹದಲ್ಲಿ ಬೇಕಾದ ಗುಣಗಳಿವೆಯೇ ಎಂದು ಪರೀಕ್ಷಿಸಲಾಗುವುದು.

ಛಾಪದ ಎರಕ (ಡೈ ಕ್ಯಾಸ್ಟಿಂಗ್): ಮರಳಿನ ಅಚ್ಚನ್ನು ಒಮ್ಮೆ ಮಾತ್ರ ಉಪಯೋಗಿಸಬಹುದಾದ್ದರಿಂದ ಒಂದೊಂದು ಸಲ ಎರಕ ಹುಯ್ಯುವಾಗಲೂ ಬೇರೆ ಬೇರೆ ಅಚ್ಚನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಎರಕದ ನಿರ್ಮಾಣ ಅಧಿಕ ಸಂಖ್ಯೆಯಲ್ಲಿ ಬೇಕಾದಾಗ ಮರಳಿನಿಂದ ಅಚ್ಚು ಮಾಡುವ ಪದ್ಧತಿ ಅನುಪಯುಕ್ತ. ಅಲ್ಲದೆ ಲೋಹವನ್ನು ಮರಳಿನ ಅಚ್ಚಿನಲ್ಲಿ ಸುರಿದರೆ ಎರಕದ ಮೇಲ್ಮೈ ಒರಟಾಗಿದ್ದು ಅದನ್ನು ಯಂತ್ರಗಳಿಂದ ನಯಪಡಿಸಬೇಕಾಗುತ್ತದೆ. ಎರಕದ ಒಳಭಾಗಗಳನ್ನು ನಯಪಡಿಸುವುದು ಬಲು ಕಷ್ಟಸಾಧ್ಯವಾದ ಮತ್ತು ಖರ್ಚಿನ ಮಾರ್ಗ. ಛಾಪದ ಎರಕದ ಪದ್ಧತಿಯಲ್ಲಿ ಈ ತೊಂದರೆಗಳಿಲ್ಲ. ಈ ಪದ್ಧತಿಯಲ್ಲಿ ಮರಳಿನ ಅಚ್ಚಿನ ಬದಲಾಗಿ ಉಷ್ಣನಿರೋಧಕ ಲೋಹದ ಅಚ್ಚನ್ನು ಉಪಯೋಗಿಸುತ್ತಾರೆ. ಈ ತರಹದ ಅಚ್ಚಿನ ಬೆಲೆ ಮರಳಿನ ಅಚ್ಚಿನ ಬೆಲೆಗಿಂತ ಜಾಸ್ತಿ. ಆದರೂ ಇಂಥ ಒಂದೇ ಅಚ್ಚಿನಿಂದ ಅನೇಕ ಸಲ ಎರಕಹುಯ್ಯಬಹುದಾದ್ದರಿಂದ ಒಟ್ಟಿನಲ್ಲಿ ಬೆಲೆ ಸುಲಭವೇ ಆಗುತ್ತದೆ.

ಕಬ್ಬಿಣ ಮತ್ತು ಉಕ್ಕಿನಿಂದ ಮಾಡಿದ ಅಚ್ಚನ್ನು ಹಿತ್ತಾಳೆ, ಕಂಚು ಮತ್ತು ಅಲ್ಯೂಮಿನಿಯಂಗಳನ್ನು ಎರಕಹುಯ್ಯಲು ಉಪಯೋಗಿಸಬಹುದು. ಕಬ್ಬಿಣವನ್ನು ಎರಕಹುಯ್ಯಬೇಕಾದಾಗ ಉಕ್ಕಿನ ಅಚ್ಚುಗಳನ್ನು ಸಿದ್ಧಪಡಿಸಿ ಅವುಗಳ ಒಳಭಾಗಕ್ಕೆ ಉಷ್ಣ ನಿರೋಧಕ ಶಕ್ತಿ ಇರುವ ಗಡಸು ಪದಾರ್ಥಗಳನ್ನು (ರಿಫ್ರಾಕ್ಟರೀಸ್) ಮೆತ್ತಿರುತ್ತಾರೆ. ಸೀಸ, ಸತುಗಳನ್ನು ಎರಕಹುಯ್ಯಬೇಕಾದಾಗ ಕಂಚಿನಿಂದ ಅಚ್ಚನ್ನು ಸಿದ್ಧಪಡಿಸಬಹುದು. ಇವಲ್ಲದೆ ಇತರ ನಿರೋಧಕ ಮಿಶ್ರಲೋಹಗಳೂ ಬಳಕೆಯಲ್ಲಿವೆ. ಛಾಪದ ಎರಕಹುಯ್ಯುವುದರಲ್ಲಿ ಎರಡು ವಿಧಾನಗಳಿವೆ. ಮೊದಲನೆಯ ವಿಧಾನದಲ್ಲಿ ಅಚ್ಚಿನೊಳಗೆ ಸುರಿದ ಲೋಹ ತನ್ನ ತೂಕದಿಂದಾಗಿ ಮಾತ್ರ ಒಳಗೆಲ್ಲ ಪ್ರವಹಿಸಿ ಅಚ್ಚಿನ ಒಳಭಾಗದಂತೆ ಮುದ್ರಿತವಾಗುತ್ತದೆ. ಎರಡನೆಯ ವಿಧಾನದಲ್ಲಿ ಕರಗಿದ ಲೋಹ ಅಚ್ಚಿನೊಳಗೆ ಪ್ರವಹಿಸುವಂತೆ ಮಾಡಲು ಒತ್ತಡವನ್ನು ಉಪಯೋಗಿಸುತ್ತಾರೆ. ಗಾಳಿಯ ಒತ್ತಡವನ್ನೇ ನೇರವಾಗಿ ಉಪಯೋಗಿಸಿ ಕರಗಿದ ಲೋಹವನ್ನು ಗಾಳಿಯಿಂದ ಅಚ್ಚಿನೊಳಕ್ಕೆ ನೂಕಿಸಿ ಅಚ್ಚಿನ ಮುದ್ರೆಪಡೆಯುವುದೊಂದು ವಿಧಾನ. ಅಲ್ಯೂಮಿನಿಯಂ ಎರಕ ಹುಯ್ಯಲು ಈ ತರಹ ಯಂತ್ರವನ್ನು ಉಪಯೋಗಿಸುತ್ತಾರೆ. ಸತು ಎರಕಕ್ಕೆ ಉಪಯೋಗಿಸುವ ಯಂತ್ರದಲ್ಲಿ ಇನ್ನೂ ಹೆಚ್ಚಿನ ಒತ್ತಡದ ಆವಶ್ಯಕತೆ ಇದ್ದು ಗಾಳಿಯಿಂದ ಇಲ್ಲವೇ ಯಾಂತ್ರಿಕ ನೆರವಿನಿಂದ ಒಂದು ಸಿಲಿಂಡರಿನೊಳಗೆ ಒಂದು ಕೊಂತ ಚಲಿಸುವಂತೆ ಮಾಡುತ್ತಾರೆ. ಕೊಂತ ಹಿಂದೆ ಸರಿದಾಗ ಸಿಲಿಂಡರಿನೊಳಗೆ ಸೆಳೆಯಲ್ಪಟ್ಟು ಕೊಂತ ಮುಂದೆ ಸರಿದಾಗ ಸಿಲಿಂಡರಿನೊಳಗಿರುವ ಲೋಹ ಹೆಚ್ಚು ಒತ್ತಡದಿಂದ ಅಚ್ಚಿನೊಳಗೆ ಪ್ರವಹಿಸುತ್ತದೆ.

ಮಿಶ್ರಲೋಹಗಳ ಎರಕ ಹುಯ್ಯಬೇಕಾದಾಗ ಅತಿ ಹೆಚ್ಚಿನ ಒತ್ತಡ ಬೇಕು. ಕೋಲ್ಡ್ ಚೇಂಬರ್ ಯಂತ್ರ ಇಂಥ ಒತ್ತಡ ಒದಗಿಸುವುದು. ಈ ಯಂತ್ರದ ಸಿಲಿಂಡರಿನೊಳಕ್ಕೆ ಎರಕಕ್ಕೆ ಎಷ್ಟು ಬೇಕೊ ಅಷ್ಟು ಕರಗಿದ ಲೋಹ ಸುರಿಯುತ್ತಾರೆ. ಇದರೊಳಗೆ ಚಲಿಸುವ ಕೊಂತ ಮತ್ತು ಸಿಲಿಂಡರುಗಳು ಕರಗುವುದನ್ನು ತಪ್ಪಿಸಲು ತಣ್ಣೀರಿನ ಪ್ರವಾಹದಿಂದ ಇವುಗಳ ಉಷ್ಣ ವಿಸರ್ಜನೆ ಮಾಡುತ್ತಾರೆ. ಇಂಥ ಯಂತ್ರಗಳಲ್ಲಿ ಚದರ ಅಂಗುಲ ಒಂದಕ್ಕೆ 10,000 ಪೌಂಡುಗಳಷ್ಟು ಒತ್ತಡವನ್ನು ಉಂಟುಮಾಡಬಹುದು. ಈ ಯಂತ್ರದಲ್ಲಿ ಕೊಂತದ ಚಲನೆ ನೀರಿನ ಒತ್ತಡದಿಂದ ಆಗುತ್ತದೆ. ಛಾಪ ಎರಕ ಪದ್ಧತಿಯಲ್ಲಿ ಅತಿಸೂಕ್ಷ್ಮ ಮತ್ತು ಅತಿ ತೊಡಕಾದ ಭಾಗಗಳನ್ನು ಅವುಗಳ ಮೇಲ್ಮೈ ನುಣುಪಾಗಿರುವಂತೆ ಎರಕಹುಯ್ಯಬಹುದು.

ಎರಕದಲ್ಲಿನ ನ್ಯೂನತೆಗಳು: ಎರಕ ಹುಯ್ಯುವುದು ನಷ್ಟವಿಲ್ಲದ ಕೈಗಾರಿಕಾ ಪದ್ಧತಿಯಾಗ ಬೇಕಾದರೆ ಎರಕ ಹುಯ್ದ ಪ್ರತಿ ಪದಾರ್ಥವೂ ದೋಷರಹಿತವಾಗಿರಬೇಕು. ಈ ದೋಷಗಳ ಮೂಲ ಎರಕದ ಆಲೇಖ್ಯದಲ್ಲಿ (ಡಿಸೈನ್) ಅಥವಾ ಅಚ್ಚಿನಲ್ಲಿ ಕರಗಿದ ಲೋಹದಲ್ಲಿರಬಹುದು. ಅಚ್ಚಿನ ಮರಳಿನಲ್ಲಿರುವ ನೀರಿನಿಂದ ಉತ್ಪನ್ನವಾದ ಹದದಿಂದ ಇಲ್ಲವೇ ಈ ಮರಳಿಗೆ ಸೇರಿಸಿದ ಇತರ ಪದಾರ್ಥಗಳಿಂದ ಉತ್ಪನ್ನವಾದ ಅನಿಲಗಳು ತಪ್ಪಿಸಿಕೊಳ್ಳಲಾಗದೆ ಆರುತ್ತಿರುವ ಲೋಹದೊಳಗೆ ಸಿಕ್ಕಿಕೊಂಡರೆ ಎರಕದ ಒಳಗೆ ವಾಯು ರಂಧ್ರಗಳು ಉಂಟಾಗುವುವು (ಬ್ಲೋಹೋಲ್ಸ್). ಅಚ್ಚು ಮರಳಿನಲ್ಲಿ ತೇವ ಹೆಚ್ಚಾಗಿದ್ದರೆ, ಮಾದರಿಯ ಸುತ್ತಲೂ ಮರಳನ್ನು ಬಲು ಗಡುಸಾಗಿ ಘಟ್ಟಿಸಿದ್ದರೆ, ಕರಗಿದ ಲೋಹದ ಉಷ್ಣತೆ ಕಡಿಮೆ ಇದ್ದರೆ, ಸುರಿಯುವ ಸೌಟು ಒಣಗಿಲ್ಲದೇ ಇದ್ದರೆ, ಕರಗಿದ ಕಬ್ಬಿಣದಲ್ಲಿ ಅಲ್ಯೂಮಿನಿಯಂ, ಆಂಟಿಮೊನಿ ಮೊದಲಾದವುಗಳ ಮಿಶ್ರಣ ಇದ್ದರೆ, ವಾಯು ರಂಧ್ರಗಳಾಗುವ ಸಂಭವ ಉಂಟು. ಈ ರಂಧ್ರಗಳು ಮೇಲ್ಮೈನ ಕೆಳಭಾಗದಲ್ಲಿರಬಹುದು ಇಲ್ಲವೆ ಮೇಲ್ಮೈಯ ಮೇಲೆಯೇ ಅನೇಕ ಸೂಜಿ ರಂಧ್ರಗಳ ರೂಪದಲ್ಲಿರಬಹುದು. ಎರಕದ ಮೈಮೇಲೆ ಮರಳು ಮತ್ತು ಲೋಹಗಳ ಮಿಶ್ರಣ, ಕಜ್ಜಿಯಂತೆ ಅಂಟಿಕೊಂಡಿರಬಹುದು. ಲೋಹದ ಉಷ್ಣತೆಯಿಂದ ಕಾದ ಮರಳ ಕಣಗಳು ಉಬ್ಬಿ ಸ್ವಸ್ಥಾನದಿಂದ ಚಲಿಸಿ ಪಕ್ಕದಲ್ಲಿರುವ ಲೋಹಕ್ಕೆ ಅಂಟಿಕೊಂಡರೆ ಹೀಗಾಗುವುದು. ಮರಳನ್ನು ಬಲು ಘಟ್ಟಿಸಿ ಅದರ ಕಣಗಳು ಹಿಗ್ಗುವುದಕ್ಕೆ ಅವಕಾಶ ಕೊಡದಿದ್ದರೆ ಮರಳಿಗೆ ಅಂಟುಮಣ್ಣು ಹೆಚ್ಚು ಸೇರಿಸಿದ್ದರೆ ಅಥವಾ ಮರಳು ದುರ್ಬಲವಾಗಿದ್ದರೆ ಹೀಗಾಗುವುದು. ಕರಗಿದ ಲೋಹ ಆರುವಾಗ ಸಹಜವಾಗಿ ಕುಗ್ಗುವುದು. ತೆರಪಚ್ಚು ಚೆನ್ನಾಗಿ ಗಟ್ಟಿಯಾಗಿದ್ದರೆ ಇಲ್ಲವೇ ಮರಳನ್ನು ಬಹಳ ಘಟ್ಟಿಸಿದ್ದರೆ ಇಲ್ಲವೇ ಎರಕದ ಆಕಾರದ ಕಾರಣವಾಗಿ ಲೋಹ ಕುಗ್ಗುವುದಕ್ಕೆ ಅವಕಾಶವಿಲ್ಲದಿದ್ದರೆ ಕರಗಿದ ಲೋಹದಲ್ಲಿ ಒತ್ತಡ ಉತ್ಪನ್ನವಾಗಲಿ ಎರಕ ಸೀಳಬಹುದು. ಕರಗಿದ ಲೋಹದಲ್ಲಿ ಉಷ್ಣತೆ ಕಡಿಮೆ ಇದ್ದರೆ ಅದು ಬೇಗ ಆರಿಹೋಗಿ, ಅಚ್ಚಿನೊಳಗೆಲ್ಲ ಪ್ರವಹಿಸದೇ ಇರಬಹುದು. ಅಚ್ಚನ್ನು ಚೆನ್ನಾಗಿ ಘಟ್ಟಿಸದೇ ಇದ್ದರೆ ಮರುಳು ಒಳಗೆ ಬಿದ್ದು ಕರಗಿದ ಲೋಹವನ್ನು ಅಶುದ್ಧಪಡಿಸುವುದು. ಲೋಹವನ್ನು ವೇಗವಾಗಿ ಇಂಥ ಅಚ್ಚಿನಲ್ಲಿ ಸುರಿದರೆ ಅಚ್ಚು ಮುರಿಯಲೂಬಹುದು. ಲೋಹವನ್ನು ವೇಗವಾಗಿ ಇಂಥ ಅಚ್ಚಿನಲ್ಲಿ ಸುರಿದರೆ ಅಚ್ಚು ಮುರಿಯಲೂಬಹುದು. ಲೋಹ ಆರುವಾಗ ಉತ್ಪನ್ನವಾದ ಕಣಗಳಲ್ಲಿ ಒಳ್ಳೆಯ ಸಂಘಟನೆ ಇಲ್ಲದೇ ಇರಬಹುದು. ಈ ದೋಷವಿದ್ದ ಕಾರಣ ಎರಕಗಳಲ್ಲಿ ನೀರಿನ ಒತ್ತಡವಿದ್ದರೆ ಅವು ಬೆವರಲಾರಂಭಿಸುತ್ತವೆ (ಸ್ವೆಟಿಂಗ್). ಕಬ್ಬಿಣದಲ್ಲಿ ಈ ದೋಷ ತಪ್ಪಬೇಕಾದರೆ ತಕ್ಕಷ್ಟು ಸಿಲಿಕಾನ್ ಇರಬೇಕು.

ಇವುಗಳಲ್ಲದೆ ಎರಕದ ರೂಪರಚನೆಯಲ್ಲೇ ದೋಷವಿರಬಹುದು. ಏರು ಕೊಳವಿಗಳು ಆರಿ ಕುಗ್ಗುತ್ತಿರುವ ಎರಕಕ್ಕೆ ಲೋಹವನ್ನು ಒದಗಿಸುವುವು. ಆದ್ದರಿಂದ ಇವುಗಳನ್ನು ತಕ್ಕ ಸ್ಥಳದಲ್ಲಿ ತಕ್ಕಷ್ಟು ಸಂಖ್ಯೆಯನ್ನು ಒದಗಿಸದೇ ಹೋದರೆ ಎರಕ ಪರಿಪೂರ್ಣವಾಗುವುದಿಲ್ಲ. ಅದು ದೋಷಯುಕ್ತವಾಗುವುದು. ಒಂದು ಎರಕದ ಎರಡು ಭಾಗಗಳು ಸಂಧಿಸುವ ಸ್ಥಳ ಸಮಕೋನದಲ್ಲಿದ್ದರೆ ಅಲ್ಲಿ ಸೀಳಾಗುವ ಸಂಭವ ಉಂಟು. ದಪ್ಪ ಮತ್ತು ಸಣ್ಣ ಭಾಗಗಳ ಸೇರುವಿಕೆ ಕ್ರಮೇಣವಾಗಿರದೆ ಒಮ್ಮೆಲೇ ಆಗಿದ್ದರೆ ಎರಕದಲ್ಲಿ ಬಿರುಕುಂಟಾಗುವ ಸಂಭವ ಉಂಟು. (ವೈ.ವಿ.ಆರ್.)

**ಎರಚು ಸಿಡಿಗುಂಡು:** ಬಂದೂಕಿಗೆ ಅಳವಡಿಸಿರುವ ದುಂಡು ಭರಣಿಯನ್ನು ಸಿಡಿಸಿದಾಗ ಅದರಿಂದ ಎಲ್ಲೆಡೆಗಳಿಗೆ ಬಿರಿಯುವ ಸ್ಫೋಟಕ (ಷ್ರಾಪ್ನೆಲ್). ನಿರ್ಮಾಪಕ ಹೆನ್ರಿ ಷ್ರಾಪ್ನೆಲನ (1761–1842) ಹೆಸರನ್ನೇ ಈ ಅಸ್ತ್ರಕ್ಕೆ ನೀಡಲಾಗಿದೆ. ಶತ್ರುವಿನೆಡೆಗೆ ಎರಚುಸಿಡಿಗುಂಡನ್ನು ಹಾರಿಸಿದಾಗ ಅದರಿಂದ ವ್ಯಾಪಕವಾಗಿ ಸ್ಫೋಟಿಸುವ ಗುಂಡುಗಳು ಎದುರಾದ ಸೈನಿಕರಿಗೆ ಮೃತ್ಯುಕಾರಕಗಳು. (ಎ.ಎನ್.ಎಸ್.ಎಂ.)

**ಎರಟಾಸ್ಥನೀಸ್:** ಪ್ರಶ ಪೂ. ಸು. 276–196. ಗ್ರೀಕ್ ಖಗೋಳಶಾಸ್ತ್ರಜ್ಞ. ಇವನ ಆಸಕ್ತಿಯ ಕ್ಷೇತ್ರದ ವ್ಯಾಪ್ತಿ ಅರಿಸ್ಟಾಟಲ್‌ನದರಷ್ಟೇ ಇತ್ತು. ಚರಿತ್ರೆ, ಕ್ರೀಡೆ, ಭೂಗೋಳ, ನಾಟಕ, ಗಣಿತ–ಒಂದೊಂದರಲ್ಲೂ ಇವನ ಕುತೂಹಲ ಹರಿದಿರುವುದನ್ನು ಕಾಣುತ್ತೇವೆ. ಇವನಿಗೆ ಬೀಟ (â–ಗ್ರೀಕ್ ಅಕ್ಷರಮಾಲೆಯಲ್ಲಿ ಎರಡನೆಯ ಅಕ್ಷರ) ಎನ್ನುವ ಅಡ್ಡ ಹೆಸರು ಇತ್ತು. â ಎಂದರೆ ಎರಡನೆಯವನು ಎಂದರ್ಥ. ಆಲ್ಫ (á) ಎಂದರೆ ಮೊದಲನೆಯವನು. ಎರಟಾಸ್ಥನೀಸನ ಸಮಕಾಲೀನ ಮತ್ತು ಮಿತ್ರ ಆರ್ಕಿಮಿಡೀಸ್ ಪ್ರ.ಶ.ಪೂ. ಸು. 287–212). ಅಲೆಗ್ಸಾಂಡ್ರಿಯದ ಪುಸ್ತಕಭಂಡಾರದ ಮುಖ್ಯಸ್ಥನಾಗಿರಲು ಎರಟಾಸ್ಥನೀಸನನ್ನು ಮೂರನೆಯ ಟಾಲೆಮಿ ಕೇಳಿಕೊಂಡಾಗ ಇವನು ಅದನ್ನು ಒಪ್ಪಿದ. ಇವನ ಹಿರಿಮೆಗೆ ಈ ಮರ್ಯಾದೆ ಒಂದು ಸಾಕ್ಷಿ. ಈತನ ಕೊಡುಗೆಗಳ ಸ್ಥೂಲವಿವರವಿಷ್ಟು: ಟ್ರೋಜನ್ ಯುದ್ಧದ ವರ್ಷವನ್ನು ಗ್ರೀಕ್ ಜಾನಪದಗಳಿಂದ, ಐತಿಹ್ಯಗಳಿಂದ ಮತ್ತು ದೊರೆತ ದಾಖಲೆಗಳ ಆಧಾರದಿಂದ ಇವನು ನಿರ್ಣಯಿಸಿದ (ಪ್ರ. ಪೂ. ಸು. 1140); ಅಲ್ಲಿಂದ ಈಚೆಗೆ ಸಂಭವಿಸಿದ ಎಲ್ಲ ಐತಿಹಾಸಿಕ ಘಟನೆಗಳ ನಿಷ್ಕೃಷ್ಟ ಕಾಲಸೂಚಿಯ ತಯಾರಿಕೆಯನ್ನು ಮೊದಲು ಮಾಡಿದವ ಇವನೇ: ಸಾಹಿತ್ಯ ವಿಮರ್ಶೆಯಲ್ಲಿ ಸಾಕಷ್ಟು ಕೈಯಾಡಿಸಿದ; ಹರ್ಷಾಂತ ನಾಟಕಗಳನ್ನು ಕುರಿತು ಶಾಸ್ತ್ರಗ್ರಂಥ ರಚಿಸಿದ; ಗಣಿತಶಾಸ್ತ್ರದಲ್ಲಿ ಮೂಲ ಸಂಖ್ಯೆಗಳನ್ನು (ಪ್ರೈಮ್ ನಂಬರ್ಸ್) ನಿರ್ಣಯಿಸಲು ಒಂದು ಕ್ರಮ ನಿರೂಪಿಸಿದುದರಿಂದ "ಎರಟಾಸ್ಥನೀಸನ ಒಂದರಿ" ಎಂದೇ ಅದು ಇಂದಿಗೂ ಪ್ರಸಿದ್ಧವಾಗಿದೆ; ಅಂದು ತಿಳಿದಿದ್ದ ಪ್ರಪಂಚ ಬ್ರಿಟಿಷ್ ದ್ವೀಪಗಳಿಂದ ಸಿಂಹಳದವರೆಗೂ ಕ್ಯಾಸ್ಪಿಯನ್ ಸಮುದ್ರದಿಂದ ಇಥಿಯೋಪಿಯದವರೆಗೂ ವ್ಯಾಪಿಸಿತ್ತು. ಈತ ಇದನ್ನು ಚಿತ್ರಿಸುವ ಒಂದು ಭೂಪಟ ತಯಾರಿಸಿದ; ಭೂಮಿಯನ್ನು ಸೂರ್ಯ ಪರಿಭ್ರಮಿಸುವ ತೋರ್ಕೆಯ ಸಮತಲ ಮತ್ತು ಭೂಮ್ಯಕ್ಷ–ಇವುಗಳ ನಡುವೆ ಇರುವ ಕೋನವನ್ನು (ಕ್ರಾಂತಿವೃತ್ತದ ಬಾಗು) ನಿಷ್ಕೃಷ್ಟವಾಗಿ ನಿರ್ಣಯಿಸಿದ.

ಭೂಮಿಯ ಗಾತ್ರ ನಿರ್ಣಯದಲ್ಲಿ ಇವನ ಸಂಶೋಧನೆ ಅತ್ಯಾಧುನಿಕವೂ ಸರಳವೂ ಆಗಿದೆ. ಈ ಬೌದ್ಧಿಕ ವಿಜಯದ ಹಿರಿಮೆ ಇಂದಿನ ಕಾಲದವರೆಗೆ ಜನರಿಗೆ ತಿಳಿದಿರಲಿಲ್ಲ. ಕರ್ಕಾಟಕ ಸಂಕ್ರಾಂತಿ ದಿವಸದಂದು ಸೂರ್ಯ ದಕ್ಷಿಣ ಈಜಿಪ್ಟಿನ ಸಯೀನ್ನಿನ (ಆಧುನಿಕ ಆಸ್ವಾನ್) ನೆತ್ತಿಯ ಮೇಲೆ ಬರುವುದೆಂದೂ, ಅದೇ ಗಳಿಗೆಯಲ್ಲಿ ಅಲೆಗ್ಸಾಂಡ್ರಿಯಾದಲ್ಲಿ ಸೂರ್ಯನ ಖಮಧ್ಯದೂರ (ಜೆನಿತ್ ಡಿಸ್ಟೆನ್ಸ್) 7° ಎಂದೂ ಗೊತ್ತಿತ್ತು. ಈ ವ್ಯತ್ಯಾಸ ಭೂಮಿಯ ಹೊರಮೈ ವಕ್ರತೆಯಿಂದ ಮಾತ್ರ ಸಾಧ್ಯ; ಆದ್ದರಿಂದ ಇವೆರಡು ಸ್ಥಳಗಳ ನಡುವಿನ ದೂರ ತಿಳಿದಿದ್ದರೆ ಮತ್ತು ಭೂಮಿ ಒಂದು ದೊಡ್ಡ ಗೋಲ ಎಂದು ಭಾವಿಸಿದರೆ, ಭೂಮಿಯ ತ್ರಿಜ್ಯವನ್ನು ಗಣಿಸಬಹುದು. ಈ ಸೂತ್ರದ ಪ್ರಕಾರ ಎರಟಾಸ್ಥನೀಸ್ (ಅಂದಿನ ಗ್ರೀಕ್ ಮಾನದಲ್ಲಿ) ಭೂಮಿಯ ಪರಿಧಿ 25,000 ಮೈಲಿಗಳಿಗಿಂತ ಸ್ವಲ್ಪ ಹೆಚ್ಚು ಇದೆ ಎಂದು ತೀರ್ಮಾನಿಸಿದ. ಇಂದಿನ ನಿಷ್ಕೃಷ್ಟ ಬೆಲೆಯೊಂದಿಗೆ ಇದನ್ನು ಹೋಲಿಸುವಾಗ ಆತನ ತರ್ಕಶುದ್ಧತೆ ನಮ್ಮನ್ನು ದಂಗುಬಡಿಸುವಂತಿದೆ. ಆದರೆ ಎಲ್ಲ ಮಹಾ ಭಾವನೆಗಳಂತೆ ಇದೂ ಸಮಕಾಲೀನ ಮೌಲ್ಯಗಳ ಬುಡ ಕಲಕಿತು. ಅಧಿಕಾರವರ್ಗ ತಿಳಿದಿದ್ದ ನೆಲ ಎಷ್ಟು ಕಿರಿಯದು ಎಂದು ಈ ಗಣನೆ ತೋರಿಸಿತು. ಇದನ್ನು ಅಧಿಕಾರಿಗಳು ಒಪ್ಪಲಿಲ್ಲ; ಭೂಮಿ ಅಷ್ಟು ವಿಶಾಲವಾಗಿರುವುದು ಸಾಧ್ಯವಿಲ್ಲ ಎಂದು ತೀರ್ಮಾನಿಸಿ ಪೊಸೈಡೋನಿಯಸ್ (ನೋಡಿ) ಕೊಟ್ಟಿದ್ದ ಬೆಲೆ (ಸು.18,000 ಮೈಲುಗಳು) ಸರಿಯಾದದ್ದು ಎಂದು ಒಪ್ಪಿಕೊಂಡರು.

ಆಕಾಶದ ದೀರ್ಘ ವೀಕ್ಷಣೆಯಿಂದ 675 ಸ್ಥಿರನಕ್ಷತ್ರಗಳ ಒಂದು ಯಾದಿ ತಯಾರಿಸಿದ್ದನೆಂದು ತಿಳಿದಿದೆ. ತನ್ನ 80ನೆಯ ಪ್ರಾಯದಲ್ಲಿ ನಿತ್ರಾಣನೂ ದೃಷ್ಟಿಹೀನೂ ಎರಟಾಸ್ಥನೀಸ್ ಸ್ವಪ್ರೇರಣೆಯಿಂದ ನಿರಶನ ಶಿಕ್ಷೆ ವಿಧಿಸಿಕೊಂಡು ಅಸುನೀಗಿದ. *

ಸುವರ್ಣ ಕರ್ನಾಟಕ ವರ್ಷದ ನೆನಹು

## ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಶ್ವಕೋಶ

## ಸಂಪುಟ ಮೂರು

**ಎರಟೋ:** ಪ್ರಾಚೀನ ಗ್ರೀಕ್ ಪುರಾಣಗಳ ಪ್ರಕಾರ ಒಂಬತ್ತು ಸಾರಸ್ವತ ಕಲಾಭಿಮಾನಿ ದೇವತೆಗಳಲ್ಲೊಬ್ಬಳು. ಈ ದೇವತೆಗಳ ಮೂಲ ಖಚಿತವಾಗಿ ತಿಳಿಯದು. ಆದರೂ ಇವರು ಅತ್ಯಂತ ಪ್ರಾಚೀನರು. ಗ್ರೀಸಿನ ಬೋಯೀಷಿಯದಲ್ಲಿನ ಹೆಲಿಕಾನ್ ಪರ್ವತ ಈ ದೇವತೆಗಳ ಆರಾಧನೆ ಪ್ರಾರಂಭವಾದ ಸ್ಥಳ. ಗಾಯಕರೂ ಕವಿಗಳೂ ಆಗಿದ್ದವರ ಪೋಷಕ ದೇವತೆಗಳೆಂದು ಇವರು ಪ್ರಸಿದ್ಧರಾಗಿದ್ದಾರೆ. ಬರಬರುತ್ತ ಇವರ ಪೋಷಕ ಹಸ್ತ ಇತರ ಕಲೆಗಳನ್ನೂ ವಿಜ್ಞಾನವನ್ನೂ ಬಳಸಿದಂತೆ ಕಾಣುತ್ತದೆ. ಹೋಮರನ ಒಡಿಸ್ಸಿಯ ಕಾಲಕ್ಕಾಗಲೇ ಈ ಒಂಬತ್ತು ದೇವತೆಗಳೂ ಕಲಾಭಿಮಾನಿ ದೇವತೆಗಳೆಂಬ ಉಲ್ಲೇಖ ಕಂಡುಬರುತ್ತದೆ. ಇವರೆಲ್ಲರೂ ಜ್ಯೂಸ್ ದೇವನ ಪುತ್ರಿಯರು. ಇವರಲ್ಲಿ ಆರನೆಯವಳೇ ಎರಟೋ, ಈಕೆ ಸೌಂದರ್ಯಾಧಿದೇವತೆ, ಶೃಂಗಾರ ಕಾವ್ಯಕ್ಕೆ ಮಾತೃಪ್ರಾಯಳು.

*

**ಎರಡನೆಯ ಮಹಾಯುದ್ಧ:** 1939–45. ಎಲ್ಲ ಅಂತಾರಾಷ್ಟ್ರೀಯ ವ್ಯಾಜ್ಯಗಳನ್ನೂ ಶಾಂತಿಯುತ ಮಾರ್ಗದಿಂದಲೇ ಪರಿಹರಿಸಿಕೊಳ್ಳಬೇಕೆಂದು ಒಂದನೆಯ ಮಹಾಯುದ್ಧಾನಂತರದಲ್ಲಿ ಆಗಿದ್ದ ವರ್ಸೇಲ್ಸ್ ಒಪ್ಪಂದದ ಆಶಯವನ್ನು ಉಲ್ಲಂಘಿಸಿ ಬಲಪ್ರಯೋಗದಿಂದ ರಾಜ್ಯ ವಿಸ್ತರಣೆಯ ಕಾರ್ಯದಲ್ಲಿ ತೊಡಗಿದ್ದ ಜರ್ಮನಿ, ಇಟಲಿ, ಜಪಾನುಗಳನ್ನೆದುರಿಸಿ ಬ್ರಿಟನ್, ಫ್ರಾನ್ಸ್, ಸೋವಿಯತ್ ಒಕ್ಕೂಟ ಅಮೆರಿಕ ಸಂಯುಕ್ತಸಂಸ್ಥಾನಗಳೇ ಮೊದಲಾದ ರಾಷ್ಟ್ರಗಳು ನಡೆಸಿದ ಯುದ್ಧ. ಸು. 6 ವರ್ಷ ಕಾಲ ನಡೆದ ಈ ಯುದ್ಧ ವಿಶ್ವವ್ಯಾಪಿಯಾಗಿ ಪರಿಣಮಿಸಿ ಅಗಾಧ ಸಾವು ನೋವು ಕಷ್ಟ ನಷ್ಟಗಳಲ್ಲಿ ಪರ್ಯವಸಾನವಾಯಿತಲ್ಲದೆ ವಿಶ್ವದ ಆರ್ಥಿಕ ರಾಜಕೀಯ ಸಾಮಾಜಿಕ ವೈಜ್ಞಾನಿಕ ಕ್ಷೇತ್ರಗಳಲ್ಲಿ ಅಗಾಧ ಪರಿವರ್ತನೆಗಳಿಗೂ ಕಾರಣವಾಯಿತೆನ್ನಬಹುದು.

ಈ ಲೇಖನವನ್ನು ಸ್ಥೂಲವಾಗಿ ಈ ರೀತಿ ವಿಂಗಡಿಸಲಾಗಿದೆ: 1. ಉಗಮ, 2.ಯುರೋಪ್, ಆಫ್ರಿಕ ಮತ್ತು ಪಶ್ಚಿಮ ಏಷ್ಯಗಳಲ್ಲಿ ಯುದ್ಧ, 3. ಚೀನ–ಜಪಾನ್ ಯುದ್ಧ, 4. ಅಟ್ಲಾಂಟಿಕ್ ಸಾಗರ ಮತ್ತು ಐರೋಪ್ಯ ಸಮುದ್ರಗಳ ಮೇಲಿನ ಯುದ್ಧ, 5. ಪೆಸಿಫಿಕ್ ಯುದ್ಧ, 6. ಶಾಂತಿ ಸ್ಥಾಪನೆ, ಯುದ್ಧದ ಪರಿಣಾಮ, ಯುದ್ಧವೆಚ್ಚ ಇತ್ಯಾದಿ.

ಲೇಖನದ ಕೊನೆಯಲ್ಲಿ ಎರಡನೆಯ ಮಹಾಯುದ್ಧದ ಮುಖ್ಯ ಘಟನೆಗಳ ಪಟ್ಟಿಯೊಂದನ್ನು ಕೊಡಲಾಗಿದೆ.

**ಉಗಮ:** ಎರಡನೆಯ ಮಹಾಯುದ್ಧದ ಕಾರಣಗಳನ್ನು ತಿಳಿಯಬೇಕಾದರೆ 1918ರ ವರ್ಸೇಲ್ಸ್ ಒಪ್ಪಂದದ ಅನಂತರದ ಪರಿಸ್ಥಿತಿಯನ್ನು ವಿವೇಚಿಸಬೇಕಾಗುತ್ತದೆ. ವರ್ಸೇಲ್ಸ್ ಒಪ್ಪಂದದ ನಿಬಂಧನೆಗಳು, ಅದರ ಮಹತ್ತ್ವ, ನ್ಯೂನತೆ, ಒಂದನೆಯ ಮಹಾಯುದ್ಧದ ವಿಜಯೀ ರಾಷ್ಟ್ರಗಳು ಸೋತ ಜರ್ಮನಿಯ ಬಗ್ಗೆ ತಳೆದ ಧೋರಣೆ, ಅವು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡ ರೀತಿ, ನೂತನ ಯುರೋಪಿನ ನಿರ್ಮಾಣ, ಪ್ರಪಂಚದಲ್ಲಿ ಶಾಂತಿಸ್ಥಾಪನೆಯ ಪ್ರಯತ್ನ ವಿಫಲವಾದ ಬಗೆ, ಮತ್ತು ಹಿಟ್ಲರನ ಆಕ್ರಮಣಕ್ಕೆ ಅನುವಾಗಿ ಒದಗಿಬಂದ ಅವಕಾಶ–ಇವೆಲ್ಲವನ್ನೂ ಪರಿಶೀಲಿಸುವುದು ಅಗತ್ಯ.

ಎರಡನೆಯ ಮಹಾಯುದ್ಧಕ್ಕೆ ಮುಂಚಿನ ವಿಶ್ವದ ಇತಿಹಾಸದಲ್ಲಿ ಒಂದನೆಯ ಮಹಾಯುದ್ಧವೇ(1914–18) ಅತ್ಯಂತ ಭೀಕರವಾದ ಯುದ್ಧವೆನಿಸಿತ್ತು. ಅದರಲ್ಲಿ ಉಂಟಾದ ಅಪಾರ ಸಾವುನೋವುಗಳನ್ನು ಮನಗಂಡ ರಾಷ್ಟ್ರಗಳು ಯುದ್ಧವನ್ನು ಕೊನೆಗಾಣಿಸಿ, ಜಗತ್ತಿನಲ್ಲಿ ಸ್ಥಿರವಾದ ಶಾಂತಿ ಸ್ಥಾಪಿಸಲು ಉದ್ಯುಕ್ತವಾಗಿದ್ದುವು. ಯುರೋಪಿನ ನಾಯಕರೂ ರಾಜಕಾರಣಿಗಳೂ ದಾರ್ಶನಿಕರೂ ಕಲೆತು ಸುಭದ್ರತೆ ಶಾಂತಿಗಳ ತಳಹದಿಯ ಮೇಲೆ ನೂತನಸಮಾಜವನ್ನು ರೂಪಿಸಲು ಪ್ರಯತ್ನಪಟ್ಟರು. ಈ ಕಾರ್ಯದಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳೂ ಮಗ್ನವಾಗಿದ್ದುವು. ಆದರೆ ಈ ಧ್ಯೇಯಸಾಧನೆಯಲ್ಲಿ ಏಕಮುಖತೆ ಕಂಡುಬರಲಿಲ್ಲ. ಯುರೋಪಿನ ರಾಷ್ಟ್ರಗಳ ನಾಯಕರು ಸಂಕುಚಿತ ಮನೋಭಾವ ತಳೆದು ತಂತಮ್ಮ ದೇಶಗಳ ಹಿತಗಳನ್ನೇ ಪ್ರಧಾನ ಮಾಡಿಕೊಂಡು ಅವುಗಳ ಪ್ರತಿಷ್ಠೆಗಳನ್ನು ಹೆಚ್ಚಿಸುವ ಯೋಜನೆಗಳಲ್ಲಿ ವಿಶೇಷ ಆಸಕ್ತಿ ವಹಿಸಿದ್ದರೇ ವಿನಾ ಸುಭದ್ರ ಶಾಂತಿಯುತ ಸಮಾಜದ ರಚನೆಯಲ್ಲಿ ಯಾವಬಗೆಯ ಆಸಕ್ತಿಯನ್ನಾಗಲಿ ಉತ್ಸಾಹವನ್ನಾಗಲಿ ತೋರಿಸಲಿಲ್ಲ. ಈ ಸಂಕುಚಿತ ಮನೋಭಾವದ ಪ್ರದರ್ಶನದಿಂದಲೇ ಆ ನಾಯಕರು ಕೈಗೊಂಡ ಯೋಜನೆಗಳಾವುವೂ ಫಲಕಾರಿಯಾಗದೆ ಎರಡನೆಯ ಮಹಾಯುದ್ಧ ಅನಿವಾರ್ಯವಾಯಿತು.

ಒಂದನೆಯ ಮಹಾಯುದ್ಧಾನಂತರ ನಾನಾ ಸಮಸ್ಯೆಗಳು ತಲೆದೋರಿದುವು. ವಿಶ್ವಶಾಂತಿಸ್ಥಾಪನೆ ಮತ್ತು ಸುಭದ್ರ ಸಮಾಜ ನಿರ್ಮಾಣದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಆಗ ಉದ್ಭವಿಸಿದ ಈ ಸಮಸ್ಯೆಗಳು ಅಡಚಣೆಯನ್ನುಂಟು ಮಾಡಿದವು. ಈ ರಾಷ್ಟ್ರಗಳು ತಮ್ಮ ಪರಸ್ಪರ ಸಂಬಂಧದ ವಿಚಾರದಲ್ಲಿ ಹಳೆಯ

ವಿಧಾನಗಳನ್ನೇ ಮುಂದುವರಿಸಿಕೊಂಡು ಬಂದವೇ ಹೊರತು, ಅವುಗಳ ಬದಲು ಹೊಸ ರೀತಿ ನೀತಿಗಳನ್ನು ರೂಪಿಸುವ ಗೋಜಿಗೇ ಹೋಗಲಿಲ್ಲ. ಮುಖ್ಯವಾಗಿ ರಾಷ್ಟ್ರಗಳ ವೈಯಕ್ತಿಕ ಭದ್ರತೆಯ ಪರಿಕಲ್ಪನೆಗೂ ಒಂದನೆಯ ಮಹಾಯುದ್ಧಾನಂತರ ಅಮೆರಿಕಾಧ್ಯಕ್ಷ ವಿಲ್ಸನರು ಪ್ರತಿಪಾದಿಸಿದ ಸಾಮೂಹಿಕ ಭದ್ರತೆಯ ಪರಿಕಲ್ಪನೆಗೂ ಅಂದರೆ ಈ ಎರಡು ಸಿದ್ಧಾಂತಗಳ ನಡುವಿನ ತಿಕ್ಕಾಟವೇ ಈ ಸಮಸ್ಯೆಯ ಮೂಲ. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ನಡುವಣ ಕಾಲದಲ್ಲಿ ಈ ಎರಡು ತತ್ತ್ವಗಳ ಘರ್ಷಣೆಯ ಪರಿಣಾಮವಾಗಿ ಯುರೋಪಿನ ರಾಷ್ಟ್ರಗಳು ಆಕ್ರಮಣಕಾರಿ ಧೋರಣೆಯನ್ನು ಮುಂದುವರಿಸಿ ತಾವೇ ಸ್ಥಾಪಿಸಿದ ರಾಷ್ಟ್ರಕೂಟವನ್ನು (ಲೀಗ್ ಆಫ್ ನೇಷನ್ಸ್) ಧಿಕ್ಕರಿಸಿದುವು. ಇಂಥ ಪರಿಸ್ಥಿತಿಯಲ್ಲಿ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು ಆಕ್ರಮಣಕಾರಿ ರಾಷ್ಟ್ರಗಳನ್ನು ಎದುರಿಸಲು ವಿಫಲವಾದುವು. ವರ್ಸೇಲ್ಸ್ ಒಪ್ಪಂದದ ಪ್ರಕಾರ ಹುಟ್ಟಿಕೊಂಡಿದ್ದ ಅನೇಕ ಸಣ್ಣ ರಾಷ್ಟ್ರಗಳೂ, ಅವುಗಳಿಂದ ಉದ್ಭವಿಸಿದ ಗಡಿ ಸಮಸ್ಯೆಗಳು, ವಿಜಯೀರಾಷ್ಟ್ರಗಳೇ ಒಪ್ಪಂದದ ಪ್ರಣಾಳಿಕೆಯನ್ನು ಪಾಲಿಸದಿದ್ದುದು–ಇವೇ ಜರ್ಮನಿ ಮತ್ತೆ ತಲೆ ಎತ್ತಿ ಪ್ರಬಲವಾಗಲು ಕಾರಣಗಳಾದವು. ಅಲ್ಲದೆ ಆ ರಾಷ್ಟ್ರದ ನಾಯಕರು ಆಗಿನ ಯುರೋಪಿನ ಪರಿಸ್ಥಿತಿಯನ್ನು ತಮಗೆ ಬೇಕಾದ ರೀತಿಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಯಿತು.

ಯಾಲ್ಟದಲ್ಲಿ ಬೃಹತ್ ತ್ರಿಮೂರ್ತಿ : ಚರ್ಚಿಲ್, ರೂಸ್ವೆಲ್ಟ್, ಸ್ಟಾಲಿನ್

ಇಂಥ ಸನ್ನಿವೇಶವನ್ನು ಉಂಟುಮಾಡಲು ರಷ್ಯ ಮತ್ತು ಮಿತ್ರ ರಾಷ್ಟ್ರಗಳು ಸಾಮೂಹಿಕ ಭದ್ರತೆಯ ವಿಷಯದಲ್ಲಿ ತೋರಿದ ಉದಾಸೀನ ಮನೋಭಾವ, ಅನಾದರಣೆ ಮತ್ತು ಅನಿಶ್ಚಿತತೆಗಳೇ ಕಾರಣವೆನ್ನಬಹುದು. ಯುದ್ಧ ಸನ್ನಿಹಿತವಾದಾಗ, ಪರಿಸ್ಥಿತಿ ಉಲ್ಬಣವಾದಾಗ ಮಾತ್ರವೇ ಆ ರಾಷ್ಟ್ರಗಳು ಒಂದಾಗಲು, ಒಗ್ಗಟ್ಟಿನಿಂದ ಕ್ರಮ ಕೈಗೊಳ್ಳಲು ಪ್ರಯತ್ನಿಸಿದುವು.

ವರ್ಸೇಲ್ಸ್ ಒಪ್ಪಂದದಲ್ಲಿ ಆಕ್ರಮಣಕಾರರಿಗೆ ಉತ್ತೇಜನಕಾರಿಯಾದ ಅಂಶಗಳೇನಾದರೂ ಇದ್ದುವೆ ಎಂಬುದನ್ನು ಈ ಸಂದರ್ಭದಲ್ಲಿ ವಿವೇಚಿಸಬೇಕಾಗಿದೆ. ವರ್ಸೇಲ್ಸ್ ಒಪ್ಪಂದವನ್ನು ರೂಪಿಸಿದ ವಿಜಯೀ ರಾಷ್ಟ್ರಗಳ ನಾಯಕರು ತಮ್ಮ ತಮ್ಮ ರಾಷ್ಟ್ರಗಳ ಸ್ಥಾನಮಾನ, ಪ್ರತಿಷ್ಠೆಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಮಗ್ನರಾಗಿ, ಸೋತ ಜರ್ಮನಿಯ ವಿಚಾರದಲ್ಲಿ ಕಠಿಣ ರೀತಿಯಲ್ಲಿ ವರ್ತಿಸಿದ್ದರಿಂದ ಎರಡನೆಯ ಮಹಾಯುದ್ಧದ ಬೀಜವನ್ನು ಅದರಲ್ಲೇ ಬಿತ್ತಿದಂತಾಯಿತೆಂದು ಹೇಳುವವರುಂಟು. ಆದರೆ ಆ ಒಪ್ಪಂದವನ್ನು ಕೂಲಂಕಷವಾಗಿ ವಿಮರ್ಶಿಸಿದರೆ, ವರ್ಸೇಲ್ಸ್ ಒಪ್ಪಂದ ಎರಡನೆಯ ಮಹಾಯುದ್ಧಕ್ಕೆ ನಾಂದಿಯಾಯಿತೆಂದು ಹೇಳುವುದು ಸತ್ಯಕ್ಕೆ ದೂರ ಎಂದು ಹೇಳಬಹುದಾಗಿದೆ. ಬಲಿಷ್ಠ ರಾಷ್ಟ್ರಗಳ ಮಹತ್ವಾಕಾಂಕ್ಷೆ, ತಮ್ಮನ್ನು ತಾವು ಕಾಯ್ದುಕೊಳ್ಳಲಾರದ ಸಣ್ಣ ರಾಷ್ಟ್ರಗಳಿಗೆ ಸಾಮೂಹಿಕ ಬೆಂಬಲದ ಅಭಾವ–ಇವೆಲ್ಲವೂ ಪರಿಸ್ಥಿತಿ ಹದಗೆಡಲು ಕಾರಣ.

ಒಂದನೆಯ ಮಹಾಯುದ್ಧದಲ್ಲಿ ಹೆಚ್ಚಿನ ಹಾನಿ ಹೊಂದಿದ ದೇಶವೆಂದರೆ ಫ್ರಾನ್ಸ್. ಆ ರಾಷ್ಟ್ರ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು, ಜರ್ಮನಿಯನ್ನೂ ಬಲಹೀನವನ್ನಾಗಿ ಮಾಡಿ, ಅದು ಯುರೋಪಿನಲ್ಲಿ ಪುನಃ ಪ್ರಬಲವಾಗದಂತೆ ನೋಡಿಕೊಳ್ಳುವ ಉದ್ದೇಶ ಹೊಂದಿತ್ತು. ಆ ಉದ್ದೇಶದ ಪೂರೈಕೆಗೆ ಬ್ರಿಟನ್ನೂ ಸಹಕರಿಸಲು ಸಿದ್ಧವಿತ್ತು. ಆದರೆ ಜರ್ಮನಿಯ ಬಗ್ಗೆ ಅದು ಉದಾರಭಾವ ತಳೆದಿತ್ತು. ಹೀಗಾಗಿ ಅಮೆರಿಕ ಮತ್ತು ಬ್ರಿಟನ್ನುಗಳಿಂದ ತನ್ನ ಭದ್ರತೆಯ ಬಗ್ಗೆ ಭರವಸೆಗಳು ಬಂದ ಅನಂತರವೇ ಫ್ರಾನ್ಸ್ ಜರ್ಮನಿಯನ್ನು ನಿರ್ಮೂಲಗೊಳಿಸುವ ಪ್ರಯತ್ನವನ್ನು ಕೈ ಬಿಟ್ಟಿತು. ಆದರೆ ಆ ರಾಷ್ಟ್ರಗಳು ತಾವು ಕೊಟ್ಟ ಮಾತಿನಂತೆ ನಡೆದುಕೊಳ್ಳದಿದ್ದಾಗ ಫ್ರಾನ್ಸ್‌ಗೆ ರಾಷ್ಟ್ರ ಕೂಟದಲ್ಲಿದ್ದ ನಂಬಿಕೆಯೂ ವಿಶ್ವಾಸವು ಮಾಸಿಹೋಯಿತು. ಫ್ರಾನ್ಸ್‌ಗೆ ಸೈನಿಕ ರಕ್ಷಣೆ ದೊರೆಯದಿದ್ದಾಗ, ಮಿಲಿಟರಿ ಒಪ್ಪಂದಕ್ಕೆ ಸಂಯುಕ್ತ ಸಂಸ್ಥಾನ ನಕಾರ ಸೂಚಿಸಿದಾಗ, ವರ್ಸೇಲ್ಸ್ ಒಪ್ಪಂದದ ತಳಹದಿಯೇ ಕುಸಿಯಿತೆನ್ನಬಹುದು. ಅಮೆರಿಕದ ಸೆನೆಟ್ ಸಭೆ ವರ್ಸೇಲ್ಸ್ ಒಪ್ಪಂದವನ್ನು ಅಂಗೀಕರಿಸದಿದ್ದುದು ಮತ್ತೊಂದು ಪೆಟ್ಟಾಯಿತು. ಕೊನೆಗೆ ಯುರೋಪಿನಲ್ಲಿ ಶಾಂತಿ ಕಾಪಾಡಿಕೊಂಡು ಬರಲು ಒಂದು ಅಂತಾರಾಷ್ಟ್ರೀಯ ಸೇನೆಯನ್ನು ರೂಪಿಸಬೇಕೆಂಬ ಫ್ರಾನ್ಸಿನ ಸೂಚನೆಗೂ ಆ ರಾಷ್ಟ್ರಗಳ ಒಪ್ಪಿಗೆ ದೊರೆಯಲಿಲ್ಲ. ಆದ್ದರಿಂದ ವರ್ಸೇಲ್ಸ್ ಒಪ್ಪಂದದ ವಿಚಾರದಲ್ಲಿ ಫ್ರಾನ್ಸ್ ಹೆಚ್ಚಿನ ಆಸಕ್ತಿ ತೋರಿಸಲಿಲ್ಲ. ಹೆಚ್ಚಿನ ನಷ್ಟ ಹೊಂದದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಶಾಂತಿ ಸ್ಥಾಪಿಸುವ ವಿಷಯದಲ್ಲಿ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಅಂತಾರಾಷ್ಟ್ರೀಯ ಸಂಸ್ಥೆಯ ಸ್ಥಾಪನೆಯ ಯೋಜನೆಯಲ್ಲಿ ಆಸಕ್ತಿ ತೋರಿಸಿದರೂ ಆ ಸಂಸ್ಥೆ ಪರಿಣಾಮಕಾರಿಯಾದ ಕಾರ್ಯಕ್ರಮ ಹೊಂದುವುದಕ್ಕೆ ಯಾವ ಮಾರ್ಗವನ್ನೂ ಸೂಚಿಸಲಿಲ್ಲ. ಅಲ್ಲದೆ ಸಂಯುಕ್ತಸಂಸ್ಥಾನ ರಾಷ್ಟ್ರಕೂಟದ ಸದಸ್ಯತ್ವವನ್ನೂ ಪಡೆಯದಿದ್ದುದರಿಂದ ಆ ರಾಷ್ಟ್ರದ ಬಗೆಗೆ ಸಂಶಯ ಇನ್ನೂ ಹೆಚ್ಚಾಯಿತು.

ಇದರಿಂದ ಬ್ರಿಟನ್ ಕೂಡ ಸಂಪ್ರದಾಯವಾದಿ ಧೋರಣೆಯನ್ನೇ ಅನುಸರಿಸಿ ಯುರೋಪಿನ ರಾಜಕೀಯದಲ್ಲಿ ಆಸಕ್ತಿ ಕಡಿಮೆ ಮಾಡಿಕೊಂಡಿತು. ಆ ವೇಳೆಗಾಗಲೇ ಮತ್ತೆ ತಲೆಯೆತ್ತಿ ಪ್ರಬಲವಾಗುವ ಚಿಹ್ನೆ ತೋರುತ್ತಿದ್ದ ಜರ್ಮನಿಯನ್ನು ಹದ್ದುಬಸ್ತಿನಲ್ಲಿಡಬೇಕೆಂಬ ಫ್ರಾನ್ಸಿನ ಆಶಯಕ್ಕೆ ಬ್ರಿಟನ್ ಅಮೆರಿಕಗಳು ಬೆಂಬಲ ನೀಡಲಿಲ್ಲ. ಫ್ರಾನ್ಸ್ ಬ್ರಿಟನ್‌ಗಳು ಒಂದಾಗಿ ನಡೆಯುವ ಬದಲು ತಾವೇ ಪರಸ್ಪರವಾಗಿ ಸ್ಪರ್ಧಿಸಿದುವು. ಇದರ ಪರಿಣಾಮವಾಗಿ ಬ್ರಿಟನ್ ಫ್ರಾನ್ಸ್‌ಗಳ ನಡುವೆ ಘರ್ಷಣೆ ಉಂಟಾಯಿತು. ಫ್ರಾನ್ಸ್ ಯಾರನ್ನೂ ಲೆಕ್ಕಿಸದೆ ರೂರ್ ಪ್ರದೇಶವನ್ನು ತನ್ನದನ್ನಾಗಿ ಮಾಡಿಕೊಂಡಿತು. ಇದನ್ನು ಗಮನಿಸಿದ ಜರ್ಮನಿಗೆ ವರ್ಸೇಲ್ಸ್ ಒಪ್ಪಂದವನ್ನು ಉಲ್ಲಂಘಿಸುವ ಧೈರ್ಯ ಬಂದಿತು.

ವರ್ಸೇಲ್ಸ್ ಒಪ್ಪಂದ ಕರಾಳ ಒಪ್ಪಂದವೆಂದು ಹೇಳಿದವನು ಹಿಟ್ಲರ್. ಆದರೆ ಅದೇ ಮುಂದೆ ಸಂಭವಿಸಿದ ಎಲ್ಲ ಅನರ್ಥಗಳಿಗೂ ಮೂಲವೆಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಆ ಒಪ್ಪಂದದ ಅನಂತರವೂ ಜರ್ಮನಿ ಪ್ರಬಲ ರಾಷ್ಟ್ರವಾಗಿಯೇ ಉಳಿಯಿತು. ಅಲ್ಲದೆ ಆ ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸುವ ಅವಕಾಶ ಅದರಲ್ಲಿತ್ತು. ಹೊಸ ರಾಷ್ಟ್ರಗಳ ನಿರ್ಮಾಣ ಮತ್ತು ಅವುಗಳ ಭದ್ರತೆಯ ವಿಚಾರದಲ್ಲೂ ವರ್ಸೇಲ್ಸ್ ಒಪ್ಪಂದ ಸರಿಯಾದ ನಿರ್ಧಾರಗಳನ್ನೊಳಗೊಂಡಿತ್ತು. ಆದ್ದರಿಂದ ವರ್ಸೇಲ್ಸ್

ಅಟ್ಲಾಂಟಿಕ್ ಘೋಷಣೆಗಾಗಿ ರೂಸ್ವೆಲ್ಟ್– ಚರ್ಚಿಲ್ ಸಮಾಗಮ

ಒಪ್ಪಂದವನ್ನು ವೈರ ಪ್ರಚೋದಕ ಅನ್ಯಾಯಕಾರಿ ಒಪ್ಪಂದವೆಂದು ಹೇಳುವುದರಲ್ಲಿ ಸತ್ಯಾಂಶವಿಲ್ಲ. ಆದರೆ ಸೋತ ರಾಷ್ಟ್ರಗಳು ಗೆದ್ದ ರಾಷ್ಟ್ರಗಳಿಗೆ ಯುದ್ಧದ ನಷ್ಟವನ್ನು ಭರ್ತಿಮಾಡಿಕೊಡಬೇಕೆಂಬ ಬಗ್ಗೆ ರಚಿತವಾಗಿದ್ದ ನಿಬಂಧನೆಗಳು ಮಾತ್ರ ವಾಸ್ತವಿಕ ಪರಿಸ್ಥಿತಿಗೆ ಅನುಗುಣವಾಗಿ ಇರಲಿಲ್ಲವೆಂದು ಹೇಳಲೇಬೇಕು. ಈ ಅಂಶವೂ ಜರ್ಮನಿಯಲ್ಲೇ ಉದ್ಭವಿಸಿದ ಪರಿಸ್ಥಿತಿಗಳೂ ಆ ದೇಶದ ಹಣದುಬ್ಬರಕ್ಕೆ ಕಾರಣವಾದುವು. ಈ ಆರ್ಥಿಕ

ಬಿಕ್ಕಟ್ಟೇ ಯುದ್ಧಾನಂತರ ಜರ್ಮನಿಯಲ್ಲಿ ಸ್ಥಾಪಿತವಾಗಿದ್ದ ಗಣರಾಜ್ಯದ ಪತನಕ್ಕೂ ಕಾರಣವಾಯಿತು. ಈ ಪರಿಸ್ಥಿತಿಯಿಂದ ರೊಚ್ಚಿಗೆದ್ದ ಜರ್ಮನಿಯ ಮಧ್ಯಮವರ್ಗ ಗಣರಾಜ್ಯಸರ್ಕಾರವನ್ನು ಉರುಳಿಸಿ, ಜರ್ಮನಿಯ ರಾಜಕೀಯದಲ್ಲಿ ಹಿಟ್ಲರ್ ಪ್ರವೇಶಿಸುವುದಕ್ಕೂ ಅವಕಾಶಮಾಡಿಕೊಟ್ಟಿತು. ವರ್ಸೇಲ್ಸ್ ಒಪ್ಪಂದದ ಆರ್ಥಿಕ ನಿಬಂಧನೆಗಳು ಯುರೋಪಿನಲ್ಲಿ ತೀವ್ರ ಪರಿಣಾಮವನ್ನುಂಟುಮಾಡಿದುವು. ಮಿತ್ರರಾಷ್ಟ್ರಗಳಲ್ಲಿ ಹೊಂದಾಣಿಕೆಯಿಲ್ಲದ್ದೂ ಆ ಒಪ್ಪಂದದ ವಿಧಿಗಳನ್ನು ಪಾಲಿಸದಿದ್ದದ್ದೂ ಅವುಗಳ ಆಚರಣೆಗೆ ಒತ್ತಾಯ ತರದಿದ್ದದ್ದೂ ಈ ಪರಿಣಾಮವನ್ನು ತೀವ್ರತರಗೊಳಿಸಿದುವು.

ಎಲ್ ಆಲಮೇನ್ ಕದನನಾಯಕ ಜನರಲ್ ಮಾಂಟ್ಗಮರಿ–ಐಸನ್‌ಹೌವರ್ ಜೊತೆಗೆ

ವರ್ಸೇಲ್ಸ್ ಒಪ್ಪಂದದ ಲೋಪದೋಷಗಳನ್ನು ಹಿಟ್ಲರ್ ಉತ್ಪ್ರೇಕ್ಷೆ ಮಾಡಿ ತೋರಿಸಿ, ಜರ್ಮನಿಯ ಜನತೆಯಲ್ಲಿ ಮಿತ್ರರಾಷ್ಟ್ರಗಳ ಬಗೆಗೆ ವೈರ ಮೂಡಿಸಿ ಅಧಿಕಾರ ಗಳಿಸಿದ. ತನ್ನ ಅಧಿಕಾರವನ್ನು ಭದ್ರಗೊಳಿಸುವ ದೃಷ್ಟಿಯಿಂದ ತನ್ನ ಸದುದ್ದೇಶಗಳ ಬಗೆಗೆ ಹೊರಗಡೆ ಪ್ರಚಾರದಲ್ಲಿ ತೊಡಗಿದ. ಕೊನೆಗೆ ಪರಿಸ್ಥಿತಿ ವಿಷಮಿಸಿ, ವರ್ಸೇಲ್ಸ್ ಒಪ್ಪಂದದ ಮಾರ್ಪಾಡಿನಿಂದಲೂ ಪರಿಹಾರವಾಗದ ಗಾಢ ಸಮಸ್ಯೆಗಳು ತಮ್ಮನ್ನು ಯುದ್ಧದ ಅಂಚಿಗೆ ತಳ್ಳುತ್ತಿವೆಯೆಂಬುದನ್ನು ಮಿತ್ರ ರಾಷ್ಟ್ರಗಳು ಅರಿತುಕೊಂಡದ್ದು ಯುದ್ಧ ಸನ್ನಿಹಿತವಾದಾಗಲೇ. ಆದರೆ ಆ ವೇಳೆಗೆ ಪರಿಸ್ಥಿತಿ ಕೈ ಮೀರಿತ್ತು. ಸಕಾಲಿಕವಾಗಿ ಎಚ್ಚೆತ್ತುಕೊಂಡು ಒಂದಾಗಿ ವರ್ತಿಸದ ತಪ್ಪಿಗಾಗಿ ಈ ರಾಷ್ಟ್ರಗಳು ಭಾರಿಯ ದಂಡತೆತ್ತವು.

ಎರಡನೆಯ ಮಹಾಯುದ್ಧದ ಪ್ರಾರಂಭಕ್ಕೆ ಮೊದಲು ಜರ್ಮನ್ ಜನತೆಯ ಜೀವನಮಟ್ಟ ಬಹಳಮಟ್ಟಿಗೆ ಸುಧಾರಿಸಿತ್ತು. ಹಿಟ್ಲರನ ಆಕ್ರಮಣಕ್ಕೆ ತುತ್ತಾದ ರಾಷ್ಟ್ರಗಳ ಸ್ಥಿತಿಗಿಂತ ಇದು ಉತ್ತಮವಾಗಿತ್ತು. ಆದಾಗ್ಯೂ ಹಿಟ್ಲರ್ ತನ್ನ ಅಪಪ್ರಚಾರಕ್ಕೆ ಈ ವಿಷಯವನ್ನೇ ಆರಿಸಿಕೊಂಡು ಇತರ ರಾಷ್ಟ್ರಗಳನ್ನೂ ಟೀಕಿಸ ತೊಡಗಿದ. ಮೈನ್ ಕಾಂಪ್ಫ್ (ನನ್ನ ಹೋರಾಟ) ಆತ್ಮ ಕಥೆಯಲ್ಲಿ ಹಿಟ್ಲರ್ ತನ್ನ ಅನುಭವಗಳನ್ನೂ ಜರ್ಮನಿಯ ದುಃಸ್ಥಿತಿಯನ್ನೂ ಅದರ ನಿವಾರಣೋಪಾಯಗಳನ್ನೂ ವಿವರಿಸಿ, ಜರ್ಮನ್ನರು ಆರ್ಯರೆಂದೂ ಆರ್ಯತ್ವವನ್ನು ಅವರು ಉಳಿಸಿಕೊಂಡು ಅನಾರ್ಯರನ್ನು ನಾಶಗೊಳಿಸಬೇಕೆಂದೂ ಹೇಳಿದ್ದಲ್ಲದೆ ಇದಕ್ಕೆ ವಿಧಾನಗಳನ್ನೂ ಸೂಚಿಸಿದ. ಇದಲ್ಲದೆ ಜರ್ಮನಿಯ ಗತವೈಭವವನ್ನೂ ಸಮಕಾಲೀನ ಅವನತಸ್ಥಿತಿಯನ್ನೂ ವರ್ಣಿಸಿ ಇವೆರಡರ ವ್ಯತ್ಯಾಸವನ್ನು ಜನ ಮನಗಾಣುವಂತೆ ಮಾಡಿದ. ತಾನೊಬ್ಬನೇ ಪ್ರಾಮಾಣಿಕ ನಾಯಕನೆಂಬ, ಜರ್ಮನ್ನರ ಆಶೆ ಆಕಾಂಕ್ಷೆಗಳನ್ನು ಈಡೇರಿಸುವ ಶಕ್ತಿ ಇರುವುದು ತನಗೊಬ್ಬನಿಗೆ ಮಾತ್ರ ಎಂಬ ನಂಬಿಕೆಯನ್ನು ಜನರಲ್ಲಿ ಮೂಡಿಸಿದ.

ಜರ್ಮನಿ ಆಕ್ರಮಣ ನಡೆಸಿ ಯುದ್ಧ ಆರಂಭಿಸುವುದಕ್ಕೆ ಸೈನಿಕ, ರಾಜಕೀಯ ಅಥವಾ ಆರ್ಥಿಕ ಕಾರಣಗಳಾವುವೂ ಇರಲಿಲ್ಲ. ಹಿಟ್ಲರನ ಹಠಮಾರಿತನ, ಆತನಿಗೆ ಜರ್ಮನ್ನರ ಸಂಪೂರ್ಣ ಬೆಂಬಲ, ಜೊತೆಗೆ ಮಿತ್ರರಾಷ್ಟ್ರಗಳ ದೌರ್ಬಲ್ಯ ಮತ್ತು ಉದಾಸೀನ ಮನೋಭಾವ–ಇವು ಯುದ್ಧಕ್ಕೆ ಪೋಷಕವಾದ ಸನ್ನಿವೇಶವನ್ನುಂಟು ಮಾಡಿದವು. ಜರ್ಮನಿ, ಜಪಾನ್ ಮತ್ತು ಇಟಲಿಗಳು ಎರಡನೆಯ ಮಹಾಯುದ್ಧಕ್ಕೆ ಮೂಲಭೂತವಾಗಿ ಕಾರಣವೆಂಬುದನ್ನು ಯಾರೂ ಮರೆಯುವಂತಿಲ್ಲ.

ಎರಡು ಯುದ್ಧಗಳ ನಡುಗಾಲದಲ್ಲಿ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು ನಿಶ್ಶಸ್ತ್ರೀಕರಣದ ಮೂಲಕ ಶಾಂತಿ ಸ್ಥಾಪಿಸುವ ನಂಬಿಕೆ ಹೊಂದಿದ್ದವು. ನಿಶ್ಶಸ್ತ್ರೀಕರಣ ಸಭೆಗಳು ನಡೆಯುತ್ತಿದ್ದ ಸಮಯದಲ್ಲೇ ಆಕ್ರಮಣಗಳೂ ನಡೆಯುತ್ತಿದ್ದವು. ಆಕ್ರಮಣಕಾರಿ ರಾಷ್ಟ್ರಗಳು ತಮ್ಮ ಸೇನೆಗಳನ್ನು ಜಮಾಯಿಸಿ, ಶಸ್ತ್ರಾಸ್ತ್ರಗಳನ್ನು ಇಮ್ಮಡಿಗೊಳಿಸಿ ಹೆಚ್ಚಿಸಿಕೊಳ್ಳುತ್ತಿದ್ದ ಕಾಲದಲ್ಲೇ ಪ್ರಜಾಪ್ರಭುತ್ವ ರಾಷ್ಟ್ರಗಳು ನಿಶ್ಶಸ್ತ್ರೀಕರಣದಲ್ಲಿ ನಂಬಿಕೆ ಇಟ್ಟಿದ್ದು ಹಾಸ್ಯಾಸ್ಪದ ಸಂಗತಿಯಾಯಿತು. ವರ್ಸೇಲ್ಸ್ ಒಪ್ಪಂದ ಮತ್ತು ಅದರ ಅನಂತರದ ಒಪ್ಪಂದಗಳೆಲ್ಲವನ್ನೂ ಉಲ್ಲಂಘಿಸುವುದು ಹಿಟ್ಲರನಿಗೆ ಅತಿ ಸುಲಭವಾಯಿತು. 1933ರಲ್ಲಿ ಅಧಿಕಾರ ಬಂದಾಗಿನಿಂದ ಆತ ತನ್ನ ಯೋಚನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ತೊಡಗಿ, 1936ರಲ್ಲಿ ಒಪ್ಪಂದಗಳನ್ನು ಮುರಿಯಲು ಪ್ರಾರಂಭಿಸಿದ. ಪ್ರಜಾಪ್ರಭುತ್ವ ರಾಷ್ಟ್ರಗಳ ದುರ್ಬಲತೆ, ಅವು ಸರಿಯಾದ ಕಾಲದಲ್ಲಿ ಕಾರ್ಯೋನ್ಮುಖವಾಗದೆ ಇದ್ದದ್ದು ಮತ್ತು ಹಿಟ್ಲರನ ರಾಜತಂತ್ರ–ಇವು ಎರಡನೆಯ ಮಹಾಯುದ್ಧಕ್ಕೆ ಕಾರಣಗಳೆಂದು ಹೇಳಬಹುದಾಗಿದೆ. ಇದರ ಆರಂಭಕ್ಕೆ ಮುಂಚಿನ ಕೆಲವು ಘಟನೆಗಳನ್ನು ಸ್ಥೂಲವಾಗಿ ಪರಿಶೀಲಿಸಬೇಕು.

ಯುರೋಪಿನಲ್ಲಿ ಹಿಟ್ಲರ್ ಆಕ್ರಮಣ ನೀತಿಯನ್ನನುಸರಿಸುವುದಕ್ಕೆ ಮುಂಚಿನಿಂದಲೇ ಪೂರ್ವದಲ್ಲಿ ಜಪಾನ್ ಕೂಡ ಇದೇ ಬಗೆಯ ಹಾದಿ ತುಳಿಯಲಾರಂಭಿಸಿತ್ತು. ವಿಶ್ವಶಾಂತಿ ನೆಲಸಬೇಕೆಂದು ಬಾಯಲ್ಲಿ ಹೇಳುತ್ತಿದ್ದರೂ ಶಾಂತಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರೂ ಅದಕ್ಕೆ ರಾಜ್ಯದಾಹ ಹೆಚ್ಚಾಗಿ 1931ರಲ್ಲಿ ಚೀನದ ಮಂಚೂರಿಯದ ಮೇಲೆ ಆಕ್ರಮಣ ನಡೆಸಿತು. ಈ ಆಕ್ರಮಣವೇ ಒಂದು ರೀತಿಯಲ್ಲಿ ಎರಡನೆಯ ಮಹಾಯುದ್ಧದ ಮೊದಲನೆಯ ಗುಂಡೆನ್ನಬಹುದು. ಆದ್ದರಿಂದ ದೂರಪ್ರಾಚ್ಯದಲ್ಲಿನ ವಿದ್ಯಮಾನಗಳನ್ನೂ ಪರಿಶೀಲಿಸುವುದು ಅನಿವಾರ್ಯ, ಆ ಕ್ಷೇತ್ರದಲ್ಲಿ ಜಪಾನ್ ವಹಿಸಿದ ಪಾತ್ರದ ವಿವೇಚನೆಯನ್ನೂ ನಡೆಸಬೇಕಾಗುತ್ತದೆ.

ಸೈನಿಕ ಕವಾಯತು ವೀಕ್ಷಿಸುತ್ತಿರುವ ಅಡಾಲ್ಫ್ ಹಿಟ್ಲರ್

ಯುರೋಪಿನಲ್ಲಿ ವಿನಾಶಕಾರಕ ಧೋರಣೆ ಅನುಸರಿಸಿದ ಜರ್ಮನ್ ಇಟಲಿಗಳಿಗೆ ಜಪಾನ್ ಯಾವರೀತಿಯಲ್ಲೂ ಕಡಿಮೆಯಾಗಿರಲಿಲ್ಲ. ಹಿಂದುಳಿದ ರಾಷ್ಟ್ರವಾಗಿದ್ದ ಜಪಾನ್ 20ನೆಯ ಶತಮಾನದ ಆದಿಭಾಗದಲ್ಲಿ ಪ್ರಬಲವಾಗಿ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರವಹಿಸಿ ಸೈನಿಕ ಸಂಪ್ರದಾಯ ಬೆಳೆಸಿಕೊಂಡು, ಸಾಮ್ರಾಜ್ಯ ದಾಹಕ್ಕೊಳಗಾಗಿತ್ತು. 1894ರಲ್ಲಿ ಚೀನದ ಮೇಲೂ 1904ರಲ್ಲಿ ರಷ್ಯದ ವಿರುದ್ಧವಾಗಿಯೂ ಜಯಪ್ರದವಾಗಿ ಯುದ್ಧಮಾಡಿ ತನ್ನ ಪ್ರತಿಷ್ಠೆ ಹೆಚ್ಚಿಸಿಕೊಂಡಿತ್ತು. ಅಲ್ಲದೆ ಮೊದಲನೆಯ

ಮಹಾಯುದ್ಧದಲ್ಲಿ ಮುಖ್ಯ ಪಾತ್ರವಹಿಸಿ ಜರ್ಮನ್ ವಸಾಹತುಗಳ ಮೇಲೆ ಬಲ ಪ್ರಯೋಗಿಸಿ ಮಿತ್ರರಾಷ್ಟ್ರಗಳ ಮೆಚ್ಚುಗೆಗೆ ಪಾತ್ರವಾಗಿ ವರ್ಸೇಲ್ಸ್ ಒಪ್ಪಂದದಲ್ಲಿ ತನಗೆ ಬೇಕಾದ ಸೌಲಭ್ಯಗಳನ್ನು ಪಡೆದುಕೊಂಡಿತ್ತು. ಇದರಿಂದ ಉತ್ತೇಜಿತವಾದ ಜಪಾನ್ ಇಡೀ ಏಷ್ಯವನ್ನೇ ತನ್ನದಾಗಿ ಮಾಡಿಕೊಳ್ಳುವ ದುರುದ್ದೇಶ ಹೊಂದಿತ್ತು. ಮಂಚೂರಿಯ ಪ್ರಕರಣದಲ್ಲಿ ರಾಷ್ಟ್ರ ಸಂಸ್ಥೆಯ ದುರ್ಬಲತೆಯನ್ನು ಮನಗಂಡ ಜಪಾನ್ ತನ್ನ ನೀತಿಯನ್ನು ಮುಂದುವರಿಸಿತು. ಅದಕ್ಕೆ ಯಾವ ಆತಂಕವೂ ಇರಲಿಲ್ಲ. ಆ ಸಂಸ್ಥೆ ಮಧ್ಯಸ್ಥಿಕೆ ವಹಿಸಲು ಯತ್ನಿಸಿದಾಗ ಜಪಾನ್ ಅದರ ಸದಸ್ಯತ್ವನ್ನು ತ್ಯಜಿಸಿ, ಮಂಚೂರಿಯವನ್ನು ಪೂರ್ಣವಾಗಿ ಕಬಳಿಸಿತು. ಬ್ರಿಟನ್, ಅಮೇರಿಕಗಳು ಸಂಯುಕ್ತವಾಗಿ ಕಾರ್ಯಾಚರಣೆಗೆ ತೊಡಗಬೇಕೆಂಬ ಸಲಹೆ ಕಾರ್ಯರೂಪಕ್ಕೆ ಬರಲಿಲ್ಲ. ಆಗ ಆ ರಾಷ್ಟ್ರಗಳು ತೋರ್ಪಡಿಸಿದ ದೌರ್ಬಲ್ಯ ಅಕ್ಷಮ್ಯವೆನ್ನಬಹುದು.

**ಕ್ಯಾಸಬ್ಲಾಂಕ ಸಮ್ಮೇಳನದಲ್ಲಿ – ರೂಸ್ವೆಲ್ಟ್, ಡ ಗಾಲ್ ಮತ್ತು ಚರ್ಚಿಲ್**

ಮಂಚೂರಿಯ ಪ್ರಕರಣದಲ್ಲಿ ರಾಷ್ಟ್ರಕೂಟ ತೋರಿಸಿದ ಅಸಹಾಯಕತೆಯನ್ನು ಕಂಡು ಸ್ಫೂರ್ತಿಗೊಂಡ ಇಟಲಿಯ ಮುಸೋಲಿನಿ 1935ರ ಅಕ್ಟೋಬರ್ ತಿಂಗಳಲ್ಲಿ ಆಫ್ರಿಕದ ಅಬಿಸೀನಿಯ ರಾಜ್ಯವನ್ನು ಆಕ್ರಮಿಸಿಕೊಂಡ. ರಾಷ್ಟ್ರಕೂಟದಲ್ಲಿ ಈ ಆಕ್ರಮಣದ ಚರ್ಚೆ ನಡೆಯುತ್ತಿದ್ದಾಗಲೇ ಹಿಟ್ಲರ್ ರೈನ್‌ಲೆಂಡನ್ನು ಆಕ್ರಮಿಸಿಕೊಂಡ. ಈ ಆಕ್ರಮಣ ಪ್ರಕರಣಗಳಲ್ಲಿ ಬ್ರಿಟನ್ನಾಗಲಿ ಫ್ರಾನ್ಸಾಗಲಿ ಯಾವ ಅಡ್ಡಿಯನ್ನುಂಟುಮಾಡುವ ಗೋಜಿಗೂ ಹೋಗಲಿಲ್ಲ. ಕೌಲು ಕರಾರುಗಳ ಪಾವಿತ್ರ್ಯವನ್ನು ಧಿಕ್ಕರಿಸಿ ಮುಂದೆ ಹಿಟ್ಲರ್ ನಡೆಸಲಿದ್ದ

**ಬ್ರಿಟನ್ನಿಗೆ ನೆರವು ನೀಡಬೇಕೆಂದು ಕಾಂಗ್ರೆಸಿಗೆ ರೂಸ್ವೆಲ್ಟ್ ಮನವಿ**

ದುರಾಕ್ರಮಣಗಳಿಗೆ ಇದು ಪೀಠಿಕೆಯಾಯಿತು. ಇದಾದ ಮೇಲೆ 1936ರ ಜುಲೈ ತಿಂಗಳಲ್ಲಿ ಸ್ಪೇನ್ ದೇಶದಲ್ಲಿ ದಂಗೆ ನಡೆದು ಅಂತರ್ಯುದ್ಧ ಪ್ರಾರಂಭವಾದಾಗ, ಯುರೋಪಿನ ಪ್ರಜಾಪ್ರಭುತ್ವ ರಾಷ್ಟ್ರಗಳ ಸಹಾನುಭೂತಿ ರಿಪಬ್ಲಿಕನ್ ಸರ್ಕಾರದ ಕಡೆ ಇದ್ದಿತಾದರೂ ಅವು ಯಾವುವೂ ಪ್ರತ್ಯಕ್ಷ ಸಹಾಯ ನೀಡಲಿಲ್ಲ. ಇದರಿಂದ ನಿರಂಕುಶ ಪ್ರಭುತ್ವದ ಶಕ್ತಿ ಹೆಚ್ಚಾಗಿ ಪ್ರಜಾಪ್ರಭುತ್ವದ ಶಕ್ತಿ ಕುಗ್ಗಿತು. ಜರ್ಮನಿ ಮತ್ತು ಇಟಲಿಗಳ ಜೊತೆಗೆ ಮತ್ತೊಂದು ರಾಷ್ಟ್ರವನ್ನು ಫ್ರಾನ್ಸ್ ಎದುರಿಸಬೇಕಾಯಿತು. ಹಿಟ್ಲರನಿಗೆ ತನ್ನ ಧ್ಯೇಯ ಸಾಧಿಸಲು ಅನುಕೂಲ ವಾತಾವರಣ ಉಂಟಾಯಿತು.

**ಬಾಂಬ್‌ದಾಳಿಗೆ ತುತ್ತಾದ ಲಂಡನ್ನಿನ ಒಂದು ಭಾಗ**

ಅನಂತರ ಚೀನದಲ್ಲಿ ಜಪಾನೀ ಆಕ್ರಮಣ ನಡೆಯಿತು. ಇದು ಚೀನದ ಸರಹದ್ದುಗಳನ್ನು ದಾಟಿ ಅಮೆರಿಕನ್ ಹಿತಾಸಕ್ತಿಗಳಿಗೆ ಧಕ್ಕೆ ತಂದಾಗ ಅಮೆರಿಕ ಸಂಯುಕ್ತಸಂಸ್ಥಾನ ಬರೀ ಪ್ರತಿಭಟನಾಪತ್ರವನ್ನು ಕಳುಹಿಸಿತೇ ವಿನಾ ಯಾವ ಉಗ್ರ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ಈ ಪ್ರಕರಣಗಳಲ್ಲಿ ಅಮೆರಿಕ ತಾಟಸ್ಥ್ಯ ನೀತಿ ಅನುಸರಿಸಿದ್ದು ಆಕ್ರಮಣಕಾರಿ ರಾಷ್ಟ್ರಗಳಿಗೆ ಇನ್ನಷ್ಟು ಪ್ರೋತ್ಸಾಹಿಸಿದಂತಾಯಿತು.

ಯುರೋಪಿನಲ್ಲಿ ಈ ಆಕ್ರಮಣಕಾರರಿಗೆ ಮೊದಲು ಆಹುತಿಯಾದ ದೇಶವೇ ಆಸ್ಟ್ರಿಯ. 1938ರ ಮಾರ್ಚ್ 11ರಂದು ಹಿಟ್ಲರನ ಸೇನೆಗಳು ಆಸ್ಟ್ರಿಯವನ್ನು ಪ್ರವೇಶಿಸಿದವು. ಅನಂತರ ಹಿಟ್ಲರನ ಕಣ್ಣು ಚೆಕೊಸ್ಲೊವಾಕಿಯದ ಮೇಲೆ ಬಿತ್ತು. ಆಸ್ಟ್ರಿಯದ ಕಡೆಯಿಂದ ಚೆಕೊಸ್ಲೊವಾಕಿಯವನ್ನು ಆಕ್ರಮಿಸಿಕೊಳ್ಳುವುದು ಸುಲಭವಾಗಿತ್ತು. ಈ ಸಣ್ಣ ರಾಷ್ಟ್ರವನ್ನು ರಕ್ಷಿಸುವ ಹೊಣೆ ಹೊತ್ತಿದ್ದ ದೇಶಗಳೆಂದರೆ ಫ್ರಾನ್ಸ್ ಮತ್ತು ಸೋವಿಯತ್ ಒಕ್ಕೂಟ, ಬ್ರಿಟನ್ ಕೂಡ ರಕ್ಷಣೆಯ ಜವಾಬ್ದಾರಿಯಲ್ಲಿ ಪಾಲುಗೊಂಡಿತು. ಆದರೆ ಈ ರಾಷ್ಟ್ರಗಳಾವುವೂ ಚೆಕೊಸ್ಲೊವಾಕಿಯದ ಅಧ್ಯಕ್ಷ ಬೆನೆಷ್ ಮಾಡಿದ ಪ್ರಾರ್ಥನೆಗೆ ಯಾವ ಮನ್ನಣೆಯನ್ನೂ ಕೊಡಲಿಲ್ಲ. ಆಂಗ್ಲೊ–ಫ್ರೆಂಚ್ ಯೋಜನೆಯಂತೆ ಸುಡೇಟನ್ ಪ್ರದೇಶವನ್ನು ಜರ್ಮನಿಗೆ ಒಪ್ಪಿಸಬೇಕೆಂದು ಫ್ರಾನ್ಸ್ ಸಲಹೆಮಾಡಿತು. ಇದರಿಂದ ಆಕ್ರಮಣವನ್ನು ನಿಲ್ಲಿಸಿ, ಶಾಂತಿ ಕಾಪಾಡುವ ಮತ್ತೊಂದು ಸುವರ್ಣಾವಕಾಶವನ್ನು ಮಿತ್ರರಾಷ್ಟ್ರಗಳು ಕಳೆದುಕೊಂಡವು. ಸ್ವತಃ ಶಾಂತಿಪ್ರಿಯನಾಗಿದ್ದ ಬ್ರಿಟಿಷ್ ಪ್ರಧಾನಿ ಚೇಂಬರ್‌ಲಿನ್ ಹಿಟ್ಲರನನ್ನು ಮ್ಯೂನಿಕ್‌ನಲ್ಲಿ ಭೇಟಿ ಮಾಡಿ ಅವನ ನೀತಿಯನ್ನು ಖಂಡಿಸಿದ, ಆದರೆ ತನಗೆ ರಾಜ್ಯ ವಿಸ್ತರಣೆಯ ಆಸೆಯೇ ಇಲ್ಲವೆಂದು ಹಿಟ್ಲರ್ ಭರವಸೆ ಕೊಟ್ಟಾಗ ಚೇಂಬರ್ಲಿನ್ ಅವನೊಂದಿಗೆ ಒಂದು ಒಪ್ಪಂದ ಮಾಡಿಕೊಂಡ (ಸೆಪ್ಟೆಂಬರ್ 30). ಈ ಸಂಧಾನದಲ್ಲಿ ಸೋವಿಯತ್ ಒಕ್ಕೂಟವನ್ನು ಸೇರಿಸಿಕೊಳ್ಳಲಿಲ್ಲ. ಸುಡೇಟನ್ ಪ್ರದೇಶವನ್ನು ಹಿಟ್ಲರನಿಗೆ ಚೆಕೊಸ್ಲೊವಾಕಿಯ ಒಪ್ಪಿಸಬೇಕೆಂಬ ತೀರ್ಮಾನದಿಂದ ಅವನ ಆಕ್ರಮಣಶೀಲಪ್ರವೃತ್ತಿಗೆ ಬಹುಮಾನ ದೊರಕಿದಂತಾಯಿ ತೆಂಬುದು ನಿಸ್ಸಂದೇಹ. ಮುಂದೆ ಮ್ಯೂನಿಕ್ ಒಪ್ಪಂದ ತೀವ್ರವಾದ ಟೀಕೆಗೆ ಗುರಿ ಯಾದರೂ ಚೇಂಬರ್ಲಿನ್ ಬ್ರಿಟನ್ನಿಗೆ ಹಿಂತಿರುಗಿದಾಗ ಜನತೆಯಿಂದ

ಅವನಿಗೆ ದೊರಕಿದ ಸ್ವಾಗತ ಅಭೂತಪೂರ್ವ. ಆಗ ಹರಡುತ್ತಿದ್ದ ಯುದ್ಧದ ಭೀತಿಯನ್ನು ನಿವಾರಿಸಿ ಶಾಂತಿ ನೆಲೆಗೊಳಿಸಲು ಚೇಂಬರ್ಲಿನ್ ಯಾವ ಕ್ರಮವನ್ನಾದರೂ ಕೈಗೊಳ್ಳಲು ತಯಾರಿದ್ದ. ಫ್ರಾನ್ಸ್ ಸಹ ಅದೇ ಧೋರಣೆ ತಳೆಯಿತು. ಅನಿವಾರ್ಯವಾದರೆ ಮಾತ್ರ ಹಿಟ್ಲರನೊಡನೆ ಯುದ್ಧಮಾಡಬೇಕೇ ಹೊರತು ಅಲ್ಪ ವಿಷಯಗಳಿಗೆ ಕೈಯೆತ್ತಬಾರದೆಂಬುದು ಚೇಂಬರ್ಲಿನನ ಅಭಿಪ್ರಾಯವಾಗಿತ್ತು. ಅಲ್ಲದೆ ತಮ್ಮ ದೇಶದ ಹಿತಕ್ಕೆ ಸಂಬಂಧಪಡದ ದೂರ ಪ್ರದೇಶದ ಕಲಹಗಳಲ್ಲಿ ಕೈಹಾಕುವುದು ಕೇವಲ ಹುಚ್ಚುತನವೆಂದು ಆತ ನಂಬಿದ್ದ.

ದಾಳಿಯಿಂದ ಕುಸಿದ ಮನೆಯಡಿಯಿಂದ ಮಹಿಳೆಯೊಬ್ಬಳ ರಕ್ಷಣೆ

ಆದರೆ ಈ ಶಮನ ನೀತಿಯಿಂದ ಯುರೋಪಿಗೆ ಶಾಂತಿ ಲಭಿಸಲಿಲ್ಲ. ಇದರ ರುಚಿ ಕಂಡ ಹಿಟ್ಲರ್ ಮ್ಯೂನಿಕ್ ಒಪ್ಪಂದಕ್ಕೆ ಸಹಿಹಾಕಿದ ಆರೇ ತಿಂಗಳೊಳಗಾಗಿ ಚೆಕೊಸ್ಲೊವಾಕಿಯವನ್ನು ಕಬಳಿಸಿದ. ಈ ಆಕ್ರಮಣದಿಂದ ಬ್ರಿಟನ್ ಫ್ರಾನ್ಸ್‌ಗಳ ನಾಯಕರಲ್ಲಿ ಭೀತಿ ಹುಟ್ಟಿತು. ಪೋಲೆಂಡನ್ನು ಆಕ್ರಮಿಸುವುದೇ ಹಿಟ್ಲರನ ಮುಂದಿನ ಗುರಿಯೆಂದು ಅವರಿಗೆ ಮನವರಿಕೆಯಾಗದೆ ಇರಲಿಲ್ಲ. ಆದ್ದರಿಂದ ತಾವು ಅನುಸರಿಸುತ್ತಿದ್ದ

ಬಾಂಬು ದಾಳಿಯಿಂದ ಬೆದರಿದ ಮಕ್ಕಳು

ತಾಟಸ್ಥ್ಯನೀತಿ ತ್ಯಜಿಸಿ, ಪೋಲೆಂಡಿಗೆ ರಕ್ಷಣೆಯ ಭರವಸೆ ನೀಡಿದರು. ಪೂರ್ವದ ಪ್ರಷ್ಯ ಪ್ರದೇಶವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಡ್ಯಾನ್ಜಿಗನ್ನೂ ಅದರ ಸುತ್ತಮುತ್ತಲಿನ ಪ್ರದೇಶವನ್ನೂ ತನಗೆ ಬಿಟ್ಟುಕೊಡಬೇಕೆಂದು ಹಿಟ್ಲರ್ ಪೋಲೆಂಡಿಗೆ ತಿಳಿಸಿದ. ಬಲಿಷ್ಠವಾದ ಜರ್ಮನಿಯೊಂದಿಗೆ ಸೆಣಸಿ ನಿಲ್ಲಲು ಸಾಮರ್ಥ್ಯವಿಲ್ಲದಿದ್ದರೂ ಬ್ರಿಟನ್ ಫ್ರಾನ್ಸ್‌ಗಳ ಭರವಸೆಯಿಂದ ಪೋಲೆಂಡ್ ಅವನ ಬೇಡಿಕೆಯನ್ನು ತಿರಸ್ಕರಿಸಿತು. ಈ ಮಧ್ಯೆ 1939 ಮೇ ತಿಂಗಳಿನಲ್ಲಿ ಜರ್ಮನಿ ಮತ್ತು ಇಟಲಿ ಪರಸ್ಪರ ರಕ್ಷಣಾ ಒಪ್ಪಂದ ಮಾಡಿಕೊಂಡವು. ಜರ್ಮನಿಯ ವಿರುದ್ಧ ಸಂಯುಕ್ತ ಕಾರ್ಯಾಚರಣೆಯಲ್ಲಿ ತೊಡಗಬೇಕೆಂದು ವಾದಿಸುತ್ತಿದ್ದ ಸೋವಿಯತ್ ವಿದೇಶಾಂಗ ಮಂತ್ರಿ ಲಿಟ್ವಿನಫ್ ರಾಜೀನಾಮೆ ಕೊಟ್ಟದ್ದರಿಂದ ಸೋವಿಯತ್ ಒಕ್ಕೂಟದ ಸಾಮೂಹಿಕ ಕಾರ್ಯಕ್ರಮಕ್ಕೆ ತಿಲಾಂಜಲಿ ಕೊಟ್ಟಂತಾಯಿತು. ಅಲ್ಲದೆ ಮ್ಯೂನಿಕ್ ಒಪ್ಪಂದದ ಸಮಯದಲ್ಲಿ ಬ್ರಿಟನ್ ತನ್ನನ್ನು ನಿರ್ಲಕ್ಷಿಸಿದ್ದನ್ನು ಸೋವಿಯತ್ ಒಕ್ಕೂಟ ಮರೆತಿರಲಿಲ್ಲ. ಆದ್ದರಿಂದ ಯುದ್ಧ ಸನ್ನಿಹಿತವಾದ ಸಮಯದಲ್ಲಿ, 1939 ಆಗಸ್ಟ್ 11ರಂದು, ಅದು ಜರ್ಮನಿಯೊಡನೆ ಪರಸ್ಪರ ಅನಾಕ್ರಮಣ ಕರಾರು ಮಾಡಿಕೊಂಡಿತು. ಸೋವಿಯತ್ ಒಕ್ಕೂಟದ ಈ ವರ್ತನೆ ವಿವಾದಾಸ್ಪದ ವಿಚಾರವಾಗಿದೆ. ಅದರ ಸತ್ಯವನ್ನು ಇತಿಹಾಸವೇ ಗುರುತಿಸಬೇಕಾಗಿದೆ.

1917ರ ಕ್ರಾಂತಿಯ ದಿನಗಳಿಂದ ಸೋವಿಯತ್ ಒಕ್ಕೂಟ ಹೊಸ ಸಮಾಜ ಸೃಷ್ಟಿಸುವ ಕಾರ್ಯದಲ್ಲಿ ತೊಡಗಿತ್ತು. ಆದ್ದರಿಂದಲೇ ಅದು ಒಂದನೆಯ ಮಹಾಯುದ್ಧದಿಂದ ನಿರ್ಗಮಿಸಿದ್ದು. ರಷ್ಯದಲ್ಲಿ ಮಾತ್ರವಲ್ಲದೆ ಯುರೋಪಿನ ಇತರ ರಾಷ್ಟ್ರಗಳಲ್ಲೂ ಈ ಕ್ರಾಂತಿ ಹರಡುವುದೆಂಬ ನಂಬಿಕೆ ಆ ದೇಶದ ನಾಯಕರಿಗಿತ್ತು. ಆದರೆ ಲೆನಿನ್‌ನ ಈ ಕನಸು ನನಸಾಗಲಿಲ್ಲ. ಅದಕ್ಕಾಗಿ ಒಂದನೆಯ ಮತ್ತು ಎರಡನೆಯ ಯುದ್ಧಗಳ ನಡುವಿನ ಕಾಲದಲ್ಲಿ ಇತರ ರಾಷ್ಟ್ರಗಳಲ್ಲಿ ಕ್ರಾಂತಿಯ ವಾತಾವರಣ ಮೂಡಿಸುವ ಕಾರ್ಯದಲ್ಲಿ ಅವರು ಮಗ್ನರಾಗಿದ್ದರು. ಆದರೆ ಕ್ರಾಂತಿಯ ತತ್ತ್ವ ಸಾಮೂಹಿಕ



ವಿಮಾನದಾಳಿಯ ಅನಂತರ ಪುನರಾಗಮನ

ಕಾರ್ಯಾಚರಣೆಗೆ ಅಡ್ಡಿಯುಂಟುಮಾಡಿತು. ಅಲ್ಲದೆ ಪಾಶ್ಚಾತ್ಯ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಸಾಮ್ರಾಜ್ಯದಾಹ ಹೆಚ್ಚಾಗಿದೆಯೆಂದು ಸೋವಿಯತ್ ನಾಯಕರು ಹೇಳತೊಡಗಿ, ಜರ್ಮನಿಯ ನಾಜಿಸಂ ಮತ್ತು ಇಟಲಿಯ ಫ್ಯಾಸಿಸಂ ಹಾವಳಿಗಿಂತ ಸಾಮ್ರಾಜ್ಯಶಾಹಿಯೇ ಹೆಚ್ಚು ಹಾನಿಕರವೆಂದು ಪ್ರಚಾರ ಮಾಡಿದರು. ಸ್ಟಾಲಿನ್ ಒಂದು ಹೆಜ್ಜೆ ಮುಂದೆ ಹೋಗಿ, ಹಿಟ್ಲರ್ ತನ್ನ ಮಿತ್ರನೆಂಬಂತೆ ವ್ಯವಹರಿಸಿದ. ಆ ಸಮಯದಲ್ಲಿ ಜರ್ಮನಿಯನ್ನು ಎದುರು ಹಾಕಿಕೊಳ್ಳಲು ಆತ ಸಿದ್ಧವಿರಲಿಲ್ಲ. ಹಿಟ್ಲರನ ಸೇನೆಗಳು ರಷ್ಯದ ಕಡೆಗೆ ನುಗ್ಗಿದರೆ ಅದರಿಂದ ತಮಗೆ ಕ್ಷೇಮವೆಂದು ಪಶ್ಚಿಮದ ರಾಷ್ಟ್ರಗಳು ಬಗೆಯುವುವೆಂದೂ ಅವು ತನ್ನ ನೆರವಿಗೆ ಬರಲಾರವೆಂದೂ ಸೋವಿಯತ್ ಒಕ್ಕೂಟ ಭಾವಿಸಿತ್ತು. ಹೀಗಾಗಿ ಸೋವಿಯತ್ ಒಕ್ಕೂಟ ಮತ್ತು ಇತರ ರಾಷ್ಟ್ರಗಳು ಯುರೋಪಿನ ಸಮಸ್ಯೆಗಳ ನಿವಾರಣೆಯಲ್ಲಿ ಒಂದುಗೂಡಲಿಲ್ಲ. ಅವು ತಾಟಸ್ಥ್ಯನೀತಿ ಅನುಸರಿಸಿದವು. ಆದರೂ ಕೊನೆಯಲ್ಲಿ ಹಾನಿಯುಂಟಾಯಿತು. ಫ್ರಾನ್ಸಿನ ಪತನವಾಯಿತು. ಬ್ರಿಟನ್ ಮತ್ತು ಇಡೀ ನಾಗರಿಕ ಪ್ರಪಂಚವೇ ತೊಂದರೆಗೊಳಗಾಗಬೇಕಾಯಿತು.

ಹಿಟ್ಲರ್ ಈ ವೇಳೆಗೆ ಬಲಶಾಲಿಯಾಗಿದ್ದ. ಜರ್ಮನಿಯ ಗಡಿಗಳು ಹಿಗ್ಗಿ ಸ್ಥಿರಗೊಂಡಿದ್ದುವು. ಆಗ ಆತನ ಮುಂದಿನ ಗುರಿ ಪೋಲೆಂಡಿನ ಆಕ್ರಮಣವೇ ಆಗಿತ್ತು. 1939 ಸೆಪ್ಟೆಂಬರ್ 1ರಂದು ಮುಂಜಾವಿನಲ್ಲಿ ಆತ ಅನೇಕ ಕಡೆಗಳಿಂದ ಜರ್ಮನ್ ಸೇನೆಗಳನ್ನು ಆ ರಾಷ್ಟ್ರದೊಳಗೆ ನುಗ್ಗಿಸಿದ. ಆಕ್ರಮಣದ ಎರಡು ದಿನಗಳ ಅನಂತರ ಇಂಗ್ಲೆಂಡ್ ಫ್ರಾನ್ಸ್‌ಗಳು ಜರ್ಮನಿಯ ಮೇಲೆ ಯುದ್ಧ ಘೋಷಿಸಿದುವು. ಆದರೂ ಪ್ರಯೋಜನವಾಗಲಿಲ್ಲ.

**ಯುರೋಪ್, ಆಫ್ರಿಕ ಮತ್ತು ಪಶ್ಚಿಮ ಏಷ್ಯಗಳಲ್ಲಿ ಯುದ್ಧ:** ಸೆಪ್ಟೆಂಬರ್ 3ರಂದು ಬ್ರಿಟನ್ ಯುದ್ಧ ಘೋಷಿಸಿದಾಗ ಪ್ರಧಾನ ಮಂತ್ರಿ ಚೇಂಬರ್ಲಿನ್ ಭಾಷಣಮಾಡುತ್ತಾ, ದೂರದ ಒಂದು ನಗರಕ್ಕಾಗಿ ನಾವೀಗ ಹೋರಾಟ ನಡೆಸುತ್ತಿಲ್ಲ. ನ್ಯಾಯಕ್ಕೆ ಮತ್ತು ಪ್ರಜಾಸತ್ತೆಯ ಕ್ಷೇಮಕ್ಕೆ ಹೋರಾಡುತ್ತಿದ್ದೇವೆ. ಯುರೋಪಿನಲ್ಲಿ ಹಿಟ್ಲರಿಸಂ ನಾಶವಾಗುವ ತನಕ ಹೋರಾಡುತ್ತೇವೆ ಎಂದು ಹೇಳಿದ. ಬ್ರಿಟನ್ನಿನ ಸೇನೆ ಫ್ರೆಂಚ್ ಸೇನೆಯೊಡಗೂಡಿ ವ್ಯೂಹವೊಂದನ್ನು ರಚಿಸಿಕೊಂಡಿತು. ಆದರೆ ಪೋಲೆಂಡಿನೊಂದಿಗೆ ಭೂಸಂಪರ್ಕವಿಲ್ಲದಿದ್ದುದರಿಂದ ಅದಕ್ಕೆ ಮಿತ್ರರಾಷ್ಟ್ರಗಳು ಯಾವ ವಿಧದಿಂದಲೂ ಸಹಾಯ ನೀಡಲು ಸಾಧ್ಯವಾಗಲಿಲ್ಲ. ಪೋಲೆಂಡಿನಲ್ಲಿ ಬಲಯುತ ಸೈನ್ಯವೇನೋ ಇತ್ತು. ಆದರೆ ಅಲ್ಲಿನ ಕೈಗಾರಿಕಾ ಉತ್ಪನ್ನ ಕಡಿಮೆಯಾಗಿದ್ದು ಸೇನೆಗೆ ಹೆಚ್ಚಿನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸ್ಥಿತಿಯಲ್ಲಿರಲಿಲ್ಲ. ಅಲ್ಲದೆ ಆಧುನಿಕ ಶಸ್ತ್ರಾಸ್ತ್ರಗಳ ಕೊರತೆಯಿತ್ತು. ಆದರೂ ಪೋಲೆಂಡಿನ ನಾಯಕರು ದೇಶದ ಅಶ್ವಸೇನೆಯ ಶಕ್ತಿಯಲ್ಲಿ ನಂಬಿಕೆಯಿಟ್ಟು, ಅದರ ಮೂಲಕ ಜರ್ಮನ್ನರ ಸುಸಜ್ಜಿತ ಸೇನೆಯನ್ನು ಎದುರಿಸಿ ಸೋಲಿಸಬಹುದೆಂಬ ಭಾವನೆ ಹೊಂದಿದ್ದರು. ಅಲ್ಲದೆ ಅವರು ಜರ್ಮನಿಯ ವಾಯುಬಲವನ್ನು ಕಡೆಗಣಿಸಿದ್ದರು.



ಗ್ವಾಡಲ್‌ಕನಾಲಿನಲ್ಲಿ ಅಮೆರಿಕನ್ ಸೈನಿಕರು

ಪೋಲಿಷ್ ಸೈನ್ಯವೇನೋ ಯುದ್ಧರಂಗದಲ್ಲಿ ಮಹಾ ಪರಾಕ್ರಮದಿಂದ ಹೋರಾಡಿತು. ಆದರೆ ಪೋಲೆಂಡನ್ನು ರಕ್ಷಿಸುವ ಕಾರ್ಯದಲ್ಲಿ ಸರಿಯಾದ ಕ್ರಮಗಳನ್ನು ಅದರ ದಳಪತಿಗಳು ಕೈಗೊಂಡಿರಲಿಲ್ಲ. ಆದ್ದರಿಂದ ಜರ್ಮನ್ನರನ್ನು ತಡೆಗಟ್ಟಬಹುದಾದ ಅನೇಕ ಅವಕಾಶಗಳನ್ನು ಪೋಲೆಂಡ್ ಕಳೆದುಕೊಂಡಿತು. ಸೆಪ್ಟೆಂಬರ್ 3ರ ವೇಳೆಗೆ ಜರ್ಮನ್ನರು ಪೋಲೆಂಡಿನ ಮುಖ್ಯ ಪಟ್ಟಣಗಳನ್ನು ವಶಪಡಿಸಿಕೊಂಡಿದ್ದರೂ ಹತ್ತು ದಿನಗಳ ಯುದ್ಧದ ಅನಂತರ ವಾರ್ಸಾನಗರ ಜರ್ಮನರ ವಶವಾಯಿತು. ಅದೇ ಸಮಯದಲ್ಲಿ ಪೂರ್ವದಿಂದ ಸೋವಿಯತ್ ಸೇನೆಗಳು ನುಗ್ಗಿ ಪೂರ್ವ ಪೋಲೆಂಡಿನ ಪೂರ್ವ ಭಾಗವನ್ನು ಆಕ್ರಮಿಸಿಕೊಂಡುವು. ಪೋಲೆಂಡ್ ರಾಷ್ಟ್ರ ಒಂದುಕಡೆ ಜರ್ಮನಿ ಮತ್ತೊಂದು ಕಡೆ ಸೋವಿಯತ್ ಒಕ್ಕೂಟ ಇವೆರಡರ ನಡುವೆ ಹಂಚಿಹೋಯಿತು.

ಪೋಲೆಂಡಿನ ವಿಭಜನೆಯ ಅನಂತರ ಸೋವಿಯತ್ ದೇಶ ಬಾಲ್ಟಿಕ್ ದೇಶಗಳಾದ ಲಿಥುವೇನಿಯ, ಲಾಟ್ವಿಯ, ಎಸ್ಟೋನಿಯಗಳನ್ನು ತನ್ನ ರಕ್ಷಣಾ ವ್ಯವಸ್ಥೆಯಲ್ಲಿ ಸೇರಿಸಿಕೊಂಡು ತನ್ನ ರಕ್ಷಣೆಗೆ ಅಗತ್ಯವಾದ ಭಾಗಗಳನ್ನು ಬಿಟ್ಟುಕೊಡಬೇಕೆಂದು ಫಿನ್‌ಲೆಂಡನ್ನು ಕೇಳಿತು. ಅದಕ್ಕೆ ಫಿನ್‌ಲೆಂಡ್ ಒಪ್ಪಲಿಲ್ಲ. ಆದ್ದರಿಂದ ಸೋವಿಯತ್ ಸೇನೆ ಫಿನ್‌ಲೆಂಡಿಗೆ ನುಗ್ಗಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಸಹಾನುಭೂತಿ ಫಿನ್‌ಲೆಂಡ್ ಕಡೆಗಿತ್ತು. ಫಿನ್ನರು ಶೌರ್ಯದಿಂದ ಹೋರಾಡಿದರೂ ಗೆಲ್ಲಲಾಗಲಿಲ್ಲ. 1940 ಮಾರ್ಚ್ 13ರಂದು ಫಿನ್ನರು ಶರಣಾಗತರಾಗಿ ಸೋವಿಯತ್ ಷರತ್ತುಗಳನ್ನೆಲ್ಲ ಒಪ್ಪಿದರು.

ದೀರ್ಘಕಾಲದ ಪೂರ್ವಯೋಜನೆಯಿಲ್ಲದೆಯೇ ಹಿಟ್ಲರ್ ನಡೆಸಿದ ಆಕ್ರಮಣವೆಂದರೆ ನಾರ್ವೆ-ಡೆನ್ಮಾರ್ಕ್‌ಗಳ ಮೇಲಿನದು. ಆಗ ನಾರ್ವೆ ತಟಸ್ಥ ರಾಷ್ಟ್ರವಾಗಿತ್ತು. ಜರ್ಮನ್ ಹಡಗುಗಳು ನಾರ್ವೆ ತೀರದಲ್ಲಿ ಸುರಕ್ಷಿತವಾಗಿರಬಹುದೆಂದು ಭಾವಿಸಲಾಗಿತ್ತು. ಆದರೆ ಅದು ವಿದ್ಯಮಾನಗಳ ಮೇಲೆ ಕಣ್ಣಿಟ್ಟಿತ್ತು. ಹಿಟ್ಲರನ ಕೆಲವರು ಸಲಹೆಗಾರರು ನಾರ್ವೆಯ ಆಕ್ರಮಣ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದ್ದರು. ಜರ್ಮನಿಯ ಯುದ್ಧಕಾರ್ಯಾಚರಣೆಗೆ ನಾರ್ವೆಯ ನೆರೆಯ ರಾಜ್ಯವಾದ ಸ್ವೀಡನ್ನಿನ ಉಕ್ಕು ಅಗತ್ಯವಾಗಿತ್ತು. ನಾರ್ವೆ ಬ್ರಿಟನ್ನಿನ ವಶಕ್ಕೇನಾದರೂ ಹೋದರೆ ಈ ಸರಬರಾಜು ತಪ್ಪುವುದೆಂಬ ಅಂಜಿಕೆ ಜರ್ಮನಿಗೆ. ಬ್ರಿಟನ್ ನಾರ್ವೆ ತೀರದಲ್ಲಿದ್ದ ಜರ್ಮನ್ ಯುದ್ಧ ನೌಕೆಯೊಂದರ ಮೇಲೆರಗಿ ಅದರಲ್ಲಿದ್ದ ಯುದ್ಧ ಖೈದಿಗಳನ್ನು ಬಲವಂತದಿಂದ ವಶಪಡಿಸಿಕೊಂಡಾಗ ನಾರ್ವೆ ತನ್ನ ತಾಟಸ್ಥ್ಯ ನೀತಿಗೆ ಅನುಗುಣವಾಗಿ ಸುಮ್ಮನಿತ್ತು. ಬ್ರಿಟನ್ನಿನ ಕಾರ್ಯಾಚರಣೆಯಿಂದ ರೊಚ್ಚಿಗೆದ್ದ ಹಿಟ್ಲರ್ ನಾರ್ವೆ ಡೆನ್ಮಾರ್ಕುಗಳನ್ನು ಆಕ್ರಮಿಸಬೇಕೆಂದು ತತ್‌ಕ್ಷಣವೇ ತೀರ್ಮಾನಿಸಿದ. ಯಾವ ಸುಳಿವನ್ನೂ ಕೊಡದೆ

ಆಫ್ರಿಕದ ಕದನದಲ್ಲಿ ಜರ್ಮನನೊಬ್ಬನ ಕೈಸೆರೆ

ಜರ್ಮನ್ ಸೇನೆಗಳು ಈ ದೇಶಗಳನ್ನು ಮುತ್ತಿದವು. ಯುದ್ಧ ಮಾಡಲಾರದೆ ಡೆನ್ಮಾರ್ಕ್ ಅಧೀನವಾಯಿತು. ನಾರ್ವೆಯ ಅನೇಕ ನಗರಗಳಲ್ಲಿ ಜರ್ಮನ್ ಸೈನಿಕರು ಸೇರಿ ಪಿತೂರಿಗಾರರೊಡನೆ ಕಲೆತು ನಾರ್ವೆಯ ರಕ್ಷಣಾಕ್ರಮವನ್ನು ನಾಶಪಡಿಸಿದರು. ದೇಶಾಭಿಮಾನಿಗಳಾದ ನಾರ್ವೀಜಿಯನರು ಹೋರಾಟ ನಡೆಸಿದರೂ ಪ್ರಯೋಜನವೇನೂ ಆಗಲಿಲ್ಲ. ಮಿತ್ರಪಡೆಗಳ ಸಹಾಯ ಸಮಯಕ್ಕೆ ಸರಿಯಾಗಿ ಒದಗಲಿಲ್ಲ. ಹಿಟ್ಲರ್ ನಾರ್ವೆಯಲ್ಲಿ ಒಂದು ಕೈಗೊಂಬೆ ಸರ್ಕಾರ ರಚಿಸಿ ಮೇಜರ್ ಕ್ವಿಸ್ಲಿಂಗನನ್ನು ಅದರ ಮುಖ್ಯಸ್ಥನ್ನಾಗಿ ನೇಮಿಸಿದ. ರಾಷ್ಟ್ರದ್ರೋಹಿ ಕೈಗೊಂಬೆಗಳಿಗೆ ಕ್ವಿಸ್ಲಿಂಗ್‌ಗಳೆಂಬ ಹೆಸರು ಬಂದದ್ದು ಈ ಕ್ವಿಸ್ಲಿಂಗನ ನಡೆವಳಿಕೆಯಿಂದಲೇ. ಜರ್ಮನ್ನರು ಹೆಚ್ಚಿನ ಪೂರ್ವಸಿದ್ಧತೆಯಿಲ್ಲದೆ ಆತುರದ ಕ್ರಮವಾಗಿ ನಾರ್ವೆಯನ್ನು ಮುತ್ತದಿದ್ದರೆ ಬಹುಶಃ ಈ ಯುದ್ಧದ ಗತಿಯೇ ಬದಲಾಗುತ್ತಿತ್ತೇನೋ. ತಟಸ್ಥ ರಾಷ್ಟ್ರವೊಂದರ ಆಕ್ರಮಣ ನಡೆಸಿದ ಅಪವಾದವೂ ಅವರ ಅಪರಾಧಗಳ ಪಟ್ಟಿಗೆ ಸೇರಿಕೊಂಡಿದ್ದಷ್ಟೇ ಅಲ್ಲ : ಜರ್ಮನಿ ಸುಮ್ಮನಿದ್ದು ಮಿತ್ರ ರಾಷ್ಟ್ರಗಳೇ ನಾರ್ವೆಯನ್ನಾಕ್ರಮಿಸಿಕೊಳ್ಳಲು ಅವಕಾಶ ಕೊಟ್ಟಿದ್ದರೆ ಆಗ ಅದು ತನ್ನ ವಿಮಾನಪಡೆಯ ಸಾಮರ್ಥ್ಯವನ್ನು ಬಳಸಿಕೊಂಡು ಬ್ರಿಟನ್ನಿನ ನೌಕಾಪಡೆಯ ಮೇಲೆ ಎರಗಬಹುದಾಗಿತ್ತು. ನಾರ್ವೆಯಲ್ಲಿ ತಮ್ಮ ಆತ್ಮಗೌರವವನ್ನೂ ಕಳೆದುಕೊಳ್ಳಲೊಲ್ಲದ ಮಿತ್ರರಾಷ್ಟ್ರಗಳು ಅದಕ್ಕಾಗಿ ಬಲು ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಜರ್ಮನ್ನರು ಡೆನ್ಮಾರ್ಕ್ ಹಾಗೂ ದಕ್ಷಿಣ ಸ್ವೀಡನಿನ ಮೂಲಕ ಪ್ರತೀಕಾರಕ್ರಮ ಕೈಕೊಳ್ಳುವುದು ಅಸಾಧ್ಯವೇನೂ ಆಗುತ್ತಿರಲಿಲ್ಲ. ನಾರ್ವೆಗೆ ಯುದ್ಧ ಸರಬರಾಜನ್ನು ಕಡಿದುಹಾಕಿ ಮಿತ್ರರಾಷ್ಟ್ರಗಳನ್ನು ಪೇಚಿನಲ್ಲಿ ಸಿಕ್ಕಿಸುವ ಅವಕಾಶವನ್ನು ಜರ್ಮನಿ ಕಳೆದುಕೊಂಡಿತೆನ್ನಬಹುದು. ನಾರ್ವೆಯಲ್ಲಾದ ಪರಾಭವ ಇಂಗ್ಲೆಂಡಿನಲ್ಲಿ ಬಹಳ ಕೋಲಾಹಲವನ್ನುಂಟು ಮಾಡಿತು, ಪಾರ್ಲಿಮೆಂಟಿನ ಒತ್ತಾಯದ ಫಲವಾಗಿ ಚೇಂಬರ್ಲಿನ್ ಚರ್ಚಿಲನಿಗೆ ಬ್ರಿಟನ್ನಿನ ಪ್ರಧಾನಿಯ ಪದವಿ ಒಪ್ಪಿಸಿದ. ಪಾರ್ಲಿಮೆಂಟಿನ ಮೂರು ಪಕ್ಷಗಳ ಸಮ್ಮಿಶ್ರ ಸರ್ಕಾರ ರಚಿಸಿ, ಯುದ್ಧವನ್ನು ಯಶಸ್ವಿಯಾಗಿ ಕೊನೆಗೊಳಿಸಬೇಕೆಂದು ಚರ್ಚಿಲ್ ಘೋಷಿಸಿದ ದಿನವೇ (10 ಮೇ 1940) ಹಿಟ್ಲರನೂ ಪಶ್ಚಿಮ ಯುರೋಪ್ ದಂಡಯಾತ್ರೆ ಪ್ರಾರಂಭಿಸಿದ. ಜರ್ಮನಿಯ ಮಿತ್ರತ್ವದಲ್ಲಿ ನಂಬಿಕೆ ಇಟ್ಟಿದ್ದ ಸಣ್ಣ ರಾಷ್ಟ್ರಗಳಾದ ಹಾಲೆಂಡ್ ಮತ್ತು ಬೆಲ್ಜಿಯಂಗಳ ಮೇಲೆ ವಿಮಾನ

ಪಡೆಯ ಮೂಲಕ ಮತ್ತು ಭೂಮಾರ್ಗವಾಗಿ ಆಕ್ರಮಣ ನಡೆಸಿದ. ಆಕ್ರಮಣವೆಲ್ಲವೂ ವಿದ್ಯುದ್ವೇಗದಲ್ಲಿ ಸಂಭವಿಸಿದವು. ಬೆಲ್ಜಿಯಂ ಮತ್ತು ಹಾಲೆಂಡಿನ ಸೈನ್ಯಗಳು ಒಂದುಗೂಡಬೇಕೆಂಬ, ಫ್ರೆಂಚ್ ಮತ್ತು ಬ್ರಿಟಿಷ್ ಪಡೆಗಳು ಅವುಗಳ ನೆರವಿಗೆ ಹೋಗಬೇಕೆಂಬ ಯೋಜನೆಯನ್ನು ರೂಪಿಸುವ ಮೊದಲೇ ಜರ್ಮನ್ನರು ಮುನ್ನುಗ್ಗಿ ಅಧಿಕ ಪ್ರಮಾಣದಲ್ಲಿ ತಮ್ಮ ಸೈನ್ಯವನ್ನು ಇಳಿಸಿ ಅಲ್ಲಿನ ಮುಖ್ಯಪಟ್ಟಣಗಳನ್ನು ನಾಶಮಾಡಿದರು; ಹಾಲೆಂಡಿನ ಮಧ್ಯಭಾಗವನ್ನಾಕ್ರಮಿಸಿ ಉತ್ತರ ದಕ್ಷಿಣಭಾಗಗಳನ್ನು ಪ್ರತ್ಯೇಕಿಸಿದರು. ಆಕ್ರಮಣ ನಡೆದ ಕೆಲವು ದಿನಗಳಲ್ಲಿ ಡಚ್ಚರು ಶರಣಾಗತರಾದರು.

ಹಾಲೆಂಡ್‌ನ ಪತನಾನಂತರ ಬೆಲ್ಜಿಯಂ ಕಡೆ ಹಿಟ್ಲರನ ಸೇನೆಗಳು ನುಗ್ಗಿದವು. ಆ ಸೇನೆಗಳನ್ನು ತಡೆಯಲು ಬೆಲ್ಜಿಯಂಗೆ ಸಾಧ್ಯವಾಗಲಿಲ್ಲ. ಫ್ರಾನ್ಸ್‌ನ ಮ್ಯಾಜಿನೊ ರಕ್ಷಣಾ ಸಾಲು ಜರ್ಮನ್ ಗಡಿಯ ಉದ್ದಕ್ಕೂ ಹಬ್ಬಿತ್ತೇ ವಿನಾ ಬೆಲ್ಜಿಯಂ ಗಡಿಯ ತನಕ ಹಬ್ಬಿರಲಿಲ್ಲ. ಜರ್ಮನ್ನರು ತಮ್ಮ ವಿಮಾನ ಪಡೆಯಿಂದ ಬೆಲ್ಜಿಯಂ ರಕ್ಷಣಾ ವ್ಯೂಹವನ್ನು ಭೇದಿಸಿ, ಮಿತ್ರರಾಷ್ಟ್ರಗಳ ಪ್ರಯತ್ನವನ್ನು ವಿಫಲಗೊಳಿಸಿದರು. ಅವುಗಳ ಸೇನೆಗಳು ಅಲ್ಲಿಂದ ತಪ್ಪಿಸಿಕೊಳ್ಳುವುದೇ ಅಸಾಧ್ಯದ ಕೆಲಸವಾಯಿತು. ಬೆಲ್ಜಿಯಂ

ಯುದ್ಧದಲ್ಲಿ ಬಳಲಿದ ಸೈನಿಕರ ಒಂದು ತಂಡ

ಸೇನೆ ಸಾಮರ್ಥ್ಯದಿಂದ ಹೋರಾಡಿದರೂ ನಿರ್ನಾಮವಾಗುವ ಸ್ಥಿತಿಗೆ ಬಂದು ಮೇ 27ರಂದು ಜರ್ಮನಿಗೆ ಶರಣಾಗತವಾಗದೆ ಅನ್ಯಥಾ ಮಾರ್ಗವಿರಲಿಲ್ಲ. ಮಿತ್ರಸೇನೆಗಳು ಮುಂದಿನ ದಾರಿ ಕಾಣದೆ ಹಿಮ್ಮೆಟ್ಟಿ ಡನ್‌ಕರ್ಕ್ ರೇವುಪಟ್ಟಣವನ್ನು ಸೇರಿದವು. ಆಗ ಬ್ರಿಟಿಷ್ ನೌಕೆ ತನಗೆ ಸಾಧ್ಯವಾದ ಹಡಗು ದೋಣಿ ತೆಪ್ಪಗಳನ್ನೆಲ್ಲ ಉಪಯೋಗಿಸಿ, ಯುದ್ಧದಲ್ಲಿ ಸೋತು ಬಳಲಿ ಆಹಾರವಿಲ್ಲದೆ ಕಂಗೆಟ್ಟ ಬ್ರಿಟಿಷ್, ಫ್ರೆಂಚ್ ಮತ್ತು ಇತರ ಸೈನಿಕರನ್ನು ರಕ್ಷಿಸಿ ಬ್ರಿಟನ್‌ಗೆ ಕೊಂಡೊಯ್ದಿತು. ಯುದ್ಧದ ಇತಿಹಾಸದಲ್ಲಿ ಇದೊಂದು ಸಾಹಸದ ಸಾಧನೆ. ಈ ಕಾರ್ಯದಲ್ಲಿ ಸೈನಿಕರನ್ನು ಉಳಿಸಲು ಸಾಧ್ಯವಾಯಿತೇ ವಿನಾ ಯುದ್ಧಸಾಮಗ್ರಿಗಳನ್ನು ತರಲು ಸಾಧ್ಯವಾಗಲಿಲ್ಲ. 700 ಟ್ಯಾಂಕುಗಳನ್ನೂ 2400 ಫಿರಂಗಿಗಳನ್ನೂ 50,000 ಮೋಟಾರು ವಾಹನಗಳನ್ನೂ ಬ್ರಿಟನ್ ಕಳೆದುಕೊಂಡಿದ್ದರಿಂದ ಆದ ನಷ್ಟ ಅಪಾರ. ಈ ಪ್ರಕರಣದಲ್ಲಿ 13,000 ಸೈನಿಕರು ಪ್ರಾಣ ತೆತ್ತರು; ಮತ್ತೆ 40,000 ಜನ ಶತ್ರುವಿನ ಕೈಗೆ ಸಿಕ್ಕಿಬಿದ್ದರು.

ಬೆಲ್ಜಿಯಂ ಜರ್ಮನಿಯ ವಶವಾಗುವ ವೇಳೆಗೆ ಫ್ರಾನ್ಸಿನ ಕಡೆ ಜರ್ಮನ್ನರು ನುಗ್ಗಿದರು. ಅಷ್ಟರೊಳಗಾಗಲೇ ಫ್ರಾನ್ಸ್ ತನ್ನ 30 ಸೈನಿಕ ಪಡೆಗಳನ್ನು ಯುದ್ಧದಲ್ಲಿ ಕಳೆದುಕೊಂಡಿತ್ತು. ಬ್ರಿಟಿಷ್ ಸೈನಿಕರು ಫ್ರಾನ್ಸ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿರಲಿಲ್ಲ. ಇಂಥ ಸಂದಿಗ್ಧ ಸನ್ನಿವೇಶದಲ್ಲಿ ಫ್ರೆಂಚರ ಸೇನಾಪತಿ ಜನರಲ್ ವೇಗಾನ್ ದೇಶದ ಸೈನಿಕ ಬಲವನ್ನು ಕ್ರೋಡೀಕರಿಸಿ, ಅದರ ಸ್ವಲ್ಪ ಭಾಗವನ್ನು ಮ್ಯಾಜಿನೊ ಸಾಲಿನ ರಕ್ಷಣೆಗೆ ಕಾದಿರಿಸಿದ. ಜನರಲ್ ವೇಗಾನ್ ರಣತಂತ್ರದಲ್ಲಿ ನಿಪುಣನೆಂದು ಕೀರ್ತಿ ಪಡೆದಿದ್ದರೂ ಆತನ ವ್ಯೂಹರಚನೆಯಾಗುವ ಮೊದಲೇ ಜರ್ಮನ್ ವಾಹನ ಪಡೆಗಳು ಸೋಮ್ ನದಿಯನ್ನೂ ರೂವಾನ್ ನಗರವನ್ನೂ ತಲುಪಿದ್ದವು. ಸೇನ್ ನದಿಯನ್ನು ದಾಟಿದ್ದು ಜೂನ್ 10 ರಂದು. ಆ ಸಮಭೂಮಿಯಲ್ಲಿ ಶತ್ರು ಸೇನೆಯನ್ನು ತಡೆಯುವುದು ಅಸಾಧ್ಯವಾಯಿತು. ರಾಜಧಾನಿಯಾದ ಪ್ಯಾರಿಸ್ ಕಡೆ ಧಾವಿಸಲು ಶತ್ರು ಸೇನೆಗಳಿಗೆ ಕಷ್ಟವಾಗಲಿಲ್ಲ. ಅಂದೇ ಮುಸೋಲಿನಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ಮೇಲೆ ಯುದ್ಧ ಘೋಷಿಸಿ ದಕ್ಷಿಣದ ಮಾರ್ಗವಾಗಿ ಫ್ರಾನ್ಸನ್ನು ಮುತ್ತಿದ. ಜೂನ್ 13ರಂದು ಪ್ಯಾರಿಸ್ಸನ್ನು ಅರಕ್ಷಿತ ನಗರವೆಂದು ಘೋಷಿಸಲಾಯಿತು. 14 ರಂದು ಜರ್ಮನ್ನರು ಪ್ಯಾರಿಸ್ ನಗರವನ್ನು ಪ್ರವೇಶಿಸಲು ಏನೂ ತೊಂದರೆಯಾಗಲಿಲ್ಲ. ಫ್ರಾನ್ಸಿನ ಕೀರ್ತಿಪ್ರತಿಷ್ಠೆಗಳು

ಈವೋಜೀಮದಲ್ಲಿ ಜಪಾನೀಯರನ್ನು ಸದೆಬಡಿಯಲು ಹೊಂಚುಹಾಕುತ್ತಿರುವ ಮಿತ್ರ ಸೈನಿಕರು

15 ದಿನಗಳ ಯುದ್ಧದಲ್ಲಿಯೇ ಉಡುಗಿಹೋದವು. ಈ ಸಮಯದಲ್ಲಿ ಸೈನಿಕದಳಪತಿಗಳ ಬೆಂಬಲ ಪಡೆದ ವೇಗಾನ್ ಜರ್ಮನ್ನರೊಡನೆ ಹೋರಾಡಿ ನಾಶವಾಗುವ ಮೊದಲೇ ಶಾಂತಿ ಸಂಧಾನ ಮಾಡುವುದು ಉತ್ತಮ ಮಾರ್ಗವೆಂದು ಮಂತ್ರಿಮಂಡಲಕ್ಕೆ ಒತ್ತಾಯ ಮಾಡಿದ. ಇದಕ್ಕೊಪ್ಪದ ಫ್ರಾನ್ಸಿನ ಪ್ರಧಾನಿ ರೇನೋ ರಾಜಿನಾಮೆಯಿತ್ತ. ಅವನ ಸ್ಥಾನದಲ್ಲಿ ಪೇಟನ್ ಪ್ರಧಾನಿಯಾದ. ವೇಗಾನನ ಸಲಹೆಯನ್ನು ಒಪ್ಪಿ ತಾನು ಸಂಧಾನಕ್ಕಾಗಿ ಸಿದ್ಧವಿರುವುದಾಗಿ ಜೂನ್ 16ರಂದು ಪೇಟನ್ ಸರ್ಕಾರ ತಿಳಿಸಿತು. ಹಿಟ್ಲರನ ಷರತ್ತುಗಳೆಲ್ಲವನ್ನೂ ಪೇಟನನ ಸರ್ಕಾರ ಜೂನ್ 22ರಂದು ಒಪ್ಪಿತು. ಸೋತ ಜರ್ಮನ್ ಪ್ರತಿನಿಧಿಗಳು 1918ರಲ್ಲಿ ಯಾವ ಸ್ಥಳದಲ್ಲಿ ಶರಣಾಗತಿ ಪತ್ರಕ್ಕೆ ಸಹಿ ಹಾಕಿದ್ದರೋ ಅಲ್ಲೇ ಈಗ ಫ್ರೆಂಚ್ ಪ್ರತಿನಿಧಿಗಳು ಶರಣಾಗತಿಯ ಪತ್ರಕ್ಕೆ ರುಜು ಹಾಕಬೇಕಾಯಿತು.

ಫ್ರಾನ್ಸ್‌ನ ಪತನದ ಅನಂತರ ಜರ್ಮನ್ನರ ಮುಂದಿನ ಗುರಿ ಬ್ರಿಟನ್ ಎಂದು ಎಲ್ಲರೂ ತಿಳಿದಿದ್ದರು. ಆದರೆ ಆಗ ಹಿಟ್ಲರ್ ಬ್ರಿಟನ್ನನ್ನು ವಶಪಡಿಸಿಕೊಳ್ಳುವ ಯಾವ ಯೋಜನೆಯನ್ನೂ ಹೊಂದಿರಲಿಲ್ಲ. ಏಕೆಂದರೆ, ಬ್ರಿಟನ್ನಿನ ರಕ್ಷಣಾ ವ್ಯವಸ್ಥೆ ಕುಸಿದಿದ್ದು, ಅದು ಯುದ್ಧ ಮುಂದುವರಿಸುವ ಸ್ಥಿತಿಯಲ್ಲಿರಲಿಲ್ಲವೆಂದೂ ಅಲ್ಲಿನ ಸರ್ಕಾರ ಆದಷ್ಟು ಬೇಗ ಜರ್ಮನ್ನರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಆತುರದಲ್ಲಿದೆಯೆಂದೂ ಹಿಟ್ಲರ್ ತರ್ಕಿಸಿದ್ದ. ಆದ್ದರಿಂದಲೇ ಜರ್ಮನ್ ವಾಯುಪಡೆ ಅತ್ತ ಕಡೆ ಕಣ್ಣು ಹಾಯಿಸಬಾರದೆಂದು ಆಜ್ಞೆ ಮಾಡಿದ್ದ. ಯುದ್ಧ ಮುಂದುವರಿಸುವುದೇ ತನ್ನ ಧ್ಯೇಯವೆಂದು ಬ್ರಿಟಿಷ್ ಪ್ರಧಾನಿ ಚರ್ಚಿಲ್ ಘೋಷಿಸಿದಾಗಲೂ ಹಿಟ್ಲರ್ ಅದನ್ನು ಕೇವಲ ಬೆದರಿಕೆಯ ಕೂಗಾಟವೆಂದೂ ಬ್ರಿಟನ್ನಿನ ಅಶಕ್ತತೆಯ ಬಗ್ಗೆ ತನ್ನ ಅಭಿಪ್ರಾಯ ಸರಿಯೆಂದೂ ಸಾರಿದ. ಆದರೆ ಸ್ವಲ್ಪ ಕಾಲದಲ್ಲೇ ಆ ನಂಬಿಕೆ ನಂದಿಹೋಯಿತು. ಸುಮಾರು ಒಂದು ತಿಂಗಳ ಕಾಲ ಹಿಟ್ಲರ್ ಸುಮ್ಮನಿದ್ದ. ಆಮೇಲೆ ನಿಜಸ್ಥಿತಿ ಅರಿವಾಗಿ 1940 ಜುಲೈ 2ರಂದು ಬ್ರಿಟನ್ನಿನ ಮೇಲೆ ಆಕ್ರಮಣ ನಡೆಸುವ ಕ್ರಮದ ವಿವರವನ್ನು ಮೊದಲ ಬಾರಿಗೆ ತನ್ನ ದಂಡನಾಯಕರೊಡನೆ ಹಿಟ್ಲರ್ ಚರ್ಚಿಸಿದ. ಆಗಸ್ಟ್ ಮಧ್ಯಭಾಗದ ವೇಳೆಗೆ ಸೈನ್ಯ ಸಿದ್ಧವಾಗಿರಬೇಕೆಂದು ಆಜ್ಞೆ ನೀಡಲಾಯಿತು.

ಜರ್ಮನ್ ಸೇನೆ ಈ ಕಾರ್ಯಾಚರಣೆಯ ಬಗ್ಗೆ ವಿಶೇಷ ತರಬೇತಿ ಪಡೆಯದಿದ್ದರೂ ಬ್ರಿಟನ್ ವಿಸ್ತಾರವಾದ ಸಾಗರ ತೀರವನ್ನು ಹೊಂದಿದ್ದರಿಂದ ಅದನ್ನು ಘಾತಿಸಲು ಉತ್ತಮ ಅವಕಾಶವಿತ್ತು. ಆಕ್ರಮಣಕ್ಕೆ ಮೊದಲು ವಿಮಾನದಾಳಿ ನಡೆಸುವುದು ಜರ್ಮನಿಯ ಉದ್ದೇಶ. ಅದರಂತೆ ಎಡೆಬಿಡದೆ ಜರ್ಮನ್ ವಿಮಾನಗಳು ಇಂಗ್ಲೆಂಡಿನ ಮೇಲೆ ದಾಳಿ ನಡೆಸಿದವು. 1940 ಆಗಸ್ಟ್ 8ರಂದು ಆರಂಭವಾದ ದಾಳಿ ಅಕ್ಟೋಬರ್ ಕೊನೆಯ ತನಕ ನಿಲ್ಲಲಿಲ್ಲ. ಈ ವಿಮಾನ ಕದನಗಳಲ್ಲಿ ಜರ್ಮನಿಯ ವಿಮಾನಗಳು ವಿಶೇಷ ಸಂಖ್ಯೆಯಲ್ಲಿ ನಾಶವಾದವು. ಇಂಗ್ಲೆಂಡಿನ ಕಡೆ ಹತರಾದ ವಿಮಾನಚಾಲಕರ ಸಂಖ್ಯೆ 375. ಈ ಕದನದಲ್ಲಿ ಜರ್ಮನಿ ಮತ್ತು ಬ್ರಿಟನ್‌ಗಳ ಬಲಾಬಲಗಳ ಸತ್ತ್ವಪರೀಕ್ಷೆಯಾಗಿ ಇಂಗ್ಲೆಂಡ್

ಉಳಿದುಕೊಂಡಿತು. ಜರ್ಮನ್ ಬಾಂಬಿನ ಮಳೆ ಸುರಿಸಿದಾಗ ಇಂಗ್ಲಿಷರು ತಮ್ಮ ಅಮೂಲ್ಯವಸ್ತುಗಳನ್ನೂ ಹೆಂಗಸರು ಮಕ್ಕಳನ್ನೂ ಸುರಕ್ಷಿತ ಪ್ರದೇಶಗಳಿಗೆ ಸಾಗಿಸಿ ಸತತವಾಗಿ ಬೀಳುತ್ತಿದ್ದ ಬೆಂಕಿಯನ್ನು ಧೈರ್ಯದಿಂದ ಎದುರಿಸಿದರು. ಕಾರ್ಖಾನೆಗಳಲ್ಲಿ ಹರಿಕೇನ್, ಸ್ಪಿಟ್‌ಫೈರ್ ಎಂಬ ಯುದ್ಧವಿಮಾನಗಳನ್ನು ಅವು ತಯಾರಾಗಿ ಸಿದ್ಧವಾಗುತ್ತಿದ್ದಂತೆಯೇ ಹಾರಿಸಿ ಶತ್ರುವಿನ ಉಪದ್ರವವನ್ನು ತಡೆಗಟ್ಟಲಾಯಿತು. ಬ್ರಿಟಿಷರ ಸಂಕಟವೇನೂ ಕಡಿಮೆಯಿರಲಿಲ್ಲ. ಅಪಾರ ನಷ್ಟ, ಆಹಾರದ ಅಭಾವ, ನಿರಂತರ ಸಾವುನೋವು ಈ ಯಾವುದಕ್ಕೂ ಎದೆಗೆಡದೆ ತಮ್ಮ ಒಳಗುದಿಗಳನ್ನು ಬದಿಗೊತ್ತಿ ಐಕಮತ್ಯದಿಂದ ಸೆಣಸಿ

ಜರ್ಮನ್ ಶರಣಾಗತಿ (1945ರ ಮೇ 7)

ನಿಂತು, ಅಮೆರಿಕ ಸಂಯುಕ್ತ ಸಂಸ್ಥಾನದಿಂದ ವಿಮಾನ, ಶಸ್ತ್ರಾಸ್ತ್ರ ಮತ್ತು ಆಹಾರ ಪದಾರ್ಥಗಳ ಸಹಾಯ ಪಡೆದು ಜಯಪ್ರದರಾದರು. ಆ 4 ತಿಂಗಳ ವಿಮಾನದಾಳಿಯಲ್ಲಿ ಬ್ರಿಟನ್ನಿನ ಜನತೆಗೆ ನರಕದ ಅನುಭವವಾಯಿತು. ಸು. 50,000 ಜನ ಸತ್ತರು; ಲಂಡನ್ ನಗರದಲ್ಲಿ ಸು. 11 ಲಕ್ಷ ಮನೆಗಳು ನೆಲಸಮವಾದವು. ಇಷ್ಟು ನಷ್ಟವಾದರೂ ಜರ್ಮನ್ ವಿಮಾನಗಳು ಬ್ರಿಟನ್ನಿನ ಕೈಗಾರಿಕಾ ಕೇಂದ್ರಗಳನ್ನು ನಾಶಪಡಿಸುವುದರಲ್ಲಾಗಲಿ ಅದರ ವಾಯು ಬಲವನ್ನು ಕುಂಠಿತಗೊಳಿಸುವುದರಲ್ಲಾಗಲಿ ಗಣನೀಯ ಯಶಸ್ಸು ಪಡೆಯಲಿಲ್ಲ.

ಬ್ರಿಟನ್ನಿನ ಕದನ ವಿಶ್ವದ ಇತಿಹಾಸದಲ್ಲೆ ಚಿರಸ್ಮರಣೀಯ ಘಟನೆ. ಏಕೆಂದರೆ ಆ ಕದನದಲ್ಲಿ ಜಯಪ್ರದವಾಗಲು ಹಿಟ್ಲರ್ ಅನುಸರಿಸದ ತಂತ್ರವಿಲ್ಲ, ಉಪಯೋಗಿಸದ ಅಸ್ತ್ರವಿಲ್ಲ. ಇಷ್ಟಾದರೂ ಬ್ರಿಟನ್ನಿನ ಜನತೆ ಧೃತಿಗೆಡಲಿಲ್ಲ; ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಿದ್ದರೂ ಶರಣಾಗತವಾಗಲಿಲ್ಲ. ಯುದ್ಧದ ಮೊದಲನೆಯ ಘಟ್ಟ ಮುಗಿದರೂ ಇಂಗ್ಲಿಷರನ್ನು ಸೋಲಿಸುವ ಭರವಸೆ ಹಿಟ್ಲರನಿಗೆ ಉಳಿಯಲಿಲ್ಲ.

ಬ್ರಿಟನ್ ತನ್ನ ದ್ವೀಪದ ರಕ್ಷಣೆಗೆ ತೊಡಗಿದ್ದಾಗ ಉತ್ತರ ಆಫ್ರಿಕದಲ್ಲಿ ಅದರ ಸ್ವಾಸ್ಥ್ಯಗಳನ್ನು ಕಬಳಿಸಬೇಕೆಂದಿದ್ದ ಮುಸೋಲಿನಿ ತನ್ನ ಸೇನೆಯನ್ನು ಈಜಿಪ್ಟಿನ ಕಡೆಗೆ ನುಗ್ಗಿಸಿದ. ಬ್ರಿಟಿಷ್ ಸೋಮಾಲಿ ಲ್ಯಾಂಡ್ ಇಟಲಿಯ ವಶವಾಯಿತು. ಯುರೋಪಿನಲ್ಲಿ ಆಲ್ಬೇನಿಯವನ್ನು ಆಕ್ರಮಿಸಿ ಗ್ರೀಸ್ ದೇಶದ ಕಡೆಗೆ ನುಗ್ಗಿದಾಗ ಗ್ರೀಸ್‌ನ ಜನತೆ ಶೌರ್ಯದಿಂದ ಹೋರಾಡಿ ಶತ್ರುವನ್ನು ತಡೆದದ್ದೇ ಅಲ್ಲದೆ ಆಲ್ಬೇನಿಯ ಗಡಿ ದಾಟಿಸಿ ಹಿಮ್ಮೆಟ್ಟಿಸಿದರು. ಈಜಿಪ್ಟಿನಲ್ಲಿ ಮಧ್ಯಪ್ರಾಚ್ಯದ ಮಹಾಸೇನಾನಿ ಜನರಲ್ ವೇವಲ್ ಇಟಾಲಿಯನರನ್ನು ಎದುರಿಸಲು ತನ್ನ ಸೈನ್ಯವನ್ನು ಸಜ್ಜುಗೊಳಿಸಿದ. ಸು. 60 ದಿನಗಳ ಕಾಲ ಸತತವಾಗಿ ನಡೆದ ಕಾರ್ಯಾಚರಣೆಯಲ್ಲಿ ಇಟಲಿಯನ್ನರು ಸೋತು ಈಜಿಪ್ಟಿನ ಗಡಿ ತ್ಯಜಿಸಿದರು. ಜರ್ಮನ್ ಸೇನಾನಿಗಳೇ ವೇವಲ್‌ನನ್ನು ಬ್ರಿಟನ್ನಿನ ಶ್ರೇಷ್ಠ ದಳಪತಿ ಯೆಂದು ಹೊಗಳಿದರು. ಅಲ್ಲಿನ ಕಾರ್ಯಾಚರಣೆಯಲ್ಲಿ ಭಾರತೀಯ ಸೈನಿಕರು ಶೌರ್ಯ ದಿಂದ ಹೋರಾಡಿ ಯಶಸ್ಸುಗಳಿಸಿದ ಕೀರ್ತಿ ಭಾರತೀಯ ಸೈನಿಕರಿಗೂ ಸಲ್ಲುತ್ತದೆ.

ಅತ್ತ ಕಡೆ ಗ್ರೀಸ್‌ನಿಂದಲೂ ಇತ್ತಕಡೆ ಬ್ರಿಟಿಷ್ ಸೈನ್ಯದಿಂದಲೂ ಪರಾಭವಗೊಂಡ ಮುಸೋಲಿನಿಯ ನೆರವಿಗೆ ಜರ್ಮನಿ ಬಂತು. ಬಲ್ಗೇರಿಯ ಮತ್ತು ರೂಮೇನಿಯ ಆಕ್ರಮಣ ನಡೆಸಿ, ಯೂಗೊಸ್ಲಾವಿಯದ ಮೇಲೆ ಬಿದ್ದು ಅದರ ರಾಜಧಾನಿ ಬೆಲ್‌ಗ್ರೇಡಿನ ಮೇಲೆ ದಾಳಿ ನಡೆಸಿತು. ಆಲ್ಬೇನಿಯದಲ್ಲಿ ಯುದ್ಧ ಮಾಡುತ್ತಿದ್ದ ಗ್ರೀಕರನ್ನು ಎದುರಿಸಿ ಜರ್ಮನ್ನರು ಆ ಕಾರ್ಯಾಚರಣೆಯಲ್ಲಿ ಜಯಪ್ರದರಾದರು. ಶೂರ ಗ್ರೀಕ್ ಸೈನ್ಯ ಶರಣಾಗತ ವಾಯಿತು. ಗ್ರೀಕರ ನೆರವಿಗೆ ಹೋದ ಬ್ರಿಟಿಷ್ ಸೇನೆಯ ಸ್ಥಿತಿ ಶೋಚನೀಯವಾಯಿತು.

ಉತ್ತರ ಆಫ್ರಿಕದಲ್ಲಿ ವೇವೆಲ್ ಜಯಶೀಲನಾಗಿದ್ದರೂ ಅವನಿದ್ದ ಪ್ರದೇಶಗಳ ಹಿಂಭಾಗದಲ್ಲಿ ಇಟಾಲಿಯನ್ ಸೇನೆಗಳು ಇದ್ದೇ ಇದ್ದವು. ವೇವಲ್‌ನ ಒಂದು ಪಡೆ ಎರಿಟ್ರಿಯದ ಮೇಲೂ ಇನ್ನೊಂದು ದಕ್ಷಿಣ ಸೋಮಾಲಿ ಲ್ಯಾಂಡಿನ ಮೇಲೂ ನುಗ್ಗಿ ಇಟಾಲಿಯನ್ ಸೇನೆಗಳಿಗೆ ನಷ್ಟವುಂಟುಮಾಡಿದುವು. ಮುಸೋಲಿನಿಯ ಆಕ್ರಮಣಕ್ಕೆ ತುತ್ತಾಗಿದ್ದ ಇಥಿಯೋಪಿಯ 5 ವರ್ಷಗಳ ಅನಂತರ ವೇವೆಲ್‌ನ ಕಾರ್ಯಾಚರಣೆಯಿಂದ ವಿಮೋಚನೆ ಹೊಂದಿತು.

ಉತ್ತರ ಆಫ್ರಿಕದಲ್ಲಿ ಬ್ರಿಟಿಷ್ ಸೇನೆಯ ಸಂಖ್ಯೆ ಕಡಿಮೆಯಾಗಿದ್ದ ಆ ಸಮಯದಲ್ಲಿ ಜರ್ಮನ್ನರು ಲಿಬಿಯದಲ್ಲಿ ದೊಡ್ಡ ಟ್ಯಾಂಕುಗಳ ಸೇನೆ ಇಳಿಸಿ, ಸಿಸಿಲಿಯಲ್ಲಿ ದೊಡ್ಡ ವಿಮಾನ ಪಡೆಯನ್ನು ಕೂಡಿಸಿ ದಾಳಿ ನಡೆಸಿದರು. ಈ ಕಾರ್ಯಾಚರಣೆಯಿಂದ ವೇವಲ್‌ನ ಸೇನೆ ಕರಗಿತು. ಬ್ರಿಟಿಷರ ಶ್ರೇಷ್ಠ ದಳಪತಿಗಳು ಜರ್ಮನ್ನರ ಸೆರೆಯಾಳುಗಳಾದರು. ಸಿಸಿಲಿಯಿಂದ ಜರ್ಮನ್ ವಿಮಾನಗಳು ದಾಳಿ ನಡೆಸಿದ್ದರಿಂದ ಬ್ರಿಟಿಷ್ ನೌಕೆಗಳು ಆ ಭಾಗದಲ್ಲಿ ಚಲಿಸುವುದೇ ದುಸ್ತರವಾಯಿತು. ಇಷ್ಟಾದರೂ ಮಿತ್ರಪಕ್ಷ ಆಫ್ರಿಕದಲ್ಲಿ ಪಡೆದುಕೊಂಡಿದ್ದ ಪ್ರದೇಶಗಳನ್ನು ಜರ್ಮನಿ ಕಸಿದುಕೊಳ್ಳಲು ಸಾಧ್ಯವಾಗಲಿಲ್ಲ.

ಈ ಮಧ್ಯೆ ಹಿಟ್ಲರ್ ತನ್ನ ಯುದ್ಧನೀತಿಯನ್ನು ಬದಲಾಯಿಸಿದ, ಇಂಗ್ಲೆಂಡನ್ನು ಸೋಲಿಸಲಾರದೆ, ಯುರೋಪಿನ ಪೂರ್ವ ರಾಷ್ಟ್ರಗಳ ಕಡೆ ತಿರುಗಿ ಸಣ್ಣ ರಾಷ್ಟ್ರಗಳನ್ನು ವಶಪಡಿಸಿಕೊಂಡು ಹಠಾತ್ತನೆ 1941 ಜೂನ್ 22ರಂದು ತನ್ನ ಸುಸಜ್ಜಿತ ಸೇನೆಯನ್ನು ಸೋವಿಯತ್ ಒಕ್ಕೂಟದ ಕಡೆಗೆ ತಿರುಗಿಸಿದ. ಅಂದೇ ಚರ್ಚಿಲ್ ಘೋಷಣೆಯೊಂದರಲ್ಲಿ ರಷ್ಯದ ನೆರವಿಗೆ ಬ್ರಿಟನ್ ಸಿದ್ಧವಿರುವುದಾಗಿ ತಿಳಿಸಿ, ಅಮೆರಿಕ ಸಂಯುಕ್ತ ಸಂಸ್ಥಾನವು ಅದರ ಬೆಂಬಲಕ್ಕೆ ಬರುವಂತೆ ಮಾಡಿದ.

ಹಿಟ್ಲರ್ ಸೋವಿಯತ್ ಒಕ್ಕೂಟದ ಮೇಲೆ ಅನಿರೀಕ್ಷಿತ ದಾಳಿ ನಡೆಸಿದಾಗ ಇತಿಹಾಸದ ಪಥವೇ ಬದಲಾಯಿತೆನ್ನಬಹುದು. ಹಿಂದೆ ನೆಪೋಲಿಯನ್ ಅನುಭವಿಸಿದ ತೇಜೋವಧೆಯಂತೆ ಹಿಟ್ಲರನಿಗೂ ಅದೇ ರೀತಿಯ ಅನುಭವ ಉಂಟಾಯಿತು. ಹಿಟ್ಲರ್ ತನ್ನ ಸೈನ್ಯವನ್ನು ಪೂರ್ವದ ಕಡೆ ತಿರುಗಿಸಿದಾಗ ಬ್ರಿಟನ್ನಿನ ಸ್ಥಿತಿ ಸುಧಾರಿಸಿತೆನ್ನಬಹುದು. ಹಿಟ್ಲರನಾದರೋ ಸೋವಿಯತ್ ದೇಶವನ್ನು ಸೋಲಿಸುವ ಧ್ಯೇಯವನ್ನು ಮೊದಲಿಂದಲೇ ಹೊಂದಿದ್ದ. 1939ರಲ್ಲಿ ಸೋವಿಯತ್ ಒಕ್ಕೂಟದೊಡನೆ ಯುದ್ಧವಿರುದ್ಧ ಒಪ್ಪಂದ ಮಾಡಿಕೊಂಡಿದ್ದು ಕೇವಲ ತಾತ್ಕಾಲಿಕವೆಂದು ಹಿಟ್ಲರ್ ಭಾವಿಸಿದ್ದ. ಏಕೆಂದರೆ ಆತ ಮೊದಲಿಂದಲೂ ಬಾಲ್‌ಷೆವಿಸ್ಮ್‌ನ ವಿರೋಧಿಯಾಗಿದ್ದು 1939ರ ಅನಂತರದ ಸ್ಟಾಲಿನನ ನಡೆವಳಿಕೆಯ ಬಗ್ಗೆ ಸಂಶಯ ಹೊಂದೇ ಇದ್ದ. ಸೋವಿಯತ್ ಒಕ್ಕೂಟದ ಮೇಲೆ ಯುದ್ಧ ಮಾಡುವ ನಿರ್ಧಾರ ಮಾಡಿ ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದ. ಅಂಥ ಸಮಯ 1941 ಜೂನ್ 22ರಂದು ಒದಗಿದಾಗ ಹಿಟ್ಲರ್ ಅದರ ಮೇಲೆ ತನ್ನ ಸೇನೆಗಳನ್ನು ನುಗ್ಗಿಸಿದ.

ಸೋವಿಯತ್–ಜರ್ಮನ್ ಯುದ್ಧವನ್ನು ಮಹಾಬಲರ ಯುದ್ಧವೆಂದು ಕರೆಯಲಾಗಿದೆ. ಯುದ್ಧತಂತ್ರದಲ್ಲಿ ನೈಪುಣ್ಯ ಪಡೆದಿದ್ದ, ಅದುವರೆಗೆ ನಡೆದ ಕದನಗಳಲ್ಲಿ ಜಯಶೀಲರಾಗಿದ್ದ ಜರ್ಮನ್ ಸೈನಿಕರಿಗೆ ಸೋವಿಯತ್ ಒಕ್ಕೂಟವನ್ನು ಸೋಲಿಸುವ ಕಾರ್ಯ ಕಷ್ಟವೆನಿಸಲಿಲ್ಲ. ಯುದ್ಧದ ಪ್ರಾರಂಭದಲ್ಲಿ ಅವರ ಕೈಯೇ ಮೇಲಾಗಿತ್ತು. ಹೊರವಲಯದ ಬಾಲ್ಟಿಕ್ ರಾಷ್ಟ್ರಗಳಲ್ಲಿ, ಪೂರ್ವ ಪೋಲೆಂಡ್ ಮತ್ತು ಬೆಸ್ಸರೇಬಿಯಗಳಲ್ಲಿ ಸೋವಿಯತ್ ಒಕ್ಕೂಟ ನಿರ್ಮಿಸಿಕೊಂಡಿದ್ದ ರಕ್ಷಣಾ ಪಂಕ್ತಿಗಳು ಅಲ್ಲಲ್ಲ ನಡೆದ ಘೋರ ಕಾಳಗಗಳಲ್ಲಿ ಕುಸಿದು ಬಿದ್ದುವು. ಜರ್ಮನ್ ಸೈನಿಕರು ಬಯಲು ಪ್ರದೇಶವಾದ ರಷ್ಯದ ಒಳಪ್ರಾಂತ್ಯಗಳಲ್ಲಿ ಪ್ರಸರಿಸಿ ಕೀಯೆಫ್, ಕಾರ್ಕೋಫ್ ನಗರಗಳನ್ನು ವಶಪಡಿಸಿಕೊಂಡು ಲೆನಿನ್‌ಗ್ರಾಡನ್ನೂ ರಾಜಧಾನಿಯಾದ ಮಾಸ್ಕೋ ನಗರವನ್ನೂ ಸುತ್ತುಗಟ್ಟಿ ದಕ್ಷಣದಲ್ಲಿ ಡೊನೆಟ್ಸ್ ನದೀಪಾತ್ರವನ್ನು ವಶಪಡಿಸಿಕೊಂಡು ಡಾನ್ ನದೀತೀರದ ರಾಸ್ಟಾವ್ ನಗರ ಪ್ರವೇಶಿಸಿದರು. ಆದರೆ ಸೋವಿಯತ್‌ರು ಎದೆಗುಂದಲಿಲ್ಲ. ಶೌರ್ಯದಿಂದ ಕಾದಾಡಿ ರಾಸ್ಟಾವನ್ನು ಮತ್ತೆ ಸ್ವಾಧೀನ ಪಡಿಸಿಕೊಂಡರು. ಆದರೆ ಆ ವೇಳೆಗೆ ಅನೇಕ ಲಕ್ಷ ಚದರ ಕಿಮೀಗಳ ರಷ್ಯನ್ ಭೂಮಿ ಜರ್ಮನ್ನರ ವಶವಾಗಿತ್ತು. ಜರ್ಮನ್ನರು ಅಗಾಧ ಸಂಖ್ಯೆಯಲ್ಲಿ ಟ್ಯಾಂಕುಗಳನ್ನೂ ವಿಮಾನ ಬಲವನ್ನೂ ಉಪಯೋಗಿಸಿ ಉಕ್ರೇನ್ ಪ್ರದೇಶದತ್ತ ನುಗ್ಗಿದರು. ಕೈಗಾರಿಕಾ ಕೇಂದ್ರವಾದ ಉಕ್ರೇನ್ ಶತ್ರುವಶವಾದದ್ದು ಸೋವಿಯತ್ ಒಕ್ಕೂಟಕ್ಕೊದಗಿದ ದೊಡ್ಡ ವಿಪತ್ತು. ಆ ಪ್ರದೇಶ ಕೈಬಿಟ್ಟದ್ದರಿಂದ ಸೋವಿಯತ್‌ರು ಯೂರಲ್ ಪ್ರಾಂತ್ಯದ ಕೈಗಾರಿಕೆಗಳನ್ನೂ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನ ಕಳುಹಿಸುತ್ತಿದ್ದ ಯುದ್ಧ ಸಾಮಗ್ರಿಗಳನ್ನೂ ಅವಲಂಬಿಸಬೇಕಾಯಿತು.

ಸೋವಿಯತ್–ಜರ್ಮನ್ ಯುದ್ಧ ಇನ್ನೂ ವಿಸ್ತಾರಗೊಂಡಿತು. ಅತ್ತಕಡೆ ಜಪಾನ್ ಜರ್ಮನ್ ದಿಗ್ವಿಜಯದಿಂದ ಉತ್ಸಾಹಗೊಂಡು 1941 ಡಿಸೆಂಬರ್ 7ರಂದು ಹವಾಯಿ ದ್ವೀಪದಲ್ಲಿನ ಪರ್ಲ್ ಹಾರ್ಬರಿನಲ್ಲಿ ಅಮೆರಿಕದ ದೊಡ್ಡ ನೌಕಾಪಡೆಯ ಮೇಲೆ

ಹಠಾತ್ತನೆ ದಾಳಿ ನಡೆಸಿದಾಗ ಅವರ ಅನೇಕ ಹಡಗುಗಳು ನಾಶಗೊಂಡುವು. ಇದರಿಂದ ಅಮೆರಿಕ ಸಂಯುಕ್ತ ಸಂಸ್ಥಾನದ ನೌಕಾಬಲ ಕುಂಠಿತವಾಯಿತೆನ್ನಬಹುದು. ಇದಾದ ಮೂರು ದಿನಗಳ ಅನಂತರ ಬ್ರಿಟಿಷರ ಪ್ರಸಿದ್ಧ ಯುದ್ಧ ನೌಕೆಗಳಾದ ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಪಲ್ಸ್ ಜಪಾನೀಯರ ಬಾಂಬುಗಳಿಗೀಡಾಗಿ ಮುಳುಗಿ ಹೋದವು. ಇದರಿಂದ ಪೆಸಿಫಿಕ್ ಮತ್ತು ಆಗ್ನೇಯ ಪ್ರದೇಶಗಳಲ್ಲಿ ಜಪಾನ್ ತನ್ನ ಆಕ್ರಮಣ ನಡೆಸಲು ಸುಲಭವಾಯಿತು. ಹಾಂಗ್‌ಕಾಂಗ್, ಮಲಯ ಮತ್ತು ಸಿಂಗಪುರಗಳು ಒಂದರ ಮೇಲೊಂದರಂತೆ ಜಪಾನೀಯರ ವಶವಾದವು. ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿದ್ದ ಫಿಲಿಪೀನ್ ದ್ವೀಪಸಮುದಾಯದಲ್ಲಿ ಜನರಲ್ ಮೆಕಾರ್ಥರನ ನಾಯಕತ್ವದಲ್ಲಿ ಹೋರಾಟ ನಡೆಸಿದರೂ ಅದಕ್ಕೆ ಹೊಸ ಸೇನೆಯ ಬೆಂಬಲ ಬಾರದೆ ಹೋದ ಪ್ರಯುಕ್ತ ಆ ಸೇನೆಯೂ ಶತ್ರುವಿನ ವಶವಾಯಿತು. ಬಂಗಾಲದ ಗಡಿ ತನಕ ಮಯನ್ಮಾರ್‌ನ್ನಾಕ್ರಮಿಸಿ ಮಯನ್ಮಾರ್ ರಸ್ತೆ ಹಿಡಿದುಕೊಂಡು ಚೀನವನ್ನು ಬೇರ್ಪಡಿಸಿ, ಅದಕ್ಕೆ ಹೊರಗಿನ ಸಂಪರ್ಕವೇ ಇಲ್ಲದಂತೆ ಮಾಡಿದ ಜಪಾನೀಯರು ತತ್ಕಾಲದಲ್ಲಿ ಅಜೇಯರೆನಿಸಿಕೊಂಡಿದ್ದರು.




ಉತ್ತರ ಆಫ್ರಿಕ ಯುದ್ಧರಂಗ

ಪರ್ಲ್ ಹಾರ್ಬರ್ ಪ್ರಕರಣದ ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನ ಯುದ್ಧ ಘೋಷಣೆ ಮಾಡಿದಾಗ, ಜರ್ಮನ್ನರ ಜಲಾಂತರ್ಗಾಮಿ ನೌಕೆಗಳ ಹಾವಳಿ ಅಷ್ಟಿಷ್ಟಲ್ಲ. ಅನೇಕ ಜಲಾಂತರ್ಗಾಮಿಗಳು ದೂರದ ಅಮೆರಿಕ ತೀರದವರೆಗೂ ಪೂರ್ವದಲ್ಲಿ ಭಾರತದವರೆಗೂ ಸಂಚರಿಸಿ ಅನೇಕ ಹಡಗುಗಳನ್ನು ಮುಳುಗಿಸಿದವು.

ಅತ್ತಕಡೆ ಜರ್ಮನ್–ಸೋವಿಯತ್ ಯುದ್ಧದಲ್ಲಿ ಸೋವಿಯತ್‌ರು ಚಳಿಗಾಲದ ಅವಕಾಶವನ್ನು ಉಪಯೋಗಿಸಿಕೊಂಡು ಜರ್ಮನ್ನರ ಮೇಲೂ ಅವರ ಸಂಚಾರ ವ್ಯವಸ್ಥೆಗಳ ಮೇಲೂ ದಾಳಿ ನಡೆಸಿ ಅಪಾರ ಹಾನಿಯನ್ನುಂಟುಮಾಡಿದರು. ಜರ್ಮನ್ನರ ಸೇನೆ ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ, ಹಿಟ್ಲರನೇ ಸಮಸ್ತ ಸೇನಾ ನಾಯಕತ್ವವನ್ನು ವಹಿಸಿಕೊಂಡಿದ್ದರಿಂದ ಅವರಿಗೆ ಸ್ಫೂರ್ತಿ ಬಂದಂತಾಗಿತ್ತು. ಲೆನಿನ್‌ಗ್ರಾಡ್ ಅನ್ನು ವಶಪಡಿಸಿಕೊಳ್ಳುವುದೇ ಜರ್ಮನ್ ಸೇನೆಯ ಗುರಿ, ಭೂಭಾಗದಿಂದ ಎಲ್ಲ ಕಡೆಗಳಿಂದಲೂ ಆ ಪಟ್ಟಣವನ್ನು ಮುತ್ತಿದ್ದರು. ಆಹಾರವಿಲ್ಲದೆ, ಯುದ್ಧ ಸಾಮಗ್ರಿಗಳಿಲ್ಲದೆ ಸತತವಾಗಿ ಜರ್ಮನ್ನರ ಫಿರಂಗಿ ಏಟಿಗೆ ತುತ್ತಾಗಿದ್ದ ಲೆನಿನ್‌ಗ್ರಾಡಿನೊಂದಿಗೆ ಸರ್ಕಾರ ನೇರ ಸಂಪರ್ಕ ಬೆಳೆಸಿ, ಆಹಾರ ಮತ್ತು ಯುದ್ಧ ಸಾಮಗ್ರಿಗಳನ್ನು ಸರಬರಾಜುಮಾಡಿದರು.

ಹಿಮಗಾಲ ಕಳೆದಾಗ ಸೋವಿಯತ್ ಸೇನೆಗಳು ಅಪಜಯ ಅನುಭವಿಸಬೇಕಾಯಿತು. 1942 ಮೇ ತಿಂಗಳಲ್ಲಿ ಕಾರ್‌ಕೊಫ್ ನಗರವನ್ನು ಮರಳಿ ಹಿಡಿಯುವ ಪ್ರಯತ್ನವೂ ಫಲಿಸಲಿಲ್ಲ. ದಕ್ಷಿಣದಲ್ಲಿ ಜರ್ಮನ್ನರು ಸೆವಾಸ್ಟೊಪೋಲ್ ಕ್ರಿಮಿಯಗಳನ್ನು ವಶಪಡಿಸಿಕೊಂಡು, ತಮ್ಮ ಸ್ಥಾನ ಭದ್ರಗೊಳಿಸಿ, ಡೊನೆಟ್ಸ್ ಮತ್ತು ಡಾನ್ ನದಿಗಳ ಮಧ್ಯ ಪ್ರದೇಶದಲ್ಲಿ ಮುನ್ನುಗ್ಗಿದರು. ಅಲ್ಲಿ ಸೇನೆ ಇಬ್ಭಾಗವಾಯಿತು. ಒಂದು ಭಾಗದ ಗುರಿ ದಕ್ಷಿಣ ಕಾಕಸಸ್ ಆದರೆ ಮತ್ತೊಂದಕ್ಕೆ ವೋಲ್ಗಾತೀರದ ಕೈಗಾರಿಕಾನಗರ ಸ್ಟಾಲಿನ್‌ಗ್ರಾಡ್ ಗುರಿ. ಇಲ್ಲಿ ಭಯಂಕರ ಯುದ್ಧವಾಗಿ ಒಂದೊಂದು ಹೆಜ್ಜೆ ಮುಂದುವರಿಯಲೂ ಉಭಯ ಪಕ್ಷಗಳಲ್ಲೂ ಸಾವಿರಾರು ಜನ ಸತ್ತರು. ಎರಡನೆಯ ಮಹಾಯುದ್ಧದಲ್ಲಿ ಸ್ಟಾಲಿನ್‌ಗ್ರಾಡ್ ಯುದ್ಧವೇ ಎರಡನೆಯ ಮಹಾ ಘಟ್ಟ, ಆ ನಗರ ಹಿಟ್ಲರನ ವಶವಾಗಿದ್ದರೆ ಮುಂದೆ ಜರ್ಮನ್ನರನ್ನು ತಡೆಯಲು ಸಾಧ್ಯವಾಗುತ್ತಿರಲಿಲ್ಲ. ಸೋವಿಯತರು ಯುದ್ಧ ಮುಂದುವರಿಸಲಾಗುತ್ತಿರಲಿಲ್ಲ. ಜರ್ಮನ್ನರು ನಿರಂತರವಾಗಿ ಮುನ್ನುಗ್ಗಿ ಸೂಯೆಜ್ ಕಾಲುವೆಯನ್ನು ವಶಪಡಿಸಿಕೊಂಡು ಭಾರತಕ್ಕೆ ಕೂಡ ಬರಬಹುದಾಗಿತ್ತು. ಯೂರಲ್ ಪರ್ವತಪ್ರದೇಶದ ಕೈಗಾರಿಕೆಗಳೆಲ್ಲ ಅವರ ವಶವಾಗುತ್ತಿದ್ದುವು. ಆದರೆ ಇದೊಂದೂ ಸಾಧ್ಯವಾಗಲಿಲ್ಲ. ಏಕೆಂದರೆ ಸುಸಜ್ಜಿತ ಸೋವಿಯತ್ ಸೇನೆ 5 ತಿಂಗಳ ಸತತ ಕದನದ ಅನಂತರ, ಶತ್ರುವಿಗೆ ಏನೊಂದೂ ಸುಳಿವು ಕೊಡದೆ ವೋಲ್ಗಾ ನದಿ ದಾಟಿ, ಶತ್ರು ಸೇನೆಯನ್ನು ಸುತ್ತುಗಟ್ಟಿ ಹಠಾತ್ತನೆ ಅದರ ಮೇಲೆ ಬಿತ್ತು. ಈ ಆಕ್ರಮಣವನ್ನು ಜರ್ಮನ್ನರು ನಿರೀಕ್ಷಿಸಿರಲಿಲ್ಲ. 1943ರ ಜನವರಿ 31ರಂದು ಜರ್ಮನ್ನರು ಅಧಿಕ ಸಂಖ್ಯೆಯಲ್ಲಿ ಶರಣಾಗತರಾದರು. ಉಳಿದ ರಂಗಗಳಲ್ಲೂ ಸೋವಿಯತ್‌ರು ಜಯ ಗಳಿಸಿದರು, ಕಾಕಸಸ್ ಕಡೆಗೆ ನುಗ್ಗಿದ್ದ ಜರ್ಮನ್ ಸೇನೆ ವಿಪತ್ತನ್ನು ಎದುರಿಸಬೇಕಾಯಿತು. ಹೀಗಾಗಿ ಡಾನ್ ಪ್ರದೇಶ, ವೋಲ್ಗಾ ತೀರ ಮತ್ತು ಕಾಕಸಸ್ ಪರ್ವತ ಪ್ರದೇಶಗಳು ಶತ್ರುವಿನಿಂದ ವಿಮೋಚನೆ ಹೊಂದಿದುವು.

ದಕ್ಷಿಣದಲ್ಲಿ ವಿಜಯಿಗಳಾದ ಸೋವಿಯತ್‌ರು ಉತ್ತರ ಮತ್ತು ಮಧ್ಯ ಪ್ರದೇಶಗಳಲ್ಲೂ ಜಯ ಗಳಿಸಿದರು. ಲೆನಿನ್‌ಗ್ರಾಡ್ ಮತ್ತು ಮಾಸ್ಕೋಗಳಿಗೆ ಸನ್ನಿಹಿತವಾಗಿದ್ದ ಆಕ್ರಮಣ ನಿವಾರಣೆಯಾಯಿತು. ಸ್ಟಾಲಿನ್‌ಗ್ರಾಡ್‌ಗೆ ಒದಗಿದ್ದ ವಿಪತ್ತನ್ನು ನಿವಾರಿಸಿದ ಸೋವಿಯತ್ ಸೇನೆ ಉತ್ತರಕ್ಕೆ ಸರಿದು ಡೊನೆಟ್ಸ್ ನದೀಪಾತ್ರವನ್ನು ಜರ್ಮನ್ನರಿಂದ ಕಸಿದುಕೊಂಡಿತು.

ಉತ್ತರ ಆಫ್ರಿಕದಲ್ಲೂ ಜರ್ಮನ್ನರ ಪ್ರಬಲ ಸೇನಾನಿ ರಾಮೆಲ್ ಮೊದಮೊದಲು ಮಿತ್ರಸೇನೆಗಳನ್ನು ಹಿಮ್ಮೆಟ್ಟಿಸಿ ಇಟಲಿ ಕಳೆದುಕೊಂಡಿದ್ದ ಭೂಭಾಗಗಳನ್ನು ವಶಪಡಿಸಿಕೊಂಡಿದ್ದ. ಆದರೆ 1942 ನವೆಂಬರ್ ತಿಂಗಳ ಆದಿಭಾಗದಲ್ಲಿ ನಡೆದ ಎಲ್ ಆಲಮೇನ್ ರಣರಂಗದಲ್ಲಿ ಸೋತು ಹಿಮ್ಮೆಟ್ಟಬೇಕಾಯಿತು. 1943 ಜನವರಿ 23ರಂದು ರಾಮೆಲ್‌ನನ್ನು ಬೆನ್ನಟ್ಟಿದ್ದ ಬ್ರಿಟಿಷ್ ಸೇನೆಗಳು ಟ್ರಿಪೋಲಿ ನಗರ ಹಿಡಿದುವು. ಅತ್ತ ಮೊರಾಕ್ಕೊ ಆಲ್ಜೀರಿಯಗಳಿಂದ ಒಳನುಗ್ಗಿದ ಮಿತ್ರ ಸೇನೆಗಳು ಕ್ಯಾಸಬ್ಲಾಂಕ, ರಬಾತ್, ಬರಾನ್, ಆಲ್ಜಿಯರ್ಸ್‌ಗಳನ್ನು ವಶಪಡಿಸಿಕೊಂಡುವು. ಉತ್ತರ ಆಫ್ರಿಕದಲ್ಲಿದ್ದ




ಜರ್ಮನಿಯ ಆಕ್ರಮಣ

ಫ್ರೆಂಚ್ ಸೇನೆ ಮಿತ್ರಪಕ್ಷಕ್ಕೆ ಸೇರಿತು. ಮಿತ್ರರಾಷ್ಟ್ರ ಪಡೆಗಳ ದಂಡನಾಯಕ ಐಸನ್‌ಹೌವರ್ ನೇತೃತ್ವದಲ್ಲಿ ಟ್ಯುನೀಷಿಯವನ್ನು ವಶಪಡಿಸಿಕೊಳ್ಳುವುದೇ ಅವರಿಗಿದ್ದ ಧ್ಯೇಯ. ದೊಡ್ಡ ಪ್ರಮಾಣದಲ್ಲಿ ಹಿಟ್ಲರ್ ಭಾರೀ ಸೇನೆಯನ್ನು ಅದರ ರಕ್ಷಣೆಗೆ ಕಳುಹಿಸಿಕೊಟ್ಟ. ಟ್ಯುನೀಷಿಯದಲ್ಲಿ ಜರ್ಮನ್ನರಿಗೆ ಅನೇಕ ಸೌಲಭ್ಯಗಳು ದೊರೆತಿದ್ದವು. ರಾಮೆಲ್ ಆ ಪ್ರದೇಶದ ರಕ್ಷಣೆಗಾಗಿ ಹೊಸ ವ್ಯೂಹವೊಂದನ್ನು ಕಟ್ಟಿದ್ದ. ಆದರೆ ರಾಮೆಲ್ ಜರ್ಮನಿಗೆ ಹಿಂತಿರುಗಿದಾಗ ಯುದ್ಧದ ಬಣ್ಣವೇ ಬದಲಾಯಿತು. ಜರ್ಮನ್ ವ್ಯೂಹ ಛಿದ್ರಗೊಂಡು ಎರಡು ಕಡೆಗಳಿಂದ ಮಿತ್ರಸೇನೆಗಳು ಮುನ್ನುಗ್ಗಿ ಬಂದಾಗ, ಮೇ ತಿಂಗಳ 6ನೆಯ ತಾರೀಕು ಜರ್ಮನ್ ಸೈನ್ಯಪಂಕ್ತಿ ಸಂಪೂರ್ಣವಾಗಿ ಮುರಿದು ಮಾರನೆಯ ದಿನ ಟ್ಯುನೀಷಿಯ ಮಿತ್ರಪಡೆಗಳ ಕೈವಶವಾಯಿತು. ಅದಾದ ಒಂದು ವಾರದೊಳಗೆ ಉತ್ತರ ಆಫ್ರಿಕದಲ್ಲಿದ್ದ ಸಮಸ್ತ ಶತ್ರು ಸೇನೆ ಕೈಸೆರೆಯಾಯಿತು. ಈ ದಂಡಯಾತ್ರೆಯಲ್ಲಿ ಭಾರತೀಯ

ಯೋಧರು ವಹಿಸಿದ ಪಾತ್ರ ಮುಖ್ಯವಾದದ್ದು. ಅವರು ಜಗತ್ತಿನ ಗೌರವಕ್ಕೆ ಪಾತ್ರರಾದರು. ಟ್ಯುನೀಷಿಯ ಕದನದಲ್ಲಿ ಜಯಗಳಿಸಿದ್ದರಿಂದ ಉತ್ತರ ಆಫ್ರಿಕನ್ ತೀರಪ್ರದೇಶವೆಲ್ಲ ಶತ್ರುಗಳಿಂದ ವಿಮೋಚನೆ ಹೊಂದಿತು. ಮಿತ್ರ ರಾಷ್ಟ್ರಗಳ ನೌಕಾಪಡೆ ಮೆಡಿಟರೇನಿಯನ್ ಸಮುದ್ರದಲ್ಲಿ ಸಾಗಲು ಮುಂದೆ ಯಾವ ತೊಂದರೆಯೂ ಇರಲಿಲ್ಲ.

1943 ಜನವರಿ ತಿಂಗಳಲ್ಲಿ ಕ್ಯಾಸಬ್ಲಾಂಕದಲ್ಲಿ ಸೇರಿದ್ದ ಸಮ್ಮೇಳನದಲ್ಲಿ ಚರ್ಚಿಲ್–ರೂಸ್ವೆಲ್ಟರು ಒಂದು ಘೋಷಣೆ ಹೊರಡಿಸಿ ಶತ್ರುರಾಷ್ಟ್ರಗಳ ನಾಯಕರು ಮಾತ್ರವಲ್ಲದೆ ಆ ರಾಷ್ಟ್ರಗಳೂ ಯಾವ ಷರತ್ತೂ ಇಲ್ಲದೆ ಶರಣಾಗತವಾಗಬೇಕೆಂದು ಹೇಳಿದ್ದರು. ಮೊದಲು ಜರ್ಮನಿಯನ್ನು ಗೆದ್ದು ಅನಂತರ ಜಪಾನ್‌ನ ಮೇಲೆ ದಂಡಯಾತ್ರೆ ನಡೆಸಬೇಕೆಂಬುದು ಮಿತ್ರನಾಯಕರ ತೀರ್ಮಾನ ಆದರೂ ಜಪಾನ್‌ನ ಮೇಲೆ ಉಸ್ತುವಾರಿ ಸಡಿಲಿಸಲಿಲ್ಲ. ಉತ್ತರ ಆಫ್ರಿಕ ಮತ್ತು ಸೋವಿಯತ್ ಕ್ಷೇತ್ರಗಳಲ್ಲಿ ಹೆಚ್ಚಿನ ಚಟುವಟಿಕೆ ಇರಲಿಲ್ಲ.

ಯುದ್ಧದಲ್ಲಿ ಮುಂದಿನ ಪ್ರಕರಣವೆಂದರೆ ಸಿಸಿಲಿಯ ಆಕ್ರಮಣ. 1943 ಜುಲೈ 10ರಂದು ಸಿಸಿಲಿಯ ಆಕ್ರಮಣದಲ್ಲಿ ನೌಕೆಗಳೂ ವಿಮಾನಗಳೂ ಭಾಗವಹಿಸಿದ್ದುವು. ಜರ್ಮನ್ನರು ಬಹು ಬುದ್ಧಿವಂತಿಕೆಯಿಂದ ಹೋರಾಡಿ ಬ್ರಿಟಿಷರು ಮುಂದುವರಿಯುವುದನ್ನು ತಡೆದರಾದರೂ ಅಮೆರಿಕನ್ನರು ದ್ವೀಪದ ಪಶ್ಚಿಮಭಾಗವನ್ನು ಆಕ್ರಮಿಸಿ ಸುಮಾರು ಏಳು ಸಹಸ್ರ ಜರ್ಮನ್ನರನ್ನು ಸೆರೆಹಿಡಿದರು. ಆ ದ್ವೀಪದಲ್ಲಿದ್ದ ಎಲ್ಲ ಇಟಾಲಿಯನ್ ಸೈನ್ಯವೂ ಮಿತ್ರ ಸೇನೆಗಳ ಕೈಸೆರೆಯಾಯಿತು. ಸು. 38 ದಿನಗಳ ಆಕ್ರಮಣದ ಅನಂತರ ಸಿಸಿಲಿ ಸಂಪೂರ್ಣವಾಗಿ ವಶವಾಯಿತು. ಸಿಸಿಲಿಯಲ್ಲಿ ಪಡೆದ ವಿಜಯದಿಂದ ಮಿತ್ರರಾಷ್ಟ್ರ ಪಡೆಗಳು ಇಟಲಿಯ ಕಡೆ ಮುನ್ನುಗ್ಗುವುದಕ್ಕೆ ಯಾವ ತಡೆಯೂ ಇರಲಿಲ್ಲ. ಇಟಲಿಯ ಫ್ಯಾಸಿಸ್ಟ್ ಆಡಳಿತ ಕುಸಿದು ಮುಸೋಲಿನಿಯ ಸರ್ವಾಧಿಕಾರ ಕೊನೆಗೊಂಡಿದ್ದು ಆಗ. ಇಟಲಿಯ ಮಾರ್ಷಲ್ ಬಾಡಾಲ್ಯೊ ಯುದ್ಧವನ್ನು ಮುಂದುವರಿಸುವೆನೆಂದು ಬಹಿರಂಗವಾಗಿ ಘೋಷಿಸಿದರೂ ಗುಪ್ತವಾಗಿ ಮಿತ್ರ ರಾಷ್ಟ್ರಗಳೊಡನೆ ಸಂಧಾನ ನಡೆಸಿದ. ಇಟಾಲಿಯನ್ನರು ಯಾವ ಷರತ್ತೂ ಇಲ್ಲದೆ ಸಂಪೂರ್ಣವಾಗಿ ಶರಣಾಗತರಾದರು.

ಮುಸೋಲಿನಿಯ ಪತನದಿಂದ ಜರ್ಮನಿಗೆ ಪೆಟ್ಟು ಬಿದ್ದಂತಾಯಿತು. ಆದರೆ ಅದರ ಪರಿಣಾಮ ಜರ್ಮನಿಗೆ ಹೆಚ್ಚೇನೂ ಹಾನಿಕರವಾಗಿರಲಿಲ್ಲ. ಆದರೆ ಪೂರ್ವದಲ್ಲಿ ಸೋವಿಯತ್‌ರು ತಮ್ಮ ಮುನ್ನುಗ್ಗುವಿಕೆಯನ್ನು ಮುಂದುವರಿಸಿದಾಗ, ಜರ್ಮನ್ನರು ತಾವು ವಶಪಡಿಸಿಕೊಂಡಿದ್ದ ಪಟ್ಟಣಗಳನ್ನು ಬಿಡಬೇಕಾಯಿತು. ಖರ್ಸ್ಕ ನಗರದಲ್ಲಿ ಒಂದು ವಾರ ಕದನ ನಡೆದು ಜರ್ಮನ್ನರು ಸಂಪೂರ್ಣ ಸೋತರು. 1944ರ ಆದಿ ಭಾಗದ ಹೊತ್ತಿಗೆ ಸೋವಿಯತ್‌ರು ಜರ್ಮನ್ನರನ್ನು ಲೆನಿನ್‌ಗ್ರಾಡ್ ಪ್ರಾಂತ್ಯದಿಂದ ಓಡಿಸಿದರು. ಉತ್ತರ ರಂಗದಲ್ಲಿ ಜರ್ಮನ್ ಸೇನಾ ಕೇಂದ್ರವಾದ ನಾವ್‌ಗೊರಾಡ್ ನಗರವೂ ಜರ್ಮನ್ನರ ಕೈಬಿಟ್ಟಿತು. ದಕ್ಷಿಣದಲ್ಲಿ ಸೋವಿಯತ್‌ರು ಪೂರ್ವ ಪೋಲೆಂಡ್ ಗಡಿ ದಾಟಿ ಲುಕ್ ನಗರವನ್ನು ವಶಪಡಿಸಿಕೊಂಡರು. ಕ್ರಿಮಿಯ ಸೋವಿಯತರ ಕೈಸೇರಿದ್ದು ಏಪ್ರಿಲ್‌ನಲ್ಲಿ. ಹೀಗಾಗಿ ಸೋವಿಯತ್ ಸೇನೆ ಎಲ್ಲ ಕ್ಷೇತ್ರಗಳಲ್ಲೂ ಮುಂದುವರಿಯಿತು. ದಕ್ಷಿಣದಲ್ಲಿ ರೂಮೇನಿಯ ಮತ್ತು ಪೋಲೆಂಡ್ ಗಡಿ ದಾಟಿದರಲ್ಲದೆ ಉತ್ತರದಲ್ಲಿ ಎಸ್ಟೋನಿಯ ಗಡಿಗೆ ಸಮೀಪದಲ್ಲಿದ್ದರು. ಜರ್ಮನ್ನರನ್ನು ಹಿಮ್ಮೆಟ್ಟಿಸಿದರೂ ಸೋವಿಯತ್‌ರು ಬಿಡಲಿಲ್ಲ, ಅವರನ್ನು ಹಿಂಬಾಲಿಸಿ ರೂಮೇನಿಯ, ಹಂಗರಿ ಮೊದಲಾದ ದೇಶಗಳನ್ನು ಜರ್ಮನ್ನರ ಅಧೀನದಿಂದ ತಪ್ಪಿಸಿ ತಮ್ಮ ಕಡೆಗೆ ಸೇರಿಸಿಕೊಂಡರು. 1944ರ ಜೂನ್‌ನಲ್ಲಿ ಬ್ರಿಟಿಷರೂ ಅಮೆರಿಕನ್ನರೂ ಯುರೋಪಿಗೆ ನುಗ್ಗಿ ಪ್ಯಾರಿಸ್‌ನ್ನು ವಶಪಡಿಸಿಕೊಂಡು ಸೆಪ್ಟೆಂಬರ್ ವೇಳೆಗೆ ಜರ್ಮನಿಯ ಗಡಿ ಮುಟ್ಟಿದರು.

1944 ಅಂತ್ಯವಾಗುವ ಹೊತ್ತಿಗೆ ಜರ್ಮನಿಯ ಸ್ಥಿತಿ ಸಂಪೂರ್ಣ ಕೆಟ್ಟಿತ್ತು. ಅದು ಯುರೋಪಿನ ಯಾವ ಪ್ರದೇಶದಲ್ಲೂ ನಿಂತು ಹೋರಾಡುವ ಸ್ಥಿತಿಯಲ್ಲಿರಲಿಲ್ಲ. ಸೋವಿಯತ್ ಸೇನೆ ವಾರ್ಸಾ ನಗರವನ್ನು ಹಿಡಿದದ್ದು 1945 ಜನವರಿ 17ರಂದು. ಆ ತಿಂಗಳ ಅಂತ್ಯಕ್ಕೆ ಲಿಥುವೇನಿಯ ಜರ್ಮನ್‌ರಿಂದ ಬಿಡುಗಡೆ ಹೊಂದಿತು. ವಿಮೋಚನೆಗೊಂಡ ಪೋಲೆಂಡಿನಲ್ಲಿ ಸೋವಿಯತ್‌ರಿಂದ ಒಂದು ಸ್ವತಂತ್ರ್ಯ ಸರ್ಕಾರ ಸ್ಥಾಪಿತವಾಯಿತು. ಪಶ್ಚಿಮ ದಿಕ್ಕಿನಿಂದ ಮಿತ್ರಸೇನೆಗಳು ಬೆಲ್ಜಿಯಂ ಆಕ್ರಮಿಸಿ ಜರ್ಮನಿಯ ಒಳಹೊಕ್ಕುವು. 1945ರ ಆರಂಭದಲ್ಲಿ ಸೋವಿಯತ್‌ರು ಜರ್ಮನಿಯೊಳಗೆ ನುಗ್ಗಿದರು. ಕೈಗಾರಿಕಾ ಕೇಂದ್ರ ರೂರ್ ಅವರ ವಶವಾದದ್ದು ಏಪ್ರಿಲ್‌ನಲ್ಲಿ. ಏಪ್ರಿಲ್ 13ರಂದು ಅವರು ವಿಯನ್ನವನ್ನು ಹಿಡಿದು ವೇಗದಿಂದ ಮುನ್ನುಗ್ಗಿ 28ರಂದು ಬರ್ಲಿನ್ ಅನ್ನು ಮುತ್ತಿದರು. ಶತ್ರುಗಳ ಕೈಯಲ್ಲಿ ಸಿಕ್ಕಿಬೀಳುವುದು ಖಂಡಿತವೆಂಬುದನ್ನರಿತ ಹಿಟ್ಲರ್ ಏಪ್ರಿಲ್ 30ರಂದು ಆತ್ಮಹತ್ಯೆ ಮಾಡಿಕೊಂಡ. ಜರ್ಮನಿಯ ಯುದ್ಧನಾಯಕರು ಶರಣಾಗತರಾಗಲಾಗಿ ಯುದ್ಧಕೊನೆಗೊಂಡಿತು.

ಸ್ವತಂತ್ರ ಫ್ರಾನ್ಸಿನ ಸರ್ಕಾರದ ಮುಖ್ಯಾಧಿಕಾರಿ ಜನರಲ್ ಡ ಗಾಲನ ನೇತೃತ್ವದಲ್ಲಿ ಜರ್ಮನ್ನರೊಡನೆ ಹೋರಾಡಲು ಪಣ ತೊಟ್ಟು ಫ್ರೆಂಚ್ ಜನತೆಯೂ ಯೂಗೊಸ್ಲಾವಿಯದ ಮಾರ್ಷಲ್ ಟೀಟೋ ಮತ್ತು ಅವನ ಅನುಯಾಯಿಗಳೂ ಗುಪ್ತ ಸಂಘಗಳೂ ಗೆರಿಲ್ಲಾ ಯೋಧರೂ ಹಿಟ್ಲರನ ಸೋಲಿಗೆ ಕಾರಣರೆಂಬುವುದನ್ನು ಮರೆಯುವಂತಿಲ್ಲ. ಜರ್ಮನಿಯ ಆಕ್ರಮಣಕ್ಕೊಳಗಾದ ಮೇಲೆ ಯುರೋಪಿನ ಯಾವ ಪ್ರದೇಶದಲ್ಲೂ ಜರ್ಮನ್ ಅಧಿಕಾರಿಗಳಿಗೆ ನೆಮ್ಮದಿ ಇರಲಿಲ್ಲ. ತಾವು ಆಕ್ರಮಿಸಿದ ರಾಷ್ಟ್ರಗಳಲ್ಲಿ ಜನತೆಯ ಸಹಕಾರ ಸಹಾಯಗಳನ್ನು ಪಡೆಯಲು ಜರ್ಮನ್ನರು ಎಷ್ಟು ಹೆಣಗಾಡಿದರೂ ಅವರಿಗೆ ಯಾವ, ಯಾರ ಬೆಂಬಲವೂ ಸಿಗಲಿಲ್ಲ. ಈ ಜನತೆಯ ಚಳವಳಿ ಮಿತ್ರ ಸೇನೆಗಳಿಗೆ ಉತ್ತೇಜನಕಾರಿಯಾದ್ದರಿಂದಲೇ ಅವು ಜರ್ಮನಿಯನ್ನು ಸೋಲಿಸಲು ಸಾಧ್ಯವಾಯಿತು.

**ಚೀನ–ಜಪಾನ್ ಯುದ್ಧ(1937–45) :** ಜಪಾನ್ ಆಧುನಿಕ ರಾಷ್ಟ್ರವಾದಮೇಲೆ ತನ್ನ ಸೈನ್ಯವನ್ನು ಹೆಚ್ಚಿಸಿಕೊಂಡು, ಮಿಲಿಟರಿ ಸಂಪ್ರದಾಯ ಬೆಳೆಸಿಕೊಂಡು, ತನಗೆ ಸಮೀಪದಲ್ಲಿದ್ದ ರಾಷ್ಟ್ರಗಳ ಮೇಲೆ ಆಕ್ರಮಣ ಪ್ರಾರಂಭಿಸಿತು. ಆ ಆಕ್ರಮಣನೀತಿಯ ಉದಾಹರಣೆಯಾಗಿ 1894ರಷ್ಟು ಹಿಂದೆಯೇ ನಡೆದ ಚೀನ–ಜಪಾನ್ ಯುದ್ಧವನ್ನೂ 1905ರಲ್ಲಿ ನಡೆದ ರಷ್ಯ–ಜಪಾನ್ ಯುದ್ಧವನ್ನೂ ಉಲ್ಲೇಖಿಸಬಹುದು.

1931 ಸೆಪ್ಟೆಂಬರ್ 18ರಂದು ನಡೆದ ಮೂಕ್‌ಡೆನ್ ಘಟನೆಯೇ 1937–45ರ ಚೀನ–ಜಪಾನ್ ಯುದ್ಧಕ್ಕೆ ನಾಂದಿಯಾಯಿತು. ಆಗ ಜಪಾನ್ ಮೂಕ್‌ಡೆನ್ ಪಟ್ಟಣವನ್ನು ವಶಪಡಿಸಿಕೊಂಡು ಚೀನದ ಕಡೆ ಆಕ್ರಮಣ ನಡೆಸಲು ಹವಣಿಸಿತು. ಮಂಚೂರಿಯ ದುರಾಕ್ರಮಣದ ಬಗ್ಗೆ ರಾಷ್ಟ್ರಕೂಟದ ಮಧ್ಯಸ್ಥಿಕೆ ಮಾಡಬೇಕೆಂದು ಚೀನ ಕೇಳಿಕೊಂಡಿತು. ಆದರೆ ಅದು ಮಂಚೂರಿಯ ಸಮಸ್ಯೆಯನ್ನು ಕೂಲಂಕಷವಾಗಿ ವಿಚಾರಿಸಲು ಒಂದು ಸಮಿತಿಯನ್ನು ನೇಮಿಸಿತೇ ವಿನಾ ಜಪಾನ್‌ನ ಆಕ್ರಮಣ ಧೋರಣೆಯನ್ನು ಖಂಡಿಸಲಿಲ್ಲ.



ನಾರ್ಮಂಡಿ ಕದನ

ಅದರ ಸಾಮ್ರಾಜ್ಯಷಾಹಿ ನೀತಿಯನ್ನು ಮೊಟಕು ಮಾಡಲೂ ಯಾವ ಆಸಕ್ತಿಯನ್ನೂ ತೋರಿಸಲಿಲ್ಲ. ಆ ಸಂಸ್ಥೆಯ ಪ್ರಮುಖ ಸದಸ್ಯ ರಾಷ್ಟ್ರಗಳಾದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನ ಕೂಡ ಅತ್ತ ಕಡೆ ತಮ್ಮ ಗಮನ ಹರಿಸಲಿಲ್ಲ. ಅದರ ದೌರ್ಬಲ್ಯವನ್ನೂ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದ ಔದಾಸೀನ್ಯವನ್ನೂ ಗಮನಿಸಿದ ಜಪಾನೀ ನಾಯಕರು ಆಕ್ರಮಣಾನೀತಿಯನ್ನು ಮುಂದುವರಿಸಲು ನಿರ್ಧರಿಸಿದರು. ಜಪಾನ್ ರಾಷ್ಟ್ರಕೂಟದ ಸದಸ್ಯತ್ವವನ್ನು ತ್ಯಜಿಸಿ, ಮಂಚೂರಿಯವನ್ನು ಪೂರ್ಣವಾಗಿ ಆಕ್ರಮಿಸಿ ಅಲ್ಲಿ ಪ್ರಬಲ ಸೇನೆಯೊಂದನ್ನಿರಿಸಿತು. ಈ ಅನ್ಯಾಯದ ಆಕ್ರಮಣವನ್ನು ತಡೆಯಲು ರಾಷ್ಟ್ರಕೂಟ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

ಇಷ್ಟಕ್ಕೇ ಜಪಾನ್ ಸುಮ್ಮನಿರಲಿಲ್ಲ. ಅಂತಃಕಲಹಗಳಿಂದ ದುರ್ಬಲವಾಗಿದ್ದ ಚೀನಕ್ಕೆ ಸೇರಿದ ಜೆಹೋಲ್ ಮತ್ತಿತರ ಪ್ರಾಂತ್ಯಗಳನ್ನೂ ಮುಂದಿನ ಎರಡು ಮೂರು ವರ್ಷಗಳಲ್ಲಿ ವಶಪಡಿಸಿಕೊಂಡಿತು. 1937 ಜುಲೈ 7ರಂದು ಜಪಾನ್ ಚೀನದ ಮೇಲೆ ದಂಡಯಾತ್ರೆ ಪ್ರಾರಂಭಿಸಿತು. ಈ ಆಕ್ರಮಣವನ್ನು ತಡೆಯಬೇಕೆಂದು ಚೀನದ ಅಧ್ಯಕ್ಷ ಚಿಯಾಂಗ್ ಕೈ-ಷೇಕ್ ಮಾಡಿದ ಮನವಿಗೆ ರಾಷ್ಟ್ರಕೂಟದಲ್ಲಾಗಲಿ ಇತರ ರಾಷ್ಟ್ರಗಳಲ್ಲಾಗಲಿ ಮನ್ನಣೆ ದೊರೆಯಲಿಲ್ಲ. ಆತ ಮಾಡಿದ ಪ್ರಾರ್ಥನೆ ವ್ಯರ್ಥವಾಯಿತು. ಆದರೂ ಯಾರ ಸಹಾಯವೂ ಇಲ್ಲದೆ ಯುದ್ಧಮಾಡಲು ಚಿಯಾಂಗ್ ನಿಶ್ಚಯಿಸಿದ. ಈ ದೃಢ ಸಂಕಲ್ಪದಿಂದಲೇ ಸು. 8 ವರ್ಷಗಳ ಕಾಲ ಜಪಾನಿನೊಡನೆ ಸೆಣಸಾಡಲು ಸಾಧ್ಯವಾಯಿತು.

ಸು. 3 ತಿಂಗಳಲ್ಲಿ ಚೀನ ಸೋತು ಈ ಯುದ್ಧಮುಗಿಯುವುದು ಖಂಡಿತವೆಂದು ಜಪಾನೀ ನಾಯಕರು ಭಾವಿಸಿದ್ದರು. ಆದ್ದರಿಂದ ಜಪಾನಿನ ಸೇನಾನಿಗಳು ಅಲ್ಪಕಾಲದ ಯುದ್ಧಕ್ಕೆ ಸರಿಹೊಂದುವ ಯೋಜನೆ ರೂಪಿಸಿ ಆಕ್ರಮಿತ ಪ್ರದೇಶಗಳಲ್ಲಿ ಚೀನಿಯರ ಸಹಕಾರದಿಂದ ಆಡಳಿತ ವ್ಯವಸ್ಥೆ ಏರ್ಪಡಿಸಲೆತ್ನಿಸಿದರು. ಆದರೆ ಯುದ್ಧ ಆರಂಭವಾದ ಸ್ವಲ್ಪ ಕಾಲದಲ್ಲೇ ಆ ನಂಬಿಕೆ ಮಾಯವಾಗಿ ದೀರ್ಘ ಕಾಲದ ಯುದ್ಧವನ್ನೇ ಮಾಡಬೇಕಾಯಿತು.

**ಉತ್ತರ ನ್ಯೂಗಿನಿ ತೀರದಲ್ಲಿ ಸತ್ತು ಬಿದ್ದಿದ್ದ ಸೈನಿಕರು**

ಯುದ್ಧದ ಪ್ರಾರಂಭದಲ್ಲಿ ಜಪಾನೀಯರು ಚೀನದ ಉತ್ತರದಲ್ಲಿ ದಾಳಿ ಆರಂಭಿಸಿದರು. ಚೀನಿಯರು ಅವರ ಮುನ್ನಡೆಯನ್ನು ತಡೆಯುವುದರಲ್ಲಿ ಯಶಸ್ವಿಯಾದರೂ ಕೊನೆಯಲ್ಲಿ ಉತ್ತರ ಪ್ರದೇಶಗಳನ್ನು ಬಿಟ್ಟುಕೊಟ್ಟು ಹಿಂತೆಗೆಯಬೇಕಾಯಿತು. 1937 ಆಗಸ್ಟ್ 13ರಂದು ಜಪಾನೀ ಸೇನೆಗಳು ಷಾಂಘೈ ಪಟ್ಟಣವನ್ನು ಮುತ್ತಿದಾಗ ಚೀನಿಯರು ಅದನ್ನು ರಕ್ಷಿಸಲು ಹೋರಾಡಿದರು. ಸು. 3 ತಿಂಗಳ ಕಾಲ ಜಪಾನೀಯರ ಭೂ, ನೌಕಾ, ವಾಯು ಸೇನೆಗಳನ್ನು ಸತತವಾಗಿ ಎದುರಿಸಿ ಹೋರಾಡಿದರು. ಆದರೆ ಜಪಾನೀಯರು ಅಧಿಕ ಸಂಖ್ಯೆಯಲ್ಲಿ ಮುನ್ನುಗ್ಗಿದಾಗ ಚೀನಿಯರು ಆ ಪಟ್ಟಣವನ್ನು ತ್ಯಜಿಸಬೇಕಾಯಿತು. ಮುಂದೆ ಪಶ್ಚಿಮ ದಿಕ್ಕಿನಲ್ಲಿ ಮುಂದುವರಿದು ಜಪಾನೀಯರು ರಾಜಧಾನಿ ನ್ಯಾನ್‌ಕಿಂಗನ್ನು ವಶಪಡಿಸಿಕೊಂಡರು. ಕ್ಯಾಂಟನ್ ನಗರ ಕೈಬಿಟ್ಟಿತು. ಸಮುದ್ರ ತೀರದ ಎಲ್ಲ ರೇವು ಪಟ್ಟಣಗಳೂ ಜಪಾನೀಯರ ವಶವಾದುವು. ಜಪಾನ್ ಮುಂದುವರಿದಂತೆಲ್ಲ ಚೀನ ಸರ್ಕಾರ ತನ್ನ ಕೇಂದ್ರವನ್ನು ಹಿಂದಕ್ಕೊಯ್ಯುತ್ತ ಕೊನೆಗೆ ಒಳನಾಡಿನಲ್ಲಿದ್ದ ಚುಂಕಿಂಗ್ ನಗರದಲ್ಲಿ ಸ್ಥಾಪಿಸಿಕೊಂಡಿತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಷ್ಟ್ರಕೂಟವಾಗಲಿ ಒಂಬತ್ತು ರಾಷ್ಟ್ರಗಳ ಕರಾರಿಗೆ ಸಹಿ ಹಾಕಿದ್ದ ರಾಷ್ಟ್ರಗಳಾಗಲಿ ಚೀನದ ನೆರವಿಗೆ ಬರಲಿಲ್ಲ. ಇದರಿಂದ ಚೀನಿಯರಿಗೆ ನಿರಾಶೆಯಾದರೂ ಅವರು ಯುದ್ಧಮುಂದುವರಿಸುವ ನಿರ್ಧಾರ ಕೈಬಿಡಲಿಲ್ಲ. ಚೀನದ ಜನತೆ ಘೋರ ಕಷ್ಟಕ್ಕೊಳಗಾದರೂ ಶತ್ರುವಿಗೆ ಮಣಿಯದೆ, ಸೋಲನ್ನೊಪ್ಪದೆ ಹೋರಾಟ ಸಾಗಿಸಿತು. ಜಪಾನೀಯರು ನ್ಯಾನ್‌ಕಿಂಗ್ ನಗರದಲ್ಲಿ ಸರ್ಕಾರ ರಚಿಸಿ ಅದರ ಮೂಲಕ ತಮ್ಮ ಪ್ರಭಾವವನ್ನು ಹರಡಲು ಯತ್ನಿಸಿದರು. ಆ ಸರ್ಕಾರದ ಬೆಂಬಲದೊಡನೆ ಚುಂಕಿಂಗ್ ಸರ್ಕಾರವನ್ನು ಛಿದ್ರಗೊಳಿಸುವ ಉದ್ದೇಶದಿಂದ ಇತರ ಪಟ್ಟಣಗಳ ಮೇಲೆ ಬಾಂಬಿನ ದಾಳಿ ನಡೆಸಲು ಪ್ರಾರಂಭಿಸಿದರು.

1939ರಲ್ಲಿ ಚೀನದ ಪರಿಸ್ಥಿತಿ ಅತ್ಯಂತ ಕಠಿಣವಾಗಿತ್ತು. ರಾಷ್ಟ್ರಕೂಟ ಯಾವ ನಿಶ್ಚಿತ ಧೋರಣೆಯನ್ನೂ ತಳೆದಿರಲಿಲ್ಲ. ಅದರ ಸದಸ್ಯ ರಾಷ್ಟ್ರಗಳು ಜಪಾನ್ ಬಳಸುತ್ತಿದ್ದ ವಿಷ ವಾಯುವಿನ ವಿರುದ್ಧ ನಿರ್ಣಯಗಳನ್ನು ಅನುಮೋದಿಸಿದುವೇ ವಿನಾ ಮತ್ತಾವ ಸ್ಪಷ್ಟ ನೀತಿಯನ್ನೂ ರೂಪಿಸಲಿಲ್ಲ. ಜಪಾನ್ ದಕ್ಷಿಣ ಚೀನವನ್ನು ಸುತ್ತುವರಿದ ಹೈನಾನ್ ಮತ್ತಿತರ ದ್ವೀಪಗಳನ್ನು 1939 ಮಾರ್ಚ್ ತಿಂಗಳಲ್ಲಿ ವಶಪಡಿಸಿಕೊಂಡಿತು. ಈ ಆಕ್ರಮಣವನ್ನು ಪೆಸಿಫಿಕ್‌ನ ಮ್ಯೂಕ್‌ಡೆನ್ ಘಟನೆ ಎಂದು ಚಿಯಾಂಗ್ ಎಚ್ಚರಿಸಿದರೂ ಪಾಶ್ಚಾತ್ಯ ರಾಷ್ಟ್ರಗಳು ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಸುಮ್ಮನಿದ್ದವು.

ಮೊದಲೇ ತಾಮಸವಾಗಿದ್ದ ಪಾಶ್ಚಾತ್ಯ ರಾಷ್ಟ್ರಗಳು ಯುರೋಪಿನಲ್ಲಿ 1939 ಸೆಪ್ಟೆಂಬರ್‌ನಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ ಪೂರ್ವದಿಂದ ಮತ್ತಷ್ಟು ದೂರ ಸರಿದುವು. ಜಪಾನನ್ನು ತೃಣೀಕರಿಸುವ ಧೋರಣೆಯನ್ನು ಮಿತ್ರ ರಾಷ್ಟ್ರಗಳು ಮುಂದುವರಿಸಿದ್ದು ಜಪಾನಿಗೆ ಇನ್ನೂ ಪ್ರೋತ್ಸಾಹ ನೀಡಿದಂತಾಯಿತು. 1940 ಜೂನ್ 19ರಂದು ಬ್ರಿಟನ್ ಜಪಾನಿನೊಡನೆ ಒಪ್ಪಂದ ಮಾಡಿಕೊಂಡು ಮಯನ್ಮಾರ್ ರಸ್ತೆಯನ್ನು ಮುಚ್ಚಿದ್ದರಿಂದ ಚೀನವನ್ನು ಪ್ರತ್ಯೇಕಿಸಿದಂತಾಯಿತು. ಸೆಪ್ಟೆಂಬರ್ 29ರಂದು ಜಪಾನ್ ಜರ್ಮನಿ ಇಟಲಿಗಳೊಡನೆ ಒಪ್ಪಂದ ಮಾಡಿಕೊಂಡಿತು. ಇದರಿಂದ ಎರಡನೆಯ ಮಹಾಯುದ್ಧಕ್ಕೆ ಜಪಾನ್ ಇಳಿದಂತಾಯಿತೆನ್ನಬಹುದು. 1941 ಏಪ್ರಿಲ್ 13ರಂದು ಜಪಾನ್ ರಷ್ಯದೊಡನೆ ಯುದ್ಧವಿರುದ್ಧ ಒಪ್ಪಂದ ಮಾಡಿಕೊಂಡಿತು. ಎರಡು ದಿನಗಳ ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ರೂಸ್‌ವೆಲ್ಟ್ ಹೇಳಿಕೆಯೊಂದನ್ನು ನೀಡಿ ಚೀನಕ್ಕೆ ತನ್ನ ದೇಶದ ನೆರವನ್ನು ಕೊಡುವುದಾಗಿ ವಾಗ್ದಾನ ಮಾಡಿದ.

ಅಮೆರಿಕ ಸಂಯುಕ್ತಸಂಸ್ಥಾನ ಜಪಾನಿನ ಮೇಲೆ ಯುದ್ಧಘೋಷಿಸಿದ್ದು ಪರ್ಲ್ ಹಾರ್ಬರ್ ಘಟನೆಯ ಅನಂತರ. ಅದೊಂದು ಅನಿರೀಕ್ಷಿತ ಘಟನೆ. 1941 ಡಿಸೆಂಬರ್ 7ರಂದು ಜಪಾನ್ ಅಮೆರಿಕ ಸಂಯುಕ್ತ ಸಂಸ್ಥಾನದೊಡನೆ ಸಂಧಾನ ನಡೆಸುತ್ತಿದ್ದಾಗಲೇ ಪರ್ಲ್ ಹಾರ್ಬರಿನಲ್ಲಿ ಬಾಂಬ್ ದಾಳಿ ಮಾಡಿದ್ದು ಯುದ್ಧದ ಬಣ್ಣವನ್ನೇ ಬದಲಾಯಿಸಿತೆನ್ನಬಹುದು. ಆಗ ಪ್ರಾಚ್ಯಪ್ರದೇಶದ ಯುದ್ಧವೂ ಮಹಾಯುದ್ಧದಲ್ಲಿ ಲೀನವಾಯಿತು. ಪರ್ಲ್ ಹಾರ್ಬರ್ ಘಟನೆಯ ಮಾರನೆಯ ದಿನ ಜರ್ಮನಿ, ಇಟಲಿ ಮತ್ತು ಜಪಾನ್‌ಗಳ ಮೇಲೆ ಚೀನ ಯುದ್ಧ ಘೋಷಿಸಿತು.

**ಅಟ್ಲಾಂಟಿಕ್ ಸಾಗರ ಮತ್ತು ಐರೋಪ್ಯ ಸಮುದ್ರಗಳ ಮೇಲಿನ ಯುದ್ಧ:** 1939 ಸೆಪ್ಟೆಂಬರ್ 3ರಂದು ಬ್ರಿಟನ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿದಾಗ ಜರ್ಮನಿಯ ನೌಕಾಬಲ ಶಕ್ತಿಯುತವಾಗಿತ್ತು. ಬ್ರಿಟನ್ನಿನ ನೌಕಾಪಡೆಯನ್ನು ನಾಶಮಾಡಿ ಅದಕ್ಕೆ ಆಹಾರ ಸಾಮಗ್ರಿಗಳು ತಲುಪದಂತೆಮಾಡಿ, ಅದರ ಮೇಲೆ ಆಕ್ರಮಣ ನಡೆಸಬೇಕೆಂದು ಹಿಟ್ಲರ್ ನಿರ್ಧರಿಸಿದ್ದ. ಜರ್ಮನ್ನರ ಕಡೆಯ ದೋಣಿಗಳೂ ಜಲಾಂತರ್ಗಾಮಿಗಳೂ ಕಾರ್ಯಾಚರಣೆಗೆ

**ಪರ್ಲ್ ಹಾರ್ಬರ್ ಮೇಲೆ ಜಪಾನೀ ದಾಳಿ**

ಸಿದ್ಧವಾಗಿದ್ದವು. ತನ್ನ ನೌಕೆಯ ಸಹಾಯದಿಂದ ಆಹಾರ ಸಾಮಗ್ರಿಗಳ ಸರಬರಾಜಿಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದೂ ತನ್ನ ಸೇನೆಗಳನ್ನು ಶತ್ರುವಿನ ವಶದಲ್ಲಿರುವ ಪ್ರದೇಶಗಳಲ್ಲಿ ಇಳಿಸುವುದೂ ಶತ್ರು ಸೇನೆಗಳು ಬ್ರಿಟನ್ನಿನ ತೀರದಲ್ಲಿ ಇಳಿಯದಂತೆ ಮಾಡುವುದೂ ಬ್ರಿಟನ್ನಿನ ಧ್ಯೇಯಗಳಾಗಿದ್ದವು. ಆದರೆ ಈ ಎಲ್ಲ ಧ್ಯೇಯಗಳೂ ಏಕಕಾಲದಲ್ಲಿ ಸಾಧ್ಯವಿರಲಿಲ್ಲ.

ಜರ್ಮನ್ ನೌಕಾಪಡೆ ದಕ್ಷಿಣ ಅಟ್ಲಾಂಟಿಕ್‌ನಲ್ಲೂ ಬ್ರಿಟಿಷ್ ನೌಕೆ ಮಾಲ್ವದಲ್ಲೂ ಇದ್ದವು. ಯುದ್ಧದ ಮೊದಲ ದಿನಗಳಲ್ಲಿ ಜರ್ಮನ್ ಜಲಾಂತರ್ಗಾಮಿಗಳು ಮಿತ್ರ ರಾಷ್ಟ್ರಗಳ ಪ್ರಯಾಣಿಕ ಜಹಜುಗಳನ್ನೂ ಇತರ ನೌಕೆಗಳನ್ನೂ ಹೆಚ್ಚಿನ ಪ್ರಮಾಣದಲ್ಲಿ ಮುಳುಗಿಸಿ ಅಪಾರ ನಷ್ಟವನ್ನುಂಟುಮಾಡಿದವು. ಜರ್ಮನಿಯ ದೋಣಿಗಳ ಹಾವಳಿಯಿಂದ ಬ್ರಿಟನ್ನಿನ ದೊಡ್ಡ ವಿಮಾನ ವಾಹಕ ನೌಕೆ ಕರೇಜಿಯಸ್ ಮುಳುಗಿತು. ಇದಲ್ಲದೆ ಬ್ರಿಟಿಷರ ನೌಕಾಶ್ರಯವನ್ನೇ ಒಳಹೊಕ್ಕು ರಾಯಲ್ ಓಕ್ ಎಂಬ ಯುದ್ಧನೌಕೆಯನ್ನು ಅಕ್ಟೋಬರ್ 14ರಂದು ಮುಳುಗಿಸಿದ್ದು ಒಂದು ದೊಡ್ಡ ಘಟನೆ.

ತಾನು ಗಳಿಸಿದ ಜಯದಿಂದ ಉತ್ತೇಜಿತವಾದ ಜರ್ಮನಿ ಹೊಸ ಬಗೆಯ ಮೈನ್‌ಗಳನ್ನು ಪ್ರಯೋಗಿಸಲಾಗಿ ನಾಲ್ಕು ದಿನಗಳ ಅವಧಿಯಲ್ಲಿ 15 ಹಡಗುಗಳು ಮುಳುಗಿದವು. ಮಿತ್ರರಾಷ್ಟ್ರಗಳಿಗೆ ಸೇರಿದ ಅನೇಕ ಯುದ್ಧನೌಕೆಗಳ ನಾಶಕ್ಕೆ ಕಾರಣವಾದ ಜರ್ಮನ್ ನೌಕೆಯೇ ಗ್ರಾಫ್‌ಸ್ಪ್ರಿ.

ಬ್ರಿಟನ್‌ನ ನೌಕಾಪಡೆ ನಷ್ಟಹೊಂದಿದಾಗ ಅದು ಸುಮ್ಮನಿರಲಿಲ್ಲ. ಅದು ಜರ್ಮನ್ ಸಬ್‌ಮರೀನ್‌ಗಳ ಆಹುತಿ ತೆಗೆದುಕೊಳ್ಳಲಾರಂಭಿಸಿತು. ದಕ್ಷಿಣ ಅಮೆರಿಕದ ತೀರದ ಬಳಿ ಬ್ರಿಟನ್ನಿನ ಮೂರು ಕ್ರೂಯಾಸರ್‌ಗಳು ಜರ್ಮನ್ನರ ಗ್ರಾಫ್‌ಸ್ಪ್ರಿಯನ್ನು ಪತ್ತೆಹಚ್ಚಿ ಅದನ್ನು ಕದನದಲ್ಲಿ ಊನಗೊಳಿಸಿದವು. ಆ ಯುದ್ಧನೌಕೆ ಕೆಟ್ಟು ಹೋದದ್ದರಿಂದ ಜರ್ಮನ್ ನಾವಿಕರೇ ಅದನ್ನು ಮುಳುಗಿಸಬೇಕಾಯಿತು. ಗ್ರಾಫ್‌ಸ್ಪ್ರಿಯ ನಾಶದಿಂದ ಜರ್ಮನಿಯ ನೌಕಾಬಲಕ್ಕೂ ಅದರ ಪ್ರತಿಷ್ಠೆಗೂ ಬಿದ್ದ ಪೆಟ್ಟು ಅಗಾಧ.

ಅತ್ತಕಡೆ ನಾರ್ವೆ ಡೆನ್‌ಮಾರ್ಕ್‌ಗಳ ಮೇಲೆ ಜರ್ಮನಿ ಆಕ್ರಮಣ ನಡೆಸಿದಾಗ ಬ್ರಿಟನ್ ಜರ್ಮನಿಗೆ ಸಮುದ್ರದ ಮೂಲಕ ಸಂಪರ್ಕವಿಲ್ಲದಂತೆ ಕಾವಲು ಏರ್ಪಡಿಸಿತು. 1939 ಏಪ್ರಿಲ್ 15ರಂದು ಬ್ರಿಟಿಷ್, ಫ್ರೆಂಚ್ ಮತ್ತು ಪೋಲಿಷ್ ಸೇನೆಗಳು ನಾರ್ವೆಯ ತೀರ ಪ್ರದೇಶದಲ್ಲಿ ಇಳಿಯಲು ಸಾಧ್ಯವಾದದ್ದು ಈ ಕಾವಲಿನಿಂದ. ನಾರ್ವೆಯ ತೀರದಲ್ಲಿ ಬ್ರಿಟಿಷ್ ನೌಕೆ ಯಶಸ್ವಿಯಾಗಿ ಕಾರ್ಯಾಚರಣೆ ನಡೆಸಿ ಜರ್ಮನಿಯ ಯುದ್ಧ ನೌಕೆಗಳನ್ನು ಮುಳುಗಿಸಿತು. ಆದರೆ ನಾರ್ವೆಯನ್ನು ಜರ್ಮನ್ನರು ಸ್ವಾಧೀನಪಡಿಸಿಕೊಂಡಾಗ ಜರ್ಮನಿಗೆ ಅಟ್ಲಾಂಟಿಕ್ ತೀರದ ಅನೇಕ ಬಂದರುಗಳ ಮೇಲೆ ಹತೋಟಿ ಸಿಕ್ಕಿತು. ಜಲಾಂತರ್ಗಾಮಿ ಗಳು ಚಟುವಟಿಕೆಯನ್ನು ತ್ವರಿತಗೊಳಿಸಲು ಅನುಕೂಲವಾದದ್ದು ಈ ಹತೋಟಿಯಿಂದ.

ಭೂ ಯುದ್ಧಗಳಲ್ಲಿ ಜರ್ಮನಿ ಜಯ ಗಳಿಸಿತ್ತು. 1940 ಮೇ 14ರ ವೇಳೆಗೆ ನೆದರ್ಲೆಂಡ್ಸನ್ನೂ ನಾಲ್ಕು ದಿನಗಳ ಅನಂತರ ಬ್ರಸೆಲ್ ಪಟ್ಟಣವನ್ನೂ ಮೇ 28ರಂದು ಬೆಲ್ಜಿಯಂ ದೇಶವನ್ನೂ ಆಕ್ರಮಿಸಿತ್ತು. ಮುಂದಿನ ಸರದಿ ಫ್ರಾನ್ಸಿನದು. ಬ್ರಿಟಿಷ್ ಸೇನೆಗಳು ಪ್ರತ್ಯೇಕಗೊಂಡು ನಾಜಿ ಪಡೆಗಳನ್ನು ಎದುರಿಸಲಾರದೆ, ತೀರದ ಕಡೆ ಪಲಾಯನ ಮಾಡಿದುವು. ಫ್ರಾನ್ಸಿನ ಬೆಂಬಲವನ್ನು ಕಳೆದುಕೊಂಡ ಬ್ರಿಟಿಷ್ ಸೇನಾಪಡೆ ಸ್ವದೇಶಕ್ಕೆ ಹಿಂತಿರುಗುವುದೇ ಅತ್ಯುತ್ತಮ ಮಾರ್ಗವೆಂದು ನಿರ್ಧರಿಸಿ, ಡನ್‌ಕರ್ಕಿನಿಂದ ವಾಪಸ್ಸು ಹೋದದ್ದೊಂದು ದೊಡ್ಡ ಸಾಹಸ.

ಪಶ್ಚಿಮ ಯುರೋಪಿನ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿದ ಜರ್ಮನಿಗೆ ವಿಸ್ತಾರವಾದ ದಕ್ಷಿಣ ಫ್ರಾನ್ಸಿನಿಂದ ಉತ್ತರ ನಾರ್ವೆವರೆಗಿನ ಸಾಗರತೀರ ಸಿಕ್ಕಿತು. ಇಂಗ್ಲೆಂಡನ್ನು ಘಾತಿಸಲು ಅನುಕೂಲವಾದದ್ದು ಇದರಿಂದ. 1940 ಆಗಸ್ಟ್ ತಿಂಗಳಲ್ಲಿ ಬ್ರಿಟನ್ ಮೇಲಿನ ಆಕ್ರಮಣ ಸನ್ನಿಹಿತವಾದಾಗ, ಬ್ರಿಟನ್ ಕದನ ಆರಂಭವಾದಾಗ, ಜರ್ಮನಿಯ ನೌಕಾಬಲ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುವುದಕ್ಕೆ ಅವಕಾಶ ಸಿಕ್ಕಿತೆನ್ನಬಹುದು. ಬ್ರಿಟನ್ನಿನ ಅನೇಕ ಯುದ್ಧನೌಕೆಗಳು ಮುಳುಗಿದ್ದು ಆ ಸಮಯದಲ್ಲೇ.

ಅತ್ತಕಡೆ ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟನ್ ಜರ್ಮನಿಯ ಜಲಾಂತರ್ಗಾಮಿಗಳನ್ನು ಮುಳುಗಿಸಿ, ಉತ್ತರ ಆಫ್ರಿಕ ಮತ್ತು ದಕ್ಷಿಣ ಯುರೋಪಿನ ರಾಷ್ಟ್ರಗಳಿಗೆ ಸೇನೆ ಮತ್ತು ಯುದ್ಧ ಸಾಮಗ್ರಿಗಳನ್ನು ಒದಗಿಸುವ ಕಾರ್ಯದಲ್ಲಿ ಮಗ್ನವಾಗಿತ್ತು. ಇಟಲಿಯ ಮುಸೋಲಿನಿ ಈಜಿಪ್ಟಿನ ಕಡೆ ನುಗ್ಗಿದ್ದ. ಯುರೋಪಿನಲ್ಲಿ ಗ್ರೀಸ್ ದೇಶವನ್ನು ಆಕ್ರಮಿಸಿದ್ದ. ಆಗ ಬ್ರಿಟಿಷ್ ನೌಕಾವಿಮಾನಗಳು ಟಾರಾಂಟೊ ಬಂದರಿನಲ್ಲಿ ತಂಗಿದ್ದ 6 ಉತ್ತಮ ವರ್ಗದ ಇಟಾಲಿಯನ್ ಯುದ್ಧನೌಕೆಗಳಲ್ಲಿ ಮೂರನ್ನು ಮುಳುಗಿಸಿ, ಮತ್ತೆ ಮೂರನ್ನು ಊನ ಮಾಡಿದುವು. ಇದರಿಂದ ಬ್ರಿಟಿಷ್ ಯುದ್ಧನೌಕೆ ಮೆಡಿಟರೇನಿಯನ್ನಿನಲ್ಲಿ ಆತಂಕವಿಲ್ಲದೆ ಸಂಚಾರ ಮಾಡುವಂತಾಯಿತು. ಅಲ್ಲದೆ ಉತ್ತರ ಆಫ್ರಿಕದಲ್ಲಿ ಯುದ್ಧಮಾಡುತ್ತಿದ್ದ ಮಿತ್ರ ರಾಷ್ಟ್ರಗಳ ಸೈನ್ಯಕ್ಕೆ ಅಲ್ಲಿದ್ದ ಬ್ರಿಟಿಷ್ ನೌಕೆ ಸಂಪೂರ್ಣ ಬೆಂಬಲವಿತ್ತುದರಿಂದ ಆಫ್ರಿಕದಿಂದ ಇಟಲಿಯನ್ನರನ್ನು ಓಡಿಸುವುದು ಸಾಧ್ಯವಾಯಿತು.

ಯೂಗೊಸ್ಲಾವಿಯದ ಮೇಲೆ ಆಕ್ರಮಣ ನಡೆಸಿ ಗ್ರೀಕರ ಮೇಲೆ ಬಿದ್ದಾಗ ಆ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿದ್ದ ಬ್ರಿಟಿಷ್ ನೌಕಾಬಲದಿಂದ ಇಟಲಿಯ ನೌಕಾದಳ ಸಂಪೂರ್ಣವಾಗಿ ಸೋತದ್ದು 1941 ಮಾರ್ಚ್ 28ರಂದು. ಆದರೆ ಆಗ ಜರ್ಮನಿಯ ಬಾಂಬರುಗಳ ಉಪಟಳ ಅಸಾಧ್ಯವಾಗಿದ್ದುದರಿಂದ ಬ್ರಿಟಿಷರು ಅನೇಕ ವಿಮಾನವಾಹಕ ನೌಕೆಗಳನ್ನೂ ಯುದ್ಧನೌಕೆಗಳನ್ನೂ ಕಳೆದುಕೊಂಡರು. ಕ್ರೀಟ್ ದ್ವೀಪದ ಕಾರ್ಯಾಚರಣೆಯಲ್ಲೂ ಬ್ರಿಟನ್ ಕಳೆದುಕೊಂಡ ಯುದ್ಧನೌಕೆಗಳು ಅನೇಕ.

ಅಟ್ಲಾಂಟಿಕ್ ಸಾಗರದ ಮೇಲೆ ಬ್ರಿಟಿಷರಿಗೆ ಬರುತ್ತಿದ್ದ ಸಾಮಗ್ರಿಗಳನ್ನು ನಿಲ್ಲಿಸಲು ಜರ್ಮನಿ ತನ್ನ ಕೈಲಾದ್ದನ್ನೆಲ್ಲ ಮಾಡಿತು. ಒಟ್ಟು 1000 ಜಲಾಂತರ್ಗಾಮಿಗಳನ್ನೂ ಇದಕ್ಕಾಗಿ ಬಿಟ್ಟಿತ್ತು. ಅಟ್ಲಾಂಟಿಕ್ ಯುದ್ಧವೆಂದು ಕರೆಯಲಾಗಿರುವ ಸಾಹಸದಲ್ಲಿ ಜರ್ಮನ್ನರು ತಮ್ಮ ಪ್ರಚಂಡ ನೌಕೆಯಾದ ಬಿಸ್‌ಮಾರ್ಕ್‌ನ್ನು ಉಪಯೋಗಿಸಿದರು. ಇದು ಬ್ರಿಟಿಷರ ಯುದ್ಧನೌಕೆ ಹೂಡನ್ನು ಮುಳುಗಿಸಿತು. ಅದು ಅಪಾರ ನಷ್ಟವನ್ನು ಉಂಟುಮಾಡಿದ ಮೇಲೆ, ಏಕಾಂಗಿಯಾಗಿದ್ದಾಗ, ಬ್ರಿಟಿಷ್ ನೌಕೆಗಳು ಅದನ್ನು ಮುಳುಗಿಸಿದವು.

1941ರ ಡಿಸೆಂಬರ್ ವೇಳೆಗೆ ಸಂಯುಕ್ತ ಸಂಸ್ಥಾನ ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳೆರಡರಲ್ಲೂ ಯುದ್ಧಮಾಡಬೇಕಾಯಿತು. ಅಟ್ಲಾಂಟಿಕ್‌ನಲ್ಲಿ ಬ್ರಿಟನ್ನಿಗೆ ಹೆಚ್ಚಿನ ನೆರವು ನೀಡುವುದೂ ಪೆಸಿಫಿಕ್ ಸಾಗರದಲ್ಲಿ ಜಪಾನ್‌ನೊಡನೆ ಯುದ್ಧಮಾಡುವುದೂ ಆಗ ಅದರ ಕಾರ್ಯ ವಿಧಾನ. 1942ರಲ್ಲಿ ತಮ್ಮ ಹಿತಗಳನ್ನು ರಕ್ಷಿಸಿಕೊಳ್ಳುವುದಷ್ಟೇ ಮಿತ್ರ ರಾಷ್ಟ್ರಗಳ ನೀತಿ. ಅಟ್ಲಾಂಟಿಕ್ ಕದನ ವೈಜ್ಞಾನಿಕ ಸಂಶೋಧನೆಗಳ ಮತ್ತು ತಂತ್ರ ಕೌಶಲದ ಯುದ್ಧ. ಜರ್ಮನಿಯ ದೋಣಿಗಳು ಅರಕ್ಷಿತ ಪ್ರದೇಶಗಳಾದ ಮೆಕ್ಸಿಕೋ ಕೊಲ್ಲಿ ಮತ್ತು ಕೆರಿಬಿಯನ್ ಸಮುದ್ರಗಳನ್ನು ಪ್ರವೇಶಿಸಿ, ಮಿತ್ರ ನೌಕೆಗಳನ್ನು ಮುಳುಗಿಸಿದವು. ಈ ಪೀಡೆಯನ್ನು ನಿವಾರಿಸಲು ಸಾಧ್ಯವಾದದ್ದು 1943ರಲ್ಲಿ. ಜರ್ಮನ್ನರು ಜಲಾಂತರ್ಗಾಮಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಸಿದರೆ, ಮಿತ್ರ ರಾಷ್ಟ್ರಗಳು ಬಾಂಬರು ವಿಮಾನಗಳನ್ನು ತಯಾರಿಸಿ ಜರ್ಮನ್ ಕೈಗಾರಿಕಾ ಕೇಂದ್ರಗಳ ಮೇಲೆ ದಾಳಿ ಮಾಡಿದವು. ಇದರ ಪರಿಣಾಮವಾಗಿ ಸಬ್‌ಮೇರಿನ್‌ಗಳ ತಯಾರಿಕೆ ಕಡಿಮೆಯಾಗತೊಡಗಿತು. ಮಿತ್ರ ರಾಷ್ಟ್ರಗಳ ಶಕ್ತಿ ಹೆಚ್ಚಿತು. ಯುರೋಪಿನಲ್ಲಿ ಯುದ್ಧದ ಅಂತ್ಯ ಸನ್ನಿಹಿತವಾಗುವ ವೇಳೆಗೆ ಬ್ರಿಟನ್ನಿನ ಯುದ್ಧನೌಕೆಗಳು ಪೆಸಿಫಿಕ್ ಸಾಗರಕ್ಕೆ ಬಂದು ಅಮೆರಿಕನ್ ನೌಕಾಬಲವನ್ನು ಸೇರಿಕೊಂಡು ಜಪಾನಿನ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿದವು.

ಬರ್ಲಿನಿನ ಮೇಲೆ ವಿಜಯಧ್ವಜ (1945)

**ಪೆಸಿಫಿಕ್ ಯುದ್ಧ:** ಜಪಾನ್ ಯುದ್ಧಪ್ರವೇಶ ಮಾಡಿದಾಗ ಹೆಚ್ಚಿನ ಆಸೆ, ಆಕಾಂಕ್ಷೆಗಳೇನನ್ನೂ ಹೊಂದಿರಲಿಲ್ಲ. ಮುಖ್ಯವಾಗಿ ತನ್ನ ಪೂರ್ವ ಏಷ್ಯ ಅಭ್ಯುದಯ ಯೋಜನೆಯ ಪ್ರಕಾರ ಕೊರಿಯ, ಮಂಚೂರಿಯ, ಚೀನ, ಇಂಡೋ–ಚೀನ, ಮಲಯ, ಮಯನ್ಮಾರ್ ಮತ್ತು ಫಿಲಿಪೀನ್ಸನ್ನು ಆಕ್ರಮಿಸುವುದೇ ಜಪಾನಿನ ಆಗಿನ ಧ್ಯೇಯ. ಆ ಸಾಮ್ರಾಜ್ಯವನ್ನು ರಕ್ಷಿಸುವುದಕ್ಕಾಗಿ ಉತ್ತರ ಕ್ಯುರೈಲ್ ದ್ವೀಪಗಳಿಂದ ಹಿಡಿದು ದಕ್ಷಿಣದ ಮಾರ್ಷಲ್ ದ್ವೀಪಗಳವರೆಗೆ ರಕ್ಷಣಾವ್ಯೂಹವನ್ನು ರಚಿಸುವುದೇ ಜಪಾನಿನ ನಾಯಕರ ಗುರಿ. ಆದಷ್ಟು ಬೇಗ ಆ ಪ್ರದೇಶವನ್ನು ಆಕ್ರಮಿಸಿ, ಅಮೆರಿಕ ಸಂಯುಕ್ತ ಸಂಸ್ಥಾನದ ಪೆಸಿಫಿಕ್ ಪಡೆಯನ್ನು ನಾಶಮಾಡಿ, ಮಿತ್ರ ರಾಷ್ಟ್ರಗಳು ಒಪ್ಪಂದಕ್ಕೆ ಬರುವಂತೆ ಒತ್ತಾಯಪಡಿಸುವುದೇ ಜಪಾನಿನ ಅಪೇಕ್ಷೆ. ಈ ಗುರಿಯನ್ನು ಸಾಧಿಸಲು ಜಪಾನ್ 1941 ಡಿಸೆಂಬರ್ 7ರಂದು ಹವಾಯಿ ದ್ವೀಪದ ಪರ್ಲ್ ಹಾರ್ಬರಿನಲ್ಲಿದ್ದ ಅಮೆರಿಕದ ಪೆಸಿಫಿಕ್ ಸಾಗರದ ನೌಕಪಡೆಯ ಮೇಲೆ ಅನಿರೀಕ್ಷಿತ ದಾಳಿ ನಡೆಸಿತು. ಈ ದಾಳಿಯ ಪರಿಣಾಮವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದ 8 ಯುದ್ಧನೌಕೆಗಳ ಪೈಕಿ 5

ನೌಕೆಗಳು ಮುಳುಗಿದವು. ಉಳಿದ ನೌಕೆಗಳಿಗಾದ ನಷ್ಟವೂ ಅಧಿಕ. ಇದಲ್ಲದೆ ಬೇಕಾದಷ್ಟು ಕ್ರೂಯ್‌ಸರುಗಳೂ ಯುದ್ಧವಿಮಾನಗಳೂ ಡಿಸ್ಟ್ರಾಯರುಗಳೂ ನಷ್ಟ ಹೊಂದಿದವು. ಆದರೆ ಜಪಾನೀಯರು ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ನಷ್ಟವುಂಟಾಗಲಿಲ್ಲ. ಏಕೆಂದರೆ ಹವಾಯಿ ತೀರಪ್ರದೇಶದಲ್ಲಿದ್ದ ಮಿಲಿಟರಿ ಕೇಂದ್ರಗಳಾಗಲಿ ವಿದ್ಯುಚ್ಛಕ್ತಿಯ ಯಂತ್ರ ಸಮುದಾಯವಾಗಲಿ ತೈಲಾಗಾರಗಳಾಗಲಿ ಈ ದಾಳಿಯಲ್ಲಿ ನಾಶವಾಗಲಿಲ್ಲ. ಆದ್ದರಿಂದ ಪರ್ಲ್ ಹಾರ್ಬರಿನ ಘಟನೆ ಸೈನಿಕ ದೃಷ್ಟಿಯಿಂದ ಯಾವ ಮಹತ್ತರ ಸಾಧನೆಯೂ ಆಗಿರಲಿಲ್ಲ. ಇದರಿಂದ ಜಪಾನ್ ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಯುದ್ಧದಲ್ಲಿ ಎದುರಿಸಬೇಕಾದ ಪ್ರಸಂಗ ಒದಗಿತು.

ಪರ್ಲ್ ಹಾರ್ಬರಿನ ಘಟನೆಯಾದ ಮೂರು ದಿನಗಳ ಅನಂತರ ಬ್ರಿಟಿಷರ ಪ್ರಸಿದ್ಧ ಯುದ್ಧ ನೌಕೆ ಪ್ರಿನ್ಸ್ ಆಫ್ ವೇಲ್ಸ್ ಮತ್ತು ಕ್ರೂಯ್‌ಸ್‌ರ್ ರಿಪಲ್ಸನ್ನು ಸಿಂಗಪುರದ ಬಳಿ ಜಪಾನೀಯರು ಮುಳುಗಿಸಿದ್ದರಿಂದ ಬ್ರಿಟಿಷರ ಪ್ರತಿಷ್ಠೆಗೆ ಮತ್ತು ನೌಕಾಬಲಕ್ಕೆ ಒದಗಿದ ನಷ್ಟ ಅಗಾಧ.



ಜಪಾನೀ ಯುದ್ಧ ನೌಕೆಯೊಂದರ ಅಂತ್ಯ

ಪೆಸಿಫಿಕಿನ ಎಲ್ಲಾ ಕ್ಷೇತ್ರಗಳಲ್ಲೂ ಜಪಾನ್ ಜಯಪ್ರದವಾಯಿತು. ಜಪಾನೀ ಸೇನೆಗಳು 1941 ಡಿಸೆಂಬರ್ ವೇಳೆಗೆ ಫ್ರೆಂಚ್ ಇಂಡೋಚೀನ ಬಂದರುಗಳನ್ನೂ ಉಪಯೋಗಿಸಿ ಕೊಂಡು. ಥೈಲೆಂಡಿನ ರಾಜಕೀಯದಲ್ಲಿ ಪ್ರವೇಶಿಸಿ, ಬ್ಯಾಂಕಾಕನ್ನು ವಶಪಡಿಸಿಕೊಂಡಿದ್ದವು. ಜಪಾನೀಯರು ಮುಂದುವರಿದು ಮಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಂದಿಳಿದು ಅದರ ಅರ್ಧಭಾಗವನ್ನು ಆಕ್ರಮಿಸಿಕೊಂಡರು. ಡಿಸೆಂಬರ್ ಅಂತ್ಯದ ವೇಳೆಗೆ ಸಿಂಗಪುರ ಬಿಟ್ಟು ಮಿಕ್ಕೆಲ್ಲ ಪ್ರದೇಶವು ಜಪಾನೀಯರ ವಶವಾಗಿತ್ತು, ಇವರ ಹಾವಳಿಯನ್ನು ತಡೆಗಟ್ಟಲು ಅಧ್ಯಕ್ಷ ರೂಸ್‌ವೆಲ್ಟ್ ಮತ್ತು ಬ್ರಿಟಿಷ್ ಪ್ರಧಾನಿ ಚರ್ಚಿಲ್ ಸಭೆ ಸೇರಿ, ಪೆಸಿಫಿಕ್ ಸಾಗರದಲ್ಲಿ ಮತ್ತು ಆಗ್ನೇಯ ಏಷ್ಯದಲ್ಲಿ ಒಂದು ಹೊಸ ರಕ್ಷಣಾ ವ್ಯವಸ್ಥೆ ಸ್ಥಾಪಿಸಿದರು. ಅದರೆ ಆ ವ್ಯವಸ್ಥೆ ರೂಪುಗೊಳ್ಳುವ ಮೊದಲೇ ಜಪಾನೀಯರು ಈಸ್ಟ್ ಇಂಡೀಸಿನ ಮುಖ್ಯ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. 1942ರ ಫೆಬ್ರವರಿ 8ರಂದು ಸಿಂಗಪುರ ಶರಣಾಗತವಾಯಿತು. ಅದೇ ತಿಂಗಳ 13ರಂದು ಜಪಾನೀಯರ ಸುಮಾತ್ರದಲ್ಲಿಳಿದರು. ಅವರ ಗಮನ ಪೂರ್ವದ ಕಡೆ ತಿರುಗಿತು. ಆಸ್ಟ್ರೇಲಿಯದ ಡಾರ್ವಿನಿನ ಮೇಲೆ ಅವರು ನಡೆಸಿದ ದಾಳಿಯಿಂದ ಆದ ನಷ್ಟ ಅಪಾರ. ಹೀಗೆ ಬಾಲಿ ಮತ್ತು ಜಾವಾ ಜಪಾನೀಯರು ವಶವಾದವು. ಫಿಲಿಪೀನ್ಸಿನಲ್ಲಿ ಜನರಲ್ ಮೆಕಾರ್ಥರ ನಾಯಕತ್ವದಲ್ಲಿ ಅಮೆರಿಕನ್ ಸೇನೆ ಶೌರ್ಯದಿಂದ ಹೋರಾಡಿದರು ಪ್ರಯೋಜನ ವಾಗಲಿಲ್ಲ. ಶಾಂತಿ ಸಾಗರದ ಆನೇಕ ದ್ವೀಪಗಳು ಜಪಾನೀಯರ ವಶವಾದವು. ಹಿಂದೂ ಸಾಗರದ ಹತೋಟಿ ಪಡೆಯುವ ಉದ್ದೇಶದಿಂದ ಜಪಾನೀಯರು ಅಂಡಮಾನ್ ದ್ವೀಪ ಹಿಡಿದರು.

ಹೀಗೆ ಜಪಾನೀಯರು ಯಾವ ಶಕ್ತಿಗೂ ಜಗ್ಗದೆ ಮುನ್ನುಗ್ಗುತ್ತಿದ್ದ ರೀತಿಯನ್ನು ನೋಡಿ ಕಳವಳಗೊಂಡ ಮಿತ್ರರಾಷ್ಟ್ರಗಳು ತಮ್ಮ ರಕ್ಷಣಾ ವ್ಯವಸ್ಥೆಯನ್ನು ಸುಧಾರಿಸಿ ಹೊಸ ನಮೂನೆಯ ರಕ್ಷಣಾವ್ಯೂಹ ರಚಿಸಿದರು. ಜನರಲ್ ಮೆಕಾರ್ಥರ್ 1942 ಏಪ್ರಿಲ್ 18ರಂದು ಆ ವ್ಯವಸ್ಥೆಯ ಅಧಿಕಾರ ವಹಿಸಿಕೊಂಡ. ಅದೇ ದಿನ ಅಮೆರಿಕನ್ ಬಾಂಬರುಗಳು ಟೋಕಿಯೋ ಮೇಲೆ ಬಾಂಬಿನ ಮಳೆಗರೆದವು. 1942 ಮೇ ತಿಂಗಳಲ್ಲಿ ನಡೆದ ಸಮುದ್ರ ಕದನದಲ್ಲೂ ಜೂನ್‌ನಲ್ಲಿ ನಡೆದ ಮಿಡ್‌ವೇ ದ್ವೀಪದ ನೌಕಾ ಕದನದಲ್ಲೂ ಮಿತ್ರರಾಷ್ಟ್ರಗಳ ವಿಮಾನಗಳು ಯಶ್ವಸಿಯಾಗಿ ಕಾರ್ಯನಿರ್ವಹಿಸಿದ್ದರಿಂದ ಜಪಾನಿನ ನೌಕಾ ಬಲಕ್ಕೆ ಆದ ಘಾಸಿ ಅಷ್ಟಿಷ್ಟಲ್ಲ. ಇದರಿಂದ ಮಿತ್ರ ರಾಷ್ಟ್ರಗಳ ಕಾರ್ಯಾಚರಣೆ ಇನ್ನೂ ಸುಗಮವಾಗಿ, ಆಸ್ಟ್ರೇಲಿಯಕ್ಕೆ ಸಂಭವಿಸಿದ್ದ ಅಪಾಯ ಕೊನೆಗೊಂಡಿತು. ಭಾರತಕ್ಕೆ ಉಂಟಾಗಿದ್ದ ಆಪತ್ತೂ ನಿವಾರಣೆಯಾಯಿತು. 1942 ಆಗಸ್ಟ್ ತಿಂಗಳಲ್ಲಿ ಸಾಲೋಮನ್ ದ್ವೀಪ ಸಮುದಾಯದ ಗ್ವಾಡಲ್‌ಕನಾಲ್‌ನಲ್ಲಿ ಅಮೆರಿಕನ್ ಸೈನ್ಯ ಬಂದಿಳಿದು 1943 ಫೆಬ್ರವರಿಯಲ್ಲಿ ಅದನ್ನು ಪೂರ್ಣ ವಶಪಡಿಸಿಕೊಂಡು ದ್ವೀಪದಿಂದ ದ್ವೀಪಕ್ಕೆ ಮುಂದುವರಿದು ಜಪಾನ್ ಭೂಭಾಗದ ಮೇಲೆಯೂ ಕಾರ್ಯಾಚರಣೆ ಮಾಡಲಾರಂಭಿಸಿದಾಗ ಜಪಾನಿಗೆ ಸೋಲು ಹತ್ತಿರವಾಯಿತೆನ್ನಬಹುದು.

ಮಹಾಯುದ್ಧದ ಪಶ್ಚಿಮ ರಂಗದಲ್ಲಿ ಜರ್ಮನಿ ಸೋತ ಮೇಲೆ ಇನ್ನುಳಿದಿದ್ದ ಶತ್ರುದೇಶವೆಂದರೆ ಜಪಾನ್ ಮಾತ್ರ. 1945 ಮೇ ತಿಂಗಳ ವೇಳೆಗೆ ಪೂರ್ವ ಏಷ್ಯ ಮತ್ತು ಪೆಸಿಫಿಕ್ ರಂಗಗಳಲ್ಲಿ ಮಿತ್ರ ಸೇನೆಗಳು ಅಪೂರ್ವ ಪ್ರಗತಿ ಸಾಧಿಸಿದ್ದವು. 1944 ಜುಲೈ–ಆಗಸ್ಟ್ ತಿಂಗಳುಗಳಲ್ಲಿ ಗ್ವಾಮ್ ದ್ವೀಪ ಅಮೆರಿಕನ್ನರ ವಶವಾಗಿತ್ತು. ಫಿಲಿಪೀನ್ಸ್ ದ್ವೀಪಗಳ ಸಮೀಪದಲ್ಲಿ ಚಲಿಸುತ್ತಿದ್ದ ಜಪಾನೀ ಯುದ್ಧ ನೌಕಾಪಡೆಯನ್ನು ಮುಳುಗಿಸಲಾಯಿತು. ಆಕ್ಟೋಬರ್ 23–25 ರಲ್ಲಿ ಫಿಲಿಪೀನ್ಸ್ ಬಳಿ ನಡೆದ ಕದನದಲ್ಲಿ ಅನೇಕ ಜಪಾನೀ ಹಡಗುಗಳು ಮುಳುಗಿದವು. ಈ ಕಡೆ ಮಯನ್ಮಾರ್ ರಂಗದಲ್ಲಿ ಭಾರತೀಯ ಸೈನಿಕರು ಅನೇಕ ನಗರಗಳನ್ನು ಹಿಡಿದರು. ಮಿತ್ರ ಸೇನೆಗಳು ಮೆಕಾರ್ಥರ್ ನೇತೃತ್ವದಲ್ಲಿ ಫಿಲಿಪೀನ್ಸ್‌ನ ರಾಜಧಾನಿ ಮಾನಿಲವನ್ನು ಪ್ರವೇಶಿಸಿದವು. ಓಕಿನಾವ ಮತ್ತು ಫಿಲಿಪೀನ್ಸ್‌ನಿಂದ ಟೋಕಿಯೋ ನಗರದ ಮೇಲೆ ವಿಮಾನದಾಳಿಗೆ ಕೊನೆಯಿರಲಿಲ್ಲ. ಅತ್ತ ಕಡೆ ಸೋವಿಯತ್ ಜಪಾನ್ ಯುದ್ಧದ ತಾಟಸ್ಥ್ಯ ಒಪ್ಪಂದ ರದ್ದಾಗಿ, ಸೋವಿಯತ್‌ರು ಜಪಾನಿನ ಮೇಲೆ ಯುದ್ಧವನ್ನು ಘೋಷಿಸಿದಾಗ ಜಪಾನಿಗೆ ವಿಪತ್ತು



ಯುದ್ಧದ ಕೊನೆಯ ಆಘಾತ : ನಾಗಸಾಕಿಯ ಮೇಲೆ ಪರಮಾಣುಬಾಂಬು

ಹತ್ತಿರಕ್ಕೆ ಬಂದಿತು. 1945 ಜೂನ್–ಜುಲೈ ತಿಂಗಳ ವೇಳೆಗೆ ಲುಸಾನ್ ಮತ್ತು ಓಕಿನಾವ ಸಂಪೂರ್ಣ ವಶವಾಗಿ ಜುಲೈ 5ರ ವೇಳೆಗೆ ಫಿಲಿಪೀನ್ಸ್ ದಂಡಯಾತ್ರೆ ಮುಕ್ತಾಯ ವಾಯಿತು. ಇಷ್ಟಾದರೂ ಜಪಾನಿನ ನಾಯಕರು ಶರಣಾಗತರಾಗುವ ಸೂಚನೆ ಕಾಣಲಿಲ್ಲ. ಜುಲೈ 17ರಂದು ಜರ್ಮನಿಯ ಪೋಟ್ಸ್‌ಡ್ಯಾಮ್ ನಗರದಲ್ಲಿ ಸ್ಟಾಲಿನ್, ಚರ್ಚಿಲ್ ಮತ್ತು ಅಧ್ಯಕ್ಷ ಟ್ರೂಮನ್ ಸಭೆ ಸೇರಿ ಜರ್ಮನಿಯ ಭವಿಷ್ಯ ನಿರ್ಧರಿಸಿದರು. ಅಲ್ಲದೆ ಪರಾಭವ ಹೊಂದಿದ ಜಪಾನಿಗೆ ಯುದ್ಧ ನಿಲ್ಲಿಸುವ ಸೂಚನೆ ಕಳುಹಿಸಿದರು. ಜಪಾನ್ ಈ ಶಾಂತಿ ಸೂಚನೆಯನ್ನು ನಿರಾಕರಿಸಿತು. ಯುರೋಪ್ ಯುದ್ಧದಿಂದ ಕೈ

ಬಿಡುವುಮಾಡಿಕೊಂಡಿದ್ದ ಮಿತ್ರ ಪಕ್ಷದವರು ತಮ್ಮ ಸರ್ವಶಕ್ತಿಯನ್ನೂ ಜಪಾನಿನ ಮೇಲೆ ಪ್ರಯೋಜಿಸಲು ಸಿದ್ಧರಿದ್ದರೆಂಬುದನ್ನು ಅದು ಅರಿಯಲಿಲ್ಲ. ಯುದ್ಧಕೊನೆಗೊಳಿಸಿ, ಸಾವು ನೋವುಗಳನ್ನು ಕಡಿಮೆಮಾಡುವ ಉದ್ದೇಶದಿಂದ ಅಮೆರಿಕನ್ನರು ಪರಮಾಣು ಬಾಂಬನ್ನು 1945 ಆಗಸ್ಟ್ 6ರಂದು ಹಿರೋಷಿಮಾ ನಗರದ ಮೇಲೆ ಪ್ರಯೋಗಿಸಿದರು. ಆ ತಿಂಗಳ 9ನೆಯ ತಾರೀಕು ಸೋವಿಯತ್‌ರು ಮಂಚೂರಿಯ ಗಡಿಯಲ್ಲಿ ಎರಡು ಪಟ್ಟಣಗಳನ್ನು ಹಿಡಿದರು. ಮತ್ತೊಂದು ಪರಮಾಣು ಬಾಂಬ್ ಅದೇ ದಿನ ನಾಗಸಾಕಿ ಬಂದರಿನ ಮೇಲೆ ಬಿತ್ತು. ಈ ಬಾಂಬಿನ ಪ್ರಯೋಗದಿಂದ ಉಂಟಾದ ಅಪಾರ ಹಾನಿಯನ್ನು ಮನಗಂಡ ಜಪಾನೀ ನಾಯಕರು ಆಗಸ್ಟ್ 10ರಂದು ತಮ್ಮ ಸೋಲನ್ನೊಪ್ಪಿಕೊಂಡರು. 14ರಂದು ಜನರಲ್ ಮೆಕಾರ್ಥರ್ ವಿಧಿಸಿದ ಷರತ್ತುಗಳನ್ನು ಒಪ್ಪಿಕೊಂಡು ಶರಣಾಗತರಾದರು. ಜಪಾನೀ ಶರಣಾಗತಿ ಪತ್ರಕ್ಕೆ ಸಹಿ ಬಿದ್ದದ್ದು ಸೆಪ್ಟೆಂಬರ್ 2ರಂದು, ಅಮೆರಿಕನ್ ಯುದ್ಧ ನೌಕೆ ಮಿಸೂರಿಯಲ್ಲಿ ಪೆಸಿಫಿಕ್ ಸಾಗರದ ಯುದ್ಧದ ಸಮಾಪ್ತಿಯೊಂದಿಗೆ ಎರಡನೆಯ ಮಹಾಯುದ್ಧವೂ ಮುಕ್ತಾಯವಾಯಿತು.



ಎರಡನೆಯ ಮಹಾಯುದ್ಧ ಕಾಲದಲ್ಲಿ ಜಪಾನಿಗೆ ಒಳಪಟ್ಟಿದ ಪ್ರದೇಶ

**ಶಾಂತಿಸ್ಥಾಪನೆ, ಯುದ್ಧದ ಪರಿಣಾಮ, ಯುದ್ಧವೆಚ್ಚ ಇತ್ಯಾದಿ :** ಸುಮಾರು 6 ವರ್ಷಗಳ ಕಾಲ ಪ್ರಪಂಚದ ಬಹುಭಾಗವನ್ನು ವ್ಯಾಪಿಸಿ ನಡೆದ ಈ ಮಹಾಯುದ್ಧದ ಸಮೀಕ್ಷೆಯಿಂದ ಕೆಲವು ಅಂಶಗಳನ್ನು ಗ್ರಹಿಸಬಹುದು. ಸೈನಿಕ ಬಲದಿಂದ ಮಾತ್ರವೇ ಆಕ್ರಮಣವನ್ನು ತಡೆಯಲು ಸಾಧ್ಯವಿಲ್ಲವೆಂಬುದು ಇದರಿಂದ ವ್ಯಕ್ತವಾದ ಮೊದಲನೆಯ ಅಂಶ. ಜನಸಮುದಾಯ, ವ್ಯಾಪಕ ಪ್ರದೇಶ ಮತ್ತು ಕೈಗಾರಿಕಾ ದಕ್ಷತೆ ಇವು ಆಧುನಿಕ ಯುದ್ಧ ತಂತ್ರಗಳಿಗೆ ಅಗತ್ಯ. ಇಲ್ಲದಿದ್ದರೆ ದೇಶದ ರಕ್ಷಣೆ ಸಾಧ್ಯವಿಲ್ಲವೆಂಬುದು ಅರ್ಥವಾಯಿತು. ಅಲ್ಲದೆ ಹಣದ ಅಭಾವವಿದ್ದರೆ ದೇಶ ಬಲಯುತವಾಗಲಾರ ದೆಂಬುದೂ ಖಚಿತವಾಯಿತು.

ಈ ಯುದ್ಧದ ಪರಿಣಾಮವಾಗಿ ವಿಶ್ವದಲ್ಲಿ ಎರಡು ಮಹತ್ತರವಾದ ರಾಜಕೀಯ ಬಣಗಳು ಉಳಿದುವು. ಸೋವಿಯತ್ ಪ್ರಭುತ್ವ ಮತ್ತು ಪಾಶ್ಚಾತ್ಯ ಪ್ರಜಾಪ್ರಭುತ್ವ. ಯುದ್ಧಾನಂತರ ಜರ್ಮನಿ ತನ್ನ ಹಿರಿಮೆಯನ್ನು ಕಳೆದುಕೊಂಡಿತು. 1918ರಲ್ಲಿ ವಿಜಯಿ ರಾಷ್ಟ್ರವಾಗಿದ್ದ ಮತ್ತು 1930ರ ವೇಳೆಗೆ ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲೊಂದಾಗಿದ್ದ ಫ್ರಾನ್ಸಿನ ಶಕ್ತಿ ಉಡುಗಿತು. ಇಟಲಿ ಸಣ್ಣ ರಾಷ್ಟ್ರವಾಗಿ ಉಳಿಯಿತು. ಹೀಗೆ ಯುರೋಪಿನ ಪ್ರಮುಖ ರಾಷ್ಟ್ರಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡುವು. ಸೋವಿಯತ್ ಒಕ್ಕೂಟವೊಂದೇ ಪ್ರಬಲ ರಾಷ್ಟ್ರವಾಗಿ ಮುಂದುವರಿಯಿತು. ಅನೇಕ ಐರೋಪ್ಯ ರಾಷ್ಟ್ರಗಳು ಸೋವಿಯತ್ ಶಕ್ತಿಯ ನೆರಳಲ್ಲಿರಬೇಕಾಯಿತು. ಯುರೋಪು ಎರಡು ಪಂಥಗಳ ಪ್ರಭಾವಕ್ಕೆ ಸಿಕ್ಕಿಬಿದ್ದು ಆರ್ಥಿಕ ಮುಗ್ಗಟ್ಟು ಮತ್ತು ಆಹಾರದ ಅಭಾವ ಸ್ಥಿತಿಯನ್ನು ಎದುರಿಸಬೇಕಾಯಿತು. ಯುದ್ಧದಲ್ಲಿ ಮುಖ್ಯ ಪಾತ್ರ ವಹಿಸಿದ ಮತ್ತೊಂದು ರಾಷ್ಟ್ರವಾದ ಬ್ರಿಟನ್ನಿನ ಶಕ್ತಿ ಕುಗ್ಗಿತು. ಯುದ್ಧದ ಅಗಾಧ ವೆಚ್ಚದ ಭಾರದಿಂದ ಬ್ರಿಟನ್ ಎದುರಿಸಬೇಕಾಗಿದ್ದ ಸಮಸ್ಯೆಗಳು ಅಪಾರವಾದವು.

ಪ್ರಪಂಚದಲ್ಲಿ ಹಿಂದುಳಿದ ದೇಶಗಳು ಮತ್ತು ವಸಾಹತು ಪ್ರದೇಶಗಳಲ್ಲಿ ಜನಜಾಗೃತಿಯುಂಟಾಗಿ ರಾಷ್ಟ್ರೀಯತೆಯ ಭಾವನೆ ಮೂಡಿದ್ದು ಮತ್ತೊಂದು ಪರಿಣಾಮ.

ಎರಡನೆಯ ಮಹಾಯುದ್ಧ ಮಿತ್ರರಾಷ್ಟ್ರಗಳ ದೃಷ್ಟಿಯಲ್ಲಿ ಜಯಪ್ರದವಾಗಿ ಕೊನೆಗೊಂಡದ್ದು ಅಮೆರಿಕ ಸಂಯುಕ್ತಸಂಸ್ಥಾನದ ಅಗಾಧ ಕೈಗಾರಿಕಾ ಮತ್ತು ಸೈನಿಕ ಶಕ್ತಿಯಿಂದ; ಇದೂ ಸೋವಿಯತ್ ಒಕ್ಕೂಟವೂ ಯುದ್ಧದಲ್ಲಿ ಪ್ರಧಾನ ಪಾತ್ರ ವಹಿಸಿದ್ದರಿಂದ.

ಮಹಾಯುದ್ಧಕ್ಕಾಗಿ ಆದ ವೆಚ್ಚ ಅಪಾರ. ಜಗತ್ತಿನ ಸಂಪತ್ತೆಲ್ಲ ಯುದ್ಧಕ್ಕಾಗಿ, ಯುದ್ಧ ಸಾಮಗ್ರಿಗಳನ್ನು ತಯಾರಿಸುವುದಕ್ಕಾಗಿ, ಯುದ್ಧದ ಅಸ್ತ್ರಗಳನ್ನು ಕಂಡು ಹಿಡಿಯುವುದಕ್ಕಾಗಿ ವಿನಿಯೋಗವಾಗಬೇಕಾಯಿತು. ಇದು ಕೇವಲ ಮಹಾಬಲರ ಯುದ್ಧ. ಒಂದು ರೀತಿಯಲ್ಲಿ ವೈಜ್ಞಾನಿಕ ಯುದ್ಧ, ಮನಸ್ಥೈರ್ಯದ ಯುದ್ಧ. ಈ ರೀತಿಯ ಘರ್ಷಣೆಯಲ್ಲಿ ಪ್ರಚಾರದ ಪಾತ್ರ ಹೆಚ್ಚು. ಯುದ್ಧಕಾಲದಲ್ಲಿ ಈ ಪ್ರಚಾರ ನಾನಾ ಮುಖಗಳಲ್ಲಿ ನಡೆದು, ಮಿತ್ರ ಶತ್ರು ರಾಷ್ಟ್ರಗಳಲ್ಲಿ ಹೆಚ್ಚಿನ ವೈಷಮ್ಯವನ್ನುಂಟುಮಾಡಿತಲ್ಲದೆ, ಯುದ್ಧಾನಂತರದಲ್ಲಿ ಮಿತ್ರ ರಾಷ್ಟ್ರಗಳಲ್ಲೆ ವಿರಸ ಮೂಡಿಸಿತು. ಸಮಸ್ಯೆಗಳು ಜಟಿಲವಾಗಿ ಶಾಂತಿ ಸ್ಥಾಪನೆ ದೂರ ಸರಿಯಿತು. ಯುದ್ಧ ಸಮಯದಲ್ಲಿ, ಹಿಟ್ಲರನನ್ನು ಎದುರಿಸಿ ಜಯಗಳಿಸುವುದರಲ್ಲಿ, ಇದ್ದ ಒಗ್ಗಟ್ಟು ಯುದ್ಧಾನಂತರ ಮಾಯವಾಯಿತು. ಯುದ್ಧದಲ್ಲಿ ಗೆದ್ದರೂ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಯುದ್ಧಮುಗಿದ ಮೇಲೆ ಒಂದು ಬಗೆಯ ಶೀತಲಯುದ್ಧ ಪ್ರಾರಂಭವಾಯಿತೆನ್ನಬಹುದು.

ಈ ಮಹಾಯುದ್ಧದಲ್ಲಿ ರಾಷ್ಟ್ರಗಳು ಮಾಡಿದ ವೆಚ್ಚದ ಬಗ್ಗೆ ನಿಖರವಾಗಿ ವಿವರ ನೀಡುವುದು ಅಸಾಧ್ಯ. ಯುದ್ಧದಲ್ಲಿ ಮಡಿದವರ ಬಗ್ಗೆಯೂ ಸರಿಯಾದ ಅಂಕಿ ಅಂಶಗಳನ್ನು ನೀಡುವುದು ದುಸ್ತರದ ಕೆಲಸ. ಸಾವು ನೋವು ನಷ್ಟಗಳ ಜೊತೆಗೆ ಮಾನವ ಅನುಭವಿಸಿದ ತೊಂದರೆಯನ್ನು ವರ್ಣಿಸುವುದು ಕಷ್ಟ. ಸೈನ್ಯದ ವೆಚ್ಚ, ವಾಯುಬಲ ಮತ್ತು ನೌಕಾಬಲದ ವೆಚ್ಚ ಇವುಗಳ ಜೊತೆಗೆ ಜನರು ಕಳೆದುಕೊಂಡ ಆಸ್ತಿ ಪಾಸ್ತಿ, ನಾಶಗೊಂಡ ಕೈಗಾರಿಕೆಗಳು, ಜನ ಕಳೆದುಕೊಂಡ ಕೆಲಸ–ಇವುಗಳ ನಷ್ಟವನ್ನೂ ಸೇರಿಸಬೇಕು. ಈ ಕೆಳಗೆ ಕೊಟ್ಟಿರುವ ಅಂಕಿ ಅಂಶಗಳು ಸ್ಥೂಲವಾಗಿ ಈ ವೆಚ್ಚದ ವ್ಯಾಪ್ತಿಯನ್ನು ಸೂಚಿಸುತ್ತವೆ.

1. ಮಿತ್ರ ಶತ್ರು ಪಕ್ಷಗಳಲ್ಲಿ ಒಟ್ಟು 57 ರಾಷ್ಟ್ರಗಳು ಯುದ್ಧದಲ್ಲಿ ಭಾಗವಹಿಸಿದ್ದವು. ಮಿತ್ರರಾಷ್ಟ್ರಗಳ ಕಡೆ ಈ ಯುದ್ಧದ ವೆಚ್ಚದಲ್ಲಿ ಬಹುಭಾಗವನ್ನು ಸಂಯುಕ್ತಸಂಸ್ಥಾನ ಹೊತ್ತಿತ್ತು. ಅದರಲ್ಲಿ ಇತರ ಪಾಲುದಾರ ರಾಷ್ಟ್ರಗಳೆಂದರೆ ಬ್ರಿಟನ್, ಕಾಮನ್‌ವೆಲ್ತ್, ರಷ್ಯ, ಚೀನ, ಮತ್ತು ಫ್ರಾನ್ಸ್. ಅಕ್ಷರಾಷ್ಟ್ರಗಳ ಕಡೆ ಜರ್ಮನಿ, ಇಟಲಿ ಮತ್ತು ಜಪಾನ್.

2. ಯುದ್ಧದಲ್ಲಿ ಸತ್ತವರ ಸಂಖ್ಯೆ ಅಗಾಧ, ಯುದ್ಧದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನ 2,92,100 ಸೈನಿಕರನ್ನು, ಅಂದರೆ 1940ರ ಜನಗಣತಿಯ ಪ್ರಕಾರ 450ಕ್ಕೆ ಒಬ್ಬನಂತೆ, ಕಳೆದುಕೊಂಡಿತು. ಇತರರ ಪೈಕಿ ಯುದ್ಧರಂಗದಲ್ಲಿ ಮತ್ತು ಯುದ್ಧ ಖೈದಿಗಳಾಗಿ ಸತ್ತವರಲ್ಲಿ ಭೂವಾಯುಪಡೆಯವರು 2,34,874. ನೌಕಾಪಡೆ 36,950, ಅದಕ್ಕೆ ಸಂಬಂಧಪಟ್ಟವರು 19,733, ತೀರ ಪ್ರದೇಶದ ಕಾವಲುಗಾರರು 574.

3. ಬ್ರಿಟನ್ ಮತ್ತು ಕಾಮನ್‌ವೆಲ್ತ್‌ಗಳ ನಷ್ಟ ಹೀಗಿದೆ: ಸತ್ತವರ ಸಂಖ್ಯೆ 5,44,596; ಬ್ರಿಟನ್ನಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾವು ನೋವು ಉಂಟಾದವು. ಬ್ರಿಟನ್ನಿನಲ್ಲಿ ಸತ್ತವರ ಸಂಖ್ಯೆ 3,97,762. ಅಂದರೆ ಅದರ ಜನಸಂಖ್ಯೆಯಲ್ಲಿ ಪ್ರತಿ 150ಕ್ಕೆ ಒಬ್ಬನಂತೆ.

4. ಸೋವಿಯತ್ ಒಕ್ಕೂಟದಲ್ಲಿ ಸತ್ತವರ ಸಂಖ್ಯೆ 75,00,000 ಅಂದರೆ ಅದರ ಜನಸಂಖ್ಯೆಯಲ್ಲಿ ಪ್ರತಿ 22 ಜನರಲ್ಲಿ ಒಬ್ಬ ಪ್ರಾಣ ತೆತ್ತ.

5. ಫ್ರಾನ್ಸಿನಲ್ಲಿ 2,10,671 ಸೈನಿಕರು ಸತ್ತರು (200 ಜನಕ್ಕೆ ಒಬ್ಬ). ಫ್ರಾನ್ಸಿನ ಇತರ ಪ್ರಜೆಗಳಲ್ಲಿ 1,07,874 ಜನ ಪ್ರಾಣ ಕಳೆದುಕೊಂಡರು.

6. ಜರ್ಮನಿಯ 28,50,000 ಸೈನಿಕರು ಸತ್ತರು (25ಕ್ಕೆ 1).

7. ಇಟಲಿ 3,00,000 ಸೈನಿಕರನ್ನು ಕಳೆದುಕೊಂಡಿತು (150ಕ್ಕೆ 1).

8. ಸಾವಿನ ಪಟ್ಟಿಯಲ್ಲಿ ಮಿತ್ರ ರಾಷ್ಟ್ರಗಳ ಪೈಕಿ ಚೀನ ಎರಡನೆಯದು. 22,00,000 (200ಕ್ಕೆ 1) ಸೈನಿಕರನ್ನು ಕಳೆದುಕೊಂಡಿತು.

9. ಜಪಾನ್ 15,06,000 ಸೈನಿಕರನ್ನು ಕಳೆದುಕೊಂಡಿತು. (46ಕ್ಕೆ 1).

10. ಯುದ್ಧದಲ್ಲಿ ಮಿತ್ರ ಶತ್ರು ರಾಷ್ಟ್ರಗಳ ಸೈನಿಕರ ಸಾವಿನ ಸಂಖ್ಯೆ ಒಟ್ಟು 1,06,50,000. ಅಕ್ಷ ರಾಷ್ಟ್ರಗಳಲ್ಲಿ ಈ ಸಂಖ್ಯೆ 46,50,000.

11. ಇದಲ್ಲದೆ ಅನೇಕ ಸಣ್ಣಪುಟ್ಟ ರಾಷ್ಟ್ರಗಳು ಉದಾ: (ಪೋಲೆಂಡ್) ಹೆಚ್ಚಿನ ಪ್ರಮಾಣದಲ್ಲಿ ಸಾವು ನೋವುಗಳನ್ನನ್ನುಭವಿಸಿದವು.

12. ನಿರಾಶ್ರಿತರ ಸಮಸ್ಯೆ ಉದ್ಭವವಾಗಿ ಅನೇಕ ಸಂಸ್ಥೆಗಳು ಅದರ ನಿವಾರಣೆಗಾಗಿ ಯತ್ನಿಸಿದವು. ಅಂತಾರಾಷ್ಟ್ರೀಯ ನಿರಾಶ್ರಿತರ ಸಂಘ 72,800 ನಿರಾಶ್ರಿತರನ್ನು ಅವರವರ ರಾಷ್ಟ್ರಗಳಿಗೆ ಹಿಂದಿರುಗಿಸಿತು. 10,50,000 ನಿರಾಶ್ರಿತರಿಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ವಸತಿ ಕಲ್ಪಿಸಲಾಯಿತು. ಇಷ್ಟಾದರೂ ಈ ಸಮಸ್ಯೆ ಸಂಪೂರ್ಣವಾಗಿ ಬಗೆ ಹರಿಯಲಿಲ್ಲ.

13. ದೂರಪ್ರಾಚ್ಯದಲ್ಲಿ ಜಪಾನಿನಿಂದ 10,00,000 ಜನರನ್ನು ಹಿಂತಿರುಗಿಸಲಾಯಿತು. ಜಪಾನಿಗೆ ವಾಪಸು ಕಳಿಸಲಾದವರ ಸಂಖ್ಯೆ 65,50,000. (ಕೆ.ಟಿ.ಆರ್.)

**ಎರಡನೆಯ ಮಹಾಯುದ್ಧದ ಮುಖ್ಯ ಘಟನೆಗಳು**

| | |
|---|---|
| 1–9–1939 : | ಜರ್ಮನ್ ಪಡೆಗಳಿಂದ ಪೋಲೆಂಡ್ ಆಕ್ರಮಣ. ಡ್ಯಾನ್ಸಿಗ್ ಮೂಲಕ ಪೂರ್ವ ಪ್ರಷ್ಯದೊಂದಿಗೆ ಸಂಪರ್ಕ ಏರ್ಪಡಿಸಿಕೊಳ್ಳಲು ಪೋಲೆಂಡ್ ಒಪ್ಪಿಗೆ ನೀಡಲಿಲ್ಲವೆಂಬುದು ಈ ಆಕ್ರಮಣಕ್ಕೆ ತತ್‌ಕ್ಷಣದ ಕಾರಣ. |
| 3–9–1939 : | ಪೋಲೆಂಡನ್ನು ಆಕ್ರಮಣದಿಂದ ರಕ್ಷಿಸುವ ಉದ್ದೇಶದಿಂದ ಬ್ರಿಟನ್–ಫ್ರಾನ್ಸ್‌ಗಳಿಂದ ಯುದ್ಧ ಘೋಷಣೆ. |
| 17–9–1939 : | ಪೂರ್ವದ ಕಡೆಯಿಂದ ಪೋಲೆಂಡಿನ ಆಕ್ರಮಣ. |
| 5–10–1939 : | ಪೋಲಿಷ್ ಸೇನೆಯ ಕೊನೆಯ ತುಣುಕಿನ ಶರಣಾಗತಿ, ಜರ್ಮನಿ ಸೋವಿಯತ್ ಒಕ್ಕೂಟಗಳ ನಡುವೆ ಪೋಲೆಂಡಿನ ಹಂಚಿಕೆ. |
| 30–11–1939 : | ಸೋವಿಯತ್ ಸೇನೆಗೆ ನೆಲೆಯೂರಲು ಅವಕಾಶ ಕೊಡಲೊಪ್ಪದ ಫಿನ್ಲೆಂಡಿಗೆ ಸೋವಿಯತ್ ಪಡೆಗಳ ಪ್ರವೇಶ. |
| 13–3–1940 : | ಸೋವಿಯತ್ ಷರತ್ತುಗಳಿಗೆ ಫಿನ್ಲೆಂಡ್ ಒಪ್ಪಿಗೆ. |
| ಏಪ್ರಿಲ್ 1940 : | ಜರ್ಮನಿಯಿಂದ ನಾರ್ವೆ ಆಕ್ರಮಣ. |
| 10–5–1940 : | 1. ಬೆಲ್ಜಿಯಂ ಹಾಲೆಂಡುಗಳ ಸ್ವಾತಂತ್ರ್ಯಭಂಗ. ಮಿಂಚಿನ ಯುದ್ಧದ (ಬ್ಲಿಟ್ಸ್‌ಕ್ರೀಗ್) ಆರಂಭ. ನಾಲ್ಕೇ ದಿನಗಳಲ್ಲಿ ನೆದರ್ಲೆಂಡ್ಸ್ ಮೂರು ವಾರಗಳಲ್ಲಿ ಬೆಲ್ಜಿಯಮ್ ಏಳು ವಾರಗಳಲ್ಲಿ ಫ್ರಾನ್ಸ್ ಪರಾಜಯ. |
| | 2. ಬ್ರಿಟಿಷ್ ಪ್ರಧಾನಿ ಚೇಂಬರ್ಲಿನ್ ರಾಜೀನಾಮೆ. ಸಂಮಿಶ್ರ ಸರ್ಕಾರದ ಪ್ರಧಾನಿಯಾಗಿ ಸರ್ ವಿನ್‌ಸ್ಟನ್ ಚರ್ಚಿಲ್ ನೇಮಕ |
| 27–5–1940 : | ಹಿಟ್ಲರನ ಆಕ್ರಮಣವನ್ನೆದುರಿಸಲಾರದ ಬೆಲ್ಜಿಯಂ ಸೇನೆ ಕುಸಿದ ಫಲವಾಗಿ ಸಿಕ್ಕಿಬಿದ್ದ 2,00,000 ಬ್ರಿಟಿಷ್ ಮತ್ತು 1,20,000 ಫ್ರೆಂಚ್ ಸೈನಿಕರನ್ನು ಉತ್ತರ ಫ್ರಾನ್ಸಿನ ಡನ್‌ಕರ್ಕ್ ಬಂದರಿನಿಂದ ತುರ್ತಾಗಿ ವಾಪಸು ಕರೆಸಿಕೊಳ್ಳುವ ಕಾರ್ಯ ಆರಂಭ. 4–6–1940ರ ವರೆಗೆ ನಡೆದ ಈ ವಾಪಸಾತಿ ಕಾರ್ಯಾಚರಣೆ ಎರಡನೆಯ ಮಹಾಯುದ್ಧದ ಸಾಹಸಗಳಲ್ಲೊಂದು. 850 ಚಿಕ್ಕ ದೊಡ್ಡ ನೌಕೆಗಳು ಈ ಕಾರ್ಯನಿರ್ವಹಿಸಿದವು. |
| 10–6–1940 : | ಇಟಲಿಯಿಂದ ಯುದ್ಧ ಘೋಷಣೆ. |
| 16–6–1940 : | ಪ್ಯಾರಿಸ್ ಆಕ್ರಮಣ. |
| 22–6–1940 : | ಫ್ರೆಂಚ್ ಶರಣಾಗತಿ. |
| 10–7–1940 : | ಅನಾಕ್ರಮಿತ ಫ್ರೆಂಚ್ ಪ್ರದೇಶದಲ್ಲಿ ಮಾರ್ಷಲ್ ಪೇಟನನಿಂದ ಹಿಟ್ಲರ್ ಪರವಾದ ಸರ್ಕಾರ ಸ್ಥಾಪನೆ. ಪ್ಯಾರಿಸ್ ಆಗ ಜರ್ಮನ್ನರ ಆಕ್ರಮಣದಲ್ಲಿದ್ದುದರಿಂದ ವಿಷಿ ಇದರ ರಾಜಧಾನಿ. ಈ ಆಡಳಿತ ನಾಲ್ಕು ವರ್ಷ ಇತ್ತು. |
| 10–8–1940 : | ಬ್ರಿಟನ್ ಕದನ ಆರಂಭ. ಬ್ರಿಟನ್ನಿನ ರೇವು. ಹಡಗು, ಕಾರ್ಖಾನೆ ಮತ್ತು ನಗರಗಳ ಮೇಲೆ ಜರ್ಮನ್ ದಾಳಿ. ಪ್ರಾರಂಭದಲ್ಲಿ ಜರ್ಮನ್ನರು 1,350 ಬಾಂಬರುಗಳನ್ನೂ 1,200 ಫೈಟರ್ ವಿಮಾನಗಳನ್ನೂ ಬಳಸಿದರು. ಬ್ರಿಟನ್ನಿನ ಆಕ್ರಮಣಕ್ಕೆ ಪೂರ್ವಭಾವಿ ಕ್ರಮವೆಂದು ಜರ್ಮನಿ ಇದರಲ್ಲಿ ತೊಡಗಿತು. 15–9–1940 ರಂದು ಈ ಕಾರ್ಯಾಚರಣೆ ಶಿಖರ ಮುಟ್ಟಿತು. ಬ್ರಿಟನ್ ಅನ್ನು ಆಕ್ರಮಿಸುವ ಯೋಜನೆಯನ್ನು ಜರ್ಮನ್ನರು ಅನಂತರ ಕೈಬಿಟ್ಟು ಯದ್ವಾ ತದ್ವಾ ದಾಳಿಯಲ್ಲಿ ತೊಡಗಿದರು. 12 ವಾರಗಳ ಈ ಕದನದಲ್ಲಿ 1,733 ಜರ್ಮನ್ ವಿಮಾನಗಳೂ 915 ಬ್ರಿಟಿಷ್ ವಿಮಾನಗಳೂ ನಾಶವಾದವು. |
| ಸೆಪ್ಟೆಂಬರ್–ಡಿಸೆಂಬರ್ 1940 : | ಪೂರ್ವ–ಉತ್ತರ ಆಫ್ರಿಕಗಳಲ್ಲಿ ಇಟಲಿಯ ಆಕ್ರಮಣ ಕಾರ್ಯಾಚರಣೆ. |

28–10–1940 : ಇಟಲಿಯಿಂದ ಗ್ರೀಕ್ ಆಕ್ರಮಣ, ಅನಂತರ ಹಿನ್ನಡೆ.

23–11–1940 : ರೂಮೇನಿಯದಲ್ಲಿ ಜರ್ಮನ್ ಸೈನಿಕರು ರಹಸ್ಯವಾಗಿ ನುಸುಳಿಕೊಂಡ ಫಲವಾಗಿ ರೋಂ– ಬರ್ಲಿನ್ ಅಕ್ಷದಲ್ಲಿ ರೂಮೇನಿಯದ ಸೇರ್ಪಡೆ.

ಡಿಸೆಂಬರ್ 1940–
ಫೆಬ್ರವರಿ 1941 : ಆಫ್ರಿಕದಲ್ಲಿ ಜರ್ಮನಿ ಇಟಲಿಗಳ ವಿರುದ್ಧ ಬ್ರಿಟಿಷ್ ಮರು ಕಾರ್ಯಾಚರಣೆ.

6–4–1941 : ಯೂಗೊಸ್ಲಾವಿಯ ಆಕ್ರಮಣಾರಂಭ.

11–4–1941 : ಹಿಟ್ಲರನ ಪಡೆಗಳ ಮುಂದೆ ಯೂಗೊಸ್ಲಾವಿಯದ ಕುಸಿತ. ಗೆರಿಲ್ಲಾ ಕಾರ್ಯಾಚರಣೆ ಮುಂದುವರಿಕೆ.

13–4–1941 : ಜಪಾನ್–ಸೋವಿಯತ್ ತಾಟಸ್ಥ್ಯ ಒಪ್ಪಂದ.

27–5–1941 : ಕ್ರೀಟ್ ದ್ವೀಪದಲ್ಲಿ ಮಿತ್ರಸೇನೆಗಳ ರಕ್ಷಣವ್ಯೂಹದೊಳಕ್ಕೆ ಜರ್ಮನ್ನರ ಪ್ರವೇಶ, ಗ್ರೀಸ್ ಪರಾಜಯ.

22–6–1941 : ಜರ್ಮನ್ ಸೈನ್ಯಗಳಿಂದ ಸೋವಿಯತ್ ಆಕ್ರಮಣ ಆರಂಭ. ನಾನಾ ಕ್ಷೇತ್ರಗಳಲ್ಲಿ ಶೀಘ್ರ ಮುನ್ನಡೆ, ಸೋವಿಯತ್ ರಕ್ಷಣಾ ಹೋರಾಟ ವೈಫಲ್ಯ.

(2–12)–8–1941 : ಬ್ರಿಟಿಷ್ ಪ್ರಧಾನಿ ಚರ್ಚಿಲ್ ಮತ್ತು ಅಮೆರಿಕನ್ ಅಧ್ಯಕ್ಷ ರೂಸ್ವೆಲ್ಟರಿಂದ ಅಟ್ಲಾಂಟಿಕ್ ಪ್ರಣಾಳಿಕೆಯ ರಚನೆ, ಘೋಷಣೆ. ಸಮಸ್ತರಿಗೂ ಚತುರ್ವಿಧ ಸ್ವಾತಂತ್ರ್ಯದ ಭರವಸೆ.

15–9–1941 : ಅಟ್ಲಾಂಟಿಕ್ ಪ್ರಣಾಳಿಕೆಯನ್ನು ಸೋವಿಯತ್ ಒಕ್ಕೂಟವೂ ಸೇರಿ ಒಟ್ಟು ಹದಿನೈದು ಮಿತ್ರರಾಷ್ಟ್ರಗಳು ಒಪ್ಪಿವೆಯೆಂದು ಪ್ರಕಟಣೆ.

23–11–1941 : ರಾಸ್ಟಾವ್ ಪ್ರದೇಶದಲ್ಲಿ ಜರ್ಮನ್ ಪಡೆ.

7–12–1941 : 1 ಪರ್ಲ್ ಹಾರ್ಬರಿನ ಅಮೆರಿಕನ್ ನೆಲೆಗಳ ಮೇಲೆ ಜಪಾನೀ ದಾಳಿ. ಪೆಸಿಫಿಕ್ ಪ್ರದೇಶಕ್ಕೆ ಮಹಾಯುದ್ಧದ ವಿಸ್ತರಣೆ. ಜಪಾನೀ ಕಾರ್ಯಾಚರಣೆಯ ಫಲವಾಗಿ ಫಿಲಿಪೀನ್ಸ್, ಮಲಯಗಳಿಂದ ಬ್ರಿಟನ್ ಅಮೆರಿಕಗಳ ಪ್ರತ್ಯೇಕತೆ.

2 ಮಯನ್ಮಾರ್ ಕಾರ್ಯಾಚರಣೆ ಪ್ರಾರಂಭ. ಭಾರತದ ಮಹಾದಂಡ ನಾಯಕ ಜನರಲ್ ವೇವಲ್‌ನಿಂದ ಬರ್ಮೀ ರಣರಂಗದ ಹೊಣೆ ನಿರ್ವಹಣೆ.

9–12–1941 : ಸೈಯಾಮ್ ತೀರದಲ್ಲಿ ಜಪಾನ್ ಸೈನಿಕರ ಪದಾಕ್ರಮಣ. ಮಲಯ ಇಂಡೋ–ಚೀನಗಳಲ್ಲಿ ಜಪಾನೀಯರ ಮುನ್ನಡೆ.

10–12–1941 : ಅಮೆರಿಕ ಸಂಯುಕ್ತಸಂಸ್ಥಾನದ ವಿರುದ್ಧ ಜರ್ಮನಿ ಇಟಲಿಗಳ ಯುದ್ಧ ಘೋಷಣೆ.

19–12–1941 : ಜರ್ಮನ್ ಸೇನೆಗಳನ್ನು ಸೋವಿಯತ್ ಜನತೆ ಪರಾಕ್ರಮದಿಂದ ಎದುರಿಸಿದ ಫಲವಾಗಿ ಸ್ವತಃ ಹಿಟ್ಲರನಿಂದ ಯುದ್ಧ ನಿರ್ದೇಶನದ ಹೊಣೆಯ ಸ್ವೀಕಾರ.

2–1–1942 : ಮಾನಿಲ ಬಂದರು ಜಪಾನ್‌ನ ವಶ.

15–2–1942 : ಸಿಂಗಪುರದ ಪತನ, ಜಪಾನ್‌ಗೆ ಜನರಲ್ ಪರ್ಸಿವಲ್‌ನ ಶರಣಾಗತಿ, 70,000 ಬ್ರಿಟಿಷ್ ಆಸ್ಟ್ರೇಲಿಯನ್ ಸೈನಿಕರ ಸೆರೆ.

3–7–1942 : ಸೆವಾಸ್ಟೊಪೋಲ್ ಪತನದೊಂದಿಗೆ ಜರ್ಮನರಿಂದ ಸೋವಿಯತ್ ಒಕ್ಕೂಟದ ಕ್ರಿಮಿಯ ಪ್ರದೇಶದ ಸಂಪೂರ್ಣ ಆಕ್ರಮಣ.

30–6–1942 : ಈಜಿಪ್ಟಿನ ಅಲೆಗ್ಸಾಂಡ್ರಿಯದ ಬಳಿಯ ಎಲ್ ಆಲಮೇನ್‌ನಲ್ಲಿ ಜರ್ಮನ್ ಇಟಾಲಿಯನ್ ಸೇನೆಗಳ ವಿರುದ್ಧ ಮಿತ್ರ ಸೇನೆಗಳ ಕದನ. ಮಾರ್ಷಲ್ ರಾಮೆಲ್ ನೇತೃತ್ವದಲ್ಲಿ ಶತ್ರುಸೇನೆ ನೈಲ್ ಅಭಿಮುಖವಾಗಿ ಮುನ್ನಡೆಯದಂತೆ ಬ್ರಿಟಿಷ್ ಜನರಲ್ ಸರ್ ಆಕಿನ್‌ಲೆಕ್ ನಿರ್ದೇಶನದಲ್ಲಿ ಬ್ರಿಟಿಷ್ ಮತ್ತು ಕಾಮನ್‌ವೆಲ್ತ್ ಸೇನೆಗಳು ಶೌರ್ಯದಿಂದ ಹೋರಾಡಿ ಶತ್ರು ಸೈನ್ಯಗಳನ್ನು ತಡೆಗಟ್ಟಿದ್ದು.

20–7–1942 : ಜರ್ಮನರಿಂದ ರಾಸ್ಟಾವ್ ವಿಜಯ. ಕಾಕಸಸ್ ಎಣ್ಣೆ ಗಣಿಗಳ ಮೇಲೆ ಕಣ್ಣಿಟ್ಟು ಜರ್ಮನ್ ಸೇನೆಯ ಮುನ್ನಡೆಯ ಪ್ರಯತ್ನ.

5–9–1942 : ಸ್ಟಾಲಿನ್‌ಗ್ರಾಡ್ ಕದನ. ಈ ನಗರವನ್ನುಳಿಸಿಕೊಳ್ಳುವುದಕ್ಕಾಗಿ ಸೋವಿಯತ್ ಸೈನಿಕರು ಬೀದಿ ಬೀದಿಯಲ್ಲೂ ಅಸೀಮ ಶೌರ್ಯದಿಂದ ಕಾದಿದರು. ಕ್ರಮೇಣ ಸೋವಿಯತ್‌ರು ಜರ್ಮನ್ ಸಂಪರ್ಕವನ್ನು ಕಡಿದುಹಾಕಿ ಯುದ್ಧದ ದಿಕ್ಕು ಬದಲಿಸಿದರು. ಆಕ್ರಮಣಕಾರರು ಆಕ್ರಮಣಕ್ಕೊಳಗಾದರು. ಹಿಟ್ಲರನ ಮಹತ್ತ್ವಾಕಾಂಕ್ಷೆಗೆ ಸ್ಟಾಲಿನ್‌ಗ್ರಾಡ್ ಗೋರಿಯಾಯಿತು. (ಈಗ ಈ ನಗರದ ಹೆಸರು ವೋಲ್ಗೊಗ್ರಾಡ್).

23–10–1942 : ಎಲ್ ಆಲಮೇನಿನಲ್ಲಿ ಉತ್ತರ ಆಫ್ರಿಕದ ದ್ವಿತೀಯ ಮತ್ತು ನಿರ್ಣಾಯಕ ಕದನ. 4ನೆಯ ನವೆಂಬರಿನ ವರೆಗೆ ನಡೆದ ಈ ಹೋರಾಟದಲ್ಲಿ ಜನರಲ್ ಸರ್ ಬರ್ನಾರ್ಡ್ (ಅನಂತರ ಲಾರ್ಡ್) ಮಾಂಟ್ಗಮರಿಯ ನೇತೃತ್ವದಲ್ಲಿ ಮಿತ್ರಸೇನೆಯ ಸಾಹಸದಿಂದ ಶತ್ರುಸೇನೆ ಅಲ್ಲಿಂದ ಶಾಶ್ವತವಾಗಿ ಕಾಲ್ತೆಗೆಯಿತು.

(14–24)–1–1–43 : ಉತ್ತರ ಆಫ್ರಿಕದ ಕ್ಯಾಸಬ್ಲಾಂಕದಲ್ಲಿ ರೂಸ್‌ವೆಲ್ಟ್–ಚರ್ಚಿಲ್ ಸಮಾಗಮ. ಅಂತಿಮವಾಗಿ ಜರ್ಮನಿ ಜಪಾನ್‌ಗಳು ಬೇಷರತ್ತಾಗಿ ಶರಣಾಗಲು ಒತ್ತಾಯಪಡಿಸಬೇಕೆಂದು ತೀರ್ಮಾನ. ಸಿಸಿಲಿ ಇಟಲಿಗಳ ಆಕ್ರಮಣಕ್ಕೆ ಸಂಬಂಧಿಸಿದ ತೀರ್ಮಾನವಾದದ್ದು ಇಲ್ಲಿಯೇ.

9–2–1943 : ಸೋವಿಯತ್ ಸೇನೆಯಿಂದ ರಾಸ್ಟಾಫ್ ಪುನರಾಕ್ರಮಣ.

25–7–1943 : ಇಟಲಿಯ ದೊರೆ ವಿಕ್ಟರ್ ಎಮಾನ್ಯುಯೆಲ್ ಮತ್ತು ಮಾರ್ಷಲ್ ಬಾಡಾಲ್ಯೊಗಳ ಒತ್ತಾಯದ ಪರಿಣಾಮವಾಗಿ ಮುಸೋಲಿನಿಯ ರಾಜೀನಾಮೆ; ಆತನ ಬಂಧನ.

23–8–1943 : ಸೋವಿಯತ್ ಕ್ಷೇತ್ರದಿಂದ ವಿಫಲ ಮನೋರಥವಾಗಿ ಹಿನ್ನಡೆಯುತ್ತಿದ್ದ ಜರ್ಮನ್ ಸೇನೆಯನ್ನು ಅಟ್ಟಿಸಿಕೊಂಡು ಹೋದ ಸೋವಿಯತ್ ಸೈನಿಕರಿಂದ ಖರ್ಕಾಫ್ ಮತ್ತೆ ವಶ.

3–9–1943 : ಇಟಲಿಯ ಸೋಲೊಪ್ಪಿಗೆ, ಪ್ರತ್ಯೇಕವಾಗಿ ಶಾಂತಿಗೆ ಸಹಿ.

12–9–1943 : ಜರ್ಮನ್ ಪ್ಯಾರಾಷೂಟ್ ಸೈನಿಕರಿಂದ ಮುಸೋಲಿನಿಯ ವಿಮೋಚನೆ, ಜರ್ಮನ್ ಆಕ್ರಮಿತ ಉತ್ತರ ಇಟಲಿಯಲ್ಲಿ ಫ್ಯಾಸಿಸ್ಟ್ ಸರ್ಕಾರ ಸ್ಥಾಪನೆ.

ನವೆಂಬರ್ 1943 : ಕೈರೊ ಟೆಹರಾನ್‌ಗಳಲ್ಲಿ ಮಿತ್ರರಾಷ್ಟ್ರ ಮುಖ್ಯರ ಸಮಾವೇಶ; ಸಮಾಲೋಚನೆ, ದೂರಪ್ರಾಚ್ಯ ಯುದ್ಧ ಹಾಗೂ ಭಾವೀ ರಾಜಕೀಯ ವ್ಯವಸ್ಥೆಗಳ ಬಗ್ಗೆ ಒಡಂಬಡಿಕೆ. ಬ್ರಿಟನ್ ಅಮೆರಿಕಗಳು ಫ್ರಾನ್ಸಿನಲ್ಲಿ ಜರ್ಮನಿಯ ವಿರುದ್ಧ ಎರಡನೆಯ ಯುದ್ಧಮುಖ ಆರಂಭಿಸುವ ಬಗ್ಗೆ ಸೋವಿಯತ್ ಒಕ್ಕೂಟಕ್ಕೆ ಭರವಸೆ.

1–12–1943 : ಕೈರೊ ಟೆಹರಾನ್ ಒಡಂಬಡಿಕೆಗಳಿಗೆ ಅನುಗುಣವಾಗಿ ಮಿತ್ರ ರಾಷ್ಟ್ರಗಳ ಧೋರಣೆಯ ಪ್ರಕಟಣೆ.

6–6–1944 : ಬ್ರಿಟನ್ ಅಮೆರಿಕಗಳಿಂದ ನಾರ್ಮಂಡಿಯ ಆಕ್ರಮಣ, ಯುರೋಪಿನಲ್ಲಿ ದ್ವಿತೀಯ ಯುದ್ಧಮುಖದ ಆರಂಭ.

20–7–1944 : ಹಿಟ್ಲರನ ಕೊಲೆಗೆ ವಿಫಲ ಪ್ರಯತ್ನ.

25–8–1944 : ಮಿತ್ರಸೈನ್ಯಗಳಿಂದ ಪ್ಯಾರಿಸ್ ವಿಮೋಚನೆ.

(4–11)–2–1945 : ದಕ್ಷಿಣ ಕ್ರಿಮಿಯದ ಯಾಲ್ಟ ನಗರದಲ್ಲಿ ರೂಸ್ವೆಲ್ಟ್ ಸ್ಟಾಲಿನ್ ಚರ್ಚಿಲ್ ಸಮಾಗಮ. ಅಲ್ಲಿ ಕೈಗೊಂಡ ತೀರ್ಮಾನಗಳಿವು :

1. ಜರ್ಮನಿಯ ಸಂಪೂರ್ಣ ಶರಣಾಗತಿಯಾಗುವವರೆಗೂ ಯುದ್ಧ ಮುಂದುವರೆಸಿ ಸೋವಿಯತ್ ಒಕ್ಕೂಟ, ಬ್ರಿಟನ್ ಮತ್ತು ಫ್ರಾನ್ಸ್‌ಗಳು ಜರ್ಮನಿಯನ್ನಾ ಕ್ರಮಿಸಿಕೊಳ್ಳಬೇಕು.
2. ವಿಶ್ವಸಂಸ್ಥೆಯ ಸ್ಥಾಪಕ ರಾಷ್ಟ್ರಗಳ ಸಮ್ಮೇಳನ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನಡೆಯತಕ್ಕದ್ದು.
3. ಜರ್ಮನಿಯ ಶರಣಾಗತಿಯಾದ ಮೂರು ತಿಂಗಳೊಳಗೆ ಜಪಾನಿನ ವಿರುದ್ಧ ಸೋವಿಯತ್ ಒಕ್ಕೂಟ ಯುದ್ಧ ಸಾರಬೇಕು.

12–4–1945 : ಹೃದಯಾಘಾತದಿಂದ ರೂಸ್‌ವೆಲ್ಟ್ ನಿಧನ. ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷನಾಗಿ ಹ್ಯಾರಿ ಟ್ರೂಮನ್ ಅಧಿಕಾರ ಸ್ವೀಕಾರ:

28–4–1945 : 1. ಎಲ್ಬ್ ನದಿಯ ದಂಡೆಯ ಮೇಲೆ ಸೋವಿಯತ್ ಪಡೆಗಳೊಂದಿಗೆ ಮಿತ್ರಸೇನೆಯ ಸಮಾಗಮ. ಸೋವಿಯತ್ ಸೇನೆಯಿಂದ ಬರ್ಲಿನ್ ನಗರದ ಆಕ್ರಮಣ.

2. ಸ್ವಿಟ್ಜರ್ಲೆಂಡಿಗೆ ತಪ್ಪಿಸಿಕೊಂಡು ಹೋಗುತ್ತಿದ್ದ ಮುಸೋಲಿನಿಯ ಸೆರೆ; ಗುಂಡಿಕ್ಕಿ ಕೊಲೆ. ಮಿಲಾನಿನಲ್ಲಿ ಬಹಿರಂಗವಾಗಿ ಆತನ ದೇಹದ ನೇಣು.

30–4–1945 : ಗುಂಡಿಕ್ಕಿಕೊಂಡು ಹಿಟ್ಲರನ ಆತ್ಮಹತ್ಯೆ. ಅದಕ್ಕೆ ಮುಂಚೆ ಪ್ರೀತಿಯ ಇವಾ ಬ್ರಾನಳೊಂದಿಗೆ ಆತನ ವಿವಾಹ.

3–5–1945 : ರಂಗೂನಿನ ಪುನರ್ವಶದೊಂದಿಗೆ ಮಿತ್ರಸೇನೆಯ ಮೂರು ವರ್ಷಗಳ ದೀರ್ಘಾವಧಿಯ ಮಯನ್ಮಾರ್ ಕಾರ್ಯಾಚರಣೆ ಅಂತ್ಯ. ಭೂ ಯುದ್ಧದಲ್ಲಿ ಜಪಾನೀಯರಿಗೆ ಬಲು ದೊಡ್ಡ ಪರಾಜಯ.

7–5–1945 : ಮಿತ್ರ ಸೇನೆಗಳಿಗೆ ಜರ್ಮನಿಯ ಶರಣಾಗತಿ.

17–7–1945 : 1 ನ್ಯೂ ಮೆಕ್ಸಿಕೋ ಮರುಭೂಮಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ಪ್ರಥಮ ಪರಮಾಣು ಬಾಂಬ್ ಪರೀಕ್ಷೆ.

2 ಪೂರ್ವಜರ್ಮನಿಯ ಪೋಟ್ಸ್‌ಡ್ಯಾಮಿನಲ್ಲಿ ಅಧ್ಯಕ್ಷ ಟ್ರೂಮನ್, ಸೋವಿಯತ್ ಪ್ರಧಾನಿ ಸ್ಟಾಲಿನ್, ಬ್ರಿಟಿಷ್ ಪ್ರಧಾನಿ ಚರ್ಚಿಲ್ (ಅನಂತರ ಅಟ್ಲಿ) ಇವರ ಸಮ್ಮೇಳನ, ಜರ್ಮನಿಯ ವಿಭಜನೆ, ಗಡಿ ನಿರ್ಧಾರ ಮುಂತಾದ ವಿಚಾರಗಳನ್ನು ಕುರಿತು ತೀರ್ಮಾನ.

6–8–1945 : ಜಪಾನೀ ನಗರ ಹಿರೋಷಿಮದ ಮೇಲೆ ಪ್ರಥಮ ಅಮೆರಿಕನ್ ಪರಮಾಣು ಬಾಂಬ್ ಪತನ. 1,60,000 ಜನರ ಸಾವು ನೋವು.

9–8–1945 : ನಾಗಸಾಕಿಯ ಮೇಲೆ ದ್ವಿತೀಯ ಬಾಂಬಿನ ಪ್ರಯೋಗ.

14–8–1945 : ಜಪಾನಿನ ಶರಣಾಗತಿ. *

**ಎರಾಳೆ ಗಿಡ: ನೋಡಿ– ಅಜಿರೇಟಮ್**

**ಎರಿಕ್ ದಿ ರೆಡ್:** 950–1003, ನಾರ್ವೆದೇಶದ ಪರಿಶೋಧಕ. ಹುಟ್ಟಿದ್ದು ಸ್ಟಾವಾಂಗರಿನ ಸಮೀಪದಲ್ಲಿ. ಎರಿಕ್ ಟೂರ್ ಮ್ಯಲ್ಸನ್ ಎಂಬುದು ಇವನ ನಿಜನಾಮಧೇಯ. ಎರಿಕ್ ದಿ ರೆಡ್ ಎಂಬ ಅಡ್ಡ ಹೆಸರು ಹಾಸ್ಯವಾಗಿ ಇವನಿಗೆ ಅಂಟಿಕೊಂಡಿತು. ಈ ಹೆಸರಿನಿಂದಲೇ ಈತ ಪ್ರಸಿದ್ಧನಾಗಿದ್ದಾನೆ. ಕೊಲೆ ಆಪಾದನೆಯ ಮೇಲೆ ಗಡೀಪಾರಾದ ತಂದೆಯೊಂದಿಗೆ ಇವನೂ ದೇಶಭ್ರಷ್ಟನಾಗಬೇಕಾಯಿತು. ಅನಂತರ ಈತ ಐಸ್ಲೆಂಡಿನಲ್ಲಿ ನೆಲೆಸಿದ. ಜಗಳದಲ್ಲಿ ಭಾಗವಹಿಸಿದನೆಂದು ಅಲ್ಲಿಂದಲೂ ಇವನನ್ನು ಹೊರಹಾಕಲಾಯಿತು, ಪಶ್ಚಿಮದಲ್ಲಿ ಇದೆಯೆಂದು ಹೇಳಲಾಗಿದ್ದ ಹೊಸ ಭೂಮಿಗೆ ಆಗ ಈತ ಪಯಣ ಬೆಳೆಸಿದ; ಗ್ರೀನ್‌ಲೆಂಡ್ ತಲಪಿ ಮುಂದುವರಿದು ಇಂದಿನ ಗಾಟ್‌ಹಾಪಿನಲ್ಲಿ ಚಳಿಗಾಲ ದಾಟಿ ಕರಾವಳಿಯ ಪರಿಶೋಧನೆಯಲ್ಲೇ ಮೂರು ವರ್ಷ ಕಳೆದು ಐಸ್ಲೆಂಡಿಗೆ ಮರಳಿ 986ರಲ್ಲಿ ಪ್ರಥಮ ವಲಸೆಗಾರರೊಂದಿಗೆ ಗ್ರೀನ್‌ಲೆಂಡಿಗೆ ಹೋದ. ಈತ ಸಾಯುವುದಕ್ಕೆ ಮುನ್ನ ಇವರ ಮಗ ಲೀಫ್ ಎರಿಕ್‌ಸನ್ ಅಮೆರಿಕದ ಈಶಾನ್ಯ ಕರಾವಳಿ ಪರಿಶೋಧಿಸಿದ. ಎರಿಕ್‌ಸನ್ನನೇ ಉತ್ತರ ಅಮೆರಿಕದ ಪ್ರಥಮ ಐರೋಪ್ಯ ಪರಿಶೋಧಕನೆಂದು ನಂಬಲಾಗಿದೆ. *

**ಎರಿಟ್ರಿಯ:** 1952ರಿಂದ ಇಥಿಯೋಪಿಯದ ಚಕ್ರವರ್ತಿಯ ಅಧೀನದಲ್ಲಿರುವ ಒಂದು ಸ್ವಯಮಾಡಳಿತ ಪ್ರಾಂತ್ಯ. ಹಿಂದೆ ಇಟಲಿಯ ವಸಾಹತು ಆಗಿತ್ತು. 1993ರ ಮೇ 24ರಂದು ಸ್ವತಂತ್ರ್ಯ ರಾಷ್ಟ್ರವಾಯಿತು. ಆಗ್ನೇಯ ಆಫ್ರಿಕದಲ್ಲಿ ಕೆಂಪು ಸಮುದ್ರದ ದಡದ ಮೇಲಿದೆ. ವಾಯವ್ಯದಲ್ಲಿ ಸುಡಾನ್ ಗಣರಾಜ್ಯವೂ ಆಗ್ನೇಯದಲ್ಲಿ ಹಿಂದೆ ಫ್ರೆಂಚ್ ಸೋಮಾಲಿ ಲ್ಯಾಂಡ್ ಆಗಿದ್ದ ಪ್ರದೇಶವೂ ದಕ್ಷಿಣದಲ್ಲಿ ಇಥಿಯೋಪಿಯವೂ ಇವೆ, ಉತ್ತರ ಅಕ್ಷಾಂಶ 18°2′–12°42′ವರೆಗೆ ಪೂ.ರೇ. 36°–43° ವರೆಗೆ. ಕಸಾರ್ ಭೂಶಿರದಿಂದ ಡುಮ್ಮೈರಾ ಭೂಶಿರದವರೆಗೆ ಹಬ್ಬಿರುವ ಇದರ ವಿಸ್ತೀರ್ಣ 1,17,600 ಚ.ಕಿಮೀ. (45,405 ಚ.ಮೈ) ಜನಸಂಖ್ಯೆ 4,000000 (2002) ಅಸ್ಮಾರ ರಾಜಧಾನಿ. ಇದು ಸಮುದ್ರಮಟ್ಟಕ್ಕಿಂತ 2280ಮೀ ಎತ್ತರದಲ್ಲಿದ್ದು 1,17,000 ಜನಸಂಖ್ಯೆ ಹೊಂದಿದೆ. ದೇಶದಲ್ಲಿ ನೆಲೆಸಿರುವ 17,500 ಇಟಾಲಿಯನರಲ್ಲಿ ಬಹು ಮಂದಿ ನಗರದಲ್ಲಿದ್ದಾರೆ. ಮುಖ್ಯ ರೇವುಪಟ್ಟಣ ಕೆಂಪುಸಮುದ್ರದ ತೀರದಲ್ಲಿರುವ ಮಸಾವ. ಇಲ್ಲಿಂದ ಅಗೋರ್ಡಾಟ್ ನಗರದವರೆಗೆ ಅಸ್ಮಾರದ ಮೂಲಕ ಸಾಗುವ 307 ಕಿಮೀ ದೂರದ ರೈಲು ಮಾರ್ಗವಿದೆ.

ಎರಿಟ್ರಿಯದ ಉತ್ತರ ಭಾಗ ಸುಡಾನಿನ ಮೈದಾನದಿಂದ ಕೆಂಪು ಸಮುದ್ರದ ಕರಾವಳಿಯವರೆಗೆ ಇಥಿಯೋಪಿಯ ಪ್ರಸ್ಥಭೂಮಿಯನ್ನು ಹಾಯ್ದು ಹಬ್ಬಿದೆ. ಎರಿಟ್ರಿಯದ ಸಮುದ್ರ ತೀರದ ಉದ್ದ 1079 ಕಿಮೀ. ತೀರದ ಬಯಲು ಪ್ರದೇಶ ಸು. 35–80 ಕಿಮೀ ಅಗಲ. ಇಲ್ಲಿ ಸೆಕೆ ಹೆಚ್ಚು, ಆರ್ದ್ರತೆಯೂ ಹೆಚ್ಚು; ಮಳೆ ಅನಿಶ್ಚಿತ. ಈ ಬಯಲಿನಿಂದ ಪಶ್ಚಿಮದ ಪರ್ವತಗಳ ಕಡೆಗೆ ಭೂಮಿ ಏರುತ್ತ ಹೋಗುತ್ತದೆ. ಈ ಪರ್ವತಗಳಲ್ಲಿ ಸೋನ (ಸು. 3013 ಮೀ) ಅತ್ಯುನ್ನತ ಶಿಖರ. ಉನ್ನತ ಪ್ರದೇಶಕ್ಕೆ ಹೋದಂತೆ ಸಮಶೀತೋಷ್ಣ ವಾಯುಗುಣವನ್ನು ಕಾಣಬಹುದು. ಇಲ್ಲಿ ಬೇಸಗೆಯಲ್ಲಿ ಮಳೆಯಾಗುತ್ತದೆ. ವಾಯವ್ಯದಲ್ಲಿ ಈ ಪ್ರದೇಶ ಸುಡಾನಿನ ಬೆಂಗಾಡಿನ ಕಡೆಗೆ ಇಳಿಜಾರಾಗಿದೆ.

ಇಲ್ಲಿ ನೀರಾವರಿಯ ಸಹಾಯದಿಂದ ಎತ್ತರಕ್ಕೆ ಅನುಸಾರವಾಗಿ ಉಷ್ಣವಲಯದ ಮತ್ತು ಸಮಶೀತೋಷ್ಣವಲಯದ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಎತ್ತರ ಪ್ರದೇಶಗಳಲ್ಲಿ ಆಹಾರಧಾನ್ಯ (ಹೆಚ್ಚಾಗಿ ಗೋದಿ), ಕಾಫಿ, ಹೊಗೆಸೊಪ್ಪು, ಹಣ್ಣು ತರಕಾರಿ – ಇವು ಮುಖ್ಯ ಬೆಳೆಗಳು, ಮಳೆ ಕಡಿಮೆಯಿರುವ ತಗ್ಗಿನ ಪ್ರದೇಶಗಳಲ್ಲಿ ಮರಗೋಂದು, ಎಣ್ಣೆ ಬೀಜಗಳು, ಖರ್ಜೂರ–ಇವು ಮುಖ್ಯ ಉತ್ಪನ್ನಗಳು, ಪಶುಪಾಲನೆಯೂ ನಡೆಯುತ್ತದೆ. ಕಣಿವೆಗಳಲ್ಲಿ ನೀರಾವರಿಯಿಂದ ಹತ್ತಿ ಬೆಳೆಸುತ್ತಾರೆ; ಮಸಾವದ ಸುತ್ತಮುತ್ತಲೂ ಇದರ ಬಳಿ ಇರುವ ಡಾಹ್‌ಲಾಕ್ ದ್ವೀಪ ಸ್ತೋಮದಲ್ಲೂ ಮೀನು ಹಿಡಿಯುವುದು ಜನರ ಮುಖ್ಯ ಉದ್ಯೋಗ. ಉಗಾರೋ ಮತ್ತು ಮಸಾವಗಳ ಹತ್ತಿರ ಸ್ವಲ್ಪ ಚಿನ್ನ ದೊರಕಿದೆ. ಕೈಗಾರಿಕೆ ಅತ್ಯಲ್ಪ. ಹತ್ತಿ ಮತ್ತು ಸಿಮೆಂಟ್ ಕಾರ್ಖಾನೆಗಳು ಕೆಲವಿವೆ. ಉಪ್ಪನ್ನೂ ತಯಾರಿಸುತ್ತಾರೆ.

ಎರಿಟ್ರಿಯದ ಪ್ರಸ್ಥಭೂಮಿ ಪ್ರದೇಶದಲ್ಲಿ ಕಾಪ್ಟ್ ಕ್ರೈಸ್ತ ಪಂಗಡದ ಜನರೂ, ಉತ್ತರದಲ್ಲಿ ಮತ್ತು ಸಮುದ್ರತೀರದಲ್ಲಿ ಮುಸ್ಲಿಮರೂ, ನೈರುತ್ಯ ಭಾಗದಲ್ಲಿ ನೀಗ್ರೊಗಳೂ ಹೆಚ್ಚಾಗಿ ವಾಸಿಸುತ್ತಾರೆ. (ಟಿ.ಇ.ಎಚ್.)

**ಎರಿಡೆನಸ್:** ಒರ್ರೈಯನ್ ಪುಂಜದ ರೀಗಲ್ ನಕ್ಷತ್ರದಿಂದ (ವಿಷುವದಂಶ $\alpha$=5 ಗಂ 12.1 ಮಿ, ಘಂಟಾವೃತ್ತಾಂಶ, $\delta = -8^0$ 15') ದಕ್ಷಿಣದ ಪ್ರಥಮ ಕಾಂತಿವರ್ಗದ ಉಜ್ಜ್ವಲ ನಕ್ಷತ್ರ ಏಕೆರ್ನಾರ್ ($\alpha$=1 ಗಂ. 35.9ಮಿ, $\delta = -57^0$ 29') ವರೆಗೆ ವ್ಯಾಪಿಸಿರುವ ದಕ್ಷಿಣಾಕಾಶದ ವಿಶಾಲ ನಕ್ಷತ್ರಪುಂಜ. 4ನೆಯ ಕಾಂತಿವರ್ಗದ ನಕ್ಷತ್ರಗಳೇ (ಎಂದರೆ ಕ್ಷೀಣ ಕಾಂತಿಯ ಅಸ್ಪಷ್ಟ ನಕ್ಷತ್ರಗಳು) ಮೂವತ್ತಕ್ಕೂ ಮೀರಿ ಇರುವ ಈ



ಪುಂಜದಲ್ಲಿ ಪ್ರಾಚೀನ ಬಗೆಗಣ್ಣು ಒಂದು ದೀರ್ಘ ನದೀಪಾತ್ರವನ್ನೇ ನೋಡಿತು. ಆದ್ದರಿಂದಲೇ ಇದರ ಕೊನೆಯಲ್ಲಿ (ದಕ್ಷಿಣದ ತಗ್ಗಿನಲ್ಲಿ; ಆದ್ದರಿಂದ ನದಿಯ ಮುಖದಲ್ಲಿ) ಇರುವ ಏಕೆರ್ನಾರ್ ($\alpha$–ಎರಿಡೆನಿ) ನಕ್ಷತ್ರಕ್ಕೆ ಆ ಹೆಸರು ಬಂದಿದೆ; ಏಕೆರ್ನಾರ್ ಪದದ ಅರ್ಥ ನದೀಮುಖದ ನಕ್ಷತ್ರವೆಂದು. ಎರಿಡೆನಸನ್ನು ವೈತರಣಿಯೆಂದೂ ಏಕೆರ್ನಾರನ್ನು ವೈತರಣೀಮುಖವೆಂದೂ ಕರೆಯುವುದಿದೆ. ಎರಿಡೆನಸ್ ಪುಂಜದ ಗಡಿಪುಂಜಗಳು ಒರ್ರೈಯನ್, (ಮಹಾವ್ಯಾಧ), ಲೀಪಸ್, ಕೊಲಂಬ, ಡೊರಾಡೊ, ರೆಟಿಕ್ಯುಲಂ, 'ಹೈಡ್ರಸ್, ಫಿನಿಕ್ಸ್, ಸ್ಕಲ್‌ಪ್ಟರ್, ಸಿಟಿಸ್, ವೃಷಭ. ಬರಿಗಣ್ಣಿಗೆ ಕಾಣುವ ಅತ್ಯಂತ ಉಜ್ಜ್ವಲ ನಕ್ಷತ್ರಗಳಲ್ಲಿ ಸೂರ್ಯನ ಸ್ಥಾನ ಒಂದನೆಯದಾದರೆ ಏಕೆರ್ನಾರಿನದು ಹತ್ತು. ಇದರ ದೂರ ಭೂಮಿಯಿಂದ 70 ಜ್ಯೋತಿರ್ವರ್ಷ. ಎರಿಡೆನಸ್, ಪುಂಜದ $0_2$–ಎರಿಡೆನಿ ಮೂರು ನಕ್ಷತ್ರಗಳಿಂದ ಕೂಡಿದೆ. ಬರಿಗಣ್ಣಿಗೆ ಹಳದಿ ಬಣ್ಣದ ಕುಬ್ಜ ನಕ್ಷತ್ರ ಒಂದು ಮತ್ತು ದೂರದರ್ಶಕಕ್ಕೆ ಕಾಣಿಸುವಂತ ನಕ್ಷತ್ರಗಳು ಎರಡು.

ಗ್ರೀಕ್ ಪುರಾಣದ ಪ್ರಕಾರ ಎರಿಡೆನಸ್ ಒಂದು ನದೀದೇವತೆ.

ಸೂರ್ಯನ ರಥದ ಸಾರಥ್ಯವನ್ನು ವಹಿಸಿದ್ದ ಅಪೊಲೊ ಸ್ವೇಚ್ಛಾನುಸಾರ ಅದನ್ನು ಆಕಾಶದಲ್ಲಿ ಓಡಿಸಿದುದರಿಂದ ಜಗತ್ತಿಗೆ ಘೋರಾಪಾಯ ಸನ್ನಿಹಿತವಾಯಿತು. ಆಗ ಜ್ಯೂಸ್ ತನ್ನ ಆಯುಧದಿಂದ ಅಪೊಲೊವಿಗೆ ಹೊಡೆದು ರಥದಿಂದ ಉರುಳಿಸಿದ. ಅಪೊಲೊ ಎರಿಡೆನಸ್ (ಎಂದರೆ ಮೃತ್ಯು ನದಿಗೆ) ಬಿದ್ದ.

ಟೈಕೊಬ್ರಾಹೆ ರಚಿಸಿದ ಕೋಷ್ಟಕದಲ್ಲಿ ಎರಿಡೆನಸ್ ಪುಂಜಕ್ಕೆ ಎರಿಡೆನಸ್ ಪ್ಲೂವಿಯಸ್ ಎಂಬ ಹೆಸರು ಇದೆ. ಉಲುಗ್ ಬೆಗ್ ಮತ್ತು ಟಾಲೆಮಿ ರಚಿಸಿದ ಕೋಷ್ಟಕಗಳಲ್ಲಿ ಇದನ್ನು ನದಿಗಳೆಂದು ಕರೆದಿದೆ. *

**ಎರಿಯೊಕಾರ್ಪಸ್:** ಕ್ಯಾಕ್ಟೇಸೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಅಲಂಕಾರಿಕ ಸಸ್ಯಜಾತಿ ಕಳ್ಳಿಯ ಮಾದರಿಯದಾಗಿದ್ದು ಆಕರ್ಷಕವಾಗಿದ್ದು ಮುಖ್ಯವೆನಿಸಿದೆ. ಇದು ಮೆಕ್ಸಿಕೋ ಮತ್ತು ಟೆಕ್ಸಾಸುಗಳ ಮೂಲವಾಸಿ. ಬೇರು ಬೀಟ್‌ಗೆಡ್ಡೆಯನ್ನು ಹೋಲುತ್ತದೆ. ಬೇರಿನ ಮೇಲು ಭಾಗದಲ್ಲಿ ವಿವಿಧ ಆಕಾರದ ಗಂಟುಗಳಿವೆ. ಗಂಟುಗಳ ಮೇಲೆ ದಪ್ಪವಾದ ತೊಗಟೆಯಿದೆ. ಬಲಿತ ಗಂಟುಗಳು ಸತ್ತುಹೋಗುತ್ತವೆ. ಆದರೆ ಇವುಗಳ ಮೇಲುಭಾಗ ಸುರಳಿಯಾಕಾರದಲ್ಲಿ ಉಳಿದು, ಸತ್ತತೊಗಟೆ ಬಿದ್ದುಹೋಗುತ್ತದೆ. ಬಲಿತ ರಂಧ್ರಗಳಿಂದ (ಎರಿಯೋಲ್ಸ್) ಹೂ ಹೊರಬರುತ್ತದೆ.

ಎರಿಯೊಕಾರ್ಪಸ್ ಫಿಸ್ಸುರೇಟಸ್ ಪ್ರಭೇದದ ಕಾಂಡ ಸುಮಾರು 14 ಸೆಂಮೀ. ಅಂಗುಲ ಅಗಲವಾಗಿದ್ದು ಗುಂಡಾಗಿರುವ ಬೂದುಬಣ್ಣದ 25–30 ಗಂಟುಗಳಿಂದ ಕೂಡಿದೆ. ಗಂಟಿನ ತಳ ದೋಣಿಯ ಬೆನ್ನಿನಂತಿದೆ. ಕಾಂಡದ ಮೇಲುಭಾಗದಲ್ಲಿ ದಾರದಿಂದ ಕೂಡಿರುವ ತಗ್ಗುಭಾಗವಿದೆ. ಇದರ ಮಧ್ಯದಲ್ಲಿ ಹೂಬಿಡುವ ರಂಧ್ರವಿದೆ.

ಎರಿಯೊಕಾರ್ಪಸ್ ಟ್ರೈಗೋನಸ್ ಪ್ರಭೇದಕ್ಕೆ 5 ಸೆಂಮೀ. ಉದ್ದದ ತ್ರಿಕೋನಾಕಾರದ ಗಂಟುಗಳಿದ್ದು, ಇವುಗಳ ತುದಿಯಲ್ಲಿ ಮುಳ್ಳಿನ ರಂಧ್ರಗಳಿವೆ. ಸಸ್ಯದ ಮೇಲುಭಾಗದ ತುದಿಯ ಗಂಟುಗಳ ಕಂಕುಳಲ್ಲಿ ಹೂಬಿಡುತ್ತದೆ. ಹೂವಿನ ಜೊತೆಯಲ್ಲಿ ನಿಬಿಡವಾದ ದಾರಗಳು ಹೊರಬಂದಿರುತ್ತವೆ.

ಎರಿಯೊಕಾರ್ಪಸ್ ಸ್ಕ್ಯಾಫರೊಸ್ಟ್ರಸ್ ಪ್ರಭೇದದಲ್ಲಿ ಬೂದುಮಿಶ್ರಿತ ಹಸಿರು ಬಣ್ಣದ, ತ್ರಿಕೋನಾಕಾರದ ಗಂಟುಗಳಿವೆ. ಈ ಸಸ್ಯ ಮೆಕ್ಸಿಕೋದಲ್ಲಿ ಔಷಧೀಯ ಪ್ರಾಮುಖ್ಯ ಪಡೆದಿದೆ.

ಎರಿಯೊಕಾರ್ಪಸ್ ಜಾತಿಯ ಬೆಳವಣಿಗೆಗೆ ಹೆಚ್ಚು ಉಷ್ಣತೆ ಮತ್ತು ಧಾರಾಳವಾದ ಬೆಳಕು ಬೇಕಾಗಿರುವುದರಿಂದ ಇದನ್ನು ಮನೆ ತೋಟಗಳಲ್ಲಿ ಬೆಳೆಸುವುದು ಕಷ್ಟಸಾಧ್ಯ.

(ಡಿ.ಎಂ.)

**ಎರಿಯೋಪ್ಸ್:** ಪ್ರಾಚೀನ ಜೀವಕಲ್ಪದ ಉತ್ತರಾರ್ಧದ ಕೊನೆಯಲ್ಲಿದ್ದ ಒಂದು ದ್ವಿಚರ ನೆಲವಾಸಿ ಪ್ರಾಣಿ. ಸ್ವಲ್ಪಮಟ್ಟಿಗೆ ಮೊಸಳೆಯನ್ನು ಹೋಲುತ್ತಿತ್ತು. ಅಮೆರಿಕದ ಟೆಕ್ಸಾಸ್ ಮತ್ತು ನೈರುತ್ಯ ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರದೇಶದಲ್ಲಿ ಸಿಕ್ಕಿರುವ ಪಳೆಯುಳಿಕೆಯ ಆಧಾರದಿಂದ ಇದು 1.5 ಮೀ ಅಡಿಗಳಷ್ಟು ಉದ್ದವಿದ್ದಿರಬೇಕೆಂದು ಊಹಿಸಲಾಗಿದೆ. ಸ್ಟೀಗೋಕೆಫಾಲಿಯ ಗುಂಪಿಗೆ ಸೇರಿದ್ದರಿಂದ ಇದನ್ನು ಸ್ಟೀಗೋಕೆಫಾಲಿಯನ್ ಎಂದು ಕರೆವುದೂ ಉಂಟು. ಬಹುಶಃ ಇದು ಪ್ರಾಚೀನ ಜೀವ ಕಲ್ಪದ ಪರ್ಮಿಯನ್ ಯುಗದಲ್ಲಿ ಸು. 250 ದಶಲಕ್ಷ ವರ್ಷಗಳ ಹಿಂದೆ ಜೀವಿಸಿದ್ದ ಪ್ರಾಣಿಯೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಇದರ ತಲೆಭಾಗ ಮೂಳೆಯ ಫಲಕಗಳಿಂದ ಕೂಡಿದ್ದು ಚರ್ಮದ ಕವಚದಿಂದ ರಕ್ಷಿಸಲ್ಪಟ್ಟಿದ್ದಿರಬಹುದು. ದೇಹದ ಹೊರಭಾಗ ಹುರುಪೆ ಮತ್ತು ಫಲಕಗಳಿಂದ ಆವೃತವಾಗಿದ್ದಿರಬೇಕು. ತಲೆಬುರುಡೆಯ ಮೇಲ್ಭಾವಣಿಯಲ್ಲಿ ಪೈನಿಯಲ್ ಕಂಡಿ ತೆರೆದಿದ್ದಿತು. ಇದರ ಅಗಲವಾದ ಬಾಯಲ್ಲಿ ಬುಗುರಿ ಆಕಾರದ ಹಲ್ಲುಗಳಿದ್ದವು. ಇದರ ಪ್ರಧಾನ ಆಹಾರ ಮೀನುಗಳಾಗಿತ್ತೆಂದು ಜೊತೆಗೆ ನೆಲವಾಸಿ ಪ್ರಾಣಿಗಳಾಗಿತ್ತೆಂದು ಊಹಿಸಲಾಗಿದೆ. ಈ ಜೀವಿಯು ಜಡಸ್ವಭಾವದ್ದಾಗಿದ್ದರಿಂದ ಚಲನಾಂಗಗಳು, ಕೈ-ಕಾಲುಗಳು ಕ್ಷೀಣಿಸಿರಬೇಕು. ನೀರಿನಲ್ಲಿ ಮೊಟ್ಟೆಯಿಡುತ್ತಿತ್ತೆಂದು ಹೇಳಲಾಗಿದೆ.

(ಎಚ್.ಎಸ್.ಎನ್.)

**ಎರೆಂತಮಮ್:** ಅಕ್ಯಾಂತೇಸಿ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಪುಷ್ಪ. ಉಷ್ಣ ಪ್ರದೇಶಗಳಲ್ಲಿ ಬೆಳೆಯುತ್ತದೆ. ಎರೆಂತಮಮ್ ಎಂದರೆ ಸುಂದರ ಪುಷ್ಪವೆಂದೇ ಅರ್ಥ. ಈ ಸಸ್ಯವನ್ನು ಕುಂಡ, ಅಂಚು, ಕಲ್ಲೇರಿ ಸಸ್ಯಗಳಾಗಿ ಬೆಳೆಸುತ್ತಾರೆ. ಎಲೆಗಳು ಪ್ರಭೇದಗಳಿಗೆ ಅನುಸಾರವಾಗಿ ಕೆಂಪು, ಹಸಿರಿನ ಮೇಲೆ ಬಿಳುಪು ಹಳದಿ ಮತ್ತು ಇತರ ಬಣ್ಣದ ಮಚ್ಚೆಗಳಿಂದ ಕೂಡಿದ್ದು ಬಹಳ ಸುಂದರವಾಗಿ ಕಾಣುತ್ತವೆ.

ಎಲೆಯ ಆಕಾರ ಕರನೆಯಂತೆ. ನಾಳರಚನೆ ಗರಿರೂಪದ್ದು. ಅಂಚು ನಯ ಇಲ್ಲವೆ ಗರಗಸದ ಹಲ್ಲಿನಂತೆ. ಹೂಗೊಂಚಲು ಸ್ಪೈಕ್ ಮಾದರಿಯದು. ಹೂಬಣ್ಣ ನೀಲಿ ಇಲ್ಲವೆ ಕಿತ್ತಳೆ. ಹೂದಳಗಳು ಕೂಡಿದೆ. ಹೂವಿನ ಆಕಾರ ಕೊಳವೆಯಂತೆ. ತುದಿ ವಿಶಾಲವಾಗಿ ಹರಡಿ ಐದು ಭಾಗಗಳಾಗಿ ಒಡೆದಿದೆ. ಪುಷ್ಪಪತ್ರ ಉಪದಳಗಳಿಂದ ಆವೃತ. ಹೂದಳದ ಮೇಲೆ ಅಂಟಿರುವ ಎರಡು ಕೇಸರಗಳಿವೆ. ದೀರ್ಘ ವೃತ್ತಾಕಾರ ಅಥವಾ ಆಯತಾಕಾರದ ಮೇಲು ಅಂಡಾಶಯ ನಾಲ್ಕು ಬೀಜವಿರುವ ಕ್ಯಾಪ್‌ಸೂಲ್ ಮಾದರಿಯದು. ಕಾಂಡದ ತುಂಡುಗಳಿಂದ ಹೊಸ ಗಿಡಗಳನ್ನು ಪಡೆಯಬಹುದು. ಜೌಗಿಲ್ಲದ ಒಳ್ಳೆಯ ನೆಲದಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಅರ್ಧ ನೆರಳಿದ್ದರಂತೂ ಇನ್ನೂ ಹಸನು.

ಎರೆಂತಮಮ್ ಸಿನವಾರಿನಮ್ ಪ್ರಭೇದ ಸುಮಾರು 2 ಅಡಿ ಎತ್ತರ ಬೆಳೆಯುತ್ತದೆ. ಮೂತ್ರಪಿಂಡಾಕಾರದ ಎಲೆಗಳು ಅರಿ ಹಸಿರು ಬಣ್ಣವಾಗಿದ್ದು ಹಳದಿ ಬಣ್ಣದ ನಾಳಗಳಿಂದ ಕೂಡಿವೆ.

ಎರೆಂತಮಮ್ ಎಲ್ಡೊರ್ಯಾಡೊ ಪ್ರಭೇದವೂ 2 ಅಡಿ ಎತ್ತರ ಬೆಳೆಯುತ್ತದೆ. ಹಳದಿ ಮಚ್ಚೆ ಮತ್ತು ಹಸಿರು ನಾಳಗಳಿರುವ ಎಲೆಗಳು ಬಹಳ ಸುಂದರವಾಗಿವೆ.

ಎರೆಂತಮಮ್ ಗೊಲ್ಡಿಯಾನ್ ಪ್ರಭೇದ ಸುಮಾರು 3 ಅಡಿ ಎತ್ತರ ಬೆಳೆಯುವುದರಿಂದ ಅಲಂಕಾರ ಬೇಲಿಗಳಲ್ಲಿ ಬೆಳೆಸಲು ಯೋಗ್ಯವಾಗಿದೆ.

ಎರೆಂತಮಮ್ ನೊಬಿಲಿಸ್ ಪ್ರಭೇದ 3–4 ಅಡಿ ಎತ್ತರ ಬೆಳೆಯುತ್ತದೆ. ಅತಿ ಹಸಿರಾದ ಎಲೆಗಳಲ್ಲಿ ಹಳದಿ ಬಣ್ಣದ ನಾಳಗಳಿರುವುದರಿಂದ ಬಹಳ ಸುಂದರವಾಗಿ ಕಾಣುತ್ತದೆ.

ಎರೆಂತಮಮ್ ವರ್ ಸಿಕೊಲೊರ್ ಪ್ರಭೇದದ ಎಲೆಗಳಲ್ಲಿ ಬಿಳಿಯ ಮತ್ತು ಹಸಿರು ಬಣ್ಣದ ಮಚ್ಚೆಗಳಿವೆ.

ಎರೆಂತಮಮ್ ಅಟ್ರೊಪರ್‌ಫ್ಯೂರಿಯಮ್ ಪ್ರಭೇದದ ಎಲೆಗಳ ಮೇಲೆ ಕಂಚು ಅಥವಾ ಕಡುಗೆಂಪು ಬಣ್ಣದ ಮಚ್ಚೆಗಳಿವೆ. (ಎಂ.ಎಚ್.ಎಂ)

**ಎರೆಯಂಗ:** (–ಮರಣ 1099). ಹೊಯ್ಸಳ ಇಮ್ಮಡಿ ವಿನಯಾದಿತ್ಯ (1047–1100) ಮತ್ತು ಆತನ ಪಟ್ಟದರಾಣಿ ಕೆಳೆಯಬ್ಬರಸಿಯ ಮಗ. ತಂದೆಗಿಂತಲೂ ಮೊದಲೇ ಮರಣಹೊಂದಿದ್ದರಿಂದ ಸಿಂಹಾಸನಕ್ಕೆ ಬರಲಿಲ್ಲ. ಮರಣ ಕಾಲದವರೆಗೂ ಯುವರಾಜನಾಗಿದ್ದ. ಆದರೆ ಆಡಳಿತದಲ್ಲಿ ಸಾಕಷ್ಟು ಪಾಲ್ಗೊಂಡಿದ್ದ. ಮಹಾಮಂಡಲೇಶ್ವರ ಎಂಬ ಬಿರುದಿತ್ತು. ಈತ ಜೈನಧರ್ಮಾವಲಂಬಿ. ಗುರು ಗೋಪನಂದಿ. ಚಾಲುಕ್ಯ ಸಾಮ್ರಾಟ ಆರನೆಯ ವಿಕ್ರಮಾದಿತ್ಯನಿಗೆ ಎರೆಯಂಗ ಬಲಭುಜದಂತಿದ್ದನೆಂಬುದಾಗಿ ಅನೇಕ ಶಾಸನಗಳಲ್ಲಿ ವರ್ಣಿಸಲಾಗಿದೆ. ಚಾಲುಕ್ಯ ಸೈನ್ಯದ ದಂಡನಾಯಕನಾಗಿ ಮಾಳವ, ಧಾರ ಮುಂತಾದ ರಾಜ್ಯಗಳನ್ನು ಎರೆಯಂಗ ಗೆದ್ದ. ಅನೇಕ ಕೆರೆ ಕಾಲುವೆಗಳನ್ನು ತೋಡಿಸಿದನಲ್ಲದೆ ಜೈನಬಸದಿಗಳನ್ನು ಕಟ್ಟಿಸಿದ. ಈತನಿಗೆ ಏಚಲದೇವಿ (**ನೋಡಿ– ಏಚಲದೇವಿ**) ಮತ್ತು ಮಹಾದೇವಿ ಎಂಬ ಇಬ್ಬರು ರಾಣಿಯರಿದ್ದರು. ಏಚಲೆಯಲ್ಲಿ ಬಲ್ಲಾಳ I, ಬಿಟ್ಟಿಗ (ವಿಷ್ಣುವರ್ಧನ) ಮತ್ತು ಉದಯಾದಿತ್ಯ ಎಂಬ ಮೂರುಜನ ಗಂಡುಮಕ್ಕಳಾದರು. (ಜಿ.ಆರ್.ಆರ್.)

**ಎರೆಹುಳು:** ರೈತನ ಮಿತ್ರ ನಿಸರ್ಗದ ನೇಗಿಲು ಎಂದೇ ಹೆಸರು ಮಾಡಿರುವ ಎರೆಹುಳ ಜೀವಿ ತಂತ್ರಜ್ಞಾನದ ಯಂತ್ರದಂತೆ ಎರೆಗೊಬ್ಬರ ತಯಾರಿಕೆಯಲ್ಲಿ ಮಹತ್ವದ ಪಾತ್ರವಹಿಸಿದೆ. ಅಕಶೇರುಕದ ಮುಖ್ಯವಂಶಗಳಲ್ಲೊಂದಾದ ವಲಯವಂತ ವಂಶದ (ಅನೀಲಿಡ) ಖೀಟೊಪೋಡ ವರ್ಗದ, ಆಲಿಗೋಕೀಟ ಗಣಕ್ಕೆ ಸೇರಿದೆ. ಖೀಟ ಎಂದರೆ ಈ ಹುಳುವಿನ ಚಲನಾಂಗಗಳಾದ ಸೀಟೆಗಳೆಂದರ್ಥ. ಎರೆಹುಳುವಿನಲ್ಲಿ ನಾನಾ ಪ್ರಭೇದಗಳಿವೆ. ಲುಂಬ್ರಿಕಸ್ ಟೆರೆಸ್ಟ್ರಿಸ್ ಪ್ರಭೇದ ಯುರೋಪ್ ಮತ್ತು ಉತ್ತರ ಅಮೆರಿಕಗಳಲ್ಲಿದೆ. ಭಾರತದಲ್ಲಿ ಫೆರಿಟೀಮ ಪಾಸ್ತುಮ ಮತ್ತು ಮೆಗಾಸ್ಕೊಲೆಕ್ಸ್ ಎಂಬ ಎರಡು ಪ್ರಭೇದಗಳು ಸಾಮಾನ್ಯವಾಗಿ ಕಂಡುಬರುತ್ತವೆ.

ಎರೆಹುಳು ತೇವದ ನೆಲದಲ್ಲಿ ವಾಸಿಸುವುದು. ಏರಿ, ಗದ್ದೆಬದು, ಕೈತೋಟ ಅಡಕೆ ಮತ್ತು ಬಾಳೆತೋಟ ಹಾಗೂ ತೇವವಿರುವ ಎಲ್ಲ ಭೂಮಿಗಳಲ್ಲೂ ಚಿಕ್ಕ ಚಿಕ್ಕ ಬಿಲಗಳನ್ನು ತೋಡಿಕೊಂಡು ಅದರೊಳಗೆ ವಾಸಿಸುತ್ತದೆ. ಎರೆಹುಳು ಪಕ್ಷಿಗಳಿಗೆ ಉತ್ತಮ ಆಹಾರ, ಶತ್ರುಗಳಿಂದ ಪಾರಾಗಲು ಇದು ಹಗಲು ಬಿಲಗಳಲ್ಲಿ ಹುದುಗಿದ್ದು ರಾತ್ರಿಯಲ್ಲಿ ಮಾತ್ರ ಹೊರಬರುತ್ತದೆ. ಕೊಳೆಯುತ್ತಿರುವ ಎಲೆ, ಕಾಂಡ, ಹುಲ್ಲು ಇದರ ಪ್ರೀತಿಯ ಆಹಾರ. ಆಹಾರದೊಡನೆ ಮಣ್ಣನ್ನೂ ಸೇವಿಸುತ್ತದೆ. ಬಿಲಗಳನ್ನು ತೋಡುವುದರಿಂದ ಭೂಮಿ ಟೊಳ್ಳಾಗಿ ಗಾಳಿಯಾಡಲು ಅನುಕೂಲವಾಗುತ್ತದೆ. ವಿಸರ್ಜಿಸಿದ ಮಲ ಕಸ್ತೂರಿಮಾತ್ರೆಗಳಂತೆ ಭೂಮಿಯ ಮೇಲೆ ಕುಪ್ಪೆ ಕುಪ್ಪೆಯಾಗಿ ಬಿದ್ದಿರುತ್ತದೆ. ಇದಕ್ಕೆ ಕುಪ್ಪಲು ಮಣ್ಣು ಎಂದು ಹೆಸರು. ಇದು ಅತಿ ಫಲವತ್ತಾಗಿರುತ್ತದೆ. ಗಿಡಗಳ ಬೆಳವಣಿಗೆಗೆ ಬೇಕಾದ ಎಲ್ಲ ಲವಣಾಂಶಗಳು ಈ ಮಣ್ಣಿನಲ್ಲಿವೆ. ಡಾರ್ವಿನ್, ಒಂದು ಎಕರೆಯಲ್ಲಿ ವಾಸಿಸುವ ಎರೆಹುಳುಗಳು ಒಂದು ವರ್ಷದಲ್ಲಿ 18 ಟನ್ ಮಣ್ಣನ್ನು ತಿರುವಿಹಾಕುತ್ತವೆ ಎಂದು ಲೆಕ್ಕಾಚಾರ ಮಾಡಿದ್ದಾನೆ.

ಎರೆಹುಳುವಿನ ಬಣ್ಣ ಕಂದುಗೆಂಪು ಅಥವಾ ಮಣ್ಣಿನ ಬಣ್ಣ. ಇದು ಒಂದು ಅಥವಾ ಸು. 4 ಮೀ. ಉದ್ದ ಬೆಳೆಯುತ್ತದೆ. ಗಾತ್ರ 3/8". ಶರೀರ ದುಂಡಗೆ ದಾರದಂತಿದೆ. ಆಸ್ಟ್ರೇಲಿಯದಲ್ಲಿ **ಮೆಗಾಸ್ಕೋಲಿಸೈಡಿಸ್ ಆಸ್ಟ್ರಾಲಿಸ್** ಎಂಬ ಎರೆಹುಳು ಇದೆ. ಇದು ಸು. 3½ಮೀ.–3.7ಮೀ. ಉದ್ದವಿದ್ದು ನೂಲಿನ ಹಗ್ಗದಷ್ಟು ಗಾತ್ರವಿರುತ್ತದೆ. ಇದನ್ನು ರಾಕ್ಷಸ ಎರೆಹುಳು ಎನ್ನುತ್ತಾರೆ. ಇದು ಅಗಲವಾದ ಬಿಲಗಳನ್ನು ತೋಡಿಕೊಂಡು ವಾಸಿಸುತ್ತದೆ. ಬಿಲಗಳ ಬಾಯಿ ಅಗ್ನಿಪರ್ವತದ ಬಾಯಿಯಂತೆ ಕಾಣುತ್ತದೆ. ಈ ಹುಳುಗಳನ್ನು ತಿನ್ನುವ ಒಂದೇ ಒಂದು ಪಕ್ಷಿಯೆಂದರೆ ಅಲ್ಲಿನ **ಲಾಫಿಂಗ್ ಕಿಂಗ್ ಫಿಷರ್**.



**ಚಿತ್ರ 1 ಎರೆಹುಳುಗಳ ಮೂರು ಬಗೆಗಳು**
**1. ಲುಂಬ್ರಿಕಸ್, 2. ಮೆಗಾಸ್ಕೊಲೆಕ್ಸ್ ಮಾರಿಟಿಯೈ, 3. ಫೆರಿಟಿಮ ಪಾಸ್ತುಮ**

ಎರೆಹುಳುವಿನ ಮೈ ಸದಾ ತೇವವಾಗಿರುತ್ತದೆ. ಮುಂತುದಿ ಮತ್ತು ಹಿಂತುದಿಗಳು ಸ್ವಲ್ಪ ಮಟ್ಟಿಗೆ ಚೂಪಾಗಿರುತ್ತವೆ. ಇದರ ಶರೀರ ಬಹಳ ವಲಯಗಳನ್ನು (ಖಂಡ) ಹೊಂದಿದೆ. ಶರೀರದಲ್ಲಿ ಇಷ್ಟೇ ಖಂಡಗಳಿರಬೇಕೆಂಬ ನಿಯಮವೇನಿಲ್ಲ. ಸಾಮಾನ್ಯವಾಗಿ 100 ರಿಂದ 150 ಖಂಡಗಳಿರಬಹುದು. ಈ ಖಂಡಗಳು ಉಂಗುರದಂತಿದ್ದು ಒಂದರ ಹಿಂದೆ ಒಂದರಂತೆ ಜೋಡಣೆಗೊಂಡಿವೆ. ಶರೀರದ ಮೇಲೆ ತೆಳುವಾದ ಕ್ಯುಟಿಕಲಿನಿಂದಾದ ಪೊರೆಯಿದೆ. ಮುಂದಿನ ಒಂದೆರಡು ಖಂಡಗಳನ್ನು ಬಿಟ್ಟರೆ ಮಿಕ್ಕೆಲ್ಲ ಖಂಡಗಳಲ್ಲೂ ಸೀಟೆಗಳೆಂಬ ಬಿರುಗೂದಲುಗಳಿವೆ. ಇವು ಖಂಡದ ಸುತ್ತಲೂ ಸಾಲಾಗಿ ಜೋಡಣೆಗೊಂಡಿವೆ. ಪ್ರತಿಯೊಂದು ಸೀಟೆಯೂ *S* ಆಕಾರಕ್ಕಿದ್ದು ತನ್ನದೇ ಆದ

**ಚಿತ್ರ 2 ಆಸ್ಟ್ರೇಲಿಯದ ದೈತ್ಯ ಎರೆಹುಳು**

ಚೀಲದಲ್ಲಿ ಹುದುಗಿದೆ. ಸೀಟೆಯ ಬುಡದಲ್ಲಿ ಮಾಂಸಖಂಡಗಳಿವೆ. ಇವುಗಳ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯಿಂದಾಗಿ ಸೀಟೆ ಚಲಿಸುತ್ತದೆ. ಸೀಟೆಯನ್ನು ಚೀಲದೊಳಕ್ಕೆ ಎಳೆದುಕೊಳ್ಳಲು ಮತ್ತು ಹೊರನೂಕಲು ಈ ಮಾಂಸಖಂಡಗಳು ಸಹಕರಿಸುತ್ತವೆ. ಸೀಟೆಗಳ ಚಲನೆಯಿಂದ ಹುಳು ಚಲಿಸುತ್ತದೆ. ಆದ್ದರಿಂದ ಸೀಟೆಗಳು ಎರೆಹುಳುವಿನ ಚಲನಾಂಗಗಳು. ಎರೆಹುಳುವಿನ ಶರೀರವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. 1. ಕ್ಲೈಟೆಲಮ್ ಮುಂಭಾಗ. 2. ಕ್ಲೈಟೆಲಮ್ ಭಾಗ. 3. ಕ್ಲೈಟೆಲಮ್ ಹಿಂಭಾಗ. ಚೆನ್ನಾಗಿ ಬೆಳೆದ ಹುಳುವನ್ನು ನೋಡಿದೊಡನೆ ಗುರುತಿಸಲು ಕ್ಲೈಟೆಲಮ್ ಭಾಗ ಬಹಳ ಸಹಕಾರಿಯಾಗಿದೆ. ಶರೀರದ ಮಿಕ್ಕ ಭಾಗಕ್ಕಿಂತ ಈ ಭಾಗ ಉಬ್ಬಿಕೊಂಡಿರುತ್ತದೆ. ಈ ಭಾಗದ ಖಂಡಗಳು ಒಗ್ಗೂಡಿಕೊಂಡಿವೆ.



**ಎರೆಹುಳು ಅಡ್ಡಸೀಳಿಕೆ ನೋಟ: 1. ಮೇಲುರಂಧ್ರ, 2. ಕ್ಯೂಟಿಕಲ್, 3. ಹೊರಚರ್ಮ, 4. ವೃತ್ತಾಕಾರದ ಮಾಂಸ ಖಂಡಗಳು, 5. ನೀಳಾಕಾರದ ಮಾಂಸಖಂಡಗಳು, 6. ಸಿಲಾಮಿನ ಎಪಿಥೀಲಿಯಂ, 7. ಕರುಳಿನ ಎಪಿಥೀಲಿಯಂ, 8. ದೇಹಾಂತರವಕಾಶ (ಸೀಲಾಂ), 9. ರಿಟ್ರ್ಯಾಕ್ಟಾರ್ ಮಾಂಸಖಂಡದ ಪೊರೆ, 10. ಸೀಟೆಯ ಚೀಲ, 11. ಸೀಟೆಗಳು, 12.ಖಂಡಕ್ಕೆ ಬಂದಿರುವ ನರಗಳು, 13. ನರದ ಪಕ್ಕದಲ್ಲಿರುವ ರಕ್ತನಾಳ, 14. ನರದ ತಳದಲ್ಲಿರುವ ರಕ್ತನಾಳ, 15. ಕರುಳಿನಿಂದ ತಳಗಿರುವ ನರಹುರಿ, 16. ನೆಫ್ರೀಡಿಯದ ಆಲಿಕೆ, 17. ನೆಫ್ರೀಡಿಯ ರಂಧ್ರ, 18. ತಳಭಾಗದ ರಕ್ತನಾಳ, 19. ನೆಫ್ರೀಡಿಯ ನಾಳಗಳು, 20. ಕರುಳು, 21. ನೆಫ್ರೀಡಿಯ ಚೀಲ, 22. ಟಿಫ್ಲೊಸೋಲ್, 23.ಮೇಲುಭಾಗದ ರಕ್ತನಾಳ, 24. ನೀಳಾಕಾರದ ಮಾಂಸಖಂಡಗಳು, 25. ಸ್ಪರ್ಶೇಂದ್ರಿಯ, 26. ಚರ್ಮಗ್ರಂಥಿ.**

ಫೆರಿಟೀಮ ಪ್ರಭೇದದಲ್ಲಿ ಕ್ಲೈಟೆಲಮ್ ಮುಂಭಾಗದಲ್ಲಿ 13 ಖಂಡಗಳಿವೆ. 14, 15 ಮತ್ತು 16 ಖಂಡಗಳು ಒಟ್ಟು ಸೇರಿ ಕ್ಲೈಟೆಲಮ್ ಭಾಗವಾಗಿದೆ. **ಮೆಗಾಸ್ಕೊಲೆಕ್ಸ್**ನಲ್ಲಿ ಕ್ಲೈಟೆಲಮ್ ಮುಂಭಾಗದಲ್ಲಿ 14 ಖಂಡಗಳಿವೆ. 15, 16 ಮತ್ತು 17 ಖಂಡಗಳು ಸೇರಿ ಕ್ಲೈಟೆಲಮ್ ಭಾಗವಾಗಿದೆ. ಅಮೆರಿಕದ ಲುಂಬ್ರಿಕಸ್‍ನಲ್ಲಿ ಕ್ಲೈಟೆಲಮ್ ಮುಂಭಾಗದಲ್ಲಿ 30 ಖಂಡಗಳಿರುತ್ತವೆ. 31 ರಿಂದ 37ನೆಯ ಖಂಡಗಳು ಸೇರಿ ಕ್ಲೈಟೆಲಮ್ ಆಗಿದೆ. ಕ್ಲೈಟೆಲಮ್ ಶರೀರದ ಮಿಕ್ಕ ಭಾಗಕ್ಕಿಂತ ದಪ್ಪನಾಗಿರುವುದಕ್ಕೆ ಅದರಲ್ಲಿರುವ ಹೊರಚರ್ಮದ ಪದರಗಳೇ ಕಾರಣ. ಈ ಪದರಗಳು ಒಂದರ ಮೇಲೊಂದರಂತೆ ಜೋಡಿಸಿಕೊಂಡಿವೆ. ಈ ಭಾಗವನ್ನು ಬಿಟ್ಟರೆ ಶರೀರದ ಮಿಕ್ಕ ಭಾಗದಲ್ಲಿ ಹೊರಚರ್ಮದ ಕೋಶಗಳು ಕೇವಲ ಒಂದೇ ಪದರದಲ್ಲಿದೆ. ಕ್ಲೈಟೆಲಮ್ ಭಾಗದಲ್ಲಿ ಅನೇಕ ಗ್ರಂಥಿಗಳು ಇವೆ. ಇವು ಸ್ರವಿಸುವ ಲೋಳೆಯಂತಿರುವ ರಸದಿಂದಾಗಿ ಈ ಭಾಗ ಮಿಕ್ಕ ಭಾಗಕ್ಕಿಂತ ಹೆಚ್ಚು ತೇವವಾಗಿರುತ್ತದೆ. ಶರೀರದ ಮೊದಲ ಖಂಡದಲ್ಲಿ ಬಾಯಿ ಇದೆ. ಇದೊಂದು ದುಂಡನೆಯ ರಂಧ್ರ. ಬಾಯಿಯ ಮುಂದೆ ಮಾಂಸದ ಮುದ್ದೆಯಂಥ ಪ್ರೋಸ್ಟೋಮಿಯಮ್ ಎಂಬ ರಚನೆ ಇದೆ. ಶರೀರದ ಕೊನೆಯ ಖಂಡದಲ್ಲಿ ಗುದದ್ವಾರವಿದೆ.

ಎರೆಹುಳುವಿನ ಶರೀರದ ಮೇಲೆ ಎರಡು ಖಂಡಗಳು ಸಂಧಿಸುವ ಭಾಗದಲ್ಲಿ ಒಂದೊಂದು ರಂಧ್ರವಿದೆ. ಈ ರಂಧ್ರಗಳು ಬೆನ್ನಿನ ಮಧ್ಯರೇಖೆಯ ಮೇಲಿವೆ. **ಫೆರೆಟೀಮ**ದಲ್ಲಿ ಈ ರಂಧ್ರಗಳು 12ನೆಯ ಖಂಡದಿಂದ ಹಿಂದಕ್ಕೆ ಪ್ರತಿ ಖಂಡದಲ್ಲೂ ಇವೆ. ಶರೀರದೊಳಗಿರುವ ಒಂದು ರೀತಿಯ ರಸ ಈ ರಂಧ್ರಗಳಿಂದ ಹೊರಬರುತ್ತದೆ. ಇದು ಈ ಪ್ರಾಣಿಯ ಶರೀರವನ್ನು ಸದಾ ತೇವವಾಗಿಟ್ಟಿರುತ್ತದೆ. ಲುಂಬ್ರಿಕಸ್‍ನಲ್ಲಿ ಈ ರಂಧ್ರಗಳು 8 ಅಥವಾ 9ನೆಯ ಖಂಡಗಳ ಮಧ್ಯದಿಂದ ಪ್ರಾರಂಭವಾಗುತ್ತದೆ. ಈ ರಂಧ್ರಗಳನ್ನು ಬಿಟ್ಟರೆ ಎರೆಹುಳುವಿನ ಪಕ್ಕೆಗಳಲ್ಲಿ ಸೂಕ್ಷ್ಮವಾದ ಅನೇಕ ರಂಧ್ರಗಳು ಪ್ರತಿ ಖಂಡದಲ್ಲೂ ಇವೆ. ಇವನ್ನು ನೆಫ್ರೀಡಿಯ ರಂಧ್ರಗಳು ಎನ್ನುತ್ತಾರೆ. ಈ ರಂಧ್ರಗಳ ಮೂಲಕ ತ್ಯಾಜ್ಯ ವಸ್ತುಗಳು ಹೊರ ಹೋಗುತ್ತವೆ.

**ಫೆರಿಟೀಮ**ದ ತಳಭಾಗದಲ್ಲಿ 5/6, 6/7, 7/8, ಮತ್ತು 8/9 ಖಂಡಗಳು, ಸಂಧಿಸುವ ಸ್ಥಳಗಳಲ್ಲಿ ನಾಲ್ಕು ಜೊತೆ ಸ್ಪರ್ಮಥೀಕೆ ರಂಧ್ರಗಳಿವೆ. ಲುಂಬ್ರಿಕಸ್‍ನಲ್ಲಿ 9/10 ಮತ್ತು 10/11 ಖಂಡಗಳಲ್ಲಿ ಮಾತ್ರ ಈ ರೀತಿಯ ಎರಡು ಜೊತೆ ರಂಧ್ರಗಳಿವೆ.

**ಫೆರಿಟೀಮ**ದಲ್ಲಿ 14ನೆಯ ಖಂಡದ ತಳಭಾಗದಲ್ಲಿ ಒಂದು ಜೊತೆ ಸ್ತ್ರೀಜನನೇಂದ್ರಿಯ ರಂಧ್ರವೂ, 18ನೆಯ ಖಂಡದಲ್ಲಿ ಒಂದು ಜೊತೆ ಪುರುಷ ಜನನೇಂದ್ರಿಯ ರಂಧ್ರವೂ ಇವೆ. ಲುಂಬ್ರಿಕಸಿನಲ್ಲಿ 14ನೆಯ ಖಂಡದ ತಳಭಾಗದಲ್ಲಿ ಒಂದು ಜೊತೆ ಸ್ತ್ರೀ ಜನನೇಂದ್ರಿಯ ರಂಧ್ರಗಳು, 15ನೆಯ ಖಂಡದ ತಳಭಾಗದಲ್ಲಿ ಒಂದು ಜೊತೆ ಪುರುಷ ಜನನೇಂದ್ರಿಯ ರಂಧ್ರಗಳು ಇವೆ.

ಎರೆಹುಳು ಮುಪ್ಪದರಜೀವಿ. ಶರೀರದ ಅಡ್ಡ ಸೀಳನ್ನು ಪರಿಶೀಲಿಸಿದರೆ ಅದರಲ್ಲಿರುವ ಮಾಂಸಖಂಡಗಳು ಮತ್ತು ಅಂಗಗಳ ಜೋಡಣೆ ಅರಿಯಬಹುದು. ಅಡ್ಡಸೀಳು ವೃತ್ತಾಕಾರಕ್ಕಿರುತ್ತದೆ. ಶರೀರದ ಪ್ರಥಮಪದರ ಹೊರಚರ್ಮ. ಇದು ಚಚ್ಚೌಕವಾಗಿರುವ ಕೋಶಗಳಿಂದಾಗಿದೆ. ಈ ಕೋಶಗಳು ಸಾಲಾಗಿ ಒಂದೇ ಪದರದಲ್ಲಿವೆ. ಹೊರಚರ್ಮದ ಮೇಲೆ ಇವುಗಳೇ ಉತ್ಪತ್ತಿಮಾಡಿದ ತೆಳುವಾದ ಕ್ಯುಟಿಕಲ್ ಲೇಪನವಿದೆ. ಹೊರಚರ್ಮದ ತಳಭಾಗದಲ್ಲಿ ಮಾಂಸಖಂಡಗಳ ಪದರಗಳಿವೆ. ಪ್ರಥಮ ಮಾಂಸಖಂಡದ ಪದರ ವೃತ್ತಾಕಾರಕ್ಕಿದೆ. ಎರಡನೆಯ ಪದರ ನೀಳವಾಗಿ ಜೋಡಿಸಿಕೊಂಡಿರುವ ಮಾಂಸಖಂಡಗಳನ್ನೊಳಗೊಂಡಿದೆ. ಹೊರಚರ್ಮ ಮತ್ತು ಮಾಂಸಖಂಡಗಳು ಸೇರಿ ಶರೀರದ ಹೊದಿಕೆಯಾಗಿದೆ. ಶರೀರದ ಹೊದಿಕೆಯಲ್ಲಿ ಅಲ್ಲಲ್ಲಿ ಚಲನಾಂಗಗಳಾದ ಸೀಟೆಗಳು ನಾಟಿಕೊಂಡಂತಿವೆ. ಮಾಂಸಖಂಡಗಳ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯಿಂದಾಗಿ ಸೀಟೆಗಳು ಚಲಿಸುತ್ತವೆ. ಶರೀರದ ಗೋಡೆಯಿಂದ ಒಳಭಾಗದಲ್ಲಿ ದೇಹಾಂತರಾವಕಾಶವಿದೆ (ಸೀಲಾಮ್). ಇದರ ಸುತ್ತಲೂ ಏಕಪದರದ ಅನುಲೇಪಕ ಅಂಗಾಂಶದ ಕೋಶಗಳಿವೆ. ದೇಹಾಂತರಾವಕಾಶದೊಳಗೆ ಒಂದು ರೀತಿಯ ರಸವಿದೆ. ಈ ರಸದಲ್ಲಿ ವರ್ಣರಹಿತ ಅಮೀಬ ರೀತಿಯ ಕೋಶಗಳಿವೆ. ಶರೀರದ ಮೇಲು ರಂಧ್ರದ ಮೂಲಕ ಈ ರಸ ಕೋಶಗಳ ಸಮೇತ ಹೊರಬರುತ್ತದೆ. ಶರೀರದ ಮೇಲೆ ಕೂರುವ ಬ್ಯಾಕ್ಟೀರಿಯ ಮುಂತಾದ ಜೀವಾಣುಗಳನ್ನು ಈ ಕೋಶಗಳು ತಿಂದು ಹಾಕಿ ಶರೀರವನ್ನು ರಕ್ಷಿಸುತ್ತವೆ. ದೇಹಾಂತರಾವಕಾಶದಲ್ಲಿ ಅನ್ನನಾಳ. ಅದರ ಮೇಲುಭಾಗದಲ್ಲಿ ಹಾಗೂ ತಳಭಾಗದಲ್ಲಿ ರಕ್ತನಾಳಗಳು ಮತ್ತು ನರಹುರಿ, ಜೀರ್ಣಾಂಗದ ಇಕ್ಕೆಲದಲ್ಲಿ ವಿಸರ್ಜನಾಂಗಗಳಾದ ನೆಫ್ರೀಡಿಯಗಳಿವೆ.

ಎರೆಹುಳುವಿನ ಜೀರ್ಣಾಂಗ ಅತಿಸರಳವಾಗಿ ನಾಳದಂತಿದೆ. ಜೀರ್ಣಾಂಗದ ಮುಂದಿನ ಭಾಗದಲ್ಲಿ ಆಹಾರವನ್ನು ಶೇಖರಿಸಲು ಫ್ಯಾರಿಂಕ್ಸ್ ಎಂಬ ಚೀಲದೋಪಾದಿಯ ಅಂಗ ಮತ್ತು ಆಹಾರವನ್ನು ಅರೆಯಲು ಗಟ್ಟಿಯಾದ ಸ್ನಾಯುಗಳಿಂದಾದ ಗಿಜರ್ಡ್ ಇವೆ. ಇವುಗಳು ಬರುವ ಖಂಡಗಳು ಪ್ರತಿ ಪ್ರಭೇದದಲ್ಲಿಯೂ ವಿಭಿನ್ನವಾಗಿವೆ. ಈ ಭಾಗಗಳ ಹಿಂದಿರುವುದು ಕರುಳು.

ಎರೆಹುಳುವಿನ ರಕ್ತ ಕೆಂಪಗಿದೆ. ಇದು ನಾಳಗಳಲ್ಲಿಯೇ ಹರಿಯುತ್ತದೆ. ಈ ಪ್ರಾಣಿಗೆ ಹೃದಯವಿಲ್ಲ. ರಕ್ತವನ್ನು ಶೇಖರಿಸಲು ಮತ್ತು ವಿತರಣೆ ಮಾಡಲು ಪ್ರತ್ಯೇಕ ರಕ್ತನಾಳಗಳಿವೆ.

ಎರೆಹುಳು ತನ್ನ ಚರ್ಮದಿಂದಲೇ ಉಸಿರಾಡುತ್ತದೆ. ಆದ್ದರಿಂದಲೇ ಇದರ ಚರ್ಮ ಸದಾ ತೇವವಾಗಿರುತ್ತದೆ. ರಕ್ತನಾಳಗಳ ಮೂಲಕ ರಕ್ತ ಚರ್ಮಕ್ಕೆ ಪ್ರವಹಿಸುತ್ತದೆ. ಗಾಳಿ ತೇವವಾದ ಚರ್ಮಕ್ಕೆ ಬಡಿದಾಗ ರಕ್ತನಾಳಗಳಲ್ಲಿರುವ ರಕ್ತ ಗಾಳಿಯಲ್ಲಿರುವ ಆಮ್ಲಜನಕವನ್ನು ಹೀರಿಕೊಂಡು ಇಂಗಾಲದ ಡೈಆಕ್ಸೈಡನ್ನು ಹೊರ ಹಾಕುತ್ತದೆ.

ಸಾಮಾನ್ಯವಾಗಿ ಪ್ರತಿಖಂಡದಲ್ಲೂ ನಾಳದಂತಿರುವ ನೆಫ್ರೀಡಿಯಗಳೆಂಬ ಶುದ್ಧೀಕರಣಾಂಗಗಳಿವೆ. ಇವು ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಿ ನೆಫ್ರೀಡಿಯ ರಂಧ್ರಗಳ ಮೂಲಕ ಹೊರಹಾಕುತ್ತವೆ.

ಎರೆಹುಳುವಿನ ನರಮಂಡಲ ಅತಿಸರಳ. ಶರೀರದ ಮುಂತುದಿಯಲ್ಲಿ ಅನ್ನನಾಳದ ಸುತ್ತಲೂ ಉಂಗುರದೋಪಾದಿಯಲ್ಲಿರುವ ಒಂದು ನರಮುಡಿ ಇದೆ. ಈ ನರಮುಡಿಯಿಂದ ಅನ್ನನಾಳದ ತಳಭಾಗದಲ್ಲಿ ಶರೀರದುದ್ದಕ್ಕೂ ಒಂದು ನರಹುರಿ ಹುಟ್ಟಿಬಂದಿದೆ. ಈ ನರಹುರಿ ಪ್ರತಿಯೊಂದು ಖಂಡದಲ್ಲೂ ಗಂಟಿ ನೋಪಾದಿಯಲ್ಲಿದೆ. ಇಲ್ಲಿಂದ ನರಗಳು ಶರೀರದ ವಿವಿಧ ಭಾಗಗಳಿಗೆ ಹೊರಡುತ್ತವೆ.

ಎರೆಹುಳು ದ್ವಿಲಿಂಗಿ. ಪುರುಷ ಹಾಗೂ ಸ್ತ್ರೀ ಜನನೇಂದ್ರಿಯಗಳು ಒಂದೇ ಪ್ರಾಣಿಯಲ್ಲಿವೆ. ಫೆರಿಟೀಮದಲ್ಲಿ ಪುರುಷ ಜನನೇಂದ್ರಿಯಗಳಾದ ವೃಷಣಗಳು ಹತ್ತು ಮತ್ತು ಹನ್ನೊಂದನೆಯ ಖಂಡದ ಮೇಲುಗೋಡೆಗೆ ಅಂಟಿಕೊಂಡಿವೆ. ಒಂದೊಂದು ಖಂಡದಲ್ಲೂ ಒಂದೊಂದು ಜೊತೆ ವೃಷಣಗಳಿದ್ದು ಅವು ವೃಷಣಚೀಲಗಳಿಂದ ರಕ್ಷಿಸಲ್ಪಟ್ಟಿವೆ. ಇವುಗಳಿಂದ ಉತ್ಪತ್ತಿಯಾಗುವ ರೇತಸ್ಸು ಸೆಮೈನಲ್ ವೆಸಿಕಲ್‌ಗಳೆಂಬ ಚೀಲಗಳಲ್ಲಿ ಶೇಖರಗೊಂಡು ಬಲಿತು ಹೊರಬರುತ್ತವೆ. ಹೊರಬಂದ ರೇತಸ್ಸನ್ನು ಒಂದು ಜೊತೆ ವೃಷಣನಾಳಗಳ ಆಲಿಕೆಗಳು ಸಂಗ್ರಹಿಸಿ ವೃಷಣನಾಳಗಳ ಮೂಲಕ 18ನೆಯ ಖಂಡದಲ್ಲಿರುವ ಪುರುಷ ಜನನೇಂದ್ರಿಯಗಳ ಮೂಲಕ ಹೊರದೂಡುತ್ತವೆ. ಪುರುಷ ಜನನೇಂದ್ರಿಯಕ್ಕೆ ಸಂಬಂಧಿಸಿದಂತೆ ಒಂದು ಜೊತೆ ಪ್ರಾಸ್ಟೇಟ್ ಗ್ರಂಥಿಗಳು ಇವೆ. ಇವು 17,18,19 ಖಂಡಗಳಲ್ಲಿ ಪಸರಿಸಿವೆ. ಇವು ಉತ್ಪತ್ತಿ ಮಾಡುವ ರಸವೂ ಪುರುಷ ಜನನೇಂದ್ರಿಯ ರಂಧ್ರದ ಮೂಲಕ ಹೊರಬರುತ್ತದೆ.

ಒಂದು ಜೊತೆ ಸ್ತ್ರೀ ಜನನೇಂದ್ರಿಯಗಳು (ಅಂಡಾಶಯಗಳು) 13ನೇ ಖಂಡದ ಮೇಲುಹೊದಿಕೆಗೆ ಅಂಟಿಕೊಂಡಿವೆ. ಈ ಅಂಡಾಶಯಗಳಲ್ಲಿ ಮೊಟ್ಟೆಗಳು ಬೆಳೆದು ಹೊರಬರುತ್ತವೆ. ಇವನ್ನು ಅಂಡಾಶಯ ನಾಳದ ಆಲಿಕೆಗಳು ಸಂಗ್ರಹಿಸಿ, ಅಂಡಾಶಯ ರಂಧ್ರದ ಮೂಲಕ ಹೊರ ಹಾಕುತ್ತವೆ. ಹೀಗೆ ಹೊರಬಂದ ಮೊಟ್ಟೆಗಳು ಕ್ಲೈಟೆಲಮ್ ಸ್ರವಿಸಿದ ಕೊಳವೆಯೊಳಕ್ಕೆ ಬೀಳುತ್ತವೆ.

ಸಂಭೋಗಕ್ರಿಯೆಯ ಕಾಲದಲ್ಲಿ ಎರಡು ಎರೆಹುಳುಗಳು ವಿರುದ್ಧ ದಿಕ್ಕಿನಲ್ಲಿ ಒಂದುಗೂಡುತ್ತವೆ ಹೀಗೆ ಇವು ಒಂದು ಗೂಡಿದಾಗ ಒಂದರ ಪುರುಷ ಜನನೇಂದ್ರಿಯಗಳು ಮತ್ತೊಂದರ ಸ್ವರ್ಮಥೀಕೆ ರಂಧ್ರಗಳಿಗೆ ಸರಿಯಾಗಿ ಜೋಡಿಸಿ ಕೊಂಡಿರುವಂತೆ ನೋಡಿಕೊಳ್ಳುತ್ತವೆ. ಪುರುಷ ಜನನೇಂದ್ರಿಯ ರಂಧ್ರದಿಂದ ಬರುವ ರೇತಸ್ಸುಗಳು ಮತ್ತೊಂದರ ಸ್ವರ್ಮಥೀಕೆ ರಂಧ್ರವನ್ನು ಪ್ರವೇಶಿಸಿ ಸ್ವರ್ಮಥೀಕೆ ಚೀಲದೊಳಗೆ

ಚಿತ್ರ 4 ಎರೆಹುಳುಗಳ ಸಂಭೋಗ

ತುಂಬಿಕೊಳ್ಳುತ್ತವೆ. ಎರಡು ಪ್ರಾಣಿಗಳು ತಮ್ಮ ಸ್ವರ್ಮಥೀಕೆ ಚೀಲಗಳು ರೇತಸ್ಸಿನಿಂದ ತುಂಬಿಕೊಂಡ ಮೇಲೆ ಬೇರ್ಪಡುತ್ತವೆ. ಹೀಗೆ ಬೇರ್ಪಟ್ಟ ಜೀವಿಯ ಮೊಟ್ಟೆಯನ್ನುಳ್ಳ ಕ್ಲೈಟೆಲಮ್ ಸ್ರವಿಸಿದ ಕೊಳವೆ ಶರೀರದಿಂದ ಸಡಿಲಗೊಳ್ಳುತ್ತದೆ. ಇದು ಸಡಿಲಗೊಂಡಾಗ ಹುಳು ತನ್ನ ಶರೀರವನ್ನು ಹಿಂದಕ್ಕೆ ಎಳೆದುಕೊಳ್ಳಲಾರಂಭಿಸುತ್ತದೆ. ಇದರಿಂದಾಗಿ ಕ್ಲೈಟೆಲಮ್ ಸ್ರವಿಸುವ ಕೊಳವೆ ಮೊಟ್ಟೆಯ ಸಮೇತ ಜಾರಿಕೊಂಡು ಸ್ವರ್ಮಥೀಕೆ ರಂಧ್ರದ ಬಳಿಗೆ ಬರುತ್ತದೆ. ಇದರ ಬಳಿಗೆ ಬಂದಾಗ ಸ್ವರ್ಮಥೀಕೆ ಚೀಲಗಳು ಸಂಕುಚಿಸಿ ರೇತಸ್ಸನ್ನು ಹೊರಹಾಕುತ್ತವೆ. ಹೀಗೆ ಹೊರಬಂದ ರೇತಸ್ಸುಗಳು ಕ್ಲೈಟಿಲಮ್‌ಕೊಳವೆಯೊಳಕ್ಕೆ ಬಿದ್ದು ಮೊಟ್ಟೆಯೊಡನೆ ಮಿಲನಗೊಳ್ಳುತ್ತವೆ. ಹೀಗೆ ಮೊಟ್ಟೆಗಳು ಕ್ಲೈಟಿಲಮ್‌ಕೊಳವೆಯೊಳಗಿದ್ದಾಗಲೇ ಗರ್ಭಧಾರಣೆಯಾಗುತ್ತದೆ. ಫಲಿತಗೊಂಡ ಮೊಟ್ಟೆಗಳ ಸಮೇತ ಕ್ಲೈಟೆಲಮ್ ಸ್ರವಿಸಿದ ಕೊಳವೆ ಬಿದ್ದುಹೋಗುತ್ತದೆ. ಬಿದ್ದುಹೋದ ಈ ಕ್ಲೈಟೆಲಮ್ ಕೊಳವೆಯನ್ನು ಕಕೂನ್ ಎಂದು ಕರೆಯುತ್ತೇವೆ. ಇದರೊಳಗಿರುವ ಮೊಟ್ಟೆಗಳು ಬೆಳೆದು ಮರಿಗಳು ಹೊರಬರುತ್ತವೆ. ಸಾಮಾನ್ಯವಾಗಿ ಒಂದು ಕಕೂನ್‌ನಿಂದ ಒಂದು ಮರಿಹುಳು ಹುಟ್ಟುವುದು. (ಎಲ್.ಎಸ್.ಜಿ.)

**ಎರ್ಗಟ್:** ಹುಲ್ಲಿನ ಜಾತಿಗೆ ಸೇರಿದ ರೈ, ಬಾರ್ಲಿ, ಓಟ್ಸ್, ಗೋದಿ ಮುಂತಾದ ಧಾನ್ಯದ ಬೆಳೆಗಳಲ್ಲಿ ತಲೆದೋರಿ ಅವುಗಳ ಕಾಳುಗಳ ಸ್ಥಾನಗಳನ್ನು ಆಕ್ರಮಿಸುವ ಒಂದು ಶಿಲೀಂಧ್ರ. ಈ ಬೆಳೆಗಳಲ್ಲಿ ಒಂದು ವಿಚಿತ್ರ ರೋಗ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತದೆ. ಅಂಥ ಗಿಡಗಳಲ್ಲಿ ಧಾನ್ಯದ ಕಾಳುಗಳು ಕಪ್ಪು ಮಿಶ್ರಿತ ಹಸಿರು ಬಣ್ಣದ 2.5–4ಸೆಂಮೀ. ಉದ್ದವುಳ್ಳ ಬಿರುಸಾದ ವಸ್ತುಗಳಾಗಿ ಮಾರ್ಪಾಟು ಹೊಂದುವುವು. ಇವನ್ನೇ ಎರ್ಗಟ್ ಎಂದು ಕರೆಯಲಾಗುತ್ತದೆ. ಈ ರೋಗಕ್ಕೂ ಅದೇ ಹೆಸರಿದೆ. ಎರ್ಗಟ್ ರೋಗ ಕ್ಲಾವಿಸೆಪ್ಸ್ ಪರ್‌ಪೂರಿಯ ಎಂಬ ಬೂಸಲು ಅಥವಾ ಶಿಲೀಂಧ್ರದಿಂದ ಉಂಟಾಗುತ್ತದೆ. ಈ ರೋಗದ ಕೆಲವು ಅನಿಷ್ಟ ಪರಿಣಾಮಗಳು ಎರ್ಗಟುಗಳು ಕೂಡಿದ ಹಿಟ್ಟಿನಿಂದ ತಯಾರಿಸಿದ ರೊಟ್ಟಿಯನ್ನು ಸೇವಿಸಿದ ಮನುಷ್ಯರಲ್ಲಿಯೂ ಎರ್ಗಟುಗಳು ಕೂಡಿದ ದಂಟು ಮತ್ತು ತೆನೆಗಳನ್ನು ಸೇವಿಸಿದ ದನಕರು ಪ್ರಾಣಿಗಳಲ್ಲಿಯೂ ಕಂಡುಬರುವುವು. ಕ್ಲಾವಿಸೆಪ್ಸ್ ಪರ್‌ಪೂರಿಯ ಎಂಬ ಶಿಲೀಂಧ್ರದಲ್ಲಿ 10–12 ಬಗೆಯ ಪ್ರಭೇದಗಳಿವೆ.

ಅವೆಲ್ಲವೂ ಗೋದಿ, ಜ಼ೋಳ, ರೈ, ಬಾರ್ಲಿ, ಓಟ್ಸ್ ಮುಂತಾದ ಧಾನ್ಯಬೆಳೆಗಳ ಮೇಲೆ ಪರತಂತ್ರ ಜೀವಿಗಳಾಗಿ ಬೆಳೆಯುವುದುಂಟು. ಮುಖ್ಯವಾಗಿ ಈ ಶಿಲೀಂಧ್ರ ಧಾನ್ಯದ ಹೂಗಳ ಅಂಡಾಶಯಕ್ಕೇ ಹೆಚ್ಚಾಗಿ ಗಂಟುಬೀಳುವುದು. ಮುಂದೆ ಆ ಬೆಳೆಗಳಲ್ಲಿ ಎರ್ಗಟ್ ಎಂಬ ರೋಗ ಉಂಟಾಗುತ್ತದೆ. ಈ ಶಿಲೀಂಧ್ರ ಧಾನ್ಯಬೆಳೆಗಳಲ್ಲಿ ರೋಗ ಉಂಟುಮಾಡಿ ಬೆಳೆಗಳನ್ನು ಹಾಳುಮಾಡುವುದಕ್ಕಿಂತ, ಅವು ಉತ್ಪಾದಿಸುವ ಒಂದು ಚಿಕ್ಕ ಕಡ್ಡಿಯಂಥ ಸ್ಕ್ಲೀರೋಷಿಯಂ ಅಥವಾ ಎರ್ಗಟ್ ಎಂಬ ರೂಪಾಂತರ ಹೊಂದಿದ ಧಾನ್ಯಫಲದಲ್ಲಿರುವ ವಿಶಿಷ್ಟ ಸಸ್ಯಕ್ಷಾರ (ಆಲ್ಕಲಾಯಿಡ್) ವಸ್ತುವಿಗೇ ಹೆಚ್ಚು ಮಹತ್ತ್ವವಿದೆ.

ಎರ್ಗಟ್ ರೋಗದಿಂದ ಮನುಷ್ಯರಲ್ಲಿ ಆಗುವ ಅನಿಷ್ಟ ಪರಿಣಾಮಗಳು ಹಲವಾರು. ತಲೆಗೂದಲು ಅಕಾಲಿಕವಾಗಿ ಉದುರಿಹೋಗುವುದು; ಹಲ್ಲು ಬೀಳುವುದು; ಉಗುರುಕಳಚಿ ಬೀಳುವುದು; ತೀವ್ರ ಪ್ರಸಂಗಗಳಲ್ಲಿ ಎಲುಬು ಕೊಳೆಯುವುದು; ಅಂಗಕ್ಷಯ, ಪಾರ್ಶ್ವವಾಯು, ನರಗಳ ದೌರ್ಬಲ್ಯ ಇತ್ಯಾದಿ ವಿಲಕ್ಷಣಗಳು ಕಾಣಿಸಿಕೊಳ್ಳುವುವು. ಇಂಥ ರೋಗಗಳಿಗೆಲ್ಲ, ಎರ್ಗಟಿಸಂ ಎನ್ನುವುದುಂಟು. ಪ್ರಾಣಿಗಳಲ್ಲಿ ಕೂಡ ಹಲವು ಗಂಡಾಂತರಕಾರಿ ಪರಿಣಾಮಗಳು ಉಂಟಾಗುತ್ತವೆ. ಗೊರಸುಗಳು ಹುಣ್ಣಾಗಿ ಉದುರಿ ಬೀಳುವುದು; ಬಾಲ, ಕಿವಿ, ಕೊಂಬು ಮುಂತಾದುವು ಕಳಚಿ ಬೀಳುವುದು ಮತ್ತು ಗರ್ಭಪಾತವಾಗಿ ಹುಟ್ಟುವ ಕರುಗಳ ಸಾವು ಮುಂತಾದುವು. ರೋಗಗ್ರಸ್ತ ಭಾಗಗಳಲ್ಲಿ ರಕ್ತನಾಳಗಳು ಆಕುಂಚನಗೊಂಡು ಕೋಶಭಿತ್ತಿಗಳು ಬಿರುಸಾಗುವುದರಿಂದ ರಕ್ತಪೂರೈಕೆ ನಿಂತಾಗ ಅನಿಷ್ಟ ಪರಿಣಾಮಗಳು ಉಂಟಾಗುತ್ತವೆ. ಕೆಲವು ಗಂಡಾಂತರಕಾರಿ ಪರಿಣಾಮಗಳು ಕಂಡುಬಂದರೂ ಈ ಸ್ಕ್ಲೀರೋಷಿಯಂ ಅಥವಾ ಎರ್ಗಟ್ಸ್ ಎಂಬುವುಗಳಿಂದ ಮಾನವನಿಗೆ ವೈದ್ಯಕೀಯ ದೃಷ್ಟಿಯಿಂದ ಅನೇಕ ರೀತಿಯ ಪ್ರಯೋಜನಗಳೂ ಆಗುತ್ತವೆ. ಅವುಗಳಲ್ಲಿ ಕೆಲವು ಬಗೆಯ ಸಸ್ಯಕ್ಷಾರದಂಥ ರಾಸಾಯನಿಕವಸ್ತುಗಳು ಇದ್ದು ಅವು ಸ್ನಾಯುಗಳ ಕ್ರಿಯೆಗಳನ್ನು ನಿಯಂತ್ರಿಸಬಲ್ಲವು. ರಕ್ತಸ್ರಾವ ನಿಲ್ಲಿಸುವುದಕ್ಕೆ ಮತ್ತು ಪ್ರಸವಕಾಲದಲ್ಲಿ ಗರ್ಭಕೋಶ ಆಕುಂಚನಗೊಂಡು ಜನನಕ್ರಿಯೆ ಸರಾಗವಾಗಿ ಕೊನೆಗೊಳ್ಳುವುದಕ್ಕೆ ಪೋಷಕವಾಗುವಂತೆ ಔಷಧಗಳ ರೂಪದಲ್ಲಿ ಬಳಸುವುದುಂಟು.

ಸಸ್ಯಕ್ಷಾರಗಳಲ್ಲಿ ಒಟ್ಟು ಏಳು ಬಗೆ. ಅವುಗಳಲ್ಲಿ ಎರ್ಗಟೊಮಿನ್ ಮತ್ತು ಎರ್ಗಟಾಕ್ಸಿನ್ ಎಂಬುವು ಪ್ರಭಾವಿಯಾದುವು. ಇವೆರಡರ ಜೊತೆಗೆ ಎರ್ಗಟಿನಲ್ಲಿ ಅಸಿಟೈಲ್ ಕೋಲಿನ್ ಎಂಬ ವಸ್ತುವೊಂದು ಇದ್ದು ಅದೇ ಸ್ನಾಯುಗಳ ಆಕುಂಚನಕ್ಕೆ ಮುಖ್ಯ ಕಾರಣವೆನ್ನಲಾಗುತ್ತದೆ.

ಇಟಲಿ, ಆಸ್ಟ್ರೇಲಿಯ ಮುಂತಾದ ಕೆಲವು ದೇಶಗಳಲ್ಲಿಯೂ ಭಾರತದಲ್ಲಿಯೂ ಈ ಕ್ಲಾವಿಸೆಪ್ಸ್ ಶಿಲೀಂಧ್ರವನ್ನು ಪ್ರಾಯೋಗಿಕವಾಗಿ ಬೆಳೆಸಿ ಅದರಿಂದ ಎರ್ಗಟನ್ನು ಉತ್ಪಾದಿಸುವ ಪ್ರಯತ್ನಗಳು ಸಾಗಿವೆ. ಹೀಗೆ ರೈ, ಬಾರ್ಲಿ, ಓಟ್ಸ್ ಮುಂತಾದ ಬೆಳೆಗಳ ಮೇಲೆ ಕೆಲವು ಬೀಜಾಣುಗಳಿಂದ ಕೃತಕವಾಗಿಯೂ ಉದ್ದೇಶಪೂರ್ವಕವಾಗಿಯೂ ರೋಗಲಕ್ಷಣಗಳನ್ನು ಉಂಟುಮಾಡಿ ಆ ಬೆಳೆಗಳಲ್ಲಿ ಕ್ರಮೇಣ ಹೆಚ್ಚೆಚ್ಚು ಸ್ಕ್ಲೀರೋಷಿಯಂ ಅಥವಾ ಎರ್ಗಟ್ ಉತ್ಪತ್ತಿಯಾಗುವಂತೆ ಯೋಜಿಸುತ್ತಾರೆ. ಇದರಿಂದ ಒಂದು ರೀತಿಯಲ್ಲಿ ಎರ್ಗಟಿನ ವ್ಯವಸಾಯವೇ ಒಂದು ಮುಖ್ಯ ಕಸುಬಿನಂತೆ ಆರಂಭವಾಗಿ ಎರ್ಗಟಿನ ಉತ್ಪಾದನೆ ಹೆಚ್ಚುತ್ತಿದೆ. ಮುಂದೆ ಅವನ್ನು ಔಷಧ ಪ್ರಯೋಗಶಾಲೆಗಳಿಗೆ ಕಳುಹಿಸಿ ಅಲ್ಲಿ ಅವುಗಳಿಂದ ಔಷಧ ರೂಪದ ವಿಷವಸ್ತುಗಳನ್ನು (ಎರ್ಗಟೊಮಿನ್, ಎರ್ಗಟಾಕ್ಸಿನ್ ಇತ್ಯಾದಿ) ಹೊರತೆಗೆದು ಮಾರಾಟಕ್ಕೆ ಬಿಡುಗಡೆ ಮಾಡುತ್ತಾರೆ.

ಎರ್ಗಟನ್ನು ಧಾನ್ಯಗಳಿಂದ ಬೇರ್ಪಡಿಸಲು ದೊಡ್ಡ ತಟ್ಟೆ ಅಥವಾ ಕಡಾಯಿಗಳಲ್ಲಿ ಶೇ. 20 ಉಪ್ಪುನೀರು ಹಾಕಿ ಅದರಲ್ಲಿ ಧಾನ್ಯವನ್ನು ಸುರಿಯುತ್ತಾರೆ. ಕಾಳುಗಳು ನೀರಿನಲ್ಲಿ ಮುಳುಗಿ ತಳಭಾಗದಲ್ಲಿ ಸಂಗ್ರಹಗೊಳ್ಳುತ್ತವೆ. ಆದರೆ ಎರ್ಗಟುಗಳು ನೀರಿನ ಮೇಲೆ ತೇಲುವುದರಿಂದ ಅವನ್ನು ಜಾಲರಿ, ಸೌಟುಗಳಲ್ಲಿ ಹೊರತೆಗೆದು, ಬಿಸಿಲಿನಲ್ಲಿ ಒಣಗಿಸಿ ಅನಂತರ ಸಣ್ಣ ಚೀಲ ಅಥವಾ ಪ್ಯಾಕೆಟುಗಳಲ್ಲಿ ತುಂಬಿ ಕಳುಹಿಸುತ್ತಾರೆ. ಮುಂದೆ ಪ್ರಯೋಗಶಾಲೆಗಳಲ್ಲಿ ಅವುಗಳಿಂದ ಸಸ್ಯಕ್ಷಾರಗಳನ್ನು ಹೊರತೆಗೆಯುತ್ತಾರೆ. (ಎಂ.ಎಸ್.ಎಸ್.ಆರ್.ಜಿ.ಆರ್.ಸಿ)

**ಎರ್ಗೊಸ್ಟೀರಾಲ್:** ವಿಕಾಸದ ದೃಷ್ಟಿಯಿಂದ ಹಿಂದುಳಿದವೆಂದು ಹೇಳಲಾದ ಸಸ್ಯಗಳಾದ ಶಿಲೀಂಧ್ರ ಬೂಸ್ಟುಗಳಲ್ಲಿ ದೊರೆಯುವ ಒಂದು ಸ್ಟೀರಾಯ್ಡ್ ಆಲ್ಕೊಹಾಲ್. ಇದನ್ನು ಮೊದಲ ಬಾರಿಗೆ ರೈ ಮತ್ತು ಇನ್ನು ಹಲವು ಧಾನ್ಯಗಳ ಮೇಲೆ ಬರುವ ಎರ್ಗಟ್ ಬೂಸ್ಟಿನಿಂದ ಪಡೆದುದರಿಂದ ಈ ಸಂಯುಕ್ತಕ್ಕೆ ಎರ್ಗೊಸ್ಟೀರಾಲ್ ಎಂದು ಹೆಸರಾಯಿತು. ಎರ್ಗೊಸ್ಟೀರಾಲ್ ಮತ್ತು ಅದರ ಕೆಲವು ವ್ಯುತ್ಪನ್ನ ಮತ್ತು ಸಂಬಂಧಿಗಳು ಹಲವು ನಿರ್ದಿಷ್ಟ ತಳಿಯ ಯೀಸ್ಟ್, ಆಸ್ಪರ್‌ಜಿಲಸ್ ಮತ್ತು ಪೆನ್ಸಿಲಿನ್ ಬೂಸ್ಟುಗಳಲ್ಲಿ ದೊರೆಯುತ್ತವೆ. ವಾಣಿಜ್ಯ ಪ್ರಮಾಣದ ತಯಾರಿಕೆಗೆ ಇವೇ ಮುಖ್ಯ ಆಕರಗಳು. ಈ ಮುಂದೆ ತೋರಿಸಿರುವ ಎರ್ಗೊಸ್ಟೀರಾಲ್‌ಸಮಘಟಕಗಳನ್ನು (ಐಸೋಮರ್ಸ್) ಎರ್ಗೊಸ್ಟೀರಾಲಿನಿಂದ ತಯಾರಿಸಬಹುದು.

ಎರ್ಗೊಸ್ಟೀರಾಲಿನ ರಚನಾರಹಸ್ಯದ ಶೋಧನೆಯಲ್ಲಿ ವಿಂಡಾಸ್ ಮತ್ತು ಆತನ ಸಹೋದ್ಯೋಗಿಗಳ ಕಾಣಿಕೆ ಮುಖ್ಯವಾದುದು. ಇದನ್ನು ಪ್ರಯೋಗ ಶಾಲೆಯಲ್ಲಿಯೂ ಸಂಯೋಜಿಸಲಾಗಿದೆ ಮತ್ತು ಇದರ ಜೈವಿಕ ಉತ್ಪಾದನೆಯ ಬಗೆಯನ್ನೂ ಅರಿಯಲಾಗಿದೆ.




ಎರ್ಗೊಸ್ಟೀರಾಲನ್ನು ನಿಯಂತ್ರಿತ ರೀತಿಯಲ್ಲಿ ಅತಿನೇರಿಳೆ ವಿಸರಣಕ್ಕೆ ಒಳಪಡಿಸಿ ಕ್ಯಾಲ್ಸಿಫೆರಾಲ್ ಅಥವಾ ಜೀವಾತು–$D_2$ ಸಂಯುಕ್ತವನ್ನು ತಯಾರಿಸಬಹುದು. ಅಲ್ಪಪ್ರಮಾಣದಲ್ಲಿ ವೈದ್ಯಕೀಯ ಸಂಶೋಧನೆಗಳಲ್ಲೂ ಬಹುಮಟ್ಟಿಗೆ ಜೀವಾತು $D_2$ ತಯಾರಿಸಲೂ ಎರ್ಗೊಸ್ಟೀರಾಲನ್ನು ಉಪಯೋಗಿಸಲಾಗುತ್ತಿದೆ. (ಕೆ.ಟಿ.ಎಸ್.)

**ಎರ್ಸಿಲ್ಯಾ, ಈ ಥೂನ್ಯಿಗಾ, ಆಲೋನ್‌ಸೋ ದಾ:** 1533–94 ಸ್ಪೇನಿನ ಕವಿ. ಚಿಲಿ ದೇಶವನ್ನು ಸ್ಪೇನಿನ ಸೈನ್ಯಗಳು ಆಕ್ರಮಿಸಿದಾಗ ಆ ಯುದ್ಧಗಳಲ್ಲಿ ಭಾಗವಹಿಸಿ ಅದೇ ವಸ್ತುವಿನ ಮೇಲೆ ಲಾ ಅರೌಕಾನಾ ಎಂಬ ಭವ್ಯ ಕಾವ್ಯವನ್ನು ಬರೆದ. ಸ್ಪೇನ್ ರಾಜ್ಯವನ್ನು ವಿಸ್ತರಿಸಿ ಕ್ರೈಸ್ತಧರ್ಮ ಹರಡುವುದು ತನ್ನ ಕರ್ತವ್ಯವೆಂದು ನಂಬಿದ್ದರೂ ಕವಿಗೆ ಅಮೆರಿಕದ ಮೂಲನಿವಾಸಿಗಳಲ್ಲಿ ವಿಶೇಷ ಸಹಾನುಭೂತಿಯಿತ್ತು. ಅವನ ದೃಷ್ಟಿಯಲ್ಲಿ ಅವರು ಉದಾತ್ತ ಅನಾಗರಿಕರು. ರೆಡ್ ಇಂಡಿಯನ್ ವೀರ ಕೌಪಲಿಕಾನ್ ಈ ಕಾವ್ಯದ ನಾಯಕ. ಯುದ್ಧದಲ್ಲಿ ರೆಡ್ ಇಂಡಿಯನ್ ಜನರಿಗೆ ಒದಗಿದ ಅಪಜಯ ಮತ್ತು ನಾಯಕನಿಗೆ ಸಂಭವಿಸಿದ ಮರಣದಂಡನೆಯ ಸನ್ನಿವೇಶಗಳು ಹೃದಯವಿದ್ರಾವಕ ವಾಗಿಯೂ ವೀರೋಚಿತವಾಗಿಯೂ ಚಿತ್ರಿತವಾಗಿವೆ. ಪ್ರಕೃತಿ, ಜನಜೀವನ ಮತ್ತು ಯುದ್ಧ ಕೌಶಲಗಳ ವರ್ಣನೆಯಲ್ಲೂ ಉಪಮಾನಗಳಲ್ಲೂ ರೆಡ್ ಇಂಡಿಯನ್ ಜನರ ಪ್ರಪಂಚ ಪ್ರತಿಬಿಂಬಿತವಾಗಿರುವುದು ಕಾವ್ಯದ ಒಂದು ವೈಶಿಷ್ಟ್ಯ. (ಎಂ.ಕೆ.ಕೆ; ಆರ್.ಜಿ.)

**ಎರ್ನಾಕುಲಂ:** ಕೇರಳ ರಾಜ್ಯದ ಒಂದು ಪಟ್ಟಣ. ಅದೇ ಹೆಸರಿನ ಜಿಲ್ಲೆಯ ಕೇಂದ್ರ. ಕೊಚ್ಚಿ (ಕೊಚೀನ್) ಬಂದರಿಗೆ ಈಶಾನ್ಯದಲ್ಲಿ 3 ಕಿಮೀ ದೂರದಲ್ಲಿ ಸಮುದ್ರದ ಹಿನ್ನೀರಿನ (ಬ್ಯಾಕ್ ವಾಟರ್) ಮಧ್ಯದಲ್ಲಿದೆ. ಜನಸಂಖ್ಯೆ 5 ಲಕ್ಷ. ಕೊಚ್ಚಿ ಮತ್ತು ತಿರುವಾಂಕೂರ್ ಸಂಸ್ಥಾನಗಳು ಸೇರಿ ಒಂದು ರಾಜ್ಯವಾಗುವವರೆಗೂ ಕೊಚ್ಚಿಯ ರಾಜಧಾನಿಯಾಗಿದ್ದು ಅನಂತರ ಉಚ್ಚನ್ಯಾಯಾಲಯದ ಕೇಂದ್ರವಾಯಿತು. ಇಲ್ಲಿ ಕೇರಳ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ ಐದು ಕಾಲೇಜುಗಳಿವೆ. ಸಾಬೂನು, ಎಣ್ಣೆ,

ಗ್ಲಿಸರಿನ್, ರೇಷ್ಮೆ ಮುಂತಾದ ಕೈಗಾರಿಕೆಗಳು ಇಲ್ಲಿವೆ. ಮೀನುಗಾರಿಕೆ ಹಾಗೂ ತೆಂಗಿನ ಬೇಸಾಯ ಜನರ ಎರಡು ಪ್ರಮುಖ ಕಸಬುಗಳು. ಇಲ್ಲೊಂದು ಸರ್ಕಾರಿ ಮುದ್ರಣಾಲಯವೂ ಇದೆ. *

**ಎರ್ಬಿಯಮ್:** ವಿರಳ ಭಸ್ಮಧಾತುಗಳಲ್ಲಿ ಲ್ಯಾಂಥೆನೈಡ್ಸ್: C ರೇರ್‌ಅರ್ತ್ ಎಲಿಮೆಂಟ್ಸ್) ಒಂದು. ಆವರ್ತಕೋಷ್ಟಕದ 3ನೆಯ ಗುಂಪಿಗೆ ಸೇರಿದೆ. ಇದರ ರಾಸಾಯನಿಕ ಚಿಹ್ನೆ Er, ಪರಮಾಣು ತೂಕ 167.26, ಪರಮಾಣು ಸಂಖ್ಯೆ 68, ಇದರ ಎಲೆಕ್ಟ್ರಾನಿಕ್ ವಿನ್ಯಾಸ $I_8^2\ 2_8^2\ 2p^6\ 3_8^2\ 3p^6\ 3d^{10}\ 4_8^2\ 4p^6\ 4d^{10}\ 4f^{12}\ 58^2\ 5p^6$ $6s^2$ಲೋಹವಸ್ತುವಾಗಿರುವ ಇದನ್ನು 1843ರಲ್ಲಿ ಸ್ವೀಡನ್ನಿನ ರಸಾಯನವಿಜ್ಞಾನಿ ಕಾರ್ಲ್ ಗುಸ್ಟಾವ್ ಮೊಸಾಂಡರ್ (1797–1858) ಕಂಡುಕೊಂಡ. ಶುದ್ಧರೂಪದ ಯೆಟ್ರಿಯದ (ಯೆಟ್ರಿಯಂ ಆಕ್ಸೈಡ್ $Y_2O_3$) ಪರೀಕ್ಷೆಯನ್ನು ನಡೆಸುತ್ತಿದ್ದಾಗ ಮತ್ತೆರಡು ವಸ್ತುಗಳ ಆಕ್ಸೈಡುಗಳಿರುವುದು ಕಂಡುಬಂತು. ಒಂದನ್ನು ಎರ್ಬಿಯಮ್ ಎಂದೂ ಮತ್ತೊಂದನ್ನು ಟೆರ್ಬಿಯಮ್ ಎಂದೂ ಕರೆದ. ಇತರ ಭಸ್ಮಧಾತುಗಳಂತೆಯೇ ಎರ್ಬಿಯಮ್ ಮತ್ತು ಅದರ ಸಂಯುಕ್ತಗಳನ್ನು ಇತರ ಭಸ್ಮಧಾತುಗಳು ಹಾಗೂ ಅವುಗಳ ಸಂಯುಕ್ತಗಳಿಂದ ಬೇರ್ಪಡಿಸುವುದು ಬಹಳ ಕಷ್ಟ. ಪಾಲಿಕ್ರೇಸ್ (ಸು. 7.5% ಎರ್ಬಿಯಮ್ ಆಕ್ಸೈಡ್), ಯೂಕ್ಸೆನೈಟ್ ಮತ್ತು ಗ್ಯಾಡೋಲಿನೈಟುಗಳಲ್ಲಿ ಇದು ದೊರೆಯತ್ತದೆ. ಸ್ವಾಭಾವಿಕವಾಗಿ ದೊರೆವ ಈ ವಸ್ತುವಿನಲ್ಲಿ 162Er(0.136%), 164Er (1.56%), 166Er (33.41%), 167Er (22.94%), 168Er (27.07%), 170Er (14.88%), ಎಂಬ ಸ್ಥಿರಸಮ ಸ್ಥಾನಿಗಳು ಸೇರಿರುತ್ತವೆ.

ಕಳೆದ 20 ವರ್ಷಗಳಲ್ಲಿ ಅಯಾನು ವಿನಿಮಯ ವರ್ಣಲೇಖೀವಿಜ್ಞಾನದಲ್ಲಿ (ಕ್ರೊಮಟಾಗ್ರಫಿ) ಅಗಿರುವ ಪ್ರಗತಿಯಿಂದಾಗಿ ಆಧಿಕ ಪ್ರಮಾಣದಲ್ಲಿ ಎರ್ಬಿಯಮ್ ಸಂಯುಕ್ತಗಳನ್ನು ತಯಾರಿಸುವುದು ಸಾಧ್ಯವಾಗಿದೆ. ಒಂದನ್ನೇ ಅಧಿಕ ಪ್ರಮಾಣದಲ್ಲಿ ಬಳಸುವ ಯಾವುದೇ ಕ್ಷೇತ್ರ ಇನ್ನೂ ಮೂಡಿಲ್ಲ (**ನೋಡಿ– ವಿರಳ–ಭಸ್ಮಧಾತುಗಳು**). *

**ಎರ್ರಗುಡಿ:** ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಪತ್ತಿಕೊಂಡ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಸಮೀಪದ ಕೆಲವು ಬಂಡೆಗಳಲ್ಲಿ ಅಶೋಕನ ಶಾಸನಗಳು ದೊರಕಿವೆ. ಇವುಗಳ ಭಾಷೆ ಆ ಕಾಲದ ಪ್ರಾಕೃತ. ಲಿಪಿ ಬ್ರಾಹ್ಮೀ. ಅಶೋಕನ ಗೌಣ ಶಿಲಾಶಾಸನಗಳಲ್ಲಿ ಮೊದಲ ಎರಡೂ ಬೃಹದ್ ಶಿಲಾಶಾಸನಗಳಲ್ಲಿ ಮೊದಲ ಹದಿಮೂರೂ ಇಲ್ಲಿವೆ. ಅಶೋಕನ ದಕ್ಷಿಣ ರಾಜಧಾನಿಗಳಲ್ಲೊಂದಾದ ಸುವರ್ಣಗಿರಿಯೇ ಈ ಎರ್ರಗುಡಿ ಇರಬಹುದೆಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. (ಎಸ್.ಎನ್.)

**ಎರ್ರಾಪ್ರೆಗ್ಗಡ:** ಆಂಧ್ರ ಮಹಾಭಾರತ ಕರ್ತೃಗಳಾದ ಕವಿತ್ರಯರಲ್ಲಿ ಮೂರನೆಯವ. ಗುಂಟೂರು ಜಿಲ್ಲೆಯ ಗುಡ್ಲೂರು ನಿವಾಸಿ. 14ನೆಯ ಶತಮಾನದ ಪೂರ್ವಾರ್ಧದಲ್ಲಿದ್ದನೆಂದು ವಿದ್ವಾಂಸರ ಅಭಿಮತ. ಈತನಿಗೆ ಶಂಭುದಾಸನೆಂಬ ಹೆಸರೂ ಇತ್ತು. ಈತ ಮಹಾ ಶಿವಭಕ್ತನಾದ ನಿಯೋಗಿಬ್ರಾಹ್ಮಣ. ನನ್ನಯ ಮತ್ತು ತಿಕ್ಕನರು ಬರೆಯದೆ ಉಳಿಸಿದ ಅರಣ್ಯಪರ್ವದ ಭಾಗವನ್ನು ಈತ ನನ್ನಯನ ರೀತಿಯಲ್ಲಿಯೇ ಬರೆದು ಪೂರೈಸಿದ ಪ್ರತಿಭಾಶಾಲಿ. ಲಕ್ಷ್ಮೀನೃಸಿಂಹಪುರಾಣ ಎಂಬ ಒಂದು ಪ್ರಬಂಧಕಾವ್ಯವನ್ನು ಬಹಳ ಅಚ್ಚುಕಟ್ಟಾಗಿ ಬರೆದು ಪ್ರಬಂಧ ಪರಮೇಶ್ವರ ಎಂಬ ಬಿರುದಿಗೆ ಪಾತ್ರನಾದ. ಕವಿಯ ಇನ್ನೊಂದು ಕೃತಿ ಹರಿವಂಶ. ಇದನ್ನು ಆಹೋಬಲ ನಾರಸಿಂಹಸ್ವಾಮಿಗೆ ಸಮರ್ಪಿಸಿದ್ದಾನೆ. ಭಾರತದ ಅನುಬಂಧದಂತಿರುವ ಈ ಕಾವ್ಯದಲ್ಲಿ ಶ್ರೀಕೃಷ್ಣನ ಸಮಗ್ರಚರಿತ್ರೆ ಬಂದಿದೆ. ಎರ್ರಾಪ್ರೆಗ್ಗಡನ ಕವಿತಾವೈಭವ ಈ ಕಾವ್ಯದಲ್ಲಿ ಪೂರ್ಣವಾಗಿ ಪ್ರಕಾಶಕ್ಕೆ ಬಂದಿದೆ. ಶ್ರೀಕೃಷ್ಣನ ಬಾಲಲೀಲೆ, ಶೃಂಗಾರ, ರಾಜನೀತಿ, ಶೌರ್ಯ ಮೊದಲಾದ ಗುಣಾತಿಶಯಗಳನ್ನು ಲಲಿತಪದಬಂಧುರವಾದ ಸುಂದರ ಶೈಲಿಯಲ್ಲಿ, ಹೃದಯಾನಂದಕರವಾಗಿ ಚಿತ್ರಿಸಿದ್ದಾನೆ.

ಈತ ಒಂದು ರಾಮಾಯಣವನ್ನು ಬರೆದನೆಂದು ಹೇಳಿದೆಯಾದರೂ ಆ ಗ್ರಂಥ ಸಿಕ್ಕಿಲ್ಲ. (ಬಿ.ಆರ್.)

**ಎರ್ಲಾಂಗರ್, ಜೋಸೆಫ್:** 1874–1965. ನರಗಳ ನಿಜಗೆಲಸಗಳ ವ್ಯತ್ಯಾಸ ತೋರಿಕೆಯ ಕೃತಿಗಾಗಿ ಗ್ಯಾಸರ್‌ನೊಂದಿಗೆ ಕ್ಯಾಥೋಡ್‌ರೇ ಆಸಿಲೋಗ್ರಾಫ್ ಅಳವಡಿಕೆಗಾಗಿ (**ನೋಡಿ– ಗ್ಯಾಸರ್,–ಹರ್ಬರ್ಟ್–ಸ್ಪೆನ್ಸರ್**) ನೊಬೆಲ್ ಬಹುಮಾನ ಪಡೆದ (1944) ಅಂಗಕ್ರಿಯಾ ವಿಜ್ಞಾನಿ. ಸ್ಯಾನ್ ಫ್ರಾನ್ಸಿಸ್ಕೋನಲ್ಲಿ ಹುಟ್ಟಿ, ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದ ವೈದ್ಯಶಾಲೆಯಲ್ಲಿ ಎಂ.ಡಿ ಪದವೀಧರನಾಗಿ (1899) ಅಂಗಕ್ರಿಯಾಪಟು ವಿಲಿಯಂ ಹೊವೆಲ್‌ನೊಂದಿಗೆ ಸೇರಿದ. ರಕ್ತದ ಒತ್ತಡವನ್ನು ಗೆರೆಚಿತ್ರದಲ್ಲಿ ಗುರುತಿಸುವುದನ್ನೂ ಗುಂಡಿಗೆಯಲ್ಲಿ ನರಗಳಲ್ಲಿನ ಸಾಗಣೆಯನ್ನೂ ಕಂಡುಹಿಡಿದು ಬೆಳಕಿಗೆ ಬಂದ. 1906ವರೆಗೆ ಜಾನ್ಸ್ ಹಾಪ್‌ಕಿನ್ಸ್ ಆಸ್ಪತ್ರೆಯ ವೈದ್ಯಶಾಲೆಯಲ್ಲಿ ಕೆಲಸಮಾಡಿ, ಮುಂದೆ ಹೊಸದಾಗಿ ಸ್ಥಾಪಿತವಾದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ವೈದ್ಯಶಾಲೆಯ ಅಂಗಕ್ರಿಯಾ ಪ್ರಾಧ್ಯಾಪಕನಾಗಿ ನೇಮಕಗೊಂಡ ಮುಂದೆ 1910ರಿಂದ ಮೊದಲಾಗಿ 1946ರಲ್ಲಿ ನಿವೃತ್ತನಾಗುವ ತನಕ ವಾಷಿಂಗ್ಟನ್ ವಿಶ್ವವಿದ್ಯಾಲಯಗಳಲ್ಲೂ ಅಂಗಕ್ರಿಯಾವಿಜ್ಞಾನದ ಪ್ರಾಧ್ಯಾಪಕನಾಗಿದ್ದ. ನಾಡಿಯನ್ನು ಕಿವಿಯಿಂದಾಲಿಸಿ ರಕ್ತದ ಒತ್ತಡವನ್ನು ತೋಳಿನಲ್ಲಿ ಅಳೆವ ವಿಧಾನಗಳಲ್ಲಿ ಸದ್ದು ಹುಟ್ಟುವುದರ ತಂತ್ರವನ್ನು ಆಳವಾಗಿ ಪರಿಶೋಧಿಸಿ, ರಕ್ತ ಪರಿಚಲನೆಯ ಅಭ್ಯಾಸದಲ್ಲಿ ಆಸಕ್ತನಾಗಿದ್ದ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ವಿಧಾನಗಳು ಬೆಳಕಿಗೆ ಬಂದುದರಿಂದ ನರಗಳ ಕೆಲಸಗಳಲ್ಲಿ ವಿಶೇಷ ಆಸಕ್ತನಾಗಿದ್ದುದರಿಂದಲೇ ನೊಬೆಲ್ ಬಹುಮಾನ ಬಂದದ್ದು. ಚೋದಿಸುವಷ್ಟು ಬಲವಿಲ್ಲದ ಆವೇಗ (ಸ್ಟಿಮುಲಸ್) ಬಂದಾಗ ನರಗಳಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಿ ವಿವರಿಸಿದ. ಮಜ್ಜಿಕಗೂಡಿನ (ಮಯಲಿನೇಟೆಡ್) ನರ ತಂತುಗಳಲ್ಲಿ ಆವೇಗದ ಸಾಗಣೆ ಒಂದೇ ಸಮನಾಗಿರದೆ ಹೆಜ್ಜೆ ಹೆಜ್ಜೆಗಳಲ್ಲಿರುವುವೆಂಬ ಇಂದಿನ ಕಲ್ಪನೆಗೆ ಮೂಲವಾದ ಮೊತ್ತಮೊದಲ ಪ್ರಯೋಗಗಳನ್ನು ಎರ್ಲಾಂಗ್ ನಡೆಸಿದ.

ಎರ್ಲಾಂಗರ್‌ನ ಸಾಧನೆಗಾಗಿ ಕ್ಯಾಲಿಫೋರ್ನಿಯ ವಿಸ್ಕಾನ್ಸಿನ್, ಪೆನ್ಸಿಲ್ವೇನಿಯ ಮತ್ತು ಮಿಚಗನ್ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿದವು. (ಡಿ.ಎಸ್.ಎನ್.)

**ಎಲ್ ಆಲಮೇನ್:** ಈಜಿಪ್ಟಿನ ಅಲೆಕ್ಸಾಂಡ್ರಿಯ ನಗರದ ಪಶ್ಚಿಮಕ್ಕೆ 80 ಕಿ.ಮೀ ದೂರದಲ್ಲಿರುವ ಸ್ಥಳ. ಎರಡನೆಯ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷ್ ಕಾಮನ್‌ವೆಲ್ತಿನ ಎಂಟನೆಯ ಸೇನೆಗೂ ಮಾರ್ಷಲ್ ಎಡ್ವಿನ್ ರಾಮೆಲನ ನೇತೃತ್ವದಲ್ಲಿ ಆಫ್ರಿಕದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಜರ್ಮನ್–ಇಟಾಲಿಯನ್ ಸಂಯುಕ್ತ ಪಡೆಗಳಿಗೂ ನಡುವೆ ಇಲ್ಲಿ ಎರಡು ಕದನಗಳು ನಡೆದವು (1942). ಮೊದಲನೆಯ ಕದನ ನಡೆದದ್ದು ಜೂನ್ 30ರಿಂದ ಜುಲೈ 25ರ ವರೆಗೆ. ಆಗ ಜನರಲ್ ಸರ್ ಕ್ಲಾಡ್ ಆಕಿನ್‌ಲೆಕ್‌ನ ನೇತೃತ್ವದಲ್ಲಿ ಮೊದಲ ಬಾರಿಗೆ ರಾಮೆಲನ ಸೇನೆಯನ್ನು ತಡೆಯಲಾಯಿತು. ಎರಡನೆಯ ಯುದ್ಧ ಅಕ್ಟೋಬರ್ 23ರಂದು ಆರಂಭವಾಗಿ ನವೆಂಬರ್ 4ರಂದು ಕೊನೆಗೊಂಡಿತು. ಈ ಎರಡನೆಯ ಕದನ ನಿರ್ಣಾಯಕವಾದದ್ದು. ಇದರಲ್ಲಿ ಬ್ರಿಟಿಷ್ ಸೇನೆ ಸಂಪೂರ್ಣವಾಗಿ ಮೇಲುಗೈ ಸ್ಥಾಪಿಸಿತಲ್ಲದೆ, ಅನಂತರ ಆಕ್ರಮಣಕಾರರನ್ನು ಅಟ್ಟಿಸಿಕೊಂಡು ಹೋಗಿ ಇಡೀ ಉತ್ತರ ಆಫ್ರಿಕದಿಂದ ಅವರು ಕಾಲ್ತೆಗೆಯುವ ಹಾಗೆ ಮಾಡಿತು. ಎರಡನೆಯ ಕದನದ ಸಮಯದಲ್ಲಿ ಎಂಟನೆಯ ಸೇನೆಯ ದಂಡನಾಯಕನಾಗಿದ್ದವನು ಜನರಲ್ ಸರ್ ಬರ್ನಾಡ್ (ಅನಂತರ ಲಾರ್ಡ್) ಮಾಂಟ್‌ಗಮರಿ (**ನೋಡಿ– ಎರಡನೆಯ–ಮಹಾಯುದ್ಧ**). (ಎ.ಎನ್.ಎಸ್.ಎಂ.)

**ಎಲ್ ಡೊರಾಡೋ:** ಅಮೆರಿಕ ಸಂಯುಕ್ತಸಂಸ್ಥಾನದ ಅರಕನ್ಸಾಸ್‌ನ ದಕ್ಷಿಣಕ್ಕಿರುವ ನಗರ. ಜನಸಂಖ್ಯೆ 26,625(2002) ರಾಜ್ಯದ ತೈಲಕೇಂದ್ರ. ವ್ಯವಸಾಯೋತ್ಪನ್ನಗಳ ವ್ಯಾಪಾರ ಕೇಂದ್ರ. ಇಲ್ಲಿ ಮರಮುಟ್ಟುಗಳ ಕಾರ್ಖಾನೆಗಳೂ ಹತ್ತಿಯ ಗಿರಣಿಗಳೂ ತೈಲಶುದ್ಧೀಕರಣ ಕೇಂದ್ರಗಳೂ ಎರಕಹೊಯ್ಯುವ ಕಾರ್ಖಾನೆಗಳೂ ಇವೆ, ದನ, ಧಾನ್ಯ, ತೈಲ ಇಲ್ಲಿಂದ ರಫ್ತಾಗುತ್ತವೆ. 1877ರಲ್ಲಿ ಇದನ್ನು ನಗರವಾಗಿ ಪರಿಗಣಿಸಲಾಯಿತು. 1951ರಲ್ಲಿ ನಗರಸಭೆಯೊಂದು ಏರ್ಪಟ್ಟು ನಗರ ವ್ಯವಸ್ಥಾಪಕನೊಬ್ಬ ಇದರ ಆಡಳಿತವನ್ನು ನಡೆಸುತ್ತಿದ್ದ. ಪ್ರಸಿದ್ಧ ಪತ್ರಿಕಾಕರ್ತನೂ ಲೇಖಕನೂ ಆದ ವಿಲಿಯಂ ಅಲೆನ್ ವೈಟ್ ತನ್ನ ಜೀವನದ ಆರಂಭದ ದಿನಗಳನ್ನು ಇಲ್ಲಿ ಕಳೆದ. *

**ಎಲ್ ಸಾಲ್ವಡಾರ್:** ಮಧ್ಯ ಅಮೆರಿಕದ ಅತಿ ಪುಟ್ಟ ಹಾಗೂ ಅತ್ಯಂತ ಜನಸಾಂದ್ರ ಗಣರಾಜ್ಯ. ಮೇರೆಗಳು: ಉತ್ತರ ಪೂರ್ವಗಳಲ್ಲಿ ಹಾಂಡುರಾಸ್, ದಕ್ಷಿಣದಲ್ಲಿ ಪೆಸಿಫಿಕ್ ಸಾಗರ ಮತ್ತು ಪಶ್ಚಿಮ ವಾಯವ್ಯಗಳಲ್ಲಿ ಗ್ವಾಟೆಮಾಲ. ಮಧ್ಯ ಅಮೆರಿಕನ್ ರಾಷ್ಟ್ರಗಳ ಪೈಕಿ ಕೆರಿಬಿಯನ್ ಸಮುದ್ರಕ್ಕೆ ತಾಕಿದಂತಿರದ ದೇಶವಿದೊಂದೇ. ಇದರ ಪೆಸಿಫಿಕ್ ತೀರ 272 ಕಿಮೀ. ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ಬೇರೆ ಯಾವುದರಲ್ಲೂ ಬೇಸಾಯ ಇಲ್ಲಿನಷ್ಟು ಸಾಂದ್ರವಾಗಿ ನಡೆಯುವುದಿಲ್ಲ. ಪೂರ್ವ ಪಶ್ಚಿಮವಾಗಿ ಇದರ ಉದ್ದ 225 ಕಿಮೀ; ಅಗಲ ದಕ್ಷಿಣೋತ್ತರವಾಗಿ 96 ಕಿಮೀ; ವಿಸ್ತೀರ್ಣ 21.146 ಚ.ಕಿಮೀ. ರಾಜಧಾನಿ ಸಾನ್ ಸಾಲ್ವಡಾರ್.

**ಮೇಲ್ಮೈ ಲಕ್ಷಣ, ವಾಯುಗುಣ:** ದಕ್ಷಿಣದಲ್ಲಿ ಕಿರಿದಾದ ಕರಾವಳಿ. ಮಗ್ಗುಲಲ್ಲೆ ದಕ್ಷಿಣ ಪರ್ವತಶ್ರೇಣಿ. ಇದರ ಹೆಗಲೇರಿ ನಿಂತ ಜ್ವಾಲಾಮುಖಿಗಳ ಪೈಕಿ ಅತ್ಯಂತ ಎತ್ತರವಾಗಿರುವುದು ಸ್ಯಾಂಟ ಆನ (2409ಮೀ). ದಕ್ಷಿಣ ಪರ್ವತ ಶ್ರೇಣಿಗೂ ಉತ್ತರದಲ್ಲಿರುವ ಪರ್ವತಸಾಲಿಗೂ ನಡುವೆ ತೊಟ್ಟಿಲಿನಂತೆ ಪ್ರಸ್ಥಭೂಮಿ ಇದೆ. ಲೇಂಪ, ಸಾನ್ ಮಿಗೆಲ್ ನದಿಗಳೂ ಅವುಗಳ ಉಪನದಿಗಳೂ ಆಳವಾದ ಕಮರಿಗಳನ್ನು ಕೊರೆದುಕೊಂಡು ಹರಿಯುತ್ತವೆ.

ಎಲ್ ಸಾಲ್ವಡಾರಿನ ವಾಯುಗುಣ ಎತ್ತರಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಪೆಸಿಫಿಕ್ ಕರಾವಳಿಯಲ್ಲೂ ಅಷ್ಟೇನೂ ಎತ್ತರವಿಲ್ಲದ ಪರ್ವತ ಪ್ರದೇಶದಲ್ಲೂ $25^0$ ಸೆಂ. ನಿಂದ $29^0$ ಸೆಂ. ವರೆಗೆ ಉಷ್ಣತೆ ವ್ಯತ್ಯಾಸವಾಗುತ್ತದೆ. 657 ಮೀ. ಎತ್ತರವಿರುವ ಸಾನ್ ಸಾಲ್ವಡಾರಿನಲ್ಲಿ ಮಾರ್ಚಿಯ ಪರಮಾವಧಿ ಉಷ್ಣತೆ $35^0$ ಸೆಂ. ಜನವರಿಯಲ್ಲಿ $14^0$ ಸೆಂ. 1450ಮೀ ಎತ್ತರದಲ್ಲಿ ಇದು $17^0$ ಸೆಂ.–$22^0$ ಸೆಂ. ನಡುವೆ ವ್ಯತ್ಯಾಸವಾಗುತ್ತದೆ.

ಎಲ್ ಸಾಲ್ವಡಾರಿನಲ್ಲಿರುವ ಋತುಗಳು ಎರಡು: ಮೇಯಿಂದ ನವೆಂಬರ್‌ವರೆಗೆ ಬೇಸಗೆ–ಮಳೆಗಾಲ. ನವೆಂಬರಿನಿಂದ ಮೇ ವರೆಗೆ ಒಣಹವೆಯ ಚಳಿಗಾಲ. ಪೆಸಿಫಿಕ್ ಕರಾವಳಿಯಲ್ಲಿ ವಾರ್ಷಿಕ ಮಳೆ ಸರಾಸರಿ 1727 ಮಿಮೀ. (68"); ನಡು ಎತ್ತರ ಪ್ರದೇಶದಲ್ಲಿ 1778–2464 ಮಿಮೀ. ಇನ್ನೂ ಎತ್ತರದಲ್ಲಿ ಇದಕ್ಕೂ ಅಧಿಕವಾಗಿ ಮಳೆ ಬೀಳುತ್ತದೆ. ಆಳದ ಕಣಿವೆಗಳಲ್ಲೂ ಪ್ರಸ್ಥ ಭೂಮಿಯಲ್ಲೂ ಬೀಳುವ ಮಳೆಯ ಮೊತ್ತ 1143–1524 ಮಿಮೀ.




**ವ್ಯವಸಾಯ, ಕೈಗಾರಿಕೆ, ವ್ಯಾಪಾರ:** ಒಟ್ಟು ಜನಸಂಖ್ಯೆಯಲ್ಲಿ 2/3 ರಷ್ಟು ಜನ ಕೃಷಿಯನ್ನವಲಂಬಿಸಿದ್ದಾರೆ. ಜ್ವಾಲಾಮುಖಿ ಪ್ರದೇಶ ಫಲವತ್ತಾದದ್ದು. ಮುಖ್ಯ ಆಹಾರ ಬೆಳೆ ಮುಸುಕಿನ ಜೋಳ, ಕಬ್ಬು, ಬತ್ತ, ಗೋದಿಗಳನ್ನೂ ಬೆಳೆಯುತ್ತಾರೆ. ಮುಖ್ಯ ವಾಣಿಜ್ಯ ಬೆಳೆಯೆಂದರೆ ಕಾಫಿ. ಎಲ್ ಸಾಲ್ವಡಾರಿನ ರಫ್ತಿನಲ್ಲಿ ಶೇ. 95 ಇದೇ. ವಾಯುಗುಣ, ಭೂಗುಣ, ಕಾರ್ಮಿಕರ ಸರಬರಾಯಿ, ಸಮುದ್ರಕ್ಕೆ ದೂರ_ಮುಂತಾದ ಎಲ್ಲ ದೃಷ್ಟಿಗಳಿಂದಲೂ ಕಾಫಿ ಬೆಳೆಗೆ ಇಲ್ಲಿ ಹೆಚ್ಚು ಅನುಕೂಲವಿದೆ. ಚಿನ್ನ ಬೆಳ್ಳಿಗಳು ಇಲ್ಲಿಯ ಮುಖ್ಯ ಖನಿಜಗಳು, ತಾಮ್ರ, ಕಬ್ಬಿಣ, ಸೀಸ, ತವರ, ಗಂಧಕ, ಪಾದರಸ_ಇವು ಇಲ್ಲಿವೆಯಾದರೂ ಇವನ್ನು ನೆಲದಿಂದ ತೆಗೆಯುತ್ತಿಲ್ಲ. ಎಲ್ ಸಾಲ್ವಡಾರಿನ ಕಾಫಿಗೆ ಅಮೆರಿಕ ಸಂಯುಕ್ತ ಸಂಸ್ಥಾನವೇ ಮುಖ್ಯ ಗ್ರಾಹಕರಾಷ್ಟ್ರ. ಹತ್ತಿ ಜವಳಿ, ಹಿಟ್ಟು, ಮುಟ್ಟುಗಳು, ರಾಸಾಯನಿಕ ಪದಾರ್ಥ–ಇವು ಈ ದೇಶದ ಆಮದುಗಳು.

ಇಲ್ಲಿಯ ಜನಸಂಖ್ಯೆಯಲ್ಲಿ ಶೇಕಡ 80 ಮಂದಿ ಸ್ಪ್ಯಾನಿಷ್–ಇಂಡಿಯನ್ ಮಿಶ್ರ (ಮೆಸ್ಟಿಸೊ). ಉಳಿದವರು ಅಚ್ಚ ಇಂಡಿಯನ್ನರು, ಬಿಳಿಯರು ಮತ್ತು ನೀಗ್ರೋಗಳು. ರಾಜಧಾನಿಯಲ್ಲದೆ ಇಲ್ಲಿಯ ಇತರ ಪಟ್ಟಣಗಳು: ನೇವಾಸಾನ್ ಸಾಲ್ವಡಾರ್, ಸಾನ್ ಮಿಗೆಲ್ ಮತ್ತು ಸ್ಸಾಕಾಟೇಕೊಲುಕ. ಇಲ್ಲಿನ ಭಾಷೆ ಸ್ಪ್ಯಾನಿಷ್.

**ಸರ್ಕಾರ:** ಅಮೆರಿಕ ಸಂಯುಕ್ತಸಂಸ್ಥಾನದಂತೆ ಇಲ್ಲಿಯ ಸಂವಿಧಾನದಲ್ಲೂ ಅಧಿಕಾರ ಕೇಂದ್ರೀಕೃತವಾಗದಂತೆ ವ್ಯವಸ್ಥೆ ನಿರ್ಮಿಸಲಾಗಿದೆ. ಕಾರ್ಯಾಂಗದ ಅಧಿಕಾರ ಅಧ್ಯಕ್ಷನದು. ಈತನನ್ನು ಐದು ವರ್ಷಗಳಿಗೊಮ್ಮೆ ಆರಿಸಲಾಗುತ್ತದೆ. ಇಲ್ಲಿನ ಶಾಸನಸಭೆಗೆ ಚುನಾವಣೆ ನಡೆಯುವುದು ಎರಡು ವರ್ಷಗಳಿಗೊಮ್ಮೆ. ಎಲ್ ಸಾಲ್ವಡಾರ್ ವಿಶ್ವಸಂಸ್ಥೆಯ, ಅಮೆರಿಕನ್ ರಾಜ್ಯಗಳ ಸಂಘದ (ದಿ ಆರ್ಗನೈಸೇಷನ್ ಆಫ್ ಅಮೆರಿಕನ್ ಸ್ಟೇಟ್ಸ್) ಮತ್ತು ಮಧ್ಯ ಅಮೆರಿಕನ್ ರಾಜ್ಯಗಳ ಸಂಘದ (ಆರ್ಗನೈಸೇಷನ್ ಆಫ್ ಸೆಂಟ್ರಲ್ ಅಮೆರಿಕನ್ ಸ್ಟೇಟ್ಸ್) ಸದಸ್ಯ ರಾಷ್ಟ್ರ.

**ಇತಿಹಾಸ:** ಗ್ವಾಟೆಮಾಲವನ್ನು ಗೆದ್ದ ಸ್ಪ್ಯಾನಿಷ್ ವಲಸೆಗಾರರು ಪೆದ್ರೊ ಆಲ್ವಾರಾದೊನ ನೇತೃತ್ವದಲ್ಲಿ 1524ರಲ್ಲಿ ಇಲ್ಲಿಗೆ ಬಂದು ಇದನ್ನು ಗೆದ್ದು ಮರುವರ್ಷ ಇಲ್ಲಿ ವಸಾಹತು ನಿರ್ಮಿಸಿದರು. ಈ ದೇಶ ಸ್ವತಂತ್ರವಾದದ್ದು ಸೆಪ್ಟೆಂಬರ್ 15, 1821ರಲ್ಲಿ. ಆದರೆ ಅದಾದ ಅನಂತರ ಮೆಕ್ಸಿಕೋ ಚಕ್ರವರ್ತಿ ಆಗಸ್ಟಿನ್‌ದ ಈಟೂರ್‌ವೀದ ಎಲ್ ಸಾಲ್ವಡಾರಿಗೆ ಸೈನ್ಯ ಕಳುಹಿಸಿ ಇದನ್ನು ಗೆದ್ದು ವಶಪಡಿಸಿಕೊಂಡ. ತನ್ನನ್ನು ಒಂದು ಸಾರ್ವಭೌಮ ರಾಜ್ಯವೆಂದು ಪರಿಗಣಿಸಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಸೇರಿಸಿಕೊಳ್ಳಬೇಕೆಂದು 1822ರಲ್ಲಿ ಇದು ಆ ದೇಶವನ್ನು ಕೇಳಿಕೊಂಡಿತು. ಆದರೆ ಸಂಯುಕ್ತಸಂಸ್ಥಾನ ಕಾಂಗ್ರೆಸ್ ಈ ಮನವಿಯನ್ನು ಒಪ್ಪಲಿಲ್ಲ. 1823ರಲ್ಲಿ ಈಟೂರ್‌ವೀದನ ಸರ್ಕಾರದ ಪತನವಾದಾಗ ಇದು ಮಧ್ಯ ಅಮೆರಿಕನ್ ರಾಜ್ಯಗಳ ಒಕ್ಕೂಟದಲ್ಲಿ ಸೇರಿತು. ಆಮೇಲೆ ಗ್ವಾಟೆಮಾಲದ ಬೆದರಿಕೆಯಿಂದಾಗಿ ಅಮೆರಿಕನ್ ರಾಜ್ಯಗಳ ಒಕ್ಕೂಟದಿಂದ ಹೊರಬಿದ್ದು ಸ್ವಾತಂತ್ರ್ಯ ಘೋಷಿಸಿಕೊಂಡಿತು (1841).

1800ರಿಂದಲೂ ಈ ದೇಶದಲ್ಲಿ ಆಗಾಗ ಅಧ್ಯಕ್ಷರ ಬದಲಾವಣೆಯೂ ಉದಾರವಾದಿಗಳಿಗೂ ಸಂಪ್ರದಾಯವಾದಿಗಳಿಗೂ ನಡುವೆ ಘರ್ಷಣೆಗಳೂ ನಡೆಯುತ್ತಲೇ ಇವೆ. ಆಂತರಿಕ ಕ್ಷೋಭೆಯಿಂದ ಇದು ಪದೇ ಪದೇ ವಿದೇಶಿ ದಾಳಿಗೆ ಒಳಗಾಯಿತು. 1900ರಿಂದ 1930ರ ಅವಧಿಯಲ್ಲಿ ಶಾಂತ ಪರಿಸ್ಥಿತಿಯಿತ್ತು. ಕಾಫಿ ಉದ್ದಿಮೆ ಬೆಳೆಯಿತು; ದೇಶ ಸಂಪದ್ಭರಿತವಾಯಿತು.

1931ರಲ್ಲಿ ಜನರಲ್ ಮ್ಯಾಕ್ಸಿಮಿಲಿಯಾನೊ ಫರ್ನಾಂಡೆತ್ ಮಾರ್ಟಿನೆತ್ ಅಧಿಕಾರ ಕಸಿದುಕೊಂಡು 1944ರ ವರೆಗೂ ಆಳಿದ. ಈತ ದಬ್ಬಾಳಿಕೆ ನಡೆಸಿದರೂ ಈ ಕಾಲದಲ್ಲಿ ದೇಶ ಸಂಪದ್ಭರಿತವಾಯಿತು. 1944ರಲ್ಲಿ ಮಾರ್ಟಿನೆತನನ್ನು ಅಧಿಕಾರದಿಂದ ಇಳಿಸಲಾಯಿತಾದರೂ ಅನಂತರದ ರಾಜಕೀಯ ಅಸ್ಥಿರವಾಯಿತೆನ್ನಬಹುದು. 1945ರಲ್ಲಿ ಜನರಲ್ ಸಾಲ್ವಡಾರ್ ಕಾಸ್ಟ್ರೊ ಅಧ್ಯಕ್ಷನಾದ. 1948ರಲ್ಲಿ ಇವನ ಅಧಿಕಾರದ ಅವಧಿ ಮುಗಿದಾಗ ಸಂವಿಧಾನವನ್ನೇ ಬದಲಿಸಿ ತಾನೇ ಶಾಶ್ವತವಾಗಿರಬೇಕೆಂದು ಪ್ರಯತ್ನಿಸಿದ. ಆಗ ಇವನನ್ನು ತಳ್ಳಿ ಬಲಿಷ್ಠ ಗುಂಪೊಂದು ಅಧಿಕಾರಕ್ಕೆ ಬಂತು. ಇದರ ಸದಸ್ಯನಾದ ಮೇಜರ್ ಆಸ್ಕಾರ ಒಸೋರಿಯೊನನ್ನು ಅಧ್ಯಕ್ಷನಾಗಿ ಆಯ್ಕೆ ಮಾಡಲಾಯಿತು. ಈತನೂ ನಿರಂಕುಶನಾದ. 1956ರಲ್ಲಿ ಈತನ ಅನುಯಾಯಿ ಲೆಫ್ಟಿನೆಂಟ್ ಕರ್ನಲ್ ಜೋಸೆ ಮೇರಿಯ ಲೆಮಸನನ್ನು ಅಧ್ಯಕ್ಷನಾಗಿ ಆರಿಸಲಾಯಿತು. ಈತ 1960ರ ವರೆಗೂ ಆಳಿದ. ನಾಗರಿಕ ಮತ್ತು ಸೈನಿಕರ ಸಂಮಿಶ್ರ ಗುಂಪೊಂದು ಈತನನ್ನು ತಳ್ಳಿ ತಾನು ಅಧಿಕಾರಕ್ಕೆ ಬಂತು. ಪ್ರಜಾಸತ್ತಾತ್ಮಕ ಪದ್ಧತಿಯಂತೆ ಚುನಾವಣೆ ನಡೆಸುವುದಾಗಿ ಆಶ್ವಾಸನೆ ನೀಡಿತು. 1961ರಲ್ಲಿ ನಡೆದ ಚುನಾವಣೆಯಲ್ಲಿ ಕರ್ನಲ್ ಜೂಲಿಯೊ ಅಡಾಲ್ಬರ್ಟೊ ರಿವೆರ ಅಧ್ಯಕ್ಷನಾಗಿ ಆಯ್ಕೆಯಾದ. ರಿವೆರನ ಸರ್ಕಾರವೂ ಸೈನ್ಯಾಧೀನವೇ ಆದರೂ ಈಗ ಹಲವಾರು ರಾಜಕೀಯ ಸುಧಾರಣೆಗಳು ಜಾರಿಗೆ ಬಂದುವು. 1964–66ರಲ್ಲಿ ನಡೆದ ಸ್ಥಳೀಯ ಚುನಾವಣೆಗಳು ಸೈನ್ಯದ ಹಿಡಿತವಿಲ್ಲದೆ ಸ್ವತಂತ್ರ ವಾತಾವರಣದಲ್ಲಿ ನಡೆದುವು. 1967ರ ಕರ್ನಲೆ ಫಿಡೆಲ್ ಸಾಂಚ ಹೆರ್ನಾಂಡ್ಸ್ ಅಧ್ಯಕ್ಷನಾಗಿ ಆಯ್ಕೆಯಾದ. *

**ಎಲಚಿ:** ರ್‍ಯಾಮ್ನೇಸೀ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ವೃಕ್ಷ ಜಾತಿಯ ಸಸ್ಯ (ಜಿಜಿಫಸ್ ಜುಜೂಬ), ಇಂಗ್ಲೀಷ್ ಭಾಷೆಯಲ್ಲಿ ಇದಕ್ಕೆ ಬ್ಬೇರ್ ಫ್ರೂಟ್ ಟ್ರೀ ಎಂದು ಕರೆಯುತ್ತಾರೆ. ಕನ್ನಡದಲ್ಲಿ ಬೋರೆ ಎಂಬ ಹೆಸರೂ ಉಂಟು. ಇದು ಭಾರತ, ಪಾಕಿಸ್ತಾನ, ಮಯನ್ಮಾರ್, ಶ್ರೀಲಂಕ, ಚೀನ, ಆಫ್ಘಾನಿಸ್ತಾನ, ಆಸ್ಟ್ರೇಲಿಯ, ಆಫ್ರಿಕಗಳಲ್ಲಿ ಹರಡಿದೆ. ಹುಲ್ಲುಗಾವಲು, ಒಣಬಂಜರು ನೆಲಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದನ್ನು ಅಲಂಕಾರಕ್ಕಾಗೂ ಹಣ್ಣುಗಳಿಗಾಗೂ ಬೆಳೆಸುತ್ತಾರೆ.


1 ರಂಬೆಯ ಒಂದು ಭಾಗ, 2. ಹೂ, 3. ಹಣ್ಣು

ಎಲಚಿ ಮರ 10–15ಮೀ. ಎತ್ತರಕ್ಕೆ ಬೆಳೆಯುವ ಕುಳ್ಳು ಕಾಂಡದ ಮಧ್ಯಮ ಪ್ರಮಾಣದ ವೃಕ್ಷ. ಕಾಂಡ ಕಪ್ಪುಬಣ್ಣದ ತೊಗಟೆಯಿಂದ ಆವೃತವಾಗಿದೆ. ತೊಗಟೆಯ ಮೇಲ್ಗಡೆ ಸೀಳಿಕೆಗಳಿದ್ದು ಒಳಭಾಗ ಕೆಂಪಾಗಿರುತ್ತದೆ. ರೆಂಬೆಗಳು ತೂಗು ಬಿದ್ದಿರುತ್ತವೆ. ಪುಷ್ಪ ಪತ್ರಗಳು (ಸ್ಟಿಪ್ಯೂಲ್ಸ್) ಮುಳ್ಳುಗಳಾಗಿ ಮಾರ್ಪಟ್ಟು ಒಂದು ನೆಟ್ಟಗೂ ಇನ್ನೊಂದು ಇಳಿಮುಖವಾಗಿಯೂ ಇವೆ. ಸುಮಾರು ಚಕ್ರಾಕಾರವಾಗಿ ಮೂರು ನರಗಳುಳ್ಳ ಎಲೆಗಳ ಕೆಳಭಾಗದಲ್ಲಿ ಬಿಳಿಗೂದಲುಗಳಿವೆ. ಹೂಗಳು ಸಣ್ಣವಾಗಿ ಹಸಿರು. ಹಳದಿ ಬಣ್ಣದಿಂದ ಕೂಡಿದ್ದು ಎಲೆ ಕಂಕುಳ ನಡುವೆ ಮಧ್ಯಾರಂಭಿ ಗೊಂಚಲುಗಳಲ್ಲಿ (ಸೈಮ್ಸ್) ಕಾಣಬರುತ್ತವೆ. ಹಣ್ಣುಗಳು ದುಂಡಾಗಿ ಕಿತ್ತಳೆ ಅಥವಾ ಕೆಂಪು ಬಣ್ಣದಿಂದ ಕೂಡಿದ ಅಷ್ಟಿಫಲಗಳು, ಒಳ ಓಟೆ ಬಹುಗಟ್ಟಿ. ರಾಯ ಬೋರೆ ಎಂಬ ಒಂದು ಜಾತಿ ತಿನ್ನಲು ಯೋಗ್ಯವಾದ ಹಣ್ಣುಗಳನ್ನು ಕೊಡುತ್ತದೆ. *

**ಎಲಿಜ಼ಬೆತ್ I:** 1533–1603. ಇಂಗ್ಲೆಂಡಿನ ರಾಣಿ. ಎಂಟನೆಯ ಹೆನ್ರಿಗೆ ಎರಡನೆಯ ಹೆಂಡತಿಯಾದ ಆನ್ ಬೂಲಿನಳಲ್ಲಿ ಜನಿಸಿದಳು. ತಂದೆಯಂತೆ ಈಕೆ ದೃಢಕಾಯೆ, ಛಲಗಾರ್ತಿ, ಉತ್ಸಾಹಶೀಲೆ. ಇವಳ ಕ್ರೌರ್ಯ ಮುಂಗೋಪಗಳೂ ತಂದೆಯಿಂದ ಪಡೆದ ಗುಣಗಳು. ಇಂಥ ಗಂಡುಲಕ್ಷಣಗಳೇ ಇವಳಲ್ಲಿ ಹೆಚ್ಚಾಗಿದ್ದರೂ ಹೆಣ್ಣಿನ ಆಕರ್ಷಣೆಯೂ ಇತ್ತು. ತಾಯಿಯಿಂದ ಪಡೆದ ಈ ಗುಣದ ಜೊತೆಗೆ ಆಕೆಯ ಇನ್ನೂ ಕೆಲವು ಗುಣಗಳನ್ನೂ ಎಲಿಜ಼ಬೆತ್ ಪಡೆದಿದ್ದಳು. ಅವಳಿಂದ ಇವಳಿಗೂ ಅಸೂಯೆ, ಸಂಚುಗಾರಿಕೆ, ಅಪ್ರಾಮಾಣಿಕತೆ ಮುಂತಾದವು ದತ್ತವಾಗಿದ್ದುವು. ಹೆನ್ರಿ–ಬೂಲಿನರದು ರಹಸ್ಯ ವಿವಾಹ. ಎಲಿಜ಼ಬೆತ್‌ಳಿಗೆ ಮೂರು ವರ್ಷವಾಗಿದ್ದಾಗ ತಾಯಿ ಮರಣದಂಡನೆಗೆ ಗುರಿಯಾದಳು. ತಂದೆ ಇನ್ನೊಬ್ಬಳನ್ನು (ಜೇನ್ ಸೇಮೋರ್) ಮದುವೆಯಾದದ್ದರಿಂದ ಇವಳೂ ಇವಳ ಮಲಸೋದರಿಯೂ ನ್ಯಾಯಬಾಹಿರ ಸಂತಾನಗಳೆಂದು ಸಾರಲಾಯಿತು. ಇದರಿಂದ ಎಲಿಜ಼ಬೆತ್ ಏಕಾಂತದಲ್ಲಿ ಬಾಲ್ಯ ಕಳೆದಳು. ಈ ಕಾಲದಲ್ಲಿ ಇವಳಿಗೆ ಅಭಿಜಾತ ಸಾಹಿತ್ಯದಲ್ಲಿ ಒಳ್ಳೆಯ ಶಿಕ್ಷಣವೇನೋ ದೊರಕಿತು. ಗ್ರೀಕ್ ಲ್ಯಾಟಿನ್ ಭಾಷೆಗಳನ್ನು ಚೆನ್ನಾಗಿ ಕಲಿತಳು. ಈಕೆಗೆ ಫ್ರೆಂಚ್, ಇಟಾಲಿಯನ್, ಸ್ಪ್ಯಾನಿಷ್ ಭಾಷೆಗಳ ಪರಿಚಯವೂ ಆಯಿತು.

ತಂದೆ ಸತ್ತಮೇಲೆ ಆರನೆಯ ಎಡ್ವರ್ಡನೂ ಅವನ ಅನಂತರ ಮೇರಿಯೂ ಸಿಂಹಾಸನವೇರಿದಾಗ ಎಲಿಜ಼ಬೆತ್ ಅಜ್ಞಾತಳಾಗಿಯೇ ಉಳಿದಿದ್ದಳು, ಪ್ರಾಟೆಸ್ಟಂಟ್ ಮತ ಪ್ರೇಮಿಯೆಂಬ ಕಾರಣದಿಂದ ಪಿತೂರಿಯ ಸಂಶಯಕ್ಕೆ ಗುರಿಯಾಗಿ ಈಕೆ ಲಂಡನ್ ಗೋಪುರದಲ್ಲಿ ಸೆರೆಯಾಗಿದ್ದಳು. ತಲೆ ಹೋಗದೆ ಉಳಿದುಕೊಂಡದ್ದು ಇವಳ ಅದೃಷ್ಟ. ಕೊನೆಗೆ ಮೇರಿಯೂ ಸತ್ತಾಗ ಎಲಿಜ಼ಬೆತಳಿಗೆ ಒಳ್ಳೆಯ ದೆಶೆ ಬಂತು. ಸೆರೆ ಅನುಭವಿಸಿದ್ದವಳು ಸಿಂಹಾಸನವನ್ನೇರಿದಳು (1558). ಆಗ ಇವಳಿಗೆ ಇಪ್ಪತ್ತೈದು ವರ್ಷ.

ಎಲಿಜ಼ಬೆತ್ ಅಧಿಕಾರ ವಹಿಸಿದ ಸಮಯದಲ್ಲಿ ರಾಜ್ಯದಲ್ಲಿ ನೆಮ್ಮದಿಯಿರಲಿಲ್ಲ. ಎಂಟನೆಯ ಹೆನ್ರಿ ಮತ್ತು ಆರನೆಯ ಎಡ್ವರ್ಡರ ಧರ್ಮಸುಧಾರಣೆಗಳು ವಿಫಲವಾದ ಕಾರಣ ಈಕೆ ಪಟ್ಟಕ್ಕೆ ಬಂದಾಗ ತುಂಬ ಗೊಂದಲವಿತ್ತು. 1559ರಲ್ಲಿ ಜಾರಿಗೆ ಬಂದ ಪರಮಾಧಿಕಾರಿ ಶಾಸನದಿಂದ ಇಂಗ್ಲೆಂಡ್‌ನಲ್ಲಿ ಪೋಪ್ ಅಧಿಕಾರಕ್ಕೆ ಅಡ್ಡಿ ಒದಗಿತು. ಏಕರೂಪತೆಯ ಶಾಸನದ ಮೂಲಕ ಪ್ರಾರ್ಥನೆಯಲ್ಲಿ ಏಕರೂಪತೆ ತರಲು ಯತ್ನಿಸಲಾಯಿತು. ಈ ಎರಡು ಶಾಸನಗಳಿಂದ ರಾಜ್ಯದಲ್ಲಿ ಕ್ರೈಸ್ತಧರ್ಮದ ಮೇಲೆ ಈಕೆ ಅಧಿಕಾರ ಹೊಂದಿದ್ದರೂ ತನ್ನನ್ನು ಕ್ರೈಸ್ತಧರ್ಮ ಸರ್ವಾಧಿಕಾರಿಣಿ ಎಂದು ಕರೆದುಕೊಳ್ಳದೆ ಪ್ರಮುಖ ಕಾರ್ಯನಿರ್ವಾಹಕಿಯೆಂದು ಮಾತ್ರ ಕರೆದುಕೊಂಡಳು. ಅವಳ ಈ ಬದಲಾವಣೆಗಳಿಂದ ಸ್ವದೇಶ ಪರದೇಶಗಳಲ್ಲಿ ವಿರೋಧ ಎದ್ದರೂ ಧರ್ಮದ ಗೊಂದಲ ಪರಿಸ್ಥಿತಿಯ ನಿವಾರಣೆಯಾಯಿತು. 1559ರ ಈ ಕ್ರಮಗಳು ಆಧುನಿಕ ಇಂಗ್ಲೆಂಡ್–ಸ್ಕಾಟ್ಲೆಂಡ್‌ಗಳ ನಿರ್ಮಾಣಕ್ಕೆ ನಾಂದಿಯಾದವು. ಇವುಗಳ ಪ್ರಭಾವದಿಂದ ಮತ್ತು ಪರಿಸ್ಥಿತಿಗಳ ಒತ್ತಡದಿಂದ ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳು ತಮ್ಮ ಅಂತಃಕಲಹಗಳಿಂದ ದೂರವಾಗಿ ಪ್ರಾಟೆಸ್ಟಂಟ್ ಧರ್ಮವನ್ನು ಅವಲಂಬಿಸಿ ಯುರೋಪಿನ ಕೆಥೊಲಿಕ್ ಪಂಥದ ರಾಜ್ಯಗಳೊಡನೆ ಹೋರಾಡಿದವು. ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಈಕೆ ದೇಶದಲ್ಲಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿ, ವಿದೇಶವ್ಯಾಪಾರ ಹೆಚ್ಚಿಸಿ ಹಣದ ಉತ್ಪಾದನೆಯ ಮಾರ್ಗಗಳನ್ನು ತೋರಿಸಿಕೊಟ್ಟಳು. ಇಂಗ್ಲೆಂಡಿನ ನೌಕಾದಳ ಬಲಗೊಂಡಿತು. ಪರಿಶೋಧನೆಯ ಕಾರ್ಯ ಹೆಚ್ಚಿ ಇತರ ನಾಡುಗಳಿಂದ ಐಶ್ವರ್ಯ ಬಂತು. 16ನೆಯ ಶತಮಾನದ ಅಂತ್ಯದ ವೇಳೆಗೆ ಇಂಗ್ಲೆಂಡ್ ಪ್ರಪಂಚದ ಅತ್ಯಂತ ಶ್ರೀಮಂತ ರಾಷ್ಟ್ರವಾಯಿತು.

ಎಲಿಜ಼ಬೆತ್ ರಾಣಿಯಾದ ಕಾಲದಲ್ಲಿ ಯುರೋಪಿನ ರಾಜಕೀಯ ಪರಿಸ್ಥಿತಿ ತುಂಬ ಹದಗೆಟ್ಟಿತ್ತು. ಫ್ರಾನ್ಸ್ ಮತ್ತು ಸ್ಪೇನ್‌ಗಳ ಪ್ರಭಾವ ಹೆಚ್ಚಾಗಿತ್ತು. ರಾಣಿಯಾದ ಮೇಲೆ ಈಕೆ ಧರ್ಮವಿಚಾರಗಳಲ್ಲಿ ಮಾಡಿದಂತೆ ಇಂಗ್ಲೆಂಡಿನ ರಾಜಕೀಯದಲ್ಲೂ ಸಮಯೋಚಿತವಾದ ಅನೇಕ ಬದಲಾವಣೆಗಳನ್ನು ಮಾಡಿದಳು. ವ್ಯಕ್ತಿಸ್ವಾತಂತ್ರ್ಯ ಮತ್ತು ರಾಷ್ಟ್ರೀಯತೆಗಳೆರಡೂ ಬೆಳೆದವು. ಎಲಿಜ಼ಬೆತ್ ಚಿಕ್ಕಂದಿನಲ್ಲಿ ಅಭ್ಯಸಿಸಿದ ಇಟಾಲಿಯನ್ ಗ್ರಂಥಗಳ ಆಧಾರದಿಂದ ಒಡಂಬಡಿಕೆಯ ರಾಜನೀತಿ ಅನುಸರಿಸಿ ಮಧ್ಯಮ ವರ್ಗದ ಜನತೆಯ ಬೆಂಬಲ ಪಡೆದಳು. ಈಕೆ ಕೊನೆಯವರೆಗೂ ಅವಿವಾಹಿತೆಯಾಗೇ ಉಳಿದಳು. ಆದರೂ ಒನಪು, ಒಯ್ಯಾರ, ಹಾವಭಾವ, ಕುಶಾಗ್ರಬುದ್ಧಿ –ಇವುಗಳಲ್ಲಿ ಈಕೆ ಕಡಿಮೆಯಲ್ಲ.

ಈಕೆಯ ಪ್ರೇಮಜೀವನ ಕುತೂಹಲಕಾರಿ. ಇವಳ ಅಭಿಮಾನಕ್ಕೆ ಪಾತ್ರರಾದವರು ಅನೇಕ ಮಂದಿ. ಆದರೆ ಯಾರನ್ನೂ ಈಕೆ ಮದುವೆಯಾಗಲಿಲ್ಲ. ಅಂತೂ ಈ ವಿಚಾರವಾಗಿ ಊಹಾಪೋಹಗಳಿಗೆ ಕೊನೆಯೇ ಇಲ್ಲ. ಇದರ ಹಿಂದೆ ಪ್ರಮುಖವಾದ ರಾಜಕೀಯ ಸಾಮಾಜಿಕ ಹಾಗೂ ಮತೀಯ ರಹಸ್ಯಗಳು ತುಂಬಿದ್ದುವು. ಈಕೆಯ ಸಂಪೂರ್ಣ ಸ್ವತಂತ್ರ್ಯ ಮನೋಭಾವವೂ ಈ ಒಂಟಿಜೀವನಕ್ಕೆ ಕಾರಣ. ತನ್ನ ಮದುವೆಯಿಂದ ಇಂಗ್ಲೆಂಡ್ ಅಸ್ವತಂತ್ರವಾದೀತೆಂಬ ಭೀತಿ ಈಕೆಗಿತ್ತು.

ಈಕೆಯ ರಾಜ್ಯಾಧಿಕಾರದ 45 ವರ್ಷಗಳ ಅವಧಿಯನ್ನು ಚರಿತ್ರಕಾರರು ಎಲಿಜ಼ಬೆತ್ ಯುಗವೆಂದು ಕರೆದಿದ್ದಾರೆ. ಇವಳ ಕಾಲದಲ್ಲಿ ಸಾಹಿತ್ಯ ಮತ್ತು ನಾಟಕ ಕಲೆಗಳ ಪುನರುಜ್ಜೀವನವೂ ಧರ್ಮಸುಧಾರಣೆಯೂ ಆದ್ದರಿಂದ ಈ ಕಾಲಕ್ಕೆ ಇವಳ ಹೆಸರೇ ಬಂತು. ಮಹಾಕವಿ ಷೇಕ್ಸ್‌ಪಿಯರ್, ಫ್ರಾನ್ಸಿಸ್ ಬೇಕನ್, ಎಡ್ಮಂಡ್ ಸ್ಪೆನ್ಸರ್, ವಾಲ್ಟರ್ ರಾಲಿ ಮೊದಲಾದ ಸಾಹಿತಿಗಳನ್ನು ಪ್ರೋತ್ಸಾಹಿಸಿದಳೆಂದು ಹೇಳಲಾಗಿದೆ. ಈಕೆಗೆ ಸಾಹಿತ್ಯಪ್ರೇಮ ಕಲಾವಂತಿಕೆಗಳಿದ್ದುವಾದರೂ ಆ ಕಾಲದ ಲೇಖಕರು ಅಭಿಮಾನಿಗಳು ಇವನ್ನು ಅತಿಯಾಗಿ ಉತ್ಪ್ರೇಕ್ಷೆ ಮಾಡಿದ್ದಾರೆ. ಷೇಕ್ಸ್‌ಪಿಯರನ ನಾಟಕಗಳಿಗೆ ಇವಳು ಹೋಗುತ್ತಿದ್ದಳಾದರೂ ಆತನ ಪ್ರತಿಭೆ ಇವಳ ಗಮನ ಸೆಳೆಯಲಿಲ್ಲ.

ಎಲಿಜ಼ಬೆತ್ ದಿಟ್ಟ ರಾಣಿ. ತನ್ನ ಆತ್ಮೀಯರೆಲ್ಲರನ್ನೂ ಕಳೆದುಕೊಂಡರೂ ಪರಾವಲಂಬಿಯಾಗಲಿಲ್ಲ. ಕೊನೆಯ ದಿನಗಳನ್ನು ಒಂಟಿಯಾಗಿಯೇ ಕಳೆದು ನಿಧನಳಾದಳು.

ಎಲಿಜ಼ಬೆತ್‌ಳದು ವಿಚಿತ್ರವಾದ ಸ್ವಯಂವಿಶಿಷ್ಟವಾದ ರಾಷ್ಟ್ರಪ್ರೇಮ. ಆ ಕಾಲದ ಬೌದ್ಧಿಕ ಧರ್ಮಿಯ ಚಳವಳಿಗಳಲ್ಲಿ ಈಕೆಗೆ ಅಷ್ಟೇನೂ ಸಹಾನುಭೂತಿ ಇರಲಿಲ್ಲ. ಅತಿ ಮಡಿಯ ಪ್ರಾಟೆಸ್ಟಂಟ್ ಮನೋಭಾವವನ್ನು ಈಕೆ ಸಹಿಸುತ್ತಿರಲಿಲ್ಲ. ಬಾಲ್ಯದಲ್ಲಿ ಓದಿದ್ದಕ್ಕಿಂತ ಈಕೆ ಹೆಚ್ಚೇನೂ ಕಲಿಯಲಿಲ್ಲ. ಎಲಿಜ಼ಬೆತಳ ಜನಪ್ರಿಯತೆ ಅಸಾಧಾರಣ. ದಕ್ಷರಾದವರನ್ನು ಪತ್ತೆಹಚ್ಚಿ ಅವರನ್ನು ತನ್ನ ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವ ಪ್ರತಿಭೆ ಇವಳಿಗೆ ಯಥೇಚ್ಛವಾಗಿತ್ತು. ಆದರೆ ಇವಳ ಆಳ್ವಿಕೆಯಲ್ಲಿ ಕೆಲವು ಕಪ್ಪು ಮಚ್ಚೆಗಳೂ ಉಂಟು. ಸ್ಕಾಟರ ರಾಣಿ ಮೇರಿಯನ್ನೂ ಇನ್ನೂ ಕೆಲವರನ್ನೂ ಈಕೆ ನಿರ್ದಯೆಯಿಂದ ಕೊಲ್ಲಿಸಿದಳು. ತನ್ನ ಸ್ಥಾನ ಭದ್ರತೆಗಾಗಿ ಈ ಕೊಲೆಗಳು ಆವಶ್ಯವೆಂದು ಇವಳು ಭಾವಿಸಿದ್ದಳು. ಅಸೂಯೆಯೂ ಒಂದು ಕಾರಣವೆನ್ನಬಹುದು. ಆದರೂ ಈಕೆಯ ಆಳ್ವಿಕೆಯ ಕಾಲ ಇಂಗ್ಲೆಂಡ್‌ನ ವೈಭವದ ಕಾಲ. (ಎಚ್.ಆರ್.ಡಿ.)

**ಎಲಿಜ಼ಬೆತ್ II:** 1926– ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡಿನ ರಾಣಿ. ಆರನೆಯ ಜಾರ್ಜ್ ದೊರೆಯ (ಆಗ ಯಾರ್ಕ್ ಡ್ಯೂಕ್) ಹಿರಿಯ ಪುತ್ರಿ. ಜನನ 1926ರ ಏಪ್ರಿಲ್ 21ರಂದು, ಲಂಡನ್ ನಗರದಲ್ಲಿ. ಈಕೆಯ ಪೂರ್ತಿ ಹೆಸರು

ಎಲಿಜ಼ಬೆತ್ ಅಲೆಗ್ಸಾಂಡ್ರಾ ಮೇರಿ. ತಾಯಿಯ ನೇತೃತ್ವದಲ್ಲಿ ಈಕೆಯ ವಿದ್ಯಾಭ್ಯಾಸ ನಡೆಯಿತು. ಇತಿಹಾಸ, ಸಂಗೀತಗಳೇ ಅಲ್ಲದೆ ಅನೇಕ ಭಾಷೆಗಳಲ್ಲಿ ಈಕೆಗೆ ಪರಿಶ್ರಮವುಂಟು.

ಎಲಿಜ಼ಬೆತ್‌ಳ ಬಾಲ್ಯದಲ್ಲಿ ಸಂಭವಿಸಿದ ಎರಡು ಮಹತ್ತ್ವದ ಘಟನೆಗಳು ಈಕೆಯ ಬಾಳನ್ನೆ ಅಲ್ಲದೆ ಇಡೀ ರಾಷ್ಟ್ರದ ಹಾಗೂ ವಿಶ್ವದ ಸ್ವರೂಪವನ್ನೆ ಬಹಳ ಮಟ್ಟಿಗೆ ಬದಲಾಯಿಸಿದುವೆನ್ನಬಹುದು. ಈಕೆಯ ದೊಡ್ಡಪ್ಪ ಎಂಟನೆಯ ಎಡ್ವರ್ಡನ ಸಿಂಹಾಸನ ತ್ಯಾಗ (1936) ಮೊದಲನೆಯ ಮುಖ್ಯ ಘಟನೆ. ಇದರಿಂದ ಒಮ್ಮೆಲೇ ಈಕೆಯ ಪ್ರಾಮುಖ್ಯ ಬಹಳ ಹೆಚ್ಚಿತು. ತಂದೆ ಜಾರ್ಜನ ಸಿಂಹಾಸನಾರೋಹಣವಾದಾಗ ಮಗಳು ಎಲಿಜ಼ಬೆತ್ ಅದಕ್ಕೆ ಉತ್ತರಾಧಿಕಾರಿಣಿಯಾದಳು. ಎರಡನೆಯ ಮಹತ್ವದ ಘಟನೆಯೆಂದರೆ 1939ರಲ್ಲಿ ಆರಂಭವಾದ ಎರಡನೆಯ ಮಹಾಯುದ್ಧ. ಇದರ ಪರಿಣಾಮವಾಗಿ ಬ್ರಿಟಿಷ್ ರಾಜತ್ವದ ಸ್ವರೂಪದಲ್ಲೆ ಮಹತ್ತರ ಬದಲಾವಣೆಗಳಾದುವು. ಆಗ ಈಕೆ ತಂದೆ ತಾಯಿಯರಿಂದ ದೂರ ಇರಬೇಕಾಗಿ ಬಂತು. ಹಿರಿಯರ ಮತ್ತು ಸರ್ಕಾರದ ವಿರೋಧ ಲೆಕ್ಕಿಸದೆ ಸೇನೆಯಲ್ಲಿ ಈಕೆ ವಾಹನ ಚಾಲಕಿಯ ತರಬೇತಿ ಪಡೆದಳು.

1947ರ ಆದಿಭಾಗದಲ್ಲಿ ಎಲಿಜ಼ಬೆತ್ ತಂದೆ ತಾಯಿಯರೊಂದಿಗೆ ದಕ್ಷಿಣ ಆಫ್ರಿಕ ಪ್ರವಾಸ ಮಾಡಿದಳು. ಇದೇ ವೇಳೆ ಈಕೆಗೆ 21 ವರ್ಷ ತುಂಬಿತು. ಆ ಸಂದರ್ಭದಲ್ಲಿ ಕಾಮನ್‌ವೆಲ್ತ್ ಒಕ್ಕೂಟವನ್ನುದ್ದೇಶಿಸಿ ಎಲಿಜ಼ಬೆತ್ ಮಾಡಿದ ಪ್ರಸಾರ ಭಾಷಣದಲ್ಲಿ ತನ್ನ ಮನೆತನದ ಹಿರಿಯ ಆದರ್ಶವನ್ನೆ ಅನುಸರಿಸುವ ಆಶಯ ವ್ಯಕ್ತಪಡಿಸಿದಳು. ಅದೇ ವರ್ಷದ ನವೆಂಬರಿನಲ್ಲಿ ಈಕೆಗೆ ಗ್ರೀಸ್ ರಾಜಕುಮಾರ ಫಿಲಿಪ್ ಮೌಂಟ್‌ಬ್ಯಾಟನ್‌ನೊಂದಿಗೆ ವೆಸ್ಟ್ ಮಿನ್‌ಸ್ಟರ್ ಅಬೆಯಲ್ಲಿ ವಿವಾಹ ನೆರವೇರಿತು.

ಆಗ್ಗೆ ಒಂಬತ್ತು ತಿಂಗಳ ಹಿಂದೆ ತಾನೇ ಗ್ರೀಕ್ ಸಿಂಹಾಸನಕ್ಕೆ ತನಗಿದ್ದ ಹಕ್ಕನ್ನು ತ್ಯಜಿಸಿ ಬ್ರಿಟಿಷ್ ಪ್ರಜೆಯಾಗಿದ್ದ ರಾಜಕುಮಾರ ಫಿಲಿಪನಿಗೆ ಆ ಸಂದರ್ಭದಲ್ಲಿ ಎಡಿನ್‌ಬರೊ ಡ್ಯೂಕ್ ಪದವಿ ನೀಡಲಾಯಿತು (**ನೋಡಿ- ಎಡಿನ್‌ಬರೊ-ಡ್ಯೂಕ್-(ಫಿಲಿಪ್-ಮೌಂಟ್‌ಬ್ಯಾಟನ್)**). ಈ ದಂಪತಿಗಳಿಗೆ ನಾಲ್ವರು ಮಕ್ಕಳಿದ್ದಾರೆ-ಚಾರಲ್ಸ್ (1948), ಆನ್ (1950), ಆಂಡ್ರ್ಯೂ (1960), ಎಡ್ವರ್ಡ್ (1966). ಚಾರಲ್ಸ್‌ನನ್ನು ಯುವರಾಜನನ್ನಾಗಿ ಘೋಷಿಸಲಾಗಿದೆ.

**ಲಾರ್ಡ್ಸ್‌ನ ಸಭೆಯಲ್ಲಿ ರಾಣಿ ಎಲಿಜ಼ಬೆತ್ II, ಗಂಡ ಮತ್ತು ಮಕ್ಕಳೊಡನೆ**

1951ರ ಬೇಸಗೆಯಲ್ಲಿ 6ನೆಯ ಜಾರ್ಜನ ಆರೋಗ್ಯ ಕಳವಳಕರವಾಯಿತು. ಎಲಿಜ಼ಬೆತ್ ಕೀನ್ಯದಲ್ಲಿ ಪ್ರವಾಸದಲ್ಲಿದ್ದಾಗ ತಂದೆಯ ಮರಣದ ಸುದ್ದಿ ಬಂತು. ತತ್‌ಕ್ಷಣವೇ ಇಂಗ್ಲೆಂಡಿಗೆ ಮರಳಿದಳು. 1952ರ ಫೆಬ್ರುವರಿ 8ರಂದು ರಾಣಿಯಾದಳು. ಈಕೆಯ ಪಟ್ಟಾಭಿಷೇಕವಾದದ್ದು 1952ರ ನವೆಂಬರ್ 4ರಂದು-ವೆಸ್ಟ್‌ಮಿನ್‌ಸ್ಟರ್ ಅಬೆಯಲ್ಲಿ.

ಪತ್ರಿಕೆಗಳಲ್ಲೂ ಸಂಪ್ರದಾಯ ಪ್ರಿಯರಿಂದಲೂ ಬರುವ ಕಟು ವಿಮರ್ಶೆಗಳಿಂದ ವಿಚಲಿತಳಾಗುವುದಿಲ್ಲ. ಎಲಿಜ಼ಬೆತ್ ಸ್ನೇಹಮಯಿ, ಒಳ್ಳೆಯ ತಾಯಿ ಮತ್ತು ಪತ್ನಿ. ಬ್ರಿಟಿಷರ ಅಭಿಮಾನ ಗಳಿಸಿದ್ದಾಳೆ. ಸರ್ಕಾರದ ಕಾರ್ಯಗಳಲ್ಲಿ ಈಕೆಗೆ ಹೆಚ್ಚಿನ ಶ್ರದ್ಧೆ ಇದೆ. (ಬಿ.ಎಸ್.ಎ.)

**ಎಲಿಜಿ:** ಪ್ರಾಚೀನ ಗ್ರೀಕ್ ಸಾಹಿತ್ಯದಲ್ಲಿ ಕಾವ್ಯದ ಒಂದು ಛಂದೋರೂಪಕ್ಕೆ ಈ ಹೆಸರಿತ್ತು. 16ನೆಯ ಶತಮಾನದಲ್ಲಿ ಇಂಗ್ಲೆಂಡಿನ ಸಾಹಿತ್ಯಕ್ಕೆ ಈ ಪದ ಬಂದ ಅನಂತರ ಇದಕ್ಕೆ ಶೋಕಗೀತೆ ಎಂಬ ಅರ್ಥ ಬಂದು ಅದೇ ಅರ್ಥ ಈಗಲೂ ಉಳಿದುಕೊಂಡಿದೆ. ಬೇರೆ ಸಾಹಿತ್ಯಗಳಲ್ಲೂ ಅದೇ ಅರ್ಥದಲ್ಲಿ ಈ ಪದ ಬಳಕೆಯಾಗುತ್ತಿದೆ.

ಎಲಿಜಿಯಕ್ ಛಂದಸ್ಸಿನಲ್ಲಿ ಬರೆದ ಯಾವ ಕವಿತೆಗಾದರೂ ಗ್ರೀಕರಲ್ಲಿ ಎಲಿಜಿ ಎಂಬ ಹೆಸರೇ ಸಲ್ಲುತ್ತಿತ್ತು. ಎಲಿಗಾಸ್ ಎಂದರೆ ಕೊಳಲುವಾದನದ ಜೊತೆಗೆ ಹಾಡುವ ಕರುಣರಸಭರಿತ ರಾಗವೆಂಬ ಅರ್ಥವಿತ್ತು. ಆದರೆ ಕರುಣರಸವಿಲ್ಲದಂಥ ಬೇರೆ ಬೇರೆ ಕಾವ್ಯಗಳಿಗೆ ಈ ಹೆಸರು ಪ್ರಾರಂಭಿಕ ಕಾಲದಲ್ಲೂ ಹೇಗೆ ಅಂಟಿಕೊಂಡಿತೆಂಬ ವಿಷಯ ಆಶ್ಚರ್ಯಕರವಾಗಿದೆಯಲ್ಲದೆ ಇಂದಿಗೂ ಬಗೆಹರಿಯದ್ದಾಗಿದೆ. ಹನ್ನೆರಡು ಮಾತ್ರೆಗಳ ಒಂದು ಸಾಲಿಗೆ ಹತ್ತು ಮಾತ್ರೆಗಳ ಒಂದು ಸಾಲು ಸೇರಿ ಎಲಿಜಿಯಕ್ ಛಂದಸ್ಸಾಗುತ್ತಿತ್ತು. ಈ ಛಂದಸ್ಸಿನ ಹಾಡುಗಳಿಗೆ, ಮೊದ ಮೊದಲಿನ ಕವಿತೆಗಳಿಗೆ ಕೊಳಲಿನ ಹಿನ್ನೆಲೆ ಇದ್ದುದರಿಂದ ಎಲಿಜಿಯೆಂಬ ಹೆಸರು ಪ್ರಚಲಿತವಾಗಿರಬೇಕೆಂದು ಊಹೆ.

ಎಫಿಸಸ್ಸಿನ ಕ್ಯಾಲಿನಸ್ (ಪ್ರ.ಶ. ಪೂ. 700) ಇಂಥ ಪದ್ಯವನ್ನು ಮೊದಲ ಬಾರಿಗೆ ಬರೆದ. ಆದರೆ ಇದು ಎಲಿಜಿಯಕ್ ಛಂದಸ್ಸಿನಲ್ಲಿರುವ ವೀರಗಾಥೆ. ಅಟಕದ ಆಫಿಡ್ನೇಯ ಕವಿ ಟಿರ್ಟೇಯಸ್ ಎಂಬಾತ (ಪ್ರ.ಶ.ಪೂ.ಸುಮಾರು 600) ರಾಜಕೀಯಕ್ಕೆ ಮತ್ತು ಸಂಗ್ರಾಮಕ್ಕೆ ಸಂಬಂಧಿಸಿದ ಕವಿತೆಗಳಿಗೆ ಎಲಿಜಿ ಎಂಬ ಹೆಸರು ಕೊಟ್ಟ. ಸೋಲನ್ (ಪ್ರ.ಶ.ಪೂ.640-559) ಮತ್ತು ಮೆಗಾರಾದ ಥಿಯೊಗ್ನಿಸ್ (ಪ್ರ.ಶ.ಪೂ.540) ಬರೆದ ಪ್ರೇಮಗೀತೆಗಳಿಗೂ ರಾಜಕೀಯ ಮತ್ತು ವ್ಯಂಗ್ಯ ಕವಿತೆಗಳಿಗೂ ಎಲಿಜಿ ಎಂಬ ಹೆಸರನ್ನೇ ಕೊಟ್ಟಿದ್ದರು. ಮೊತ್ತಮೊದಲ ಬಾರಿಗೆ ಎಲಿಜಿಯಲ್ಲಿ ಶೋಕ ರಸವನ್ನು ತುಂಬಿದವ ಸಿಯೋಸಿನ ಸೈಮನೈಡೀಸ್ (ಪ್ರ.ಶ.ಪೂ.469). ಆದರೂ ಈ ಛಂದಸ್ಸಿನಲ್ಲಿ ಪ್ರೇಮ, ರಾಜಕೀಯ, ಯುದ್ಧ, ವ್ಯಕ್ತಿದ್ವೇಷ, ಪಾಂಡಿತ್ಯ, ವಿರಕ್ತಿ ಮುಂತಾದ ಎಲ್ಲ ವಿಷಯಗಳ ಬಗ್ಗೆಯೂ ಕವಿತೆಗಳು ಹುಟ್ಟಿಕೊಂಡಿದ್ದು, ಅವೆಲ್ಲಕ್ಕೂ ಎಲಿಜಿ ಎಂಬ ಹೆಸರೇ ಅಂಟಿಕೊಂಡಿದೆ. ರೋಮನ್ ಕವಿ ಮಾಂಟಯೇನಸ್ (ಪ್ರ.ಶ.416) ತಾನು ರೋಮಿನಿಂದ ಫ್ರಾನ್ಸಿಗೆ ಬಂದ ಪ್ರಯಾಣದ ವರ್ಣನೆಯನ್ನು ಎಲಿಜಿಯೆಂದೇ ಕರೆದಿದ್ದಾನೆ. ಆದ್ದರಿಂದ ಪ್ರಾರಂಭದಿಂದಲ್ಲೂ ಎಲಿಜಿಗೂ ಶೋಕಭಾವಕ್ಕೂ ಯಾವ ಸಂಬಂಧವೂ ಇರಲಿಲ್ಲ ವೆಂಬುದು ಸ್ಪಷ್ಟ. ಪ್ರ.ಶ.ಪೂ. 7ನೆಯ ಶತಮಾನದಿಂದ ಪ್ರ.ಶ. 10ನೆಯ ಶತಮಾನದವರೆಗೆ ಸುಮಾರು 16 ಶತಮಾನಗಳ ಕಾಲದಲ್ಲಿ ಚಾಟೂಕ್ತಿಗಳು, ಪ್ರೇಮಗೀತೆಗಳು, ವೀರಗಾಥೆಗಳು, ಒಗಟುಗಳು, ವ್ಯಕ್ತಿನಿಂದೆ ಮುಂತಾದ ಎಲ್ಲ ವಿಷಯಗಳನ್ನೂ ಒಳಗೊಂಡಿದ್ದು ಎಲಿಜಿ ಬಹಳ ಜನಪ್ರಿಯವಾಗಿತ್ತು. ಓವಿಡ್ (ಪ್ರ.ಶ.ಪೂ.43-ಪ್ರ.ಶ. 18) ಎಲಿಜಿಯಲ್ಲಿ ಹಾಸ್ಯ, ವ್ಯಂಗ್ಯೋಕ್ತಿ ಮತ್ತು ವಿಡಂಬನವನ್ನು ಸಕ್ರಿಯವಾಗಿ ಬಳಸಿದ.

ಶೋಕಗೀತೆಯಾಗಿ ಮೊದಲಬಾರಿ ಬಂದದ್ದೆಂದರೆ ಪ್ರ.ಶ.ಪೂ.100ರ ಸುಮಾರಿನಲ್ಲಿ ಸಿಸಿಲಿಯಲ್ಲಿದ್ದ ಬಿಯಾನ್ ಎಂಬ ಗ್ರೀಕ್ ಕವಿ ಬರೆದ ಅಡೋನಿಸ್ (ಲ್ಯಾಮೆಂಟ್ ಫಾರ್ ಅಡೋನಿಸ್). ಇಲ್ಲಿ ಪ್ಯಾಸ್ಟೋರಲ್ ಎಲಿಜಿ (ನಿಸರ್ಗ ಶೋಕಗೀತೆ) ಎಂಬ ಹೊಸ ರೀತಿಯ ಸಂಪ್ರದಾಯ ಪ್ರಾರಂಭವಾಯಿತು. ಮೊದಲಿಗೆ ಸಾವಿನ ಬಗ್ಗೆ ದುಃಖ. ದೇಶಮಾತೆ, ದೇವತೆಗಳು, ಸತ್ತವನ ಸ್ನೇಹಿತರು, ಅವನ ವಿಚಾರಗಳು-ಇವೆಲ್ಲವೂ ಮೆರವಣಿಗೆಯಾಗಿ ಬಂದು ದುಃಖ ಪ್ರದರ್ಶಿತವಾಗುತ್ತದೆ. ಅನಂತರ ಸತ್ತವನ ಗೆಳೆಯನಾದ ಕವಿ ತನ್ನ ವೈಯಕ್ತಿಕ ಸಂಕಟವನ್ನು ತೋಡಿಕೊಳ್ಳುತ್ತಾನೆ. ಆದರೆ ಕೊನೆಯಲ್ಲಿ ಸಾವು ಸೋಲುತ್ತದೆ, ಬದುಕೇ ಗೆಲ್ಲುತ್ತದೆ ಎಂಬ ಆಶಾವಾದವನ್ನು ಪ್ರಕಟಿಸಿ, ಮನಸ್ಸಿಗೆ ಸಮಾಧಾನ ತಂದು ಕೊಳ್ಳುತ್ತಾನೆ. ಇದು ಈ ರೀತಿಯ ಕವಿತೆಯ ಚೌಕಟ್ಟು. ಬಯಾನ್ ಸತ್ತ ಅನಂತರ ಆತನ ಬಗ್ಗೆ ಅವನ ಸ್ನೇಹಿತ ಮಾಸ್ಕಸ್ ಇಂಥ ಪ್ಯಾಸ್ಟೋರಲ್ ಎಲಿಜಿಯನ್ನು ರಚಿಸಿದ.

ಇಂಗ್ಲೆಂಡಿಗೆ ಎಲಿಜಿ 16ನೆಯ ಶತಮಾನದಲ್ಲಿ ಮೊದಲು ಕಾಲಿಟ್ಟಿತು. ಆಗಲೇ ಅದಕ್ಕೆ ಚರಮಗೀತೆ, ಮರಣಗೀತೆ ಅಥವಾ ಶೋಕಗೀತೆ ಎಂಬ ತಪ್ಪು ಅರ್ಥ ಕಲ್ಪನೆಯಾಯಿತು. 1576ರಲ್ಲಿ ಗ್ಯಾಸ್ಕಾಯಿನ್ ಕವಿ ಫಿಲೋಮಿನಳ ಗೋಳಾಟ ಎಂಬ ಪದ್ಯ ಬರೆದುದೇ ಮೊದಲ ಇಂಗ್ಲಿಷ್ ಎಲಿಜಿ. ಇಂಗ್ಲಿಷ್ ಭಾಷೆಯಲ್ಲಿ ಅತ್ಯಂತ ಪ್ರಖ್ಯಾತವಾದ ಎಲಿಜಿಗಳು: ಮಿಲ್ಟನನ ಲಿಸಿಡಾಸ್ (17ನೆಯ ಶತಮಾನ), ಗ್ರೇ ಕವಿಯ ಹಳ್ಳಿಯ ಶ್ಮಶಾನದಲ್ಲಿ ಬರೆದ ಎಲಿಜಿ (ಎಲಿಜಿ ರಿಟನ್ ಇನ್ ಎ ಕಂಟ್ರಿ ಚರ್ಚ್‌ಯಾರ್ಡ್, 18ನೆಯ ಶತಮಾನ), ಷೆಲ್ಲಿಯ ಆಡೋನೇಯಿಸ್ (19ನೆಯ ಶತಮಾನ), ಆರ್ನಲ್ಡನ ಥಿರ್ಸಿಸ್ (19ನೆಯ ಶತಮಾನ), ಟೆನಿಸನ್ನನ 'ಇನ್ ಮೆಮೋರಿಯಮ್' ಪ್ಯಾಸ್ಟೋರಲ್ ಎಲಿಜಿಯಲ್ಲ; ಅವನ ಗೆಳೆಯ ಆರ್ಥರ್ ಹೆನ್ರಿ ಹ್ಯಾಲಮ್ ತೀರಿಕೊಂಡಾಗ ಬರೆದ ಶೋಕ ಗೀತೆ. ರಾಬರ್ಟ್ ಬ್ರಿಜ್ಜಸ್ ಕವಿಯ ಎಲಿಜಿ (20ನೆಯ ಶತಮಾನ). ಡಬ್ಲ್ಯೂ.ಬಿ.ಯೇಟ್ಸನನ್ನು ಕುರಿತು ಡಬ್ಲ್ಯೂ ಎಚ್ ಆಡೆನ್ನನ ಕವನ (20ನೆಯ ಶತಮಾನ). ಫ್ರೆಂಚ್ ಭಾಷೆಯಲ್ಲಿ ರಾನ್ಸರ್ಡ್ ಲಾಮಾರ್ಲಿನ್, ರಷ್ಯನ್ ಭಾಷೆಯಲ್ಲಿ ಪುಷ್ಕಿನ್, ಮಾಯಾಕೋವ್‌ಸ್ಕಿ ಮುಂತಾದವರೂ ಇಂಥ ಎಲಿಜಿಗಳನ್ನು ಬರೆದಿದ್ದಾರೆ. (ಎಸ್.ಎ.ಎನ್.)

ಈಚೆಗೆ ಆಂಗ್ಲಭಾಷೆಯಲ್ಲಿ ಪ್ಯಾಸ್ಟೋರಲ್ ಎಲಿಜಿಗಳು ಬಂದಿಲ್ಲ, ಆದರೆ ಎಲಿಜಿಗಳು ರಚಿತವಾಗುತ್ತಿವೆ. ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡ ತನ್ನ ಹೆಂಡತಿಯ ನೆನಪಿಗಾಗಿ ಡಗ್ಲಸ್ ಡನ್ ಬರೆದ ಮೂವತ್ತೊಂಬತ್ತು ಕವನಗಳು (1985) ಈ ಪ್ರಕಾರದಲ್ಲಿ ಹೆಸರಿಸಬೇಕಾದ ಕೃತಿಗಳು.

ಕನ್ನಡದಲ್ಲಿ ಇಂಥ ಶೋಕಗೀತೆಗಳು ಬಹಳ ಕಡಿಮೆ. ಗಾಂಧೀಜಿಯವರಂಥ ಹಿರಿಯರು ತೀರಿಕೊಂಡಾಗ ಅನೇಕ ಕವಿಗಳು ಶೋಕಗೀತೆಗಳನ್ನು ಬರೆದಿದ್ದಾರೆ. ಹತ್ತಿರದವರು ತೀರಿಕೊಂಡಾಗ ಬರೆದ ಶೋಕಗೀತೆಗಳ ಸಂಖ್ಯೆ ಹೆಚ್ಚಿಲ್ಲ. ಸಾಲಿ ರಾಮಚಂದ್ರರಾಯರ 'ತಿಲಾಂಜಲಿ' (1932), ಬೇಂದ್ರೆಯವರ 'ಹಾಡು ಪಾಡು' (1946), ಎಸ್.ಅನಂತನಾರಾಯಣ ಅವರ 'ಬಾಡದ ಹೂವು' (1946). ಪುತಿನ ಅವರ 'ತೀನಂಶ್ರೀಯವರನ್ನು ನೆನೆದು' ಮತ್ತು 'ಆಪ್ತ ಗೆಳೆಯನಿಗೆ ಕಂಬನಿ'. ಗಂಗಾಧರ ಚಿತ್ತಾಲರ 'ದುಃಖಗೀತ', ಇಂಥ ಕೆಲಸವನ್ನು ಹೆಸರಿಸಬಹುದು. ಚಿತ್ತಾಲರ ಕವನ ಬದುಕಿನ ಭಾಗವಾದ ಯಾತನೆಯೊಡನೆ ಮುಖಾಮುಖಿಯಾಗುತ್ತವೆ. ಯಾತನೆಯ ಮುಖಾಮುಖಿಯೊಂದಿಗೆ ಎಲ್ಲವನ್ನೂ ಹಲ್ಲು ಕಚ್ಚಿ ಸಹಿಸಬೇಕು. ಬದುಕಬೇಕು ಎನ್ನುವ 'ಸ್ಟೋಯಿಸಿನಂ' ಅಭಿವ್ಯಕ್ತವಾಗಿದೆ.

'ಅಲಿಸಿಡಾಸ್' ನಲ್ಲಿ ವ್ಯಕ್ತಿಯ ಸಾವಿನ ಸಂದರ್ಭದಲ್ಲಿ ಸಮಾಜಕ್ಕೆ ಸಂಬಂಧಿಸಿದ ಒಂದು ವಿಷಯವನ್ನು (ಚರ್ಚ್‌ನಲ್ಲಿ ಭ್ರಷ್ಟಾಚಾರ) ಪರಾಮರ್ಶಿಸುವ ಪದ್ಧತಿ ಪ್ರಾರಂಭವಾಯಿತು. ಗ್ರೇನ 'ಎಲಿಜಿ' ವಿಶಿಷ್ಟವಾದ ಕವನ; ಇದು ಯಾವ ಒಬ್ಬ

ವ್ಯಕ್ತಿಯ ಸಾವನ್ನು ಕುರಿತದ್ದಲ್ಲ, ಹಳ್ಳಿಯ ಚರ್ಚ್‌ಯಾರ್ಡ್‌ನಲ್ಲಿ ಹೂತಿರುವ ಎಲ್ಲ ಜನರ ಸಾವನ್ನು ಕುರಿತ ಕವನವು ಹಳ್ಳಿಯವರ ಬದುಕು, ಅವರ ಬದುಕಿನೊಂದಿಗೆ ಶ್ರೀಮಂತರ ಮತ್ತು ಪ್ರತಿಷ್ಠಿತರ ಬದುಕಿನ ಹೋಲಿಕೆ ಈ ಚಿಂತನೆಗಳಿಗೆ ವಿಶಾಲಗೊಳ್ಳುತ್ತದೆ.

ಶ್ರೇಷ್ಠ ಶೋಕಗೀತೆಗಳಲ್ಲಿ ತೀರಿಕೊಂಡ ಆಪ್ತನಿಗಾಗಿ ದುಃಖ ವ್ಯಕ್ತವಾಗುತ್ತದೆ. ಆದರೆ ದುಃಖ, ವೈಯಕ್ತಿಕ ಅನುಭವವಷ್ಟೇ ಆಗದೇ ಬದುಕನ್ನು ಕುರಿತ ಚಿಂತನೆಗೆ ಒಯ್ಯುತ್ತದೆ. ದುಃಖದಲ್ಲಿಯೂ ಬದುಕಿನ ಸ್ವೀಕಾರವನ್ನು ಕವನ ಮುಟ್ಟುತ್ತದೆ. (ಎಸ್.ಎ.ಎಸ್.)

**ಎಲಿಫೆಂಟ:** ಮುಂಬಯಿಯ ಅಪೊಲೊ ಬಂದರಿನಿಂದ ಈಶಾನ್ಯಕ್ಕೆ 12 ಕಿಮೀ ದೂರದಲ್ಲಿ, ಗುಡ್ಡಗಳಿಂದ ಕೂಡಿದ, ಸು. 7 ಕಿಮೀ ಸುತ್ತಳತೆಯುಳ್ಳ ಒಂದು ದ್ವೀಪ. ಇಲ್ಲಿದ್ದ ಒಂದು ಬೃಹದಾಕಾರದ ಆನೆಯ ವಿಗ್ರಹದಿಂದ ಇದಕ್ಕೆ ಎಲಿಫೆಂಟ್ ಎಂಬ ಹೆಸರು ಬಂತು. ಈಗ ಈ ವಿಗ್ರಹವನ್ನು ಮುಂಬಯಿಗೆ ಸಾಗಿಸಲಾಗಿದೆ. ಮೊದಲಿನ ಹೆಸರು ಶ್ರೀಪುರಿ, ಘಾರಾಪುರಿ ಎಂಬುದು ಮತ್ತೊಂದು ಹೆಸರು. ಈ ದ್ವೀಪ 8ನೆಯ ಶತಮಾನದವರೆಗೆ ಕೊಂಕಣ ಪ್ರದೇಶ ಮತ್ತು ಪಶ್ಚಿಮ ಭಾರತವನ್ನು ಆಳುತ್ತಿದ್ದ ಮೌರ್ಯ ಸಂತತಿಯ ಒಂದು ಶಾಖೆಯ ದೊರೆಗಳ ಅಧೀನದಲ್ಲಿತ್ತು, ಅನಂತರ ಚಲುಕ್ಯ ಪುಲಿಕೇಶಿಯ ಕೈಸೇರಿ, ಕ್ರಮವಾಗಿ ರಾಷ್ಟ್ರಕೂಟರು, ಕಲ್ಯಾಣಿಯ ಚಾಳುಕ್ಯರು, ದೇವಗಿರಿಯ ಯಾದವರು ಮತ್ತು ಅಹಮದಾಬಾದಿನ ಮುಸ್ಲಿಂ ದೊರೆಗಳ ಅಧೀನದಲ್ಲಿದ್ದು 1534ರಲ್ಲಿ ಪೋರ್ಚುಗೀಸರ ಕೈ ಸೇರಿತು.

1673ರಲ್ಲಿ ಪೋರ್ಚುಗೀಸರು ಈ ಗುಹಾಲಯಗಳನ್ನು ದನದ ದೊಡ್ಡಿಗಳನ್ನಾಗಿ ಮಾಡಿಕೊಂಡಿದ್ದರು. 1682ರಲ್ಲಿ ಮರಾಠರು ಈ ದ್ವೀಪವನ್ನು ವಶಪಡಿಸಿಕೊಂಡರು. 1774ರಲ್ಲಿ ಇದು ಬ್ರಿಟಿಷರ ವಶವಾಯಿತು. ಅನೇಕ ವರ್ಷಗಳ ಕಾಲ ಇಲ್ಲಿ ಬ್ರಿಟಿಷ್ ಸೈನ್ಯದ ಒಂದು ತುಕಡಿ ಇತ್ತು. ಆಗ ರಾಜಕುಮಾರನಾಗಿದ್ದ ಇಂಗ್ಲೆಂಡಿನ ಏಳನೆಯ ಎಡ್ವರ್ಡ್‌ಗೆ ಇಲ್ಲಿ ಒಂದು ಔತಣ ಕೂಟವನ್ನು ಏರ್ಪಡಿಸಿದ್ದರು (1875), 1890ರಲ್ಲಿ ಮುಂಬಯಿನ ಲೋಕೋಪಯೋಗಿ ಇಲಾಖೆ ಇದರ ಮೇಲ್ವಿಚಾರಣೆಯನ್ನು ವಹಿಸಿಕೊಂಡಿತು. 1909ರಲ್ಲಿ ಈ ಗುಹಾಲಯಗಳು ರಕ್ಷಿಸಲ್ಪಟ್ಟ ಪುರಾತನ ಅವಶೇಷಗಳೆಂದು ಪರಿಗಣಿಸಲ್ಪಟ್ಟವು.

**ಪ್ರಾಚೀನ ಅವಶೇಷಗಳು – ವಾಸ್ತುಶಿಲ್ಪ:** ಪ್ರ.ಶ. ಸು. 3ರಿಂದ 10–11ನೆಯ ಶತಮಾನದವರೆಗೂ ಪ್ರಸಿದ್ಧವೆನಿಸಿ ಮೆರೆದ ಈ ದ್ವೀಪದ ಅನೇಕ ಕಡೆಗಳಲ್ಲಿ ಕಲ್ಲು ಮತ್ತು ಇಟ್ಟಿಗೆಯ ಅಡಿಪಾಯಗಳೂ ಶಿಲ್ಪಗಳೂ ಕಂಡುಬಂದಿವೆ. ಇಲ್ಲಿಯ ಒಂದು ಗುಡ್ಡದ ಮೇಲೆ ಬೌದ್ಧಸ್ತೂಪವೊಂದರ ಅವಶೇಷಗಳಿವೆ. ಆದರೆ ಇವೆಲ್ಲಕ್ಕೂ ಹೆಚ್ಚು ಪ್ರಸಿದ್ಧವಾಗಿರುವುದು ಇಲ್ಲಿಯ ಗುಹಾದೇವಾಲಯಗಳು. ಎಲಿಫೆಂಟದಲ್ಲಿ ಒಟ್ಟು ಆರು ಗುಹೆಗಳಿವೆ. ಇವೆಲ್ಲವೂ ಶೈವಧರ್ಮಕ್ಕೆ ಸಂಬಂಧಿಸಿದುವು. ಅವುಗಳಲ್ಲಿ ದೊಡ್ಡ ಗುಹೆಯೇ ಅತಿಮುಖ್ಯವಾದುದು. ಉತ್ತರಕ್ಕೆ ಮುಖ ಮಾಡಿರುವ ಈ ಗುಹೆ ಪೂರ್ಣವಾಗಿ ಕಗ್ಗಲ್ಲಿನದಾಗಿದ್ದು 16–17 ಅಡಿ ಎತ್ತರವಿದೆ. ಒಟ್ಟು ಉದ್ದ 130' ಅಗಲವೂ ಸುಮಾರು ಅಷ್ಟೇ. ಆದರೆ ತಳವಿನ್ಯಾಸದಲ್ಲಿ ಇದು ಪೂರ್ಣ ಚಚ್ಚೌಕವಾಗಿಲ್ಲ. ಪಶ್ಚಿಮ, ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ 54' ಅಗಲ ಮತ್ತು 16 1/2' ಉದ್ದದ ಮುಖಮಂಟಪಗಳೂ ದಕ್ಷಿಣದಲ್ಲಿ ಸುಮಾರು ಇಷ್ಟೇ ವಿಸ್ತಾರದ ಹಜಾರದ ಚಾಚೂ ಇವೆ. ಮಧ್ಯದ ಹಜಾರ ಆರು ಕಂಬಗಳ ಆರು ಸಾಲುಗಳಿಂದ ಅಂಕಣಗಳಾಗಿ ವಿಭಾಗಿತವಾಗಿದೆ. ಆದರೆ ಕೆಲವೆಡೆ ಹೊರಗೋಡೆಯನ್ನನುಸರಿಸಿ ಕಂಬಗಳ ಬದಲು ಅರೆಗಂಬಗಳಿವೆಯಲ್ಲದೆ ಹಜಾರದ ಪಶ್ಚಿಮಕ್ಕೆ ಎಂಟು ಕಂಬಗಳಿರುವ ಜಾಗದಲ್ಲಿ ನಾಲ್ಕುಕಡೆ ದ್ವಾರಗಳಿರುವ ಒಂದು ಗರ್ಭಗೃಹವಿದೆ. ಗರ್ಭಗೃಹದ ಮಧ್ಯದಲ್ಲಿ ಲಿಂಗವೂ ಅದರ ದ್ವಾರಗಳ ಎರಡು ಪಕ್ಕಗಳಲ್ಲಿ ದ್ವಾರಪಾಲಕ ವಿಗ್ರಹಗಳೂ ಇವೆ. ವಿಶಾಲವಾದ ಗೋಡೆಗಳ ಮೇಲೂ ಶಿಲ್ಪಗಳಿವೆ. ಈ ಗುಹೆಯಲ್ಲಿ ಯಾವ ಶಾಸನಗಳೂ ಸಿಕ್ಕಿಲ್ಲವಾದ್ದರಿಂದ, ಇದರ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಚಚ್ಚೌಕದ ತಳ, ಅಷ್ಟ ಅಥವಾ ಷೋಡಶ ಕೋನಗಳ ಮಧ್ಯಭಾಗ ಮತ್ತು ದುಂಡು ಮೇಲು ಭಾಗವಿರುವ ದಪ್ಪಕಂಬಗಳು, ಎಲ್ಲೋರದ ಕೆಲವು ಗುಹೆಗಳನ್ನು ಹೋಲುವ ತಳ ವಿನ್ಯಾಸ, ಶಿಲ್ಪಗಳ ಅಲಂಕರಣ ಶೈಲಿ ಮುಂತಾದುವುಗಳಿಂದ ಈ ಗುಹೆ ಪ್ರ.ಶ. 6–8ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾಗಿರಬೇಕೆಂದು ಊಹಿಸಬಹುದು. ಇತರ ಗುಹೆಗಳೂ ಇದೇ ಕಾಲದವೇ, ಆದರೇ ವಿನ್ಯಾಸದಲ್ಲಾಗಲೀ ಶಿಲ್ಪಗಳಲ್ಲಾಗಲೀ ದೊಡ್ಡಗುಹೆಗೆ ಇವು ಸರಿಗಟ್ಟುವುದಿಲ್ಲ.

**ಮೂರ್ತಿಶಿಲ್ಪ:** ಎಲಿಫೆಂಟದ, ಅದರಲ್ಲೂ ಇಲ್ಲಿನ ದೊಡ್ಡ ಗುಹೆಯ, ಶಿಲ್ಪ ದಖನ್ನಿನ ಗುಹಾಶಿಲ್ಪ ಶ್ರೇಣಿಯಲ್ಲಿಯೇ ಅತ್ಯುಚ್ಚಮಟ್ಟದ ಶಿಲ್ಪಗಳಿಗೆ ಪ್ರಸಿದ್ಧವಾಗಿದೆ. ಸಮಕಾಲೀನ ಶಿಲ್ಪದಂತೆ ಇಲ್ಲಿಯವೂ ಬೃಹತ್ ಶಿಲ್ಪಗಳೇ. ಶಿಲ್ಪಗಳು ನೆಲದಿಂದ ಮೇಲಿನವರೆಗೆ ಹನ್ನೆರಡರಿಂದ ಹದಿನೆಂಟು ಅಡಿಗಳ ಎತ್ತರವಿದ್ದರೂ ಉತ್ತಮಭಾವಪ್ರಕಟನೆ, ಅಂಗಾಂಗಗಳ ಸಹಜ ಪ್ರಮಾಣ ಮತ್ತು ನೈಜತೆಯಿಂದ ಕೂಡಿ ಸುಂದರ ಕೃತಿಗಳಾಗಿವೆ. ಈ ಗುಹೆಯಲ್ಲಿ ಶಿಲ್ಪಗಳಿಗೆ ಅಳವಡಿಸಿರುವ ಬೆಳಕು–ನೆರಳಿನ ಸಂಯೋಜನೆ ಇಲ್ಲಿಯ ವೈಶಿಷ್ಟ್ಯ.

ಎಲಿಫೆಂಟದ ಶಿಲ್ಪಗಳೆಲ್ಲವೂ ಶೈವಮತ ಸಂಬಂಧವಾದುವು. ದೊಡ್ಡ ಗುಹೆಯಲ್ಲಿ ಮುಂಬಾಗಿಲಿಗೆ ನೇರೆ ಎದುರಿನಲ್ಲಿರುವ ಮಹೇಶಮೂರ್ತಿಯೇ ಇಲ್ಲಿಯ ಪ್ರಧಾನಶಿಲ್ಪ. ಗುಹೆಯ ಹಿಂಗೋಡೆಯ ಮೇಲೆ ಮುಂಬಾಗಿಲಿಗೆ ನೇರ ಎದುರಾಗಿ ಕೆತ್ತಲಾಗಿರುವ ಈ ಶಿಲ್ಪ 6.3ಮೀ ಅಗಲವೂ 5.3ಮೀ. ಎತ್ತರವೂ ಇದೆ. ಎದೆಯಿಂದ ಮೇಲ್ಭಾಗ ಮಾತ್ರವೇ ಇರುವ ಈ ಶಿಲ್ಪದಲ್ಲಿ ಮಹೇಶ ತ್ರಿವದನನಾಗಿದ್ದು ಸೃಷ್ಟಿ, ಸ್ಥಿತಿ, ಲಯಗಳ ಸಮನ್ವಯದ್ಯೋತಕನಾಗಿದ್ದಾನೆ. ದೇವನ ಮೂರು ಮುಖಗಳಲ್ಲಿ ನೇರ ಎದುರುನಲ್ಲಿರುವುದು ಶಿವನ ತತ್ಪುರುಷ ಅಥವಾ ಮಹಾದೇವತತ್ತ್ವದ ರೂಪ. ದೇವನ ದುಂಡು ಮುಖ. ತುಂಬುಗಲ್ಲ. ಅಕೃಷ್ಟ ಚಿಬುಕ ಮತ್ತು ನಿಮೀಲಿತ ನೇತ್ರಗಳು ಅವರ ಶಾಂತ, ಗಂಭೀರ ನಿರ್ವಿಕಾರ, ನಿರಾಮಯ ಸ್ವರೂಪವನ್ನು ವ್ಯಕ್ತಪಡಿಸುತ್ತಿವೆ. ಆದರೆ, ಶಾಲವಾದ ಸ್ಕಂಧ, ಸ್ವಲ್ಪವೇ ಉಬ್ಬಿದ ನಯವಾದ ಎದೆ ಮತ್ತು ದಪ್ಪಕಂಠದಿಂದಾಗಿ ಇದೇ ದೇವ ಮಹಾಶಕ್ತಿಯನ್ನೇ ತನ್ನಲ್ಲಿ ಹುದುಗಿಸಿಕೊಂಡಿರುವಂತೆ ಕಾಣಿಸುತ್ತಾನೆ. ಎಡಗೈಯಲ್ಲಿ

ಮಹೇಶಮೂರ್ತಿ

ಹಿಡಿದಿರುವ ತೊಟ್ಟು ಮೇಲಾದ ಬೀಜಪೂರಕ ಸಾಂಕೇತಿಕವಾಗಿ ಇದಕ್ಕೆ ಹೊಂದಿಕೊಳ್ಳುವಂತಿದೆ. ಮೂರ್ತಿಯ ಮುಖದ ಎರಡು ಕಡೆಗಳಲ್ಲೂ ಇರುವ ದೀರ್ಘ ಕರ್ಣಗಳು, ಮೇಲಿನ ಮಕುಟದ ತಳ ಮತ್ತು ಎದೆಯ ಮೇಲಿನ ಆಭರಣ, ಈ ದೈವಿಕ ಮುಖಕ್ಕೊಂದು ಚೌಕಟ್ಟನ್ನು ಒದಗಿಸಿದಂತಿದ್ದು ಆಕರ್ಷಣೆಯನ್ನು ವೃದ್ಧಿಸಿದೆ. ತಲೆಯ ಮೇಲಿರುವುದು ಜಟಾಮುಕುಟವಾದರೂ ಕೀರ್ತಿ ಮುಖ ಮತ್ತು ವಿವಿಧ ಆಭರಣಗಳಿಂದ ಅಲಂಕೃತವಾಗಿದ್ದು. ಅಲ್ಲಿಯ ಪ್ರತಿ ಅಂಗುಲದಲ್ಲೂ ಕುಸುರಿಯ ಕೌಶಲವನ್ನು ಕಾಣಬಹುದಾಗಿದೆ. ಈ ಅಲಂಕರಣ ನಯವಾದ ಮುಖದ ಸಹಜತೆಯನ್ನು ಎಳ್ಳಷ್ಟೂ ಕುಂದಿಸದೆ, ಮುಖದಲ್ಲಿ ವ್ಯಕ್ತವಾಗಿರುವ ದೈವಿಕ ಕಳೆಯನ್ನೆಲ್ಲ ಕ್ರೋಢೀಕರಿಸಿ ಮೆಲೆದ್ದು ಸುತ್ತಲೂ ಪಸರಿಸುತ್ತದೆಯೇನೋ ಎಂಬ ಭಾವವನ್ನು ಹುಟ್ಟಿಸುತ್ತದೆ. ಎಡ ಬಲಗಡೆಯ ಮುಖಗಳು ಒಂದು ಪಕ್ಕಕ್ಕೆ ತಿರುಗಿಕೊಂಡಿರುವಂತೆ ಇವೆ. ಬಲಗಡೆಯ ಮುಖ ಶಿವನ ಅಘೋರ ಅಥವಾ ಭೈರವ ತತ್ತ್ವದ ಪ್ರತಿರೂಪ. ದಪ್ಪ ತುಟಿಗಳು, ತಿರುವಿದ ಮೀಸೆ, ಕೋಪದಿಂದ ಊದಿದಂತಿರುವ ಕಣ್ಣಗಳು ಮುಂಚಾಚಿದ ಗಡ್ಡವುಳ್ಳ ಚಿಬುಕ ಇವು ಶಿವನ ಘೋರ ರೌದ್ರಭಾವವನ್ನು ತೋರಿಸಿವೆ. ಇವಕ್ಕೆ ಪೂರಕವಾಗಿ ಸರ್ಪ ಮತ್ತು ರುಂಡದಿಂದ ಲಂಕೃತವಾದ ದಪ್ಪ ಜಟೆಗಳಿಂದ ಹೆಣೆಯಲಾಗಿ ರುವ ಮುಕುಟ, ಇಳಿಬಿದ್ದ ಜಟೆಗಳು ಇವೆ. ಧರಿಸಿರುವ ಸರ್ಪಾಭರಣ ಮತ್ತು ಬಲಗೈಯಲ್ಲಿ ಹಿಡಿದೆತ್ತಿರುವ ದಪ್ಪ ಸರ್ಪ ಘೋರತೆಯನ್ನು ಮತ್ತಷ್ಟು ವರ್ಧಿಸಿವೆ. ಎಡಭಾಗದಲ್ಲಿರುವ ಮುಖ ತದ್ವಿರುದ್ಧವಾದುದು. ಇದು ವಾಮದೇವ ಅಥವಾ ಉಮಾ ತತ್ತ್ವದ ಪ್ರತೀಕ. ಇಲ್ಲಿ ಕೋಮಲತೆಯೇ ಶಿಲ್ಪವಾಗಿದೆ. ನಯವಾದ ಸ್ವಲ್ಪವೇ ಉಬ್ಬಿದ ಕೆನ್ನೆ. ನೇರ ಎಸಳುಮೂಗು, ದಪ್ಪ ರಾಗಪೂರಿತ ತುಟಿ ಮತ್ತು ನಿಮೀಲಿತ ನೇತ್ರ–ಇವು ಅಪೂರ್ವ ಶೋಭೆಯನ್ನಿತ್ತಿವೆ. ಕಿವಿಯಲ್ಲಿನ ಪತ್ರಾಭರಣ, ಕೆನ್ನೆಯಮೇಲೆ ಇಳಿಬೀಳುತ್ತಿರುವ ಗುಂಗುರು ಕೂದಲು, ಮಣಿಹಾರ, ಪದಕ, ಪುಷ್ಪಗಳಿಂದಲಂಕೃತವಾದ ಮಕುಟ ಮತ್ತು ಕೈಯಲ್ಲಿ ಹಿಡಿದಿರುವ ಕಮಲಗಳು ಈ ಕೋಮಲ ಸೌಂದರ್ಯ ಭಾವವನ್ನು ಮತ್ತಷ್ಟು ಉಕ್ಕಿಸುತ್ತವೆ. ಒಂದೇ ಮೂರ್ತಿಯಲ್ಲಿ ವಿವಿಧ ರಸಭಾವಗಳನ್ನು ಒಂದಕ್ಕೊಂದು ಪೋಷಕವಾಗುವಂತೆ ಸೆರೆಹಿಡಿದಿರುವ ಜಾಣ್ಮೆ, ಶಿಲ್ಪದ ಸ್ಫುಟ ಪ್ರಮಾಣ ಮತ್ತು ಚತುರ ಅಲಂಕರಣದಿಂದಾಗಿ ಈ ಮಹೇಶಮೂರ್ತಿಶಿಲ್ಪ ಲೋಕ ಪ್ರಸಿದ್ಧವಾಗಿದೆ.

ಇಂಥ ಒಂದು ಅಪೂರ್ವ ಶಿಲ್ಪವನ್ನು ಕಡೆಯಲು ಆರಿಸಿರುವ ಸ್ಥಳ ಮತ್ತು ಕೆತ್ತಿರುವ ರೀತಿ ಸಹ ಗಮನಾರ್ಹವಾದುದು. ಹಿಂಭಾಗದ ಗೋಡೆಯಲ್ಲಿ ಸುಮಾರು 3.3ಮೀ ಗಳಷ್ಟು ಒಳಸರಿದಂತಿರುವ 6.3 ಮೀ ಅಗಲದ ಕೋಷ್ಠದಲ್ಲಿ ನೆಲದಿಂದ

ಮೇಲಿನವರೆಗೂ ಹಬ್ಬಿದಂತೆ ಉಬ್ಬುಶಿಲ್ಪವಾಗಿ ಇದನ್ನು ಕೆತ್ತಲಾಗಿದೆ. ಉಬ್ಬುಶಿಲ್ಪವಾದರೂ ಪೂರ್ಣಶಿಲ್ಪದಂತೆಯೇ ಭಾಸವಾಗುತ್ತದೆ. ಯಾವ ಕೆತ್ತನೆಯೂ ಇಲ್ಲದ ಹಿಂಭಾಗದ ಗೋಡೆ ಶಿಲ್ಪಕ್ಕೆ ಒಂದು ವಿಶಾಲವಾದ ಹಿನ್ನೆಲೆಯನ್ನು ಒದಗಿಸುತ್ತದೆ. ಶಿಲ್ಪ ಗೋಡೆಯಿಂದ ಸ್ವಲ್ಪ ಒಳಸರಿದಂತಿರುವುದರಿಂದ ಇದರ ಮೇಲೆ ಹೆಚ್ಚು ಬೆಳಕು ಬೀಳುವುದಿಲ್ಲ. ಪಕ್ಕದಿಂದ ಕಂಬಗಳ ಮಧ್ಯೆ ತೂರಿಬರುವ ಅಲ್ಪಸ್ವಲ್ಪ ಬೆಳಕು ಸಹ ಶಿಲ್ಪಕ್ಕೆ ಪೂರ್ಣವಾಗಿ ಹರಡದೆ ಮಧ್ಯ ಮುಖದ ಮೇಲಷ್ಟೇ ಕೇಂದ್ರೀಕೃತವಾಗಿ, ಅದರ ಸೌಂದರ್ಯವನ್ನೂ ಪ್ರಭಾವವನ್ನೂ ಆಕರ್ಷಣೆಯನ್ನೂ ಮತ್ತಷ್ಟು ಹೆಚ್ಚಿಸುತ್ತದೆ. ಈ ಶಿಲ್ಪ ಮುಂಬಾಗಿಲಿಗೆ ನೇರ ಎದುರಿಗಿದ್ದರೂ ಅಲ್ಲಿಂದ ಸು. 36.4ಮೀಗಳಷ್ಟು ಒಳಗಿರುವುದರಿಂದ ಬಿಸಿಲಿನ ಕಾಲದಲ್ಲೂ ಇಲ್ಲಿ ಬೀಳುವ ಬೆಳಕು ಅಷ್ಟು ಪ್ರಖರವಾಗೇನೂ ಇರುವುದಿಲ್ಲ. ಆದರೆ ಈ ಅರೆ ಬೆಳಕಿನ ಸ್ಥಿತಿಯೇ ಈ ಶಿಲ್ಪವನ್ನು ನೋಡುವವರ ಮೇಲೆ ಒಂದು ಅಸಾಧಾರಣ ಪರಿಣಾಮವನ್ನು ಉಂಟು ಮಾಡುತ್ತದೆ. ಹೊರ ಬಿಸಿಲಿನಿಂದ ಬಂದ ಬಾಗಿಲ ಬಳಿ ನಿಂತರೆ ಒಳಗೆ ಕಾಣುವುದು ಗಾಢಾಂಧಕಾರ ಅಷ್ಟೇ. ಆದರೆ ದೃಷ್ಟಿಯನ್ನು ಈ ಶಿಲ್ಪದ ದಿಶೆಯಲ್ಲಿ ಸ್ವಲ್ಪಕಾಲ ಕೇಂದ್ರೀಕರಿಸಿದರೆ ಮಸುಕು ಮಸುಕಾಗಿ ರೂಪಗೊಳ್ಳುತ್ತಿರುವ ಮೂರ್ತಿ ಆಗತಾನೇ ಪೃಥ್ವೀಗರ್ಭದಿಂದ ಎದ್ದುಬರುತ್ತಿರುವುದೋ ಎಂದು ಭಾಸವಾಗುತ್ತದೆ. ಕೆಲವು ಕ್ಷಣದಲ್ಲೇ ಮಹಾದೇವನ ಹಸನ್ಮುಖ ಸ್ಪಷ್ಟವಾಗುತ್ತ ಬರುತ್ತದೆ. ನಿಧಾನವಾಗಿ ದೇವನ ಅಘೋರ, ವಾಮದೇವ ಮುಖಗಳು ಸ್ಫುಟವಾಗಿ ಕಾಣತೊಡಗಿ ಮಹಾದೇವನ ವಿರಾಟಸ್ವರೂಪದ ದರ್ಶನವಾಗುತ್ತದೆ.

ಈ ಮಹಾದೇವನನ್ನು ಸೃಷ್ಟಿಸಿದ ಶಿಲ್ಪಿಯ ಕೌಶಲ ಮತ್ತು ತಪಸ್ಸಿದ್ಧಿ ಇಲ್ಲಿಯ ಇತರ ಶಿಲ್ಪಗಳಲ್ಲೂ ಕಂಡುಬರುತ್ತದೆ. ದ್ವಾರಪಾಲಕ ವಿಗ್ರಹಗಳನ್ನು ಬಿಟ್ಟರೆ ಇಲ್ಲಿಯ ಮುಖ್ಯ ಶಿಲ್ಪಗಳು ಎಂಟು ಮಾತ್ರ. ಇವೆಲ್ಲ ಶಿವಲೀಲಾಮೂರ್ತಿಗಳು. ಗೋಡೆಯ ಮೇಲೆ ವಿಶಾಲವಾದ ಸ್ಥಳ ದೊರೆಕಿದೆಡೆಗಳಲ್ಲಿ ಅರೆಗಂಬಗಳಿಂದಲಂಕರಿಸಿ ಮಧ್ಯೆ ಮಾಡದಂತೆ ಮಾಡಿ ಇವನ್ನು ಕೆತ್ತಿದ್ದಾರೆ. ಇವೂ ಸುಮಾರು ನೆಲದಿಂದ ಮೇಲಿನ ವರೆಗೆ ಹಬ್ಬಿರುವ ಬೃಹತ್ ಶಿಲ್ಪಗಳೇ. ಇವುಗಳಲ್ಲಿ ಯಾವುದೋ ಕಾರ್ಯನಿರತನಾದ, ತತ್ಕಾರ್ಯ ಪೋಷಕವಾದ ಭಾವವನ್ನು ಬಹು ಚೆನ್ನಾಗಿ ವ್ಯಕ್ತಪಡಿಸುತ್ತಿರುವ ಶಿವನ ವಿಗ್ರಹವೇ ಪ್ರಧಾನ. ಇದರ ಸುತ್ತಲೂ ಇರುವ ಉಪದೇವತೆಗಳು ಮತ್ತು ಗಣಗಳೂ, ಶಿವನಿಗಿಂತ ಗಾತ್ರದಲ್ಲಿ ಚಿಕ್ಕವಾಗಿ ತೋರಿಸಲ್ಪಟ್ಟಿದ್ದರೂ ಅವೂ ತಮ್ಮ ಸಹಜ ಭಾವಗಳೊಡನೆ ಚಿತ್ರಿತವಾಗಿವೆ. ಇಂಥ ಒಂದೊಂದು ಶಿಲ್ಪವನ್ನು ನೋಡಿದಾಗಲೂ ನಾಟಕದ ಸ್ತಬ್ಧದೃಶ್ಯವನ್ನು ನೋಡಿದಂತೆನಿಸುತ್ತದೆ. ವಸ್ತು ಮತ್ತು ಭಾವ ನಿರೂಪಣೆಯಲ್ಲಲ್ಲದೆ ಬೆಳಕು-ನೆರಳಿನ ಸಂಯೋಜನೆಗೂ ವಿವಿಧ ಶಿಲ್ಪಗಳ ಸ್ಥಳ ವಿನ್ಯಾಸಕ್ಕೂ ಶಿಲ್ಪಿ ವಿಶೇಷ ಗಮನವನ್ನಿತ್ತಿದ್ದಾನೆ. ಉದಾಹರಣೆಗೆ ಮುಂಬಾಗಿಲಿನ ಒಳಗೆ ಎದುರುಬದುರಾಗಿ ಎರಡು ಶಿಲ್ಪಗಳಿವೆ. ಬಲಗಡೆ ಇರುವುದು ನಟರಾಜ ವಿಗ್ರಹ, ಶಿವ ತನ್ನ ಅಷ್ಟಭುಜಗಳನ್ನೂ ಕಾಲುಗಳನ್ನು ವಿವಿಧ ದಿಶೆಗೆ ಎತ್ತಿ, ರಾಕ್ಷಸನ ಧ್ವಂಸಮಾಡುತ್ತ ತನ್ನ ವಿರಾಟ್ ಶಕ್ತಿಯನ್ನು ಹೊರಚೆಲ್ಲುತ್ತಿದ್ದಾನೆ. ಆದರೆ ಅದಕ್ಕೆ ನೇರ ಎದುರಿಗಿರುವುದು ಶಿವಲಕುಲೀಶನ ಶಿಲ್ಪ. ಅದೇ ಸರ್ವಶಕ್ತನಾದ ಮಹಾದೇವ. ಯಾವ ಅಬ್ಬರ, ಆವೇಶಗಳೂ ಇಲ್ಲದೆ ನಿರ್ವಿಕಾರನಾಗಿ ಮಹಾಯೋಗಿಯಾಗಿ ಅಂತರ್ಮುಖಿಯಾಗಿ ತಪೋಮಗ್ನನಾಗಿದ್ದಾನೆ. ಹಾಗೆಯೇ ಒಂದು ಶಿಲ್ಪದಲ್ಲಿ, ಪಾರ್ವತಿ ಯಾವುದೋ ಕಾರಣಕ್ಕಾಗಿ ಶಿವನ ಮೇಲೆ ಮುನಿಸಿಕೊಂಡು ಅವನಿಂದ ದೂರ ಕುಳಿತಿದ್ದರೆ, ಅದರ ಎದುರಿರುವ ರಾವಣ ಕೈಲಾಸವನ್ನೆತ್ತುತ್ತಿರುವ ಶಿಲ್ಪದಲ್ಲಿ. ಅದೇ ಪಾರ್ವತಿ ರಾವಣನ ಕಾರ್ಯದಿಂದ ಬೆದರಿ ಶಿವನನ್ನು ಬಾಚಿ ತಬ್ಬಿಕೊಂಡಿದ್ದಾಳೆ. ಇನ್ನೊಂದು ಕಡೆ ಶಿವ ಅಂಧಕಾಸುರ ಸಂಹಾರಮೂರ್ತಿಯಾಗಿ ಭಯಂಕರನಾಗಿ ವ್ಯಕ್ತವಾಗಿದ್ದರೆ, ಅದರ ಎದುರಿನಲ್ಲಿ ಕಲ್ಯಾಣ ಸುಂದರಮೂರ್ತಿಯಾಗಿದ್ದಾನೆ, ಮಹೇಶಮೂರ್ತಿಯ ಇಕ್ಕೆಲಗಳಲ್ಲೂ ಇನ್ನೆರಡೂ ಶಿಲ್ಪಗಳಿದ್ದು ಪರಶಿವ ಪ್ರಕೃತಿ ಪುರುಷಾತ್ಮಕನೆಂಬ ಭಾವವನ್ನು ವ್ಯಕ್ತಪಡಿಸುವ ಅರ್ಧನಾರೀಶ್ವರ ಮತ್ತು ಗಂಗಾಧರ ಶಿವನ ರೂಪವನ್ನು ಸಾಕ್ಷಾತ್ಕರಿಸಿವೆ. ಈ ಒಂದೊಂದು ಶಿಲ್ಪವೂ ಎಲಿಫೆಂಟದ ಅನಾಮಿಕ ಶಿಲ್ಪಿಯ ತಪಸ್ಸಿದ್ಧಿಯ ಕುರುಹಾಗಿ, ಭಾರತೀಯ ಶಿಲ್ಪದ ಶ್ರೇಷ್ಠ ಸಾಧನೆಯಾಗಿ ಮೆರೆಯಬಲ್ಲುದು. (ವಿ.ಎಸ್.ಎಸ್.ಎಸ್.ಎನ್.)

**ಎಲಿಯಟ್, ಎಚ್ ಎಂ ಮತ್ತು ಡೌಸನ್, ಜಾನ್:** (1808-53) ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ಎಂಟು ಸಂಪುಟಗಳ ಆಧಾರ ಗ್ರಂಥವನ್ನು ರಚಿಸಿರುವ ಪ್ರಸಿದ್ಧ ವಿದ್ವಾಂಸರು. ಎಲಿಯಟ್ 1808ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದ. ವಿಂಚೆಸ್ಟರ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ನೌಕರನಾಗಿ ಬಂಗಾಳಕ್ಕೆ ಬಂದ. ಎರಡು ಬಾರಿ ವಿದೇಶೀವ್ಯವಹಾರಗಳ ಖಾತೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ. 1849ರಲ್ಲಿ ಭಾರತ ಮುಸ್ಲಿಂ ಇತಿಹಾಸಕಾರರ ವಿವರವಾದ ಒಂದು ಪಟ್ಟಿಯನ್ನೂ ವಿಷಯ ಸೂಚಿಯೊಂದನ್ನೂ ಪ್ರಕಟಿಸಿದ. ಈತನ ಪ್ರಸಿದ್ಧ ಗ್ರಂಥವೆಂದರೆ ಹಿಸ್ಟರಿ ಆಫ್ ಇಂಡಿಯ ಆಸ್ ಟೋಲ್ಡ್ ಬೈ ಇಟ್ಸ್ ಓನ್ ಹಿಸ್ಟೋರಿಯನ್ಸ್. ಇದು ಅಮೂಲ್ಯ ಆಧಾರ ಗ್ರಂಥವೆನಿಸಿದೆ. ಈ ಗ್ರಂಥಕ್ಕಾಗಿ ಎಲಿಯಟ್ ಅನೇಕಾನೇಕ ಉರ್ದು, ಪಾರಸಿ ಮತ್ತು ಅರಬ್ಬೀ ಮೂಲ ಪ್ರತಿಗಳನ್ನು ಶೇಖರಿಸಿದ್ದಲ್ಲದೆ ಅವುಗಳ ಅಗತ್ಯ ಭಾಗಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದಾನೆ. ಈ ಮಹಾ ಸಂಪುಟದ ಮೊದಲ ಭಾಗ ಪ್ರಕಟವಾಗುವ ವೇಳೆಗೆ ಎಲಿಯಟ್ ಆಫ್ರಿಕದ ಗುಡ್ ಹೋಪ್ ಭೂಶಿರದಲ್ಲಿ ತನ್ನ 45ನೆಯ ವಯಸ್ಸಿನಲ್ಲಿ ಮರಣಹೊಂದಿದ (1853). ಗ್ರಂಥದ ಉಳಿದ ಕೆಲಸವನ್ನು ಪೂರೈಸುವ ಜವಾಬ್ದಾರಿಯನ್ನು ಎಲಿಯಟ್ಟನ ಪತ್ನಿ ಜಾನ್ ಡೌಸನ್ನನಿಗೆ ವಹಿಸಿದಳು. ಡೌಸನ್ ಆಗ ಸ್ಯಾಂಡ್‌ಹರ್ಸ್ಟಿನ ಸೈನಿಕ ಶಾಲೆಯೊಂದರ ಪ್ರಾಧ್ಯಾಪಕನಾಗಿದ್ದ. ಈ ಮಹಾಪಂಡಿತ 1867-77ರ ಅವಧಿಯಲ್ಲಿ ಉಳಿದ ಸಂಪುಟಗಳನ್ನು ಪರಿಶೀಲಿಸಿ ಪ್ರಕಟಿಸಿದ. ಇದರ ರಚನೆಗೆ 200 ಚರಿತ್ರಕಾರರನ್ನು ಆರಿಸಲಾಗಿದೆ. ಸುಮಾರು 143 ಐತಿಹಾಸಿಕ ಗ್ರಂಥಗಳಿಂದ ವಿವರಣೆಗಳನ್ನು ಆಯಲಾಗಿದೆ. ಇದರ ಪರಿಷ್ಕರಣ ಮಾಡುವಾಗ ಡೌಸನ್ ಇದ್ದ ವಸ್ತುವಿನ ಜೊತೆಗೆ ಅನೇಕ ಪ್ರಾಂತೀಯ ದಾಖಲೆಗಳು, ಜೀವನಚರಿತ್ರೆಗಳು, ಕಾಗದ ಪತ್ರಗಳೂ, ಐತಿಹಾಸಿಕ ಪ್ರಾಮುಖ್ಯವುಳ್ಳ ಭೌಗೋಳಿಕ ವಿಷಯಗಳು – ಮುಂತಾದುವನ್ನು ಸಂಗ್ರಹಿಸಿ ಸೇರಿಸಿದ್ದಾನೆ. ಹೀಗೆ ಶೇಖರಗೊಂಡ ಹಸ್ತಪತ್ರಿಕೆಗಳ ಸಂಖ್ಯೆ ಸುಮಾರು 421. ಇವುಗಳಲ್ಲಿ ಹೆಚ್ಚಿನವು ಪಾರಸಿ ಭಾಷೆಯಲ್ಲಿವೆ.

ಡೌಸನ್ ಈ ಗ್ರಂಥವನ್ನಲ್ಲದೆ ಕ್ಲ್ಯಾಸಿಕಲ್ ಡಿಕ್ಷನರಿ ಆಫ್ ಹಿಂದೂ ಮೈಥಾಲಜಿ ಅಂಡ್ ರಿಲಿಜನ್, ಜಾಗ್ರಫಿ, ಹಿಸ್ಟರಿ ಅಂಡ್ ಲಿಟರೇಚರ್ ಎಂಬ ಭಾರತ ಪುರಾಣೇತಿಹಾಸ ಸಂಬಂಧವಾದ ನಿಘಂಟೊಂದನ್ನೂ ಬರೆದಿದ್ದಾನೆ. (ಎಸ್.ಎಂ.ಎಚ್.; ಎಸ್.ಕೆ.ಎಸ್.)

**ಎಲಿಯಟ್ ಜಾರ್ಜ್:** (1819-80). ಮೇರಿ ಅನ್ (ಮೇರಿಯನ್) ಎವನ್ಸ್ ಎಂಬ ಇಂಗ್ಲಿಷ್ ಲೇಖಕಿಯ ಕಾವ್ಯನಾಮ, ಈಕೆ ಹೆಚ್ಚಾಗಿ ಕಾದಂಬರಿಗಳನ್ನು ಬರೆದಿದ್ದಾಳೆ. ಇಂಗ್ಲಿಷ್ ಮಧ್ಯಪ್ರದೇಶಗಳ ಪ್ರಾಂತೀಯ ಜೀವನವನ್ನು ಚಿತ್ರಿಸಿರುವ ಆಡಂ ಬೀಡ್ (1859), ಮಿಲ್ ಆನ್ ದಿ ಫ್ಲಾಸ್ (1860). ಮಿಡ್ಲ್‌ಮಾರ್ಚ್ (1872) ಎಂಬ ಕಾದಂಬರಿಗಳು ಪ್ರಸಿದ್ಧ. ವಾರ್ವಿಕ್‌ಷೈರಿನಲ್ಲಿ ಈಕೆಯ ತಂದೆ ಕೇವಲ ಬಡ ಬಡಗಿಯೊಬ್ಬನ ಮಗನಾದರೂ ರೈತನಾಗಿ ಜೀವನವನ್ನು ಪ್ರಾರಂಭಿಸಿ ಸ್ವಶ್ರಮದಿಂದ ಆಸ್ತಿಯೊಂದರ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದ. ಮೇರಿಯನ್ ಕೊನೆಯ ಮಗಳು, ಕಪ್ಪು ಕೂದಲಿನ ಚದುರೆ. ತನ್ನ ಅಣ್ಣ ಐಸ್ಯಾಕನನ್ನು ಕಂಡರೆ ತುಂಬ ಪ್ರೀತಿ. ತನ್ನ ಮಿಲ್ ಆನ್ ದಿ ಫ್ಲಾಸ್ ಎಂಬ ಕಾದಂಬರಿಯಲ್ಲಿ ಟಾಮ್‌ನ ಪಾತ್ರದಲ್ಲಿ ಐಸ್ಯಾಕನನ್ನೂ ಅವನ ಸೋದರಿಯ ಪಾತ್ರದಲ್ಲಿ ತನ್ನನ್ನೂ ಚಿತ್ರಿಸಿದ್ದಾಳೆ. 17ನೆಯ ವಯಸ್ಸಿನಲ್ಲಿ ತಾಯಿ ಸತ್ತ ಒಡನೆಯೇ ಮನೆಯ ಜವಾಬ್ದಾರಿಯೆಲ್ಲ ಈಕೆಯ ಮೇಲೆ ಬಿತ್ತು. ಗ್ರಾಮಜೀವನವೆಂದರೆ ಈಕೆಗೆ ಪ್ರಿಯ. ವಿರಾಮಕಾಲದಲ್ಲಿ ವ್ಯಾಸಂಗಮಾಡುವುದರಲ್ಲೂ ವಿಶ್ವಾಸ. ಆದರೂ ಅಂಥ ಸಾಮರ್ಥ್ಯವುಳ್ಳ ಯುವತಿಗೆ ಗ್ರಾಮಜೀವನ ಸಪ್ಪೆಯಾಗಿ ಕಂಡಿತು. ಹೆಣ್ಣಾಗಿ ಹುಟ್ಟಿದುದರಿಂದ ತನಗಾದ ಸಂಕೋಚಗಳನ್ನು ಡೇನಿಯಲ್ ಡೊರೊಂಡ ಎಂಬ ಕಥೆಯಲ್ಲಿ ತೋಡಿಕೊಂಡಿದ್ದಾಳೆ. 21ನೆಯ ವಯಸ್ಸಿನಲ್ಲಿ ವಾರ್ವಿಕ್‌ಷೈರಿನಿಂದ ಆಕೆಗೆ ಬಿಡುಗಡೆಯಾಯಿತು. ಐಸ್ಯಾಕನಿಗೆ ತೋಟದ ಮೇಲ್ವಿಚಾರಣೆ ವಹಿಸಿ ಮಗಳೊಂದಿಗೆ ತಂದೆ ಕವೆಂಟ್ರಿಗೆ ಬಂದು ನೆಲೆಸಿದ. ಇಲ್ಲಿ ಮೇರಿಯನಳಿಗೆ ರಿಬ್ಬನ್ ತಯಾರಕ ಬ್ರೇ ಮತ್ತು ಆತನ ಹೆಂಡತಿಯ ಪರಿಚಯವಾಯಿತು. ಈ ದಂಪತಿಗಳ ಪ್ರಭಾವದಿಂದ ಮತಧರ್ಮವಿಚಾರಗಳಲ್ಲಿ ಮೇರಿಯನಳಿಗಿದ್ದ ಉತ್ಕಟ ಹಾಗೂ ಸಂಕೋಚ ಮನೋಭಾವ ವ್ಯತ್ಯಾಸಗೊಂಡಿತು. ತಂದೆ ಸತ್ತಮೇಲೆ (1849) ಬ್ರೇ ದಂಪತಿಗಳೊಡನೆ ದೇಶಸಂಚಾರಮಾಡಿ ಬಂದಳಲ್ಲದೆ ದಿ ವೆಸ್ಟ್ ಮಿನಿಸ್ಟರ್ ರಿವ್ಯೂ ಎಂಬ ಪತ್ರಿಕೆಗೆ ಲೇಖನಗಳನ್ನು ಬರೆದಳು. ಅನಂತರ ಅದರ ಸಂಪಾದಕನ ಕೋರಿಕೆಯಂತೆ ಲಂಡನ್ನಿಗೆ ಹೋಗಿ ಆ ಪತ್ರಿಕೆಯ ಉಪಸಂಪಾದಕಳಾಗಿ ಕೆಲಸ ಮಾಡಿದಳು. ಅಲ್ಲಿ ಇವಳಿಗೆ ಪ್ರಸಿದ್ಧ ಲೇಖಕ ಹರ್ಬರ್ಟ್ ಸ್ಪೆನ್ಸರ್ ಮತ್ತು ನಟ ಜಾರ್ಜ್ ಹೆನ್ರಿ ಲೆವಿಸರ ಸ್ನೇಹವಾಯಿತು. ಕಾನೂನಿನ ರೀತ್ಯ ಮದುವೆಯಾಗದಿದ್ದರೂ ಸುಮಾರು ಇಪ್ಪತ್ತೈದು ವರ್ಷಕಾಲ ಮೇರಿಯನ್ ಎವನ್ಸ್ ಮತ್ತು ಹೆನ್ರಿ ಲೆವಿಸ್ ಗಂಡ ಹೆಂಡಿರಂತೆ ಬಾಳಿದರು. ತಮ್ಮ ಮೂರು ಮಕ್ಕಳನ್ನೂ ಈಕೆ ವಿಶ್ವಾಸದಿಂದ ಸಾಕಿದಳು. ಬರೆಯಲು ಪ್ರಾರಂಭಿಸಿದಾಗ ಎವನ್ಸ್‌ಗೆ ನಲವತ್ತರ ವಯಸ್ಸಾಗಿತ್ತು. ಬಹಳ ಉತ್ತಮ ಕಾದಂಬರಿ ಎನಿಸಿದ ಸೀನ್ಸ್ ಫ್ರಂ ಕ್ಲರಿಕಲ್ ಲೈಫ್ ಎಂಬುದರಲ್ಲಿ ಈಕೆಯ ಪ್ರಾರಂಭಿಕ ಗ್ರಾಮಜೀವನದ ಚಿತ್ರಗಳಿವೆ. ಇದರಲ್ಲಿ ದಿ ಸ್ಯಾಡ್ ಫಾರ್ಚೂನ್ಸ್ ಆಫ್ ದಿ ರೆವರೆಂಡ್ ಎಮಾಸ್ ಬಾರ್ಟನ್, ಮಿಸ್ಟರ್ ಜೆಲ್‌ಫಿಲ್ಸ ಲೌವ್ ಸ್ಟೋರಿ, ಜೆನೆಟ್ಸ್ ರಿಪೆಂಟೆನ್ಸ್ ಎಂಬ ಮೂರು ಕಥೆಗಳಿವೆ. ಅನಂತರ ಆಡಂ ಬೀಡ್, ಮಿಲ್ ಆನ್ ದಿ ಫ್ಲಾಸ್, ಸೈಲಸ್ ಮಾರ್ನರ್ ಎಂಬ ಮೂರು ಕಾದಂಬರಿಗಳು

ಹೊರಬಂದುವು. ಕೊನೆಯ ಕಾದಂಬರಿಯಲ್ಲಿ ಬಾಗಿಲಲ್ಲಿ ಸಿಕ್ಕ ತಬ್ಬಲಿ ಹೆಣ್ಣು ಕೂಸೊಂದನ್ನು ಸಾಕಿದ ನೇಕಾರನೊಬ್ಬನ ಜೀವನ ಚಿತ್ರಣವಿದೆ. ರೊಮೊಲದಲ್ಲಿ (1861) 15ನೆಯ ಶತಮಾನದ ಇಟಲಿಯ ಹಿನ್ನೆಲೆಯಿದೆ. ಡೇನಿಯಲ್ ಡರೋಂಡದಲ್ಲಿ (1876) 19ನೆಯ ಶತಮಾನದ ಯುರೋಪಿನ ಜೀವನವಿದೆ. ಈಕೆಯ ಅತ್ಯುತ್ತಮ ಕಾದಂಬರಿಯೆಂದು ಖ್ಯಾತವಾಗಿರುವ ಮಿಡ್ಲ್ ಮಾರ್ಚ್‌ನಲ್ಲಿ ಸಣ್ಣ ಊರೊಂದರಲ್ಲಿನ ಮಧ್ಯಮವರ್ಗದ ಕುಟುಂಬವೊಂದರ ಕಥೆ ಇದೆ. ಇಷ್ಟಲ್ಲದೆ ಈಕೆ ಒಂದು ಪ್ರಬಂಧ ಗುಚ್ಛವನ್ನೂ ಕವನ ಸಂಕಲನವನ್ನೂ ಬರೆದಿದ್ದಾಳೆ. ತನ್ನ ಕಾಲಕ್ಕಾಗಲೇ ಈಕೆ ಖ್ಯಾತ ಲೇಖಕಿಯಾಗಿ ಸಾಕಷ್ಟು ಗೌರವ ಸಂಪಾದಿಸಿದ್ದಳು. ಲೆವಿಸ್ ಸತ್ತಮೇಲೆ ತನ್ನನ್ನು ಮೆಚ್ಚಿದ ಜಾನ್ ವಾಲ್ಟರ್ ಕ್ರಾಸ್ ಎಂಬಾತನನ್ನು ಈಕೆ ಮದುವೆಯಾದಳು.

ಜಾರ್ಜ್ ಎಲಿಯಟ್‌ಳು ತನ್ನ ಕಾದಂಬರಿಗಳಲ್ಲಿ ಸಾಮಾನ್ಯ ಜನರ ಜೀವನದಲ್ಲಿನ ಆಳವಾದ ಸಮಸ್ಯೆಗಳನ್ನು ಗಂಭೀರವಾಗಿ ಬಿಡಿಸಿದ್ದಾಳೆ. ಇವಳು ಆರಿಸಿದ ಕಥಾನಕಗಳೆಲ್ಲ ಸಂಕೀರ್ಣವಾದವು. ಸಾಮಾನ್ಯ ಜನಕ್ಕೆ ಒದಗುವ ದುರಂತಗಳನ್ನು ಈಕೆ ತೀಕ್ಷ್ಣವಾಗಿ ವರ್ಣಿಸಿದ್ದಾಳೆ. ಅಷ್ಟೇ ಚೆನ್ನಾಗಿ ಜೀವನದ ಲಘು ಸನ್ನಿವೇಶಗಳನ್ನೂ ಹಾಸ್ಯಪ್ರಕರಣಗಳನ್ನೂ ಈಕೆ ಚಿತ್ರಿಸಿದ್ದಾಳೆ. ಸಂಭಾಷಣೆಯನ್ನು ಸಹಜವಾಗಿ ಬೆಳಸುವ ಕಲೆ ಈಕೆಗೆ ಸಿದ್ಧಿಸಿತ್ತು. ಮಕ್ಕಳ ವಿಷಯಗಳನ್ನಂತೂ ಈಕೆ ಮನಮುಟ್ಟುವಂತೆ ಚಿತ್ರಿಸಿದ್ದಾಳೆ.

(ಎಚ್.ಎ.ಎಸ್.)

ಬದುಕಿನಲ್ಲಿ ಪ್ರತಿಯೊಂದು ಕ್ರಿಯೆಯೂ ಫಲವನ್ನು ಕೊಟ್ಟೇ ಕೊಡುತ್ತದೆ ಎಂಬುದು ಈಕೆಯ ಗಾಢ ನಂಬಿಕೆ. ಮನುಷ್ಯನು ತನ್ನ ಒಂದು ಕ್ರಿಯೆ ಗುಟ್ಟಾಗಿ ಉಳಿಯುತ್ತದೆ ಎಂದಾಗಲಿ ಇಂಥ ಫಲವನ್ನೇ ನೀಡುತ್ತದೆ ಎಂದಾಗಲಿ ನಿರೀಕ್ಷಣೆಯನ್ನು ಇಟ್ಟುಕೊಳ್ಳಬಹುದು. ಆದರೆ ಆತನ ನಿರೀಕ್ಷಣೆ ತಪ್ಪಾಗಬಹುದು. ಜಾರ್ಜ್ ಎಲಿಯೆಟ್‌ಳ ಹಲವು ಕಾದಂಬರಿಗಳೇ ಎಂದೋ ನಡೆದ ಕ್ರಿಯೆಯು ಕಾಲದ ಗರ್ಭದಲ್ಲಿ ಮರೆಯಾಗಿದ್ದು, ನಿರೀಕ್ಷಿಸದಿದ್ದಾಗ ನಿರೀಕ್ಷಿಸದಿದ್ದ ಫಲವನ್ನೂ ಕೊಡುತ್ತದೆ. ಮನುಷ್ಯ-ಮನುಷ್ಯರ ನಡುವಣ ಪ್ರೀತಿ, ನೆರವು ಇವೇ ನಿಜವಾದ ಸಂಪತ್ತು. ('ಸೈಲಸ್ ಮಾರ್‍ನರ್'ನಲ್ಲಿ ಪ್ರೀತಿಯ ಭಾಗ್ಯದ ನಿರೂಪಣೆ ಇದೆ.) ಇವಳು ತನ್ನನ್ನು 'ಮಿನಾಲಿಯರಿಸ್ಟ್' ಎಂದು ಕರೆದುಕೊಂಡಳು. ಹೀಗೆಂದರೆ, ಜಗತ್ತು ಉತ್ತಮವಾಗುವ ವಿಷಯದಲ್ಲಿ ನಿರಾಸೆ ಇಲ್ಲ, ಆದರೆ ಅದು ತಾನಾಗಿಯೇ ಸುಧಾರಿಸುತ್ತದೆ ಎಂದು ನಂಬುವಂತಿಲ್ಲ, ಮನುಷ್ಯನ ಪ್ರಯತ್ನದಿಂದ ಸುಧಾರಿಸುತ್ತದೆ ಎಂದು ನಂಬಿಕೆ ಇರುವ ವ್ಯಕ್ತಿ.

ಜಾರ್ಜ್ ಎಲಿಯಟ್‌ಳಿಗೆ ದೇವರಲ್ಲಿ ನಂಬಿಕೆ ಇಲ್ಲ. ಆದರೆ ಮಾನವರ ಪರಸ್ಪರ ಪ್ರೀತಿಗೆ ಅತ್ಯುನ್ನತ ಸ್ಥಾನವನ್ನು ಕೊಟ್ಟಳು. ಮನುಷ್ಯರು ಪರಸ್ಪರ ಅವಲಂಬಿಸುತ್ತಾರೆ, ಒಂಟಿಯಾಗಿ ಸಾರ್ಥಕ ಬದುಕನ್ನು ನಡೆಸುವುದು ಅಸಾಧ್ಯ, ಮನುಷ್ಯನ ಭಾವಗಳು (ಫೀಲಿಂಗ್ಸ್) ಬಹು ಮುಖ್ಯ ಇವೇ ಮನುಷ್ಯನ ನಡತೆಯನ್ನು ನಿರ್ಧರಿಸುತ್ತವೆ. ಆದುದರಿಂದ ಮನುಷ್ಯನ ಪರಸ್ಪರ ಅವಲಂಬನೆ ಕಲ್ಯಾಣಕರವಾಗಬೇಕಾದರೆ ನಮ್ಮ ಫೀಲಿಂಗ್ಸ್ ಅನ್ನು ನೈತಿಕವಾಗಿ ಇಟ್ಟುಕೊಳ್ಳುವುದು ಅನಿವಾರ್ಯ ಎಂಬುದು ಈಕೆಯ ಚಿಂತನೆ. ಈಕೆಯ ಕಾದಂಬರಿಗಳಲ್ಲಿ ಪಾತ್ರಗಳು ಆರೋಗ್ಯಕರವಾದ, ಗಟ್ಟಿ ಫೀಲಿಂಗ್ ನಿಂದ ಆಯ್ಕೆ ಮಾಡಿದಾಗ ಬದುಕು ಅರ್ಥವತ್ತಾಗುತ್ತದೆ. ಫೀಲಿಂಗ್ ಟೊಳ್ಳಾದಾಗ ಬದುಕು ಅರ್ಥಹೀನವಾಗುತ್ತದೆ. ಒಮ್ಮೊಮ್ಮೆ ಈಕೆಗೆ ಕ್ರಿಯೆಯನ್ನು ಸಾಕಷ್ಟು ದೂರದಿಂದ ನೋಡಲು ಸಾಧ್ಯವಾಗಿಲ್ಲ ಎನ್ನಿಸುತ್ತದೆ; ಆ್ಯಡಂ ಬೀಡ್‌ನಲ್ಲಿ ಹೆಟಿ ಸೊರೆಲ್ ಎನ್ನುವ ಪಾತ್ರಕ್ಕೆ ವಿರುದ್ಧವಾಗಿದ್ದಾಳೆ ಎನ್ನಿಸುತ್ತದೆ. ಇಂಥ ದೋಷಗಳಿದ್ದರೂ ಈಕೆ ಕಾದಂಬರಿಯಲ್ಲಿ ಬದುಕಿನ ಅರ್ಥ ಅನ್ವೇಷಣೆಯನ್ನು ಕಲಾತ್ಮಕವಾಗಿ ನಿರೂಪಿಸಿದಳು. ಇಂಗ್ಲಿಷ್ ಕಾದಂಬರಿಯ ಸಾಹಿತ್ಯದಲ್ಲಿ ಬಹು ದೊಡ್ಡ ಸ್ಥಾನ ಈಕೆಯದು. (ಎಲ್.ಎಸ್.ಎಸ್.)

**ಎಲಿಯಟ್, ಟಿ ಎಸ್:** 1888-1965. ಶ್ರೇಷ್ಠ ಕವಿ, ವಿಮರ್ಶಕ, ನಾಟಕಕಾರ ಮತ್ತು ವಿಚಾರವಂತ ಹುಟ್ಟಿನಿಂದ ಅಮೆರಿಕದವನಾದರೂ ಇಂಗ್ಲೆಂಡಿಗೆ ಬಂದು ಬ್ರಿಟಿಷ್ ಪ್ರಜೆಯಾಗಿ ಬಾಳಿದ, ಮಿಸೂರಿಯ ಸೇಂಟ್ ಲೂಯಿಯಲ್ಲಿ ಜನಿಸಿದ. ತಂದೆ ಹೆನ್ರಿ ವೇರ್ ಎಲಿಯಟ್ (1841-1919). ಈ ಕುಟುಂಬದವರು 17ನೆಯ ಶತಮಾನದಲ್ಲೆ ಇಂಗ್ಲೆಂಡಿನಿಂದ ಬಾಸ್ಟನ್ನಿಗೆ ವಲಸೆ ಹೋಗಿದ್ದರು. ಪದವೀಧರನಾದಮೇಲೂ (1909) ಹಾರ್ವರ್ಡ್‌ನಲ್ಲಿ ಸಾಹಿತ್ಯ ಮತ್ತು ದರ್ಶನಶಾಸ್ತ್ರಗಳನ್ನು ಆಳವಾಗಿ ಅಭ್ಯಾಸ ಮಾಡಿದ. 1915ರಲ್ಲಿ ಪ್ರಯಾಣ ವೇತನ ಸಿಗಲಾಗಿ ಜರ್ಮನಿಗೆ ಹೋಗಿ ಬಂದು ಆಕ್ಸ್‌ಫರ್ಡಿನಲ್ಲಿ ಪುನಃ ದರ್ಶನ ಶಾಸ್ತ್ರದ ವ್ಯಾಸಂಗ ಮಾಡಿದ. ವಿವಾಹವಾಗಿ (1915) ಇಂಗ್ಲೆಂಡಿನಲ್ಲಿ ನೆಲೆಸಿದ. ಶಾಲಾಧ್ಯಾಪಕನಾಗಿ, ಬ್ಯಾಂಕ್ ಗುಮಾಸ್ತನಾಗಿ ಕೆಲಕಾಲ ಕೆಲಸ ಮಾಡಿದ. ಸಂಕೇತ ಪಂಥದ ಈಗೋಯಿಸ್ಟ್ ಪತ್ರಿಕೆಯ ಸಹಸಂಪಾದಕನಾಗಿ (1917) ದುಡಿದು, ಸಾಹಿತ್ಯ ಮತ್ತು ದರ್ಶನಗಳಿಗೆ ಮೀಸಲಾದ ನಿಯತಕಾಲಿಕವೊಂದನ್ನು ಆರಂಭಿಸಿ ಅದರ ಸಂಪಾದಕನಾಗಿ ಕೆಲಸ ಮಾಡಿದ. ಮೊದಲು ಕ್ರೈಟೀರಿಯನ್ ಎಂದೂ ಅನಂತರ ನ್ಯೂ ಕ್ರೈಟೀರಿಯನ್ ಎಂದೂ ಕರೆಯಲಾದ ಈ ಪತ್ರಿಕೆ ಸುಮಾರು ಹತ್ತು ವರ್ಷಗಳ ಕಾಲ ಬಹು ಪ್ರಸಿದ್ಧವೆನಿಸಿತು. 1925ರಿಂದ ಕೊನೆಯವರೆಗೂ ಫೇಬರ್ ಅಂಡ್ ಫೇಬರ್ ಪ್ರಕಟಣಾಲಯದ ನಿರ್ದೇಶಕರನಲ್ಲೊಬ್ಬನಾಗಿ ಕೆಲಸ ಮಾಡಿದ. ಫ್ರಾನ್ಸಿನ ಸಂಕೇತ ಪಂಥದ ಎಜ್ರಾಪೌಂಡ್ ಮೊದಲಾದ ಕೆಲವರು ಕವಿಗಳಿಂದ ತುಂಬ ಪ್ರಭಾವಿತನಾದ. ಇವನ ದಿ ಲೌವ್ ಸಾಂಗ್ ಆಫ್ ಆಲ್‌ಫ್ರೆಡ್ ಪ್ರುಫ್ರಾಕ್ ಎಂಬ ಪ್ರಥಮ ವಿಡಂಬನ ಕವಿತೆ ಮೊದಲು ಪತ್ರಿಕೆಯಲ್ಲೂ (1915) ಅನಂತರ ಬೇರೆ ಕೆಲವು ಕವನಗಳೊಡನೆ ಪುಸ್ತಕವಾಗಿಯೂ ಪ್ರಕಟವಾಯಿತು (1917). 1919ರಲ್ಲಿ ಪೊಯಮ್ಸ್ ಎಂಬ ಗ್ರಂಥ ಹೊರಬಂತು. ಎಲ್ಲವೂ ಒಟ್ಟಾಗಿ 1920ರಲ್ಲಿ ಪುನರ್ಮುದ್ರಿತವಾದುವು. ಎಲಿಯಟ್‌ನ ಈ ಕವನಗಳಲ್ಲೆಲ್ಲ ಸಮಕಾಲೀನ ನಗರ ಜೀವನದ ಹರಿತವಾದ ವಿಮರ್ಶೆ, ವಿಡಂಬನೆಗಳು ಪಾತ್ರಗಳ ಮೂಲಕ ನಾಟಕೀಯವಾಗಿ ಮೈದೋರಿವೆ. ಈ ವಿಡಂಬನೆ ದಿ ವೇಸ್ಟ್ ಲ್ಯಾಂಡ್ ಕವಿತೆಯಲ್ಲಿ (1922) ತನ್ನ ಶಿಖರ ಮುಟ್ಟಿದೆ. ಉಜ್ಜ್ವಲ ಪ್ರತಿಮೆಗಳ ಮಾಲಿಕೆಯ ಮೂಲಕ ಯುದ್ಧೋತ್ತರ ಯುರೋಪಿನ ಭಗ್ನಜೀವನವನ್ನು ಚಿತ್ರಿಸುವ ಈ ಕವನಕ್ಕೆ 2000 ಡಾಲರುಗಳ ಡಯಲ್ ಬಹುಮಾನ

ದೊರೆಯಿತು. ಅರಿಸ್ಟೋಫೆನೀಸನ ಮಾದರಿಯದೆಂದು ಹೇಳಲಾದ ಉಗ್ರನಾಟಕವೊಂದರ (ಮೆಲೋಡ್ರಾಮ) ಭಾಗಗಳಾದ ದಿ ಹಾಲೊ ಮೆನ್ ಮತ್ತು ಸ್ವೀನಿ ಅಗೋನಿಸ್ಟಿಸ್ ಎಂಬುವು ಕ್ರೈಟೀರಿಯನ್ ಪತ್ರಿಕೆಯಲ್ಲಿ ಬೆಳಕು ಕಂಡವು. ದಿ ಜರ್ನಿ ಆಫ್ ದಿ ಮಾಗಿ (1917), ಎ ಸಾಂಗ್ ಫಾರ್ ಸಿಮ್ಯೋನ್ (1928) ಮತ್ತು ಆನಿಮುಲಾಗಳು (1929) ಪುಸ್ತಕಗಳಲ್ಲಿ ಪ್ರಕಟಗೊಂಡವು. ಬಾಳಿನ ಒಳಿತು ಕೆಡಕುಗಳ ಬಗ್ಗೆ ಮತ್ತು ಶ್ರದ್ಧೆ ನಮ್ರತೆಗಳ ಮೂಲಕ ಪ್ರಸ್ತುತ ಜೀವನದ ಪಾಳು ಭೂಮಿಯಿಂದ ಪಾರಾಗುವ ಬಗ್ಗೆ ಕವಿ ನಡೆಸಿರುವ ದೀರ್ಘ ಚಿಂತನೆ ಆಷ್ ವೆಡ್‌ನೆಸ್‌ಡೆ (1930) ಕವನದಲ್ಲಿ ಕಲಾತ್ಮಕವಾಗಿ ರೂಪುಗೊಂಡಿದೆ. ಆಗಾಗ ಬರೆದಿಟ್ಟ ಕೆಲವು ಪದ್ಯದ ತುಣುಕುಗಳನ್ನು ಒಟ್ಟಿಗೆ ಪರಿಭಾವಿಸಿದಾಗ ಏನೋ ಒಂದು ಅರ್ಥ ಹೊಳೆದು ಈ ಕವನ ರೂಪುಗೊಂಡಿತು. ರೋಮನ್ ಕೆಥೊಲಿಕ್ ಧರ್ಮಕ್ಕೆ ಸೇರಿದ ಎಲಿಯಟ್ ತಾನು ಸಾಹಿತ್ಯದಲ್ಲಿ ಪ್ರಾಚೀನ ಸಂಪ್ರದಾಯದವನೆಂದೂ ರಾಜಕೀಯದಲ್ಲಿ ರಾಜಪಕ್ಷದವನೆಂದೂ ಧರ್ಮದಲ್ಲಿ ರೋಮನ್ ಕೆಥೊಲಿಕನೆಂದೂ ಸಾರಿದ. ಈ ಘೋಷಣೆಗೆ ಮುಂಚೆ ಬಂದ ಕವನಗಳು ಇದರ ಪೂರ್ವಭಾವಿ ಸಿದ್ಧತೆ ಎಂಬಂತಿವೆ. ದಿ ಲೌವ್ ಸಾಂಗ್ ಆಫ್ ಆಲ್ಫ್ರೆಡ್ ಪ್ರುಫ್ರಾಕ್ ಮತ್ತು ದಿ ವೇಸ್ಟ್ ಲ್ಯಾಂಡ್‌ಗಳು ಧರ್ಮಸಂಪ್ರದಾಯಗಳಿಲ್ಲದ ಸಮಾಜದಲ್ಲಿ ಜೀವನ ವಿಫಲತೆ ನಿರಾಶೆಗಳಿಗೆ ಹೇಗೆ ಬಲಿಯಾಗುತ್ತದೆಂಬುದನ್ನು ತೋರಿಸುತ್ತವೆ. ಮೌಲ್ಯಹೀನವಾಗಿ ಸಿಡಿದ ಜಗತ್ತಿನ ಚಿತ್ರ ದಿ ವೇಸ್ಟ್ ಲ್ಯಾಂಡ್‌ನಲ್ಲಿದೆ. ಫೋರ್ ಕ್ವಾರ್ಟೆಟ್ಸ್ ಎಲಿಯಟ್ಟನ ಕಾವ್ಯಸಿದ್ಧಿಯ ನಿದರ್ಶನವೆನ್ನಬಹುದು. ಕವಿಯ ಪೂರ್ವಜರಿಗೆ ಸಂಬಂಧಿಸಿದ್ದು ಕವಿಗೆ ಧ್ಯಾನವಸ್ತುಗಳಾದ ನಾಲ್ಕು ಪ್ರದೇಶಗಳ ಹೆಸರನ್ನು ಈ ಕೃತಿಯ ನಾಲ್ಕು ಭಾಗಗಳಿಗೆ ಕೊಡಲಾಗಿದೆ. ಮಾನವ ಜೀವನದಲ್ಲಿ ಕಾಲದ ಅರ್ಥ ಮತ್ತು ನಿತ್ಯತೆಗೆ ಅದರೊಡನಿರುವ ಸಂಬಂಧವನ್ನು ಕುರಿತು ಎಲಿಯಟ್ ಸಂಯಮ ಪೂರ್ಣವಾದ ಚಿಂತನೆ ನಡೆಸಿರುವುದು ಈ ಕೃತಿಯಲ್ಲಿ ಕಾಣುತ್ತದೆ. ಗತಪರಂಪರೆಯ ಪುನಶ್ಶೋಧನೆ ಮತ್ತು ಅದರೊಡನೆ ಸ್ನೇಹಸ್ಥಾಪನೆಗೆ ನಡೆಸಿದ ಚತುರ್ಯಾತ್ರೆಗಳೆಂದು ವಿಮರ್ಶಕರು ಇದನ್ನು ಬಣ್ಣಿಸಿದ್ದಾರೆ.

ಎಲಿಯಟ್ಟನ ಬೃಹತ್ ಸಾಧನೆಗಳ ದೃಷ್ಟಿಯಿಂದ ಗೌಣವಾದರೂ ಪ್ರಕೃತ ಹೆಸರಿಸಲು ಯೋಗ್ಯವಾದ ಗ್ರಂಥವೆಂದರೆ ಓಲ್ಡ್ ಪೋಸಮ್ಸ್ ಬುಕ್ ಆಫ್ ಪ್ರಾಕ್ಟಿಕಲ್ ಕ್ಯಾಟ್ಸ್ (1939). ಇದರಲ್ಲಿ ಮಕ್ಕಳಿಗಾಗಿ ಬಹು ಸುಲಭ ಶೈಲಿಯಲ್ಲಿ ಬರೆದ ಕವನಗಳಿವೆ.

ಎಲಿಯಟ್‌ನ ಮೊದಲ ಕವನಗಳು ರಮ್ಯ ಕಾವ್ಯಪಂಥದಿಂದ ತೀರ ಭಿನ್ನವಾದ ಹಾದಿಯನ್ನು ಹಿಡಿದಿದ್ದು ಹೊಸ ಕಾವ್ಯವಿಧಾನವನ್ನೇ ರೂಪಿಸಿದುವು. ಅತಿ ಬಳಕೆಯಿಂದ ನಿರ್ವೀರ್ಯವಾಗಿದ್ದ ಕಾವ್ಯ ಭಾಷೆಯನ್ನು ಎಲಿಯಟ್ ಹೊಸ ರಚನೆ ಮತ್ತು ಪ್ರತಿಮೆಗಳ ಬಳಕೆಯಿಂದ ವೀರ್ಯವತ್ತಾಗಿ ಮಾಡಿ ಅದರ ಅಭಿವ್ಯಕ್ತಿಯನ್ನೇ ತಿದ್ದಿದ. ತಾನೇ

ರೂಪಿಸಿದ ವಿಮರ್ಶಾ ಸೂತ್ರಗಳಿಗೆ ಮಾದರಿಯೆಂಬಂತೆ ಕಾವ್ಯ ರಚನೆ ಮಾಡಿದ. ಸಮಕಾಲೀನ ಸಾಹಿತ್ಯ ಇವನ ಕೃತಿಗಳಿಂದ ತೀರ ಪ್ರಭಾವಿತವಾಗಿದೆ. ಎಲಿಯಟ್‌ನ ಎಲ್ಲ ಕವನಗಳೂ ಪರಂಪರೆ, ಧರ್ಮ, ಜೀವನಗಳ ಮೌಲ್ಯಗಳನ್ನು ಆಧರಿಸಿ ಸೃಷ್ಟಿಸಿದ ಕಲಾತ್ಮಕ ಕೃತಿಗಳಾಗಿದ್ದು ಇಂಗ್ಲಿಷ್ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

ಸಾಹಿತ್ಯಕ್ಕೆಂದು ಎಲಿಯಟ್‌ನಿಗೆ ನೊಬೆಲ್ ಪ್ರಶಸ್ತಿ ಕೊಡಲಾಯಿತು (1948). ಅದೇ ವರ್ಷ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಯೂ ದೊರೆಯಿತು. ಹಾರ್ವರ್ಡ್, ಯೇಲ್, ಪ್ರಿನ್ಸ್‌ಟನ್, ಕೇಂಬ್ರಿಜ್, ಎಡಿನ್‌ಬರೊ, ಬ್ರಿಸ್ಟಲ್, ಲೀಡ್ಸ್ ಮೊದಲಾದ ವಿಶ್ವವಿದ್ಯಾನಿಲಯಗಳು ಇವನಿಗೆ ಡಾಕ್ಟೊರಲ್ ಪದವಿಯಿತ್ತು ಗೌರವಿಸಿದುವು.

(ಎಚ್.ಎಸ್.ಎಲ್.)

20ನೆಯ ಶತಮಾನದ ನಾಲ್ಕನೆಯ ದಶಕದಲ್ಲಿ ಇಂಗ್ಲೆಂಡಿನಲ್ಲಿ ಪುನರುಜ್ಜೀವನ ಗೊಂಡ ಪದ್ಯನಾಟಕಗಳ ಕ್ಷೇತ್ರದಲ್ಲಿ ಪ್ರಧಾನ ಪಾತ್ರ ಎಲಿಯಟ್‌ನದು. ಪದ್ಯ ನಾಟಕಗಳ ವೈಶಿಷ್ಟ್ಯವನ್ನು ಎಲಿಯಟ್ ಹಲವು ಪ್ರಬಂಧಗಳಲ್ಲಿ ವಿಮರ್ಶಿಸಿದ್ದಾನಲ್ಲದೆ ತನ್ನ ಉದ್ದೇಶ, ಮಾರ್ಗ ಮತ್ತು ಪ್ರಯೋಗಗಳನ್ನೂ ಪೃಥಕ್ಕರಿಸಿದ್ದಾನೆ. ಎ ಡಯಲಾಗ್ ಆನ್ ಡ್ರಮೆಟಿಕ್ ಪೊಯೆಟ್ರಿ, ಆನ ಪೊಯೆಟ್ರಿ ಅಂಡ್ ಪೊಯೆಟ್ಸ್, ಪೊಯೆಟ್ರಿ ಅಂಡ್ ಡ್ರಾಮ ಎಂಬ ವಿಮರ್ಶೆಗಳಲ್ಲೂ ಈತ ಮಾಡಿದ ಒಂದು ರೇಡಿಯೋ ಭಾಷಣ (1936) ಮತ್ತು ಎಲಿಜಬೆತ್ ಯುಗದ ನಾಟಕಕಾರರ ಮೇಲಿನ ಪ್ರಬಂಧಗಳಲ್ಲೂ–ಈ ಬಗ್ಗೆ ಎಲಿಯಟ್ಟನಿಗಿದ್ದ ಧೋರಣೆಯನ್ನು ಕಾಣಬಹುದು. ನಾಟಕಕ್ಕೆ ಪದ್ಯಮಾಧ್ಯಮ ಅಲಂಕಾರಕ್ಕೆಂದು ಕೃತಕವಾಗಿ ತೊಡಿಸಿದ ಒಡವೆಯಲ್ಲ. ನಾಟಕದ ಕ್ರಿಯೆಯ ಕ್ರಮಕ್ಕೆ (ಪ್ಯಾಟರ್ನ್) ಗಹನತೆಯನ್ನು ನೀಡಬಲ್ಲ ಇನ್ನೊಂದು ಕ್ರಮವನ್ನು ಸೂಚಿಸುವುದೇ ಪದ್ಯಮಾಧ್ಯಮದ ಸಾರ್ಥಕ್ಯ. ಈ ಎರಡು ಕ್ರಮಗಳೂ ಒಂದರೊಡನೊಂದು ಬೆಸೆದು ಕೊಂಡಿರಬೇಕು ಎಂಬುದು ಈತನ ದೃಷ್ಟಿ.. ಎಲಿಯಟ್‌ನ ಪದ್ಯನಾಟಕಗಳು ಈ ದೃಷ್ಟಿಯ ಅಭಿವ್ಯಕ್ತಿ ಎನ್ನಬಹುದು.

ಸ್ವೀನಿ ಅಗೊನಿಸ್ಟಿಸ್ (1932) ಮತ್ತು ದಿ ರಾಕ್ (1934) ಎಂಬೆರಡು ಕೃತಿಗಳು ಈ ಕ್ಷೇತ್ರದಲ್ಲಿ ಪ್ರಯೋಗಗಳು. ಎಲಿಯೆಟ್‌ನ ಕೈ ಪದ್ಯನಾಟಕಗಳನ್ನು ಬರೆಯುವುದರಲ್ಲಿ ಪಳಗಿರುವುದು ಮರ್ಡರ್ ಇನ್ ದಿ ಕೆಥೆಡ್ರಲ್‌ನಲ್ಲಿ (1935) ನಿಸ್ಸಂದೇಹವಾಗಿ ಕಾಣುತ್ತದೆ. ಕ್ಯಾಂಟರ್‌ಬರಿ ಉತ್ಸವದ ಸಮಯದಲ್ಲಿ ಅಭಿನಯಕ್ಕಾಗಿ ರಚಿಸಿದ ಈ ಕೃತಿಯಲ್ಲಿ ಧಾರ್ಮಿಕ ವಿಧಿಯ ವಾತಾವರಣವನ್ನು ಅದ್ಭುತವಾಗಿ ಬಳಸಿಕೊಂಡಿದ್ದಾನೆ, ನಾಟಕಕಾರ, 1170ರಲ್ಲಿ ರಾಜಭಟರಿಂದ ಸಂತ ಥಾಮಸ್ ಬೆಕೆಟ್ ಕೊಲೆಯಾದುದು ನಾಟಕದ ಕಥಾವಸ್ತು. ದೇವಾಲಯದಲ್ಲಿ ಅಭಿನಯಿಸಲೆಂದೇ ರಚಿತವಾದ ಈ ಕೃತಿಯಲ್ಲಿ ಪ್ರೇಕ್ಷಕರು ನಾಟಕದ ಕ್ರಿಯೆಯಲ್ಲಿ–ಧಾರ್ಮಿಕ ವಿಧಿಯಲ್ಲಿ ಭಾಗವಹಿಸುವಂತೆ ಭಾಗಿಗಳಾಗಿ ರಸಾತ್ಮಕ ಅನುಭವವನ್ನು ಪಡೆಯುತ್ತಾರೆ. ಭಾಷೆಯ ಗಾಂಭೀರ್ಯ ಮತ್ತು ಬಿಗುಮಾನ ಇದಕ್ಕೆ ಹೊಂದಿಕೊಳ್ಳುತ್ತದೆ. ಇದರ ಮುಂದಿನ ನಾಟಕ ದಿ ಫ್ಯಾಮಿಲಿ ರೀಯೂನಿಯನ್ (1939) ಎಂಬುದು ನಾಟಕಕಾರನ ಸಮಕಾಲೀನ ಭಾಷೆಯನ್ನಾಡುವ ಸಮಕಾಲೀನ ಜನರನ್ನು ಕುರಿತ ನಾಟಕ. ಇದರ ನಾಯಕ ತರುಣ ಶ್ರೀಮಂತ ಹ್ಯಾರಿ, ಲಾರ್ಡ್ ಮಾನ್‌ಚೆನ್ಸಿ ತನ್ನ ಹೆಂಡತಿಯನ್ನು ಕೊಲೆಮಾಡಿರುವನೆಂಬ ನಂಬಿಕೆಯಿಂದ ಜೀವನದಲ್ಲಿ ಬೇಸರಗೊಂಡಿದ್ದಾನೆ. ಪ್ರಾಚೀನ ಗ್ರೀಕರ ನಾಟಕಗಳಲ್ಲಿನಂತೆ ಪ್ರತೀಕಾರ ದೇವತೆಗಳು ಅವನನ್ನು ಬೆನ್ನಟ್ಟುತ್ತಾರೆ. ತನ್ನ ಚಿಕ್ಕಮ್ಮ ಅಗಾಥಳಿಂದ ಅವನಿಗೆ ಇವರು ಪರಿಶುದ್ಧತೆಯ ದೇವತೆಗಳು ಅಹುದು ಎನ್ನುವ ಅರಿವಾಗುತ್ತದೆ. ಇಲ್ಲಿ ಸಾಮಾನ್ಯ ಜನದ ವ್ಯವಹಾರಜಗತ್ತನ್ನೂ ಅಗಾಥಳ ಆಧ್ಯಾತ್ಮಿಕ ಜಗತ್ತನ್ನೂ ಸೃಷ್ಟಿಸುತ್ತಾನೆ. ಎಲಿಯಟ್, ಹಾಗೆ ಮಾಡುವಲ್ಲಿ ಶೈಲಿಯ ಶ್ರೀಮಂತಿಕೆಯನ್ನೂ ಕಾವ್ಯಗುಣವನ್ನೂ ಕಡಿಮೆ ಮಾಡುತ್ತಾನೆ. ಪಾಪ ಕೃತ್ಯಕ್ಕಿಂತ ಪಾಪದ ಅರಿವನ್ನು ನಿರೂಪಿಸಲು ಹೊರಟುದರಿಂದ ಇಲ್ಲಿ ಕ್ರಿಯೆ ತಕ್ಕಷ್ಟು ನಿಷ್ಕೃಷ್ಟವಾಗಿಲ್ಲ. ದಿ ಕಾಕ್‌ಟೇಲ್ ಪಾರ್ಟಿಯಲ್ಲಿ (1951) ಒಬ್ಬರಿಂದೊಬ್ಬರು ದೂರವಾದ ಗಂಡ ಹೆಂಡತಿಯರು ಮನೋರೋಗವೈದ್ಯನೊಬ್ಬನ ಮಾರ್ಗದರ್ಶನದಿಂದ ಮತ್ತೆ ಒಟ್ಟಾಗಿ ಬಾಳಲು ಕಲಿಯುತ್ತಾರೆ. ಇಬ್ಬರೂ ತಮ್ಮ ಕನಸುಗಳನ್ನು ಬಿಟ್ಟು ತಮ್ಮ ವ್ಯಕ್ತಿತ್ವಗಳ ಮಿತಿಯಲ್ಲಿ ಬಾಳುವುದನರಿತರೆ ತೃಪ್ತಿಯನ್ನು ಕಂಡುಕೊಳ್ಳಬಹುದೆಂಬ ಅರಿವು ಬರುತ್ತದೆ. ಈ ನಾಟಕ ಫ್ಯಾಮಿಲಿ ರೀಯೂನಿಯನ್ ಗಿಂತ ಯಶಸ್ವಿ ಎನಿಸಿದೆ. ನಾಟಕಕಾರ ಪ್ರೇಕ್ಷಕರ ಆಸಕ್ತಿಯನ್ನು ಉಳಿಸಿಕೊಂಡು ಬರುವ ಮತ್ತು ಅವರನ್ನು ವಿನೋದಗೊಳಿಸಬಲ್ಲ ಘಟನೆಗಳೊಂದಿಗೆ ಸಮಕಾಲದ ಜೀವನದ ಸಮಸ್ಯೆಗಳ ಗಂಭೀರ ಪೃಥಕ್ಕರಣೆಯನ್ನು ಬೆರೆಸುವುದರಲ್ಲಿ ಯಶಸ್ವಿಯಾಗಿದ್ದಾನೆ. ನಾಯಕ ಭಗವದಿಚ್ಛೆಯನ್ನೂ ಸೂಚಿಸುತ್ತಾನೆ. ಧಾರ್ಮಿಕ ವಿಧಿಗಳ ವಾತಾವರಣವನ್ನು ಇಲ್ಲಿಯೂ ಕಾಣಬಹುದು. ಈ ಕಥೆಯ ಮೂಲ ಯುರಿಪಿಡೀಸ್‌ನ ಆಲ್ಸೆಸ್ಟಿಸ್ ಎಂದು ಎಲಿಯಟ್ ಹೇಳಿದ್ದಾನೆ. ಇದರಲ್ಲಿ ಅಲ್ಲಲ್ಲಿ ಹೃದಯಸ್ಪರ್ಶಿಯಾದ ವಾಗ್ಮಿತೆಯುಳ್ಳ ಭಾಗಗಳುಂಟು. ಶೈಲಿ ಸಮಕಾಲೀನ ವಿದ್ಯಾವಂತರ ದೈನಿಕ ಜೀವನದ ಭಾಷೆಗೆ ಬಹುದೂರವಿಲ್ಲ. ದಿ ಕಾನ್ಫಿಡೆನ್ಷಿಯಲ್ ಕ್ಲರ್ಕ್‌ನ (1953) ವಸ್ತು ಜಟಿಲವಾದುದು. ತನ್ನ ತಂದೆ ಯಾರೆಂದು ಅರಿಯದ ಯುವಕ ಕಾಲ್‌ಬಿ ಸಿಮ್‌ಕಿನ್ಸ್ ಇದರ ಕೇಂದ್ರ ವ್ಯಕ್ತಿ. ಕಥೆಯ ತಿರುವುಗಳು ಪ್ರೇಕ್ಷಕರ ಆಸಕ್ತಿಯನ್ನು ಉಳಿಸಿಕೊಳ್ಳುತ್ತವೆ. ಕಾಲ್‌ಬಿಗೆ ಕಡೆಯಲ್ಲಿ ಆಯ್ಕೆಯ ಸ್ವಾತಂತ್ರ್ಯಲಭಿಸುತ್ತದೆ–ತನ್ನ ತಂದೆ ಎಂದು ತಾನು ಭಾವಿಸಿದ್ದ ಶ್ರೀಮಂತನ ಜೀವನ ರೀತಿಯನ್ನೇ ಅನುಸರಿಸಿ ಅದು ತನ್ನ ಪ್ರವೃತ್ತಿಗೆ ವಿರುದ್ಧವಾಗಿದ್ದರೂ ಐಶ್ವರ್ಯಪದವಿ ಸುಖಗಳನ್ನು ಖಂಡಿತಮಾಡಿಕೊಳ್ಳಬಹುದು ಇಲ್ಲವೆ ಬಡ ಸಂಗೀತಗಾರನೊಬ್ಬನ ಮಾರ್ಗವನನ್ನನುಸರಿಸಿ ತನ್ನ ಪ್ರವೃತ್ತಿಯ ಬಯಕೆಯನ್ನು ತೃಪ್ತಿಪಡಿಸಬಹುದು. ಈ ನಾಟಕದ ರಚನೆಯಲ್ಲಿ ಯುರಿಪಿಡೀಸನ ಐಯಾನ್‌ನ ಪ್ರಭಾವ ಕಾಣುತ್ತದೆ. ಎಲಿಯಟ್‌ನ ಕಡೆಯ ನಾಟಕ ದಿ ಎಲ್ಡರ್ ಸ್ಟೇಟ್ಸ್‌ಮನ್ (1958). ಇದರಲ್ಲಿನ ಕೇಂದ್ರ ವ್ಯಕ್ತಿ ಲಾರ್ಡ್ ಕ್ಲೇವರ್‌ಟನ್. ಇತರ ನಾಟಕಗಳಲ್ಲಿನಂತೆ ಇಲ್ಲೂ ಭೂತಕಾಲದ ಘಟನೆಗಳು ವರ್ತಮಾನದ ಬಾಳನ್ನು ಸುಡಲು ಬರುತ್ತವೆ. ಅದರೆ ಕ್ಲೇಮರ್‌ಟನ್ ತನ್ನ ಅಂತಃಸಾಕ್ಷಿಯನ್ನು ಶುದ್ಧಗೊಳಿಸಿಕೊಂಡ ಅನಂತರ ಭೂತಕಾಲ ಅವನನ್ನು ಏನೂ ಮಾಡಲಾರದು. ಕಲೋನಸಸ್‌ನಲ್ಲಿ ಈಡಿಪಸ್ ಎಂಬ ಸೊಫೋಕ್ಲೀಸ್‌ನ ನಾಟಕದ ಪ್ರಭಾವ ಇಲ್ಲಿ ತೋರುತ್ತದೆ.

ಕಟ್ಟುನಿಟ್ಟಿನ ವಾಸ್ತವಿಕತೆ ನಾಟಕದ ಶಕ್ತಿಯನ್ನೂ ಸೂಚ್ಯಾರ್ಥವನ್ನೂ ಅನಗತ್ಯವಾಗಿ ಮಿತಿಗೊಳಿಸುವುದೆಂದು ಭಾವಿಸಿದ ಎಲಿಯಟ್‌ನ ಪ್ರಯೋಗಗಳು ವಿಶೇಷ ಪ್ರಭಾವವನ್ನು ಬೀರಿದುವು. ಈ ಕೃತಿಗಳಲ್ಲಿ ಗ್ರೀಕ್ ನಾಟಕಗಳ ಪ್ರಭಾವದೊಡನೆ ಕ್ರೈಸ್ತಧರ್ಮ ಅಂಶ ಬೆರೆತಿದೆ. ಕ್ರಿಯೆ ಎರಡು ಹಂತಗಳಲ್ಲಿ ಸಾಗುವುದೆನ್ನುವುದಕ್ಕಿಂತ ಎರಡು ಜಗತ್ತುಗಳ ಅರಿವನ್ನು ಉಂಟುಮಾಡಬಲ್ಲದು ಎಂದು ಹೇಳುವುದು ಸರಿಯಾಗುತ್ತದೆ. ಪದ್ಯಮಾಧ್ಯಮದ ಬಳಕೆಯ ಪ್ರಯೋಗಗಳು ಕುತೂಹಲಕಾರಿಯಾಗಿವೆ. (ಎಲ್.ಎಸ್.ಎಸ್.)

ಎಲಿಯಟ್ ಕವಿಯಾಗಿ, ನಾಟಕಕಾರನಾಗಿ ಖ್ಯಾತಿಪಡೆದಿರುವುದು ಮಾತ್ರವಲ್ಲದೆ ವಿಮರ್ಶಕನಾಗಿಯೂ ಸಮಾಜ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಕುರಿತ ಚಿಂತನಾಸಕ್ತ ಲೇಖಕನಾಗಿಯೂ ಖ್ಯಾತಿಪಡೆದಿದ್ದಾನೆ. ಇವನ ವಿಮರ್ಶಾತ್ಮಕ ಪ್ರಬಂಧಗಳ ಪ್ರಥಮ ಸಂಗ್ರಹ ದಿ ಸೇಕ್ರೆಡ್ ವುಡ್ ಹೊರಬಿದ್ದುದು 1920ರಲ್ಲಿ. 17ನೆಯ ಶತಮಾನದ ಇಂಗ್ಲಿಷ್ ಕಾವ್ಯದ ಕೆಲವು ಅಂಶಗಳನ್ನು ವಿಷಯವಾಗುಳ್ಳ ಮೂರು ಪ್ರಬಂಧಗಳು ಹೋಮೇಜ್ ಟು ಡ್ರೈಡೆನ್ ಎಂಬ ಹೆಸರಿನ ಪುಸ್ತಕದಲ್ಲಿ 1924ರಲ್ಲಿ ಪ್ರಕಟವಾದುವು. ಈ ಲೇಖನಗಳೆಲ್ಲ ಸಾಹಿತ್ಯವಿಮರ್ಶೆಯ ಮೇಲೂ ಸಾಹಿತಿಗಳ ಮೇಲೂ ಪ್ರಭಾವ ಬೀರಿದುವು. ಅನಂತರವೂ ಎಲಿಯಟ್ ವಿಮರ್ಶಾತ್ಮಕ ಲೇಖನಗಳನ್ನು ಬರೆಯುತ್ತಲೇ ಇದ್ದ. 1932ರಲ್ಲಿ ಹೊರಬಿದ್ದ ಅವನ ಸೆಲೆಕ್ಟೆಡ್ ಎಸ್ಸೇಸ್ ಎಂಬ ಸಂಗ್ರಹದಲ್ಲಿ ಇವನ ಅತ್ಯುತ್ತಮ ಲೇಖನಗಳು ಕೆಲವಿದ್ದುವು. ಟ್ರೆಡಿಷನ್ ಅಂಡ್ ದಿ ಇಂಡಿವಿಡ್ಯುಯಲ್ ಟ್ಯಾಲೆಂಟ್ (ಸಂಪ್ರದಾಯ ಮತ್ತು ವೈಯಕ್ತಿಕ ಪ್ರತಿಭೆ), ದಿ ಯೂಸ್ ಆಫ್ ಪೊಯೆಟ್ರಿ ಅಂಡ್ ದಿ ಯೂಸ್ ಆಫ್ ಕ್ರಿಟಿಸಿಸಮ್ (ಕಾವ್ಯದ ಮತ್ತು ವಿಮರ್ಶೆಯ ಉಪಯೋಗ) ಮೊದಲಾದ ಲೇಖನಗಳು ವಿಶೇಷವಾಗಿ ಹೆಸರಾಂತಿವೆ. ಎಲಿಯಟ್ ಕ್ಲಾಸಿಕಲ್ ಪಂಥದ ಸಾಹಿತ್ಯವನ್ನು ಮೆಚ್ಚಿಕೊಂಡಿದ್ದವ. ರಮ್ಯಕಾವ್ಯದ ಅತಿರೇಕಗಳನ್ನು ಕಂಡರೆ ಇವನಿಗೆ ಆಗದು. ಅದೇ ರೀತಿ ಮಿಲ್ಟನ್ ಕವಿಯ ಕ್ಲಿಷ್ಟಪದ ಪ್ರಯೋಗವೂ ಇವನ ಆಕ್ಷೇಪಣೆಗೆ ಪಾತ್ರವಾಯಿತು. ಅಸಹಜವೂ ಅತಿಪಾಂಡಿತ್ಯಮಯವೂ ಆದ ಶಬ್ದಪ್ರಯೋಗವನ್ನು ಈತ ಖಂಡಿಸಿದ. ಕಾವ್ಯ ಸಮಕಾಲೀನ ಆಡುಮಾತಿಗೆ ಆದಷ್ಟು ಸಮೀಪವಾಗಿರ ಬೇಕೆನ್ನುವುದು ಈತನ ಮತ. ತನ್ನ ಕಾವ್ಯದಲ್ಲೂ ಇಂಥ ಭಾಷೆಯನ್ನು ಬಳಸಿ ಇವನು ಅದ್ಭುತ ಫಲಗಳನ್ನು ಸಾಧಿಸಿದ. ಸಾಹಿತ್ಯದಲ್ಲಿ ಭಾವ ಮತ್ತು ಆಲೋಚನೆಗಳ ಸಹಚರ್ಯ ಅಗತ್ಯವೆಂಬ ಇವನ ಅಭಿಪ್ರಾಯವೂ ಈ ಪ್ರಬಂಧಗಳಲ್ಲಿ ಪ್ರಖರವಾಗಿ ವ್ಯಕ್ತವಾಗಿದೆ. ಆಧುನಿಕ ಯುಗದ ಜೀವನ ಜಟಿಲವಾಗಿರುವುದರಿಂದ ಕವಿಯೂ ಅದಕ್ಕೆ ತಕ್ಕ ಮತ್ತು ಅದನ್ನು ಪ್ರತಿಬಿಂಬಿಸುವ ಪದಸಂಪತ್ತನ್ನು ರೂಪಿಸಿಕೊಳ್ಳಬೇಕೆಂಬುದು ಇವನ ಅಭಿಪ್ರಾಯವಾಗಿತ್ತು.

ಉತ್ತಮ ಸಾಹಿತ್ಯಮೌಲ್ಯಗಳ ಪ್ರಸಾರದಲ್ಲಿ ಆಸಕ್ತನಾಗಿದ್ದಂತೆಯೇ ಎಲಿಯಟ್ ಸಾರ್ವಜನಿಕ ಸಂಸ್ಕೃತಿಯ ಉದ್ಧಾರ ಕಾರ್ಯದಲ್ಲೂ ಶ್ರದ್ಧೆಹೊಂದಿದ್ದ. ಈತ ಬ್ರಿಟಿಷ್ ಪ್ರಜೆಯಾಗಿ ಚರ್ಚ್ ಆಫ್ ಇಂಗ್ಲೆಂಡಿನ ಸದಸ್ಯನಾದ ಮೇಲೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳಲ್ಲೂ ಆಸಕ್ತನಾದ. ಈ ಕ್ಷೇತ್ರಗಳಲ್ಲಿ ಇವನ ಅಭಿಪ್ರಾಯಗಳು ಕ್ರೈಟೀರಿಯನ್ ಎಂಬ ಪತ್ರಿಕೆಯಲ್ಲಿ ಪ್ರಕಟವಾದುವು. ಆಫ್ಟರ್ ಸ್ಟ್ರೇಂಜ್ ಗಾಡ್ಸ್ (ವಿಚಿತ್ರ ದೇವರುಗಳ ಅನುಸರಣೆ, 1934), ದಿ ಐಡಿಯ ಆಫ್ ಎ ಕ್ರಿಶ್ಚಿಯನ್ ಸೊಸೈಟಿ (ಕ್ರೈಸ್ತ ಸಮಾಜದ ಆದರ್ಶಕಲ್ಪನೆ, 1939) ಎಂಬ ಪ್ರಬಂಧಗಳು ಪ್ರಸಿದ್ಧವಾಗಿವೆ. ಇವುಗಳಲೆಲ್ಲ ಎಲಿಯಟ್ ತನ್ನ ಕಾಲದಲ್ಲಿ ಜನಪ್ರಿಯವಾಗಿದ್ದ ವಿಚಾರಸರಣಿಗೆ ವಿರುದ್ಧ

ವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿ ಜನರಲ್ಲಿ ಹಿಂದಿರುತ್ತಿದ್ದಷ್ಟು ಮಟ್ಟದ ಸಂಸ್ಕೃತಿ ಮತ್ತು ಸಂವೇದನಶಕ್ತಿ ಇಲ್ಲವೆಂದೂ ಅವುಗಳ ಪುನರುದ್ಧಾರ ಅಗತ್ಯವೆಂದೂ ವಾದಿಸಿದ. ಪರಿಣಾಮವಾಗಿ ಇವನು ಪ್ರಗತಿ ವಿರೋಧಿಯೆಂಬ ಆಪಾದನೆಗೂ ಗುರಿಯಾದ. ಆದರೆ ಇವನು ವೇಸ್ಟ್ ಲ್ಯಾಂಡ್ ಮೊದಲಾದ ಕವಿತೆಗಳಲ್ಲಿ ವ್ಯಕ್ತಪಡಿಸಿದ ಭಾವಗಳಿಗೂ ಈ ಪ್ರಬಂಧಗಳಲ್ಲಿ ಪ್ರತಿಪಾದಿಸಿರುವ ಅಭಿಪ್ರಾಯಗಳಿಗೂ ಸಾದೃಶ್ಯವಿರುವುದನ್ನು ಮರೆಯುವಂತಿಲ್ಲ. (ಎಂ.ಆರ್.)

**ಎಲಿಯಟ್, ಸರ್ ವಾಲ್ಟರ್:** 1803–87, ಭಾರತೀಯ ಸಂಸ್ಕೃತಿ ಶಾಸ್ತ್ರಜ್ಞನಾದ ಈತ ಪ್ರಾರಂಭದಲ್ಲಿ ಐ.ಸಿ.ಎಸ್. ಅಧಿಕಾರಿಯಾಗಿ ಭಾರತಕ್ಕೆ ಬಂದ (1821), ಚೆನ್ನೈ(ಮದರಾಸ್)ನ ಗವರ್ನರ್ ಲಾರ್ಡ್ ಎಲ್‍ಫಿನ್‍ಸ್ಟನ್‍ಗೆ ಕಾರ್ಯದರ್ಶಿಯಾಗಿ ಕೆಲಸಮಾಡಿದ. ಭಾರತದ ಪ್ರಾಚೀನ ಸಂಸ್ಕೃತಿಯ ಬಗ್ಗೆ ಅಮಿತವಾದ ಆಸಕ್ತಿ ಇತ್ತಾಗಿ ತನ್ನ ಕಚೇರಿಯ ಗುಮಾಸ್ತನ ಸಹಾಯದಿಂದ ಪ್ರಾಚೀನ ಲಿಪಿಗಳ ಅಧ್ಯಯನ ನಡೆಸಿ ಪುರಾತನ ಶಾಸನಗಳನ್ನು ಓದತೊಡಗಿದ. ಅನಂತರ ಭಾರತದ ಪ್ರಾಚೀನ ನಾಣ್ಯಗಳ ವಿಚಾರವಾಗಿ ಪರಿಶೋಧನೆ ಪ್ರಾರಂಭಿಸಿ, ಕಾಯಿನ್ಸ್ ಆಫ್ ಸೌತ್ ಇಂಡಿಯ ಇಂಬ ಗ್ರಂಥ ರಚಿಸಿದ. ಈ ಗ್ರಂಥ ಇಂಟರ್‌ನ್ಯಾಷನಲ್ ನ್ಯುಮಿಸ್‌ಮ್ಯಾಟಾ ಓರಿಯಂಟ್ಯಾಲಿಯ ಗ್ರಂಥದ ಒಂದು ಭಾಗವಾಗಿದೆ. 1877ರಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ. ಇವನ ಪರಿಶೋಧನ ಲೇಖನಗಳನ್ನು ಇಂಡಿಯನ್ ಆಂಟಿಕ್ವರಿ, ಜರ್ನಲ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ, ಜರ್ನಲ್ ಆಫ್ ದಿ ಎತ್ನಲಾಜಿಕಲ್ ಸೊಸೈಟಿ ಮುಂತಾದ ಪ್ರಕಟನೆಗಳಲ್ಲಿ ಕಾಣಬಹುದು. (ಎ.ವಿ.ಎನ್.)

**ಎಲಿವೇಟರುಗಳು:** ತೂಕದ ವಸ್ತುಗಳನ್ನು ಎತ್ತರಕ್ಕೂ ತಗ್ಗಿಗೂ ನಿರ್ಧರಿತ ಭೂಲಂಬ ಪಥದಲ್ಲಿ ಹೊತ್ತು ಸಾಗಿಸುವ ಯಂತ್ರಗಳು. ಎತ್ತಿಗೆ ಯಂತ್ರಗಳು **(ನೋಡಿ– ಎತ್ತಿಗೆ–ಯಂತ್ರಗಳು)** ಸಹ ತೂಕವಸ್ತುಗಳ ಸಾಗಾಣಿಕೆಗೋಸ್ಕರವೇ ಇರುವುವಾದರೂ ಅವು ವಸ್ತುಗಳನ್ನು ಹಿಡಿದುಕೊಂಡು ಅಥವಾ ನೇತಾಡಿಸುತ್ತ ಸ್ಥಾನಾಂತರಿಸುತ್ತವೆ. ಎಲಿವೇಟರುಗಳ ಚಲನೆ ವಿಚ್ಛಿನ್ನ–ಏಕಪ್ರಕಾರ ಚಲನೆಯಿಂದ ಗುರಿ ತಲಪುವುದಿಲ್ಲ. ಕಚೇರಿ, ಕಾರ್ಖಾನೆ, ಭೂತಳಗಣಿ, ಮಹಾಸೌಧ ಮುಂತಾದ ಎಡೆಗಳಲ್ಲಿ ಜನರನ್ನು ಒಂದು ಅಂತಸ್ತಿನಿಂದ ಇನ್ನೊಂದು ಅಂತಸ್ತಿಗೆ ಒಯ್ಯುವ ಉತ್ಥಾನ ಯಂತ್ರಗಳು (ಲಿಫ್ಟ್) ಸಹ ಎಲಿವೇಟರುಗಳೇ. ಆದರೆ ಇಲ್ಲಿ ಚಲನೆ ಏಕಪ್ರಕಾರವಾಗಿದೆ. ಪ್ರ.ಶ.ಪೂ. 236ರಲ್ಲಿ ರೋಮನ್ ಚಕ್ರಾಧಿಪತ್ಯದಲ್ಲಿ ಎಲಿವೇಟರಿನ ಬಳಕೆ ಇದ್ದುದಕ್ಕೆ ದಾಖಲೆ ಇದೆ. ಅಂದು ಬಳಸಿದ್ದು ಮನುಷ್ಯನ ಸ್ನಾಯು ಶಕ್ತಿ; ಇಂದು ಅದರ ಹಲವಾರು ಪಟ್ಟು ಶಕ್ತಿಯನ್ನು ವಿದ್ಯುಚ್ಛಕ್ತಿ ಒದಗಿಸುತ್ತಿದೆ. (ಟಿ.ಟಿ.)

**ಎಲುಗಟ್ಟು, ಅಕಶೇರುಕಗಳ:** ಸ್ನಾಯುಗಳಿಗೆ ಆಸರೆಯಾಗಿ, ಸರಿ ಸುಮಾರು ದೃಢವಾಗಿ, ದೇಹದ ಒಳಗೆ ಇರುವ ಚೌಕಟ್ಟಿನ ಹೆಸರು ಎಲುಗಟ್ಟು. ಎಲುಬುಗಳ ಜೋಡಣೆ ಎಲುಗಟ್ಟು ಎಂದಿಟ್ಟುಕೊಂಡರೆ ಇದು ಕಶೇರುಕಗಳ ವಿಶಿಷ್ಟ ಗುಣವಾಗುತ್ತದೆ. ಕಾರಣ, ಎಲುಬುಗಳು ಆ ಪ್ರಾಣಿಗಳಿಗೆ ಮಾತ್ರ ಸೀಮಿತ. ಅಕಶೇರುಕಗಳಲ್ಲಿ ಎಲುಬುಗಳಿಲ್ಲ. ಆದರೆ ಎಲುಬುಗಳ ಕ್ರಿಯೆಯನ್ನು ಆಯಾ ಅಕಶೇರುಕಗಳ ಜೀವನಕ್ರಮಕ್ಕೆ ಸಹಾಯಕವಾಗಿ ನಿರ್ವಹಿಸಬಲ್ಲ ರಚನೆಯನ್ನು ಅಕಶೇರುಕಗಳ ಎಲುಗಟ್ಟು (ಸ್ಕೆಲಿಟನ್ ಆಫ್ ಇನ್ವರ್ಟಿಬ್ರೇಟ್ಸ್) ಎಂದು ಕರೆಯುವುದು ವಾಡಿಕೆ. ಶರೀರದ ಆಕಾರವನ್ನು ಕಾಪಾಡಿಕೊಳ್ಳಲು ನಾನಾ ರೀತಿಯ, ಅಸ್ಥಿಗೆ ಹೋಲಿಸಬಹುದಾದ ರಚನೆಗಳನ್ನು ಅಕಶೇರುಕಗಳು ಬೆಳೆಸಿಕೊಂಡಿರುವುದನ್ನು ಕಾಣಬಹುದು. ಬಹಳ ಅಕಶೇರುಕಗಳಲ್ಲಿ ಇಂಥ ಗಟ್ಟಿಯ ವಸ್ತುಗಳೂ ಇಲ್ಲ. ಇಂಥವು ನಮ್ಮ ಶರೀರದ ಆಕಾರವನ್ನು ಕಾಯ್ದಿಡಲು ಶರೀರದೊಳಗಿನ ನೀರನ್ನೇ ಆಶ್ರಯಿಸಬೇಕಾಗುತ್ತದೆ. ಜೀವಕೋಶಗಳಲ್ಲಿರುವ ನೀರು ಮತ್ತು ಇತರ ಭಾಗಗಳಲ್ಲಿರುವ ನೀರಿನ ಒತ್ತಡದಿಂದಾಗಿ ಆಕಾರ ಉಳಿದಿರುವುದು. ಕಂಬಳಿಹುಳು ಇದಕ್ಕೊಂದು ಉತ್ತಮ ನಿದರ್ಶನ. ಶರೀರದ್ರವಗಳ ಜೊತೆಗೆ ಮಾಂಸ ಖಂಡಗಳನ್ನು ಕೂಡ ನಾವು ಇಲ್ಲಿ ಗಣನೆಗೆ ತಂದುಕೊಳ್ಳಬೇಕು. ಈ ಪ್ರಾಣಿಗಳ ಚರ್ಮಕ್ಕೆ ಹೊಂದಿಕೊಂಡಂತೆ ಸ್ನಾಯುಗಳಿವೆ. ಇವುಗಳ ಕುಗ್ಗುವಿಕೆ ಮತ್ತು ಹಿಗ್ಗುವಿಕೆಯಿಂದ ಪ್ರಾಣಿಯ ಚಲನೆ ಸಾಧ್ಯವಾಗುತ್ತದೆ.

ಅಕಶೇರುಕಗಳಲ್ಲಿ ಅಸ್ಥಿಗೆ ಹೋಲಿಸಬಹುದಾದ ರಚನೆಗಳನ್ನು ಏಕಕೋಶಪ್ರಾಣಿ ಗಳಲ್ಲಿಯೂ ಕಾಣಬಹುದು. ಅಮೀಬದಲ್ಲಿ ಮಾತ್ರ ಇಂಥ ರಚನೆ ಇಲ್ಲ. ಆದರೆ ಇದೇ ವಂಶಕ್ಕೆ ಸೇರಿದ ಎಲ್ಫಿಡಿಯಾಗಳಲ್ಲಿ ಗಟ್ಟಿಮುಟ್ಟಾದ ಲವಣಮಿಶ್ರಿತ (ಕ್ಯಾಲ್ಸಿಯಂ ಕಾರ್ಬೊನೇಟ್) ಅಸ್ಥಿರಚನೆ ಇದೆ. ಮತ್ತೆ ಕೆಲವು ಏಕಕೋಶಜೀವಿಗಳಲ್ಲಿ ಮರಳುಮಿಶ್ರಿತ ಅಸ್ಥಿರಚನೆಗಳಿವೆ. ಇಂಥ ರಚನೆಗಳು ಶರೀರವನ್ನು ರಕ್ಷಿಸುತ್ತವೆ. ಈ ಅಸ್ಥಿರಚನೆ ಪ್ರಾಣಿಯ ಶರೀರದ ಹೊರಭಾಗದಲ್ಲಾಗಬಹುದು ಅಥವಾ ಒಳಭಾಗದಲ್ಲಾಗಬಹುದು.

ಸ್ಪಂಜುಗಳಲ್ಲಿ ಕೂಡ ಗಟ್ಟಿಯಾಗಿರುವ ಲವಣಮಿಶ್ರಿತ ರಚನೆಗಳಿವೆ. ಇವು ಅತಿಸೂಕ್ಷ್ಮ ವಾಗಿದ್ದು ಮುಳ್ಳುಗಳನ್ನು ಹೋಲುತ್ತವೆ. ಇವು ಉತ್ಪಾದಿಸುವ ಈ ಒಳ ಅಸ್ಥಿ ಎಂಬ ಸ್ಪಾಂಜಿನ್ ಗಾಜಿನಂಥ ವಸ್ತುಗಳಿಂದಾಗುತ್ತದೆ. ಈ ರಚನೆಗಳು ಶರೀರಕ್ಕೆ ಆಸರೆಯನ್ನೊದಗಿ ಸುತ್ತವೆ. ಪ್ರತ್ಯೇಕವಾಗಿರುವ ಜೀವಕೋಶಗಳಿಂದಲೇ ಅಸ್ಥಿರಚನೆ ರೂಪುಗೊಳ್ಳುತ್ತದೆ.

ಕುಟುಕುಕಗಳಲ್ಲಿ ಹವಳದ ಹುಳುಗಳು ತಮ್ಮ ದೇಹಗಳಲ್ಲಿರುವ ಜೀವಕೋಶಗಳಿಂದ ಗಟ್ಟಿಮುಟ್ಟಾದ ಅಸ್ಥಿಯನ್ನು ಉತ್ಪತ್ತಿಸುತ್ತವೆ. ಇವುಗಳು ಹವಳದ ಗುಡ್ಡಗಳು ಮತ್ತು ಹವಳದ್ವೀಪಗಳನ್ನೇ ನಿರ್ಮಿಸುತ್ತವೆ. ಆಲ್ಸಿಯೋನಿಯಂನಲ್ಲಿ ಲವಣಮಿಶ್ರಿತ ದಾರಗಳು ಮತ್ತು ಮುಳ್ಳಿನಂಥ ರಚನೆಗಳನ್ನು ಒಳಗೊಂಡಿರುವ ಒಳ ಅಸ್ಥಿ ಇದೆ. ಹವಳದ ಗುಡ್ಡಗಳನ್ನು ನಿರ್ಮಿಸುವ ಪ್ರಾಣಿಗಳಲ್ಲಿ ಹೊರಚರ್ಮದ ಕೋಶಗಳಿಂದ ಅಸ್ಥಿ ಹುಟ್ಟುತ್ತದೆ. ಈ ಕೋಶಗಳಿಂದ ಉತ್ಪನ್ನವಾಗುವ ಬಟ್ಟಲಿನಂಥ ಅಸ್ಥಿರಚನೆಯೊಳಗೆ ಪ್ರಾಣಿ ಹುದುಗಿ ಕೊಳ್ಳುತ್ತದೆ. ಸಾವಿರಾರು ಪ್ರಾಣಿಗಳು ಒಟ್ಟುಗೂಡಿ ಸಂಘಜೀವನವನ್ನು ನಡೆಸುತ್ತಿರುವ ಭಾಗಗಳಲ್ಲಿ ಉತ್ಪತ್ತಿಯಾಗುವ ಅಸ್ಥಿರಚನೆಗಳಿಂದ ಹವಳದ ಗುಡ್ಡಗಳೇ ನಿರ್ಮಾಣವಾಗುತ್ತವೆ.

ಸಂದಿಪದಿಗಳಲ್ಲಿ ಹೊರ ಅಸ್ಥಿರಚನೆ ಬಹಳ ಚೆನ್ನಾಗಿ ಬೆಳೆದಿರುತ್ತದೆ. ಇವುಗಳ ಶರೀರದ ಮೇಲಿರುವ ಗಟ್ಟಿಯಾದ ಹೊದಿಕೆ ಖೈಟಿನ್ ಎಂಬ ವಸ್ತುವಿನಿಂದಾಗಿದ್ದು. ರಾಸಾಯನಿಕವಾಗಿ ನೈಟ್ರೋಜನ್ ಇರುವ ಶರ್ಕರಗಳ ಮತ್ತು ಇವುಗಳ ಜೊತೆಗೆ ಪ್ರೋಟೀನುಗಳು ಸೇರಿ ಖೈಟಿನ್ ಆಗುತ್ತದೆ. ಖೈಟಿನಿಂದ ಕ್ಯೂಟಿಕಲ್ ಎಂಬ ಹೊರಕವಚ ಉಂಟಾಗುತ್ತದೆ. ಇದು ಬಹಳ ಗಟ್ಟಿ.. ದುಂಬಿ ಮಿಡತೆ ಮುಂತಾದವುಗಳಲ್ಲಿ ಈ ರೀತಿಯ ಕ್ಯೂಟಿಕಲ್ ಹೊದಿಕೆಯನ್ನು ಕಾಣಬಹುದು. ಸಂದಿಪದಿಗಳ ಶರೀರದ ಖಂಡಗಳ ಮೇಲೆ ಈ ಕ್ಯೂಟಿಕಲ್ ವಸ್ತುವಿನ ತಟ್ಟೆಗಳು ಜೋಡಿಸಿಕೊಂಡಿರುವುದನ್ನು ಕಾಣುತ್ತೇವೆ. ಹೀಗೆ ಖಂಡಗಳ ಮೇಲಿರುವ ತಟ್ಟೆಗಳು ಒಂದರೊಡನೊಂದು ತೆಳುವಾದ ಪೊರೆಯ ಸಹಾಯದಿಂದ ಸಂಬಂಧ ಕಲ್ಪಿಸಿಕೊಂಡಿವೆ.

ಸೀಗಡಿ, ಏಡಿ, ನಳ್ಳಿ ಮುಂತಾದುವುಗಳ ಹೊರ ಅಸ್ಥಿಯಲ್ಲಿ ಕ್ಯೂಟಿಕಲ್‍ನೊಡನೆ ಸುಣ್ಣದ ಲವಣಗಳೂ ಸೇರಿಕೊಂಡಿದ್ದು ಅದು ಅತಿ ಗಟ್ಟಿಯಾಗುವಂತೆ ಮಾಡುತ್ತವೆ. ಇವುಗಳ ವದನಾಂಗಗಳು ಅತಿಗಟ್ಟಿಯಾದ ಸ್ಕ್ಲಿರೋಟಿನ್ ಎಂಬ ವಸ್ತುವಿನಿಂದಾಗಿವೆ. ಸಂದಿಪದಿಗಳ ಎಲುಗಟ್ಟು ಕೇವಲ ಶರೀರ ರಕ್ಷಣೆಯನ್ನೇ ಅಲ್ಲದೆ ಶರೀರದಲ್ಲಿರುವ ನೀರು ಹೊರ ಹೋಗದಂತೆ ರಕ್ಷಿಸುತ್ತದೆ. ಆದ್ದರಿಂದ ಈ ಕ್ಯೂಟಿಕಲ್ ಕವಚದ ಮೇಲೆ ಒಂದು ರೀತಿಯ ಮೇಣದಂಥ ವಸ್ತುವನ್ನು ಇವು ಉತ್ಪಾದಿಸಿಕೊಳ್ಳುತ್ತವೆ. ಚರ್ಮದಲ್ಲಿರುವ ಗ್ರಂಥಿಗಳು ಇದನ್ನು ಉತ್ಪಾದಿಸುವುವು.

ಮೃದ್ವಂಗಿಗಳ ವಂಶದಲ್ಲಿಯೂ ಅಸ್ಥಿರಚನೆಗಳು ಹೇರಳವಾಗಿವೆ, ಕಪ್ಪೆಚಿಪ್ಪಿನ ಹುಳು, ಶಂಖದ ಹುಳುಗಳು, ಕವಡೆ ಮುಂತಾದವುಗಳ ಶರೀರದ ಮೇಲೆ ಅತಿಗಟ್ಟಿಯಾದ ಸುಣ್ಣಮಿಶ್ರಿತ ಲವಣಗಳಿಂದಾದ ರಕ್ಷಾಕವಚಗಳಿವೆ. ಕವಚ ಈ ಪ್ರಾಣಿಗಳಿಗೆ ರಕ್ಷಣೆಯನ್ನೊ ದಗಿಸುತ್ತದೆ. ಪ್ರಾಣಿ ಸತ್ತಮೇಲೆಯೂ ಕವಚಗಳು ಬಹಳ ಕಾಲ ಉಳಿದಿರುತ್ತವೆ. ಈ ಹೊರ ಅಸ್ಥಿರಚನೆಗಳು ಚರ್ಮದ ಹೊದಿಕೆಯಾದ ಮ್ಯಾಂಟಲ್ ಎಂಬ ಅಂಗದಿಂದ ಹುಟ್ಟುತ್ತವೆ. ಇಲ್ಲಿ ಉತ್ಪತ್ತಿಯಾಗುವ ಲವಣ ವಸ್ತುಗಳು ಗಟ್ಟಿಯಾಗಿ ಹೊರ ಅಸ್ಥಿ ರಚನೆಯಾಗುತ್ತದೆ. ಕೆಲವು ಮೃದ್ವಂಗಿಗಳಲ್ಲಿ ಇಂಥ ಅಸ್ಥಿರಚನೆಗಳು ಶರೀರದ ಒಳಗೂ ಇದೆ. ಕಟಲ್‍ಮೀನು, ಲಾಲಿಗೊ ಮುಂತಾದ ಪ್ರಾಣಿಗಳಲ್ಲಿ ಅಸ್ಥಿರಚನೆಗಳು ಶರೀರದೊಳಕ್ಕೆ ಹುದುಗಿಕೊಂಡಿವೆ.

ಎಕಿನೋಡರ್ಮೇಟ ಅಥವಾ ಕಂಟಕಚರ್ಮಿಗಳಲ್ಲಿಯೂ ಅಸ್ಥಿರಚನೆಗಳಿವೆ. ಹೊರಚರ್ಮದ ತಳದಲ್ಲಿ ತಟ್ಟೆಗಳಂಥ ರಚನೆಗಳನ್ನು ಇವು ಉತ್ಪಾದಿಸಿಕೊಳ್ಳುತ್ತವೆ. ಆದ್ದರಿಂದ ಇವುಗಳ ಚರ್ಮ ಒರಟಾಗಿ ಗಟ್ಟಿಯಾಗಿರುತ್ತದೆ. ಕೆಲವು ಬಾರಿ ಈ ಅಸ್ಥಿರಚನೆಗಳು ಬಹಳ ಗಟ್ಟಿಯಾಗಿದ್ದು ಟೆಸ್ಟ್ ಅಥವಾ ಥೀಕಗಳೆಂಬ ಪಟ್ಟಿಗಳಂಥ ರಚನೆಗಳನ್ನು ಕೊಡುತ್ತವೆ. ಶರೀರದ ಮೇಲೆ ಮುಳ್ಳುಗಳಂಥ ಬೆಳೆವಣಿಗೆಗಳು ಕೂಡ ಉಂಟು. ಹೀಗಿದ್ದರೂ ಕೂಡ ಅಕಶೇರುಕಗಳಲ್ಲಿರುವ ಈ ಎಲುಗಟ್ಟನ್ನು ಕಶೇರುಕಗಳ ಎಲುಗಟ್ಟಿಗೆ ಯಾವ ವಿಧದಲ್ಲಿಯೂ ಹೋಲಿಸಲಾಗುವುದಿಲ್ಲ. ಕಶೇರುಕಗಳಲ್ಲಿ ಎಲುಗಟ್ಟು ಶರೀರಕ್ಕೆ ಆಸರೆ ಮತ್ತು ರಕ್ಷಣೆಯನ್ನೊದಗಿಸುವಂತೆಯೇ ಅಕಶೇರುಕಗಳಲ್ಲಿರುವ ಎಲುಗಟ್ಟು ಇವುಗಳ ಶರೀರ ರಕ್ಷಣೆಗೆ ಸಹಾಯಕವಾಗಿವೆ. ಈ ರೀತಿಯ ಎಲುಗಟ್ಟು ಒಂದೊಂದು ವಂಶದ ಅಕಶೇರುಕಗಳಲ್ಲಿ ಒಂದೊಂದು ರೀತಿಯಲ್ಲಿದೆ. (ಎಲ್.ಎಸ್.ಜಿ.)

**ಎಲುಗಟ್ಟು, ಕಶೇರುಕಗಳ:** ಬಹುತೇಕ ಪ್ರಾಣಿಗಳಲ್ಲೂ ಕಶೇರುಕಗಳಲ್ಲೂ ಮೈಯ ಸಾಮಾನ್ಯ ಆಕಾರವನ್ನು ಉಳಿಸಿಕೊಂಡಿರಲು ಕೆಲವು ಊತಕಗಳು ಒಂದುಗೂಡಿ ಗಟ್ಟಿಯಾಗಿರುವ ರಚನೆಯ ಕಟ್ಟು (ಸ್ಕೆಲಿಟನ್). ಸತ್ತಮೇಲೆ ಉಳಿದೆಲ್ಲ ಮೆದುವಾದ ಭಾಗಗಳೂ ಹಾಳಾದರೂ ಇದು ಮಾತ್ರ ಒಂದಷ್ಟು ಕಾಲ ಉಳಿದಿರುವುದು. ಮೇಲ್ತರದ ಕಶೇರುಕಗಳ ಎಲುಗಟ್ಟಿನಲ್ಲಿ ಎಲುಬುಗಳು ಕೂಡಿಕೊಂಡು ಇನ್ನಷ್ಟು ಗಡುಸಾಗಿರುತ್ತದೆ.

ಪ್ರಾಣಿಗಳ ಆಕಾರ, ಗಾತ್ರಗಳಿಗೆ ಬಹುಮಟ್ಟಿಗೆ ಇದೇ ಕಾರಣ. ಒಳಗಿರುವ ಜೀವಾಳದ ಅಂಗಗಳಿಗೆ ರಕ್ಷಣೆ ಒದಗಿಸುವುದು ಇನ್ನೊಂದು ಅನುಕೂಲ. ಸ್ನಾಯುಗಳ ಚಲನೆಗೆ ಸನ್ನೆಗಳಾಗುವ ಭಾಗಗಳಿವೆ. ಸುಣ್ಣಾಂಶಕ್ಕೆ ಮೂಳೆಗಳೇ ತೌರು. ಹಲವಾರು ಅಕಶೇರುಕ ಪ್ರಾಣಿಗಳಲ್ಲಿ ಕಾಪಿಡಲೂ ಊರೆ ಕೊಡಲೂ ಹೊರಚಿಪ್ಪು (ಎಕ್ಸೊಸ್ಕೆಲಿಟನ್) ಇದ್ದರೆ ಕಶೇರುಕಗಳಲ್ಲಿ ಒಳಗಿನ ಎಲುಗಟ್ಟೂ ಬಹಳ ಮಾರ್ಪಾಟಾಗಿರುವ ಇಲ್ಲವೇ ಪೂರ್ತಿ ಅಣಗಿರುವ ಹೊರಚಿಪ್ಪು ಉಗುರು, ಕೂದಲು, ಹಲ್ಲುಗಾಜು (ಎನಾಮೆಲ್)–ಇವುಗಳ ರೂಪದಲ್ಲಿ ಉಳಿದಿರುವುದು.

**ಬೆನ್ನೆಲುಬಿನ ಕಂಬ:** ದಪ್ಪನೆಯ ಹಿಂಪುಟಿಕ ಬೆನ್ನೆಲುನಡುವಣ ಬಟ್ಟುಗಳು (ಡಿಸ್ಕಸ್)ಮತ್ತಿತರ ತಂತುಗಟ್ಟುಗಳಿಂದ (ಲಿಗಮೆಂಟ್ಸ್) ಒಂದಕ್ಕೊಂದು ಕೂಡಿರುವ ಬೆನ್ನೆಲುಬುಗಳ ನೆಟ್ಟನೆಯ ಸಾಲು (ವರ್ಟಿಬ್ರಲ್ ಕಾಲಂ). ಇದನ್ನು ನಟ್ಟೆಲುಬು, ಮಟ್ಟೆಲುಬು, ನಿಟ್ಟೆಲುಬು, ಬೆನ್ನುಕಂಬ ಎನ್ನುವುದೂ ಉಂಟು. ಮುಖ್ಯವಾಗಿ ಇದು ಮುಂಡ, ಕೊರಳುಗಳ ಹಿಂಭಾಗದ ನಡುವೆ ಇದ್ದು ಇದರ ಮೇಲ್ಗಡೆ ತಲೆ ಬುರುಡೆ ಕುಳಿತಿರುವುದು. ಇವಿಷ್ಟೂ ಸೇರಿದರೆ ಅಚ್ಚಿನ (ಆಕ್ಸಿಯಲ್) ಎಲುಗಟ್ಟು ಆಗುವುದು. ಸಾಮಾನ್ಯವಾಗಿ ಒಂದೊಂದು ಬೆನ್ನಲುಬಲ್ಲೂ ಮುಂದುಗಡೆ ದಪ್ಪನೆಯ ಕಾಯವೂ (ಬಾಡಿ) ಹಿಂದುಗಡೆ ನರದ ಕಮಾನೂ (ನ್ಯೂರಲ್ ಆರ್ಚ್) ಇರುವುವು.




ಚಿತ್ರ 1 ಬೆನ್ನಲುಬಿನ ಕಂಬದ ಮೂರು ನೋಟಗಳು

ಬೆನ್ನಲುನಡುವಣ ಬಟ್ಟುಗಳೊಂದಿಗೆ ಕಾಯಗಳು ಒಂದರ ಮೇಲೊಂದು ಜೋಡಿಸಿರುವುದರಿಂದ ಅವು ಮೈ ಭಾರ ಹೊರುವ ಕಂಬದಂತಿರುವುವು. ಒರಸೆಯಲ್ಲಿರುವ ಬೆನ್ನೆಲುಬಿನ ಕಾಯಗಳಿಗೂ ನರದ ಕಮಾನಿಗೂ ನಡುವೆ ಬೆನ್ನೆಲುಬಿನ ಕಂಬದ ಎರಡು ಪಕ್ಕಗಳಲ್ಲೂ ಬೆನ್ನುಹುರಿಗೆ ಸಂಬಂಧಿಸಿರುವ ಜೋಡಿ ನರಗಳು ಹೊರಬೀಳುತ್ತವೆ. ಈ ನರದ ಕಮಾನುಗಳು ಬೆನ್ನುಹುರಿಯನ್ನೂ ಕೆಳಗಿನ ಬೆನ್ನುಹುರಿಯ ನರಗಳನ್ನೂ ಕೊಂಚಮಟ್ಟಿಗೆ ಕಾಪಿಡುತ್ತವೆ. ಒಂದೊಂದು ನರದ ಕಮಾನಿನಲ್ಲೂ ಉರು ಆಕಾರದ ಎರಡು ತೊಟ್ಟುಗಾಲುಗಳು (ಪೆಡಿಕಲ್ಸ್). ಹಿಂದುಗಡೆ ನಡುವೆ ಒಂದಾಗುವ ಎರಡು ರೇಕುಪರೆಗಳು (ಲಮೈನ), ತೊಟ್ಟುಗಾಲು ಮತ್ತು ರೇಕುಪರೆ ಸೇರುವೆಡೆಯಲ್ಲಿ ಅಡ್ಡನೆಯ ಚಾಚು, ಕೀಲುಗೂಡಿಸುವ ಚಾಚುಗಳ (ಪ್ರೋಸೆಸಸ್) ಇವೆ. ಮೇಲಿನ ಕೆಳಗಿನ ಕೀಲುಗೂಡಿಸುವ ಚಾಚುಗಳ ನಡುವೆ ಕೀಲೋಳಿನ (ಸೈನೋವಿಯಲ್) ಕೀಲುಗಳಿವೆ. ಮುಳ್ಳಿನ ಚಾಚುಗಳ ಸಾಲು ಹಿಂದುಗಡೆ ನಟ್ಟನಡುವೆ ಇರುವುದೇ ಬೆನ್ನೆಲುಬಿನ ಕಂಬವನ್ನು ಮುಟ್ಟಿದಾಗ ಕೈಗೆ ತಾಕುವುದು.

ಎಳೆಮಗುವಿನ ಬೆನ್ನೆಲುಬಿನ ಕಂಬದಲ್ಲಿರುವ 33 ಬಿಡಿಯಾಗಿರುವ ಬೆನ್ನೆಲುಬುಗಳಲ್ಲಿ ಕೆಲವು ದೊಡ್ಡವರಾದ ಮೇಲೆ ಒಂದುಗೂಡಿ ಬಿಡಿಯಾದವು ಕೇವಲ 26 ಉಳಿಯುತ್ತವೆ. ಬೆನ್ನೆಲುಬುಗಳು ಇರುವೆಡೆಯಂತೆ, ಕೊರಳಿನ (ಸರ್ವೈಕಲ್) ಎದೆಗೂಡಿನ (ತೊರ್‍ಯಾಸಿಕ್), ಸೊಂಟದ (ಲಂಬರ್), ಪಾವನಿಯ (ಸೇಕ್ರಲ್) ಕೋಕಿಲುವಿನ (ಕಾಕ್ಸಿಜಯಲ್) ಬೆನ್ನೆಲುಬುಗಳೆಂದು ಹೆಸರಾಗಿದೆ. ಎಳೆಮಗುವಿನಲ್ಲಿ ಪಾವನಿಯವು ಐದೂ ಕೋಕಿಲುವಿನವು ನಾಲ್ಕೂ ಇದ್ದುವು. ದೊಡ್ಡವರಲ್ಲಿ ಒಂದೊಂದೇ ಇರುತ್ತವೆ. ಅಲ್ಲದೆ ಕೊರಳಿನವು 7, ಎದೆಗೂಡಿನವು 12, ಸೊಂಟದವು 5 ಇರುತ್ತವೆ.

**ಬೆನ್ನೆಲುಬುಗಳು:** ಅಡ್ಡನೆಯ ಚಾಚುಗಳಲ್ಲಿ ಒಂದೊಂದು ಕೊರೆಗಂಡಿ (ಫೋರಮನ್) ಇರುವವೇ ಕೊರಳಿನ ಬೆನ್ನೆಲುಬುಗಳು. 7ನೆಯದನ್ನು ಬಿಟ್ಟರೆ, ಮಿದುಳಿನ ಒಂದು ಭಾಗಕ್ಕೆ ರಕ್ತ ಒದಗಿಸುವ ಬೆನ್ನೆಲುಬಿನ ಧಮನಿ ಇವುಗಳ ಮೂಲಕ ಮೇಲಕ್ಕೆ ಸಾಗುತ್ತದೆ. ಒಂದನೆಯ ಬೆನ್ನೆಲುಬಾದ ಎಲುಮೇರುವಿನಲ್ಲಿ (ಅಟ್ಲಾಸ್) ಮಾತ್ರ ಕಾಯವಿರದೆ ಉಂಗುರ ರೂಪದಲ್ಲಿದೆ. ಇದರ ಇಬ್ಬದಿಗಳೂ ದಪ್ಪನಾಗಿದ್ದು ಮೇಲುಗಡೆ ತಲೆಬುರುಡೆಯ ಹೆಡತಲೆಯ (ಆಕ್ಸಿಪಿಟಲ್) ಮೂಳೆಯೊಂದಿಗೂ ತಳಗಡೆ 2ನೆಯ ಬೆನ್ನೆಲುಬೊಂದಿಗೂ ಕೀಲುಗೂಡುವುದು. 2ನೆಯ ಬೆನ್ನೆಲುಬಿನ ಕಾಯದ ಮೇಲೆ ದಪ್ಪ ಗೂಟದಂತಿರುವ ಹಲ್ಲುತೆರ ಚಾಚೂ ಇದೆ. ತಲೆಯನ್ನು ಪಕ್ಕಗಳಿಗೆ ತಿರುಗಿಸಿದಾಗ ಎಲುಮೇರು ಸುತ್ತ ತಿರುಗಲು ಈ ಚಾಚು ತಿರುಗಣೆಯಾಗಿದೆ. ಎದೆಗೂಡಿನ ಮೊದಲಿನ 9 ಬೆನ್ಮೂಳೆಗಳ ಕಾಯಗಳ ಇಬ್ಬದಿಗಳಲ್ಲೂ ಪಕ್ಕೆಲುಬುಗಳ ತಲೆಗಳು ಕೂಡುವ ಸಣ್ಣ ಕೀಲುಮೊಗಗಳಿವೆ (ಫೇಸೆಟ್ಸ್). ಸೊಂಟದ ಬೆನ್ನೆಲುಬುಗಳ ಅಡ್ಡನೆಯ ಚಾಚುಗಳಲ್ಲಿ ಕೊರೆಗಂಡಿಗಳೂ ಇಲ್ಲ. ಪಕ್ಕೆಲುಬುಗಳು ಕೂಡುವ ಕೀಲುಮೊಗಗಳೂ ಇಲ್ಲ. ಇಡೀ ಮುಂಡದ ಭಾರವನ್ನೆಲ್ಲ ಹೊರಲೋಸುಗ ಇವುಗಳ ಕಾಯಗಳು ದಢೂತಿಯಾಗಿವೆ.

5 ಬೆನ್ನೆಲುಬುಗಳು ಒಂದುಗೂಡಿ ತ್ರಿಕೋಣಾಕಾರ ತಳೆದಿರುವುದು ಪಾವನಿ (ಸೇಕ್ರಂ) ಮೂಳೆ. ಇಬ್ಬದಿಗಳಲ್ಲೂ ಎರಡೆರಡು ಟೊಂಕೆಲುಬುಗಳೊಂದಿಗೆ ಸೇರಿ ಕಿಳ್ಗುಳಿಯ ನಡುಕಟ್ಟು (ಪೆಲ್ವಿಕ್ ಗರ್ಡಲ್) ಆಗಿದೆ. ಪಾವನಿ ಮೂಳೆ ಮುಂದುಗಡೆ ಕುಳಿಯಾಗಿದ್ದು, ಮೂಲದ 5 ಮೂಳೆಗಳ ಗುರುತಿನ ಅಡ್ಡಗೆರೆಗಳು ಕಾಣುವುವು. ಎರಡು ಪಕ್ಕಗಳಲ್ಲೂ ಇರುವ ಕಂಡಿಗಳಲ್ಲಿ ಇರುವ ಪಾವನಿಯ 4 ನರಗಳ ಮುಂದಣ ಕವಲುಗಳು ತೂರುತ್ತವೆ. ಉಬ್ಬಿರುವ ಹಿಂಭಾಗದಲ್ಲಿ 4 ಮುಳ್ಳಿನ ಚಾಚುಗಳನ್ನು ಕೊಂಚವಾಗಿ ಗುರುತಿಸಬಹುದು. ಹಿಂದಣ 4 ಕಂಡಿಗಳಲ್ಲಿ ಪಾವನಿಯ ನರಗಳ ಹಿಂದಣ ಕವಲುಗಳು ಸಾಗುತ್ತವೆ. ಈ ಕಂಡಿಗಳ ಆಚೆ ಪಕ್ಕದ ಭಾಗಕ್ಕೆ ಮಗ್ಗುಲಿನ ಪಿಂಡಿ (ಲ್ಯಾಟರಲ್ ಮಾಸ್) ಎಂದಿದೆ. ಆಯಾ ಪಕ್ಕಗಳ ಟೊಂಕೆಲುಬೊಂದಿಗೆ (ಇಲಿಯಂ) ಕೀಲುಗೂಡಲು ದೊಡ್ಡ ಒರಟು ಕೀಲುಮೊಗವಿದೆ. ಬೇರೆ ಸಸ್ತನಿಗಳವಕ್ಕಿಂತಲೂ ಮಾನವನ ಪಾವನಿ ಅಗಲವಾಗಿದ್ದು ನೆಟ್ಟಗೆ ನಡೆವಾಗಿನ ಮೈಭಾರವನ್ನು ಇಡೀ ಬೆನ್ನೆಲುಬಿನ ಕಂಬದ ಮೂಲಕ ಹೊರಲು ತಕ್ಕದಾಗಿದೆ. ಹೆಣ್ಣಿನ ಪಾವನಿ ಗಂಡಿನದಕ್ಕಿಂತಲೂ ಅಗಲವಾಗಿರುವುದರಿಂದ ಇಡೀ ಕಿಳ್ಗುಳಿಯ ಒಳ ಅಳತೆ ಹೆಚ್ಚಾಗಿರುವುದು. 4 ಬೆನ್ನೆಲುಬುಗಳು ಒಂದುಗೂಡಿ ಆಗಿರುವ ಕೋಕಿಲು (ಕಾಕ್ಸಿಕ್ಸ್) ಸಾಮಾನ್ಯವಾಗಿ ಬಾಲದಂತೆ ಪಾವನಿಯ ಕೆಳಕೊನೆಗೆ ಕೀಲುಗೂಡಿರುತ್ತದೆ.

**ಇಡೀ ಬೆನ್ನೆಲುಬಿನ ಕಂಬ:** ಬೆನ್ನೆಲುಬುಗಳನ್ನು ಇರುವೆಡೆಗಳಲ್ಲಿ ಇರಿಸಿಡಲು ಬಲವಾದ ತಂತುಗಟ್ಟುಗಳಿವೆ, ಬೆನ್ನೆಲುನಡುವಣ ಬಿಲ್ಲೆಗಳು, ಕಾಯಗಳ ನಡುವಣ ಬಟ್ಟುಗಳು ಹಿಂದಣ ಅಲ್ಲದೆ ಮುಂದಣ ನೀಳವಾದ ತಂತುಗಟ್ಟುಗಳು (ಲಿಗಮೆಂಟ್ಸ್) ರೇಕುಪರೆಗಳ ನಡುವಣ ಹಳದಿ ತಂತುಗಟ್ಟು ಇವು ಮುಖ್ಯವಾದುವು. ಮೇಲಿನ ಕೊನೆಯಿಂದ ಕೆಳಕೊನೆಯ ತನಕ ಬೆನ್ನೆಲುಬಿನ ಕಂಬ ಹೇಗೆಂದರೆ ಹಾಗೆ ಬಾಗುವ ಬೆನ್ನೆಲುಬುಗಳ ಕಾಯಗಳ ನಡುವೆ ಮೆತ್ತನೆಯ ಬೆನ್ನೆಲುನಡುವಣ ಬಟ್ಟುಗಳಿವೆ. ಒಂದೊಂದು ಬಟ್ಟಿನಲ್ಲೂ ನಟ್ಟನಡುವೆ ತಂತುಮೆಲ್ಲೆಲುಬಿನ (ಫೈಬ್ರೊ ಕಾರ್ಟಿಲೇಜ್) ನ್ಯೂಕ್ಲಿಯಸಿನ ಪಪ್ಪು (ನ್ಯೂಕ್ಲಿಯಸ್ ಪಲ್ಪೋಸಸ್) ಇದೆ. ಬೆನ್ನೆಲುಬುಗಳ ಕಾಯಗಳನ್ನು ಒಂದಕ್ಕೊಂದು ಬಿಗಿಯಾಗಿ ಕಟ್ಟುವುದು ಈ ತಂತುಮೆಲ್ಲೆಲುಬು. ನ್ಯೂಕ್ಲಿಯಸಿನ ಪಪ್ಪು ಅರೆದ್ರವವಾಗಿದ್ದು ಒತ್ತಡ ಪೆಟ್ಟುಗಳನ್ನು ತಡೆದು ಒಂಗುವಂತಿರುವುದು. ಈ ಒತ್ತಡ, ಪೆಟ್ಟು ತಡೆಯಲಾರದಂತಾದರೆ ತಂತುಮೆಲ್ಲೆಲುಬು ಬಿರಿದು ಸೀಳಿ ನ್ಯೂಕ್ಲಿಯಸಿನ ಪಪ್ಪು ಹೊರಟುಕೊಂಡು ಬೆನ್ನುಹುರಿಯನ್ನು ಒತ್ತಿ ಬೆನ್ನು ವಿಪರೀತ ನೋವಿಡುವುದು. ಇದಕ್ಕೆ ಜಾರಿದ ಬಟ್ಟು ಎಂದು ಹೆಸರು. ಬೆನ್ನೆಲುಬಿನ ಕಂಬ, ಇಡೀ ಎಲುಗಟ್ಟಿನ ನಡುಗಡೆಯ ಅಚ್ಚಿನಂತಿದ್ದು ತಲೆ, ಮುಂಡಗಳ ಭಾರವನ್ನೇ ಅಲ್ಲದೆ ಕೈಗಳದನ್ನೂ ಹೊರುತ್ತದೆ. ಈ ಕಂಬವನ್ನು ಆಡಿಸುವ ಸ್ನಾಯುಗಳೊಂದಿಗೆ ತಲೆ, ತೋಳುಗಳವೂ ಇದಕ್ಕೆ ತಗುಲಿಕೊಂಡಿವೆ.

ನಿಂತಿರುವ ನೇರ ನಿಲುವಿನಲ್ಲಿ ಬೆನ್ನೆಲುಬಿನ ಕಂಬದಲ್ಲಿ ಸಾಮಾನ್ಯವಾಗಿ ಮೈಯ ಹಿಂದು ಮುಂದಣ ಸಮತಲದಲ್ಲಿ ಕೆಲವು ಕೊಂಕುಗಳಿರುತ್ತವೆ. ಅಡ್ಡನೆಯ ಸಮತಲದಲ್ಲೂ ಕೆಲವಿದೆ. ಆಗತಾನೇ ಹುಟ್ಟಿದ ಹಸುಗೂಸಿನ ಬೆನ್ನೆಲುಬಿನ ಕಂಬದಲ್ಲಿ ಮುಂದುಗಡೆ ಎರಡು ತಗ್ಗುಗಳಿದ್ದು ಪಾವನಿ ಬೆನ್ನೆಲುಬಿನ ಬಳಿ ಸೇರುತ್ತವೆ. ಕೂಸು ತಲೆ ಎತ್ತುವಂತಾದಾಗ ಮುಂದಕ್ಕೆ ಉಬ್ಬುವ ಕೊಂಕು ಕೊರಳಲ್ಲಿ ಆಗುವುದು. ಎಳೆಕೂಸು ನಡೆವಂತಾದಾಗ ಸೊಂಟದಲ್ಲೂ ಹೀಗೇ ಮುಂದಕ್ಕೆ ಉಬ್ಬಿಕೊಳುವುದು. ಆದ್ದರಿಂದಲೇ ಬೆಳೆದವರು, ನೆಟ್ಟ ನಿಲುವಿನಲ್ಲಿ ನಡೆವಾಗ ಬೆನ್ನೆಲುಬಿನ ಕಂಬದಲ್ಲಿ ಒಂದಾದ ಮೇಲೊಂದರಂತೆ ಉಬ್ಬುತಗ್ಗುಗಳಿರುತ್ತವೆ. ಈ ಕೊಂಕುಗಳಿಂದ ಪಾವನಿಯ ಮೇಲಿನ ಭಾರ ಹೊರಲು ಸ್ನಾಯುಗಳ ಪಾತ್ರ ತೀರ ಕಡಿಮೆಯಾಗಿರುವುದು. ಪಕ್ಕಕ್ಕೆ ಓಲುವ ಕೊಂಕುಗಳು ಎಲ್ಲರಲ್ಲೂ ಕಂಡುಬರುವುವು. ಬಲಗೈಯನ್ನು ಹೆಚ್ಚು ವಾಡಿಕೆಯಾಗಿ ಬಳಸುವುದರಿಂದ ಬಲಕ್ಕೆ ಕೊಂಚ ಉಬ್ಬಿರಬಹುದು.



ಚಿತ್ರ 2 ಬೆನ್ನೆಲುಬುಗಳಲ್ಲಿ ಮೂರು ಮಾದರಿಗಳು

ಬೆನ್ನೆಲುಬಿನ ಕಂಬದಲ್ಲಿ ಮೂರು ಚಲನೆಗಳು ಸಾಧ್ಯ. ಹಿಂದಕ್ಕೂ ಮುಂದಕ್ಕೂ ಬಾಗುವುದು; ಪಕ್ಕಗಳಿಗೆ ಬಾಗುವುದು, ಬೆನ್ನೆಲುಬುಗಳ ಕಾಯಗಳ ಮೇಲೆ ನೆಟ್ಟಗೆ ಸುತ್ತುತಿರುಗುವುದು. ಬೆನ್ನೆಲುಬಿನ ಕಂಬದ ಬೇರೆ ಬೇರೆ ಮಟ್ಟಗಳಾದ ಕೊರಳು, ಎದೆಸೊಂಟಗಳ ನಡುವೆ. ಸೊಂಟ ಪಾವನಿ ಕೂಡುವೆಡೆಗಳಲ್ಲಿ ಚಲನೆ ಬಹಳ. ಕೀಲುಗೂಡಿಸುವ ಚಾಚುಗಳ ಕೀಲುಗಳ ಸಮತಲಗಳು ಬೆನ್ನೆಲುನಡುವಣ ಬಟ್ಟುಗಳ ಹಿಗ್ಗುವ ಗುಣ, ಸ್ನಾಯು ತಂತುಗಟ್ಟುಗಳ ಪುಟಿಸುವ ಗುಣ ಇವು ಈ ಚಲನೆಗಳಿಗೆ ಮಿತಿಗಳು. ಪಕ್ಕೆಲುಬುಗಳು ಅಡ್ಡಿಯಾಗುವುದರಿಂದ ಎದೆಗೂಡಿನಲ್ಲಿ ಬೆನ್ನೆಲುಬಿನ ಕಂಬದ ಚಲನೆಗೆ ಹೆಚ್ಚು ಮಿತಿಗಳಿವೆ.

**ಎದೆಗೂಡಿನ ಎಲುಗಟ್ಟು:** ಎದೆಚಕ್ಕೆ (ಸ್ಟರ್ನಂ), ಪಕ್ಕೆಲುಬುಗಳೊಂದಿಗಿನ ಮೆಲ್ಲೆಲುಬುಗಳೂ ಎದೆಗೂಡಿನ ಬೆನ್ನೆಲುಬುಗಳೂ ಇದರಲ್ಲಿವೆ. ಬೆನ್ನೆಲುಬುಗಳ ಕಾಯಗಳ ನೆಟ್ಟ ಸಾಲು ಎದೆಗೂಡೊಳಕ್ಕೆ ಮುಂಚಾಚಿರುವುದರಿಂದ ಇಬ್ಬದಿಯಲ್ಲೂ ಹಳ್ಳವಾಗಿದೆ.

ಮೇಲಿನ ಕೈಪಿಡಿಗ (ಮೆನುಬ್ರಿಯಂ), ನಡುವಣ ಕಾಯ, ಕೆಳಗಣ ಕೂರಸಂದ (ಕ್ಸೈಫಾಯ್ಡ್) ಹೀಗೆ ಎದೆಚಕ್ಕೆಯಲ್ಲಿ 3 ಭಾಗಗಳಿವೆ. ಎಳೆಯರಲ್ಲಿನ ಇದರ ಕಾಯದಲ್ಲಿ 4 ಬಿಡಿ ಭಾಗಗಳಿದ್ದ ಗುರುತಿನ ಅಡ್ಡಗೆರೆಗಳು ಹಿಂದೂ ಮುಂದೂ ಕಾಣುತ್ತವೆ. ಮೇಲಿನ 7 ಪಕ್ಕೆಲುಬುಗಳೊಂದಿಗೆ ಕೀಲುಗೂಡಲು ಪಕ್ಕಗಳ ಅಂಚುಗಳಲ್ಲಿ 7 ಕಚ್ಚುಗಳಿವೆ (ನಾಚೆಸ್). ಕೈಪಿಡಿಗಿದ ಮಗ್ಗಲುಗಳಲ್ಲಿ ಕೀಲಿಕ (ಕ್ಲಾವಿಕಲ್) ಮೂಳೆಗಳು ಕೂಡಲು ಹಳ್ಳಗಳಿವೆ. ಕೂರಸಂದ ಚಾಚು ತೀರ ವಯಸ್ಸಾಗುವ ತನಕ ಮೆಲ್ಲೆಲುಬಾಗೆ ಉಳಿದಿರುವುದು.

ಎದೆಗೂಡಿನ ಬೆನ್ನಲುಬುಗಳೊಂದಿಗೆ ಕೀಲುಗೂಡುವ, ಪಕ್ಕೆಲುಬುಗಳ 12 ಜೋಡಿಗಳು ಬಹಳ ಎಲುಗಟ್ಟುಗಳಲ್ಲಿರುವುವು. ಕೆಲವೇಳೆ, ಪಕ್ಕೆಲುಬುಗಳು ಕೊರಳಲ್ಲೂ ಸೊಂಟದಲ್ಲೂ ಇರಬಹುದು. ಬೆನ್ನೆಲುಬಿನ ಕಂಬದಿಂದ ಪಕ್ಕೆಲುಬುಗಳು ಮೊದಲು ಹಿಂದಕ್ಕೂ ಆಮೇಲೆ ಮುಂದಕ್ಕೆ ಕೆಳಗಡೆಗೂ ಸಾಗಿ ಇನ್ನೂ ಕೆಳಮಟ್ಟದಲ್ಲಿರುವ ಪಕ್ಕೆಲುಬಿನ ಮೆಲ್ಲೆಲುಬುಗಳೊಂದಿಗೆ ಕೂಡಿಕೊಳ್ಳುತ್ತವೆ. ಮೊದಲ 7 ಪಕ್ಕೆಲುಬುಗಳ ನಿಜವಾದ ಪಕ್ಕೆಲುಬುಗಳಾಗಿ ಹೀಗಿರುವುವು. ಹೀಗೆ ಮುಂಗೊನೆಗಳು ಪಕ್ಕೆಲುಬಿನ ಮೆಲ್ಲೆಲುಬೊಂದಿಗೆ ಸೇರದೆ ಹಾಗೇ ಉಳಿದಿರುವ ಕೆಳಗಿನ ಹುಸಿ ಪಕ್ಕೆಲುಬುಗಳು 8, 9, 10ನೆಯ ಪಕ್ಕೆಲುಬುಗಳು, ಎದೆ ಚಕ್ಕೆಯನ್ನು ನೇರವಾಗಿ ಬಿಡಿಯಾಗಿ ಕೂಡದೆ ಮೇಲಿನ ಮೆಲ್ಲೆಲುಬೊಂದಿಗೆ ಕೂಡಿಕೊಳ್ಳುತ್ತವೆ. 11, 12ನೆಯವುಯಾವುದನ್ನೂ ಸೇರದೆ ಇರುವುದರಿಂದ ತೇಲುವ ಪಕ್ಕೆಲುಬುಗಳು ಎನಿಸಿವೆ. ಒಂದು ಮಾದರಿ ಪಕ್ಕೆಲುಬಿನಲ್ಲಿ ತಲೆ, ಕತ್ತು, ಕಾವುಗಳಿವೆ (ಷ್ಯಾಫ್ಟ್). ಅಕ್ಕಪಕ್ಕದ ಎರಡು ಬೆನ್ನೆಲುಬುಗಳ ಕಾಯಗಳೊಂದಿಗೆ ತಲೆ ಕೀಲುಗೂಡುತ್ತದೆ.

ಬೆನ್ನೆಲುಬಿನ ಅಡ್ಡನೆಯ ಚಾಚಿನೊಂದಿಗೆ ಕೀಲುಗೂಡುವ ಪಕ್ಕೆಲುಬಿನ ಒಂದು ಗುಬಟಿಗೂ (ಟ್ಯೂಬರ್ಕಲ್) ತಲೆಗೂ ನಡುವೆ ಮೋಟಾಗಿ ದಪ್ಪನಾದ ಕತ್ತು ಇದೆ. ಇದರಾಚೆ ಎದೆಗೂಡಿನ ಸುತ್ತ ಬಾಗುವ ಕಾಂಡವಿದೆ. ಒಳಗಡೆ ಕೆಳ ಅಂಚಿನಲ್ಲಿ ನರ, ರಕ್ತನಾಳಗಳು ಸಾಗಲು ಉದ್ದಕ್ಕೂ ತಗ್ಗು ಇದೆ.

**ಕೈಕಾಲುಗಳಎಲುಗಟ್ಟು:** ಸಾಮಾನ್ಯ ಜೋಡಣೆಯಲ್ಲಿ ಕೈಕಾಲುಗಳು ಒಂದನ್ನೊಂದು ಹೋಲಿದರೂ ರಚನೆಯ ವಿವರದಲ್ಲೂ ಮುಂಡಕ್ಕೆ ತಗುಲಿಕೊಂಡಿರುವ ರೀತಿಯೂ ಇವುಗಳ ನಿಜಗೆಲಸಗಳೂ ಬೇರೆ ಬೇರೆ. ಮೈ ಭಾರ ಹೊರುವ ಹೊಣೆಯಿರದೆ, ಕೈಗಳು ಕೇವಲ ಹಿಡಿದುಕೊಳ್ಳುವ ಅಂಗಗಳಾಗಿವೆ. ನಡಿಗೆಯಲ್ಲಿ ಮೈಯನ್ನು ಮುಂದೂಡುವುದೇ ಅಲ್ಲದೆ, ಮುಂದಕ್ಕೆ ಬಿದ್ದು ಹೋಗದ ಹಾಗೂ ಕಾಲುಗಳು ನಿಲ್ಲಿಸುವ ಅಂಗಗಳಾಗಿವೆ. ಕೈಕಾಲುಗಳು ನಡುಕಟ್ಟುಗಳ (ಗರ್ಡ್ಲ್‌ಸ್) ಮೂಲಕ ಅಚ್ಚಿನ ಎಲುಗಟ್ಟಿಗೆ ತಗುಲಿಕೊಂಡಿವೆ. ಮೇಲಿನದು ಹೆಗಲಿನ ನಡುಕಟ್ಟು, ಕೆಳಗಿನದು ಕಿಳ್ಳುಳಿಯ (ಪೆಲ್ವಿಕ್) ನಡುಕಟ್ಟು. ಹೆಗಲದ (ಸ್ಕ್ಯಾಪುಲ), ಕೀಲಕಗಳಿರುವ ಮೇಲಿನದು ಬಹುಮಟ್ಟಿಗೆ ಎದೆಗೂಡಿನ ಮೇಲೆ ಆಡುವಂತಿರುವುದು. ಅಲ್ಲದೆ ಕೈ ತೋಳು ಕೂಡ ನಡುಕಟ್ಟಿನ ಮೇಲೆ ಬಹುಮಟ್ಟಿಗೆ ಎಲ್ಲ ದಿಕ್ಕುಗಳಲ್ಲೂ ಆಡಿಸುವಂತಿರುತ್ತದೆ. ಇದರ ಚಲನೆಗಳಿಗೆ ಬೇರೆ ಬೇರೆ ಹೆಸರುಗಳಿವೆ. ಮುಂಚಾಚುವುದು ಮಡಿಸಿಕೆ (ಫ್ಲೆಕ್ಷನ್); ಹಿಂಚಾಚುವುದು ಚಾಚಿಕೆ (ಎಕ್ಸ್‌ಟೆನ್ಷನ್); ಅವಯವವನ್ನು ಮುಂಡದ ನಡುಗಡೆಗೆ ತಂದರೆ ಒಳಸರಿಕೆ (ಅಡಕ್ಷನ್); ಮುಂಡದಿಂದ ದೂರಕ್ಕೆ ಸರಿಸುವುದು ದೂರಸರಿಕೆ (ಅಬ್ಡಕ್ಷನ್); ಎಡ, ಬಲಗಳಿಗೆ ಅವಯವವನ್ನು ತಿರುಗಿಸುವುದು (ರೊಟೇಷನ್); ಕೊನೆಯದಾಗಿ, ಇವೆಲ್ಲ ಚಲನೆಗಳನ್ನೂ ಸೇರಿಸಿ ಸುತ್ತಲೂ ಆಡಿಸುವುದು, ಸುತ್ತಿರುಗಣೆ (ಸರ್ಕಂಡಕ್ಷನ್). ಎದೆಗೂಡಿನ ಎಲುಗಟ್ಟಿಗೂ ಈ ನಡುಕಟ್ಟಿಗೂ ಇರುವ ಒಂದೇ ಒಂದು ಸಂಬಂಧ ಕೀಲಕ ಮೂಳೆ. ಇದು ಎದೆಚಕ್ಕೆಯ ಕೈ ಪಿಡಿಗದ ಪಕ್ಕಕ್ಕೆ ಕೀಲುಗೂಡಿಸುವುದು.

ಪಾವನಿ ಮೂಳೆಯೊಂದಿಗೆ ಕೂಡಿ ಭದ್ರವಾಗಿರುವ ಕಿಳ್ಳುಳಿಯ ನಡುಕಟ್ಟಾಗಿರುವ ರೊಂಡಿಯೆಲುಬೊಂದಿಗೆ ಕಾಲುಗಳು ಕೀಲುಗೂಡುತ್ತವೆ. ಪಾವನಿ ಮೂಳೆ ಮೇಲೆ ಬೀಳುವ ಮುಂಡದ ಭಾರವನ್ನೆಲ್ಲ ರೊಂಡಿಯೆಲುಬಿನ ಮೂಲಕ ತೊಡೆಲುಬಿನ (ಫೀಮರ್) ಅರೆಗುಂಡು ತಲೆಗೆ ಸಾಗಿಸುತ್ತದೆ. ಇದರ ಎದುರಾಗಿ ಕಾಲುಗಳ ಚಲನೆಯ ಬಲವನ್ನು ಇದೇ ಕಿಳ್ಳುಳಿಯ ನಡುಕಟ್ಟು ಮುಂದಕ್ಕೆ ಸಾಗಿಸುವುದು. ಹೆಗಲಿನ ಕೀಲಲ್ಲಿದ್ದ ಹಾಗೇ ರೊಂಡಿ ಕೀಲಲ್ಲೂ ಕಾಲು ಹಲವು ದಿಕ್ಕುಗಳಲ್ಲಿ ಆಡುವುದಾದರೂ ಇದಕ್ಕೆ ಕೊಂಚ ಮಿತಿಯಿದೆ.

ಕೈಕಾಲುಗಳಲ್ಲಿ ಒಂದೊಂದರಲ್ಲೂ, ಹತ್ತಿರದ, ನಡುವಣ, ದೂರಂಚಿನ (ಪೆರಿಫೆರಲ್) ಭಾಗಗಳಿವೆ. ಹತ್ತಿರದ ತುಂಡಿನಲ್ಲಿ ಒಂದು ನೀಳ ಮೂಳೆಯಿದೆ. ಕೈಯಲ್ಲಿರುವುದು ತೋಳ್ಮೂಳೆ (ಹ್ಯೂಮೆರಸ್), ಕಾಲಲ್ಲಿ ತೊಡೆಲುಬು.

ನಡುವಣ ತುಂಡಿನಲ್ಲಿ ಎರಡು ಮೂಳೆಗಳಿವೆ. ಮುಂದೋಳಲ್ಲಿ ಆರೆಲು (ರೇಡಿಯಸ್), ಮೊಣೆಲುಬು (ಅಲ್ನ) ; ಕಾಲಲ್ಲಿ ಕಣಕಾಲೆ (ಟಿಬಿಯ), ಸೂಚಿಲುಕ (ಫಿಬುಲ). ಹತ್ತಿರದ ತುಂಡಿಗೂ ನಡುವಣ ತುಂಡಿಗೂ ನಡುವೆ ಕೀಲುಮೊಳೆ ಕುತ್ತಿಯಂತಿದೆ (ಹಿಂಜ್). ಮೇಲಿನ ಅವಯವದ್ದು ಮೊಣಕೈಗೀಲು, ಕೆಳಗಿನದು ಮಂಡಿಕೀಲು. ಪೂರ್ತಿ ಚಾಚಿನದಾಗಿದ್ದನ್ನು ಬಿಟ್ಟರೆ ಮಂಡಿಯಲ್ಲಿ ಕಾಲನ್ನು ಒಂದಿಷ್ಟು ಸುತ್ತಿರುಗಿಸಬಹುದಾದರೂ ಮೊಣಕೈ ಕೀಲಿನಲ್ಲಿ ಅಷ್ಟೊಂದು ಸಾಧ್ಯವಿಲ್ಲ. ನಡುವಣ ತುಂಡಿನ ಎರಡು ಮೂಳೆಗಳ ಚಲನೆ ಕೈಕಾಲುಗಳಲ್ಲಿ ಬೇರೆ ಬೇರೆ. ಮುಂದೋಳಲ್ಲಿನ ಆರೆಲು, ಮೊಣೆಲುಬುಗಳ ನಡುವೆ ಬೋರಲಾಗಿಸುವುದೂ (ಪ್ರೋನೇಷನ್) ಅಂಗತ್ತನಾಗಿಸುವುದೂ (ಸೂಪಿನೇಷನ್) ಆಗುವುದಾದರೂ ಕಾಲಿನಲ್ಲಿ ಹಾಗೆ ಸುತ್ತಿರುಗಿಸುವಂತಿಲ್ಲ.

ಕೈ, ಪಾದಗಳೇ ಎರಡೂ ಅವಯವಗಳ ಕೊನೆಯ ತುಂಡುಗಳು. 1. ಸಣ್ಣ ಮೂಳೆಗಳ ಸಾಲುಗಳಾಗಿ ಮಣಿಕಟ್ಟಿನಲ್ಲಿ ಮುಂಗೈಯೆಲುಬುಗಳು (ಕಾರ್ಪಲ್ ಬೋನ್ಸ್), ಹರಡಿನಲ್ಲಿ ಮುಂಗಾಲೆಲುಬುಗಳು (ಟಾರ್ಸಸ್); 2. ಉದ್ದನೆಯ ಮೂಳೆಗಳು ಕೈಯಲ್ಲಿ ಅಂಗೈಯೆಲುಬುಗಳೂ (ಮೆಟಕಾರ್ಪಲ್ಸ್) ಪಾದದಲ್ಲಿ ಅಂಗಾಲೆಲುಬುಗಳೂ (ಮೆಟಟಾರ್ಸಲ್ಸ್); 3. ಸಾಮಾನ್ಯವಾಗಿ ಬೆಟ್ಟು, ಬೆರಳು ಎನಿಸಿಕೊಳ್ಳುವವೂ ಇವುಗಳಲ್ಲಿವೆ. ಮುಂದೋಳಿನ ಆರೆಲು ಮೊಣೆಲುಬುಗಳೊಂದಿಗೆ ಮಣಿಕಟ್ಟಿನ ಮುಂಗೈಯೆಲುಬುಗಳು

ಕೀಲುಗೂಡಿ ಅಡ್ಡನೆಯ ಅಚ್ಚಿನಲ್ಲಿ, ಅಂದರೆ ಮಣಿಕಟ್ಟು ಮಡಿಸುವ ಚಾಚುವ ಚಲನೆಗಳು ಸಾಧ್ಯ. ಇವುಗಳೊಂದಿಗೆ ಅಂಗೈಯನ್ನು ಒಳಸರಿಸುವುದೂ ದೂರಸರಿಸುವುದೂ ಆಗುವುದು. ಹರಡಿನಲ್ಲಿ ಮುಂಗಾಲೆಲುಬುಗಳು ಕಣಕಾಲೆ, ಸೂಚಿಲುಕ ಮೂಳೆಗಳೊಂದಿಗೆ ಕೂಡುವ ಕೀಲಿನಲ್ಲಿ ಕೇವಲ ಮಡಿಸುವುದು ಚಾಚುವುದಕ್ಕೆ ಮಾತ್ರ ಮಿತಿಗೊಂಡಿದೆ. ಪಾದದಲ್ಲಿ



ಚಿತ್ರ 3 ಮಾನವನ ಎಲುಗಟ್ಟು

ಕೆಲವು ಅಂಗಾಲೆಲುಬುಗಳ ನಡುವೆ ಒಂದಿಷ್ಟು ಚಲನೆ ಆಗಬಹುದು. ಪಾದದ ತಳವನ್ನು ಒಳಮೊಗವಾಗುವಂತೆ ತಿರುಗಿಸುವುದಕ್ಕೆ ಒಳತಿರುವು (ಇನ್‌ವರ್ಷನ್) ಎಂದೂ ಹೊರಮೊಗವಾಗುದುವುದಕ್ಕೆ ಹೊರತಿರುವು (ಎವರ್ಷನ್) ಎಂದೂ ಇವೆ. ಈ ತಿರುವುಗಳಿಂದ ನೆಲದ ಸೊಟ್ಟುಗಳಿಗೆ ತಕ್ಕಂತೆ ಪಾದದ ತಳ ಹೊಂದಿಕೊಳ್ಳುವಂತಿರುತ್ತದೆ.

ಕೈಕಾಲುಗಳ ಬೆರಳುಗಳ ಚಲನೆಗಳು ಬಹುಮಟ್ಟಿಗೆ ಒಂದೇ ತೆರನು. ಆದರೆ ಹೆಬ್ಬೆರಳಿನ ಅಂಗೈಯೆಲುಬಿಗೂ ಮಣಿಕಟ್ಟಿನ ಒಂದು ಮುಂಗೈಯೆಲುಬಿಗೂ ನಡುವಣ ಕೀಲಿನಲ್ಲಿ ಸುತ್ತಿರುಗಿಸುವಂತಿದೆ. ಕಾಲಿನ ಹೆಬ್ಬೆಟ್ಟಿನಲ್ಲಿ ಹೀಗೆ ಮಾಡುವಂತಿಲ್ಲ. ಒಟ್ಟಿನಲ್ಲಿ ಕೈಯಲ್ಲಿನ ಬೆರಳುಗಳಲ್ಲಿನಷ್ಟು ಸರಾಗ ಚಲನೆಗಳು ಪಾದದಲ್ಲಿ ಸಾಧ್ಯವಿಲ್ಲ.

ಮೇಲಿನ ಅವಯವ: ಹೆಗಲಲ್ಲಿರುವ ಕೀಲಿಕ, ಹೆಗಲದಲ (ಸ್ಕ್ಯಾಪುಲ), ತೋಳೆಲುಬು, ಮುಂದೋಳಿನ ಆರೆಲು, ಮೊಣೆಲಬುಗಳೂ ಕೈಯಲ್ಲಿ ಹಲವು ಸಣ್ಣಮೂಳೆಗಳು ಇದರಲ್ಲಿವೆ.

**ಕೀಲಿಕ:** ಈ ಕೊರಳೆಲುಬು (ಜತ್ರು) ಎದೆಚಕ್ಕೆಯ ಮೇಲ್ಕೊನೆಯಿಂದ ಅಡ್ಡನಾಗಿದ್ದು ಹೆಗಲದಲ ತೀರ ಆಚಿನ ಚಾಚು, ಹೆಗಲ್ಕೊನೆಯಲ್ಲಿ(ಅಕ್ರೋಮಿಯಾನ್) ಕೀಲುಗೂಡು ವುದು. ಇದು ವಿಶಿಷ್ಟವಾದ ಆಕಾರದಲ್ಲಾಗಿದೆ. ಹೆಂಗಸರಲ್ಲಿ ಕೋಮಲವಾಗಿದ್ದರೂ, ಒಳ್ಳೆಯ ಕಟ್ಟುಮಸ್ತಾಗಿರುವ ಗಂಡಸರಲ್ಲಿ ಜೋರಾಗಿರುವುದು. ಇದರ ಆಚೆ ಕೊನೆ ಚಪ್ಪಟೆಯಾಗಿದೆ. ಇದರ ಈಚೆ ಕೊನೆ, ಎದೆಚಕ್ಕೆ ಒಂದನೆಯ ಪಕ್ಕೆಲುಬು ಇವುಗಳ ನಡುವೆ ಬಲವಾದ ತಂತುಗಟ್ಟುಗಳು ಬಿಗಿದಿವೆ. ಕೀಲಿಕದ ಕಾವಿಗೆ ಹೆಗಲಿನ ನಡುಕಟ್ಟಿನ ಸ್ನಾಯುಗಳು ತಗುಲಿಕೊಂಡಿರುತ್ತವೆ.

**ಹೆಗಲದಲ:** ಎದೆಯ ಹಿಂದುಗಡೆ 2ನೆಯದರಿಂದ 8ನೆಯ ಪಕ್ಕೆಲುಬುಗಳ ನಡುವಣ ಮಟ್ಟದಲ್ಲಿರುವ ಈ ಚಪ್ಪಟೆ ಮೂಳೆ ತ್ರಿಕೋನಾಕಾರದಲ್ಲಿದೆ. ಹಳ್ಳವಾಗಿರುವ ಇದರ ಮುಂದಣ ಮೇತಲ ಪಕ್ಕೆಲುಬುಗಳ ಕಡೆಗಿದೆ. ಇದರ ಹಿಂದಣ ಮೇತಲದಲ್ಲಿ ಐಮೂಲೆಯಾಗಿ ದೊಡ್ಡ ಏಣಾದ ಮುಳ್ಳುಚಾಚು(ಸ್ಪೈನ್) ಇರುವುದರಿಂದ, ಮುಳ್ಳುಚಾಚುಮೇಲಣ (ಸುಪ್ರಸ್ಪೈನಸ್), ಮುಳ್ಳುಚಾಚು ಕೆಳಗಣ (ಇನ್‌ಫ್ರಸ್ಪೈನಸ್) ತಗ್ಗುಗಳಾಗಿದೆ (ಫಾಸ), ತೋಳನ್ನು ತಿರುಗಿಸುವ ಸ್ನಾಯುಗಳು ಈ ಮುಳ್ಳುಚಾಚಿಗೂ, ಇವೆರಡು ತಗ್ಗುಗಳಿಗೂ ತಗುಲಂಟಿವೆ. ಮುಳ್ಳುಚಾಚು ಮುಂದಕ್ಕೆ ಕಮಾನಾಗಿ ಚಾಚಿಕೊಂಡು ಅಗಲನ್ನೆಯ ಹೆಗಲ್ಕೊನೆಯಾಗುತ್ತದೆ. ತೋಳನ್ನು ಆಡಿಸುವಾಗ ಹೆಗಲನ್ನು ಹಿಡಿದಿಡಲೋ ಆಡಿಸಲೋ ಇರುವ ಸ್ನಾಯುಗಳು ಹೆಗಲಗಲದ ಅಂಚುಗಳಿಗೆ ತಗುಲಿಕೊಂಡಿರುವುವು. ಹೆಗಲದಲದ ಮೂರು ಕೋನಗಳಲ್ಲಿ ಹೊರಗೆನದರಲ್ಲಿ ದಪ್ಪನಾಗಿ ಆಳವಿಲ್ಲದ ಕುಳಿಯಿಂದ (ಗ್ಲಿನಾಯ್ಡ್) ತಗ್ಗು ಇರುವುದು. ತೋಳ್ಮೂಳೆಯ ಗುಂಡುತಲೆ ಈ ತಗ್ಗಿನೊಂದಿಗೆ ಕೂಡಿಯೇ ಹೆಗಲಿನ ಕೀಲು ಆಗಿರುತ್ತದೆ. ಕುಳಿಯಿಂದ ತಗ್ಗಿನ ಮೇಲೆ ತೂಗುವಂತೆ ಕೊಕ್ಕಂದ ಚಾಚು (ಕೊರನಾಯ್ಡ್ ಪ್ರೋಸೆಸ್) ಇದೆ.

**ತೋಳ್ಮೂಳೆ:** ಮಾದರಿಯಾದ ನೀಳ ಮೂಳೆಯಾದ್ದರಿಂದ ಇದಕ್ಕೂ ಒಂದು ಕಾವು, ಎರಡು ಹಿಗ್ಗಿದ ಕೊನೆಗಳಿವೆ. ಮೇಲೆ ಕೊನೆಯ ಅರೆಗೋಳಾಕಾರದ ತಲೆಯ ನುಣ್ಣನೆ ಮೇತಲ ಹೆಗಲದಲದ ಕುಳಿಯಿಂದ ತಗ್ಗಿನೊಂದಿಗೆ ಕೀಲುಗೂಡುವುದು. ತಲೆಯೂ ಕಾವೂ ಒಂದಾಗುವೆಡೆಯಲ್ಲಿರುವ ಎರಡು ಗುಬಟುಗಳಿಗೆ ಹೆಗಲದಲದ ತಗ್ಗುಗಳಿಂದ ಬರುವ ಸುತ್ತಿರುಗಿಸುವ ಸ್ನಾಯುಗಳು ತಗುಲಂಟಿರುವುವು. ಈ ಗಂಟುಗಳ ನಡುವೆ ಇರುವ ತೋಡಿನಲ್ಲಿ (ಗ್ರೂವ್) ಇತ್ತಲೆಗದ (ಬೈಸೆಪ್ಸ್) ಉದ್ದನೆಯ ಕಂಡರ (ಟೆಂಡನ್) ಆಡುವುದು. ತೋಳ್ಮೂಳೆಯ ಕಾವಿನ ಮೇಲ್ಗಡೆ ಅಡ್ಡ ಕೊಯ್ತದಲ್ಲಿ ಮೂರು ಪಕ್ಕೆಗಳಿರುವಂತೆ ಕಂಡರೂ ಕೆಳಗಡೆ ಚಪ್ಪಟೆಯಾಗಿ ಹಿಗ್ಗಿದಂತಿರುವುದು. ಕಾವಿನ ಹಿಂದುಗಡೆ ಸುತ್ತಸುತ್ತುವ ಆಳವಿಲ್ಲದ ಒಂದು ತೋಡಿನಲ್ಲಿ ಆರೆಲುವಿನ (ರೇಡಿಯಲ್) ನರ ಸಾಗುತ್ತದೆ. ಕೆಳಕೊನೆಯ ಹೊರಪಕ್ಕದ ಕೀಲುಗೂಡುವ ಜಾಗವಾದ ಎಲುದಲಿ (ಕ್ಯಾಪಿಟುಲಂ) ಆರೆಲುವಿನ ತಲೆಯೊಂದಿಗೂ ಒಳಪಕ್ಕದ ಎಲುಕಪ್ಪಿ (ಟ್ರೋಕ್ಲಿಯ) ಮೊಣೆಲುಬೊಂದಿಗೂ ಕೀಲುಗೂಡುತ್ತವೆ, ಕೆಳ ಕೊನೆಯ ಕೀಲುಗೂಡದ ಭಾಗಗಳಲ್ಲಿ ಎರಡು ಬದಿಗಳಲ್ಲೂ ಒಂದೊಂದು ಮೇಲೆಲುಗೆಣ್ಣುಗಳಿವೆ (ಎಪಿಕಾಂಡೈಲ್ಸ್). ಇವುಗಳ ಮೇಲುಗಡೆ ಎಲುಗೆಣ್ಣು ಮೇಲಣ ಏಣುಗಳಿವೆ (ಸುಪ್ರಕಾಂಡೈಲಾರ್ ರಿಡ್ಜಸ್), ಮುಂದೋಳನ್ನು ಬೋರಲು ಹಾಕುವ ಅದನ್ನೂ ಬೆರಳುಗಳನ್ನೂ ಮಡಿಸುವ ಸ್ನಾಯುಗಳು ಒಳಪಕ್ಕದ ಮೇಲೆಲುಗೆಣ್ಣು, ಏಣುಗಳಿಗೆ ತಗುಲಂಟಿರುವುವು. ಹಾಗೇ ಮುಂದೋಳನ್ನು ಅಂಗತ್ತನಾಗಿಸುವ ಮಣಿಕಟ್ಟು, ಬೆರಳುಗಳನ್ನು ಹಿಂಬಾಗಿಸುವ ಸ್ನಾಯುಗಳು ಆಚೆಪಕ್ಕದ ಮೇಲೆಲುಗೆಣ್ಣು, ಏಣುಗಳಿಗೆ ಅಂಟಿಕೊಂಡಿರುತ್ತದೆ.

**ಆರೆಲು:** ಮುಂದೋಳಿನ ಹೊರಪಕ್ಕದಲ್ಲಿರುವ ನೀಳಮೂಳೆ, ಇದರ ಮೇಲ್ಕೊನೆಯಾದ ತಲೆ, ಬಟ್ಟಿನ ರೂಪದಲ್ಲಿದ್ದು ತೋಳ್ಮೂಳೆಯೊಂದಿಗೂ ಅದರ ಅಂಚು ಮೊಣೆಲುಬೊಂದಿಗೂ ಕೀಲುಗೂಡುವುದು. ತಲೆಯ ಕೆಳಗೆ ಕೊರಳಿದೆ. ಇದರ ಕೆಳಗಿರುವ ಗುಂಡುಬ್ಬಿಗೆ ಇತ್ತಲೆಗ ಸ್ನಾಯು ತಗುಲಂಟಿದೆ. ಮಣಿಕಟ್ಟು, ಬೆರಳುಗಳನ್ನು ಆಡಿಸುವ ಸ್ನಾಯುಗಳು ಆರೆಲುವಿನ ಕಾವಿಗೆ ತಗುಲಂಟಿದೆ. ಮುಂದೋಳಿನ ಮುಂದಣ, ಹಿಂದಣ ರಚನೆಗಟ್ಟುಗಳನ್ನು ಬೇರ್ಪಡಿಸುವಂತಿರುವ ಎಲುನಡುವಣ (ಇಂಟರಾಸಿಯಸ್) ಪದರ, ಆರೆಲುವಿನ ಚೂಪಾದ ಒಳ ಅಂಚಿನುದ್ದಕ್ಕೂ

ತಗುಲಿರುವುದು. ಇದರ ಎರಡು ತಲಗಳಲ್ಲೂ ಸ್ನಾಯುಗಳು ತಗುಲಂಟಿರುತ್ತವೆ. ಈ ಮೂಳೆಯ ಕೆಳಗಿನ ಕೊನೆ ಮೇಲಿನದಕ್ಕಿಂತಲೂ ಬಲು ದಪ್ಪ. ಮೊನೆಯಾದ ಚಾಚು ಹೊರಂಚಿಂದ ಕೆಳಕ್ಕೆ ಚಾಚಿರುವುದು. ಇದರ ಒಳಪಕ್ಕ ನುಣುಪಾಗಿದ್ದು ಮೊಣೆಲುಬಿನ ಕೆಳಕೊನೆಯಾದ ತಲೆಯೊಂದಿಗೂ ಉಳಿದ ಕೆಳಪಕ್ಕ ಮಣಿಕಟ್ಟಿನ ಎರಡು ಮುಂಗೈಯೆಲುಬುಗಳೊಂದಿಗೂ ಕೀಲುಗೂಡುವುವು.

**ಮೊಣೆಲುಬು:** ಮುಂದೋಳಿನ ಒಳಪಕ್ಕದಲ್ಲಿನ ನೀಳಮೂಳೆ, ಇದರ ಮೇಲಿನ ಕೊನೆಯ ಎರಡು ಬಲವಾದ ನುಣುಪಾದ ಚಾಚುಗಳ ನಡುವೆ ಎಲುಕಪ್ಪಿಯ ಕಚ್ಚು ಇದ್ದು, ತೋಳ್ಮೂಳೆಯೊಂದಿಗೆ ಕೀಲುಗೂಡುತ್ತದೆ. ಇದರಲ್ಲಿ ಕೆಳಗಿನ ಕೊಕ್ಕಂದ (ಕೊರಕಾಯ್ಡ್) ಚಾಚು ಒರಟು. ಮುಂದೋಳನ್ನು ಬಲವಾಗಿ ತೋಳಿನ ಮೇಲೆ ಮಡಿಸುವ ತೋಳು ಸ್ನಾಯು ಇಲ್ಲಿ ತಗುಲಂಟಿದೆ. ಮುಂದೋಳನ್ನು ಜೋರಾಗಿ ನೀಟುವ ಸ್ನಾಯುವಾದ ಮೂದಲೆಗ (ಟ್ರೈಸೆಪ್ಸ್) ಹಿಂದುಗಡೆ ತುದಿ ಮೇಲಿರುವ ಮೊಣಕೊನೆ (ಓಲಿಕ್ರೇನನ್) ಚಾಚಿಗೆ ಹಿಂದಿನಿಂದ ತಗುಲಂಟಿರುವುದು. ಮಣಿಕಟ್ಟು, ಬೆರಳುಗಳನ್ನು ಆಡಿಸುವ ಮುಂದೋಳನ್ನು ಬೋರಲಾಗೂ ಅಂಗತ್ತನಾಗೂ ಹಾಕಿಸುವ ಸ್ನಾಯುಗಳು ತಗುಲಿಕೊಳ್ಳಲು, ಮೊಣೆಲುಬಿನ ಕಾವಿನಲ್ಲಿ 3 ಪಕ್ಕಗಳಿವೆ. ಮೊನಚಾದ ಆಚೆಪಕ್ಕದ ಅಂಚಿನುದ್ದಕ್ಕೂ ಎಲುನಡುವಣ ಪದರ ಅಂಟಿರುತ್ತದೆ. ಮೇಲಿನ ಕೊನೆಗಿಂತ, ಕೆಳಗಿನದು ತೀರ ಸಣ್ಣದು. ಇದಕ್ಕೂ ಒಂದು ಕಂಬದಂಡ (ಸ್ಟೆಲಾಯ್ಡ್) ಚಾಚು ಇದೆ. ಇದರ ಹೊರಪಕ್ಕ ಆರೆಲುವಿನೊಂದಿಗೆ ಕೀಲುಗೂಡುತ್ತದೆ. ಇದರ ಕೆಳಪಕ್ಕ ತಂತು ಮೆಲ್ಲಲುಬಿಗೆ ತಾಕಿರುವುದು. ಮೊಣಕೈ ಕೀಲಿನಲ್ಲಿ ಆರೆಲುವಿಗಿಂತ ಮೊಣೆಲುಬಿನ ಪಾತ್ರವೇ ದೊಡ್ಡದು. ಹಾಗೇ ಮಣಿಕಟ್ಟಿನೊಂದಿಗೆ ಕೀಲುಗೂಡುವಾಗ ಆರೆಲುವಿನ ಪಾತ್ರ ಹಿರಿಯದು. ಮಣಿಕಟ್ಟನ್ನು ತಿರುವಿದಾಗ, ಸುಮ್ಮನಿರುವ ಮೊಣೆಲುಬಿನ ಸುತ್ತಲೂ ಆರೆಲು ಸುತ್ತುವುದು. ಅಂಗೈ ಮುಂದಕ್ಕೆ ತೋರುತ್ತಿರುವಾಗ ಆರೆಲು, ಮೊಣೆಲುಬು ಎರಡೂ ಸಮದೂರದಲ್ಲಿರುವುವು. ಅಂಗೈ ತಿರುವಿಹಾಕಿದರೆ ಮೊಣೆಲುಬಿನ ಮೇಲೆ ಆರೆಲು ಕೋಸೆಯಾಗಿ ಬೀಳುವುದು.

**ಕೈ:** ಮಣಿಕಟ್ಟು, ಅಂಗೈ, ಬೆರಳುಗಳು ಇದರಲ್ಲಿವೆ. ಮಣಿಕಟ್ಟಿನ 8 ಸಣ್ಣ ಮುಂಗೈ ಎಲುಬುಗಳು 2 ಸಾಲುಗಳಲ್ಲಿವೆ. 5 ಅಂಗೈ ಎಲುಬುಗಳೂ ಪುಟಾಣಿ ನೀಳ ಮೂಳೆಗಳೇ. ಹೆಬ್ಬೆರಳಿನದೇ ಬಲು ಸಣ್ಣದು. ಉಳಿದವನ್ನು ಬಿಟ್ಟು ಪಕ್ಕಕ್ಕೆ ಬಾಗಿರುವುದು. ಅಂಗೈ ಎಲುಬುಗಳು ಮಣಿಕಟ್ಟಿನ ಕೆಳ ಸಾಲಿನ 4 ಮುಂಗೈ ಎಲುಬೊಂದಿಗೂ ಬೆರಳಿನ ಹತ್ತಿರದ ಎಲುವೆರಳೊಂದಿಗೂ (ಫೆಲ್ಯಾಂಕ್ಸ್) ಕೀಲುಗೂಡುತ್ತದೆ. ಹೆಬ್ಬೆರಳಲ್ಲಿ 2 ಎಲುವೆರಳುಗಳೂ ಉಳಿದ ತೋರು, ನಡು, ಉಂಗುರ, ಕಿರು ಬೆರಳುಗಳಲ್ಲಿ ಮೂರು ಮೂರೂ ಇವೆ. ಒಂದೊಂದು ಎಲುವೆರಳೂ ಪುಟ್ಟ ನೀಳ ಮೂಳೆ. ಮಣಿಕಟ್ಟಿನಲ್ಲಿರುವ ಮುಂಗೈ ಎಲುಬುಗಳು ಒಂದ ರೊಡನೊಂದು ಬಲವಾಗಿ ಬಿಗಿದಂತಿದ್ದರೂ ಒಂದಿಷ್ಟು ಚಲನೆ ಆಗುವಂತಿದೆ. ಮಣಿಕಟ್ಟಿನ ಅಂಗೈಪಕ್ಕ, ಹಳ್ಳವಾಗಿ ಒಂದು ಬಲವಾದ ತಂತುಗಟ್ಟು ಮೇಲೇ ಹಾದು ಇದನ್ನು ಸುರಂಗವಾಗಿಸಿದೆ. ಬೆರಳುಗಳಿಗೆ ಹೋಗುವ ರಕ್ತನಾಳಗಳು, ನರಗಳು, ಕಂಡರಗಳೂ ಈ ಸುರಂಗದಲ್ಲಿ ಸಾಗುವುವು–ಹೆಬ್ಬೆರಳಿನ ಹಲತೆರನ ಚಲನೆಗಳು ಮಾನವನ ಬಲು ಹೆಚ್ಚಿನ ಗುಣ.



ಚಿತ್ರ 4 ರೊಂಡಿಯೆಲುಬುಗಳೂ ಪಾವನಿಯೂ ಕೂಡಿ ಆಗಿರುವ ಕಿಳ್ಗುಳಿಗಳು. ಮೇಲಿನದು ಗಂಡಸಿನದು, ಕೆಳಗಿನದು ಹೆಂಗಸಿನದು.

**ಕೆಳಗಿನ ಅವಯವ:** ಇದರಲ್ಲಿ ಕೊಂಡಿಮೂಳೆ, ತೊಡೆಲುಬು ಮಂಡಿಚಿಪ್ಪು, ಕಣಕಾಲೆ (ಟಿಬಿಯ), ಸೂಜಿಲುಕ (ಫೆಬುಲ), ಪಾದದ ಹಲವು ಮೂಳೆಗಳೂ ಇವೆ.

ಕಿಳ್ಗುಳಿಯ ಪಕ್ಕ, ಮುಂಗೋಡೆಗಳಾಗುವ ದೊಡ್ಡ ಡೊಂಕು ಮೂಳೆ ರೋಂಡಿಮೂಳೆ. ಎಳೆತನದಲ್ಲಿ ಬೇರೆ ಬೇರೆಯಾಗಿರುವ ಟೊಂಕೆಲುಬು (ಐಲಿಯಂ), ಕುಂಡೆಲುಬು (ಇಸ್ಕಿಯಂ), ಗುಂಜೆಲುಬುಗಳು (ಪ್ಯೂಬಿಸ್) 18–20 ವರ್ಷಗಳ ವಯಸ್ಸಿಗೆ ಒಂದು ಗೂಡುತ್ತವೆ. ಇವು ಮೂರೂ ಕೂಡುವೆಡೆ, ತೊಡೆಲುಬಿನ ಇಡೀ ಗುಂಡುತಲೆ ಕೂಡುವಂತೆ ಒರಳಂತಿರುವ, ಎಲುಗುಂದಣ (ಅಸಿಟ್ಯಾಬುಲಂ) ಇದೆ. ಎಲುಗುಂದಣದ ಮೇಲ್ಗಡೆ ಹೊರಚಾಚಿಕೊಂಡಿರುವುದು ಟೊಂಕೆಲುಬು, ಕೆಳಗಿರುವುದು ಕುಂಡೆಲುಬು, ಮುಂದಕ್ಕೆ ಒಳ ಚಾಚಿರುವುದು ಗುಂಜೆಲುಬು. ಈ ಮೂರು ಮೂಳೆಗಳ ನಡುವೆ ಕಂಡಿತಡೆಕ (ಅಬ್ಚುರೇಟರ್) ತೂರುಗಂಡಿ (ಫೋರಮನ್) ಇದೆ.

**ಕಿಳ್ಗುಳಿ:** ರೊಂಡಿಮೂಳೆಗಳು ಮುಂದುಗಡೆ ಕೂಡೇಣಲ್ಲೂ (ಸಿಂಫೈಸಿಸ್) ಹಿಂದುಗಡೆ ಪಾವನಿ ಪಕ್ಕಗಳಲ್ಲೂ ಕೀಲುಗೂಡುವುದರಿಂದ ಕಿಬ್ಬೊಟ್ಟೆಯಲ್ಲಿರುವ ಎಲುಗಟ್ಟಾದ ಕೀಳ್ಗುಳಿಯ ನಡುಕಟ್ಟು ಆಗುವುದು. ಕಿಬ್ಬೊಟ್ಟೆ ಅಂದರೆ, ಈ ಎಲುಬುಗಳ ನಡುವಣ ಪೊಳ್ಳೇ ಹೊರತು ಅದರ ಸುತ್ತಣ ಮೂಳೆಯಲ್ಲ. ಕಿಳ್ಗುಳಿಯಲ್ಲಿ ಹಿರಿಯ ಹುಸಿ ಭಾಗ, ಕಿರಿಯ ದಿಟ ಭಾಗಗಳಿವೆ. ದಿಟ ಕಿಳ್ಗುಳಿಗೆ ಮೇಲಣ ಕಂಡಿ, ಪೊಳ್ಳು,




ಚಿತ್ರ 5 ರೊಂಡಿಯೆಲುಬಿನ ಹೊರ, ಒಳಪಕ್ಕಗಳು

ಕೆಳಗಣ ಕಂಡಿಗಳಿವೆ. ಹೆರಿಗೆ ಮುಂಚೆ ಪಿಂಡಗೂಸಿನ (ಫೀಟಸ್) ತಲೆ ಕೆಳಗಿಳಿವುದು ದಿಟ ಕಿಳ್ಗುಳಿಯೊಳಕ್ಕೇ. ದಿಟ ಕಿಳ್ಗುಳಿಯ ಮೇಲಿರುವ ಹುಸಿ ಕಿಳ್ಗುಳಿ ಅಗಲವಾಗಿದ್ದು ಟೊಂಕೆಲುವಿನ ತಗ್ಗುಗಳು ಎರಡು ಪಕ್ಕಗಳಲ್ಲಿವೆ. ನೆಟ್ಟಗೆ ನಿಂತುಕೊಂಡಿರುವಾಗ, ಕಿಳ್ಗುಳಿ ಸಹಜವಾಗಿ ಮುಂದಕ್ಕೆ ಇಳಿಜಾರಾಗುವಂತೆ ಬಾಗಿರುವುದರಿಂದ, ಪಾವನಿಯ ಮೇಲಿನ ಅಂಚು ಗುಂಜೆಲುವಿನ ಕೂಡೇಣಿಗೂ ಎತ್ತರದಲ್ಲಿರುತ್ತದೆ.

ಹೆಣ್ಣಿನ ಕಿಳ್ಗುಳಿಗೂ ಗಂಡಿನದಕ್ಕೂ ಹಲವು ವ್ಯತ್ಯಾಸಗಳಿವೆ. ಹೆಣ್ಣಿನಲ್ಲಿ ಮೂಳೆಗಳು ನುಣುಪಾಗಿ ಕೋಮಲವಾಗಿದ್ದು, ಸ್ನಾಯುಗಳು ತಗುಲಿಕೊಳ್ಳುವ ಏಣುಗಳು, ಚಾಚುಗಳು ಅಷ್ಟಾಗಿ ಎದ್ದುಕಾಣುವುದಿಲ್ಲ. ಆಳ ಕಡಿಮೆ, ದಿಟ ಕಿಳ್ಗುಳಿಯ ಒಳಗಂಡಿ ಇನ್ನೂ ಗುಂಡಗೂ ಗುಂಜೆಲುಗಳಿಂದಾದ ಕೆಳಗಿನ ಕಮಾನು ಇನ್ನೂ ಅಗಲಕ್ಕೂ ಇರುವುವು. ಕುಂಡೆಲುಬುಗಳ ಗುಂಡುಬ್ಬುಗಳು, ಹೆರಿಗೆಯಲ್ಲಿ ಪಿಂಡಗೂಸು ಹೊರಬೀಳಲು ಅಡ್ಡಿಯಾಗದಂತೆ ಇನ್ನೂ ದೂರದೂರ ಇವೆ. ಎಲುಗುಂದಣವೂ ಚಿಕ್ಕದು. ಒಟ್ಟಿನಲ್ಲಿ ಇಡೀ ಕಿಳ್ಗುಳಿಯ ಅಡ್ಡಗಲ ಹೆಚ್ಚಿರುವುದರಿಂದಲೇ ಹೆಣ್ಣಿನ ಪಿರ್‍ರೆಗಳು ದೊಡ್ಡವು. ಕಿಳ್ಗುಳಿಯ ಒಳಗಿನ ಅಳವು ಹೆಚ್ಚಿರುವುದರಿಂದ, ಬಸುರಿನಲ್ಲಿ ಗರ್ಭಕೋಶ ದೊಡ್ಡದಾಗಿ ಬೆಳೆಯಲು ಅನುಕೂಲಕರ.

ಟೊಂಕೆಲುಬಿನ ಕೆಳಗಿನ ಸಣ್ಣ ಭಾಗ ಎಲುಗುಂದಣದಲ್ಲಿ ಸೇರಿದೆ. ಅಗಲದ ತಟ್ಟೆಯಂತಿರುವ ಮೇಲಿನ ಭಾಗದ ಹೊರ ಅಂಚು ಉಬ್ಬೇಣು (ಕ್ರೆಸ್ಟ್) ಎನಿಸಿಕೊಳ್ಳುತ್ತದೆ. ಕಿಬ್ಬದಿ ಕೆಳಗಡೆ ಇದನ್ನು ಮೈಮೇಲೆ ಮುಟ್ಟಲು ಸಿಗುವುದು. ಹೊಟ್ಟೆಗೋಡೆಯ ಅಗಲವಾದ ಸ್ನಾಯುಗಳು ನೆಲೆಯೂರುವುದು ಇಲ್ಲೇ. ಟೊಂಕೆಲುಬಿನ ಹೊರ ಪಕ್ಕದಲ್ಲಿ ಕುಂಡಿಯ ಸ್ನಾಯುಗಳು ಕೂಡಂಟಿವೆ. ಒಳಪಕ್ಕದ ಮುಂಭಾಗ ತಗ್ಗಾಗಿದ್ದು, ತೊಡೆಯನ್ನು ಮಡಿಸುವ ಟೊಂಕೆಲುಬು ಸ್ನಾಯು ಕೂಡಂಟಿರುವುದು. ಹಿಂದುಗಡೆ L ಆಕಾರದ ಒರಟು ಭಾಗ ಪಾವನಿಯೊಂದಿಗೆ ಗಟ್ಟಿಯಾಗಿ ಕೀಲುಗೂಡುವುದು. ಗುಂಜೆಲುವಿನಲ್ಲಿ ನಡುವೆ ಕಾಯವೂ ಎರಡು ಕವಲುಗಾಲೂ (ರೇಮೈ) ಇರುವುದರಿಂದ n ಆಕಾರದಲ್ಲಿದೆ. ಎರಡು ಪಕ್ಕಗಳ ಗುಂಜೆಲುಗಳೂ ಕೂಡೇಣಿನಲ್ಲಿ ಕೂಡುವೆಡೆ ಇದರ ಕಾಯ

ಚಪ್ಪಟೆಯಾಗಿರುತ್ತದೆ. ಮೇಲಿನ ಕವಲುಗಾಲು ಹಿಂದಕ್ಕೆ ಹೋಗಿ ಟೊಂಕೆಲುವನ್ನೂ ಕೆಳಗಿನದು ಕುಂಡೆಲುಬಿನೊಂದಿಗೂ ಸೇರಿಕೊಳ್ಳುತ್ತವೆ. ಹೆಚ್ಚು ಕಡಿಮೆ U ಆಕಾರದಲ್ಲಿರುವ ಕುಂಡೆಲುಬಿನ ಮೇಲಿನ ಕೊನೆ ಎಲುಗುಂದಣದಲ್ಲಿ ಕೂಡುವುದು. ಕೆಳ ಭಾಗ ಗುಂಜೆಲುವೊಂದಿಗೆ ಕೂಡಿ ಕಂಡಿತಡೆಕತೂರುಗಂಡಿಯ (ಅಬ್ಟುರೇಟರ್ ಪೋರಮನ್) ಕೆಳ ಅಂಚಾಗುವುದು. ಇದರ ಎರಡು ಕವಲುಗಾಲುಗಳಿಗೂ ತೊಡೆಯನ್ನು ನಡುಗಡೆಗೆಳೆವ ಸ್ನಾಯು ಅಂಟಿರುತ್ತದೆ. ಮೇಲಿನ ಹಿಂದಣ ಭಾಗ ದಪ್ಪನಾಗಿದ್ದು ಹಿಂತೊಡೆಯ (ಹ್ಯಾಮ್‍ಸ್ಟ್ರಿಂಗ್) ಬಲವಾದ ಸ್ನಾಯುಗಳು ಕೂಡಂಟಿರುವುವು. ಕುಂಡೆಲುಬಿನ ಮುಳ್ಳು ಚಾಚುರೊಂಡಿಯ ಹಿರಿಯ ಕಚ್ಚನ್ನೂ (ಗ್ರೇಟ್ ಸಯೆಟಿಕ್ ನಾಚ್) ಕಿರಿಯ ಕಚ್ಚನ್ನೂ ಬೇರ್ಪಡಿಸುವುದು. ನೆಲದ ಮೇಲೆ ಕುಳಿತಾಗ ಕುಂಡೆಲುಬಿನ ಹಿಂದುಗಡೆಯಿರುವ ಗುಂಡುಬ್ಬು (ಟ್ಯೂಬರಾಸಿಟಿ) ನೆಲಕ್ಕೂರುವುದು.

**ತೊಡೆಲುಬು:** ಇದರಷ್ಟು ಉದ್ದದ ಮೂಳೆ ಮೈಯಲ್ಲಿ ಇನ್ನೊಂದಿಲ್ಲ. ಇದರ ಮೇಲಿನ ಕೊನೆಯ ಆರೆಗೋಳಾರದ ನುಣುಪಾದ ತಲೆ ಎಲುಗುಂದಣದ ಗುಳಿಯೊಂದಿಗೆ ಕೀಲುಗೂಡುತ್ತದೆ. ತಲೆಗೂ ಕಾವಿಗೂ ನಡುವೆ ಕೆಳಕ್ಕೂ ಹೊರಕ್ಕೂ ಚಾಚಿರುವ ಕೊರಳಿದೆ. ಕೊರಳಿಗೂ ಕಾವಿಗೂ ನಡುವೆ ಚಾಚುಗಳಾಗಿರುವ ಎರಡು ತಿರುಗಾಲಿಗಳಿವೆ (ಟ್ರೋಕ್ಯಾಂಟರ್ಸ್). ಆಚೆ ಪಕ್ಕದ ಹಿರಿಯ ತಿರುಗಾಲಿಗೆ ತೊಡೆಯನ್ನು ತಿರುಗಿಸುವ ಸ್ನಾಯುಗಳೂ ಒಳಬದಿಯ ಕಿರಿಯದಕ್ಕೆ ತೊಡೆಯನ್ನು ಮಡಿಸುವ ಸ್ನಾಯುವೂ ತಗುಲಂಟಿವೆ. ಬೆಳೆದವರಲ್ಲಿ ತೊಡೆಲುಬಿನ. ಕೊರಳು ಸಮತಲಕ್ಕೆ ಸುಮಾರು $35^0$ ಕೋನದಲ್ಲಿ ಬಾಗಿರುವುದು. ಕಾವಿನ ನಡುಭಾಗ ಕಬ್ಬಿನ ಜಲ್ಲೆಯಂತೆ ದುಂಡಗಿದ್ದು ಮೇಲೂ ಕೆಳಗೂ ದಪ್ಪಗಿರುತ್ತದೆ. ಇದರ ಮುಂದೂ ಪಕ್ಕಗಳಲ್ಲೂ ತೊಡೆಯನ್ನು ಚಾಚುವ ಸ್ನಾಯುಗಳು ತಗುಲಿಕೊಂಡಿವೆ. ಹಿಂದುಗಡೆ ಮೂಳೆಯುದ್ದಕ್ಕೂ ಇರುವ ನೀಳ ಏಣು ದರಕುವಳಿಗೆ (ಲೀನಿಯ ಆಸ್ಪರ) ತೊಡೆಯ ಒಳಸರಿಕ ಸ್ನಾಯುಗಳು ತಗುಲಂಟಿವೆ. ಕಣಕಾಲೆ ಮೂಳೆಯ ಮೇಲಿನ ತಲದೊಂದಿಗೆ ಕೀಲುಗೂಡಿ ಮಂಡಿಯಲ್ಲಿ ಮಡಿಸುವಂತೆ ತೊಡೆಲುಬಿನ ಕೆಳಕೊನೆಯಲ್ಲಿ ಅಗಲವಾದ ನುಣುಪಾದ ಕೀಲುಗೂಡುವ ತಲವಿರುವುದು. ಇದರ ಮುಂದಿನ ತಗ್ಗಿನಲ್ಲಿ, ಮಂಡಿಚಿಪ್ಪು ಮೇಲಕ್ಕೂ ಕೆಳಕ್ಕೂ ಆಡುವಂತಿರುವುದು. ಕೆಳಗಿನ ಹಿಂದಿನ ಭಾಗಗಳ ನಡುವೆ ಇರುವ ಆಳದ ತಗ್ಗಿನಲ್ಲಿ ಮಂಡಿಕೀಲಿನ ಚಲನೆಯನ್ನು ಮಿತಿಯಲ್ಲಿ ಹಿಡಿದಿಡುವ ಶಿಲುಬಿಕ (ಕ್ರೂಸಿಯೇಟ್) ತಂತುಗಟ್ಟುಗಳಿವೆ. ತಗ್ಗಿನ ಪಕ್ಕಗಳಲ್ಲಿರುವ ಒಂದೊಂದು ಎಲುಗೆಣ್ಣು (ಕಾಂಡೈಲ್) ಕಣಕಾಲೆಯವೊಂದಿಗೆ ಕೀಲುಗೂಡುವುದು.

**ಮಂಡಿಚಿಪ್ಪು:** ಕಾಲನ್ನು ನೇರವಾಗಿ ನೀಡುವ ದೊಡ್ಡ ಸ್ನಾಯುಗಳ ಕಂಡರದಲ್ಲೇ ಬೆಳೆದಿರುವ ಸಾಸಿವಂದ (ಸೆಸೆಮಾಯ್ಡ್) ಮೂಳೆಯಾಗಿ. ಚಪ್ಪಟೆಯಾಗಿ ಮುಮ್ಮೂಲೆ ಆಕಾರದಲ್ಲಿದೆ. ಇದರ ಹಿಂಭಾಗ ನುಣುಪಾಗಿದ್ದು ತೊಡೆಲುಬಿನ ಕೆಳಕೊನೆಯ ಮುಂಭಾಗದೊಂದಿಗೆ ಕೀಲುಗೂಡುವುದು. ಬಲವಾದ ಕಂಡರದ ತಂತುಗಳು ಅಂಟಿರುವುದರಿಂದ ಮುಂಭಾಗವೂ ಪಕ್ಕಗಳೂ ಒರಟಾಗಿವೆ.

**ಕಣಕಾಲೆ:** ಕೆಳಕಾಲಿನ ಎರಡು ಮೂಳೆಗಳಲ್ಲಿ ಒಳ ಪಕ್ಕದಲ್ಲಿ ದಪ್ಪನಾದ ಕಣಕಾಲಿನ ಮೂಳೆಯದು. ನಿಂತಿರುವಾಗ ಇದು ತೊಡೆಲುಬಿನ ಮೂಲಕ ಬೀಳುವ ಮೈಭಾರವನ್ನು ಪಾದಕ್ಕೆ ಸಾಗಿಸುವುದು. ಮೇಲಿನ ಕೊನೆಯಾದ ಚಪ್ಪನೆಯ ತಲೆಯಲ್ಲಿ ಚಪ್ಪಟೆಯಾಗಿ ಅಗಲಕ್ಕಿರುವ ಎರಡು ಎಲುಗೆಣ್ಣುಗಳು. ತೊಡೆಲುಬಿನ ಎಲುಗೆಣ್ಣುಗಳೊಂದಿಗೆ ಕೀಲುಗೂಡುತ್ತವೆ. ಹೊರ ಪಕ್ಕದ್ದರ ತಳದಲ್ಲಿ ಸೂಚಿಲುಕದ ತಲೆಯೊಂದಿಗೆ ಕೀಲು ಗೂಡಲು ಒಂದು ಸಣ್ಣ ಎಲುಮೊಗವಿದೆ. ಎಲುಗೆಣ್ಣುಗಳ ನಡುವೆ ತರಕಲಾಗಿ ಎದ್ದಿರುವ ಬುಗುಡಿಗೆ (ಎಮಿನೆನ್ಸ್) ಕೀಲೊಳಗಿನ ಶಿಲುಬಿಕ ತಂತುಗಟ್ಟುಗಳೂ ಮಂಡಿ ಕೀಲೊಳಗಿರುವ ಮಂಡಿಚಿಪ್ಪಿನ ಚಂದ್ರಬಟ್ಟೆನಂತೆ (ಮೆನಿಸ್ಕಸ್) ಇರುವ ಮೆಲ್ಲೆಲುಬುಗಳೂ ಬಲವಾಗಿ ತಗುಲಿಕೊಂಡಿವೆ. ಎಲುಗೆಣ್ಣುಗಳು ಚಪ್ಪಟೆ ಆಗಿರುವುದರಿಂದ ತೊಡೆಲುಬು ಜಾರದಂತೆ ಈ ಮೆಲ್ಲೆಲುಬುಗಳು ಸಿಂಬೆಗಳ ಹಾಗಿರುವುವು. ಕಣಕಾಲೆಯ ಕಾವಿಗೆ 3 ಪಕ್ಕಗಳಿವೆ. ಚರ್ಮದ ಕೆಳಗೆ ಕೈಗೆ ಸಿಗುವಂತಿರುವ ಇದರ ಒಳಪಕ್ಕವೆ ಕಣಕಾಲು. ಪಾದವನ್ನು ಆಡಿಸುವ ಸ್ನಾಯುಗಳು ಇದರ ಹಿಂದಣ, ಹೊರ ಪಕ್ಕಗಳಿಗೆ ಕೂಡಂಟಿವೆ. ಮುಂದಣ ಅಂಚು ಚೂಪಾದ ಏಣು. ಇದರ ಮೇಲ್ಕೊನೆಯಲ್ಲಿರುವ ಗುಬಟೆಗೆ ಬಲವಾಗಿ ನೀಟುವ ಕಾಲಿನ ಸ್ನಾಯುಗಳ ದಪ್ಪನೆಯ ಕಂಡರ ಕೂಡಂಟಿದೆ. ಹೊರ ಪಕ್ಕದ ಅಂಚಿಗೆ ಎಲುನಡುವಣ ಪದರ ಅಂಟಿದೆ. ಕಣಕಾಲೆಯ ಕೆಳಕೊನೆ ಮೇಲಿನದರಷ್ಟು ದಪ್ಪವಲ್ಲ. ಹರಡಿನ ಎಲುದಾಳದೊಂದಿಗೆ (ಟ್ಯಾಲಸ್) ಕೀಲುಗೂಡುವುದು. ಒಳ ಪಕ್ಕದ ಬಡಿಗುಬಟಾಗಿ (ಮ್ಯಾಲಿಯೋಲಿಸ್) ಮುಂದೆ ಸಾಗಿ ಹರಡಿನ ಒಳ ಪಕ್ಕದಲ್ಲಿ ಕೈಗೆ ಸಿಗುವ ಗೆಣ್ಣಾಗಿರುತ್ತದೆ.

**ಸೂಚಿಲುಕ:** ಕೆಳಕಾಲಿನ ಹೊರಪಕ್ಕದ ಸ್ನಾಯುಗಳ ಆಳದಲ್ಲಿ, ತೆಳುವಾಗಿ ನುಗ್ಗೆ ಕಡ್ಡಿಯಂತಿವೆ. ಮೇಲಿನ ಕೊನೆ ಕಣಕಾಲೆಯ ಹೊರ ಪಕ್ಕದ ಎಲುಗೆಣ್ಣೊಂದಿಗೆ ಕೀಲುಗೂಡುವುದು. ನಾಲ್ಕೂ ಪಕ್ಕಗಳಿರುವ ಕಾವಿಗೆ ಹಲವು ಸ್ನಾಯುಗಳು ತಗುಲಿ ಕೊಂಡಿರುತ್ತವೆ. ಒಳಪಕ್ಕದ ಏಣೊಂದಕ್ಕೆ ಎಲುನಡುವಣ ಪದರ ಅಂಟಿರುತ್ತದೆ. ಕೆಳ ಕೊನೆ ಮಾತ್ರ ಬಲವಾದ ಹೊರ ಪಕ್ಕದ ಬರಿಗುಬಟಾಗಿ ಹರಡಿನ ಆಚೆ ಪಕ್ಕದಲ್ಲಿ ಉಬ್ಬಿ ಕಾಣುವುದು. ಇದರ ಒಳಪಕ್ಕ ಎಲುದಾಳದೊಂದಿಗೆ ಕೀಲುಗೂಡುವುದು.

**ಪಾದ:** ಮುಂಗಾಲೆಲುಬುಗಳು (ಟಾರ್ಸಸ್), ಅಂಗಾಲೆಲುಬುಗಳು (ಮೆಟಾರ್ಸಲ್ಸ್), 5 ಬಿಡಿ ಬೆಟ್ಟುಗಳೂ ಇಲ್ಲವೇ ಕಾಲೆಲುಬೆರಳುಗಳೂ ಇದರಲ್ಲಿವೆ. ಕಾಲಿನ ಹೆಬ್ಬೆಟ್ಟು ಕೈಯ ಹೆಬ್ಬೆರಳನ್ನು ಹೋಲುವುದಾದರೂ ಚಲನೆಗೆ ಮಿತಿಯಿದೆ. ಹರಡಿನ 7 ಮುಂಗಾಲೆಲುಬುಗಳು 3 ಸಾಲುಗಳಲ್ಲಿವೆ. ಮೇಲಿನ ಸಾಲಿನಲ್ಲಿ ಎಲುದಾಳ (ಟ್ಯಾಲಸ್), ಎಲುಮಡಗಳೂ (ಕ್ಯಾಲ್ಕೇನಿಯಸ್), ನಡು ಸಾಲಿನಲ್ಲಿ ಕಿರಿಯೋಡವೂ (ನೆವಿಕ್ಯುಲಾರ್), ಮೂರನೆಯ ಸಾಲಿನಲ್ಲಿ ಮೇಕುರೂಪಿ (ಕ್ಯೂನಿಫಾರಂ) ಮೂಳೆಗಳು, ಘನಾಕಾರಿ (ಕ್ಯುಬಾಯ್ಡ್) ಮೂಳೆಯೂ ಇವೆ. ಮುಂಗಾಲೆಲುಬುಗಳು ಸಣ್ಣ ಘನಾಕಾರದವು. ಅಂಗಾಲಿನ, ಮೇಲಿನ ಪಕ್ಕಗಳಿಗೆ ತಂತುಗಟ್ಟುಗಳು ತಗುಲಂಟುವುದರಿಂದ ಒರಟಾಗಿರುತ್ತವೆ. ಆದರೆ ಎಲುದಾಳ ಮಾತ್ರ ಕೆಳಕಾಲಿನ ಎರಡು ಮೂಳೆಗಳು, ಎಲುಮಡದ ನಡುವೆ ನುಣುಪಾಗಿ ಕೀಲುಗೊಡುವುದು. ಹೊರಗಾಣುವ ಹಿಮ್ಮಡಿಯ ಉಬ್ಬಿನಲ್ಲಿ ಮುಖ್ಯವಾಗಿ ಎಲುಮಡದ ಹಿಂಚಾಚಿರುವುದು. ಇದರ ಹೊರತಾಗಿ ಮುಂಗಾಲೆಲುಬುಗಳೂ ಹಿಂದೂ ಮುಂದೂ ಕೀಲುಗೂಡುವಂತೆ ನುಣುಪಾಗಿರುವುವು. ಅಂಗಾಲೆಲುಬುಗಳೂ ಎಲುವೆರಳುಗಳೂ ಕೈಯಲ್ಲಿ ಇರುವ ಹಾಗೇ ಇರುತ್ತವೆ.

**ಸಾಸಿವಂದ ಮೂಳೆಗಳು:** ಮೇಲಿನವೇ ಅಲ್ಲದೆ, ಕೈಯಲ್ಲೂ ಪಾದದಲ್ಲೂ ಸ್ನಾಯುಗಳ ಕಂಡರಗಳ ನಡುವೆ ಸಾಸಿವಂದ ಮೂಳೆಗಳೆಂಬ ಕೆಲವು ಮಿಗಿಲಾದ ಮೂಳೆಗಳು ಬೆಳೆದಿರುತ್ತವೆ. ಮಂಡಿಚಿಪ್ಪು ಈ ತೆರನ ಮೂಳೆಯ ಒಳ್ಳೆಯ ಉದಾಹರಣೆ.

**ಪಿಂಡದಲ್ಲಿ ವಿಕಾಸ:** ಎಲುಗಟ್ಟಿನ ವಿಕಾಸಕ್ಕೆ ಪಿಂಡದ ನಡುವಿನ ಚರ್ಮವೇ (ಮೀಸೊಡೆರ್ಮ್) ಮೂಲ. ಹೊರನನೆಚರ್ಮ(ಎಕ್ಟೊಡರ್ಮ್) ಒಳನನೆ ಚರ್ಮಗಳ (ಎಂಡೊಡರ್ಮ್) ಇಪ್ಪದರದ ಬಟ್ಟೆನಂತಿರುವ 15 ದಿನಗಳ ಪಿಂಡದ ಹಿಂಭಾಗದಲ್ಲಿ ಹೊರನನೆ ಚರ್ಮದ ಜೀವಕಣಗಳು ಗುಣಿತವಾಗಿ ಉದ್ದನೆಯ ಗಂಟು ಕಾಣಿಸಿ ಕೊಳ್ಳುತ್ತದೆ. ಮುಂದೆ ಇದೇ ಬೆಂಬೀವಿಗೂ (ನೋಟೊಕಾರ್ಡ್) ನಡುನನೆ ಚರ್ಮಕ್ಕೂ ಮೂಲವಾಗುವ ಆದಿಯ ಪಟ್ಟೆ (ಪ್ರಿಮಿಟಿವ್ ಸ್ಟ್ರೀಕ್). ಕೆಳಮಟ್ಟದ ಕಶೇರುಕಗಳ ಪಿಂಡಗಳಲ್ಲಿನ ನೆನೆಕಣಕಂಡಿಗೆ (ಬ್ಲಾಸ್ಟೊಪೋರ್) ಇದು ಸಮಾನಾಂಗ. ಈ ಪಟ್ಟೆಯ ಮುಂದಿನ ಕೊನೆಯಲ್ಲಿನ (ಹೆನ್ಸನ್ನನ) ಗಂಟಿನಿಂದ ಉರುಳೆಯಾಕಾರದ ಜೀವಕಣ ರಾಸಿಯೇ ಬೆಂಬೀವು ಆದಾಗ ತಲೆ ಯಾವುದೆಂದು ನಿರ್ಧರವಾಯಿತೆನ್ನಬಹುದು. ವಿಕಾಸವಾಗುತ್ತಿರುವ ಕೇಂದ್ರದ ನರದ ಮಂಡಲದ ತಳದಲ್ಲಿ ಈ ಬೆಂಬೀವು ಇದ್ದುಕೊಂಡು ಬೆಳೆಯುತ್ತಿರುವ ಪಿಂಡಕ್ಕೆ ಊರೆ ಕೊಡುವುದು.

ಚೊರಮೀನಿನ (ಷಾರ್ಕ್) ತೆರನ ಮೀನುಗಳಲ್ಲಿ ಬೆಂಬೀವಿನ ಸುತ್ತಲೂ ಮೆಲ್ಲೆಲುಬಿನ ಬೆನ್ನೆಲುಬುಗಳು ಬೆಳೆದು ಅದನ್ನು ಒಂದಿಷ್ಟು ಇರುಕಿಸುತ್ತವೆ ಎನ್ನಬಹುದು. ಇಷ್ಟಾದರೂ ಬೆನ್ನೆಲುಬುಗಳೊಳಗೆ ಇಡೀ ಬೆಂಬೀವು ಉಳಿದೇ ಇರುತ್ತದೆ. ಆದರೆ ಮೇಲ್ತರದ ಕಶೇರುಕಗಳಲ್ಲಿ ಬೆಂಬೀವು ತತ್ಕಾಲದ ರಚನೆಯಾಗಿದ್ದು, ಆಮೇಲೆ ಬೆನ್ನೆಲುಬುಗಳ ಕಾಯಗಳಲ್ಲೂ ಬೆನ್ನೆಲುನಡುವಣ ಬಟ್ಟುಗಳ ಪುಷ್ಪಸಗಳಲ್ಲೂ ಪಟಾಣಿ ತೂತಾಗಿ ಉಳಿದಿರಬಹುದು.

ಬೆಂಬೀವು ವಿಕಾಸವಾಗುತ್ತಿರುವಾಗ ಆದಿಯ ಪಟ್ಟೆಯ ಪಕ್ಕಗಳಿಂದ ಜೀವಕಣಗಳು ವೆಗ್ಗಳಿಸಿ ನಡುನನೆ ಚರ್ಮದ ಪದರವಾಗಿ, ಕೊನೆಗೆ ಹೊರನನೆ ಚರ್ಮ, ಒಳನನೆ ಚರ್ಮಗಳ ನಡುವೆ ಸೇರಿಕೊಳ್ಳುತ್ತವೆ. ನಡುವಿನ ಚರ್ಮದ ಪದರ ಬರುಬರುತ್ತ ಮೂರು ರಾಸಿಗಳಾಗಿ ವಿಂಗಡವಾಗುತ್ತವೆ. ನಡುನನೆ ಚರ್ಮದ ಪಿಂಡಖಂಡಗಳು (ಸೋಮೈಟ್ಸ್), ಮೈಗೋಡೆ ಮತ್ತು ಕರುಳುಗಳು, ಮೂತ್ರ ಮಂಡಲಗಳು ಇವುಗಳಿಂದ ಏಳುವುವು.

ಕಶೇರುಕಗಳಲ್ಲಿ, ಬೆಂಬೀವಿಂದ ನಡುನನೆಚರ್ಮದ ವಿಕಾಸ ಹೆಚ್ಚಳಿಕೆಯ ವಿಚಾರ, ತಲೆಬುರುಡೆ, ಬೆನ್ನೆಲುಬೂ ಅವೊಂದಿಗಿನ ಬೇರೆ ರಚಗಟ್ಟುಗಳೂ ಪಿಂಡಖಂಡದ ಒಂದು ಭಾಗದಿಂದಲೂ ಕೈ ಕಾಲುಗಳ ಎಲುಗಟ್ಟು ಪಕ್ಕದ ಪದರದಿಂದಲೂ ಏಳುತ್ತವೆ. ಒಂದೊಂದು ಪಿಂಡಖಂಡವೂ ಮೂರು ಪದರಗಳಲ್ಲಿ ವಿಕಾಸವಾಗುವುದು. ಮೇಲ್ಮೆಲಿರುವ ಮುಂದೆ ಚರ್ಮವಾಗುವ ಚರ್ಮಪಡಿ (ಡರ್ಮಟೋಂ) ಮೊದಲಿನದು. ಹೊರಪಕ್ಕದ ಆಳದಲ್ಲಿರುವ ತುಂಡಾದ, ಮುಂದೆ ಸ್ನಾಯುಗಳಾಗುವ ಸ್ನಾಯುಪಡಿ (ಮಯೋಟೋಂ) ಎರಡನೆಯದು. ಒಡಲೆಡೆಯ ತುಂಡಾದ ಗಡುಸುಪಡಿ (ಸ್ಕ್ಲೀರೊಟೋಂ) ಮೂರನೆಯದು. ಪಿಂಡಖಂಡದ

ಒಂದೊಂದು ಜೊತೆಯಿಂದಲೂ ಗಡುಸುಪಡಿಯ ಜೀವಕಣಗಳು ಒಳಸರಿದು ನಡುಗೆರೆ 'ಯಲ್ಲಿ ಒಂದುಗೂಡಿ ಬೆಂಬೀವಿನ ಸುತ್ತ ಸುತ್ತಿಕೊಂಡು ಬೆನ್ನುಕಡೆ ನರದ ನಾಳಿಯಿಂದ (ನ್ಯೂರಲ್ ಟ್ಯೂಬ್). ಒಡಲ ಕಡೆ ಮಹಾಧಮನಿಯಿಂದ (ಅಯೋರ್ಟ) ಬೇರ್ಪಡಿಸುತ್ತವೆ. ಗಡುಸುಪಡಿಯ ಊತಕ ಮೊದಲಿನಂತೆ ತುಂಡು ತುಂಡಾಗೇ ಇದ್ದು ಮುಂದೆ ಬೆನ್ನೆಲುಬಿನ ಕಾಯವಾಗುತ್ತದೆ. ಸ್ನಾಯುಪಡಿಗಳ ನಡುವೆ ಇದರ ಪಕ್ಕಗಳಿಂದ ಹೊರಟಿಕೊಳ್ಳುವ ಚಾಚುಗಳೇ ಮುಂದೆ ಪಕ್ಕೆಲುಬುಗಳಾಗುವುವು. ಆದರೆ ಮುಂದೆ ಪಕ್ಕೆಲುಬುಗಳ ವಿಕಾಸ ಆಗುವುದು ಎದೆಗೂಡಿನ ಮಟ್ಟದಲ್ಲಿ ಮಾತ್ರ. ಉಳಿದೆಡೆಗಳಲ್ಲಿ ನೆಪಮಾತ್ರಕ್ಕೆ ಉಳಿಯುತ್ತವೆ. ಪಿಂಡಗೂಸಿನಲ್ಲಿ 7ನೆಯ ವಾರದ ಹೊತ್ತಿಗೇ ಬೆನ್ನೆಲುಬುಗಳು ಮೆಲ್ಲೆಲುಬುಗಳಾಗಿರುತ್ತವೆ. ಇನ್ನೆರಡು ವಾರಗಳಲ್ಲಿ ಎಲುಮೊಳೆತದ (ಆಸಿಫಿಕೇಷನ್) ಕೇಂದ್ರಗಳು ತಲೆದೋರಿ ಬರುಬರುತ್ತ ಮೆಲ್ಲೆಲುಬೆಲ್ಲ ಎಲುಬಾಗಿ ಮಾರ್ಪಡುತ್ತದೆ. ಪಕ್ಕೆಲುಬುಗಳ ಬೆಳೆವ ಮುಂಗೊನೆಗಳ ಮೆಲ್ಲೆಲುಬಿಂದ ಎದೆ ಚಕ್ಕೆಯ ಕಡ್ಡಿ ಬೆಳೆದು ಮುಂದೆ ಅದೇ ಎದೆಚಕ್ಕೆ ಆಗುತ್ತದೆ.

ಪಿಂಡದ 5ನೆಯ ವಾರದ ಹೊತ್ತಿಗೆ ಕೈಕಾಲುಗಳ ಎಲುಗಟ್ಟು ಅಡಿಯ ಅವಯವ ಮೊಳಕೆಯ ನಡುರಚಾಂಶದ (ಮೀಸೆಂಕೈಮಲ್) ತಿರುಳಿನಲ್ಲಿ ತುಂಡಾಗದ ನಡುನನೆ ಚರ್ಮದಿಂದಲೇ ವಿಕಾಸವಾಗುತ್ತದೆ. ನಡುರಚಾಂಶ ಗಟ್ಟಿಬಿದ್ದು ಮುಂದಿನ ಅವಯವದ ಮೂಳೆಗಳೇಳುವುವು. 7ನೆಯ ವಾರದಲ್ಲಿ ನಡುರಚಾಂಶವೇ ಮುಂದಿನ ಮೂಳೆಗಳು ಮೆಲ್ಲೆಲುಬುಗಳಾಗಿರುವುವು. ಮುಂದೆ ಎಲುಬಾಗಿ ಬದಲಾದ ಮೇಲಿನ ಆಕಾರ, ಗಾತ್ರಗಳಿಗೆ ಬಹುಮಟ್ಟಿಗೆ ಈ ಮೆಲ್ಲೆಲುಬುಗಳೇ ಕಾರಣ. ಹಾಗೇ, ಕೈ ಕಾಲುಗಳ ವಿಕಾಸಕ್ಕೆ ಮುಂಚೆಯೇ ಹೆಗಲಿನ, ಟೊಂಕದ ನಡುಕಟ್ಟುಗಳು ಮೊಳೆಯುತ್ತವೆ. ಇದರಲ್ಲಿ ಹೆಗಲಿನದೇ ಮೊದಲ ಮೊಳೆತ. ಮೈಗೆ ಹತ್ತಿರದಲ್ಲಿರುವ ಮೂಳೆಗಳು ಮೊದಲು ಕುಡಿಯಿಡುತ್ತವೆ.

**ಎಲುಮೊಳೆತ:** ಮೆಲ್ಲೆಲುಬೊಳಗೋ ಪದರ ನಡುವೆಯೋ ಆಗಬಹುದು, ಇವೆರಡು ಮೊಳೆತಗಳೂ ಒಂದೇ ರೀತಿ. ಏಕೆಂದರೆ, ಇದರಲ್ಲಿ ಪಾಲ್ಗೊಳ್ಳುವ ಜೀವ ಕಣಗಳು ಒಂದೇ ಬಗೆಯವು. ತಲೆಬುರುಡೆಯ ಕೆಲವನ್ನೂ ಕೀಲಿಕವನ್ನೂ ಬಿಟ್ಟರೆ, ಎಲುಗಟ್ಟಿನ ಎಲ್ಲ ಮೂಳೆಗಳಿಗೂ ಮೊದಲು ಮೆಲ್ಲಲುಬಾಗಿದ್ದುದರಲ್ಲೇ ಎಲುಬು ಮೊಳಯುತ್ತದೆ. ಇಲ್ಲಿ ಮೆಲ್ಲೆಲುಬು ನೇರವಾಗಿ ಎಲುಬಾಗಿ ಮಾರ್ಪಡದೆ, ಮೆಲ್ಲಲುಬಲ್ಲಿ ಸುಣ್ಣಗೂಡಿ, ಸವೆಗೊರಿ (ಎರೋಷನ್) ಎಲುಬಿನ ಮರುಜೋಡಣೆಯಾಗುವುದು. ಇಷ್ಟಾದರೂ, ವಯಸ್ಸಾದರೂ ಕೆಲವು ಮೆಲ್ಲೆಲುಬುಗಳು ಎಲುಬಾಗದೆ ಹಾಗೇ ಉಳಿದಿರುತ್ತವೆ.

**ಪ್ರಾಣಿಗಳಲ್ಲಿ (ಕಶೇರುಕಗಳು) ಎಲುಗಟ್ಟು:** ಕಶೇರುಕಗಳಲ್ಲಿ ಎಲುಗಟ್ಟಿನ ಬೆಳೆವಣಿಗೆ ಅಕಶೇರುಕಗಳಿಗಿಂತ ವಿಭಿನ್ನರೀತಿಯದು. ಈ ವಂಶದ ಜೀವಿಗಳ ಎಲುಗಟ್ಟು ಭ್ರೂಣ ಬೆಳವಣಿಗೆಯ ಕಾಲದಲ್ಲಿ ಮಧ್ಯಚರ್ಮದಿಂದ (ಮೀಸೊಡರ್ಮ್) ಹುಟ್ಟಿಬರುತ್ತದೆ. ಇದು ಬೆಳೆದು ಬರುವ ರೀತಿಗಳನ್ನು ಎಲ್ಲ ಕಶೇರುಕಗಳ ಭ್ರೂಣಾಭ್ಯಾಸದಿಂದ ಅರಿತುಕೊಳ್ಳಬಹುದು. ಕಶೇರುಕಗಳಲ್ಲಿ ಎಲುಗಟ್ಟು ಮೂರು ಹಂತಗಳಲ್ಲಿದೆ. ಕೆಳದರ್ಜೆಯ ಕಶೇರುಕಗಳಾದ ಆಂಫಿಯಾಕ್ಸಿಸ್, ಬೆಲನೊಗ್ಲಾಸಸ್ ಮತ್ತು ಅಸಿಡಿಯಾಗಳ ಎಲುಗಟ್ಟನ್ನು ನೊಟೊಕಾರ್ಡ್ ಎಂದು ಕರೆಯುತ್ತೇವೆ. ಇದು ಜೀರ್ಣಾಂಗಗಳಿಂದ ಮೇಲುಭಾಗದಲ್ಲಿದೆ; ಇದರ ಹುಟ್ಟು ಪ್ರತ್ಯೇಕವಾದ ಒಂದು ಅಂಗಾಂಶದಿಂದ (ನೊಟೊಕಾರ್ಡಿನ ಅಂಗಾಂಶವೆಂದೇ ಹೆಸರು). ಬೆಲನೊಗ್ಲಾಸಸ್ ಜೀವಿಯಲ್ಲಿ ನೊಟೊಕಾರ್ಡ್ ಶರೀರದ ಮುಂದಿನ ತುದಿಯಲ್ಲಿದೆ. ಅಸೀಡಿಯಗಳಲ್ಲಿ ಇದು ಇರುವುದೇ ಇಲ್ಲ. ಆದರೆ ಇವುಗಳ ಲಾರ್ವಗಳಲ್ಲಿ ಮಾತ್ರ ನೊಟೊಕಾರ್ಡ್ ಬೆಳೆಯುತ್ತದೆ. ಇವುಗಳ ಬಾಲದಲ್ಲಿ ಮಾತ್ರ ರೂಪಾಂತರ ಪರಿವರ್ತನೆಗೊಂಡಾಗ ಈ ನೊಟೊಕಾರ್ಡ್ ಕರಗಿಹೋಗುತ್ತದೆ. ಇದು ಕಶೇರುಕಗಳ ಎಲುಗಟ್ಟಿನ ಬೆಳೆವಣಿಗೆಯ ಪ್ರಥಮ ಹಂತ.

ಇವುಗಳಿಗಿಂತ ಮುಂದುವರಿದ ಸೈಕ್ಲೊಸ್ಟೊಮ್ಯಾಟ ಪ್ರಾಣಿಗಳಲ್ಲಿಯೂ ನೊಟೊಕಾರ್ಡಿನ ಬೆಳೆವಣಿಗೆಯನ್ನು ಕಾಣುತ್ತೇವೆ. ಇವುಗಳಲ್ಲಿ ನೊಟೊಕಾರ್ಡ್ ಮತ್ತು ಅದರ ಮೇಲಿರುವ ಕವಚ ಪ್ರಾಣಿಗಳ ಜೀವಪರ್ಯಂತ ಇರುವುದು ಕಂಡುಬರುತ್ತದೆ. ಆದರೆ ಇದರ ನೊಟೊಕಾರ್ಡಿನ ಮೇಲೆ ಮೃದ್ವಸ್ಥಿಯಿಂದಾದ ನರದ ಕಮಾನುಗಳಿವೆ. ಕೆಲವು ಅಸ್ಥಿಮತ್ಸ್ಯಗಳಲ್ಲಿ ಅಂದರೆ ಆಸಿಪೆನ್‌ಸರ್ ಮೀನಿನಲ್ಲಿ ವಯಸ್ಕ ಜೀವಿಗಳಲ್ಲಿಯೂ ನೊಟೊಕಾರ್ಡ್ ಉಳಿದುಬಂದಿರುವುದು ಕಾಣುತ್ತದೆ. ಇದರ ನೊಟೊಕಾರ್ಡಿನ ಮೇಲೆ ತಂಪುಗಳನ್ನೊಳಗೊಂಡಿರುವ ಕವಚವೂ ಅದರ ಮೇಲೆ ಮೃದ್ವಸ್ಥಿಯಿಂದಾದ ನರದ ಕಮಾನು ಮತ್ತು ರಕ್ತನಾಳದ ಕಮಾನುಗಳೂ ಇವೆ. ಸೈಕ್ಲೊಸ್ಟೊಮುಗಳನ್ನುಳಿದು ಮುಂದುವರಿದಿರುವ ಮತ್ಸ್ಯವರ್ಗದ ಪ್ರಾಣಿಗಳಲ್ಲಿ ನೊಟೊಕಾರ್ಡ್ ಮಾಯವಾಗಿ ಕೋಮಲಾಸ್ಥಿ ಮತ್ತು ನಿಜಾಸ್ಥಿಗಳು ಬೆಳೆದಿರುವುದು ಕಾಣುತ್ತದೆ. ಕಶೇರುಕಗಳ ವಿಕಾಸದ ಹಾದಿಯಲ್ಲಿ ಕೋಮಲಾಸ್ಥಿ ಬೆಳವಣಿಗೆ ಎರಡನೆಯ ಹಂತ ಮತ್ತು ನಿಜಾಸ್ಥಿ ಬೆಳೆವಣಿಗೆ ಮೂರನೆಯ ಹಂತ. ಕೋಮಾಲಸ್ಥಿ ಮೊದಲು ಹುಟ್ಟಿತೋ ಅಥವಾ ನಿಜಾಸ್ಥಿ ಮೊದಲು ಹುಟ್ಟಿತೊ ಎಂಬ ಬಗ್ಗೆ ವಾದ ವಿವಾದಗಳಿವೆ. ಇದಿನ್ನೂ ತೀರ್ಮಾನವಾಗದಿರುವ ವಿಚಾರ.

ಷಾರ್ಕ್ ಮೀನು ರೇಮೀನುಗಳು ಮತ್ತು ಅವುಗಳ ಸಂಬಂಧಿಗಳಲ್ಲಿ ಎಲುಗಟ್ಟು ಕೋಮಲಾಸ್ಥಿಯಿಂದಾಗಿದೆ. ಆದರೆ ಭ್ರೂಣ ಬೆಳವಣಿಗೆಯ ಕಾಲದಲ್ಲಿ ಇವುಗಳಲ್ಲಿಯೂ ನೊಟೊಕಾರ್ಡ್ ಬೆಳೆದುಕೊಳ್ಳುತ್ತದೆ. ಮುಂದೆ ಭ್ರೂಣ ಬೆಳೆದಂತೆ ನೊಟೊಕಾರ್ಡ್ ಮಾಯವಾಗಿ ಅದರ ಸ್ಥಾನವನ್ನು ಕೋಮಲಾಸ್ಥಿ ಆಕ್ರಮಿಸುತ್ತದೆ. ಕೋಮಲಾಸ್ಥಿಯಲ್ಲಿ ಕಾಂಡ್ರಿಸ್ ಎಂಬ ರಾಸಾಯನಿಕವಸ್ತುವಿದೆ. ಅಸ್ಥಿ ಮತ್ಸ್ಯಗಳಲ್ಲಿ ಕಶೇರು ಪೂರ್ಣವಾಗಿ ಮೂಳೆ ಅಥವಾ ನಿಜಾಸ್ಥಿಯಿಂದಲೇ ಆಗಿದೆ. ಇದು ಕೋಮಲಾಸ್ಥಿಗಿಂತ ವಿಭಿನ್ನವಾಗಿದ್ದು ಮೂಳೆ ಸುಣ್ಣ ಮತ್ತು ರಂಜಕದ ಲವಣಗಳನ್ನೊಳಗೊಂಡಿರುತ್ತದೆ. ಇವುಗಳ ರೆಕ್ಕೆಗಳಲ್ಲಿರುವ ರಚನೆಗಳು ಕೂಡ ಮೂಳೆಯಿಂದಲೇ ಆಗಿವೆ. ಮತ್ಸ್ಯವರ್ಗದ ಕಶೇರು ಮಣಿಗಳ ಮೇಲೆ ನರದ ಕಮಾನು ಮತ್ತು ರಕ್ತನಾಳದ ಕಮಾನುಗಳಿರುವುದರಿಂದ ನರಹುರಿ ಮತ್ತು ರಕ್ತನಾಳಗಳಿಗೆ ರಕ್ಷಣೆಯೊದಗುತ್ತದೆ. ಕಮಾನುಗಳು ಒಂದರ ಹಿಂದೆ ಒಂದರಂತೆ ಜೋಡಿಸಿಕೊಂಡ ಒಂದು ನಾಳದಂತೆಯೇ ಇರುವ ಸ್ಥಳಾವಕಾಶಗಳನ್ನು ಕಲ್ಪಿಸಿ ಕೊಡುತ್ತವೆ. ಕಶೇರುವಿನ ಮೇಲೆ ಇರುವ ನಾಳದೊಳಗೆ ನರಹುರಿ ಇದೆ. ಕಶೇರುವಿನ ಕೆಳಗಿರುವ ನಾಳದಲ್ಲಿ ರಕ್ತನಾಳವಿದೆ.

ದ್ವಿಚರಿ ವರ್ಗದ ಪ್ರಾಣಿಗಳ ಎಲುಗಟ್ಟಿನಲ್ಲಿ ನಿಜಾಸ್ಥಿ ಮತ್ತು ಕೋಮಲಾಸ್ಥಿಗಳೆರಡೂ ಇವೆ. ಕಶೇರುಕಗಳಲ್ಲಿ ಕಶೇರುಮಣಿಗಳ ಉಗಮ ಭ್ರೂಣದಲ್ಲಿರುವ ಖಂಡಗಳಿಗನುಸಾರವಾಗಿದೆ. ಕಶೇರುಮಣಿಯ ಪೂರ್ಣ ಬೆಳವಣಿಗೆಯಾದ ಮೇಲೆ ಒಂದು ಕಶೇರುಮಣಿಗೂ ಮತ್ತೊಂದು ಕಶೇರುಮಣಿಗೆ ಸಂಬಂಧ ಕಲ್ಪಿಸಲು ಬೇಕಾದ ರಚನೆಗಳು ಕಶೇರುಮಣಿಯಲ್ಲಿಯೇ ಹುಟ್ಟುತ್ತವೆ. ಕಶೇರುವಿನಲ್ಲಿರುವ ಪ್ರಥಮ ಕಶೇರುಮಣಿಯೊಡನೆ ತಲೆಯ ಬುರುಡೆ ಕೀಲಿಸಿಕೊಳ್ಳುತ್ತದೆ. ಪ್ರಥಮ ಕಶೇರುಮಣಿಗಳ ಹಿಂದಿರುವ ಕಶೇರುಮಣಿಗಳಿಗೆ ಕುತ್ತಿಗೆಯ ಕಶೇರುಮಣಿಗಳೆಂದು ಹೆಸರು. ಇವುಗಳ ಸಂಖ್ಯೆ ಪ್ರತಿವರ್ಗದ ಜೀವಿಗಳಲ್ಲಿ ಬದಲಾಗುತ್ತದೆ. ಸ್ತನಿಗಳಲ್ಲಿ ಸಾಮಾನ್ಯವಾಗಿ 7 ಕುತ್ತಿಗೆಯ ಕಶೇರುಮಣಿಗಳಿವೆ. ಆದರೆ ಇದೇ ವರ್ಗಕ್ಕೆ ಸೇರಿದ ಸ್ಲಾತ್‌ಪ್ರಾಣಿಗಳಲ್ಲಿ ಇವುಗಳ ಸಂಖ್ಯೆ ಬೇರೆಯಲ್ಲ. ಮೂರು ಬೆರಳಿರುವ ಸ್ಲಾತ್‌ಪ್ರಾಣಿಯಲ್ಲಿ ಇವುಗಳ ಸಂಖ್ಯೆ 9 ಅಥವಾ 10. ಒಂದೇ ಬೆರಳಿರುವ ಸ್ಲಾತಿನಲ್ಲಿ 6. ಪಕ್ಷಿಗಳ ಕುತ್ತಿಗೆಯ ಕಶೇರುಮಣಿಗಳಲ್ಲಿಯೂ ಈ ವ್ಯತ್ಯಾಸಗಳನ್ನು ಕಾಣಬಹುದು. ಕುತ್ತಿಗೆಯ ಚಲನೆಗೆ ತಕ್ಕಂತೆ ಇವುಗಳಲ್ಲಿ ಕಶೇರುಮಣಿಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳಿವೆ. ಹಂಸದಲ್ಲಿ 25 ಕಶೇರುಮಣಿಗಳಿವೆ.

ಸರೀಸೃಪಗಳು, ಪಕ್ಷಿಗಳು ಮತ್ತು ಸ್ತನಿಗಳ ಎಲುಗಟ್ಟು ಪೂರ್ಣವಾಗಿ ನಿಜಾಸ್ಥಿಯಿಂದಲೇ ಆಗಿದೆ. ಕೋಮಲಾಸ್ಥಿ ಕೇವಲ ಕೀಲುಗಳಲ್ಲಿ ಹೊರಕಿವಿಯಲ್ಲಿ ಶ್ವಾಸನಾಳ ಮುಂತಾದ ಭಾಗಗಳಿಗೆ ಮೀಸಲಾಗಿದೆ. ಸರೀಸೃಪಗಳಿಂದ ಪ್ರಾರಂಭವಾಗಿ ಸಸ್ತನಿಗಳವರೆಗೆ ಬೆನ್ನೆಲುಬಿನ ಕೆಲವು ಮೂಳೆಗಳಲ್ಲಿ ಬಗ್ಗರಿ ಮೂಳೆಗಳ ಬೆಳವಣಿಗೆಯನ್ನು ಕಾಣಬಹುದು. ಕುತ್ತಿಗೆಯಿಂದ ಕೆಳಗಿರುವ ಭಾಗದಲ್ಲಿರುವ ಕೆಲವು ಕಶೇರುಮಣಿಗಳಿಂದ ಹೊರಟರುವ ಬೆಳವಣಿಗೆಗಳ ಜೊತೆಗೆ ಈ ಬಗ್ಗರಿ ಮೂಳೆಗಳು ಸೇರಿಕೊಂಡಿರುವುದರಿಂದ ಎದೆಯ ಭಾಗಕ್ಕೆ ಪೂರ್ಣ ರಕ್ಷಣೆಯೊದಗುತ್ತದೆ. ಶ್ವಾಸಕೋಶಗಳು ಮತ್ತು ಹೃದಯಕ್ಕೆ ಇವುಗಳಿಂದ ರಕ್ಷಣೆ ಸಿಕ್ಕಿದೆ. ಈ ಬಗ್ಗರಿ ಮೂಳೆಗಳಿಂದ ಉಸಿರಾಟಕ್ಕೂ ಬಹಳ ಸಹಾಯವಾಗಿದೆ.

ಬೆನ್ನುಮೂಳೆಗೆ ಸೊಂಟದ ಮೂಳೆಗಳು, ಕೀಲಿಸಿಕೊಂಡಿವೆ. ಪಕ್ಷಿಗಳಲ್ಲಿ ಸೊಂಟದ ಮೂಳೆಗಳೂ ಸಂಪೂರ್ಣವಾಗಿ ಬೆನ್ನು ಮೂಳೆಯೊಡನೆ ಬೆರೆತುಹೋಗಿ ಸಿನ್‌ಸೇಕ್ರಮ್ ಎಂಬ ಹೊಸಭಾಗವೇ ಆಗಿದೆ. ಸೊಂಟದ ಮೂಳೆಗಳಿಗೆ ಕಾಲುಗಳು ಕೀಲಿಸಿಕೊಂಡಿದೆ. ಕೆಲವು ಸರೀಸೃಪಗಳ ಬಾಲದ ಭಾಗದಲ್ಲಿರುವ ಕಶೇರುಮಣಿಗಳಲ್ಲಿರುವ ರಕ್ತನಾಳದ ಕಮಾನಗಳು ಬೇರ್ಪಟ್ಟಿವೆ. ಈ ಮೂಳೆಗಳಿಗೆ ಚವರಾನ್ ಮೂಳೆಗಳೆಂದು ಹೆಸರು. ಇಂಥವನ್ನು ಮೊಸಳೆಯ ಬಾಲದಲ್ಲಿ ನೋಡಬಹುದು. ಪಕ್ಷಿಗಳಲ್ಲಿ ಬಾಲದ ಕಶೇರುಮಣಿಗಳೆಲ್ಲವೂ ಒಂದು ಗೂಡಿ ಪೈಗೋಸ್ಟೈಲ್ ರಚನೆಯನ್ನು ಕೊಟ್ಟಿವೆ. ಇದು ಬಾಲಕ್ಕೆ ಆಸರೆಯನ್ನೊದಗಿಸುತ್ತದೆ.

ಭುಜದ ಮೂಳೆಗಳು ಕಶೇರುವಿನೊಡನೆ ಕೀಲಿಸಿಕೊಂಡಿರುವುದಿಲ್ಲ. ಬದಲಾಗಿ ಇವು ಎದೆಯ ಮೂಳೆಗಳೊಡನೆ ಸಂಬಂಧ ಕಲ್ಪಿಸಿಕೊಂಡಿವೆ. ಈ ಭುಜದ ಮೂಳೆಗಳಿಗೆ ಕೈಗಳು ಕೀಲಿಸಿಕೊಳ್ಳುತ್ತವೆ. ಪಕ್ಷಿಗಳಲ್ಲಿ ಎದೆಯ ಮೂಳೆ ತ್ರಿಕೋನಾಕೃತಿಯಲ್ಲಿರುವ ಕೀಲ್ ಎಂಬ ಭಾಗವನ್ನು ಬೆಳೆಸಿಕೊಂಡಿವೆ. ಈ ಭಾಗಕ್ಕೆ ಹಾರಲು ಸಹಾಯಕವಾಗಿರುವ ಮಾಂಸಖಂಡಗಳೂ ಅಂಟಿಕೊಂಡಿವೆ.

ಸ್ತನಿಗಳ ಕಶೇರುಮಣಿಗಳ ಮಧ್ಯೆ ಕೋಮಲಾಸ್ಥಿಯಿಂದಾದ ತಟ್ಟಗಳಿವೆ. ಇವುಗಳ ಬಾಲದಲ್ಲಿರುವ ಕಶೇರುಮಣಿಗಳ ಸಂಖ್ಯೆ ವ್ಯತ್ಯಾಸಗೊಳ್ಳುತ್ತದೆ. ಬಾವಲಿಗಳಲ್ಲಿ ಬಾಲದ ಕಶೇರುಮಣಿಯಿಲ್ಲ. ಆದರೆ ಪಂಗೊಲಿನ್ ಪ್ರಾಣಿಯಲ್ಲಿ 49 ಕಶೇರುಮಣಿಗಳಿವೆ. ಹೀಗೆ ಕಶೇರುವಿನಲ್ಲಿರುವ ಮಣಿಗಳ ಸಂಖ್ಯೆ ಕೆಲವು ಪ್ರಭೇದಗಳಲ್ಲಿ ಬದಲಾಗುತ್ತದೆ.

ಸ್ತನಿಗಳ ಎದೆಯ ಮೂಳೆ ನಾನಾ ಭಾಗಗಳಿಂದಾಗಿದೆ. ಇದರಲ್ಲಿ ಪ್ರೀಸ್ಟರ್ನಂ ಮೀಸೊಸ್ಟರ್ನಂ ಕ್ಸಿಫಿಸ್ಟರ್ನಂ ಎಂಬ ಭಾಗಗಳಿವೆ. ಈ ಎದೆಯ ಮೂಳೆಗೆ ಬಗ್ಗರಿ ಮೂಳೆಗಳೂ ಕೀಲಿಸಿಕೊಳ್ಳುತ್ತವೆ. (ಎಲ್.ಎಸ್.ಜಿ.)

**ಎಲುಚಿಕಿತ್ಸೆ:** ಎಲ್ಲ ರೋಗಗಳಿಗೂ ಕೀಲುಗಳಲ್ಲೊ ಅವುಗಳ ಸುತ್ತುಮುತ್ತಲೊ ಏನಾದರೂ ಆಯ ತಪ್ಪಿರುವುದೇ ಕಾರಣವೆಂದುಕೊಂಡು, ಮದ್ದುಗಳ ನೆರವಿಲ್ಲದೆ ಕೇವಲ ಕೈಪಾಟಿಂದ (ಮೆನಿಪ್ಯುಲೇಷನ್) ಸರಿಪಡಿಸುವ ಒಂದು ಬಗೆಯ ಅಮೆರಿಕದ ಚಿಕಿತ್ಸಾಪದ್ಧತಿ (ಆಸ್ಟಿಯೊಪತಿ). ಈ ಕಲ್ಪನೆಗೆ ಮೂಲ ಕಾರಣನಾದ ಆಂಡ್ರೂಥಾಮಸ್ ಸ್ಟಿಲ್ಲನ ಅಭಿಪ್ರಾಯದಲ್ಲಿ ಮದ್ದುಗಳು ವಿಷಕರ, ಅಲ್ಲದೆ ಮೂಳೆ, ಸ್ನಾಯು, ಕೀಲು, ತಂತುಗಟ್ಟು (ಲಿಗಮೆಂಟ್) ಮತ್ತಿತರ ಯಾವುದೇ ಊತಕದಲ್ಲಿ ರೋಗದ ಅಂಗಾಂಶ ಗಾಯ (ಲೀಷನ್) ತೋರಬಹುದು. ಪೆಟ್ಟು, ಗಾಯ, ಒತ್ತಡ, ಸೊಂಕುಗಳಿಂದಲೊ ಇನ್ನೆಲ್ಲೊ ರೋಗವೆದ್ದುದರ ಹಿಮ್ಮರಿಗೆಯಾಗೊ (ರಿಫ್ಲೆಕ್ಸ್‌ಲಿ), ಕೇವಲ ನರಬೇನೆಯ ಪರಿಣಾಮವಾಗೊ ಹೀಗಾಗಬಹುದು. ಇದರಿಂದ, ಒಂದೆಡೆ ಹಿಡಿದುಕೊಂಡಂತೆ ಬಿಗುವಾಗಿ, ಆ ಭಾಗದ ಕೆಲಸ ಕುಂದಿ, ಇಲ್ಲವೇ ಅಕ್ಕಪಕ್ಕಗಳ ಊತಕಗಳಲ್ಲಿ ರಕ್ತದ ಹರಿವು ನಿಧಾನವಾಗಿ, ಆಮ್ಲ ರಕ್ತವಾಗಿ (ಅಸಿಡೇಮಿಯ) ಹತ್ತಿರ ಇರುವ ನರಗಳನ್ನು ಕೆರಳಿಸುವುದು. ಇದರಿಂದಾಗಿ ಆ ನರಗಳು ಹೋಗಿ ಸೇರುವ ದೂರದ ಅಂಗಗಳಿಗೂ ರಕ್ತ ಹರಿವು ತಗ್ಗಿ ತೊಂದರೆಯಾಗುತ್ತದೆ. ಕರುಳುವಾಳುರಿತ (ಅಪೆಂಡಿಸೈಟಿಸ್) ಆಗುವುದು ಒಂದು ಉದಾಹರಣೆ. ಕೀಲುಗಳು ಆಯತಪ್ಪಿದಾಗ (ಸಬ್ ಲಕ್ಸೇಷನ್) ಉಂಟಾಗುವ ಅಂಗಾಂಶಗಾಯಗಳ ದೆಸೆಯಿಂದ ಸೊಂಕುಗಳನ್ನು ಎದುರಿಸಲು ಮೈ ತನ್ನದೇ ಆದ ಜೀವಿವಿಷರೋಧಕಗಳು (ಆಂಟಿಟಾಕ್ಸಿನ್ಸ್) ಮತ್ತು ನಿರೋಧವಸ್ತುಗಳನ್ನು (ಆಂಟಿಬಾಡೀಸ್) ತಯಾರಿಸಿಕೊಳ್ಳುವ ಬಲಕ್ಕೆ ಅಡ್ಡಿಯಾಗುತ್ತದೆ. ಇವೆಲ್ಲವನ್ನೂ ಸರಿಪಡಿಸಬೇಕಾದರೆ ದೇಹವನ್ನು ಸಮಸ್ಥಿತಿಗೆ ತಂದು ಅದು ಮತ್ತೆ ತನ್ನ ಕೆಲಸಗಳನ್ನು ನಿರ್ವಹಿಸುವಂತೆ ಮಾಡಬೇಕು. ಇದು ಬರಿಯ ಕೈಗಳಿಂದ ಕೈಗೊಳ್ಳುವ ಕೈಪಾಟಿನಿಂದ ಸಾಧ್ಯ ಎನ್ನುವುದು ಸ್ಟಿಲ್ಲನ ಮತ (1874).

ಇತ್ತೀಚೆಗೆ ಈ ಚಿಕಿತ್ಸಾ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಬಹುಮಟ್ಟಿಗೆ ಎಲ್ಲ ರೋಗಗಳಿಂದಲೂ ತೇರ್ಗಡೆಯಾಗುವ ಬಲ ಮೈಗೆ ಇದೆಯೆಂದೂ ಭೌತಿಕ, ರಾಸಾಯನಿಕ, ಪೋಷಕ ಅಂಶಗಳು ಆರೋಗ್ಯದ ಮಟ್ಟದ ಮೇಲೆ ಪರಿಣಾಮ ಬೀರುವುವೆಂದೂ ಅನೇಕ ರೋಗಗಳಲ್ಲಿ ಮದ್ದು, ಶಸ್ತ್ರವೈದ್ಯ ಆಗಬೇಕೆಂದೂ ಈ ಪದ್ಧತಿಯವರು ಈಗ ಒಪ್ಪಿಕೊಂಡರೂ ಅವರ ಅಂಗಾಂಶಗಾಯಗಳ ಹುಟ್ಟಿನ ಕಲ್ಪನೆ ಮಾತ್ರ ಬದಲಾಗಿಲ್ಲ. ಇದನ್ನು ಸ್ಟಿಲ್ ಮೊದಲು ಒಪ್ಪಿರಲಿಲ್ಲ. ಬೆನ್ನೆಲುಬುಗಳ ನಡುವಣ ಕೀಲುಗಳ ಅರೆಕೀಲ್ತಪ್ಪಿಕೆಗಳು ಘನದರ್ಶಕ (ಸ್ಟಿರಿಯೊಸ್ಕೋಪಿಕ್) ಎಕ್ಸ್‌ಕಿರಣ ಪರೀಕ್ಷೆಗಳಲ್ಲಿ ಕಂಡರು ಅವು ತೀರ ಸಾಮಾನ್ಯ ಶಸ್ತ್ರಕ್ರಿಯೆಗೆ ತಕ್ಕವಲ್ಲ. ಅವುಗಳಿಂದ ಯಾರೂ ಸಾಯುವುದೂ ಇಲ್ಲ. ಮುಖ್ಯವಾಗಿ ಬೆನ್ನೆಲುಬಿನ ಕೀಲುಗಳಲ್ಲೂ ಅವುಗಳ ಸುತ್ತಲೂ ಅಲ್ಲಲ್ಲಿ ನೋವು, ಕೋಮಲತೆ, ಸ್ನಾಯು ಸೆಳೆತ, ಚಲನೆ ಮಿತಿಗೊಂಡಿರಬಹುದು. ಎಷ್ಟೊ ವೇಳೆ ದೂರದ ಅಂಗಗಳಲ್ಲಿ ಏರುಪೇರು ಮಾಡುವಂತಿದ್ದರೂ ಇವು ಕೇವಲ ರೋಗ ಲಕ್ಷಣಗಳೇ ಹೊರತು, ಇವೇ ರೋಗಗಳಲ್ಲ, ಇನ್ನೆಲ್ಲೂ ಗೊತ್ತಾದ ರೋಗಕಾಣದಿದ್ದರು ಬಹಳ ಮಂದಿಯಲ್ಲಿ ಕೂಡಲೇ ಶಾಶ್ವತ ಅಥವಾ ತಾತ್ಕಾಲಿಕ ಶಮನಕ್ಕಾಗಿ ಬರೀ ಕೈಪಾಟನ್ನೇ ಬಳಸಬಹುದು. ಮಿತಿಮೀರಿ ಚಿಕಿತ್ಸೆ ಮಾಡುವುದು ಬೇಕಿಲ್ಲವಾದರೂ ಕೈಪಾಟು ಕೈಗೊಳ್ಳುವುದೂ ತರವಲ್ಲ. ಮೈಯಲ್ಲಿ ಇನ್ನೆಲ್ಲಾದರೂ ಗೊತ್ತಾದ ರೋಗವಿದ್ದು ಈ ಲಕ್ಷಣಗಳ ಕಂಡುಬಂದರೆ, ಕೈಪಾಟು ಆಗಲೇಬೇಕೆಂದಿಲ್ಲ. ಇದನ್ನು ಮಾಡಿದಾಗಲೂ ಎಂದಿನ ವೈದ್ಯಚಿಕಿತ್ಸೆಯ ವಿಧಾನಗಳ ಜೊತೆಗೆ ಇದು ಇರುವುದೇ ಹೊರತು ಅದರ ಬದಲಾಗಿ ಅಲ್ಲ. ಎಲ್ಲ ರೋಗಗಳೂ ಈ ಪದ್ಧತಿಯಿಂದಲೇ ಖಂಡಿತವಾಗಿ ವಾಸಿಯಾಗುವುವೆಂಬ ಸ್ಟಿಲ್ಲನ ಹಳೆಯ ಕಲ್ಪನೆ ಈಗ ಉಳಿದಿಲ್ಲ.

ಮೊಟ್ಟಮೊದಲು ಸ್ಟಿಲ್ 1874ರ ಜೂನ್ 22ರಲ್ಲಿ ತನ್ನ ಕಲ್ಪನೆಯನ್ನು ಸಾರಿ ಹೇಳಿದರೂ ಅಮೆರಿಕದ ಒಂದು ಎಲುಚಿಕಿತ್ಸೆಯ ಶಾಲೆ ತೆರೆದುದು 1892ರಲ್ಲಿ 1964ರ ಹೊತ್ತಿಗೆ ಇಡೀ ಅಮೆರಿಕದ ಸಂಸ್ಥಾನಗಳಲ್ಲಿ 6 ಶಾಲೆಗಳಿದ್ದವು. ಅಂದಿನ ವೈದ್ಯಶಾಸ್ತ್ರ ಶಾಲೆಗಳ ಹಾಗೇ ಇವೂ ವೈದ್ಯಪಾರಗಳು, ಶಿಕ್ಷಣ, ಪರೀಕ್ಷೆಗಳಲ್ಲಂತೂ ಎಷ್ಟೊ ನಡೆಯದು. ಬ್ರಿಟನಿನಲ್ಲಿ 2 ಶಿಕ್ಷಣ ಕೇಂದ್ರಗಳಿವೆ. ಲಂಡನ್ನಿನ ಎಲುಚಿಕಿತ್ಸೆಯ ಕಾಲೇಜಿನಲ್ಲಿ, ಒಂದು ಕಾಲು ವರ್ಷಗಳ ಶಿಕ್ಷಣಕ್ಕೆ ವೈದ್ಯ ಪದವೀಧರರು ಮಾತ್ರ ಸೇರಬಹುದಾದರೂ ಎಲುಚಿಕಿತ್ಸೆಯ ಬ್ರಿಟಿಷ್ ಶಾಲೆಯಲ್ಲಿ 4–5 ವರ್ಷಗಳ ತರಬೇತಿಗೆ ಬೇರೆಯವರೂ ಸೇರಬಹುದು. ಇವೆರಡರಲ್ಲೂ ಎಲುಚಿಕಿತ್ಸೆಗೆ ಗಮನ ಕೊಡುವುದು ಹೆಚ್ಚು. ಲಂಡನ್ ಶಾಲೆ ಅಮೆರಿಕದ ಎಲುಚಿಕಿತ್ಸೆ ಸಂಘಕ್ಕೆ ಸೇರದೆಂದು ಹೇಳಿಕೊಳ್ಳುತ್ತದೆ. ಇನ್ನೊಂದು ಗ್ರೇಟ್‌ಬ್ರಿಟನ್ನಿನ ಎಲುಚಿಕಿತ್ಸಕಸಂಘದ ಮೇಲ್ವಿಚಾರಣೆಯಲ್ಲಿದೆ. ಎಲುಚಿಕಿತ್ಸಕರ ಒಂದು ಮಂಡಲಿಯೂ ನೊಂದಣಿಯೂ (ರಿಜಿಸ್ಟರ್) ಇವೆ. ಬಹುಪಾಲು ಲಂಡನ್ ಶಾಲೆಯಲ್ಲೇ ಕಲಿತ ಬಹಳ ಮಂದಿ ಎಲುಚಿಕಿತ್ಸಕರು ಫ್ರಾನ್ಸಿನಲ್ಲಿದ್ದಾರೆ. ಹೀಗೆ ಆಸ್ಟ್ರೇಲಿಯ, ನ್ಯೂಜಿಲೆಂಡ್, ವೆಸ್ಟ್ ಇಂಡೀಸ್, ಭಾರತ, ದಕ್ಷಿಣ ಆಫ್ರಿಕಗಳಲ್ಲೂ ಅಲ್ಲಲ್ಲಿ ಈ ಚಿಕಿತ್ಸಾ ವಿಧಾನ ಅನುಸರಣೆಯಲ್ಲಿದೆ. (ಎಂ.ಡಿ.)

**ಎಲುನೇರ್ಪಿಕ ಶಸ್ತ್ರವೈದ್ಯ (ಅಸ್ಥಿ ವಿಜ್ಞಾನ):** ಎಲುಬು, ಕೀಲು, ಅವುಗಳಿಗೆ ಸಂಬಂಧಿಸಿದ ಸ್ನಾಯು ಕಂಡರ ಹುರಿ, ನರ ಮತ್ತು ಇನ್ನಿತರ ಊತಕಗಳ ಸಹಜ ಆರೋಗ್ಯ ಕಾಪಾಡಿಕೊಳ್ಳಲು, ಅವುಗಳ ರಚನೆ ತಿಳಿದು ನಿಜಗೆಲಸಗಳನ್ನು ಅರಿತು ಕೊಳ್ಳುವ ವಿಜ್ಞಾನವೇ ಅಸ್ಥಿವಿಜ್ಞಾನ. ಇಂದಿನ ದಿನಗಳಲ್ಲಿ ಅಸ್ಥಿವಿಜ್ಞಾನವು ಬೃಹತ್ತಾಗಿ ಬೆಳೆದಿದೆ. ವಿಜ್ಞಾನದ ಎಲ್ಲ ಶಾಖೆಗಳು ಬೆಳೆದು ಅಸ್ಥಿ ವಿಜ್ಞಾನ ಬೆಳೆಯಲು ಅನುವು ಮಾಡಿಕೊಟ್ಟಿದೆ. ಅಸ್ಥಿವಿಜ್ಞಾನಕ್ಕೆ ಇಂಗ್ಲಿಷಿನಲ್ಲಿ ಆರ್ಥೋಪೆಡಿಕ್ಸ್ ಎನ್ನುವ ಹೆಸರಿದೆ. ಇದು ಗ್ರೀಕ್ ಭಾಷೆಯಿಂದ ಬಂದಿದ್ದು. ಆರ್ಥೋ ಅಂದರೆ ನೇರ ಮತ್ತು ಪೆಡಿಯಾ ಅಂದರೆ ಮಗು. ಸೊಟ್ಟಗಿರುವ ಮಕ್ಕಳನ್ನು ನೇರಗೊಳಿಸುವ ವಿಜ್ಞಾನವೆಂದು ಆರ್ಥೋಪೆಡಿಕ್ಸ್ ಆಯಿತು. ಆದರೆ ಬರೀ ಮಕ್ಕಳನ್ನಷ್ಟೇ ಅಲ್ಲ ಎಲ್ಲ ವಯಸ್ಸಿನವರ ಮೂಳೆಯ ರೋಗಗಳನ್ನು, ನ್ಯೂನತೆಯನ್ನು ಸರಿಪಡಿಸುವುದು ಅಸ್ಥಿಶಸ್ತ್ರಜ್ಞನ ಕೆಲಸ.

ಪ್ಯಾರಿಸ್ ವಿಶ್ವವಿದ್ಯಾಲಯದ ವೈದ್ಯ ವಿಜ್ಞಾನ ಪ್ರಾಧ್ಯಾಪಕ ನಿಕೊಲಾಸ್ ಆಂಡ್ರೆ 1241 ರಲ್ಲಿ ಅಸ್ಥಿವಿಭಾಗವನ್ನು ಆರ್ಥೋಪೆಡಿಕ್ಸ್ ಅಂತಕರೆದದ್ದು ಇಂದಿಗೂ ಬಳಕೆಯಲ್ಲಿ ಉಳಿದಿದೆ. 18ನೆಯ ಶತಮಾನದಲ್ಲಿ ಮಕ್ಕಳ ಕೈಕಾಲುಗಳ ಸೊಟ್ಟು, ಊನಗಳನ್ನು ಸರಿಪಡಿಸಲೋಸುಲು ಸ್ವಿಟ್ಜರ್ಲೆಂಡಿನಲ್ಲಿ ಒಂದು ಸಂಸ್ಥೆ ಪ್ರಾರಂಭಿಸಲಾಯಿತು. ವಿಲಿಯಂ ಹಂಟರ, ಅವರ ತಮ್ಮ ಜಾನ ಹಂಟರ ಇರ್ವರೂ ಮೂಳೆಗಳ, ಕೀಲುಗಳ ರಚನೆ, ಕಾರ್ಯ, ಬೆಳವಣಿಗೆಗಳ ಬಗ್ಗೆ ವಿವರವಾದ ಅಭ್ಯಾಸ ಮಾಡಿ ವಿವರಿಸಿದ್ದಾರೆ. ಜಾನ ಹಿಲ್ಟನ್ (1804–1878) ಅಸ್ಥಿ ವಿಜ್ಞಾನದ ಪುಸ್ತಕ ಬರೆದವರಲ್ಲಿ ಪ್ರಮುಖ. ಚಿಕಿತ್ಸೆಯಲ್ಲಿ ಅಂಗಭಾಗದ ವಿಶ್ರಾಂತಿಯ ಮಹತ್ವ ಇದರಲ್ಲಿ ತಿಳಿಸಿದೆ. ಜರ್ಮನಿಯ ಸ್ಟ್ರೋಮೆಯರ (1804–1876) ಹೊರಕಾರಣದ ಕೀಲುಗಟ್ಟುವಿಕೆ ನಿವಾರಿಸಲು ಕಂಡರ ಕೋಯ್ಯಿಳಿಕೆ (ಟಿನಟೊಮಿ) ವಿಧಾನ ಜಾರಿಗೆ ತಂದನು. ಈಗಲೂ ಮುರಿದ ಕಾಲಿನ ಚಿಕಿತ್ಸೆಯಲ್ಲಿ ಬಳಸುವ ಸಳಾಕೆಯ ದಬ್ಬೆಯನ್ನು "ಹಗ್ ಒವೆನ್‌ಥಾಮಸ್" ಕಂಡು ಹಿಡಿದು ಬಳಸಿದ ಕೀರ್ತಿಗೆ ಭಾಜನ ನಾಗಿದ್ದಾನೆ. ಅಸ್ಥಿವಿಜ್ಞಾನಕ್ಕೆ ವೈಜ್ಞಾನಿಕ ತಳಹದಿ ನೀಡಿದವರಲ್ಲಿ ಥಾಮಸ್ ಮೊದಲಿಗ. ನಂತರ ಸರ್ ರಾಬರ್ಟ ಜೋನ್ಸ್ (1858–1933) ಸಾಧನೆಗಳು ಭದ್ರ ಅಡಿಪಾಯ ಒದಗಿಸಿತು. ಮೊದಲನೆ ಮತ್ತು ಎರಡನೆ ಮಹಾಯುದ್ಧಗಳಲ್ಲಿ ಸಂಭವಿಸಿದ ಭಯಾನಕ ಮನ ಕಲಕುವ ಘೋರಗಾಯಗಳನ್ನು ಉಪಚರಿಸುವಾಗ ವೈದ್ಯರಿಗೆ ಹೊಸ ಹೊಸ ಚಿಕಿತ್ಸೆ ನೀಡುವ ಮಾರ್ಗೋಪಾಯಗಳು ತೆರೆದವು. ಅದರ ಸದುಪಯೋಗದಿಂದಾಗಿ ಇಂದು ಅಸ್ಥಿ ವಿಜ್ಞಾನ, ವೈದ್ಯ ವಿಜ್ಞಾನ ಕ್ಷೇತ್ರದಲ್ಲಿ ವಿಭಾಗವಾಗಿ ಬೆಳೆಯಲು ಸಾಧ್ಯವಾಗಿದೆ.

ಗಾಯಗಳ ಚಿಕಿತ್ಸೆ: ಎಲುಬು ಮುರಿದ ಗಾಯಗಳಲ್ಲಿ ಮುಖ್ಯವಾಗಿ ಎರಡು ವಿಧಗಳು ಒಂದು ಮುಚ್ಚಿದ ಮುರಿತ; ಇದರಲ್ಲಿ ಚರ್ಮಕ್ಕೆ ಗಾಯವಾಗಿರುವುದಿಲ್ಲ. ಇನ್ನೊಂದು ತೆರೆದ ಮುರಿತ; ಇದರಲ್ಲಿ ಚರ್ಮಕ್ಕೆಗಾಯವಾಗಿ, ಮುರಿದೆಲುಗಳ ತುದಿಗಳು ಹೊರಭಾಗಕ್ಕೆ ಸಂಪರ್ಕ ಪಡೆಯುತ್ತವೆ. ಮುಚ್ಚಿದ ಮುರಿತಕ್ಕೆ ಸರಳ ಮುರಿತವೆಂದೂ ಕರೆಯುತ್ತಾರೆ. ಕಾರಣ ಅದರ ಚಿಕಿತ್ಸೆ ಸರಳ. ಇಲ್ಲಿ ಶಸ್ತ್ರಕ್ರಿಯೆ ಅಪರೂಪಕ್ಕೆ ಬೇಕಾಗುತ್ತದೆ. ಮುರಿದು ಸರಿದದ್ದನ್ನು ಅರಿವಳಿಕೆಯ ಸಹಾಯದಿಂದ ಸರಿ ಕೂಡಿಸುತ್ತಾರೆ. ನಂತರ ಅದು ಮತ್ತೆ ಸರಿಯದಂತೆ ಗಚ್ಚಿನ ದಬ್ಬೆ ಇಲ್ಲವೆ ಅಚ್ಚಿನಲ್ಲಿ ಹಿಡಿದಿಡುತ್ತಾರೆ. ಎಲುವು ಕೂಡಿಕೊಳ್ಳಲು ಕೆಲವು ವಾರಗಳೇ ಬೇಕಾಗುತ್ತದೆ.

ತೆರೆದ ಮುರಿತದಲ್ಲಿ ಚರ್ಮಕ್ಕೆ ಗಾಯವಾಗಿ ಬಾಹ್ಯ ಸಂಪರ್ಕ ಹೊಂದಿರುವುದರಿಂದ ಸೋಂಕು ತಗಲುವ ಸಾಧ್ಯತೆಗಳಿರುತ್ತವೆ. ಸೋಂಕು ತಗುಲದಂತೆ ಗಾಯ ಮಾಯಬೇಕು. ಅದೇ ಸಮಯದಲ್ಲಿ ಮುರಿದೆಲುಬು ಸರಿಕೂಡಿಸಿ ಹಿಡಿದಿಟ್ಟು ಎಲುಬು ಕೂಡಿಕೊಳ್ಳಲು ಅನುವು ಮಾಡಿ ಕೊಡಬೇಕು. ಇದು ಸರಳವಲ್ಲ. ಶಸ್ತ್ರಕ್ರಿಯೆ ಬೇಕಾಗುತ್ತದೆ. ಸ್ವಚ್ಛತೆ, ರೋಗಾಣು ರಹಿತತೆ, ಜೀವಿರೋಧಕ ಔಷಧ, ಸಕಲ ಸೌಕರ್ಯಯುಕ್ತ ಶಸ್ತ್ರಕ್ರಿಯಾ ಮಂದಿರ, ಜೀವಕ್ಕಪಾಯವಾಗದ ಅರಿವಳಿಕೆ ನುರಿತ ದಾದಿಯರು ಕಲಾತ್ಮಕವಾಗಿ ಶಸ್ತ್ರ ಕ್ರಿಯಾ ಪರಿಣಿತ ವೈದ್ಯರುಗಳೆಲ್ಲ ಲಭ್ಯವಿದ್ದಾಗಲೂ ತೆರೆದ ಮುರಿತದ ಚಿಕಿತ್ಸೆ ಕಷ್ಟವೆನಿಸಬಹುದು. ಆದರೆ ಅಂದಿನ ದಿನಗಳನ್ನು ನೆನೆಸಿಕೊಂಡರೆ ಇಂದು ಸಾಧಿಸಿದ್ದು ಬಹಳವಿದೆ.

ಎಲುಬು ಮುರಿದು ಮುರಿದೆಲುಬು ಸರಿದಾಗ ಅವುಗಳನ್ನು ಸರಿಕೂಡಿಸಬೇಕು. ಇದನ್ನು ಅರಿವಳಿಕೆಯಲ್ಲಿ ಸಹಾಯಕರ ಸಹಯೋಗದೊಂದಿಗೆ ಸಾಧಿಸಬೇಕಾಗುತ್ತದೆ. ಇಲ್ಲಿ ಎಲುಬುಗಳು ನೇರವಾಗಿ ಕಾಣುವುದಿಲ್ಲ ಚರ್ಮ, ಸ್ನಾಯು, ಕಂಡರಗಳ ಅಡಿಯಲ್ಲಿರುವ ಮುರಿದ ಮೂಳೆಯ ತುಂಡುಗಳ ಚಿತ್ರ ಎಕ್ಸರೇ ಚಿತ್ರದಲ್ಲಿ ಕಂಡು, ಕೈಯಿಂದ ನೇವರಿಸುತ್ತ ಅಂದಾಜಿನ ಮೇಲೆ ಸರಿಸುತ್ತ ಸರಿಕೂಡಿಸಬೇಕಾಗುತ್ತದೆ. ಒಂದು ಸಮಯ ಇಂತಹ ಕೂಡಿಸುವ ಪದ್ಧತಿಯಿಂದ ಸರಿಪಡಿಸಲು ಸಾಧ್ಯವಾಗದಿದ್ದರೆ ಶಸ್ತ್ರಕ್ರಿಯೆ ಮಾಡಿ ಮುರಿದೆಲುವುಗಳನ್ನು ಕಣ್ಣಾರೆಕಂಡು, ಕೈಯಿಂದ (ಸಾಧನಗಳನ್ನು ಬಳಸಿ) ಸರಿ ಕೂಡಿಸಬೇಕಾಗುತ್ತದೆ. ಹೀಗೆ ಸರಿಕೂಡಿಸಿದ್ದನ್ನು ಮತ್ತೇ ಜಾರದಂತೆ ಒಳ ಜೋಡಣೆಯಿಂದ ಹಿಡಿದಿಡಬೇಕಾಗುತ್ತದೆ. ಒಳ ಜೋಡಣೆಗಾಗಿ ಅನೇಕ ವಿವಿಧ ಸಾಧನಗಳಿವೆ. ಒಳೆಲುಮಾಳೆ, ತೂತುತಟಕ ತಿರುವುಮೊಳೆ, ತಂತಿ, ಒಳೆಲುಮೊಳೆ ಒಳಹಿಡಿತ (ಇಂಟರ್‌ಲಾಕಿಂಗ್ ನೇಲ್) ಗಳನ್ನು ಬಳಸಬಹುದು. ಲೋಹದ ಈ ಸಾಧನಗಳು 'ಜಡ' ಗುಣಹೊಂದಿದ್ದು ತುಕ್ಕು ಹಿಡಿಯುವುದಿಲ್ಲ, ವಿದ್ಯುತ್ ಚೋದನೆಗೆ ಪ್ರತಿಕ್ರಿಯಿಸುವುದಿಲ್ಲ ಮತ್ತು ಸೋಂಕಿಗೆ ಕಾರಣವಾಗುವುದಿಲ್ಲ.

ಕೆಲವೊಮ್ಮೆ ಒಳ ಜೋಡಣೆ ಮಾಡುವುದು ಹಿತಕರವೆನಿಸುವುದಿಲ್ಲ. ಆಗ ಮುರಿತದಿಂದ ಸ್ವಲ್ಪ ಕೆಳಗೆ ಹಾಗೂ ಮೇಲೆ ಎರಡೆರಡು ಉದ್ದುದ್ದ ಮೊಳೆಗಳನ್ನು ಎಲುಬಿನೊಳಗಿಂದ ತೂರಿಸಿ ಅವುಗಳನ್ನು ಹೊರಭಾಗದಲ್ಲಿ ದೃಢವಾದ ಸಲಕರಣೆಗಳಿಂದ ಹಿಡಿದಿಡುವುದಿದೆ. ಹೀಗೆ ಹಿಡಿದಿಟ್ಟರೆ ಸರಿ ಕೂಡಿಸಿದೆಲುಬು ಸರಿಯುವುದಿಲ್ಲ ಮತ್ತು ಚರ್ಮದ ಗಾಯಕ್ಕೆ ಪಟ್ಟಿ ಮಾಡಲು ಸರಳವಾಗುತ್ತದೆ. ಇದಕ್ಕೆ ಹೊರ ಹಿಡಿತವೆನ್ನುತ್ತಾರೆ. ಒಳಹಿಡಿತ ಇಲ್ಲವೆ ಹೊರಹಿಡಿತದಿಂದಾಗಿ ಚಿಕಿತ್ಸೆಗೊಳಪಟ್ಟ ವ್ಯಕ್ತಿ ತನ್ನ ಗಾಯದ ಅಂಗವನ್ನು ಕೂಡಲೆ ಅಲುಗಾಡಿಸುತ್ತಿರಲು ಸಾಧ್ಯವಾಗುತ್ತದೆ, ಸಹಾಯದಿಂದ ನಡೆದಾಡಲು ಬರುತ್ತದೆ. ಪ್ಲಾಸ್ಟರ್ ಅಚ್ಚಿದಲ್ಲಿ ವಾರ, ತಿಂಗಳುಗಟ್ಟಲೆ ಕಾಲ ಕಳೆಯುವುದು ಇಲ್ಲವಾಗುತ್ತದೆ. ಹೀಗೆ ಗಾಯಗಳ, ಮುರಿತಗಳ ಮತ್ತು ಕೀಲತಪ್ಪಿಕೆಗಳ ಚಿಕಿತ್ಸೆಯಲ್ಲಿ ಅಸ್ಥಿ ವಿಜ್ಞಾನ ವೈಜ್ಞಾನಿಕವಾಗಿ ಬಹಳ ಬೆಳೆದಿದೆ ಹಾಗೂ ಉತ್ತಮ ಫಲನೀಡುತ್ತಿದೆ.

ವಯಸ್ಸಾದ ಹಿರಿಯರ ಎಲುಬುಗಳು ಮೆತ್ತಗಾಗಿರುವುದರಿಂದ ಸ್ವಲ್ಪ ಪ್ರಮಾಣದ ಪೆಟ್ಟಿನಿಂದಾಗಿ ಮುರಿಯುತ್ತವೆ. ಇವರ ತೊಡೆಯೆಲುಬು ಕತ್ತು (ಫಿಮೋರಲ್ ನೆಕ್) ಮುರಿಯುವುದು ಬಹಳ ಸಾಮಾನ್ಯ. ತೊಡೆಯೆಲಬು ಕತ್ತು ಮುರಿದರೆ ನಡೆಯಲು ಆಗುವುದಿಲ್ಲ. ಬಿದ್ದಲ್ಲೇ ಬಿದ್ದಿರಬೇಕಾಗಿರುತ್ತದೆ. ಈ ಮುರಿತ ಸರಿ ಹೊಂದುವುದು ಕಷ್ಟ ಸಾಧ್ಯ. ಹೀಗಾಗಿ ಜೀವನದ ಕೊನೆಯವರೆಗೂ ಅನುಭವಿಸುವುದು ಅನಿವಾರ್ಯವಾಗಿತ್ತು. ಆದರೆ ವೈಜ್ಞಾನಿಕ ಪ್ರಗತಿಯಿಂದ ಇಂತವರ ತೊಡೆಯಲು ಕತ್ತನ್ನು ಕೊಯ್ತೆಗೆದು ಅದನ್ನು ಉಕ್ಕಿನಿಂದ ತಯಾರಿಸಿದ ತದ್ರೂಪ ಕತ್ತನ್ನು ಅಳವಡಿಸುವ ಶಸ್ತ್ರ ಕ್ರಿಯೆ ಕೈಕೊಂಡರೆ ವ್ಯಕ್ತಿ ಮೂರನೇ ದಿನಕ್ಕೆ ಎದ್ದು ಓಡಾಡಲು ಸಾಧ್ಯವಾಗುತ್ತದೆ.

**ಕೀಲು ರೋಗಗಳಲ್ಲಿ :** ರುಮಟಾಯ್ಡ್ ಕೀಲುರಿತದಿಂದ ಇಲ್ಲವೆ ಮುಪ್ಪಿನಿಂದಾಗಿ ಪಡೆವ ಎಲುಗೀಲುರಿತದಲ್ಲಿ ಕೀಲಿನ ಎಲುಬುಗಳು ಸವೆದು ನೋವಾಗುತ್ತದೆ. ಕೀಲು ಅಂದಗೆಡುತ್ತದೆ. ಮಂಡಿಕೀಲಿನಲ್ಲಿ ಇಲ್ಲವೆ ಚಪ್ಪೆಕೀಲಿನಲ್ಲಿ ಇದು ಉಂಟಾದರೆ ಕಂಡರೆ ಕೂಡಲು, ಏಳಲು, ನಡೆಯಲು ಬಹಳ ತೊಂದರೆಯಾಗುತ್ತವೆ. ಕೀಲುಗಟ್ಟುವ ಶಸ್ತ್ರಕ್ರಿಯೆಯಿಂದ ಕೀಲಿನ ಚಲನೆ ಇಲ್ಲವಾಗಿ ದಿನದ ಆಗುಹೋಗುಗಳು ಕಷ್ಟದಾಯಕವಾಗುತ್ತದೆ. ಆದರೆ ಕೃತಕ ಕೀಲು ಅಳವಡಿಸುವುದರಿಂದಾಗಿ ವ್ಯಕ್ತಿ ನೋವಿಲ್ಲದ ಕೀಲು, ಮತ್ತು ಚಲನಾ ಸಹಿತದ ಬದುಕು ಬಾಳುವಂತಾಗಿದೆ. ಚಪ್ಪೆ ಕೀಲಿನಲ್ಲಿ ಮತ್ತು ಮಂಡಿ ಕೀಲಿನಲ್ಲಿ ಪೂರ್ಣ ಕೃತಕ ಕೀಲು (ಟೋಟಲ್ ರಿಪ್ಲೇಸ್‌ಮೆಂಟ್ ಆಫ್ ಜಾಯಿಂಟ್) ಜೋಡಿಸುದನ್ನು ಸಾಮಾನ್ಯವಾಗಿ ಕಾಣುತ್ತಿದ್ದೇವೆ. ಆದರೆ ಉಳಿದ ಕೀಲುಗಳಲ್ಲಿ ಇದರ ಬಳಕೆಯ ಪ್ರಯೋಗ ನಡೆದಿದೆ.

ಸೋಂಕುರೋಗಗಳು ಕೀಲನ್ನಾವರಿಸಿದರೆ ಕೀಲು ಪೂರ್ಣ ಹಾಳಾಗುತಿತ್ತು ಆದರೆ ಹೊಸ ಹೊಸ ಪ್ರಬಲ ಜೀವಿರೋಧಕ ಔಷಧಗಳ ಸಂಶೋಧನೆ ಮತ್ತು ಬಳಕೆಯಿಂದಾಗಿ ಕೀಲು ಕೀವಿನಿಂದ ಹಾಳಾಗುವುದು ತಪ್ಪಿದೆ. ಹಾಗೆ ಒಂದು ಸಮಯ ಹಾಳಾದರೆ ನೋವು ಇಲ್ಲದಂತೆ ಮಾಡಲು ಕೀಲುಗಟ್ಟುವ ಶಸ್ತ್ರಕ್ರಿಯೆ ಕೈಕೊಳ್ಳಬಹುದು. ಇಲ್ಲವೆ ಪೂರ್ಣ ಕೃತಕ ಕೀಲು ಜೋಡಣೆ ಮಾಡಬಹುದು.

ಕೀಲುದರ್ಶಕ : ಉದರದೊಳಗೆ ನಳಿಕೆತೂರಿಸಿ ಅದರ ಮೂಲಕ ಸಂತಾನ ಹರಣ ಶಸ್ತ್ರಕ್ರಿಯೆ, ಮಾಡುವುದರಿಂದ ಪ್ರಾರಂಭವಾದ ಉದರದರ್ಶಕ ವಿಧವ ಹೊಟ್ಟೆಯೊಳಡಗಿದ ಅನೇಕ ರೋಗಗಳನ್ನು ಪತ್ತೆ ಹಚ್ಚಿ ಶಸ್ತ್ರ ಕ್ರಿಯಾಚಿಕಿತ್ಸೆ ಮಾಡುವಲ್ಲಿ ಯಶಸ್ಸು ಪಡೆದಿದೆ. ಅಂತಹದೇ ಯಂತ್ರ ಸಹಾಯದಿಂದ ಕೀಲೊಳಗೆ ನಳಿಕೆತೂರಿಸಿ ಅದರ ಮೂಲಕ ಕೀಲೊಳಗಿನ ಎಲ್ಲ ಭಾಗಗಳನ್ನೂ ವೀಕ್ಷಿಸಿ ದೋಷ ಕಂಡು ಅದನ್ನು ಸರಿಪಡಿಸಲು ಸಾಧ್ಯವಾಗಿದೆ. ಮುಖ್ಯವಾಗಿ ಮಂಡಿ ಕೀಲಿನಲ್ಲಿ ಅರ್ಧ ಚಂದ್ರಾಕಾರದ ಮೆಲ್ಲೆಲುವಿನ ತಟ್ಟೆಗಳ ಹರಿತ; ಹಿಂದು ಮುಂದಿನ ಅಡ್ಡಡ್ಡ ಹುರಿಗಳಗಾಯ; ಕೀಲೊಳುಪರೆಯ ರೋಗ; ಮೆಲ್ಲೆಲುವಿನ ನ್ಯೂನತೆ ಸರಿಪಡಿಸಲು ಕೀಲುದರ್ಶಕ ಶಸ್ತ್ರಕ್ರಿಯೆ ಅತ್ಯಂತ ಫಲಕಾರಿಯಾಗಿದೆ. ಸಾದಾ ಶಸ್ತ್ರಕ್ರಿಯೆಯಲ್ಲಿ ಹಲವಾರು ವಾರಗಳಷ್ಟು ವಿಶ್ರಾಂತಿ ಬೇಕಾಗುತಿತ್ತು. ಆದರೆ ಕೀಲುದರ್ಶಕದ ಮೂಲಕ ಶಸ್ತ್ರಕ್ರಿಯೆ ಮಾಡಿಸಿಕೊಂಡ ಮರುದಿವಸದಿಂದಲೇ ವ್ಯಕ್ತಿ ಓಡಾಡುತ್ತಿರಲು ಸಾಧ್ಯವಿದೆ.

ಸಿ–ತೋಳಿನ ವಿಶಾಲದರ್ಶಕ (ಚಿತ್ರ – 6) ಇಂಗ್ಲಿಷ್ ಅಕ್ಷರ ಸಿ ನಂತೆ ತೋಳು ಹೊಂದಿದ ಈ ವಿಶಿಷ್ಟ ಎಕ್ಸ್‌ಕಿರಣಗಳ ಯಂತ್ರದಿಂದ ತೆಗೆದ ಚಿತ್ರವನ್ನು ಮಗ್ಗುಲಿನಲ್ಲಿರುವ ದೂರದರ್ಶನದ ಪರದೆಯ ಮೇಲೆ ಕಾಣಬಹುದು. ಅಪ್ಪಿಕೊಳ್ಳುವಂಥ ತೋಳಿರುವುದ ರಿಂದ ಯಾವುದೇ ಅಂಗ ಭಾಗವನ್ನು ಅಲುಗಾಡಿಸದೆ ಯಂತ್ರವನ್ನು ತಿರುಗಿಸುತ್ತ ನೇರ ಹಾಗೂ ಮಗ್ಗುಲ ಚಿತ್ರಗಳನ್ನು ಕಾಣಬಹುದು. ಇದರಿಂದಾಗಿ ಎಲುಬು ಮುರಿತಗಳ ಚಿಕಿತ್ಸೆ ಬಹಳ ಸರಳವಾಗಿದೆ. ಚರ್ಮ ಕೊಯ್ಯದೆ ಅತ್ಯಲ್ಪ ಚಿಕ್ಕಗಾಯದ ಮೂಲಕ ಮುರಿದೆಲುವನ್ನು ಸರಿಕೂಡಿಸಿ, ಕೂಡಿಸಿದ್ದನ್ನು ಖಚಿತ ಪಡಿಸಿಕೊಂಡು ಒಳಹಿಡಿತ ಸಾಧಿಸಲು ಸಾಧ್ಯವಾದುದರಿಂದ ಅತ್ಯಂತ ಭಯಾನಕ ವೆನಿಸುವ ತೊಡೆ ಎಲುಬು ಮುರಿತದ ರೋಗಿ ಸಹ ಅಲ್ಪ ಸ್ವಲ್ಪ ಸಹಾಯದಿಂದ ಕೂಡಲೇ ನಡೆದಾಡಲು ಸಾಧ್ಯವಾಗಿದೆ. ಆಸ್ಪತ್ರೆಯಲ್ಲಿ ಕಳೆಯುವ ದಿನಗಳು; ನೋವಿನಿಂದ ಬಳಲುವ ಸಮಯ, ಮತ್ತು ಒಟ್ಟು ಖರ್ಚು ಕಡಿಮೆಯಾಗಿ; ದೈಹಿಕವಾಗಿ ಬೇಗನೇ ಚೇತರಿಸಿಕೊಂಡು ಮಾನಸಿಕ ಉಲ್ಲಾಸದಿಂದಿರಲು ಇಂದಿನ ವೈಜ್ಞಾನಿಕ ಬೆಳವಣಿಗೆಯು ಸಹಾಯಕಾರಿ ಯಾಗಿದೆ. ಬೆನ್ನೆಲುಬಿನ ತಟ್ಟೆಯ ಸರಿತದಂತಹ ಸಮಸ್ಯೆಯನ್ನು ನಳಿಕೆಯ ಮುಖಾಂತರ ಶಸ್ತ್ರಕ್ರಿಯೆ ಕೈಕೊಂಡು ಅತ್ಯಂತ ಹರ್ಷದಾಯಕ ಫಲ ಪಡೆಯಲು ಸಾಧ್ಯವಾಗಿದೆ.

ಇವುಗಳಲ್ಲದೆ ಸಂಜಾತ ವಿಕಲತೆಗಳಾದ ಚಪ್ಪೆಕೀಲುತಪ್ಪಿಕೆ ; ಲಟ್ಟಪಾದಗಳನ್ನು ಅಸ್ಥಿವಿಜ್ಞಾನಿತಜ್ಞರು ಶಸ್ತ್ರಕ್ರಿಯೆ ಇಲ್ಲದೆಯೂ ಇಲ್ಲವೆ ಶಸ್ತ್ರಕ್ರಿಯೆ ಮಾಡಿ ಸರಿಪಡಿಸುವಲ್ಲಿ ಯಶಸ್ಸು ಸಾಧಿಸಿದ್ದಾರೆ.

ಎಲುಬಿನ ಕಸಿ ಅಥವಾ ನಾಟಿ : ಕೆಲವು ಸಂದರ್ಭಗಳಲ್ಲಿ ಎಲುಬು ಬೆಳೆಯಲು ಪ್ರೇರಣೆ ಬೇಕಾಗುತ್ತದೆ. ಅದು ಎಲುಬಿನಿಂದಲೇ ಸಿಗುತ್ತದೆ. ಅದನ್ನು ಎಲುಬುನಾಟಿಯ ಮೂಲಕ ಪಡೆಯಬಹುದು. ಎಲುಬಿನೊಳಗಿರುವ ಪೊಳ್ಳು ತುಂಬಲು, ಯಾವುದೋ ಕಾರಣಕ್ಕಾಗಿ ಕೊಯ್ತೆಗೆದ ಎಲುಬಿನ ಭಾಗದಲ್ಲಿ ಬದಲಿಮಾಡುವದಕ್ಕಾಗಿಯೋ ಎಲುಬಿನ ಕಸಿ ಮಾಡಬೇಕಾಗುತ್ತದೆ. ಅದೇ ವ್ಯಕ್ತಿಯ ಇನ್ನೊಂದು ಭಾಗದಿಂದ ಪಡೆದ ಎಲುಬಿನ ನಾಟಿ ಅತ್ಯಂತ ಶ್ರೇಷ್ಠ ಆದರೆ ಹೆಚ್ಚಿನ ಪ್ರಮಾಣದಲ್ಲಿ ನಾಟಿ ಎಲುಬು ಬೇಕಾದರೆ ಇನ್ನೊಬ್ಬರ ಎಲುಬನ್ನೇ ಪಡೆಯಬೇಕಾಗುತ್ತದೆ. ಹೀಗಾಗಿ ಎಲುಬಿನ ಬ್ಯಾಂಕ್ ಪ್ರಾರಂಭವಾಯಿತು. ಬೇರೆಯವರಿಂದ ಪಡೆದ ಎಲುಬುಗಳನ್ನು ವಿಕಿರಣತೆಗೊಳಪಡಿಸಿ, ಕೆಡದಂತೆ ಅತಿಶೀತದಲ್ಲಿ ಸಂಸ್ಕರಿಸಿ, ಕೆಡದಂತೆ ಶೇಖರಿಸಿಡುತ್ತಾರೆ. ಇಂತಹವಿಧಾನಗಳನ್ನು ಸಂದರ್ಭಾನುಸಾರ ಬಳಸುತ್ತಾರೆ ರಕ್ತದ ಬ್ಯಾಂಕ್, ವೀರ್ಯ ಬ್ಯಾಂಕ್, ಕಣ್ಣಿನ ಬ್ಯಾಂಕ್‌ಗಳಂತೆ ಎಲುಬಿನ ಬ್ಯಾಂಕ್ ಅಸ್ಥಿ ತಜ್ಞ ಕಾರ್ಯ ನಿರ್ವಹಿಸುವಲ್ಲಿ ಬಹಳ ಸಹಾಯಕವಾಗಿದೆ. ರೋಗಿಗಳಿಗೆ ವರದಾನವಾಗಿದೆ. (ಎಸ್.ಎಸ್.ಪಿ)

**ಎಲುಬಿನ ರೋಗಗಳು, ಗಾಯಗಳು:** ಎಲುಬಿನ ರೋಗಗಳು ಅನೇಕ ರೋಗದ ಕಾರಣಗಳೂ ಅನೇಕಾನೇಕ. ಆನುವಂಶಿಕ, ಸಂಜಾತ, ಸೋಂಕು, ಅಪೌಷ್ಠಿಕತೆ, ಗಂತಿಗಳು ಎಲುಬಿನ ರೋಗದ ಕಾರಣಗಳಾಗಬಹುದು. ಕೆಲವು ರೋಗಗಳನ್ನು ತಡೆಗಟ್ಟಬಹುದು, ಕೆಲವುಗಳನ್ನು ಚಿಕಿತ್ಸೆಯಿಂದ ಗುಣಪಡಿಸಬಹುದು. ಕೆಲವು ರೋಗಗಳು ಇಲ್ಲಿವರೆಗೆ ವಿಜ್ಞಾನಿಗಳ, ವೈದ್ಯರ ನಿಯಂತ್ರಣಕ್ಕೆ ಬಂದಿಲ್ಲ. ಎಲುಬುಗಳು ರೋಗಕ್ಕೆ ತುತ್ತಾದಾಗ ವಿಕಲತೆ ಉಂಟಾಗುತ್ತದೆ. ವಿಕಲತೆ ಎದ್ದು ಕಾಣುವಂತಾದರೆ ಅಂತಹ ವ್ಯಕ್ತಿಗಳ ದೈಹಿಕ ಸಾಮರ್ಥ್ಯ ಕಡಿಮೆಯಾಗುತ್ತದೆ. ಇವರು ಸಹಜವಾಗಿಯೇ ಮಾನಸಿಕ ಗೊಂದಲಕ್ಕೊಳಗಾಗುತ್ತಾರೆ.

ಆನುವಂಶಿಕವಾಗಿ ಕಾಣುವ ಹಲವಾರು ರೋಗಗಳು ಎಲುಬುಗಳಲ್ಲಿ ನ್ಯೂನತೆಯುಂಟು ಮಾಡಿ ವಿಕಲತೆಗೆ ಕಾರಣವಾಗುತ್ತವೆ. ಕೆಲವು ರೋಗಗಳು ಜನನದೊಂದಿಗೆ ಕಂಡರೆ ಕೆಲವು ರೋಗಗಳು ಮೂರು, ನಾಲ್ಕರ ದಶಕದಲ್ಲಿ ಹೊರಬೀಳುತ್ತವೆ. ಲಟ್ಟಪಾದ, ಚಪ್ಪೆಕೀಲತಪ್ಪಿಕೆ, ಎಲುಜನಕ ನ್ಯೂನತೆಗಳು ಮಗುವಿನ ಜನನದೊಂದಿಗೆ ಕಾಣಿಸುವಂಥವುಗಳು. ರುಮಟಾಯ್ಡ್ ಕೀಲುರಿತ, ಆಂಕಿಲೋಸಿಂಗ ಸ್ಪಾಂಡಿಲೈಟಿಸ್ ಮೂರು ಅಥವಾ ನಾಲ್ಕರ ದಶಕದಲ್ಲಿ ಕಾಣುವಂತವುಗಳು. ತಲೆತಲಾಂತರಕ್ಕೆ ಬಿಡದೆ ಕಾಡುವ ರೋಗಗಳು ಪ್ರಬಲ (ಡಾಮಿನೆಂಟ್) ವೆಂದು, ಒಂದೊಂದು ತಲೆ ಬಿಟ್ಟು ಬಿಟ್ಟು ಕಾಣುವ ರೋಗಗಳು ದುರ್ಬಲ (ರಿಸೆಸಿವ್) ಸ್ವರೂಪದ್ದೆಂದು ಗುರುತಿಸಿದ್ದಾರೆ.

ಗರ್ಭದಲ್ಲಿ ಪಿಂಡ ಬೆಳೆಯುವ ಮೊದಲ ಮೂರು ತಿಂಗಳ ಸಮಯದಲ್ಲಿ ತಾಯಿ ಕೆಲವೊಂದು ಔಷಧಗಳನ್ನು ಸೇವಿಸಿದರೆ, ಎಕ್ಸ್‌ಕಿರಣ ಅಥವಾ ಇನ್ನಿತರ ವಿಕಿರಣತೆಗೆ ಒಳ ಪಟ್ಟರೆ ಹುಟ್ಟುವ ಮಗು ವಿಕಲವಾಗುವ ಸಂಭವ ಇದೆ. ವಿಕಲತೆಯ ಸ್ವರೂಪ ಬಹು ವಿಧವಾಗಿ ಕಾಣಿಸಿಕೊಳ್ಳಬಹುದು. ಅಂಗಭಾಗದ ಕೊರತೆ ಇರುವುದೇ ಹೆಚ್ಚು. ಕೆಲವೊಮ್ಮೆ ಹೆಚ್ಚಿನ ಅಂಗಭಾಗ ಕಾಣಿಸಿಕೊಳ್ಳಲೂಬಹುದು.

ಸಂಶೋಧನೆ ಮುಂದುವರೆದಂತೆ ವಿಕಲತೆಯುಂಟುಮಾಡುವ ಕಾರಣ ಕಂಡುಕೊಳ್ಳಲು ಸಾಧ್ಯವಾಗುತ್ತಿದೆ. ಕ್ರೋಮೊಸೋಮುಗಳಲ್ಲಿಯ ನ್ಯೂನತೆ ಕಂಡು ಕೊಂಡು ಸರಿಪಡಿಸುವ ಪ್ರಯತ್ನಗಳು ನಡೆದಿವೆ ಹೀಗಾಗಿ ಮುಂದೊಂದು ದಿನ ಆನುವಂಶಿಕ ರೋಗಗಳನ್ನು ಕಾಣುವುದು ಕಷ್ಟವಾಗಬಹುದು. ಸಂಜಾತ ರೋಗಗಳ ಕಾರಣಗಳು ಗೊತ್ತಾಗುತ್ತಿರುವುದರಿಂದಾಗಿ ಅವುಗಳನ್ನು ಸಹ ತಡೆಗಟ್ಟಲು ಪ್ರಯತ್ನಗಳು ನಡೆದಿವೆ. ಕಂಡುಬಂದ ವಿಕಲತೆಗಳಲ್ಲಿ ಕೆಲವನ್ನು ಚಿಕಿತ್ಸೆಯಿಂದ ಸರಿಪಡಿಸಬಹುದು.

ಸಣ್ಣ ಪೆಟ್ಟು ತಗುಲಿದರೆ ಸುಲಭವಾಗಿ ಸೀಳುವ, ಮುರಿಯುವ ಮೂಳೆಗಳೊಂದಿಗೆ ಮಗುವಿನ ಜನನವಾಗಬಹುದು. ಇಂತಹ ನ್ಯೂನತೆ ಮಗು ಬೆಳೆಯುವಾಗ ಸಹ ಕಾಣಿಸಿಕೊಳ್ಳಬಹುದು. ಇದಕ್ಕೆ "ಎಲುಜನನ ನ್ಯೂನತೆ" (ಆಸ್ಟಿಯೋಜನಿಸಿಸ್ ಇಂಪರ್ಫೆಕ್ಟ) ಎನ್ನುತ್ತಾರೆ. ಕೆಲವೊಮ್ಮೆ ಎಲುಬಿನೊಳಗಣ ಮಜ್ಜೆಯ ಭಾಗವೆಲ್ಲ ಗಟ್ಟಿಗಡುಸಾಗಿ ಹಾಲುಗಲ್ಲಿನಂತಾಗಿರುತ್ತದೆ. ಇವು ಸಹ ಸ್ವಲ್ಪ ಪೆಟ್ಟಿನಿಂದಾಗಿ ಮುರಿಯುತ್ತವೆ. ಇದಕ್ಕೆ 'ಎಲುಕಲ್ಲು ರೋಗ' (ಆಸ್ಟಿಯೋ ಪೆಟ್ರೋಸಿಸ್) ಎನ್ನುತ್ತಾರೆ. ಮೂಳೆಯ ಬದಲಾಗಿ ಮೆದುವಾದ ತಂತುವಿನ ಊತಕ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಫೈಬ್ರೋಸಡಿಸಪ್ಲೇಸಿಯ ಎನ್ನುತ್ತಾರೆ.

ಕೆಲವೊಮ್ಮೆ ಮೇಲೆಲುಮೊಳೆ (ಎಪಿಫೈಸಿಸ್) ಉರಿತಕ್ಕೊಳಗಾಗಿ ಅದರ ಬೆಳೆವಣಿಗೆ ಕುಂಠಿತಗೊಳ್ಳುತ್ತದೆ. ಲೆಗ್-ಪರ್ಥಿ ರೋಗದಲ್ಲಿ ತೊಡೆಲುತಲೆಯ ಮೇಲೆಲುಮೊಳೆ ಉರಿತಕ್ಕೊಳಗಾಗಿ ಚಪ್ಪೆ ಕೀಲನ್ನು ಹಾಳುಗೆಡುವುದುಂಟು. ಇಂತಹ ನ್ಯೂನತೆ ಇನ್ನೂ ಅನೇಕ ಬೆಳೆವಮೂಳೆಗಳಲ್ಲಿ ಕಂಡುಬರುತ್ತವೆ. ಒಮ್ಮೊಮ್ಮೆ ಬೆಳೆದ ಮೂಳೆ ನಿಧಾನವಾಗಿ ಕರಗುವದನ್ನೂ ಕಾಣಬಹುದು. ಇದಕ್ಕೆ ಮೂಳೆಲಯ (ಆಸ್ಟಿಯೋಲೈಸಿಸ್) ಎನ್ನುತ್ತಾರೆ.

ಚಪ್ಪೆಕೀಲಿನ ಎಲುಬುಗಳು ತಮ್ಮ ಸಹಜರೂಪದಿಂದ ವಂಚಿತವಾದ ಮಗುವಿನಲ್ಲಿ ಚಪ್ಪೆಕೀಲ್ತಪ್ಪಿಕೆಯುಂಟು ಮಾಡುತ್ತವೆ. ಲಟ್ಟಪಾದ, ತಾಗುಮಂಡಿ, ಪಂಗಡಕಾಲುಗಳು ಸಾಮಾನ್ಯವಾಗಿ ಕಾಣುವ ಮೂಳೆಯ ಊನಗಳು. ಅನೇಕ ಊನಗಳನ್ನು ಸಣ್ಣದರಲ್ಲೇ ಗುರುತಿಸಿ ಚಿಕಿತ್ಸೆ ನೀಡಿದರೆ ಒಳ್ಳೆಯ ಫಲ ಸಿಗುತ್ತದೆ.

ಜೀವಸ್ತುಕರಣದ ಏರುಪೇರುಗಳು: ಮೈಯಲ್ಲಿಯ ಮೂಳೆಗಳಲ್ಲಿ ಜೀವ ಇರುತ್ತದೆ ಎಡೆಬಿಡದೆ ಒಂದೆಡೆ ಮೂಳೆ ಹಾಳಾಗುತ್ತಿದ್ದರೆ ಇನ್ನೊಂದೆಡೆ ಅದೇ ಹೊತ್ತಿನಲ್ಲಿ ಹೊಸ ಮೂಳೆ ಚುರುಕಾಗಿ ಬೆಳೆಯುತ್ತಿರುತ್ತದೆ. ಆರೋಗ್ಯವಂತರಲ್ಲಿ ಇವೆರಡು ಕೆಲಸಗಳು ಸಮಸಮವಾಗಿರುತ್ತವೆ. ಜೀವಸ್ತುಕರಣ ಕ್ರಿಯೆಯನ್ನು ಕೆಡಿಸುವ ರೋಗಗಳ ಪ್ರಭಾವ ಎಲುಗಟ್ಟಿನ ಮೇಲೂ ಆಗುತ್ತದೆ. 'ಸಿ' ಮತ್ತು 'ಡಿ' ಜೀವಸತ್ವಗಳ ಕೊರತೆಯಲ್ಲಿ ಕ್ರಮವಾಗಿ ನೀಚಗೊರೆ (ಸ್ಕರ್ವಿ). ಎಲುಮುರುಟು (ರಿಕೆಟ್ಸ್) ಕಾಣಿಸಿಕೊಳ್ಳುತ್ತವೆ. ಗುರಾಣಿಕ (ಥೈರಾಯ್ಡ್) ಬದಿಗುರಾಣಿಕ (ಪ್ಯಾರಾ ಥೈರಾಯ್ಡ್) ಗ್ರಂಥಿ, ಮೂತ್ರಪಿಂಡ, ಜಠರಗರುಳಿನ ನಾಳ, ಅಡ್ರಿನಲ್ ಗ್ರಂಥಿಗಳ ಕೆಲಸ ಕೆಟ್ಟರೆ ಮೂಳೆಯಲ್ಲಿ ಬದಲಾವಣೆ ಕಾಣಬಹುದು. ಇಷ್ಟೇ ಅಲ್ಲ ಯಾವುದೇ ಕಾರಣದಿಂದಾಗಿ ವ್ಯಕ್ತಿ ಓಡಾಡದೆ ಹಾಸಿಗೆ ಹಿಡಿದರೆ ಮೂಳೆಗಳು ಮೆತ್ತಗಾಗುತ್ತವೆ.

ಮೈ ಕಟ್ಟಿನಲ್ಲಿ ಆದ ಏರುಪೇರು ಕಂಡಹಾಗೆ, ಎಲುಗಟ್ಟಿನ ಸಹಜ ನಿಜಗೆಲಸ ಕೆಡುವುದಿಲ್ಲ. ಮರುರಚನೆಗೂ, ಹಾಳುಗೆಡುವದಕ್ಕೂ ನಡುವಣ ಪರಿಮಾಣ ಬದಲಾದ ಹಾಗೆಲ್ಲ ಕೊನೆಗೆ ಉಳಿವ ಮೂಳೆಯ ಮೊತ್ತವು ಕಡಮೆ ಆಗುವುದನ್ನು ಬಿಟ್ಟರೆ ಮೂಳೆಗೆ ವಯಸ್ಸು ಏನೂ ತಟ್ಟದು. ಮೂಳೆಯ ರಾಸಾಯನಿಕ ಸಂಯೋಜನೆ ಒಂದೇ ಸಮನಾಗಿದ್ದರೂ ಇಡೀ ಎಲುಗಟ್ಟು ಹಗುರವೂ ಕೋಮಲವೂ ಆಗುವುದು. ಹೀಗಾಗಿ ವಯಸ್ಸಾದವರ ಮೂಳೆ ಸುಲಭವಾಗಿ ಲೊಟಕ್ಕೆಂದು ಮುರಿಯುವವು ಮತ್ತು ಮುರಿತ ತನ್ನಷ್ಟಕ್ಕೆ ತಾನೇ ಸರಿಹೊಂದುತ್ತದೆ.

ಸೋಂಕು: ಎಲುಬಿನ ಸೋಂಕು ರೋಗಕ್ಕೆ ಎಲುಮಜ್ಜೆಯುರಿತ (ಆಸ್ಟಿಯೋಮೈಲೈಟಿಸ್) ಎನ್ನುತ್ತಾರೆ. ಕೀವು ಸೃಜಿಸುವ ರೋಗಾಣುಗಳಾದ ಸ್ಟ್ರೆಪ್ಟೋಕಾಕ್ಕೈ, ಸ್ಟಾಫಿಲೋಕಾಕ್ಕೈಗಳು ಸಾಮಾನ್ಯವಾಗಿ ಎಲು ಮಜ್ಜೆಯುರಿತವನ್ನುಂಟುಮಡುತ್ತವೆ. ಇದು ತೀವ್ರ (ಅಕ್ಯೂಟ್) ಇಲ್ಲವೆ ನಿಧಾನ (ಕ್ರಾನಿಕ್) ಸ್ವರೂಪದ್ದಾಗಿರಬಹುದು. ತೀವ್ರವಾಗಿದ್ದನ್ನು ಕೂಡಲೆ ಕಂಡು ಉಪಚರಿಸಿದರೆ ನಿಧಾನವಾಗುವದನ್ನು ತಡೆಗಟ್ಟಬಹುದಲ್ಲದೆ ಮಗುವಿನ ಪ್ರಾಣ ಹಾನಿಯನ್ನೂ ತಡೆಗಟ್ಟಬಹುದು. ನಿಧಾನ ರೋಗವಾಗಿ ಮಾರ್ಪಟ್ಟಾಗ ಕೀಲಿನೆಲುವು ಕರಗುತ್ತದೆ; ಒಂದು ಚೂರು ಅಥವಾ ದೊಡ್ಡದಾಗಿಯೇ ಎಲುಬು ಸಾಯುತ್ತದೆ ಇದಕ್ಕೆ 'ಹೊರಚಿಕೆ' (ಸಿಕ್ವೆಸ್ಟ್ರಮ್) ಎನ್ನುತ್ತಾರೆ. ರಗಟೆಲುವಿನಲ್ಲಿ ತೂತುಗಳುಂಟಾಗಿ ಕೀವು ಸೋರುತ್ತದೆ. ಇಂದಿನ ದಿನಗಳಲ್ಲಿ ಇಂತಹದು ಕಾಣುವುದು ಅಪರೂಪ. ಪೆನ್‌ಸಿಲಿನ್ ಅಲ್ಲದೆ ಅನೇಕ ಬಲಯುತವಾದ ಜೀವಿರೋಧಕ (ಅಂಟಿಬಯಟಿಕ್) ಮದ್ದು ಲಭ್ಯವಾಗಿ ಚಿಕಿತ್ಸೆ ಸರಳವಾಗಿದೆ. ಕೆಲವೊಮ್ಮೆ ಶಸ್ತ್ರಕ್ರಿಯೆ ಅನಿವಾರ್ಯ.

ಗಂತಿಗಳು: ಬೇರೆ ಬೇರೆ ಅಂಗಗಳಲ್ಲಿ ಗಂತಿಗಳು ಕಂಡುಬರುವಷ್ಟು ಮೂಳೆಗಳಲ್ಲಿ ಕಾಣಿಸುವುದು ಸಾಮಾನ್ಯವಲ್ಲ. ಮೂಳೆಯಗಂತಿಗಳಲ್ಲಿ ಹೆಚ್ಚಿನವು ಸೌಮ್ಯ (ಬಿನೈನ್) ಗಂತಿಗಳಾಗಿರುತ್ತವೆ. ಮತ್ತು ಇವು ಶಸ್ತ್ರಕ್ರಿಯೆಗೆ ಮಣಿಯುತ್ತವೆ. ಪ್ರಾಥಮಿಕ ಗಂತಿಗಳಿಗಿಂತ 'ಗುಳೆಗಂತಿ' (ಸೆಕೆಂಡರಿ) ಮೂಳೆಗಳಲ್ಲಿ ಸಾಮಾನ್ಯವಾಗಿ ಕಾಣಿಸುತ್ತವೆ. ಪುಪ್ಪುಸ, ಮುನ್ನಿಲುಗ (ಪ್ರಾಸ್ಟೇಟ್), ಗರ್ಭಕೋಶ, ತರಡು, ಕರುಳು ಮತ್ತಿತರ ಅಂಗಗಳ ಗಂತಿಗಳು ಮೂಳೆಗಳಿಗೆ ಹರಡುತ್ತವೆ, ನೋವುಂಟು ಮಾಡುತ್ತವೆ, ಅಂಗದ ಆಕಾರ ಕೆಡಿಸುತ್ತವೆ. ಇವುಗಳ ಚಿಕಿತ್ಸೆ ಕಷ್ಟವಾದರೂ ಇಂದು ವೈಜ್ಞಾನಿಕ ಪ್ರಗತಿಯಿಂದಾಗಿ, ವಿಕಿರಣ ಚಿಕಿತ್ಸೆ, ಕೀಮೊಥೆರಪಿ ನೀಡಿ, ರಕ್ತ ಪೂರಣೆ ಕೊಟ್ಟು ಗಂತಿಯನ್ನು ಗಂತಿಯ ಕೆಡಕನ್ನು ನಿಯಂತ್ರಿಸಲು ಸಾಧ್ಯವಾಗುತ್ತಿದೆ.

ಮೂಳೆಗಳಲ್ಲಿ ಪ್ರಾಥಮಿಕವಾಗಿ ಏಳುವ ಗಂತಿಗಳಿಗೆ ಮಾಂಸಗಂತಿ (ಸಾರ್ಕೋಮ) ಗಳೆನ್ನುತ್ತಾರೆ. ಎಲುಬಿನ, ಮೆಲ್ಲೆಲುವಿನ, ಮತ್ತು ತಂತುಗಳ ಪ್ರಬಲತೆಯಿರುವ ಮೂಳೆಯ ಗಂತಿಗಳನ್ನು ಗುರುತಿಸಲಾಗಿದೆ. ಎಲುಜನಕ ಗಂತಿಯಲ್ಲಿ ಎಲುಬಿನ ಭಾಗವೇ ಪ್ರಮುಖವಾಗಿ ಕಾಣಿಸುತ್ತದೆ. ಇದು ಹದಿಹರೆಯದವರಲ್ಲಿ, ಸುಮಾರು ಎರಡು ದಶಕದ ವಯಸ್ಸಿನವರಲ್ಲಿ ಕಾಣಿಸುತ್ತದೆ. ಎಂತಹ ಪ್ರಬಲ ಉಪಚಾರದಿಂದಲೂ, ಅಂಗವನ್ನೇ ಕಳೆದುಕೊಂಡ ಜೀವ ಬದುಕಿಸುವುದು ಕಷ್ಟವಾಗುತ್ತದೆ.

ಇವಿಂಗ್ಸನ ಮಾಂಸಗಂತಿ, ಮೆಲ್ಲೆಲುವಿನಮಾಂಸಗಂತಿ, ತಂತುಮಾಂಸಗಂತಿಗಳು ವಿನಾಶಕಾರಕಗಳು. ಎಲುಬಿನಲ್ಲಿ ಮಧ್ಯವಯಸ್ಸಿನ ಸುಮಾರಿಗೆ ಕಾಣಿಸುವ ರಾಕ್ಷಸಕಣಗಂತಿ (ಆಸ್ಟಿಯೋಕ್ಲಾಸ್ಟೋಮ) ಸ್ಥಳೀಯವಾಗಿ ಕೆಲವೊಮ್ಮೆ ಅಪಾಯಕಾರಿಯಾಗಿ ಕಂಡರೂ ವ್ಯಕ್ತಿಯ ಜೀವಕ್ಕೆ ಅಪಾಯವಿರುವುದಿಲ್ಲ.

ನೀರನಲ್ಲಿ ಫ್ಲೋರಿನ್ ಪ್ರಮಾಣ ಹೆಚ್ಚಾಗಿದ್ದಾಗ ಅದರ ಪರಿಣಾಮವನ್ನು ತಂತುಗಟ್ಟುಗಳಲ್ಲಿ ಮತ್ತು ಮೂಳೆ ಕೀಲುಗಳಲ್ಲಿ ಕಾಣಬಹುದು. ಮಕ್ಕಳು ಇಂತಹ ನೀರನ್ನು ಕುಡಿಯುತ್ತಿದ್ದರೆ ಅವರ ಹಲ್ಲುಗಳು ಹಳದಿಯಾಗುತ್ತವೆ. ಸರಿಯಾಗಿ ಬೆಳೆಯುವುದಿಲ್ಲ. ಕಾಲುಗಳು ಬಾಗಿ ತಾಗುಮಂಡಿ ಇಲ್ಲವೆ ಪಂಗಡಗಾಲು ವಿಕಲತೆ ಫಲಿಸುತ್ತದೆ. ದೊಡ್ಡವರಲ್ಲಿ ಸೊಂಟನೋವು ಮೈಕೈನೋವು ಸಾಮಾನ್ಯ. ಎಕ್ಸ್‌ಕಿರಣದ ಚಿತ್ರದಿಂದ ಇದನ್ನು ಗುರುತಿಸಬಹುದು. ಇದಕ್ಕೆ ತಕ್ಕ ಚಿಕಿತ್ಸೆ ಇಲ್ಲ, ಫ್ಲೋರಿನ್ ಯುಕ್ತ ನೀರಿನ ಬಳಕೆ ಬಿಡುವುದರಿಂದ ಇದು ಬರದಂತೆ ಮಾಡುವುದೇ ಉಪಾಯ.

**ಮುರಿತಗಳು:** ಮೈಯಲ್ಲಿ ಬಲುಗಟ್ಟಿಯಾದ ಊತಕ ಎಲುಬು. ಅದು ಮುರಿಯುವುದು ಸಾಕಷ್ಟು ಬಲವಾದ ಪೆಟ್ಟಿನಿಂದ ಮಾತ್ರ. ಆದರೆ ರೋಗದಿಂದ ಮೆತ್ತಗಾದ ಮೂಳೆ, ಮುಪ್ಪಿನಿಂದ ತೆಳುವಾದ ಮೂಳೆ, ಹೆಂಗಸರಲ್ಲಿ ಮುಟ್ಟು ನಿಂತನಂತರದ ಬಲಹೀನ ಮೂಳೆಗಳು ಅಲ್ಪ ಸ್ವಲ್ಪ ಪೆಟ್ಟಿನಿಂದಾಗಿ ಮುರಿಯಬಹುದು. ಮುರಿದ ಎಲುಬಿನ ತುದಿ ಚರ್ಮದ ಗಾಯದಿಂದ ಗಾಳಿಗೊಡ್ಡುವಂತಾದರೆ ಅದಕ್ಕೆ ತೆರೆದ ಮುರಿತ (ಓಪನ್) ಇಲ್ಲವೆ ಕಲೆತ ಮುರಿತ (ಕಾಂಪೌಂಡ್)ವೆನ್ನುತ್ತಾರೆ; ಇಲ್ಲವಾದರೆ ಅದು ಮುಚ್ಚಿದ ಮುರಿತ ಅಥವಾ ಸರಳ ಮುರಿತವಾಗುತ್ತದೆ. ಮೂಳೆಮುರಿತ ಪತ್ತೆ ಮಾಡುವುದು ಕಷ್ಟವಾಗುವುದಿಲ್ಲ. ಪೆಟ್ಟಿಗೊಳಗಾದ ಭಾಗದಲ್ಲಿ ನೋವಿರುತ್ತದೆ. ಆ ಭಾಗವನ್ನು ಮುಟ್ಟಿದರೆ ನೋವು ಉಲ್ಬಣವಾಗುತ್ತದೆ ಮುರಿತದ ಭಾಗವನ್ನು ಅಲುಗಾಡಿಸಿದರೆ ಕರ್ ಕರ್ ಶಬ್ದ ಕೇಳಿಸಬಹುದು. ಇಲ್ಲವೆ ಪರೀಕ್ಷಿಸುವ ಕೈ ಅನುಭವಿಸಬಹುದು. ಮುರಿತಕ್ಕೊಳಗಾದ ಕೈ ಅಥವಾ ಕಾಲು ಡೊಂಕಾಗುತ್ತದೆ. ಎಕ್ಸರೇ ಚಿತ್ರ ಗಮನಿಸಿದರೆ ಎಲುಬು ಎಲ್ಲಿ ಮುರಿದಿದೆ, ಹೇಗೆ ಮುರಿದಿದೆ, ಯಾವ ಭಾಗಕ್ಕೆ ಮುರಿದೆಲುಬುಗಳು ಸರಿದಿವೆ ಎನ್ನುವ ವಿವರಗಳು ತಿಳಿಯುತ್ತವೆ. ಅದರಿಂದ ಮುರಿತದ ಚಿಕಿತ್ಸೆ ಸರಳವಾಗುತ್ತದೆ.

**ಮುರಿದೆಲುಬನ್ನು ಸರಿಕೂಡಿಸುವುದು;** ಕೂಡಿಸಿದ ಎಲುಬುಗಳನ್ನು ಚೆನ್ನಾಗಿ ಕೂಡಿಕೊಳ್ಳುವತನಕ ಹಾಗೇ ಹಿಡಿದಿಡುವುದು, ಮತ್ತು ಅದೇ ಸಮಯದಲ್ಲಿ ಹಿಡಿದಿಡದ ಕೀಲುಗಳನ್ನು ಆಡಿಸುತ್ತಿರುವುದು ಎಲುಮುರಿತದ ಚಿಕಿತ್ಸೆಯ ಪ್ರಮುಖ ಅಂಶಗಳು. ಮಕ್ಕಳಲ್ಲಿ ಮೂಳೆಗಳು ಹಸಿರು ಕಡ್ಡಿಯಂತೆ (ಗ್ರೀನ್ ಸ್ಟಿಕ್) ಮುರಿದು ಬಾಗುತ್ತವೆ. ಮಕ್ಕಳ ಮೂಳೆ ಮುರಿದರೂ ಸರಿಕೂಡಿಕೊಳ್ಳುತ್ತವೆ. ಅಲ್ಪ ಸ್ವಲ್ಪ ದೋಷವಿದ್ದರೂ ಬೆಳೆಯುವ ಮೂಳೆಗಳಾದುದರಿಂದ ತಾವಾಗಿಯೇ ಸರಿಹೊಂದುತ್ತವೆ. ದೊಡ್ಡವರಲ್ಲಿ ಮುರಿದ ಮೂಳೆಗಳನ್ನು ಅರಿವಳಿಕದ ಸಹಾಯದಿಂದ ಸರಿಕೂಡಿಸಿ ಪ್ಲಾಸ್ಟರ್ ಆಫ್

ಪ್ಯಾರಿಸ್ ಅಚ್ಚು (ಪ್ಲಾಸ್ಟರ್‌ಕಾಸ್ಟ್) ಹಾಕಿ ಕೆಲವು ವಾರಗಳ ವರೆಗೆ ಹಿಡಿದಿಡಬೇಕಾಗುತ್ತದೆ. ಸರಿಕೂಡಿಸಲು ಸಾಧ್ಯವಾಗದಾದಾಗ, ಅಥವಾ ಸಾಧ್ಯವಿಲ್ಲವೆನ್ನುವ ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ಮಾಡಿ, ಮುರಿದು ಸರಿದ ಎಲುಬುಗಳನ್ನು ಸರಿಕೂಡಿಸಿ, ಕೂಡಿಸಿದ್ದನ್ನು ಒಳೆಲುಮೊಳೆ, (ಇಂಟ್ರಾಮೆಡುಲರಿನೇಲ್) ತಂತು; ತೂತುತಟ್ಟೆ (ಪ್ಲೇಟ್) ಯಿಂದ ಹಿಡಿದಿಡಬೇಕಾಗುತ್ತದೆ. ಇಂದಿನ ವೈಜ್ಞಾನಿಕ ಪ್ರಗತಿಯ ದಿನಗಳಲ್ಲಿ ಶಸ್ತ್ರಕ್ರಿಯೆ ಸರಳವಾಗಿ ನಾನಾ ತರಹದ ಶಸ್ತ್ರಕ್ರಿಯೆಗಳು ಬಳಕೆಯಲ್ಲಿ ಬಂದು, ರೋಗಿ ಹಾಸಿಗೆ ಹಿಡಿದು ಮಲಗುವುದು ತಪ್ಪಿ ಸ್ವಲ್ಪ ಸಹಾಯದೊಂದಿಗೆ ಆದಷ್ಟು ಕೂಡಲೇ ಸ್ವತಂತ್ರವಾಗಿ ಓಡಾಡುವಂತಾಗಲು ಸಾಧ್ಯವಾಗಿದೆ.

ಶಸ್ತ್ರ ಕ್ರಿಯೆಯಿಂದಾದ ಗಾಯ ಸೋಂಕಿಗೊಳಗಾಗಿ ಕೀವುಂಟಾಗುವುದು ಅಪರೂಪವಾಗಿದೆ. ಸ್ವಚ್ಛತೆ, ಕ್ರಿಮಿರಹಿತತೆ, ಜೀವಿರೋಧಕ ಔಷಧಗಳು, ಶಸ್ತ್ರಕ್ರಿಯಾ ತಂತ್ರ ಶಸ್ತ್ರಮಂದಿರ (ಆಪರೇಶನ್ ಥೇಟರ್)ದಲ್ಲಿಯ ಉತ್ತಮ ಸೌಕರ್ಯಗಳು ಮತ್ತು ನುರಿತ ದಾದಿಯರ ಸಹಕಾರ ಎಂತಹದೇ ಗಂಭೀರವಾದ ಮೂಳೆ ಮುರಿತದ ಚಿಕಿತ್ಸೆಯನ್ನು ಸರಳಗೊಳಿಸಿವೆ. ರಷ್ಯದ ವೈದ್ಯ ಎಲಿಜಾರೋವ್ ಎಂಬಾತ ಮೂಳೆಯಲ್ಲಿ ತೆಳು ತಂತಿಗಳನ್ನು ಸೇರಿಸಿ ಆ ತಂತಿಗಳನ್ನು ಅಂಗಭಾಗದ ಹೊರಗೆ ಅರ್ಧ ಉಂಗುರಗಳ ಮೂಲಕ ಹಿಡಿದು ಉಪಚರಿಸುವ ಪದ್ಧತಿ ರೂಢಿಯಲ್ಲಿ ತಂದು ಮೂಳೆ ಚಿಕಿತ್ಸೆಯಲ್ಲಿ ಹೊಸತನ ನೀಡಿದ್ದಾರೆ. *

**ಎಲುಬು:** ಮಾನವನ ಆಕೃತಿಗೆ ಮೂಲ ಆಧಾರ ಮೂಳೆಗಳು. ಗಟ್ಟಿಯಾಗಿರುವ, ಸುಣ್ಣದಾಂಶದೊಂದಿಗೆ ಖನಿಜೀಕೃತಗೊಂಡ ವಿಶೇಷ ಹಾಗೂ ವಿಶಿಷ್ಟವಾದ ಊತಕ (ಟಿಷ್ಯೂ) ವೆ ಎಲುಬು. ಶರೀರದ ಎಲ್ಲ ಎಲುಬುಗಳು ಸೇರಿ ಎಲುಗಟ್ಟು ರಚನೆಗೊಂಡಿದೆ. (ಚಿತ್ರ – 1) ಎರಡು ಎಲುಬುಗಳು ಸೇರುವಲ್ಲಿ ಕೀಲು ಇರುತ್ತದೆ. ಕೀಲಿನ ಚಲನೆಯಿಂದಾಗಿ ಕೂಡಲು, ಏಳಲು, ನಡೆಯಲು, ಹಿಡಿಯಲು ಹೀಗೆ ನಾನಾ ಕಾರ್ಯಗಳು ಸಾಧ್ಯವಾಗುತ್ತವೆ. ಎಲುಬಿಗೆ ಸ್ನಾಯುಗಳು, ಕಂಡರಗಳು, ಹುರಿಗಳು ಅಂಟಿಕೊಂಡಿದ್ದು ಕೀಲು ಚಲನೆಗೆ ಆಧಾರವಾಗಿವೆ. ಶರೀರದೊಳಗಿನ ಎಲುಬುಗಳೆಲ್ಲ ಒಂದಕ್ಕೊಂದು ಹೊಂದಿಕೊಂಡು ಮೈಕಟ್ಟಿನ ರೂಪ ರಚಿಸುತ್ತವೆ. ರಕ್ತ ತಯಾರಿಸುವ ಊತಕ ಎಲುಮಜ್ಜೆ (ಬೋನ್ ಮ್ಯಾರೊ) ಮೂಳೆಗಳ ಒಳ ಪೊಳ್ಳಿನಲ್ಲಿದೆ. ದೇಹದ ಜೀವಾಳದ ಅಂಗಗಳಾದ ಹೃದಯ ಪುಪ್ಪುಸ, ಮಿದುಳು ಬೆನ್ನುಹುರಿಗಳು ಮೂಳೆಯ ಕವಚದಿಂದ ಸುರಕ್ಷಿತವಾಗಿವೆ.



**ಚಿತ್ರ 1 ತೊಡೆ ಎಲುಬಿನ ಮೇಲಿನ ಕೊನೆಯ ಸೀಳುಕೊಯ್ತು**

ಮೆತುವಾದ ಜೈವಿಕ ಹಾಸಿಗೆ (ಮ್ಯಾಟ್ರಿಕ್ಸ್)ಯೊಳಗೆ ಮುಖ್ಯವಾಗಿ ಕ್ಯಾಲ್ಸಿಯಂ ಫಾಸ್ಫೇಟ್, ಕಾರ್ಬೋನೇಟುಗಳಿರುವ ಸಮ್ಮಿಶ್ರ ಖನಿಜ ಸೇರಿಕೊಂಡು ಎಲುಬು ಬಿರುಸಾಗಿರಲಿಕ್ಕೆ ಕಾರಣವಾಗುತ್ತದೆ. ಬದುಕಿರುವ ಮೂಳೆಯಲ್ಲಿ ಜೀವವಿರುವುದರಿಂದ ಅವುಗಳಲ್ಲಿ ರಕ್ತ ನಾಳಗಳು, ಹಾಲರಸ ನಾಳಗಳು ಮತ್ತು ನರಗಳು ಇರುತ್ತವೆ.

ರಚನೆ : ಎಲುಬಿನಲ್ಲಿ ಮುಖ್ಯವಾಗಿ ಎರಡು ಭಾಗಗಳು. ಕವಚರೂಪದ ಹೊರ ಭಾಗ ದಪ್ಪವಾಗಿ ಗಟ್ಟಿಯಾಗಿದ್ದು ಅದಕ್ಕೆ "ರಗಟೆಲುಬು" (ಕಾರ್ಟೆಕ್ಸ್) ಎನ್ನುತ್ತಾರೆ ಇದರ ಒಳ ಭಾಗದಲ್ಲಿ ಸ್ಪಂಜಿನಂತೆ ಸಡಿಲು ಸಡಿಲಾಗಿ ಎಲುವಿನೆಳೆಗಳು ಹರಡಿಕೊಂಡಿದ್ದು ಹಂದರೆಲುಬು (ಕ್ಯಾನ್ಸಲಸ್ ಬೋನ್) ಎನಿಸಿಕೊಳ್ಳುತ್ತದೆ. ರಗಟೆಲುಬನ್ನು ಒಂದು ತೆಳುವಾದ ಪೊರೆ ಸುತ್ತಿಕೊಂಡಿರುತ್ತದೆ ಇದಕ್ಕೆ ಎಲುಸುತ್ತರೆ ಎನ್ನುತ್ತಾರೆ. ಹಂದರೆಲುವಿನ ಎಲುದೂಲ (ಲ್ಯಾಮೆಲ್ಲೆ) ಗಳು ಅಡ್ಡಾದಿಡ್ಡಿಯಾಗಿ ಹರಡಿಕೊಂಡಿದ್ದರೂ ಭಾರ, ಒತ್ತಡ ಬೀಳುವಲ್ಲಿ ದಟ್ಟವಾಗಿರುತ್ತವೆ.

ರಗಟೆಲುಬಿನಲ್ಲಿ ಹ್ಯಾವರ್ಸಿಯನ್ ಮಂಡಲವಿದೆ. ಹ್ಯಾವರ್ಸಿಯನ್ ಇಲ್ಲವೆ ಎಲುಉರುಳೆ (ಆಸ್ಟಿಯೋನ್) ಮೂಳೆ ರಚನೆಯಲ್ಲಿ ಒಂದು ಘಟಕ. ಸಾಮಾನ್ಯವಾಗಿ ಇವು ಎಲುಬಿನಲ್ಲಿ ಉದ್ದುದ್ದವಾಗಿ ಉರುಳೆಯಾಕಾರವಾಗಿ, ಕವಲೊಡೆದು, ಕಿರುಗಾತ್ರದ ಒಂದು ಅಥವಾ ಹೆಚ್ಚಿನ ಸಣ್ಣ ರಕ್ತ ನಾಳಗಳನ್ನು ಸಾಗಿಸುವ ಇಕ್ಕಟ್ಟಿನ ಚಿಕ್ಕಕಾಲುವೆ ಹೊಂದಿರುತ್ತದೆ. ಎಲು ಉರುಳೆಗಳ ಗೋಡೆಗಳು ಸುರಳಿಸುತ್ತುವ ಪದರಗಳಂತಿರುತ್ತವೆ. ಈ ಘಟಕಕ್ಕೆ ಮೂಲ ಆಧಾರ ತಂತುಕ ಪ್ರೋಟಿನಾದ ಅಂಟುಜನಕ (ಕೊಲ್ಲೇಜನ). ಮೂಳೆಯ ತೂಕದ ತೊಂಬತ್ತು ಪ್ರತಿ ಶತಕ್ಕೂ ಹೆಚ್ಚಿನ ಭಾಗ ಅಂಟುಜನಕದ್ದಾಗಿದೆ.

ಅಡ್ಡ ಕೊಯ್ದ ಎಲುಬಿನ ರಚನೆಯನ್ನು ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದಾಗ ಹ್ಯಾವರ್ಸಿಯನ್ ಘಟಕ ಅತ್ಯಂತ ಶಿಸ್ತಿನ ಅಂದದ ಚಿತ್ರವಾಗಿ ಕಾಣಿಸುತ್ತದೆ. (ಚಿತ್ರ – 2) ಮಧ್ಯದಲ್ಲಿ ರಕ್ತನಾಳದ ರಂಧ್ರ, ಅದರ ಸುತ್ತಲೂ ಕಿಗ್ಗುಳಿ (ಲ್ಯಾಕುನೆ), ಅದಕ್ಕೆ ಹೊಂದಿಕೊಂಡು ರೇಕುಪರೆ (ಲ್ಯಾಮೆಲ್ಲೆ) ಗಳು ಚಕ್ರವ್ಯೂಹದಂತೆ ಹರಡಿಕೊಂಡಿರುತ್ತವೆ. ಕುಳಿಗಳಿಂದ ಅಡ್ಡವಾಗಿ ಸಾಗುವ ಕಿರುಗಾಲುವೆಗಳಿರುತ್ತವೆ. ಎಲುಗುಳಿಗಳಲ್ಲಿ ಎಲುಕಣಗಳು ನೆಲೆಸಿರುತ್ತವೆ. ಕಿರುಗಾಲುವೆಗಳು ರಕ್ತ ಸಂಚಾರದ ಮಾರ್ಗಗಳಾಗಿರುತ್ತವೆ. ಇಂತಹ ಘಟಕಗಳು ಅಂಟುಜನಕ ಪರದೆಯಿಂದಾವೃತಗೊಂಡಿದ್ದು ತನ್ನ ಸುತ್ತಲಿನ ಇತರ ಘಟಕಗಳೊಂದಿಗೆ ಅಡ್ಡರಕ್ತ ನಾಳಗಳಿಂದ ಸಂಪರ್ಕ ಸಾಧಿಸುತ್ತವೆ. ಹ್ಯಾವರ್ಸಿಯನ್ ನಾಳಗಳು ಹೀಗೆ ರಗಟೆಲುಬಿನ ಹೊರ ಮೈಗೆ ಮತ್ತು ಒಳ ಮೈಗೆ ಹಾದು ಹೋಗುತ್ತವೆ.


**ಚಿತ್ರ 2 ತೋಳ್ಮೂಳೆಯ ಒಂದು ಅರೆಪಾಲಿನ ಸೀಳುಕೊಯ್ತು**

**ಎಲುಬು ಜೀವಕಣಗಳು:** ಮೂಳೆಯ ಒಂದೊಂದು ಜೀವಕಣಗಳಿಗೆ ವಿಶಿಷ್ಟವಾದ ಬೇರೆ ಕಾರ್ಯ ನಿರ್ವಹಿಸುವ ಶಕ್ತಿ ಇರುತ್ತದೆ. ಎಲುಬಿನ ಹೊರ ಮೈ (ಸರ್ಫೇಸ್) ಯ ದಟ್ಟ ರಗಟೆಲುಬಿನಲ್ಲಿರುವ ಎಲುನನೆಕಣಗಳು (ಆಸ್ಟಿಯೋಬ್ಲಾಸ್ಟ್) ಮೂಳೆಯನ್ನು ರಚಿಸುತ್ತವೆ. ಈ ಕಣಗಳು ಎಲುಸುತ್ತರೆಯ ಒಳ ಮೈಯಲ್ಲಿರುವದು ಕಂಡು ಬಂದಿದೆ. ಎಲುಕುಳಿ (ಲ್ಯಾಕುನೆ) ಗಳಲ್ಲಿರುವ ಎಲುಕಣಗಳು (ಆಸ್ಟಿಯೋಸೈಟ್ಸ್) ಎಲುಬನ್ನು ಬದುಕಿಸಿಡುತ್ತವೆ. ಎಲುಸುತ್ತರೆಯ ಒಳ ಭಾಗದಲ್ಲಿ ಹಾಗೂ ಹಂದರೆಲುಬಿನೊಳ ಮೈಯಲ್ಲಿ ಎಲುತವಕ (ಆಸ್ಟಿಯೋಕ್ಲಾಸ್ಟ್) ಗಳಿವೆ. ಇವು ಎಲುಬನ್ನು ಹಾಳುಗೆಡವಿ ಹೀರಿ ಕರಗಿಸುವ ಸಾಮರ್ಥ್ಯ ಪಡೆದಿವೆ.

ಈ ಎಲ್ಲ ಜೀವಕಣಗಳು ಒಂದೆ ಮೂಲದಿಂದ ಹುಟ್ಟುವುದರಿಂದ ಒಂದಕ್ಕೊಂದು ಸಂಬಂಧಿಸಿವೆ. ಗಾಯದಿಂದಾಗಿ, ಪೆಟ್ಟಿನಿಂದಾಗಿ ಮುರಿದ ಎಲುಬು ಕೂಡಿಕೊಳ್ಳಲು ಹೊಸ ಎಲುಬಿನ ರಚನೆ ಬೇಕಾಗುತ್ತದೆ. ಎಲುಸುತ್ತರೆಯ ಮತ್ತು ಎಲುಬೊಳು ಪೊರೆಯ ಜೀವಕಣಗಳಿಗೆ ಎಲುಬನ್ನು ತಯಾರಿಸುವ ಬಲವಿರುತ್ತದೆ. ಹೀಗಾಗಿ ಮುರಿದೆಲುಬು ನೈಸರ್ಗಿಕವಾಗಿ ಸರಿಹೊಂದಲು ಸಾಧ್ಯವಾಗುತ್ತದೆ.

**ಊತಕಾಂತರದ ವಸ್ತು:** ಎಲುಬಿನಲ್ಲಿಯ ಜೀವಕಣಗಳನಡುವಿನ ಊತಕಾಂತರದ (ಇಂಟರ್‌ಸ್ಟಿಷಿಯಲ್) ಭಾಗವೆಲ್ಲ ಸುಣ್ಣ ಗೂಡಿದ ಅಂಟುಜನಕ ಪದಾರ್ಥವಾಗಿದೆ. ಮೂಳೆಯ ಗಡಸುತನಕ್ಕೆ ಇದೇ ಮುಖ್ಯ ಕಾರಣ. ಊತಕಾಂತರದಲ್ಲಿ ಜೈವಿಕ ಹಾಸಿಗೆ, ಅಜೈವಿಕ ಖನಿಜಗಳು ಮತ್ತು ನೀರು ಇರುತ್ತವೆ. ಜೈವಿಕ ಹಾಸಿಗೆಯಲ್ಲಿ ಪ್ರಮುಖವಾಗಿ ಅಂಟುಜನಕ ತಂತುಗಳು ಆಧಾರ ವಸ್ತುವಾಗಿರುತ್ತದೆ. ಇದನ್ನು ಎಲೆಕ್ಟ್ರಾನ ದರ್ಶಕದಲ್ಲಿ

ದೊಡ್ಡದು ಮಾಡಿ ನೋಡಿದರೆ ಅಂಟುಜನಕತಂತುಗಳ ಉದ್ದಕ್ಕೂ ಜೋಡಿ ಅಡ್ಡ ಪಟ್ಟಿಗಳು ಕ್ರಮವಾಗಿರುವುದು ಕಾಣಿಸುತ್ತದೆ. ಈ ತಂತುಗಳ ನಡುವೆ ಖನಿಜದ ಹರಳುಗಳು ಮತ್ತು ಅರೆದ್ರವವಾದ ಗಚ್ಚು (ಸಿಮೆಂಟ್) ತುಂಬಿರುತ್ತವೆ.

ಎಲುಬಿನ ಲವಣಗಳಲ್ಲಿ ಮುಖ್ಯವಾದ್ದು ಕ್ಯಾಲ್ಸಿಯಂ ಫಾಸ್ಫೇಟ. ಇವು ಸರಳವಾಗಿ ಕರಗುವುದಿಲ್ಲ. ಇವು ಷಟ್‌ಮುಖಿಗಳಾಗಿರುತ್ತವೆ. ತಂತುಗಳ ನೇರ ದಿಕ್ಕಿನಲ್ಲಿ ಈ ಹರಳುಗಳು ಉದ್ದುದ್ದನಾಗಿ ಕ್ರಮವಾಗಿ ಜೋಡಿಸಿರುತ್ತವೆ. ಎಲುಬಿನ ಲವಣದ ಹರಳಿನ ರಸಾಯನಿಕ ರಚನೆಯು $3C_{a3}(PO_4)_2 Ca(OH)_2$ ಆಗಿದ್ದು ಇದಕ್ಕೆ ಹೈಡ್ರಾಕ್ಸಿ ಅಪಟೈಟ



ಚಿತ್ರ 3 ಅಂಟುಜನಕ ಕಿರುತಂತುಗಳನ್ನು ಬಿಡಿಸಿ, 34,000ರಷ್ಟು ದೊಡ್ಡದಾಗಿ ತೋರಿಸಿದೆ

ಎನ್ನುತ್ತಾರೆ. ಎಲುಬು ಒಂದು ಗಟ್ಟಿಯಾದ (ಸಾಲಿಡ್) ವಸ್ತುವಾಗಿರದೆ ಇಟ್ಟಿಗೆ, ಗಾರೆಗಳಿಂದ ರಚನೆಗೊಂಡಂತಿದೆ. ಹೈಡ್ರಾಕ್ಸಿ ಅಪಟೈಟಿನ ಹರಳುಗಳು ಇಟ್ಟಿಗೆಗಳಾದರೆ, ಸಿಟ್ರೇಟು, ಕಾರ್ಬೋನೇಟುಗಳು ಗಾರೆ: ಇವುಗಳ ನಡುವೆ ಬೇರೆ ಬೇರೆ ಆಯಾನುಗಳು ಬೆರೆತಿರುತ್ತವೆ. ಹರಳುಗಳ ನಡುವೆ ಇರುವ ಅಂಟುಜನಕ ತಂತುಗಳು ಬಿಗುವು ನೀಡುವ ನಾರುಗಳಂತಿರುತ್ತವೆ.

**ಮೂಳೆ ಬೆಳೆವ ಬಗೆ:** ಪಿಂಡಗೂಸಿನಲ್ಲಿ (ಫೀಟಸ್) ಮೂಳೆ ಅಂಕುರಿಸುತ್ತದೆ, ಬೆಳೆಯುತ್ತದೆ, ಜನನದ ನಂತರ ಹದಿವಯಸ್ಸಿನವರೆಗೆ ಮೂಳೆ ಬೆಳೆಯುತ್ತದೆ. ಮೆಲ್ಲೆಲುಬಿನ (ಕಾರ್ಟಿಲೇಜ) ಇಲ್ಲವೆ ತಂತುಕ (ಫೈಬ್ರಸ್) ಹಾಸಿಗೆಯ ಮೇಲೆ ಎಲುಬು ಅಂಕುರಿಸಿ ಬೆಳೆಯುತ್ತದೆ. ಮೆಲ್ಲೆಲುಬಿನ ಮೇಲೆ ಮೂಳೆ ರಚನೆಗೊಂಡರೆ ಅದಕ್ಕೆ ಮೆಲ್ಲೆಲುಬೊಳಗಿನ



ಚಿತ್ರ 4 ಎಲುಬಿನಲ್ಲಿ ಹ್ಯಾವರ್ಸಿಯನ್ ಮಂಡಲದ ರೂಪಿಕೆ

ಎಲು ಮೊಳೆತ (ಕಾರ್ಟಿಲೇಜಿನಿಯಸ್ ಆಸಿಫಿಕೇಶನ್) ಎನ್ನುತ್ತಾರೆ; ತಂತುಗಳ ಮೇಲೆ ನೇರವಾಗಿ ಎಲುಬು ಮೊಳೆತರೆ ಅದಕ್ಕೆ ಪದರದೊಳಗಿನ ಎಲು ಮೊಳೆತ (ಫೈಬ್ರಸ್ ಆಸಿಫಿಕೇಶನ) ಎನ್ನುತ್ತಾರೆ. ಮಗುವಿನ ಮೂಳೆಗಳ ಬೆಳೆವಣಿಗೆಗಳಲ್ಲಿ ಮತ್ತು ಮುರಿತದೆಲುಬು ಮತ್ತೆ ಕೂಡಿಕೊಳ್ಳುವ ಕ್ರಿಯೆಯಲ್ಲಿ ಈ ಎರಡೂತರಹದ ಎಲುಮೊಳೆತ ಕಾಣಿಸುತ್ತದೆ. ಎಲುಬಿನ ಒಂದು ತುದಿಯ ಒಳ ಭಾಗದಲ್ಲಿ ಬೆಳೆವ ತಟ್ಟೆ ಇರುತ್ತದೆ. ಇದಕ್ಕೆ ಮೇಲೆಲು ಮೊಳೆವ ತಟ್ಟೆ (ಎಪಿಫೈಸಿಯಲ್ ಗ್ರೋತ್ ಪ್ಲೇಟ್) ಎನ್ನುತ್ತಾರೆ. ಈ ತಟ್ಟೆ ಎಲುಬೊಂದರ ತುದಿಯ ಮೆಲ್ಲಲು (ಎಪಿಫೈಸಿಸ) ಮತ್ತು ಕಾವು/ದಿಂಡು (ಶ್ಯಾಫ್ಟ್)ಗಳ ಮಧ್ಯದಲ್ಲಿದೆ. ಎಲುಬು ತುದಿಯಲ್ಲಿ ಬೆಳೆಯುತ್ತ ಉದ್ದವಾಗುತ್ತದೆ. ಎಲುಸುತ್ತರೆಯ ಒಳ ಮೈಯಿಂದ ಹಾಗೂ ಮೂಳೆಯೊಳ ಪರೆಯಿಂದ ಎಲುಬು ಗಾತ್ರದಲ್ಲಿ ಬೆಳೆಯುತ್ತದೆ. ಸಾಮಾನ್ಯವಾಗಿ ಬೆಳೆಯುವುದು 16–18 ವಯಸ್ಸಿಗೆ ಸೀಮಿತಗೊಂಡಿರುತ್ತದೆ. ಎಲುಬು ಬೆಳೆವುದು ಸ್ಥಗಿತಗೊಳ್ಳುತ್ತಿದ್ದಂತೆ ಬೆಳೆವತಟ್ಟೆ ಮಾಯವಾಗುತ್ತದೆ. ಎಲುಬು ಕರಗುವ, ಬೆಳೆವ ಕ್ರಿಯೆ, ಜೀವನ ಪರ್ಯಂತ ಎಲುಸುತ್ತರೆ ಮತ್ತು ಮೂಳೆಯೊಳ ಪೊರೆಯಿಂದ ನಿರಂತರವಾಗಿ ನಡೆಯುತ್ತದೆ.

**ಎಲುಬುಗಳ ಕಾರ್ಯ:** ದೇಹದೊಳಗಿನ ಕಾಲ್ಸಿಯಂನ 60 ಪ್ರತಿಶತ ಮೂಳೆಗಳಲ್ಲಿದೆ. ಉಳಿದದ್ದು ರಕ್ತ ರಸ (ಪ್ಲಾಸ್ಮಾ) ದಲ್ಲಿ ಹಾಗೂ ಇತರ ಕಣಗಳಲ್ಲಿ. ಹೃದಯ, ನರ, ಸ್ನಾಯುಗಳು ಸರಿಯಾಗಿ ತಮ್ಮ ತಮ್ಮ ಕೆಲಸ ನಿರ್ವಹಿಸಲು, ರಕ್ತ ಗರಣೆಕಟ್ಟಲು ಕಾಲ್ಸಿಯಂನ ಆವಶ್ಯಕತೆ ಇದೆ. ರಕ್ತ ರಸದಲ್ಲಿ ಇದರ ಸಾಂದ್ರತೆ ಒಂದೇ ಸಮನಾಗಿ ಉಳಿಯುವುದು ಅತ್ಯಾವಶ್ಯಕ. ಎಲುಬೊಳಗಿನ ಲವಣ ಸುಲಭವಾಗಿ ಕರಗುವುದಿಲ್ಲ. ಎಲುಬೊಳಗಣ ಕಾಲ್ಸಿಯಂ ಮತ್ತು ಫಾಸ್ಫರಸ್ ಮಟ್ಟ ಒಂದೇ ಸಮನಾಗಿರುವುದು ಸಹ ಅತೀ ಮುಖ್ಯವಾದದ್ದೆ. ಈ ಒಂದು ಸಮಾನತೆಯನ್ನು ಗುರಾಣಿಕ(ತೈರಾಯ್ಡ್) ಗ್ರಂಥಿಯ ಹಿಂಬದಿಯಲ್ಲಿ ಅಡಗಿ ಕುಳಿತಂತಿರುವ ನಾಲ್ಕು ಪುಟಾಣಿ ಗಾತ್ರದ ಬದಿಗುರಾಣಿಕ (ಪ್ಯಾರಾ ತೈರಾಯ್ಡ್) ಗ್ರಂಥಿಗಳು ನಿಯಂತ್ರಿಸುತ್ತವೆ.

ಜೀವನದುದ್ದಕ್ಕೂ ನಡೆಯುವ ಹ್ಯಾವರ್ಸಿಯನ್ ಮಂಡಲಗಳ ಮರುರೂಪಿಕೆಗೂ, ರಕ್ತ-ಮೂಳೆಗಳ ನಡುವೆ ನಡೆಯುವ ಸುಣ್ಣಾಂಶದ ವಿನಿಮಯದ ಹತೋಟಿಗೂ ನಿಕಟ ಸಂಬಂಧವಿದೆ. ಮೂಳೆ ಬೆಳೆಯುತ್ತಿರುವ ಸಮಯದಲ್ಲಿ ರಕ್ತದಿಂದ ಖನಿಜಾಂಶಗಳನ್ನು ಪಡೆಯುತ್ತದೆ. ರಕ್ತದೊಳಗೆ ಖನಿಜಾಂಶಗಳ ಪ್ರಮಾಣ ಕಡಿಮೆ ಬೀಳದಂತೆ ತನ್ನೊಳಗಿನದನ್ನು ನೀಡುತ್ತದೆ. ಬಹುಕಾಲದವರೆಗೆ ರಕ್ತರಸದ ಖನಿಜಾಂಶಗಳ ಪ್ರಮಾಣದಲ್ಲಿ ಇಳಿತ ಉಂಟಾದರೆ ಎಲುಬು ತನ್ನೊಳಗಿನ ಖನಿಜಾಂಶಗಳನ್ನು ಕಳಕೊಂಡು ಮೆತ್ತಗಾಗುವ ಸಂಭವವಿರುತ್ತದೆ. ಇಂತಹದ್ದು ಮಕ್ಕಳಲ್ಲಿ ಕಂಡರೆ 'ರಿಕೆಟ್ಸ್ ಎನ್ನುತ್ತಾರೆ ದೊಡ್ಡವರಲ್ಲಾದರೆ 'ಆಸ್ಟಿಯೋ ಮಲೇಶಿಯಾ' ಎನ್ನುತ್ತಾರೆ. ವಯಸ್ಸಾದಂತೆ, ಮಹಿಳೆಯರಲ್ಲಿ ಮುಟ್ಟು ಸ್ಥಗಿತಗೊಂಡಾದ ಮೇಲೆ, ಆಹಾರದಲ್ಲಿಯ ಪೌಷ್ಟಿಕಾಂಶದ ಕೊರತೆಯಾದರೆ, ಮದ್ಯ ಸೇವನೆ ಮಿತಿ ಮೀರಿದರೆ, ಸ್ಟಿರಾಯ್ಡ ಔಷದ ಸೇವನೆ ನಿರಂತರವಾಗಿ ಸಾಗಿದರೆ. ಎಲುಬಿನೊಳಗಣ ಅಂಟುತಂತುಗಳ ಸೊರಗುವಿಕೆ ಫಲಿಸುತ್ತದೆ. ಇದಕ್ಕೆ ಪೊಳ್ಳೆಲು (ಆಸ್ಟಿಯೋಪೊರೋಸಿಸ್) ಎನ್ನುತ್ತಾರೆ.



ಚಿತ್ರ 5 48 ತಾಸುಗಳಲ್ಲಿ ಮಾಯುತ್ತಿರುವ ಪಕ್ಕೆಲುಬಿನ ಎಲುಮುರಿಕೆಯ ಕೊಯ್ತ

**ವಿಕಿರಣ ಶಕ್ತ ಧಾತುಗಳು:** ರೇಡಿಯಂ, ಸ್ಟ್ರಾಂಷಿಯಂ ತೆರನ ವಿಕಿರಣ ಶಕ್ತಧಾತುಗಳು (ರೆಡಿಯೋ ಅಕ್ಟಿವ ಎಲಿಮೆಂಟ್ಸ್)ಯಾವುದೇ ಕಾರಣಕ್ಕೆ (ಚಿಕಿತ್ಸೆಗಾಗಿ ಬಳಸಿದರೂ) ಶರೀರದ ಒಳ ಸೇರಿದರೆ ಅವು ಹೆಚ್ಚಾಗಿ ಎಲುಬುಗಳಲ್ಲಿ ನೆಲಸುತ್ತವೆ. ಅನೇಕ ವರ್ಷಗಳವರೆಗೆ ಅವು ಅಲ್ಲೇ ಬೀಡು ಬಿಟ್ಟರೆ ಮೂಳೆಗೂ, ಮೂಳೆಯೊಳಗಿನ ಮಜ್ಜೆಗೂ ಹಾನಿಕಾರಕವಾಗುತ್ತವೆ. ಎಲುಬಿನೊಳಗೆ ರೇಡಿಯಂ ಬಹುಕಾಲ ಉಳಿದರೆ ಅದರಿಂದ ಉತ್ಪತ್ತಿಯಾಗುವ ವಿಕಿರಣತೆ ಮೂಳೆಯ ಮಾಂಸಗಂತಿ(ಸಾರ್ಕೋಮಾ)ಯನ್ನುಂಟು ಮಾಡಬಹುದು.*

**ಎಲುಬು ಮಜ್ಜೆ:** ರಕ್ತದಲ್ಲಿ ಎರಡು ಭಾಗಗಳು. ಒಂದು ದ್ರವದ್ದು ಇನ್ನೊಂದು ಕಣಗಳದ್ದು. ದ್ರವ ಭಾಗಕ್ಕೆ ರಕ್ತರಸ (ಪ್ಲಾಸ್ಮಾ) ಎಂದು ಹೆಸರು. ರಕ್ತಕಣಗಳಲ್ಲಿ ಅನೇಕ ವಿಧದ ಕಣಗಳಿವೆ. ಹಾಲ್‌ರಸಕಣ (ಲಿಂಫೋಸೈಟ್) ಒಂದನ್ನು ಬಿಟ್ಟು ಉಳಿದ ಎಲ್ಲ ಬಗೆಯ ರಕ್ತಕಣಗಳು, ಚಪ್ಪಟಿಕಗಳು ಮೂಳೆಗಳ ಒಳಗಿನ ಪೊಳ್ಳುಗಳಲ್ಲಿರುವ ಮಜ್ಜೆ (ಮ್ಯಾರೋ)ಯಿಂದ ಜನಿಸುತ್ತವೆ. ಎಲುಮಜ್ಜೆಯು ಮೃದುವಾದ ಮೆತುವಾದ ಊತಕ. ಹಸುಗೂಸಿನ ತೂಕದಲ್ಲಿ ಸು. ಶೇ. 2.3 ರಷ್ಟು 'ಎಲುಮಜ್ಜೆ' ಇರುತ್ತದೆ. ಬೆಳೆದಿರುವವರಲ್ಲಿ ಇದು ಎರಡು ಪಟ್ಟು ಹೆಚ್ಚಾಗುತ್ತದೆ. ಮಗುವಿನಲ್ಲಿ ಎಲುಮಜ್ಜೆಯ ಘನ ಅಳತೆ 65 ಮಿ.ಲೀ. ನಷ್ಟಿದ್ದು ದೊಡ್ಡವರಲ್ಲಿ 1.6 ರಿಂದ 3.2 ಲೀಟರುಗಳಷ್ಟಾಗುತ್ತದೆ.

ಮಜ್ಜೆಯಲ್ಲಿ ಕೊಬ್ಬಿನ ಊತಕ ಹೆಚ್ಚಾಗಿದ್ದರೆ ಹಳದಿಯಾಗಿ, ರಕ್ತ ಉತ್ಪಾದಿಸುವ ಊತಕ ಹೆಚ್ಚಾಗಿದ್ದರೆ ಕೆಂಪಾಗಿ ತೋರುವುದು. ಸುಮಾರು ಏಳನೆಯ ವಯಸ್ಸಿನ ತನಕ ದೇಹದೊಳಗಿನ ಮಜ್ಜೆ ಕೆಂಪಗೆ ಇರುತ್ತದೆ. ನಂತರ ಮಗು ಬೆಳೆದು ದೊಡ್ಡದಾದಂತೆ ಮಜ್ಜೆ ಕೊಬ್ಬುಗೂಡುವುದು ಹೆಚ್ಚಾಗುತ್ತ ಸಾಗುತ್ತದೆ. ಹೀಗಾಗಿ ಬೆಳೆದವರ ತಲೆಬುರುಡೆ, ಎದೆ ಚಕ್ಕೆ, ಪಕ್ಕೆಲುಬುಗಳು, ಕೊರಳೆಲುಬುಗಳು, ಬೆನ್ನುಗಂಬ ತೊಡೆಮೂಳೆ ಅಲ್ಲದೆ ತೋಳಿನ ಮೇಲ್ತೊನೆಗಳಲ್ಲಿ ಮಾತ್ರ ಕೆಂಪು ಮಜ್ಜೆ ಉಳಿಯುತ್ತದೆ. ಆವಶ್ಯಕತೆಯ ಹಲವು ತುರ್ತಿನ ಸಮಯಗಳಲ್ಲಿ ಮಾತ್ರ ಹಳದಿ ಮಜ್ಜೆ ಕೆಂಪಾಗುತ್ತದೆ. ಯಾವುದೇ ಕಾರಣದಿಂದಾಗಿ ರಕ್ತ ಉತ್ಪಾದನೆಯ ಚಟುವಟಿಕೆ ಹೆಚ್ಚಿದಾಗಲೂ ಹಳದಿ ಮಜ್ಜೆ ಕೆಂಪಾಗುತ್ತದೆ.

ನವಿರ್ಜಾಲಕ (ರೆಟಿಕ್ಯುಲಾರ್) ತಂತುಗಳು ಬಲೆ ಹೆಣೆದಂತೆ ಹರಡಿರುತ್ತವೆ. ನವಿರ್ಜಾಲಕ ಜೀವಕಣಗಳು ಆ ತಂತುಗಳಿಗೆ ಅಡ್ಡ ಚಾಚಿಕೊಂಡು ಸ್ಪಂಜಿನಂತೆ ಕಾಣುತ್ತವೆ. ಎಲುಮಜ್ಜೆಯ ತುಂಬೆಲ್ಲ ಇವೆರಡರ ರಚನೆಗಳು ಕಂಡು ಬರುತ್ತದೆ. ನವಿರ್ಜಾಲ ಜೀವಕಣಗಳಲ್ಲಿ ಎರಡು ಬಗೆಯ ಕಣಗಳಿವೆ 1) ನೆಲೆಸಿದ ನಿಡುತಿನಿ ಕಣಗಳು (ಮ್ಯಾಕ್ರೊಫಾಜ್) ಮತ್ತು 2) ಮೂಲರೂಪದ ನವಿರ್ಜಾಲಕ ಕಣಗಳು. ನೆಲೆಸಿದ ನಿಡುತೀನಿಕಣಗಳು ರಕ್ತದ ಪರಿವಿನಿಂದ ಸಣ್ಣಪುಟ್ಟ ಚೂರುವಸ್ತುಗಳನ್ನು ಎತ್ತಿಕೊಂಡು ಕಬಳಿಸುತ್ತವೆ. ಮೂಲರೂಪದ ನವಿರ್ಜಾಲಕ ಕಣಗಳು ನಡುತೀನಿಕ ಕಣಗಳಾಗಿ ಬದಲಾಗಬಲ್ಲವು. ಇಲ್ಲವೆ ಸಾಧಾರಣ ರಕ್ತದ ಕಣಗಳಾಗಿ ಬೆಳೆಯಬಲ್ಲವು. ಬಲಿತ ಕೆಂಪುರಕ್ತಣಗಳು, ಹರಳುಗೂಡಿದ ಬಿಳಿ ರಕ್ತದ ಕಣಗಳಾಗಿ ಬೆಳೆಯಬಲ್ಲವು. ಬಲಿತ ಕೆಂಪು ರಕ್ತಕಣಗಳು, ಹರಳುಗೂಡಿದ ಬಿಳಿರಕ್ತ ಕಣಗಳಾದ "ಹರಳು ಕಣಗಳು" (ಗ್ರ್ಯಾನ್ಯುಲೋಸೈಟ್ಸ್) ತಂತುಗಳ ಜೀವಕಣಗಳ ಬಲೆಯಲ್ಲಿ ಇರುತ್ತವೆ. ಮಜ್ಜೆಮೊಳೆಕಣ (ಮಯಲೋಬ್ಲಾಸ್ಟ್) ಮತ್ತು ಹಾಲುರಸಮೊಳೆಕಣ (ಲಿಂಫೊಬ್ಲಾಸ್ಟ್) ಒಂದೇ ತಾಯಿ ಕಣದಿಂದ ಜನಿಸಿದವೆಂಬ ವಾದ ಕೆಲವರು ಒಪ್ಪಿದರೆ ಇತರರು ಒಪ್ಪುವುದಿಲ್ಲ. ಎಲುಮಜ್ಜೆ ಮೂಲಕಣವು, ಹಾಲುರಸಕಣಗಳ ರೂಪದಲ್ಲಿ, ನಿಜಗೆಲಸದಲ್ಲಿ ಬೇರೆ ಬೇರೆ ಆಗಿರುವುದು ಇನ್ನೂವರೆಗೆ ಯಾರೂ ಸ್ಥಿರಪಡಿಸಿಲ್ಲ. ಹಾಲುರಸಮೊಳೆಕಣ ಮತ್ತು ಹಾಲುಕಣಗಳಲ್ಲಿ ಹೆಚ್ಚಿನ ವ್ಯತ್ಯಾಸಗಳು ಇಲ್ಲ. ಹೀಗಾಗಿ ಮೂಲಕಣಗಳಿಗೆ ರಕ್ತಮೊಳೆಕಣ (ಹೀಮೋಸೈಟೋಬ್ಲಾಸ್ಟ್) ಎಂದು ಕರೆದರೆ ಸಾಕು.

ಎಲುಬುಮಜ್ಜೆ ಮೂಲಕಣ ಕೆಂಪು ರಕ್ತಕಣವಾಗಿ ಬೆಳೆದಂತೆಲ್ಲ ಅದರ ಕಣರಸದಲ್ಲಿ (ಸೈಟೋಪ್ಲಾಸ್ಮ್) ರಕ್ತ ಬಣ್ಣಕ (ಹೀಮೋಗ್ಲಾಬಿನ್) ಕೂಡಿಕೊಳ್ಳುತ್ತದೆ. ಕೆಲವು ರಕ್ತಕಣದ ತಾಯಿಕಣದಲ್ಲಿ ನ್ಯೂಕ್ಲೀಯಿಕ್‌ಆಮ್ಲ, ರಕ್ತ ಬಣ್ಣಕಗಳಿರುತ್ತವೆ. ಆದರೆ ಬರುಬರುತ್ತ ನ್ಯೂಕ್ಲಿಯಕಾಮ್ಲದ ಬದಲಾಗಿ ರಕ್ತ ಬಣ್ಣಕವೇ ತುಂಬಿಕೊಳ್ಳುತ್ತದೆ. ಆಗ ನಡುಬೀಜದ (ನ್ಯೂಕ್ಲಿಯಸ್) ಬಣ್ಣವೇರಿ ದುಂಡಾಗಿ ಸಮನೆಕಣ (ನಾರ್ಮೊಬ್ಲಾಸ್ಟ್) ವಾಗುತ್ತದೆ. ಇದರೊಳಗಿರುವ ನಡುಬೀಜ ಕರಗಿ ಸಹಜವಾದ ನಡುಬೀಜವಿರದ ಕೆಂಪು ರಕ್ತಕಣವಾಗುತ್ತದೆ.

ಎಲುಬುಮಜ್ಜೆಯ ಮೂಲಕಣದ ಕಣರಸದಲ್ಲಿ ಹರಳುಗಳು ಹುಟ್ಟಿಕೊಂಡು ನಡುಬೀಜದಲ್ಲೂ ಒಂದಿಷ್ಟು ಬದಲಾವಣೆಗಳಾಗಿ ಹರಳುಕಣಗಳು ಜನ್ಮ ತಾಳುತ್ತದೆ. ಅಂತ್ಯದಲ್ಲಿ ತಯಾರಾಗುವ ರಕ್ತದ ಬಿಳಿಕಣದ ಗುಣಲಕ್ಷಣಗಳಿಗೆ ತಕ್ಕಂತೆ ಅದರ ಹರಳುಗಳು ಕೆಂಪಾನುರಾಗಿಕ (ಇಯೋಸಿನೊಫಿಲ್); ಮಾರಾಮ್ಲಾನುರಾಗಿಕ (ಬೇಸೋಫಿಲ್) ಕಣಗಳಾಗುವವು. ಇವೆರಡೂ ಕಣಗಳು ಮಜ್ಜೆಕಣ (ಮಯಲೋಸೈಟ) ಗಳಿಂದ ರಚನೆಗೊಂಡಿರುತ್ತವೆ.

ರಕ್ತದ ಜೀವಕಣಗಳ ಮತ್ತು ಕೊಬ್ಬಿನ ಜೀವಕಣಗಳ ನಡುವೆ 'ತೋರನಡುಬೀಜಕಣ' (ಮೆಗಾಕ್ಯಾರಿಯೊಸೈಟ್ಸ್) ಗಳಿವೆ. ಬಹಳ ದೊಡ್ಡಗಾತ್ರದ ಈ ಜೀವಕಣಗಳ ಜೀವರಸ (ಪ್ರೋಟೊಪ್ಲಾಸ್ಮ್)ದ ಸಣ್ಣ ಸಣ್ಣ ತುಣುಕುಗಳೇ ರಕ್ತದ ಚಪ್ಪಟಿಕಗಳಾಗುತ್ತವೆಂದು ನಂಬಿಕೆ ಇದೆ.

ಹೊಸದಾಗಿ ತಯಾರಾದ ಜೀವಕಣಗಳುಳ್ಳ ರಕ್ತಧಮನಿಗಳ ಮೂಲಕ ಎಲುಬುಮಜ್ಜೆ ಸೇರುತ್ತದೆ. ಅಲ್ಲಿಂದ ಮುಂದೆ ತೆಳುಗೋಡೆ ಹೊಂದಿದ ದೊಡ್ಡ ನಾಳಗುಳಿಗಳ (ಸೈನುಸಾಯ್ಡ್ಸ್) ಮೂಲಕ ಸಿರಗಳೊಳಕ್ಕೆ (ವೇನ್ಸ) ರಕ್ತ ಹರಿಯುತ್ತದೆ. ಈ ನಾಳಗುಳಿಗಳ ಒಳಪೊರೆಯಲ್ಲಿ ನಿಡುತೀನಿಕಣದಂತೆ ಕಬಳಿಸುವ ನವಿರುಜಾಲಕಕಣಗಳಿರುತ್ತವೆ. ಈ ಜೀವಕಣಗಳು ಇಲ್ಲಿಂದ ದುಂಡಾಗಿ, ಬಿಡಿಯಾದ ನಿಡುತೀನಿಕಣಗಳಾಗಿ ನಾಳಗುಳಿ ಯೊಳಗೆ ಸೇರಿಕೊಳ್ಳಬಲ್ಲವು.

ಪರ್ವತಗಳ ಎತ್ತರದ ಏರಿನಲ್ಲಿ ಆಗುವಂತೆ ಉಸಿರಲ್ಲಿ ಆಮ್ಲಜನಕದ ಪ್ರಮಾಣ ತಗ್ಗಿದರೆ ಕೆಂಪುರಕ್ತ ಕಣಗಳು ಹೆಚ್ಚು ಹೆಚ್ಚಾಗಿ ತಯಾರಾಗುತ್ತವೆ. ಕೋಬಾಲ್ಟ್ ತೆರನ ಕೆಲವು ರಸಾಯನಿಕಗಳಿಂದಲೂ ಹೀಗಾಗುವುದು. ಕೆಲವು ರೋಗಗಳಲ್ಲಿ ಎಲುಬುಮಜ್ಜೆಯಲ್ಲಿ ವಿಶಿಷ್ಟ ಬದಲಾವಣೆಗಳಾಗುವುದು. ಇದನ್ನು ಕಂಡುಕೊಳ್ಳಲು ಎದೆ ಚಕ್ಕೆಯಲ್ಲಿ (ಸ್ಟರ್ನಂ) ತೂತಿಟ್ಟು ಸೂಜಿಯಿಂದ ಎಲುಬೊಳಗಿರುವ ಮಜ್ಜೆ ಹೀರಿ ತೆಗೆದು ಪರೀಕ್ಷಿಸುತ್ತಾರೆ.

ಎಕ್ಸ್ ಕಿರಣಗಳು, ಪರಮಾಣುಬಾಂಬ್ ಸಿಡಿತದಿಂದಾಗುವ ವಿಕಿರಣತೆಯಿಂದ ಎಲುಬುಮಜ್ಜೆಗೆ ಹಾನಿಯಾಗುತ್ತದೆ. ರಕ್ತದ ಜೀವಕಣಗಳ ಉತ್ಪತ್ತಿ ಕುಂಠಿತಗೊಳ್ಳುತ್ತದೆ. ಇಂತಹ ಸಂದರ್ಭಗಳಲ್ಲಿ ಎಲುಬುಮಜ್ಜೆ ಪೂರಣ (ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟ್) ಮಾಡಿದರೆ ಮಜ್ಜೆ ಚೇತರಿಸಿಕೊಂಡು ಮೊದಲಿನಂತಾಗುತ್ತದೆ. ಎಲುಬುಮಜ್ಜೆಯಲ್ಲಿ ಕಾಣುವ ಕಾಂಡಕಣ(ಸ್ಟೆಮ್ ಸೆಲ್ಸ್)ಗಳನ್ನು ದಾನಿಗಳಿಂದ ಪಡೆದು ಸಂರಕ್ಷಿಸಿ ಶೇಖರಿಸಿಟ್ಟು ನಂತರ ಕೆಲವು ವಿಶಿಷ್ಟ ಚಿಕಿತ್ಸೆಯಲ್ಲಿ ಪೂರಣ ಮಾಡಿ ಸಂತಸದಾಯಕ ಫಲಪಡೆಯುವಲ್ಲಿ ವಿಜ್ಞಾನಿಗಳು ಯಶಸ್ಸು ಪಡೆದಿದ್ದಾರೆ (**ನೋಡಿ–ಎಲುಬಿನ ರೋಗಗಳು**). (ಡಿ.ಎಸ್.ಎಸ್)

**ಎಲುಬು ಮೀನುಗಳು :** ಇವು ಮೀನುಗಳಲ್ಲಿನ ಎರಡು ವರ್ಗಗಳಲ್ಲೊಂದು (ಆಸ್ಟಿಕ್ತಿಯೀಸ್). ಇನ್ನೊಂದು ವರ್ಗದವು ಕೋಮಲಾಸ್ಥಿ ಮೀನುಗಳು (*ಕಾಂಡ್ರಿಕ್ತಿಯೀಸ್*). ಇಂದು ಜೀವಿಸಿರುವ ಮೀನುಗಳಲ್ಲಿ ಅನೇಕ ಜಾತಿಯವು ಎಲುಬು ಮೀನುಗಳೇ ಆಗಿವೆ. ಇವುಗಳಿಗೆ ಕಾಸ್ಮಾಯ್ಡ್ ಅಥವಾ ಗನಾಯ್ಡ್ ಬಗೆಯ ಹುರುಪೆಗಳಿವೆ. ಬಾಲದ ರೆಕ್ಕೆ ಸಮಲಾಂಗೂಲ ಅಥವಾ ದ್ವಿಪಾರ್ಶ್ವ ಸಮಲಾಂಗೂಲ ಬಗೆಯದಾಗಿರುತ್ತದೆ. ರೆಕ್ಕೆಯ ಕಡ್ಡಿಗಳು ಎಲುಬಿನಿಂದ ರಚಿತವಾಗಿವೆ. ಕಿವಿರುತಂತುಗಳನ್ನು ಒಂದು (ತೆಳುವಾದ) ಪೊರೆ ಮುಚ್ಚಿರುತ್ತದೆ. ಈ ಪೊರೆಯನ್ನು ಅಪರ್ಕ್ಯುಲಂ ಅಥವಾ ಕಿವಿರು ಕವಚ ಎಂದು ಕರೆಯುತ್ತಾರೆ. ಕೆಳದವಡೆ ಅನೇಕ ಮೂಳೆಗಳಿಂದ ಮಾಡಲ್ಪಟ್ಟಿರುತ್ತದೆ. ಗರ್ಭಾಂಕುರತೆ ಸಾಮಾನ್ಯವಾಗಿ ದೇಹದೊಳಗಾಗದೆ ಹೊರಾವರಣದಲ್ಲೇ ಆಗುತ್ತದೆ. ಅಂಡಾಶಯದ ಜೊತೆಗೇ ಅಂಡನಳಿಕೆಗಳು ಅವಿರತವಾಗಿರುತ್ತವೆ.



**ಚಿತ್ರ 1 ಆಂಟೆನೇರಿಯಸ್ (ಗಾಳದ ಮೀನು)**

ಕೆಲವು ವರ್ಷಗಳ ಹಿಂದೆ, ಎಲುಬು ಮೀನುಗಳು ಶಾರ್ಕ್ ಮಾದರಿಯ ಮೀನು ಗಳಿಂದ ಉದ್ಭವಿಸಿರಬಹುದೆಂದೂ ಆದ್ದರಿಂದ ಇವುಗಳ ಎಲುಬು ಒಂದು ಹೊಸ ಗಳಿಕೆ ಎಂದೂ ನಂಬಿದ್ದರು. ಆದರೆ ಆ ರೀತಿಯಾಗದೆ ಎಲುಬು ಮೀನುಗಳಲ್ಲಿ ಎಲುಬು, ಆಸ್ಟ್ರಕೋಡರ್ಮ್ ಮತ್ತು ಪ್ಲಾಕೊಡರ್ಮ್ ಮೀನುಗಳಲ್ಲಿದ್ದ ಹಾಗೆ ಆದಿಯಿಂದಲೂ ಇದ್ದು, ಉಳಿದುಕೊಂಡು ಬಂದಿರುವುದಲ್ಲದೆ ಕ್ರಮೇಣ ಅವುಗಳ ನವೀನ ಕಾರ್ಯಾಚರಣೆಗೆ ಹೊಂದಿಕೊಂಡಿದೆ ಎಂದು ಇತ್ತೀಚಿನ ಪ್ರಾಣಿವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ವಿಕಸನ ಪಥದಲ್ಲಿ ಸಾಕಷ್ಟು ಮುಂದುವರೆದಿದ್ದು ಪ್ರಪಂಚದ ವೈವಿಧ್ಯ ಜಲಪರಿಸರಗಳಿಗೆ ಹೊಂದಿಕೊಂಡು ಬದುಕಲು ಕಲಿತಿವೆ. ತದ್ವಿರುದ್ಧವಾಗಿ ಮೃದ್ವಸ್ಥಿ ಮೀನುಗಳು ಕಡಲನ್ನು ಬಿಟ್ಟರೆ ಸಿಹಿನೀರು ಪ್ರದೇಶಗಳಲ್ಲಿ ಕಾಣಸಿಗುವುದು ಕಡಿಮೆ.

ಈ ಮೀನುಗಳಿಗೆ ಬಹು ಪ್ರಾಚೀನವಾದ ಇತಿಹಾಸವಿದೆ. ಇವು ಡಿವೊನಿಯನ್ ಯುಗದಲ್ಲೇ ಇದ್ದುವೆಂಬುದಕ್ಕೆ ಜೀವಾವಶೇಷಗಳ ಆಧಾರವಿದೆ. ಆದ್ದರಿಂದ ಎಲುಬು ಮೀನುಗಳು ಶಾರ್ಕ್ ಮೀನುಗಳಿಗಿಂತಲೂ ಹಳೆಯವು. ಮಧ್ಯ ಡಿವೊನಿಯನ್ ಕಾಲದಲ್ಲೇ ಎಲುಬು ಮೀನುಗಳು ಸಿಹಿ ನೀರಿನಲ್ಲಿ ಪ್ರಧಾನವಾದ ಪ್ರಾಣಿಗಳಾಗಿದ್ದು ಪ್ರಾಚೀನ ಜೀವ ಕಲ್ಪದ (ಪೇಲಿಯೊಝೋಯಿಕ್) ಉತ್ತರಾರ್ಧದ ಅಂತ್ಯದಲ್ಲಿ ಹೆಚ್ಚಿನ ಜಾತಿಗಳು ಮತ್ತು ಪ್ರಭೇದಗಳನ್ನೊಳಗೊಂಡು ಬಹಳ ಹೆಚ್ಚಿನ ಸಂಖ್ಯೆಯಲ್ಲಿದ್ದುವು. (ಮೀಸೊಝೋಯಿಕ್) ಕಾಲದಲ್ಲಿ ಅವು ಸಮುದ್ರಗಳಿಗೆ ವಲಸೆ ಹೋಗಿ ನೆಲೆಸಲಾರಂಭಿಸಿದುದರಿಂದ ಸಮುದ್ರವೇ ಅವುಗಳ ಮುಖ್ಯ ಸ್ಥಾನವಾಯಿತು.

ಶ್ವಾಸಕೋಶಗಳು ಎಲ್ಲ ಪ್ರಾಚೀನ ಎಲುಬು ಮೀನುಗಳಲ್ಲೂ ಇದ್ದಂತೆ ಕಾಣುತ್ತದೆ. ಆದರೆ ಆಧುನಿಕ ಎಲುಬು ಮೀನುಗಳಲ್ಲಿ ಅಂಥ ರಚನೆಗಳು ಸಾಮಾನ್ಯವಾಗಿ ಕಂಡುಬಂದಿಲ್ಲ. ಒಂದುವೇಳೆ ಅಂಥವು ಇದ್ದಲ್ಲಿ ಅವು ಗಾಳಿಯಕೋಶಗಳಾಗಿ ಮಾರ್ಪಾಡು ಹೊಂದಿವೆ. ಋತುಗಳನ್ನನುಸರಿಸಿ ಸಿಹಿನೀರಿನ ಕೆರೆಕುಂಟೆಗಳು ಬತ್ತಿದಾಗ, ಶ್ವಾಸಕೋಶಗಳು ಈ ಮೀನುಗಳಿಗೆ ಉಸಿರಾಡಲು ಸಹಾಯಕವಾಗಿದ್ದು ಅವು

ಜೀವಂತವಾಗಿರುವುದಕ್ಕೆ ಅನುಕೂಲವಾಗುತ್ತಿದ್ದವೆಂದು ಕಾಣುತ್ತದೆ. ಪ್ರಾಚೀನ ಎಲುಬು ಮೀನುಗಳು ವಾಸವಾಗಿದ್ದ ಸಿಹಿನೀರಿನ ಕೆರೆಕುಂಟೆಗಳು ಆಗಾಗ್ಗೆ ಬತ್ತಿಹೋಗುತ್ತಿದ್ದಿರಬೇಕು. ವಾತಾವರಣ ಬದಲಾದ ನಂತರ ಕೆಲವು ಜೀವಂತವಾಗಿದ್ದ ಎಲುಬು ಮೀನುಗಳು ಸಮುದ್ರವನ್ನು ಮತ್ತೆ ಸೇರಿದಮೇಲೆ ಶ್ವಾಸಕೋಶ ತನ್ನ ಪ್ರಾಧಾನ್ಯಯನ್ನು ಕಳೆದುಕೊಂಡಿತು.

ಈ ವರ್ಗವನ್ನು ಎರಡು ಉಪವರ್ಗಗಳನ್ನಾಗಿ ವಿಂಗಡಿಸಲಾಗಿದೆ: ಉಪವರ್ಗ 1. ಕೊಯೊನಿಕ್ಥಿಸ್ ಉಪವರ್ಗ 2: ಆಕ್ಟಿನೊಟೆರಿಜಿಯ

**ಕೊಯನಿಕ್ಥಿಸ್:** ಈ ಉಪವರ್ಗದ ಮೀನುಗಳಿಗೆ ಮೂಗಿನ ಹೊಳ್ಳೆಗಳು ಒಳಗಿದ್ದು ಶ್ವಾಸಕೋಶಗಳ ಸಹಾಯದಿಂದ ಉಸಿರಾಡಲು ಅನುಕೂಲವಿದೆ. ಡಿವೊನಿಯನ್ ಕಾಲದಿಂದಲೂ ಕಂಡುಬಂದಿರುವ ಈ ಜಾತಿಯ ಮೀನುಗಳಿಗೆ ವಿಕಾಸದಲ್ಲಿ ಬಹು ಪ್ರಾಮುಖ್ಯವಿದೆ. ಅನೇಕ ಪ್ರಾಣಿವಿಜ್ಞಾನಿಗಳು ಈ ವರ್ಗದ ಒಂದು ಗುಂಪಿನ ಮೀನುಗಳಿಂದಲೇ ದ್ವಿಚರ ಪ್ರಾಣಿಗಳು ಹುಟ್ಟಿಕೊಂಡುವೆಂದು ಹೇಳುತ್ತಾರೆ. ಆಸ್ಟಿಕ್ಥಿಯೀಸ್ ವರ್ಗದ ಆಕ್ಟಿನೊಟೆರಿಜಿಯೈ ಉಪವರ್ಗದ ಮೀನುಗಳಿಗಿಂತಲೂ ವಿಕಾಸದಲ್ಲಿ ಈ ಮೀನುಗಳು ಬಹು ಮುಂದಿವೆ ಎಂಬುದಕ್ಕೆ ಆಧಾರಗಳು ದೊರೆತಿಲ್ಲ. ಕೊಯನಿಕ್ಥೀಯೀಸ್ ಮೀನುಗಳು ಸಂಖ್ಯೆಯಲ್ಲಿ ಸಾಕಾದಷ್ಟಿದ್ದರೂ ಪ್ರಭೇದಗಳು ಮಾತ್ರ ಕೆಲವು. ಈ ಉಪವರ್ಗದಲ್ಲಿ ಎರಡು ಗುಂಪುಗಳಿವೆ : 1 ಕ್ರಾಸೊಟೆರಿಜಿಯೈ, ಲೋಬ್‌ಫಿನ್ ಮೀನುಗಳದ್ದು. 2 ಡಿಪ್ನಾಯ್. ಶ್ವಾಸ ಕೋಶದ ಮೀನುಗಳು (ಲಂಗ್ ಫಿಶಸ್)

**ಕ್ರಾಸೊಟೆರಿಜಿಯೈ:** ಡಿವೊನಿಯನ್ ಕಾಲದಲ್ಲಿ ಈ ಜಾತಿಯ ಮೀನುಗಳ ಸಂಖ್ಯೆ ಬಹು ಅಧಿಕವಾಗಿತ್ತು. ದ್ವಿಚರ ಪ್ರಾಣಿಗಳಿಗೆ ಮತ್ತು ತನ್ಮೂಲಕ ಮತ್ತೆಲ್ಲ ಕಶೇರುಮಣಿಸ್ತಂಭ ಪ್ರಾಣಿಗಳಿಗೆ ಪೂರ್ವಜಗಳಾಗಿದ್ದ ಈ ಮೀನುಗಳಿಗೆ ಪಳೆಯುಳಿಕೆಯ ಶಾಸ್ತ್ರದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಇವುಗಳ ಜೋಡಿ ಈಜುರೆಕ್ಕೆಯ ಬುಡದಲ್ಲಿ ಒಂದು ಬಗೆಯ ಮಾಂಸದ ಪಟಲವಿರುತ್ತಿತ್ತು. ಈ ಪಟಲಕ್ಕೆ ಮೂಳೆಯ ಆಧಾರವಿತ್ತು. ಈ ಗುಣವನ್ನು ಪರಿಶೀಲಿಸಿದರೆ ಇತರ ಭೂಚರ ಕಶೇರುಕಗಳಿಗೆ ಇದೇ ರೀತಿಯ ಸಾಮ್ಯವಿರುವುದು ಕಂಡುಬರುತ್ತದೆ. ಬಹುಶಃ ಅಸ್ಥಿಯ ಆಧಾರವಿದ್ದ ಮಾಂಸದ ಪಟಲ ರೆಕ್ಕೆಯ ತಳಭಾಗದಲ್ಲಿದ್ದುದರಿಂದಲೇ ಈ ಮೀನುಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಲು ಸಹಾಯವಾಗುತ್ತಿತ್ತೆಂದು ಕಾಣುತ್ತದೆ. ಈ ಜಾತಿಯ ಮೀನುಗಳಿಗೆ ಪೈನಿಯಲ್ ರಂಧ್ರ ಪರೈಟಲ್ ಮೂಳೆಗಳ ಮಧ್ಯದಲ್ಲಿರುವುದು ಕಂಡುಬಂದಿದೆ. ಹಲ್ಲುಗಳಿಗೆ ಸುತ್ತು ಸುತ್ತಾದ ರಚನೆ ಇದೆ. ಈ ಜಾತಿಯ ಮೀನುಗಳಲ್ಲಿ 3 ಗುಂಪುಗಳಿವೆ. ಪೋರೊಲೆಪಿಡ್, ಆಸ್ಟಿಯೊಲೆಪಿಡ್, ಮತ್ತು ಸೀಲಕಾಂತ್. ಪೋರೊಲೆಪಿಡ್ ಮತ್ತು ಆಸ್ಟಿಯೊಲೆಪಿಡ್ ಮೀನುಗಳು ಡಿವೋನಿಯನ್ ಮತ್ತು ಪರ್ಮಿಯನ್ ಕಾಲಗಳಲ್ಲಿ ಜೀವಿಸಿದ್ದುವು. ಇವು ಪೇಲಿಯೋಜೋಯಿಕ್ ಯುಗ ಮುಗಿಯುವುದರೊಳಗೆ ಅಳಿದು ಹೋದ ಮೀನುಗಳು. ಈ ಸಣ್ಣ ಗುಂಪಿನ ಮೀನುಗಳಿಗೆ ದ್ವಿಚರ ಪ್ರಾಣಿಗಳ ಅನೇಕ ಗುಣಗಳಿವೆ. ಅಷ್ಟೊಂದು ಸಾಮ್ಯವಿರುವುದರಿಂದಲೇ ದ್ವಿಚರ ಪ್ರಾಣಿಗಳು ಈ ಮೀನುಗಳಿಂದ ಹುಟ್ಟಿಕೊಂಡಿರಬಹುದು ಎಂದು ಊಹಿಸಲಾಗಿದೆ. ಆಸ್ಟಿಯೋಲೆಪಿಸ್ ಮ್ಯಾಕ್ರೊ ಲೆಪಿಡೊತಸ್ ಮೀನು ಈ ಗುಂಪಿನಲ್ಲಿ ಗೊತ್ತಾದ ಮೊಟ್ಟಮೊದಲನೆಯ ಪ್ರಭೇದ. ಈ ಮೀನಿನಿಂದ ಈ ಗುಂಪಿನ ಮುಖ್ಯ ಗುಣಗಳನ್ನೂ ವಿಶಿಷ್ಟ ಗುಣಗಳನ್ನೂ ತಿಳಿಯಬಹುದು. ಆದಿಯ ಅಕ್ಟಿನೊಟೆರಿಜಿಯೈ ಮೀನುಗಳೊಡನೆ ಹೋಲಿಸಿದರೆ ಈ ಗುಂಪಿನ ಮೀನುಗಳಲ್ಲಿ ಅನೇಕ ಸಾಮಾನ್ಯ ಅಂಶಗಳಲ್ಲದೆ ಕೆಲವು ಮೂಲಭೂತ ಅಂಶಗಳಾದ ಒಳಮೂಗಿನ ಹೊಳ್ಳೆ, ಕಾಸ್ಮಾಯ್ಡ್ ಹುರುಪೆಗಳ ರಚನೆ ಮತ್ತು ತಲೆಯ ಮೂಳೆಗಳಲ್ಲಿ ವ್ಯತ್ಯಾಸಗಳಿದ್ದುವು. ಇವುಗಳಲ್ಲಿ ಒಂದು ರೆಕ್ಕೆಯ ಬದಲು ಎರಡು ಮೇಲು ರೆಕ್ಕೆಗಳಿದ್ದು ಸಣ್ಣ ಕಣ್ಣುಗಳ ರಚನೆ ಮತ್ತು ಜೋಡು ಈಜು ರೆಕ್ಕೆಗಳು ಆರ್ಕಿಟೆರಿಜಿಯಂ ರೀತಿಯವಾಗಿದ್ದು ಒಂದೇ ಒಂದು ಬುಡದ ಮೂಳೆ ಭುಜಕಟಿ ಬಂಧದೊಡನೆ ಕೀಲಿನಂತಿತ್ತು. ಹಲ್ಲುಗಳೂ ಸಾಮಾನ್ಯ ರೀತಿಯಲ್ಲಿರದೆ ತಿರುಪಿನಂತೆ ಸುತ್ತು ಸುತ್ತಾಗಿದ್ದುವು. ಈ ಗುಣಲಕ್ಷಣಗಳು ಈ ಗುಂಪಿನ ಕೆಲವು ಮೊದಲಿನ ಪ್ರಾಣಿಗಳಿಂದ ಚತುಷ್ಪಾದಿಗಳಿಗೆ ನಡೆದು ಬಂದಿವೆ. ಇದನ್ನು ಆದಿ ದ್ವಿಚರಿಗಳಲ್ಲಿ ಕಾಣಬಹುದು.

**ಸೀಲಕಾಂತ್ ಮೀನುಗಳು:** ಈ ಮೀನುಗಳು ಸುಮಾರು 60 ದಶಲಕ್ಷ ವರ್ಷಗಳ ಹಿಂದೆಯೇ (ಕ್ರಿಟೇಶಿಯಸ್ ಯುಗ) ಅಂತ್ಯಗೊಂಡುವು ಎಂದು ಬಹಳ ದಿನಗಳವರೆಗೂ ವಿಜ್ಞಾನಿಗಳೂ ತಿಳಿದುಕೊಂಡಿದ್ದರು. ಆದರೆ ಡಿಸೆಂಬರ್ 22, 1938 ರಲ್ಲಿ ಈ ಗುಂಪಿಗೆ ಸೇರಿದ ಒಂದು ಜೀವಂತವಾದ ಮೀನು ದಕ್ಷಿಣ ಆಫ್ರಿಕಾ ತೀರದಲ್ಲಿ ಸಿಕ್ಕಿತು. ಇದಕ್ಕೆ **ಲ್ಯಾಟಿಮೀರಿಯ ಕಾಲಮ್ನೆ** ಎಂದು ಹೆಸರು. ಮುಂದೆ 1952ರಲ್ಲಿ ಇನ್ನೊಂದು ಮೀನು ಸಿಕ್ಕಿ ಅದರ ರಚನೆಯನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಯಿತು. ಈ ಮೀನಿನಲ್ಲಿ ಅದರ ಗತಕಾಲದ ಅನೇಕ ಗುಣಗಳು ಕಂಡುಬಂದಿರುವುದರಿಂದ ಅದಕ್ಕೆ ಜೀವಂತ ಪಳೆಯುಳಿಕೆ ಎಂದು ಕರೆಯುತ್ತಾರೆ. ಸೀಲಕಾಂತ್ ಮೀನುಗಳು ಮೂಲದಲ್ಲಿ ಸಿಹಿನೀರಿನ ವಾಸಿಗಳು. ಅವುಗಳ ಒಂದು ಗುಂಪು ಸಾಗರವನ್ನು ಸೇರಿ ಅಲ್ಲಿನ ವಾಸಕ್ಕೆ ಅಭ್ಯಾಸ ಮಾಡಿಕೊಂಡುವು. ಇವುಗಳ ಪಳೆಯುಳಿಕೆಗಳು ಸಿಹಿನೀರು ಮತ್ತು ಉಪ್ಪುನೀರಿನ ನಿಕ್ಷೇಪಗಳಲ್ಲಿ ಸಿಕ್ಕಿವೆ. ಲ್ಯಾಟಿಮೀರಿಯ ಮೀನಿನ ಗುಣಲಕ್ಷಣಗಳು ಈಗ ಆದಷ್ಟು ವಿಶದವಾಗಿ ತಿಳಿದಿದೆ. ಈಜುರೆಕ್ಕೆ, ಬಾಲದರೆಕ್ಕೆ, ಮತ್ತು ಈಜುಚೀಲ (ಕೋಶ)– ಇವುಗಳ ರಚನೆಯಲ್ಲಿ ವಿಶೇಷ ಗುಣಲಕ್ಷಣಗಳಿವೆ. ಈಗ ಈ ಗುಂಪು ಸೀಲಕಾಂತಿಡೀ ಕುಟುಂಬದಿಂದ ಉಳಿದಿದೆ.



ಚಿತ್ರ 2 ಲ್ಯಾಟಿಮೀರಿಯ (ಸಿಲಕಾಂತ್ ಮೀನು)

**ಡಿಪ್ನಾಯ್:** ಈ ಮೀನುಗಳನ್ನು ಪುಪ್ಪಸ ಮೀನುಗಳೆಂದು ಸಾಮಾನ್ಯವಾಗಿ ಕರೆಯುತ್ತಾರೆ. ಇವು ನೀರಿನಲ್ಲಲ್ಲದೆ ನೀರಿನ ಹೊರಗಡೆಯೂ ಉಸಿರಾಡಬಲ್ಲವಾದ್ದರಿಂದ ಇವುಗಳಿಗೆ ದ್ವಿಶ್ವಾಸಿಗಳು ಎಂಬ ಹೆಸರು ಬಂದಿದೆ. ಇವು ಕಿವಿರುಗಳಿಂದಲೂ ಶ್ವಾಸಕೋಶಗಳಿಂದಲೂ ಸಂದರ್ಭಕ್ಕನುಸಾರವಾಗಿ ಉಸಿರಾಡುತ್ತವೆ; ಕೆರೆಕುಂಟೆ ಮತ್ತು ಜೌಗು ಪ್ರದೇಶಗಳಲ್ಲಿ ಜೀವಿಸುತ್ತವೆ. ಡಿವೋನಿಯನ್ ಕಾಲದಲ್ಲಿ ಹೇರಳವಾಗಿದ್ದು ವಿಶ್ವವ್ಯಾಪಿಗಳಾಗಿದ್ದ ಈ ಗುಂಪಿನ ಮೀನುಗಳು ಆ ಕಾಲದಲ್ಲೇ ಕೆಲವು ವಿಶೇಷ ಗುಣಗಳನ್ನು ಹೊಂದಿದ್ದುವು. ಈಗ ಈ ಮೀನುಗಳ ಸಂಖ್ಯೆ ಮತ್ತು ವ್ಯಾಪ್ತಿ ಬಲು ಕಡಿಮೆಯಾಗಿವೆ. ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡಿನಲ್ಲಿ ನಿಯೊಸೆರಟೊಡಸ್, ಆಫ್ರಿಕದಲ್ಲಿ ಪ್ರೊಟಾಪ್ಟರಸ್ ಮತ್ತು ದಕ್ಷಿಣ ಅಮೆರಿಕದಲ್ಲಿ ಲೆಪಿಡೊಸೈರನ್ ಜಾತಿಯ ಮೀನುಗಳು ಮಾತ್ರ ಇಂದು ಜೀವಂತವಾಗಿವೆ. ಈ ಆಧುನಿಕ ಮೀನುಗಳಲ್ಲಿ ಸೈಕ್ಲಾಯಿಡ್



ಚಿತ್ರ 3 ನೊಯೊಸೆರಟೊಡಸ್ (ಡಿಪ್ನಾಯ್ ಮೀನು)

ಹುರುಪೆಗಳಿವೆ. ತಲೆಬುರುಡೆಯಲ್ಲಿ ಎಲುಬಿನ ತಟ್ಟೆಗಳು ಕಡಿಮೆಯಾಗಿವೆ. ಹಲ್ಲುಗಳು ಕೂಡಿಕೊಂಡು ದೊಡ್ಡ ತಟ್ಟೆಗಳಂತಿವೆ. ಡಿಪ್ನಾಯ್ ಮೀನುಗಳಲ್ಲಿ ಕೆಲವು ವಿಶೇಷ ಗುಣಗಳಿದ್ದು ಮೂಳೆ ಮೀನುಗಳ ಕೆಲವು ಗುಣಗಳೂ ದ್ವಿಚರಿ ಪ್ರಾಣಿಗಳ ಕೆಲವು ಗುಣಗಳೂ ಇವೆ. ಕರುಳಿನಲ್ಲಿರುವ ಸುರುಳಿಯ ಕವಾಟ, ಕ್ಲೋಯೆಕ ಮತ್ತು ಹೃದಯದ ಭಾಗವಾದ ಕೋನಸ್ ಆರ್ಟೀರಿಯೊಸಸ್‌ನಲ್ಲಿನ ಕವಾಟಗಳೂ ಮತ್ತು ಕುಗ್ಗಿದಿರುವ ಆದ್ಯಮೃದ್ವಸ್ಥಿಯ ಪಟ್ಟೆ – ಇವು ಈ ಮೀನುಗಳ ಕೆಲವು ಮೂಲಗುಣಗಳು. ದ್ವಿಚರಿ ಪ್ರಾಣಿಗಳು ಈ ಡಿಪ್ನಾಯ್ ಮೀನುಗಳಿಂದಲೇ ವಿಕಸಿತವಾದುವು ಎಂದು ಹಿಂದಿನ ಪಳೆಯುಳಿಕೆವಿಜ್ಞಾನಿಗಳು ತಿಳಿದಿದ್ದರು. ಆದರೆ ಕೆಲವು ಮುಖ್ಯ ಪಳೆಯುಳಿಕೆಗಳು ಸಿಕ್ಕಿದ ಮೇಲೆ ಆ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು. ದ್ವಿಚರಿ ಪ್ರಾಣಿಗಳು ಮತ್ತು ಡಿಪ್ನಾಯ್ ಮೀನುಗಳು ಒಳಮೂಗು ಹೊಳ್ಳೆಗಳನ್ನೂ ಅಸ್ಥಿಯ ಆಧಾರವಿದ್ದ ಬುಡ ಪಟಲಗಳನ್ನೂ ಹೊಂದಿದ್ದ ಜೋಡಿ ಈಜುರೆಕ್ಕೆಯ ಪ್ರಾಚೀನ ಕಾಲದ ಅಸ್ಟಿಯೋಲೆಪಿಡ್ ಬುಡಕಟ್ಟಿನ ಮೀನುಗಳಿಂದ ವಿಕಸಿತವಾಗಿವೆ ಎಂದು ಅಭಿಪ್ರಾಯ ಪಡಲಾಗಿದೆ.

ಈಗ ಜೀವಂತವಾಗಿರುವ ಡಿಪ್ನಾಯ್ ಮೀನುಗಳ ಗುಂಪನ್ನು ಎರಡು ಉಪಗಣಗಳನ್ನಾಗಿ ವಿಂಗಡಿಸಿದೆ.

ಉಪಗಣ **1 ಮಾನೋನ್ಯೂಮೊನ:** ಈ ಗುಂಪಿನ ಮೀನುಗಳಲ್ಲಿ ಒಂದು ಶ್ವಾಸಕೋಶವಿದೆ. ಈಜುರೆಕ್ಕೆಗಳು ಅವುಗಳ ಕಡ್ಡಿಗಳಿಂದ ಪ್ರಬಲವಾಗಿವೆ. ಉದಾಹರಣೆ ನಿಯೊಸೆರೊಟೊಡಸ್. ಈ ಮೀನು ಸುಮಾರು 4'–5' ಉದ್ದ ಬೆಳೆಯುತ್ತದೆ. ವಾಸ ಕೆರೆಕುಂಟೆಗಳಲ್ಲಿ. ಚಲನೆ ವಿಧಾನ.

ಉಪಗಣ 2 **ಡೈನ್ಯೂಮೊನ**: ಈ ಗುಂಪಿನ ಮೀನುಗಳಲ್ಲಿ ಎರಡು ಶ್ವಾಸಕೋಶಗಳಿವೆ. ಈಜುರೆಕ್ಕೆಗಳ ಕಡ್ಡಿಗಳು ಕೆಲವು ಮೀನುಗಳಲ್ಲಿರುವುದಿಲ್ಲ, ಇದ್ದರೆ ಒಂದೇ ಕಡೆ ಇರುತ್ತವೆ. ಆದ್ದರಿಂದ ಈಜುರೆಕ್ಕೆಗಳು ಅಷ್ಟು ಪ್ರಬಲವಾಗಿರುವುದಿಲ್ಲ. ಉದಾಹರಣೆ ಪ್ರೊಟೊಪ್ಟರಸ್. ಈ ಮೀನು ಸುಮಾರು 6' ಉದ್ದ ಬೆಳೆಯುತ್ತದೆ. ಅನನುಕೂಲವಾದ ವಾತಾವರಣದ ಋತುಗಳಲ್ಲಿ ಇದು ತೇವದ ಭೂಮಿಯಲ್ಲಿ ಸುಮಾರು 2' ಕೆಳಕ್ಕೆ



ಚಿತ್ರ 4 ಲೇಬಿಯೋ (ಗೆಂಡೆ ಮೀನು)

ನಳಿಗೆಯಾಕಾರದ ಪ್ರದೇಶವನ್ನು ಅನುಗೊಳಿಸಿ ಈ ಕೋಣೆಗೆ ತನ್ನ ದೇಹದಿಂದ ಬರುವ ಅಂಟನ್ನು ಬಳಿದು ಅದು ಆರಿದ ಮೇಲೆ ತನ್ನ ದೇಹವನ್ನು ಸುರುಳಿಸುತ್ತಿ ಅಲ್ಲಿ ಮಲಗುತ್ತದೆ. ಇದಕ್ಕೆ ಬೇಸಗೆಯ ನಿದ್ದೆ ಎಂದು ಹೇಳುತ್ತಾರೆ. ಹೊರಗಿನ ವಾತಾವರಣ ಸರಿಯಿದ್ದಾಗ ಈ ಕೋಣೆಯಿಂದ ಹೊರಬಂದು ಯಥಾಪ್ರಕಾರ ನೀರಿನಲ್ಲಿ ಈಜುತ್ತದೆ.

ಲೆಪಿಡೊಸೈರನ್ ಈ ಗುಂಪಿನ ಇನ್ನೊಂದು ಉದಾಹರಣೆ.

**ಆಕ್ಟಿನಾಪ್ಟರಿಜಿಯೈ**: ಈ ಉಪವರ್ಗದ ಮೀನುಗಳಲ್ಲಿ ರೆಕ್ಕೆಗಳಿಗೆ ಕೆಲವು ಸಣ್ಣ ಕಡ್ಡಿಗಳು ಆಧಾರವಾಗಿರುವುದರಿಂದ ಇವನ್ನು ಕಡ್ಡಿ ರೆಕ್ಕೆ ಮೀನುಗಳೆಂದು (ರೇ ಫಿಶ್) ಸಾಮಾನ್ಯವಾಗಿ ಕರೆಯುವರು. ಈ ಗುಂಪಿನಲ್ಲಿ ಸಮುದ್ರದಲ್ಲಿ ಸಾಮಾನ್ಯವಾಗಿ ಸಿಕ್ಕುವ ಎಲ್ಲ ಮೀನುಗಳನ್ನೂ ಸಿಹಿ ನೀರಿನ ಅನೇಕ ಜಾತಿಯ ಮೀನುಗಳನ್ನೂ ಸೇರಿಸಲಾಗಿದೆ. ಅಲ್ಲದೆ ಈ ಗುಂಪಿನಲ್ಲಿ ವಿಚಿತ್ರವಾದ ಹಾಗೂ ಪ್ರಾಚೀನ ಕಾಲದ ಗುಣಗಳುಳ್ಳ ಕೆಲವು ಗ್ಯಾನಾಯ್ಡ್ ಮೀನುಗಳೂ ಸೇರಿವೆ.

ಪ್ರಥಮವಾಗಿ ಗೊತ್ತಾದ ಆಕ್ಟಿನಾಪ್ಟರಿಜಿಯೈ ಮೀನುಗಳು ಮಧ್ಯ ಡಿವೋನಿಯನ್ ಕಾಲದಲ್ಲಿ ಸಿಹಿನೀರಿನಲ್ಲಿ ವಾಸವಾಗಿದ್ದುವು. ಆಶ್ಚರ್ಯಕರವಾದ ವಿಚಾರವೆಂದರೆ ಡಿವೋನಿಯನ್ ಕಾಲದ ಪೂರ್ವಾರ್ಧದಲ್ಲಿ ಕೇವಲ ಕೆಲವೇ ಅಸ್ಪಷ್ಟವಾದ ಎಲುಬು ಮೀನುಗಳ ಪಳೆಯುಳಿಕೆಗಳು ಕಂಡುಬಂದರೂ ಮಧ್ಯ ಡಿವೋನಿಯನ್ ಕಾಲದ ಹೊತ್ತಿಗೆ ಅವುಗಳ ಸಂಖ್ಯೆ ಹೆಚ್ಚಾಗಿ ವಿವಿಧ ಜಾತಿ ಮತ್ತು ಪ್ರಭೇದಗಳ ಸಂಖ್ಯೆಯೂ ಹೆಚ್ಚಾಯಿತು. ಆಗ ಸಿಹಿ ನೀರಿನಲ್ಲಿ ವಾಸಿಸುವ ಮೀನುಗಳೇ ಹೆಚ್ಚಾಗಿದ್ದುವು.

ಕ್ರಾಸಾಪ್ಟಜಿಯೈ ಮತ್ತು ಆಕ್ಟಿನಾಪ್ಟರಿಜಿಯೈ ಗುಂಪಿನ ಮೀನುಗಳ ಹತ್ತಿರದ ಸಂಬಂಧಿಗಳು ಮತ್ತು ಇವುಗಳಿಗೆ ಜನ್ಮವಿತ್ತ ಪೂರ್ವಿಕರು ಯಾವುವು ಎಂಬುದು ಸರಿಯಾಗಿ ಗೊತ್ತಿಲ್ಲ. ಸೈಲ್ಯೂರಿಯನ್ ಉತ್ತರಾರ್ಧದಲ್ಲಿ ಅಥವಾ ಡಿವೋನಿಯನ್ ಪೂರ್ವಾರ್ಧದಲ್ಲಿ ಜೀವಿಸಿದ್ದ ಯಾವುದೋ ಕೆಲವು ಮೀನುಗಳು ಈ ಎರಡು ಗುಂಪುಗಳ ಆದಿ ಮೀನುಗಳಾಗಿರಬೇಕು. ಮಧ್ಯ ಡಿವೋನಿಯನ್ ಕಾಲದ ಹೊತ್ತಿಗೆ ಈ ಗುಂಪಿನ ಮೀನುಗಳು ತಮ್ಮವೇ ಆದ ಗುಣಲಕ್ಷಣಗಳಿಂದ ರೂಪಗೊಂಡು ಬೇರೆ ಬೇರೆ ಗುಂಪುಗಳಾಗಿದ್ದುವು. ಕಡ್ಡಿರೆಕ್ಕೆ ಮೀನುಗಳು ಮೊದಲಲ್ಲಿ ಕ್ರಾಸೊಟೆರಿಜಿಯೈ ಮೀನುಗಳಿಗಿಂತ ಅಪೂರ್ವವಾಗಿದ್ದರೂ ಈಗ ಇವು ಅತಿ ಸಾಮಾನ್ಯವಾದ ಕಶೇರುಕಗಳಾಗಿವೆ.

ಆದಿಯ ಕಡ್ಡಿರೆಕ್ಕೆ ಮೀನುಗಳ ದೇಹದ ಮೇಲೆ ಹುರುಪೆಗಳು ಹೇರಳವಾಗಿದ್ದುವು. ದೇಹ ನೀಳವಾಗಿರಲಿಲ್ಲ. ಚಲನೆ ಬಲು ನಿಧಾನವಾಗಿತ್ತು.

ನವೀನ ಕಡ್ಡಿರೆಕ್ಕೆ ಮೀನುಗಳಲ್ಲಿ ಒಳಗಿನ ಮೂಗಿನ ಹೊಳ್ಳೆಗಳಿಲ್ಲ. ಜೋಡಿ ಈಜು ರೆಕ್ಕೆಗಳಿಗೆ ಮಾಂಸದ ಪಟಲಗಳಿಲ್ಲ. ಆದರೆ ಈ ಭಾಗಗಳಲ್ಲಿ ಸಣ್ಣ ಸಣ್ಣ ಅಸ್ಥಿಗಳಿಂದ ಆಧಾರ ದೊರೆತಿದೆ. ರೆಕ್ಕೆಯ ಬಲೆ ಕೊಂಬಿನ ಗುಣವುಳ್ಳ ಸಣ್ಣ ಕಡ್ಡಿಗಳಿಂದ ಆಧರಿತವಾಗಿದೆ. ಈ ಗುಂಪಿನ ಮೀನುಗಳಿಗೆ ಗ್ಯಾನಾಯ್ಡ್ ರೀತಿಯ ಹುರುಪೆಗಳಿವೆ. ಈ ಗುಣಲಕ್ಷಣ ಈ ಗುಂಪನ್ನು ಗುರುತಿಸಲು ಆಧಾರ. ಅನೇಕ ಜಾತಿಗಳಲ್ಲಿ ಈ ಹುರುಪೆಗಳ ಕೆಲವು ಮೂಲವಸ್ತುಗಳು ನಶಿಸಿ ಮಾರ್ಪಾಟಾಗಿವೆ. ಇನ್ನೂ ಕೆಲವು ಜಾತಿಗಳಲ್ಲಿ ಇವು ತೆಳುವಾಗಿರಬಹುದು ಅಥವಾ ಇಲ್ಲದೆ ಇರಬಹುದು. ಬಾಲದರೆಕ್ಕೆ ಮೊದಲು ಭಿನ್ನಲಾಂಗೂಲವಾಗಿದ್ದು ಅನಂತರ ಸಮಲಾಂಗೂಲ ಸ್ಥಿತಿ ಮತ್ತು ಕೆಲವು ವೇಳೆ ದ್ವಿಪಾರ್ಶ ಸಮಲಾಂಗೂಲ ಸ್ಥಿತಿ ವಿಕಾಸಗೊಂಡಿತು. ಕಿವಿರು ತಂತುರಚನೆಯನ್ನು ಹೊಂದಿದೆ. ಹೃದಯದಲ್ಲಿ ಕೋನಸ್ ಆರ್ಟೀರಿಯೋಸಸ್ಸಿಗೆ ಬದಲಾಗಿ ಬಲ್ಬಸ್ ಆರ್ಟೀರಿಯೋಸಸ್ ಇದ್ದು ಕೋನಸ್ ಒಂದು ಅಥವಾ ಎರಡು ಸಾಲಿನ ಕವಾಟಗಳಾಗಿ ಮಾರ್ಪಾಟಾಗಿದೆ.

ಎಲುಬು ಮೀನುಗಳು ಬೆಳೆವಣಿಗೆಯಲ್ಲಿ ಬಹಳ ದೊಡ್ಡ ಪ್ರಮಾಣವನ್ನು ಮುಟ್ಟದಿದ್ದರೂ ಆಸಿಪೆನ್ಸರ್ ಹೊಸೋ (ಸ್ಟರ್ಜನ್) ಎಂಬ ಮೀನು ಸು.24" ಉದ್ದವಾಗಿದ್ದು 2000 ಪೌಂಡಿನಷ್ಟು ತೂಗುತ್ತದೆ. ಕೆಲವು ಎಲುಬು ಮೀನುಗಳಂತೂ ಶಾರ್ಕ್ ಮೀನುಗಳಷ್ಟೇ ಅಪಾಯಕಾರಿಗಳು.

ಈ ಉಪವರ್ಗವನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿದೆ.

ಗುಂಪು 1 **ಪೇಲಿಯೋನಿಸ್ಕಾಯ್ಡ್ ಮೀನುಗಳು :** ಈ ಮೀನುಗಳಲ್ಲಿ ತಲೆಯ ಮೇಲೆ ತೆಳುವಾದ ಚರ್ಮದ ಫಲಕಗಳಿವೆ. ಅಸ್ಥಿಪಂಜರ ಮೃದ್ವಸ್ಥಿಯದು. ಶಾಶ್ವತವಾದ ಆದ್ಯಮೃದ್ವಸ್ಥಿಯ ಪಟ್ಟಿ ಇದೆ.

ಭಿನ್ನಲಾಂಗೂಲ ರೀತಿಯ ಬಾಲದ ರೆಕ್ಕೆ ಇದೆ. ಕಿವಿರು ರಂಧ್ರಗಳು 5 ಜೊತೆ. ಗಾಳಿಯ ಕೋಶ ಹೊಟ್ಟೆಯ ಮೇಲ್ಭಾಗದಲ್ಲಿದೆ. ಕರುಳಿನಲ್ಲಿ ಸುರುಳಿಗೆ ಕವಾಟವಿದೆ. ಈ ಗುಂಪಿನ ಮೀನುಗಳು ಪೇಲಿಯೋಜೋಯಿಕ್ ಕಾಲದಲ್ಲಿ ಬಹಳ ಸಂಖ್ಯೆಯಲ್ಲಿದ್ದು ಇವುಗಳಲ್ಲಿ ಅನೇಕ ಜಾತಿಗಳಿದ್ದವು. ಈ ಗುಂಪನ್ನು ಪೇಲಿಯೋನಿಸಿಡ್ ಗುಂಪು ಎಂದು ಕರೆಯುತ್ತಾರೆ. ಇವು ಸಿಹಿನೀರಿನಲ್ಲಿ ಜೀವಿಸುವ ಸಣ್ಣ ಮೀನುಗಳು. ಬಾಲದ ರೆಕ್ಕೆ ಭಿನ್ನಲಾಂಗೂಲದ ರೀತಿಯದಾಗಿತ್ತು. ಹುರುಪೆಗಳು ಗನಾಯ್ಡ್ ರೀತಿಯವು. ಇವು ಕಾರ್ಬೊನಿಫೆರಸ್ ಕಾಲದಲ್ಲಿ ಅಭಿವೃದ್ಧಿಯ ಶಿಖರವನ್ನು ಮುಟ್ಟಿ ಟ್ರಯಾಸಿಕ್ ಕಾಲದಲ್ಲಿ ಕ್ಷೀಣಿಸಿ ಹೋಗಿ ಕೇವಲ ಕೆಲವೇ ಜಾತಿಯ ಕ್ಷೀಣ ಜೀವಿಗಳು ಉಳಿದಿವೆ. ಈ ಗುಂಪಿನಲ್ಲಿ ಸುಮರು 10 ಜಾತಿಯ ಬೈಕಿರ್‌ಗಳು, ಒಂದು ರೀಡ್ ಫಿಶ್ (ಪಾಲಿಪ್ಟೆರಿಡೀ) 20 ಸ್ಟರ್ಜಿಯನ್ (ಅಸಿಪೆನ್ಸರ್).



ಚಿತ್ರ 5 ಹೀರುಬಟ್ಟಲು ಮೀನು (ಸಕ್ಕರ್ ಮೀನು)

ಗುಂಪು 2 **ಹೋಲೊಸ್ಟೈ**: ಈ ಗುಂಪಿನ ಮೀನುಗಳ ಗುಣಲಕ್ಷಣಗಳನ್ನು ಪರಿಶೀಲಿಸಿದರೆ ಇವು ಪೇಲಿಯೋನಿಸ್ಕಿಡ್ ಮೀನುಗಳಿಗಿಂತ ಹೆಚ್ಚು ವಿಕಸಿತವಾದವು ಎಂದು ತಿಳಿಯುತ್ತದೆ. ಮಾಕ್ಸಿಲ್ಲ ರಚನೆಯಲ್ಲಿ ಸಾಮ್ಯ ರೂಪಾಂತರ ಇದೆ; ಮತ್ತು ಕಿವಿರು ಕವಚ ಮತ್ತು ಕಣ್ಣುಗೂಡಿನ ಪೂರ್ವ ಪ್ರದೇಶಗಳಲ್ಲೂ ಬದಲಾವಣೆ ಇದೆ. ಇವುಗಳ ಹುರುಪೆಗಳು ರಚನೆಯಲ್ಲಿ ಮಾರ್ಪಾಡಾಗಿ ತೆಳುವಾಗಿದೆ. ಈ ಗುಂಪಿನಲ್ಲಿ ಕೆಲವೇ 10 ಜಾತಿಯ ಮೀನುಗಳಿವೆ. ಗಾರ್‌ಪೈಕ್ ಮೀನುಗಳು (ಲೆಪಿಸಾಸ್ಟಿಯಸ್), ಕೆಸರು ಮೀನು (ಎಮಿಯಾ ಕಾಲ್ವಾ) ಈ ಗುಂಪಿನಲ್ಲಿವೆ.

ಗುಂಪು 3 **ಟೀಲಿಯೊಸ್ಟೈ**: ಆಕ್ಟಿನಾಪ್ಟರಿಜಿಯೈ ವರ್ಗದ ಈ ಗುಂಪು ವಿಕಾಸ ದೃಷ್ಟಿಯಲ್ಲಿ ಬಹಳ ಅಭಿವೃದ್ಧಿ ಹೊಂದಿದೆ. ಇವು ವಾಣಿಜ್ಯ ದೃಷ್ಟಿಯಿಂದಲೂ ಬಹಳ ಮುಖ್ಯವಾದುವು. ಈ ಗುಂಪಿನಲ್ಲಿ 25 ಸಾವಿರಕ್ಕೂ ಹೆಚ್ಚಿನ ಪ್ರಭೇದಗಳಿವೆ. ಇವು ಎಲ್ಲ ಸಾಗರಗಳ ಆಳಗಳಲ್ಲೂ ಶೀತವಲಯ ಸುಮುದ್ರಗಳಲ್ಲೂ ಎಲ್ಲ ಸಿಹಿನೀರಿನ ಪ್ರದೇಶಗಳಲ್ಲೂ ಇವೆ. ಕೆಲವು ಟೀಲಿಯೋಸ್ಟ್ ಮೀನುಗಳಂತೂ ನೆಲದ ಮೇಲೂ ಕೆಲ ಸಮಯದವರೆಗೆ ಬದುಕಬಲ್ಲವಾಗಿವೆ. ನಿಜ ಅರ್ಥದಲ್ಲಿ ಟೀಲಿಯೋಸ್ ಅಂದರೆ ಸಂಪೂರ್ಣ, ಆಸ್ಟಿಯಸ್ ಅಂದರೆ ಎಲುಬು, ಆದ್ದರಿಂದ ಇವು ಸಂಪೂರ್ಣ ಅಭಿವೃದ್ಧಿ ಹೊಂದಿದ ಎಲುಬು ಮೀನುಗಳೆಂದು ಅರ್ಥ.

ಈ ಗುಂಪಿನಲ್ಲಿ ಆಹಾರವಾಗಿ ಬಳಕೆಯಾಗುವ ಅನೇಕ ಮೀನುಗಳಿವೆ.

ನಿಜವಾದ ಟೀಲಿಯೊಸ್ಟಿಯೈ ಮೀನುಗಳು ಜುರಾಸಿಕ್ ಕಾಲದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡವು; ಕ್ರಿಟೇಷಿಯಸ್ ಕಾಲದ ಸಮುದ್ರದಲ್ಲಿ ಅವು ಹೇರಳವಾಗಿದ್ದುವು. ಸಮುದ್ರದಲ್ಲೇ ಉದ್ಭವಿಸಿದುವು ಎಂದು ಪರಿಗಣಿಸಲಾಗಿದ್ದರೂ ದಾಖಲೆಗಳು ಸಾಕಾದಷ್ಟು ದೊರೆತಿಲ್ಲ. ಟರ್ಷಿಯರಿ ಕಾಲದ ಮೊದಲಲ್ಲಿ ಅವು ಹೇರಳವಾಗಿ ಪ್ರಸರಿಸಿದುವು. ಈ ಮೀನುಗಳು ವಿಕಾಸದ ಪೂರ್ತಿ ಉಬ್ಬರವನ್ನು ಇನ್ನೂ ಮುಟ್ಟಿಲ್ಲ. ಟೀಲಿಯೋಸ್ಟ್ ಮೀನುಗಳ ಗುಂಪು ಅನೇಕ ವಾತಾವರಣಗಳಿಗೆ ಹೊಂದಿಕೊಂಡು ಕೆಲವು ರಚನೆಗಳಲ್ಲಿ ಮಾರ್ಪಾಟು ಹೊಂದಿ ಸಣ್ಣ ಸಣ್ಣ ಗುಂಪುಗಳಾಗಿ ಕಾಣಿಸಿಕೊಂಡಿವೆ. ಈ ಮೀನುಗಳಲ್ಲಿ ಅಸ್ಥಿಪಂಜರ ಬಹಳವಾಗಿ ಅಸ್ಥಿಗತವಾಗಿದೆ. ಬಾಲದ ರೆಕ್ಕೆ ಅನೇಕ ವೇಳೆ ದ್ವಿಪಾರ್ಶ್ವ ಸಮಲಾಂಗೂಲ ರೀತಿಯದಾಗಿಯೂ ಕೆಲವು ವೇಳೆ ಸಮಲಾಂಗೂಲ ರೀತಿಯದಾಗಿಯೂ ಇದೆ. ಹುರುಪೆಗಳು ಸೈಕ್ಲಾಯ್ಡ್ ಅಥವಾ ಟಿನಾಯ್ಡ್ ರೀತಿಯವು. ಕಿವಿರು ಕವಚ ತಪ್ಪದೇ ಇದೆ. ಕಿವಿರುಗಳು ತಂತುಗಳ ರೂಪದಲ್ಲಿವೆ. ಅನೇಕ ವೇಳೆ ಗಾಳಿಯ ಕೋಶವಿರುತ್ತದೆ. ಕರುಳಿನಲ್ಲಿ ಸುರುಳಿಯ ಕವಾಟವಿಲ್ಲ. ಜನನ ಗ್ರಂಥಿಗಳು ಅವುಗಳ

ನಳಿಕೆಗಳೊಂದಿಗೆ ಅವಿರತವಾಗಿವೆ. ವೃಷಣಗಳು ಮೂತ್ರಪಿಂಡಗಳಿಂದ ಬೇರೆಯಾಗಿವೆ. ಮೊಟ್ಟೆಗಳು ಗಾತ್ರದಲ್ಲಿ ಸಣ್ಣವಾದರೂ ಅತ್ಯಧಿಕ ಸಂಖ್ಯೆಯಲ್ಲಿವೆ. ಲಾರ್ವ ಸ್ಥಿತಿ ಉಂಟು. ಈ ಮೀನುಗಳ ವರ್ಗೀಕರಣದಲ್ಲಿ ಕೆಲವು ಹೊರ ರಚನೆಯ ಗುಣಲಕ್ಷಣಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆ. 1 ಎರಡನೆಯ ಜೋಡಿ ಈಜುರೆಕ್ಕೆಗಳು ಇರುವ ಸ್ಥಳ. 2 ಬಾಯಿ ಅಗಲಿಸುವುದಕ್ಕೆ ಕಾರಣವಾದ ಪ್ರಿಮ್ಯಾಕ್ಸಿಲ್ಲ ಮತ್ತು ಮ್ಯಾಕ್ಸಿಲ್ಲಗಳ ಸಂಬಂಧ. 3 ಮೇಲಿನ, ಗುದ ಮತ್ತು ಜೋಡು ಈಜುರೆಕ್ಕೆಗಳಲ್ಲಿನ ಮುಳ್ಳುಗಳು ಹಾಗೂ ಅವುಗಳ ರಚನೆ.

ಇವುಗಳ ವೈವಿಧ್ಯದ ಬಗ್ಗೆ ಸಂಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲದಿದ್ದರೂ ಇವುಗಳ ಪ್ರಮುಖ ಈ ಗುಂಪಿನ ವರ್ಗೀಕರಣದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಟೀಲಿಯೋಸ್ಟ್‌ಗಳನ್ನು ಸಹಸ್ರಾರು ಕುಟುಂಬಗಳನ್ನೊಳಗೊಂಡ ಅನೇಕ ಗಣಗಳಾಗಿ ವಿಂಗಡಿಸಿದೆ.

1. **ಐಸೊಸ್ಪಾಂಡೈಲಿ:** ಇದರಲ್ಲಿ ಕೆಲವು ಪ್ರಾಚೀನ ಮೀನುಗಳನ್ನು ಸೇರಿಸಲಾಗಿದೆ.



**ಚಿತ್ರ 6 ಚೇಳು ಮೀನು (ಸೈಲುರಾಯ್ಡಿಯ)**

ಇವುಗಳಲ್ಲಿ ಸುಮಾರು 900 ಜಾತಿಯ ಮೀನುಗಳಿವೆ. ಇವು ಹೊಲೊಸ್ಟಿಯೈ ಮೀನುಗಳನ್ನು ಹೋಲುತ್ತವೆ. ರೆಕ್ಕೆಗಳಲ್ಲಿ ಮುಳ್ಳುಗಳಿರುವುದಿಲ್ಲ. ಅನೇಕ ಜಾತಿಯ ಸಾರ್ಡಿನ್, ಹೆರ್ರಿಂಗ್ ಮೀನು, ಹಿಲ್ಸ ಮೀನು ಟ್ರೌಟ್ ಮೀನು, ಚಪ್ಪಲು ಮೀನು – ಈ ಗುಂಪಿನಲ್ಲಿ ಇವು ಮುಖ್ಯವಾದುವು. ಇವಲ್ಲದೆ ಕೆಲವು ಸಮುದ್ರ ತಳದಲ್ಲಿ ಜೀವಿಸುವ ಮೀನುಗಳೂ ಸೇರಿವೆ. ಟ್ರೌಟ್ ಮೀನು, ಭಾರತದ್ದಲ್ಲದಿದ್ದರೂ ನೀಲಗಿರಿಬೆಟ್ಟಗಳಲ್ಲಿ ಇವನ್ನು ಸಾಕಲಾಗುತ್ತಿದೆ.

2. **ಆಸ್ಟೀರಿಯೊಫೈಸಿ:** ಸಿಹಿನೀರಿನಲ್ಲಿ ವಾಸಿಸುವ ಬಹಳ ಮುಖ್ಯವಾದ ಮೀನುಗಳನ್ನು ಈ ಗುಂಪಿನಲ್ಲಿ ಸೇರಿಸಲಾಗಿದೆ. ಏಷ್ಯ, ಆಫ್ರಿಕ, ಯುರೋಪ್ ಮತ್ತು ಅಮೆರಿಕ ಖಂಡಗಳಲ್ಲಿ ಹೇರಳವಾಗಿ ಕಂಡು ಬರುತ್ತವೆ. ಇವುಗಳಲ್ಲಿ ಎರಡನೆಯ ಜೋಡಿ ಈಜುರೆಕ್ಕೆಗಳು ಹೊಟ್ಟೆಯ ತಳಭಾಗದಲ್ಲಿವೆ. ಈ ಗಣದ ಸೈಪ್ರಿಯನಾಯ್ಡಿಯ ಗುಂಪಿನಲ್ಲಿ ಆಹಾರಯೋಗ್ಯವಾದ ಗೆಂಡೆ ಮೀನುಗಳು (ಕಾರ್ಪ್) ಮುಖ್ಯ. ಇವುಗಳಲ್ಲಿ ಜಾಗ್ರತೆಯಾಗಿ ದೊಡ್ಡದಾಗಿ ಬೆಳೆಯುವ ಜಾತಿಯವು ಯಾವುವೆಂದರೆ ಕಟ್ಲ, ಲೇಬಿಯೊ (ರೋಹು), ಸಿರೈನ (ಮ್ರಿಗಾಲ್), ಗೆಂಡೆ (*ಬಾರ್ಬಸ್ ಕರ್ನಾಟಿಕಸ್*), ಅರ್ಜ (*ಸಿರೈನ ಜಾತಿ*). ಗೆಂಡೆ ಮೀನುಗಳಿಗೆ ಹಲ್ಲಿಲ್ಲ. ಇವು ಸಸ್ಯಾಹಾರಿಗಳೂ. ಭಾರತದಲ್ಲಿ ಈಗ ಕೆಲವು ವರ್ಷಗಳಿಂದ ಮುಖ್ಯವಾದ ಗೆಂಡೆಗಳ ಸಂವರ್ಧನೆ ವೈಜ್ಞಾನಿಕ ರೀತಿಯಲ್ಲಿ ಆಗುತ್ತಿದೆ. ಆಸ್ಟೆರಿಯೊಫೈಸಿಯ ಇನ್ನೊಂದು ಗುಂಪು ಮೀಸೆಮೀನು (*ಸೈಲ್ಯುರಾಯ್ಡಿಯ*). ಇವುಗಳಿಗೆ ಬಾಯಿಯ ಸುತ್ತಲೂ ಉದ್ದನೆಯ ಮೀಸೆಗಳಿವೆ. ಇವಕ್ಕೆ ಹಲ್ಲುಗಳಿವೆ. ಇವು ಮಾಂಸಾಹಾರಿಗಳು, ಹುರುಪೆಗಳು ಇರುವುದಿಲ್ಲ. ಆಣೆಮೀನು (*ಕ್ಲೇರಿಯಾಸ್*), ಚೇಳುಮೀನು (*ಹೆಟರೊನ್ಯೂಸ್ಟೆಸ್*), ಬಾಳೆಮೀನು (*ವಲ್ಲಾಗೊ*) ಇವು ತಿನ್ನಲು ಯೋಗ್ಯವಾದುವು.

3. **ಏಪೋಡ್ಸ್:** ದೇಹ ನೀಳವಾಗಿ ಹಾವಿನ ರೀತಿ ಇರುವುದರಿಂದ ಇವುಗಳಿಗೆ ಹಾವು ಮೀನುಗಳೆಂದು (ಈಲ್) ಹೆಸರು. ಸಮುದ್ರವಾಸಿಗಳಾದರೂ ಕೆಲವು ತಮ್ಮ ಯೌವನಾವಸ್ಥೆಯನ್ನು ಸಿಹಿ ನೀರಿನಲ್ಲಿ ಕಳೆಯುತ್ತವೆ. ಜೋಡಿ ಈಜುರೆಕ್ಕೆಗಳಿಲ್ಲ. ಕೆಲವಲ್ಲಿ ಹುರುಪೆಗಳಿರುತ್ತವೆ. ಇವು ಮಾಂಸಾಹಾರಿಗಳು. ಉದಾಹರಣೆ: ಮುರಿನ, ಆಂಗ್ಯುಲ್ಲ ಮತ್ತು ಓಫಿಕ್ಥಿಸ್.

4. **ಹೆಟರೋಮಿ:** ಸಮುದ್ರದಾಳದಲ್ಲಿ ಜೀವಿಸುವ ಕೆಲವು ಮೀನುಗಳು ಈ ಗುಂಪಿಗೆ ಸೇರಿವೆ. ಇವುಗಳ ತಲೆ ದೇಹ ಮತ್ತು ಬಾಲ ಇವು ಉದ್ದವಾಗಿವೆ. ಉದಾಹರಣೆ: *ನೋಟೋಕ್ಯಾಂತಸ್, ಹೊಲೊಸಾರಸ್*. (ಸ್ಪೈನೀ ಈಲ್)

5. **ಇನಿಯೋಮಿ:** ಗುಂಪಿನಲ್ಲಿ ಸು. 400 ಪ್ರಭೇದಗಳಿದ್ದು ಬಹುಪಾಲು ಆಳ ಸಮುದ್ರಗಳಲ್ಲಿ ವಾಸಿಸುತ್ತವೆ. ಲ್ಯಾಂಟರ್ನ್ ಮೀನುಗಳು (ಮಿಕ್ಟೋಫಿಡೆ) ಟ್ರೈಪೊಡ್ ಮೀನುಗಳು, ಲಿಜಾರ್ಡ್ ಮೀನುಗಳು ಈ ಗುಂಪಿನಲ್ಲಿ ಕಂಡುಬರುವ ಪ್ರಮುಖ ಮೀನುಗಳು. ಈ ಗುಂಪಿನಲ್ಲಿರುವ ಬಾಂಬೆಡಕ್ ಮೀನು (*ಹರ್ಪೊಡಾನ್*) ಖಾದ್ಯ ಯೋಗ್ಯ.

6. **ಸೈನೆಂಟೊಗ್ನಾತೀ:** ಈ ಗುಂಪಿನಲ್ಲಿ ಹಾರುವ ಮೀನುಗಳು, ಗಾರ್ ಮೀನುಗಳು (ಬಿಲೋನೀ), ಕುದುರೆ ಮೀನು ಪ್ರಮುಖವಾದವು. ಗಾರ್ ಮೀನುಗಳ ಎರಡು ದವಡೆಗಳೂ ಕೊಕ್ಕಿನ ರೀತಿಯಲ್ಲಿ ಉದ್ದವಾಗಿವೆ. ಹೆಮಿರ್ಯಾಂಪಸ್ ಮೀನಿನಲ್ಲಿ ಕೆಳದವಡೆ ಮಾತ್ರ ಮೇಲುದವಡೆಗಿಂತ ಉದ್ದವಾಗಿದೆ. ಹಾರುವ ಮೀನುಗಳಲ್ಲಿ ಒಂದಾದ ಸಿಪ್ಸಿಲ್ಯೂರಸ್‌ನಲ್ಲಿ ಮೊದಲಿನ ಜೋಡಿ ಈಜುರೆಕ್ಕೆಗಳು ಮಾರ್ಪಾಡಾಗಿ ಬಹಳ ದೊಡ್ಡವಾಗಿದ್ದು ನೀರಿನ ಮೇಲೆ ಸ್ವಲ್ಪದೂರ ಹಾರುವುದಕ್ಕೆ ಅನುಕೂಲವಾಗಿವೆ. ಕುದುರೆಮೀನು (*ಹಿಪ್ಪೊಕ್ಯಾಂಪಸ್*) ಮತ್ತು ಕೊಳವೆ ಮೀನುಗಳಲ್ಲಿ (*ಸಿನ್ಯಾತಸ್*) ಹುರುಪೆಗಳು ಮಾರ್ಪಾಡಾಗಿ ದೇಹ ಸ್ವಲ್ಪ ಗಟ್ಟಿಯಾಗಿದೆ.



**ಚಿತ್ರ 7 ಕುಚ್ಚು ಮೀನು (ಓಫಿಕೆಫಾಲಸ್)**

7. **ಅಕ್ಯಾಂತಾಪ್ಟರಿಜಿಯೈ ಅಥವಾ ಪರ್ಕೊಮಾರ್ಫಿ:** ಈ ಮೀನುಗಳಲ್ಲಿ ಒಂಟಿ ರೆಕ್ಕೆಗಳ ಮುಂದಿನ ರೆಕ್ಕೆ ಕಡ್ಡಿಗಳು ಮುಳ್ಳುಗಳಾಗಿ ಮಾರ್ಪಾಡಾಗಿವೆ. ಎರಡನೆಯ ಜೋಡಿ ಈಜುರೆಕ್ಕೆಗಳು ಹೊಟ್ಟೆಯ ಬಹು ಮುಂದಿವೆ. ಈ ಗುಂಪಿನಲ್ಲಿ ಅನೇಕ ಸಮುದ್ರ ಮೀನುಗಳೂ ಕೆಲವು ಸಿಹಿನೀರಿನ ಮೀನುಗಳೂ ಸೇರಿವೆ. ಮುಳ್ಳು ಪ್ರಬಲವಾಗಿರುವ ಪರ್ಚ್ ಮೀನುಗಳು (*ಎಟ್ರೊಪ್ಲಸ್*), ದೇಹ ನೀಳವಾಗಿರುವ ರಿಬ್ಬನ್ ಮೀನು (*ಟ್ರೈಕಿಯೂರಸ್*), ತೆಳುವಾಗಿ ಆಳವಾಗಿರುವ ದೇಹವುಳ್ಳ ಏಂಜೆಲ್ ಮೀನು (*ಟೆರೊಫಿಲ್ಲಂ*), ಗಟ್ಟಿ ದೇಹದ ಪೆಟ್ಟಿಗೆಮೀನು ಮತ್ತು ಹಸುಮೀನು (*ಆಸ್ಟ್ರೇಸಿಯಾನ್*), ದೇಹ ಎರಡು ಕಣ್ಣುಗಳನ್ನು ಒಂದೇ ಕಡೆ ಹೊಂದಿರುವ ಚಪ್ಪಟೆ (*ಸೋಲ್*) ಮೀನು (*ಪ್ಲೂರೊನೆಕ್ಟೀಸ್, ಸಿನಾಪ್ಟ*), ಸಾಮಾನ್ಯವಾಗಿ ಗೂಡುಕಟ್ಟುವ ಸೂರ್ಯಮೀನು (*ಆರ್ತೊಗೊರಿಸ್ಕಸ್*), ಗಾಳದಂಥ ರೆಕ್ಕೆ ಕಡ್ಡಿಗಳಿರುವ ಗಾಳದ ಮೀನುಗಳು (*ಆಂಟೆನೇರಿಯಸ್*), ಹೀರುಬಟ್ಟಲಂತಿರುವ ಮೇಲುರೆಕ್ಕೆಗಳನ್ನುಳ್ಳ ಮತ್ತು ಬೇರೆ ಪ್ರಾಣಿಗಳಿಗೆ ಅಥವಾ ಹಡಗುಗಳಿಗೆ ಅಂಟಿಕೊಂಡು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣ ಬೆಳೆಸುವ ಹೀರುಬಟ್ಟಲು ಮೀನು (*ಪೆಕಿನಸ್*), ಗೂಡು ಕಟ್ಟಿ ಮೊಟ್ಟೆ ಮರಿಗಳನ್ನು ಕಾಪಾಡುವ ಗೌರಿ ಮೀನು (*ಆಸ್ಫ್ರೊನೀಮಸ್ ಗೌರಾಮಿ*), ಮೇಲುರೆಕ್ಕೆ ಮತ್ತು ಅದರ ಮುಳ್ಳಿನಲ್ಲಿ ವಿಷದ ಗ್ರಂಥಿಗಳನ್ನುಳ್ಳ ಚೇಳು ಮೀನುಗಳು (*ಸ್ಕಾರ್ಪೀನಡೀ*), ಗೋಲದ ಮೀನು (*ಟೆಟ್ರಡಾನ್*), ಮುಳ್ಳುಮೀನು (*ಡಯೊಡಾನ್*) ಇದೇ ಗುಂಪಿಗೆ ಸೇರಿವೆ. ತಿನ್ನಲು ಯೋಗ್ಯವಾದ ಹೂಮೀನು, ಕೊರವ ಮತ್ತು ಕುಚ್ಚು ಮೀನುಗಳು (*ಒಫಿಯೋಸೆಫಾಲಸ್ ಜಾತಿ*) ಸಿಹಿನೀರಿನಲ್ಲಿ ವಾಸಿಸುತ್ತವೆ. ಇವುಗಳಲ್ಲಿ ಗಾಳಿಯನ್ನು ಸೇವಿಸಲು ವಿಶೇಷ ಅಂಗಗಳಿರುವುದರಿಂದ ಇವು ನೀರಿನ ಹೊರಗಡೆ ಕೆಲವು ಕಾಲ ಜೀವಿಸಬಲ್ಲುವು. ಹೇರಳವಾಗಿ ಸಿಗುವ ಬಂಗಡೆ ಮೀನು (*ರಾಸ್ಟಲಗರ್ ಕನಗೂರ್ತ*) ಸಮುದ್ರವಾಸಿ. ಇದು ಕರ್ನಾಟಕದ ಮೀನುಗಾರಿಕೆಯಲ್ಲಿ ಬಹಳ ಮುಖ್ಯವಾದುದು. ಇವಲ್ಲದೆ ಇನ್ನೂ ಅನೇಕ ಪ್ರಭೇದಗಳು ಈ ಗುಂಪಿಗೆ ಸೇರಿವೆ (**ನೋಡಿ– ಮೀನುಗಳು; ಮೃದ್ವಸ್ತಿ– ಮೀನುಗಳು**). (ಎನ್.ವಿ.ಎ.)

**ಎಲುಬುವಿಜ್ಞಾನ:** ಮೂಳೆಗಳ, ಎಲುಗಟ್ಟಿನ (ಸ್ಕೆಲಿಟನ್), ಒಟ್ಟಾರೆ ಇಲ್ಲವೆ ಬಿಡಿ ಬಿಡಿಯಾಗಿ ಅತ್ಯಂತ ಸೂಕ್ಷ್ಮ ರಚನೆಯಿಂದ ಕಣ್ಣಿಗೆ ಕಾಣಿಸುವ ರಚನೆಯನ್ನು ಅಭ್ಯಸಿಸುವ ಅಂಗರಚನಾವಿಜ್ಞಾನದ ವಿಭಾಗಕ್ಕೆ (ಆಸ್ಟಿಯಾಲಜಿ) ಎನ್ನುತ್ತಾರೆ. ಇಲ್ಲಿ ಮುಖ್ಯವಾಗಿ ಮೂಳೆಗಳ ರೂಪ, ಆಕಾರ, ಗಾತ್ರ, ಬೆಳವಣಿಗೆಯ ಕ್ರಮ, ಇತರ ಊತಕಗಳೊಂದಿಗಿರುವ ಸಂಬಂಧ, ನಿಜಗೆಲಸಗಳನ್ನು ವಿವರಿಸಲಾಗಿದೆ (**ನೋಡಿ– ಎಲುಬು; ಎಲುಗಟ್ಟು;–ಕಶೇರುಕಗಳು**). (ಡಿ.ಎಸ್.ಎಸ್.)

**ಎಲುಮುರಿಕೆಗಳು, ಕೀಲ್ತಪ್ಪಿಕೆಗಳು:** ಮುರಿದುಹೋಗುವುದೂ ಕೀಲು ತಪ್ಪುವುದೂ ಮೂಳೆಗಳಿಗೆ ಆಗುವ ಸಾಮಾನ್ಯ ಗಾಯಗಳು, ಮೂಳೆ ಒಂದೇ ಸಮನಾಗಿರುವುದು ಎಲ್ಲಿಯಾದರೂ ತಪ್ಪಿದ್ದರೆ ಎಲುಮುರಿಕೆ (ಫ್ರಾಕ್ಚರ್) ಎನಿಸಿಕೊಳ್ಳುತ್ತದೆ. ಮೇಲಿನ ಚರ್ಮ ಬಿರಿಯದೆಯೇ ಆದ ಎಲುಮುರಿಕೆ ಸರಳವೆಂದೂ ಚರ್ಮಕ್ಕೆ ಗಾಯವಾಗಿ ಮುರಿದ ಮೂಳೆ ತುಂಡುಗಳ ಕೊನೆಗಳು ಹೊರಗಣ ಗಾಳಿಗೆ ಸೋಕುವಂತಿದ್ದರೆ ಕಲೆತದ್ದೆಂದೂ (ಕಾಂಪೌಂಡ್) ಹೆಸರಿದೆ. ಎಲುಮುರಿಕೆ ಆಕಾರಕ್ಕೆ ತಕ್ಕಂತೆ, ಸುರುಳಿಯ, ಅಡ್ಡಡ್ಡನೆಯ, ಉದ್ದುದ್ದನೆಯ, ಕೋಸೆಯ ಸೊಟ್ಟಪಟ್ಟ ಬಗೆಯವು ವಿಂಗಡವಾಗುತ್ತವೆ, ಸರಳ ಎಲುಮುರಿಕೆಯಲ್ಲಿ ಸೊಂಕು ಹತ್ತುವಂತಿರದು. ಹೊರಗಾಳಿ ಸೋಕುವಂತಿದ್ದರೆ ಸೊಂಕು ಒಳ ಹೋಗುವುದು ಸುಲಭ. ಗಾಯವಾದ ಮೇಲೆ, ಮೂಳೆ ಚೂರುಗಳ ಕೊನೆಗಳ ಜೋಡಣೆಗೆ ತಕ್ಕಂತೆ, ಪೂರ್ತಿ, ಅರೆಬರೆ, ಹಸೀಕಡ್ಡಿ (ಗ್ರೀನ್–ಸ್ಟಿಕ್) ತಾಟಿಕೊಂಡ (ಇಂಪ್ಯಾಕ್ಟೆಡ್) ನುಗ್ಗುನುರಿದ (ಕಮ್ಮಿನ್ಯುಟೆಡ್), ತಾಕುತೊಡಕಾದ (ಕಾಂಪ್ಲಿಕೇಟಡ್)

ಮುರಿಕೆಗಳು ಏರ್ಪಡುತ್ತವೆ, ಮೂಳೆ ಮುರಿದು ಎರಡು ಬಿಡಿಯಾದ ತುಂಡುಗಳಾಗದೆ ಸುಮ್ಮನೆ ಬಾಗಿದ್ದರೆ ಅರೆಬರೆ, ಹಸಿಕಡ್ಡಿ ಮುರಿಕೆಯೆಂದೂ ಎರಡು ತುಂಡುಗಳಾಗಿದ್ದರೆ ಪೂರ್ತಿ ಮುರಿಕೆ ಎಂದೂ ಇದೆ. ಗಾಯದ ರಭಸದಿಂದ ಮುರಿಕೆಯ ತುಂಡುಗಳ ಕೊನೆಗಳು ಒಂದರೊಡನೊಂದು ಸಿಕ್ಕಿಕೊಂಡಿರುವುದು ತಾಟಿಕೊಂಡ ಮುರಿಕೆ. ಮುರಿದು ಮೂರಕ್ಕೂ ಹೆಚ್ಚು ಚೂರುಗಳಾಗಿರುವುದೇ ನುಗ್ಗುನುರಿದ ಮುರಿಕೆ. ಎಲುಮುರಿಕೆಯೊಂದಿಗೆ ಅಕ್ಕಪಕ್ಕಗಳ ನರಗಳು, ಒಳಾಂಗಗಳೂ, ರಕ್ತನಾಳ ಮೊದಲಾದವಕ್ಕೂ ಹಾನಿಯಾಗಿರುವುದೇ ತಾಕುತೊಡಕಿನ ಮುರಿಕೆ. ರೋಗ ಹತ್ತಿ ಬಡಕಲಾಗಿರುವ ಮೂಳೆಗೆ ಕೊಂಚ ಪೆಟ್ಟು ತಗುಲಿದರೂ ಮುರಿವುದು ರೋಗದ (ಪ್ಯಾತಲಾಜಿಕಲ್) ಎಲುಮುರಿಕೆ.

ಕೀಲಲ್ಲಿ ಕೂಡಿರುವ ಮೂಳೆಗಳ ಕೊನೆಗಳು ಕೀಲನ್ನು ಬಿಟ್ಟು ಒಂದಕ್ಕೊಂದರ ಸಂಬಂಧ ತಪ್ಪಿರುವುದೇ ಕೀಲ್ತಪ್ಪಿಕೆ (ಡಿಸ್‍ಲೊಕೇಷನ್), ಸರಳ ಕೀಲ್ತಪ್ಪಿಕೆಯಲ್ಲಿ ಮೂಳೆ ಕೊನೆಗಳು ಗಾಳಿಗೊಡ್ಡಿರವು. ಆದರೆ ಚರ್ಮಕ್ಕೆ ಪೆಟ್ಟು, ಗಾಯಗಳಾಗಿಯೊ ಕೀಲ್ತಪ್ಪಿದಾಗ ಮೂಳೆಯ ಚೂಪು ಕೊನೆಗಳು ಜೋರಾಗಿ ಚರ್ಮದಲ್ಲಿ ತೂರಿದ್ದರಿಂದಲೊ ಅವು ಗಾಳಿಗೊಡ್ಡಿದ್ದರೆ ಕಲೆತದಕೀಲ್ತಪ್ಪಿಕೆ. ಕೆಲವೇಳೆ ಹುಟ್ಟಿನಿಂದಲೇ ಬರುವ ಕೀಲ್ತಪ್ಪಿಕೆ ಆಗ ಹುಟ್ಟಿದ ಕೂಸಿನಲ್ಲೇ ಕೀಲಿನ ರಚನೆಯಲ್ಲಿ ಕುಂದಾಗಿ ಕಾಣಿಸಿಕೊಳ್ಳುತ್ತದೆ. ಗಾಯದಿಂದ ಆಮೇಲೆ ಆದುದು, ಆರ್ಜಿತ(ಅಕ್ವೈರ್ಡ್) ಕೀಲ್ತಪ್ಪಿಕೆ. ಮೇಲಿಂದ ಮೇಲೆ ಒಂದೇ ಕೀಲಲ್ಲಿ ಕೀಲ್ತಪ್ಪಿಕೆ ಆಗುತ್ತಿರುವುದು ಮರುಕಳಿಕ (ರೆಕರೆಂಟ್) ಎಲ್ಲವೇ ಅಭ್ಯಾಸದ (ಹೆಬಿಚ್ಯುಯಲ್) ಕೀಲ್ತಪ್ಪಿಕೆ. ಕೀಲಿನ ಸುತ್ತು ಇರುವ ಕೀಲ್ಗವಚ. ತಂತುಗಟ್ಟುಗಳು (ಕ್ಯಾಪ್ಸೂಲ್, ಲಿಗಮೆಂಟ್ಸ್) ಸಡಿಲ ಬೀಳುವುದರಿಂದ ರೋಗದ ಕೀಲ್ತಪ್ಪಿಕೆ ಆಗುವುದು. ಕೀಲ್ತಪ್ಪಿಸುವ ಪೆಟ್ಟು, ಗಾಯಗಳಿಂದ ಅದೇ ಹೊತ್ತಿನಲ್ಲಿ ಕೀಲಿನ ಒಂದೋ ಇನ್ನೂ ಹೆಚ್ಚೋ ಮೂಳೆಗಳೂ ಮುರಿದಿದ್ದರೆ ಎಲುಮುರಿಕೆ–ಕೀಲ್ತಪ್ಪಿಕೆ ಎನಿಸುವುದು.

**ಕಾರಣಗಳು:** ಸಾಕಷ್ಟು ಬಲವಾದ ಪೆಟ್ಟು, ಗಾಯಗಳಿಂದ ಎಲುಬು ಮುರಿಯುವುದು. ಮುಂದೋಳಿಗೆ ಏಟು ತಗಲಿ ಮುರಿವಂತೆ, ನೇರವಾದ ಹೊರಗಿನ ಗಾಯಗಳಲ್ಲಿ ಪೆಟ್ಟು ತಾಕಿದೆಡೆಯಲ್ಲೇ ಮೂಳೆ ಮುರಿಯುತ್ತದೆ. ಮರದ ಇಲ್ಲವೇ ಮಹಡಿಯ ಎತ್ತರದಿಂದ ಇದ್ದಕಿದ್ದ ಹಾಗೆ ಅಕಸ್ಮಾತ್ತಾಗಿ ಕೆಳಬೀಳುವಾಗ ಕೈ ನೀಡಿ ಊರುವಂತಾದಾಗ, ಪೆಟ್ಟು ಕೈಗೇ ತಾಗಿದರೂ ಏಟಿನಬಲ ದೂರದ ತೋಳಿಗೆ ತಾಕಿ ಮುರಿವಂತೆ, ಬಳಸಾಗೂ ಎಲುಬು ಮುರಿಯಬಹುದು. ಮುರಿದ ಮೂಳೆಯ ಕೊನೆಗಳಿಗೆ ತಗುಲಿಕೊಂಡಿರುವ ಸ್ನಾಯುಗಳ ಎಳೆತವೇ ಎದೆಗೂಡಿನ ಇಲ್ಲವೇ ಒಡಲಿನ ಒಳಾಂಗಗಳ ಗಾಯಗಳಿಗೆ ಕಾರಣ, ಪಕ್ಕೆಲುಬು ಮುರಿದಾಗ ಈಲಿಗೂ ಪುಪ್ಪುಸಗಳಿಗೂ ಗಾಯವಾಗುವುದು ಇದರ ಒಂದು ಉದಾಹರಣೆ.

ಎಳೆಗೂಸುಗಳೂ, ಮಕ್ಕಳಲ್ಲಿ ಸಾಕಷ್ಟು ಬಲಿಯದಿರುವುದರಿಂದಲೂ ವಯಸ್ಸಾದ ವರಲ್ಲೂ ಅದರಲ್ಲೂ ಹೆಂಗಸರಲ್ಲಿ, ಮೂಳೆ ಬಡಕಲಾಗಿರುತ್ತದೆ, ಬೇರೊಂದು ಅಂಗದಲ್ಲಿದ್ದು ಏಡಿಗಂತಿ (ಕ್ಯಾನ್ಸರ್) ಬಲು ಸಾಮಾನ್ಯವಾಗಿ ಮೂಳೆಗಳಿಗೆ ಹರಡಿಕೊಳ್ಳುವಂತೆ, ಎಲುಗಟ್ಟಿಗೂ (ಸ್ಕೆಲಿಟನ್) ಹತ್ತುವ ಅನೇಕ ರೋಗಗಳು ಮೂಳೆಗಳಲ್ಲಿ ತ್ರಾಣವಿಲ್ಲದಂತೆ ಮಾಡುವುವು. ಹಾಗಾಗಿದ್ದಾಗ, ಮೂಳೆ ಮುರಿಯಲು ಸಣ್ಣ ಪೆಟ್ಟೇ ಸಾಕಾಗುತ್ತದೆ. ಅಭ್ಯಾಸವಿಲ್ಲದ ಅಸಹಜ ಒತ್ತಡ ಮೂಳೆಯ ಮೇಲೆ ಬಿದ್ದರೆ, ದಣಿವಿನ (ಫಟೀಗ್) ಎಲುಮುರಿಕೆ ಆಗುವುದು. ತಾಸುಗಟ್ಟಲೆ ನಿಂತು ಇರುವಾಗ, ಬಲು ದೂರ ನಡೆದಾಗಲೂ ಹೀಗಾಗಬಹುದು. ಸೈನಿಕರಲ್ಲಿ ಹೀಗಾಗುವುದಕ್ಕೆ ನಡೆಯ ಎಲುಮುರಿಕೆ ಎಂದಿದೆ.

ಕೀಲಿನ ಬಲುಮೆಗೆ ಕಾರಣವಾಗಿ ಕೀಲನ್ನು ಕೂಡಿಸಿ ಹಿಡಿದಿಡುವ ತಂತುಗಟ್ಟುಗಳು, ಸ್ನಾಯುಗಳು, ಕೀಲ್ಗವಚಗಳನ್ನು ಒಡೆವಷ್ಟು ಜೋರಿನ ಪೆಟ್ಟಿನಿಂದ ಕೀಲು ತಪ್ಪುತ್ತದೆ. ನೀಳ ಮೂಳೆಯ ಉದ್ದಕ್ಕೂ ಬಲವಾದ ಒತ್ತಡಬಿದ್ದು, ಕೀಲಿನ ಸುತ್ತ ಇರುವ ಊತಕಗಳನ್ನೂ ಹರಿದು ಮೂಳೆಯ ಕೊನೆ ತೂರುವುದರಿಂದ, ಚೆನ್ನಾಗಿರುವ ಕೀಲೂ ಸಾಮಾನ್ಯವಾಗಿ ತಪ್ಪುವುದು. ನೇರವಾಗಿ ಕೀಲಿಗೇ ಏಟು ಬಿದ್ದರೂ ಕೀಲ್ತಪ್ಪಬಹುದು.

ಕೀಲಿಗೆ ಹಿಂದೆಂದೋ ಗಾಯವಾಗಿ ಇಲ್ಲವೆ ಅದರ ಸುತ್ತಣ ಊತಕಗಳಿಗೆ ಏಟು ತಗುಲಿ ಸರಿಯಾಗಿ ವಾಸಿಯಾಗದಿದ್ದರೆ. ಮತ್ತೆಮತ್ತೆ ಕೀಲ್ತಪ್ಪುವುದೇ ಮರುಕಳಿಕ ಕೀಲ್ತಪ್ಪಿಕೆಗೆ ಕಾರಣ. ಆಮೇಲೆ ಆಗಾಗ್ಗೆ ಕೀಲ್ತಪ್ಪಲು ಹೆಚ್ಚು ಬಲವೇ ಬೇಕಿರದು. ಹಗರಿನ ಕೀಲಿನಲ್ಲಿ ತಪ್ಪಿಕೆಯಾಗಿ ಅರೆಬರೆ ಗುಣವಾಗಿದ್ದರೆ ಕೈ ಹಿಡಿದು ಸುಮ್ಮನೆ ಎಳೆದರೂ ತಲೆಯಿಂದ ಮೇಲಕ್ಕೆ ತೋಳನ್ನು ಎತ್ತಿದರೂ ಸುಲಭವಾಗಿ ಕೀಲ್ತಪ್ಪುವುದು ಇದರ ಉದಾಹರಣೆ. ಕೀಲ್ಗವಚದ ಬಲಗುಂದಿಸುವ, ಕೀಲನ್ನು ಕೆಡಿಸುವ ರೋಗಗಳಲ್ಲಿ ರೋಗದ ಕೀಲ್ತಪ್ಪಿಕೆ ಕೊಂಚ ಬಲದಿಂದಲೇ ಆಗುತ್ತದೆ.

ಲಕ್ಷಣಗಳು: ಏಟು ಹೇಗೆ ಯಾವುದರಿಂದ ಬಿತ್ತು, ಎಲ್ಲಿಗೆ ತಗಲಿತು ಎಂಬ ವಿಷಯಗಳು, ಆಗಿರುವ ಗಾಯಗಳು, ರೋಗಿಯ ನೋವು, ಅನುಭವ ಲಕ್ಷಣಗಳು, ಕಣ್ಣಿಗೆ ಕಾಣುವ ಗಾಯಗಳು, ಎಕ್ಸ್‌ಕಿರಣ ಪರೀಕ್ಷೆಗಳು ಮುಂತಾದವುಗಳಿಂದ ಎಲುಮುರಿಕೆಗಳನ್ನು ಕೀಲ್ತಪ್ಪಿಕೆಗಳನ್ನು ಪತ್ತೆ ಹಚ್ಚಬಹುದು ಗಾಯ, ಪೆಟ್ಟು ಹೇಗಾಯಿತೆಂದು ಗೊತ್ತಾದರೆ, ಎಲುಮುರಿಕೆ, ಕೀಲ್ತಪ್ಪಿಕೆ ಎಲ್ಲೆಲ್ಲಿ ಆಗಿರುವುದೆಂದು ಗುರುತಿಸಲು ಅನುಕೂಲ. ಅದರಲ್ಲೂ ಎಳೆಯ ಮಕ್ಕಳಿಗೆ ನೋವು ಎಲ್ಲಿ ಹೆಚ್ಚಾಗಿರುವುದೆಂದು ತಿಳಿಸಲು ತಿಳಿಯದು. ಸಣ್ಣ ಏಟಿಗೇ ಹೀಗಾಗಿದ್ದರೆ, ಅದರ ಹಿನ್ನೆಲೆಯಲ್ಲಿರುವ ರೋಗವನ್ನು ಪತ್ತೆ ಹಚ್ಚಲು ನೆರವಾಗುವುದು. ಮೂಳೆ ಮುರಿದಿದ್ದರೆ, ಕೀಲ್ತಪ್ಪಿದ್ದರೆ ಸಾಮಾನ್ಯವಾಗಿ, ಹಾಗಾಗಿರುವ ಎಡೆಯಲ್ಲಿ ಮಾತ್ರ ನೋವು ಕಂಡು, ಮುಟ್ಟಿದರೆ ಕೋಮಲವಾಗಿರುವುದು. ಪೆಟ್ಟು ಬಿದ್ದಿರುವ ಕೈಕಾಲನ್ನು ಬಳಸ ಹೋದರೆ ಕರಕರ ಸದ್ದಾಗುವುದು, ಇಲ್ಲವೇ ಗಾಯಗೊಂಡ ಕೈಕಾಲನ್ನು ಬಳಸದಂತಾಗಿರುವುದು. ಪೆಟ್ಟಾದ ಭಾಗ ಸೊಟ್ಟಗಿರುವುದೂ ಮುರಿದೆಡೆ ಊತ, ಮೇಲಿನ ಚರ್ಮದ ಬಣ್ಣದಲ್ಲಿ ಬದಲಾವಣೆ, ಮೂಳೆ ಅಸಹಜವಾಗಿ ಬಾಗಿರುವಿಕೆ, ಪೆಟ್ಟಾದ ಮೂಳೆಯ ಬಲವನ್ನು ಪರೀಕ್ಷಿಸಿದಾಗ ಪೆಟ್ಟಾದ ಕಡೆ ಕರಕರ ತಾಕುವ ಅರಿವಾಗುವುದೂ ಬಲು ಸಾಮಾನ್ಯವಾಗಿ ಎದ್ದುಕಾಣುವ ಅಂಗ ಲಕ್ಷಣಗಳೂ. ಆದರೆ, ತಾಟಿಕೊಂಡ ಎಲುಮುರಿಕೆಯಲ್ಲಿ ಅಲುಗಾಡಿಸಿದರೆ ಮುರಿದ ಕೊನೆಗಳೂ ಆಡುವುದೂ ಇಲ್ಲ, ಕರಕರ ಸದ್ದು ಬರುವುದೂ ಇಲ್ಲ.

ಪೆಟ್ಟಾದ ಕೀಲು ಸೊಟ್ಟನಾಗಿ ತೋರುವಿಕೆ, ಕೀಲು ಸುತ್ತಲೂ ಊತಕಗಳ ಊತ. ಕೀಲುಮೇಲಿನ ಚರ್ಮದ ಬಣ್ಣಗೆಡಿಕೆ, ಕೀಲ್ತಪ್ಪಿದ ಕೀಲನ್ನು ಬಳಸಲಾಗದಿರುವಿಕೆ. ಕೀಲನ್ನು ಆಡಿಸದಂತಿರುವಿಕೆ–ಇವೆಲ್ಲ ಕೀಲ್ತಪ್ಪಿರುವ ಕೀಲಲ್ಲಿ ಕಂಡುಬರುತ್ತವೆ. ಎಲುಮುರಿಕೆ, ಕೀಲ್ತಪ್ಪಿಕೆಗಳನ್ನು ಕಂಡುಕೊಳ್ಳಲು ಮುಂದಿನಿಂದಲೂ ಪಕ್ಕಗಳಿಂದಲೂ ತೆಗೆದ ಎಕ್ಸ್‌ಕಿರಣ ಚಿತ್ರಗಳು ನೆರವಾಗುವುವಲ್ಲದೆ, ಅವುಗಳ ಬಗೆ, ಗಾಯದ ಹರವು ಇವೆಲ್ಲ ತಿಳಿಯುವುದರಿಂದ ಚಿಕಿತ್ಸೆ ಹೇಗಿರಬೇಕೆಂದೂ ಕೇವಲ ಹೊರಗಿನ ಪರೀಕ್ಷೆಗಿಂತಲೂ ಚೆನ್ನಾಗಿ ಸೂಚಿಸುವುವು. ಗಾಯ, ಪೆಟ್ಟುಗಳ ಜೋರು, ರೋಗಿಯ ವಯಸ್ಸು, ಆರೋಗ್ಯಗಳಿಗೆ ತಕ್ಕ ಹಾಗೆ ಸೊಕ್ಕೆ (ಷಾಕ್) ಆಗಿ ರೋಗಿ ಸುಸ್ತಾಗುವುದುಂಟು.

**ಮಾಯುವಿಕೆ:** ಎಲುಮುರಿಕೆಗಳ ಕಾರಣ ಏನೇ ಇರಲಿ, ಅವು ಮಾಯುವ ಬಗೆ ಮಾತ್ರ ಒಂದೇ. ಬಲು ಬೇಗನೆ ಮುರಿದ ಕೊನೆಗಳಿಗೆ ಅಡ್ಡನಾಗಿ ಚಾಚಿ, ಮುರಿದ ತುಂಡುಗಳನ್ನು ಒಂದುಗೂಡಿಸುವ ಹೊಸ ಊತಕವನ್ನು ಗಾಯಗೊಂಡ ಮೂಳೆ ಕೂಡಲೆ ತಯಾರಿಸುತ್ತದೆ. ಮಾಯುವಾಗ ಮೊದಮೊದಲಲ್ಲಿ ಈ ಊತಕ ನಯ ಗಾರೆಯಷ್ಟು ಮೆತುವಾಗಿದ್ದು ಸುಲಭವಾಗಿ ಕೆಡಿಸುವಂತಿರುವುದು. ಬರಬರುತ್ತ ಮೈಯಲ್ಲಿನ ಮೂಳೆಯ ಖನಿಜಗಳು ಈ ಹೊಸ ಊತಕದಲ್ಲಿ ಸೇರಿಕೊಂಡು ಗಡುಸುಗಟ್ಟಿಸಿ ಮುರಿದಿರುವ ಚೂರುಗಳನ್ನು ಗಟ್ಟಿಯಾಗಿ ಒಂದರೊಡನೊಂದು ಅಂಟಿಸುತ್ತವೆ. ಗೋಟುಮೂಳೆ (ಕ್ಯಾಲಸ್) ಎಂಬ ಈ ಹೊಸ ಊತಕದಲ್ಲಿ ಖನಿಜಗಳಿರುವುದರಿಂದ, ಆಗತಾನೆ ತೆಗೆದ ಎಕ್ಸ್‌ಕಿರಣ ಚಿತ್ರದಲ್ಲಿ ಮಸಕಾಗಿ ಕಾಣಬರುತ್ತದೆ. ವಾಸಿಯಾದಂತೆಲ್ಲ ಇನ್ನೂ ಮುಂದೆ ಇದೇ ಬೆಳೆದ ಮೂಳೆಯಾಗಿ ಬದಲಾಗುವುದು. ಗೋಟುಮೂಳೆ ಎಂದಿನ ಮೂಳೆಯಂತಾದ ಹಾಗೆಲ್ಲ ಮುರಿದ ಎಲುಬಿನ ತುಂಡುಗಳ ಕೂಡಿಕೆ ಇನ್ನೂ ಬಿಗುವಾಗಿ, ಕೊನೆಗೆ ಮುರಿದ ಭಾಗವೂ ಸೇರಿ ಇಡೀ ಒಂದೇ ಮೂಳೆಯಾಗಿಬಿಡುತ್ತದೆ.

ಗಾಯದ ಬಗೆ, ಆಳ, ಹರವು, ಊತಕಗಳ ನಾಶಗಳಂತೆ, ಎಲುಮುರಿಕೆ ಮಾಯುವುದರಲ್ಲಿ ಹಲವಾರು ಅಂಶಗಳಿವೆ. ಏಟು, ಗಾಯ ಜೋರಾಗಿದ್ದರೆ ಎಲುಮುರಿಕೆಯೊಂದಿಗೆ ಅದಕ್ಕೆ ಒದಗಿಸುತ್ತಿದ್ದ ರಕ್ತದ ಪೂರೈಕೆ ಕಡಿದೇ ಹೋಗಬಹುದು. ಆಗ ಮುರಿದ ಮೂಳೆ ವಾಸಿಯಾಗುವಂತೆ ಹೊಸ ನೇರ್ಪಿಕ ಊತಕಗಳನ್ನು ಹುಟ್ಟಿಸಲಾರದು. ಮುರಿದ ಮೂಳೆ ತುಂಡುಗಳ ಕೊನೆಗಳು ಮತ್ತೆ ಸರಿಗೂಡದಿದ್ದರೆ, ಸರಿಯಾಗಿ ಜೋಡಿಸುವ ಹೊಸ ಊತಕ ಬಿಟ್ಟಿರುವ ಜಾಗವನ್ನು ತುಂಬಿ ವಾಸಿಮಾಡಲು ಎಷ್ಟೂ ಅನುಕೂಲ. ಮೂಳೆ ತುಂಡುಗಳ ನಡುವೆ, ಸ್ನಾಯು, ಕಂಡರಗಳ (ಟೆಂಡನ್ಸ್) ತೆರನ ಊತಕ ಅಡ್ಡಬಿದ್ದರೆ, ತೆಗೆದುಹಾಕಬೇಕು. ಮುರಿದ ತುಂಡುಗಳು ಕೂಡಿಕೊಳ್ಳಬೇಕಾದರೆ, ಮೂಳೆ ಮೇಲೆ ಬೀಳುವ ಭಾರಕ್ಕೆ ತಕ್ಕಂತೆ 4 ರಿಂದ 10 ವಾರಗಳ ತನಕ ಅಲುಗಾಡದಂತೆ ಇರಿಸಬೇಕು. ಮೂಳೆಗಳನ್ನು ಒಂದು ಬಾರಿ ಒಂದು ನಿಲುವಿನಲ್ಲಿ ಜೋಡಿಸಿಟ್ಟ ಮೇಲೆ ಆಗಾಗ್ಗೆ ಕದಲಿಸದೆ ಹಾಗೇ ಇರಿಸದಿದ್ದರೆ, ಹೊಸದಾಗಿ ತಯಾರಾದ ಗೋಟುಮೂಳೆ ಹಾಳಾಗಿ ಮೂಳೆ ತುಂಡುಗಳನ್ನು ಒಂದುಗೂಡಿಸಲಾರದು. ಮೂಳೆಯ ಕೊನೆಗಳು ಒಂದುಗೂಡುವ ಮುನ್ನವೇ ಅಲುಗಾಡದೆ ಇರಿಸುವ ಸಲಕರಣೆಯನ್ನು ತೆಗೆದುಹಾಕಿಬಿಟ್ಟರೆ, ಅಲ್ಲಾಟದಿಂದ ಗೋಟುಮೂಳೆಯ ಬಲಗುಂದಿ ಮೂಳೆಯ ಕೊನೆಗಳು ಮತ್ತೆ ದೂರ ಸರಿವುವು.

ಮುರಿದ ಎಲುಬುಗಳನ್ನು ಸರಿಯಾಗಿ ಜೋಡಿಸಿಟ್ಟು, ಸಾಕಷ್ಟು ಎಚ್ಚರದಿಂದ ಅಲುಗಾಡದೆ ಇರಿಸಿದರೂ ಮುರಿದೆಡೆಯಲ್ಲಿ ಸೋಂಕು ಸೇರಿಬಿಟ್ಟಿತೆಂದರೆ, ಹೊಸ ಸರಿಪಡಕ ಗೋಟುಮೂಳೆ ಊತಕವನ್ನು ಹಾಳುಗೆಡವಿ, ಮಾಯುವುದನ್ನು ನಿಧಾನಗೊಳಿಸಬಹುದು ಇಲ್ಲವೇ ತೀರ ಅಡ್ಡಿಯೇ ಆಗಬಹುದು. ಎಲುಮುರಿಕೆ

ಮಾಯುವುದರಲ್ಲಿ ಹಿಂದೆ ಬಲು ಮುಖ್ಯ ಎನಿಸಿದ್ದ ವಯಸ್ಸು, ಊಣಿಸು, ಆರೋಗ್ಯ, ಜೀವಾತುಗಳು, ಕುಲ ಇವುಗಳ ಪಾತ್ರ ಈಗ ಅಷ್ಟು ಮುಖ್ಯವಲ್ಲ ಎನಿಸಿದೆ. ಬೆಳೆದವರಿಗಿಂತ ಮಕ್ಕಳಲ್ಲಿ ಎಲುಬು ಬೇಗನೆ ಕೂಡಿಕೊಳ್ಳುವುದಾದರೂ ಮಾಯುವುದಕ್ಕೆ ಮುಪ್ಪು ಅಡಚಣೆಯೂ ಅಲ್ಲ, ಕಷ್ಟಕೊಡುವುದೂ ಇಲ್ಲ.

ಕೀಲ್ತಪ್ಪಿಕೆಗಳಲ್ಲಿ, ಮೂಳೆಗಳನ್ನು ಕೀಲಿನಲ್ಲಿ ಚೆನ್ನಾಗಿ ಹಿಡಿದಿರುವ ಸ್ನಾಯುಗಳು, ತಂತುಗಟ್ಟಗಳು, ಕಂಡರಗಳು ಕೀಲ್ಗವಚಗಳಿಗೂ ಗಾಯವಾಗಿರುವುದು. ಮೆತುವಾದ ಈ ಊತಕಗಳ ಹರಿದ ಅಂಚುಗಳ ನಡುವೆ ವಾಸಿಯಾಗುವಾಗ ಕಲೆಗಟ್ಟುತ್ತವೆ. ಮೂಳೆಗಳು ಮತ್ತೆ ಸರಿಯಾದ ಜಾಗದಲ್ಲಿ ಇರಲಿ, ಇಲ್ಲದಿರಲಿ ಇವು ಕೂಡಿಕೊಳ್ಳಲು ಅಡ್ಡಿಯೇ ಇಲ್ಲ. ಮುರಿದ ಮೂಳೆಗಳಿಗಿಂತಲೂ ಗಾಯಗೊಂಡ ಕೀಲಿನ ಊತಕಗಳು ಬೇಗನೆ ಮಾಯುತ್ತವೆ.

ಮೇಲಿನ ಎರಡು ವಿಧಾನಗಳಿಂದಲೂ ಎಲುಮುರಿಕೆ, ಕೀಲ್ತಪ್ಪಿಕೆಗಳು ಮಾಯುತ್ತವೆ.

**ಚಿಕಿತ್ಸಾ ಕ್ರಮ:** ಎಲುಮುರಿಕೆ, ಕೀಲ್ತಪ್ಪಿಕೆಗಳ ಚಿಕಿತ್ಸೆ ಕೈಗೊಳ್ಳುವಾಗ ಹಲವಾರು ಅಂಶಗಳನ್ನು ಗಮನಿಸಬೇಕು. ರೋಗಿಯ ವಯಸ್ಸು, ಆರೋಗ್ಯದ ಮಟ್ಟ, ಕಸಬು, ಜೊತೆಗೇ ಆಗಿರುವ ಗಾಯಗಳು, ಎಲುಮುರಿಕೆಯ ಬಗೆ, ಆಗಿರುವ ಜಾಗ–ಇವನ್ನೆಲ್ಲ ಲೆಕ್ಕಿಸಬೇಕು.

ಕೀಲ್ತಪ್ಪಿಕೆ, ಎಲುಮುರಿಕೆ ಆಕಸ್ಮಿಕವಾಗಿ ಆಗಿದ್ದರೆ, ವಿಪರೀತವಾಗಿ ರಕ್ತ ಸುರಿವುದನ್ನು ಕಟ್ಟುಪಟ್ಟಿಗಳನ್ನೋ (ಬ್ಯಾಂಡೇಜಸ್) ತಿರುಚೊತ್ತನ್ನೋ (ಟೂರ್ನಿಕೆ) ಬಿಗಿಸಿ ತುರ್ತಾಗಿ ನಿಲ್ಲಿಸಿ, ಗಾಯವಾಗಿ ಹರಿದಿರುವ ಚರ್ಮದ ಮೇಲೆ ಚೊಕ್ಕವಾದ ಕಟ್ಟುಪಟ್ಟಿ ಸುತ್ತಿ, ಗಾಯವಾದ ಕೈಕಾಲುಗಳನ್ನು ನೆಟ್ಟಗಿರಿಸಲು ಯತ್ನಿಸದೆ, ಇರುವ ಹಾಗೇ ಎಲುಮುರಿದ ಜಾಗದ ಮೇಲ್ಗಡೆಯ ಕೆಳಗಡೆಯ ಕೀಲುಗಳು ಕೂಡ ಆಡಿಸಲಾಗದ ಹಾಗೆ ಮೆತ್ತೆಗಳನ್ನು ಜೋಡಿಸಿರುವ ದಬ್ಬೆಪಟ್ಟಿಗಳಿಂದ ಕಟ್ಟಿಟ್ಟು, ವೈದ್ಯ ಪಾಲನೆ ದೊರೆವಲ್ಲಿಗೆ ಮೆಲ್ಲನೆ ಸಾಗಿಸಬೇಕು.

ಮುರಿದು ಜಾಗ ಬಿಟ್ಟಿರುವ ಎಲುಬಿನ ತುಂಡುಗಳನ್ನು ಮತ್ತೆ ಸರಿಯಾಗಿ ಜೋಡಿಸಿಟ್ಟು, ಮಾಯುವ ತನಕ ಅವುಗಳ ಕೊನೆಗಳು ಅಲುಗಾಡದಂತೆ ನೋಡಿಕೊಳ್ಳುವುದೇ ಸರಳ ಎಲುಮುರಿಕೆಯ ಚಿಕಿತ್ಸೆ. ಮುರಿದರೂ ಎಲುಬಿನ ಕೊನೆಗಳು ಅವುಗಳ ಜಾಗದಿಂದ ಕದಲದಿರುವ ಸಣ್ಣ ಎಲುಮುರಿಕೆಗಳಿಗೆ ಸರಿಪಡಿಸುವುದೇನೂ ಬೇಕಿರದು. ಅರೆಬರೆ ಎಲುಮುರಿಕೆಗಳು, ಮಕ್ಕಳಲ್ಲಾಗುವ ಬಹು ಪಾಲು ಎಲುಮುರಿಕೆಗಳು, ಬಲವಾದ ಸ್ನಾಯುಗಳು ತಗುಲಿಕೊಂಡಿರದ ಮೂಳೆಯ ಮುರಿಕೆಗಳನ್ನು ಕೇವಲ ಕೈಪಾಟಿಂದಲೇ ಸರಿಜೋಡಿಸಬಹುದು. ಮೂಳೆಯ ಮುರಿಕೆಯಾದ ಇಕ್ಕಡೆಗಳಲ್ಲೂ ಒಂದು ಕೈಯಿಂದ ಹಿಡಿದುಕೊಂಡು, ಸರಿಯಾದ ಜಾಗದಲ್ಲಿ ಕೂರುವಂತೆ ಕೈಗಳಿಂದ ನೀವಬೇಕು.

ಬಲವಾದ ಸ್ನಾಯುಗಳು ತಗುಲಿಕೊಂಡಿರುವ ಮೂಳೆಗಳ ಇಲ್ಲವೇ ಬಲು ಚೂರುಚೂರಾಗಿರುವ ಎಲುಮುರಿಕೆಯನ್ನು ಸರಿಜೋಡಿಸಲು ಬಹಳ ಪಾಲನೆ, ಎಚ್ಚರಗಳಿರಬೇಕು. ಜೋರಾಗಿ ಎಳೆವ ಸ್ನಾಯುಗಳಿಂದ, ಮುರಿದ ಮೂಳೆಯ ತುಂಡುಗಳ ಕೊನೆಗಳು ದೂರದೂರ ಸರಿಯಬಹುದು. ಆಗ, ಮುರಿದ ಕೊನೆಗಳನ್ನು ಸರಿಜೋಡಿಸಿಟ್ಟು, ಸ್ನಾಯುಗಳ ಎಳೆತದ ಎದುರುವರ್ತಿಸಲು ಗಾಯಗೊಂಡ ಅವಯವವನ್ನು ಒಂದೇ ಸಮನಾಗಿ ಎಳೆದಿಡಬೇಕು. ಅವಯವದ ಕೊನೆಗೆ ಗೊತ್ತಾದ ಭಾರದ ಮಣ್ಣಿನ ಚೀಲಗಳನ್ನೋ ತೂಕದ ಬಟ್ಟುಗಳನ್ನೋ ತಗುಲಿಹಾಕಿ, ಗುರುತ್ವಕ್ಕೆ ಎದುರಾಗಿ ಎಳೆಯುತ್ತಿರುವಂತೆ ತೂಗಬಿಡುವುದೇ ಎಳೆತದ (ಟ್ರಾಕ್ಷನ್) ವಿಧಾನದ ಚಿಕಿತ್ಸೆ. ಭಾರವನ್ನು ಅಂಟುಪಟ್ಟಿಗಳು, ದಾರಗಳಿಂದ ಚರ್ಮಕ್ಕೆ ಅಂಟಿಸಿ, ಇಲ್ಲವೇ ಕೆಳಗಣ ಮೂಳೆಯಲ್ಲಿ ಲೋಹದ ಕಂಬಿ ತೂರಿಸಿ ಹಾಕಿಡಬಹುದು. ಕೆಲವೇಳೆ, ಕೊಂಚ ಕಾಲದ್ದಾದರೆ, ಕೈಗಳಿಂದ ಎಳೆದಿಟ್ಟರೆ ಸಾಕಾಗುವುದು. ಭಾರವನ್ನು ತೆಗೆದರೂ ಮುರಿದ ಮೂಳೆ ತುಂಡುಗಳ ಕೊನೆಗಳು ಇರಿಸಿದಲ್ಲೇ ಇರುವಂತೆ ವಾಸಿಯಾಗುವ ತನಕ ಈ ಎಳೆತವನ್ನು ಇಟ್ಟಿರಬೇಕು. ಕೆಲವು ಎಲುಮುರಿಕೆಗಳನ್ನು ಕೈಪಾಟಿಂದಾಗಲೀ ಎಳೆದಿಡುವುದರಿಂದಾಗಲೀ ಸರಿಪಡಿಸುವುದಾಗದು. ಬಲು ಜೋರಾಗಿ ಏಟು ಬಿದ್ದು ಸಿಡಿದಂತಾದ ಮೂಳೆ ತುಂಡುಗಳ ನಡುವೆ ಸ್ನಾಯು ತೆರನ ಊತಕಗಳು ತೆಗೆದುಹಾಕಲಾಗದಷ್ಟು ಆಳವಾಗಿ ಸೇರಿಬಿಟ್ಟಿದ್ದರೆ ಹೀಗಾಗುವುದು. ಆಗ ಒಳಗೆ ನಂಜು ಸೇರದಂತೆ ಎಚ್ಚರದಿಂದ ನೋಡಿಕೊಂಡು ಶಸ್ತ್ರಕ್ರಿಯೆಯಿಂದ ಮೂಳೆಯನ್ನು ಮತ್ತೆ ಸರಿಜೋಡಿಸಿ, ಹಲವಾರು ವಿಧಾನಗಳಲ್ಲಿ ಒಂದನ್ನು ಬಳಸಿ ಅಲುಗಾಡದಂತೆ ಇರಿಸಬೇಕಾಗುತ್ತದೆ.

ಸಣ್ಣ ಎಲುಮುರಿಕೆಗಳಿಗೆ ಸರಳ ಕಟ್ಟುಪಟ್ಟಿಗಳು, ತೂಗಾಸರೆಗಳಲ್ಲಿ (ಸ್ಲಿಂಗ್ಸ್) ಇರಿಸಿದ್ದರೆ ಸಾಕು. ಸರಿಜೋಡಿಸಲು ಕೈಪಾಟು ಬೇಕಾಗುವ ಎಲುಮುರಿಕೆಗಳನ್ನು ದಬ್ಬೆಪಟ್ಟಿಗಳಿಂದಲೊ ಪ್ಯಾರಿಸ್ಸಿನ ಗಚ್ಚುಗಿರಿಯ ಸುರುಳಿಗಳಿಂದ ಮಾಡಿದ ಅಚ್ಚುಗಳಲ್ಲೊ ಅಲುಗಾಡದಿರಿಸಬೇಕು. ಅವಯವವನ್ನು ಸರಿಯಾದ ಇರವಿನಲ್ಲಿ ಹಿಡಿದುಕೊಂಡು ಅಚ್ಚನ್ನು ಹಾಕಬೇಕು. ಗಚ್ಚುಗಿರಿ ಒಣಗಿ ಗಟ್ಟಿಯಾದ ಮೇಲೆ, ಗಾಯವಾದ ಅವಯವವನ್ನು ಕಾಪಿಡಲು ತೂಗಾಸರೆಗಳು, ಊರುಗೋಲುಗಳು, ಬೆತ್ತಗಳನ್ನೂ ರೋಗಿ ಬಳಸಬಹುದು. ಮೂಳೆಯ ಕೊನೆಗಳನ್ನು ಎಳೆದಿಟ್ಟಾಗ ಪಕ್ಕಗಳಿಗೆ ಹೊರಳದಂತೆ ಇರಿಸಲು ಉಸುಬಿನ ಚೀಲಗಳು, ತೂಗಾಸರೆಗಳು ಮತ್ತು ಅಚ್ಚುಗಳನ್ನು ಬಳಸಬಹುದು. ಶಸ್ತ್ರಕ್ರಿಯೆ ಆಗಬೇಕಾದ ಎಲುಮುರಿಕೆಗಳಲ್ಲಿ ಎಷ್ಟೊ ವೇಳೆ, ಲೋಹದ ಮೊಳೆಗಳು, ಸೂಜಿಗಳು, ತಂತಿಗಳು, ತಿರುಪುಗಳು, ಕಂಬಿಗಳು, ತಗಡು ಪಟ್ಟಿಗಳಿಂದ ಒಳಗೇ ಬಿಗಿಸುವುದುಂಟು. ಹಾಗೆ ಮಾಡಿದಾಗ, ಕೆಲವೇಳೆ ಹೊರಗೆ ದಬ್ಬೆಪಟ್ಟಿಗಳಾಗಲೀ ಅಚ್ಚುಗಳಾಗಲೀ ಬೇಕಿರದು. ಕೆಲವೇಳೆ ಕೊಂಚವಾಗಿ ಕೈಕಾಲು ಆಡಿಸಲೂ ಬಹುದು.

ಮೂಳೆಯ ಬಲವನ್ನು ಮೆಲ್ಲಗೆ ಅಮುಕಿ ಇಲ್ಲವೇ ಎಕ್ಸ್‌ಕಿರಣಗಳಿಂದ ಪರೀಕ್ಷಿಸಿದಾಗ ಗೋಟುಮೂಳೆ ಹೊರಗಣ ಆಸರೆಯ ನೆರವಿಲ್ಲದೆಯೆ ಮುರಿದ ಮೂಳೆ ಸರಿಗೂಡಿದಷ್ಟು ಬಲವಾಗುವ ತನಕ ಹಾಗೇ ಅಲುಗಾಡದಂತೆ ಇರಿಸಿರಬೇಕು. ತೂಗಾಸರೆಗಳು, ಅಚ್ಚುಗಳನ್ನು ತೆಗೆದುಬಿಟ್ಟ ಮೇಲೂ ಇನ್ನಷ್ಟು ಮಾಯುವ ತನಕ ಗಾಯಗೊಂಡ ಕೈಕಾಲನ್ನು ಬಳಸುವಂತಿಲ್ಲ.

ಸಾಕಷ್ಟು ವಾಸಿಯಾದ ಮೇಲೆ, ಗಾಯಗೊಂಡ ಕೈಕಾಲುಗಳಲ್ಲಿ ಬಲ ಬರುವಂತೆ ಮೆಲ್ಲನೆ ಅಂಗಸಾಧನೆಗಳನ್ನು ಮೊದಲು ಮಾಡಿದರೆ ಗಾಯಗೊಂಡವ ಆದಷ್ಟು ಬೇಗನೆ ಬಲು ಕಡಿಮೆ ಊನದೊಂದಿಗೆ ಕೆಲಸಕ್ಕೆ ಹಿಂತಿರುಗಬಹುದು. ಆಗ, ಅರೆಬರೆ ವಾಸಿಯಾಗಿರುವ ಮುರಿದ ಮೂಳೆಯನ್ನು ಕಾಪಿಡಲು, ತೆಗೆದು ಮುಚ್ಚುವ ಅಚ್ಚುಗಳು, ತೆಗೆಯಬಹುದಾದ ದಬ್ಬೆಪಟ್ಟಿಗಳು, ಊರುಗೋಲುಗಳು, ಬೆತ್ತಗಳು, ನಡೆಕೋಲುಗಳು, ಬಿಸಿನೀರಿನ ಕೊಳಗಳು, ತೂಗಾಸರೆಗಳು, ಬಿಗುಪಟ್ಟಿಗಳು ಒಳ್ಳೆಯ ಸಾಧನಗಳು. ಇವುಗಳ ಬಳಕೆಯಿಂದ ಅವಯವದಲ್ಲಿ ರಕ್ತದ ಸುತ್ತಾಟ ಚೆನ್ನಾಗಿದ್ದು, ಸ್ನಾಯುಗಳೂ ಬಡಕಲಾಗದಿರುವುವು. ಕೀಲುಗಳು ಬಿಗಿಹಿಡಿವುದೂ ತಗ್ಗುವುದು. ನೋವು ಕೊಡುವ ಯಾವ ಬಲವಾದ ಅಂಗಸಾಧನೆಯೂ ಕೂಡದು. ಗೋಟುಮೂಳೆ ಪೂರ್ತಿಯಾಗಿ ಮೂಳೆಯಂತೆ ಬದಲಾಗಿ, ಎಲುಮುರಿಕೆ ಚೆನ್ನಾಗಿ ಕೂಡಿಕೊಂಡು ಎಲುಬಾದ ಮೇಲೆ ಕೈಕಾಲು ಪೂರ್ತಿ ಆಡಿಸಲು ಒಪ್ಪಬಹುದು, ಬೇಕೆನಿಸಿದರೆ, ಎಲುಮುರಿಕೆ ಚೆನ್ನಾಗಿ ವಾಸಿಯಾದ ಮೇಲೆ, ಶಸ್ತ್ರಕ್ರಿಯೆಯಿಂದ ಒಳಗೇ ಹಾಕಿರಿಸಿದ ಲೋಹದ ಸಾಧನಗಳನ್ನು ಮತ್ತೆ ಶಸ್ತ್ರಕ್ರಿಯೆಯಿಂದ ತಗೆದು ಹಾಕಬಹುದು. ಈಗಿನ ಕಾಲದ ವಿಶಿಷ್ಟ ಲೋಹದ ಬಳಕೆಯಿಂದ ಹೀಗೆ ಮಾಡಬೇಕಿಲ್ಲ.

ಸರಳ ಎಲುಮುರಿಕೆಗಳಿಗಿಂತ ಕಲೆತದವಕ್ಕೆ ಚಿಕಿತ್ಸೆ ಮಾಡುವುದು ತೊಡಕಿನದು. ಚರ್ಮದಲ್ಲಾದ ಗಾಯದಿಂದ ಸೋಂಕು ಒಳನುಗ್ಗಿ ನೆಲೆಸುತ್ತದೆ. ಮುರಿದ ಮೂಳೆಯ ಕೊನೆಗಳಿಗೆ ಈ ಸೋಂಕು ಹೊಕ್ಕಿತೆಂದರೆ, ಹೊಸ ಎಲುಬು ತಯಾರಿಸುವ ಗೋಟುಮೂಳೆಯೇ ಹುಟ್ಟದೆ ಎಲುಮುರಿಕೆ ಮಾಯದಂತಾಗುತ್ತದೆ. ಸೋಂಕನ್ನು ಪೂರ್ತಿ ಹೋಗಲಾಡಿಸಿದ ಹೊರತು ಮೂಳೆಯಂತೂ ಕೂಡಿಕೊಳ್ಳುವುದೇ ಇಲ್ಲ.

ಕಲೆತ ಎಲುಮುರಿಕೆಯಾದ ಕೆಲವೇ ತಾಸುಗಳಲ್ಲಿ ರೋಗಿಯನ್ನು ಕಂಡರೆ, ಕೂಡಲೇ ಶಸ್ತ್ರಕ್ರಿಯೆ ಕೈಗೊಳ್ಳಬೇಕಾಗುತ್ತದೆ. ಮುರಿದ ಮೂಳೆಯನ್ನು ಆಗ ಸರಿಜೋಡಿಸಿ ಒಳಗೆಲ್ಲೂ ಸೋಂಕು ನೆಲೆಸದಂತೆ ಮಾಡಲು ಸೋಂಕಿಗೆ ಒಡ್ಡಿ ಕೆಟ್ಟಿರುವ ಸುತ್ತಮುತ್ತಲ ಎಲ್ಲ ಊತಕಗಳನ್ನೂ ಕತ್ತರಿಸಿ ಹಾಕಿಬಿಡಬೇಕು. ಆ ಮೇಲೆ ಗಾಯವನ್ನು ಹೊಲೆಯಬಹುದು ಇಲ್ಲವೇ ಅದರ ಮೇಲೆ ಹೆಚ್ಚು ತೆರವು ಬಿಟ್ಟಿದ್ದರೆ ಚರ್ಮ ನಾಟಿ ಹಾಕಬಹುದು. ಇದಾದ ಮೇಲೆ ದಬ್ಬೆಪಟ್ಟಿಗಳನ್ನೊ ಅಚ್ಚುಗಳನ್ನೊ ಹಾಕಿ ಅಲುಗಾಡದಂತೆ ಇರಿಸಬೇಕು. ಸೋಂಕು ಹತ್ತದಂತೆ ನೋಡಿಕೊಳ್ಳಲು ಮುದ್ದುಗಳನ್ನೂ ಸೆಟೆಬೇನೆ (ಟೆಟನಸ್) ಬರದಂತೆ ರೋಧರಸಿಕೆಯನ್ನೂ (ಅಂಟಿಸೀರಂ) ಕೊಡಬೇಕು.

ಈ ಮುನ್ನೆಚ್ಚರಿಕೆಗಳು ಸಫಲವಾಗದಿದ್ದರೆ, ಚಿಕಿತ್ಸೆ ಮಾಡುವ ಮೊದಲೇ ಸೋಂಕು ಹತ್ತಿಬಿಟ್ಟಿದ್ದರೆ, ಸೋಂಕನ್ನು ಹೋಗಲಾಡಿಸಲು ಚಿಕಿತ್ಸೆ ಮೊದಲು ಆಗಬೇಕು. ಆಮೇಲೆ ಎಲುಮುರಿಕೆಯನ್ನು ಸರಿಪಡಿಸುವುದು. ಎಷ್ಟೊ ವೇಳೆ ಎಲುಮುರಿಕೆಯೊಂದಿಗಿನ ಸೋಂಕನ್ನು ಹೋಗಲಾಡಿಸುವುದೆಂದರೆ, ನಿಡುಗಾಲದ, ಕಷ್ಟವಾದ, ಕಟ್ಟುನಿಟ್ಟಿನ ಕೆಲಸ. ಆಗ ಮುರಿದ ಮೂಳೆ ಕೊನೆಗಳನ್ನು ಆದಷ್ಟು ಚೆನ್ನಾಗಿರಿಸಿಟ್ಟು ಹೊರ ಸೋಂಕು ಇನ್ನು ಒಳ ನುಗ್ಗದಂತೆ ಮುಚ್ಚಿಟ್ಟು ಮುಂದಿನ ಚಿಕಿತ್ಸೆ ಮಾಡಬೇಕು. ಸೋಂಕೆಲ್ಲ ಕಳೆಯಿತೆಂದರೆ, ಇದನ್ನು ಸರಳ ಎಲುಮುರಿಕೆಯಷ್ಟು ಸುಲಭವಾಗಿ ಚಿಕಿತ್ಸೆ ಮಾಡಬಹುದು.

ಎಲುಮುರಿಕೆ ಕೀಲಿನೊಳಕ್ಕೂ ಹರಡಿ ಕೀಲಿನ ನುಣುಪಾದ ಮೇಲುತಳಗಳನ್ನು ಹಾಳುಗೆಡವಿದ್ದರೆ ಇನ್ನೂ ತೊಡಕಿದ್ದಂತೆ. ಗಾಯದಿಂದ ಮೇಲುತಳ ಒರಟಾಗಿ ಅಡ್ಡಾದಿಡ್ಡಿಯಾಗಿ ವಾಸಿಯಾದರೆ, ಆಮೇಲೆ ಕೀಲು ಆಡಿಸದಂತಾಗಿ ನೋಯುತ್ತಿರುತ್ತವೆ. ಕೀಲಿನ ಮೇಲುತಳಗಳನ್ನು ಕೈಪಾಟನಿಂದಲೊ ಎಳೆದಿಡುವುದರಿಂದಲೊ ಎಂದಿನಂತೆ ಸರಿಜೋಡಿಸಲಾಗದಿದ್ದರೆ ಶಸ್ತ್ರಕ್ರಿಯೆ ಆಗಲೇಬೇಕಾಗುವುದು.

ಸರಳ ಕೀಲ್ತಪ್ಪಿಕೆಗಳನ್ನು ಕೈಪಾಟಿನಿಂದಲೇ ಸರಿಗೂಡಿಸಬಹುದು; ಕೆಲವು ಬಾರಿ ಎಳೆದಿಡಬೇಕಾಗಬಹುದು. ಕೀಲ್ತಪ್ಪಿಕೆಯನ್ನು ಸರಿಪಡಿಸಿದ ಮೇಲೆ, ಕೀಲಿನ ಸುತ್ತಲೂ ಗಾಯ ಚೆನ್ನಾಗಿ ಮಾಯುವ ತನಕ ಆ ಕೀಲನ್ನು ಕಟ್ಟುಪಟ್ಟಿಗಳು, ತೂಗಾಸರಗಳು, ದಬ್ಬೆಪಟ್ಟಿಗಳು. ಅಚ್ಚುಗಳಲ್ಲಿ ಅಲುಗಾಡದಂತೆ ಇರಿಸಬೇಕು. ಆಮೇಲೆ ಕೀಲನ್ನು ಮೆಲ್ಲಗೆ ಆಡಿಸಲು ಯತ್ನಿಸಬಹುದು. ನೋವಾಗುವುದಾದರೆ, ಬಲವಂತದಿಂದ ಕೀಲನ್ನು ಆಡಿಸಬಾರದು. ನೋವಿರದೆಯೇ ಕೊಂಚವಾದರೂ ಕೀಲು ಆಡುವ ತನಕ ಆ ಅವಯವವನ್ನು ಕೆಲಸಕ್ಕೆ ಬಳಸಕೂಡದು.

ಕಲೆತ ಕೀಲ್ತಪ್ಪಿಕೆಗಳಿಗೂ ಕಲೆತ ಎಲುಮುರಿಕೆಯ ಚಿಕಿತ್ಸೆಯ ವಿಧಾನಗಳೇ ಸಾಕಾಗುತ್ತವೆ. ಮರುಕಳಿಕ ಇಲ್ಲವೇ ಹುಟ್ಟಿಂದಲೇ ಬಂದ ಕೀಲ್ತಪ್ಪಿಕೆಗಳನ್ನು ಸರಿಪಡಿಸಲು ಕೆಟ್ಟಿರುವ ಕೀಲುಗಳ ಮರುರೂಪಿಕ ಶಸ್ತ್ರವೈದ್ಯವೇ ಬೇಕಾಗುತ್ತದೆ **(ನೋಡಿ– ಎಲುನೇರ್ಪಿಕ–ಶಸ್ತ್ರವೈದ್ಯ)**.

ಎಲುಮುರಿಕೆ ಕೀಲ್ತಪ್ಪಿಕೆಗಳು ವಿಪರೀತ ಗಾಯ, ಪೆಟ್ಟುಗಳಿಂದಾಗುತ್ತವೆ. ಹೀಗೆ ಸಿಕ್ಕಾಪಟ್ಟೆ ಒಡೆದಿರುವ ಮೂಳೆ ಕೊನೆಗಳ ನಡುವೆ ಚೂರುಗಳು ಬಿಡಿಯಾಗಿ ಬಿದ್ದು ಸಿಕ್ಕಿಕೊಂಡಿರುತ್ತವೆ. ಆಗ ಕೀಲ್ತಪ್ಪಿಕೆಯನ್ನು ಸರಿಪಡಿಸುವ ಮೊದಲು ಈ ಬಿಡಿ ಚೂರುಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಬೇಕು. ಇಷ್ಟೆಲ್ಲ ಮಾಡಿ ಸರಿಗೂಡಿಸಿದರೂ ಪೂರ್ತಿ ವಾಸಿಯಾಗಲು ಸರಳ ಕೀಲ್ತಪ್ಪಿಕೆಗಿಂತಲೂ ಹೆಚ್ಚು ಕಾಲ ಹಿಡಿಯುತ್ತದೆ.

**ತಾಕುತೊಡಕುಗಳು:** ಎಲುಮುರಿಕೆಯಿಂದೇಳುವ ತೊಡಕುಗಳಲ್ಲಿ ಮುಖ್ಯವಾದುವು ಮಾಯದಿರುವಿಕೆ, ಅವಯವ ಬಳಸಲಾರದಂತೆ ಮೂಳೆ ಕೊನೆಗಳು ಕೂಡಿರುವಿಕೆ, ಮೂಳೆಗಳು ಚೆನ್ನಾಗಿ ಕೂಡಿಕೊಂಡಿದ್ದರೂ ಅದರ ಬಳಕೆಗೆ ಅಡ್ಡಿಯಾಗಿರುವಿಕೆ. ಮುರಿದ ಮೂಳೆ ಮಾಯದಿರಲು ಕಾರಣಗಳು ಹಲವಾರು. ಸಾಕಷ್ಟು ಅಲುಗಾಡದಂತೆ ಇರಿಸಿಕೆ, ಸೋಂಕು, ಮೂಳೆಯೆಲ್ಲ ಚೂರುಚೂರಾಗೊ, ವಿಪರೀತ ಗಾಯವಾಗೊ, ಬಹುಪಾಲು ಮೂಳೆಗೆ ಸಾಕಷ್ಟು ರಕ್ತ ಒದಗಣೆ ತಪ್ಪುವುದು. ಕೆಲವು ವೇಳೆಗಳಲ್ಲಿ ಮುರಿದ ಮೂಳೆ ಕೂಡಿಕೊಳ್ಳದೆ ಹಾಗೇ ಉಳಿವುದಕ್ಕೆ ಕಾರಣವೇ ಗೊತ್ತಾಗದು.

ಸಾಮಾನ್ಯವಾಗಿ ಮೂಳೆಯನ್ನು ಮತ್ತೆ ಸರಿಜೋಡಿಸದಿದ್ದರೆ, ಅದು ಸೊಟ್ಟನಾಗಿ ಕೂಡಿಕೊಂಡು ಕೈಕಾಲು ಸೊಟ್ಟನಾಗೇ ಉಳಿವುದು. ಗಾಯ, ಪೆಟ್ಟುಗಳಿಂದ ಅವಯವದ ಬಹುಪಾಲು ಮೂಳೆಯೇ ಹಾಳಾಗಿ ಬಿಟ್ಟರೂ ಹೀಗೇ ಸೊಟ್ಟನಾಗುವುದು. ಆಗ ಅವಯವವನ್ನು ಉಳಿಸಿಕೊಳ್ಳಬೇಕಾದರೆ ಸೊಟ್ಟಗಿರುವುದನ್ನು ಒಪ್ಪಿಕೊಳ್ಳಲೇಬೇಕು. ಮಕ್ಕಳಲ್ಲಿ ಮೂಳೆ ಬೆಳೆವ ಕೇಂದ್ರಗಳಿಗೆ ಪೆಟ್ಟಾದರೂ ಮುಂದೆ ಆ ಭಾಗ ಸೊಟ್ಟನಾಗೇ ಬೆಳೆಯುತ್ತದೆ.

ಅಪಾರವಾಗಿ ಮುರಿದಿರುವುದರಿಂದ ಚೆನ್ನಾಗಿ ವಾಸಿಯಾಗುವಂತೆ ಬಹಳ ಕಾಲ ಅಲುಗಾಡದಂತೆ ಇರಿಸಿಕೆ, ಕಲೆತ ಎಲುಮುರಿಕೆಗಳಲ್ಲಿ ಸೊಂಕು ಸೇರಿಬಿಟ್ಟು ವಾಸಿಯಾದಾಗ ಬೆಳೆದ ದಪ್ಪನೆಯ ಕಲೆಗಟ್ಟು (ಸ್ಕಾರ್), ಇಲ್ಲವೆ ಅವಯವವನ್ನು ಅಲುಗಾಡದಂತೆ ಇರಿಸಿದಾಗ ಗಾಯ ಮಾಯುವುದರಿಂದೆದ್ದ ದಟ್ಟನೆಯ ಕಲೆಗಟ್ಟು– ಇವು ಎಲುಮುರಿಕೆ ಚೆನ್ನಾಗಿ ವಾಸಿಯಾದರೂ ಅವಯವವನ್ನು ಬಳಸಲಾಗದಂತೆ ಆಗುವ ಸಾಮಾನ್ಯ ಕಾರಣಗಳು. ಕೀಲುಗಳು ಕೇವಲ ಸಣ್ಣ ಏಟುಗಳಿಂದಲೇ ಗಡಸಾಗಿಬಿಡಬಹುದು. ಇದರ ಕಾರಣ ತಿಳಿದಿಲ್ಲ.

ಕೀಲಿನಲ್ಲಿ ನೋವು ಕೀಲು ಗಡುಸಾಗುವುದೂ ಕೀಲ್ತಪ್ಪಿಕೆ ಮರುಕಳಿಸುವುದೂ ಕೀಲ್ತಪ್ಪಿಕೆಯ ಮುಖ್ಯ ತೊಡಕುಗಳು. ಕೀಲ್ತಪ್ಪಿಕೆಯನ್ನು ಸರಿಪಡಿಸದಿದ್ದರೆ, ಗಾಯದಿಂದ ಸರಿಪಡಿಸಲಾಗದಷ್ಟು ಹಾನಿಯಾಗುವುದು, ಮಾಯುವಾಗ, ಅಲುಗಾಡದೆ ಇರಿಸಿದ್ದಾಗ ಕೀಲಿನ ಸುತ್ತ ಆಗುವ ಬಲು ದಪ್ಪನೆಯ ಕಲೆಗಟ್ಟೂ ಈ ನೋವು, ಗಡುಸುತನಗಳಿಗೆ ಕಾರಣ. ಕೀಲಿನ ಸುತ್ತಮುತ್ತಣ ಊತಕಗಳ ಗಾಯ ಚೆನ್ನಾಗಿ ವಾಸಿಯಾಗದಿದ್ದರೆ, ಕೀಲಿನ ಕೂಡಿಸುವ ಮೇಲುತಳಗಳು ಹಾಳಾಗಿದ್ದರೆ ಕೀಲ್ತಪ್ಪಿಕೆ ಮರುಕಳಿಸುವುದು.

**ಮೂಳೆ ನಾಟಿಕೆ:** ಮುರಿದ ಮೂಳೆಯ ಕೊನೆಗಳು ಸರಿಯಾಗಿ ಕೂಡಿಕೊಳ್ಳದಿದ್ದಾಗ ಅವಕ್ಕೆ ಅಡ್ಡನಾಗಿ ಒಂದೆರಡು ಬೇರೆಡೆಯ ಮೂಳೆ ಚೂರುಗಳನ್ನು ಇರಿಸುವ, ನಡುವೆ ತುಂಬುವ ಶಸ್ತ್ರಕ್ರಿಯಾವಿಧಾನವಿದು. ಈ ತೆರಪಿನಲ್ಲಿ ಮೂಳೆ ಕೊನೆಗಳು ಒಂದುಗೂಡುವಂತೆ ಗೋಟುಮೂಳೆ ಬೆಳೆಸಲು ಇವು ನೆರವಾಗುತ್ತವೆ. ಇನ್ನೊಬ್ಬರ, ಪ್ರಾಣಿಯ, ಇಲ್ಲವೇ ಮೂಳೆ ಭಂಡಾರದಿಂದ ತಂದ ಮೂಳೆಗಿಂತಲೂ ರೋಗಿಯದನ್ನೇ ಇನ್ನೊಂದು ಅಂಗ ದಿಂದ ತೆಗೆದು ನಾಟಿ ಹಾಕಿದರೆ ಚೆನ್ನಾಗಿ ಕೂಡಿಕೊಳ್ಳುವುದು. ಮೂಳೆಯ ಬಹುಪಾಲು ಹಾಳಾಗಿ ಹೋಗಿದ್ದರೂ ಸೊಟ್ಟುಗಳನ್ನು ಸರಿಪಡಿಸಲಾಗದಿದ್ದರೂ ಬೇರಾವ ಬಗೆಗಳಿಂದಲೂ ಮೂಳೆ ಕೂಡಿಕೊಳ್ಳುವ ಸಂದರ್ಭ ಕಾಣದಿದ್ದರೂ ಮೂಳೆಯ ನಾಟಿ ಹಾಕಬೇಕಾಗುತ್ತದೆ. (ಬಿ.ಎಚ್.ಎ.; ಡಿ.ಎಸ್.ಎಸ್.)

**ಎಲುಮುರುಟು:** ಮಕ್ಕಳ ಮೂಳೆಗಳಲ್ಲಿ ಸುಣ್ಣದ ಅಂಶ ಸಾಕಷ್ಟು ಕಡಿಮೆಯಿದ್ದು, ಬೆಳೆಯುವ ಮೂಳೆಗಳು ಸೊಟ್ಟ ಸೊಟ್ಟಾಗುವ ರೋಗಕ್ಕೆ ಎಲುಮುರುಟು(ರಿಕೆಟ್ಸ್) ಎನ್ನುತ್ತಾರೆ. ಇದಕ್ಕೆ ಮುಟ್ಟುದೋಷ, ಬಾಲಗ್ರಹವೆಂದು ಜನಸಾಮಾನ್ಯರು ಕರೆಯುತ್ತಾರೆ. ಇದು ದೋಷವೂ ಅಲ್ಲ ಬಾಲಗ್ರಹವೂ ಅಲ್ಲ. ಪೌಷ್ಟಿಕಾಂಶದ ಆಹಾರ ಕೊರತೆ ಮತ್ತು 'ಡಿ' ಜೀವಸತ್ವದ ಕೊರತೆ ಮತ್ತು ಬಿಸಿಲಿನ ಅತಿನೇರಳೆಕಿರಣಗಳಿಂದ ವಂಚಿತರಾಗುವುದರಿಂದ ಮೂಳೆಯಲ್ಲಿ ಸುಣ್ಣದ ಅಂಶ ಕೂಡಿಕೊಳ್ಳುವಲ್ಲಿ ಕೊರತೆ ಕಾಣಿಸುತ್ತದೆ. ಹೀಗಾಗಿ ಬೆಳೆಯುವ ಎಲುಬು ಮೆತ್ತಗಾಗಿ ಭಾರ ತಾಳದೆ ಅಂಕುಡೊಂಕಾಗುತ್ತವೆ. ಮಗುವಿಗೆ ವರ್ಷ ತುಂಬುವ ಮೊದಲಿಗೆ ಇಲ್ಲವೇ ಮರು ವರ್ಷದಲ್ಲಿ ಇದು ಕಾಣಿಸಿಕೊಳ್ಳುವುದು ಸಾಮಾನ್ಯ. ಉಷ್ಣವಲಯದಲ್ಲಿ ಬಹುಮಟ್ಟಿಗೆ ಎಲ್ಲರೂ ದೇಹವನ್ನು ಬಿಸಿಲಿಗೊಡ್ಡುವುದರಿಂದಾಗಿ ಎಲುಮುರುಟು ರೋಗ ವಿರಳ. ಮೀನು ತಿನ್ನುವವರಲ್ಲೂ ಇದು ಕಡಿಮೆ.

ದೇಹದೊಳಗೆ ಕ್ಯಾಲ್ಸಿಯಂ ಉಪಯೋಗವಾಗಬೇಕಾದರೆ 'ಡಿ' ಸತ್ವ ಬೇಕೇ ಬೇಕು. ಅತಿನೇರಿಳೆ ಕಿರಣಗಳ ಪ್ರಭಾವದಿಂದಾಗಿ ಚರ್ಮದಲ್ಲಿ ಡಿ$^2$ (ಕಾಲ್ಸಿಫೆರಾಲ್) ಮತ್ತು ಡಿ$^3$ (ಕೊಲೆಕಾಲ್ಸಿಫೆರಾಲ್) ತಯಾರಾಗುತ್ತವೆ. ಇವರೆಡು ಆ ಬಳಿಕ ಯಕೃತ್ತಿನಲ್ಲಿ ಮತ್ತು ಮೂತ್ರಪಿಂಡದಲ್ಲಿ ಬದಲಾವಣೆ ಹೊಂದಿ ಕ್ರಿಯಾಶೀಲ 'ಡಿ' ಜೀವಸತ್ವವಾಗುತ್ತವೆ. ಇದರ ಚಟುವಟಿಕೆಯನ್ನು ಬದಿಗುರಾಣಿಕ ರಸದೂತ (ಪ್ಯಾರಾತಾರಮೋನ್) ಮತ್ತು ಕ್ಯಾಲ್ಸಿಟೋನಿನ ರಸದೂತಗಳು ನಿಯಂತ್ರಿಸುತ್ತವೆ. ಯಾವುದೇ ಕಾರಣದಿಂದ ರಕ್ತದಲ್ಲಿ ಕ್ಯಾಲ್ಸಿಯಂ ಪ್ರಮಾಣ ಕಡಿಮೆಯಾದರೆ ಎಲುಬುಗಳೊಳಗಿನ ಕ್ಯಾಲ್ಸಿಯಂ ಕರಗಿ ರಕ್ತ ಸೇರುತ್ತದೆ ಹೀಗಾಗಿ ಎಲುಬು ಮೆತ್ತಗಾಗುತ್ತವೆ. ಆಹಾರದಲ್ಲಿಯ ಕೊರತೆ, ಕರುಳಿನ ರೋಗ, ಮೂತ್ರಪಿಂಡಗಳ ನ್ಯೂನತೆ, ಎಳೆ ಬಿಸಿಲಿನಿಂದ ವಂಚನೆಗಳೆಲ್ಲ 'ಡಿ' ಜೀವಸತ್ವದ ಕೊರತೆಯ ಕಾರಣಗಳು.

ಎಲುಮುರುಟು ರೋಗಕ್ಕೆ ತುತ್ತಾಗುವ ಮಗು ಮೊದಮೊದಲು ಸದಾ ಚಡಪಡಿಸುತ್ತದೆ. ಸಮಾಧಾನವೆಂಬುದು ಕಾಣುವುದಿಲ್ಲ. ರಾತ್ರಿ ಹೊತ್ತು ಮಲಗಿದ ಮಗುವಿನ ತಲೆ ಬೆವರಿ ನೆನೆಯುತ್ತದೆ. ಕೈ ಕಾಲು ಹೊಟ್ಟೆಗಳಲ್ಲಿ ಬಿಗುವಿರುವುದಿಲ್ಲ. ಕೂಡುವುದು, ತೆವಳಿಕೆ, ನಡಿಗೆಗಳು ನಿಧಾನ ಮತ್ತು ಕಷ್ಟ ಹಲ್ಲು ಹುಟ್ಟುವುದೂ ತಡ. ಮೊದಲ ಕೆಲವು ತಿಂಗಳುಗಳಲ್ಲಿ ತಲೆ ಬುರುಡೆಯ ಮೂಳೆಗಳು ಮೆತ್ತಗಿರುತ್ತವೆ. ಉದ್ದ ನಿಲುವುಗಳ ಕೊನೆಗಳು, ಮೇಲೆಲುಮೂಳೆಯ ಮೆಲ್ಲೆಲುಬುಗಳು (ಎಪಿಫೈಯಲ್ ಕಾರ್ಟಿಲೇಜಸ್) ದಪ್ಪವಾಗಿ ಬೆಳೆದು ಅಗಲವಾಗಿ ಗೋಚರಿಸುತ್ತದೆ. ಅದೇ ರೀತಿ ಪಕ್ಕೆಲುಬು ಮೆಲ್ಲೆಲುಬಿನೊಂದಿಗೆ ಕೂಡುವೆಡೆಯಲ್ಲೂ ಮೂಳೆ ದಪ್ಪವಾಗಿರುವುದು ಸಾಮಾನ್ಯ. ಮೂಳೆಗಳ ಎಕ್ಸ್‌ಕಿರಣ ಪರೀಕ್ಷೆ, ರಕ್ತದಲ್ಲಿನ ಸುಣ್ಣದ ಅಂಶವನ್ನು ರಂಜಕಗಳ ಮಟ್ಟದ ಪರೀಕ್ಷೆಯ ಫಲಿತಾಂಶಗಳಿಂದ ಎಲುಮುರುಟು ರೋಗ ಖಚಿತಪಡಿಸಿಕೊಳ್ಳಬಹುದು.

ಚಿಗುರಾವಸ್ಥೆಯಲ್ಲೇ ಇದನ್ನು ಗುರುತಿಸಿ ಉಪಚರಿಸದಿದ್ದರೆ ಮೈ ಮೂಳೆಗಳು ಬಗೆ ಬಗೆಯಾಗಿ ಅಂಕುಡೊಂಕಾಗುತ್ತವೆ. ವಿಕಲತೆ ತೋಳುಗಳಿಗಿಂತ ತೊಡೆ ಕಾಲುಗಳಲ್ಲಿ ಹೆಚ್ಚಿಗೆ ಕಾಣಿಸುತ್ತದೆ. ಶರೀರದ ಭಾರ ಕಾಲುಗಳು ಹೊರುವುದರಿಂದ ಹೀಗಾಗುವುದು. ತಾಗು ಮಂಡಿ(ನಾಕ್‌ನೀ) ಪಂಗಡಗಾಲು(ಬೋಲೆಗ್) ವಿಕಲತೆಗಳು ಮಗು ನಡೆಯುವುದಕ್ಕೆ ಮುನ್ನವೇ ಉಂಟಾಗುತ್ತವೆ. ನಡೆಯುವುದನ್ನು ಪ್ರಾರಂಭಿಸಿದ ಮೇಲೆ ಇದು ಇನ್ನೂ ಹೆಚ್ಚು ವಿಕಾರಗೊಳ್ಳುತ್ತವೆ. ಹೆಣ್ಣುಗೂಸಿನಲ್ಲಿ ಕಿಳ್ಗುಳಿ (ಪೆಲ್ವಿಕ್) ಮೂಳೆ ಸೊಟ್ಟಾಗಿ ಮುಂದೆ ಹೆರಿಗೆಗೆ ತೊಂದರೆಯಾಗಬಹುದು. ಚಿಕಿತ್ಸೆ ಇಲ್ಲವಾದರೆ ರೋಗ ಕಳೆದು ಸೊಟ್ಟಗಿರುವ ಮೂಳೆಗಳು ಗಡುಸಾಗಿಬಿಡುತ್ತವೆ. ಎದೆಗೆಮ್ಮು, ಪುಪ್ಪುಸುರಿತ, ವಾಂತಿ, ಸ್ನಾಯುನಿತ್ರಾಣ, ಯಕೃತ್ತಿನ ತೊಂದರೆ, ರಕ್ತ ಕೊರೆ ಮುಂತಾದವುಗಳೆಲ್ಲ ಎಲುಮುರುಟದೊಂದಿಗೆ ಸಂಭವಿಸಬಹುದಾದ ತೊಡಕುಗಳು. ರಕ್ತಾಂಶದಲ್ಲಿ ಸುಣ್ಣದ ಅಂಶದ ಕೊರತೆಯಾಗಿ ಕೈ ಅಂಗಾಲುಗಳಲ್ಲಿ ಎಡೆಸೆಳವು (ಟೆಟನಿ) ಇಲ್ಲವೆ ಮೂರ್ಛೆ ಕಾಣಿಸಿಕೊಳ್ಳುತ್ತವೆ.

ಎಲುಮುರುಟು ರೋಗವನ್ನು ವಿಕಲತೆ ಮೂಡುವ ಮುನ್ನವೇ ಕಂಡು ಉಪಚರಿಸಬೇಕು. ಬರೀ ಕ್ಯಾಲ್ಸಿಯಂ ಫಾಸ್ಪರಸ್ ಕೊಟ್ಟರೆ ಸಾಲದು. ಮುಖ್ಯವಾಗಿ 'ಡಿ' ಸತ್ವ ಕೊಡಬೇಕು. 'ಡಿ' ಜೀವಸತ್ವ ಔಷಧ ರೂಪದಲ್ಲಿ ಲಭ್ಯವಿದೆ. ಮೀನಿನ ಎಣ್ಣೆ, ಹಾಲು, ತಪ್ಪಲುಪಲ್ಯಗಳನ್ನು ಮಗುವಿಗೆ ಆಹಾರ ರೂಪದಲ್ಲಿ ನೀಡಬೇಕು. ಎಲುಮುರುಟು ರೋಗದೊಂದಿಗೆ ನೀಚಗೊರೆ (ಸ್ಕರ್ವಿ) ಒಡಲಬೇನೆ (ಸೀಲಿಯಕ್ ಡಿಸೀಸ್) ಮೂತ್ರಪಿಂಡದ ಸೋಲುವೆಗಳನ್ನು ಗುರುತಿಸಿ ಉಪಚರಿಸಬೇಕು. ಕೆಲವು ಎಲುಮುರುಟು ರೋಗ ಎಂತಹ ಉಪಚಾರ ನೀಡಿದರೂ ವಾಸಿಯಾಗಲಾರದು.

ಬಲಿತ ವಿಕಲತೆಯ ಮಗುವಿನ ಉಪಚಾರ ಸರಳಸಾಧ್ಯವಾಗಲಾರದು. ಮೊದಲಿಗೆ ವಿಕಲತೆಗಳನ್ನು ಸರಿಪಡಿಸಬೇಕು. ಅಲ್ಪ ಪ್ರಮಾಣದ ವಿಕಲತೆಯನ್ನು ದಬ್ಬೆ (ಸ್ಪ್ಲಿಂಟ್) ಇಲ್ಲವೆ ಪ್ಲಾಸ್ಟರ್ ಆಫ್ ಪ್ಯಾರಿಸಿನ ಅಚ್ಚು (ಪಿ.ಓ.ಪಿ. ಕಾಸ್ಟ್) ಹಾಕಿ ಸರಿಪಡಿಸಬಹುದು. ವಿಕಲತೆ ಬಲಿತಿದ್ದರೆ ಶಸ್ತ್ರ ಕ್ರಿಯೆಯಿಂದ ಸರಿಪಡಿಸಬೇಕು. ನಂತರ 'ಡಿ' ಜೀವಸತ್ವ, ಕ್ಯಾಲ್ಸಿಯಂ, ಫಾಸ್ಪರಸ್‌ಗಳನ್ನು ಮತ್ತು ಪೌಷ್ಟಿಕಾಂಶದ ಆಹಾರವನ್ನು ಕೊಡಬೇಕು.

ಎಳುಕಳಲು: ಮಕ್ಕಳಲ್ಲಿ ಕಾಣುವ ಎಲುಮುರುಟು ಬೆಳೆದವರಲ್ಲಿ ಕಂಡುಬಂದರೆ ಅದಕ್ಕೆ 'ಎಳುಕಳಲು' (ಆಸ್ಟಿಯೋ ಮಲೇಶಿಯಾ) ಎನ್ನುತ್ತಾರೆ. 'ಡಿ' ಜೀವಸತ್ವದ ಕೊರತೆಯಿಂದಾಗಿ ಬೆಳೆದಿರುವ ಮೂಳೆಗಳು ಬರುಬರುತ್ತ ಮೆತ್ತಗಾಗುತ್ತವೆ. ಯಾವತ್ತೂ ಬಿಸಿಲಿನಿಂದ ವಂಚನೆಗೊಂಡು ಪರದೆಯ ಹಿಂದೆ ಬದುಕುವ ಹೆಂಗಸರಲ್ಲಿ ಎಳುಕಳಲು ಹೆಚ್ಚಿಗೆ ಕಾಣಿಸುತ್ತದೆ. ಗಂಡಸರಲ್ಲಿದು ಕಡಿಮೆ, ಬಸುರಿನಲ್ಲಿ, ಮಗುವಿಗೆ ಹಾಲುಣಿಸುವಾಗ ತಾಯಿಗೆ ಸಾಕಾಗುವಷ್ಟು ಕ್ಯಾಲ್ಸಿಯಂ ಸಿಗದಿದ್ದರೆ; ಸಿಕ್ಕ ಕ್ಯಾಲ್ಸಿಯಂ ಪಿಂಡಗೂಸು ಹೀರಿಕೊಳ್ಳುವುದರಿಂದಲೂ ತಾಯಿಯ ಎಲುಬುಗಳು ಮೆತ್ತಗಾಗಿ ಎಲುಕಳಲು ಅಂಕುರಿಸಬಹುದು. ಆಗ ಸುಣ್ಣಾಂಶ ಕಡಿಮೆ ಹೊಂದಿದ ಮೈಯ ಮೂಳೆಗಳು ಮೆತ್ತಗಾಗಿ ಸುಲಭವಾಗಿ ಮುರಿದು ಹೋಗುವುವು. ಇವರು ನೋವಿನಿಂದ ಬಳಲುವಂತಾಗುತ್ತದೆ. ಇಂತಹ ಎಲುಕಳಲನ್ನು 'ಡಿ' ಜೀವಸತ್ವವಾದ ಕ್ಯಾಲ್ಸಿಫೆರಾಲ್ ಕೊಟ್ಟು ಉಪಚರಿಸಬೇಕು. ಇದು ಮೂಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಗರ್ಭಿಣಿ ಸ್ತ್ರೀಯರಿಗೆ ಶಿಕ್ಷಣ ಕೊಡಬೇಕು, ಸಮತೋಲನ ಆಹಾರ, ಮೀನಿನೆಣ್ಣೆ, ಹಾಲು, ತರಕಾರಿ ಸಾಕಷ್ಟು ಉಪಯೋಗಿಸಿದರೆ ಕೊರತೆಯ ಎಳುಕಳಲು ಆಗದಂತೆ ತಡೆಗಟ್ಟಬಹುದು. *

**ಎಲುಸಿಂಗ ಮೊರೆ:** ಮುಖದ ಎಲುಬುಗಳು, ಕೆಲವುವೇಳೆ ತಲೆಯ ಎಲುಬುಗಳು ಅತಿಯಾಗಿ ಬೆಳೆದುಕೊಂಡು ಆ ಭಾಗಗಳ ಮಲೆತವಾಗಿ (ಹೈಪರ್ ಟ್ರೋಫಿ) ವ್ಯಕ್ತಿಯ ಮೋರೆ ಸಿಂಹದ ಹಾಗೆ ಕಾಣಿಸುವ ಒಂದು ಅಸಾಧಾರಣ, ವಿಶಿಷ್ಟ ಆದರೆ ಮಾರಕವಲ್ಲದ ರೋಗ. (ಡಿ.ಎಸ್.ಎಸ್.)

**ಎಲೆ:** ಸಾಮಾನ್ಯವಾಗಿ ಎಲ್ಲ ಬಗೆಯ ಸಸ್ಯಗಳ ಕಾಂಡ, ರೆಂಬೆ, ಕೊಂಬೆಗಳಲ್ಲಿ ವಿವಿಧ ವರ್ಣಗಳಲ್ಲಿ ಬೆಳೆಯುವ ಸಸ್ಯಗಳ ಪ್ರಮುಖ ಭಾಗ (ಲೀಫ್).

ಕಾಂಡದ ಮೇಲೆ ಹಸಿರಾಗಿ ಬೆಳೆಯುವ ಎಲ್ಲ ಸಸ್ಯಭಾಗಗಳನ್ನೂ ವಾಡಿಕೆಯಾಗಿ ಎಲೆ ಎಂದು ಕರೆಯುತ್ತಾರೆ. ಆದರೆ ಎಲೆಯಂತೆ ತೋರದ ಇನ್ನೂ ಅನೇಕ ಭಾಗಗಳೂ ಎಲೆಗಳೇ ಆಗಿವೆಯೆಂದು ಸಂಶೋಧನೆಗಳಿಂದ ತಿಳಿಯಬಂದಿದೆ. ಗೆಡ್ಡೆಯ ಮೇಲಿನ ಪದರಗಳು, ಹೂವಿನ ಕೆಲ ಭಾಗಗಳು ಇದಕ್ಕೆ ಒಳ್ಳೆಯ ಉದಾಹರಣೆ. ಪಾಚಿಯಂಥ ಕೆಳವರ್ಗದಸಸ್ಯದಲ್ಲಿ ಎಲೆ ಕಾಂಡ ಬೇರುಗಳನ್ನು ಪ್ರತ್ಯೇಕವಾಗಿ ಕಾಣುವುದು ಅಸಾಧ್ಯ. ಕೋಲುಗಳ್ಳಿಯಲ್ಲಿನ ಎಲೆಗಳು ಆಗಲೇ ಬಿದ್ದುಹೋಗಿರುತ್ತವೆ. ಪಾಪಾಸುಕಳ್ಳಿಯಲ್ಲಿ ಹಸ್ತದಂತೆ ದಪ್ಪನಾಗಿರುವ ಭಾಗ ಎಲೆಯಂತೆ ಕಂಡರೂ ಅದು ಎಲೆಯಲ್ಲ, ಅದು ಅದರ ಕಾಂಡ. ಆ ಹಸ್ತದ ಮೇಲೆ ಚೂಪಾಗಿ ನಿಮಿರಿ ನಿಂತಿರುವ ಮುಳ್ಳುಗಳೇ ಗಿಡದ ಎಲೆಗಳು.




**ಚಿತ್ರ 1 ಸಾಧಾರಣ ಎಲೆ**

**1. ತೊಟ್ಟು, 2. ಎಲೆಯ ಅಂಚು, 3. ಲೆಮ್ಮೆನ, 4. ಎಲೆಯ ತುದಿ, 5. ನಾಳಗಳು, 6. ಕಂಕುಳ ಮೊಗ್ಗು, 7. ವೃಂತ ಪರ್ಣಗಳು.**

ಎಲೆಗಳು ಕಾಂಡ ಅಥವಾ ಅದರ ಕವಲುಗಳ ಮೇಲೆ ತೆಳುವಾಗಿ, ಅಗಲವಾಗಿ ಇದ್ದು ಗಿಣ್ಣುಗಳಿರುವ ಜಾಗದಲ್ಲಿ ಉದ್ಭವಿಸುವುವು. ಕಾಂಡಕ್ಕೂ ಎಲೆಗಳಿಗೂ ಇರುವ ಮೇಲುಗಡೆಯ ಕಂಕುಳಲ್ಲಿ (ಆಕ್ಸಿಲ್) ಒಂದೊಂದು ಎಲೆ ಮೊಗ್ಗು ಇರುತ್ತದೆ. ಇದರ ಬೆಳವಣಿಗೆಯಿಂದ ಕಾಂಡದ ಹೊಸಕೊನೆಗಳು ಉತ್ಪತ್ತಿಯಾಗುವುವು. ಕೊನೆ ಬೆಳೆದಂತೆ ಎಳೆಯ ಎಲೆಗಳು ಮೇಲಾಗಿ ಹಳೆಯ ಎಲೆಗಳು ಕೆಳಗಾಗುತ್ತವೆ. ಕಾಂಡಗಳ ಮೇಲೆ ಈ ರೀತಿ ಎಲೆಗಳು ಇರುವುದನ್ನು ಊರ್ಧ್ವ ವೃದ್ಧಿ (ಆಕ್ರೊಪೆಟಲ್ ಸಕ್ಸೆಷನ್) ಎನ್ನುತ್ತಾರೆ. ಎಲೆ ಉತ್ಪತ್ತಿಯಾಗುತ್ತಿರುವಾಗ, ಅದು ತನ್ನ ತುದಿಯಲ್ಲಿ ಮೊದಲು ಸ್ವಲ್ಪ ಬೆಳೆಯುತ್ತದೆ. ಕೆಲವು ಜರಿಗಿಡಗಳಲ್ಲಿ ಬಹು ಕಾಲ ಈ ರೀತಿಯ ಬೆಳವಣಿಗೆಯನ್ನು ಕಾಣಬಹುದು. ಉದಾ: ಲೈಗೋಡಿಯಂ. ಅನಂತರ ಅದು ತನ್ನ ಬುಡದಲ್ಲಿಯೂ ಸಾಧಾರಣವಾಗಿ ಮಧ್ಯ ಪ್ರದೇಶದಲ್ಲಿಯೂ ವೃದ್ಧಿಯಾಗುತ್ತದೆ. ಏಕದಳ ಸಸ್ಯಗಳಲ್ಲಿ, ಎಲೆ ಬುಡದಲ್ಲಿ ಬಹುಕಾಲ ಬೆಳೆಯುತ್ತದೆ. ಆಮೇಲೆ, ಎಲೆಗಳು ತಮ್ಮೊಳಗೆ ಹೊಸ ಜೀವಕೋಶಗಳನ್ನು ನಿರ್ಮಿಸದೆ ಕೇವಲ ಗಾತ್ರದಲ್ಲಿ ದೊಡ್ಡವಾಗುತ್ತವೆ.

ಸರಳವಾದ ವಿಕಾಸವನ್ನು ಹೊಂದಿರುವ ಥ್ಯಾಲೋಫೈಟ ಎನ್ನುವ ಒಂದು ದೊಡ್ಡ ಗುಂಪಿನ ಸಸ್ಯಗಳಲ್ಲಿ ಎಲೆಗಳಾಗಲಿ, ಕಾಂಡವಾಗಲಿ, ಸಾಧಾರಣವಾಗಿ ಕಂಡುಬರುವುದಿಲ್ಲ. ಈ ಗುಂಪಿಗಿಂತ ಹೆಚ್ಚು ವಿಕಾಸವನ್ನು ತೋರಿಸುವ ಬ್ರಯೋಫೈಟ್ ಗುಂಪಿನ ಹಾವಸೆಗಳಲ್ಲಿ ಕಾಣಬರುವ ಎಲೆಗಳೇ ಅತ್ಯಂತ ಸರಳವೂ ಸೂಕ್ಷ್ಮವೂ ಆದ ಎಲೆಗಳು. ಇವು ಒಂದು ಜೀವಕೋಶದಷ್ಟು ಮಾತ್ರ ದಪ್ಪನಾಗಿರುವುವು. ಆದರೆ ಒಂದು ವಿಶೇಷ ಜಾತಿಯ ತಾವರೆಯಾದ ವಿಕ್ಟೋರಿಯ ರೀಜಿಯ ಎಂಬ ಅಮೆರಿಕದ ಗಿಡದ ಎಲೆ ಎರಡು ಮೀಟರಿನಷ್ಟು ಅಗಲವಾಗಿರಬಹುದು.

**ಎಲೆಗಳ ರಚನೆ:** ದಾಸವಾಳದಂಥ ಒಂದು ಸಾಮಾನ್ಯ ರೀತಿಯ ಎಲೆಗೆ ಒಂದು ಬುಡವೂ ಒಂದು ತೊಟ್ಟೂ ಒಂದು ಪತ್ರ ಭಾಗವೂ ಇವೆ. ಬುಡದ ಇಕ್ಕೆಲದಲ್ಲೂ ವೃಂತಪರ್ಣಗಳು (ಸ್ಟಿಪ್ಯೂಲ್) ಕಾಣಬರುತ್ತವೆ. ಪತ್ರದ ಉದ್ದಕ್ಕೂ ಮಧ್ಯದಲ್ಲಿ ಒಂದು ದೊಡ್ಡ ನಾಳವೂ ಇದರ ಎರಡು ಕಡೆಗಳಲ್ಲಿಯೂ ಸಣ್ಣ ನಾಳಗಳೂ ಇವುಗಳ ಕವಲುಗಳೂ ಇರುವುವು. ಎಲಚಿಯಂಥ ಎಲೆಗಳಲ್ಲಿ, ಮೂರು ಮುಖ್ಯವಾದ ನಾಳಗಳಿರುತ್ತವೆ. ಇಂಥ ಎಲೆಗೆ ಮಲ್ಟಿಕಾಸ್ಟೇಟ್ ಎನ್ನುವರು. ಕಾವಿನ ಒಳಗೂ ನಾಳಗಳಿದ್ದು, ಇವು ಕಾಂಡದಲ್ಲಿರುವ ನೀರಿನ ಮತ್ತು ಆಹಾರದ ಕೊಳವೆಗಳ ಸಮೂಹವನ್ನು ಸೇರಿಕೊಳ್ಳುತ್ತವೆ. ಎಲೆಯ ನಾಳಸಮೂಹ ದ್ವಿದಳ ಸಸ್ಯಗಳಲ್ಲಿ ಬಲೆಯ ರೂಪದಲ್ಲಿಯೂ ಏಕದಳಸಸ್ಯಗಳಲ್ಲಿ ಸಮಾನಾಂತರವಾಗಿಯೂ ಜರಿಗಿಡಗಳಲ್ಲಿ ಕವಲೊಡೆಯುವ ರೀತಿಯಲ್ಲಿಯೂ ಇರುತ್ತದೆ. ಆದರೆ ಈ ಸೂತ್ರಕ್ಕೆ ವಿರೋಧವಾಗಿ ಕೆಸವಿನ ದಂಟು ಮುಂತಾದ ಏಕದಳ ಸಸ್ಯಗಳಲ್ಲಿ ಬಲೆಯ ರೀತಿಯ ನಾಳಜಾಲವೂ ಸುರಹೊನ್ನೆಯಂಥ ದ್ವಿದಳ ಸಸ್ಯಗಳಲ್ಲಿ ಸಮಾನಾಂತರ ರೀತಿಯ ನಾಳಸಮೂಹವೂ ಇರುವುದುಂಟು. ಗೊಡ್ಡೀಚಲಿನ (ಸೈಕಾಸ್) ಪತ್ರ ಭಾಗಗಳಲ್ಲಿ ಮಧ್ಯದ ನಾಳ ಎಡಬಲಕ್ಕೆ ಕವಲೊಡೆಯುವುದೇ ಇಲ್ಲ. ಹರಳೆಲೆಯಲ್ಲಿ, ಮುಖ್ಯವಾದ ನಾಳಗಳು ಹಸ್ತದ ಬೆರಳುಗಳನ್ನು ಹೋಲುವ ರೀತಿಯಲ್ಲಿ ಇರುತ್ತವೆ. ನಾಳಸಮೂಹಗಳಿಂದ ಎಲೆಯ ಹಸಿರು ಜೀವಕಣಗಳಿಗೆ ನೀರೂ ಲವಣಗಳೂ ಒದಗುವುದಲ್ಲದೆ, ಇವುಗಳಲ್ಲಿ ಉತ್ಪತ್ತಿಯಾಗುವ ಸಕ್ಕರೆಯನ್ನು ಗಿಡದ ಇತರ ಭಾಗಗಳಿಗೆ ಸಾಗಿಸಲು ಸಾಧ್ಯವಾಗುತ್ತದೆ. ಅಲ್ಲದೆ, ನಾಳ ಸಮೂಹಗಳು ಎಲೆಯ ರಚನೆಗೆ ಆಧಾರವಾಗಿದ್ದು, ತೆಳುವಾಗಿದ್ದರೂ ಅವು ಗಾಳಿಯ ಹೊಡೆತವನ್ನು ತಡೆಯುವ ಶಕ್ತಿಯನ್ನು ಕೊಡುತ್ತವೆ. ಆದರೆ ಬಾಳೆಯ ಎಲೆಯ ಅಂಚಿನಲ್ಲಿ ಈ ತರಹ ರಚನೆ ಇಲ್ಲದ ಕಾರಣ ಅದು ಬೇಗನೆ ಹರಿದುಹೋಗುತ್ತದೆ.




**ಚಿತ್ರ 2 ಏಕದಳ ಸಸ್ಯದ ಎಲೆ**

**1. ಕಾಂಡ, 2. ಆರಿಕಲ್, 3. ಲಿಗ್ಯೂಲ್, 4. ಲೆಮ್ಮೆನ, 5. ಎಲೆಯ ಬುಡ**

ಕೆಲವು ಎಲೆಯ ಮೈಮೇಲೆ ಕೂದಲುಗಳೂ ಹೂವರ್ಚಿಯಲ್ಲಿರುವಂತೆ ಸಣ್ಣಸಣ್ಣ ಪೊರೆಗಳೂ ಇರುವುದುಂಟು. ಇವುಗಳಿಂದ ಎಲೆಗಳ ಆವಿ ಹೊರಹೊಮ್ಮುವಿಕೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು. ಎಲೆಯ ಅಂಚಿನಲ್ಲಿ ಮುಳ್ಳುಗಳಿದ್ದು (ಉಮ್ಮತ್ತಿ) ಅಥವಾ ಎಲೆಯ ವೃಂತಪರ್ಣಗಳು ಮುಳ್ಳುಗಳಾಗಿದ್ದು (ಎಲಚಿ) ಅಥವಾ ಪೂರ್ಣ ಎಲೆಯೇ ಮುಳ್ಳಿನ ರೀತಿಯಲ್ಲಿದ್ದು (ಪಾಪಸುಕಳ್ಳಿ) ಆಡು ಮುಂತಾದ ಪ್ರಾಣಿಗಳಿಂದ ಈ ಗಿಡಗಳಿಗೆ ರಕ್ಷಣೆಯನ್ನು ದೊರಕಿಸುತ್ತದೆ. ನಿಂಬೆ, ನಾಗದಾಳಿ, ಯೂಕಲಿಪ್ಟಸ್, ವೀಳೆಯದೆಲೆ, ಕರಿಬೇವಿನ ಸೊಪ್ಪು ಮುಂತಾದ ಗಿಡಗಳ ಎಲೆಗಳಲ್ಲಿ, ತೈಲವಿರುತ್ತದೆ.

ಅಲ್ಲದೆ, ಮುಟ್ಟಿನೋಡುವುದಕ್ಕೆ ಕೆಲವು ಎಲೆಗಳು ಮೃದುವಾಗಿಯೂ ಮತ್ತೆ ಕೆಲವು ಚರ್ಮದ ಹಾಗೆಯೂ ಇನ್ನು ಕೆಲವು ಸುಲಭವಾಗಿ ಪುಡಿಯಾಗುವ ಹಾಗೆಯೂ (ಪಾರಿಜಾತ) ಇರುವುವು. ದೊಡ್ಡ ಪತ್ರೆ ಎಲೆ ತುಂಬ ರಸವತ್ತಾಗಿರುತ್ತದೆ. ಕ್ಷೀಣ ಎಲೆಗಳು ಪೊರೆಯಂತೆ ಇರುವುದೂ ಉಂಟು.

**ಎಲೆಯ ಬಗೆಗಳು:** ಎಲೆಗಳಲ್ಲಿ ಸರಳ ಪತ್ರವೆಂದೂ ಭಿನ್ನಪತ್ರವೆಂದೂ (ಕಾಂಪೌಂಡ್) ಎರಡು ಬಗೆಯುಂಟು. ಆದರೆ ಕೆಲವು ಸರಳ ಪತ್ರಗಳಲ್ಲಿನ ಭಾಗಗಳು ಅರ್ಧ ಮಾತ್ರ ಕತ್ತರಿಸಲ್ಪಟ್ಟಂತೆ ಇರಬಹುದು. (ಹರಳೆಲೆ). ಭಿನ್ನಪತ್ರಗಳ ಉಪಪತ್ರಗಳು

ಮತ್ತೊಂದು ಸಲ ಭಿನ್ನವಾಗಿದ್ದು, ದ್ವಿಭಿನ್ನಪತ್ರಗಳಾಗಬಹುದು (ಗೋಲ್ಡ್ ಮೊಹರ್). ಹೆಚ್ಚಾಗಿ ಭಿನ್ನವಾದ ಪತ್ರಗಳನ್ನು ನಾವು ನುಗ್ಗೆ ಗಿಡದಲ್ಲಿ ಕಾಣಬಹುದು. ಮೇಲೆ ಹೇಳಿರುವ ಎರಡು ಉದಾಹರಣೆಗಳಲ್ಲಿ ಉಪಪತ್ರಗಳು ಗರಿಯ ಮಾದರಿಯಲ್ಲಿ ಜೋಡಣೆಗೊಂಡಿರುತ್ತವೆ. ಎಲೆಯ ತುದಿಯ ಮಧ್ಯದಲ್ಲಿ ಉಪಪತ್ರವಿದ್ದರೆ ಅದಕ್ಕೆ ಇಂಪ್ಯಾರಿಪಿನ್ನೇಟ್ (ಬೇವು) ಎಂದೂ ಹಾಗಿಲ್ಲದಿದ್ದರೆ ಪ್ಯಾರಿಪಿನ್ನೇಟ್ (ಹುಣಿಸೆ) ಎಂದೂ ಕರೆಯುತ್ತಾರೆ. ಬೂರುಗದ ಮರದಲ್ಲಿರುವ ಭಿನ್ನ ಪತ್ರಗಳು ಹಸ್ತದ ಮಾದರಿಯವು. ಭಿನ್ನಪತ್ರದ ಮಧ್ಯದ ಅಕ್ಷಕ್ಕೆ ರೇಕಿಸ್ ಎಂದು ಹೆಸರು. ಕಿತ್ತಲೆ ಎಲೆಯಲ್ಲಿ ಒಂದೇ ಉಪಪತ್ರವಿರುವ ಭಿನ್ನಪತ್ರ ಉತ್ಪತ್ತಿಯಾಗಿರುವುದು ಒಂದು ವಿಶೇಷ. ಭಿನ್ನಪತ್ರಗಳು ಗಾಳಿಯ ಹೊಡೆತದಿಂದ ಬೇಗ ಹರಿಯುವುವು. ಅಲ್ಲದೆ ಪತ್ರಗಳ ನಡುನಡುವೆ ಹೆಚ್ಚಿನ ಗಾಳಿ ಮತ್ತು ಬೆಳಕು ಆಡುವ ಸಾಧ್ಯತೆ ಹೆಚ್ಚು. ಭಾರತದ ಕಾಡಿನ ಕೆಲವು ಮರಗಳಲ್ಲಿ ಒಂದೇ ಒಂದು ಭಿನ್ನಪತ್ರ ನಾಲ್ಕೈದು ಅಡಿಗಳಷ್ಟು ಉದ್ದವಿದ್ದು, ಅದರ ಉಪ ಪತ್ರಗಳು ಅಂಗೈ ಅಷ್ಟು ಅಗಲವಾಗಿರುವುದುಂಟು. ಇಂಥ ಸಂದರ್ಭದಲ್ಲಿ ಆ ದೊಡ್ಡ ಭಿನ್ನಪತ್ರವನ್ನು ಒಂದು ಕಾಂಡದ ಕೊಂಬೆಯೆಂದು ತಪ್ಪಾಗಿ ಭಾವಿಸಬಹುದು. ಆದರೆ ಆ ಎಲೆಯ ತುದಿಯಲ್ಲಿ ಎಲೆ ಮೊಗ್ಗು ಇರುವುದಿಲ್ಲ. ಉಪಪತ್ರ ಕೊಂಕುಳಲ್ಲಿಯೂ ಎಲೆಮೊಗ್ಗು ಇರುವುದಿಲ್ಲ. ಎಲ್ಲ ಉಪ ಪತ್ರಗಳೂ ಒಂದೇ ದಿಕ್ಕಿನಲ್ಲಿ ಹರಡಿಕೊಂಡಿರುವುವು. ಆ ದೊಡ್ಡ ಎಲೆಯ ಬುಡದ ಕೊಂಕುಳಲ್ಲಿ ಮಾತ್ರ ಎಲೆಮೊಗ್ಗು ಇರುತ್ತದೆ.

**ಎಲೆಗಳಲ್ಲಿ ವೈವಿಧ್ಯ:** ಎಲೆಯ ಪತ್ರದ ಭಾಗ (ಅಥವಾ ಉಪಪತ್ರ) ನಾನಾ ಆಕಾರಗಳನ್ನು ಹೊಂದಿರುತ್ತದೆ. ಸೂಜಿಯಂತೆ ಉದ್ದನಾದ ಪಟ್ಟಿಯಂತೆ (ಹುಲ್ಲು). ಭರ್ಜಿಯಂತೆ (ಕಣಗಿಲೆ). ಉದ್ದವಾದ ಕೊಳವೆಯಂತೆ (ಈರುಳ್ಳಿ), ಹೃದಯದಂತೆ (ವೀಳೆಯದ ಎಲೆಬಳ್ಳಿ), ಬಾಣದ ಅಲುಗಿನಂತೆ (ಕೆಸವಿನ ದಂಟು), ವೃತ್ತಾಕಾರದಲ್ಲಿ (ತಾವರೆ), ಮೂತ್ರ ಪಿಂಡದಂತೆ (ಒಂದೆಲಗ), ಆಯತವಾಗಿ (ಬಾಳೆ), ಅಂಡಾಕಾರವಾಗಿ (ಆಲ)–ಹೀಗೆ ನಾನಾ ಬಗೆಯ ಆಕಾರಗಳನ್ನು ನೋಡಬಹುದು. ಬೀಜಮೊಳೆತು ಸಸಿಯಾದಾಗ ಕಾಂಡದ ಮೊದಲ ನೆಯ ಎಲೆಗಳು ಆಕಾರದಲ್ಲಿ ಸರಳವಾಗಿದ್ದು, ಅನಂತರ ಹುಟ್ಟುವ ಎಲೆಗಳಿಗಿಂತ ಬೇರೆ ತರಹ ಇರುವುದನ್ನು ಅವರೆ ಮುಂತಾದ ಗಿಡಗಳಲ್ಲಿ ಕಾಣಬಹುದು. ಯೂಕಲಿಪ್ಟಸ್ ಗಿಡ ಎಳೆಯದಾಗಿರುವಾಗ ಎಲೆಗಳು ಅಗಲವಾಗಿದ್ದು ಗಿಡ ಬಲಿತಂತೆ, ಉದ್ದವಾಗಿ ಕುಡುಗೋಲಿನ ಆಕಾರವನ್ನು ತಾಳುತ್ತವೆ. ಹಲಸಿನ ಮರದ ಎಲೆಗಳು ವಿವಿಧ ಆಕಾರಗಳಲ್ಲಿರುತ್ತವೆ. ನೀರಿನಲ್ಲಿ ಅರ್ಧ ಮುಳುಗಿ ಬೆಳೆಯುವ ಲಿಮ್ನೊಫೈಲ ಮುಂತಾದ ಗಿಡಗಳಲ್ಲಿ, ಮುಳುಗಿರುವ ಎಲೆಗಳು ಬಹಳ ಛಿದ್ರವಾಗಿ ಮೇಲಿರುವ ಎಲೆಗಳು ಅಗಲವಾಗಿಯೇ ಉಳಿಯುವುವು. ಈ ರೀತಿಗೆ ಹೆಟೆರೊಫಿಲಿ ಎಂದು ಕರೆಯುತ್ತಾರೆ. ಸೆಲಾಜಿನೆಲ್ಲ ಗಿಡದಲ್ಲಿ ದೊಡ್ಡ ಎಲೆಗಳ ಸಾಲೂ ಚಿಕ್ಕ ಎಲೆಗಳ ಸಾಲು ಇವೆ; ಇದಕ್ಕೆ ಅನೈಸೋಫಿಲಿ ಎಂದು ಹೆಸರು.



ವಿವಿಧ ಮಾದರಿಯ ನಾಲ್ಕು ಎಲೆಗಳು

ಎಲೆಯ ಅಂಚಿನಲ್ಲೂ ವೈವಿಧ್ಯವುಂಟು. ಹಲ್ಲಿನಂತೆಯೂ ಗರಗಸದ ಅಂಚಿನಂತೆಯೂ ಮುಳ್ಳಿನಂತೆಯೂ ಕಮಾನುಗಳಂತೆಯೂ (ಒಂದೆಲಗ) ಅಲೆಗಳೋಪಾದಿಯಲ್ಲಿಯೂ (ಅಶೋಕ) ಇರುವುದುಂಟು. ಆದ್ದರಿಂದ ಆಯಾ ಎಲೆಯ ಮಾದರಿಯಿಂದ ಹಲವು ಸಸ್ಯಗಳನ್ನು ಗುರುತಿಸಬಹುದು.

**ಎಲೆತೊಟ್ಟು:** ಕೆಲವು ತೆಂಗಿನ ಜಾತಿಯ ಗಿಡದಲ್ಲಿ 15 ಅಡಿಯಷ್ಟು ಉದ್ದದ ತೊಟ್ಟು ಇರುವುದುಂಟು. ನಿಂಬೆಯ ಎಲೆಯಲ್ಲಿ ತೊಟ್ಟಿಗೆ ರೆಕ್ಕೆಗಳು ಅಗಲವಾಗಿ ಬೆಳೆದಿರುವುವು. ಆಸ್ಟ್ರೇಲಿಯದ ಜಾಲಿಗಿಡಗಳಲ್ಲಿ, ಎಲೆ ತೊಟ್ಟು ಅಗಲವಾಗಿದ್ದು, ಎಲೆ ಪತ್ರದ ಕೆಲಸವನ್ನೇ ಮಾಡುತ್ತದೆ. ಇದಕ್ಕೆ ಫಿಲ್ಲೋಡ್ ಎಂದು ಹೆಸರು, ಇದು ಸೂರ್ಯನ ಬೆಳಕಿಗೆ ತನ್ನ ಅಂಚನ್ನು ತೋರಿಸುವುದು. ಈ ಎಲೆಯ ಭಿನ್ನಪತ್ರದ ಇತರ ಭಾಗಗಳು ಬೇಗನೆ ಉದುರಿ ಹೋಗುವುವು. ಸಾರಸೆನಿಯ ಎನ್ನುವ ಕೀಟಾಹಾರಿ ಸಸ್ಯದಲ್ಲಿ ಎಲೆತೊಟ್ಟು ಹೂಜಿಯ ಆಕಾರದಲ್ಲಿದೆ. ಟ್ರೋಪಿಯೋಲು ಗಿಡದಲ್ಲಿನ ತೊಟ್ಟು ನುಲಿಬಳ್ಳಿಯಂತೆ ಇರುವುದು. ಎಲೆತೊಟ್ಟಿನ ಬುಡದಲ್ಲಿ ಉಬ್ಬಿದ್ದರೆ ಆ ಭಾಗಕ್ಕೆ ಪಲ್ವೈನಸ್ ಎಂದು ಹೆಸರು. ಹರಳು ಮುಂತಾದ ಎಲೆಗಳ ಕಾವು ಪತ್ರದ ಮಧ್ಯಭಾಗದಲ್ಲಿ ಸೇರಿಕೊಂಡಿದೆ. ಮುಟ್ಟಿದರೆ ಮುನಿಯಲ್ಲಿ ಈ ಪಲ್ವೈನಸಿನ ಸಹಾಯದಿಂದ ಎಲೆಯ ಭಾಗಗಳು ಚಲಿಸುವುವು. ಇದರಂತೆಯೆ ಬಯೋಫೈಟಂ ಸಸ್ಯದ ಎಲೆಗಳೂ ಮುಟ್ಟಿದರೆ ಅಥವಾ ಶಾಖವನ್ನು ತೋರಿಸಿದರೆ, ಮುಚ್ಚಿಕೊಳ್ಳುವುವು. ಆದರೆ ಡೆಸ್ಮೋಡಿಯ ಗೈರಾನ್ಸಿನ (ಟೆಲಿಗ್ರಾಫ್ ಸಸ್ಯ) ಎಲೆಯ ಉಪಪತ್ರಗಳು ತಮ್ಮಷ್ಟಕ್ಕೆ ತಾವೇ ಸದಾ ಚಲಿಸುತ್ತಿರುವುವು. ಮತ್ತೆ ಕೆಲವು ಗಿಡಗಳ ಉಪಪತ್ರಗಳು ರಾತ್ರಿಯಾಗುತ್ತಲೇ ಮುಚ್ಚಿಕೊಂಡು, ನಿದ್ರಿಸುವಂತೆ ತೋರುವುವು. ಜಾನ್ ಗೋಟು ಬೆಡ್ ಎಟ್ ನೂನ್ ಎಂದು ಕರೆಯುವ ಇಂಗ್ಲೆಂಡಿನ ಸಸ್ಯದಲ್ಲಿ ಈ ರೀತಿ ಮಧ್ಯಾಹ್ನದ ತಾಪಕ್ಕೆ ಉಪಪತ್ರಗಳು ಮುಚ್ಚಿಕೊಳ್ಳುವುವಂತೆ. ಆದರೆ ಅಮೆರಿಕದ ಹುಲ್ಲುಗಾವಲಿನಲ್ಲಿ ಬೆಳೆಯುವ ಸಿಲ್ಫಿಯಂ ಎಂಬ ಗಿಡದ ಎಲೆಗಳು ಮಧ್ಯಾಹ್ನದ ಸೂರ್ಯನ ಕಡೆಗೆ ತಮ್ಮ ಅಂಚನ್ನೇ ತೋರಿಸಿಟ್ಟುಕೊಂಡು ಬಿಸಿಲಿನ ತಾಪದಿಂದ ಪಾರಾಗುವುವಂತೆ.

**ಎಲೆಯ ಬುಡ:** ಇದು ಹುಲ್ಲು, ಕೊತ್ತಂಬರಿ ಜಾತಿಗಳ ಎಲೆಗಳಲ್ಲಿ ಕೊಳವೆಯಂತೆ ಇರುವುದು. ಹುಲ್ಲು, ಶುಂಠಿ, ಸೆಲಾಜಿನೆಲ್ಲ, ಗಿಡಗಳ ಎಲೆಗಳಲ್ಲಿ ಲಿಗ್ಯೂಲ್ ಎಂದು ಕರೆಯುವ ನಾಲಗೆಯಂಥ ಚಿಕ್ಕ ಭಾಗ ಎಲೆಯ ಬುಡದಲ್ಲಿ ಬೆಳೆದಿರುವುದು ಒಂದು ವಿಶೇಷವಾಗಿದೆ.

**ಎಲೆಗಳಲ್ಲಿ ಮಾರ್ಪಾಟು:** ಎಲೆಯ ಭಾಗಗಳು ಬಹುವಾಗಿ ಮಾರ್ಪಾಟು ಹೊಂದಿ, ಕೆಲವು ವಿಶೇಷ ಕಾರ್ಯಗಳನ್ನು ಮಾಡಬೇಕಾದ ಸಂದರ್ಭಗಳೂ ಇವೆ. ಬೀಜದಳಗಳನ್ನೂ ಹೂವಿನ ದಳಗಳನ್ನು ಮಾರ್ಪಾಡಾದ ಎಲೆಗಳೆಂದು ಭಾವಿಸುವರು.

**ಎಲೆಮುಳ್ಳುಗಳು ಮತ್ತು ಸುಳಿಬಳ್ಳಿಗಳು:** ವೃಂತಪರ್ಣಗಳು ಎಲಚಿಯಲ್ಲಿ ಮುಳ್ಳಿನಂತೆಯೇ ಇದ್ದು, ಆಡು ಮುಂತಾದ ಪ್ರಾಣಿಗಳ ಬಾಯಿಗೆ ಗಿಡ ತುತ್ತಾಗದಂತೆ ರಕ್ಷಣೆ ನೀಡುವುವು. ಪಾಪಾಸುಕಳ್ಳಿಯಲ್ಲಂತೂ ಎಲೆಗಳೇ ದಪ್ಪ ಮುಳ್ಳುಗಳಾಗಿ ರಕ್ಷಣೆ ನೀಡುತ್ತದೆ. ಒಂದು ಜಾತಿಯ ಜಾಲಿಗಿಡದಲ್ಲಿ ವೃಂತಪರ್ಣಗಳು ಟೊಳ್ಳಾಗಿದ್ದು ಇರುವೆಗಳಿಗೆ ಆಶ್ರಯಕೊಡುತ್ತವೆ. ಈ ಎಲೆಗಳ ತೊಟ್ಟಿನ ಮೇಲೂ ಇತರ ಕಡೆಗಳಲ್ಲಿಯೂ ಒಂದು ತರಹ ಆಹಾರ ಉತ್ಪತ್ತಿಯಾಗಿ, ಇರುವೆಗಳಿಗೆ ಒದಗುವುದು. ಇರುವೆಗಳಿಗೂ ಎಲೆಗಳಿಗೂ ಇರುವ ಇಂಥ ಪರಸ್ಪರ ಸಂಬಂಧಕ್ಕೆ ಮರ್ಮಿಕೋಫೈಲಿ ಎನ್ನುತ್ತಾರೆ. ಬಟಾಣಿಯಲ್ಲಿ ವೃಂತಪರ್ಣಗಳು ಅಗಲವಾಗಿ ಬೆಳೆದು ಎಲೆಯ ಪತ್ರಭಾಗದ ಕೆಲಸಗಳನ್ನು ಮಾಡುತ್ತವೆ. ಎಲೆಯ ತುದಿಯೇ ನುಲಿಬಳ್ಳಿಯಾಗಿರುವುದನ್ನು ಗ್ಲೋರಿಯೋಸ ಗಿಡದಲ್ಲಿ ಕಾಣಬಹುದು. ಅರಳಿ ಎಲೆಯ ತುದಿ ಚೂಪಾಗಿ ಎಳೆದಂತೆ ಇದ್ದು, ಮಳೆಯ ನೀರು ಅಲ್ಲಿಂದ ಹರಿದು ಹೋಗಲು ಅನುಕೂಲವಾಗಿರುವುದರಿಂದ ಅದನ್ನು ಡ್ರಿಪ್‌ಟಿಪ್ ಎನ್ನುವರು. ಬಟಾಣಿ, ಬಿಗ್ನೋನಿಯಗಳಲ್ಲಿ ಭಿನ್ನಪತ್ರದ ಉಪಪತ್ರಗಳು ನುಲಿಬಳ್ಳಿಗಳಾಗಿ ಮಾರ್ಪಾಡಾಗಿವೆ. ಸ್ಮಯ್‌ಲ್ಯಾಕ್ಸ್‌ನಲ್ಲಿ ವೃಂತಪರ್ಣಗಳೇ ನುಲಿಬಳ್ಳಿಗಳಾಗಿವೆ.

ಕ್ಷೀಣ ಎಲೆಗಳು: ಶುಂಠಿ ಮುಂತಾದ ನೆಲದೊಳಗೆ ಬೆಳೆಯುವ ಕಾಂಡಗಳಲ್ಲಿಯೂ ಪೈನಸ್, ಸೈಕಾಸ್, ಸರ್ವೆ (ಕ್ಯಾಸ್ಯುಯರೈನ) ಗಳಲ್ಲಿಯೂ ಪೂರ್ಣಪರಾವಲಂಬಿ ಗಿಡಗಳಲ್ಲಿಯೂ (ಆಕಾಶಬಳ್ಳಿ) ಇವು ಇರುವುವು. ಸಾಧಾರಣವಾಗಿ ಇವುಗಳಲ್ಲಿ ಹರಿತ್ತು ಇಲ್ಲ. ಎಲೆ ಮೊಗ್ಗುಗಳನ್ನು ವಾತಾವರಣದ ವ್ಯತ್ಯಾಸಗಳಿಂದ ರಕ್ಷಿಸುವ ಕಾರ್ಯವನ್ನು ಇವು ಮಾಡುವುವು. ಆದರೆ ನೀರುಳ್ಳಿಯಂಥ ಗೆಡ್ಡೆಗಳಲ್ಲಿ ಇವು ಆಹಾರವನ್ನು ಸಂಗ್ರಹಿಸಿಟ್ಟಿರುವುವು.

ಬ್ರಯೋಫಿಲ್ಲಂ, ಬೆಗೋನಿಯಗಳ ಎಲೆಯ ಚೂರುಗಳನ್ನು ಭೂಮಿಯಲ್ಲಿ ನೆಟ್ಟು ಹೊಸ ಗಿಡಗಳನ್ನು ಬೆಳೆಸಬಹುದು. ಈ ಎಲೆಗಳು ಹೀಗೆ ನಿರ್ಲಿಂಗ ರೀತಿಯಲ್ಲಿ ವಂಶೋತ್ಪತ್ತಿ ಮಾಡಲು ಸಹಾಯಕವಾಗಿವೆ. ಇನ್ನೊಂದು ತರದ ನಿರ್ಲಿಂಗ ರೀತಿಯಲ್ಲಿ ವಂಶೋತ್ಪತ್ತಿ ಮಾಡುವ ಬೀಜಗಳು (ಸ್ಪೋರ್ಸ್) ಜರೀಗಿಡದ ಎಲೆಗಳಲ್ಲಿನ ಸಣ್ಣ ಚೀಲಗಳಲ್ಲಿ (ಸ್ಪೊರ್‍ಯಾಂಜಿಯ) ಹೇರಳವಾಗಿ ಬೆಳೆಯುವುವು.

**ಬೀಜಗಳಲ್ಲಿರುವ ಎಲೆಗಳು:** ಮೊಳಕೆಯಲ್ಲಿನ ಬೀಜದಳಗಳನ್ನು ಎಲೆಗಳೆನ್ನುತ್ತಾರೆ. ಸಾಕಷ್ಟು ದಪ್ಪನಾಗಿದ್ದಾಗ (ಅವರೆ) ಅವೇ ಸಸಿಯ ಬೆಳವಣಿಗೆಗೆ ಆಹಾರವಾಗುತ್ತವೆ. ಅವು ತೆಳುವಾಗಿದ್ದರೆ ಸುತ್ತಲಿನ ಆಹಾರವನ್ನು ಹೀರಿಕೊಂಡು ಬೆಳೆಯುತ್ತವೆ (ಹರಳು). ಅನಂತರ ಈ ಎಲೆಗಳು ಕೆಲವು ಕಾಲ ಭೂಮಿಯ ಮೇಲೆ ಬೆಳೆದು ತಮ್ಮ ಕಾರ್ಯವನ್ನು ನಿರ್ವಹಿಸಬಹುದು. ಆದರೆ ಬಟಾಣಿ, ಕಡಲೆಗಳಲ್ಲಿ ಬೀಜದಳಗಳು ಭೂಮಿಯ ಒಳಗೇ ಉಳಿಯುವುವು. ಇದರಂತೆಯೆ ಮುಸುಕಿನ ಜೋಳದಲ್ಲಿಯೂ ಬೀಜದಳ ಭೂಮಿಯ ಒಳಗೇ ಇರುತ್ತದೆ (ಹೈಪೊಜಿಯಲ್). ಇದು ಏಕದಳ ಸಸ್ಯ. ಹೀಗೆ, ಹೂ ಬಿಡುವ ಗಿಡಗಳನ್ನು ಏಕದಳ ಸಸ್ಯಗಳನ್ನಾಗಿ, ದ್ವಿದಳ ಸಸ್ಯಗಳನ್ನಾಗಿ ವಿಂಗಡಿಸಲು ಮುಖ್ಯವಾಗಿ ಈ ಬೀಜದಳಗಳ ಸಂಖ್ಯೆಯೇ ನೆರವಾಗುತ್ತದೆ.

ಹೊಗೊಂಚಲುಗಳ ನಡುವೆ ಬೆಳೆದಿರುವ ಎಲೆಗಳಿಗೆ ಬ್ರ್ಯಾಕ್ಟುಗಳು ಎಂದು ಹೆಸರು. ಇವು ಹೂವಿನ ಬುಡದಲ್ಲಿಯೂ ಇನ್ನೂ ಚಿಕ್ಕದಾಗಿರುವ ಬ್ರ್ಯಾಕ್ಟಿಯೋಲುಗಳು ಹೂವಿನ ಎರಡು ಪಕ್ಕದಲ್ಲಿಯೂ ಇರಬಹುದು. ಇವುಗಳಿಂದ ಮೊಗ್ಗುಗಳಿಗೆ ಕೊಂಚ ರಕ್ಷಣೆ ದೊರೆಯುತ್ತದೆ. ಕೆಲವು ಗಿಡಗಳಲ್ಲಿ ಈ ಬ್ರ್ಯಾಕ್ಟುಗಳೂ ಬಣ್ಣಗಳಿಂದ ಕೂಡಿರುವುದುಂಟು (ಪಾಯಿನ್‌ಸೆಟಿಯಾ ಮತ್ತು ಬೋಗನ್‌ವಿಲಿಯ).

ಹೂಜಿಗಿಡ (ನೆಪೆಂತೆಸ್) ಮುಂತಾದ ಕೀಟಾಹಾರಿ ಸಸ್ಯಗಳಲ್ಲಿ, ಎಲೆಗಳು ಒಂದು ವಿಶೇಷ ರೀತಿಯಲ್ಲಿ ಆಹಾರವನ್ನು ಒದಗಿಸಿಕೊಳ್ಳುವುದಕ್ಕೋಸ್ಕರ ಮಾರ್ಪಾಡಾಗಿವೆ. ಡಿಸ್ಕಿಡಿಯ ಎನ್ನುವ ಅಪ್ಪುಗಿಡದಲ್ಲಿ ಕೆಲವು ಎಲೆಗಳು ಹೂಜಿಯಂತೆ ಮಾರ್ಪಾಟಾಗಿವೆ. ಈ ಹೂಜಿಗಳಲ್ಲಿ ನೀರೂ ಕಸವೂ ಸ್ವಲ್ಪ ಮಣ್ಣೂ ಸೇರಿಕೊಂಡಿರುತ್ತವೆ. ಕೆಲವು ಬೇರುಗಳು ಇವುಗಳಲ್ಲಿ ಬೆಳೆದುಕೊಂಡು ಬಂದು, ತಮಗೆ ಆವಶ್ಯಕವಾದ ಪದಾರ್ಥಗಳನ್ನು ಹೀರಿಕೊಳ್ಳುವುವು.

**ಮೊಗ್ಗಿನ ಅವಸ್ಥೆಯಲ್ಲಿ ಎಲೆಗಳು:** ಎಲೆಗಳು ಎಳೆಯವಾಗಿರುವಾಗ ಮೊಗ್ಗಿನಲ್ಲಿರುವ ಅಲ್ಪಸ್ಥಳದಲ್ಲಿಯೇ ನಾನಾ ರೀತಿಯಲ್ಲಿ, ಪರಸ್ಪರ ಸಂಬಂಧವಿರುವಂತೆ ಜೋಡಿಸಿಕೊಂಡಿರುವುದಕ್ಕೆ ವರ್ನೇಷನ್ ಎಂದು ಹೆಸರು. ಇವುಗಳನ್ನು ಮೊಗ್ಗುಗಳ ಅಡ್ಡ ಸೀಳಿಕೆಯಲ್ಲಿ ಕಾಣಬಹುದಾಗಿದೆ. ಒಂದು ಎಲೆಯ ಅಂಚು ಮತ್ತೊಂದರ ಅಂಚನ್ನು ಮುಚ್ಚದಿರಬಹುದು. ಇಲ್ಲವೆ ಒಂದು ಎಲೆ ಹೊರಗೂ ಮತ್ತೊಂದು ಒಳಗೂ ಇದ್ದು ಉಳಿದ ಎಲೆಗಳು ಒಂದನ್ನೊಂದು ಒಂದು ಕಡೆಯ ಅಂಚನ್ನು ಮುಚ್ಚುವಂತಿರಬಹುದು. ಎಲೆಗಳು ತಿರುಚಿಕೊಂಡಿರುವುದೂ ಉಂಟು. ಕೆಲವು ವೇಳೆ ಎಲೆಗಳು ಒಂದನ್ನೊಂದು ಪೂರ್ತಿ ಮುಚ್ಚಿರದ ಮಾದರಿಗಳೂ ಇವೆ. ಸಾಮಾನ್ಯವಾಗಿ ಪ್ರತಿಯೊಂದು ಎಲೆಯೂ ತನ್ನ ಅಕ್ಷದ ಮೇಲೆ ಮಡಿಚಿಕೊಂಡಿರುತ್ತದೆ.

**ಎಲೆಯ ಒಳರಚನೆ:** ಎಲೆಯ ಮುಖ್ಯ ಕಾರ್ಯ ದ್ಯುತಿಸಂಶ್ಲೇಷಣ. ಆದ್ದರಿಂದ ಎಲೆಯ ಆಕಾರದಂತೆ ಒಳರಚನೆಯೂ ಈ ಕಾರ್ಯಕ್ಕೆ ಬಹು ಅಂದವಾಗಿ ಹೊಂದಿಕೊಂಡಿರುತ್ತದೆ. ಒಂದು ಸಾಮಾನ್ಯವಾದ ಎಲೆ ಒಂದು ಸೀಸದ ಕಡ್ಡಿಯ ಗೀಟಿನಷ್ಟು ಮಾತ್ರ ದಪ್ಪಗಿದ್ದರೂ ಅದರಲ್ಲಿ 7–8 ಜೀವಕೋಶಗಳ ಪದರಗಳಾದರೂ ಇರುವುವು. ಎಲೆಯ ಮೇಲಿನ ಮತ್ತು ಕೆಳಗಡೆಯ ಚರ್ಮಗಳ ಮೇಲೆ ಒಂದು ತರಹ ಮೇಣದಂಥ ಪದಾರ್ಥ (ಕ್ಯುಟಿನ್) ಹರಡಿಕೊಂಡಿರುತ್ತದೆ. ಎಲೆ ಬೇಗ ಒಣಗದಂತೆ ಇದು ಕಾಪಾಡುತ್ತದೆ. ಎಲೆಯ ಮಧ್ಯಭಾಗದಲ್ಲಿರುವ ಜೀವ ಕೋಶಗಳು ಎರಡು ಬಗೆಯವು. ಮೇಲಿನ ಅರ್ಧದಷ್ಟು ಇವುಗಳಲ್ಲಿ ಕಂಬದೋಪಾದಿಯಲ್ಲಿದ್ದು ಹರಿತ್ತಿನ ಕಣಗಳಿಂದ ಹೆಚ್ಚಾಗಿ ತುಂಬಿರುತ್ತವೆ. ಈ ಭಾಗವೇ ದ್ಯುತಿಸಂಶ್ಲೇಷಣೆ ಮಾಡುವುದರಲ್ಲಿ ಮುಖ್ಯಪಾತ್ರವನ್ನು ಹೊಂದಿದೆ. ಇದರ ಕೆಳಭಾಗದ ಜೀವಕೋಶಗಳ ಮಧ್ಯೆ ಗಾಳಿ ಇರಲು ಹೆಚ್ಚು ಅವಕಾಶವಿದ್ದು, ಇದು ಸ್ಪಂಜಿನೋಪಾದಿಯಲ್ಲಿರುವುದು. ಇದರಿಂದ ಆವಿಹೊರಹೊಮ್ಮುವಿಕೆ ಹೆಚ್ಚಾಗಿ ಆಗುವುದು. ಈ ಎರಡು ತರಹದ ಅಂಗಾಂಶಗಳ ಮಧ್ಯೆನಾಳಗಳು ಇರುತ್ತವೆ. ಈ ನಾಳಗಳಿಂದ ತೆಳುವಾಗಿರುವ ಎಲೆಗೆ ಆಧಾರವೂ ನೀರು, ಲವಣ ಸಕ್ಕರೆಗಳನ್ನು ಸಾಗಿಸಲು ಮಾರ್ಗವೂ ಒದಗುವುವು. ಅನಿಲಗಳು ಎಲೆಯ ಒಳಗೂ ಹೊರಗೂ ಸಂಚರಿಸಲು ಸಾವಿರಾರು ಪತ್ರರಂಧ್ರಗಳು (ಸ್ಟೊಮೇಟ) ಕೆಳಚರ್ಮದಲ್ಲಿರುವುವು. ಒಂದು ಚದುರ ಮಿಲಿಮೀಟರಿನಷ್ಟು ಜಾಗದಲ್ಲಿ ಸಾಮಾನ್ಯವಾಗಿ ಇಂಥ 300 ರಂಧ್ರಗಳು ಇರುವುವು. ಪ್ರತಿ ರಂಧ್ರವೂ ಎರಡು ರಕ್ಷಕ ಜೀವಕೋಶಗಳ ಮಧ್ಯೆ ಇರುತ್ತದೆ:

**ಚಿತ್ರ 3 ಎಲೆಗಳ ಜೋಡಣೆಯ ವೈವಿಧ್ಯ : ಅಭಿಮುಖ ಜೋಡಣೆ–ಎಕ್ಕದ ಗಿಡದಲ್ಲಿ**

**ಪತ್ರರಂಧ್ರಗಳು ತೆರೆಯುವ ಅಥವಾ ಮುಚ್ಚುವ ಬಗೆ:** ರಕ್ಷಕ ಜೀವಕೋಶಗಳಲ್ಲಿ ಮಾತ್ರ ಹರಿತ್ತಿನ ಕಣಗಳು ಇರುತ್ತವೆಯಲ್ಲದೆ ಹೊರ ಚರ್ಮದ ಇತರ ಜೀವಕೋಶಗಳಲ್ಲಿರುವುದಿಲ್ಲ. ಆದ್ದರಿಂದ ಈ ರಕ್ಷಕ ಜೀವಕೋಶಗಳಲ್ಲಿ ಹಗಲು ದ್ಯುತಿ ಸಂಶ್ಲೇಷಣವಾದಾಗ ಸಕ್ಕರೆ ಉತ್ಪತ್ತಿಯಾಗುವುದು. ಆಗ ಇವುಗಳ ಅಕ್ಕಪಕ್ಕದ ಜೀವಕೋಶಗಳಿಂದ ನೀರು ಈ ರಕ್ಷಕ ಜೀವಕೋಶಗಳೊಳಗೆ ವಿನಿಮಯ ಕಾರ್ಯದಿಂದ (ಆಸ್ಮಾಸಿಸ್) ತುಂಬಿಕೊಳ್ಳುವುದು, ಹೀಗಾದಾಗ, ಇವುಗಳ ಮಧ್ಯೆ ಇರುವ ರಂಧ್ರ ಅಗಲವಾಗಿ ತೆರೆಯುವುದು. ಅಂತೆಯೆ ರಕ್ಷಕ ಜೀವಕೋಶಗಳಲ್ಲಿ ಪಿಷ್ಟ ತಯಾರಾಗಿ ನೀರು ಕಡಿಮೆಯಾದಾಗ ರಂಧ್ರ ಮುಚ್ಚಿಕೊಳ್ಳುವುದು. ಏಕೆಂದರೆ, ರಕ್ಷಕ ಜೀವಕೋಶಗಳ ಆವರಣದಲ್ಲಿ ಕೆಲವು ಭಾಗಗಳು ಮಾತ್ರ ತೆಳುವಾಗಿದ್ದು, ಸ್ಥಿತಿಸ್ಥಾಪಕತ್ವವನ್ನು ಹೊಂದಿರುವುವು.

**ಎಲೆಗಳ ಬಣ್ಣಗಳು :** ಎಲೆಗಳು ಹಸುರಾಗಿ ಕಾಣುವುದಕ್ಕೆ ಅವುಗಳಲ್ಲಿರುವ ಹರಿತ್ತೇ (ಕ್ಲೋರೋಫಿಲ್) ಕಾರಣ. ಈ ಹರಿತ್ತು ಎಲೆಯ ಜೀವಕೋಶಗಳಲ್ಲಿರುವ ಹರಿತ್ತಿನ ಕಣಗಳಲ್ಲಿ (ಕ್ಲೋರೊಪ್ಲಾಸ್ಟ್) ಮಾತ್ರ ಇರುತ್ತದೆ. ಗ್ರಾನ ಎನ್ನುವ ಕೆಲವು ಭಾಗಗಳಲ್ಲಿ ಮಾತ್ರ ಹರಿತ್ತು ತುಂಬಿರುತ್ತದೆ. ಹರಿತ್ತಿನ ಕಣಗಳ ಬಣ್ಣ ರಹಿತ ಭಾಗಕ್ಕೆ ಸ್ಟ್ರೋಮ ಎಂದು ಹೆಸರು. ಗ್ರಾನಗಳಲ್ಲಿ ಹರಿತ್ತು, ಜಿಡ್ಡು ಮತ್ತು ನೈಟ್ರೋಜನ್ ಪದಾರ್ಥಗಳು ಪದರಗಳಾಗಿ ಜೋಡಣೆಗೊಂಡಿವೆ. ಹರಿತ್ತಿನ ಕಣಗಳು ಜೀವರಸದೊಡನೆ ಚಲಿಸುವುದನ್ನು ವ್ಯಾಲಿಸ್‍ನೇರಿಯ ಗಿಡದ ಎಲೆಗಳಲ್ಲಿ ನೋಡಬಹುದು. ಬೆಳಕಿನ ತೀಕ್ಷ್ಣತೆಯನ್ನು ತಪ್ಪಿಸಿಕೊಳ್ಳಲು, ಹರಿತ್ತಿನ ಕಣಗಳು ಜೀವಕೋಶದ ಮೇಲ್ಭಾಗವನ್ನು ಬಿಟ್ಟು ಇಕ್ಕೆಲಗಳಲ್ಲಿಯೂ ಒಟ್ಟುಗೂಡುವುದನ್ನು ಬೇರೆ ಕೆಲವುಗಿಡದ ಎಲೆಯಲ್ಲಿ ನೋಡಬಹುದು. ಎಲೆಯನ್ನು ನೀರಿನಲ್ಲಿ ಕುದಿಸಿ, ಮದ್ಯಸಾರದಲ್ಲಿ ಹಾಕಿದರೆ, ಹರಿತ್ತೆಲ್ಲವೂ ಕರಗಿ ಈಚೆಗೆ ಬರುವುದು. ನಾವು ಸಾಧಾರಣವಾಗಿ ಹರಿತ್ತು ಎಂದು ಕರೆಯುವ ಪದಾರ್ಥದಲ್ಲಿ ಎರಡು ಬಗೆಗಳಿವೆ. ಅಲ್ಲದೆ ಹಳದಿಯ ಬಣ್ಣದ ಕ್ಸಾಂತೋಫಿಲ್ ಮತ್ತು ಕೆಂಪು ಬಣ್ಣದ ಕೆರೋಟೀನ್ ಎಂಬ ಬಣ್ಣದ ಪದಾರ್ಥವೂ ಮಿಶ್ರಣರೂಪದಲ್ಲಿರುತ್ತವೆ.

ಕ್ಲೋರೊಫಿಲ್ ಎ – $C_{55}H_{72}O_5N_4Mg$

ಕ್ಲೋರೊಫಿಲ್ ಬಿ – $C_{55}H_{70}O_6N_4Mg$

ಕೆರೊಟೀನ್ – $C_{40}H_{56}$

ಕ್ಸಾಂತೋಫಿಲ್ – $C_{40}H_{56}O_2$

ಆದರೆ ದ್ಯುತಿಸಂಶ್ಲೇಷಣ ಕಾರ್ಯಕ್ಕೆ ಮೊದಲ ಎರಡು ಬಣ್ಣದ ಪದಾರ್ಥಗಳೇ ಸಾಕು. ಎಲೆಯಲ್ಲಿ ಹರಿತ್ತು ಉತ್ಪತ್ತಿಯಾಗಬೇಕಾದರೆ, ಅದಕ್ಕೆ ಬೆಳಕೂ ಕಬ್ಬಿಣ, ಮೆಗ್ನೀಸಿಯಂ ಮುಂತಾದವೂ ಅತ್ಯಾವಶ್ಯಕ. ಹಳೆಯ ಎಲೆಗಳಲ್ಲಿ ಕ್ಲೋರೊಫಿಲ್ಲುಗಳು ಕಡಿಮೆಯಾಗಿ ಹಳದಿಯ ಕ್ಸಾಂತೋಫಿಲ್ಲಿನ ಪ್ರಮಾಣ ಹೆಚ್ಚುವುದು. ಚಳಿಗಾಲದಲ್ಲಿ ಉದುರುವುದಕ್ಕೆ ಮುಂಚೆ ಸಮಶೀತೋಷ್ಣವಲಯದ ಗಿಡಗಳ ಎಲೆಗಳು ಕೆಂಪುಬಣ್ಣದ ಅಂಥೋಸಯನಿನನ್ನು ತಮ್ಮ ಜೀವಕೋಶದ ಮಧ್ಯದಲ್ಲಿರುವ ರಸದಲ್ಲಿ ಸಂಗ್ರಹಿಸುವುವು. ಅನಂತರ ಕಂದುಬಣ್ಣದ ಟ್ಯಾನಿನುಗಳೂ ಹೆಚ್ಚಾಗಿ ಉತ್ಪತ್ತಿಯಾಗುವುವು. ಅನೇಕ ಜಾತಿಯ ಗಿಡಗಳಲ್ಲಿ ಹರಿತ್ತು ಎಲೆಯ ಕೆಲವು ಭಾಗಗಳಲ್ಲಿ ಮಾತ್ರ ಇರುತ್ತದೆ. ಇದು ಅವುಗಳ ಹುಟ್ಟುಗುಣ. ಹರಿತ್ತನ್ನು ತಯಾರಿಸುವ ಶಕ್ತಿಯನ್ನು ಕಳೆದುಕೊಂಡ ಬಣ್ಣರಹಿತ ಸಸಿಗಳು (ಆಲ್ಬಿನೋಸ್) ಬೇಗ ಸಾಯಬೇಕಾಗುತ್ತವೆ.



**ಚಿತ್ರ 4 ಎಲೆಗಳ ಜೋಡಣೆಯ ವೈವಿಧ್ಯ : ಪರ್ಯಾಯ ಜೋಡಣೆ –ದಾಸವಾಳ ಗಿಡದಲ್ಲಿ**

**ದ್ಯುತಿಸಂಶ್ಲೇಷಣೆ:** ಗಿಡದ ಎಲೆಗಳು ಹಗಲಿನಲ್ಲಿ ಸೂರ್ಯ ರಶ್ಮಿಯ ಸಹಾಯದಿಂದ ಗಾಳಿಯಲ್ಲಿನ ಇಂಗಾಲಾಮ್ಲವನ್ನು ಬಳಸಿಕೊಂಡು ನೀರಿನೊಂದಿಗೆ ಶರ್ಕರ ಪಿಷ್ಟಾದಿಗಳನ್ನು ತಯಾರು ಮಾಡುವ ವಿಧಾನಕ್ಕೆ ಈ ಹೆಸರಿದೆ. (**ನೋಡಿ– ದ್ಯುತಿಸಂಶ್ಲೇಷಣೆ**) ಇಲ್ಲಿ ದ್ಯುತಿ ಸಂಶ್ಲೇಷಣೆಯಿಂದ ಜಗತ್ತಿಗಾಗುವ ಉಪಕಾರಗಳನ್ನು ಮಾತ್ರ ತಿಳಿಸಿದೆ. ನಮ್ಮ ಚಟುವಟಿಕೆಗಳಿಗೆ ಅಗತ್ಯವಾದ ಶಕ್ತಿಗೆ ಆಹಾರವೇ ಮೂಲ. ಅಂಥ ಆಹಾರ ತಯಾರಿಕೆಯಲ್ಲಿ ಹರಿತ್ತಿನ ಪಾತ್ರ ಬಹು ಮುಖ್ಯವಾದುದು. ಅಲ್ಲದೆ ಪುರಾತನ ಕಾಲದ ಸಸ್ಯಗಳು ಈ ಕಾರ್ಯದ ಮೂಲಕ ಸಂಗ್ರಹಿಸಿದ ಸೂರ್ಯನ ಶಕ್ತಿಯೇ ನಾವು ಈಗ ಬಳಸುವ ಕಲ್ಲಿದ್ದಲು, ಪೆಟ್ರೋಲ್ ಮುಂತಾದುವುಗಳಲ್ಲಿ ಅಡಗಿರುತ್ತದೆ. ಇವುಗಳ ಬಳಕೆ ಯಂತ್ರಯುಗದ ಶ್ರೇಯಸ್ಸಿಗೆ ಆಧಾರವಾಗಿದೆ. ಹಾಗೂ ಪಟ್ಟಣಗಳಲ್ಲಿ ಹೆಚ್ಚಾಗಿ ಇಂಗಾಲದ ಡೈಆಕ್ಸೈಡೂ ಇತರ ಅನಾರೋಗ್ಯಕರವಾದ ಅನಿಲಗಳೂ ಉತ್ಪತ್ತಿಯಾಗುತ್ತವೆ. ಗಿಡಮರಗಳು, ದ್ಯುತಿಸಂಶ್ಲೇಷಣೆಯಲ್ಲಿ ಆಮ್ಲಜನಕವನ್ನು ಉತ್ಪತ್ತಿಮಾಡಿ, ವಾಯುವನ್ನು ಶುದ್ಧಿಗೊಳಿಸಿರುವುದರಿಂದ ಈ ಕಾರಣದಿಂದಲೂ ಮರಗಳನ್ನು ಬೆಳೆಸುವುದು ಅತ್ಯಾವಶ್ಯಕವಾಗಿದೆ. ಪ್ರತಿವರ್ಷವೂ ದ್ಯುತಿಸಂಶ್ಲೇಷಣೆಯಿಂದ ತಯಾರಾಗುವ ಸಾವಯುವ ಪದಾರ್ಥಗಳು, ಪ್ರಪಂಚದಲ್ಲಿರುವ

ಎಲ್ಲ ಹೊಲಗೆ ಫ್ಯಾಕ್ಟರಿ ಮುಂತಾದವುಗಳಲ್ಲಿ ಉತ್ಪತ್ತಿಯಾಗುವ ಪದಾರ್ಥಗಳ ಪ್ರಮಾಣಕ್ಕಿಂತ 100ರಷ್ಟು ಹೆಚ್ಚಾಗಿರುತ್ತದೆ. ಈ ಕಾರ್ಯದಲ್ಲಿ ಸಸ್ಯಗಳು 470 ಬಿಲಿಯನ್ ಟನ್ನುಗಳಷ್ಟು ಸಾವಯವ ಪದಾರ್ಥಗಳನ್ನು ತಯಾರಿಸುವುದರಲ್ಲಿ, 690 ಬಿ.ಟನ್ನು ಇಂಗಾಲದ ಡೈಆಕ್ಸೈಡನ್ನೂ 280 ಬಿ.ಟನ್ನು ನೀರನ್ನೂ ಉಪಯೋಗಿಸಿಕೊಂಡು, 500 ಬಿ.ಟನ್ನು ಆಮ್ಲಜನಕವನ್ನೂ ಈಚೆಗೆ ಬಿಡುತ್ತವೆ. ದ್ಯುತಿಸಂಶ್ಲೇಷಣೆಯಿಲ್ಲದಿದ್ದರೆ ಗಾಳಿಯಲ್ಲಿ ಇಷ್ಟು ಆಮ್ಲಜನಕವಿರುತ್ತಿರಲಿಲ್ಲ.

**ಎಲೆಗಳಲ್ಲಿ ಉಸಿರಾಟ:** ಹಗಲು ಹೊತ್ತಿನಲ್ಲಿ ಎಲೆಗಳು ಹೆಚ್ಚು ರಭಸದಿಂದ ದ್ಯುತಿಸಂಶ್ಲೇಷಣೆಯನ್ನು ಮಾಡುವುದರಿಂದ, ಎಲೆಗಳು ಉಸಿರಾಡುತ್ತಿದ್ದರೂ ಅದು ಗೋಚರವಾಗುವುದಿಲ್ಲ. ಆದರೆ ರಾತ್ರಿ ಹೊತ್ತಿನಲ್ಲಿ ಎಲೆಗಳ ಉಸಿರಾಟವೊಂದೇ ನಡೆಯುವುದರಿಂದ, ಆಗ ಅವು ಇಂಗಾಲದ ಡೈಆಕ್ಸೈಡನ್ನು ತಮ್ಮ ರಂಧ್ರಗಳಿಂದ ಈಚೆಗೆ ಬಿಡುವುದು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಸೂರ್ಯನ ಬೆಳಕು ಬೆಳಗಿನ ಜಾವದಲ್ಲಿ ಇನ್ನೂ ಕಡಿಮೆಯಾಗಿರುವಾಗ ಉಸಿರಾಡುವಿಕೆಯಿಂದ ಹೊರಗೆ ಬರುವ ಇಂಗಾಲದ ಡೈಆಕ್ಸೈಡ್ ದ್ಯುತಿಸಂಶ್ಲೇಷಣೆಗೆ ಮಾತ್ರ ಸಾಕಾಗುವಷ್ಟಿರುತ್ತದೆ.

ದ್ಯುತಿಸಂಶ್ಲೇಷಣೆ ಆಹಾರವನ್ನು ತಯಾರುಮಾಡುವ ಕಾರ್ಯವಾದರೆ, ಉಸಿರಾಡುವ ಕಾರ್ಯ ಆಹಾರವನ್ನು ವಿಭಜನೆಮಾಡಿ ಅದರಿಂದ ಶಕ್ತಿಯನ್ನು ಬಿಡುಗಡೆ ಮಾಡುವ ಕಾರ್ಯವಾಗಿದೆ. ಹೀಗೆ ಇವೆರಡು ಕಾರ್ಯಗಳೂ ಒಂದಕ್ಕೊಂದು ವಿರೋಧವಾದುವು.

**ಆವಿ ಹೊರಹೊಮ್ಮುವಿಕೆ:** ಎಲೆಗಳ ರಚನೆ ದ್ಯುತಿಸಂಶ್ಲೇಷಣೆಗೆ ಮುಖ್ಯವಾಗಿ ಹೊಂದಿಕೊಂಡಿರುವುದರಿಂದ, ಇವುಗಳಿಂದ ಆವಿ ಹೊರಹೊಮ್ಮಬೇಕಾಗಿರುವುದು ಅನಿವಾರ್ಯ. ಆದರೆ, ಆವಿ ಹೊರಹೊಮ್ಮುವಿಕೆ ಹೆಚ್ಚಾದರೆ, ಗಿಡ ಬಾಡಿಹೋಗಿ ಅಪಾಯಕ್ಕೆ ತುತ್ತಾಗಬಹುದು. ಬಿಸಿಲು, ಉಷ್ಣತೆ ಮತ್ತು ಗಾಳಿ ಹೆಚ್ಚಾಗಿದ್ದು, ಭೂಮಿಯಲ್ಲಿ ನೀರು ಕಡಿಮೆ ಇರುವ ಪ್ರದೇಶಗಳಲ್ಲಿ ಈ ಅಪಾಯ ಹೆಚ್ಚಾಗಿರುವುದು. ಅಲ್ಲಿ ಬೆಳೆಯುವ ಗಿಡಗಳಿಗೆ ಕ್ಸೀರೋಫೈಟ್ಸ್ ಎನ್ನುತ್ತಾರೆ. ಇದರಲ್ಲಿ ಎಲೆಯ ಮೇಲೂ ಕೆಳಗೂ ಮೇಣದಂಥ ವಸ್ತು ದಪ್ಪನಾಗಿ ಹರಡಿಕೊಂಡಿದೆ. ಬ್ರೆಜಿಲ್ ದೇಶದ (ಕಾರ್ನುಕೋಪಿಯ) ಮೇಣದ ಮರದ ಎಲೆಗಳಿಂದ ಮೇಣವನ್ನು ಸಂಗ್ರಹಿಸುತ್ತಾರೆ. ಹೊರಚರ್ಮವೂ ಅನೇಕ ಪದರಗಳಿಂದ ಕೂಡಿದೆ. ರಕ್ಷಕಜೀವಕೋಶಗಳು ಗುಳಿಗಳಲ್ಲಿ ಅಡಗಿವೆ. ಈ ಗುಳಿಗಳಲ್ಲಿ ಕೂದಲು ತುಂಬಿಕೊಂಡಿದೆ. ಎಲೆಯಲ್ಲಿ ಒಳಗೆ ಕಂಬದಂಥ ಜೀವಕೋಶಗಳು ಹೆಚ್ಚಾಗಿದ್ದು, ಇವು ದಟ್ಟವಾಗಿ ಜೋಡಣೆಗೊಂಡಿವೆ. ಸ್ಪಂಜಿನಂತಿರುವ ಜೀವಕೋಶಗಳು ಅಲ್ಪ ಪ್ರಮಾಣದಲ್ಲಿವೆ. ಈ ತರಹ ವಿಶೇಷ ರಚನೆಯಿಂದ, ಈ ಎಲೆಗಳು ಆವಿ ಹೊರಬೀಳುವ ಪ್ರಮಾಣವನ್ನು ನಿಯಂತ್ರಿಸಿಕೊಳ್ಳುತ್ತವೆ. ಕೆಲವು ಜಾತಿಯ ಹುಲ್ಲಿನಲ್ಲಿ, ಮಧ್ಯಾಹ್ನ ವೇಳೆಯಲ್ಲಿ ಎಲೆ ಸುರುಳಿಯಂತೆ ಸುತ್ತಿಕೊಳ್ಳುವುದರಿಂದಲೂ ಇದೇ ಪರಿಣಾಮವಾಗುವುದು ಕೆಲವು ಗಿಡಗಳಲ್ಲಿ ಎಲೆಗಳೇ ಬಹಳ ಚಿಕ್ಕವಾಗಿರಬಹುದು ; ಬೇಗ ಉದುರಿಹೋಗಬಹುದು; ಮತ್ತೆ ಕೆಲವು ಗಿಡಗಳ ಎಲೆಗಳು ಮಳೆಯಾದಾಗ ಹೆಚ್ಚಾಗಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುತ್ತವೆ (ಕತ್ತಾಳೆ).

ನೆರಳಿನಲ್ಲಿ ಬೆಳೆಯುವ ಗಿಡಗಳ ಎಲೆಗಳಾದರೂ ಅಗಲವಾಗಿ ತೆಳುವಾಗಿದ್ದು, ಮೇಲಿರುವ ಮೇಣದ ಪೊರೆ ಬಹಳ ತೆಳ್ಳಗಿರುತ್ತದೆ.

ನೀರಿನಲ್ಲಿ ಬೆಳೆಯುವ ಗಿಡಗಳ ಎಲೆಗಳಲ್ಲಿ ವಾಯು ಹೆಚ್ಚಾಗಿ ಸಂಗ್ರಹವಾಗಲು ಅನುಕೂಲವಾಗುವಂಥ ರಚನೆ ಇದೆ. ಎಲೆ ತೇಲುತ್ತಿದ್ದರೆ, ರಂಧ್ರಗಳು ಮೇಲುಭಾಗದ ಚರ್ಮದಲ್ಲಿಯೇ ಇರುವುವು. ಮುಳುಗಿರುವ ಎಲೆಗಳಲ್ಲಿ ರಂಧ್ರಗಳೇ ಇರುವುದಿಲ್ಲ. ಅಲ್ಲದೆ ಈ ಎಲೆಗಳು ಬಹುವಾಗಿ ಚೂರು ಚೂರಾಗಿರುತ್ತವೆ.

ನೀರು ಹೆಚ್ಚಾಗಿ ದೊರೆಯುವ ತಂಪು ಜಾಗದಲ್ಲಿ ಬೆಳೆಯುವ ಕೆಸವಿನದಂಟು, ಟ್ರೋಪಿಯೋಲಂ ಮುಂತಾದ ಗಿಡಗಳಲ್ಲಿ ನೀರು ಆವಿಯ ರೂಪದಲ್ಲಿಲ್ಲದೆ, ತನ್ನ ದ್ರವರೂಪದಲ್ಲಿಯೇ ಹೊರಹೊಮ್ಮುತ್ತದೆ. ಇದು ಎಲೆಗಳ ಮುಖ್ಯ ನಾಳಗಳ ತುದಿಯಲ್ಲಿರುವ ಕೆಲವು ಜೀವಕೋಶಗಳ ಮೂಲಕ ಈಚೆಗೆ ಬರುವುದು. ಕೆಲವು ವೇಳೆ, ಒಂದು ನಿಮಿಷಕ್ಕೆ ನೂರುತೊಟ್ಟುಗಳು ಬೀಳಬಹುದು. ರಾತ್ರಿ ಉದ್ದವಾಗಿದ್ದು, ನೆಲದಲ್ಲಿ ನೀರು ಹೆಚ್ಚಾಗಿದ್ದರೆ, ಮರುದಿವಸ ಮಂಜಿನ ಹನಿಯಂತೆ ಹುಲ್ಲಿನ ಎಲೆಯ ತುದಿಯಲ್ಲಿ ಈ ರೀತಿ ನೀರು ಹೊರಹೊಮ್ಮುವುದು. ಈ ಕಾರ್ಯಕ್ಕೆ ಉಗುಳುವಿಕೆ (ಗಟ್ಟೇಷನ್) ಎಂದು ಹೆಸರು.

**ಎಲೆ ಉದುರುವಿಕೆ:** ಎಲೆಗಳು ಬೇಗನೆ ಉದುರಬಹುದು ಅಥವಾ ಒಂದು ಋತುವಿನ ಕೊನೆಯಲ್ಲಿ ಉದುರಬಹುದು. ಚಳಿಗಾಲಕ್ಕೆ ಮುಂಚೆ ಸಮಶೀತೋಷ್ಣ ವಲಯಗಳಲ್ಲಿ ಅನೇಕ ಗಿಡಗಳು ತಮ್ಮ ಎಲೆಗಳನ್ನು ಕಳೆದುಕೊಳ್ಳುವುವು. ಏಕೆಂದರೆ, ಆಗ ಆ ಗಿಡಗಳು ಎಂದಿನಂತೆ ಹೆಚ್ಚು ನೀರನ್ನು ಹೀರಿಕೊಳ್ಳುವುದು ಕಷ್ಟವಾಗುವುದು. ಆದರೆ ಕೆಲವು ಗಿಡಗಳಲ್ಲಿ ಎಲೆಗಳು ಬಹಳ ಕಾಲವಿದ್ದು ಏಕಕಾಲದಲ್ಲಿ ಎಲ್ಲ ಉದುರುವುದಿಲ್ಲ. ಉದುರುವುದಕ್ಕೆ ಮುಂಚೆ ಎಲೆಗಳು ಹಳದಿ, ಕೆಂಪು ಬಣ್ಣಗಳಿಗೆ ತಿರುಗಿ, ತಮ್ಮಲ್ಲಿರುವ ಸಾರವನ್ನು ಕಾಂಡಕ್ಕೆ ಕೊಟ್ಟುಬಿಡುವುವು. ಅಂಥ ಎಲೆಯ ಬುಡದಲ್ಲಿ, ಒಂದು ಹೊಸ ತರಹ ಜೀವಕೋಶಗಳ ಪದರ ಅಡ್ಡವಾಗಿ ಬೆಳೆದುಕೊಂಡು ಬರುತ್ತದೆ. ಅನಂತರ ಈ ಪದರದಲ್ಲಿ ತಕ್ಕಷ್ಟು ಶಕ್ತಿ ಇಲ್ಲದಂತಾಗಿ ಎಲೆ ಉದುರಲು ಅನುಕೂಲವಾಗುತ್ತದೆ. ಗಾಳಿಯಿಂದ ಎಲೆಯ ಮಧ್ಯದ ನಾಳ ಮುರಿಯುವುದೇ ತಡ, ಎಲೆ ಉದುರುತ್ತದೆ. ಸತ್ತ ಕೊಂಬೆಗಳಿಂದ ಎಲೆಗಳು ಈ ರೀತಿ ಉದುರುವುದಿಲ್ಲ. ಎಲೆ ಉದುರಿದ ಜಾಗದಲ್ಲಿ, ಬುಡದಲ್ಲಿ ಕಾರ್ಕ್ ಎಂಬ ಅಂಗಾಂಶ ಉತ್ಪತ್ತಿಯಾಗಿರುವುದರಿಂದ, ಇಲ್ಲಿ ಯಾವ ಗಾಯವೂ ಉಂಟಾಗದಂತೆ ರಕ್ಷಣೆ ಇರುತ್ತದೆ. ಆದರೆ ಓಕ್‌ನಂಥ ಮರಗಳಲ್ಲಿ ಸತ್ತ ಎಲೆಗಳು ಬಹಳ ಕಾಲ ಗಿಡಕ್ಕೆ ಅಂಟಿಕೊಂಡಿರುವುವು.

**ಎಲೆಗಳ ವಿಕಾಸ:** ಬಹು ಪುರಾತನ ಡಿವೋನಿಯನ್ ಕಾಲದ ರೈನಿಯ ಮುಂತಾದ ಗಿಡಗಳ ಅವಶೇಷಗಳಿಂದ ತೋರಿ ಬರುವಂತೆ, ಆದಿಕಾಲದ ಸಸ್ಯಗಳಲ್ಲಿ ಎಲೆಗಳೇ ಇರಲಿಲ್ಲ. ಅವುಗಳ ಕೆಲಸವನ್ನು ಕಾಂಡದ ಕವಲುಗಳೇ ಮಾಡಬೇಕಾಗಿತ್ತು. ಅನಂತರದ ವಿಕಾಸದಲ್ಲಿ ಕಾಂಡಗಳ ಮೇಲೆ ಸಣ್ಣ ಸಣ್ಣ ಎಲೆಗಳು ಉದ್ಭವಿಸಿದುವು–ಎಂಬುದು ಕೆಲವರ ಮತ. ಕಾಂಡದ ಸಣ್ಣ ಸಣ್ಣ ಕೊಂಬೆಗಳೇ ಅಗಲವಾಗುತ್ತ ಬಂದು, ಉದ್ದವಾಗಿ ಬೆಳೆಯುವುದನ್ನು ನಿಲ್ಲಿಸಿ, ಎಲೆಗಳಾಗಿ ಮಾರ್ಪಾಡಾದುವು ಎಂಬುದು ಮತ್ತೆ ಕೆಲವರವಾದ. ದೊಡ್ಡ ಎಲೆಗಳ ಉತ್ಪತ್ತಿಯ ವಿಕಾಸ ಈ ರೀತಿಯಲ್ಲಿ ಕಾಂಡದ ಕವಲು ಕೊನೆಗಳ ಜೋಡಣೆಯಿಂದ ಆಯಿತೆಂಬುದನ್ನೂ ಅನೇಕರು ಒಪ್ಪಿರುವರು. ಆದರೆ ಸಣ್ಣ ಎಲೆಗಳ ವಿಕಾಸ ಮುಂಚೆ ಏನೂ ಬೆಳೆಯದೇ ಇದ್ದ ಕಾಂಡದ ಮೇಲ್ಮೈಯ ಮೇಲೆ, ಹೊಸದಾಗಿ ಉದ್ಭವಿಸಿದುದರಿಂದ ಆಯಿತೆಂದು ಕೆಲವರು ವಾದಿಸುವರು.

**ಚಿತ್ರ 5 ಎಲೆಗಳ ಜೋಡಣೆಯ ವೈವಿಧ್ಯ: ಸುತ್ತು ಜೋಡಣೆ–ಕಣಗಿಲೆ ಗಿಡದಲ್ಲಿ**

**ಎಲೆಗಳ ಉಪಯೋಗಗಳು:** ಹಲವು ಎಲೆಗಳನ್ನು ತರಕಾರಿಯಾಗಿ ಉಪಯೋಗಿಸುತ್ತೇವೆ. ಕರಿಬೇವು, ಕೊತ್ತಂಬರಿ, ಪುದೀನ ಮುಂತಾದವು ಆಹಾರಕ್ಕೆ ತಕ್ಕ ವಾಸನೆಯನ್ನು ಕೊಟ್ಟು, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುವು. ಟೀ ಗಿಡದ ಎಲೆಗಳನ್ನು ಪಾನೀಯಕ್ಕೆ ಬಳಸುವುದು ಸಾಮಾನ್ಯವಾಗಿದೆ. ಹೊಗೆಸೊಪ್ಪು, ಗಾಂಜಾ ಮುಂತಾದ ಎಲೆಗಳನ್ನು ಹೊಗೆಬತ್ತಿಯಾಗಿ ಸೇವಿಸುತ್ತಾರೆ. ವೀಳೆಯದೆಲೆಗಳಿಗೆ ಸಮಾಜದಲ್ಲಿರುವ ಪ್ರಾಮುಖ್ಯ ಎಲ್ಲರಿಗೂ ತಿಳಿದಿದೆ. ಬಾಳೆ, ಮುತ್ತುಗ ಕಂಚುವಾಳ–ಇವುಗಳನ್ನು ಊಟಮಾಡಲು ತಟ್ಟೆಗೆ ಬದಲಾಗಿ ಉಪಯೋಗಿಸುತ್ತೇವೆ. ಕತ್ತಾಳೆ, ಬಾಳೆಗಳಿಂದ ಬರುವ ನಾರನ್ನು ದಾರದಂತೆ ಉಪಯೋಗಿಸುತ್ತಾರೆ. ಇಷ್ಟಲ್ಲದೆ, ಅನೇಕ ಜಾತಿಯ ಗಿಡಗಳ ಎಲೆಗಳನ್ನು ಔಷಧಿಯಾಗಿ ಎಲ್ಲ ದೇಶಗಳಲ್ಲಿಯೂ ಬಳಸುತ್ತಾರೆ. ಬೆಲ್ಲಡೋನ, ಡಿಜಿಟ್ಯಾಲಿಸ್, ಅಟ್ರೋಪೀನ್ ಮುಂತಾದವು ಪರ್ಣಜನ್ಯ ಔಷಧಿಗಳೇ. ಯೂಕಲಿಪ್ಟಸ್ ಮತ್ತು ಮಜ್ಜಿಗೆ ಹುಲ್ಲಿನಿಂದ ಎಣ್ಣೆಯನ್ನು ತೆಗೆಯುವರು. ಅಲ್ಲದೆ ಎಲೆಯ ಹರಿತ್ತನ್ನು ದಂತಧಾವನ ಸರಿಗಳಲ್ಲೂ ಕೆಲವು ಪದಾರ್ಥಗಳಿಗೆ ಬಣ್ಣ ಕಟ್ಟುವುದಕ್ಕೂ ಉಪಯೋಗಿಸುವುದುಂಟು. ಹೊಂಗೆ, ಗ್ಲಿರಿಸಿಡಿಯ ಎಲೆಗಳು ಒಳ್ಳೆಯ ಹಸಿರುಗೊಬ್ಬರವಾಗುವುದು. ಹಬ್ಬದ ದಿವಸಗಳಲ್ಲಿ ಮಾವಿನ ಎಲೆಗಳಿಂದ ಮನೆಗೆ ತೋರಣವನ್ನು ಕಟ್ಟುತ್ತೇವೆ. ಉಗಾದಿ ಹಬ್ಬದಲ್ಲಿ ಬೇವಿಗೆ ಪ್ರಾಧಾನ್ಯವಿದೆ.

**ಎಲೆಗಳ ವಿನ್ಯಾಸ :** ಕಾಂಡದ ಮೇಲಿರುವ ಎಲೆಗಳು ಕೆಳಗಿನ ಎಲೆಗಳನ್ನು ಪೂರ್ತಿ ಮುಚ್ಚಿಕೊಂಡರೆ ಆ ಎಲೆಗಳಿಗೆ ದ್ಯುತಿಸಂಶ್ಲೇಷಣೆಗೆ ಅಗತ್ಯವಾದ ಬೆಳಕು ದೊರೆಯದೆ ಹಾನಿಯಾಗುತ್ತದೆ. ಆದುದರಿಂದ ಎಲೆಗಳು ಕಾಂಡದ ಮೇಲೆ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಬೆಳೆದು ಎಲ್ಲ ಎಲೆಗಳಿಗೂ ತಕ್ಕಷ್ಟು ಬೆಳಕು ದೊರೆಕುವಂತೆ ಜೋಡಣೆಗೊಂಡಿರುತ್ತವೆ. ಎಲೆಗಳ ಜೋಡಣೆಯ ಈ ವಿನ್ಯಾಸಕ್ಕೆ ಸಂಯೋಜನೆ (ಫಿಲ್ಲೊಟ್ಯಾಕ್ಸಿ) ಎಂದು ಹೆಸರು. ಕೆಲವು ಗಿಡಗಳಲ್ಲಿ ಕಾಂಡ ಚಿಕ್ಕದಾಗಿದ್ದು, ಎಲೆಗಳೆಲ್ಲ ನೆಲದ ಮೇಲೆಯೇ ಹರಡಿಕೊಂಡಿರುವುವು. ಸೆಂಪರ್‌ವೈವಂ ಮುಂತಾದ ಗಿಡಗಳಲ್ಲಿ ಎಲೆಗಳು ಹೂವಿನ ದಳಗಳೋಪಾದಿಯಲ್ಲಿ ಕಾಣುತ್ತವೆ.

ಒಂದು ಗಿಣ್ಣಿನಲ್ಲಿ ಎರಡು ಎಲೆಗಳಿದ್ದರೆ, ಅದಕ್ಕೆ ಅಭಿಮುಖ ಜೋಡಣೆ ಎನ್ನುವರು. ಎಲೆಗಳು ಅಭಿಮುಖವಾಗಿದ್ದು, ಎರಡೇ ಸಾಲುಗಳಲ್ಲಿರಬಹುದು ಅಥವಾ ನಾಲ್ಕು ಸಾಲುಗಳಲ್ಲಿರಬಹುದು (ಎಕ್ಕ), ದ್ವಿದಳ ಸಸ್ಯಗಳ ಸಸಿಗಳಲ್ಲಿ ಎರಡು ಬೀಜದಳಗಳೂ ಯಾವಾಗಲೂ ಅಭಿಮುಖವಾಗಿಯೇ ಇರುವುವು. ಕಾಫಿ ಗಿಡದ ಕುಟುಂಬದ (ರೂಬಿಯೇಸಿ) ಎಲೆಗಳೂ ಹೀಗೆಯೇ ಇರುವುವು.

ಒಂದೇ ಗಿಣ್ಣಿನಲ್ಲಿ ಎರಡಕ್ಕಿಂತ ಹೆಚ್ಚಾಗಿ ಎಲೆಗಳು ಇದ್ದರೆ ಅದಕ್ಕೆ ವರ್ತುಳ ವಿನ್ಯಾಸ (ಹೋರ್ಲ್ಡ್) ಎನ್ನಬಹುದು (ಕಣಗಿಲೆ).

ಒಂದು ಗಿಣ್ಣಿನಿಂದ ಒಂದು ಎಲೆಮಾತ್ರ ಉದ್ಭವಿಸಿದರೆ ಅದು ಪರ್ಯಾಯ ವಿನ್ಯಾಸವಾಗುತ್ತದೆ (ಆಲ್ಟರ್‌ನೇಟ್). ಉದಾಹರಣೆಗೆ ಆಲ, ಕಂಚುವಾಳ, ಎಲೆಯ ಮೇಲಿನ ಗಿಣ್ಣಿನ ಅಥವಾ ಕೆಳಗಿನ ಗಿಣ್ಣಿನ ಎಲೆ ಇದರ ಎದುರು ದಿಕ್ಕಿನಲ್ಲಿರುತ್ತದೆ. ಈ ವಿನ್ಯಾಸ ಒಂದು ಸೂತ್ರವನ್ನು ಅವಲಂಬಿಸಿದೆ. ಹುಲ್ಲಿನಲ್ಲಿರುವಂತೆ, ಕಾಂಡದ ಒಂದು ಸುತ್ತಿನಲ್ಲಿ ಎರಡು ಎಲೆಗಳಿದ್ದು ಒಟ್ಟು ಉದ್ದದ ಎರಡು ಸಾಲುಗಳಿರುತ್ತವೆ. ಇದನ್ನು ½ ವಿನ್ಯಾಸವೆನ್ನುವರು. ಜೊಂಡುಗಿಡದಲ್ಲಿ (ಸೈಪೆರಸ್) – ವಿನ್ಯಾಸವಿರುತ್ತದೆ. ಇವೆರಡು ವಿನ್ಯಾಸಗಳ ಅಂಶಗಳನ್ನೂ ಛೇದಗಳನ್ನು ಕೂಡಿದರೆ 2/5 ವಿನ್ಯಾಸವಾಗುವುದು. ಉದಾ: ಹೂವರ್ಚಿಗಿಡ. ಇನ್ನೂ ಮುಂದುವರಿದ ವಿನ್ಯಾಸವೆಂದರೆ ಪ್ಲಾಂಟಾಗೊ ಗಿಡದಲ್ಲಿರುವಂತೆ $\frac{1+2}{3+5}=\frac{3}{8}$ ಅನೇಕವೇಳೆ, ಎಲೆಗಳ ತೊಟ್ಟುಗಳು ತಿರುವಿಕೊಂಡಿರುವುದರಿಂದ, ಅವುಗಳ ವಿನ್ಯಾಸವನ್ನು ಸರಿಯಾಗಿ ಕಂಡು ಹಿಡಿಯಲು ಕಷ್ಟವಾಗುವುದು. ಗಿಡದ ಎಲೆಗಳು ಸಾಧ್ಯವಾದಷ್ಟು ಒಂದನ್ನು ಮತ್ತೊಂದು ಮುಚ್ಚಿದಂತೆ ಇದ್ದು ಬೆಳಕನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವಂತಿರಬೇಕು ಎಂಬುದನ್ನು ಆಗಲೇ ತಿಳಿಸಿದೆ. ಇದಕ್ಕಾಗಿಯೋ ಎನ್ನುವಂತೆ ಕೆಲವು ಗಿಡಗಳಲ್ಲಿ ಎಲೆತೊಟ್ಟುಗಳು ಉದ್ದವಾಗುತ್ತ ಬಂದಿವೆ. ಉದಾಹರಣೆಗೆ: ಅಕ್ಯಾಲಿಫದಲ್ಲಿರುವ ಮೊಸೈಕ್ ರೀತಿ. (ಕೆ.ಎಲ್.ಎಂ.)

**ಪಿಡುಗುಗಳು:** ಪೈರಿಗೆ ಹೇಗೋ ಹಾಗೆ ಗಿಡದ ಎಲ್ಲ ಭಾಗಗಳನ್ನು ಕೊರೆದು ಎಲೆ ತಿನ್ನುವ ಹುಳು, ಕೀಟಗಳಿವೆ, ಮಿಡತೆ, ಚಿಟ್ಟೆಗಳು, ಕಂಬಳಿ ಹುಳುಗಳು, ಕೊಂಡಿ ಹುಳು, ಜೀರುಂಡಿ, ಕಣಜದ ಹುಳು–ಮುಂತಾದವು ಎಲೆಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಕೊರೆದುಹಾಕುತ್ತವೆ. ಈ ಪಿಡುಗಿನಿಂದ ಗಿಡವನ್ನು ರಕ್ಷಿಸಲು ಅನೇಕ ರಾಸಾಯನಿಕ ಮದ್ದುಗಳಿವೆ. ಇಂಥ ಹುಳುಕೀಟಗಳ ವಿವರಗಳನ್ನೂ ಆಯಾ ಹುಳುಕೀಟಗಳ ಶೀರ್ಷಿಕೆಯಲ್ಲಿ ಕೊಟ್ಟಿದೆ. (ಎಂ.ಎ.ಪಿ.)

**ಎಲೆಕೋಸು:** ಬ್ರಾಸಿಕ ಓಲರೇಸಿಯ ಇದರ ವೈಜ್ಞಾನಿಕ ಹೆಸರು ಬ್ರಾಸಿಕೇಸೀ ಕುಟುಂಬಕ್ಕೆ ಸೇರಿದ ತರಕಾರಿಸಸ್ಯ (ಕ್ಯಾಬೇಜ್). ಇದು ಒಂದು ಜನಪ್ರಿಯ ತರಕಾರಿ, ಆಹಾರವನ್ನು ಸಂಗ್ರಹಿಸಿಕೊಂಡಿರುವ ಇದರ ಬಿಳಿಯ ಎಲೆಗಳು ಒಂದರ ಮೇಲೊಂದು ಕವುಚಿಕೊಂಡು ಗೆಡ್ಡೆಯ ರೂಪವನ್ನು ತಾಳಿರುತ್ತವೆ. ಈ ಗೆಡ್ಡೆಯೇ ಹುಳಿ, ಪಲ್ಯ ಇತ್ಯಾದಿ ಅಡಿಗೆಗಳಿಗೆ ಬಳಸುವ ತರಕಾರಿ. ವಿಶೇಷವಾಗಿ ಯುರೋಪ್ ಮತ್ತು ಏಷ್ಯ ಖಂಡಗಳ ತೀರ ಪ್ರದೇಶಗಳಲ್ಲಿ ಬಹು ಹಿಂದಿನಿಂದಲೂ ವ್ಯವಸಾಯದಲ್ಲಿದೆ. ಹಸಿಯ ಕೋಸಿನಲ್ಲಿ ಎ, ಬಿ ಮತ್ತು ಬಿ$_2$ ಜೀವಾತು ಗಳಿವೆ. ಸಿ ಜೀವಾತುವಂತೂ ಅತಿ ಹೆಚ್ಚಾಗಿದೆ. ಕೋಸನ್ನು ಬೇಯಿಸಿದರೆ ಬಿ ಮತ್ತು ಬಿ$_2$ ಅಂಶಗಳು ನಾಶವಾಗಿ ಎ ಮತ್ತು ಸಿ ಗಳು ಅತ್ಯಲ್ಪ ಪ್ರಮಾಣದಲ್ಲಿ ಉಳಿಯುತ್ತವೆ. ಆದ್ದರಿಂದ ಕೋಸನ್ನು ಹಸಿಯಾಗಿ ಅಥವಾ ಅರೆಬೇಯಿಸಿ ಉಪಯೋಗಿಸಬೇಕು. ಪಾಶ್ಚಾತ್ಯರಲ್ಲಿ ಬೇಯಿಸದೆ ತಿನ್ನುವ ಪದ್ಧತಿ ಹೆಚ್ಚು. ಹೊರಭಾಗದ ಹಸಿರು ಎಲೆಗಳಲ್ಲಿ ಇರುವಷ್ಟು ಎ ಅಂಶ ಒಳಭಾಗದ ಎಲೆಗಳಲ್ಲಿ ಇಲ್ಲ. ಕೋಸು ಜಾತಿಯ ಗಿಡಗಳ ಬೆಳವಣಿಗೆಗೆ ಜೌಗು ಪ್ರದೇಶಕ್ಕಿಂತ ಮರಳು ಮಿಶ್ರವಾದ ಕೆಬ್ಬೆ ನೆಲ ಅಥವಾ ಗೋಡು ಮಣ್ಣಿನ ಭೂಮಿ ಉತ್ತಮ. ನೀರು ನಿಲ್ಲದೆ ಇಂಗಿ ಹೋಗುವ ಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ಭೂಮಿಯನ್ನು ಒಂದು ಮೀಟರಷ್ಟು ಆಳವಾಗಿ ಅಗೆದು ಮಣ್ಣಿನ ಹೆಂಟೆಗಳನ್ನು ಪುಡಿಮಾಡಬೇಕು. ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರವನ್ನು 304.8 ಮೀ ಗಳಿಗೆ ಒಂದು ಗಾಡಿಯಂತೆ ಅಥವಾ ಎಕರೆಗೆ 10 ಕಿಗ್ರಾಂ ನಂತೆ ಹಾಕಿ ಭೂಮಿಯನ್ನು ಸಿದ್ಧಪಡಿಸಬೇಕು. ಒಟ್ಟಲು ಪಾತಿಗಳಲ್ಲಿ ಬೀಜವನ್ನು ತೆಳುವಾಗಿ ಬಿತ್ತಿ ಸಸಿಗಳು 0.3048 ಮೀ ಬೆಳೆದು ನಾಲ್ಕರಿಂದ ಆರು ಎಲೆಗಳು ಕಾಣಿಸಿಕೊಂಡ ಕೂಡಲೆ ಜಾಗರೂಕತೆಯಿಂದ ತೆಗೆದು, ಸಿದ್ಧಪಡಿಸಿದ ಭೂಮಿಯಲ್ಲಿ ನೆಡಬೇಕು. ಸಾಲಿನಿಂದ ಸಾಲಿಗೆ ಎರಡಡಿ ಅಂತರ ಬಿಟ್ಟು ಸಸಿಯಿಂದ ಸಸಿಗೆ ಒಂದೂವರೆ ಅಡಿ ಅಂತರದಲ್ಲಿ ಒಂದೊಂದಾಗಿ ನೆಡಬೇಕು. ಬೇಸಗೆಯಲ್ಲಿ ನಾಲ್ಕು ದಿನಗಳಿಗೊಮ್ಮೆ ನೀರನ್ನು ಹಾಕಬೇಕು. ಇದಕ್ಕೆ ಮೀನಿನ ಗೊಬ್ಬರವನ್ನು ಉಪಯೋಗಿಸುವುದು ಒಳ್ಳೆಯದು. ಅದರಿಂದ ಗೆಡ್ಡೆಗಳು ದೊಡ್ಡವಾಗಿಯೂ ರುಚಿಕರವಾಗಿಯೂ ಆಗುತ್ತವೆ. ಒಟ್ಟಲು ಪಾತಿಯಿಂದ ಎಳೆ ಸಸಿಗಳನ್ನು ಬದಲಾಯಿಸುವಾಗ ತಂಪಾದ ಸಂಜೆಯಲ್ಲಿ, ಬೇರು ಮತ್ತು ಸ್ವಲ್ಪ ಮಣ್ಣಿನ ಸಹಿತವಾಗಿ ಸಸಿಗಳನ್ನು ತೆಗೆದು ಹೊಸ ಪಾತಿಗಳಲ್ಲಿ ನೆಟ್ಟು ನೀರನ್ನು ಒದಗಿಸಬೇಕು. ಹಣ್ಣೆಲೆಗಳನ್ನು ಆಗಾಗ್ಗೆ ತೆಗೆಯಬೇಕು. ಆಗಾಗ್ಗೆ ಮಣ್ಣನ್ನು ಕೆದಕಿ ಕಳೆ ತೆಗೆಯಬೇಕು. ಮಳೆ ಬಂದಾಗ ಸಸಿಗಳಿಗೆ ಅಪಾಯವಾಗದಂತಿರಲು ಮಾಡಲು ಸಸಿಗಳನ್ನು ಬದುಗಳ ಮೇಲೆ ನೆಡುವುದು ಉತ್ತಮ. ಸಸಿಗಳು 30 ಸೆಂಮೀ ಎತ್ತರ ಬೆಳೆದಾಗ ಬುಡದ ಮಣ್ಣನ್ನು ಕೆದಕಿ, ಬುಡದ ಸುತ್ತಲೂ ಗೋಪುರದಂತೆ ಮಣ್ಣನ್ನು ಏರಿ ಹಾಕಬೇಕು. ಬಿತ್ತನೆ ಮಾಡಿದ ಮೂರರಿಂದ ಮೂರುವರೆ ತಿಂಗಳಲ್ಲಿ ಕೋಸುಗೆಡ್ಡೆಗಳು ಕೊಯ್ಲಿಗೆ ಸಿದ್ಧವಾಗುತ್ತವೆ.

ಚಿತ್ರ 1 ಎಲೆಕೋಸಿನ ಬೀಜತೆನೆಗಳು

ಚಿತ್ರ 2 ಎಲೆಕೋಸು

ಕೋಸಿನಲ್ಲಿ ಜಾಗ್ರತೆ ಫಲ ಬಿಡುವ ನಿಧಾನವಾಗಿ ಫಲಬಿಡುವ ಎಂಬ ಎರಡು ಬಗೆಗಳಿವೆ. ಸಕ್ಕರೆ ಎಲೆ ಎಂಬುದು ಮತ್ತೊಂದು ವಿಧದ ಕೋಸು. ಡ್ರಂಹೆಡ್ ಎಂಬ ಜಾತಿಯ ಕೋಸಿನ ಎಲೆಗಳು ಸಿಹಿಯಾಗಿರುತ್ತವೆ. ಕೆಂಪು ಕೋಸನ್ನು ಉಪ್ಪಿನಕಾಯಿಗೆ ಉಪಯೋಗಿಸುತ್ತಾರೆ.

ಎಲೆಕೋಸಿಗೆ ಅನೇಕ ವಿಧವಾದ ಕೀಟಗಳು ಮುತ್ತುತ್ತವೆ. ರೆಕ್ಕೆ ಹುಳುಗಳೂ ಅವುಗಳ ಮರಿಗಳೂ ಕ್ಯಾಟರ್‌ಪಿಲ್ಲರ್ ಈ ಬೆಳೆಗೆ ಮಾರಕವಾಗಿ ಪರಿಣಮಿಸುತ್ತವೆ. ಮುಂಜಾನೆಯಲ್ಲಿ ಫಾಲಿಡಾಲ್ ಮುಂತಾದ ರಾಸಾಯನಿಕಗಳನ್ನು ಸಿಂಪಡಿಸುವುದರಿಂದ ಹುಳುಗಳ ಹಾವಳಿಯನ್ನು ತಡೆಯಬಹುದು (**ನೋಡಿ– ಕೋಸು**). (ಎನ್.ಆರ್.ವಿ.)

**ಎಲೆಕ್ಟ್ರಕಾಂಪ್ಲೆಕ್ಸ್: ನೋಡಿ– ಈಡಿಪಸ್–ಕಾಂಪ್ಲೆಕ್ಸ್**

**ಎಲೆಕ್ಟ್ರಾನ್:** ಏಕಮಾನ ವಿದ್ಯುದಂಶವಿರುವ ಒಂದು ಮೂಲಭೂತ ಕಣ. ಇದರ ಜೀವಿತಕಾಲ ಅನಂತ. ಇದೇ ಮೊದಲು ಪತ್ತೆಯಾದ ಒಳಪರಮಾಣಿಕ (ಸಬ್‌ಅಟಾಮಿಕ್) ವಸ್ತುಘಟಕ. ಇದರ ಅನ್ವೇಷಣೆಯೊಂದಿಗೆ ಆಧುನಿಕ ಭೌತವಿಜ್ಞಾನದ ಉದಯವಾಯಿತೆಂದು ಹೇಳಬಹುದು. ವಿದ್ಯುದ್ವಿಭಜನ ನಿಯಮಗಳನ್ನು ಫ್ಯಾರಡೆ ಮಂಡಿಸಿದ ಮೇಲೆ ವಿದ್ಯುತ್ತಿನ ಕಣಸ್ವಭಾವ ನಿಸ್ಸಂಶಯವಾಗಿ ವೇದ್ಯವಾಯಿತು. ದ್ರಾವಣದಲ್ಲಿ ವಿದ್ಯುದ್ವಿಭಜನೀಯವು ಅಯಾನುಗಳಾಗಿ ಒಡೆಯುತ್ತದೆ. ಈ ಅಯಾನುಗಳು ಹೊತ್ತಿರುವ ವಿದ್ಯುದಂಶ ಅವಿಭಾಜ್ಯವಾದ ಏಕಕ ಇಲ್ಲವೇ ಅದರ ಅಪವರ್ತ್ಯ. ಯಾವ ಧಾತುವೇ ಆಗಲಿ ಅದರ ಒಂದು ಗ್ರಾಂ ಪರಮಾಣುವಿನಲ್ಲಿರುವ ಪರಮಾಣುಗಳ ಸಂಖ್ಯೆ ಒಂದೇ. ಇದರ ಹೆಸರು ಅವೊಗ್ಯಾಡ್ರೋ ಸಂಖ್ಯೆ (N). ಆದ್ದರಿಂದ ಒಂದು ಗ್ರಾಂ ಪರಮಾಣು ಮಾನೊವೇಲೆಂಟ್ ವಸ್ತು ಬಿಡುಗಡೆಯಾಗಬೇಕಾದರೆ ದ್ರಾವಣದ ಮೂಲಕ ಹರಿಯುವ ವಿದ್ಯುತ್ ಯಾವಾಗಲೂ ಒಂದೇ ಮೌಲ್ಯದ್ದಾಗಿರಬೇಕು. ಈ ವಿದ್ಯುನ್ಮೌಲ್ಯಕ್ಕೆ ಫ್ಯಾರಡೆ(F) ಎಂದು ಹೆಸರು. ಏಕ ವಿದ್ಯುದಂಶ($e$) ಆಗಿದ್ದರೆ

$$Ne=F \qquad .....(1)$$

ಎಂದು ಬರೆದು N ಮತ್ತು F ಗೊತ್ತಿರುವಾಗ *e* ಯನ್ನು ಗಣಿಸಬಹುದು. 1891ರಲ್ಲಿ ಜಾರ್ಹ್ನೆಸ್ಟನ್ ಸ್ಟೋನಿ ಎಂಬಾತ ಏಕವಿದ್ಯುದಂಶಕ್ಕೆ ಎಲೆಕ್ಟ್ರಾನ್ ಎಂದು ಹೆಸರಿಟ್ಟ. ಆಗ ಎಲೆಕ್ಟ್ರಾನ್ ಒಳಪರಮಾಣೀಕ ಕಣವೆಂಬುದು ತಿಳಿದಿರಲಿಲ್ಲ; ಅದನ್ನು ಬೇರ್ಪಡಿಸುವುದೂ ಸಾಧ್ಯವಾಗಿರಲಿಲ್ಲ.

ಮ್ಯಾಸನ್ ಎಂಬ ಅಷ್ಟೇನೂ ಪ್ರಸಿದ್ಧನಲ್ಲದ ಫ್ರೆಂಚ್ ವಿಜ್ಞಾನಿ ಮೊಟ್ಟಮೊದಲು ದೊಡ್ಡ ವಿಭವ ಪ್ರೇರಕ ಸುರುಳಿಯ ಸಹಾಯದಿಂದ ಭಾಗಶಃ ನಿರ್ವಾತಗೊಂಡ ಗಾಜಿನ ಪಾತ್ರೆಯಲ್ಲಿ ವಿದ್ಯುದ್ವಿಸರ್ಜನೆಯನ್ನು ಕಳುಹಿಸಿದ (1853). ಇದು ಗಾಳಿಯಲ್ಲಿ ಸಂಭವಿಸುವ ವಿಸರ್ಜನೆಯ ರೀತಿ ಇರದೆ ಗಾಜಿನ ಪಾತ್ರೆಯನ್ನು ಪ್ರಭೆಯಿಂದ(ಗ್ಲೋ) ತುಂಬಿತು. ಇದಾದ ಕೆಲವು ವರ್ಷಗಳ ಮೇಲೆ ಗೈಸ್ಲರ್ ಎಂಬ ಜರ್ಮನ್ ಗಾಜು ಊದುಗಾರ ಗಾಳಿಯ ವಿಸರ್ಜನೆಯ ಕೊಳವೆಗಳನ್ನು ನಿರ್ಮಿಸಿ ಮಾರಾಟಕ್ಕೆ ಒದಗಿಸಿದ. ಅನೇಕ ಸಂಶೋಧನಾಗಾರಗಳು ಈ ಕೊಳವೆಗಳನ್ನು ಕೊಂಡು ಪ್ರಯೋಗಗಳಿಗೂ ಪ್ರದರ್ಶನಕ್ಕೂ ಉಪಯೋಗಿಸತೊಡಗಿದರು. ಹಿಟ್ಟಾರ್ಫ್ ಎಂಬಾತ ಸುಧಾರಿಸಿದ ನಿರ್ವಾತ ಪಂಪುಗಳನ್ನು ಉಪಯೋಗಿಸಿ ವಿಸರ್ಜನ ಕೊಳವೆಯಲ್ಲಿ ಒಂದು ವಿದ್ಯುದ್ವಾರದ ಬಳಿ ಕಪ್ಪು ಪ್ರದೇಶವಿರುವುದನ್ನು ಒತ್ತಡ ಕಡಿಮೆಯಾದಂತೆ ಈ ಪ್ರದೇಶ ಬೆಳೆಯುವುದನ್ನೂ ಅವಲೋಕಿಸಿದ (1869).




**ಚಿತ್ರ 1 ವಿಸರ್ಜನೆ ಕೊಳವೆ ಅದಕ್ಕೆ ಸಂಬಂಧಿಸಿದ ಉಪಕರಣಗಳು. 1. ವಿಸರ್ಜನೆ ಕೊಳವೆ, 2. ಕ್ಯಾಥೋಡ್, 3. ಆನೋಡ್, 4. ಪಾದರಸ ಆವಿತಡೆ, 5. ದ್ರವಗಾಳಿ, 6. ದಿವಾರ್ ಪಾತ್ರೆ, 7. ಯಾಂತ್ರಿಕ ತೈಲರೇಚಕ, 8.ಪಾದರಸ, 9. ಪಾದರಸ ಆವಿರೇಚಕ, 10. ವಿದ್ಯುತ್‌ಕೋಶಕ್ಕೆ, 11. ಪ್ರೇರಕ ಸುರುಳಿ, 12. ಕಿಡಿಗಿಂಡಿ.**

ಚಿತ್ರದಲ್ಲಿ ವಿಸರ್ಜನ ಕೊಳವೆ ಮತ್ತು ಅದಕ್ಕೆ ಸಂಬಂಧಪಟ್ಟ ಉಪಕರಣಗಳನ್ನು ತೋರಿಸಿದೆ. ವಿಸರ್ಜನ ಕೊಳವೆಯ ಉದ್ದ ಮತ್ತು ಒಳವ್ಯಾಸ ಕ್ರಮವಾಗಿ 150 ಸೆಂ. ಮತ್ತು 4 ಸೆ. ಇದಕ್ಕೆ ಪಾದರಸ ವಿಸರಣ ಪಂಪ್ ಮತ್ತು ಯಾಂತ್ರಿಕ ನಿರ್ವಾತ ಪಂಪುಗಳೊಂದಿಗೆ ಸಂಪರ್ಕವಿದೆ. ಪಾದರಸದ ಆವಿ ವಿಸರ್ಜನೆ ಕೊಳವೆಗೆ ಹೋಗದಂತೆ ಬೋನು (ಟ್ರ್ಯಾಪ್) ತಡೆಯುತ್ತದೆ. ಆವಿ ಇದರಲ್ಲಿ ಘನಿಸುತ್ತದೆ. ಪಂಪುಗಳು ಕೆಲಸಮಾಡಿದಂತೆ ವಿಸರ್ಜನ ಕೊಳವೆಯಲ್ಲಿ ಒತ್ತಡ ಕಡಿಮೆಯಾಗುತ್ತದೆ. ಕೊಳವೆಯಲ್ಲಿ ಒತ್ತಡ ವಾಯುಮಂಡಲದ ಒತ್ತಡದ $10^{-3}$ ಭಾಗವಾದಾಗ 10,000 ಅಥವಾ 15,000 ವೋಲ್ಟ್ ವಿಭವಾಂತರ (ಪೊಟೆನ್ಷಿಯಲ್ ಡಿಫರೆನ್ಸ್) ಕೊಳವೆಯಲ್ಲಿ ವಿಸರ್ಜನೆಯನ್ನು ಕಳುಹಿಸುತ್ತದೆ. ವಿಸರ್ಜನೆ ಕ್ಯಾಥೋಡಿನಿಂದ ಹುಯಿಲಿನಂತೆ ಹೊರಚಿಮ್ಮಿ ಆನೋಡನ್ನು ತಲುಪುತ್ತದೆ. ಒತ್ತಡ 5 ಮಿಮೀಗೆ ಬಂದಾಗ ವಿಸರ್ಜನೆ ಕೊಳವೆಯನ್ನೆಲ್ಲ ಪ್ರಭೆಯಿಂದ ತುಂಬುತ್ತದೆ. ಇದರ ಬಣ್ಣ ನಸುಗೆಂಪು. ವಿಸರ್ಜನೆಯ ಬಣ್ಣ ಕೊಳವೆಯಲ್ಲಿರುವ ಅನಿಲದ ಸ್ವಭಾವಕ್ಕೆ ಅನುಗುಣವಾಗಿ ಬೇರೆ ಬೇರೆಯದಾಗಿರುತ್ತದೆ. ಕೊಳವೆಯಲ್ಲಿನ ಒತ್ತಡ 2 ಮಿಮೀಗೆ ಬಂದಾಗ ಕ್ಯಾಥೋಡಿನ ಸಮೀಪದಲ್ಲಿ ಒಂದು ಕಪ್ಪು ಪ್ರದೇಶ ಕಾಣಿಸಿಕೊಳ್ಳುತ್ತದೆ. ಇದರ ಹೆಸರು ಫ್ಯಾರಡೆ ಕಪ್ಪು ಪ್ರದೇಶ, ಕ್ಯಾಥೋಡಿನ ಪಕ್ಕದ ನಸುನೀಲಿ ಪ್ರಭೆಯನ್ನು ಋಣಪ್ರಭೆ ಎಂದೂ ಮತ್ತು ಉದ್ದವಾದ ನಸುಗೆಂಪು ಪ್ರಭೆಯನ್ನು ಧನಸ್ತಂಭ (ಪಾಸಿಟಿವ್ ಕಾಲಂ) ಎಂದೂ ಕರೆಯುತ್ತಾರೆ. ಒತ್ತಡ ಇನ್ನೂ ಕಡಿಮೆಯಾದರೆ ಕ್ಯಾಥೋಡ್ ಪ್ರಭೆ ಕ್ಯಾಥೋಡಿನಿಂದ ಬೇರ್ಪಡುತ್ತದೆ ಮತ್ತು ಅದಕ್ಕೂ ಕ್ಯಾಥೋಡಿಗೂ ಮಧ್ಯೆ ಬೇರೊಂದು ಕಪ್ಪು ಪ್ರದೇಶ ಕಾಣಿಸಿಕೊಳ್ಳುತ್ತದೆ. ಇದರ ಹೆಸರು ಕ್ರೂಕ್ಸ್ ಕಪ್ಪು ಪ್ರದೇಶ. ಈಗ ಫ್ಯಾರಡೆ ಕಪ್ಪು ಪ್ರದೇಶ ಇನ್ನೂ ದೊಡ್ಡದಾಗಿರುತ್ತದೆ ಮತ್ತು ಧನಸ್ತಂಭ ಸ್ತರಗಳಾಗಿ ಒಡೆದಿರುತ್ತದೆ. ಒತ್ತಡ 0.01 ಮಿಮೀಗೆ ಬಂದಾಗ ಕ್ರೂಕ್ಸ್ ಕಪ್ಪು ಪ್ರದೇಶ ಬೆಳೆದು ಇಡೀ ವಿಸರ್ಜನೆ ಕೊಳವೆಯನ್ನು ತುಂಬುತ್ತದೆ. ಈ ಹಂತದಲ್ಲಿ ಕ್ಯಾಥೋಡಿನ ಎದುರು ಭಾಗದ ಗಾಜಿನ ಗೋಡೆ ಹಸಿರು ಬಣ್ಣದಿಂದ ಹೊಳೆಯುತ್ತದೆ.

ಗಾಜಿನ ಗೋಡೆಯ ಹಸಿರು ಬಣ್ಣದ ಹೊಳಪು ಕ್ಯಾಥೋಡಿನಿಂದ ಹೊರಹೊಮ್ಮಿ ಆನೋಡಿನ ಕಡೆಗೆ ಧಾವಿಸುವ ಅಗೋಚರ ಕಿರಣಗಳಿಂದಾದುದೆಂದು ತಿಳಿಯಲು ಬಹಳಕಾಲ ಬೇಕಾಗಲಿಲ್ಲ. ಆದ್ದರಿಂದ ಈ ಕಿರಣಗಳನ್ನು ಕ್ಯಾಥೋಡ್ ಕಿರಣಗಳೆಂದು ಕರೆದರು. ಇವುಗಳ ಸ್ವಭಾವದ ಬಗ್ಗೆ ವೈಚಾರಿಕ ಗೊಂದಲವೇ ಉಂಟಾಯಿತು.




**ಚಿತ್ರ 2 ವಿಸರ್ಜನೆಯ ವಿವಿಧ ಹಂತಗಳು**
**1. ವಿಸರ್ಜನ ಹುಯಿಲು, 2. ನಸುಗೆಂಪು ಪ್ರಭೆ, 3. ಋಣಪ್ರಭೆ, 4.ಧನಕಂಬ, 5. ಫ್ಯಾರಡೆ ಕಪ್ಪುಪ್ರದೇಶ, 6. ಸ್ತರಗಳು, 7. ಕ್ರೂಕ್ಸ್ ಕಪ್ಪು ಪ್ರದೇಶ**

ಇವನ್ನು ಅತಿ ಅನಿಲ ಅವಸ್ಥೆ ಎಂದು ಕ್ರೂಕ್ಸ್ ನಂಬಿದರೆ ಇವು ಜಡವಸ್ತುವಿನ ನಾಲ್ಕನೆಯ ಅವಸ್ಥೆ ಎಂದು ಹಿಟ್ಟಾರ್ಫ್ ಬಗೆದ. ಇವು ಅಲೆಗಳೇ ಅಥವಾ ಕಣಗಳೇ ಎಂಬ ವಿವಾದ ಇತ್ತು. ಒಂದಾದ ಮೇಲೊಂದು ನಡೆದ ವ್ಯವಸ್ಥಿತ ಪ್ರಯೋಗಗಳು ಇವು ಋಣ ವಿದ್ಯುದಂಶವುಳ್ಳ ಕಣಗಳೆಂಬುದನ್ನು ತೋರಿಸಿದವು.

ಕ್ಯಾಥೋಡ್ ಕಿರಣಗಳು ಸರಳರೇಖೆಯಲ್ಲಿ ಚಲಿಸುತ್ತವೆಂದು ಹಿಟ್ಟಾರ್ಫ್ ತೋರಿಸಿದ (1869). ಚಿತ್ರ 3ರಲ್ಲಿ ಹಿಟ್ಟಾರ್ಫನ ಪ್ರಯೋಗದ ನಿರೂಪಣೆಯನ್ನು ಕಾಣಬಹುದು. ಕ್ಯಾಥೋಡಿಗೆ ಎದುರಾಗಿರುವ ಅಲ್ಯೂಮಿನಿಯಂ ಬಿಲ್ಲೆಯ ಸ್ಪಷ್ಟ ಛಾಯೆ ಗಾಜಿನ ಗೋಡೆಯ ಮೇಲೆ ಬಿದ್ದಿದೆ. ಇದು ಕ್ಯಾಥೋಡ್ ಕಿರಣಗಳು ಸರಳರೇಖೆಯಲ್ಲಿ ಪ್ರಸಾರವಾಗದಿದ್ದರೆ ಸಾಧ್ಯವಾಗದು.

1870ರಲ್ಲಿ ಕ್ರೂಕ್ಸನು ಕ್ಯಾಥೋಡ್ ಕಿರಣಗಳಿಗೆ ಸಂವೇಗ (ಮೊಮೆಂಟಂ) ಮತ್ತು ಚಲನಶಕ್ತಿ (ಕೈನೆಟಿಕ್ ಎನರ್ಜಿ) ಇವೆ ಎಂಬುದನ್ನು ತೋರಿಸಿದ. ಈ ಪ್ರಯೋಗದ ನಿರೂಪಣೆ ಚಿತ್ರದಲ್ಲಿದೆ. ಕ್ಯಾಥೋಡಿನಿಂದ ಹೊರಹೊಮ್ಮಿದ ಕಿರಣಗಳು ಸಮಾನಾಂತರವಾಗಿರುವ ಮಟ್ಟ ಸರಳಿನ ಮೇಲಿಟ್ಟಿರುವ ಉರುಳು ಸೂಜಿಯ ಎಲೆಗಳಿಗೆ ತಾಗುತ್ತದೆ. ಆಗ ಸೂಜಿ ಸರಳುಗಳ ಮೇಲೆ ಉರುಳುತ್ತದೆ. ಇದು ಕ್ಯಾಥೋಡ್ ಕಿರಣಗಳಿಗೆ ಸಂವೇಗ ಮತ್ತು ಚಲನಶಕ್ತಿ ಇಲ್ಲದಿದ್ದರೆ ಆಗುವುದಿಲ್ಲ.

1895ರಲ್ಲಿ ಜೀನ್‌ಪೆರಿನ್ ಎಂಬಾತ ಕ್ಯಾಥೋಡ್ ಕಿರಣಗಳಿಗೆ ಋಣ ವಿದ್ಯುದಂಶವಿದೆ ಎಂಬುದನ್ನು ತೋರಿಸಿದ. ಚಿತ್ರದಲ್ಲಿ ಪೆರಿನಿನ ಉಪಕರಣವನ್ನು ಕಾಣಬಹುದು. ಕ್ಯಾಥೋಡ್ ಕಿರಣಗಳು ಆನೋಡಿನಲ್ಲಿರುವ ರಂಧ್ರವನ್ನು ಹಾಯ್ದು ಹೊರ ಬಂದಾಗ ಅವು ಚಲಿಸುವ ದಿಕ್ಕಿಗೆ ಲಂಬವಾಗಿ ವರ್ತಿಸುವ ಕಾಂತ ಕ್ಷೇತ್ರವನ್ನು ಸೇರುತ್ತದೆ. ಅಲ್ಲಿ ಅವು ವೃತ್ತಾಕಾರವಾಗಿ ಬಾಗಿ ಫ್ಯಾರಡೆ ಬಟ್ಟಲಿಗೆ ಬರುತ್ತವೆ. ಫ್ಯಾರಡೆ ಬಟ್ಟಲಿಗೆ ಒಂದು ಚತುರ್ಥಿಕೀಂರು ವಿದ್ಯುನ್ಮಾಪಕದೊಂದಿಗೆ (ಕ್ವಾಡ್ರೆಂಟ್ ಎಲೆಕ್ಟ್ರೋಮೀಟರ್) ಸಂಪರ್ಕವಿದೆ. ಈ ಮಾಪಕ ಕ್ಯಾಥೋಡ್ ಕಿರಣಗಳಿಗೆ ಋಣ ವಿದ್ಯುದಂಶವಿರುವುದನ್ನು ತೋರಿಸುತ್ತದೆ. ಋಣ ವಿದ್ಯುದಂಶವುಳ್ಳ ಈ ಕಿರಣಗಳು ವಿದ್ಯುತ್ ಕ್ಷೇತ್ರದಲ್ಲೂ ಬಾಗುತ್ತವೆ.




**ಚಿತ್ರ 3 ಕ್ಯಾಥೋಡ್ ಕಿರಣಗಳ ಸರಳ ರೇಖಾ ಪ್ರಸಾರವನ್ನು ತೋರಿಸುವ ಕ್ರೂಕ್ಸ್ ವಿಸರ್ಜನ ಕೊಳವೆ. 1. ಕ್ಯಾಥೋಡ್ ಕಿರಣಗಳು, 2. ವಸ್ತು, 3. ನೆರಳು, 4. ಕೀಲು**

ಕ್ಯಾಥೋಡ್ ಕಿರಣಗಳು ಕಾಂತ ಮತ್ತು ವಿದ್ಯುತ್ ಕ್ಷೇತ್ರಗಳಲ್ಲಿ ಬಾಗುವುದನ್ನು

ಗಮನಿಸಿದ ಥಾಮ್ಸನ್ ಅವುಗಳ ಸಾಪೇಕ್ಷ ವಿದ್ಯುದಂಶ ನ್ನು ಅಳೆದನು (1897).

ಇಲ್ಲಿ *e* ವಿದ್ಯುದಂಶ ಮತ್ತು *m* ಜಡದ್ರವ್ಯರಾಶಿ. ಚಿತ್ರದಲ್ಲಿ ಥಾಮ್ಸನ್ನನ ಉಪಕರಣವನ್ನು ನೋಡಬಹುದು. ವೇಗೋತ್ಕರ್ಷಗೊಂಡ ಕ್ಯಾಥೋಡ್ ಕಿರಣಗಳು A ಮತ್ತು B

ಗಳಲ್ಲಿರುವ ರಂಧ್ರಗಳ ಮೂಲಕ ಹಾಯ್ದು ಒಂದು ದೂಲದಂತೆ (ಬೀಮ್) ಪ್ರತಿದೀಪ್ತಶೀಲ (ಫ್ಲೋರೊಸೆಂಟ್) ತೆರೆ S ಮೇಲೆ ಬೀಳುತ್ತದೆ. ಅಲ್ಲಿ ಆ ದೂಲದ ಅಡ್ಡಕೊಯ್ತಕ್ಕೆ (ಕ್ರಾಸ್ ಸೆಕ್ಷನ್) ಅನುಗುಣವಾಗಿ ಪ್ರಭಾಬಿಂದು $P_1$ ಮೂಡುತ್ತದೆ.

ಈಗ D ಮತ್ತು E ತಟ್ಟೆಗಳ ಮಧ್ಯೆ ವಿಭವಾಂತರ (ಪೊಟೆನ್ಷಿಯಲ್ ಡಿಫರೆನ್ಸ್) ವರ್ತಿಸುವಂತೆ ಮಾಡಿದರೆ ಪ್ರಭಾಬಿಂದು $P_2$ರ ಕಡೆಗೆ ಇಳಿಯುತ್ತದೆ. F ಮತ್ತು G ಗಳು ಒಂದು ಜೊತೆ ಹೆಲ್ಮೋಟ್ಜ್ ಸುರುಳಿಗಳು (ಕಾಯಿಲ್ಸ್). ಇವುಗಳ ವ್ಯಾಸ D ಮತ್ತು E ಗಳ ಉದ್ದಕ್ಕೆ ಸಮಾನ. ಇವುಗಳಲ್ಲಿರುವ ಒಂದನ್ನು ಕೊಳವೆಯ ಮುಂಭಾಗದಲ್ಲೂ ಇನ್ನೊಂದನ್ನು ಹಿಂಭಾಗದಲ್ಲೂ ಅಳವಡಿಸಿದೆ.



ಚಿತ್ರ 4 ಕ್ಯಾಥೋಡ್ ಕಿರಣಗಳಿಗಿರುವ ಸಂವೇಗ ಮತ್ತು ಚಲನಶಕ್ತಿಯ ನಿರೂಪಣೆ

ಸುರುಳಿಗಳಲ್ಲಿ ವಿದ್ಯುತ್ ಹರಿದಾಗ ಹುಟ್ಟುವ ಕಾಂತಕ್ಷೇತ್ರದ ದಿಕ್ಕು ಕ್ಯಾಥೋಡ್ ಕಿರಣಗಳ ಚಲನ ದಿಕ್ಕಿಗೆ ಲಂಬವಾಗಿರುವುದು. ಕಾಂತಕ್ಷೇತ್ರದ ದಿಕ್ಕು ಓದುಗನ ಕಡೆಗಿದ್ದರೆ ಕ್ಯಾಥೋಡ್ ಕಿರಣಗಳು ಮೇಲೆ ಬಾಗುತ್ತವೆ. ಸಾಪೇಕ್ಷ ವಿದ್ಯುದಂಶವನ್ನು ಅಳೆಯಬೇಕಾದರೆ ಎರಡು ಪ್ರಯೋಗಗಳನ್ನು ನಡೆಸಬೇಕು. ಒಂದನೆಯ ಪ್ರಯೋಗದಲ್ಲಿ D ಮತ್ತು Eಗಳ ಮಧ್ಯೆ ವರ್ತಿಸುವ ವಿದ್ಯುತ್ ಕ್ಷೇತ್ರಬಲದ E ಮತ್ತು ಕಾಂತಕ್ಷೇತ್ರಕ್ಕೆ ಬಲ B ಗಳನ್ನು ಪ್ರಭಾಬಿಂದು ಸ್ಥಳಾಂತರ ಗೊಳ್ಳದಂತೆ ಸರಿದೂಗಿಸಬೇಕು. ಆಗ



ಚಿತ್ರ 5 ಪೆರಿನನ ಉಪಕರಣ
1. ಭೂಮಿಗೆ, 2. ವಿದ್ಯುತ್ ಮಾಪಕಕ್ಕೆ, 3. ಫ್ಯಾರಡೆ ಬಟ್ಟಲು

$$v = \frac{E}{B} \qquad \ldots\ldots(2)$$

ಎಂದು ಬರೆಯಬಹುದು.



ಚಿತ್ರ 6 (a) ಥಾಮ್ಸನನ ಉಪಕರಣ, (b) ಕ್ಯಾಥೋಡ್ ಕಿರಣಗಳು ವಿದ್ಯುತ್ ಕ್ಷೇತ್ರದಲ್ಲಿ ಬಾಗುವ ನಿರೂಪಣೆ. ಚಿತ್ರದಲ್ಲಿ ಎಂಬುದು ಪ್ರತಿದೀಪ್ತಶೀಲತೆರೆ

ಇಲ್ಲಿ $v$ ಕ್ಯಾಥೋಡ್ ಕಿರಣಗಳ ವೇಗ. ಎರಡನೆಯ ಪ್ರಯೋಗದಲ್ಲಿ ಕಾಂತಕ್ಷೇತ್ರವನ್ನು ಅಳಿಸಿ ಕ್ಯಾಥೋಡ್ ಕಿರಣಗಳು ವಿದ್ಯುತ್ ಕ್ಷೇತ್ರದಲ್ಲಿ ಬಾಗುವುದನ್ನು ಅಳೆಯಬೇಕು. ಚಿತ್ರ ಮತ್ತು ಸಮೀಕರಣ (2) ರ ನೆರವಿನಿಂದ

$$\frac{e}{m} = \frac{2HE}{lLB^2} \qquad \ldots\ldots(3)$$

ಎಂದು ಬರೆಯಬಹುದು. ವಿಸರ್ಜಟಿ ಕೊಳವೆಯಲ್ಲಿ ಬೇರೆ ಬೇರೆ ಅನಿಲಗಳನ್ನು ತುಂಬಿ ಮತ್ತು ಬೇರೆ ಬೇರೆ ಲೋಹಗಳ ಕ್ಯಾಥೋಡುಗಳನ್ನು ಉಪಯೋಗಿಸಿ $e/m$ ಬೆಲೆಯನ್ನು ಥಾಮ್ಸನ್ ನಿರ್ಧರಿಸಿದ. ಆತನ ಅಂತಿಮ ಲೆಕ್ಕಾಚಾರದಂತೆ $e/m=1.77\times10^7$ *emu*/ಗ್ರಾಂ. ಕ್ಯಾಥೋಡ್ ಕಿರಣಗಳ ಸ್ವಭಾವ ವಿಸರ್ಜನ ಕೊಳವೆಯಲ್ಲಿರುವ ಅನಿಲವನ್ನಾಗಲಿ ಕ್ಯಾಥೋಡಿನ ವಸ್ತುವನ್ನಾಗಲಿ ಅವಲಂಬಿಸಿರುವುದಿಲ್ಲ.

ಥಾಮ್ಸನ್ನನ ಪ್ರಯೋಗಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಕ್ಯಾಥೋಡ್ ಕಿರಣಗಳನ್ನು ಋಣ ವಿದ್ಯುದಂಶವುಳ್ಳ ಕಣಗಳ ಸಾಮೂಹಿಕ ಚಲನೆಯಿಂದ ಭಾವಿಸಬೇಕಾದುದು ಅನಿವಾರ್ಯ. ಆದರೂ ಅವುಗಳ ವಿದ್ಯುದಂಶವನ್ನು ಪ್ರತ್ಯೇಕವಾಗಿ ಅಳೆಯದೆ ಈ ತೀರ್ಮಾನವನ್ನು ಮುಟ್ಟುವುದಕ್ಕಾಗುವುದಿಲ್ಲ. ಥಾಮ್ಸನ್ ಕೆಲಸ ಮಾಡುತ್ತಿದ್ದ ಕಡೆಯೇ ಇದ್ದ ಟೌನ್ಸೆಂಡ್ ಎಂಬಾತ ಕ್ಯಾಥೋಡ್ ಕಿರಣಗಳ ವಿದ್ಯುದಂಶವನ್ನು ಪ್ರತ್ಯೇಕವಾಗಿ ಅಳೆಯಲು ನೀರಿನ ಆವಿಯಿಂದ ಪರ್ಯಾಪ್ತವಾದ (ಸ್ಯಾಚುರೇಟೆಡ್) ಗಾಳಿಯಲ್ಲಿ ಅಯಾನುಗಳ ಮೇಲೆ ಹನಿಗಳು ಮೂಡಿ ಬೆಳೆಯುವ ಮೋಡಗಳನ್ನು ಉಪಯೋಗಿಸಿದ. ಪ್ರತಿ ಅಯಾನಿನ ಮೇಲೆ ಒಂದೊಂದು ಮೂಡಿದೆಯೆಂದೂ ಒಂದೇ ಏಕ ವಿದ್ಯುದಂಶವಿದೆಯೆಂದೂ ಆತ ಭಾವಿಸಿದ. ಈ ಹನಿಗಳು ಗುರುತ್ವಾಕರ್ಷಣೆಯಿಂದ ಗಾಳಿಯಲ್ಲಿ ಕೆಳಗೆ ಬೀಳುವಾಗ ಸ್ಟೋಕ್ಸ್ ನಿಯಮವನ್ನು ಅನುಸರಿಸುತ್ತವೆ. ಇದರಿಂದ ಪ್ರತಿ ಹನಿಯ ತೂಕವನ್ನು ಗೊತ್ತುಮಾಡಬಹುದು. ಟೌನ್ಸೆಂಡನು ಮೋಡದಲ್ಲಿದ್ದ ನೀರಿನ ತೂಕವನ್ನು ಕಂಡುಹಿಡಿದು ಒಟ್ಟು ಹನಿಗಳ ಲೆಕ್ಕಹಾಕಿದ. ಮೋಡದಲ್ಲಿದ್ದ ವಿದ್ಯುತ್ತನ್ನು ಅಳೆದು $e$ ಬೆಲೆಯನ್ನು ಗೊತ್ತುಮಾಡಿದ. ಆತನಿಗೆ ದೊರೆತ $e$ ಮೌಲ್ಯ $3 \times 10^{-10}$ ರಿಂದ $5\times10^{-10}$esu ಆಗಿತ್ತು. ಇಂಥವೇ ಪ್ರಯೋಗಗಳಿಂದ ಥಾಮ್ಸನ್ ಪಡೆದ ಬೆಲೆ $6.5\times10^{-10}$esu ಆಗಿತ್ತು.


ಚಿತ್ರ 7 ಕ್ಯಾಥೋಡ್ ಕಿರಣಗಳು ಕಾಂತಕ್ಷೇತ್ರದಲ್ಲಿ ಬಾಗುವ ನಿರೂಪಣೆ

ಅಯಾನುಗಳ ಮೇಲಿರುವ ವಿದ್ಯುದಂಶ ಕ್ಯಾಥೋಡ್ ಕಿರಣಗಳು ಹೊತ್ತಿರುವ ವಿದ್ಯುದಂಶಕ್ಕೆ ಸರಿಸಾಟಿಯೆಂದು ಥಾಮ್ಸನ್ ಭಾವಿಸಿದ. $e=4.0\times10^{-10}$esu ಮತ್ತು $e/m=1.77\times10^{-7}$esu ಎಂದಿಟ್ಟುಕೊಂಡರೆ ಎಲೆಕ್ಟ್ರಾನಿನ ಜಡ ದ್ರವ್ಯರಾಶಿ $7.5\times10^{-28}$ ಗ್ರಾಂ ಆಗುತ್ತದೆ. ಈ ಕಣಗಳನ್ನು ಮೂಲ ಪರಮಾಣುಗಳೆಂದು (ಪ್ರೈಮಾರ್ಡಿಯಲ್ ಆಟಂಸ್) ಥಾಮ್ಸನ್ ಕರೆದ. ಇವು ಹೊತ್ತಿರುವ ವಿದ್ಯುದಂಶವನ್ನು ಸ್ಟೋನಿ ಎಂಬಾತನ ಅರ್ಥದಲ್ಲಿ ಬ್ರಿಟಿಷ್ ವಿಜ್ಞಾನಿಗಳು ಬಹಳ ಕಾಲದವರೆಗೆ ಎಲೆಕ್ಟ್ರಾನ್ ಎಂದು ಕರೆಯುತ್ತಿದ್ದರು. ಆದರೆ ಲೊರೆಂಟ್ಸ್ ಈ ಕಣಗಳನ್ನೇ ನೇರವಾಗಿ ಎಲೆಕ್ಟ್ರಾನ್ ಎಂದು ಕರೆದ.



ಚಿತ್ರ 8 ಮಿಲಿಕನನ ಉಪಕರಣ
1. ಮೊನೊಮಾಪಕ, 2. ಎಣ್ಣೆ ತೊಟ್ಟಿ, 3. ನಿರ್ವಾತ ಪಂಪಿಗೆ, 4. ಆಟಿಮೈಸರ್, 5. ಎಕ್ಸ್ ಕಿರಣ ಉತ್ಪಾದಕ, 6. ಚಾಪದೀಪ ಮತ್ತು M.N.ಹಿತ್ತಾಳೆಯ ತಟ್ಟೆಗಳು

ಪರಮಾಣುಗಳಲ್ಲಿ ಬಂಧಿತವಾಗಿರುವ ಎಲೆಕ್ಟ್ರಾನುಗಳ ಸಾಪೇಕ್ಷ ವಿದ್ಯುದಂಶವನ್ನು ಸಹ ಅಳೆಯಬಹುದು. ಕಾಂತಕ್ಷೇತ್ರದಲ್ಲಿರುವ ಆಕರದಿಂದ ಬರುವ ಬೆಳಕಿನ ರೋಹಿತವನ್ನು ಜೀಮನ್ ಪರೀಕ್ಷಿಸಿದಾಗ ವಿಶಿಷ್ಟ ಗೆರೆಗಳು ಒಡೆದು ಬೇರ್ಪಟ್ಟಿರುವುದನ್ನು ಕಂಡ (1896). ಈ ಗೆರೆಗಳ ಅಂತರ ಕಾಂತಕ್ಷೇತ್ರದಲ್ಲಿ ಬಲ ಹೆಚ್ಚಿದಂತೆಲ್ಲ ಹೆಚ್ಚುತ್ತದೆ. ಪರಮಾಣುಗಳಲ್ಲಿ ಬಂಧಿತವಾಗಿರುವ ಎಲೆಕ್ಟ್ರಾನುಗಳ ಸ್ಪಂದನದ ಮೇಲೆ ಕಾಂತಕ್ಷೇತ್ರ

ಬೀರುವ ಪರಿಣಾಮದಿಂದಲೇ ವಿಶಿಷ್ಟ ಗೆರೆಗಳು ಒಡೆಯುವುದೆಂದು ಲೊರೆಂಟ್ಸ್ ಸೈದ್ಧಾಂತಿಕವಾಗಿ ತೋರಿಸಿದ. ಅದರ ಪ್ರಕಾರ

$$\frac{e}{m}=\frac{2\pi}{B}\Delta v \qquad ........(4)$$

ಎಂದು ಬರೆಯಬಹುದು. ಇಲ್ಲಿ B ಕಾಂತ ಕ್ಷೇತ್ರದ ಬಲ, $\Delta v$ ಕಾಂತ ಕ್ಷೇತ್ರದ ದಿಕ್ಕಿಗೆ ಸಮಾನಾಂತರವಾಗಿ ನೋಡಿದಾಗ ಕಾಣುವ ಹೊಸ ಗೆರೆಗಳಿರುವ ಕಂಪನಾಂಕಗಳ ವ್ಯತ್ಯಾಸ. B ಮತ್ತು $\Delta v$ ಗಳನ್ನು ಪ್ರಯೋಗದಿಂದ ತಿಳಿದ ನ್ನು ಗಣಿಸಬಹುದು. ಜೀಮನ್ ಪಡೆದ ಬೆಲೆ $1.6 \times 10^{7}$emu/ ಗ್ರಾಂ. ಇದು ಥಾಮ್ಸನ್ನನ ಬೆಲೆಗೆ ಅತಿ ಸಮೀಪವಾಗಿದ್ದು ಕ್ಯಾಥೋಡ್ ಕಣಗಳು ಒಳ ಪರಮಾಣಿಕ ಘಟಕಗಳಾದ ಎಲೆಕ್ಟ್ರಾನುಗಳೇ ಎಂಬುದನ್ನು ದೃಢೀಕರಿಸುತ್ತದೆ.

ಟೌನ್ಸೆಂಡ್ ಮತ್ತು ಥಾಮ್ಸನ್ ಅವರ ಪ್ರಯೋಗಗಳಿಂದ ದೊರೆತ ಎಲೆಕ್ಟ್ರಾನಿನ ವಿದ್ಯುದಂಶದ ಮೌಲ್ಯ ನಿಖರವಾದುದಲ್ಲ. ವಿಲ್ಸನ್ನನು ಮೇಘ ಮಂದಿರದ (ಕ್ಲೌಡ್ ಚೇಂಬರ್) ನೆರವಿನಿಂದ ವಿದ್ಯುದಂಶವನ್ನು ಅಳೆದ (1903). ಈತನ ಪ್ರಯೋಗದಲ್ಲಿ ವಿದ್ಯುದಂಶವನ್ನು ಹೊತ್ತ ನೀರಿನ ಹನಿಗಳನ್ನೇ ಅವಲೋಕಿಸುವುದು ಸಾಧ್ಯವಿತ್ತು. ಆದರೆ ಪ್ರಯೋಗದ ಸಮಯದಲ್ಲಿ ಹನಿಗಳ ಗಾತ್ರ ಸ್ಥಿರವಾಗಿರುವುದಿಲ್ಲ.



**ಚಿತ್ರ 9 ಅಡ್ಡ ಕೂದಲುಗಳ ನಡುವೆ ಚಲಿಸುವ ತೈಲ ಬಿಂದು**

ನೀರು ಆವಿಯಾಗುತ್ತಿರುತ್ತದೆ. ಈ ಕಾರಣದಿಂದ ವಿಲ್ಸನ್ ಬೆಲೆಗಳು $2 \times 10^{-10}$ ನಿಂದ $4 \times 10^{-10}$esu ದವರೆಗೆ ಹರಡಿದ್ದವು.

ವಿಲ್ಸನ್ನನ ಪ್ರಯೋಗಗಳಲ್ಲಿದ್ದ ಎಲ್ಲ ನ್ಯೂನತೆಗಳನ್ನೂ ನಿವಾರಿಸಿ ಎಲೆಕ್ಟ್ರಾನಿನ ವಿದ್ಯುದಂಶವನ್ನು ಅಳೆದಾತ ಮಿಲಿಕನ್. ಈತನ ಉಪಕರಣವನ್ನು ಚಿತ್ರದಲ್ಲಿ ನೋಡಬಹುದು. ಉಪಕರಣದ ಮುಖ್ಯ ಭಾಗಗಳೆಂದರೆ M ಮತ್ತು N ಹಿತ್ತಾಳೆ ತಟ್ಟೆಗಳು. ಅವುಗಳ ಅಂತರ 1.49174 ಸೆಂಮೀ N ಭೂಮಿಯೊಂದಿಗೆ ಸಂಪರ್ಕ ಹೊಂದಿದೆ. ತಟ್ಟೆಗಳ ಮಧ್ಯೆ 10,000 ವೋಲ್ಟ್ ವಿಭವಾಂತರವನ್ನು ಆರೋಪಿಸಬಹುದು. ಇವು ಇರುವ ಲೋಹಮಂದಿರ ಎಣ್ಣೆಯ ತೊಟ್ಟಿಯಲ್ಲಿ ಮುಳುಗಿದೆ. ಈ ಮಂದಿರದಲ್ಲಿ ಒತ್ತಡವನ್ನು ಬೇಕಾದ ಹಾಗೆ ಕಡಿಮೆ ಮಾಡಬಹುದು.

M ಮಧ್ಯದಲ್ಲಿ ಒಂದು ಸಣ್ಣ ರಂಧ್ರವಿದೆ. A ಒಂದು ಆಟಮೈಸರ್. ಇದರ ಸಹಾಯದಿಂದ ಎಣ್ಣೆಯ ಸಣ್ಣ ಸಣ್ಣ ಬಿಂದುಗಳನ್ನು M ಮೇಲೆ ಸಿಂಪಡಿಸಬಹುದು. ಇವುಗಳಲ್ಲಿ ಕೆಲವು ಮಧ್ಯದಲ್ಲಿರುವ ರಂಧ್ರದ ಮೂಲಕ ಹಾಯ್ದು ಕೆಳಗೆ ಬರುತ್ತದೆ. ಇವು ಉಜ್ಜುವಿಕೆಯಿಂದ ಒಂದು ಅಥವಾ ಹೆಚ್ಚು ವಿದ್ಯುತ್ ಏಕಮಾನಗಳನ್ನು ಪಡೆದಿರುತ್ತವೆ. ಚಾಪ(ಆರ್ಕ್) ದೀಪದಿಂದ ಇವನ್ನು ಬೆಳಗಬಹುದು. ತಟ್ಟೆಗಳ ಮಧ್ಯೆ ವಿದ್ಯುತ್ ಕ್ಷೇತ್ರವಿಲ್ಲದಿದ್ದರೆ ತೈಲಬಿಂದುಗಳು ಗುರುತ್ವಾಕರ್ಷಣೆಯಿಂದ ಕೆಳಗೆ ಬೀಳುತ್ತವೆ. ವಿದ್ಯುತ್ ಕ್ಷೇತ್ರವನ್ನು ಬೇಕಾದ ಹಾಗೆ ಇರುವಂತೆಯೂ ಇಲ್ಲದಂತೆಯೂ ಮಾಡುತ್ತ ಒಂದು ಬಿಂದು ತಟ್ಟೆಗಳ ಮಧ್ಯೆ ಗಂಟೆಗಟ್ಟಲೆ ಮೇಲೆ ಕೆಳಗೆ ಚಲಿಸುತ್ತಿರುವಂತೆ ಮಾಡಬಹುದು. ಇದನ್ನು ಒಂದು ದೂರದರ್ಶಕದಲ್ಲಿ ನೋಡಿದರೆ ಮಿನುಗುವ ನಕ್ಷತ್ರದಂತೆ ಕಾಣುತ್ತದೆ. ದೂರದರ್ಶಕದ ವೀಕ್ಷಣೆ ಕ್ಷೇತ್ರದಲ್ಲಿ ಎರಡು ಅಡ್ಡ ಕೂದಲುಗಳಿವೆ. ಬಿಂದು ಒಂದು ಕೂದಲಿನಿಂದ ಇನ್ನೊಂದು ಕೂದಲನ್ನು ತಲುಪಲು ಬೇಕಾಗುವ ಕಾಲವನ್ನು ನಿಖರವಾಗಿ ಗೊತ್ತು ಮಾಡಬಹುದು. ಚಿತ್ರದಲ್ಲಿ ಅಡ್ಡಕೂದಲುಗಳನ್ನು ಕಾಣಬಹುದು. ಅಡ್ಡಕೂದಲುಗಳ ಮಧ್ಯೆ ತೈಲಬಿಂದುವಿನ ಚಲನೆ ಸ್ಟೋಕ್ಸ್ ನಿಯಮದಂತೆ ನಡೆಯುತ್ತದೆಂದು ಭಾವಿಸಿದರೆ

........(5)

ಎಂದು ಕರೆಯಬಹುದು. ಇಲ್ಲಿ E ವಿದ್ಯುತ್ ಕ್ಷೇತ್ರದ ಬಲ, ç ಗಾಳಿಯ ಸ್ನಿಗ್ಧತಾನಿಯತಾಂಕ, a ಬಿಂದುವಿನ ತ್ರಿಜ್ಯ, $\tilde{o}_1$ ಮತ್ತು $\tilde{o}_2$ ಬಿಂದು ಕೆಳಗೆ ಮತ್ತು ಮೇಲೆ ಚಲಿಸುವ ವೇಗಗಳು. ತೈಲ ಬಿಂದುವಿನ ಮೇಲಿದ್ದ ವಿದ್ಯುದಂಶದ ಮೌಲ್ಯವನ್ನು ಎಕ್ಸ್ ಕಿರಣಗಳ ಸಹಾಯದಿಂದ ವ್ಯತ್ಯಾಸಮಾಡಿ ($\tilde{o}_1 + \tilde{o}_2$) ರಲ್ಲಾಗುವ ವ್ಯತ್ಯಾಸವನ್ನು ಮಿಲಿಕನ್ ನೋಡಿದ. ಈ ವ್ಯತ್ಯಾಸ ಯಾವಾಗಲೂ ಒಂದು ಕನಿಷ್ಠ ಮೌಲ್ಯದ ಅಪವರ್ತ್ಯವಾಗಿತ್ತು. ಇದರಿಂದ ವಿದ್ಯುತ್ತಿನ ಕಣಸ್ವಭಾವ ನಿಸ್ಸಂಶಯವಾಗಿ ಗೋಚರಿಸುತ್ತದೆ. ಮುಂದಿನ ಪಟ್ಟಿ ಇದನ್ನು ಮನದಟ್ಟು ಮಾಡುತ್ತದೆ.

ಬೀಳುವ ಸರಾಸರಿ ವೇಗ $v_1$=0.01985 ಸೆಂಮೀ. ಸೆ.$^{-1}$

| ಪ್ರಯಾಣ | ಏರುವ ಕಾಲ | ಏರುವ ವೇಗ $v_2$ | $v_1 + v_2$ | $n$ | $\frac{v_1+v_2}{n}$ |
|---|---|---|---|---|---|
| 2 | 21.86 | 0.04675 | 0.06660 | 5 | 0.01332 |
| 1 | 30.55 | 0.03345 | 0.05330 | 4 | 0.01333 |
| 3 | 50.72 | ... | ... | ... | ... |
| 6 | 50.29 | ... | ... | ... | ... |
| 7 | 50.25 | ... | ... | ... | ... |
| 8 | 50.39 | ... | ... | ... | ... |
| 9 | 40.70 | ... | ... | ... | ... |
| ಸರಾಸರಿ | 50.13 | 0.02039 | 0.04024 | 3 | 0.01341 |
| 4 | 148.63 | ... | ... | ... | ... |
| 5 | 147.46 | ... | ... | ... | ... |
| 10 | 146.41 | ... | ... | ... | ... |
| ಸರಾಸರಿ | 147.50 | 0.00693 | 0.02678 | 2 | 0.01339 |

ಬಿಂದುಗಳ ತ್ರಿಜ್ಯ ಕಡಿಮೆಯಾದಂತೆ ಸ್ಟೋಕ್ಸ್ ನಿಯಮ ಸಮಂಜಸವಾಗಿ ಪಾಲಿತವಾಗುವುದಿಲ್ಲ. ವಿಲ್ಸನ್ ಇದನ್ನು ಗಮನಿಸಿ ತಕ್ಕ ಪರಿಹಾರವನ್ನು ಕಂಡುಕೊಂಡ. 1906 ರಿಂದ ಒಂದು ದಶಕ ಪರ್ಯಂತ ನಡೆಸಿದ ಪ್ರಯೋಗಗಳ ಫಲವಾಗಿ ಅವನು ಎಲೆಕ್ಟ್ರಾನಿನ ವಿದ್ಯುದಂಶ e= $(4.770 \pm 0.0005) \times 10^{-10}$ esu ಎಂದು ನಿರ್ಧರಿಸಿದ.

ಎಕ್ಸ್ ಕಿರಣಗಳ ತರಂಗಾಂತರವನ್ನು ಪ್ರತಿಫಲನರೇಖಾಪಟಲದ ಸಹಾಯದಿಂದ ಕಂಡುಹಿಡಿಯಬಹುದು. ಈ ಬೆಲೆ ಅತಿ ನಿಖರವಾದದ್ದು. ಇದರಿಂದ ಸ್ಫಟಿಕಗಳ ಲ್ಯಾಟಿಸ್ ದೂರವನ್ನು ನಮನ ಪ್ರಯೋಗಗಳನ್ನು ನಡೆಸಿ ಲೆಕ್ಕ ಹಾಕಬಹುದು. ಒಮ್ಮೆ ಲ್ಯಾಟಿಸ್ ದೂರ ತಿಳಿದರೆ ಒಂದು ಗ್ರಾಂ ಅಣು ಸ್ಫಟಿಕದಲ್ಲಿರುವ ಅಣುಗಳ ಸಂಖ್ಯೆಯನ್ನು ಕಂಡುಹಿಡಿಯಬಹುದು. ಉದಾಹರಣೆಗೆ ಸೋಡಿಯಂ ಕ್ಲೋರೈಡ್ ತೆಗೆದುಕೊಂಡರೆ

$$N=\frac{M}{2d^3\rho} \qquad .......(6)$$

ಎಂದು ಬರೆಯಬಹುದು. ಇಲ್ಲಿ N ಅವೊಗ್ಯಾಡ್ರೊ ಸಂಖ್ಯೆ, M ಸೋಡಿಯಂ ಕ್ಲೋರೈಡಿನ ಅಣುತೂಕ, *d* ಲ್ಯಾಟಿಸ್ ದೂರ ಮತ್ತು *p* ಸಾಂದ್ರತೆ. ಒಂದು ಸೋಡಿಯಂ ಕ್ಲೋರೈಡ್ ಅಣುವಿನಲ್ಲಿ 2 ಪರಮಾಣುಗಳಿರುವುದರಿಂದ ಕೆಳಗೆ 2 ಇದೆ. N ತಿಳಿದರೆ ಫ್ಯಾರಡೆಯಿಂದ *e*ಯನ್ನು ಗಣಿಸಬಹುದು.

$$e=\frac{F}{N} \qquad .......(7)$$

ಎಕ್ಸ್‌ಕಿರಣಗಳ ಎಲೆಕ್ಟ್ರಾನಿನ ವಿದ್ಯುದಂಶದ ಮೌಲ್ಯ *e*= $4.802 \times 10^{-10}$ esu ಇದು ತೈಲಬಿಂದು ಮೌಲ್ಯಕ್ಕಿಂತ ಸ್ವಲ್ಪ ಹೆಚ್ಚಾಗಿದೆ. ಆದರೆ ಈ ಬೆಲೆಯೇ ಹೆಚ್ಚು ನಿಖರವಾದದ್ದು. ಕಾರಣ ಇಲ್ಲಿ ಉಪಯೋಗಿಸಿರುವ ಎಲ್ಲ ಪರಿಮಾಣಗಳೂ ಹೆಚ್ಚು ನಿಖರವಾಗಿ ಗೊತ್ತಿರುವುವು. ಇದರಿಂದ ತೈಲಬಿಂದುವಿನ ಮೌಲ್ಯವನ್ನು ಪರಿಷ್ಕರಿಸುವುದು ಅನಿವಾರ್ಯವಾಯಿತು. ಶಿಬ ಎಂಬ ವಿಜ್ಞಾನಿ ತೈಲಬಿಂದು ಮತ್ತು ಎಕ್ಸ್‌ಕಿರಣಗಳ ಮೌಲ್ಯಗಳಲ್ಲಿರುವ ವ್ಯತ್ಯಾಸಕ್ಕೆ ವಿಲ್ಸನ್ ಉಪಯೋಗಿಸಿದ ಗಾಳಿಯ ಸ್ನಿಗ್ಧತಾನಿಯತಾಂಕದಲ್ಲಿದ್ದ ಲೋಹವೇ ಕಾರಣವೆಂದು ತಿಳಿಸಿ ಅದನ್ನು ಸರಿಪಡಿಸಿದ. ಎಲೆಕ್ಟ್ರಾನಿನ ವಿದ್ಯುದಂಶ ಮತ್ತು ಸಾಪೇಕ್ಷ ವಿದ್ಯುದಂಶ ತಿಳಿದ ಮೇಲೆ ಅದರ ಜಡಮಾನವನ್ನು ಗಣಿಸಬಹುದು. ಇದು $9.1 \times 10^{-28}$ ಗ್ರಾಂ,

ಎಲೆಕ್ಟ್ರಾನಿನ ವಿದ್ಯುದಂಶ ಮತ್ತು ಜಡಮಾನ ತಿಳಿದ ಮೇಲೆ ಅದರ ರಚನೆಯನ್ನು ತಿಳಿಯಬಯಸುವುದು ಸ್ವಾಭಾವಿಕ. ಎಲೆಕ್ಟ್ರಾನಿನ ಜಡಮಾನ ಅದರ ವಿದ್ಯುದಂಶದಿಂದಲೇ ವ್ಯಕ್ತವಾಗುವುದೆಂದು ಭಾವಿಸಿದರೆ ಅದರ ಗಾತ್ರವನ್ನು ಗಣಿಸಬಹುದು. ಒಂದು ಎಲೆಕ್ಟ್ರಾನ್

õ ವೇಗದಿಂದ ಚಲಿಸುತ್ತಿದ್ದರೆ ಅದರ ಚಲನಶಕ್ತಿಯನ್ನು

$$\frac{1}{2}mv^2 = \mu\frac{e^2v^2}{3a} \qquad ....(8)$$

ಎಂದು ಬರೆಯಬಹುದು. ಇಲ್ಲಿ *m* ವಿದ್ಯುದಂಶದಿಂದ ವ್ಯಕ್ತವಾದ ಜಡಮಾನ, ì ಸುತ್ತಿನ ಪ್ರದೇಶದ ಪಾರಗಮ್ಯತೆ (ಪರ್ಮಿಯಬಿಲಿಟಿ), a ಎಲೆಕ್ಟ್ರಾನಿನ ತ್ರಿಜ್ಯ, ಗಾಳಿಯ ಅಥವಾ ನಿರ್ವಾತದ ì = 1.ಆಗ

$$a = \frac{2e^2}{3m} \qquad ....(9)$$

e ಮತ್ತು *m* ಗಳಿಗೆ ಗೊತ್ತಿರುವ ಬೆಲೆಗಳನ್ನು ಆದೇಶಿಸಿದರೆ

a = 1.875 $\tfrac{3}{2}$ $10^{-13}$ ಸೆಂ. ಆಗುತ್ತದೆ.

ನೇರವಾಗಿ ಎಲೆಕ್ಟ್ರಾನಿನ ತ್ರಿಜ್ಯವನ್ನು ಗಣಿಸಬೇಕಾದರೆ ಎಲೆಕ್ಟ್ರಾನ್-ಎಲೆಕ್ಟ್ರಾನ್ ಸಂಘರ್ಷಣ ಪ್ರಯೋಗಗಳನ್ನು ನಡೆಸಬೇಕು. ಇವು ನಿರೀಕ್ಷಿತ ಫಲವನ್ನು ಕೊಡಬೇಕಾದರೆ ಎಲೆಕ್ಟ್ರಾನುಗಳ ಚಲನಶಕ್ತಿ 0.51 MeV ನಷ್ಟಾದರೂ ಇರಬೇಕು. ಆದರೆ ಇಂಥ ಪ್ರಸಂಗಗಳಲ್ಲಿ ಎಲೆಕ್ಟ್ರಾನುಗಳು ತರಂಗಗಳಂತೆ ವರ್ತಿಸುತ್ತವೆ. 0.51 MeV ಚಲನಶಕ್ತಿಯ ಎಲೆಕ್ಟ್ರಾನುಗಳ ತರಂಗಾಂತರ ಸುಮಾರು 2 $\tfrac{3}{2}$ $10^{-10}$ ಸೆಂ. ಇದು ಎಲೆಕ್ಟ್ರಾನುಗಳ ತ್ರಿಜ್ಯಕ್ಕಿಂತ ಸಾವಿರಪಾಲು ಹೆಚ್ಚಾಗಿದೆ. ಸಂಘರ್ಷಣ ಪ್ರಯೋಗಗಳು ತರಂಗಗಳ ಪ್ರತಿಕ್ರಿಯೆ (ಇಂಟರ್‍ಯಾಕ್ಷನ್) ಪ್ರಯೋಗಗಳಾಗುತ್ತವೆ. ಎಲೆಕ್ಟ್ರಾನನ್ನು ಬಿಂದು ವಿದ್ಯುದಂಶವೆಂದು ಪರಿಗಣಿಸಿ ಸಂದರ್ಭಕ್ಕೆ ತಕ್ಕಂತೆ ಅದರ ಗುಣವಿಶೇಷಗಳನ್ನು ವಿವರಿಸುವುದೇ ಸೂಕ್ತ.

ಎಲೆಕ್ಟ್ರಾನಿನ ಭ್ರಮಣೆ (ಸ್ಪಿನ್) ಮತ್ತು ಕಾಂತ ಭ್ರಮಣಾಂಕಗಳು : ಪರಮಾಣು ರೋಹಿತಸೂಕ್ಷ್ಮ ರಚನೆಯನ್ನು ವಿವರಿಸಲು ಎಲೆಕ್ಟ್ರಾನಿಗೆ ಭ್ರಮಣೆ (ಸ್ಪಿನ್) ಮತ್ತು ಕಾಂತ ಭ್ರಮಣಾಂಕಗಳಿವೆಯೆಂದು ಭಾವಿಸುವುದು ಅಗತ್ಯ ಎಂದು ಉಲೆನ್‌ಬೆಕ್ ಮತ್ತು ಗೌಡ್ಸ್‌ಮಿತ್ ಅವರು ಗಣನೆಗಳ ಆಧಾರದಿಂದ ತಿಳಿಸಿದರು (1925). ಭ್ರಮಣೆ ಸದಿಶ ಪರಿಮಾಣ. ಅದನ್ನು S ಎಂದಿಟ್ಟುಕೊಂಡು ಅದರ ವರ್ಗಮಾನವನ್ನು $S.S = S(S+1)\frac{h}{2\pi}$ ಎಂದು ಬರೆಯಬಹುದು. ಯಾವುದಾದರೂ ಒಂದು ದಿಶೆಯಲ್ಲಿ, ಉದಾಹರಣೆಗೆ Z ದಿಶೆಯಲ್ಲಿ, ಅದರ ಘಟಕ

$S_z = m_s\frac{h}{2\pi}$ ಇಲ್ಲಿ $m_s = \pm$ ½. ಭ್ರಮಣಾಧಾರಿತ ಕಾಂತ ಭ್ರಮಣಾಂಕ $\mu = -\frac{e}{m}S.$ Z- ದಿಶೆಯಲ್ಲಿ ಇದರ ಘಟಕ $\mu_z = m_s\frac{e}{m}\frac{h}{2\pi}$ ಇದನ್ನು ಒಂದು ಬೋರ್ ಮ್ಯಾಗ್ನಟಾನ್ ಎಂದು ಕರೆಯುತ್ತಾರೆ. ಇದರ ಮೌಲ್ಯ 0. 92732 $\tfrac{3}{2}$ $10^{-23}$ ಆಂಪೇರ್-ಮೀಟರ್$^2$.

ಭ್ರಮಣೆಯನ್ನು ಸಾಮಾನ್ಯವಾಗಿ ಭ್ರಮಣ ಪರಿಮಾಣವೆಂದು ಪರಿಗಣಿಸುವುದು ವಾಡಿಕೆ. ಎಲೆಕ್ಟ್ರಾನ್ ಅದರ ಜಡಮಾನ ಕೇಂದ್ರದಿಂದ ಹಾದುಹೋಗುವ ಅಕ್ಷದ ಮೇಲೆ ಭ್ರಮಣಿಸುತ್ತಿದೆಯೆಂದು ತಿಳಿದು ಗಣಿಸುವ ಗೈರೋಕಾಂತ ಪ್ರಮಾಣ (ಕಾಂತ ಭ್ರಮಣಾಂಕಕ್ಕೂ ಭ್ರಮಣ ಪರಿಮಾಣಕ್ಕೂ ಇರುವ ಪ್ರಮಾಣ) ನಿಜವಾದ ಮೌಲ್ಯದ ಅರ್ಧದಷ್ಟಿದೆ. ಅದೂ ಅಲ್ಲದೆ ಅಭಿಜಾತ (ಕ್ಲಾಸಿಕಲ್) ಮಿತಿಯಲ್ಲಿ $\frac{h}{2\pi} \to 0.$ ಆದ್ದರಿಂದ ಎಲೆಕ್ಟ್ರಾನ್ ಭ್ರಮಣೆಯನ್ನು ಅದರ ಶಕಲ (ಕ್ವಾಂಟಂ) ಗುಣವೆಂದು ತಿಳಿಯುವುದು ಸೂಕ್ತ. ಅದಕ್ಕೆ ಅಭಿಜಾತ ಉಪಮೆಯನ್ನೊದಗಿಸಲು ಮಾಡುವ ಯತ್ನ ವ್ಯರ್ಥ. ಭ್ರಮಣೆಯ ಜೊತೆಗೆ ಹೊಂದಿಕೊಂಡಿರುವ ಗುಣ ಕಾಂತಭ್ರಮಣಾಂಕ.

ಎಲೆಕ್ಟ್ರಾನಿನ ಡಿರಾಕ್ ಸಮೀಕರಣ: ವಿದ್ಯುತ್‌ಕಾಂತ ಕ್ಷೇತ್ರದಲ್ಲಿ ಎಲೆಕ್ಟ್ರಾನಿನ ವರ್ತನೆಯನ್ನು ವಿವರಿಸಲು ಡಿರಾಕ್ ಒಂದು ಹೊಸ ಸಮೀಕರಣವನ್ನು ಮಂಡಿಸಿದ (1928). ಈ ಸಮೀಕರಣ ಎಲೆಕ್ಟ್ರಾನಿನ ತರಂಗಗುಣವನ್ನು ಒಳಗೊಂಡಿರಬೇಕಾದುದಲ್ಲದೆ ಸಾಪೇಕ್ಷಿಯವಾಗಿ ಅಚರವಾಗಿಯೂ (ರಿಲೆಟಿವಿಸ್ಟಿಕ್ ಇನ್‌ವೇರಿಯೆನ್ಸ್) ಇರಬೇಕು. ಈ ಎರಡನೆಯ ಅಗತ್ಯವೆಂದರೆ ವಿಶಿಷ್ಟ ರಿಲೆಟಿವಿಟಿ ಸಿದ್ಧಾಂತದಂತೆ ಆಕಾಶ ಮತ್ತು ಕಾಲದ ನಿರ್ದೇಶಕಗಳನ್ನು ಲೊರೆಂಟ್ಸ್ ಸ್ಥಾನಪಲ್ಲಟನಕ್ಕೆ ಒಳಪಡಿಸಿದರೆ ಸಮೀಕರಣದ ಸ್ವರೂಪ ಬದಲಾಗದೆ ಇರಬೇಕು. ಇದಾದರೆ ಜಡಮಾನದಲ್ಲಾಗುವ ವ್ಯತ್ಯಾಸವೂ ಸೇರಿಕೊಂಡಂತಾಗುತ್ತದೆ.

ಸಾಪೇಕ್ಷ ಅಚರತ್ವದಿಂದ ಎರಡು ಅನಿರೀಕ್ಷಿತ ತೀರ್ಮಾನಗಳು ವ್ಯಕ್ತವಾದುವು. ಮೊದಲನೆಯದು, ಎಲೆಕ್ಟ್ರಾನಿಗೆ ಭ್ರಮಣ $\frac{h}{4\pi}$ ಮತ್ತು ಕಾಂತಭ್ರಮಣಾಂಶ ಒಂದು ಬೋರ್ ಮ್ಯಾಗ್ನಟಾನ್ ಇರಬೇಕೆಂಬುದು. ಎರಡನೆಯದು ಸಂವೇಗ P ಆಗಿರುವ ಎಲೆಕ್ಟ್ರಾನಿನ ಶಕ್ತಿ ಐಗನ್ ಮೌಲ್ಯಗಳು $\pm(P^2c^2 + m^2c^4)^{1/2}$ ಎಂದು. ಇಲ್ಲಿ *c* ಬೆಳಕಿನ ವೇಗ. ಋಣ ಶಕ್ತಿ ಮೌಲ್ಯವುಳ್ಳ ಎಲೆಕ್ಟ್ರಾನಿಗೆ ಸ್ವಾಭಾವಿಕವಾದ ಅಸ್ತಿತ್ವವಿಲ್ಲ; ಎಲೆಕ್ಟ್ರಾನುಗಳು ಋಣಶಕ್ತಿ ಸ್ತರಗಳಿಗೆ ಸ್ಥಿತ್ಯಂತರಗೊಳ್ಳುವುದಕ್ಕಾಗುವುದಿಲ್ಲ. ಕಾರಣ ಎಲ್ಲ ಋಣಶಕ್ತಿ ಸ್ತರಗಳು ಎಲೆಕ್ಟ್ರಾನುಗಳಿಂದ ತುಂಬಿ ಬಿಟ್ಟಿವೆ ಎಂದು ಡಿರಾಕ್ ಹೇಳುತ್ತಾನೆ. ಈ ಪರಿಕಲ್ಪನೆಯಂತೆ ನಿರ್ವಾತ ಋಣಶಕ್ತಿ ಸ್ತರಗಳನ್ನು ತುಂಬಿರುವ ಎಲೆಕ್ಟ್ರಾನುಗಳ ಅಸೀಮಸಾಗರ. ಆದರೆ ಸಾಕಷ್ಟು ಶಕ್ತಿ ದೊರೆತರೆ ಋಣಶಕ್ತಿ ಸ್ತರದಿಂದ ಎಲೆಕ್ಟ್ರಾನ್ ಮೇಲೆ ಬರುತ್ತದೆ. ಆಗ ಋಣಶಕ್ತಿ ಸಾಗರದಲ್ಲಿ ಒಂದು ಗುಳ್ಳೆಯಂಥ ರಂಧ್ರ ಹುಟ್ಟಿಕೊಳ್ಳುತ್ತದೆ. ಇದರ ವಿದ್ಯುದಂಶ ಎಲೆಕ್ಟ್ರಾನಿನ ವಿದ್ಯುದಂಶದಷ್ಟೆ ಇದ್ದು ಚಿಹ್ನೆಯಲ್ಲಿ ಮಾತ್ರ ವಿರುದ್ಧವಾಗಿರುತ್ತದೆ ಈ ಕಾರಣದಿಂದ ಅದರ ಕಾಂತ ಭ್ರಮಣಾಂಕದ ಚಿಹ್ನೆ ಎಲೆಕ್ಟ್ರಾನಿನ ಕಾಂತ ಭ್ರಮಣಾಂಕದ ಚಿಹ್ನೆಗೆ ವಿರುದ್ಧವಾಗಿರುತ್ತದೆ. ಭ್ರಮಣ ಚಿಹ್ನೆಯಲ್ಲಿ ಬದಲಾವಣೆ ಇಲ್ಲ. ಆಂಡ್ರಸನ್ ಕಾಸ್ಮಿಕ್ ಕಿರಣಗಳ ಸಂಶೋಧನೆಯಲ್ಲಿ ಕಂಡುಹಿಡಿದ (1932) ಕಣ ಈ ಡಿರಾಕ್ ರಂಧ್ರದ ಎಲ್ಲ ಗುಣಗಳನ್ನೂ ಹೊಂದಿತ್ತು. ಇದನ್ನು ಪಾಸಿಟ್ರಾನ್ ಎಂದು ಕರೆಯುತ್ತಾರೆ. ಪಾಸಿಟ್ರಾನ್ ಅನ್ವೇಷಣೆ ಮಾಡಿದ ಮೇಲೆ ಡಿರಾಕ್ ಸಮೀಕರಣಕ್ಕೆ ಭದ್ರವಾದ ಅಡಿಪಾಯ ಸಿಕ್ಕಿತು. ಎಲೆಕ್ಟ್ರಾನ್ ಮತ್ತು ಪಾಸಿಟ್ರಾನ್ ಒಂದನ್ನೊಂದು ಸಂಧಿಸಿದರೆ ಪರಸ್ಪರ ನಾಶವಾಗುತ್ತವೆ ಮತ್ತು ಆಗ ಬಿಡುಗಡೆಯಾಗುವ ಜಡ ಮಾನಶಕ್ತಿ ಎರಡು ಅಥವಾ ಮೂರು ಫೋಟಾನುಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ನಾಶಹೊಂದಿದ ಕಣಗಳ ಚಲನಶಕ್ತಿ ಫೋಟಾನುಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಅದು ಫೋಟಾನುಗಳ ಶಕ್ತಿಯಲ್ಲಿ ಸೇರಿರುತ್ತದೆ.

ಎಲೆಕ್ಟ್ರಾನ್ ವಿದ್ಯುತ್ಕಾಂತೀಯ ಕ್ಷೇತ್ರದ ಆಕರ. ಇದು ಸದಾ ತೋರಿಕೆ ಫೋಟಾನುಗಳನ್ನು ಸುತ್ತಿನ ಕ್ಷೇತ್ರದೊಂದಿಗೆ ವಿನಿಮಯ ಮಾಡಿಕೊಳ್ಳುತ್ತ ಮಿಡಿಯುತ್ತಿರುತ್ತದೆ. ಈ ಪ್ರತಿಕ್ರಿಯೆಯನ್ನು ಗಣನೆಗೆ ತೆಗೆದುಕೊಂಡರೆ ಎಲೆಕ್ಟ್ರಾನಿನ ಕಾಂತ ಭ್ರಮಣಾಂಕವನ್ನು

$$\mu = \left(1 + \frac{a}{2\pi} - 0.327\frac{\alpha^2}{\pi^2}\right)\mu B \qquad .........(10)$$

ಎಂದು ಬರೆಯಬಹುದು. ಇಲ್ಲಿ a ಸೂಕ್ಷ್ಮ ರಚನ ನಿಯತಾಂಕ ಮತ್ತು $ì_B$ ಬೋರ್ ಮ್ಯಾಗ್ನೆಟಾನ್. a/2ð ಪದವನ್ನು ಸ್ವಿಂಗರನೂ ಮುಂದಿನದನ್ನು ಸಾಮರ್‌ಫೆಲ್ಡನೂ ಪಡೆದಿದ್ದಾರೆ. ವಿಲ್ಕನ್‌ಸನ್ ಮತ್ತು ಕ್ರೇನ್ ಅವರು ಎಲೆಕ್ಟ್ರಾನುಗಳನ್ನು ಕಾಂತ ಶೀಶೆಯಲ್ಲಿ ಹಿಡಿದು ಅವುಗಳ ಸೈಕ್ಲೊಟ್ರಾನ್ ಪಥೀ ಕಂಪನಾಂಕ ಮತ್ತು ಭ್ರಮಣ ಅಯನಾಂಶಿಕ ಕಂಪನಾಂಕಗಳನ್ನು ಹೋಲಿಸಿ ಎಲೆಕ್ಟ್ರಾನಿನ ಕಾಂತ ಭ್ರಮಣಾಂಕ $ì = 1.0011596ì_B$ ಎಂದು ತೋರಿಸಿದರು. ಇದು ಸಮೀಕರಣ (10)ರ ಬೆಲೆಗೆ ಸರಿಯಾಗಿದೆ. (ಎಸ್.ಎ.ಎಚ್.)

**ಎಲೆಕ್ಟ್ರಾನ್ ದೃಕ್‌ವಿಜ್ಞಾನ:** ಎಲೆಕ್ಟ್ರಾನ್ ಕಿರಣಗಳ ಪ್ರಸಾರವನ್ನು ವಿವರಿಸುವ ಭೌತವಿಜ್ಞಾನದ ವಿಭಾಗ. 1926ರಲ್ಲಿ ಬುಷ್ ಎಂಬಾತ ಎಲೆಕ್ಟ್ರಾನ್ ಮಸೂರಗಳ ಕ್ರಿಯೆಯನ್ನು ಸೈದ್ಧಾಂತಿಕವಾಗಿ ವಿವರಿಸಿದ ಮೇಲೆ ಈ ವಿಜ್ಞಾನದ ಬೆಳವಣಿಗೆ ಪ್ರಾರಂಭವಾಯಿತು.

ಕನಿಷ್ಠ ಕ್ರಿಯೆ ಮತ್ತು ಫರ್ಮನ ನಿಯಮಗಳನ್ನು ಒಟ್ಟಿಗೆ ಪರೀಕ್ಷಿಸಿದರೆ ಸಂವೇಗ (ಮೊಮೆಂಟಂ) ಮತ್ತು ವಕ್ರೀಭವನ ಸೂಚ್ಯಂಕ ಕ್ರಮವಾಗಿ ಗತಿವಿಜ್ಞಾನ ಮತ್ತು ದೃಕ್‌ವಿಜ್ಞಾನದಲ್ಲಿ ಸಮಾನಪಾತ್ರಗಳನ್ನು ನಿರ್ವಹಿಸುವುದು ತಿಳಿಯುತ್ತದೆ. ಎಲೆಕ್ಟ್ರಾನ್ ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಹಾದುಹೋಗು ವುದನ್ನು ಚಿತ್ರದಲ್ಲಿ ತೋರಿಸಿದೆ. ಕನಿಷ್ಠ ಕ್ರಿಯೆ ನಿಯಮದಂತೆ ಚಿತ್ರದ ಜ್ಯಾಮಿತಿಯನ್ನನುಸರಿಸಿ,

$$\delta\left(P_1\sqrt{x_1^{\ 2} + y_1^{\ 2}} + P_2\sqrt{x_2^{\ 2} + y_2^{\ 2}}\right) = 0 \qquad ..... (1)$$

ಎಂದು ಬರೆಯಬಹುದು. ಅನಂತರ $\frac{Sin\, i}{Sin\, r} = \frac{P_2}{P_1}$ . . . . . (2)

ಎಂದು ಬರೆಯುವುದು ಸುಲಭ. $i$ ಮತ್ತು ಪತನಕೋನ ಮತ್ತು ವಕ್ರೀಭವನಕೋನ. ಮತ್ತು $P_1$ ಕ್ಷೇತ್ರ (2) ಮತ್ತು (1) ರಲ್ಲಿ ಕ್ರಮವಾಗಿ ಎಲೆಕ್ಟ್ರಾನಿನ ಸಂವೇಗ $\eta_1$




ಚಿತ್ರ 1 ಬೇರೆ ಬೇರೆ ವಿಭವವಿರುವ ಎರಡು ಕ್ಷೇತ್ರಗಳಲ್ಲಿ ಎಲೆಕ್ಟ್ರಾನಿನ ಪಥ ನಿರೂಪಣೆ

ಮತ್ತು $\eta_2$ ಗಳು ಕ್ರಮವಾಗಿ ಕ್ಷೇತ್ರ (1) ಮತ್ತು (2)ರ ವಕ್ರೀಭವನ ಸೂಚಿಗಳಾದರೆ ಫರ್ಮ ನಿಯಮದಂತೆ $\frac{\sin i}{\sin r} = \frac{\eta_2}{\eta_1}$ . . . . (3)

ಎಂದು ತೋರಿಸಬಹುದು, ಸಮೀಕರಣ (2) ಮತ್ತು (3) ಸಂವೇಗ ಮತ್ತು ವಕ್ರೀಭವನ ಸೂಚಿಗಳಿಗಿರುವ ಸಾಮ್ಯವನ್ನು ತೋರಿಸುತ್ತವೆ.

ಗಾಜು, ನೀರು ಮುಂತಾದ ಪಾರದರ್ಶಕಗಳು ಬೆಳಕಿನ ಕಿರಣಗಳನ್ನು ಬಾಗಿಸುವಂತೆ ವಿದ್ಯುತ್ ಮತ್ತು ಕಾಂತಕ್ಷೇತ್ರಗಳು ಎಲೆಕ್ಟ್ರಾನ್ ಕಿರಣಗಳನ್ನು ಬಾಗಿಸುತ್ತವೆ.




ಚಿತ್ರ 2 ಅಕ್ಷಸಮವುಳ್ಳ ಸ್ಥಿರವಿದ್ಯುತ್ ಬಲ ಕ್ಷೇತ್ರದಲ್ಲಿ ಎಲೆಕ್ಟ್ರಾನಿನ ಪಥ

ಅಕ್ಷಸಮವಿರುವ ಸ್ಥಿರ ವಿದ್ಯುತ್ ಕ್ಷೇತ್ರ ಎಲೆಕ್ಟ್ರಾನ್ ಮಸೂರದಂತೆ ವರ್ತಿಸುತ್ತದೆ. ಈ ಮಾತಿನ ಯಾಥಾರ್ಥ್ಯವನ್ನು ತಿಳಿಯಲು ಚಿತ್ರದಲ್ಲಿ ನಿರೂಪಿಸಿರುವ ಎಲೆಕ್ಟ್ರಾನಿನ ಚಲನೆಯನ್ನು ಗಮನಿಸಿ. ವಿಭವದ ವ್ಯತ್ಯಾಸ $o < z < l$ ಮಿತಿಯಲ್ಲಿ ಮಾತ್ರ ಆಗುತ್ತದೆ. ಇದರಿಂದ ಹೊರಗೆ ಎರಡೂ ಕಡೆಯಲ್ಲಿ ಎಲೆಕ್ಟ್ರಾನುಗಳು ಸರಳರೇಖೆಯಲ್ಲಿ ಚಲಿಸುತ್ತವೆ. ಕೋನ $\alpha$ ದ ಮೌಲ್ಯ ಬಹಳ ಕಡಿಮೆಯಾಗಿದ್ದರೆ

. . . . .(4)

ಎಂದು ಬರೆಯಬಹುದು. ಅಕ್ಷಕ್ಕೆ ಅತಿ ಸಮೀಪದಲ್ಲಿ ಹಾಯುವ ಎಲೆಕ್ಟ್ರಾನುಗಳ ಪಥವನ್ನು ಈ ಸಮೀಕರಣ ವಿವರಿಸುತ್ತದೆ. ಆದ್ದರಿಂದ ಇದನ್ನು ಉಪಾಕ್ಷ ಸಮೀಕರಣ ಎಂದು ಕರೆಯುತ್ತಾರೆ. $z = 0$ ಆದಾಗ

$$r = r_0 P(z) + r_0^1 Q(z) \qquad . . . . .(5)$$

ಎಂದು ಬರೆಯಬಹುದು. ಇಲ್ಲಿ $P(z)$ ಮತ್ತು $Q(z)$ ಗಳು $z$ ನ ಉತ್ಪನ್ನಗಳು.




ಚಿತ್ರ 3 ಸ್ಥಿರವಿದ್ಯುತ್ ಮಸೂರದ ಕಾರ್ಯ ನಿರೂಪಣೆ

ಈಗ ಮಸೂರದ ಕೆಲಸವನ್ನು ತಿಳಿಯುವುದು ಸುಲಭ. ಚಿತ್ರದಲ್ಲಿ ಪಥ (1)ಮತ್ತು (2)ನ್ನು ಗಮನಿಸಿ ಪಥ (1)ಕ್ಕೆ ಸಂಬಂಧಿಸಿದಂತೆ ಸಮೀಕರಣ (5)ನ್ನು

. . . . .(6)

ಎಂದೂ ಪಥ (2)ಕ್ಕೆ ಸಂಬಂಧಿಸಿದಂತೆ ಅದನ್ನು

. . . . .(7)

ಎಂದೂ ಬರೆಯಬಹುದು. (6) ಮತ್ತು (7) ರ ಬಲಪಕ್ಷಗಳನ್ನು ಸಮೀಕರಿಸಿ

$$yP(z_i) = (y + r_0' z_0) P(z_i) + r_0' Q(z_i) \qquad . . . . .(8)$$

ಎಂದೂ ಬರೆಯಬಹುದು. (8) ರಿಂದ

$$Z_0 P(z_i) + Q(z_i) = 0 \qquad . . . . .(9)$$

ಎಂದು ಬರೆಯಬಹುದು. ಇದು ಎರಡನೆ ಪಥದ ಓಟವನ್ನು ಅವಲಂಬಿಸಿಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತದೆ. $A$ ಯಿಂದ ಹೊರಡುವ ಎಲ್ಲ ಕಿರಣಗಳೂ ಅವುಗಳ




ಚಿತ್ರ 4 ಏಕರಂಧ್ರ ಮಸೂರ

ಓಟಗಳೂ ಬೇರೆ ಬೇರೆಯಾಗಿದ್ದರೂ ಪ್ರತಿಬಿಂಬಕ್ಷೇತ್ರದಲ್ಲಿ $z_i$ ಬಳಿ ಸಂಧಿಸುತ್ತವೆ. ವಸ್ತು ಕ್ಷೇತ್ರದ ಪ್ರತಿಬಿಂದುವಿಗೂ ತಕ್ಕಂತೆ ಪ್ರತಿಬಿಂಬಕ್ಷೇತ್ರದಲ್ಲಿ ಒಂದು ಬಿಂದು ಮೂಡುತ್ತದೆ ಲಂಬನ $\frac{yi}{y} = P(z_i)$, $y$ ಯನ್ನು ಮಾತ್ರ ಅವಲಂಬಿಸಿರುವುದರಿಂದ ಅಕ್ಷಕ್ಕೆ ಲಂಬವಾಗಿರುವ ಯಾವುದೇ ಎರಡು ಅನುವರ್ತಿ (ಕಾಂಜುಗೇಟ್) ಸಮತಳಗಳಲ್ಲಿ ಅದು ಸ್ಥಿರಮೌಲ್ಯವನ್ನು ಹೊಂದಿರುತ್ತದೆ.

ಅಕ್ಷಸಮ ಸ್ಥಿರ ವಿದ್ಯುತ್ ಕ್ಷೇತ್ರಗಳು ಎಲೆಕ್ಟ್ರಾನ್ ಮಸೂರಗಳಂತೆ ವರ್ತಿಸುವುದರಿಂದ ವಿವಿಧ ಎಲೆಕ್ಟ್ರೋಡುಗಳ ಜೋಡಣೆಯಿಂದ ಬೇಕಾದ ಮಸೂರಗಳನ್ನು ಮಾಡಿಕೊಳ್ಳಬಹುದು

(i) ಏಕರಂಧ್ರಮಸೂರ, ಅತಿ ಸಾಮಾನ್ಯವಾದ ಮಸೂರವೆಂದರೆ ಎರಡು ವಿಭವ ಕ್ಷೇತ್ರಗಳನ್ನು ಬೇರ್ಪಡಿಸುವ ಒಂದು ವಾಹಕ ತಟ್ಟೆಯಲ್ಲಿನ ರಂಧ್ರ. ಇದರ ರಚನೆ ಮತ್ತು ಕೆಲಸವನ್ನು ವಿಶೇಷವಾಗಿ ಅಭ್ಯಾಸಮಾಡಿರುವ ಡೇವಿಸನ್ ಮತ್ತು ಕ್ಯಾಲ್ಲಿಕ್ ಅವರು ಮಸೂರದ ನಾಭಿ ದೂರ ಎಂದು ತೋರಿಸಿದ್ದಾರೆ. ಮತ್ತು $V_2'$ಗಳು ವೋಲ್ಟಿನಲ್ಲಿ ವಿಭವದ ಮೌಲ್ಯಗಳು.

$$f = \frac{4Vg}{V_2'-V_1'} \quad .....(10)$$




ಚಿತ್ರ 5 ಒಂದೇ ವ್ಯಾಸವುಳ್ಳ ಕೊಳವೆ ಮಸೂರದ ನಾಭಿಗುಣಗಳು ($v_1 < v_2$)

$V_g V_1'$

ii) ಕೊಳವೆ ಮಸೂರ. ಒಂದೇ ಅಕ್ಷವುಳ್ಳ ಬೇರೆ ಬೇರೆ ವಿಭವಗಳಿರುವ ಎರಡು ಕೊಳವೆಗಳು ಮಸೂರದಂತೆ ವರ್ತಿಸುತ್ತವೆ. ಇದರಲ್ಲಿ ಎರಡನೆಯ ನಾಭಿ ದೂರ $f_2$ ಯಾವಾಗಲೂ $z_2$ ಕ್ಕಿಂತ ಹೆಚ್ಚಾಗಿರುತ್ತದೆ. ಎರಡನೆಯ ಪ್ರಮುಖಬಿಂದು $H_2$ ಕೊಳವೆಗಳ ಮಧ್ಯದ ಸಮತಲಕ್ಕೆ ಎಡಭಾಗದಲ್ಲಿರುತ್ತದೆ. $z_2$ ಹೆಚ್ಚಾದರೆ $f_2$ ಕಡಿಮೆಯಾಗುತ್ತದೆ. ಕೊಳವೆ ಮಸೂರಗಳನ್ನು ಎಲೆಕ್ಟ್ರಾನ್ ದೃಗುಪಕರಣಗಳಲ್ಲಿ ವಿಶೇಷವಾಗಿ ಬಳಸುತ್ತಾರೆ.

(iii) ಏಕವಿಭವ ಮಸೂರ (ಯೂನಿಪೊಟೆನ್ಷಿಯಲ್ ಲೆನ್ಸ್). ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳಿಗೆ ಬಹುಮುಖ್ಯವಾಗಿ ಬೇಕಾದ ಮಸೂರ ಇದು. ಇದರಲ್ಲಿ ಮೂರು ಏಕಾಕ್ಷಿ



ಚಿತ್ರ 6 ಏಕವಿಭವ ಮಸೂರ

ರಂಧ್ರಗಳಿವೆ. ಹೊರಗಿನ ರಂಧ್ರಗಳ ವಿಭವ ಒಂದೇ ಮೌಲ್ಯದ್ದಾಗಿರುತ್ತದೆ. ಮಧ್ಯ ರಂಧ್ರದ ವಿಭವ ಇದಕ್ಕಿಂತ ಹೆಚ್ಚಾಗಿರಲಿ ಅಥವಾ ಕಡಿಮೆಯಾಗಿರಲಿ ಏಕವಿಭವ ಮಸೂರ ಯಾವಾಗಲೂ ಅಭಿಸರಿಸುವ (ಕನ್ವರ್ಜಿಂಗ್) ಮಸೂರದಂತೆಯೆ ವರ್ತಿಸುತ್ತದೆ. ಇದರ ರಚನೆಯನ್ನು ಚಿತ್ರದಲ್ಲಿ ನೋಡಬಹುದು.

ಏಕವಿಭವ ಮಸೂರದ ನಾಭಿದೂರದ ಮೇಲೆ ಪ್ರಭಾವ ಬೀರುವ ಪ್ರಾಚಲಗಳು (ಪ್ಯರಾಮೀಟರ್ಸ್) ಒಳಗಿನ ರಂಧ್ರದ ವ್ಯಾಸ, ಎಲೆಕ್ಟ್ರೋಡುಗಳಿಗಿರುವ ದೂರ ಮತ್ತು ಮಧ್ಯದ ಎಲೆಕ್ಟ್ರೋಡಿನ ದಪ್ಪ. ಹೊರಗಿನ ರಂಧ್ರಗಳ ವ್ಯಾಸದ ಪ್ರಭಾವ ಅಷ್ಟಿಲ್ಲ. ಒಳಗಿನ ರಂಧ್ರದ ವ್ಯಾಸ ಕಡಿಮೆಯಾದಂತೆ ನಾಭಿದೂರ ಕೂಡ ಕಡಿಮೆಯಾಗುತ್ತದೆ.

ಅಕ್ಷಸಮಾಂಗ ಸ್ಥಿರ ವಿದ್ಯುತ್ ಕ್ಷೇತ್ರಗಳಂತೆ ಅಕ್ಷಸಮಾಂಗಕಾಂತಕ್ಷೇತ್ರಗಳೂ ಎಲೆಕ್ಟ್ರಾನ್ ಮಸೂರಗಳಂತೆ ವರ್ತಿಸುತ್ತವೆ. ಸ್ಥಿರ ವಿದ್ಯುತ್ ಕ್ಷೇತ್ರದಲ್ಲಿ ಎಲೆಕ್ಟ್ರಾನನ್ನು ಬಾಗಿಸುವ ಬಲ ಕ್ಷೇತ್ರದ ದಿಕ್ಕಿನಲ್ಲಿ ವರ್ತಿಸುತ್ತದೆ. ಆದರೆ ಕಾಂತಕ್ಷೇತ್ರದಲ್ಲಿ ಇದು ಎಲೆಕ್ಟ್ರಾನಿನ ಚಲನೆಯ ದಿಕ್ಕು ಮತ್ತು ಕ್ಷೇತ್ರದ ದಿಕ್ಕುಗಳನ್ನೊಳಗೊಂಡ ಸಮತಲಕ್ಕೆ ಲಂಬವಾಗಿರುತ್ತದೆ. ಈ ಕಾರಣದಿಂದ ಕಾಂತಮಸೂರದಿಂದ ಮೂಡುವ ಪ್ರತಿಬಿಂಬ $180^\circ$ ಗಳಿಗಿಂತ ಹೆಚ್ಚಾಗಿ ತಿರುಗುತ್ತದೆ. ಇದನ್ನು ಚಿತ್ರದಲ್ಲಿ ನೋಡಬಹುದು.




ಚಿತ್ರ 7 ಕಾಂತ ಮಸೂರದಿಂದ ಪ್ರತಿಬಿಂಬ ಮೂಡುವ ಬಗೆ

ಕಾಂತ ಮಸೂರದಲ್ಲಿ ಪ್ರತಿಬಿಂಬ $180^\circ$ ಗಿಂತ ಹೆಚ್ಚು ತಿರುಗುವುದನ್ನೂ ಗಮನದಲ್ಲಿಟ್ಟುಕೊಂಡರೆ

$$r'' = -\frac{eHz^{2} r}{8mc_{2}V} \quad .....(11)$$

$$\theta'_i = \sqrt{\frac{e}{8mc^2V}} H_2 \quad .....(12)$$

ಎಂದು ಬರೆಯಬಹುದು. ಇಲ್ಲಿ $\dot{z} = \sqrt{\frac{2eV}{m}}$ ಎಂಬ ಸಾಮ್ಯವನ್ನು ಉಪಯೋಗಿಸಿ ಕೊಂಡಿದೆ. $m$ ಎಲೆಕ್ಟ್ರಾನಿನ ಜಡಮಾನ, ಎಲೆಕ್ಟ್ರಾನ್ ಹಾಯ್ದು ಬಂದಿರುವ ವಿಭವಾಂತರ. ಸಾಮಾನ್ಯವಾಗಿ ಬಳಸುವ ಕಾಂತ ಮಸೂರಗಳಲ್ಲಿ ಕ್ಷೇತ್ರದ ಹಂಚಿಕೆ ಗಂಟೆಯ ಆಕೃತಿಯಲ್ಲಿರುತ್ತದೆ. ಚಿತ್ರದಲ್ಲಿ ಇಂಥ ಹಂಚಿಕೆಯನ್ನು ನೋಡಬಹುದು. ಇದನ್ನು ಸಮೀಕರಣದ ರೂಪದಲ್ಲಿ

$$H(Z) = \frac{H_\circ(z)}{1+\left(\frac{z}{a}\right)^2} \quad ......(13)$$

ಎಂದು ಬರೆಯಬಹುದು. ಇಷ್ಟಾದರೆ ಸಮೀಕರಣ (11) ರಿಂದ

$$r = r_0 P(z) + r_0' Q(z) \quad ....(14)$$

ಎಂದು ಬರೆಯಬಹುದು.

ಇದನ್ನು ಸಮೀಕರಣ (5) ರೊಂದಿಗೆ ಹೋಲಿಸಿ ನೋಡಿದರೆ ಕಾಂತಕ್ಷೇತ್ರ ಸ್ಥಿರವಿದ್ಯುತ್ ಕ್ಷೇತ್ರದಂತೆಯೇ ಮಸೂರದ ಕೆಲಸ ಮಾಡುತ್ತದೆಂಬುದು ಮನದಟ್ಟಾಗುತ್ತದೆ.




**ಚಿತ್ರ 8 ಗಂಟೆಯ ಆಕೃತಿಯ ಕಾಂತಕ್ಷೇತ್ರ. ಚಿತ್ರದಲ್ಲಿ D ರಂಧ್ರದ ವ್ಯಾಸ 8 ಧ್ರುವ ತುಂಡುಗಳ ಮಧ್ಯದ ಅಂತರ**

ನಾಭಿದೂರ ಮಸೂರದ ವ್ಯಾಪ್ತಿ $l$ ಗಿಂತ ಹೆಚ್ಚಾಗಿರುವ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು

$$\frac{1}{f} = \frac{0.022}{V}\int_{o}^{l} H_z^{2}\, dz \qquad \text{.........(15)}$$

$$\theta\, i = \frac{0.149}{\sqrt{V}}\int_{o}^{l} H_z^{2}\, dz \qquad \text{.........(16)}$$

ಎಂದು ತೋರಿಸಬಹುದು. ಇಂಥ ಮಸೂರಗಳನ್ನು ತೆಳುಮಸೂರಗಳೆಂದು ಕರೆಯುತ್ತಾರೆ.

ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳಲ್ಲಿ ಕಾಂತಮಸೂರಗಳ ಉಪಯೋಗವೇ ಹೆಚ್ಚು. ಮೃದು ಕಬ್ಬಿಣದ ದಪ್ಪ ಹೊದಿಕೆಯುಳ್ಳ ತಾಮ್ರದ ತಂತಿಯ ಕೊಳವೆ ಸಿಂಬಿಗಳು ಅವುಗಳಲ್ಲಿ ವಿದ್ಯುತ್ ಪ್ರವಹಿಸಿದಾಗ ಕಾಂತ ಮಸೂರಗಳಂತೆ ವರ್ತಿಸುತ್ತವೆ. ವಿದ್ಯುತ್ ಪ್ರವಾಹದ ಪ್ರಮಾಣವನ್ನು ಹೆಚ್ಚು ಕಡಿಮೆ ಮಾಡುವುದರಿಂದ ನಾಭಿದೂರವನ್ನು ಹೆಚ್ಚು ಕಡಿಮೆ ಮಾಡಬಹುದು. ಕಾಂತಕ್ಷೇತ್ರ ಒಂದು ನಿರ್ದಿಷ್ಟ ಪರಿಮಿತಿಯಲ್ಲಿ ವರ್ತಿಸುವಂತೆ ಮಾಡಲು ಮೃದುಕಬ್ಬಿಣದ ಹೊದಿಕೆಯಲ್ಲಿ ಸಂದುಗಳನ್ನು ಕತ್ತರಿಸಿರುತ್ತಾರೆ. ಈ ಸಂದಿನ ರಚನೆ, ಅದರ ಅಗಲ ಮತ್ತು ಸಿಂಬಿಯ ವ್ಯಾಸ ಕಾಂತಕ್ಷೇತ್ರದ ಬಲ ಮತ್ತು ವ್ಯಾಪ್ತಿಯ ಮೇಲೆ ಹೆಚ್ಚು ಪರಿಣಾಮವನ್ನು ಬೀರುತ್ತವೆ. ಚಿತ್ರಗಳು ಹೆಚ್ಚು ನಾಭಿದೂರ ಮತ್ತು ಕಡಿಮೆ ನಾಭಿದೂರದ ಕಾಂತ ಮಸೂರಗಳನ್ನು ತೋರಿಸುತ್ತವೆ.

**ಪ್ರತಿಬಿಂಬದ ದೋಷಗಳು:** ಕಾಂತ ಮತ್ತು ಸ್ಥಿರ ವಿದ್ಯುತ್ ಕ್ಷೇತ್ರಗಳು ಎಲೆಕ್ಟ್ರಾನ್ ಮಸೂರಗಳಂತೆ ವರ್ತಿಸುವುದನ್ನು ತಿಳಿಯಲು ಉಪಾಕ್ಷಕಿರಣಗಳನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳಲಾಗಿದೆ. ಈ ಸ್ಥಿತಿ ಇಲ್ಲದಿದ್ದರೆ ಪ್ರತಿಬಿಂಬದಲ್ಲಿ ಅನೇಕ ದೋಷಗಳಿರುತ್ತವೆ. ದ್ಯುತಿ ಮಸೂರಗಳಿಂದ ಮೂಡುವ ಪ್ರತಿಬಿಂಬದಲ್ಲಿನ ಐದು ದೋಷಗಳೂ ಸ್ಥಿರ ವಿದ್ಯುತ್ ಮಸೂರದಿಂದ ಮಾಡುವ ಪ್ರತಿಬಿಂಬದಲ್ಲಿರುತ್ತವೆ. ಇವುಗಳಲ್ಲದೆ ಕಾಂತಮಸೂರಗಳಿಂದ ಮೂಡುವ ಪ್ರತಿಬಿಂಬದಲ್ಲಿ ಬೇರೆ ದೋಷಗಳೂ ಇರುತ್ತವೆ. ಹೆಚ್ಚಿನ ದೋಷಗಳು ಪ್ರತಿಬಿಂಬ ತಿರುಗುವುದರಿಂದ ಹುಟ್ಟಿಕೊಳ್ಳುತ್ತವೆ.




**ಚಿತ್ರ 9 (a) ಹೆಚ್ಚು ನಾಭಿದೂರದ ಕಾಂತಮಸೂರ (b) ಕಡಿಮೆ ನಾಭಿದೂರದ ಕಾಂತಮಸೂರ**

(1) ಗೋಳವಿಪಥನ: ಅಕ್ಷದಿಂದ ಹೆಚ್ಚು ದೂರದಲ್ಲಿ ಮಸೂರವನ್ನು ತಲುಪುವ ಎಲೆಕ್ಟ್ರಾನುಗಳು ಹೆಚ್ಚು ಬಾಗುತ್ತವೆ. ಆದ್ದರಿಂದ ಅಕ್ಷದ ಮೇಲಿನ ಒಂದು ಬಿಂದು ಬಲಗಡೆ ಪ್ರತಿಬಿಂಬದಲ್ಲಿ ವೃತ್ತವಾಗಿ ಹರಡಿಕೊಳ್ಳುತ್ತದೆ. ಇದರ ತ್ರಿಜ್ಯ $(\Delta r_i), a^3$ಗೆ ಸರಿಗಟ್ಟಿ ವ್ಯತ್ಯಾಸವಾಗುತ್ತದೆ. ವಸ್ತುವಿನ ಪ್ರತಿಯೊಂದು ಬಿಂದುವೂ ಹೀಗೆ ಪ್ರತಿಬಿಂಬದಲ್ಲಿ ವಿಸ್ತೃತ ವೃತ್ತವಾಗಿ ಹರಡಿಕೊಳ್ಳುತ್ತದೆ. ಈ ದೋಷವನ್ನು ಗೋಳವಿಪಥನ ಎನ್ನುತ್ತಾರೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳಲ್ಲಿ ಬಳಸುವ ಕಾಂತ ಮತ್ತು ಸ್ಥಿರವಿದ್ಯುತ್ ಮಸೂರಗಳು ಅಭಿಸರಿಸುವ (ಕನ್ವರ್ಜಿಂಗ್) ಮಸೂರಗಳಾದ್ದರಿಂದ ಗೋಳವಿಪಥನವನ್ನು ಸಂಪೂರ್ಣವಾಗಿ ನಿವಾರಿಸಲು ಆಗುವುದೇ ಇಲ್ಲ. ಇದು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ವಿಘಟನ ಸಾಮರ್ಥ್ಯವನ್ನು ನಿಯಂತ್ರಣಗೊಳಿಸುತ್ತದೆ.




**ಚಿತ್ರ 10 ಗೋಳವಿಪಥನ**




**ಚಿತ್ರ 11 ಕೋಮ ದೋಷದ ನಿರೂಪಣೆ**

(2) ಕೋಮ: ಇದು ಎರಡನೆಯ ದೋಷ. ಅಕ್ಷಕ್ಕೆ ದೂರವಾಗಿರುವ ಪ್ರತಿಯೊಂದು ಬಿಂದು ಪ್ರತಿಬಿಂಬದಲ್ಲಿ ಧೂಮಕೇತು ರೂಪ ತಾಳುವುದರಿಂದ ಈ ದೋಷಕ್ಕೆ ಕೋಮ ಎಂದು ಹೆಸರು ಬಂದಿದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಕೋಮ ಅಷ್ಟು ಪ್ರಮುಖವಾದ ದೋಷವಲ್ಲ. ಪ್ರತಿಬಿಂಬೀಕರಣಗೊಳ್ಳುವ ವಸ್ತು ಅಕ್ಷದ ಅತಿ ಸಮೀಪದ ಪ್ರದೇಶಕ್ಕೆ ಸೀಮಿತಗೊಂಡಿರುತ್ತದೆ.

(3) ವಿಕೃತ(ಡಿಸ್ಟಾರ್ಶನ್): ಅಕ್ಷದಿಂದ ತ್ರಿಜ್ಯದಲ್ಲಿ ದೂರಹೋದಂತೆ ಪ್ರತಿಬಿಂಬದ ಲಂಬನ ಹೆಚ್ಚು ಇಲ್ಲವೆ ಕಡಿಮೆಯಾಗುವ ಸಾಧ್ಯತೆಯಿದೆ. ಇದನ್ನು ಅನುಸರಿಸಿ ಕ್ರಮವಾಗಿ



ಚಿತ್ರ 12 (a) ಪಿನ್‍ವಿಕೃತ

ಪಿನ್‍ವಿಕೃತ ಮತ್ತು ಪಿಪಾಯಿವಿಕೃತಗಳುಂಟಾಗುತ್ತವೆ. ಕಾಂತ ಮಸೂರಗಳಲ್ಲಿ ಇವುಗಳೊಂದಿಗೆ ತಿರುಗು ವಿಕೃತವೂ ಇರುತ್ತದೆ. ಈ ದೋಷಗಳು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಪ್ರತಿಬಿಂಬಗಳಲ್ಲಿ ಕಾಣಿಸಿಕೊಳ್ಳುತ್ತವಾದರೂ ಅವುಗಳಿಂದ ಅಂಥ ತೊಂದರೆ ಏನೂ ಆಗುವುದಿಲ್ಲ.



ಚಿತ್ರ 12 (b) ಪಿಪಾಯಿ ವಿಕೃತ

(4) ಆಸ್ಟಿಗ್ಮ್ಯಾಟಿಸಮ್: ಅಕ್ಷದಿಂದ ದೂರವಿರುವ ಒಂದು ವಸ್ತುಬಿಂದುವಿನಿಂದ ಹೊರಟ ಎಲೆಕ್ಟ್ರಾನುಗಳು ಪ್ರತಿಬಿಂಬ ಮೂಡುವಲ್ಲಿ ಪರಸ್ಪರ ಲಂಬವಾಗಿರುವ ಎರಡು ಗೆರೆಗಳ ಮೇಲೆ ಬಂದು ಸೇರುತ್ತವೆ. ಸ್ಪಷ್ಟವಾದ ಪ್ರತಿಬಿಂಬ ಬಿಂದು ಯಾವ ಗೆರೆಯ ಮೇಲೂ ಕಾಣುವುದಿಲ್ಲ. ಈ ದೋಷವನ್ನು ಆಸ್ಟಿಗ್ಮ್ಯಾಟಿಸಮ್ ಎನ್ನುತ್ತಾರೆ. ಇದರ ಪರಿಣಾಮವೆಂದರೆ ಪ್ರತಿಬಿಂಬತಲದಲ್ಲಿ ಗೊಂದಲಪಡಿಸುವ ವೃತ್ತ. ಅಕ್ಷದಿಂದ ವಸ್ತು ಬಿಂದು ದೂರವಾದಷ್ಟೂ ಈ ಗೊಂದಲ ವೃತ್ತ ದೊಡ್ಡದಾಗುತ್ತದೆ. ಅಕ್ಷದ ಮೇಲೆ ಇಂಥ ಗೊಂದಲ ವೃತ್ತ ಮೂಡುವುದಿಲ್ಲ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಈ ದೋಷ ಗಣನೀಯವಾದುದಲ್ಲ.



ಚಿತ್ರ 13 ಬಿಂದುವಿನ ಆಸ್ಟಿಗ್ಮ್ಯಾಟಿಕ್ ಪ್ರತಿಬಿಂಬ

(5) ವರ್ಣವಿಪಥನ (ಕ್ರೊಮ್ಯಾಟಿಕ್ ಅಬೆರೇಷನ್): ಭರ ಎಲೆಕ್ಟ್ರಾನ್ ಮತ್ತು ಮಂದ ಎಲೆಕ್ಟ್ರಾನುಗಳು ಒಂದೇ ನಾಭಿಗೆ ಬರುವುದಿಲ್ಲ. ಆದ್ದರಿಂದ ಒಂದೇ



ಚಿತ್ರ 14 ವರ್ಣವಿಪಥನ ದೋಷದ ನಿರೂಪಣೆ

ಬಿಂದುವಿನಿಂದ ಹೊರಡುವ ಬೇರೆ ಬೇರೆ ವೇಗದ ಎಲೆಕ್ಟ್ರಾನುಗಳು ಆ ಬಿಂದುವಿನ ಪ್ರತಿಬಿಂಬವನ್ನು ಹರಡುತ್ತದೆ.

ಈ ದೋಷವನ್ನು ವರ್ಣವಿಪಥನ ಎನ್ನುತ್ತಾರೆ. ಕಾಂತಮಸೂರದಲ್ಲಿ ಪ್ರತಿಬಿಂಬ ತಿರುಗುವುದರಿಂದ ವರ್ಣೀಯ (ಕ್ರೊಮ್ಯಾಟಿಕ್) ತಿರುಗುದೋಷವೂ ಕಾಣಿಸಿಕೊಳ್ಳುತ್ತದೆ. ಈ ದೋಷಗಳನ್ನು ಕಡಿಮೆಮಾಡಲು ಎಲೆಕ್ಟ್ರಾನುಗಳ ವೇಗೋತ್ಕರ್ಷಕ್ಕೆ ಉಪಯೋಗಿಸುವ ವಿಭವಾಂತರದಲ್ಲಿ ವ್ಯತ್ಯಾಸವಾಗದಂತೆ ನೋಡಿಕೊಳ್ಳಬೇಕು.

(6) ಕ್ಷೇತ್ರದ ವಕ್ರತೆ: ಮಸೂರದಲ್ಲಿ ಎಲ್ಲ ಭಾಗಗಳ ನಾಭಿದೂರ ಒಂದೇ ಆಗಿರುವುದಿಲ್ಲ. ಆದ್ದರಿಂದ ಒಂದು ಸಮತಲದ ಪ್ರತಿಬಿಂಬ ವಕ್ರವಾಗುತ್ತದೆ. ಈ ದೋಷವನ್ನು ಕ್ಷೇತ್ರದ ವಕ್ರತೆ ಎನ್ನುತ್ತಾರೆ. ವಸ್ತುವಿನ ವಿಸ್ತಾರ ಹೆಚ್ಚಾದರೆ ವಕ್ರತೆಯೂ ಹೆಚ್ಚಾಗುತ್ತದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಈ ದೋಷ ತೀರ ಕಡಿಮೆ.



ಚಿತ್ರ 15 ಕ್ಷೇತ್ರದ ವಕ್ರತ



ಚಿತ್ರ 16 ಪ್ರದೇಶ ವಿದ್ಯುತ್ ಅಂಶದ ಪರಿಣಾಮ

(7) ಆಕಾಶ ವಿದ್ಯುದಂಶದ ಪರಿಣಾಮ (ಸ್ಪೇಸ್ ಚಾರ್ಜ್ ಎಫೆಕ್ಟ್): ಎಲೆಕ್ಟ್ರಾನುಗಳು ಪರಸ್ಪರ ವಿಕರ್ಷಿಗೊಳ್ಳುತ್ತವೆ. ಆದ್ದರಿಂದ ಒಂದು ಎಲೆಕ್ಟ್ರಾನ್ ಕಿರಣ ಮುಂಬರಿದಂತೆಲ್ಲ ವಿಸ್ತಾರವಾಗುತ್ತ ಹೋಗುತ್ತದೆ. ಇದನ್ನು ಚಿತ್ರದಲ್ಲಿ ಕಾಣಬಹುದು. ಹೆಚ್ಚು ಎಲೆಕ್ಟ್ರಾನ್ ಸಾಂದ್ರತೆಯಿರುವ ಕಿರಣಗಳಲ್ಲಿ ಹರಡುವಿಕೆ ಹೆಚ್ಚಾಗಿರುತ್ತದೆ. ಈ ದೋಷವನ್ನು ಆಕಾಶ ವಿದ್ಯುದಂಶದ ಪರಿಣಾಮ ಎನ್ನುತ್ತಾರೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳಲ್ಲಿ ಎಲೆಕ್ಟ್ರಾನುಗಳ ವೇಗ ಹೆಚ್ಚಾಗಿರುವುದರಿಂದಲೂ ಕಿರಣಗಳಲ್ಲಿ ಸಾಂದ್ರತೆ ಕಡಿಮೆಯಿರುವುದರಿಂದಲೂ ಈ ದೋಷ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. (ಎಸ್.ಎ.ಎಚ್.)

**ಎಲೆಕ್ಟ್ರಾನ್ ನಮನ:** ಎಲೆಕ್ಟ್ರಾನ್ ದೂಲಗಳು ತರಂಗ ಚಲನೆಯ ಗುಣವನ್ನು ಪ್ರದರ್ಶಿಸುವ ಒಂದು ಘಟನೆ (ಎಲೆಕ್ಟ್ರಾನ್ ಡಿಫ್ರ್ಯಾಕ್ಷನ್). ವ್ಯತಿಕರಣ, ನಮನ ಮತ್ತು ಧ್ರುವೀಕರಣಗಳನ್ನು ವಿವರಿಸುವಾಗ ಬೆಳಕನ್ನು ವಿದ್ಯುತ್ಕಾಂತ ತರಂಗಗಳ ಪ್ರಸಾರವೆಂದೂ ದ್ಯುತಿವಿದ್ಯುತ್ ಕ್ರಿಯೆ ಮತ್ತು ಕಾಂಪ್ಟನ್ ಕ್ರಿಯೆಗಳನ್ನು ವಿವರಿಸುವಾಗ ಫೋಟಾನುಗಳ ಚಲನೆಯೆಂದೂ ಭಾವಿಸಬೇಕಾಗುತ್ತದೆ. ಫೋಟಾನುಗಳು ಬೆಳಕಿನ ಕಣಗಳು. ಇವುಗಳಿಗಿರುವ ತರಂಗ–ಕಣ ದ್ವೈತಗುಣದಂತೆ ಭೌತಕಣಗಳಿಗೂ ತರಂಗ–ಕಣ ದ್ವೈತಗುಣವಿದೆಯೆಂದು ಲೂಯಿಡಿಬ್ರಾಯಿ ಸೈದ್ಧಾಂತಿಕ ಆಧಾರದ ಮೇಲೆ ಸೂಚಿಸಿದ

(1924). ಈ ಸೂಚನೆಯಂತೆ ಒಂದು ಕಣದ ಸಂವೇಗಕ್ಕೂ ಅದರ ತರಂಗಾಂತರಕ್ಕೂ ಇರುವ ಸಂಬಂಧವನ್ನು $\lambda = \frac{h}{P}$ .......(1)

ಎಂದು ಬರೆಯಬಹುದು. ಇಲ್ಲಿ ë ಕಣದ ತರಂಗಾಂತರ P ಅದರ ಸಂವೇಗ ಮತ್ತು *h* ಪ್ಲಾಂಕನ ನಿಯತಾಂಕ. ಅತಿ ನಿಧಾನವಾಗಿ ಚಲಿಸುವ ಒಂದು ದೂಳಿನ ಕಣದ ತರಂಗಾಂತರ ಕೂಡ ಸಮೀಕರಣ (1)ರ ಪ್ರಕಾರ $10^{-8}$Å ಗಿಂತ ಕಡಿಮೆ ಇರುತ್ತದೆ. ಯಾವುದೇ ಭೌತ ರಚನೆಯ ಅಡ್ಡಗಲವಾದರೂ ಇದಕ್ಕಿಂತ ಹೆಚ್ಚಾಗಿರುವುದರಿಂದ ನಮನ ಪ್ರಯೋಗಗಳಿಂದ ಡಿಬ್ರಾಯಿಯ ಸೂಚನೆಯನ್ನು ಸ್ಥಿರಪಡಿಸಲು ತತ್‌ಕ್ಷಣ ಸಾಧ್ಯವಾಗಲಿಲ್ಲ.




ಚಿತ್ರ 1 (a) ನಿಕ್ಕಲ್ ಸ್ಫಟಿಕ, (b) ಒಂದು ಕರ್ಣಕ್ಕೆ ಲಂಬವಾಗಿ ಕತ್ತರಿಸಿರುವ ಸಮತಲವುಳ್ಳ ಅದೇ ಸ್ಫಟಿಕ

ಎಲೆಕ್ಟ್ರಾನುಗಳ ಜಡಮಾನ $9.1x10^{-28}$ ಗ್ರಾಂ 0.10 ವೋಲ್ಟ್ ವಿಭವಾಂತರದ ಮೂಲಕ ಹಾಯ್ದು ಬಂದರೆ ಅವುಗಳ ಸಂವೇಗ (ಮೊಮೆಂಟಂ)$1.7x10^{-19}$ ಗ್ರಾಂ–ಸೆಂಮೀ–ಸೆ.$^{-1}$ ಆಗುತ್ತದೆ. ಇಷ್ಟು ಸಂವೇಗವಿರುವ ಕಣಗಳ ತರಂಗಾಂತರ 3.9Å. ಸ್ಫಟಿಕಗಳ ಒಳ ಸಮತಲದೂರ ಸಾಮಾನ್ಯವಾಗಿ ಈ ಪ್ರಮಾಣ ದಲ್ಲಿ ಇರುತ್ತದೆ. ಆದ್ದರಿಂದ ನೆರವಿನಿಂದ ಎಲೆಕ್ಟ್ರಾನ್ ನಮನ ಪ್ರಯೋಗಗಳನ್ನು ಮಾಡುವುದು ಸಾಧ್ಯವಾಯಿತು.




ಚಿತ್ರ 2 C ಟಂಗ್‌ಸ್ಟನ್ ತಂತು, Ni ನಿಕ್ಕಲ್ ಸ್ಫಟಿಕ, D ಮಧ್ಯೆ ರಂಧ್ರವಿರುವ ತೆರೆ, P ದರ್ಶಕ, M ಮಾಪಕ

1927ರಲ್ಲಿ ಡೇವಿಸನ್ ಮತ್ತು ಜರ್ಮರ್ ಎಂಬುವರು ಎಲೆಕ್ಟ್ರಾನ್ ನಮನ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದರು. ನಿಕ್ಕಲ್ ಸ್ಫಟಿಕದ ರಚನೆ ಅವರ ಪ್ರಯೋಗಗಳಿಗೆ ಸಹಕಾರಿಯಾಯಿತು. ಇದು ಮುಖಮಧ್ಯ ಘನ ಸ್ಫಟಿಕ (ಫೇಸ್ ಸೆಂಟರ್ಡ್ ಕ್ಯೂಬಿಕ್ ಕ್ರಿಸ್ಟಲ್). ಇದರ ಘಟಕಕೋಶದ ಎಂಟು ಮೂಲೆಗಳಲ್ಲೂ ಮತ್ತು ಪ್ರತಿಮುಖದ ಮಧ್ಯದಲ್ಲೂ ಪರಮಾಣುಗಳಿವೆ. ಘಟಕಕೋಶದ ಅಂಚಿನ ದೂರ 3.51Å ಇದನ್ನು ಚಿತ್ರದಲ್ಲಿ ತೋರಿಸಿದೆ. ಹಾಗೆಯೇ ಒಂದು ಕರ್ಣಕ್ಕೆ ಲಂಬವಾಗಿ ಕತ್ತರಿಸಿರುವ ಸಮತಲವನ್ನು ನೋಡಬಹುದು. ಇದರಲ್ಲಿ ಒಂದು ಪರಮಾಣು ಶ್ರೇಣಿಗೂ ಇನ್ನೊಂದು ಪರಮಾಣು ಶ್ರೇಣಿಗೂ ಇರುವ ಅಂತರ 2.15Å. ಇದನ್ನು ರೇಖಾಂತರ d=2.15Å. ಇರುವ ಒಂದು ಸಮತಲ ರೇಖಾಪಟಲವೆಂದು ಪರಿಗಣಿಸಬಹುದು, ಇದರ ಮೇಲೆ ತ್ರಿಕೋನದ ಯಾವುದಾದರೂ ಒಂದು ಬಾಹುವಿಗೆ ಪತನ ಸಮತಲ ಲಂಬವಾಗಿರುವಂತೆ ಎಲೆಕ್ಟ್ರಾನುಗಳು ಬಿದ್ದರೆ ಅವು ನಮನಗೊಳ್ಳುತ್ತವೆ. ಇದು ಅನುಸರಿಸುವ ಸಂಬಂಧವನ್ನು

*d sinè=në* .....(2)

ಎಂದು ಬರೆಯಬಹುದು. ಇಲ್ಲಿ *è* ನಮನ ಮತ್ತು ಪತನದೂಲಗಳ ಮಧ್ಯೆ ಏರ್ಪಡುವ ಕೋನ, *n* ಒಂದು ಪೂರ್ಣಾಂಕ. ಡೇವಿಸನ್ ಮತ್ತು ಜರ್ಮರ್ ಅವರ ಪ್ರಯೋಗದ ಉಪಕರಣಗಳನ್ನು ಚಿತ್ರದಲ್ಲಿ ನೋಡಬಹುದು.

ಕಾದ ಟಂಗ್‌ಸ್ಟನ್ ತಂತುವಿನಿಂದ ಹೊರಹೊಮ್ಮಿದ ಎಲೆಕ್ಟ್ರಾನುಗಳು ವೇಗೋತ್ಕರ್ಷಗೊಂಡು ನಿಕ್ಕಲ್ ಸ್ಫಟಿಕದ ಮೇಲೆ ಬೀಳುತ್ತವೆ. ಸ್ಫಟಿಕದಲ್ಲಿ ನಮನಗೊಂಡ ಎಲೆಕ್ಟ್ರಾನುಗಳು ತೆರೆಯಲ್ಲಿರುವ ರಂಧ್ರದ ಮೂಲಕ ದರ್ಶಕವನ್ನು ತಲಪುತ್ತವೆ. ಇವುಗಳ ಸಂಖ್ಯೆಗಳಿಗೆ ಅನುಗುಣವಾಗಿ ಮಾಪಕ (ಮೀಟರ್) ವಾಚಕವನ್ನು (ರೀಡಿಂಗ್) ತೋರಿಸುತ್ತದೆ. ಸ್ಫಟಿಕ ದಲ್ಲಿ ಯಾವ ಕಾರಣಕ್ಕಾದರೂ ಶಕ್ತಿಯನ್ನು ಕಳೆದುಕೊಂಡ ಎಲೆಕ್ಟ್ರಾನುಗಳು ದರ್ಶಕವನ್ನು ತಲುಪದಂತೆ ತಡೆಯಲು ಅದಕ್ಕೆ ಋಣ ವಿಭವ ವನ್ನು ಆರೋಪಿಸಲಾಗಿದೆ.

54 ವೋಲ್ಟ್ ಎಲೆಕ್ಟ್ರಾನುಗಳು ನಮನಗೊಂಡಾಗ ದರ್ಶಕವನ್ನು ತಲಪುವ ಎಲೆಕ್ಟ್ರಾನುಗಳ ಸಂಖ್ಯೆ *N(è)* ಮತ್ತು *è* ಗಳಿಗಿರುವ ಸಂಬಂಧವನ್ನು ಚಿತ್ರ 3ರಲ್ಲಿರುವ ರೇಖಾಚಿತ್ರ (ಗ್ರಾಫ್) ತೋರಿಸುತ್ತದೆ. 50°ಯಲ್ಲಿ ಒಂದು ಶೃಂಗವಿದೆ. 54 ವೋಲ್ಟ್ ವಿಭವಾಂತರದ ಮೂಲಕ ಹಾಯ್ದು ಬರುವ ಎಲೆಕ್ಟ್ರಾನುಗಳ ತರಂಗಾಂತರ ಸಮೀಕರಣ (1)ರ ಪ್ರಕಾರ 1.67Å. ಸಮೀಕರಣ (2)ರ ಪ್ರಕಾರ ಇದು 1.65Å. ಅಗುತ್ತದೆ. ಈ ಎರಡು ಬೆಲೆಗಳು ಒಂದಕ್ಕೊಂದು ಅತಿ ಸಮೀಪದಲ್ಲಿದ್ದು ಡಿಬ್ರಾಯಿಯ ಸೂಚನೆಯನ್ನು ಸಮರ್ಥಿಸುತ್ತವೆ.




ಚಿತ್ರ 3 ನಿಕ್ಕಲ್ ಸ್ಫಟಿಕದಲ್ಲಿ ಚದರಿದ ಎಲೆಕ್ಟ್ರಾನುಗಳ ಕೋನೀಯ ಹಂಚಿಕೆ

ಜೆ.ಪಿ. ಥಾಮ್ಸನ್ನನು ಸ್ಫಟಿಕಗಳ ಮೂಲಕ ಹಾಯುವ ಎಲೆಕ್ಟ್ರಾನುಗಳ ನಮನ ಪ್ರಯೋಗವನ್ನು ಮಾಡಿದ (1928). ಸ್ಫಟಿಕಗಳ ಒಳಸಮತಲ ದೂರ ಮತ್ತು ಓರೆಕೋನಗಳಿರುವ ಸಂಬಂಧವನ್ನು ಬ್ರ್ಯಾಗ್ ನಿಯಮ ಕೊಡುತ್ತದೆ. ಈ ನಿಯಮದ ಜ್ಯಾಮಿತಿಕ ನಿರೂಪಣೆಯನ್ನು ಚಿತ್ರದಲ್ಲಿ ನೋಡಬಹುದು. d ಅಂತರದಲ್ಲಿರುವ ಮಟ್ಟ ಗೆರೆಗಳು ಸ್ಫಟಿಕದ ಸಮತಲಗಳನ್ನು ಪ್ರತಿನಿಧಿಸುತ್ತವೆ. $I_1$ ಮತ್ತು $I_2$ ಎಲೆಕ್ಟ್ರಾನ್ ಪತನದೂಲಗಳು (ಇನ್ಸಿಡೆಂಟ್




ಚಿತ್ರ 4 ಬ್ರ್ಯಾಗ್ ನಿಯಮದ ಜ್ಯಾಮಿತಿಕ ನಿರೂಪಣ

ಬೀಮ್ಸ್). ಅವು A ಮತ್ತು B ಯಲ್ಲಿರುವ ಪರಮಾಣುಗಳಿಗೆ ತಾಗಿ ಚದರುತ್ತವೆ. ಬ್ರ್ಯಾಗ್ ನಿಯಮಕ್ಕೆ ಅನುಗುಣವಾಗಿ ಓರೆಕೋನ ಇದ್ದರೆ ಚದರಿದ ದೂಲಗಳು ಸ್ಫಟಿಕ ಸಮತಲಗಳಿಗೆ ಪತನದೂಲ ಗಳಂತೆಯೆ ಕೋನಗಳನ್ನುಂಟು ಮಾಡುತ್ತವೆ. $R_1$ ಮತ್ತು $R_2$ ಚದರಿದ ದೂಲಗಳು. ಈ ದೂಲಗಳಿಗಿರುವ ದಾರಿ ವ್ಯತ್ಯಾಸ FBH. ರಚನಾತ್ಮಕ ವ್ಯತಿಕರಣ ಸಂಭವಿಸಬೇಕಾದರೆ.

FBH=*në* .....(3)

ಅಗಬೇಕು. ಚಿತ್ರದ ಜ್ಯಾಮಿತಿಯಿಂದ

FBH=EB=2*dsinè* .....(4)

ಎಂದಾಗುತ್ತದೆ. ಈಗ ಬ್ರ್ಯಾಗ್ ನಿಯಮದ ಸಮೀಕರಣ ರೂಪವನ್ನು

2*dsinè=në* ....(5)

ಎಂದು ಬರೆಯಬಹುದು. ಎಲೆಕ್ಟ್ರಾನುಗಳಿಗೆ ಸಂಬಂಧಿಸಿದಂತೆ ಓರೆಕೋನ ಬಹಳ ಕಡಿಮೆ ಇರುತ್ತದೆ. ಆದ್ದರಿಂದ (5)ನ್ನು

2*dè=në* ....(6)

ಎಂದು ಬರೆಯಬಹುದು.




ಚಿತ್ರ 5 ತೆಳುಪೊರೆಯ ಮೂಲಕ ಎಲೆಕ್ಟ್ರಾನುಗಳು ಹಾಯುವಾಗ ಸಂಭವಿಸುವ ನಮನ ನಮೂನೆ

ಬ್ರ್ಯಾಗ್ ನಿಯಮಕ್ಕೆ ಸರಿಯಾಗಿ ಮಾಲಿಕೊಂಡಿರುವ ಸಮತಲಗಳುಳ್ಳ ಒಂದು ಏಕಸ್ಫಟಿಕದ ಮೇಲೆ ಪತನವಾಗುವ ಎಲೆಕ್ಟ್ರಾನುಗಳು ಪ್ರತಿಫಲನಗೊಂಡು ಮಾದರಿಗೆ ಸ್ವಲ್ಪ ದೂರದಲ್ಲಿ ಬೊಟ್ಟನ್ನು

ಮೂಡಿಸುತ್ತವೆ. ಹಾಗಲ್ಲದೆ ಅವು ಸಣ್ಣ ಸಣ್ಣ ಸ್ಫಟಿಕಗಳ ಸಮೂಹದ ಮೂಲಕ ಹಾಯ್ದರೆ ಅಡ್ಡಾದಿಡ್ಡಿ ಯಾಗಿ ಮಾಲಿಕೊಂಡಿರುವ ಸಹಸ್ರಾರು ಸಮತಲಗಳಿಂದ ಬ್ರ್ಯಾಗ್ ಪ್ರತಿಫಲನಗೊಂಡು ಟೊಳ್ಳು ಬುಗರಿಯ ಆಕಾರದಲ್ಲಿ ಹೊರಕ್ಕೆ ಬರುತ್ತವೆ.

ಅವುಗಳಿಗೆ ಅಡ್ಡವಾಗಿ ಒಂದು ಫೋಟೋಗ್ರಫಿ ತಟ್ಟೆಯನ್ನು ಇಟ್ಟರೆ ಅದರ ಮೇಲೆ ವೃತ್ತಗಳು ಮೂಡುತ್ತವೆ. ಇದನ್ನು ಚಿತ್ರದಲ್ಲಿ ಕಾಣಬಹುದು. ಆ ವೃತ್ತದ ವ್ಯಾಸ ಮತ್ತು L ಮಾದರಿಗೂ ತಟ್ಟೆಗೂ ಇರುವ ದೂರ ಆಗಿದ್ದರೆ ಸಮೀಕರಣ (6) ರಿಂದ

$$d = \frac{n\lambda L}{D} \quad ..........(7)$$

ಎಂದು ಬರೆಯಬಹುದು. $n$ ತಿಳಿದಿದ್ದರೆ $d$ ತಿಳಿಯುತ್ತದೆ.

ಥಾಮ್ಸನ್ನನ ಉಪಕರಣಗಳನ್ನು ಚಿತ್ರದಲ್ಲಿ ನೋಡಬಹುದು. ವಿಸರ್ಜನ ಕೊಳವೆಯಲ್ಲಿ ಎಲೆಕ್ಟ್ರಾನುಗಳು ಉತ್ಪತ್ತಿಯಾಗಿ *B* ಮೂಲಕ ಹಾಯುತ್ತವೆ. *B* ಯ ಹಿಂಬದಿಯಲ್ಲಿ ಸ್ವಲ್ಪ ದೂರಕ್ಕೆ ಲೋಹದ ಪೊರೆ ಇದೆ. ಇದು ಸಣ್ಣ ಸಣ್ಣ ಸ್ಫಟಿಕಗಳ ಸಮುಚ್ಚಯ. ಫೋಟೋಗ್ರಫಿ ತಟ್ಟೆಯನ್ನು ಕೆಳಕ್ಕೆ ಜಾರಿಸುವುದಕ್ಕೆ ಮುಂಚೆ ಎಲೆಕ್ಟ್ರಾನ್ ನಮನ




**ಚಿತ್ರ 6 ಥಾಮ್ಸನ್ನನ ಉಪಕರಣ : A ವಿಸರ್ಜನ ಕೊಳವೆ, B ಸೂಕ್ಷ್ಮ ಕೊಳವೆ, $S_1$ ಲೋಹದ ಪೊರೆ, $S^2$ ತೆರೆ, P ಛಾಯಾಚಿತ್ರದ ತಟ್ಟೆ**

κ

ನಮೂನೆಯನ್ನು ಪ್ರತಿದೀಪ್ತಶೀಲ (ಫ್ಲೂರಸೆಂಟ್) ತೆರೆಯಮೇಲೆ ನೋಡಬಹುದು. ಈ ನಮೂನೆ ಎಲೆಕ್ಟ್ರಾನ್‌ನಮನದಿಂದ ಹುಟ್ಟಿದುದೆಂಬುದನ್ನು ಖಚಿತಪಡಿಸಲು ಥಾಮ್ಸನ್ ಕಾಂತಕ್ಷೇತ್ರದಲ್ಲಿ ಎಲೆಕ್ಟ್ರಾನುಗಳನ್ನು ಬಾಗಿಸಿ ತತ್ಫಲವಾಗಿ ನಮೂನೆ ಸ್ಥಳಾಂತರಗೊಳ್ಳುವುದನ್ನು ತೋರಿಸಿದ.



**ಚಿತ್ರ 7 30kV ಎಲೆಕ್ಟ್ರಾನುಗಳು ಚಿನ್ನದ ತೆಳು ಹಾಳೆಯ ಮೂಲಕ ಹಾಯುವಾಗ ಮೂಡುವ ನಮನ ನಮೂನೆ**

ಚಿತ್ರದಲ್ಲಿ ತೆಳುವಾದ ಚಿನ್ನದ ಹಾಳೆಯ ಮೂಲಕ 30kv ಎಲೆಕ್ಟ್ರಾನುಗಳು ಹಾಯುವುದರಿಂದ ಮೂಡಿದ ನಮನ ನಮೂನೆಯನ್ನು ನೋಡಬಹುದು. ಮಧ್ಯದ ಬಿಳಿಬೊಟ್ಟು ನಮನಗೊಳ್ಳದೆ ಇರುವ ಎಲೆಕ್ಟ್ರಾನುಗಳಿಗೆ ಸಂಬಂಧಿಸಿದುದು. ಮುಂದೆ ಬರೆದಿರುವ ಪಟ್ಟಿಯಲ್ಲಿ ಅಲ್ಯೂಮಿನಿಯಂ, ಚಿನ್ನ ಮತ್ತು ಪ್ಲಾಟಿನಂ ಲೋಹಗಳ ಒಳಸಮತಲ ದೂರಗಳ ಹೋಲಿಕೆಯನ್ನು ಕೊಟ್ಟಿದೆ.

ಎಕ್ಸ್‌ಕಿರಣ ನಮನ ಮೌಲ್ಯಗಳು ಎಲೆಕ್ಟ್ರಾನ್ ನಮನ ಮೌಲ್ಯಗಳಿಗೆ ತೀರಾ ಹತ್ತಿರವಿದ್ದು ಎಲೆಕ್ಟ್ರಾನುಗಳ ತರಂಗಸ್ವಭಾವವನ್ನು ಸ್ಪಷ್ಟವಾಗಿ ತೋರಿಸುತ್ತವೆ.

ಎಕ್ಸ್‌ಕಿರಣ ಮತ್ತು ಎಲೆಕ್ಟ್ರಾನ್ ನಮನ ಪ್ರಯೋಗಗಳಿಂದ ಒದಗಿದ ಒಳಸಮತಲ ದೂರಗಳು

| ಲೋಹ | ಎಕ್ಸ್‌ಕಿರಣ ಅಂತರ(Å) | ಎಲೆಕ್ಟ್ರಾನ್ ದೂಲ ಅಂತರ(Å) |
|---|---|---|
| ಅಲ್ಯೂಮಿನಿಯಂ | 4.046 | 4.03 |
| ಚಿನ್ನ | 4.060 | 4.09 |
| ಪ್ಲಾಟಿನಂ | 3.910 | 3.89 |

1982ರಲ್ಲಿ ಇಂಥವೇ ಪ್ರಯೋಗಗಳನ್ನು ಕಿಕೂಚಿ ನಡೆಸಿದ. ಅಭ್ರಕದ ತೆಳುವಾದ ಏಕಸ್ಫಟಿಕ ಹಾಳೆಗಳ ಮೂಲಕ 10–85kV ಎಲೆಕ್ಟ್ರಾನುಗಳನ್ನು ಹಾಯಿಸಿ ಅವುಗಳ ನಮನವನ್ನು ಪರಿಕ್ಷಿಸಿದ. ಚಿತ್ರದಲ್ಲಿ 68kV ಎಲೆಕ್ಟ್ರಾನುಗಳನ್ನು ಕಿಕೂಚಿ ಅಭ್ರಕದ ತೆಳುವಾದ ಹಾಳೆಯ ಮೂಲಕ ಹಾಯಿಸಿ ಫೋಟೋ ತೆಗೆದಿರುವ ನಮನ ನಮೂನೆಯನ್ನು ಕಾಣಬಹುದು.



**ಚಿತ್ರ 8 ತೆಳು ಆಭ್ರಕದ ಹಾಳೆಯಿಂದ ಉಂಟಾದ 68 kV ಎಲೆಕ್ಟ್ರಾನುಗಳ ನಮನ ನಮೂನೆ**

ಎಲೆಕ್ಟ್ರಾನುಗಳ ನಮನ ಎಕ್ಸ್‌ಕಿರಣಗಳ ನಮನದಂತೆಯೇ ಸ್ಫಟಿಕಗಳ ಆಂತರಿಕ ರಚನೆಯನ್ನು ತಿಳಿಯಲು ಸಹಾಯಕವಾಗಿದೆ. ಇದರ ಜೊತೆಗೆ ಸೈದ್ಧಾಂತಿಕವಾಗಿ ಇದು ತರಂಗಬಲವಿಜ್ಞಾನದ (ವೇವ್ ಮೆಕನಿಕ್ಸ್) ಬೆಳವಣಿಗೆಗೆ ಭದ್ರವಾದ ಅಡಿಪಾಯವನ್ನು ಹಾಕಿದೆ. (ಎಸ್.ಎ.ಎಚ್.)

**ಎಲೆಕ್ಟ್ರಾನ ವೋಲ್ಟ್:** ಶಕ್ತಿಯ ಒಂದು ಏಕಮಾನ (unit), ಕಣಗಳ ಚಲನಶಕ್ತಿ (ಕೈನೆಟಿಕ್ ಎನರ್ಜಿ) ಹಾಗೂ ಜಡಮಾನಗಳನ್ನು (ಮಾಸಸ್) ಅಳೆಯಲು ಈ ಏಕಮಾನವನ್ನು ಉಪಯೋಗಿಸುತ್ತಾರೆ. ಒಂದು ವೋಲ್ಟ್ ವಿಭವಾಂತರದ ಮೂಲಕ ಹಾಯುವಾಗ ಎಲೆಕ್ಟ್ರಾನಿನ (ವಿದ್ಯುದಂಶ ± ಇರುವ ಕಣದ) ಚಲನಶಕ್ತಿಯಲ್ಲಿ ಸಂಚಯವಾಗುವ ಶಕ್ತಿಗೆ ಒಂದು ಎಲೆಕ್ಟ್ರಾನ್ ವೋಲ್ಟ್ (eV) ಎನ್ನುತ್ತಾರೆ. ಇದು $1.602 \times 10^{-12}$ ಎರ್ಗ್‌ಗೆ ಸಮ. ಇದರ ಬೆಲೆ ತುಂಬಾ ಕಡಿಮೆ. ಆದ್ದರಿಂದ ಇದರ ಗುಣ್ಯಗಳನ್ನು ಉಪಯೋಗಿಸುವುದು ವಾಡಿಕೆ.

1 ಕಿಲೊ ಎಲೆಕ್ಟ್ರಾನ್ ವೋಲ್ಟ್ ($\kappa$eV)=$10^3$eV

1 ಮಿಲಿಯನ್ ಎಲೆಕ್ಟ್ರಾನ್ ವೋಲ್ಟ್ (MeV)=$10^6$eV=$10^3$ eV

1 ಬಿಲಿಯನ್ ಎಲೆಕ್ಟ್ರಾನ್ ವೋಲ್ಟ್ (BeV)=$10^9$eV. ಇದನ್ನು ಗಿಗ ಎಲೆಕ್ಟ್ರಾನ್ ವೋಲ್ಟ್ ಎಂದು ಕರೆಯುತ್ತಾರೆ. (GeV=$10^3$MeV) ಈ ಮಾನದಲ್ಲಿ ಒಂದು ಪ್ರೋಟಾನಿನ ಜಡಮಾನ 938.256 MeV ಒಂದು ನ್ಯೂಟ್ರಾನಿನ ಜಡಮಾನ 939–550MeV. ಒಂದು ಎಲೆಕ್ಟ್ರಾನಿನ ಜಡಮಾನ 0.511 MeV, ಸಾಮಾನ್ಯವಾಗಿ ಕಣಗಳ ಜಡಮಾನಗಳನ್ನು ಎಲೆಕ್ಟ್ರಾನಿನ ಜಡಮಾನದ ಗುಣ್ಯದಲ್ಲಿ ಕೊಡುತ್ತಾರೆ. ಆದ್ದರಿಂದ ಯಾವ ಕಣದ ಜಡಮಾನವನ್ನಾದರೂ ಸುಲಭವಾಗಿ ಶಕ್ತಿಏಕಮಾನಗಳಲ್ಲಿ ಬರೆಯಬಹುದು. ಉದಾಹರಣೆಗೆ ರಿ± ಮೆಸಾನಿನ ಜಡಮಾನ 273 $m_e$. ಇಲ್ಲಿ $m_e$ ಎಲೆಕ್ಟ್ರಾನಿನ ಜಡಮಾನ. ಆದ್ದರಿಂದ ರಿ± ಮೆಸಾನಿನ ಜಡಮಾನ 139.503 MeV ಎಂದು ಬರೆಯಬಹುದು. (ಎಸ್.ಎ.ಎಚ್.)

**ಎಲೆಕ್ಟ್ರಾನ್ ಸೂಕ್ಷ್ಮದರ್ಶಿ:** ಎಲೆಕ್ಟ್ರಾನ್‌ಗಳ ನೆರವಿನಿಂದ ಸೂಕ್ಷ್ಮವಸ್ತುಗಳ ಬಹು ವಿಸ್ತೃತವಾದ ಛಾಯಾಚಿತ್ರಗಳನ್ನು ಪಡೆಯಲು ಉಪಯೋಗಿಸುವ ಉಪಕರಣ (ಎಲೆಕ್ಟ್ರಾನ್ ಮೈಕ್ರೊಸ್ಕೋಪ್). ದ್ಯುತಿಸೂಕ್ಷ್ಮದರ್ಶಿಯ ರಚನೆ ಮತ್ತು ಉಪಯೋಗದಲ್ಲಿ ಸುಮಾರು 300 ವರ್ಷಗಳ ಅವಧಿಯಲ್ಲಿ ನಡೆದ ಸುಧಾರಣೆಯನ್ನು ಮೀರಿಸುವಂಥವನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಿ ಕೇವಲ 15 ವರ್ಷಗಳಲ್ಲೆ ಸಾಧಿಸಿತು. ಇಷ್ಟು ತ್ವರಿತಗತಿಯಿಂದ ನಡೆದ ಸಂಶೋಧನೆಯೇ ಈ ಉಪಕರಣದ ವೈಜ್ಞಾನಿಕ ಪ್ರಾಮುಖ್ಯಕ್ಕೆ ಹಿಡಿದ ಕನ್ನಡಿ.

**ಇತಿಹಾಸ:** ಎಲೆಕ್ಟ್ರಾನುಗಳು ತರಂಗಗಳಂತೆ ವರ್ತಿಸುತ್ತವೆಂದು ಲೂಯಿ ಡಿಬ್ರಾವಿ ಸೈದ್ಧಾಂತಿಕವಾಗಿ ತೋರಿಸಿದ (1924). ಆ ಸಿದ್ಧಾಂತದಂತೆ ವಿಭವಾಂತರದಿಂದ ವೇಗೋತ್ಕರ್ಷಗೊಂಡ ಎಲೆಕ್ಟ್ರಾನುಗಳ ತರಂಗಾಂತರ 0.05. ಇದು 1/100,000 ಪಾಲು ಮಾತ್ರ. ಇದರಿಂದ ಎಲೆಕ್ಟ್ರಾನುಗಳು ಮೂಡಿಸುವ ಛಾಯಾಚಿತ್ರಗಳಲ್ಲಿ 10 $\mathring{A}$ ಅಂತರವುಳ್ಳ ಸೂಕ್ಷ್ಮ ರಚನೆ ಕೂಡ ಪ್ರಕಟವಾಗುವ ಸಾಧ್ಯತೆಯನ್ನು ಸ್ಪಷ್ಟವಾಗಿ ಕಾಣಬಹುದು.

ಎಲೆಕ್ಟ್ರಾನ್ ಕಿರಣಗಳನ್ನು ಬೆಳಕಿನಂತೆ ಉಪಯೋಗಿಸಲು ತಕ್ಕ ಮಸೂರಗಳು ಬೇಕು. ಗಾಜಿನ ಮಸೂರಗಳು ಬೆಳಕಿನ ಕಿರಣಗಳನ್ನು ಕೇಂದ್ರೀಕರಿಸುವಂತೆ ಅಕ್ಷಸಮವಿರುವ ಸ್ಥಿರ ವಿದ್ಯುತ್ ಮತ್ತು ಕಾಂತಕ್ಷೇತ್ರಗಳು ಎಲೆಕ್ಟ್ರಾನುಗಳನ್ನು ಕೇಂದ್ರೀಕರಿಸುತ್ತವೆಂದು ಬುಷ್ ತೋರಿಸಿದ್ದಾನೆ. 1932ರಲ್ಲಿ ಅರ್ನೆಸ್ಟ್ ಬ್ರೂಕ್ ಮತ್ತು ಎಚ್.ಜೊಹಾನ್‌ಸನ್ ಅವರು 300ವೋಲ್ಟ್ ಎಲೆಕ್ಟ್ರಾನ್ ಕಿರಣಗಳಿಂದ ಕಾದ ಕ್ಯಾಥೋಡಿನ ಛಾಯಾಚಿತ್ರವನ್ನು ತೆಗೆದರು. ಅದೇ ವರ್ಷ ಎಂ. ನಾಲ್ ಮತ್ತು ಅರ್ನೆಸ್ಟ್ ರುಸ್ಕ ಅವರು ತುಂಡು ಕಾಂತ ಮಸೂರಗಳನ್ನು ಅಳವಡಿಸಿ ನಿರ್ಮಿಸಿದ ಎಲೆಕ್ಟ್ರಾನ್ ಸೂಕ್ಷ್ಮ ದರ್ಶಿಯಿಂದ ವಿಸರ್ಜನ ಕೊಳವೆಯ ಎಲೆಕ್ಟ್ರಾನ್ ಆಕರಗಳ ಛಾಯಾಚಿತ್ರವನ್ನು ತೆಗೆದರು. ಅವರು ಭರ ಎಲೆಕ್ಟ್ರಾನ್ ಕಿರಣಗಳನ್ನು ಉಪಯೋಗಿಸುವ ಸೂಕ್ಷ್ಮದರ್ಶಿಯ ವಿಘಟನ ಸಾಮರ್ಥ್ಯ ದ್ಯುತಿಸೂಕ್ಷ್ಮದರ್ಶಿಗಳ ವಿಘಟನಸಾಮರ್ಥ್ಯಕ್ಕಿಂತ ಬಹಳಷ್ಟು ಹೆಚ್ಚಾಗಿರುತ್ತದೆಂದು ಸಾರಿದರು. ಪ್ರೇಷಣ ಎಲೆಕ್ಟ್ರಾನುಗಳಿಂದ ಉತ್ಪತ್ತವಾದ ಛಾಯಾಚಿತ್ರಗಳನ್ನು ಪಡೆಯಲು ಅನುಕೂಲವಾದ ಸೂಕ್ಷ್ಮದರ್ಶಿಯಸು ರಚನೆಯನ್ನು 1934ರಲ್ಲಿ ರುಸ್ಕ ವಿವರಿಸಿದ. ಇದಾದ ತರುಣದಲ್ಲೇ ಬೆಲ್ಜಿಯಮಿನಲ್ಲಿ ಮಾರ್ಟನ್ ಎಂಬಾತ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯನ್ನು ಜೀವವಿಜ್ಞಾನ ಸಂಶೋಧನೆಗೆ ಉಪಯೋಗಿಸಿದ.

ಈ ಯಾವ ಮುಂಚಿನ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳೂ ದ್ಯುತಿಸೂಕ್ಷ್ಮದರ್ಶಿಗಳಿಗಿಂತ ಉತ್ತಮವಾಗಿರಲಿಲ್ಲ. 1935ರಲ್ಲಿ ಡ್ರೀಸ್ಟ್ ಮತ್ತು ಮುಲ್ಲರ್ ಅವರು ರುಸ್ಕನ ಸಲಹೆಯಂತೆ ತಮ್ಮ ಸೂಕ್ಷ್ಮದರ್ಶಿಯಲ್ಲಿ ಮಾರ್ಪಾಡುಮಾಡಿ ಮೊದಲಬಾರಿಗೆ ದ್ಯುತಿಸೂಕ್ಷ್ಮದರ್ಶಿಯ ವಿಘಟನ ಸಾಮರ್ಥ್ಯವನ್ನು ಮೀರಿ ಮುಂದೆ ಹೋದರು. ಕ್ರೌಸ್ ಎಂಬಾತ ರುಸ್ಕನ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಿಂದ ವಿವಿಧ ವಸ್ತುಗಳ ಛಾಯಾಚಿತ್ರಗಳನ್ನು ತೆಗೆದ. ಅತಿ ತೆಳುವಾದ ಮಾದರಿಗಳು ಎಲೆಕ್ಟ್ರಾನ್ ಆಘಾತಕ್ಕೆ ಸಿಕ್ಕಿ ಛಿದ್ರವಾಗಿಬಿಡಬಹುದೆಂಬ ಹಿಂದಿನ ಭೀತಿ ಕ್ರೌಸನ ಸಂಶೋಧನೆಗಳ ಫಲವಾಗಿ ದೂರವಾಯಿತು.

1938ರಲ್ಲಿ ವಾನ್ ಬೋರಿಸ್ ಮತ್ತು ರುಸ್ಕ ಅವರು ಜರ್ಮನಿಯ ಸೀಮನ್ ಮತ್ತು ಹಲ್‌ಸ್ಕೆ ಕಂಪನಿಯವರಿಗಾಗಿ ಪ್ರಯೋಗಶಾಲೆಯಲ್ಲಿ ಉಪಯೋಗಿಸಬಹುದಾದ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ರಚನೆಯನ್ನು ಸಿದ್ಧಪಡಿಸಿದರು. ಈ ಕಂಪನಿ ತಯಾರಿಸಿದ ಸೂಕ್ಷ್ಮದರ್ಶಿಗಳ ವಿಘಟನಸಾಮರ್ಥ್ಯ 100 $\mathring{A}$ ಆಗಿತ್ತು. 1939ರಲ್ಲಿ ಪ್ರಿಬಸ್ ಮತ್ತು ಹಿಲಿಯರ್ ಅವರು ಟೊರೊಂಟೋದಲ್ಲಿ ಸ್ವತಂತ್ರವಾಗಿ ಕಾಂತ ಮಸೂರಗಳನ್ನುಳ್ಳ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯನ್ನು ನಿರ್ಮಿಸಿದರು.

ಈ ಪ್ರಾರಂಭಿಕ ಸಂಶೋಧನೆಗಳಾದ ಅನಂತರ ಬಹುಬೇಗ ಪರಿಷ್ಕೃತ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳು ಮಾರುಕಟ್ಟೆಗೆ ಬಂದುವು. ಹಾನ್ಸ್ ವ್ಹಲ್ ಎಂಬಾತ ಜರ್ಮನಿಯ ಬೇರೊಂದು ಕಂಪನಿಗಾಗಿ ಸ್ಥಿರ ವಿದ್ಯುತ್ ಮಸೂರಗಳುಳ್ಳ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯನ್ನು ನಿರ್ಮಿಸಿದ. ವಾನ್ಸ್ ಎಂಬಾತ ಎಲೆಕ್ಟ್ರಾನ್ ವಿಧಾನಗಳಿಂದ ನಿಯಂತ್ರಣಗೊಂಡ ವಿದ್ಯುತ್ ಶಕ್ತಿ ಮೂಲಗಳನ್ನು (ಎಲೆಕ್ಟ್ರಾನಿಕಲಿ ಕಂಟ್ರೋಲ್ಡ್ ಪವರ್ ಸಪ್ಲೈ) ಬಳಸಿದ ಕಾಂತ ಉಪಕರಣವನ್ನು ಅಮೆರಿಕದ ರೇಡಿಯೋ ಕಾರ್ಪೊರೇಷನ್ನಿಗಾಗಿ ಸಿದ್ಧಪಡಿಸಿದ. 1940ರಲ್ಲಿ ಅದೇ ಕಂಪನಿ (RCA) 24 $\mathring{A}$ ವಿಘಟನ ಸಾಮರ್ಥ್ಯವಿರುವ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯನ್ನು ಮಾರುಕಟ್ಟೆಗೆ ತಂದಿತು. ರುಸ್ಕ ಮತ್ತು ಬೋರಿಸ್ ಅವರು ಸುಧಾರಿಸಿದ ಸೀಮನ್ ಕಂಪೆನಿಯ ಸೂಕ್ಷ್ಮದರ್ಶಿ 22 $\mathring{A}$ ವಿಘಟನ ಸಾಮರ್ಥ್ಯವನ್ನು ಸಾಧಿಸಿತ್ತು. ಅಮೆರಿಕ, ಇಂಗ್ಲೆಂಡ್ ಮತ್ತು ರಷ್ಯಗಳಲ್ಲಿ ಈಗ ಉತ್ಪಾದನೆಗೊಳ್ಳುತ್ತಿರುವ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳು ಸೈದ್ಧಾಂತಿಕ ಮಿತಿಯನ್ನೇ ಮುಟ್ಟಿವೆ.

**ವಿಘಟನಸಾಮರ್ಥ್ಯ:** ಬರಿಕಣ್ಣಿನಿಂದ 0.2 ಮಿಮೀ ಗಿಂತ ಕಡಿಮೆ ಅಂತರದಲ್ಲಿರುವ ಎರಡು ಬಿಂದುಗಳನ್ನು ಪ್ರತ್ಯೇಕ ಬಿಂದುಗಳಂತೆ ಕಾಣುವುದಕ್ಕಾಗುವುದಿಲ್ಲ. ಈ ಅಂತರಕ್ಕಿಂತ ಇನ್ನೂ ಕಡಿಮೆ ದೂರದಲ್ಲಿರುವ ಸೂಕ್ಷ್ಮವಸ್ತುಗಳನ್ನು ಅವುಗಳ ರಚನೆಗೆ ಕುಂದು ಬಾರದಂತೆ ತೋರಿಸುವ ಕೆಲಸ ಸೂಕ್ಷ್ಮದರ್ಶಿಯದು. ದ್ಯುತಿ ಸೂಕ್ಷ್ಮದರ್ಶಿಗಳು 1000$\mathring{A}$ಗಿಂತ ಕಡಿಮೆ ಅಂತರವುಳ್ಳ ರಚನಾ ವಿವರಗಳನ್ನು ತೋರಿಸಲಾರವು. (1 $\mathring{A}$ =$10^{-8}$ ಸೆಂ.ಮೀ.) ಅಂದರೆ ಯಾವುದೇ ವಸ್ತುವಿನ ಪ್ರತಿಬಿಂಬವನ್ನು 2000ಕ್ಕಿಂತ ಹೆಚ್ಚು ದೊಡ್ಡದಾಗಿ ತೋರಿಸಲು ಅವುಗಳಿಂದ ಆಗುವುದಿಲ್ಲ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳಾದರೋ 2,00,000ದಷ್ಟು ಲಂಬನವನ್ನು ಸಾಧಿಸಬಲ್ಲವು. 1970ರಲ್ಲಿ ಚಿಕಾಗೊ ವಿಶ್ವವಿದ್ಯಾಲಯದ ಆಲ್ಬರ್ಟ್ ಕ್ರಿವ್ ಎಂಬಾತ ಮೊದಲಬಾರಿಗೆ ಅಣುಗಳಲ್ಲಿರುವ ಪರಮಾಣುಗಳ (ಯುರೇನಿಯಂ ಮತ್ತು ಪಲೋನಿಯಂ) ಛಾಯಾಚಿತ್ರವನ್ನು ತೆಗೆಯಲು ಸಮರ್ಥನಾದ. ಈತ ಉಪಯೋಗಿಸಿದ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಲಂಬನಸಾಮರ್ಥ್ಯ 5,000,000.



**ಚಿತ್ರ 1**

ಸೂಕ್ಷ್ಮದರ್ಶಿಯ ವಿಘಟನಸಾಮರ್ಥ್ಯ ಅದರ ದ್ಯುತಿಕೊರತೆಯನ್ನೇ (ಆಪ್ಟಿಕಲ್ ಇಂಪರ್ಫೆಕ್ಷನ್) ಅವಲಂಬಿಸಿರುವುದಿಲ್ಲ. ಇದನ್ನು ಗ್ರಹಿಸಲು ಸ್ವಪ್ರಕಾಶಿಯಾದ ಒಂದು ಬಿಂದುವಿನ ಪ್ರತಿಬಿಂಬವನ್ನು ನೋಡಬೇಕು. ಪ್ರತಿಬಿಂಬ ವಿಸ್ತೃತವಾದ ಒಂದು ಬಿಂದು ಮಾತ್ರ ಆಗಿಲ್ಲ. ಅದರ ಸುತ್ತ ಪ್ರಭಾವಲಯಗಳಿವೆ. ಇದಕ್ಕೆ ಕಾರಣ ಬೆಳಕಿನ ನಮನ (Diffraction). ಬೆಳಕಿನ ನಮನದಿಂದ ಮೂಡಿರುವ ಪ್ರತಿಬಿಂಬ ರಚನೆಯನ್ನು ಚಿತ್ರದಲ್ಲಿ ನೋಡಬಹುದು. ನಮನ ರಚನೆಯ ಮೊದಲ ಕನಿಷ್ಟ ಕಿಂಡಿಯ ಬಳಿ ತೋರಿಸುವ ಕೋನ e ಆದರೆ

$$\sin\theta = \frac{1\cdot 22\lambda\, i}{2\rho} \qquad .....(1)$$

ಎಂದು ಬರೆಯಬಹುದು. $\lambda_i$ ಪ್ರತಿಬಿಂಬ ಕ್ಷೇತ್ರದಲ್ಲಿ ಬೆಳಕಿನ ತರಂಗಾಂತರ ಮತ್ತು $\rho$ ಕಿಂಡಿಯ ತ್ರಿಜ್ಯ. ಈಗ ಚಿತ್ರವನ್ನು ನೋಡಿ

$$\frac{\Delta r_i}{S_i} = \frac{1.22\ \rho_i}{2\rho} \qquad .....(2)$$

ಎಂದು ಬರೆಯಬಹುದು. ಲಂಬವಾದರೆ $\Delta r_i$ ಗೆ ಸಂಬಂಧಿಸಿದ ಬಿಂದುವಿನ ತ್ರಿಜ್ಯ $\Delta r_0 = \Delta r_i / M$ ವಸ್ತುಬಿಂದುವಿನ ತ್ರಿಜ್ಯ $\Delta r_0$ ಗಿಂತ ಕಡಿಮೆಯಾದರೂ ಅದರ ಪ್ರಮುಖ ಪ್ರತಿಬಿಂಬದ ತ್ರಿಜ್ಯ $\Delta r_i$ ಆಗುತ್ತದೆ. ಅನಂತರ ಆಬೆ ಸೈನ್ ನಿರ್ಬಂಧವನ್ನು ಉಪಯೋಗಿಸಿ

$$\Delta r_0 = \frac{n_i \times 0.61\,\lambda_i}{n_0 \sin\ \alpha_0} \qquad .....(3)$$

ಎಂದು ತೋರಿಸಬಹುದು. $n_i$ ಸರಿಸುಮಾರಾಗಿ 1 ಕ್ಕೆ ಸಮ. $n_0$ವಸ್ತು ಕ್ಷೇತ್ರದ ವಕ್ರೀಭವನ ಸೂಚ್ಯಂಕ. $\Delta r_0$ ಯನ್ನೆ ಉಪಕರಣದ ವಿಘಟನ ಎಂದು ತಿಳಿಯಬಹುದು. ಈ ಉಪಕರಣದಿಂದ $\Delta r_0$ ಗಿಂತ ಕಡಿಮೆ ಅಂತರದಲ್ಲಿರುವ ರಚನಾ ವಿವರಣೆಯನ್ನು ತಿಳಿಯುವುದು ಸಾಧ್ಯವಿಲ್ಲ. $n_0 \sin a_0$ ಯನ್ನು ಸಂಖ್ಯಾಕಿಂಡಿ (ನ್ಯೂಮರಿಕಲ್ ಅಪರ್ಚರ್) ಎನ್ನುತ್ತಾರೆ. $\Delta r_0$ ಯನ್ನು ಕಡಿಮೆ ಮಾಡಲು ಸಂಖ್ಯಾಕಿಂಡಿಯನ್ನು ಹೆಚ್ಚು ಮಾಡಬೇಕು ಮತ್ತು $\lambda_i$ ಯನ್ನು ಕಡಿಮೆ ಮಾಡಬೇಕು. ದ್ಯುತಿ ಸೂಕ್ಷ್ಮದರ್ಶಿಯಲ್ಲಿ ಸಂಖ್ಯಾಕಿಂಡಿಯನ್ನು 1.4 ಕ್ಕಿಂತ ಹೆಚ್ಚು ಮಾಡುವುದು ಅಸಾಧ್ಯ. ಅತಿ ಕಡಿಮೆ

ತರಂಗಾಂತರದ ಕಿರಣಗಳು ಎಂದರೆ ಅತಿನೇರಳೆ ಕಿರಣಗಳು. ಎಕ್ಸ್‌ಕಿರಣಗಳ ತರಂಗಾಂತರ ಇನ್ನೂ ಕಡಿಮೆಯಾಗಿದ್ದರೂ ಅವನ್ನು ಸೂಕ್ಷ್ಮದರ್ಶಿಯಲ್ಲಿ ಉಪಯೋಗಿಸಲು ಅನುಕೂಲವಾಗುವಂಥ ಮಸೂರಗಳಿಲ್ಲ. ಈ ಕಾರಣಗಳಿಂದ ದ್ಯುತಿ ಸೂಕ್ಷ್ಮದರ್ಶಿಗಳಲ್ಲಿ $\Delta r_0$ ಒಂದು ಸಾವಿರ ಆಂಗ್‌ಸ್ಟ್ರಾಮ್ ಏಕಮಾನಗಳಿಗಿಂತ ಕಡಿಮೆಯಾಗುವುದು ಸಾಧ್ಯವಿಲ್ಲ.

ಎಲೆಕ್ಟ್ರಾನಿನ ಜಡಮಾನ ಮತ್ತು ವೇಗ ಕ್ರಮವಾಗಿ $m$ ಮತ್ತು ಆದರೆ ಅದರ ತರಂಗಾಂತರ

....(4)

ಎಂದು ತೋರಿಸಬಹುದು. $h$ ಪ್ಲಾಂಕನ ನಿಯತಾಂಕ. ಎಲೆಕ್ಟ್ರಾನುಗಳು $v$ ವೋಲ್ಟುಗಳು ವಿಭವಾಂತರದ ಮೂಲಕ ವೇಗೋತ್ಕರ್ಷಗೊಂಡಿದ್ದರೆ

.....(5)

ಎಂದೂ ಬರೆಯಬಹುದು. ಈ ಸಮೀಕರಣ $V<$ 20,000 ವೋಲ್ಟ್ ಆಗಿದ್ದರೆ ಮಾತ್ರ ಸರಿ. ಇದಕ್ಕೂ ಹೆಚ್ಚಾದರೆ

$$\lambda = \frac{12.3}{(V + 10^{-6}V^2)^{\frac{1}{2}}} \mathring{A} \qquad ....(6)$$

ಎಂದು ಬರೆಯಬೇಕಾಗುತ್ತದೆ. ಎಲೆಕ್ಟ್ರಾನ್ ಮಸೂರಗಳಲ್ಲಿ $v$ ಯನ್ನು 10–100 ಗಳ ವರೆಗೆ ವ್ಯತ್ಯಾಸ ಮಾಡಬಹುದು. ಅಂದರೆ ಎಲೆಕ್ಟ್ರಾನುಗಳ ತರಂಗಾಂತರವನ್ನು 0.123⁻ 0.0537 ವರೆಗೆ ವ್ಯತ್ಯಾಸಮಾಡಬಹುದೆಂದಾಯಿತು. ಇದರಿಂದ $\Delta r_0$ ಯನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಬೇಕಾದ ಹಾಗೆ ಕಡಿಮೆ ಮಾಡಬಹುದೆನಿಸುತ್ತದೆ. ಆದರೆ $a_0$ ಯನ್ನು ಹೆಚ್ಚಿಸುವುದಕ್ಕಾಗುವುದಿಲ್ಲ. ಇದು ಹೆಚ್ಚಾದರೆ ಗೋಳವಿಪಥನ ಹೆಚ್ಚುತ್ತದೆ. ಈ ದೋಷವೇ ಮುಖ್ಯವಾಗಿ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ವಿಘಟನಸಾಮರ್ಥ್ಯವನ್ನು ಸೀಮಿತಗೊಳಿಸುವ ಅಂಶ. ಇದಕ್ಕೆ ಸಂಬಂಧಪಟ್ಟಂತೆ $\Delta r_s$ ಸೂಕ್ಷ್ಮದರ್ಶಿಯ ವಿಘಟನವಾದರೆ

$$\lambda = \frac{h}{mv} \qquad \lambda = \frac{12.3}{\sqrt{V}} \mathring{A}$$

$$\Delta r_s = C_s \alpha_0{}^3 \qquad ......(7)$$

ಎಂದು ತೋರಿಸಬಹುದು. $c_s$ ಗೋಳ ವಿಪಥನ ಸೂಚಿ. ಸಮೀಕರಣ (3)ರಿಂದ

$$\Delta r_s = \frac{0.61\lambda_0}{a_0} \qquad ......(8)$$

ಎಂದು ಬರೆದು $\alpha_0 = \left(\frac{0.61\,\lambda^0}{C_s}\right)^{\frac{1}{4}}$ ಎಂದು ತಿಳಿಯಬಹುದು.

ಇಲಿ $n_i$ ಸರಿಸುಮಾರಾಗಿ 1ಕ್ಕೆ ಸಮ.

$\frac{\lambda_i}{n_i} = \lambda_0$ ಮತ್ತು $\sin a_0 = a_0$. ಅನಂತರ ಸಮೀಕರಣ (7)ರಿಂದ

$$\Delta r_s = AC_s^{\frac{1}{4}} \lambda_0^{\frac{3}{4}} \qquad ....(9)$$

ಎಂದು ತೋರಿಸಬಹುದು. ನಿಯಂತಾಂಕ A ಸರಿ ಸುಮಾರಾಗಿ 0.6–0.7, $C_s$=3.3 ಮಿ.ಮೀ. ಇರುವ ಮಸೂರವನ್ನು ಉಪಯೋಗಿಸುವ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ವಿಘಟನೆ 6.5 $\mathring{A}$. ಇಲ್ಲಿ ಉಪಕರಣದ ವ್ಯವಸ್ಥೆಯಲ್ಲಿರಬಹುದಾದ ಲೋಪದೋಷಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಆದ್ದರಿಂದ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ವಿಘಟನ 8–10 $\mathring{A}$. ಎಂದುಕೊಳ್ಳಬಹುದು. ಗೋಳವಿಪಥನವನ್ನು ಕಡಿಮೆ ಮಾಡುವುದು ಮತ್ತು ಇನ್ನೂ ಹೆಚ್ಚು ವೇಗದ ಎಲೆಕ್ಟ್ರಾನುಗಳನ್ನು ಉಪಯೋಗಿಸಬಹುದು ಆಗುವುದೇ ಇಲ್ಲವೆನ್ನುವುದು ಸರಿಯಾದುದಲ್ಲ. ಇತ್ತೀಚಿನ ಬೆಳವಣಿಗೆಗಳು ಅಂಥ ಸಾಧ್ಯತೆಯನ್ನು ತೋರಿಸಿವೆ. ವಸ್ತುಗಳನ್ನು ಮಾಲಿಸಿ ಬೆಳಗುವುದರಿಂದ ವಿಘಟನ ಮಿತಿಯನ್ನು 2.06 $\mathring{A}$.ಗಳಿಗೆ ತರಬಹುದು. ಚಿತ್ರದಲ್ಲಿ



**ಚಿತ್ರ 2 ಚಿನ್ನದ ಏಕಸ್ಫಟಿಕ (200) ಸಮತಲಗಳು**

ಜಪಾನಿನ ಹಿಟಾಚಿ ಕಂಪೆನಿಯ ಸೂಕ್ಷ್ಮದರ್ಶಿಯಿಂದ ತೆಗೆದ ಛಾಯಾಚಿತ್ರದಲ್ಲಿ 2.06 $\mathring{A}$. ಅಂತರದಲ್ಲಿರುವ ಚಿನ್ನದ ಪರಮಾಣುಗಳ ಸಾಲುಗಳನ್ನು ನೋಡಬಹುದು.

**ಕಾಂತ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳು :** ಕಾಂತ ಮಸೂರಗಳನ್ನು ಅಳವಡಿಸಿರುವ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳು ಹೆಚ್ಚು ಸಂಖ್ಯೆಯಲ್ಲಿವೆ. ಇಂಥ ಒಂದು ಸೂಕ್ಷ್ಮದರ್ಶಿಯನ್ನು ಚಿತ್ರದಲ್ಲಿ ಚಿತ್ರಿಸಿದೆ. ವಿದ್ಯುತ್ ಪ್ರವಾಹದಿಂದ ಕಾದ ತಲೆಪಿನ್ನಿನ ಆಕಾರದಲ್ಲಿರುವ ಟಂಗ್‌ಸ್ಟನ್ ತಂತು ಎಲೆಕ್ಟ್ರಾನುಗಳ ಆಕರ. ಇದು ರಕ್ಷಾಕವಚದೊಂದಿಗೆ 40–100 $kv$.ಋಣ ವಿಭವದಲ್ಲಿರುತ್ತದೆ. ರಕ್ಷಾಕವಚದಲ್ಲಿರುವ ಕಿಂಡಿ ಸ್ಥಿರ ವಿದ್ಯುತ್ ಮಸೂರದಂತೆ ವರ್ತಿಸಿ ಆನೋಡಿನ ಹಿಂದೆ ಕಡಿಮೆ ವ್ಯಾಸವಿರುವ ಕ್ರಾಸ್ ಓವರನ್ನು ಮೂಡಿಸುತ್ತದೆ. ಆ್ಯನೋಡಿನಿಂದ ಮುಂದೆ ಹೋಗುವ ಎಲೆಕ್ಟ್ರಾನುಗಳ ಸಂಖ್ಯೆ ಬಲು ಕಡಿಮೆ.

ಸಂಕ್ಷಿಪ್ತಕ ಮಸೂರದಲ್ಲಿ ವಿದ್ಯುತ್ ಪ್ರವಾಹವನ್ನು ನಿಯಂತ್ರಿಸುವುದರ ಮೂಲಕ ವಸ್ತುವಿನ ಮೇಲೆ ಬೀಳುವ ಎಲೆಕ್ಟ್ರಾನುಗಳ ಸಾಂದ್ರತೆಯನ್ನು ಬೇಕಾದ ಹಾಗೆ ಕಡಿಮೆ ಮಾಡಬಹುದು. ಇಲ್ಲಿ ಕಿಂಡಿಯ ವಿಸ್ತಾರ 0.1–0.5ಮಿಮೀ ನಷ್ಟು ಇರುವುದು ಸಾಮಾನ್ಯ. ವಸ್ತುವಿನ ಮೂಲಕ ಹಾಯುವ ಎಲೆಕ್ಟ್ರಾನುಗಳಲ್ಲಿ ಕೆಲವು ಚದರಿಕೆಯ ಅಸಮತೆಯಿಂದಲೆ ಪ್ರತಿಬಿಂಬದಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುವುದು. ಹೆಚ್ಚು ಜಡಮಾನವಿರುವ ಕಡೆಯಲ್ಲಿ ಹೆಚ್ಚು ಎಲೆಕ್ಟ್ರಾನುಗಳು ಚದರುತ್ತವೆ. ಇದಕ್ಕೆ ಸರಿಯಾಗಿ ಬಿಂಬಗ್ರಾಹಿತಟ್ಟೆಯ (ಫೋಟೋಗ್ರಫಿಕ್ ಪ್ಲೇಟ್) ಮೇಲೆ ಬೀಳುವ ಎಲೆಕ್ಟ್ರಾನುಗಳ ಸಂಖ್ಯೆ ಕಡಿಮೆಯಾಗುತ್ತದೆ. ಆದ್ದರಿಂದ ವಸ್ತು ರಚನೆಗೆ ವಿರುದ್ಧವಾದ ಗುಪ್ತ ಪ್ರತಿಬಿಂಬ (ಲೇಟೆಂಟ್ ಇಮೇಜ್) ಬಿಂಬಗ್ರಾಹಿತಟ್ಟೆಯಲ್ಲಿ ಮೂಡುತ್ತದೆ.

ವಸ್ತು ಮಸೂರದ ಕಿಂಡಿ 10–100ì ಗಳ(1ì =10⁻⁶ ಮೀ)ವರೆಗಿದೆ. ಆದ್ದರಿಂದ ಚದರಿದ ಹೆಚ್ಚು ಎಲೆಕ್ಟ್ರಾನುಗಳು ಮುಂದೆ ಹೋಗುವುದಿಲ್ಲ. ವಸ್ತು ಮಸೂರ ಪ್ರತಿಬಿಂಬದ ಲಂಬನವನ್ನು $100x$ ನಿಂದ $300x$ ವರೆಗೆ ಹೆಚ್ಚಿಸಬಹುದು. ಮಧ್ಯಸ್ಥ ಪ್ರತಿಬಿಂಬವನ್ನು ಎರಡುಸಾರಿ ಮರುಲಂಬನಗೊಳಿಸುವುದು ವಾಡಿಕೆ. ಮಧ್ಯಸ್ಥ ಹಾಗೂ ಅಂತಿಮ ಪ್ರತಿಬಿಂಬಗಳನ್ನು ಕಣ್ಣಿನಿಂದ ನೋಡಲು ಅನುಕೂಲವಾಗುವಂತೆ ಪ್ರತಿದೀಪ್ತಶೀಲ (ಫ್ಲೂರಸೆಂಟ್) ತೆರೆಗಳಿವೆ. ಇದರಿಂದ ಪ್ರತಿಬಿಂಬದಲ್ಲಿ ಕಾಣುವ ಅನೇಕ ದೋಷಗಳನ್ನು ನಿವಾರಿಸಲು ಸಹಾಯವಾಗುತ್ತದೆ.

ತಲೆಪಿನ್ನಿನಿಂದ ಸಂಕ್ಷಿಪ್ತಕ ಮಸೂರಕ್ಕೆ 15 ಸೆಂಮೀ ಅಲ್ಲಿಂದ ವಸ್ತು ಮಸೂರಕ್ಕೆ ಸುಮಾರು ಅಷ್ಟೆ ದೂರವಿರುವುದು ಸಾಮಾನ್ಯ. ವಸ್ತು ಮಸೂರದಿಂದ ಬಿಂಬಗ್ರಾಹಿತಟ್ಟೆಗೆ 100 ಸೆಂಮೀ ಇರುತ್ತದೆ. ಇವೆಲ್ಲ ಇರುವ ಕೋಣೆಯಲ್ಲಿ ಗಾಳಿಯ ಒತ್ತಡ $10^{-4}$ ಮಿಮೀ ಹೆಚ್ಚಾಗಿರಬಾರದು. ಹೆಚ್ಚಾಗಿದ್ದರೆ ಎಲೆಕ್ಟ್ರಾನುಗಳು ಗಾಳಿಯ ಅಣುಗಳಿಗೆ ತಾಗಿ ನಷ್ಟವಾಗುತ್ತವೆ.

ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಬಹುಮುಖ್ಯಭಾಗ ವಸ್ತು ಮಸೂರ. ಇದೇ ವಿಘಟನ ಮತ್ತು ಪ್ರತಿಬಿಂಬದ ವ್ಯತ್ಯಾಸವನ್ನು ನಿರ್ಣಯಿಸುವ ಸಾಧನ. ವಸ್ತು ಸಾಮಾನ್ಯವಾಗಿ

ಧ್ರುವ ತುಂಡುಗಳ ರಂಧ್ರಕ್ಕಿಂತ ದೊಡ್ಡದಾಗಿರುತ್ತದೆ. ಇದನ್ನು ಚಿತ್ರದಲ್ಲಿ ನೋಡಬಹುದು. ವಸ್ತುವನ್ನು ಅಥವಾ $B$ ಯಲ್ಲಿ ಬೇಕಾದ ಹಾಗೆ ಇಡಬಹುದು. ಎರಡು ಜಾಗಗಳಲ್ಲಿಯೂ ಕೆಲವು ಅನುಕೂಲ ಮತ್ತು ಪ್ರತಿಕೂಲಗಳಿವೆ.




ಚಿತ್ರ 3 ಕಾಂತ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ನಕಾಶೆ

ಕಾಂತ ಗುಣವಿರುವ ವಸ್ತುವಾದರೆ ಅದನ್ನು $A$ ಯಲ್ಲಿ ಇಡುವುದು ಉತ್ತಮ. ಆಗ ಮಸೂರದ ಕಾಂತಕ್ಷೇತ್ರ ಅದರ ಮೇಲೆ ಹೆಚ್ಚು ಪ್ರಭಾವವನ್ನು ಬೀರುವುದಿಲ್ಲ. $B$ ಯಲ್ಲಿ ವಸ್ತುವನ್ನು ಇಡುವುದು ಸುಲಭ. ನೂಕು ತೊಲೆಯ (ಪುಶ್ ರಾಡ್) ಮೇಲೆ ಅದನ್ನಿಟ್ಟು ಸರಿಯಾದ ಜಾಗಕ್ಕೆ ಸರಿಸಬಹುದು. ಇದಲ್ಲದೆ ಇನ್ನೂ ಒಂದು ಅನುಕೂಲವಿದೆ. ಹೆಚ್ಚು ವಿಘಟನೆ ಬೇಕಾದರೆ $C_s$ ಕಡಿಮೆ ಇರಬೇಕು. $C_s$ ಕಡಿಮೆ ಆಗಬೇಕಾದರೆ ನಾಭಿದೂರ ಕಡಿಮೆ ಆಗಬೇಕು. ವಸ್ತುವನ್ನು $A$ ಯಲ್ಲಿಟ್ಟರೆ ನಾಭಿದೂರವನ್ನು ಹೆಚ್ಚಿಸಬೇಕಾಗುತ್ತದೆ. ನಾಭಿದೂರ ಹೆಚ್ಚಾದರೂ ಪ್ರಯೋಜನವಿದೆ. ಆಗ ಪ್ರತಿಬಿಂಬದ ವಿಬೇಧ ಚೆನ್ನಾಗಿರುತ್ತದೆ.




ಚಿತ್ರ 4 A, B ವಸ್ತು ಇರಬಹುದಾದ ಸ್ಥಳಗಳು

ವಸ್ತು ಮೊದಲ ನಾಭಿ ಬಿಂದುವಿನ ಹಿಂದೆ ಅತಿ ಸಮೀಪದಲ್ಲೇ ಇರುತ್ತದೆ. ಆದ್ದರಿಂದ ಅದರ ಪ್ರತಿಬಿಂಬ ಮುಂದೆ ಹೆಚ್ಚು ದೂರದಲ್ಲಿ ಮೂಡುವುದು. ಪ್ರತಿಬಿಂಬಕ್ಕೆ ಕಾರಣವಾದ ಎಲೆಕ್ಟ್ರಾನುಗಳು ಅಕ್ಷಕ್ಕೆ ಸಮಾನಾಂತರವಾಗಿಯೇ ಚಲಿಸುತ್ತವೆ. ಚದರಿದ ಎಲೆಕ್ಟ್ರಾನುಗಳು ವಸ್ತು ಕಿಂಡಿ ತಡೆಯುತ್ತದೆ. ಈ ಎಲೆಕ್ಟ್ರಾನುಗಳನ್ನು ತಡೆಯುದೆ ಹೋದರೆ ಅವು ಬಿಂಬಗ್ರಾಹಿತಟ್ಟೆಯ ಮೇಲೆ ವಸ್ತುವಿನ ಪ್ರತಿಬಿಂಬಕ್ಕೆ ಸಂಬಂಧವಿಲ್ಲದ ಕಡೆ ಬೀಳುತ್ತವೆ. ಆಗ ಪ್ರತಿಬಿಂಬ ಮಸುಕಾ ಗುತ್ತದೆ. 2 ಅಥವಾ 3ಮಿಮೀ ನಾಭಿದೂರ ವಿರುವ ಮಸೂರಗಳಲ್ಲಿ 25–50$\grave{\imath}$ ವಿಸ್ತಾರವಿರುವ ಕಿಂಡಿಗಳಿರುತ್ತವೆ. ಈ ಕಿಂಡಿ ಸ್ವಚ್ಛವಾಗಿರಬೇಕು. ಹಾಗಿಲ್ಲದಿದ್ದರೆ ಎಲೆಕ್ಟ್ರಾನುಗಳ ಘರ್ಷಣೆಗೆ ಗುರಿಯಾಗಿ ಅಯಾನೀಕರಣಗೊಂಡು ಎಲೆಕ್ಟ್ರಾನುಗಳ ಪಥವನ್ನು ಹಾಳುಮಾಡುತ್ತದೆ.




ಚಿತ್ರ 5 ವಸ್ತುಕಿಂಡಿಯ ಸ್ಥಳ

ವಸ್ತುಮಸೂರದಲ್ಲಿ ಕಾಂತಕ್ಷೇತ್ರ ಅಕ್ಷಸಮತೆಯನ್ನು ಹೊಂದಿಲ್ಲದಿದ್ದರೆ ಪ್ರತಿಬಿಂಬದಲ್ಲಿ ದೋಷ ಕಾಣಿಸಿಕೊಳ್ಳುತ್ತದೆ. ಕಾಂತಕ್ಷೇತ್ರದ ಅಕ್ಷಸಮತೆಯನ್ನು ಕಾಪಾಡಲು ಕಬ್ಬಿಣದ




ಚಿತ್ರ 6 ಸ್ಥಿರವಿದ್ಯುತ್ ಸೂಕ್ಷಮದರ್ಶಿಯ ನಕಾಶೆ

1. ತಂತು, 2. ಹೆಚ್ಚು ವಿಭವ ಆಕರದ ಋಣ ಧ್ರುವಕ್ಕೆ, 3. ಆನೋಡ್ ಕಿಂಡಿ, 4.ವಸ್ತು, 5. ವಸ್ತುಕ, 6. ಪ್ರೊಜೆಕ್ಟರ್, 7. ಫ್ಲೂರಸೆಂಟ್ ತೆರೆ, 8. ಗ್ರಿಡ್

ಸ್ಕ್ರೂಗಳನ್ನು ಉಪಯೋಗಿಸುತ್ತಾರೆ. ಈ ಸ್ಕ್ರೂಗಳ ಸಂಖ್ಯೆ, ಜಾಗ ಮತ್ತು ಗಾತ್ರಗಳನ್ನು ಬೇಕಾದ ಹಾಗೆ ವ್ಯತ್ಯಾಸ ಮಾಡುವುದರಿಂದ ಕಾಂತಕ್ಷೇತ್ರದ ಅಕ್ಷಸಮತೆಯನ್ನು ಸ್ಥಾಪಿಸಬಹುದು.




ಚಿತ್ರ 7 ಪ್ರತಿಫಲನ ಸೂಕ್ಷ್ಮದರ್ಶಿಯ ಬಿಂಬೀಕರಣ ಕ್ರಿಯೆಯ ಲಾಕ್ಷಣಿಕ ನಕಾಶೆ

1. ವಸ್ತು, 2. ಕಾಂತವಸ್ತುಮಸೂರ, 3. ಪ್ರತಿಫಲನ ದೂರ

**ಸ್ಥಿರವಿದ್ಯುತ್ ಸೂಕ್ಷ್ಮದರ್ಶಿ:** ಸ್ಥಿರವಿದ್ಯುತ್ ಸೂಕ್ಷ್ಮದರ್ಶಿ ರಚನೆ ಮತ್ತು ಪ್ರತಿಬಿಂಬೀಕರಣದಲ್ಲಿ ಕಾಂತ ಸೂಕ್ಷ್ಮದರ್ಶಿಯನ್ನೇ ಹೋಲುತ್ತದೆ. ರಕ್ಷಾಕವಚದ ವಿಭವ ತಂತುವಿಗೆ ಸಂಬಂಧಪಟ್ಟಂತೆ 200 ವೋಲ್ಟ್ ಋಣಮೌಲ್ಯದಲ್ಲಿರುತ್ತದೆ. ವಸ್ತುಮಸೂರ

ಮತ್ತು ಪ್ರೊಜೆಕ್ಟರುಗಳೆರಡೂ ಏಕವಿಭವ ಮಸೂರಗಳು. ಇವುಗಳಲ್ಲಿ ಎಲೆಕ್ಟ್ರೋಡುಗಳು ಪರಸ್ಪರ ಹತ್ತಿರವಿರುವುದರಿಂದ ವಿದ್ಯುತ್‌ಕುಸಿತ ಸಂಭವಿಸುವುದು ಸಾಮಾನ್ಯ. ಇದನ್ನು ತಪ್ಪಿಸಬೇಕಾದರೆ ಎಲೆಕ್ಟ್ರೋಡುಗಳು ಮೊನಚಾದ ಭಾಗಗಳಿಲ್ಲದ ಸ್ವಚ್ಛವಾಗಿರಬೇಕು. ಮಸೂರ ಕ್ರೋಮ್–ನಿಕ್ಕಲ್ ಉಕ್ಕಿನದಾಗಿದ್ದರೆ ಒಂದು ಸೆಂಮೀಗೆ 275 $kv$ ವಿಭವಾಂತರವಿದ್ದರೂ ಕುಸಿತ ಸಂಭವಿಸುವುದಿಲ್ಲ. ಅಲ್ಯೂಮಿನಿಯಂ ಮತ್ತು ಹಿತ್ತಾಳೆಯನ್ನು ಉಪಯೋಗಿಸಿದರೆ ಈ ಸಂಖ್ಯೆ ಕ್ರಮವಾಗಿ 163 ಮತ್ತು 110 ಗಳಿಗಿಳಿಯುತ್ತದೆ. ವಸ್ತುಮಸೂರಗಳ ನಾಭಿದೂರ 3–5 ಮಿಮೀ ಇರುವುದು ಸಾಮಾನ್ಯ. ಆನೋಡ್ ಮತ್ತು ಉಳಿದೆರಡು ಮಸೂರಗಳ ಹೊರ ಎಲೆಕ್ಟ್ರೋಡುಗಳ ವಿಭವ ಸೊನ್ನೆ ಆಗಿರುತ್ತದೆ. ತಂತು ಮತ್ತು ಉಳಿದೆರಡು ಮಧ್ಯ ಎಲೆಕ್ಟ್ರೋಡುಗಳ ಒಂದೇ ಋಣವಿಭವದಲ್ಲಿರುತ್ತವೆ.

ಸ್ಥಿರವಿದ್ಯುತ್ ಸೂಕ್ಷ್ಮದರ್ಶಿಗಳೊಂದಿಗೆ ಕೆಲಸ ಮಾಡುವುದು ಸುಲಭ. ಇಲ್ಲಿ ಒಂದು ವಿಭವವನ್ನು ಸ್ಥಾಪಿಸಿದರೆ ಸಾಕು. ಕಾಂತ ಸೂಕ್ಷ್ಮದರ್ಶಿಯಲ್ಲಾದರೆ ಪ್ರತಿ ಮಸೂರಗಳ ಸುರುಳಿಯಲ್ಲಿ ಪ್ರವಹಿಸುವ ವಿದ್ಯುತ್ತನ್ನು ನಿಯಂತ್ರಿಸಬೇಕು. ಮತ್ತೆ ಸ್ಥಿರವಿದ್ಯುತ್ ಸೂಕ್ಷ್ಮದರ್ಶಿಯಲ್ಲಿ ಪ್ರತಿಬಿಂಬ ತಿರುಗುವುದಿಲ್ಲ.

**ಸ್ಫುರಣ ಸೂಕ್ಷ್ಮದರ್ಶಿ:** ಚಾರಿತ್ರಿಕವಾಗಿ ನೋಡುವುದಾದರೆ ಸ್ಫುರಣ ಸೂಕ್ಷ್ಮದರ್ಶಿಯೇ ಮೊದಲು ನಿರ್ಮಾಣವಾದ ಎಲೆಕ್ಟ್ರಾನ್ ಸೂಕ್ಷ್ಮದರ್ಶಿ. ಬ್ರೂಕೆ ಮತ್ತು ಜೊಹಾನ್‌ಸನ್ ಅವರು ಕಾದ ಕ್ಯಾಥೋಡಿನ ಛಾಯಾಚಿತ್ರವನ್ನು ತೆಗೆದುದು ಇಂಥ ಸೂಕ್ಷ್ಮದರ್ಶಿಯ ನೆರವಿನಿಂದಲೇ. ಈ ಸೂಕ್ಷ್ಮದರ್ಶಿಯ ವಿಘಟನ ಸಾಮರ್ಥ್ಯ ಕಡಿಮೆ. ಆದರೂ ಇವುಗಳ ಉಪಯೋಗವನ್ನು ಅಲ್ಲಗಳೆಯುವಂತಿಲ್ಲ. ಪ್ರತಿಬಿಂಬವನ್ನು ತೆಗೆಯಬೇಕಾದ ಪ್ರದೇಶವನ್ನು ಎಲೆಕ್ಟ್ರಾನ್ ಘಟ್ಟಣೆಯಿಂದ ಕಾಯಿಸುತ್ತಾರೆ. $2000^o$ ಸೆ. ಗಿಂತ ಹೆಚ್ಚು ಉಷ್ಣತೆಯವರೆಗೂ ಹೋಗಬಹುದಾದ ಸೂಕ್ಷ್ಮದರ್ಶಿಗಳಿವೆ.

**ಪ್ರತಿಫಲನ ಸೂಕ್ಷ್ಮದರ್ಶಿ:** ದಪ್ಪವಾದ ಮತ್ತು ಅಪಾರದರ್ಶನ ವಸ್ತುಗಳ ಸೂಕ್ಷ್ಮರಚನೆಯನ್ನು ಪರೀಕ್ಷಿಸಲು ಪ್ರತಿಫಲನ ಸೂಕ್ಷ್ಮದರ್ಶಿಯನ್ನು ಉಪಯೋಗಿಸುತ್ತಾರೆ. ಚಿತ್ರದಲ್ಲಿ ಪ್ರತಿಫಲನ ಸೂಕ್ಷ್ಮದರ್ಶಿಯ ಬಿಂಬೀಕರಣ ಕ್ರಿಯೆಯ ನಿರೂಪಣೆಯಿದೆ. ಎಲೆಕ್ಟ್ರಾನುಗಳು ಪತನಗೊಳ್ಳುವ ಓರೆಕೋನ್ ಕಡಿಮೆಯಾಗಿದ್ದರೆ ಒಳ್ಳೆಯ ಸೂಕ್ಷ್ಮಚಿತ್ರಣ ದೊರೆಯುತ್ತದೆ. ಲೋಹಗಳ ಮೇಲ್ಮೈ ಪರೀಕ್ಷೆಗೆ ಇದು ಉಪಯುಕ್ತವಾದ ಉಪಕರಣ. ಅಲೋಹಗಳ ಮೇಲ್ಮೈ ಪರೀಕ್ಷೆಗೆ ಇದು ಉಪಯುಕ್ತವಾದುದಲ್ಲ. ಪಡಿಯಚ್ಚಿನ ವಿಧಾನ (ರೆಪ್ಲಿಕ ಮೆಥೆಡ್) ರೂಢಿಗೆ ಬಂದ ಮೇಲೆ ಈ ಸೂಕ್ಷ್ಮದರ್ಶಿಯ ಬಳಕೆ ತಗ್ಗಿದೆ.

ZnO



ಚಿತ್ರ 8 ಲಿಥಿಯಂ ಅಯಾನು ZnO ಸ್ಫಟಿಕಗಳ ಛಾಯಾಚಿತ್ರ

**ಅಯಾನು ಸೂಕ್ಷ್ಮದರ್ಶಿಗಳು:** ಸ್ಥಿರವಿದ್ಯುತ್ ಸೂಕ್ಷ್ಮದರ್ಶಿಯಲ್ಲಿ ವಿಭವಗಳ ಚಿಹ್ನೆಯನ್ನು ಬದಲಾಯಿಸಿದರೆ ಅಯಾನುಗಳನ್ನೇ ವಸ್ತುಗಳ ಸೂಕ್ಷ್ಮ ರಚನೆಯ ಪರೀಕ್ಷೆಗೆ ಉಪಯೋಗಿಸಬಹುದು. ಅಯಾನುಗಳ ಡಿಬ್ರಾಯಿ ತರಂಗಾಂತರ ಬಹಳಷ್ಟು ಕಡಿಮೆಯಾಗಬಲ್ಲದು ಆದ್ದರಿಂದ ಅಯಾನು ಸೂಕ್ಷ್ಮದರ್ಶಿಯ ವಿಘಟನಸಾಮರ್ಥ್ಯ $1\mathring{A}$ ಗಿಂತ ಕಡಿಮೆಯಾಗಬಹುದು. ಚಿತ್ರದಲ್ಲಿ ಲಿಥಿಯಂ ಅಯಾನು ಸೂಕ್ಷ್ಮದರ್ಶಿಯಲ್ಲಿ ಸ್ಫಟಿಕಗಳ ಛಾಯಚಿತ್ರವನ್ನು ನೋಡಬಹುದು. ಇಲ್ಲಿ ಸಾಧಿಸಿರುವ ವಿಘಟನೆ $500\mathring{A}$. ಅಯಾನು ಸೂಕ್ಷ್ಮದರ್ಶಿಯ ವಿಘಟನಸಾಮರ್ಥ್ಯ ಸೈದ್ಧಾಂತಿಕವಾಗಿ ಬಹಳ ಆಶಾದಾಯಕವಾಗಿದ್ದರೂ ವಾಸ್ತವ ರಚನೆ ಆ ಮಿತಿಯನ್ನು ಮುಟ್ಟಿಲ್ಲ. ಪ್ರೋಟಾನುಗಳ ಸೂಕ್ಷ್ಮದರ್ಶಿಯ ವಾಸ್ತವ ವಿಘಟನೆ $300\mathring{A}$ಗಳನ್ನು ದಾಟಿಲ್ಲ. ಭಾರಪ್ರೋಟಾನುಗಳು ಬೀಜಕ್ರಿಯೆ (ನ್ಯೂಕ್ಲಿಯರ್ ಆಕ್ಷನ್) ಯನ್ನು ಉಂಟುಮಾಡುವುದೂ ಅವುಗಳು ಉಪಯೋಗಕ್ಕೆ ಅಡ್ಡಿಯಾಗುತ್ತದೆ.

**ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಉಪಯೋಗದಲ್ಲಿ ಬಳಸುವ ತಂತ್ರಗಳು:** ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಉಪಯೋಗದ ಬಗ್ಗೆ ಕೆಲವು ಕಾಲ ತೀವ್ರತರವಾದ ಸಂಶಯಗಳೇ ಇದ್ದುವು. ನಿರ್ವಾತ ಜಲಶೋಷಣೆ (ಡೆಸಿಕೇಶನ್) ಮತ್ತು ಎಲೆಕ್ಟ್ರಾನ್ ಘರ್ಷಣೆಯಿಂದ ಸಂಭವಿಸಬಹುದಾದ ತೊಂದರೆಗಳ ಕಲ್ಪನೆಯಲ್ಲಿ ಜೀವವಿಜ್ಞಾನ ವಿಜ್ಞಾನಿಗಳಿಗೆ ಮತ್ತು ಪ್ರತಿಫಲನಗೊಂಡ ಎಲೆಕ್ಟ್ರಾನುಗಳಿಂದ ಪ್ರತಿಬಿಂಬಗಳನ್ನು ಮೂಡಿಸುವುದರಲ್ಲಿರುವ ತೊಂದರೆಗಳಿಂದ ಭೌತವಿಜ್ಞಾನಿಗಳಿಗೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಿಂದ ಯಾವ ಪ್ರಯೋಜನವೂ ಆಗದಿರಬಹುದೆಂಬ ನಿರಾಶೆಯಿತ್ತು. ಪಡಿಯಚ್ಚು ವಿಧಾನ ಘನವಸ್ತುಗಳ ಮೇಲ್ಮೈ ಪರೀಕ್ಷೆಗೆ ಸಹಕಾರಿಯಾಗಿರುವುದರಿಂದ ಪ್ರತಿಫಲನ ಸೂಕ್ಷ್ಮದರ್ಶಿಯ ಸಮಸ್ಯೆಗಳು ಎದುರಾಗಲೇ ಇಲ್ಲ. ಕಡಿಮೆ ಚದುರಿಕೆ ಸಾಮರ್ಥ್ಯವಿರುವ ವಸ್ತುಗಳ ವಿಭೇದದ ಮಿತಿಯನ್ನು ನೆರಳುಎರಕ (ಶ್ಯಾಡೊ ಕ್ಯಾಸ್ಟಿಂಗ್) ಮತ್ತು ಅಭಿರಂಜನ (ಸ್ಟೇನಿಂಗ್) ತಂತ್ರಗಳು ನಿವಾರಿಸಿವೆ. ಪಡಿಯಚ್ಚು ವಿಧಾನ ನೀರಿರುವ ವಸ್ತುಗಳ ಸೂಕ್ಷ್ಮರಚನೆಯ ಪರೀಕ್ಷೆಗೂ ಸಹಕಾರಿಯಾಗುತ್ತದೆ. 1/20ರಷ್ಟು ತೆಳುವಾದ ಪೊರೆಗಳನ್ನು ಕತ್ತರಿಸಿ ತೆಗೆಯುವುದು ಸಾಧ್ಯವಿದೆಯಾಗಿ ಈಗ ಹಿಂದಿನ ಕಷ್ಟಗಳಿಲ್ಲ.

ನಿರ್ವಾತ ಬಾಷ್ಪೀಕರಣ (ವ್ಯಾಕೂಂ ಎವಾಪೊರೇಷನ್) : ಈ ಕ್ರಿಯೆಗೆ ಉಪಯೋಗಿಸುವ ಉಪಕರಣದ ಚಿತ್ರದಲ್ಲಿ ತೋರಿಸಿದೆ. ವಸ್ತುಗಳನ್ನು ನಿರ್ವಾತದಲ್ಲಿ ಬಾಷ್ಪೀಕರಿಸುವ ಸಂದರ್ಭಗಳು ಅನೇಕಸಾರಿ ಬಂದೊದುಗುತ್ತವೆ. ನಿರ್ವಾತವನ್ನುಂಟು



ಚಿತ್ರ 9 ವಸ್ತುಗಳನ್ನು ನಿರ್ವಾತದಲ್ಲಿ ಬಾಷ್ಪೀಕರಿಸಲು ಉಪಯೋಗಿಸುವ ಸಾಧನ.
1. ಗ್ಯಾಸ್ಕೆಟ್, 2. ಅಡಿತಟ್ಟೆ, 3. ರೇಚಕಗಳಿಗೆ, 4. ಗಂಟಾಪಾತ್ರೆ

ಮಾಡಲು ಸಾಮಾನ್ಯವಾಗಿ ರೋಟರಿ ಪೆಂಪಿನಿಂದ ಬೆಂಬಲ ಗೊಂಡ ವಿಸರಣ ಪಂಪನ್ನು ಉಪಯೋಗಿಸುತ್ತಾರೆ. ಗಂಟಾಪಾತ್ರೆಯೊಳಗಿನ ಒತ್ತಡ ಬಾಷ್ಪೀಕರಣಗೊಂಡ ಪರಮಾಣುಗಳ ಸರಾಸರಿ ಸ್ವಚ್ಛಂದ ದಾರಿ (ಮೀನ್ ಫ್ರೀ ಪಾತ್) ಅವುಗಳು ಹಾಯಬೇಕಾದ ದೂರಕ್ಕಿಂತ ಹೆಚ್ಚಾಗಲು ಅನುವಾಗುವಂತಿರ ಬೇಕು. $10^{-4}$ ಮಿಮೀ ಪಾದರಸ ನಿರ್ವಾತವಿದ್ದರೆ ಇದು ಸಾಧ್ಯ. ಚಿನ್ನ, ಪಲೇಡಿಯಂ ಮುಂತಾದ ಧಾತುಗಳ ತುಣುಕುಗಳನ್ನು ಶಂಖದ ಆಕಾರದಲ್ಲಿರುವ ಟಂಗ್‌ಸ್ಟನ್ ಸುರುಳಿಯಲ್ಲಿಟ್ಟು ಕಾಯಿಸಿ ಬಾಷ್ಪೀಕರಣಗೊಳಿಸಬಹುದು. ಪ್ಲಾಟಿನಂ ಟಂಗ್‌ಸ್ಟನ್ನಿನೊಂದಿಗೆ ಬೆರೆತು ಅದನ್ನು ಕತ್ತರಿಸುತ್ತದೆ. ಆದ್ದರಿಂದ ಪ್ಲಾಟಿನಮನ್ನು ಬಾಷ್ಪೀಕರಿಸುವಾಗ ತೀರ ತೆಳುವಾದ ಅದರ ತಂತಿಯನ್ನು ಟಂಗ್‌ಸ್ಟನ್ ತಂತಿಯಮೇಲೆ ಸುತ್ತಿ ಕಾಯಿಸಬೇಕಾಗುತ್ತದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಉಪಯೋಗಕ್ಕಾಗಿ ಹೀಗೆ ಬಾಷ್ಪೀಕರಣ ಮಾಡಬೇಕಾದ ವಸ್ತುಗಳ ಪ್ರಮಾಣ 5 ಮಿಗ್ರಾಂ ಗಿಂತ ಹೆಚ್ಚಾಗಿರುವುದಿಲ್ಲ.

ಬಾಷ್ಪೀಕರಣಗೊಂಡ ಪರಮಾಣುಗಳು ನೇರವಾಗಿ ಚಲಿಸುತ್ತ ಅವಕ್ಕೆ ಅಡ್ಡವಾದ ಪ್ರದೇಶದ ಮೇಲೆ ಬಿದ್ದು ತೆಳುವಾದ ಪೊರೆಗಳನ್ನು ಸೃಷ್ಟಿಸುತ್ತವೆ. ಇಂಥ ಪೊರೆಗಳು ಗಂಟಾಪಾತ್ರೆಯ ಒಳಮೈಮೇಲೂ ಬೆಳೆಯುತ್ತವೆ. ಗಂಟಾಪಾತ್ರೆಯನ್ನು ತೆಗೆದಮೇಲೆ

ಈ ಪೊರೆಗಳು ಒಳಮೈನಿಂದ ಬೇರ್ಪಟ್ಟು ಗಾಳಿಯಲ್ಲಿ ತೇಲುತ್ತವೆ. ಅವು ಶ್ವಾಸಕೋಶಗಳಿಗೆ ಹೋಗಿ ಅಪಾಯವನ್ನು ಉಂಟುಮಾಡುವ ಸಾಧ್ಯತೆಯಿರುವುದರಿಂದ ನಿರ್ವಾತ ಬಾಷ್ಪೀಕರಣದಲ್ಲಿ ತೊಡಗಿರುವ ಜನ ಎಚ್ಚರಿಕೆ ವಹಿಸುವುದು ತೀರ ಆವಶ್ಯಕ.



ಚಿತ್ರ 10 ಜಾಲಂಧ್ರ

ಮಾದರಿಯ ಆಧಾರಗಳು: ಚಿತ್ರದಲ್ಲಿ ವಿದ್ಯುತ್ ಗಿಲಾವಿನ ನಿಕ್ಕಲ್ ಅಥವಾ ತಾಮ್ರದ ಜಾಲಂಧ್ರವನ್ನು ನೋಡಬಹುದು. 3% ರಷ್ಟು ಕಲೋಡಿಯನ್ ಇರುವ ಅಮೈಲ್ ಅಸಿಟೇಟನ್ನು ನೀರಿನ ಮೇಲೆ ಹಾಕಿದರೆ ಅದು ತೆಳುವಾದ ಪೊರೆಯಂತೆ ಹರಡಿಕೊಳ್ಳುತ್ತದೆ. ಈ ಪೊರೆಯನ್ನು ಜಾಲಂಧ್ರಕ್ಕೆ ಹೊದಿಸಿ ಅದನ್ನು ಮಾದರಿಯ ಮೌಂಟ್ ಆಗಿ ಉಪಯೋಗಿಸುತ್ತಾರೆ. ಒಮ್ಮೊಮ್ಮೆ ದೃಢವಾದ ಪೊರೆಗಳು ಬೇಕಾಗುತ್ತವೆ. ಸಿಲಿಕಾನ್ ಆಕ್ಸೈಡ್ ಅಥವಾ ಇಂಗಾಲವನ್ನು ನಿರ್ವಾತ ಗಂಟಾಪಾತ್ರೆಯಲ್ಲಿ ಬಾಷ್ಪೀಕರಿಸಿ ಅದು ಕಲೋಡಿಯನ್ ಪೊರೆಯಮೇಲೆ ಶೇಖರವಾಗುವಂತೆ ಮಾಡುವುದರಿಂದ ದೃಡವಾದ ಪೊರೆಗಳನ್ನು ಸಿದ್ಧಪಡಿಸಿಕೊಳ್ಳಬಹುದು. ಕಲೋಡಿಯನ್ ಪೊರೆ ಹಾಗೇ ಇದ್ದರೂ ಬಾಧಕವಿಲ್ಲ. ಅದು ಬೇಕಿಲ್ಲವೆಂದಾಗ ಜಾಲಂಧ್ರವನ್ನು ಅಸಿಟೋನಿನಲ್ಲಿ ಅದ್ದಿ ಅದನ್ನು ಕರಗಿಸಬಹುದು.

ಸಾಮಾನ್ಯ ಮಾದರಿಗಳ ತಯಾರಿಕೆ: ಕಣಗಳ ರೂಪದಲ್ಲಿರುವ ವಸ್ತುಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ನೋಡಬೇಕಾದರೆ ಅವನ್ನು ನೀರಿನಲ್ಲಿ ಕದಡಬೇಕು. ಅನಂತರ ಒಂದು ತೊಟ್ಟು ಈ ಕಲಾಯಿಡಲ್ ದ್ರಾವಣವನ್ನು ಪೊರೆ ಜಾಲಂಧ್ರದ ಮೇಲೆ ಹರಡಿ ಒದಗಿಸಬೇಕು. ಒಮ್ಮೊಮ್ಮೆ ಮಾದರಿಗಳನ್ನು ರಾಸಾಯಿನಿಕ ಶುದ್ಧಿಗೂ ಒಳಪಡಿಸಬೇಕಾಗುತ್ತದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಉಪಯೋಗಿಸಲು ಯೋಗ್ಯವಾದ ಮಾದರಿಯನ್ನು ಒಂದೇ ಪ್ರಯತ್ನದಲ್ಲಿ ಸಿದ್ಧಿಪಡಿಸುವುದು ಕಷ್ಟ.

ಮೆಗ್ನೀಸಿಯಂ, ಕ್ಯಾಡ್ಮಿಯಂ, ಸತು ಮತ್ತು ಮಾಲಿಬ್ಡಿನಂ ಧಾತುಗಳ ಆಕ್ಸೈಡ್ ಹೊಗೆಯನ್ನು ಪೊರೆಯಿಲ್ಲದ ಜಾಲಂಧ್ರದ ಮೇಲೆ ಹಿಡಿಯಬಹುದು. ಕಣಗಳು ತಂತಿಗೆ ಅಂಟಿಕೊಂಡು ಹೊರಚಾಚಿರುತ್ತವೆ. ಇವನ್ನು ನೇರವಾಗಿ ಛಾಯಾಚಿತ್ರೀಕರಿಸ ಬಹುದು.

ಲೋಹದ ತೆಳುವಾದ ಪೊರೆಗಳನ್ನು ತಯಾರಿಸಲು ರಾಸಾಯನಿಕ ಕಡೆತ (ಕೆಮಿಕಲ್ ಎಚ್ಚಿಂಗ್) ಮತ್ತು ವಿದ್ಯುದ್ವಿಭಜನ ಮಾರ್ಗಗಳನ್ನು ಆಶ್ರಯಿಸಬೇಕಾಗುತ್ತದೆ.

**ನೆರಳು ಎರಕ (ಶ್ಯಾಡೋ ಕ್ಯಾಸಿಂಗ್):** ಇದನ್ನು ಮಾಡುವ ವಿಧಾನವನ್ನು ಚಿತ್ರದಲ್ಲಿ ನೋಡಬಹುದು. ವಿದ್ಯುತ್ ಪ್ರವಾಹದಿಂದ ಕಾದ ತಂತಿಯ ಸುರುಳಿಯಲ್ಲಿರುವ ಲೋಹ ಬಾಷ್ಪೀಕರಣಗೊಂಡು ದೂರದಲ್ಲಿರುವ ಮಾದರಿಯ ಮೇಲೆ ಬೀಳುತ್ತದೆ. ಚಿತ್ರದ ಜ್ಯಾಮಿತಿಯನ್ನನುಸರಿಸಿ

$$l = \frac{h}{\tan\ \theta} \qquad \ldots\ldots (10)$$

$$t = \frac{M\ \sin\ \theta}{4\pi R^2\ \rho} \qquad \ldots\ldots (11)$$

$$t_1 = \frac{M\ \cos\ \theta}{4\pi R^2\ \rho} \qquad \ldots\ldots (12)$$




ಚಿತ್ರ 11 ನೆರಳು ಏಕೀಕರಣ ವಿಧಾನ

ಎಂದು ಬರೆಯಬಹುದು. ಇಲ್ಲಿ $M$ ಬಾಷ್ಪೀಕರಣಗೊಂಡ ಲೋಹದ ಒಟ್ಟು ಜಡಮಾನ ಮತ್ತು $\rho$ ಅದರ ಸಾಂದ್ರತೆ. ಈ ಸಮೀಕರಣಗಳನ್ನು ನೇರವಾಗಿ ಲೆಕ್ಕಾಚಾರಕ್ಕಾಗಿ ಉಪಯೋಗಿಸುವುದು ಸರಿಯಲ್ಲ. ಸಮಯಕ್ಕೆ ತಕ್ಕಂಥ ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಸಮೀಕರಣ (2)ರಿಂದ ಬಲಭಾಗವನ್ನು ವಿಲಿಯಂ ಮತ್ತು ಬಾಕಸ್ ಅವರಂತೆ ¾ ರಿಂದ ಗುಣಿಸಬೇಕಾಗುತ್ತದೆ.

ನೆರಳು ಎರಕ ಮಾದರಿಗಳ ಧನಮುದ್ರಿಕೆಗಳಲ್ಲಿ ನೆರಳು ಬೆಳಕಾಗಿಯೂ ಲೋಹವಿರುವ ಜಾಗ ಕಪ್ಪಾಗಿಯೂ ಕಾಣುತ್ತವೆ. ಇದು ಸಾಮಾನ್ಯವಾದ ಸ್ಥಿತಿಗೆ ವ್ಯತಿರಿಕ್ತವಾದುದು. ಆದ್ದರಿಂದ ಇಂಥ ಸೂಕ್ಷ್ಮಚಿತ್ರಣಗಳನ್ನು ಮಾಧ್ಯಮಿಕ ಧನ ಪಾರದರ್ಶಗಳಿಂದ ಋಣ




ಚಿತ್ರ 12 ಧನಮುದ್ರಿಕೆ ಮತ್ತು ಋಣಮುದ್ರಿಕೆಗಳನ್ನು ಕ್ರಮವಾಗಿ A ಮತ್ತು B ಗಳಲ್ಲಿ ತೋರಿಸಿದೆ (ಕ್ರೋಮಿಯಂ ನೆರಳು ಎರಕ)

ಮುದ್ರಿಕೆಗಳಂತೆ ಅಚ್ಚು ಹಾಕುತ್ತಾರೆ. ಚಿತ್ರದಲ್ಲಿ ಮೊಟ್ಟೆಯ ಆಲ್ಬುಮಿನ್ ಲೇಪನಗೊಂಡ ಕಲೋಡಿಯನ್ ಪೊರೆಯ ಮೇಲಿರುವ ಇಂಗಾಲದ ಕಣಗಳ ಧನ ಮತ್ತು ಋಣಮುದ್ರಿಕೆಗಳನ್ನು ಕಾಣಬಹುದು. ನೆರಳಿನ ಹೊರಗಿರುವ ಜಾಗದಲ್ಲಿ ಆಲ್ಬುಮಿನ್ ಅಣುಗಳ ಗುಂಪುಗಳನ್ನು ಗುರುತಿಸಬಹುದು.

ನೆರಳು ಎರಕಕ್ಕೆ ಸಾಮಾನ್ಯವಾಗಿ ಕ್ರೋಮಿಯಮ್, ನಿಕ್ಕಲ್, ಜರ್ಮೇನಿಯಂ ಮ್ಯಾಂಗನೀಸ್, ಪೆಲೇಡಿಯಂ, ಪ್ಲಾಟಿನಂ ಮತ್ತು ಯುರೇನಿಯಮ್ ಲೋಹಗಳನ್ನು ಉಪಯೋಗಿಸುತ್ತಾರೆ.

**ಮೇಲ್ಮೈ ಪಡಿಯಚ್ಚುಗಳು :** ಪ್ರತಿಫಲನ ಮತ್ತು ಪ್ರೇಷಕ ತಂತ್ರದಿಂದ ಪರೀಕ್ಷಿಸಲು ಸಾಧ್ಯವಿಲ್ಲದ ದಪ್ಪ ಮಾದರಿಗಳ ಪಡಿಯಚ್ಚಿನ ಸೂಕ್ಷ್ಮಚಿತ್ರಣ ತೆಗೆಯುವುದು ಸುಲಭ. ನಿರ್ವಾತದಲ್ಲಿ ನಿಜಸ್ಥಿತಿಯನ್ನು ಕಳೆದುಕೊಳ್ಳುವ ವಸ್ತುಗಳ ಉಪಯೋಗಕ್ಕೆ ಬಂದ ಮೊದಲ ದಶಕದಲ್ಲಿ ಲೋಹಗಳ ಕಡೆದ (ಎಚ್ಡ್) ಮೇಲ್ಮೈ ಪರೀಕ್ಷೆಗೆ ಇದು ಅತಿ ಮುಖ್ಯವಾದ ವಿಧಾನವಾಗಿತ್ತು.

ಋಣ ಪಡಿಯಚ್ಚುಗಳು (ನೆಗೆಟಿವ್ ರೆಪ್ಲಿಕಾಸ್): ಋಣ ಪಡಿಯಚ್ಚುಗಳಲ್ಲಿ ಮಾದರಿಯ ಉಬ್ಬು ತಗ್ಗುಗಳಿಗೆ ಬದಲಾಗಿ ತಗ್ಗು ಉಬ್ಬುಗಳಿರುತ್ತವೆ. ಮಂದವಾದ ಫಾರ್ಮ್‌ವಾರ್ ಅಥವಾ ಕಲೋಡಿಯನ್ ದ್ರಾವಣವನ್ನು ಮಾದರಿಗೆ ಸವರಿ ಅದು



ಚಿತ್ರ 13 ಮೇಲಿನದು ಋಣಪಡಿಯಚ್ಚು ತಂತ್ರ, ಕೆಳಗಿನದು ಧನಪಡಿಯಚ್ಚು ತಂತ್ರ

ಒಣಗಿದ ಮೇಲೆ ಪೊರೆಯನ್ನು ಎಬ್ಬಿದರೆ ಋಣ ಪಡಿಯಚ್ಚು ಸಿದ್ಧವಾಗುತ್ತದೆ. ಈ ಕೆಲಸದ ನಿರೂಪಣೆಯನ್ನು ಚಿತ್ರದಲ್ಲಿ ನೋಡಬಹುದು. ಋಣಪಡಿಯಚ್ಚನ್ನು ಜಾಲಂದ್ರದ ಮೇಲಿಟ್ಟು ಸೂಕ್ಷ್ಮಚಿತ್ರಣ ತೆಗೆಯುತ್ತಾರೆ.

**ಧನಪಡಿಯಚ್ಚು:** ಧನಪಡಿಯಚ್ಚು ವಸ್ತುವಿನ ಮೇಲ್ಮೈನಂತೆಯೇ ಇರುತ್ತದೆ. ಮೊದಲು ಋಣಪಡಿಯಚ್ಚನ್ನು ತೆಗೆದು ಅನಂತರ ಅದರಿಂದ ಧನಪಡಿಯಚ್ಚನ್ನು ಪಡೆಯುತ್ತಾರೆ. ಈ ತಂತ್ರದ ನಿರೂಪಣೆಯನ್ನು ಚಿತ್ರದಲ್ಲಿ ಕಾಣಬಹುದು. ಋಣಪಡಿಯಚ್ಚನ್ನು ಕರಗಿಸಿ ಧನಪಡಿಯಚ್ಚನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಉಪಯೋಗಿಸಬಹುದು.

ಬಾಷ್ಪೀಕೃತ ಪಡಿಯಚ್ಚುಗಳು: ತೆಳುವಾದ ಪಾಲಿಥೀನ್ ಹಾಳೆಯನ್ನು ಕಾಯಿಸಿ ಮಾದರಿಯ ಮೇಲೆ ಮೋಲ್ಡ್ ಮಾಡಿ ಋಣಪಡಿಯಚ್ಚನ್ನು ಪಡೆಯಬೇಕು. ಅದರ ಮೇಲೆ ನಿರ್ವಾತ ಗಂಟಾಪಾತ್ರೆಯಲ್ಲಿ ಸಿಲಿಕವನ್ನು ಬಾಷ್ಪೀಕರಿಸಿ ಹಾಯಿಸಿದರೆ ಧನಪಡಿಯಚ್ಚು ದೊರೆಯುತ್ತದೆ. ಈ ವಿಧಾನ ಲೋಹ, ಹಲ್ಲು ಮತ್ತು ತಂತುಗಳ ಪರೀಕ್ಷಣಕ್ಕೆ ಬಲು ಸಹಕಾರಿಯಾಗಿದೆ.

ಅಭಿರಂಜನತಂತ್ರ (ಸ್ಟೇನಿಂಗ್ ಟೆಕ್ನೀಕ್): ಚದರಿಕೆ ಸಾಮರ್ಥ್ಯ ಕಡಿಮೆ ಇರುವ ಕಡಿಮೆ ತೂಕದ ಮತ್ತು ಪರಮಾಣುಗಳಿಂದ ರಚಿತವಾದ ವಸ್ತುಗಳ ಸೂಕ್ಷ್ಮಚಿತ್ರಣದಲ್ಲಿ ವಿಭೇದವನ್ನು (ಕಾಂಟ್ರಾಸ್ಟ್) ಹೆಚ್ಚಿಸಲು ಕೆಲವು ರಾಸಾಯನಿಕ ವಸ್ತುಗಳನ್ನು ಉಪಯೋಗಿಸುತ್ತಾರೆ. ಇವುಗಳ ಚದರಿಕೆ ಸಾಮರ್ಥ್ಯ ಹೆಚ್ಚು. ಸಾಮಾನ್ಯವಾಗಿ ಇವು ಭಾರವಾದ ಲೋಹಗಳ ಸಂಯುಕ್ತಲವಣಗಳು. ಇವನ್ನು ಎಲೆಕ್ಟ್ರಾನ್ ಅಭಿರಂಜಕಗಳೆಂದು ಕರೆಯುತ್ತಾರೆ. ಅಭಿರಂಜಕಗಳಲ್ಲಿ ಎರಡು ವಿಧ. ಧನಾಭಿರಂಜಕ ಮತ್ತು ಋಣಾಭಿರಂಜಕ.

**ಧನಾಭಿರಂಜಕ:** ಧನಾಭಿರಂಜಕಗಳು ರಾಸಾಯನಿಕವಾಗಿ ಅಂಟಿಕೊಳ್ಳುತ್ತವೆ. ವಿಶೇಷವಾಗಿ ಉಪಯೋಗದಲ್ಲಿರುವ ಧನಾಭಿರಂಜಕ ಫಾಸ್ಫೊಟಂಗ್‌ಸ್ಟಿಕ್ ಆಮ್ಲ ಮತ್ತು




ಚಿತ್ರ 14 A ಫಾಸ್ಫೊಟಂಗ್‌ಸ್ಟಿಕ್ ಆಮ್ಲದಿಂದ ಅಭಿರಂಜಕಗೊಂಡ ಪ್ಯಾರಮಿಯೊಸಿನ್ ತಂತು.
B ಇದರ ಜ್ಯಾಮಿತಿ

ಅದರ ಲವಣಗಳು. ಪ್ರೋಟೀನ್ ಪ್ಯಾರಮಿಯೋಸಿನ್ ಎಕ್ಸ್‌ಕಿರಣಗಳ ನಮನ ನಮೂನೆಯನ್ನು ಅರ್ಥಮಾಡಿಕೊಳ್ಳಲು ಅದರ ಎಲೆಕ್ಟ್ರಾನ್ ಸೂಕ್ಷ್ಮಚಿತ್ರಣ ತೆಗೆದಾಗ ಯಾವ ಅಭಿರಂಜಕವನ್ನು ಉಪಯೋಗಿಸಿದ ಮೇಲೆ ಆಂತರಿಕರಚನೆ ಸ್ಪಷ್ಟವಾಗಿ ಕಾಣಿಸಿತು. ಇದನ್ನು ಚಿತ್ರದಲ್ಲಿ ನೋಡಬಹುದು. ಯುರಾನಿಲ್ ಅಸಿಟೇಟ್, ನ್ಯೂಕ್ಲಿಯಿಕ್ ಆಮ್ಲ, ಆಸ್ಮಿಯಮ್ ಟೆಟ್ರಾಕ್ಸೈಡ್ ಮತ್ತು ಪ್ಲಾಟಿನಮ್ ಟ್ರೈಕ್ಲೋರೈಡ್‌ಗಳು $PtCl_3$ ಬೇರೆ ಮುಖ್ಯ ಧನಾಭಿರಂಜಕಗಳು.

**ಋಣಾಭಿರಂಜಕ:** ಋಣಾಭಿರಂಜಕಗಳು ರಾಸಾಯನಿಕ ಕ್ರಿಯೆಯನ್ನುಂಟು ಮಾಡುವುದಿಲ್ಲ. ಅವು ವಸ್ತು ಕಣಗಳ ಸಂದುಗಳಲ್ಲಿ ಸೇರಿ ಹೊರಮೈ ರೇಖೆ ಚೆನ್ನಾಗಿ ಕಾಣುವಂತೆ ಮಾಡುತ್ತವೆ. ಥ್ಯಾಲಿಯಂ ಕಾರ್ಬೋನೇಟ್, ಮತ್ತು ಸೋಡಿಯಂ ಟಂಗ್‌ಸ್ಟೇಟ್ ಮುಖ್ಯವಾದ ಋಣಾಭಿರಂಜಕಗಳು.

ಮಾದರಿ ಮತ್ತು ಅಭಿರಂಜಕಗಳು ಎಲೆಕ್ಟ್ರಾನುಗಳನ್ನು ಚದುರಿಸಲು ಕ್ರಮವಾಗಿ ಕಡಿಮೆ ಮತ್ತು ಹೆಚ್ಚು ಸಾಮರ್ಥ್ಯವನ್ನು ಹೊಂದಿರುವುದರಿಂದ ಛಾಯಾಚಿತ್ರದಲ್ಲಿ ವಿಭೇದ ಮೂಡುತ್ತದೆ.

**ಪ್ರತಿಬಿಂಬೀಕರಣ:** ದೃಕ್ ಸೂಕ್ಷ್ಮದರ್ಶಿಯ ಪ್ರತಿಬಿಂಬದಲ್ಲಿ ಉಂಟಾಗುವ ವಿಭೇದಕ್ಕೆ ಕಾರಣ ಬೆಳಕು ಮಾದರಿಯ ಮೂಲಕ ಹಾಯುವಾಗ ಸಂಭವಿಸುವ ಹೀರಿಕೆ. ಹೆಚ್ಚು ಸಾಂದ್ರತೆ ಇರುವಲ್ಲಿ ಹೀರಿಕೆ ಹೆಚ್ಚು; ಆ ಭಾಗ ಛಾಯಾಚಿತ್ರದಲ್ಲಿ ಕಪ್ಪಾಗಿ ಕಾಣುತ್ತದೆ. ಕಡಿಮೆ ಸಾಂದ್ರತೆ ಇರುವಲ್ಲಿ ಹೀರಿಕೆ ಕಡಿಮೆ: ಅಂಥ ಭಾಗ ಛಾಯಾಚಿತ್ರದಲ್ಲಿ ಬಿಳುಪಾಗಿ ಕಾಣುತ್ತದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಪ್ರತಿಬಿಂಬದಲ್ಲಿ ಉಂಟಾಗುವ ವಿಭೇದಕ್ಕೆ ಕಾರಣ ಎಲೆಕ್ಟ್ರಾನುಗಳು ಮಾದರಿಯ ಮೂಲಕ ಹಾಯುವಾಗ ಸಂಭವಿಸುವ ಚದರಿಕೆ. ಹೆಚ್ಚು ಸಾಂದ್ರತೆ ಇರುವಲ್ಲಿ ಎಲೆಕ್ಟ್ರಾನುಗಳ ಚದರಿಕೆ ಹೆಚ್ಚು; ಆ ಭಾಗ ಛಾಯಾಚಿತ್ರದಲ್ಲಿ ಕಪ್ಪಾಗಿ ಕಾಣುತ್ತದೆ. ಕಡಿಮೆ ಸಾಂದ್ರತೆ ಇರುವಲ್ಲಿ ಎಲೆಕ್ಟ್ರಾನುಗಳ ಚದರಿಕೆ ಕಡಿಮೆ; ಅಂಥ ಭಾಗ ಛಾಯಾಚಿತ್ರದಲ್ಲಿ ಬಿಳುಪಾಗಿ ಕಾಣುತ್ತದೆ. ಚದರಿದ ಎಲೆಕ್ಟ್ರಾನುಗಳು ಬಿಂಬ ಗ್ರಾಹಿತಟ್ಟೆಯನ್ನು ತಲುಪದಂತೆ ಮಾಡಲು ಸಂದರ್ಭೋಚಿತವಾಗಿ ಕಿಂಡಿಗಳನ್ನು ಅಳವಡಿಸಲಾಗುತ್ತದೆ. ಕಡಿಮೆ ಕೋನದಲ್ಲಿ ಚದುರಿದ ಎಲೆಕ್ಟ್ರಾನುಗಳು ಛಾಯಾಚಿತ್ರದಲ್ಲಿ ಹಿನ್ನೆಲೆ ಮಸುಕನ್ನು ಮೂಡಿಸುತ್ತವೆ.




ಚಿತ್ರ 15 ಅಪಾರದರ್ಶಕ ಅಂಚಿನಲ್ಲಿ ಎಲೆಕ್ಟ್ರಾನಿನ ಫ್ರೆನಲ್ ನಮನ

ರೇಖಾವಳಿ ಪರಿಣಾಮ (ಕಾಂಟೂರ್ ಫಿನಾಮಿನನ್): ಚಿಕ್ಕ ಬೆಳಗು ಕಿಂಡಿಯಿರುವ ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ಛಾಯಾಚಿತ್ರಗಳಲ್ಲಿ ವಸ್ತುಮಸೂರ ನಿಜ ನಾಭಿಯಿಂದ ಹೊರಗಿದ್ದರೆ ಫ್ರೆನಲ್ ನಮನದ ಪಟ್ಟಿಗಳು ಕಾಣಿಸಿಕೊಳ್ಳುತ್ತವೆ. ಇದನ್ನು ರೇಖಾವಳಿ ಪರಿಣಾಮ ಎಂದು ಕರೆಯುತ್ತಾರೆ. ಚಿತ್ರ15ರಲ್ಲಿ ಕಾಣಿಸುವಂಥ ಪಟ್ಟಿಗಳು ಮೂಡುತ್ತವೆ.

$$x < \frac{\lambda}{2\alpha_c} \qquad .....(13)$$

ಇಲ್ಲಿ $2\alpha_c = \frac{d}{\alpha}$ ಮತ್ತು $\lambda$ ಎಲೆಕ್ಟ್ರಾನ್ ತರಂಗಾಂತರ. ವಸ್ತುವಿನ ಅಂಚು ನಾಭಿಗೊಂಡಿದ್ದರೆ ಫ್ರೆನಲ್ ಪಟ್ಟಿಗಳು ಕಾಣಿಸುವುದಿಲ್ಲ.

ಸಣ್ಣ ಕಣಗಳ ಇಲ್ಲವೆಕಿಂಡಿಗಳ ಸುತ್ತ ಮೂಡುವ ರೇಖಾವಳಿಗಳು ಸೂಕ್ಷ್ಮದರ್ಶಿ ಸರಿಯಾಗಿ ನಾಭಿಗೊಂಡಿದೆಯೋ ಇಲ್ಲವೋ ಎಂಬುದನ್ನು ತಿಳಿಯಲು ಸಹಾಯಕವಾಗುತ್ತವೆ.

ಸ್ಫಟಿಕ ವಸ್ತುಗಳ ಸೂಕ್ಷ್ಮ ಚಿತ್ರದಲ್ಲಿ ಅನೇಕ ಸಾರಿ ವಸ್ತುಗಳ ಛಾಯಾಚಿತ್ರದಂತೆಯೆ ಇರುವ ಬಿಳುಪು ಪ್ರದೇಶಗಳು ಕಾಣಿಸುವುದುಂಟು. ಇವು ಬ್ರ್ಯಾಗ್ ಪ್ರತಿಫಲನದಿಂದ ಹುಟ್ಟುತ್ತವೆ. ಇಂಥ ಒಂದು ಸೂಕ್ಷ್ಮಚಿತ್ರಣವನ್ನು ಚಿತ್ರದಲ್ಲಿ ನೋಡಬಹುದು. ವಸ್ತು

ಮಸೂರದಲ್ಲಿ ಬ್ರ್ಯಾಗ್ ಪ್ರತಿಫಲನಗೊಂಡ ಎಲೆಕ್ಟ್ರಾನುಗಳನ್ನು ತಡೆಯಲು ಸರಿಯಾದ ಕಿಂಡಿಯಿದ್ದರೆ ಬಿಳುಪುಪ್ರದೇಶಗಳು ಮೂಡುವುದಿಲ್ಲ.




**ಚಿತ್ರ 16 ಸತು ಆಕ್ಸೈಡ್ (ZnO) ಸ್ಫಟಿಕಗಳ ಎಲೆಕ್ಟ್ರಾನ್ ಮೈಕ್ರೊಗ್ರಾಫ್ (ಬಿಳಿ ಪ್ರದೇಶಗಳು ಕಾಣುತ್ತವೆ)**

ಪುನರಾವರ್ತಿತ ರಚನೆಗಳ ಎಲೆಕ್ಟ್ರಾನ್ ಪ್ರತಿಬಿಂಬಗಳು (ಎಲೆಕ್ಟ್ರಾನ್ ಇಮೇಜಸ್ ಆಫ್ ಪೀರಿಯಾಡಿಕ್ ಸ್ಟ್ರಕ್ಚರ್ಸ್): ಹೆಚ್ಚು ವಿಘಟನ ಸಾಮರ್ಥ್ಯ ವಿರುವ (10Å) ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳು 1955ರಲ್ಲಿ ಉಪಯೋಗಕ್ಕೆ ಸಿದ್ಧವಾಗಲಾಗಿ ಸ್ಫಟಿಕಗಳ ಪರಮಾಣು ರಚನೆಯನ್ನು ನೇರವಾಗಿ ನೋಡುವುದು ಸಾಧ್ಯವಾಯಿತು. ಪುನರಾವರ್ತಿತ ರಚನೆಯನ್ನು ಮೊದಲು ನೊಡಿದವ ಮೆಸ್ಟರ್.




**ಚಿತ್ರ 17 (a) ಸಮಾನಾಂತರ ಮಾಯ್ರೆ ನಮೂನೆಯ ರಚನೆ**
**(b) ತಿರುವು ಮಾಯ್ರೆ ನಮೂನೆಯ ರಚನೆ**

ನೇರಕಿರಣದೊಂದಿಗೆ ಒಂದು ಅಥವಾ ಹೆಚ್ಚು ನಮನಕಿರಣಗಳು ವ್ಯತಿಕರಣ ಗೊಂಡು ಪ್ರತಿಬಿಂಬ ಮೂಡಿದರೆ ಪುನರಾವರ್ತಿತ ರಚನೆ ಕಾಣಿಸಿಕೊಳ್ಳುತ್ತದೆ. ಬೇಕಾದ ನಮನಕಿರಣಗಳನ್ನು ಮಸೂರದ ಹಿಂದಿನ ನಾಭಿತಲದಲ್ಲಿ ಸರಿಯಾದ ವ್ಯಾಸವಿರುವ ಕಿಂಡಿಯನ್ನು ಅಳವಡಿಸುವುದರಿಂದ ಪಡೆಯಬಹುದು. ನೇರಕಿರಣಕ್ಕೆ ಕೋನವನ್ನು

ಏರ್ಪಡಿಸುವ ನಮನ ಕಿರಣವಿದ್ದರೆ ಅಂತರವುಳ್ಳ ಪಟ್ಟಿಗಳು ಮೂಡುತ್ತವೆ.

ಇಲ್ಲಿ $d$ ಸ್ಫಟಿಕತಲಗಳಿಗಿರುವ ಅಂತರ ಮತ್ತು $\lambda$ ತರಂಗಾಂತರ. ಸ್ಫಟಿಕತಲಗಳ ಛಾಯಾಚಿತ್ರವನ್ನು ತೆಗೆಯಬೇಕಾದರೆ ಆವಶ್ಯಕವಾಗಿ ಬ್ರ್ಯಾಗ್ ಪ್ರತಿಫಲನ ಆಗಬೇಕು. ಒಂದಕ್ಕಿಂತ ಹೆಚ್ಚು ನಮನಕಿರಣಗಳು ಸೇರಿದರೆ ಎರಡು ಆಯದ ಪುನರಾವರ್ತಿತ ರಚನೆ ಮೂಡುತ್ತದೆ. ಇಂಥ ರಚನೆಗಳ ವಿವರಣೆ ಕಠಿಣ.

ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯಲ್ಲಿ ಲೋಹಗಳಂಥ ಸಾಮಾನ್ಯ ಸ್ಫಟಿಕಗಳ ಪುನರಾವರ್ತಿತ ರಚನೆಯನ್ನು ನೋಡುವುದು ಕಷ್ಟ. ಆದರೆ ಪರೋಕ್ಷವಾಗಿ ಅದನ್ನು ಮಾಡಬಹುದೆಂದು ಹಾಷಿಮಟೊ ಮತ್ತು ಉಯೇಡ ಮತ್ತು ಪಾಷ್ಲಿ ಅವರು ತೋರಿಸಿದರು. ಒಂದರ ಮೇಲೊಂದು ಏರಿಸಿದ ಸ್ಫಟಿಕಗಳಿಂದ ಪಡೆಯಬಹುದಾದ ಮಾಯ್ರೆ ನಮೂನೆಗಳನ್ನು ಸ್ಥಳಭ್ರಂಶ (ಡಿಸ್‌ಲೋಕೇಶನ್) ಮತ್ತು ಲ್ಯಾಟಿಸ್ ಕೊರತೆಗಳ (ಲ್ಯಾಟಿಸ್ ಇಂಪರ್ಫೆಕ್ಷನ್) ವಿಶ್ಲೇಷಣೆಗಾಗಿ ಉಪಯೋಗಿಸಬಹುದು.

**ಮಾಯ್ರೆ ನಮೂನೆಗಳು:** ಎರಡು ರೇಖಾಪಟಲಗಳನ್ನು ಒಂದರ ಮೇಲೊಂದು ಏರಿಸಿ ಒರಟು ರೇಖಾಪಟಲ ಅಥವಾ ಮಾಯ್ರೆ ನಮೂನೆಗಳನ್ನು ಪಡೆಯುವ ದೃಕ್ ತಂತ್ರವನ್ನು ಸ್ಫಟಿಕಗಳ ಎಲೆಕ್ಟ್ರಾನ್ ಸೂಕ್ಷ್ಮಚಿತ್ರಣ ತೆಗೆಯುವಾಗಲೂ ಬಳಸಬಹುದು.



**ಚಿತ್ರ 18 ಪೆಲೇಡಿಯಂ ಮತ್ತು ಚಿನ್ನದ (111) ದಿಗ್‌ವಿನ್ಯಾಸ ತಲಗಳ ಸಮಾನಾಂತರ ಮಾಯ್ರೆ ನಮೂನೆ**

ಚಿತ್ರ ಮಾಯ್ರೆ ನಮೂನೆಗಳನ್ನು ರಚಿಸುವ ಎರಡು ವಿಧಾನಗಳನ್ನು ಸೂಚಿಸುತ್ತವೆ. ಎರಡು ರೇಖಾಪಟಲಗಳನ್ನು ಸಮಾನಾಂತರವಾಗಿ ಒಂದರ ಮೇಲೊಂದು ಏರಿಸಿ ಛಾಯಾಚಿತ್ರ ತೆಗೆದರೆ ಸಮಾನಾಂತರ ಮಾಯ್ರೆ ನಮೂನೆ ಮೂಡುತ್ತದೆ. ಹಾಗಲ್ಲದೆ ಒಂದರ ಮೇಲೊಂದು ಓರೆಯಾಗಿ ಏರಿಸಿ ಛಾಯಾಚಿತ್ರ ತೆಗೆದರೆ ತಿರುವು ಮಾಯ್ರೆ ನಮೂನೆ ಮೂಡುತ್ತದೆ. ಇದೇ ರೀತಿಯ ಪರಿಣಾಮವನ್ನು ಎರಡು ತೆಳುವಾದ ಸ್ಫಟಿಕಗಳನ್ನು ಒಂದರ ಮೇಲೊಂದು ಏರಿಸಿ ಎಲೆಕ್ಟ್ರಾನ್ ಸೂಕ್ಷ್ಮಚಿತ್ರಣ ತೆಗೆದು ಪಡೆಯಬಹುದು. ಮಾಯ್ರೆ ನಮೂನೆಗಳನ್ನು ಬೇರೆ ಬೇರೆ ಸ್ಫಟಿಕಗಳಲ್ಲಿರುವ ಅಂತರಕ್ಕಿಂತ ಹೆಚ್ಚು ಅಂತರ ಇರುವುದರಿಂದ ಅದು ಪ್ರತಿಬಿಂಬದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಸಮಾನಾಂತರ ಮಾಯ್ರೆ ನಮೂನೆಯ ಅಂತ .....(14)

ಎಂದು ಕರೆಯಬಹುದು. $(d_1 d_2) << d_1$ ಅಥವಾ $d_2$ ಆಗ $D >> d_1$ ಅಥವಾ $d_2$. ಮಾಯ್ರೆ ಲಂಬ $M$ ಆದರೆ $D = Md_2$ ಎಂದು ಬರೆಯಬಹುದು. ಹೀಗೆ $d_2$ ಅಂತರವಿರುವ ತಲಗಳನ್ನು $Md_2$ ಅಂತರವಿರುವ ತಲಗಳೆಂಬಂತೆ ಛಾಯಾಚಿತ್ರ ತೆಗೆಯಬಹುದು. ತಿರುವು ಮಾಯ್ರೆ ನಮೂನೆಯ ಅಂತರ

$$D = \frac{d}{2\sin\alpha/2} \qquad .....(15)$$

ಎಂದು ಬರೆಯಬಹುದು. $a$ ಕಡಿಮೆಯಿದ್ದರೆ ಎಂದು ಬರೆಯಬಹುದು.

ಇಲ್ಲಿ ಮಾಯ್ರೆ ಲಂಬನ $\frac{1}{\alpha}$

ಚಿತ್ರದಲ್ಲಿ ಪೆಲೇಡಿಯಂ ಮತ್ತು ಚಿನ್ನದ (111) ದಿಗ್ವಿನ್ಯಾಸ ತಲಗಳ ಸಮಾನಾಂತರ ಮಾಯ್ರೆ ನಮೂನೆಯನ್ನು ನೋಡಬಹುದು. ಲ್ಯಾಟಿಸ್ ಕೊರತೆಯಿಲ್ಲದ ಮತ್ತು ಲ್ಯಾಟಿಸ್ ಕೊರತೆಯಿರುವ ಸ್ಫಟಿಕಗಳ ಮಾಯ್ರೆ ನಮೂನೆಯಲ್ಲಿ ಲ್ಯಾಟಿಸ್ ಕೊರತೆ ಲಂಬಿತವಾಗಿ

ಕಾಣುತ್ತದೆ. ಎಲೆಕ್ಟ್ರಾನ್ ಕಿರಣದ ತೀವ್ರತೆಯನ್ನು ಹೆಚ್ಚಿಸಿ ಸ್ಫಟಿಕಗಳನ್ನು ಕಾಯಿಸಬಹುದಾದ್ದರಿಂದ ಲ್ಯಾಟಿಸ್ ಕೊರತೆಗಳು ಜಾರುತಲದಲ್ಲಿ ಚಲಿಸುವುದನ್ನು ನೇರವಾಗಿ ನೋಡಬಹುದು. ಇಂಥ ಪ್ರಯೋಗಗಳನ್ನು ಮೊದಲು ನಡೆಸಿದಾತ ಹಿರ್ಷ್.



**ಚಿತ್ರ 19 ಕಿಕೂಚಿ ಗೆರೆಗಳು ಮತ್ತು ಬ್ಯಾಂಡುಗಳು**

ಕಿಕೂಚಿ ಗೆರೆಗಳು ಮತ್ತು ಬ್ಯಾಂಡುಗಳು: ಅನೇಕಸಾರಿ ಏಕಸ್ಫಟಿಕಗಳ ಎಲೆಕ್ಟ್ರಾನ್ ಸೂಕ್ಷ್ಮಚಿತ್ರಣಗಳಲ್ಲಿ ಬಿಂದುಗಳ ಜೊತೆಗೆ ವಿಚಿತ್ರ ನಮೂನೆಯ ಗೆರೆಗಳೂ ಮೂಡುತ್ತವೆ. ಈ ಗೆರೆಗಳನ್ನು ಕಿಕೂಚಿ ಗೆರೆಗಳು (ಕಿಕೂಚಿ 1928) ಎಂದು ಕರೆಯುತ್ತಾರೆ. ಇವು ಸ್ಫಟಿಕದಲ್ಲಿ ಎಲೆಕ್ಟ್ರಾನುಗಳು ಪುಟಿತ ಮತ್ತು ಪುಟಿತವಲ್ಲದ (ಇಲಾಸ್ಟಿಕ್ ಅಂಡ್ ಇನಿಲಾಸ್ಟಿಕ್) ಚದುರಿಕೆಯಿಂದ ಹುಟ್ಟುತ್ತವೆ. ಸ್ಫಟಿಕದ ದಿಗ್ವಿನ್ಯಾಸವನ್ನು ವ್ಯತ್ಯಾಸ ಮಾಡಿದರೆ ಬಿಂದುಗಳು ಸ್ಥಳಾಂತರಗೊಳ್ಳುವುದಿಲ್ಲ. ಕೆಲವು ಕ್ಷೀಣಿಸಿ ಕಾಣೆಯಾಗುತ್ತವೆ. ಮತ್ತೆ ಕೆಲವು ಹುಟ್ಟಿ ಕಾಣಿಸಿಕೊಳ್ಳುತ್ತವೆ. ಕಿಕೂಚಿ ಗೆರೆಗಳು ಸ್ಫಟಿಕಕ್ಕೆ ಭದ್ರವಾಗಿ ಅಂಟಿಕೊಂಡಿರುವಂತೆ ಚಲಿಸುತ್ತವೆ. ಈ ಚಲನೆಯನ್ನು ಅನುಸರಿಸಿ ಸ್ಫಟಿಕದ ದಿಗ್ವಿನ್ಯಾಸವನ್ನು ಗೊತ್ತುಮಾಡಬಹುದು.




**ಚಿತ್ರ 20 ಕಲಾಯ್‌ಡಲ್ ಚಿನ್ನದ ಮುದ್ದೆಗಳ ಪ್ರಭಾಕ್ಷೇತ್ರ (A) ಮತ್ತು ಕಾಳಕ್ಷೇತ್ರದ (B) ಛಾಯಾಚಿತ್ರಗಳು**

ಸಾಮಾನ್ಯ ಲೆಕ್ಕಾಚಾರದಂತೆ ಕಿಕೂಚಿ ಗೆರೆಗಳು ಕಾಣಬೇಕಾದಲ್ಲಿ ಬ್ಯಾಂಡುಗಳು ಕಾಣುವುದು. ಅಪೂರ್ವವೇನಲ್ಲ. ಈ ಬ್ಯಾಂಡುಗಳ ಉತ್ಪತ್ತಿಯನ್ನು ತಿಳಿಯಲು ಕಿಕೂಚಿ ಗೆರೆಗಳ ಉತ್ಪತ್ತಿಗೆ ಕೊಡುವ ಕಾರಣವನ್ನು ನಂಬಿದರೆ ಆಗುವುದಿಲ್ಲ. ಅದಕ್ಕೆ ಗತಿಸಿದ್ಧಾಂತವನ್ನು ಆಶ್ರಯಿಸಬೇಕು ಮತ್ತು ಸಮೀಕರಣಗಳಲ್ಲಿ ಹೀರಿಕೆಪದ (ಟರ್ಮ್) ಒಂದನ್ನು ಸೇರಿಸಬೇಕು. ಚಿತ್ರದಲ್ಲಿ ಕಿಕೂಚಿ ಗೆರೆ ಮತ್ತು ಬ್ಯಾಂಡುಗಳನ್ನು ನೋಡಬಹುದು.

**ಪ್ರಭಾಕ್ಷೇತ್ರ ಮತ್ತು ಕಾಳಕ್ಷೇತ್ರ ಪ್ರತಿಬಿಂಬಗಳು:** ಎಲೆಕ್ಟ್ರಾನ್ ಸೂಕ್ಷ್ಮದರ್ಶಿಯ ವಸ್ತುಮಸೂರದ ಕಿಂಡಿ ಬ್ರ್ಯಾಗ್ ಪ್ರತಿಫಲನಗಳನ್ನು ತಡೆದಾಗ ಮೂಡುವ ಪ್ರತಿಬಿಂಬವನ್ನು ಪ್ರಭಾಕ್ಷೇತ್ರ ಪ್ರತಿಬಿಂಬ ಎಂದು ಕರೆಯುತ್ತಾರೆ. ಇದು ನೇರ ಕಿರಣಗಳಿಂದ ಹುಟ್ಟಿದುದು. ಕಿಂಡಿಯ ಜಾಗವನ್ನು ಬದಲಾಯಿಸಿಯೊ ಇಲ್ಲವೆ ಎಲೆಕ್ಟ್ರಾನ್ ಆಕಾರವನ್ನು ಬೇಕಾದ ಹಾಗೆ ಮಾಲಿಸಿಯೋ ಬರಿ ನಮನ ಕಿರಣಗಳಿಂದಲೇ ಪ್ರತಿಬಿಂಬವನ್ನು ಮೂಡಿಸಬಹುದು. ಇಂಥ ಪ್ರತಿಬಿಂಬವನ್ನು ಕಾಳಕ್ಷೇತ್ರ ಪ್ರತಿಬಿಂಬ ಎಂದು ಕರೆಯುತ್ತಾರೆ. ಕಲಾಯ್‌ಡಲ್ ಚಿನ್ನದ ಮುದ್ದೆಗಳ ಪ್ರಭಾಕ್ಷೇತ್ರ ಮತ್ತು ಕಾಳಕ್ಷೇತ್ರ ಛಾಯಾಚಿತ್ರಗಳನ್ನು ಚಿತ್ರ 20

**ಚಿತ್ರ 21 ದೆಹಲಿಯ ರಾಷ್ಟ್ರೀಯ ಭೌತ ಪ್ರಯೋಗಾಲಯದಲ್ಲಿ ಸ್ಥಾಪಿಸಲಾಗಿರುವ ಫಿಲಿಪ್ಸ್ ಎಲೆಕ್ಟ್ರಾನ್ ಸೂಕ್ಷ್ಮದರ್ಶಿ 200**

$(A)$ ಮತ್ತು $(B)$ಗಳಲ್ಲಿ ಕಾಣಬಹುದು. ಅಸ್ಫಟಿಕ ವಸ್ತುಗಳ ಇಂಥ ಛಾಯಾಚಿತ್ರಗಳು ಅಷ್ಟು ಉಪಯುಕ್ತವಾದುವಲ್ಲ. ಸ್ಫಟಿಕ ವಸ್ತುಗಳ ಕಾಳಕ್ಷೇತ್ರ ಪ್ರತಿಬಿಂಬಗಳು ಪ್ರಭಾಕ್ಷೇತ್ರ ಪ್ರತಿಬಿಂಬಗಳಿಗಿಂತ ವಿಶ್ಲೇಷಣೆಗೆ ಅನುಕೂಲವಾಗಿರುತ್ತವೆ. ಚಿತ್ರದಲ್ಲಿ ಸ್ಫಟಿಕಗಳು ಎದ್ದು ಕಾಣುವುದನ್ನು ನೋಡಬಹುದು. ಇವು $A$ಯಲ್ಲಿ ಕಾಣುವುದಿಲ್ಲ. (ಎಸ್.ಎ.ಎಚ್.)

**ಎಲೆಕ್ಟ್ರಾನ್ ಸ್ಫುರಣ:** ಒಂದು ವಸ್ತುವಿನಿಂದ ಎಲೆಕ್ಟ್ರಾನ್ ಬಿಡುಗಡೆಯಾಗುವ ಕ್ರಿಯೆ(ಎಲೆಕ್ಟ್ರಾನ್ ಎಮಿಶನ್). ಯಾವ ವಸ್ತುವಿನಿಂದಲೂ ಎಲೆಕ್ಟ್ರಾನು ಅದೇ ಅದಾಗಿ ಹೊರ ಬರುವುದಿಲ್ಲ. ಅದು ವಸ್ತುವಿನಿಂದ ಬಿಡುಗಡೆಯಾಗಿ ಹೊರಗೆ ಬರಬೇಕಾದರೆ ಶಕ್ತಿಯ ಪೂರೈಕೆಯಾಗಬೇಕು. ಇದು ಮುಂದೆ ತೋರಿಸುವ ಹಲವಾರು ರೀತಿಗಳಲ್ಲಾಗಬಹುದು.

1 ಉಷ್ಣ ಅಯಾನಿಕ ಸ್ಫುರಣ: ಒಂದು ವಸ್ತುವನ್ನು ಕಾಯಿಸಿದರೆ ಅದರ ಪರಮಾಣುಗಳ ಕಂಪನ ವೈಶಾಲ್ಯ ಒಂದು ನಿರ್ದಿಷ್ಟ ಕಂಪನಾಂಕಶಕ್ತಿಗಿಂತ ಹೆಚ್ಚಾಗಿರುವ ಹೆಚ್ಚು ಕಂಪನಶಕ್ತಿಯನ್ನು ಹೀರಿಕೊಂಡ ಎಲೆಕ್ಟ್ರಾನುಗಳು ಹೊರಗೆ ಬರುತ್ತವೆ.

2 ದ್ಯುತಿ ವಿದ್ಯುತ್ತಿಯೆ: ಫೋಟಾನುಗಳಿಂದ ಬೆಳಗಿದ ವಸ್ತುಗಳು ಎಲೆಕ್ಟ್ರಾನುಗಳನ್ನು ಹೊರದೂಡುತ್ತವೆ. ಫೋಟಾನುಗಳ ಶಕ್ತಿ ಪ್ರತಿ ವಸ್ತುವಿನ ಗುಣಕ್ಕೆ ತಕ್ಕಂತೆ ಒಂದು ಕನಿಷ್ಠ ಮಿತಿಗಿಂತ ಹೆಚ್ಚಾಗಿರಬೇಕು, ಅಷ್ಟೇ ಫೋಟಾನಿನ ಶಕ್ತಿಯನ್ನು ಹೀರಿಕೊಂಡ ಎಲೆಕ್ಟ್ರಾನ್ ಹೊರಕ್ಕೆ ಬರುತ್ತದೆ.

3 ದ್ವಿತೀಯ ಸ್ಫುರಣ: ವಿದ್ಯುದಂಶವಿರುವ ಕಣಗಳಿಂದ ವಸ್ತುಗಳನ್ನು ಘಟ್ಟಿಸಿದರೆ ಎಲೆಕ್ಟ್ರಾನುಗಳು ಹೊರಕ್ಕೆ ಬರುತ್ತವೆ. ಇಲ್ಲಿ ಕಣಗಳ ಶಕ್ತಿ ಭಾಗಶಃ ಎಲೆಕ್ಟ್ರಾನುಗಳಿಗೆ ಒದಗುತ್ತದೆ.

4 ಕ್ಷೇತ್ರ ಸ್ಫುರಣ ಅಥವಾ ಶೀತ ಸ್ಫುರಣ: ಪ್ರಬಲವಾದ ವಿದ್ಯುತ್ ಕ್ಷೇತ್ರದಲ್ಲಿರುವ ವಸ್ತುಗಳಿಂದ ಎಲೆಕ್ಟ್ರಾನುಗಳು ಹೊರಗೆ ಬರುತ್ತವೆ. ವಿದ್ಯುತ್ ಕ್ಷೇತ್ರದ ಪ್ರಚೋದನೆಯಿಂದ ಎಲೆಕ್ಟ್ರಾನುಗಳಿಗೆ ಬೇಕಾದ ಶಕ್ತಿಯ ಪೂರೈಕೆಯಾಗುತ್ತದೆ.

ಅಯಾನೀಕರಣ ಮತ್ತು ಕಾಂಪ್ಟನ್ ಕ್ರಿಯೆಗಳಲ್ಲೂ ಎಲೆಕ್ಟ್ರಾನುಗಳು ಹೊರಗೆ ಬರುತ್ತವೆ. ಆದರೆ ಈ ಕ್ರಿಯೆಗಳನ್ನು ಎಲೆಕ್ಟ್ರಾನ್ ಸ್ಫುರಣ ಎಂದು ಕರೆಯುವುದಿಲ್ಲ.

(ಎಸ್.ಎ.ಎಚ್.)

**ಎಲೆಕ್ಟ್ರಾನಿಕ್ ಕಾಮರ್ಸ್:** ವ್ಯಾಪಾರ ವ್ಯವಹಾರ ವಿದ್ಯುನ್ಮಾನ ಮಾಧ್ಯಮದ ಮೂಲಕ ನಡೆಯುವ ಒಂದು ಬಗೆಯ ಬ್ಯಾಂಕಿಂಗ್ ವ್ಯವಸ್ಥೆ. ಇದು ಒಂದು ವಿದ್ಯುನ್ಮಾನ ಸಂಪರ್ಕ ವ್ಯವಸ್ಥೆಯಾಗಿದ್ದು, ಕೈಗಾರಿಕೆಗಳು, ಗ್ರಾಹಕರು, ಪೂರೈಕೆದಾರರು, ಹೂಡಿಕೆದಾರರು, ವ್ಯಾಪಾರ ಭಾಗಸ್ಥರು ಮತ್ತು ಸರ್ಕಾರದ ಕೇಂದ್ರಗಳ ನಡುವಿನ ಸಂಪರ್ಕವಾಗಿದೆ. ಸರಕು ಮತ್ತು ಸೇವೆಗಳನ್ನು ಅಂತರ್‌ಜಾಲದ ಮೂಲಕ ಯಾವಾಗಲಾದರೂ ಅಥವಾ ಎಲ್ಲಿಯಾದರೂ ಕೊಂಡುಕೊಳ್ಳುವುದು ಅಥವಾ ಮಾರಾಟ ಮಾಡಬಹುದು.

ಇದು ಕೇವಲ ದೊಡ್ಡ ಕಂಪನಿಗಳು ಮತ್ತು ಸರ್ಕಾರದ ಇಲಾಖೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಮಧ್ಯಮ ಮತ್ತು ಸಣ್ಣ ಪ್ರಮಾಣದ ವ್ಯವಹಾರ ಮಾಡುವವರಿಗೂ ಉಪಯುಕ್ತ. ಇದರ ಉಪಯೋಗ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೂ ಉಪಯುಕ್ತವಾಗಿದೆ. ಇದರಿಂದ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಡುವಿನ ಅಂತರ ಕಡಿಮೆಯಾಗಲು ಸಹಾಯಕವಾಗಿದೆ. ಮಾರುಕಟ್ಟೆಯ ವಿಸ್ತರಣೆ, ಸರಕು–ಸೇವೆಗಳಿಗೆ ಪ್ರಚಾರ, ಮಾಹಿತಿಯ ಹಂಚಿಕೆ, ಮಾರಾಟದ ಅಭಿವೃದ್ಧಿ, ಸರಕುಗಳ ಮಾರಾಟ, ವಿಮಾ, ಹಣಕಾಸು ಕ್ಷೇತ್ರ ಮೊದಲಾದವು ಇದನ್ನು ಉಪಯೋಗಿಸುವುದರಿಂದ ನಿಗದಿತ ಅವಧಿಯೊಳಗೆ ಸರಿಯಾಗಿ ವ್ಯಾಪಾರ ನಡೆಯುವುದು. ಇದರಿಂದ ಸಮಯ ಮತ್ತು ಹಣದ ಉಳಿತಾಯವಾಗುತ್ತದೆ. ಉತ್ಪಾದನೆ ಹೆಚ್ಚಾಗಿ, ಮಾರುಕಟ್ಟೆ ವಿಸ್ತರಿಸಲ್ಪಡುವುದು. ಇದನ್ನು ಮೂರು ಕ್ಷೇತ್ರಗಳಲ್ಲಿ ಹೆಚ್ಚು ಅನ್ವಯಿಸಿಕೊಳ್ಳಲಾಗಿದೆ. ಅವುಗಳೆಂದರೆ ವ್ಯಾಪಾರ ಸಂಸ್ಥೆಗಳ ನಡುವೆ, ವ್ಯಾಪಾರಸ್ಥರು ಮತ್ತು ಗ್ರಾಹಕರ ನಡುವೆ ಹಾಗೂ ಒಂದೇ ದೊಡ್ಡ ವ್ಯಾಪಾರ ಸಂಸ್ಥೆಯೊಳಗೆ ಈ ತಾಂತ್ರಿಕತೆಯನ್ನು ಸರಿಯಾಗಿ ಅಳವಡಿಸಿಕೊಳ್ಳಬೇಕಾದರೆ ಕಂಪ್ಯೂಟರ್, ಅಂತರ್‌ಜಾಲದ ವ್ಯವಸ್ಥೆ, ವೆಬ್‌ಸೈಟ್, ಅತ್ಯುತ್ತಮವಾದ ಸಂಪರ್ಕ ವ್ಯವಸ್ಥೆ, ಪರಿಣಿತ ಕೆಲಸಗಾರರು, ಉತ್ತಮವಾದ ಸೈಬರ್ ಕಾನೂನು, ವ್ಯಾಪಾರದಲ್ಲಿನ ರಕ್ಷಣೆ ಮತ್ತು ಉತ್ತಮ ಗ್ರಾಹಕರು ಆವಶ್ಯಕ. (ಎಸ್.ಕೆ.ಪಿ.)

**ಎಲೆಕ್ಟ್ರಾನಿಕ್ ನಕಾಶೆ ಕೆತ್ತನೆ:** ವಿದ್ಯುತ್ ಪ್ರಕಾಶದ ಕೋಶಗಳು ಮೂಲಪ್ರತಿಯಿಂದ ಪ್ರತಿಫಲಿತವಾದ ಅಥವಾ ಪ್ರಸರಿಸಲ್ಪಟ್ಟ ಕಿರಣಗಳನ್ನು ಉಪಯೋಗಿಸಿಕೊಂಡು ಕೆತ್ತುವ ಸಾಧನಕ್ಕೆ ಶಕ್ತಿಯನ್ನು ಕೊಟ್ಟು ಅದರ ಅಡಿಯಲ್ಲಿರುವ ಲೋಹದ ಅಥವಾ ಲೆಪ್ಪದ ಫಲಕದ ಮೇಲೆ ನೇರವಾಗಿ ನಡೆಸುವ ಕ್ರಿಯೆ (ಎಲೆಕ್ಟ್ರಾನಿಕ್ ಎನ್‌ಗ್ರೇವಿಂಗ್). ಇತರ ವಿಧಾನಗಳ ಸ್ಥೂಲ ಕಲ್ಪನೆ ಇದ್ದರೆ ಎಲೆಕ್ಟ್ರಾನಿಕ್ ನಕಾಶೆ ಕೆತ್ತನೆಯಲ್ಲಿರುವ ಸೂಕ್ಷ್ಮ ಸುಧಾರಣೆ ತಿಳಿಯುತ್ತದೆ. ಲಿಪಿ ಮುದ್ರಣ (ಲೆಟರ್ ಪ್ರೆಸ್) ಇಂಥ ಒಂದು ಇತರ ವಿಧಾನ. ಈ ವಿಧಾನದಿಂದ ಚಿತ್ರಗಳನ್ನು ಮುದ್ರಿಸಲು ಉಬ್ಬುಶಿಲ್ಪದ ಅಚ್ಚಿನ ಮೈಯುಳ್ಳ ಮುದ್ರಾಫಲಕಗಳಿರಬೇಕು. ಸಾಧಾರಣವಾಗಿ ರೂಢಿಯಲ್ಲಿರುವ ಸಾಂಪ್ರದಾಯಿಕ ಪದ್ಧತಿಯಲ್ಲಿ, ಒಂದು ಆಮ್ಲದ ಸಹಾಯದಿಂದ ಅಚ್ಚಾಗದ ಭಾಗವನ್ನು ಹಲವಾರು ಹಂತಗಳಲ್ಲಿ ಕೊರೆದು ಆಮ್ಲನಿರೋಧ ಬಿಂಬದ ಸಹಾಯದಿಂದ ಅಚ್ಚಾಗುವ ಭಾಗವನ್ನು ಸಂರಕ್ಷಿಸಿ ಈ ಫಲಕಗಳನ್ನು ತಯಾರಿಸಲಾಗುವುದು. ಉತ್ತಮವಾದ ಮುದ್ರಾಫಲಕಗಳನ್ನು ತಯಾರಿಸುವ ಮತ್ತು ಅನೇಕ ಅನುಕೂಲತೆಗಳನ್ನೊಳಗೊಂಡಿರುವ ಪೌಡರ್ ರಹಿತ ಕೊರೆಯುವಿಕೆ (ಪೌಡರ್‌ಲೆಸ್ ಎಚ್ಚಿಂಗ್) ಹಾಗೂ ಎಲೆಕ್ಟ್ರಾನಿಕ್ ಕೆತ್ತನೆ (ಎನ್‌ಗ್ರೇವಿಂಗ್) ಮುಂತಾದ ನವೀನ ಪದ್ಧತಿಗಳು ಬಳಕೆಗೆ ಬಂದಿರುವ ಪ್ರಯುಕ್ತ ಈ ಸಾಂಪ್ರದಾಯಿಕ ಪದ್ಧತಿ ಕ್ರಮೇಣ ಕ್ಷೀಣಿಸುತ್ತಿದೆ ಮೂಲ ಚಿತ್ರಗಳ, ಅದರಲ್ಲೂ ವರ್ಣರಂಜಿತ ಚಿತ್ರಗಳ, ಪ್ರತಿಯ ಪುನರುತ್ಪಾದನೆಯನ್ನು ಶೀಘ್ರವಾಗಿ, ಮತ್ತು ಚೊಕ್ಕವಾಗಿ ತಯಾರಿಸುವ ದೃಷ್ಟಿಯಿಂದ ಎಲೆಕ್ಟ್ರಾನಿಕ್ ನಕಾಶೆ ಕೆತ್ತನೆ ಬಹಳ ಉಪಯುಕ್ತವಾಗಿದೆ. ಈ ಪದ್ಧತಿಯಲ್ಲಿ ಲೋಹದ ಮೇಲೆ ಬಿಂಬವನ್ನು ಛಾಯಾಗ್ರಹಣ ಮಾಡುವುದರ ಬದಲು ಮೂಲಪ್ರತಿಯ ಬಹಳ ಕಿರಿದಾದ ಭಾಗವನ್ನು ಮಾತ್ರ ಒಂದು ಬಾರಿಗೆ ಬೆಳಕಿಗೆ ಒಡ್ಡಲಾಗುತ್ತದೆ. ಈ ಬಗೆಯ ಕಿರಿದಾದ ಪ್ರತಿಫಲಿತವಾದ ಅಥವಾ ಪ್ರಸರಿಸಲ್ಪಟ್ಟ ಬೆಳಕಿನ ಕಿರಣಗಳನ್ನು ದ್ಯುತಿವಿದ್ಯುತ್ಕೋಶಗಳು (ಫೋಟೋ ಎಲೆಕ್ಟ್ರಿಕ್ ಸೆಲ್ಸ್) ಸ್ವೀಕರಿಸುತ್ತವೆ. ಪತನ ಬೆಳಕಿನ ಪ್ರಮಾಣಕ್ಕನುಸಾರವಾದ ವಿದ್ಯುತ್ ಪ್ರವಾಹವನ್ನುಂಟುಮಾಡುವ ಸಾಮರ್ಥ್ಯ ಕೋಶಗಳಿಗೆ ಇದೆ. ಇದರಿಂದಾಗಿ ಮೂಲಚಿತ್ರದ ಶ್ವೇತವರ್ಣದಿಂದ ತೊಡಗಿ ಕಪ್ಪುವರ್ಣದವರೆಗಿನ ಎಲ್ಲ ಅಂತರಗಳ ಮೇಲೆಯೂ ಬೆಳಕಿನ ಕಿರಣವನ್ನು ಹಾಯಿಸಿದಾಗ ಅಂಥ ಶ್ವೇತವರ್ಣ ಮತ್ತು ಕಪ್ಪು ವರ್ಣಗಳ ನಡುವಣ ವರ್ಣಾಂತರಗಳ ರೀತ್ಯ ದ್ಯುತಿವಿದ್ಯುತ್ ಕೋಶದಲ್ಲಿನ ವಿದ್ಯುತ್ ಪ್ರವಾಹದಲ್ಲಿ ವ್ಯತ್ಯಾಸವುಂಟಾಗುವುದು. ಈ ವಿದ್ಯುತ್ ಪ್ರವಾಹದ ಪ್ರಮಾಣವನ್ನು ಅನುಸರಿಸುವ ಕೆತ್ತುವ ಸಾಧನ ಅದರ ಅಡಿಯಲ್ಲಿರುವ ಫಲಕದ ಮೇಲೆ ಅತಿ ಸೂಕ್ಷ್ಮ ಹಾಗೂ ವಿಭಿನ್ನ ಗಾತ್ರದ ರಂಧ್ರಗಳನ್ನು ಕೊರೆಯುವುದು. ಕಿರಿದಾದ ಬೆಳಕಿನ ಕಿರಣವನ್ನು ಮೂಲಪ್ರತಿಯ ಪ್ರತಿಯೊಂದು ಭಾಗದ ಮೇಲೆಯೂ ಸರಳರೇಖೆಯಲ್ಲಿ ಪ್ರಸರಿಸಲಾಗುವುದು. ಇದಕ್ಕೆ ಕ್ರಮವೀಕ್ಷಣೆ (ಸ್ಕ್ಯಾನಿಂಗ್) ಎಂದು ಹೆಸರು.

ಕ್ಲಿಸ್ಕೊಗ್ರಾಫ್ ಎಂಬ ಯಂತ್ರ ಎಲೆಕ್ಟ್ರಾನಿಕ್ ನಕಾಶೆ ಕೆತ್ತನೆಯಲ್ಲಿ ಪ್ರಸಿದ್ಧವಾಗಿರುವ ಯಂತ್ರಗಳಲ್ಲಿ ಒಂದು. ಈ ಯಂತ್ರದಲ್ಲಿ ಬೆಳಕಿನ ಕಿರಣಗಳು ಸ್ಥಾಯಿಯಾಗಿದ್ದು ಚಿತ್ರದ ನಕಲು ಸಮತಲವಾಗಿ ಹಿಂದಕ್ಕೂ ಮುಂದಕ್ಕೂ ಚಲಿಸುತ್ತದೆ. ಹೀಗೆ ಹಾದು ಹೋದ ಪ್ರತಿರೇಖೆಯ ಕೊನೆಯಲ್ಲಿ ಬೆಳಕಿನ ಕಿರಣ ಅಂಥ ಎಡೆಯಾಟಕ್ಕೆ ಲಂಬವಾದ ದಿಕ್ಕಿನಲ್ಲಿ ಸ್ವಲ್ಪಮಟ್ಟಿಗೆ ಚಲಿಸುವುದು. ಆ ಕೂಡಲೆ ಮೂಲಪ್ರತಿಯ ಎಡೆಯಾಟ ಪುನಃ ಪ್ರಾರಂಭವಾಗುವುದು. ಈ ಕ್ರಿಯೆ ಸ್ವಯಂಚಾಲಿತವಾಗಿ ಕ್ರಮವೀಕ್ಷಣೆಯ ಕೆಲಸ ಪೂರ್ಣಗೊಳ್ಳುವವರೆವಿಗೂ ನಡೆಯುವುದು. ಅಂತೆಯೇ, ಕೆತ್ತನೆಯ ಸಾಧನದ ಕೆಳಗೆ ಇಟ್ಟ ಲೋಹದ ಅಥವಾ ಲೆಪ್ಪದ ಫಲಕವೂ ಚಿತ್ರದ ಪ್ರತಿಯೊಂದಿಗೆ ಹಿಂದಕ್ಕೂ ಮುಂದಕ್ಕೂ ಚಲಿಸುವುದು. ಕೆತ್ತನೆಯ ಸಾಧನಕ್ಕೆ ಒಂದು V ಆಕಾರದ ಕಂಟಿಕೆಯನ್ನು (ಸ್ಟೈಲಸ್) ಅಳವಡಿಸಿರುತ್ತದೆ. ವಿದ್ಯುತ್ ಪ್ರಕಾಶದ ಕೋಶಗಳಿಂದ ಬರುವ ವಿದ್ಯುತ್ ಕಂಪನಗಳು ಕಂಟಿಕೆಯನ್ನು ಸಂಚಾಲಿಸಿದಾಗ ಅದು ಕೆಳಗಿರುವ ಫಲಕದ ಮೇಲೆ ನಿಯತಕಾಲಿಕವಾಗಿ ಕೆತ್ತನೆ ಮಾಡುತ್ತದೆ. ಅಂಥ ಪ್ರತಿಯೊಂದು ಕೆತ್ತನೆಯ ಆಳವೂ ವಿದ್ಯುತ್‌ಕೋಶದಿಂದ ಬರುವ ವಿದ್ಯುತ್‌ಪ್ರವಾಹಕ್ಕೆ ಅನುಗುಣವಾಗಿರುತ್ತದೆ. ವಿಶೇಷ ಗಾತ್ರದ ಕಂಟಿಕೆ ವಜ್ರಾಕಾರದ ರಂಧ್ರವನ್ನು ಕೆತ್ತುತ್ತದೆ. ಈ ರೀತಿ ಫಲಕದ ಮೇಲೆ ಪರಿಣಮಿಸುವ ರಂಧ್ರದ ಅಗಲ ಕಂಟಿಕೆ ಫಲಕದಲ್ಲಿ ಎಷ್ಟು ಆಳಕ್ಕೆ ಹೋಗುವುದೋ ಅದನ್ನು ಅವಲಂಬಿಸಿದೆ.

ಒಂದು ಅಂಗುಲದಷ್ಟು ಅಗಲದಲ್ಲಿ ನೂರಾರು ಸಾಲು ರಂಧ್ರಗಳನ್ನು ಈ ಯಂತ್ರ ಕೆತ್ತಬಲ್ಲುದು. ಇದರ ಅಣುವಿದ್ಯುತ್ ಘಟಕ ದ್ಯುತಿ ವಿದ್ಯುತ್ ಸಂಕೇತಗಳನ್ನು ಬೇಕಾದ ಪ್ರಮಾಣಕ್ಕೆ ಗಾತ್ರ ವ್ಯತ್ಯಾಸ ಮಾಡಬಲ್ಲುದು; ಮತ್ತು ಆ ಪ್ರಯುಕ್ತ ಮೂಲಪ್ರತಿಯ ಛಾಯಾ ಹಾಗೂ ಅತ್ಯುಜ್ವಲ (ಹೈಲೈಟ್) ಭಾಗಗಳಲ್ಲಿನ ಭೇದ ಕಡಿಮೆಯಾಗದಿದ್ದರೆ ಆ ನ್ಯೂನತೆಯನ್ನು ಸಹ ಸರಿಪಡಿಸಿ ಬೇಕಾದ ಛಾಯೆಗಳನ್ನೂ ಅರ್ಧ ಛಾಯಾ ಭಾಗಗಳನ್ನೂ ಅತ್ಯುಜ್ವಲ ಭಾಗಗಳನ್ನೂ ಒಳಗೊಂಡ ಫಲಕವನ್ನು ಕೊಡಬಲ್ಲುದು.

ಈ ಯಂತ್ರಗಳಲ್ಲಿ ಕೆಲವಕ್ಕೆ ಸಮತಟ್ಟಾದ ಪ್ರತಿಫಲಿಸುವ ಚಿತ್ರಪಟಲಗಳೇ ಬೇಕು. ಮತ್ತೆ ಕೆಲವಕ್ಕೆ ಪಾರದರ್ಶಕ ಚಿತ್ರಪಟಲಗಳೇ ಬೇಕು. ಇನ್ನು ಕೆಲವು ಯಂತ್ರಗಳು ಈ ಎರಡು ವಿಧದ ಚಿತ್ರಪಟಲಗಳನ್ನೂ ಉಪಯೋಗಿಸಬಲ್ಲುವು. ಚಿತ್ರದ ಮೂಲಪ್ರತಿಗಿಂತ ಚಿಕ್ಕದಾದ ಹಾಗೂ ದೊಡ್ಡದಾದ ನಕಾಶೆ ಕೆತ್ತನೆ ಫಲಕಗಳನ್ನು ಉತ್ಪಾದಿಸುವ ಯಂತ್ರಗಳೂ ಇವೆ. ಕ್ಲಿಸ್ಕೊಗ್ರಾಫ್ ಯಂತ್ರಗಳ ಗುಂಪಿನಲ್ಲಿ ಇತ್ತೀಚೆಗೆ ವಾಡಿಕೆಗೆ ಬಂದಿರುವ ವೇರಿಯೊಕ್ರೋಮೋಗ್ರಾಫ್ ಯಂತ್ರ ಈ ತೆರನಾದ ಚಿತ್ರವನ್ನು ಮೂಲಕ್ಕಿಂತ 20 ಪಾಲು ವಿಸ್ತರಿಸಬಲ್ಲುದಷ್ಟೇ ಅಲ್ಲದೆ ಒಂದು ಅಂಗುಲದಷ್ಟು ಪ್ರದೇಶದಲ್ಲಿ 500 ರಿಂದ 1500ರ ವರೆಗೆ ಸಾಲುಗಳನ್ನು ಉಂಟುಮಾಡಲೂಬಲ್ಲುದು. ಇಷ್ಟೇ ಅಲ್ಲ, ತ್ರಿವರ್ಣ ಅಥವಾ ನಾಲ್ಕು ವರ್ಣಗಳಲ್ಲಿ ಮುದ್ರಿಸಲು ಬೇಕಾಗುವ 3 ಅಥವಾ 4 ನಕಾಶೆ ಕೆತ್ತನೆಗಳನ್ನು ಒಂದೇ ಮೂಲ ಪ್ರತಿಯಿಂದ ಏಕಕಾಲದಲ್ಲಿ ಉತ್ಪಾದಿಸುವ ಯಂತ್ರಗಳೂ ಇವೆ. ವೇರಿಯೊ ಕ್ಲಿಸ್ಕೊಗ್ರಾಫ್ ಎಂಬ ಯಂತ್ರದಲ್ಲಿ ನಕಾಶೆ ಕೆತ್ತನೆ ಮಾಡಿದ ಫಲಕವನ್ನಾಗಲೀ ವರ್ಣ ಪರಿಷ್ಕರಣ ಮಾಡಿದ ಮತ್ತು ಹಾಫ್‌ಟೋನ್ ಸ್ಕ್ರೀನ್ ಮಾಡಿದ ಋಣ ಅಥವಾ ಧನ ಚಿತ್ರವನ್ನಾಗಲೀ ಉತ್ಪಾದಿಸಬಹುದು. ಈ ಬಗೆಯ ಯಂತ್ರಗಳೂ (ಮೂಲ ಪ್ರತಿಯನ್ನು ಸಮತಟ್ಟಾಗಿಯೇ ಆಗಲಿ ಅಥವಾ ವರ್ತುಳಾಕಾರದಲ್ಲಿಯೇ ಆಗಲಿ ತೆಗೆದುಕೊಳ್ಳುವಂಥ ಯಂತ್ರಗಳಲ್ಲಿ) ಇದುವರೆಗೆ ತೆಗೆದುಕೊಳ್ಳಬಲ್ಲ ಅತ್ಯಂತ ಹೆಚ್ಚಿನ ಅಳತೆಯ ಮೂಲಪ್ರತಿಯೆಂದರೆ ಸು. 45ಮೀx33ಮೀ ಇರುವಂಥದು; ಮತ್ತು ಇವುಗಳಿಂದ ಪಡೆಯಬಹುದಾದ ನಕಾಶೆ ಕೆತ್ತನೆ ಮಾಡಿರುವ ಫಲಕಗಳ ಅಳತೆ ಸು. 43ಮೀx30ಮೀ.

ಬಣ್ಣದ ನಕಾಶೆ ಕೆತ್ತನೆ: ಮೇಲೆ ವಿವರಿಸಿದ ಯಂತ್ರಗಳ ಪೈಕಿ ಕೆಲವಲ್ಲಿ ತ್ರಿವರ್ಣ ಅಥವಾ ನಾಲ್ಕು ವರ್ಣಗಳ ನಕಾಶೆ ಕೆತ್ತನೆ ಮಾಡಿದ ಅಚ್ಚಿನ ಫಲಕಗಳನ್ನು ಉತ್ಪಾದಿಸಿ 3 ಅಥವಾ 4 ಬಣ್ಣಗಳ ಶಾಯಿಗಳನ್ನು ಬಳಸಿ ವರ್ಣರಂಜಿತ ಚಿತ್ರಗಳನ್ನು ಮುದ್ರಿಸಬಹುದು. ಇವು ಮೂಲತಃ ಎಲೆಕ್ಟ್ರಾನಿಕ್ ಕೆತ್ತನೆ ಯಂತ್ರಗಳೇ ಆಗಿದ್ದರೂ ಇವುಗಳಲ್ಲಿ ವರ್ಣಪರಿಷ್ಕರಣ ಮಾಡುವ ಕೆಲವು ಸೌಲಭ್ಯಗಳಿವೆ.

ಉದಾಹರಣೆಗೆ, ಕಲರ್ ಕ್ಲಿಸ್ಕೊಗ್ರಾಫ್ ಯಂತ್ರದಲ್ಲಿ ಪ್ರತಿಯೊಂದು ಬಣ್ಣದ ಫಲಕವನ್ನು ತಯಾರಿಸುವಲ್ಲಿಯೂ ಎರಡು ಪ್ರತ್ಯೇಕ ವರ್ಣಶೋಧಕಗಳನ್ನು ಉಪಯೋಗಿಸಬೇಕು. ಮೆಜೆಂಟ ಬಣ್ಣದ ಫಲಕವನ್ನು ತಯಾರಿಸುವಲ್ಲಿ ಮೂಲಪ್ರತಿಯ ಮೇಲೆ ಪತನವಾದ ಬೆಳಕಿನ ಕಿರಣವನ್ನು ಎರಡು ದ್ಯುತಿ ವಿದ್ಯುತ್ ಕೋಶಗಳಿಂದ ಗ್ರಹಿಸಲಾಗುತ್ತದೆ. ಇವುಗಳಲ್ಲಿ ಒಂದು ಹಸಿರು ಶೋಧಕದ ಮೂಲಕ ಹಾದು ಬಂದ ಬೆಳಕನ್ನೂ ಮತ್ತೊಂದು ಕೆಂಪು ಶೋಧಕದ ಮೂಲಕ ಹಾದು ಬಂದ ಬೆಳಕನ್ನೂ ಗ್ರಹಿಸುತ್ತವೆ. ಹಸಿರುಶೋಧಕ ದ್ಯುತಿ ವಿದ್ಯುತ್ ಕೋಶದಿಂದ ಬರುವ ಸಂಕೇತವು ಪರಿಷ್ಕೃತವಲ್ಲದ ಮೆಜೆಂಟ ಬಣ್ಣದ ಸಹಜ (ಧನ) ಚಿತ್ರ ಸಂಬಂಧಿಯಾಗಿರುತ್ತದೆ; ಮತ್ತು ಕೆಂಪುಶೋಧಕ ದ್ಯುತಿ ವಿದ್ಯುತ್ ಕೋಶದಿಂದ ಬರುವ ಸಂಕೇತವು ಸೂಕ್ತ ರೀತಿಯ ಅಣುವಿದ್ಯುತ್ (ಎಲೆಕ್ಟ್ರಾನಿಕ್) ಮಾರ್ಪಾಟು

ಹೊಂದಿದ ಅನಂತರ ಸೈಯಾನ್ ವಿಷಮ (ಋಣ) ಚಿತ್ರ ಸಂಬಂಧಿಯಾಗಿರುತ್ತದೆ. ಈ ಎರಡೂ ಸಂಕೇತಗಳನ್ನು ಒಂದು ಗಾತ್ರ ವ್ಯತ್ಯಾಸ ಮಾಡುವ ಮಾಡ್ಯುಲೇಟರಿನಲ್ಲಿ ಸಂಯೋಜಿಸಿ ಅದರಿಂದ ಬರುವ ಸಂಕೇತವನ್ನು ಕೆತ್ತನೆ ಸಾಧನೆಗೆ ಪ್ರವಹಿಸಲಾಗುತ್ತದೆ. ಇದರಿಂದ ಉತ್ಪಾದಿಸಿದ ಫಲಕ ವರ್ಣಪರಿಷ್ಕೃತವಾದ ಮಜೆಂಟ ಬಣ್ಣದ ಹಾಫ್‌ಟೋನ್ ಅಚ್ಚಿನ ಪಡಿಯಾಗಿರುತ್ತದೆ. ಸೈಯಾನ್ ಮತ್ತು ಹಳದಿ ಹಾಫ್‌ಟೋನ್ ಅಚ್ಚಿನ ಪಡಿಗಳನ್ನೂ ಈ ರೀತಿಯಲ್ಲಿಯೇ ಆದರೆ ಬೇರೆ ಬಣ್ಣದ ಶೋಧಕಗಳನ್ನು ಉಪಯೋಗಿಸಿ ತಯಾರಿಸಲಾಗುವುದು.

ಈ ವಿಧಾನದಲ್ಲಿ ವರ್ಣಪರಿಷ್ಕರಣ ಮಾಡುವ ರೀತಿ ಫೋಟೊಗ್ರಾಫಿಕ್ ಮಾಸ್ಕಿಂಗ್ ವಿಧಾನದಲ್ಲಿ ಅನುಸರಿಸುವ ರೀತಿಯಲ್ಲಿ ಸ್ವಲ್ಪಮಟ್ಟಿಗೆ ಹೋಲುತ್ತದೆ. ಆದರೆ ಆನುವಿದ್ಯುತ್ ವಿಧಾನದಲ್ಲಿ ಕೆಲವು ಹೆಚ್ಚು ಸೌಲಭ್ಯಗಳಿರುವ ಪ್ರಯುಕ್ತ ಈ ವಿಧಾನ ಹೆಚ್ಚು ಅನುಕೂಲಕರವಾಗಿದೆ. ಮೂಲಚಿತ್ರ ಹೇಗೇ ಇದ್ದರೂ ತಕ್ಕಂಥ ವರ್ಣ ಪರಿಷ್ಕಾರವನ್ನು ಕೊಡಬಲ್ಲ ಅನುಕೂಲತೆಯೇ ಇವುಗಳಲ್ಲಿ ಅತ್ಯಂತ ಮುಖ್ಯವಾದದ್ದು. ಅಷ್ಟೇ ಅಲ್ಲದೆ ನಕಾಶೆ ಕೆತ್ತನೆ ಮಾಡುವ ಮೊದಲೇ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಕೆತ್ತಲಾಗುವ ಪ್ರತಿಯೊಂದು ಫಲಕದಲ್ಲಿ ಉಂಟಾಗಬಹುದಾದ ಚುಕ್ಕೆಯ ಪ್ರಮಾಣವನ್ನು ಮೊದಲಲ್ಲಿಯೇ ನಿರ್ದಿಷ್ಟಗೊಳಿಸಬಹುದು.

ವರ್ಣ ಕ್ಲಿಸ್ಕೊಗ್ರಾಫ್ ಯಂತ್ರದ ಬೆಲೆ ಇತರ ನಕಾಶೆ ಕೆತ್ತನೆ ಮಾಡುವ ಯಂತ್ರಗಳ ಬೆಲೆಗಳಿಗಿಂತ ಕಡಿಮೆ. ಈ ಯಂತ್ರದಿಂದ ಲಭಿಸುವ ವರ್ಣಪರಿಷ್ಕರಣ ಮೂಲಚಿತ್ರದ ನಿಜವಾದ ವರ್ಣಕ್ಕೆ ಸರಿಸುಮಾರು ಶೇ. 90 ಸಮನಾಗಿರುತ್ತದೆ. ಶೇ. 100 ಪಾಲು ವರ್ಣ ಪರಿಷ್ಕರಣವನ್ನು ಕೊಡಬಲ್ಲ ಯಂತ್ರಗಳೂ ಇವೆ. **(ಡಿ.ಎನ್.)**

**ಎಲೆಕ್ಟ್ರಾನಿಕ್ ವರ್ಣವೀಕ್ಷಕಗಳು:** ನಕಾಶೆ ಕೆತ್ತನೆಯಲ್ಲಿ (ಎನ್‌ಗ್ರೇವಿಂಗ್) ಎಲೆಕ್ಟ್ರಾನಿಕ್ ನಕಾಶೆ ಕೆತ್ತನೆ ಸಾಧನೆಗಳಂತೆಯೇ ಇರುವ, ಆದರೆ ಅಂತಿಮ ಉತ್ಪನ್ನವಾಗಿ ನಕಾಶೆ ಕೆತ್ತಿದ ಫಲಕದ ಬದಲು ಸ್ಕ್ರೀನ್ ಮಾಡಲ್ಪಟ್ಟ ಅಥವಾ ನಿರಂತರ ಟೋನ್ ಫೋಟೊಗ್ರಾಫಿಕ್ ಫಿಲಂ ಅಥವಾ ಫಲಕ ನೀಡುವ ಸಾಧನೆಗಳು (ಎಲೆಕ್ಟ್ರಾನಿಕ್ ಕಲರ್ ಸ್ಕ್ಯಾನರ್ಸ್). ಹೀಗಾಗಿ ಇವು ಸಾಂಪ್ರದಾಯಿಕ ಲಿಪಿಮುದ್ರಣ ಕ್ಷೇತ್ರಕ್ಕಿಂತ ಲಿಥೊ ಮತ್ತು ಗ್ರವ್ಯೂರ್ ಫಲಕ ತಯಾರಿಕೆಯ ಕ್ಷೇತ್ರದಲ್ಲಿ ಬಹಳ ಉಪಯೋಗಕರವಾಗಿವೆ. ಪೌಡರ್‌ರಹಿತ ಕೊರೆತ (ಎಚ್ಚಿಂಗ್) ಮತ್ತು ಇತರ ಸುಧಾರಿತ ಪದ್ಧತಿಗಳಿಂದ ಚಿತ್ರಗಳನ್ನು ಕೆತ್ತಿ ಲಿಪಿಮುದ್ರಣ ರೋಟರಿ ಯಂತ್ರಗಳಲ್ಲಿ ಮುದ್ರಿಸುವುದೇ ಆದರೆ ಆಗಲೂ ಈ ಯಂತ್ರಗಳು ಅಷ್ಟೇ ಉಪಯುಕ್ತವಾಗುತ್ತವೆ. ಉದಾಹರಣೆಗೆ ಈ ಯಂತ್ರದಲ್ಲಿ ಪಡೆದ ಸ್ಕ್ರೀನ್ ಮಾಡಿದ ವರ್ಣ ಪ್ರತ್ಯೇಕಿಕರಣಗಳನ್ನು (ಕಲರ್ ಸೆಪರೇಷನ್ಸ್) ಬೇಕಾದಲ್ಲಿ ಅಚ್ಚು ವಸ್ತುವಿನೊಡನೆ (ಟೈಪ್ ಮ್ಯಾಟರ್) ಸಿಲಿಂಡರ್ ಮೇಲೆ ಮುದ್ರಿಸಿ ಆ ಸಿಲಿಂಡರನ್ನು ಡೌ ಕೊರೆತ (ಎಚ್ಚಿಂಗ್) ಯಂತ್ರದಲ್ಲಿ ಒಂದೇ ಬಾರಿಗೆ ಕೆತ್ತನೆ ಮಾಡಿ ಮುದ್ರಣಕ್ಕೆ ಸಜ್ಜುಗೊಳಿಸಬಹುದು.

ವೇರಿಯೊ–ಕ್ಲಿಸ್ಕೊಗ್ರಾಫ್ ಯಂತ್ರ ವರ್ಣವೀಕ್ಷಕಗಳ ವರ್ಗಕ್ಕೆ ಸಹ ಸೇರುತ್ತದೆ. ಕಾರಣ, ಲಿಪಿ ಮುದ್ರಣ ಪಡಿಯಚ್ಚುಗಳನ್ನು (ಬ್ಲಾಕ್ಸ್) ಕೆತ್ತನೆಮಾಡುವುದರ ಜೊತೆಗೆ ಅದು ನಿರಂತರ ಟೋನ್ ಅಥವಾ ಸ್ಕ್ರೀನ್ ಮಾಡಿದ ಋಣಗಳನ್ನು (ನೆಗಟಿವ್ಸ್) ಅಥವಾ ಧನಗಳನ್ನೂ (ಪಾಸಿಟಿವ್ಸ್) ತಯಾರಿಸಬಲ್ಲುದು. ಕೇವಲ ವರ್ಣವೀಕ್ಷಕಗಳಂತೆ ಮಾತ್ರ ಕಾರ್ಯವೆಸಗುವ ಸರಳವಾದ, ಆದರೆ ವಿಶೇಷವಾಗಿ ಅದೇ ಕಾರ್ಯಕ್ಕೆ ಮಾತ್ರ ನಿರ್ಮಿಸಲ್ಪಟ್ಟಿರುವ ಯಂತ್ರಗಳೂ ಹಲವಿವೆ. ಇವುಗಳ ಪೈಕಿ ವರ್ಣನಕಾಶೆ (ಕಲರ್ ಗ್ರಾಫ್) ಎಂಬುದು ಒಂದು ಇದರಲ್ಲಿ ಪೂರ್ಣವಾಗಿ ವರ್ಣಪರಿಷ್ಕೃತವಾದ ಧನಗಳನ್ನು ಉತ್ಪಾದಿಸಬಹುದು. ಇದು ಒಂದೇ ವರ್ಣರಂಜಿತ ಮೂಲಪ್ರತಿಯೊಡನೆ ನೇರವಾಗಿ ಪ್ರವರ್ತಿಸಲಾರದು. ಮೂರು ಸರಳವಾದ ವರ್ಣ ವಿಭಾಜಕ ಋಣಗಳನ್ನು ಆಳವಡಿಸಿ ಕೊಟ್ಟಾಗ ಮಾತ್ರ ತನ್ನ ಕಾರ್ಯವನ್ನು ಮಾಡಬಲ್ಲುದು. ಮತ್ತು ಏಕಕಾಲದಲ್ಲಿ ಎಲ್ಲ ಮೂರು ಅಥವಾ ನಾಲ್ಕು ವರ್ಣ ಪರಿಷ್ಕೃತ ಧನಗಳನ್ನು ತಯಾರಿಸಬಲ್ಲುದು.

**(ಡಿ.ಎನ್.)**

**ಎಲೆಕ್ಟ್ರಾನಿಕ್ಸ್:** ನಿರ್ವಾತ, ಅನಿಲ ಮತ್ತು ಅರೆ ವಿದ್ಯುದ್ವಾಹಕಗಳ ಮೂಲಕ ಎಲೆಕ್ಟ್ರಾನುಗಳ ಹರಿಯುವಿಕೆಯ ತತ್ತ್ವಗಳ ಆಧಾರದ ಮೇಲೆ ರೂಪಗೊಂಡಿರುವ ವಿಜ್ಞಾನ; ಭೌತವಿಜ್ಞಾನದ ಒಂದು ವಿಶಿಷ್ಟ ವಿಭಾಗ. ವಿದ್ಯುತ್ ಮೋಟಾರು, ತಾಪಪ್ರಭಾದೀಪ (ಇನ್‌ಕ್ಯಾಂಡೆಸೆಂಟ್ ಲ್ಯಾಂಪ್) ಮೊದಲಾದುವುಗಳ ವಿವರಗಳು ಎಲೆಕ್ಟ್ರಾನಿಕ್ಸ್ ವಿಭಾಗಕ್ಕೆ ಸೇರುವುದಿಲ್ಲ. ಕಾರಣ, ಇಲ್ಲಿ ಎಲೆಕ್ಟ್ರಾನುಗಳು ನಿರ್ವಾತ, ಅನಿಲ ಅಥವಾ ಅಪೂರ್ಣ ವಿದ್ಯುದ್ವಾಹಕಗಳ ಮೂಲಕ ಹರಿಯುವುದಿಲ್ಲ; ಬದಲಾಗಿ ಉತ್ತಮ ವಿದ್ಯುದ್ವಾಹಕಗಳ ಮೂಲಕ ಹರಿಯುತ್ತವೆ. ನಿರ್ವಾತ ನಳಿಗೆ, ಅನಿಲಪೂರಿತ ನಳಿಗೆ, ಟ್ರಾನ್ಸಿಸ್ಟರ್ ಮೊದಲಾದುವುಗಳು ಎಲೆಕ್ಟ್ರಾನಿಕಸ್ ವಿಭಾಗಕ್ಕೆ ಸೇರುತ್ತವೆ. ಕಾರಣ, ಇಲ್ಲಿ ಎಲೆಕ್ಟ್ರಾನುಗಳು ನಿರ್ವಾತ, ಅನಿಲ ಇಲ್ಲವೇ ಅಪೂರ್ಣ ವಿದ್ಯುದ್ವಾಹಕಗಳ ಮೂಲಕ ಹರಿಯುತ್ತವೆ.

ಬೆಳೆವಣಿಗೆಯ ವಿವಿಧ ಹಂತಗಳು: ವಿದ್ಯುತ್ಪ್ರವಾಹ ಕಾಂತಕ್ಷೇತ್ರವನ್ನು ಉಂಟುಮಾಡುತ್ತ ದೆಂದು ಡೆನ್ಮಾರ್ಕಿನ್ ಎಚ್.ಸಿ.ಎರ್‌ಸ್ಟೆಡ್ ಎಂಬ ವಿಜ್ಞಾನಿ ತೋರಿಸಿಕೊಟ್ಟ (1820). ಚಲನೆಯಲ್ಲಿರುವ ಅಯಸ್ಕಾಂತದ ಬಳಿಯಿರುವ ವಿದ್ಯುದ್ವಾಹಕದಲ್ಲಿ ವಿದ್ಯುತ್ ಉತ್ಪಾದನೆಯಾಗುವುದೆಂದು ಬ್ರಿಟಿಷ್ ವಿಜ್ಞಾನಿ ಮೈಕೆಲ್ ಫ್ಯಾರಡೆ ಪ್ರಕಟಿಸಿದ (1831). ವಿದ್ಯುಚ್ಛಕ್ತಿ ಮತ್ತು ಕಾಂತತ್ವಗಳನ್ನು ಕುರಿತು ಆಗ ದೊರೆತಿದ್ದ ಆಧಾರಗಳಿಂದ ಬ್ರಿಟಿಷ್ ಭೌತವಿಜ್ಞಾನಿ ಜೇಮ್ಸ್ ಕ್ಲಾರ್ಕ್ ಮ್ಯಾಕ್ಸ್‌ವೆಲ್ ವಿದ್ಯುತ್ಕಾಂತ ತರಂಗಗಳ ಅಸ್ತಿತ್ವವನ್ನು ಸೂಚಿಸಿದ (1864). ವಿದ್ಯುತ್ಪ್ರವಾಹ ಅನಿಲಗಳ ಮೂಲಕ ಹರಿಯಬಲ್ಲದೆಂದು ಥಾಮಸ್ ಆಲ್ವ ಎಡಿಸನ್ ತೋರಿಸಿಕೊಟ್ಟ (1883). ವಿದ್ಯುತ್ಕಾಂತ ತರಂಗಗಳ ರೂಪದಲ್ಲಿ ಶಕ್ತಿ ಆಕಾಶದ ಮೂಲಕ ಹರಿಯುವುದೆಂದು ಜರ್ಮನ್ ಭೌತವಿಜ್ಞಾನಿ ಹೀನರಿಚ್ ಹರ್ಟ್ಸ್ ಪ್ರಯೋಗ ಮೂಲಕ ತೋರಿಸಿ (1887) ಮ್ಯಾಕ್ಸ್‌ವೆಲ್ಲನ ವೈಜ್ಞಾನಿಕ ಊಹೆ ಸತ್ಯವೆಂದು ಸಾರಿದ. ಹರ್ಟ್ಸ್‌ನ ಪ್ರಯೋಗದಲ್ಲಿ ಶಕ್ತಿ ವಿಸರಣೆಗೊಂಡ ದೂರ ಕೆಲವೇ ಮೀ ಗಳಾದರೂ ಯಾವುದೇ ವಾಹಕದ ಸಹಾಯವಿಲ್ಲದೆ ರೇಡಿಯೊ ಅಲೆಗಳು ಸ್ಥಳಾಂತರಗೊಳ್ಳಬಹುದೆಂಬುದು ವಿಧಿತವಾಯಿತು. ವಿದ್ಯುತ್ಕಾಂತ ತರಂಗಗಳು ದೃಷ್ಟಿಗೆ ಅಗೋಚರವಾದರೂ ಅವು ಬೆಳಕಿನ ವೇಗದಲ್ಲಿ ಚಲಿಸುತ್ತವೆಂದು ಹರ್ಟ್ಸ್ ತೋರಿಸಿಕೊಟ್ಟ. ರೇಡಿಯೊ ತರಂಗಗಳು ಮತ್ತು ಬೆಳಕಿನ ತರಂಗಗಳು ವಿದ್ಯುತ್ಕಾಂತ ತರಂಗಗಳು ಎರಡು ವಿವಿಧ ರೂಪಗಳು. ವಿದ್ಯುತ್ಕಾಂತ ತರಂಗಗಳಲ್ಲಿ ಶಕ್ತಿ ವಿದ್ಯುತ್ ಮತ್ತು ಕಾಂತತ್ವದ ರೂಪದಲ್ಲಿರುತ್ತದೆ. ಮುಂದೆ ರಾಂಟ್‌ಜನ್ ಎಂಬಾತ ಎಕ್ಸ್‌ಕಿರಣಗಳನ್ನು ಕಂಡುಹಿಡಿದ (1895). ಅದೇ ವರ್ಷ ಮಾರ್ಕೊನಿ ದೂರಸಂಪರ್ಕಕ್ಕಾಗಿ ಉದ್ದವಾದ ಸರಿಗೆಯ ಆಂಟೆನದ ಒಂದು ರೇಡಿಯೊ ಮಾದರಿಯನ್ನು ನಿರ್ಮಿಸಿದ. 1901ರಲ್ಲಿ ಅವನು ಅಟ್ಲಾಂಟಿಕ್ ಸಾಗರದ ಒಂದು ಅಂಚಿನಿಂದ ಇನ್ನೊಂದು ಅಂಚಿಗೆ ತಂತಿರಹಿತ ಪ್ರಸಾರವನ್ನು ಕಳಿಸಲು ಸಮರ್ಥನಾದ. ಅಲ್ಲಿಂದೀಚೆಗೆ ರೇಡಿಯೊ ವಿಧಾನದಲ್ಲಾದ ತೀವ್ರವಾದ ಪ್ರಗತಿಗೆ ನಿರ್ವಾತ ನಳಿಗೆಗಳ ಬಳಕೆ ಮತ್ತು ಆವಿಷ್ಕಾರಗಳು ಕಾರಣ. ಫ್ಲೆಮಿಂಗ್ ಎಂಬಾತ ಡಯೋಡನ್ನು ಕಂಡುಹಿಡಿದ (1905). ವಿದ್ಯುತ್ ಸಂಕೇತ ಗಳನ್ನು ವರ್ಧಿಸುವಂಥ ಆಡಿಯೋನ್ ನಳಿಗೆಗಳನ್ನು ಫೋರೆಸ್ಟ್ ಎಂಬಾತ ತಯಾರಿಸಿದ (1906). 1920ರಲ್ಲಿ ಅಮೆರಿಕದ ಪಿಟ್ಸ್‌ಬರ್ಗಿನಲ್ಲಿ ಕ್ರಮಬದ್ಧವಾದ ರೇಡಿಯೊ ಪ್ರಸಾರ ಪ್ರಾರಂಭ ವಾಯಿತು. ವ್ಯವಸ್ಥಿತವಾದ ಟೆಲಿವಿಷನ್ ಪ್ರಸಾರ 1945ರಲ್ಲಿ ಕಾಣಿಸಿಕೊಂಡಿತು. ಅಪೂರ್ಣ ವಿದ್ಯುದ್ವಾಹಕಗಳ ತತ್ತ್ವ 1930ರಲ್ಲೇ ಪ್ರತಿಪಾದಿಸಲ್ಪಟ್ಟಿದ್ದರೂ ಟ್ರಾನ್ಸಿಸ್ಟರಿನ ಉದಯವಾದದ್ದು 1948ರಲ್ಲಿ. ಟ್ರಾನ್ಸಿಸ್ಟರಿನ ಸಂಶೋಧನೆ ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲೇ ಒಂದು ಮೈಲಿಗಲ್ಲು. ಈ ಸಂಶೋಧನೆಯ ಕೀರ್ತಿ ಜೆ. ಬಾರ್ಡೀನ್ ಮತ್ತು ಡಬ್ಲ್ಯು. ಎಚ್.ಬ್ರೇಟನ್ ಎಂಬುವರಿಗೆ ಸಲ್ಲುತ್ತದೆ. ಕ್ರಿಯಾವಿಶೇಷಗಳ ಒಂದು ವಿಹಂಗಮ ನೋಟ ಹೀಗಿದೆ:

**ರಕ್ಟಿಫಿಕೇಶನ್:** ಪರ್ಯಾಯ ಪ್ರವಾಹವನ್ನು ಏಕಮುಖ ಪ್ರವಾಹವನ್ನಾಗಿ ಪರಿವರ್ತಿಸುವ ಕಾರ್ಯ.

**ವರ್ಧನೆ:** ದುರ್ಬಲವಾದ ವಿದ್ಯುತ್ ಸಂಕೇತಗಳನ್ನು ಪ್ರಬಲಗೊಳಿಸಿ ಬಳಕೆಗೆ ಯೋಗ್ಯವಾಗುವಂತೆ ಮಾಡುವ ಕ್ರಿಯೆ (ಆಂಪ್ಲಿಫಿಕೇಶನ್).

**ಆಂದೋಳನ:** ಹೆಚ್ಚು ಆವರ್ತಸಂಖ್ಯೆ (ಫ್ರೀಕ್ವೆನ್ಸಿ) ಇರುವ ಪರ್ಯಾಯ ಪ್ರವಾಹದ ಉತ್ಪಾದನೆ (ಆಸಿಲೇಷನ್). ಒಂದು ವರ್ಧಕದ ಕೊಡುಗೆಯ ಒಂದಂಶವನ್ನು ಅದಕ್ಕೆ ಮರಳಿ ಒದಗಿಸಿ ಅದು ಸ್ವಪೋಷಕವಾಗುವಂತೆ ಮಾಡುವುದು ಆಂದೋಳನದ ವಿಧಾನ.

**ಆವರ್ತಸಂಖ್ಯೆ ಪರಿವರ್ತನೆ:** ಒಂದು ಆವರ್ತಸಂಖ್ಯೆ ಇರುವ ತರಂಗವನ್ನು ಇನ್ನೊಂದು ಆವರ್ತಸಂಖ್ಯೆಯ ತರಂಗದೊಡನೆ ಬೆರೆಸಿದಾಗ ದೊರೆಯುವ ಉತ್ಪನ್ನದಲ್ಲಿ, ಆ ಎರಡು ಆವರ್ತಸಂಖ್ಯೆಗಳ ವ್ಯತ್ಯಾಸದಷ್ಟು ಆವರ್ತಸಂಖ್ಯೆ ಇರುವ ವಿಶೇಷಗಳು ಉತ್ಪನ್ನವಾದ ಹೊಸತರಂಗದಲ್ಲೂ ಕಂಡುಬರುತ್ತದೆ.

**ಮಾಡ್ಯುಲೇಶನ್:** ವಿದ್ಯುತ್ಕಾಂತ ತರಂಗಗಳ ಮೂಲಕ ಒಂದೆಡೆಯಿಂದ ಇನ್ನೊಂದೆಡೆಗೆ ಸಮಾಚಾರವನ್ನು ಪ್ರಸರಿಸಲು ಶ್ರವ್ಯ ತರಂಗಗಳನ್ನು ಬಳಸುವಂತಿಲ್ಲ. ಈ ರೀತಿಯ ಪ್ರಸಾರಕ್ಕೆ ರೇಡಿಯೊ ತರಂಗಗಳ ಬಳಕೆ ಅನಿವಾರ್ಯ, ಹೆಚ್ಚು ಆವರ್ತಸಂಖ್ಯೆ ಇರುವ ರೇಡಿಯೊ ತರಂಗವನ್ನು ಸಮಾಚಾರಗರ್ಭಿತವಾದ ಶ್ರವ್ಯ ತರಂಗವಾಹಕದಂತೆ ಮಾಡಬೇಕಾ ಗುವುದು. ವಾಹಕ ತರಂಗದ ಪರಿಣಾಮವನ್ನು ಅಥವಾ ಆವರ್ತಸಂಖ್ಯೆಯನ್ನು ಶ್ರವ್ಯ ತರಂಗದ ಏರಿಳಿತಕ್ಕನುಗುಣವಾಗಿ ಮಾರ್ಪಡಿಸುವ ಕ್ರಿಯೆಯೇ ಮಾಡ್ಯುಲೇಶನ್. ಹೀಗೆ ಮಾಡ್ಯುಲೇಶನ್ ಮಾಡಲ್ಪಟ್ಟ ವಾಹಕತರಂಗವನ್ನು ಏರಿಯಲಿನಿಂದ ಬಿತ್ತರಿಸಲಾಗುವುದು.

**ಡಿಮಾಡ್ಯುಲೇಶನ್:** ಮಾಡ್ಯುಲೇಶನ್‌ಗೊಂಡ ವಾಹಕ ತರಂಗದಿಂದ ಶ್ರವ್ಯ ತರಂಗವನ್ನು ಮರಳಿ ಪಡೆಯುವ ಕ್ರಿಯೆ.

ಪ್ರಭಾಚಿತ್ರ ಉತ್ಪನ್ನ (ಲೈಟ್ ಇಮೇಜ್ ಪ್ರೊಡಕ್ಷನ್): ಎಲೆಕ್ಟ್ರಾನುಗಳ ಎಲೆಕ್ಟ್ರಾನ್ ಕಿರಣನಳಿಗೆಯ ಪ್ರತಿದೀಪ್ತಶೀಲ ತೆರೆಯನ್ನು (ಫ್ಲೂರಸೆಂಟ್ ಸ್ಕ್ರೀನ್) ಸ್ಪರ್ಶಿಸಿದಾಗ ಆ ಸ್ಪರ್ಶಸ್ಥಾನದಿಂದ ಬೆಳಕಿನ ವಿಸರ್ಜನೆಯಾಗುತ್ತದೆ. ಯಾವುದೊಂದು ತರಂಗದ ಸ್ವರೂಪಚಿತ್ರ ಅಥವಾ ಇನ್ನಾವುದೇ ದೃಶ್ಯಚಿತ್ರಗಳನ್ನು ತೆರೆಯಮೇಲೆ ಮೂಡಿಸಲು ಕ್ಯಾಥೋಡ್ ಕಿರಣ ನಳಿಗೆಗಳು ಉಪಯೋಗವಾಗುತ್ತವೆ.

ದ್ಯುತಿವಿದ್ಯುತ್‍ಕ್ರಿಯೆ (ಫೋಟೊ ಎಲೆಕ್ಟ್ರಿಕಲ್ ಆಕ್ಷನ್): ಕೆಲವು ವಸ್ತುಗಳ ಮೇಲ್ಮೈಯನ್ನು ಬೆಳಕಿನ ಕಿರಣಗಳು ಸ್ಪರ್ಶಿಸಿದಾಗ ಆ ವಸ್ತುವಿನಿಂದ ಎಲೆಕ್ಟ್ರಾನುಗಳ ವಿಸರ್ಜನೆಯಾಗುತ್ತದೆ. ಇವು ಪ್ರವಾಹರೂಪದಲ್ಲಿ ಹರಿಯುತ್ತದೆ. ಇದರ ಪ್ರಮಾಣ ಬೆಳಕಿನ ಆವರ್ತಸಂಖ್ಯೆ ಮತ್ತು ಅದರ ತೀಕ್ಷ್ಣತೆಯನ್ನು ಅವಲಂಬಿಸಿದೆ. ಈ ತತ್ತ್ವವನ್ನು ಬಳಸಿ ಕಾರ್ಯನಿರ್ವಹಿಸುವ ನಳಿಗೆಗಳಿಗೆ ದ್ಯುತಿವಿದ್ಯುತ್ ನಳಿಗೆಗಳೆಂದು ಹೆಸರು.

ಎಲೆಕ್ಟ್ರಾನಿಕ್ಸಿನ ಬಳಕೆ: ಎಲೆಕ್ಟ್ರಾನಿಕ್ಸಿನ ತತ್ತ್ವ ಮತ್ತು ಗುಣ ವಿಶೇಷಗಳನ್ನು ಆಧರಿಸಿ ತಯಾರಿಸಿದ ಸಾಧನಗಳ ವೈವಿಧ್ಯ ಅಸಂಖ್ಯಾತ. ವಿದ್ಯುತ್ತಿನ ಬಳಕೆಯ ಕ್ಷೇತ್ರವನ್ನು ಸ್ಥೂಲವಾಗಿ ಸಂಪರ್ಕ (ಕಮ್ಯುನಿಕೇಶನ್), ಕೈಗಾರಿಕಾ ನಿಯಂತ್ರಣ, ಬೆಳಕು ಪಡೆಯುವಿಕೆ ಮತ್ತು ಉಪಕರಣಗಳು ಎಂಬ ಭಾಗಗಳಾಗಿ ವಿಭಾಗಿಸಬಹುದು.

ಸಂಪರ್ಕ ವಿಭಾಗದಲ್ಲಿ ಎಲೆಕ್ಟ್ರಾನಿಕ್ಸ್ ಉಪಕರಣಗಳ ಬಳಕೆ ಅತ್ಯಧಿಕವಾಗಿದೆ. ಶ್ರವ್ಯ, ರೇಡಿಯೊ, ಟೆಲಿವಿಷನ್, ರಾಡರ್ ಮೊದಲಾದುವು ಈ ಪ್ರಮುಖ ಉಪವಿಭಾಗಗಳು.

ಕಳೆದ ದಶಕದಿಂದ ಕೈಗಾರಿಕಾಕ್ಷೇತ್ರದಲ್ಲಿ ಎಲೆಕ್ಟ್ರಾನಿಕ್ಸ್‍ನ ಬಳಕೆ ಬಲುವಾಗಿ ವಿಸ್ತರಿಸಿದೆ. ಪರ್ಯಾಯ ಪ್ರವಾಹದಿಂದ ಏಕಮುಖ ಪ್ರವಾಹದ ಉತ್ಪಾದನೆ, ಆವರ್ತ ಸಂಖ್ಯೆಯ ಪರಿವರ್ತನೆ, ಸ್ವಯಂಚಾಲಿತ ನಿಯಂತ್ರಣ, ಮೋಟಾರುಗಳ ವೇಗನಿಯಂತ್ರಣ, ಏಕಮುಖ ಮತ್ತು ಪರ್ಯಾಯ ಪ್ರವಾಹೋತ್ಪಾದಕಗಳ ಒತ್ತಡ ನಿಯಂತ್ರಣ, ಕಿಡಿವಿರಹಿತ ತೆರೆ–ಮುಚ್ಚು ಗುಂಡಿಗಳು (ಆನ್– ಆಫ್ ಸ್ವಿಚ್ಚುಗಳು) ವಿದ್ಯುತ್ ಬೆಸುಗೆಯ ಕಾಲಾವಧಿ ನಿಯಂತ್ರಣ, ಬೆಳಕಿನ ನಿಯಂತ್ರಣ, ಉಷ್ಣತಾನಿಯಂತ್ರಣ ಮೊದಲಾದವು ಔದ್ಯೋಗಿಕ ಕ್ಷೇತ್ರದಲ್ಲಿ ಎಲೆಕ್ಟ್ರಾನಿಕ್ಸ್‍ನ ಉಪಯೋಗದ ಕೆಲವು ಉದಾಹರಣೆಗಳು.

ಬೆಳಕನ್ನುಂಟುಮಾಡಲು ಮತ್ತು ಅದನ್ನು ನಿಯಂತ್ರಿಸಲು ಎಲೆಕ್ಟ್ರಾನಿಕ್ಸ್ ಸಾಧನಗಳು ಅತ್ಯಾವಶ್ಯಕ. ನಿಯಾನ್ ನಳಿಗೆಗಳು, ಸೋಡಿಯಂ ಅನಿಲದೀಪಗಳು ಮರ್ಕ್ಯುರಿ ಅನಿಲದೀಪಗಳು ಮತ್ತು ಪ್ರತಿದೀಪ್ತಶೀಲ ದೀಪಗಳು ಎಲೆಕ್ಟ್ರಾನಿಕ್ಸಿನ ಬಳಕೆಯ ಉತ್ತಮ ನಿದರ್ಶನಗಳು.

ಎಲೆಕ್ಟ್ರಾನಿಕ್ಸಿನ ಉಪಕರಣಗಳನ್ನು ಉಪಯೋಗಿಸಿ ಬಲುಬೇಗ ಮತ್ತು ಸೂಕ್ಷ್ಮವಾಗಿ ವಿದ್ಯುತ್ ಮತ್ತಿತ್ತರ ಪ್ರಮಾಣಗಳನ್ನು ಅಳೆಯುವುದು ಸಾಧ್ಯ. ಒತ್ತಡ, ಪ್ರವಾಹ, ವಿದ್ಯುತ್, ಆವರ್ತಸಂಖ್ಯೆ ನಿರೋಧ ಮೊದಲಾದ ವಿದ್ಯುತ್ ಪ್ರಮಾಣಗಳನ್ನು ಕಾಲಾವಧಿ, ವೇಗ ದೂರ, ಬೆಳಕಿನ ತೀಕ್ಷ್ಣತೆ ಮೊದಲಾದ ಅವಿದ್ಯುತ್ ಪ್ರಮಾಣಗಳನ್ನೂ ಅಳೆಯ ಬಹುದು. ಎಲೆಕ್ಟ್ರಾನಿಕ್ ಗಣಕಯಂತ್ರಗಳನ್ನು ಬಳಸಿ ಗಣಿತದ ಹಲವು ಕ್ಲಿಷ್ಟಸಮಸ್ಯೆಗಳನ್ನು ಬಹಳ ಸುಲಭವಾಗಿ ಬಿಡಿಸಬಹುದು. (ಕೆ.ಸಿ.ಜಿ.)

**ಎಲೆಕ್ಟ್ರೊ ಎನ್ಸೆಫಲೋಗ್ರಫಿ:** ಮಿದುಳಿನ ವಿದ್ಯುತ್ಸಂಬಂಧ ಚಟುವಟಿಕೆಗಳನ್ನು ಲೇಖಿಸುವ ಮತ್ತು ಅವನ್ನು ಅರ್ಥವಿಸುವ ತಂತ್ರ (ಮಿದುಳಿನ ವಿದ್ಯುಲ್ಲೇಖನ). ಈ ತಂತ್ರದಲ್ಲಿ ಉಪಯೋಗಿಸುವ ಯಂತ್ರದ ಹೆಸರು ಎಲೆಕ್ಟ್ರೊ ಎನ್ಸೆಫಲೋಗ್ರಾಫ್ (ಮಿದುಳಿನ ವಿದ್ಯುಲ್ಲೇಖ).

ಪ್ರಾಣಿಗಳ ಜೀವಕ್ರಿಯೆಗಳೆಲ್ಲವುಗಳ ಹಿಂದೆಯೂ ಒಂದಲ್ಲ ಒಂದು ವಿಧವಾದ ವಿದ್ಯುತ್ಕ್ರಿಯೆ ಇದೆ ಎಂಬುದನ್ನು ಕೇಟನ್ ಮೊತ್ತಮೊದಲು ಸ್ಥೂಲವಾಗಿ ತೋರಿಸಿದ (1874). ಮುಂದೆ 1890ರಲ್ಲಿ ಬೆಕ್ ಎಂಬಾತ ನಾಯಿಯ ಮಿದುಳಿನಲ್ಲಿ ಸತತವಾಗಿ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿರುತ್ತದೆ, ಅಲ್ಲದೇ ಅದರ ಕಣ್ಣುಗಳಿಗೆ ಬೀಳುವ ನೋಟ ಬದಲಾದಂತೆ ಬೆಳಕಿನ ತೀಕ್ಷ್ಣತೆ ಹೆಚ್ಚು ಕಡಿಮೆಯಾದಂತೆ ಮಿದುಳಿನ ವಿದ್ಯುತ್ಕ್ರಿಯೆಯಲ್ಲಿಯೂ ಹೆಚ್ಚು ಕಡಿಮೆಗಳು ಕಂಡುಬರುತ್ತವೆಂದು ತೋರಿಸಿದ. ಆದರೆ ಪ್ರಯೋಗಗಳನ್ನು ಜರ್ಮನಿಯ ಕಾಫ್‍ಮನ್ 1912ರಲ್ಲಿ ಪುನಃ ಸಮರ್ಥನೆ ಮಾಡುವವರೆಗೆ ಇವು ವೈದ್ಯರ ಮತ್ತು ಇತರ ವಿಜ್ಞಾನಿಗಳ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ಅಲ್ಲಿಂದ 12 ವರ್ಷಗಳು ಕಳೆದ ಮೇಲೆ 1924ರಲ್ಲಿ ಬರ್ಗರ್ ಎಂಬ ಮತ್ತೊಬ್ಬ ಜರ್ಮನ್ ವೈದ್ಯವಿಜ್ಞಾನಿ ಮನುಷ್ಯನ ಮಿದುಳಿನ ವಿದ್ಯುತ್ಕ್ರಿಯೆಗಳನ್ನು ನಿರೂಪಿಸುವ ಸಾಹಸದ ಕೆಲಸಕ್ಕೆ ಕೈಹಾಕಿದ. ಆರೇಳು ವರ್ಷಗಳ ಈತನ ನಿರಂತರ ಶ್ರಮದ ಪರಿಣಾಮವಾಗಿ ಮಾನವನ ಮಿದುಳಿನ ಹಲವಾರು ಚಿತ್ತಪ್ರವೃತ್ತಿಗಳನ್ನು ಪ್ರತಿಬಿಂಬಿಸುವ ನೂರಾರು ವಿದ್ಯುತ್ಕ್ರಿಯಾಚಿತ್ರ ನಿರೂಪಣೆಗಳು ಪ್ರಕಟವಾದುವು. ಆದರೆ ಈ ಚಿತ್ರನಿರೂಪಣಗಳನ್ನಾಗಲಿ ಅವುಗಳಿಂದ ಬರ್ಗರ್ ಸಾಧಿಸಿದ ತೀರ್ಮಾನಗಳನ್ನಾಗಲಿ ಆಗಿನ ವೈದ್ಯ ವಿಜ್ಞಾನಿಗಳು ವಿಶ್ವಾಸದಿಂದ ಸ್ವಾಗತಿಸಲಿಲ್ಲ. ಇದಕ್ಕೆ ಎದೆಗುಂದದೆ ಬರ್ಗರ್ ತನ್ನ ಅನ್ವೇಷಣೆಗಳನ್ನು ಮುಂದುವರಿಸಿದ. ಈತನ ಶ್ರಮಕ್ಕೆ ಮನ್ನಣೆ 1924ರಲ್ಲಿ ದೊರೆಯಿತು. ಆ ವರ್ಷ ಇಂಗ್ಲೆಂಡಿನ ಪ್ರಮುಖ ವೈದ್ಯವಿಜ್ಞಾನಿ ಏಡ್ರಿಯನ್ ಎಂಬಾತ ಬರ್ಗರನ ವಿದ್ಯುತ್ಕ್ರಿಯಾನಿರೂಪಣೆಗಳು ತೀರ ನಿರರ್ಥಕಗಳಲ್ಲ, ಅವುಗಳ ವ್ಯಾಸಂಗದಿಂದ ಮಾನವನ ಮಿದುಳು ರೋಗಗಳ ನಿಧಾನ, ಚಿಕಿತ್ಸೆಗಳಿಗೆ ಅಲ್ಪಸ್ವಲ್ಪ ಅನುಕೂಲವಾದೀತು, ಇಂಥ ಪ್ರಯೋಗಗಳನ್ನು ತಿರಸ್ಕರಿಸುವ ಮುನ್ನ ಅವನ್ನು ಕೂಲಂಕಷವಾಗಿ ಪರೀಕ್ಷಿಸಬೇಕಾದದ್ದು ವೈದ್ಯವಿಜ್ಞಾನಿಗಳ ಕರ್ತವ್ಯ ಎಂಬ ತನ್ನ ಅಭಿಪ್ರಾಯವನ್ನು ಪ್ರಕಟಿಸಿ ಬರ್ಗರನನ್ನು ಅಭಿನಂದಿಸಿದ, ಅಂದಿನಿಂದ ಈ ಶಾಖೆ ಹಲವು ದಿಕ್ಕುಗಳಲ್ಲಿ ಬೆಳೆಯುತ್ತ ಬಂದಿದೆ.

ಮಿದುಳು ಕೋಟ್ಯನುಕೋಟಿ ನರ್ವ್‍ಸೆಲ್ಲುಗಳ ಅಂದರೆ ನರಕೋಶಗಳ ಮತ್ತು ಆ ಅಸಂಖ್ಯಾತ ನರಕೋಶಗಳನ್ನು ಒಂದಕ್ಕೊಂದನ್ನು ಪರಸ್ಪರ ಕೂಡಿಸಿರುವ ಅಸಂಖ್ಯಾತ ನರತಂತುಗಳ ವ್ಯವಸ್ಥೆ. ಪ್ರತಿಯೊಂದು ನರಕೋಶವೂ ಒಂದು ಪುಟ್ಟ ವಿದ್ಯುತ್ಕೋಶ, ಅಂದರೆ ನಾವು ಟಾರ್ಚ್‍ಲೈಟಿನಲ್ಲಿ ಉಪಯೋಗಿಸುವಂಥ ಸೆಲ್. ಟಾರ್ಚ್‍ಲೈಟಿನ ವಿದ್ಯುತ್ಕೋಶಕ್ಕೂ ಮಿದುಳಿನ ನರಕೋಶಕ್ಕೂ ಇರುವ ವ್ಯತ್ಯಾಸ ಈ ಲೇಖನದ ದೃಷ್ಟಿಯಿಂದ ಇಷ್ಟೇ : ಟಾರ್ಚ್‍ಲೈಟಿನ ವಿದ್ಯುತ್ಕೋಶದ ಶಕ್ತಿ ಒಂದು ವೋಲ್ಟಿನ ಹಲವಾರು ಲಕ್ಷಾಂಶಗಳಷ್ಟು ಮಾತ್ರ. ಇನ್ನೊಂದು ವ್ಯತ್ಯಾಸವೂ ಇದೆ. ಟಾರ್ಚ್‍ಲೈಟಿನ ವಿದ್ಯುಚ್ಛಕ್ತಿ ಹೆಚ್ಚು ಕಡಿಮೆ ಏಕರೀತಿಯಾಗಿರುತ್ತದೆ. ನರಕೋಶದ ವಿದ್ಯುತ್ತು ಚಂಚಲ. ನರಕೋಶ ಜೀವಂತವಾಗಿರುವಷ್ಟು ಕಾಲ ಅದರ ವಿದ್ಯುತ್ತು ವಿರಾಮವಿಲ್ಲದೆ ಏರಿ ಇಳಿದು ಏರುತ್ತಿರುತ್ತದೆ.

ಈ ಏರಿಳಿತಗಳನ್ನು ಚಿತ್ರಿಸುವ ವಿಧಾನ ಹೀಗೆ. ತಿರುಪು ಹಿಡಿಗಳಿರುವ ಬೆಳ್ಳಿಯ ಎರಡು ಬಿಲ್ಲೆಗಳನ್ನು ಒಬ್ಬ ಮನುಷ್ಯನ ತಲೆಯ ಮೇಲೆ ಬಿಗಿಸಿಟ್ಟರೆ, ಆ ಬಿಲ್ಲೆಗಳ ಕೆಳಗಿರುವ ಮಿದುಳಿನ ಪ್ರಾಂತದ ನರಕೋಶಗಳು ಉತ್ಪತ್ತಿಮಾಡುವ ವಿದ್ಯುಚ್ಛಕ್ತಿ ಬಿಲ್ಲೆಗಳನ್ನು ಪ್ರವೇಶಿಸುತ್ತದೆ.

ಆದರೆ ಮೇಲೆ ತಿಳಿಸಿರುವಂತೆ ಈ ವಿದ್ಯುತ್ತು ಅತಿಕ್ಷೀಣ ಶಕ್ತಿಯದಾದ್ದರಿಂದ ಅದನ್ನು ವಿದ್ಯುದ್ವರ್ಧಕಗಳಿಂದ ವರ್ಧಿಸಬೇಕಾದದ್ದು ಅತ್ಯವಶ್ಯ. ವಿದ್ಯುದ್ವರ್ಧಕಗಳು ವಿಶೇಷ ರೀತಿಯವಾಗಿರಬೇಕು. ಏಕೆಂದರೆ ಇವುಗಳ ವರ್ಧಕ ಸಾಮರ್ಥ್ಯ ಹತ್ತಿಪ್ಪತ್ತು ಲಕ್ಷಗಳಷ್ಟಾದರೂ ಇರಬೇಕಾಗುತ್ತದೆ ಇದಕ್ಕಿಂತ ಮುಖ್ಯವಾಗಿ ನರಕೋಶಗಳು ಉತ್ಪತ್ತಿಸುವ ವಿದ್ಯುತ್ತಿನ ಏರಿಳಿತಗಳ ರೂಪವನ್ನು ಕಿಂಚಿತ್ತೂ ವಿರೂಪಮಾಡದೆ ಇವು ಈ ಅಗಾಧ ಪ್ರಮಾಣದಲ್ಲಿ ವರ್ಧಿಸಬೇಕು. ಹೀಗೆ ವರ್ಧನಗೊಂಡ ಪ್ರವಾಹವನ್ನು ಪ್ರವಾಹಮಾಪಕದ (ಗ್ಯಾಲ್ವನೊಮೀಟರ್) ಒಂದರ ತುದಿಗಳಿಗೆ ಹರಿಸಿದರೆ ಆಗ ಮಾಪಕದ ಮುಳ್ಳು ಪ್ರವಾಹಕ್ಕನುಗುಣವಾಗಿ ಕಂಪಿಸುತ್ತದೆ. ಮುಳ್ಳಿನ ಬದಲು ಒಂದು ಲೇಖನಿಯನ್ನು ಪ್ರವಾಹಮಾಪಕಕ್ಕೆ ಜೋಡಿಸಿದರೆ ಮತ್ತು ಲೇಖನಿಯ ಕೆಳಗೆ ಒಂದು ಕಾಗದದ ಹಾಳೆಯನ್ನು ಸಮವೇಗದಲ್ಲಿ ಸರಿಯುವಂತೆ ಏರ್ಪಡಿಸಿದರೆ ಲೇಖನಿ ನರಕೋಶಗಳ ವಿದ್ಯುತ್ತಿನ ವೃದ್ಧಿಕ್ಷಯಗಳ ರೂಪವನ್ನು ಕಾಗದದ ಮೇಲೆ ಬರೆಯುತ್ತದೆ.

ಹೀಗೆ ಬರೆದ ರೇಖಾಚಿತ್ರ ಎರಡು ಬಿಲ್ಲೆಗಳ ಸಮೀಪದಲ್ಲಿರುವ ಮಿದುಳಿನ ಭಾಗಮಾತ್ರದ ವಿದ್ಯುತ್ಕ್ರಿಯಾಚಿತ್ರ. ಮಿದುಳಿನ ಇಲ್ಲ ಭಾಗಗಳ ವಿದ್ಯುತ್ಕ್ರಿಯಾಚಿತ್ರ ನಮಗೆ ಬೇಕಾದರೆ ತಲೆಯ ಮೇಲೆಲ್ಲ ನಾವು 20–30 ಬಿಲ್ಲೆಗಳ ಜಾಲವನ್ನು ರಚಿಸಿ ಅವುಗಳಲ್ಲೆರಡನ್ನು ಒಂದೊಂದು ವಿದ್ಯುದ್ವರ್ಧಕಕ್ಕೆ ಸೇರಿಸಿ ಆ ವಿದ್ಯುದ್ವರ್ಧಕಗಳೊಂದೊಂದಕ್ಕೂ ಬೇರೆ ಬೇರೆ ಲೇಖನಿಗಳನ್ನು ಜೋಡಿಸಬೇಕು. ಆಗ ಮಿದುಳಿನ ವಿವಿಧ ಭಾಗಗಳ ವಿದ್ಯುತ್ಕ್ರಿಯಾಚಿತ್ರಗಳನ್ನು ಲೇಖನಿಗಳು ಏಕಕಾಲದಲ್ಲಿಯೆ ಸರಿಯುತ್ತಿರುವ ಹಾಳೆಯ ಮೇಲೆ ಬರೆಯುತ್ತವೆ. ಇಂಥ ಯಂತ್ರವೇ ಮಿದುಳಿನ ವಿದ್ಯುಲ್ಲೇಖ–ಎಲೆಕ್ಟ್ರೊ ಎನ್‍ಸೆಫಲೋಗ್ರಾಫ್. ಈ ಯಂತ್ರ ಬರೆಯುವ ರೇಖಾಚಿತ್ರವ್ಯೂಹಕ್ಕೆ ಎಲೆಕ್ಟ್ರೊ ಎನ್‍ಸೆಫಲೋಗ್ರಾಂ ಅಂದರೆ ಮಿದುಳಿನವಿದ್ಯುಲ್ಲೇಖನ ಎಂದು ಹೆಸರು. ಈ ಎರಡು ಹೆಸರುಗಳೂ ನಾಲಗೆಯನ್ನು ತೊಡರಿಸುವಂಥವೇ ಆದ್ದರಿಂದ ಎರಡನ್ನೂ ಸಂಕ್ಷೇಪವಾಗಿ ಇಇಜಿ ಎಂಬ ಒಂದೇ ಸಂಕೇತ ನಾಮದಿಂದ ಕರೆಯುವುದು ರೂಢಿಯಾಗಿದೆ.

ಎಂಟು ನಾಲೆಗಳ ಇಇಜಿ ಅಥವಾ ಹನ್ನೆರಡು ಹದಿನಾರು ನಾಲೆಗಳ ಇಇಜಿಗಳು ಉಪಯೋಗದಲ್ಲಿದೆ.

ಎಲೆಕ್ಟ್ರೊ ಎನ್ಸೆಫಲೊಗ್ರಫಿ ಚಿತ್ರಿಸುವ ರೇಖಾವ್ಯೂಹವನ್ನು ಸಹ ಸಂಕ್ಷೇಪವಾಗಿ ಇಇಜಿ ಎಂದೇ ಕರೆಯುವೆವು. ಕಣ್ಣುಮುಚ್ಚಿಕೊಂಡು ನಿಶ್ಚಿಂತನಾಗಿ ಮಲಗಿರುವ ಮನುಷ್ಯನೊಬ್ಬನ ತಲೆಯ ಹಿಂಭಾಗದಿಂದ ಹುಟ್ಟಿ ಬಂದ ಇಇಜಿಗಳು ಸಾಮಾನ್ಯವಾಗಿ ಸುಸ್ಪಷ್ಟಾಕಾರದ ತರಂಗಗಳ ರೂಪ ತಾಳುತ್ತವೆ. ಇವುಗಳ ಆವರ್ತಸಂಖ್ಯೆ ಸೆಕೆಂಡೊಂದಕ್ಕೆ 10ರ ಸುಮಾರಿನಲ್ಲಿರುತ್ತದೆ. ಕಣ್ಣುಮುಚ್ಚಿಕೊಂಡಿರುವ ಮನುಷ್ಯ ಕಣ್ಣುತೆರೆದಕೂಡಲೆ ಅಥವಾ ಮುಚ್ಚಿಕೊಂಡಿದ್ದರೂ ಲೆಕ್ಕಮಾಡಲು ತೊಡಗಿದರೆ ಇಲ್ಲವೇ ಯಾವ ವಿಷಯವಾಗಿಯಾಗಲಿ ಚಿಂತನೆ ಮಾಡತೊಡಗಿದರೆ ಈ ತರಂಗಗಳು ಮಾಯವಾಗಿ ಅವುಗಳ ಸ್ಥಾನದಲ್ಲಿ ಸೆಕೆಂಡಿಗೆ 20–25ರ ಅನಿರ್ದಿಷ್ಟಾಕಾರದ ಅಲೆಗಳು ($\beta$ ತರಂಗಗಳು) ರೂಪುಗೊಳ್ಳುತ್ತವೆ. ತಲೆಯ ಹಿಂಭಾಗದಲ್ಲಿರುವುದು ನಮ್ಮ ಮಿದುಳಿನ ದೃಷ್ಟಿಕೇಂದ್ರ,

ನಾವು ಕಣ್ಣು ಮುಚ್ಚಿಕೊಂಡು ಶಾಂತಚಿತ್ತರಾಗಿರುವಾಗ ದೃಷ್ಟಿಕೇಂದ್ರದ ನರಕೋಶಗಳು ನಮ್ಮ ಕಣ್ಣುಗಳು ನೋಡಬೇಕಾದದ್ದು ಏನನ್ನು ಎಂಬುದನ್ನು ಹುಡುಕುತ್ತ ಇರುತ್ತವೆ, ಹೀಗೆ ಹುಡುಕುವಾಗ ಸೆಕೆಂಡಿಗೆ ಹತ್ತು ತಾಳದ ಗೀತವನ್ನು (α ರಿದಂ) ಹಾಡುತ್ತಿರುತ್ತವೆ. ಕಣ್ಣಿಗೆ ಯಾವುದಾದರೊಂದು ನೋಟ ಸಿಕ್ಕಿದ ಕೂಡಲೇ ಹುಡುಕುವುದು ನಿಂತುಹೋಗಿ ಮನಸ್ಸು ನೋಟದಲ್ಲಿ ನಿಲ್ಲುತ್ತದೆ; ಹತ್ತು ತಾಳದ ಗೀತ ಅಡಗಿ ಹೋಗುತ್ತದೆ. ಆದ್ದರಿಂದ ಈ ದಶತಾಳಗೀತವನ್ನು ದೃಷ್ಟ್ಯಾಕಾಂಕ್ಷೆಯಗೀತ ಎಂದು ಕರೆಯಬಹುದು.

ಕೆಲವರ ಗಂಡಸ್ಥಳದಿಂದ ಹುಟ್ಟಿಬಂದ ಇಇಜಿಯಲ್ಲಿ ಸೆಕೆಂಡಿಗೆ ಐದಾರರ ಸಂಖ್ಯೆಯ ತರಂಗಗಳು ಒಂದೊಂದು ಸಲ ಕಾಣಿಸಿಕೊಳ್ಳುತ್ತವೆ. ಇವರು ಭಾವೋದ್ರಿಕ್ತರಾದಾಗ, ಇವರಿಗೆ ಸಿಟ್ಟುಬಂದಾಗ ಈ ಐದು ತಾಳದ ಗೀತ (θ ರಿದಂ) ಸಾಮಾನ್ಯವಾಗಿ ಹೊರಡುತ್ತದೆ. ಇವರು ಸಮಾಧಾನರಾದಾಗ ಈ ಗೀತ ಮಾಯವಾಗುತ್ತದೆ. ಆದ್ದರಿಂದ ಪಂಚತಾಳಗೀತ ಸುಖಾಕಾಂಕ್ಷೆಯ ಗೀತ. ಜಿತೇಂದ್ರಿಯನ ಗಂಡಸ್ಥಳ ಪಂಚತಾಳಗೀತವನ್ನು ಎಂದೆಂದೂ ಹಾಡುವುದಿಲ್ಲ.




**ಚಿತ್ರ 1 A. ಶ್ರವಣವಿಷಯಜ್ಞನೊಬ್ಬನ ಇಇಜಿ. Oಎಂದು ಗುರುತಿಸುತಿರುವ ಕ್ಷಣದಲ್ಲಿ ಈತ ಕಣ್ಣು ತೆರೆದ. ಇದರ ಪರಿಣಾಮವಾಗಿ ಹರಿದ ವಿದ್ಯುತ್ತಿನ ಪ್ರವಾಹವನ್ನು 1–8 ನಾಲೆಗಳು ತೋರಿಸಿವೆ. ಆದರೆ ಎಂಟು ನಾಲೆಗಳಲ್ಲಿಯೂ ಲೇಖನದ ತಾಳ Oಯ ಎರಡು ಪಕ್ಕಗಳಲ್ಲಿಯೂ ಅಂದರೆ ಕಣ್ಣುಮುಚ್ಚಿದ್ದಾಗ ಹೇಗೋ ತೆರೆದಾಗಲೂ ಹಾಗೆಯೇ ಏಕರೀತಿಯಾಗಿದೆ. ದಶತಾಳಗೀತ ಹುಟ್ಟಿಯೇ ಇಲ್ಲ.**

**B. ಸಾಮಾನ್ಯ ವಿಷಯಜ್ಞನೊಬ್ಬನ ಇಇಜಿ. ಇಲ್ಲಿ Oಯ ಎಡಗಡೆ ಅಂದರೆ ಕಣ್ಣು ಮುಚ್ಚಿದ್ದಾಗ ದಶತಾಳಗೀತ ಎದ್ದು ಕಾಣುತ್ತಿದೆ. Oಯ ಬಲಗಡೆ ದಶತಾಳಗೀತ ಅಳಿಸಿಹೋಗುತ್ತಿದೆ. (ಈ ಲೇಖನಗಳ ಪಕ್ಕದಲ್ಲಿ ತಲೆಯ ಮೇಲ್ಭಾಗವನ್ನು ರೇಖಾಚಿತ್ರವಾಗಿ ಸೂಚಿಸಿದೆ.) ಮೂಗು, ಕಿವಿಗಳನ್ನು ಗಮನಿಸಿ. ಈ ರೇಖಾಚಿತ್ರದಲ್ಲಿ ಗುರುತಿಸಿರುವ 1, 2..............7, 8 ಎಂಬ ಮಿದುಳಿನ ಭಾಗಗಳಲ್ಲಿ ಹುಟ್ಟಿದ ವಿದ್ಯುತ್ತನ್ನು ಲೇಖನದ 1, 2.......................7 8ರ ಗೀಟುಗಳು ಅಲೆಯ ರೂಪದಲ್ಲಿ ಚಿತ್ರಿಸಿವೆ. ಎಂಟು ಲೇಖನಗಳ ಮೇಲಿನ ಮತ್ತು ಕೆಳಗಿನ ರೇಖೆಗಳಲ್ಲಿ ಕಾಣುವ ಏರುಗಳು ಸೆಕೆಂಡುಗಳನ್ನು ಎಣಿಸುತ್ತವೆ.**

ಆದರೆ ಕೆಲವರು ಕಣ್ಣುಮುಚ್ಚಿಕೊಂಡಿರಲಿ ತೆರೆದಿರಲಿ ಈ ದಶತಾಳಗೀತ ಅವರ ಇಇಜಿಯಲ್ಲಿ ರೂಪುಗೊಳ್ಳುವುದೇ ಇಲ್ಲ. ಇಂಥವರು ತಮ್ಮ ಮನಸ್ಸಿನಲ್ಲಿಯೇ ಯಾವಾಗಲೂ ಚಿತ್ರಗಳನ್ನು ಕಾಣುತ್ತಿರುತ್ತಾರೆ. ಇವರು ಯಾವ ಮಾತನ್ನು ಕೇಳಿದರೂ ಅದರ ಚಿತ್ರ ಅವರ ಕಣ್ಣ ಮುಂದೆ ನಿಂತಂತಿರುತ್ತದೆ.




**ಚಿತ್ರ 2 ದೃಷ್ಟಿ ವಿಷಯಜ್ಞನೊಬ್ಬನ ಇಇಜಿ. Sನ ಎರಡು ಪಕ್ಕಗಳಲ್ಲಿಯೂ ಅಂದರೆ ಕಣ್ಣುಗಳನ್ನು ತೆರೆದಿದ್ದಾಗ ಮತ್ತು ಮುಚ್ಚಿಕೊಂಡಿದ್ದಾಗ ದಶತಾಳಗೀತ ಏಕರೀತಿಯಲ್ಲಿ ನುಡಿಯುತ್ತಿದೆ.**

ಇದಕ್ಕೆ ಪ್ರತಿಯಾಗಿ ಮತ್ತೆ ಕೆಲವರ ದಶತಾಳಗೀತ ಅಳಿಸಿಹೋಗುವುದೇ ಇಲ್ಲ. ಕಣ್ಣ ತೆರೆದಿದ್ದಾಗ, ವಿಚಾರಪರವಾಗಿದ್ದಾಗ ಕೂಡ ಇವರ ನರಕೋಶಗಳು ಸೆಕೆಂಡಿಗೆ ಹತ್ತುತಾಳ ಹಾಕುತ್ತಲೇ ಇರುತ್ತವೆ. ಇವರ ದೃಷ್ಟ್ಯಾಕಾಂಕ್ಷೆಗೆ ವಿರಾಮವೇ ಇಲ್ಲ.

ಮತ್ತೆ ಕೆಲವರಲ್ಲಿ ಆಗಾಗ್ಗೆ ಸೆಕೆಂಡಿಗೆ ಮೂರರ ಸುಮಾರಿನ ಮಂದ್ರ ತರಂಗಗಳು ಕಾಣಿಸಿಕೊಳ್ಳುತ್ತವೆ. ಅಂಥವರು ಅಪಸ್ಮಾರ ರೋಗಿಗಳು; ಕಡೆಯ ಪಕ್ಷ ಸುಪ್ತ ಅಪಸ್ಮಾರ ರೋಗಿಗಳಾದರೂ ಆಗಿರುತ್ತಾರೆ. ಮೂರು ತಾಳದ ಗೀತ (δ ರಿದಂ) ನರಕೋಶಗಳ ಅವನತ ಸ್ಥಿತಿಯನ್ನೂ ಸೂಚಿಸುತ್ತದೆ. ಎರಡು ಮೂರು ವರ್ಷಗಳೊಳಗಿನ ಮಕ್ಕಳ ಮತ್ತು ಪೂರ್ಣ ನಿದ್ರಾವಸ್ಥೆಯಲ್ಲಿರುವ ಆರೋಗ್ಯವಂತರ ಇಇಜಿಗಳಲ್ಲಿಯೂ ಮೂರರ ತರಂಗಗಳು ಕಾಣುತ್ತವೆ. ಒಟ್ಟಿನಲ್ಲಿ ತ್ರಿತಾಳಗೀತೆಯನ್ನು ಲಯಗೀತೆ ಎಂದು ಕರೆಯಬಹುದು.

ಈ ವಿದ್ಯುದ್ರೂಪಗಳನ್ನು ದಶತಾಳಗೀತೆ, ಪಂಚತಾಳಗೀತೆ, ತ್ರಿತಾಳಗೀತೆ ಎಂದು ಕರೆದಿರುವುದು ಸಂಪೂರ್ಣವಾಗಿ ಆಲಂಕಾರಿಕ ದೃಷ್ಟಿಯಿಂದಲ್ಲ. ಏಕೆಂದರೆ ಇಇಜಿಯ ವಿದ್ಯುದ್ವರ್ಧಕದಿಂದ ಹೊರಬಿದ್ದ ವಿದ್ಯುತ್ಪ್ರವಾಹವನ್ನು ಪ್ರವಾಹಮಾಪಕದಲ್ಲಿ ಹರಿಯಿಸುವುದರ ಬದಲು ಲೌಡ್‌ಸ್ಪೀಕರ್ ಅಥವಾ ಪ್ರಬಲವಾಚಿಯಲ್ಲಿ ಹರಿಯಿಸಿದರೆ ಗೀತಗಳು ನಮಗೆ ಹತ್ತು, ಐದು, ಮೂರು ತಾಳಗಳಾಗಿ ಅಸಂದಿಗ್ಧವಾಗಿ ಕೇಳಿಬರುತ್ತವೆ.

ಸಾಮಾನ್ಯಸ್ಥಿತಿಯಲ್ಲಿರುವಾಗ ಜನಗಳ ಇಇಜಿಗಳನ್ನು ಬರೆಸುವುದರ ಜೊತೆಗೆ ಅವರ ದೃಷ್ಟಿಕೇಂದ್ರಗಳನ್ನೋ ವಿಶೇಷವಾಗಿ ಉದ್ದೀಪನಗೊಳಿಸಿ ಇಇಜಿಗಳನ್ನು ಬರೆಸಿದರೆ ಅವರ ಆರೋಗ್ಯಸ್ಥಿತಿ ಮತ್ತಷ್ಟು ಸ್ಪಷ್ಟವಾಗಿ ಹೊರಬೀಳುತ್ತದೆ. ಬಹುಜನರ ಲೇಖನಗಳು ಹೀಗೆ ಉದ್ದೀಪನಗೊಂಡಾಗಲೂ ಏನೂ ಬದಲಾವಣೆಯನ್ನು ತೋರುವುದಿಲ್ಲ. ಆದರೆ ಕೆಲವರು ಎಲ್ಲ ವಿಧದಲ್ಲಿಯೂ ಆರೋಗ್ಯವಂತರಾಗಿಯೇ ಕಂಡರೂ ಅವರ ಕಣ್ಣಮೇಲೆ ಆವರ್ತವಾಗಿ ಬೆಳಕು, ನೆರಳು, ಬೆಳಕು, ನೆರಳುಗಳು ಒಂದು ಗೊತ್ತಾದ ತಾಳದಲ್ಲಿ – ಸಾಮಾನ್ಯವಾಗಿ ದಶತಾಳದಲ್ಲಿ—ಬಿದ್ದಾಗ ಅವರ ಇಇಜಿ ಒಂದು ದೊಡ್ಡ ತಳಮಳವನ್ನೇ ಬಿರುಗಾಳಿಯನ್ನೆ ಚಿತ್ರಿಸುತ್ತದೆ. (ಚಿತ್ರ 3). ಇಂಥವರು ದ್ಯುತಿಜನಿತ ಅಪಸ್ಮಾರ ರೋಗಿಗಳು (ಫೋಟೋಜೆನಿಕ್ ಎಪಿಲೆಪ್ಸಿಕ್ಸ್). ಇವರು ದಟ್ಟವಾದ ಗಿಡಮರಗಳಿರುವ ರಸ್ತೆಯಲ್ಲಿ ವಾಹನಗಳಲ್ಲಿ ವೇಗವಾಗಿ ಹೋಗುತ್ತಿರುವಾಗ ಸೂರ್ಯನ ಬೆಳಕು ಮರಗಳ ಎಲೆಗಳ ಸಂದುಗಳಿಂದ ಆವರ್ತಕಾಂತಿ ಇವರ ನರಕೋಶಗಳ ತಾಳಗತಿಗೆ ಸಮವಾದರೆ, ಹಾಗೇ ಅದೇ ಆವರ್ತದಲ್ಲಿ ಬೆಳಕು ಕಣ್ಣಮೇಲೆ ಬೀಳುತ್ತಿರುವಷ್ಟು ಕಾಲವೂ ಇವರಿಗೆ

ತಮ್ಮ ಇಂದ್ರಿಯಗಳ ಮೇಲಿರುವ ಹತೋಟಿ ತಪ್ಪಿಹೋಗುತ್ತದೆ. ಇವರು ಪ್ರಜ್ಞಾಹೀನರಾಗುತ್ತಾರೆ. ದ್ಯುತಿಜನಿತ ಅಪಸ್ಮಾರ ರೋಗಿಗಳು ಪ್ರಾಯಶಃ ನಮ್ಮ ಜನಸಂಖ್ಯೆಯಲ್ಲಿ ಇನ್ನೂರಕ್ಕೆ ಒಬ್ಬರಿಗಿಂತ ಕಡಿಮೆ ಇದ್ದಾರೆ. ಇದೇ ರೀತಿಯಲ್ಲಿ ಧ್ವನಿಜನಿತ ಅಪಸ್ಮಾರ ರೋಗಿಗಳೂ (ಆಡಿಯೊಜೆನಿಕ್ ಎಪಿಲೆಪ್ಸಿಕ್ಸ್) ಇರುವುದುಂಟು. ಇವರ ಸಂಖ್ಯೆ ಎಂಟುನೂರಕ್ಕೆ ಒಬ್ಬರಿಗಿಂತಲೂ ಕಡಿಮೆ ಇರಬೇಕು. ಹಾಗೆಯೇ




**ಚಿತ್ರ 3 A. ನಿದ್ರಿಸುತ್ತಿರುವವನ ಇಇಜಿ. B. ದ್ಯುತಿಜನಿತ ಅಪಸ್ಮಾರವನ್ನು ಚಿತ್ರಿಸಿರುವ ಇಇಜಿ. ರೋಗಿಯ ಕಣ್ಣುಗಳ ಮೇಲೆ ಆವರ್ತವಾಗಿ ಬೀಳುವ ಬೆಳಕು, ಕತ್ತಲೆಗಳು ಪ್ರಭಾವಿದ್ಯುತ್ಕೋಶದ (P) ಮೇಲೂ ಬೀಳುವಂತೆ ಮಾಡಿದೆ. ಈ ಕೋಶದಲ್ಲಿ ಬೆಳಕಿನ ಕಾಂತಿಗನುಗುಣವಾಗಿ ಹುಟ್ಟುವ ವಿದ್ಯುತ್ತನ್ನು ಎಂಟನೆಯ ನಾಲೆಗೊಯ್ದಿದೆ. ಬೆಳಕು ಸೆಕೆಂಡೊಂದಕ್ಕೆ 10 ಸಲದಂತೆ ಕಣ್ಣಮೇಲೆ ಬಿದ್ದಾಗ ಎಲ್ಲ ನಾಲೆಗಳಲ್ಲಿಯೂ (1–7)ರ ವರೆಗೆ ವಿದ್ಯುತ್ತಿನ ತಳಮಳ ಎದ್ದಿರುವುದನ್ನು ಕಾಣಬಹುದು.**

ಕೆಲವು ಜಾತಿಯ ಶ್ರವಣ ಭ್ರಾಂತರ ಕಣ್ಣಮೇಲೆ ಆವರ್ತಕಾಂತಿ ಬಿದ್ದಾಗ ಅವರ ಇಇಜಿಗಳು ಒಂದು ವಿಚಿತ್ರ ರೀತಿಯಲ್ಲಿ ದ್ಯುತಿಸ್ಪಂದನಗಳನ್ನು ಅನುಸರಿಸುವಂತೆ ಈಚಿನ ಕೆಲವು ಅನ್ವೇಷಣೆಗಳಿಂದ ಕಂಡುಬಂದಿದೆ. ಮಂದಬುದ್ಧಿಗಳ ಮಿದುಳು ಹಾನಿಯಾಗಿರುವವರ ಇಇಜಿಗಳಲ್ಲಿ ಸುಮಾರು ಅರ್ಧ ಮಿನಿಟಿನ ಅವಧಿಯ ಲೇಖನ ನೋಡಿದರೆ ಸಾಕು, ಅವರ ಇಇಜಿಯ ವ್ಯಕ್ತಿ ವೈಶಿಷ್ಟ್ಯ ಪತ್ತೆಯಾಗುತ್ತದೆ.

ಮುಖ್ಯವಾಗಿ ಇಇಜಿಯ ಲಿಪಿಗಳಲ್ಲಿ ಅಡಗಿರುವ ರಹಸ್ಯಗಳಲ್ಲಿ ನೂರರಲ್ಲೊಂದು ಭಾಗವನ್ನು ಕೂಡ ನಾವಿನ್ನು ಹೊರಗೆಡಹಿಲ್ಲವೆಂಬುದನ್ನು ಮರೆಯಬಾರದು. ಇದೇ ಅಭಿಪ್ರಾಯವನ್ನೆ ಇಂಗ್ಲೆಂಡಿನ ಸುಪ್ರಸಿದ್ಧ ಶರೀರವಿಜ್ಞಾನಿ, ಅದರಲ್ಲಿಯೂ ವಿಶೇಷವಾಗಿ ನರಶಾಸ್ತ್ರದಲ್ಲಿ ನಿಷ್ಣಾತನಾಗಿದ್ದ ಸರ್ ಚಾರ್ಲ್ಸ್ ಷೆರಿಂಗ್‌ಟನ್ ರೂಪಕದ ಸುಂದರ ಭಾಷೆಯಲ್ಲಿ ಹೀಗೆ ಹೇಳಿದ್ದಾನೆ– ನಮ್ಮ ಮಿದುಳು ಒಂದು ಐಂದ್ರಜಾಲಿಕ ಮಗ್ಗದಂತೆ ಇದೆ; ಮಗ್ಗದಲ್ಲಿ ಥಳಥಳಿಸುವ ಲಾಳಿಗಳು ಕ್ಷಣಕ್ಷಣವೂ ಕರಗಿ ಅಳಿಸಿಹೋಗುತ್ತಿರುವ ಅದೆಷ್ಟೋ ಮಾದರಿ ನವುರುಬಟ್ಟೆಗಳನ್ನು ನೇಯುತ್ತಿವೆ; ಪ್ರತಿಯೊಂದು ಮಾದರಿಯೂ ಅರ್ಥಪೂರ್ಣವಾಗಿದ್ದರೂ ಶಾಶ್ವತವಲ್ಲ. ಹೀಗೆ ಅರ್ಥಪೂರ್ಣವಾಗಿದ್ದರೂ ನಮಗೆ ಅರ್ಥ ತೋರುತ್ತಿಲ್ಲದಿರುವ ಕೊರತೆಯನ್ನು ನೀಗಿಸುವುದಕ್ಕೆಂದೇ ಪ್ರಪಂಚದ ಹಲವಾರು ಸಂಸ್ಥೆಗಳು ಅನ್ವೇಷಣೆ ನಡೆಸುತ್ತಿವೆ. ಅವುಗಳಲ್ಲಿ ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್)ಯೂ ಒಂದು.(ಆರ್.ಎಲ್.ಎನ್.)

**ಎಲೆಕ್ಟ್ರೊಕಾರ್ಟಿಕೋಗ್ರಾಂ:** ತಲೆಯ ನೆತ್ತಿವಲಯದ ಎರಡು ಬಿಂದುಗಳ ವಿದ್ಯುದ್ವಿಭವಗಳಲ್ಲಿ ಕಾಲಕಾಲಕ್ಕೆ ಉಂಟಾಗುವ ಬದಲಾವಣೆಗಳನ್ನು ಚಿತ್ರಿಸುವ ಗ್ರಾಫ್ ಇಇಜಿ; ಮಿದುಳಿನ ಮೇಲೆಯೇ ಎಲೆಕ್ಟ್ರೋಡುಗಳನ್ನು ಇಟ್ಟು ತರಂಗಗಳನ್ನು ದಾಖಲಿಸಿದಾಗ ದೊರೆಯುವ ಗ್ರಾಫಿನ ಹೆಸರು ಎಲೆಕ್ಟ್ರೊಕಾರ್ಟಿಕೋಗ್ರಾಂ. ಮಿದುಳಿನ ಶಸ್ತ್ರಚಿಕಿತ್ಸೆಯ ಸಂದರ್ಭಗಳಲ್ಲಿ ಮಾತ್ರ ಇದು ಸಾಧ್ಯ. ಮಿದುಳಿನ ವಿದ್ಯುತ್ತಿಯೆ ಅತಿಸೂಕ್ಷ್ಮ ವೋಲ್ಟೇಜಿನದು (0,00001—0.0002 ವೋಲ್ಟ್). ಅದರ ಆವರ್ತ ಸಂಖ್ಯೆ ಕಡಿಮೆ, ಸೆಕೆಂಡಿಗೆ 1—100.

ಕೇಟನ್ ಎಂಬಾತ ಪ್ರಾಣಿಮಿದುಳಿನ ವಿದ್ಯುದ್ವಿಭವಗಳನ್ನು 1875 ರಲ್ಲಿಯೇ ಪ್ರಾಯೋಗಿಕವಾಗಿ ಪ್ರದರ್ಶಿಸಿದರೂ ಮನುಷ್ಯನ ಮಿದುಳಿನ ವಿದ್ಯುತ್ತಿಯೆಯ ಪ್ರದರ್ಶನ ನಡೆದದ್ದು ಈಚೆಗೆ (1929), ಬರ್ಗರ್ ಎಂಬಾತನಿಂದ, ಆಡ್ರಿಯನ್ ಮತ್ತು ಮ್ಯಾಥ್ಯೂಸ್ ಇದನ್ನು ಸ್ಥಿರೀಕರಿಸಿದರು (1924). ಅಪಸ್ಮಾರವನ್ನು ಕುರಿತ ತಮ್ಮ ವರದಿಗಳನ್ನು ಗಿಬ್ಸ್, ಡೇರಿನ್ ಮತ್ತು ಲೆನಾಕ್ಸ್ 1935ರಲ್ಲೂ ಜ್ಯಾಸ್ಪರ್ ಒಂದು ವರ್ಷದ ತರುವಾಯವೂ ಪ್ರಸಿದ್ಧಿಸಿದರು, ತಲೆಬುರುಡೆಯೊಳಗೆ ಗೆಡ್ಡೆಗಳಿರುವಾಗ ಇಇಜಿಯಲ್ಲಿ ಆಗುವ ವ್ಯತ್ಯಾಸಗಳನ್ನು ಫೋರೆಸ್ಟರ್ ಮತ್ತು ಆಲ್ಟೆನ್ ಬರ್ಗರ್ 1935ರಲ್ಲಿ ಪ್ರದರ್ಶಿಸಿದರು. 1938ರಿಂದೀಚೆಗೆ ದ್ವಿತೀಯ ಜಾಗತಿಕ ಸಮರದ ಚಿಕಿತ್ಸಕ ಸಮಸ್ಯೆಗಳ (ಕ್ಲಿನಿಕಲ್ ಪ್ರಾಬ್ಲೆಮ್ಸ್) ಪರಿಶೀಲನೆಯಿಂದಲೂ ಕೇಸ್, ಬ್ರ್ಯೂಸಿ, ಹಿಲ್ ಮತ್ತು ಪಾರ್ ಅದರಲ್ಲೂ ವಿಶೇಷವಾಗಿ ಬಾಗ್ಚಿ ಇವರ ಸಂಶೋಧನಾತ್ಮಕ ಲೇಖನಗಳಿಂದಲೂ ಇಇಜಿಯ ಉಪಯೋಗ ಕ್ರಮೇಣ ವೃದ್ಧಿಗೊಂಡಿದೆ. ಭಾರತದ ಬಸು.ಕೆ.ಬಾಗ್ಚಿಯವರು ಇತ್ತೀಚಿನವರೆಗೆ ಮಿಶಿಗನ್ ವಿಶ್ವವಿದ್ಯಾನಿಲಯದಲ್ಲಿ ಇಇಜಿ ಪ್ರಾಧ್ಯಾಪಕರಾಗಿದ್ದರು. ಈ ಕ್ಷೇತ್ರದಲ್ಲಿ ಅವರ ಕೊಡುಗೆ ಅಪಾರವಾದದ್ದು.

**ವಿಧಾನ:** ಹೆಚ್ಚಿನ ಸಂಸ್ಥೆಗಳಲ್ಲಿ ಬಹುದಿಕ್ಕಿನ ಬಹುನಾಲೆಯ ಇಇಜಿಗಳನ್ನು ಮಿದುಳಿನ ವಿದ್ಯುತ್ತಿಯೆಗಳನ್ನು ದಾಖಲಿಸಲು ಉಪಯೋಗಿಸುತ್ತಾರೆ. ಲೋಹಬಿಲ್ಲೆಗಳಿಂದ ಅಥವಾ ಬೆಳ್ಳಿಯ ಕ್ಲೋರೈಡಿನ ಮೇಲೆ ತೇವಪೂರಿತ ಮೆತ್ತೆಗಳಿಂದ ಮಾಡಿದ ಎಲೆಕ್ಟ್ರೋಡುಗಳನ್ನು ತಲೆಯ ವಿವಿಧ ಭಾಗಗಳಲ್ಲಿ ಇಡಲಾಗುವುದು. ತರುವಾಯ ಯಾವುದೇ ಎರಡು ಎಲೆಕ್ಟ್ರೋಡುಗಳ ವಿದ್ಯುದ್ವಿಭವಗಳಲ್ಲಿ ಕಾಲಕಾಲಕ್ಕೆ ಉಂಟಾಗುವ ಬದಲಾವಣೆಗಳನ್ನು ಗ್ರಾಫ್ ವಿಧಾನದಿಂದ ಚಿತ್ರಿಸುತ್ತಾರೆ.

**ಮಿದುಳಿನ ವಿಭವಗಳ ಸ್ವಭಾವ:** ಮಿದುಳಿನ ಅನೈಚ್ಛಿಕ ಕ್ರಿಯೆಗಳ ಸ್ವಭಾವ ವಿವರವಾಗಿ ಇನ್ನೂ ತಿಳಿದಿಲ್ಲ. ಬಿಡಿ ನ್ಯೂರಾನುಗಳಲ್ಲಿ ಒಂದೊಂದರ ವಿದ್ಯುದ್ವಿಸರ್ಜನೆಗಳ ಆಕಾಶೀಯ (ಸ್ಪೇಶಿಯಲ್) ಹಾಗೂ ಕಾಲೀಯ (ಟಂಪೊರಲ್) ಮೊತ್ತಗಳ ಪರಿಣಾಮವಾದ ಘಟನೆಯೇ ಮಿದುಳಿನ ಅನೈಚ್ಛಿಕ ಪರ್ಯಾಯ ವಿಭವಸೂಚಕ ತರಂಗಗಳೆಂದು ಪರಿಗಣಿಸಲಾಗಿದೆ. ಇಂದು ಚಿಕಿತ್ಸಾವಿಧಾನದಲ್ಲಿ ಉಪಯೋಗಿಸುತ್ತಿರುವ ಇಇಜಿ ಪ್ರಾಯಶಃ ಬಹುಸಂಖ್ಯೆಯ ಕಾರ್ಟಿಕಲ್ ನ್ಯೂರಾನುಗಳ ಸಂಗ್ರಹಣೆಯಿಂದ ದಾಖಲಿಸುವುದು. ಭಿನ್ನ ಆವರ್ತಸಂಖ್ಯೆಗಳಲ್ಲಿರುವ (ಫ್ರೀಕ್ವೆನ್ಸೀಸ್) ಅನಿರ್ದಿಷ್ಟ ಸಂಖ್ಯೆಯ ಮತ್ತು ಅನಿರ್ದಿಷ್ಟ ಗುಂಪುಗಳ ಕ್ರಿಯೆಯನ್ನು ಇಂಥ ದಾಖಲೆ ಸೂಚಿಸುತ್ತದೆ. ಕೆಲವೊಂದು ಗುಂಪುಗಳು ಕ್ರಿಯೆಗಳ ಸಮಗ್ರ ಮೊತ್ತವೆ ಈ ದಾಖಲೆ. ಇಇಜಿ ವ್ಯಕ್ತಪಡಿಸುವ ಕ್ರಿಯೆಗಳ ವ್ಯಾಪ್ತಿ ಬಲು ವಿಶಾಲವಾಗಿದೆ–ಅದು ಸೆಕೆಂಡಿಗೆ 1—50 ಅಥವಾ 100 ಅಥವಾ ಹೆಚ್ಚೂ ಇರಬಹುದು. ಆವರ್ತಸಂಖ್ಯೆಯನ್ನು ಈ ಕೆಳಗಿನಂತೆ ವಿಭಾಗಿಸಿದೆ.

| | | | |
|---|---|---|---|
| 1 | ಆಲ್ಫಾ | ($\alpha$) | 8–13 ಸೆಕೆಂಡಿಗೆ |
| 2 | ಬೀಟ | ($\beta$) | 15–50 ಸೆಕೆಂಡಿಗೆ |
| 3 | ಥೀಟ | ($\theta$) | 4–7 ಸೆಕೆಂಡಿಗೆ |
| 4 | ಡೆಲ್ಟ | ($\delta$) | 1–3 ಸೆಕೆಂಡಿಗೆ |

ಆವರ್ತಸಂಖ್ಯೆ–ವೋಲ್ಟೇಜ್ ಸಂಬಂಧಾನುಸಾರ ಇಇಜಿಯನ್ನು ವರ್ಗೀಕರಿಸಲಾಗಿದೆ. ವೋಲ್ಟೇಜ್ ಮತ್ತು ರೂಪಿಕೆ (ಪ್ಯಾಟರ್ನ್) ಮುಖ್ಯವಾದವಾದರೂ ಆವರ್ತಸಂಖ್ಯೆಯೇ ಪ್ರಧಾನ ಪ್ರಾಚಲ (ಪ್ರಿನ್ಸಿಪಲ್ ಪ್ಯಾರಾಮೀಟರ್).

ಸಹಜ (ನಾರ್ಮಲ್) ಇಇಜಿ: ಜಿಬ್ಸ್ ಎಂಬಾತ ಸಹಸಸ್ಥಿತಿಯ 1000 ತರುಣರ ದಾಖಲೆ ಚಿತ್ರಿಸಿದ. ಅವನ ತೀರ್ಮಾನಗಳು ಈ ಕೆಳಗಿನಂತಿವೆ: ಶೇ.75 ಸಹಜ ಜನರಲ್ಲಿ 8.5–12/ಸೆಕೆಂಡ್ ವ್ಯಾಪ್ತಿಯಲ್ಲಿ ಆಲ್ಫಕ್ರಿಯೆಯಿತ್ತು; ಮತ್ತು ಶೇ.11 ಜನರಲ್ಲಿ ಅತಿವೇಗದ ನಿಮ್ನ(ಲೋ) ವೋಲ್ಟೇಜ್ ರೂಪಿಕೆ ಇತ್ತು. ಇವೆರಡನ್ನೂ ಸಹಜ ರೂಪಿಕೆಗಳೆಂದು ಸ್ವೀಕರಿಸಲಾಯಿತು. ಉಳಿದ ಶೇ.14 ಈ ಸ್ಥಿತಿಗಿಂತ ವಿಚಲಿತರಾಗಿದ್ದರೂ ಅ ವ್ಯಕ್ತಿಗಳು ಯಾರೂ ಯಾವ ನರವ್ಯಾಧಿಯಿಂದಲೂ ನರಳುತ್ತಿದ್ದಂತೆ ತೋರಲಿಲ್ಲ.




ಚಿತ್ರ 4 ದಶತಾಳಗೀತ (ನಾರ್ಮಲ್)




ಚಿತ್ರ 5 ಅಸಾಮಾನ್ಯಗೀತ ಏಕತಾಳ ದ್ವಿತಾಳ ಅಥವಾ ತ್ರಿತಾಳಗೀತ 1ನೆಯ ಮತ್ತು 2ನೆಯ ಪಾದದಲ್ಲಿ. 3ನೆಯ ಪಾದ ದಶತಾಳಗೀತ. (ವಿ.ಸೂ. ಎಡಿಗಂತಿಯ ಮೇಲೆ ಬೆಳ್ಳಿಯ ಬಿಲ್ಲೆ ಇಟ್ಟ ಕಾರಣ ಗೀತಗಳ ಬದಲಾವಣೆ. ಇದು ಎಡಿಗಂತಿಯ ಸ್ಥಾನ ನಿರ್ಧರಣಕ್ಕೆ ಅನುಕೂಲ

ಮಕ್ಕಳ ದಾಖಲೆಗಳು ವಯಸ್ಕರವುಗಳಿಗಿಂತ ಭಿನ್ನವಾಗಿವೆ. ಅವರಲ್ಲಿ ತರಂಗಗಳು ಸಾಮಾನ್ಯವಾಗಿ ನಿಧಾನ; ಮಗು ಬೆಳೆಯುತ್ತಿದ್ದಂತೆ ಇವು ಬದಲಾಗಿ ಅದು ಯುವಕನಾಗುವ ವೇಳೆಗೆ ಸಹಜ ರೂಪಿಕೆಗಳಾಗುತ್ತವೆ.

**ಅನ್ವಯಗಳು:** ಬುರುಡೆಯೊಳಗಿನ ಗೆಡ್ಡೆಗಳು ಮತ್ತು (ಇಂಟ್ರಾಕ್ರ್ಯಾನಿಯಲ್ ನಿಯೋಪ್ಲಾಸಮ್ಸ್) ಮಿದುಳಿನ ಗೆಡ್ಡೆಗಳ— ಅದರಲ್ಲೂ ಪ್ರಧಾನ ಮಿದುಳಿನ ಭಾಗಗಳಲ್ಲಿ (ಸೆರೆಬ್ರಲ್ ಹೆಮಿಸ್ಫಿಯರ್) ತಲೆದೋರುವವುಗಳ — ಸಮೀಪದಲ್ಲಿ ಮಂದ ವಿದ್ಯುತ್ಕ್ರಿಯೆ ಇರುವುದನ್ನು ತೋರಿಸಬಹುದು; ಶೇ.75 ಅನ್ವೇಷಣೆಗಳಲ್ಲಿ ಗೆಡ್ಡೆಗಳ ಸ್ಥಾನ ನಿರ್ಧರಣ ನಿಖರವಾಗಿತ್ತು. ಆದ್ದರಿಂದ ಮಿದುಳ ಗೆಡ್ಡೆ ಇರುವಂಥ ಒಬ್ಬ ವ್ಯಕ್ತಿಯ ಇಇಜಿ ಸಹಜರೂಪಿಕೆಯನ್ನೇ ತೋರಿಸಬಹುದು; ಎಂದಮಾತ್ರಕ್ಕೆ ಆತನಿಗೆ ಗೆಡ್ಡೆ ಇಲ್ಲವೇ ಇಲ್ಲ ಎಂದು ತೀರ್ಮಾನಿಸಲು ಈ ಪರೀಕ್ಷೆಯನ್ನು ಆಧರಿಸುವುದು ಸಾಧುವಲ್ಲ. ಚಿಕಿತ್ಸಕ ಮುಂತಾದ ಇತರ ಪುರಾವೆಗಳೊಡನೆ ಹೋಲಿಸಿ ಯುಕ್ತ ತೀರ್ಮಾನಕ್ಕೆ ಬರಲು ಇದೊಂದು ಉಪಯುಕ್ತ ವಿಧಾನವೆಂದು ಪರಿಗಣಿಸಬೇಕಷ್ಟೆ. (ಎಂ.ಪಿ.ಪಿ.)

**ಎಲೆಕ್ಟ್ರೊ ಟೈಪುಗಳು:** ಮುದ್ರಣ ಕ್ರಿಯೆಯಲ್ಲಿ ಅನುಸರಿಸುವ ಒಂದು ವಿಧಾನ, ತತ್ತ್ವಶಃ ಎಲೆಕ್ಟ್ರೊಟೈಪುಗಳು ಒಂದು ಮೂಲ ಲಿಪಿ ಮುದ್ರಣ (ಲೆಟರ್ ಪ್ರೆಸ್—ಅಕ್ಷರಗಳ ಮೊಳೆಗಳನ್ನು ಜೋಡಿಸಿ ಉಬ್ಬಿರುವ ಭಾಗಗಳಿಗೆ ಮಸಿ ಲೇಪಿಸಿ ಮುದ್ರಿಸುವ ಸಾಂಪ್ರದಾಯಿಕ ವಿಧಾನವೇ ಲಿಪಿ ಮುದ್ರಣ). ಮುದ್ರಣ ಅಚ್ಚಿನ ಹಲಗೆಯಿಂದ ಪಡೆದ ಎರಕದ ಅಚ್ಚಿನ (ಮೌಲ್ಡ್) ಮೇಲೆ ವಿದ್ಯುಚ್ಛಕ್ತಿಯ ಸಹಾಯದಿಂದ ಶೇಖರಿಸಲ್ಪಟ್ಟ ತಾಮ್ರದ ಚಿಪ್ಪುಗಳೇ ಎಲೆಕ್ಟ್ರೊ ಟೈಪುಗಳು. ಮುದ್ರಣ ಫಲಕಗಳ ಪ್ರತಿರೂಪಗಳ (ಡ್ಯೂಪ್ಲಿಕೇಟ್ ಪ್ಲೇಟ್ಸ್) ತಯಾರಿಕೆಯಲ್ಲಿ ಸ್ಟೀರಿಯೊ ಫಲಕಗಳು ಮೊದಲನೆಯ ವಿಧಾನವಾದರೆ ಎಲೆಕ್ಟ್ರೊ ಟೈಪುಗಳು ಎರಡನೆಯ ವಿಧಾನ. ಇದು ಸ್ಟೀರಿಯೊ ಟೈಪ್ ವಿಧಾನಕ್ಕಿಂತಲೂ ಹೆಚ್ಚು ನಿಧಾನವಾದ ಮತ್ತು ಹೆಚ್ಚು ವೆಚ್ಚದ ವಿಧಾನ. ಆದರೆ ತುಂಬ ಉತ್ತಮ ವರ್ಗದ ಫಲಕಗಳ ಪ್ರತಿರೂಪಗಳನ್ನು ಇದು ನೀಡುತ್ತದೆ. ಎಲೆಕ್ಟ್ರೊಟೈಪ್‌ಗಳು ಬಹಳ ಹೆಚ್ಚು ಪ್ರತಿಗಳನ್ನು ಕೊಡುತ್ತವಲ್ಲದೆ ಮುದ್ರಣದಲ್ಲಿ ಬಹು ಸೂಕ್ಷ್ಮ ವಿವರಗಳನ್ನು ಚೊಕ್ಕಟವಾಗಿ ಉತ್ಪಾದಿಸಬಲ್ಲವು. ಅಷ್ಟೇ ಅಲ್ಲದೆ, ಅತಿ ಸೂಕ್ಷ್ಮ ಹಾಫ್‌ಟೋನ್ ಬಿಂದುಗಳನ್ನೊಳಗೊಂಡ ಚಿತ್ರಗಳನ್ನೂ ಅಂದವಾಗಿ ಉತ್ಪಾದಿಸಬಲ್ಲವು.

ಎಲೆಕ್ಟ್ರೊ ಟೈಪುಗಳನ್ನು ತಯಾರಿಸುವ ವಿಧಾನವನ್ನು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು: 1 ಎರಕದ ಅಚ್ಚು (ಮೌಲ್ಡ್) ಮಾಡುವುದು; 2 ವಿದ್ಯುಲ್ಲೇಪಿತ ಲೋಹವನ್ನು ಎರಕದ ಅಚ್ಚಿನ ಮೇಲೆ ಕ್ರೋಡೀಕರಿಸುವುದು; 3 ಲೋಹದ ಚಿಪ್ಪಿನ ಹಿಂಬದಿಯ ನಿರ್ಮಾಣ ಮತ್ತು ಒಪ್ಪ ಮಾಡುವುದು.

ವಿದ್ಯುತ್ ಎರಕದ ಅಚ್ಚು: ಅಚ್ಚು ಎರಕ ಮಾಡಲು ಮೂರು ಬಗೆಯ ಪದಾರ್ಥಗಳನ್ನು ಬಳಸುವರು:

1. ಉಷ್ಣಲೆಪ್ಪದ ಎರಕದ ಅಚ್ಚು (ಥರ್ಮೊಪ್ಲಾಸ್ಟಿಕ್ ಮೌಲ್ಡ್): ಮೂಲವಾದ ಲಿಪಿ ಮುದ್ರಣದ ಅಚ್ಚಿನ ಹಲಗೆಯನ್ನು ಎಚ್ಚರಿಕೆಯಿಂದ ತಯಾರಿಸಿ, ಅದಕ್ಕೆ ಎಣ್ಣೆಯನ್ನು ತೆಳುವಾಗಿ ಸವರಬೇಕು. ಹೈಡ್ರಾಲಿಕ್ ಪ್ರೆಸ್ಸಿನ ಕಾದ ಹಲಗೆಯ ಮೇಲೆ ಆ ಅಚ್ಚಿನ ಹಲಗೆಯನ್ನಿರಿಸಿ ಅದರ ಮೇಲೆ 0.076200 ಸೆಂಮೀ. ಗಾತ್ರದ ಉಷ್ಣಲೆಪ್ಪದ ಹಾಳೆಯನ್ನು (ಪಿ.ವಿ.ಸಿ. ಕೊಪಾಲಿಮರ್) ಇಟ್ಟು $120^0$–$180^0$ ಸೆಂ. ವರೆಗೆ ಕಾಯಿಸಿ ವೃತ್ತಪತ್ರಿಕೆಯ ಕಾಗದ ಅಥವಾ ಒಂದು ಬ್ಲಾಂಕೆಟನ್ನು ಅದರ ಮೇಲಿರಿಸಿ ಒತ್ತಡವನ್ನು ಕೊಡಬೇಕು. ಈ ಸಂಯೋಜನೆಯನ್ನು ಅನಂತರ ನೀರಿನಿಂದ ತಣ್ಣಗಾಗಿಸಿದ ನೀರೊತ್ತಡದ ಸಾಧನಕ್ಕೆ ವರ್ಗಾಯಿಸಿ ಅದನ್ನು ಒತ್ತಡದಲ್ಲಿ ಶೈತ್ಯಗೊಳಿಸಬೇಕು. ಉಷ್ಣಲೆಪ್ಪದ ಎರಕಗಳ ಸಾಮಗ್ರಿಗಳಿಂದ ಲಭಿಸುವ ಒಂದು ದೊಡ್ಡ ಅನುಕೂಲವೆಂದರೆ ಇದು ಉತ್ತಮಗುಣದ ಮುದ್ರಣವನ್ನು ಕೊಡುವುದು; ಮತ್ತು ಇದನ್ನು ಪುನಃ ಎರಕ ಮಾಡಲು ಉಪಯೋಗಿಸಬಹುದು.

2. ಟೆನಪ್ರೇಟ್: ಉತ್ತಮ ಬಗೆಯ ರಬ್ಬರಿನ ಒಂದು ಅಂಟು ಪದಾರ್ಥದಿಂದ ಇದನ್ನು ಮಾಡಿದೆ. ಇದಕ್ಕೆ ಬಲು ತೆಳ್ಳನೆಯ 0.012700 ಸೆಂಮೀ.ಅಲ್ಯೂಮಿನಿಯಮ್ ಹಾಳೆಯ ಆಧಾರವನ್ನು ಹಿಂಬದಿಯಲ್ಲಿ ಕೊಟ್ಟಿದೆ. ಇದನ್ನು ಕೊಠಡಿಯ ಉಷ್ಣತೆಯಲ್ಲಿ ಅಚ್ಚಿನ ಹಲಗೆಯ ಮೇಲಿರಿಸಿ ಒಂದು ತೆಳುವಾದ ರಬ್ಬರ್ ಹಾಳೆಯ ಅಥವಾ ವೃತ್ತಪತ್ರಿಕೆಯ ಕಾಗದದ ಅಡಿಯಲ್ಲಿ ಹೈಡ್ರಾಲಿಕ್ ಪ್ರೆಸ್ಸಿನಲ್ಲಿ ಒತ್ತುವ ಮೂಲಕ ಬೇಕಾದ ಎರಕದ ಅಚ್ಚು ದೊರೆಯುವುದು.

3. ಸೀಸದ ಫಲಕ: ಅಚ್ಚಿನ ಹಲಗೆಯ ಮೇಲೆ 0.010116ಸೆಂಮೀ. ದಪ್ಪದ ಸೀಸದ ಫಲಕವನ್ನಿಟ್ಟು ಅದರ ಮೇಲೆ ಚದರ ಅಂಗುಲಕ್ಕೆ 3–5 ಟನ್ನುಗಳಷ್ಟು ಒತ್ತಡ ಉಂಟಾಗುವಂತೆ ಒತ್ತಬೇಕು. ಆಗ ಅದು ಸೀಸದ ಫಲಕದ ಒಂದು ಅಚ್ಚಾಗಿ ಪರಿಣಮಿಸುತ್ತದೆ. ಅದನ್ನು ಈಗ ನೇರವಾಗಿ ವಿದ್ಯುಲ್ಲೇಪಿತ ತೊಟ್ಟಿಗೆ ವರ್ಗಾಯಿಸ ಬಹುದು. ಮಿಕ್ಕೆರಡು ಸಂದರ್ಭಗಳಲ್ಲಿ ಎರಕದ ಅಚ್ಚಿನ ಮೇಲ್ಮೈ ವಿದ್ಯುದ್ವಾಹಕವಲ್ಲವಾದ ಕಾರಣ ಕೆಲವು ಸಿದ್ಧತೆಗಳಾಗಬೇಕು. ಸೀಸದ ಅಥವಾ ಇತರ ವಿದ್ಯುದ್ವಾಹಕ ಪಟ್ಟಿಗಳನ್ನು ಬಂಧಿಸಬೇಕು. ಅನಂತರ ಆ ಎರಕದ ಅಚ್ಚನ್ನು ಒಂದು ಶುದ್ಧಿಕಾರಕ ವಸ್ತುವಿನಿಂದ ಉಜ್ಜಿ ನೀರನಲ್ಲಿ ಜಾಲಾಡಿ ತೊಳೆಯಬೇಕು. ತರುವಾಯ ಸ್ಟ್ಯಾನಸ್ ಕ್ಲೋರೈಡ್ ದ್ರಾವಣದಲ್ಲಿ ಮುಳುಗಿಸಿ ಸೂಕ್ಷ್ಮಗೊಳಿಸಿ ಮತ್ತೆ ನೀರಿನಲ್ಲಿ ಜಾಲಾಡಿ ತೊಳೆದು ಅದರ ಮೇಲ್ಮೈಯ ಮೇಲೆ ಅಮೋನಿಯೇಟೆಡ್ ಸಿಲ್ವರ್ ನೈಟ್ರೇಟ್‌ದ್ರಾವಣವನ್ನು ಮತ್ತು ಒಂದು ಅಪಕರ್ಷಣಕಾರಿ ದ್ರಾವಣವನ್ನು (ಹೈಡ್ರೊಜನ್) ಎರಡು ಹೊಳ್ಳೆಗಳುಳ್ಳ ಸೀರ್ಪನಿ ಯಂತ್ರದ (ಸ್ಪ್ರೇಗನ್) ಸಹಾಯದಿಂದ ಸಿಂಪಡಿಸಬೇಕು. ಆಗ ಒಂದು ರಾಸಾಯನಿಕ ಲೇಪವಾಗಿ ಬೆಳ್ಳಿಯ ತೆಳುಪೊರೆ ಉಂಟಾಗುವುದು. ಅನಂತರದಲ್ಲಿ ಇದನ್ನು ವಿದ್ಯುಲ್ಲೇಪನ ಮಾಡುವ ತೊಟ್ಟಿಗೆ ವರ್ಗಾಯಿಸಬಹುದು.



ಚಿತ್ರ 1 ವಿದ್ಯುಲ್ಲೇಪನ ತೊಟ್ಟಿ–ವಾಯುಸಂಮರ್ದಕ ವ್ಯವಸ್ಥೆಯೊಂದಿಗೆ

ವಿದ್ಯುಲ್ಲೇಪನ (ಎಲೆಕ್ಟ್ರೊ ಡಿಪಾಸಿಷನ್) : ಈ ಕಾರ್ಯವಿಧಾನದಲ್ಲಿ ಒಂದು ನಿಕ್ಕಲ್ ತೊಟ್ಟಿ, ಒಂದು ತಾಮ್ರದ ತೊಟ್ಟಿ, ಒಂದು ವಿದ್ಯುತ್ ಪರಿವರ್ತಕ ಅಥವಾ ಸಮಕಾರಕ ಮತ್ತು ಒಂದು ವಾಯುಸಂಮರ್ದಕ–ಇವಿಷ್ಟು ಸಲಕರಣೆಗಳು ಬೇಕಾಗುತ್ತವೆ.

ವಿದ್ಯುಲ್ಲೇಪನಕ್ಕಾಗಿ ಎರಕದ ಅಚ್ಚನ್ನು ತೊಟ್ಟಿಯ ಋಣವಿದ್ಯುತ್ ಧ್ರುವಕ್ಕೆ (ಕ್ಯಾಥೋಡ್) ಬಂಧಿಸಬೇಕು. 0.0025400 ಸೆಂಮೀ.– 0.0038100 ಸೆಂಮೀ.ನಷ್ಟು ದಪ್ಪನಾದ ತಾಮ್ರದ ಲೇಪವನ್ನು ಪಡೆಯಲು 1½–3 ಗಂಟೆಗಳ ವರೆಗೆ ಕಾಲಾವಕಾಶ ಬೇಕು. ನಿಕ್ಕಲಿನ ನೇರ ಕಾರ್ಯವಿಧಾನದಲ್ಲಿ ಮೊದಲು ನಿಕ್ಕಲ್ ಸಲ್ಫೇಟ್ ದ್ರಾವಣದ ತೊಟ್ಟಿಯಲ್ಲಿ ಎರಕದ ಅಚ್ಚನ್ನಿರಿಸಿ 0.0050800 ಸೆಂಮೀ.ನಷ್ಟು ದಪ್ಪನಾದ ನಿಕ್ಕಲ್ ಲೇಪವನ್ನು ಪಡೆಯಬೇಕು. ಅನಂತರದಲ್ಲಿ ತಾಮ್ರದ ವಿದ್ಯುಲ್ಲೇಪನಕ್ಕಾಗಿ ಕಾಪರ್ ಸಲ್ಫೇಟ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ದ್ರಾವಣದ ತೊಟ್ಟಿಯಲ್ಲಿರಿಸಬೇಕು. ವಿದ್ಯುಲ್ಲೇಪನ ಕಾರ್ಯವನ್ನು ಶೀಘ್ರಗೊಳಿಸಲು ದ್ರಾವಣವನ್ನು ಕಾಯಿಸಬೇಕು ಮತ್ತು ಸಂಮರ್ದಿತ ಗಾಳಿಯ ಸಹಾಯದಿಂದ ದ್ರಾವಣವನ್ನು ಸ್ವಲ್ಪಮಟ್ಟಿಗೆ ಕಲಕಬೇಕು. ಲೇಪನದಲ್ಲಿ ಎಷ್ಟು ಕಡಿಮೆ ವೋಲ್ಟೇಜನ್ನು ಉಪಯೋಗಿಸಿದರೆ ಅಷ್ಟು ಹಸನಾದ ತಾಮ್ರದ ಲೇಪ ದೊರೆಯುವುದು. ಸಾಮಾನ್ಯವಾಗಿ ಮೊದಲಲ್ಲಿ ಸೂಕ್ಷ್ಮವಾದ ಮತ್ತು ತೆಳುವಾದ ತಾಮ್ರದ ಲೇಪವನ್ನು ಕೊಟ್ಟು ಅನಂತರದಲ್ಲಿ ಅದರ ಮೇಲೆ ದಪ್ಪನಾದ ಲೇಪವನ್ನು ಕೊಡುವುದು ವಾಡಿಕೆ. ಈ ರೀತಿಯಲ್ಲಿ ಹೊಸದಾಗಿ ಲೇಪಿತವಾದ ತಾಮ್ರದ ಮೇಲ್ಮೈಯ ಉತ್ಕರ್ಷಣೆಯನ್ನು ತಡೆಯುವುದಕ್ಕಾಗಿ ಅದರ ಮೇಲೆ ವಿದ್ಯುತ್ತಿನ ಸಹಾಯದಿಂದ ಅತ್ಯಂತ ತೆಳುವಾದ ತವರದ ಲೇಪನ ಮಾಡಬೇಕು; ಅಥವಾ ಉಷ್ಣದ ಸಹಾಯದಿಂದ ತವರದ ತೆಳುವಾದ ರೇಖೆಯನ್ನು ಬೆಸುಗೆ ಮಾಡಬೇಕು. ಇದು ತಾಮ್ರದ ತೆಳು ಪೊರೆ ಮತ್ತು ಅದರ ಹೊರಮೈ ನಿರ್ಮಿಸುವ ಲೋಹಗಳ ಮಧ್ಯೆ ಒಳ್ಳೆ ಬಂಧಕವಾಗಿಯೂ ಪರಿಣಮಿಸುತ್ತದೆ. ಅನಂತರದಲ್ಲಿ ತಾಮ್ರದ ತೆಳು ಪೊರೆಯನ್ನು ಎರಕದ ಅಚ್ಚಿನಿಂದ ಬೇರ್ಪಡಿಸಿ ಸೀಸದ ಮಿಶ್ರಲೋಹವನ್ನು ಅದರ ಹೊರಮೈಗೆ ಹೊದಿಸಿ ಲೋಹದ ಹೊರಮೈಯುಳ್ಳ ವಿದ್ಯುತ್



ಚಿತ್ರ 2 ಹೈಡ್ರಾಲಿಕ್ ಪ್ರೆಸ್ ಮತ್ತು ಮುದ್ರಣ ಫಲಕವನ್ನು ಕಾಯಿಸುವ ಸಲಕರಣೆ

ಅಚ್ಚು ಫಲಕವನ್ನು ಪಡೆಯಲಾಗುವುದು. ಈ ರೀತಿಯಲ್ಲಿ ಹೊದಿಸಿದ ಸೀಸದ ಹೊರಮೈ ತಾಮ್ರದ ಅಚ್ಚಿನ ವರೆಗೆ ಸದೃಢವಾದ ರಕ್ಷಣೆಯನ್ನು ಕೊಡುವುದಲ್ಲದೆ ಅದನ್ನು ತಟ್ಟಲು ಮತ್ತು ಪರಿಭ್ರಮಣ ರೀತ್ಯಬಾಗಿಸಲು ಅನುಕೂಲವಾಗುವಂತೆ ಮೃದುವಾಗಿಯೂ ಇರುತ್ತದೆ. ಸೀಸದ ಹೊರಮೈಹೊದಿಸಲು 1. ಓಪನ್ ಪ್ಯಾನ್, 2. ಪ್ರೆಶ್ಶರ್ ಕ್ಯಾಸ್ಟರ್, 3. ಕ್ಯಾಸ್ಟಿಂಗ್‌ಬಾಕ್ಸ್, 4. ಸೆಂಟ್ರಿಫ್ಯೂಗಲ್ ಕ್ಯಾಸ್ಟಿಂಗ್ (ರೋಟರಿ ಪ್ಲೇಟುಗಳಿಗಾಗಿ) –ಇವೇ ಮುಂತಾದ ಕಾರ್ಯವಿಧಾನಗಳು ಬಳಕೆಯಲ್ಲಿವೆ.

ಲೋಹವನ್ನು ಹೊದಿಸಿದ ಎಲೆಕ್ಟ್ರೋಟೈಪುಗಳ ಮುದ್ರಣದ ಔನ್ನತ್ಯದಲ್ಲಿ (ಪ್ರಿಂಟಿಂಗ್ ಹೈಟ್) ವ್ಯತ್ಯಾಸಗಳಿರುವ ಸಂಭವವಿದೆಯಾದ್ದರಿಂದ ಅವನ್ನು ಸೂಕ್ತವಾಗಿ ತಟ್ಟಿ ಪರಿಷ್ಕರಿಸುವುದು ಆವಶ್ಯಕ. ಅಂಥ ವ್ಯತ್ಯಾಸಗಳನ್ನು–1. ಕೈಯಿಂದ ಅಥವಾ ಪ್ರೀಸ್ಲ್ಯಾಬಿಂಗ್ ಸಲಕರಣೆಗಳಿಂದ ಸಮಮಟ್ಟ ಮಾಡುವುದು, 2. ಒಪ್ಪ ಮಾಡಿದಾಗಿನ ಮಂದಕ್ಕಿಂತ 0.03" ಹೆಚ್ಚಾಗಿರುವಂತೆ ಪ್ರಥಮತಃ ಹಿಂಭಾಗವನ್ನು ಸಮಮಟ್ಟ ಮಾಡುವುದು, 3. ತಗ್ಗಾದ ಭಾಗಗಳನ್ನು ಪತ್ತೆಮಾಡಿ ಫಲಕದ ಹಿಂಬದಿಯಲ್ಲಿ ಗುರುತು ಮಾಡುವುದು, 4. ಅಂಥ ತಗ್ಗಾದ ಜಾಗಗಳನ್ನು ವಿಶೇಷ ತೆರದ ಬಡಿಗೆಯಿಂದ ಹಿಂಭಾಗದಿಂದ ತಟ್ಟಿ ಉನ್ನತಗೊಳಿಸುವುದು, 5. ಅಂತಿಮವಾಗಿ ಸರಿಯಾದ ವೃಂದಕ್ಕೆ ಸಮ ಮಟ್ಟಗೊಳಿಸಿ ಮೃದುವಾಗಿ ತಟ್ಟಿ ಒಪ್ಪ ಮಾಡುವುದು—ಇವೇ ಮುಂತಾದ ಕಾರ್ಯ ವಿಧಾನಗಳಿಂದ ಸರಿಪಡಿಸಲಾಗುವುದು.

ತಾಮ್ರದ ಪೊರೆಯ ಹಿಂಬದಿಯಲ್ಲಿ ಗೊತ್ತಾದ ಗಾತ್ರಕ್ಕೆ ಸೀಸದ ಮಿಶ್ರಲೋಹವನ್ನು ಹೊದಿಸಲು ವಿದ್ಯುಲ್ಲೇಪನ ಮಾಡುವುದೂ ರೂಢಿಯಲ್ಲಿದೆ. ಈ ಸಂದರ್ಭದಲ್ಲಿ ಫಲಕವನ್ನು ತಟ್ಟಿ ಸಮಮಟ್ಟಕ್ಕೆ ತರುವ ಆವಶ್ಯಕತೆ ಇಲ್ಲ. ಇಂಥ ಫಲಕದ ಹೆಸರು ಬ್ಲಾಕ್‌ಮೋರ್ ಫಲಕ.

ಕೆಲವು ವೇಳೆ ತಾಮ್ರದ ಚಿಪ್ಪಿನ ಹಿಂಬದಿಯಲ್ಲಿ ಒಂದು ಲೆಪ್ಪದ ಸಾಮಗ್ರಿಯನ್ನು ಹೊದಿಸಲಾಗುವುದು. ಲೆಪ್ಪ ಹೊದಿಸಿದ (ಪ್ಲಾಸ್ಟಿಕ್ ಬ್ಯಾಕ್ಡ್) ಎಲೆಕ್ಟ್ರೊಟೈಪುಗಳೆಂದು ಇವುಗಳ ಹೆಸರು. ಅಂಥ ಒಂದು ಉತ್ಪನ್ನವನ್ನು ಕಾಲೇಜ್ ಎಲೆಕ್ಟ್ರೊಟೈಪು ಎಂದು ಕರೆಯುತ್ತಾರೆ. ಈ ವಿಧಾನದಲ್ಲೂ ಮಾಮೂಲು ವಿಧಾನವನ್ನನುಸರಿಸಿ ತಯಾರಿಸಿದ



ಚಿತ್ರ 3 ವಿದ್ಯುಲ್ಲೇಪನಕ್ಕೆ ತಯಾರಿಸಿರುವ ಪ್ಲಾಸ್ಟಿಕ್ ಮೌಲ್ಡ್
1. ಬೇಕಲೈಟ್ ಹಾಳೆ; 2. ತಾಮ್ರದ ಕಂಬಿ; 3. ಹಿತ್ತಾಳೆಯ ಚಿಮಟ;
4. ಬೆಳ್ಳಿಯ ಪೊರೆ ಇಲ್ಲದ ಭಾಗ; 5. ಬೆಳ್ಳಿಯ ಪೊರೆ ಇರುವ ಭಾಗ; 6. ರಬ್ಬರ್ ಪಟ್ಟಿ

ತಾಮ್ರದ ಪೊರೆಯನ್ನೇ ಉಪಯೋಗಿಸುತ್ತಾರೆ. ಅದರ ಹಿಂಬದಿಯಲ್ಲಿ ಬಲವಾಗಿ ಅಂಟುವಂತೆ ಮಾಡುವುದಕ್ಕಾಗಿ– 1. ಒಂದು ಒರಟಾದ ತಾಮ್ರದ ವಿದ್ಯುಲ್ಲೇಪನ ಅಥವಾ 2. ಉತ್ಕರ್ಷಣ ಅಥವಾ 3. ತವರದ ವಿದ್ಯುಲ್ಲೇಪನ–ಮಾಡಲಾಗುವುದು. ಎರಕದ ಅಚ್ಚಿಗೆ ಇನ್ನೂ ಅಂಟಿರುವ ತಾಮ್ರದ ಪೊರೆಯನ್ನು ಒಣಗಿಸಿ ಒಂದು ನಿರ್ವಾತ ಪೀಠದ (ವ್ಯಾಕ್ಯೂಮೇಟೆಡ್) ಮೇಲೆ ವೃತ್ತ ಪತ್ರಿಕೆಯ ಕಾಗದದ ಒಂದು ಹಾಳೆಗೆ ಅಂಟಿಸಿಡಬೇಕು (ಟೇಪ್ಡ್). ಕಲೆಸಿದಾಗ ವೇಗವಾಗಿ ಗಡಸಾಗುವ ಗುಣವುಳ್ಳ ಎರಡು ರಾಳಗಳನ್ನು ಒಂದು ಗೊತ್ತಾದ ಪ್ರಮಾಣದಲ್ಲಿ ಮಿಶ್ರಣಮಾಡಿ ತಾಮ್ರದ ಫಲಕದ ಹಿಂಬದಿಯಲ್ಲಿ ಸವರಿ ಅಂಚುಗಳಲ್ಲಿರಿಸಿರುವ ಅಳತೆ ಕಡ್ಡಿಗಳ ಮಟ್ಟಕ್ಕೆ ಸರಿಯಾಗಿ ಸಮ ಮಟ್ಟಗೊಳಿಸಬೇಕು. ಅನಂತರದಲ್ಲಿ ನಿರ್ವಾತತೆಯನ್ನು ಸಡಿಲಿಸಿ ಫಲಕವನ್ನು ಪೀಠದಿಂದಿಳಿಸಿ ಒಣಗುವುದಕ್ಕೆ ಇಡಬೇಕು. ಮಿತವಾದ ಉಷ್ಣತೆಯಲ್ಲಿ ಇದು ಒಣಗಲು 1–2 ಗಂಟೆಗಳ ಕಾಲ ಬೇಕಾಗುವುದು, ಅನಂತರ ತಳದಲ್ಲಿರುವ ವೃತ್ತ ಪತ್ರಿಕೆಯ ಕಾಗದದ ಸಮೇತ ಒಂದು ಘಟ್ಟಿಸುವ (ಮಿಲ್ಲಿಂಗ್) ಯಂತ್ರದ ನಿರ್ವಾತ ಪೀಠಕ್ಕೆ ವರ್ಗಾಯಿಸಿ ಪ್ರಥಮವಾಗಿ ಒಂದು ತೆಳುವಾದ ಪದರವನ್ನು ಕತ್ತರಿಸಿ ತೆಗೆಯುವರು. ಇದಾದ ಅನಂತರ ಎರಕದ ಅಚ್ಚನ್ನು ಎಲೆಕ್ಟ್ರೊ ಫಲಕದಿಂದ ಬಾಗಿಸಿ ಬೇರ್ಪಡಿಸುವರು. ಆ ಮೇಲೆ ಸರಿಯಾದ ಗಾತ್ರಕ್ಕೆ ಮಿಲ್ಲಿಂಗ್ ಮಾಡುವರು.

ಈ ಮುದ್ರಣ ಯಂತ್ರದಲ್ಲಿ ಫಲಕವನ್ನು ಸಮತಲವಾದ ಅಚ್ಚಿನ ಪೀಠವುಳ್ಳ (ಫ್ಲಾಟ್ ಬೆಡ್) ಮುದ್ರಣ ಯಂತ್ರದಲ್ಲಿ ಸಮತಲ ರೂಪದಲ್ಲಿಯಾಗಲಿ ಅಥವಾ ಒಂದು ಕಂಸದ ಆಕಾರಕ್ಕೆ ಸುಲಭವಾಗಿ ಬಗ್ಗಿಸಿ ರೋಟರಿ ಯಂತ್ರದ ಉರುಳೆಯ ಫಲಕವನ್ನಾಗಿಯಾಗಲಿ ಉಪಯೋಗಿಸಬಹುದು. ಮತ್ತೊಂದು ವಿಧಾನವೆಂದರೆ, ಒಂದು ಅಲ್ಯೂಮಿನಿಯಮ್ ರೇಕಿನ ಹಾಗೂ ಎರಕದ ಅಚ್ಚಿನಿಂದ ಬೇರ್ಪಡಿಸಿದ ತಾಮ್ರದ ಪೊರೆಯ ಮಧ್ಯೆ ಉಷ್ಣಲೆಪ್ಪದ ಅಥವಾ ಉಷ್ಣದಿಂದ ಹದವಾಗುವ ರಾಳಗಳನ್ನು ಹರಡಿ ಉಷ್ಣವನ್ನೊಡ್ಡಿ ಒತ್ತಡದಿಂದ ಅವನ್ನು ಅಂಟಿಸುವುದರಿಂದ ಉಂಟಾಗುವ ವಿದ್ಯುದಚ್ಚಿನ ಫಲಕಗಳು. ಇವನ್ನು ಲ್ಯಾಮಿನೇಟೆಡ್ ಪ್ಲಾಸ್ಟಿಕ್ ಎಲೆಕ್ಟ್ರೊ ಟೈಪುಗಳೆಂದು ಕರೆಯುತ್ತಾರೆ. (ಡಿ.ಎನ್.)

**ಎಲೆಕ್ಟ್ರೋಫಾರಿಸಿಸ್:** ವಿದ್ಯುತ್ಪ್ರವಾಹವನ್ನು ತರಲದಲ್ಲಿ (ಫ್ಲೂಯಿಡ್) ಹರಿಸುವುದರ ಮೂಲಕ ಅದರಲ್ಲಿರುವ ಕಲಿಲ ಕಣಗಳ (ಕಲಾಯಿಡಲ್ ಪಾರ್ಟಿಕಲ್ಸ್) ಸಾಗಣೆ (ವಿದ್ಯುತ್‌ಕ್ಷೇತ್ರ ಚಲನೆ). ಇದೊಂದು ವಿದ್ಯುದ್ರಾಸಾಯನಿಕ ಕ್ರಿಯೆ. ಆವೆ ಮಣ್ಣು (ಕೊಚ್ಚೆಮಣ್ಣು–ಕ್ಲೇ) ನೀರಲ್ಲಿ ಹರಡಿ ನಿಂತಿರುವಾಗ ಅದರಲ್ಲಿ ವಿದ್ಯುತ್ತನ್ನು ಹರಿಸಿದರೆ ಮಣ್ಣಿನ ಕಣಗಳು ಧನಧ್ರುವಕ್ಕೆ (ಪಾಸಿಟಿವ್ ಎಲೆಕ್ಟ್ರೋಡ್) ಸಾಗುವುದನ್ನು ರೂಯಸ್ ಕಂಡುಹಿಡಿದ (1807). ಈ ಕ್ರಿಯೆಯನ್ನು ಎಲೆಕ್ಟ್ರೋಫಾರಿಸಿಸ್ ಎಂದು ಕರೆಯಲಾಯಿತು. ಋಣ ವಿದ್ಯುದಂಶವಿರುವ ಕಣಗಳು ಧನಧ್ರುವದೆಡೆಗೂ ಧನ ವಿದ್ಯುದಂಶವಿರುವ ಕಣಗಳು ಋಣ ಧ್ರುವದೆಡೆಗೂ ಚಲಿಸುವುದನ್ನು ಹಲವು ದಶಕಗಳ ತರುವಾಯ ಕಂಡುಹಿಡಿಯ ಲಾಯಿತು. ಈ ಕ್ರಿಯೆಗಳನ್ನು ಕ್ರಮವಾಗಿ ಅನಾಫಾರಿಸಿಸ್ ಮತ್ತು ಕ್ಯಾಟಾಫಾರಿಸಿಸ್ ಎಂದು ಕರೆದರು. ಚಲನೆಯ ವೇಗ ಕಣಗಳ ಆಕಾರ ಮತ್ತು ಅಳತೆಯನ್ನು ಅವಲಂಬಿಸಿ ರುವುದು ಮಾತ್ರವಲ್ಲದೆ ಅವುಗಳ ಮೇಲಿರುವ ವಿದ್ಯುದಂಶದ (ಎಲೆಕ್ಟ್ರಿಕ್ ಚಾರ್ಜ್) ಪ್ರಮಾಣವನ್ನು ಕೂಡ ಅವಲಂಬಿಸಿದೆ. ಈ ವಿಚಾರ ತಿಳಿದ ಮೇಲೆ ಒಂದು ಮಿಶ್ರಣದಲ್ಲಿ ರುವ ಬೇರ ಬೇರೆ ವಸ್ತುಗಳನ್ನು ಬೇರ್ಪಡಿಸಲು ಸಾಧ್ಯವೆಂದು ಕಂಡುಹಿಡಿಯಲಾಯಿತು. ಕಣಗಳ ಮೇಲಿರುವ ವಿದ್ಯುದಂಶ ಅವುಗಳ ಸ್ವಾಭಾವಿಕ ಗುಣದಿಂದ ಬರಬಹುದು; ಅಥವಾ ನೀರಲ್ಲಿರುವ ಅಯಾನುಗಳು ಕಣಗಳ ಮೇಲೆ ಸೇರುವುದರಿಂದಲೂ ಬರಬಹುದು.

ನೀರಲ್ಲಿ ಹರಡಿರುವ ಕಣಗಳು ಧ್ರುವಗಳೆಡೆಗೆ ಸಾಗುವ ವೇಗವನ್ನು ಕಂಡು ಹಿಡಿಯಲು ಮೂರು ವಿಧಾನಗಳಿವೆ. ಒಂದನೆಯದಾಗಿ, ಸೂಕ್ಷ್ಮ ದರ್ಶಕದ ಮುಖಾಂತರ ನೋಡುವ ಕ್ರಮ. ಇದರಿಂದ ರಕ್ತಕಣಗಳು, ಬ್ಯಾಕ್ಟೀರಿಯ ಮತ್ತು ಕೆಲವು ಪ್ರೋಟೀನ್ ಅಣುಗಳು ಇತರ ಪದಾರ್ಥಗಳ ಮೇಲೆ ಸೇರಿ ಚಲಿಸುವುದನ್ನು ನೋಡಬಹುದು. ಎರಡನೆಯದಾಗಿ, ಕಣಗಳ ರಾಶಿಗಳು ಚಲಿಸುವಾಗ ಅವುಗಳ ಮೇರೆಯನ್ನು ನೋಡಿ ತಿಳಿಯುವ ಕ್ರಮ. ಇದರಲ್ಲಿ ಚಲನೆಯಲ್ಲಿರುವ ಕಣಗಳನ್ನು ನೋಡುವ ಅಗತ್ಯ ಇಲ್ಲ. ನೊಬೆಲ್ ಬಹುಮಾನ ಪಡೆದ ಟಸೆಲಿಯಸ್ ಮತ್ತು ಆತನ ಸಹವರ್ತಿಗಳು ಈ ಕ್ರಮವನ್ನು ಪ್ರಯೋಗಿಸಿ ಹಲವು ವಿಧವಾದ ಇತರ ಸಂಶೋಧನೆಗಳನ್ನು ನಡೆಸಿರುವರು. ಮೂರನೆಯದಾಗಿ, ವಸ್ತುಗಳ ಕಣಗಳು ಮತ್ತು ಅಯಾನುಗಳು ಸ್ವಾಭಾವಿಕವಾಗಿ ಕಾಗದಗಳ ಮತ್ತು ಪಿಷ್ಟ ಪದಾರ್ಥಗಳ ಮೇಲೆ ಬೇರ್ಪಡಿಸಲ್ಪಡುವ ವಿಧಾನವನ್ನು ಉಪಯೋಗಿಸುವ ಕ್ರಮ. ಈ ಕ್ರಮದಲ್ಲಿ ವಿದ್ಯುತ್ಪ್ರವಾಹದ ಅಗತ್ಯ ಇಲ್ಲ.

ಮನುಷ್ಯನ ದೇಹದಲ್ಲಿರುವ ಪ್ರೋಟೀನುಗಳನ್ನು ಕಂಡುಹಿಡಿಯಲು ಎಲೆಕ್ಟ್ರೋಫಾರಿಸಿಸ್ ಬಹು ಪ್ರಮುಖ ವಿಧಾನ. ಹಲವು ರೋಗಗಳ ಕಾರಣಗಳನ್ನು ಈ ವಿಧಾನದಿಂದ ಕಂಡುಹಿಡಿಯಲು ಸಾಧ್ಯವಿದೆ.

ವಿದ್ಯುದಂಶಪೂರಿತ ವಸ್ತುಗಳ ಕಣಗಳನ್ನು ಧ್ರುವಗಳ ಮೇಲೆ ಲೇಪಿಸುವಂತೆ ಮಾಡಲೂ ಸಾಧ್ಯವಿದೆ. ವಿದ್ಯುತ್ಪ್ರವಾಹದಿಂದ ಲೋಹಗಳನ್ನು ಹೇಗೆ ಲೇಪಿಸಲು ಸಾಧ್ಯವೋ ಅದೇ ರೀತಿ ಕಣರೂಪದಲ್ಲಿ ನೀರಿನಲ್ಲಿ ಹರಡಿರುವ ಪದಾರ್ಥಗಳನ್ನು ಲೋಹಗಳ ಮೇಲೆ ಲೇಪಿಸಲು ಸಾಧ್ಯವಿದೆ. ಇದಕ್ಕೆ ಎಲೆಕ್ಟ್ರೋಫಾರೆಟಿಕ್ ಲೇಪನವೆಂದು (ಡಿಪಾಸಿಷನ್) ಹೆಸರು. ಬಲು ತೆಳ್ಳಗಾದ ಲೇಪನವನ್ನು ಈ ವಿಧಾನದಿಂದ ಪಡೆಯುವುದು ಮಾತ್ರವಲ್ಲದೆ ಬೇಕಾದಷ್ಟೇ ದಪ್ಪವನ್ನು ಪಡೆಯಲು ಸಾಧ್ಯವಿದೆ. ರಬ್ಬರ್ ಹಾಲಿನಿಂದ (ರಬ್ಬರ್ ಲೇಟೆಕ್ಸ್) ರಬ್ಬರನ್ನು ಬೇರ್ಪಡಿಸಲು ಸಾಧ್ಯವಿದೆಯೆಂದು ತಿಳಿದಿದ್ದರಿಂದ ರಬ್ಬರ್ ಕೈಚೀಲ ತಯಾರಿಸುವ ಕ್ರಮವನ್ನೂ ಕಂಡು ಹಿಡಿಯಲಾಯಿತು. ಇತ್ತೀಚಿನ ದಿನಗಳಲ್ಲಿ ಕಾರಿಗೆ ಬಣ್ಣ ಹಚ್ಚಲು ಎಲೆಕ್ಟ್ರೋಫಾರೆಟಿಕ್ ಕ್ರಮವನ್ನು ಉಪಯೋಗಿಸುತ್ತಾರೆ.

ಎಲೆಕ್ಟ್ರೋಫಾರಿಸಿಸ್ ವಿಧಾನದಿಂದ 1–20 ಮೈಕ್ರಾನ್ (ಒಂದು ಮಿಲಿ ಮೀಟರಿನ ಸಾವಿರದ ಒಂದನೆಯ ಅಂಶ) ಪ್ರಮಾಣದ ಕಣಗಳನ್ನು ನೀರಿನಿಂದ ಬೇರ್ಪಡಿಸಲು ಆಗುತ್ತದೆ. ಪದಾರ್ಥಗಳ ಕಣಗಳನ್ನು ತಯಾರಿಸಲು ಹಲವು ವಿಧಾನಗಳಿವೆ. ಸೋಸಣೆಯಿಂದ (ಸೀವಿಂಗ್) ಬಂದ ಪದಾರ್ಥಗಳನ್ನು ಗೋಲಿ ಗಿರಣಿಯಲ್ಲಿ (ಬಾಲ್ ಮಿಲ್) ಇನ್ನೂ ಅರೆಯುವುದರಿಂದ ಅವನ್ನು ದ್ರವಪದಾರ್ಥಗಳಲ್ಲಿ ಹರಡಬಹುದು. ನೀರು ಮಾತ್ರವಲ್ಲದೆ ಇತರ ದ್ರವಪದಾರ್ಥಗಳನ್ನೂ ಉಪಯೋಗಿಸಬಹುದು. ಅಸಿಟೋನ್, ಈಥೈಲ್ ಆಲ್ಕೊಹಾಲ್ ಇತ್ಯಾದಿ ದ್ರವಗಳನ್ನು ಉಪಯೋಗಿಸಿ ಅಯಾನುಗಳನ್ನು ಕೊಡುವ ಅಮೋನಿಯಮ್ ಹೈಡ್ರಾಕ್ಸೈಡ್, ಸಿಟ್ರಿಕ್ ಆಮ್ಲ ಇತ್ಯಾದಿಗಳನ್ನು ಸ್ವಲ್ಪಮಟ್ಟಿಗೆ ಸೇರಿಸುವುದರ ಮುಖಾಂತರ ಹರಡಿಕೆ ಯಶಸ್ವಿಯಾಗುತ್ತದೆ. ಇಂಥ ಹರಡಿಕೆಯಿಂದ ಮಾಡತಕ್ಕ ಲೇಪನಗಳು, ಬಹಳ ಗಟ್ಟಿಯಾಗಿ ಒಟ್ಟಿಕೊಂಡಿರುತ್ತವೆ. ಬೇರೆ ಬೇರೆ ಪದಾರ್ಥಗಳನ್ನು ಲೇಪನಮಾಡುವುದು ಮಾತ್ರವಲ್ಲದೆ ಲೋಹಗಳ ತುಣುಕಗಳನ್ನೂ ಕೂಡ ಲೇಪನಮಾಡಲು ಸಾಧ್ಯವಿದೆ. ಹರಡಿಕೊಂಡಿರುವ ಎರಡು ವಸ್ತುಗಳನ್ನು ದ್ರವದಿಂದ ಅದೇ ಪ್ರಮಾಣದಲ್ಲಿ ಲೇಪನಮಾಡಬಹುದು. ನೀರಿನಿಂದ ಪದಾರ್ಥಗಳನ್ನು ಲೇಪಿಸಲು ಸಾಮಾನ್ಯ 15 ವೋಲ್ಟ್‌ಗಳು ಬೇಕಾದರೆ ಇತರ ದ್ರವಗಳಿಂದ ಬೇರ್ಪಡಿಸಲು 100–2500 ವೋಲ್ಟ್‌ಗಳು ಬೇಕಾದೀತು. ಆಲ್ಯೂಮಿನಿಯಂ ಲೋಹದ ತುಣುಕುಗಳನ್ನು ಕಬ್ಬಿಣದ ಮೇಲೆ ಲೇಪಿಸಿ ಅನಂತರ ಬಿಸಿಮಾಡಿ ಅದು ಅಂಟುವವಂತೆ ಮಾಡುವ ಕ್ರಮವೂ ಇದೆ. (ಎಸ್.ವಿ.ಕೆ.ಯು.)

**ಎಲೆತೋಟ:** ವೀಳ್ಯದೆಲೆಯ ಬಳ್ಳಿಗಳನ್ನು ಹೆಚ್ಚಾಗಿ ಹಾಗೂ ಪ್ರತ್ಯೇಕವಾಗಿ ಬೆಳೆಸುವ ಪ್ರದೇಶವನ್ನು ಎಲೆತೋಟವೆನ್ನುತ್ತಾರೆ. ಮೆಣಸಿನಂತೆ ವೀಳ್ಯದೆಲೆಯ ಬಳ್ಳಿಯನ್ನೂ ಅಧಿಕ ಪ್ರಮಾಣದಲ್ಲಿ ತೋಟಗಳಲ್ಲಿ ಬೆಳೆಸುತ್ತಾರೆ. ಇದರ ವ್ಯವಸಾಯ ಮತ್ತು ಉಪಯೋಗ ಏಷ್ಯದಲ್ಲಿ ಪ್ರಾಚೀನಕಾಲದಿಂದಲೂ ಇದೆ. ಇದರ ಮೂಲಸ್ಥಾನ ಮಲೇಸಿಯ ಎಂದು ಹೇಳಲಾಗಿದೆ. ಭಾರತ, ಶ್ರೀಲಂಕಾ, ಮಲೇಷ್ಯಗಳಲ್ಲಿಯೂ ತಾಂಬೂಲ ಚರ್ವಣ ಬಹು ಹಳೆಯ ಸಂಪ್ರದಾಯ. ಇಲ್ಲಿನ ಸಾಮಾಜಿಕ ಹಾಗೂ ಧಾರ್ಮಿಕ ಅಚಾರಗಳಲ್ಲೂ ತಾಂಬೂಲಕ್ಕೆ ಅಗ್ರಸ್ಥಾನವಿರುವುದು ಕಂಡುಬಂದಿದೆ **(ನೋಡಿ– ತಾಂಬೂಲ)**.

ಬಿಳಿ ಎಲೆಗೆ ಪ್ರಸಿದ್ಧವೆನಿಸಿರುವ ಮೈಸೂರಿನ ಒಂದು ಎಲೆತೋಟ

ವೀಳ್ಯದೆಲೆಯನ್ನು ಭಾರತ ದೇಶದ ಎಲ್ಲ ಪ್ರಾಂತ್ಯಗಳಲ್ಲೂ ಕರ್ನಾಟಕ ರಾಜ್ಯದ ಮೈದಾನ ಪ್ರದೇಶಗಳಲ್ಲಿ ವಿಶೇಷವಾಗಿಯೂ ಬೆಳೆಸುತ್ತಾರೆ. ಬೆಂಗಳೂರು, ಚಿತ್ರದುರ್ಗ ಮೈಸೂರು, ಮಂಡ್ಯ, ಹಾಸನ, ಧಾರವಾಡ ಮುಂತಾದ ಜಿಲ್ಲೆಗಳ ಎಲೆ ಹೆಸರು ಪಡೆದಿದೆ. ಇತರ ಜಿಲ್ಲೆಗಳಲ್ಲಿ ಇದರ ವ್ಯವಸಾಯ ಗಣನೀಯ ಪ್ರಮಾಣದಲ್ಲಿಲ್ಲ.

ನೆಲದಲ್ಲಿ ತೇವಾಂಶವಿದ್ದು ಹವೆ ಶುಷ್ಕವಾಗಿರುವಲ್ಲಿ ಎಲೆ ಸೊಗಸಾಗಿ ಬೆಳೆಯುತ್ತದೆ. 45–90 ಸೆಂಮೀ ಅಂಗುಲದಿಂದ ಮೂವತ್ತು ಅಂಗುಲ ಮಳೆ ಬೀಳುವ ಪ್ರದೇಶಗಳು ಎಲೆಯ ಬೇಸಾಯಕ್ಕೆ ಉತ್ತಮ. ಸಾಮಾನ್ಯವಾಗಿ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿ ಅನುಕೂಲ ಇರಬೇಕು. ಇದು ಒಣಹವೆಯಲ್ಲಿ ಚೆನ್ನಾಗಿ ಬೆಳೆಯುತ್ತದಾದರೂ ಭೂಮಿಯಲ್ಲಿ ತೇವಾಂಶ ಚೆನ್ನಾಗಿರಬೇಕು. ಸೂರ್ಯನ ತಾಪವನ್ನು ಇದು ತಡೆಯುವುದಿಲ್ಲ. ಆದ್ದರಿಂದ ನೆರಳು ಅತ್ಯಾವಶ್ಯಕ. ಇದು ಬಳ್ಳಿಯಾಗಿರುವುದರಿಂದ ಹಬ್ಬುವುದಕ್ಕೆಂದು

ನೆಟ್ಟ ಮರಗಳು ನೆರಳನ್ನು ಒದಗಿಸುತ್ತವೆ. $15^0$–$25^0$ ಸೆಂ. ಉಷ್ಣತೆ ಇದಕ್ಕೆ ಸರಿಯಾದುದು. ಅಲ್ಲದೆ ಎಲೆ ವ್ಯವಸಾಯ ಬಹು ನಾಜೂಕಿನ ಕೆಲಸ. ನೆಲ, ನೀರು, ಬಿಸಿಲು, ಗೊಬ್ಬರ, ಕಟಾವು–ಇತ್ಯಾದಿಯಾಗಿ ಎಲ್ಲ ಅಂಶಗಳಲ್ಲೂ ಬಹು ಎಚ್ಚರಿಕೆಯಿಂದಿರಬೇಕಾಗುತ್ತದೆ.

ಎಲೆಹಂಬು ಆಸರೆಗಿಡಕ್ಕೆ ಹಂಬು ಹಬ್ಬಿದಂತೆಲ್ಲ ನಾರಿನಿಂದ ಅದನ್ನು ಗಿಡಕ್ಕೆ ಕಟ್ಟಿ ಎಬ್ಬಿಸುತ್ತಾರೆ

ಆಳವಾದ ಜೌಗಿಲ್ಲದ ಕಪ್ಪು ಮಣ್ಣು ಎಲೆಯ ತೋಟಮಾಡಲು ಉತ್ಕೃಷ್ಟವಾದ್ದು. ದೀರ್ಘ ಕಾಲದ ಬೆಳೆಯಾದ್ದರಿಂದ ಹೆಚ್ಚು ಫಲವತ್ತಾದ ಮಣ್ಣುಬೇಕು. ಸಸ್ಯಗಳಿಂದ ಕೊಳೆತು ಹೆಚ್ಚು ಫಲವತ್ತಾಗಿರುವ ಕೆಂಪು ಗೋಡು ಭೂಮಿ ಚೆನ್ನಾಗಿ ಫಸಲನ್ನು ಕೊಡುತ್ತದೆ. 6–7ರವರೆಗೆ ಪಿ.ಎಚ್.ಉಳ್ಳ ಮಣ್ಣು ಸರಿಹೊಂದುತ್ತದೆ. ಮಣ್ಣಿಗೆ ತೇವಾಂಶವನ್ನು ಚೆನ್ನಾಗಿ ತಡೆದು ಇಟ್ಟುಕೊಳ್ಳುವ ಶಕ್ತಿ ಇರಬೇಕು. ನೀರು ಹೆಚ್ಚು ಬೇಕಿದ್ದರೂ ಬುಡದಲ್ಲಿ ನಿಲ್ಲಬಾರದು, ಬಿದ್ದ ನೀರು ಬಸಿದು ಹೋಗಲು ಅನುಕೂಲವಾಗುವಂತೆ ಇಂಗು ಕಾಲುವೆಗಳನ್ನು ತೆಗೆಯಬೇಕು.

ಬಳ್ಳಿಯನ್ನು ಹಂಬುಗಳಿಂದ ವೃದ್ಧಿ ಮಾಡುತ್ತಾರೆ. ಸಾಮಾನ್ಯವಾಗಿ ಮುಂಗಾರು ಮಳೆಯ ಮಧ್ಯದಲ್ಲಿ ಹಂಬು ನೆಡುವುದು ವಾಡಿಕೆ. ಸು. 1ವರ್ಷ ವಯಸ್ಸಾಗಿದ್ದು ಚೆನ್ನಾಗಿ ಬಲಿತಿರುವ ಹಂಬುಗಳನ್ನು ಸು. 1ಮೀ ಉದ್ದ ಗೆಣ್ಣುಗಳು ಬರುವಂತೆ ಕತ್ತರಿಸಿಕೊಂಡು ನೆಡಬೇಕು.

ವೀಳ್ಯದೆಲೆಯ ಹಂಬುಗಳಲ್ಲಿರುವ ಜಾತಿಗಳನ್ನು ಇದುವರೆಗೆ ವೈಜ್ಞಾನಿಕ ರೀತಿಯಿಂದ ವಿಂಗಡಿಸಿಲ್ಲ. ಎಲೆಯ ರುಚಿ, ವಾಸನೆ, ಕಟುತ್ವ, ಗಾತ್ರ ಇವುಗಳ ಮೇಲೆ ಕರಿಎಲೆ, ನಾಗವಲ್ಲಿ ಎಲೆ, ಅಂಬಾಡಿ ಎಲೆ, ಮದ್ರಾಸು ಎಲೆ, ಕಣಿಗೆ ಎಲೆ–ಎಂದು ಸ್ಥೂಲವಾಗಿ ವಿಂಗಡಿಸಲಾಗಿದೆ.

ಕರಿಎಲೆ ಜಾತಿ ಮೈಸೂರು ದೇಶದಲ್ಲಿ ಅದರಲ್ಲೂ ತರೀಕೆರೆ, ಶಿವಮೊಗ್ಗ, ಹಾಸನ, ಅಜ್ಜಂಪುರ ಮತ್ತು ಮಲೆನಾಡಿನ ಇತರ ಭಾಗಗಳಲ್ಲಿ ಹೆಚ್ಚಿನ ಬೇಸಾಯದಲ್ಲಿದೆ. ಇಳುವರಿ ಚೆನ್ನಾಗಿದೆ. ಇತರ ಜಾತಿಗಳಿಗಿಂತ ಕಪ್ಪಗಿರುವುದರಿಂದ ಇದಕ್ಕೆ ಈ ಹೆಸರು, ಈ ಜಾತಿಯ ತೊಟ್ಟು ಉದ್ದ. ಎಳೆಯದಾಗಿದ್ದಾಗ ಎಲೆ ಹೆಚ್ಚು ಕಾರವಾಗಿರುತ್ತದೆ. ಬಲಿತಾಗ ಬಹು ಒರಟು, ಇದನ್ನು ಹೆಚ್ಚು ದಿವಸ ಇಡಬಹುದು. ಬೇರೆ ಜಾತಿಯ ಎಲೆಗಳಿಗಿಂತ ಇದರ ಬೆಲೆ ಕಡಿಮೆ. ನಾಗವಲ್ಲಿ ಎಲೆಯನ್ನು ಏಲಕ್ಕಿ ಎಲೆ ಎಂದೂ ಕರೆಯುತ್ತಾರೆ. ಎಲೆ ಗಾತ್ರದಲ್ಲಿ ಚಿಕ್ಕದಾಗಿದ್ದು ನಾಗರಹಾವಿನ ಹೆಡೆಯನ್ನು ಹೋಲುತ್ತದೆ. ಈ ಎಲೆ ಕಾರವಾಗಿಲ್ಲ, ಸ್ವಲ್ಪ ಸಿಹಿಯಾಗಿದೆ. ಬಹು ಮೃದು, ಬಣ್ಣ ಬಿಳುಪಿನಿಂದ ಕೂಡಿದ ತಿಳಿ ಹಸುರು. ಮೈಸೂರಿನ ಸುತ್ತಮುತ್ತ ಈ ಜಾತಿಯನ್ನು ಹೆಚ್ಚಾಗಿ ಬೆಳೆಸುತ್ತಾರೆ. ಇಳುವರಿ ಕಡಿಮೆ. ಅದರೂ ಈ ಎಲೆಗೆ ಒಳ್ಳೆಯ ಬೆಲೆ ಇದೆ.

ಅಂಬಾಡಿ ಎಲೆಗೆ ಕರ್ಪೂರದ ವಾಸನೆ ಇದೆ. ಬಣ್ಣ ತೆಳುಹಸುರು, ಅಗಲ ಕಡಿಮೆ, ಉದ್ದ ಹೆಚ್ಚು, ಸ್ವಲ್ಪ ಒರಟು, ಹೆಚ್ಚು ದಿವಸ ಇಡಬಹುದು, ತಿಂದಾಗ ಬಾಯಲ್ಲಿ ಚರಟು ಉಳಿಯುತ್ತದೆ. ಮಲೆನಾಡು ಪ್ರದೇಶಗಳಲ್ಲಿ ಇದರ ಬೇಸಾಯ ಹೆಚ್ಚಾಗಿದೆ.

ಮದರಾಸು ಎಲೆ ಅದರ ಹೆಸರೇ ಸೂಚಿಸುವಂತೆ ಚೆನ್ನೈ ಪ್ರಾಂತ್ಯದಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಹೆಚ್ಚು ದಿನ ಇಟ್ಟರೂ ಎಲೆ ಬಾಡದು. ಜಾತಿ ಉತ್ತಮವಾದ್ದರಿಂದ ಹೆಚ್ಚಿನ ಬೆಲೆಯೂ ಬೇಡಿಕೆಯೂ ಇದೆ.

ವೀಳ್ಯದೆಲೆಯ ಹಂಬನ್ನು ಬೆಳೆಸುವ ಮೊದಲು ಭೂಮಿಯನ್ನು ಚೆನ್ನಾಗಿ ಹದಮಾಡಬೇಕು. ಬೇಸಗೆ ಬರುವ ಮೊದಲೆ ನೆಲವನ್ನು ಆಳವಾಗಿ ಅಗೆದು ಬಿಸಿಲಿನ ತಾಪಕ್ಕೆ ಬಿಡಬೇಕು. ಮುಂಗಾರು ಮಳೆಯ ಪ್ರಾರಂಭದಲ್ಲಿ ಹೆಂಟೆಗಳನ್ನು ಚೆನ್ನಾಗಿ ಪುಡಿ ಮಾಡಿ ಮಟ್ಟಸಮಾಡಬೇಕು. ಗರಿಕೆ, ಕಳೆ, ಕಲ್ಲು ಇತ್ಯಾದಿಗಳನ್ನು ತೆಗೆದುಹಾಕಿ ಶುದ್ಧಮಾಡಬೇಕು. ಭದ್ರವಾದ ಬೇಲಿಯನ್ನು ಸಿದ್ಧ ಮಾಡಬೇಕು. ನೀರಾವರಿಗೋಸ್ಕರ ಬಾವಿ ಮತ್ತು ಕಾಲುವೆಗಳನ್ನು ಮಾಡಬೇಕು. ತೋಟದ ಸುತ್ತಲೂ ಗಾಳಿತಡೆಯನ್ನು ನಿರ್ಮಿಸಬೇಕು.

ಮೊದಲು ಹಂಬುಗಳನ್ನು ಹಬ್ಬಿಸಲು ಅಗಸೆ, ಬೂರುಗ, ನುಗ್ಗೆ, ಪಾರಿಜಾತ ಮುಂತಾದ ಬೀಜಗಳನ್ನು ಸಾಲುಗಳಲ್ಲಿ ನೆಡುವುದರಿಂದ ಬೇಸಾಯ ಪ್ರಾರಂಭವಾಗುತ್ತದೆ. ಬೀಜಗಳನ್ನು ಬಿತ್ತನೆ ಮಾಡುವುದಕ್ಕೆ ಮುಂಚೆ ಅನುಕೂಲತೆಗೆ ತಕ್ಕ ಹಾಗೆ 1ಮೀ ಅಗಲದ ಉದ್ದನೆಯ ಪಾತಿಗಳನ್ನು ಮಾಡಬೇಕು. ಪ್ರತಿ ಎರಡು ಪಾತಿಗಳಿಗೆ ನಡುವೆ 1.3ಮೀ ಅಗಲವಿರುವ ಚೌಗು ಕಾಲುವೆಗಳನ್ನು ನಾಲ್ಕು ಮೀ ಉದ್ದಕ್ಕೂ ಮಾಡಬೇಕು. ಅನಂತರ ಅಂತರದಲ್ಲಿ ಸಾಲುಗಳಾಗಿ ನೆರಳಿನ ಮರಗಳನ್ನು ಎಬ್ಬಿಸಬೇಕು. ಅಗಸೆ, ಬೂರುಗ, ನುಗ್ಗೆ, ಪಾರಿಜಾತ, ಹಾಲಿವಾಣ ಇವು ಒಳ್ಳೆಯ ನೆರಳು ಕೊಡುವ ಮರಗಳು. ಅನೇಕ ವೇಳೆ ಬೆಳೆದ ಅಡಕೆ ಮತ್ತು ತೆಂಗುಗಳಿಗೂ ಬಳ್ಳಿಯನ್ನು ಹಬ್ಬಿಸುವುದುಂಟು. ಎರಡು ಅಥವಾ ಮೂರು ತಿಂಗಳಲ್ಲಿ ನೆರಳು ಗಿಡಗಳು 1.3–1.6ಮೀ ಎತ್ತರಕ್ಕೆ ಬೆಳೆಯುತ್ತವೆ. ಇವುಗಳ ಮಧ್ಯದಲ್ಲಿನ ಪಾತಿಯಲ್ಲಿ ಆಗಸ್ಟ್ ತಿಂಗಳಲ್ಲಿ ಹಂಬುಗಳ ತುಂಡುಗಳನ್ನು ನೆಡುವುದು ವಾಡಿಕೆ. ಸಾಲಿನಲ್ಲಿ ಒತ್ತಾಗಿರುವ ಸಸಿಗಳನ್ನು ಕಿತ್ತುಹಾಕಬೇಕು. ಅಂಟುಗಳು ಚಿಗುರುವವರೆಗೆ ನೀರು ಹೊತ್ತು ಹಾಕುವುದು ಅಗತ್ಯ. ಸರಿಯಾದ ನೆರಳನ್ನೂ ಒದಗಿಸಬೇಕು.

ಅನಂತರವೂ ಕಾಲಕ್ಕೆ ಸರಿಯಾಗಿ ನೀರು ಹಾಯಿಸುವುದು ಮುಖ್ಯ. ಕಳೆ ಕಿತ್ತು ಸ್ವಚ್ಛ ಮಾಡುವುದರಿಂದ ತೋಟಕ್ಕೆ ರೋಗಗಳು ಹರಡುವ ಸಂಭವ ಕಡಿಮೆಯಾಗುತ್ತದೆ. ತುಂಬ ನೆರಳು ಕಟ್ಟಿರುವಲ್ಲಿ ಹೆಚ್ಚಿನ ರೆಂಬೆಗಳನ್ನು ಕತ್ತರಿಸಿ ಹಾಕಬೇಕು. ಉತ್ತಮ ಫಸಲನ್ನು ಪಡೆಯಲು ಪ್ರತಿ ಎರಡು ತಿಂಗಳಿಗೊಮ್ಮೆ ಪಾತಿ ಒಂದಕ್ಕೆ 10ಕಿಗ್ರಾಂನಷ್ಟು ಚೆನ್ನಾಗಿ ಕೊಳೆತ ಗೊಬ್ಬರವನ್ನು ಹಾಕಬೇಕು. ವರ್ಷಕ್ಕೊಂದುಸಾರಿ ಹೆಚ್ಚು ಬೆಳೆದಿರುವ ಹಂಬುಗಳನ್ನು ಸುತ್ತಿ ಪಕ್ಕದ ಪಾತಿಗಳಿಗೆ ಬದಲಾಯಿಸಬೇಕು. ಸುತ್ತಿದ ಹಂಬುಗಳನ್ನು ಪಾತಿಯಲ್ಲಿಟ್ಟು ಸರಿಯಾಗಿ ನಿಲ್ಲುವಂತೆ ಮಣ್ಣು ಉಂಡೆಗಳನ್ನು ಇಡಬೇಕು. ಅನಂತರ ಅವು ಬೆಳೆದಂತೆಲ್ಲ ಆಶ್ರಯದ ಮರಗಳಿಗೆ ಕಟ್ಟಬೇಕು. ಹಂಬು ಇಳಿಸುವಾಗ ಅದರ ಪಕ್ಕದ ರೆಂಬೆಗಳನ್ನು ಕತ್ತರಿಸಿ ಹಾಕಬೇಕು.

ಸಾಮಾನ್ಯವಾಗಿ ಎಲೆ ಬಳ್ಳಿಯನ್ನು ಮಿಶ್ರಬೆಳೆಯಾಗಿ ಬೆಳೆಯುತ್ತಾರೆ. ಜೌಗು ಕಾಲುವೆ ಮತ್ತು ದೊಡ್ಡ ಅಥವಾ ಮುಖ್ಯ ಕಾಲುವೆಗಳ ನಡುವೆ ಹಂಬು ನೆಡುತ್ತಾರೆ. ಪರಂಗಿಯನ್ನು ಕೂಡ ಇದೇ ರೀತಿ ಬೆಳೆಸಬಹುದು. ನೆರಳು ಮತ್ತು ಆಶ್ರಯಕ್ಕಾಗಿ ನೆಟ್ಟ ನುಗ್ಗೆ ಅಥವಾ ಅಗಸೆ ಮರಗಳು ಫಲವನ್ನು ಕೊಡುವುದರಿಂದ ಅವನ್ನು ಸಹ ಮಿಶ್ರಬೆಳೆ ಎಂದೇ ಕರೆಯಬಹುದು. ಎಲೆ ಹಂಬು ನೆಟ್ಟ ಹೊಸದರಲ್ಲಿ ಸೌತೆ, ಹುರುಳಿ ಮುಂತಾದುವನ್ನು ಬೆಳೆಯಬಹುದು. ಅದರ ಹಂಬು ದೊಡ್ಡದಾದಮೇಲೆ ಬಾಳೆ, ಪರಂಗಿ ಮತ್ತು ಅಡಕೆಯನ್ನು ಬಿಟ್ಟು ಮತ್ತೆ ಯಾವ ಮಿಶ್ರ ಬೆಳೆಯನ್ನು ತೆಗೆಯಲು ಸಾಧ್ಯವಿಲ್ಲ.

ಎಲೆಯುಗುರಿನಿಂದ ಎಲೆ ಚಿವುಟುತ್ತಿರುವುದು

ಎಲೆ ಎರಡು ತಿಂಗಳಿಗೆ ಒಂದಾವರ್ತಿ ಕುಯ್ಲಿಗೆ ಬರುತ್ತದೆ. ಹದವಾದ ಎಲೆಗಳನ್ನು ಮಾತ್ರ ಚಾಕುವಿನಿಂದ ಕುಯ್ದು ಜೋಡಿಸಿ ಕಟ್ಟುಗಳಾಗಿ ಕಟ್ಟುತ್ತಾರೆ. ಹೆಬ್ಬೆರಳಿನ ತುದಿಗೆ ಲೋಹದ ಉಗುರನ್ನು ಹಾಕಿಕೊಂಡು ಎಲೆಗಳನ್ನು ಚಿವುಟಿ ತೆಗೆಯುವುದೂ ಉಂಟು. ಇಂಥ ಲೋಹದ ಉಗುರನ್ನು ಎಲೆಯುಗುರು ಎನ್ನುತ್ತಾರೆ. ನೇರ ಉಗುರುಗಳಿಂದಲೇ ಚಿವುಟಿದರೆ ಬಳ್ಳಿಗೆ ನಂಜಾಗುತ್ತದೆ. ಎಲೆ ಬಿಡಿಸುವವರನ್ನು ಉಗುರರು ಎಂದೇ ಕರೆಯುತ್ತಾರೆ. ಚೆನ್ನಾಗಿ ಬೇಸಾಯ ಮಾಡಿದ ತೋಟ ವರ್ಷಕ್ಕೆ ಎಕರೆ ಒಂದಕ್ಕೆ ಸುಮಾರು ಎರಡು ಲಕ್ಷ ಎಲೆಗಳನ್ನು ಕೊಡುತ್ತದೆ. ಆಗಾಗ ನೆಲಕ್ಕೆ ಊರುತ್ತಿದ್ದರೆ ಚೆನ್ನಾಗಿ ಬೆಳೆದ ಹಂಬು ಅರವತ್ತು ವರ್ಷ ಫಲಕೊಡುತ್ತದೆಂದು ಬೇಸಾಯಗಾರರ ಅಭಿಪ್ರಾಯ.

ವೀಳ್ಯದೆಲೆಗೆ ಸಾಮಾನ್ಯವಾಗಿ ಬರುವ ರೋಗವೆಂದರೆ ಬೂದಿರೋಗ. ಅದು ಬಂದಾಗ ಎಲೆಗಳ ಕೆಳಗಡೆ ಬೂದಿಗಟ್ಟಿದಂತಾಗಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರಿಹೋಗುತ್ತವೆ. ಇದನ್ನು ತಡೆಯಲು ಗಂಧಕದ ಪುಡಿಯನ್ನು ಎರಚಬೇಕು; ರೋಗ ಹರಡದಂತೆ ತೋಟವನ್ನು ಸ್ವಚ್ಛವಾಗಿಟ್ಟಿರಬೇಕು.

ವೀಳೆಯದೆಲೆಯ ಮೂರು ಬಗೆಗಳು. ಎಡಗಡೆಯದು ಮೈಸೂರು ಚಿಗುರು, ಮಧ್ಯದ್ದು ಕರಿ ಎಲೆ, ಬಲಗಡೆಯದು ಅಂಬಾಡಿ ಎಲೆ

ಎರೆಹುಳು ಭೂಮಿಯಲ್ಲಿ ತೂತುಗಳನ್ನು ಕೊರೆದು ನೀರು ನಿಲ್ಲುವಂತೆ ಮಾಡುವುದರಿಂದ ಚೌಗು ಹಿಡಿದು ಹಂಬುಗಳು ಸಾಯುತ್ತವೆ. ಕೆಲವು ಸಾರಿ, ಎರೆ ಹುಳುಗಳು ನೆಲದಂತೆ ಹಂಬುಗಳನ್ನೂ ಕೊರೆಯಬಹುದು. ಯುಕ್ತ ರಾಸಾಯನಿಕಗಳ ಪುಡಿಯನ್ನು ರಂಧ್ರಗಳ ಒಳಗಡೆ ಹೋಗುವಂತೆ ಮಾಡಿ ಹುಳುಗಳನ್ನು ಕೊಲ್ಲಬೇಕು.

ಎಲೆತೋಟ ಬಹು ಲಾಭದಾಯಕವಾದ ಉದ್ಯಮ, ಬೆಳೆದ ಎಲೆಯಲ್ಲಿ ಬಹುಪಾಲು ದೇಶೀಯ ಮಾರುಕಟ್ಟೆಯಲ್ಲೇ ಖರ್ಚಾಗುತ್ತದೆ. ಸ್ವಲ್ಪ ಭಾಗ ರಫ್ತಾಗುವುದೂ ಉಂಟು. ಭಾರತ ತಾನು ಬೆಳೆದ ಎಲೆಯನ್ನು ಯುನೈಟೆಡ್ ಕಿಂಗ್‌ಡಮ್, ಕೀನ್ಯ, ಏಡನ್, ಪೂರ್ವ ಪಾಕಿಸ್ತಾನ, ಬಹ್ರೇನ್ ದ್ವೀಪಗಳು, ಕುವಾಯಿತ್, ನೇಪಾಲ ಮತ್ತು ಇತರ ಸ್ಥಳಗಳಿಗೆ ರಫ್ತಾಗುತ್ತದೆ.

**ಎಲೆಯ ಲಕ್ಷಣಗಳು, ಉಪಯೋಗಗಳು:** ತಾಂಬುಲದೊಡನೆಯೊ ಹಾಗೆಯೊ ಸೇವಿಸಿದಾಗ ವೀಳ್ಯದೆಲೆ ಸುವಾಸನೆಯನ್ನು ಕೊಡುತ್ತದೆ. ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ನರಗಳನ್ನು ಉತ್ತೇಜಿಸುತ್ತದೆ. ತಿಂದ ಆಹಾರ ಜೀರ್ಣಿಸಲು ಸಹಾಯ ಮಾಡುತ್ತದೆ. ಕಫ, ಕೆಮ್ಮು ಮೊದಲಾದ ಗಂಟಲ ಮತ್ತು ಎದೆಯ ರೋಗಗಳನ್ನು ಶಮನಮಾಡುತ್ತದೆ. ಎಲೆಗಳಿಂದ ಬೆಚ್ಚಾರ (ಪೌಲ್ಟೀಸ್) ಮಾಡಿ ಕುರು ಮೊದಲಾದ ಚರ್ಮರೋಗಗಳಿರುವ ಎಡೆಗೆ ಕಟ್ಟುತ್ತಾರೆ. ಹೊಸ ಎಲೆಯಲ್ಲಿ ಈ ಅಂಶಗಳಿವೆ : (ಶೇಕಡ) ತೇವ 85.4; ಪ್ರೋಟೀನು 3.1; ಕೊಬ್ಬು 0.8; ಶರ್ಕರ ಪಿಷ್ಟಾದಿಗಳು 6.1; ನಾರು 2.3; ಖನಿಜ ವಸ್ತು 2.3 ಕ್ಯಾಲ್ಸಿಯಂ 230 ಮಿಗ್ರಾಂ; ರಂಜಕ 40 ಮಿಗ್ರಾಂ; ಕಬ್ಬಿಣ 7 ಮಿಗ್ರಾಂ; ಅಯಾನೀಕೃತವಾಗಬಲ್ಲ ಕಬ್ಬಿಣ 3.5 ಮಿಗ್ರಾಂ; ಕೆರೊಟೀನ್ 9.600 ಐ.ಯು; ತಯಾಮಿನ್ 70ಮಿಗ್ರಾಂ; ರೈಬೊಫ್ಲೇವಿನ್ 30ಮಿಗ್ರಾಂ; ನಿಕೋಟಿನಿಕ್ ಅಮ್ಲ 0.7 ಮಿಗ್ರಾಂ ಸಿ ಜೀವಾತು 5.0 ಮಿಗ್ರಾಂ/100 ಗ್ರಾಂ; ಅಯೋಡಿನ್ 3.4 ಮಿ.ಗ್ರಾಂ./100 ಗ್ರಾಂ; ಪೊಟ್ಯಾಸಿಯಂ ನೈಟ್ರೇಟ್ ಶೇ. 0.26–0.42. ಬೊಂಬಾಯಿಯ ಎಲೆಗಳಲ್ಲಿ ಈ ಅಂಶಗಳಿವೆ: ಗ್ಲೂಕೋಸ್ 1.4–3.2; ಸುಕ್ರೋಸ್ 0.6–2.5; ಪಿಷ್ಟ 1.0–1.2; ತೈಲಾಂಶ 0.8–1.8; ಟ್ಯಾನಿನ್ ಶೇ. 1.0–1.3.

ಎಲೆಯಲ್ಲಿನ ತೈಲಾಂಶವನ್ನು ಪ್ರತ್ಯೇಕಿಸಿ ಅನೇಕ ಔಷಧಗಳಲ್ಲಿ ಬಳಸುತ್ತಾರೆ. ಎಲೆಗಳನ್ನು ಎಣ್ಣೆ, ಬೆಣ್ಣೆ ಇತ್ಯಾದಿಗಳೊಡನೆ ಹಾಕಿ ಕಾಯಿಸಿದಾಗ ಜಿಡ್ಡಿನಲ್ಲಿರುವ ಕಮಟುನಾತ ಮಾಯವಾಗಿ ಶುಭ್ರವಾಗುತ್ತದೆ. (ಡಿ.ಎಂ.)

**ಎಲೆನ್‌ಬರೊ, ಎಡ್ವರ್ಡ್ ಲಾ, ಲಾರ್ಡ್:** 1790–1871. ಇಂಗ್ಲಿಷ್ ರಾಜಕಾರಣಿ. ಲಾರ್ಡ್ ಆಕ್‌ಲೆಂಡಿನ ಅನಂತರ ಭಾರತದ ಗವರ್ನರ್ ಜನರಲ್ ಆಗಿದ್ದ (1842–44). ಒಂದನೆಯ ಬ್ಯಾರನ್ ಎಲೆನ್‌ಬರೋಗೆ ಈತ ಹಿರಿಯ ಪುತ್ರ. ಈಟನಿನಲ್ಲೂ ಕೇಂಬ್ರಿಜಿನ ಸೇಂಟ್ ಜಾನ್ಸ್ ಕಾಲೇಜಿನಲ್ಲೂ ವಿದ್ಯಾರ್ಜನೆ ಮಾಡಿದ ಮೇಲೆ 1813ರಲ್ಲಿ ಈತ ಬ್ರಿಟನ್ನಿನ ಕಾಮನ್ಸ್ ಸಭಾ ಪ್ರವೇಶಮಾಡಿದ. ಈತನ ತಂದೆ ಮರಣಿಸಿದಾಗ (1818) ಇವನಿಗೆ ಲಾರ್ಡ್ಸ್ ಸಭಾ ಸದಸ್ಯತ್ವ ಲಭ್ಯವಾಯಿತು. ಹತ್ತು ವರ್ಷಗಳ ಅನಂತರ (1828) ಈತ ಲಾರ್ಡ್ ಪ್ರಿವಿ ಸೀಲ್ ಆದ. 1828–30 ಅವಧಿಯಲ್ಲಿ ಈತ ಭಾರತ ನಿಯಂತ್ರಣ ಬೋರ್ಡಿನ ಅಧ್ಯಕ್ಷನಾದಾಗಿನಿಂದ ಇವನಿಗೂ ಭಾರತಕ್ಕೂ ಸಂಬಂಧ ಬೆಳೆಯಲಾರಂಭಿಸಿತೆನ್ನಬಹುದು.

ಆಗ ಭಾರತವಿನ್ನೂ ಈಸ್ಟ್ ಇಂಡಿಯ ಕಂಪನಿಯ ಆಡಳಿತದಲ್ಲಿತ್ತು. ಭಾರತದ ಆಡಳಿತದಲ್ಲಿ ಸರ್ಕಾರದ ಹತೋಟಿ ಹೆಚ್ಚಾಗಿರಬೇಕೆಂಬುದು ಈತನ ಅಭಿಪ್ರಾಯವಾಗಿತ್ತು. ಬ್ರಿಟನ್ನಿನಿಂದ ಅಲೆಗ್ಸಾಂಡ್ರಿಯಕ್ಕೂ ಕೆಂಪು ಸಮುದ್ರದ ಮೂಲಕವಾಗಿ ಮುಂಬೈಗೂ ಹಡಗುಸಂಚಾರ ಏರ್ಪಡಿಸಬೇಕೆಂಬುದಾಗಿ ಈತ ವಾದಿಸಿದ. ಭಾರತೀಯರ ತೆರಿಗೆಯ ಭಾರ ಇಳಿಸಿ ಅವರ ಉತ್ಪಾದನಶಕ್ತಿ ಹೆಚ್ಚಿಸಬೇಕು. ಭಾರತ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದಷ್ಟೂ ಬ್ರಿಟನ್ನಿಗೆ ಅದು ಕೈಗಾರಿಕೆಗಳಿಗೆ ಅಗತ್ಯವಾದ ಸಾಮಗ್ರಿ ಸರಬರಾಜು ಮಾಡಬಲ್ಲುದಲ್ಲದೆ ಬ್ರಿಟನ್ನಿನ ಕೈಗಾರಿಕೆಗಳಿಗೆ ಮಾರುಕಟ್ಟೆಯಾಗಿಯೂ ಪರಿಣಮಿಸುವುದು–ಎಂಬುದು ಈತನ ನಂಬಿಕೆ. ಪಾಶ್ಚಾತ್ಯಶಿಕ್ಷಣ ಪಡೆದ ಭಾರತೀಯರನ್ನು ಹೆಚ್ಚು ಹೆಚ್ಚಾಗಿ ಆಡಳಿತದಲ್ಲಿ ಸೇರಿಸಿಕೊಳ್ಳಬೇಕೆಂಬುದು ಆಗ ಭಾರತದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕನ ಅಭಿಪ್ರಾಯವಾಗಿತ್ತು. ಇದು ಈತನಿಗೂ ಸಮ್ಮತವಾಗಿತ್ತು.

ಮುಂದೆ ಈತನೇ ಭಾರತದ ಗವರ್ನರ್ ಜನರಲ್ ಆಗಿ ನೇಮಕಗೊಂಡಾಗ ತನ್ನ ಅಭಿಪ್ರಾಯಗಳನ್ನೆಲ್ಲ ಕಾರ್ಯರೂಪಕ್ಕೆ ತರಲೆತ್ನಿಸಿದ. ಈತ ಗವರ್ನರ್ ಜನರಲ್ ಆದಾಗ ಭಾರತದಲ್ಲಿದ್ದ ಬ್ರಿಟಿಷ್ ಸರ್ಕಾರಕ್ಕೂ ಆಫ್ಘಾನಿಸ್ತಾನಕ್ಕೂ ನಡುವೆ ಯುದ್ಧ ನಡೆಯುತ್ತಿತ್ತು. ಅಲ್ಲಿಂದ ಈತ ಸೇನೆಯನ್ನು ಹಿಂದಕ್ಕೆ ಕರೆಸಿ ಅದನ್ನು ಸಿಂಧೂ ಪ್ರದೇಶಕ್ಕೆ ನುಗ್ಗಿಸಿದ. ಅಲ್ಲಿನ ಅಮೀರರಿಗೆ ಸೋಲಾಗಿ ಸಿಂಧೂ ಪ್ರಾಂತ್ಯ ಬ್ರಿಟಿಷ್ ಭಾರತದ ಭಾಗವಾಯಿತು. ಮಹಾರಾಜ ಸಿಂಧಿಯನೂ ಪರಾಜಿತನಾದ. ಗ್ವಾಲಿಯರ್ ಬ್ರಿಟಿಷ್ ಆಶ್ರಿತ ಸಂಸ್ಥಾನವಾಯಿತು.

ಲಾರ್ಡ್ ಎಲೆನ್‌ಬರೋನ ಛಲವೂ ಅಹಂಕಾರವೂ ಆತುರದ ಕ್ರಮಗಳೂ ಕಂಪನಿಯ ನಿರ್ದೇಶಕ ಮಂಡಳಿಗೆ ಹಿಡಿಸಲಿಲ್ಲ. ತತ್ಫಲವಾಗಿ ಈತ ಶೀಘ್ರದಲ್ಲೇ ಇಂಗ್ಲೆಂಡಿಗೆ ವಾಪಸು ಹೋಗಬೇಕಾಯಿತು. ಆದರೂ ಭಾರತದ ವ್ಯವಹಾರಗಳ ಮೇಲೆ ಈತನ ಪ್ರಭಾವ ಇದ್ದೇ ಇತ್ತು. 1857ರ ಬಂಡಾಯದ ಅನಂತರ ಭಾರತದ ಹೊಸ ಆಡಳಿತ ವ್ಯವಸ್ಥೆಯ ಯೋಜನೆಯನ್ನು ರಚಿಸಿದವನೀತನೇ. ಅಯೋಧ್ಯೆಯ ವಿಷಯವಾಗಿ ಲಾರ್ಡ್ ಕ್ಯಾನಿಂಗ್ ಮಾಡಿದ್ದ ಘೋಷಣೆಯ ಬಗ್ಗೆ ಈತ ಮಾಡಿದ ಕಟು ಟೀಕೆಯಿಂದಾಗಿ ಅಸಮಾಧಾನವೇರ್ಪಟ್ಟು ರಾಜಕೀಯದಿಂದ ಈತ ಅಂತಿಮವಾಗಿ ನಿರ್ಗಮಿಸಬೇಕಾಯಿತು. ಭಾರತದ ಲೋಕಸೇವೆಗೆ ಅಭ್ಯರ್ಥಿಗಳನ್ನು ಸ್ಪರ್ಧಾಪರೀಕ್ಷೆಯ ಮೂಲಕ ಆಯ್ಕೆ ಮಾಡಬೇಕೆಂಬ ಯೋಜನೆಯನ್ನು ಈತ ವಿರೋಧಿಸಿದ್ದ. ಈತ ಪಕ್ಕಾ ಸಾಮ್ರಾಜ್ಯವಾದಿ. (ಎಸ್.ವಿ.ಡಿ.)

**ಎಲೆಹುಳು:** ಫಿಲ್ಲಿಡಿಡೀ ಕುಟುಂಬಕ್ಕೆ ಸೇರಿದ ಒಂದು ಕೀಟ. (ಲೀಫ್ ಇನ್ಸೆಕ್ಟ್; ವಾಕಿಂಗ್ ಲೀಫ್:ಫಿಲ್ಲಿಯಂ). ನೋಡಲು ಹಸಿರು ಎಲೆಯಂತೆ ಇದೆ. ಕಡ್ಡಿಹುಳುಗಳ ಹತ್ತಿರದ ಸಂಬಂಧಿ. ಕುಳಿತಾಗ ಬೆನ್ನನ್ನು ಮುಚ್ಚಿರುವ ಇದರ ಎರಡು ರೆಕ್ಕೆಗಳು ಸಂಪೂರ್ಣವಾಗಿ ಎಲೆಯನ್ನು ಹೋಲುತ್ತವೆ. ಹೆಣ್ಣು ಹುಳುವಿನ ಹಿಂದಿನ ರೆಕ್ಕೆಗಳು



ಎಲೆಯಂತೆಯೇ ಕಾಣುವ ಎಲೆಹುಳು

ಹಾರಲು ಉಪಯುಕ್ತವಾಗಿಲ್ಲ. ಗಂಡು ಹುಳುವಿನಲ್ಲಿ ಎಲೆರೆಕ್ಕೆ ಸಣ್ಣನಾಗಿದ್ದು ಹಿಂದಿನ ರೆಕ್ಕೆಗಳು ಹಾರಲನುಕೂಲವಾಗುವಂತೆ ಚೆನ್ನಾಗಿ ಬೆಳೆದಿವೆ. ಮರಿ ಕೆಂಪಗಿದ್ದು ಎಲೆ ತಿನ್ನುತ್ತ ತಿನ್ನುತ್ತ ಹಸುರು ಬಣ್ಣಕ್ಕೆ ತಿರುಗುತ್ತದೆ. ಕೇವಲ ಹಸಿರನ್ನು ತಿನ್ನುತ್ತವಾದ್ದರಿಂದ ಹಸುರು ಗಿಡಮರಗಳಲ್ಲೇ ಇರುತ್ತವಾಗಿ ಈ ಕೀಟಗಳ ಬಣ್ಣ ಮತ್ತು ಆಕಾರ ಇವಕ್ಕೆ

ಸಾಕಷ್ಟು ರಕ್ಷಣೆ ಕೊಡುತ್ತವೆ. ಕಡ್ಡಿ ಹುಳುಗಳಲ್ಲಿರುವಂತೆ ಇವುಗಳ ತತ್ತಿಗಳು ಬೀಜಗಳನ್ನು ಹೋಲುತ್ತವೆ. ಇದರಿಂದ ತತ್ತಿಗಳಿಗೂ ರಕ್ಷಣೆ ಒದಗುತ್ತದೆ. ಭಾರತದಲ್ಲಲ್ಲದೆ ಪೂರ್ವದ ಫಿಜಿ ದ್ವೀಪಗಳವರೆಗೂ ಇವುಗಳ ವ್ಯಾಪ್ತಿಯನ್ನು ಕಾಣಬಹುದು. ಎಲೆಹುಳುಗಳಲ್ಲಿ ಮೂರು ಜಾತಿಗಳನ್ನು ಇಪ್ಪತ್ತು ಪ್ರಭೇದಗಳನ್ನು ಗುರುತಿಸಲಾಗಿದೆ. ಒಂಟೆ ಹುಳುವಿನ (ಪ್ರೇಯಿಂಗ್ ಮ್ಯಾಂಟಿಸ್) ಕೆಲವು ಪ್ರಭೇಧಗಳಲ್ಲೂ ರೆಕ್ಕೆಯ ಬಣ್ಣ ಮತ್ತು ಆಕಾರ ಸ್ವಲ್ಪಮಟ್ಟಿಗೆ ಎಲೆಯನ್ನು ಹೋಲುವುದನ್ನು ಗಮನಿಸಬಹುದು **(ನೋಡಿ– ಅನುಕರಣೆ–2)**. *

**ಎಲ್ಕ್ ಸಾರಗ:** ಜಿಗರೆಗಳಲ್ಲೆಲ್ಲ ಅತಿದೊಡ್ಡ ಗಾತ್ರದ ಪ್ರಾಣಿ. ಸರ್ವಸ್ ಜಾತಿಗೆ ಸೇರಿದ ಈ ಪ್ರಾಣಿಯನ್ನು ಅಮೆರಿಕದಲ್ಲಿ ಮುಸು (ಮೂಸ್) ಎಂದೂ ಯುರೋಪಿನಲ್ಲಿ ಕೆಂಪು ಜಿಗರೆ ಎಂದೂ ಕಾಶ್ಮೀರದಲ್ಲಿ ಜಿಂಕೆಯೆಂದೂ ಹಿಮಾಲಯದಲ್ಲಿ ಸೌ ಎಂದೂ ಕರೆಯುತ್ತಾರೆ. ಉತ್ತರ ಅಮೆರಿಕದಲ್ಲಿ ಇದನ್ನು ವಾಪಿಟಿ ಎನ್ನುವರು. ಎಲ್ಕ್ ಎನ್ನುವುದು ಯುರೋಪಿನ ಹೆಸರು. ಮುಸುವನ್ನು ಬಿಟ್ಟರೆ ಅಮೆರಿಕದ ಎಲ್ಕ್ ಅತಿ ದೊಡ್ಡ ಪ್ರಾಣಿ.


ಅಮೆರಿಕದ ಎಲ್ಕ್

ತೋಳಿನ ಮಟ್ಟದಿಂದ ಲೆಕ್ಕ ಹಾಕಿದರೆ ಚೆನ್ನಾಗಿ ಬೆಳೆದ ಎಲ್ಕ್ 1.5ಮೀ ಎತ್ತರವಿದ್ದು 1500–2200 ಕೆಜಿ ತೂಕವಿರುತ್ತದೆ. ಚೆನ್ನಾಗಿ ಬೆಳೆದ ಕೊಂಬುಗಳು 1.5ಮೀ ಪಸರಿಸಿರುತ್ತವೆ. ಇದರ ಕಾಲುಗಳು ಉದ್ದ, ಕೊರಳು ಮೊಟಕು. ಮೇಲೊಸಡು ಗ್ರಾಹಶಕ್ತಿಯುಳ್ಳದ್ದಾಗಿ ನೇತು ಬಿದ್ದಿರುತ್ತದೆ. ಕಿವಿಗಳು ಉದ್ದನಾಗಿ ಜೋತುಬಿದ್ದಿರುತ್ತವೆ. ನೋಡಲು ಪ್ರಾಣಿ ಅಷ್ಟೇನೂ ಚನ್ನವಲ್ಲ. ಗಂಡಿನ ಕೂದಲು ಉದ್ದ, ಒರಟು, ಸ್ವಲ್ಪ ಪೆಡಸು.

ಈ ಮೃಗ ಜೌಗುಪ್ರದೇಶದಲ್ಲಾಗಲಿ, ಕುರುಚಲು ಅಥವಾ ದಟ್ಟ ಕಾಡಿನಲ್ಲಾಗಲಿ ಹಾಯಾಗಿರಬಲ್ಲುದು. ಕಾಡಿನ ಮತ್ತು ಜೌಗಿನ ಯಾವ ಅಡಚಣೆಗಳೂ ಇದಕ್ಕೆ ಲೆಕ್ಕವಿಲ್ಲ. ಶೀತಕಾಲದ ಅನ್ನಾಭಾವಕ್ಕೂ ಇದು ಹೆದರದು. ಆದ್ದರಿಂದ ತನ್ನ ಮೇಲೆ ಬೀಳಲು ಬರುವ ತೋಳ, ಲಿಂಕ್ಸ್, ಕರಡಿಗಳು ಮತ್ತು ಗ್ಲಟನ್ ಮುಂತಾದ

ಯುರೋಪಿನ ಎಲ್ಕ್

ಪ್ರಾಣಿಗಳಿಂದಲೂ ಮನುಷ್ಯನಿಂದಲೂ ಇದು ಅತಿ ಜಾಣತನದಿಂದ ತಪ್ಪಿಸಿಕೊಳ್ಳುತ್ತದೆ. ತನ್ನ ಏಕಾಂತಭಂಗವನ್ನು ಇದು ಸಹಿಸದು. ಸುತ್ತುಗಟ್ಟಿದಾಗ ದಿಗ್ಭ್ರಮೆಗೊಳ್ಳುತ್ತದೆ. ಕೃಷಿಗಾಗಿ ಅರಣ್ಯ ನಾಶವಾಗಿ ಈ ಪ್ರಾಣಿ ಮಾಯವಾಗುತ್ತಿದೆ. ಯುರೋಪ್ ಖಂಡದಲ್ಲಿ ಇದು ಸ್ಕ್ಯಾಂಡಿನೇವಿಯ, ಪೂರ್ವಪ್ರಷ್ಯ ಮತ್ತು ರಷ್ಯದ ಕೆಲವು ಭಾಗಗಳಲ್ಲಿದೆ. ಅಮೆರಿಕದಲ್ಲಿ ಅಲಾಸ್ಕದ ಹತ್ತಿರ ಕಾಣಬರುತ್ತದೆ. ಉದ್ದನಾದ ಕಾಲು ಮತ್ತು ಚಿಕ್ಕ ಕತ್ತು ಇರುವುದರಿಂದ ನೆಲದ ಮೇಲಿನ ಹುಲ್ಲನ್ನು ಮೇಯಲಾರದು, ಕೇವಲ ಮರದ ಕೆಳಗಿನ ಎಲೆ ಕೊನೆಗಳು, ಪೊದರುಗಳ ತುದಿಗಳು ಮತ್ತು ಉದ್ದವಾಗಿ ಬೆಳೆಯುವ ಹುಲ್ಲುಗಳನ್ನು ಮಾತ್ರ ಮುಟ್ಟಬಲ್ಲುದು. ಬರ್ಚ್, ವಿಲ್ಲೊ, ಆಸ್ಪೆನ್, ಪಾಪ್ಲರ್ ಮರಗಳ ಎಲೆ, ಕುಡಿ, ಕಲ್ಲುಹೂ ಮತ್ತು ಪಾಚಿ–ಮುಂತಾದವು ಇದರ ಮುಖ್ಯ ಆಹಾರ. ಬೇಸಿಗೆಯಲ್ಲಿ, ಮುಖ್ಯವಾಗಿ ಇರುಳಿನಲ್ಲಿ, ಇದು ಜೌಗು ಗುಂಡಿಗಳ ಕೆಸರಿನಲ್ಲಿ ಆಳಕ್ಕೆ ಮುಳುಗಿ ಅಲ್ಲಿ ಬೆಳೆದಿರುವ ಸಾರವತ್ತಾದ ನೀರಿನ ಗಿಡಗಳನ್ನು ಮೇಲೆತ್ತಿ, ಬೇರು ಸಹಿತ ಅವನ್ನು ಕೀಳಲು ನೀರಿನೊಳಕ್ಕೆ ಆಗಾಗ ತಲೆಯನ್ನು ಮುಳುಗಿಸುತ್ತ ಕಾಲ ಕಳೆಯುತ್ತದೆ.

ಎಲ್ಕ್ ಸಾರಗ ಎಷ್ಟು ಬಲಿಷ್ಠವೋ ಅಷ್ಟು ಧೈರ್ಯಶಾಲಿ. ಇದರ ಮೊನಚಾದ ಗೊರಸುಗಳು ಕೊಂಬುಗಳಿಗಿಂತ ಭಯಂಕರವಾದ ಆಯುಧ. ಎರಡನ್ನೂ ಅದು ತುಂಬ ಕೌಶಲದಿಂದ ಉಪಯೋಗಿಸಬಲ್ಲುದು.

ಗಂಡು ವಾಪಿಟಿ ತನ್ನ ಸುತ್ತ ಹೆಣ್ಣು ಜಿಂಕೆಗಳ ಒಂದು ಗುಂಪನ್ನು ಇಟ್ಟುಕೊಂಡು ಗುಂಪಿನ ಸ್ವಾಮ್ಯಕ್ಕಾಗಿ ಹೊಡೆದಾಡುತ್ತದೆ. ಅದೇ ಮುಸು ತನ್ನ ಏಕಾಕಿ ಸಂಗಾತಿಯೊಡನೆ ಸಂಸಾರ ಮಾಡುತ್ತದೆ. ಮೇ ತಿಂಗಳಲ್ಲಿ ಒಂದೊ ಅಥವಾ ಎರಡೋ ಮರಿಗಳು ಹುಟ್ಟುತ್ತವೆ; ಈಯುವುದಕ್ಕೆ ಮೊದಲು ಹೆಣ್ಣುಗಳು ಕೆರೆಯ ಅಥವಾ ನದಿಯ ನಡುಗಡ್ಡೆ, ಜೌಗು ಮುಂತಾದ ದುರ್ಗಮ ಪ್ರದೇಶಗಳನ್ನು ಹುಡುಕಿಕೊಳ್ಳುತ್ತವೆ. ಹುಟ್ಟಿದ ಕೆಲವೇ ತಾಸುಗಳಲ್ಲಿ ಮರಿ ಸ್ವತಂತ್ರವಾಗಿ ಓಡಾಡುತ್ತ ತಾಯನ್ನು ಹಿಂಬಾಲಿಸುತ್ತದೆ. (ಎ.)

**ಎಲ್ಗಿನ್, ಲಾರ್ಡ್1:** 1811–63. ಸ್ಕಾಟ್ಲೆಂಡಿನ ಎಲ್ಗಿನ್ ಮತ್ತು ಕಿಂಕಾರ್ಡೀನ್ ಅರ್ಲ್‌ಗಳ (ಶ್ರೀಮಂತರ) ಸಾಲಿನಲ್ಲಿ ಎಂಟನೆಯವ; ಜೇಮ್ಸ್ ಇವನ ಸ್ವಂತನಾಮ. ಈತ ಸಮರ್ಥ ಆಡಳಿತಗಾರ. ಲಾರ್ಡ್ ಕ್ಯಾನಿಂಗ್‌ನ ತರುವಾಯ ಭಾರತದ ವೈಸರಾಯ್ ಆಗಿದ್ದ (ಮಾರ್ಚ್ 1862–ನವೆಂಬರ್ 1863). ಮುಂದೆ ಇವನ ಮಗನೂ ಭಾರತದ ವೈಸರಾಯಿಯಾದ್ದರಿಂದ ಈತನನ್ನು 1ನೆಯ ಲಾರ್ಡ್ ಎಲ್ಗಿನ್ ಎಂದು ಕರೆಯಲಾಗಿದೆ. ಲಂಡನಿನಲ್ಲಿ ಜನಿಸಿ, ಈಟನಿನಲ್ಲೂ ಕ್ರೈಸ್ಟ್ ಚರ್ಚ್ ಕಾಲೇಜಿನಲ್ಲೂ ವಿದ್ಯೆಗಳಿಸಿದ. ಈತ ಗ್ಲಾಡ್‌ಸ್ಟನನ ಸಮಕಾಲೀನ. ಸರ್ ರಾಬರ್ಟ್ ಪೀಲ್ ಬ್ರಿಟನಿನ ಪ್ರಧಾನ ಮಂತ್ರಿಯಾಗಿದ್ದಾಗ ಜಮೈಕದ ಗವರ್ನರ್ ಆಗಿ ನೇಮಕವಾದ (1842). ಗುಲಾಮಗಿರಿ ರದ್ದಾಗಿದ್ದದ್ದರಿಂದ ಅಲ್ಲಿ ಉದ್ಭವಿಸಿದ್ದ ವಿಶೇಷ ಪರಿಸ್ಥಿತಿಯಲ್ಲಿ ಯಶಸ್ವಿಯಾಗಿ ಆಡಳಿತ ನಿರ್ವಹಿಸಿ, ನೀಗ್ರೋಗಳ ಬಾಳು ಉತ್ತಮಗೊಳಿಸುವ ಕ್ರಮ ಕೈಗೊಂಡ.

1846ರಲ್ಲಿ ಕೆನಡದ ಗವರ್ನರ್ ಜನರಲ್ ಹುದ್ದೆ ಈತನಿಗೆ ದೊರಕಿತು. ಅಲ್ಲೂ ಉತ್ತಮ ವಾತಾವರಣವಿರಲಿಲ್ಲ. ಅಲ್ಲಿನ ಬ್ರಿಟಿಷ್ ಹಾಗೂ ಫ್ರೆಂಚ್ ನಿವಾಸಿಗಳ ನಡುವೆ ವೈರ ಬೆಳೆದಿತ್ತು. ಅವರ ಸ್ವಾತಂತ್ರ್ಯಾಕಾಂಕ್ಷೆಯನ್ನೂ ಕಡೆಗಣಿಸುವಂತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಈತ ತಳೆದ ಸಹಾನುಭೂತಿಯುತ ಧೋರಣೆಯಿಂದಾಗಿ ಅಲ್ಲೂ ಒಳ್ಳೆಯ ಹೆಸರು ಪಡೆದ. ಎಲ್ಗಿನಿನ ಬ್ಯಾರನ್ ಪದವಿ ಈತನಿಗೆ ಲಭ್ಯವಾಯಿತು.

1855ರಲ್ಲಿ ಲಾರ್ಡ್ ಪಾಮರ್‌ಸ್ಟನನ ಸರ್ಕಾರದಲ್ಲಿ ಇವನಿಗೆ ಸಚಿವನಾಗುವ ಅವಕಾಶವಿತ್ತು. ಆದರೆ ಆ ಆಹ್ವಾನವನ್ನು ಈತ ನಿರಾಕರಿಸಿದ. ಮುಂದೆ ಚೀನದಲ್ಲಿ ಸಂಭವಿಸಿದ ದುರ್ಘಟನೆಯಿಂದಾಗಿ ಅಲ್ಲಿಗೆ ಸೈನ್ಯದೊಂದಿಗೆ ಹೊರಟ. ನಡುವೆ ಭಾರತದ ಕರೆ ಬಂತು. ಆಗ ವೈಸ್‌ರಾಯಿಯಾಗಿದ್ದ ಲಾರ್ಡ್ ಕ್ಯಾನಿಂಗ್ ಈತನ ಮಿತ್ರ . 1857ರ ಬಂಡಾಯವನ್ನಡಗಿಸಲು ಅವನ ನೆರವಿಗೆ ಈತನ ಸೇನೆ ಧಾವಿಸಿತು. ಅನಂತರ ಈತ ಚೀನ–ಜಪಾನುಗಳೊಂದಿಗೆ ಚೌಕಾಶಿ ಮಾಡಿ ಬ್ರಿಟಿಷರಿಗೆ ನಾನಾ ಸವಲತ್ತುಗಳನ್ನು ಗಿಟ್ಟಿಸಿಕೊಂಡ. ಇವನ ಸಾಮ್ರಾಜ್ಯಶಾಹಿ ಮನೋಭಾವ ಬಯಲಿಗೆ ಬಂದದ್ದು ಆಗ.

ಆ ವೇಳೆಗೆ ಭಾರತದ ಆಡಳಿತ ಈಸ್ಟ್ ಇಂಡಿಯ ಕಂಪನಿಯಿಂದ ಬ್ರಿಟಿಷ್ ಸರ್ಕಾರದ ವಶಕ್ಕೆ ಬಂದಿತ್ತು. 1858ರ ಕಾಯಿದೆಗೆ ಅನುಗುಣವಾಗಿ ಬ್ರಿಟಿಷ್ ಸರ್ಕಾರದಿಂದ ನೇರವಾಗಿ ನೇಮಕಗೊಂಡ ಪ್ರಥಮ ವೈಸರಾಯ್ ಈತ. ಹೊಸ ವ್ಯವಸ್ಥೆಯನ್ನು ಊರ್ಜಿತಗೊಳಿಸುವ ಕೆಲಸದಲ್ಲಿ ಈತ ಉದ್ಯುಕ್ತನಾಗಿದ್ದ. ವಾಯವ್ಯ ಗಡಿನಾಡಿನಲ್ಲಿ ಎದ್ದ ದಂಗೆಯನ್ನಡಗಿಸುವ ಕಾರ್ಯದಲ್ಲಿ ಇವನ ಸಜ್ಜಾದ ಉಕ್ಕಿನ ಕೈಮುಂದಾಯಿತು. ಎಂಟು ತಿಂಗಳ ವೈಸರಾಯ್‌ಗಿರಿಯಲ್ಲಿನ ದೊಡ್ಡ ಘಟನೆಯೆಂದರೆ ಇದೊಂದೇ. ಭಾರತದಲ್ಲಿ ಇವನ ಆಡಳಿತದ ಬಣ್ಣದ ಅರಿವಾಗುವ ಮುನ್ನವೇ ಈತ ಹೃದಯಾಘಾತದಿಂದ ನಿಧನನಾದ. ಧರ್ಮಶಾಲಾದಲ್ಲಿ ಈತನ ದೇಹವನ್ನು ಹೂಳಲಾಯಿತು. (ಬಿ.ಎಸ್.ಎಸ್.)

**ಎಲ್ಗಿನ್, ಲಾರ್ಡ್2:** 1849–1917. ಎಲ್ಗಿನ್ ಮತ್ತು ಕಿಂಕಾರ್ಡೀನ್‌ಗಳ ಎಂಟನೆಯ ಅರ್ಲನ ಮಗ, 9ನೆಯ ಅರ್ಲ್. ಹೆಸರು ವಿಕ್ಟರ್ ಅಲೆಗ್ಸಾಂಡರ್. 1894ರಿಂದ 1899ರವರೆಗೆ ಭಾರತದ ವೈಸರಾಯ್ ಆಗಿದ್ದ. ಈತನ ತಂದೆಯೂ ಭಾರತದ ವೈಸರಾಯ್ ಆಗಿದ್ದದ್ದರಿಂದ ಈತ ಎರಡನೆಯ ಲಾರ್ಡ್ ಎಲ್ಗಿನ್ ಎನಿಸಿಕೊಂಡಿದ್ದಾನೆ. ಈತನೂ ಈಟನ್ ಆಕ್ಸ್‌ಫರ್ಡ್‌ಗಳಲ್ಲಿ ವಿದ್ಯೆ ಗಳಿಸಿದ. ತಂದೆಯಂತೆ ದಕ್ಷನೇನೂ ಅಲ್ಲ. ಈತನ ಅಧಿಕಾರದ ಕಾಲದಲ್ಲಿ ಎರಡು ಮಹಾ ದುರ್ಘಟನೆಗಳು

ಒದಗಿದುವು: ಒಂದು, ಮುಂಬೈಯಲ್ಲಿ 1896ರಲ್ಲಿ ತಲೆದೋರಿದ ಪ್ಲೇಗು ಜಾಡ್ಯ; ಇನ್ನೊಂದು, ಇಡೀ ಭಾರತದಲ್ಲಿ ಸಂಭವಿಸಿದ ಭೀಕರ ಕ್ಷಾಮ (1896–97). ಎಲ್ಗಿನನ ಸರ್ಕಾರ ಇವೆರಡರ ವಿರುದ್ಧ ಯಾವ ಪರಿಣಾಮಕಾರಿ ಕ್ರಮವನ್ನೂ ಕೈಕೊಳ್ಳಲಿಲ್ಲ. ಬ್ರಿಟಿಷ್ ಭಾರತದಲ್ಲೇ ಸುಮಾರು ಹತ್ತು ಲಕ್ಷ ಮಂದಿ ಸತ್ತರು. ಪ್ಲೇಗ್ ಜಾಡ್ಯವನ್ನೆದುರಿಸುವ ನೆವದಲ್ಲಿ ಸರ್ಕಾರ ಕೈಕೊಂಡ ಉಗ್ರಕ್ರಮಗಳೂ ಜನರಿಗೆ ಹಿಡಿಸಲಿಲ್ಲ. ಭಾರತೀಯರ ಮರ್ಯಾದೆಗೆ ಭಂಗ ತರುವ ವರ್ತನೆಯಿಂದ ಮುಳಿದ ಪುಣೆಯ ಜನ ಇಬ್ಬರು ಬ್ರಿಟಿಷ್ ಅಧಿಕಾರಿಗಳನ್ನು ಕೊಂದರು. ಈ ಘಟನೆ ರಾಜಕೀಯ ಬಣ್ಣ ತಳೆಯಿತು.

ಎಲ್ಗಿನನ ವೈಸ್‌ರಾಯಿಗಿರಿಯಲ್ಲಿ ಇನ್ನೂ ಅನೇಕ ಅನಾಹುತಗಳು ಸಂಭವಿಸಿದುವು. ಬ್ರಿಟಿಷ್ ಸರ್ಕಾರದ ಹಣಕಾಸಿನ ನೀತಿ ಭಾರತೀಯರ ಹಿತಕ್ಕೆ ವಿರೋಧವಾಗಿತ್ತೆಂಬುದು ಬಯಲಿಗೆ ಬಂದದ್ದು ಆಗ. 1895ರ ಆಯ–ವ್ಯಯದ ಕೊರತೆ ತುಂಬುವ ನೆವದಿಂದ ಸರ್ಕಾರ ಆಗ ಭಾರತದ ಆಮದು ವಸ್ತುಗಳ ಮೇಲೆ ಶೇಕಡಾ 5ರ ಸುಂಕ ವಿಧಿಸಿತು. ಆದರೆ ಲ್ಯಾಂಕಷೈರಿನಿಂದ ಭಾರತಕ್ಕೆ ಬರುತ್ತಿದ್ದ ಹತ್ತಿಯ ಬಟ್ಟೆಗೆ ಮಾತ್ರ ಈ ಸುಂಕದಿಂದ ವಿನಾಯಿತಿಯಿತ್ತು. ಬ್ರಿಟಿಷ್ ತಯಾರಿಕೆದಾರರ ಬಗ್ಗೆ ತೋರಿದ ಈ ಪಕ್ಷಪಾತದಿಂದ ಭಾರತದಲ್ಲಿ ಉಂಟಾದ ಅಸಮಾಧಾನವನ್ನು ನಿವಾರಿಸಲೋ ಎಂಬಂತೆ ಆ ಪದಾರ್ಥಗಳ ಮೇಲೂ ಸುಂಕ ಜಾರಿಗೆ ತರಲಾಯಿತಾದರೂ ಭಾರತೀಯ ಜವಳಿಯ ಮೇಲೆ ಇದೇ ಪ್ರಮಾಣದ ಪ್ರತಿಸುಂಕ ವಿಧಿಸಿದಾಗ ಬ್ರಿಟಿಷ್ ಸರ್ಕಾರದ ಕುಟಿಲನೀತಿ ಸ್ಪಷ್ಟವಾಯಿತೆನ್ನ ಬಹುದು. ಭಾರತದ ಹತ್ತಿಜವಳಿ ಕೈಗಾರಿಕೆಯನ್ನು ಬೆಳೆಯಗೊಡಬಾರದೆಂಬುದೇ ಇದರ ಹಿಂದಿದ್ದ ಉದ್ದೇಶ.

ವಾಯವ್ಯ ಗಡಿನಾಡಿನಲ್ಲಿ ಲಾರ್ಡ್ ಎಲ್ಗಿನನ ಸರ್ಕಾರ ಅನವಶ್ಯಕವಾಗಿ ಗೊಂದಲವನ್ನುಂಟುಮಾಡಿತು. ಚಿತ್ರಾಲಿನ ಸಿಂಹಾಸನಕ್ಕೆ ಯಾರು ಬರಬೇಕೆಂಬ ಬಗ್ಗೆ ಸರ್ಕಾರ ಬಾಯಿಹಾಕಿದ್ದರಿಂದ ಅಲ್ಲಿ ಉದ್ಭವಿಸಿದ ಅಸಾಮಾಧಾನವನ್ನಡಗಿಸಲು ಭಾರತದ ಬ್ರಿಟಿಷ್ ಸೇನೆ ಅಲ್ಲಿಗೆ ನುಗ್ಗಿತು. ಇದರಿಂದ ನೆರೆಯ ಜನರೂ ದಂಗೆಯೆದ್ದರು. ಎರಡು ಯುದ್ಧಗಳು ನಡೆದುವು. 1898ರಲ್ಲಿ ಬ್ರಿಟಿಷ್ ಸರ್ಕಾರ ಕೊನೆಗೆ ಜಯಗಳಿಸಿತಾದರೂ 1857ರ ಅನಂತರ ಸರ್ಕಾರ ಎದುರಿಸಿದ ದೊಡ್ಡಗಂಡಾಂತರಗಳಲ್ಲಿ ಇದೂ ಒಂದು.

ಲಾರ್ಡ್ ಎಲ್ಗಿನ್ ಆಡಂಬರಪ್ರಿಯನಾಗಿರಲಿಲ್ಲ. ಆದರೆ ಈತನ ಆಡಳಿತ ಜಯಪ್ರದವಾಗಲಿಲ್ಲ. ಭಾರತದ ರಾಜಕೀಯ ಸುಧಾರಣೆಗಳ ಬಗ್ಗೆ ಲಾರ್ಡ್ ಮಾರ್ಲೆ ನೀಡಿದ ಸಲಹೆಗಳನ್ನು ವಿರೋಧಿಸಿದವರ ಪೈಕಿ ಇವನೂ ಒಬ್ಬ. *

**ಎಲ್ಡೊರಾಡೊ:** ಚಿನ್ನದ ಮುಲಾಮಿನ ಎಂಬ ಅರ್ಥ ಬರುವ ಈ ಶಬ್ದ ಅಮೆರಿಕದ ಕೊಲಂಬಿಯದ ಬೊಗೊಟ ಬಳಿಯ ಇಂಡಿಯನ್ ನಗರವೊಂದರ ನಾಯಕನ ಹೆಸರಾಗಿತ್ತು. ಪರ್ವದಿನಗಳಲ್ಲಿ ಆತ ಮೈತುಂಬ ಸ್ವರ್ಣಧೂಳಿ ಲೇಪಿಸಿಕೊಂಡು ಬತ್ತಲೆಯಾಗಿ ಸರೋವರದಲ್ಲಿ ಧುಮುಕಿ ಮೀಯುತ್ತಿದ್ದನೆಂದು ಪ್ರತೀತಿ. ಆತನ ಪ್ರಜೆಗಳು ನೀರಿಗೆ ಒಡವೆಗಳನ್ನೂ ಸ್ವರ್ಣದ ವಸ್ತುಗಳನ್ನೂ ಹಾಕುತ್ತಿದ್ದರು. ಈ ದಂತಕಥೆಯನ್ನು ಕೇಳಿದ ಸ್ಪ್ಯಾನಿಷರು ಪೆರುವಿನಿಂದಲೂ ಜರ್ಮನರು ವೆನಿಜುವೇಲ ದಿಂದಲೂ ಆ ಸ್ವರ್ಣಪುರುಷನನ್ನು ಅನ್ವೇಷಿಸುತ್ತ ಇಲ್ಲಿಗೆ ಬಂದರು. ಆದರೆ ಆತ ಕಾಣಸಿಗಲಿಲ್ಲ. ಸ್ಪ್ಯಾನಿಷರು ಸುತ್ತಿನ ಪ್ರದೇಶವನ್ನೆಲ್ಲ ಜಯಿಸಿದರು. ಅನ್ವೇಷಣೆ ನಿಲ್ಲದೆ ಮುಂದುವರಿಯಿತು. ಇಲ್ಲೆಲ್ಲ ಚಿನ್ನದ ಆಸೆಯಿಂದ ಅಲೆದಾಡಿ ನೆಲವನ್ನು ಗೆದ್ದುಕೊಂಡ ಪಾಶ್ಚಾತ್ಯರು ಇಡೀ ಪ್ರದೇಶವನ್ನೇ ಎಲ್ಡೊರಾಡೊ ಎಂದು ಕರೆದರು. ಬ್ರೆಜಿಲಿನವರು ರಚಿಸಿದ ನಕ್ಷೆಯಲ್ಲಿ ಎಲ್ಡೊರಾಡೊವೂ ಸ್ಥಾನ ಪಡೆಯಿತು. ಚಿನ್ನ ಇದೆಯೆಂದು ನಂಬಲಾಗಿದ್ದ ಇಂಥ ಮಿಥ್ಯಾ ಪ್ರದೇಶಗಳು ಅನೇಕವಿವೆ ಅಪ್ರಯಾಸವಾಗಿ ಶೀಘ್ರಸಂಪತ್ತು ದೊರಕಬಹುದಾದ ಪ್ರದೇಶವನ್ನು ಎಲ್ಡೊರಾಡೊ ಎಂದು ಕರೆಯುವುದು ವಾಡಿಕೆ ಯಾಗಿದೆ. ಸಾಹಿತ್ಯದಲ್ಲೂ ಇದು ಸ್ಥಾನ ಪಡೆದಿದೆ (ಉದಾ: ಮಿಲ್ಟನನ ಪ್ಯಾರಡೈಸ್ ಲಾಸ್ಟ್; ವಾಲ್ಟೇರನ ಕ್ಯಾಂಡಿಡೆ). *

**ಎಲ್ಬ್:** ಮಧ್ಯ ಯುರೋಪಿನ ಒಂದು ಮುಖ್ಯ ನದಿ, ಬೊಹೀಮಿಯ ಪೀಠಭೂಮಿಯಲ್ಲಿ ಹುಟ್ಟಿ, ಚೆಕೋಸ್ಲವಾಕಿಯ ಮತ್ತು ಜರ್ಮನಿಗಳಲ್ಲಿ ಹರಿದು ಹ್ಯಾಂಬರ್ಗಿನಲ್ಲಿ ಉತ್ತರ ಸಮುದ್ರ ಸೇರುವ ಈ ನದಿಯ ಉದ್ದ ಸು. 1100 ಕಿಮೀ ಮೊದಲು ಇದು ದಕ್ಷಿಣಾಭಿಮುಖವಾಗಿ ಹರಿಯುತ್ತದೆ. 4600’ ಎತ್ತರದಿಂದ 700’ ಎತ್ತರದ ಇಳಿಜಾರು ನೆಲಕ್ಕೆ ಧುಮುಕಿ, ಪಾರ್‌ಡುಬಿಟ್ಸೆ ಬಳಿ ಪಶ್ಚಿಮದ ಕಡೆ ತಿರುಗಿ, ಬೊಹೀಮಿಯದ ಅತ್ಯಂತ ವಿಶಾಲ ಹಾಗೂ ಫಲವತ್ತಾದ ಬಯಲನ್ನು ಪ್ರವೇಶಿಸುತ್ತದೆ. ಅನಂತರ ವಾಯವ್ಯಾಭಿಮುಖವಾಗಿ ಹರಿಯುವ ಈ ನದಿಗೆ ಮೆಲ್‌ನಿಕ್ ಮತ್ತು ಲಿಟೊಮೆರಿಸ್ ಬಳಿ ಕ್ರಮವಾಗಿ ವಲ್ಟಾವ ಮತ್ತು ಏಗರ್ ಉಪನದಿಗಳು ಬಂದು ಸೇರುತ್ತವೆ. ಬೊಹೀಮಿಯವನ್ನು ಬಿಡುವುದಕ್ಕೆ ಮುಂಚೆ, ಎರ್ಟ್ಸ್‌ಗೆಬಿರ್ಜೆ ಪರ್ವತಾವಳಿಗಳಲ್ಲಿನ ಆಳವಾದ ಪ್ರಪಾತಗಳನ್ನು ಹಾಯ್ದು ಹೋಗುತ್ತದೆ. ಇದುವರೆಗೆ ಚೆಕೋಸ್ಲವಾಕಿಯದಲ್ಲಿ ಕ್ರಮಿಸಿದ ನದಿ ಅನಂತರ ಜರ್ಮನಿಯಲ್ಲಿ ಹರಿಯುತ್ತದೆ.

ಡ್ರೆಸ್‌ಡೆನ್‌ನಿಂದ ಉತ್ತರ ಸಮುದ್ರ ಸೇರುವ ವರೆಗೆ ಈ ನದಿ ಹರಿಯುವ ಪ್ರದೇಶ ಸಮಮಟ್ಟವಾದದ್ದು. ಆಗ ಸಾಮಾನ್ಯವಾಗಿ ಇದರ ದಿಕ್ಕು ವಾಯವ್ಯ. ತಿರುವು ಮುರಿವಾಗಿ ಸಾಗುವ ಈ ನದಿ ಮುಂದೆ ಹರಿಯುವುದು ಹಿಮಚಲನೆಯಿಂದುಂಟಾದ, ಪ್ರಾಚೀನ ನದಿಕೊಳ್ಳಗಳ ಹಾದಿಯಲ್ಲಿ. ಇದನ್ನು ಕೂಡಿಕೊಳ್ಳುವ ಎರಡು ನದಿಗಳು ಮೂಲ್ಡೆ ಮತ್ತು ಜ಼ಾಲೆ. ಇವು ಲೈಪ್‌ಸಿಗ್ ಕೈಗಾರಿಕಾವಲಯಕ್ಕೆ ಮಾತೃರೂಪದಂತಿವೆ. ಮ್ಯಾಗ್ಡೆಬರ್ಗ್‌ನಿಂದ ಹ್ಯಾಂಬರ್ಗ್‌ವರೆಗೆ ನದಿಯ ಎರಡೂ ದಡಗಳು ಜೌಗು ಪ್ರದೇಶಗಳಿಂದ ಕೂಡಿವೆ. ಆದರೆ ನೀರನ್ನು ಹೊರತೆಗೆದು ಹುಲ್ಲುಗಾವಲುಗಳನ್ನು ನಿರ್ಮಿಸಿರುವುದರಿಂದ ಇಲ್ಲಿ ಸಾಮಾನ್ಯ ಜನವಸತಿಯುಂಟು. ಅನೇಕ ಕಾಲುವೆಗಳ ಮುಖಾಂತರ ಇದಕ್ಕೂ ಇತರ ನದಿಗಳಿಗೂ ಸಂಪರ್ಕ ಕಲ್ಪಿಸಲಾಗಿದೆ.

ಎಲ್ಬ್ ನದಿ ಸಮುದ್ರ ಸೇರುವ ಎಡೆಯಿಂದ ಒಳಕ್ಕೆ 140 ಕಿಮೀ ದೂರದಲ್ಲಿರುವ ಜಂಟಿ ಬಂದರುಗಳೇ ಹ್ಯಾಂಬರ್ಗ್ ಮತ್ತು ಆಲ್ಟೋನ. ಈ ಬಳಿಯಲ್ಲಿ ಎಲ್ಬಿನಿಂದ ಹೊರಟು ಬಾಲ್ಟಿಕ್ ಸಮುದ್ರ ಸೇರುವ ಕೀಲ್ ಕಾಲುವೆ ಇದೆ.

ಈ ನದಿಯ ಜಲಾನಯನ ಪ್ರದೇಶ 90123.264ಕಿಮೀ ಸರಾಸರಿಯಲ್ಲಿ ಸೆಕೆಂಡಿಗೆ 7315.2ಮೀ ನೀರು ಈ ನದಿಯಲ್ಲಿ ಹರಿಯುತ್ತದೆ, ಇದು ಪರಿಮಾಣದಲ್ಲಿ ರೈನ್ ನದಿಯ 1/3ರಷ್ಟು. ಈ ನದಿಯ ಕೆಳಭಾಗ ಚಳಿಗಾಲದಲ್ಲಿ ಹೆಪ್ಪುಗಟ್ಟುತ್ತದೆ. (ಕೆ.ಆರ್.ಆರ್.)

**ಎಲ್ಬ:** ಇಟಲಿಯ ಪಶ್ಚಿಮ ತೀರದಲ್ಲಿರುವ ಒಂದು ದ್ವೀಪ. ಟಸ್ಕನಿ ಪ್ರದೇಶದ ಲೆಗ್‌ಹಾರನಿನ ಒಂದು ಭಾಗ. ವಿಸ್ತೀರ್ಣ 138.40358 ಕಿಮೀ. ಜನಸಂಖ್ಯೆ 31,572 (2009). ಪಶ್ಚಿಮ ಭಾಗದಲ್ಲಿ ಅಭ್ರಕ, ಪ್ರಶಸ್ತ ಬೆಣಚುಕಲ್ಲು ಮತ್ತು ಸುಣ್ಣಕಲ್ಲಿನ ನಿಕ್ಷೇಪಗಳೂ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಳೂ ಇವೆ.

ಇಲ್ಲಿಯ ಹಿತಕರವಾದ ವಾತಾವರಣದಿಂದಾಗಿ ಎಲ್ಲ ರೀತಿಯ ಸಸ್ಯವರ್ಗ ಬೆಳೆಯಲು ಅನುಕೂಲವಾಗಿದೆ. ಆಲಿವ್ ಮರಗಳು, ದ್ರಾಕ್ಷಿ ಬಳ್ಳಿಗಳು ಹೇರಳ. ಇಲ್ಲಿಯ ಕಬ್ಬಿಣದ ಅದಿರಿಗೆ ಇಟ್ರುಸ್ಕನ್ ಸಂಸ್ಕೃತಿಯ ಅವಶೇಷಗಳ ಹೋಲಿಕೆಯಿರುವುದರಿಂದ ಎಲ್ಬ ಆ ಸಂಸ್ಕೃತಿಯ ಪ್ರಮುಖ ಕೇಂದ್ರವಾಗಿತ್ತೆಂದು ಊಹೆ. ಮಧ್ಯಯುಗದಲ್ಲಿ ಇದನ್ನು ಪೀಸ ಜನ ಆಳುತ್ತಿದ್ದರು. ಇದು 1399ರಲ್ಲಿ ಪಿಯಾಂಬಿನೋದ ಡ್ಯೂಕರ ಕೈಯಲ್ಲೂ 1548ರಲ್ಲಿ ಫ್ಲಾರೆನ್ಸಿನ ಒಂದನೆಯ ಕಾಸಿಮೊ ಕೈಯಲ್ಲೂ 1595–1709ವರೆಗೆ ಸ್ಪೇನಿನ ವಶದಲ್ಲೂ ಇದ್ದು ಅನಂತರ ನೇಪಲ್ಸಿನವರ ಅಧೀನಕ್ಕೆ ಬಂತು. 1802ರಲ್ಲಿ ಇದನ್ನು ಫ್ರಾನ್ಸ್ ಗದ್ದಿತು. 1814ರಲ್ಲಿ ಒಂದನೆಯ ನೆಪೋಲಿಯನ್ ರಾಜ್ಯಭ್ರಷ್ಟನಾಗಿ ಎಲ್ಬಕ್ಕೆ ಬಂದ. ಅನಂತರ ಇದೊಂದು ಸ್ವತಂತ್ರ ಸಂಸ್ಥಾನವಾಗಿ ಪರಿವರ್ತನೆ ಹೊಂದಿತು. ನೆಪೋಲಿಯನ್ನನೇ ಇದರ ರಾಜ್ಯಸೂತ್ರಗಳನ್ನು ನಡೆಸುತ್ತಿದ್ದ. ಅವನ ಅನಂತರ 1860ರಲ್ಲಿ ಇದು ಮತ್ತೆ ಇಟಲಿಯ ವಶವಾಯಿತು.

ಪಾರ್ಟೊಫೇರ್ರಾಯೋ ಮುಖ್ಯ ಪಟ್ಟಣ ಹಾಗೂ ಬಂದರು. ಇದು ನೆಪೋಲಿಯನ್ನನ ಮುಖ್ಯ ಠಾಣ್ಯವಲ್ಲದೆ ಅವನ ಬೇಸಗೆಯ ತಂಗುದಾಣವೂ ಆಗಿತ್ತು. ಆತ ಬಳಸುತ್ತಿದ್ದ ಕಟ್ಟಡಗಳೂ ಸುಂದರವಾದ ಚಿತ್ರಗಳ ಶಾಲೆಯೂ ಇಲ್ಲಿವೆ. *

**ಎಲ್ಮ್ ಗಿಡ:** ಅಲ್ಮೇಸಿ ಕುಟುಂಬಕ್ಕೆ ಸೇರಿದ ಅಲ್ಮಸ್ ಜಾತಿಯ ಒಂದು ಗಿಡ. ಈ ಜಾತಿಯಲ್ಲಿ ಸು.16 ಪ್ರಭೇದಗಳಿವೆ ಇವು ಉತ್ತರಗೋಳದ ಸಮಶೀತೋಷ್ಣ ಪ್ರದೇಶಗಳ ಬೆಟ್ಟಗುಡ್ಡಗಳಲ್ಲೂ ಉಷ್ಣ ಪ್ರದೇಶಗಳ ಎಲೆ ಉದುರುವ ಕಾಡುಗಳಲ್ಲೂ ಬೆಳೆಯುತ್ತವೆ. ಅಲ್ಮಸ್ ಇಂಟೆಗ್ರಿಪೋಲಿಯ ಅಥವಾ ಹೊಲೋಪ್ಟೀಲಿಯ ಇಂಟೆಗ್ರಿಫೋಲಿಯ ಎಂಬ ಪ್ರಭೇದವನ್ನು ಇಂಡಿಯನ್ ಎಲ್ಮ್ ಎಂದೂ ಕನ್ನಡದಲ್ಲಿ ತಪ್ಸಿಮರ ಎಂದೂ ಕೊಡವ ಭಾಷೆಯಲ್ಲಿ ಕಲಾದ್ರಿ ಎಂದೂ ಕರೆಯುತ್ತಾರೆ. ಸಂಸ್ಕೃತದಲ್ಲಿ ಇದನ್ನು ಚಿರಬಿಲ್ವ ಎಂದು ಹೇಳುತ್ತಾರೆ. ಇದು ಹಿಮಾಲಯದ ಬೆಟ್ಟಗಳಲ್ಲಿ 700 ಮೀ ಮೇಲ್ಪಟ್ಟದ ಪ್ರದೇಶಗಳಲ್ಲೂ ಮಧ್ಯಭಾರತ ಮತ್ತು ಇತರ ಕಡೆಗಳಲ್ಲೂ ಬೆಳೆಯುತ್ತದೆ. ಆಲ್ಮಸ್ ಕಾಂಪೆಸ್ಟ್ರಿಸ್ ಎಂಬುದನ್ನು ಇಂಗ್ಲಿಷ್ ಎಲ್ಮ್ ಎಂದು ಕರೆಯುತ್ತಾರೆ, ಇದನ್ನು ಇಂಗ್ಲೆಂಡಿನಲ್ಲಿ ಉದ್ಯಾನ, ಹುಲ್ಲುಗಾವಲುಗಳಲ್ಲಲ್ಲದೆ ಬೇಲಿಗಿಡವಾಗಿಯೂ ಬೆಳೆಸುತ್ತಾರೆ. ಇದರಲ್ಲಿ ಕೊಂಬೆಗಳಿಂದ ಮಾತ್ರ ವ್ಯವಸಾಯ ಸಾಧ್ಯ. ಅಲ್ಮಸ್ ಸಟೈವ ಎಂಬುದನ್ನು ಕಿರು ಎಲೆಗಳ ಎಲ್ಮ್ ಎಂದೂ ಅಲ್ಮಸ್ ನೈಟೆನ್ಸನ್ನು ನುಣುಪೆಲೆಗಳ ಎಲ್ಮ್ ಎಂದೂ ಆಲ್ಮಸ್ ಗ್ಲಾಬ್ರವನ್ನು ವಿಚ್ ಎಲ್ಮ್ ಎಂದೂ ಕರೆಯುತ್ತಾರೆ.ಹಾಗೆಯೇ ಡಚ್ ಎಲ್ಮ್ (ಆಲ್ಮಸ್ ಹಾಲೆಂಡಿಕ), ಕಾರ್ನಿಷ್ ಎಲ್ಮ್ (ಆಲ್ಮಸ್ ಮೈನರ್), ಅಮೆರಿಕನ್ ಎಲ್ಮ್ (ಆಲ್ಮಸ್ ಅಮೆರಿಕಾನ) ಎಂಬವೂ ಎಲ್ಮ್ ಗಿಡಗಳ ಗುಂಪಿಗೆ ಸೇರಿವೆ.

ಎಲ್ಮ್ ಗಿಡದಲ್ಲಿ ಹೂಗಳು ಗೊಂಚಲುಗೊಂಚಲಾಗಿ ಬಿಡುತ್ತವೆ. ಹೂಗಳ ಪುಷ್ಪಪತ್ರಗಳಿಗೂ ದಳಗಳಿಗೂ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಅಂಡಾಶಯ ಎರಡು ಕಾರ್ಪೆಲ್ಲುಗಳಿಂದ ಕೂಡಿದ ಸಂಯುಕ್ತ ರೂಪದ್ದು.

ಇಂಡಿಯನ್ ಎಲ್ಮ್ ಗಿಡದ ಬೀಜಗಳಿಂದ ಒಂದು ವಿಧವಾದ ಎಣ್ಣೆಯನ್ನು ತೆಗೆಯುತ್ತಾರೆ. ಮರ ತಿಳಿಹಳದಿ ಮಿಶ್ರಿತ ಬೂದು ಬಣ್ಣವಾಗಿದೆ. ಚೇಗು ಇಲ್ಲ. ಮರವನ್ನು



ಎಡಗಡೆಯದು ಗಂಡು ಹೂಗೊಂಚಲು, ಮಧ್ಯದ್ದು ರೆಂಬೆ, ಬಲಗಡೆಯದು ಹೆಣ್ಣು ಹೂಗೊಂಚಲು

ವಾಣಿಜ್ಯ ಭಾಷೆಯಲ್ಲಿ ಕಂಜಿ ಎಂದು ಕರೆಯುತ್ತಾರೆ. ಮರ ಮನೆ ಕಟ್ಟುವುದಕ್ಕೂ ಗಾಡಿಗಳನ್ನು ತಯಾರಿಸುವುದಕ್ಕೂ ಕೆತ್ತನೆ ಕೆಲಸಕ್ಕೂ ಬರುತ್ತದೆ. ಕೆಲವು ಕಡೆಗಳಲ್ಲಿ ಸೌದೆಗೂ ಇದ್ದಲು ತಯಾರಿಸುವುದಕ್ಕೂ ಇದನ್ನು ಉಪಯೋಗಿಸುತ್ತಾರೆ. (ಎಂ.ಸಿ.ಆರ್.)

**ಎಲ್ಯಟ್, ಸರ್ ಥಾಮಸ್:** 1490–1546. ಇಂಗ್ಲೆಂಡಿನ ರಾಯಭಾರ ಕುಶಲಿ, ವಿದ್ವಾಂಸ, ಲೇಖಕ, ನಿಘಂಟುಕಾರ. ನ್ಯಾಯಮೂರ್ತಿಯೊಬ್ಬನ ಮಗನಾಗಿ ಜನಿಸಿದ ಈತ ಖಾಸಗಿಯಾಗಿ ವಿದ್ಯಾಭ್ಯಾಸ ಪಡೆದು ನಾನಾ ಹುದ್ದೆಗಳಲ್ಲಿದ್ದು ಆಕ್ಸ್‌ಫರ್ಡ್‌ಷೈರ್ ಮತ್ತು ಬರ್ಕ್‌ಷೈರ್‌ಗಳ ಶೆರೀಫನಾದ (1527). 1530ರಲ್ಲಿ ಈತನಿಗೆ ನೈಟ್ ಪದವಿ ದೊರಕಿತು. ಮುಂದಿನ ಎರಡು ವರ್ಷಗಳ ಕಾಲ ಈತ ಸ್ಪೇನಿನ ಐದನೆಯ ಚಾರಲ್ಸನ ಆಸ್ಥಾನದಲ್ಲಿ ಇಂಗ್ಲೆಂಡಿನ ಎಂಟನೆಯ ಹೆನ್ರಿಯ ರಾಯಭಾರಿಯಾಗಿದ್ದ. 1535ರಲ್ಲಿ ಮತ್ತೆ ಆ ಹುದ್ದೆಯಲ್ಲಿದ್ದನೆಂದೂ ಕಾಣುತ್ತದೆ. ಇಂಗ್ಲೆಂಡಿನ ಮಾನವಹಿತಜ್ಞರ (ಹ್ಯೂಮನಿಸ್ಟ್) ಪೈಕಿ ಎಲ್ಯಟನೂ ಒಬ್ಬ. ಅಭಿಜಾತ ನೀತಿಬೋಧಕರ ಸಿದ್ಧಾಂತಗಳನ್ನು ತನ್ನ ದೇಶಬಾಂಧವರಲ್ಲಿ ಪ್ರಚುರಪಡಿಸುವುದರಲ್ಲಿ ಈತ ನಿರತನಾಗಿದ್ದ; ಈ ಉದ್ದೇಶದಿಂದಲೇ ಐಸಾಕ್ರಟೀಸ್ ಮತ್ತು ಪ್ಲೂಟಾರ್ಕರ ಕೃತಿಗಳನ್ನು ಆಂಗ್ಲೀಕರಿಸಿದ. ದಿ ಬ್ಲೋಕ್ ನೇಮ್ಡ್ ದಿ ಗವರ್ನರ್ ಈತನ ಅತ್ಯಂತ ಪ್ರಸಿದ್ಧ ಕೃತಿ. ಇದು ಪ್ಲೇಟೋ, ಅರಿಸ್ಟಾಟಲ್, ಸಿಸರೋ, ಕ್ವಿಂಟಲ್ಯನ್, ಪ್ಲೂಟಾರ್ಕ್ ಮುಂತಾದವರ ಅಭಿಜಾತ ಕೃತಿಗಳ ಸಾರಸಂಗ್ರಹವಾಗಿದೆ.

ಎಲ್ಯಟ್‌ನ ಚಿಂತನದಲ್ಲಿ ಅವನ ಸ್ವಂತದ್ದೇನೂ ಅಷ್ಟಾಗಿ ಇಲ್ಲ. ಆದರೆ ಆಗಿನ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಸ್ವಂತಿಕೆಗೆ ಅಷ್ಟಾಗಿ ಬೆಲೆ ಇರಲಿಲ್ಲ. ಅಭಿಜಾತ ಸಾಹಿತ್ಯವೇ ನಿಜವಾದ ಜ್ಞಾನದ ಗಣಿ; ಸಮಕಾಲೀನ ಬರ್ಬರತನವನ್ನು ಹೋಗಲಾಡಿಸಲು ಅದೊಂದು ಸಂಜೀವಿನಿ– ಎಂಬ ಭಾವನೆ ಇದ್ದ ಕಾಲದಲ್ಲಿ ಎಲ್ಯಟ್ ಬದುಕಿದ್ದ. ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಶ್ರೀಮಂತ ಪ್ರಭುತ್ವ, ಸಮಾಜನಿಷ್ಠೆ, ಉಪಕೃತಿ ಮುಂತಾದ ಅರ್ಥಗಳುಳ್ಳ ಪದಗಳನ್ನು ಇಂಗ್ಲಿಷಿನಲ್ಲಿ ಬಳಕೆಗೆ ತಂದವನು ಎಲ್ಯಟ್. ನೀತಿಬೋಧೆಯ ಕಾರ್ಯದಲ್ಲಿ ಅವನಿಗೆ ಈ ಶಬ್ದಗಳು ಅನುವಾಗಿ ಒದಗಿಬಂದುವು. ಈತ ಲ್ಯಾಟಿನ್ ನಿಘಂಟೊಂದನ್ನು ರಚಿಸಿದ್ದಾನೆ (1538). *

**ಎಲ್ಯಾಟೆರಿಯಂ:** ಎಕ್ಬಾಲಿಯಂ ಎಲ್ಯಾಟೆರಿಯಂ ಎಂಬ ಮೆಡಿಟರೇನಿಯನ್ ಪ್ರದೇಶದ ಸರ್ವಋತು ಬಳ್ಳಿಯಿಂದ ತೆಗೆದ ಬೂದು ಛಾಯೆಯ ಹಸುರು ಬಣ್ಣದ ಕಹಿ ಪದಾರ್ಥ. ಇದು ಭೇದಿ ಮಾಡಿಸುವ ಔಷಧಿ. ಆಲ್ಕೊಹಾಲಿನಲ್ಲಿ ಇದನ್ನು ಸಂಸ್ಕರಿಸಿ ಎಲ್ಯಾಟೆರಿನನ್ನು ಪಡೆಯುತ್ತಾರೆ. ಈ ಎಲ್ಯಾಟೆರಿನಿನಲ್ಲಿ $\alpha$–ಮತ್ತು $\beta$–ಎಲ್ಯಾಟೆರಿನುಗಳೆರಡೂ ಇರುತ್ತವೆ. ಎಲ್ಯಾಟೆರಿನಿನ ಕರಗುವ ಬಿಂದು $220^0$ಸೆ. ಇದರಿಂದ ಮಾನವನ ಶರೀರದ ಮೇಲೆ ಯಾವ ಪ್ರಭಾವವೂ ಇಲ್ಲ. ಎಲ್ಯಾಟೆರಿನಿನ ಕರಗುವ ಬಿಂದು ಬಹು ಕೆಳಗಿರುತ್ತದೆ. ಅದಕ್ಕೆ ವಿರೇಚಕ ಗುಣವಿದೆ. ಮಾರುಕಟ್ಟೆಯ ಎಲ್ಯಾಟೆರಿನಿನಲ್ಲಿ ಶೇ. 60–80ಭಾಗ ಕ್ರಿಯಾಶಕ್ತವಲ್ಲದ ಎಲ್ಯಾಟೆರಿನ್ನೇ ಇರುತ್ತದೆ. (ಎಂ.ಆರ್.ಆರ್)

**ಎಲ್ಯಾಟೊಸ್ಟೆಮ:** ಅರ್ಟಿಕೇಸೀ ಕುಂಟುಂಬಕ್ಕೆ ಸೇರಿದ ಒಂದು ಸಸ್ಯಜಾತಿ. ಉಷ್ಣ ಹಾಗೂ ಉಪೋಷ್ಣವಲಯಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಇದರಲ್ಲಿ ಸುಮಾರು 120 ಪ್ರಭೇದಗಳಿವೆ. ಭಾರತದಲ್ಲಿ ಸು. 29 ಪ್ರಭೇದಗಳು ಬೆಳೆಯುತ್ತವೆ. ಇವುಗಳಲ್ಲಿ ಮುಖ್ಯವಾದ ಎ.ಸೆಸ್ಸೈಲ್ ಎಂಬುದು ಹಿಮಾಲಯ, ಅಸ್ಸಾಂ ಮತ್ತು ನೀಲಗಿರಿ ಬೆಟ್ಟಗಳಲ್ಲಿ 5396.24 ಮೀ. ಎತ್ತರದ ಪ್ರದೇಶಗಳಲ್ಲಿ ಬೆಳೆಯುವುದು.

ಇದು ಒಂದು ಮೂಲಿಕೆ, ಚಿಕ್ಕದಾಗಿದ್ದಾಗ ನೆಲದ ಮೇಲೆಯೆ ಹರಡಿಕೊಂಡಂತಿದ್ದರೂ ಕ್ರಮೇಣ, ಯಾವುದಾದರೂ ಆಸರೆ ಸಿಕ್ಕಿದರೆ, ಬಳ್ಳಿಯಂತೆ ಹಬ್ಬಿ 2.5 ಮೀ ಎತ್ತರಕ್ಕೆ ಬೆಳೆಯ ಬಲ್ಲುದು. ಎಲೆಗಳು ಸರಳ, ಅವುಗಳ ತೊಟ್ಟು ಚಿಕ್ಕವು. ಆಕಾರ ಭಲ್ಲೆಯಂತೆ. ಅಂಚು ಗರಗಸದ ಹಲ್ಲಿನಂತೆ.

ಇದರ ಎಲೆಗಳಿಂದ ತಯಾರಿಸಿದ ಬೆಚ್ಚಾರವನ್ನು (ಪೋಲ್ಟೀಸ್) ಉದರ ಸಂಬಂಧಿ ವ್ಯಾಧಿಗಳ ನಿವಾರಣೆಗೆ ಉಪಯೋಗಿಸುತ್ತಾರೆ. *

**ಎಲ್ಯಾಸ್ಟೊಮರ್:** ರಬ್ಬರಿನ ಗುಣಗಳಿರುವ ಸಂಯೋಜಿತ ವಸ್ತು. ಇದರ ವಸ್ತುಗಳಿಗೆ ರಬ್ಬರಿನ ಪ್ರಧಾನ ಲಕ್ಷಣವಾದ ಸ್ಥಿತಿಸ್ಥಾಪಕತೆ ಇದೆ. ನಿರ್ದಿಷ್ಟ ಸಂದರ್ಭಗಳಲ್ಲಿ ರಬ್ಬರಿಗಿಂತ ಇವುಗಳ ಉಪಯುಕ್ತತೆ ಹೆಚ್ಚು. 1930ರಿಂದಲೂ ಇವು ಮಾರುಕಟ್ಟೆಯಲ್ಲಿವೆ. ಆದರೆ ಎಲ್ಯಾಸ್ಟೊಮರುಗಳ ಉತ್ಪಾದನೆಯಲ್ಲಿ ಸ್ಪಷ್ಟ ಏರಿಕೆಯಾದದ್ದು ಎರಡನೆಯ ಮಹಾಯುದ್ಧದ ತರುವಾಯ. ಅಮೆರಿಕ ಸಂಯುಕ್ತ ಸಂಸ್ಥಾನಗಳು, ಜರ್ಮನಿ, ಕೆನಡ ಮತ್ತು ರಷ್ಯಗಳು ಇವನ್ನು ಉತ್ಪಾದಿಸುವ ಪ್ರಮುಖ ದೇಶಗಳು. ರಬ್ಬರಿನಂಥ ವಸ್ತುಗಳನ್ನು ಸಂಯೋಜಿಸಬಹುದೆಂಬ ತತ್ತ್ವ ಇತ್ತೀಚಿನ ಶೋಧವೇನೂ ಅಲ್ಲ. 1879ರಲ್ಲಿಯೇ ಫ್ರಾನ್ಸಿನ ಜಿ.ಬೂಕಾರ್ಟ ಐಸೊಪ್ರೀನ್ ಮತ್ತು ಹೈಡ್ರೊಕ್ಲೋರಿಕಾಮ್ಲದ ವರ್ತನೆಯಿಂದ ಅಂಥದೊಂದು ವಸ್ತುವನ್ನು ತಯಾರಿಸಿದ್ದ. ಪ್ರಾಯಶಃ ಈ ಕ್ರಿಯೆ ನಡೆದಾಗ ಐಸೊಪ್ರೀನಿನ ಒಂದು ಭಾಗ ವಾಯುಮಂಡಲದ ಆಕ್ಸಿಜನ್ನಿನಿಂದ ಪೆರಾಕ್ಸೈಡಿಗೆ ಉತ್ಕರ್ಷಿತವಾಗಿತ್ತೆಂದು ತೋರುತ್ತದೆ. ಅದು ಬಹ್ವಂಗೀಕರಣ ಕ್ರಿಯೆಗೆ (ಪಾಲಿಮರೈಸೇಷನ್) ವೇಗವರ್ಧಕವಾಗಿ ಪರಿಣಮಿಸಿರಬೇಕು. ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಜರ್ಮನಿ 2,3 ಡೈಮೀಥೈಲ್ ಬ್ಯೂಟಾಡಯೀನಿನ ಬಹ್ವಂಗೀಕರಣದಿಂದ ಸಹಸ್ರಾರು ಟನ್ನುಗಳಷ್ಟು ಮೀಥೈಲ್ ರಬ್ಬರನ್ನು ತಯಾರಿಸಿಕೊಂಡಿತೆಂದು ವರದಿಯಾಗಿದೆ. ಸಾರ್ವಜನಿಕ ಉಪಯೋಗಕ್ಕಾಗಿ ಮಾರುಕಟ್ಟೆಗೆ ಬಿಡುಗಡೆಯಾದ ಮೊದಲ ಎಲ್ಯಾಸ್ಟೊಮರ್ ಅಂದರೆ ಥಯೊಕೋಲ್. ಇದರ ಶೋಧವಾದದ್ದು 1930ರಲ್ಲಿ. ಮರುವರ್ಷ ನಿಯೋಪ್ರೀನ್ ಹುಟ್ಟಿತು. ಸು. 1940ರಲ್ಲಿ ಜರ್ಮನಿ, ರಷ್ಯ ಮತ್ತು ಅಮೆರಿಕ ದೇಶಗಳು ಇತರ ಎಲ್ಯಾಸ್ಟೊಮರಗಳ ಪತ್ತೆಯನ್ನು ಪ್ರಕಟಿಸಿದುವು. ಎರಡನೆಯ ಮಹಾಯುದ್ಧದ ಆದಿಭಾಗದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ದೂರಪ್ರಾಚ್ಯದಿಂದ ರಬ್ಬರಿನ ಪೂರೈಕೆ ನಿಂತಿತು. ಇದು ಎಲ್ಯಾಸ್ಟೊಮರುಗಳ ಶೋಧಕ್ಕೆ ಪ್ರೇರಕವಾಯಿತು. 1943ರಲ್ಲಿ ಜಿ ಆರ್ ಎಸ್ (ಗವರ್ನಮೆಂಟ್ ರಬ್ಬರ್–ಸ್ಟೈರೀನ್‌ನಿಂದ) ಎಂಬ ವಸ್ತು ರೂಪುಗೊಂಡಿತು. ಇಂದಿಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬಲು ಬಳಕೆಯಲ್ಲಿರುವ ರಬ್ಬರ್ ಇದೇ. ನೈಸರ್ಗಿಕ ರಬ್ಬರನ್ನು ಎಲ್ಯಾಸ್ಟೊಮರ್‌ಗಳು ಸರಿಗಟ್ಟಲಾರವು. ಕೆಲವು ಸಂದರ್ಭಗಳಲ್ಲಿ ಮಾತ್ರ ಅವು ಹೆಚ್ಚು ಉಪಯುಕ್ತವೆಂಬುದು ಮುಂದೆ ಸೂಚಿಸಿರುವ ಉದಾಹರಣೆಗಳಿಂದ ಗೊತ್ತಾಗುತ್ತದೆ. ರಬ್ಬರಿನ ತುಂಡೊಂದನ್ನು ಜಗ್ಗಿ ಎಳೆದರೆ ಉಷ್ಣ ಹುಟ್ಟುವುದು (ಜೂಲ್ ಪರಿಣಾಮ). ಸಂಯೋಜಿತ ರಬ್ಬರಿಗೆ ಉಷ್ಣವಾಹಕ ಶಕ್ತಿ ಕಡಿಮೆ. ಹೀಗಾಗಿ ದೊಡ್ಡ ಸಾರಿಗೆ ಟ್ರಕ್ಕುಗಳು ಮತ್ತು ಬಸ್ಸುಗಳ ಟೈರುಗಳಲ್ಲಿ ಚಲನಕಾಲದಲ್ಲಿ ಹುಟ್ಟಿದ ಉಷ್ಣ ವ್ಯಯವಾಗದೆ ಅಲ್ಲೇ ಉಳಿಯುವುದು. ಇದರಿಂದ ಟೈರಿನಲ್ಲಿ ಬಿರುಕುಂಟಾಗಿ ಒಡೆಯುವುದು.

ನೈಸರ್ಗಿಕ ರಬ್ಬರಿನಲ್ಲಿ ಉಷ್ಣೋತ್ಪತ್ತಿಯಾಗುವುದು ಕಡಿಮೆ. ಆದ್ದರಿಂದ ದೊಡ್ಡ ಸಾರಿಗೆ ವಾಹನಗಳ ಟೈರುಗಳಿಗೆ ಅದನ್ನೇ ಬಳಸುವುದು ಕ್ಷೇಮ. ಆದರೆ ಸಣ್ಣ ವಾಹನಗಳ ಟೈರುಗಳನ್ನು ಎಲ್ಯಾಸ್ಟೊಮರುಗಳಿಂದ ಮಾಡಲು ಅಡ್ಡಿಯಿಲ್ಲ. ಏಕೆಂದರೆ ಭಾರ ಒತ್ತಡಗಳು ಅಷ್ಟಿಲ್ಲದಿರುವುದರಿಂದ ಹುಟ್ಟುವ ಉಷ್ಣದ ಪ್ರಮಾಣ ಅಲ್ಪ. ಅದೂ ಬೇಗ ವ್ಯಯವಾಗಿ ಟೈರನ್ನು ಘಾಸಿಪಡಿಸುವ ಸಂಭವ ಕಡಿಮೆ. ಸಂಯೋಜಿತ ರಬ್ಬರಿಗಿಂತ ಪ್ರಕೃತಿದತ್ತ ರಬ್ಬರಿಗೆ ಹಿಸ್ಟೆರಿಸಸ್ ಮೌಲ್ಯವೂ ಕಡಿಮೆ. ಇದು ಮಹತ್ತ್ವದ ವಿಷಯ. ರಬ್ಬರಿಗೆ ಸ್ಥಿತಿಸ್ಥಾಪನ ಶಕ್ತಿಯಿರುವುದು ನಿಜ. ಆದರೆ ರಬ್ಬರಿನ ತುಂಡೊಂದನ್ನು ಎಳೆದು ಬಿಟ್ಟರೆ, ಅದರ ಉದ್ದ ಹಿಂದಿನಷ್ಟೇ ಇರದೆ ಸ್ವಲ್ಪ ವ್ಯತ್ಯಾಸವಿರುತ್ತದೆ ಎಂದು ಪ್ರಯೋಗಗಳಿಂದ ದೃಢಪಟ್ಟಿದೆ. ಈ ದೋಷಕ್ಕೆ ಹಿಸ್ಟೆರಿಸಿಸ್ ಎನ್ನುತ್ತಾರೆ. ಈ ಅವಗುಣ ಕಡಿಮೆಯಾಗಿರುವುದು ಅಪೇಕ್ಷಣೀಯ. ಸಂಯೋಜಿತ ರಬ್ಬರಿನ ಉತ್ತಮಕಾರ್ಯನಿರ್ವಹಣೆಗೆ ಹಲವು ನಿದರ್ಶನಗಳಿವೆ. ವಲ್ಕನೈಸ್ ಮಾಡಿದ ನೈಜರಬ್ಬರು ಕೆಲವು ತೈಲಗಳು ಮತ್ತು ಲೀನಕಾರಿಗಳ ಸಂಪರ್ಕದಲ್ಲಿ ವಿಪರೀತ ಉಬ್ಬುವುದು. ಆದರೆ ಎಲ್ಯಾಸ್ಟೊಮರುಗಳಿಗೆ ಈ ಗುಣವಿಲ್ಲ. ಒಂದು ವೇಳೆ ಗಾತ್ರವರ್ಧನೆಯಾದರೂ ಅದು ಅಲ್ಪ. ಎರಡನೆಯದಾಗಿ ಚಲನೆಯಲ್ಲಿ ಉದ್ಭವಿಸುವ ಘರ್ಷಣೆ ಮತ್ತು ವಿಚ್ಛಿದ್ರಕಾರಕ ಶಕ್ತಿಗಳನ್ನು ತಡೆಗಟ್ಟುವ ಸಾಮರ್ಥ್ಯ ಅವಕ್ಕಿವೆ. ಟೈರುಗಳನ್ನು ಪುನಶ್ಚೇತನಗೊಳಿಸುವ ಹೊಸ ನಮೂನೆಯ ಕುಲುಮೆ ಇಂಗಾಲದ (ಫರ್ನೇಸ್ ಕಾರ್ಬನ್) ಶೋಧವಾಗಿದೆ. ಅದನ್ನು ಅಳವಡಿಸಿದ ವಲ್ಕೊಲಾನ್, ಕೆಮಿಗೆಮ್–ಎಸ್‌ಎಲ್ ಮತ್ತು ಜಿಆರ್‌ಎಸ್ ಎಲ್ಯಾಸ್ಟೊಮರುಗಳಿಂದ ಮಾಡಿದ ಟೈರುಗಳು ನೈಸರ್ಗಿಕ ರಬ್ಬರಿನ ಟೈರುಗಳಿಗಿಂತ ಹೆಚ್ಚು ಕಾಲ ಬಾಳುತ್ತವೆ. ಇದು ಅನುಭವವೇದ್ಯ ಸಂಗತಿ. ಅಲ್ಲದೆ ನೈಜರಬ್ಬರಿಗಿಂತ ಬ್ಯೂಟೈಲ್ ರಬ್ಬರಿನ ಮೂಲಕ ಗಾಳಿ ಹಾಯಲು ಹತ್ತುಪಟ್ಟು ಕಷ್ಟವಾಗುತ್ತದೆ. ಆದ್ದರಿಂದ ಮೋಟಾರ್ ವಾಹನಗಳ ಒಳ ಟ್ಯೂಬುಗಳನ್ನು ತಯಾರಿಸಲು ಇದು ಯೋಗ್ಯವಾಗಿದೆ. ವಲ್ಕನೈಸಾದ ರಬ್ಬರು ಬಹುಬೇಗ ಹೊತ್ತಿ ಉರಿಯುವುದು. ಆದರೆ ನಿಯೊಪ್ರೀನ್, ಕೊರೊಸೀಲ್ ಮತ್ತು ಈಚಿನ ಶೋಧವಾದ ಕೆಲ್‌ಎಫ್‌ಎಲ್ಯಾಸ್ಟೊಮರುಗಳು ದಹನವಿರೋಧಿಗಳು. ಬಣ್ಣವಿಲ್ಲದಿರುವುದು ಎಲ್ಯಾಸ್ಟೊಮರುಗಳ ಇನ್ನೊಂದು ವೈಶಿಷ್ಟ್ಯ. ತತ್ಫಲವಾಗಿ ಇವು ಇತರ ಬಣ್ಣಗಳನ್ನು ಸುಲಭವಾಗಿ ಗ್ರಹಿಸುತ್ತವೆ. ಆದ್ದರಿಂದ ಟೈರುಗಳನ್ನು ರೂಪಿಸುವಾಗ ವಿವಿಧ ಬಣ್ಣಗಳನ್ನು ಕೂಡಿಸಲು ಅನುಕೂಲವಾಗುತ್ತದೆ. ನೈಜರಬ್ಬರಿನ ಟೈರುಗಳಿಗೆ ಇಂಗಾಲ ಕದಡಿಸಿ ಕಪ್ಪುಬಣ್ಣ ಮಾತ್ರ ಕೊಡಬಹುದು. $-25^0$ ಸೆ.ನಲ್ಲಿ ಸಾಮಾನ್ಯ ರಬ್ಬರು ಗಟ್ಟಿಯಾಗಿಬಿಡುತ್ತದೆ. $120^0$ ಸೆ. ಮೀರಿದಾಗ ಅದನ್ನು ಬಳಸುವಂತಿಲ್ಲ. ಈ ನಿಟ್ಟಿನಲ್ಲಿ ಸಿಲಿಕೋನ್ ರಬ್ಬರುಗಳು ಮೇಲು. $-55^0$ ರಿಂದ $260^0$ ಸೆ. ವರೆಗಿನ ಉಷ್ಣತಾಮಿತಿಯಲ್ಲೂ ಅವು ತಮ್ಮ ಪ್ರಧಾನ ರಬ್ಬರಿನ ಲಕ್ಷಣಗಳನ್ನು ಕಾಪಾಡಿಕೊಂಡು ಬರುತ್ತವೆ. ರಬ್ಬರೂ ಕೆಲವು ಎಲ್ಯಾಸ್ಟೊಮರುಗಳೂ ವಲ್ಕನೈಸ್ ಮಾಡಿದಮೇಲೆಯೂ ವಾಯುಮಂಡಲದಲ್ಲಿರುವ ಓಜೋನಿನ ಸಂಪರ್ಕದಲ್ಲಿ ನಾಶಹೊಂದುತ್ತವೆ. ಹಿಗ್ಗಿದ ಸ್ಥಿತಿಯಲ್ಲಂತೂ ಅವುಗಳಿಗೆ ಓಝೋನ್ ಮಾರಕವಾಗುತ್ತದೆ. ವಲ್ಕೊಲಾನ್, ಕೆಮಿಗಮ್–ಎಸ್‌ಎಲ್, ಹೈಪಲಾನ್ ಮತ್ತು ಕೆಲ್‌ಎಫ್ ಮಾತ್ರ ಓಝೋನಿನ ಸಂಪರ್ಕದಲ್ಲಿ ಸ್ಥಿರವಾಗಿರುವುವು. ಬ್ಯೂಟೈಲ್ ನಿಯೊಪ್ರೀನ್ ಮತ್ತು ಥಯೊಕೋಲ್ ಮಾತ್ರ ಓಝೋನಿನ ಪ್ರಭಾವಕ್ಕೆ ಸ್ವಲ್ಪ ಮಣಿಯುವುದುಂಟು. ರಬ್ಬರನ್ನು ಓಝೋನಿನಿಂದ ರಕ್ಷಿಸುವ ವಸ್ತುಗಳನ್ನು ಈಚೆಗೆ ರೂಪಿಸಲಾಗಿದೆ. ಇವುಗಳಿಗೆ ಓಝೋನ್ ವಿರೋಧಿಗಳು (ಆಂಟಿಓಝೋನೆಂಟ್ಸ್) ಎಂದು ಹೆಸರು. ಮೇಣದೊಂದಿಗೆ 1:4 ಫಿನಲೀನ್ ಡೈ ಅಮೀನ್ ವ್ಯುತ್ಪನ್ನಗಳನ್ನು ರಬ್ಬರಿನ ಮೂಲ ಮಿಶ್ರಣಕ್ಕೆ ಕೂಡಿಸಿದರೆ ಓಝೋನ್ ನಿರೋಧಕ ಗುಣ ಪ್ರಾಪ್ತವಾಗುತ್ತದೆ.

ಬ್ಯೂನಾ ಮತ್ತು ಬ್ಯೂಟೈಲ್ ರಬ್ಬರುಗಳ ತಯಾರಿಕೆಗೆ ಮೊದಲು ಬ್ಯೂಟಾಡಯೀನ್ ಮಾಡಿಕೊಳ್ಳಬೇಕು. ನೈಸರ್ಗಿಕ ರಬ್ಬರಿನ ಮೂಲ ಘಟಕವಾದ ಐಸೊಪ್ರೀನ್

$$CH_2=C-CH-=CH_2$$
|
$$CH_3$$

**ಎಲ್ಯಾಸ್ಟೊಮರುಗಳ ಸಂಯೋಜನೆಗೆ ಅಗತ್ಯವಾದ ಮೂಲ ಪದಾರ್ಥಗಳು ಬಹ್ವಂಗೀಕರಣಾಂಗಗಳು (ಪಾಲಿಮರೈಸೇಷನ್ ಯೂನಿಟ್ಸ್) ಮತ್ತು ಫಲಿತ ಎಲ್ಯಾಸ್ಟೊಮರಿನ ವ್ಯವಹಾರ ನಾಮಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ.**

| ಕಚ್ಚಾ ಪದಾರ್ಥಗಳು | ಬಹ್ವಂಗೀಕರಣಾಂಗ | ವ್ಯವಹಾರ ನಾಮಗಳು |
|---|---|---|
| 1. ಬ್ಯೂಟಾಡಯಿನ್ + ಸ್ಟೈರೀನ್ | $-CH_2-CH=CH-CH_2-CH_2-CH-$<br>\|<br>$C_6H_4$ | ಜಿಆರ್‌ಎಸ್ ಅಥವಾ ಬ್ಯೂನಾ–ಎಸ್ |
| 2. ಐಸೊಬ್ಯುಟಿಲೀನ್+ಐಸೊಪ್ರೀನ್ | $CH_3$ $CH_3$<br>\| \|<br>$-CH_2-C-CH_2-C=CH-CH_2-$<br>\|<br>$CH_3$ | ಜಿಆರ್‌ಐ, ಬ್ಯೂಟೈಲ್ |
| 3. ಕ್ಲೋರೋಪ್ರೀನ್ | $-CH_2-C=CH-CH_2-$<br>\|<br>C1 | ನಿಯೊಪ್ರೀನ್,ಡ್ಯೂಪ್ರೀನ್, ಜಿಆರ್‌ಎಮ್ |
| 4. ಬ್ಯೂಟಾಡಯಿನ್+ಅಕ್ರಿಲೊನೈಟ್ರೀಲ್ | $-CH_2-CH=CH-CH_2-CH_2-CH-$<br>\|<br>CN | ಬ್ಯೂನಾ–ಎನ್,ಕೆಮಿಗಮ್, ಬ್ಯೂಟಾಪ್ರೀನ್, ಪ್ಯಾರಾಕ್ರಿಲ್ |
| 5. ಸೋಡಿಯಂ ಪಾಲಿಸಲ್ಫೈಡ್+ ಸಾವಯವ ಡೈ ಕ್ಲೋರೈಡ್ | $-CH_2-CH_2-S-S-$<br>\|\| \|\|<br>S S | ಥಯೊಕೋಲ್–ಎ<br>(ಸೋಡಿಯಂ ಟೆಟ್ರ ಸಲ್ಫೈಡ್ ಮತ್ತು ಎಥಿಲೀನ್ ಡೈಕ್ಲೋರೈಡಿನಿಂದ ಲಭ್ಯವಾದ ಬಹ್ವಂಗೀಕರಣಾಂಗವನ್ನು ಸೂಚಿಸಲಾಗಿದೆ.) |
| 6. ಡೈಮೀಥೈಲ್ ಸೈಲಾಕ್ಸೇನ್ | $CH_3$ $CH_3$ $CH_3$<br>\| \| \|<br>- Si -0-Si-0- Si-0-<br>\| \| \|<br>$CH_3$ $CH_3$ $CH_3$ | ಸಿಲಿಕೋನ್ ರಬ್ಬರುಗಳು |

ಇದರಲ್ಲಿರುವ ಮೀಥೈಲ್ ಗ್ರೂಪಿನ ಬದಲು ಒಂದು ಹೈಡ್ರೊಜನ್ ಪರಮಾಣುವಿದ್ದರೆ ಬ್ಯೂಟಾಡಯಿನ್ ($CH_2$=C-CH-=$CH_2$) ಆಗುತ್ತದೆ. ಇದನ್ನು ಪೆಟ್ರೋಲಿಯಂ ವಿಭಜನೆಯಿಂದಾಗಲೀ ಅಸಿಟಲೀನಿನಿಂದಾಗಲೀ ತಯಾರಿಸುವುದು




ಚಿತ್ರ 1

ವಾಡಿಕೆ. ಎಥಿಲೀನ್ ಮತ್ತು ಬೆಂಜೀನಿನ ಸಂಯೋಜನೆಯಿಂದ ಸ್ಟೈರೀನ್ ತಯಾರಿಸಬಹುದು. ಸ್ಟೈರೀನ್ ಮತ್ತು ಬ್ಯೂಟಾಡಯಿನ್ ಕೂಡಿ ಬ್ಯೂನಾ–ಎಸ್ ರಬ್ಬರ್ ಉಂಟಾಗುತ್ತದೆ.

$$x\begin{pmatrix} C_6H_5 \\ | \\ CH = CH_2 \end{pmatrix} + x(CH_2 = CH - CH = CH_2)$$

–ಸ್ಟೈರೀನ್ ಬ್ಯೂಟಾಡಯನ್

$$\begin{pmatrix} C_6H_5 \\ | \\ -CH - CH_2 - CH_2 - CH = CH - CH_2 - \end{pmatrix} x$$

ಬ್ಯೂನಾ–ಎಸ್

ಉಳಿದ ಎಲ್ಲ ಎಲ್ಯಾಸ್ಟೊಮರಗಳಿಗಿಂತ ಬ್ಯೂನಾ–ಎಸ್ ನೈಸರ್ಗಿಕ ರಬ್ಬರನ್ನು ಹೆಚ್ಚು ಹೋಲುವುದರಿಂದ

ಮೋಟಾರು ಟೈರುಗಳನ್ನು ಮಾಡಲು ಇದನ್ನೇ ವಿಶೇಷವಾಗಿ ಉಪಯೋಗಿಸುತ್ತಾರೆ.

$$x\begin{pmatrix} CH \\ | \\ CH_2 = CH \end{pmatrix} + x(CH_2 = CH - CH = CH_2)$$

ಅಕ್ರಿಲೊನೈಟ್ರೀಲ್ ಬ್ಯೂಟಾಡಯನ್

$$\begin{matrix} CN \\ | \\ (-CH_2 - CH - CH_2 - CH = CH - CH_2 -)x \end{matrix}$$

ಬ್ಯೂನಾ–ಎಸ್

ಅಕ್ರಿಲೊನೈಟ್ರೀಲ್ ತಯಾರಿಸಲು ಎರಡು ವಿಧಾನಗಳಿವೆ. ಚಿತ್ರ 2ರಲ್ಲಿ ಕಾಣಿಸಿರುವ ಅಕ್ರಿಲೊನೈಟ್ರೀಟನ್ನು ಟ್ಯೂಟಾಡಯಿನಿನೊಡನೆ ಕೂಡಿಸಿ ಸಹಬಹ್ವಂಗೀಕರಣ ಕ್ರಿಯೆಗೆ (ಕೋಪಾಲಿಮರೈಸೇಷನ್) ಗುರಿಪಡಿಸಿದರೆ ಬ್ಯೂನಾ–ಎನ್ ಲಭಿಸುವುದು.

ಇದಕ್ಕೆ ಪೆಟ್ರೋಲಿಯಂ ವ್ಯುತ್ಪನ್ನಗಳ ಲೀನಕಾರಿ ಪ್ರಭಾವವನ್ನು ಎದುರಿಸುವ ಶಕ್ತಿಯಿದೆ. ಆದ್ದರಿಂದ ಪೆಟ್ರೋಲ್ ಒದಗಿಸುವ ಕೊಳಾಯಿಗಳು, ಕೇಬಲ್ ಹೊದಿಕೆಗಳು ಮೊದಲಾದುವನ್ನು ಮಾಡಲು ಬ್ಯೂನಾ–ಎನ್ ಎಲ್ಯಾಸ್ಟೊಮರ್ ಉಪಯೋಗಿಸುತ್ತಾರೆ.




ಚಿತ್ರ 2

ಪೆಟ್ರೋಲಿಯಂ ವಿಭಜನೆಯಿಂದ ಲಭ್ಯವಾದ ಐಸೊಬ್ಯುಟಿಲೀನನ್ನು ಬ್ಯೂಟಾಡಯಿನಿನೊಡನೆ ಬಹ್ವಂಗೀಕರಿಸಿದಾಗ ಬ್ಯೂಟೈಲ್ ರಬ್ಬರು ದೊರೆಯುತ್ತದೆ.

$$x\begin{Bmatrix} CH_3 \\ | \\ CH_2 = C \\ | \\ CH_3 \end{Bmatrix} + x(CH_2CH - CH = CH_2)$$

ಐಸೊಬ್ಯುಟೀನ್ ↓ ಬ್ಯೂಟಾಡಯನ್

$$\begin{pmatrix} CH_3 \\ | \\ -CH - CH_2 - C - CH_2 - CH = CH - CH_2 - \\ | \\ CH_3 \end{pmatrix} x$$

ಬ್ಯೂಟೈಲ್ ಎಲ್ಯಾಸ್ಟೊಮರ್

ನೈಜರಬ್ಬರಿನಂತೆ ಇದಕ್ಕೂ ಸಹ ಪೆಟ್ರೋಲಿಯಂ ವ್ಯುತ್ಪನ್ನಗಳ ಲೀನಕಾರಿ ಪ್ರಭಾವವನ್ನು ಎದುರಿಸುವ ಸಾಮರ್ಥ್ಯ ಅಷ್ಟಾಗಿಲ್ಲ. ಆದರೆ ಬೆಳಕು ಮತ್ತು ಆಕ್ಸಿಜನ್ನಿನ ಪ್ರಭಾವವನ್ನು ಸಹಿಸಬಲ್ಲುದು. ಇದರ ಮೂಲಕ ಅನಿಲಗಳು ಹಾಯಲಾರವು. ಟೈರುಗಳು ಟ್ಯೂಬುಗಳು ಮತ್ತು ಹಬೆಯ ವಾಹಕ ನಳಿಗೆಗಳನ್ನು ಮಾಡಲು ಇದು ಅನುಕೂಲ. ವೇಗವರ್ಧಕದ ಸಂಪರ್ಕದಲ್ಲಿ ಅಸಿಟಲೀನಿನ ಎರಡು ಅಣುಗಳು ಕೂಡಿ ವೀನೈಲ್ ಅಸಿಟಲೀನ್ ಆಗುತ್ತದೆ. ಕ್ಯುಪ್ರಸ್ ಮತ್ತು ಪೊಟ್ಯಾಸಿಯಂ ಕ್ಲೋರೈಡುಗಳನ್ನು ಅಮೋನಿಯಂ ಕ್ಲೋರೈಡ್ ದ್ರಾವಣದಲ್ಲಿ ವಿಲೀನಗೊಳಿಸಿ ವೇಗವರ್ಧನಕ್ಕೆ ಉಪಯೋಗಿಸುತ್ತಾರೆ. ಉಷ್ಣತೆಯನ್ನು 55°–65° ಸೆ. ಮಿತಿಯಲ್ಲಿಡಬೇಕು. ಕ್ರಿಯೆ ನಡೆಯಲು ತಾಮ್ರದ ಪಾತ್ರೆ ಅಗತ್ಯ.

$$2CH \equiv CH \rightarrow CH \equiv C - CH \equiv CH_2$$

ವೀನೈಲ್ ಅಸಿಟಲೀನ್

ಕ್ಯುಪ್ರಸ್ ಕ್ಲೋರೈಡಿನ ದ್ರಾವಣವನ್ನು ವೇಗವರ್ಧಕವಾಗಿಟ್ಟುಕೊಂಡು ಉಷ್ಣತೆಯನ್ನು 35°–45° ಸೆ. ಮಿತಿಯಲ್ಲಿ ನಿಯಂತ್ರಿಸಿ ತಣ್ಣಗಿರುವ ಹೈಡ್ರೊಕ್ಲೋರಿಕಾಮ್ಲ ವನ್ನು ಸೇರಿಸಿದರೆ ವೀನೈಲ್ ಅಸಿಟಲೀನ್ ಕ್ಲೋರೊಪ್ರೀನ್ ಆಗಿ ಪರಿವರ್ತಿತವಾಗಬಹುದು.

$$CH \equiv C - CH = CH2 \rightarrow CH_2 = \underset{}{\overset{Cl}{\overset{|}{C}}} - CH = CH_2$$

**ಕ್ಲೊರೊಪ್ರೀನ್**

ಕ್ಲೊರೊಪ್ರೀನ್ ಬಹ್ವಂಗೀಕರಿಸಿ ನಿಯೊಪ್ರೀನ್ ಕೊಡುತ್ತದೆ.

$$n\left( CH_2 = \overset{Cl}{\overset{|}{C}} - CH = CH_2 \right) \rightarrow \left( CH_2 - \overset{Cl}{\overset{|}{C}} = CH - CH_2 - \right)_n$$

**ನಿಯೊಪ್ರೀನ್**

ಇದರ ಉತ್ಪಾದನೆ ದುಬಾರಿ. ಕೇವಲ ಉಷ್ಣದಿಂದ ಇದು ವಲ್ಕನೈಸಾಗುತ್ತದೆ. ಆದರೆ ಲೋಹದ ಆಕ್ಸೈಡುಗಳನ್ನು ಸೇರಿಸಿದರೆ ವಲ್ಕನೈಸೇಷನ್ ಕ್ರಿಯೆ ತ್ವರಿತಗೊಳ್ಳುವುದು. ಮೆದುವಾದ ರಬ್ಬರನ್ನು ಮಾತ್ರ ಇದರಿಂದ ಮಾಡಲು ಸಾಧ್ಯ. ಎಣ್ಣೆಗಳು ಮತ್ತು ತೀಕ್ಷ್ಣ ಸ್ವಭಾವದ ಅನಿಲಗಳನ್ನು ಒಯ್ಯುವ ಕೊಳಾಯಿಗಳನ್ನು ತಯಾರಿಸಲು ಈ ರಬ್ಬರು ಪ್ರಶಸ್ತವಾಗಿದೆ.

ರಬ್ಬರಿನ ಗುಣವಿರುವ ಅನೇಕ ಸಾವಯವ ಪಾಲಿಸಲ್ಫೈಡುಗಳಿವೆ. ಬ್ಯೂನಾ




ಚಿತ್ರ 3

ಮತ್ತು ಬ್ಯೂಟೈಲ್ ಎಲ್ಯಾಸ್ಟೊಮರಗಳು ಸಹ ಬಹ್ವಂಗೀಕಾರಿಗಳಾದರೆ, ನಿಯೊಪ್ರೀನ್ ಕೇವಲ ಬಹ್ವಂಗೀಕಾರಿ. ಆದರೆ ಈ ಪಾಲಿಸಲ್ಫೈಡ್ ಎಲ್ಯಾಸ್ಟೊಮರಗಳು ಸಾಂದ್ರೀಕರಣ ಬಹ್ವಂಗೀಕರಣದಿಂದಾದವು (ಕಂಡೆನ್ಸೇಷನ್ ಪಾಲಿಮರೈಸೇಷನ್). ಅಂದರೆ ಮೂಲ ಪದಾರ್ಥಗಳು ಸಂಯೋಜಿಸಿದಾಗ ಕ್ರಿಯೆಯಲ್ಲಿ ಬೇರೊಂದು ವಸ್ತು ಕಳೆಯುವ ಸಂದರ್ಭವಿದು. ಇದಕ್ಕೆ ಥಯೊಕೋಲ್–ಬಿ ಉತ್ತಮ ನಿದರ್ಶನ. ಪೆಟ್ರೋಲಿಯಂ ವ್ಯುತ್ಪನ್ನಗಳಿಂದ ಪಡೆದ ಡೈಕ್ಲೋರೋ ಡೈ ಈಥೈಲ್ ಈಥರನ್ನು ಸೋಡಿಯಂ ಟೆಟ್ರಸಲ್ಫೈಡಿನೊಡನೆ ಬಹ್ವಂಗೀಕರಿಸಿ ಥಯೊಕೋಲ್–ಬಿ ಮಾಡುತ್ತಾರೆ.

ಥಯೊಕೋಲ್ ರಬ್ಬರನ್ನು ವಲ್ಕನೈಸ್ ಮಾಡಲು ಲೋಹದ ಆಕ್ಸೈಡುಗಳನ್ನು ಉಪಯೋಗಿಸುತ್ತಾರೆ. ನಿಯೊಪ್ರೀನಿನಂತೆ ಇದು ಸಹ ಮೆದುವಾದ ವಸ್ತು. ಪೆಟ್ರೋಲ್, ಎಣ್ಣೆಗಳು, ಬೆಂಜೀನ್ ಮೊದಲಾದ ಲೀನಕಾರಿಗಳು ಇದರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಆದ್ದರಿಂದ ಪೆಟ್ರೋಲ್ ವಾಹಕ ಕೊಳಾಯಿಗಳು ಮತ್ತು ಕೇಬಲ್ ಹೊದಿಕೆಗಳನ್ನು ಇದರಿಂದ ಮಾಡಬಹುದೇ ವಿನಾ ಮೋಟಾರ್ ಟೈರುಗಳನ್ನಲ್ಲ.

ಕ್ಲೋರೋಟ್ರೈಫ್ಲೋರೋ ಎಥಿಲೀನ್ ಮತ್ತು ವಿನಿಲಿಡೀನ್ ಫ್ಲೋರೈಡ್ ಕೂಡಿದಾಗ ಕೆಲ್ಎಫ್ ಎಲ್ಯಾಸ್ಟೊಮರ್ ದೊರೆಯುತ್ತದೆ. ಇದು ಫ್ಯೂಮಿಂಗ್ ನೈಟ್ರಿಕಾಮ್ಲದ ವರ್ತನೆಯನ್ನು 140 ದಿವಸಗಳ ಕಾಲ ಸಹಿಸಬಲ್ಲದು.

ಪ್ರಕೃತಿದತ್ತವಾದ ರಬ್ಬರಿನಲ್ಲಿರುವ ಸಿಸ್–ಪಾಲಿಐಸೊಪ್ರೀನ್ ಹೈಡ್ರೊಕಾರ್ಬನ್ನನ್ನು ಸಂಯೋಜಿಸಲಾಗಿದೆ. ಇದಕ್ಕೆ ಅಮೆರಿಪೋಲ್–ಎಸ್ಎನ್ ಎಂದು ಹೆಸರು. ತಯಾರಿಕಾ ವಿವರಗಳು ಉದ್ಯಮ ರಹಸ್ಯವಾದ್ದರಿಂದ ಅಲಭ್ಯ. (ಎಚ್.ಜಿ.ಎಸ್.)

**ಎಲ್ಯೂಟ್ರಿಯೇಷನ್:** ನೀರನ್ನು ಉಪಯೋಗಿಸಿ ಒಂದು ಗೊತ್ತಾದ ಪ್ರಮಾಣದ ಪದಾರ್ಥವನ್ನು ಸಂಪೂರ್ಣವಾಗಿ ವಿಂಗಡಿಸುವ ಕ್ರಮಕ್ಕೆ ಸಾಮಾನ್ಯವಾಗಿ ಇರುವ ಹೆಸರು. ಇದರಿಂದ ಆ ಪದಾರ್ಥದ ವಿವಿಧ ಕಣಗಳ ಗಾತ್ರಗಳನ್ನು, ಮುಖ್ಯವಾಗಿ ಅತಿ ಸಣ್ಣ ಜರಡಿಗಿಂತ ಚಿಕ್ಕದಾದ ಕಣಗಳ ಗಾತ್ರಗಳನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಆಂಡ್ರ್ಯೂಸ್ ಕೈನೆಟಿಕ್ ಎಲ್ಯೂಟ್ರಿಯೇಷನ್, ಶುಷ್ಕ ಎಲ್ಯೂಟ್ರಿಯೇಷನ್ ಮತ್ತು ರೋಲರ್ ಕಣಗಾತ್ರ ವಿಭಾಜಕ (ರೋಲರ್ ಪಾರ್ಟಿಕಲ್ ಸೈಜ್ ಅನಲೈಸರ್)–ಇವು ಇದರಲ್ಲಿ ಕೆಲವು ವಿಧಾನಗಳು. ಅದಿರುಗಳನ್ನು ಸಾಂದ್ರೀಕರಿಸುವುದರಲ್ಲಿ ಇವು ಬಹು ಮುಖ್ಯವಾದ ಮಾರ್ಗಗಳು. (ಎಂ.ಆರ್.ಆರ್.)

**ಎಲ್ಲ ಅಥವಾ ಏನೂ ಇಲ್ಲ ಎಂಬ ನಿಯಮ:** ಅಂಗಕ್ರಿಯಾ ವಿಜ್ಞಾನದಲ್ಲಿ, ನರ, ಸ್ನಾಯುಗಳ ತೆರನ ಉದ್ರೇಕಗೊಳ್ಳುವ ಊತಕಗಳಲ್ಲಿ ಚೋದನೆಯ ಎದುರಾಗಿ ಮಾರುವರ್ತನೆ ಆಗುವ ಸಂದರ್ಭಗಳ ಒಂದು ನಿಯಮ (ಆಲ್ ಆರ್‌ನನ್ ಲಾ). ವಿದ್ಯುತ್ತಿನ ಆಗವಣೆಯ ಸೊಕ್ಕೆಯಿಂದ (ಇಂಡಕ್ಷನ್ ಷಾಕ್) ಒಂದು ಸ್ನಾಯು ಅದರ ಜೋರಿಗೆ ತಕ್ಕಂತೆ ಕುಗ್ಗುತ್ತದೆ, ಇಲ್ಲವಾದರೆ ತೆಪ್ಪನಿರುತ್ತದೆ. ಆಗುವುದಾದರೆ, ಸ್ನಾಯುವಿನ ಆಗಿನ ಸ್ಥಿತಿಯಲ್ಲಿ ಎಷ್ಟೇ ಬಲವಾದ ಚೋದನೆಯೇ ಆಗಲಿ ಸಾಧ್ಯವಿರುವಷ್ಟೂ ದೊಡ್ಡದಾಗಿ, ಬಲವಾಗಿ ಕುಗ್ಗುವುದೆಂದು ಮೊದಲು (1871) ಗುಂಡಿಗೆಯ ಸ್ನಾಯುವಿನ ವಿಚಾರವಾಗಿ ಹೇಳಿದವ ಬೌಡಿಚ್. ಆಗಿನ ಕಾಲಕ್ಕೆ ಈ ನಿಯಮ ಕೇವಲ ಗುಂಡಿಗೆಗೆ ಮಾತ್ರ ಹೇಳಬಹುದೇ ಹೊರತು ಉಳಿದ ಸ್ನಾಯುಗಳು ನರಗಳ ತೆರನ ಊತಕಗಳಿಗಲ್ಲವೆಂಬ ನಂಬಿಕೆಯಿತ್ತು. ಎಷ್ಟು ಕಡಿಮೆ ಬಲದ ಚೋದನೆಯಿಂದಾದರೂ ಎಲುಗಟ್ಟಿನ (ಸ್ಕೆಲಿಟಲ್) ಸ್ನಾಯುಗಳನ್ನು ಕೊಂಚವಾದರೂ ಕುಗ್ಗಿಸಬಹುದೆಂಬ ಕಲ್ಪನೆಯಿತ್ತು. ಸ್ನಾಯು, ನರಗಳಲ್ಲಿ ನೂರಾರು ಸಾವಿರಾರು ತಂತುಗಳು ಇರುವುದೇ ಈ ಕಲ್ಪನೆಗೆ ಆಧಾರ. ಆದರೆ ಎಲುಗಟ್ಟಿನ ಸ್ನಾಯುಗಳ, ನರಗಳ ಒಂದೊಂದು ತಂತುವೂ ಒಂದು ಬಲದ ಚೋದನೆಯಿಂದ ಕುಗ್ಗುತ್ತದೆ. ಇಲ್ಲವಾದರೆ ಏನೇನೂ ಕುಗ್ಗದೆಂದು ಈಗ ಗೊತ್ತಾಗಿದೆ. ಮಾರುವರ್ತನೆಯ ಪ್ರಮಾಣ ಹೆಚ್ಚು ಕಡಿಮೆ ಆಗುವುದೇ ಇಲ್ಲವೆಂದು ಇದರ ಅರ್ಥವಲ್ಲ. ಊತಕದ ಸ್ಥಿತಿಗೆ ತಕ್ಕಂತೆ ಅದರ ಮಾರುವರ್ತಿಸುವ ನಿಜಗೆಲಸವೂ ಇರುವುದು. ಹಿಂದಿನ ಮಾರುವರ್ತನೆಯಿಂದ ಚೇತರಿಸಿಕೊಳ್ಳುತ್ತಿರುವ ಹೊತ್ತಿನಲ್ಲಿ ನೀಡಿದ ಚೋದನೆಗೆ ಮಾರುವರ್ತನೆ ಎಂದಿಗಿಂತಲೂ ಕಡಿಮೆಯೇ. ಚೋದನೆ ಸಾಕಷ್ಟಿದ್ದರೆ, ಅದರ ಬಲಕ್ಕೂ ಮಾರುವರ್ತನೆಯ ಪ್ರಮಾಣಕ್ಕೂ ಸಂಬಂಧವಿರದು. ವಿಶೇಷೀಕರಿತ ಊತಕಗಳಾದ ಗುಂಡಿಗೆಯ, ಎಲುಗಟ್ಟಿನ ಸ್ನಾಯುಗಳಲ್ಲಿ, ನರಗಳಲ್ಲಿ ಒಟ್ಟಿನಲ್ಲಿ ನಿಜಗೆಲಸದ ಮಾರುವರ್ತನೆ ಒಂದೇ ತೆರನಾಗಿ ಇರುವುದೆಂದು ಈ ನಿಜಸಂಗತಿಗಳು ತೋರುತ್ತವೆ. ಹೀಗಾಗುವುದರ ಸರಿಯಾದ ಕಾರಣ ಗೊತ್ತಿಲ್ಲವಾದರೂ ಇರುವ ಬಲವೆಲ್ಲ ಒಂದೇ ಬಾರಿಗೆ ಕಳೆವಂತೆ ಮಾಡುವ ಸಿಡಿತಕ್ಕೆ ಹೋಲಿಸಬಹುದಷ್ಟೆ. (ಡಿ.ಎಸ್.ಎಸ್.)

**ಎಲ್ಲ ದರ್ಜೆಗಳು:** ಕಾಳಗವೆಸಗುವ ಎಲ್ಲ ಯೋಧರಿಗೂ ರಕ್ಷಣಾ ಬಲಗಳಲ್ಲಿ ಬಳಸುವ ಸಾಮಾನ್ಯ ಹೆಸರು (ಆಲ್ ರ್‍ಯಾಂಕ್ಸ್). ರಕ್ಷಣಾ ಬಲಗಳಲ್ಲಿ ಕಾಳಗವೆಸವಗುವವರು (ಕಾಂಬಟೆಂಟ್ಸ್) ಮತ್ತು ಕಾಳಗವೆಸಗದವರು (ನಾನ್–ಕಾಂಬಟೆಂಟ್ಸ್) ಎಂಬ ಎರಡು ಪ್ರಧಾನವರ್ಗಗಳಿವೆ. ಬಾಣಸಿಗರು, ಮೋಚಿ, ದರ್ಜಿ, ನಾಪಿತ ಮುಂತಾದ ವಿವಿಧ ಸೇವಾ ವರ್ಗದವರು, ಗುಮಾಸ್ತರು, ವಿವಿಧ ಮತಗಳ ಪುರೋಹಿತರು ಎರಡನೆಯ ವರ್ಗಕ್ಕೆ ಸೇರಿದವರು. ಕಾಳಗದ ಸ್ಥಳ, ಉದ್ದೇಶ, ಸ್ವಭಾವ ಮುಂತಾದವನ್ನು ಅನುಸರಿಸಿ ರಕ್ಷಣಾ ಬಲಗಳಲ್ಲಿ ಮೂರು ವಿಭಾಗಗಳಿವೆ: ಸೈನ್ಯ(ನೆಲ), ನೌಕೆ(ಜಲ), ವಿಮಾನ(ಗಾಳಿ). ಇವೆಲ್ಲವುಗಳಲ್ಲಿಯೂ ಎರಡು ಮುಖ್ಯ

# ಎಲ್ಲ ದರ್ಜೆಗಳು


ಇಂಡಿಯನ್ ಕಮಿಷನ್ಡ್ ಆಫೀಸರ್ಸ್
ಸೈನ್ಯ
ನೌಕೆ
ವಿಮಾನ
ಫೀಲ್ಡ್ ಮಾರ್ಷಲ್
ಅಡ್ಮಿರಲ್ ಆಫ್ ದಿ ಫ್ಲೀಟ್
ಮಾರ್ಷಲ್ ಆಫ್ ದಿ ಏರ್ ಫೋರ್ಸ್
ಲೆಫ್ಟಿನೆಂಟ್ ಕರ್ನಲ್
ಕಮಾಂಡರ್
ವಿಂಗ್ ಕಮಾಂಡರ್
ಜನರಲ್
ಅಡ್ಮಿರಲ್
ಏರ್ ಚೀಫ್ ಮಾರ್ಷಲ್
ಮೇಜರ್
ಲೆಫ್ಟಿನೆಂಟ್ ಕಮಾಂಡರ್
ಸ್ಕ್ವಾಡ್ರನ್ ಲೀಡರ್
ಲೆಫ್ಟಿನೆಂಟ್ ಜನರಲ್
ವೈಸ್ ಅಡ್ಮಿರಲ್
ಏರ್ ಮಾರ್ಷಲ್
ಕ್ಯಾಪ್ಟನ್
ಲೆಫ್ಟಿನೆಂಟ್
ಫ್ಲೈಟ್ ಲೆಫ್ಟಿನೆಂಟ್
ಮೇಜರ್ ಜನರಲ್
ರಿಯರ್ ಅಡ್ಮಿರಲ್
ಏರ್ ವೈಸ್ ಮಾರ್ಷಲ್
ಲೆಫ್ಟಿನೆಂಟ್
ಸಬ್ ಲೆಫ್ಟಿನೆಂಟ್
ಫ್ಲೈಯಿಂಗ್ ಆಫೀಸರ್
ಬ್ರಿಗೇಡಿಯರ್
ಕಮೊಡೋರ್
ಏರ್ ಕಮೊಡೋರ್
ಸೆಕೆಂಡ್ ಲೆಫ್ಟಿನೆಂಟ್
ಆಫೀಸರ್
ಪೈಲಟ್ ಆಫೀಸರ್
ಜೂನಿಯರ್ ಕಮಿಷನ್ಡ್ ಆಫೀಸರ್ಸ್-ಸೈನ್ಯ
ಕರ್ನಲ್
ಕ್ಯಾಪ್ಟನ್
ಗ್ರೂಪ್ ಕ್ಯಾಪ್ಟನ್
ಸುಬೇದಾರ್ ಮೇಜರ್
ಸುಬೇದಾರ್
ನಾಯಬ್ ಸುಬೇದಾರ್

| ಸೈನ್ಯ | ನೌಕೆ | ವಿಮಾನ |
|---|---|---|
| **ಇಂಡಿಯನ್ ಕಮಿಷನ್ಡ್ ಆಫಿಸರ್ಸ್** | **ಇಂಡಿಯನ್ ಕಮಿಷನ್ಡ್ ಆಫಿಸರ್ಸ್** | **ಇಂಡಿಯನ್ ಕಮಿಷನ್ಡ್ ಆಫಿಸರ್ಸ್** |
| ಜನರಲ್ | ಅಡ್ಮಿರಲ್ | ಏರ್ ಚೀಫ್ ಮಾರ್ಷಲ್ |
| ಲೆಫ್ಟಿನೆಂಟ್ ಜನರಲ್ | ವೈಸ್ ಅಡ್ಮಿರಲ್ | ಏರ್ ಮಾರ್ಷಲ್ |
| ಮೇಜರ್ ಜನರಲ್ | ರೇರ್ ಅಡ್ಮಿರಲ್ ಕಮ್ಮೊಡೋರ್ ಫಸ್ಟ್‌ಕ್ಲಾಸ್ | ಏರ್ ವೈಸ್ ಮಾರ್ಷಲ್ |
| ಬ್ರಿಗೇಡಿಯರ್ | ಕಮ್ಮೊಡೋರ್ ಸೆಕೆಂಡ್ ಕ್ಲಾಸ್ | ಏರ್ ಕಮ್ಮೊಡೋರ್ |
| ಕರ್ನಲ್ | ಕ್ಯಾಪ್ಟನ್ | ಗ್ರೂಪ್ ಕ್ಯಾಪ್ಟನ್ |
| ಲೆಫ್ಟಿನೆಂಟ್ ಕರ್ನಲ್ | ಕಮಾಂಡರ್ | ವಿಂಗ್ ಕಮಾಂಡರ್ |
| ಮೇಜರ್ | ಲೆಫ್ಟಿನೆಂಟ್ ಕಮಾಂಡರ್ | ಸ್ಕ್ವಾಡ್ರನ್ ಲೀಡರ್ |
| ಕ್ಯಾಪ್ಟನ್ | ಲೆಫ್ಟಿನೆಂಟ್ | ಫ್ಲೈಟ್ ಲೆಫ್ಟಿನೆಂಟ್ |
| ಲೆಫ್ಟಿನೆಂಟ್ | ಸಬ್ ಲೆಫ್ಟಿನೆಂಟ್ | ಫ್ಲೈಯಿಂಗ್ ಆಫೀಸರ್ |
| ಸೆಕೆಂಡ್ ಲೆಫ್ಟಿನೆಂಟ್ | | ಪೈಲೆಟ್ ಆಫೀಸರ್ |
| **ಜೂನಿಯರ್ ಕಮಿಷನ್ಡ್ ಆಫಿಸರ್ಸ್** | **ನಾನ್ ಕಮಿಷನ್ಡ್ ಆಫಿಸರ್ಸ್** | **ನಾನ್ ಕಮಿಷನ್ಡ್ ಆಫಿಸರ್ಸ್** |
| ಸುಬೇದಾರ್ ಮೇಜರ್ | ಮಾಸ್ಟರ್ ಚೀಫ್ ಪೆಟಿ ಆಫಿಸರ್ ಫಸ್ಟ್ ಕ್ಲಾಸ್ | ಮಾಸ್ಟರ್ ವಾರಂಟ್ ಆಫಿಸರ್ |
| ಸುಬೇದಾರ್ | ಮಾಸ್ಟರ್ ಚೀಫ್ ಪೆಟಿ ಆಫಿಸರ್ ಸೆಕೆಂಡ್ ಕ್ಲಾಸ್ | ವಾರಂಟ್ ಆಫಿಸರ್ |
| ನಾಯಬ್ ಸುಬೇದಾರ್ | ಚೀಫ್ ಪೆಟಿ ಆಫಿಸರ್ | ಫ್ಲೈಟ್ ಸಾರ್ಜೆಂಟ್ |
| **ನಾನ್ ಕಮಿಷನ್ಡ್ ಆಫಿಸರ್ಸ್** | | |
| ವಾರಂಟ್ ಆಫಿಸರ್ | | |
| ಬೆಟಾಲಿಯನ್ ಹವಲ್ದಾರ್ ಮೇಜರ್ | ಪೆಟಿ ಆಫಿಸರ್ | ಸಾರ್ಜೆಂಟ್ |
| ಬೆಟಾಲಿಯನ್ ಕ್ವಾರ್ಟರ್ ಮಾಸ್ಟರ್ ಹವಲ್ದಾರ್ | | |
| ಕಂಪನಿ ಕ್ವಾರ್ಟರ್ ಮಾಸ್ಟರ್ ಹವಲ್ದಾರ್ | | ಕಾರ್ಪೊರಲ್ |
| ಹವಲ್ದಾರ್ | ಲೀಡಿಂಗ್ ಸೀಮ್ಯಾನ್ | ಲೀಡಿಂಗ್ ಏರ್‌ಕ್ರಾಫ್ಟ್ಸ್ ಮ್ಯಾನ್ |
| ನಾಯಕ್ | ಸೀಮ್ಯಾನ್ ಕ್ಲಾಸ್ I | |
| ಲ್ಯಾನ್ಸ್ ನಾಯಕ್ | ಸೀಮ್ಯಾನ್ ಕ್ಲಾಸ್ II | ಏರ್‌ಕ್ರಾಫ್ಟ್ಸ್ ಮ್ಯಾನ್ ಕ್ಲಾಸ್ I |
| ಸಿಪಾಯಿ | ಸೇಲರ್ | ಏರ್‌ಕ್ರಾಫ್ಟ್ಸ್ ಮ್ಯಾನ್ ಕ್ಲಾಸ್ II |

ಅಂತಸ್ತಿನ ದರ್ಜೆಗಳಿವೆ: ಕಮಿಷನ್ ನೀಡಿದ ಅಧಿಕಾರಿಗಳು (ಕಮಿಷನ್ಡ್ ಆಫಿಸರ್ಸ್), ಕಮಿಷನ್ ನೀಡದ ಅಧಿಕಾರಿಗಳು (ನಾನ್‌ಕಮಿಷನ್ಡ್ ಆಫಿಸರ್ಸ್). ಸೈನ್ಯದಲ್ಲಿ ಮಾತ್ರ ಮೂರನೆಯದೂ ಒಂದು ಅಂತಸ್ತು ಇದೆ-ಕಿರಿಯ ಕಮಿಷನ್ ನೀಡಿದ ಅಧಿಕಾರಿಗಳು (ಜೂನಿಯರ್ ಕಮಿಷನ್ಡ್ ಆಫಿಸರ್ಸ್) ಎಂಬ ಒಂದು ದರ್ಜೆ ಮೇಲೆ ಹೇಳಿದ ಎರಡು ಅಂತಸ್ತುಗಳ ನಡುವೆ ಇದೆ. ಈ ದರ್ಜೆಗಳ ಸಂಕ್ಷೇಪರೂಪಗಳು ಐಸಿಓ (ಇಂಡಿಯನ್ ಕಮಿಷನ್ಡ್ ಆಫಿಸರ್ಸ್), ಜೆಸಿಓ (ಜೂನಿಯರ್ ಕಮಿಷನ್ಡ್ ಆಫಿಸರ್ಸ್), ಎನ್‌ಸಿಓ (ನಾನ್‌ಕಮಿಷನ್ಡ್ ಆಫಿಸರ್ಸ್). ಒಂದೊಂದು ವಿಭಾಗದ ಸಮವಸ್ತ್ರದ ಬಣ್ಣ ಒಂದೊಂದು.

ಒಂದೊಂದು ಸೈನ್ಯದ್ದು, ಆಲಿವ್ ಹಸಿರು (ಆಲಿವ್ ಗ್ರೀನ್ ಸಂಕ್ಷೇಪ ರೂಪ ಓಜಿ), ನೌಕೆಯದು ಬಿಳಿ, ವಿಮಾನದ್ದು ಖಾಕಿ. ಇಷ್ಟುಮಾತ್ರವಲ್ಲ ಒಂದೊಂದು ಅಂತಸ್ತಿನವರನ್ನೂ ಆ ಅಂತಸ್ತಿನಲ್ಲಿ ಅವರ ಸ್ಥಾನವನ್ನೂ ಗುರುತಿಸಲು ಅನುಕೂಲವಾಗುವಂತೆ ವಿಶಿಷ್ಟ ಭುಜ ಅಥವಾ ಕಂಕಣ ತೊಡುಗೆಗಳನ್ನು ಅಧಿಕಾರಿಗಳು (ಸಮವಸ್ತ್ರಧಾರಿಗಳಾಗಿರುವಾಗ) ಧರಿಸಲೇಬೇಕು. ಇವುಗಳ ವಿವರಗಳನ್ನು ಚಿತ್ರದಲ್ಲಿ ತೋರಿಸಿದೆ.

ರಕ್ಷಣಾ ಬಲಗಳ ಮೂರು ವಿಭಾಗಗಳ ಸಮಾನ ದರ್ಜೆಗಳನ್ನು 89ನೆಯ ಪುಟದ ಪಟ್ಟಿಯಲ್ಲಿ ಬರೆದಿದೆ.

(ಎ.ಎನ್.ಎಸ್.ಎಂ.)

**ಎಲ್ಲಮ್ಮ:** ಬೆಳಗಾವಿ ಜಿಲ್ಲೆಯ ಪರಸ್‌ಗಡ ತಾಲ್ಲೂಕಿಗೆ ಸೇರಿರುವ ಸವದತ್ತಿಯಲ್ಲಿರುವ ಒಂದು ಪ್ರಸಿದ್ಧ ದೇವತೆ.

ಧಾರ್ಮಿಕವಾಗಿ, ಪ್ರಚಲಿತವಿರುವ ಒಂದು ಆಧಾರದಮೇರೆಗೆ ಎಲ್ಲಮ್ಮನ ದೇವಸ್ಥಾನ ಸುಮಾರು 2,000 ವರ್ಷಗಳಷ್ಟು ಪ್ರಾಚೀನವಾದದ್ದು. ಆದಿಯಿಂದಲೂ ರೇಣುಕೆಯ ಆವಾಸಸ್ಥಾನವಾಗಿರುವಂಥದು. ಆದರೆ ಈ ವಿಷಯದಲ್ಲಿ ಒಮ್ಮತವಿಲ್ಲ. ಶಂ.ಬಾ. ಜೋಷಿ ಹಾಗೂ ಬೆಟಗೇರಿ ಕೃಷ್ಣಶರ್ಮ ಮುಂತಾದ ವಿದ್ವಾಂಸರು ಈಗಿರುವ ಎಲ್ಲಮ್ಮನ ದೇವಸ್ಥಾನ ಅಷ್ಟೊಂದು ಪ್ರಾಚೀನವಾದುದಲ್ಲವೆಂದೂ ಜೈನವಾಸ್ತುಶಿಲ್ಪದ ವಿಶಿಷ್ಟಾಂಶಗಳಿಂದೊಡಗೂಡಿರುವ ಆ ಗುಡಿಯಲ್ಲಿ ಪ್ರತಿಷ್ಠಾಪಿತಳಾಗಿರುವ ದೇವತೆ ಎಲ್ಲಮ್ಮನಲ್ಲ, ಪದ್ಮಪುಷ್ಪಾಣಿಯಾಗಿರುವ ಯಕ್ಷಿ ಪದ್ಮಾವತಿ ದೇವಿಯೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಜೊತೆಗೆ ಈಗ್ಗೆ ಕೆಲವು ವರ್ಷಗಳ ಹಿಂದೆ ಆ ಮೂಲ ಜೈನ ಬಸದಿಯ ದ್ವಾರದ ಮೇಲಿದ್ದು ಜಿನಮೂರ್ತಿಯನ್ನು ಈಚೆಗೆ ಕೆತ್ತಿ ಹಾಕಿರುವ ಗಮನಾರ್ಹ ಸಂಗತಿಯನ್ನೂ ಹೊರಗೆಡವಿದ್ದಾರೆ.

ಸು. 1514 ರಲ್ಲಿ ಸವದತ್ತಿ ಪ್ರಾಂತ್ಯದಲ್ಲಿ ಪ್ರಬಲನಾಗಿದ್ದ ಬಾಗಿಬೊಮ್ಮಪ್ಪನಾಯ್ಕನೆಂಬಾತ ಈಗಿನ ಎಲ್ಲಮ್ಮನ ಗುಡಿಯ ದಕ್ಷಿಣಕ್ಕಿರುವ ನಗಾರಖಾನೆಯನ್ನು ಕಟ್ಟಿಸಿದ್ದರ ಬಗೆಗೆ ತಾನು ಹಾಕಿಸಿದ ಶಾಸನದಲ್ಲಿ ಆ ದೇವತೆಯನ್ನು ಜತ್ತಕ ಎಂದು ಕರೆದಿರುವುದು ಮತ್ತೊಂದು ಮುಖ್ಯಾಂಶ. ಯಕ್ಷಿಣಿ>ಜಕ್ಕಿಣಿ>ಜತ್ತಕ್ಕ>ಜತ್ತಕ-ಹೀಗೆ ಜನರ ಬಾಯಲ್ಲಿ ರೂಪಾಂತರಗೊಂಡಿರಬಹುದಾದ ಆ ದೇವತೆ ಮೂಲತಃ ಜೈನ ದೇವತೆಯೇ ಆಗಿರಬೇಕೆಂದೂ ಕಾಲಕ್ರಮೇಣ ಅದು ವೈದಿಕ ದೇವತೆಯಾಗಿ ಪರಿವರ್ತಿತವಾಗಿರಬಹುದೆಂದೂ ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈಗ ಮಾತ್ರ ಆ ದೇವತೆ ಶುದ್ಧ ಹಿಂದೂ ದೇವಿಯಾಗಿದ್ದಾಳೆ. ಪೂಜಾರಿಗಳು, ಆಡಳಿತವರ್ಗದವರೆಲ್ಲ ವೀರಶೈವರು.

ನಂಬಿ ನೆಚ್ಚಿ ನಡೆದುಕೊಳ್ಳುವ ಭಕ್ತಾದಿಗಳಿಗೆ ಇಷ್ಟಾರ್ಥಗಳನ್ನು ಕೊಡುವಳೆಂದು ಹೆಸರಾಗಿರುವ ಎಲ್ಲಮ್ಮನಿಗೆ ಎಲ್ಲ ಜಾತಿ ಪಂಥದಲ್ಲೂ ಭಕ್ತವರ್ಗವಿದೆ. ನನ್ನ ಕ್ಷೇತ್ರಕ್ಕೆ ಯಾವತ್ತು ಹೊಸ ಭಕ್ತಾದಿಗಳು ಬರುವುದಿಲ್ಲವೋ ಆ ದಿನದಿಂದಲೇ ನಾನು ಅಲ್ಲಿಲ್ಲವೆಂದು ತಿಳಿಯಿರಿ-ಎಂದು ದೇವಿ ಸತ್ಯಕ್ಕ (ಎಲ್ಲಮ್ಮನ ಇನ್ನೊಂದು ಹೆಸರು) ಭಾಷೆ ಕೊಟ್ಟಿದ್ದಾಳೆಂಬುದು ಜನರ ನಂಬಿಕೆ. ಆದ್ದರಿಂದಲೇ ಪ್ರತಿದಿನವೂ ನೂರಾರು ಜನ ಬರುತ್ತಿರುತ್ತಾರೆ. ಪ್ರತಿ ಮಂಗಳವಾರ ಶುಕ್ರವಾರಗಳಂದು ವಿಶೇಷ ಪೂಜೆ ಪುನಸ್ಕಾರಗಳಾಗುವುದರಿಂದ ಜನಸಂದಣಿಯೂ ಹೆಚ್ಚುತ್ತದೆ. ಪ್ರತಿ ಹುಣ್ಣಿಮೆಯ ದಿನವಂತೂ ದೊಡ್ಡ ಜಾತ್ರೆಯೇ ಆಗುತ್ತದೆ; ಬರಾತನ ಹುಣ್ಣಿಮೆಯಿಂದ (ಭಾರತ ಹುಣ್ಣಿಮೆ) ಒಂದು ತಿಂಗಳವರೆಗೆ ವಾರ್ಷಿಕ ಜಾತ್ರೆ ನಡೆಯುತ್ತದೆ. ಆ ಸಮಯದಲ್ಲಿ ಕನಿಷ್ಠ ಎರಡು ಲಕ್ಷ ಜನ ಸೇರುತ್ತಾರೆಂದು ಅಂದಾಜು ಮಾಡಲಾಗಿದೆ.

ಪೌರಾಣಿಕವಾಗಿಯೂ ಆ ಕ್ಷೇತ್ರದೇವತೆಯನ್ನು ಕುರಿತು ಭಿನ್ನಾಭಿಪ್ರಾಯಗಳಿವೆ. ಭಾಗವತ, ಹರಿವಂಶ ಮುಂತಾದ ವೈದಿಕ ಪುರಾಣಗಳ ಪ್ರಕಾರ ವಿಷ್ಣುವಿನ ಪರಶುರಾಮಾವತಾರದಲ್ಲಿ ಆತನಿಗೆ ಆ ಜನ್ಮವಿತ್ತ ತಾಯಿ ರೇಣುಕೆಯೇ ಸವದತ್ತಿಯ ಎಲ್ಲಮ್ಮ. ತಂದೆ ಜಮದಗ್ನಿಯ ಆಜ್ಞೆಯಂತೆ ತಾಯಿಯ ತಲೆ ಕಡಿದ ಆತ ತನ್ನ ತಾಯನ್ನು ಮತ್ತೆ ಬದುಕಿಸಿಕೊಳ್ಳಲು ವರಪಡೆದ. ಮತ್ತೊಂದು ಕಥೆಯಂತೆ ಕಾರ್ತವೀರ್ಯನಿಗೆ ಸೋದರಿ ಈ ರೇಣುಕೆ. ಮಗುದೊಂದರ ಪ್ರಕಾರ ಆತ ಅಳುಪಿ ವರಿಸ ಬಯಸಿದ ಋಷಿಪತ್ನಿ ರೇಣುಕೆ ಆಕೆ.

ಅನೂಚಾನವಾಗಿ ನಡೆದುಬಂದ ಮೂಲ ಸಂಪ್ರದಾಯ, ಪರಂಪರಾಗತ ಆಚಾರ ವಿಚಾರಗಳಿಗೆ ಜೀವಂತ ಸಾಕ್ಷಿ ನುಡಿಯುವ ಜಾನಪದದಲ್ಲಿ ರೂಢಿಯಲ್ಲಿರುವ ಕಥೆಗಳ ಪ್ರಕಾರ, ರೇಣುಕ ರಾಜನ ಮಗಳೇ ರೇಣುಕೆ. ಜಮದಗ್ನಿಯ ಧರ್ಮಪತ್ನಿ. ಒಂದು ದಿನ ಪೂಜಾವಿಧಿಗಳಿಗೆ ನೀರು ತಂದುಕೊಡಲು ತಡಮಾಡಿದಾಗ ಆಕೆಗೆ ತೊನ್ನಿಯಾಗೆಂದು ಋಷಿ ಶಾಪಕೊಟ್ಟ. ಆಕೆ ಆ ಶಾಪದಿಂದ ದುಃಖಿತೆಯಾಗಿ ತೊಳಲಿ ಅಲೆಯುತ್ತ ಸವದತ್ತಿಯ ಈಗಿನ ಜೋಗುಳ ಬಾವಿಯ ಹತ್ತಿರವಿರುವ ಮರದ ತೋಪಿಗೆ ಬಂದು ನೋಡಿದಾಗ ಎಕ್ಕಯ್ಯ, ಜೋಗಯ್ಯ ಎಂಬಿಬ್ಬರ ಘನಸಿದ್ಧರ ದರ್ಶನವಾಯಿತು. ತನ್ನ ದುಃಸ್ಥಿತಿಯನ್ನೆಲ್ಲ ಅವರಿಗೆ ಭಯಭಕ್ತಿಯಿಂದ ನಿವೇದಿಸಿಕೊಂಡಾಗ ಅವರು ಜೋಗುಳ ಬಾವಿಯಲ್ಲಿ ಮಿಂದು, ಅಲ್ಲಿರುವ ಅರೆಯ ಮೇಲೆ ಅರೆದ ಅರಿಶಿಣವನ್ನು ಮೈಗೆಲ್ಲ ತೊಡೆದುಕೊಂಡರೆ ತೊನ್ನು ರೋಗ ಹೋಗುತ್ತದೆ ಎಂದು ಹಿತವಚನ ನುಡಿದರು. ಆಕೆ ಹಾಗೆ ಮಾಡಿದಾಗ ತೊನ್ನೆಲ್ಲ ಮಾಯವಾಯಿತಲ್ಲದೆ ಅವಳ ದೇಹಕಾಂತಿ ನೂರ್ಮಡಿಸಿತು. ಅತ್ಯಂತ ಹರ್ಷ ಹಾಗೂ ಉತ್ಸಾಹದಿಂದ ಹಿಂದಿರುಗಿ ಬಂದು ಎಕ್ಕಯ್ಯ ಜೋಗಯ್ಯರ ಹೆಸರು ಶಾಶ್ವತವಾಗಲೆಂದೂ ಜೋಗುಳ ಬಾವಿಗೆ ಎಲ್ಲ ದುಷ್ಟ ರೋಗನಿವಾರಕ ಶಕ್ತಿ ತುಂಬಿಬರಲೆಂದೂ ಹಾರೈಸಿ ತನ್ನ ಗಂಡನ ಬಳಿಗೆ ಹೋಗಿ ಸುಖವಾಗಿರತೊಡಗಿದಳು. ಅವಳು ಹೊಕ್ಕು ಊರ್ಜಿತಗೊಳಿಸಿದ ಸವದತ್ತಿಯ ಆ ಪ್ರದೇಶವೇ ಮುಂದೆ ಎಲ್ಲಮ್ಮನ ಆವಾಸ ಸ್ಥಾನವಾಯಿತು, ಪವಿತ್ರ ಕ್ಷೇತ್ರವಾಯಿತು.

ಎಲ್ಲಮ್ಮ ದೇವಾಲಯ, ಸವದತ್ತಿ

ಮತ್ತೊಂದು ಜನಪದ ಕಥೆಯ ಮೇರೆಗೆ ಒಮ್ಮೆ ಕಾರ್ತವೀರ್ಯಾರ್ಜುನ ತನ್ನ ಪ್ರೇಯಸಿಯರೊಂದಿಗೆ ಜಲಕ್ರೀಡೆಯಾಡುತ್ತಿದ್ದುದನ್ನು ಕಂಡ ರೇಣುಕೆಯ ಮನಸ್ಸು ವಿಚಲಿತವಾಯಿತು. ಒಂದು ಹುಣ್ಣಿಮೆಯ ದಿನ ಕಾರ್ತವೀರ್ಯ ಜಮದಗ್ನಿಯನ್ನು ಕೊಂದ. ಆದ್ದರಿಂದಲೇ ಅದು ರಂಡೆ ಹುಣ್ಣಿಮೆಯಾಯಿತು. ಆದರೆ ಸ್ವರ್ಗದಿಂದ ಅಮೃತಕಲಶ ತಂದು ಆತನನ್ನು ಬದುಕಿಸಿದ್ದು ಇನ್ನೊಂದು ಹುಣ್ಣಿಮೆಯ ದಿನವೇ. ಆಗ ರಂಡೆಯಾಗಿದ್ದ ಎಲ್ಲಮ್ಮ ಮತ್ತೆ ಮುತ್ತೈದೆಯಾದಳಾದ್ದರಿಂದ ಅದು ಮುತ್ತೈದೆ ಹುಣ್ಣಿಮೆಯಾಯಿತು. ಈ ಎರಡು ಹುಣ್ಣಿಮೆಗಳಲ್ಲೂ ಅದ್ದೂರಿಯಾದ ಉತ್ಸವಗಳಾಗುತ್ತವೆ. ರಂಡೆ ಹುಣ್ಣಿಮೆಯಂದು ದೇವತೆಯ ಕೈಬಳೆಗಳನ್ನೆಲ್ಲ ಒಡೆದು ತೆಗೆದುಹಾಕಿ ಮುತ್ತೈದೆ ಹುಣ್ಣಿಮೆಯ ದಿನ ಮತ್ತೆ ಕೈತುಂಬ ಹೊಸಬಳೆ, ಕರಿಮಣಿ, ಇತ್ಯಾದಿ ಮಂಗಳವಸ್ತು ಒಡವೆಗಳಿಂದ ದೇವತೆಯನ್ನು ಅಲಂಕರಿಸುತ್ತಾರೆ. ತಂದೆಯ ಆಜ್ಞೆಯಂತೆ ಪರಶುರಾಮ ರೇಣುಕೆಯ ಶಿರವನ್ನು ಕಡಿದಂತೆ ತಲೆ ಚಿಗುರುತ್ತಲೇ ಹೋಯಿತಂತೆ. ಆದ್ದರಿಂದ ಹಾಗೆ ಪ್ರತಿಯೊಂದು ಕಡಿತದಿಂದಲೂ ಸಿಡಿದುಬಂದ ಉಗ್ರದೇವತೆಗಳೇ ಪ್ಲೇಗು, ಸಿಡುಬು, ಕಾಲರ ಮುಂತಾದ ಮಾರಿರೋಗಗಳು. ರೋಸಿಹೋದ ರೇಣುಕೆ ಗುಡ್ಡದ ಎಲ್ಲಮ್ಮನಾಗಿ ಅಲ್ಲಿ ಬಂದು ನೆಲೆಸಿದಳು; ತನ್ನ ಗಂಡ ಮಕ್ಕಳಿಂದ ದೂರವಿರಬಯಸಿದಳು. ಆದ್ದರಿಂದಲೇ ಜಮದಗ್ನಿ ಹಾಗೂ ಪರಶುರಾಮರ ಗುಡಿಗಳು ಎಲ್ಲಮ್ಮನ ಗುಡಿಯಿಂದ ದೂರ ದೂರ ಇವೆ. ತಾಯಿಯ ಮೇಲೆ ಕೊಡಲಿ ಎತ್ತಿದ ತಪ್ಪಿಗೆ ಪ್ರಾಯಶ್ಚಿತ್ತರೂಪವಾಗಿ ನಿರಂತರವಾಗಿ ತಾಯಿ ಎಲ್ಲಮ್ಮನ ಸ್ತುತಿ ಮಾಡುತ್ತಲೇ ಇದ್ದಾನಂತೆ, ಪರಶುರಾಮ. ಆದರೆ ಆಕೆ ಅದನ್ನು ಕೇಳಿಸಿಕೊಳ್ಳುವುದಿಲ್ಲವಂತೆ!

ಜನಪದದಲ್ಲಿ ರೂಢಮೂಲ ನಂಬಿಕೆಯಾಗಿ ಬೆಳೆದು ಆಚರಣೆಯಲ್ಲಿರುವ ಈ ಕಥೆಗಳಲ್ಲಿ ಕ್ವಚಿತ್ತಾಗಿ ಐತಿಹಾಸಿಕ, ಪೌರಾಣಿಕ ಸಂಗತಿಗಳು ವಿಚಿತ್ರವಾಗಿ ಹೆಣೆದುಕೊಂಡಿರುವುದರ ಸುಳಿವನ್ನು ಕಾಣಬಹುದಾಗಿದೆ. ವೀರಶೈವರು ತಮ್ಮದೇ ಆದ ರೀತಿಯಲ್ಲಿ ಎಲ್ಲಮ್ಮನ ಕಥೆಕಟ್ಟಿ ಹೇಳಿರುವುದನ್ನು ಗಮನಿಸಬೇಕು. ಆ ಪ್ರಕಾರ, ಒಂದಾನೊಂದು ಕಾಲದಲ್ಲಿ ಉಗುರುಗೊಳ್ಳ ಗ್ರಾಮದಲ್ಲಿ ಶ್ರೀಮಂತ ವೀರಶೈವ ಗೃಹಸ್ಥನೊಬ್ಬನಿದ್ದ. ಆತನ ಮಗಳೇ ಎಲ್ಲಮ್ಮ. ಬೆಳೆಯುವ ಕಾಲಕ್ಕೆ ಆಕೆಗೆ ತೊನ್ನು ಹತ್ತಿತ್ತು. ಯಾರೂ ಮದುವೆಯಾಗಬಯಸಲಿಲ್ಲ. ಹೀಗಿರುವಲ್ಲಿ ಸವದತ್ತಿಗೆ ಹೋದಾಗ ಗುಡ್ಡದಲ್ಲಿ ಎಕ್ಕಯ್ಯ

ಜೋಗಯ್ಯರ ಪಾದುಕೆಯ ಮೇಲಿನ ಮಳೆನೀರು ಬಿದ್ದಕ್ಷಣವೇ ತೊನ್ನು ಮಾಯವಾಯಿತು. ಆಗ ಆಕೆ ಸಿದ್ಧರ ಧ್ಯಾನದಲ್ಲಿ ಅಲ್ಲೇ ಕುಳಿತಳು. ಕೊನೆಗೆ ಪ್ರತ್ಯಕ್ಷರಾದ ಅವರು ಎಲ್ಲ ರೀತಿಯ ಯಂತ್ರ ಮಂತ್ರ ರಸವಿದ್ಯೆಗಳನ್ನು ಹೇಳಿಕೊಟ್ಟರಲ್ಲದೆ, ಶಿವಪಂಚಾಕ್ಷರಿ ಮಂತ್ರವನ್ನೂ ಆಕೆಗೆ ಉಪದೇಶಿಸಿದರು. ನೀನು ಮಾಯಾಕಾತಿಯಾಗು, ಭಕ್ತಜನ ಜಗವನ್ನು (ಅಲಂಕೃತಬಿಂದಿಗೆ) ಹೊತ್ತು ಕುಣಿಯುತ್ತ ನಿನ್ನಲ್ಲಿಗೆ ಬರುವಂತಾಗಲಿ ಎಂದು ಆಶೀರ್ವದಿಸಿ ಅಲ್ಲೇ ಅಂತರ್ಧಾನವಾದರು. ಅಂದಿನಿಂದ ಎಲ್ಲಮ್ಮ ಸತ್ಯಕ್ಕನೆಂಬ ಅನ್ವರ್ಥಕ ಹೆಸರಿನಿಂದ ಅಲ್ಲೇ ನೆಲೆಸಿ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತ ಬರುತ್ತಿದ್ದಾಳೆ. ಆ ಸಿದ್ಧರು ಪ್ರತ್ಯಕ್ಷರಾದ ಕಿಚ್ಚಿನಕುಂಡವೇ ರೋಗನಾಶಿನಿಯಾದ ಈಗಿನ ಜೋಗುಳ ಬಾವಿ; ಜೋಗಪ್ಪ ಜೋಗಮ್ಮರ ವೇಷಭೂಷಣಗಳನ್ನು ಧರಿಸಿಕೊಂಡು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಜಗ ಹೊತ್ತುಕೊಂಡು ಕುಣಿಯುತ್ತ ಬರುವ ಎಲ್ಲಮ್ಮನ ಭಕ್ತರನ್ನು ಬಿಜಾಪುರ, ಬೆಳಗಾಂವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಾಣಬಹುದು.

ಸಾಮಾಜಿಕ ಹಾಗೂ ನೈತಿಕ ದೃಷ್ಟಿಯಿಂದ ಕೂಡ ಎಲ್ಲಮ್ಮ ತುಂಬ ಪ್ರಭಾವ ಬೀರಿದ ಶಕ್ತಿಯಾಗಿದ್ದಾಳೆ. ಅನೇಕ ಜಾತಿಯವರು-ಹೆಚ್ಚಾಗಿ ಹರಿಜನರು-ಎಲ್ಲಮ್ಮನ ಭಕ್ತರಾಗಿ, ಜೋಗಯ್ಯನೋ ಜೋಗಮ್ಮನೋ ಆಗಿ ದೀಕ್ಷೆಪಡೆದುಕೊಳ್ಳುತ್ತಾರೆ. ಅವರು ಶಾಸ್ತ್ರೋಕ್ತವಾಗಿ ಮದುವೆಯಾಗುವಂತಿಲ್ಲ; ದೇವದಾಸಿಯರಂತೆ ನಡೆದುಕೊಳ್ಳಲು ಅವಕಾಶವಿದೆ.

ಇಷ್ಟರಮಟ್ಟಿಗೆ ಜನಮನದಲ್ಲಿ ಬೇರೂರಿ ಬೆಳೆದಿರುವ ಪರಂಪರಾಗತ ನಂಬಿಕೆ, ಭಕ್ತಿಗಳ ಸಂಕೇತವಾಗಿ ಬಹು ಹಿಂದಿನಿಂದಲೂ ಬೆನ್ನುಸಿಡಿಯಾಡುತ್ತಿದ್ದುದೂ ಉಗ್ರಕೊಂಡ ಹಾಯುತ್ತಿದ್ದುದೂ ರೂಢಿಯಲ್ಲಿತ್ತು. ಈಗ ಉತ್ತರ ಕರ್ನಾಟಕದಲ್ಲಿ ಮಾತ್ರವಲ್ಲದೆ ದಕ್ಷಿಣ ಕರ್ನಾಟಕದ ಅನೇಕ ಕಡೆಗಳಲ್ಲಿ ಎಲ್ಲಮ್ಮನ ದೇವಸ್ಥಾನಗಳಿವೆ. ತುಮಕೂರು ಜಿಲ್ಲೆಯ ಕುಣಿಗಲ್‌ನಿಂದ 10 ಕಿಮೀ ದೂರದಲ್ಲಿರುವ ಗುನ್ನಾಗರೆ ಎಂಬ ಗ್ರಾಮದಲ್ಲಿ ಪ್ರತಿವರ್ಷವೂ ಎಲ್ಲಮ್ಮ ದೇವತೆಯ ಜಾತ್ರೆ ನೆಡೆದು ಬೆನ್ನುಸಿಡಿ, ಕೊಂಡಹಾಯುವುದು ಮುಂತಾದವೆಲ್ಲ ನಡೆಯುತ್ತವೆ ಎಂಬುದು ಗಮನಾರ್ಹ ಸಂಗತಿ. ಆದರೆ ಈ ಎಲ್ಲಮ್ಮನ ಪೂಜಾರಿಗಳು ಎಲೆ ಬಣಜಿಗರಾದರೂ ಬೆನ್ನುಸಿಡಿ ಆಡುವವರು ಮಾತ್ರ ಇಲ್ಲೂ ಹರಿಜನರೇ ಎಂಬುದು ಮುಖ್ಯಾಂಶ.

ಸವದತ್ತಿ **(ನೋಡಿ- ಸವದತ್ತಿ)** ಕ್ಷೇತ್ರ ತುಂಬ ರಮಣೀಯವಾದ ಪ್ರವಾಸಿ ಕೇಂದ್ರವೂ ಆಗಿದೆ. ಗುಡ್ಡಗಳ ಸಾಲಿನಿಂದ, ಪಕ್ಕದಲ್ಲೇ ಬೆಳೆದ ತೆಂಗು, ಬಾಳೆ, ಕಬ್ಬಿನ ತೋಟಗಳಿಂದ ಆಕರ್ಷಕವಾಗಿರುವ ಇದು ಧಾರವಾಡದಿಂದ ಉತ್ತರಕ್ಕೆ 37 ಕಿಮೀ ದೂರದಲ್ಲಿದೆ. ಬೆಳಗಾಂವಿಯಿಂದ 80 ಕಿಮೀ ಮೈಲಿ ಪೂರ್ವಕ್ಕಿದೆ. ರೈಲು ಪ್ರಯಾಣದ ಸೌಲಭ್ಯವಿಲ್ಲ. ಆದರೆ ಬಸ್ಸುಗಳು ಸಾಕಷ್ಟು ಓಡುತ್ತವೆ. ನೀರು ವಸತಿಗೃಹದ ವ್ಯವಸ್ಥೆಯೂ ಈಚೆಗೆ ಸುಧಾರಿಸಿದೆ. (ಎನ್.ಟಿ.)

**ಎಲ್ಲಿಸ್, ಫ್ರಾನ್ಸಿಸ್ ವೈಟ್:** 1780-1819. 1796 ರಲ್ಲಿ ಕಂದಾಯ ಇಲಾಖೆಯ ಅಧಿಕಾರಿಯಾಗಿ ಭಾರತಕ್ಕೆ ಬಂದು ದಕ್ಷಿಣ ಭಾರತದ ಭಾಷೆ, ಚರಿತ್ರೆ, ಪ್ರಾಚೀನತೆ, ಸಂಸ್ಕೃತಿ ಮುಂತಾದವನ್ನು ಅರಿಯುವುದರಲ್ಲಿ ಉಳಿದ ಜೀವಮಾನವನ್ನೇ ಕಳೆದ ವ್ಯಕ್ತಿ. 20 ವರ್ಷಗಳ ಈ ಅವಧಿಯಲ್ಲಿ ತನ್ನ ಬಿಡುವಿನ ಸಮಯವನ್ನು ಈತ ಸಂಸ್ಕೃತ ಮತ್ತು ದಕ್ಷಿಣ ಭಾರತದ ವಿವಿಧ ಭಾಷೆಗಳ ವೈಚಿತ್ರ್ಯಗಳನ್ನು ವೈಶಿಷ್ಟ್ಯಗಳನ್ನು ಕಲಿತು ಅರ್ಥಮಾಡಿಕೊಳ್ಳುವುದರಲ್ಲಿಯೇ ಕಳೆದ. ಆ ಬಗ್ಗೆ ದೊರೆಯುವ ಎಲ್ಲ ಸಾಮಗ್ರಿಯನ್ನೂ ಸಂಗ್ರಹಿಸಿದ. ಪರಿಶೋಧನೆ, ಪರಿಶೀಲನೆ ಸಮರ್ಪಕವಾದಾಗ ಹೊರತು ಏನನ್ನೂ ಪ್ರಕಟಿಸಬಾರದೆಂದು ತಡೆಹಿಡಿದನಾದರೂ ಆತ ಸಂಗ್ರಹಿಸಿದ ವಿಷಯ ಅಗಾಧ, ಅಮೂಲ್ಯ. ಸಂಗ್ರಹಿಸಿದ್ದ ಮೂಲ ಸಾಮಗ್ರಿಯನ್ನು ಹಾಗೆಯೇ ಕೋಶರೂಪದಲ್ಲಿ ಪ್ರಕಟಿಸಿದ್ದರೂ ಅದು ಆಧುನಿಕ ಭಾಷಾವಿಜ್ಞಾನದಲ್ಲಿ ನಿಗೂಢವಾಗುಳಿದಿರುವ ಎಷ್ಟೋ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಿತ್ತು. ತನ್ನ ಸಂಶೋಧನಾ ವಿಷಯದ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ತಿಳಿಯಬೇಕೆಂದು, ದಕ್ಷಿಣ ಭಾರತದ ಅಥೆನ್ಸ್ ಎಂದು ಪ್ರಖ್ಯಾತವಾಗಿರುವ ಮಧುರೆಗೆ ಬಂದು ಆ ಜಿಲ್ಲೆಯಲ್ಲಿ ಆಗ ಕಲೆಕ್ಟರ್ ಆಗಿದ್ದ ರೌಸ್ ಪೀಟರನ ಜೊತೆಯಲ್ಲಿ ತಂಗಿದ್ದವನು ಒಂದು ದಿನ ಅದೇ ಪ್ರಾಂತ್ಯದಲ್ಲಿರುವ ರಾಮನಾಡಿಗೆ ಸಂತೋಷ ಪ್ರವಾಸಕ್ಕೆ ಹೋಗಿದ್ದಾಗ ಅಕಸ್ಮಾತ್ತಾಗಿ ವಿಷವನ್ನು ಸೇವಿಸಿ ಮಾರ್ಚ್ 10 ರಂದು ಅಸುನೀಗಿದ. ಹೀಗೆ ಎಲ್ಲಿಸ್ ಅಕಾಲಮೃತ್ಯುವಿಗೆ ಈಡಾದದ್ದು ದ್ರಾವಿಡ ಭಾಷೆ ಮತ್ತು ಸಾಹಿತ್ಯಕ್ಕೆ ತುಂಬಲಾಗದ ಹಾನಿ. ಅಡಕ್ಕಿ ಸುಬ್ಬರಾವು ಎಂಬ ವಿದ್ವಾಂಸ ತಾನು ಬರೆದ ಸೆಲೆಕ್ಷನ್ ಆಫ್ ಸ್ಟೋರೀಸ್ ಅಂಡ್ ರೆವೆನ್ಯೂ ಪೇಪರ್ಸ್ ಇನ್ ದಿ ಕರ್ನಾಟಕ ಲ್ಯಾಂಗ್ವೇಜ್ ಎಂಬ ಪುಸ್ತಕವನ್ನು ಎಲ್ಲಿಸ್‌ನ ಜ್ಞಾಪಕಾರ್ಥಕವಾಗಿ ಅವನಿಗೆ ಅರ್ಪಿಸಿದ್ದಾನೆ. ಆತ ಸತ್ತಾಗ ಆತನಲ್ಲಿದ್ದ ಚರ ಆಸ್ತಿಯನ್ನೆಲ್ಲ ಮಧುರೆ ಮತ್ತು ಚೆನ್ನೈಗಳಲ್ಲಿ ಹರಾಜಿನ ಮೂಲಕ ಮಾರಲಾಯಿತು. ಹೀಗಾಗುವಾಗ ಆತ ಬರೆದಿಟ್ಟಿದ್ದ ಅನೇಕ ಲೇಖನಗಳು ಕಳೆದುಹೋದವು, ಇಲ್ಲವೆ ನಾಶವಾದವು. (ತಿಂಗಳುಗಟ್ಟಲೆ ಪೀಟರನ ಮನೆಯಲ್ಲಿ ಒಲೆ ಹಚ್ಚಲಿಕ್ಕೆ ಅವನ್ನು ಬಳಸಲಾಯಿತೆಂದು ಇತ್ತೀಚೆಗೆ ತಿಳಿದುಬಂದಿದೆ).

**ಅತ್ಯಂತ ಸಮರ್ಥ;** ದಕ್ಷಿಣ ಭಾರತದ ಅಧ್ಯಯನ ಅದರ ಚರಿತ್ರೆ ಮತ್ತು ಭಾಷೆಗಳ ವಿಷಯದಲ್ಲಿ ಬಳಲದೆ, ಬೇಸರಪಡದೆ, ಸತತವಾಗಿ ಸಂಶೋಧನೆಯನ್ನು ನಡೆಸಿದವ; ಪ್ರಾಚೀನ-ಅರ್ವಾಚೀನ, ದೇಶೀಯ-ಐರೋಪ್ಯ ವಿಷಯಗಳ ಬಗ್ಗೆ ವಿಸ್ತೃತವಾದ ಜ್ಞಾನವನ್ನು ಪಡೆದವ; ನಿಖರವಾದ ನ್ಯಾಯತೀರ್ಮಾನ ಮತ್ತು ಉತ್ತಮ ಅಭಿರುಚಿಯ ಸಂಕೇತದಂತಿದ್ದವ-ಎಂದು ಮದ್ರಾಸ್ ಲಿಟರರಿ ಸೊಸೈಟಿ ಪತ್ರಿಕೆ ಅವನನ್ನು ಕೊಂಡಾಡಿದೆ.

ಬಂಗಾಲದ ಮುಖ್ಯ ನ್ಯಾಯಾಧೀಶನಾಗಿದ್ದ ಸರ್ ಚಾರಲ್ಸ್‌ಗ್ರೆ ಹಿಂದೂ ನ್ಯಾಯದ ಬಗ್ಗೆ ಲಿಟರರಿ ಸೊಸೈಟಿ ಸಭೆಯಲ್ಲಿ ಓದಿದ ಲೇಖನಗಳು 500 ಪುಟಗಳಷ್ಟಾಗುತ್ತವೆ. ಆದರೆ ಅದೆಲ್ಲವೂ ಕೊನೆಯವರೆಗೂ ಕರಡುಪ್ರತಿಯಾಗಿಯೇ ಉಳಿಯಿತು.

ಮಲಬಾರ್ ಮತ್ತು ಕೆನರ ಜಿಲ್ಲೆಗಳಲ್ಲಿ ಮಿರಾಸಿ ಹಕ್ಕಿನ ಬಗ್ಗೆ ತಲೆ ದೋರಿದ್ದ ವಿವಾದಕ್ಕೆ ಸಂಬಂಧಿಸಿದಂತೆ 1812ರಲ್ಲಿ ಮದ್ರಾಸು ಸರ್ಕಾರ ಆಯಾ ಜಿಲ್ಲೆಗಳಲ್ಲಿದ್ದ ಅಧಿಕಾರಿಗಳಿಗೆ ಅಲ್ಲಿನ ಮಿರಾಸಿ ಪದ್ಧತಿಯ ಬಗ್ಗೆ ವರದಿ ಮಾಡಬೇಕೆಂದು ಪ್ರಶ್ನಮಾಲಿಕೆಯೊಂದನ್ನು ಕಳುಹಿಸಿಕೊಟ್ಟಾಗ ಎಲ್ಲಿಸ್ ಕೇವಲ ಪ್ರೆಸಿಡೆನ್ಸಿಯ ಕಲೆಕ್ಟರಾಗಿದ್ದು ತನಗೆ ನೇರ ಸಂಬಂಧಪಡದಿದ್ದರೂ ಸಿದ್ಧಪಡಿಸಿ ಕೊಟ್ಟಿರುವ ಉತ್ತರಗಳನ್ನು ಕಂಡು ಸರ್ಕಾರ ಕೂಡಲೇ ಆ ಉತ್ತರಗಳನ್ನೆಲ್ಲ ಅಚ್ಚು ಮಾಡುವಂತೆ ಆಜ್ಞೆ ನೀಡಿತು. ಮಿರಾಸಿ ಹಕ್ಕಿಗೆ ಸಂಬಂಧಿಸಿದಂತೆ ಸುಮಾರು ಹದಿನೇಳು ಪ್ರಶ್ನೆಗಳಿಗೆ ಆತ ಉತ್ತರ ಕೊಟ್ಟಿದ್ದಾನೆ. ಕೊಟ್ಟ ಉತ್ತರಗಳು ಪೂರ್ಣವಾಗಿವೆ. ನಿರ್ದುಷ್ಟವಾಗಿವೆ. ದೃಷ್ಟಾಂತಗಳು ನಾಡಿನ ಸಾಹಿತ್ಯ ಮತ್ತು ಇತಿಹಾಸಗಳಿಂದ ಆಯ್ಕೆಯಾಗಿವೆ. ಈ ಪುಸ್ತಕ ಇಂದಿಗೂ ಪ್ರಮಾಣಗ್ರಂಥವೆಂದು ಪರಿಗಣಿಸಲ್ಪಟ್ಟಿದೆ.

ತಮಿಳಿನಲ್ಲಿ ನೈತಿಕಗ್ರಂಥವೆಂದು ಪ್ರಸಿದ್ಧವಾಗಿರುವ ಕುಱಳ್ ಗ್ರಂಥದ ಅರ್ಥ ವಿವರಣೆ ಎಲ್ಲಿಸ್‌ನ ಇನ್ನೊಂದು ಶ್ರೇಷ್ಠವಾದ ಕೆಲಸ. ಅವನು ಕುಱಳ್ ಗ್ರಂಥದ ಮೊದಲ ಭಾಗದ ದ್ವಿಪದಿಗಳನ್ನು ಸರಳರಗಳೆಯ ಛಂದಸ್ಸಿನಲ್ಲಿ ಅನುವಾದ ಮಾಡಿರುವುದಲ್ಲದೆ, ವಿಮರ್ಶಾತ್ಮಕವಾದ ವಿವರಣೆಯನ್ನೂ ನೀಡಿದ್ದಾನೆ. ಹೀಗೆ ಮಾಡುವಾಗ ತನ್ನ ವಿವರಣೆಗಾಗಿ ಶ್ರೇಷ್ಠರೆನಿಸಿದ ದೇಶೀಯ ವಿದ್ವಾಂಸರ ಪುಸ್ತಕಗಳಿಂದ ಅನೇಕ ದೃಷ್ಟಾಂತಗಳನ್ನು ಕೊಟ್ಟಿದ್ದಾನೆ. ಇದರಿಂದಾಗಿ ಅದರಲ್ಲಿ ಅಮೂಲ್ಯವಾದ ವಿವರಣೆಗಳು, ದಂತಕಥೆಗಳು, ಆಗಿನ ತಾತ್ತ್ವಿಕ ಪದ್ಧತಿಗಳು, ಜನತೆಯ ವಿವಿಧ ರೀತಿ-ನೀತಿಗಳು ವೇದ್ಯವಾಗುತ್ತವೆ. ಆತ ಮದ್ರಾಸನ್ನು ಬಿಡುವ ವೇಳೆಗೆ ಕುಱಳ್ ಗ್ರಂಥದ ಮೊದಲ ಭಾಗದ ಹದಿನೆಂಟು ಅಧ್ಯಾಯಗಳಿಗೆ ಸರಳಾನುವಾದ, ಟೀಕೆ-ಟಿಪ್ಪಣಿಗಳನ್ನು ಬರೆದಿದ್ದ. ಅದರಲ್ಲಿ ಸುಮಾರು 304 ಪುಟಗಳನ್ನೊಳಗೊಂಡ ಹದಿಮೂರು ಅಧ್ಯಾಯಗಳು ಮಾತ್ರ ಯಾವ ತಾರೀಖು ಅಥವಾ ಶಿರೋನಾಮೆಯೂ ಇಲ್ಲದೆ ಅಚ್ಚಾಗಿವೆ.

ಫ್ರಾನ್ಸಿಸ್ ವೈಟ್ ಎಲ್ಲಿಸ್ ಇನ್ನೂ ಕೆಲವು ಸಣ್ಣ ಪುಟ್ಟ ಲೇಖನಗಳನ್ನು ಬಿಟ್ಟು ಹೋಗಿದ್ದಾನೆ. ಪೋರ್ಟ್ ಸೇಂಟ್ ಜಾರ್ಜ್ ಕಾಲೇಜಿನ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ತಮಿಳು, ತೆಲುಗು, ಮಲೆಯಾಳಂ ಮತ್ತು ಪ್ರಾಯಶಃ ಕನ್ನಡ ಭಾಷೆಗಳ ಮೇಲೆ ಲೇಖನಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಮಲೆಯಾಳಂ ಭಾಷೆಯ ಬಗ್ಗೆ ಬರೆದ ಲೇಖನದ ಕೆಲವು ಪ್ರತಿಗಳು ಸಿಕ್ಕುತ್ತವೆ. ಡೇಸರ್ಟೇಷನ್ ಆನ್ ಮಲಯಾಳಂ ಲ್ಯಾಂಗ್ವೇಜ್ ಎಂಬುದು ಇಂಡಿಯನ್ ಆಂಟಿಕ್ವೆರಿಯಲ್ಲಿ ಅಚ್ಚಾಗಿದೆ. ತೆಲುಗಿನ ಬಗ್ಗೆ ಈತ ಬರೆದ ಒಂದು ಲೇಖನವನ್ನು ಎ. ಡಿ. ಕ್ಯಾಂಪ್‌ಬೆಲ್ ತನ್ನ ತೆಲುಗು ವ್ಯಾಕರಣದ (1816) ಮುನ್ನುಡಿಯಾಗಿ ಸೇರಿಸಿಕೊಂಡು ಅಚ್ಚುಹಾಕಿಸಿದ್ದಾನೆ. ಆ ಕಾಲೇಜಿನ ಅನುಪಯುಕ್ತ ಕಾಗದಗಳ ರಾಶಿಯ ಮಧ್ಯೆ ದೊರೆತ ಕೊಚ್ಚಿನ್ನಿನ ಜ್ಯೂಯಿಷ್ ಕಾಪರ್ ಪ್ಲೇಟಿನ ಅನುವಾದ ಮದ್ರಾಸ್ ಲಿಟರರಿ ಜರ್ನಲ್ಲಿನಲ್ಲಿ ಅಚ್ಚಾಗಿದೆ.

ಅದೇ ಕಾಗದದ ರಾಶಿಯ ಮಧ್ಯದಲ್ಲಿ ದಕ್ಷಿಣಭಾರತದ ಕವಿಗಳ ಗ್ರಂಥಗಳಿಂದ ಆಯ್ದ ಲಕ್ಷ್ಯ ಪದ್ಯಗಳನ್ನು ಒಳಗೊಂಡಿದ್ದು ತಮಿಳು ಛಂದಸ್ಸಿಗೆ ಸಂಬಂಧಪಟ್ಟ ಎರಡು ಗ್ರಂಥಗಳ ಕರಡು ಪ್ರತಿಗಳು ವಾಲ್ಟರ್ ಎಲಿಯಟ್ಟನಿಗೆ ದೊರೆತಿವೆ. ರೆವರೆಂಡ್ ಟಿ. ಬ್ರದರ್‌ಟನ್‌ನಂಥ ವಿದ್ವಾಂಸರು ಈ ಗ್ರಂಥಪ್ರತಿಗಳನ್ನು ನೋಡಿ ಶ್ಲಾಘಿಸಿದ್ದಾರೆ. ಸುಮಾರು ನೂರು ಪುಟಗಳನ್ನೊಳಗೊಂಡ ಈ ಕರಡು ಪ್ರತಿಗಳು ಸಹಜವಾಗಿಯೇ ಅಪೂರ್ಣವಾಗಿವೆ. ಮಾಡರ್ನ್ ಇಮಿಟೇಷನ್ ಆಫ್ ವೇದಾಸ್ ಎಂಬ ಎಲ್ಲಿಸನ ಇನ್ನೊಂದು ಲೇಖನ ಏಷ್ಯಾಟಿಕ್ ರಿಸರ್ಚಸ್‌ನಲ್ಲಿ ಪ್ರಕಟವಾಗಿದೆ.

ಒಟ್ಟಿನಲ್ಲಿ ತಾನು ಕೈಕೊಂಡ ಕಾರ್ಯಕ್ಷೇತ್ರದಲ್ಲಿ, ಸರ್ಕಾರಿ ಕೆಲಸದ ಜೊತೆಗೆ, ಇಷ್ಟು ನಿಷ್ಠೆ, ಶ್ರದ್ಧೆ, ತಲ್ಲೀನತೆಯಿಂದ ದುಡಿದು ತನ್ನ ಬಹುಮುಖ ಪ್ರತಿಭೆಯನ್ನು ಮೆರೆದ ಎಲ್ಲಿಸ್ ಪ್ರಪ್ರಥಮವಾಗಿ ದ್ರಾವಿಡಭಾಷೆಗಳು ಸಂಸ್ಕೃತಜನ್ಯವಲ್ಲವೆಂದೂ ಸ್ವತಂತ್ರವರ್ಗಕ್ಕೆ ಸೇರಿದ ಭಾಷೆಗಳೆಂದೂ ಸಾರಿ ಅವುಗಳ ಸ್ವತಂತ್ರ ಅಸ್ತಿತ್ವವನ್ನು ರೂಪಿಸಿ ದ್ರಾವಿಡ ಭಾಷಾವಿಜ್ಞಾನದ ಆದ್ಯಪ್ರವರ್ತಕನೆನಿಸಿದ್ದಾನೆ. (ಬಿ.ಎನ್.ಪಿ.)

**ಎಲ್ಲಿಸ್, ಹೆನ್ರಿ ಹ್ಯಾವಲಾಕ್:** 1859–1939. ಇಂಗ್ಲೆಂಡಿನ ವೈದ್ಯ. ಮಾನವನ ಲೈಂಗಿಕ ವರ್ತನೆಯ ಬಗ್ಗೆ ಆಳವಾದ ಅಧ್ಯಯನ ಮಾಡಿ ಪ್ರಸಿದ್ಧನಾದವ. 1859ರ ಫೆಬ್ರವರಿ ತಿಂಗಳ ಎರಡನೆಯ ತಾರೀಖು ಕ್ರಾಯ್‌ಡನ್ನಲ್ಲಿ ಜನ್ಮತಳೆದ. ತಂದೆ ಕಡಲ ನಾವಿಕ. ಹಾಗಾಗಿ ತುಂಬ ಚಿಕ್ಕವಯಸ್ಸಿನಿಂದಲೇ ಸಮುದ್ರಯಾನ ಮಾಡತೊಡಗಿದ. ಏಳು ವರ್ಷದವನಿದ್ದಾಗ ತಂದೆ ಇವನನ್ನು ತನ್ನ ಹಡಗಿನಲ್ಲಿ ಪ್ರಪಂಚ ಪರ್ಯಟನೆಗೆ ಕರೆದೊಯ್ದ. ಆದರೆ ಎಲ್ಲಿಸ್‌ಗೆ ನಾವಿಕನಾಗುವ ಇಷ್ಟ ಇರಲಿಲ್ಲ.

ಎಲ್ಲಿಸ್‌ಗೆ ತುಂಬ ಚಿಕ್ಕವಯಸ್ಸಿನಲ್ಲೇ ಪುಸ್ತಕಗಳನ್ನು ಓದುವ ಚಟ ಅಂಟಿಕೊಂಡಿತು. ಹನ್ನೆರಡನೆಯ ವಯಸ್ಸಿನಲ್ಲಿ ಅನೇಕ ಇಂಗ್ಲೀಷ್ ಕವಿಗಳ ಕೃತಿಗಳನ್ನು ಓದತೊಡಗಿದ. ಸ್ವತಃ ಬರವಣಿಗೆಯನ್ನು ಪ್ರಾರಂಭಿಸಿದ. ಹೂವಿನ ಮೇಲೊಂದು ಪುಸ್ತಕವನ್ನು ಅನೇಕ ಪ್ರಬಂಧಗಳನ್ನೂ ಬರೆದ. ಹದಿನಾರನೆಯ ವಯಸ್ಸಿಗೆ ಶಾಲೆಯ ಶಿಕ್ಷಣವನ್ನು ಮುಗಿಸಿಕೊಂಡ ಮೇಲೆ ಕೆಲವು ಕಾಲ ಸಿಡ್ನಿಯ ಶಾಲೆಯೊಂದರಲ್ಲಿ ಅಧ್ಯಾಪಕನಾಗಿ ಕೆಲಸ ಮಾಡಿದ. ಆಮೇಲೆ ಸ್ವಲ್ಪ ಸಮಯ ಖಾಸಗಿ ಅಧ್ಯಾಪಕನಾಗಿ ಪಾಠ ಹೇಳಿದ. ಹೀಗೆ ನಾಲ್ಕು ವರ್ಷ ನ್ಯೂಸೌತ್‌ವೇಲ್ಸ್‌ನಲ್ಲಿ ಅಧ್ಯಾಪಕನಾಗಿ ಕೆಲಸ ಮಾಡಿದ ಮೇಲೆ ವೈದ್ಯವಿಜ್ಞಾನವನ್ನು ಓದಲು ನಿರ್ಧರಿಸಿ, ಇಂಗ್ಲೆಂಡಿಗೆ ಹಿಂತಿರುಗಿ ಲಂಡನ್ನಿನ ಸೇಂಟ್ ಥಾಮಸ್ ಆಸ್ಪತ್ರೆಗೆ ಸೇರಿದ. ಏಳು ವರ್ಷಗಳ ಅಧ್ಯಯನ ಆದ ಅನಂತರ ವೈದ್ಯನಾದ. ಇದೇ ಅವಧಿಯಲ್ಲಿ ಸಾಹಿತ್ಯ, ಸಂಗೀತ, ಸಮಾಜ ವಿಜ್ಞಾನ, ಪುರಾಣಗಳು, ತತ್ತ್ವಶಾಸ್ತ್ರ, ಇತಿಹಾಸ ಮೊದಲಾದ ಅನೇಕ ಕ್ಷೇತ್ರಗಳಲ್ಲಿ ಪಾಂಡಿತ್ಯವನ್ನು ಗಳಿಸಿಕೊಂಡ. 1889ರಲ್ಲಿ ಎಂ.ಡಿ. ಪದವಿಯನ್ನು ಪಡೆದ. 1891ರಲ್ಲಿ ಎಡಿತ್ ಲೀಸ್ ಎಂಬವಳನ್ನು ಮದುವೆಯಾದ.

ಖಾಸಗಿ ವೈದ್ಯನಾಗಿ ಕೆಲಸ ಪ್ರಾರಂಭಮಾಡಿದ ಕೆಲವು ದಿನಗಳಲ್ಲೇ ಅದನ್ನು ಬಿಟ್ಟು ಕೊಟ್ಟು ಬರವಣಿಗೆಗೆ ತನ್ನ ಸಮಯವನ್ನು ಮೀಸಲಿಟ್ಟ. ಮನುಷ್ಯನ ಕಾಮವರ್ತನೆಯಲ್ಲಿ ವೈಜ್ಞಾನಿಕ ಆಸಕ್ತಿ ತಳೆದದ್ದು ತುಂಬಾ ಚಿಕ್ಕ ವಯಸ್ಸಿನಲ್ಲೇ. ಹದಿನಾರು ವರ್ಷದ ಹುಡುಗನಾಗಿದ್ದಾಗಲೇ ಮನುಷ್ಯನ ಕಾಮಜೀವನವನ್ನು ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕೆಂದು ನಿರ್ಧರಿಸಿದ್ದ. ಈ ನಿರ್ಧಾರದ ಮೂಲಕಾರಣ ಕಾಮಪ್ರವೃತ್ತಿಯ ಬಗೆಗೆ ಅವನ ಮತ್ತು ಅವನ ಶತಮಾನದ ಅಜ್ಞಾನವೇ. ಆ ಕಾಲದ ಇತರ ಹುಡುಗರಂತೆಯೇ ಎಲ್ಲಿಸ್‌ಗೆ ಹದಿನಾರನೆಯ ವಯಸ್ಸಿನಲ್ಲಿ ಲೈಂಗಿಕತೆಯ ಬಗೆಗೆ ಹೆಚ್ಚೇನೂ ಗೊತ್ತಿರದೆ ಮನುಷ್ಯನ ಈ ಹುಟ್ಟು ಗುಣ, ಈ ಸಹಜ ವರ್ತನೆ, ಈ ಅನಿವಾರ್ಯ ಪ್ರವರ್ತನೆ ಅವನಿಗೆ ಒಂದು ನಿಗೂಢವಾದ ಸಮಸ್ಯೆಯಾಗಿತ್ತು. ಬಹುಶಃ ಮಡಿವಂತಿಕೆಯ ಸಂಪ್ರದಾಯ ಅತ್ಯಂತ ಪ್ರಬಲವಾಗಿದ್ದ 19ನೆಯ ಶತಮಾನದ ಇಂಗ್ಲೆಂಡಿನಲ್ಲಿ ಇದೇನೂ ವಿಶೇಷವಾಗಿರಲಿಲ್ಲ. ಆದರೆ ವೈಜ್ಞಾನಿಕ ಕುತೂಹಲ ಮತ್ತು ನಡೆವಳಿಕೆಯಲ್ಲಿ ತನ್ನ ಕಾಲದವರಿಗಿಂತ ಬಹಳಷ್ಟು ಮುಂದಿದ್ದ ಎಲ್ಲಿಸ್‌ಗೆ ಮಾತ್ರ ಇದು ಸಹ್ಯವಾಗಲಿಲ್ಲ. ಲೈಂಗಿಕತೆಯ ಮೇಲೆ ಏನಾದರೂ ವೈಜ್ಞಾನಿಕವಾದ ತಿಳಿವಳಿಕೆ ದೊರೆಯುತ್ತದೆಯೋ ಎಂದು ಹಾತೊರೆದ. ಆತನಿಗೆ ಅದು ಎಲ್ಲೂ ಸಿಗಲಿಲ್ಲ. ಅದರ ಬದಲು ಕಾಮಜೀವನದ ಬಗೆಗೆ ಕೆಟ್ಟ ಸಂಕೋಚ, ನಾಚಿಕೆಗೇಡಿನ ಮುಚ್ಚುಮರೆ, ಭಯಂಕರ ಮಡಿವಂತಿಕೆ, ಅಗಾಧವಾದ ಅಜ್ಞಾನ, ದಂಗುಬಡಿಸುವ ಮೂಢನಂಬಿಕೆಗಳು, ಆಧಾರವಿಲ್ಲದ ಸುಳ್ಳು ಸಿದ್ಧಾಂತಗಳು, ಅರ್ಥಹೀನವಾದ ಉಪದೇಶಾಮೃತಗಳೇ ಕಂಡವು. ಇದನ್ನು ನೋಡಿ, ಅನುಭವಿಸಿದ ಎಲ್ಲಿಸ್ ಮಾನವನ ಕಾಮಜೀವನದ ವಾಸ್ತವಿಕ ಅಂಶಗಳನ್ನು ಕಂಡುಹಿಡಿಯುವುದೇ ತನ್ನ ಜೀವನದ ಉದ್ದೇಶವಾಗಬೇಕೆಂದು ನಿರ್ಧರಿಸಿಕೊಂಡ. ಎಲ್ಲಿಸನ ಜೀವನ ಮತ್ತು ಕೃತಿಗಳನ್ನು ಪರಿಶೀಲಿಸಿದರೆ, ಬಹುಶಃ ಆತ ತನ್ನ ಉದ್ದೇಶವನ್ನು ಬಲು ಸಮರ್ಥವಾಗಿ ನೆರವೇರಿಸಿಕೊಂಡು ಸಾರ್ಥಕವಾದ ಬದುಕನ್ನು ನಡೆಸಿದನೆಂದೇ ಹೇಳಬೇಕು.

ಹ್ಯಾವಲಾಕ್ ಎಲ್ಲಿಸ್ 1894ರಲ್ಲಿ ಮ್ಯಾನ್ ಅಂಡ್ ವುಮನ್ ಎಂಬ ಪುಸ್ತಕವನ್ನು ಪ್ರಕಟಿಸಿದ. ಇದರಲ್ಲಿ ಆತ ಹೆಣ್ಣು ಮತ್ತು ಗಂಡಿನ ಶರೀರ ರಚನೆ, ಮತ್ತು ಅವುಗಳ ಮುಖ್ಯ ವ್ಯತ್ಯಾಸಗಳನ್ನು ದೀರ್ಘವಾಗಿ ವಿಶ್ಲೇಷಿಸಿದ್ದಾನೆ. ಅಲ್ಲದೆ ಹೆಣ್ಣು ಗಂಡಿನ ಬೆಳವಣಿಗೆಯ ವಿಶಿಷ್ಟ ಕ್ರಮಗಳು, ಜ್ಞಾನೇಂದ್ರಿಯಗಳ, ಭಾವಪ್ರತಿಕ್ರಿಯೆಗಳ ಬೆಳವಣಿಗೆ, ಜೀರ್ಣಾಂಗಗಳು ಮತ್ತು ಒಳಸುರಿತಗಳು, ಹೆಣ್ಣಿನ ವಿಶಿಷ್ಟ ಜೈವಿಕ ಕ್ರಿಯೆಯಾದ ಮುಟ್ಟು–ಇವೆಲ್ಲದರ ಬಗ್ಗೆ ಬರೆದ. ಹೆಣ್ಣು ಗಂಡುಗಳು ಬೇರೆ ಬೇರೆ, ಆದರೆ ಸರಿಸಮ. ಇಬ್ಬರೂ ಭಿನ್ನ ಪ್ರಕೃತಿಯವರೇ ಹೊರತು ಇವರಲ್ಲಿ ಮೇಲುಕೀಳುಗಳಿಲ್ಲ–ಎಂಬ ಧೋರಣೆಯನ್ನು ಎಲ್ಲಿಸ್ ತನ್ನ ಈ ಕೃತಿಯಲ್ಲಿ ವ್ಯಕ್ತಪಡಿಸಿದ.

ಇದಾದ ಮೇಲೆ ಎಲ್ಲಿಸ್ ಕಾಮವಿಕಾರಗಳ ಮೇಲೆ ಅನೇಕ ಅಧ್ಯಯನಗಳನ್ನು ನಡೆಸಿದ. ಅವನ ಬರೆಹಗಳಲ್ಲೆಲ್ಲ ಪ್ರಸಿದ್ಧವಾದವು ಇವೇ. ಕಾಮವಿಕಾರಗಳ ಮೇಲಿನ ಅವನ ಅಧ್ಯಯನಗಳೆಲ್ಲ ಈಗ ಸ್ಟಡೀಸ್ ಇನ್ ದಿ ಸೈಕಾಲಜಿ ಆಫ್ ಸೆಕ್ಸ್ ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ಇವು ಏಳು ಬೃಹತ್ ಸಂಪುಟಗಳಲ್ಲಿದ್ದು ಲೇಖಕನ ಮೂವತ್ತು ವರ್ಷಗಳ ಜೀವನಾನುಭವಗಳನ್ನೂ ವ್ಯಾಸಂಗದ ಸಾರವನ್ನೂ ಒಳಗೊಂಡಿವೆ. ಇದು ಮತ್ತು ಈತನ ವರ್ಲ್ಡ್ ಆಫ್ ಡ್ರೀಮ್ಸ್ (1911) ಎಂಬ ಗ್ರಂಥಗಳನ್ನು ಫ್ರಾಯ್ಡ್ ಬಹಳ ಮೆಚ್ಚಿದ್ದಾನೆ. ಎಲ್ಲಿಸ್ ಮಾಡಿದ ಮೊದಲ ಅಧ್ಯಯನವೆಂದರೆ ಸಲಿಂಗರತಿಯ (ಹೋಮೊಸೆಕ್ಷುಯಾಲಿಟಿ) ಮೇಲೆ; ಆದರೆ ಆ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಇದನ್ನು ಪ್ರಕಟಿಸುವುದು ಸುಲಭವಾಗಲಿಲ್ಲ. ವೈದ್ಯಕೀಯ ಪುಸ್ತಕಗಳನ್ನು ಪ್ರಕಟಿಸಿದ ಸಂಸ್ಥೆಗಳು ಈ ಪುಸ್ತಕವನ್ನು ತೆಗೆದುಕೊಳ್ಳಲಿಲ್ಲ. ಕೊನೆಗೆ ಲಂಡನ್ನಿನಲ್ಲಿ ವಾಸವಾಗಿದ್ದ ಜರ್ಮನನೊಬ್ಬ ಇದನ್ನು ಪ್ರಕಟಿಸಿದ. ಆದರೆ ಸ್ವಲ್ಪ ದಿನಗಳಲ್ಲೇ ಈ ವ್ಯಕ್ತಿ ಭಾರಿ ಕೇಡಿಗನೆಂದೂ ಸಂಭಾವಿತನ ಸೋಗು ಹಾಕಿ ಬದುಕುತ್ತಿದ್ದ ವಂಚಕನೆಂದೂ ಗೊತ್ತಾಯಿತು. ಸಲಿಂಗರತಿಯ ಮೇಲಿನ ಈ ಪುಸ್ತಕ ಪ್ರಕಟವಾದ ಸ್ವಲ್ಪ ದಿನಗಳಲ್ಲೇ ಒಂದು ಸಾರ್ವಜನಿಕ ಸಂಸ್ಥೆಯಲ್ಲಿ ಪೋಲೀಸರ ಕೈಗೆ ಸಿಕ್ಕು ಅಶ್ಲೀಲವೆಂಬ ಕಾರಣಕ್ಕಾಗಿ ನ್ಯಾಯಸ್ಥಾನದ ವಿಚಾರಣೆಗೆ ಗುರಿಯಾಯಿತು. ಆದರೆ ಹೇಗೋ ಎಲ್ಲಿಸ್‌ನನ್ನು ಮಾತ್ರ ಪೋಲೀಸರು ಪೀಡಿಸಲಿಲ್ಲ. ಈ ಪುಸ್ತಕ ಅಶ್ಲೀಲ, ವಿಕೃತ, ಅವೈಜ್ಞಾನಿಕವೆಂದು ನ್ಯಾಯಸ್ಥಾನ ಘೋಷಿಸಿತು. ಪೋಲೀಸರು ಪುಸ್ತಕವನ್ನು ಪ್ರಕಟಿಸಿದ ಜರ್ಮನ್ ಕೇಡಿಗನನ್ನು ಬಹಳ ಕಷ್ಟಪಟ್ಟು ಹಿಡಿದರು. ಆದರೆ ಆತ ನ್ಯಾಯಸ್ಥಾನಕ್ಕೆ ಹೋಗುವ ಮೊದಲೇ ಆತ್ಮಹತ್ಯೆ ಮಾಡಿಕೊಂಡ.

ತನ್ನ ವೈಜ್ಞಾನಿಕ ಬರೆಹಕ್ಕೆ ಸಿಕ್ಕಿದ ಇಂಥ ಸ್ವಾಗತದಿಂದ ಮನ ನೊಂದ ಎಲ್ಲಿಸ್ ಮುಂದೆ ತನ್ನ ಯಾವ ಪುಸ್ತಕವನ್ನೂ ಇಂಗ್ಲೆಂಡಿನಲ್ಲಿ ಪ್ರಕಟಿಸಲಿಲ್ಲ. ಆದರೆ ಅಮೆರಿಕದ ಕಂಪನಿಯೊಂದು ಕೂಡಲೇ ಅವನ ಪುಸ್ತಕಗಳನ್ನು ಪ್ರಕಟಿಸಲು ಮುಂದಾಯಿತು. ಅನಂತರ ಅವನ ಎಲ್ಲ ಪುಸ್ತಕಗಳನ್ನೂ ಈ ಕಂಪನಿ ಪ್ರಕಟಿಸಿತು. 1939ರಲ್ಲಿ ಎಲ್ಲಿಸ್ ತೀರಿಕೊಳ್ಳುವ ಹೊತ್ತಿಗೆ ಅವನ ಕೃತಿ ಪ್ರಪಂಚದಾದ್ಯಂತ ಪ್ರಸಿದ್ಧವಾಗಿತ್ತು. ಆದರೆ ಎಲ್ಲಿಸ್ ಪ್ರಾರಂಭದಲ್ಲಿ ತನ್ನ ಈ ವೈಜ್ಞಾನಿಕ ಆಸಕ್ತಿಯಿಂದಾಗಿ ಸಾಕಷ್ಟು ಕಷ್ಟವನ್ನೇ ಅನುಭವಿಸಬೇಕಾಯಿತು.

ಅನೇಕ ಬಗೆಯ ಕಾಮವಿಕಾರಗಳ ಬಗ್ಗೆ ಎಲ್ಲಿಸ್ ಬರೆದಿದ್ದಾನೆ. ಇವನ ಬರೆಹದ ಒಂದು ಒಳ್ಳೆಯ ಅಂಶವೆಂದರೆ, ಆವರೆಗೆ ದೊರೆಯದಿದ್ದ ದೀರ್ಘವಾದ ರೋಗ ಸಂಗತಿಗಳನ್ನು ಕೊಟ್ಟಿರುವುದೇ ಆಗಿದೆ. ಈತ ಮುಖ್ಯವಾಗಿ ಸಲಿಂಗರತಿ, ಬದಲುಡಿಗೆ (ಟ್ರಾನ್ಸ್ ವೆಸ್ಟಿಸಮ್), ಸೇಡುಗಾಮ (ಸ್ಯಾಡಿಸಮ್), ಸಂಕಟಕಾಮ (ಮ್ಯಾಸೊಫಿಸಮ್) ಇತ್ಯಾದಿಗಳ ಬಗ್ಗೆ ಬರೆದಿದ್ದಾನೆ. ಎಲ್ಲಿಸ್‌ನ ಪ್ರಕಾರ ಮನುಷ್ಯನ ಕಾಮಪ್ರವೃತ್ತಿ ಅವನ ಸಹಜ ಪ್ರವೃತ್ತಿಗಳಲ್ಲೆಲ್ಲ ಮುಖ್ಯವಾದದ್ದು. ಆದರೆ ಮನುಷ್ಯನ ಎಲ್ಲ ಚಟುವಟಿಕೆಯ ಮೂಲ ಕಾಮವೆಂಬ ಫ್ರಾಯ್ಡನ ಅಭಿಪ್ರಾಯವನ್ನು ಎಲ್ಲಿಸ್ ಅನುಮೋದಿಸಲಿಲ್ಲ. ಜೀವನದ ಸಂಕೀರ್ಣವಾದ, ವೈವಿಧ್ಯಮಯವಾದ ವ್ಯಾಪಾರವನ್ನು ಯಾವುದಾದರೊಂದು ಅಂಶಕ್ಕೆ ಬಟ್ಟಿ ಇಳಿಸಬಹುದೆಂದು ಎಲ್ಲಿಸ್ ನಂಬಿರಲಿಲ್ಲ. ಹಾಗಿದ್ದರೂ ಮನುಷ್ಯನ ಎಲ್ಲ ಸಹಜ ಪ್ರವೃತ್ತಿಗಳಲ್ಲಿ ಕಾಮ ಬಲು ಅರ್ಥಪೂರ್ಣವಾದ, ಆಳವಾದ, ಬದುಕಿನ ಬಹಳಷ್ಟು ಚಟುವಟಿಕೆಗಳಿಗೆ ವಿಶೇಷ ಮಹತ್ತ್ವವನ್ನು ಕೊಡುವ ಶಕ್ತಿಯೆಂಬುದು ಎಲ್ಲಿಸ್‌ನ ಕಲ್ಪನೆ.

ಕಾಮವಿಕಾರಗಳ ಬಗ್ಗೆ ಎಲ್ಲಿಸ್‌ನ ಒಟ್ಟು ದೃಷ್ಟಿಕೋನ ಜೀವವಿಜ್ಞಾನದಿಂದ ಪ್ರಭಾವಿತವಾದದ್ದು. ಆತ ಫ್ರಾಯ್ಡನಂತೆ ಮಾನಸಿಕ ಅಂಶಗಳಿಗೆ ಹೇಳಿಕೊಳ್ಳಬಹುದಾದಂಥ ಪ್ರಾಮುಖ್ಯ ಕೊಡಲಿಲ್ಲ. ಎಲ್ಲ ಬಗೆಯ ಕಾಮವಿಕಾರಗಳಿಗೂ ಮೂಲವಾಗಿ ಶರೀರ ಪ್ರಕೃತಿಯ ದೋಷಗಳಿರುತ್ತವೆ. ಈ ದೋಷ ಬಹು ಮಟ್ಟಿಗೆ ಆನುವಂಶಿಕವಾಗಿ ಬಂದದ್ದು ಎಂಬುದು ಅವನ ಅಭಿಪ್ರಾಯ. ಆದ್ದರಿಂದ ಕಾಮವಿಕಾರಗಳು ವಿಕೃತ ಪ್ರತಿಕ್ರಿಯೆಗಳಾದರೂ ಇವು ಹುಟ್ಟಿನಿಂದಲೇ ಪಡೆದುಬಂದವು; ಅಥವಾ ಹುಟ್ಟಿದ ಮೇಲೆ ಶಾರೀರಿಕ ಕ್ರಿಯೆಯಲ್ಲಾಗುವ ತಾರುಮಾರುಗಳ ಪ್ರತಿಫಲವಾಗಿ ಕಾಣಿಸಿಕೊಳ್ಳುವಂತವು. ಪರಿಣಾಮವಾಗಿ ಈ ಬಗೆಯ ವಿಚಾರಗಳನ್ನು ಉಂಟು ಮಾಡುವುದರಲ್ಲಿ ಪರಿಸರದ ಅನುಭವಗಳು ಅಷ್ಟು ಪ್ರಮುಖವಲ್ಲ ಎಂಬುದು ಎಲ್ಲಿಸ್‌ನ ನಂಬಿಕೆಯಾಗಿತ್ತು. ಇದಲ್ಲದೆ, ಸಹಜವಾಗಿಯೇ ನೋವು ಮತ್ತು ಸಂಕಟ ಕಾಮದ ಹುಟ್ಟನ್ನು ಕೂಡ ಎಲ್ಲಿಸ್ ಜೀವದಂಶಗಳಲ್ಲೇ ಕಾಣಲು ಪ್ರಯತ್ನಿಸಿದ.

ಎಲ್ಲಿಸ್‌ನ ಅಧ್ಯಯನ ಬಹುಮುಖ್ಯವಾದುದು. ದಿ ಕ್ರಿಮಿನಲ್ (1899) ಎಂಬ ಈತನ ಗ್ರಂಥ ಕೊಲೆ ದರೋಡೆಗಳ ಬಗ್ಗೆ ಬ್ರಿಟನ್ನಿನಲ್ಲಿ ಮೊದಲ ಬಾರಿ ಮಾಡಿದ ಮಾನಸಿಕ ವಿಶ್ಲೇಷಣೆಯಾಗಿದೆ. ಎ ಸ್ಟಡಿ ಆಫ್ ದಿ ಬ್ರಿಟಿಷ್ ಜೀನಿಯಸ್ (1904) ಎಂಬುದು ಮೇಧಾಶಕ್ತಿಗೂ ಆನುವಂಶೀಯತೆಗೂ ಇರುವ ಸಂಬಂಧದ ವಿಶ್ಲೇಷಣೆಗೆ ಮೀಸಲಾಗಿರುವ ಪುಸ್ತಕ. ಆಫರ್‌ಮೇಷನ್ಸ್ (1898), ದಿ ಸೋಲ್ ಆಫ್ ಸ್ಪೇನ್ (1908), ಸೆಕ್ಸ್ ಇನ್ ರಿಲೇಷನ್ ಟು ಸೊಸೈಟಿ (1910), ಇಂಪ್ರೆಷನ್ಸ್ ಅಂಡ್ ಕಾಮೆಂಟ್ಸ್ (1914–24), ದಿ ಡಾನ್ಸ್ ಆಫ್ ಲೈಫ್ (1923), ದಿ ನ್ಯೂಸ್ಪಿರಿಟ್

(1926), ಮ್ಯಾರಿಯೇಜ್ ಟುಡೆ ಅಂಡ್ ಟುಮಾರೊ (1929) ಇವು ಈತನ ಇತರ ಪುಸ್ತಕಗಳು. ಈತನ ಶೈಲಿ ಸರಳ, ಸುಂದರವಾದುದು. ಬುದ್ಧಿ ತೀಕ್ಷ್ಣವಾದುದು. ಎಲ್ಲ ಕೃತಿಗಳಲ್ಲೂ ಮಾನವನ ಲೋಪದೋಷಗಳ ಬಗ್ಗೆ ಈತನಿಗಿದ್ದ ಸಹಾನುಭೂತಿ ಎದ್ದು ತೋರುತ್ತದೆ.

ಎಲ್ಲಿಸ್‍ನ ಬರೆಹದ ಪ್ರಾಮುಖ್ಯ ಈಗ ಮುಖ್ಯವಾಗಿ ಐತಿಹಾಸಿಕ ಮಹತ್ತ್ವದ್ದಾಗಿದೆ. ಅವನ ಸಿದ್ಧಾಂತಗಳು ಅನೇಕ ಬಗೆಯ ಆಕ್ಷೇಪಣೆಗಳಿಗೆ ಗುರಿಯಾಗಿವೆ. ಕಾಮವಿಕಾರಗಳು ಮುಖ್ಯವಾಗಿ ವ್ಯಕ್ತಿಯ ಶರೀರ ಪ್ರಕೃತಿಯನ್ನವಲಂಬಿಸಿದ ಅಥವಾ ಹುಟ್ಟಿನೊಡನೆ ಪಡೆದು ಬಂದ ತಾರುಮಾರುಗಳು ಎಂಬ ದೃಷ್ಟಿಕೋನಕ್ಕೆ ಆಧುನಿಕ ಸಂಶೋಧನೆಗಳಿಂದ ಹೇಳಿಕೊಳ್ಳುವಂಥ ಪುಷ್ಟಿ ದೊರೆತಿಲ್ಲ. ಕಲಿಕೆಯ ಮತ್ತು ಪರಿಸರದ ಅಂಶಗಳು ಕೂಡ ಈ ರೀತಿಯ ವಿಕಾರಗಳಿಗೆ ತಕ್ಕ ಮಟ್ಟಿಗೆ ಕಾರಣಗಳಾಗಬಹುದು ಎಂಬುದಕ್ಕೆ ಈಗ ಸಾಕಷ್ಟು ಆಧಾರಗಳಿವೆ. ಹೀಗೆ ಎಲ್ಲಿಸ್‍ನ ಸಿದ್ಧಾಂತಗಳು ಆಕ್ಷೇಪಣೆಗೆ ಗುರಿಯಾದರೂ ಈತ ಕಾಮಜೀವನದ ವೈಜ್ಞಾನಿಕ ಅಧ್ಯಯನಕ್ಕೆ ಕೈ ಹಾಕಿದವರಲ್ಲಿ-ಅದೂ ಮಡಿವಂತಿಕೆಯ 19ನೆಯ ಶತಮಾನದಲ್ಲಿ ಮೊದಲಿಗನಾಗಿದ್ದಾನೆ. ಆದ್ದರಿಂದ ಮನುಷ್ಯನ ವರ್ತನೆಯ ನಿಗೂಢ ಅಂಶಗಳನ್ನು, ಸಹಜ ಪ್ರೇರಣೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡಿದ ವಿಜ್ಞಾನಿಗಳಲ್ಲಿ ಎಲ್ಲಿಸ್ ಗಣನೀಯನಾಗಿದ್ದಾನೆ.

(ಎಂ.ಎಸ್.ಎಚ್.; ಎಸ್.ಕೆ.ಆರ್.)

**ಎಲ್ಲೋರ:** ಮಹಾರಾಷ್ಟ್ರದಲ್ಲಿ ಗೋದಾವರಿಯ ಉಪನದಿಯೊಂದರ ದಂಡೆಯ ಮೇಲೆ, ಅಜಂತದಿಂದ ನೈರುತ್ಯದಲ್ಲಿ 46ಕಿಮೀ ದೂರದಲ್ಲೂ ಔರಂಗಾಬಾದಿನಿಂದ ವಾಯವ್ಯ ದಲ್ಲಿ ಸು.26ಕಿಮೀ ದೂರದಲ್ಲೂ ಇರುವ ಪ್ರಸಿದ್ಧ ಸ್ಥಳ. ಬೌದ್ಧ, ಹಿಂದು ಮತ್ತು ಜೈನ ಧರ್ಮಗಳಿಗೆ ಸೇರಿದ 34 ಗುಹೆಗಳೂ ಒಂದೇ ಕಲ್ಲಿನಲ್ಲಿ ಕಡೆಯಲಾಗಿರುವ ದ್ರಾವಿಡ ಶೈಲಿಯ ಸುಪ್ರಸಿದ್ಧ ಕೈಲಾಸ ದೇವಾಲಯವೂ ಇರುವ ಈ ಊರು ಭಾರತೀಯ ಕಲೆಯ ಮುಖ್ಯ ಕೇಂದ್ರಗಳಲ್ಲೊಂದಾಗಿದೆ. ಇಲ್ಲಿನ ಇಳಿಜಾರಾದ ಬೆಟ್ಟದ ಪಶ್ಚಿಮದ ಅಂಚಿನಲ್ಲಿ ಕಡೆದಿರುವ ಗುಹಾಂತರ ದೇವಾಲಯಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ದಕ್ಷಿಣದಲ್ಲಿರುವ 12 ಗುಹೆಗಳು ಬೌದ್ಧಧರ್ಮಕ್ಕೂ ಮಧ್ಯದ 17 ಗುಹೆಗಳು ಹಿಂದು ಧರ್ಮಕ್ಕೂ ಉತ್ತರದ ಅಂಚಿನ 5 ಗುಹೆಗಳು ಜೈನಧರ್ಮಕ್ಕೂ ಸೇರುತ್ತವೆ.

ತೀನ್-ತಾಲ್ (12ನೆಯ ಗುಹೆ)

350-650ರ ಮಧ್ಯದಲ್ಲಿ ನಿರ್ಮಿತವಾದ ಬೌದ್ಧ ಚೈತ್ಯವಿಹಾರಗಳಲ್ಲಿ ಎರಡು ಗುಂಪು ಗಳಿದ್ದು ಮೊದಲ 5 ಗುಹೆಗಳು ದೇರ್ವಾರ ಗುಂಪಿಗೂ ಉಳಿದ 7 ಎರಡನೆಯ ಗುಂಪಿಗೂ ಸೇರುತ್ತವೆ. ಮೊದಲ ಗುಂಪಿನ ಗುಹೆಗಳಲ್ಲಿ ಮಹಾನ್ ವಾಡ ಎಂಬ ಕಂಬಗಳಿಂದ ಕೂಡಿದ್ದ ವಿಶಾಲ ಹಜಾರವನ್ನು ಪ್ರಾರ್ಥನಾ ಮಂದಿರವಾಗಿ ಬಳಸುತ್ತಿದ್ದರು. ಎರಡನೆಯ ಗುಂಪಿನ ಚೈತ್ಯ ಮಂದಿರದಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಈ ಎಲ್ಲ ಗುಹೆಗಳು ಒಂದಂತಸ್ತಿನವುಗಳಾಗಿದ್ದು ಕೈಸಾಲೆ, ಕಂಬಗಳಿಂದ ಕೂಡಿದ್ದ ಹಜಾರ ಮತ್ತು ಚೈತ್ಯ ಅಥವಾ ಗರ್ಭಗುಡಿಯ ನ್ನೊಳಗೊಂಡಿ ರುತ್ತಿದ್ದವು. ಎರಡನೆಯ ಗುಂಪಿನ ಬೌದ್ಧ ಗುಹೆಗಳಲ್ಲಿ ವಿಶಾಲವಾದ ವಿಹಾರಗಳಿದ್ದು ಸುಂದರ ಚೈತ್ಯಗಳೂ ಇರುತ್ತಿದ್ದುವು. ಮುಂಭಾಗದಲ್ಲಿ ದೊಡ್ಡ ಪ್ರಾಂಗಣಗಳಿರುತ್ತಿದ್ದವು. ಅವುಗಳಲ್ಲಿ 3 ಗುಹೆಗಳು ಮೂರಂತಸ್ತಿನ ನಿರ್ಮಾಣಗಳಾಗಿವೆ. ತೀನ್ ತಲ್ ಅಥವಾ ಮೂರಂತಸ್ತಿನ ಭವನವೆಂದು ಹೆಸರಾದ 12ನೆಯ ಗುಹೆ ಗಮನಾರ್ಹವಾಗಿದೆ. ಸು. 40 ಭಿಕ್ಷುಗಳ ವಸತಿಗೆ ಅನುಕೂಲವಿರುವ ಈ ಗುಹೆಯ ಹಜಾರ ಇನ್ನೂ ಅಧಿಕ ಸಂಖ್ಯೆಯ ಭಿಕ್ಷುಗಳು ಪ್ರಾರ್ಥನೆ ಧರ್ಮೋಪದೇಶಗಳಿಗಾಗಿ ಸೇರಲನುಕೂಲವಾಗಿತ್ತು. ಚೈತ್ಯಗೃಹದಲ್ಲಿ ಕುಳಿತಿರುವ ಬುದ್ಧ ಮತ್ತು ಇತರ ಮೂರ್ತಿಗಳಿವೆ. ಬೌದ್ಧ ಗುಹೆಗಳಲ್ಲೊಂದಾದ ವಿಶ್ವಕರ್ಮ (10ನೆಯದು) ಗುಹೆ ಸಮಕಾಲೀನ ಅಜಂತದ ಚೈತ್ಯವಿಹಾರಗಳನ್ನು ಹೋಲುತ್ತದೆ.

ಘೃಷ್ಣೇಶ್ವರ ದೇವಾಲಯ

7ನೆಯ ಶತಮಾನದ ಅಂತ್ಯ ಮತ್ತು 8ನೆಯ ಶತಮಾನಗಳಲ್ಲಿ ಬೌದ್ಧ ಧರ್ಮ ಕ್ಷೀಣಿಸುತ್ತಿದ್ದಾಗ ಹಿಂದುಗಳ ಕಾರ್ಯರಂಗ ಇಲ್ಲಿ ಬೆಳೆಯಲಾರಂಭಿಸಿತು. ಬೌದ್ಧ ವಾಸ್ತುಶಿಲ್ಪಗಳ ಮಾದರಿಯಲ್ಲೇ ಆದರೂ ತಮ್ಮ ಸಂಪ್ರದಾಯಕ್ಕನುಸಾರವಾಗಿ ಮಾರ್ಪಡಿಸಿಕೊಂಡ ಈ ಗುಹೆಗಳಲ್ಲಿ 14ನೆಯ ರಾವಣ್-ಕಾ-ಖಾಇ, 15ನೆಯ ದಶಾವತಾರ, 16ನೆಯ ಕೈಲಾಸ, 21ನೆಯ ರಾಮೇಶ್ವರ ಮತ್ತು 29ನೆಯ ದುಮಾರ್ ಲೇನಾ ಅಥವಾ ಸೀತೆಯ ಸ್ನಾನದ ಗುಹೆಗಳು ಮುಖ್ಯವಾದುವು. ಕ್ರಮಾಗತವಾಗಿ ಬದಲಾವಣೆ ಹೊಂದುತ್ತಿದ್ದ ಈ ಗುಹಾಶೈಲಿಗಳಲ್ಲಿ ಮೊದಲನೆಯ ಗುಂಪಿಗೆ ಸೇರುವ ದಶಾವತಾರ ಗುಹೆ ಬೌದ್ಧ ಗುಹೆಗಳನ್ನು ಹೋಲುತ್ತದೆ. ಪ್ರದಕ್ಷಿಣ ಪಥವಿರುವ ರಾಮೇಶ್ವರ ಮತ್ತು ರಾವಣ್-ಕಾ-ಖಾಇ ಎರಡನೆಯ ಹಂತವನ್ನೂ, ಶಿಲುಬೆಯಾಕೃತಿಯ ತಳಕಟ್ಟಿನ ಮಧ್ಯದಲ್ಲಿ ಗರ್ಭಗುಡಿಯಿರುವ ಮತ್ತು ಒಂದಕ್ಕಿಂತಲೂ ಹೆಚ್ಚು ಪ್ರವೇಶದ್ವಾರಗಳಿರುವ ದುಮಾರ್‍ಲೇನಾ ಗುಹೆ ಮೂರನೆಯ ಹಂತವನ್ನೂ, ಕೊನೆಯದಾಗಿ ಗುಹೆಯ ಬದಲು ಕಟ್ಟಿದ ಭವನವನ್ನು ಹೋಲುವ, ಒಂದೇ ಕಲ್ಲಿನಲ್ಲಿ ಕೊರೆಯಲಾದ ಕೈಲಾಸ ದೇವಾಲಯ ನಾಲ್ಕನೆಯ ಹಂತವನ್ನೂ ಸೂಚಿಸುತ್ತವೆ. ರಾವಣ್-ಕಾ-ಖಾಇ ಗುಹೆಯ ದಕ್ಷಿಣದ ಗೋಡೆಯ ಮೇಲೆ ಮಹಿಷಾಸುರಮರ್ದಿನಿ, ತಾಂಡವನೃತ್ಯ ಮಗ್ನಶಿವ, ಕೈಲಾಸಪರ್ವತವನ್ನೆತ್ತುತ್ತಿರುವ ರಾವಣ, ಪಗಡೆಯಾಟದಲ್ಲಿ ತೊಡಗಿರುವ ಶಿವ ಪಾರ್ವತಿ ಮುಂತಾದ ಸುಂದರ ಶೈವಶಿಲ್ಪಗಳೂ ಉತ್ತರದ ಗೋಡೆಯ ಮೇಲೆ ದುರ್ಗೆ, ಲಕ್ಷ್ಮಿ, ವರಾಹ, ಲಕ್ಷ್ಮೀನಾರಾಯಣ ಮುಂತಾದ ವೈಷ್ಣವಶಿಲ್ಪಗಳೂ ಇವೆ. ಹೊರ ಭಾಗದಲ್ಲಿ ಗಣಪತಿ, ಸಪ್ತಮಾತೃಕೆಯರ ಶಿಲ್ಪಗಳಿವೆ. ದಶಾವತಾರ ಗುಹೆಯಲ್ಲೂ ಅನೇಕ ಉತ್ತಮ ದೇವತಾ ಮೂರ್ತಿಗಳನ್ನು ಕಡೆಯಲಾಗಿದೆ.

ಇಲ್ಲಿನ ಹಿಂದು ದೇವಾಲಯಗಳಲ್ಲೆಲ್ಲ ಅಮೋಘವಾದುದು ರಾಷ್ಟ್ರಕೂಟ ದೊರೆ ಒಂದನೆಯ ಕೃಷ್ಣನ (756-75) ಆಶ್ರಯದಲ್ಲಿ ನಿರ್ಮಿಸಲ್ಪಟ್ಟ ಶಿವನ ವಾಸಸ್ಥಾನವಾದ ಕೈಲಾಸಪರ್ವತದ ಪ್ರತೀಕವಾಗಿ ಒಂದೇ ಶಿಲೆಯಲ್ಲಿ ಕಡೆಯಲಾಗಿರುವ ಕೈಲಾಸ ದೇವಾಲಯ. ಇದನ್ನು ಅತ್ಯಮೋಘವಾದ ಧಾರ್ಮಿಕ ಸಾಧನೆಯೆಂದೂ ಮಾನವನ ಮನಸ್ಸು ಹೃದಯ ಮತ್ತು ಕರಗಳು ಒಂದು ಉದಾತ್ತ ಧ್ಯೇಯ ಸಾಧನೆಗೆ ಒಮ್ಮುಖವಾಗಿ

ಶ್ರಮಿಸಿರುವುದರ ನಿದರ್ಶನವೆಂದೂ ಪರ್ಸಿಬ್ರೌನ್ ಶ್ಲಾಘಿಸಿದ್ದಾನೆ. 7.5ಮೀ ಎತ್ತರದ ಜಗತಿಯ ಮೇಲೆ ಇರುವ 45×30ಮೀ ವಿಶಾಲವಾದ ಈ ಮಂದಿರ ಆನೆ ಮತ್ತು ಸಿಂಹಗಳ ಸಾಲುಗಳಿಂದ ಲಂಕೃತವಾಗಿದೆ. ಎರಡಂತಸ್ತಿನ ಗುಡಿಗೆ ಸೇರಿದಂತೆ ಸಣ್ಣ ದೇವತಾ ಗೃಹಗಳೂ ವಿಹಾರಗಳೂ ಇದ್ದು ಹೊರಭಾಗದ ಮಹಾದ್ವಾರದೊಂದಿಗೆ ಕಲ್ಲಿನ ಸೇತುವೆಯ ಮೂಲಕ ಸಂಪರ್ಕ ಪಡೆದಿದೆ. 95 ಅಡಿಗಳೆತ್ತರದ ಈ ದೇವಾಲಯದ ವಿಮಾನದಲ್ಲಿ ಮೂರಂತಸ್ತುಗಳಿವೆ. ಗೋಡೆಗಳ ಮೇಲೆ ರಾಮಾಯಣದ ದೃಶ್ಯಗಳನ್ನು ಕೆತ್ತಲಾಗಿದೆ. ಮುಂಭಾಗದಲ್ಲಿ 15ಮೀ ಎತ್ತರದಲ್ಲಿ ನಂದಿ ಮಂಟಪವೂ ಅದರ ಇಕ್ಕೆಲಗಳಲ್ಲಿ ಧ್ವಜಸ್ತಂಭಗಳೂ ನಿರ್ಮಿತವಾಗಿವೆ. ಕೈಲಾಸ ದೇವಾಲಯದಿಂದ ಉತ್ತರಕ್ಕೆ 2.4ಕಿಮೀ



ದುರ್ಗಾ (ಕೈಲಾಸ)

ದೂರದಲ್ಲಿರುವ, ಪ್ರಾಯಶಃ 9ನೆಯ ಶತಮಾನದಲ್ಲಿ ನಿರ್ಮಾಣವಾದ 5 ಜೈನಗುಹೆಗಳಲ್ಲಿ ಮುಖ್ಯವಾದುವು ಇಂದ್ರ ಸಭಾ ಮತ್ತು ಜಗನ್ನಾಥ ಗುಹೆಗಳು. (ಬಿ.ಕೆ.ಜಿ.;ಕೆ.ಎಸ್.ಎಸ್.)

**ಎಲ್ಲೋರದ ಮೂರ್ತಿಶಿಲ್ಪ:** ಚಿತ್ರಕಲೆಗೆ ಅಜಂತದಂತೆ, ಶಿಲ್ಪಕಲೆಗೆ ಎಲ್ಲೋರ ಪ್ರಸಿದ್ಧವಾಗಿದೆ. ಬೌದ್ಧ ಗುಹೆಗಳೆಲ್ಲ (1 ರಿಂದ 12) ಮಹಾಯಾನ ಪಂಥಕ್ಕೆ ಸೇರಿದವಾಗಿರುವುದರಿಂದ ವಿವಿಧ ಭಂಗಿಗಳಲ್ಲಿರುವ ವಿವಿಧ ರೀತಿಯ ಬುದ್ಧ ಪ್ರತಿಮೆಗಳು ಇಲ್ಲಿ ಕಾಣಸಿಗುತ್ತವೆ. ಇವುಗಳಲ್ಲಿ ಹತ್ತನೆಯ (ವಿಶ್ವಕರ್ಮ) ಗುಹೆ ಬಿಟ್ಟು ಮಿಕ್ಕೆಲ್ಲವೂ ವಿಹಾರಗಳಾದರೂ ಸಮಕಾಲೀನ ವಾಸ್ತು ಪದ್ಧತಿಯಲ್ಲಿ ರೂಢವಾಗಿದ್ದಂತೆ, ಬುದ್ಧಮೂರ್ತಿಗಾಗಿಯೇ ಒಂದು ವಿಶೇಷ ಗರ್ಭಗೃಹವಿರುತ್ತದೆ. ಅಲ್ಲದೆ ಹಜಾರದ ಭಿತ್ತಿಗಳ ಮೇಲೆ ವಿಶಾಲ ಸ್ಥಳ ದೊರಕಿದಲ್ಲಿ ಬುದ್ಧ ಮತ್ತು ಇತರ ಬೌದ್ಧ ಪರಿವಾರ ದೇವತೆಗಳನ್ನು ಕೆತ್ತಲು ಉಪಯೋಗಿಸಿಕೊಂಡಿರುವುದು ಇಲ್ಲಿಯ ವೈಶಿಷ್ಟ್ಯ. ಈ ಗುಹೆಗಳು ಸಾಮಾನ್ಯವಾಗಿ ಮಹಾಯಾನ ಪಂಥದವುಗಳೆಂದು ಪ್ರಸಿದ್ಧವಾಗಿದ್ದರೂ ಇಲ್ಲಿಯ ಶಿಲ್ಪಗಳಲ್ಲಿ ಈ ಪಂಥದಿಂದಲೇ ಕ್ರಮೇಣ ಬೆಳೆದ ತಂತ್ರಯಾನ ಪಂಥದಿಂದ ವಿಶೇಷವಾಗಿ ಪ್ರಚಲಿತಗೊಂಡ ಬೌದ್ಧ ಪರಿವಾರ ದೇವತೆಗಳೂ ಬಹುವಾಗಿರುವುದು ಗಮನಾರ್ಹ. ಕೆಲವು ರೀತಿಯ ಬುದ್ಧ ಮೂರ್ತಿಗಳಲ್ಲದೆ, ವಿವಿಧ ಅವಲೋಕಿತೇಶ್ವರ (ಮಂಜುಶ್ರೀ) ಮತ್ತು ಶಕ್ತಿದೇವತೆಗಳೂ ಇಲ್ಲಿವೆ. ಇವುಗಳಲ್ಲಿ ಅನೇಕ ಗುಹೆಗಳಲ್ಲಿ ಕಾಣಬರುವ ಷಡಕ್ಷರೀ ಲೋಕೇಶ್ವರ, ರಕ್ತಲೋಕೇಶ್ವರ, ಲೋಕನಾಥ, ಸ್ಥಿರಚಕ್ರ, ಸಿದ್ಧೈಕವೀರ, ವಜ್ರಪಾಣಿ, ಜ್ಞಾನಕೇತು, ಜಂಭಲ, ತಾರಾ, ಪಾಂಡಾರಾ, ಜಾಂಗುಲೀ, ವಸುಧಾರಾ ಚುಂಡಾ, ಮಹಾಮಾಯೂರೀ, ಸರಸ್ವತೀ, ಹಾರೀತೀ, ಪಂಚಿಕಾ ಮುಂತಾದವನ್ನು ವಿಶೇಷವಾಗಿ ಹೆಸರಿಸಬಹುದು. ಈ ವಿಗ್ರಹಗಳು ಒಂಟಿಯಾಗಿಯೊ ಹಲವು ಗುಂಪುಗಳಲ್ಲೊ ಇವೆ. ಎಲ್ಲೋರದ ಬೌದ್ಧ ಶಿಲ್ಪಗಳು ಬಹುಮಟ್ಟಿಗೆ ಬೃಹದ್‌ಗಾತ್ರದವೇ. ಇವೆಲ್ಲವೂ ಪ್ರ.ಶ. ಸು. 6 ರಿಂದ 8ನೆಯ ಶತಮಾನದ ಮಧ್ಯಭಾಗಕ್ಕೆ ಸೇರಿದವಾದ್ದರಿಂದ ಗುಪ್ತ ಶೈಲಿಯಿಂದ ಪ್ರಭಾವಿತವಾದ ಅಜಂತ ಶಿಲ್ಪಶೈಲಿಯೇ ಇದ್ದರೂ ಅಲ್ಲಲ್ಲಿ ತತ್ಕಾಲೀನ ದಖನೀ ಶಿಲ್ಪಶೈಲಿಯ ಪ್ರಭಾವವೂ ಕಂಡುಬರುತ್ತದೆ. ಅಜಂತ ಶಿಲ್ಪಗಳಿಗಿಂತ ಎಲ್ಲೋರ ಶಿಲ್ಪಗಳು ಸ್ವಲ್ಪ ಕೆಳ ಮಟ್ಟದವೇ ಎಂದು ಹೇಳಬಹುದು. ಶಿಲ್ಪ ವಸ್ತು ಬಹುಮಟ್ಟಿಗೆ ದೇವ ದೇವತೆಗಳಿಗೆ ಸೀಮಿತವಾಗಿದ್ದು, ಬೌದ್ಧಾಗಮಿಕ ಸೂತ್ರಗಳ ಕಟ್ಟಿನೊಳಗೇ ಇರಬೇಕಾಗಿದ್ದುದರಿಂದ, ಅವುಗಳ ರೂಪಣೆಯಲ್ಲಿ ಶಿಲ್ಪಿಯ ಸ್ವಪ್ರತಿಭೆ ಮತ್ತು ವಿವಿಧ ರಸಭಾವ ನಿರೂಪಣೆಗಳಿಗೆ ಅಷ್ಟಾಗಿ ಅವಕಾಶವೊದಗಿಲ್ಲ. ಮೂರ್ತಿಗಳೆಲ್ಲ ಶಾಂತ, ಗಂಭೀರ ಮುಖ ಮುದ್ರೆಯಲ್ಲಿದ್ದು, ಇವುಗಳಲ್ಲಿ ಒಂದು ರೀತಿಯ ಅಸಹಜ ಏಕರೂಪತೆ ಕಾಣಿಸಿಕೊಂಡಿದೆ. ಆದರೂ ಆಗಮಸೂತ್ರಗಳ ಕಟ್ಟಿನಿಂದ ಹೊರತಾದ ಕೆಲವು ಉಪವಿಗ್ರಹಗಳ ರೂಪಣೆ ಮತ್ತು ಅಲಂಕರಣಗಳಲ್ಲಿ ಶಿಲ್ಪಿಯ ಜಾಣ್ಮೆಯನ್ನು ಕಾಣಬಹುದಾಗಿದೆ.

10ನೆಯ (ವಿಶ್ವಕರ್ಮ) ಗುಹೆಯಲ್ಲಿ ಸ್ತೂಪದ ಮೇಲೆ ಕೆತ್ತಿರುವ ಬುದ್ಧ ವಿಗ್ರಹ ಎಲ್ಲೋರ ಬೌದ್ಧಶಿಲ್ಪಕ್ಕೆ ಉತ್ತಮ ಉದಾಹರಣೆ. ಸಿಂಹಾಸನದ ಮೇಲೆ ಪ್ರಲಂಬ ಪಾದನಾಗಿ ಕುಳಿತಿರುವ ಬುದ್ಧನ ಈ ಮೂರ್ತಿ ಧರ್ಮಚಕ್ರ ಪ್ರವರ್ತನವನ್ನು ಪ್ರತೀಕರಿಸುತ್ತದೆ. ಮೂರ್ತಿ ಅಂತರ್ಮುಖಿಯಾಗಿ ತೋರಿಸಲ್ಪಟ್ಟಿದ್ದರೂ ಅಜಂತ ಮತ್ತಿತರೆಡೆಯಲ್ಲಿರುವ ಇದೇ ರೀತಿಯ ಮೂರ್ತಿಗಳಲ್ಲಿರುವ ಸಾತ್ತ್ವಿಕ ಗಾಂಭೀರ್ಯ ಇಲ್ಲಿ ಎದ್ದು ಕಾಣುವುದಿಲ್ಲ. ನಿರೂಪಣದಲ್ಲಿ ಗಾತ್ರವಷ್ಟೇ ಪ್ರಧಾನವಾಗಿ ಕಾಣುತ್ತದೆ. ಆದರೆ ಪಕ್ಕದ ಅನುಚರ ವಿಗ್ರಹಗಳು ಇದಕ್ಕಿಂತಲೂ ಉತ್ತಮವಾಗಿವೆ. ಮೇಲಿನ ಗಂಧರ್ವ ಭಕ್ತರ ಶಿಲ್ಪಗಳು ಚಿಕ್ಕವಾಗಿದ್ದರೂ ಸಂದರ್ಭೋಚಿತವಾಗಿ ಭಕ್ತಿಭಾವ ಪೂರಿತವಾಗಿದೆ. ಇಲ್ಲಿನ ಬೌದ್ಧಶಿಲ್ಪಗಲ್ಲಿ ಕಂಡುಬರುವ ವಿಭಿನ್ನ ಭಾವಗಳ ಅಭಾವಕ್ಕೆ 12ನೆಯ ಗುಹೆಯಲ್ಲಿರುವ ಬುದ್ಧ ವಿಗ್ರಹಗಳ ಸಾಲನ್ನು ಉದಾಹರಿಸಬಹುದು. ಮೂರ್ತಿರಚನೆಯಲ್ಲಿ ಅಂಗಾಂಗಗಳ ಸಹಜ ಪ್ರಮಾಣವನ್ನು ಅನುಸರಿಸಿ ಸ್ವಲ್ಪ ಮಾತ್ರ ಅಲಂಕರಣದಿಂದ ಉತ್ತಮ ಶಿಲ್ಪಗಳನ್ನು ಸಮಕಾಲೀನ ಶಿಲ್ಪಿ ರೂಪಿಸಬಲ್ಲವನಾಗಿದ್ದ

ರಾಮೇಶ್ವರ ಗುಹೆಯ (21ನೆಯದು) ವರಾಂಡದ ಮುಂಭಾಗ

ನೆಂಬುದನ್ನು ಅದೇ 12ನೆಯ ಗುಹೆಯಲ್ಲಿರುವ ದ್ವಾರಪಾಲಕ ವಜ್ರ ಪಾಣಿಯ ಮೂರ್ತಿಯಲಿ ಕಾಣಬಹುದು. ಹಾಗೆಯೇ ಅದೇ 12ನೆಯ ಗುಹೆಯಲ್ಲಿರುವ ಪ್ರಜ್ಞಾಪಾರಮಿಕ, 6ನೆಯ ಗುಹೆಯಲ್ಲಿರುವ ಮಹಾಮಾಯೂರಿಯೂ ಒಳ್ಳೆಯ ಶಿಲ್ಪಗಳು.

ಬೌದ್ಧ ಗುಹೆಗಳಿಂದ ಹಿಂದೂ ಗುಹೆಗಳಿಗೆ ಬಂದರೆ ಒಂದು ಹೊಸ ವಾತಾವರಣವನ್ನು ಹೊಕ್ಕಂತಾಗುತ್ತದೆ. ಅಲ್ಲಿನಂತೆ ಬೃಹದ್ ಶಿಲ್ಪಗಳೇ ವಿಶೇಷವಾಗಿವೆ. ಗುಹೆಗಳ ಭಿತ್ತಿಗಳಲ್ಲಿ ಒಂದೊಂದು ಶಿಲ್ಪವೂ ನೆಲದಿಂದ ಮೇಲಿನವರೆಗೆ ಎಂಟು ಹತ್ತು ಅಡಿಗಳ ಎತ್ತರ ಹಬ್ಬಿ ಎರಡು ಪಕ್ಕಗಳಲ್ಲೂ ಗೋಡೆಯಿಂದ ಹೊರಬರುವ ಅರೆಗಂಬ (ಪಿಲಾಸ್ಟರ್)ಗಳಿಂದ ಸೀಮಿತಗೊಂಡು ದೊಡ್ಡ ಪಟ್ಟಿಕೆಗಳ (ಪ್ಯಾನಲ್) ರೀತಿಯಲ್ಲಿರುತ್ತದೆ. ಕೈಲಾಸ ದೇವಾಲಯದಲ್ಲಿ ಗೋಡೆಗಳಲ್ಲಿರುವ ವಿಶಾಲವಾದ ಕೋಷ್ಠಗಳು ಶಿಲ್ಪಗಳಿಗೆ ಉಪಯೋಗಿಸಲ್ಪಟ್ಟಿವೆ. ಪುರಾಣಗಳಿಂದ ಆರಿಸಿದ ನರಸಿಂಹಾವತಾರ, ತ್ರಿವಿಕ್ರಮಾವತಾರ, ವರಾಹಾವತಾರ, ಅಂಧಕಾಸುರ ಮರ್ದನ, ಗಜಾಸುರ ಮರ್ದನ, ತ್ರಿಪುರ ದಹನ, ಗಿರಿಜಾಕಲ್ಯಾಣ ಮುಂತಾದ ವೈಷ್ಣವ ಶೈವ ಕಥೆಗಳೇ ಈ ಶಿಲ್ಪಗಳ ಮುಖ್ಯವಸ್ತುಗಳು. ಇವುಗಳ ನಿರೂಪಣೆಯಲ್ಲಿ ಒಂದು ಮುಖ್ಯ ಮೂರ್ತಿಯನ್ನು ದೊಡ್ಡದಾಗಿ ಅದರ ಸಂಬಂಧದ ಇತರ ಮೂರ್ತಿಗಳನ್ನು ಸ್ವಲ್ಪ ಚಿಕ್ಕದಾಗಿ ಕೆತ್ತಿದ್ದರೂ ಅದರದರ ಸಂದರ್ಭ ಸಹಜಭಾವದೊಡನೆ ಪ್ರಭಾವಪೂರ್ಣವಾಗಿ ವ್ಯಕ್ತಗೊಂಡಿದ್ದು ಒಂದೊಂದು ಶಿಲ್ಪವೂ ನಾಟಕದ ಸ್ತಬ್ಧದೃಶ್ಯದಂತೆ (ಟ್ಯಾಬ್ಲೋ)

ಭಾಸವಾಗುತ್ತದೆ. ವಿಶಾಲವಾದ ಎದೆ, ತುಂಬಿದ ದೇಹ, ನೀಳವಾದ ಆದರೂ ಭಾರ ಮತ್ತು ಸೌಷ್ಠವತೆಯಿಂದ ಕೂಡಿದ ಅಂಗಾಂಗಗಳು, ಅಸೀಮ ಶಕ್ತಿಯನ್ನು ವ್ಯಕ್ತಪಡಿಸುವ ಮುಖಚರ್ಯೆ ಮತ್ತು ಅಂಗಭಂಗಿಗಳು ಎಲ್ಲೋರದ ಹಿಂದೂ ಶಿಲ್ಪದ ವೈಶಿಷ್ಟ್ಯ. ಈ ಶಿಲ್ಪಗಳಲ್ಲಿ ಅಲಂಕರಣಕ್ಕಿಂತ ಭಾವನಿರೂಪಣೆಯೇ ಪ್ರಧಾನ. ಪುರಾಣಗಳಿಂದ ಆಯ್ದ ಕಥೆಗಳೇ ಶಿಲ್ಪವಸ್ತುವಾದ್ದರಿಂದ, ಶಿಲ್ಪದಲ್ಲಿ ವಿವಿಧ ರಸಭಾವ ಪ್ರಕಟಣೆಗಿರುವ ಆಗಾಧ ಅವಕಾಶವನ್ನು ಇಲ್ಲಿನ ಶಿಲ್ಪಿಗಳು ಸಾರ್ಥಕಪಡಿಸಿಕೊಂಡಿದ್ದಾರೆ.

ವಿಶ್ವಕರ್ಮನ ಗುಹೆ

ಕೈಲಾಸ ದೇವಾಲಯದಲ್ಲಿರುವ ಗಜಾಸುರಮರ್ದನ ಮೂರ್ತಿ ಇಲ್ಲಿಯ ಒಂದು ಉತ್ತಮ ಶಿಲ್ಪ. ಆವೇಶಪೂರಿತನಾದ ಶಿವ ತನ್ನ ಆಗಾದಶಕ್ತಿ, ಕ್ರೋಧವನ್ನೆಲ್ಲ ನೇರವಾಗಿ ಅಸುರನೆಡೆಗೆ ಕಾರುತ್ತ ಭಯಂಕರನಾಗಿದ್ದಾನೆ. ಆದರೆ ಈ ರೌದ್ರತೆಯಿಂದ ಪಕ್ಕದಲ್ಲಿರುವ ಪಾರ್ವತಿ ಬೆದರಿ ಎದೆಯ ಮೇಲೆ ಕೈಯಿಟ್ಟು ಕುಳಿತಿದ್ದರೂ ಪೂರ್ತಿಯಾಗಿ ಧೃತಿಗೆಟ್ಟಿಲ್ಲ. ರುದ್ರ ಶಿವನಾಗುವನೆಂಬ ಆತ್ಮವಿಶ್ವಾಸ ಅವಳ ಮುಖದಲ್ಲಿ ಎದ್ದು ಕಾಣುತ್ತಿದೆ.

ಮಹಾಮಯೂರೀ ಶಿಲ್ಪ

ಪಾರ್ವತಿಯ ಪಕ್ಕದಲ್ಲಿರುವ ಚಾಮರಧಾರಿಯಾದರೂ ಹೆಚ್ಚು ಕಡಿಮೆ ನಿರ್ವಿಕಾರಿ. ಶಿವನ ಲೀಲೆಗಳಲ್ಲಿ ಇಂಥವೆಷ್ಟೋ ಎಂಬ ಭಾವ ಅವನಲ್ಲಿ ಸ್ಪಷ್ಟವಾಗಿದೆ. ಇದೇ ರೀತಿಯಲ್ಲಿ ಅದೇ ಕೈಲಾಸ ದೇವಾಲಯದಲ್ಲಿರುವ ಮಹಿಷಮರ್ದಿನಿ ಶಿಲ್ಪದಲ್ಲಿ ದೇವಿಯ ವೀರಕ್ರೋಧ, ಅಸುರನ ಪ್ರತಿಭಟನೆ, ಪರಾಜಿತರ ಆರ್ದ್ರತೆ, ದೇವತೆಗಳ ಆಶ್ಚರ್ಯ, ಸಂತಸ– ಎಲ್ಲವೂ ಪರಿಣಾಮಕಾರಿಯಾಗಿ ರೂಪಿತವಾಗಿರುವುದನ್ನು ಕಾಣಬಹುದು. ಹಾಗೆಯೇ ಅಲ್ಲಿನ ನರಸಿಂಹ ಶಿಲ್ಪದಲ್ಲಿ ನರಸಿಂಹನ ಭಯಂಕರ ಕ್ರೋಧ, ಅಸುರನತ್ತ ತಾತ್ಸಾರ, ಅಸುರನ ಅಸಹಾಯಕ ಸ್ಥಿತಿ, ಪ್ರಾಯಶಃ ಪ್ರಹ್ಲಾದನ ಶರಣಾಗತಿ ಎಲ್ಲವೂ ಮೇಲೆದ್ದು ಕಾಣುತ್ತವೆ. ಉಗ್ರಶಿಲ್ಪಿಗಳನ್ನು ರೂಪಿಸುವುದರಲ್ಲೆ ಎಲ್ಲೋರದ ಶಿಲ್ಪ ಬಹು ಕುಶಲ. ಕಲ್ಯಾಣ ಸುಂದರ, ಮತ್ತಿತರ ಸೌಮ್ಯ ಸಂದರ್ಭಗಳನ್ನು ಕಡೆಯುವುದರಲ್ಲೂ ಶಿಲ್ಪಿಯ ಜಾಣ್ಮೆ ಹೊರ ಹೊಮ್ಮದಿಲ್ಲ. ನಾಲ್ಕಾರು ಗುಹೆಗಳಲ್ಲಿ ಕೈಲಾಸದ ಮೇಲೆ ಶಿವ ಪಾರ್ವತಿಯರು ವಿನೋದಾಸಕ್ತರಾಗಿರುವಂತೆ ಕೆತ್ತಲಾದ ಶಿಲ್ಪಗಳ ಕೆಳಭಾಗದಲ್ಲಿ ಅತಿಸಹನೆಯ ಮೊದ್ದು ನಂದಿಯನ್ನು ಕೀಟಲೆ ಮಾಡುತ್ತ ಹಲವು ಚೆಲ್ಲಾಟಗಳಲ್ಲಿ ಆಸಕ್ತರಾಗಿರುವ ಶಿವಗಣಗಳು ಬಹು ನಗುವನು ತರುತ್ತವೆ. ಎಲ್ಲೋರದ ಸ್ತ್ರೀ ಶಿಲ್ಪ ಬಹು ವಿಶಿಷ್ಟವಾದುದು. ಇವು ಅಷ್ಟಾಗಿ ಪ್ರಧಾನ ಶಿಲ್ಪಗಳಾಗಿ ಕಂಡುಬರದೆ, ಇತರ ಶಿಲ್ಪಗಳೊಡನೆ ಅಳವಡಿಸಲ್ಪಟ್ಟಿದರೂ ಬಹು ಸುಂದರವಾಗಿ ರೂಪಿತವಾಗಿದೆ. ಆಗತಾನೇ ಮಿಂದೆದ್ದು ಬರುತ್ತಿರುವಂತಿರುವ ಯಮುನೆಯ ಒಂದು ಮೋಹಕಶಿಲ್ಪ ಸೀತಾ–ಕಾ–ನಾನಿ ಗುಹೆಯಲ್ಲಿದೆ. ಸುಮಾರು ಅದೇ ರೀತಿಯ ಗಂಗೆಯ ಶಿಲ್ಪವೊಂದು ರಾಮೇಶ್ವರ ಗುಹೆಯಲ್ಲಿದೆ.

ಎಲ್ಲೋರ ಜೈನ ಗುಹೆಗಳಲ್ಲಿ ಕಾಣುವ ಶಿಲ್ಪಗಳ ವಸ್ತು ಬೌದ್ಧ ಗುಹೆಗಳಲ್ಲಿನಂತೆಯೆ ದೇವದೇವತೆಗಳ ವಿಗ್ರಹಗಳಿಗೆ ಸೀಮಿತವಾದುದು. ಅನೇಕ ತೀರ್ಥಂಕರರು, ಯಕ್ಷ–ಯಕ್ಷಿಯರು, ಗೊಮ್ಮಟ ಮುಂತಾದ ಮೂರ್ತಿಗಳು ಇಲ್ಲಿವೆ. ಕಾಲದಲ್ಲಿ ಇವು ಹಿಂದೂ ಶಿಲ್ಪಗಳಿಗಿಂತ ಸ್ವಲ್ಪ ಈಚಿನವು. ಈ ಶಿಲ್ಪಗಳು ಪ್ರಮಾಣ, ರೀತಿ ಮುಂತಾದವುಗಳಲ್ಲಿ ಹಿಂದೂ ಶಿಲ್ಪಗಳನ್ನೇ ಅನುಕರಿಸಿವೆ. ಆದರೆ ಶಿಲ್ಪ ವಸ್ತು ಶಾಸ್ತ್ರದ ಕಟ್ಟಿನಿಂದ ಸೀಮಿತವಾಗಿರುವುದರಿಂದ ವಿವಿಧ ಭಾವನಿರೂಪಣೆಗೆ ಅಷ್ಟಾಗಿ ಅವಕಾಶವೊದಗಿಲ್ಲ. ಬೌದ್ಧಶಿಲ್ಪಗಳಂತೆ ಇಲ್ಲೂ ತದೇಕ ಸೌಮ್ಯ–ಗಂಭೀರ ಭಾವವಷ್ಟೆ ಪ್ರಕಟಗೊಂಡಿದೆ. ಆದರೆ ಈ ಕುಂದನ್ನು ಶಿಲ್ಪಿ ಹೆಚ್ಚಿನ ಅಲಂಕರಣವನ್ನು ಒದಗಿಸುವುದರಲ್ಲಿ ಭಾಗಶಃ ನಿವಾರಿಸಿಕೊಂಡಿದ್ದಾನೆ. ಆದರೆ ಈ ಅಲಂಕರಣವೇ ಶಿಲ್ಪದ ವೈಭವವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದೆಯೇನೋ ಎನ್ನಿಸುತ್ತದೆ. ಜೈನ ಶಿಲ್ಪಕ್ಕೆ 32ನೆಯ ಗುಹೆಯಲ್ಲಿರುವ ಗೊಮ್ಮಟೇಶ್ವರ ಮತ್ತು ಸಿದ್ಧೈಕಿಯ ಮೂರ್ತಿಗಳು ಒಳ್ಳೆಯ ಉದಾಹರಣೆಗಳು. (ಎಸ್.ಎನ್.)

**ಎಲ್ಸ್‌ವರ್ತ್, ಲಿಂಕನ್:** 1880–1951. ಅಮೆರಿಕದ ಪರಿಶೋಧಕ. ಜನನ ಇಲಿನಾಯ್‌ನ ಚಿಕಾಗೊದಲ್ಲಿ (1880). ಕೊಲಂಬಿಯ ಮತ್ತು ಯೇಲ್‌ಗಳಲ್ಲಿ ಇವನ ವಿದ್ಯಾಭ್ಯಾಸ ನಡೆಯಿತು. ರೈಲುಮಾರ್ಗ ನಿರ್ಮಾಣದಲ್ಲಿ ಮೋಜಣಿದಾರ ಮತ್ತು ಎಂಜಿನಿಯರ್ ಆಗಿ ಕೆಲಸಮಾಡಿದ. ಅನಂತರ ವಾಯವ್ಯ ಕೆನಡದಲ್ಲಿ ಗಣಿ ಎಂಜಿನಿಯರ್ ಆಗಿಯೂ ಅನ್ವೇಷಕನಾಗಿಯೂ ಸೇವೆ ಸಲ್ಲಿಸಿದ. ಆರ್ಕ್‌ಟಿಕ್ ಪ್ರದೇಶದ (ಉತ್ತರ ಮೇರುವಲಯ) ಮೇಲಣ ವಿಮಾನ ಹಾರಾಟಗಳನ್ನು ನಡೆಸಿದ ರೋಲ್ಡ್ ಆಮಂಡ್‌ಸನ್ನನ ಸಹವರ್ತಿ ಮತ್ತು ಆರ್ಥಿಕ ಬೆಂಬಲಿಗನಾಗಿದ್ದ. 1925ರಲ್ಲಿ ಇವರಿಬ್ಬರಿಗೂ ಸ್ಪಿಟ್ಸ್ ಬರ್ಗನಿಂದ ಉತ್ತರ ಅಕ್ಷಾಂಶ $87^0$ 43'ಯವರೆಗೂ ವಿಮಾನ ಹಾರಾಟ ನಡೆಸಿದರು. ಸ್ಪಿಟ್ಸ್ ಬರ್ಗನ್ನಿನಿಂದ ಉತ್ತರ ಮೇರುವಿನ ಮೂಲಕ ಅಲಾಸ್ಕಕ್ಕೆ ನಡೆದ (1926) ಹಾರಾಟದಲ್ಲಿ ಈತ ಸಹಚಾಲಕ. ಗ್ರಾಫ್ ಜೆಪ್ಪಿಲಿನ್ ಎಂಬ ವಿಮಾನದಲ್ಲಿ ಫ್ರಾನ್ಜ್ ಜೋಸೆಫ್ ಲ್ಯಾಂಡ್ ನಿಂದ ನಾರ್ದರ್ನ್ ಲ್ಯಾಂಡ್‌ಗಳವರೆಗೆ ನಡೆಸಿದ ಹಾರಾಟದಲ್ಲಿ (1931) ವೀಕ್ಷಕನಾಗಿದ್ದ. 1935ರಲ್ಲಿ ಪ್ರಥಮ ಬಾರಿಗೆ ಈತ ಅಂಟಾರ್ಕ್‌ಟಿಕ ಪ್ರದೇಶದ ಒಳಭಾಗವನ್ನು ಈತ ಪ್ರವೇಶಿಸಿದ್ದು 1939ರಲ್ಲಿ. ಇದರಿಂದಾಗಿ ಹಿಂದೆಂದೂ ಕಂಡರಿಯದಿದ್ದ 29,9,789.10ಕಿಮೀಗಳಷ್ಟು ಭೂ–ಪ್ರದೇಶವನ್ನು ಈತ ಕಂಡ. ಆವರ್ ಪೋಲಾರ್ ಫ್ಲೈಟ್ (1925) ಮತ್ತು ಫಸ್ಟ್ ಕ್ರಾಸಿಂಗ್ ಆಫ್ ದಿ ಪೋಲಾರ್ ಸೀ (1927) ಎಂಬುವು ಎಲ್ಸ್‌ವರ್ತ್ ಮತ್ತು ಆಮಂಡ್‌ಸನ್ನರು ಒಟ್ಟಾಗಿ ಬರೆದ ಗ್ರಂಥಗಳು. ಸ್ವಂತ ಕೃತಿಗಳಾದ ಸರಚ್ (1932), ಎಕ್ಸ್ ಪ್ಲೇರಿಂಗ್ ಟುಡೆ (1935) ಮತ್ತು ಬಿಯಾಂಡ್ ಹೊರೈಜನ್ಸ್ (1938) ಎಂಬುವುಗಳಲ್ಲಿ ತನ್ನ ಅನುಭವಗಳನ್ನು ಈತ ಚಿತ್ರಿಸಿದ್ದಾನೆ.

*

**ಎಲ್ವಿನ್, ವೆರಿಯರ್:** 1902–64. ಭಾರತಕ್ಕೆ ಒಬ್ಬ ಕ್ರೈಸ್ತ ಪಾದ್ರಿಯಾಗಿ ಬಂದು, ಚರ್ಚನ್ನು ತ್ಯಜಿಸಿ ಗುಡ್ಡಗಾಡುಗಳಲ್ಲಿ ನೆಲೆಸಿ ಗಿರಿಜನರ ಜೀವನವನ್ನು ಅರಿತು ಅವರನ್ನು ಕುರಿತಂತೆ ಅನೇಕ ಗ್ರಂಥಗಳನ್ನು ಬರೆದು ಅವರ ಮೇಲ್ಮೆಗೆ ಅವಿಶ್ರಾಂತವಾಗಿ ದುಡಿದ ಮಹನೀಯ. ಮಹಾತ್ಮ ಗಾಂಧಿಯ ಪ್ರೀತಿ ಮತ್ತು ಮನ್ನಣೆಗೆ ಪಾತ್ರರಾಗಿದ್ದುದಲ್ಲದೆ ಪಂಡಿತ್ ಜವಹಾರಲಾಲ್ ನೆಹರೂ ಅವರಿಂದ ತಮ್ಮ ಕಾರ್ಯನೀತಿಗೆ ಸಂಪೂರ್ಣವಾಗಿ ಬೆಂಬಲ ಪಡೆದವರು. ಎಲ್ವಿನ್ ಮಾನವಶಾಸ್ತ್ರದಲ್ಲಿ ಶಾಸ್ತ್ರೀಯ ತರಬೇತನ್ನು ಹೊಂದಿರಲಿಲ್ಲವಾದರೂ ಅವರ ಆಳವಾದ ಸಂಶೋಧನೆಗಳು ವಿಶ್ವಮಾನವಶಾಸ್ತ್ರಜ್ಞರ ಪಂಕ್ತಿಯಲ್ಲಿ ಅವರಿಗೆ ಒಂದು ವಿಶಿಷ್ಟಸ್ಥಾನವನ್ನು ದೊರಕಿಸಿಕೊಟ್ಟಿವೆ. ಅವರ ಪಾಂಡಿತ್ಯ ಕೇವಲ ಪುಸ್ತಕ ರಚನೆಗೆ ಸೀಮಿತವಾಗದೆ ಜೀವನದಲ್ಲಿ ಪ್ರತಿಫಲಿಸಿತ್ತು.

ವೆರಿಯರ್ ಎಲ್ವಿನ್ ಇಂಗ್ಲೆಂಡಿನ ಕೆಂಟ್ ಪ್ರಾಂತ್ಯದ ಡೋವರ್ ಎಂಬ ಊರಿನಲ್ಲಿ 1902ನೆಯ ಇಸವಿ ಆಗಸ್ಟ್ 29ರಂದು ಜನಿಸಿದರು. ತಂದೆ ಎಡ್ಮಂಡ್ ಹೆನ್ರಿ ಎಲ್ವಿನ್. ಸುಧಾರಿತ ಕ್ರೈಸ್ತ ಧರ್ಮದ ಬಿಷಪ್ ಆಗಿದ್ದ ಆತನಿಗೆ ಮಾನವ ಶಾಸ್ತ್ರದಲ್ಲಿ ಆಸಕ್ತಿಯಿತ್ತು. ಪಶ್ಚಿಮ ಆಫ್ರಿಕಕ್ಕೆ ಪಾದ್ರಿಯಾಗಿ ಹೋಗಿ ಅಲ್ಲಿ ಗಿರಿ ಜನರಲ್ಲಿ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದು ಆಫ್ರಿಕದಲ್ಲಿಯೇ ತನ್ನ ಮೂವತ್ತೆಂಟನೆಯ ವಯಸ್ಸಿನಲ್ಲಿ ಹಳದಿಜ್ವರದಿಂದ ಮೃತನಾದ. ಆಗ ವೆರಿಯರ್ ಎಲ್ವಿನ್ ಏಳು ವರ್ಷದ ಬಾಲಕ. ತಂದೆಯಿಲ್ಲದ ಮನೆಯಲ್ಲಿ ಬಡತನದ ಮಧ್ಯೆ ಆತ ಬೆಳೆದ. ಸುಶಿಕ್ಷಿತಳೂ ಧರ್ಮಿಷ್ಠಳೂ ಆದ ತಾಯಿಯ ಪ್ರಭಾವ ಎಲ್ವಿನ್ನರ ಜೀವನದ ಮೇಲೆ ತೀವ್ರ ಪರಿಣಾಮ ಬೀರಿತು. ಚೆಲ್ಟೆನ್‌ಹ್ಯಾಂನಲ್ಲಿದ್ದ ಡೀನ್‌ಕ್ಲೋಸ್ ಎಂಬ ಶಾಲೆಯಲ್ಲಿ ಇವರ ವಿದ್ಯಾಭ್ಯಾಸ ಆಯಿತು. ಅದು ಹೆಚ್ಚಾಗಿ ಧಾರ್ಮಿಕ ವಿಷಯಗಳನ್ನು ಬೋಧಿಸುವ ಶಾಲೆ. ಮೊದಲಿನಿಂದಲೂ ಎಲ್ವಿನ್ನರಿಗೆ ಸಾಹಿತ್ಯದಲ್ಲಿ ವಿಶೇಷವಾದ ಆಸಕ್ತಿ. ಸಮನ್ವಯ ಮಾಡಲಾರದ ಎರಡು ಪ್ರಪಂಚಗಳಲ್ಲಿ ನಾನಿದ್ದೆ. ಸಾಂಪ್ರದಾಯಿಕ ಕ್ರೈಸ್ತ ಧರ್ಮ ಬೋಧೆ, ಹಾಗೂ ವರ್ಡ್ಸ್‌ವರ್ತ್ ಕವಿಯ ರಹಸ್ಯಯುತ ಸರ್ವದೇವತಾರಾಧನೆ ಎರಡೂ ಒಂದರ ಪಕ್ಕದಲ್ಲೊಂದು ನಿಂತಿದ್ದುವು'-ಎಂದು ಅವರು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

ಗಿರಿಜನರ ಜೊತೆ ಎಲ್ವಿನ್

ಎಲ್ವಿನ್ 19ನೆಯ ವಯಸ್ಸಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಆಕ್ಸ್‌ಫರ್ಡಿಗೆ ಹೋಗಿ ಐದು ವರ್ಷ ಅಲ್ಲೇ ವಿದ್ಯಾರ್ಥಿಯಾಗಿದ್ದರು. ಮರ್ಟನ್ ಕಾಲೇಜಿನಲ್ಲಿ ಓದುತ್ತಿದ್ದಾಗ ಷೇಕ್ಸ್‌ಪಿಯರನನ್ನು ಅಭ್ಯಾಸ ಮಾಡಿದವರಿಗೆಂದಿದ್ದ ಮೂರು ಸಾವಿರ ರೂಪಾಯಿಗಳ ಬಹುಮಾನವನ್ನು ಪಡೆದರು. ಮೂರು ವರ್ಷ ಇಂಗ್ಲೀಷ್ ಸಾಹಿತ್ಯವನ್ನೂ ಎರಡು ವರ್ಷ ಮತಧರ್ಮಶಾಸ್ತ್ರವನ್ನೂ ಅಭ್ಯಾಸಮಾಡಿ ಪದವೀಧರರಾದ ಮೇಲೆ ಕ್ರಾಂತಿಯ ಕಾವ್ಯ (ಪೊಯಟ್ರಿ ಆಫ್ ರೆವಲ್ಯೂಷನ್) ಎಂಬ ಪ್ರಬಂಧಕ್ಕೆ ಮ್ಯಾಥ್ಯೂ ಆರ್ನಲ್ಡ್ ಬಹುಮಾನ ಬಂತು. ಅನಂತರ ವೈಕ್ಲಿಫ್ ಹಾಲ್ ಎಂಬ ಕಾಲೇಜಿನಲ್ಲಿ ಉಪ-ಪ್ರಿನ್ಸಿಪಾಲರ ಹುದ್ದೆ ದೊರಕಿತು. ಒಂದು ವರ್ಷದ ಅನಂತರ ಅಭಿಪ್ರಾಯ ಭೇದದಿಂದಾಗಿ ಕೆಲಸಕ್ಕೆ ರಾಜೀನಾಮೆ ಕೊಡಬೇಕಾದ ಸಂದರ್ಭ ಬಂತು. ಆಮೇಲೆ ಧಾರ್ಮಿಕ ಶ್ರದ್ಧೆ ಮತ್ತು ಅನುಕಂಪಗಳು ಅವರ ಗಮನವನ್ನು ಭಾರತದ ಕಡೆ ಸೆಳೆದುವು. ನನ್ನ ಮನೆತನದವರಿಗೂ ಇಂಡಿಯಕ್ಕೂ ಹಳೆಯ ಸಂಬಂಧವಿತ್ತು. ಇದಕ್ಕಿಂತ ಹೆಚ್ಚಾಗಿ ನನ್ನಲ್ಲಿದ್ದ ಏನೋ ಒಂದು ಶಕ್ತಿ ನನ್ನನ್ನು ಆ ಕಡೆ ನೂಕುತ್ತಿತ್ತು. ನನ್ನ ಪೂರ್ವಿಕರು ಇಂಡಿಯದಲ್ಲಿ ಹಣವನ್ನು ಸಂಪಾದಿಸಿದ್ದರು. ನನ್ನ ದೇಶದವರು ಇಂಡಿಯಕ್ಕೆ ಹೋಗಿ ಅದನ್ನು ಶೋಷಿಸಿ, ಅದರ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರು. ಈ ಕಾರಣ ಅದರ ಪ್ರಾಯಶ್ಚಿತ್ತಕ್ಕಾಗಿ ನಾನು ಇಂಡಿಯಕ್ಕೂ ಹೋಗಬೇಕೆನ್ನಿಸಿತು. ನನ್ನ ಮನೆತನದವರಲ್ಲಿ ಒಬ್ಬರಾದರೂ ಇಂಡಿಯದಿಂದ ತರುವುದನ್ನು ಬಿಟ್ಟುಕೊಡುವುದಕ್ಕಾಗಿ ಅಲ್ಲಿ ಹೋಗಬೇಕೆನ್ನಿಸಿತು. ಹೋಗಿ ಬಡವರನ್ನು ಆಳುವ ಬದಲು ಅವರ ಸೇವೆ ಮಾಡಬೇಕು ಮತ್ತು ಆ ದೇಶದಲ್ಲಿ ಐಕ್ಯವಾಗಬೇಕು ಎಂದು ಅನ್ನಿಸಿತು.-ಎಂದು ತಮ್ಮ ಆತ್ಮಕಥೆಯಲ್ಲಿ ಎಲ್ವಿನ್ ತಿಳಿಸಿದ್ದಾರೆ. ಈ ಮಾತಿನ ಸಂಪೂರ್ಣ ಸತ್ಯತೆಗೆ ಅವರ ಜೀವನವೇ ಸಾಕ್ಷಿ. ಆಕ್ಸ್‌ಫರ್ಡಿನಲ್ಲಿದ್ದ ಸದಾವಕಾಶವನ್ನು ಬಿಟ್ಟು ಭಾರತಕ್ಕೆ ಹೋಗುವಂತೆ ಪ್ರೇರಿಸಿದ್ದು ಈ ಅರ್ಪಣ ಮನೋಧರ್ಮವೇ.

ಎಲ್ವಿನ್ ಕ್ರೈಸ್ತಪಾದ್ರಿಯಾಗಿ ಪೂನದಲ್ಲಿದ್ದ ಕ್ರೈಸ್ತ ಸೇವಾಸಂಘವೆಂಬ ಆಶ್ರಮಕ್ಕೆ ಬಂದು ಸೇರಿದರು (1926). ಸ್ವಲ್ಪ ಕಾಲದಲ್ಲೆ ಆ ಆಶ್ರಮದ ಮುಖ್ಯಸ್ಥ ಜಾಕ್‌ವಿನ್ ಸ್ಲೋ ಅಧಿಕಾರವನ್ನು ಎಲ್ವಿನ್ನರಿಗೆ ವಹಿಸಿ ಇಂಗ್ಲೆಂಡಿಗೆ ತೆರಳಿದ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ವಿನ್ನರಿಗೆ ಸಂಪೂರ್ಣ ಸಹಾನುಭೂತಿಯಿತ್ತು. ಆದ್ದರಿಂದ ತಮ್ಮ ಕ್ರೈಸ್ತ ಸೇವಾಸಂಘದ ಆಶ್ರಮದ ಮೇಲೆ ಕ್ರಾಂತಿಕಾರಕವಾದ ತ್ರಿವರ್ಣ ಧ್ವಜವನ್ನು ಅವರು ಹಾರಿಸಿದರು. ಸುಭಾಷಚಂದ್ರ ಬೋಸ ಮತ್ತು ಸರ್ದಾರ್ ಪಟೇಲರ ಸಂಗಡ ನಿಕಟ ಸಂಬಂಧವನ್ನು ಬೆಳೆಸಿದರು. 1928ರಿಂದ 1930ರವರೆಗೆ ಗಾಂಧೀಜಿ ಸಂಗಡ ಹತ್ತಿರದ ಸಂಪರ್ಕವನ್ನಿಟ್ಟುಕೊಂಡು ಅವರ ಆಶ್ರಮಕ್ಕೆ ಆಗಾಗ ಹೋಗಿಬರುತ್ತಿದ್ದರು. ಗಾಂಧೀಜಿಯ ವಾತ್ಸಲ್ಯ ಮತ್ತು ಅಭಿಮಾನವನ್ನು ಎಲ್ವಿನ್ ಸಂಪೂರ್ಣವಾಗಿ ಪಡೆದಿದ್ದರು. ಮೀರಾಬೆನ್ ತಮ್ಮ ಮಗಳಾಗಿರುವಂತೆ ಎಲ್ವಿನ್ ತಮ್ಮ ಮಗ-ಎಂದು ಗಾಂಧೀಜಿ ಹೇಳಿದ್ದುಂಟು.

ಇದೇ ಕಾಲದಲ್ಲಿ ಸುಸಂಸ್ಕೃತರೂ ವಿದ್ಯಾವಂತರೂ ಆದ ಶ್ಯಾಮರಾವ್ ಹಿವಾಲೆ ಎಂಬವರು ಪೂನಕ್ಕೆ ಬಂದರು. ಅವರು ಎಲ್ವಿನ್ನರ ನೆಚ್ಚಿನ ಸ್ನೇಹಿತರಾಗಿ ಬಹು ದಿನಗಳವರೆಗೆ ಅವರ ಚಟುವಟಿಕೆಗಳಲ್ಲಿ ಸಹಭಾಗಿಗಳಾಗಿದ್ದರು. ಗಾಂಧೀಜಿಯವರ ಪ್ರಭಾವಕ್ಕೊಳಗಾದ ಮೇಲೆ ಎಲ್ವಿನ್ನರಿಗೆ ಒಂದು ಹಳ್ಳಿಯಲ್ಲಿ ಜೀವಿಸಿ ಜನಸಾಮಾನ್ಯರಂತೆ ಬಾಳುವ ಇಚ್ಛೆಯುಂಟಾಯಿತು. ಅದರಲ್ಲೂ ಹರಿಜನರೊಂದಿಗೆ ಇರುವ ಅಭಿಲಾಷೆಯಾಯಿತು. 1930ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಆಹ್ವಾನದಂತೆ ಗುಜರಾತಿನ ಕರನಿರಾಕರಣೆಯ ಚಳವಳಿಯ ವಿಷಯವಾಗಿ ಪೋಲೀಸರ ದೌರ್ಜನ್ಯದ ಬಗ್ಗೆ ವಿಚಾರಣೆ ನಡೆಸಿ ಒಂದು ವರದಿಯನ್ನು ಸಿದ್ಧಪಡಿಸಿದರು. ಅದು ಗುಜರಾತಿನ ಹಾಳೂರು ಎಂಬ ಹೆಸರಿನಲ್ಲಿ ಒಂದು ಸಣ್ಣ ಪುಸ್ತಕದ ರೂಪದಲ್ಲಿ ಪ್ರಕಟವಾಯಿತು. ಸರ್ದಾರ್ ಪಟೇಲರು ಎಲ್ವಿನ್ನರನ್ನು ಗಿರಿಜನರ ಕಡೆಗೆ ಆಸಕ್ತಿ ವಹಿಸುವಂತೆ ಪ್ರೇರೇಪಿಸಿದರು. 1931ರಿಂದ ಅವರ ಕಡೆಯ ದಿನಗಳವರೆಗೆ ಎಲ್ವಿನ್ನರು ಅವಿಶ್ರಾಂತವಾಗಿ ಗಿರಿಜನರ ಉನ್ನತಿಗೆ ದುಡಿದರು. 1932ರಲ್ಲಿ ಶ್ಯಾಮರಾಯರ ಸಂಗಡ ಮಧ್ಯಪ್ರಾಂತ್ಯದಲ್ಲಿ ಗೋಂಡ ಜನರ ಸಣ್ಣ ಹಳ್ಳಿಯಾದ ಕರಂಜಿಯ ಎಂಬ ಗ್ರಾಮದಲ್ಲಿ ನೆಲೆಸಿದರು. 1936ರಲ್ಲಿ ಅವರು ಸಂಪೂರ್ಣವಾಗಿ ಚರ್ಚಿನ ಸಂಬಂಧವನ್ನು ಕಡಿದುಹಾಕಿ ಸಮಾಜ ಕಾರ್ಯಕರ್ತರಾದರು. ಅವರು ಸ್ಥಾಪಿಸಿದ ಆಶ್ರಮದಲ್ಲಿ ಆಸ್ಪತ್ರೆ, ಶಾಲೆ, ಅತಿಥಿಗೃಹ ಮತ್ತು ಕುಷ್ಠರೋಗಿಗಳಿಗೆ ಮೀಸಲಾದ ಗುಡಿಸಲು – ಮೊದಲಾದವುಗಳಿದ್ದುವು. ಕರಂಜಿಯದ ಅನುಭವಗಳನ್ನು ಲೀವ್ಸ್ ಆಫ್ ದಿ ಜಂಗಲ್ (ಕಾಡಿನ ಎಲೆಗಳು) ಎಂಬ ಗ್ರಂಥದಲ್ಲಿ ವಿವರಿಸಿರುವರು. ಈ ಪುಸ್ತಕಕ್ಕೆ ಫ್ರಾನ್ಸಿನ ಸುಪ್ರಸಿದ್ಧ ಸಾಹಿತಿಯಾದ ರೋಮೇನ್ ರೋಲಾನ್ ಮುನ್ನುಡಿ ಬರೆದಿದ್ದಾರೆ. ಹೀಗೆ ಎಲ್ವಿನ್ನರು ತಮ್ಮ ಜೀವನವೆಲ್ಲವನ್ನೂ ಗಿರಿಜನರ ಅಧ್ಯಯನದಲ್ಲಿ ಕಳೆದರು. ಅವರು ಪಠಾನ್‌ಘರಿನ ಗೋಂಡ ಜನಾಂಗದ ಹುಡುಗಿಯೊಬ್ಬಳನ್ನು ಮದುವೆಯಾದರು. ಆಕೆಯ ಹೆಸರು ಲೀಲಾ. ಗಂಡನಿಗೆ ಆಕೆ ಪ್ರತಿಯೊಂದು ವಿಧದಲ್ಲಿಯೂ ಸಹಾಯಕಳಾಗಿದ್ದಳು. ಎಲ್ವಿನ್ನರಿಗೆ ಮೂರು ಗಂಡುಮಕ್ಕಳು. ಅವರ ಸಾಂಸಾರಿಕ ಜೀವನ ಬಹುವಾಗಿ ಆನಂದಮಯವಾಗಿತ್ತೆಂದು ಅವರೇ ಹೇಳಿದ್ದಾರೆ.

ಎಲ್ವಿನ್ನರು ಭಾರತಕ್ಕೆ ಬಂದಾಗ ಅವರಿಗೆ ವಿದ್ವತ್ತಿನ ಜೀವನ ದೂರವಾದಂತೆ ತೋರಿತಾದರೂ ಅವರ ಮೊದಲ ಹದಿನಾಲ್ಕು ವರ್ಷಗಳ ಸಂಶೋಧನೆಗಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಅವರಿಗೆ ಡಿ.ಎಸ್‌ಸಿ. ಪ್ರಶಸ್ತಿ ಕೊಟ್ಟು ಗೌರವಿಸಿತು. ವಿದ್ವಜ್ಜೀವನದಲ್ಲಿ ತಮಗಿರುವ ಉತ್ಸುಕತೆಯನ್ನು ಅವರು ಹಲವು ಬಾರಿ ತಮ್ಮ ಆತ್ಮಕಥೆಯಲ್ಲಿ ತಿಳಿಸಿರುವರು. ನಾನು ಮುಖ್ಯವಾಗಿ ಪಂಡಿತ, ಸಂಶೋಧನೆ ಮಾಡುವ ಮನುಷ್ಯ ಎಂದು ಹೇಳಿಕೊಂಡಿರುವರು.

ಎಲ್ವಿನ್ನರು ಜನರಲ್ಲಿ ಬೆರೆತು ಅವರನ್ನು ಅರ್ಥಮಾಡಿಕೊಂಡು ಹಲವಾರು ಗ್ರಂಥಗಳನ್ನು ರಚಿಸಿದರು. ದಿ ಬೈಗಾ ಎಂಬ ಗ್ರಂಥವನ್ನು ಬರೆಯಬೇಕಾದರೆ ಅವರು ಆ ಜನರ ಕೂಡ ಏಳು ವರ್ಷಗಳಿದ್ದರು. ಹಾಗೆ ಅಗೇರಿಯ ಜನಾಂಗದವರ ವಿಚಾರ ಬರೆಯಲು ಅವರ ಕೂಡ ಹತ್ತು ವರ್ಷಗಳ ನಿಕಟವಾದ ಸಂಬಂಧವನ್ನು ಹೊಂದಿದ್ದರು. ಮಹಾಕೋಸಲದ ಜನಪದ ಕಥೆಗಳ ಛತ್ತೀಸ್‌ಘರ್‌ನ ಜನಪದ ಗೀತೆಗಳು ಎಂಬ ಪುಸ್ತಕಗಳು ಹತ್ತು ವರ್ಷಗಳ ಅಧ್ಯಯನದ ಫಲ. ಜನಗಳನ್ನು ಅರ್ಥ ಮಾಡಿಕೊಂಡಂತೆ ಎಲ್ವಿನ್ ಅವರಲ್ಲಿ ತಲ್ಲೀನರಾಗುತ್ತಿದ್ದರು. ನನಗೆ ಮಾನವಶಾಸ್ತ್ರವೆಂದರೆ ಹೊರಗಡೆಯ ಕೆಲಸ ಅಷ್ಟೇ ಅಲ್ಲ; ನನ್ನ ಬಾಳೇ ಅದಾಗಿತ್ತು. ಜನರ ಮಧ್ಯೆ ನೆಲೆಸಿ, ಅವರೊಡನೆ ಬಾಳಿ, ಹೊರಗಿನವನೊಬ್ಬ ಎಷ್ಟರಮಟ್ಟಿಗೆ ಅವರೊಡನೆ ಬೆರೆಯಬಹುದೋ ಅಷ್ಟರಮಟ್ಟಿಗೆ ಬೆರೆತು ಹಲವಾರು ಗ್ರಂಥಗಳನ್ನು ಬರೆಯುವುದು ನನ್ನ ಕ್ರಮವಾಗಿತ್ತು ಎಂಬುದಾಗಿ ಅವರೊಂದು ಕಡೆ ಬರೆದಿದ್ದಾರೆ. ಜನರ ಅಥವಾ ಸಮಾಜದ ಪುರೋಭಿವೃದ್ಧಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಶೋಧನೆ ಮಾಡಿದರೆ, ಸಂಶೋಧನೆಯ ಮಟ್ಟ ತಗ್ಗುತ್ತದೆಂದು ಅವರು ಭಾವಿಸಿರಲಿಲ್ಲ. ಆದ್ದರಿಂದಲೇ ಅವರು ತಮ್ಮ ಸಂಶೋಧನೆಯ ಆಧಾರದ ಮೇಲೆ ಗಿರಿಜನರ ಅಭಿವೃದ್ಧಿಯ ನೀತಿಗಳನ್ನು ಸೂಚಿಸುತ್ತಿದ್ದರು.

ಎಲ್ವಿನ್ನರನ್ನು ಒರಿಸ್ಸ ಸರ್ಕಾರ 1944ನೆಯ ಇಸವಿಯಲ್ಲಿ ಗೌರವ ಮಾನವಶಾಸ್ತ್ರಜ್ಞರಾಗಿ ನೇಮಕ ಮಾಡಿತು. ಆಮೇಲೆ ಅವರು ಎರಡು ವರ್ಷ ಕೊಲ್ಕತ್ತದಲ್ಲಿ ಭಾರತ ಸರ್ಕಾರದ ಮಾನವಶಾಸ್ತ್ರ ಇಲಾಖೆಯ ನಿರ್ದೇಶಕ ಬಿ.ಸಿ. ಗುಹಾರವರ

ಸಂಗಡ ಇದ್ದು ಅನಂತರ ಅಲ್ಲಿಂದ ಹಿಂತಿರುಗಿದರು. ಎರಡು ವರ್ಷಗಳಾದ ಅನಂತರ ಭಾರತ ಸರ್ಕಾರ ಅವರನ್ನು ನಿರ್ದೇಶಕರ ಕೆಲಸಕ್ಕೆ ಆಹ್ವಾನಿಸಿತಾದರೂ ಅವರು ಅದನ್ನು ಒಪ್ಪಲಿಲ್ಲ.

ಎಲ್ವಿನ್ನರು 1952ರಲ್ಲಿ ಭಾರತ ಸರ್ಕಾರದ ಕೋರಿಕೆಯಂತೆ ಇಂಡಿಯನ್ ಫ್ರಾಂಟಿಯರ್ ಅಡ್‌ಮಿನಿಸ್ಟ್ರೇಟಿವ್ ಸರ್ವಿಸ್ಸಿನ ಆಯ್ಕೆಯ ಸಮಿತಿಯ ಸದಸ್ಯರಾಗಿದ್ದರು. ಅನಂತರ ಪಂಡಿತ ನೆಹರೂರವರ ಅಭಿಲಾಷೆಯಂತೆ ನೀಫ (ಭಾರತದ ಈಶಾನ್ಯ ಗಡಿ ಪ್ರದೇಶ) ಆಡಳಿತದಲ್ಲಿ ಭಾಗವಹಿಸಿ ಆದಿವಾಸಿಗಳ ಬಗ್ಗೆ ಸಲಹೆಗಾರರಾದರು. ಮೊದಲು ಅವರನ್ನು ಮಾನವಶಾಸ್ತ್ರ ಸಲಹೆಗಾರರೆಂದು (ಆಂಥ್ರೊಪೊಲಾಜಿಕಲ್ ಕನ್ಸಲ್‌ಟೆಂಟ್) ಕರೆಯಲಾಯಿತು. ಒಂದು ವರ್ಷದ ಅನಂತರ ಗಿರಿಜನರಿಗೆ ಸಂಬಂಧಪಟ್ಟ ಸಲಹೆಗಾರರೆಂದು (ಅಡ್ವೈಸರ್ ಫಾರ್ ಟ್ರೈಬಲ್ ಅಫೇರ್ಸ್) ಕರೆಯಲಾಯಿತು. 1954ರಲ್ಲಿ ಅಸ್ಸಾಂ ಸರ್ಕಾರ ಎಲ್ವಿನ್ನರನ್ನು ಭಾರತದ ಪ್ರಜೆ ಎಂದು ಅಂಗೀಕರಿಸಿತು. ಅಲ್ಲಿಗೆ ಅವರ ಬಹುದಿನಗಳ ಅಭಿಲಾಷೆ ನೆರವೇರಿತು. ಅವರು ನೀಫ ವಿಚಾರವಾಗಿ ಕೆಲವು ಪುಸ್ತಕಗಳನ್ನು ಪ್ರಕಟಿಸಿದರು. ಗಿರಿಜನರ ಉಪಯೋಗಕ್ಕೆಂದು ಅವರಿಗೆ ತಿಳಿಯಬಹುದಾದ ರೀತಿಯಲ್ಲಿ ಗಾಂಧೀಜಿಯವರನ್ನು ಕುರಿತು ಬರೆದ ಗ್ರಂಥ ಬಹುಸೊಗಸಾಗಿದೆ. ಆಮೇಲೆ ನಾನೂರು ಸಣ್ಣ ಕಥೆಗಳೊಳಗೊಂಡ ನೀಫಾದ ಕಟ್ಟುಕಥೆಗಳು ಎಂಬ ಪುಸ್ತಕವನ್ನು ಪ್ರಕಟಿಸಿದರು. ಇಂಡಿಯನ್ ನಾರ್ತ್ ಈಸ್ಟರ್ನ್ ಫ್ರಾಂಟಿಯರ್ ಇನ್ ದಿ ನೈನ್‌ಟೀಂತ್ ಸೆಂಚ್ಯುರಿ ಎಂಬ ಪುಸ್ತಕವನ್ನು ರಚಿಸಿದರು. ಇದರಲ್ಲಿ ಪ್ರವಾಸಿಗಳು, ಪಾದ್ರಿಗಳು ಮತ್ತು ಆಡಳಿತಗಾರರು ಆ ನಾಡಿನ ಬಗ್ಗೆ ತಿಳಿಸಿದ ಸ್ವಾರಸ್ಯವಾದ ವಿಷಯಗಳನ್ನು ಸಂಗ್ರಹಿಸಲಾಗಿದೆ. ಗಿರಿಜನರ ಕಲೆಯ ಬಗ್ಗೆ ನೀಫಾದ ಕಲೆ ಎಂಬ ಪುಸ್ತಕವನ್ನು ಬರೆದರು. ಬಹಳ ಜನ ಓದಿ ಮೆಚ್ಚಿದ ಪುಸ್ತಕವೆಂದರೆ ಎ ಫಿಲಾಸಫಿ ಫಾರ್ ನೀಫ (ನೀಫಾಕ್ಕೊಂದು ತತ್ತ್ವ). ಅನಂತರ ಎಲ್ವಿನ್ನರು ನಾಗಾಲ್ಯಾಂಡಿನ ಇತಿಹಾಸವನ್ನು ಕುರಿತು ಬರೆದ ಪುಸ್ತಕಕ್ಕೆ ರಾಷ್ಟ್ರಾಧ್ಯಕ್ಷರ ಬಹುಮಾನ ಬಂತು. ಎಲ್ವಿನ್ನರ ಕಾರ್ಯಕ್ಷೇತ್ರ ವಿಶಾಲವಾಯಿತು. ಅವರನ್ನು ಮಣಿಪುರ ಮತ್ತು ತ್ರಿಪುರಗಳಿಗೆ ಆದಿವಾಸಿಗಳ ಗೌರವ ಸಲಹೆಗಾರನನ್ನಾಗಿ ನೇಮಿಸಲಾಯಿತು.

1959ರಲ್ಲಿ ಗೃಹಮಂತ್ರಿಗಳಾದ ಗೋವಿಂದ ವಲ್ಲಭ ಪಂತರು ಎಲ್ವಿನ್ನರನ್ನು ಪಂಚವಾರ್ಷಿಕ ಯೋಜನೆಯಲ್ಲಿ ಗಿರಿಜನರಿರುವ ಸಾಮೂಹಿಕ ಅಭಿವೃದ್ಧಿ ಕ್ಷೇತ್ರಗಳ ವಿಚಾರವಾಗಿ ನಿಯೋಜಿತವಾದ ಒಂದು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿದರು. 1960ರ ಮಾರ್ಚ್ ತಿಂಗಳಲ್ಲಿ 550 ಪುಟಗಳನ್ನೊಳಗೊಂಡ ವರದಿಯನ್ನು ಎಲ್ವಿನ್ ಪಂತರಿಗೆ ಒಪ್ಪಿಸಿದರು. ಇದರಲ್ಲಿ ಗಿರಿಜನರ ವಿಚಾರವಾಗಿ ಅವರ ಅಭಿವೃದ್ಧಿಯ ನಾನಾಮುಖಗಳನ್ನು ಚರ್ಚಿಸಿ ಸಲಹೆಗಳನ್ನು ಕೊಡಲಾಗಿತ್ತು. ಗಿರಿಜನರನ್ನು ಒಲಿಸಿಕೊಳ್ಳಲು ಬೇಕಾದ ಮೂಲ ತತ್ತ್ವಗಳು ಎಂಬ ಪೀಠಿಕೆಯ ಭಾಗದಲ್ಲಿ ಗಿರಿಜನರಿಗೆ ಹೇಗೆ ಹಣವನ್ನು ವೆಚ್ಚಮಾಡಬೇಕು ಎನ್ನುವುದನ್ನು ಪ್ರಮುಖವಾಗಿ ಚರ್ಚಿಸಲಾಗಿತ್ತು. ಗಿರಿಜನರ ವಿಚಾರವಾಗಿ ಅನುಸರಿಸಬೇಕಾದ ನೀತಿಗೆ ಹೆಚ್ಚು ಗಮನ ಕೊಟ್ಟು ಅಮೂಲ್ಯವಾದ ಸಲಹೆಗಳನ್ನು ಮಾಡಲಾಗಿತ್ತು. ಈ ವರದಿಯ ಸಲಹೆಗಳ ಬಹು ಭಾಗವನ್ನು ಭಾರತದ ಸರ್ಕಾರ ಒಪ್ಪಿತು. 1960ರಲ್ಲಿ ಎಲ್ವಿನ್ನರನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮಜನರ ಕಮಿಷನ್ನಿನ ಸದಸ್ಯರಾಗಿ ನೇಮಿಸಲಾಯಿತು. ಎಲ್ವಿನ್ 1961ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಸ್ಮಾರಕ ಭಾಷಣಗಳನ್ನು ಮಾಡಿದರು. ಪ್ರೇಮದ ತತ್ತ್ವ (ಎ ಫಿಲಾಸಫಿ ಆಫ್ ಲವ್) ಎಂಬುದೇ ಅವರ ಭಾಷಣಗಳ ವಿಷಯ.

1961ನೆಯ ವರ್ಷದ ಜನವರಿ ಇಪ್ಪತ್ತಾರನೆಯ ತಾರೀಖಿನಂದು ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಎಲ್ವಿನ್ನರನ್ನು ಸನ್ಮಾನಿಸಿತು.

1960ನೆಯ ವರ್ಷದಿಂದಲೇ ಎಲ್ವಿನ್ನರ ಆರೋಗ್ಯ ಕೆಟ್ಟಿತ್ತು. ಆದರೂ ಅದನ್ನು ಲೆಕ್ಕಿಸದೆ ಅವರು ಆದಿವಾಸಿಗಳ ಅಭಿವೃದ್ಧಿಗೆ ದುಡಿಯುತ್ತಿದ್ದರು. 1964ರ ಫೆಬ್ರವರಿ 21ನೆಯ ತಾರೀಖಿನ ಸಂಜೆ ಇಂದಿರಾ ಗಾಂಧಿಯವರನ್ನು ನೋಡಿ ಅವರ ಸಂಗಡ ತಮ್ಮ ಮುಂದಿನ ಕಾರ್ಯಕ್ರಮಗಳನ್ನು ಚರ್ಚಿಸಿದರು. ಮಾರನೆಯ ದಿನ ದೆಹಲಿಯಲ್ಲಿ ಅವರು ನಿಧನರಾದರು. ಅವರ ನಿಧನದಿಂದ ಮಾನವಶಾಸ್ತ್ರಕ್ಕೆ ಬಹಳ ದೊಡ್ಡ ನಷ್ಟವಾಯಿತು. ಅದರಲ್ಲೂ ಭಾರತಕ್ಕೆ, ಗಿರಿಜನರಿಗೆ ಆದ ನಷ್ಟ ಅಪಾರ.

ಆದಿವಾಸಿಗಳೆಂದರೆ ತೊಂದರೆ ಕೊಡುವ ಕ್ರೂರ ಜನರೆಂಬ ಅಭಿಪ್ರಾಯವಿತ್ತು. ನರಬಲಿ ಕೊಡುವ, ಮನುಷ್ಯರನ್ನು ಬೇಟೆಯಾಡುವ ಭಯಂಕರ ಮಾನವರೆಂದು ಜನ ಅವರನ್ನು ದೂರ ಇರಿಸಿದ್ದರು. ಅವರು ಭಿನ್ನರೀತಿಯ ಮನುಷ್ಯರು. ಸ್ವಲ್ಪ ಕರುಣೆಗೆ ಅರ್ಹರೇ ಹೊರತು ಸಮಾಜದಲ್ಲಿ ಗೌರವಕ್ಕೆ ಪಾತ್ರರಲ್ಲ ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿತ್ತು. ಅವರ ಬಗ್ಗೆ ಸರಿಯಾದ ರೀತಿಯಲ್ಲಿ ವರ್ತಿಸಿ ಅವರನ್ನು ಗೌರವ ವಿಶ್ವಾಸಗಳಿಂದ ಕಾಣಬೇಕಾದ ಅಗತ್ಯವನ್ನು ಎಲ್ವಿನ್ನರು ಎಲ್ಲರಿಗೂ ಅರಿವು ಮಾಡಿದರು.

ಗಿರಿಜನರಲ್ಲಿರುವ ವೈವಿಧ್ಯವನ್ನು ಕಾಪಾಡುವುದು ಅಗತ್ಯ. ಅವರ ಸಂಸ್ಕೃತಿ, ಅವರ ಕಲೆ ಬಹಳ ಅಮೂಲ್ಯವಾದುವು. ಅವನ್ನು ಗೌರವಿಸಬೇಕು. ಅವರು ಈ ದೇಶದ ಪ್ರಜೆಗಳೆಂಬ ಭಾವನೆಯನ್ನು ಬೆಳೆಸಬೇಕು. ಗಿರಿಜನರು ತಮ್ಮ ವೈಶಿಷ್ಟ್ಯ, ಜೀವನದ ಆನಂದಗಳನ್ನು ಉಳಿಸಿಕೊಳ್ಳಲು ಸಹಾಯಮಾಡುವುದು ಅಗತ್ಯ. ಅವರಿಗೆ ಅನ್ನ, ಆರೋಗ್ಯ, ಸಂಚಾರ ಸೌಲಭ್ಯ, ತಿಳಿವಳಿಕೆ ನಾಗರಿಕತೆಗಳ ಅಗತ್ಯವಿದೆ. ಅವನ್ನೊದಗಿಸಿ ಅವರ ಸಂಸ್ಕೃತಿಯನ್ನು ರಕ್ಷಿಸಿ ಪೋಷಿಸುವ ಅಗತ್ಯವೂ ಇದೆ–ಇದು ಎಲ್ವಿನ್ನರ ಸಂದೇಶ.

ವೆರಿಯರ್ ಎಲ್ವಿನ್ನರು ಅನೇಕ ಗ್ರಂಥಗಳನ್ನು, ಸಂಶೋಧನ ಲೇಖನಗಳನ್ನು ಬರೆದಿರುವರು. ಅವರ ಪುಸ್ತಕಗಳಲ್ಲಿ ಕೆಲವು ಏಕವಿಷಯಕ ನಿಬಂಧಗಳಿವೆ (ಮಾನೊಗ್ರಾಫ್ಸ್). ಇವು ಗಿರಿಜನರನ್ನು ಕುರಿತು ಬರೆದವು. ಇವುಗಳಲ್ಲದೆ ಎರಡು ಕಾದಂಬರಿಗಳನ್ನು ಬರೆದಿರುವರು. ಅವರ ಪುಸ್ತಕಗಳಲ್ಲಿ ಮುಖ್ಯವಾದವು ಈ ಕೆಲವು: ದಿ ಬೈಗ (1939); ದಿ ಅಗಾರಿಯ (1942); ಮರಿಯ ಮರ್ಡರ್ ಅಂಡ್ ಸೂಯಿಸೈಡ್ (1943); ಫೋಕ್ ಸಾಂಗ್ಸ್ ಆಫ್ ಛತ್ತೀಸ್‌ಘರ್ (1946); ದಿ ಮರಿಯ ಅಂಡ್ ದೇರ್ ಗೌಟಲ್ (1947); ದಿ ಟ್ರೈಬಲ್ ಆರ್ಟ್ ಆಫ್ ಮಿಡ್ಲ್ ಇಂಡಿಯ (1951); ದಿ ರಿಲಿಜನ್ ಆಫ್ ಆನ್ ಇಂಡಿಯನ್ ಟ್ರೈಬ್ (1955); ಮಿಕ್ಸ್ ಆಫ್ ದಿ ನಾರ್ತ್ ಈಸ್ಟರ್ನ್ ಫ್ರಾಂಟಿಯರ್ ಆಫ್ ಇಂಡಿಯ (1959); ದಿ ಲೀವ್ಸ್ ಫ್ರಾಂ ದಿ ಜಂಗಲ್ (1958); ದಿ ಆರ್ಟ್ ಆಫ್ ದಿ ನಾರ್ತ್ ಈಸ್ಟರ್ನ್ ಫ್ರಾಂಟಿಯರ್ ಆಫ್ ಇಂಡಿಯ (1959); ಎ ಫಿಲಾಸಫಿ ಫಾರ್ ನೀಫ್(1961); ಎ ಫಿಲಾಸಫಿ ಆಫ್ ಲವ್ (1962).

1964ರಲ್ಲಿ ಪ್ರಕಟವಾದ ದಿ ಟ್ರೈಬಲ್ ವರ್ಲ್ಡ್ ಆಫ್ ವೆರಿಯರ್ ಎಲ್ವಿನ್ ಎಂಬುದು ಎಲ್ವಿನ್ನರ ಆತ್ಮಕಥೆ. ಫುಲ್‌ಮತ್ ಆಫ್ ದಿ ಹಿಲ್ಸ್ (1937), ಎ ಕ್ಲೌಡ್ ದಟ್ ಈಸ್ ಡ್ರ್ಯಾಗೂನಿಷ್ (1938)–ಎಂಬುವು ವನ್ಯ ಜೀವನವನ್ನು ವಸ್ತುವನ್ನಾಗುಳ್ಳ ಎರಡು ಕಾದಂಬರಿಗಳು. ದಿ ಕಿಂಗ್‌ಡಂ ಆಫ್ ದಿ ಯಂಗ್ ಎಂಬುದು ದಿ ಮರಿಯ ಅಂಡ್ ದೇರ್ ಗೌಟಲ್ ಎಂಬುದರ ಸಂಗ್ರಹ. ಶ್ಯಾಮರಾವ್ ಹಿವಾಲೆಯವರೊಂದಿಗೆ ಎಲ್ವಿನ್ ಎರಡು ಗ್ರಂಥಗಳನ್ನು ರಚಿಸಿದ್ದಾರೆ; ಸಾಂಗ್ಸ್ ಆಫ್ ದಿ ಫಾರೆಸ್ಟ್ (1935), ದಿ ಫೋಕ್ ಸಾಂಗ್ಸ್ ಆಫ್ ಮೈಕಲ್ ಹಿಲ್ಸ್ (1944).

ತಮ್ಮ ಸಂಶೋಧನೆಗಳಿಂದಾಗಿ ಎಲ್ವಿನ್ನರು ದಿ ವೆಲ್‌ಕಮ್ ಮೆಡಲ್ (1943), ಎಸ್.ಸಿ.ರಾಯ್ ಮೆಡಲ್ (1945), ರಿವರ್ಸ್ ಮೆಮೋರಿಯಲ್ ಮೆಡಲ್ (1948), ಆನನ್ ಡೇಲ್ ಮೆಡಲ್ (1952), ದಾದಾಭಾಯ್ ನವ್ರೋಜಿ ಪ್ರೈಸ್ (1961) ಮೊದಲಾದ ಪದಕ, ಪಾರಿತೋಷಕಗಳನ್ನು ಪಡೆದಿದ್ದಾರೆ.

ಎಲ್ವಿನ್ನರು ತಮ್ಮ ಪುಸ್ತಕಗಳಲ್ಲಿ ಏನನ್ನು ಬರೆದರೋ ಆ ತತ್ತ್ವಗಳನ್ನು ಕಾರ್ಯರೂಪಕ್ಕೆ ತರಲು ಕೊನೆಯವರೆಗೂ ಶ್ರಮಿಸಿದರು. ತಮ್ಮ ಮೂವತ್ತು ವರ್ಷಗಳಿಗೂ ಮೇಲ್ಪಟ್ಟ ಸೇವಾಜೀವನದಲ್ಲಿ ಭಾರತದ ಗಿರಿಜನರ ಅಭಿವೃದ್ಧಿಗೆ ಶ್ರಮಿಸಿದರು. ಭಾರತದ ಗೃಹಮಂತ್ರಿಗಳಾಗಿದ್ದ ಗೋವಿಂದ ವಲ್ಲಭ ಪಂತರು ಎಲ್ವಿನ್ನರ ಕಾರ್ಯಗಳ ಬಗ್ಗೆ ಹೇಳಿದ ಮಾತುಗಳು ಅವರು ಸಲ್ಲಿಸಿದ ಮಹತ್ಕಾರ್ಯಗಳನ್ನು ತಿಳಿಸುತ್ತವೆ: ಗಿರಿಜನರ ವಿಚಾರವಾಗಿ ಸಾರ್ವತ್ರಿಕವಾದ ಒಳ್ಳೆಯ ಅಭಿಪ್ರಾಯ ಬರುವಂತೆ ಇಡೀ ದೇಶದಲ್ಲಿ ದೊಡ್ಡ ಕೆಲಸ ಮಾಡಿದವರು ಎಲ್ವಿನ್ ಅವರು. ಆದಿವಾಸಿಗಳು ಕೇವಲ ಹಿಂದುಳಿದವರಲ್ಲ, ಅವರಲ್ಲಿ ಕಲೆ, ಸಂಸ್ಕೃತಿ ಇವೆ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅವರು ಹೀಗೆ ಮಾಡಿದ್ದರಿಂದ ದೇಶದ ಧೋರಣೆಯನ್ನು ರೂಢಿಸಿದಂತಾಯಿತು.

(ಎಚ್.ಎಂ.ಎಸ್.)

**ಎಲ್‌ವುಡ್, ಚಾರಲ್ಸ್ ಎ:** 1873–1946. ಅಮೆರಿಕ ಸಂಯುಕ್ತ ಸಂಸ್ಥಾನದ ಮನೋವೈಜ್ಞಾನಿಕ ಸಮಾಜವಿಜ್ಞಾನದ ಪ್ರವರ್ತಕ. ಜನನ–ನ್ಯೂಯಾರ್ಕಿನ ದಕ್ಷಿಣಕ್ಕೆ ಸುಮಾರು 26 ಕಿಮೀ ದೂರದಲ್ಲಿರುವ ಆಗ್ಡೆನ್ಸ್ ಬರ್ಗ್‌ನಲ್ಲಿ, 1873ರ ಜನವರಿ 26ರಂದು. ಅಲ್ಲಿನ ಫ್ರಿ ಅಕೆಡಮಿಯಲ್ಲಿ ಚಿಕ್ಕಂದಿನ ವಿದ್ಯಾಭ್ಯಾಸ, ಅನಂತರ ಈತ ನ್ಯಾಯಶಾಸ್ತ್ರದ ಅಧ್ಯಯನ ಮಾಡುವ ಉದ್ದೇಶದಿಂದ ಕಾರ್ನೆಲ್ ವಿಶ್ವವಿದ್ಯಾಲಯವನ್ನು ಸೇರಿದ. ಅಲ್ಲಿ ಇವನಿಗೆ ಸುಪ್ರಸಿದ್ಧ ಸಮಾಜಶಾಸ್ತ್ರಜ್ಞ ಎಡ್ವರ್ಡ್ ಎ. ರಾಸನ ಪರಿಚಯ ವಾಯಿತು. ಆಗತಾನೇ ಆತ ತನ್ನ ಪಾಂಡಿತ್ಯವೃತ್ತಿಯ ಆರಂಭದೆಸೆಯಲ್ಲಿದ್ದು, ಅರ್ಥಶಾಸ್ತ್ರದ ಅಧ್ಯಾಪಕನಾಗಿದ್ದ. ರಾಸನ ಪ್ರಭಾವದಿಂದ ಎಲ್‌ವುಡ್‌ನ ಜೀವನದ ಗತಿಯೇ ಬದಲಾಯಿತು. ನ್ಯಾಯಶಾಸ್ತ್ರಾಭ್ಯಾಸದ ಯೋಚನೆ ಬಿಟ್ಟು ಈತ ಸಮಾಜವಿಜ್ಞಾನವನ್ನಭ್ಯಸಿಸುವ ಮನಸ್ಸು ಮಾಡಿದ. ಸಮಾಜವಿಜ್ಞಾನ ಅರ್ಥಶಾಸ್ತ್ರಗಳಲ್ಲಿ ವಿಶೇಷ ಜ್ಞಾನ ಸಂಪಾದಿಸಿಕೊಂಡ. ಜೊತೆಗೆ ಸಂಖ್ಯಾಶಾಸ್ತ್ರ, ಜನಾಂಕಶಾಸ್ತ್ರ (ಡಿಮಾಗ್ರಫಿ), ರಾಜ್ಯಶಾಸ್ತ್ರಗಳನ್ನೂ ಅಧ್ಯಯನ ಮಾಡಿದ. ಈ ನಾನಾ ಶಾಸ್ತ್ರಗಳನ್ನು ಈತನಿಗೆ ಬೋಧಿಸಿದವರೆಲ್ಲ ಸಮಾಜ ಸುಧಾರಣೆಯಲ್ಲಿ ಒಲವುಳ್ಳವರಾಗಿದ್ದದ್ದರಿಂದ ಎಲ್‌ವುಡ್‌ನೂ ಇದೇ ಬಗೆಯ ಒಲವು

ತಳೆದು ಕೊಂಡ. ಜನಸಾಮಾನ್ಯರ ಸ್ಥಿತಿ ಸುಧಾರಣೆಯೇ ಸಮಾಜವಿಜ್ಞಾನದ ಗುರಿಯಾಗಿರಬೇಕೆಂಬುದಾಗಿ ಇವನಿಗೆ ಮನವರಿಕೆಯಾಯಿತು. ಈತ ಪದವೀಧರನಾದದ್ದು ಇದೇ ಕಾಲದಲ್ಲಿ (1896).

ಅನಂತರ ಎಲ್‌ವುಡ್ ಷಿಕಾಗೋ ವಿಶ್ವವಿದ್ಯಾಲಯಕ್ಕೆ ಹೋಗಿ ಅಲ್ಲಿ ಥಾಮಸ್, ಮೀಡ್, ಡ್ಯೂಯಿ ಇವರಲ್ಲಿ ಅಧ್ಯಯನ ಮುಂದುವರಿಸಿದ. ಸಾಮಾಜಿಕ ಮನೋವಿಜ್ಞಾನ, ವ್ಯಾವಹಾರಿಕ ತತ್ತ್ವಶಾಸ್ತ್ರ ಸಮಾಜ ಸುಧಾರಣೆ–ಮುಂತಾದವು ಈತನ ವಿಶೇಷ ಸಂಶೋಧನೆಯ ವಿಷಯಗಳಾದವು. 1897–98ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಐತಿಹಾಸಿಕ ಮತ್ತು ಸುಧಾರಣೀಯ ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ನೀತಿಶಾಸ್ತ್ರ– ಇವನ್ನು ಅಭ್ಯಾಸಮಾಡಿ ಮತ್ತೆ ಚಿಕಾಗೋಗೆ ಬಂದು ತನ್ನ ಪ್ರೌಢ ಪ್ರಬಂಧವಾದ ಸಂಪಾಲೆಗೊಮೆನ ಟು ಸೋಷಿಯಲ್ ಸೈಕಾಲೊಜಿಯನ್ನು ಸಿದ್ಧಪಡಿಸಿದ (1899). ಅಮೆರಿಕನ್ ಜರ್ನಲ್ ಆಫ್ ಸೋಷಿಯಾಲೊಜಿಯಲ್ಲಿ ಪ್ರಕಟವಾದ ಈ ಪ್ರಬಂಧ ಶುದ್ಧ ಮನೋವಿಜ್ಞಾನದ ತತ್ತ್ವಗಳ ಆಧಾರದ ಮೇಲೆ ಸಾಮಾಜಿಕ ಮನೋವಿಜ್ಞಾನದ ಪ್ರಥಮ ಪ್ರತಿಪಾದನೆ ಎನ್ನಬಹುದು.

ಮಿಸೂರಿ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಸ್ಥಾಪಿತವಾದ ಸಮಾಜವಿಜ್ಞಾನ ಪ್ರಾಧ್ಯಾಪಕ ಹುದ್ದೆಯಲ್ಲಿ ಎಲ್‌ವುಡ್ ನೇಮಕವಾದ (1900). ಅಲ್ಲೇ ಮೂವತ್ತು ವರ್ಷಕಾಲ ಇದ್ದು, ಸಮರ್ಥ ಶಿಷ್ಯರನೇಕರನ್ನು ತಯಾರಿಸಿದ. ಇವರ ಪೈಕಿ ರಾಯಿಟರ್, ಬಾರ್ನ್, ಬ್ಲೂಮರ್ ಇವರು ಮುಖ್ಯರು. ಎಲ್‌ವುಡ್ ಈ ವಿಶ್ವವಿದ್ಯಾಲಯವನ್ನು ಸೇರಿದಾಗ ಸಮಾಜವಿಜ್ಞಾನವನ್ನು ಅಧ್ಯಯನಕ್ಕಾಗಿ ಆಯ್ಕೆಮಾಡಿಕೊಂಡಿದ್ದವರು ಸುಮಾರು ಮೂವತ್ತು ಮಂದಿ ಮಾತ್ರ. ಇವನು ಈ ವಿಶ್ವವಿದ್ಯಾಲಯವನ್ನು ಬಿಡುವ ವೇಳೆಗೆ ಇಲ್ಲಿ 1,500 ವಿದ್ಯಾರ್ಥಿಗಳಿಗೆ ಅಧ್ಯಯನ ಸೌಲಭ್ಯವಿತ್ತು. ಡೂಕ್ ವಿಶ್ವವಿದ್ಯಾಲಯದಲ್ಲಿ ಸಮಾಜವಿಜ್ಞಾನದ ಇಲಾಖೆಯೊಂದನ್ನು ಹೊಸದಾಗಿ ತೆರೆದು ಅಭಿವೃದ್ಧಿಪಡಿಸಬೇಕೆಂದು ಆ ವಿಶ್ವವಿದ್ಯಾಲಯದಿಂದ 1930ರಲ್ಲಿ ಬಂದ ಆಹ್ವಾನದಂತೆ ಈತ ಅಲ್ಲಿಗೆ ಹೋಗಿ, ತನ್ನ ಅಂತ್ಯಕಾಲದವರೆಗೂ ಅಲ್ಲೇ ಇದ್ದ.

ಎಲ್‌ವುಡ್ 1912ರಲ್ಲಿ ಪ್ರಕಟಿಸಿದ ಸೋಷಿಯಾಲೊಜಿ ಇನ್ ಇಟ್ಸ್ ಸೈಕೊಲಾಜಿಕಲ್ ಆಸ್ಪೆಕ್ಟ್ಸ್ ಎಂಬುದು ಮನೋವೈಜ್ಞಾನಿಕ ಸಮಾಜವಿಜ್ಞಾನದ ಕ್ಷೇತ್ರದಲ್ಲೊಂದು ಮಹತ್ತ್ವದ ಗ್ರಂಥ. ಮಾನವ ವರ್ತನೆಗೆ ಮನೋವೈಜ್ಞಾನಿಕ ವ್ಯಾಖ್ಯಾನದ ಪ್ರಯತ್ನವಾಗಿರುವ ಈ ಗ್ರಂಥದಲ್ಲಿ ವಿಕಾಸವಾದ, ಪ್ರಾಣಿವಿಜ್ಞಾನ, ನರರೋಗವಿಜ್ಞಾನ, ಕ್ರಿಯಾತ್ಮಕ ಮನೋವಿಜ್ಞಾನ, ಸಾಮಾಜಿಕ ಮನೋವಿಜ್ಞಾನ ಮುಂತಾದ ನಾನಾ ಕ್ಷೇತ್ರಗಳ ಸಂಗಮವಾಗಿದೆ. ಈಗ ಎಲ್‌ವುಡ್‌ನ ಗ್ರಂಥವನ್ನೂ ಮೀರಿಸಿದ ಕೃತಿಗಳು ಹಲವಾರಿವೆಯಾದರೂ ಆಗಿನ ಕಾಲದಲ್ಲಿ ಈ ಕ್ಷೇತ್ರದಲ್ಲಿ ಇದನ್ನು ಸರಿಗಟ್ಟುವ ಗ್ರಂಥ ಇನ್ನೊಂದಿರಲಿಲ್ಲ.

ಒಂದನೆಯ ಮಹಾಯುದ್ಧದ ಕಾಲದಿಂದೀಚೆ ಎಲ್‌ವುಡ್ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಗಳಲ್ಲಿ ಹೆಚ್ಚು ಆಸಕ್ತಿ ತಳೆದ. ಇವುಗಳ ಅಂತರಂಗಗಳನ್ನು ಬೆದಕಿ ನೋಡುವ ಪ್ರಸಕ್ತಿ ಬೆಳೆಯಿತು. ಆದ್ದರಿಂದ 1917ರಲ್ಲಿ ಇಂಟ್ರೊಡಕ್ಷನ್ ಟು ಸೋಷಿಯಲ್ ಸೈಕಾಲೊಜಿಯನ್ನೂ 1925ರಲ್ಲಿ ಸೈಕಾಲೊಜಿ ಆಫ್ ಹ್ಯೂಮನ್ ಸೊಸೈಟಿಯನ್ನೂ ಈತ ಬರೆದ. ಈ ಪುಸ್ತಕಗಳು ಈತನ ಹಿಂದಿನ ಪುಸ್ತಕದಷ್ಟು ಮಹತ್ತ್ವದವೆನ್ನಲಾಗುವುದಿಲ್ಲ. 1927ರಲ್ಲಿ ಎಲ್‌ವುಡ್ ಬರೆದ ಕಲ್ಚರಲ್ ಎವಲ್ಯೂಷನ್; ಎ ಸ್ಟಡಿ ಆಫ್ ಸೋಷಿಯಲ್ ಆರಿಜಿನ್ ಅಂಡ್ ಡೆವಲಪ್‌ಮೆಂಟ್ ಎಂಬ ಪುಸ್ತಕದಲ್ಲೂ ಸಾಂಸ್ಕೃತಿಕ, ಮಾನವಶಾಸ್ತ್ರದ ಪ್ರಾಮುಖ್ಯದ ಪ್ರತಿಪಾದನೆಯಿದೆ. ಸಾಮಾಜಿಕ ಪ್ರಕ್ರಿಯೆಗಳನ್ನು ಸಾಂಸ್ಕೃತಿಕ ಧಾರ್ಮಿಕ ದೃಷ್ಟಿಯಿಂದ ನೋಡುವ ಈ ಅಭ್ಯಾಸವನ್ನು ಎಲ್‌ವುಡ್ ತನ್ನ ಕೊನೆಗಾಲದವರೆಗೂ ಉಳಿಸಿಕೊಂಡಿದ್ದ. ಈ ಬಗೆಗೆ ಇನ್ನೊಂದು ಉದ್ಗ್ರಂಥವನ್ನೇ ಬರೆದು ಸಜ್ಜು ಪಡಿಸಿದ್ದ. ಆದರೆ ಅದು ಪ್ರಕಟವಾಗಲಿಲ್ಲ.

1933ರಲ್ಲಿ ಪ್ರಕಟವಾದ ಮೆಥಡ್ಸ್ ಇನ್ ಸೋಷಿಯಾಲೊಜಿ, ಎ ಕ್ರಿಟಿಕಲ್ ಸ್ಟಡಿ ಎಂಬುದು ಇನ್ನೊಂದು ಗಮನಾರ್ಹ ಗ್ರಂಥ. ಸಮಾಜವಿಜ್ಞಾನ ಕ್ಷೇತ್ರದಲ್ಲಿ ಆ ಕಾಲದಲ್ಲಿ ಪ್ರಚಲಿತವಿದ್ದ ಕೆಲವು ಅಪಾಯಕಾರಿ ಪ್ರವೃತ್ತಿಗಳನ್ನು ಎಲ್‌ವುಡ್ ಇಲ್ಲಿ ಎತ್ತಿ ತೋರಿಸಿದ್ದಾನೆ. ಸಮಾಜ ಸುರಕ್ಷೆ ಮತ್ತು ಸಾಮಾಜಿಕ ಮೌಲ್ಯಗಳ ನಿರಾಕರಣೆ, ಸಮಾಜಶಾಸ್ತ್ರದ ಅಧ್ಯಯನಕ್ಕೆ ಪ್ರಾಕೃತಿಕ ವಿಜ್ಞಾನ ವಿಧಾನಗಳ ಅನ್ವಯ ಮುಂತಾದವು ಸಮಾಜಶಾಸ್ತ್ರದ ನಿಜವಾದ ಸ್ವರೂಪವನ್ನು ಮಸುಕುಮಾಡುವುವೆಂದು ಎಲ್‌ವುಡ್ ಈ ಪುಸ್ತಕದಲ್ಲಿ ಎಚ್ಚರಿಸಿದ್ದಾನೆ.

1910ರಲ್ಲಿ ಎಲ್‌ವುಡ್ ಸಮಾಜವಿಜ್ಞಾನವನ್ನು ಕುರಿತು ಬರೆದ ಪಠ್ಯ ಪುಸ್ತಕ ಆ ಬಗೆಯ ಪುಸ್ತಕಗಳಲ್ಲಿ ಬಲು ಪ್ರಸಿದ್ಧವಾದದ್ದು. ಎಲ್‌ವುಡ್‌ನಿಗೆ ಪ್ರಾಯೋಗಿಕ ಸಮಾಜವಿಜ್ಞಾನದಲ್ಲಿ ಎಷ್ಟೊಂದು ಆಸಕ್ತಿಯಿತ್ತೆಂಬುದನ್ನು ಇದು ತೋರಿಸುತ್ತದೆ. ಅನಂತರ ಎಲ್‌ವುಡ್ ಈ ಬಗೆಯ ಅನೇಕ ಪಠ್ಯ ಪುಸ್ತಕಗಳನ್ನು ಬರೆದ. ಸಾಮಾಜಿಕ ನೀತಿಶಾಸ್ತ್ರದಲ್ಲಿ ಈತ ತಳೆದಿದ್ದ ಆಸಕ್ತಿಯ ಫಲವಾಗಿ ಈ ಬಗ್ಗೆಯೂ ಅನೇಕ ಪುಸ್ತಕಗಳನ್ನು ಬರೆದ. ಬಾಲ್ಯದ ಧಾರ್ಮಿಕ ಅನುಭವಗಳಿಂದಾಗಿ ಈತನ ದೃಷ್ಟಿಯಲ್ಲಿ ಕ್ರೈಸ್ತಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು. ಧರ್ಮಪುನರ್‌ರಚನೆ, ಕ್ರೈಸ್ತಧರ್ಮ ಮತ್ತು ಸಮಾಜವಿಜ್ಞಾನ ಮುಂತಾದ ವಿಚಾರಗಳನ್ನು ಕುರಿತು ಎಲ್‌ವುಡ್ ಬರೆದ ಪುಸ್ತಕಗಳು ಬಲು ಜನಪ್ರಿಯವಾದವು.

ಅನಾರೋಗ್ಯದ ನಿಮಿತ್ತ ಎಲ್‌ವುಡ್ 1927ರಲ್ಲಿ ಮಿಸೂರಿ ವಿಶ್ವವಿದ್ಯಾಲಯದಿಂದ ರಜೆ ಪಡೆದು ಫ್ರಾನ್ಸ್, ಇಟಲಿ, ಆಸ್ಟ್ರಿಯ ಮುಂತಾದ ದೇಶಗಳಲ್ಲಿ ಸಂಚರಿಸಿ, ಅಲ್ಲಿಯ ಸಮಾಜಶಾಸ್ತ್ರಜ್ಞರ ಪರಿಚಯ ಮಾಡಿಕೊಂಡ. ಇದರಿಂದ ಇವನ ಅನುಭವ ಹೆಚ್ಚು ಆಳವಾಯಿತು. 1935ರಲ್ಲಿ ಈತ ವಿಶ್ವಸಮಾಜವಿಜ್ಞಾನಿಗಳ ಸಂಸ್ಥೆಯ ಅಧ್ಯಕ್ಷನಾಗಿ ಚುನಾಯಿತನಾದ.

ವಿಶ್ವದ ಎಲ್ಲ ದೇಶಗಳ ಸುರಕ್ಷತೆ ಆವಶ್ಯಕವೆಂದೂ ಅಂತಾರಾಷ್ಟ್ರೀಯ ಸಂಸ್ಥೆಗಳು ಇದಕ್ಕಾಗಿ ಶ್ರಮಿಸಬೇಕೆಂದೂ ಎಲ್‌ವುಡ್ ತನ್ನ ಕೊನೆಯ ದಿನಗಳಲ್ಲಿ ಸಾರಿದ. ಜನರೆಲ್ಲ ವಿದ್ಯಾವಂತರೂ ನಿಪುಣರೂ ದಾರಿದ್ರ್ಯದೂರರೂ ಆದಾಗ ಮಾತ್ರವೇ ಸುರಕ್ಷತೆ ಭದ್ರತೆಗಳು ಸಾಧ್ಯವೆಂಬುದು ಈತನ ದೃಢ ನಂಬಿಕೆಯಾಗಿತ್ತು. ಯುದ್ಧದಿಂದ ವಿಶ್ವದ ಹಿತಕ್ಕೆ ಧಕ್ಕೆಯೊದಗುವುದೆಂದೂ ಯುದ್ಧಕ್ಕೆ ಅಮೆರಿಕ ಪ್ರಚೋದನೆ ನೀಡಬಾರದೆಂದು ಎಲ್‌ವುಡ್ ವಿಶ್ರಾಂತ ಪ್ರಾಧ್ಯಾಪಕನಾಗಿ 1945ರಲ್ಲಿ ಸಾರಿದ. ಎಲ್‌ವುಡ್ 1946 ಸೆಪ್ಟೆಂಬರ್ 25ರಂದು ನಿಧನನಾದ.

ಅಮೆರಿಕನ್ ಸಮಾಜವಿಜ್ಞಾನಿಗಳ ಪೈಕಿ ಎಲ್‌ವುಡ್ ವಿಶಿಷ್ಟ ಸ್ಥಾನ ಗಳಿಸಿಕೊಂಡಿದ್ದಾನೆ. ಮನೋವಿಜ್ಞಾನಕ್ಕೂ ಸಮಾಜವಿಜ್ಞಾನಕ್ಕೂ ಸ್ಥಿರವಾದ ಸೇತುವೆ ನಿರ್ಮಿಸಿದವ ಎಲ್‌ವುಡ್ ಎನ್ನಬಹುದು. ಈ ಎರಡು ವಿಷಯಗಳಲ್ಲೂ ತಕ್ಕಮಟ್ಟಿನ ಸಾಮರ್ಥ್ಯ ಗಳಿಸಿಕೊಂಡಿದ್ದ ಎಲ್‌ವುಡ್ ಈ ಕೆಲಸವನ್ನು ಇತರ ಎಲ್ಲರಿಗಿಂತ ಹೆಚ್ಚು ಸಮರ್ಪಕವಾಗಿ ಮಾಡಿದ. ಸಮಾಜ ಸುಧಾರಣೆ ಸುರಕ್ಷೆಗಳಲ್ಲೂ ಇವನಿಗೆ ಹೆಚ್ಚಿನ ಆಸಕ್ತಿಯಿತ್ತು. ಸಾಮಾಜಿಕ ನಿರ್ದೇಶನದಲ್ಲಿ ಆಧುನಿಕ ಧರ್ಮ ಹೆಚ್ಚಿನ ಪಾತ್ರವಹಿಸಬೇಕೆಂಬುದು ಇವನ ನಂಬಿಕೆ. ವಿಶ್ವಸಂಸ್ಥೆಯ ಮೂಲಕ ವಿಶ್ವಶಾಂತಿ ಸ್ಥಾಪನೆ ಮಾಡದೆ ಶಾಶ್ವತ ಪ್ರಜಾಪ್ರಭುತ್ವವಾದಿ ಸಮಾಜದ ಸ್ಥಾಪನೆಯಾಗಲಿ ಸಾಮಾಜಿಕ ಆದರ್ಶರಾಜ್ಯದ ರಚನೆಯಾಗಲಿ ಸಾಧ್ಯವಿಲ್ಲವೆಂದೂ ಎಲ್‌ವುಡ್ ದೃಢವಾಗಿ ನಂಬಿದ್ದ. (ಕೆ.ಎನ್.ವಿ.)

**ಎವನ್ಸ್, ಮೇರಿ ಆನ್: ನೋಡಿ– ಎಲಿಯಟ್ ಜಾರ್ಜ್**

**ಎವರೆಸ್ಟ್ ಶಿಖರ:** ಜಗತ್ತಿನಲ್ಲಿ ಅತ್ಯುನ್ನತ ಪರ್ವತಶಿಖರ. 29,028′ (8,848 ಮೀಟರುಗಳು). ಪೂರ್ವ ನೇಪಾಲದ ಪೂರ್ವ ಹಿಮಾಲಯಗಳಲ್ಲಿ ನೇಪಾಲ–ಟಿಬೆಟುಗಳ ಎಲ್ಲೆಯಲ್ಲಿ $28^0$ ಉತ್ತರ ಅಕ್ಷಾಂಶ. $86^058'$ ಪೂರ್ವ ರೇಖಾಂಶಗಳ ಸಂಧಿಸ್ಥಾನದಲ್ಲಿ ಇದೆ. ಮೊತ್ತಮೊದಲು ಗುರುತಿಸಿದ್ದು 1856ರಲ್ಲಿ, ತ್ರಿಕೋನಕಲ್ಪ

ನೈಋತ್ಯ ದಿಕ್ಕಿನಿಂದ ಎವರೆಸ್ಟ್ ಶಿಖರದ ನೋಟ. ಶಿಖರ ಎಡಗಡೆಯದು

ವಿಧಾನದಿಂದ. ಭಾರತದ ಸರ್ವೇಯರ್ ಜನರಲ್ ಆಗಿ ಭಾರತದ ಸರ್ವೆ ಇಲಾಖೆಗೆ ಅಪಾರ ಸೇವೆ ಸಲ್ಲಿಸಿದ್ದ ಸರ್ ಜಾರ್ಜ್ ಎವರೆಸ್ಟ್ ಎಂಬಾತನ (1790–1866) ಹೆಸರನ್ನು ಈ ಶಿಖರಕ್ಕೆ ಇಡಲಾಯಿತು. ಹೆಸರಿಸಿದ್ದು 1863ರಲ್ಲಿ. ಟಿಬೆಟ್ ಭಾಷೆಯಲ್ಲಿ ಈ ಶಿಖರದ ಹೆಸರು ಚೊಮೊಲುಂಗ್ಮ. ಅರ್ಥ–ದೇವಿ ಭೂಮಾತೆ. ಇದರ ಆರ್ಷೇಯ ಭಾರತೀಯ ನಾಮಧೇಯ ಗೌರೀಶಂಕರ.

ಕಣ್ಣು ಕೋರೈಸುವ ಶ್ವೇತ ಹಿಮ, ಕೃಷ್ಣ ಶಿಲೆಯ ಒತ್ತು ಗೋಡೆಗಳು, 3347ಮೀ ಗಳಿಗಿಂತಲೂ ಎತ್ತರವಾದ ಕಡಿದಾದ ಶಿಲಾಪ್ರಪಾತಗಳು ಈ ಶಿಖರಪೀಠವನ್ನು ಚಿತ್ತಾಕರ್ಷಕವಾಗಿ ಮಾಡಿವೆ. ಆದರೆ ಎವರೆಸ್ಟ್ ಶಿಖರ ಆ ಸಾಲಿನ ಇತರ ಶಿಖರಗಳಷ್ಟು

ವೈಶಿಷ್ಟ್ಯಪೂರ್ಣವಾಗಿಲ್ಲ. ಇದೊಂದು ಮುದ್ದೆಮುದ್ದೆಯಾದ ಪಿರಮಿಡ್ಡಿನಂತಿದೆ. ಜಲಜ ಹಾಗೂ ನೈಸ್ ಶಿಲೆಯ ಪೀಠದ ಮೇಲೆ ಪರ್ಮೊಕಾರ್ಬೊನಿಫೆರೆಸ್ ಯುಗದ ಸುಣ್ಣಕಲ್ಲು ಮಿಶ್ರದ ನೈಸ್ ಹಾಗೂ ಪದರುಗಲ್ಲುಗಳಿಂದ ಶಿಖರ ಪೀಠ ನಿರ್ಮಾಣವಾಗಿದೆ. ಓಡೆಲ್ ಮತ್ತು ವೇಗರ್ ಎಂಬುವರು ಈ ಶಿಖರ ಆಂತರಿಕ ಘರ್ಷಣೆಗಳಿಂದ ಲಂಬವಾಗಿ ಮೇಲೆತ್ತಲ್ಪಟ್ಟು ಇಂದಿನ ರೂಪ ಪಡೆದಿದೆಯೆಂದು ತಿಳಿಸುತ್ತಾರೆ. ಬೇರೆ ಕೆಲವರು ವಿಜ್ಞಾನಿಗಳು ಈ ಶಿಖರ ನ್ಯಾಪೆ ರೀತಿಯಲ್ಲಿ ನಿರ್ಮಾಣವಾಗಿ ಹಿಮಸಂಚಯನಗಳಿಂದ ಬೇರೆಯಾಗಿ, ಇಂದಿನ ರೂಪ ಪಡೆದಿದೆಯೆಂದು ತಿಳಿಸುತ್ತಾರೆ. ಆಂತರಿಕ ಘರ್ಷಣೆ ಇನ್ನೂ ಮುಂದುವರಿಯುತ್ತಿದ್ದು, ಪ್ರತಿವರ್ಷವೂ ಶಿಖರದ ಎತ್ತರ ಹೆಚ್ಚಾಗುತ್ತಿದೆಯೆಂದೂ ಅವರ ಅಭಿಪ್ರಾಯ.

ಎವರೆಸ್ಟಿನ ಹಿಮನದಿಗಳು ಸ್ಯಾಂಗ್ ಪೊ (ಬ್ರಹ್ಮಪುತ್ರ) ನದಿಯ ದಕ್ಷಿಣದಲ್ಲಿನ ಹಿಮಾಲಯದ ಆಚೆ ಪಕ್ಕದಲ್ಲಿನ ನೆತ್ತಿಯ ಕಣಿವೆಗಳ (ಘಾಟಿ) ಮೇಲೆಲ್ಲ ಹರಡಿ ಹೋಗಿದ್ದುವೆಂದು ನಂಬಲಾಗಿದೆ. ಈಗಿರುವ ಹಿಮನದಿಗಳಲ್ಲಿ ರಂಗ್‌ಬಕ್ ಮುಖ್ಯವಾದುದು. ಇದು ಎವರೆಸ್ಟಿನಿಂದ ಉತ್ತರದ ಕಡೆಗೆ ಹರಿಯುತ್ತದೆ. 19ಕಿಮೀ ಉದ್ದವಾಗಿದ್ದು, 6673ಮೀ ಎತ್ತರದಿಂದ 5005ಮೀ ತಗ್ಗಿಗೆ ಹರಿಯುವ ಇದು ಪರ್ವತದ ಅಕ್ಷರೇಖೆಗೆ ಸರಿಯಾಗಿ ಅಡ್ಡಹಾಯುತ್ತದೆ.

ಶಿಖರದ ಸುತ್ತಮುತ್ತಣ ಪ್ರದೇಶದಲ್ಲಿ 4550ಮೀ ಗಳ ವರೆಗೆ ಅತ್ಯಂತ ಕಡಿಮೆ ಪ್ರಮಾಣದಲ್ಲಿನ ವ್ಯವಸಾಯ, ಪಶುಪಾಲನೆ ಸಾಧ್ಯ. ವರ್ಷದಲ್ಲಿ ಹೆಚ್ಚು ಕಾಲ ಹಿಮಾಚ್ಛಾದಿತವಾದ ಈ ಪ್ರದೇಶದಲ್ಲಿ ಜನಜೀವನ ಬಲು ಕಷ್ಟಕರವಾದುದು. ಸದಾ ಹಿಮದಿಂದ ತುಂಬಿರುವ ಈ ಪರ್ವತ ಶಿಖರದ ಮೂಲ ಶಿಲೆ ಅಥವಾ ಭೂಭಾಗವನ್ನು ಕಾಣಲಾಗುವುದಿಲ್ಲ. ಇಲ್ಲಿನ ಜನರ ಆಹಾರ ಟ್ಸಂಬ ಎನ್ನುವ ಬಾರ್ಲಿ ಗಂಜಿ, ಹುಳಿ ಹತ್ತಿಸಿದ ಬೀರ್, ಕಮಟು ವಾಸನೆಯ ಬೆಣ್ಣೆ ಮತ್ತು ಉಪ್ಪು ಮಿಶ್ರಣದ ಟೀ. ಪ್ರಕೃತಿ ವಿಕೋಪ ಇಲ್ಲಿ ಸರ್ವೇ ಸಾಮಾನ್ಯ. ಹೀಗಾಗಿ ಇಲ್ಲಿನ ಮಾನವ ಮತ ಧರ್ಮಗಳ ಮೊರೆ ಹೊಕ್ಕರೆ ಆಶ್ಚರ್ಯವಿಲ್ಲ. ಶಿಲೆ, ಹಿಮ, ಸದಾಬೀಸುವ ಗಾಳಿ ಒಂಟಿತನ–ಇವು ಈ ಭಾವನೆಯನ್ನು ಹೆಚ್ಚಿಸುತ್ತವೆ. ಇಲ್ಲಿ ಸಸ್ಯ ಹಾಗೂ ಪ್ರಾಣಿಸಮೂಹ ವಿರಳ, ಸಸ್ಯ ವರ್ಗ 5157ಮೀಗಳ ವರೆಗೆ ಮಾತ್ರ ಕಂಡು ಬರುತ್ತದೆ, ಅಲ್ಲಿಂದಾಚೆಗೆ ಇಲ್ಲ, ಮಿಡತೆಗಳು 5460ಮೀಗಳ ವರೆಗೂ ನೊಣಗಳು 6643ಮೀ ಗಳವರೆಗೂ ಕಂಡುಬರುತ್ತವೆ. ಎವರೆಸ್ಟ್ ಪರ್ವತಾರೋಹಿಗಳನ್ನು ಅನುಸರಿಸುತ್ತ ಕೆಂಪು ಕಾಲಿನ ಕಾಗೆಗಳು 8190ಮೀಗಳ ವರೆಗೂ ಹೋಗಬಲ್ಲವು. ಅಲ್ಲಿಂದಾಚೆ ನಿರ್ಜೀವ ಹಿಮಾಚ್ಛಾದಿತ ವಸ್ತುಗಳು. (ಕೆ.ಆರ್.ಆರ್.)

**ಎವರೆಸ್ಟ್ ಶಿಖರಾರೋಹಣ:** ಸಾಹಸ ಸಾಧನೆಯ ಪ್ರತೀಕವಾದ ಪರ್ವತಾರೋಹಣದ ಪರಿಮಿತಿಯಾದ ಎವರೆಸ್ಟ್ ಶಿಖರಾರೋಹಣ ಇಡೀ ಮಾನವಕುಲಕ್ಕೆ ಒಂದು ದೊಡ್ಡ ಸವಾಲಾಗಿತ್ತು. ಸುಮಾರು 100ಕ್ಕೂ ಹೆಚ್ಚು ವರ್ಷಗಳ ಸತತ ಪ್ರಯತ್ನವಾಗಿ ಅನೇಕ ಸಾವು–ನೋವುಗಳನ್ನು ಅನುಭವಿಸಿ ಕಡೆಗೂ ಮಾನವನು ಪಡೆದ ಸಾಧನೆ ಅತ್ಯಂತ ಮಿಗಿಲಾದುದು. ಇದರ ಹಿಂದೆ ಒಂದು ದೊಡ್ಡ ಇತಿಹಾಸವೇ ನಡೆದುಹೋಗಿದೆ. ಇದರ ಆಕರ್ಷಣೆ, ಮಾನವನ ಛಲಗಾರಿಕೆಗೆ ನಿದರ್ಶನ: 1923ರಲ್ಲಿ ಶಿಖರಾರೋಹಣದಲ್ಲಿ ಅತ್ಯಂತ ಆಸಕ್ತಿವಹಿಸುತ್ತಿದ್ದ ಜಾರ್ಜ್ ಮಲ್ಲೋರಿಯವರನ್ನು ಪತ್ರಿಕಾ ವರದಿಗಾರನೊಬ್ಬ ಎವರೆಸ್ಟ್‌ನ್ನು ಏಕೆ ಹತ್ತುವಿರಿ? ಎಂದು ಕೇಳಿದ ಪ್ರಶ್ನೆಗೆ ಅವರು ನೀಡಿದ ಉತ್ತರ ಬಿಕಾಸ್ ಇಟ್ ಈಸ್ ದೇರ್ (ಅದು ಅಲ್ಲಿರುವುದರಿಂದ)! ಎಂದಿಗೂ ಮರೆಯಲಾಗದ ಅರ್ಥಗರ್ಭಿತ ವೈಚಾರಿಕವಾದ ಉಕ್ತಿ ಇದಾಯಿತು.

ಭಾರತ ಮತ್ತು ಟಿಬೆಟ್‌ನ ಮಧ್ಯಭಾಗದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಸುಮಾರು 2,400 ಕಿಮೀಗಳು ಉತ್ತರದಿಂದ ದಕ್ಷಿಣಕ್ಕೆ ಸುಮಾರು 400 ಕಿಮೀ ವಿಸ್ತೀರ್ಣದಲ್ಲಿ ಹಬ್ಬಿರುವ ಅತಿ ದೊಡ್ಡ ಪರ್ವತಶ್ರೇಣಿ ಹಿಮಾಲಯ. ಇದರ ಸಾವಿರಾರು ಹಿಮಚ್ಛಾದಿತ ಉನ್ನತ ಶಿಖರಗಳಲ್ಲಿ ಒಂದಾದ ಎವರೆಸ್ಟ್ ಶಿಖರವನ್ನು 1841ರಲ್ಲಿ ಮೊಟ್ಟಮೊದಲಿಗೆ ಗುರುತಿಸಿದವರು ಭಾರತದಲ್ಲಿ ಸೇವೆ ಸಲ್ಲಿಸುತ್ತಿದ್ದ ಬ್ರಿಟಿಷ್ ಸರ್ವೇಯರ್ ಜನರಲ್ ಸರ್ ಜಾರ್ಜ್ ಎವರೆಸ್ಟ್ ಎಂಬುವರು. ಇನ್ನೂ ಹೆಸರಿಸಿಲ್ಲದ ಈ ಶಿಖರವನ್ನು ಪೀಕ್–XV ಎಂದು ಕರೆದರು.

1852ರಲ್ಲಿ ನಡೆಸಿದ ಮಾಪನದಲ್ಲಿ ಇದು ಜಗತ್ತಿನ ಅತ್ಯುನ್ನತ ಶಿಖರವೆಂದು ಪರಿಗಣಿಸಲ್ಪಟ್ಟಿತು. 1856ರ ಹೊತ್ತಿಗೆ ಈ ಶಿಖರದ ಎತ್ತರ 29,002 ಅಡಿಗಳೆಂದು ತೀರ್ಮಾನವಾಯಿತು. ಈ ಕಾರ್ಯದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸರ್ವೇ ಆಫ್ ಇಂಡಿಯಾದ ನಾಥಾಸಿಂಗ್ ಭಾರತೀಯ ನೌಕರನೆಂಬುದು ಹೆಮ್ಮೆಯ ವಿಷಯ. ಪೀಕ್‌ಗಳನ್ನು ಶೋಧಿಸಿದ ಕೀರ್ತಿಗಾಗಿ 1865ರಲ್ಲಿ ಸರ್ ಜಾರ್ಜ್ ಎವರೆಸ್ಟ್‌ರ ಹೆಸರನ್ನೇ ಶಿಖರಕ್ಕೆ ನಾಮಕರಣ ಮಾಡಿ ಮೌಂಟ್ ಎವರೆಸ್ಟ್ ಎಂದು ಕರೆಯಲಾಯಿತು. 1920ರಲ್ಲಿ ಟಿಬೆಟ್‌ನ ದಲಾಯಿ ಲಾಮ ಅವರ ಅನುಮತಿಯನ್ನು ಪಡೆದು ಎವರೆಸ್ಟ್‌ನ ಉತ್ತರ ಭಾಗದ ಪರಿಶೋಧನೆ ಮತ್ತು ಶಿಖರಾರೋಹಣ ಪ್ರಯತ್ನ ಮಾಡಲು ಸರ್ ಫ್ರಾನ್ಸಿಸ್ ಯಂಗ್ ಹಸ್ಬೆಂಡ್ ಅವರ ನೇತೃತ್ವದ ಸಮಿತಿಯೊಂದನ್ನು ರಚಿಸಲಾಯಿತು.

ವಿಶ್ವದ ಎಲ್ಲ ದೇಶಗಳ ಪರ್ವತಾರೋಹಿಗಳ ಗುರಿಯಾಗಿದ್ದ ಎವರೆಸ್ಟ್ ಆರೋಹಣದಲ್ಲಿ ಪ್ರಾರಂಭದಿಂದಲೂ ಬ್ರಿಟಿಷರದು ಮೇಲುಗೈ ಆಗಿತ್ತು. ಇದರ ಫಲವಾಗಿ 1921ರಲ್ಲಿ ಎವರೆಸ್ಟ್ ಶಿಖರಾರೋಹಣದ ಮೊಟ್ಟಮೊದಲ ಸಾಹಸಯಾತ್ರೆ ಕರ್ನಲ್ ಚಾರ್ಲ್ಸ್ ಹೋವಾರ್ಡ್ ಬ್ಯೂರಿ ನಾಯಕತ್ವದ ಬ್ರಿಟಿಷ್ ತಂಡ. ಪ್ರಥಮ ಪ್ರಯತ್ನದಲ್ಲಿಯೇ ತಂಡದ ಗೈ ಬುಲ್ಲಾರ್ ಮತ್ತು ಜಾರ್ಜ್ ಮಲ್ಲೋರಿ 23,000 ಅಡಿಗಳ (7,000 ಮೀ.) ಎತ್ತರದ ಉತ್ತರ ಮೇಲ್ಕಣಿವೆ (ನಾರ್ತ್ ಕೋಲ್)ಯವರೆಗೆ ಆರೋಹಣ ಮಾಡಿ ಶಿಖರದ ತುದಿ ಮುಟ್ಟುವ ಸಾಧ್ಯತೆಯನ್ನು ಕಂಡುಕೊಂಡರು. ಮರುವರ್ಷದಲ್ಲಿಯೇ (1922) ಸಿ ಜಿ ಬ್ರೂಸ್ ನಾಯಕತ್ವದ ತಂಡವು ಹಿಂದಿನ ದಾರಿಯಲ್ಲೇ ಮುಂದುವರೆದು 27,300 ಅಡಿ (8,320 ಮೀ.)ಗಳವರೆಗೆ ಏರಿತು. ಪ್ರಥಮ ಬಾರಿಗೆ ಆಮ್ಲಜನಕವನ್ನು ಬಳಸಲಾಯಿತು. ದುರದೃಷ್ಟವಶಾತ್ ಈ ಸಾಹಸದಲ್ಲಿ ಏಳು ಜನ ಶೆರ್ಪಾಗಳು ನಾರ್ತ್‌ಕೋಲ್‌ನ ಕೆಳಭಾಗದಲ್ಲಿ ಸಂಭವಿಸಿದ ಭೀಕರ ನೀರ್ಗಲ್ಲಿನ ಕುಸಿತದಲ್ಲಿ ಸಿಕ್ಕಿ ಜೀವ ತೆತ್ತರು.

ಮತ್ತೆ 1924ರಲ್ಲಿ 3ನೆಯ ಬ್ರಿಟಿಷ್ ತಂಡ ಸಿದ್ಧವಾಯಿತು. ಜಿ ಬ್ರೂಸ್‌ರ ಅನಾರೋಗ್ಯದ ಕಾರಣ ನೇತೃತ್ವವನ್ನು ಜಾರ್ಜ್ ಮಲ್ಲೊರಿ ವಹಿಸಿಕೊಂಡರು. ಇದಲ್ಲದೆ ತಂಡಕ್ಕೆ ಹೊಸ ಸದಸ್ಯರುಗಳಾಗಿ ನೋಯೆಲ್ ಇ ಓಡೆಲ್ ಮತ್ತು ಆ್ಯಂಡ್ರ್ಯೂ ಇರ್ವಿನ್ ಸೇರಿಕೊಂಡರು. ತಂಡದ ಎಡ್ವರ್ಡ್ ನಾರ್ಟನ್ ಮತ್ತು ಹೊವಾರ್ಡ್ ಸೋಮರ್‌ವೆಲ್ ಆಮ್ಲಜನಕವಿಲ್ಲದೆ ಆರೋಹಣ ನಡೆಸಿ, 28,126 ಅಡಿ (8,570 ಮೀ.) ಎತ್ತರವನ್ನು ತಲುಪಿದರು. ಮುಂದಿನ 29 ವರ್ಷಗಳವರೆಗೆ ಯಾರೂ ತಲಪಲಾಗದಿದ್ದ ಎತ್ತರ ಅದಾಗಿತ್ತು. ಆರೋಹಣದ ಮರು ಪ್ರಯತ್ನದಲ್ಲಿ ಜಾರ್ಜ್ ಮಲ್ಲೊರಿ ಮತ್ತು ಆ್ಯಂಡ್ರ್ಯೂ ಇರ್ವಿನ್ ಆಮ್ಲಜನಕ ಸಲಕರಣೆಯೊಂದಿಗೆ ಬಹಳ ಎತ್ತರಕ್ಕೇರಿದರು.

ಆಕಾಶದಲ್ಲಿ ಎರಡು ಚುಕ್ಕಿಗಳಂತಿದ್ದ ಇವರನ್ನು ನೋಯೆಲ್ ಓಡೆಲ್ ಕಂಡಿದ್ದರು. ನಂತರ ಕವಿದ ಮಂಜಿನಿಂದ ಮುಂದೇನಾಯಿತೆಂದು ತಿಳಿಯಲೇ ಇಲ್ಲ. ಇವರು ವಾಪಸಾಗಲಿಲ್ಲ. ಈ ಇಬ್ಬರು ಪರ್ವತಾರೋಹಿಗಳು ಎವರೆಸ್ಟ್ ತುದಿ ತಲುಪಿದರು ಎಂದು ಕೆಲವರೆಂದರೆ ತುದಿ ಸೇರುವ ಮೊದಲೇ ಇವರುಗಳು ಸಾವಿಗೀಡಾಗಿರಬಹುದೆಂದು ಕೆಲವರು ಶಂಕಿಸುತ್ತಾರೆ. ಪರ್ವತಾರೋಹಣದಲ್ಲಿ ಆಧಾರಗಳೇ ಪ್ರಮುಖವಾಗಿರುವುದರಿಂದ ಮತ್ತು ಈ ಪರ್ವತಾರೋಹಿಗಳು ತುದಿ ಮುಟ್ಟಿದ ಸೂಚನೆಗಳಿಲ್ಲದುದರಿಂದ ಇವರು ಶಿಖರಾರೋಹಣ ಮಾಡಿರುವರೆಂಬುದು ನಿರ್ಧಾರವಾಗಿಲ್ಲ. ಆನಂತರ 1933ರಲ್ಲಿ ಆ್ಯಂಡ್ರ್ಯೂ ಇರ್ವಿನ್‌ರ (ಐಸ್‌ಏಕ್ಸ್) ಹಿಮಗೊಡಲಿಯನ್ನು ಸುಮಾರು 27,700 ಅಡಿ (8,440 ಮೀ.) ಎತ್ತರದಲ್ಲಿ ಪತ್ತೆ ಮಾಡಲಾಯಿತು. ಇತ್ತೀಚೆಗೆ 1999ರ ಸಂಶೋಧನಾ ತಂಡವು ಮಲ್ಲೊರಿಯವರ ದೇಹವನ್ನು 26,750 ಅಡಿ (8155 ಮೀ.) ಎತ್ತರದಲ್ಲಿ ಪತ್ತೆ ಮಾಡಿದರು. ಈ ದುರಂತಗಳಿಂದ ಬೇಸರಗೊಂಡಿದ್ದ ದಲಾಯಿ ಲಾಮ ಅವರು ಟಿಬೆಟ್ ಮೂಲಕ ಶಿಖರಾರೋಹಣ ಪ್ರಯತ್ನಗಳಿಗೆ ತಡೆಹಾಕಿದರು. ಆದರೂ 9 ವರ್ಷಗಳ ನಂತರ ತಂಡಗಳ ಅತೀವ ಬೇಡಿಕೆಗಳಿಗೆ ಮಣಿದು ಮತ್ತೆ ಪ್ರಯತ್ನಕ್ಕೆ ಅನುಮತಿ ನೀಡಲಾಯಿತು. 1933ರ ನಾಲ್ಕನೆಯ ಬ್ರಿಟಿಷ್ ತಂಡವು ಹ್ಯೂ ರಟ್ಲೆಡ್ಜ್‌ರ ನೇತೃತ್ವದಲ್ಲಿ ದಿಟ್ಟ ಪ್ರಯತ್ನವನ್ನು ನಡೆಸುವ ಮೂಲಕ, ತಂಡದ ವಿನ್ ಹ್ಯಾರಿಸ್ ಮತ್ತು ಎಲ್ ಆರ್ ವೇಜರ್ ಇದುವರೆಗೂ ತಲಪಿದ್ದ ಅತಿ ಎತ್ತರದ ಜಾಗವನ್ನು ತಲಪಿದರೂ, ಮೇಲ್ಭಾಗದಲ್ಲಿ ಎದುರಾದ ದುರ್ಗಮ ಪ್ರದೇಶವನ್ನು ದಾಟಲಾಗದೆ ಹಿಂದಿರುಗಬೇಕಾಯಿತು. 1935ರ ಬ್ರಿಟಿಷರ ಐದನೆಯ ತಂಡದ ನಾಯಕ ಎರಿಕ್ ಷಿಪ್ಟನ್. ಕಿರಿವಯಸ್ಸಿನ ಹೊರೆಯಾಳಾಗಿ ಬಂದ ತೇನ್‌ಸಿಂಗ್‌ರ ಮೊದಲನೆಯ ತಂಡವೂ ಇದಾಗಿತ್ತು. ಮಳೆಗಾಲದ ನಂತರ ಮಾಡಿದ ಈ ಪ್ರಯತ್ನವು ಅತೀವ ಹಿಮಪಾತದಿಂದ ವಿಫಲವಾಯಿತು.

1936ರ ಆರನೆಯ ಪ್ರಯತ್ನವೂ ಸಹ ಇದೇ ರೀತಿ ವಿಫಲಗೊಂಡಿತು. 1938ರಲ್ಲಿ ತಂಡದ ನಾಯಕ ಬಿಲ್ ಟಿಲ್‌ಮ್ಯಾನ್ ಹಾಗೂ ತೇನ್‌ಸಿಂಗ್ ಸೇರಿದಂತೆ ಏಳು ಜನರ ತಂಡವು 27,900 ಅಡಿ (8,290 ಮೀ.)ವರೆಗೆ ಏರಲು ಮಾತ್ರ ಸಾಧ್ಯವಾಯಿತು. ಈ ಸಮಯಕ್ಕೆ ಎರಡನೆಯ ಮಹಾಯುದ್ಧ ಪ್ರಾರಂಭವಾಗಿ ಮುಂದಿನ 12 ವರ್ಷಗಳ ವರೆಗೆ ಎವರೆಸ್ಟ್ ಪ್ರಯತ್ನಗಳನ್ನು ಕೈ ಬಿಡಬೇಕಾಗಿ ಬಂದಿತು. 1950ರಲ್ಲಿ ಟಿಬೆಟ್‌ನ್ನು ಆಕ್ರಮಿಸಿದ ಚೀನಿಯರು ಶಿಖರದ ಉತ್ತರದ ಕಡೆಯಿಂದ ಪ್ರವೇಶ ನಿಷೇಧ ಮಾಡಿದರು. ಆದರೆ ದಕ್ಷಿಣದಿಂದ ಎವರೆಸ್ಟ್ ಏರುವ ತಂಡಗಳಿಗೆ ನೇಪಾಲ ಸರಕಾರ ಅನುಮತಿ ನೀಡಿತು. 1950 ಬ್ರಿಟಿಷ್ ಮತ್ತು ಅಮೆರಿಕೆಯ ಜಂಟಿ ತಂಡವೊಂದು ಪ್ರಯತ್ನ

ನಡೆಸಿ ಕುಂಭು ಹಿಮನದಿಯವರೆಗೆ ತಲಪಲು ಸಾಧ್ಯವಾಯಿತು. 1951ರಲ್ಲಿ ಎರಿಕ್ ಷಿಪ್ಟನ್‌ರ ಮುಂದಾಳ್ವಿಕೆಯ ತಂಡವು ಕುಂಭು ಹಿಮನದಿಯನ್ನು ಭೇದಿಸುವ ಪ್ರಯತ್ನ ಮಾಡಿ ಹಿಂತಿರುಗಿತು. ಈ ತಂಡಕ್ಕೆ ಮೊದಲಬಾರಿಗೆ ಸೇರಿದವರು ನ್ಯೂಜಿಲ್ಯಾಂಡ್‌ನ ಎಡ್ಮಂಡ್ ಹಿಲೇರಿ.

ಎವರೆಸ್ಟ್ ವಿಜಯ ಸಾಧನೆಯ ಓಟದಲ್ಲಿ ಬ್ರಿಟಿಷರನ್ನು ಹಿಂದೆ ಹಾಕಲು ಹಾತೊರೆಯುತ್ತಿದ್ದ ಸ್ವಿಸ್ (ಸ್ವಿಟ್ಜರ್ಲೆಂಡ್) ತಂಡಗಳು 1952ರಲ್ಲಿ ದಿಟ್ಟ ಪ್ರಯತ್ನವನ್ನು ಮಾಡಿದುವು. ವಸಂತಕಾಲದ ಮೊದಲ ಪ್ರಯತ್ನದಲ್ಲಿ ಈ ವಿನ್ ಡ್ಯೂನಾಂಟ್ ನೇತೃತ್ವದ ತಂಡವು ಕುಂಭು ಹಿಮನದಿಯನ್ನು ಸಫಲವಾಗಿ ಭೇದಿಸಿ, ದಕ್ಷಿಣ ಪೂರ್ವದ ದಾರಿಯನ್ನು ಮಾಡಿ 27,550 ಅಡಿ (8,382 ಮೀ.) ಎತ್ತರದಲ್ಲಿ 7ನೆಯ ಶಿಬಿರವನ್ನು ಸ್ಥಾಪಿಸಿತು. ಹೊರೆಯಾಳುಗಳ ನಾಯಕ (ಸರದಾರ) ತೇನ್‌ಸಿಂಗ್ ಮತ್ತು ರೇಮಂಡ್ ಲ್ಯಾಂಬರ್ಟ್ ಆಮ್ಲಜನಕದ ಉಪಕರಣದೊಂದಿಗೆ ಎವರೆಸ್ಟ್‌ನ ದಕ್ಷಿಣ ಶಿಖರದ ಕೆಳಭಾಗದಲ್ಲಿ 28,210 ಅಡಿ (8,595 ಮೀ.) ವರೆಗೆ ಏರಿ ಹಿಂದಿರುಗಿದರು. ಅದೇ ವರ್ಷದ ಮಳೆಗಾಲದ ನಂತರ ಹೊರಟ ಜಿ ಚಿವಾಲ್ಲೆ ನಾಯಕತ್ವದ ಸ್ವಿಸ್ ತಂಡ ಲೊಟ್ಸೆ ಶಿಖರದ ಏರಿನ ಮೇಲೆ ಆರೋಹಣ ಮಾಡಿತು. ನೀರ್ಗಲ್ಲು ಕುಸಿತದಲ್ಲಿ ಶೆರ್ಪಾ ಮಿಂಗ್ಮಾ ದೋರ್ಜಿಯ ಸಾವಿನಿಂದಲೂ, ಹಗ್ಗ ಸಡಿಲಗೊಂಡು ತಂಡವು ಸುಮಾರು 600 ಅಡಿಗಳ ಕೆಳಗೆ ಉರುಳಿದರಿಂದಲೂ ತಂಡವು ಹಿಮ್ಮೆಟ್ಟಬೇಕಾಯಿತಾದರೂ ಈ ತಂಡ ತೆರೆದ ಮಾರ್ಗವೇ ಮುಂದಿನ ವರ್ಷಗಳಲ್ಲಿ ಯಶಸ್ವಿಯಾದ ದಾರಿಯಾಯಿತು. ಇಂದಿಗೂ ಇದು ಬಹಳಷ್ಟು ತಂಡಗಳು ಬಳಸುವ ಮಾರ್ಗ.

1953 ಎವರೆಸ್ಟ್ ವಿಜಯದ ವರ್ಷ. ಮತ್ತೆ ಪ್ರಯತ್ನಕ್ಕಿಳಿದ ಕರ್ನಲ್ ಜಾನ್ ಹಂಟ್ ನಾಯಕತ್ವದ ಬ್ರಿಟಿಷ್ ತಂಡ ಸ್ವಿಸ್ ತಂಡವು ಸ್ಥಾಪಿಸಿದ್ದ ಮಾರ್ಗವಾಗಿ ಮುಂದುವರೆದು ದಕ್ಷಿಣ ಮೇಲ್ಕಣಿವೆಯನ್ನು (ಸೌತ್‌ಕೋಲ್) ತಲುಪಿತು. ಇಲ್ಲಿಂದ ಶಿಖರದ ತುದಿಗೇರಲು ಇಬ್ಬಿಬ್ಬರ ತಂಡಗಳನ್ನು ಮಾಡಲಾಗಿ, ಮೇ 26ರಂದು ಮೊದಲಿಗೆ ಹೊರಟ ಆರ್ ಸಿ ಈವಾನ್ಸ್ ಮತ್ತು ಟಿ ಬೋರ್ಡಿಲಾನ್ ಜೋಡಿ ದಕ್ಷಿಣ ಶಿಖರವನ್ನು ಮಧ್ಯಾಹ್ನ ಒಂದು ಘಂಟೆಯ ಹೊತ್ತಿಗೆ ಸೇರಿತು. ಆದರೆ, ಆಮ್ಲಜನಕದ ಕೊರತೆ ಹಾಗೂ ಅಂದು ಮಧ್ಯಾಹ್ನ ಪ್ರಾರಂಭವಾದ ಬಿರುಗಾಳಿಯಿಂದಾಗಿ ಹಿಂತಿರುಗಬೇಕಾಯಿತು. ಇದರ ಫಲವಾಗಿ, ಎರಡನೆಯ ಜೋಡಿ ಹಿಲೇರಿ ಮತ್ತು ತೇನ್‌ಸಿಂಗ್ ಅವರಿಗೆ ಎವರೆಸ್ಟ್ ತುದಿ ಮುಟ್ಟುವ ಪ್ರಯತ್ನದ ಸುವರ್ಣಾವಕಾಶ ಒದಗಿತು. 29ರಂದು ಮುಂಜಾನೆಯೇ ಹೊರಟ ಇವರು 9 ಘಂಟೆಗೆ ದಕ್ಷಿಣ ಶಿಖರವನ್ನು ತಲುಪಿ, 40 ಅಡಿ ಎತ್ತರದ (ಈಗ ಹಿಲೇರಿ ಸ್ಟೆಪ್ ಎಂದು ನಾಮಾಂಕಿತವಾಗಿರುವ) ಬಂಡೆಯನ್ನು ಏರಿ, ಬೆಳಗಿನ 11.30 ಘಂಟೆಗೆ ಎವರೆಸ್ಟ್ ಶಿಖರದ ತುದಿಯನ್ನು ತಲುಪಿ ವಿಜಯದ ಕಹಳೆಯನ್ನೂದಿದರು. ಕಾಕತಾಳೀಯ ಎಂಬಂತೆ ಎವರೆಸ್ಟ್‌ನ್ನು ಶೋಧಿಸಿದ 100 ವರ್ಷಗಳಿಗೆ ಸರಿಯಾಗಿ ಶಿಖರವನ್ನೇರಿದ ವಿಶ್ವದ ಮೊದಲಿಗರಾದ ಎಡ್ಮಂಡ್ ಹಿಲೇರಿ ಮತ್ತು ತೇನ್‌ಸಿಂಗ್ ನಾರ್ಗ್ಸೆ ಇಡೀ ಮಾನವಕುಲವೇ ಹೆಮ್ಮೆಪಡುವಂತಹ ಸಾಧನೆ ಮಾಡಿದರು. ಪ್ರಸ್ತುತ ಕಾಲದಲ್ಲಿ ಲಭ್ಯವಿರುವ ಯಾವ ವಿಶೇಷ ಉಪಕರಣಗಳಿಲ್ಲದೆ, ಜೀವವನ್ನೇ ಪಣತೊಟ್ಟು ಉನ್ನತ ಸಾಧನೆಗೈದ ಈ ವೀರರ ಹೆಸರುಗಳು ಸುವರ್ಣಾಕ್ಷರಗಳಲ್ಲಿ ಬರೆಯುವಂತಹವು. ಹಿಲೇರಿಯವರಿಗೆ ಸರ್ ಬಿರುದು ನೀಡಿ ಗೌರವಿಸಲಾಯಿತು. ಪರ್ವತಾರೋಹಣವು ಬೆಳೆದಂತೆ, ಮುಂದಿನ ದಶಕಗಳಲ್ಲಿ ವಿಶ್ವದ ವಿವಿಧ ದೇಶಗಳ ತಂಡಗಳು ಶಿಖರಾರೋಹಣವನ್ನು ನಡೆಸುತ್ತಾ ಬಂದು ಈವರೆಗೆ ಸುಮಾರು 2,800ಕ್ಕೂ ಹೆಚ್ಚು ಪರ್ವತಾರೋಹಿಗಳು ಶಿಖರವನ್ನು ಏರಿದ್ದರೆ, ಈ ಸಾಹಸದಲ್ಲಿ ಅಸು ನೀಗಿದವರು 180ಕ್ಕೂ ಹೆಚ್ಚು. ಎವರೆಸ್ಟ್ ಏರಲು ಮುಖ್ಯವಾಗಿ ನಾರ್ತ್‌ಕೋಲ್ ಮತ್ತು ಸೌತ್‌ಕೋಲ್ ಮಾರ್ಗಗಳಾಗಿದ್ದರೂ, ಒಟ್ಟು 15 ಕಡೆಯಿಂದ ಶಿಖರಾರೋಹಣ ಮಾಡಲಾಗಿದೆ. ಅನೇಕ ದಾಖಲೆಗಳೂ ಸ್ಥಾಪಿತವಾಗಿವೆ (ದಾಖಲೆಗಳನ್ನು ನೋಡಿ).

ತೇನ್‌ಸಿಂಗ್‌ರ ಸಾಹಸದ ಅನಂತರ 1957ರಲ್ಲಿ ಭಾರತೀಯ ತಂಡವು ಆರನೆಯ ಉನ್ನತ ಪರ್ವತವಾದ ಚೋ ಓಯು ವನ್ನು ಏರಿದ ಹಿನ್ನೆಲೆಯಲ್ಲಿ ಭಾರತೀಯ ಪರ್ವತಾರೋಹಣ ಸಂಸ್ಥೆ (ಇಂಡಿಯನ್ ಮೌಂಟನಿಯರಿಂಗ್ ಫೌಂಡೇಷನ್) ನವದೆಹಲಿಯಲ್ಲಿ ಸ್ಥಾಪಿತವಾಯಿತು. 1960ರಲ್ಲಿ ಬ್ರಿಗೇಡಿಯರ್ ಗ್ಯಾನ್‌ಸಿಂಗ್ ನೇತೃತ್ವದ ಮೊದಲನೆಯ ಭಾರತೀಯ ತಂಡವು ಎವರೆಸ್ಟ್ ಆರೋಹಣ ಪ್ರಯತ್ನಿಸಿತು. ಶಿಖರವು ಕೇವಲ 700 ಅಡಿ ದೂರವಿದ್ದಾಗ, ಪ್ರತಿಕೂಲ ಹವಾಮಾನದಿಂದ ಹಿಂತಿರುಗಿತು. 1962ರಲ್ಲಿಯೇ ಮೇಜರ್ ಜಾನ್ ಡಯಾಸ್ ನಾಯಕತ್ವದ ತಂಡವು ಶಿಖರದ 400 ಅಡಿ ಕೆಳಭಾಗದವರೆಗೆ ಏರಿ ಹಿಂತಿರುಗಿದರು. ಕೊನೆಗೆ 1965ರಲ್ಲಿ ಕಮ್ಯಾಂಡರ್ ಎಂ ಎಸ್ ಕೊಹ್ಲಿಯವರ ನಾಯಕತ್ವದಲ್ಲಿ 9 ಭಾರತೀಯರು ವಿಜಯಿಗಳಾದರು. ಇವರಲ್ಲೊಬ್ಬರಾದ ನವಾಂಗ್ ಗೊಂಬು 1963ರಲ್ಲಿ ಅಮೆರಿಕನ್ನರ ತಂಡದೊಡನೆ ಒಮ್ಮೆ ಶಿಖರವೇರಿದ್ದು, ಎವರೆಸ್ಟ್‌ನ್ನು ಎರಡು ಬಾರಿಗೆ ಏರಿದ ವಿಶ್ವದ ಮೊದಲನೆಯ ಪರ್ವತಾರೋಹಿಯಾದರು. ಮುಂದೆ 1984ರಲ್ಲಿ ಮಹಿಳಾ ತಂಡದ ಬಚ್ಚೇಂದ್ರಿಪಾಲ್ ಎವರೆಸ್ಟ್ ಏರಿದ ಭಾರತದ ಪ್ರಥಮ ಮಹಿಳೆಯಾದರು.

ಇಷ್ಟೆಲ್ಲಾ ಸಾಧನೆಗಳಾದರೂ, ಎವರೆಸ್ಟ್‌ನ್ನು ಎಂದಿಗೂ ಯಾರಿಗೂ ಗೆದ್ದೆನೆಂಬ ಭಾವನೆ ಸಲ್ಲದು. ದೈವಸ್ವರೂಪವಾದ ಆ ತಾಯಿ ಮುಗ್ಧಮನಸ್ಸಿನಿಂದ ಗೌರವಿಸಿ ಬಂದ ಪರ್ವತಾರೋಹಿಗಳನ್ನು ತನ್ನ ಮಡಿಲಿಗೆ ಕರೆಯುತ್ತಾಳೆ, ಬರಮಾಡಿಕೊಳ್ಳುತ್ತಾಳೆ. ಪ್ರಕೃತಿಯ ಸೃಷ್ಟಿಯ ಅನಂತಾನಂತತೆಯಲ್ಲಿ ಮಾನವ ಕೇವಲ ಒಂದು ಬಿಂದುವಿನಂತೆ.

**ಎವರೆಸ್ಟ್ ದಾಖಲೆಗಳು**

1953 ತೇನ್‌ಸಿಂಗ್ ನಾರ್ಗ್ಸೆ ಮತ್ತು ಸರ್ ಎಡ್ಮಂಡ್ ಹಿಲೇರಿ ಶಿಖರವನ್ನೇರಿದ ಮೊದಲ ಪರ್ವತಾರೋಹಿಗಳು.

1960 ಚೀನೀಯರ ತಂಡವು ಉತ್ತರದಿಂದ ಶಿಖರವನ್ನೇರಿದ ಮೊದಲಿಗರು.

1965 ಭಾರತೀಯ ನವಾಂಗ್ ಗೊಂಬು ಎರಡು ಬಾರಿ ಶಿಖರವನ್ನೇರಿದ ಮೊದಲಿಗರಾದರು.

1975 ಜಪಾನ್ ದೇಶದ ಜಂಕೋ ಟೇಬೀ ಶಿಖರವನ್ನೇರಿದ ಪ್ರಥಮ ಮಹಿಳೆ.

1980 ರೀನ್‌ಹೋಲ್ಡ್ ಮೆಸ್ನರ್ ಒಂಟಿಯಾಗಿ ಶಿಖರವೇರಿದ ಮೊದಲಿಗ.

1984 ಶಿಖರವೇರಿದ ಪ್ರಥಮ ಭಾರತೀಯ ಮಹಿಳೆ ಬಚ್ಚೇಂದ್ರಿ ಪಾಲ್.

1988 ನ್ಯೂಜಿಲ್ಯಾಂಡ್‌ನ ಲಿಡಿಯಾ ಬ್ರ್ಯಾಡಿ ಆಮ್ಲಜನಕವಿಲ್ಲದೆ ಏರಿದ ಪ್ರಥಮ ಮಹಿಳೆ.

1999 ಬಾಬು ಚಿರಿ ಶೆರ್ಪಾ ಶಿಖರದ ಮೇಲೆ ರಾತ್ರಿ ಕಳೆದ ಏಕೈಕ ಪರ್ವತಾರೋಹಿ.

2001 ಅಮೆರಿಕದ ಎರಿಕ್ ವೀಹೆನ್ ಮೈಯರ್ ಶಿಖರವೇರಿದ ಮೊದಲನೆಯ ಅಂಧಪರ್ವತಾರೋಹಿ.

2002 ಶಾಮ ವಾಕಾನಬೆ (64ರ ಹರೆಯದ) ಶಿಖರವೇರಿದ ಅತ್ಯಂತ ಹಿರಿಯ ಮಹಿಳೆ.

2003 70ರ ಹರೆಯದ ಯೂಶಿರೋ ಮಿಯೂರಾ ಶಿಖರವೇರಿದ ಅತ್ಯಂತ ಹಿರಿಯ ವ್ಯಕ್ತಿ

2003 ಅಮೆರಿಕದ ಗ್ಯಾರಿ ಗಲ್ಲರ್ ಶಿಖರವೇರಿದ ಒಂದು ಕೈಯಿಲ್ಲದ ಪರ್ವತಾರೋಹಿ.

2003 ನೇಪಾಲದ ಲಕ್ಪಾ ಗೇಲು ಶೆರ್ಪಾ ಅತ್ಯಂತ ವೇಗವಾಗಿ ಶಿಖರವನ್ನೇರಿದವರು(ಸಮಯ 10ಘ, 56ನಿ, 46ಸೆ.)

2003 ಅಮೆರಿಕದ ಜೆಸ್ ರೋಸ್ಕೆಲ್ಲಿ ಶಿಖರವೇರಿದ ಅತಿ ಕಿರಿಯ.

2003 ನೇಪಾಲದ ಅಪಾ ಶೆರ್ಪಾ ಅತಿ ಹೆಚ್ಚು ಬಾರಿ ಶಿಖರವೇರಿದವ. (ಈವರೆಗೆ 13 ಬಾರಿ)

ವಿಶ್ವದ 8,000 ಮೀ.ಗಿಂತ ಎತ್ತರದ 14 ಶಿಖರಗಳನ್ನು ಏರಿದ ಮೊದಲಿಗ ರೀನ್‌ಹೋಲ್ಡ್ ಮೆಸ್ನರ್.

ಅನಂತರದ ಕೆಲವು ಎವರೆಸ್ಟ್ ಆರೋಹಣದ ದಾಖಲೆಗಳೆಂದರೆ,

ನೇಪಾಳದ ಅಪಾ ಶೆರ್ಪಾ 2002–2011ರ ಅವಧಿಯಲ್ಲಿ ವರ್ಷ ಬಿಟ್ಟು ವರ್ಷದಂತೆ 10 ಬಾರಿ ಎವರೆಸ್ಟ್ ಶಿಖರವನ್ನು ಏರಿದ್ದಾನೆ.

ನೇಪಾಳದ ಪೆಮ್ ದೋರ್ಕಿ ತಳಭಾಗದ ಕ್ಯಾಂಪ್ ಸ್ಥಳದಿಂದ ಮೇ 21, 2004ರಂದು ಅತ್ಯಂತ ವೇಗವಾಗಿ, ಅಂದರೆ ಕೇವಲ ಎರಡು ಗಂಟೆ ಹತ್ತು ನಿಮಿಷಗಳ ಅವಧಿಯಲ್ಲಿ ಎವರೆಸ್ಟ್ ಏರಿದ್ದಾನೆ.

ಮೇ 22, 2010ರಂದು ಎವರೆಸ್ಟ್ ಏರಿದ ಸುಮಾರು 13 ವರ್ಷಗಳ ಅಮೆರಿಕೆಯ ಜೊರ್ಡಾನ್ ರೋಮೆರೊ ಈ ಶಿಖರವನ್ನು ಹತ್ತಿದ ಅತ್ಯಂತ ಕಿರಿಯ ವಯಸ್ಸಿನವನು.

ಮೇ 23, 2013ರಂದು ಎವರೆಸ್ಟ್ ಹತ್ತಿದ ಜಪಾನಿನ ಯೂಚಿರೊ ಮಿಯೂರಾ ಈ ಸಾಹಸವನ್ನು ಮೆರೆದ ಅತಿ ಹೆಚ್ಚು ವಯಸ್ಸಿನವನು.

ಮೇ 25, 2014ರಂದು ಎವರೆಸ್ಟ್ ಏರಿ ಭಾರತದ 13 ವಯಸ್ಸಿನ ಹದಿಹರೆಯದ ಮಲವತ್ ಪೂರ್ಣ ಈ ಸಾಹಸಕ್ಕೆ ಕೈಹಾಕಿದ ಅತ್ಯಂತ ಕಡಿಮೆ ವಯಸ್ಸಿನ ಬಾಲಕಿ.

ಏಪ್ರಿಲ್ 21, 2013ರಂದು ಅಮೆರಿಕೆಯ ಲಿಜಿ ಹಾಕರ್ ಎವರೆಸ್ಟಿನ ತಳಮಟ್ಟದಿಂದ ಅತ್ಯಂತ ವೇಗವಾಗಿ, ಅಂದರೆ ಸುಮಾರು 63 ಗಂಟೆಗಳಲ್ಲೇ ಕೆ.ಟಿ.ಎಮ್.ಗೆ ಓಡಿದ ಮೊದಲ ವ್ಯಕ್ತಿ.

2007 ವರ್ಷವೊಂದರಲ್ಲೇ ಈ ಮಾಹಾಶಿರವನ್ನು ವಿವಿಧ ವ್ಯಕ್ತಿಗಳು ಏಳು ಬಾರಿ ಏರಿದ್ದಾರೆ. (ಬಿ.ವಿ.ಪಿ.)

**ಎವೆಯೂತ:** ಕೆಲವು ಸಸ್ಯಗಳಲ್ಲಿ, ಅದರಲ್ಲೂ ಬೀಜೋತ್ಪತ್ತಿಯುಳ್ಳವುಗಳಲ್ಲಿ, ಆಗುವ ತರುವಾಯದ (ಸೆಕಂಡರಿ) ಬೆಳೆವಣಿಗೆಯಲ್ಲಿ ಸಸ್ಯದ ವಿವಿಧ ಭಾಗಗಳಿಗೆ ನೀರನ್ನೊದಗಿಸುವ ಕ್ಸೈಲಂ ಪೇರೆಂಖೈಮ ಜೀವಕೋಶಗಳಲ್ಲುಂಟಾಗುವ ಊತಗಳು (ಟೈಲೋಸಿಸ್). ಈ ಊತಗಳು ಟ್ರೇಕಿಯ ಜೀವಕೋಶದ ಬಹುಪಾಲು ಭಾಗವನ್ನು ಆಕ್ರಮಿಸಿಕೊಂಡು ನೀರು ಮತ್ತು ಇತರ ಲವಣಾಂಶಗಳ ವಹನವನ್ನು ತಡೆಯುತ್ತವೆ. ಸಾಮಾನ್ಯವಾಗಿ ಇವು ಅನುಷಂಗಿಕ ಕ್ಸೈಲಂನಲ್ಲಿ ಕಂಡುಬರುತ್ತವೆ. ಕ್ಸೈಲಂ ಪೇರೆಂಖೈಮ ಜೀವಕೋಶದ ಕಣಬೀಜ ಹಾಗೂ ಇತರ ವಸ್ತುಗಳು ಈ ಊತದೊಳಕ್ಕೆ ಹರಿದುಹೋಗುತ್ತವೆ. ಎವೆಯೂತದ ಗೋಡೆ ತುಂಬ ತೆಳುವಾಗಿದ್ದು ಮೃದುವಾಗಿರುತ್ತದೆ; ದಪ್ಪನಾಗಿರುವುದು ಅಪರೂಪ. ಸಾಮಾನ್ಯವಾಗಿ ಹೂ ಬಿಡುವ ಸಸ್ಯಗಳಲ್ಲಿ ಬಣ್ಣವಿರುವ ಜೇಗುಭಾಗದಲ್ಲಿ ಇಂಥ ಊತಗಳು ಕಂಡು ಬರುತ್ತವೆ. ಇದರಿಂದಾಗಿ ವಯಸ್ಸು ಹೆಚ್ಚಿದಂತೆಲ್ಲ ಮರದ ವಿವಿಧ ಭಾಗಗಳ ಸುತ್ತಳತೆ ದೊಡ್ಡದಾಗುತ್ತ ಹೋಗುತ್ತದೆ. (ಬಿ.ಪಿ.)

**ಎಸೆತಗಳು:** ದೈಹಿಕ ಚಟುವಟಿಕೆಗಳಲ್ಲಿ ಒಂದು ಪ್ರಮುಖ ವಿಭಾಗ, ಎಸೆತಗಳಲ್ಲಿ ಗುಂಡು ಎಸೆತ, ಸರಪಳಿಯ ಗುಂಡು ಎಸೆತ, ತಟ್ಟೆ ಎಸೆತ ಮತ್ತು ಭರ್ಜಿ ಎಸೆತ ಎಂಬ ಭಾಗಗಳಿವೆ.

ಈ ಪಂದ್ಯಗಳಿಗೆ ಯೋಗ್ಯವಾದ ಗಾತ್ರ ಮತ್ತು ತೂಕವುಳ್ಳ ಗುಂಡುಗಳನ್ನೂ ದಪ್ಪ ಮತ್ತು ಉದ್ದವುಳ್ಳ ಭರ್ಜಿಗಳನ್ನೂ ಸಿದ್ಧಮಾಡಿರುತ್ತಾರಲ್ಲದೆ ಅನೇಕ ಅಂತಾರಾಷ್ಟ್ರೀಯ ನಿಯಮಾವಳಿಗಳನ್ನೂ ಮಾಡಿದ್ದಾರೆ. ಹಿಂದಿನ ಕಾಲದಲ್ಲಿ ಕಲ್ಲುಗುಂಡುಗಳನ್ನು ಎಸೆಯುವುದು ಒಂದು ಆಟವಾಗಿತ್ತು. ಭರ್ಜಿಯನ್ನು ಆಟಕ್ಕೂ ಬೇಟೆಗೂ ದೂರದಿಂದ ಎಸೆಯುತ್ತಿದ್ದರು.

ತಟ್ಟೆ ಎಸೆತ

**ಗುಂಡು ಎಸೆತ:** ಒಂದು ವೃತ್ತದೊಳಗೆ ನಿಂತು ಗುಂಡನ್ನು ಎಸೆಯಬೇಕು. ಈ ವೃತ್ತ 2,135 ಮೀ. ಅಥವಾ 7' ಸುತ್ತಳತೆದಾಗಿರುತ್ತದೆ. ಸುತ್ತಳತೆಯ ಮುಂಭಾಗದಲ್ಲಿ ಕಾಲ್ ತಡೆಯ ಫಲಕ(ಬೋರ್ಡ್) ಇರುತ್ತದೆ. ಗುಂಡಿನ ತೂಕ ಪುರುಷರಿಗಾದರೆ 16 ಪೌಂಡು: ಸ್ತ್ರೀಯರಿಗಾದರೆ 8 ಪೌಂಡು 13 ಔನ್ಸ್. ಸುತ್ತಳತೆ ಪುರುಷರಿಗೆ 110–130 ಮಿ.ಮೀ: ಸ್ತ್ರೀಯರಿಗೆ 95–110 ಮಿ.ಮೀ. ಗುಂಡನ್ನು ಒಂದೇ ಕೈಯಲ್ಲಿ ಹಿಡಿದು ಭುಜದ ಮೇಲ್ಭಾಗದಿಂದ ಎಸೆಯಬೇಕು. ಎಸೆಯುವಾಗ ಕೈ ಭುಜಕ್ಕಿಂತ ಕೆಳಗಿಳಿಯಬಾರದು, ಮೊಣಕೈ ಭುಜದ ಹಿಂಭಾಗಕ್ಕೆ ಬರಬಾರದು. ಎಸೆದ ಅನಂತರ ವೃತ್ತದ ಹಿಂಭಾಗದ ಅರ್ಧದಿಂದ ಹೊರಗೆ ಬರಬೇಕು. ಎಸೆದ ಗುಂಡು ಗೊತ್ತಾದ ಅವಕಾಶದೊಳಕ್ಕೆ ಬೀಳಬೇಕು. ಎಸೆಯುವಾಗ ಕೈ ಮತ್ತು ನೆಲದ ನಡುವಿನ ಕೋನ $45^0$ ಇರಬೇಕು. ಗುಂಡನ್ನು ತೀರ ಎತ್ತರ ಒಗೆಯಬಾರದು. ಒಗೆದ ಮೇಲೆ ವೃತ್ತದ ಹೊರಭಾಗವನ್ನು ಮುಟ್ಟಬಾರದು.

**ಸರಪಳಿಯ ಗುಂಡು:** ಇಲ್ಲೂ ವೃತ್ತ 2,135 ಮೀ ಅಥವಾ 7' ಸುತ್ತಳತೆಯದಾಗಿರಬೇಕು. ಎಸೆಯುವಾಗ ಕೈ ಚೀಲಗಳನ್ನು ಉಪಯೋಗಿಸಬಹುದು. ಎಸೆಯುವುದಕ್ಕೆ ಮೊದಲು ಗುಂಡು ನೆಲದ ಮೇಲೆ ಉರುಳಬಹುದು. ಎಸೆಯುವ ವೇಳೆಯಲ್ಲಿ ಗುಂಡು ನೆಲಕ್ಕೆ ತಗುಲಬಾರದು. ಹಾಗೇನಾದರೂ ತಗುಲಿದರೆ ಎಸೆವಾತನಿಗಿರುವ ಮೂರು ಅವಕಾಶಗಳಲ್ಲೊಂದು ಇಲ್ಲದಾಗುತ್ತದೆ. ಮಿಕ್ಕ ನಿಯಮಗಳು ಸಾಮಾನ್ಯ ಗುಂಡು ಎಸೆತದಂತೆ, ಇರುವ ಮೂರು ಅವಕಾಶಗಳಲ್ಲಿ ಎಸೆವಾತನಿಗೆ ಅನುಕೂಲವಾದದ್ದನ್ನು ಮಾತ್ರ ಪರಿಗಣಿಸುವರು.

**ಭರ್ಜಿ ಎಸೆತ:** ಈ ಎಸೆತಕ್ಕೆ 36.5 ಮೀ. ಅಥವಾ 120' ಓಡಿಬರುವ ಅವಕಾಶವಿರಬೇಕು. ಈ ಅವಕಾಶವನ್ನು 2" ಅಥವಾ 5 ಸೆಂ.ಮೀ. ಅಗಲವಿರುವ 2 ಸಮಾನಾಂತರ ರೇಖೆಗಳಿಂದ ಗುರುತಿಸಿರಬೇಕು. ಈ ಸಮಾನಾಂತರ ರೇಖೆಗಳ ಮಧ್ಯದ ಅಂತರ 4 ಮೀ. ಅಥವಾ 13' 1.5".

ಭರ್ಜಿ ಎಸೆತ

ಈ ಎಸೆತವನ್ನು ಒಂದು ವೃತ್ತದ ಅಥವಾ ಕಂಸದ ಹಿಂಭಾಗದಿಂದ ಮಾಡಬೇಕು. ಈ ಕಂಸ 8 ಮೀ. ಅಥವಾ 26' 3" ತ್ರಿಜ್ಯದ್ದಾಗಿರುತ್ತದೆ. ಈ ಗುರುತನ್ನು ಮರದ ಪಟ್ಟಿಯಿಂದಾಗಲಿ, 7ಸೆಂ. ಮೀ, ಅಥವಾ 2.75" ಅಗಲವುಳ್ಳ, ಬಿಳಿಬಣ್ಣ ಬಳಿದು ನೆಲದ ಮಟ್ಟದಲ್ಲಿ ಹೂತಿರುವ ಪಟ್ಟಿಯಿಂದಾಗಲಿ ಮಾಡಿರುತ್ತಾರೆ. ಈ ಕಂಸದಿಂದ ಲಂಬ ಕೋನಗಳಲ್ಲಿ ಮತ್ತು ಓಟದ ಸಮಾನಾಂತರ ರೇಖೆಗಳಿಗೆ ಸಮನಾಗಿ ಗೆರೆಗಳಿರುತ್ತವೆ. ಈ ಗೆರೆಗಳು 1.50ಮೀ. ಅಥವಾ 5' ಉದ್ದ ಮತ್ತು 7 ಸೆಂ. ಅಥವಾ 2.75" ಅಗಲವಿರುತ್ತವೆ.



ತಟ್ಟೆ ಎಸೆವವ: ಮೈರೋನನ ಕೃತಿ ರೋಮಿನ ರಾಷ್ಟ್ರೀಯ ವಸ್ತುಸಂಗ್ರಹಾಲಯ

ಭರ್ಜಿಯನ್ನು ಗೊತ್ತಾದ ಹಿಡಿತದಲ್ಲಿ ಹಿಡಿಯಬೇಕು. ಕೈಗೆತ್ತಿಕೊಂಡ ಮೇಲೆ ಗೊತ್ತಾದ ಭಾಗದಲ್ಲಲ್ಲದೆ ಎಲ್ಲೆಂದರಲ್ಲಿ ಅದರ ತುದಿಯನ್ನು ಊರುವಂತಿಲ್ಲ.

ಪುರುಷರು ಬಳಸುವ ಭರ್ಜಿಯ ತೂಕ 800ಗ್ರಾಂ. (1ಪೌಂ. 2.218ಔ.), ಉದ್ದ 260–270ಸೆಂಮೀ (8'61/4"–8'10 1/4"); ಸ್ತ್ರೀಯರು ಬಳಸುವ ಭರ್ಜಿಯ ತೂಕ 600ಗ್ರಾಂ. (1ಪೌಂ. 5.163ಔ.), ಉದ್ದ 220ಸೆಂಮೀ. 230ಸೆಂಮೀ. (7'21/2"–7'61/2").

ಎಸೆತದ ನಿಯಮಗಳು ಗುಂಡಿನ ಎಸೆತದಲ್ಲಿದ್ದಂತೆ.

**ತಟ್ಟೆ ಎಸೆತ:** ಈ ತಟ್ಟೆ ಮರದಿಂದ ಮಾಡಿದ್ದಾದರೆ ಸುತ್ತಲೂ ಲೋಹದಪಟ್ಟಿ ಇರಬೇಕು. ಪುರುಷರ ತಟ್ಟೆಯ ತೂಕ 2 ಕಿ.ಗ್ರಾಂ. (4 ಪೌಂ. 6.547 ಔನ್ಸ್). ಸುತ್ತಳತೆ 219–221 ಮಿ.ಮೀ. (85/8"–83/4"). ಮಧ್ಯಭಾಗದ ದಪ್ಪ 44–46 ಮಿ.ಮೀ. (13/4"–17/8") ಸ್ತ್ರೀಯರ ತಟ್ಟೆಯ ತೂಕ 1 ಕಿ. ಗ್ರಾಂ. (2 ಪೌಂ. 3.274 ಔನ್ಸ್), ಸುತ್ತಳತೆ 50 ಮಿ. ಮೀ. (2"–2 1/4"), ಮಧ್ಯಭಾಗದ ದಪ್ಪ 37–39 ಮಿ. ಮೀ. (11/2"–15/8")ವರೆಗಿರಬೇಕು.

ಈ ತಟ್ಟೆಯನ್ನು 2.50 ಮೀ. (8'2.5") ಸುತ್ತಳತೆಯ ವೃತ್ತದಿಂದ ಎಸೆಯಬೇಕು. ಇತರ ನಿಯಮಗಳು ಗುಂಡಿನ ಎಸೆತದಂತೆ. ಈ ಅಭ್ಯಾಸಗಳಿಂದ ದೇಹಬಲದ ಜೊತೆಗೆ ಎಸೆತದ ಜಾಣ್ಮೆಯೂ ಪರೀಕ್ಷಿತವಾಗುತ್ತದೆ. (ಬಿ.ಎಲ್.ಆರ್.)

**ಎಸ್ಕಿಮೋ:** ಪೂರ್ವದಲ್ಲಿ ಗ್ರೀನ್‌ಲೆಂಡ್ ಮತ್ತು ಲ್ಯಾಬ್ರಡಾರ್‌ಗಳಿಂದ ಹಿಡಿದು ಪಶ್ಚಿಮದಲ್ಲಿ ಬೇರಿಂಗ್ ಸಮುದ್ರದವರೆಗೂ ಬೇರಿಂಗ್ ಜಲಸಂಧಿಯ ಸಮೀಪದ ಸೈಬೀರಿಯನ್ ಪ್ರದೇಶದಲ್ಲೂ ಇರುವ 9660 ಕಿಮೀ ಉತ್ತರ ಕರಾವಳಿಯುದ್ದಕ್ಕೂ ವಾಸಿಸುವ ಜನ, ಹಡ್‌ಸನ್ ಕೊಲ್ಲಿ ಮತ್ತು ದಕ್ಷಿಣ ಅಲಾಸ್ಕದ ಮೂಲನಿವಾಸಿಗಳಾದ ಇವರು ಕಾಲಕ್ರಮದಲ್ಲಿ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ಹಬ್ಬಿದರು. ಪ್ರಪಂಚ ಜನಾಂಗಗಳ ಇತಿಹಾಸದಲ್ಲಿ ವಿಶಿಷ್ಟಸ್ಥಾನ ಪಡೆದಿರುವ ಈ ಜನರ ಸಂಸ್ಕೃತಿ, ಭಾಷೆ ಮತ್ತು ಭೌತಲಕ್ಷಣಗಳು ಇತ್ತೀಚಿನವರೆಗೂ ಈ ವಿಸ್ತಾರ ಪ್ರದೇಶದ ಉದ್ದಕ್ಕೂ ಒಂದೇ ರೀತಿಯಾಗಿದ್ದುವು. ಇಷ್ಟೊಂದು ವಿಸ್ತಾರವಾದ ಭೂಪ್ರದೇಶವನ್ನು ಇವರು

ಆವರಿಸಿಕೊಂಡಿದ್ದರೂ ಇವರ ಸಂಖ್ಯೆ ಅರುವತ್ತು ಸಾವಿರವನ್ನೂ ಮೀರಿಲ್ಲದಿರುವುದು ಆಶ್ಚರ್ಯಕರ. ಯಾವ ಕಾಲದಲ್ಲೂ ಇವರ ಸಂಖ್ಯೆ ಇದಕ್ಕಿಂತ ಹೆಚ್ಚಿರಲಿಲ್ಲವೆಂದು ಹೇಳಲಾಗಿದೆ. ಐರೋಪ್ಯರಿಂದ ಬಳುವಳಿಯಾಗಿ ಬಂದ ಸಿಡುಬು, ದಡಾರ, ಇನ್‌ಫ್ಲುಯೆಂಜಗಳಿಂದ ಜನ ಒಟ್ಟೊಟ್ಟಿಗೆ ಸತ್ತರೂ ಹೀಗೆ ತೆರವಾದ ಜನಸಂಖ್ಯೆ ಮತ್ತೆ ಮತ್ತೆ ಕೂಡಿಕೊಂಡಿದೆ. ಈಚೆಗೆ ಇದು ಶೀಘ್ರವಾಗಿ ಬೆಳೆಯುತ್ತಿದೆ.

ಎಸ್ಕಿಮೋ ಭಾಷೆಯಲ್ಲಿ ಅಮೆರಿಕನ್ ಎಸ್ಕಿಮೋಗಳಿಗೆ ಇನ್ಯುಯಿಟ್‌ಗಳೆಂದೂ ಏಷ್ಯನ್ ಎಸ್ಕಿಮೋಗಳಿಗೆ ಯುಯಿಟ್‌ಗಳೆಂದೂ ಹೆಸರು. ಅಲಾಸ್ಕದ ನೈಋತ್ಯಕ್ಕಿರುವ ಅಲ್ಯೂಷನ್ ದ್ವೀಪಗಳಲ್ಲಿ ವಾಸಿಸುವ ಜನ ಆಲ್ಯೂಷನರು. ಇವರನ್ನು ಬೇರೆ ಜನಾಂಗದವರೆಂದು ಪರಿಗಣಿಸಲಾಗಿದೆ. ಇನ್ಯುಯಿಟ್ ಅಥವಾ ಯುಯಿಟ್ ಎಂದರೆ ಮನುಷ್ಯ ಎಂದು ಅರ್ಥ. ಎಸ್ಕಿಮೋ ಎಂಬುದು ಅವಹೇಳನ ಶಬ್ದ. ಹಸಿಮಾಂಸ ಭಕ್ಷಕ ಎಂಬರ್ಥ ಬರುವ ಈ ಹೆಸರಿನಿಂದ ಇವರನ್ನು ಕೆನಡದ ಆಲ್ಗೋಂಕ್ವಿನ್ ಇಂಡಿಯನ್ನರು ಕರೆಯುತ್ತಿದ್ದರಂತೆ. ಈ ಹೆಸರನ್ನು ಬಳಕೆಗೆ ತಂದವನು ಕ್ರೈಸ್ತಪಾದ್ರಿ ಬೇರ್ಡ್–17ನೆಯ ಶತಮಾನದಲ್ಲಿ.

ಎಸ್ಕಿಮೋ ಜನರ ಶರೀರ ಲಕ್ಷಣಗಳಲ್ಲಿ ಏಕರೂಪತೆ ಕಂಡುಬರುವುದಿಲ್ಲ. ಲ್ಯಾಬ್ರಡಾರ್ ಮತ್ತು ಗ್ರೀನ್ ಲೆಂಡಿನ ಎಸ್ಕಿಮೋಗಳಿಗಿಂತ ಅಮೆರಿಕನ್ ಉತ್ತರ ಕರಾವಳಿಯ ಮತ್ತು ಗ್ರೀನ್ ಲೆಂಡಿನ ಪೂರ್ವತೀರದ ಎಸ್ಕಿಮೋಗಳೂ ಇವರಿಗಿಂತ ಅಲಾಸ್ಕದವರೂ ಹೆಚ್ಚು ಎತ್ತರವಾಗಿದ್ದಾರೆ. ಅಂತೂ ಇವರ ಸರಾಸರಿ ಎತ್ತರ 155–165 ಸೆಂಮೀ ಕಪಾಲ ಸೂಚ್ಯಂಕ (ಸಿಫಾಲಿಕ್ ಇಂಡೆಕ್ಸ್) 74–82. ಇವರು ಇಂಡಿಯನ್ ಜನಾಂಗದವರಿಗಿಂತ ಭಿನ್ನ. ಇವರಲ್ಲಿ ಮಂಗೋಲಾಯಿಡ್ ಲಕ್ಷಣಗಳೇ ಹೆಚ್ಚಾಗಿವೆ. ಅವರಂತೆ ಇವರ ಕೈ ಪಾದಗಳೂ ಬಹಳ ಸಣ್ಣ. ಇವರ ಮುಂಭಾಗದ ಹಲ್ಲುಗಳೂ ಎಲೆಗುದ್ದಲಿಯ ಆಕಾರದಲ್ಲಿರುತ್ತವೆ. ಹಳದಿ ಬಣ್ಣದ ಚರ್ಮ, ಅಗಲವಾದ ಮುಖ, ಕಿರಿದಾದರೂ ಎತ್ತರವಾದ ಮೂಗು, ದಪ್ಪನೆಯ ತುಟಿ, ನೇರವಾದ ಕಪ್ಪು ಕೂದಲು, ಕುರುಚಲು ಗಡ್ಡ–ಇವು ಎಸ್ಕಿಮೋಗಳ ಇತರ ಶಾರೀರಿಕ ಲಕ್ಷಣಗಳು. ಇವರ ಆಯು:ಪರಿಮಾಣ ಕಡಿಮೆ. ಅರುವತ್ತು ವರ್ಷದ ಅನಂತರ ಎಸ್ಕಿಮೋಗಳು ಜೀವಿಸುವುದು ಬಲು ವಿರಳ.

ಆಚಾರ ವ್ಯವಹಾರ ಮತ್ತು ಭಾಷೆಗಳ ಆಧಾರದ ಮೇಲೆ ಇವರನ್ನು ಅಲಾಸ್ಕ, ಸೈಬೀರಿಯ, ವಿಕ್ಟೋರಿಯ ಮತ್ತು ಕಾರೊನೇಷನ್ ಖಾರಿಯ ಪ್ರದೇಶ, ಬೂತಿಯ ಫೀಲಿಕ್ಸ್ ಪರ್ಯಾಯದ್ವೀಪ, ಮೆಕೆಂಜಿ ನದಿ ಹಾಗೂ ಹರ್ಷಲ್ ದ್ವೀಪದ ಪ್ರದೇಶ, ಗ್ರೀನ್‌ಲೆಂಡ್, ಲ್ಯಾಬ್ರಡಾರ್, ಮೆಲ್‌ವಿಲ್ ಪರ್ಯಾಯದ್ವೀಪ ಮತ್ತು ಸೌಥಾಂಪ್ಟನ್ ಎಸ್ಕಿಮೋಗಳೆಂದು ಒಂಬತ್ತು ಬಗೆಯಾಗಿ ವಿಂಗಡಿಸಬಹುದು. ಈ ಒಂದೊಂದು ವಿಭಾಗದಲ್ಲಿಯೂ ಬೇರೆ ಬೇರೆ ಕುಲಸಂಬಂಧವಾದ ಅನೇಕ ಪಂಗಡಗಳಿವೆ.

ಭೌಗೋಳಿಕ ಅಂಶಗಳು ಮಾನವನ ಜನಜೀವನವನ್ನು ಹೇಗೆ ರೂಪಿಸುತ್ತವೆ ಎಂಬುದಕ್ಕೆ ಎಸ್ಕಿಮೋಗಳು ಉತ್ತಮ ನಿದರ್ಶನ. ಇವರು ವರ್ಷಕ್ಕೆ ಆರರಿಂದ ಒಂಬತ್ತು ತಿಂಗಳ ಕಾಲ ಹಿಮಗಡ್ಡೆಗಳ ಅಡಿಯಲ್ಲಿ ಹುದುಗಿ ಮಲಗುವ, ಅಂಥ ನೆಲದ ಮೇಲೆ ವಾಸಿಸುವ ಛಲಗಾರರಾಗಿರಬೇಕು, ಕುಶಲಮತಿಗಳೂ ಆಗಿರಬೇಕು. ಇಲ್ಲಿನ ಪರಿಸರಕ್ಕೆ ತಕ್ಕಂತೆ ಇವರು ವಸತಿಸೌಕರ್ಯ, ಆಹಾರ ಸಂಪಾದನೆಯ ವಿಧಾನ ಮುಂತಾದವನ್ನು ಕಲ್ಪಿಸಿಕೊಳ್ಳುವುದು ಅನಿವಾರ್ಯ. ಉತ್ತರ ಪ್ರದೇಶದಲ್ಲಿ ಜೀವಿಸುವ ಸೀಲ್, ಮೀನು ಮುಂತಾದವು ಇವರ ಮುಖ್ಯ ಆಹಾರ. ಈ ಪ್ರಾಣಿಗಳ ಬೇಟೆ ಮುಖ್ಯ ಕಸುಬು. ಎರಡು ಹಲಗೆಗಳನ್ನು ಸೇರಿಸಿ ರಚಿಸಿದ ಕೈಯಾಕ್ ಎಂಬ ದೋಣಿಯಲ್ಲಿ ಕುಳಿತು ಇವರು ಜಲಚರಗಳನ್ನು ಹಿಡಿಯುತ್ತಾರೆ. ಸೀಲ್ ಹಿಮವಾಸಿಪ್ರಾಣಿ. ಅದು ಉಸಿರಾಡಲು ತಲೆಯೆತ್ತುವುದನ್ನೆ ಎಸ್ಕಿಮೋಗಳು ಕಾಯುತ್ತಿದ್ದು ಅದರ ಮೇಲೆ ಮೊನಚಾದ ಆಯುಧ ಎಸೆದು ಅದನ್ನು ಕೊಲ್ಲುತ್ತಾರೆ. ಈ ಮೊನಚಾದ ಆಯುಧಗಳು ಹಿಮದಲ್ಲಿ ಹೂತುಹೋಗದಿರುವಂತೆ ಅವುಗಳಿಗೆ ಗಾಳಿತುಂಬಿದ ಸಣ್ಣ ಸಣ್ಣ ಚರ್ಮ ಚೀಲಗಳನ್ನು ಕಟ್ಟಿರುತ್ತಾರೆ. ಚಳಿಗಾಲದಲ್ಲಿ ಹತ್ತಾರು ಸಂಸಾರಗಳ ಜನ ಒಂದೆಡೆ ಸೇರಿ

ಬೇಟೆಯಾಡುವುದೂ ವಸಂತ ಋತುವಿನಲ್ಲಿ ಪ್ರಾಣಿಗಳನ್ನು ಹುಡುಕಿಕೊಂಡು ಹೋಗುವುದೂ ಇವರ ಅಭ್ಯಾಸ. ಉಡುಗೆ ತೊಡುಗೆಗಳಿಗೆ ಉಪಯೋಗವಾಗುವ ಕ್ಯಾರಿಬೂ ಎಂಬ ಹಿಮಸಾರಂಗದ ಚರ್ಮಕ್ಕಾಗಿ ಬೇಸಗೆಯಲ್ಲಿ ಅದನ್ನು ಹುಡುಕಿಕೊಂಡು ದೂರ ಪ್ರದೇಶಗಳ ವರೆಗೂ ಸಂಚಾರ ಕೈಗೊಳ್ಳುವುದುಂಟು. ಚದುರಿದ್ದ ಸಂಸಾರಗಳೆಲ್ಲ ಚಳಿಗಾಲ ಬರುವುದರೊಳಗಾಗಿ ಒಂದುಗೂಡುತ್ತವೆ. ಪ್ರತಿವರ್ಷವೂ ಇವರದು ಇದೇ ಪರಿಪಾಟ. ಭೂಪ್ರದೇಶದ ಪ್ರಾಣಿಗಳನ್ನು ಬೇಟೆಯಾಡಲು ಇವರು ಉಪಯೋಗಿಸುವ ಉಪಕರಣಗಳೆಂದರೆ ಬಿಲ್ಲು, ಬಾಣ ಮತ್ತು ಚರ್ಮದ ಬಲೆ. ಬೇಟೆಯ ಕಾಲದಲ್ಲಿ ಜೊತೆಯಲ್ಲಿ ಬರುವ ನಾಯಿಗಳು ನೆಲದಲ್ಲಿ ಹೂತುಕೊಂಡ ಪ್ರಾಣಿಗಳನ್ನು ಹುಡುಕಲು ಬಹಳ ಸಹಾಯಮಾಡುತ್ತವೆ.



ಕುಸುರಿ ಕೆಲಸ ಮಾಡಿದ ದಂತವಸ್ತುಗಳು

ಎಸ್ಕಿಮೋಗಳು ವಾಸಮಾಡುವ ಮನೆಗಳೂ ವೈಶಿಷ್ಟ್ಯಪೂರ್ಣ, ಬೇಸಿಗೆಯಲ್ಲಿ ಸೀಲ್ ಅಥವಾ ಜಿಂಕೆಯ ಚರ್ಮದ ಗುಡಾರಗಳಲ್ಲಿ ಇವರ ವಾಸ. ಆದರೆ ಇವರ ಚಳಿಗಾಲದ ಮನೆಗಳು ಬಗೆಬಗೆಯಾಗಿರುತ್ತವೆ. ಪಶ್ಚಿಮ ಆರ್ಕ್‌ಟಿಕ್ ಪ್ರದೇಶದಲ್ಲಿರುವ ನದಿಗಳು ತಮ್ಮ ಪ್ರವಾಹದಲ್ಲಿ ಮರದ ದಿಮ್ಮಿಗಳನ್ನು ಹೊತ್ತು ತರುವುದರಿಂದ, ಅಲ್ಲಿನ ಎಸ್ಕಿಮೋಗಳು ಅವನ್ನು ಉಪಯೋಗಿಸಿಕೊಂಡು ಮರದ ಹಲಗೆಗಳಿಂದ ಮನೆಗಳನ್ನು ಕಟ್ಟಿಕೊಂಡು ಅವುಗಳ ಚಾವಣಿಗಳ ಮೇಲೆ ಹುಲ್ಲುಬೆಳೆಸುತ್ತಾರೆ. ಮರದ ದಿಮ್ಮಿಗಳು ದೊರಕದೆ ಇರುವ ಪ್ರದೇಶದಲ್ಲಿ ಕಲ್ಲಿನಿಂದ ಮನೆಕಟ್ಟಿ ತಿಮಿಂಗಿಲದ ಮೂಳೆಗಳಿಂದ ಮೇಲ್ಚಾವಣಿ ನಿರ್ಮಿಸುತ್ತಾರೆ, ಕೆನಡದ ಎಸ್ಕಿಮೋಗಳು ಗಟ್ಟಿಯಾದ ಮಂಜಿನ ಗಡ್ಡೆಯ ತುಂಡುಗಳನ್ನು ಇಟ್ಟಿಗೆಗಳಂತೆ ಒಂದರಮೇಲೊಂದು ಇಟ್ಟು ವೃತ್ತಾಕಾರದ ಮನೆ ನಿರ್ಮಿಸುತ್ತಾರೆ. ಇದಕ್ಕೆ ಇಗ್ಲೂ ಎಂದು ಹೆಸರು. ನೆಲಕ್ಕೆ ಹಿಮಸಾರಂಗದ ಚರ್ಮ ಹಾಸುವುದರಿಂದ ಬೆಚ್ಚಗಿರುತ್ತದೆ. ಬೇಸಗೆಯಲ್ಲಿ ಮಂಜು ಕರಗಿ ಹರಿದ ಪ್ರವಾಹ ಮನೆಯೊಳಗೆ ನುಗ್ಗುವ ಮುನ್ನವೇ ಇದನ್ನು ಬಿಟ್ಟು ಚರ್ಮದ ಗುಡಾರಕ್ಕೆ ಹೊರಟು ಹೋಗುತ್ತಾರೆ. ಪ್ರಾಣಿಯ ಕೊಬ್ಬನ್ನೋ ಯಾವುದಾದರೂ ಇಂಧನದ ಕಲ್ಲನ್ನೋ ಉರಿಸಿ ದೀಪಮಾಡಿಕೊಳ್ಳಲಾಗುತ್ತದೆ. ಆಹಾರ ಬೇಯಿಸಲೂ ಇದು ಉಪಯುಕ್ತ. ಇದು ಒದಗದಾಗ ಇವರು ಒಣಗಿದ ಅಥವಾ ಹಿಮದಲ್ಲಿ ಹೆಪ್ಪುಗಟ್ಟಿಸಿದ ಆಹಾರ ತಿನ್ನುತ್ತಾರೆ. ಬಲು ಅನಿವಾರ್ಯವಾದಾಗ ಮಾತ್ರ ಹಸಿಯ ಮಾಂಸ ಭಕ್ಷಿಸಬೇಕಾಗುತ್ತದೆ. ಇದು ಇವರಿಗೆ ಅಷ್ಟೇನೂ ಇಷ್ಟವಿಲ್ಲ. ಆದ್ದರಿಂದ ಹಸಿಮಾಂಸಭಕ್ಷಕರೆಂಬ ಅರ್ಥಬರುವ ಎಸ್ಕಿಮೋ ಶಬ್ದದ ಬಳಕೆಗೆ ಇವರ ಅಭ್ಯಂತರವುಂಟು.

ಸಾಮಾನ್ಯವಾಗಿ ಕ್ಯಾರಿಬೂ ಪ್ರಾಣಿಯ ತುಪ್ಪಟದಿಂದ ಹೊಲಿದು ಸಿದ್ಧಪಡಿಸಿದ ಚಲ್ಲಣ, ಮೇಲಂಗಿ, ಟೋಪಿ ಮತ್ತು ಪಾದರಕ್ಷೆ–ಇವು ಎಸ್ಕಿಮೋ ಉಡುಗೆ ತೊಡುಗೆ. ಇವು ಇವರನ್ನು ಬೆಚ್ಚಗಿಡುತ್ತವೆ. ಸ್ತ್ರೀ ಪುರುಷರಿಗೆ ಉಡುಗೆ ತೊಡುಗೆಯಲ್ಲಿ ಹೆಚ್ಚು ವ್ಯತ್ಯಾಸವೇನೂ ಕಾಣಬರುವುದಿಲ್ಲ. ಸ್ತ್ರೀಯರ ಉಡುಪನ್ನು ಪುರುಷರ ಉಡುಪಿಗಿಂತ ಸ್ವಲ್ಪ ಭಿನ್ನವಾದ ರೀತಿಯಲ್ಲಿ ಹೊಲಿಯಲಾಗಿರುತ್ತದೆ. ಉಡುಪಿಗೆ ಒಂದರ ಮೇಲೊಂದರಂತೆ ತುಪ್ಪಟಗಳ ಎರಡು ಪದರಗಳಿರುತ್ತವೆ. ಮೊದಲನೆಯ ಪದರದಲ್ಲಿ ತುಪ್ಪಟದ ಭಾಗ ಮೈಗೆ ಅಂಟಿಕೊಂಡಂತೆಯೂ ಎರಡನೆಯ ಪದರದಲ್ಲಿ ತುಪ್ಪಟದ ಭಾಗ ಹೊರಭಾಗಕ್ಕೆ ಬರುವಂತೆಯೂ ಹೊಲಿದಿರುತ್ತಾರೆ. ಶರೀರದ ಶಾಖವನ್ನು ಕಾಪಾಡಲು ಇದೊಂದು ಒಳ್ಳೆಯ ಮಾರ್ಗ. ಆಭರಣ ಧರಿಸುವುದೂ ಅದಕ್ಕಿಂತ ಹೆಚ್ಚಾಗಿ ತಮ್ಮ ಮುಖಕ್ಕೆ ಹಚ್ಚೆ ಹುಯ್ಯಿಸಿಕೊಳ್ಳುವುದೂ ಹೆಂಗಸರಿಗೆ ಹಿಂದಿನಿಂದಲೂ ಪ್ರಿಯ.

ಎಸ್ಕಿಮೋಗಳಲ್ಲಿ ಸುವ್ಯವಸ್ಥಿತ ಸಾಮಾಜಿಕ ಪದ್ಧತಿಗಳೇನೂ ಇದ್ದಂತೆ ಕಾಣಬರುವುದಿಲ್ಲ. ಬಲಿಷ್ಠ ವ್ಯಕ್ತಿಯನ್ನು ಹಳ್ಳಿಯ ಮುಖಂಡನೆಂದು ಪರಿಗಣಿಸುತ್ತಿದ್ದರೂ ಅವನ ಮಾತಿಗೆ ಅಷ್ಟೇನೂ ಬೆಲೆಯಿರುತ್ತಿರಲಿಲ್ಲ. ಹಳ್ಳಿಯ ಭೂಮಿ ಎಲ್ಲರಿಗೂ ಸೇರಿತ್ತು. ಏಕಸ್ವಾಮ್ಯವಿರಲಿಲ್ಲ. ಯಾವನಾದರೂ ಒಬ್ಬನಿಗೆ ಒಂದು ದಿನ ಬೇಟೆ ಸಿಗದಿದ್ದರೆ ಅವನಿಗೂ ಅವನ ಸಂಸಾರಕ್ಕೂ ಆಹಾರ ಒದಗಿಸುವುದು ಇತರರ ಕರ್ತವ್ಯವಾಗಿತ್ತು. ಬೇಟೆ, ಮತ್ತು ಮೀನುಗಾರಿಕೆ ಪುರುಷರ ಮುಖ್ಯ ಕೆಲಸ; ಅಡಿಗೆ ಮಾಡುವುದೂ ಬಟ್ಟೆ ಹೊಲಿಯುವುದೂ ಸ್ತ್ರೀಯರ ಕರ್ತವ್ಯ. ಈ ಶ್ರಮ ವಿಭಾಗದಿಂದ ಒಬ್ಬರ ಸಹಾಯವಿಲ್ಲದೆ ಇನ್ನೊಬ್ಬರು ಬದುಕುವುದು ಕಷ್ಟವಾಗಿತ್ತು. ಆದ್ದರಿಂದ ವಿಧುರರೂ ವಿಧವೆಯರೂ ಬದುಕಲು ಮದುವೆಯಾಗಲೇಬೇಕಾಗಿತ್ತು. ಏಕಪತ್ನಿತ್ವ ಮತ್ತು ಏಕಪತ್ನೀತ್ವವೇ ಸಾಮಾನ್ಯವಾಗಿತ್ತು. ವೃದ್ಧರನ್ನೂ ಅನಾಥರನ್ನೂ ಅವರ ಬಂಧುಗಳು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಎಸ್ಕಿಮೋಗಳು ಶಾಂತಿಪ್ರಿಯರು, ವಿಧೇಯರು, ಸತ್ಯಸಂಧರು, ಕಷ್ಟಸಹಿಷ್ಣುಗಳು. ವಿರಾಮ ಕಾಲದಲ್ಲಿ ಇವರು ಸಂಗೀತ, ನೃತ್ಯ ಹಾಗೂ ಮನೋರಂಜನೆಯ ಆಟಗಳಲ್ಲಿ ನಿರತರಾಗುತ್ತಿದ್ದರು.

ಇವರೆಲ್ಲ ಈಗ ಹೆಚ್ಚು ಕಡಿಮೆ ಕ್ರೈಸ್ತರಾಗಿದ್ದಾರಾದರೂ ಇವರು ತಮ್ಮ ಹಳೆಯ ಮತೀಯ ನಂಬಿಕೆಗಳನ್ನು ಉಳಿಸಿಕೊಂಡಿದ್ದಾರೆ. ಇವು ಅಮೆರಿಕನ್ ಇಂಡಿಯನ್ ಜನರ ನಂಬಿಕೆಗಳನ್ನೇ ಹೋಲುತ್ತವೆ. ಅಲ್ಲಲ್ಲಿ ಕೆಲವು ಸ್ಥಳೀಯ ಬದಲಾವಣೆಗಳನ್ನು ಕಾಣಬಹುದು. ಜೀವ ನಿರ್ಜೀವ ವಸ್ತುಗಳಲ್ಲೆಲ್ಲ ಆತ್ಮನಿರುತ್ತಾನೆಂಬುದು ಇವರ ಮುಖ್ಯ ನಂಬಿಕೆ. ತೋರ್ನ್ಗಸ್ಸುಕ್ ಶ್ರೇಷ್ಠ ದೇವತೆ. ಇವನ ಆಶ್ರಯದಲ್ಲಿ ತೋರ್ನ್ಗತ್ ಎಂಬ ಇತರ ಅಧಿದೇವತೆಗಳಿರುತ್ತಾರೆ. ಆಹಾರಗಳನ್ನು ಕೊಡುವ ಸ್ತ್ರೀ ದೇವತೆಯಾದ ಸೆಡ್ನ ಸಮುದ್ರದಲ್ಲಿ ವಾಸಿಸುತ್ತಾಳೆಂದು ಕೆಲವರೂ ಆಕೆಯ ಹೆಸರು ಅರ್ನರ್ಕ್ನಗ್ಸಕ್ ಎಂದು ಮತ್ತೆ ಕೆಲವರೂ ಭಾವಿಸುತ್ತಾರೆ. ಈ ದೇವತೆ ಸಮುದ್ರದಲ್ಲಿ ಅಲೆಗಳನ್ನು ಸೃಷ್ಟಿಸುತ್ತಾಳೆ. ಕುಲದ ಕಟ್ಟಳೆಗಳನ್ನು ಮುರಿದವರಿಗೆ ಬೇಟೆಯಲ್ಲಿ ಸಮುದ್ರ ಪ್ರಾಣಿಗಳು ಸಿಕ್ಕದಂತೆ ಮಾಡುವವಳು ಈಕೆ. ಸಮುದ್ರ ಪ್ರಾಣಿಗಳೆಲ್ಲ ಈಕೆಯ ಕೈಬೆರಳುಗಳು. ಆದ್ದರಿಂದ ಈ ಸಮುದ್ರದೇವತೆಯ ಕೋಪಕ್ಕೆ ಯಾರೂ ಗುರಿಯಾಗದಂತೆ ನೋಡಿಕೊಳ್ಳುವುದು ಪುರೋಹಿತನ (ಅಂಗಕಾಕ್) ಕರ್ತವ್ಯ. ಎಸ್ಕಿಮೋಗಳ ಕೆಲವು ಕುಲಗಳ ಜನ ಮನುಷ್ಯನ ದೇಹದಲ್ಲಿ ಎರಡು ಆತ್ಮಗಳಿವೆಯೆಂದು ಭಾವಿಸುತ್ತಾರೆ. ದೇಹಿಯ ಮರಣಾನಂತರ ಈ ಆತ್ಮಗಳಲ್ಲೊಂದು ಆಕಾಶಕ್ಕೋ ಪಾತಾಳಕ್ಕೋ ಹೋಗಿ ಅಲ್ಲಿ ವಾಸಿಸುವ ಇತರ ಆತ್ಮಗಳನ್ನು ಸೇರುತ್ತದೆ. ಮತ್ತೊಂದು ಆತ್ಮ ದೇಹದಲ್ಲಿಯೇ ಉಳಿದಿರುತ್ತದೆ ; ಅಥವಾ ತಾತ್ಕಾಲಿಕವಾಗಿ ಇನ್ನೊಂದು ಎಳೆ ಮಗುವಿನ ಶರೀರಕ್ಕೆ ಹೋಗುತ್ತದೆ. ಕಣ್ಣಿಗೆ ಕಾಣುವ ಪ್ರತಿಯೊಂದು ವಸ್ತುವಿಗೂ ಒಬ್ಬ ದೇವತೆಯುಂಟು. ಅದರ ಸಹಾಯವಿಲ್ಲದೆ ಆ ವಸ್ತು ತಮಗೆ ದೊರೆಯಲಾರದೆಂಬುದು ಎಸ್ಕಿಮೋಗಳ ನಂಬಿಕೆ. ಆದ್ದರಿಂದ ಪ್ರತಿಯೊಂದು ದೇವತೆಯನ್ನೂ ಒಂದಲ್ಲ ಒಂದು ಬಗೆಯಿಂದ ಸಂತುಷ್ಟಿಗೊಳಿಸುವುದೇ ಎಸ್ಕಿಮೋಗಳ ಆದ್ಯ ಕರ್ತವ್ಯ. ಇದಕ್ಕಾಗಿ ಅವರು ಪುರೋಹಿತನ ನೆರವು ಪಡೆಯುತ್ತಿದ್ದರು. ಈತನಿಗೆ ದೇವತೆಗಳೊಡನೆ ಮಾತನಾಡುವ ಶಕ್ತಿಯಿದೆಯೆಂದು ನಂಬಲಾಗಿತ್ತು. ಈತ ಸಾಮಾನ್ಯ ಜನಕ್ಕೆ ಅರ್ಥವಾಗದ ಎಸ್ಕಿಮೋ ಭಾಷೆಯ ಮಂತ್ರಗಳನ್ನು ಪಠಿಸಿ ದೇವತೆಗಳೊಡನೆ ಸಖ್ಯ ಏರ್ಪಡಿಸಬಲ್ಲವ. ಆದ್ದರಿಂದ ಪುರೋಹಿತನಿಗೆ ಸಮಾಜದಲ್ಲಿ ಮುಖ್ಯ ಸ್ಥಾನವಿತ್ತು.

ಪಶ್ಚಿಮ ಮತ್ತು ಪೂರ್ವ ಗ್ರೀನ್‌ಲೆಂಡ್‌ಗಳಲ್ಲಿ ಡೆನ್ಮಾರ್ಕಿನ ಪಾದ್ರಿಗಳೂ ಲ್ಯಾಬ್ರಡಾರಿನಲ್ಲಿ ಮೊರೇವಿಯದ ಪಾದ್ರಿಗಳೂ ಅಲಾಸ್ಕದಲ್ಲಿ ರಷ್ಯನ್ ಪಾದ್ರಿಗಳೂ ಎಸ್ಕಿಮೋ ಜನರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಇವರ ಪ್ರಭಾವಕ್ಕೆ ಹೆಚ್ಚಾಗಿ ಒಳಗಾಗದ ಕಡೆಗಳಲ್ಲಿ ಎಸ್ಕಿಮೋಗಳು ತಮ್ಮ ಮತ ಧರ್ಮಗಳನ್ನು ಈಗಲೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ. (ಎ.ವಿ.ಎನ್.)

**ಪ್ರಾಗಿತಿಹಾಸ:** ಇತ್ತೀಚೆಗೆ ದೊರಕಿರುವ ಅನೇಕ ಆಧಾರಗಳ ಪ್ರಕಾರ ಎಸ್ಕಿಮೋ ಸಂಸ್ಕೃತಿ ಏಷ್ಯನ್ ಮೂಲಕ್ಕೇ ಸೇರಿದ್ದು ಬೇರಿಂಗ್ ಜಲಸಂಧಿಯ ಮಾರ್ಗವಾಗಿ ಕ್ರಮೇಣ ಉತ್ತರ ಅಮೆರಿಕವನ್ನು ಪ್ರವೇಶಿಸಿತೆಂದು ಖಚಿತವಾಗಿದೆ. ಈ ವಲಸಿಯ ಕಾರ್ಯ ಪ್ರ.ಶ. ಪೂ. 6–5ನೆಯ ಸಹಸ್ರಮಾನಗಳಲ್ಲಿ ಪ್ರಾರಂಭವಾಯಿತು. ಈ ಸಂಸ್ಕೃತಿ ಸೈಬೀರಿಯ–ಅಲಾಸ್ಕಗಳಲ್ಲಿ ಕಂಡುಬರುವ ಡೆನ್‌ಬಿಗ್ ಸಂಸ್ಕೃತಿಗೆ ಸಂಬಂಧಿಸಿದ್ದರೂ ಉತ್ತರ ಅಮೆರಿಕದ ಅಲಾಸ್ಕ, ಗ್ರೀನ್‌ಲೆಂಡ್ ಮತ್ತಿತರ ಪ್ರದೇಶಗಳಲ್ಲಿ ದೊರಕಿರುವ ಅತ್ಯಂತ ಪುರಾತನ ಎಸ್ಕಿಮೋ ಅವಶೇಷಗಳು ಇಂಗಾಲ ಕಾಲನಿರ್ಣಯ ರೀತ್ಯಾ ಪ್ರಸಕ್ತಶಕ ಪೂರ್ವದ ಕೆಲವು ಶತಮಾನಗಳಿಗೆ ಮಾತ್ರ ನಿರ್ದೇಶಿತವಾಗಿದೆ.

ಅತ್ಯಂತ ಹಳೆಯ ಎಸ್ಕಿಮೋ ಸಂಸ್ಕೃತಿ ಉಮ್‍ನಾಕ್ ದ್ವೀಪದ ನೆಲೆಯೊಂದರಲ್ಲಿ ಬೆಳಕಿಗೆ ಬಂದು ಅದರ ಹೆಚ್ಚಿನ ವಿವರಗಳು ದಕ್ಷಿಣ ಅಲಾಸ್ಕದ ಕುಕ್ ಕೊಲ್ಲಿ ಮತ್ತು ಪ್ರಿನ್ಸ್ ವಿಲಿಯಮ್‍ಗಳಲ್ಲಿನ ಮಾಹಿತಿಗಳಿಂದ ತಿಳಿದುಬಂದಿವೆ ಪೂರ್ವೈತಿಹಾಸಿಕ ದಕ್ಷಿಣ ಅಲಾಸ್ಕ ಮತ್ತು ಅಲ್ಯೂಷನ್ ದ್ವೀಪಗಳ ಸಂಸ್ಕೃತಿಗಳು ಎಸ್ಕಿಮೋ ಸಂಸ್ಕೃತಿಗಳ ಗುಂಪಿಗೆ ಸೇರಿದ್ದರೂ ಅಲಾಸ್ಕದ ಇತರ ಪ್ರದೇಶಗಳ ಸಂಸ್ಕೃತಿಗಳಿಂದ ಭಿನ್ನವಾಗಿದ್ದುವು. ಜನಭರಿತ ಪ್ರದೇಶದ ಸಂಸ್ಕೃತಿ ಸ್ಥಿರವಾಗಿತ್ತು. ಆದರೆ ಬೇರಿಂಗ್ ಜಲಸಂಧಿಯ ಪ್ರದೇಶದಲ್ಲಿ ಅಡಿಗಡಿಗೆ ಅದರ ರೂಪ ರೇಷೆಗಳು ಬದಲಾಗುತ್ತಿದ್ದುವು. ಇಲ್ಲಿ ಇಪಿಯುಟಾಕ್ ಪ್ರದೇಶದ ಜನರ ಸಂಸ್ಕೃತಿಯ ತಳಹದಿಯ ಮೇಲೆ ದಕ್ಷಿಣ ಅಲಾಸ್ಕದ ಸಂಸ್ಕೃತಿಯ ಪ್ರಭಾವ ಬೆಳೆಯಿತು. ಇದರೊಂದಿಗೆ ಪುನಕ್ ಸಂಸ್ಕೃತಿಯ ಅಂಶಗಳೂ ಮಿಳಿತವಾಗಿದ್ದುವು.

ಪಶ್ಚಿಮ ಹಾಗೂ ಉತ್ತರ ಅಲಾಸ್ಕದಲ್ಲಿನ ಇತಿಹಾಸಪೂರ್ವ ಎಸ್ಕಿಮೋ ಸಂಸ್ಕೃತಿಯ ಬೆಳವಣಿಗೆಯಲ್ಲಿ ಮೂರು ಹಂತಗಳನ್ನು ಕಾಣಬಹುದು. ಮೊಟ್ಟಮೊದಲಿಗೆ ಇಲ್ಲಿ ಹಳೆಯ ಬೇರಿಂಗ್ ಸಮುದ್ರದ ಲಕ್ಷಣಗಳೂ ಅನಂತರ ಕ್ರಮವಾಗಿ ಇಪಿಯುಟಾಕ್, ಬಿರ್ನಿಕ್ ಮತ್ತು ಪುನಕ್ ಅಂಶಗಳೂ ಕಂಡುಬಂದವು. ಹಳೆಯ ಬೇರಿಂಗ್ ಸಮುದ್ರ ಸಂಸ್ಕೃತಿಯ ಮಾಹಿತಿಗಳೂ ಇಲ್ಲಿನ ಲಿಟ್ಲ್ ಡೈಯೊಮೀಡ್ ದ್ವೀಪದಲ್ಲಿ ದೊರಕಿವೆ. ಸೇಂಟ್ ಲಾರೆನ್ಸ್ ದ್ವೀಪದಲ್ಲಿ ನಡೆದ ಸಂಶೋಧನೆಗಳಿಂದ ಇದು ಖಚಿತವಾಗಿದೆ. ಇದಾದ ಅನಂತರ ಕೆನಡದ ಥ್ಯೂಲೀ ಸಂಸ್ಕೃತಿಗೆ ಸಮಾನವಾದ ಸಂಸ್ಕೃತಿ ಇಲ್ಲಿ ಬೆಳೆಯಿತು. ಹಳೆಯ ಬೇರಿಂಗ್ ಸಂಸ್ಕೃತಿಯ ಮೊದಲ ಹಂತವಾದ ಓಕ್‍ವಿಕ್ ಸಂಸ್ಕೃತಿ ಪ್ರ.ಶ.ಪೂ. 500–400 ವರ್ಷಗಳಷ್ಟು ಹಿಂದಿನದು. ಪುನಕ್ ಸಂಸ್ಕೃತಿ ಪ್ರ.ಶ. 550–1250ರದೆಂದು ನಿರ್ಧರಿಸಲಾಗಿದೆ. ಈ ಸಂಸ್ಕೃತಿಯ ಕಾಲದಲ್ಲಿ ಜನ ಕಡಲತೀರದ ಜೀವನರೀತಿಗೆ ಹೊಂದಿಕೊಂಡಿದ್ದು ಸೀಲ್, ತಿಮಿಂಗಲ ಮುಂತಾದ ಜಲಚರಗಳ ಮತ್ತು ಪಕ್ಷಿಗಳ ಬೇಟೆಯನ್ನೇ ಅವಲಂಬಿಸಿದ್ದರು. ಈ ಜನರ ವಾಸದ ಮನೆಗಳು ಆಯಾತಾಕಾರ. ಅವಕ್ಕೆ ಇಕ್ಕಟ್ಟಾದ ಬಾಗಿಲು. ಇವು ಭೂ ಮಟ್ಟದಿಂದ ಅರ್ಧಭಾಗ ಕೆಳಗಿರುತ್ತಿದ್ದುವು. ಇವರ ಮುಖ್ಯ ಆಯುಧೋಪಕರಣಗಳು ಕಲ್ಲಿನವು. ಇವರು ಮಡಿಕೆ ಕುಡಿಕೆಗಳನ್ನೂ ಹಣತೆಯನ್ನೂ ಉಪಯೋಗಿಸುತ್ತಿದ್ದರು. ಇದು ಎಸ್ಕಿಮೋ ಸಂಸ್ಕೃತಿಗಳಲ್ಲಿ ಅತ್ಯಂತ ಹಳೆಯದಾದರೂ ಇಪಿಯುಟಾಕ್ ಸಂಸ್ಕೃತಿಯ ಕಲೆಯ ವಿನಾ ಉಳಿದೆಲ್ಲಕ್ಕಿಂತಲೂ ಇದೇ ಹೆಚ್ಚು ಮುಂದುವರಿದಿತ್ತು.

ಅನಂತರದ ಪುನಕ್ ಸಂಸ್ಕೃತಿ ಹಳೆಯ ಬೇರಿಂಗ್ ಸಮುದ್ರದ ಮತ್ತು ಸೈಬೀರಿಯದ ಸಂಸ್ಕೃತಿಗಳ ಪ್ರಭಾವಗಳಿಂದ ಕೂಡಿತ್ತು. ಅಲಾಸ್ಕದ ಪಾಯಿಂಟ್ ಹೋಪ್, ಕೊಟ್‍ಸೆಬ್ಯೂ ಮತ್ತು ಸ್ಯೂಯರ್ಡ್ ಪರ್ಯಾಯ ದ್ವೀಪಗಳಲ್ಲಿ ಈ ಸಂಸ್ಕೃತಿ ಇಪಿಯುಟಾಕ್ ಸಂಸ್ಕೃತಿಯೊಂದಿಗೆ ಮಿಳಿತವಾಗಿದೆ. ಹಳೆಯ ಬೇರಿಂಗ್ ಸಮುದ್ರದ ಸಂಸ್ಕೃತಿಯ ದ್ವಿತೀಯ ಮತ್ತು ತೃತೀಯ ಸಾಂಸ್ಕೃತಿಕ ಹಂತಗಳ ಅವಶೇಷಗಳು ಸೈಬೀರಿಯ ತೀರಪ್ರದೇಶ, ಸೇಂಟ್ ಲಾರೆನ್ಸ್ ಮತ್ತು ಡೈಯೊಮೀಡ್ ದ್ವೀಪ ಪ್ರದೇಶಗಳಲ್ಲಿ ದೊರಕಿವೆ. ಅಲಾಸ್ಕದಲ್ಲಿ ಇಪಿಯುಟಾಕ್ ಸಂಸ್ಕೃತಿಯ ಅವಶೇಷಗಳು ಪಾಯಿಂಟ್ ಹೋಪ್‍ನಲ್ಲಿ ಮಾತ್ರ ದೊರಕಿವೆ. ಪುನಕ್ ಸಂಸ್ಕೃತಿಯ ಅವಶೇಷಗಳು ಸೇಂಟ್ ಲಾರೆನ್ಸ್, ಡೈಯೊಮೀಡ್, ಈಶಾನ್ಯ ಸೈಬೀರಿಯ, ಅಲಾಸ್ಕದ ಆರ್ಕ್‍ಟಿಕ್ ತೀರದ ಪ್ರಿನ್ಸ್ ಆಫ್ ವೇಲ್ಸ್ ಭೂಶಿರ ಮುಂತಾದ ಪ್ರದೇಶಗಳಲ್ಲಿ ಕಂಡುಬಂದಿವೆ.

ಪಾಯಿಂಟ್ ಹೋಪ್ ಭೂಶಿರದಲ್ಲಿ ಕಂಡುಬಂದ ಇಪಿಯುಟಾಕ್ ಸಂಸ್ಕೃತಿಯ ಕಾಲ 9–10ನೆಯ ಶತಮಾನಗಳೆಂದು ನಿರ್ಧರಿಸಿರುವುದರಿಂದ ಹಲವು ಸಮಸ್ಯೆಗಳು ಕಂಡುಬಂದಿವೆ. ಹಳೆಯ ಬೇರಿಂಗ್ ಸಮುದ್ರದ ಮತ್ತು ಇಲ್ಲಿನ ಸಂಸ್ಕೃತಿಗಳಿಗಿರುವ ಹೋಲಿಕೆಗಳಿಂದ ಇದನ್ನು 2–3ನೆಯ ಶತಮಾನಗಳದೆಂದು ಊಹಿಸುವುದು ಸಮಂಜಸವಾಗಿ ಕಾಣುತ್ತದೆ. ಈ ಸಂಸ್ಕೃತಿಗೆ ಸೇರಿದ ದಂತ, ಕೊಂಬು ಮತ್ತು ಎಲುಬಿನ ಆಯುಧಗಳು ಇತರ ಎಸ್ಕಿಮೋ ಸಂಸ್ಕೃತಿಗಳ ಆಯುಧಗಳಿಗಿಂತಲೂ ಪ್ರಮುಖವಾಗಿವೆ. ಎಲುಬಿನ ಆಯುಧಗಳ ಮೇಲಿರುವ ಕಲೆ, ಇವರ ಶವಸಂಸ್ಕಾರ ಪದ್ಧತಿ, ಮತೀಯಾಚರಣೆ ಮುಂತಾದವುಗಳಲ್ಲಿ ಇವರು ಕಬ್ಬಿಣ ಯುಗದ ಸೈಬೀರಿಯನ್ ಸಂಸ್ಕೃತಿಯ ಜನರನ್ನು ಹೋಲುತ್ತಾರೆ. ಈ ಸಂಸ್ಕೃತಿಗೆ ಸೇರಿದ ಕಲ್ಲಿನಾಯುಧಗಳು ಇನ್ನೂ ಪುರಾತನವಾದ ಸೈಬೀರಿಯದ ನವಶಿಲಾಯುಗದ ಆಯುಧಗಳನ್ನು ಹೋಲುತ್ತವೆ. ಇಪಿಯುಟಾಕ್ ಸಂಸ್ಕೃತಿಯಲ್ಲಿ ಎಸ್ಕಿಮೋ ಸಂಸ್ಕೃತಿಗಳ ಮುಖ್ಯ ಚಿಹ್ನೆಗಳಾದ ಸ್ಲೆಜ್ ಗಾಡಿಗಳು, ಈಟಿಗಾಳ, ಬಿಲ್ಲಿನಾಕಾರದ ಬೈರಿಗೆ, ಮಣ್ಣಿನ ಪಾತ್ರೆ, ಹಣತೆ ಮತ್ತು ನಯಗೊಳಿಸಿದ ಬಳಪದ ಕಲ್ಲಿನಾಯುಧಗಳು ಸಿಕ್ಕಿಲ್ಲ. ಈ ಸಂಸ್ಕೃತಿಯನ್ನೇ ಹೋಲುವ ಇಪಿಯುಟಾಕ್ ಸಮೀಪ ಸಂಸ್ಕೃತಿಯಲ್ಲಿ ಕೊನೆಯ ಮೂರು ರೀತಿಯ ಅವಶೇಷಗಳೇನೋ ದೊರಕಿವೆ. ಬ್ರಿಸ್ಟಲ್ ಕೊಲ್ಲಿ ಕುಸ್‍ಕೊಕ್ವಿಮ್ ಮತ್ತು ನಾರ್ಟನ್‍ಸೌಂಡ್ ಪ್ರದೇಶಗಳಲ್ಲಿ ದೊರಕಿರುವ ಈ ಸಂಸ್ಕೃತಿಯ ಅವಶೇಷಗಳು ಇಂಗಾಲ ಕಾಲ ನಿರ್ಣಯ ವಿಧಾನದ ಪ್ರಕಾರ ಪ್ರ.ಶ.ಪೂ.300–ಪ್ರ.ಶ.300ರ ನಡುವಣ ಕಾಲದವೆಂದು ಹೇಳಲಾಗಿದೆ.

ಥ್ಯೂಲೀ ಸಂಸ್ಕೃತಿ ಕೆನಡ–ಗ್ರೀನ್‍ಲೆಂಡ್ ಪ್ರದೇಶಗಳಲ್ಲಿ ಕಂಡುಬರುವ ಮುನ್ನ ಆ ಪ್ರದೇಶಗಳಲ್ಲಿ ಡಾರ್ಸೆಟ್ ಸಂಸ್ಕೃತಿ ನೆಲೆಸಿತ್ತು. ಈ ಸಂಸ್ಕೃತಿ ಆರ್ಕ್‍ಟಿಕ್ ತೀರ ಪ್ರದೇಶದಲ್ಲಿ ನ್ಯೂ ಫೌಂಡ್‍ಲೆಂಡಿನಿಂದ ಪೂರ್ವ ಗ್ರೀನ್‍ಲೆಂಡಿನ ವರೆಗೂ ಹಬ್ಬಿತ್ತು. ಈ ಸಂಸ್ಕೃತಿಗೆ ಸೇರಿದ ಈಟಿಗಾಳ, ಚಾಕು, ಹಣತೆ ಕಲ್ಲಿನಾಯುಧಗಳು ಮತ್ತು ದಂತದ ಕೆತ್ತನೆ ವಸ್ತುಗಳು ಥ್ಯೂಲೀ ಸಂಸ್ಕೃತಿಯ ವಸ್ತುಗಳಿಗಿಂತ ನಯವಾಗಿದ್ದುವು. ಈ ಸಂಸ್ಕೃತಿಯ ಜನಕ್ಕೆ ಥ್ಯೂಲೀ ಸಂಸ್ಕೃತಿಯವರು ಬಳಸುತ್ತಿದ್ದ ನಾಯಿ ಹೂಡಿದ ಸ್ಲೆಜ್‍ಗಾಡಿ, ಬಿಲ್ಲಿನಾಕಾರದ ಬೈರಿಗೆ, ಎಲುಬಿನಿಂದ ಮಾಡಿದ ಬಾಣದ ಮೊನೆ ಮುಂತಾದವುಗಳ ಉಪಯೋಗ ಗೊತ್ತಿರಲಿಲ್ಲ. ಡಾರ್ಸೆಟ್ ಸಂಸ್ಕೃತಿಯ ಹಲವಾರು ಆಯುಧೋಪಕರಣಗಳ ಪ್ರಭಾವ ಅನಂತರಕಾಲದ ಎಸ್ಕಿಮೋಗಳ ಆಯುಧಗಳ ಮೇಲೆ ಕಂಡುಬರುತ್ತದೆ. ಕೆಲ ಕಾಲ ಡಾರ್ಸೆಟ್ ಮತ್ತು ಥ್ಯೂಲೀ ಸಂಸ್ಕೃತಿಗಳು ಒಟ್ಟಿಗೆ ನೆಲೆಸಿದ್ದು ಅನಂತರ ಡಾರ್ಸೆಟ್ ಸಂಸ್ಕೃತಿ ಕಣ್ಮರೆಯಾಗಿ ಥ್ಯೂಲೀ ಸಂಸ್ಕೃತಿ ಪ್ರಬಲವಾಯಿತು. ಇದು ಸು.ಪ್ರ.ಶ.ಪೂ. 750ರಲ್ಲಿ ಇದ್ದುದಾಗಿ ತಿಳಿದುಬಂದಿದೆ. ಡಾರ್ಸೆಟ್ ಸಂಸ್ಕೃತಿಯನ್ನೇ ಹೋಲುವ ಸಾರ್ಕ್ವಾಕ್ ಎಂಬ ಸಂಸ್ಕೃತಿಯ ಅವಶೇಷಗಳು (ಪ್ರ.ಶ.ಪೂ. 600) ಕೆನಡದ ಆರ್ಕ್‍ಟಿಕ್‍ನಲ್ಲಿ ಕಂಡುಬಂದಿದ್ದರೂ ಇದರ ಬಗ್ಗೆ ಹೆಚ್ಚಿನ ವಿವರಗಳು ಗೊತ್ತಾಗಿಲ್ಲ.

ಈ ಪ್ರದೇಶದ ಮತ್ತೊಂದು ಪುರಾತನ ಸಂಸ್ಕೃತಿಯಾದ ಡೆನ್‍ಬಿಗ್ ಸಂಸ್ಕೃತಿ ಡಾರ್ಸೆಟ್ ಸಂಸ್ಕೃತಿಯೊಂದಿಗೂ ಎಸ್ಕಿಮೋ ಪೂರ್ವದ ಸಂಸ್ಕೃತಿಗಳೊಂದಿಗೂ ಹೋಲಿಕೆ ಪಡೆದಿದೆ. ಅದೂ ಈ ಸಂಸ್ಕೃತಿಗಳ ಮೇಲೆ ತಕ್ಕಮಟ್ಟಿನ ಪ್ರಭಾವ ಬೀರಿದಂತೆ ಕಾಣುತ್ತದೆ. ಪ್ರ.ಶ.ಪೂ. 3100–1600ದಷ್ಟು ಹಳೆಯದಾದ ಈ ಸಂಸ್ಕೃತಿಯ ಅಂಶಗಳು ಇಪಿಯುಟಾಕ್ ಸಂಸ್ಕೃತಿಯಲ್ಲೂ ಕಂಡುಬರುತ್ತವೆ. (ಬಿ.ಕೆ.ಜಿ.)

**ಕಲೆ:** ಪ್ರಾಗಿತಿಹಾಸಕಾಲದಿಂದ ಇಂದಿನವರೆಗೂ ಎಸ್ಕಿಮೋಗಳು ಕಲಾ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಆಚಾರ ವ್ಯವಹಾರಗಳಲ್ಲಿ ಭಿನ್ನತೆಯಿರುವಂತೆ ಎಸ್ಕಿಮೋಗಳು ಹೆಚ್ಚು ಸಮಯವನ್ನು ಕಲಾ ಸೃಷ್ಟಿಗಾಗಿ ಬಳಸಲು ಅವಕಾಶವಿದ್ದದ್ದರಿಂದ ಪ್ರಾಚೀನ ಬೇರಿಂಗ್ ಸಮುದ್ರದ ಎಸ್ಕಿಮೋಗಳು ಪ್ರಾಗಿತಿಹಾಸ ಕಾಲದಿಂದ ಉತ್ತಮ ಕಲಾಕೃತಿಗಳನ್ನು ಸೃಷ್ಟಿಸಿದ್ದಾರೆ. ಓಕ್ವಿಕ್, ಪುನಕ್, ಸೇಂಟ್‍ಲಾರೆನ್ಸ್ ಮುಂತಾದ ಕಡೆಗಳಲ್ಲಿ ನಡೆದ ಉತ್ಖನನಗಳು ಪ್ರ.ಶ.ಪೂ. 3ನೆಯ ಸಹಸ್ರಮಾನಕ್ಕೆ ಸೇರಬಹುದಾದ ಕಲಾವಿಶೇಷಗಳನ್ನು ಬೆಳಕಿಗೆ ತಂದಿವೆ. ಈಟಿಗಾಳಗಳು, ಒರೆಯುವ ಆಯುಧಗಳು, ಚಾಕುಗಳ ಹಿಡಿಗಳು ಮತ್ತು ಮೀನು ಹಿಡಿಯಲು ಉಪಯೋಗಿಸುವ ಬೆಂಡುಗಳು ಇವುಗಳ ಮೇಲೆ ವಿವಿಧ ಆಕಾರಗಳ ಕೆತ್ತನೆಯ ಕೆಲಸಗಳನ್ನು ಮಾಡಲಾಗಿದೆ. ಇವುಗಳಲ್ಲಿ ಕೆಲವು ವಿವಿಧ ಪ್ರಾಣಿಗಳ ಚಿತ್ರಗಳೆಂಬುದು ಸುಲಭವಾಗಿ ಗೊತ್ತಾಗುತ್ತದೆ. ದಂತದ ಈಟಿಗಾಳಗಳ ಮೇಲೆ ಕೆತ್ತಲಾಗಿರುವ ಪ್ರಾಣಿಗಳ ಚಿತ್ರಗಳು ಬಹು ನಾಜೂಕಾಗಿವೆ. ಅವುಗಳ ಕಣ್ಣು, ಕಿವಿ, ಮೂಗು, ಹಲ್ಲು ಮೊದಲಾದ ಅಂಗಗಳನ್ನು ಚಿತ್ರಿಸುವಲ್ಲಿ ಚಿತ್ರಕಾರನ ಕುಶಲತೆ ಎದ್ದು ಕಾಣುತ್ತದೆ. ಈ ಕಾಲದ ಚಿತ್ರಗಳಲ್ಲಿ ಪದೇ ಪದೇ ಕಾಣಬರುವ ಚಿತ್ರವೆಂದರೆ ರೆಕ್ಕೆಯಿರುವ ಪ್ರಾಣಿಯದು. ಇದರಲ್ಲಿ ರೆಕ್ಕೆಯ ಎರಡು ಭಾಗಗಳಲ್ಲೂ ಕಾಣಬರುವ ಪ್ರಮಾಣೌಚಿತ್ಯ ಗಮನಾರ್ಹವಾದದ್ದು. ಅಲಾಸ್ಕದ ಪುನಕ್ ದ್ವೀಪದಲ್ಲಿ ದೊರಕಿರುವ ದಂತದ ಶಿಲ್ಪಗಳು ಆ ಕಾಲದ ಶಿಲ್ಪ ಶೈಲಿಗೆ ಉತ್ತಮ ಸಾಕ್ಷಿಗಳಾಗಿವೆ. ಪ್ರಮಾಣ ಮೀರಿದ ಸ್ತನಗಳು, ನಿತಂಬ ಮುಂತಾದವುಗಳಿಂದ ಇವು ಕಾಮದೇವತೆಯ ಶಿಲ್ಪಗಳೆಂದು ಸುಲಭವಾಗಿ ಊಹಿಸಬಹುದು. ದಕ್ಷಿಣ ಅಲಾಸ್ಕದ ಬ್ರಿಸ್ಟಲ್ ಖಾರಿ, ಅಲ್ಯೂಷನ್ ಮತ್ತು ಕೋಡಿಯಾಕ್ ದ್ವೀಪಗಳು, ಕುಕ್ ಖಾರಿ, ವಿಲಿಯಂ ಸೌಂಡ್ ಮುಂತಾದ ಕಡೆಗಳಲ್ಲಿ ದೊರಕಿರುವ ಪ್ರಾಗೈತಿಹಾಸಿಕ ಅವಶೇಷಗಳಿಂದ ಈ ಎಸ್ಕಿಮೋಗಳು ವಿಶೇಷವಾಗಿ ಸಮುದ್ರದ ಪ್ರಾಣಿಗಳ ಮತ್ತು ಪಕ್ಷಿಗಳ ರೇಖಾಚಿತ್ರಗಳನ್ನೂ ವರ್ಣಚಿತ್ರಗಳನ್ನೂ ಮೂಳೆಯ ಆಯುಧಗಳ ಮೇಲೆ ಬರೆಯುತ್ತಿದ್ದರೆಂದು ಗೊತ್ತಾಗುತ್ತದೆ. ಈಟಿ, ಚಾಕು ಮುಂತಾದವುಗಳ ಮೇಲೆ ಪ್ರಾಣಿಗಳ ಚಿತ್ರಗಳನ್ನು ಬರೆದರೆ ಆ ಪ್ರಾಣಿಗಳು ಬೇಗ ಈ ಆಯುಧಗಳ ಏಟಿಗೆ ಸಿಕ್ಕಿ ಸಾಯುತ್ತವೆ ಎಂಬ ನಂಬಿಕೆ ಇದ್ದಿರಬೇಕು.

ಕೆನಡ ಮತ್ತು ಗ್ರೀನ್‍ಲೆಂಡಿನ ಎಸ್ಕಿಮೋಗಳ ಪ್ರಾಗೈತಿಹಾಸಿಕ ಕಲೆಗಳಲ್ಲಿ ಮುಖ್ಯವಾದದ್ದು ಶಿಲ್ಪ. ಪ್ರಾಣಿಗಳ ಮತ್ತು ಮಾನವನ ಶಿಲ್ಪಗಳನ್ನು ಇವರು ದಂತ, ಮೂಳೆ ಮತ್ತು ಮರಗಳಲ್ಲಿ ರೂಪಿಸಿದ್ದಾರೆ. ಇವುಗಳಲ್ಲಿ ವಿಶೇಷವಾಗಿ ಜೀವಂತ ಲಕ್ಷಣಗಳು ಕಾಣಬರುತ್ತವೆ. ಡಾರ್ಸೆಟ್ ಸಂಸ್ಕೃತಿಯ (ಪ್ರ.ಶ. 7ನೆಯ ಶತಮಾನ)

ಶಿಲ್ಪಗಳಲ್ಲಿ ಅಗಲವಾದ ಮತ್ತು ದುಂಡಾದ ಮುಖ, ಚಪ್ಪಟೆ ಮೂಗು ಮತ್ತು ಅಗಲಬಾಯಿ–ಇವು ಮುಖ್ಯ ಲಕ್ಷಣಗಳು. ಒಂದಕ್ಕಿಂತಲೂ ಹೆಚ್ಚು ತಲೆ ಮುಖಗಳನ್ನುಳ್ಳ ಮರದ ಶಿಲ್ಪಗಳು ಕೆನಡ ಮತ್ತು ಗ್ರೀನ್‌ಲೆಂಡಿನ ಅಗೆತಗಳಲ್ಲಿ ದೊರಕಿವೆ.

ಸಮಕಾಲೀನ ಎಸ್ಕಿಮೋ ಕಲೆಯಲ್ಲಿ ವಿಕಾಸಹೊಂದಿದ ಪ್ರಾಗೈತಿಕಹಾಸಿಕ ಪರಂಪರೆಯನ್ನೇ ಕಾಣಬಹುದು. ಆಯುಧಗಳ ಮೇಲೆ, ಪೆಟ್ಟಿಗೆಗಳ ಮೇಲೆ ದಂತದ ಕೆತ್ತನೆಯ ಕೆಲಸ ವಿಶೇಷವಾಗಿ ಕಾಣಬರುತ್ತದೆ. ಶಿಲ್ಪಗಳಲ್ಲಿ ಬಹು ಮುಖ್ಯವಾದವು ದಂತದಿಂದ ಮತ್ತು ಮರದಿಂದ ಮಾಡಲಾದವು. ಆದರೆ ಅಲಾಸ್ಕ ಎಸ್ಕಿಮೋಗಳ ಉನ್ನತ ಮಟ್ಟದ ಕಲೆಯನ್ನು ನೃತ್ಯದಲ್ಲಿ ಬಳಸಲಾಗುವ ವಿವಿಧ ವರ್ಣಗಳ ಮುಖವಾಡಗಳಲ್ಲಿ ಕಾಣಬಹುದು. ಕ್ಯಾರಿಬೂ ಪ್ರಾಣಿಯ ಚರ್ಮವನ್ನು ಆಕಾರಕ್ಕೆ ತಕ್ಕಂತೆ ಕತ್ತರಿಸಿ, ಕೆಂಪು, ಕಪ್ಪು, ನೀಲಿ ಮತ್ತು ಬಿಳಿಯ ಬಣ್ಣಗಳಿಂದ ಕಣ್ಣು, ಮೂಗು, ಬಾಯಿ ಮುಂತಾದವನ್ನು ಚಿತ್ರಿಸಿ ಅದರ ಸುತ್ತಲೂ ಪಕ್ಷಿಯ ಗರಿಗಳನ್ನು ಕಟ್ಟಿ ಮುಖವಾಡಗಳನ್ನು ತಯಾರಿಸುತ್ತಿದ್ದರು. ಮರದಿಂದ ಮಾಡಿದ ಮುಖವಾಡಗಳೂ ಬಳಕೆಯಲ್ಲಿದ್ದುವು. ಗ್ರೀನ್‌ಲೆಂಡ್ ಕೆನಡಗಳ ಎಸ್ಕಿಮೋಗಳ ಸಮಕಾಲೀನ ಕಲೆಯಲ್ಲಿ ವಿಶೇಷವೇನೂ ಕಾಣಬರುವುದಿಲ್ಲ. ಇಲ್ಲಿಯೂ ಆಯುಧಗಳ ಮೇಲಿನ ರೇಖಾಚಿತ್ರ, ದಂತದ ಶಿಲ್ಪಗಳು ಮತ್ತು ಮರದ ಶಿಲ್ಪಗಳನ್ನು ಕಾಣಬಹುದು. ಶಿಲ್ಪಗಳಲ್ಲಿ ಮುಖಲಕ್ಷಣಗಳೂ ಉಡುಗೆತೊಡುಗೆಗಳೂ ಎಸ್ಕಿಮೋಗಳ ನಿಜ ಜೀವನವನ್ನು ಪ್ರತಿಬಿಂಬಿಸುತ್ತವೆಯೆಂಬುದು ಗಮನಾರ್ಹ. ಆದಿಮಾನವ ಕಲೆಯಲ್ಲಿ ಎಸ್ಕಿಮೋ ಕಲೆಯ ಸ್ಥಾನ ವಿಶಿಷ್ಟವಾದದ್ದು. (ಎ.ವಿ.ಎನ್.)

**ಎಸ್ಕಿಮೊ ಭಾಷೆ:** ಕೆನಡ, ಗ್ರೀನ್‌ಲೆಂಡ್, ಅಲಾಸ್ಕ ಪರ್ವತ, ಸೋವಿಯತ್ ಸೈಬೀರಿಯ ಮುಂತಾದ ಉತ್ತರ ಧ್ರುವದ ಸಮೀಪವಿರುವ ಪ್ರದೇಶಗಳಲ್ಲಿ ವಾಸಿಸುವ ಎಸ್ಕಿಮೋ ಜನರು ಮಾತಾಡುವ ಭಾಷೆ. ಅಲಾಸ್ಕ ಪರ್ವತ, ಕಮ್ಯಾಂಡರ್ ದ್ವೀಪ ಹಾಗೂ ಅಲ್ಯೂಷನ್ ದ್ವೀಪಗಳಲ್ಲಿ ಬಳಕೆಯಲ್ಲಿರುವ ಅಲ್ಯೂಟ್ ಭಾಷೆಯೂ ಈ ಪರಿವಾರಕ್ಕೆ ಸೇರುತ್ತದೆ. ಭೌಗೋಳಿಕವಾಗಿ ಬಹು ದೊಡ್ಡ ಪ್ರದೇಶದಲ್ಲಿ ಚೆದರಿ ಹೋಗಿದ್ದರೂ ಈ ಭಾಷೆಗಳಲ್ಲಿ ಪ್ರಭೇದಗಳು ಬಹಳ ಕಡಿಮೆಯಿರುವುದು ಗಮನಾರ್ಹವಾಗಿದೆ. ಎಸ್ಕಿಮೋ ಭಾಷೆಯಲ್ಲಿ ಮುಖ್ಯವಾಗಿ ಪೂರ್ವದ ಎಸ್ಕಿಮೋ ಮತ್ತು ಪಶ್ಚಿಮದ ಎಸ್ಕಿಮೋ ಎಂಬ ಎರಡು ಪ್ರಭೇದಗಳನ್ನು ಗುರುತಿಸಬಹುದು.

1814ರಲ್ಲಿ ಡೇನಿಷ್ ಭಾಷಾ ವಿಜ್ಞಾನಿಯಾದ ರಾಸ್ಕ್ ಎಂಬಾತ ಎಸ್ಕಿಮೋ ಮತ್ತು ಅಲ್ಯೂಟ್ ಭಾಷೆಗಳಲ್ಲಿನ ಸಾಮ್ಯಗಳನ್ನು ಕಂಡುಹಿಡಿದು ಅವು ಒಂದೇ ಪರಿವಾರಕ್ಕೆ ಸೇರಿದವೆಂದು ಅಭಿಪ್ರಾಯಪಟ್ಟ. ಮುಂದೆ 20ನೆಯ ಶತಮಾನದಲ್ಲಿ ನಡೆದ ಸಂಶೋಧನೆಗಳೂ ಈ ಭಾವನೆಗೆ ಪುಷ್ಟಿಯನ್ನಿತ್ತವು. ಆದರೂ ಹಲಕೆಲವು ವಿದ್ವಾಂಸರು ಈ ಭಾಷೆಗಳನ್ನು ಇಂಡೋ ಯುರೋಪಿಯನ್ ಮತ್ತು ಯೂರಲ್–ಅಲ್ಟಾಯಿಕ್ ಗುಂಪುಗಳ ಜೊತೆ ಸೇರಿಸುವ ಪ್ರಯತ್ನವನ್ನೂ ಮಾಡಿದ್ದಾರೆ.

ನಮಗೆ ತಿಳಿದಮಟ್ಟಿಗೆ ಈ ಭಾಷೆಗಳನ್ನಾಡುವವರ ಸಂಖ್ಯೆ ಹೀಗಿದೆ. ಎಸ್ಕಿಮೋ ಭಾಷೆ ಸೈಬೀರಿಯದಲ್ಲಿ 1,000, ಅಲಾಸ್ಕದಲ್ಲಿ 16,000, ಕೆನಡದಲ್ಲಿ 10,000 ಗ್ರೀನ್‌ಲೆಂಡಿನಲ್ಲಿ 25,000, ಅಲ್ಯೂಟ್ ಭಾಷೆ ಅಲ್ಯೂಷನ್ ದ್ವೀಪಗಳಲ್ಲಿ ಸುಮಾರು 6,000.

ಈ ಭಾಷೆಗಳ ಪ್ರಧಾನ ವೈಶಿಷ್ಟ್ಯವೆಂದರೆ ಅವುಗಳ ರಚನೆ ಸ್ಪಷ್ಟ ಯೋಗಾತ್ಮಕವಾಗಿದ್ದು ಒಂದೇ ಶಬ್ದ ತನ್ನಲ್ಲಿ ಸೇರಿಕೊಂಡಿರುವ ಪ್ರತ್ಯಯಗಳ ಆಧಾರದ ಮೇಲೆ ಇಡೀ ವಾಕ್ಯದ ಅರ್ಥವನ್ನೇ ಕೊಡುವ ಸಾಮರ್ಥ್ಯವನ್ನು ಪಡೆದಿದೆ. ಒಂದು ನಾಮಧಾತುವಿಗೆ ಮುನ್ನೂರಕ್ಕಿಂತಲೂ ಹೆಚ್ಚು ರೂಪಗಳು ಹಾಗೂ ಒಂದು ಕ್ರಿಯಾಧಾತುವಿಗೆ ಒಂದು ಸಾವಿರಕ್ಕಿಂತಲೂ ಹೆಚ್ಚು ರೂಪಗಳಿವೆಯೆಂದರೆ ಈ ಭಾಷೆಗಳ ಪದಗಳು ಸಂಸ್ಕೃತ ಹಾಗೂ ಗ್ರೀಕ್ ಭಾಷೆಗಳ ಪದಗಳಿಗಿಂತಲೂ ಹೆಚ್ಚಿನ ರೂಪ ವೈವಿಧ್ಯಗಳನ್ನು ಹೊಂದಿವೆ ಎಂದು ತಿಳಿಯಬಹುದು. ರಚನೆಯಲ್ಲಿ ಇಂಥ ರೂಪಗಳು ಸಂಸ್ಕೃತ ಗ್ರೀಕ್ ಭಾಷೆಗಳಿಗಿಂತ ಜಟಿಲವಾಗಿ ಕಂಡರೂ ಪದಾಂತ್ಯ ಪ್ರತ್ಯಯಗಳಲ್ಲಿ ಆಕೃತಿ ವೈವಿಧ್ಯ ಕಡಿಮೆ ಇರುವುದರಿಂದ ಸ್ವಲ್ಪ ಸರಳವಾಗಿಯೇ ಇವೆಯೆನ್ನಬಹುದು. ಏಕವಚನ, ದ್ವಿವಚನ, ಬಹುವಚನಗಳೆಂಬ ಮೂರು ವಚನಗಳಿವೆ. ಉದಾ: ಎಸ್ಕಿಮೋ ಭಾಷೆಯಲ್ಲಿ ಇಗ್ಲು–ಒಂದು ಮನೆ. ಇಗ್ಲುಕ್–ಎರಡು ಮನೆಗಳು, ಇಗ್ಲುತ್–ಎರಡಕ್ಕಿಂತ ಹೆಚ್ಚು ಮನೆಗಳು. ನಾಮಪದಕ್ಕೆ ಕ್ರಿಯಾಪದದೊಡನಿರುವ ಅನೇಕ ರೀತಿಯ ಸಂಬಂಧಗಳನ್ನು ಸೂಚಿಸುವಂಥ ಮತ್ತು, ಇಂದ, ಗೆ, ಮೂಲಕ, ಒಡನೆ, ಅಂತೆ, ಅಲ್ಲಿ ಮುಂತಾದ ವಿವಿಧ ಅರ್ಥಗಳನ್ನು ಸೂಚಿಸುವಂಥ ವಿಭಕ್ತಿ ಪ್ರತ್ಯಯಗಳಿವೆ. ವಿಭಕ್ತಿ ಮತ್ತು ವಚನ ಪ್ರತ್ಯಯಗಳಲ್ಲದೆ ಸರ್ವನಾಮದೊಡನೆ ಸಂಬಂಧವನ್ನು ಸೂಚಿಸುವ ಪ್ರತ್ಯಯಗಳೂ ಇವೆ. ಉದಾ. ಇಗ್ಲುಗ–ನನ್ನ ಮನೆ, ಇಗ್ಲುಬ್ಸಿ–ನಿನ್ನ ಮನೆ ಇಗ್ಲುಅ–ಅವನ ಮನೆ, ಇಗಲುನಿ–ಅವನ ಸ್ವಂತ ಮನೆ ಇತ್ಯಾದಿ. ಕ್ರಿಯಾಪ್ರಕಾರಗಳೂ ಹಲವಾರು. ಸೂಚಕ, ಪ್ರಶ್ನಾರ್ಥಕ, ವಿಧ್ಯರ್ಥಕ, ಸಂಭಾವನಾರ್ಥಕ ಮುಂತಾದ ಪ್ರಭೇದಗಳೂ ಕರ್ತೃಸೂಚಕ ಮತ್ತು ಕರ್ಮಸೂಚಕ ಕೃದಂತಗಳೂ ಇವೆ. ಕ್ರಿಯಾಪದದ ಕೊನೆಯಲ್ಲಿ ಬರುವ ಸರ್ವನಾಮ ಸೂಚಕ ಪ್ರತ್ಯಯಗಳೂ ನಾಮಪದಾಂತ್ಯದಲ್ಲಿ ಬರುವ ಸರ್ವನಾಮ ಸೂಚಕ. ಪ್ರತ್ಯಯಗಳು ಒಂದೇ ಆಗಿವೆ. ಕ್ರಿಯಾಂತ್ಯ ಪ್ರತ್ಯಯಗಳು ಕರ್ತೃಕರ್ಮಗಳೆರಡನ್ನು ಸೂಚಿಸುತ್ತವೆ. ಉದಾ: ತಕುವಗ–ನಾನು ಅದನ್ನು ನೋಡುತ್ತೇನೆ. ತಕುವಗ್ಸಿ–ನೀನು ಅದನ್ನು ನೋಡುತ್ತಿ, ಇತ್ಯಾದಿ. ಪ್ರತ್ಯಯಗಳೆಲ್ಲ ಧಾತುವಿನ ಮುಂದೆ ಜೋಡಿಸಲ್ಪಡುವುದರಿಂದ ಈ ಭಾಷೆಗಳಲ್ಲಿ ಉಪಸರ್ಗಗಳಾಗಲಿ ಅಂತಃ ಪ್ರತ್ಯಯಗಳಾಗಲಿ ಧಾತುಗಳ ಆಂತರಿಕ ಪರಿವರ್ತನೆಯಾಗಲಿ ಕಂಡು ಬರುವುದಿಲ್ಲ. ಸಂಖ್ಯಾಗಣನೆಯಲ್ಲಿ ಬೇರೆ ಬೇರೆ ಬೆರಳುಗಳ ಉಪಯೋಗ ಕಂಡು ಬರುತ್ತದೆ. ಉದಾ: ಎರಡನೆಯ ಕೈಯಲ್ಲಿ ಒಂದು–ಆರು. ಮೊದಲನೆಯ ಕಾಲಿನಲ್ಲಿ ಎರಡು–ಹನ್ನೆರಡು ಇತ್ಯಾದಿ.

ಈ ಭಾಷೆಗಳಲ್ಲಿ ಮುಖ್ಯವಾಗಿ ಇ, ಉ, ಆ ಎಂಬ ಮೂರು ಸ್ವರಗಳೂ ಹದಿಮೂರು ವ್ಯಂಜನಗಳೂ ಇವೆ. ಕೆಲವು ಪ್ರಭೇದಗಳಲ್ಲಿ ವ್ಯಂಜನಗಳ ಸಂಖ್ಯೆ ಇಪ್ಪತ್ತರವರೆಗೆ ಇರುತ್ತವೆ. ಇ ಮತ್ತು ಉ ಪರಿಸರಕ್ಕನುಗುಣವಾಗಿ ಎ ಒ ಎಂಬ ಧ್ವನಿರೂಪಗಳನ್ನು ಪಡೆಯುತ್ತವೆ. ಪ, ತ, ಕ ಮತ್ತು ಕ಼ (ಪಶ್ಚತಾಲವ್ಯ) ಎಂಬ ಅಘೋಷ ಸ್ಪರ್ಶ ವ್ಯಂಜನಗಳೂ ವ, ಯ, ಲ, ಸ ಹಾಗೂ ಗ (ಪಶ್ಚತಾಲವ್ಯ) ಎಂಬ ಘೋಷ ಸಂಘರ್ಷಗಳೂ ಮ, ನ, ಙ ಎಂಬ ಅನುನಾಸಿಕಗಳೂ ಇವೆ. ಕೆಲವು ಪ್ರಭೇದಗಳಲ್ಲಿ ಘೋಷ–ಅಘೋಷ ವ್ಯತ್ಯಾಸವೂ ಸ–ಹಗಳ ವಿಕಲ್ಪ ರೂಪಗಳೂ ಚ–ಸಗಳ ವಿಕಲ್ಪ ರೂಪಗಳೂ ಕಂಡುಬರುತ್ತವೆ. ವರ್ಣಗಳ ಧ್ವನಿರೂಪಗಳೂ ಪರಿಸರಕ್ಕನುಸಾರವಾಗಿ ತುಂಬ ವ್ಯತ್ಯಾಸ ಹೊಂದುವುದು ಈ ಭಾಷೆಗಳ ಒಂದು ಮುಖ್ಯ ವೈಶಿಷ್ಟ್ಯ. ಮೊದಲು ಚಿತ್ರಲಿಪಿಯ ಮೂಲಕ ಬರೆಯಲ್ಪಡುತ್ತಿದ್ದ ಈ ಭಾಷೆಗಳಿಗೆ ಈಗ ಲ್ಯಾಟಿನ್ ಮತ್ತು ರಷ್ಯನ್ ಲಿಪಿಗಳನ್ನು ಬಳಸುತ್ತಾರೆ. (ಯು.ಪಿ.ಯು.)

**ಎಸ್ಕೋಲ್ಟ್‌ಜಿಯ:** ಪಪಾವರೇಸಿ ಜಾತಿಯ, ಬಹು ಸುಲಭವಾಗಿ ಬೆಳೆಯುವ ವಾರ್ಷಿಕ ಹೂಗಿಡ. 1'–1 1/2' ಎತ್ತರ ಬೆಳೆಯುತ್ತದೆ. ಮಡಿಗಳಲ್ಲಿ ಕುಂಡಗಳಲ್ಲಿ ಬೆಳೆಯುತ್ತಾರೆ. ಎಲೆಗಳ ಮೈ ಬಹಳ ಒಡಕಾಗಿರುತ್ತದೆ. 4"–6" ಸುತ್ತಳತೆಯುಳ್ಳ



ಎಸ್ಕೋಲ್ಟ್‌ಜಿಯ ಕ್ಯಾಲಿಫೋರ್ನಿಕ

ತಟ್ಟೆಯ ಆಕಾರದ ಹೂಗಳು ಬೆಳಗಿನಲ್ಲಿ ಮಾತ್ರಅರಳಿ ದೀರ್ಘಕಾಲ ಇರುತ್ತವೆ. ವ್ಯವಸಾಯಕ್ಕೆ, ಹಗುರವಾದ ಮರಳು ಮಿಶ್ರಿತ ಮಣ್ಣು ಬೇಕು. ಬೀಜಗಳನ್ನು ನೇರವಾಗಿ ಬಿತ್ತನೆ ಮಾಡಿ 8"–10" ಅಂತರಗಳಿಗೊಂದು ಸಸಿಯನ್ನು ಬಿಟ್ಟು ಉಳಿದವನ್ನು ಕಿತ್ತು ಹಾಕಬೇಕು. ನಾಲ್ಕು ತಿಂಗಳಲ್ಲಿ ಹೂ ಬರುತ್ತದೆ. ಚಳಿಗಾಲದಲ್ಲಿ, ವರ್ಷಕ್ಕೊಮ್ಮೆ ಹೂ ಬಿಡುತ್ತದೆ.

ಒಂದು ಪ್ರಭೇದವಾದ ಕ್ಯಾಲಿಪೋರ್ನಿಯನ್ ಪಾಪಿ (ಎಸ್ಕೋಲ್ಟ್‌ಜಿಯ ಕ್ಯಾಲಿಪೋರ್ನಿಕ) ಉತ್ತರ ಅಮೆರಿಕದಲ್ಲಿ ಹೇರಳವಾಗಿ, ತಾನೇ ತಾನಾಗಿ ಬೆಳೆಯುತ್ತದೆ. ಕಸಿ ಗಿಡದ ಹೂಗಳಿಂದ ಸುಗಂಧ ಸಾರವನ್ನು ತೆಗೆಯುತ್ತಾರೆ. ಕ್ಯಾಲಿಪೋರ್ನಿಯನ್ ಪಾಪಿ ಎಂಬ ಸುಗಂಧ ಬಹು ಜನಪ್ರಿಯವಾಗಿದೆ. (ಕೆ.)

**ಎಸ್ಟರ್:** ನೀರು ಅಥವಾ ಆಮ್ಲ ಅಥವಾ ಕ್ಷಾರದೊಡನೆ ಕ್ರಿಯೆ ಎಸಗಿ ಆಲ್ಕೊಹಾಲ್ ಮತ್ತು ಒಂದು ಆಮ್ಲವನ್ನು (ಕ್ಷಾರ ಬಳಸಿದಾಗ ಆಮ್ಲದ ಒಂದು ಲವಣವನ್ನು) ಕೊಡುವ ಒಂದು ಸಂಯುಕ್ತ. ಇದರ ವಿಪರ್ಯಯ ಕ್ರಿಯೆಯಲ್ಲಿ ಆಲ್ಕೊಹಾಲ್ ಮತ್ತು ಆಮ್ಲ ಕ್ರಿಯೆ ಎಸಗಿ ನೀರಿನ ಅಂಶ ನಷ್ಟವಾಗಿ ಎಸ್ಟರ್ ಉತ್ಪನ್ನವಾಗುವುದು. ಆದ್ದರಿಂದ ಎಸ್ಟರ್ ಆಲ್ಕೊಹಾಲ್ ಮತ್ತು ಆಮ್ಲದವ್ಯುತ್ಪನ್ನ. ಇದನ್ನು ತಯಾರಿಸಲು ಇತರ ವಿಧಾನಗಳೂ ಇವೆ. ಎಸ್ಟರಿನ ತಯಾರಿಕೆಯಲ್ಲಿ ಬಳಸುವ ಆಮ್ಲಗಳು ನಿರವಯವ ಅಥವಾ ಸಾವಯವ ಆಮ್ಲಗಳಾಗಿರಬಹುದು. ಅಂತೆಯೇ ಎಸ್ಟರಿನಲ್ಲಿ ಭಿನ್ನ ಪ್ರಭೇದಗಳಿವೆ.

ನಿರವಯವ ಆಮ್ಲ ಎಸ್ಟರುಗಳು : ಆಕ್ಸಿಜನ್ ಇರುವ ಖನಿಜಾಮ್ಲಗಳೊಡನೆ (ಮಿನರಲ್ ಆಸಿಡ್ಸ್) ಆಲ್ಕೊಹಾಲುಗಳು ವರ್ತಿಸಿದಾಗ ಎಸ್ಟರುಗಳು ದೊರೆಯುತ್ತವೆ. ಈ ಬಗೆಯ ಎಸ್ಟರುಗಳಲ್ಲಿ ಸಲ್ಫೇಟುಗಳು, ನೈಟ್ರೇಟುಗಳು ಮತ್ತು ಫಾಸ್ಫೇಟುಗಳು ಮುಖ್ಯವಾದುವು. ಅವುಗಳ ನಿರ್ಮಾಣದ ಬಗೆಯನ್ನು ಮುಂದಿನ ಸಮೀಕರಣಗಳು ಸೂಚಿಸುತ್ತವೆ.

$$2CH_3C0H + HOSO_2OH\ 0H \longrightarrow (CH_30)_2\ SO_2 + 2H_2O$$

ಮೆಥನಾಲ್ ಸಲ್ಫ್ಯೂರಿಕ್ ಆಮ್ಲ $\longleftarrow$ ಡೈಮಿಥೈಲ್ ಸಲ್ಫೇಟ್

$$\begin{array}{lcl} CH_2 - OH & & CH_2 - ONO_2 \\ \vert & & \vert \\ CH - OH \quad + & 3HNO_3 \longrightarrow & CH - ONO_2 + 3H_2O + 3H_2O \\ \vert & \text{ನೈಟ್ರಿಕ್ ಆಮ್ಲ} & \vert \\ CH_2 - OH & & CH_2 - ONO_2 \end{array}$$

ಗ್ಲಿಸರಾಲ್ ಗ್ರಿಸರಿಲ್ ಟ್ರೈನೈಟ್ರೇಟ್ (ನೈಟ್ರೊ ಗ್ಲಿಸರಿನ್)

ಆಲ್ಕೀನುಗಳು ಸಲ್ಫ್ಯೂರಿಕ್ ಆಮ್ಲದೊಡನೆ ಸಂಕಲನಗೊಂಡಾಗಲೂ ಸಲ್ಫೇಟ್ ಎಸ್ಟರುಗಳು ಉತ್ಪತ್ತಿಯಾಗುತ್ತವೆ.

$$CH_2{=}CH_2 \longrightarrow CH_3 - CH_2 - OSO_2 - OH$$

ಇಥಲೀನ್ ಈಥೈಲ್ ಮಾನೊಸಲ್ಫೇಟ್

ಡೈಮೀಥೈಲ್ ಮತ್ತು ಡೈ ಈಥೈಲ್ ಸಲ್ಫೇಟುಗಳು ಇತರ ಸಂಯುಕ್ತಗಳಿಗೆ, ಮೀಥೈಲ್ ಮತ್ತು ಈಥೈಲ್ ಪುಂಜಗಳನ್ನು ಸೇರಿಸಲು ಉಪಯೋಗಿಸುವ ಪರಿವರ್ತಕಗಳು (ರೀಏಜೆಂಟ್ಸ್).

ನೈಟ್ರೊ ಗ್ಲಿಸರಿನ್ ಎಂದು ಪರಿಚಿತವಾಗಿರುವ ಗ್ಲಿಸರಿಲ್ ಟ್ರೈ ನೈಟ್ರೇಟ್ ಎಸ್ಟರ್ ಡೈನಮೈಟ್ ತಯಾರಿಕೆಗೆ ಬೇಕಾಗಿರುವ ಸ್ಫೋಟಕ.

ಫಾಸ್ಫಾರಿಕ್ ಆಮ್ಲದ ಎಸ್ಟರುಗಳ ನಿರ್ಮಾಣ ಮತ್ತು ವಿಭಜನೆಗಳು ಅನೇಕ ಜೀವ ರಾಸಾಯನಿಕ (ಬಯೊಕೆಮಿಕಲ್) ಸಂಯೋಜನೆಗಳಲ್ಲಿ ಕಂಡುಬರುತ್ತವೆ. ಹಿರಿಯ ಅಣುತೂಕದ ಆಲ್ಕೊಹಾಲುಗಳ ಸಲ್ಫೋನೇಟ್ ಎಸ್ಟರುಗಳು ಲೋಹ ಲವಣಗಳೇ ಕೃತಕ ಮಾರ್ಜಕ ವಸ್ತುಗಳು (ಡಿಟರ್ಜೆಂಟ್ಸ್). ಗಡಸು ನೀರಿನಲ್ಲೂ ಧಾರಾಳವಾಗಿ ನೊರೆ ಕೊಡುವುದು ವೈಶಿಷ್ಟ್ಯ. ಆದ್ದರಿಂದ ಇವುಗಳ ಉಪಯೋಗ ಈಚೆಗೆ ಹೆಚ್ಚುತ್ತಿದೆ.

ಸಾವಯವ ಆಮ್ಲ ಎಸ್ಟರುಗಳು : ಅಧಿಕ ಸಂಖ್ಯೆಯ ಎಸ್ಟರುಗಳನ್ನು ಕೃತಕವಾಗಿ ತಯಾರಿಸಲಾಗುತ್ತಿದ್ದರೂ ಪ್ರಕೃತಿಯಲ್ಲಿ ಅನೇಕ ಎಸ್ಟರುಗಳು ದೊರೆಯುತ್ತವೆ. ಅನೇಕ ಹಣ್ಣು ಹೂವುಗಳ ಮಾಧುರ್ಯ ಸುಗಂಧಗಳಿಗೆ ಎಸ್ಟರುಗಳೇ ಕಾರಣ. ದ್ರಾಕ್ಷಿ, ಅನಾನಸ್ ಹಣ್ಣುಗಳಲ್ಲಿ ಈಥೈಲ್ ಅಸಿಟೇಟ್; ಸೇಬು, ಬಾಳೆಹಣ್ಣುಗಳಲ್ಲಿ ಅಮೈಲ್ ಅಸಿಟೇಟ್; ಪೆಪ್ಪರಮಿಂಟ್ ತೈಲದಲ್ಲಿ ಮೆಂಥೈಲ್ ಅಸಿಟೇಟ್; ಲವಂಗದಲ್ಲಿ ಮೆಂಥೈಲ್ ಬೆಂಝೋಯೇಟ್; ಶೇವಂತಿಗೆಯಲ್ಲಿ ಮೀಥೈಲ್ ಅಂಥ್ರಾನಿಲೇಟ್ ಮೊದಲಾಗಿ ಸುಗಂಧ ಮಧುರ ದ್ರವ್ಯಗಳನ್ನು ನೀಡುವ ಎಲ್ಲ ಹಣ್ಣು ಹೂವುಗಳಲ್ಲೂ ಹಲವು ಎಸ್ಟರುಗಳಿದ್ದೇ ಇವೆ. ಇವನ್ನು ಅವುಗಳ ಆಕರಗಳಿಂದ ಬೇರ್ಪಡಿಸಲು ಒತ್ತುವಿಕೆ (ಪ್ರೆಸ್ಸಿಂಗ್) ಆಸವೀಕರಣ (ಡಿಸ್ಟಿಲ್ಲೇಷನ್) ಅಥವಾ ಲೀನಕಾರೀ ಸಂಸ್ಕರಣ (ಸಾಲ್ವೆಂಟ್ ಎಕ್ಸ್‌ಟ್ರಾಕಷನ್) ವಿಧಾನಗಳನ್ನು ಉಪಯೋಗಿಸಲಾಗುತ್ತದೆ. ಹೀಗೆ ಸುಗಂಧ, ಮಾಧುರ್ಯಗಳಿಗೆ ಕಾರಣವಾದ ಎಸ್ಟರುಗಳು ಸಾಮಾನ್ಯ ಮತ್ತು ಕಿರಿಯ ಅಣುತೂಕದವು. ಹಿರಿಯ ಅಣುತೂಕದ ಆಮ್ಲಗಳ ಉತ್ಪನ್ನ ಎಸ್ಟರುಗಳಲ್ಲಿ ಸುವಾಸನೆಯಾಗಲಿ ಸುಗಂಧವಾಗಲಿ ಇರುವುದಿಲ್ಲ. ಈ ಬಗೆಯ ಅನೇಕ ಎಸ್ಟರುಗಳ ಮಿಶ್ರಣವೇ ಎಣ್ಣೆ, ಕೊಬ್ಬುಗಳು, ಇನ್ನೂ ಹೆಚ್ಚು ಅಣುತೂಕದ ಎಸ್ಟರುಗಳು ಪ್ರಾಣಿ ಸಸ್ಯಜನ್ಯ ಮೇಣಗಳಲ್ಲಿವೆ.

ಪ್ರಕೃತಿಯಲ್ಲಿ ದೊರೆಯುವ ಎಲ್ಲ ಬಗೆಯ ಎಸ್ಟರುಗಳನ್ನೂ ಸುಲಭವಾಗಿ ಆಮ್ಲ, ಆಲ್ಕೊಹಾಲುಗಳಿಂದ ಪ್ರಯೋಗಶಾಲೆಯಲ್ಲಿ ತಯಾರಿಸಬಹುದು, ಅಷ್ಟೇ ಅಲ್ಲದೆ ಪ್ರಕೃತಿಯಲ್ಲಿ ದೊರೆಯದ ಅಸಂಖ್ಯಾತ ಎಸ್ಟರುಗಳನ್ನೂ ಸಂಯೋಜಿಸಲಾಗಿದೆ.

ಎಸ್ಟರಿಫಿಕೇಷನ್ ಅಥವಾ ಎಸ್ಟರುಗಳ ತಯಾರಿಕೆ : ಎಸ್ಟರುಗಳ ತಯಾರಿಕೆಯ ಹಲವು ಮುಖ್ಯ ವಿಧಾನಗಳನ್ನು ಮುಂದೆ ವಿವರಿಸಿದೆ.

1. ಆಲ್ಕೊಹಾಲ್ ಮತ್ತು ಆಮ್ಲಗಳು ವೇಗವರ್ಧಕವೊಂದರ ಸಂಪರ್ಕದಲ್ಲಿ ನೇರ ಸಂಯೋಗದಿಂದ ಎಸ್ಟರುಗಳಾಗಿ ಪರಿವರ್ತಿತವಾಗುತ್ತವೆ. ಇದರಲ್ಲಿ ಹೈಡ್ರೊಜನ್ ಕ್ಲೋರೈಡ್ ಅಥವಾ ಪ್ರಬಲ ಸಲ್ಫ್ಯೂರಿಕ್ ಆಮ್ಲ ಸಾಮಾನ್ಯವಾಗಿ ಬಳಸುವ ವೇಗವರ್ಧಕಗಳು. ಈಚೆಗೆ ಆಮ್ಲಗುಣವನ್ನುಳ್ಳ ಥಯೋನಿಲ್ ಕ್ಲೋರೈಡ್, ಸಲ್ಫ್ಯೂರಿಕ್ ಕ್ಲೋರೈಡ್, ಬೆಂಝೀನ್ ಸಲ್ಫೋನಿಕ್ ಆಮ್ಲ, ಪ್ಯಾರಟಾಲುಯೀನ್ ಸಲ್ಫ್ಯೂನಿಕ್ ಆಮ್ಲ ಮೊದಲಾದುವನ್ನು ಅನೇಕ ಎಸ್ಟರುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ.

$$R\text{- }COOH + R'OH \xrightarrow{\text{ವೇಗವರ್ಧಕ}} R\ COOR' + H_2O$$

ಆಮ್ಲ ಆಲ್ಕೊಹಾಲ್ $\longleftarrow$ ಎಸ್ಟರ್ ನೀರು

ಇದೊಂದು ವಿಪರ್ಯಯ (ರಿವರ್ಸಿಬಲ್) ಕ್ರಿಯೆಯಾದ್ದರಿಂದ ಎಸ್ಟರಿನ ನಿರ್ಮಾಣ ಇಲ್ಲಿ ಸಂಪೂರ್ಣವಾಗಿ ಆಗದು. ಕ್ರಿಯೆಯ ಸಮತೋಲ ಎಸ್ಟರ್ ನಿರ್ಮಾಣದ ಪರವಾಗಿ ಇರಬೇಕಾದರೆ ಆಮ್ಲದ ಆಲ್ಕೊಹಾಲಿನ ಪ್ರಮಾಣ ಅಧಿಕವಾಗಿರಬೇಕು; ಅಲ್ಲದೇ ಉತ್ಪನ್ನವಸ್ತುಗಳಾದ ನೀರು ಮತ್ತು ಎಸ್ಟರುಗಳಲ್ಲಿ ಒಂದನ್ನಾದರೂ ನಿರ್ಮಾಣವಾದಂತೆಲ್ಲ ಕ್ರಿಯಾಮಿಶ್ರಣದಿಂದ ಹೊರ ತೆಗೆಯುತ್ತಿರಬೇಕು. ಈ ಪರಿಸ್ಥಿತಿಯಲ್ಲಿ ವಿಪರ್ಯಯ ಕ್ರಿಯಾವೇಗ ಕಡಿಮೆಯಾಗಿ ಎಸ್ಟರಿನ ನಿರ್ಮಾಣ ಕಾರ್ಯ ತ್ವರಿತಗೊಳ್ಳುತ್ತದೆ.

ಪ್ರೈಮರಿ ಮತ್ತು ಸೆಕೆಂಡರಿ ಆಲ್ಕೊಹಾಲುಗಳನ್ನು ಬಳಸಿ ಎಸ್ಟರುಗಳನ್ನು ತಯಾರಿಸುವಾಗ ಆಲ್ಕೊಹಾಲ್ ಹೈಡ್ರೊಜನ್ನನ್ನೂ ಆಮ್ಲ ಹೈಡ್ರೊಕ್ಸಿಲ್ ಪುಂಜವನ್ನೂ ಒದಗಿಸಿ ನೀರಿನ ಒಂದು ಅಣುವನ್ನು ಉತ್ಪತ್ತಿ ಮಾಡುತ್ತವೆ. ಆದರೆ ಟರ್ಷಿಯರಿ ಆಲ್ಕೊಹಾಲಿನಿಂದಲೂ ಹೈಡ್ರೊಜನ್ನಿನ ಒಂದು ಪರಮಾಣು ಆಮ್ಲದಿಂದಲೂ ಬರುತ್ತವೆ.

$$R - COO\ \ H + HO\ R' \rightarrow R - COO\ \ R'$$

$$R - COOH + HOC \begin{cases} R' \\ R'' \\ R''' \end{cases} \rightarrow R - COOC \begin{cases} R \\ R'' \\ R''' \end{cases}$$

2. ಆಮ್ಲಗಳಿಗೆ ಬದಲಾಗಿ ಆಮ್ಲ ಅನ್‌ಹೈಡ್ರೈಡ್ ಆಮ್ಲಹ್ಯಾಲೈಡ್, ಆಮ್ಲೈಡ್ ಮತ್ತು ಸಯನೈಡ್ ಅಥವಾ ನೈಟ್ರೇಟುಗಳನ್ನು ಎಸ್ಟರಿಫಿಕೇನ್ನಿಗೆ ಉಪಯೋಗಿಸಬಹುದೆಂಬುದನ್ನು ಮುಂದಿನ ಸಮೀಕರಣಗಳಿಂದ ತಿಳಿಯಬಹುದು.

(i) $(R\text{-}CO_2)O + R'OH \longrightarrow R - COOH + R\ COOR'$

ಅಥವಾ

$(R\text{-}CO_2)O + 2R'OH \longrightarrow 2RCOOR' + H_20$

(ii) $R\text{-}COX + R'OH \longrightarrow R\ COOR' + HX$

(iii) $R\text{-}CN + R'OH + HOH \longrightarrow R\text{-}COOR' + NH_3$

3. ಆಮ್ಲ ಲವಣಗಳಿಂದ ಎಸ್ಟರುಗಳನ್ನು ತಯಾರಿಸಲು ಎರಡು ಬಗೆಯ ವಿಧಾನಗಳನ್ನು ಅನುಸರಿಸಬಹುದು. ಮೊದಲ ವಿಧಾನದಲ್ಲಿ ಥಯೋನಿಲ್ ಕ್ಲೋರೈಡ್ ಮತ್ತು ಆಲ್ಕೊಹಾಲನ್ನೂ ಎರಡನೆಯ ವಿಧಾನದಲ್ಲಿ ಆಲ್ಕೈಲ್ ಹ್ಯಾಲೈಡುಗಳನ್ನೂ ಬಳಸುತ್ತಾರೆ. ಈ ಕ್ರಿಯೆಗಳನ್ನು ಮುಂದಿನ ಸಮೀಕರಣಗಳು ಸೂಚಿಸುತ್ತವೆ.

(i) $R'OH + SOCl_2 \longrightarrow R'\text{-}O\text{-}SOCl + HCl$

ಆಲ್ಕೈಲ್ ಕ್ಲೋರೋಸಲ್ಫೇಟ್

(ii) $R\text{-}COONa + R'X \longrightarrow$

4. ಮೀಥೈಲ್ ಎಸ್ಟರುಗಳನ್ನು ಮಾತ್ರ ತಯಾರಿಸಲು ಡೈ ಆಝೋ ಮೀಥೇನ್ ಎಂಬ ಪರಿವರ್ತಕವನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಲಾಗುತ್ತದೆ.

5. ಅಮೈಡುಗಳನ್ನು ಆಲ್ಕೊಹಾಲೀಕರಣಕ್ಕೆ (ಆಲ್ಕೊಹಾಲೈಸಿಸ್) ಒಳಪಡಿಸಿದಾಗ ಉತ್ಪತ್ತಿಯಾಗುತ್ತದೆ.

$$R-CONH_2 + R'OH \rightarrow R-COOR' + NH_3$$

6. ಹಲವು ವಿಶಿಷ್ಟ ವೇಗವರ್ಧಕಗಳ ಸಂಪರ್ಕದಲ್ಲಿ ಆಲ್ಕೊಹಾಲುಗಳಿಂದ ಹೈಡ್ರೊಜನ್ ನಿವಾರಣೆ (ಡೀಹೈಡ್ರೊಜೀನೇಷನ್) ಮಾಡಿ ಎಸ್ಟರುಗಳನ್ನು ತಯಾರಿಸಬಹುದು.

$$2RCH_2OH \leftarrow RCOOCH_2R + 2H$$

7. ಇದೇ ರೀತಿ ಪ್ರತ್ಯೇಕ ಮತ್ತು ವಿಶಿಷ್ಟ ವಿಧಾನಗಳನ್ನು ಅನುಸರಿಸಿ ಆಲ್ಡಿಹೈಡುಗಳನ್ನೂ ಎಸ್ಟರುಗಳಾಗಿ ಪರಿವರ್ತಿಸಬಹುದು.

$$2-R-CHO \rightarrow RCOO \quad CH_2R$$

8. ಕೀಟೀನ್ ಸಂಯುಕ್ತದಿಂದ ಅಸಿಟಿಕ್ ಆಮ್ಲದ ಎಸ್ಟರುಗಳನ್ನು ತಯಾರಿಸಬಹುದು.

$$CH_2 = C = O + ROH \rightarrow CH_3 \quad COOR$$

9. ಆಮ್ಲ ಅಥವಾ ಕ್ಷಾರ ವೇಗವರ್ಧಕಗಳ ನೆರವಿನಿಂದ ಎಸ್ಟರುಗಳಲ್ಲಿನ ಆಲ್ಕೊಹಾಲ್ ಮೂಲದ ಪುಂಜವನ್ನು ಮತ್ತೊಂದು ಪುಂಜದಿಂದ ಪಲ್ಲಟಿಸಿ ಹೊಸ ಎಸ್ಟರನ್ನು ನಿರ್ಮಿಸಬಹುದು. ಈ ಬಗೆಯ ಕ್ರಿಯೆಯ ಹೆಸರು ಎಸ್ಟರ್ ವಿನಿಮಯ ಕ್ರಿಯೆ (ಎಸ್ಟರ್ ಇಂಟರ್‌ಚೇಂಜ್).

$$R-COOR' + R'OH \longrightarrow R-COOR' + R'OH$$

ಗುಣಲಕ್ಷಣಗಳು : ಎಸ್ಟರುಗಳು ಬಲುಮಟ್ಟಿಗೆ ದ್ರವಗಳು. ಬಲು ಹಿರಿಯ ಅಣುತೂಕದ ಹಲವು ಎಸ್ಟರುಗಳು ಘನವಸ್ತುಗಳು. ಇವುಗಳ ಕರಗುವ ಬಿಂದು ಸಹ ಅಷ್ಟೇನೂ ಹೆಚ್ಚಿರುವುದಿಲ್ಲ. ಆಲ್ಕೊಹಾಲ್ ಮತ್ತು ಆಮ್ಲಗಳಲ್ಲಿರುವ ಹೈಡ್ರೊಜನ್ ಬಂಧ ಎಸ್ಟರುಗಳಲ್ಲಿ ಇಲ್ಲವಾದ್ದರಿಂದ ಸಮಾನ ಅಣುತೂಕದ ಆಮ್ಲ, ಆಲ್ಕೊಹಾಲುಗಳ ಕರಗುವ ಬಿಂದುಗಳಿಗಿಂತಲೂ ಎಸ್ಟರಿನ ಕರಗುವ ಬಿಂದು ಮತ್ತು ಕುದಿಯುವ ಬಿಂದುಗಳು ಕಡಿಮೆಯಿರುವುದು ಸಹಜವೇ ಆಗಿದೆ.

ಎಸ್ಟರುಗಳ ರಾಸಾಯನಿಕ ಲಕ್ಷಣಗಳನ್ನು ಪರಿಶೀಲಿಸುವಾಗ ಇವು ಆಮ್ಲ ಮತ್ತು ಆಲ್ಕೊಹಾಲುಗಳ ಉತ್ಪನ್ನಗಳು ಮತ್ತು ಕಾರ್ಬೊನಿಲ್ ಪುಂಜವುಳ್ಳ ಸಂಯುಕ್ತಗಳು ಎಂಬುದನ್ನು ನೆನಪಿನಲ್ಲಿಟ್ಟಿರಬೇಕು.

1. ಎಸ್ಟರುಗಳ ಜಲ ವಿಶ್ಲೇಷಣೆ ಆಮ್ಲ ಮತ್ತು ಆಲ್ಕೊಹಾಲುಗಳನ್ನು ಒದಗಿಸುತ್ತದೆ.

$$R-COOR' + H_2O \rightarrow RCOOH + R'OH$$

ಇದು ಎಸ್ಟರ್ ತಯಾರಿಕೆಯ ವಿಪರ್ಯಯ ಕ್ರಿಯೆ. ವೇಗವರ್ಧಕಗಳ ನೆರವಿಲ್ಲದೆ ಕ್ರಿಯೆ ಬಲು ನಿಧಾನವಾಗಿ ನಡೆಯುತ್ತದೆ. ಆದರೆ ಆಮ್ಲ ಅಥವಾ ಕ್ಷಾರಗಳ ಸಂಪರ್ಕದಲ್ಲಿ ಸಾಕಷ್ಟು ವೇಗವಾಗಿ ನಡೆಯುತ್ತದೆ. ಕ್ಷಾರವನ್ನು ಬಳಸಿದಾಗ ಉತ್ಪತ್ತಿಯಾದ ಆಮ್ಲದೊಡನೆ ಅದು ವರ್ತಿಸಿ ಲವಣವನ್ನು ನೀಡುತ್ತದೆ. ಸಾಬೂನು ತಯಾರಿಸುವಾಗ ಈ ಕ್ರಿಯೆ ನಡೆಯುವುದರಿಂದ ಅದನ್ನು ಸಾಬೂನೀ ಕರಣ ಕ್ರಿಯೆ (ಸಪೋನಿಫಿಕೇಷನ್) ಎನ್ನುವರು. ಒಂದು ಅಣುತೂಕದಷ್ಟು ಕ್ಷಾರ ವಸ್ತುವಿನೊಡನೆ ಸಂಪೂರ್ಣವಾಗಿ ವರ್ತಿಸಬಲ್ಲ ಎಸ್ಟರಿನ ತೂಕಕ್ಕೆ ಎಸ್ಟರಿನ ಸಾಬೂನೀಕರಣಾಂಕ ಎಂದು ಹೆಸರು.

2. ಕ್ಷಾರ ವಸ್ತು ಅಮೋನಿಯ ಆಗಿದ್ದಲ್ಲಿ ಕ್ರಿಯೆ ಅಮೋನಿಯ ವಿಶ್ಲೇಷಣೆ (ಅಮೊನೊಲಿಸಿಸ್) ಎನ್ನಿಸಿಕೊಳ್ಳುತ್ತದೆ. ಆಗ ವ್ಯುತ್ಪನ್ನ ಲವಣವಾಗಿರದೆ ಅಮೈಡ್ ಆಗಿರುತ್ತದೆ.

$$R-COOR' + NH_3 \rightarrow R \quad CONH_2 + R'OH$$

3 ನೀರಿನೊಡನೆ ವರ್ತಿಸುವಂತೆಯೇ ಎಸ್ಟರುಗಳು ಆಮ್ಲದ ಸಂಪರ್ಕದಲ್ಲಿ ಆಲ್ಕೊಹಾಲುಗಳೊಡನೆ ವರ್ತಿಸಬಲ್ಲುವು. ಆಗ ಹೊಸ ಎಸ್ಟರ್ ಮತ್ತು ಆಲ್ಕೊಹಾಲುಗಳು ದೊರೆಯುತ್ತವೆ. ಈ ರಿಯೆ ಎಸ್ಟರ್ ವಿನಿಮಯ ಅಥವಾ ಆಲ್ಕೊಹಾಲ್ ವಿಶ್ಲೇಷಣೆ (ಆಲ್ಕೋಹಾಲಿಸಿಸ್) ಅಥವಾ ಸ್ಥಾನಾಂತರ ಎಸ್ಟರಿಫಿಕೇಷನ್ (ಟ್ರಾನ್ಸ್ ಎಸ್ಟರಿಫಿಕೇಷನ್) ಎನ್ನಿಸಿಕೊಳ್ಳುತ್ತದೆ.

$$R-COOR' + R''OH \xrightarrow{H_2SO_4} RCOOR'' + R'OH$$

ಈ ಎಸ್ಟರುಗಳಿಗೆ ಹೈಡ್ರೊಜನನ್ನು ಸೇರಿಸಿದಾಗ ಅಥವಾ ಅವನ್ನು ಅಪಕರ್ಷಿಸಿದಾಗ ಆಲ್ಕೊಹಾಲುಗಳು ಉಂಟಾಗುತ್ತವೆ. ಈ ಬಗೆಯ ಅಪಕರ್ಷಣಕ್ಕೆ ಸೂಕ್ತ ವೇಗವರ್ಧಕಗಳ ಸಂಪರ್ಕದಲ್ಲಿ ಹೈಡ್ರೊಜನನ್ನಾಗಲೀ ಇತರ ಅಪಕರ್ಷಣಕಾರಿಗಳನ್ನಾಗಲೀ ಬಳಸಬಹುದು. ಜಲಜನಕೀಕರಣ ಮಾಡುವಾಗ ಪ್ಲಾಟಿನಂ, ಪೆಲೇಡಿಯಂ ರುಥೇನಿಯಂ, ತಾಮ್ರ, ರ್ಹೋಡಿಯಂ ಮೊದಲಾದ ಅನೇಕ ವೇಗವರ್ಧಕಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಬಳಸುವ ಅಪಕರ್ಷಣಕಾರಿಗಳೆಂದರೆ ಸೋಡಿಯಂ ಆಲ್ಕೊಹಾಲ್ ಮಿಶ್ರಣ ಅಥವಾ ಲಿಥಿಯಂ ಅಲ್ಯೂಮಿನಿಯಂ ಹೈಡ್ರೈಟ್, ಸೋಡಿಯಂ ಬೊರೋ ಹೈಡ್ರೈಡ್‌ಗಳಂಥ ಲೋಹ ಹೈಡ್ರೈಡುಗಳು




5 ಎಸ್ಟರುಗಳು ಗ್ರಿನಾರ್ಡ್ ಸಂಯುಕ್ತಗಳೊಡನೆ ವರ್ತಿಸಿದಾಗ ದೊರೆಯುವ ಅಸ್ಥಿರ ಆರ್ಗ್ಯಾನೋ ಲೋಹ ಸಂಯುಕ್ತಗಳ ಜಲವಿಶ್ಲೇಷಣೆ ಟರ್ಷಿಯರಿ ಆಲ್ಕೊಹಾಲುಗಳನ್ನು ಒದಗಿಸುತ್ತದೆ. ಈ ಕ್ರಿಯೆಯಲ್ಲಿ ಕೀಟೋನುಗಳು ಮಧ್ಯವರ್ತಿಗಳೆಂದು ತಿಳಿದು ಬಂದಿದೆ.



6 $300^0$ ಸೆಂ. ಗಿಂತಲೂ ಹೆಚ್ಚು ಉಷ್ಣತೆಗೆ ಆಲ್ಕೊಹಾಲುಗಳ ಎಸ್ಟರುಗಳನ್ನು ಒಳಪಡಿಸಿದಾಗ ಆಲ್ಕೇನುಗಳು ದೊರೆಯುತ್ತವೆ.

$$R\text{-}CO\text{-}O\text{-}CH_2.\ CH_2\text{-}R' \longrightarrow R\text{-}COOH + R'CH{=}CH_2$$

ಹಲವು ವಿಶಿಷ್ಟ ಎಸ್ಟರುಗಳು ಮತ್ತು ಪಾಲಿ ಎಸ್ಟರುಗಳು : ಕೆಲವು ಆಮ್ಲಗಳಲ್ಲಿ ಎರಡು ಕಾರ್ಬಾಕ್ಸಿಲ್ ಪುಂಜಗಳು (ರ್‍ಯಾಡಿಕಲ್) ಇರುವುದುಂಟು. ಅವುಗಳಲ್ಲಿ ಒಂದು ಮಾತ್ರ ಎಸ್ಟರಾಗಿ ಇನ್ನೊಂದು ಪುಂಜ ಮುಕ್ತಸ್ಥಿತಿಯಲ್ಲಿದ್ದರೆ ಅದು ಅರ್ಧ ಎಸ್ಟರ್ ಇವು ಎಸ್ಟರ ಮತ್ತು ಆಮ್ಲದ ಗುಣಗಳೆರಡನ್ನೂ ಪಡೆದಿರುತ್ತವೆ.

ಒಂದು ಸಂಯುಕ್ತದಲ್ಲಿ ಆಮ್ಲ, ಆಲ್ಕೊಹಾಲ್ ಪುಂಜಗಳೆರಡೂ ಇದ್ದು ಇವುಗಳ ಪರಸ್ಪರ ಸಂಯೋಗದಿಂದ ದೊರೆಯುವ ಎಸ್ಟರೇ, ಚಕ್ರೀಯ ಎಸ್ಟರ್ (ಸೈಕ್ಲಿಕ್ ಎಸ್ಟರ್) ಅಥವಾ ಲ್ಯಾಕ್ಟೋನ್. ಲ್ಯಾಕ್ಟೋನಿನ ಕಾರ್ಬೊನಿಲ್ ಪುಂಜ ಮತ್ತು ಆಕ್ಸಿಜನ್ನಿನ ನಡುವಿರುವ ಪರಮಾಣುಗಳ ಸಂಖ್ಯೆಯನ್ನು ಅನುಸರಿಸಿ ಅವನ್ನು ಲ್ಯಾಕ್ಟೋನುಗಳೆಂದು ಕರೆಯಲಾಗುತ್ತದೆ.



ಮೇಲೆ ತೋರಿಸಿರುವ β ಲ್ಯಾಕ್ಟೋನ್ ಹೈಡ್ರಾಕ್ಸಿ ಪ್ರೋಪಿಯೋನಿಕ್ ಆಮ್ಲದ ವ್ಯುತ್ಪನ್ನವಾದ್ದರಿಂದ ಪ್ರೋಪಿಯೋನಿಕ್ ಲ್ಯಾಕ್ಟೋನ್ ಎನ್ನಿಸಿಕೊಳ್ಳುತ್ತದೆ. ಈ ಸಂಯುಕ್ತ ಅಸ್ಥಿರ ಚೌಕ ಅಣುರಚನೆಯನ್ನು ಪಡೆದಿರುವುದರಿಂದ ಪಟುವಾಗಿದ್ದು ಆಮ್ಲಗಳ ಸಂಪರ್ಕ ಪಾಲಿ ಎಸ್ಟರ್‌ಲಿಮರ್ ಆಗಿ ಪರಿವರ್ತಿತವಾಗುತ್ತದೆ.

ಪಾಲಿಎಸ್ಟರ್

γ–ಮತ್ತು ಲ್ಯಾಕ್ಟೋನುಗಳು ಈ ಬಗೆಯಾಗಿ ಪಾಲಿ ಎಸ್ಟರುಗಳಾಗದಿರಲು ಇವು ತಕ್ಕ ಮಟ್ಟಿಗೆ ಸ್ಥಿರ ಸಂಯುಕ್ತಗಳಾಗಿರುವಿದೆ ಕಾರಣ. ವೃತ್ತದಲ್ಲಿ ಐದು ಅಥವಾ ಆರು ಪರಮಾಣುಗಳನ್ನುಳ್ಳ ಲ್ಯಾಕ್ಟೋನುಗಳಲ್ಲಿ ಬಂಧಾಂತರ ಕೋನ ವಿಕಾರ (ಆಮಗ್ಯುಲರ್ ಸ್ಟ್ರೈನ್) ಬಲು ಕಡಿಮೆ. ε ಅಥವಾ ಅದಕ್ಕೂ ಮುಂದಿನ ಹೈಡ್ರಾಕ್ಸಿ ಆಮ್ಲಗಳು ಲ್ಯಾಕ್ಟೋನುಗಳಾಗಿ ಪರಿವರ್ತಿತವಾಗದೆ, ನೇರವಾಗಿ ಪಾಲಿ ಎಸ್ಟರುಗಳಾಗುತ್ತವೆ.

$$HO\ CH_2CH_2CH_2CH_2CH_2\text{-}COOH \xrightarrow{\text{ಉಷ್ಣ}}$$

$$H\left\{O(CH_2)_5-CO-O-(CH_2)_5\,CO\right\}\frac{n}{2}OH+(n-1)H_2O$$

ಇನ್ನೂಂದು ಬಗೆಯ ಪಾಲಿ ಎಸ್ಟರುಗಳನ್ನು ಪಾಲಿ ಆಮ್ಲ ಮತ್ತು ಪಾಲಿ ಆಲ್ಕೊಹಾಲುಗಳ ಸಂಯೋಜನೆಯಿಂದ ತಯಾರಿಸಬಹುದು. ಇವುಗಳಲ್ಲಿ ಮುಖ್ಯವಾದುವು ಗ್ಲಿಸರಾಲ್ ಮತ್ತು ಆರ್ಥೋಫ್ಥ್ಯಾಲಿಕ್ ಆಮ್ಲಗಳಿಂದ ದೊರೆಯುವ ಗ್ಲಿಪ್ಟಾಲ್ ಹಾಗೂ ಎಥಿಲಿನ್ ಗ್ಲೈಕಾಲ್ ಮತ್ತು ಟೆರೆಫ್ಥ್ಯಾಲಿಕ್ ಆಮ್ಲಗಳ ಸಂಯೋಜನೆಯಿಂದ ದೊರೆಯುವ ಟೆರೀನ್ ಟೆರಿಲೀನ್ ಅಥವಾ ಡೆಕ್ರಾನ್ ಎಂದೆನ್ನಿಸಿಕೊಳ್ಳುವ ಕೃತಕ ಎಳೆ.

ಟೆರಿಲೀನ್



ಗ್ಲಿಪ್ಟಾಲ್

**ಉಪಯೋಗಗಳು:** ಹೂ ಹಣ್ಣುಗಳಲ್ಲಿ ದೊರೆಯುವ ಕಡಿಮೆ ಅಣು ತೂಕದ ಅನೇಕ ಸಹಜ ಎಸ್ಟರುಗಳನ್ನೂ ಕೃತಕವಾಗಿ ತಯಾರಿಸಿದ ಅವುಗಳ ಸಂಬಂಧಿಗಳನ್ನೂ ಸುಗಂಧ ಮಧುರ ದ್ರವ್ಯ ಉದ್ದಿಮೆಗಳಲ್ಲಿ ಉಪಯೋಗಿಸಲಾಗುತ್ತಿದೆ. ಎಣ್ಣೆ ಕೊಬ್ಬುಗಳನ್ನು ಆಹಾರವಾಗಿಯೂ ಸಾಬೂನು ತಯಾರಿಕೆಯಲ್ಲೂ ಉಪಯೋಗಿಸುತ್ತಿದ್ದೇವೆ. ಕೃತಕ ಮಾರ್ಜಕಗಳಿಗೆ ಬೇಕಾಗುವ ಹಿರಿಯ ತೂಕದ ಆಲ್ಕೊಹಾಲುಗಳ ತಯಾರಿಕೆಗೂ ಎಣ್ಣೆ ಕೊಬ್ಬುಗಳೇ ಮೂಲವಸ್ತುಗಳು. ಎಸ್ಟರ್ ವ್ಯುತ್ಪನ್ನಗಳಾದ ಕೃತಕ ಮಾರ್ಜಕಗಳ ಉಪಯುಕ್ತತೆ ದಿನೇದಿನೇ ಹೆಚ್ಚುತ್ತಿದೆ. ಕೃತಕ ಎಳೆಯಾದ ಟೆರೀನ್ ಪಾಲಿ ಎಸ್ಟರ್ ಇಂದು ಸರ್ವಜನಪ್ರಿಯವಾಗಿ ವಸ್ತ್ರ ಉದ್ದಿಮೆಯಲ್ಲಿ ಪ್ರಮುಖಪಾತ್ರ ವಹಿಸುತ್ತಿದೆ. ಗ್ಲಿಪ್ಟಾಲ್ ಮತ್ತು ಅದರಂಥ ಇನ್ನೂ ಹಲವು ಪಾಲಿ ಎಸ್ಟರ್ ಪ್ಲಾಸ್ಟಿಕುಗಳ ಉಪಯೋಗ ಹಲವಾರು.

ಅನೇಕ ಸ್ಯಾಲಿಸಿಲೇಟ್, ಬೆಂಝೋಯೇಟುಗಳು ಮತ್ತು ಅವುಗಳ ವ್ಯುತ್ಪನ್ನಗಳಿಗೆ ಔಷಧರಂಗದಲ್ಲೇ ವಿವಿಧ ರೀತಿಯ ಉಪಯೋಗಗಳಿವೆ. ಮೀಥೈಲ್ ಫಾರ್ಮೇಟ್ ಒಂದು ಕ್ರಿಮಿನಾಶಕ. ಈಥೈಲ್ ಅಸಿಟೇಟ್, ಪ್ರೋಪೈಲ್ ಅಸಿಟೇಟ್ ಮತ್ತು ಬ್ಯೂಟೈಲ್ ಅಸಿಟೇಟುಗಳು ಸಾರ್ವತ್ರಿಕ ಲೀನಕಾರಿಗಳಾಗಿ (ಸಾಲ್ವೆಂಟ್ಸ್) ಉಪಯೋಗಕ್ಕೆ ಬರುತ್ತವೆ. ಈಥೈಲ್ ಅಸಿಟೇಟ್ ಬಹುಶಃ ಎಸ್ಟರುಗಳಲ್ಲೆಲ್ಲ ಅತ್ಯಂತ ಪರಿಚಿತವಾದದ್ದು ಮತ್ತು ಅದರ ಉಪಯೋಗ ಮಧುರ ದ್ರವ್ಯಗಳಲ್ಲಿ, ಸುಗಂಧ ದ್ರವ್ಯದ ಉದ್ದಿಮೆಯಲ್ಲಿ, ಕರ್ಪೂರ, ಮರಗಳ ಎಣ್ಣೆ ಅಂಟುಗಳು ಹಲವು ಬಗೆಯ ಪ್ಲಾಸ್ಟಿಕ್ಕುಗಳೇ ಮೊದಲಾದ ಅನೇಕ ವಸ್ತುಗಳ ಲೀನಕಾರೀ ಸಂಸ್ಕರಣಗಳಲ್ಲಿ ಇದೆ. ಕೃತಕ ಚರ್ಮ, ಸೆಲ್ಯುಲಾಯ್ಡ್ ಸಾಮಗ್ರಿಗಳು, ಮಸಿ, ಪಾಲಿಶುಗಳೇ ಮೊದಲಾದುವುಗಳ ತಯಾರಿಕೆಗಳಲ್ಲಿ ಲೀನಕಾರಿಯಾಗಿಯೂ ಈಥೈಲ್ ಅಸಿಟೇಟನ್ನು ಉಪಯೋಗಿಸಲಾಗುತ್ತದೆ.

ಈಥೈಲ್ ಅಸಿಟೋ ಅಸಿಟೇಟ್ ಎಂಬ ಎಸ್ಟರ್ ಅನೇಕ ಸಾವಯವ ಸಂಶ್ಲೇಷಣೆಗಳಲ್ಲಿ ಉಪಯುಕ್ತವಾಗಿದೆ. ಅನೇಕ ವರ್ಣದ್ರವ್ಯಗಳು, ಆಂಟಿ ಪೈರೀನ್, ಅಮೈನೋ ಪೈರೀನ್, ಅಟಾಟ್ರಿನ್, ಥಯಮಿನ್ ಮತ್ತು ಪೈರಜ಼ೋಲೋನ್ ಗುಂಪಿಗೆ ಸೇರಿದ ಅನೇಕ ಔಷಧ ದ್ರವ್ಯಗಳ ತಯಾರಿಕೆಯಲ್ಲಿ ಈ ಎಸ್ಟರನ್ನು ಉಪಯೋಗಿಸಲಾಗುತ್ತದೆ. (ಕೆ.ಟಿ.ಎಸ್.)

**ಎಸ್ಟೋನಿಯ:** ಸೋವಿಯತ್ ಒಕ್ಕೂಟದ ಗಣರಾಜ್ಯಗಳಲ್ಲೊಂದಾಗಿತ್ತು. 1991ರಲ್ಲಿ ಎಸ್ಟೋನಿಯನ್ ಸೋವಿಯತ್ ಸಮಾಜವಾದೀ ಗಣರಾಜ್ಯದಿಂದ ಬೇರ್ಪಟ್ಟು ಸ್ವತಂತ್ರ ರಾಷ್ಟ್ರವಾಯಿತು. ಸುಮಾರು $57^0$ 50' ಉತ್ತರ ಅಕ್ಷಾಂಶದಿಂದ $59^0$ 75' ಉತ್ತರ ಅಕ್ಷಾಂಶದ ವರೆಗೂ $22^0$ ಪೂರ್ವ ರೇಖಾಂಶದಿಂದ $28^0$ 10' ಪೂರ್ವ ರೇಖಾಂಶದ ವರೆಗೂ ಹರಡಿದೆ. ಉತ್ತರದಲ್ಲಿ ಫಿನ್ಲೆಂಡ್ ಖಾರಿ, ಪಶ್ಚಿಮದಲ್ಲಿ ಬಾಲ್ಟಿಕ್ ಸಮುದ್ರ, ಪೂರ್ವದಲ್ಲಿ ಪೈಪೂಸ್ ಸರೋವರ, ಪ್ಸಾಫ್ಕ್ ಮತ್ತು ರಷ್ಯನ್ ಸೋವಿಯತ್ ಗಣರಾಜ್ಯ, ದಕ್ಷಿಣದಲ್ಲಿ ಲ್ಯಾಟ್ವಿಯ ಇವುಗಳ ನಡುವೆ ಇರುವ ಈ ರಾಜ್ಯ ಬಾಲ್ಟಿಕ್ ಪ್ರದೇಶದ ಮೂರು ಗಣರಾಜ್ಯಗಳ ಪೈಕಿ ಅತ್ಯಂತ ಚಿಕ್ಕದು. (ಉಳಿದೆರಡು ಲಿಥುವೇನಿಯ ಮತ್ತು ಲ್ಯಾಟ್ವಿಯ.) ಪ್ರಧಾನ ಭೂ ಭಾಗದೊಂದಿಗೆ ಪಶ್ಚಿಮದಲ್ಲಿನ 818 ದ್ವೀಪಗಳೂ ಈ ದೇಶಕ್ಕೆ ಸೇರಿವೆ. ಇವುಗಳಲ್ಲಿ ಮುಖ್ಯವಾದವು ಸೆರ್ರೈಮ (ಅಸೆಲ್) (163 ಚ.ಕಿಮೀ) ಹೀಯೂಮಾ (ಡೇಗೋ) (600 ಚ.ಕಿಮೀ), ಮುಹುಮಾ ಮತ್ತು ಮೊರ್ಮ್ಸೋ. ರಾಜ್ಯದ ವಿಸ್ತೀರ್ಣ 29,555 ಚ.ಕಿಮೀ ಗಳಿದ್ದುದು 1946ರ ಅನಂತರ 45,100 ಚ.ಕಿಮೀ ಆಯಿತು. ವಿಸ್ತೀರ್ಣದ ದೃಷ್ಟಿಯಿಂದ ಈ ರಾಜ್ಯದ ಸಮುದ್ರ ತೀರ ಅಧಿಕ ಉದ್ದವೆಂದೇ ಹೇಳಬೇಕು.

ಈ ರಾಜ್ಯದ ಉತ್ತರಾರ್ಧದಲ್ಲೂ ದ್ವೀಪಗಳಲ್ಲೂ ಸಿಲ್ಯೂರಿಯನ್ ಕಾಲದ ಡೊಲೊಮೈಟ್ ಮತ್ತು ಸುಣ್ಣಕಲ್ಲು ಶಿಲೆಗಳೂ ದಕ್ಷಿಣದಲ್ಲಿ ಡಿವೊನಿಯನ್ ಕಾಲದ ಮರಳುಕಲ್ಲುಗಳೂ ಇವೆ. ದೇಶದಾದ್ಯಂತ ಹೇರಳವಾಗಿ ಹಿಮಚಲನೆಗಳಿಂದ ಸಂಭವಿಸಿದ ಸಂಚಯನಗಳುಂಟು. ಇವು ದಕ್ಷಿಣದಲ್ಲಿ ಹೆಚ್ಚು ಒತ್ತಾಗಿವೆ.

ಹಿಮಚಲನೆಯಿಂದಾದ ಸರೋವರಗಳು ಸುಮಾರು 1,500ಕ್ಕೂ ಅಧಿಕವಾಗಿವೆ. ಮಧ್ಯ ಮತ್ತು ದಕ್ಷಿಣಗಳಲ್ಲಿ ಇವನ್ನು ಹೆಚ್ಚಾಗಿ ಕಾಣಬಹುದು. ಇವುಗಳಲ್ಲಿ ವೋರ್ಟ್ಸ್–ಜಾರು ಅತ್ಯಂತ ದೊಡ್ಡದು.

**ಮೇಲ್ಮೈ ಲಕ್ಷಣ:** ಇದು ಉತ್ತರ ಯುರೋಪಿನ ಮಹಾ ಮೈದಾನದ ಒಂದು ಭಾಗ, ಎಸ್ಟೋನಿಯದ ಬಹು ಭಾಗ ಸಮುದ್ರ ಮಟ್ಟದಿಂದ 90ಮೀ.ಗೂ ಕಡಿಮೆ ಎತ್ತರದಲ್ಲಿದೆ. ಆಗ್ನೇಯದಲ್ಲಿ ಅಲ್ಲಲ್ಲಿ ಸ್ವಲ್ಪ ಎತ್ತರದ ಪ್ರದೇಶಗಳನ್ನು ಕಾಣಬಹುದು. ಮುನಮಗಿ (306ಮೀ.) ಎಸ್ಟೋನಿಯದ ಅತ್ಯಂತ ಎತ್ತರ ಶಿಖರ. ಉತ್ತರ ಮತ್ತು ಪೂರ್ವ ಪ್ರದೇಶಗಳು ತಗ್ಗು ಬಯಲುಗಳು. ಇವು ಸಮುದ್ರ ಮಟ್ಟದಿಂದ 24–44ಮೀ. ಎತ್ತರದಲ್ಲಿವೆ.

ಈ ದೇಶದ ಎಲ್ಲ ನದಿಗಳೂ ಚಿಕ್ಕವು. ಇವುಗಳಲ್ಲಿ ಪ್ರವಾಹ ಇದ್ದೇ ಇರುತ್ತದೆ. ಇವು ಮೂರು ಬಗೆ : 1 ಫಿನ್ಲೆಂಡ್ ಖಾರಿ ಸೇರುವ ನದಿಗಳು : ಪಿರಿಟ, ನಾರ್ವ ಇವು ಜಲಪಾತಗಳಿಂದ ಕೂಡಿವೆ. 2 ರೀಗಾ ಖಾರಿ ಸೇರುವ ನದಿಗಳು : ಪಾರ್ನ್ಯು, ಕಸರಿ. 3 ಪೈಪೂಸ್ ಸರೋವರವನ್ನು ಸೇರುವ ನದಿಗಳು : ಎಮಜೋಗಿ, ಒಹಂಡು.

ಎಸ್ಟೋನಿಯದ ಸಮುದ್ರತೀರಗಳಲ್ಲಿ ಸಾಗರಿಕ ವಾಯುಗುಣವೂ ಒಳಭಾಗಗಳಲ್ಲಿ ಖಂಡಾಂತರ ವಾಯುಗುಣವೂ ಕಂಡುಬರುತ್ತವೆ. ಸರಾಸರಿ ಉಷ್ಣತೆ $17^0$ ಸೆ. (ಜುಲೈ) ಮತ್ತು $5^0$ ಸೆ. (ಫೆಬ್ರುವರಿ). ಎಸ್ಟೋನಿಯ ಸಣ್ಣ ದೇಶವಾದರೂ ಉಷ್ಣತೆಯ ವ್ಯತ್ಯಾಸಗಳು ಅಧಿಕ. ವಾಯವ್ಯ ಮಾರುತಗಳಿಂದ ಇಲ್ಲಿ ಮಳೆಯಾಗುತ್ತದೆ. ಬೇಸಗೆಯಲ್ಲಿ ಪರಿಸರಣ ಮಳೆ ಸಾಮಾನ್ಯ. ಮಳೆಯ ವಾರ್ಷಿಕ ಸರಾಸರಿ 60 ಸೆಂಮೀ ಹಿಮ ಬೀಳುವುದು ಹೆಚ್ಚು. ಚಳಿಗಾಲದಲ್ಲಿ ಒಳಭಾಗಗಳಲ್ಲಿ 25 ಸೆಂಮೀ ದಪ್ಪನಾಗಿ ಹಿಮ ಬೀಳುವುದುಂಟು. ಉತ್ತರ ತೀರದಲ್ಲಿ ವರ್ಷಕ್ಕೆ 130–145 ದಿನಗಳ ಕಾಲ ಹಿಮ ಕವಿದಿರುತ್ತದೆ. ಪಶ್ಚಿಮದಲ್ಲಿ ಈ ಅವಧಿ 50–70 ದಿನ.

ಒಂದನೆಯ ಮಹಾಯುದ್ಧಕ್ಕೆ ಮುಂಚೆ ದೇಶದ 1/4 ಭಾಗ ಕಾಡುಗಳಿಂದ ಕೂಡಿತ್ತು. ಇವುಗಳಲ್ಲಿ ಶೇ. 70 ಎಲೆ ಮೊನಚಿನವು. ಸ್ಪ್ರೂಸ್, ಪೈನ್ ಮರಗಳು ಮುಖ್ಯವಾದವು. ಭೂ ಸುಧಾರಣೆಯ ಪರಿಣಾಮವಾಗಿ ಕಾಡುಗಳನ್ನು ಬಹುತೇಕ ಕಡಿಯಲಾಗಿದೆ. ಈಗ ಅಲ್ಲಲ್ಲಿ ಓಕ್ ಮರದ ಕಾಡುಗಳಿವೆ.

**ವ್ಯವಸಾಯ, ಕೈಗಾರಿಕೆ ಇತ್ಯಾದಿ:** ಎಸ್ಟೋನಿಯದಲ್ಲೂ ಡೆನ್ಮಾರ್ಕಿನಂತೆ ಮಿಶ್ರವ್ಯವಸಾಯ ಸಾಮಾನ್ಯ. 1919ರಲ್ಲಿ ಆದ ಸುಧಾರಣೆಯ ಪರಿಣಾಮವಾಗಿ ಭೂಮಿ ಸಾಮಾನ್ಯ ಜನತೆಯ ಕೈಸೇರಿತು. 1939ರ ಹೊತ್ತಿಗೆ ಸರಾಸರಿ 58 ಎಕರೆ ವಿಸ್ತಾರದ 1,39,984 ಹಿಡುವಳಿಗಳಿದ್ದವು. ಅನಂತರ ಇವುಗಳ ಸಂಧ್ಯ 88,000ಕ್ಕೆ ಇಳಿಯಿತು. 1949ರಿಂದೀಚೆಗೆ ಸಾಮೂಹಿಕ ವ್ಯವಸಾಯ ರೂಢಿಗೆ ಬಂದು, ಕೃಷಿಯ ನೆಲವನ್ನೆಲ್ಲ ಕಾಲ್‌ಖಾಜ್‌ಗಳನ್ನಾಗಿ (ಸಾಮೂಹಿಕ ಭೂಮಿ) ವಿಂಗಡಿಸಲಾಯಿತು. 1935ರಲ್ಲಿ ಇವುಗಳ ಸಂಖ್ಯೆ 1,137. ರೈ, ಗೋಧಿ, ತೋಕೆಗೋಧಿ, ಆಲೂಗೆಡ್ಡೆ, ಅಗಸೆಗಳು ಮುಖ್ಯ ಬೆಳೆಗಳು. ಹಿಂದೆ ಈ ರಾಜ್ಯ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಈಗ ಇದು ಹೆಚ್ಚುವರಿ ದೇಶ ಪಶುಪಾಲನೆಯೂ ಸಾಮಾನ್ಯ ಮಹಾಯುದ್ಧದ ಸಮಯದಲ್ಲಿ ಈ ಕಸಬಿಗೆ ಧಕ್ಕೆ ತಗುಲಿತಾದರೂ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ (1951–55) ಇದು ಮತ್ತೆ ಮೊದಲಿನ ಸ್ಥಾನ ಪಡೆಯಿತು. ದನಕರು, ಹಂದಿ, ಕುರಿ, ಕುದುರೆ, ಕೋಳಿಗಳು ಮುಖ್ಯ ಪ್ರಾಣಿಗಳು. ಬೆಣ್ಣೆ, ಗಿಣ್ಣು,

ಘನೀಕರಿಸಿದ ಹಾಲು ಮುಂತಾದವುಗಳ ವಾರ್ಷಿಕ ಉತ್ಪನ್ನ 10 ಲಕ್ಷ ಟನ್ನುಗಳಿಗಿಂತಲೂ ಹೆಚ್ಚು. ಸಮುದ್ರತೀರದಲ್ಲಿ ಮೀನುಗಾರಿಕೆ ಒಂದು ಮುಖ್ಯ ಕಸಬು. ಇದನ್ನು ಆಧುನೀಕರಿಸಲಾಗಿದೆ. ಕೆಲವು ಕಡೆ ತುಪ್ಪಳು ಚರ್ಮ ತಯಾರಿಕೆಯೂ ಉಂಟು.

ಕೈಗಾರಿಕೆಗಳಿಗೆ ಅಗತ್ಯವಾದ ಶಕ್ತಿ ಸಾಧನಗಳು ಇಲ್ಲಿ ಹೇರಳ. ನ್ಯಾಫ್ತ, ಪೆಟ್ರೋಲಿಯಂ ಮೊದಲಾದ ಜಲಜನಕ ಇಂಗಾಲ ಸಂಯುಕ್ತ ಪದರಗಲ್ಲುಗಳು ಉತ್ತರ ಹಾಗೂ ಪೂರ್ವ ಭಾಗಗಳಲ್ಲಿ ಹರಡಿವೆ. ಈ ಜೇಡಿ ಪದರಗಲ್ಲುಗಳಿಂದ ಪೆಟ್ರೋಲಿಯಂ, ಮೃದುಚಾಲಕ ಎಣ್ಣೆಗಳು, ರಾಳ ಮತ್ತು ಕಲ್ಲರಗುಗಳನ್ನು ಹೊರತೆಗೆಯಲಾಗುತ್ತದೆ. 1955ರಲ್ಲಿ 8,10,000ಟನ್ ಎಣ್ಣೆ ತಯಾರಿಕೆಯ ಗುರಿ ಇದ್ದು ಅದನ್ನು ಸಾಧಿಸಲಾಯಿತು. ಕೋಹ್‌ಟ್ಲಾ ಜಾರ್ವೆ ಮುಖ್ಯ ತೈಲ ಶೋಧನಕೇಂದ್ರ. ಅಲ್ಲಿಂದ 160 ಕಿಮೀ ದೂರದಲ್ಲಿರುವ ಲೆನಿನ್‌ಗ್ರಾಡಿಗೆ 1948ರಲ್ಲೂ ಟ್ಯಾಲಿನಿಗೆ 1953ರಲ್ಲೂ ಎಣ್ಣೆ ಸಾಗಿಸಲು ಕೊಳವೆ ಹಾಕಲಾಯಿತು. ಜಲವಿದ್ಯುತ್ತಿನ ಉತ್ಪಾದನೆಯೂ ಈಚೆಗೆ ಅಧಿಕಗೊಂಡಿದೆ. (1949ರಲ್ಲಿ 25 ಕೋಟಿ ಕಿ.ವ್ಯಾ.), ಎಲ್ಲಮಾ, ಪಾರ್ನ್ಯ ಇವು ಉಷ್ಣ ವಿದ್ಯುತ್ ತಯಾರಿಕೆಯ ಕೇಂದ್ರಗಳು. ಟ್ಯಾಲಿನ್ ರಂಜಕ ಮತ್ತು ಲವಣಗಳ ಕೈಗಾರಿಕಾ ಕೇಂದ್ರ. ಹತ್ತಿ ಜವಳಿ ಈ ದೇಶದ ಮುಖ್ಯ ಕೈಗಾರಿಕೆ. ಇದಕ್ಕೆ ನಾರ್ವ ಮುಖ್ಯ ಕೇಂದ್ರ. ಇದಲ್ಲದೆ ರೇಯಾನ್, ಅಗಸೆ, ಉಣ್ಣೆ ಮತ್ತು ಸೆಣಬಿನ ಗಿರಣಿಗಳೂ ಇಲ್ಲುಂಟು. ಉತ್ತರದಲ್ಲಿ ಮರ ಕೊಯ್ಯುವ ಕೈಗಾರಿಕೆ ಮುಖ್ಯ. ಇದರೊಂದಿಗೆ ಅಲ್ಲಲ್ಲಿ ಸಿಮೆಂಟ್, ಗಾಜು, ಜಿಪ್ಸಂ ಕಾರ್ಖಾನೆಗಳೂ ಬೆಳೆದಿವೆ.

ಎಸ್ಟೋನಿಯ ಸಣ್ಣ ದೇಶವಾದರೂ ಇಲ್ಲಿನ ಸಂಚಾರ ಮಾರ್ಗ ಚೆನ್ನಾಗಿ ಬೆಳೆದಿದೆ. (ರೈಲು ಮಾರ್ಗ 1,702ಕಿಮೀ ರಸ್ತೆ 21,500ಕಿಮೀ) ಪಲ್‌ಡಿಸ್ಕಿ ಪಾರ್ನು ಮುಖ್ಯ ಬಂದರುಗಳು.

ಎಸ್ಟೋನಿಯದ ಜನಸಂಖ್ಯೆ 13,32,900 (2005), 56% ಮಂದಿ ಪಟ್ಟಣಿಗರು. ಇವರ ಪೈಕಿ ಅಧಿಕ ಸಂಖ್ಯೆಯ ಜನ ಉತ್ತರ ತೀರದ ಪಟ್ಟಣಗಳಾದ ಟ್ಯಾಲಿನ್ (2,81,714) ಮತ್ತು ಟಾರ್ಟುಗಳಲ್ಲಿ (74,263) ವಾಸಿಸುತ್ತಾರೆ. ಎಸ್ಟೋನಿಯದ ಜನರ ಪೈಕಿ ಸುಮಾರು 73% ಎಸ್ಟೋನಿಯನ್ನರು. ಇವರು ಫಿನ್ನರ ಸಂಬಂಧಿಗಳು. ಉಳಿದವರಲ್ಲಿ ರಷ್ಯನ್ನರು (22%) ಮುಖ್ಯ. ಫಿನ್, ಉಕ್ರೇನಿಯನ್, ಬೆಲೊರಷ್ಯನ್ ಜ್ಯೂ ಜನ ಇತರರು. ಈ ದೇಶದ ವ್ಯಾಪಾರ ಹೆಚ್ಚಾಗಿ ರಷ್ಯದೊಂದಿಗೆ ನಡೆಯುತ್ತಿತ್ತು. 1919–39ರ ಅವಧಿಯಲ್ಲಿ ಗ್ರೇಟ್ ಬ್ರಿಟನ್ ಮತ್ತು ಜರ್ಮನಿಗಳೊಂದಿಗೆ ವ್ಯಾಪಾರ ಬೆಳೆಯಿತು. ಎರಡನೆಯ ಮಹಾಯುದ್ಧದ ಅನಂತರ ಮತ್ತೆ ರಷ್ಯದೊಂದಿಗೆ ವ್ಯಾಪಾರ ಸಂಬಂಧ ಅಧಿಕವಾಗಿದೆ. ಇಲ್ಲಿನ ಹಣ ಕ್ರೂನ್. (ಕೆ.ಆರ್.ಆರ್.)

**ಇತಿಹಾಸ:** ಎಸ್ಟೋನಿಯದ ಇತಿಹಾಸ ಸುಮಾರು ಎರಡು ಸಾವಿರ ವರ್ಷಗಳಷ್ಟು ಪುರಾತನವಾದದ್ದು. ಒಂದನೆಯ ಶತಮಾನದಲ್ಲಿ ಬದುಕಿದ್ದ ರೋಮನ್ ಇತಿಹಾಸಕಾರ ಟೌಸಿಟಸನ ಕೃತಿಯೊಂದರಲ್ಲಿ ಪ್ರಪ್ರಥಮವಾಗಿ ಎಸ್ಟೋನಿಯದ ಉಲ್ಲೇಖವಿದೆ.

ಇತಿಹಾಸಕಾರರಿಗೆ ತಿಳಿದಿರುವ ಮಟ್ಟಿಗೆ ಈ ದೇಶದ ಜನ ಮೊಟ್ಟಮೊದಲ ಬಾರಿಗೆ ಆಕ್ರಮಣಕ್ಕೆ ತುತ್ತಾದದ್ದು 9ನೆಯ ಶತಮಾನದಲ್ಲಿ. ಆಗ ಜೈತ್ರಯಾತ್ರೆಯಲ್ಲಿ ನಿರತರಾಗಿದ್ದ ವೈಕಿಂಗರು ಈ ನಾಡಿನ ಮೂಲಕ ಹಾದು ಹೋದರಂತೆ. ಈ ಆಕ್ರಮಣಕಾರರು ಯೋಧರು ಮಾತ್ರವೇ ಆಗಿರಲಿಲ್ಲ; ವರ್ತಕರೂ ಆಗಿದ್ದರು ಆದ್ದರಿಂದ ಎಸ್ಟೋನಿಯನ್ನರು ಇವರಿಂದ ಅನೇಕ ವಿಚಾರಗಳನ್ನು ಕಲಿತರು.

ಎಸ್ಟೋನಿಯನ್ನರು ಆಗ ಕ್ರೈಸ್ತರಾಗಿರಲಿಲ್ಲ. 11, 12ನೆಯ ಶತಮಾನಗಳಲ್ಲಿ ಡೇನರೂ ಸ್ವೀಡರೂ ಇವರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಲು ಪ್ರಯತ್ನಿಸಿ ವಿಫಲರಾದರು. ಸುಮಾರು ಇದೇ ಕಾಲಕ್ಕೆ ರಷ್ಯನ್ನರು ಈ ದೇಶದ ಮೇಲೆ 13 ಸಾರಿ ದಂಡಯಾತ್ರೆ ಮಾಡಿದರಾದರೂ ಇದನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲಾಗಲಿಲ್ಲ. ಜರ್ಮನಿಯ ಹೋಲ್‌ಸ್ಟೈನ್ ಪ್ರದೇಶದ ಪಾದ್ರಿ ಮೈನ್‌ಹಾರ್ಡ್ 12ನೆಯ ಶತಮಾನದಲ್ಲಿ ಎಸ್ಟೋನಿಯದ ನೆರೆನಾಡುಗಳಲ್ಲಿ ಕ್ರೈಸ್ತಧರ್ಮ ಪ್ರಚಾರದಲ್ಲಿ ತೊಡಗಿದ. ಇವನ ಅನಂತರ ಬಂದ ಬರ್ಟೋಲ್ಡ್ ಈ ಕೆಲಸಕ್ಕೆ ಕತ್ತಿ ಬಳಸಿದ. ಇದಕ್ಕೆ ದಂಡವಾಗಿ ಈತ ಕದನವೊಂದರಲ್ಲಿ ತಲೆ ಒಪ್ಪಿಸಬೇಕಾಯಿತು.

ಆಮೇಲೆ ಬಂದ ಪಾದ್ರಿ ಬಲುಮೆಯ ಬದಲು ಒಲುಮೆಯ ಮಾರ್ಗ ಹಿಡಿದ. ಅಲ್ಲಿನ ಜನರಿಂದ ಕೋಟೆ ಕೊತ್ತಲ ಕಟ್ಟಿಸಿ ಅವರನ್ನೇ ಸೈನ್ಯಕ್ಕೆ ಸೇರಿಸಿಕೊಂಡು ಅವರಿಂದಲೇ ವಸಾಹತು ನಿರ್ಮಿಸಿದ. ಈತ ಎಸ್ಟೋನಿಯಕ್ಕೂ ಮುಂದುವರಿದ. ಧರ್ಮದ ಹೆಸರಿನಲ್ಲಿ ಜರ್ಮನಿಯಿಂದ ಪ್ರವಾಹದಂತೆ ಮುನ್ನುಗ್ಗುತ್ತಿದ್ದ ಯೋಧರ ಮುಂದೆ ಎಸ್ಟೋನಿಯನ್ನರು ತಣ್ಣಗಾದರು. ಇದೇ ವೇಳೆಗೆ ನೆರೆಯ ರಷ್ಯದ ದೊರೆಗಳೂ ಇಲ್ಲಿಗೆ ನುಗ್ಗಿದರು. ಡೆನ್ಮಾರ್ಕಿನ ದೊರೆಯೂ ದಂಡೆತ್ತಿ ಬಂದ. ಹೀಗೆ ಎಸ್ಟೋನಿಯದ ನೆಲ ಹಲವರ ಪಾಲಾಯಿತು. ಎಸ್ಟೋನಿಯನ್ನರು ಊಳಿಗದಾಳುಗಳಾದರು.

15ನೆಯ ಶತಮಾನದ ವೇಳೆಗೆ ದಕ್ಷಿಣದಲ್ಲಿ ಪೋಲೆಂಡ್ ಲಿಥುವೇನಿಯಗಳೂ ಪೂರ್ವದ ಮಸ್ಕೊವಿಯೂ ಎಸ್ಟೋನಿಯದ ಮೇಲೆ ಪ್ರಭಾವ ಬೀರಲಾರಂಭಿಸಿದುವು. ನಾಲ್ಕನೆಯ ಐವಾನ್ ದಿ ಟೆರಿಬಲ್ (1530–84) ಎಸ್ಟೋನಿಯವನ್ನಾಕ್ರಮಿಸಿದ. ಮುಂದೆ ರಷ್ಯನ್ನರನ್ನು ಸೋಲಿಸಿ ಸ್ವೀಡರು ಬಂದರು.

ಪದೇ ಪದೇ ಸಂಭವಿಸುತ್ತಿದ್ದ ಯುದ್ಧಗಳ ಫಲವಾಗಿ ಎಸ್ಟೋನಿಯದ ಬೆಳೆವಣಿಗೆಯಾಗಲಿಲ್ಲ. ಎಸ್ಟೋ ನೆಲ ಪಾಳು ಬಿದ್ದಿತು. ಜರ್ಮನ್ ಶ್ರೀಮಂತರು ಇದರ ಮೇಲೆ ತಮ್ಮ ಒಡೆತನ ಸ್ಥಾಪಿಸಿದರು. ಸ್ವೀಡಿಷ್ ದೊರೆಗಳು ಇವರನ್ನು ಹತೋಟಿಗೆ ತರಲು ಯತ್ನಿಸುತ್ತಿದ್ದರು.

18ನೆಯ ಶತಮಾನದಲ್ಲಿ ರಷ್ಯದ ಜ಼ಾರ್ ಪೀಟರ್ ಕೊನೆಗೂ ಈ ದೇಶವನ್ನು ಸಂಪೂರ್ಣವಾಗಿ ಗೆದ್ದ. ಇಡೀ ಬಾಲ್ಟಿಕ್ ಪ್ರದೇಶವೇ ರಷ್ಯದ ಅಧೀನವಾಯಿತು. ಮುಂದಿನ ಕೆಲವು ದಶಕಗಳಲ್ಲಿ ಎಸ್ಟೋನಿಯದಲ್ಲಿ ಅನೇಕ ಭೂ ಸುಧಾರಣೆಗಳು ಜಾರಿಗೆ ಬಂದು ರೈತರ ಸ್ಥಿತಿ ಸ್ವಲ್ಪ ಉತ್ತಮಗೊಂಡಿತು. ಕೈಗಾರಿಕೆಗಳು ಬೆಳೆದವು. ಅಕ್ಷರಸ್ಥರ ಸಂಖ್ಯೆಯೂ ಹೆಚ್ಚಿತು. ಕ್ರಮೇಣ ಎಸ್ಟೋನಿಯದ ಜನರಲ್ಲಿ ಜಾಗೃತಿಯುಂಟಾಯಿತು.

1905ರಲ್ಲಿ ರಷ್ಯದಲ್ಲಿ ಸಂಭವಿಸಿದ ಕ್ರಾಂತಿ ಆ ದೇಶದ ಎಲ್ಲೆಯನ್ನು ದಾಟಿ ಎಸ್ಟೋನಿಯವನ್ನೂ ತಲಪದಿರಲಿಲ್ಲ. ಇಲ್ಲಿನ ಜನ ಸಂಘಟಿತರಾಗಿ ಸ್ವಾಯತ್ತೆಯ ಬೇಡಿಕೆ ಮುಂದಿಟ್ಟರು. 1917ರ ಕ್ರಾಂತಿಯ ಫಲವಾಗಿ ಎಸ್ಟೋನಿಯಕ್ಕೆ ಸ್ವಯಂ ಆಡಳಿತದ ಸ್ಥಾನ ಲಭಿಸಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಜರ್ಮನ್ನರ ಆಕ್ರಮಣಕ್ಕೊಳಗಾಗಿದ್ದ ಎಸ್ಟೋನಿಯ ಆ ಯುದ್ಧಾಂತ್ಯದಲ್ಲಿ ವಿಮೋಚನೆ ಹೊಂದಿತಾದರೂ ಮುಂದೆ ರಷ್ಯದ ಕೆಂಪು ಸೇನೆ ಈ ದೇಶವನ್ನು ಪ್ರವೇಶಿಸಿತು. 1920ರಲ್ಲಿ ಶಾಂತಿಯ ಕೌಲಿಗೆ ಸಹಿಯಾದರೂ ಎಸ್ಟೋನಿಯಕ್ಕೆ ನೆಮ್ಮದಿ ಉಳಿಯಲಿಲ್ಲ. 1940ರ ಆಗಸ್ಟ್‌ನಲ್ಲಿ ಇದು ಗಣರಾಜ್ಯವಾಗಿ ಸೋವಿಯತ್ ಒಕ್ಕೂಟಕ್ಕೆ ಸೇರಿತು.

ಆದರೆ ಬಹುಕಾಲ ಈ ಸ್ಥಿತಿ ಮುಂದುವರಿಯಲಿಲ್ಲ. ಮರುವರ್ಷ ಇಲ್ಲಿಗೆ ಜರ್ಮನ್ನರು ನುಗ್ಗಿದರು. ಯುದ್ಧದ ಕೊನೆಯ ಘಟ್ಟದಲ್ಲಿ ಜರ್ಮನ್ನರು ಹಿನ್ನಡೆದಾಗ ಎಸ್ಟೋನಿಯದ ಭವಿಷ್ಯ ಮತ್ತೆ ಸೋವಿಯತ್ ಒಕ್ಕೂಟಕ್ಕೆ ಹಸ್ತಾಂತರವಾಯಿತೆನ್ನಬಹುದು. ಈಗ ಇದು ಈ ಒಕ್ಕೂಟದ ಒಂದು ಗಣರಾಜ್ಯವಾಗಿ ಮುಂದುವರಿಯುತ್ತಿದೆ. *

**ಎಸ್‌ನಿನ್, ಎಸ್.ವಿ:** 1895–1925. ಸೋವಿಯತ್ ದೇಶದ ಕವಿ. ಸರ್ಗಿ ಅಲೆಕ್ಸಾಂಡ್ರೋವಿಚ್ ಎಸ್‌ನಿನ್ ಇವನ ಪೂರ್ಣ ಹೆಸರು. ಒಮ್ಮೆ ಗಾರ್ಕಿ ಇವನನ್ನು ಪುಷ್ಕಿನನ ಅನಂತರ ಬಂದ ಅತ್ಯಂತ ಶ್ರೇಷ್ಠ ಕವಿ ಎಂದು ಪ್ರಶಂಸಿಸಿದ್ದಾನೆ. ವಿದ್ಯೆ ಸಂಸ್ಕಾರಗಳಿಲ್ಲದ ಬಡರೈತ ಕುಟುಂಬದಲ್ಲಿ ಹುಟ್ಟಿದ್ದರೂ ಈತ ರಷ್ಯನ್ ಜಾನಪದ ಸಾಹಿತ್ಯವನ್ನು ಚೆನ್ನಾಗಿ ಅರಿತಿದ್ದ. 1916ರಲ್ಲಿ ಬರೆದ ಮೊಟ್ಟ ಮೊದಲ ಕವನ ಸಂಗ್ರಹ ಇವನ ಚಿಂತನೆ ಹಾಗೂ ದೇಶಪ್ರೇಮದ ಪ್ರತೀಕವಾಗಿದೆ. ರಷ್ಯನ್ ಕ್ರಾಂತಿಯನ್ನು

ಕಳಕಳಿಯಿಂದ ಸ್ವಾಗತಿಸಿದ ಈತ 1919ರಲ್ಲಿ ಎಜ್ರಾ ಪೌಂಡನ ಪ್ರತಿಮಾವಾದದಿಂದ (ಇಮೇಜಿಸಂ) ಪ್ರಭಾವಿತನಾಗಿ ಪ್ರತಿಮಾವಾದಿಗಳ ಪಂಥವೊಂದನ್ನು ಸ್ಥಾಪಿಸಿದ. ರಷ್ಯನ್ ಕ್ರಾಂತಿ ವಿಫಲವಾದಾಗ ನಿರಾಶೆ ಹೊಂದಿ ಮಾಸ್ಕೋಗೆ ತೆರಳಿ ಅಲ್ಲಿ ಸ್ವೇಚ್ಛಾಚಾರಿ ಜೀವನ ನಡೆಸಿದ. ಮಾಸ್ಕೋ ನಗರದ ಕುಡಿತದ ಅಂಗಡಿಗಳನ್ನು ಚಿತ್ರಿಸುವ ಕವನಗಳಲ್ಲಿ, ಪುಂಡನ ತಪ್ಪೊಪ್ಪಿಗೆ ಎಂಬ ಕವನದಲ್ಲಿ ದುರಂತವ್ಯಗ್ರತೆ ಇದೆ. ಹೊಸ ಸೋವಿಯತ್ ದೇಶ ನಿರ್ಮಿಸಿದ ಆದರ್ಶ ಗ್ರಾಮವಾಗಲಿ ಸದ್ದು ಗದ್ದಲ ತುಂಬಿದ ಮಹಾನಗರವಾಗಲಿ ಇವನಿಗೆ ಶಾಂತಿ, ಸಮಾಧಾನಗಳನ್ನು ನೀಡಲಿಲ್ಲ. ಐಸಾಡೊರ ಡಂಕನಳೊಂದಿಗೆ ಮಾಡಿಕೊಂಡ ಬೇಜವಾಬ್ದಾರಿಯುತವಾದ ವಿವಾಹ ಇವನ ಬಾಳನ್ನು ಮತ್ತಷ್ಟು ಹದಗೆಡಿಸಿತು. ಪೌರಸ್ತ್ಯ ದೇಶಗಳಲ್ಲಿ ಪ್ರವಾಸ ಕೈಕೊಂಡಾಗ ಬರೆದ ಪರ್ಷಿಯನ್ ರೂಢಿಗಳನ್ನುಳ್ಳ ಸರಳ ರಮ್ಯ ಕವನಗಳೂ ಇವನಿಗೆ ತೃಪ್ತಿ ನೀಡಲಿಲ್ಲ. ನಿರಾಶೆಯಿಂದ ಈತ ಆತ್ಮಹತ್ಯೆ ಮಾಡಿಕೊಂಡ. (ಎಚ್.ಕೆ.ಆರ್.)

**ಎಸ್ಪರ್‌ಸನ್, ಆಟೋ:** 1860–1943. ಡೆನ್ಮಾರ್ಕ್ ದೇಶದ ಪ್ರಖ್ಯಾತ ಭಾಷಾವಿಜ್ಞಾನಿ, ಭಾಷಾವಿಜ್ಞಾನದ ಅಧ್ಯಯನಕ್ಕೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ಈತ ಡೆನ್ಮಾರ್ಕಿನ ರಾನ್‍ಡರ್ಸ್ ಪಟ್ಟಣದಲ್ಲಿ 1860ನೆಯ ಜುಲೈ 16ರಂದು ಜನಿಸಿದ. ಈತನ ಆಡುಮಾತು ಡಚ್ ಭಾಷೆ; ಈತ ಪರಿಶೋಧನೆಗೆ ಕೈಗೊಂಡ ವಿಷಯ ಆಂಗ್ಲಭಾಷೆ ಮತ್ತು ವ್ಯಾಕರಣ. ಇವುಗಳಲ್ಲಿ ಅತ್ಯಂತ ಶ್ರೇಷ್ಠಮಟ್ಟದ ಅಧಿಕಾರವುಳ್ಳ ವ್ಯಕ್ತಿ ಎಂದು ಪರಿಗಣಿಸಲ್ಪಟ್ಟಿದ್ದ. ಯುರೋಪಿನಲ್ಲಿ ಆಧುನಿಕ ಪದ್ಧತಿಯಲ್ಲಿ ಭಾಷಾ ಬೋಧನೆ ಮಾಡಬೇಕೆಂಬ ಒಂದು ರೀತಿಯ ಚಳವಳಿಯನ್ನೇ ಆರಂಭಿಸಿ ಯಶಸ್ವಿಯಾದ. ಧ್ವನಿವಿಜ್ಞಾನ, ಭಾಷಾವಿಜ್ಞಾನ, ಆಂಗ್ಲಭಾಷಾ ಚರಿತ್ರೆಗಳ ಬೆಳೆವಣಿಗೆ, ಅಂತಾರಾಷ್ಟ್ರೀಯ ಭಾಷಾ ಚಳವಳಿ–ಮುಂತಾದ ಕಾರ್ಯಕ್ಷೇತ್ರಗಳಲ್ಲಿ ದುಡಿದಿದ್ದಾನೆ.

1893ರಲ್ಲಿ ಕೋಪೆನ್ ಹೇಗೆನ್ ವಿಶ್ವವಿದ್ಯಾನಿಲಯದಲ್ಲಿ ಆಂಗ್ಲಭಾಷಾ ಪ್ರಾಧ್ಯಾಪಕ ಪದವಿಯನ್ನು ಸ್ವೀಕರಿಸಿದ. ನ್ಯೂಯಾರ್ಕಿನ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ 1909–10ರವರೆಗೆ ವಿಶೇಷ ಉಪನ್ಯಾಸಗಳನ್ನು ನಡೆಸಿದ. ಆಗಾಗ ಇಂಗ್ಲೆಂಡಿಗೂ ಹೋಗಿ ಅಲ್ಲೂ ಪ್ರೌಢಪ್ರವಚನಗಳನ್ನು ಮಾಡಿದ. ಅಲ್ಲಿಂದೀಚೆಗೆ ತನ್ನ ವಿಶ್ವವಿದ್ಯಾನಿಲಯದಲ್ಲಿಯೇ ನೆಲೆಸಿ ಅನೇಕ ಗ್ರಂಥಗಳನ್ನು ರಚಿಸಿದ. ಜನರಲ್ಲಿ ನಿತ್ಯ ಬಳಕೆಯಲ್ಲಿರುವ ಭಾಷೆಯನ್ನು ಆಧಾರವಾಗಿಟ್ಟುಕೊಂಡು ಭಾಷೆಯನ್ನು ಬೋಧಿಸಬೇಕೆಂಬ ತತ್ತ್ವವನ್ನು ಪ್ರತಿಪಾದಿಸಿ ಆ ಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸಿದ.

ಈತ ಬರೆದಿರುವ ಗ್ರಂಥಗಳು ಮತ್ತು ಲೇಖನಗಳ ಸಂಖ್ಯೆ ಸುಮಾರು 400. ಅವುಗಳಲ್ಲಿ ಬಹು ಮುಖ್ಯವಾದ ಗ್ರಂಥಗಳು: 1 ಇಂಗ್ಲಿಷ್ ಭಾಷೆಯ ಬೆಳೆವಣಿಗೆ ಮತ್ತು ರಚನೆ (ಗ್ರೋತ್ ಅಂಡ್ ಸ್ಟ್ರಕ್ಚರ್ ಆಫ್ ಇಂಗ್ಲಿಷ್ ಲ್ಯಾಂಗ್ವೇಜ್, 1905). 2 ಭಾಷೆಯಲ್ಲಿ ಪ್ರಗತಿ (ಪ್ರೋಗ್ರೆಸ್ ಇನ್ ಲ್ಯಾಂಗ್ವೇಜ್. 1894). 3 ಜರ್ಮನ್ ಭಾಷೆಯಲ್ಲಿ ಬರೆದಿರುವ ಲಾರ್ಬುಶ್ಚ್ ಡರ್ ಪೋನೆಟಿಕ್ (1904) ಎಂಬುದು ಸಾಮಾನ್ಯ ಧ್ವನಿವಿಜ್ಞಾನದ ವಿಷಯವನ್ನು ವೈಜ್ಞಾನಿಕ ರೀತಿಯಲ್ಲಿ ವಿವರಿಸುವ ದೀರ್ಘವೂ ಉತ್ತಮವೂ ಆದ ಪುಸ್ತಕ. 4 ಶಿಕ್ಷಾಶಾಸ್ತ್ರ (ಪೋನೆಟಿಕ್ಸ್, 1899). 5 ಭಾಷೆ, ಅದರ ಮೂಲ, ಸ್ವಭಾವ ಮತ್ತು ಬೆಳೆವಣಿಗೆ (ಲ್ಯಾಂಗ್ವೇಜ್, ಇಟ್ಸ್ ನೇಚರ್, ಡೆವಲಪ್‌ಮೆಂಟ್ ಅಂಡ್ ಆರಿಜಿನ್. 1922). 6 ವ್ಯಾಕರಣಶಾಸ್ತ್ರದ ತತ್ತ್ವ (ದಿ ಫಿಲಾಸಫಿ ಆಫ್ ಗ್ರಾಮರ್. 1924). 7 ಏಳು ಸಂಚಿಕೆಗಳಲ್ಲಿ ಬರೆದಿರುವ, ವಿಶ್ವಕೋಶದಂತಿರುವ ಆಧುನಿಕ ಇಂಗ್ಲಿಷ್ ವ್ಯಾಕರಣ ಪುಸ್ತಕಗಳು (ಮಾಡರ್ನ್ ಇಂಗ್ಲಿಷ್ ಗ್ರ್ಯಾಮರ್. 1909). ಈ ಗ್ರಂಥಗಳಲ್ಲಿ ಅನೂಚಾನವಾಗಿ ನಡೆದು ಬಂದ ಸಂಪ್ರದಾಯಬದ್ಧವಾದ ಜಿಗುಟು ನಿಯಮಗಳ ಮಧ್ಯದಲ್ಲಿ ಸೆರೆಸಿಕ್ಕಿದ್ದ ಲ್ಯಾಟಿನ್ ವ್ಯಾಕರಣಗಳ ಪದ್ಧತಿಯನ್ನು ಖಂಡಿಸಿ, ಅವುಗಳ ವೈಜ್ಞಾನಿಕತೆಯನ್ನು ಅಲ್ಲಗಳೆಸಿರುವುದಲ್ಲದೆ ವ್ಯಾಕರಣವೂ ಒಂದು ರೀತಿಯಲ್ಲಿ ಸಂಬಂಧಾತ್ಮಕವಾದುದು ಹಾಗೂ ಪ್ರಗತಿಶೀಲವಾದುದು ಎಂಬುದನ್ನು ನಿರೂಪಿಸಿದ್ದಾನೆ. ಈ ಗ್ರಂಥಗಳಲ್ಲಿ ಆತ ಅನುಸರಿಸಿರುವ ಮಾರ್ಗವೂ ನಿರೂಪಿಸಿರುವ ವಿಷಯಗಳೂ ಶಾಸ್ತ್ರೀಯವಾದ ವಿಚಾರ ಪದ್ಧತಿಯೂ ಹೊಸದಾಗಿ ಸೂಚಿಸಿರುವ ಅಂಶಗಳೂ ಎಲ್ಲ ಭಾಷೆಗಳಿಗೂ ಸಾಮಾನ್ಯವಾಗಿ ಅನ್ವಯಿಸುತ್ತವೆ. ಅವುಗಳ ಅಭ್ಯಾಸದಿಂದ ಉಂಟಾಗುವ ಹೊಸ ದೃಷ್ಟಿ ನಮ್ಮ ಭಾಷಾ ಚರಿತ್ರೆ, ವ್ಯಾಕರಣಗಳ ಕ್ರಮವನ್ನು ತಿರುಗಿ ವಿಮರ್ಶೆ ಮಾಡುವ ಪ್ರೇರಣೆಯನ್ನು ಮೂಡಿಸುತ್ತದೆ. ಇವಲ್ಲದೆ ಈತ 8 ಅನಲಿಟಿಕ್ ಸಿಂಟ್ಯಾಕ್ಸ್ (1937), 9 ಎಸೆನ್ಷಿಯಲ್ಸ್ ಆಫ್ ಗ್ರ್ಯಾಮರ್, 10 ಲಿಂಗ್ವಿಸ್ಟಿಕ್, 11 ಹೌ ಟು ಟೀಚ್ ಎ ಫಾರಿನ್ ಲ್ಯಾಂಗ್ವೇಜ್, 12 ಇನ್ ಇಂಟರ್ ನ್ಯಾಷನಲ್ ಲ್ಯಾಂಗ್ವೇಜ್, 13 ಮ್ಯಾನ್ ಕೈಂಡ್, ನೇಷನ್ ಅಂಡ್ ಇಂಡಿವಿಜುಯಲ್–ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ.

ಈತ ವೈಯಾಕರಣಿಯೇನೋ ಅಹುದಾದರೂ ಒಣ ವೈಯಾಕರಣಿಯಲ್ಲ. ಭಾಷೆಯನ್ನು ಸುಲಭವಾಗಿ ಕಲಿಯುವುದಕ್ಕೆ ಉತ್ಕೃಷ್ಟವಾದ ಮಾರ್ಗ ಯಾವುದೆಂಬುದನ್ನು ಕಂಡುಹಿಡಿಯುವುದು ಈತನ ಉದ್ದೇಶವಾಗಿತ್ತು. ಇದಕ್ಕಾಗಿ ಈತ ಭಾಷೆಯ ಮೂಲವನ್ನೂ ಬೆಳೆವಣಿಗೆಯನ್ನೂ ಕೆದಕಲು ಹೊರಟ. ತನ್ನ ಜೀವನದ ಆರಂಭದೆಶೆಯಲ್ಲಿ ಡಾರ್ವಿನ್ನನ ವಿಕಾಸವಾದದಿಂದ ಪ್ರಭಾವಿತನಾಗಿದ್ದಂತೆ ಕಂಡುಬರುತ್ತದೆ. ಆದರೆ ಕಾಲಾಂತರದಲ್ಲಿ ಅದರ ಪ್ರಭಾವದಿಂದ ಮುಕ್ತನಾಗಿ ಮಗು ಕಲಿಯುವ ಭಾಷೆಯ ಅವಸ್ಥೆಗಳನ್ನು ವಿಶ್ಲೇಷಿಸಿ ಆ ಮೂಲಕ ಭಾಷೆಯ ಹುಟ್ಟನ್ನು ಕಂಡುಹಿಡಿಯುವ ಪ್ರಯತ್ನವನ್ನು ಈತ ಮಾಡಿದ. ಅನಂತರ ಭಾಷಾಬೋಧನೆಯ ಕ್ರಮವನ್ನು ಸೂಚಿಸಿದ. ಡೆನ್ಮಾರ್ಕ್ ದೇಶದ ಭಾಷಾ ಬೋಧನೆಯ ಕ್ರಮವೆಲ್ಲ ಎಸ್ಪರ್‌ಸನ್ ಸೂಚಿಸಿದ ಮಾರ್ಗದಲ್ಲಿಯೆ ಇಂದು ನಡೆಯುತ್ತಿದೆ.

ಫಿಲಾಸಫಿ ಆಫ್ ಗ್ರ್ಯಾಮರ್ ಎಂಬ ಗ್ರಂಥದಲ್ಲಿ ಈತ ತನಗೆ ಪರಿಚಯವಿದ್ದ ಐರೋಪ್ಯ ಭಾಷೆಗಳ ವ್ಯಾಕರಣಗಳನ್ನೆಲ್ಲ ಸಮದೃಷ್ಟಿಯಿಂದ ನೋಡಿ ವ್ಯಾಕರಣ ಶಾಸ್ತ್ರದ ಜೀವವೇನೆಂಬುದನ್ನು ನಿರೂಪಿಸಿದ್ದಾನೆ. ಪ್ರತಿಯೊಂದು ಭಾಷೆಯನ್ನಾಡುವ ಜನರ ಮನೋಧರ್ಮ ಅವರವರ ವ್ಯಾಕರಣಗಳಲ್ಲಿ ಅಡಕವಾಗಿದೆ. ಮನುಷ್ಯನ ಬುದ್ಧಿ ಕಾಲದೇಶಗಳ ತಡೆಯಿಲ್ಲದೆ ಭಾಷೆಯ ಬೆಳೆವಣಿಗೆಯಲ್ಲಿ ಅನುಸರಿಸಿರುವ ಕ್ರಮ ಸಾಮಾನ್ಯವಾಗಿ ಒಂದೇ ರೀತಿಯದು ಎಂದು ಇಲ್ಲಿ ಈತ ತೋರಿಸಿದ್ದಾನೆ. ಭಾಷೆಯ ಚರಿತ್ರೆಯನ್ನು ಬುದ್ಧಿಯ ಚರಿತ್ರೆಯೆಂದೂ ಹೇಳಬಹುದು. ಯಾವುದಾದರೂ ಭಾಷೆಯ ವ್ಯಾಕರಣ ರಚನೆಗೆ ಸಾಮಾನ್ಯವಾಗಿ ಗ್ರಾಂಥಿಕ ಪ್ರಯೋಗಗಳನ್ನು ಆಧಾರವಾಗಿಟ್ಟುಕೊಳ್ಳುವುದು ರೂಢಿಯಾಗಿದೆ. ವ್ಯವಹಾರದಲ್ಲಿಲ್ಲದ ಭಾಷೆಯ ವಿಷಯದಲ್ಲಿ ಇದು ಸರಿಯಾದರೂ ಅದು ಜೀವಂತವಾಗಿದ್ದಲ್ಲಿ, ಅಂದರೆ ವ್ಯವಹಾರಿಕವಾಗಿದ್ದಲ್ಲಿ ಅದರ ಆ ಸ್ವರೂಪವನ್ನು ಅವಶ್ಯವಾಗಿ ಗಮನಿಸಬೇಕೆಂದು ಎಸ್ಪರ್ಸನ್ ಒತ್ತಿ ಹೇಳಿದ್ದಾನೆ. ಇಂದು ನಡೆಯುತ್ತಿರುವ ವ್ಯತ್ಯಾಸಗಳೂ ಹಿಂದೆ ನಡೆದಿರುವುವೂ ಯಾವುದಾದರೂ ನಿಯಮಗಳಿಗೆ ಒಳಪಟ್ಟಿರಬೇಕೆಂಬ ಅಂಶ ಖಚಿತವಾಗಿ ಈ ಗ್ರಂಥದಿಂದ ತಿಳಿಯುತ್ತದೆ. ಇದರಿಂದ ವ್ಯಾಕರಣ ರಚನೆಗೆ ಇದು ಬಹಳ ಸಹಾಯಕರ. ವ್ಯಾಕರಣದಲ್ಲಿ ಒಂದು ಭಾಷೆಯ ಲಕ್ಷಣವನ್ನು ಹೇಳುವುದು ಮುಖ್ಯವಾದರೂ ಕಲಿಯುವವನ ದೃಷ್ಟಿಯಿಂದಲೂ ಅದನ್ನು ರಚಿಸಬೇಕು. ಅದು ಅವನಿಗೆ ಕ್ಲೇಶವಿಲ್ಲದ ಮಾರ್ಗವನ್ನು ಕಾಣಿಸಬೇಕು. ಸಾಮಾನ್ಯ ಲಕ್ಷಣಗಳನ್ನು ಬೇಸರಗೊಳಿಸದೆ ಸಂದೇಹಕ್ಕೆ ಅವಕಾಶವಿಲ್ಲದಂತೆ ತಿಳಿಸಬೇಕು. ಒಬ್ಬನ ಮಾತೃಭಾಷೆಯ ವ್ಯಾಕರಣದ ಅಭ್ಯಾಸದಲ್ಲಿಯೇ ಅವನಿಗೆ ಇತರ ಭಾಷೆಗಳ ವ್ಯಾಕರಣಗಳ ಸಾಮಾನ್ಯ ಪದ್ಧತಿಯೂ ಹಸ್ತಗತವಾಗುವಂತಿರಬೇಕು–ಇವೇ ಮುಂತಾದ ಹಲವು ತತ್ತ್ವಗಳ ಪ್ರತಿಪಾದನೆ ಈ ಗ್ರಂಥದಲ್ಲಿದೆ. ವ್ಯಾಕರಣಶಾಸ್ತ್ರದಲ್ಲಿ ಹೊಸ ಮಾರ್ಗ ಉಂಟೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅದನ್ನು ಕಾಲಕಾಲಕ್ಕೆ ವಿಮರ್ಶೆಗೆ ಒಳಪಡಿಸಿ ತಿದ್ದುವ ಆವಶ್ಯಕತೆ ಇದ್ದೇ ಇದೆ. ಈ ಗ್ರಂಥವೊಂದರಿಂದಲೇ ಆತನ ವ್ಯಕ್ತಿತ್ವವನ್ನು ಮನಗಾಣಬಹುದು. ಇದು ಎಸ್ಪರ್‌ಸನ್ನನ ಪರಿಣತ ವಿದ್ವತ್ತಿನ ಫಲವಾಗಿದೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಗ್ರಂಥಗಳಲ್ಲಿ ಭಾಷೆಯ ವಿವಿಧ ಕ್ಷೇತ್ರಗಳಲ್ಲಿ ಪ್ರವೇಶಿಸಿ ಭಾಷಾವಿಜ್ಞಾನದ ಸರ್ವತೋಮುಖವಾದ ಬೆಳೆವಣಿಗೆಗೆ ಈತ ಕಾರಣನಾಗಿದ್ದಾನೆ. ಪ್ರಸಿದ್ಧ ಭಾಷಾವಿಜ್ಞಾನಿಗಳು ಈತನ ಪುಸ್ತಕಗಳನ್ನು ಆಗಾಗ್ಗೆ ಆಧಾರಗ್ರಂಥಗಳಾಗಿ ಉದಾಹರಿಸುತ್ತಿದ್ದಾರೆ. ಭಾಷೆ ಮತ್ತು ಭಾಷಾ ವಿಜ್ಞಾನಗಳ ಮತ್ತು ಭಾಷಾ ಬೋಧನೆಯ ಬಗ್ಗೆ ಎಸ್ಪರ್‌ಸನ್ ಮಾಡಿರುವ ಕೆಲಸ ಬಹು ಮಹತ್ತ್ವದ್ದು. (ಬಿ.ಎಸ್.ಸಿ.)

**ಎಸ್ಪರ್‍ಯಾಂಟೊ:** ಯುರೋಪಿನ ಅನೇಕ ಭಾಷೆಗಳ ಆಧಾರದ ಮೇಲೆ ನಿರ್ಮಿತವಾದ ಒಂದು ಅಂತಾರಾಷ್ಟ್ರೀಯ ಭಾಷೆ. ಪ್ರಪಂಚಕ್ಕೆಲ್ಲ ಒಂದು ಭಾಷೆಯಿದ್ದರೆ ಒಳ್ಳೆಯದು, ಅದರಿಂದ ಮಹತ್ತ್ವದ ಪ್ರಯೋಜನಗಳಾಗುತ್ತವೆ ಎಂಬ ಉದ್ದೇಶದಿಂದ ಕಲ್ಪಿತವಾದ ಭಾಷೆಗಳಲ್ಲಿ ಇದೂ ಒಂದು. ಬೇರೆ ಬೇರೆ ಭಾಷೆಗಳಿಂದ ತೆಗೆದುಕೊಂಡ ಅಂಶಗಳು ಇದರಲ್ಲಿ ತುಂಬ ಇವೆ. ಮೂಲ ಪದಗಳು ಹೆಚ್ಚಾಗಿಲ್ಲದಿದ್ದರೂ ಪ್ರತ್ಯಯಗಳ ನೆರವಿನಿಂದ ಹೇರಳವಾಗಿ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಿಕೊಳ್ಳಬಹುದು. ಈ ಭಾಷೆಯಲ್ಲಿ ಕೃತಕವಾದ ಅಂಶಗಳೂ ಇಲ್ಲದಿಲ್ಲ. ಇಂಡೋ–ಯುರೋಪಿಯನ್ ಭಾಷೆಗಳನ್ನೇ ಸಂಪೂರ್ಣವಾಗಿ ಅವಲಂಬಿಸಿರುವ ಇದರಲ್ಲಿ ಅರ್ಧಕ್ಕೂ ಹೆಚ್ಚು ಲ್ಯಾಟಿನ್ ಅಂಶಗಳಿವೆ. ಮಿಕ್ಕ ಅಂಶಗಳಲ್ಲಿ ಹೆಚ್ಚು ಪಾಲು ಜರ್ಮ್ಯಾನಿಕ್ ಮೂಲದವು.

ಎಸ್ಪರ್‍ಯಾಂಟೊ ಭಾಷೆಗೆ ವ್ಯಾಕರಣವಿದ್ದು ಅದರಲ್ಲಿ ಅಪವಾದಗಳಿಲ್ಲದ ಹದಿನಾರು ನಿಯಮಗಳಿವೆ. ಎಲ್ಲ ನಾಮಪದಗಳೂ–0ಯಿಂದ ಅಂತ್ಯಗೊಳ್ಳುತ್ತವೆ. ಬಹುವಚನವಾದರೆ–J ಆಗುತ್ತದೆ; ಗುಣವಾಚಕಗಳಲ್ಲಿ– A ದಿಂದ ಕೊನೆಯಾಗುತ್ತದೆ; ಅವುಗಳ ಬಹುವಚನ–AJ; ಹೀಗೆ ಭಾಷೆಯ ರಚನೆ ಸರಳವಾಗಿದೆ. ಈ ಭಾಷೆಗೆ ರೋಮನ್ ಲಿಪಿಯನ್ನೇ ಬಳಸಲಾಗಿದೆ. ಆದರೆ ಅದು ಧನ್ಯಾತ್ಮಕವಾಗಿದೆ. ಅದರ ಫಲವಾಗಿ ಬಳಕೆಯಲ್ಲಿರುವ ರೋಮನ್ ಲಿಪಿಯಲ್ಲಿ ಕೆಲವು ಸಣ್ಣಪುಟ್ಟ ಮಾರ್ಪಾಡುಗಳಾಗಿವೆ. ಎಸ್ಪರ್‍ಯಾಂಟೊ ಭಾಷೆಯನ್ನು ನಿರ್ಮಿಸಿದವ ರಷ್ಯದ ಒಬ್ಬ ವೈದ್ಯ ಲಾಜರಸ್ ಲುಸ್ಸಿಗ್ ಜಮೆನ್ ಹಾಫ್ (1859–1917). ಈತ ಯುರೋಪಿನ ಪ್ರಮುಖ ಭಾಷೆಗಳೆಲ್ಲವನ್ನೂ

ಬಲ್ಲವನಾಗಿದ್ದ. 1887ರಲ್ಲಿ ಅಂತಾರಾಷ್ಟ್ರೀಯ ಭಾಷೆ ಎಂಬ ಪುಸ್ತಿಕೆಯನ್ನು ಡಾ. ಎಸ್ಪರಾಂಟೊ ಎಂಬ ಗುಪ್ತ ನಾಮದಲ್ಲಿ ಪ್ರಕಟಿಸಿದ. ಎಸ್ಪರ್‍ಯಾಂಟೊ ಎಂದರೆ ಆಶಾವಾದಿ ಎಂದು ಅರ್ಥ. ಒಂದು ಜಗತ್ತಿಗೆ ಒಂದು ಭಾಷೆ ಇರಬೇಕು ಎಂಬುದು ಜಮೆನ್ ಹಾಫ್‍ನ ಹಂಬಲವಾಗಿತ್ತು ಆತ ಅದನ್ನು ಈಡೇರಿಸುವ ಕನಸು ಕಂಡ. ಈ ಉದ್ದೇಶದಿಂದ ತಾನು ನಿರ್ಮಿಸಿದ ಭಾಷೆಗೆ, ತಾನು ಬಳಸಿಕೊಂಡಿದ್ದ ಹೆಸರನ್ನೆ ಇಟ್ಟ.

ಆರಂಭದ ವರ್ಷಗಳಲ್ಲಿ ಈ ಭಾಷೆ ರಷ್ಯ, ಜರ್ಮನಿ, ಅಮೆರಿಕ ಸಂಯುಕ್ತ ಸಂಸ್ಥಾನ ಮೊದಲಾದ ದೇಶಗಳಲ್ಲಿ ನಿಧಾನವಾಗಿ ಪ್ರಚಾರಕ್ಕೆ ಬಂತು. ಈಗ ಲೋಕದ ಅನೇಕ ಕಡೆ ಪ್ರಸರಿಸಿದೆ. 1889ರಷ್ಟು ಹಿಂದೆಯೆ ಜರ್ಮನಿಯಲ್ಲಿ ಈ ಭಾಷೆಯ ಪತ್ರಿಕೆಯೊಂದು ಆರಂಭವಾಯಿತು. ಈ ಶತಮಾನದ ಆರಂಭದಲ್ಲಿ ಎಸ್ಪರ್‍ಯಾಂಟೊ ಚಳವಳಿ ಪ್ರಬಲವಾಯಿತು. ಅನೇಕ ಸಂಘ ಸಂಸ್ಥೆಗಳು ಈ ಭಾಷೆಯ ಪ್ರಚಾರಕ್ಕೆಂದೇ ಅಸ್ತಿತ್ವಕ್ಕೆ ಬಂದುವು. ಜಗತ್ತಿನಾದ್ಯಂತ ಸಾವಿರಾರು ಪುಸ್ತಕಗಳು ಎಸ್ಪರ್‍ಯಾಂಟೊ ಭಾಷೆಯಲ್ಲಿ ಪ್ರಕಟವಾಗಿವೆ. 65ಕ್ಕಿಂತಲೂ ಹೆಚ್ಚು ಭಾಷೆಗಳಿಂದ ಗ್ರಂಥಗಳು ಅನುವಾದಗೊಂಡಿವೆ. ನೂರಕ್ಕೂ ಹೆಚ್ಚು ನಿಯತಕಾಲಿಕಗಳು ಪ್ರಕಟವಾಗುತ್ತಿವೆ. ಅನೇಕ ರೇಡಿಯೋ ಕೇಂದ್ರಗಳು ಈ ಭಾಷೆಯಲ್ಲಿ ಕಾರ್ಯಕ್ರಮ ನಡೆಸಿಕೊಡುತ್ತಿವೆ. ಕೆನಡ ಮತ್ತು ಅಮೆರಿಕೆಯ ಹದಿನೈದಕ್ಕೂ ಹೆಚ್ಚಿನ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಎಸ್ಪರ್‍ಯಾಂಟೊ ಬೋಧನ ವಿಷಯವಾಗಿದೆ. ಹಲವು ಕುಟುಂಬಗಳಲ್ಲಿ ಇದನ್ನು ಮನೆಮಾತಾಗಿ ಸ್ವೀಕರಿಸಿರುವ ಉದಾಹರಣೆಗಳೂ ಇವೆ. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಎಸ್ಪರ್‍ಯಾಂಟೊವನ್ನು ತೀವ್ರ ಪ್ರಚಾರಮಾಧ್ಯಮವನ್ನಾಗಿಯೂ ಬಳಸಲಾಗಿತ್ತು. ಈ ಭಾಷೆಯ ನಿರ್ಮಾಪಕ ಹೊಸ ಹೊಸ ಪದಗಳನ್ನು ಸ್ವೀಕರಿಸಲು ಸಮ್ಮತಿಸಿದ್ದನೆ ಹೊರತು, ನಿಯಮಗಳನ್ನು ಬದಲಿಸಲು, ಸರಳಗೊಳಿಸಲು ಅಪೇಕ್ಷಿಸಿರಲಿಲ್ಲ. ಆದರೆ ಎಸ್ಪರ್‍ಯಾಂಟೊ ನಿಯಮಗಳನ್ನು ಇನ್ನೂ ಸುಲಭಗೊಳಿಸುವ ಪ್ರಯತ್ನಗಳು ನಡೆದೇ ಇವೆ. ಅದರ ಫಲವಾಗಿ ಕಾಲಕಾಲಕ್ಕೆ ಬೇರೆ ಭಾಷೆಗಳೇ ತಲೆ ಎತ್ತುವ ಅವಕಾಶವಿದೆ. ಇಡೊ ಇಂಥದೊಂದು ಭಾಷೆ.

ನಿರ್ಮಿತ ಭಾಷೆಗಳಲ್ಲೆಲ್ಲ ಎಸ್ಪರ್‍ಯಾಂಟೊ ನಿರ್ವಿವಾದವಾಗಿ ಅತ್ಯಂತ ಯಶಸ್ವಿಯಾದ, ಜನಪ್ರಿಯವಾದ ಭಾಷೆ. ಸರಳತೆ, ಸಂಕ್ಷಿಪ್ತತೆ, ಸೌಲಭ್ಯ ಹಾಗೂ ಕ್ರಮಬದ್ಧತೆಗಳೇ ಈ ಭಾಷೆಯ ಮುಖ್ಯ ಸೂತ್ರಗಳು (**ನೋಡಿ–ಅಂತಾರಾಷ್ಟ್ರೀಯ–ಭಾಷೆ**). (ವಿ.ಜಿ.)

**ಎಸ್ಕೋಸ್ಕೊ:** ಸುಂದರವಾದ ಒಂದು ಕಳ್ಳಿ ಜಾತಿ, ಪೆರು ಮತ್ತು ಎಕ್ವಡಾರ್‌ಗಳ ಮೂಲವಾಸಿ. ಪೆರು ದೇಶದ ಸಸ್ಯವಿಜ್ಞಾನಿಯಾದ ನಿಕೊಲಾಸ್ ಎ. ಎಸ್ಕೋಸ್ಕೊ ಎಂಬುವನ ಜ್ಞಾಪಕಾರ್ಥವಾಗಿ ಈ ಹೆಸರು. ಗಿಡದ ಮೇಲೆ ಉಣ್ಣೆಯಂತಿರುವ ಬಿಳಿಯ ಬಣ್ಣದ ನಾರು ಇರುವುದರಿಂದ ಸುಂದರವಾಗಿ ಕಾಣುತ್ತದೆ. ಮನೆಗಳಲ್ಲಿ ಇದನ್ನು ಅಲಂಕಾರ ಸಸ್ಯವಾಗಿ ಬೆಳೆಸುತ್ತಾರೆ. ಬೆಳೆದ ಗಿಡ ಸುಮಾರು 3 ಅಡಿ ಎತ್ತರವಿರುತ್ತದೆ. ಮೇಲು ಭಾಗ 20ರಿಂದ 25 ದಿಣ್ಣೆಗಳಿಂದ ಕೂಡಿದ್ದು ಹಿಮಬಿಳುಪಿನ ನಾರಿನಿಂದ ಆವೃತವಾಗಿದೆ. ಗಂಟುಗಳಲ್ಲಿ ದೃಢವಾದ ಮುಳ್ಳುಗಳಿವೆ. ಚಕ್ರಾಕಾರದ ನಸುಗೆಂಪು ಬಣ್ಣದ ಹೂಗಳು ಪ್ರತಿನಿತ್ಯ ಕಾಣಿಸಿಕೊಳ್ಳುತ್ತವೆ. ಅಂಡಾಶಯ ಬಹು ಸಣ್ಣ ಬಿಲ್ಲೆಗಳಿಂದ ಆವೃತವಾಗಿದ್ದು, ಇವುಗಳ ಕಂಕುಳಲ್ಲಿ ಉದುರಿ ಹೋಗುವ ಬಿಳಿಯ ಬಣ್ಣದ ನಾರುಗಳಿವೆ. ಹೆಚ್ಚು ರಸದಿಂದ ಕೂಡಿರುವ ಬಿಳುಪು ಅಥವಾ ಕೆಂಪು ಬಣ್ಣದ ಹಣ್ಣಿನಲ್ಲಿ ಕಪ್ಪಾದ ಬೀಜಗಳಿವೆ. (ಬಿ.ಎ.ಪಿ.)

**ಎಸ್ಮಾರ್ಕ್, ಜೊಹಾನ್ ಫ್ರೀಡ್ರಿಕ್ ಆಗಸ್ಟ್ ವಾನ್:** 1823–1908. ಕಾಳಗ ಕಳದಲ್ಲಿ ಮೊದಲ ನೆರವಿನ ಪ್ರಥಮ ಚಿಕಿತ್ಸೆ (ಫಸ್ಟ್ ಎಯ್ಡ್ ಬ್ಯಾಂಡೇಜ್) ಬಳಕೆ ಜಾರಿಗೆ ತಂದು, ಸೇನೆಯ ಶಸ್ತ್ರವೈದ್ಯದಲ್ಲಿ ಹೆಸರಾಗಿದ್ದ ಜರ್ಮನಿಯ ಶಸ್ತ್ರವೈದ್ಯ. ಕೀಲ್, ಗಟಿಂಜನ್ ವಿಶ್ವವಿದ್ಯಾನಿಲಯಗಳಲ್ಲಿ ವೈದ್ಯ ಪದವೀಧರನಾಗಿ (1848), ಡೆನ್ಮಾರ್ಕಿನೊಡನೆ ನಡೆದ ಯುದ್ಧದಲ್ಲಿ ಸೇರಿದ್ದಾಗ ಡೇನರ ಸೆರೆಗೆ ಸಿಕ್ಕಿದ್ದ. ಯುದ್ಧ ಮುಗಿದ ಮೇಲೆ ಕೀಲಿಗೆ ಹಿಂದಿರುಗಿ ಶಸ್ತ್ರವೈದ್ಯ ಪ್ರಾಧ್ಯಾಪಕನಾದ (1857). ಡೆನ್ಮಾರ್ಕ್, ಆಸ್ಟ್ರಿಯ, ಫ್ರಾನ್ಸ್ ಗಳ ಎದುರು ನಡೆದ ಕದನಗಳಲ್ಲಿ ಸುಮಾರು 6–7 ವರ್ಷ ಸರ್ಜನ್ ಜನರಲ್‌ನ ಪದವಿಯಲ್ಲಿ ಸೇನಾಸೇವೆಯಲ್ಲಿದ್ದ. ಅವಯವ ಒಂದರ ತುದಿಯಿಂದ ಮುಂಡದ ಕಡೆಗೆ, ಹಿಗ್ಗುವ ಅಗಲದ ಕಟ್ಟುಪಟ್ಟಿಯನ್ನು ಬಿಗಿಬಿಗಿಯಾಗಿ ಸುತ್ತುತ್ತಾ ಬಂದಾಗ ಅದರಲ್ಲಿನ ರಕ್ತವೆಲ್ಲ ಕಳೆದಂತಾಗಿಸುವುದೇ ಎಸ್ಮಾರ್ಕ್‌ನ ಕಟ್ಟುಪಟ್ಟಿಯ ಉಪಯೋಗ. ಆಮೇಲೆ ಒಂದು ತಿರುಚೊತ್ತನ್ನು (ಟೂರ್ನಿಕೆ) ಬಿಗಿದ ಮೇಲೆ, ಕಟ್ಟುಪಟ್ಟಿಯನ್ನು ಬಿಚ್ಚಿದರೂ ಅವಯವಕ್ಕೆ ರಕ್ತ ಹಿಂದಿರುಗದು. ಆಗ ಶಸ್ತ್ರಕ್ರಿಯೆ ಮಾಡುವುದು ಸುಲಭ. ಈ ವಿಧಾನವನ್ನು ಎಸ್ಮಾರ್ಕ್ ಯುದ್ಧಕಾಲದಲ್ಲಿ (1873) ಕಂಡುಹಿಡಿದ. ಸೇನೆಯಲ್ಲಿ ಕೈಗೊಳ್ಳಬೇಕಾದ ಶಸ್ತ್ರಕ್ರಿಯಾ ವಿಧಾನಗಳನ್ನು ಪುಸ್ತಕದಲ್ಲಿ ವಿವರವಾಗಿ ಬರೆದ. ಮೊದಲ ನೆರವನ್ನು (ಫಸ್ಟ್ ಎಯ್ಡ್) ಕೊಡುವ ತರಬೇತುಶಾಲೆಗಳನ್ನು ಸೈನಿಕರ ಮತ್ತು ಖಾಸಗಿ ಜನರ ಉಪಯೋಗಕ್ಕಾಗಿ ತೆರೆದ. ಮೊದಲ ನೆರವಿನ ಅವನ ಕೈಪಿಡಿಗಳು ಉತ್ತಮವಾದುವೆಂದು ಹೆಸರಾಗಿದ್ದವು. ಚಕ್ರವರ್ತಿ ಇಮ್ಮಡಿ ವಿಲಿಯಂನ ರಾಜಕುಮಾರಿಯನ್ನು ಮದುವೆಯಾದ ಮೇಲೆ ಅವನಿಗೆ ರಾಜಮನ್ನಣೆ ಸಿಕ್ಕಿತು (1877). (ಡಿ.ಎಸ್.ಎಸ್.)

**ಎಹರೆನ್‌ಬರ್ಗ್, ಇಲ್ಯ ಗ್ರೆಗೊರಿಯೇವಿಚ್:** 1891–1967. ರಷ್ಯದ ಕಾದಂಬರಿಕಾರ ಮತ್ತು ವಿಡಂಬನಕಾರ. ಹುಟ್ಟಿದ್ದು ಯೆಹೂದ್ಯ ಕುಟುಂಬದಲ್ಲಿ. 1910ರಲ್ಲಿ ಸಾಹಿತ್ಯ ರಚನೆಗೆ ಕೈಹಾಕಿದ. 1917ರಲ್ಲಿ ಬಾಲ್‌ಷೆವಿಕ್ ಪಂಗಡಕ್ಕೆ ವಿರೋಧಿಯಾಗಿದ್ದವನು ಕೆಲ ಕಾಲಾನಂತರ ಅದೇ ಪಂಗಡವನ್ನು ಸೇರಿ ಪ್ಯಾರಿಸಿಗೆ ಹೋದ. ಇಲ್ಲಿ ಸಂಕೇತವಿಧಾನದ ಕಲೆಗಾರರ ಪರಿಚಯವಾಯಿತು. ಅಲ್ಲಿದ್ದಾಗ ಜ್ಯೂಲಿಯ ಜ್ಯೂರೆನ್ ಷಿಯೋ ಮತ್ತು ಅವನ ಶಿಷ್ಯರ ಅಸಾಧಾರಣ ಸಾಹಸಗಳು ಎಂಬ ತೀಕ್ಷ್ಣವಾದ ವಿಡಂಬನ ಗ್ರಂಥವನ್ನು ರಚಿಸಿ (1930) ಸಮಕಾಲೀನ ನಾಗರಿಕತೆಯನ್ನು ಹಾಸ್ಯ ಮಾಡಿದ. ಇದೇ ಇವನ ಅತ್ಯುತ್ತಮ ಕೃತಿ ಎಂದು ಕೆಲವರ ಅಭಿಪ್ರಾಯ. ಈತ ಜನಪ್ರಿಯ ಪತ್ರಿಕಾ ಲೇಖಕನೂ ಆಗಿದ್ದ. ಪ್ರೋಟೊಕ್ಕಿ ಕಿರುದಾರಿಯಲ್ಲಿ (1941) ಎಂಬ ಕಾದಂಬರಿಯಲ್ಲಿ ಕರುಣರಸವೇ ಪ್ರಧಾನವಾಗಿದೆ. ಅವ್ಯವಸ್ಥೆಯಿಂದ ಹೊರಕ್ಕೆ (1933) ಎಂಬುದು ತನ್ನ ಜಗತ್ತಿನಿಂದ ದೂರನಾದ ಬೌದ್ಧಿಕ ವ್ಯಕ್ತಿಯ ಅಂತರಂಗದ ಸಂಕಟವನ್ನು ನಿರೂಪಿಸುತ್ತದೆ. ರಷ್ಯದ ಕೈಗಾರಿಕಾ ಯೋಜನೆಯಿಂದ ಹೊಸದೊಂದು ಜಗತ್ತು ಸೃಷ್ಟಿಯಾಗುತ್ತದೆ ಎನ್ನುವ ನೀತಿಯನ್ನು ಇದು ಸಾರುತ್ತದೆ. ಪಕ್ಷದ ನಿಯಮಗಳಿಗೆ ಬದ್ಧವಾಗಿ ತಯಾರಾದ ರಷ್ಯನ್ ಸಾಹಿತ್ಯ ತನ್ನ ಸತ್ತ್ವವನ್ನು ಕಳೆದುಕೊಂಡಿದೆ ಎಂದು ಸ್ಟಾಲಿನ್ನನ ಯುಗದ ಅನಂತರ ಟೀಕೆ ಮಾಡಿದವರಲ್ಲಿ ಈತ ಪ್ರಮುಖ. ಅದುವರೆಗೆ ಸ್ಟಾಲಿನ್ ಮತ್ತು ಕಮ್ಯುನಿಸ್ಟ್ ವರ್ಗದ ತೀವ್ರ ಪಕ್ಷಪಾತಿಯಾಗಿದ್ದ ಈತ ಸಾಮಾಜಿಕ ಪುನರ್ ರಚನೆಗಳನ್ನು ನಿರೂಪಿಸುವುದು ಸಾಹಿತ್ಯಕ್ಕೆ ಮುಖ್ಯವಲ್ಲ, ಮಾನವ ವ್ಯಕ್ತಿಗಳ ಒಳಜಗತ್ತು ಅದರಲ್ಲಿ ಸೃಷ್ಟಿಸಬೇಕು ಎಂದು ಸಾರಿ, ಇಂಥ ಪುಸ್ತಕಗಳನ್ನು ಅಪ್ಪಣೆಯ ಪ್ರಕಾರ ರಚಿಸಲು ಸಾಧ್ಯವಿಲ್ಲ; ಇವು ತಾವೇ ಸೃಷ್ಟಿಯಾಗಬೇಕು. ಆನ ಕರಿನೀನವನ್ನು ಬರೆಯುವಂತೆ ಟಾಲ್‌ಸ್ಟಾಯ್‌ಗೆ ಅಪ್ಪಣೆ ಕೊಡುವುದನ್ನು ಊಹಿಸಲು ಸಾಧ್ಯವೇ?– ಎಂದು ಪ್ರಶ್ನಿಸಿದ. ಸ್ಟಾಲಿನನ ಕಾಲದ ಅನಂತರ ರಷ್ಯದಲ್ಲಿ ಕಂಡುಬಂದ ಹೊಸ ವಾತಾವರಣದಲ್ಲಿ ಸೃಷ್ಟಿಯಾದ ಕಾದಂಬರಿಗಳಲ್ಲಿ ಇವನ ಹಿಮದ ಕರಗುವಿಕೆ (1954) ಮುಖ್ಯವಾದುದು. ಇದರ ತಾತ್ಪರ್ಯ ಇಷ್ಟು: ವ್ಯಕ್ತಿತ್ವಕ್ಕೆ ಮಹತ್ತ್ವ ನೀಡಬೇಕು. ರಾಗ ದ್ವೇಷಗಳನ್ನು ನಿಯಮಗಳಿಗನುಗುಣವಾಗಿ ವಿಭಾಗಿಸಿ ನಿರೂಪಿಸುವುದು ಸಾಧ್ಯವಿಲ್ಲ. ಪ್ರೇಮ, ಅನುಕಂಪ, ಭಯ, ಅಸೂಯೆ ಇವನ್ನು ಅನುಭವಿಸಿ ಅರಿಯಬೇಕು. ಈ ಕಿರುಕಾದಂಬರಿಯಲ್ಲಿ ಪ್ರತಿ ಪಾತ್ರದ ಒಳ ಜಗತ್ತೇ ವಸ್ತು; ಒಂದೊಂದು ಪಾತ್ರದ ದೃಷ್ಟಿಯಿಂದ ಒಂದೊಂದು ಪ್ರಸಂಗವನ್ನು ನಿರೂಪಿಸಲಾಗಿದೆ. ಈ ಕಾದಂಬರಿಯ ಮುಂದಿನ ಭಾಗ ವಸಂತ. ಈ ಕಾದಂಬರಿಯಲ್ಲಿ ಸ್ಟಾಲಿನ್ ಅನಂತರದ ಯುಗದ ಪ್ರಗತಿಯಲ್ಲಿ ಕವಿ ವಿಶ್ವಾಸ ಸೂಚಿಸುತ್ತಾನೆ. ತನ್ನ ಆತ್ಮವೃತ್ತದಲ್ಲಿ 1951ರ ದಶಕದ ಉತ್ತರಾರ್ಧದವರೆಗಿನ ಕಾಲವನ್ನು ಚಿತ್ರಿಸುತ್ತಾನೆ. (ಎಲ್.ಎಸ್.ಎಸ್.)

**ಎಳಂದೂರು ಹರೀಶ್ವರ:** 1606. ವೀರಶೈವ ಕವಿ. ಮೈಸೂರು ಜಿಲ್ಲೆಯ ಎಳಂದೂರು ಸಿಂಹಾಸನಾಧೀಶ್ವರನಾದ ಗುರು ಹರೀಶ್ವರದೇವರ ಮೊಮ್ಮಗ, ತೋಂಟದಾರ್ಯನ ಮಗ. ಪ್ರಭುದೇವರ ಪುರಾಣ ಇವನ ಕಾವ್ಯ. ಇದು ವಿವಿಧ ಷಟ್ಪದಿಗಳಲ್ಲಿ ರಚಿತವಾಗಿದೆ. 9 ಸಂಧಿ, 1497 ಪದ್ಯಗಳಿರುವ ಈ ಕೃತಿಯಲ್ಲಿ ಅಲ್ಲಮ ಪ್ರಭುದೇವರ ಸಮಗ್ರಚರಿತ್ರೆ ನಿರೂಪಿತವಾಗಿದೆ. ಕಾವ್ಯದ ಬಂಧ ಪ್ರೌಢವಾಗಿದೆ. ಕವಿಯೇ ಇದನ್ನು ಪ್ರಾಸರತ್ನಾಕರ ಎಂದು ಕರೆದಿದ್ದಾನೆ. ಲೌಕಿಕ ಪಾರಮಾರ್ಥಿಕ ಉದಾಹರಣೆಗಳಿಂದ ಚರಿತ್ರೆಯನ್ನು ಅತ್ಯಂತ ರಸವತ್ತಾದ ಕಾವ್ಯವನ್ನಾಗಿ ಮಾಡಿದ್ದಾನೆ. ತನ್ನ ಗ್ರಂಥವನ್ನು ವಿಶ್ವಾವಸು ಜ್ಯೇಷ್ಠ ಶುದ್ಧ ಪಾಡ್ಯದಲ್ಲಿ ಆರಂಭಿಸಿ ಪರಾಭವ ಜ್ಯೇಷ್ಠ ಶುದ್ಧ ಬಹುಳ ದಶಮಿಯಲ್ಲಿ ಮುಗಿಸಿದಂತೆ ಹೇಳಿದ್ದಾನೆ. ಇದರಿಂದ ಈತನ ಕಾಲವನ್ನು ಸು. 1486 ಎಂದು ಕೆಲವರೂ ಸು. 1606 ಎಂದು ಮತ್ತೆ ಕೆಲವರೂ ಹೇಳುತ್ತಾರೆ.

ಕಾವ್ಯ ಪ್ರಾರಂಭದಲ್ಲಿ ಪರಮೇಶ್ವರ, ವೃಷಭ, ಭೃಂಗೀಶ, ವೀರಭದ್ರ, ಸೊನ್ನಲಿಗೆಯ ರಾಮ, ತೋಂಟದ ಸಿದ್ಧಲಿಂಗಯತಿ, ಕೊಟ್ಟೂರಬಸವೇಶ್ವರ, ಗುರು ಸಿದ್ದವೀರ–ಇವರನ್ನು ಕವಿ ಸ್ತುತಿಸಿದ್ದಾನೆ. ತನ್ನ ಗುರುವಾದ ಸಿದ್ದವೀರೇಶ್ವರ ಪ್ರಭು ಕೃತಿಯನ್ನು ರಚಿಸಲು ಆಶೀರ್ವದಿಸಲೆಂದು ಬೇಡಿದ್ದಾನೆ. ಕಾವ್ಯಮಧ್ಯದಲ್ಲಿ ಕೆಲವೆಡೆ ತನ್ನನ್ನು ಹರೀಶ್ವರ ದೇವ, ಹರಿದೇವ, ಹರೀಶ್ವರಾಚಾರ್ಯ ಎಂದು ಕರೆದುಕೊಂಡಿದ್ದಾನೆ. ಪೂರ್ವ ಕವಿಗಳಲ್ಲಿ ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ, ಪಂಡಿತದೇವ, ಗುಬ್ಬಿಯ ಮಲ್ಲಣ್ಣ, ಜಕ್ಕಣಾರ್ಯ, ಮಯೂರ, ಬಲ್ಲಟ, ಭವಭೂತಿ, ಬಿಲ್ಹಣ, ಮಲ್ಹಣ, ಹಂಪೆಯ ಹರಿದೇವ–ಇವರನ್ನು ಸ್ತುತಿಸಿದ್ದಾನೆ. (ಎಸ್.ಬಿ.ಎಸ್.)

**ಎಟುತ್ತಚ್ಚನ್:** 17ನೆಯ ಶತಮಾನ. ಮಲೆಯಾಳಂ ಭಾಷೆಯಲ್ಲಿ ಇಂದಿಗೂ ಬಹು ಜನಪ್ರಿಯವಾಗಿರುವ ರಾಮಾಯಣ ಮಹಾಭಾರತಗಳನ್ನು ಬರೆದಿರುವ ಪ್ರಸಿದ್ಧ ಕವಿ. ತುಂಜತ್ತು ಎಮಿತ್ತಚ್ಚನ್ ಈತನ ಪೂರ್ವ ನಾಮ. ಈತನ ಶೈಲಿಯಲ್ಲಿ ಒಂದು ರೀತಿಯ ಸುವರ್ಣ ಮಾಧ್ಯಮ ಕಾಣುತ್ತದೆ. ತನ್ನ ಹಿಂದೆ, ಎಂದರೆ 16ನೆಯ ಶತಮಾನ ದಲ್ಲಿ, ಕವಿಗಳು ತೀರ ಮಲೆಯಾಳದ ಸೊಗಡನ್ನುಳ್ಳ ಜಾನಪದ ಗೀತ ಮಾದರಿಗಳಲ್ಲಿ ಬರೆಯುತ್ತಿದ್ದರು. ಇಲ್ಲವೆ ಸಂಸ್ಕೃತ ಪದ ವೃತ್ತ ಭೂಯಿಷ್ಠವಾದ ಮಣಿಪ್ರವಾಳ ಶೈಲಿಯಲ್ಲಿ ಬರೆಯುತ್ತಿದ್ದರು. ಆದರೆ ಎಮಿತ್ತಚ್ಚನ್ ಮಲೆಯಾಳ ಮತ್ತು ಸಂಸ್ಕೃತಗಳ ಹಾಳತವಾದ ಮಿಶ್ರಣವನ್ನು ದ್ರಾವಿಡ ಧಾಟಿಗಳಿಗೆ ಹೊಂದಿಸುವ ಪ್ರಯೋಗವನ್ನು ಯಶಸ್ವಿಯಾಗಿ ಮಾಡಿದ್ದಾನೆ. ಕೇರಳದ ಜಾನಪದ ಗೀತೆಗಳಾದ ವಡಕ್ಕನ್ ಪಾಟ್ಟುಗಳು (ಬಡಗಣ ಗೀತೆಗಳು) ಈತನ ಮೇಲೆ ಸಾಕಷ್ಟು ಪ್ರಭಾವ ಬೀರಿವೆ.

ಈತನ ರಾಮಚರಿತಂ ಕಾವ್ಯ ಭಕ್ತಿಸಾಹಿತ್ಯದ ಮೇರುಕೃತಿಯಾಗಿಯೇ ಇಂದಿಗೂ ಉಳಿದಿದೆ. ತನ್ನ ಹೃದಯದಲ್ಲಿ ಉಕ್ಕುತ್ತಿದ್ದ ಭಕ್ತಿಭಾವವನ್ನು ಪ್ರಕಟಪಡಿಸಲು ಅದಕ್ಕೆ ಅನುಯೋಜ್ಯವಾದ ಇತಿವೃತ್ತಗಳನ್ನು ಆಧ್ಯಾತ್ಮ ರಾಮಾಯಣದಲ್ಲೂ ಮಹಾಭಾರತದಲ್ಲೂ ಕಂಡುಕೊಂಡು, ಮೂಲಗ್ರಂಥಗಳನ್ನು ಅವಲಂಬಿಸಿ ಸ್ವಕೀಯವೂ ಸ್ವತಂತ್ರ್ಯವೂ ಆದ ರೀತಿಯಲ್ಲಿ ನೂತನ ಗ್ರಂಥಗಳನ್ನು ಈ ಕವಿ ರಚಿಸಿದ್ದಾನೆ. ಭಕ್ತಿದ್ಯೋತಕವಾದ ಭಾಗಗಳಂತೂ ಗಾನಯೋಗ್ಯವಾಗಿದ್ದು ಮೈಮರೆಸುವಂತಿವೆ. ಭಕ್ತಿಪ್ರಸ್ಥಾನ, ಕಿಳಿಪಾಟ್ಟು ಪ್ರಸ್ಥಾನಗಳನ್ನು ಪುನರುದ್ಧರಿಸಿದವನೆಂದು ಸಾಹಿತ್ಯ ಚರಿತ್ರೆಯಲ್ಲಿ ಈತ ಖ್ಯಾತನಾಗಿದ್ದಾನೆ. ಭಕ್ತಿಸಾಹಿತ್ಯದಲ್ಲಿ ಈತನಿಗೆ ತುಳಸೀದಾಸ, ಜಯದೇವ ಮೊದಲಾದ ಮಹಾಕವಿಗಳೊಡನೆ ಸಮಾನಪಟ್ಟವಿದೆಯೆಂದಲ್ಲಿ ಅತಿಶಯೋಕ್ತಿಯಾಗದು.

ರಾಮಾಯಣ, ಮಹಾಭಾರತಗಳಲ್ಲದೆ ಇನ್ನೂ ಕೆಲವು ಕೃತಿಗಳನ್ನು ಈತ ಬರೆದನೆನ್ನಲಾಗಿದೆ. ಅವುಗಳ ಪೈಕಿ ಮಲೆಯಾಳ ಭಾಗವತದ ಮೊದಲಿನ ಒಂಬತ್ತು ಸ್ಕಂಧಗಳು, ಉತ್ತರ ರಾಮಾಯಣ, ಹರಿನಾಮ ಕೀರ್ತನಂ, ಚಿಂತಾರತ್ನಂ–ಈ ಕೃತಿಗಳನ್ನು ಅವನವೆಂದು ಹೇಳಬಹುದು. ಆದರೆ ಇವಾವುವೂ ರಾಮಯಣ, ಮಹಾಭಾರತಗಳ ಮಟ್ಟಕ್ಕೆ ಮುಟ್ಟುವಂಥವಲ್ಲ. ಭಾಗವತಂ ಕಿಳಿಪಾಟ್ಟು ರಾಮಾಯಣಂ ಇರುಪತ್ತಿನಾಲು ವೃತ್ತಂ, ದೇವೀಮಾಹಾತ್ಮ್ಯಂ ಮುಂತಾದವನ್ನು ಈತನೇ ಬರೆದನೆಂಬ ವಿಷಯದಲ್ಲಿ ಅಭಿಪ್ರಾಯಭೇದವಿದೆ. ಆಧ್ಯಾತ್ಮ ರಾಮಾಯಣದಲ್ಲಿ ತತ್ತ್ವೋಪದೇಶಕ್ಕೂ ಭಾಗವತದಲ್ಲಿ ಕೃಷ್ಣಪಾರಮ್ಯ ಸ್ಥಾಪನೆಗೂ ಕವಿ ಆದ್ಯಗಮನವಿತ್ತಿದ್ದಾನೆ.

ಮಲೆಯಾಳಂ ಭಾಷೆಗೆ ಒಂದು ಲಿಪಿಸಮುಚ್ಚಯವನ್ನು ಒದಗಿಸಿದ ಕೀರ್ತಿಯನ್ನೂ ಎಮಿತ್ತಚ್ಚನಿಗೆ ಕೆಲವರು ವಿದ್ವಾಂಸರು ಆರೋಪಿಸಿದ್ದಾರೆ. ಈತನ ಕೃತಿಗಳ ಮೂಲಕ ಮಲೆಯಾಳಂ ಭಾಷೆಯ ಸಾಹಿತ್ಯಕ್ಕೆ ಉಂಟಾದ ಅಭಿವೃದ್ಧಿಯನ್ನು ಅನುಲಕ್ಷಿಸಿ ಇಂಥ ವಾದ ಹುಟ್ಟಿಕೊಂಡಿದೆಯೆಂದು ಹೇಳಬಹುದು, ಅಷ್ಟೆ. (ಕೆ.ಕೆ.ಎಸ್.)

**ಎಳೆಗಳು:** ಉಡುಪಿನ ಸಕಲ ಪ್ರಕಾರಗಳಲ್ಲಿಯೂ ಬಳಸಲಾಗುವ ನೈಸರ್ಗಿಕ ಮತ್ತು ಕೃತಕ ರಚನೆಗಳು (ಫೈಬರ್ಸ್). ಎಳೆ ಹೇಗೋ ಬಟ್ಟೆ ಹಾಗೆ ಎಂಬ ರೂಢಿಯ ಮಾತು ಬಟ್ಟೆಯ ಬಾಳ್ವಿಕೆ, ಹಿತ, ಅಂದಗಳಲ್ಲೆಲ್ಲ ಎಳೆಯ ಪಾತ್ರವನ್ನು ಎತ್ತಿಹಿಡಿದಿದೆ. ವಸ್ತ್ರೋದ್ಯಮದಲ್ಲಿ ಅಲ್ಲದೆ ಇತರ ರಂಗಗಳಲ್ಲಿಯೂ ಎಳೆಗಳಿಗೆ ಉಪಯೋಗ ಉಂಟು. ಎಳೆಗಳ ಆಕರಗಳನ್ನು ಅವಲಂಬಿಸಿ ಎಳೆಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸ ಬಹುದು–1 ನೈಸರ್ಗಿಕ, 2 ಅರ್ಧ ಕೃತಕ ಅಥವಾ ಪರಿವರ್ತಿತ, 3 ಪೂರ್ಣ ಕೃತಕ.

ಹತ್ತಿ, ರೇಷ್ಮೆ, ಉಣ್ಣೆ ಮೊದಲಾದವು ನೈಸರ್ಗಿಕ ಎಳೆಗಳ ಆಕರಗಳು. ರೇಯಾನ್ ಒಂದು ಬಗೆಯ ಪರಿವರ್ತಿತ ಎಳೆ. ನೈಸರ್ಗಿಕ ಆಕರಗಳಾದ ಸೆಲ್ಯುಲೋಸ್ ಅಥವಾ ಜೀವಜನ್ಯ ಸಸಾರಜನಕಗಳನ್ನು ಯಾವುದಾದರೊಂದು ಲೀನಕಾರಿಯಲ್ಲಿ ವಿಲೀನಮಾಡಿ ದೊರೆಯುವ ದ್ರಾವಣದಿಂದ ಎಳೆಗಳನ್ನೆಳೆಯುವುದರಿಂದ ಪರಿವರ್ತಿತ ಎಳೆಗಳು ದೊರೆಯುತ್ತವೆ. ನೈಲಾನ್, ಟೆರಿಲೀನ್, ಅರ್ಲಾನ್ ಮೊದಲಾದ ಹೆಸರುಗಳಿಂದ ಪರಿಚಿತವಾಗಿರುವ ಅನೇಕ ಸರಪಳಿ ಪಾಲಿಮರುಗಳು ಕೃತಕ ಎಳೆಗಳೆನ್ನಿಸಿಕೊಳ್ಳುತ್ತವೆ.

ಮೇಲೆ ಉದಾಹರಿಸಿದ ಎಳೆಗಳೆಲ್ಲವೂ ಆರ್ಗ್ಯಾನಿಕ್ ಬಗೆಯವು. ಇನಾರ್ಗ್ಯಾನಿಕ್ ವಸ್ತುಗಳೂ ಎಳೆಗಳ ರೂಪದಲ್ಲಿರಬಹುದು. ಕಲ್ನಾರು ಮತ್ತು ಆ ಬಗೆಯ ಅನೇಕ ಸಿಲಿಕೇಟುಗಳು ನಿಸರ್ಗದಲ್ಲಿ ಎಳೆಗಳ ರೂಪದಲ್ಲಿರುತ್ತವೆ. ಇಲ್ಲವೇ ಅವನ್ನು ಅನಂತರ ಎಳೆಗಳಾಗಿ ಪರಿವರ್ತಿಸಬಹುದು. ಉಕ್ಕು, ಅನೇಕ ಲೋಹಗಳು, ಸಿಲಿಕ ಮತ್ತು ಗಾಜುಗಳನ್ನೂ ಎಳೆಗಳಾಗಿ ಪರಿವರ್ತಿಸಬಹುದು.

**ಎಳೆಗಳ ಗುಣಲಕ್ಷಣಗಳು :** ಎಳೆಗಳ ರಚನೆಯನ್ನು ಮೊತ್ತಮೊದಲು ಪರೀಕ್ಷಿಸಲಾಗುತ್ತದೆ. ರೇಷ್ಮೆಯನ್ನುಳಿದ ಸಹಜ ಎಳೆಗಳಲ್ಲಿ ಈ ಪ್ರತಿ ಎಳೆಯ ಉದ್ದ ಪರಿಮಿತಿ ಮತ್ತು ಕೇವಲ ಹಲವು ಅಂಗುಲಗಳಷ್ಟಿರುತ್ತದೆ. ಈ ಬಗೆಯ ಎಳೆಗಳ ನಯವೂ (ಫೈನ್‍ನೆಸ್) ಪರಿಮಿತ. ಕೃತಕ ಎಳೆಗಳನ್ನು ಅಪರಿಮಿತ ಉದ್ದದ ಅವಿಚ್ಛಿನ್ನ ತಂತುಗಳಾಗಿ ಪಡೆಯಬಹುದು. ಅಷ್ಟೇ ಅಲ್ಲದೆ ಅವನ್ನು ನೈಸರ್ಗಿಕ ಎಳೆಗಳಿಗಿಂತಲೂ ನಯವಾದ ತಂತುಗಳಾಗಿ ಪಡೆಯಬಹುದು.

ಅಡ್ಡಕೊಯ್ತಗಳ ಪರಿಶೀಲನೆಯಿಂದ ಒಂದೊಂದು ಎಳೆಯ ರಚನೆಯೂ ಒಂದೊಂದು ಬಗೆ ಎಂದು ತಿಳಿದಿದೆ. ನೈಲಾನ್ ಮತ್ತು ಹಲವು ಬಗೆಯ ರೇಯಾನುಗಳ ಅಡ್ಡಕೊಯ್ತ ವರ್ತುಲಾಕಾರ; ರೇಷ್ಮೆಯ ಎಳೆಗಳ ಅಡ್ಡಕೊಯ್ತ ತ್ರಿಕೋನಾಕಾರ; ಲಿನನ್ ಬಟ್ಟೆಯನ್ನು ತಯಾರಿಸಲಾಗುವ ಅಗಸೆ ನಾರಿನ ಅಡ್ಡಕೊಯ್ತ ಪಂಚಬಾಹು ಆಕಾರ; ಹತ್ತಿಯ ಎಳೆ ಪೊಳ್ಳಾದ ಪಟ್ಟಿ ಆಕಾರ; ಹೀಗೆ ವಿವಿಧ ಎಳೆಗಳ ಅಡ್ಡಕೊಯ್ತಗಳಿಗೆ ವಿವಿಧ ಆಕಾರಗಳಿರುವುದರಿಂದ ಅಡ್ಡಕೊಯ್ತಗಳ ಪರೀಕ್ಷೆಯಿಂದ ಎಳೆಗಳನ್ನು ಗುರುತು ಹಿಡಿಯಬಹುದು. ಇಂಥ ಪರೀಕ್ಷೆಯಲ್ಲಿ ಸೂಕ್ಷ್ಮ ದರ್ಶಕದ ನೆರವು ಅನಿವಾರ್ಯ.

ಯಾವುದೊಂದು ಬಗೆಯ ಅಡ್ಡಕೊಯ್ತ ಏಕಪ್ರಕಾರವಾಗಿರಬೇಕಾದುದರ ಅಗತ್ಯ ನೂಲುವಾಗ, ನೇಯುವಾಗ, ಹೆಣೆಯುವಾಗ ಮತ್ತು ಬಣ್ಣಹಾಕುವಾಗ ಕಂಡುಬರುತ್ತದೆ. ಉಡುಪನ್ನು ತಯಾರಿಸಿದಾಗ ಅದರ ಒಪ್ಪ ಮತ್ತು ಅದರ ಹೊರಸ್ವರೂಪಗಳು ಎಳೆಗಳ ಏಕಪ್ರಕಾರತೆಯನ್ನು ಅವಲಂಬಿಸಿರುತ್ತದೆ.

ಯಾವ ಬಳಕೆಗೆ ಯಾವ ಎಳೆಯನ್ನುಪಯೋಗಿಸಬೇಕೆಂದು ನಿರ್ಧರಿಸುವಾಗ ಹಲವು ಯಾಂತ್ರಿಕ ಗುಣಗಳ ಪರಿಶೀಲನೆ ಅಗತ್ಯ. ಧಾರಣ ಸಾಮರ್ಥ್ಯ (ಟೆನ್ಸೈಲ್ ಸ್ಟ್ರೆಂತ್), ಆಘಾತ ನಿರೋಧಶಕ್ತಿ (ಇಂಪ್ಯಾಕ್ಟ್ ರೆಸಿಸ್ಟೆನ್ಸ್), ಶ್ರಮನಿರೋಧಶಕ್ತಿ (ಫೆಟೀಗ್ ರೆಸಿಸ್ಟೆನ್ಸ್), ಘರ್ಷಣಶಕ್ತಿ (ಅಬ್ರೇಶನ್ ರೆಸಿಸ್ಟೆನ್ಸ್), ಸ್ಥಿತಿಸ್ಥಾಪಕತೆ, ಮೃದುತ್ವ ಇತ್ಯಾದಿ ಈ ಗುಣಗಳು. ಇವನ್ನು ನೈಸರ್ಗಿಕ ಸ್ಥಿತಿಯಲ್ಲಿದ್ದಾಗ ಎಳೆಗಳು ಬಾಗಿದಾಗ, ತಿರುಚಿದಾಗ, ಒದ್ದೆಯಾದ ಸ್ಥಿತಿಯಲ್ಲಿದ್ದಾಗ ಅಳೆಯಲಾಗುತ್ತದೆ.

ಉಷ್ಣ, ವಿದ್ಯುತ್ ಮತ್ತು ದೃಗ್ ಲಕ್ಷಣಗಳನ್ನೂ ಪರಿಶೀಲಿಸುವುದುಂಟು. ಉಣ್ಣೆಯಂಥ ಹಲವು ಎಳೆಗಳು ಕಡಿಮೆ ವಿದ್ಯುದ್ವಾಹಕಗಳು. ಅವುಗಳಿಂದಾದ ಉಡುಪುಗಳು ಶರೀರದ ಉಷ್ಣ ನಷ್ಟವನ್ನು ತಡೆಯಬಲ್ಲವು. ಯಾವ ಬಗೆಯ ಎಳೆಯೇ ಆಗಲಿ ಅದನ್ನು ಉಡುಪುಗಳನ್ನು ತಯಾರಿಸಲು ಉಪಯೋಗಿಸಬೇಕಾದರೆ ಅದರ ಕರಗುವ ಬಿಂದು ಮತ್ತು ಮೆದು ಬಿಂದುಗಳು ಸಾಕಷ್ಟು ಹೆಚ್ಚಿರಬೇಕು. ಉಷ್ಣತೆ ಕಡಿಮೆಯಾದಂತೆ ಎಳೆಯ ಗುಣಲಕ್ಷಣಗಳಲ್ಲಿ ತೀವ್ರ ವ್ಯತ್ಯಾಸವಾಗಬಾರದು. ಉಡುಪಿಗಾಗಿ ಉಪಯೋಗಿಸುವ ಎಳೆಗಳಲ್ಲಿ ವಿದ್ಯುದ್ವಾಹಕತೆ ಹೆಚ್ಚಿರಬಾರದು. ದೃಗ್ ಲಕ್ಷಣಗಳಲ್ಲಿ ಹೊಳಪು ಎಳೆಯ ಆಕಾರವನ್ನು ಮಾತ್ರವಲ್ಲದೆ, ಎಳೆಯ ತಯಾರಿಕೆ ಮತ್ತು ಸಂಸ್ಕರಣ ವಿಧಾನಗಳನ್ನು ಸಹ ಅವಲಂಬಿಸಿರುತ್ತದೆ.

ಉಡುಪಿಗಾಗಿ ಉಪಯೋಗಿಸುವ ಎಳೆಗಳು ರಾಸಾಯನಿಕವಾಗಿ ಆದಷ್ಟು ನಿರೋಧಶಕ್ತಿಯನ್ನು ಪಡೆದಿರುವುದು ಉತ್ತಮ. $60^0 - 80^0$ ಸೆಂ. ಉಷ್ಣತೆಯಲ್ಲಿರುವ ತೆಳು ಆಮ್ಲ ದ್ರಾವಣಗಳು, ಸಾಮಾನ್ಯ ಸಾವಯವ ಲೀನಕಾರಿಗಳು, ಆಕ್ಸಿಜನ್ ನೀರು–ಇವುಗಳೊಡನೆ ವರ್ತಿಸುವಂತಿರಬಾರದು. ಬೂಷ್ಟು ಮೊದಲಾದವನ್ನು ತಕ್ಕಮಟ್ಟಿಗೆ ಪ್ರತಿಬಂಧಿಸಬೇಕು. ಬಣ್ಣಗಳನ್ನು ಸಾಕಷ್ಟು ಸುಲಭವಾಗಿ ಹಿಡಿಯುವಂತಿರಬೇಕು. ಬೇಕಿರುವ ಇಲ್ಲ ಗುಣಗಳನ್ನೂ ಪಡೆದಿರುವ ಎಳೆಗಳಿಲ್ಲ. ಆದ್ದರಿಂದ ಸಂದರ್ಭಗಳಿಗನುಗುಣವಾಗಿ ಯಾವ ಲಕ್ಷಣಗಳು ಅಪೇಕ್ಷಿತವೋ ಆ ಲಕ್ಷಣಗಳನ್ನುಳ್ಳ ಎಳೆಗಳನ್ನು ಆರಿಸಬೇಕಾಗುತ್ತದೆ. ಸಾಮಾನ್ಯವಾಗಿ ನೈಸರ್ಗಿಕ ಎಳೆಗಳು ಲೀನಕಾರಿಗಳನ್ನು ನಿರೋಧಿಸಿದರೂ ಅವುಗಳಿಗೆ ಆಮ್ಲ ನಿರೋಧಶಕ್ತಿ ಇರುವುದಿಲ್ಲ. ಕೃತಕ ಎಳೆಗಳಲ್ಲಿ ಹಲವಕ್ಕೆ ಆಮ್ಲ ನಿರೋಧಶಕ್ತಿ ಇದೆ. ಆದರೆ ಲೀನಕಾರಿಗಳಲ್ಲಿ ಸುಲಭವಾಗಿ ಲೀನವಾಗುತ್ತದೆ. ಕೃತಕ ಎಳೆಗಳ ಮೇಲೆ ಬೂಷ್ಟು ಬರುವ ಸಂಭವ ಕಡಿಮೆ. ಸಹಜ ಬಣ್ಣಗಳನ್ನೇ ತಯಾರಿಸಬೇಕಾಯಿತು, ಆದರೆ ಹಲವು ಪಾಲಿ ಅಮೈಡ್, ಪಾಲಿ ಯುರೆಥೇನ್ ಮತ್ತು ಪಾಲಿ ಅಕ್ರಿಲೋನೈಟ್ರೈಲ್ ಮತ್ತು ಪಾಲಿ ಎಸ್ಟರ್ ಎಳೆಗಳು ಅನೇಕ ಅಪೇಕ್ಷಿತ ಗುಣಗಳನ್ನು ಪಡೆದಿವೆ. ತಯಾರಿಕೆಯ ವಿಧಾನಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಇಲ್ಲ ಅಪೇಕ್ಷಿತ ಗುಣಗಳನ್ನೂ ಪಡೆದಿರುವ ಕೃತಕ ಎಳೆಗಳನ್ನು ತಯಾರಿಸಲು ಸಾಧ್ಯವಾಗಬಹುದೆಂದು ನಂಬಲಾಗಿದೆ.

ಎಳೆಗಳಲ್ಲಿ ಕೆಲವು ಭಾಗಗಳಲ್ಲಿ ಅಣು ಜೋಡಣೆ ಒಂದು ನಿರ್ದಿಷ್ಟ ನಿಯತ ಕ್ರಮದಲ್ಲಿ ಆಗಿರುವುದುಂಟು. ಆ ಭಾಗಗಳನ್ನು ಕ್ರಿಸ್ಟಲೈಟುಗಳೆಂದು ಕರೆಯಲಾಗುತ್ತದೆ ಮತ್ತು ಎಕ್ಸ್‌ಕಿರಣ ಪರೀಕ್ಷೆಯಿಂದ ಎಳೆಗಳಲ್ಲಿ ಕ್ರಿಸ್ಟಲೈಟುಗಳ ಅಂಶವೆಷ್ಟೆಂದು ತಿಳಿಯಬಹುದು. ಉಣ್ಣೆ, ಸೆಲ್ಯುಲೋಸ್ ಅಸಿಟೇಟುಗಳಲ್ಲಿ ಕ್ರಿಸ್ಟಲೈಟುಗಳ ಅಂಶ ಕಡಿಮೆ. ಆದರೆ ರೇಷ್ಮೆ, ಸೆಣಬಿನ ಎಳೆ, ಲಿನನ್ ಹಾಗೂ ಹಲವು ಬಗೆಯ ನೈಲಾನು ಮತ್ತು ರೇಯಾನುಗಳಲ್ಲಿ ಕ್ರಿಸ್ಟಲೈಟುಗಳ ಅಂಶ 80%ಕ್ಕಿಂತಲೂ ಹೆಚ್ಚಿರಬಹುದು. ಸೂಕ್ತ ರೀತಿಯಲ್ಲಿ ಎಳೆಗಳನ್ನು ಎಳೆಯುವುದರಿಂದ ಕ್ರಿಸ್ಟಲೈಟುಗಳ ವಿನ್ಯಾಸ (ಓರಿಯೆಂಟೇಶನ್)

ಏಕಮುಖವಾಗಿರುವಂತೆ ಮಾಡಬಹುದು. ಹೀಗೆ ಮಾಡಿದಾಗ ಧಾರಣ ಸಾಮರ್ಥ್ಯ ಹೆಚ್ಚುತ್ತದೆ. ಆದರೆ ಈ ಬಗೆಯ ಎಳೆಯ ಸ್ಥಿತಿ ಸ್ಥಾಪಕತೆ, ಘರ್ಷಣ ನಿರೋಧಶಕ್ತಿ ಮತ್ತು ಬಣ್ಣ ಹೀರುವ ಶಕ್ತಿಗಳು ಕಡಿಮೆಯಿರುತ್ತವೆ.

**ನೈಸರ್ಗಿಕ ಎಳೆಗಳು:** ಇವನ್ನು ಸ್ಥೂಲವಾಗಿ ಸಸ್ಯಜನ್ಯ ಮತ್ತು ಪ್ರಾಣಿ ಜನ್ಯ ಎಂದು ವಿಭಾಗಿಸಬಹುದು. ಸಾಮಾನ್ಯವಾಗಿ ಸಸ್ಯಜನ್ಯ ಎಳೆಗಳು ಸೆಲ್ಯುಲೋಸ್ ಅಣುಗಳಿಂದಲೂ ಪ್ರಾಣಿಜನ್ಯ ಎಳೆಗಳು ಸಸಾರಜನಕ ಅಣುಗಳಿಂದಲೂ ಕೂಡಿ ಆಗಿರುತ್ತವೆ. ಸಸ್ಯಜನ್ಯ ಎಳೆಗಳಲ್ಲಿ ಹಲವು ಒರಟು ಮತ್ತೆ ಹಲವು ಮೃದುವಾಗಿಯೂ ನುಣುಪಾಗಿಯೂ ಇರುತ್ತವೆ. ತೆಂಗಿನನಾರು, ಮನಿಲ್ಲಾ ಹೆಂಪ್ ಎನ್ನಿಸಿಕೊಳ್ಳುವ ಫಿಲಿಪೈನಿನ ಅಬಾಕ, ದಕ್ಷಿಣ ಅಮೆರಿಕದ ಮಾರಿಷಸ್, ಆಫ್ರಿಕ ಮತ್ತು ದಕ್ಷಿಣ ಅಮೆರಿಕದ ಅನೇಕ ಭಾಗಗಳಲ್ಲಿ ದೊರೆಯುವ ಸಿಸಾಲ್ ಮೊದಲಾದುವುಗಳು ಒರಟು ಎಳೆಗಳು. ಇವನ್ನು ಸಾಮಾನ್ಯವಾಗಿ ಉಡುಪಿಗಾಗಿ ಬಳಸಲಾಗುವುದಿಲ್ಲ. ಆದರೆ ಇವುಗಳ ಧಾರಣ ಸಾಮರ್ಥ್ಯವೇ ಮೊದಲಾದ ಉತ್ತಮ ಗುಣಲಕ್ಷಣಗಳ ದೆಸೆಯಿಂದ, ಹಗ್ಗ, ಹುರಿಗಳಿಗಾಗಿ, ಒರಟು ಕಾಲೊರಸುವ ಚಾಪೆಗಳು ಉಜ್ಜುವ ಬ್ರಷ್ಷುಗಳು. ಸೋಫ ಮೊದಲಾದ ಆಸನಗಳಲ್ಲಿ ಸ್ಪ್ರಿಂಗುಗಳ ಮಧ್ಯೆ ತುಂಬುವ ವಸ್ತುಗಳಾಗಿ ಇವನ್ನು ಉಪಯೋಗಿಸಲಾಗುತ್ತದೆ. ನಮ್ಮ ದೇಶದಲ್ಲಿ ದೊರೆಯುವ ಒರಟು ಎಳೆಯೆಂದರೆ ತೆಂಗಿನ ನಾರೊಂದೇ.

ಮೃದು ಎಳೆಗಳಲ್ಲಿ ಹತ್ತಿ, ಲಿನನ್ ಮತ್ತು ಸೆಣಬಿನ ಎಳೆಗಳು ಮುಖ್ಯವಾದುವು. ಇವನ್ನು ಒಂದೊಂದಾಗಿ ಮುಂದೆ ಪರಿಶೀಲಿಸಲಾಗಿದೆ.

ಹತ್ತಿಯ ಗಿಡವನ್ನು ನೆಟ್ಟ ವರ್ಷವೊಂದರೊಳಗೆ ಫಸಲು ದೊರೆಯುತ್ತದೆ. ಯಾಂತ್ರಿಕವಾಗಿ ಅಥವಾ ಯಂತ್ರಗಳ ನೆರವಿಲ್ಲದೆ ಹತ್ತಿಯ ತೊಳೆಗಳನ್ನು ಆರಿಸಲಾಗುತ್ತದೆ. ಬಲಿತು ಪಕ್ವವಾಗಿ ಒಡೆದ ಕಾಯಿಯಿಂದ ಬಂದ ಹತ್ತಿ ಮಾತ್ರ ಉತ್ತಮವಾದದು. ಅಪಕ್ವ ಕಾಯಿಯಿಂದ ಬಂದ ಹತ್ತಿ ಅನುಪಯುಕ್ತ. ಪಕ್ವ ಹತ್ತಿಯಲ್ಲಿ ಸಹಜವಾಗಿರುವ ಎಳೆಗಳಲ್ಲಿ ತಿರುಚುಗಳಿರುತ್ತವೆ. ಇವು ನೂಲನ್ನು ನೂಲುವಾಗ ಅನುಕೂಲವಾಗುವಂತೆ ಮಾಡುತ್ತವೆ. ಜಿನ್ ಯಂತ್ರಗಳನ್ನುಪಯೋಗಿಸಿ ಬೀಜ, ಎಲೆ ಮುಂತಾದ ಅನಪೇಕ್ಷಿತ ವಸ್ತುಗಳನ್ನು ಹೀಗೆ ಆರಿಸಿದ ಹತ್ತಿಯಿಂದ ಬೇರ್ಪಡಿಸಲಾಗುತ್ತದೆ. ಈ ಹತ್ತಿಯನ್ನು ಅನಂತರ ಹಲವು ಹಂತಗಳಲ್ಲಿ ನೂಲನ್ನೆಳೆಯಲು ಉಪಯೋಗಿಸಲಾಗುತ್ತದೆ.

ಹತ್ತಿ ಸ್ವಚ್ಛ ಬಿಳಿಯಿರುವುದು ಅಪೂರ್ವ, ಬೆಳೆಯುವ ವಾತಾವರಣಕ್ಕೆ ಅನುಗುಣವಾಗಿ ತೆಳುಹಳದಿ, ತೆಳು ಕಂದು ಅಥವಾ ತೆಳುನೀಲಿ ಬಣ್ಣವಿರುವದು ಕಂಡು ಬಂದಿದೆ. ಎಳೆಗಳ ಸರಾಸರಿ ಉದ್ದಕ್ಕೆ ಅನುಗುಣವಾಗಿ ಹತ್ತಿಯನ್ನು ವರ್ಗೀಕರಿಸ ಬಹುದು. ಸು. 28.5ಮೀ.ಗಿಂತ ಉದ್ದದ ಎಳೆಗಳನ್ನುಳ್ಳ ದೀರ್ಘಸ್ಟೇಪಲ್ ಹತ್ತಿ ಅತ್ಯುತ್ತಮವಾದುದು. ಸು. 22ಮೀ.–28.5ಮೀ. ಉದ್ದದ ಹತ್ತಿ ಮಧ್ಯಮ ದರ್ಜೆಯದು. ಸು. 22ಮೀ ಉದ್ದಕ್ಕಿಂತ ಕಡಿಮೆ ಎಳೆ ಉದ್ದದ ಕಿರುಸ್ಟೇಪಲ್ ಹತ್ತಿ ಕೀಳು ದರ್ಜೆಯದು.

ಹತ್ತಿಯಲ್ಲಿನ ಮುಖ್ಯ ರಾಸಾಯನಿಕ ವಸ್ತು ಸೆಲ್ಯುಲೋಸ್ (ಶೇ.94). ಉಳಿದ ಇತರ ವಸ್ತುಗಳಲ್ಲಿ ಮುಖ್ಯವಾದುದು ಎಳೆಗಳನ್ನು ಒಟ್ಟಾಗಿ ಹಿಡಿಯಲು ಸಹಾಯಕವಾಗಿರುವುದು ಒಂದು ಬಗೆಯ ಮೇಣ. ನೂಲನ್ನೆಳೆಯುವಾಗ ಈ ಮೇಣ ಸಹಾಯಕವಾಗುತ್ತದೆ.

ಲಿನನ್ ಎಳೆಗಳು ಒಂದು ಬಗೆಯ ಅಗಸೆಯ ಗಿಡದ ನಾರಿನಿಂದ ತಯಾರಾಗುತ್ತವೆ. ಗಿಡಗಳು ಪೂರ್ಣವಾಗಿ ಬೆಳೆದು ನಿಂತ ಮೇಲೆ ಒಟ್ಟು ಗಿಡವನ್ನೇ ಕೊಯ್ಲುಮಾಡಿ ಬೀಜ ಎಲೆಗಳನ್ನು ಬೇರ್ಪಡಿಸಿ. ಕಾಂಡಗಳನ್ನು ಕಟ್ಟುಗಳನ್ನಾಗಿ ಕಟ್ಟಿ ಹವೆಯಲ್ಲಿ ಅಥವಾ ನೀರಿನಲ್ಲಿ ನೆನೆಸಲಾಗುತ್ತದೆ. ಆಗ ಕಾಂಡದಲ್ಲಿ ಎಳೆಗಳನ್ನು ಒಟ್ಟಾಗಿ ಹಿಡಿದಿರುವ ಅಂಟು ಪದಾರ್ಥ ನಷ್ಟವಾಗಿ ಎಳೆಗಳು ಮಾತ್ರ ಉಳಿಯುತ್ತವೆ. ಹೀಗೆ ದೊರೆತ ಎಳೆಗಳನ್ನು ಬಾಚಣಿಗೆಯಂಥ ಉಪಕರಣಗಳಿಂದ ಬಾಚಿ ನೇರ ಮಾಡಿಕೊಂಡು ನೂಲೆಳೆಯಲಾಗುತ್ತದೆ. ಈ ನೂಲನ್ನೂ ಹತ್ತಿಯ ನೂಲಿನಂತೆಯೇ ನೇಯಬಹುದು. ಮತ್ತು ಹೊಳಪಿಗಾಗಿ ಸಂಸ್ಕರಿಸಬಹುದು. ಲಿನನ್ನಿನಲ್ಲಿಯೂ ಮುಖ್ಯ ರಾಸಾಯನಿಕ ವಸ್ತು ಸೆಲ್ಯುಲೋಸ್.

ಸೆಣಬಿನ ಎಳೆ ಹತ್ತಿ ಮತ್ತು ಲಿನನ್ನುಗಳಷ್ಟು ಮೃದುವಾದುದಲ್ಲ. ಎಳೆಗಳನ್ನು ಲಿನನ್ ಎಳೆಗಳನ್ನು ತಯಾರಿಸಿದಂತೆಯೇ ಸೆಣಬಿನ ಗಿಡಗಳನ್ನು ಸಂಸ್ಕರಿಸಿ ಪಡೆದು ಅನಂತರ ನೂಲಾಗುತ್ತದೆ. ಹತ್ತಿ ಮತ್ತು ಲಿನನ್ ನೂಲುಗಳಿಗಿಂತ ಹೀಗೆ ಒದಗಿದ ನೂಲು ದಪ್ಪವಾಗಿರುತ್ತದೆ. ಇದನ್ನು ಗೋಣಿಯ ಚೀಲ, ಗಟ್ಟಿದಾರ, ಬಲೆಗಳು ಹುರಿಗಳು ಮೊದಲಾದುವನ್ನು ತಯಾರಿಸಲು ಉಪಯೋಗಿಸುತ್ತಾರೆ. ಎಳೆಗಳ ಮುಖ್ಯ ರಾಸಾಯನಿಕವಸ್ತು ಸೆಲ್ಯುಲೋಸ್.

ಸೆಣಬಿನ ಜಾತಿಗೆ ಸೇರಿದ ಸನ್ ಹೆಂಪ್ ಎಂಬ ಗಿಡದಲ್ಲಿಯೂ ಸೆಲ್ಯುಲೋಸ್ ಎಳೆಗಳಿರುತ್ತವೆ. ಆದರೆ ಇವನ್ನು ನೂಲುವುದಕ್ಕಿಂತಲೂ ಹೆಚ್ಚಾಗಿ ವಿಶಿಷ್ಟ ದರ್ಜೆಯ ಕಾಗದಗಳನ್ನು ತಯಾರಿಸಲು ಉಪಯೋಗಿಸಲಾಗುತ್ತದೆ.

ಜಪಾನ್ ಮತ್ತು ದಕ್ಷಿಣ ಏಷ್ಯ, ಯುರೋಪುಗಳಲ್ಲಿ ಬೆಳೆಯುವ ರಿಯಾ ಎಂಬ ಪೊದೆಯೊಂದರಿಂದ ತಯಾರಿಸಲಾಗುವ ರೇಮೀ ಎಂಬ ನೂಲು ಬಲುಮಟ್ಟಿಗೆ ಲಿನನ್ನು ಹೋಲುತ್ತದೆ. ಈ ಎಳೆಗಳ ಹೊಳಪು, ಸಾಮರ್ಥ್ಯಗಳು ಲಿನನಿಗಿಂತಲೂ ಉತ್ತಮವಾದುದು. ಇದರ ಸಂಸ್ಕರಣ ಹೆಚ್ಚು ವೆಚ್ಚದ ಕ್ರಿಯೆ. ಚೀನದಲ್ಲಿ ಮಾತ್ರ ಇದನ್ನು ಈಗ ತಯಾರಿಸಲಾಗುತ್ತಿದೆ. ಬಟ್ಟೆ, ದಾರಗಳನ್ನು ಮಾತ್ರವಲ್ಲದೆ, ಬಲೆಗಳನ್ನು ತಯಾರಿಸಲೂ ಇದನ್ನು ಉಪಯೋಗಿಸಬಹುದು.

ಬಹುತೇಕ ಎಲ್ಲ ಸಸ್ಯಜನ್ಯ ಎಳೆಗಳಲ್ಲೂ ಮುಖ್ಯ ರಾಸಾಯನಿಕ ವಸ್ತು ಸೆಲ್ಯುಲೋಸ್, ಸೆಲ್ಯುಲೋಸಿನ ಬೃಹದಣುಗಳು ಸಾವಿರಾರು ಸೆಲ್ಲೊ ಬಯೋಸ್ ಎಂಬ ಅಣುಗಳು ಕೂಡಿ ಆಗಿವೆ. ಸೆಲ್ಲೋ ಬಯೋಸ್ ಅಣುವೊಂದು ಎರಡು ಬೀಟ ಗ್ಲೂಕೋಸ್ ಅಣುಗಳು ಈಥರ್ ಬಂಧದ ಮೂಲಕ ಸೇರಿ ಆಗಿರುತ್ತದೆ. ಅನೇಕ ಸೆಲ್ಲೊಬಯೋಸ್ ಅಣುಗಳು ನಿರ್ದಿಷ್ಟ ರೀತಿಯಲ್ಲಿ (ನೇರ ಸರಣಿಯಲ್ಲಿ) ಈಥರ್ ಬಂದಗಳ ಮೂಲಕ ಸೇರಿ ಸೆಲ್ಯುಲೋಸ್ ಬೃಹದಣುವೊಂದರ ಸೃಷ್ಟಿಯಾಗುತ್ತದೆ. ಸೆಲ್ಯುಲೋಸಿನ ಅಣುಗಾತ್ರ ಆಕಾರ ಮತ್ತು ಸಂಸ್ಕರಣಗಳನ್ನು ಅವಲಂಬಿಸಿದೆ.

ಹತ್ತಿ ಮತ್ತು ಲಿನನ್ ಎಳೆಗಳಿಂದಾದ ಬಟ್ಟೆಗಳನ್ನು ಚೆಲುವೆ ಕ್ರಿಯಿಗೆ (ಬ್ಲಿಚಿಂಗ್) ಒಳಪಡಿಸಿ ಶುದ್ಧ ಬಿಳಿ ಬಣ್ಣದ ಬಟ್ಟೆಗಳನ್ನು ಪಡೆಯಬಹುದು. ಸಾರಗುಂದಿದ (ಡೈಲ್ಯೂಟ್) ಕ್ಷಾರ ದ್ರಾವಣದಲ್ಲಿ ಅದ್ದಿ ತೆಗೆಯುವ ಮರ್ಸರೀಕರಣ (ಮರ್ಸರೈಸೇಶನ್) ಎಂಬ ಸಂಸ್ಕರಣದಿಂದ ಬಟ್ಟೆಯ ಧಾರಣ ಸಾಮರ್ಥ್ಯ ಮತ್ತು ಹೊಳಪು ಹೆಚ್ಚುತ್ತವೆ. ಹೊಳಪನ್ನು ಹೆಚ್ಚಿಸಲು ಬಟ್ಟೆಯನ್ನು ಎರಡು ಬಿಸಿ ರೋಲರುಗಳ ಮಧ್ಯೆ ಹೋಗುವಂತೆ ಮಾಡಬಹುದು. ಈ ಸಂಸ್ಕರಣಕ್ಕೆ ಕ್ಯಾಲೆಂಡರಿಂಗ್ ಎಂದು ಹೆಸರು.

ಪ್ರಾಣಿಜನ್ಯ ಎಳೆಗಳಲ್ಲಿ ರೇಷ್ಮೆ ಮತ್ತು ಉಣ್ಣೆಗಳು ಮುಖ್ಯವಾದುವು. ರೇಷ್ಮೆಯ ಹುಳುವಿನ ಮೊಟ್ಟೆಗಳು ಒಡೆದಾಗ ಹೊರಬರುವ 2–3 ಮಿ. ಮೀ. ಉದ್ದದ ಹುಳುಗಳು ಮಲ್ಬೆರಿ (ಹಿಪ್ಪನೇರಳೆ) ಎಲೆಗಳನ್ನು ತಿಂದು 5–10 ಸೆಂ. ಮೀ. ನಷ್ಟು ಉದ್ದ ಬೆಳೆಯುತ್ತವೆ. ಹೀಗೆ ಪ್ರೌಢಾವಸ್ಥೆಯನ್ನು ಪಡೆದ ಹುಳು ತನ್ನ ತಲೆಯ ಬಳಿಯಿರುವ ತಂತುಕದಂಥ ರಂಧ್ರದಿಂದ ರಸವೊಂದನ್ನು ಹೊರಚೆಲ್ಲುತ್ತದೆ. ಈ ರಸ ಗಾಳಿಯ ಸಂಪರ್ಕಕ್ಕೆ ಬಂದ ಕೂಡಲೇ ಗಟ್ಟಿಯಾಗಿ ಎಳೆಯಾಗುತ್ತದೆ. ಹೀಗೆ ಅಖಂಡವಾದ ಎಳೆಯಿಂದ ತನ್ನನ್ನೇ ಸುತ್ತುವರಿದುಕೊಂಡು ನಾಲ್ಕೈದು ದಿವಸಗಳಲ್ಲಿ ತನ್ನ ಕಾಯಾಂತರಣ ಅಥವಾ ರೂಪಾಂತರಣಕ್ಕೆ ಬೇಕಾಗುವ ನಿದ್ರೆಗೆ ಆವಶ್ಯಕವಾದ ಕಕೂನ್ ಅಥವಾ ಕೋಶವನ್ನು ಸಿದ್ಧಮಾಡಿಕೊಳ್ಳುತ್ತದೆ. ಪೂರ್ಣ ಕಾಲಾವಕಾಶ ಕೊಟ್ಟಲ್ಲಿ ಕ್ಷಾರವಸ್ತುವನ್ನು ಒಸರಿಸಿ ಕಕೂನಿನ ಭಾಗವೊಂದನ್ನು ನಾಶಮಾಡಿ ರೂಪಾಂತರ ಹೊಂದಿದ ಚಿಟ್ಟೆ ಹೊರಬರುತ್ತದೆ. ಆದರೆ ಚಿಟ್ಟೆಯಾಗುವ ಮೊದಲೇ ಕಕೂನಿನಿಂದ ರೇಷ್ಮೆಯ ಎಳೆಯನ್ನು ಪಡೆಯಲಾಗುತ್ತದೆ. ಕಕೂನುಗಳನ್ನು ಬಿಸಿ ನೀರಿನಲ್ಲಿಟ್ಟಾಗ ಅದರಲ್ಲಿನ ಸೆರಿಸಿನ್ ಎಂಬ ಅಂಟುಪದಾರ್ಥ ನೀರಿನಲ್ಲಿ ಸ್ವಲ್ಪ ಮಟ್ಟಿಗೆ ಲೀನವಾಗಿ, ಫೈಬ್ರಾಯ್ನ್ ಎಂಬ ಉಳಿದ ಭಾಗ ಮೆದುವಾಗಿ ಅದರಿಂದ ಎಳೆಗಳನ್ನು ಅಖಂಡವಾಗಿ ಎಳೆಯಲು ಸಾಧ್ಯವಾಗುತ್ತದೆ. ರೇಷ್ಮೆಯ ಒಂಟಿ ಎಳೆ ಬಲು ಸೂಕ್ಷ್ಮ; ಮತ್ತು ಅದರಲ್ಲಿ ಅಷ್ಟು ಬಲವಿರುವುದಿಲ್ಲ. ಆದ್ದರಿಂದ ಹೆಚ್ಚು ಎಳೆಗಳನ್ನು ಕೂಡಿಸಿ ತಿರುವುಗಳನ್ನು ಕೊಟ್ಟು ನೂಲನ್ನು ತಯಾರಿಸಲಾಗುತ್ತದೆ. ನೂಲಿನಲ್ಲಿನ ಎಳೆಗಳ ಸಂಖ್ಯೆ ಮತ್ತು ಪ್ರತಿ ಅಂಗುಲಕ್ಕೆ ಕೊಡಲಾಗುವ ತಿರುವುಗಳ ಸಂಖ್ಯೆಯನ್ನನುಸರಿಸಿ ನೂಲುಗಳನ್ನು ಕ್ರೇಪ್, ಜಾರ್ಜೆಟ್ ಮೊದಲಾಗಿ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಕಚ್ಚ ರೇಷ್ಮೆಯ ನೂಲಿನಲ್ಲಿ ಮುಕ್ಕಾಲು ಭಾಗದಷ್ಟು ಫೈಬ್ರಾಯ್ನ್ ಮತ್ತು ಉಳಿದ ಕಾಲುಭಾಗದಷ್ಟು ಸೆರಿಸಿನ್ ಇರುತ್ತದೆ. ಸೆರಿಸಿನ್ ರೇಷ್ಮೆಯ ಎಳೆ ಮಂಕಾಗಿ ಕಾಣುವಂತೆ ಮಾಡುವುದಾದರೂ ಎಳೆಗಳನ್ನು ಕೀಟಗಳಿಂದ ರಕ್ಷಿಸುವುದಕ್ಕಾಗಿ ನೇಯುವ ಸಮಯದವರೆವಿಗೆ ಸೆರಿಸಿನನ್ನು ಹಾಗೆಯೇ ಬಿಟ್ಟಿರಲಾಗುತ್ತದೆ. ಸೆರಿಸಿನ್ ಕಳೆದು ಕೊಂಡ ರೇಷ್ಮೆಯ ಎಳೆಗೆ ಸಾಕಷ್ಟು ಹೊಳಪಿದ್ದರೂ ವಿವಿಧ ಸಂಸ್ಕರಣಗಳಿಂದ ಅದರ ಹೊಳಪು, ನಯ ಮತ್ತು ಧಾರಣ ಸಾಮರ್ಥ್ಯಗಳು ಹೆಚ್ಚುವಂತೆ ಮಾಡಲಾಗುತ್ತದೆ.

ಮತ್ತೊಂದು ಪ್ರಾಣಿಜನ್ಯ ಎಳೆಯಾದ ಉಣ್ಣೆಗೆ ಕುರಿಗಳ ತುಪ್ಪಟವೇ (ಫ್ಲೀಸ್) ಆಕರ. ಇದು ಚರ್ಮದ ಕೆಳಭಾಗದ ಗ್ರಂಥಿಗಳಲ್ಲಿ ದ್ರವವಾಗಿ ತಯಾರಾಗಿ ಹೊರಬಂದು ಕೂಡಲೇ ಘನೀಭವಿಸಿ ತುಪ್ಪಟವಾಗುತ್ತದೆ. ಕುರಿಯ ಮೈಮೇಲಿನಿಂದ ಕತ್ತರಿಸಿ ತುಪ್ಪಟ ಅಥವಾ ಉಣ್ಣೆಯ ಎಳೆಗಳನ್ನು ಪಡೆದು ನೂಲು ತಯಾರಿಸಬಹುದು. ಈ ಎಳೆಯಲ್ಲಿನ ಮುಖ್ಯ ಸಂಯುಕ್ತ ಕೆರಾಟಿನ್ ಎಂಬ ಪ್ರೋಟೀನ್.

ಉಣ್ಣೆ ಮತ್ತು ರೇಷ್ಮೆಗಳಲ್ಲಿನ ಮುಖ್ಯ ಸಂಯುಕ್ತಗಳು ಸಸಾರಜನಕ ಅಥವಾ ಪ್ರೋಟೀನುಗಳ ಗುಂಪಿಗೆ ಸೇರಿದವು. ಅನೇಕ ಅಮೈನೋ ಆಮ್ಲಗಳು ಒಂದಕ್ಕೊಂದು ಅಮೈಡ್ ಬಂಧಗಳ ಮೂಲಕ ಕೂಡಿಕೊಂಡು ಪ್ರೋಟೀನುಗಳ ಸೃಷ್ಟಿಯಾಗುತ್ತದೆ. ಉಣ್ಣೆ ಮತ್ತು ರೇಷ್ಮೆಗಳೆರಡೂ ಪ್ರೋಟೀನ್ ಎಳೆಗಳೇ ಆದರೂ ಅವುಗಳ ಗುಣಗಳಲ್ಲಿ ಬಹಳ ವೈವಿಧ್ಯವಿದೆ.

ರೇಷ್ಮೆಯ ಎಳೆಗಳು ಸೂಕ್ಷ್ಮವೂ ಬಲಯುತವೂ ಆದವು. ರೇಷ್ಮೆಯ ನೂಲನ್ನು ಎಳೆದು ಎಳೆಗಳು ಒಂದೇ ದಿಕ್ಕಿನಲ್ಲಿ ನಿಲ್ಲುವಂತೆ ಮಾಡಿ ನೂಲಿನ ಶಕ್ತಿಯನ್ನು ಹೆಚ್ಚಿಸಬಹುದು. ರೇಷ್ಮೆ ಉಣ್ಣೆಗಿಂತ ಹೆಚ್ಚು ಉಷ್ಣತೆಯಲ್ಲಿ ($110^0$ ಸೆಂ.) ಅದು ಹಳದಿಬಣ್ಣ ತಾಳುತ್ತದೆ. ಅದಕ್ಕಿಂತ ಹೆಚ್ಚಿನ ಉಷ್ಣತೆಯಲ್ಲಿ ಅಥವಾ ಅತಿನೇರಳೆ ಕಿರಣಗಳ ಸನ್ನಿಧಿಯಲ್ಲಿ ಪ್ರೋಟೀನ್ ಅಣುಗಳು ವಿಭಜನೆಗೊಳಗಾಗಿ ಎಳೆಗಳ ಅನೇಕ ಗುಣಗಳು ನಾಶವಾಗುತ್ತವೆ **(ನೋಡಿ– ಉಣ್ಣೆ)**.

**ಖನಿಜ ಮತ್ತು ಲೋಹಗಳ ಎಳೆಗಳು:** ಕಲ್ನಾರು ಒಂದು ಬಗೆಯ ಖನಿಜ ಎಳೆ. ಇದು ಮೆಗ್ನೀಷಿಯಂ ಮತ್ತು ಕ್ಯಾಲ್ಸಿಯಂ ಸಿಲಿಕೇಟುಗಳ ಮಿಶ್ರಣ. ಹಲವು ಬಾರಿ ಖನಿಜದಲ್ಲಿ ಕಬ್ಬಿಣ, ಅಲ್ಯೂಮಿನಿಯಂ ಮತ್ತು ಇತರ ಲೋಹಗಳ ಅದಿರುಗಳೂ ಬೆರೆತಿರುತ್ತವೆ. ಪ್ರಕೃತಿಯಲ್ಲಿ ಎಳೆಗಳಾಗಿ ದೊರೆಯುವ ಈ ಖನಿಜ ಉಷ್ಣ ಮತ್ತು ವಿದ್ಯುತ್ ನಿರೋಧಿ. ಈಗೀಗ ಕೆಲವು ವರ್ಷಗಳಿಂದ ಉತ್ತಮ ದರ್ಜೆಯ ಕಲ್ನಾರಿನಿಂದ ಅಗ್ನಿ ಶಾಮಕದಳದವರು ಧರಿಸಲು ಅಗ್ನಿ ನಿರೋಧಕ ಉಡುಪುಗಳನ್ನೂ ರಂಗಸ್ಥಳ ಮತ್ತಿತ್ತರ ಎಡೆಗಳಲ್ಲಿ ಉಪಯೋಗಿಸಬಹುದಾದ ತೆರೆಗಳನ್ನು ತಯಾರಿಸುತ್ತಿದ್ದಾರೆ.

ತನ್ಯತೆ (ಡಕ್ಟಿಲಿಟಿ) ಇರುವ ಅನೇಕ ಲೋಹಗಳಿಂದ ಸೂಕ್ಷ್ಮ ಎಳೆಗಳನ್ನು ಪಡೆಯಬಹುದು. ನಮ್ಮ ದೇಶದಲ್ಲಿ ಇಂಥ ಬೆಳ್ಳಿ, ಬಂಗಾರದ ಎಳೆಗಳು ಬಹುಕಾಲದಿಂದಲೂ ಆಕರ್ಷಕ ಜರತಾರಿಯಾಗಿ ಉಪಯೋಗದಲ್ಲಿವೆ. ಇವು ಅಲಂಕಾರಕ್ಕಲ್ಲದೆ ಮತ್ತಾವ ರೀತಿಯಲ್ಲೂ ಅಷ್ಟಾಗಿ ಉಪಯೋಗಕ್ಕೆ ಬಾರವು. ಸೂಕ್ಷ್ಮ ಕಸೂತಿಗಳಲ್ಲಿ ಮಲಿನಗೊಂಡಾಗ ಇವನ್ನು ತೊಳೆದು ಶುದ್ಧೀಕರಿಸುವುದು ಕಷ್ಟದ ಕೆಲಸ. ಈ ಸಂಕಷ್ಟದಿಂದ ಪಾರಾಗಲು ಹೊಸ ವಿಧಾನಗಳನ್ನು ಯೋಜಿಸಲಾಗಿದೆ. ಲೋಹದ ತೆಳುಪದರವೊಂದನ್ನು ಅತಿ ತೆಳ್ಳಗಿನ ಪಾರದರ್ಶಕ ಮೈಲಾರ್ ಎಂಬ ಪಾಲಿ ಎಸ್ಟರ್ ಹಾಳೆಗಳ ಮಧ್ಯೆ ಇಟ್ಟು ಸೂಕ್ತ ಅಂಟೊಂದನ್ನು ಉಪಯೋಗಿಸಿ ಪ್ಲಾಸ್ಟಿಕ್ ರಕ್ಷಿತ ಲೋಹದ ಹಾಳೆಯನ್ನು ತಯಾರಿಸಲಾಗುತ್ತಿದೆ. ಈ ಹಾಳೆಗಳಿಂದ ತಯಾರಿಸಿದ ಎಳೆಗಳನ್ನು ನೇಯಲು ಉಪಯೋಗಿಸಬಹುದು ಅಲ್ಲದೆ ಬಟ್ಟೆಗಳನ್ನು ಒಗೆಯುವಾಗ ಈ ಎಳೆಗಳಿಗೆ ಏನೂ ಅಪಾಯವಾಗದು. ಇಂಥ ಸಂಕೀರ್ಣ ಲೋಹದ ಹಾಳೆಗಳಿಗೆ ಮುಖ್ಯವಾಗಿ ಅಲ್ಯೂಮಿನಿಯಂ ಲೋಹವನ್ನು ಉಪಯೋಗಿಸಲಾಗುತ್ತದೆ. ಇತರ ಲೋಹಗಳಂತೆ ಕಾಣುವ ಕೃತಕ ಜರಿಯನ್ನು ತಯಾರಿಸುವಾಗ ಉಪಯೋಗಿಸುವ ಅಂಟಿಗೆ ಬೇಕಾದ ಬಣ್ಣಗಳನ್ನು ಸರಿಯಾದ ಪ್ರಮಾಣದಲ್ಲಿ ಬೆರೆಸಲಾಗುತ್ತದೆ. ಹೀಗೆ ಮಾಡಿ ಎಲ್ಲ ಬಗೆಯ ಬಣ್ಣಗಳನ್ನುಳ್ಳ ಹೊಳೆವ ಕೃತಕ ಜರತಾರಿಗಳನ್ನು ತಯಾರಿಸಬಹುದು.

**ಪರಿವರ್ತಿತ ಎಳೆಗಳು:** ಸಹಜ ಸೆಲ್ಯುಲೋಸನ್ನು ಉಪಯುಕ್ತ ಎಳೆಗಳಾಗಿ ಪರಿವರ್ತಿಸಬಹುದು. ಹೀಗೆ ದೊರೆವ ಪರಿವರ್ತಿತ ಸೆಲ್ಯುಲೋಸಿನ ಎಳೆ ರೇಯಾನ್ ಎಂದೆನಿಸಿಕೊಳ್ಳುತ್ತದೆ. ರೇಯಾನ್ ತಯಾರಿಕೆಯ ವಿಧಾನಗಳಲ್ಲಿ ಪ್ರಕೃತಿಯಿಂದ ಸಂಗ್ರಹಿಸಿದ ಸೆಲ್ಯುಲೋಸನ್ನು ನಿರ್ದಿಷ್ಟ ರಾಸಾಯನಿಕ ವಸ್ತುಗಳಿಂದ ಸಂಸ್ಕರಿಸಿ ಸೆಲ್ಯುಲೋಸ್ ಒಳಗೊಂಡ ದ್ರಾವಣವನ್ನು ಪಡೆಯಲಾಗುತ್ತದೆ. ಈ ದ್ರಾವಣವನ್ನು ಸಣ್ಣ ರಂಧ್ರವೊಂದರ ಮೂಲಕ ಎಳೆದು, ಎಳೆಯುವಾಗ ಅಥವಾ ಅನಂತರ ಸೆಲ್ಯುಲೋಸ್ ಪುನ: ಘನೀಭೂತವಾಗುವಂತೆ ಮಾಡಿದರೆ ಸೆಲ್ಯುಲೋಸ್ ಎಳೆ ದೊರೆಯುತ್ತದೆ. ರೇಯಾನ್ ತಯಾರಿಕೆಗೆ ಮೂರು ಮುಖ್ಯ ವಿಧಾನಗಳಿವೆ.

ಇಂದು ಹೆಚ್ಚು ಉಪಯೋಗದಲ್ಲಿಲ್ಲದ ನೈಟ್ರೋ ಸೆಲ್ಯುಲೋಸ್ ವಿಧಾನದಲ್ಲಿ ನೂಲಲು ಯೋಗ್ಯವಲ್ಲದ ಹತ್ತಿಯನ್ನು ನೈಟ್ರಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣದಲ್ಲಿ ಲೀನಮಾಡಿದಾಗ ನೈಟ್ರೋ ಸೆಲ್ಯುಲೋಸ್ ದೊರೆಯುತ್ತದೆ. ಇವನ್ನು ಆಲ್ಕೊಹಾಲ್ ಈಥರ್ ಮಿಶ್ರಣಗಳಲ್ಲಿ ಲೀನಮಾಡಿ ದೊರೆಯುವ ದ್ರಾವಣವನ್ನು ತಂತುಕಗಳ ಮೂಲಕ ಹಾಯಿಸಿದಾಗ, ಲೀನಕಾರಿಗಳು ಅನಿಲಗಳಾಗಿ ನಷ್ಟವಾಗಿ ನೈಟ್ರೋಸೆಲ್ಯುಲೋಸ್ ಎಳೆ ದೊರೆಯುತ್ತದೆ. ಇದನ್ನು ಸೋಡಿಯಮ್ ಹೈಡ್ರೊ ಸಲ್ಫೈಡ್ ದ್ರಾವಣದಲ್ಲಿ ಹಾಯಿಸಿ ಸೆಲ್ಯುಲೋಸ್ ಎಳೆಗಳನ್ನು ಪಡೆಯಲಾಗುತ್ತದೆ.

ಹೆಚ್ಚು ಬಳಕೆಯಲ್ಲಿರುವ ವಿಸ್ಕೋಸ್ ವಿಧಾನದಲ್ಲಿ, ವಸ್ತ್ರೋದ್ಯಮದಲ್ಲಿ ಉಪಯೋಗಿಸಲಾಗದೆ ಮಿಕ್ಕ ಕೀಳು ದರ್ಜೆಯ ಹತ್ತಿಯ ಭಾಗ ಮತ್ತು ಅಥವಾ ಕಾಗದದ ತಯಾರಿಕೆಯಲ್ಲಿ ಉಪಯೋಗಿಸುವಂಥ ನಾನ್ ಸೆಲ್ಯುಲೋಸ್‌ರಹಿತ ಮರದ ತಿಳ್ಳುಗಳನ್ನು (ವೂಡ್ ಪಲ್ಪ್ ಡಿವಾಯಿಡ್ ಆಫ್ ನಾನ್ ಸೆಲ್ಯುಲಾಸಿಕ್ಸ್) ಮೊದಲು ಕ್ಷಾರ ದ್ರಾವಣದಲ್ಲಿ ನೆನೆಸಿಟ್ಟು ಕ್ಷಾರ ಸೆಲ್ಯುಲೋಸನ್ನು ತಯಾರಿಸಲಾಗುತ್ತದೆ. ಈ ಕ್ಷಾರ ಸೆಲ್ಯುಲೋಸನ್ನು ಸಣ್ಣ ಸಣ್ಣ ತುಂಡುಗಳಾಗಿ ಮುರಿದು ನಿಯಂತ್ರಿತ ಉಷ್ಣತೆ ಮತ್ತು ಆರ್ದ್ರತೆಗಳ ವಾತಾವರಣದಲ್ಲಿ ಹಲವು ದಿವಸಗಳಿಟ್ಟು ಅನಂತರ ಇಂಗಾಲದ ಡೈ ಸಲ್ಫೈಡ್ ವರ್ತಿಸುವಂತೆ ಮಾಡಿದಾಗ ಸೆಲ್ಯುಲೋಸ್ ಕ್ಸಾಂಥೇಟ್ ದೊರೆಯುತ್ತದೆ. ಇದನ್ನು ಸಾರಗುಂದಿದ (ಡೈಲ್ಯೂಟ್) ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿ ಲೀನಮಾಡಿದಾಗ ಜೇನುತುಪ್ಪದಂತೆ ಮಂದವಾದ ವಿಸ್ಕೋಸ್ ದ್ರಾವಣ ದೊರೆಯುತ್ತದೆ. ಈ ದ್ರಾವಣವನ್ನು ತಂತುಕಗಳ ಮೂಲಕ ಸಲ್ಫ್ಯೂರಿಕ್ ಆಮ್ಲದ ಮೂಲಕ ಹಾಯಿಸಿ ದೊರೆಯುವ ಎಳೆಗಳನ್ನು, ಆಮ್ಲವನ್ನು ನಿವಾರಿಸುವುದಕ್ಕಾಗಿ ನೀರಿನ ಮೂಲಕ ಹಾಯಿಸಿದಾಗ ಶುದ್ಧ ಸೆಲ್ಯುಲೋಸ್ ಎಳೆಗಳು ದೊರೆಯುತ್ತವೆ.

ಮೂರನೆಯದಾದ ಕ್ಯುಪ್ರಮೋನಿಯಂ ವಿಧಾನದಲ್ಲಿ ಮೊದಲು ಹತ್ತಿಯ ತಿರುಳು ಮತ್ತು ಉಳಿಕೆಗಳನ್ನು (ವೇಸ್ಟ್) ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿ ಬೇಯಿಸಿ ಅನಂತರ ಚೆಲುವೆ ಕ್ರಿಯೆಗೆ ಒಳಗು ಮಾಡಿದಾಗ ದೊರೆಯುವ ತಿಳ್ಳನ್ನು (ಪಲ್ಪ್) ಒಣಗಿಸಲಾಗುತ್ತದೆ. ತಾಮ್ರದ ಆಕ್ಸೈಡನ್ನು ಅಮೋನಿಯ ದ್ರಾವಣದಲ್ಲಿ ಒಣತಿಳ್ಳನ್ನು ಲೀನಮಾಡಲಾಗುತ್ತದೆ. ಹೀಗೆ ದೊರೆತ ಸೆಲ್ಯುಲೋಸ್ ದ್ರಾವಣವನ್ನು ತಂತುಕಗಳ ಮೂಲಕ ಹಾಯಿಸಿದಾಗ ಉತ್ಪತ್ತಿಯಾಗುವ ಎಳೆಗಳನ್ನು ನೀರಿನಲ್ಲಿ ಹಾಯಿಸಿ ತೊಳೆದು, ಎಳೆತ ತಿರುಚುವಿಕೆಗಳಿಂದ ಬಲಪಡಿಸಿ ಅನಂತರ ಸಾರಗುಂದಿದ ಸಲ್ಫ್ಯೂರಿಕ್ ಆಮ್ಲದ ಮೂಲಕ ಹಾಯಿಸಲಾಗುತ್ತದೆ. ಹೀಗೆ ದೊರೆತ ಕ್ಯುಪ್ರಮೋನಿಯಂ ರೇಯಾನ್ ಎಳೆಗಳನ್ನು ಉತ್ತಮ ದರ್ಜೆಯ ಅತಿತೆಳ್ಳನೆಯ ವಸ್ತ್ರಗಳನ್ನು ನೇಯಲು ಉಪಯೋಗಿಸಬಹುದು.

ಅಸಿಟೇಟ್ ಎಳೆಯೆಂದು ಹೆಸರು ಪಡೆದಿರುವ ಅರ್ಧ ಕೃತಕ ಎಳೆಯಾದ ಸೆಲ್ಯುಲೋಸ್ ಅಸಿಟೇಟಿಗೆ ಸಹ ರೇಯಾನ್ ತಯಾರಿಕೆಗೆ ಬೇಕಾಗುವ ಸೆಲ್ಯುಲೋಸೇ ಆಕರ. ಹತ್ತಿಯ ಉಳಿಕೆ ಮತ್ತು ಶುದ್ಧೀಕರಿಸಿದ ಮರದ ತಿಳ್ಳುಗಳನ್ನು ನಿಯಂತ್ರಿತ ಉಷ್ಣತೆಯ ವಾತಾವರಣದಲ್ಲಿ ಅಸಿಟಿಕ್ ಆಮ್ಲದಲ್ಲಿ ಹಲವಾರು ದಿವಸಗಳವರೆಗೆ ನೆನೆಸಿಡಲಾಗುತ್ತದೆ. ಈ ಸೆಲ್ಯುಲೋಸನ್ನು ಅಸಿಟಿಕ್ ಆನ್ ಹೈಡ್ರೈಡಿನೊಡನೆ ವರ್ತಿಸುವಂತೆ ಮಾಡಿದಾಗ ಮಂದ ದ್ರವದ ರೂಪದಲ್ಲಿ ಸೆಲ್ಯುಲೋಸ್ ಅಸಿಟೇಟ್ ದೊರೆಯುತ್ತದೆ. ಹಲವು ಕಾಲಾನಂತರ ಈ ದ್ರವವನ್ನು ನೀರಿನಲ್ಲಿ ಹಾಯಿಸಿದಾಗ ಸೆಲ್ಯುಲೋಸ್ ಅಸಿಟೇಟ್‌ನ ತೆಳು ಚಕ್ಕೆ ಅಥವಾ ಹಲ್ಲೆಗಳು ದೊರೆಯುತ್ತವೆ. ಇವನ್ನು ಪೂರ್ಣವಾಗಿ ಒಣಗಿಸಿ ಅನಂತರ ಅಸಿಟೋನ್ ದ್ರವದಲ್ಲಿ ಲೀನಮಾಡಿ ಲೀನಭಾಗವನ್ನು ಶೋಧಿಸಿ ಬೇರ್ಪಡಿಸಿ ದೊರೆಯುವ ಶುದ್ಧ ಬಿಳಿಯ ಮರದ ದ್ರಾವಣವನ್ನು ತಂತುಕಗಳ ಮೂಲಕ ಬಿಸಿಗಾಳಿಯ ವಾತಾವರಣಕ್ಕೆ ಹೊರತಳ್ಳಲಾಗುತ್ತದೆ. ಅಲ್ಲಿ ಅಸಿಟೋನ್ ಹವೆಯಾಗಿ ನಷ್ಟವಾಗಿ ಹೊಳೆಯುವ ಸೆಲ್ಯುಲೋಸ್ ಅಸಿಟೇಟಿನ ಎಳೆಗಳು ದೊರೆಯುತ್ತವೆ. ಬಹುವಾದ ಹೊಳಪು ಬೇಡವಾಗಿದ್ದರೆ, ತಂತುಕಗಳ ಮೂಲಕ ಹಾಯಿಸುವ ಮೊದಲು ದ್ರಾವಣಕ್ಕೆ ಟೈಟಾನಿಯಂ ಆಕ್ಸೈಡ್ ಸೇರಿಸಲಾಗುತ್ತದೆ.

ಅಸಿಟೇಟ್ ಎಳೆಗಳು ಪೂರ್ಣ ಕೃತಕ ಮತ್ತು ಪರಿವರ್ತಿತ ಎಳೆಗಳಿಗೆ ಮಧ್ಯಮ ಬಗೆಯವು. ಗುಣಲಕ್ಷಣಗಳಲ್ಲಿ ಅಸಿಟೇಟ್ ಎಳೆಗಳು ಬಲುಮಟ್ಟಿಗೆ ಕೃತಕ ಎಳೆಗಳನ್ನು ಹೋಲುತ್ತವೆ. ಉಷ್ಣ ಪ್ರಯೋಗದಿಂದ ಈ ಬಟ್ಟೆಗಳು ಮೆದುವಾಗುತ್ತವೆ. ಹೀಗೆ ಆದಾಗ ಒತ್ತಡವನ್ನು ಒದಗಿಸುವುದರಿಂದ ಅವುಗಳಿಗೆ ಬೇಕಾದ ಆಕಾರ ಕೊಡಬಹುದು. ಈ ಉಷ್ಣಸುನಮ್ಯತಾ (ಥರ್ಮೋಪ್ಲಾಸ್ಸಿಸಿಟಿ) ಗುಣ ಉಡುಪುಗಳಲ್ಲಿ ಬಲು ಉಪಯುಕ್ತ. ಬಟ್ಟೆಗಳ ಮೇಲೆ ಉಷ್ಣ ಉಬ್ಬಚ್ಚಿನಿಂದ (ಹೀಟ್ ಎಂಬಾಸ್ಸಿಂಗ್) ಚಿತ್ರ, ನಕ್ಷೆಗಳನ್ನು ಮೂಡಿಸಬಹುದು. ಮಡಿಕೆಗಳು ಮತ್ತು ನೆರಿಗೆಗಳು ಉಷ್ಣ ಪ್ರಯೋಗ ಮತ್ತು ಒತ್ತಡಗಳಿಂದ ಶಾಶ್ವತವಾಗಿ ಉಳಿಯುವಂತೆ ಮಾಡಬಹುದು. ಹಲವು ರಾಸಾಯನಿಕ ಸಂಸ್ಕರಣಗಳಿಂದ ಅಸಿಟೇಟ್ ವಸ್ತ್ರಗಳಿಗೆ ಜಲವಿಕರ್ಷಣ (ವಾಟರ್ ರಿಪೆಲ್ಲೆಂಟ್) ಶಕ್ತಿಯನ್ನು ನೀಡಬಹುದು. ಇಂಥ ಜಲವಿಕರ್ಷಕ ಬಟ್ಟೆಗಳನ್ನು ಮಳೆಯಲ್ಲಿ ಧರಿಸುವ ಉಡುಪುಗಳ ತಯಾರಿಕೆಯಲ್ಲಿ ಉಪಯೋಗಿಸಬಹುದು.

**ಕೃತಕ ಎಳೆಗಳು:** ಇಂದು ಮಾರುಕಟ್ಟೆಯಲ್ಲಿ ಸುಮಾರು ಅರುವತ್ತು ಬಗೆಯ ಕೃತಕ ಎಳೆಗಳು ಇವೆ. ಮುಂದಿನ ಕೆಲವು ವರ್ಷಗಳಲ್ಲಿ ಇನ್ನೂ ಹಲವನ್ನು ನಿರೀಕ್ಷಿಸಬಹುದು. ಎಲ್ಲ ಕೃತಕ ಎಳೆಗಳೂ ವಿವಿಧ ಬಗೆಯ ಪಾಲಿಮರುಗಳಾಗಿದ್ದು (ಬಹ್ವಂಗಗಳು) ರಾಸಾಯನಿಕವಾಗಿ ಎಲ್ಲ ವಿಧಗಳಲ್ಲಿಯೂ ಪ್ಲಾಸ್ಟಿಕುಗಳೆಂದು ಪರಿಗಣಿಸಬಹುದು. ನೈಸರ್ಗಿಕ ಎಳೆಗಳಲ್ಲಿರುವಂತೆಯೆ, ಸರಳ ಸಂಯುಕ್ತಗಳ ಅನೇಕ ಅಣುಗಳು ಸರಪಳಿ ಯಂತೆ ಪರಸ್ಪರ ಕೂಡಿಕೊಂಡು ಎಳೆಗಳ ಸರಪಳಿ ಪಾಲಿಮರುಗಳಾಗುತ್ತವೆ. ರಚನೆಯಲ್ಲಿ ಹೋಲಿಕೆಗಳನ್ನು ತೋರಿಸಲು ಕೆಲವು ನೈಸರ್ಗಿಕ ಮತ್ತು ಕೃತಕ ಎಳೆಗಳ ರಾಸಾಯನಿಕ ರಚನೆಗಳನ್ನು ಸ್ಥೂಲವಾಗಿ ಮುಂದೆ ತೋರಿಸಿದೆ.

ಗ್ಲೂಕೋಸ್ + ಗ್ಲೂಕೋಸ್ ಸೆಲ್ಲೋಬಯೋಸ್ (ಅಃ)

-(CB)-(CB) -(CB)-(CB)-ಹತ್ತಿ ಮತ್ತು ರೇಯಾನ್ ಎಳೆಗಳು

R-CONH-R- R-CONH-R- R-CONH-R-ಉಣ್ಣೆ ಮತ್ತು ರೇಷ್ಮೆಯ ಎಳೆಗಳು

HOOC-R-CONH- R-NHCO- R-CONH-ನೈಲಾನ್ ಎಳೆ

HOOC-R-COO-R-OCO-R-COO-R-OCO-ಪಾಲಿ ಎಸ್ಟರ್ ಎಳೆ

ನಮಗೆ ಈ ವರೆಗೆ ತಿಳಿದಿರುವ ಎಲ್ಲ ಕೃತಕ ಎಳೆಗಳ ವಿಚಾರವನ್ನೂ ಪೂರ್ಣವಾಗಿ ಇಲ್ಲಿ ವಿವರಿಸಲು ಸಾಧ್ಯವಿಲ್ಲ. ಹಲವು ಮುಖ್ಯ ಮತ್ತು ಪರಿಚಿತ ಎಳೆಗಳನ್ನು ಮಾತ್ರ ಮುಂದೆ ವಿವೇಚಿಸಲಾಗಿದೆ.–

ನೈಲಾನ್: ಕೃತಕ ಎಳೆಗಳಲ್ಲಿ ಮೊಟ್ಟ ಮೊದಲನೆಯದು. ಇದನ್ನು ಮೊದಲ ಬಾರಿಗೆ ಅಮೆರಿಕದ ಡು ಪಾಂಟ್ ಕಂಪನಿ ತಯಾರಿಸಿತು. ರೇಷ್ಮೆ ಮತ್ತು ಉಣ್ಣೆಗಳಂತೆ ನೈಲಾನ್ ಸಹ ಪಾಲಿ ಅಮೈಡ್ ಎಂದರೆ ಅನೇಕ ಅಮೈಡ್ ಪುಂಜಗಳು ಕೂಡಿ ಆಗಿದೆ. ರೇಷ್ಮೆ ಅಥವಾ ಉಣ್ಣೆಗಳ ಎಳೆಗಳು ಪ್ರೋಟೀನುಗಳಾಗಿದ್ದು ಅವುಗಳ ಸರಳ ಘಟಕಗಳು (ಸಿಂಪಲ್ ಯೂನಿಟ್ಸ್) ಅಮೈನೋ ಆಮ್ಲಗಳು. ಆದರೆ ನೈಲಾನ್ ಎಳೆಗಳು ದ್ವಿಪ್ರತ್ಯಾಮ್ಲೀಯ ಆಮ್ಲ (ಡೈಬೇಸಿಕ್ ಆಸಿಡ್) ಮತ್ತು ದ್ವಿಯಾಮ್ಲೀಯ (ಡೈಆಸಿಡಿಕ್) ಅಮೈನ್ ಅಣುಗಳ, ಮುಂದೆ ತೋರಿಸಿರುವ ಸಂಯೋಜನೆಯಂಥ ಅನಂತ ಸಂಯೋಜನೆಗಳಿಂದ ಆಗಿವೆ.

$$HOOC - R-COOH + H_2N-R' - NH_2 + HOOC - R - COOH$$
$$\rightarrow HOOC - R - CONH - R' - NHCO - R - COOH$$

ಅಡಿಪಿಕ್ ಆಮ್ಲ ಮತ್ತು ಹೆಕ್ಸ್ ಮೆಥಿಲೀನ್ ಡೈ ಅಮೈನುಗಳು ಒಂದರೊಡನೊಂದು ಸರಳ ರೀತಿಯಲ್ಲಿ ವರ್ತಿಸಿದಾಗ ದೊರೆಯುವುದು ಅಮೈಡ್ ನೈಲಾನ್ ಲವಣ. ನೈಲಾನ್ ಲವಣವನ್ನು ನೀರಿನಲ್ಲಿ ಲೀನಮಾಡಿ ದ್ರಾವಣವನ್ನು ಸಾಂದ್ರೀಕರಿಸಿ ಸಾರ (ಕಾನ್‌ಸೆಂಟ್ರೇಟೆಡ್) ದ್ರಾವಣವನ್ನು ಉಷ್ಣ ಮತ್ತು ಒತ್ತಡಗಳಿಗೆ ಒಳಪಡಿಸಿದಾಗ ನೈಲಾನ್ ಲವಣದ ಅಣುಗಳು ಒಂದರೊಡನೊಂದು ಸೇರಿ ಸರಪಳಿ ಪಾಲಿಮರಿನ ಬೃಹದಣುಗಳಾಗುತ್ತವೆ. ಹೀಗೆ ದೊರೆತ ಪಾಲಿಮರ್ ಅಥವಾ ಪ್ಲಾಸ್ಟಿಕನ್ನು ಉಷ್ಣದಿಂದ ಮೆದುವಾಗುವಂತೆ ಮಾಡಿ ನೀಳು ಗಂಡಿಗಳ ಮೂಲಕ ನೀರಿನ ತುಂತುರಿಗೆ ಎದುರಾಗಿ ಹೊರಚಲ್ಲುವಂತೆ ಮಾಡಲಾಗುತ್ತದೆ. ಆಗ ನೈಲಾನ್ ಪುನಃ ಘನರೂಪಕ್ಕೆ ತಿರುಗುತ್ತದೆ. ಹೀಗೆ ದೊರೆತ ಪಟ್ಟಿಗಳ ರೂಪದಲ್ಲಿರುವ ನೈಲಾನನ್ನು ಯಂತ್ರಗಳಿಂದ ಚಿಕ್ಕ ಚಿಕ್ಕೆಗಳಾಗಿ ಕತ್ತರಿಸಲಾಗುತ್ತದೆ.

ಚಿಕ್ಕೆ ನೈಲಾನನ್ನು ಉಷ್ಣದಿಂದ ಕರಗಿಸಿ ದ್ರವ ನೈಲಾನನ್ನು ತಂತುಕಗಳಲ್ಲಿ ಹಾಯಿಸಿದಾಗ ಬಲು ಸೂಕ್ಷ್ಮವಾದ ನೈಲಾನ್ ಎಳೆಗಳು ದೊರೆಯುತ್ತವೆ. ಈ ಬಗೆಯ ಹಲವಾರು ಎಳೆಗಳನ್ನು ಕೂಡಿಸಿ ತಿರುಚಿದಾಗ ನೈಲಾನ್ ನೂಲು ದೊರೆಯುತ್ತದೆ. ಈ ನೂಲಿನಲ್ಲಿ ನೈಲಾನ್ ಅಣುಗಳು ಏಕಮುಖವಾಗಿ ಇರುವುದಿಲ್ಲವಾದ್ದರಿಂದ ನೂಲಿನ ಬಲ ಬಲು ಕಡಿಮೆ. ಎಳೆತದಿಂದ ಅಣುಗಳು ಏಕಮುಖವಾಗುವಂತೆ ಮಾಡಿ ನೂಲಿನ ಬಲವನ್ನು ಹೆಚ್ಚಿಸಬಹುದು. ಹೀಗೆ ಮಾಡಿದಾಗ ನೈಲಾನಿಗೆ ಹೊಳಪು ಮತ್ತು ಪಾರದರ್ಶಕತ್ವವೂ ದೊರೆಯುತ್ತವೆ.

ನೈಲಾನ್ ಉಷ್ಣಸುನಮ್ಯ (ಥರ್ಮೋಪ್ಲಾಸ್ಟಿಕ್). ಇದರ ಅರ್ಥ ಉಷ್ಣವನ್ನು ಒದಗಿಸಿದಾಗ ನೈಲಾನ ಮೆದುವಾಗುತ್ತದೆ. ಆದ್ದರಿಂದ ಉಷ್ಣ ಉಬ್ಬಚ್ಚಿನಿಂದ ಬಟ್ಟೆಗಳ ಮೇಲೆ ಚಿತ್ರ, ನಕ್ಷೆಗಳನ್ನು ಮೂಡಿಸಬಹುದು; ಮತ್ತು ಆವಶ್ಯಕವಾದ ಮಡಿಕೆ ಆಕಾರಗಳು ಶಾಶ್ವತವಾಗಿ ಉಳಿಯುವಂತೆ ಮಾಡಬಹುದು. ವಿಶಿಷ್ಟ ಸಂಸ್ಕರಣಗಳಿಂದ ನೈಲಾನ ಬಟ್ಟೆಗೆ ಜಲವಿಕರ್ಷಣ ಶಕ್ತಿಯನ್ನೂ ನೀಡಬಹುದು. ನೈಲಾನನ್ನು ಕೇವಲ ಉಡುಪುಗಳಿಗೆ ಮಾತ್ರವೇ ಉಪಯೋಗಿಸುತ್ತಿಲ್ಲ. ವಿಶಿಷ್ಟ ರೀತಿಯ ಬಲು ಬಲಯುತವಾದ ನೈಲಾನನ್ನು ಟೈರುಗಳಲ್ಲಿ ಒಳಹೊದಿಕೆಗಾಗಿ ಅಧಿಕ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತದೆ.

**ಪಾಲಿ ಎಸ್ಟರು:** ಟೆರಿಲೀನ್, ಟೆರೀನ್, ಡೆಕ್ರಾನ ಮೊದಲಾಗಿ ಹಲವು ಹೆಸರುಗಳಿಂದ ಪರಿಚಿತವಾಗಿರುವ ಈ ಎಳೆಯನ್ನು ಮೊದಲ ಬಾರಿಗೆ ತಯಾರಿಸಿದ ಕೀರ್ತಿ ಇಂಗ್ಲೆಂಡಿನ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಸಂಸ್ಥೆಗೆ ಸಲ್ಲುತ್ತದೆ. ಹೆಸರೇ ತಿಳಿಸುವಂತೆ ಅನೇಕ ಎಸ್ಟರ್ ಪುಂಜಗಳನ್ನುಳ್ಳ ಬೃಹದಣುಗಳ ಸರಪಳಿ ಪಾಲಿಮರ್ ಪಾಲಿಎಸ್ಟರ್.

ಟೆರಿಫ್ತಾಲಿಕ್ ಆಮ್ಲ ಮತ್ತು ಎಥಿಲೀನ್ ಗ್ಲೈಕಾಲುಗಳನ್ನು ಆಮ್ಲ ವೇಗ ವರ್ಧಕವೊಂದರ ಸನ್ನಿಧಿಯಲ್ಲಿ ಉಷ್ಣಕ್ಕೆ ಒಳಗುಮಾಡಿದಾಗ ಪಾಲಿಎಸ್ಟರ್ ಪಿಂಗಾಣಿಯಂಥ ಗಡುತರವಾದ ಘನವಸ್ತುವಿನ ರೂಪದಲ್ಲಿ ದೊರೆಯುತ್ತದೆ. ಹೀಗೆ ದೊರೆತ ಕರಡು ಪಾಲಿ ಎಸ್ಟರನ್ನು ಉಷ್ಣದಿಂದ ಕರಗಿಸಿ ಮೆದುಮಾಡಿ ತಂತುಕಗಳ ರಂಧ್ರಗಳ ಮೂಲಕ ಹಾಯಿಸಿದಾಗ ಸೂಕ್ಷ್ಮವಾದ ಪಾಲಿಎಸ್ಟರ್ ಎಳೆಗಳು ದೊರೆಯುತ್ತವೆ. ಈ ರೀತಿ ದೊರೆತ ಎಳೆಗಳಲ್ಲಿ ಅಣುಗಳು ಏಕಮುಖವಾಗಲು ಎಳೆಗಳನ್ನು ಎಳೆತಕ್ಕೆ ಒಳಪಡಿಸಿ ಅವುಗಳ ಬಲವೃದ್ಧಿ ಮಾಡಬಹುದು. ಹೀಗೆ ಬಲಯುತವಾದ ಪಾಲಿಎಸ್ಟರ್ ಬಹಳ ಬಾಳಿಕೆ ಬರುತ್ತದೆ. ಪಾಲಿಎಸ್ಟರ್ ಬಟ್ಟೆಯಲ್ಲಿ ಕಲ್ಮಷ, ದೂಳು ಮೊದಲಾದುವುಗಳು ಸುಲಭವಾಗಿ ಸೇರುವುದಿಲ್ಲವಾದ್ದರಿಂದ ಇದನ್ನು ಒಗೆಯುವುದು ಬಹು ಸುಲಭ. ಸೂಕ್ಷ್ಮ ಎಳೆಗಳ ಹೊಳಪೂ ಸಾಕಷ್ಟಿದ್ದು ಉಷ್ಣ ಸುನಮ್ಯತೆಯನ್ನೂ ಪಡೆದಿರುವುದರಿಂದ ಪಾಲಿಎಸ್ಟರ್ ಬಹು ಜನಪ್ರಿಯತೆಯನ್ನು ಗಳಿಸಿದೆ.

**ಅಕ್ರಿಲಿಕ್ ಎಳೆಗಳು:** ಆರ್ಲಾನ್ ಮತ್ತು ಅಕ್ರಿಲಾನುಗಳೆರಡೂ ಪಾಲಿ ಅಕ್ರಿಲೋ ನೈಟ್ರಿಲ್ ಬೃಹದಣುಗಳ ಸರಪಳಿ ಪಾಲಿಮರುಗಳಿಂದ ಕೂಡಿ ಆದ ಎಳೆಗಳು. ಎಥಿಲೀನ್ ಮೂಲ ಸಂಯುಕ್ತದಿಂದ ತಯಾರಿಸಲಾದ ಅಕ್ರಿಲೋ ನೈಟ್ರಿಲನ್ನು ಪಾಲಿಮರೈಸೇಷನ್ ಕ್ರಿಯೆಗೆ ಒಳಪಡಿಸಿದಾಗ ಪಾಲಿ ಅಕ್ರಿಲೋ ನೈಟ್ರಿಲ್ ಘನರೂಪದಲ್ಲಿ ದೊರೆಯುತ್ತದೆ. ಕರಡು ಅಕ್ರಿಲೋ ನೈಟ್ರಿಲನ್ನು ಸೂಕ್ತ ಲೀನಕಾರಿಯೊಂದರಲ್ಲಿ ಲೀನಮಾಡಿ ದೊರೆತ ದ್ರಾವಣವನ್ನು ತಂತುಕಗಳ ಮೂಲಕ ಹಾಯಿಸಿ ಸೂಕ್ಷ್ಮ ಎಳೆಗಳನ್ನು ಪಡೆಯಲಾಗುತ್ತದೆ. ಈ ಬಗೆಯ ಎಳೆಗಳನ್ನೂ ಎಳೆತಕ್ಕೊಳಪಡಿಸಿ ಅಣುಗಳು ಏಕಮುಖವಾಗುವಂತೆ ಮಾಡಿ ಎಳೆಗಳು ಬಲಯುತವಾಗುವಂತೆ ಮಾಡಲಾಗುತ್ತದೆ.

ಈ ಎಳೆಗಳು ಬಲು ಉಷ್ಣಸುನಮ್ಯತೆಯನ್ನು ಪಡೆದಿರುವುದರಿಂದ ಮಡಿಕೆ. ನೆರಿಗೆಗಳು ಶಾಶ್ವತವಾಗಿ ಉಳಿಯುವಂತೆ ಮಾಡಬಹುದು. ಮತ್ತು ಉಷ್ಣ ಉಬ್ಬಚ್ಚಿನ ಮೂಲಕ ಚಿತ್ರ ನಕಾಶೆಗಳನ್ನು ಮೂಡಿಸಬಹುದು. ನಿರ್ದಿಷ್ಟ ರಾಸಾಯನಿಕ ಸಂಸ್ಕರಣಗಳಿಂದ ಈ ಬಗೆಯ ಬಟ್ಟೆಗಳಿಗೆ ಜಲವಿಕರ್ಷಣ ಶಕ್ತಿಯನ್ನು ನೀಡಬಹುದಾದ್ದರಿಂದ ಅಧಿಕ ಪ್ರಮಾಣದಲ್ಲಿ ಇವನ್ನು ಮಳೆಯುಡುಪುಗಳನ್ನು ತಯಾರಿಸಲು ಉಪಯೋಗಿಸಲಾಗುತ್ತಿದೆ.

ಇತರ ಅಕ್ರಿಲಿಕ್ ಎಳೆಗಳಲ್ಲಿ ವೆರೆಲ್ ಮತ್ತು ಕ್ರೆಸ್ಲಾನುಗಳನ್ನು ಹೆಸರಿಸಬಹುದು. ಡೊ ಕೆಮಿಕಲ್ ಕಂಪನಿ ತಯಾರಿಸಿರುವ ಜೆಫ್ರಾನ್ ಅಕ್ರಿಲೊ ನೈಟ್ರಿಲ್ ಮತ್ತು ಇನ್ನು ಹಲವು ಪಾಲಿಮರುಗಳು ಕೂಡಿ ಆದ ಮಿಶ್ರ ಎಳೆ. ಇದನ್ನು ಸುಧಾರಿತ ಅಕ್ರಿಲಿಕ್ ಎಳೆ ಎಂದೆನ್ನಬಹುದು. ಅಕ್ರಿಲಿಕ್ ಎಳೆಗಳಿಗೆ ಬಣ್ಣ ಕೊಡುವುದು ಕಷ್ಟ. ಆದರೆ ಸುಧಾರಿತ ಅಕ್ರಿಲಿಕ್ ಆದ ಜೆಫ್ರಾನ್ ಸುಲಭವಾಗಿ ಬಣ್ಣ ತಳೆಯುತ್ತದೆ. ಜೆಫ್ರಾನ್ ಸಹ ಇತರ ಅನೇಕ ಕೃತಕ ಎಳೆಗಳಂತೆ ಉಷ್ಣ ಸುನಮ್ಯ. ಆದ್ದರಿಂದ ಮಡಿಕೆ. ನೆರಿಗೆಗಳನ್ನು ಶಾಶ್ವತವಾಗ ತಳೆಯಬಹುದು. ಈ ಎಳೆ ತಕ್ಕಮಟ್ಟಿಗೆ ನೀರನ್ನೂ ಹೀರಿಕೊಳ್ಳಬಲ್ಲುದು.

**ಡಾರ್ವಾನ್:** ವಿನೈಲಿಡೀನ್ ಡೈ ನೈಟ್ರೈಲ್ ಅಣುಗಳಿಂದಾದ ಪಾಲಿಮರ್ ಎಳೆ ಡಾರ್ವಾನ್. ಇದನ್ನು ತಯಾರಿಸಲು ಬೇಕಾಗುವ ಮೂಲ ಸಂಯುಕ್ತವಾದ ಅಸಿಟಾಕ್ಸಿ ಡೈ ಸಯನೋ ಈಥೇನನ್ನು ಹೈಡ್ರೋಜನ್ನ ಸಯನೈಡ್ ಮತ್ತು ಅಸಿಟಿಕ್ ಆನ್ ಹೈಡ್ರೈಡುಗಳ ಸಂಯೋಜನೆಯಿಂದ ಪಡೆಯಲಾಗುತ್ತದೆ. ಅಸಿಟಾಕ್ಸಿ ಡೈ ಸಯನೋ ಈಥೇನನ್ನು ನಿರ್ದಿಷ್ಟ ರೀತಿಯಲ್ಲಿ ಉಷ್ಣಕ್ಕೆ ಒಳಪಡಿಸಿದಾಗ ವೀನೈಲಿಡೀನ್ ಡೈ ನೈಟ್ರೈಲ್ ದೊರೆಯುತ್ತದೆ. ಇದನ್ನು ವೀನೈಲ್ ಅಸಿಟೇಟಿನೊಡನೆ ಪಾಲಿಮರೈಸೇಷನ್ ಕ್ರಿಯೆಗೆ ಒಳಪಡಿಸಿದಾಗ ದೊರೆಯುವ ಸಹ ಪಾಲಿಮರನ್ನು (ಕೊ–ಪಾಲಿಮರ್) ಸೂಕ್ಷ್ಮ ಲೀನಕಾರಿಯೊಂದರಲ್ಲಿ ಲೀನಮಾಡಿ ದ್ರಾವಣವನ್ನು ತಂತುಕಗಳ ಮೂಲಕ ಹಾಯಿಸಿ ಡಾರ್ವಾನ್ ಎಳೆಗಳನ್ನು ಪಡೆಯಲಾಗುತ್ತದೆ. ಡಾರ್ವಾನ್ ಸಹ ಉಷ್ಣಸುನಮ್ಯ ಎಳೆ. ಉಣ್ಣೆಯ ಎಳೆಗಳಂತೆ ಇರುವ ದಪ್ಪ ಡಾರ್ವಾನ್ ಎಳೆಗಳನ್ನು ತಯಾರಿಸಬಹುದಾದ್ದರಿಂದ ಇವನ್ನು ಉಣ್ಣೆಗೆ ಬದಲಾಗಿ ಹಲವು ಎಡೆಗಳಲ್ಲಿ ಉಪಯೋಗಿಸಬಹುದು.

**ಎಳೆ ಗಾಜು (ಫೈಬರ್ ಗ್ಲಾಸ್):** ಸಾಮಾನ್ಯವಾಗಿ ನಾವು ನೋಡುವ ಗಾಜು ಗಡಸು ಮತ್ತು ಬಗ್ಗಿಸಲಾರದಂತಹುದು. ಆದರೆ ಗಾಜಿನಿಂದ ಸೂಕ್ಷ್ಮ ಎಳೆಗಳನ್ನು ತಯಾರಿಸಿ ಉತ್ತಮ ಪಾರದರ್ಶಕ ಮತ್ತು ಅಪಾರದರ್ಶಕ ಬಟ್ಟೆಗಳನ್ನು ತಯಾರಿಸಬಹುದು. ಸೂಕ್ಷ್ಮ ಪರೀಕ್ಷೆ ಮಾಡದೆ ಗಾಜಿನೆಳೆಯ ಬಟ್ಟೆ ಮತ್ತು ರೇಷ್ಮೆಯ ಬಟ್ಟೆಗಳಿಗಿರುವ ವ್ಯತ್ಯಾಸವನ್ನು ಕಂಡುಹಿಡಿಯುವುದು ಕಷ್ಟ. ರೇಷ್ಮೆಯ ಎಳೆಗಳೊಡನೆ ಬೆರೆತ ಗಾಜಿನೆಳೆಯ ವಸ್ತ್ರವನ್ನು ಮೊದಲಬಾರಿಗೆ ಸುಮಾರು ಎಂಬತ್ತು ವರ್ಷಗಳ ಹಿಂದೆಯೇ ತಯಾರಿಸಲಾಗಿದ್ದರೂ ಈ ಬಟ್ಟೆ ಗಡುಸಾಗಿದ್ದು, ಮಡಚಿಡಲು ಸಹ ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ವಸ್ತ್ರೋದ್ಯಮದಲ್ಲಿ ಆಗಲೇ ಗಾಜು ಕಾಲಿಡಲು ಸಾಧ್ಯವಾಗಲಿಲ್ಲ. ಆದರೂ ಪ್ರಯೋಗಗಳು ಮುಂದುವರಿದು ಒಂದನೆಯ ಮಹಾಯುದ್ಧದ ವೇಳೆಯಲ್ಲಿ ಕಲ್ನಾರಿನ ಅಭಾವದಿಂದ ಪಾರಾಗಲು ಜರ್ಮನಿಯಲ್ಲಿ ಗಾಜಿನೆಳೆಗಳನ್ನು ಉಷ್ಣ ನಿರೋಧಕ, ವಿದ್ಯುನ್ನಿರೋಧಕಗಳಾಗಿ ಕಲ್ನಾರಿಗೆ ಬದಲಾಗಿ ಉಪಯೋಗಿಸಲು ಸಾಧ್ಯವಾಯಿತು. ಇಂದಿನ ಸೂಕ್ಷ್ಮ, ಮೃದು ಮತ್ತು ಹೇಗೆ ಬೇಕಾದರೂ ಬಗ್ಗಿಸಲಾಗುವ ವಸ್ತ್ರೋದ್ಯಮದಲ್ಲಿ ಉಪಯೋಗಿಸಲಾಗುವಂಥ ಎಳೆಯನ್ನು ಅಲ್ಪ ವೆಚ್ಚದಲ್ಲಿ ಮೊದಲ ಬಾರಿಗೆ 1931ರಲ್ಲಿ ಅಮೆರಿಕದ ಓವೆನ್ಸ್–ಎಲಿನಾಯ್ಸ್ ಗ್ಲಾಸ್ ಕಂಪನಿಯಲ್ಲಿ ತಯಾರಿಸಲಾಯಿತು. 1938ರಲ್ಲಿ ಈ ಬಗೆಯ ಗಾಜಿನೆಳೆ ವಸ್ತ್ರೋದ್ಯಮದಲ್ಲಿ ಕಾಲಿಟ್ಟಿತು.

ಗಾಜಿನೆಳೆಯ ತಯಾರಿಕೆಗೆ ವಿಶಿಷ್ಟ ರೀತಿಯ ಗಾಜು ಅಗತ್ಯ. ಸಿಲಿಕ (ಮರಳು), ಸುಣ್ಣಕಲ್ಲು, ಸೋಡಿಯಂ ಕಾರ್ಬೊನೇಟ್ ಮತ್ತು ಬೋರಾಕ್ಸುಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸಿ ಅತಿ ನಿಖರ ನಿಯಂತ್ರಣವುಳ್ಳ ಕುಲುಮೆಗಳಲ್ಲಿ $1370^0$ ಸೆಂ. ಉಷ್ಣತೆಯಲ್ಲಿ ಕಾಯಿಸಿದಾಗ ಈ ವಿಶಿಷ್ಟ ರೀತಿಯ ಗಾಜು ದೊರೆಯುತ್ತದೆ. ಇದರಿಂದ ಸಣ್ಣ ಗೋಲಿಗಳನ್ನು ಮಾಡಿ ಪರೀಕ್ಷಿಸಿದ ಮೇಲೆ ಇವನ್ನು ಪುನಃ ಸಣ್ಣ ಕುಲುಮೆಗಳಲ್ಲಿ ಕಾಯಿಸಿ ವಿಶಿಷ್ಟ ರೀತಿಯ ತಂತುಕಗಳ ಮೂಲಕ ಹಾಯಿಸಿ ಗಾಜಿನೆಳೆಗಳನ್ನು ಪಡೆಯಲಾಗುತ್ತದೆ. ಒಂದೊಂದು ತಂತುಕದಲ್ಲಿಯೂ ಸುಮಾರು 200 ಸೂಕ್ಷ್ಮವಾದ ರಂಧ್ರಗಳಿರುತ್ತವೆ. ಇವುಗಳಿಂದ ಬರುವ ಸೂಕ್ಷ್ಮ ಎಳೆಗಳನ್ನು ಕೂಡಲೇ ಅತಿವೇಗದಿಂದ

ಒಟ್ಟಾಗಿ ಎಳೆತಕ್ಕೊಳಪಡಿಸಿದಾಗ ಅವುಗಳ ದಪ್ಪ ಕಡಿಮೆಯಾಗಿ ಬಲ ವೃದ್ಧಿಯಾಗುತ್ತದೆ. ಅನಂತರ ಹಲವು ಎಳೆಗಳನ್ನು ಒಟ್ಟಾಗಿ ತಿರುಚಿ ನೂಲು ತಯಾರಿಸಲಾಗುತ್ತದೆ. ಈ ನೂಲನ್ನು ಬಾಗಿಲ ತೆರೆ, ರಂಗಸ್ಥಳ ತೆರೆಗಳನ್ನು ನೇಯಲು ಉಪಯೋಗಿಸಬಹುದು.

ಮತ್ತೊಂದು ವಿಧಾನದಲ್ಲಿ ತಂತುಕದಿಂದ ಹೊರಬಂದ ಗಾಜಿನೆಳೆಗಳಿಗೆ ಎದುರಾಗಿ ಗಾಳಿಯ ಪ್ರವಾಹವನ್ನೇರ್ಪಡಿಸುವುದರಿಂದ ಗಾಜು 8"–15" ಉದ್ದದ ಸೂಕ್ಷ್ಮ ಎಳೆಗಳಾಗಿ ಮಾರ್ಪಡುತ್ತದೆ. ಈ ಸೂಕ್ಷ್ಮ ಎಳೆಗಳು ಮೊದಲು ಘರ್ಷಣ ನಿರೋಧಕವೊಂದರ ತುಂತುರು ಮತ್ತು ಅನಂತರ ಹದವಾದ ಬೆಂಕಿಯಲ್ಲಿ ಹಾದು ತಿರುಗುತ್ತಿರುವ ಪೀಪಾಯಿ ಒಂದರ ಮೇಲೆ ಬಿದ್ದು ಹತ್ತಿಯಂತೆ ಮೃದುವಾದ ಬಲೆಯಾಗಿ ಮಾರ್ಪಡುತ್ತವೆ. ಹತ್ತಿಯಂಥ ಈ ಎಳೆಗಳ ಸಮೂಹವನ್ನು ಒಟ್ಟುಗೂಡಿಸಿ ನೈಸರ್ಗಿಕ ಎಳೆಗಳನ್ನು ನೂಲುವಂತೆಯೇ ನೂತು ಎಳೆಗಳನ್ನು ತಯಾರಿಸಲಾಗುತ್ತದೆ.

ಗಾಜಿನ ಎಳೆಗಳಿಂದ ತಯಾರಾದ ಬಟ್ಟೆಯನ್ನು ಬಲಗೊಳಿಸಲು ಅಧಿಕ ಉಷ್ಣಕ್ಕೆ ಅದನ್ನು ಒಳಪಡಿಸಬೇಕು. ಈ ವಸ್ತ್ರಕ್ಕೆ ವಿಶಿಷ್ಟ ರೀತಿಯ ಬಣ್ಣಗಳನ್ನು ಕೊಡಬಹುದು; ಮತ್ತು ಘರ್ಷಣರಕ್ಷಣ ಲೇಪಗಳನ್ನು ಕೊಡಬಹುದು. ಸೂಕ್ತ ಲೇಪಗಳಿಂದ ವಸ್ತ್ರದ ಇತರ ಗುಣಗಳನ್ನೂ ಬೇಕಾದಂತೆ ತಕ್ಕಮಟ್ಟಿಗೆ ಮಾರ್ಪಡಿಸಬಹುದು.

ಗಾಜಿನ ಎಳೆಯ ವಸ್ತ್ರಗಳು ನುಣುಪಾಗಿರುವುದರಿಂದ ಕಲ್ಮಷಗಳು ಸುಲಭವಾಗಿ ಒಳಸೇರವು. ಆದ್ದರಿಂದ ಇವನ್ನು ಕೇವಲ ಒಂದು ಒದ್ದೆ ಬಟ್ಟೆಯಿಂದ ಒರೆಸಿ ನಿರ್ಮಲಗೊಳಿಸಬಹುದು. ಹಲವು ಬಾರಿ ನೀರಿನಲ್ಲಿ ಅಥವಾ ಸಾಬೂನು ನೀರಿನಲ್ಲಿ ಕೇವಲ ಅದ್ದಿತೆಗೆದರೂ ಸಾಕು. ಸಾಮಾನ್ಯ ಉಷ್ಣದಿಂದ ಇವಕ್ಕೆ ಏನು ಹಾನಿಯಾಗದು; ಬೆಳಕು ಯಾವ ಪರಿಣಾಮವನ್ನೂ ಉಂಟುಮಾಡದು; ಕ್ರಿಮಿಕೀಟಗಳು ಬಟ್ಟೆಗಳ ಮೇಲೆ ದಾಳಿ ಮಾಡುವುದಿಲ್ಲ. ಅನೇಕ ಸಂದರ್ಭದಲ್ಲಿ ಗಾಜಿನೆಳೆಯ ವಸ್ತ್ರಗಳಿಗಿಂತ ಉತ್ತಮ ವಸ್ತ್ರ ಇನ್ನೊಂದಿಲ್ಲ. ಈಗೀಗ ಉಡುಪುಗಳನ್ನೂ ಗಾಜಿನೆಳೆಯ ವಸ್ತ್ರಗಳಿಂದ ತಯಾರಿಸಲು ಪ್ರಯತ್ನಿಸಲಾಗುತ್ತಿದೆ.

ಮಿಶ್ರ ನೂಲುಗಳು: ಸಾಮಾನ್ಯವಾಗಿ ನೈಸರ್ಗಿಕ ಮತ್ತು ಕೃತಕ ಎಳೆಗಳ ಗುಣಲಕ್ಷಣಗಳಲ್ಲಿ ಹಲವು ಮುಖ್ಯ ವ್ಯತ್ಯಾಸಗಳನ್ನು ಸುಲಭವಾಗಿ ಕಾಣಬಹುದು. ಉಷ್ಣಸುನಮ್ಯತೆ, ಕ್ರಿಮಿನಿರೋಧತೆ ಮತ್ತು ಉತ್ತಮ ಬಾಳಿಕೆಗಳು ಕೃತಕ ಎಳೆಗಳ ಉತ್ತಮಗುಣಗಳು. ಆದರೆ ನೈಸರ್ಗಿಕ ಎಳೆಗಳು ನೀರನ್ನು ಸುಲಭವಾಗಿ ಹೀರಬಲ್ಲವು; ಸುಲಭವಾಗಿ ಬಣ್ಣ ತಳೆಯಬಲ್ಲವು. ಸಾವಯವ ಲೀನಕಾರಿಗಳಲ್ಲಿ ಲೀನವಾಗುವುದಿಲ್ಲ, ಮತ್ತು ಸಾಕಷ್ಟು ಉಷ್ಣವನ್ನು ತಡೆಯಬಲ್ಲುವು, ನೈಸರ್ಗಿಕ ಮತ್ತು ಕೃತಕ ಎಳೆಗಳೆರಡರ ಗುಣಗಳನ್ನೂ ಪಡೆದಿರುವ ಯಾವ ಎಳೆಯೂ ಇಲ್ಲ. ಆದರೆ ಒಂದಕ್ಕಿಂತ ಹೆಚ್ಚು ಎಳೆಗಳಿಂದ ಕೂಡಿದ ಮಿಶ್ರ ನೂಲುಗಳನ್ನು ತಯಾರಿಸುವುದರ ಮೂಲಕ ತಕ್ಕಮಟ್ಟಿಗೆ ಅನೇಕ ಬಗೆಯ ಅಪೇಕ್ಷಿತ ಗುಣಗಳನ್ನೂ ಉಳ್ಳ ಬಟ್ಟೆಗಳನ್ನು ತಯಾರಿಸಲು ಸಾಧ್ಯವಾಗಿದೆ.

ನೈಲಾನ್ ಹತ್ತಿಯ ಮಿಶ್ರ ನೂಲಿಗೆ ಹತ್ತಿಯ ಎಳೆಗಿಂತಲೂ ಹೆಚ್ಚು ಧಾರಣ ಸಾಮರ್ಥ್ಯ ಇದೆ. ಈ ನೂಲಿನಿಂದ ತಯಾರಿಸಿದ ಬಟ್ಟೆಗಳು ನುಣುಪು ನಯಗಳನ್ನು ಪಡೆದಿದ್ದು ಹತ್ತಿಯ ಬಟ್ಟೆಗಳಿಗಿಂತ ಹಗುರವಾಗಿರುತ್ತವೆ. ಇವು ಹತ್ತಿಯ ಬಟ್ಟೆಯಷ್ಟು ಬೇಗ ಮಲಿನವಾಗುವುದಿಲ್ಲ. ಈ ಬಟ್ಟೆಗಳು ಸುಲಭವಾಗಿ ಸುಕ್ಕಾಗದಂತೆ ನೈಲಾನ್ ಮಿಶ್ರಣ ತಡೆಯುತ್ತದೆ. ಹತ್ತಿಯ ಅಂಶವೂ ಬಟ್ಟೆಗಳಿಗೆ ಹಲವು ಅಪೇಕ್ಷಿತ ಗುಣಗಳನ್ನು ನೀಡುತ್ತದೆ. ಈ ಬಗೆಯ ಬಟ್ಟೆಯಲ್ಲಿರುವ ಮೃದುತ್ವ ಕೇವಲ ನೈಲಾನಿನಿಂದಾದ ಬಟ್ಟೆಗಳಲ್ಲಿರದು. ಈ ಬಟ್ಟೆ ಹತ್ತಿಯ ಬಟ್ಟೆಗಳಷ್ಟಲ್ಲವಾದರೂ ಸಾಕಷ್ಟು ತೇವವನ್ನು ಹೀರಿಕೊಳ್ಳಬಲ್ಲದು.

ನೈಲಾನ್ ಉಣ್ಣೆಯ ಮಿಶ್ರಣ ಹಗುರವಾದರೂ ಹೆಚ್ಚು ಬಾಳಿಕೆ ಬರುವ ಬೆಚ್ಚನೆಯ ಬಟ್ಟೆಗಳನ್ನು ನೀಡುತ್ತದೆ. ಈ ಬಗೆಯ ಬಟ್ಟೆ ಉಣ್ಣೆ ಎಳೆಯ ಉಷ್ಣ ಬಂಧಕ (ಹೀಟ್ ರಿಟೆನ್ಷನ್), ನೈಲಾನಿನ ನಯ, ಸುಕ್ಕನ್ನು ನಿರೋಧಿಸುವ ಶಕ್ತಿಗಳನ್ನು ಪಡೆದಿರುತ್ತದೆ. ನೈಲಾನ್ ರೇಷ್ಮೆಯ ಮಿಶ್ರಣದಲ್ಲಿ ತೇವವನ್ನು ಹೀರುವ ಶಕ್ತಿಯನ್ನು ರೇಷ್ಮೆಯೂ ಸುಕ್ಕನ್ನು ನಿರೋಧಿಸುವ ಶಕ್ತಿಯನ್ನು ಮತ್ತು ಧಾರಣ ಸಾಮರ್ಥ್ಯವನ್ನು ನೈಲಾನೂ ನೀಡುತ್ತವೆ. ನೈಲಾನ್ ರೇಯಾನ್ ಮಿಶ್ರಣ ಬಲು ಮಟ್ಟಿಗೆ ನೈಲಾನ್ ರೇಷ್ಮೆಯ ಮಿಶ್ರಣವನ್ನು ಹೋಲುತ್ತದೆ. ನೈಲಾನ್ ಅರ್ನೆಲ್ ಮಿಶ್ರಣವನ್ನು ಉತ್ತಮದರ್ಜೆಯ ಗ್ಯಾಬರ್ಡಿನ್ ಬಟ್ಟೆಗಳನ್ನು ತಯಾರಿಸಲು ಉಪಯೋಗಿಸಲಾಗುತ್ತದೆ.

ಶೇ.65 ಪಾಲಿ ಎಸ್ಟರನ್ನು ಪಡೆದಿರುವ ಪಾಲಿ ಎಸ್ಟರ್ ಹತ್ತಿಯ ಮಿಶ್ರಣ ಟೆರಿಕಾಟ್ ಎಂದು ಬಹು ಜನಪ್ರಿಯವಾಗಿದೆ. ನೈಲಾನ್ ಹತ್ತಿಯ ಮಿಶ್ರಣದಲ್ಲಿಯಂತೆ ಇದರಲ್ಲಿ ಪಾಲಿ ಎಸ್ಟರ್ ಧಾರಣ ಸಾಮರ್ಥ್ಯ, ಬಾಳಿಕೆ, ಸುಕ್ಕಿಗೆ ನಿರೋಧತೆಯನ್ನು ನೀಡಿ ಉಡುಪಿನ ಮಡಿಕೆ, ನೆರಿಗೆಗಳು ಬೇಗ ಕೆಡದಿರುವಂಥ ಸಾಮರ್ಥ್ಯ ಒದಗಿಸುತ್ತದೆ. ಮೃದುತ್ವವನ್ನೂ ನೀರನ್ನು ಹೀರಬಲ್ಲ ಶಕ್ತಿಯನ್ನೂ ಹತ್ತಿ ನೀಡುತ್ತದೆ. ಪಾಲಿಎಸ್ಟರ್ ಉಣ್ಣೆಯ ಮಿಶ್ರಣವುಳ್ಳ ಬಟ್ಟೆಗಳಲ್ಲಿ ಉಷ್ಣ ಪ್ರತಿಬಂಧಕ ಶಕ್ತಿಯನ್ನು ಉಣ್ಣೆಯೂ ಬಾಳಿಕೆಯನ್ನು ಮತ್ತು ಮಡಿಕೆಗಳು ಉಳಿಯುವ ಶಕ್ತಿಯನ್ನು ಪಾಲಿ ಎಸ್ಟರೂ ನೀಡುತ್ತವೆ.

ಇದೇ ಬಗೆಯಾಗಿ ಬಟ್ಟೆಗಳ ಗುಣಗಳನ್ನು ಮಾರ್ಪಡಿಸಲು, ನಮಗೆ ಸಾಧ್ಯವಾದಷ್ಟು ಮಟ್ಟಿಗೆ ಅಪೇಕ್ಷಿತ ಗುಣಗಳನ್ನು ಪಡೆದಿರುವ ಬಟ್ಟೆಗಳನ್ನು ಪಡೆಯಲು ಸೂಕ್ತ ರೀತಿಯ ಎಳೆಗಳ ಮಿಶ್ರಣಗಳನ್ನು ತಯಾರಿಸಬಹುದು. ಹೀಗೆಂದ ಮಾತ್ರಕ್ಕೆ ಯಾವ ಎಳೆಯೊಡನೆ ಯಾವ ಎಳೆಯನ್ನಾಗಲೀ ಯಾವ ಪ್ರಮಾಣದಲ್ಲಿಯಾಗಲೀ ಉಪಯೋಗಿಸಬಹುದೆಂದು ತಿಳಿಯಲಾಗದು. ಮಿಶ್ರಣದ ರೀತಿ, ಪ್ರಮಾಣಗಳು ಸರಿಯಾಗಿಲ್ಲದಿದ್ದಲ್ಲಿ ಬಟ್ಟೆ ಉತ್ತಮವಾಗಿರದು. ಕೃತಕ ನೈಸರ್ಗಿಕ ಎಳೆಗಳ ಮಿಶ್ರಣದಲ್ಲಿ ಪ್ರಮಾಣಗಳು ಸರಿಯಾಗಿಲ್ಲದಿದ್ದಲ್ಲಿ ಸಾಮಾನ್ಯವಾಗಿ ಹೆಚ್ಚು ಧಾರಣ ಸಾಮರ್ಥ್ಯವನ್ನುಳ್ಳ ಕೃತಕ ಎಳೆಗಳು ನೈಸರ್ಗಿಕ ಎಳೆಗಳನ್ನು ಕತ್ತರಿಸುತ್ತವೆ. ಸೂಕ್ತ ಸಂಸ್ಕರಣಗಳಿಗೆ ಒಳಪಡಿಸದಿದ್ದಲ್ಲಿ ಹತ್ತಿಯಂಥ ನೈಸರ್ಗಿಕ ಎಳೆಗಳು ಸೇರುತ್ತವೆ. ಆದರೆ ಅದೇ ದರದಲ್ಲಿ ಕೃತಕ ಎಳೆ ಸೇರದಿರುವುದರಿಂದ ಇಂಥ ಮಿಶ್ರಣದಿಂದ ತಯಾರಿಸಿದ ಬಟ್ಟೆಗಳು ವಿಚಿತ್ರ ಮತ್ತು ಅಸಹ್ಯ ಆಕಾರಗಳನ್ನು ತಳೆಯುತ್ತವೆ. ಆದ್ದರಿಂದ ಸೂಕ್ತ ಮಿಶ್ರಣಗಳ ಬಗ್ಗೆ ನಿರ್ಣಯಗಳಿಗೆ ಬರಲು ಅನೇಕ ಪ್ರಯೋಗ, ಪರೀಕ್ಷೆಗಳು ಅಗತ್ಯ. ಪ್ರಯೋಗಶಾಲೆ, ಪರೀಕ್ಷಾಲಯಗಳಿಂದ ಅಂಗೀಕರಿಸಲ್ಪಟ್ಟು ಹೊರಬಂದ ಮಿಶ್ರಣಗಳು ಸಾಮಾನ್ಯವಾಗಿ ಯಾವೊಂದು ಎಳೆಯಿಂದಾದ ಬಟ್ಟೆಗಳಿಗಿಂತಲೂ ಹೆಚ್ಚು ಅಪೇಕ್ಷಿತ ಗುಣಗಳನ್ನು ಪಡೆದಿದ್ದು ಹೆಚ್ಚು ಉಪಯುಕ್ತತೆಯನ್ನು ಪಡೆದಿರುತ್ತವೆ. ಕೃತಕ ಎಳೆಗಳಲ್ಲಿರುವ ಉಷ್ಣಸುನಮ್ಯತೆ ಮತ್ತು ಕಲ್ಮಷಗಳನ್ನು ದೂರೀಕರಿಸುವ ಗುಣಗಳು ಈಗಿನ ಉಡುಪುಗಳಲ್ಲಿ ಅತ್ಯಪೇಕ್ಷಿತ ಗುಣಗಳಾಗಿವೆ. ಕೃತಕ ಎಳೆಗಳನ್ನುಳ್ಳ ಮಿಶ್ರಣಗಳೂ ಸಾಕಷ್ಟು ಮಟ್ಟಿಗೆ ಈ ಗುಣಗಳನ್ನು ಪಡೆದಿರುವುದರಿಂದ ವಸ್ತ್ರಜಗತ್ತಿನಲ್ಲಿ ಇವು ಪ್ರಮುಖ ಸ್ಥಾನ ಪಡೆಯುವಂತೆ ಮಾಡಿವೆ. **(ಕೆ.ಟಿ.ಎಸ್.)**

**ಎಳೆಗೂಸಿನ ಈಲಿಯ ಅರಿಶಿನಾರಿಗೆ:** ಭಾರತದಲ್ಲಿ, ಮುಖ್ಯವಾಗಿ ದಕ್ಷಿಣ ನಾಡುಗಳಲ್ಲಿ ಎಳೆಗೂಸುಗಳಿಗೆ ಆಗಾಗ್ಗೆ ಜ್ವರ ಬಂದೋ ಉಚ್ಚಾಟವಾಗೋ, ಗೊತ್ತಾದ ಕಾರಣವಿಲ್ಲದೆ ಈಲಿ ನಿಧಾನವಾಗಿ ಕೆಡುತ್ತ ದೊಡ್ಡದಾಗಿ ನಾರಿನಂತಾಗಿ ಹೊಟ್ಟೆ ಉಬ್ಬರಿಸಿಕೊಂಡು, ಕೆಲವೇಳೆ ಕಾಮಾಲೆಯಾಗಿ, ಬಹಳ ಕೂಸುಗಳಲ್ಲಿ ಕೊನೆಗೆ ಮಾರಕವಾಗುವ ಬೇರೂರುವ ರೋಗ. ಈ ರೋಗವನ್ನು ಮೊಟ್ಟಮೊದಲು ವಿವರಿಸಿದಾತ ಸೆನ್ (1887). ಈಲಿಯಲ್ಲಿನ ಜೀವಕಣಗಳ ಅನುವಳಿಕೆಯಾಗಿ (ಡೀಜನರೇಷನ್) ಮತ್ತೆ ಬೆಳೆದು ನಾರಿನಂತಾಗಿ ಅದರ ರಚನೆಯೇ ಹಾಳಾಗುವುದಕ್ಕೆ ಅರಿಶಿನಾರಿಗೆ (ಸಿರ್ರೋಸಿಸ್) ಎಂದಿದೆ.

**ಕಾರಣಗಳು:** ಒಂದರಿಂದ ಮೂರನೆಯ ವರ್ಷಗಳಲ್ಲಿ ಬಡವ ಬಲ್ಲಿದ, ಗಂಡು ಹೆಣ್ಣು ಎಂಬ ವ್ಯತ್ಯಾಸಗಳಿಲ್ಲದೆ, ಕೆಲವು ತಲೆಮಾರುಗಳಲ್ಲಿ ಈ ರೋಗ ಬರುವಂತೆ ತೋರುವುದು. ಕಾರಣ ಸರಿಯಾಗಿ ತಿಳಿದಿಲ್ಲ. ಎಳೆಗೂಸಿನ ಉಣಿಸು, ಜೀವವಸ್ತು ಕರಣದ (ಮೆಟಬಾಲಿಕ್) ಅಂಶ, ಜಠರದಲ್ಲಿ ಹುಟ್ಟಿ ಈಲಿಯನ್ನು ಕೆಡಿಸುವ ಕೆರಳಿಕ ಅಂಶ, ತಾಯ ಆಹಾರದಿಂದ ಹುಟ್ಟಿ ಬಸುರಲ್ಲೂ ಆಮೇಲೆ ಹಾಲೂಡಿಸುವಾಗಲೂ ಎಳೆಗೂಸಿಗೆ ಸಾಗುವ ವಿಷಕರ ಅಂಶ ಇವುಗಳಲ್ಲಿ ಯಾವುದಾದರೂ ಕಾರಕ ಆಗಿರಬಹುದೆಂಬ ಶಂಕೆಯಿದೆ. ಆದರೆ, ಉಣಿಸಿನಲ್ಲಿ ಆ ತೆರನ ಕೆಡುಕಿನ ವಸ್ತು ಇಲ್ಲಿನ ತನಕ ಯಾವುದೂ ಸಿಕ್ಕಿಲ್ಲ. ತೀರ ಬಡತನದಲ್ಲಿ ಬೆಳೆವ ಎಳೆಗೂಸಿನಲ್ಲಿ ಉಣಿಸು ಕೊರೆಯಾಗಿ ಕ್ವಾಷಿಯಾರ್ಕರ್ ರೋಗ ಬಂದು ಈಲಿ ದೊಡ್ಡದಾಗುವುದಾದರೂ ಆ ಮಕ್ಕಳಲ್ಲಿ ಈ ಅರಿಶಿನಾರಿಗೆ ಕಂಡುಬರದು. ಇನ್ನೂ ಹೆಚ್ಚಿನದಾಗಿ, ಯಾವುದೊ ಸೋಂಕು ಕಾರಕವನ್ನೆಲು ಬಲವಾದ ಅನುಮಾನಗಳೂ ಇವೆ. ಆಗಾಗ್ಗೆ ಜ್ವರ, ಉಚ್ಚಾಟ, ಉಸಿರ್ನಾಳ ಪುಪ್ಪುಸಗಳ ಬೇನೆಗಳ ಕಾಟ; ಜ್ವರ ಬಂದಾಗ ಬಿಳಿರಕ್ತ ಕಣಗಳ ಹೆಚ್ಚಳ; ಹೆತ್ತವಳ ಮಾಸಿನ ಮೂಲಕ ಸಾಗಿಬರುವ ಒಂದು ವಿಷಕಣದಿಂದ (ವೈರಸ್) ಈಲಿಯುರಿತವಾಗುವುದು (ಹೆಪಟೈಟಿಸ್)– ಹೀಗಾದಾಗ ಅರಿಶಿನಾರಿಗೆ ಕಂಡುಬಂದಿದೆ. ಅರಿಶಿನಾರಿಗೆ ಆಗಿರುವ ಎಳೆಗೂಸುಗಳ ಮಲದಲ್ಲಿ ಸೋಸಿಹೋಗುವ ಕಾರಕಗಳನ್ನು ಬಿಳಿ ಇಲಿಗಳಿಗೆ ಚುಚ್ಚಿದಾಗ ಅವಕ್ಕೆ ಅರಿಶಿನಾರಿಗೆ ಆಗಲು ಹಲವಾರು ಕಾರಕಗಳೇ ಇರಬಹುದಾದರೂ ಅವುಗಳ ನಿಜವಾದ ಪಾತ್ರ, ಒಂದರೊಡನೊಂದರ ಸಂಬಂಧ ಇವಾವುದೂ ಇನ್ನೂ ಖಚಿತವಾಗಿ ತಿಳಿದಿಲ್ಲ. ವಿಷಕಣದಿಂದ ಹತ್ತುವ ಸೋಂಕು, ತಲೆಮೊರೆ ಗುಣ, ಜೀವಿವಿಷಗಳು ಮುಖ್ಯ ಎನ್ನಬಹುದು.

**ರೋಗ ಪ್ರಭಾವ:** ರೋಗದ ಎಳಸಿನಲ್ಲಿ, ಈಲಿಯ ಜೀವಕಣಗಳಿಗೆ ಅಷ್ಟಿಷ್ಟು ಹಾನಿಯಾಗಿರುತ್ತದೆ. ಹಾನಿಗೊಂಡ ಜೀವಕಣಗಳು ಅಲ್ಲಲ್ಲೇ ಗುಂಪುಗಟ್ಟಿರಬಹುದು. ಇಲ್ಲವೇ ಈಲಿಯಲ್ಲಿ ಎಲ್ಲೆಲ್ಲೂ ಇರಬಹುದು. ಯಾವ ಹಂತದಲ್ಲೇ ಆಗಲಿ ಕೊಬ್ಬಿನ ಜೀವಕಣಗಳು ಕಂಡುಬಾರವು. ಈಲಿಯ ವಿಶೇಷ ಜೀವಕಣಗಳ ಬದಲಾಗಿ ಸಾಮಾನ್ಯವಾದವು ಅಲ್ಲಲ್ಲಿ ನುಗ್ಗಿ ಪಸರಿಸಿರುತ್ತವೆ. ಅನುವಳಿದು (ಡಿಜನರೇಟೆಡ್) ಹಾಳಾದ ಜೀವಕಣಗಳ ಜಾಗದಲ್ಲಿ ನಾರಿನಂತಿರುವ ತಂತುಕ (ಫೈಬ್ರಸ್) ಊತಕ ಸೇರಿಕೊಳ್ಳುತ್ತದೆ. ಇದು ಹುಸಿ ಕಿರಿಹಾಲೆ (ಲಾಬ್ಯೂಲ್) ತೆರನಾಗಿರುತ್ತದೆ. ಇವುಗಳ ನಡುವೆ ಸಿಕ್ಕಿಕೊಂಡ ಈಲಿಯ ಜೀವಕಣಗಳು ಸೊಟ್ಟಾಪಟ್ಟೆ ಆಗುತ್ತವೆ. ಧಮನಿಗಳಿಗೆ (ಆರ್ಟರೀಸ್) ಆತಂಕ

ವಾಗದು. ತೂರುಗೊಂದಿಯ ಸಿರಗಳಲ್ಲಿ (ಪೋರ್ಟಲ್ ವೆಯ್ನ್ಸ್) ಒತ್ತಡವೇರುವುದರಿಂದ ಅನ್ನನಾಳದ ಕೆಳಕೊನೆಯಲ್ಲಿ ಸಿರಗಳು ಊದಿಕೊಂಡು ಬಿರಿದಾಗ ರಕ್ತವಾಂತಿ ಆಗಬಹುದು. ಹಾಗೆ ಹೊಕ್ಕುಳ ಸುತ್ತ ಹೊಟ್ಟೆ ಮೇಲೆ ಸಿರಗಳು ಊದಿಕೊಂಡು ತಿರಿಗಟ್ಟುತ್ತವೆ.

**ಲಕ್ಷಣಗಳು :** ಈ ರೋಗ ಎಂದಿನಿಂದ ತಲೆದೋರಿತೆಂದು ಹೇಳಲಾಗದಷ್ಟು ಒಳಗೊಳಗೇ ಬಲಿಯುತ್ತ ಬರುವುದು. ಸಾಮಾನ್ಯವಾಗಿ ಹೆತ್ತವರು ಚೆನ್ನಾಗಿ ನೋಡಿಕೊಳ್ಳುತ್ತಿರುವ ಎಳೆಗೂಸಿಗೆ ಸಣ್ಣಜ್ವರ ಬಂದು ಇಳಿಯುತ್ತದೆ. ಆದರೆ, ಭೇದಿ, ಕೆಮ್ಮು, ಜ್ವರಗಳೊಂದಿಗೆ ಕೂಸು ಮತ್ತೆ ಮತ್ತೆ ಹಾಸಿಗೆ ಹಿಡಿಯುತ್ತದೆ. ಮೇಲಿಂದ ಮೇಲೆ ಹೀಗಾಗುತ್ತ ಬಂದಂತೆಲ್ಲ ಕೂಸು ಸಣಕಲಾಗುತ್ತ ಹೊಟ್ಟೆ ದಪ್ಪವಾಗಿ, ಲವಲವಿಕೆ ಕುಂದುತ್ತ, ಹಸಿವಿಲ್ಲದೆ ರಚ್ಚೆ ಹಿಡಿವುದನ್ನು ತಾಯಿ ಗುರುತಿಸಿ ವೈದ್ಯರಿಗೆ ತೋರಿಸುವ ಹೊತ್ತಿಗೆ ಬಲಗಡೆ ಪಕ್ಕೆಲುಬಿನ ಕೆಳಗೆ ಒಂದೆರಡು ಅಂಗುಲಗಳಷ್ಟು ಬೆಳೆದು ಈಲಿ ದೊಡ್ಡದಾಗಿರವುದು. ಇದರೊಂದಿಗೇ ತೊರಳೆ (ಪ್ಲೀಹ) ಕೂಡ ಊದಿರಬಹುದು.

ಕೆಲವೇ ವಾರಗಳಲ್ಲಿ ಎಳೆಗೂಸಿನ ಆರೋಗ್ಯ ತೀರ ಕೆಟ್ಟು, ಆಗಾಗ್ಗೆ ಜ್ವರ ಕಾಣಿಸಿಕೊಂಡು ಹೊಟ್ಟೆಯಲ್ಲಿ ತುಸು ನೀರ್ಗೂಡಿ, ಈಲಿ ತೊರಳೆಗಳು ಮತ್ತೂ ಗಡುಸಾಗಿ ನಾರಾಗುತ್ತವೆ. ಈಲಿಯಲ್ಲಿ ರಕ್ತ ಹರಿವಿಗೆ ತಡೆಯಾಗುವುದರಿಂದ ಹೊಟ್ಟೆಯ ಮೇಲೆ ಹೊಕ್ಕುಳಸುತ್ತ ಸಿರಗಳು ಹಿಗ್ಗಿ, ಮೈಚರ್ಮ, ಕಣ್ಣು ಕೊಂಚ ಹಳದಿಬಣ್ಣಕ್ಕೆ ತಿರುಗಬಹುದು. ಮಲ ಬಿಳಿಚಿಕೊಂಡು ಉಚ್ಚೆ ಹಳದಿಯಾಗುವುದು ರಕ್ತಕೊರೆಯಾಗಿ (ಅನೀಮಿಯ), ಬಿಳಿರಕ್ತಕಣಕೊರೆಯಾಗಿ ರಕ್ತದಲ್ಲಿನ ಚಪ್ಪಟಿಕಗಳ (ಪ್ಲೇಟಿಲೆಟ್ಸ್) ಕೊರತೆಯಿಂದ ಚರ್ಮದಡಿ ರಕ್ತ ಜಿನುಗಿ ನೀಲಿ ಕಲೆಗಳೇಳುತ್ತವೆ.

ಕೊನೆಯ ಹಂತವಾಗಿ, ಹೊಟ್ಟೆಯಲ್ಲಿ ವಿಪರೀತ ನೀರ್ದುಂಬಿಕೊಂಡು, ಹೊಕ್ಕುಳು ಹೊರಮುಗುಚಿಕೊಂಡು ಕೈ, ಕಾಲು ಮೊಗಗಳ ಉಬ್ಬರವಾಗಿ, ಈಲಿ ಒರಟೊರಟಾಗಿ ಕುಗ್ಗಿ ಬಲುಗಡುಸೂ ನಾರೂ ಆಗಿ, ತೊರಳೆಯೂ ಇನ್ನಷ್ಟು ದೊಡ್ಡದಾಗುವುದು. ಉಬ್ಬಸ, ಅರವೆ (ಅಜೀರ್ಣ), ಆಗಾಗ್ಗೆ ರಕ್ತವಾಂತಿ ಆಗುತ್ತ, ಈಲಿಯ ಮಯಕವಾಗಿ (ಹೆಪ್ಯಾಟಿಕ್ ಕೋಮ) ನಿಧಾನವಾಗಿ ಒಂದು ದಿನ ಕೂಸು ಅಸು ನೀಗುವುದು.

**ಚಿಕಿತ್ಸೆ:** ತೀರ ಎಳಸಿನಲ್ಲೇ ರೋಗವನ್ನು ಕಂಡುಕೊಂಡರೆ, ವಾಸಿಯಾಗಬಹುದು. ಈಲಿ ದೊಡ್ಡದಾಗಿರುವುದನ್ನು ಗುರುತಿಸಿದರೆ ಮಾತ್ರ ಇದು ಸಾಧ್ಯ. ಈಲಿಯಲ್ಲಿ ಒಂದು ಸಣ್ಣ ತೂತುಸೂಜಿಯನ್ನು ತೂರಿಸಿ ಈಲಿಯ ಬಲು ಸೂಕ್ಷ್ಮ ಚೂರನ್ನು ಮಾದರಿಯಾಗಿ ಹೊರತೆಗೆದು ತಪಾಸುಮಾಡಿ ರೋಗವನ್ನು ಖಚಿತಪಡಿಸಲೂಬಹುದು. ನಿಜವಾದ ಕಾರಣವೇ ಗೊತ್ತಿಲ್ಲವಾದ್ದರಿಂದ, ಬಲಿತ ರೋಗಕ್ಕೆ ಮದ್ದುಗಳೇ ಇಲ್ಲ. ಆದರೆ, ಎಳೆಗೂಸಿಗೆ ಸಾಕಷ್ಟು ಶಮನ ಕೊಡಲು ಕೆಲವು ಕ್ರಮಗಳನ್ನೂ ಕೈಗೊಳ್ಳಬಹುದು. ಕೂಸು ಆದಷ್ಟೂ ಹಾಯಾಗಿ ಮಲಗಿರಬೇಕು. ಉಣಿಸಿನಲ್ಲಿ ಪಥ್ಯವಿಲ್ಲವಾದರೂ ಪ್ರೋಟೀನುಗಳನ್ನು ಹೆಚ್ಚಾಗಿ ನೀಡಬೇಕು. ಜೀವಾತುಗಳು ಸಾಕಷ್ಟಿರಬೇಕು. ಉಪ್ಪು, ಕೊಬ್ಬು ಕಡಿಮೆ ಮಾಡಬೇಕು.

ಸೋಂಕುಗಳು ತಲೆದೋರಿದರೆ ಜೀವಿವಿರೋಧಕಗಳನ್ನು (ಆಂಟಿಬಯೊಟಿಕ್ಸ್) ಕೊಡಬೇಕು. ಉಚ್ಚಾಟ ಆಗುತ್ತಿದ್ದರೆ. ಮದ್ದುಗಳಿಂದ ತಡೆಯಬಹುದು. ಹೊಟ್ಟೆ ಉಬ್ಬರ ಬಲುಹೆಚ್ಚಿ ಏರುಸಿರು ಉಬ್ಬಸವಾಗಿದ್ದರೆ ಹೊಟ್ಟೆಯಲ್ಲಿ ನೀರು ಕೂಡಿಕೊಂಡಂತೆಲ್ಲ ತೂತುಸೂಜಿ ಹಾಕಿ ತೆಗೆದುಹಾಕಬೇಕು **(ನೋಡಿ– ಈಲಿ; ಪಿತ್ತಕೋಶ;– ಪಿತ್ತನಾಳಗಳು).**

(ಪಿ.ಸಿ.ಬಿ.; ಎ.ಎನ್.ಎ.)

### ಎಳೆಯರ ಅರನಾರಿ: ನೋಡಿ – ಪೋಲಿಯೋಮಯಲೈಟಿಸ್

**ಎಳೆಗೂಸುಗಳ ಪಾಲನೆ:** ಮಗುವನ್ನು ಸಲಹುವುದು ಅತ್ಯಂತ ಜವಾಬ್ದಾರಿಯುತ ವಾದ ಹಾಗೂ ಕಷ್ಟದ ಕೆಲಸ. ಇದರ ಪೂರ್ಣ ಹೊಣೆಯಿರುವುದು ಕಂದನಿಗೆ ಜನ್ಮಕೊಟ್ಟ ತಾಯಿಗೆ ಹೆಚ್ಚು. ಏನೂ ಅರಿಯದ ಮುಗ್ಧ ಮಗುವನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡುವುದರಲ್ಲಿ ತಾಯಿಗೆ ಅಪೂರ್ವ ಆನಂದವಿರುತ್ತದೆ. ಮಗುವನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯವಂತನನ್ನಾಗಿ ಬೆಳೆಸುವುದು ಆರೈಕೆಯ ಮೂಲ ತಿರುಳು. ಇದನ್ನು ಯಶಸ್ವಿಯಾಗಿ ನಿರ್ವಹಿಸಲು ತಾಯಿಗೆ ತುಂಬ ಆತ್ಮ ವಿಶ್ವಾಸವಿರಬೇಕು. ಈ ದೃಢತೆಯನ್ನು ಆಕೆ ಸಂಪಾದಿಸಬೇಕಾದರೆ ಆರೈಕೆಯ ಶಾಸ್ತ್ರೀಯಜ್ಞಾನದ ಅರಿವು ಮೊದಲ ಹೆಜ್ಜೆ. ಹಿರಿಯರ ಹಾಗೂ, ಅನುಭವಿಕರ ಮಾತುಗಳಿಗೆ ಕಿವಿಗೊಟ್ಟು, ಅದರಲ್ಲಿ ತನಗೆ ಉಪಯುಕ್ತವಾಗುವಂಥವನ್ನು ಬಳಸಿಕೊಳ್ಳುವುದು ಎರಡನೆಯ ಹೆಜ್ಜೆ.

ಹಸುಗೂಸಿಗೆ ಮುಖ್ಯವಾಗಿ ಬೇಕಾಗಿರುವುದು ತಾಯಿಯ ಪ್ರೀತಿ ಮತ್ತು ಆರೈಕೆ. ಬೆಳವಣಿಗೆಗೆ ಅಗತ್ಯವಾದುದು ಆಹಾರ ಮತ್ತು ಪೌಷ್ಟಿಕಾಂಶಗಳು. ಮಗುವಿನ ಆರೋಗ್ಯ ಕಾಪಾಡುವ ಸಾಧನಗಳೂ ತಾಯಿಯಾದವಳಿಗೆ ತಿಳಿದಿರಬೇಕು. ರೋಗ ರುಜಿನಗಳು ಬಾರದಂತೆ ಆಕೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕಲ್ಲದೆ ರೋಗ ನಿದಾನವನ್ನೂ ಅರಿತಿರಬೇಕು. ಮಗು ಸೌಹಾರ್ದಭಾವದಿಂದಲೂ ಶಿಸ್ತು ವಿಧೇಯತೆಗಳಿಂದಲೂ ನಡೆದುಕೊಳ್ಳು ವಂತೆ ಆಕೆ ಶಿಕ್ಷಣ ನೀಡಬೇಕು. ಆದರೂ ಮಗುವಿಗೆ ತನ್ನ ವ್ಯವಹಾರಗಳಲ್ಲಿ ಪೂರ್ಣ ಸ್ವಾತಂತ್ರ್ಯವಿರುವಂತೆ ನೋಡಿಕೊಳ್ಳಬೇಕು. ಇಂಥ ಮಕ್ಕಳು ನಾಳಿನ ಸತ್ಪ್ರಜೆಗಳಾಗುತ್ತಾರೆ.

ಮಗುವಿನ ವಯೋಮಾನವನ್ನನುಸರಿಸಿ ಆರೈಕೆಯ ಹಂತಗಳನ್ನು ಮೂರಾಗಿ ವಿಂಗಡಿಸಬಹುದು. 1. ಮಗುವಿನ ಮೊದಲ ಆರುತಿಂಗಳು, 2. ಆರು ತಿಂಗಳಿಂದ ವರ್ಷದವರೆಗೆ, 3. ಒಂದು ವರ್ಷದಿಂದ ಎರಡು ವರ್ಷಗಳವರೆಗೆ.

ಮಗುವಿನ ಮೊದಲ ಆರುತಿಂಗಳು : ಈ ಅವಧಿಯಲ್ಲಿ ಮಗು, ತನ್ನೆಲ್ಲ ಪೂರೈಕೆಗಳಿಗೆ ತಾಯಿಯನ್ನೇ ಅವಲಂಬಿಸುತ್ತದೆ. ಆಗ ಅದರ ಹೊಟ್ಟೆಗೆ ಆಹಾರವೆಂದರೆ ತಾಯ ಹಾಲು ಇಲ್ಲವೆ ಮೇಲು ಹಾಲು. ತಾಯಿಯ ತೋಳಿನ ಆಶ್ರಯ ಕಂದನಿಗೆ ದೊಡ್ಡ ಆಧಾರ. ಮಗು ಅಸಹಾಯಕವಾಗಿ ಕಂಡರೂ ತನಗೆ ಬೇಕಾದುದೆಲ್ಲವನ್ನೂ ಖಂಡಿತ ದೊರಕಿಸಿಕೊಳ್ಳುತ್ತದೆ. ಹಸಿವಾದಾಗ ಅಳುತ್ತದೆ. ಮುಖದ ಮೇಲೆ ಬಟ್ಟೆಯೆಳೆದುಕೊಂಡು ಉಸಿರು ಕಟ್ಟಿದರೆ ಚೀರುತ್ತದೆ. ಅದನ್ನು ಕೇಳಿದೊಡನೆ ತಾಯಿ ಎಲ್ಲಿದ್ದರೂ ಓಡಿಬರಬೇಕಾಗುತ್ತದೆ.

ಎಳೆಯ ಮಗುವಿಗೆ ತಾಯ ಹಾಲು ಅತ್ಯಂತ ಪುಷ್ಟಿದಾಯಕವೂ ಆರೋಗ್ಯಕರವಾದುದೂ ಆಗಿದೆ. ಇದು ಶುಚಿಯಾದುದೂ ಹೌದು. ತಾಯಿಗೆ ನಿಜವಾದ ಹಾಲು ಬರುವ ಮುಂಚೆ, ಒಂದು ಬಗೆಯ ಹಳದಿ ದ್ರವ ಮೊಲೆಯಿಂದ ಒಸರುತ್ತದೆ. ಇದರಲ್ಲಿ ಮಗುವನ್ನು ಹಲವಾರು ಅಂಟುಜಾಡ್ಯಗಳಿಂದ (ದಡಾರ, ಚರ್ಮ ರೋಗ ಮತ್ತು ನಾಯಿಕೆಮ್ಮು) ತಪ್ಪಿಸುವ ಪ್ರತ್ಯಂಶಗಳು ಇವೆ. ತಾಯ ಹಾಲು ಮಗುವಿಗೆ ಸುಲಭವಾಗಿ ಜೀರ್ಣವಾಗುತ್ತದೆ. ಈ ಹಾಲು ಕುಡಿಯುವ ಮಕ್ಕಳಲ್ಲಿ ಅಜೀರ್ಣ, ಭೇದಿ ಆಗುವುದು ಕಡಿಮೆ. ಮಗು ಹುಟ್ಟಿದ ಮೂರನೆಯ ದಿನದಿಂದ ತಾಯಿ ಹಾಲು ಕೊಡುತ್ತಾಳೆ. ಮೊದಲು ಮೂರು ಗಂಟೆಗಳಿಗೊಂದಾವರ್ತಿ ಹಾಲು ಕೊಡಬಹುದು. ಮಗುವಿಗೆ ಮೂರುತಿಂಗಳಾಗುವ ಹೊತ್ತಿಗೆ ನಾಲ್ಕು ಗಂಟೆಗೊಮ್ಮೆ ಕೊಟ್ಟರೆ ಸಾಕು. ಕೆಲವು ಮಕ್ಕಳು ಈ ರೂಢಿಗೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಮತ್ತೆ ಕೆಲವಕ್ಕೆ ಈ ಲೆಕ್ಕಾಚಾರ ಒಗ್ಗುವುದೇ ಇಲ್ಲ. ಇಂಥ ಮಕ್ಕಳು ಹಸಿವೆಯಾಗಿ ಅತ್ತಾಗಲೆಲ್ಲ ಹಾಲು ಕೊಡಬಹುದು. ಮೊಲೆಹಾಲು ಮಗುವಿಗೆ ಸಾಕಾಗದಿದ್ದರೆ ಹೊಯ್ ಹಾಲನ್ನು ಕೊಡಬಹುದು. ಒಳ್ಳೆಯ ಹಸುವಿನ ಹಾಲು ಸಿಕ್ಕಿದರೆ ಅದನ್ನೆ ಮಗುವಿಗೆ ಕೊಡಬಹುದು. ಇಲ್ಲದಿದ್ದರೆ ಡಬ್ಬದ ಹಾಲಿನ ಪುಡಿಯಿಂದ ಹಾಲು ತಯಾರಿಸಿ ಮಗುವಿಗೆ ನೀಡಬಹುದು. ಒಂದು ಔನ್ಸ್ ನೀರಿಗೆ ಒಂದು ಚಮಚ ಹಾಲಿನ ಪುಡಿಯನ್ನು ಹಾಕಬೇಕು. ಮಗುವಿಗೆ ನಾಲ್ಕು ಔನ್ಸ್ ಹಾಲು ತಯಾರಿಸಬೇಕಾಗಿದ್ದರೆ ಕುದಿಸಿದ ನಾಲ್ಕು ಔನ್ಸ್ ನೀರನ್ನು ಇನ್ನೊಂದು ಲೋಟದಲ್ಲಿರಿಸಿಕೊಂಡು ಆ ನೀರನ್ನು ಸ್ವಲ್ಪ ಸ್ವಲ್ಪವಾಗಿ ಪುಡಿಗೆ ಹಾಕಿ ಹದವಾಗಿ ಕಲಕಿ, ಅನಂತರ ಉಳಿದ ನೀರನ್ನು ಸುರಿಯಬಹುದು. ಹಾಲನ್ನು ಕುಡಿಸುವ ಕುಪ್ಪಿ ಮತ್ತು ರಬ್ಬರಿನ ಮೊಲೆ ತೊಟ್ಟುಗಳನ್ನು ಕುದಿಯುವ ನೀರಿನಲ್ಲಿ ತೊಳೆದು ಶುಚಿಯಾಗಿರಿಸಿಕೊಳ್ಳಬೇಕು. ಮಗು ಹಾಲು ಕುಡಿದಾದ ಮೇಲೆ ಬೆನ್ನು ನೀವಿ ತೇಗು ಬರಿಸಿ, ಒಳ ಸೇರಿದ ವಾಯುವನ್ನು ಹೊರಗೆ ಹಾಕಬೇಕು. ಮಗುವಿಗೆ ನಾಲ್ಕುತಿಂಗಳಾಗುವ ಹೊತ್ತಿಗೆ ಬರಿಯ ಹಾಲೊಂದೇ ಸಾಕಾಗುವುದಿಲ್ಲ. ಅದಕ್ಕಿಂತ ಶಕ್ತಿಯುತವಾದ ಹಾಗೂ ರುಚಿಕರವಾದ ಆಹಾರ ಬೇಕು. ಈ ವಯಸ್ಸಿನಲ್ಲಿ ದ್ವಿದಳ ಧಾನ್ಯಗಳಿಂದ ತಯಾರಿಸಲಾದ ಫ್ಯಾರಿಕ್ಸಿನಂಥ ಆಹಾರವನ್ನು ತುಸುಗಟ್ಟಿಯಾಗಿ ಮಾಡಿ ಮಗುವಿಗೆ ತಿನ್ನಿಸಬಹುದು. ರಾಗಿ, ಗೋಧಿಗಳ ಅಂಬಲಿಗಳನ್ನೂ ಅನ್ನದಿಂದ ತಯಾರಿಸುವ ಮಣ್ಣಿಯನ್ನೂ ಕೊಡಬಹುದು. ಮಗುವಿಗೆ ಒಂದು ತಿಂಗಳಾಗುವ ಹೊತ್ತಿಗೆ ಕಿತ್ತಳೆ ಅಥವಾ ಮೂಸಂಬಿ ರಸವನ್ನು ಆರಂಭಿಸಬೇಕು. ಇದರಿಂದ ಮಗುವಿಗೆ ಮಲಬದ್ಧತೆಯ ಕಾಟ ತಪ್ಪುತ್ತದೆ.

ಹೊಯ್ ಹಾಲು : ತಾಯ ಹಾಲಲ್ಲದೆ ಬೇರೆ ಆಹಾರವನ್ನು ಮಗುವಿಗೆ ಕೊಟ್ಟಾಗ ಅದನ್ನು ಕೃತಕ ಆಹಾರ ಪೋಷಣೆ ಎನ್ನುತ್ತಾರೆ. ಹಸು, ಎಮ್ಮೆ, ಮೇಕೆ, ಕತ್ತೆಗಳ ಹಾಲನ್ನು ಬಳಸುವ ಕ್ರಮ ಇದೆ. ಆದರೆ ರೂಢಿಯಲ್ಲಿ ಹಸುವಿನ ಹಾಲನ್ನು ಬಳಸುತ್ತಾರೆ. ಈಚೆಗೆ ಡಬ್ಬಿ ಹಾಲುಗಳನ್ನು ಉಪಯೋಗಿಸುತ್ತಿದ್ದಾರೆ. ಇವುಗಳಲ್ಲಿ ಮುಖ್ಯವಾದುವು : 1 ಹಸುವಿನ ಹಾಲು, 2 ಒಣಹಾಲು–ಪೂರ್ಣಕೆನೆ ಮತ್ತು ಅರ್ಧಕೆನೆ–ಹೀಗೆ ಎರಡು ವಿಧ, 3 ಘನೀಕರಿಸಿದ ಹಾಲು, 4 ಸರಿದೂಗಿಸಿದ ಹಾಲು– ಅಂದರೆ, ಆಮ್ಲೀಕರಣ, ಕ್ಷಾರೀಕರಣ ಮತ್ತು ಕಿಣ್ವೀಕರಣ ಮೊದಲಾದ ಅನೇಕ ಕ್ರಮಗಳಿಂದ ಹಾಲು ಸುಲಭವಾಗಿ ಜೀರ್ಣವಾಗುವಂತೆ ಮಾಡಿದ್ದು, 5 ಎದೆಹಾಲನ್ನು ಹೋಲುವಂತೆ ತಯಾರಿಸಿದ ಹಸುವಿನ ಹಾಲು, 6 ಸಾರ ಹೆಚ್ಚಿಸಿದ ಹಾಲುಗಳು.

ಭಾರತದಲ್ಲಿ ಸಾಮಾನ್ಯವಾಗಿ ಕೃತಕ ಆಹಾರ ಪೋಷಣೆಗೆ ಹಸುವಿನ ಹಾಲು ಮತ್ತು ಈಚೆಗೆ ಅಮೂಲ್ ಡಬ್ಬಿ ಹಾಲು ಬಳಕೆಯಲ್ಲಿವೆ.

ಒಂದು ಪೌಂಡ್ ತೂಕದ ದೇಹಕ್ಕೆ ದಿನವೊಂದಕ್ಕೆ 2 1/2 ಔನ್ಸ್ (50 ಕೆಲೊರಿ) ಹಾಲು ಬೇಕಾಗಬಹುದು. ಎರಡು ವರ್ಷ ತುಂಬುವವರೆಗೂ ಇದೇ ಲೆಕ್ಕಾಚಾರ ಸರಿಯಾಗುತ್ತದೆ.

ಈ ಪ್ರಮಾಣವನ್ನು ಲೆಕ್ಕಮಾಡುವ ವಿಧಾನಗಳು ಹೀಗಿವೆ:

| | | |
|---|---|---|
| ಹಸುವಿನ ಹಾಲು ಅಥವಾ ಕೆನೆತೆಗೆಯದ ಹಾಲು | | 20 ಕೆ./ಔನ್ಸ್ |
| ಅರ್ಧ ಕೆನೆತೆಗೆದ ಹಾಲು | . . . | 15 |
| ಪೂರ್ಣ ಕೆನೆತೆಗೆದ ಹಾಲು | . . . | 10 |
| ತಲೆ ಸವರಿದ ಒಂದು ಚಮಚ ಸಕ್ಕರೆ | . . . | 15 |

ಗಟ್ಟಿ ಹಾಲನ್ನು ನೀರು ಬೆರೆಸಿ ತೆಳ್ಳಗೆ ಮಾಡುವಾಗ–

| | ಹಾಲಿನ ಭಾಗ | ನೀರಿನ ಭಾಗ |
|---|---|---|
| ಒಂದು ತಿಂಗಳ ವರೆಗೆ | . . . 1 | . . . 1 |
| ಒಂದರಿಂದ ಎರಡು ತಿಂಗಳ ವರೆಗೆ | . . . 2 | . . . 1 |
| 2–3 ತಿಂಗಳ ವರೆಗೆ | . . . 3 | . . . 1 |
| 3–4 ತಿಂಗಳ ವರೆಗೆ | . . . 4 | . . . 1 |
| 4–5 ತಿಂಗಳ ವರೆಗೆ | . . . 5 | . . . 1 |

ಈ ಪ್ರಮಾಣಗಳನ್ನು ಗಮನಿಸಬಹುದು. ಐದು ತಿಂಗಳ ಅನಂತರ ಅಪ್ಪಟ ಹಾಲನ್ನು ಕೊಡಬಹುದು.

ಹಾಲಿಗೆ ಬೆರೆಸಲು ಸಾಧಾರಣ ಕಬ್ಬಿನ ಸಕ್ಕರೆ ಸಾಕಷ್ಟು ಒಳ್ಳೆಯದು. ಸಾಮಾನ್ಯವಾಗಿ ನಾಲ್ಕು ತಿಂಗಳವರೆಗೆ ಮೂರು ಔನ್ಸ್ ಹಾಲಿಗೆ ಒಂದು ಚಮಚ ಸಕ್ಕರೆಯನ್ನೂ ಅನಂತರ ನಾಲ್ಕು ಔನ್ಸ್ ಹಾಲಿಗೆ ಒಂದು ಚಮಚ ಸಕ್ಕರೆಯನ್ನೂ ಹಾಕಬಹುದು.

ಮೂರು ತಿಂಗಳವರೆಗೆ ಮೂರು ಗಂಟೆಗಳ ಅಂತರದಲ್ಲಿ ದಿನಕ್ಕೆ ಆರು ಬಾರಿ ಅನಂತರ ನಾಲ್ಕು ಗಂಟೆಗಳಿಗೊಮ್ಮೆ ಐದು ಬಾರಿ ಹೊಯ್ ಹಾಲು ಹಾಕಬಹುದು.

ಹನ್ನೆರಡು ವಾರಗಳ ಮಗುವಿನ ತೂಕ ಬಹುಶಃ ಹತ್ತು ಪೌಂಡು ಇರಬಹುದು. ಆದ್ದರಿಂದ ದಿನದ ದ್ರವದ ಆವಶ್ಯಕತೆ 21/2×10=25 ಔನ್ಸುಗಳು. ಮೂರು ತಿಂಗಳ ತನಕ ಹಾಲಿಗೆ ನೀರು ಬೆರೆಸುವುದರಿಂದ 3:1 ಅಂದರೆ ಆರು ಔನ್ಸ್ ನೀರು ಮತ್ತು 19 ಔನ್ಸ್ ಹಾಲಿರುತ್ತದೆ.

10 ಪೌಂಡಿನ ಮಗುವಿಗೆ ಬೇಕಾಗುವ ಕೆಲೊರಿಗಳು 10*50 ಆಗಿರುವುದರಿಂದ ಸಂಮಿಶ್ರಣ ಈ ರೀತಿಯಿರುತ್ತದೆ.

| | | | | |
|---|---|---|---|---|
| ಹಾಲು | 10 | ಔನ್ಸುಗಳು | 380 | ಕೆಲೊರಿ |
| ನೀರು | 6 | | .... | |
| ಸಕ್ಕರೆ | 8 | ಚಮಚಗಳು | 120 | ಕೆಲೊರಿ |
| ಒಟ್ಟು | 25 | ಔನ್ಸುಗಳು | 500 | ಕೆಲೊರಿ |

(ಪಿ.ಸಿ.ಬಿ.)

ಮಗುವಿಗೆ ದಿನವೂ ಸ್ನಾನಮಾಡಿಸುವ ಪದ್ಧತಿ ಉಷ್ಣದೇಶವಾದ ಭಾರತದಲ್ಲಿ ಒಳ್ಳೆಯದು. ಸ್ನಾನಕ್ಕೆ ಮುಂಚೆ ಮಗುವಿಗೆ ಕೊಬ್ಬರಿ ಎಣ್ಣೆಯನ್ನೂ ಹರಳೆಣ್ಣೆಯನ್ನೋ ಹಚ್ಚಬಹುದು. ಇದರಿಂದ ಮಗುವಿನ ಮೈಕೈನೋವು ಕಡಿಮೆಯಾಗುವುದಲ್ಲದೆ, ಚರ್ಮವ್ಯಾಧಿಗಳು ಮಿತಗೊಳ್ಳುತ್ತವೆ. ಎಣ್ಣೆಯನ್ನು ಕಿವಿ, ಮೂಗು, ಕಣ್ಣುಗಳಿಗೆ ಹಾಕಬಾರದು. ತಾಯಿ ಅಥವಾ ದಾದಿ ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಮೀಯಿಸುವುದು ರೂಢಿ. ಎರೆಯುವ ನೀರು ತುಂಬ ಬಿಸಿಯಾಗಿರಬಾರದು. ತೀರ ತಣ್ಣಗೂ ಇರಬಾರದು. ಹದವಾದ ನೀರು ಯೋಗ್ಯ. ಎಣ್ಣೆ ತೆಗೆಯಲು ಸೋಪನ್ನೋ ಕಡಲೆ ಅಥವಾ ಹೆಸರುಹಿಟ್ಟನ್ನೋ ಬಳಸಬಹುದು. ಸ್ನಾನದ ಬಳಿಕ ಮಗುವಿನ ಮೈಕೈ ಚೆನ್ನಾಗಿ ಒರೆಸಿ, ಮೈ, ಕಂಕಳು, ಕತ್ತು ಹಾಗೂ ತೊಡೆಯ ಸಂಧಿಗಳಿಗೆ ಹೇರಳವಾಗಿ ಪೌಡರ್ ಬೆವರನ್ನು ಹೀರುವುದಲ್ಲದೆ, ಚರ್ಮ ಬಿರಿಯುವುದನ್ನು ತಪ್ಪಿಸುತ್ತದೆ.

ಮಗುವಿನ ಉಡುಪು ಸ್ವಲ್ಪ ಆಳ್ಳಕವಾಗಿರುವುದು ಒಳ್ಳೆಯದು, ಬೇಸಗೆಯಲ್ಲಿ ತೆಳ್ಳಗಿನ ಅಂಗಿಯೇ ಸಾಕು, ಚಳಿಗಾಲದಲ್ಲಿ ಬೆಚ್ಚಗಿನ ಉಣ್ಣೆಯ ಬಟ್ಟೆಗಳು ಯೋಗ್ಯ. ಸದಾ ಕೈ ತುಂಬ ಸ್ವೆಟರ್, ಟೊಪ್ಪಿಗಳನ್ನು ಕಟ್ಟುವ ಅಗತ್ಯವಿಲ್ಲ.

ಹೊಕ್ಕುಳುಬಳ್ಳಿ ಸಾಧಾರಣವಾಗಿ ಎಂಟನೆಯ ದಿನ ಉದುರಿ ಹೋಗುತ್ತದೆ. ಅದು ಉದುರಿದ ಜಾಗ ಸ್ವಲ್ಪ ದಿನ ಹಸಿಯಾಗಿರುವುದರಿಂದ, ಸ್ನಾನವಾದ ಮೇಲೆ, ಹೊಕ್ಕಳಿಗೆ ಸ್ವಲ್ಪ ಸ್ಪಿರಿಟ್ ಹಚ್ಚಿ, ಸ್ವಚ್ಛಮಾಡಿ ಬೋರಿಕ್ ಪೌಡರು ಹಾಕಿ ಒಂದು ಬಟ್ಟೆಯನ್ನು ಕಟ್ಟಬೇಕು.

ಎಳೆಯ ಮಗುವಿಗೆ ಸಾಧಾರಣವಾಗಿ ಉಂಟಾಗುವುದು ಅಜೀರ್ಣ ವಾಂತಿ ಮತ್ತು ಭೇದಿ. ಅಜೀರ್ಣವಾದಾಗ ಅಥವಾ ಹೊಟ್ಟೆಯಲ್ಲಿ ವಾಯು ತುಂಬಿಕೊಂಡಾಗ ಮಗು ಕೈಕಾಲುಗಳನ್ನು ಬಡಿಯುತ್ತ ಚೀರಿ ಅಳಲಾರಂಭಿಸುತ್ತದೆ. ಹೂಸು ಬಿಡುತ್ತದೆ. ಹೊಟ್ಟೆ ಉಬ್ಬರಿಸಿಕೊಂಡು ಗಟ್ಟಿಯಾಗಿರುತ್ತದೆ. ಇದನ್ನು ತಪ್ಪಿಸಲು ಈ ಮೊದಲೇ ಹೇಳಿದಂತೆ ಮಗುವಿಗೆ ಹಾಲು ಕುಡಿಸಿದ ಒಡನೆಯೇ ತೇಗು ಬರಿಸಿ ವಾಯುವನ್ನು ಹೊರ ಹಾಕುವುದು ಒಂದು ಉಪಾಯ. ಒಂದು ಚಮಚ ಗ್ರೈಪ್ ವಾಟರನ್ನು ಬಿಸಿ ನೀರಿನಲ್ಲಿ ಬೆರೆಸಿ ಕುಡಿಸಿ ಹೊಟ್ಟೆಗೆ ತುಸು ಶಾಖ ಕೊಡಬೇಕು.

ಕಕ್ಕಿದ ಮಗು ದಕ್ಕುತ್ತದೆ ಎಂದು ಹಿರಿಯರು ಅನ್ನುತ್ತಾರೆ. ಆದ್ದರಿಂದ ಮಕ್ಕಳು ವಾಂತಿ ಮಾಡುವುದು ಸಾಮಾನ್ಯವಾದ ವಿಷಯ ಎಂದಾಯಿತು. ಮಗು ದಿನಕ್ಕೆ ಒಂದೆರಡು ಬಾರಿ ವಾಂತಿ ಮಾಡಿದಾಗ ವೈದ್ಯರ ಸಲಹೆ ಕೇಳುವುದು ಒಳ್ಳೆಯದು.

ಭೇದಿಯಾಗುವ ಮಗುವಿಗೆ ಸುಲಭವಾಗಿ ಜೀರ್ಣಿಸುವಂಥ ಆಹಾರ ಕೊಡಬೇಕು. ಗ್ಲೂಕೋಸ್ ನೀರು, ಸೇಬುಹಣ್ಣಿನ ರಸ, ತೆಳ್ಳಗಿನ ಹಾಲು ಯೋಗ್ಯವಾದುವು.

ಮಗುವಿಗೆ ಎರಡು ತಿಂಗಳಾದೊಡನೆ ದಾಕು ಹಾಕಿಸಬೇಕು. ಮೂರು ನಾಲ್ಕು ತಿಂಗಳುಗಳಿಗೆ ಕ್ರಮವಾಗಿ ತಿಂಗಳಿಗೊಂದರಂತೆ ಟ್ರಿಪಲ್ ಆಂಟಿಜೆನ್ ಚುಚ್ಚುಮದ್ದು ಕೊಡಿಸಬೇಕು. ಚರ್ಮರೋಗ, ವಾಯುರೋಗ ಮತ್ತು ನಾಯಿ ಕೆಮ್ಮು ಮಗುವಿಗೆ ಬಾರದಂತೆ ಇದು ರಕ್ಷಿಸುತ್ತದೆ.

ಆರು ತಿಂಗಳಿಂದ ವರ್ಷದವರೆಗೆ: ಮಗುವಿಗೆ ಐದು ತಿಂಗಳು ತುಂಬಿ ಆರರಲ್ಲಿ ಬೀಳುವ ಹೊತ್ತಿಗೆ ಅದರ ತೂಕ ಇಮ್ಮಡಿಸುತ್ತದೆ. ಆಗಿನ ಮಾನಸಿಕ ಬೆಳವಣಿಗೆಯೂ ಗಮನಾರ್ಹ. ಮಗು ತನ್ನ ತಾಯಿ ತಂದೆಗಳನ್ನು ಗುರುತಿಸುತ್ತದೆ. ಮಾತನಾಡಿಸಿದರೆ ಅರ್ಥವಾದಂತೆ ನಗುತ್ತದೆ. ಆಟಿಕೆ ಕೊಟ್ಟರೆ ಕೈಯಲ್ಲಿರಿಸಿಕೊಂಡು ಆಡಿಸುತ್ತದೆ.

ನಾಲ್ಕು ತಿಂಗಳ ಹೊತ್ತಿಗೆ ಮಗು ಮಗುಚಿಕೊಳ್ಳಬಹುದು. ಬಳಿಕ ಒಂದೆರಡು ತಿಂಗಳಲ್ಲೆ ಮುಂದೆ ಸರಿದು ಆರು ತಿಂಗಳು ತುಂಬುವ ಹೊತ್ತಿಗೆ ಅಂಬೆಗಾಲಿಕ್ಕುತ್ತದೆ. ಎಂಟು ತಿಂಗಳಿಗೆ ಕುಳಿತು ಹತ್ತರಿಂದ ವರ್ಷದೊಳಗೆ ನಡೆದಾಡಬಹುದು. ಸಾಧಾರಣವಾಗಿ ಎಂಟು ತಿಂಗಳಿಗೆ ಮಗುವಿಗೆ ಹಲ್ಲು ಮೊಳೆಯಲಾರಂಭವಾಗುತ್ತದೆ. ಹಲ್ಲುಗಳು ಚೆನ್ನಾಗಲು ಕ್ಯಾಲ್ಸಿಯಂ, ಫಾಸ್ಫರಸ್, ಸಿ ಮತ್ತು ಡಿ ಜೀವಾತು ಅಗತ್ಯ. ಈ ಅವಧಿಯಲ್ಲಿ ಮಗು ಕೈಗೆ ಸಿಕ್ಕಿದ ವಸ್ತುಗಳನ್ನು ಕಚ್ಚಬಹುದು. ವಿನಾಕಾರಣ ಚಂಡಿ ಹಿಡಿಯಬಹುದು. ಆಗ ಅದನ್ನು ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳಬೇಕು.

ಆರು ತಿಂಗಳು ತುಂಬಿದ ಮಗು ಗಟ್ಟಿಆಹಾರವನ್ನು ಇಷ್ಟಪಡುತ್ತದೆ. ಫಾರೆಕ್ಸ್, ಅಂಬಲಿ, ಮಣ್ಣೆಗಳ ಜೊತೆಗೆ ಸೇಬುಹಣ್ಣನ್ನು ಬೇಯಿಸಿ ಕೊಡಬಹುದು. ತರಕಾರಿಗಳನ್ನು ಬೇಯಿಸಿ ಚೆನ್ನಾಗಿ ಹಿಸುಕಿ ದಿನಕ್ಕೊಮ್ಮೆ ನೀಡಿದರೆ ಮಗು ಪ್ರೀತಿಯಿಂದ ತಿನ್ನುತ್ತದೆ. ಎಂಟು ತಿಂಗಳ ಮಗುವಿಗೆ ಮೃದುವಾದ ಅನ್ನಕ್ಕೆ ಸ್ವಲ್ಪ ಉಪ್ಪು ಮತ್ತು ತುಪ್ಪ ಹಾಕಿ ಕೊಡಬಹುದು. ಅಥವಾ ತಿಳಿಸಾರು ಅನ್ನ ಇಲ್ಲವೆ ಮೊಸರನ್ನು ನೀಡಬಹುದು.

ಪೋಲಿಯೋ ಮೈಲೈಟಿಸ್ ಎಂಬ ಮಕ್ಕಳ ಪಾರ್ಶ್ವವಾಯು ಬಾರದಂತೆ ಮಗುವಿಗೆ ಆರು ತಿಂಗಳಾದೊಡನೆ ಪೋಲಿಯೊ ತೊಟ್ಟುಗಳನ್ನು ಕೊಡಿಸಬೇಕು. ಆರು ವಾರಕ್ಕೊಂದರಂತೆ ಮೂರು ಬಾರಿ ಈ ತೊಟ್ಟುಗಳು ಅಗತ್ಯ. ಇದಾದೊಡನೆ ಕ್ಷಯರೋಗದ ವಿರುದ್ಧ ಬಿಸಿಜಿ ಚುಚ್ಚುಮದ್ದು ಕೊಡಿಸಬೇಕು. ಇಲ್ಲಿಗೆ ಮಗುವಿಗೆ ಕೊಡಿಸಬೇಕಾದ ಚುಚ್ಚುಮದ್ದುಗಳೆಲ್ಲ ಮುಗಿಯುತ್ತವೆ.

**ಒಂದು ವರ್ಷದಿಂದ ಎರಡರವರೆಗೆ:** ಒಂದು ವರ್ಷದ ಮಗುವಿಗೆ ತನ್ನದೇ ಆದ ವ್ಯಕ್ತಿತ್ವವಿದೆ. ಅದಕ್ಕೆ ಮನ ಬಂದ ಕಡೆ ನಡೆಯಲು ಬರುತ್ತದೆ. ತನ್ನದೇ ಆದ ಇಷ್ಟ ಅನಿಷ್ಟಗಳೂ ಅದಕ್ಕೆ ಇವೆ. ತಂದೆ ತಾಯಿಗಳನ್ನು ಅನುಕರಿಸಿ ಎಲ್ಲ ಕಾರ್ಯಗಳನ್ನು ಕಲಿಯುವ ಚುರುಕುತನ ಕೂಡ ಅದಕ್ಕುಂಟು. ಇದಕ್ಕೆ ಮಾತಾ ಪಿತೃಗಳು ಪ್ರೋತ್ಸಾಹ ನೀಡಬೇಕು.

ಮಗುವಿನ ಕಲ್ಪನಾಶಕ್ತಿ ಈಗ ಬೆಳೆಯುತ್ತಿದೆ. ಇಲ್ಲದ್ದನ್ನು ಊಹಿಸಿ ಭಯಪಡುವ ಅವಸ್ಥೆಯೂ ಉಂಟು. ಗರಿಗಳು, ಎಲೆಗಳು, ಹರಿದಾಡುವ ಜಿರಳೆಗಳು ಇವನ್ನು ಕಂಡರೆ ಮಗುವಿಗೀಗ ಅಂಜಿಕೆ. ತಾಯಿ ಅವುಗಳಿಂದ ಅಪಾಯವಿಲ್ಲ ಎಂಬುದನ್ನು ಮಗುವಿಗೆ ಮನದಟ್ಟು ಮಾಡಿಸಿ ಆತ್ಮವಿಶ್ವಾಸವನ್ನು ತುಂಬಬೇಕು. ತನ್ನ ಕಣ್ಣಿಗೆ ಕಂಡವಸ್ತುಗಳನ್ನೆಲ್ಲ ಮಗು ಪರೀಕ್ಷಿಸಲು ಯತ್ನಿಸುತ್ತದೆ. ಆಗ ಅದರ ಕುತೂಹಲ ತಣಿಸುವುದು ಒಳ್ಳೆದು. ಆದರೆ ಅಪಾಯಕಾರೀ ವಸ್ತುಗಳಾದ ಸ್ಟವ್, ಸ್ವಿಚ್, ಇಸ್ತ್ರಿ ಪೆಟ್ಟಿಗೆ ಇಂಥವುಗಳಿಂದ ಅದನ್ನು ದೂರವಿಡಬೇಕು. ಸುಲಭ ಮಾರ್ಗವೆಂದರೆ ಬಿಸಿ ಇತ್ಯಾದಿಗಳನ್ನು ಮುಟ್ಟಿಸಿ ತೋರಿಸುವುದು ಒಳ್ಳೆಯದು. ಇದು ಸುಡುತ್ತದೆ ಎಂದು ತಿಳಿದ ಮೇಲೆ ಮಗು ಒಲೆಯ ಹತ್ತಿರ ಹೋಗುವುದಿಲ್ಲ. ಮಗುವಿನ ಪ್ರಶ್ನೆಗಳಿಗೆ ತಂದೆ ತಾಯಿ ಬೇಸರವಿಲ್ಲದೆ ಉತ್ತರಿಸಬೇಕು. ಇದರಿಂದ ಅದರ ಬುದ್ಧಿಶಕ್ತಿ ಅರಳುತ್ತದೆ. ಈ ವಯಸ್ಸಿನಲ್ಲಿ ಮಗುವಿಗೆ ಸಾಕಷ್ಟು ಶಬ್ದಗಳನ್ನು ಉಚ್ಚರಿಸಲು, ಬಳಸಿ ಮಾತನಾಡಲು ಕಲಿಸಬೇಕು. ಕೈಕೆಲಸದ ಜಾಣ್ಮೆಯ ಕಡೆ ಮನಸ್ಸು ಒಲಿಯುವಂತೆ ಮಾಡಬೇಕು. ಕುತೂಹಲಗಳನ್ನು ತಣಿಸಬೇಕು. ತರ್ಕಬದ್ಧವಾಗಿ ಆಲೋಚನೆ ಮಾಡುವುದನ್ನು ಕಲಿಸಬೇಕು. ಓಡಾಡುವ ಕಂದನಿಗೆ ಸರಳ ಆಟಿಕೆಗಳೇ ಇಷ್ಟ. ಅವುಗಳ ಜೊತೆ ತಾನು ಆಡುವುದಲ್ಲದೆ ನೆರೆಹೊರೆಯ ಮಕ್ಕಳಲ್ಲೂ ಅವನ್ನು ಹಂಚಿಕೊಂಡು ಆಡಿದರೆ ಚೆನ್ನು ಎಂಬ ಭಾವನೆಯನ್ನು ಮಗುವಿನಲ್ಲಿ ಎಳೆತನದಿಂದ ಬೆಳೆಸಿದರೆ ಒಳ್ಳೆಯದು. ತನ್ನ ಕೈಗೆ ಸಿಕ್ಕ ಆಟಿಕೆಗಳನ್ನು, ಇತರ ಪದಾರ್ಥಗಳನ್ನು ಹರಿಯುವ, ಮುರಿಯುವ, ಬಡಿದು ಶಬ್ದಮಾಡುವ, ಎಸೆಯುವ, ನೆಕ್ಕಿ ನೋಡುವ, ಮತ್ತೆ ಜೋಡಿಸುವ ಆಸೆ ಮಗುವಿನಲ್ಲಿ ವಿಪರೀತವಾಗಿರುತ್ತದೆ. ಸಾಧ್ಯವಾದ ಮಟ್ಟಿಗೂ ಹಿರಿಯರು ಅದಕ್ಕೆ ಅಡ್ಡಿ

ಬರಬಾರದು. ಅಪಾಯವಾಗದಂತೆ ಮಾತ್ರ ನೋಡಿಕೊಳ್ಳುತ್ತಿರಬೇಕು. ಹೀಗೆ ಮಾಡುವುದರಿಂದ ಮಗುವಿಗೆ ಆತ್ಮ ವಿಶ್ವಾಸ ಹೆಚ್ಚುತ್ತದೆ. ಒಂದು ವರ್ಷದ ಮಗುವಿಗೆ ಮಲ ಮತ್ತು ಮೂತ್ರಗಳನ್ನು ತನಗೆ ಇಷ್ಟ ಬಂದಾಗ ಮಾಡುವ ಹತೋಟಿಯಿಲ್ಲ. ಏಕೆಂದರೆ ಅದರ ನರಮಂಡಲ ಇನ್ನೂ ಪೂರ್ಣ ಬೆಳೆವಣಿಗೆಯಾಗಿರುವುದಿಲ್ಲ. ಈ ಅವಧಿಯಲ್ಲಿ ಅದು ತನ್ನ ಚಡ್ಡಿಯಲ್ಲಿ ಮಲಮೂತ್ರಗಳನ್ನು ಮಾಡಿಕೊಳ್ಳಬಹುದು.

ಅದರ ಅರಿವಿಲ್ಲದೆಯೆ ಈ ಕ್ರಿಯೆಗಳು ನಡೆಯುವುದರಿಂದ ಅದಕ್ಕಾಗಿ ಮಗುವನ್ನು ಹೀಯಾಳಿಸಬಾರದು, ಬಯ್ಯಬಾರದು. ನಿಯಮಿತ ವೇಳೆಗೆ, ನಿಶ್ಚಿತ ಸ್ಥಳದಲ್ಲಿ ಮಗು ಮಲಮೂತ್ರಗಳನ್ನು ಮಾಡುವಂತೆ ಸಹನೆಯಿಂದ ತಾಯಿ ಹೇಳಿಕೊಡಬೇಕು. ಎರಡು ವರ್ಷ ವಯಸ್ಸಾಗುವ ವೇಳೆಗೆ ನರಮಂಡಲವನ್ನು ಪೂರ್ಣವಾಗಿ ತನ್ನ ಹತೋಟಿಯಲ್ಲಿರಿಸಿಕೊಳ್ಳಲು ಮಗು ಕಲಿಯುತ್ತದೆ.

ಮಗುವಿನ ದೈಹಿಕ ಆರೋಗ್ಯದಷ್ಟೇ ಮುಖ್ಯವಾದ್ದು ಅದರ ನಡೆವಳಿಕೆ ಮತ್ತು ವಿಧೇಯತೆ. ತಾಯಿಯ ನಡತೆ, ನೆರೆಹೊರೆಯವರೊಂದಿಗೆ ಆಕೆಯ ವರ್ತನೆ ಇವನ್ನು ಮಗು ಅನುಕರಿಸುತ್ತದೆ. ಆದ್ದರಿಂದ ತಾಯಿ ಒಳ್ಳೆಯವಳಾದರೆ ಮಗುವೂ ಯೋಗ್ಯ ನಡೆವಳಿಕೆ ಕಲಿಯುತ್ತದೆ. ಆಜ್ಞೆಮಾಡುವುದರಿಂದ ಮಗು ವಿಧೇಯತೆಯನ್ನು ಕಲಿಯುವುದಿಲ್ಲ. ಉಪಾಯವಾಗಿ, ಸ್ನೇಹಪೂರ್ಣವಾಗಿ ಸ್ಥಿರತೆಯಿಂದ ತಾಯಿ ವರ್ತಿಸಿದರೆ, ಮಗು ಕಲಿಯುವುದು ಸುಲಭವಾಗುತ್ತದೆ. ನೆರೆ ಮಕ್ಕಳೊಂದಿಗೆ ಸ್ನೇಹಸೌಹಾರ್ದ ಭಾವನೆಗಳು ಬೆಳೆಯುವಂತೆ ಆಕೆ ಪ್ರೋತ್ಸಾಹಿಸಬೇಕು. ಪ್ರತಿ ತಪ್ಪಿಗೂ ಏಟುಕೊಡುವುದರಿಂದ ಮಗು ಹಠಮಾರಿಯಾಗುತ್ತದೆ. ತೀರ ಅಗತ್ಯವಿದ್ದಾಗ ಮಾತ್ರ ಮಗುವನ್ನು ಶಿಕ್ಷಿಸಲು ತಾಯಿ ತಂದೆ ಹಿಂದೆಮುಂದೆ ನೋಡಬಾರದು.

ಮಕ್ಕಳಿಗೆ ಸಾಮಾನ್ಯವಾಗಿ ಬರುವ ಕಾಯಿಲೆಗಳೆಂದರೆ ನೆಗಡಿ, ಕೆಮ್ಮು, ಜ್ವರ ಭೇದಿ, ವಾಂತಿ-ಇವು. ಸೋಂಕು ರೋಗಗಳಾದ ದಡಾರ, ಗಣಜಿಲೆ, ಕೆನ್ನೆಬಾವು ಇವುಗಳೂ ಸಾಧಾರಣವಾಗಿ ಈ ವಯೋಮಾನದಲ್ಲಿ ಕಾಣಿಸಿಕೊಳ್ಳಬಹುದು. ಈ ಕಾಯಿಲೆಗಳಿಗೆ ತಂದೆ ತಾಯಿ ಚಿಕಿತ್ಸೆ ಮಾಡಲು ಹೋಗಬಾರದು. ಅಗತ್ಯ ಕಂಡೊಡನೆ ಮಗುವನ್ನು ವೈದ್ಯರಲ್ಲಿಗೆ ಒಯ್ಯಬೇಕು.

ಕಾಯಿಲೆಯಾದಾಗ ಮಗುವನ್ನು ಗಲಾಟೆಯಿಲ್ಲದ, ಚೆನ್ನಾಗಿ ಗಾಳಿ ಬೆಳಕು ಬರುವಂಥ ಕೊಠಡಿಯಲ್ಲಿರಿಸಬೇಕು. ಸುಲಭವಾಗಿ ಜೀರ್ಣಿಸುವ ಗಂಜಿ, ಹಣ್ಣಿನ ರಸ, ಗ್ಲೂಕೋಸ್ ನೀರು, ಹಾಲು-ಇವನ್ನು ಕೊಡಬೇಕು. ಮಗುವಿಗೆ ಬೇಸರವಾಗದಂತೆ ಅದು ಮಲಗಿದ್ದಲ್ಲೇ ಕಥೆ ಹೇಳಬಹುದು. ಆಟಿಕೆಗಳನ್ನು ಕೊಡಬಹುದು. ಈ ಬಗೆಯ ಸ್ನೇಹ ವರ್ತನೆಯಿಂದ, ವೈದ್ಯರ ಸರಿಯಾದ ಚಿಕಿತ್ಸೆಯಿಂದ ಮಗು ಬೇಗ ಗುಣಹೊಂದುತ್ತದೆ.

ಹೀಗೆ ಹಸುಗೂಸನ್ನು ದೊಡ್ಡದನ್ನಾಗಿ ಮಾಡುವುದು ಬಹು ಹಿರಿಯ ಜವಾಬ್ದಾರಿ. ಆರೈಕೆ ಯೋಗ್ಯವಾಗಿದ್ದರೆ ಮಾತ್ರ ಮಗು ದೈಹಿಕವಾಗಿ ಮಾನಸಿಕವಾಗಿ ಒಳ್ಳೆಯ ಪ್ರಜೆಯಾಗಿ ಬೆಳೆಯುತ್ತದೆ. ಮಗುವಿನ ಮುಂದಿನ ಎಲ್ಲ ಪ್ರಗತಿಗೂ ಅಗತ್ಯವಾದ ತಳಹದಿ ಅದರ ಮೊದಲ ಎರಡು ವರ್ಷಗಳ ಜೀವನವನ್ನವಲಂಬಿಸಿದೆಯಾಗಿ ಆ ವಯಸ್ಸು ಬರುವವರೆಗೆ ಮಕ್ಕಳನ್ನು ಸರಿಯಾಗಿ ಸಾಕುವ ಕೆಲಸ ನಿಜಕ್ಕೂ ಶ್ರಮಸಾಧ್ಯವಾದುದು. ಬಹು ಮುಖ್ಯವಾದುದು. (ಎ.ಎನ್.)

**ಎಳ್ಳು:** ಪಿಡಾಲಿಯೇಸಿ ಕುಟುಂಬಕ್ಕೆ ಸೇರಿದ ಸೆಸಾಮಮ್ ಇಂಡಿಕಮ್ ಎಂಬ ಏಕವಾರ್ಷಿಕ ಸಸ್ಯಪ್ರಭೇದ. ಮಾನವ ಮೊಟ್ಟ ಮೊದಲು ಬೆಳೆದ ಎಣ್ಣೆ ಬೀಜದ ಬೆಳೆಗಳಲ್ಲಿ ಒಂದಾಗಿದೆ. ಎಳ್ಳಿನ ಬೆಳೆಯಲ್ಲಿ ಭಾರತಕ್ಕೆ ಮೊದಲ ಸ್ಥಾನ. ಚೀನಕ್ಕೆ ಎರಡನೆಯದು. ಏಷ್ಯದ ಇತರ ದೇಶಗಳಲ್ಲಿ ಅಂದರೆ ಸಯಾಮ್, ಇಂಡೊಚೀನ, ಫಾರ್ಮೊಸ, ಜಪಾನ್, ಪ್ಯಾಲೆಸ್ಟೈನ್, ಟರ್ಕಿ ಮತ್ತು ಯುರೋಪಿನ ಮೆಡಿಟರೇನಿಯನ್ ಭಾಗಗಳಲ್ಲಿ, ರಷ್ಯ, ಬ್ರೆಜಿಲ್, ಅರ್ಜಂಟೀನ, ಮೆಕ್ಸಿಕೋ ಮತ್ತು ಆಫ್ರಿಕ ಖಂಡಗಳಲ್ಲೂ ಎಳ್ಳನ್ನು ಬೆಳೆಸುತ್ತಾರೆ. ಈ ಸಸ್ಯದ ಮೂಲದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಇದು ಭಾರತದ ಮೂಲನಿವಾಸಿಯೆಂದು ಕೆಲವರೂ ಪೂರ್ವ ಆಫ್ರಿಕದ ಮೂಲನಿವಾಸಿಯೆಂದು ಇನ್ನೂ ಕೆಲವರೂ ವಾದಿಸುವರು. ವೇದಗಳಲ್ಲಿ ತಿಲಪದದ ಪ್ರಯೋಗ, ಪೂರ್ವ ಅಪರ ಕರ್ಮಗಳಲ್ಲಿ ತಿಲದ ಪ್ರಾಮುಖ್ಯ ಕಂಡುಬಂದಿದೆ. ಹೇಗೇ ಆಗಲಿ ಅದು ಕ್ರಮ ಕ್ರಮವಾಗಿ ಉಷ್ಣವಲಯ ಮತ್ತು ದಕ್ಷಿಣ ಸಮಶೀತೋಷ್ಣವಲಯಗಳಲ್ಲಿ ಹರಡಿತೆಂದು ನಂಬಲಾಗಿದೆ. ಬೆಳೆಯ ಅವಧಿ ಎರಡೂವರೆಯಿಂದ ಆರು ತಿಂಗಳವರೆಗೆ. ಗಿಡ ಸುಮಾರು ಎರಡರಿಂದ ಐದು ಅಡಿ ಎತ್ತರಕ್ಕೆ ನೇರವಾಗಿ ಬೆಳೆಯುತ್ತದೆ. ರೆಂಬೆಗಳು ಅನೇಕ, ಮೊಟ್ಟೆಯಾಕಾರದ ಅಥವಾ ಭರ್ಜಿ ಆಕಾರದ ಎಲೆಗಳು ಕಾಂಡದ ಕೆಳಭಾಗದಲ್ಲಿ ಅಭಿಮುಖ ಜೋಡಣೆಯಿಂದ ಕೂಡಿರುತ್ತವೆ. ಮೇಲ್ಭಾಗದಲ್ಲಿ ಪರ್ಯಾಯ ಜೋಡಣೆ ಕಂಡು ಬರುತ್ತದೆ. ಬಿತ್ತನೆಯಾದ ಆರು ವಾರಗಳಲ್ಲಿ ಒಂದರಿಂದ ಮೂರು ಆಕರ್ಷಕ ಬಿಳಿಯ ಹೂಗಳು ಮೂಡುತ್ತವೆ. ಹೂವಿನಲ್ಲಿ ದಳಗಳು ಕೂಡಿಕೊಂಡು ಕೊಳವೆಯೋಪಾದಿಯಲ್ಲಿದ್ದು ತುದಿಯಲ್ಲಿ ಹರಡಿಕೊಂಡಿರುತ್ತದೆ. ಬಣ್ಣ ಬಿಳಿಯಾದರೂ ಬಿಳಿಯಿಂದ ದಟ್ಟ ನೀಲಿಯವರೆಗೆ ಬಣ್ಣ ವ್ಯತ್ಯಾಸ ಕಂಡುಬರುತ್ತದೆ. ಕೇಸರಗಳು ನಾಲ್ಕು. ಅವುಗಳಲ್ಲಿ ಎರಡು ಚಿಕ್ಕವು, ಎರಡು ದೊಡ್ಡವು. ಅಂಡಾಶಯ ಉಚ್ಚಸ್ಥಾನದ್ದಾಗಿದ್ದು ಇಬ್ಭಾಗದ ಎರಡು ಜೋಡಣೆಗಳಿಂದ ಕೂಡಿದೆ. ಕಾಯಿ ಸಂಪುಟ (ಕ್ಯಾಪ್ಸೂಲ್) ಮಾದರಿಯದು. ಆಕಾರ ನೀಳ ಚತುರ್ಭುಜಾಕೃತಿ. ಉದ್ದ ಒಂದರಿಂದ ಎರಡು ಇಂಚು, ಸುತ್ತಳತೆ ಅರ್ಧದಿಂದ ಒಂದು ಇಂಚು, ಒಳಗೆ ಎರಡು ಕೋಣೆಗಳಿದ್ದು ಅನಂತರ ನಾಲ್ಕಾಗುತ್ತವೆ. ಬೀಜ ಗಾತ್ರದಲ್ಲಿ ಚಿಕ್ಕವಾದರೂ ಪ್ರತಿ ಕಾಯಲ್ಲೂ ಅಧಿಕ ಸಂಖ್ಯೆಯಲ್ಲಿರುತ್ತವೆ. ಆಕಾರ ಚಪ್ಪಟೆ, ಬಣ್ಣ ಅನೇಕ, ಬಿಳುಪು, ಮಾಸಲು ಬಿಳುಪು, ಸ್ವಲ್ಪ ಕಪ್ಪು, ಕಂದು ಕಪ್ಪು ಹೀಗೆ ಬೇರೆ ಬೇರೆ ಪ್ರಭೇದದ ಬೇರೆ ಬೇರೆ ತಳಿಗಳು ಬೇರೆ ಬೇರೆ ಬಣ್ಣ ಹೊಂದಿರುತ್ತವೆ.

ಎಳ್ಳಿನಗಿಡ
ಒಳಚಿತ್ರ: ಕಾಯಿಯ ಒಳನೋಟ

ಕರ್ನಾಟಕ ರಾಜ್ಯದಲ್ಲಿ ಫೆಬ್ರವರಿಯಿಂದ ಮಾರ್ಚ್‌ವರೆಗೆ ನೀರಾವರಿಯಿಂದ ಬಿತ್ತನೆ ಮಾಡುವುದನ್ನು ಕಾರು ಎಳ್ಳು ಎಂದು ಕರೆಯುತ್ತಾರೆ. ಇದು ಸ್ವಲ್ಪ ಕಂದು ಬಣ್ಣದ ಬೀಜದ ತಳಿ. ಕಪ್ಪು ಬಣ್ಣದವೂ ಇವೆ. ಪ್ರಮುಖ ತಳಿಗಳ ಬೀಜಗಳನ್ನು ಜೂನ್ ಅಥವಾ ಜುಲೈ ಮಧ್ಯದಲ್ಲಿ ಬಿತ್ತಿ ಅಕ್ಟೋಬರ್ ಅಥವಾ ನವಂಬರ್ ತಿಂಗಳಲ್ಲಿ ಒಕ್ಕಣೆ ಮಾಡುತ್ತಾರೆ. ಇವು ಕಂದು ಮತ್ತು ಕಪ್ಪು ಬೀಜಗಳುಳ್ಳ ತಳಿಗಳು. ಬಿಳಿಯ ಮತ್ತು ಮಾಸಲು ಬಿಳಿಯ ಜಾತಿಯನ್ನು ಸೆಪ್ಟೆಂಬರಿನಲ್ಲಿ ಬಿತ್ತಿ ಡಿಸೆಂಬರಿನಲ್ಲಿ ಒಕ್ಕಣೆ ಮಾಡುತ್ತಾರೆ. ಎಳ್ಳಿನ ಬೀಜದಲ್ಲಿ ಶೇಕಡ ನಲವತ್ತೈದರಿಂದ ಅರವತ್ತುಮೂರು ಭಾಗ ಎಣ್ಣೆ, ಹದಿನಾರರಿಂದ ಮೂವತ್ತೆರಡು ಭಾಗ ಸಾರಜನಕ ಇದೆ. ಭಾರತದಲ್ಲಿ ಹುರಿದ ಅಥವಾ ಹಸಿಯ ಎಳ್ಳು ಬೀಜವನ್ನು ಅನೇಕ ಸಿಹಿತಿಂಡಿಗೆ ಉಪಯೋಗಿಸುತ್ತಾರೆ. (ಜಿ.ಬಿ.;ಡಿ.ಜಿ.)

ಎಳ್ಳಿನ ಎಣ್ಣೆಯನ್ನು ಹೆಚ್ಚಾಗಿ ಅಡಿಗೆಗೆ ಉಪಯೋಗಿಸುತ್ತಾರೆ. ಎಣ್ಣೆ ಬೇಗ ಕಮಟು ಹಿಡಿಯದು, ಕಟುವಾದ ಯಾವ ವಾಸನೆಯೂ ಇಲ್ಲ. ತನ್ನೊಡನೆ ಬೆರೆತ ಇತರ ವಸ್ತುಗಳ ಪರಿಮಳವನ್ನು ಇದು ಸುಲಭವಾಗಿ ಹೀರಿಕೊಳ್ಳುತ್ತದೆ. ಕಿತ್ತಳೆ, ನಿಂಬೆ, ಮಲ್ಲಿಗೆ ಮತ್ತು ಇತರ ಹೂವಿನ ಸುಗಂಧವನ್ನು ತಯಾರಿಸಲು ಇದನ್ನು ಮಾಧ್ಯಮವಾಗಿ ಬಳಸುತ್ತಾರೆ. ಯುರೋಪಿನಲ್ಲಿ ಆರು ಲೀಟರ್ ಎಣ್ಣೆಗೆ ಒಂದು ಕಿಗ್ರಾಂ ಹೂವನ್ನು ಬೆರೆಸಿ, ನಲವತ್ತು ಗಂಟೆ ಇಟ್ಟು ಸುಗಂಧವನ್ನು ತಯಾರಿಸುತ್ತಾರೆ. ಎಳ್ಳು ಎಣ್ಣೆಯನ್ನು ಆಲಿವ್ ಎಣ್ಣೆಯ ಜೊತೆ ಬೆರೆಸಿ ಮಾರುವುದೂ ಉಂಟು, ವನಸ್ಪತಿ, ಕೃತಕ ತುಪ್ಪ, ಸಾಬೂನು ಮತ್ತು ಅನೇಕ ಔಷಧಿಗಳಿಗೂ ಇದನ್ನು ಉಪಯೋಗಿಸುತ್ತಾರೆ. ಎಣ್ಣೆಯಲ್ಲಿ ಸಂಪೂರ್ಣ ಆಮ್ಲಗಳು (ಸ್ಯಾಚುರೇಟೆಡ್ ಆಸಿಡ್ಸ್) ಶೇ. 12, ಅಸಂಪೂರ್ಣ ಆಮ್ಲಗಳು ಶೇ. 81, ಇತರ ವಸ್ತುಗಳು ಶೇ. 1.7 ಇರುತ್ತವೆ. ಲಿನೋಲೀಯಿಕ್ ಮತ್ತು ಒಲೀಯಿಕ್ ಆಮ್ಲಗಳೇ ಪ್ರಧಾನ, 0.1 ಗ್ರಾಮು ಪುಡಿ ಮಾಡಿದ ಸಕ್ಕರೆ ಮತ್ತು 100 ಮಿಲಿಲೀಟರ್ ಮದ್ಯಸಾರ ಬೆರೆಸಿ, 0.1 ಮಿಲಿಲೀಟರ್ ಮಿಶ್ರಣಕ್ಕೆ 10 ಮಿಲಿ ಹೈಡ್ರೋಕ್ಲೋರಿಕ್ ಆಮ್ಲ ಮತ್ತು 10 ಮಿಲಿ ಎಣ್ಣೆ ಹಾಕಿ ಕಲಕಿದರೆ ಕಡು ಕೆಂಪು ಬಣ್ಣ ಬರುತ್ತದೆ. ಇದಕ್ಕೆ ನೀರು ಬೆರೆಸಿದರೂ ಬಣ್ಣ ನಷ್ಟವಾಗುವುದಿಲ್ಲ. ಈ ರೀತಿ ಎಳ್ಳೆಣ್ಣೆಯನ್ನು ಸುಲಭವಾಗಿ ಗುರುತಿಸಬಹುದು. ಇತರ ಯಾವ ಎಣ್ಣೆಗಳಿಗೂ ಈ ಬಣ್ಣ ಅಂಟುವುದಿಲ್ಲ. ಇದಕ್ಕೆ ಬೊಡಾಯಿನ್ ಟೆಸ್ಟ್ ಎಂದು ಹೆಸರು. ಎಳ್ಳು ಹಿಂಡಿ ಜಾನುವಾರುಗಳಿಗೆ ಒಳ್ಳೆಯ ಮೇವು; ನೆಲಕ್ಕೆ ಒಳ್ಳೆಯ ಗೊಬ್ಬರ. (ವೈ.ಎಸ್.ಎಲ್.)

ಎಳ್ಳು ಬೆಳೆಗೆ ಆಂಟಿಗ್ಯಾಸ್ಟರ್ ಕ್ಯಾಟೆಲನಾಲಿಸ್ ಎಂಬ ಕಂಬಳಿ ಹುಳುಗಳು ಹತ್ತಿ ಎಲೆಗಳನ್ನು ತಿಂದು ಕಾಂಡ ಮತ್ತು ಕಾಯಿಗಳನ್ನು ಹಾಳುಮಾಡುತ್ತವೆ. ಆಸ್ಟೆನೊಡೈಲಿಯ ಸಿಸೆಮಿ ಕೀಟದ ಚಿಟ್ಟೆ ಹೂವಿನ ಮೊಗ್ಗನ್ನು ತಿಂದು ಹಾಕುತ್ತದೆ. ಇವುಗಳ ಜೊತೆಗೆ ರಸ ಕುಡಿಯುವ ಬಲ್ಗ್ ಮತ್ತು ಎಫಿಡ್ಡುಗಳೂ ಬೆಳೆ ಹಾಳು ಮಾಡುತ್ತವೆ. ಎಲೆಗಳಿಗೆ ಸರ್ಕೊಸ್ಪೊರ ಎಂಬ ಬೂಷ್ಟು ರೋಗ ಬಂದರೆ ಬೂದು ಬಣ್ಣದ ಅಥವಾ ಕಪ್ಪು ಕಂದು ಬಣ್ಣದ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಈ ರೋಗ ತಗುಲಿದರೆ ಬೆಳೆಗೆ ತೀರ ಹಾನಿಯಾಗುವುದು. ಕೆಲವು ರಾಸಾಯನಿಕ ಕ್ರಿಮಿನಾಶಕಗಳಿಂದ ಈಚೆಗೆ ಈ ಪಿಡುಗುಗಳನ್ನು ಹತೋಟಿಗೊಳಿಸಲಾಗಿದೆ. (ಜಿ.ಬಿ)

ಕನ್ನಡ ವರ್ಣಮಾಲೆಯ ಹತ್ತನೆಯ ಅಕ್ಷರ. ದೀರ್ಘಸ್ವರ, ಪ್ರಾಚೀನತಮ ಬ್ರಾಹ್ಮೀಲಿಪಿಯಲ್ಲಿ ಈ ಅಕ್ಷರ ಒಂದು ತ್ರಿಕೋಣದಂತೆ ಇದ್ದು ಪ್ರ.ಶ. 2ನೆಯ ಶತಮಾನದ ಹೊತ್ತಿಗೆ ತ್ರಿಕೋಣದ ಮೂಲೆಗಳು ದುಂಡಗಾದುವು. ಕದಂಬರ ಕಾಲದಲ್ಲಿ ಕೆಳಗಿನ ಒಳಭಾಗ ವೃತ್ತಾಕಾರದಂತಾಗಿ ಚೌಕತಲೆಯ ತಲೆಕಟ್ಟು ಸ್ಪಷ್ಟವಾಗಿ ಕಾಣುತ್ತದೆ. ಪ್ರ.ಶ. 9ನೆಯ ಶತಮಾನದಲ್ಲಿ ಕೆಳಗಿನ ವೃತ್ತಾಕಾರದಲ್ಲಿ ಬದಲಾವಣೆಗಳುಂಟಾಗಿ ಅಕ್ಷರ ಈಗಿರುವ ರೂಪವನ್ನು ಹೋಲುತ್ತದೆ. 13ನೆಯ ಶತಮಾನದಲ್ಲಿ ವೃತ್ತ ಮಾರ್ಪಟ್ಟು ಒಂದು ಸಣ್ಣ ಕೊಂಡಿಯಂತೆ ಬದಲಾಗುತ್ತದೆ. ಇದೇ ಪ್ರವೃತ್ತಿ ಮುಂದುವರಿದು ಈಗಿರುವ ರೂಪವನ್ನು ತಳೆಯುತ್ತದೆ.




ಉಚ್ಚಾರಣೆಯಲ್ಲಿ ವ್ಯತ್ಯಾಸವಿದ್ದರೂ ಎಕಾರ ಏಕಾರಗಳ ಚಾಕ್ಷುಷರೂಪ ಮಾತ್ರ ಬಹಳ ಕಾಲ ಒಂದೇ ಆಗಿತ್ತೆಂದು ತೋರುತ್ತದೆ. ಈ ಅಕ್ಷರ ಪೂರ್ವ ಅಗೋಲ ಅರ್ಧ ಸಂವೃತ ದೀರ್ಘಸ್ವರವನ್ನು ಸೂಚಿಸುತ್ತದೆ. ವ್ಯಂಜನದೊಂದಿಗೆ ಸೇರಿದಾಗ ಎ ವರ್ಣ ಪಡೆಯುತ್ತಿದ್ದ ರೂಪಾದಿ ವಿವರಗಳಿಗೆ **(ನೋಡಿ– ಎ).** (ಎ.ವಿ.ಎನ್.)

**ಏಂಜೆಲ್ ಮೀನು:** ಅನೇಕ ಬೇರೆ ಬೇರೆ ಮೀನು ಜಾತಿಗಳನ್ನು ಸೂಚಿಸುವ ಸಾಮಾನ್ಯ ಹೆಸರು. *ಕೀಟೋಡಾನ್ಟಿಡೀ* ಕುಟುಂಬಕ್ಕೆ ಸೇರಿದ ಅತ್ಯಂತ ರಮಣೀಯವಾದ ಈ ಮೀನುಗಳು ಉಷ್ಣವಲಯದ ಸಮುದ್ರವಾಸಿಗಳು. ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾದ ದೇಹವನ್ನುಳ್ಳ ಈ ಕುಟುಂಬದ ಮೀನುಗಳು ಸಾಧಾರಣವಾಗಿ ಉದ್ದದಲ್ಲಿ 15–20 ಸೆಂಮೀ. ಗಿಂತ ಹೆಚ್ಚಾಗಿರುವುದಿಲ್ಲ. ಕೆಲವು ಪ್ರಭೇಧಗಳು 60 ಸೆಂಮೀ. ನಷ್ಟೂ ಬೆಳೆಯಬಹುದು.

ಮತ್ಸ್ಯವಿಜ್ಞಾನಿಗಳಲ್ಲಿ ಕೆಲವರು ಕೀಟೋಡಾನ್ಟಿಡೀ ಕುಟುಂಬವನ್ನು ಏಂಜೆಲ್ ಮೀನುಗಳೆಂದೂ ಬಟರ್ ಫ್ಲೈ (ಚಿಟ್ಟೆ) ಮೀನುಗಳೆಂದೂ ವಿಭಾಗಮಾಡುವರು. ಆಪರ್‌ಕ್ಯುಲಂ ಮೂಳೆಯ ಮುಂತುದಿಯ ಕೆಳ ಅಂಚಿನಲ್ಲಿ ಗಟ್ಟಿಯಾದ ಮುಳ್ಳು ಇರುವುದು ಏಂಜೆಲ್ ಮೀನು; ಇಲ್ಲದ್ದು ಬಟರ್ ಫ್ಲೈ ಮೀನು.

ಸಿಕ್‌ಲಿಡೆ ಕುಟುಂಬಕ್ಕೆ ಸೇರಿದ್ದು ದಕ್ಷಿಣ ಅಮೆರಿಕದ ಸಿಹಿನೀರು ವಾಸಿಗಳಾದ ಮೂರು *ಟೆರೊಫಿಲ್ಲಂ* ಪ್ರಭೇದಗಳನ್ನೂ ಮೃದ್ವಸ್ಥಿ ಮತ್ಸ್ಯಗಳಾದ ಸ್ಕೇಟ್ (ಸ್ಕ್ವಾಟಿನ ಸ್ಕಾಟಿನ)ಗಳನ್ನೂ ಏಂಜೆಲ್ ಮೀನುಗಳೆಂದೇ ಕರೆಯುವುದುಂಟು.

ಏಂಜೆಲ್ ಮೀನುಗಳು ಹೆಸರೇ ಸೂಚಿಸುವಂತೆ ಅಪ್ಸರೆಯಂತೆ ಬಲು ಸುಂದರ. ವಿವಿಧ ವರ್ಣ ಮತ್ತು ಮಾಟಗಳಲ್ಲಿರುವ ಇವನ್ನು ಅನೇಕ ಮತ್ಸ್ಯಸಂಗ್ರಹಾಲಯಗಳಲ್ಲೂ ಮನೆಗಳಲ್ಲೂ ಪ್ರೀತಿಯಿಂದ ಸಾಕುತ್ತಾರೆ **(ನೋಡಿ– ಚಿಟ್ಟೆ–ಮೀನುಗಳು).** (ಸಿ.ಜಿ.ಕೆ.)

**ಏಂಜೆಲ್ ಮೇರಿ, ಜೋಸೆಫ್:** ಅಥ್ಲೆಟಿಕ್ಸ್‌ನ ನಾನಾ ವಿಭಾಗಗಳಲ್ಲಿ ಪರಿಣಿತರಾದ ಪ್ರಸಿದ್ಧ ಕ್ರೀಡಾಪಟು. ಅರ್ಜುನ್ ಪ್ರಶಸ್ತಿ ವಿಜೇತೆ. ದಾವಣಗೆರೆಯಲ್ಲಿ ಜನಿಸಿದ ಇವರು ಬೆಂಗಳೂರಿನ ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಕ್ರೀಡಾಕೂಟಗಳ ಮೂಲಕ ರೂಪುಗೊಂಡರು. ಪ್ರಾರಂಭದಲ್ಲಿ ಪೂರ್ಣವೇಗದ ಓಟ (ಸ್ಪ್ರಿಂಟ್) ಹಾಗೂ ಉದ್ದ ನೆಗೆತ (ಲಾಂಗ್ ಜಂಪ್) ಸ್ಪರ್ಧೆಗಳಲ್ಲಿ ಮೇಲ್ಮೆ ಸಾಧಿಸಿದರು. ಅನಂತರ ದಕ್ಷಿಣ ರೈಲ್ವೆ ತಂಡದಲ್ಲಿ ಪ್ರಮುಖ ಪಾತ್ರ ವಹಿಸಿ ಹಲವಾರು ವರ್ಷ ಭಾರತೀಯ ಕ್ರೀಡಾರಂಗದಲ್ಲಿ ದಕ್ಷಿಣ ರೈಲ್ವೆಯ ಕ್ರೀಡಾಪಟುವಾಗಿ ಭಾರತಕ್ಕೆ ಹಿರಿಮೆ ತಂದುಕೊಟ್ಟರು.

ಓಟದ ನಾನಾ ವಿಭಾಗಗಳಲ್ಲಿ ಸ್ಪರ್ಧಿಸಿ, ಮೂರು ಏಷ್ಯನ್ ಕ್ರೀಡೆಗಳಲ್ಲಿ ಭಾಗವಹಿಸಿದ್ದ ಈಕೆ ದೆಹಲಿಯ 1982ರ ಏಷ್ಯನ್ ಕ್ರೀಡೆಯ ಸ್ಪರ್ಧೆಯಲ್ಲಿ ಭಾಗವಹಿಸಿ ಅಂತಾರಾಷ್ಟ್ರೀಯ ಓಟದ ಸ್ಪರ್ಧೆಗಳಿಗೆ ವಿದಾಯ ಹೇಳಿದರು. 1978ರ ಬ್ಯಾಂಕಾಕ್ ಏಷ್ಯನ್ ಕ್ರೀಡೆಗಳಲ್ಲಿ ಭಾಗವಹಿಸಿ ಪೆಂಟಾತ್ಲಾನ್ ಹಾಗೂ ಉದ್ದ ನೆಗೆತದಲ್ಲಿ ಪಾಲ್ಗೊಂಡರು. ಉದ್ದ ನೆಗೆತದಲ್ಲಿ ಬೆಳ್ಳಿ ಪದಕ ಗಳಿಸಿದರು. 6.05 ಮೀ. ಉದ್ದ ಜಿಗಿತದೊಂದಿಗೆ ಇವರು ದಾಖಲೆ ನಿರ್ಮಿಸಿದ್ದಾರೆ. ಭಾರತದ ಅಥ್ಲೆಟಿಕ್ಸ್ ರಂಗದಲ್ಲಿ ಸಕಲ ವಿಭಾಗ ಕ್ರೀಡಾಪಟು (ಆಲ್ ರೌಂಡರ್) ಎಂದು ಖ್ಯಾತಿ ಪಡೆದಿದ್ದಾರೆ.

ಇವರ ಮಹತ್ತರವಾದ ಸಾಧನೆಗೆ ಮನ್ನಣೆಯಿತ್ತು ಭಾರತ ಸರ್ಕಾರ ಇವರಿಗೆ 1978–79ರ ಸಾಲಿನ ಅರ್ಜುನ ಪ್ರಶಸ್ತಿ ನೀಡಿದೆ. ಕರ್ನಾಟಕ ರಾಜ್ಯ ಸರ್ಕಾರ ರಾಜ್ಯ ಪ್ರಶಸ್ತಿ ಹಾಗೂ ದಸರಾ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿದೆ. ಇವರು ಸದ್ಯದಲ್ಲಿ ದಕ್ಷಿಣ ರೈಲ್ವೆ ವಿಭಾಗದ ಕ್ಷೇಮಾಭಿವೃದ್ಧಿ ಅಧಿಕಾರಿಯಾಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. (ಎಸ್.ಆರ್.ಯು.)

**ಏಂಜೆಲಿಕ:** ಕೊತ್ತಂಬರಿ ಬಳಗಕ್ಕೆ (ಏಪಿಯೇಸೀ) ಸೇರಿದ, ಚಿಕ್ಕಗಾತ್ರದ ಬಹುವಾರ್ಷಿಕ, ಸುಗಂಧಸಸ್ಯ, ಸಿರಿಯ ಇದರ ತವರೂರು. ದಿವ್ಯವಾದ, ಅತಿ ಮಾನುಷ ಗುಣಗಳನ್ನು ಹೊಂದಿರುವುದರಿಂದ ಇದಕ್ಕೆ ಏಂಜೆಲಿಕ ಎಂಬ ಹೆಸರು, ಬೇರು ಮತ್ತು ಫಲಗಳನ್ನು ಒಣಗಿಸಿ ಕೇಕ್, ರೊಟ್ಟಿ, ಕ್ಯಾಂಡಿ ಮತ್ತು ಅನೇಕ ಜನಪ್ರಿಯ ಮಾದಕಪಾನೀಯಗಳಿಗೆ ಮನಮೋಹಕ, ಆಕರ್ಷಕ, ಸುವಾಸನೆ ನೀಡಲು ಉಪಯೋಗಿಸುತ್ತಾರೆ. ಸಸ್ಯ ದಟ್ಟ ಹಸುರುಬಣ್ಣದಿಂದ ಕೂಡಿರುವುದರಿಂದ ಎಳೆಯ ಕುಡಿಗಳನ್ನು ಶೀತಲೀಕರಿಸಿ ಕೇಕುಗಳಿಗೆ ಅಂದ ಕೊಡಲು ಬಳಸುತ್ತಾರೆ. ಬಟ್ಟಿ ಇಳಿಸಿ ತೆಗೆದ ತೈಲವನ್ನು ಔಷಧಿ, ಸುಗಂಧ ತೈಲಗಳ ತಯಾರಿಕೆಯಲ್ಲಿ ಬಳಸಲಾಗುತ್ತಿದೆ. 1500 ವರ್ಷಗಳಿಗೂ ಮುಂಚೆಯೇ ಇದರ ಪ್ರಯೋಜನವನ್ನು ಜನ ಕಂಡುಕೊಂಡಿದ್ದರೆಂಬುದಕ್ಕೆ ದಾಖಲೆಗಳಿವೆ. (ವಿ.ಬಿ.)

**ಏಂಟಿಲಿಯ:** ಖಗೋಳದ ದಕ್ಷಿಣಾರ್ಧದಲ್ಲಿರುವ ನಕ್ಷತ್ರಪುಂಜ. ಕಣ್ಣಿಗೆ ಕಾಣಿಸುವಂತೆ ಅಷ್ಟೇನೂ ಗಮನಾರ್ಹವಾಗಿಲ್ಲ. ಇದರ ವ್ಯಾಪ್ತಿಯ ವಿವರಗಳು: ವಿಷುವದಂಶ 9 ಗಂ. 25 ಮಿ.–11ಗಂ. 5 ಮಿ. ಘಂಟಾವೃತ್ತಾಂಶ $24^0$ ದ–$40^0$ ದ. *

**ಏಕ ಅಕ್ಷೀಯ ಹರಳುಗಳು:** ಚತುರ್ಮುಖಿ (ಟೆಟ್ರಗೋನಲ್) ಮತ್ತು ಷಣ್ಮುಖಿ (ಹೆಕ್ಸಗೋನಲ್) ವರ್ಗಗಳಿಗೆ ಸೇರಿದ ಹರಳುಗಳನ್ನು ಏಕ ಅಕ್ಷೀಯವೆನ್ನುತ್ತಾರೆ. ಇವುಗಳಲ್ಲಿ ಒಟ್ಟು ಮೂರು ಅಥವಾ ನಾಲ್ಕು ಅಕ್ಷಗಳಿದ್ದು, ಅವುಗಳಲ್ಲಿ ಎರಡು ಅಥವಾ ಮೂರು ಸಮನಾದ ಸಮತಲ ಸ್ಫಟಿಕಾಕ್ಷಗಳಾಗಿರುತ್ತವೆ. ಮೂರನೆಯ ಅಥವಾ ನಾಲ್ಕನೆಯ ಅಕ್ಷ ಅಸಮವಾಗಿದ್ದು, ಸಮತಲ ಸಪಾಟಕ್ಕೆ ಸಮಕೋನದಲ್ಲಿರುತ್ತದೆ. ಇದರಿಂದ ಈ ವರ್ಗದ ಹರಳುಗಳಲ್ಲಿ ಬೆಳಕಿನ ಕಿರಣಗಳು ಎಲ್ಲ ದಿಕ್ಕುಗಳಲ್ಲೂ ಒಂದೇ ವೇಗದಲ್ಲಿ ಚಲಿಸುವುದಿಲ್ಲ.

ಈ ಹರಳುಗಳಲ್ಲಿ ಹಾದುಹೋಗುವ ಬೆಳಕು ಎರಡು ಕಿರಣಗಳಾಗಿ ವಿಭಾಗವಾಗುತ್ತದೆ. ಒಂದೇ ಪತನ ಕಿರಣದಿಂದುಂಟಾದ ಎರಡು ಕಿರಣಗಳಲ್ಲೊಂದು ಸಮತಲ ಅಕ್ಷಗಳ ಸಪಾಟದಲ್ಲಿ ಸ್ಪಂದಿಸುತ್ತದೆ. ಪ್ರಸಾರದ ದಿಕ್ಕು ಯಾವುದಾದರೂ ಈ ಕಿರಣಕ್ಕೆ ಒಂದೇ ರೀತಿಯ ವೇಗವಿರುತ್ತದೆ. ಇದರಿಂದ ಈ ಕಿರಣಕ್ಕೆ ಒಂದು ನಿರ್ದಿಷ್ಟವಾದ ಭಂಗಸೂಚಕವೂ ಗೋಳಾಕೃತಿಯ ತರಂಗಮುಖವೂ ಇವೆ. ಇದನ್ನೇ ಸಾಮಾನ್ಯ (ಆರ್ಡಿನರಿ) ಕಿರಣವೆನ್ನುವುದು.

ಮತ್ತೊಂದು ಮೊದಲ ಕಿರಣಕ್ಕೆ ಸಮಕೋನದಲ್ಲಿ ಯಾವಾಗಲೂ ನೇರ ಸಪಾಟದಲ್ಲಿ ನೀಳ ಸ್ಫಟಿಕಾಕ್ಷಕ್ಕೆ ಸಮಾಂತರವಾಗಿ ಸ್ಪಂದಿಸುತ್ತದೆ. ಇದರ ವೇಗ ಹರಳಿನಲ್ಲಿ ವಿವಿಧ ದಿಕ್ಕುಗಳಲ್ಲಿ ಚಲಿಸಿದಂತೆ ವ್ಯತ್ಯಾಸಗೊಳ್ಳುತ್ತದೆ. ಇದರಿಂದ ಈ ಕಿರಣಕ್ಕೆ ಒಂದು ನಿರ್ದಿಷ್ಟವಾದ ಭಂಗಸೂಚಕವಿರದೆ ಅಂಡಾಕೃತಿಯ ತರಂಗ ಮುಖ ಮಾತ್ರ ಇದೆ. ಇದನ್ನು ಅಸಾಮಾನ್ಯ (ಎಕ್ಸ್ಟ್ರಾಡಿನರಿ) ಕಿರಣವೆನ್ನುತ್ತಾರೆ.

ಏಕ ಅಕ್ಷೀಯ ಹರಳುಗಳಲ್ಲಿ ಸಾಧಾರಣ ಹಾಗೂ ಅಸಾಧಾರಣ ಕಿರಣಗಳು ವಿವಿಧ ವೇಗಗಳಲ್ಲಿ ಚಲಿಸುವುವಾದರೂ ನೀಳ ಸ್ಫಟಿಕಾಕ್ಷಕಕ್ಕೆ ಸಮಾಂತರವಾಗಿ ಚಲಿಸುವಾಗ ಮಾತ್ರ ಒಂದೇ ವೇಗಗತಿಯಲ್ಲಿರುತ್ತವೆ. ಈ ಕಾರಣ ಒಂದೇ ಭಂಗ ಸೂಚಕವಿದ್ದು, ದ್ವಿರಶ್ಮಿಭಂಗಕ್ಕೆ ಅವಕಾಶವಿರುವುದಿಲ್ಲ. ದ್ವಿರಶ್ಮಿಭಂಗವಿಲ್ಲದ ಈ ಅಕ್ಷವನ್ನೇ ದ್ಯುತಿ ಅಕ್ಷವೆನ್ನುವುದು (ಆಪ್ಟಿಕ್ ಆಕ್ಸಿಸ್). ಇಂಥ ದ್ಯುತಿ ಅಕ್ಷ ಈ ದ್ಯುತಿವರ್ಗದ ಹರಳುಗಳಲ್ಲಿ ಒಂದೇ ಒಂದು. ಈ ಕಾರಣ ಇವುಗಳನ್ನು ಏಕ ಅಕ್ಷೀಯವೆನ್ನುತ್ತಾರೆ.

ಏಕ ಅಕ್ಷೀಯ ಹರಳುಗಳಲ್ಲಿ ಸಾಧಾರಣ ಹಾಗೂ ಅಸಾಧಾರಣ ಕಿರಣಗಳ ಪರಸ್ಪರ ವೇಗದ ಆಧಾರದ ಮೇಲೆ ಎರಡು ವರ್ಗಗಳಿವೆ. ಬೆಣಚುಗಲ್ಲು (ಕ್ವಾರ್ಟ್ಸ್) ಜ಼ಿರ್‌ಕಾನ್ ಮುಂತಾದ ಖನಿಜಗಳಲ್ಲಿ ಸಾಧಾರಣ ರಶ್ಮಿಯ ವೇಗ ಅಸಾಧಾರಣ ಕಿರಣದ ವೇಗಕ್ಕಿಂತ ಹೆಚ್ಚಾಗಿರುವುದರಿಂದ ಅವುಗಳನ್ನು ಧನಸ್ಫಟಿಕಗಳೆಂದೂ ಕ್ಯಾಲ್‌ಸೈಟ್, ಅಪಟೈಟ್ ಮುಂತಾದ ಖನಿಜಗಳಲ್ಲಿ ಸಾಧಾರಣ ರಶ್ಮಿಯ ವೇಗ ಅಸಾಧಾರಣ ರಶ್ಮಿಯ ವೇಗಕ್ಕಿಂತ ಕಡಿಮೆಯಾಗಿರುವುದರಿಂದ ಅವನ್ನು ಋಣಸ್ಫಟಿಕಗಳೆಂದೂ ಕರೆಯುತ್ತಾರೆ. (ಎಂ.ಎನ್.ವಿ.)

**ಏಕಕಗಳು ಮತ್ತು ಆಯಾಮಗಳು:** ಭೌತಮಾಪನದ ಹಿನ್ನೆಲೆಯಲ್ಲಿರುವ ಮೂಲ ಪರಿಕಲ್ಪನೆಗಳು (ಯೂನಿಟ್ಸ್ ಅಂಡ್ ಡೈಮೆನ್ಷನ್ಸ್). ಪ್ರತಿಯೊಂದು ಭೌತಮಾಪನವೂ ಒಂದೇ ಸ್ವಭಾವದ ಎರಡು ಪರಿಮಾಣಗಳ ತುಲನೆಯನ್ನು ಅವಲಂಬಿಸಿದೆ. ಒಂದು ಕೋಲಿನ ಉದ್ದವನ್ನು ಇನ್ನೊಂದು ಕೋಲಿನ ಉದ್ದದಿಂದ ಅಳೆಯಬೇಕು; ಒಂದು ವಸ್ತುವಿನ ತೂಕವನ್ನು ಇನ್ನೊಂದು ವಸ್ತುವಿನ ತೂಕದಿಂದ ಅಳೆಯಬೇಕು–ಇತ್ಯಾದಿ. ಸಾರ್ವಜನಿಕ ಜೀವನದಲ್ಲಿಯೂ ವೈಜ್ಞಾನಿಕಾನ್ವೇಷಣೆಗಳಲ್ಲಿಯೂ ಒಂದೇ ವಸ್ತುವನ್ನು ಕುರಿತು ಹಲವಾರು ಜನರ ಅಳತೆಗಳು ಒಂದೇ ಫಲಿತಾಂಶವನ್ನು ಕೊಡಬೇಕಾದದ್ದು ಅನಿವಾರ್ಯ. ಆದ್ದರಿಂದ ಇಲ್ಲಿ ಒಂದು ಶಿಷ್ಟ ಏಕಕದ (ಸ್ಟ್ಯಾಂಡರ್ಡ್ ಯೂನಿಟ್)

ಅಗತ್ಯವಿದೆ. ಅಳತೆಯ ಸ್ವರೂಪವನ್ನು (ಉದ್ದ, ಉಷ್ಣತೆ, ಕಾಲ ಇತ್ಯಾದಿ) ಅವಲಂಬಿಸಿ ಬೇರೆ ಬೇರೆ ಏಕಕಗಳು (ಏಕಮಾನಗಳು) ಬೇಕಾಗುತ್ತವೆ. ಇವನ್ನು ಅಂತಾರಾಷ್ಟ್ರೀಯ ಒಪ್ಪಂದದ ಮೇರೆಗೆ ಸರಕಾರಗಳ ಶಾಸನಗಳ ಪ್ರಕಾರ ವಿಧಿಸಬಹುದು ಅಥವಾ ವಿಜ್ಞಾನಿಗಳ ಅನುಮೋದನೆ ಪ್ರಕಾರ ನಿರ್ಧರಿಸಬಹುದು. ತತ್ತ್ವಶಃ ಏಕಕಗಳ ಆಯ್ಕೆ ಸ್ವೇಚ್ಛೆಯಿಂತಿದೆ ಎಂಬುದು ಗಮನಾರ್ಹ.

ಒಂದು ಭೌತಪರಿಮಾಣದ ಅಳತೆ ಎರಡು ಅಂಶಗಳನ್ನು ವಿಶದೀಕರಿಸಬೇಕು–ಬಳಸಿರುವ ಏಕಕ, ಇದರೊಡನೆ ಪರಿಮಾಣದ ತುಲನೆ. ಒಂದು ಸರಳರೇಖೆಯ ಉದ್ದ 3 ಮೀ. ಎನ್ನುವಾಗ ಮೀಟರ್ ಎಂಬುದು ಶಿಷ್ಟ ಏಕಕ, ಇದರೊಡನೆ ಹೋಲಿಸಿದಾಗ ಸರಳರೇಖೆಯ ಉದ್ದ 3. ಆದ್ದರಿಂದ ಪ್ರತಿಯೊಂದು ಅಳತೆಯಲ್ಲೂ ಮೊದಲಿನ ಅಂಶ ಒಂದು ಸಂಖ್ಯೆ ಎರಡನೆಯ ಅಂಶ ಈ ಸಂಖ್ಯೆಯ ವಿವರಣೆ. ವಿವರಣೆ ಏಕಕವನ್ನು ಸೂಚಿಸುತ್ತದೆ. ಇದನ್ನೇ ಸಾಂಕೇತಿಕವಾಗಿ

ಅಳತೆಯ ಪರಿಮಾಣ=(ಸಂಖ್ಯೆ) x (ಏಕಕ) ಎಂದು ನಿರೂಪಿಸಬಹುದು.

ಒಂದೇ ಏಕಕದಲ್ಲಿ ಬರೆಯಬಹುದಾದ ಎರಡು ಪರಿಮಾಣುಗಳ ಭೌತ ಆಯಾಮಗಳು ಸಮಾನ ಎನ್ನುತ್ತೇವೆ. ಎರಡು ಭಿನ್ನಕ್ಷೇತ್ರಗಳ ವಿಸ್ತೀರ್ಣಗಳನ್ನು ಭಿನ್ನ ಏಕಕಗಳಲ್ಲಿ ನಿರೂಪಿಸಬಹುದು; ಆದರೆ ಅಂತಿಮವಾಗಿ ಅವನ್ನು ಒಂದೇ ಏಕಕಕ್ಕೆ ಪರಿವರ್ತಿಸುವುದು ಸಾಧ್ಯವಿದೆ. ಆದ್ದರಿಂದ ಆ ಕ್ಷೇತ್ರಗಳು ಸಮಾನ ಆಯಾಮದವು. ಒಂದು ಕ್ಷೇತ್ರದ ವಿಸ್ತೀರ್ಣ ಮತ್ತು ಒಂದು ಘನದ ಘನಗಾತ್ರ ಇವನ್ನು ನಿರೂಪಿಸುವ ಏಕಕಗಳನ್ನು ಒಂದೇ ಏಕಕಕ್ಕೆ ಪರಿವರ್ತಿಸುವುದು ಅಸಾಧ್ಯ. ಆದ್ದರಿಂದ ಕ್ಷೇತ್ರ ಮತ್ತು ಘನಗಳ ಆಯಾಮಗಳು ಸಮಾನವಾಗಿಲ್ಲ.

2 ಗಜ=6 ಅಡಿಗಳು=72 ಇಂಚುಗಳು ಎಂಬ ಉದಾಹರಣೆಯನ್ನು ಪರಿಶೀಲಿಸಿದಾಗ ಏಕಕ ಬದಲಾದಂತೆ ಸಂಖ್ಯೆ ಬದಲಾಗುತ್ತದೆಂದು ತಿಳಿಯುತ್ತದೆ. ಇಷ್ಟು ಮಾತ್ರವಲ್ಲ, ಏಕಕದ ಗಾತ್ರ ದೊಡ್ಡದಾದಂತೆ ಸಂಖ್ಯೆ ಚಿಕ್ಕದಾಗುವುದು. ಏಕಕದ ಗಾತ್ರ ಚಿಕ್ಕದಾದಂತೆ ಸಂಖ್ಯೆ ದೊಡ್ಡದಾಗುವುದು ಆದ್ದರಿಂದ ಏಕಕ ಮತ್ತು ಸಂಖ್ಯೆಗಳು ಪರಸ್ಪರ ವಿಲೋಮಾನುಪಾತದಲ್ಲಿವೆ ಎಂದು ತಿಳಿಯುತ್ತದೆ. ಇನ್ನೂ ಒಂದು ವಿಚಾರ ಗೊತ್ತಾಗುವುದು. ಒಂದು ರೇಖೆಯ ಅಡಿಗಳಲ್ಲಿನ ಉದ್ದಕ್ಕೂ ಇಂಚುಗಳಲ್ಲಿನ ಉದ್ದಕ್ಕೂ ಇರುವ ಪ್ರಮಾಣ ಇಂಚಿನ ಉದ್ದಕ್ಕೂ ಅಡಿಯ ಉದ್ದಕ್ಕೂ ಇರುವ ಪ್ರಮಾಣದಷ್ಟೇ ಆಗಿದೆ. ಮೇಲಿನ ಉದಾಹರಣೆಯ ಪ್ರಕಾರ

$$\frac{6}{72}=\frac{1}{12}$$

AB, CD ಎಂಬ ಎರಡು ಅಸಮಾನ ಸರಳರೇಖೆಗಳನ್ನು (ಆಯಾಮಗಳು ಸಮಾನ) ಮೊದಲು ಸೆಂಟಿಮೀಟರು ಗಳಲ್ಲಿ ಅಳೆದು ಫಲಿತಾಂಶಗಳ ಪ್ರಮಾಣ ಕಂಡುಹಿಡಿಯಬೇಕು. ತರುವಾಯ ಇಂಚುಗಳಲ್ಲಿ ಅಳೆದು ಫಲಿತಾಂಶಗಳ ಪ್ರಮಾಣವನ್ನು ಕಂಡುಹಿಡಿಯಬೇಕು. ಇವೆರಡೂ ಸಮಾನವಾಗಿರುತ್ತವೆ. ಸಮಾನ ಆಯಾಮಗಳ ಎರಡು ಭಿನ್ನವಸ್ತುಗಳನ್ನು ಅಳೆಯಬಹುದಾದ ವಿವಿಧ ಏಕಕಗಳೆಲ್ಲವೂ ಅನುಪಾತದಲ್ಲಿವೆ ಎಂದು ಇದರಿಂದ ಗೊತ್ತಾಗುವುದು. ಈ ಪ್ರಮಾಣ ಯಾವುದೇ ಏಕಕದ ಗಾತ್ರವನ್ನು ಅವಲಂಬಿಸಿಲ್ಲ. ಇದಕ್ಕೆ ಪರಸ್ಪರ ಪ್ರಮಾಣ ನಿರಪೇಕ್ಷ ತತ್ತ್ವ (ಪ್ರಿನ್ಸಿಪಲ್ ಆಫ್ ಅಬ್ಸೊಲ್ಯುಟ್ ಸಿಗ್ನಿಫಿಕೆನ್ಸ್ ಆಫ್ ರಿಲೇಟಿವ್ ಮ್ಯಾಗ್ನಿಟ್ಯೂಡ್ಸ್) ಎಂದು ಹೆಸರು.

ಏಕಕಗಳ ಮತ್ತು ಆಯಾಮಗಳ ವಿಶ್ಲೇಷಣೆ ಭೌತಪರಿಮಾಣಗಳ ಅಳತೆಯ ಅಧ್ಯಯನವನ್ನೊಳಗೊಂಡ ಒಂದು ವಿಧಾನ. ಇದರ ಮುಖ್ಯ ಉಪಯೋಗಗಳೆಂದರೆ ಗಣಿತರೀತ್ಯಾ ಉತ್ತರ ದೊರೆಯುವುದು ಅಸಾಧ್ಯವೆನಿಸುವಂಥ ಕ್ಲಿಷ್ಟ ಸಮಸ್ಯೆಗಳಲ್ಲಿನ ಪರಿಮಾಣಗಳ ನಡುವೆ ಸಾಧ್ಯವಾಗಬಹುದಾದಂಥ ಸಂಬಂಧ ಮತ್ತು ಅದರ ಪರಿಮಿತಿಗಳನ್ನು ತಿಳಿಸುವುದು, ದೊಡ್ಡ ಯಂತ್ರಗಳು ಕೆಲಸಮಾಡುವ ರೀತಿಯನ್ನು ಮಾದರಿ ಪ್ರಯೋಗಗಳಿಂದ ತಿಳಿಯುವುದು, ಭೌತಪರಿಮಾಣಗಳ ಮೌಲ್ಯವನ್ನು ಒಂದು ಅಳತೆ ಪದ್ಧತಿಯಿಂದ ಮತ್ತೊಂದು ಅಳತೆ ಪದ್ಧತಿಗೆ ಸರಿಯಾಗಿ ಬದಲಾಯಿಸುವುದು, ಸಮೀಕರಣಗಳು ಸರಿಯೋ ತಪ್ಪೋ ಎಂದು ತಾಳೆ ನೋಡುವುದು, ಭೌತಪರಿಮಾಣಗಳ ವ್ಯಾಖ್ಯೆಗಳನ್ನು ಸಂಕ್ಷಿಪ್ತವಾಗಿ ಪಟ್ಟಿಮಾಡುವುದು ಇತ್ಯಾದಿ. ಈ ವಿಧಾನ ಬಲು ಸರ್ವವ್ಯಾಪಿ ಮತ್ತು ಸರಳ. ಇದನ್ನು ಪ್ರತಿಪಾದಿಸಿದ ಮೊದಲಿಗರಲ್ಲಿ ಒಬ್ಬನಾದ ಲಾರ್ಡ್ ರ‍್ಯಾಲಿ ಇದಕ್ಕೆ ಕೊಟ್ಟ ಹೆಸರು ರೂಪಸಾದೃಶ್ಯ ತತ್ತ್ವ (ಪ್ರಿನ್ಸಿಪಲ್ ಆಫ್ ಸಿಮಿಲಿಟ್ಯೂಡ್).

ಆಯಾಮ ಎಂದರೆ ಜ್ಯಾಮಿತಿಯಲ್ಲಿ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಅಳೆದ ಪರಿಮಾಣ. ಉದಾಹರಣೆಗೆ ವ್ಯಾಸದ ಮೇಲೆ, ವಸ್ತುವಿನ ಅಂಚಿನಲ್ಲಿ, ಪ್ರಧಾನಾಕ್ಷದ ಮೇಲೆ ಇತ್ಯಾದಿ. ಬಿಂದುವಿಗೆ ಆಯಾಮವಿಲ್ಲ (ಅಂದರೆ ಅದರ ಆಯಾಮ 0) ಗೆರೆಯ ಆಯಾಮ 1, ತಲದ ಆಯಾಮ 2, ಘನದ ಆಯಾಮ 3 ಎಂದು ಪರಿಗಣಿಸುತ್ತೇವೆ. ಉದ್ದ, ವಿಸ್ತೀರ್ಣ, ಘನಗಾತ್ರಗಳನ್ನು ಕ್ರಮವಾಗಿ ಉದ್ದದ 1ನೆಯ ಘಾತ [$L^1$], 2ನೆಯ ಘಾತ [$L^2$], 3ನೆಯ ಘಾತಗಳಾಗಿ [$L^3$] ನಿರೂಪಿಸುವುದರಿಂದ ಇವುಗಳಿಗೆ ಕ್ರಮವಾಗಿ ಉದ್ದದ 1, 2, 3 ಆಯಾಮಗಳಿವೆ ಎಂದು ಹೇಳುತ್ತೇವೆ. ಹೀಗೆಯೇ ಭೌತವಿಜ್ಞಾನದಲ್ಲಿ ಅನೇಕ ಕಡೆ ಉದ್ದ (L), ಜಡಮಾನ (M), ಕಾಲ (T) ಮತ್ತು ಇತರ ಜನ್ಯಪರಿಮಾಣಗಳ ಆಯಾಮಗಳನ್ನು ಉಪಯೋಗಿಸುತ್ತೇವೆ.

ಆಯಾಮವೇನೆಂಬುದನ್ನು ಈ ರೀತಿ ಅರ್ಥ ಮಾಡಿಕೊಳ್ಳಬಹುದು. ಒಂದು ವಿವೃತರೇಖೆಯನ್ನು (ಸರಳ ರೇಖೆಯೂ ವಕ್ರರೇಖೆಯೂ ಅಡಕವಾಗಿವೆ), ಅದರ ಮೇಲೆ ಗುರುತಿಸಿರುವ ಒಂದು ಬಿಂದುವಿನಿಂದ, ಎರಡು ವಿಭಾಗಗಳಾಗಿಸಬಹುದು. ರೇಖೆಯ ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಈ ಗಡಿಬಿಂದುವನ್ನು ದಾಟದೇ ಹೋಗಲಾಗುವುದಿಲ್ಲ. ಇಂಥವುಗಳಿಗೆ ವಿವೃತರೇಖೆಗಳೆಂದು ಹೆಸರು. ಆಯಾಮರಹಿತ ಬಿಂದುವಿನಿಂದ ರೇಖೆ ವಿಭಾಗಿಸಲ್ಪಡುವುದರಿಂದ ಅದರ ಆಯಾಮ ಒಂದು ಎಂದು ಪರಿಗಣಿಸುತ್ತೇವೆ. ಆದರೆ ಒಂದು ತಲವನ್ನು ಬಿಂದು ಅಥವಾ ಮತ್ತೊಂದು ಭಾಗಕ್ಕೆ ಆ ಬಿಂದುಗಳನ್ನು ದಾಟದೆಯೇ ಅವನ್ನು ಬಳಸಿಕೊಂಡು ಹೋಗಬಹುದು. ಒಂದು ಸೂಕ್ತವಾದ ಸಂವೃತರೇಖೆಯನ್ನು (ಕ್ಲೋಸ್ಡ್ ಕರ್ವ್) ಎಳೆದು ತಲದ ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಆ ರೇಖೆಯನ್ನು ದಾಟದೇ ಹೋಗಲು ಆಗದಂತೆ ಮಾಡಬಹುದು. ಆಯಾಮರಹಿತ ಬಿಂದುವಿನಿಂದ ವಿಭಾಗಿಸಲಾಗದೆ ಆದರೆ ಒಂದು ಆಯಾಮವಿರುವ ತಲದಿಂದ ಮಾತ್ರ ವಿಭಾಗಿಸಲ್ಪಡುವ ಘನಾಕೃತಿಯ ಆಯಾಮ ಮೂರು ಎನ್ನುತ್ತೇವೆ. ಈ ಆಯಾಮಗಳು ಧನಪೂರ್ಣಾಂಕಗಳೆಂಬುದನ್ನು ಗಮನಿಸಬೇಕು.

ನಾವು ಮೂರಕ್ಕಿಂತ ಹೆಚ್ಚು ಆಯಾಮವಿರುವ ಆಕಾಶವನ್ನು (ಸ್ಪೇಸ್) ಸ್ಪಷ್ಟವಾಗಿ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಲಾಗದಿದ್ದರೂ ಬೀಜಜ್ಯಾಮಿತಿಯಲ್ಲಿ n ಆಯಾಮಗಳಿರುವ ಇಂಥ ಆಕಾಶಗಳಲ್ಲಿ ಜನರ ಆಸಕ್ತಿಯನ್ನು ಹೆಚ್ಚಾಗಿ ಕೆರಳಿಸಿರುವುದು ಆಲ್ಬರ್ಟ್ ಐನ್‌ಸ್ಟೈನನ ರಿಲೆಟಿವಿಟಿ ಸಿದ್ಧಾಂತ. ಇದರಲ್ಲಿ ನಾಲ್ಕು ಆಯಾಮಗಳಿರುವ ಆಕಾಶವನ್ನು ಕಲ್ಪಿಸಿಕೊಳ್ಳಲಾಗಿದೆ–ಉದ್ದ, ಅಗಲ, ಎತ್ತರ ಎಂಬ ಮೂರು ಆಯಾಮಗಳ ಜೊತೆಗೆ ಕಾಲ ಎಂಬುದು ನಾಲ್ಕನೆಯ ಆಯಾಮ, ಇದೇ ಅಲ್ಲದೆ ಬೇರೆ ಹೆಚ್ಚು ಆಯಾಮಗಳಿರುವ ಆಕಾಶಗಳ ಸಾಧ್ಯತೆ ಇದೆಯೆಂದು ತೋರಿಸಲಾಗಿದೆ. ಅನಂತ ಆಯಾಮಗಳ ಆಕಾಶದ ಅಧ್ಯಯನ ಮಾಡಿದ್ದಾರೆ **(ನೋಡಿ– ಅತ್ಯಾಕಾಶಗಳು)**.

ಆಯಾಮ ವಿಶ್ಲೇಷಣೆ ಮುಖ್ಯವಾಗಿ ಅಳತೆ ಪದ್ಧತಿಗಳ ಲಕ್ಷಣಗಳನ್ನು ಅವಲಂಬಿಸಿದೆ. ಅಳತೆ ಪದ್ಧತಿಯ ಮುಖ್ಯ ಉದ್ದೇಶ ನಿಖರ ವಿವರ ನಿರೂಪಣೆ. ಬೇರೆ ಎಲ್ಲ ಅಳತೆ ಪದ್ಧತಿಗಳಿಗಿಂತ ಅತಿ ಉತ್ತಮವಾದದ್ದು ಸೂಚ್ಯಸಂಖ್ಯೆಗಳಿಂದ (ಅಸ್ಸೈನ್ಡ್ ನಂಬರ್ಸ್) ವಿವರಿಸುವ ಪದ್ಧತಿ. ಒಂದು ನಿರ್ದಿಷ್ಟ ಅಳತೆಯೆಂದರೆ ಒಂದು ನಿರ್ದಿಷ್ಟ ಭೌತಕ್ರಿಯೆಯಿಂದ ಬರುವುದಕ್ಕೆ ಮಾತ್ರ ಉದ್ದ ಎನ್ನುತ್ತೇವೆ. ಇಲ್ಲಿ ನಾವು ಮೀಟರ್ ಎಂಬ ಶಿಷ್ಟ ಏಕಕವನ್ನು ನಿರ್ಧರಿಸಲು ಯಾವ ನಿಯಮವೂ ಇಲ್ಲ. ಉದ್ದವನ್ನು ಗಜಗಳಲ್ಲೂ ಮೀಟರುಗಳಲ್ಲೊ ಮೈಲಿಗಳಲ್ಲೋ ಜ್ಯೋತಿರ್ವರ್ಷಗಳಲ್ಲೋ ಮತ್ತಿತರ ಯಾವುದೇ ಅನುಕೂಲವಾದ ಏಕಕದಿಂದಲೋ ಅಳೆಯಬಹುದು. ಹೀಗೆ ಬೇರೆ ಬೇರೆ ಏಕಕಗಳಿಂದ ಅಳೆದಾಗ ಗಮನಿಸಬೇಕಾದ ಮುಖ್ಯ ಅಂಶ ಈ ಹಿಂದೆ ಹೇಳಿದಂತೆ ಸೂಚಕಸಂಖ್ಯೆ.

ಪ್ರತಿಯೊಂದು ಭೌತಪರಿಮಾಣಕ್ಕೂ ಅದಕ್ಕೆ ಸೂಕ್ತವಾದ ಮಾನವನ್ನೇ ಉಪಯೋಗಿಸುತ್ತೇವೆ. ಉದಾಹರಣೆಗೆ ಉದ್ದವನ್ನು ಗ್ರಾಂಗಳಲ್ಲಾಗಲಿ ತೂಕವನ್ನು ಮೈಲಿಗಳಲ್ಲಾಗಲಿ ಕಾಲವನ್ನು ಲೀಟರುಗಳಲ್ಲಾಗಲಿ ಹೇಳುವುದಿಲ್ಲ. ಏಕೆಂದರೆ ಅವು ಬೇರೆ ಬೇರೆ ಗುಣಲಕ್ಷಣಗಳಿರುವ ಪರಿಮಾಣಗಳು. ಇಂಥವನ್ನು ಅಳೆಯುವ ಭೌತಕ್ರಿಯೆಗಳು ಆಯಾ ಮೂಲಪರಿಮಾಣವನ್ನು ಅನುಸರಿಸಿ ಬೇರೆ ಬೇರೆ ರೀತಿಯದಾಗಿರುತ್ತವೆ. ಭೌತವಿಜ್ಞಾನದ ಬಲಪ್ರಕರಣ ವಿದ್ಯುತ್ ಪ್ರಕರಣ ಮುಂತಾದ ಬೇರೆ ಬೇರೆ ಪ್ರಕರಣಗಳಲ್ಲಿ ಸ್ವಲ್ಪ ಪರಿಮಾಣಗಳನ್ನು ಮೂಲಪರಿಮಾಣಗಳೆಂದೂ ಮಿಕ್ಕವನ್ನು ಜನ್ಯಪರಿಮಾಣಗಳೆಂದೂ ಪರಿಗಣಿಸುತ್ತೇವೆ. ಬಲಪ್ರಕರಣದಲ್ಲಿ ಸಾಮಾನ್ಯವಾಗಿ ಉದ್ದ, ಜಡಮಾನ ಮತ್ತು ಕಾಲವನ್ನು ಮೂಲಪರಿಮಾಣಗಳಾಗಿ ಪರಿಗಣಿಸುತ್ತೇವೆ. ಏಕೆಂದರೆ ಅವುಗಳ ಏಕಕಗಳನ್ನು ಸ್ವೇಚ್ಛೆಯಂತೆ ಆರಿಸಬಹುದು ಮತ್ತು ಆ ಏಕಕಗಳ ಸಹಾಯದಿಂದ ಅಳತೆ ಮಾಡಬಹುದು. ವೇಗ, ಬಲ, ಸಂವೇಗ (ಮೊಮೆಂಟಂ) ಮುಂತಾದುವನ್ನು ಜನ್ಯಪರಿಮಾಣಗಳು ಎನ್ನುತ್ತೇವೆ. ಇವನ್ನು ಮೂಲ ಅಳತೆಗಳ ಸಂಯೋಜನೆಯಿಂದ ಅಳೆಯಬಹುದು. ಉದಾಹರಣೆಗೆ ಒಂದು ವಸ್ತುವಿನ ಸ್ಥಳಾಂತರವನ್ನು ಅದು ಚಲಿಸಲು ತೆಗೆದುಕೊಳ್ಳುವ ಕಾಲದಿಂದ ಭಾಗಿಸಿ ಅದರ ಸರಾಸರಿವೇಗವನ್ನು ಕಂಡುಹಿಡಿಯಬಹುದು. ಮೂಲಪರಿಮಾಣಗಳನ್ನೂ ಜನ್ಯಪರಿಮಾಣಗಳನ್ನು ಅಷ್ಟೊಂದು ನಿರ್ದಿಷ್ಟವಾಗಿ ಬೇರ್ಪಡಿಸಲು ಆಗುವುದಿಲ್ಲ. ಆಯಾ ಸಮಸ್ಯೆಗೆ ಅನುಕೂಲವಾಗಿ ಮೂಲಪರಿಮಾಣಗಳನ್ನು ಆರಿಸಬಹುದು; ಅದಕ್ಕೆ ಯಾವ ನಿಯಮವೂ ಇಲ್ಲ.

ಆಯಾಮ ಸೂತ್ರಗಳು (ಡೈಮೆನ್ಷನಲ್ ಫಾರ್ಮುಲಾಸ್) : $\xi, n, \zeta$ ಎಂಬ ಮೂರು ಮೂಲ ಪರಿಮಾಣಗಳ $\phi(\xi, n, \zeta)$ ಎಂಬ ಜನ್ಯಪರಿಮಾಣವನ್ನು ಪರಿಶೀಲಿಸೋಣ; ಎಂದರೆ $\phi(\xi, n, \zeta)$ ಆ ಮೂರು ಮೂಲ ಪರಿಮಾಣಗಳ ಒಂದು ಉತ್ಪನ್ನ (ಫಂಕ್ಷನ್) ಉದಾಹರಣೆಗೆ $\xi$ ಉದ್ದ, n, ಜಡಮಾನ, $\zeta$ ಕಾಲ ಆಗಿದ್ದರೆ ವೇಗ ಎಂಬ ಜನ್ಯಪರಿಮಾಣ $\phi(\xi, n, \zeta) = \dfrac{\xi}{\zeta}$ ಆಗುತ್ತದೆ.

ಈಗ $\xi, n, \zeta$ ಗಳನ್ನು ಅಳೆಯುವ ಏಕಕಗಳ ಗಾತ್ರಗಳನ್ನು ಕ್ರಮವಾಗಿ ಮೊದಲಿನದರ $\dfrac{1}{\alpha}, \dfrac{1}{\beta}, \dfrac{1}{\gamma}$ ದಷ್ಟು ಮಾಡಿದರೆ, ಆ ಮೂಲಪರಿಮಾಣಗಳನ್ನು ಅಳೆಯುವ ಸಂಖ್ಯೆಗಳು $\alpha\xi, \beta n, \gamma\zeta$ ಆಗುತ್ತವೆ. ಆಗ ಜನ್ಯಪರಿಮಾಣ $\phi(\alpha\xi, \beta n, \gamma\zeta)$ ಆಗುತ್ತದೆ. ಏಕಕಗಳ ಗಾತ್ರ ಬದಲಾವಣೆಯಿಂದಲೇ ಜನ್ಯಮಾನಗಳನ್ನು ಪಡೆಯುವ ನಿಯಮ ಅಥವಾ ಸೂತ್ರ ಬದಲಾಗಬಾರದು.

ಆ ಜನ್ಯಪರಿಮಾಣದ $\phi(\xi_1, n_1, \zeta_1)$ ಮತ್ತು $\phi(\xi_2, n_2, \zeta_2)$ ಎಂಬ ಎರಡು ಬೇರೆ ಬೇರೆ ಮೌಲ್ಯಗಳನ್ನು ಪರಿಗಣಿಸೋಣ. ಪರಸ್ಪರ ಪ್ರಮಾಣ ನಿರಪೇಕ್ಷ ನಿಯಮದ ಪ್ರಕಾರ

$$\frac{\phi(\xi_1, n_1, \zeta_1)}{\phi(\xi_2, n_2, \zeta_2)} = \frac{\phi(\alpha\xi_1, \beta n_1, \gamma\zeta_1)}{\phi(\alpha\xi_2, \beta n_2, \gamma\zeta_2)}$$

$$\therefore \phi(\alpha\xi_1, \beta n_1, \gamma\zeta_1) = \phi(\alpha\xi_2, \beta n_2, \gamma\zeta_2).\ \frac{\phi(\xi_1, n_1, \zeta_1)}{\phi(\xi_2, n_2, \zeta_2)}$$

ಈಗ β ಮತ್ತು $\gamma$ ಗಳನ್ನು ಸ್ಥಿರಾಂಕಗಳೆಂದು ಭಾವಿಸಿ ಈ ಸಮೀಕರಣವನ್ನು ಕುರಿತು ಆಂಶಿಕವಾಗಿ ಅವಕಲನಿಸಿದರೆ

$$\xi_1\phi'(\alpha\xi_1, \beta n_1, \gamma\zeta_1) = \xi_2\phi'(\alpha\xi_2, \beta n_2, \gamma\zeta_2).\ \frac{\phi(\xi_1, n_1, \zeta_1)}{\phi(\xi_2, n_2, \zeta_2)}$$

ಗುಣಕ $\alpha, \beta, \gamma$ ಗಳು ಕ್ಕೆ ಸಮನಾದರೆ ಆಗ

$$\frac{\xi_1\phi'(\xi_1, n_1, \zeta_1)}{\phi(\xi_1, n_1, \zeta_1)} = \frac{\xi_2\phi'(\xi_2, n_2, \zeta_2)}{\phi(\xi_2, n_2, \zeta_2)}$$

ಆದ್ದರಿಂದ $\xi = \dfrac{\phi'(\xi, n, \zeta)}{\phi(\xi, n, \zeta)}$ =K ಒಂದು ಸ್ಥಿರಾಂಕ

$$\therefore \xi\frac{\phi'}{\phi} = K$$

$$\therefore \frac{\xi}{\phi}\frac{d\phi}{d\xi} = K$$

$$\therefore K\frac{d\xi}{\xi} = \frac{d\phi}{\phi}$$

$$\therefore K \log\xi = \log K'\phi$$

ಎಂದರೆ $\phi = A\xi^a$ ರೂಪದಲ್ಲಿದೆ. ಎಲ್ಲಿ a ಒಂದು ಸ್ಥಿರಾಂಕ; A ಸಾಮಾನ್ಯವಾಗಿ $\xi, n$ ಗಳ ಉತ್ಪನ್ನ. ಇದೇ ಪ್ರಕಾರ $\phi = Bn^b, \phi = C\zeta^c$ ಯ ಇವೆಲ್ಲ ಉತ್ತರಗಳೂ ತಾಳೆಯಾಗ ಬೇಕಾದರೆ $\phi = \lambda\xi^a n^b \zeta^c$ ಆಗಬೇಕು. ಇಲ್ಲಿ λ, a, b, c ಎಲ್ಲವೂ ಸ್ಥಿರಾಂಕಗಳು.

ಹೀಗೆ ಪರಸ್ಪರ ಪ್ರಮಾಣ ನಿರಪೇಕ್ಷ ತತ್ತ್ವಕ್ಕೆ ಅನುಗುಣವಾಗಿರುವ ಪ್ರತಿಯೊಂದು ಜನ್ಯಪರಿಮಾಣವನ್ನೂ ಮೂಲ ಪರಿಮಾಣಗಳ ಘಾತಗಳ ಗುಣಲಬ್ಧವನ್ನಾಗಿ ಬರೆಯಬಹುದು. ಇಂಥ ಸೂತ್ರದ ಹೆಸರು ಆ ಜನ್ಯಮಾನದ ಆಯಾಮಸೂತ್ರ. a, b, c ಗಳು ಪೂರ್ಣಾಂಕಗಳೇ ಆಗಿರಬೇಕಾಗಿಲ್ಲ, ಧನ ಚಿಹ್ನೆಯೂ ಆಗಿರಬೇಕಾಗಿಲ್ಲ. ಈ ಜಿಜ್ಞಾಸೆ ಮೂರಕ್ಕಿಂತ ಹೆಚ್ಚಾಗಿ ಮೂಲ ಪರಿಮಾಣಗಳಿರುವ ಸಮಸ್ಯೆಗೂ ಕೂಡ ಅನ್ವಯಿಸುತ್ತದೆ. ಮೇಲಿನ ಪ್ರಮೇಯದ ವಿಲೋಮವೂ ಸರಿ ಎಂದು ತೋರಿಸಬಹುದು. ಅಂದರೆ, ಜನ್ಯಪರಿಮಾಣದ ಆಯಾಮ ಸೂತ್ರವನ್ನು ಮೂಲ ಪರಿಮಾಣಗಳ ಘಾತಗಳ ಗುಣಲಬ್ಧವನ್ನಾಗಿ ಬರೆದರೆ ಆಗ ಆ ಜನ್ಯಪರಿಮಾಣಕ್ಕೂ ಮೂಲ ಪರಿಮಾಣಗಳಿಗೆ ಅನ್ವಯಿಸಿದಂತೆ ಪರಸ್ಪರ ಪ್ರಮಾಣ ನಿರಪೇಕ್ಷ ತತ್ತ್ವ ಅನ್ವಯಿಸುತ್ತದೆ.

ಉದಾಹರಣೆಗೆ ಜನ್ಯಪರಿಮಾಣದ ಆಯಾಮ ಸೂತ್ರ $\Phi=CML^2T^{-2}$ ಆಗಿರಲಿ M,L,T ಗಳನ್ನು ಅಳೆಯುವ ಏಕಕಗಳನ್ನು ಕ್ರಮವಾಗಿ $\dfrac{1}{a}, \dfrac{1}{b}, \dfrac{1}{c}$ ಗಳಷ್ಟು ಮಾಡಿ ಜನ್ಯಪರಿಮಾಣದ ಎರಡು ಭಿನ್ನ ಮೌಲ್ಯಗಳನ್ನು ಪರಿಶೀಲಿಸಿದರೆ

$$\frac{C(aM_1)(bL_1)^2(cT_1)^{-2}}{C(aM_2)(bL_2)^2(cT_2)^{-2}}$$ ದೊರೆಯುವುದು. ಇದು

$$\frac{CM_1L_1^2T_1^{-2}}{CM_2L_2^2T_2^{-2}}$$ ಗೆ ಸಮಾನವೆಂಬುದು ಸ್ಪಷ್ಟ.

ಈ ವಿಶ್ಲೇಷಣೆಯಲ್ಲಿ ಜನ್ಯಪರಿಮಾಣಗಳಲ್ಲಿನ ಎಲ್ಲ ಪರಿಮಾಣಗಳ ಅಳತೆಗಳನ್ನು ಎಲ್ಲ ಹಂತಗಳಲ್ಲೂ ಒಂದೇ ಏಕಕ ಪದ್ಧತಿಯಲ್ಲಿ ಮಾಡಿರಬೇಕು ಎಂಬ ಅಂಶವನ್ನು ಗಮನಿಸಬೇಕು. ಉದಾಹರಣೆಗೆ ವೇಗೋತ್ಕರ್ಷ ಎಂದರೆ ವೇಗ ಬದಲಾವಣೆಯ ದರ,

[ವೇಗೋತ್ಕರ್ಷ]=[$(V_2-V_1)T^{-1}$]

ಇಲ್ಲಿ ವೇಗ $V_1$ ಇದ್ದದ್ದು T ಕಾಳದಲ್ಲಿ $V_2$ ಆಯಿತು ಎಂದರ್ಥ. ಆದ್ದರಿಂದ ಆಯಾಮ ಸೂತ್ರಗಳಲ್ಲಿ ಚೌಕ ಆವರಣ ಚಿಹ್ನೆಯನ್ನುಪಯೋಗಿಸುತ್ತೇವೆ. [ವೇಗೋತ್ಕರ್ಷ] ಎಂದರೆ ವೇಗೋತ್ಕರ್ಷದ ಆಯಾಮಗಳು ಎಂದರ್ಥ. ಆಯಾಮಸೂತ್ರದಲ್ಲಿ ನಾವು ಎರಡು ವೇಗಗಳ ವ್ಯತ್ಯಾಸವನ್ನು ತೆಗೆದುಕೊಂಡೆವು ಎನ್ನುವುದು ಬೇಕಾಗಿಲ್ಲ. ವೇಗವನ್ನು ಅಳೆಯುವ ವಿಧಾನ ವೇಗೋತ್ಕರ್ಷದಲ್ಲಿ ಸೇರಿದೆ ಎಂದು ತಿಳಿದರೆ ಸಾಕು. ಆದ್ದರಿಂದ ಇನ್ನೂ ಸರಳವಾಗಿ

ವೇಗೋತ್ಕರ್ಷ=[$V\,T^{-1}$]

ಎಂದು ಬರೆಯಬಹುದು. ಹೀಗೆ ಬರೆಯಬೇಕಾದರೆ ಆದಿವೇಗ $V_1$ ಮತ್ತು ಅಂತ್ಯವೇಗ $V_2$ ಎರಡನ್ನೂ ಒಂದೇ ಏಕಕರದಲ್ಲಿ ಅಳೆದಿರಬೇಕು. ಆದರೆ [V]=[$LT^{-1}$] ಆದ್ದರಿಂದ ವೇಗೋತ್ಕರ್ಷ=[$LT^{-1}T^{-1}$]=[$LT^{-2}$] ಎಂದು ಸಹ ಬರೆಯಬಹುದು. ಒಂದೇ ಏಕಕ ಪದ್ಧತಿಯನ್ನು ಎಲ್ಲ ಹಂತಗಳಲ್ಲೂ ಉಪಯೋಗಿಸುವುದರಿಂದ $T^{-1}T^{-1}$ ಅನ್ನು $T^{-2}$ ಎಂದು ಬರೆಯಬಹುದು. ಆದ್ದರಿಂದ ವೇಗೋತ್ಕರ್ಷ=[$LT^{-2}$] ಎಂದು ಸರಳರೀತಿಯಲ್ಲಿ ಬರೆಯಬಹುದು. ಈಗ [$VT^{-1}$] ಅಥವಾ [$LT^{-2}$] ವೇಗೋತ್ಕರ್ಷದ ಆಯಾಮಗಳು. ಅದೇ ರೀತಿ ಬಲದ

[$MLT^{-2}$]ಆಯಾಮಗಳು.

ಬಲಪ್ರಕರಣದ ಕೆಲವು ಜನ್ಯಪರಿಮಾಣಗಳ ಸೂತ್ರಗಳು ಈ ರೀತಿ ಇವೆ.

| ಭೌತ ಪರಿಮಾಣ | | ಆಯಾಮಸೂತ್ರ |
|---|---|---|
| ಜಡಮಾನ | . . . . . . | [M] |
| ಉದ್ದ | . . . . . . | [L] |
| ಕಾಲ | . . . . . . | [T] |
| ವಿಸ್ತೀರ್ಣ | . . . . . . | [$L^2$] |
| ಘನಗಾತ್ರ | . . . . . . | [$L^3$] |
| ಸಾಂದ್ರತೆ= $\dfrac{\text{ಜಡಮಾನ}}{\text{ಘನಗಾತ್ರ}}$ | . . . . . . | [$ML^{-3}$] |
| ವೇಗ= $\dfrac{\text{ದೂರ}}{\text{ಕಾಲ}}$ | . . . . . . | [$LT^{-1}$] |
| ವೇಗೋತ್ಕರ್ಷ= $\dfrac{\text{ವೇಗ ಬದಲಾವಣೆ}}{\text{ಕಾಲ}}$ | . . . . . . | [$LT^{-2}$] |
| ಬಲ=ಜಡಮಾನ X ವೇಗೋತ್ಕರ್ಷ | . . . . . . | [$MLT^{-2}$] |
| ಒತ್ತಡ= $\dfrac{\text{ಬಲ}}{\text{ವಿಸ್ತೀರ್ಣ}}$ | . . . . . . | [$ML^{-1}T^{-2}$] |
| ಕಾರ್ಯ=ಬಲXದೂರ | . . . . . . | [$ML^2T^{-2}$] |
| ಸಾಮರ್ಥ್ಯ= $\dfrac{\text{ಕಾರ್ಯ}}{\text{ಕಾಲ}}$ | . . . . . . | [$ML^2T^{-3}$] |
| ಚಲನಶಕ್ತಿ = 1/2 ಜಡಮಾನ (ವೇಗ)$^2$ | . . . | [$ML^2T^{-2}$] |
| ಬಲದ ಭ್ರಮಣಾಂಕ=ಬಲ ದೂರ | . . . . . . | [$ML^2T^{-2}$] |
| ಸಂವೇಗ=ಜಡಮಾನ ವೇಗ | . . . . . . | [$MLT^{-1}$] |
| ಪ್ರವಾಹ ನಿರೋಧಕತ್ವ = $\dfrac{\text{ಬಲ}}{\text{ವಿಸ್ತೀರ್ಣ}} \Big/ \dfrac{\text{ವೇಗ}}{\text{ದೂರ}}$ | | [$ML^{-1}T^{-1}$] |

ಈ ಮೇಲಿನ ಪಟ್ಟಿಯಲ್ಲಿ ಉದ್ದ (L) ಜಡಮಾನ (M) ಮತ್ತು (T) ಕಾಲಗಳನ್ನು ಮೂಲ ಪರಿಮಾಣಗಳಾಗಿ ಪರಿಗಣಿಸಿದೆ. ಕಾರ್ಯ, ಚಲನಶಕ್ತಿ, ಬಲದ ಭ್ರಮಣಾಂಕ– ಇವೆಲ್ಲ ಸಮಾನ ಆಯಾಮದವು ಎಂದು ಸುಲಭವಾಗಿ ತಿಳಿಯುತ್ತದೆ.

ಈ ಪಟ್ಟಿಯನ್ನು ಬೇರೆ ಪ್ರಕರಣಗಳಿಗೆ ಅಂದರೆ ವಿದ್ಯುತ್ ಪ್ರಕರಣ, ಕಾಂತ ಪ್ರಕರಣ ಮುಂತಾದುವಕ್ಕೆ ವಿಸ್ತರಿಸಲು ಈ ಕೆಳಗಿನ ಎರಡು ಮಾರ್ಗಗಳುಂಟು.

1 ಬೇರೆ ಯಾವ ಹೊಸ ಮೂಲಪರಿಮಾಣವನ್ನೂ ತೆಗೆದುಕೊಳ್ಳದೆ ಪ್ರತಿಯೊಂದು ಪರಿಮಾಣವನ್ನೂ M,L,T ಎಂಬ ಮೂರೇ ಮೂಲ ಪರಿಮಾಣಗಳ ಆಯಾಮಸೂತ್ರಗಳನ್ನಾಗಿ ಬರೆಯುವುದು. ಉದಾಹರಣೆಗೆ ಕೂಲಾಂಬ್ ನಿಯಮದ ಪ್ರಕಾರ

$$\text{ಬಲ} = \left(\frac{\text{ವಿದ್ಯುದಂಶ}}{\text{ದೂರ}}\right)^2$$

$$\text{ವಿದ್ಯುದಂಶ (ಚಾರ್ಜ್)} = \text{ದೂರ} \times \sqrt{\text{ಬಲ}}$$

$$= \left[L\sqrt{MLT^{-2}}\right] = \left[M^{\frac{1}{2}}L^{\frac{3}{2}}T^{-1}\right]$$

$$\text{ವಿದ್ಯುದ್ವಿಭವ (ಪೊಟೆನ್ಷಿಯಲ್)} = \left[M^{\frac{1}{2}}L^{\frac{1}{2}}T^{-1}\right]$$

$$\text{ವಿದ್ಯುತ್ಪ್ರವಾಹ (ಕರಂಟ್)} = \left[M^{\frac{1}{2}}L^{\frac{3}{2}}T^{-2}\right]$$

$$\text{ವಿದ್ಯುತ್ಕ್ಷೇತ್ರ (ಫೀಲ್ಡ್)} = \left[M^{\frac{1}{2}}L^{-\frac{1}{2}}T^{-1}\right]$$

$$\text{ವಿದ್ಯುನ್ನಿರೋಧ (ರೆಸಿಸ್ಟೆನ್ಸ್)} = \left[L^{-1}T\right]$$

ಇಲ್ಲಿ ವಿದ್ಯುದವಾಹಕ ಸ್ಥಿರಾಂಕವನ್ನು (ಡೈಎಲೆಕ್ಟ್ರಿಕ್ ಕಾನ್‌ಸ್ಟೆಂಟ್) 1 ಎಂದು ಪರಿಗಣಿಸಿದೆ. ಈ ಸೂತ್ರಗಳಲ್ಲಿ ಘಾತಗಳು ಪೂರ್ಣಾಂಕಗಳಲ್ಲ.

2 ಇದರ ಬದಲು L,M,T ಗಳ ಜೊತೆಗೆ ವಿದ್ಯುದಂಶ Qವನ್ನೂ ಒಂದು ಮೂಲಪರಿಮಾಣವನ್ನಾಗಿ ಪರಿಗಣಿಸಿ ಸೂತ್ರಗಳನ್ನು ಬರೆದರೆ ಈ ರೀತಿ ಸರಳವಾಗಿರುತ್ತದೆ.

ವಿದ್ಯುದ್ವಿಭವ = $[ML_2T^{-2}Q^{-1}]$

ವಿದ್ಯುತ್ಪ್ರವಾಹ = $[QT^{-1}]$

ವಿದ್ಯುತ್ಕ್ಷೇತ್ರ = $[MLT^{-2}Q^{-1}]$

ವಿದ್ಯುನ್ನಿರೋಧ = $[ML^2T^{-1}Q^{-2}]$

ಆದ್ದರಿಂದ ಈ ಮೊದಲೇ ಹೇಳಿರುವಂತೆ ಮೂಲಪರಿಣಾಮಗಳ ಆಯ್ಕೆಗೆ ನಿಯಮವೇನೂ ಇಲ್ಲ. ಬಲಪ್ರಕರಣದಲ್ಲಿ M,L,T ಎಂಬ ಮೂರು ಮೂಲ ಪರಿಮಾಣಗಳ ಜೊತೆಗೆ ಬಲ Fಅನ್ನೂ ಮೂಲಪರಿಮಾಣವನ್ನಾಗಿ ಪರಿಗಣಿಸಿದರೆ ನ್ಯೂಟನ್ನನ ಎರಡನೆಯ ನಿಯಮವನ್ನು F=kma ಎಂದು ಬರೆಯಬಹುದು. ಇಲ್ಲಿ $[k]=[M^{-1}L^{-1}T^2F]$ ಆದ್ದರಿಂದ k=1 ಇದ್ದ ಮೊದಲಿನ ಏಕಕ ಪದ್ಧತಿಯ ಬದಲು k ಗೆ ಬೇರೆ ಮೌಲ್ಯವಿರುವ ಇನ್ನೊಂದು ಏಕಕ ಪದ್ಧತಿಯನ್ನು ರಚಿಸಬಹುದು.

ವ್ಯಾಖ್ಯೆಯ ನಿರೂಪಣೆ : ಆಯಾಮಸೂತ್ರಗಳು ಜನ್ಯಪರಿಮಾಣಗಳ ವ್ಯಾಖ್ಯೆಯ ಸಂಕ್ಷಿಪ್ತಲಿಪಿ ಎನ್ನಬಹುದು. ಆಯಾಮಸೂತ್ರಕ್ಕೂ ವ್ಯಾಖ್ಯೆಗೂ ಯಾವಾಗಲೂ ನಿಖರವಾದ ಪರಸ್ಪರ ಸಂಬಂಧವಿದೆಯೆಂದೇನೂ ಇಲ್ಲ. ಉದಾಹರಣೆಗೆ ಶಕ್ತಿ ಮತ್ತು ಬಲದ ಭ್ರಮಣಾಂಕ (ಮೊಮೆಂಟ್) ಇವೆರಡಕ್ಕೂ ಎಂಬ ಒಂದೇ ಆಯಾಮ ಸೂತ್ರವಿದೆ. ಆದರೂ ಸಾಮಾನ್ಯವಾಗಿ ಆಯಾಮಸೂತ್ರಕ್ಕೂ ಲಕ್ಷಣ ನಿರೂಪಣೆಗೂ ನಿಕಟಸಂಬಂಧವಿರುತ್ತದೆ.

ಭೂಮಿಯ ಗುರುತ್ವಾಕರ್ಷಣೆಯ ದೆಸೆಯಿಂದ ಒಂದು ವಸ್ತು ನಿಶ್ಚಲಸ್ಥಿತಿಯಿಂದ ಬೀಳುತ್ತಿರುವುದನ್ನು ಪರಿಗಣಿಸೋಣ.

ಕೆಳಕ್ಕೆ ಚಲಿಸಿದ ದೂರ= 16 X (ಚಲಿಸಿದ ಕಾಲ)$^2$

ಅಂದರೆ, $s=16t^2$

ಕೆಳಕ್ಕೆ ಚಲಿಸುವ ವೇಗ =32 X (ಚಲಿಸಿದ ಕಾಲ)

ಅಂದರೆ $v=32t$

ಈ ಎರಡು ಸಮೀಕರಣಗಳಲ್ಲಿ ಅಡಿ, ಪೌಂಡ್ ಮತ್ತು ಸೆಕೆಂಡನ್ನು ಮೂಲ ಏಕಕಗಳಾಗಿ ಪರಿಗಣಿಸಿ ಮಾಡಿದ ಅನೇಕ ಪ್ರಯೋಗಗಳ ವಿವರಗಳೆಲ್ಲ ಅಡಕವಾಗಿದೆ. ಈ ಸಮೀಕರಣಗಳ ಸಹಾಯದಿಂದ ಕಾಲ, ದೂರ, ವೇಗ ಇವುಗಳಲ್ಲಿ ಯಾವುದಾದರೂ ಒಂದು ತಿಳಿದಿದ್ದರೆ ಮತ್ತೆರಡರ ಮೌಲ್ಯವನ್ನು ಪ್ರಯೋಗ ಮಾಡದೆಯೇ ಗಣಿಸಬಹುದು. ಆದರೆ ಸೆಂಟಿಮೀಟರ್, ಗ್ರಾಂ, ಸೆಕೆಂಡುಗಳನ್ನು ಮೂಲ ಏಕಕಗಳಾಗಿ ಉಪಯೋಗಿಸಿದರೆ ಈ ಸಮೀಕರಣಗಳು ತಪ್ಪಾಗುತ್ತವೆ. ಹೀಗಾಗಬಾರದಿತ್ತು ಎಂದು ನಮಗನ್ನಿಸುತ್ತದೆ. ಸರಿಯಾಗಿ ಗಮನಿಸಿದರೆ ಕೆಳಕ್ಕೆ ಚಲಿಸಿದ ದೂರ ಚಲಿಸಿದ ಕಾಲದ ವರ್ಗಕ್ಕೆ ಸರಳ ಪ್ರಮಾಣದಲ್ಲಿದೆ ಎಂದು ತಿಳಿಯಬಹುದು. ಇಲ್ಲಿ ಪ್ರಮಾಣಾನುಗುಣ ಸ್ಥಿರಾಂಕಏಕಮಾನ ಪದ್ಧತಿಯನ್ನು ಅವಲಂಬಿಸಿರುತ್ತದೆ. ಆದರೆ ಪರಸ್ಪರ ಪ್ರಮಾಣ ನಿರಪೇಕ್ಷನಿಯಮಕ್ಕೆ ಅನುಸಾರವಾಗಿ ನಾವೂ ಈ ಸ್ಥಿರಾಂಕ್ಕ ಆಯಾಮಸೂತ್ರಗಳನ್ನು ಕೊಟ್ಟರೆ ಈ ತೊಂದರೆಯನ್ನು ತಪ್ಪಿಸಬಹುದು. ಭೂಮಿಯ ಗುರುತ್ವಾಕರ್ಷಣೆ g=ಸ್ಥಿರಾಂಕ ಎಂದು ಪರಿಗಣಿಸಿದರೆ ಈ ಸಮೀಕರಣಗಳು $g=\frac{1}{2}gt^2,\ v=gt$ ಆಗುತ್ತವೆ.

ಈಗ ಸಮೀಕರಣಗಳು ಯಾವುದೇ ಏಕಕ ಪದ್ಧತಿಗೂ ಸರಿಹೊಂದುತ್ತವೆ. ಹೀಗೆ ಏಕಕಪದ್ಧತಿಯನ್ನು ಅವಲಂಬಿಸಿದ ಸಮೀಕರಣಗಳನ್ನು ಸಂಪೂರ್ಣ ಸಮೀಕರಣಗಳು (ಕಂಪ್ಲೀಟ್ ಇಕ್ವೇಷನ್ಸ್) ಎನ್ನುತ್ತೇವೆ.

ಸಂಪೂರ್ಣ ಸಮೀಕರಣದಲ್ಲಿರುವ ಸ್ಥಿರಾಂಕಗಳಿಗೆ ಆಯಾಮ ಸೂತ್ರಗಳಿವೆ. ಉದಾಹರಣೆಗೆ [g] ಗೆ $[LT^{-2}]$ ಅವುಗಳ ಮೌಲ್ಯ ಏಕಕಪದ್ಧತಿಯನ್ನು ಅವಲಂಬಿಸಿರುತ್ತದೆ. ಇಂಥ ಸ್ಥಿರಾಂಕಗಳನ್ನು ಆಯಾಮಸ್ಥಿರಾಂಕ ಎನ್ನುತ್ತೇವೆ.

ಈಗ ವಿಜ್ಞಾನ ಯಾವ ಮಟ್ಟದಲ್ಲಿದೆಯೆಂದರೆ ಸಾಮಾನ್ಯವಾಗಿ ಎಲ್ಲ ಸಮಸ್ಯೆಗಳಿಗೂ ಸಂಪೂರ್ಣ ಸಮೀಕರಣಗಳು ತಿಳಿದಿವೆ. ಆದ್ದರಿಂದಲೇ ಆಯಾಮಸೂತ್ರಗಳು ಭೌತ ಪರಿಮಾಣಗಳ ವಿವರ ಪಟ್ಟಿ ಮಾಡಲು ಸಂಕ್ಷಿಪ್ತ ಲಿಪಿಯಾಗಿ ಉಪಯೋಗವಾಗುತ್ತವೆ.

ಆಯಾಮ ಸಮಘಾತೀಯತೆ ಮತ್ತು $\pi$ ಪ್ರಮೇಯ (ಡೈಮೆನ್ಷನಲ್ ಹೊಮೊಜಿನೈಟಿ ಅಂಡ್ $\pi$ ಥಿಯೊರಂ) : ಒಂದು ನಿರೂಪಣೆಯ ಅಥವಾ ಸಂಖ್ಯಾ ಸಮುದಾಯದ ಅಥವಾ ಸಮೀಕರಣದ ಪ್ರತಿಯೊಂದು ಪದದ ಆಯಾಮವೂ ಸಮವಾದರೆ ಆ ನಿರೂಪಣೆ ಆಯಾಮ ಸಮಘಾತೀಯವಾಗಿದೆ ಎನ್ನುತ್ತೇವೆ. ಉದಾಹರಣೆಗೆ v=u+at ಸಮೀಕರಣದ ಪದಗಳಿಗೆ ಆಯಾಮಸೂತ್ರ ಅನ್ವಯಿಸಿದರೆ

$$[LT^{-1}]=[LT^{-1}]+[LT^{-2}T]$$

ಆಗುತ್ತದೆ. ಇದರಲ್ಲಿ ಪ್ರತಿಯೊಂದು ಪದದ ಆಯಾಮವೂ $[LT^{-1}]$ ಆದ್ದರಿಂದ ಈ ಸಮೀಕರಣದಲ್ಲಿ ಆಯಾಮ ಸಮಘಾತೀಯತೆ ಇದೆ.

$x_1,x_2,x_3,,\ldots.x_n$ ಎಂಬ n ಭೌತ ಪರಿಮಾಣಗಳ ನಡುವೆ $\phi(x_1,x_2,,\ldots\ldots,x_n)=0$ ಎಂಬ ಒಂದೇ ಒಂದು ಸಂಪೂರ್ಣ ಸಮೀಕರಣ ಸಾಧ್ಯವೆಂದುಕೊಳ್ಳೋಣ. ಈ $x_1,x_2,x_3,,\ldots.x_n$ ಗಳಲ್ಲಿ ಕೆಲವು ಭೌತಪರಿಮಾಣಗಳೂ ಮತ್ತೆ ಉಳಿದವು ಆಯಾಮ ಸ್ಥಿರಾಂಕಗಳೂ ಆಗಿರಬಹುದು. ಆದರೆ ಅವೆರಡಕ್ಕೂ ಆಯಾಮ ಸೂತ್ರಗಳಿರುವುದರಿಂದ ನಮ್ಮ ಈ ವಿಶ್ಲೇಷಣೆಗೆ ಅವೆರಡೂ ಒಂದೇ. ಈ ಎಲ್ಲ n ಭೌತ ಪರಿಮಾಣಗಳು $\alpha,\beta,\gamma\ldots.$ ಎಂಬ ಒಟ್ಟು m ಸಂಖ್ಯೆಯ ಮೂಲ ಪರಿಮಾಣಗಳ ಜನ್ಯಪರಿಮಾಣಗಳಾಗಿರಲಿ. $\phi$ ಸಮೀಕರಣವನ್ನು $F(\pi_1, \pi_2,\ldots\ldots \pi_{n-m})=0$ ಎಂಬ ರೂಪದಲ್ಲಿ ಬರೆಯಬಹುದು. ಇಲ್ಲಿ $\pi_1, \pi_2,\ldots\ldots \pi_{n-m}$ ಗಳಲ್ಲಿ ಪ್ರತಿಯೊಂದೂ $x_1,x_2,\ldots.x_n$ ರ ಘಾತ ಗುಣಲಬ್ಧಗಳಾಗಿ ಆಯಾಮ ರಹಿತವಾಗಿರಬೇಕು. ಈ ಪ್ರಮೇಯವನ್ನು $\pi$ ಪ್ರಮೇಯವೆನ್ನುತ್ತಾರೆ. ಇದನ್ನು ಅನ್ವಯಿಸಲು ಈ ಪರಿಮಾಣಗಳ ನಡುವೆ ಒಂದೇ ಒಂದು ಉತ್ಪನ್ನ (ಫಂಕ್ಷನಲ್) ಸಂಬಂಧ ಇರಬೇಕು. ಅಂದರೆ ಆ ಸಮೀಕರಣದಲ್ಲಿ ಆಯಾಮ ಸಮಘಾತೀಯತೆ ಇರಬೇಕು ಮತ್ತು ಈ ಉತ್ಪನ್ನದ ಪ್ರತಿಯೊಂದು ಪದವೂ ($\pi$ಗಳು) ಆಯಾಮರಹಿತವಾಗಿರಬೇಕು. ಈ ಉತ್ಪನ್ನ ಹೀಗೇ ಇರಬೇಕೆಂದೇನೂ ನಿಯಮವಿಲ್ಲ ಮತ್ತು ಈ(n-m) ಸಂಖ್ಯೆಯ $\pi$ಗಳನ್ನು ಹೀಗೇ ಬರೆಯಬೇಕೆಂದೇನೂ ನಿಯಮವಿಲ್ಲ. ಅಂದರೆ $\pi$ಗಳು ಪರಸ್ಪರಾವಲಂಬಿಗಳಾಗಿ ಇರಬಾರದು; ಅಂದರೆ ಒಂದು $\pi$ ಯನ್ನು ಬೇರೆ $\pi$ ಗಳ ಘಾತಗಳಾಗಿಯೋ ಗುಣಲಬ್ಧವಾಗಿಯೋ ಬರೆಯಲು ಸಾಧ್ಯವಿರಬಾರದು.

**ಆಯಾಮ ವಿಶ್ಲೇಷಣೆ:** ಆಯಾಮ ವಿಶ್ಲೇಷಣೆಯ ಮತ್ತು ಪ್ರಮೇಯದ ಉಪಯೋಗಗಳಲ್ಲಿ ಅತಿ ಮುಖ್ಯವಾದದ್ದೆಂದರೆ ಗಣಿತರೀತ್ಯಾ ಉತ್ತರ ದೊರೆಯುವುದು ಅಸಾಧ್ಯವೆನಿಸುವಷ್ಟು ಕ್ಲಿಷ್ಟವಾದ ಸಮಸ್ಯೆಗಳಲ್ಲಿ ಒಂದು ಉತ್ತರ ದೊರಕಿಸುವುದು.

ಇಲ್ಲಿ mನ ಸಂಖ್ಯೆ ಇಷ್ಟೇ ಇರಬೇಕೆಂದೇನೂ ಇಲ್ಲ. ಎಷ್ಟೋ ಸಮಸ್ಯೆಗಳಲ್ಲಿ mನ ಸಂಖ್ಯೆಯನ್ನು ಹೆಚ್ಚಿಸುವುದರಿಂದ n-m ಕಡಿಮೆಯಾಗಿ ಹೆಚ್ಚು ವಿವರಗಳು ತಿಳಿಯುತ್ತವೆ. ಆದರೆ ಸಾಮಾಣ್ಯವಾಗಿ m ಅನ್ನು ಹೆಚ್ಚಿಸುವುದರಿಂದ ಆಗುವ

ಅನುಕೂಲವನ್ನು ಅದರಿಂದಲೇ ಉದ್ಭವಿಸುವ ಆಯಾಮ ಸ್ಥಿರಾಂಕ ತೊಡೆದುಹಾಕುತ್ತದೆ. ಈ ಆಯಾಮ ವಿಶ್ಲೇಷಣೆಯನ್ನು ಭೌತ ಸಮಸ್ಯೆಗಳಿಗೆ ಹೇಗೆ ಉಪಯೋಗಿಸಬೇಕೆಂದು ತಿಳಿಯಲು ಸಾಕಷ್ಟು ಅನುಭವ ಇರಬೇಕು; ಮತ್ತು ಆ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಆದಷ್ಟೂ ವಿವರಗಳು ತಿಳಿದಿರಬೇಕು. (ಟಿ.ಎನ್.ಎಸ್.)

**ಏಕಕಾಲೀನ ಶಿಲೆಗಳು:** ಭೂ ಇತಿಹಾಸದ ಒಂದೇ ಕಾಲಕ್ಕೆ ಸೇರಿದ ಶಿಲೆಗಳು (ಕಂಟೆಂಪೊರೇನಿಯಸ್ ರಾಕ್ಸ್). ಜೀವ್ಯವಶೇಷಗಳ ಅಭ್ಯಾಸದಿಂದ ಜಲಜಶಿಲಾ ಸಮುದಾಯದ ಕಾಲವನ್ನು ನಿರ್ಣಯಿಸುವ ಕ್ರಮ ರೂಢಿಗೆ ಬಂದಿದೆ. ಒಂದೊಂದು ಕಾಲದ ಜೀವಿಗಳಿಗೂ ಇತರ ಕಾಲದ ಜೀವಿಗಳಿಗೂ ಭಿನ್ನವಾದ ವೈಶಿಷ್ಟ್ಯವಿರುವುದರಿಂದ ಅವುಗಳ ಅವಶೇಷಗಳಲ್ಲಿಯೂ ಈ ವೈಶಿಷ್ಟ್ಯ ಉಳಿದಿರುವುದು. ಇದರ ಪರಿಣಾಮವಾಗಿ ಜಲಜ ಶಿಲಾಸಮುದಾಯದ ಕಾಲನಿರ್ಣಯ ಶಾಸ್ತ್ರೀಯವಾಗಿ ಸಾಧ್ಯವಾಗುತ್ತದೆ. ಜೀವಕೋಟಿ ಭೂ ಇತಿಹಾಸದ ಉದ್ದಕ್ಕೂ ಕಾಲಕಾಲಕ್ಕೆ ಬದಲಾವಣೆಗೊಂಡು ಮುನ್ನಡೆದ ಸಂಗತಿ ಯುರೋಪ್ ಖಂಡದ ಜಲಜಶಿಲಾ ಪರಂಪರೆಯ ಸಂಶೋಧನೆಯಿಂದ ಮೊದಲಬಾರಿಗೆ ವ್ಯಕ್ತವಾಯಿತು. ಆಗ ಭೂವಿಜ್ಞಾನಿಗಳು ಭೂ ಇತಿಹಾಸದ ಪ್ರತಿ ಕಾಲದಲ್ಲಿಯೂ ಪ್ರಪಂಚದ ನಾನಾ ಭಾಗಗಳಲ್ಲಿನ ಜೀವರಾಶಿಯಲ್ಲಿ ಏಕರೂಪತೆ ಇದ್ದಿರಬೇಕೆಂದೂ ಅವುಗಳ ಮುನ್ನಡೆಯೂ ಒಂದೇ ರೀತಿಯಲ್ಲಿ ಸಾಗಿರಬೇಕೆಂದೂ ಅಭಿಪ್ರಾಯಪಟ್ಟರು. ಎರಡು ಪ್ರದೇಶಗಳ (ಅವು ಎಷ್ಟೇ ದೂರದಲ್ಲಿದ್ದರೂ) ಶಿಲಾವರ್ಗಗಳಲ್ಲಿ ಒಂದೇ ರೀತಿಯ ಅಥವಾ ಸರಿಸುಮಾರು ಒಂದೇ ರೀತಿಯ ಜೀವ್ಯವಶೇಷಗಳು ಇದ್ದರೆ ಆ ಶಿಲೆಗಳು ಒಂದೇ ಕಾಲದಲ್ಲಿ ನಿಕ್ಷೇಪಗೊಂಡಿರುತ್ತವೆಂಬ ಅಭಿಪ್ರಾಯಕ್ಕೆ ಬಂದರು. ಇವೇ ಏಕಕಾಲೀನ ಶಿಲಾವರ್ಗಗಳು. ಈ ದಾರಿಯಲ್ಲಿ ನಡೆದ ಸಂಶೋಧನೆ ಜಿಜ್ಞಾಸೆಗಳ ಫಲಿತಾಂಶವಾಗಿ ಶಿಲಾವರ್ಗಗಳು ಈ ಕೆಳಗಿನ ನಿಯಮಗಳಿಗೆ ಒಳಪಟ್ಟರೆ ಅವನ್ನು ಏಕಕಾಲೀನ ಶಿಲೆಗಳು ಎನ್ನುತ್ತಾರೆ. 1. ಆ ಶಿಲಾವರ್ಗಗಳಲ್ಲಿ ಒಂದೇ ರೀತಿಯ ಅಥವಾ ಸುಮಾರು ಒಂದೇ ರೀತಿಯ ಜೀವ್ಯವಶೇಷಗಳಿರಬೇಕು. 2. ಅವು ನಿಕ್ಷೇಪಗೊಂಡ ಪ್ರದೇಶಗಳು ಒಂದೇ ಭೌಗೋಳಿಕ ಪ್ರಾಂತ್ಯಕ್ಕೆ ಸೇರಿದ್ದು, ಪರಸ್ಪರ ಅತಿದೂರದಲ್ಲಿರಕೂಡದು. 3. ಆ ಪ್ರದೇಶಗಳಲ್ಲಿ ಏಕರೀತಿಯ ವಾತಾವರಣ ಇದ್ದಿರಬೇಕು. (ಡಿ.ಆರ್.)

**ಏಕತಳಿ ಸಂತಾನೋತ್ಪಾದನೆ:** ಸಾಕು ಪ್ರಾಣಿ ಮತ್ತು ಕೃಷಿ ಉತ್ಪಾದನೆಯಲ್ಲಿ, ಹೆಚ್ಚು ಹಾಲು ನೀಡಬಲ್ಲ ಹಸು, ಉಣ್ಣೆ ಮತ್ತು ಒಳ್ಳೆಯ ಆಹಾರ ನೀಡಬಲ್ಲ ಕುರಿ, ಮೇಕೆ, ಹಂದಿ, ಕೋಳಿ ಹಾಗೂ ಅಪೇಕ್ಷಿತ ಗುಣಗಳ ಸಸ್ಯಗಳನ್ನು ಪಡೆಯಲು ನಡೆಸುವ ತಳಿ ಸಂವರ್ಧನಾ ವಿಧಾನ.

ಸೂಕ್ತ ಜೀವಿಗಳ ಆಯ್ಕೆ ಮತ್ತು ಸಂಕರಣ ಈ ವಿಧಾನದಲ್ಲಿ ಬಳಸಲಾಗುವುದು. ಹೆಣ್ಣು ಸಂತತಿಯನ್ನು ತಂದೆಯೊಂದಿಗೇ, ಮತ್ತು ಗಂಡು ಸಂತತಿಯನ್ನು ತಾಯಿಯೊಂದಿಗೇ ಅಥವಾ ಸೂಕ್ತ ಜೀನುಗಳಿರುವ ಮೊದಲ ಪೀಳಿಗೆಯ ಸಸ್ಯ/ಪ್ರಾಣಿಯನ್ನು ಎರಡನೇ ಮತ್ತು ಮೂರನೇ ಪೀಳಿಗೆಗಳೊಂದಿಗೆ ತಳಿ ಎಬ್ಬಿಸುವ ಪ್ರಕ್ರಿಯೆ. ಈ ವಿಧಾನದಲ್ಲಿ ಪೀಳಿಗೆಯ ಸೂಕ್ತ ಲಕ್ಷಣಗಳೊಂದಿಗೆ ಸೂಕ್ತವಲ್ಲದ ಲಕ್ಷಣಗಳೂ ಹರಿದು ಬರುವುದರಿಂದ ಆಯ್ಕೆಯನ್ನು ಎಚ್ಚರವಹಿಸಿ ಮಾಡಬೇಕಾಗುವುದು. ತಳಿವಿಜ್ಞಾನ ಮತ್ತು ಕೋಶತಳಿವಿಜ್ಞಾನದ ತತ್ತ್ವಗಳ ಆಧಾರದ ಮೇಲೆ ತಳಿ ಎಬ್ಬಿಸುವುದರಿಂದ ಆಯ್ಕೆಯ ಪ್ರಕ್ರಿಯೆ ಕೆಲವೊಮ್ಮೆ ಸೂಕ್ತವಾಗಲಾರದು. ಇಂತಹ ಸಂತಾನೋತ್ಪಾದನೆ ಜೀವಿ ವೈವಿಧ್ಯಕ್ಕೆ ಅಡಚಣೆಯಾಗ ಬಹುದೆಂಬ ಸಂಶಯವೂ ಇದೆ. (ಎನ್.ಎಸ್.ಎಲ್)

**ಏಕತೆಗಳು:** ನಾಟಕದಲ್ಲಿ ಕಾಲ, ಸ್ಥಳ ಮತ್ತು ಘಟನಾವಳಿಗೆ ಸಂಬಂಧಿಸಿ ಇರಬೇಕಾದುವು ಮೂರು ಏಕತೆಗಳು, ನಾಟಕದ ಏಕತೆಗಳು ಎಂದೂ ಹೆಸರುಂಟು (ದಿ ಯೂನಿಟೀಸ್). ಫ್ರೆಂಚರಲ್ಲಿ ಲೆಸ್ ಯೂನಿತೆ ಸ್ಕ್ಯಾಲಿಜೆರಿಯೆನ್ ಎಂಬ ಹೆಸರು ಸರ್ವಸಾಮಾನ್ಯವಾಗಿ ರೂಢಿಯಲ್ಲಿತ್ತು. 1561ರಲ್ಲಿ ಒಂದು ಕಾವ್ಯ ವಿಚಾರಣೆಯ ಗ್ರಂಥವನ್ನು ಪ್ರಕಟಿಸಿದ ಇಟಲಿಯ ಜೆ.ಸಿ. ಸ್ಕ್ಯಾಲಿಜರನಿಂದ ಏಕತೆಗಳ ವಿಧಿ ಏರ್ಪಟ್ಟಿತೆಂದು ಫ್ರೆಂಚರ ನಂಬಿಕೆ. ನಾಟಕದ ಕಥೆ ವಾಸ್ತವಿಕ ಸತ್ಯವೋ ಎಂಬಂತೆ ತೋರಿ ಬರಬೇಕು ಎಂದು ನುಡಿದು ಸ್ಕ್ಯಾಲಿಜರ್ ಏಕತೆಗಳ ಕಡೆಗೆ ಬೆರಳು ಕೊಂಕಿಸಿದನೇ ಹೊರತು ಸ್ಪಷ್ಟವಾಗಿ ಸೂತ್ರಗೈಯಲಿಲ್ಲ. ಹಾಗೆ 1570ರಲ್ಲಿ ಶಾಸನ ಉಚ್ಚರಿಸಿದಾತ ಇಟಲಿಯ ಕ್ಯಾಸಲ್ ವೆಟ್ರೊ. 1572ರಲ್ಲಿ ಫ್ರೆಂಚ್ ನಾಟಕಕರ್ತ ಜೀನ್ ದ ಲ ಟೇಯ್ಯ ನಾಟಕಕ್ಕೆ ಕಾಲದ ಏಕತೆ, ಸ್ಥಳದ ಏಕತೆ, ಘಟನಾವಳಿಯ ಏಕತೆ–ಮೂರೂ ಅತ್ಯಗತ್ಯವೆಂದು ನೇಮಿಸಿದ. ಅಲ್ಲಿಂದ ಸುಮಾರು ಇನ್ನೂರೈವತ್ತು ಸಂವತ್ಸರ ಪೂರ್ತಿ ಅವುಗಳ ಆಧಿಪತ್ಯ ಒಂದೇ ಸಮನೆ ನಡೆಯಿತು.

ಏಕತೆಗಳ ಅರ್ಥವಿವರಣೆ ಹೀಗೆ : 1. ನಾಟಕದಲ್ಲಿ ಜರುಗುವ ಕಥೆ ತೆಗೆದುಕೊಳ್ಳುವ ಸಮಯ 24 ಗಂಟೆಗಳ ಒಂದು ದಿವಸವನ್ನು ಮೀರಬಾರದು. 2. ಎಲ್ಲ ಘಟನೆಗಳೂ ಒಂದೇ ಸನ್ನಿವೇಶದಲ್ಲಿ ಅಥವಾ ಒಂದು ಸ್ಥಳದ ಹತ್ತಿರ ಹತ್ತಿರ ನಡೆಯತಕ್ಕದ್ದು; ಸ್ಥಳಾಂತರ ಆಗಕೂಡದು. 3. ನಾಟಕದಲ್ಲಿ ಹಲವು ಘಟನೆಗಳು ಬಂದರೂ ಅವೆಲ್ಲ ಒಟ್ಟುಗೂಡಿ ಒಂದೇ ಘಟನಾವಳಿಯಾಗಿರಬೇಕು; ಅಪ್ರಕೃತವಾದ ಯಾವೊಂದು ಸಂಗತಿಗೂ ಕಥಾಸಂವಿಧಾನದಲ್ಲಿ ಪ್ರವೇಶವಿರಕೂಡದು.

ಏಕತೆಗಳ ವಿಧಿ ಇಟಲಿಯ ಹೊಸ ಹುಟ್ಟಿನ ವಿಮರ್ಶಕರಿಂದ ಸ್ವಕಪೋಲ ಕಲ್ಪಿತವಾದುದಲ್ಲ; ರೂಪಕ ವಿಮರ್ಶೆಯ ಪ್ರತಿಷ್ಠಾಪಕನಾದ ಅರಿಸ್ಟಾಟಲನ ಕಾವ್ಯ ಮೀಮಾಂಸೆಯ ಮೇಲೆ ಅವರು ತಪ್ಪು ನೆಪ್ಪಾಗಿ ಮಾಡಿದ ವ್ಯಾಖ್ಯಾನದ ಫಲ. ಅರಿಸ್ಟಾಟಲನ ಬರೆವಣಿಗೆಯಲ್ಲಿ ಖಚಿತವಾಗಿ ನಿರೂಪಿತವಾಗಿರುವುದು ರೂಪಕದ ಕಥಾವಸ್ತುವಿನ ಏಕತೆ ಒಂದೆ. ಅವನ ಹೇಳಿಕೆ ಹೀಗಿದೆ: ನಾಟಕದ ಕಥೆ ಒಂದೇ ಘಟನಾವಳಿಯಾಗಿರತಕ್ಕದ್ದು. ಅದರ ಬಿಡಿ ಪ್ರಸಂಗಗಳನ್ನು ಎಷ್ಟು ಅಚ್ಚುಕಟ್ಟಾಗಿ ಹೊಸೆದಿರಬೇಕೆಂದರೆ ಅವುಗಳಲ್ಲಿ ಒಂದನ್ನು ತೆಗೆದು ಹಾಕಿದರೂ ಅಥವಾ ಅದು ಇರುವ ಸ್ಥಾನವನ್ನು ಬದಲಾಯಿಸಿದರೂ ಪೂರ್ತಿ ಕಥೆಯ ರೂಪವೇ ಕೆಟ್ಟು ಹೋಗಬೇಕು. ಕಾಲದ ಏಕತೆಯನ್ನು ಆತ ಎಲ್ಲಿಯೂ ಕಡ್ಡಾಯವಾಗಿ ವಿಧಿಸಿಲ್ಲ. ಪೊಯೆಟಿಕ್ಸ್ ಗ್ರಂಥದ 5ನೆಯ ಅಧ್ಯಾಯದಲ್ಲಿ ನಾಟಕದ ಘಟನಾವಳಿಗೆ ಸಾಧಾರಣವಾಗಿ ಹಿಡಿಯುವ ಕಾಲಾವಧಿಯನ್ನು ಸೂಚಿಸುವ ವಾಕ್ಯವೊಂದಿದೆ; ಸೂರ್ಯನ ಒಂದು ಪರಿವರ್ತನದೊಳಗೆ ಅಡಕವಾಗುವುದು ರುದ್ರ ನಾಟಕದ ಪ್ರಯತ್ನ; ಆ ಮಿತಿಗಿಂತ ಹೆಚ್ಚಾದರೆ ಎಲ್ಲೋ ಅತ್ಯಲ್ಪ ಹೆಚ್ಚಾಗುತ್ತದೆ. ಸ್ಥಳದ ಏಕತೆಯನ್ನು ಅರಿಸ್ಟಾಟಲ್ ಎಲ್ಲಿಯೂ ಹೆಸರಿಸಿಯೇ ಇಲ್ಲ. ಗಂಭೀರ ನಾಟಕದ ಘಟನಾವಳಿಗಳು ಭವ್ಯ ಕಾವ್ಯದ ಘಟನಾವಳಿಗಳಂತೆ ವಿಶಾಲವಾದುದಲ್ಲ; ಚಿಕ್ಕವು. ಅವಕ್ಕೆ ಸಂಕುಚಿತ ಮೇರೆಗಳುಂಟು–ಇತ್ಯಾದಿ ವಾಕ್ಯಗಳನ್ನು ಸ್ಥಳ ಸೂಚನೆಯೆಂದು ತಿಳಿಯಲಾಗುವುದಿಲ್ಲ. ತಿಳಿದರೂ ಅವಕ್ಕೆ ಸೂತ್ರದ ವೈಖರಿ ಇಲ್ಲ. ನಿಜಾಂಶ ಇಂತಿದ್ದರೂ ಇಟಲಿಯ ಪಂಡಿತರು ಮೂರು ಏಕತೆಗಳನ್ನು ಶಾಸ್ತ್ರೀಯವಾಗಿ ವಿಧಾಯಕ ಮಾಡಿದರು. ಫ್ರಾನ್ಸಿನಲ್ಲಿ ಅವಕ್ಕೆ ರಾಜಾಜ್ಞೆಗೆ ಸದೃಶವಾದ ಗೌರವ ದೊರಕಿತು. ಸೂರ್ಯನ ಒಂದು ಪರಿವರ್ತನ ಎಂದರೆ ಒಂದು ಹಗಲು ಅಥವಾ 12 ಗಂಟೆಗಳು ಎಂದೂ, ಸ್ಥಳದ ಏಕತೆಯೆಂದರೆ ಒಂದೇ ಹೊರ ಅಂಗಳ, ಒಂದೇ ಹಜಾರ ಅಥವಾ ಒಂದೇ ಕೊಠಡಿ ಎಂದು ಅರ್ಥವೆಂದೂ ಅಲ್ಲಿನ ಕೆಲವು ವಿದ್ವಜ್ಜನರ ಮೊಂಡಾಟ. ಇನ್ನೂ ಕೆಲವರು 24 ಗಂಟೆ ಅಥವಾ 36 ಗಂಟೆ ಆಗಬಹುದೆಂದೂ ಕಾರ್ಯಕ್ಷೇತ್ರ ಒಂದೇ ಊರಾದರೆ ಸಾಕೆಂದೂ ಔದಾರ್ಯ ತೋರಿದರು. ಏಕತೆಗಳ ನಿಯಮದಿಂದ ನಾಟಕಕಾರ ಕಾರ್ನೀಲ್ ಬಹು ತ್ರಾಸಗೊಂಡ. ಆದರೆ ರಾಸೀನ್ ಅವು ಮೂರನ್ನೂ ಅಚ್ಚುಕಟ್ಟಾಗಿ ಅನುಸರಿಸಿದ. ಅದರಿಂದ ಅವನ ನಾಟಕಗಳಲ್ಲಿ ಸಹಜತೆ, ಸಮಂಜಸತ್ವಗಳಿಗೆ ಏನೂ ಕುಂದುಬಂದಿಲ್ಲ.

16, 17ನೆಯ ಶತಮಾನದ ಇಂಗ್ಲೆಂಡ್ ಮತ್ತು ಸ್ಪೇನ್ ದೇಶಗಳಲ್ಲಿ ಆ ನಿಯಮಕ್ಕೆ ಕವಿಗಳು ಅಷ್ಟಾಗಿ ತಲೆ ಬಾಗಲಿಲ್ಲ. ಸಿಡ್ನಿ, ಬೆನ್ ಜಾನ್ಸನ್ ಇತ್ಯಾದಿ ವಿಮರ್ಶಕರ ಗರ್ಜನೆ ಇದ್ದರೂ ಮಾರ್ಲೋ, ಷೇಕ್ಸ್‌ಪಿಯರ್, ಲೋಪ್ ಡ ವೀಗ, ಕಾಲ್ಡೆರನ್ ಮೊದಲಾದ ಮಹಾಕವಿಗಳು ಧಾರಾಳಚಿತ್ತವೃತ್ತಿಯಿಂದಲೇ ಕೃತಿ ರಚನೆಗೈದರು. ಅವರ ರೂಪಕದ ಪ್ರಮುಖ ಲಾಂಛನ ವೈಶಾಲ್ಯ, ವೈವಿಧ್ಯ, ಆದರೂ ಕಲೆಗೆ ಎಂದೆಂದೂ ಮರ್ಯಾದೆಯೀಯುವ ಸಂವಿಧಾನದ ಏಕತೆಯನ್ನು ಅವರು ಕೈಬಿಟ್ಟಿಲ್ಲ.

ನಾಟಕ ಎಷ್ಟೇ ಆದರೂ ನಾಟಕ ಮಂದಿರದಲ್ಲಿ ಮೂರು ನಾಲ್ಕು ಗಂಟೆಗಳ ಅವಧಿಯಲ್ಲಿ ನಟರ ಅಭಿನಯದ ಮೂಲಕ ಜರುಗಿ, ಪ್ರೇಕ್ಷಕ ಸಂದೋಹಕ್ಕೆ ಹರ್ಷೋಲ್ಲಾಸವನ್ನಿತ್ತು, ಮುಗಿದು ಹೋಗುವ ಮಿಶ್ರ ಕಲೆಯ ವ್ಯಾಪಾರ. ಆದ್ದರಿಂದ ಅದು ಕಾದಂಬರಿ, ಭವ್ಯಕಾವ್ಯಗಳಂತೆ ನಿಧಾನವಾಗಿ ಹೆಚ್ಚು ಸ್ವಾತಂತ್ರ್ಯದಿಂದ ನಡೆಯುವಂತಿಲ್ಲ. ಯುಕ್ತ ನಿಯಮಗಳ ಹದ್ದಿನಲ್ಲಿ ಅದು ಇದ್ದೇ ಇರತಕ್ಕದ್ದು; ಇಲ್ಲದಿದ್ದರೆ ಅದರಿಂದ ರಸಭಂಗ ಖಂಡಿತ. ಏಕತೆಯೆಂಬ ಮಾತನ್ನು ನಟರಾಗಲಿ ನಾಟಕಕಾರನಾಗಲಿ ಅಲ್ಲಗಳೆದರೆ ಕಷ್ಟ; ಎಂದರೆ ಏಕತೆಯನ್ನು ವಿಶಾಲಾರ್ಥದಲ್ಲಿ ಗ್ರಹಿಸತಕ್ಕದ್ದು. ಒಂದೇ ಕಥೆಯಿಂದ ಕಟ್ಟಿದ ಈಸ್ಕಿಲಸ್‌ನ ಆಗಮೆಮ್ನಾನ್‌ನಲ್ಲೂ ಏಕತೆಯಿದೆ; ನಾಲ್ಕು ಕಥೆಗಳನ್ನು ಒಟ್ಟುಗೂಡಿಸಿ ಕಟ್ಟಿದ ಷೇಕ್ಸ್‌ಪಿಯರನ ದ ಮರ್ಚೆಂಟ್ ಆಫ್ ವೆನಿಸ್‌ನಲ್ಲೂ ಏಕತೆಯಿದೆ.

ಈಚೆಗೆ ಕೆಲವು ವಿದ್ವಾಂಸರು ಆ ಮೂರು ಏಕತೆಗಳಿಗಿಂತಲೂ ತೋರಿಕೆಯ ಅಥವಾ ಪರಿಣಾಮದ ಏಕತೆ (ಯೂನಿಟಿ ಆಫ್ ಇಂಪ್ರೆಷನ್) ಹೆಚ್ಚಾದುದು, ಅಗತ್ಯ ವಾದುದು ಎಂದಿದ್ದಾರೆ. ನಾಟಕ ನಡೆಯುತ್ತ ನಡೆಯುತ್ತ ಕಡೆಗೆ ನೋಟಕನ ಮನಸ್ಸಿನಲ್ಲಿ ಮುದ್ರಿತವಾಗಿ ಉಳಿದು ನಿಲ್ಲುವ ಪರಿಣಾಮ ಏಕಮುಖದ್ದಾಗಿರಬೇಕು. ಅದು ಸರಿ. ಆದರೆ ಅದನ್ನು ರೂಪಕಕ್ಕೆ ಮಾತ್ರ ಏತಕ್ಕೆ ಮೀಸಲಿಡಬೇಕು ? ಎಲ್ಲ ಸಾಹಿತ್ಯ ಪ್ರಕಾರಗಳಿಗೂ ಅದನ್ನು ಹೊಂದಿಸುವುದು ನ್ಯಾಯವೆಂದು ತೋರುತ್ತದೆ. (ಎಸ್.ವಿ.ಆರ್.)

ಷೇಕ್ಸ್‌ಪಿಯರ್ ಕಾಲೈಕ್ಯ, ಸ್ಥಳೈಕ್ಯಗಳನ್ನು ಪಾಲಿಸಲಿಲ್ಲ. ಅವನಿಗಿಂತ ಚಿಕ್ಕವನಾದ ಮಿಲ್ಟನ್ ತನ್ನ ಸ್ಯಾಮ್ಸನ್‌ಅಗನಿಸ್ಟೀಸ್ ನಾಟಕದಲ್ಲಿ ಕಾಲೈಕ್ಯ ಸ್ಥಳೈಕ್ಯವನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಿದ–ಎಷ್ಟರಮಟ್ಟಿಗೆ ಎಂದರೆ, ನಾಟಕದ ಕ್ರಿಯೆಯು ನಿಜಜೀವನದಲ್ಲಿ ತೆಗೆದುಕೊಳ್ಳುವಷ್ಟೇ ಕಾಲವನ್ನು ಅಭಿನಯದಲ್ಲಿ ತೆಗೆದುಕೊಳ್ಳುತ್ತದೆ.

ಸಂಸ್ಕೃತನಾಟಕದಲ್ಲಿ ಕಾಲೈಕ್ಯ, ಸ್ಥಳೈಕ್ಯಗಳ ಪರಿಕಲ್ಪನೆಯೇ ಇಲ್ಲ. ಶಾಕುಂತಲ ನಾಟಕದ ಕ್ರಿಯೆ ಹಲವು ವರ್ಷಗಳನ್ನು ಆವರಿಸಿದೆ. ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತದೆ.

ಕನ್ನಡ ನಾಟಕಗಳು ಆಧುನಿಕ ಯುಗದವು. ಶ್ರೀ ಅವರು ಅಶ್ವತ್ಥಾಮ ನಾಟಕದಲ್ಲಿ ಕಾಲೈಕ್ಯ, ಸ್ಥಳೈಕ್ಯಗಳನ್ನು ಪಾಲಿಸಿದರು; ಆದರೆ ಆ ನಾಟಕಕ್ಕೆ ಪ್ರಾಚೀನ ಗ್ರೀಸಿನ ಅಜಾಕ್ಸ್ ನಾಟಕದ ಮೂಲ. ಕುವೆಂಪು ಅವರು ಬೆರಳ್-ಗೆ-ಕೊರಳ್ ನಲ್ಲಿ ಕಾಲೈಕ್ಯ, ಸ್ಥಳೈಕ್ಯಗಳನ್ನು ಪಾಲಿಸುತ್ತಾರೆ. ಬೇಂದ್ರೆಯವರ ಜಾತ್ರೆಯಲ್ಲಿ ಕ್ರಿಯೆ ಒಂದೇ ಸ್ಥಳದಲ್ಲಿ ನಡೆಯುತ್ತದೆ. ಕೆಲವೇ ನಿಮಿಷಗಳಲ್ಲಿ ಮುಗಿದು ಹೋಗುತ್ತದೆ. ಆಧುನಿಕ ಕನ್ನಡ ರಂಗಭೂಮಿಯು ಈ ಎರಡು ಐಕ್ಯಗಳಿಗೆ ಗಂಟು ಬಿದ್ದಿಲ್ಲ. ಅವನ್ನು ತಿರಸ್ಕರಿಸಿಯೂ ಇಲ್ಲ. ಅವುಗಳನ್ನು ಪಾಲಿಸುವುದು ಕ್ರಿಯೆಯ ಸ್ವರೂಪವನ್ನು ಹೊಂದಿಕೊಂಡಿದೆ.

ಇಡೀ ನಾಟಕವು ಒಂದು ಸ್ಪಷ್ಟವಾದ ಏಕರೂಪದ ಅನುಭವವನ್ನು ತಂದುಕೊಡ ಬೇಕೆಂಬ ಅರ್ಥದಲ್ಲಿ ಕ್ರಿಯೆಯ ಐಕ್ಯತೆ, ಪರಿಣಾಮದ ಐಕ್ಯತೆ ಅನಿವಾರ್ಯ, ಈ ಅನುಭವ ಸಂಕೀರ್ಣವಾಗಿರಬಹುದು, ಆದರೆ ಅದರಲ್ಲಿ ಏಕರೂಪತೆ, ಸಾಮಂಜಸ್ಯ ಅಗತ್ಯ. ಉಳಿದೆರಡು ಐಕ್ಯಗಳು ಅನಿವಾರ್ಯವೂ ಅಲ್ಲ, ತಿರಸ್ಕರಿಸಬೇಕಾದವೂ ಅಲ್ಲ. (ಎಲ್.ಎಸ್.ಎಸ್.)

**ಏಕತ್ವವಾದ:** ಪಾಶ್ಚಾತ್ಯ ಮತ್ತು ಪೌರಸ್ತ್ಯ ತತ್ತ್ವಶಾಸ್ತ್ರ ಚರಿತ್ರೆಯಲ್ಲಿ ಮುಖ್ಯವಾದ ಮತ್ತು ಪ್ರಬಲವಾದ ಒಂದು ತತ್ತ್ವ ಪಂಥ, (ಮಾನಿಸಂ). ಸತ್ ಒಂದೇ ಎಂಬುದು ಈ ವಾದದ ತಿರುಳು. ಸತ್ ಒಂದಲ್ಲ ಎರಡು ಎಂಬ ದ್ವೈತವಾದಕ್ಕೂ ಅನೇಕ ಎಂಬ ಬಹುತ್ವವಾದಕ್ಕೂ ಪ್ರತಿಯಾದದ್ದು ಈ ಏಕತ್ವವಾದ. ಇದು ಎರಡು ಬಗೆಯಾಗಿದೆ. ಸತ್ ಭೌತಸ್ವರೂಪ ಉಳ್ಳದ್ದು ಎಂಬುದು ಒಂದು ಬಗೆಯದು. ಅದು ಚೇತನ ಸ್ವರೂಪವಾದದ್ದು ಎಂಬುದು ಎರಡನೆಯ ಬಗೆಯದು. ಸತ್ ಜೀವಸ್ವರೂಪ ಉಳ್ಳದ್ದು ಎಂಬ ವಾದವನ್ನು ಎರಡನೆಯದರಲ್ಲೇ ಸೇರಿಸುವುದುಂಟು. ಭೌತಏಕತ್ವವಾದವಾಗಲಿ, ಚೈತನ್ಯಏಕತ್ವವಾದವಾಗಲಿ ಕೆಲವು ಒಳ ಭೇದಗಳನ್ನು ಪಡೆದೇ ಇರುತ್ತದೆ. ಏಕತ್ವವಾದಕ್ಕೆ ಬಹುಮುಖಗಳಿವೆ. ಕೆಲವರು ಈ ಒಂದಾದ ಸತ್ ಭಿನ್ನತೆ ಇಲ್ಲದ್ದು ಬೆಳವಣಿಗೆ ಇಲ್ಲದ್ದು ಎಂದು ವಾದಿಸುತ್ತಾರೆ. ಮತ್ತೆ ಕೆಲವರು ಅದು ಭೇದಸಹಿತವಾದ್ದು, ಬೆಳವಣಿಗೆಯುಳ್ಳದ್ದು ಎಂದು ವಾದಿಸುತ್ತಾರೆ. ಇನ್ನೂ ಕೆಲವರು ಸತ್ ರೂಪರಹಿತ, ಭೇದರಹಿತ ಒಂದೆಂದೂ ಪ್ರಪಂಚದಲ್ಲಿ ಕಾಣುವ ಎಲ್ಲ ಭೇದಗಳೂ ಬದಲಾವಣೆಗಳೂ ಮಿಥ್ಯಾ ರೂಪವಾದುವೆಂದೂ ವಾದಿಸುತ್ತಾರೆ.

ಪೌರಸ್ತ್ಯ ತತ್ತ್ವಶಾಸ್ತ್ರ ಚರಿತ್ರೆಯಲ್ಲಿ ಏಕತ್ವವಾದ ಬಹಳ ಹಿಂದೆ ಋಗ್ವೇದ ಕಾಲದಲ್ಲೇ ಕಂಡುಬರುತ್ತದೆ. ಈ ವಾದ ಉಪನಿಷತ್ತುಗಳಲ್ಲಿ ವಿಸ್ತಾರವಾಗಿ, ಹಲವು ವಿಧವಾಗಿ ಪ್ರಕಟವಾಗಿದೆ. ಬುದ್ಧ ಅದ್ವಯವಾದಿ ಎಂದು ಅಮರದಲ್ಲಿ ಹೇಳಿದೆ. ಬೌದ್ಧ ತತ್ತ್ವದ ಒಂದು ಮುಖ್ಯ ಬೆಳವಣಿಗೆಯಾದ ಮಾಧ್ಯಮಿಕ ದರ್ಶನ ಅದ್ವೈತ ಪರವಾದದ್ದೆಂದು ಹೇಳಲು ಪ್ರಬಲ ಕಾರಣಗಳಿವೆ. ಬ್ರಹ್ಮಸೂತ್ರದಲ್ಲಿ ಹಲವು ಬಗೆಯ ಏಕತ್ವವಾದಗಳ ವಿವರಣೆ ಇದೆ. ಗೌಡಪಾದನ ಮಾಂಡೂಕ್ಯಕಾರಿಕೆ ನಿಸ್ಸಂದೇಹವಾಗಿ ಏಕತ್ವವಾದವನ್ನು ಘೋಷಿಸುತ್ತದೆ. ಶಂಕರಾಚಾರ್ಯರ ಅದ್ವೈತವಾದವಂತೂ ಪ್ರಖ್ಯಾತವಾದದ್ದು. ಅದು ಇಂದಿನವರೆಗೂ ಭಾರತದಲ್ಲೂ ಪಾಶ್ಚಾತ್ಯ ದೇಶಗಳಲ್ಲೂ ವಿರಾಜಿಸುತ್ತಿದೆ. ಭೌತ ಏಕತ್ವವಾದ ಭಾರತದಲ್ಲಿ ಅಷ್ಟು ಪ್ರಬಲವಾದ ವಾದವೆಂದು ಹೇಳಲಾಗುವುದಿಲ್ಲ. ಆ ವಾದ ಪಾಶ್ಚಾತ್ಯ ದೇಶಗಳಲ್ಲಿ ಬೆಳೆದಷ್ಟು ಹುಲುಸಾಗಿ ಬೆಳೆಯದಿದ್ದರೂ ಒಂದು ಕಾಲದಲ್ಲಿ ಚಾರ್ವಾಕ ದರ್ಶನದಲ್ಲದು ಸ್ಪಷ್ಟವಾಗಿ ಕಾಣುತ್ತದೆ.

ಪಾಶ್ಚಾತ್ಯ ತತ್ತ್ವಶಾಸ್ತ್ರಚರಿತ್ರೆಯಲ್ಲಿ ಏಕತ್ವವಾದದ ಸ್ಪಷ್ಟವಾದ ಘೋಷಣೆ ಕಾಣಬರುವುದು ಗ್ರೀಕ್ ತತ್ತ್ವಜ್ಞನಾದ ಪಾರ್ಮನಿಡೀಸನ ಸೂತ್ರಪ್ರಾಯವಾದ ಹೇಳಿಕೆಗಳಲ್ಲಿ. ಇಲ್ಲಿ ಕಾಣುವುದು ಸತ್ ಒಂದೇ ಎಂಬ ಸಿದ್ಧಾಂತ. ಈ ಒಂದಾಗಿರುವ ಸತ್ ಚೇತನ ಸ್ವರೂಪವೇ ಭೌತಸ್ವರೂಪವೇ ಈ ಒಂದಾದ ಚಿರವಾದ ಸತ್ತಿಗೂ ಲೋಕದಲ್ಲಿ ಕಾಣುವ ಭಿನ್ನತೆಗೂ ಬದಲಾವಣೆಗಳಿಗೂ ಏನು ಸಂಬಂಧ-ಎಂಬ ಪ್ರಶ್ನೆಗಳಿಗೆ ಅವನ ವಚನಗಳಲ್ಲಿ ನೇರವಾದ ಉತ್ತರ ದೊರೆಯುವುದಿಲ್ಲ. ಈ ಪ್ರಶ್ನೆಗಳನ್ನು ಎತ್ತಿದವ ಪ್ಲೇಟೊ. ಭಿನ್ನತೆಯನ್ನು ಏಕತೆಯೊಡನೆ, ಚೇತನಸ್ವರೂಪವಾದದ್ದನ್ನು ಅಚೇತನದೊಡನೆ, ಚಿರವಾದದ್ದನ್ನು ಬದಲಾವಣೆಯೊಂದಿಗೆ ಸಮನ್ವಯ ಮಾಡಲು ಪ್ಲೇಟೊ ತನ್ನ ಸಂವಾದಗಳಲ್ಲಿ ಬಹು ಪ್ರಕಾರವಾಗಿ ಪ್ರಯತ್ನಿಸಿದ್ದಾನೆ. ಅಲ್ಲಿ ನಿರೂಪಿತವಾಗಿರುವ ನಿಗೂಢ (ಮಿಸ್ಟಿಕ್) ತತ್ತ್ವವೊಂದನ್ನು ತಾನು ಅವಲಂಬಿಸುತ್ತಿದ್ದರೂ ಬರೆವಣಿಗೆಯ ಮೂಲಕ ಎಂದೆಂದಿಗೂ ಅದನ್ನು ಪ್ರಕಟಿಸುವುದಿಲ್ಲವೆಂದು ಆತ ಹೇಳಿದ್ದಾನೆ. ಒಂದು ನಿಗೂಢ ತತ್ತ್ವಸಂಸ್ಥೆಯ ಮುಖ್ಯರಲ್ಲಿ ಆತ ಒಬ್ಬನೆಂದು ಇತರರ ಹೇಳಿಕೆಗಳಿಂದೂ ಸ್ಪಷ್ಟವಾಗುತ್ತದೆ. ಪ್ಲೇಟೊ ಬೌದ್ಧಿಕ ಏಕತ್ವ (ರ್‍ಯಾಷನಲ್ ಮಾನಿಸಂ) ತಾತ್ತ್ವಿಕನಲ್ಲದೆ, ನಿಗೂಢ ಏಕತ್ವತಾತ್ತ್ವಿಕ (ಮಿಸ್ಟಿಕಲ್ ಮಾನಿಸ್ಟ್) ಕೂಡ ಆಗಿದ್ದನೆಂದು ಹೇಳಲು ಸಾಕಾದಷ್ಟು ಕಾರಣಗಳಿವೆ. ಇವನ ಅನಂತರದ ಪ್ಲೋಟೈನಸ್ ತನ್ನ ನಿಗೂಢತತ್ತ್ವ ಪ್ರತಿಪಾದನೆಗಾಗಿ ಪ್ಲೇಟೋವನ್ನು ವಿಶೇಷವಾಗಿ ಆಶ್ರಯಿಸಿರುವುದು ಆ ಕಾರಣಗಳಲ್ಲಿ ಮುಖ್ಯವಾದುದ್ದು. ಆಧುನಿಕರಲ್ಲಿ ಏಕತ್ವವಾದದ ಮುಖ್ಯ ಪ್ರತಿಪಾದಕರು ಬೆನಿಡಿಕ್ಟ್ ಸ್ಪಿನೋಜ಼ ಮತ್ತು ತದನಂತರ ಜರ್ಮನ್ ತಾತ್ತ್ವಿಕ ಹೆಗೆಲ್. ಇವನ ಆಂಗ್ಲೇಯ ಅನುಯಾಯಿಗಳಲ್ಲಿ ಎಫ್.ಎಚ್.ಬ್ರಾಡ್ಲೆ ಪ್ರಸಿದ್ಧನಾದವ. ಪಾಶ್ಚಾತ್ಯ ಏಕತ್ವವಾದಿಗಳಲ್ಲಿ ಅರ್ನೆಸ್ಟ್ ಹೆಗಲ್, ಕಾರಲ್ ಮಾರ್ಕ್ಸ್ ಪ್ರಖ್ಯಾತರು. ಭೌತ ಏಕತ್ವವಾದದ ಒಂದು ಹೊಸ ರೂಪ ಈಗ ರಷ್ಯ ದೇಶದಲ್ಲಿ ವಿರಾಜಿಸುತ್ತಿದೆ.

ಏಕತ್ವ ತತ್ತ್ವದ ಮುಖ್ಯ ಅಂಶ ಇದು. ಇದರ ತಳಹದಿಯಾದ ಭಾವನೆ ಸತ್; ಸತ್ಯ ಸ್ವರೂಪವಾದದ್ದು. ಸತ್ಯ ಎಂದರೆ ಸ್ವತಃ ಅಸಂಗತವಲ್ಲದ್ದು, ಅವಿರೋಧವಲ್ಲದ್ದು, ಸ್ವಸಂಗತವಾದದ್ದು, ಸ್ವಸಂಪೂರ್ಣವಾದುದ್ದು, ಅವಿಭಾಜ್ಯವಾದ ಒಗ್ಗಟ್ಟುಳ್ಳದ್ದು. ಸರ್ವವ್ಯಾಪಕವಾದದ್ದು, ಎಲ್ಲಕ್ಕೂ ಆಧಾರವಾದದ್ದು. ಈ ಭಾವನೆಯನ್ನು ಎಲ್ಲ ಏಕತ್ವವಾದಿಗಳೂ ಒಪ್ಪುತ್ತಾರೆ. ಆದರೆ ಇದರ ಸ್ವರೂಪವೇನು ? ಏಕೈಕವಾಗಿರುವ ಸತ್ ಭೌತವಾದುದೇ ಜೀವರೂಪವಾದುದೆ ? ಇದು ಭಿನ್ನತೆ ಇಲ್ಲದ. ಬದಲಾವಣೆ ಇಲ್ಲದ, ಬೆಳವಣಿಗೆ ಇಲ್ಲದ, ಕಾಲದೇಶಗಳಿಲ್ಲದ, ಸರಳ ಸಾಮಾನ್ಯವೇ ? ಅಥವಾ ವೈವಿಧ್ಯ ಸಹಿತವಾದ ಬೆಳವಣಿಗೆಯುಳ್ಳ ಒಂದೇ ? ಒಂದೇ ಆಗಿಯೂ ವೈವಿಧ್ಯದಿಂದ ಕೂಡಿದ್ದರೆ, ಬದಲಾವಣೆಗಳಿಂದ ಕೂಡಿದ್ದರೆ, ಸಾಮಾನ್ಯಕ್ಕೂ ವೈಶಿಷ್ಟ್ಯಕ್ಕೂ, ಸ್ಥಿರತೆಗೂ ಬದಲಾವಣೆಗೂ ಏನು ಸಂಬಂಧ ?-ಈ ಮುಂತಾದ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಶ್ನೆಗಳಿಗೆ ಏಕತ್ವವಾದಿಗಳು ವಿಧವಿಧವಾದ ಉತ್ತರಗಳನ್ನು ಕೊಟ್ಟಿರುತ್ತಾರೆ. ಈ ಉತ್ತರಗಳು ಭಿನ್ನ ಸಿದ್ಧಾಂತಗಳಾಗಿ ಪರಿಣಮಿಸಿವೆ. ಇವನ್ನು ಸಂಕ್ಷೇಪವಾಗಿ ಪರಿಶೀಲಿಸಬಹುದು.

**ಭೌತ ಏಕತ್ವವಾದ:** ಈ ವಾದವನ್ನು ಚರಿತ್ರೆಯ ದೃಷ್ಟಿಯಿಂದ ಮೂರು ಹಂತಗಳಲ್ಲಿ ವಿವೇಚಿಸಿದೆ. ಮೊದಲನೆಯದು ಪ್ರಾಕ್ತನರದು. ಥಾಲೀಸ್ ಎಂಬ ಗ್ರೀಕ್ ತಾತ್ತ್ವಿಕ ಎಲ್ಲಕ್ಕೂ ಮೂಲವಾದ ವಸ್ತು ಅಪ್, ಅಂದರೆ ನೀರು ಎಂದು ವಾದಿಸಿದ. ಅನ್ಯಾಕ್ಸಿಮೈನೀಸ್ ಎಲ್ಲಕ್ಕೂ ಮೂಲಭೂತವಾದದ್ದು ವಾಯು ಎಂದು ವಾದಿಸಿದ. ಅವನ ತರುವಾಯದ ಅನ್ಯಾಕ್ಸಿಮೆಂಡರ್ ಎಲ್ಲಕ್ಕೂ ಮೂಲಭೂತವಾದದ್ದು ಅಗ್ನಿ ಎಂದು ವಾದಿಸಿದ. ವೇದದ ಕಾಲದಲ್ಲೂ ಇದೇ ವಿಧವಾದ ವಾದಗಳು ಕಾಣಬರುತ್ತವೆ. ಕೆಲವರು ಎಲ್ಲಕ್ಕೂ ಮೂಲಭೂತವಾದದ್ದು ಆಕಾಶ ಎಂದು ವಾದಿಸಿದರು. ಹೀಗೆ ಕ್ರಮಕ್ರಮವಾಗಿ ಸ್ಥೂಲವಾದ ಭೌತವಸ್ತುವಿನಿಂದ ಹೆಚ್ಚು ಹೆಚ್ಚು ಸೂಕ್ಷ್ಮವಾದ ಭೌತವಸ್ತು ಎಲ್ಲಕ್ಕೂ ಮೂಲವೆಂಬ ತತ್ತ್ವವಿವೇಚನೆ ಬೆಳೆಯಿತು. ಹೀಗೆ ಒಬ್ಬೊಬ್ಬರೂ ಒಂದೇ ವಸ್ತುವಿನಿಂದ ಎಲ್ಲವೂ ಹುಟ್ಟಿದ್ದು ಎಂದು ವಾದಿಸಿದರೂ ಅವು ಭಿನ್ನಗುಣಗಳುಳ್ಳವಾದುದರಿಂದ ಅವುಗಳ ಭಿನ್ನತೆಯನ್ನು ಇಲ್ಲವೆನ್ನಲಾಗುವುದಿಲ್ಲ. ನೀರು ನೀರೆ, ಗಾಳಿ ಗಾಳಿಯೆ, ಬೆಂಕಿ ಬೆಂಕಿಯೆ, ದೊಡ್ಡದಾದರೂ ಸಣ್ಣದಾದರೂ ಅದು ತನ್ನ ಸ್ವಭಾವವನ್ನು ಬಿಟ್ಟು ಕೊಡುವುದಿಲ್ಲ.

ನೀರು, ಗಾಳಿ, ಅಗ್ನಿ, ಆಕಾಶ ಇವೆಲ್ಲವೂ ಭೌತವಾದವು. ಈ ಒಂದೊಂದು ಬೇರೆ ಬೇರೆ. ಒಂದರೊಡನೆ ಇನ್ನೊಂದು ಕಲೆಯುವ ಹಾಗಿಲ್ಲ. ಈ ಒಂದೊಂದು ಅನೇಕವಾಗಿ ವಿಭಾಜ್ಯವಾಗಬಲ್ಲಂಥವು. ಒಂದು ತೊಟ್ಟು ನೀರಿನಲ್ಲಿ ನೂರಾರು ನೀರಿನ ಕಣಗಳಿವೆ. ಒಂದು ಸೂಜಿಯ ಕಣ್ಣಿನಲ್ಲಿರುವ ಗಾಳಿಯಲ್ಲಿ ನೂರಾರು ಗಾಳಿಯ ಕಣಗಳಿವೆ. ಒಂದು ಬೆಂಕಿಕಡ್ಡಿಯ ಉರಿಯಲ್ಲಿ ನೂರಾರು ಬೆಂಕಿಯ ಕಿಡಿಗಳಿವೆ. ಒಂದು ಇರುವೆ ನಿಲ್ಲುವಷ್ಟು ಸ್ಥಳದಲ್ಲಿ ಅನೇಕಾನೇಕ ಚುಕ್ಕೆಗಳನ್ನು ಸೇರಿಸಬಹುದು. ಈ ವಿಶ್ವವನ್ನು ವಿಭಜಿಸುತ್ತ ಹೋದರೆ ಅಂತಿಮದಲ್ಲಿ ನಮಗೆ ದೊರೆಯುವುದು ಅಗಣಿತವಾದ ಬಗೆಬಗೆಯ ಕಣಗಳು. ಮನೆ ಇಟ್ಟಿಗೆಗಳಿಂದ ಆಗಿರುವಂತೆ ಈ ವಿಶ್ವವೂ ವಿವಿಧವಾದ ಅಣುಗಳು ಸೇರಿ ಆದದ್ದು. ಆದ್ದರಿಂದ ಈ ವಿಶ್ವಕ್ಕೆ ಅಂತಿಮ ತಳಹದಿ ಈ ಅಣುಗಳು. ಇವೇ ಸತ್ತಿನ ಅಂತಿಮ ವಸ್ತುಗಳು. ಆದ್ದರಿಂದ ಅಂತಿಮದಲ್ಲಿ ಈ ವಿಶ್ವ ಏಕಪ್ರಕಾರವಾದ ಒಂದೇ ಒಂದು ಪದಾರ್ಥವಲ್ಲ. ಅದು ಅನೇಕಾನೇಕ ಪ್ರತ್ಯೇಕವಾದ ಅಣುಗಳ ಸಮುದಾಯ. ಭಿನ್ನಗುಣಗಳುಳ್ಳ ಅನೇಕ ವಸ್ತುಗಳೇ ಈ ವಿಶ್ವಕ್ಕೆ ಮೂಲಕಾರಣಗಳು-ಎಂದು ಡಿಮಾಕ್ರಿಟಸ್ ಮೊದಲಾದ ಭೌತ ಬಹುತ್ವವಾದಿಗಳು ವಾದಿಸಿದರು.

ಏಕತ್ವವಾದಿಗಳು ಈ ವಾದವನ್ನು ಎದುರಿಸಬೇಕಾಯಿತು. ಅದಕ್ಕೆ ಅವರು ಹೊಸದೊಂದು ತರ್ಕಸರಣಿಯನ್ನು ಹಿಡಿದರು. ಅದರ ಮುಖ್ಯಾಂಶ ಇದು: ನಾವು ತತ್ತ್ವಜ್ಞರಾಗಿ ಹುಡುಕುತ್ತಿರುವುದು ವಿಶ್ವದ ಅಂತಿಮ ಕಾರಣವನ್ನು. ಅಣುಗಳು ವಿಶ್ವಕ್ಕೆ ಅಂತಿಮ ಕಾರಣಗಳೆಂದು ನೀವು ಹೇಳುತ್ತೀರಿ. ಅಂತಿಮ ಎಂಬ ಪದವನ್ನು ಅರ್ಥಮಾಡಿಕೊಳ್ಳದೆ ಉಪಯೋಗಿಸುತ್ತಿದ್ದೀರಿ. ಅಂತಿಮ ವಸ್ತು ಎಂದರೆ ಕಾರಣ ಎಂದಲ್ಲಿ ಎಲ್ಲಕ್ಕೂ ಅದು ಕಾರಣವಾಗಿರಬೇಕು. ಅದಕ್ಕೆ ಬೇರೆ ಕಾರಣವಿಲ್ಲದಿರಬೇಕು. ಅದು ಎಲ್ಲವನ್ನು ಒಳಗೊಂಡಿರಬೇಕು. ಅದರ ಹೊರಗೆ ಬೇರೆ ಏನೂ ಇರಕೂಡದು. ಅದು ಅಮಿತವಾಗಿರಬೇಕು. ಅನಂತವಾಗಿರಬೇಕು. ಪರಮವಾಗಿರಬೇಕು. ನಾವು ನೋಡಿದ ನೀರು, ಗಾಳಿ, ಬೆಂಕಿ ಯಾವುದೇ ಆಗಲಿ ಮಿತಿಯುಳ್ಳವು. ಅಂಥ ಮಿತಿಯುಳ್ಳದ್ದು ಪರಮವಾಗಲಾರದು, ಸ್ವತಂತ್ರವಾಗಲಾರದು. ಗಾಳಿಯ ಹೊರಗೆ ಅದಕ್ಕೆ ತಡೆಯಾಗಿ ಘನ ಪದಾರ್ಥಗಳಿವೆ. ಬೆಂಕಿಯ ಹೊರಗೆ ನೀರಿದೆ. ಬೆಂಕಿಯ

ಮೇಲೆ ನೀರು ಬಿದ್ದರೆ ಅದು ಆರಿಹೋಗುತ್ತದೆ. ನೀರನ್ನು ಬೆಂಕಿಯಿಂದ ಕಾಯಿಸಿದರೆ ಅದು ಅನಿಲ ರೂಪದ್ದಾಗುತ್ತದೆ. ಹೀಗೆ ಒಂದು ಇನ್ನೊಂದರ ಸ್ವಭಾವ ತಾನೇ ತಾನಾಗಿ ಉಳಿಯದಂತೆ ಮಾಡುತ್ತದೆ. ಆದ್ದರಿಂದ ಇವುಗಳಲ್ಲಿ ಯಾವುದೊಂದು ಅಂತಿಮದಲ್ಲಿ ತಾನೇತಾನಾಗಿ ಉಳಿಯಲಾರದು. ಭಿನ್ನತೆ ಇದ್ದೆಡೆ ಪರಸ್ಪರ ಘರ್ಷಣೆ, ಪರಸ್ಪರ ವಿನಾಶ ಅನಿವಾರ್ಯ. ಅಂತಿಮ ವಸ್ತು ಎಂದರೆ ಅದು ಅವಿರೋಧವುಳ್ಳದ್ದಾಗಿರಬೇಕು. ಅದಕ್ಕೆ ಹೊರಗೆ ಬೇರೆ ಯಾವುದೂ ಇಲ್ಲವಾಗಿರಬೇಕು. ಅದು ಎಲ್ಲವನ್ನೂ ಒಳಗೊಂಡ ವಸ್ತುವಾಗಿರಬೇಕು. ಅಂಥ ವಸ್ತು ಹುಟ್ಟು ಸಾವು ಇಲ್ಲದ ಸ್ಥಿರಚಿರವಸ್ತುವಾಗಿರಬೇಕು. ಅಂಥ ವಸ್ತು ಒಂದಲ್ಲದೆ ಹಲವಾಗಲಾರದು. ಭೂಮಿ, ನೀರು, ಗಾಳಿ, ಬೆಂಕಿ, ಆಕಾಶ ಎಲ್ಲವೂ ಒಂದೇ ವಸ್ತುವಿನಿಂದ ಬಂದು, ಒಂದೇ ಒಂದೇ ವಸ್ತುವಿನಲ್ಲಿ ಲೀನವಾಗಬೇಕು. ಈ ಭೌತವಸ್ತುಗಳ ತಳಹದಿಯಾಗಿ ಒಂದೇ ಭೌತವಸ್ತು ಪರಮವಾಗಿರಬೇಕು. ಸ್ವಸಂಗತ್ವಾದದ್ದೆ ಸತ್. ಒಂದಲ್ಲದ್ದು ಸ್ವಸಂಗತವಾಗಲಾರದು. ಈ ಒಂದಾದ ಭೌತವಸ್ತುವೇ ಮೂಲಪ್ರಕೃತಿ. ಆ ಪ್ರಕೃತಿ ಒಂದೇ. ಅದು ಸರ್ವವ್ಯಾಪಕ ಸಮಸ್ತವನ್ನೂ ಒಳಗೊಂಡದ್ದು. ಚಿರವಾದದ್ದು ಅನಂತವಾದದ್ದು, ಅನಾದಿಯಾದದ್ದು. ಈ ವಾದ ಭೌತವಾದದ ಎರಡನೆಯ ರೂಪ, ಎಲ್ಲವೂ ಭೌತವಾದ ಪ್ರಕೃತಿಗೆ ಅಧೀನ ಎಂಬ ವಾದಕ್ಕೆ ಪ್ರತಿಯಾಗಿ ಒಂದು ಪ್ರಶ್ನೆ ತಲೆದೋರುತ್ತದೆ. ಪ್ರಕೃತಿ ಇಂಥದು ಎಂದು ನಾವು ಹೇಳಲು ನಮಗೆ ಸಾಧ್ಯವಾದದ್ದು ಅರಿವಿನ ಪ್ರಭಾವದಿಂದ. ಈ ಅರಿವು ಇರವಿನಿಂದ ಪ್ರತ್ಯೇಕ. ಅದು ಇದೆ ಎಂದು ಸಿದ್ಧವಾಗಬೇಕಾದರೆ ತಿಳಿಯುವ ಚೈತನ್ಯ ಅದಕ್ಕೆ ಆಧಾರ. ನಮಗೆ ಮೊದಲು, ನೇರವಾಗಿ, ಬೇರೆಯ ವಿಷಯದ ಸಹಾಯವಿಲ್ಲದೆ ತಿಳಿಯುವುದೆಂದರೆ ನಾನು ಅರಿಯುವವನು ಎಂಬ ಚೇತನ. ನಾನು ಇದ್ದೇನೆ ಎಂದು ಹೇಳಬೇಕಾದರೆ ನನ್ನ ತಿಳಿವು ಆ ಇರವಿಗೆ ಆಧಾರ. ನಾನು ಉಳಿದೆಲ್ಲದರ ಇರವಿನ ವಿಚಾರವಾಗಿ ಸಂಶಯಪಡಬಹುದು, ಇಲ್ಲವೆಂದು ಹೇಳಬಹುದು. ಆದರೆ ನನ್ನ ತಿಳಿವನ್ನೇ ನಾನು ಇಲ್ಲವೆನ್ನುವ ಹಾಗಿಲ್ಲ. ಆ ತಿಳಿವು ಸ್ವತಃಸಿದ್ಧ. ಆ ತಿಳಿವು ಇರವಿಗೆ ಆಧಾರವಾದ್ದರಿಂದ ಜಡವಸ್ತುವಿನ ಇರವಿಗೆ ಚೇತನ ಅಗತ್ಯವಾಗುತ್ತದೆ. ತಿಳಿವಿಲ್ಲದೆ. ತಿಳಿಯಬಹುದಾದ ವಸ್ತುವಿರಲಾರದು. ಆದ್ದರಿಂದ ಭೌತವಸ್ತುವಿನ ಅಸ್ತಿತ್ವ ತಿಳಿವಿನಿಂದಲೇ ಏರ್ಪಡಬೇಕಾದುದರಿಂದ ಇರವು ಅರಿವಿಗೆ ಅಧೀನ. ಅರಿವೇ ಎಲ್ಲ ಇರವಿನ ಅಂತಿಮ, ಪರಮ–ಆಧಾರ–ಎಂಬ ಚೇತನಾದ್ವೈತವಾದ ಈ ಭೌತದ್ವೈತಕ್ಕೆ ಪ್ರತಿವಾದವಾಗಿ ನಿಲ್ಲುತ್ತದೆ.

ಏಕತ್ವ ಭೌತವಾದ ಇನ್ನೊಂದು ಬಗೆಯ ಆಕ್ಷೇಪಕ್ಕೆ ಒಳಪಡುತ್ತದೆ. ಭೌತವಸ್ತು ಕೇವಲ ಜಡವಾದದ್ದು. ಪ್ರಪಂಚವಾದರೋ ಚಟುವಟಿಕೆಯಿಂದ ತುಂಬಿತುಳುಕಾಡುತ್ತಿದೆ. ಅದು ಕೇವಲ ಯಾಂತ್ರಿಕವಾದದ್ದಲ್ಲ, ಗೊತ್ತುಗುರಿ ಇಲ್ಲದ್ದಲ್ಲ. ಈ ವಿಶ್ವದಲ್ಲಿರುವ ಒಂದೊಂದು ವಸ್ತುವೂ ಒಂದು ಗುರಿಯ ಕಡೆಗೆ ಧಾವಿಸುತ್ತದೆ. ಅದರಲ್ಲಿ ಕ್ರಮವಿದೆ. ಉದಾಹರಣೆಗಾಗಿ ಉಪ್ಪಿನ ದ್ರವವನ್ನು ತೆಗೆದುಕೊಳ್ಳೋಣ. ಅದು ಆವಿಯಾದಂತೆಲ್ಲ ಚತುರಸ್ರವಾದ ಹರಳುಗಳು ಸ್ಫುಟಗೊಳ್ಳುತ್ತವೆ, ಪುಟಗೊಳ್ಳುತ್ತವೆ. ಒಂದು ಬೀಜ ಸಸಿಯಾಗಿ, ಕ್ರಮವಾಗಿ ಎಲೆಗಳಾಗಿ ಕೊಂಬೆಗಳಾಗಿ ಕವಲೊಡೆದು ಬೆಳೆಯುತ್ತದೆ. ಅನಂತರ ಹೂ ಬಿಡುತ್ತದೆ. ಹೂ ಕಾಯಾಗಿ ಹಣ್ಣಾಗುತ್ತದೆ. ಉಪ್ಪಿನ ದ್ರವದ ಗುರಿ ಚೆಚ್ಚೌಕವಾದ ಹರಳುಗಳಾಗುವುದು. ಬೀಜದ ಗುರಿ ಗಿಡವಾಗಿ ಬೆಳೆದು ಹಣ್ಣು ಬಿಡುವುದು. ಹೀಗೆ ಪ್ರಪಂಚದಲ್ಲಿ ವಸ್ತುಗಳು ಜಡವಾಗಿರದೆ, ಚಟುವಟಿಕೆಯಿಂದ ಒಂದು ಗುರಿ ಮುಟ್ಟುತ್ತವೆ. ಚಟುವಟಿಕೆಯಿಂದ ಗುರಿ ಮುಟ್ಟುವುದಕ್ಕೆ ಚೇತನದ ಪ್ರಭಾವದಿಂದ ಸಾಧ್ಯವೇ ಹೊರತು, ಕೇವಲ ಅಚೇತನ ವಸ್ತುವಿನಿಂದ ಸಾಧ್ಯವಿಲ್ಲ ಎಂಬುದು ಭೌತವಾದಕ್ಕೆ ಇನ್ನೊಂದು ಪ್ರಬಲ ಆಕ್ಷೇಪ.

ಈ ಆಕ್ಷೇಪಗಳನ್ನು ಭೌತವಾದದ ಮೂರನೆಯ ರೂಪವಾಗಿರುವ ಆಧುನಿಕ ಭೌತವಾದ ಪರಿಹರಿಸಲು ಪ್ರಯತ್ನಿಸಿದೆ. ಈ ಭೌತವಾದಕ್ಕೆ ಡಯಲೆಕ್ಟಿಕ್ ಮೆಟೀರಿಯಲಿಸಂ ಎಂದು ಹೆಸರು. ಇದನ್ನು ಪ್ರತಿಪಾದಿಸಿದವ ಕಾರ್ಲ್ ಮಾರ್ಕ್ಸ್. ಆಧುನಿಕ ಭೌತವಾದಕ್ಕೆ ವಿಜ್ಞಾನ ಆಧಾರ. ವೈಜ್ಞಾನಿಕ ಭೌತವಾದ ಅರಿವು ಇಲ್ಲವೆಂದು ಹೇಳುವುದಿಲ್ಲ. ಅರಿವಿನ ಗುಣವನ್ನು ಅಲ್ಲಗಳೆಯುವುದಿಲ್ಲ. ಬುದ್ಧಿಯನ್ನು ತಿರಸ್ಕರಿಸುವುದಿಲ್ಲ. ಅದನ್ನು ಪುರಸ್ಕರಿಸುತ್ತದೆ. ಅದರ ವಾದ ಇಷ್ಟು. ತಿಳಿವು, ಇದ್ದದ್ದನ್ನು ತಿಳಿಯಬಲ್ಲದ್ದೇ ಹೊರತು, ಅದು ಇರವನ್ನು ಹುಟ್ಟಿ ಹಾಕಲಾರದು, ಹಾಗೆ ಅರಿವು ಇರವನ್ನು ಸೃಷ್ಟಿಸಬಹುದಾದರೆ, ಮಂತ್ರಿಸಿದರೆ ಮಾವಿನಕಾಯಿ ಆಗಬೇಕು. ನಾವು ಏನನ್ನಾದರೂ ತಿಳಿಯಬೇಕಾದರೆ ತಿಳಿಯಬೇಕಾದುದರ ಜಾಡನ್ನು ಹಿಡಿದುಹೋಗಬೇಕು. ಸತ್ತನ್ನು ತಿಳಿಸುವುದು ಸತ್ಯ; ಸತ್ಯ ಸತ್ತಿನ ಅನುಯಾಯಿ. ಸತ್ ಸತ್ಯದ ಅನುಯಾಯಿ ಅಲ್ಲ. ವಿಜ್ಞಾನ ಸತ್ತನ್ನು ಅನುಸರಿಸುವುದರಿಂದಲ್ಲವೆ ಅದು ಅಷ್ಟು ಪ್ರಬಲವಾಗಿ ಬೆಳೆದಿರುವುದು? ಸತ್ತಿನ ಮಾರ್ಗವನ್ನು ಅನುಸರಿಸದೆ ಕೇವಲ ಆಲೋಚನೆಯನ್ನೇ ನಂಬಿದರೆ, ಕೇವಲ ಭಾವನೆಗಳಿಂದಲೇ ಸತ್ತನ್ನು ಸ್ಥಾಪಿಸ ಹೊರಟರೆ, ಆ ನಂಬಿಕೆ ಮಿಥ್ಯವಾಗುತ್ತದೆ, ಬರಡಾಗುತ್ತದೆ. ಮಾನವ ತನ್ನ ಭಾವನೆಗಳೇ ಎಲ್ಲಕ್ಕೂ ಮೂಲ ಎಂಬ ಅಭಿಮಾನವನ್ನು ಹೊಂದಿದ್ದರಿಂದ ಅವನು ಪ್ರಗತಿ ಪಡೆಯಲಿಲ್ಲ; ಹಸಿವಿನಿಂದ, ದೌರ್ಬಲ್ಯದಿಂದ ನರಳುವಂತಾದ. ಪ್ರಕೃತಿಯನ್ನು ನಂಬಿ ಪ್ರಕೃತಿಯನ್ನು ಅನುಸರಿಸಿದ ವಿಜ್ಞಾನದ ಪರಿಣಾಮವಾಗಿ ಮಾನವ ಹೆಚ್ಚು ಸಂಪತ್ತನ್ನು ಗಳಿಸಿ, ಹಸಿವು, ಕಾಯಿಲೆ, ದೌರ್ಬಲ್ಯವನ್ನು ನೀಗಲು ಸಾಧ್ಯವಾಗಿದೆ, ಹೆಚ್ಚು ಕಾಲ ಬದುಕಲು ಸಾಧ್ಯವಾಗಿದೆ.

ವಿಜ್ಞಾನ ಮತ್ತೊಂದು ವಿಧದಲ್ಲಿ ಮಾನವನ ಮಿಥ್ಯಾ ಅಥವಾ ಅಂಧಾಭಿಮಾನವನ್ನು ಕರಗಿಸಿದೆ. ಆಧುನಿಕ ಪರಿಣಾಮವಾದದ ಪ್ರಕಾರ, ಮಾನವ ಹುಟ್ಟಿದ್ದು ಈಚೆಗೆ. ಪುರಾತನವಾದ ಸೂರ್ಯ ಚಂದ್ರಾದಿಗಳೊಡನೆ ಹೋಲಿಸಿದರೆ ಮಾನವ ನಿನ್ನೆ ಹುಟ್ಟಿದ ಶಿಶು. ಅರಿವು, ಬುದ್ಧಿ ಹುಟ್ಟುವುದಕ್ಕೆ ಭೌತವಾದ ದೇಹರಚನೆ ಮತ್ತು ಅದರ ಕ್ರಿಯೆಗಳು ಆಧಾರ. ಅರಿವು ಪ್ರಕೃತಿಯ ಮೂಲಕ್ರಿಯೆಯ ಒಂದು ಉಪವ್ಯಾಪಾರ (ಬೈಪ್ರಾಡಕ್ಟ್) ಅಥವಾ ಉಪವಿಕಾರ (ಎಪಿಫಿನಾಮೆನನ್) ಎಂದು ಹಕ್ಸ್‌ಲಿ, ಹರ್ಬರ್ಟ್ ಸ್ಪೆನ್ಸರ್ ಮುಂತಾದ ವೈಜ್ಞಾನಿಕ ತಾತ್ತ್ವಿಕರು ವಾದಿಸಿರುತ್ತಾರೆ. ವೈದ್ಯರು ಜ್ಞಾನಪಲ್ಲಟವಾಗುವುದಕ್ಕೆ, ಜ್ಞಾನ ತಪ್ಪುವುದಕ್ಕೆ ಶರೀರದಲ್ಲಾಗುವ ಕೆಲವು ಬದಲಾವಣೆಗಳು ಕಾರಣವೆಂದೂ ಮಿದುಳಿಗೆ ಅಗತ್ಯವಾದ ಆಮ್ಲಜನಕದ ಸರಬರಾಯಿ ನಿಂತರೆ ಅರಿವು ನಿಂತು ಹೋಗುವುದೆಂದೂ ಪ್ರಾಯೋಗಿಕವಾಗಿ ಸ್ಥಾಪಿಸಿದ್ದಾರೆ. ಅಲ್ಲದೆ ಪ್ರಪಂಚದ ವಸ್ತುಗಳಲ್ಲಿ ಹೊಸ ಹೊಸ ರಚನೆಗೆ ಈ ಅರಿವು ಕಾರಣವಲ್ಲ. ಅರಿವೇನಿದ್ದರೂ ಹಿಂದೆ ಈ ರೀತಿ ಇದ್ದದ್ದು ಅನಂತರ ಈ ರೀತಿಯಾಗಿ ಪರಿವರ್ತನೆಯಾಗಿದೆ ಎಂದು ತಿಳಿಸುತ್ತದೆಯೇ ಹೊರತು ಆ ಪರಿವರ್ತನೆಗೆ ಕಾರಣವಾಗುವುದಿಲ್ಲ. ವಸ್ತುಗಳನ್ನು ಅರಿತ ಮಾತ್ರದಿಂದ ಅವುಗಳಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಕಾರ್ಯವೇನಿದ್ದರೂ ಭೌತ ಸತ್ತಿನ ಕಾರ್ಯ, ಸತ್ತಿನಲ್ಲಿ ಇಲ್ಲದ ಕಾರ್ಯ ಬೇರೆ ಎಲ್ಲಿಂದಲೂ ಬರಲು ಸಾಧ್ಯವಿಲ್ಲ. ಇಲ್ಲದ್ದರಿಂದ, ಅಸತ್ತಿನಿಂದ ಇರವು ಬಂದಿದೆ ಎಂದು ಹೇಳುವುದು ಅಸಂಗತ ಪ್ರಲಾಪವಾಗುತ್ತದೆ.

ಜಲಜನಕ, ಆಮ್ಲಜನಕ ಇವೆರಡೂ ಸೇರಿ ಎರಡರಿಂದಲೂ ಭಿನ್ನವಾದ ನೀರು ಹುಟ್ಟುವುದಿಲ್ಲವೆ, ಅವೆರಡರಲ್ಲೂ ಇಲ್ಲದ್ದು ಈಗ ನೀರಾಗಿ ಹೊಸದಾಗಿ ಹುಟ್ಟಿಲ್ಲವೆ – ಎಂದು ಕೇಳಬಹುದು.

ಅದಕ್ಕೆ ಭೌತಪರಿಣಾಮವಾದಿಗಳ ಉತ್ತರ ಇದು. ದ್ರವರೂಪ ಆಮ್ಲಜನಕದಲ್ಲಾಗಲಿ, ಜಲಜನಕದಲ್ಲಾಗಲಿ ಇಲ್ಲ. ಅದು ನಿಜ. ಆದರೆ ನೀರಾಗುವ ಶಕ್ತಿ ಅವೆರಡೂ ಪ್ರತ್ಯೇಕವಾಗಿ ಇರುವಾಗ ಇರುವುದಿಲ್ಲ. ಅವುಗಳಲ್ಲಿ ರಜೋಗುಣ ಹೆಚ್ಚಾಗಿ ತಮೋಗುಣ ಕಡಿಮೆಯಾಗಿರುವವರೆಗೂ ಅವು ಹಾಗೆಯೇ ಇರಬೇಕಾಗುತ್ತದೆ. ಆದರೆ ಅವುಗಳಲ್ಲಿ ತಮೋಗುಣವಿಲ್ಲದಿಲ್ಲ. ಯಾವ ವಸ್ತುವನ್ನು ತೆಗೆದುಕೊಂಡರೂ ಅದರಲ್ಲಿ ತಮೋಗುಣ ಇರುತ್ತದೆ. ರಜೋಗುಣವೂ ಇರುತ್ತದೆ. ಜಡವಾಗಿ ಒಂದು ಕಡೆ ಬಿದ್ದಿರುವ ಕಲ್ಲುಬಂಡೆ ಕೇವಲ ತಮಸ್ಸಿನ ಮುದ್ದೆಯಾಗಿ ಕಾಣುತ್ತದೆ. ಆದರೂ ಅದರಲ್ಲಿ ಚಲನೆ ಇದೆ. ಹಾಗೆಯೆ ತುಂಬ ಚಟುವಟಿಕೆಯಾಗಿರುವ ಗಾಳಿಯಲ್ಲಿರುವ ಒಂದು ಆಮ್ಲಜನಕದ ಅಣುವಿನಲ್ಲೂ ಸಾಂದ್ರತೆ ಇದೆ. ಆ ಸಾಂದ್ರತೆ ಇಲ್ಲದಿದ್ದರೆ ಆ ಅಣು ಪ್ರತ್ಯೇಕವಾದ ಅಣುವಾಗಿ ಇರಲು ಸಾಧ್ಯವೇ ಇಲ್ಲ. ಕಲ್ಲು ಬಂಡೆ ಹೇಗೆ ಇತರ ವಸ್ತುಗಳು ತನ್ನೊಳಕ್ಕೆ ಪ್ರವೇಶಮಾಡದಂತೆ ತಡೆದಿರುತ್ತದೆಯೊ ಹಾಗೆ ಆಮ್ಲಜನಕದ ಕಣವೂ ಇತರ ಕಣಗಳು ಅದರೊಳಗೆ ಪ್ರವೇಶ ಮಾಡದಂತೆ ತಡೆದು ನಿಲ್ಲಿಸುವ ಸಾಂದ್ರ ಸ್ವಭಾವವನ್ನೂ ಪಡೆದಿರುತ್ತದೆ. ಯಾವ ವಸ್ತುವೇ ಆಗಲಿ ತಾನು ತಾನಾಗಿ ಇರುವವರೆಗೂ ಇಂಥ ಸಾಂದ್ರತೆಯನ್ನು ಪಡೆದೇ ಇರುತ್ತದೆ. ಒಂದು ವಸ್ತುವಿಗೂ ಇನ್ನೊಂದು ವಸ್ತುವಿಗೂ ಇರುವ ಭೇದಕ್ಕೆ ಅದರ ಸಾಂದ್ರತೆ ಅಂದರೆ ತಮೋಗುಣದ ಮತ್ತು ರಜೋಗುಣದ ಪ್ರಮಾಣಭೇದಗಳು ಕಾರಣಗಳು. ಪ್ರತಿಯೊಂದು ವಸ್ತುವೂ ಈ ಎರಡು ದ್ವಂದ್ವಗಳ ಮಿಶ್ರಣ. ಒಂದೊಂದು ವಸ್ತುವೂ ಈ ಎರಡು ಗುಣಗಳನ್ನೂ ಬೇರೆ ಬೇರೆ ಪ್ರಮಾಣಗಳಲ್ಲಿ ಪಡೆದಿರುವುದಲ್ಲದೆ, ಅವೆರಡನ್ನೂ ಒಂದು ಸಮಸ್ಥಿತಿಗೆ ತರಬಲ್ಲ ಸತ್ತ್ವಗುಣವನ್ನೂ ಪಡೆದಿರುತ್ತದೆ. ಈ ಸಮಸ್ಥಿತಿ ವಸ್ತುಗಳ ಸಾಮಾನ್ಯ ಸ್ಥಿತಿ. ಈ ಮೂರು ಗುಣಗಳು ಎಲ್ಲದರಲ್ಲೂ ಇರುತ್ತವೆ. ಇದು ಇಡೀ ಪ್ರಕೃತಿಯ ಮೂಲತತ್ತ್ವ. ಭಿನ್ನತೆಯನ್ನು ಒಳಗೊಂಡ ಏಕತೆ ಪ್ರಕೃತಿಯ ಸ್ವರೂಪ. ಭೂಮಿಯಂತೆ ದೊಡ್ಡದಾಗಲಿ ಒಂದು ಗುಲಗಂಜಿಯಂತೆ ಚಿಕ್ಕದಾಗಲಿ, ಅದು ಈ ತತ್ತ್ವಕ್ಕೆ ಒಳಪಟ್ಟೇ ಇರುತ್ತದೆ. ಈ ಮೂರು ಗುಣಗಳಿಲ್ಲದ ವಸ್ತುವೇ ಇಲ್ಲ. ಅವು ಕಾರಣ ದೆಶೆಯಲ್ಲಾಗಲಿ, ಕಾರ್ಯ ದೆಶೆಯಲ್ಲಾಗಲಿ, ಈ ಗುಣಗಳನ್ನು ಪಡೆದೇ ಇರುತ್ತವೆ. ಅಲ್ಲದೆ ಕಾರ್ಯವಲ್ಲದ ಕಾರಣವೂ ಕಾರಣವಲ್ಲದ ಕಾರ್ಯವೂ ಇರುವುದಿಲ್ಲ. ಸದಾ ಬದಲಾಯಿಸುತ್ತಿರುವುದು ಪ್ರಕೃತಿಯ ಸ್ವಭಾವವಾದುದರಿಂದ, ಯಾವುದೊಂದೂ ಕಾರ್ಯವಿಲ್ಲದ ಕಾರಣವಾಗಿ ಇರಲಾರದು.

ಈ ವಿಶ್ವದ ಒಂದೊಂದೂ ಪರಿಣಾಮ ಹೊಂದುತ್ತಲೇ ಇರುತ್ತದೆ. ಸತ್ ಯಾವಾಗಲೂ ಕಾರ್ಯರೂಪವೇ ಪರಿಣಾಮಕಾರಿಯೇ. ಆದರೆ ಯಾವ ಪರಿಣಾಮವೂ ಕೇವಲ ಪುನಃಶ್ಚರಣೆಯಲ್ಲ. ಯಾವುದೊಂದೂ ಆ ಸ್ಥಿತಿಯಲ್ಲಿ ಎಲ್ಲ ಕಾಲಕ್ಕೂ ಹಾಗೆಯೇ ಉಳಿದಿರುವುದಿಲ್ಲ. ಪ್ರತಿಯೊಂದು ವಸ್ತುವೂ ಸದಾ ಪರಿಣಾಮಗೊಳ್ಳುತ್ತಾದ್ದರಿಂದ ಅದರ ಮುಖದ ಮೇಲೆ ನವತ್ವದ ಮೆರುಗು ಅಚ್ಚಳಿಯದೆ ಇರುತ್ತದೆ. ಒಂದು ಕಲ್ಲಿನ ಹರಳಾಗಲಿ, ಸ್ಫಟಿಕವಾಗಲಿ, ಗಿಡವಾಗಲಿ, ಕ್ರಿಮಿಯಾಗಲಿ ಯಾವುದೊಂದೂ ಎರಡು ಕ್ಷಣಕಾಲ ಒಂದೇ ಸಮನಾಗಿ ನಿಂತಿರುವುದಿಲ್ಲ; ತಾನೇ ತಾನಾಗಿ ಪ್ರತ್ಯೇಕವಾಗಿಯೂ ಇರುವುದಿಲ್ಲ. ಇತರ ಪದಾರ್ಥಗಳ ಕೇವಲ ಬಹಿರಂಗ ಸಂಸರ್ಗದಿಂದಲೊ ಅವುಗಳ ಅಂತರಂಗರೂಪವಾದ ಸಮವಾಯೀಕರಣದಿಂದ ತನ್ನೊಳಕ್ಕೆ ಹೀರಿಕೊಳ್ಳುವುದರ ಮೂಲಕವೂ ಅವನ್ನು ಅದು ತನ್ನ ಹೊರಗೂ ಒಳಗೂ ಪ್ರತಿಫಲಿಸುತ್ತದೆ. ಆದ್ದರಿಂದ ಪ್ರತಿಯೊಂದೂ ತನ್ನದೇ ಆದ ನವತ್ವವನ್ನೂ ವೈಶಿಷ್ಟ್ಯವನ್ನೂ ಪಡೆದಿರುತ್ತದೆ. ಆದರೆ ಈ ವೈಶಿಷ್ಟ್ಯಕ್ಕೆ ತಾನಲ್ಲದೆ ಇತರ ಕಾರಣಗಳೂ ಉಂಟು. ಆ ವೈಶಿಷ್ಟ್ಯ ಎರಡರ ಅಭಿವ್ಯಕ್ತಿ. ಅಭಿವ್ಯಕ್ತವಾದ ಆ ಪರಿಣಾಮದಲ್ಲಿ ಎರಡೂ ಭಾಗಿಗಳು. ಎರಡರ ತಾದಾತ್ಮ್ಯವೇ ಆ ಅಭಿವ್ಯಕ್ತಿ. ಆದ್ದರಿಂದ ಅವೆರಡರ ಸೇರಿಕೆಯಾದ ಕಾರ್ಯರೂಪದಲ್ಲಿ ಅವೆರಡೂ ಅಂತರ್ಗತವಾಗಿವೆ. ಈ ದೃಷ್ಟಿಯಿಂದ ಕಾರ್ಯದಲ್ಲಿ ಕಾರಣವೂ ಕಾರಣದಲ್ಲಿ ಕಾರ್ಯವೂ ಅಂತರ್ಗತ. ಈ ಕಾರ್ಯಕಾರಣ ಸಂಬಂಧ, ಕಾರಣವೂ ಕಾರ್ಯವೂ ಒಂದೇ ಎಂಬ ಸತ್ಕಾರ್ಯವಾದವೂ ಅಲ್ಲ, ಕಾರಣದಲ್ಲಿ ಕಾರ್ಯವಿಲ್ಲ ಎಂಬ ಅಸತ್ ಕಾರ್ಯವಾದವೂ ಅಲ್ಲ. ಇದು ಸದಸದ್ ಕಾರ್ಯವಾದ. ಕಾರ್ಯ ಕಾರಣದಿಂದ ಏಕತೆಯಿಲ್ಲದ ಅತ್ಯಂತ ಭಿನ್ನತೆಯೂ ಅಲ್ಲ, ಭಿನ್ನತೆ ಇಲ್ಲದ ಏಕೈಕತೆಯೂ ಅಲ್ಲ. ಅದು ಭಿನ್ನಾಭಿನ್ನ. ಎಲ್ಲ ಸತ್ತಿನ ಸ್ವಭಾವವೇ ಈ ಭಿನ್ನಾಭಿನ್ನತೆಯಾದ್ದರಿಂದ, ಈ ಹೊಸ ಭೌತತತ್ತ್ವ ಸತ್ತಾದ್ವೈತದ ಸತ್ಕಾರ್ಯವಲ್ಲ. ಆ ಸತ್ತಾದ್ವೈತದಲ್ಲಿ ಕಾರ್ಯ ಕಾರಣ ಒಂದೇ ಎಂಬ ಭಾವನೆ ಇರುತ್ತದೆ. ಬದಲಾವಣೆ ಕೇವಲ ಮಿಥ್ಯೆ ಎಂದು ಆ ವಾದ ಎಣಿಸುತ್ತದೆ. ಈ ಹೊಸ ಭೌತ ಏಕತ್ವವಾದದ ಪ್ರಕಾರ, ಸತ್ ಎಲ್ಲ ಕಾಲದಲ್ಲೂ ಭಿನ್ನತೆಯಿಂದ ಕೂಡಿದ ಏಕತೆಯ ರೂಪದಿಂದಲೇ ಇರುತ್ತದೆ. ಭಿನ್ನತೆ, ಬದಲಾವಣೆಗಳಿಲ್ಲದ ಏಕತೆ ಎಂದಿಗೂ ಇಲ್ಲ, ಯಾವುದರಲ್ಲಿಯೂ ಇಲ್ಲ. ಎಲ್ಲ ಕಾರ್ಯ ರೂಪಗಳಿಗೂ ಕಾರಣರೂಪಗಳಿಗೂ ಸಮಾನವಾದ ಸ್ವಭಾವ ಇದು. ಅಲ್ಲದೆ ಈ ತತ್ತ್ವ ಯಾವುದೂ ಕೇವಲ ಕಾರಣರೂಪವಾಗಿಯೇ ಅಥವಾ ಕೇವಲ ಕಾರ್ಯ ರೂಪವಾಗಿಯೇ ಇರಬಹುದೆಂಬುದನ್ನು ನಿರಾಕರಿಸುತ್ತದೆ. ಸತ್ ಸದಾ ಕಾರ್ಯಕಾರಣ ರೂಪವೇ. ಈಗ ಕಾರ್ಯವೆಂದು ನಾವು ಎಣಿಸುವುದು ಅದಕ್ಕಿಂತ ಹಿಂದೆ ಕಾರಣ ರೂಪದಲ್ಲಿತ್ತು. ಈಗ ಕಾರಣರೂಪದಲ್ಲಿರುವುದು ಮುಂದಿನ ಕಾರ್ಯರೂಪಕ್ಕೆ ಕಾರಣವಾಗುತ್ತದೆ.

ಯಾವ ವಸ್ತುವೇ ಆಗಲಿ ಅದು ಹಿಂದಿನದನ್ನು ತನ್ನೊಳಕ್ಕೆ ಎಳೆದುಕೊಂಡೇ ಸೆಳೆದುಕೊಂಡೇ ಸೇರಿಸಿಕೊಂಡೇ ಇಂದಿನದಾಗುವುದು. ಇಂದಿನದೆಂಬುದು ನಿನ್ನೆಯದರ ಭವಿಷ್ಯ. ಇಂದಿನದು ಭೂತಭವಿಷ್ಯಗಳು ಸಂಧಿಸುವ ಕೇಂದ್ರ. ಹಿಂದಿನದು ಮುಂದಿನದಕ್ಕೆ ನೂಕು ಕೊಡುತ್ತದೆ. ಮುಂದಿನದು ಹಿಂದಿನದನ್ನು ಎಳಕೊಳ್ಳುತ್ತದೆ. ಮುಂದಿನದರಲ್ಲಿ ಹಿಂದಿನದೂ ಇದೆ, ಹಿಂದಿನದರಲ್ಲಿ ಮುಂದಿನದೂ ಇದೆ. ಒಂದನ್ನೊಂದು ಬಿಟ್ಟರೆ ಎರಡೂ ಕುಸಿದು ಬೀಳುತ್ತವೆ. ಈ ತ್ರಿಕಾಲಸಾಮರಸ್ಯವನ್ನು ಬಿಟ್ಟು ಚಲನೆಯಾಗಲಿ, ಚಲನೆಯನ್ನು ಬಿಟ್ಟು ವಸ್ತುವಾಗಲಿ ಇರುವುದಿಲ್ಲ.

ಹಿಂದಿನ ಭೌತವಾದಕ್ಕೂ ಈ ಹೊಸ ಭೌತವಾದಕ್ಕೂ ವ್ಯತ್ಯಾಸವಿರುವುದು ಇಲ್ಲಿ. ಚಲನೆ ಇಲ್ಲದ ಭೌತವಸ್ತುವಿದೆ, ಭೌತವಸ್ತುವಿನಿಂದ ಪ್ರತ್ಯೇಕವಾದ ಚಲನೆ ಇದೆ, ವಸ್ತುಚಲನೆಗಳಿಂದ ಪ್ರತ್ಯೇಕವಾಗಿ ದಿಕ್ ಮತ್ತು ಕಾಲಗಳು ಇವೆ, ಆಕಾಶವೆಂಬ ಖಾಲಿ ಜಾಗದಲ್ಲಿ ಅದಕ್ಕೆ ಬಾಹಿರವಾದ ವಸ್ತು ಇದೆ, ಕಾಲವೆಂಬ ಇನ್ನೊಂದು ವಸ್ತುವಿನಲ್ಲಿ ಅದರಿಂದ ಹೊರತಾದ ಚಲನೆ ಇದೆ. ಹೀಗೆ ಒಂದಕ್ಕೊಂದು ಆಂತರಿಕ ಸಂಬಂಧವಿಲ್ಲದ ಭೌತವಸ್ತು, ಚಲನೆ, ಆಕಾಶ, ಕಾಲ ಇವುಗಳ ಸಂಸರ್ಗವೇ ಈ ವಿಶ್ವವೆಂದು ಹಳೆಯ ಭೌತವಾದ ಎಣಿಸಿತ್ತು. ಈಗಿನ ಹೊಸ ಭೌತವಾದದ ಪ್ರಕಾರ ಅವು ಯಾವುದೊಂದೂ ಹೊರಚ್ಚಾಗಿ, ಪ್ರತ್ಯೇಕವಾಗಿ, ಒಂದಕ್ಕೊಂದು ಬಾಹಿರವಾಗಿ ಇರುವುದಿಲ್ಲ. ಚಲನೆಯನ್ನೊಳಗೊಳ್ಳದ ಭೌತವಸ್ತುವಿಲ್ಲ; ಆಕಾಶ ಮತ್ತು ಕಾಲವನ್ನೊಳಗೊಳ್ಳದ ವಸ್ತುವಾಗಲಿ ಚಲನೆಯಾಗಲಿ ಇಲ್ಲ; ಭಿನ್ನತೆ ಇಲ್ಲದ ಏಕಪ್ರಕಾರತೆಯೂ ಏಕತೆ ಇಲ್ಲದ ಭಿನ್ನತೆಯೂ ಇಲ್ಲ. ಈ ವಿಶ್ವ ಯಾವ ಕಾಲದಲ್ಲೂ ತಾನೇ ತಾನಾಗಿ ಇರಬಲ್ಲ, ಒಂದಕ್ಕೊಂದು ಬಾಹಿರವಾದ, ಏಕಾಕಿಯಾದ, ಅಂಟಿಲ್ಲದ ಸಂಬಂಧಗಳಿಲ್ಲದೆ ಸರಳರೂಪವಾಗಿ ಇರಲಿಲ್ಲ. ಹಾಗೆ ಈಗಲೂ ಇಲ್ಲ, ಮುಂದೆಯೂ ಇರುವುದಿಲ್ಲ. ಈ ವಿಶ್ವ ಎಲ್ಲ ಕಾಲದಲ್ಲೂ ದೇಶ, ಕಾಲ, ಚಲನೆಗಳ ಆಂತರಿಕ ಸಂಬಂಧವನ್ನು ಒಳಗೊಂಡ ಭಿನ್ನಾಭಿನ್ನವಸ್ತು.

ಈ ಹೊಸ ಭೌತವಾದವನ್ನು ಹಳೆಯದಾದ ಅವಿಚಾರರಮಣೀಯ ಭೌತವಾದದಿಂದ ಪ್ರತ್ಯೇಕಿಸಲು ಅದನ್ನು ವಿಚಾರರಮಣೀಯವಾದವೆಂದು ಮಾರ್ಕ್ಸ್, ಎಂಜೆಲ್, ಲೆನಿನ್ನರು ಕರೆದಿರುತ್ತಾರೆ. ಇದು ಹಳೆಯಕಾಲದ ಅಶಿಕ್ಷಿತ ಚಾರ್ವಾಕ ವಾದವಲ್ಲ, ಭಾರತೀಯರು ಹಿಂದೆ ಗುರುತಿಸಿದ್ದ ಸುಶಿಕ್ಷಿತ ಚಾರ್ವಾಕವಾದ. ಈ ವಾದವನ್ನು ಮಾರ್ಕ್ಸ್ ಮೊಟ್ಟ ಮೊದಲಿಗೆ ಸೂಚಿಸಿದನಾದರೂ ಅದು ಅಷ್ಟು ಮೈತುಂಬಿಕೊಂಡಿರಲಿಲ್ಲ. ಲೆನಿನ್‌ನಲ್ಲಿ ಅದು ಸ್ವಲ್ಪ ಮೈ ತುಂಬಿದೆ. ಲೆನಿನ್ನನಿಂದ ಈಚೆಗೆ ಬೆಳೆದ ವಿಜ್ಞಾನವನ್ನೂ ಮಾರ್ಕ್ಸ್‌ನ ವಾದಕ್ಕೆ ಇತರ ತಾತ್ತ್ವಿಕರು ಎತ್ತಿದ ಆಕ್ಷೇಪಗಳನ್ನೂ ಗಣನೆಗೆ ತೆಗೆದುಕೊಂಡು, ಹೊಸ ವಿಜ್ಞಾನಕ್ಕೆ ಹೊಂದುಕೊಳ್ಳುವಂತೆಯೂ ಮಾರ್ಕ್ಸ್‌ನ ತತ್ತ್ವದಲ್ಲಿ ಕಾಣುವ ಅಸ್ಪಷ್ಟತೆಯನ್ನು ಹೋಗಲಾಡಿಸುವಂತೆಯೂ ಇಂದಿನ ವೈಚಾರಿಕಭೌತವಾದ ರೂಪುಗೊಳ್ಳುತ್ತಿದೆ. ಆ ವಿಚಾರವಾದ ಚಾರಿತ್ರಿಕವಾದವಾದುದರಿಂದ ಭವಿಷ್ಯದೃಷ್ಟಿಯಷ್ಟೇ (ಫ್ಯೂಚರಿಸಂ) ಸಂಪ್ರದಾಯದ ದೃಷ್ಟಿಯೂ (ಟ್ರೆಡಿಷನಲಿಸಂ) ಮುಖ್ಯವೆಂದು ಎಣಿಸುತ್ತದೆ. ಈ ಹೊಸಭೌತವಾದ ಇಂದು ತಾನು ಪ್ರತಿಪಾದಿಸುತ್ತಿರುವ ತತ್ತ್ವವೇ ಕೊನೆಯ ಮಾತೆಂದು ಪರಿಗಣಿಸಿರುವುದಿಲ್ಲ. ಅದನ್ನು ಮೀರಿಸುವ, ಅದಕ್ಕಿಂತ ವಿಹಿತವಾದ ಮತ್ತು ಸುಂದರವಾದ ಭೌತವಾದಗಳು ಹುಟ್ಟಲೇಬೇಕು, ಹುಟ್ಟಿಯೇ ಹುಟ್ಟುತ್ತವೆ – ಎಂದು ಸಾರುತ್ತಿದೆ. ಆದ್ದರಿಂದ ಈಗಿರುವ ಭೌತವಾದ ಸದ್ಯದಲ್ಲಿ ಸಮರ್ಪಕವೆಂದು ತಿಳಿಯಬೇಕೇ ಹೊರತು ಹೊಸ ವಿವೇಚನೆ, ಹೊಸ ಜೀವನಕ್ಕೆ ಅವಕಾಶವೇ ಇಲ್ಲದಷ್ಟು ಪರಿಪೂರ್ಣವೆಂದು ತಿಳಿಯಲಾಗದು. ಪ್ರತಿಯೊಂದು ಕಾಲದ ಜನರೂ ತಮ್ಮ ಸ್ಥಿತಿಗೆ ತಕ್ಕಂತೆ ವಿವೇಚನೆ ನಡೆಸುತ್ತಲೇ ಇರಬೇಕು. ಏಕೆಂದರೆ ಹಿಂದಿನವರು ಹಾಗೆ ವಿವೇಚನೆ ನಡೆಸಿದ್ದುದರಿಂದಲೇ ಅವರು ತಮ್ಮ ಬಾಳನ್ನು ರೂಪಿಸಿಕೊಂಡದ್ದು. ನಮ್ಮ ಬಾಳನ್ನು ರೂಪಿಸಿಕೊಳ್ಳುವುದು ನಮ್ಮ ಪಾಲಿಗೆ ಬಂದ ಜವಾಬ್ದಾರಿ. ಯಾವ ಕಾಲದವರೂ ಈ ಜವಾಬ್ದಾರಿಯನ್ನು ಬಿಟ್ಟುಕೊಡಲಾಗದು. ಈ ಜವಾಬ್ದಾರಿಯ ಅರಿವಿಲ್ಲದ ಜನರ ಜೀವನ ಹುರುಳಿಲ್ಲದ ಜಳ್ಳು ಜೀವನವಾಗಿ ಪರಿಣಮಿಸುತ್ತದೆ.

ಡಯಲೆಕ್ಟಿಕ್ ಎಂಬ ಪದದ ಅರ್ಥವನ್ನು ಸೂಚಿಸಿದಲ್ಲದೆ ಭೌತವಾದದ ವಿವೇಚನೆ ಪೂರ್ಣವಾಗುವುದಿಲ್ಲ. ಈ ಪದ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ತುಂಬ ಪ್ರಭಾವಶಾಲಿಯಾದುದು. ಇದು ಹುಟ್ಟಿದ್ದು ಪ್ಲೇಟೋವಿನ ಚಿತ್ ಪ್ರಧಾನವಾದ ತತ್ತ್ವದಲ್ಲಿ. ಡಯಲೆಕ್ಟಿಕ್ ಎಂದರೆ ಬಹುಮುಖವಾದ ವಿಮರ್ಶೆ. ಏಕಪ್ರಕಾರ ಒಂದೇ ಸರಣಿಯಲ್ಲಿ ಆಲೋಚನೆಯನ್ನು ನಡೆಸಿದರೆ ಆಲೋಚನೆ ಗೊಡ್ಡುಬೀಳುತ್ತದೆ. ವಿಚಾರ ಹುಟ್ಟುವುದಕ್ಕೆ ಎರಡು ಪಕ್ಷಗಳಾದರೂ ಇರಬೇಕು. ಮನುಷ್ಯ ಏಕಾಕಿಯಲ್ಲ, ಸಮಾಜಜೀವಿ. ಇಬ್ಬರಿಲ್ಲದೇ ಮನುಷ್ಯಜನ್ಮವೇ ಅಸಾಧ್ಯ. ಹೆಣ್ಣೂ ಆಲೋಚಿಸಬೇಕು. ಗಂಡೂ ಆಲೋಚಿಸಬೇಕು. ತಮ್ಮ ಸ್ಥಿತಿಗತಿ, ದೇಹಧರ್ಮ, ಮನೋಧರ್ಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಲೋಚಿಸಬೇಕು. ತನ್ನತನವನ್ನು ಯಾರೂ ನಿರಾಕರಿಸಲಾಗುವುದೂ ಇಲ್ಲ, ನಿರಾಕರಿಸಬೇಕಾದ ಅಗತ್ಯವೂ ಇಲ್ಲ. ನಮ್ಮನ್ನು ನಾವು ಬಿಟ್ಟರೆ, ನಮ್ಮಿಂದ ನಾವು ದೂರಸರಿದುಬಿಟ್ಟರೆ, ನಮ್ಮನ್ನು ನಾವು ರಕ್ಷಿಸಿಕೊಳ್ಳದಿದ್ದರೆ, ನಮ್ಮಿಂದ ನಾವು ಸುಖ ದೊರಕಿಸಿಕೊಳ್ಳಲಾಗಿದಿದ್ದರೆ, ಬೇರೆ ಯಾರಿಂದಲೂ ಅವರು ಎಷ್ಟೇ ಸಮರ್ಥರಾದರೂ– ರಕ್ಷಣೆ ಇಲ್ಲ, ಬಿಡುಗಡೆ ಇಲ್ಲ, ಸೌಖ್ಯವಿಲ್ಲ. ನಮ್ಮನ್ನು ನಾವು ನಿರಾಕರಿಸಲಾಗದಿದ್ದರೆ ಇತರರೂ ತಮ್ಮನ್ನು ತಾವು ನಿರಾಕರಿಸಲಾಗುವುದಿಲ್ಲ. ಈ ಮುಖ್ಯ ಅಂಶವನ್ನು ಗ್ರಹಿಸಿದರೆ ಒಂದು ಸಾರ್ವತ್ರಿಕ ತತ್ತ್ವ ದೊರೆತಂತಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಕಾಲುಗಳ ಮೇಲೆ ನಿಲ್ಲಬೇಕು. ಇತರರನ್ನೂ ಹಾಗೆಯೆ ತಮ್ಮ ಕಾಲಿನ ಮೇಲೆ ನಿಲ್ಲಲು ಅವಕಾಶ ಕೊಡಬೇಕು. ಹಾಗಾದರೆ ಇಬ್ಬರಲ್ಲೂ ಸಾಮರಸ್ಯ ಕುದುರುತ್ತದೆ. ಮನುಷ್ಯಜೀವನಕ್ಕೆ ಹೊಂದುವ ಈ ತತ್ತ್ವ ಎಲ್ಲಕ್ಕೂ ಅನ್ವಯವಾಗುತ್ತದೆ. ಈ ವಿಶ್ವದಲ್ಲಿ ಪ್ರತಿಯೊಂದು ವಸ್ತುವೂ ತನ್ನತನವನ್ನು ಪಡೆದಿರುತ್ತದೆ. ಪ್ರತಿಯೊಂದು ವಸ್ತುವು ಅದೇ ವಿಧವಾದ ತನ್ನತನವನ್ನು ಪಡೆದ ಇತರ ವಸ್ತುಗಳೊಡನೆ ಸಂಬಂಧ ಪಡೆದಿರುತ್ತದೆ. ಪ್ರತಿಯೊಂದು ವಸ್ತುವೂ ಶಕ್ತಿಪುಂಜವಾಗಿದೆ. ಅದು ಬೆಳೆಯುವ ವಸ್ತು. ಆದರೆ ಈ ಒಂದೊಂದರ ಬೆಳೆವಣಿಗೆಯೂ ಇತರ ವಸ್ತುಗಳ ಬೆಳೆವಣಿಗೆಗೆ ಸಾಪೇಕ್ಷವಾಗಿರುತ್ತದೆ. ಒಂದನ್ನು ಬಿಟ್ಟು ಇನ್ನೊಂದು ಬೆಳೆಯುವಂತಿಲ್ಲ. ಆದ್ದರಿಂದ ಯಾವ ವಸ್ತುವು ಬೆಳೆಯಬೇಕಾದರೂ ತನ್ನತನವನ್ನು ಬಿಡುವಂತಿಲ್ಲ. ಇತರ ವಸ್ತುಗಳೊಡನೆ ಸಂಬಂಧವನ್ನೂ ಬಿಡುವಂತಿಲ್ಲ, ವಸ್ತು ವಸ್ತುವಿಗೆ ಇರುವ ಭೇದವನ್ನೂ ಸಂಬಂಧವನ್ನೂ ನಿರಾಕರಿಸಲಾಗುವುದಿಲ್ಲ. ವಸ್ತುಸ್ಥಿತಿ ಹೀಗಿರುವುದರಿಂದ ಒಂದಕ್ಕೊಂದು ಪ್ರತಿಯಾಗಿ ನಿಲ್ಲುವುದು, ಅನಿವಾರ್ಯ. ಇವುಗಳ ಘರ್ಷಣೆ ಅನಿವಾರ್ಯ. ಅಂತೆಯೆ ಘರ್ಷಣೆಯನ್ನು ಮೆಟ್ಟಿ ಸಮರಸ ಸಂಬಂಧವನ್ನು ಕುದುರಿಸುವುದೂ ಅಷ್ಟೇ ಅನಿವಾರ್ಯ. ವಿಶ್ವ ಬೆಳೆಯುತ್ತಿರುವುದಕ್ಕೆ ಈ ಘರ್ಷಣೆ ಒಂದು ರೆಕ್ಕೆಯಾದರೆ ಸಾಮರಸ್ಯ, ಹೊಂದಿಕೆ ಇನ್ನೊಂದು ರೆಕ್ಕೆ. ಈ ವಿಶ್ವಕ್ರಿಯೆಯ ಸಾರ್ವತ್ರಿಕ ಸ್ವರೂಪ ದ್ವಂದ್ವದಿಂದ ನಿರ್ದ್ವಂದ್ವವನ್ನು ಕುದುರಿಸುವುದು.

ಈ ಬೆಳೆವಣಿಗೆಯ ರೀತಿಯನ್ನೇ ಮಾರ್ಕ್ಸ್ ಮತ್ತು ಲೆನಿನ್ ಡಯಲೆಕ್ಟಿಕಲ್ ಪ್ರೋಸೆಸ್ ಎಂದು ಕರೆದಿರುವುದು. ಈ ತತ್ತ್ವವೇ ವಿಶ್ವಕ್ರಿಯೆಯ ಭೌತವಸ್ತುಗಳ, ಸಸ್ಯಗಳ, ಪ್ರಾಣಿಗಳ–ಹೀಗೆ, ಎಲ್ಲದರ ಕ್ರಿಯೆಯ ಮರ್ಮವನ್ನೂ ತೆರೆದು ತೋರಿಸುವ ಬೀಗದ ಕೈ.

ವಿಶ್ವವು ಬೆಳೆದು ನವನವೋನ್ಮೇಷಕವಾಗುತ್ತಿದೆ. ಹೊಸ ಬೆಲೆಗಳು ಹುಟ್ಟುತ್ತಿವೆ. ವಿಷಮ ಸ್ಥಿತಿಯಿಂದ ಸಮಸ್ಥಿತಿ ಹುಟ್ಟುತ್ತಿದೆ. ಕಾಲಾಂತರದಲ್ಲಿ ಅಸಮಸ್ಥಿತಿ ಉದ್ಭವಿಸಬಹುದು. ವಿಶ್ವದ ಬೆಳೆವಣಿಗೆ ಏಕಪ್ರಕಾರವಾದದ್ದಲ್ಲ, ಅನೇಕ ಪ್ರಕಾರವಾದದ್ದು. ಅದರದು ಎಂದೆಂದಿಗೂ ಮುಗಿಯದ ಚರಿತ್ರೆ.

ಹೊಸಭೌತವಾದಿಗಳ ಈ ಡಯಲೆಕ್ಟಿಕ್ ಕ್ರಮಕ್ಕೆ ಹೆಗೆಲ್ಲನ ಡಯಲೆಕ್ಟಿಕ್ ಮುಖ್ಯವಾದ ಪ್ರಚೋದನೆ. ಹೊಸಭೌತವಾದಿಗಳು ಅದನ್ನು ಮಾರ್ಪಡಿಸಿ ಭೌತವಾದಕ್ಕೆ ಹೊಂದಿಸಿಕೊಂಡಿದ್ದಾರೆ. ಹೆಗೆಲ್ ಇರವು ಅರಿವು ಒಂದೇ, ಇರವು ಚಿದ್ರೂಪವಾದದ್ದು–ಎಂಬ ತತ್ತ್ವವನ್ನೂ ತನ್ನ ತತ್ತ್ವದ ಆಧಾರಪ್ರತಿಜ್ಞೆಯಾಗಿ ಅಂಗೀಕರಿಸಿದ. ಭೌತ ವಸ್ತು ಅಂತಿಮವಾಗಿ ಮಿಥ್ಯೆ ಎಂದು ಸಿದ್ಧಾಂತ ಮಾಡಿದ. ಪರಮಚೈತನ್ಯವೇ ಪರಮ ಸತ್. ಅದರಲ್ಲಿ ಎಲ್ಲವೂ ಸಮರಸವಾಗುತ್ತದೆ. ಉಳಿದೆಲ್ಲವೂ ಬದಲಾಯಿಸುತ್ತಿದ್ದರೂ ಅದು ಮಾತ್ರ ಬದಲಾಯಿಸುವುದಿಲ್ಲ. ಉಳಿದೆಲ್ಲವೂ ಅಪರಿಪೂರ್ಣವಾದುದರಿಂದ ಅವುಗಳಲ್ಲಿ ಪರಸ್ಪರ ಗೊಂದಲ, ತಿಕ್ಕಾಟ, ಅನಿವಾರ್ಯ. ಚಿದ್ರೂಪವಾದ ಸತ್ ಪರಿಪೂರ್ಣವಾದುದರಿಂದ. ಅದರಲ್ಲಿ ಗೊಂದಲವಿಲ್ಲ, ತಿಕ್ಕಾಟವಿಲ್ಲ, ಚರಿತ್ರೆ ಇರುವುದು ಲೋಕವಸ್ತುಗಳಿಗೇ ಹೊರತು ಈ ಅಲೌಕಿಕ ಚೈತನ್ಯಕ್ಕಲ್ಲ. ಇದಕ್ಕೆ ಹುಟ್ಟಿಲ್ಲ, ಸಾವಿಲ್ಲ, ಬೆಳೆವಣಿಗೆ ಇಲ್ಲ. ಸಾವಿರ ಚರಿತ್ರೆಗಳನ್ನು ಒಳಗೊಂಡಿದ್ದರೂ ಇದು ಮಾತ್ರ ಚರಿತ್ರೆಗೆ ಒಳಪಟ್ಟಿದ್ದಲ್ಲ. ದ್ವಂದ್ವ ವಿಶ್ವಕರ್ಮವೇ ಹೊರತು ವಿಶ್ವಾತೀತವಾದ ಪರಮ ಸತ್ ನಿರ್ದ್ವಂದ್ವವಾದದ್ದು–ಎಂಬುದು ಹೆಗೆಲ್ಲನ ಅಂತಿಮ ಸಿದ್ಧಾಂತ.

ಡಯಲೆಕ್ಟಿಕ್ ಭೌತವಾದಿಗಳು ಚೈತನ್ಯ ಪರಮವೆಂಬುದನ್ನು ಒಪ್ಪುವುದಿಲ್ಲ. ಬದಲಾವಣೆ ಇಲ್ಲದ, ಘರ್ಷಣೆಯನ್ನು ಒಳಗೊಳ್ಳದ, ಭೌತರೂಪವಿಲ್ಲದ ಸ್ವಪರಿಪೂರ್ಣವಾದ ಸತ್ ಇದೆ ಎಂದು ಹೇಳುವುದು ಅವಾಸ್ತವಿಕ, ಕೇವಲ ಕಟ್ಟು ಕಥೆ, ಮಿಥ್ಯಾ ಭಾವನೆ. ಇರುವುದೆಲ್ಲ ಅಪೂರ್ಣವೇ. ಅದು ಅಪೂರ್ಣವಾದ ಸದ್ಯಸ್ಥಿತಿಯಿಂದ, ಕಾಲಗತಿಯಿಂದ ಆ ಗತಿಯನ್ನು ಪೂರೈಸುವ ಸದ್ಯದ ತಾತ್ಕಾಲಿಕವಾದ ಪೂರ್ಣತೆಯನ್ನು ಮುಟ್ಟುತ್ತದೆಯೇ ಹೊರತು, ಸಾರ್ವಕಾಲಿಕ ಪೂರ್ಣತೆ ಎಂದೆಂದಿಗೂ ಇಲ್ಲ, ಎಲ್ಲಿಯೂ ಇಲ್ಲ. ಇಲ್ಲಿಗೆ ಪೂರ್ಣತೆ ಮುಟ್ಟಿದೆ. ಇನ್ನು ಮಾಡಬೇಕಾದ್ದೇನೂ ಇಲ್ಲವೆಂದು ಈ ಲೋಕದಲ್ಲಿರುವ ಯಾವ ವಸ್ತುವನ್ನು ಕುರಿತಾಗಲಿ, ಯಾವ ವ್ಯಕ್ತಿಯನ್ನು ಕುರಿತಾಗಲಿ ಹೇಳುವಂತಿಲ್ಲ. ಸಾರ್ವಕಾಲಿಕ ನಿವೃತ್ತಿ ಎಲ್ಲೂ ಇಲ್ಲ. ಸರ್ವಕಾಲಕ್ಕೂ ನಿವೃತ್ತಿ ಪಡೆದ ಪರಮ ಚಿತ್ ಇದೆ ಎಂಬುದು ಪೌರಾಣಿಕ ಕಥೆ, ವಾಸ್ತವಕ್ಕಿಂತ ಬಹುದೂರವಾದದ್ದು. ಈ ವಿಶ್ವಕ್ರಿಯೆ ಮುಗಿದ ಯುದ್ಧವೂ ಅಲ್ಲ. ಮುಗಿದ ಶಾಂತಿಯೂ ಅಲ್ಲ. ನಿವೃತ್ತಿ, ಶಾಂತಿ ಸೌಖ್ಯ ಮುಂತಾದ ಎಲ್ಲ ಬೆಲೆಗಳೂ ಸದ್ಯದ ನಿವೃತ್ತಿ, ಸದ್ಯದ ಶಾಂತಿ, ಸದ್ಯದ ಸೌಖ್ಯ. ಸದ್ಯಸ್ಥಿತಿಯಿಂದ ಸದ್ಯಸ್ಥಿತಿಗೆ ಹಾಯುವುದೇ ಇಲ್ಲಿ ಇರುವುದೆಲ್ಲದರ ಸಾರ್ವತ್ರಿಕ. ಸಾರ್ವಕಾಲಿಕ ಪಥ. ಈ ಪಥ ಕೊನೆಮೊದಲಿಲ್ಲದ್ದು. ಈ ವಿಶ್ವ ತೆರೆದ ವಿಶ್ವ, ಅದಕ್ಕೆ ಅನಂತ ಭೂತವಿದ್ದಂತೆಯೇ ಅನಂತ ಭವಿಷ್ಯವೂ ಇದೆ, ಅನಂತ ವರ್ತಮಾನವೂ ಇದೆ. ಇಲ್ಲಿಗೆ ಎಲ್ಲವೂ ಮುಗಿಯಿತು, ಬ್ರಹ್ಮಾಂಡ ಇಲ್ಲಿಗೆ ಕೊನೆ ಮುಟ್ಟಿತು, ಇನ್ನೇನನ್ನು ಮಾಡಬೇಕಾದ್ದಿಲ್ಲ ಎಂದು ಕೈಕಟ್ಟಿಕೊಂಡು ಕುಳಿತುಕೊಳ್ಳುವ ಮನೋಧರ್ಮವನ್ನು ಈ ಹೊಸ ಭೌತವಾದ ಖಂಡಿಸುತ್ತದೆ. ಈ ವಿಶ್ವ ಅನಂತವಾಗಿ ವಿಸ್ತರಿಸುತ್ತಿರುವ ವಿಶ್ವ, ಅನಂತವಾಗಿ ತೆರೆದ ವಿಶ್ವ–ಎಂಬುದು ಈ ತತ್ತ್ವದ ಮುಖ್ಯ ಅಂಶ.

ಈ ಹೊಸ ತತ್ತ್ವ ಚಿದದ್ವೈತ ಮನೋಭಾವವನ್ನು ಅಕರ್ಮಭಾವವೆಂದೂ ಕರ್ಮದಿಂದ ದೂರಸರಿಯುವ ಮನೋಭಾವವೆಂದೂ ಆಲಸಿಕೆಯ ಮನೋಭಾವವೆಂದೂ ದುಡಿಮೆಯಿಂದ ಹಿಂಜರಿದು, ಹಗಲುಗನಸನ್ನು ಕಾಣುವ ಮನೋಭಾವವೆಂದೂ ಹಲವು ವಿಧವಾಗಿ ಹಳಿಯುತ್ತದೆ. ಈ ಭೌತವಾದ ಜಪಿಸುವ ಮಂತ್ರ ಇದು : ದೈವವನ್ನು ಒತ್ತಳ್ಳಿ ಆತ್ಮಪೌರುಷದಿಂದ ಬಾಳು; ನಮ್ಮೆಲ್ಲರ ಆಲಸಿಕೆಗೂ ಕ್ರಿಯೆ ಇಲ್ಲದ, ಕರ್ಮವಿಲ್ಲದ, ಪ್ರಪಂಚದಿಂದ ದೂರವಾಗಿ ಹೊರತಾಗಿ ತಾನೇ ತಾನಾಗಿ ಇರುವ ದೈವವಿದೆಯೆಂಬ ನಂಬಿಕೆ ಕಾರಣ. ನಿಜವಾದ ಕರ್ಮ ಯೋಗ ನಮ್ಮದಾಗಬೇಕು. ಸದಾ ಕರ್ಮ ಮಾಡುವುದರಿಂದಲೇ ಜೀವನ ಹಸನಾಗುವುದು. ಈ ಕರ್ಮಕ್ಕೆ ಕಾರಣ ಭೌತವಸ್ತು, ಆಹಾರ. ನಮ್ಮ ಶೀಲ ಸದ್ಗುಣಗಳನ್ನು ಒರೆ ಹಚ್ಚಿ ನೋಡಬೇಕಾದರೆ. ಯಾರನ್ನೂ ದಂಡಿಸದೆ ಯಾರ ಅನ್ನವನ್ನೂ ಕಿತ್ತುಕೊಳ್ಳದೆ ನಾವು ಹೇಗೆ ಬಾಳುತ್ತೇವೆ ಎಂಬುದನ್ನು ಪರೀಕ್ಷಿಸಬೇಕು. ಅನ್ನಕ್ಕಾಗಿ ದುಡಿಯುತ್ತೇವೆ. ಈ ಅನ್ನಪ್ರಾಯವಾದ ವಿಶ್ವದಲ್ಲಿರುವ ಸಮಸ್ತ ವಸ್ತುಗಳನ್ನೂ ಗೌರವಿಸಿ, ಅವು ಸಾರ್ವತ್ರಿಕವಾದುವು, ನಮ್ಮ ಖಾಸಗಿ ಸ್ವತ್ತಲ್ಲ ಎಂದು–ಭಾವಿಸಿ, ಅವನ್ನು ಪೋಲುಮಾಡದೆ, ಅವು ವರ್ಧಿಸುವಂತೆ ಮಾಡಿ. ಹೆಚ್ಚಿಸಿದ್ದನ್ನು ಎಲ್ಲರೂ ಹಂಚಿಕೊಂಡು, ಯಾರು ಯಾರನ್ನೂ ಆಳಾಗಿ, ತೊತ್ತಾಗಿ ಎಣಿಸದೆ ಭೋಗಿಸುವುದನ್ನು ಕಲಿಯುವುದೇ, ಕಲಿಸುವುದೇ ಈ ತತ್ತ್ವದ ಧರ್ಮ.

ಈ ಹೊಸ ಭೌತಾದ್ವೈತ ತತ್ತ್ವಕ್ಕೆ ಇಂದಿನ ಹೊಸ ಚಿದದ್ವೈತದ ಉತ್ತರ ಇದು. ನಾವು ಯಾವುದನ್ನು ಚಿತ್ ಎಂದು ಕರೆಯುತ್ತೇವೆಯೊ ಅದನ್ನು ನೀವು ಭೌತವಸ್ತುವೆಂದು ಕರೆಯುತ್ತೀರಿ. ನಾವು ಹಿಂದಿನ ಭೌತವಾದವನ್ನು ಖಂಡಿಸಿದಂತೆಯೆ ನೀವೂ ಖಂಡಿಸುತ್ತೀರಿ. ಭೌತವಸ್ತು ಕೇವಲ ಜಡವಸ್ತುವಲ್ಲ, ಯಾಂತ್ರಿಕವಲ್ಲ. ಅದು ಸೃಷ್ಟ್ಯಾತ್ಮಕವಾದದ್ದು, ನವನವೋನ್ಮೇಷವಾದದ್ದು ಎಂದು ಹೇಳುತ್ತೀರಿ, ಅದು ಮಿತಿ ಇಲ್ಲದ್ದು ಅನಂತವಾದದ್ದು ಎಂದು ಹೇಳುತ್ತೀರಿ. ಈ ಸೃಷ್ಟ್ಯಾತ್ಮಕ ಲಕ್ಷಣವುಳ್ಳದ್ದು, ನವೋನ್ಮೇಷವಾದದ್ದು ಚೇತನಕ್ಕೆ ಒಪ್ಪುವ ಲಕ್ಷಣಗಳೇ ಹೊರತು, ಭೌತವಸ್ತುವಿಗೆ ಒಪ್ಪತಕ್ಕವಲ್ಲ. ಅಲ್ಲದೆ ಚಿದದ್ವೈತಿಗಳು ಎಲ್ಲರೂ ಭೌತವಸ್ತುವೂ ಮಾನವ ಆತ್ಮವೂ ಅತ್ಯಂತ ಭಿನ್ನವೆಂಬ ದ್ವೈತವಾದಿಗಳಾಗಬೇಕಾಗಿಲ್ಲ. ಚೇತನವನ್ನು ಕೇವಲ ಮಾನವನ ಕ್ರಿಯೆಗೆ ಮಾತ್ರ ಕ್ಲುಪ್ತಗೊಳಿಸಬೇಕಾಗಿಲ್ಲ. ಮಾನವಲ್ಲಿರುವ ಚೇತನವೂ ಪ್ರಕೃತಿಯಲ್ಲಿರುವ ಚೇತನವೂ ಒಂದೇ ಚಿತ್ತಿನ ಭಿನ್ನರೂಪಗಳು. ಅವೆರಡಕ್ಕೂ ಭೇದವೂ ಇದೆ, ಅಭೇದವೂ ಇದೆ. ನೀವು ಪರಿಣಾಮವಾದವನ್ನು ಒಪ್ಪುತ್ತೀರಿ. ಭೇದಾಭೇದವಾದವನ್ನೊಪ್ಪದಿದ್ದರೆ ಪರಿಣಾಮವಾದ ಅರ್ಥಹೀನವಾಗುತ್ತದೆ. ಪ್ರಕೃತಿಯಲ್ಲಿ ಚಿದಂಶವಿಲ್ಲದೆ, ಇದ್ದಕ್ಕಿದ್ದಂತೆಯೇ ಚೇತನ ಸ್ವಭಾವ ಹುಟ್ಟುವುದು ಅಸಂಗತ, ಅಸಾಧ್ಯ. ಕೇವಲ ಸತ್ಕಾರ್ಯವಾದವನ್ನು ಒಪ್ಪಿದರೆ ಮಾನವ ಚೈತನ್ಯವೂ ಪ್ರಕೃತಿಯಲ್ಲಿರುವ ಚೇತನವೂ ಭೇದರಹಿತವಾದ ಒಂದೇ ಎಂದು ಹೇಳಬೇಕಾಗುತ್ತದೆ. ಅದು ಅಸಂಗತ. ಮನುಷ್ಯ ವ್ಯಾಪಾರ ಮತ್ತು ಮೃಗಗಳ ವ್ಯಾಪಾರ, ಸಸ್ಯಗಳ ವ್ಯಾಪಾರ ಎಲ್ಲವೂ ಒಂದೇ ಆಗಲಾರವು. ಇದು ವಾಸ್ತವ ಅನುಭವಕ್ಕೆ ವಿರುದ್ಧ. ಹಾಗೆಯೇ ಅಸತ್ಕಾರ್ಯವಾದವೂ ಅಸಂಗತ. ಕಾರ್ಯ ಕೇವಲ ಇಲ್ಲದ್ದರಿಂದ ಹುಟ್ಟಿತೆಂದು ಹೇಳಬೇಕಾಗುತ್ತದೆ. ಮಾನವನ ಚೈತನ್ಯ ವಿಶ್ವದ ಎಲ್ಲದರಲ್ಲೂ ಇರುವ ಚೇತನದ ಒಂದು ಹೊಸರೂಪ, ಆ ಚೇತನದ ಒಂದು ಅಂಶ. ಮಾನವ ಹುಟ್ಟುವುದಕ್ಕೆ ಹಿಂದಿನ ಜೀವಿಯಲ್ಲಿ ಯಾವ ಬಗೆಯಾದ ಚೇತನವೂ ಇಲ್ಲದಿದ್ದ ಪಕ್ಷದಲ್ಲಿ, ಮಾನವನಲ್ಲಿ ಅದು ತೋರುವುದು ಕೇವಲ ಅಸಂಭವ.

ಡಯಲೆಕ್ಟಿಕಲ್ ಭೌತವಾದ ಕೇವಲ ಏಕರೂಪವಾದ ದ್ವೈತದಿಂದ ಭಿನ್ನವೆಂದು ಹೇಳಿಕೊಳ್ಳಬಹುದೇ ಹೊರತು ಭೇದಾಭೇದವನ್ನು ಒಳಗೊಂಡ ಪರಿಣಾಮ ರೂಪದ ಶಕ್ತಿವಿಶಿಷ್ಟಾದ್ವೈತಕ್ಕೂ ಅದಕ್ಕೂ ಭೇದ ತುಂಬ ಕಡಿಮೆ. ಡಯಲೆಕ್ಟಿಕಲ್ ಭೌತವಾದದ ಭೌತವಸ್ತು ಸೃಷ್ಟ್ಯಾತ್ಮಕವಾದದ್ದು, ಪ್ರಕೃತಿ ನವನವೋನ್ಮೇಷಶಾಲಿಯಾದದ್ದು. ಎಂದಮೇಲೆ ಅದಕ್ಕೂ ಭೇದ ಸಹಿತವಾದ, ಕಾಲದೇಶಸ್ವರೂಪಿಯಾದ ಶಕ್ತಿಯ ಪರಿಣಾಮವೇ ಈ ವಿಶ್ವ ಎಂದು ಹೇಳುವ ಶಕ್ತಿವಿಶಿಷ್ಟಾದ್ವೈತಕ್ಕೂ ತತ್ತ್ವದಲ್ಲಿ ಭೇದವಿಲ್ಲ. ರಷ್ಯದ ತಾತ್ತ್ವಿಕರು ಭಾರತೀಯ ಶಕ್ತಿತತ್ತ್ವವನ್ನು ಪರಿಚಯ ಮಾಡಿಕೊಂಡರೆ ಆಗ ತಮ್ಮ ತತ್ತ್ವಕ್ಕೆ ಆಧಾರವಾದ ತತ್ತ್ವವನ್ನು ಭೌತವಸ್ತುವೆಂದು ಕರೆಯುವುದಕ್ಕಿಂತ ಶಕ್ತಿ ಎಂದು ಕರೆಯುವುದು ಹೆಚ್ಚು ಸಮಂಜಸವೆಂದು ಮನಗಾಣಬಹುದು. ಅನ್ನದಿಂದ ಪ್ರಾಣ, ಪ್ರಾಣದಿಂದ ಮನಸ್, ಮನಸ್ಸಿನಿಂದ ವಿಜ್ಞಾನ, ವಿಜ್ಞಾನದಿಂದ ಆನಂದ, ಇವೆಲ್ಲವೂ ಭೇದಾಭೇದವುಳ್ಳ ಚೇತನಾತ್ಮಕವಾದ ಶಕ್ತಿಯ ಕ್ರಮವಾದ ಅಂತಸ್ತುಗಳು.

ಭಾರತೀಯ ಏಕತ್ತ್ವವಾದ ವಿಷಯದ ವಿವರಗಳಿಗೆ (**ನೋಡಿ– ಅದ್ವೈತ**).

(ಜಿ.ಎಚ್.; ಎಸ್.ಎಲ್.ಆರ್.)

**ಏಕದೇವತಾವಾದ:** ಜಗತ್ಕಾರಣನಾದ ಈಶ್ವರನೊಬ್ಬನೇ ದೇವನೆಂದು ಪ್ರತಿಪಾದಿಸುವ ತತ್ತ್ವ (ಮಾನೊಥೀಯಿಸಂ). ಮಾನವ ತನ್ನನ್ನು ಮೀರಿದ ಅದ್ಭುತ ಶಕ್ತಿಯನ್ನು ಮೊದಮೊದಲು ಬೇರೆ ಬೇರೆ ರೂಪಗಳಲ್ಲಿ ಕಂಡು ಅವನ್ನು ಆರಾಧಿಸತೊಡಗಿದಾಗ ಬಹುದೇವತಾತತ್ತ್ವ ರೂಪತಾಳಿ ಕ್ರಮೇಣ ದೇವತೆಗಳಿಗೆಲ್ಲ ಒಡೆಯ ಒಬ್ಬನೇ ಎಂಬ ಭಾವನೆ ಬೆಳೆಯಿತೆಂದು ಹೇಳಬಹುದು.

ಐತಿಹಾಸಿಕ ದೃಷ್ಟಿಯಿಂದ ಪರಿಶೀಲಿಸಿದರೆ, ಮುಖ್ಯವಾದ ಮತಧರ್ಮಗಳೆಲ್ಲವೂ ಬಹುದೇವತಾತತ್ತ್ವವನ್ನು ನಿರಾಕರಿಸಿ ಏಕದೇವತಾತತ್ತ್ವದಿಂದ ಪ್ರಾಮುಖ್ಯಕ್ಕೆ ಬಂದಿವೆ ಎನ್ನಬಹುದು. ಮತಧರ್ಮದ ವಿಕಾಸದ ಮೊದಲನೆಯ ಘಟ್ಟದಲ್ಲಿ ಪ್ರಕೃತಿಯ ಶಕ್ತಿಗಳನ್ನು ಆರಾಧಿಸುವುದು ಪ್ರಾಚೀನ ಅನಾಗರಿಕ ಜನಗಳಲ್ಲಿ ಸಾಧಾರಣವಾಗಿತ್ತು. ಮೊದಮೊದಲು ಮಾನವನಿಗೆ ಅರಿವಾದ ಶಕ್ತಿಗಳು ಸೂರ್ಯ, ಚಂದ್ರ, ಅಗ್ನಿ, ಹರಿಯುವ ಪ್ರವಾಹ, ಮಳೆ ಸುರಿಸುವ ಆಕಾಶ–ಇತ್ಯಾದಿಗಳು. ಜೀವನದ ಮೇಲೆ ಅತ್ಯಂತ ಪರಿಣಾಮಕಾರಿಯಾಗಿ ಪ್ರಭಾವವನ್ನು ಬೀರಿದ ಈ ಶಕ್ತಿಗಳಿಗೆ ಹೆಸರುಗಳನ್ನು ಕೊಟ್ಟು ದೇವತೆಗಳೆಂದು ಕರೆಯಲಾಯಿತು. ಪ್ರಕೃತಿಪೂಜೆ, ಜೀವನಕ್ಕೆ ಸಹಾಯಕವಾಗಿರುವ ಪ್ರಾಣಿಗಳಪೂಜೆ, ಕಣ್ಮರೆಯಾದ ಹಿರಿಯರ (ಪಿತೃ)ಪೂಜೆ ಇವು ಆಚರಣೆಯಲ್ಲಿದ್ದುವು. ಯುದ್ಧಗಳಲ್ಲಿ ಗೆಲುವು ಸೋಲುಗಳು ದೇವತೆಗಳಿಂದ ಉಂಟಾಗುತ್ತವೆ ಎಂಬ ನಂಬಿಕೆಯೂ ಉಂಟಾಯಿತು.

ಪ್ರಾಚೀನ ಸಂಸ್ಕೃತಿಗಳಲ್ಲಿ (ಉದಾಹರಣೆ, ಗ್ರೀಕರಲ್ಲಿ ಮತ್ತು ಆರ್ಯರಲ್ಲಿ) ಇಂಥ ಬಹುದೇವತಾ ಪೂಜೆಯನ್ನು ಕಾಣಬಹುದು.

ಬಹುದೇವತಾತತ್ತ್ವ ಕ್ರಮೇಣ ಏಕದೇವತಾತತ್ತ್ವದ ಕಡೆಗೆ ಸಾಗಿದ ಕಾರಣಗಳನ್ನು ಮಾನವಶಾಸ್ತ್ರಜ್ಞರು ಸಂಶೋಧಿಸಿದ್ದಾರೆ. ಚಿಕ್ಕ ಪುಟ್ಟ ಗುಂಪುಗಳನ್ನು ಕಟ್ಟಿಕೊಂಡು ಅಲೆದಾಡುತ್ತಿದ್ದ ಮಾನವ ನದಿಬಯಲುಗಳಲ್ಲಿ ಕ್ರಮೇಣ ದೇಶಗಳನ್ನು ಕಟ್ಟಿಕೊಂಡು ಅವನ ಬುದ್ಧಿ ವಿಕಾಸವಾಗಲು ಅವಕಾಶವಾಯಿತು. ಅವನ ದೃಷ್ಟಿ ವಿಶಾಲವಾಯಿತು. ಚಿಕ್ಕ ಗುಂಪಿನ ದೇವತೆಗಳು ಒಂದೇ ನಾಗರಿಕತೆಯಲ್ಲಿ ಸೇರಿ ಹೋದರು. ಅವರನ್ನು ತಾರತಮ್ಯ ಭಾವನೆಯಿಂದ ಕಂಡು ಅವರಲ್ಲಿ ಒಂದು ಅಂತಸ್ತಿನ ವ್ಯವಸ್ಥೆಯನ್ನು ಮಾಡಲಾಯಿತು. ಒಬ್ಬನೇ ಒಡೆಯನನ್ನು ಇತರ ದೇವತೆಗಳು ಅನುಸರಿಸಬೇಕು ಎಂಬ ಭಾವನೆ ಉದಯವಾಯಿತು. ಎಲ್ಲರಿಗಿಂತ ಹಿರಿಯ ದೇವತೆಯ ಭಾವನೆಯೇ ಸರ್ವೇಶ್ವರನ ಭಾವನೆಯ ವಿಕಾಸಕ್ಕೆ ಅಂದರೆ ಏಕದೇವತಾತತ್ತ್ವಕ್ಕೆ ಪ್ರಧಾನ ಕಾರಣವಾಯಿತು.

ಯುದ್ಧದಲ್ಲಿ ಜಯಿಸಿದವರ ದೇವತೆಗಳಿಗೆ ಸೋತವರ ದೇವತೆಗಳು ಅಧೀನರಾದಂತೆ ಭಾವಿಸಲಾಯಿತು. ಕುಟುಂಬ ದೇವತೆಗಿಂತ ದೇಶದ ದೇವತೆಗಳಿಗೆ ಹೆಚ್ಚು ಪ್ರಾಧಾನ್ಯ ಕೊಡಲಾಯಿತು. ಕುಟುಂಬ ಜೀವನದ ಭಾವನೆಯಿಂದ ದಂಪತಿ ದೇವತೆಗಳ ಕಲ್ಪನೆಯಾಯಿತು. ಪತಿ ದೇವತೆಗೆ ಹೆಚ್ಚು ಪ್ರಾಧಾನ್ಯ ಬಂತು. ಭೂಮಿ ದೇವತೆಗಳಿಗಿಂತ ಆಕಾಶ ದೇವತೆಗಳಿಗೆ ಹೆಚ್ಚು ಶಕ್ತಿ ಇದೆ ಎಂದು ಭಾವಿಸಲಾಯಿತು. ಹೀಗೆ ಶಕ್ತಿಯ ತಾರತಮ್ಯ ಭಾವನೆಯಿಂದ ಸರ್ವೇಶ್ವರನ ಭಾವನೆ ಬೆಳೆಯುತ್ತಾ ಬಂತು.

ಸೃಷ್ಟಿಯಲ್ಲಿನ ಋತು ನಿಯಮ, ಕಾಲ ನಿಯಮಗಳನ್ನು ಗುರುತಿಸಿದ ಮೇಲೆ ಸೃಷ್ಟಿಕರ್ತನೊಬ್ಬನಿರಬೇಕೆಂಬ ಕಲ್ಪನೆ ಉದಯಿಸಿತು. ಇವಕ್ಕೆಲ್ಲಾ ಒಡೆಯನಾದವ ಸೃಷ್ಟಿಪಾಲಕನೂ ಆಗಿರಬೇಕು ಎಂಬ ಭಾವನೆಯಿಂದ ಅವನ ಪೂಜೆಗೆ ಹೆಚ್ಚು ಪ್ರೋತ್ಸಾಹ ದೊರಕಿತು.

ಮಾನವನ ಜನನ ಮರಣಗಳ ಸಮಸ್ಯೆಯಿಂದ ಇಹ, ಪರಲೋಕಗಳ ಕಲ್ಪನೆ, ಅವುಗಳ ಅಧಿಕಾರಿಯ ಭಾವನೆ, ತಲೆದೋರಿತು. ಜ್ವರ, ರುಜಿನ, ಮರಣಾದಿ ನೋವುಗಳಿಂದ ಪಾರಾಗುವ ಬಗೆಯೇನು ಎಂದು ಮಾನವ ಚಿಂತಿಸತೊಡಗಿ ತನ್ನ ಮೊರೆಯನ್ನು ಕೇಳಿ ಶಾಂತಿಯನ್ನು ಕೊಡುವ ಸರ್ವೇಶ್ವರನೊಬ್ಬನಿರಲೇಬೇಕೆಂದು ಹೃದಯಾಂತರಾಳದಲ್ಲಿ ಕಂಡುಕೊಂಡ. ಈ ಪ್ರಕಾರ ಮತಧರ್ಮಗಳ ಉದಯವಾಯಿತು. ಯೆಹೂದೀ, ಕ್ರೈಸ್ತ, ಮಹಮ್ಮದೀಯ ಮುಂತಾದ ಧರ್ಮಗಳು ರೂಪತಾಳಿದುವು. ಮಾನವರೆಲ್ಲರು ಭಗವಂತನ ಮಕ್ಕಳೆಂಬ ಭಾವನೆಯನ್ನು ಪ್ರಚಾರ ಮಾಡಿದುವು.

ಭಾರತದಲ್ಲೂ ಬಹು ದೇವತಾತತ್ತ್ವಕ್ಕೆ ವೇದಗಳ ಕಾಲದಿಂದೀಚೆಗೆ ಮನ್ನಣೆ ಕಡಿಮೆ ಯಾಗುತ್ತಾ ಬಂದು ಏಕದೇವತಾತತ್ತ್ವ ಹರಡಿದೆ. ಉಪನಿಷತ್ತುಗಳು ಪರಬ್ರಹ್ಮನೊಬ್ಬನ ಸ್ವರೂಪವನ್ನೇ ವಿಸ್ತಾರವಾಗಿ ಚರ್ಚಿಸಿವೆ. ವೇದಗಳು ಇಂದ್ರಾದಿ ದೇವತೆಗಳಿಗೆ ಮನ್ನಣೆ ಇಲ್ಲ. ಉಪನಿಷತ್ತುಗಳಿಂದ ಏಕತ್ವವಾದವನ್ನೂ ದ್ವೈತ, ವಿಶಿಷ್ಟಾದ್ವೈತಗಳ ಏಕದೇವತಾ ತತ್ತ್ವವನ್ನೂ ಮತಚಾರ್ಯರು ಹೊರಗೆಡಹಿದ್ದಾರೆ. ವಿಷ್ಣು ಸರ್ವೋತ್ತಮತ್ವವನ್ನೂ ಶಿವ ಸರ್ವೋತ್ತಮತ್ವವನ್ನೂ ಸಾರುವ, ವೈಷ್ಣವ ಮತ್ತು ಶೈವ ಸಂಪ್ರದಾಯಗಳು ಭಾರತದಲ್ಲಿ ಹರಡಿವೆ. ಜೀವಾತ್ಮರೆಲ್ಲರೂ ಪರಬ್ರಹ್ಮನಿಂದಲೇ ಸೃಷ್ಟಿಸಲ್ಪಟ್ಟು ಅವನಿಂದಲೇ ಮುಕ್ತರಾಗುವರೆಂದು ಹೇಳುವ ಹಿಂದೂ ಧರ್ಮದಲ್ಲಿ ಬಹುದೇವತಾತತ್ತ್ವವಿದೆಯೆಂದು ಹೇಳುವುದು ತಪ್ಪು. ಅವತಾರಗಳನ್ನು ಕೂಡ ವಿಷ್ಣುವಿನ ಅಥವಾ ಈಶ್ವರನ ಅಂಶಗಳ ವ್ಯಕ್ತರೂಪಗಳೆಂದು ಹೇಳುವುದರಿಂದ ಎಷ್ಟೋ ದೇವತೆಗಳನ್ನು ಪೂಜಿಸಿದರೂ ಹಿಂದೂ ಧರ್ಮ ಏಕದೇವತಾತತ್ತ್ವವನ್ನೇ ಪ್ರತಿಪಾದಿಸುತ್ತದೆ. (ಎಸ್.ಎಸ್.ಆರ್.)

**ಏಕನಾಥ:** ಸು. 1548. ಮಹಾರಾಷ್ಟ್ರದ ಪ್ರಸಿದ್ಧ ಸಂತರಲ್ಲಿ ಪ್ರಮುಖ. ಜ್ಞಾನದೇವನಾದ ಮೇಲೆ ಆತನಂತೆ ದೇಶದಲ್ಲೆಲ್ಲಾ ವಿಖ್ಯಾತನಾದ ಯಶಸ್ಸು ಏಕನಾಥನದು. ಆತನಂತೆ ಈತನು ಜನರ ಭಾಷೆಯಲ್ಲಿ ವೇದಾಂತರಹಸ್ಯವನ್ನೂ ಜ್ಞಾನಸಾರವನ್ನೂ ಭಾಗವತಧರ್ಮವನ್ನೂ ಪ್ರಚಾರ ಮಾಡುವುದರಲ್ಲಿ ಜೀವಮಾನವನ್ನು ಕಳೆದವ.

ಈತನ ಅಡ್ಡ ಹೆಸರು ಪೈಠಣಕರ. ಈತನ ಗುರು ದತ್ತಾತ್ರೇಯನ ಅವತಾರವೆಂದು ಪ್ರಸಿದ್ಧನಾದ ಗಾಣಗಾಪುರದ ನರಸಿಂಹ ಸರಸ್ವತಿಯ ಶಿಷ್ಯ ಜನಾರ್ದನಸ್ವಾಮಿ.

ವಿಜಯನಗರದ ಕೃಷ್ಣದೇವರಾಯ ಪಂಢರಾಪುರದಿಂದ ವಿಠ್ಠಲನ ಮೂರ್ತಿಯನ್ನು ತನ್ನ ರಾಜಧಾನಿಗೆ ಒಯ್ದು ಅಲ್ಲಿ ಪ್ರತಿಷ್ಠೆ ಮಾಡಿಸಿದ್ದ. ಅದನ್ನು ತಿರುಗಿ ಪಂಢರಾಪುರಕ್ಕೆ ತಂದು ಕೀರ್ತಿವಂತನಾದ ಭಾನುದಾಸನ ವಂಶಜನೇ ಏಕನಾಥ. ಏಕನಾಥನ ತಂದೆ ಸೂರ್ಯನಾರಾಯಣ, ತಾಯಿ ರುಕ್ಮಿಣಿ. ಹಂಪೆಯಲ್ಲಿ ವಿಜಯವಿಠ್ಠಲನ ಗುಡಿ ಈಗಲೂ ಇದೆಯಾದರೂ ಅಲ್ಲಿ ಯಾವ ಮೂರ್ತಿಯೂ ಇಲ್ಲ.

ಏಕನಾಥ ತನ್ನ ಗುರುವಾದ ಜನಾರ್ದನಸ್ವಾಮಿಯಲ್ಲಿ ಜ್ಞಾನೇಶ್ವರಿ, ಅಮೃತಾನುಭವ ಗ್ರಂಥಗಳ ಅಭ್ಯಾಸ ಮಾಡಿದ. ದೇವಗಡದ ಬೆಟ್ಟದಲ್ಲಿ ಆರು ವರ್ಷ ತಪಸ್ಸನ್ನು ಮಾಡಿದ. ಸಾಕ್ಷಾತ್ಕಾರ ಪಡೆದ. ದೇವಗಡಕ್ಕೆ ಒಮ್ಮೆ ವೈರಿಗಳು ಮುತ್ತಿದಾಗ ಜನಾರ್ದನಸ್ವಾಮಿ ಧ್ಯಾನಸ್ಥನಿದ್ದ. ಏಕನಾಥ ಕುದುರೆಯನ್ನು ಹತ್ತಿ, ಯುದ್ಧಮಾಡಿ ವೈರಿಗಳನ್ನು ಓಡಿಸಿದ. ಮುಂದೆ ಗುರುವಿನ ಅಪ್ಪಣೆಯಂತೆ ಪೈಠಣಕ್ಕೆ ಬಂದು, ಗಿರಿಜಾಬಾಯಿ ವಿಜಾಪುರ ಎಂಬ ತರುಣಿಯನ್ನು ಲಗ್ನವಾದ. ಪ್ರಪಂಚವನ್ನು ಪರಮಾರ್ಥವನ್ನೂ ಕೂಡಿಯೇ ಸಾಧಿಸಿದ.

ಏಕನಾಥನಿಗೆ ದೀನದಲಿತರಲ್ಲಿ, ಶೂದ್ರಾದಿಗಳಲ್ಲಿ ಅಪಾರ ಕರುಣೆ ಇತ್ತು. ತಂದೆಯ ಶ್ರಾದ್ಧದ ಕಾಲಕ್ಕೆ ಬ್ರಾಹ್ಮಣರಿಗಿಂತ ಮುಂಚೆ ಹಸಿದ ಹೊಲೆಯರಿಗೆ ಅನ್ನ ಬಡಿಸಿದ ಧೀರನೀತ. ಪೂಜೆಗೆ ತಂದ ಗಂಗಾಜಲವನ್ನು ನೀರಡಿಸಿದ ಕತ್ತೆಗೆ ಕುಡಿಸಿದ ಅಂತಃಕರುಣಿ ಈತ. ಚೋರರನ್ನು, ಜಾರರನ್ನು, ವೇಶ್ಯೆಯರನ್ನು ಉದ್ಧರಿಸಿದ ಕುಶಲಮತಿ. ಜ್ಞಾನಮದಾಂಧನಾದ ತನ್ನ ಮಗ ಹರಿಪಂಡಿತನ ಕಣ್ಣು ತೆರೆಯಿಸಿದ. ಸಂಸಾರ ಮಾಡಿಯೂ ಪರಮಾರ್ಥವನ್ನು ಸಾಧಿಸುವ ಬಗೆಯನ್ನು ಬೋಧಿಸಿದ. ಎಲ್ಲಾ ಪ್ರಾಣಿಗಳಲ್ಲಿ ಪರಮಾತ್ಮನನ್ನು ಕಾಣುವುದೇ ಭಕ್ತಿ ಎಂಬುದು ಈತನ ಉಪದೇಶ. ಅನುತಾಪವೇ ಆತ್ಮಾನಂದಕ್ಕೆ ಕಾರಣ, ಭಕ್ತನಿಗಿಂಥ ದೇವ ಕಿರಿಯ–ಎಂಬ ಮಾತುಗಳನ್ನು ಮತ್ತೆ ಮತ್ತೆ ಹೇಳಿ ಧ್ಯಾನವೊಂದೇ ದೇವ ಸಾಕ್ಷಾತ್ಕಾರಕ್ಕೆ ಇರುವ ಮಾರ್ಗ ಎಂದು ಏಕನಾಥ ಸಾಧಿಸಿದ್ದಾನೆ.

ಮರಾಠಿ ಸಾಹಿತ್ಯಕ್ಕೆ ಏಕನಾಥನ ಅಮೋಘ ಕಾಣಿಕೆಯೆಂದರೆ ಭಾಗವತ ಪುರಾಣದ ಹನ್ನೊಂದನೆಯ ಸ್ಕಂಧದ ವಿಸ್ತೃತ ಪದ್ಯ ವಿವರಣೆ. ಇದು 20,000 ಓವಿಗಳನ್ನೊಳ ಗೊಂಡಿದೆ. ಓವಿಯೆಂಬುದು ಮರಾಠಿ ಜಾನಪದ ಗೀತೆಯ ಹೆಸರು. ಮರಾಠಿಯಲ್ಲಿ ಇಷ್ಟು ಹೃದಯಂಗಮವಾಗಿಯೂ ವಿಸ್ತೃತವಾಗಿಯೂ ಇರುವ ಮಹಾರಚನೆಗಳು ಏಕನಾಥನಿಗೆ ಪೂರ್ವದಲ್ಲಿ ಇರಲಿಲ್ಲ. ಏಕನಾಥನ ಜ್ಞಾನದ ತೇಜವನ್ನು ಭಾಷಾ ಸೌಷ್ಠವವನ್ನೂ ಪ್ರಾಸಾದಿಕ ಕವಿತ್ವವನ್ನೂ ಮುಕ್ತ ಕಂಠದಿಂದ ಮರಾಠಿ ಸಾಹಿತ್ಯ ವಿಮರ್ಶಕರು ಕೊಂಡಾಡಿದ್ದಾರೆ. ಈತನ ಭಕ್ತಿ ನಿರ್ಭರತೆಯಂತೂ ಅಸಾಧಾರಣವಾದುದು. ಅಲ್ಲದೆ ಜ್ಞಾನದೇವನ ಜ್ಞಾನೇಶ್ವರಿ ಗ್ರಂಥವನ್ನು ಏಕನಾಥ ಪರಿಷ್ಕರಿಸಿ ಸಂಪಾದಿಸಿದ್ದಾನೆ.

ಏಕನಾಥ ಜನಸಾಮಾನ್ಯರಿಗೆ ತಿಳಿಯುವಂತೆ ಮರಾಠಿಯಲ್ಲೇ ರುಕ್ಮಿಣೀ ಸ್ವಯಂವರವೆಂಬ ಹದಿನೆಂಟು ಅಧ್ಯಾಯಗಳ ಪೌರಾಣಿಕ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ 7,000 ಓವಿಗಳಿವೆ. ಕೃಷ್ಣ ರುಕ್ಮಿಣಿಯರ ವಿವಾಹವೆಂದರೆ ಜೀವಾತ್ಮ–ಪರಮಾತ್ಮರ ಐಕ್ಯವೆಂಬ ವೇದಾಂತ ಸೂಕ್ಷ್ಮವನ್ನು ಉದ್ದಕ್ಕೂ ಸಾಂಕೇತಿಕವಾಗಿ ಸೂಚಿಸಿರುವುದು ಇಲ್ಲಿಯ ವಿಶೇಷ. ಪ್ರಹ್ಲಾದ ಚರಿತ್ರಾ, ಶುಕಾಷ್ಟಕ ಮುಂತಾದ ಚಿಕ್ಕ ಪೌರಾಣಿಕ ಆಖ್ಯಾನಗಳನ್ನೂ ಏಕನಾಥ ಮರಾಠಿಯಲ್ಲಿ ಸುಂದರವಾಗಿ ರಚಿಸಿದ್ದಾನೆ. ಸ್ವಾತ್ಮಸುಖ ಎಂಬುದು ಈತನ ಅದ್ವೈತ ವೇದಾಂತ ವಿಷಯದ ರಚನೆ. ಭಾವಾರ್ಥ ರಾಮಾಯಣ, ಬಾಲಕ್ರೀಡಾ, ಭಾಗವತಚತುಃಶ್ಲೋಕೀ ವ್ಯಾಖ್ಯಾನ ಇತ್ಯಾದಿ ಇನ್ನೂ ಹಲವಾರು ರಚನೆಗಳಿವೆ. ಓವಿ ಹಾಗೂ ಅಭಂಗಗಳ ಮೇಲೆ ಏಕನಾಥನ ಪ್ರಭುತ್ವ ಅದ್ವಿತೀಯ.

ಮರಾಠಿ ಸಾಹಿತ್ಯದಲ್ಲಿ ಹೀಗೆ ಏಕನಾಥನ ವ್ಯಕ್ತಿತ್ವ ಅಜರಾಮರವಾಗಿದೆ. ಆತನ ಪ್ರಭಾವ ಮುಂದಿನ ಕವಿಗಳ ಮೇಲೆ ಅಗಾಧವಾಗಿ ಆದುದನ್ನು ಮರೆಯುವಂತಿಲ್ಲ. ಸಾಧುಸಂತರ ಬೋಧನೆಗಳು ಹೇಗೋ ಹಾಗೆ ಅವರ ವ್ಯಕ್ತಿತ್ವದ ಬಗೆಗೆ ಜನರ ಮನಸ್ಸಿನಿಂದ ಎಂದೂ ದೂರವಾಗದಂಥ ಪವಾಡ ಕಥೆಗಳು ನೂರಾರು ಜನಜನಿತವಾಗಿ ಬಂದಿವೆ: ಭಕ್ತವಿಜಯವೇ ಮುಂತಾದ ಗ್ರಂಥಗಳಾಗಿ ಮಾರ್ಪಟ್ಟಿವೆ. ಇಂದಿಗೂ ಇವುಗಳ ಪ್ರವಚನ ವಾಚನಗಳಲ್ಲಿ ಭಾವುಕರಿಗೆ ಆಸಕ್ತಿ ಇರುವುದನ್ನು ನೋಡಬಹುದು. (ಕೆ.ಕೆ.; ಎಂ.ಎ.)

**ಏಕಪಾತ್ರಾಭಿನಯ:** ಒಬ್ಬನೇ ನಟ ರಂಗಭೂಮಿಯ ಮೇಲೆ ಬಂದು ಇಡೀ ಕಥೆಯನ್ನು ನಿರ್ವಹಿಸುವುದು. ಕಥೆಯಲ್ಲಿ ಒಂದೇ ಪಾತ್ರವಿರಬಹುದು ಇಲ್ಲವೇ ಅನೇಕ ಪಾತ್ರಗಳಿರಬಹುದು. ಸಾಮಾನ್ಯವಾಗಿ ನಾಟಕದಲ್ಲಿ ಒಬ್ಬನಿಗಿಂತ ಹೆಚ್ಚು ಜನ ನಟರು ಇರುತ್ತಾರಾದರೂ ಒಬ್ಬನೇ ನಟನಿಂದ ನಿರ್ವಹಿಸಲ್ಪಡುವ ಕೆಲವು ನಾಟಕಗಳು ಹಿಂದಿನಿಂದಲೂ ಇದ್ದಂತೆ ಕಾಣುತ್ತದೆ. ಭಾರತೀಯ ಪರಂಪರೆಯಲ್ಲಿ ಏಕಪಾತ್ರಾಭಿನಯ ನಾಟ್ಯಕಲೆಯ ಒಂದು ಅಧಿಕೃತ ಪ್ರಕಾರವಾಗಿತ್ತು. ಸ್ಥೂಲವಾಗಿ ಹೇಳುವುದಾದರೆ ಭರತನಾಟ್ಯ, ಕೂಚಿಪುಡಿ ಮೊದಲಾದ ನೃತ್ಯಗಳು ಇಂಥ ಏಕಪಾತ್ರಾಭಿನಯದ ಪ್ರಕಾರಕ್ಕೆ ಸೇರಿದ್ದಾಗಿವೆ. ರಾಮಾಯಣ ಇಲ್ಲವೆ ಭಾಗವತದ ಕಥೆಗಳನ್ನು ಒಬ್ಬನೇ ಕಲಾವಿದ–ಕಥೆಯ ಪಾಠವನ್ನು ಒಮ್ಮೊಮ್ಮೆ ಹಿನ್ನೆಲೆಯಲ್ಲಿ ಇರಿಸಿಕೊಳ್ಳದೆಯೂ–ಪ್ರದರ್ಶಿಸುತ್ತಾನೆ. ಏಕಪಾತ್ರಾಭಿನಯ ಬರೀ ನೃತ್ಯಕ್ಕೆ ಸೀಮಿತವಾಗಿಲ್ಲ. ಭಾರತೀಯ ನಾಟಕದಲ್ಲೂ ಇದು ಪ್ರಾಚೀನಕಾಲದಿಂದಲೂ ಕಂಡುಬರುತ್ತಿದೆ. ಭಾರತೀಯಪರಂಪರೆಯ ನಾಟಕಕಲೆಯನ್ನು ಪ್ರತಿಷ್ಠಿತಗೊಳಿಸಿದ ಭರತಮುನಿಯ ನಾಟ್ಯಶಾಸ್ತ್ರ ದಶರೂಪಕಗಳನ್ನು (ಹತ್ತು ಬಗೆಯ ನಾಟಕ) ಹೆಸರಿಸಿದೆ. ಅವುಗಳಲ್ಲಿ ಭಾಣ ಎಂಬುದು, ಕೆಲವೊಮ್ಮೆ ವೀಥೀ ಎಂಬುದು ಒಂದೇ ಅಂಕದ ರೂಪಕಗಳು. ಇದರಲ್ಲಿ ಭಾಣ ಎಂಬುದು ಏಕಹಾರ್ಯ ಎಂದರೆ ಒಂದೇ ಪಾತ್ರವುಳ್ಳದ್ದು. ಆದರೆ ವೀಥೀ ಎಂಬುದು ಏಕಹಾರ್ಯಾ ದ್ವಿಹಾರ್ಯಾ ವಾ ಎಂದರೆ ಒಂದು, ಅಥವಾ ಕೆಲವೊಮ್ಮೆ ಎರಡು ಪಾತ್ರಗಳನ್ನುಳ್ಳದ್ದು. ಭಾಣದಲ್ಲಿ ಇನ್ನೊಬ್ಬರ ಮಾತುಗಳನ್ನು,

ಆಕಾಶಪುರುಷರ (ಎಂದರೆ ರಂಗಸ್ಥಳದಲ್ಲಿ ಕಾಣದವರ) ಮಾತುಗಳನ್ನು ಅಂಗವಿಕಾರಗಳಿಂದ, ಅಭಿನಯದಿಂದ ಈ ಏಕಪಾತ್ರವೆ ಸೂಚಿಸುತ್ತದೆ. ಭಾಣ ಮತ್ತು ವೀಥೀಗಳೆರಡರಲ್ಲೂ ಶೃಂಗಾರರಸವೇ ಪ್ರಧಾನ ಎಂಬುದು ಗಮನಾರ್ಹವಾಗಿದೆ.

ನಾಟ್ಯಶಾಸ್ತ್ರದಲ್ಲಿಯ ಈ ಏಕಪಾತ್ರಾಭಿನಯದ ರೂಪಕಗಳು ಭಾರತೀಯ ರಂಗಭೂಮಿಯಲ್ಲಿ ಪ್ರಚುರಗೊಂಡು ಉಳಿದವೊ ಇಲ್ಲವೊ ಎಂದು ಹೇಳಲು ಸಾಕಷ್ಟು ಆಧಾರಗಳಿಲ್ಲ. ಆದರೆ ಭಾರತದಲ್ಲಿ ನಡೆದುಬಂದ ಹರಿಕಥೆ ಅಥವಾ ಕೀರ್ತನ ಕಲೆಯನ್ನು ನೋಡಿದರೆ ಈ ಏಕಪಾತ್ರಾಭಿನಯಪ್ರಕಾರದ ಜನಪ್ರಿಯತೆ ಸ್ಪಷ್ಟವಾಗಿ ಕಂಡುಬರುವುದು. ಇಲ್ಲಿ ಕೀರ್ತನಕಾರ ತನ್ನ ಕಥೆಯಲ್ಲಿ ಸಂದರ್ಭೋಚಿತವಾಗಿ ಬರುವ ಎಲ್ಲ ಪಾತ್ರಗಳನ್ನೂ ತನ್ನೊಬ್ಬನ ಅಂಗವಿಕಾರಗಳಿಂದ, ಅಭಿನಯದಿಂದ, ಮಾತಿನಿಂದ ನಟಿಸಿ ಚಿತ್ರಿಸುತ್ತಾನೆ.

ಆಧುನಿಕ ಭಾರತೀಯ ರಂಗಭೂಮಿಯ ಮೇಲೆ ಏಕಪಾತ್ರಾಭಿನಯ ಪ್ರಕಾರಗಳು ಕಂಡುಬರುವುದಿಲ್ಲ. ಆದರೂ ಭಾರತದ ಕೆಲವು ರಾಜ್ಯಗಳಲ್ಲಿ ಪಾಶ್ಚಾತ್ಯ ರಂಗಭೂಮಿಯ ಪ್ರಭಾವದಿಂದ ಇಂಥ ಪ್ರಯೋಗಗಳು ನಡೆದಿವೆ. ಪಾಶ್ಚಾತ್ಯರಲ್ಲಿ ವಿವಿಧ ವಿನೋದ ರಂಗಭೂಮಿ ಎಂಬಲ್ಲಿ (ವೆರೈಟಿ ಥಿಯೇಟರ್) ಈ ಏಕಪಾತ್ರಾಭಿನಯ ಕಂಡುಬರುವುದು. ಆದರೆ ಇಲ್ಲಿ ಅದು ನಾಟಕಕ್ಕಿಂತ ವಿನೋದಕ್ಕೆ ಪ್ರಾಧಾನ್ಯ ಕೊಡುತ್ತದೆ. ದೃಷ್ಟಾಂತಕ್ಕೆ ಒಬ್ಬನೇ ಒಬ್ಬ ನಟ ಬೇರೆ ಬೇರೆ ಸನ್ನಿವೇಶಗಳನ್ನು ಚಿತ್ರಿಸಿ ಅಲ್ಲಿ ಸಾಂದರ್ಭಿಕವಾದ ಪಾತ್ರಗಳನ್ನು ತಾನೇ ನಿರ್ವಹಿಸುತ್ತಾನೆ. ಸಾಮಾನ್ಯವಾಗಿ ಸಾಮಾಜಿಕ ಇಲ್ಲವೇ ರಾಜಕೀಯ ಸಮಸ್ಯೆಗಳ ವ್ಯಂಗ್ಯ ಟೀಕೆ ಇದರಲ್ಲಿರುತ್ತದೆ.

ಕಳೆದ ಕೆಲವು ವರ್ಷಗಳಿಂದ ಮಹಾರಾಷ್ಟ್ರದ ರಂಗಭೂಮಿಯ ಮೇಲೆ ಏಕಪಾತ್ರಾಭಿನಯದ ಮೂರೋ ನಾಲ್ಕೋ ಪ್ರಯೋಗಗಳು ನಡೆದಿವೆ. ಇವುಗಳಲ್ಲಿ ಎರಡು ವಿಧಗಳನ್ನು ಕಾಣಬಹುದು. ಒಂದು, ಅನೇಕ ನಟರು ಕೂಡಿ ಆಡುವ ಇಡಿಯ ನಾಟಕವನ್ನು ಒಬ್ಬನೇ ನಟ (ಇಲ್ಲವೆ ನಟಿ) ಆಡುವುದು. ಇನ್ನೊಂದು ಪಾಶ್ಚಾತ್ಯರಲ್ಲಿನಂತೆ ಹಾಸ್ಯ ಟೀಕಾತ್ಮಕ ಸನ್ನಿವೇಶಗಳನ್ನು ರಚಿಸಿ ಒಬ್ಬನೇ ನಟ ನಟಿಸಿ ತೋರಿಸುವುದು.

ಒಟ್ಟಾರೆ ಹೇಳುವುದಾದರೆ ನಾಟಕದ ರಚನೆಯಲ್ಲಾಗಲಿ ನಟನ ವಿವಿಧ ನೈಪುಣ್ಯದಲ್ಲಾಗಲಿ ಮೇಲ್ಮಟ್ಟವನ್ನು ಅಪೇಕ್ಷಿಸುವ ಈ ಏಕಪಾತ್ರಾಭಿನಯ ಭಾರತದ ಇಂದಿನ ರಂಗಭೂಮಿಯಲ್ಲಿ ಮೂಡಿಬಂದಿಲ್ಲ. ಆದರೂ ನಾಟ್ಯಶಾಸ್ತ್ರ, ಹರಿಕಥೆ ಮತ್ತು ಅಷ್ಟಾವಧಾನದಂಥ ಪ್ರಕಾರಗಳನ್ನು ನೋಡಿದರೆ ಇದು ಮುಂಚಿನಿಂದಲೂ ಮನ್ನಣೆ ಪಡೆದ ಒಂದು ರೂಪಕ ಎಂದು ಹೇಳಬಹುದು. (ಎ.ಆರ್.ಎ.)

**ಏಕಪ್ರಕಾರತವಾದ:** ಭೂಮಿಯ ಹೊರಪದರದಲ್ಲೂ ಒಳಭಾಗದಲ್ಲೂ ಆಗುತ್ತಿರುವ ವ್ಯತ್ಯಾಸಗಳು ಕೇವಲ ಆಕಸ್ಮಿಕವಲ್ಲ; ಅವು ಭೂಚರಿತ್ರೆಯ ಉದ್ದಕ್ಕೂ ಒಂದು ನಿಯಮಕ್ಕೆ ಅನುಸಾರವಾಗಿ ಏಕಪ್ರಕಾರವಾಗಿ ನಡೆಯುತ್ತ ಬಂದಿವೆ ಎಂಬ ವಾದ (ಯೂನಿಫಾರ್ಮಿಟೇರಿಯಾನಿಸಂ). ಇದನ್ನು ಜೇಮ್ಸ್ ಹಟ್ಟನ್ ಎಂಬ ಭೂವಿಜ್ಞಾನಿ 1788ರಲ್ಲಿ ಮಂಡಿಸಿದ. ಈ ವಾದಕ್ಕೆ ಸರ್ ಚಾರಲ್ಸ್ ಲಯೆಲ್ ಎಂಬ ವಿಖ್ಯಾತ ಭೂವಿಜ್ಞಾನಿ ಯೂನಿಫಾರ್ಮಿಟೇರಿಯಾನಿಸಂ (ಏಕಪ್ರಕಾರತಾವಾದ) ಎಂದು ಹೆಸರಿಟ್ಟ.

ಪ್ರತಿದಿವಸ ಉಂಟಾಗುವ ಉಷ್ಣತೆಯ ಏರಿಳಿತ, ನೀರಿನ ಹರಿವು. ಸಾಗರಗಳ ಬಡಿತ, ವಿವಿಧ ರಾಸಾಯನಿಕಗಳ ಕ್ರಿಯೆಗಳು, ಅಖಿಲ ಪ್ರಾಣಿವರ್ಗದ ಚಟುವಟಿಕೆಗಳು– ಇವೆಲ್ಲವುಗಳ ಸಮಗ್ರ ಪರಿಣಾಮವಾಗಿ ಭೂಮಿಯಲ್ಲಿ ವ್ಯತ್ಯಾಸಗಳು ನಿರಂತರವಾಗಿ ಸಂಭವಿಸುತ್ತವೆ. ಉದಾಹರಣೆಗೆ 250 ವರ್ಷಗಳಲ್ಲಿ ಲಂಡನ್ನಿನ ಸೇಂಟ್ ಪಾಲ್ ಕಟ್ಟಡದ ಹೊರಮೈಯಲ್ಲಿ ಸರಾಸರಿ ಅರ್ಧ ಅಂಗುಲದಷ್ಟು ಶಿಲಾಪದರ ಸವೆದುಹೋಗಿದೆ ಎಂದು ಅಂದಾಜು ಮಾಡಲಾಗಿದೆ. ಇದು ನಿಧಾನವಾಗಿಯೂ ಸತತವಾಗಿಯೂ ಭೂಮಿಯ ಮೇಲೆ ನಡೆಯುವ ಕಾರ್ಯಗಳಿಂದ ಆಯಿತು ಎನ್ನುವುದು ಖಚಿತವಾಗಿದೆ. ಪ್ರಕೃತಿ ವ್ಯಾಪಾರ ಇದೇ ರೀತಿ ನಡೆಯುತ್ತಿದ್ದರೆ, ಕೋಟಿ ವರ್ಷಗಳಲ್ಲಿ ಒಂದು ಪ್ರದೇಶದ ಗುಡ್ಡಗಳೂ ಬೆಟ್ಟಗಳೂ ನೆಲಸಮವಾಗುವುದು ಅಸಾಧ್ಯವೇನಲ್ಲ. ಭೂವಿಜ್ಞಾನ ದೃಷ್ಟಿಯಲ್ಲಿ ಒಂದು ಕೋಟಿ ವರ್ಷ ಚಿಕ್ಕ ಅವಧಿ. ಭೂಮಿಯ ಪ್ರಾಯ $5 \times 10^9$ ವರ್ಷಗಳು ಎಂದಾಗ 1 ಕೋಟಿ ವರ್ಷಗಳು ($10^7$) ಎಷ್ಟು ಚಿಕ್ಕ ಅವಧಿ ಎಂದು ಊಹಿಸಬಹುದು. ಈ ಅಗಾಧ ಕಾಲದಲ್ಲಿ ಮೇಲೆ ವಿವರಿಸಿರುವ ಎಲ್ಲ ಕಾರಣಗಳಿಂದಾಗಿ ಭೂಮಿಯ ಹೊರಮೈಯ ರೂಪದಲ್ಲಿಯೂ ಭೂ ಜಲಭಾಗಗಳ ಹರವಿನಲ್ಲಿಯೂ ಅನೇಕ ವ್ಯತ್ಯಾಸಗಳಾಗಿವೆ. ಭೂಮಿಯ ಮೇಲ್ಭಾಗದಲ್ಲಿ ಎಡೆಬಿಡದೆ ಒಂದೇ ಸಮನಾಗಿ ನಡೆಯುವ ಇಂಥ ಕಾರ್ಯಗಳೇ ಈ ಬಗೆಯ ವ್ಯತ್ಯಾಸಗಳಿಗೆ ಕಾರಣಗಳಾಗಿವೆ.

ಭೂಚರಿತ್ರೆಯ ಅಗಾಧ ಕಾಲವನ್ನೂ ಅದರ ಪಾತ್ರವನ್ನೂ ಮೊತ್ತಮೊದಲು ಸರಿಯಾಗಿ ಅರ್ಥಮಾಡಿಕೊಂಡವ ಆಧುನಿಕ ಭೂವಿಜ್ಞಾನದ ಪಿತಾಮಹನಾದ ಇಂಗ್ಲೆಂಡಿನ ಜೇಮ್ಸ್ ಹಟ್ಟನ್ (1726–97). 1785ರಲ್ಲಿ ಆತ ಎಡಿನ್‌ಬರೋವಿನ ರಾಯಲ್ ಸೊಸೈಟಿಯ ಮುಂದೆ ಥಿಯೊರಿ ಆಫ್ ದಿ ಅರ್ತ್ ಎಂಬ ಗ್ರಂಥವನ್ನು ಮಂಡಿಸಿದ. ಇಂದಿನ ಬೆಟ್ಟಗಳು ಮತ್ತು ಪರ್ವತಗಳು ಅವಿರತವಾಗಿ ನಡೆಯುತ್ತಿರುವ ಭೂವ್ಯಾಪಾರ ಕರ್ತೃಗಳ ತೇಮಾನದ ಪರಿಣಾಮದಿಂದ ಉಂಟಾದುವೆಂಬುದನ್ನು ಆತ ತನ್ನ ಗ್ರಂಥದಲ್ಲಿ ಸ್ಥಾಪಿಸಿದ್ದಾನೆ. ಆತನಿಗೆ ಮೊದಲು ಯಾರೂ ಈ ವಿವರಗಳನ್ನು ಸರಿಯಾಗಿ ತಿಳಿಸಿರಲಿಲ್ಲ ಮತ್ತು ಸಕಾರವಾಗಿ ವಿವರಿಸಿರಲಿಲ್ಲ. ಪ್ರಕೃತಿಯಲ್ಲಿ ನಡೆಯುವ ಎಲ್ಲ ವ್ಯತ್ಯಾಸಗಳೂ ಇದ್ದಕ್ಕಿದ್ದಂತೆ ಹಠಾತ್ತಾಗಿ ವಿಪ್ಲವಗಳ ದೆಸೆಯಿಂದ ಉಂಟಾಗುತ್ತವೆ ಎಂಬ ಭಾವನೆ ಹಟ್ಟನನ ಕಾಲದಲ್ಲೂ ಮತ್ತು ಅದಕ್ಕೆ ಮುಂಚೆಯೂ ಇತ್ತು. ಇದಕ್ಕೆ ವಿಪ್ಲವವಾದ (ಕ್ಯಾಟಸ್ಟ್ರೋಫಿಸಂ) ಎಂದು ಹೆಸರು. ಆದರೆ ಇಂದು ಏಕಪ್ರಕಾರತಾವಾದವೇ ಭೂವಿಜ್ಞಾನದ ಒಂದು ಮೂಲಭೂತ ತತ್ತ್ವವಾಗಿದೆ. (ಎಂ.ಆರ್.ಎಸ್.)

**ಏಕಮಾನ ವ್ಯವಸ್ಥೆಗಳು:** ಭೌತ ಪರಿಮಾಣಗಳನ್ನು ಅಳೆಯಲು ಮತ್ತು ಭೌತನಿಯಮಗಳನ್ನೂ ಫಲಿತಾಂಶಗಳನ್ನೂ ಅಡಕವಾಗಿ ನಿರೂಪಿಸಲು ಬಳಸುವ ಏಕಕಗಳ (ಏಕಮಾನಗಳ) ಸಮುದಾಯಗಳು (ಸಿಸ್ಟಮ್ಸ್ ಆಫ್ ಯೂನಿಟ್ಸ್). ಎರಡು ಸದೃಶ ಪರಿಮಾಣಗಳ ತುಲನೆಯೇ ಅಳತೆಯ ಮೂಲಸೂತ್ರ. ಇವೆರಡರಲ್ಲಿ ಒಂದನ್ನು ಸಂದರ್ಭೋಚಿತವಾಗಿ ಆರಿಸಿದರೆ (ಆಗ ಅದು ಏಕಕವಾಗುತ್ತದೆ) ಇನ್ನೊಂದು ಈ ಏಕಕದ ಅಪವರ್ತ್ಯ ಅಥವಾ ಭಿನ್ನರಾಶಿ ಆಗುತ್ತದೆ. ಏಕಕದ ಆಯ್ಕೆ ತತ್ತ್ವಶಃ ಸ್ವೇಚ್ಛೆಯಂತಾದರೂ ಅಂತಾರಾಷ್ಟ್ರೀಯವಾಗಿಯೂ ವಿಜ್ಞಾನಿಗಳ ಕ್ಷೇತ್ರಗಳಲ್ಲಿಯೂ ಇದರಲ್ಲಿ ಒಂದು ನಿಷ್ಕೃಷ್ಟತೆ ಬಂದಿದೆ. ಹೀಗಲ್ಲದಿದ್ದರೆ ಎಲ್ಲ ವ್ಯವಹಾರಗಳಲ್ಲಿಯೂ ಗೊಂದಲ ಉಂಟಾಗುತ್ತಿತ್ತು.

ಒಂದು ಊರಿನಿಂದ ಇನ್ನೊಂದು ಊರಿಗೆ ಇರುವ ದೂರವೆಷ್ಟು ಎನ್ನುವ ಪ್ರಶ್ನೆಗೆ 80 ಕಿಮೀ.ಗಳು ಎನ್ನುವಾಗ ನಾವು ಬಳಸಿರುವ ಏಕಕ. ಬೆಳಕು ಸೂರ್ಯನಿಂದ ಭೂಮಿಗೆ ಬರಲು ಸುಮಾರು 8 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ ಎನ್ನುವಲ್ಲಿ ನಿಮಿಷ ಎಂಬುದು ನಾವು ಬಳಸಿರುವ ಏಕಕ. ಈ ಉದಾಹರಣೆಗಳಲ್ಲಿ ಏಕಕ ಎಲ್ಲರೂ ಒಪ್ಪಿರುವಂಥ ಒಂದು ಅನುಕೂಲವಾದ ಸ್ವೇಚ್ಛಾ ಆಯ್ಕೆ.

ದೈನಂದಿನ ವ್ಯವಹಾರದಲ್ಲಿಯೂ ಎಲ್ಲ ವೈಜ್ಞಾನಿಕ ವ್ಯವಹಾರಗಳಲ್ಲಿಯೂ ಮೊದಲು ಎದುರಾಗುವ ಭೌತಪರಿಣಾಮಗಳು ಉದ್ದ (ಅಗಲ, ಎತ್ತರ, ಆಳ, ದೂರ ಎಲ್ಲವೂ ಈ ಭಾವನೆಯಲ್ಲಿ ಅಧ್ಯಾಹಾರ), ತೂಕ ಮತ್ತು ಕಾಲ. ಇವು ಅಳತೆಯ ಮೂಲಮಾನಗಳು. ಕಾರಿನ ವೇಗ ಸೆಕೆಂಡಿಗೆ 30 ಮೀಗಳು ಎನ್ನುವಾಗ, ಭೂಮಿಯ ದ್ರವ್ಯಮಾನ $5.9\frac{3}{}10^{27}$ ಗ್ರಾಂಗಳು ಎಂದು ತಿಳಿಸುವಾಗ, ಭೂಮಿಯಿಂದ ಪ್ರಾಕ್ಸಿಮಾ ಸೆಂಟಾರಿ ನಕ್ಷತ್ರದ ದೂರ 4.3 ಜ್ಯೋತಿರ್ವರ್ಷಗಳೆಂದು ಹೇಳುವಾಗ ಇವೇ ಮೂರು ಅಳತೆಯ ಮೂಲಮಾನಗಳು ವಿವಿಧರೀತಿಗಳಲ್ಲಿ ಜೋಡಣೆಗೊಂಡಿವೆ ಎಂಬುದು ಸ್ಪಷ್ಟ (**ನೋಡಿ– ಏಕಕಗಳು–ಮತ್ತು–ಆಯಾಮಗಳು**).

ಮೂಲಮಾನಗಳನ್ನು ನಿಗದಿಸುವ ಕಾರ್ಯ ಸುಮಾರು 150 ವರ್ಷಗಳ ಹಿಂದೆಯೇ ಪ್ರಾರಂಭವಾಯಿತು. ಇವನ್ನು ಸುಲಭವಾಗಿ ನಿರೂಪಿಸಲು ಅನುಕೂಲಿಸುವಂತೆ ಬಂದ ಹಲವಾರು ವ್ಯವಸ್ಥೆಗಳಲ್ಲಿ ಮುಖ್ಯವಾದವು ಎರಡು : ಬ್ರಿಟಿಷ್ ಅಥವಾ ಎಫ್‌ಪಿಎಸ್ (ಫುಟ್–ಪೌಂಡ್–ಸೆಕೆಂಡ್) ವ್ಯವಸ್ಥೆ; ಫ್ರೆಂಚ್ ಅಥವಾ ಮೆಟ್ರಿಕ್ ಅಥವಾ ಸಿಜಿಎಸ್ (ಸೆಂಟಿಮೀಟರ್–ಗ್ರಾಂ–ಸೆಕೆಂಡ್) ವ್ಯವಸ್ಥೆ. ಎಫ್‌ಪಿಎಸ್ ವ್ಯವಸ್ಥೆಯಲ್ಲಿ ಉದ್ದದ ಏಕಕ ಅಡಿ (ಫುಟ್) ತೂಕದ ಏಕಕ ಪೌಂಡ್. ಸಿಜಿಎಸ್ ವ್ಯವಸ್ಥೆಯಲ್ಲಿ ಅವು ಕ್ರಮವಾಗಿ ಸೆಂಟಿಮೀಟರ್ ಮತ್ತು ಗ್ರಾಂ. ಎರಡು ವ್ಯವಸ್ಥೆಗಳಲ್ಲೂ ಕಾಲದ ಏಕಕ ಸೆಕೆಂಡ್. ಸಿಜಿಎಸ್‌ನ್ನು ಎಂಕೆಎಸ್ (ಮೀಟರ್–ಕಿಲೋಗ್ರಾಂ–ಸೆಕೆಂಡ್) ವ್ಯವಸ್ಥೆ ಎಂದೂ ಕರೆಯುವುದುಂಟು. ಈ ವ್ಯವಸ್ಥೆಯಲ್ಲಿ ಎಲ್ಲವೂ ಹತ್ತರ ಅಪವರ್ತ್ಯಗಳಾಗಿರುವುದರಿಂದ ಇದನ್ನು ದಶಕ ವ್ಯವಸ್ಥೆ ಎಂದೂ ಸಹ ಕರೆಯುತ್ತಾರೆ.

**ಉದ್ದದ ಅಳತೆ:** ಬ್ರಿಟಿಷ್ ವ್ಯವಸ್ಥೆಯಲ್ಲಿ ಉದ್ದವನ್ನಳೆಯುವುದು ಅಡಿಗಳಲ್ಲಿ. ಲಂಡನ್ ಪಟ್ಟಣದಲ್ಲಿರುವ ಬೋರ್ಡ್ ಆಫ್ ಟ್ರೇಡ್ ಎಂಬ ಸಂಸ್ಥೆಯಲ್ಲಿ ಒಂದು ಕಂಚಿನ ಸಲಾಕಿ ಇಟ್ಟಿದ್ದಾರೆ. ಇದರ ಪ್ರತಿ ಒಂದು ಕೊನೆಯಲ್ಲಿ ಒಂದು ಚಿನ್ನದಪಟ್ಟಿ ಇದೆ. ಅದರ ಮೇಲೆ ಒಂದನ್ನೊಂದು ಕತ್ತರಿಸುವ ಎರಡು ಸರಳರೇಖೆಗಳಿವೆ. ಇವು ಛೇದಿಸುವ ಬಿಂದುಗಳ ನಡುವೆ $62^0$ ಫ್ಯಾ. ಉಷ್ಣತೆಯಲ್ಲಿ. ಇರುವ ದೂರವನ್ನು ಗಜ (ಯಾರ್ಡ್) ಎಂದು ಹೇಳುತ್ತಾರೆ. ಈ ಉದ್ದದ ಮೂರನೆ ಒಂದು ಭಾಗವೇ ಒಂದು ಅಡಿ. ಇದು ಶಿಷ್ಟ ಏಕಕ. ಮೆಟ್ರಿಕ್ ವ್ಯವಸ್ಥೆಯಲ್ಲಿ ಉದ್ದವನ್ನು ಮೀಟರುಗಳಲ್ಲೂ ಸೆಂಟಿಮೀಟರುಗಳಲ್ಲೂ ಅಳೆಯುತ್ತಾರೆ. 1 ಮೀಟರಿಗೆ ನೂರು ಸೆಂಟಿಮೀಟರುಗಳು. ಮೀಟರಿನ ಉದ್ದ ಎಷ್ಟಾಗುತ್ತದೆಂದು ವಿಜ್ಞಾನಿಗಳು ಬಲು ಸಂಶೋಧನೆ ನಡೆಸಿದರು. ಕೊನೆಗೆ 1875ರಲ್ಲಿ ಈ ರೀತಿ ನಿರ್ಣಯ ಮಾಡಿದರು–ಪ್ಲಾಟಿನಂ ಮತ್ತು ಇರಿಡಿಯಂ

ಲೋಹಗಳ ಮಿಶ್ರಲೋಹದ ಕಂಬಿಯೊಂದರಲ್ಲಿ ಗುರುತಿಸಲಾದ ಎರಡು ಅತ್ಯಂತ ಸೂಕ್ಷ್ಮ ಗೆರೆಗಳ ನಡುವೆ $0^0$ ಸೆಂ. ಉಷ್ಣತೆಯಲ್ಲಿರುವ ದೂರವೇ ಮೀಟರ್. ಈ ಕಂಬಿಯನ್ನು (ಸಲಾಕಿ) ಪ್ಯಾರಿಸ್ ನಗರದ ಸೆವ್ರೆಸ್ ಪಟ್ಟಣದ ಅಂತಾರಾಷ್ಟ್ರೀಯ ತೂಕ ಮತ್ತು ಅಳತೆಗಳ ಸಂಸ್ಥೆಯಲ್ಲಿಟ್ಟು ಕಾಪಾಡಿಕೊಂಡು ಬಂದಿದ್ದಾರೆ. ಇದು ಮೀಟರಿನ ಅಧಿಕೃತ ಉದ್ದ. ಇದು ಮೆಟ್ರಿಕ್ ವ್ಯವಸ್ಥೆಯಲ್ಲಿ ಉದ್ದದ ಶಿಷ್ಟ ಏಕಕ.

**ತೂಕದ ಅಳತೆ:** ಬ್ರಿಟಿಷ್ ವ್ಯವಸ್ಥೆಯಲ್ಲಿ ತೂಕವನ್ನು ಪೌಂಡುಗಳಲ್ಲಿ ಅಳೆಯುತ್ತಾರೆ. ಮೆಟ್ರಿಕ್ ಏಕಕಗಳಲ್ಲಿಯೂ ಕಂಡುಹಿಡಿದರೆ ಅವುಗಳಿಗಿರುವ ಸಂಬಂಧ ಗೊತ್ತಾಗುವುದು. ಹೀಗೆ ಮಾಡಿದಮೇಲೆ 1 ಪೌಂಡಿಗೆ 453,56 ಗ್ರಾಂಗಳೆಂದೂ 1 ಮೀಟರಿಗೆ 39.37 ಅಂಗುಲಗಳೆಂದೂ ಹೇಳಿದ್ದಾರೆ (ಒಂದು ಅಡಿಯ 12ನೆಯ ಒಂದು ಭಾಗ ಒಂದು ಅಂಗುಲ). ಉದಾಹರಣೆಗೆ ಬ್ರಿಟಿಷ್ ವ್ಯವಸ್ಥೆಯಲ್ಲಿ ಘನಗಾತ್ರದ ಅಳತೆ ಘನ ಅಡಿಗಳಲ್ಲೂ ಮೆಟ್ರಿಕ್ ಪದ್ಧತಿಯಲ್ಲಿ ಘನಸೆಂಟಿಮೀಟರುಗಳಲ್ಲೂ ಇದೆ. ಒಂದು ಘನ ಅಡಿಯನ್ನು ಘನಸೆಂಟಿಮೀಟರುಗಳಲ್ಲೂ ಹೇಳಬಹುದು.

**1 ನಿರಪೇಕ್ಷ ಏಕಕ ವ್ಯವಸ್ಥೆಗಳು**

| ಪರಿಮಾಣ | ಸಂಬಂಧದ ವಿವರ | ಏಕಕಗಳು | | |
|---|---|---|---|---|
| | | ಎಂಕೆಎಸ್ | ಸಿಜಿಎಸ್ | ಎಫ್‌ಪಿಎಸ್ |
| ಉದ್ದ L | ಮೂಲಮಾನ | m | Cm | ಅಡಿ(Ft) |
| ದ್ರವ್ಯಮಾನ m | ಮೂಲಮಾನ | kg | G | ಪೌಂಡ್ ದ್ರವ್ಯಮಾನ(lbm) |
| ಕಾಲ t | ಮೂಲಮಾನ | sec | Sec | sec |
| ವೇಗ v | $\frac{L}{t}$ | m/sec | cm/sec | ft/sec |
| ವೇಗೋತ್ಕರ್ಷ a | $\frac{V}{t}$ | m/sec$^2$ | cm/sec$^2$ | ft/sec$^2$ |
| ಬಲ F | ma | 1 ನ್ಯೂಟನ್=1kg-m/sec$^2$ | 1 ಡೈನ್=1–g=cm/sec$^2$ | 1 ಪೌಂಡಲ್=1 lbm-ft/sec$^2$ |
| ಕಾರ್ಯ W | FL | 1 ಜೌಲ್=1 ನ್ಯೂಟನ್ -m | 1 ಏರ್ಗ್=1 ಡೈನ್–cm | ಪೌಂಡಲ್–ಅಡಿ |
| ಸಾಮರ್ಥ್ಯ P | $\frac{W}{t}$ | 1 ವಾಟ್=1 ಜೌಲ್/sec | ಏರ್ಗ್/sec | Ft-poundal/sec |
| ಸಂವೇಗ p | mv | Kg-m/sec | g-cm/sec | Lbm-ft/sec |

**2 ಗುರುತ್ವಾಕರ್ಷಣ ಏಕಕ ವ್ಯವಸ್ಥೆಗಳು**

| ಪರಿಮಾಣ | ಸಂಬಂಧದ ವಿವರ | ಏಕಕಗಳು | |
|---|---|---|---|
| | | ಸಿಜಿಎಸ್ | ಎಫ್‌ಪಿಎಸ್ |
| ಉದ್ದ L | ಮೂಲಮಾನ | cm | ಅಡಿ(Ft) |
| ಬಲ F | ಮೂಲಮಾನ | ಗ್ರಾಂ–ಬಲ(gf) | ಪೌಂಡ್ (lbm) |
| ಕಾಲ t | ಮೂಲಮಾನ | ಸೆಕೆಂಡ್(sec) | ಸೆಕೆಂಡ್(sec) |
| ದ್ರವ್ಯಮಾನ m | $\frac{F}{a}$ | Gf-sec$^2$/cm | ಸ್ಲಗ್ |
| ವೇಗ v | $\frac{L}{t}$ | cm/sec | ft/sec |
| ವೇಗೋತ್ಕರ್ಷ a | $\frac{v}{t}$ | cm/sec$^2$ | ft/sec$^2$ |
| ಕಾರ್ಯ W | FL | cm-gf | ಅಡಿ – ಪೌಂಡ್ ಬಲ(ft-lbf) |
| ಸಾಮರ್ಥ್ಯ P | W/t | cm-gf/sec | ft-lbf/sec |
| ಸಂವೇಗ p | mv | gf-sec | ಸ್ಲಗ್–ಅಡಿ/ಸೆಕೆಂಡ್ |

1844 ಎಂದು ಗುರುತಿಸಿರುವ ಪ್ಲಾಟಿನಂ ಲೋಹದ ಚೂರಿನ ತೂಕಕ್ಕೆ 1 ಪೌಂಡ್ ಎಂದಿದ್ದಾರೆ. ಮೆಟ್ರಿಕ್ ವ್ಯವಸ್ಥೆಯಲ್ಲಿ ತೂಕವನ್ನು ಗ್ರಾಂಗಳಲ್ಲಿ ಹೇಳುತ್ತಾರೆ. 1 ಕಿಲೋಗ್ರಾಂನ ಸಾವಿರದ ಒಂದನೇ ಭಾಗವೇ ಒಂದು ಗ್ರಾಂ. ಪ್ಲಾಟಿನಂ–ಇರಿಡಿಯಂ ಮಿಶ್ರಲೋಹದ ಸಿಲಿಂಡರಿನ ತೂಕವೇ 1 ಕಿಲೋಗ್ರಾಂ.

**ಕಾಲದ ಅಳತೆ:** ಎರಡು ವ್ಯವಸ್ಥೆಗಳಲ್ಲೂ ಕಾಲದ ಅಳತೆ ಸೆಕೆಂಡುಗಳಲ್ಲಿ. ಒಂದು ಸರಾಸರಿ ಸೌರದಿವಸದ (ಮೀನ್ ಸೋಲಾರ್ ಡೇ) ಎಂಬತ್ತಾರು ಸಾವಿರದ ನಾನೂರನೇ ಒಂದು ಭಾಗವನ್ನು ಸೆಕೆಂಡ್ ಎಂದು ಕರೆದಿದ್ದಾರೆ (1/86,400). ಬ್ರಿಟಿಷ್ ಹಾಗೂ ಮೆಟ್ರಿಕ್ ವ್ಯವಸ್ಥೆಗಳಿಗೆ ಸಂಬಂಧವಿದೆ. ಒಂದೇ ಅಳತೆಯನ್ನು ಬ್ರಿಟಿಷ್ ಏಕಕಗಳಲ್ಲಿಯೂ ಗಣನೆಗಳಿಗೆ ಬ್ರಿಟಿಷ್ ವ್ಯವಸ್ಥೆಯು ಮೆಟ್ರಿಕ್ ವ್ಯವಸ್ಥೆಯಷ್ಟು ಸುಲಭ ಇಲ್ಲದಿರುವುದರಿಂದ ಮೆಟ್ರಿಕ್ ವ್ಯವಸ್ಥೆಯೇ ಈಗ ಹೆಚ್ಚು ಉಪಯೋಗದಲ್ಲಿದೆ. ಭಾರತ ದೇಶದ ಎಲ್ಲೆಡೆಗಳಲ್ಲಿಯೂ ಈ ವ್ಯವಸ್ಥೆಯನ್ನೇ ಅಧಿಕೃತವಾಗಿ ಅನುಸರಿಸಲಾಗುತ್ತಿದೆ.

ಕೆಲವು ಏಕಕ ವ್ಯವಸ್ಥೆಗಳ ವಿನಿಮಯ ಸಂಬಂಧಗಳನ್ನು ಪಟ್ಟಿಗಳಲ್ಲಿ ತೋರಿಸಿದೆ. (ಬಿ.ಜಿ.ಆರ್.)

**ಏಕಮುಖ ವಿದ್ಯುಜ್ಜನಕ:** ಏಕಮುಖ ವಿದ್ಯುತ್ಪ್ರವಾಹವನ್ನೂ ವೋಲ್ಟೇಜನ್ನೂ ಆವರ್ತನೆಯಿಂದ ಪೂರೈಸುವ ವಿದ್ಯುದ್ಯಂತ್ರ (ಡೈರೆಕ್ಟ್ ಕರೆಂಟ್ ಜನರೇಟರ್). ವಿದ್ಯುತ್ಕೋಶಗಳಿಂದ, ಉಷ್ಣಶಕ್ತಿಯಿಂದ ಬೆಳಕಿನ ಶಕ್ತಿಯಿಂದ ಪಡೆದ ಪರ್ಯಾಯ

ವಿದ್ಯುತ್ಪ್ರವಾಹವನ್ನು ಏಕಮುಖಪ್ರವಾಹವಾಗಿ ಪರಿವರ್ತಿಸುವುದರಿಂದಲೂ ವಿದ್ಯುದ್ಯಂತ್ರಗಳ ನೆರವಿನಿಂದಲೂ ಏಕಮುಖ ವಿದ್ಯುತ್ತನ್ನು ಪಡೆಯಬಹುದು. ಇವುಗಳ ಪೈಕಿ ಕೊನೆಯದನ್ನುಳಿದು ಮಿಕ್ಕವು ಅಧಿಕ ಪರಿಮಾಣದ ಪ್ರವಾಹೋತ್ಪಾದನೆಯ ದೃಷ್ಟಿಯಿಂದ ಗಮನಾರ್ಹಗಳಲ್ಲ. ಆದ್ದರಿಂದ ಈ ಲೇಖನದಲ್ಲಿ ವಿದ್ಯುದ್ಯಂತ್ರ ಕ್ರಿಯೆಯಿಂದ ಏಕಮುಖ ಪ್ರವಾಹೋತ್ಪಾದನೆಯನ್ನು ವಿವರಿಸಿದೆ.

ಏಕಮುಖ ಪ್ರವಾಹದ ವಿದ್ಯುಜ್ಜನಕ (ಡಿಸಿ ಜನರೇಟರ್) : ಇದರಲ್ಲಿ ಸ್ಥಿರ ಭಾಗ ಮತ್ತು ಆವರ್ತಕ ಎಂಬ ಎರಡು ವಿಶಿಷ್ಟ ಅಂಗಗಳಿವೆ. ದಂಡದ ಮೇಲೆ ಕೂರಿಸಿರುವ ಆವರ್ತಕ ಸ್ಥಿರಭಾಗದ ಒಳಗಡೆ ತಿರುಗುತ್ತದೆ. ಸ್ಥಿರಭಾಗ ಚಲಿಸದ ಸ್ಥಾಯಿ ಅಂಗ. ಇದು ಉರುಳೆಯ ಆಕೃತಿಯಲ್ಲಿದೆ. ಎರಕದ ಕಬ್ಬಿಣ ಅಥವಾ ಎರಕದ ಉಕ್ಕಿನಿಂದ ಇದನ್ನು ಮಾಡಿರುತ್ತಾರೆ. ಒಳಭಾಗದಲ್ಲಿ ವಿದ್ಯುತ್ ಧ್ರುವಗಳನ್ನು ಜೋಡಿಸಲಾಗುತ್ತದೆ. ಉರುಳೆಯ ಆಕೃತಿಯ ಈ ಚೌಕಟ್ಟಿಗೆ ನೊಗ (ಯೋಕ್) ಎಂದು ಹೆಸರು. ಇದು ವಿದ್ಯುತ್ ಧ್ರುವಗಳನ್ನು ಆಧರಿಸುತ್ತದೆ ಮತ್ತು ಕಾಂತ ಅಭಿವಾಹಕ್ಕೆ (ಮ್ಯಾಗ್ನೆಟಿಕ್ ಫ್ಲಕ್ಸ್) ವಾಹಕ, ವಿದ್ಯುತ್ ಧ್ರುವಗಳನ್ನು ಮತ್ತು ನೊಗವನ್ನು ಒಂದಾಗಿ ಎರಕ ಹೊಯ್ದು ಮಾಡಿದೆ ಅಥವಾ ಅಗುಳಿ ಮತ್ತು ಹಲ್ಲು ಚಕ್ರಗಳನ್ನು ಉಪಯೋಗಿಸಿ ಸೇರಿಸಿದೆ. ವಿದ್ಯುತ್ ಧ್ರುವಗಳು ಅನುಕ್ರಮವಾಗಿ ಉತ್ತರ ಮತ್ತು ದಕ್ಷಿಣವಾಗುವಂತೆ ಧ್ರುವಗಳ ಸುತ್ತಲೂ ವಿದ್ಯುತ್ ಸುರುಳಿಯನ್ನು ಸುತ್ತಿದೆ.

**ಆವರ್ತಕ :** ಆವರ್ತಕದ ಎರಡು ಮುಖ್ಯ ಅಂಗಗಳು ಮೆತು ಕಬ್ಬಿಣದ ಪಟ್ಟಿ ಮತ್ತು ಪರಿವರ್ತಕ (ಕಾಮ್ಯುಟೇಟರ್). ಉರುಳೆಯ ಆಕೃತಿಯ ಸ್ಥಿರಭಾಗದ ಒಳಗಡೆ ಈ ಪಟ್ಟಿಯ ನಡುವಿನ ಎಡೆ ಅತ್ಯಲ್ಪ ಪ್ರಮಾಣದ್ದು. ತನಗೆ ಆಧಾರವಾದ ಕಾಂಡದೊಡನೆ ಪಟ್ಟಿ ತಿರುಗುತ್ತದೆ. ಪಟ್ಟಿಯ ಹೊರಮೈಯಲ್ಲಿ ಉದ್ದುದ್ದಕ್ಕೂ ಆಯತಾಕಾರದ ಸೀಳು ಕಂಡಿಗಳಿವೆ. ಇವುಗಳಲ್ಲಿ ವಿದ್ಯುದ್ವಾಹಕಗಳನ್ನು ಇಟ್ಟಿದೆ. ಕಂಡಿಗಳಲ್ಲಿ ಒಂದರ ಮೇಲೆ ಒಂದರಂತೆ ಎರಡು ಮೂರು ವಾಹಕಗಳೂ ಅವುಗಳ ಸುತ್ತ ವಿದ್ಯುನ್ನಿರೋಧಕಗಳೂ ಇವೆ. ಮೆತು ಕಬ್ಬಿಣದ ಪಟ್ಟಿ ತೆಳ್ಳಗಿನ ತಗಡುಗಳನ್ನು ಒಟ್ಟು ಸೇರಿಸಿ ಕೂಡಿಸುತ್ತದೆ. ಈ ತಗಡುಗಳ ಮಧ್ಯೆ ಅನುಕ್ರಮವಾಗಿ ಕೆಲವು ಎಡೆಗಳನ್ನು ಬಿಟ್ಟಿದೆ. ಇವುಗಳಿಂದಾಗಿ ಪಟ್ಟಿಯಲ್ಲಿ ವಾಯುದ್ವಾರಗಳು ಉಂಟಾಗುತ್ತವೆ. ಇವುಗಳ ಮೂಲಕ ಪ್ರವಹಿಸುವ ವಾಯು ವಾಹಕಗಳನ್ನು ತಣ್ಣಗಿಡಲು ಸಹಾಯಕವಾಗುವುದು.



**ಚಿತ್ರ 1 ಚಿತ್ರದ ಮಧ್ಯಭಾಗದಲ್ಲಿ ರೋಟರನ್ನೂ ಅದರ ಸುತ್ತಲಿನ ಭಾಗದಲ್ಲಿ ಸ್ಟೇಟರ್, ವಿದ್ಯುತ್ ಧ್ರುವಗಳು ಮತ್ತು ನೊಗಗಳನ್ನೂ ತೋರಿಸಿದೆ.**

**ಪರಿವರ್ತಕ (ಕಾಮ್ಯುಟೇಟರ್):** ಮೆತು ಕಬ್ಬಿಣದ ಪಟ್ಟಿಯನ್ನು ಜೋಡಿಸಿದ ಕಾಂಡದ ಮೇಲೆಯೇ ಪರಿವರ್ತಕವನ್ನು ಜೋಡಿಸಿದೆ. ಆದರೆ ಪರಿವರ್ತಕರ ವ್ಯಾಸ ಪಟ್ಟಿಯ ವ್ಯಾಸಕ್ಕಿಂತ ಕಡಿಮೆ. ಉರುಳೆಯ ಆಕೃತಿಯ ಹೊರಮೈಯ ಮೇಲೆ ತಾಮ್ರದ ಚಿಕ್ಕ ಚಿಕ್ಕ ತಗಡುಗಳನ್ನು (ಸ್ಟ್ರಿಪ್ಸ್) ಹಾಸಿದೆ. ಇವುಗಳ ಮಧ್ಯೆ ವಿದ್ಯುನ್ನಿರೋಧಕವಿದೆ. ತಾಮ್ರದ ತಗಡುಗಳನ್ನು ಕಬ್ಬಿಣದ ಪಟ್ಟಿಯ ವಾಹಕಗಳಿಗೆ ಸೇರಿಸಿರುತ್ತಾರೆ. ಪರಿವರ್ತಕದ ತಾಮ್ರದ ತಗಡುಗಳಿಗೆ ತಾಕಿಕೊಂಡು ಹೊರಮೈಯಲ್ಲಿ ಇಂಗಾಲದ ವಿದ್ಯುತ್ಕೂರ್ಚಗಳಿವೆ (ಬ್ರಷಸ್). ಪ್ರತಿಯೊಂದು ವಿದ್ಯುತ್ಕೂರ್ಚದ ಅಗಲ ಸು. 2–3 ಪಟ್ಟಿಗಳಷ್ಟು. ಸಾಮಾನ್ಯವಾಗಿ ಇವುಗಳ ಸಂಖ್ಯೆ ಆ ವಿದ್ಯುಜ್ಜನಕದ ವಿದ್ಯುತ್ ಧ್ರುವಗಳ ಸಂಖ್ಯೆಗೆ ಸಮ. ವಿದ್ಯುತ್ಕೂರ್ಚಗಳು ಕಬ್ಬಿಣದ ಪಟ್ಟಿಯಲ್ಲಿರುವ ಪ್ರವಾಹವನ್ನು ಶೇಖರಿಸುತ್ತವೆ. ಮೇಲಿರುವ ಎಗರು ಪಟ್ಟಿಯನ್ನು ಉಪಯೋಗಿಸಿ ವಿದ್ಯುತ್ಕೂರ್ಚ ಪರಿವರ್ತಕದ ಮೇಲೆ ಹೇರುವ ವೋಲ್ಟೇಜನ್ನು ವ್ಯತ್ಯಾಸ ಮಾಡಬಹುದು. ಸ್ಥಿರವಾದ ಭಾಗದ ವಿದ್ಯುತ್ ಧ್ರುವಗಳಿಗೆ ಸುತ್ತಿರುವ ಸುರುಳಿಗಳ ಮೂಲಕ ಏಕಮುಖ ಪ್ರವಾಹವನ್ನು ಹರಿಸಿದಾಗ ವಿದ್ಯುತ್ ಪ್ರವಾಹ ಉತ್ಪತ್ತಿಯಾಗುತ್ತದೆ. ಮೆತು ಕಬ್ಬಿಣದ ಪಟ್ಟಿಯನ್ನು ಬಾಹ್ಯ ಶಕ್ತಿಯನ್ನು ಉಪಯೋಗಿಸಿ ತಿರುಗಿಸಿದಾಗ ವಾಹಕಗಳಲ್ಲಿ ವೋಲ್ಟೇಜ್ ಉತ್ಪನ್ನವಾಗಿ ಅದು ವಿದ್ಯುತ್ಕೂರ್ಚಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅವುಗಳ ನಡುವೆ ಒಂದು ಬಾಹ್ಯನಿರೋಧವನ್ನು ಸೇರಿಸಿದಾಗ ಕಬ್ಬಿಣದ ಪಟ್ಟಿಯಿಂದ ವಿದ್ಯುತ್ ಪ್ರವಾಹ ಹರಿಯುತ್ತದೆ.

ಉತ್ಪನ್ನವಾದ ವೋಲ್ಟೇಜಿನ ಸೂತ್ರ : ಒಂದು ವಿದ್ಯುಜ್ಜನಕದಲ್ಲಿ ಉತ್ಪನ್ನವಾದ ವೋಲ್ಟೇಜನ್ನು ಕೆಳಗಣ ಸೂತ್ರದಿಂದ ತಿಳಿಯಬಹುದು.

$\sum = \frac{\phi Z N}{60} \; \frac{P}{P'}$ ವೋಲ್ಟ್. ಇಲ್ಲಿ $\phi$= ಅಭಿವಾಹ (ಫ್ಲಕ್ಸ್) ವೀಬರುಗಳಲ್ಲಿ. Z = ಕಬ್ಬಿಣದ ಪಟ್ಟಿಯಲ್ಲಿರುವ ವಾಹಕಗಳ ಸಂಖ್ಯೆ. N = ತಿರುಗುವಿಕೆಯ ವೇಗ (ನಿಮಿಷಕ್ಕೆ ಸುತ್ತುಗಳು). P = ಧ್ರುವಗಳ ಸಂಖ್ಯೆ. P' = ಸಮಾನಾಂತರ ಪಥಗಳ ಸಂಖ್ಯೆ; ಇದು ಸುರುಳಿಯ (ವೈಂಡಿಂಗ್) ರೀತಿಯನ್ನವಲಂಬಿಸಿದೆ. ವೇವ್‌ವೈಂಡಿಂಗಿಗೆ P' = 2, ಲೇಪ್ ವೈಂಡಿಗಿಗೆ P' = P.

ಡಿಸಿ ಜನರೇಟರುಗಳ ವಿಶಿಷ್ಟ ಗುಣಗಳು : ಕ್ಷೇತ್ರ ಸುರುಳಿ ಮತ್ತು ಆರ್ಮೆಚರ್ ಸುರುಳಿಗಳನ್ನು ಸೇರಿಸುವ ಕ್ರಮಕ್ಕೆ ಅನುಗುಣವಾಗಿ ಡಿಸಿ ಜನರೇಟರುಗಳನ್ನು ಈ ವಿಧವಾಗಿ ವಿಂಗಡಿಸಬಹುದು : 1 ಬಾಹ್ಯ ಪ್ರಚೋದಿತ (ಸೆಪರೇಟ್ಲಿ ಎಕ್ಸೈಟೆಡ್), 2 ಶ್ರೇಣಿ (ಸೀರೀಸ್), 3 ಶಂಟ್, 4 ಸಮ್ಮಿಶ್ರ (ಕಾಂಪೌಂಡ್). ಬಾಹ್ಯ ಪ್ರಚೋದಿತ ಡಿಸಿ ಜನರೇಟರುಗಳಲ್ಲಿ, ಕ್ಷೇತ್ರ ಸುರುಳಿ ಬೇರೆಯೇ ಆದ ಕ್ರಮ ಪ್ರವಾಹದ ಮೂಲದಿಂದ ಪ್ರಚೋದಿಸಲ್ಪಡುತ್ತದೆ.

ಸ್ವಪ್ರಚೋದಿತ (ಸೆಲ್ಫ್ ಎಕ್ಸೈಟೆಡ್) ಡಿಸಿ ಜನರೇಟರುಗಳಲ್ಲಿ ಶ್ರೇಣಿ, ಶಂಟ್ ಮತ್ತು ಸಮ್ಮಿಶ್ರ ಎಂದು ಮೂರು ವಿಧಗಳಿವೆ. ಇವುಗಳಲ್ಲಿ ಕ್ಷೇತ್ರ ಸುರುಳಿಯನ್ನು ಆರ್ಮೆಚರ್ ಸುರುಳಿಗೆ ಸೇರಿಸುತ್ತಾರೆ. ಶ್ರೇಣಿ ಜನರೇಟರುಗಳಲ್ಲಿ ಎರಡೂ ಸುರುಳಿಗಳನ್ನು ಶ್ರೇಣಿಯಲ್ಲಿ ಸೇರಿಸುತ್ತಾರೆ. ಶಂಟ್ ಜನರೇಟರುಗಳಲ್ಲಿ ಎರಡೂ ಸುರುಳಿಗಳನ್ನು ಸಮಾನಾಂತರವಾಗಿ ಸೇರಿಸುತ್ತಾರೆ. ಸಮ್ಮಿಶ್ರ ಜನರೇಟರಿನ ಧ್ರುವಗಳಲ್ಲಿ ಪ್ರತ್ಯೇಕವಾದ ಎರಡು ಸುರುಳಿಗಳಿವೆ.

ಅವುಗಳಲ್ಲಿ ಒಂದು ಸುರುಳಿ ಶ್ರೇಣಿಯಲ್ಲೂ ಇನ್ನೊಂದು ಸಮಾನಾಂತರವಾಗಿಯೂ ಆರ್ಮೆಚರ್ ಸುರುಳಿಯೊಂದಿಗೆ ಸೇರಿಸಲ್ಪಡುತ್ತವೆ. ಶಂಟ್ ಸುರುಳಿಯನ್ನು ಶ್ರೇಣಿ ಸುರುಳಿಯ ಬಳಿಕ ಸೇರಿಸಿದ್ದರೆ ಅದನ್ನು ಲಾಂಗ್ ಶಂಟ್ ಎಂದೂ ಮೊದಲೇ ಸೇರಿಸಿದ್ದರೆ ಷಾರ್ಟ್‌ಶಂಟ್ ಎಂದೂ ಕರೆಯುತ್ತಾರೆ. ವಿವಿಧ ರೀತಿಯ ಸೇರಿಸುವಿಕೆಗಳನ್ನು ಚಿತ್ರ2ರಲ್ಲಿ ಕಾಣಬಹುದು.

ಒಂದು ಡಿಸಿ ಜನರೇಟರಿನ ಯೋಗ್ಯತೆಯನ್ನು ಅದರ ಸ್ವಭಾವ ರೇಖೆಗಳಿಂದ ತಿಳಿಯಬಹುದು.

ಕಾಂತಸ್ವಭಾವ ರೇಖೆ (ಮ್ಯಾಗ್ನೆಟಿಕ್ ಕ್ಯಾರೆಕ್ಟೆರಿಸ್ಟಿಕ್) ಅಥವಾ ಹೊರೆ ವಿರಹಿತ ಸಂತೃಪ್ತ ರೇಖೆ (ನೋ ಲೋಡ್ ಸ್ಯಾಚುರೇಶನ್ ಕರ್ವ್) : 1 ಇದು ಕ್ಷೇತ್ರ ಸುರುಳಿಯಲ್ಲಿ ಹರಿಯುವ ಪ್ರವಾಹ ಮತ್ತು ಆರ್ಮೆಚರಿನಲ್ಲಿ ಕಾಣಿಸಿಕೊಳ್ಳುವ ವಿದ್ಯುತ್ ವೋಲ್ಟೇಜುಗಳ ನಡುವಣ ಸಂಬಂಧವನ್ನು ಸೂಚಿಸುವ ರೇಖೆ.




**ಚಿತ್ರ 2 ಏಕಮುಖ ವಿದ್ಯುಜ್ಜನಕದ ಸುರುಳಿಗಳ ವಿವಿಧ ಸೇರಿಕೆಗಳು**

2 ಬಾಹ್ಯ ಸ್ವಭಾವ ರೇಖೆ (ಎಕ್ಸ್‌ಟರ್ನಲ್ ಕ್ಯಾರೆಕ್ಟೆರಿಸ್ಟಿಕ್) ಅಥವಾ ಹೊರೆ ಸ್ವಭಾವ ರೇಖೆ (ಲೋಡ್ ಕ್ಯಾರೆಕ್ಟರಿಸ್ಟಿಕ್): ಒಂದು ಡಿಸಿ ವಿದ್ಯುಜ್ಜನಕದಿಂದ ವಿದ್ಯುತ್ ಪ್ರವಾಹ ಯಾವ ಉಪಕರಣಕ್ಕೆ ಹರಿಯುವುದೋ ಅದನ್ನು ಹೊರೆ (ಲೋಡ್) ಎಂದು ಕರೆಯುತ್ತಾರೆ. ಹೊರೆಯ ಮೂಲಕ ಹರಿಯುವ ಪ್ರವಾಹ ಮತ್ತು ಹೊರೆಯಲ್ಲಿರುವ ವೋಲ್ಟೇಜುಗಳ ಸಂಬಂಧವನ್ನು ಸೂಚಿಸುವ ರೇಖೆಯೇ ಬಾಹ್ಯ ಸ್ವಭಾವರೇಖೆ.

3 ಆಂತರಿಕ ಸ್ವಭಾವ ರೇಖೆ (ಇಂಟರ್ನಲ್ ಕ್ಯಾರೆಕ್ಟೆರಿಸ್ಟಿಕ್) ಅಥವಾ ಸಂಪೂರ್ಣ ಸ್ವಭಾವ ರೇಖೆ (ಟೋಟಲ್ ಕ್ಯಾರೆಕ್ಟೆರಿಸ್ಟಿಕ್) : ಇದು ಹೊರೆಯ ಮೂಲಕ ಹರಿಯುವ ಪ್ರವಾಹ ಮತ್ತು ವಿದ್ಯುಜ್ಜನಕದಲ್ಲಿ ಪ್ರೇರಿತವಾದ ವೋಲ್ಟೇಜುಗಳ ನಡುವಣ ಸಂಬಂಧವನ್ನು ನಿರೂಪಿಸುವ ರೇಖೆ.

**ಕಾಂತಸ್ವಭಾವ ರೇಖೆ:** ಇದನ್ನು ಪಡೆಯಲು ಕ್ಷೇತ್ರವನ್ನು ಆರ್ಮೆಚರಿನಿಂದ ಪ್ರತ್ಯೇಕಿಸಿರಬೇಕು. ಕ್ಷೇತ್ರ ಸುರುಳಿಯೊಡನೆ ಶ್ರೇಣಿಯಲ್ಲಿ ಒಂದು ಪರವಾಹಮಾಪಕ (ಅಮೀಟರ್) ಮತ್ತು ವಿದ್ಯುತ್ ಪ್ರವಾಹ ಬಲ ನಿಯಂತ್ರಕವನ್ನು (ರ್ಹಿಯೋಸ್ಟ್ಯಾಟ್) ಸೇರಿಸಿ ಇದಕ್ಕೆ ಒಂದು ವಿದ್ಯುನ್ಮೂಲವನ್ನು ಸೇರಿಸಬೇಕು. ರ್ಹಿಯೋಸ್ಟ್ಯಾಟನ್ನು ನಿಯಂತ್ರಿಸುವುದರ ಮೂಲಕ ಕ್ಷೇತ್ರ ಪ್ರವಾಹವನ್ನು ನಿಧಾನವಾಗಿ ಶೂನ್ಯದಿಂದ ಏರಿಸಬೇಕು. ಆರ್ಮೆಚರಿನಲ್ಲಿ ಕಾಣಿಸಿಕೊಳ್ಳುವ ವೋಲ್ಟೇಜನ್ನು ವೋಲ್ಟ್ ಮಾಪಕದಿಂದ ಅಳೆಯಬಹುದು. ಪ್ರವಾಹಮಾಪಕ ಮತ್ತು ವೋಲ್ಟ್ ಮಾಪಕಗಳ ಓದಿಕೆಗಳನ್ನು (ರೀಡಿಂಗ್ಸ್) ಚೌಕುಳಿ ಕಾಗದದ ಮೇಲೆ ಚಿತ್ರದಲ್ಲಿ ತೋರಿಸಿದಂತೆ ಸ್ವಭಾವ ರೇಖೆಯಾಗಿ ಚಿತ್ರಿಸಬಹುದು.



ಚಿತ್ರ 3 ಸ್ವಭಾವರೇಖೆಯನ್ನು ಪಡೆಯುವ ವಿಧಾನ

ಕ್ಷೇತ್ರದಲ್ಲಿ ಪ್ರವಾಹ ಶೂನ್ಯವಾಗಿರುವಾಗಲೂ ಅಲ್ಪಪ್ರಮಾಣದಲ್ಲಿ ಕಾಂತತ್ವದ ಉಳಿಕೆ (ರೆಸಿಡ್ಯುಯಲ್ ಮ್ಯಾಗ್ನೆಟಿಸಂ) ಇರುತ್ತದೆ. ಇದರಿಂದಾಗಿ ಆರ್ಮೆಚರಿನಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ವಿದ್ಯುತ್ ವೋಲ್ಟೇಜ್ ಕಾಣಿಸಿಕೊಳ್ಳುತ್ತದೆ. ಕ್ಷೇತ್ರ ಪ್ರವಾಹ ಅಧಿಕವಾದಂತೆ ಅಭಿವಾಹ (ಫ್ಲಕ್ಸ್) ಮತ್ತು ಅದರೊಡನೆ ವೋಲ್ಟೇಜು ಅಧಿಕವಾಗುತ್ತವೆ. ಕ್ಷೇತ್ರ ಪ್ರವಾಹವನ್ನು ಅಧಿಕಗೊಳಿಸುತ್ತ ಹೋದಂತೆ ಅದರಂತೆಯೇ ಅಭಿವಾಹ ಕೂಡ ಅಧಿಕವಾಗುವುದಿಲ್ಲ. ಕಾರಣ, ಒಂದು ಮಿತಿಯ ಬಳಿಕ ಧ್ರುವಗಳು ಪೂರ್ತಿ ತುಂಬಿರುತ್ತದೆ. ಹೀಗಾದ ಬಳಿಕ ಅಭಿವಾಹ ಮತ್ತು ವೋಲ್ಟೇಜುಗಳು ಹೆಚ್ಚು ಬದಲಾವಣೆಯಾಗುವುದಿಲ್ಲ.



ಚಿತ್ರ 4 ಕಾಂತಸ್ವಭಾವರೇಖೆ

**ಹೊರೆ ಸ್ವಭಾವ ರೇಖೆ:** ಒಂದು ವಿದ್ಯುಜ್ಜನಕದಲ್ಲಿ ನಿಶ್ಚಿತ ವೋಲ್ಟೇಜ್ ಕಾಣಿಸಿಕೊಂಡ ಬಳಿಕ ಅದಕ್ಕೆ ಹೊರೆಯನ್ನು ಹೇರಬಹುದು. ಹೊರೆಯನ್ನು ಅಧಿಕಗೊಳಿಸಿದಂತೆ ಹೊರೆ ಪ್ರವಾಹವೂ ಹೆಚ್ಚಾಗುತ್ತದೆ ಮತ್ತು ಅದರೊಡನೆ ವೋಲ್ಟೇಜು ವ್ಯತ್ಯಾಸ ಹೊಂದುತ್ತದೆ. ವೋಲ್ಟೇಜ್ ಮತ್ತು ಹೊರೆ ಪ್ರವಾಹಗಳೊಳಗಣ ಸಂಬಂಧ ಹೊರೆ ಸ್ವಭಾವರೇಖೆಯೆನಿಸುವುದು. ಬಾಹ್ಯ ಪ್ರಚೋದಿತ ವಿದ್ಯುಜ್ಜನಕದ ಸ್ವಭಾವ ರೇಖೆಗಳನ್ನು ಚಿತ್ರದಲ್ಲಿ ತೋರಿಸಿದೆ.



ಚಿತ್ರ 5 ಬಾಹ್ಯಪ್ರಚೋದಿತ ವಿದ್ಯುಜ್ಜನಕ

ಕ್ಷೇತ್ರದಲ್ಲಿ ಸೇರಿಸಿರುವ ರ್ಹಿಯೋಸ್ಟ್ಯಾಟನ್ನು ನಿಯಂತ್ರಿಸಿ ಆರ್ಮೆಚರಿನಲ್ಲಿ ನಿಯಂತ್ರಿತ ವೋಲ್ಟೇಜನ್ನು ಉಂಟುಮಾಡಬೇಕು. ಬಳಿಕ ನಿಧಾನವಾಗಿ ವಿದ್ಯುಜ್ಜನಕದ ಮೇಲೆ ಹೊರೆ ಹೇರಿದಾಗ ಹೊರೆ ಪ್ರವಾಹ ಹೆಚ್ಚಾಗುತ್ತದೆ. ಪ್ರವಾಹ ಹೆಚ್ಚಾದಂತೆ ವೋಲ್ಟೇಜ್ ಇಳಿಕೆ (ಡ್ರಾಪ್) ಹೆಚ್ಚಾಗುತ್ತದೆ. ಹಾಗಾಗಿ ಪ್ರವಾಹ ಹೆಚ್ಚಾದಂತೆ ಹೊರೆಯ ವೋಲ್ಟೇಜ್ ಕಡಿಮೆಯಾಗುತ್ತದೆ. ಇದು ವಕ್ರರೇಖೆಯಲ್ಲಿ ಸೂಚಿತವಾಗಿದೆ. ಪ್ರೇರಿತ ವೋಲ್ಟೇಜ್ ಸ್ಥಿರವಾಗಿರಬೇಕು. ಕಾರಣ ಕ್ಷೇತ್ರಪ್ರವಾಹ ಸ್ಥಿರವಾಗಿರುವುದರಿಂದ ಪ್ರೇರಿತ ವೋಲ್ಟೇಜೂ ಸ್ಥಿರವಾಗಿರಬೇಕೆಂದು ಎನಿಸಬಹುದು. ಆದರೆ ಹೊರೆಯನ್ನು ಹೇರಿದಂತೆ ಆರ್ಮೆಚರ್ ಪ್ರತಿಕ್ರಿಯೆಯಿಂದಾಗಿ ಕ್ಷೇತ್ರ ದುರ್ಬಲವಾಗುತ್ತದೆ ಮತ್ತು ಇದರಿಂದಾಗಿ ಪ್ರೇರಿತ ವೋಲ್ಟೇಜ್ ಕಡಿಮೆಯಾಗುತ್ತದೆ. ಇದು ವಕ್ರರೇಖೆಯಲ್ಲಿ ಸೂಚಿತವಾಗಿದೆ. ವಿದ್ಯುಜ್ಜನಕದ ಅಂತಿಮದಲ್ಲಿನ (ಟರ್ಮಿನಲ್) ವೋಲ್ಟೇಜ್ ಸ್ಥಿರವಾಗ ಬೇಕೆಂದಿದ್ದಾಗಲೆಲ್ಲ ಬಾಹ್ಯ ಪ್ರಚೋದಿತ ವಿದ್ಯುಜ್ಜನಕವನ್ನು ಉಪಯೋಗಿಸುತ್ತಾರೆ. ಕ್ಷೇತ್ರ ಮತ್ತು ಆರ್ಮೆಚರುಗಳು ಪ್ರತ್ಯೇಕವಾಗಿರುವುದರಿಂದ ಇದನ್ನು ವಿಧಿಮಂಡಲಗಳಲ್ಲೂ (ಕಂಟ್ರೋಲ್ ಸರ್ಕ್ಯುಟ್ಸ್) ಬಳಸುತ್ತಾರೆ.



ಚಿತ್ರ 6 ಬಾಹ್ಯಪ್ರಚೋದಿತ ವಿದ್ಯುಜ್ಜನಕ ಭಾರಸ್ವಭಾವ ರೇಖೆಗಳು

**ಶಂಟ್ ವಿದ್ಯುಜ್ಜನಕ:** ಫೀಲ್ಡ್ ಮತ್ತು ಆರ್ಮೆಚರುಗಳನ್ನು ಸಮಾನಾಂತರವಾಗಿ ಸೇರಿಸಲಾಗಿರುವ ವಿದ್ಯುಜ್ಜನಕ. ಇದರಲ್ಲಿ ಬಾಹ್ಯ ಚಾಲಕದ (ಎಕ್ಸ್ಟರ್ನಲ್ ಪ್ರೈಮ್ ಮೂವರ್) ಮೂಲಕ ಆರ್ಮೆಚರನ್ನು ನಿಶ್ಚಿತ ವೇಗದಲ್ಲಿ ತಿರುಗಿಸಲಾಗುತ್ತದೆ. ಅಲ್ಪಪರಿಮಾಣದ ಕಾಂತತ್ವದ ಉಳಿಕೆಯಿಂದಾಗಿ (ರೆಸಿಡ್ಯುಯಲ್ ಮ್ಯಾಗ್ನೆಟಿಸಂ) ಆರ್ಮೆಚರಿನಲ್ಲಿ ಅಲ್ಪ ಪರಿಮಾಣದಲ್ಲಿ ವಿದ್ಯುತ್ ವೋಲ್ಟೇಜ್ ಕಾಣಿಸಿಕೊಳ್ಳುವುದು. ಆರ್ಮೆಚರ್ ಮಂಡಲ (ಆರ್ಮೆಚರ್ ಸರ್ಕ್ಯೂಟ್ಸ್) ಮತ್ತು ಕ್ಷೇತ್ರ ಮಂಡಲಗಳು (ಫೀಲ್ಡ್ ಸರ್ಕ್ಯೂಟ್ಸ್) ಸೇರಿ ಒಂದು ಸಂವೃತಮಂಡಲವನ್ನು (ಕ್ಲೋಸ್ಡ್ ಸರ್ಕ್ಯೂಟ್ಸ್) ಉಂಟುಮಾಡುವುದರಿಂದ ಇದರಲ್ಲಿ ಅಲ್ಪ ಪರಿಮಾಣದ ಪ್ರವಾಹ ಹರಿಯುವುದು. ಕ್ಷೇತ್ರದ ಮೂಲಕ ಹರಿಯುವ ಈ ಪ್ರವಾಹ ಕಾಂತ ಶಕ್ತಿಯ ಉಳಿಕೆಯನ್ನು ಬಲಗೊಳಿಸುವಂತೆ ಕ್ಷೇತ್ರವನ್ನು ಸೇರಿಸಲಾಗುವುದು. ಇದರಿಂದಾಗಿ ಪ್ರೇರಿತ ವೋಲ್ಟೇಜ್ ಹೆಚ್ಚುವುದು; ಪ್ರವಾಹ ಅಧಿಕವಾಗುವುದು ಮತ್ತು ಹೀಗಾಗಿ ಅಭಿವಾಹ (ಫ್ಲಕ್ಸ್) ಅಧಿಕವಾಗುವುದು. ಮೇಲಿನ ಕ್ರಿಯೆಯ ಪುನರಾವೃತ್ತಿಯಿಂದಾಗಿ ಕ್ಷೇತ್ರಮಂಡಲ ಸಂತೃಪ್ತ (ಸ್ಯಾಚುರೇಟೆಡ್) ಆಗುವವರೆಗೆ ವೋಲ್ಟೇಜ್ ಏರುತ್ತ ಹೋಗುವುದು.

**ಬಾಹ್ಯ ವಿಶಿಷ್ಟ ಗುಣರೇಖೆಗಳು (ಎಕ್ಸ್‌ಟರ್ನಲ್ ಕ್ಯಾರೆಕ್ಟರಿಸ್ಟಿಕ್ಸ್):** ಈಗ ವಿದ್ಯುಜ್ಜನಕಕ್ಕೆ ಹೊರೆಯನ್ನು (ಲೋಡ್) ಕೊಡಲಾಗುವುದು ಮತ್ತು ಇದನ್ನು ಕ್ರಮೇಣ ಹೆಚ್ಚು ಮಾಡಲಾಗುವುದು. ಹೊರೆಯಿಂದಾಗಿ ಹರಿಯುವ ಪ್ರವಾಹ ಆರ್ಮೆಚರಿನ ಮೂಲಕ ಹರಿದು ಅಲ್ಲೇ ವೋಲ್ಟೇಜಿನ ಇಳಿತವನ್ನು ಉಂಟುಮಾಡುತ್ತದೆ. ಆದ್ದರಿಂದ ಹೊರೆ ಅಧಿಕವಾದಂತೆ ಆರ್ಮೆಚರಿನ ಅಂತಿಮ (ಟರ್ಮಿನಲ್) ವೋಲ್ಟೇಜ್ ಕೆಳಗಿಳಿಯುತ್ತದೆ. ಕಡಿಮೆಯಾದ ಈ ಅಂತಿಮ ವೋಲ್ಟೇಜ್ ಕ್ಷೇತ್ರದ ಅಂತಿಮ ವೋಲ್ಟೇಜೂ ಆಗಿರುವುದರಿಂದ ಕ್ಷೇತ್ರದ ಪ್ರವಾಹವೂ, ಅದರೊಂದಿಗೆ ಪ್ರೇರಿತ ವೋಲ್ಟೇಜೂ ಕಡಿಮೆಯಾಗುವುವು. ಇದರಿಂದಾಗಿ ಅಂತಿಮ ವೋಲ್ಟೇಜ್ ಮತ್ತೂ ಕಡಿಮೆಯಾಗುತ್ತದೆ. ಈ ಎರಡೂ ಕಾರಣಗಳಿಂದಾಗಿ ವೋಲ್ಟೇಜ್ ಚಿತ್ರ7ರಲ್ಲಿ ಚಿತ್ರಿಸಿರುವಂತೆ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ (AB), ಹೊರೆಯನ್ನು ಇನ್ನೂ ಅಧಿಕಗೊಳಿಸಿದಂತೆಲ್ಲ ಅಂತಿಮವೋಲ್ಟೇಜ್ ಕಡಿಮೆಯಾಗುತ್ತ ಹೋಗಿ, ಅಭಿವಾಹದ ಇಳಿತದಿಂದಾಗಿ ಒಮ್ಮಿಂದೊಮ್ಮೆ ಪ್ರೇರಿತ ವೋಲ್ಟೇಜಿನ ಇಳಿತ ವಿದ್ಯುಜ್ಜನಕ ಹೊರೆಯನ್ನು ಸಹ ತಡೆಯಲು ಅಸಮರ್ಥವಾಗುವಷ್ಟು ಹೆಚ್ಚಾಗುವುದು. ಆಗ ಪ್ರವಾಹ ಒಮ್ಮಿಂದೊಮ್ಮೆ ಕಡಿಮೆಯಾಗುತ್ತಾ ಹೋಗಿ ವಿದ್ಯುಜ್ಜನಕ ಒಂದಿಷ್ಟು ಪ್ರವಾಹವನ್ನೂ ಹರಿಸದಮಟ್ಟಿಗೆ ಬರುವುದು. ಇದನ್ನು BCಯಲ್ಲಿ ಚಿತ್ರಿಸಲಾಗಿದೆ.



ಚಿತ್ರ 7

ಬಾಹ್ಯ ವಿಶಿಷ್ಟ ಗುಣರೇಖೆಗಳಿಗೆ ಆರ್ಮೆಚರಿನ ನಿರೋಧವನ್ನು (ರೆಸಿಸ್ಟೆನ್ಸ್) ಸೇರಿಸುತ್ತ ಹೋದರೆ ಅಂತರ್ ವಿಶಿಷ್ಟ ಗುಣರೇಖೆಗಳು ಸಿಗುವುವು.

ಶಂಟ್ ವಿದ್ಯುಜ್ಜನಕಕ್ಕೆ ಅನ್ವಯಿಸುವ ಕೆಲವು ಸೂತ್ರಗಳು ಈ ರೀತಿಯಾಗಿವೆ :

$$I_a = I_l L + I_{sh}$$

$$I_{sh} = V / Rsh$$

$$E = V + I_a \ R_a$$

**ಶ್ರೇಣಿ ವಿದ್ಯುಜ್ಜನಕ (ಸೀರಿಸ್ ಜನರೇಟರ್):** ಈ ವಿಧದ ವಿದ್ಯುಜ್ಜನಕದಲ್ಲಿ ಆರ್ಮೆಚರ್ ಮತ್ತು ಕ್ಷೇತ್ರಗಳು ಶ್ರೇಣಿಯಲ್ಲಿರುತ್ತವೆ. ಬಾಹ್ಯ ಚಾಲಕವೊಂದರ ಮೂಲಕ ಆರ್ಮೆಚರನ್ನು ನಿಶ್ಚಿತ ವೇಗದಲ್ಲಿ ತಿರುಗಿಸಿದಾಗ ಕಾಂತತ್ವದ ಉಳಿಕೆಯಿಂದಾಗಿ, ಅತ್ಯಲ್ಪ ಪರಿಮಾಣದ ವೋಲ್ಟೇಜ್ ಆರ್ಮೆಚರಿನ ಅಂತಿಮದಲ್ಲಿ (ಟರ್ಮಿನಲ್) ಕಾಣಿಸಿಕೊಳ್ಳುವುದು.




ಚಿತ್ರ 8 I*a* ಆರ್ಮೆಚರ್ ಪ್ರವಾಹ, I*sh* ಶಂಟ್‌ಫೀಲ್ಡ್ ಪ್ರವಾಹ, I*l* ಭಾರ–ಪ್ರವಾಹ, V ಅಂತಿಮ ಒತ್ತಡ

ಈಗ ಆರ್ಮೆಚರಿನ ಅಂತಿಮಕ್ಕೆ ಹೊರೆಯನ್ನು ಸೇರಿಸಿದಾಗ ಮೇಲೆ ಹೇಳಿದ ಅತ್ಯಲ್ಪ ಪರಿಮಾಣದ ವೋಲ್ಟೇಜಿಗೆ ಅನುಗುಣವಾಗಿ ಪ್ರವಾಹ ಹರಿಯುವುದು; ಈ ಪ್ರವಾಹ ಕ್ಷೇತ್ರದ ಮೂಲಕ ಹರಿಯುವುದರಿಂದ ಅದು ಪ್ರೇರಿತ ವೋಲ್ಟೇಜನ್ನು ಹೆಚ್ಚಿಸುವುದು.

ಪ್ರೇರಿತ ವೋಲ್ಟೇಜ್ ಮತ್ತು ಹೊರಗೆ ಹರಿಯುವ ಪ್ರವಾಹ ಇವುಗಳೊಳಗೆ ಒಂದು ಸಮತೋಲನ ಬರುವವರೆಗೆ ವೋಲ್ಟೇಜ್ ಹೆಚ್ಚುವುದು. ಕಾಂತವಲಯ ಸಂತೃಪ್ತ ಆಗುವವರೆಗೆ ಈ ಕ್ರಿಯೆ ಮುಂದುವರಿಯುವುದು.



ಚಿತ್ರ 9

ಈ ಸ್ಥಿತಿಯಲ್ಲಿ ಹೊರೆಪ್ರವಾಹದ (ಲೋಡ್ ಕರೆಂಟ್) ಹೆಚ್ಚಳ ವೋಲ್ಟೇಜನ್ನು ಹೆಚ್ಚಿಸಲಾರದು. ಹೊರೆಯನ್ನು ಇನ್ನೂ ಹೆಚ್ಚಿಸಿದಾಗ ಪ್ರೇರಿತ ವೋಲ್ಟೇಜ್ ಸ್ಥಿರವಾಗಿರುವುದರಿಂದ ಅಂತಿಮ ವೋಲ್ಟೇಜ್ ಕಡಿಮೆಯಾಗುವುದು. ವೋಲ್ಟೇಜ್ ಎಷ್ಟು ವೇಗವಾಗಿ ಕಡಿಮೆಯಾಗುವುದೆಂದರೆ ಈಗ ಹೊರೆಪ್ರವಾಹ ಹೆಚ್ಚು ಕಡಿಮೆ ಸ್ಥಿರವಾಗಿರುತ್ತದೆ. ವಿಶಿಷ್ಟಗುಣರೇಖೆ ಚಿತ್ರದಲ್ಲಿ ಸೂಚಿತವಾಗಿದೆ.




ಚಿತ್ರ 10

ಆರ್ಮೆಚರ್ ಮತ್ತು ಶ್ರೇಣಿ ಕ್ಷೇತ್ರದ ನಿರೋಧದಿಂದಾಗಿ ಉಂಟಾದ ವೋಲ್ಟೇಜಿನ ಇಳಿತವನ್ನು ಬಾಹ್ಯ ರೇಖೆಗಳಿಗೆ ಸೇರಿಸುತ್ತ ಹೋದರೆ ಅಂತರ್ ವಿಶಿಷ್ಟ ಗುಣ ರೇಖೆಗಳು ಸಿಗುವುವು. ಶ್ರೇಣಿ ವಿದ್ಯುಜ್ಜನಕದಲ್ಲಿ

$$V = E - I(R_a + R_{se}), \ \ R_{se} = \text{ಶ್ರೇಣಿ ಕ್ಷೇತ್ರದ ನಿರೋಧತೆ.}$$

**ಸಮ್ಮಿಶ್ರ ವಿದ್ಯುಜ್ಜನಕ (ಕಾಂಪೌಂಡ್ ಜನರೇಟರ್):** ಇದರಲ್ಲಿ ಶಂಟ್ ಮತ್ತು ಶ್ರೇಣಿ ಎಂಬ ಎರಡು ಕ್ಷೇತ್ರಗಳಿವೆ. ಪ್ರತಿಯೊಂದು ಧ್ರುವದಲ್ಲೂ ಬೇರೆ ಬೇರೆಯಾದ ಶ್ರೇಣಿ ಮತ್ತು ಶಂಟ್ ಸುರುಳಿಗಳಿವೆ. ಇವುಗಳಲ್ಲಿ ಒಂದು ಆರ್ಮೆಚರಿಗೆ ಶ್ರೇಣಿಯಲ್ಲೂ ಇನ್ನೊಂದು ಸಮಾಂತರವಾಗಿಯೂ ಸೇರಿಸಲ್ಪಟ್ಟಿವೆ. ಇದರ ವಿಶಿಷ್ಟಗುಣಗಳು ಶಂಟ್ ಮತ್ತು ಶ್ರೇಣಿ ಜನರೇಟರಿನ ಗುಣಗಳೆರಡರ ನಡುವೆ ಇವೆ. ಶಂಟ್ ಕ್ಷೇತ್ರದಿಂದಾಗಿ ಹೊರೆಯಿಲ್ಲದಿದ್ದಾಗ ಅಂತಿಮ ವೋಲ್ಟೇಜ್ ನಿಶ್ಚಿತ ವೋಲ್ಟೇಜಿಗೆ (ರೇಟೆಡ್ ವೋಲ್ಟೇಜ್) ಸಮವಿರುತ್ತದೆ. ಹೊರೆಯನ್ನು ಸೇರಿಸಿದಾಗ ಶಂಟ್ ಸುರುಳಿಯಿಂದಾಗಿ ವೋಲ್ಟೇಜ್ ಕಡಿಮೆಯಾಗಲು ಮತ್ತು ಶ್ರೇಣಿ ಸುರುಳಿಯಿಂದಾಗಿ ಹೆಚ್ಚಾಗಲು ಎಳಸುತ್ತದೆ. ಶ್ರೇಣಿ ಸುರುಳಿ, ಶಂಟ್ ಸುರುಳಿಗಿಂತ ಪ್ರಬಲವಾಗಿದ್ದರೆ ಹೊರೆ ಹೆಚ್ಚಾದಂತೆ ವೋಲ್ಟೇಜ್ ಹೆಚ್ಚಾಗುವುದು. ಶಂಟ್ ಮತ್ತು ಶ್ರೇಣಿಗಳೊಳಗೆ ಒಂದು ಸಮತೋಲನವನ್ನು ಸಾಧಿಸಿದರೆ ಆಗ ಎಲ್ಲ ಹೊರೆಯಲ್ಲೂ ವೋಲ್ಟೇಜ್ ಒಂದೇ ಸಮನಾಗಿರುವುದು. ವಿಶಿಷ್ಟ ಗುಣರೇಖೆಗಳು ಕೆಳಗೆ ಕಾಣಿಸಿದಂತಿವೆ.




ಚಿತ್ರ 11

ಶಂಟ್ ವಿದ್ಯುಜ್ಜನಕದ ವೋಲ್ಟೇಜ್ ನಿಯಂತ್ರಣ (ವೋಲ್ಟೇಜ್ ರೆಗ್ಯುಲೇಶನ್) ಹೆಚ್ಚಿರುವುದರಿಂದ ಇದು ಪ್ರವಾಹ ಮಂಡಲಗಳಲ್ಲಿ (ಪವರ್ ಸರ್ಕ್ಯೂಟ್ಸ್) ಅನುಪಯುಕ್ತ. ಆದರೆ ಇದನ್ನು ವಿಧಿ ಮಂಡಲಗಳಲ್ಲಿ (ಕಂಟ್ರೋಲ್ ಸರ್ಕ್ಯೂಟ್ಸ್) ಉಪಯೋಗಿಸಬಹುದು. ಶ್ರೇಣಿ ವಿದ್ಯುಜ್ಜನಕವನ್ನು ವೋಲ್ಟೇಜ್ ನಿಯಂತ್ರಕ (ವೋಲ್ಟೇಜ್ ರೆಗ್ಯುಲೇಟರ್) ಅಥವಾ ವರ್ಧಕವಾಗಿ (ಬೂಸ್ಟರ್) ಉಪಯೋಗಿಸಬಹುದು. ಅದನ್ನು ಸ್ಥಿರ ಪ್ರವಾಹ (ಕಾನ್‌ಸ್ಟೆಂಟ್ ಕರೆಂಟ್) ವಿದ್ಯುಜ್ಜನಕವಾಗಿಯೂ ಉಪಯೋಗಿಸಬಹುದು. ವೋಲ್ಟೇಜನ್ನು ಬೇಕಾದಂತೆ ನಿಯಂತ್ರಿಸಬಹುದಾದ್ದರಿಂದ ಸಮ್ಮಿಶ್ರ ವಿದ್ಯುಜ್ಜನಕಗಳನ್ನು ಪ್ರವಾಹ ಮಂಡಲಗಳಲ್ಲಿ ಹೆಚ್ಚಾಗಿ ಉಪಯೋಗಿಸಲಾಗುತ್ತಿದೆ. ಪ್ರವಾಹ ಮಂಡಲಗಳಲ್ಲಿ ಪ್ರತ್ಯೇಕ ಪ್ರಚೋದಿತ ವಿದ್ಯುಜ್ಜನಕಗಳನ್ನು ಉಪಯೋಗಿಸಬಹುದು. ಇವನ್ನು ಆಲ್ಟರ್ನೇಟರುಗಳ ಪ್ರಚೋದಕಗಳಾಗಿಯೂ ಉಪಯೋಗಿಸಬಹುದು.

**ಸಮಾಂತರ ಕ್ರಿಯೆ (ಪ್ಯಾರಲಲ್ ಆಪರೇಶನ್):** ಎರಡು ಅಥವಾ ಹೆಚ್ಚು ವಿದ್ಯುಜ್ಜನಕಗಳನ್ನು ಸಮಾಂತರವಾಗಿ ಉಪಯೋಗಿಸಬಹುದು. ಸಮಾಂತರ ಕ್ರಿಯೆಗೆ ವೋಲ್ಟೇಜ್ ಮತ್ತು ಚಿಹ್ನೆಗಳು ಒಂದೇ ಆಗಿರಬೇಕು. ಹೀಗೆ ಅವನ್ನು ಒಳಪಡಿಸಿದಾಗ ಅವು ಸ್ವೀಕರಿಸುವ ಹೊರೆಯ ಅಂಶಗಳು ಆಯಾ ವಿದ್ಯುಜ್ಜನಕದ ಬಾಹ್ಯಗುಣರೇಖೆಗಳಿಗೆ ಅನುಗುಣವಾಗಿವೆ. ಎರಡೂ ವಿದ್ಯುಜ್ಜನಕಗಳ ಅಂತಿಮ ವೋಲ್ಟೇಜುಗಳು ಸಮವಿರುವುದರಿಂದ ಅಧಿಕ ವೋಲ್ಟೇಜಿನ ಆರ್ಮೆಚರಿನಿಂದ ಕಡಿಮೆ ವೋಲ್ಟೇಜಿನ ಆರ್ಮೆಚರಿಗೆ ಪ್ರವಾಹ ಹರಿಯುವುದರ ಮೂಲಕ ಸಮತೋಲನ ಉಂಟಾಗುತ್ತದೆ. ಎರಡೂ ಬಾಹ್ಯಗುಣರೇಖೆಗಳು ಒಂದೇ ತೆರನಾಗಿದ್ದರೆ ಆಗ ಸಮಾಂತರ ಕಾರ್ಯ ಆದರ್ಶಪ್ರಾಯವಾಗುವುದು ಮತ್ತು ಹೊರೆ ಸಮಸಮವಾಗಿ ಹಂಚಿಹೋಗುವುದು.

**ಆರ್ಮೆಚರ್ ಪ್ರತಿಕ್ರಿಯೆ:** ಧ್ರುವಗಳ ಕಾಂತತ್ವದ ಮೇಲೆ ಆರ್ಮೆಚರಿನಲ್ಲಿ ಪ್ರವಾಹ ಹರಿಯುವಾಗ ಉಂಟಾಗುವ ಕಾಂತತ್ವ ಉಂಟುಮಾಡುವ ಪರಿಣಾಮವನ್ನು ಆರ್ಮೆಚರ್ ಪ್ರತಿಕ್ರಿಯೆ ಎಂದು ಕರೆಯುತ್ತಾರೆ. ಇದರಿಂದಾಗಿ ಧ್ರುವಗಳ ಕಾಂತಶಕ್ತಿಯ ಕೆಲವಂಶ ನಾಶವಾಗುತ್ತದೆ. ಮತ್ತು ಉಳಿದ ಅಂಶ ತನ್ನ ಮೂಲ ಸ್ಥಾನದಿಂದ ಚದುರಿಸಲ್ಪಡುತ್ತದೆ.

**ಪರಿವರ್ತನೆ (ಕಾಮ್ಯುಟೇಷನ್):** ಆರ್ಮೆಚರಿನ ಯಾವೊಂದು ಸುರುಳಿ ಧನಧ್ರುವದ ಕ್ಷೇತ್ರದಲ್ಲಿದ್ದಾಗ ವೋಲ್ಟೇಜ್ ಒಂದು ದಿಕ್ಕಿನಲ್ಲೂ ಋಣಧ್ರುವದ ಕ್ಷೇತ್ರದಲ್ಲಿದ್ದಾಗ ಇನ್ನೊಂದು ದಿಕ್ಕಿನಲ್ಲೂ, ಕಾಣಿಸಿಕೊಳ್ಳುತ್ತದೆ. ಇದು ದ್ವಿಮುಖ ಅಥವಾ ವ್ಯುತ್ಕ್ರಮ ಪ್ರವಾಹದ ವೋಲ್ಟೇಜ್. ಆದರೆ ಹೊರೆಯ ಮೂಲಕ ಹರಿಯುವ ಪ್ರವಾಹ ಏಕಮುಖವಾಗಿರುವಂತೆ ಮಾಡಲು ಪರಿವರ್ತಕವನ್ನು (ಕಾಮ್ಯುಟೇಟರ್) ಆರ್ಮೆಚರಿಗೆ ಹೊಂದಿಸುತ್ತಾರೆ. ಹೀಗೆ ಆರ್ಮೆಚರಿನಲ್ಲಿ ವೋಲ್ಟೇಜ್ ದ್ವಿಮುಖವಾಗಿ ಉಂಟಾದರೆ, ಪ್ರವಾಹ ಹೊರೆಯ ಮೂಲಕ ಏಕಮುಖವಾಗಿ ಹರಿಯುವಂತೆ ಮಾಡುವುದರ ಹೆಸರು ಪರಿವರ್ತನೆ (ಕಾಮ್ಯುಟೇಷನ್).

**ಡಿಸಿ ಮೋಟಾರ್:** ಎಂದರೆ ಏಕಮುಖ ಮೋಟಾರ್. ಈ ಮೊದಲು ವಿವರಿಸಿದ ಏಕಮುಖ ವಿದ್ಯುಜ್ಜನಕಗಳ (ಡಿಸಿ ಜನರೇಟರ್ಸ್) ಆರ್ಮೆಚರಿಗೆ ಕ್ರಮ ಪ್ರವಾಹದ ಹೊರೆಯನ್ನು ಹೇರಿದಾಗ ಅವು ಮೋಟಾರುಗಳಾಗಿ ಕ್ರಿಯೆ ಎಸಗುತ್ತವೆ. ಅಂದರೆ ಅವುಗಳಿಂದ ಯಾಂತ್ರಿಕಶಕ್ತಿ ಉತ್ಪಾದನೆ ಆಗುವುದು. (ಎಂ.ಎಚ್.ಡಿ.)

**ಪ್ರಾರಂಭಕ:** ಜಡಸ್ಥಿತಿಯಲ್ಲಿರುವ ಒಂದು ಏಕಮುಖ ವಿದ್ಯುತ್ ಪ್ರವಾಹ ಮೋಟಾರಿಗೆ (ಡಿಸಿ ಮೋಟಾರ್) V ವೋಲ್ಟ್ ವಿದ್ಯುತ್ ವೋಲ್ಟೇಜನ್ನು ಅಳವಡಿಸಿದರೆ ಅದರಲ್ಲಿ ಅಧಿಕ ಪ್ರಮಾಣದ ವಿದ್ಯುತ್ ಪ್ರವಾಹ ಹರಿಯುತ್ತದೆ. ಕಾರಣ, ಮೋಟಾರ್

ಜಡಸ್ಥಿತಿಯಲ್ಲಿರುವಾಗ ಅದರ $E_b$, ವಿರೋಧಿ ವಿದ್ಯುತ್ ವಾಹಕ ಬಲ ಉತ್ಪತ್ತಿಯಾಗಲಾರದು. ಆದ್ದರಿಂದ ವಿದ್ಯುತ್ ಪ್ರವಾಹದ ಪ್ರಮಾಣ $\frac{V}{r_a}$ ಆಗಿರುತ್ತದೆ. ಇದು ಮೋಟಾರಿನಲ್ಲಿ ಸಾಧಾರಣವಾಗಿ ಹರಿಯಬೇಕಾದ $I_f$ amps ಗಿಂತ ಬಹಳ ಹೆಚ್ಚು. ಉದಾಹರಣೆಗೆ, 50 ಅಶ್ವಸಾಮರ್ಥ್ಯ 220 ವೋಲ್ಟ್ ಡಿಸಿ ಮೋಟಾರಿಗೆ ಅಳವಡಿಸಬೇಕಾದ ವೋಲ್ಟೇಜ್ V=220 ವೋಲ್ಟುಗಳು ಮೋಟಾರಿನ ನಿರೋಧ (ರೆಸಿಸ್ಟೆನ್ಸ್) $r_a$ = 0.2 ಓಮ್.

ಆಗ $I_m = \frac{V}{r_a} = 1100 \quad amps$ · ಮೋಟಾರಿನ ಸಾಮಾನ್ಯ ಪ್ರವಾಹ

$$I_f = \frac{50 \times 746}{220} = 169.5 \ amps.$$

ಆದ್ದರಿಂದ ನಾವು ಮೋಟಾರನ್ನು ಚಲನೆ ಮಾಡಬೇಕಾದಾಗ ಅದರ ವಿದ್ಯುತ್ ಪ್ರವಾಹ ಬೇಕಾದ ಪ್ರಮಾಣದಲ್ಲಿರುವಂತೆ ತಕ್ಕ ಉಪಕರಣವನ್ನು ಅಳವಡಿಸಬೇಕು.




ಚಿತ್ರ 12

ಇದರ ಹೆಸರು ಪ್ರಾರಂಭಕ (ಸ್ಟಾರ್ಟರ್). ಚಿತ್ರ12ರಲ್ಲಿ ಶಂಟ್ ಮೋಟಾರಿನ ಪ್ರಾರಂಭಕವನ್ನು ಕಾಣಬಹುದು. $r_1$, $r_2$, $r_3$, ... ಇತ್ಯಾದಿಗಳು ನಿರೋಧಕಗಳು. H ಕೈಯ ಮೂಲಕ ಒಂದು ವಿದ್ಯುತ್ ತಂತಿಯನ್ನು ಅಳವಡಿಸಿದೆ. ಇದು off ಸ್ಥಳದಲ್ಲಿರುವಾಗ ಮೋಟಾರು ಜಡಸ್ಥಿತಿಯಲ್ಲೂ, on ಸ್ಥಳದಲ್ಲಿದ್ದಾಗ ಪೂರ್ಣ ಚಲನೆಯಲ್ಲೂ ಇರುತ್ತದೆ. ಮೋಟಾರನ್ನು ಚಲನೆಗೆ ತರಬೇಕಾದಲ್ಲಿ H ಕೈಯನ್ನು ಮೊದಲು 1ನೆಯ ಗುಂಡಿಯ ಮೇಲೆ ತಳ್ಳಿ, ಸ್ವಲ್ಪ ಕಾಲಾನಂತರ 2ನೆಯ ಗುಂಡಿಗೆ ತಳ್ಳಿ, ಕ್ರಮೇಣ on ಸ್ಥಳಕ್ಕೆ ತರಬೇಕು. ಒಂದು ಮೃದುಕಬ್ಬಿಣದ ಚೂರು Dಯನ್ನು Hಗೆ ಜೋಡಿಸಿರುತ್ತದೆ. H ಕೈಗೆ S ಎಂಬ ಒಂದು ಸ್ಪ್ರಿಂಗ್ ಜೋಡಣೆಯಾಗಿರುತ್ತದೆ. H ಕೈ on ಸ್ಥಳದಲ್ಲಿರುವಾಗ ಈ ಸ್ಪ್ರಿಂಗು ಅದನ್ನು off ಸ್ಥಳಕ್ಕೆ ತರಲು ಎಳೆಯುತ್ತಿರುತ್ತದೆ. ಆದರೆ NV ಅಯಸ್ಕಾಂತ Hಗೆ ಜೋಡಿಸಿರುವ Dಯನ್ನು ಆಕರ್ಷಿಸಿ ಹಿಡಿದು, H ಕೈ off ಸ್ಥಳಕ್ಕೆ ಹೋಗದಂತೆ ತಡೆದಿರುತ್ತದೆ. ಮೋಟಾರಿನ ಅಯಸ್ಕಾಂತದಲ್ಲಿ ಹರಿಯುವ ವಿದ್ಯುಚ್ಛಕ್ತಿ, NV ಅಯಸ್ಕಾಂತದಲ್ಲಿಯೂ ಹರಿಯುತ್ತಿರುತ್ತದೆ. ಯಾವುದೇ ಆಕಸ್ಮಿಕ ಕಾರಣಕ್ಕಾಗಿ ಮೋಟಾರಿನ ವೋಲ್ಟೇಜ್ V ತಪ್ಪಿದಲ್ಲಿ, NVಯ ಆಕರ್ಷಣ ಬಲ ಇಲ್ಲವಾಗಿ H ಕೈ off ಸ್ಥಳಕ್ಕೆ ಧಾವಿಸುತ್ತದೆ. ಹೀಗೆ ಧಾವಿಸದೆ H ಕೈ on ಸ್ಥಳದಲ್ಲೇ ನಿಂತ ಪಕ್ಷಕ್ಕೆ ಪುನಃ V ವೋಲ್ಟೇಜ್ ಬಂದಾಗ ಮೋಟಾರಿಗೆ ಅಪಾಯ ಸಂಭವಿಸುತ್ತದೆ ಮತ್ತು ಯಾವುದೇ ಕಾರಣಕ್ಕಾಗಿ ಮೋಟಾರಿನ ಅಯಸ್ಕಾಂತದ ವಿದ್ಯುತ್ ಪ್ರವಾಹ ಕಡಿಮೆಯಾಗಿ, ಮೋಟಾರಿನ ವೇಗ ಬಹಳ ಜಾಸ್ತಿಯಾದಾಗ್ಯೂ NVಯ ಆಕರ್ಷಣ ಬಲ ಕಡಿಮೆಯಾಗಿ, H ಕೈ off ಸ್ಥಳಕ್ಕೆ ಧಾವಿಸಿ ಮೋಟಾರನ್ನು ನಿಲ್ಲಿಸುತ್ತದೆ. ಈ ಕಾರಣಗಳಿಗಾಗಿ S ಸ್ಪ್ರಿಂಗ್, D ಕಬ್ಬಿಣ ಮತ್ತು NV ಅಯಸ್ಕಾಂತಗಳನ್ನು ಅಳವಡಿಸಿರುತ್ತದೆ. OL ಎಂಬ ಇನ್ನೊಂದು ಅಯಸ್ಕಾಂತವನ್ನೂ ಅಳವಡಿಸಿದೆ. ಇದರಲ್ಲಿ ಮೋಟಾರಿನ ಆರ್ಮೆಚರಿನಲ್ಲಿ ಹರಿಯುವ ವಿದ್ಯುತ್ ಪ್ರವಾಹ ಹರಿಯುತ್ತದೆ. ಯಾವ ಕಾರಣದಿಂದಾಗಲೀ ಮೋಟಾರಿನಲ್ಲಿ ನಿರ್ಬಂಧಿಸಿರುವುದಕ್ಕಿಂತ (ಅಂದರೆ $I_f$ ಗಿಂತ) ಜಾಸ್ತಿ ಪ್ರಮಾಣದ ವಿದ್ಯುತ್ ಪ್ರವಾಹ ಹರಿಯಲು ತೊಡಗಿದರೆ, OL ಅಯಸ್ಕಾಂತದ ಆಕರ್ಷಣ ಬಲ ಜಾಸ್ತಿಯಾಗಿ ಅದು R ಮೃದು ಕಬ್ಬಿಣದ ತುಂಡನ್ನು ಎಳೆದು C ಗುಂಡಿಗೆ ತಗಲುವಂತೆ ಮಾಡುತ್ತದೆ. ಈ ರೀತಿ ಆದಾಗ NVಯಲ್ಲಿ ಹರಿಯುವ ವಿದ್ಯುತ್ ಪ್ರಮಾಣದ ಬಹು ಭಾಗ PQCB ಮಾರ್ಗವಾಗಿ ಹೋಗುತ್ತದೆ. ಇದರಿಂದ NVಯ ಆಕರ್ಷಣಬಲ ಕಡಿಮೆಯಾಗಿ, H ಕೈ off ಸ್ಥಳಕ್ಕೆ ಹೋಗುವುದರಿಂದ ಮೋಟಾರಿಗೆ ಅಧಿಕ ವಿದ್ಯುತ್ ಪ್ರವಾಹದಿಂದ ಒದಗಬಹುದಾದ ಆಪತ್ತನ್ನು OL ಅಯಸ್ಕಾಂತ ಸ್ವಯಂಚಾಲಿತವಾಗಿ ತಪ್ಪಿಸುತ್ತದೆ. ಈ ರೀತಿಯಾಗಿ ಅಳವಡಿಸಿರುವ ಉಪಕರಣಗಳ ಸಮೂಹದ ಹೆಸರು ಪ್ರಾರಂಭಕ.



ಚಿತ್ರ 13

ಚಿತ್ರದಲ್ಲಿ ಶ್ರೇಣಿ ಮೋಟಾರಿನ ಪ್ರಾರಂಭಕದಲ್ಲಿ NV ಅಯಸ್ಕಾಂತವನ್ನು ಅಳವಡಿಸಿದೆ. ಇದು ಶಂಟ್ ಮೋಟಾರಿನ ಪ್ರಾರಂಭಕದಲ್ಲಿ ವರ್ಣಿಸಿರುವ ರೀತಿಯಲ್ಲೇ ಕೆಲಸಮಾಡಿ, ವೋಲ್ಟೇಜ್ ಇಲ್ಲದಿರುವಾಗ ಮೋಟಾರನ್ನು ನಿಲ್ಲಿಸುತ್ತದೆ.



ಚಿತ್ರ 14

ಚಿತ್ರ14ರಲ್ಲಿ ಇದೇ ಪ್ರಾರಂಭಕದಲ್ಲಿ OL ಅಯಸ್ಕಾಂತವನ್ನು ಅಳವಡಿಸುವ ರೀತಿ ತೋರಿಸಿದೆ. ಇದು ಶಂಟ್ ಮೋಟಾರಿನಲ್ಲಿ ತಿಳಿಸಿದಂತೆ ವಿದ್ಯುತ್ ಪ್ರವಾಹದ ಪ್ರಮಾಣ ಸಂಯೋಜಿತ ಮಟ್ಟಕ್ಕಿಂತಲೂ ಅಧಿಕವಾದಾಗ ಮೋಟಾರಿಗೆ ವಿದ್ಯುತ್ ಸರಬರಾಜನ್ನು ನಿಲ್ಲಿಸುತ್ತದೆ. (ಎಂ.ಡಿ.ಕೆ.)

**ಏಕಮುಖ ವಿದ್ಯುದ್ಯಂತ್ರ ಪರೀಕ್ಷೆಗಳು:** ವಿದ್ಯುದ್ಯಂತ್ರಗಳ ಪರೀಕ್ಷೆ, ಅವುಗಳ ತಯಾರಿಕೆಯ ಕೊನೆಯ ಹಂತ. ಉದ್ದೇಶಿತ ಕಾರ್ಯನಿರ್ವಹಣ ಸಾಮರ್ಥ್ಯ ಅವುಗಳಿಗಿದೆಯೇ ಎಂಬುದನ್ನು ತಿಳಿಯಲು ಈ ಪರೀಕ್ಷೆಗಳು ಅವಶ್ಯ. ಎಂಜಿನಿಯರ್ ಬರೆದುಕೊಟ್ಟ ಆಲೇಖ್ಯ ಮತ್ತು ರಚನಾವಿಧಾನಕ್ಕನುಗುಣವಾಗಿ ತಯಾರಿಸಿದ ಈ ಯಂತ್ರಗಳನ್ನು ಕ್ಷೇತ್ರಪರೀಕ್ಷೆಗೆ (ಫೀಲ್ಡ್ ಟೆಸ್ಟ್) ಕಳಿಸುವ ಮೊದಲು ಯಂತ್ರದ ಮುಖ್ಯ ಭಾಗಗಳು, ಧ್ರುವಗಳು (ಪೋಲ್ಸ್), ಚಂಡ (ಷಾಫ್ಟ್), ಧಾರಕಗಳು (ಬೇರಿಂಗ್ಸ್) ಮತ್ತು ಯಂತ್ರದಲ್ಲಿ ಬಳಸಿರುವ ಅವಾಹಕಗಳ ಪ್ರತಿರೋಧ (ಇನ್ಸುಲೇಷನ್ ರೆಸಿಸ್ಟೆನ್ಸ್) ಇವನ್ನು ನೋಡಿರಬೇಕು. ಅನಂತರ ಅವು ಪರೀಕ್ಷೆಗೆ ಅರ್ಹವಾಗುತ್ತವೆ. ಒಂದು ಯಂತ್ರದ ದಕ್ಷತೆಯನ್ನು ಅಳೆಯುವುದರ ಮೂಲಕ ಅದರ ಕಾರ್ಯನಿರ್ವಹಣೆಯ ಬಗ್ಗೆ ಒಂದು ನಿರ್ಧಾರಕ್ಕೆ ಬರಬಹುದು. ಯಂತ್ರದಿಂದ ದೊರೆಯುವ ಸಾಮರ್ಥ್ಯ (ಔಟ್‌ಪುಟ್ ಪವರ್) ಮತ್ತು ಯಂತ್ರಕ್ಕಾಗಿ ವ್ಯಯಿಸಿದ ಸಾಮರ್ಥ್ಯ ಇವುಗಳ ಪ್ರಮಾಣ ಅದರ ದಕ್ಷತೆ. ಇದನ್ನು ಕಂಡುಹಿಡಿಯುವಾಗ ಮುಖ್ಯವಾಗಿ ಯಂತ್ರದಲ್ಲಿ ಉಪಯೋಗಿಸಲಾಗಿರುವ ಕಬ್ಬಿಣ, ತಾಮ್ರದಿಂದಾದ ನಷ್ಟಗಳು ಹಾಗೂ ಘರ್ಷಣದಿಂದ ಮತ್ತು ಕಾಂತತ್ವದಿಂದಾದ ನಷ್ಟಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಏಕಮುಖ ವಿದ್ಯುದ್ಯಂತ್ರಗಳನ್ನು ಪರೀಕ್ಷೆ ಮಾಡಲು ಐದು ವಿಧಾನಗಳನ್ನು ಅನುಸರಿಸುತ್ತಾರೆ.

**1. ಗತಿಪ್ರತಿಬಂಧಕ ಪರೀಕ್ಷೆ (ಬ್ರೇಕ್ ಟೆಸ್ಟ್):** ಸಣ್ಣ ಏಕಮುಖ ವಿದ್ಯುತ್ ಮೋಟಾರನ್ನು ಪರೀಕ್ಷಿಸಲು ಇದೊಂದು ನೇರ ವಿಧಾನ. ನೀರಿನಿಂದ ತಂಪಿಸುವ ಒಂದು ರಾಟೆ. ಇದನ್ನು ಒಂದು ಸಣ್ಣ ಮೋಟಾರಿನ ದಂಡದ ಮೇಲೆ ನಿಲ್ಲಿಸಿದೆ. ರಾಟೆಯಲ್ಲಿ ಗತಿಪ್ರತಿಬಂಧವನ್ನು ಉಂಟುಮಾಡಿ ಯಂತ್ರದ ಮೇಲೆ ಉಂಟಾದ ಹೊರೆಯನ್ನು (ಲೋಡ್) ಯಂತ್ರ ತನ್ನ ಸಾಮರ್ಥ್ಯವಿರುವಷ್ಟು ವಿದ್ಯುತ್ಪ್ರವಾಹವನ್ನು ಪಡೆಯುವವರೆಗೂ ಅಳವಡಿಸುತ್ತಾರೆ. ರಾಟೆಯ ಮೇಲೆ ಉಪಯೋಗಿಸಲಾದ ಪಟ್ಟಿಯ (ಬೆಲ್ಟ್) ಬಿಗಿ ಹಾಗೂ ಜಾರುವ ಭಾಗಗಳಲ್ಲುಂಟಾದ ಎಳೆತಗಳಲ್ಲಿನ (ಟೆನ್ಷನ್ಸ್) ವ್ಯತ್ಯಾಸದ ಸಹಾಯದಿಂದ ಮೋಟಾರಿನಿಂದೊದಗುವ ಸಾಮರ್ಥ್ಯವನ್ನು ನಿರ್ಧರಿಸುತ್ತಾರೆ.



ಚಿತ್ರ 1

ಇಲ್ಲಿ $W_1$ = ಇಳಿಬಿಡಲಾದ ತೂಕ (ಕಿಲೋಗ್ರಾಂಗಳಲ್ಲಿ), $W_2$ = ಎಗರು ತ್ರಾಸಿನ ಓದಿಕೆ (ಕಿಲೋಗ್ರಾಂಗಳಲ್ಲಿ). N = ಮೋಟಾರಿನ ವೇಗ (RPM ಗಳಲ್ಲಿ), R = ರಾಟೆಯ ತ್ರಿಜ್ಯ (ಮೀಟರುಗಳಲ್ಲಿ). ಗಣನೆಯ ಪ್ರಕಾರ ಲಭ್ಯ ಸಾಮರ್ಥ್ಯ (ಔಟ್ ಪುಟ್) $= 2\pi RN\ (W_1 - W_2)\ X\ 9.81$ ವಾಟುಗಳು. ಯಂತ್ರಕ್ಕೆ ಒದಗಿಸಿದ ವೋಲ್ಟೇಜ್ V ಇದ್ದು ಯಂತ್ರಪಡೆದ ವಿದ್ಯುತ್ I ಇದ್ದಾಗ ನಾವು ವ್ಯಯಿಸಿದ ಸಾಮರ್ಥ್ಯ (ಇನ್‌ಪುಟ್) = VI ವಾಟುಗಳು.

ಆಗ ದಕ್ಷತೆ (ಶೇ.) $$= \frac{2\pi RN\ (W_1 - W_2)\ 9.81}{VI}$$

ದೊಡ್ಡ ಮೋಟಾರುಗಳನ್ನು ಪರೀಕ್ಷಿಸಲು ಈ ಪರೀಕ್ಷೆ ಸಹಾಯವಾಗುವುದಿಲ್ಲ. ಏಕೆಂದರೆ ನಾವು ವ್ಯಯಿಸಿದ ಸಾಮರ್ಥ್ಯ ನಷ್ಟವಾಗುವುದಲ್ಲದೇ ಪರೀಕ್ಷೆಗೆ ಬೇಕಾದ ಅನುಕೂಲಗಳಿರುವುದಿಲ್ಲ.

**2. ಸ್ವಿನ್‌ಬರ್ನನ ಪರೀಕ್ಷೆ:** ಶಂಟ್ ಮತ್ತು ಸಮ್ಮಿಶ್ರ (ಕಾಂಪೌಂಡ್) ಯಂತ್ರಗಳನ್ನು ಪರೀಕ್ಷಿಸಲು ಈ ವಿಧಾನ ಸಹಕಾರಿ. ಯಂತ್ರದ ಮೇಲೆ ಯಾವ ಹೊರೆಯೂ ಇಲ್ಲದಾಗ ಅದನ್ನು ಓಡಿಸಿ ಈ ಪರೀಕ್ಷೆ ನಡೆಸುತ್ತಾರೆ. ಇದನ್ನು ನಡೆಸಲು ಒಂದು ನಿಬಂಧನೆ ಎಂದರೆ ಪರೀಕ್ಷೆಗೊಳಗಾದ ಯಂತ್ರಗಳಲ್ಲಿ ಅಭಿವಾಹಗಳು (ಫ್ಲಕ್ಸಸ್) ಸ್ಥಿರವಾಗಿರಬೇಕು. ಈ ಪರೀಕ್ಷೆಯಿಂದ ಯಂತ್ರದಲ್ಲಿ ಉಂಟಾಗುವ ನಷ್ಟಗಳನ್ನು ಗೊತ್ತುಮಾಡಿ, ಈ ತಿಳಿವಳಿಕೆಯಿಂದ ಯಂತ್ರದ ದಕ್ಷತೆಯನ್ನು ನಿರ್ಧರಿಸಬಹುದು. ಈ ವಿಧಾನದ ಒಂದು ಅನುಕೂಲವೆಂದರೆ ನಾವು ಯಂತ್ರಕ್ಕಾಗಿ ವ್ಯಯಿಸುವ ಸಾಮರ್ಥ್ಯ ಅಲ್ಪ. ಇದರಿಂದಾಗಿ ದೊಡ್ಡ ಯಂತ್ರಗಳನ್ನು ಪರೀಕ್ಷೆ ಮಾಡಬಹುದು. ಗೊತ್ತು ಮಾಡುವ ನಷ್ಟಗಳು ಸ್ಥಿರವಾದ್ದರಿಂದ ಯಂತ್ರದ ಮೇಲೆ ಬೇರೆ ಬೇರೆ ಹೊರೆಗಳಿದ್ದಾಗ ಅದರ ದಕ್ಷತೆಯನ್ನು ನಿರ್ಧರಿಸಬಹುದು.

**3. ವೇಗಾಪಕರ್ಷಕ ಪರೀಕ್ಷೆ (ರಿಟಾರ್ಡೇಷನ್ ಟೆಸ್ಟ್):** ಶಂಟ್ ಮೋಟಾರುಗಳ ಮತ್ತು ಏಕಮುಖ ವಿದ್ಯುಜ್ಜನಕಗಳ ಪರೀಕ್ಷೆಯಲ್ಲಿ ಈ ವಿಧಾನದ ಬಳಕೆಯಿದೆ. ಇಲ್ಲಿ ಘರ್ಷಣದಿಂದಾದ ನಷ್ಟ ಹಾಗೂ ಕಾಂತತ್ವದಿಂದಾದ ನಷ್ಟಗಳನ್ನು ಗೊತ್ತುಮಾಡುತ್ತಾರೆ. ಈ ಪರೀಕ್ಷೆ ನಡೆಸಲು ಯಂತ್ರವನ್ನು ಅದರ ಸಾಧಾರಣ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಓಡಿಸಿ ಅದರ ಆರ್ಮೇಚರಿನ ಕಡೆಯಲ್ಲಿ ವಿದ್ಯುತ್ಪ್ರವಾಹವನ್ನು ನಿಲ್ಲಿಸುತ್ತಾರೆ. ಆಗ ಅದರ ವೇಗ ಕಡಿಮೆಯಾಗುತ್ತದೆ. ಅದರ ಚಲನಶಕ್ತಿಯನ್ನು (ಕೈನೆಟಿಕ್ ಎನರ್ಜಿ) ನಷ್ಟಗಳನ್ನು ಕಂಡುಹಿಡಿಯಲು ಬಳಸುತ್ತಾರೆ. ಅನಂತರ ತಾಮ್ರದಿಂದಾದ ನಷ್ಟಗಳನ್ನು (ಗೊತ್ತಾದ ಹೊರೆಯಲ್ಲಿ) ಗಣನೆಗೆ ತೆಗೆದುಕೊಂಡು ದಕ್ಷತೆಯನ್ನು ಗೊತ್ತುಮಾಡುತ್ತಾರೆ.

**4. ಹಾಪ್‌ಕಿನ್‌ಸನ್ನನ ಪರೀಕ್ಷೆ:** ಈ ಪರೀಕ್ಷಾವಿಧಾನವನ್ನು ಹೆಚ್ಚು ಸಾಮರ್ಥ್ಯವುಳ್ಳ ಎರಡು ಸಮಾನ ಶಂಟ್ ಮೋಟಾರುಗಳನ್ನು ಪರೀಕ್ಷಿಸಲು ಉಪಯೋಗಿಸುತ್ತಾರೆ. ಎರಡು ಮೋಟಾರುಗಳಲ್ಲಿ ಒಂದನ್ನು ವಿದ್ಯುತ್ ಮೋಟಾರ್ ಆಗಿ ಓಡುವಂತೆಯೂ ಇನ್ನೊಂದನ್ನು ವಿದ್ಯುಜ್ಜನಕವಾಗಿ ಓಡುವಂತೆಯೂ ಸಮಾಂತರ ಸಂಬಂಧದಲ್ಲಿ ಜೋಡಿಸುತ್ತಾರೆ (ಕನೆಕ್ಟೆಡ್ ಇನ್ ಪ್ಯಾರಲಲ್). ವಿದ್ಯುತ್ ಮೋಟಾರು ವಿದ್ಯುಜ್ಜನಕ ಓಡಲು ಸಾಮರ್ಥ್ಯ ಒದಗಿಸಿ ಕೊಡುತ್ತದೆ. ವಿದ್ಯುಜ್ಜನಕದಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ವಿದ್ಯುತ್ ಮೋಟಾರಿನಲ್ಲಿ ಬಳಸಲಾಗುವುದು. ಪ್ರಧಾನ ತಂತಿಗಳಿಂದ (ಮೆಯಿನ್ ಲೈನ್ಸ್) ಒದಗಿದ ಪ್ರವಾಹ ಸಾಮರ್ಥ್ಯ ನಷ್ಟಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು. ಈ ನಷ್ಟಗಳು ಎರಡು ಯಂತ್ರಗಳಿಗೂ ಸಮಾನವಾಗಿ ಹಂಚಲ್ಪಟ್ಟು ಅವೆರಡರ ದಕ್ಷತೆಗಳನ್ನು ನಿರ್ಧರಿಸಲು ಸಹಾಯವಾಗುತ್ತದೆ. ದೊಡ್ಡ ಯಂತ್ರಗಳ ಪರೀಕ್ಷೆಗೆ ಇದು ಸುಲಭದ ವಿಧಾನ. ಇದು ಪೂರ್ಣ ಹೊರೆಯ ಸ್ಥಿತಿಯಲ್ಲಿ ದಕ್ಷತೆ ಕೊಡುವುದಲ್ಲದೆ ಉಷ್ಣತೆಯಲ್ಲುಂಟಾದ ಏರಿಕೆಯನ್ನು ನಿರ್ಧರಿಸುತ್ತದೆ. ಈ ಪರೀಕ್ಷೆಯನ್ನು ಹಾಪ್‌ಕಿನ್‌ಸನ್ ಎಂಬಾತ ಮೊದಲು ಬಳಕೆಗೆ ತಂದುದರಿಂದ ಆತನ ಹೆಸರೇ ಇದಕ್ಕೆ ಬಂದಿದೆ. ಇದನ್ನು ಬ್ಯಾಕ್–ಟು–ಬ್ಯಾಕ್ ಪರೀಕ್ಷೆ ಎಂದೂ ಕರೆಯುತ್ತಾರೆ.



ಚಿತ್ರ 2 M, M– ಮೋಟರುಗಳು, R– ಪ್ರತಿರೋಧ

**5. ಕ್ಷೇತ್ರ ಪರೀಕ್ಷೆ:** ಸಾಗಾಣಿಕೆಯಲ್ಲಿ ಬಳಸುವ ಟ್ರಾಮ್ ಕಾರುಗಳಲ್ಲಿ ಸಾಮಾನ್ಯವಾಗಿ ಎರಡು ಏಕಮುಖ ಶ್ರೇಣಿ ವಿದ್ಯುತ್ ಮೋಟಾರುಗಳನ್ನು ಬಳಸುತ್ತಾರೆ. ಇಂಥ ಶ್ರೇಣಿ ಮೋಟಾರುಗಳ ಪರೀಕ್ಷೆಗೆ ಕ್ಷೇತ್ರ ಪರೀಕ್ಷೆ ಒಂದು ಸುಲಭ ವಿಧಾನ. ಎರಡು ಸಮಾನ ಮೋಟಾರುಗಳ ಕ್ಷೇತ್ರಗಳನ್ನು ಒಂದಕ್ಕೊಂದು ಅಂಟಿಕೊಂಡಂತೆ ಜೋಡಿಸಿ ಪರೀಕ್ಷೆಗೊಳಪಡಿಸುತ್ತಾರೆ. ಮೊದಲನೆಯ ಯಂತ್ರ ಮೋಟಾರಾಗಿ ಓಡಿ ಎರಡನೆಯದು ವಿದ್ಯುಜ್ಜನಕವಾಗಿ ಓಡುತ್ತದೆ. ಎರಡನೆಯ ಯಂತ್ರದಿಂದ ಒದಗಿದ ಸಾಮರ್ಥ್ಯ ಅದಕ್ಕೆ ಸಂಬಂಧಿಸಿದ ಪ್ರತಿರೋಧದಲ್ಲಿ (R) ವ್ಯಯವಾಗುತ್ತದೆ.

ಈ ರೀತಿಯ ಜೋಡಣೆಯಿಂದ ಯಂತ್ರದಲ್ಲಿನ ನಷ್ಟಗಳು ಸಮಾನವಾಗಿ ಎರಡು ಯಂತ್ರಕ್ಕೂ ಹಂಚಲ್ಪಡುತ್ತವೆ. ಇದರಿಂದ ಯಂತ್ರಗಳ ದಕ್ಷತೆ ನಿರ್ಧರಿಸಲು ಸಾಧ್ಯ.

ಮೇಲೆ ತಿಳಿಸಿದ ಪರೀಕ್ಷೆಗಳು ಸಾಮಾನ್ಯವಾಗಿ ಬಳಕೆಯಲ್ಲಿವೆ. ಕೆಲವು ವಿಶೇಷ ಯಂತ್ರಗಳಿಗೆ ಅಲ್ಲಿನ ಸ್ಥಿತಿಗನುಸಾರವಾಗಿ ಇತರ ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ. ಏಕಮುಖ ವಿದ್ಯುದ್ಯಂತ್ರಗಳಲ್ಲಿ ವಿದ್ಯುತ್ಪ್ರವಾಹ ಕ್ರಮವಾದ್ದರಿಂದ ಅವುಗಳ ಪರೀಕ್ಷೆಗಳು ಅಷ್ಟು ಕಠಿಣವಲ್ಲ. ನಿರ್ಧರಿಸಬೇಕಾದ ಅಂಶಗಳು ಸಂಖ್ಯೆಯಲ್ಲಿ ಕಡಿಮೆ ಇವೆ.

(ಬಿ.ಜಿ.ಆರ್.)

**ಏಕಮುಖ ಮತ್ತು ವಿಭಿನ್ನ ಮುಖ ಪ್ರಾದೇಶಿಕ ಬೆಳವಣಿಗೆ:** ಪ್ರಾದೇಶಿಕ ಬೆಳವಣಿಗೆ ಏಕಮುಖವಾಗಿರುತ್ತದೆಯೋ ಅಥವಾ ವಿಭಿನ್ನ ಮುಖವಾಗಿರುತ್ತದೆಯೋ ಎಂಬ ವಿಷಯದ ಬಗೆಗಿನ ಚರ್ಚೆ ಪ್ರಾದೇಶಿಕ ಯೋಜನೆಯ ಚಿಂತನೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದೆ. ಹಿಂದುಳಿದ ಮತ್ತು ಸಂಮೃದ್ಧ ಪ್ರದೇಶಗಳ ನಡುವಿನ ವ್ಯತ್ಯಾಸ ಕಾಲಕ್ರಮೇಣ ಕಡಿಮೆಯಾಗುತ್ತದೆಯೋ ಅಥವಾ ಹೆಚ್ಚಾಗುತ್ತದೆಯೋ ಎಂಬುದು ಯೋಜಕರಲ್ಲಿ ಅಧಿಕ ಜಿಜ್ಞಾಸೆಗೊಳಪಟ್ಟ ವಿಷಯವಾಗಿದೆ. ಕೆಲವು ಪ್ರಾದೇಶಿಕ ಸಿದ್ಧಾಂತಗಳ ಪ್ರಕಾರ ಪ್ರಾದೇಶಿಕ ಅಸಮತೋಲನ ಸ್ವಯಂ ಸರಿಪಡಿಸಿಕೊಳ್ಳಲು ಸಾಧ್ಯವಿದೆಯಾದರೂ ಮಧ್ಯಸ್ಥಿಕೆಯ ಅಗತ್ಯತೆ ಅನಿವಾರ್ಯವಾಗಿದೆ.

ವಿಭಾಗೀಯ ಸಿದ್ಧಾಂತದ ಸಲಹೆಯಂತೆ ಆಂತರಿಕವಾಗಿ ವಿವಿಧ ಕ್ಷೇತ್ರಗಳ ನಡುವೆ ಸಂಪನ್ಮೂಲಗಳ ಪುನರ್ ಹಂಚಿಕೆಗೆ ವಿಪುಲ ಅವಕಾಶಗಳಿದ್ದು ಹಿಂದುಳಿದ ಕೃಷಿ ಪ್ರದೇಶಗಳಲ್ಲಿ ಸಂಮೃದ್ಧ ಪ್ರದೇಶಗಳಿಗಿಂತ ಹೆಚ್ಚಿನ ಸಂಪನ್ಮೂಲಗಳ ಪುನರ್ ಹಂಚಿಕೆ ಸಾಧ್ಯವಿರುವುದರಿಂದ ಕ್ರಮೇಣ ಪ್ರಾದೇಶಿಕ ಅಭಿವೃದ್ಧಿ ಧೃವೀಕರಣಗೊಳ್ಳುವುದಿಲ್ಲ. ಹಾಗೆಯೇ ಆಂತರಿಕ ಪ್ರಾದೇಶಿಕ ವ್ಯಾಪಾರ ಮಾದರಿಯ ಸಲಹೆಯಂತೆ ಪ್ರಾದೇಶಿಕ ತಲಾದಾಯ ಸಹ ಎಲ್ಲಾ ಪ್ರದೇಶಗಳಲ್ಲಿ ಹೆಚ್ಚಾಗುತ್ತದೆ. ಅಪವ್ಯಯ ಆರ್ಥಿಕ ಪ್ರಮಾಣ ಹೆಚ್ಚಾದಂತೆ ಸಂಮೃದ್ಧ ಪ್ರದೇಶಗಳ ಬೆಳವಣಿಗೆಯನ್ನು ಮಿತಗೊಳಿಸುತ್ತದೆ. ಆದರೂ ಪ್ರಾಯೋಗಿಕವಾಗಿ ಆರ್ಥಿಕ ಅಂಶಗಳ ಚಲನೆ ಕ್ಷೇತ್ರಗಳು ಮತ್ತು ಪ್ರದೇಶಗಳ ನಡುವೆ ಇಲ್ಲವಾದಾಗ ಮತ್ತು ಆರ್ಥಿಕತೆಗಳು ಸಮೃದ್ಧ ಪ್ರದೇಶಗಳ ಬೆಳವಣಿಗೆಯ ಮೇಲೆ ಯಾವುದೇ ಪರಿಣಾಮ ಬೀರಲಾರದಾಗ ಸಮಾನ ಪ್ರಾದೇಶಿಕ ಬೆಳವಣಿಗೆ ಮಿತಿಗೊಳ್ಳಬಹುದು. ಆಗ ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವ ಉದ್ದೇಶದಿಂದ ಸೂಕ್ತ ರೀತಿಯ ನೀತಿ ನಿಯಮಗಳನ್ನು ರೂಪಿಸಿ ಆರ್ಥಿಕಾಂಶಗಳ ಚಾಲನೆಗೆ ಒತ್ತುಕೊಡುವುದು ಅಗತ್ಯವಾಗುತ್ತದೆ.

ಹೈರ್ಸ್‌ಮ್ಯಾನ್, ಫ್ರೀಡ್‌ಮನ್ ಮತ್ತು ಮಿರ್ಡಾಲ್ ಇವರುಗಳ ಬೆಳೆವಣಿಗೆ ಸಿದ್ಧಾಂತಗಳ ಪ್ರಕಾರ ಪ್ರಾದೇಶಿಕ ಬೆಳೆವಣಿಗೆ ಪ್ರಾದೇಶಿಕವಾಗಿ ಅಸಮಾನತೆಯಿಂದ ಕೂಡಿರುತ್ತದೆ. ಈ ಸಿದ್ಧಾಂತಗಳಲ್ಲಿ ಚರ್ಚಿಸಿರುವಂತೆ ಪ್ರದೇಶಗಳ ನಡುವಿನ ಬೆಳೆವಣಿಗೆ ಅಸಮಾನವಾಗಿರುತ್ತದೆ. ಉದಾಹರಣೆ ಸಹಿತ ಹೋಲಿಸಿ ನೋಡುವುದಾದರೆ ಪ್ರದೇಶ ಎ ಪ್ರದೇಶ ಬಿ ಗಿಂತ ಅತಿ ಹೆಚ್ಚು ವೇಗವಾಗಿ ಅಭಿವೃದ್ಧಿಹೊಂದುವುದು. ಏಕೆಂದರೆ ಇದು ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ಅನುಕೂಲತೆಗಳನ್ನು ಹೊಂದಿರುವುದರಿಂದ ಭಿನ್ನಾಭಿಮುಖ ಅಥವಾ ಅಸಮಾನತೆಯ ಬೆಳೆವಣಿಗೆ ಸ್ವಯಂ ಸರಿಪಡಿಸಿಕೊಳ್ಳುವಿಕೆಯನ್ನು ಹೊಂದಿಲ್ಲದಿರಬಹುದು. ಸ್ಪಷ್ಟವಾಗಿ ಹೇಳುವುದಾದರೆ ಈ ಪ್ರಕ್ರಿಯೆ ಸಮುಚ್ಚಯಕವಾಗಿರಬಹುದಾದುದರಿಂದ ಶ್ರೀಮಂತ ಪ್ರದೇಶಗಳು ಶ್ರೀಮಂತವಾಗಿಯೂ ಮತ್ತು ಬಡತನದಿಂದ ಕೂಡಿದ ಪ್ರದೇಶಗಳು ಅತಿ ಬಡಪ್ರದೇಶಗಳಾಗಿ ಮುಂದುವರಿಯುತ್ತವೆ.

ಮಿರ್ಡಾಲ್‌ರವರು ಸಮುಚಾಯಕ ಕಾರಣ ವಿಧಾನಕ್ಕೆ ಸಂಬಂಧಿಸಿದಂತೆ ಚದುರಿದ ಮತ್ತು ಹಿಂತೊಳೆ ಪರಿಣಾಮಗಳನ್ನು ವಿವರಿಸಿದ್ದಾರೆ. ಚದುರುವಿಕೆ ಪರಿಣಾಮಗಳು – ಶ್ರೀಮಂತ ಮತ್ತು ಹಿಂದುಳಿದ ಪ್ರದೇಶಗಳ ನಡುವಿನ ಬೆಳೆವಣಿಗೆಯ ಅಂತರವನ್ನು ಕಡಿತಗೊಳಿಸುವುದಕ್ಕೆ ಪೂರಕವಾಗಿದೆ. ಶ್ರೀಮಂತ ಪ್ರದೇಶಗಳು ಬೆಳೆದಂತೆ ಬಡತನ ಪ್ರದೇಶಗಳ ಉತ್ಪನ್ನಗಳ ಬೇಡಿಕೆ ಹೆಚ್ಚಿಸುವುದರಿಂದ ಬಡ ಪ್ರದೇಶಗಳಲ್ಲಿ ಬೇಡಿಕೆ ಹೆಚ್ಚಾಗಿ ಆ ಪ್ರದೇಶಗಳ ಬೆಳೆವಣಿಗೆಗೆ ಉತ್ತೇಜನ ಕೊಡುತ್ತವೆ.

ಹೀಗೆ ಬಡತನ ಪ್ರದೇಶಗಳಲ್ಲಿ ಉತ್ಪಾದನೆಯ ಬೇಡಿಕೆ ಹೆಚ್ಚುವುದರಿಂದ ಅಂತಹ ಪ್ರದೇಶಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಸಮರ್ಥ ರೀತಿಯಲ್ಲಿ ಬಳಸುವುದರಿಂದ ಸಂಪನ್ಮೂಲಗಳು ಕಡಿಮೆ ಕೂಲಿ ವಲಯದಿಂದ ಹೆಚ್ಚಿನ ಕೂಲಿ ವಲಯಕ್ಕೂ ಹಾಗೂ ಕಡಿಮೆ ಉತ್ಪಾದನೆ ಕ್ಷೇತ್ರದಿಂದ ಹೆಚ್ಚಿನ ಉತ್ಪಾದನೆ ಕ್ಷೇತ್ರಕ್ಕೂ ಪುನರ್ ಹಂಚಿಕೆಯಾಗುತ್ತವೆ. ಅಲ್ಲದೆ ಅಪವ್ಯಯ ಆರ್ಥಿಕತೆಗಳು ಸಮೃದ್ಧ ಪ್ರದೇಶದಲ್ಲಿ ಪ್ರಾರಂಭವಾಗಬಹುದು. ಇದರಿಂದಾಗಿ ಅಭಿವೃದ್ಧಿ ಪ್ರಕ್ರಿಯೆ ಹೆಚ್ಚು ಅಭಿವೃದ್ಧಿ ಪ್ರದೇಶಗಳಿಂದ ಹಿಂದುಳಿದ ಪ್ರದೇಶಗಳಿಗೆ ಪಸರಿಸುತ್ತದೆ. ಆದರೆ ಮಿರ್ಡಾಲ್‌ರವರು ಹೇಳುವಂತೆ ಚದುರಿದ ಪರಿಣಾಮಗಳು ಹಿಂತೊಳೆ ಪರಿಣಾಮಗಳಿಂದ ಸ್ಥಿರವಾಗಿರುತ್ತವೆ. ನಗರ ಕೇಂದ್ರ ಭಾಗದ ಸುತ್ತಮುತ್ತ ವ್ಯವಸಾಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳದಿಂದಾಗಿ ಕೇಂದ್ರ ಸಮೃದ್ಧತೆ ಹೊಂದಿದ್ದರೂ ನಗರದ ಕೇಂದ್ರೀಯ ಭಾಗದ ಸುತ್ತಲಿನ ವಸ್ತುಗಳು ಮೂಲತಃ ವ್ಯವಸಾಯ ವಸ್ತುಗಳಾಗಿದ್ದು ಕಡಿಮೆ ಸ್ಥಿತಿಸ್ಥಾಪಕತ್ವವುಳ್ಳ ಬೇಡಿಕೆಯಿಂದ ಕೇಂದ್ರದ ರೀತಿಯ ಸಮೃದ್ಧತೆಯು ಅನಂತರದ ಸುತ್ತಲಿನ ವ್ಯವಸಾಯ ಪ್ರದೇಶದಲ್ಲಿ ಸಿದ್ಧಿಸದಿರಬಹುದು. ಹೀಗೆ ಬಂಡವಾಳ ಮತ್ತು ಪರಿಣಿತಶ್ರಮ ಮುಂತಾದ ಆಯ್ದ ಸಂಪನ್ಮೂಲಗಳು ನಗರ ಪ್ರದೇಶಗಳಿಗೆ ಹೋಗುವುದು. ಇದು ಹಿಂದುಳಿದ ಪ್ರದೇಶದ ಬೆಳೆವಣಿಗೆಯನ್ನು ಕುಂಠಿತಗೊಳಿಸುವುದಲ್ಲದೆ ಹಿಂದುಳಿದ ಪ್ರದೇಶಗಳು ಸ್ಪರ್ಧಿಸದಂತಾಗುತ್ತವೆ.

ಕೇಂದ್ರ ಮತ್ತು ಅಂಚಿನ ಸಿದ್ಧಾಂತಗಳು ಸಂಚಿತ (ಕುಮುಲೇಟಿವ್ ಕಾಷೋಮಾನ್) ವಿಧಾನಕ್ಕೆ ಹೆಚ್ಚು ಒತ್ತು ಕೊಟ್ಟಿವೆ. ವಿಭಿನ್ನ ಪ್ರಾದೇಶಿಕ ಬೆಳೆವಣಿಗೆ ಬಗ್ಗೆ ಪರಿಜ್ಞಾನ ಪಡೆಯಲು ಸಹ ಉಪಯುಕ್ತವಾದ ಮಾಹಿತಿಯನ್ನು ಒದಗಿಸುವುದಲ್ಲದೆ, ವಿವಿಧ ಸಿದ್ಧಾಂತಗಳ ಮೂಲಾಂಶಗಳನ್ನು ಒಟ್ಟುಗೂಡಿಸಿದೆ. ನೀತಿ ನಿಯಮಗಳು ಮತ್ತು ತೊಡಕುಗಳು ಕುರಿತಂತೆ ಆರ್ಥಿಕ ಬೆಳೆವಣಿಗೆ ಕಾರ್ಯವಿಧಾನದಲ್ಲಿ ಸಾಮಾನ್ಯ ಸ್ಥಿರತೆ ಕಂಡುಬರದೆ ಇರುವುದರಿಂದ ಸರ್ಕಾರದ ಮಧ್ಯಸ್ಥಿಕೆಯ ಅನಿವಾರ್ಯತೆ ಕಂಡುಬರುತ್ತದೆ.

ವಿಭಿನ್ನತೆಯನ್ನು ಹೊಂದಿರುವ ಪ್ರಾದೇಶಿಕ ಬೆಳೆವಣಿಗೆಯನ್ನು ಅನೇಕ ಸಿದ್ಧಾಂತ ತಜ್ಞರು ಬೆಂಬಲಿಸಿದ್ದಾರೆ. ಅಲ್ಲದೆ ಕೈಗಾರಿಕಾ ರಚನೆ ಮತ್ತು ನಿಯಂತ್ರಣ ಕೇಂದ್ರೀಯವಾಗಿದ್ದು ಪ್ರಾದೇಶಿಕ ಬೆಳೆವಣಿಗೆಯ ವ್ಯತ್ಯಾಸಗಳನ್ನು ವಿವರಿಸುತ್ತವೆ. ಉದಾ: ಹೊಲ್ಯಾಂಡ್ ಅವರ ಪ್ರಕಾರ ಪ್ರಾದೇಶಿಕ ಅಸಮತೋಲನಕ್ಕೆ ಪ್ರಮುಖವಾಗಿ ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪನಿಗಳು ಬೆಳೆಯುತ್ತಿರುವುದೇ ಕಾರಣವಾಗಿದೆ. ಹೊಲ್ಯಾಂಡ್ ಅವರು ಹೇಳುವಂತೆ ಬಹುರಾಷ್ಟ್ರೀಯ ಬಹುಉತ್ಪನ್ನ ಕಂಪನಿಗಳ ಉದ್ಯಮಗಳು ಆರ್ಥಿಕ ಕ್ಷೇತ್ರವನ್ನು ಆವರಿಸಿಕೊಂಡಿವೆ. ಈ ಉದ್ಯಮಗಳು ಮೂಲತಃ ದೇಶದಲ್ಲಿನ ಪ್ರಾದೇಶಿಕ ಅಸಮತೋಲನವನ್ನು ಮುಂದುವರಿಸುತ್ತವೆ. ಉದ್ಯಮಿಗಳು ಪ್ರಮುಖವಾಗಿ ದೇಶದ ಸಮೃದ್ಧ ಪ್ರದೇಶಗಳಲ್ಲಿ ಕೇಂದ್ರೀಕರಿಸುತ್ತಾರೆ ಮತ್ತು ಅವರಿಗೆ ವಿರುದ್ಧವಾದ ನೀತಿ ನಿಯಮಗಳನ್ನು ರೂಪಿಸಿದಲ್ಲಿ ಸಮಸ್ಯೆಗಳಿಂದ ಕೂಡಿದ ಉದ್ಯಮಿಗಳು ಇತರೆ ಪ್ರದೇಶಗಳಲ್ಲಿ ಉದ್ಯಮಗಳನ್ನು ಕೈಗೊಳ್ಳದೆ ಸರ್ಕಾರದ ನೀತಿಗಳಿಗೆ ವಿರುದ್ಧವಾಗಿ ಪ್ರತಿಭಟಿಸುವುದಲ್ಲದೆ ದೇಶವನ್ನೇ ಬಿಟ್ಟು ಹೋಗುವುದಾಗಿ ಹೇಳುತ್ತಾರೆ.

ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಪ್ರಾಮುಖ್ಯತೆಯನ್ನು ಬೆಳೆಸಿಕೊಳ್ಳುತ್ತಿವೆ ಮತ್ತು ಕೆಲವೇ ಕೆಲವು ದೊಡ್ಡ ಕಂಪನಿಗಳು ಕೈಗಾರಿಕಾ ಕ್ಷೇತ್ರದಲ್ಲಿ ಏಕಸ್ವಾಮ್ಯತೆಯನ್ನು ಅಮೆರಿಕ, ಪಶ್ಚಿಮ ಯುರೋಪ್‌ಗಳಲ್ಲಿಯೂ ಪಡೆದಿವೆ.

ಕೆಲವು ಸಂಗತಿಗಳಲ್ಲಿ ಹೊಲ್ಯಾಂಡ್‌ರವರ ವಿಶ್ಲೇಷಣೆ ಸಮಂಜಸವಾಗಿದ್ದು ಬಹುರಾಷ್ಟ್ರೀಯ ಕಂಪನಿಗಳ ಪ್ರಾದೇಶಿಕ ಅಭಿವೃದ್ಧಿಯ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಆದರೆ ಈ ಬಗ್ಗೆ ಯನ್ನೋಪಲಸ್ ಮತ್ತು ಡುನಿಯುಂಗ್ ಅವರು ಇದಕ್ಕೆ ತದ್ವಿರುದ್ಧವಾಗಿ ಅಭಿಪ್ರಾಯವನ್ನು ಸಹ ನೀಡಿರುತ್ತಾರೆ. (ಡಿ.ಎಂ.)

**ಏಕರೂಪ ಶಬ್ದಗಳು:** ಭಾಷೆಯಲ್ಲಿ ಕಾಣಬರುವ ಒಂದೇ ಉಚ್ಚಾರಣೆಯ ಅಥವಾ ಒಂದೇ ಲಿಖಿತರೂಪದ ಆದರೆ ಅರ್ಥಭೇದವುಳ್ಳ ಪದಗಳನ್ನು ಏಕರೂಪ ಶಬ್ದಗಳು ಅಥವಾ ಸಮಾನ ರೂಪದ ಪದಗಳು ಎನ್ನುತ್ತಾರೆ (ಹೋಮೋನಿಮ್ಸ್). ಉದಾ: ವರ್ಣ ಎಂಬ ರೂಪಕ್ಕೆ ಬಣ್ಣ, ಜಾತಿ ಎಂಬೆರಡು ಅರ್ಥಗಳೂ ದ್ವಿಜ ಎಂಬ ಪದಕ್ಕೆ ಬ್ರಾಹ್ಮಣ, ಹಲ್ಲು ಮತ್ತು ಹಕ್ಕಿ ಎಂಬ ಮೂರು ಅರ್ಥಗಳು ಇವೆ. ಹಿಂದಿನ ಭಾರತೀಯ ಶಬ್ದಕೋಶಗಳಲ್ಲಿ ಈ ಬಗೆಯ ಪದಗಳನ್ನು ನಾನಾರ್ಥವುಳ್ಳ ಪದಗಳೆಂದು ಕರೆದಿದ್ದಾರೆ. ಅಂದರೆ, ಒಂದೇ ಪದಕ್ಕೆ ಪರಿಸರಣ (ಕಾಂಟೆಕ್ಸ್ಟ್) ಭೇದದಿಂದ ಬೇರೆ ಬೇರೆ ಅರ್ಥಸೂಚಕ ಶಕ್ತಿ ಇದೆಯೆಂದು ಹಿಂದಿನವರ ತಿಳಿವಳಿಕೆಯಾಗಿತ್ತು. ಆದರೆ, ನಿಜಕ್ಕೂ ಇವು ಸಮಾನ ರೂಪದ, ಅರ್ಥಭೇದವಿರುವ ಎರಡು ಮೂರು ಬೇರೆ ಬೇರೆ ಪದಗಳು.

ಈ ಬಗೆಯ ಜೋಡಿ ಪದಗಳಲ್ಲಿ (ಎರಡಕ್ಕಿಂತ ಹೆಚ್ಚು ಪದಗಳೂ ಈ ಜೋಡಿಗಳಲ್ಲಿರಬಹುದು) ಒಂದು ನಾಮವಾಚಕವಾಗಿಯೂ ಇನ್ನೊಂದು ಕ್ರಿಯಾವಾಚಕ ವಾಗಿಯೂ ಇರಬಹುದು. ಹಾಗಿದ್ದಲ್ಲಿ ಅವುಗಳ ಪ್ರಯೋಗ ಭೇದದಿಂದ ವ್ಯವಹಾರದಲ್ಲಿ ತೊಂದರೆಯೆನಿಸುವುದಿಲ್ಲ. (ಉದಾ: ಸೇರು–ಅಳತೆಯ ಒಂದು ಪ್ರಮಾಣ; ತಲುಪುವುದು). ಎರಡು ಪದಗಳೂ ನಾಮವಾಚಕಗಳಾಗಿಯೂ ಕ್ರಿಯಾವಾಚಕ ಗಳಾಗಿಯೂ ಇರಬಹುದು (ಉದಾ: ಹದ್ದು–ಒಂದು ಹಕ್ಕಿ; ಗಡಿ).

ಭಾಷಾ ಬೆಳೆವಣಿಗೆಯ ಯಾವುದೇ ಕಾಲದಲ್ಲಿನ ಭಿನ್ನಾರ್ಥಕ ಎರಡು ಅಥವಾ ಹೆಚ್ಚಿನ ಪದಗಳ ಲಿಖಿತರೂಪ ಅಥವಾ ಉಚ್ಚಾರಣೆಯ ರೂಪ ಒಂದೇ ಆಗಿ ಕಂಡು ಬಂದರೂ ಅವು ಭಿನ್ನ ಮೂಲದಿಂದ ಬಂದವುಗಳಾಗಿರುತ್ತವೆ. ಹೀಗೆ ಒಂದು ಕಾಲದಲ್ಲಿ ಭಿನ್ನರೂಪದ ಪದಗಳಾಗಿದ್ದು ಇನ್ನೊಂದು ಕಾಲದಲ್ಲಿ ಸಮಾನರೂಪದ ಪದಗಳಾಗಿ ಮಾರ್ಪಡಲು ಭಾಷೆಯಲ್ಲುಂಟಾಗುವ ಧ್ವನಿ ಪರಿಣಾಮಗಳೇ ಕಾರಣವೆನ್ನಬಹುದು. ಹಳಗನ್ನಡದ ಅೞಿ=ತಿಳಿ ಮತ್ತು ಅರಿ=ಕತ್ತರಿಸು ಎಂಬ ಎರಡು ಪದಗಳೂ ಈಗ ಅರಿ ಎಂಬ ರೂಪದಲ್ಲಿ ಕಂಡುಬರುತ್ತವೆ. ೞಕಾರವು ರಕಾರವಾಗಿ ಪರಿವರ್ತಿತವಾದ್ದರಿಂದ ಭಿನ್ನರೂಪದಲ್ಲಿದ್ದ ಪದಗಳು ಸಮಾನರೂಪವನ್ನು ತಾಳಿದುವು.

ಬರವಣಿಗೆ ಮತ್ತು ಉಚ್ಚಾರಣೆ ಎರಡರಲ್ಲೂ ಸಮಾನರೂಪದ ಪದಗಳಿರುವಂತೆ ಬರೆವಣಿಗೆಯಲ್ಲಿ ಮಾತ್ರ ಸಮಾನರೂಪವಿದ್ದು ಉಚ್ಚಾರಣೆಯಲ್ಲಿ ಭೇದವಿರುವ ಪದಗಳೂ ಉಂಟು. ಲಿಖಿತ ರೂಪದಲ್ಲಿ ವ್ಯತ್ಯಾಸವಿಲ್ಲದ ತಂದೆ ಎಂಬ ಜೋಡಿ ಪದಗಳಲ್ಲಿ (ಒಂದು ನಾಮವಾಚಕ, ಇನ್ನೊಂದು ಕ್ರಿಯಾವಾಚಕ) ಒಂದರ ಮೊದಲ ಸ್ವರ ಕೆಲವರ ಉಚ್ಚಾರಣೆಯಲ್ಲಿ ವಿವೃತ ಸ್ವರ (ಓಪನ್ ಓವೆಲ್)ವಾಗಿಯೂ ಇನ್ನೊಂದರ ಮೊದಲ ಸ್ವರ ಸಂವೃತ ಸ್ವರ (ಕ್ಲೋಸ್ಡ್ ಓವೆಲ್) ವಾಗಿಯೂ ಕಾಣಬರುತ್ತದೆ. ಇನ್ನು ಕೆಲವರ ಉಚ್ಚಾರಣೆಯಲ್ಲಿ ಈ ಎರಡು ಸಂದರ್ಭಗಳಲ್ಲೂ ವಿವೃತ ಸ್ವರದ ಪ್ರಯೋಗವಿದೆ. ಇಲ್ಲಿ ತಂದೆ ಎಂಬ ಸಮಾನರೂಪದ ಜೋಡಿಪದಗಳೆರಡರಲ್ಲೂ ಮೊದಲ ಸ್ವರ ವಿವೃತ ಸ್ವರವಾಗಿರುವ ಉಪಭಾಷೆಯಲ್ಲಿ ಮಾತ್ರ ಈ ಪದಗಳು ಸಮಾನರೂಪದ ಪದಗಳೆನ್ನಿಸಿಕೊಳ್ಳುತ್ತವೆ. ಉಚ್ಚಾರಣೆಯಲ್ಲಿ ಭೇದವಿಲ್ಲದ ಜೋಡಿ ಪದಗಳಿಗೇ ಸಮಾನರೂಪದ ಪದಗಳು ಎನ್ನುವ ಪಾರಿಭಾಷಿಕ ಶಬ್ದವನ್ನು ಮೀಸಲಾಗಿಟ್ಟುಕೊಂಡು ಬರೆವಣಿಗೆಯಲ್ಲಿ ಮಾತ್ರ ಭೇದವಿಲ್ಲದ ಪದಗಳನ್ನು ಲಿಖಿತ ಸಮಾನ ರೂಪದ ಪದಗಳೆನ್ನಬಹುದು (ಹೋಮೊಗ್ರ್ಯಾಫ್).

ಭಿನ್ನರೂಪದಲ್ಲಿದ್ದ ಪದಗಳು ಧ್ವನಿ ಪರಿಣಾಮದಿಂದ ಸಮಾನರೂಪದ ಪದಗಳಾಗು ವಂತೆಯೇ ಸಮಾನರೂಪದ ಜೋಡಿಪದಗಳಲ್ಲಿ ವ್ಯವಹಾರದಲ್ಲಿ ಕಷ್ಟವೆಂದು ತೋರಿದಾಗ ಧ್ವನಿ ಪರಿಣಾಮಗಳಿಂದ ಒಂದು ಪದದ ರೂಪ ಮಾತ್ರ ಬದಲಾವಣೆಯಾಗಿ ಇನ್ನೊಂದು ಹಾಗೇ ಉಳಿದು ಅವೆರಡೂ ಭಿನ್ನ ರೂಪದ ಪದಗಳಾಗುವುದೂ ಉಂಟು. ಪದಾದಿಯಲ್ಲಿನ ಪಕಾರ ನಡುಗನ್ನಡದಲ್ಲಿ (ಸು. 10ನೆಯ ಶ.) ಹಕಾರವಾಗಿ ಪರಿವರ್ತಿತವಾಯಿತು. ಈ ಧ್ವನಿ ಪರಿಣಾಮದಿಂದ ಸಮಾನರೂಪದ ಪಾಲು (ಹಿಸ್ಸೆ; ಹಾಲು) ಎಂಬ ಜೋಡಿಪದಗಳಲ್ಲಿ ಒಂದರ ರೂಪ ಹಾಗೇ ಉಳಿದು (ಹಿಸ್ಸೆ ಎಂಬರ್ಥದ ಪದ) ಇನ್ನೊಂದರ ರೂಪ ಹಾಲು ಎಂದಾಯಿತು. ಹಾಗೆಯೇ ಪಾಡು (ದುಃಸ್ಥಿತಿ; ಹಾಡು) ಎಂಬ ಜೋಡಿ ಪದಗಳಲ್ಲೊಂದು ಹಾಗೇ ಉಳಿದು ಇನ್ನೊಂದರ ರೂಪ ಹಾಡಾಗಿ ಪರಿವರ್ತಿತವಾಯಿತು.

ಸಮಾನ ರೂಪದ ಜೋಡಿಪದಗಳಲ್ಲಿ ಯಾವ ಅರ್ಥದ ಪದ ಹಾಗೇ ಉಳಿಯುತ್ತದೆ ಮತ್ತು ಯಾವ ಅರ್ಥದ ಪದ ಪರಿವರ್ತನೆ ಹೊಂದುತ್ತದೆಂಬುದನ್ನು ಧ್ವನಿ ಪರಿಣಾಮಗಳಾಗುವ ಮುಂಚೆ ಹೇಳಲು ಬರುವುದಿಲ್ಲ. ಸಮಾನ ರೂಪದ

ಜೋಡಿ ಪದಗಳಲ್ಲೆಲ್ಲ ಧ್ವನಿ ಪರಿಣಾಮದಿಂದಾಗಿ ಒಂದರ ರೂಪ ಬದಲಾಯಿಸಿ ಅವು ಭಿನ್ನ ರೂಪದ ಪದಗಳಾಗುವುದಿಲ್ಲವೆನ್ನುವುದಕ್ಕೆ ಭಾಷೆಯಲ್ಲಿ ಯಾವುದೇ ಕಾಲದಲ್ಲೂ ಸಮಾನ ರೂಪದ ಪದಗಳು ಉಳಿದು ಬರುವುದೇ ನಿದರ್ಶನ. ಸಾಕಷ್ಟು ಅರ್ಥ ಭೇದವುಳ್ಳ ಮತ್ತು ಅತಿ ಭಿನ್ನ ಪ್ರಸಾರದ ಸಮಾನ ರೂಪದ ಪದಗಳು ಬಹುಕಾಲ ಭಾಷೆಯಲ್ಲಿ ಉಳಿದು ಬರುವುದು ಸಾಧ್ಯ.

ಶ್ಲೇಷೆ (ಪನ್) ಇರುವಂಥ ಕಾವ್ಯ ರಚಿಸಲು ಈ ರೀತಿಯ ಸಮಾನ ರೂಪದ ಪದಗಳು ಸಹಾಯಕಾರಿಯಾಗಿವೆ. ಇಂಥ ಕಾವ್ಯ ರಚನೆ ಸಂಸ್ಕೃತದಲ್ಲಿ ಹೇರಳವಾಗಿದೆ. ಕನ್ನಡದಲ್ಲಿ ಕೂಡ ಶ್ಲೇಷೆಯನ್ನುಪಯೋಗಿಸಿಕೊಂಡು ಸಾಕಷ್ಟು ಕಾವ್ಯ ರಚನೆಯಾಗಿದೆ. ಪಂಪಭಾರತದ ಈ ಪದ್ಯವನ್ನು ಇಲ್ಲಿ ಉದಾಹರಣೆಯಾಗಿ ಕೊಡಬಹುದು. ಕುವಳಯಬಾಂಧವನೆಸೆವನೆ । ಕುವಳಯಮಂ ಬೆಳಗಿ ಕುವಳಯಂ ಪೊಜಗೆನೆ ಪಾಂ ॥ ಡವರೆ ಪೊಜಗಾಗೆನಿನಗೀ । ಕುವಳಯಪತಿಯೆಂಬ ಪೆಂಪೊಡಂಬಡೆ ನೃಪತೀ ॥

ಸಮಾನಾರ್ಥಕ ಆದರೆ ಭಿನ್ನರೂಪದ ಪದಗಳಿಗೂ (ಸಿನೊನಿಮ್ಸ್) ಸಮಾನ ರೂಪದ ಆದರೆ ಭಿನ್ನಾರ್ಥಕ ಪದಗಳಿಗೂ ವ್ಯತ್ಯಾಸವಿರುವುದನ್ನಿಲ್ಲಿ ಗಮನಕ್ಕೆ ತಂದುಕೊಳ್ಳಬಹುದು. ಮನುಷ್ಯ, ಮನುಜ, ನರ ಹಾಗೂ ಸ್ತ್ರೀ, ಅಬಲೆ, ನಾರೀ– ಇವು ಭಿನ್ನರೂಪದ, ಸಮಾನಾರ್ಥಕ ಪದಗಳು. ಅಂದರೆ, ಕೆಲವಾರು ಪರಿಸರಣಗಳಲ್ಲಿ ಈ ಗುಂಪಿನ ಪದಗಳಲ್ಲಿ ಯಾವುದೇ ಒಂದನ್ನು ಉಪಯೋಗಿಸಬಹುದು. ನಿಜಕ್ಕೂ, ಈ ಪದಗಳಲ್ಲಿ ಯಾವುದೇ ಎರಡರ ಪ್ರಸಾರ ಒಂದೇ ಆಗಿರುವುದಿಲ್ಲ. ಈ ಪದಗಳ ಅರ್ಥವ್ಯಾಪ್ತಿಯಲ್ಲಿ ಅಂತರವಿದೆ.

ಕೆಲವೊಮ್ಮೆ ಒಂದೇ ಪದವನ್ನು, ಆ ಪದ ಸೂಚಿಸುವ ವಸ್ತುವಿನ ಸದೃಶವಿರುವೆಡೆಗಳಲ್ಲಿ ಕೂಡ ಬಳಸಿರುವುದು ಕಂಡುಬರುತ್ತದೆ. ಕುರ್ಚಿಯ ಕಾಲುಗಳು, ಸೂಜಿಯ ಕಣ್ಣು, ಬಾಚಣಿಗೆಯ ಹಲ್ಲುಗಳು, ಗಡಿಯಾರದ ಕೈಗಳು, ಗಂಟೆಯ ನಾಲಗೆ ಇತ್ಯಾದಿ ಶಬ್ದಗಳಲ್ಲಿ ಕಾಲು, ಕಣ್ಣು, ಹಲ್ಲು, ಕೈ ಮತ್ತು ನಾಲಗೆ ಈ ಬಗೆಯ ಪ್ರಯೋಗಕ್ಕೆ ಸೇರಿವೆ. ಮನುಷ್ಯನ ಕಾಲುಗಳು ಮತ್ತು ಕುರ್ಚಿಯ ಕಾಲುಗಳು ಎಂಬಲ್ಲಿನ ಕಾಲು ಸಮಾನರೂಪದ ಭಿನ್ನಾರ್ಥಕ ಜೋಡಿಪದವಲ್ಲ. ಸಮಾನರೂಪವಿರುವುದೇನೋ ನಿಜ. ಆದರೆ ಇದು ಒಂದೇ ಪದವಾಗಿದ್ದು ಅರ್ಥದಲ್ಲಿ ಸ್ವಲ್ಪ ವಿಸ್ತಾರ ಉಂಟಾಗಿದೆ ಎನ್ನಬಹುದು. ಇಂಥ ಪ್ರಯೋಗಗಳನ್ನು ಅಲಂಕಾರಿಕ ಪ್ರಯೋಗಗಳು (ಮೆಟಫಾರಿಕಲ್ ಯೂಸೇಜ್) ಎನ್ನುತ್ತಾರೆ. (ಎಚ್.ಎಸ್.ಎ.)

**ಏಕಲವ್ಯ:** ದ್ರೋಣಾಚಾರ್ಯರ ಶಿಷ್ಯರಲ್ಲೊಬ್ಬ. ಧನುರ್ವಿದ್ಯೆಯಲ್ಲಿ ನಿಷ್ಣಾತನಾದವ. ಹಿರಣ್ಯಧನುವೆಂಬ ಬೇಡನ ಸಾಕುಮಗ. ದ್ರೋಣಾಚಾರ್ಯರಲ್ಲಿ ಧನುರ್ವಿದ್ಯೆಯನ್ನು ಕಲಿಯಬೇಕೆಂಬ ಅಭಿಲಾಷೆಯಿಂದ ಬಂದು ಬೇಡಿ, ತಿರಸ್ಕೃತನಾದರೂ ಹತಾಶನಾಗದೆ ಮಣ್ಣಿನಿಂದ ದ್ರೋಣಾಚಾರ್ಯರ ಪ್ರತಿಮೆಯನ್ನು ಮಾಡಿ ಅತ್ಯಂತ ಭಕ್ತಿಯಿಂದ ಅದಕ್ಕೆ ಗುರುಸೇವೆಯನ್ನು ಸಲ್ಲಿಸಿ ಬಿಲ್ಲುಗಾರಿಕೆಯನ್ನು ಕಲಿಯುತ್ತ ಅದರಲ್ಲಿ ಅನ್ಯಾದೃಶವಾದ ನೈಪುಣ್ಯವನ್ನು ಸಂಪಾದಿಸಿದ. ಆತನಿಗೆ ಶಬ್ದವೇದಿತ್ವವೂ ಸಾಧಿಸಿತು.

ಒಂದು ದಿನ ಬೇಟೆಯಾಡಲು ಬಂದ ಕುರುಪಾಂಡವರ ನಾಯಿ ಏಕಲವ್ಯನನ್ನು ಅಟ್ಟಿಸಿಕೊಂಡು ಹೋಗಲಾಗಿ ತನ್ನ ಕೈಚಳಕದಿಂದ ಏಕಲವ್ಯ ಬೊಗಳುತ್ತಿದ್ದ ನಾಯ ಬಾಯಲ್ಲಿ ಏಳು ಬಾಣಗಳನ್ನು ನಾಟಿಸಿದ. ಇಂಥ ಚಮತ್ಕಾರವನ್ನೆಸಗಿದ ಬಿಲ್ಲುಗಾರನ ಹಸ್ತಲಾಘವಕ್ಕೆ ಎಲ್ಲರೂ ಬೆರಗಾದರು. ಅರ್ಜುನನಿಗಂತೂ ತನ್ನನ್ನು ಮೀರಿಸುವ ಬಿಲ್ಲುಗಾರನಿದ್ದಾನಲ್ಲ ಎಂಬ ಬೇಗುದಿಯುಂಟಾಯಿತು. ಅರ್ಜುನನಿಗೆ ಮಾತುಕೊಟ್ಟ ದ್ರೋಣಾಚಾರ್ಯರು ಏಕಲವ್ಯನಿದ್ದೆಡೆಗೆ ಬಂದು ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯನ್ನಾಗಿ ಬೇಡಲು, ಸ್ವಲ್ಪವೂ ಹಿಂದೆಮುಂದೆ ನೋಡದೆ ಪರಿಶುದ್ಧ ಭಕ್ತಿಭಾವದಿಂದ ಏಕಲವ್ಯ ತನ್ನ ಹೆಬ್ಬೆರಳನ್ನು ಕತ್ತರಿಸಿಕೊಟ್ಟ. ಹೆಬ್ಬೆರಳು ಹೋದರೂ ಬಿಲ್ಲುಗಾರಿಕೆಯ ಅಭ್ಯಾಸವನ್ನು ಮಾತ್ರ ಆತ ಬಿಡಲಿಲ್ಲ. ಇವನ ಮಗ ಕೇತುಮಂತನನ್ನು ಭಾರತಯುದ್ಧದಲ್ಲಿ ಭೀಮಸೇನ ಕೊಂದ. ಇವನಾದರೋ ದುರ್ಯೋಧನನ ಪರವಾಗಿ ಭಾರತಯುದ್ಧದಲ್ಲಿ ಹೋರಾಡಿ ಶ್ರೀ ಕೃಷ್ಣನಿಂದ ಹತನಾದ. ಏಕಲವ್ಯನ ಹೆಸರು ಗುರುಭಕ್ತಿಗೂ ಧನುರ್ವಿದ್ಯೆಗೂ ಪ್ರಖ್ಯಾತವಾಗಿದೆ.

ಏಕಲವ್ಯನ ಈ ಕಥೆ ಕನ್ನಡದ ಮೂವರು ಪ್ರಸಿದ್ಧ ಲೇಖಕರಿಗೆ ರೂಪಕಸಾಮಗ್ರಿಯನ್ನೊದಗಿಸಿದೆ. ಕೈಲಾಸಂ ಅವರು ಪರ್ಪಸ್ ಮತ್ತು ಫುಲ್‌ಫಿಲ್‌ಮೆಂಟ್ ಎಂಬ ಎರಡು ನಾಟಕಗಳನ್ನು ರಚಿಸಿದ್ದಾರೆ. ಕುವೆಂಪು ಅವರು ತಮ್ಮ ಬೆರಳ್‌ಗೆ ಕೊರಳ್ ಎಂಬ ನಾಟಕದಲ್ಲಿ ಬೆರಳನ್ನು ಬೇಡಿದ ದ್ರೋಣರು ಹೇಗೆ ಕರ್ಮಫಲವಾಗಿ ತಮ್ಮ ಕೊರಳನ್ನು ಅರ್ಪಿಸಿದರು ಎಂಬ ವಸ್ತುವನ್ನು ಬಹುಗಂಭೀರವಾಗಿ ಚಿತ್ರಿಸಿದ್ದಾರೆ. ಹಾಗೆಯೇ ಗೋವಿಂದಪೈಗಳು ಇದೇ ವಸ್ತುವನ್ನಾಧಾರವಾಗುಳ್ಳ ಹೆಬ್ಬೆರಳು ಎಂಬ ನಾಟಕವನ್ನು ರಚಿಸಿದ್ದಾರೆ. ದಿವಂಗತ ಕಾಶಿವಿಶ್ವನಾಥಶೆಟ್ಟಿ ಅವರೂ ಏಕಲವ್ಯ ಎಂಬ ನಾಟಕವನ್ನು ರಚಿಸಿದ್ದಾರೆ. (ಎಸ್.ಎಸ್.ಬಿ.)

**ಏಕವೇಗದ ಮೋಟಾರ್:** ಪೂರೈಕೆ ಮಾಡಿದ ಪ್ರತ್ಯಾವರ್ತೀ ವಿದ್ಯುತ್ಪ್ರವಾಹದ (ಆಲ್ಟರ್ನೇಟಿಂಗ್ ಕರೆಂಟ್, ಎಸಿ) ಆವರ್ತಸಂಖ್ಯೆಗೆ (ಫ್ರೀಕ್ವೆನ್ಸಿ) ಅನುಗುಣವಾದ ಸ್ಥಿರ ಏಕವೇಗದಿಂದ ಕ್ರಿಯೆ ಎಸಗುವ ಒಂದು ಎಸಿ ಮೋಟಾರ್ (ಸಿಂಕ್ರನಸ್ ಮೋಟಾರ್). ವಿದ್ಯುಚ್ಛಕ್ತಿಯನ್ನು ಯಾಂತ್ರಿಕಶಕ್ತಿಯನ್ನಾಗಿ ಪರಿವರ್ತನೆ ಮಾಡಲು ಉಪಯೋಗಿಸುವ ಮೋಟಾರುಗಳಲ್ಲಿ ಏಕವೇಗದ ಮೋಟಾರ್ ಬಲು ಮುಖ್ಯ. ಎಸಿ ಪ್ರವಾಹವನ್ನು ವೈಂಡಿಂಗುಗಳ ಮೂಲಕ ಕಬ್ಬಿಣದ ಅಂತರಕದ (ಕೋರ್) ಸುತ್ತಲೂ ಹರಿಯುವಂತೆ ಮಾಡಿದರೆ ಪ್ರತ್ಯಾವರ್ತಿಸುವ ಕಾಂತ ಅಭಿವಾಹ (ಮ್ಯಾಗ್ನೆಟಿಕ್ ಫ್ಲಕ್ಸ್) ಉಂಟಾಗುವುದು. ಏಕಾವಸ್ಥೆಯ (ಸಿಂಗಲ್ ಫೇಸ್) ಪ್ರವಾಹವನ್ನು ಉಪಯೋಗಿಸಿದಾಗ ಏಕಾವಸ್ಥೆಯ ಅಭಿವಾಹವಾಗುತ್ತದೆ. $90^0$ ಅಂತರದ ಎರಡು ಅವಸ್ಥೆಯ ಪ್ರವಾಹಗಳ ಅಥವಾ $120^0$ ಅಂತರದ ಮೂರು ಅವಸ್ಥೆಯ ಪ್ರವಾಹಗಳ ಉಪಯೋಗದಿಂದ ಆವರ್ತಕಾಂತಕ್ಷೇತ್ರ (ರೊಟೇಟಿಂಗ್ ಮ್ಯಾಗ್ನೆಟಿಕ್ ಫೀಲ್ಡ್) ಉದ್ಭವಿಸುವುದು. ಒಂದು ದೃಷ್ಟಿಯಿಂದ ನೋಡಿದರೆ ಒಂದೇ ಅವಸ್ಥೆಯ ಕಾಂತಕ್ಷೇತ್ರವನ್ನು ಸಹ ಪರಸ್ಪರ ವ್ಯತಿರಿಕ್ತ ದಿಕ್ಕುಗಳಲ್ಲಿ ತಿರುಗುವ ಎರಡು ಆವರ್ತ ಸದಿಶಗಳ (ರೊಟೇಟಿಂಗ್ ವೆಕ್ಟರ್ಸ್) ಪರಿಣಾಮವೆಂದು ಹೇಳಬಹುದು. ಹೇಗೆಂದರೆ ಏಕಾವಸ್ಥೆಯ ಮೋಟಾರುಗಳನ್ನು ಈ ಎರಡು ದಿಕ್ಕುಗಳ ಪೈಕಿ ಯಾವ ದಿಕ್ಕಿನಲ್ಲಿ ಬೇಕಾದರೂ ತಿರುಗುವಂತೆ ಮಾಡಬಹುದು. ಇದು ಚಿತ್ರದಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಏಕವೇಗದ ಮೋಟಾರುಗಳನ್ನು ಒಂದು, ಎರಡು ಅಥವಾ ಮೂರು ಅವಸ್ಥೆಗಳಿಗೆ ಅನುಗುಣವಾಗಿ ತಯಾರಿಸುವರು.



ಚಿತ್ರ 1

ಏಕವೇಗದ ಯಂತ್ರಗಳು ಮೂರು ಅಂಗಗಳನ್ನು ಒಳಗೊಂಡಿವೆ : ಕಾಂತಮಂಡಲ (ಮ್ಯಾಗ್ನೆಟಿಕ್ ಸರ್ಕ್ಯೂಟ್), ವಿದ್ಯುನ್ಮಂಡಲ ಮತ್ತು ಯಾಂತ್ರಿಕ ಅಂಗಗಳು. ಕಾಂತಮಂಡಲ ಉತ್ತರ–ದಕ್ಷಿಣ ಧ್ರುವಗಳ ಜೊತೆಗಳನ್ನೊಳಗೊಂಡಿವೆ. ಅಲ್ಲದೆ ಇವುಗಳ ಅಭಿವಾಹಗಳು ಒಂದೆಡೆಯಿಂದ ಇನ್ನೊಂದೆಡೆಗೆ ನಿರ್ದಿಷ್ಟವಾದ ರೀತಿಯಲ್ಲಿಯೂ ಸುಲಭವಾಗಿಯೂ ಹಾಯ್ದು ಹೋಗುವುದಕ್ಕೋಸ್ಕರ ನಿಮ್ನ ಕಾಂತ ನಿರೋಧಕದ (ಲೋ ರೆಲಕ್ಟೆನ್ಸ್) ಪಥವನ್ನು ನಿರ್ಮಿಸಿರುತ್ತಾರೆ. ಈ ಧ್ರುವಗಳು ಸಾಮಾನ್ಯವಾಗಿ ಭ್ರಾಮಕದ (ರೋಟರ್) ಮೇಲಿವೆ. ಧ್ರುವಗಳನ್ನು ಬಹಿರ್ಗತ (ಸೇಲಿಯಂಟ್) ಮತ್ತು ಅಂತರ್ಗತ (ನಾನ್ ಸೇಲಿಯಂಟ್) ಎಂಬ ಎರಡು ವಿಧಗಳಲ್ಲಿ ನಿರ್ಮಿಸಬಹುದು. ಕಡಿಮೆ ವೇಗದ ಮೋಟಾರುಗಳಲ್ಲಿ ಬಹಿರ್ಗತವಾಗಿಯೂ ಇರುತ್ತವೆ. ಪ್ರತಿಯೊಂದು ಉತ್ತರಧ್ರುವದಿಂದ ಹೊರಬಿದ್ದ ಅಭಿವಾಹವೂ ಸ್ಟೇಟರಿನ ಮೂಲಕವಾಗಿ ಹೋಗಿ ದಕ್ಷಿಣ ಧ್ರುವವನ್ನು ಸೇರುತ್ತದೆ.

ವಿದ್ಯುನ್ಮಂಡಲದಲ್ಲಿ ಎರಡು ಶಾಖೆಗಳಿವೆ : ಸ್ಟೇಟರಿನಲ್ಲಿ ಅಡಗಿದ ವೈಂಡಿಂಗುಗಳನ್ನು ಒಳಗೊಂಡ ಎಸಿ ಶಾಖೆ ಮತ್ತು ರೋಟರಿನ ಧ್ರುವಗಳ ಮೇಲೆ ಸುತ್ತಿರುವ ಡಿಸಿ ಪ್ರವಾಹದ ಶಾಖೆ.

ಕೊನೆಯದಾಗಿ ಯಾಂತ್ರಿಕ ಅಂಗಗಳೆಂದರೆ ಮೋಟಾರಿನ ಲೋಹಮಯ ಹೊದಿಕೆ, ಭ್ರಾಮಕದ ಧಾರಕಗಳು (ಬೇರಿಂಗ್ಸ್) ಪೀಠಗಳು, ಭೂಫಲಕ (ಬೆಡ್ ಪ್ಲೇಟ್)–ಇವೇ ಮುಖ್ಯವಾದುವು.

**ಸಮಾನವೇಗ:** ಏಕವೇಗದ ಮೋಟಾರುಗಳ ವೇಗ ವಿದ್ಯುಚ್ಛಕ್ತಿಯ ಆವರ್ತಸಂಖ್ಯೆ ಮತ್ತು ಧ್ರುವಗಳ ಜೊತೆಗಳ ಸಂಖ್ಯೆ ಇವುಗಳಿಂದ ನಿಗದಿ ಮಾಡಲ್ಪಡುತ್ತದೆ. ಈ ವೇಗಕ್ಕೆ ಏಕವೇಗ (ಸಿಂಕ್ರನಸ್ ಸ್ಪೀಡ್) ಎಂದು ಹೆಸರು. ಇದರ ದರವನ್ನು ಎಂದರೆ ಮಿನಿಟಿಗೆ ಪೂರ್ಣ ಪರಿಭ್ರಮಣೆಗಳು (rpm–ರಿವೊಲ್ಯೂಷನ್ಸ್ ಪರ್ ಮಿನಿಟ್)–ಈ ರೀತಿಯಾಗಿ ನಿಷ್ಕರ್ಷೆ ಮಾಡಬಹುದು.

$$\text{ಏಕವೇಗದ rpm} = \frac{60\text{X ಆವರ್ತಸಂಖ್ಯೆ}}{\text{ಧ್ರುವಗಳ ಜೊತೆಗಳ ಸಂಖ್ಯೆ}}$$

**ಭ್ರಾಮಕ ಮತ್ತು ಸ್ಟೇಟರ್:** ಈ ಭಾಗಗಳ ರಚನೆಯಲ್ಲಿ ಏಕವೇಗ ಮೋಟಾರುಗಳು ಎಸಿ ಆಲ್ಟರ್ನೇಟರುಗಳನ್ನು ಹೋಲುತ್ತವೆ. ಆದರೆ ಈ ಮೋಟಾರುಗಳ ಧ್ರುವಗಳ ಮುಖಗಳಲ್ಲಿ ತಾಮ್ರದ ಸಲಾಕಿಗಳಿಂದ ತಯಾರಿಸಿದ ಧ್ರುವಮುಖ (ಪೋಲ್ ಫೇಸ್) ವೈಂಡಿಂಗುಗಳನ್ನು ಹುದುಗಿಸಲಾಗಿದೆ.

ಭ್ರಾಮಕದ ಮುಖ್ಯ ವಿಭಾಗಗಳು : ದಂಡ (ಶಾಫ್ಟ್), ಸ್ಪೈಡರ್ ಮತ್ತು ಧ್ರುವಗಳು. ದಂಡ ಸಶಕ್ತ ಉಕ್ಕಿನಿಂದ ತಯಾರಾದದ್ದು. ಸ್ಪೈಡರಿನ ರಚನೆ ಸಾಮಾನ್ಯವಾಗಿ ಉಕ್ಕಿನ ಎರಕದಿಂದ. ಇದನ್ನು ದಂಡದ ಮೇಲೆ ಕೀಲಿಗಳಿಂದಲೂ (ಕೀ) ಮತ್ತು ಸಂಕುಚನೆಯ (ಶ್ರಿಂಕಿಂಗ್) ಅಥವಾ ಬೋಲ್ಟುಗಳ ಮೂಲಕವಾಗಿಯೂ ಭದ್ರಪಡಿಸಿರುತ್ತಾರೆ. ಧ್ರುವಗಳನ್ನು ಉತ್ತಮ ಕಾಂತ ಗುಣಗಳ ವಿಶೇಷ ಉಕ್ಕಿನ ತಗಡುಗಳಿಂದ ನಿರ್ಮಿಸಿ ಒಟ್ಟುಗೂಡಿಸಿ ಸ್ಪೈಡರಿನಲ್ಲಿ ಕೆತ್ತಲ್ಪಟ್ಟಿರುವ ಸಂಧಿಗಳ ಮೇಲೆ ಕೀಲಿಗಳ ಸಹಾಯದಿಂದ ಭದ್ರವಾಗಿ ಕೂಡಿಸಿರುತ್ತಾರೆ. ಅತಿ ಚಿಕ್ಕ ಮೋಟಾರುಗಳಲ್ಲಿ ಧ್ರುವಗಳು ಮತ್ತು ಸ್ಪೈಡರುಗಳನ್ನು ಏಕಭಾಗವಾಗಿ ಎರಕ ಹೊಯ್ದಿರುತ್ತಾರೆ. ಅಥವಾ ಧ್ರುವಗಳನ್ನು ಸ್ಪೈಡರಿನ ಮೇಲೆ ಸಣ್ಣ ಸಣ್ಣ ದಿಣ್ಣೆಗಳಂತೆ ಕೆತ್ತಿರುತ್ತಾರೆ. ಇದರ ವೈಶಿಷ್ಟ್ಯವೇನೆಂದರೆ ಸ್ಟೇಟರಿನ ಪ್ರವಾಹದ ಪ್ರತಿಕ್ರಿಯಾ ಘಟಕದ (ರೀಆಕ್ಟಿವ್ ಕಾಂಪೊನೆಂಟ್) ದೆಸೆಯಿಂದ ಈ ದಿಣ್ಣೆಗಳಿಗೆ ಕಾಂತತೆ ಉಂಟಾಗಿ ಧ್ರುವಗಳಾಗುವುವು. ಇವಕ್ಕೆ ಡಿಸಿ ಪ್ರವಾಹದ ವೈಂಡಿಂಗುಗಳು ಬೇಕಾಗುವುದಿಲ್ಲ. ಆದರೆ ದೊಡ್ಡ ಮೋಟಾರುಗಳ ಧ್ರುವಗಳು ಪ್ರತ್ಯೇಕವಾದ ಡಿಸಿ ಪ್ರವಾಹದ ಸಹಾಯದಿಂದ ಮಾತ್ರ ಸಮರ್ಪಕವಾಗಿ ಕೆಲಸ ಮಾಡಲು ಸಾಧ್ಯ.

ಸ್ಟೇಟರಿನ ಆಂತರಕವನ್ನು ಸಿಲಿಕನ್ ಮಿಶ್ರಿತವಾದ ವಿಶೇಷ ತರಗತಿಯ ಉಕ್ಕಿನ ಪಟ್ಟಿಕೆಗಳಿಂದ (ಲ್ಯಾಮಿನೇಶನ್ಸ್) ಮಾಡಿರುತ್ತಾರೆ. ಈ ಪಟ್ಟಿಕೆಗಳನ್ನು ರೋಧನ (ಇನ್ಸುಲೇಷನ್) ವಸ್ತುವಾದ ಫ್ಲಾಷ್ ಎನಾಮಲಿನಿಂದ ಸವರಿರುತ್ತಾರೆ. ಈ ರೀತಿಯಲ್ಲಿ ತಯಾರಿಸಿದ ಪಟ್ಟಿಕೆಗಳನ್ನು ಉಪಯೋಗಿಸುವುದರಿಂದ ಸ್ಟೇಟರಿನಲ್ಲಿ ಐರನ್ ನಷ್ಟಗಳು ಬಹಳ ಕಡಿಮೆಯಾಗುತ್ತವೆ. ಮತ್ತು ಮೋಟಾರಿನ ದಕ್ಷತೆ ಹೆಚ್ಚಾಗಲು ಸಾಧ್ಯವಾಗುತ್ತದೆ. ಈ ಪಟ್ಟಿಕೆಗಳನ್ನು ಗಟ್ಟಿ ಮುಟ್ಟಾದ ಉಕ್ಕಿನ ಹೊರಚೌಕಟ್ಟಿನಲ್ಲಿ ಬಿಗಿಯಾಗಿ ಸ್ಥಾಪಿಸಿರುತ್ತಾರೆ. ಮಟ್ಟವಾಗಿ ಯಂತ್ರದಿಂದ ಹತ್ತರಿ ಹಿಡಿದ ಲೋಹದ ಭೂಫಲಕದ ಮೇಲೆ ಈ ಚೌಕಟ್ಟನ್ನು ಮತ್ತು ಭಾರವಾಹಕಗಳ ಪೀಠಗಳನ್ನು ಆಯಾ ಸ್ಥಳಗಳಲ್ಲಿ ಭದ್ರವಾಗಿ ಕೂಡಿಸಿರುತ್ತಾರೆ.

**ಟಾರ್ಕಿನ ಉತ್ಪತ್ತಿ:** ಸ್ಟೇಟರಿನಿಂದ ಉಂಟಾದ ಆವರ್ತ ಕ್ಷೇತ್ರದ ಉತ್ತರ–ದಕ್ಷಿಣ ಧ್ರುವಗಳನ್ನು ಭ್ರಾಮಕದ ದಕ್ಷಿಣ–ಉತ್ತರ ಧ್ರುವಗಳು ಅನುಕ್ರಮವಾಗಿ ಹಿಂಬಾಲಿಸಿ ತಿರುಗುತ್ತವೆ. ಆದರೆ ತಟಸ್ಥವಾಗಿದ್ದಾಗ ಮೊಟ್ಟಮೊದಲು ತಿರುಗಿಸುವುದಕ್ಕೆ ಒಂದು ಪ್ರಾರಂಭಿಕ ಟಾರ್ಕ್ ಬೇಕು. ಇದನ್ನು ಮೇಲೆ ಹೇಳಿದ ಧ್ರುವ ಮುಖ ವೈಂಡಿಂಗುಗಳು ಒದಗಿಸುತ್ತವೆ. ಈ ವೈಂಡಿಂಗುಗಳ ತಾಮ್ರದ ಸಲಾಕಿಗಳಲ್ಲಿ ಪ್ರಯುಕ್ತವಾದ (ಇನ್‌ಡ್ಯೂಸ್ಡ್) ವಿದ್ಯುತ್ಪ್ರವಾಹಗಳ ಮಂಡಲಗಳು ಆವರ್ತ ಕ್ಷೇತ್ರವನ್ನು ಹಿಂಬಾಲಿಸಲು ಯತ್ನಿಸುವುದರಿಂದ ಮೋಟಾರನ್ನು ತಿರುಗಿಸುವುದಕ್ಕೆ ಸಾಕಾದಷ್ಟು ಟಾರ್ಕ್ ಉತ್ಪತ್ತಿಯಾಗುತ್ತದೆ. ಒಂದು ಸಾರಿ ಭ್ರಾಮಕ ಸಮ ವೇಗವನ್ನು ಪಡೆದ ಕೂಡಲೆ ಧ್ರುವಮುಖಗಳಲ್ಲಿನ ಪ್ರವಾಹ ನಿಂತುಹೋಗುತ್ತದೆ. ಆದರೆ ಇದಕ್ಕೆ ಸ್ವಲ್ಪ ಮುಂಚಿತವಾಗಿಯೇ ಧ್ರುವಗಳಿಗೆ ಪ್ರದೀಪನವನ್ನು ಒದಗಿಸುವುದರಿಂದ ಧ್ರುವಗಳಿಗೆ ಹೆಚ್ಚು ಕಾಂತಬಲ ಉಂಟಾಗಿ ಅವು ಮೋಟಾರ್ ನಿಂತುಬಿಡದಂತೆ ಸುತ್ತಲಾರಂಭಿಸುತ್ತವೆ.

ಹೀಗೆ ತಿರುಗುತ್ತಿರುವ ಮೋಟಾರ್ ಹೊರಗಿನ ಹೊರೆಗಳನ್ನು (ಮೆಕ್ಯಾನಿಕಲ್ ಲೋಡ್ಸ್) ತಿರುಗಿಸುವುದಕ್ಕೆ ಮೊದಲು ಮಾಡಿದಾಗ ಮೋಟಾರಿನಲ್ಲಿನ ಟಾರ್ಕ್ ತಾನಾಗಿಯೇ ಹೆಚ್ಚಾಗುತ್ತದೆ. ಆದರೆ ಹೀಗಾಗುವಾಗ ಇಂಡಕ್ಷನ್ ಮೋಟಾರುಗಳಂತೆ ಅಲ್ಲದೇ ಇದರ ವೇಗವೇನೂ ಕಡಿಮೆಯಾಗುವುದಿಲ್ಲ. ಮೋಟಾರು ಸಮವೇಗದಲ್ಲಿಯೇ ಓಡುತ್ತಿರುತ್ತದೆ. ಆದರೆ ಅದರ ಧ್ರುವಗಳು ಮಾತ್ರ ಕ್ಷೇತ್ರಕ್ಕೆ ಸ್ವಲ್ಪ ಹಿಂಜರಿದು ತಿರುಗುತ್ತಿರುತ್ತವೆ.




**ಚಿತ್ರ 2 A ಸರಬರಾಜು ವೋಲ್ಟೇಜ್, B ಚಾಲಕದ ಬಾಹ್ಯ ವೋಲ್ಟೇಜ್, C ಪರಿಣಾಮೀ ವೋಲ್ಟೇಜ್, D ಚಾಲಕದ ಧಾರೆ**

ಆದರೆ ಮೋಟಾರಿನ ಟಾರ್ಕ್ ಹೀಗೆ ಹೆಚ್ಚುವುದಕ್ಕೆ ಒಂದು ಮಿತಿಯಿದೆ. ಹೊರಗಿನ ಹೊರೆ ಹೆಚ್ಚಿದಂತೆ ಇದು ಮೊದ ಮೊದಲು ಹೆಚ್ಚುತ್ತ ಹೋಗುತ್ತದೆ. ಆದರ ಅತಿ ಹೆಚ್ಚಿನ ಹೊರೆ ಬಂದಾಗ ಕಡಿಮೆಯಾಗತೊಡಗುವುದು. ಹೀಗಾಗಿ ಸಮವೇಗತ್ವ ಕೆಡುವುದರಿಂದ ಮೋಟಾರ್ ನಿಂತುಬಿಡುವುದು. ಈ ರೀತಿಯಲ್ಲಿ ಮೋಟಾರ್ ತಿರುಗುವಿಕೆಯಿಂದ ಹೊರಬೀಳುವುದರಿಂದ ಇದಕ್ಕೆ ನಿಷ್ಪತನ ಟಾರ್ಕ್ (ಪುಲ್ ಔಟ್ ಟಾರ್ಕ್) ಎಂದು ಹೆಸರಾಗಿದೆ.

**ಕ್ರಿಯಾ ವಿಧಾನ:** ಸಾಧಾರಣವಾಗಿ ಏಕವೇಗ ಮೋಟಾರುಗಳ ಕ್ರಿಯಾ ವಿಧಾನವನ್ನು ಇಲ್ಲಿ ತೋರಿಸಿರುವ ಸದಿಶ ಚಿತ್ರದಿಂದ ನಮೂದಿಸುವುದು ವಾಡಿಕೆ. ಆದರೆ ಈ ಚಿತ್ರ ಬಹಿರ್ಗತ ಧ್ರುವಗಳನ್ನು ಹೊಂದಿರುವ ಏಕವೇಗ ಮೋಟಾರುಗಳಿಗೆ ಸರಿಯಾಗಿ ಅನ್ವಯಿಸುವುದಿಲ್ಲ. ಇಂಥ ಮೋಟಾರುಗಳ ಸದಿಶ ಚಿತ್ರವನ್ನು ಬರೆಯುವಾಗ ಬ್ಲಾಂಡೆಲ್ ದ್ವಿಪ್ರತಿಕ್ರಿಯಾ ವಿಧಾನವನ್ನು (ಟೂ ರೀಆಕ್ಷನ್ ಥಿಯೊರಿ) ಅನುಸರಿಸಬೇಕಾಗುತ್ತದೆ. ಇದರ ಪ್ರಕಾರ ಮೋಟಾರಿನ ಪ್ರವಾಹ ಎರಡು ಭಾಗಗಳಾಗಿ ವಿಂಗಡಿಸಲ್ಪಡುತ್ತದೆ; ಸರಳಾಕ್ಷ ಮತ್ತು ಚತುಷ್ಕಾಕ್ಷ ವಿಭಾಗಗಳೆಂದು (ಡೈರೆಕ್ಟ್ ಆಕ್ಸಿಸ್ ಅಂಡ್ ಕ್ವಾಡ್ರೇಚರ್ ಆಕ್ಸಿಸ್) ಇವುಗಳ ಹೆಸರು.

ಸರಳಾಕ್ಷ ವಿಭಾಗದ ಅಕ್ಷ ಧ್ರುವದ ಮಧ್ಯ ರೇಖೆಯನ್ನು ಹೊಂದಿಕೊಳ್ಳುತ್ತದೆ. ಚತುಷ್ಕಾಕ್ಷ ವಿಭಾಗದ ಅಕ್ಷ ಉತ್ತರ–ದಕ್ಷಿಣ ಧ್ರುವಗಳ ಮಧ್ಯದಲ್ಲಿರುವ ಸಮಭಾಜಕ ರೇಖೆಯಾಗಿರುತ್ತದೆ. ಮೊದಲಿನ ವಿಭಾಗ ಧ್ರುವಗಳ ಕಾಂತ ಬಲವನ್ನು ನೇರವಾಗಿ ಹೆಚ್ಚು ಅಥವಾ ಕಡಿಮೆ ಮಾಡುತ್ತದೆ. ಎರಡನೆಯ ಭಾಗ ಈ ಬಲವನ್ನು ಅಡ್ಡಮಾರ್ಗವಾಗಿ ಸೆಳೆಯುತ್ತದೆ.

ಸಮವೇಗೀಕರಣ ಸಾಮರ್ಥ್ಯ (ಸಿಂಕ್ರನೈಸಿಂಗ್ ಪವರ್) : ಮೇಲೆ ವಿವರಿಸಿದಂತೆ ಮೋಟಾರಿನ ಧ್ರುವಗಳು ಸ್ವಲ್ಪ ಹಿಂಜರಿಯುವುದರಿಂದ ಟಾರ್ಕ್ ಬೆಳೆದು ಅವನ್ನು ಮುಂದೆ ಸೆಳೆಯುತ್ತದೆ. ಇದೇ ರೀತಿ ಯಂತ್ರಹೊರೆ ಸ್ವಲ್ಪ ಕಡಿಮೆಯಾದಾಗ ಧ್ರುವಗಳು ಮುಂದೋಡಲು ಪ್ರಯತ್ನಿಸಿ ಮತ್ತೆ ಇದೇ ಕಾರಣದಿಂದ ಹಿಂದಕ್ಕೆ ಸೆಳೆಯಲ್ಪಡುತ್ತವೆ. ಹೀಗೆ ಮೋಟಾರನ್ನು ಒಂದೇ ಸಮನಾದ ವೇಗದಲ್ಲಿರುವಂತೆ ಮಾಡುವುದಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿ ಸರಬರಾಜಿನ ತಂತಿಗಳಿಂದ (ಲೈನ್ಸ್) ಒದಗುತ್ತದೆ. ಇದಕ್ಕೆ ಸಮವೇಗೀಕರಣ ಸಾಮರ್ಥ್ಯ ಎನ್ನುತ್ತಾರೆ.

**ಅವಸ್ಥಾಂದೋಲನ (ಫೇಸ್ ಸ್ವಿಂಗಿಂಗ್) ಅಥವಾ ಹಂಟಿಂಗ್:** ಮೋಟಾರ್ ತಿರುಗಿಸುತ್ತಿರುವ ಹೊರೆ ಥಟ್ಟನೆ ಬಿಟ್ಟುಹೋದರೆ ಅಥವಾ ಕಡಿಮೆಯಾದರೆ ಮೋಟಾರಿನೊಳಗಿನ ಸೆಳೆತಕ್ಕೆ ಇದ್ದಕ್ಕಿದ್ದ ಹಾಗೆ ತಡೆ ಕಡಿಮೆಯಾಗುವುದು. ಆಗ ಮೋಟಾರ್ ಸಮವೇಗಕ್ಕಿಂತ ಹೆಚ್ಚು ವೇಗದಲ್ಲಿ ಓಡಲು ಪ್ರಯತ್ನಿಸುವುದು. ಆಗ ಸಮವೇಗೀಕರಣ ಸಾಮರ್ಥ್ಯ ಬೆಳೆದು ಅದನ್ನು ಹಿಂದೆ ಸೆಳೆಯುವುದು. ಹಠಾತ್ತನೆ ಬಂದ ಈ ಹಿಂದೆಳೆತದಿಂದ ಮೋಟಾರಿನ ವೇಗ ಸಮವೇಗಕ್ಕಿಂತ ಕಡಿಮೆಯಾಗತೊಡಗುವುದು. ಆಗ ಮತ್ತೆ ಸಮವೇಗೀಕರಣ ಸಾಮರ್ಥ್ಯ ಉಂಟಾಗಿ ಅದನ್ನು ಮುಂದಕ್ಕೆಳೆಯುವುದು. ಈ ರೀತಿ ಪೈಪೋಟಿಯ ದೆಸೆಯಿಂದ ಮೋಟಾರಿನ ವೇಗದಲ್ಲಿ ಆಂದೋಲನ ಅಥವಾ ಹಂಟಿಂಗ್ (ಷಿಕಾರಿ) ಉಂಟಾಗುತ್ತದೆ. ಈ ವಿಧದ ಆಂದೋಲನವನ್ನು ತಡೆಗಟ್ಟುವುದರಲ್ಲಿ ಧ್ರುವಗಳ ಮುಖ ವೈಂಡಿಂಗುಗಳು ಅತಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಆಂದೋಲನದ ಚಲನಶಕ್ತಿ ಈ ಮುಖ ವೈಂಡಿಂಗುಗಳಲ್ಲಿ ಪ್ರವಾಹದ ರೂಪದಲ್ಲಿ ಹರಿದು ಬೇಗ ಖರ್ಚಾಗಿ ಹೋಗುವುದರಿಂದ ಆಂದೋಲನ ನಿಂತುಹೋಗಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಮುಖ ವೈಂಡಿಂಗುಗಳಿಗೆ ಡ್ಯಾಂಪರ್ ವೈಂಡಿಂಗುಗಳೆಂಬ ಹೆಸರು ಬಂದಿದೆ.

ಸ್ಪಂದಿಸುವ ಹೊರೆಗಳು (ಪಲ್ಸೇಟಿಂಗ್ ಲೋಡ್ಸ್) : ಏಕವೇಗದ ಮೋಟಾರುಗಳ ಹೊರೆಗಳ ಪಂಪುಗಳಾಗಲೀ ಕಂಪ್ರೆಸರ್ ಅಥವಾ ಮತ್ತಿತರ ತರಹದ ಸ್ಪಂದಕ ಗುಣವುಳ್ಳ ಭಾಗಗಳಾಗಲೀ ಆಗಿದ್ದರೆ ಮೇಲೆ ಹೇಳಿದ ಕಾರಣಗಳಿಂದ ಎಡೆಬಿಡದೆ ಆಂದೋಲನಗಳುಂಟಾಗಿ ಅನಾವಶ್ಯಕವಾಗಿ ವಿದ್ಯುಚ್ಛಕ್ತಿಯ ನಷ್ಟವುಂಟಾಗುವುದಲ್ಲದೆ ಡ್ಯಾಂಪರ್ ವೈಂಡಿಂಗುಗಳು ಹೆಚ್ಚು ಬಿಸಿಯಾಗುವುದರಿಂದ ಮೋಟಾರಿಗೆ ಹಾನಿಯುಂಟಾಗಬಹುದು. ಆದ್ದರಿಂದ ಈ ವಿಧದ ಹೊರೆಯನ್ನು ತಿರುಗಿಸುವಾಗ ಹಾಗೆ ತಿರುಗತಕ್ಕ ಭಾಗಗಳ ಜಡತ್ವದ (ಇನರ್ಷಿಯ) ಅಂಕಿಗಳನ್ನು ಲಕ್ಷಿಸಬೇಕು. ಇವು ಸಾಲದಿದ್ದರೆ ಗತಿನಿಯಂತ್ರಕ ಗಾಲಿಯ (ಫ್ಲೈವೀಲ್) ಉಪಯೋಗದ ಮೂಲಕ ಇದನ್ನು ಸಾಕಾಗುವಷ್ಟು ಹೆಚ್ಚಿಸಬೇಕು. ಈ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಬಹು ಮುಖ್ಯ ಅಂಶವಿದೆ. ಅದು ಮೋಟಾರಿನ ಹೊರೆಗಳ ಸ್ಪಂದನದ ಆವರ್ತ ಸಂಖ್ಯೆ ಮೋಟಾರ್ ಮತ್ತು ಅದನ್ನು ನಡೆಸುತ್ತಿರುವ ವಿದ್ಯುತ್ಪಥದ ಸ್ವಾಭಾವಿಕ ಆವರ್ತಸಂಖ್ಯೆಯ (ನ್ಯಾಚುರಲ್ ಫ್ರೀಕ್ವೆನ್ಸಿ) ಸಮೀಪದಲ್ಲಿದ್ದರೆ ಅಂಥ ಸಂದರ್ಭಗಳಲ್ಲಿ ಅಪಾಯಕರವಾದ ಅನುನಾದ (ರೆಸೊನೆನ್ಸ್) ಉಂಟಾಗಬಹುದು. ವಿಶೇಷವಾಗಿ ಇಂಥ ಸನ್ನಿವೇಶಗಳು ಕಂಪ್ರೆಸರುಗಳನ್ನು ಚಲಿಸುತ್ತಿರುವಾಗ ಉದ್ಭವಿಸುವುವು. ಆದ್ದರಿಂದ ಆ ಸಂದರ್ಭಗಳನ್ನು ಜಾಗರೂಕತೆಯಿಂದ ವಿಮರ್ಶೆ ಮಾಡಬೇಕು. ಈ ವಿಷಯದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಎ.ಎಸ್.ಎ ಸಂಸ್ಥೆ ಉಪಯುಕ್ತವಾದ ಕೆಲವು ಸೂತ್ರಗಳನ್ನು ಗೊತ್ತು ಮಾಡಿದೆ. ಅವುಗಳ ಸಹಾಯದಿಂದ ಸ್ವಾಭಾವಿಕ ಆವರ್ತ ಸಂಖ್ಯೆ, ಕಂಪ್ರೆಸರ್ ಫ್ಯಾಕ್ಟರ್ ಮುಂತಾದ ಅಂಕಿಗಳನ್ನು ನಿಷ್ಕರ್ಷಿಸಿ ಗತಿನಿಯಂತ್ರಕ ಗಾಲಿಯ ತೂಕ ಮತ್ತು ವ್ಯಾಸ ಎಷ್ಟಿರಬೇಕೆಂದು ನಿಶ್ಚಯಿಸಲು ಸಾಧ್ಯವಾಗುತ್ತದೆ.

**V ರೇಖೆಗಳು:** ಏಕವೇಗದ ಮೋಟಾರಿನ ಒಂದು ವಿಶೇಷ ಗುಣವೇನೆಂದರೆ ಅದರ ಸಾಮರ್ಥ್ಯ ಗುಣಕವನ್ನು (ಪವರ್ ಫ್ಯಾಕ್ಟರ್) ನೂರಕ್ಕೆ ನೂರರಷ್ಟು ಉತ್ತಮವಾಗಿ ಮಾಡಲು ಸಾಧ್ಯವಿದೆ. ವಸ್ತುತಃ ಅದರ ಸಾಮರ್ಥ್ಯಗುಣಕವನ್ನು ಎಷ್ಟುಬೇಕಾದರಷ್ಟು

ಅಗ್ರಗಾಮಿಯನ್ನಾಗಲಿ ಅನುಗಾಮಿಯನ್ನಾಗಲಿ ಮಾಡಬಹುದು. ಉದಾಹರಣೆಗೆ, 500 ಕಿಲೋವಾಟುಗಳಷ್ಟು ಹೊರೆಯನ್ನು ತಿರುಗಿಸುತ್ತಿರುವ ಒಂದು ಮೋಟಾರಿನ ಪ್ರದೀಪನವನ್ನು ಸ್ವಲ್ಪ ಪ್ರಮಾಣದಲ್ಲಿ ಇಟ್ಟಿದ್ದರೆ ಮೋಟಾರಿನ ಆರ್ಮೇಚರಿನ ಪ್ರವಾಹ ಬಹಳ ಅನುಗಾಮಿಯಾಗಿಯೂ ಹೆಚ್ಚು ಪ್ರಮಾಣದ್ದಾಗಿಯೂ ಇರುತ್ತದೆ. ಆದರೆ ಪ್ರದೀಪವನ್ನು ಕ್ರಮೇಣ ಹೆಚ್ಚಿಸುತ್ತ ಹೋದರೆ ಮೊದಲು ಸಾಮರ್ಥ್ಯಗುಣಕ ಹೆಚ್ಚುತ್ತದೆ ಮತ್ತು ಆರ್ಮೇಚರ್ ಪ್ರವಾಹ ಕಡಿಮೆಯಾಗುತ್ತದೆ. ಆದರೆ ಅದರ ಸಾಮರ್ಥ್ಯಗುಣಕ ನೂರಕ್ಕೆ ನೂರರಷ್ಟು ಉತ್ತಮವಾದಾಗ, ಅಂದರೆ 1.0 ಆದಾಗ, ಪ್ರದೀಪನವನ್ನು ಮತ್ತಷ್ಟು ಹೆಚ್ಚು ಮಾಡಿದರೆ ಆರ್ಮೇಚರ್ ಪ್ರವಾಹ ಅಗ್ರಗಾಮಿಯಾಗತೊಡಗಿ ಹೆಚ್ಚುವುದು ಮತ್ತು ಸಾಮರ್ಥ್ಯ ಗುಣಕ ಅಗ್ರಗಾಮಿತೆಯ ದಿಕ್ಕಿನಲ್ಲಿ 1.0 ಗಿಂತ ಕೆಳಗಿಳಿಯುತ್ತ ಬರುವುದು. ಈ ಪ್ರಯೋಗಗಳ ಫಲಿತಾಂಶಗಳನ್ನು ಗ್ರಾಫಿನ ಮೂಲಕ ನಮೂದಿಸಿದಾಗ V ಅಕ್ಷರದ ಆಕೃತಿಯ ರೇಖೆಗಳು ದೊರೆಯುತ್ತವೆ. ಈ ರೇಖೆಗಳನ್ನು V ರೇಖೆಗಳು




ಚಿತ್ರ 3

ಎಂದು ಕರೆಯುತ್ತಾರೆ.

**ಔದ್ಯಮಿಕ ಉಪಯೋಗಗಳು:** ಕೈಗಾರಿಕೆಯ ಉದ್ಯಮಗಳಲ್ಲಿ ಏಕವೇಗದ ಮೋಟಾರುಗಳು ಅಧಿಕ ವ್ಯಾಪ್ತಿ ಪಡೆದಿವೆ. ಅದರಲ್ಲಿಯೂ ಸಹ ನಿಯಮಿತವಾಗಿ ಒಂದೇ ವೇಗದಲ್ಲಿ ಓಡಬೇಕಾದ ಯಂತ್ರಗಳಿದ್ದೆಡೆಯಲ್ಲಿ ಇವುಗಳಿಗೆ ಮಾನ್ಯತೆ ಹೆಚ್ಚು. ಇದಕ್ಕೆ ಮುಖ್ಯ ಕಾರಣಗಳೆಂದರೆ ಇವು ಸಾಮಾನ್ಯವಾಗಿ ಇಂಡಕ್ಷನ್ ಮೋಟಾರುಗಳಿಗಿಂತ ಬೆಲೆಯಲ್ಲಿ ಕಡಿಮೆ ಮತ್ತು ಸಾಮರ್ಥ್ಯ ಗುಣಕದಲ್ಲಿಯೂ ದಕ್ಷತೆಯಲ್ಲಿಯೂ ಹೆಚ್ಚು. ಇವುಗಳಿಗೆ ಬೇಕಾಗುವ ನೆಲದಳತೆ ಇಂಡಕ್ಷನ್ ಮೋಟಾರುಗಳಿಗಿಂತ ಸಾಧಾರಣವಾಗಿ ಕಡಿಮೆ. ಆದರೆ ಪ್ರದೀಪನಕ್ಕಾಗಿ ಹೊರಗಿನ ಆಲ್ಟರ್ನೇಟರುಗಳು ಬೇಕಾಗುವುದರ ದೆಸೆಯಿಂದ ಈ ಮೋಟಾರುಗಳ ಉದ್ದಳತೆ ಹೆಚ್ಚು.

**ಚಾಲನೆಯ ವಿಧಾನಗಳು (ಸ್ಟಾರ್ಟಿಂಗ್ ಮೆಥಡ್ಸ್):** ಮೇಲೆ ನಮೂದಿಸಿದಂತೆ ಏಕವೇಗದ ಮೋಟಾರುಗಳನ್ನು ತಿರುಗಿಸಲು ಅವುಗಳ ಡ್ಯಾಂಪರ್ ವೈಂಡಿಂಗುಗಳ ಸಹಾಯದಿಂದ ಇಂಡಕ್ಷನ್ ಮೋಟಾರುಗಳಂತೆಯೇ ತಿರುಗಿಸಲು ಉಪಕ್ರಮಿಸಬೇಕು. ಆದರೆ ಹೀಗೆ ಮಾಡುವುದಕ್ಕೆ ಮುಂಚೆ ಧ್ರುವಗಳ ಡಿಸಿ ವೈಂಡಿಂಗುಗಳನ್ನು ನಿರೋಧಕದ (ರೆಸಿಸ್ಟೆನ್ಸ್) ಮೂಲಕ ಲಘುಮಂಡಲಗೊಳಿಸಬೇಕಾಗುತ್ತದೆ (ಷಾರ್ಟ್ ಸರ್ಕ್ಯೂಟ್). ಕಾರಣ, ಮೊದಲನೆಯದಾಗಿ ಡಿಸಿ ವೈಂಡಿಂಗುಗಳಲ್ಲಿ ಉದ್ಭವಿಸಬಹುದಾದ ಹೆಚ್ಚು ಪ್ರಮಾಣದ ಪ್ರಯುಕ್ತ (ಇಂಡ್ಯೂಸ್ಡ್) ಎಸಿ ವೋಲ್ಟೇಜುಗಳನ್ನು ತಡೆದು ಹಿಡಿಯಬೇಕಾದ್ದು ಅತ್ಯಾವಶ್ಯಕ. ಎರಡನೆಯದಾಗಿ, ಡಿಸಿ ವೈಂಡಿಂಗುಗಳಲ್ಲಿಯೂ ಎಸಿ ಪ್ರವಾಹವನ್ನು ಈ ರೀತಿಯಾಗಿ ಹರಿಯುವಂತೆ ಮಾಡಿದರೆ ರೋಟರಿನ ಮೇಲೆ ಉಂಟಾಗುವ ಟಾರ್ಕ್ ಮತ್ತಷ್ಟು ಹೆಚ್ಚುವುದರಿಂದ ಮೋಟಾರನ್ನು ತಿರುಗಿಸುವುದರಲ್ಲಿ ಸಹಾಯವಾಗುವುದು.

ಸಣ್ಣ ಮೋಟಾರುಗಳನ್ನು ತಿರುಗಿಸುವಾಗ ನೇರವಾಗಿ ಎಸಿ ತಂತಿಗಳಿಂದಲೇ (ಮೆಯಿನ್ಸ್) ಚಲನಗೊಳಿಸಬಹುದು. ಆದರೆ ದೊಡ್ಡ ಮೋಟಾರುಗಳನ್ನು ತಿರುಗಿಸುವುದಕ್ಕಾಗಿ ಪ್ರಾರಂಭಕಗಳು (ಸ್ಟಾರ್ಟರುಗಳು) ಬೇಕಾಗುತ್ತವೆ. ಒಂದು ತರಹದ ಪ್ರಾರಂಭದಲ್ಲಿ ಆಟೋಟ್ರಾನ್ಸ್ ಫಾರ್ಮರುಗಳನ್ನು ಉಪಯೋಗಿಸಿ ಮೊದಲಿಗೆ ವೋಲ್ಟೇಜನ್ನು ಕಡಿಮೆಮಾಡಿ ಚಾಲನ ಪ್ರವಾಹ ಬಹಳ ದೊಡ್ಡದಾಗಿ ಬೆಳೆಯದಂತೆ ತಡೆಯಲ್ಪಡುತ್ತದೆ. ಕಾರ್ನ್‌ಡಾರ್ಫರ್ ವಿಧಾನದಲ್ಲಿ ಹೆಜ್ಜೆಗಳುಳ್ಳ (ಟ್ಯಾಪ್ ಚೇಂಜಿಂಗ್) ಆಟೋಟ್ರಾನ್ಸ್‌ಫಾರ್ಮರುಗಳನ್ನು ಉಪಯೋಗಿಸಿ ವೋಲ್ಟೇಜಿನ ಪರಿಪೂರ್ಣಪ್ರಭಾವ ಕ್ರಮೇಣ ಮೋಟಾರಿಗೆ ಒದಗುವಂತೆ ಮಾಡಿರುತ್ತಾರೆ. ದೊಡ್ಡ ಯಂತ್ರಗಳಲ್ಲಿ ಒತ್ತು ಗುಂಡಿಗಳ (ಪುಷ್ ಬಟನ್ಸ್) ಮೂಲಕ ಈ ಎಲ್ಲ ಕೆಲಸಗಳೂ ತಾವಾಗಿಯೇ ನೆರವೇರುವಂತೆ ಮಾಡಿರುತ್ತಾರೆ.

ಇನ್ನೊಂದು ತರಹದ ಯಂತ್ರದಲ್ಲಿ ಪ್ರತಿಕಾರಕ ಕುಂಡಲಗಳ (ರಿಆಕ್ಟೆನ್ಸ್ ಕಾಯಿಲ್ಸ್) ಮೂಲಕ ವೋಲ್ಟೇಜನ್ನು ಕಡಿಮೆಮಾಡಿ ಮೋಟಾರ್ ಸಮಾನವೇಗವನ್ನು ಮುಟ್ಟಿದ ಅನಂತರ ಆ ಕುಂಡಲಗಳನ್ನು ಬೇರ್ಪಡಿಸಲಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ಮೋಟಾರ್ ದೊಡ್ಡದಾಗಿದ್ದರೂ ಅದು ತಿರುಗಿಸುವ ಯಂತ್ರದ ಹೊರೆ ಮೊದಲು ಬಹಳ ಕಡಿಮೆಯಾಗಿದ್ದು ಆಮೇಲೆ ಹೆಚ್ಚುತ್ತದೆ. ಉದಾಹರಣೆಗೆ ಡಿಸಿ ಆಲ್ಟರ್ನೇಟರುಗಳನ್ನು ತಿರುಗಿಸುವ ಎಸಿ ಮೋಟಾರುಗಳು. ಈ ಸಂದರ್ಭಗಳಲ್ಲಿ ಬ್ಯಾಟರಿಯಿಂದ ಓಡುವ ಒಂದು ಸಣ್ಣ ಡಿಸಿ ಮೋಟಾರಿನ ಚಾಲಕದ ಮೂಲಕ ಎಸಿ ಮೋಟಾರನ್ನು ತಿರುಗುವಂತೆ ಮಾಡಿ ಸಮವೇಗಕ್ಕೆ ತರಬಹುದು. ಅನಂತರ ಎಸಿ ವೋಲ್ಟೇಜಿನ ಮೂಲಕ ಮೋಟಾರ್ ಓಡಲಾರಂಭಿಸುತ್ತದೆ. ಮತ್ತೆ ಕೆಲವು ಸನ್ನಿವೇಶಗಳಲ್ಲಿ ಮೋಟಾರ್ ತಿರುಗುವುದಕ್ಕೆ ಮೊದಲಿನಿಂದಲೇ ಹೆಚ್ಚಿನ ಹೊರೆ ಅದರ ದಂಡಕ್ಕೆ ಬಿಗಿಯಲ್ಪಟ್ಟಿರಬಹುದು. ಇಂಥ ಸಂದರ್ಭಗಳಲ್ಲಿ ಚಾಲನ ಪ್ರವಾಹ ಅತಿ ಹೆಚ್ಚಾಗದಂತೆ ತಡೆಯುವ ಸಲುವಾಗಿ ಕ್ಲಚ್ಚುಗಳನ್ನು ಉಪಯೋಗಿಸುತ್ತಾರೆ. ಇವು ಸ್ವಯಂ ಪ್ರೇರಿತವಾದ ಕೇಂದ್ರಾಪಗಾಮಿ (ಸೆಂಟ್ರಿಫ್ಯೂಗಲ್) ವೈದ್ಯುತಿಕ ಅಥವಾ ದ್ರವಚಾಲಕ (ಹೈಡ್ರಾಲಿಕ್) ಕ್ಲಚ್ಚುಗಳಾಗಿರಬಹುದು; ಅಥವಾ ಕೈಯಿಂದಲೇ ಚಲಿಸುವ ಕ್ಲಚ್ಚುಗಳಾಗಿಯೂ ಇರಬಹುದು.

**ವಿಶಿಷ್ಟ ರೀತಿಯ ಉಪಯೋಗಗಳು:** ಒಂದು ಏಕವೇಗದ ಮೋಟಾರನ್ನು ಕೆಲವು ಸಾರಿ ಬೇರೆ ಬೇರೆ ವೇಗಗಳಲ್ಲಿ ಓಡತಕ್ಕಂತೆ ಮಾಡಬೇಕಾಗಿ ಬರುತ್ತದೆ. ಸ್ಟೇಟರಿನಲ್ಲಿರುವ ವೈಂಡಿಂಗುಗಳ ಕುಂಡಲಗಳನ್ನು (ಕಾಯಿಲ್ಸ್) ಎರಡು ಭಾಗಗಳಲ್ಲಿ ರಚಿಸಿ ಆ ಭಾಗಗಳು ಎರಡು ರೀತಿಯಲ್ಲಿ ಸಂಯೋಗಿಸುವಂತೆ ಮಾಡುವುದರಿಂದ ಮತ್ತು ಪ್ರದೀಪನವರ್ತನಗಳನ್ನು ಎರಡು ಭಾಗಗಳಲ್ಲಿ ಸುತ್ತಿ ಎರಡು ವಿಧಗಳಲ್ಲಿ ಸೇರುವಂತೆ ಮಾಡುವುದರಿಂದಲೂ ಒಂದೇ ಮೋಟಾರ್ ಎರಡು ವೇಗಗಳಲ್ಲಿ ಓಡುವಂತಾಗುತ್ತದೆ. ಈಚಿನ ವರ್ಷಗಳಲ್ಲಿ ಪಂಪ್ಡ್ ಸ್ಟೋರೇಜ್ ಪದ್ಧತಿಯ ವಿದ್ಯುದಾಗಾರಗಳು ಹೆಚ್ಚು ಬಳಕೆಗೆ ಬರುತ್ತಿರುವುದರಿಂದ ಈ ತರಹದ ದ್ವಿಭಿನ್ನವೇಗದ ಏಕವೇಗ ಮೋಟಾರುಗಳನ್ನು ಉಪಯೋಗಿಸತೊಡಗಿದ್ದಾರೆ. ಈ ಆಗಾರಗಳಲ್ಲಿ ಸಾಮಾನ್ಯವಾಗಿ ಒಂದೇ ಯಂತ್ರವನ್ನು ಆಲ್ಟರ್ನೇಟರಾಗಿಯೂ ಮೋಟಾರಾಗಿಯೂ ಉಪಯೋಗಿಸುವುದು ರೂಢಿಯಲ್ಲಿದೆ. ಮೋಟಾರಾಗಿ ಓಡುವಾಗ ಅದರ ವೇಗ ಆಲ್ಟರ್ನೇಟರ್ ಆಗಿದ್ದಾಗಿಗಿಂತ 20ರಷ್ಟು ಹೆಚ್ಚಾಗಿರಬೇಕಾಗಿ ಬರುತ್ತದೆ. ಆದ್ದರಿಂದ 10 ಧ್ರುವಗಳುಳ್ಳ ಆಲ್ಟರ್ನೇಟರನ್ನು 8 ಧ್ರುವಗಳುಳ್ಳ ತಿರುಗುವಂತೆ ಮಾಡುವುದರಿಂದ ಪಂಪನ್ನು ಚಲಾಯಿಸಲು ಸಾಧ್ಯವಾಗುತ್ತದೆ.

ಇನ್ನೊಂದು ಬಹಳ ಮುಖ್ಯವಾದ ವಿಶೇಷ ಉಪಯೋಗವೇನೆಂದರೆ ಏಕವೇಗದ ಮೋಟಾರುಗಳಿಗೆ ಹೆಚ್ಚು ಪ್ರದೀಪನವನ್ನುಂಟುಮಾಡಿ ಕಂಡೆನ್ಸರಿನಂತೆ ಉಪಯೋಗಿಸಬಹುದು. ಹೀಗೆ ಉಪಯೋಗಿಸತಕ್ಕ ಯಂತ್ರವನ್ನು ಏಕವೇಗ ಕಂಡೆನ್ಸರ್ (ಸಿಂಕ್ರನಸ್ ಕಂಡೆನ್ಸರ್) ಎಂದು ಕರೆಯುತ್ತಾರೆ. ಬಹಳ ಉದ್ದನೆಯ ಮತ್ತು ಬಹಳ ಹೆಚ್ಚು ವೋಲ್ಟೇಜಿನ ವಾಹಕ ತಂತಿಗಳಿಗೆ (ಟ್ರಾನ್ಸ್‌ಮಿಷನ್ ಲೈನ್ಸ್) ಈ ವಿಧದ ಕಂಡೆನ್ಸರುಗಳ ಆವಶ್ಯಕತೆ ಇದೆ. ಈಗಿನ ಕಾಲದಲ್ಲಿ ಈ ವಿಧದ ಕಂಡೆನ್ಸರುಗಳನ್ನು ಒಂದು ಲಕ್ಷ ಕೆ.ವಿ.ಎ.ಗಳ ಸಾಮರ್ಥ್ಯದವರೆಗೂ ತಯಾರು ಮಾಡುತ್ತಾರೆ. ಇವು ಬಿಸಿಲು ಮಳೆಗಾಳಿಗಳನ್ನು ಸಹಿಸುವಂತೆ ನಿರ್ಮಿಸಲ್ಪಟ್ಟು ಕಟ್ಟಡದ ಹೊರಗಡೆಯೇ ಕೆಲಸಮಾಡುವಂತೆ ತಯಾರಾಗಿರುತ್ತವೆ. ಇನ್ನೊಂದು ವಿಶೇಷವೇನೆಂದರೆ ಈ ಯಂತ್ರಗಳೊಳಗೆ ಗಾಳಿಯ ಬದಲಾಗಿ ಹೈಡ್ರೋಜನ್ ಅನಿಲವನ್ನು ಉಪಯೋಗಿಸುತ್ತಾರೆ. ಹೈಡ್ರೋಜನ್ನಿನ ಉಷ್ಣವಹನತೆ (ಥರ್ಮಲ್ ಕಂಡಕ್ಟಿವಿಟಿ) ಗಾಳಿಗಿಂತ ಏಳರಷ್ಟು ಹೆಚ್ಚಾಗಿರುವುದರಿಂದ ಈ ವಿಧದ ಮೋಟಾರುಗಳು ತಂಪಾಗಿ ಕೆಲಸ ಮಾಡುತ್ತವೆ ಮತ್ತು ಈ ಕಾರಣದಿಂದ ಅವು, ಅವಶ್ಯಬಂದಾಗ ಅತಿ ಹೆಚ್ಚು ಹೊರೆಗಳನ್ನು ವಹಿಸಲು ಸಾಧ್ಯವಾಗುತ್ತದೆ. ಇಷ್ಟೇ ಅಲ್ಲದೆ ಹೈಡ್ರೋಜನ್ ಗಾಳಿಗಿಂತ ಹಗುರವಾಗಿರುವುದರಿಂದ ಈ ಮೋಟಾರುಗಳಲ್ಲಿ ಉಂಟಾಗುವ ವಾಯು ನಷ್ಟಗಳು (ವಿಂಡೇಜ್ ಲಾಸಸ್) ಬಹಳ ಕಡಿಮೆ. ಆದರೆ ಹೈಡ್ರೋಜನ್ನಿನ ಜೊತೆಗೆ ಗಾಳಿ ಬೆರೆತರೆ ಆಸ್ಫೋಟನೆಯಾಗುವ ಅಪಾಯವಿರುವುದರಿಂದ ಈ ರೀತಿಯ ಮೋಟಾರುಗಳಲ್ಲಿ ಹೈಡ್ರೋಜನ್ನಿನ ಪ್ರಮಾಣ 95% ಕ್ಕಿಂತ ಕಡಿಮೆ ಆಗದಂತೆ ಬಹಳ ಜಾಗರೂಕತೆಯ ಏರ್ಪಾಡುಗಳು ಅಗತ್ಯ. ಆಧುನಿಕ ವ್ಯವಹಾರದಲ್ಲಿ ಸುಮಾರು 20,000 ಕಿಲೋವಾಟುಗಳಿಗಿಂತ ದೊಡ್ಡ ಮತ್ತು ಹೆಚ್ಚುವೇಗದ ಮೋಟಾರುಗಳಲ್ಲಿ ಮಾತ್ರ ಹೈಡ್ರೋಜನ್ನಿನ ಉಪಯೋಗ ಪ್ರಚುರವಾಗಿದೆ.

(ಎಂ.ವಿ.ಎಸ್.ಎಂ.)

**ಏಕವ್ಯಕ್ತಿ ಸಂಸ್ಥೆ:** ಒಬ್ಬ ವ್ಯಕ್ತಿಯೇ ಉದ್ಯಮಕ್ಕೆ ಅಗತ್ಯವಾದ ಬಂಡವಾಳ ಒದಗಿಸಿಕೊಂಡು ಹೊಣೆ ಹೊತ್ತು ನಿರ್ವಹಿಸುವ ವ್ಯವಹಾರ ಸಂಸ್ಥೆ (ಸೋಲ್ ಟ್ರೇಡಿಂಗ್ ಕನ್ಸರ್ನ್). ವ್ಯವಹಾರ ಸಂಘಟನೆಯ ಇತಿಹಾಸದಲ್ಲಿ ಇದು ಅತ್ಯಂತ ಪ್ರಾಚೀನ

ಪ್ರಭೇದ; ಅತ್ಯಂತ ಸಹಜ. ಈ ಸಂಸ್ಥೆಯ ಮಾಲೀಕನೊಬ್ಬನೇ. ಅವನಿಗೆ ಅವನೇ ಯಜಮಾನ. ತನಗಾಗಿ ತಾನೇ ಇದನ್ನು ನಡೆಸುತ್ತಾನೆ. ಏನು ಮಾಡಬೇಕೆಂಬ ಬಗ್ಗೆ ತೀರ್ಮಾನ ಕೈಕೊಳ್ಳುವವನೂ ತೀರ್ಮಾನವನ್ನು ಕಾರ್ಯಗತಗೊಳಿಸುವವನೂ ಸ್ವತಃ ಈತನೇ. ತನ್ನ ವ್ಯವಹಾರದ ಎಲ್ಲ ಹೊಣೆಯೂ ಎಲ್ಲ ಲಾಭ ನಷ್ಟಗಳೂ ಇವನವೇ.

ಈತ ಸ್ವತಃ ತಂದ ಬಂಡವಾಳ ವ್ಯಾಪಾರಕ್ಕೆ ಸಾಲದಿದ್ದ ಪಕ್ಷದಲ್ಲಿ ಇತರರಿಂದ ಸಾಲದ ರೂಪದಲ್ಲಿ ತರಬಹುದಷ್ಟೆ. ಇವನೇ ತನ್ನ ಉದ್ಯಮದ ಸರ್ವಾಧಿಕಾರಿ, ಸಂಘಟಕ ಮತ್ತು ಆಡಳಿತಗಾರ. ಸಂಸ್ಥೆಯ ಅವನತಿ–ಅಭಿವೃದ್ಧಿಯೆಲ್ಲ ಈತನದೇ. ಈತನ ಚಾತುರ್ಯ ಹಾಗೂ ಈತ ಕೈಗೊಳ್ಳುವ ಸೂಕ್ತ ನಿರ್ಣಯಗಳನ್ನೇ ಅದು ಅವಲಂಬಿಸಿರುತ್ತದೆ.

ಈ ಸಂಸ್ಥೆಯ ಬಂಡವಾಳ ಸಣ್ಣ ಪ್ರಮಾಣದಲ್ಲಿರುವುದರಿಂದಲೂ ವ್ಯಾಪಾರದ ಕಷ್ಟನಷ್ಟಗಳ ಹೊಣೆ ಹೆಚ್ಚಾಗಿರುವುದರಿಂದಲೂ ಆವಶ್ಯಕತೆಗೆ ಅನುಗುಣವಾಗಿ ವ್ಯಾಪಾರದ ಧ್ಯೇಯವನ್ನು ಬದಲಾಯಿಸುವ ಅನುಕೂಲ ಇರುವುದರಿಂದಲೂ ಈ ಬಗೆಯ ಸಂಘಟನೆ ಸಣ್ಣ ಉದ್ಯಮಗಳಿಗೆ ಸೀಮಿತಗೊಂಡಿದೆ. ಬಟ್ಟೆ, ಪಾನ್ ಮತ್ತು ದಿನಸಿ ಅಂಗಡಿಗಳೂ ದಳ್ಳಾಳಿ, ವಕೀಲಿ, ವೈದ್ಯಕೀಯ ಸಂಸ್ಥೆಗಳೂ ಏಕವ್ಯಕ್ತಿ ಉದ್ಯಮದ ಉದಾಹರಣೆಗಳು.

ಏಕವ್ಯಕ್ತಿಸಂಸ್ಥೆಯ ಆಸ್ತಿ ಮತ್ತು ಜವಾಬ್ದಾರಿಗಳಿಗೂ ಅದರ ಯಜಮಾನನ ಸ್ವಂತ ಆಸ್ತಿ–ಹೊಣೆಗಳಿಗೂ ಯಾವ ವಿಧವಾದ ಭೇದವೂ ಇಲ್ಲ. ಆದಕಾರಣ ಸಂಸ್ಥೆ ತನ್ನ ಸಾಲ ತೀರಿಸಲು ಅಶಕ್ತವಾಗಿದ್ದರೆ ಅದನ್ನು ತೀರಿಸುವ ಹೊಣೆಯನ್ನು ಯಜಮಾನನೇ ಹೊರಬೇಕು. ಸಂಸ್ಥೆಯ ಸಾಲಗಳಿಗೆ ಮಾಲೀಕನ ಸ್ವಂತ ಆಸ್ತಿಯೂ ಈಡಾಗುತ್ತದೆ. ಅಂತೆಯೇ ಮಾಲೀಕನ ಸಾಲಿಗರು ತಮಗೆ ಬರಬೇಕಾದ ಸಾಲದ ವಸೂಲಿಗಾಗಿ ಸಂಸ್ಥೆಯ ಆಸ್ತಿಯ ಮೇಲೂ ಕ್ರಮ ಜರುಗಿಸಬಹುದಾಗಿದೆ. ಸಂಸ್ಥೆಯ ನಷ್ಟಗಳಿಗೆಲ್ಲ ಮಾಲೀಕನೇ ವೈಯಕ್ತಿಕವಾಗಿ ಅಪಾರ ಹೊಣೆಗಾರ. ಇದು ಅಮಿತ ಜವಾಬ್ದಾರಿ.

ಏಕವ್ಯಕ್ತಿ ಉದ್ಯಮಸಂಸ್ಥೆಯಲ್ಲಿ ಕೆಲವು ಅನುಕೂಲಗಳುಂಟು. ಇದನ್ನು ಪ್ರಾರಂಭಿಸಲು ಸ್ಥಾನಿಕ ಸಂಸ್ಥೆಗಳಿಂದ ಪರವಾನಿಗೆ ಪಡೆಯುವುದರ ಹೊರತಾಗಿ ಬೇರೆ ಯಾವ ಬಗೆಯ ಕಾನೂನಿನ ವಿಧಿಗಳನ್ನು ಅನುಸರಿಸಬೇಕಾಗಿಲ್ಲ. ಕಂಪನಿಗಳಂತೆ ಇದನ್ನು ನೋಂದಣಿ (ರಿಜಿಸ್ಟರ್) ಮಾಡಿಸಬೇಕಾಗಿಲ್ಲ. ಅಂದರೆ ಯಾವಾಗ ಬೇಕಾದರೂ ಸುಲಭವಾಗಿ ವ್ಯಾಪಾರ ಪ್ರಾರಂಭಿಸಲೂಬಹುದು ಮತ್ತು ಮುಕ್ತಾಯ ಮಾಡಲೂಬಹುದು.

ಸಂಸ್ಥೆಯ ಮಾಲೀಕನಿಗೂ ಗ್ರಾಹಕರಿಗೂ ನಿಕಟ ಸಂಪರ್ಕ ಇರುವುದರಿಂದ ಗ್ರಾಹಕರ ಆವಶ್ಯಕತೆಗಳನ್ನು ಕೂಡಲೇ ತಿಳಿದುಕೊಂಡು ಅವನ್ನು ಕೂಡಲೇ ಪೂರೈಸುವುದು ಸಾಧ್ಯ. ಇದರಿಂದ ಉದ್ಯಮಿ ಅವರ ವಿಶ್ವಾಸಕ್ಕೆ ಪಾತ್ರನಾಗುವುದಲ್ಲದೆ ಹೆಚ್ಚು ಹೆಚ್ಚು ಲಾಭ ಪಡೆಯಲೂ ಸಹಾಯವಾಗುತ್ತದೆ.

ಉದ್ಯಮಿಯೇ ಸರ್ವಾಧಿಕಾರಿಯಾಗಿರುವುದರಿಂದ ವ್ಯಾಪಾರದಲ್ಲಿ ಬರಬಹುದಾದಂಥ ಸಮಸ್ಯೆಗಳನ್ನು ನಿವಾರಿಸಲು ಯಾರದೇ ಸಮ್ಮತಿಗೆ ದಾರಿ ಕಾಯದೆ ತಾನೇ ತೀವ್ರವಾಗಿ ತೀರ್ಮಾನ ಕೈಗೊಳ್ಳುತ್ತಾನೆ. ಎಂದರೆ ಆವಶ್ಯಕತೆಗೆ ಅನುಗುಣವಾಗಿ ವ್ಯಾಪಾರದ ಧ್ಯೇಯ ಧೋರಣೆಗಳನ್ನು ತಕ್ಷಣವೇ ಬದಲಾಯಿಸಬಹುದು.

ಯಜಮಾನ ತನ್ನ ಸಂಸ್ಥೆಯನ್ನು ಅಭಿವೃದ್ಧಿಪಡಿಸಲು ಸ್ವತಃ ಆಸಕ್ತಿ ವಹಿಸಿ ಎಲ್ಲ ಕಾರ್ಯಗಳನ್ನೂ ನಡೆಸಿಕೊಂಡು ಹೋಗುವುದರಿಂದ ಯಶಸ್ಸು ಬಹುತೇಕ ಸ್ವತಃ ಸಿದ್ಧ.

ಇಂಥ ಸಂಸ್ಥೆಯ ವಿಚಾರಗಳನ್ನಾಗಲಿ ಆಯ್ವೆರು ಲೆಕ್ಕಗಳನ್ನಾಗಲಿ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟ ಪಡಿಸಬೇಕೆಂದು ಯಾವ ಕಾಯಿದೆಯೂ ಇಲ್ಲದಿರುವುದರಿಂದ ಈತ ವ್ಯಾಪಾರದ ಮರ್ಮವನ್ನು ಗೋಪ್ಯವಾಗಿ ಇಟ್ಟುಕೊಳ್ಳಬಹುದು. ಇದು ವ್ಯಾಪಾರಾಭಿವೃದ್ಧಿಗೆ ಸಹಾಯಕ.

ಸಂಸ್ಥೆಯ ಎಲ್ಲ ಕಾರ್ಯಗಳನ್ನೂ ತಾನೇ ನಡೆಸಿಕೊಂಡು ಹೋಗುವುದರಿಂದಲೂ ಉದ್ಯಮ ಸಣ್ಣ ಪ್ರಮಾಣದಲ್ಲಿ ಇರುವುದರಿಂದಲೂ ದೊಡ್ಡ ಉದ್ಯಮ ಸಂಸ್ಥೆಯಲ್ಲಿ ತಗಲುವ ಮೇಲ್ವಿಚಾರಣೆಯ ಖರ್ಚು ಇದಕ್ಕೆ ತಗಲುವುದಿಲ್ಲ. ಆದ್ದರಿಂದ ಪೈಪೋಟಿಯ ದರದಲ್ಲಿ ಸರಕುಗಳನ್ನು ಮಾರಿ ಹೆಚ್ಚಿನ ಲಾಭ ಸಂಪಾದಿಸುವುದು ಸಾಧ್ಯ.

ಸಂಸ್ಥೆಯ ಅಭಿವೃದ್ಧಿಗಾಗಿ ಈತ ಬ್ಯಾಂಕಿನಿಂದಲೂ ಸ್ನೇಹಿತರಿಂದಲೂ ಇತರರಿಂದಲೂ ಸಾಲ ಪಡೆಯಬಹುದು. ಸಂಸ್ಥೆಯ ಆಸ್ತಿಯಿಂದ ಸಾಲ ತೀರಿಸಲು ಸಾಧ್ಯವಿಲ್ಲವಾದರೆ ಯಜಮಾನನೇ ತೀರಿಸುವುದರಿಂದಲೂ ಸಂಸ್ಥೆಯ ಅಭಿವೃದ್ಧಿಯಲ್ಲಿ ಮಾಲೀಕನ ವೈಯಕ್ತಿಕ ಆಸಕ್ತಿ ಇರುವುದರಿಂದಲೂ ಸಾಲಿಗರಿಗೆ ಸಾಕಷ್ಟು ಭರವಸೆಯಿರುತ್ತದೆ. ಸಾಲ ಸುಲಭವಾಗಿ ದೊರಕುತ್ತದೆ. ಸಂಸ್ಥೆಯ ಲಾಭಕ್ಕೆಲ್ಲ ಇವನೊಬ್ಬನೆ ಭೋಕ್ತೃ.

ಈ ಸಂಸ್ಥೆಗೆ ಆನುವಂಶಿಕ ವ್ಯಾಪಾರಸಂಸ್ಥೆ ಅಥವಾ ಕೌಟುಂಬಿಕ ವ್ಯಾಪಾರ ಸಂಸ್ಥೆ ಎಂದೂ ಹೆಸರುಂಟು. ಅಂದರೆ ಯಜಮಾನ ಸತ್ತರೆ, ಮನೋವಿಕಲ್ಪ ಹೊಂದಿದರೆ ಅಥವಾ ಅಸ್ವಸ್ಥನಾದರೆ ಸಂಸ್ಥೆಯನ್ನು ಮುಚ್ಚದೆ ಅವನ ವಂಶದವರೋ ಕುಟುಂಬದವರೋ ಮುಂದುವರಿಸಿಕೊಂಡು ಹೋಗುತ್ತಾರೆ. ಕಂಪನಿ, ಪಾಲುದಾರಿಕೆ ಮುಂತಾದವನ್ನು ಕಾನೂನಿಗೆ ಅನುಸಾರ ಮುಚ್ಚಿಸುವಂತೆ ಇದನ್ನು ಮುಚ್ಚಿಸಲು ಸಾಧ್ಯವಿಲ್ಲ.

ಏಕವ್ಯಕ್ತಿಸಂಸ್ಥೆಯ ಇನ್ನೊಂದು ಅನುಕೂಲವೆಂದರೆ ಅನುಭವದ ಗಳಿಕೆ. ಈ ಸಂಸ್ಥೆಯ ಬೆಳವಣಿಗೆಯೊಂದಿಗೆ ಇದರ ಮಾಲೀಕನೂ ಬೆಳೆಯುತ್ತಾನೆ. ವ್ಯಾಪಾರದ ಅನುಭವಗಳನ್ನು ಚೆನ್ನಾಗಿ ಅರಿತುಕೊಳ್ಳುತ್ತಾನೆ. ಆದ್ದರಿಂದ ದೊಡ್ಡ ದೊಡ್ಡ ಉದ್ಯಮಗಳನ್ನು ಪ್ರಾರಂಭಿಸಿ ಬೆಳೆಸಲು ಇದು ನಾಂದಿ. ಸ್ವತಂತ್ರ ಮನೋವೃತ್ತಿಯನ್ನು ಕಾರ್ಯನಿಷ್ಠೆಯನ್ನೂ ಆತ್ಮವಿಶ್ವಾಸ, ಸಂತೃಪ್ತಿ ಮುಂತಾದ ಗುಣಗಳನ್ನೂ ಬೆಳೆಸಿ ವ್ಯಕ್ತಿತ್ವದ ವಿಕಾಸಕ್ಕೆ ಇದು ಕಾರಣವಾಗುತ್ತದೆ.

ಈ ಸಂಸ್ಥೆಯಲ್ಲಿ ಅನೇಕ ಪ್ರತಿಕೂಲಗಳೂ ಉಂಟು. ಮೊದಲನೆಯದಾಗಿ ಬಂಡವಾಳದ ಕೊರತೆ. ಒಬ್ಬ ವ್ಯಕ್ತಿ ತರುವ ಬಂಡವಾಳ ಅಲ್ಪ; ದೊಡ್ಡ ಉದ್ಯಮಕ್ಕೆ ಸಾಕಾಗುವುದಿಲ್ಲ. ಇತರ ಮೂಲಗಳಿಂದ ಈತ ಪಡೆಯಬಹುದಾದ ನೆರವಿಗೂ ಮಿತಿಯುಂಟು. ಒಬ್ಬ ವ್ಯಕ್ತಿಯನ್ನೇ ನಂಬಿ ಹೆಚ್ಚು ಹಣ ಕೊಡುವುದೂ ಅನೇಕ ವೇಳೆ ಕಠಿಣವೇ. ಕಡಿಮೆ ಬಂಡವಾಳದಿಂದ ಸಂಸ್ಥೆಯ ಅಭಿವೃದ್ಧಿ ಕುಂಠಿತವಾಗುವುದಲ್ಲದೆ ಯಜಮಾನನ ಆದಾಯವೂ ಕಡಿಮೆಯಾಗುತ್ತದೆ.

ಸಂಸ್ಥೆ ಹೆಚ್ಚಿನ ನಷ್ಟಹೊಂದಿ, ತನ್ನ ಸಾಲ ತೀರಿಸಲು ಸಾಕಷ್ಟು ಆಸ್ತಿ ಇಲ್ಲದಿದ್ದರೆ ಮಾಲೀಕನ ಸ್ವಂತ ಆಸ್ತಿಯೂ ಕರಗಬಹುದು. ಈ ಅಮಿತ ಜವಾಬ್ದಾರಿಯಿಂದ ಮಾಲೀಕನ ಸ್ಥೈರ್ಯ ಉಡುಗಬಹುದು. ಈ ಭಯದ ಹಿನ್ನೆಲೆಯಲ್ಲಿ ಆತನ ಸಾಹಸ ಪ್ರವೃತ್ತಿ ಮೊಟಕಾಗಬಹುದು.

ಸಂಸ್ಥೆ ಅಭಿವೃದ್ಧಿ ಹೊಂದಿ ಅನೇಕ ಶಾಖೆಗಳಿಂದ ಕೂಡಿದ್ದರೆ ಆಗ ಒಬ್ಬನೇ ಯಜಮಾನ ಎಲ್ಲ ಶಾಖೆಗಳ ಕಾರ್ಯಗಳನ್ನೂ ಸುಸೂತ್ರವಾಗಿ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗದೆ ಸಂಸ್ಥೆ ಅವನತಿ ಹೊಂದಬಹುದು. ಅಲ್ಲದೆ ವ್ಯಾಪಾರದ ಚತುರತೆ, ಸಾಕಷ್ಟು ಬಂಡವಾಳ ಎರಡೂ ಇರುವ ವ್ಯಕ್ತಿಗಳು ಬಹಳ ವಿರಳ. ವ್ಯಾಪಾರದ ಕುಶಲತೆಯನ್ನು ತಿಳಿಯದ ವ್ಯಕ್ತಿ ಎಷ್ಟೇ ಬಂಡವಾಳ ಹಾಕಿ ವ್ಯಾಪಾರ ನಡೆಸಿದರೂ ನಷ್ಟ ಅನುಭವಿಸುವುದು ಖಂಡಿತ. ಅಂಥವ ದಿವಾಳಿಯಾದರೂ ಆಶ್ಚರ್ಯವಿಲ್ಲ.

ಏಕವ್ಯಕ್ತಿ ಉದ್ಯಮ ಶಾಶ್ವತವೇನೂ ಅಲ್ಲ. ಸಂಸ್ಥೆಯ ಒಡೆಯ ಸಾವಿಗೋ ಹುಚ್ಚಿಗೋ ಕಾಯಿಲೆಗೋ ಈಡಾದರೆ ಸಂಸ್ಥೆಯನ್ನು ಮುಚ್ಚಲೇಬೇಕಾದ ಸಂದರ್ಭವೂ ಒದಗಬಹುದು. ಆತನ ಕುಟುಂಬದವರೋ ಉತ್ತರಾಧಿಕಾರಿಗಳೋ ಅದನ್ನು ನಡೆಸಿಕೊಂಡು ಹೋಗಬಲ್ಲರೆಂಬ ಭರವಸೆಯೇನೂ ಇಲ್ಲ.

ಏಕವ್ಯಕ್ತಿಸಂಸ್ಥೆಯ ಗಾತ್ರ ಕಿರಿದಾದ್ದರಿಂದ ದೊಡ್ಡ ಪ್ರಮಾಣದ ವಹಿವಾಟಿನಿಂದ ಸಿಗಬಹುದಾದ ರಿಯಾಯಿತಿಗಳು ಈ ಉದ್ಯಮಿಗೆ ದೊರಕಲಾರವು. ಈ ಕಾರಣದಿಂದ ಈತ ತನ್ನ ಸರಕುಗಳನ್ನು ಹೆಚ್ಚಿನ ಬೆಲೆಗೆ ಮಾರಬೇಕಾಗಬಹುದು. ಇದರಿಂದ ಗಿರಾಕಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲಾಗುವುದಿಲ್ಲ. ಆಧುನಿಕ ಸೌಲಭ್ಯಗಳೂ ಸಲಕರಣೆಗಳೂ ಶ್ರಮವಿಭಜನೆಯ ಅನುಕೂಲಗಳೂ ಸಣ್ಣ ಸಂಸ್ಥೆಗೆ ಲಭ್ಯವಿಲ್ಲ.

ಇಷ್ಟೆಲ್ಲ ಅನಾನುಕೂಲಗಳಿದ್ದರೂ ಏಕವ್ಯಕ್ತಿ ಸಂಸ್ಥೆಗಳು ಇಂದಿಗೂ ಬಹು ಸಂಖ್ಯೆಯಲ್ಲಿವೆ. ಇದಕ್ಕೆ ಕಾರಣಗಳಿಲ್ಲದೆ ಇಲ್ಲ. ಚಿಲ್ಲರೆ ಮಾರಾಟಕ್ಕೆ ಈ ಬಗೆಯ ಸಂಸ್ಥೆಗಳು ಸೂಕ್ತ. ಕೆಲವು ವ್ಯವಹಾರಗಳಲ್ಲಿ ಗ್ರಾಹಕನಿಗೂ ವ್ಯಾಪಾರಿಗೂ ನಡುವೆ ಅತ್ಯಂತ ನಿಕಟ ಸಂಪರ್ಕವಿರಬೇಕು. ವಕೀಲ–ಕಕ್ಷಿಗಾರ, ವೈದ್ಯ–ರೋಗಿ, ಇವರಲ್ಲಿ ನಿಕಟಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಗ್ರಾಹಕರ ಮನೋಭಾವವನ್ನರಿತು ಅವರ ಆಶಯಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇಂಥ ಉದ್ಯಮಗಳಲ್ಲೆಲ್ಲ ಏಕಮೇವ ಒಡೆತನ ಸಂಸ್ಥೆಯೇ ಅತ್ಯಂತ ಯೋಗ್ಯ. ಬೆಳ್ಳಿ–ಬಂಗಾರ, ಷೇರು ಮುಂತಾದ ವ್ಯವಹಾರಗಳಲ್ಲಿ, ಬೆಲೆಗಳಲ್ಲಿ ಬಹಳ ಏರಿಳಿತಗಳಾಗುವುದರಿಂದ ಶೀಘ್ರ ನಿರ್ಣಯದ ಆವಶ್ಯಕತೆ ಇರುತ್ತದೆ. ಇಂಥಲ್ಲೂ ಏಕವ್ಯಕ್ತಿ ಉದ್ಯಮವೇ ಹೆಚ್ಚು ಯಶಸ್ವಿಯಾಗುತ್ತದೆನ್ನಬಹುದು. ಬಂಡವಾಳ ಕಡಿಮೆಯಾಗಿಯೂ ಹಳ್ಳಿಗಳು ಹೆಚ್ಚಾಗಿಯೂ ಇರುವ ಭಾರತದಂಥ ದೇಶದಲ್ಲಿ ಏಕವ್ಯಕ್ತಿ ಉದ್ಯಮ ಸಂಸ್ಥೆಗಳ ಕ್ಷೇತ್ರ ವಿಸ್ತಾರವಾಗಿದೆ; ಅವಕಾಶಗಳೂ ಹೇರಳವಾಗುಂಟು. (ಪಿ.ವಿ.ಎನ್.)

**ಏಕಶಿಲಾನಗರಿ: ನೋಡಿ– ವಾರಂಗಲ್**

**ಏಕಶೃಂಗಿ:** ಒಂದು ಕೊಂಬಿನ ಕಾಲ್ಪನಿಕ ಪ್ರಾಣಿ (ಯೂನಿಕಾರ್ನ್). ಕುದುರೆಯಂತಹ ತಲೆ, ಜಿಂಕೆಯ ಕಾಲು, ಸಿಂಹದ ಬಾಲ, ಹೋತದ ಗಡ್ಡ ಹೊಂದಿರುವ ಹಾಗೆ ಪ್ರತಿನಿಧಿಸಲಾಗಿದೆ. ಇದರ ತಲೆ ಮತ್ತು ದೇಹ ಕುದುರೆಯಂತಿದ್ದು ಹಿಂಗಾಲುಗಳ ಜಿಂಕೆಯ ಕಾಲಿನಂತಿವೆ. ಬಾಲ ಸಿಂಹದ ಬಾಲದಂತೆ. ಕುದುರೆಯ ಬಾಲದಂತೆ ಚಿತ್ರಿತವಾಗಿರುವುದೂ ಉಂಟು. ಹೋತನಂತೆ ಗಡ್ಡವಿದೆ. ಹಣೆಯಲ್ಲಿ ತಿರುಚಿಕೊಂಡು

ನೇರಚಾಚಿರುವ ಒಂದು ಕೊಂಬಿದೆ. ಈ ಪ್ರಾಣಿ ಶೌಚಗುಣದ ಪ್ರತೀಕವಾಗಿತ್ತು. ಶುದ್ಧ ಕನ್ಯೆಗಲ್ಲದೆ ಬೇರಾರಿಗೂ ವಶವಾಗುತ್ತಿರಲಿಲ್ಲ. ಭಾರತದಲ್ಲಿ ಕೆಲವು ಬಿಳಿಕತ್ತೆಗಳಿಗೆ ಏಕಶೃಂಗವಿತ್ತೆಂದು ಟೆಸಿಯಸ್ ತಿಳಿಸುತ್ತಾನೆ. ಇದರ ಕೊಂಬಿನಿಂದಾದ ಪಾನಪಾತ್ರೆ ವಿಷಾಪಹಾರಿಯೆಂದು ಅವನ ಹೇಳಿಕೆ. ಏಕಶೃಂಗಿಗಳಾದ ಓರಿಕ್ಸ್ ಮತ್ತು ಭಾರತದ ಕತ್ತೆಗಳ ವಿಷಯವನ್ನು ಅರಿಸ್ಟಾಟಲ್ ಪ್ರಸ್ತಾಪಮಾಡಿದ್ದಾನೆ. ಪ್ಲಿನಿ ಇದರ ಉಲ್ಲೇಖ ಮಾಡಿದ್ದಾನೆ. ಬೈಬಲ್ಲಿನಲ್ಲಿ ಇಂಥದೊಂದು ಪ್ರಾಣಿಯ ಉಲ್ಲೇಖವಿದೆ.

ಏಕಶೃಂಗಿಯ ವಿಷಪರಿಹಾರಕ ಗುಣದಲ್ಲಿ ನಂಬಿಕೆ ಇದ್ದ ಮಧ್ಯಂಯುಗದವರು ತಮ್ಮ ಪಾನಪಾತ್ರೆಗಳ ಮೇಲೆ ಅದರ ಚಿತ್ರ ಬಿಡಿಸುತ್ತಿದ್ದರು. ಈ ಪರಿಪಾಟಿ ಎರಡನೆಯ ಚಾರ್ಲ್ಸ್‌ನ ಕಾಲದವರೆಗೂ ಪ್ರಚಲಿತವಾಗಿತ್ತು. ರಾಜಭೋಜನವನ್ನು ಪರೀಕ್ಷಿಸಲು ಫ್ರಾನ್ಸಿನವರು 1789ರ ವರೆಗೂ ಏಕಶೃಂಗಿಯ ಕೊಂಬಿನಿಂದ ಮಾಡಿದ ಒಂದು ವಸ್ತುವನ್ನು ಬಳಸುತ್ತಿದ್ದರು. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡಿನ ರಾಜಲಾಂಛನಗಳಲ್ಲಿ ಏಕಶೃಂಗಿಯ ಚಿತ್ರವಿದೆ.

ಮೆಕ್ಸಿಕೋದ ಒಂದು ಗಿಡಕ್ಕೆ ಏಕಶೃಂಗಿ ಎಂಬ ಹೆಸರಿದೆ. ಇದನ್ನು ಭೂತದ ಕೈ ಎಂದೂ ಕರೆಯುತ್ತಾರೆ. ಮಾರ್ಟಿನಿಯೇಸಿ ಕುಟುಂಬಕ್ಕೆ ಸೇರಿದ ಈ ಸಸ್ಯದ ಕಾಯಿ ಬಾಗಿರುವ ಕೊಂಬಿನಂತಿದ್ದು ತೊಟ್ಟಿನಿಂದ ಕೆಳಗೆ ನೇತುಬಿದ್ದಿರುತ್ತದೆ.



ನರ್‌ವ್ಹಾಲ್ ಎಂಬ ತಿಮಿಂಗಿಲ ಒಂದಕ್ಕೆ ಮೂತಿಯ ತುದಿಯಲ್ಲಿ ಈಟಿಯಂಥ ಮೂಳೆಯೊಂದಿದೆ. ಇದು ಶೀತವಲಯದ ಸಮುದ್ರಗಳಲ್ಲಿ ವಾಸಿಸುತ್ತದೆ. ಇದರ ಶರೀರ 7 ಮೀ ಉದ್ದ. ಮೂತಿಯಲ್ಲಿನ ಶೃಂಗ 3 ಮೀಗಳವರೆಗೂ ಬೆಳೆಯಬಲ್ಲುದು. ಈ ತಿಮಿಂಗಿಲದ ಮೂಳೆಗಳೇ ಏಕಶೃಂಗಿಯ ಕಲ್ಪನೆಗೆ ಕಾರಣವಾಗಿರ ಬಹುದೆಂದು ಹೇಳಲಾಗಿದೆ. (ಎ.ಎಸ್.ಜಿ.)

**ಏಕಸಮ ಸಂಭವ ವಿತರಣೆ:** ಪ್ರತಿಯೊಂದು ಸರಳ ಘಟನೆಗೂ (ಸಿಂಪಲ್ ಈವೆಂಟ್) ಒಂದೇ ಸಮನಾದ ಸಂಭವತೆಯನ್ನು (ಪ್ರಾಬೆಬಿಲಿಟಿ) ಇತ್ತರೆ ದೊರೆಯುವ ಸಂಭವತೆ ವಿತರಣೆ (ಯೂನಿಫಾರಂ ಪ್ರಾಬೆಬಿಲಿಟಿ ಡಿಸ್ಟ್ರಿಬ್ಯೂಷನ್). ಇದು ಯಾದೃಚ್ಛಿಕ ಚರದ (ರ‍್ಯಾಂಡಮ್ ವೇರಿಯಬಲ್) ಅತಿ ಸರಳ ವಿತರಣೆಗಳಲ್ಲೊಂದು. ಒಂದು ಚೀಲದಲ್ಲಿ 1,2,3...N ಎಂಬ ಅಂಕಿಗಳನ್ನು ಬರೆದಿಟ್ಟ N ಚೀಟಿಗಳಿವೆ; ಒಂದು ಚೀಟಿಯನ್ನು ಯಾದೃಚ್ಛಿಕವಾಗಿ ತೆಗೆದರೆ ದೊರೆಯುವ ಚೀಟಿಯ ಸಂಖ್ಯೆಯನ್ನು X ಎಂದು ಕರೆಯೋಣ. ಯಾದಚ್ಛಿಕವಾಗಿ ತೆಗೆಯುವುದು ಎಂದರೆ ಪ್ರತಿಯೊಂದು ಚೀಟಿಯನ್ನು ಆರಿಸುವ ಸಂಭವತೆ ಸಮವಾಗಿರಬೇಕು. Xನ ಬೆಲೆಯನ್ನು x ಎಂದೂ ಇದರ ಸಂಭವತೆಯನ್ನು $P(X-x)$ ಎಂದೂ ಸೂಚಿಸಿದರೆ Xನ ಸಂಭವ ವಿತರಣೆಯನ್ನು ಹೀಗೆ ನಿರೂಪಿಸಬಹುದು.

$$\mathbf{X} : \quad 1 \quad 2 \quad 3 \cdots\cdots N$$

$$P(X{=}\mathrm{X}) : \quad \frac{1}{N} \quad \frac{1}{N} \quad \frac{1}{N} \;\ldots\ldots\; \frac{1}{N}$$

ಇಲ್ಲಿ $X=1, X=2, \ldots. X=N$ ಎಂಬುವನ್ನು ಸರಳ ಘಟನೆಗಳು ಎಂದು ಪರಿಗಣಿಸಿದರೆ ಮೇಲೆ ನಮೂದಿಸಿರುವ ವಿತರಣೆಯನ್ನು 1,2,3...... ... ... ಪೂರ್ಣಾಂಕಗಳ ಮೇಲೆ ಏಕಸಮ ವಿತರಣೆ ಎನಿಸಲಾಗುವುದು. ಏಕಸಮ ವಿತರಣೆಯ ಸ್ತಂಭಚಿತ್ರ (ಹಿಸ್ಟೋಗ್ರಾಂ) ಆಯತದ ರೂಪದಲ್ಲಿರುವುದರಿಂದ ಇದಕ್ಕೆ ಆಯತಾಕಾರದ ವಿತರಣೆ (ರೆಕ್ಟಾಂಗ್ಯುಲರ್ ಡಿಸ್ಟ್ರಿಬ್ಯೂಷನ್) ಎಂಬ ಹೆಸರೂ ಉಂಟು.

ಮೊದಲನೆಯ ಬಹುಮಾನ 2,5 ಲಕ್ಷರೂಪಾಯಿ ಇರುವ ಒಂದು ಲಾಟರಿಯಲ್ಲಿ 10 ಲಕ್ಷ ಟಿಕೆಟ್ಟುಗಳ ಮಾರಾಟವಾಗುತ್ತದೆ. ಪ್ರತಿ ಟಿಕೆಟ್ಟಿಗೂ ಸಮಾನ ಸಂಭವತೆಯನ್ನು ಕೊಡಲಾಗುವುದು. ಆದ್ದರಿಂದ ಬಹುಮಾನ ಪಡೆದ ಸಂಖ್ಯೆಯ ಸಂಭವತೆ ವಿತರಣೆ ಏಕಸಮ ವಿತರಣೆಯಾಗಿರುವುದು.

Xನ ಗಣಿತೀಯ ನಿರೀಕ್ಷೆ (ಮ್ಯಾಥಮ್ಯಾಟಿಕಲ್ ಎಕ್ಸ್‌ಪೆಕ್ಟೇಶನ್)

$E(x)=\dfrac{N+1}{2}$ ಮತ್ತು X ನ ವಿಚಲನೆ $V(X)=\dfrac{(n^2-1)}{12}$

ಇರುವುದು. ಚರ ಅವಿಚ್ಛಿನ್ನವಾದಾಗ (ಕಂಟಿನ್ಯೂಯಸ್) ವಿತರಣೆ ಅವಿಚ್ಛಿನ್ನ ಆಯಾಕಾರ ವಿತರಣೆ (ಕಂಟಿನ್ಯೂಸ್ ರೆಕ್ಟಾಂಗ್ಯುಲರ್ ಡಿಸ್ಟ್ರಿಬ್ಯೂಷನ್) ಆಗುವುದು. ಆಗ ವಿತರಣೆಯನ್ನು ಹೀಗೆ ನಿರೂಪಿಸಬಹುದು.

$$f(x)=\frac{1}{2a}, \qquad -a<x<a$$

$f(x)=0, \qquad x<-a$ ಅಥವ ೨ $x>a$

ಅಂದರೆ x ನ ಬೆಲೆ ಉಭಯ ದಿಕ್ಕಿನಲ್ಲೂ ಸೀಮಿತವಾಗಿರುತ್ತದೆ (ಬೌಂಡೆಡ್) ಮತ್ತು ಸವಾಂಗವಾಗಿರುತ್ತದೆ (ಸಿಮೆಟ್ರಿಕಲ್). ಇದರ ಎಲ್ಲ ದರ್ಜೆಯ ಭ್ರಮಣಾಂಕಗಳಿಗೂ (ಮೊಮೆಂಟ್ಸ ಆಫ್ ಆಲ್ ಆರ್ಡರ್ಸ್) ಅಸ್ತಿತ್ವವಿದೆ. ಇದರ ಮಧ್ಯಕ (ಮೀನ್) ಸೊನ್ನೆ, ಎರಡನೆಯ ಭ್ರಮಣಾಂಕ ಮತ್ತು ಮಾನಕ ವಿಚಲನ (ಸ್ಟ್ಯಾಂಡರ್ಡ್ ಡೀವಿಯೇಷನ್) (ಸಮೀಪದ ಬೆಲೆ); ಸರಾಸರಿ ವಿಚಲನ ಮತ್ತು ಮಧ್ಯಮಾಂತರ ಗುಣಕ (ಕೊಯಿಫಿಶಂಟ್ ಆಫ್ ಮೀನ್ ಡಿಫರೆನ್ಸ್) ಇದು ಪಿಯರ್ಸನ್ ವಕ್ರಗಳ ಜಾತಿಗೆ ಸೇರ್ಪಡೆಯಾದುದು. ಹೇಗೆಂದರೆ ನಿಕಷ ಸೊನ್ನೆಯಾದಾಗ ಏಕಸಮ ವಿತರಣ ರೇಖೆ ದೊರೆಯುವುದು.

ಆಯತಾಕಾರ ವಿತರಣೆಯನ್ನು ಬೀಟಾ ವಿತರಣೆಯ ಒಂದು ವಿಶಿಷ್ಟ ರೂಪವನ್ನಾಗಿ ಪರಿಗಣಿಸಲು ಅವಕಾಶವಿದೆ. ಬೀಟಾ ವಿತರಣೆಯ ಸಾಂದ್ರತೆಯನ್ನು ಎಂದು ನಿರೂಪಿಸಿ

$$f(x)=\frac{1}{B(a,b)}x^{a-1}(1-x)^{b-1}, \qquad (0<x<1).$$

ದಾಗ, a,b ಇದರ ಪ್ರಾಚಲಗಳಾಗುತ್ತವೆ (ಪ್ಯಾರಾಮೀಟರ್ಸ್). ಈಗ a=b=1 ಎಂದು ಆದೇಶಿಸಿದರೆ ಈ ವಿತರಣೆಯ ಸಾಂದ್ರತೆ ಆಯತಾಕಾರ ವಿತರಣೆಯಾಗುವುದು.

ಕೆಲವು ಸಂದರ್ಭಗಳಲ್ಲಿ x ನ ಗಡಿಗಳನ್ನು -a ಮತ್ತು -a ಎಂದು ತೆಗೆದುಕೊಳ್ಳುವುದುಂಟು. ಆಗ ಸಾಂದ್ರತೆಯ ಉತ್ಪನ್ನ (ಫಂಕ್ಷನ್) $f(x)=1/2a \quad (-a<x<a)$ ಎಂದಾಗುವುದು. ಭ್ರಮಣಾಂಕಗಳನ್ನು ಗಣನೆ ಮಾಡುವಲ್ಲಿ ಈ ರೂಪ ಬಹಳ ಉಪಯುಕ್ತವಾಗುವುದು. ಇದರ ಭ್ರಮಣಾಂಕ ಜನಕ ಉತ್ಪನ್ನ (ಮೊಮೆಂಟ್ ಜನರೇಟಿಂಗ್ ಫಂಕ್ಷನ್) ಈ ಶ್ರೇಣಿಯನ್ನು ಗಮನಿಸಿದರೆ

$$M(h)=\frac{1}{2ah}\int_{-a}^{a}e^{hx}dx=\frac{1}{2a}\left(e^{ah}-e^{-ah}\right)$$

$$=1+\frac{a^2h^2}{3!}+\frac{a^4h^4}{5!}+\cdots\cdots\cdots$$

ಏಕಸಮ ವಿತರಣೆಯ ವಿಷಮಭ್ರಮಣಾಂಕಗಳು (ಆಡ್ ಮೊಮೆಂಟ್ಸ್) ಎಲ್ಲವೂ ಸೊನ್ನೆಯಾಗುತ್ತವೆಂಬುದು ಸ್ಪಷ್ಟ; ಮತ್ತು $h^{2n}/(2n)!$ ಪದದ ಗುಣಕಗಳು ಸಮ ಭ್ರಮಣಾಂಕಗಳಾಗುವುವು (ಈವನ್ ಮೊಮೆಂಟ್ಸ್). ವಿತರಣೆಯ ಮಧ್ಯಕ 0 ಆದ್ದರಿಂದ $\mu_r=\mu_r'$ ಆದ ಕಾರಣ $\mu_{2n}=a^{2n}/(2n+1)$ ಇದರಲ್ಲಿ nಗೆ 1,2, …… ಎಂಬ ಬೆಲೆಗಳನ್ನು ಆದೇಶಿಸಿ $\mu_2=a^2/3, \quad \mu_4=a^4/5, \cdots$ ಎಂಬ

ಬೆಲೆಗಳನ್ನು ಪಡೆಯಬಹುದು. ಲಕ್ಷಣ ಉತ್ಪನ್ನಗಳನ್ನು (ಕ್ಯಾರೆಕ್ಟೆರಿಸ್ಟಿಕ್ ಫಂಕ್ಷನ್ಸ್) ಬಳಸಿ ಇದೇ ಫಲಗಳನ್ನು ಪಡೆಯಬಹುದು.

**ನಿದರ್ಶನ ಮಧ್ಯಕ (ಸ್ಯಾಂಪಲ್ ಮೀನ್)** : ಏಕಸಮ ವಿತರಣೆಯ ಸಮಷ್ಟಿಯಿಂದ n ಗಾತ್ರದ ಯಾದೃಚ್ಛಿಕ ನಿದರ್ಶನವನ್ನು (ರ್‍ಯಾಂಡಮ್ ಸ್ಯಾಂಪಲ್) ತೆಗೆದುಕೊಂಡರೆ ಅದರ ಮಧ್ಯಕದ ವಿತರಣೆ ಆಶ್ಚರ್ಯಕರವಾಗಿ ವರ್ತಿಸುವುದು. ನಿದರ್ಶನ ಮಧ್ಯಕ m ಆದರೆ ಇದರ ಸಾಂದ್ರತಾ ಉತ್ಪನ್ನ ತಾಳುವ ರೂಪ ಹೀಗಿರುವುದು.

$$f(m)=\frac{n^n}{(n-1)!}\sum_{r=0}^{k}(-1)^r\binom{n}{r}\left(m-\frac{r}{n}\right)^{n-1}$$

$$\frac{k}{n}\le m\le\frac{k+1}{n}\qquad\cdots(1)$$

ಸೋಜಿಗವೆಂದರೆ ಈ ಉತ್ಪನ್ನ (n-1) ಘಾತಪ್ರಮಾಣದ ಬೇರೆ ಬೇರೆಯಾದ n ಚಾಪಗಳಿಂದಾಗಿ ಸಂಗಮಸ್ಥಾನಗಳಲ್ಲಿ, ಅಂದರೆ $h/n(k=1,2,\ldots\ldots,n)$ ಬಿಂದುಗಳಲ್ಲಿ (n-1) ಬಿಂದು ಸ್ಪರ್ಶ (n-1 ಪಾಯಿಂಟ್ ಕಾಂಟ್ಯಾಕ್ಟ್) ಉಳ್ಳವಾಗಿರುತ್ತವೆ, n=2,3,4 ಈ ಬೆಲೆಗಳಿಗೆ ಆವರ್ತಸಂಖ್ಯಾ ಉತ್ಪನ್ನ (ಫ್ರೀಕ್ವೆನ್ಸಿ ಫಂಕ್ಷನ್) ಈ ರೂಪಗಳನ್ನು ತಾಳುತ್ತದೆ.

$$n=2\quad\begin{cases}4m & 0\le m\le\frac{1}{2}\\ 4(1-m) & \frac{1}{2}\le m\le 1\end{cases}$$

$$n=3\quad\begin{cases}\frac{27m^2}{2} & 0\le m\le\frac{1}{3}\\ \frac{27}{2}\left\{m^2-3\left(m-\frac{1}{3}\right)^2\right\} & \frac{1}{3}\le m\le\frac{2}{3}\\ \frac{27}{2}(1-m)^2 & \frac{2}{3}\le m\le 1\end{cases}$$

$$n=4\quad\begin{cases}\frac{128m^3}{3} & \\ \frac{128}{3}\left\{m^3-4\left(m-\frac{1}{4}\right)^3\right\} & \frac{1}{4}\le m\le\frac{1}{2}\\ \frac{128}{3}\left\{(1-m)^3-4\left(\frac{3}{4}-m\right)^2\right\} & \frac{1}{2}\le m\le\frac{3}{4}\\ \frac{128}{3}(1-m)^3 & \frac{3}{4}\le m\le 1\end{cases}$$




ನಕ್ಷೆ 1

ಮೇಲೆ ಕೊಟ್ಟಿರುವ ಆವರ್ತಸಂಖ್ಯೆ ನೋಡುವುದಕ್ಕೆ ಪ್ರಸಾಮಾನ್ಯ (ನಾರ್ಮಲ್) ರೇಖೆಯಂತೆ ಕಾಣುತ್ತದೆ. ವಾಸ್ತವವಾಗಿ ಪರಿಶೀಲಿಸಿದರೆ ಕೇಂದ್ರಾಭಿಮಿತಿ ಪ್ರಮೇಯದ (ಸೆಂಟ್ರಲ್ ಲಿಮಿಟ್ ಥಿಯೊರಮ್) ಪ್ರಕಾರ ಈ ವಿತರಣೆ n ಹೆಚ್ಚಿದಾಗ ಪ್ರಸಾಮಾನ್ಯ ವಿತರಣೆಗೆ ಉಪಗಮಿಸುವುದು.

**ಮುಖ್ಯ ಗುಣಧರ್ಮಗಳು** : ಯಾವುದಾದರೂ ಅವಿಚ್ಛಿನ್ನ ಚರ $x$ ನ ಸಂಭವ ಸಾಂದ್ರತಾ ಉತ್ಪನ್ನ (ಸ. ಸಾ. ಉ, ಪ್ರಾಬೆಬಿಲಿಟಿ ಡೆನ್ಸಿಟಿ ಫಂಕ್ಷನ್, ಪಿ. ಡಿ. ಎಫ್) $f(x)$ ಇದ್ದರೆ ಅದರ ವಿತರಣ ಉತ್ಪನ್ನ (ಡಿಸ್ಟ್ರಿಬ್ಯೂಷನ್ ಫಂಕ್ಷನ್) $F(x)=\int_{-\infty}^{x}f(x)\,dx$ ಇರುವುದು. ಈಗ $y=F(x)$ ಎಂಬ ರೂಪಾಂತರ (ಟ್ರಾನ್ಸ್‌ಫಾರ್ಮೇಶನ್) ಮಾಡಿದರೆ ಏಕಸಮ ವಿತರಣೆಗೆ ಒಳಗಾಗುತ್ತದೆ ಮತ್ತು $f(y)=1$ ಇರುವುದು, $0\le y\le 1$ ಈ ರೂಪಾಂತರಕ್ಕೆ ಸಂಭವ್ಯತೆಯ ರೂಪಾಂತರ (ಪ್ರಾಬೆಬಿಲಿಟಿ ಟ್ರಾನ್ಸ್‌ಫಾರ್ಮೇಶನ್) ಎಂದು ಹೆಸರು. ಇದು ಬಹಳ ಮುಖ್ಯವಾದ ಮತ್ತು ಹೆಚ್ಚು ಪ್ರಯೋಜನಕರವಾದ ರೂಪಾಂತರ.

ಏಕಸಮ ವಿತರಣೆಯನ್ನು ಅನುಸರಿಸುವ $x$ ಚರವನ್ನು ಪರಿಶೀಲಿಸಿ. $y=-2\log_e{}^x$ ಇದ್ದರೆ $dy=2dx/x$ ಅಥವಾ $dx=-\frac{1}{2}e^{-y/2}\cdot dy$ ಆದ್ದರಿಂದ $y$ ಚರ 2 ಸ್ವತಂತ್ರಾಂಕದೊಂದಿಗೆ (ಡಿಗ್ರೀಸ್ ಆಫ್ ಫ್ರೀಡಂ) $\chi^2$ ವಿತರಣೆಯನ್ನು ಅನುಸರಿಸುತ್ತವೆ. k ವಿವಿಧ ಸಮಷ್ಟಿಗಳಿಂದ (ಪಾಪ್ಯುಲೇಷನ್) ಕ್ರಮವಾಗಿ $u_1,u_2,\cdots,u_k$ ಎಂಬ ವೀಕ್ಷಣೆಗಳ ಸಂಭವ್ಯತೆಗಳು ಕ್ರಮವಾಗಿ $x_1,x_2,\cdots,x_k$ ಇದ್ದರೆ ಆಗ $P_\lambda=-2log_e x_1-2log_e x_2-\cdots-2log_e x_k$ ಎಂಬ ಸ್ಟ್ಯಾಟಿಸ್ಟಿಕ್ k ಸ್ವತಂತ್ರ $\chi^2$ ಚರಗಳ ಮೊತ್ತವಾಗಿರುವುದರಿಂದ ಯೋಗಫಲ $\chi^2$ ವಿತರಣೆಯನ್ನು ಅನುಸರಿಸುವುದು. ಇಲ್ಲಿನ ಪ್ರತಿ $\chi^2$ ಸ್ವತಂತ್ರಾಂಕ 2 ಇರುವುದರಿಂದ $P_\lambda$ ವಿನ ಸ್ವಾತಂತ್ರಾಂಕ 2k ಇರುವುದು. ಸಾಂಖ್ಯಿಕೀಯ ಆಧಾರಕಲ್ಪನೆಗಳ ಸಾರ್ಥಕತಾ ಪರೀಕ್ಷಣ ಅಥವಾ ಅಂತರಾರ್ಥ ಪರೀಕ್ಷೆಗಳನ್ನು (ಸಿಗ್ನಿಫಿಕೆನ್ಸ್ ಟೆಸ್ಟ್) ಸಮ್ಮಿಳಿತ ಮಾಡಲು ಈ ವಿತರಣೆ ಬಹಳ ಉಪಯೋಗಕ್ಕೆ ಬರುವುದು.

**ನಿದರ್ಶನದಿಂದ ಪ್ರಾಚಲದ ಅಂದಾಜು** : ಅವಿಚ್ಛಿನ್ನ ಏಕಸಮ ವಿತರಣೆಗೆ ಒಂದು ಪ್ರಾಚಲವಿದೆ. ಅದನ್ನು ಎಂದು ಸೂಚಿಸಿದರೆ ಚರದ ಸಾಂದ್ರತಾ ಉತ್ಪನ್ನವನ್ನು ಹೀಗೆ ನಿರೂಪಿಸಬಹುದು. $f(x)\begin{cases}\frac{1}{\theta}\\ 0\end{cases},\ 0<x<\theta$

ಇದರ ನಕ್ಷೆಯನ್ನು 2(4) ಚಿತ್ರದಲ್ಲಿ ತೋರಿಸಿದೆ. ಇದರ ವಿತರಣ ಉತ್ಪನ್ನವನ್ನು ಹೀಗೆ ನಿರೂಪಿಸಬಹುದು.




ನಕ್ಷೆ 2

$$F(x)\begin{cases}0 & x\le 0 \text{ ಅನ್ಯಥಾ}\\ \frac{x}{\theta} & 0<x\le\theta\\ 1 & 0<x\end{cases}$$

ಇದರ ನಕ್ಷೆಯನ್ನು 2(5)ನೆಯ ಚಿತ್ರದಲ್ಲಿ ತೋರಿಸಿದೆ. ಈ ಸಮಷ್ಟಿಯಿಂದ n-ಗಾತ್ರದ ನಿದರ್ಶನವನ್ನು ಆಯ್ದುಕೊಂಡು ಅದರ ಸಹಾಯದಿಂದ $\theta$ ವನ್ನು ಅಂದಾಜು ಮಾಡುವುದು ರೂಢಿ. n ಸ್ವತಂತ್ರ ವೀಕ್ಷಣೆಗಳಲ್ಲಿ ಎಲ್ಲಕ್ಕಿಂತ ದೊಡ್ಡದನ್ನು $x_{\max}$ ಎಂದು ಸೂಚಿಸಿದರೆ ಇದು $\theta$ ದ ಮಹತ್ತಮ ಪ್ರಾಯಿಕತಾ ಅಂದಾಜು (ಮ್ಯಾಕ್ಸಿಮಂ ಲೈಕ್‌ಲೀಹುಡ್ ಎಸ್ಟಿಮೇಟ್) ಆಗುವುದು. ಇದು ಅಭಿನತ (ಬಯಸ್ಡ್) ಅಂದಾಜು ಆದರೆ ಸುಸಂಗತ (ಕನ್ಸಿಸ್ಟೆಂಟ್). $\theta$ ದ ಅಂದಾಜನ್ನು $[(n+1)/n]\,x_{\max}$ ಎಂದು ತೆಗೆದುಕೊಂಡರೆ ಅದು ಲಘುತ್ತಮ ವಿಚಲದ ಅನಭಿನತ (ಮಿನಿಮಂ ವೇರಿಯನ್ಸ್ ಅನ್‌ಬಯಸ್ಡ್) ಅಂದಾಜಾಗಿರುವುದು. ಕನಿಷ್ಠ ವೀಕ್ಷಣೆ $x_{\min}$ ಇದ್ದರೆ $(x_{\min}+x_{\max})/2$ ಅಂದರೆ $x_{\min}$ ಮತ್ತು $x_{\max}$ ಇವುಗಳ ಸರಾಸರಿಗೆ, ನಡುವ್ಯಾಪ್ತಿ (ಮಿಡ್‌ರೇಂಜ್) ಎಂದು ಹೆಸರು. ಉಪರೋಕ್ತ ಏಕಸಮ ಸಮಷ್ಟಿಯ ಮಧ್ಯಮ $\frac{\theta}{2}$ ಅಜ್ಞಾತವಾದಾಗ ನಿದರ್ಶನದಿಂದ ಇದನ್ನು ಅಂದಾಜು ಮಾಡಬಹುದು. ನಿದರ್ಶನದ ಮಧ್ಯಕಕ್ಕಿಂತ ನಿದರ್ಶನದ ನಡುವ್ಯಾಪ್ತಿ $\theta$ ಕ್ಕೆ ಹೆಚ್ಚು ದಕ್ಷವಾದ ಅಂದಾಜು ಎಂಬುದು ಗಮನಾರ್ಹವಾದುದು.

(ಎಂ.ವಿ.ಜೆ.)

**ಏಕಸ್ವ:** ಒಂದು ಉತ್ಪನ್ನವನ್ನೋ ಪದಾರ್ಥವನ್ನೋ ಮಾರಾಟಮಾಡಲು ಸರ್ಕಾರ ನೀಡಿದ ವಿಶಿಷ್ಟ ಹಕ್ಕು. ಸಮಸ್ತರ ಅವಗಾಹನೆಗೆ ಅವಕಾಶವಿರುವಂತೆ ತೆರೆದಿಟ್ಟ ಅಥವಾ ಬಹಿರಂಗ ಪತ್ರ ಎಂದು ಹೇಳಬಹುದಾದ ಲೆಟರ್ಸ್ ಪೇಟೆಂಟ್ ಎಂಬುದರಿಂದ ಸ್ಥೂಲವಾಗಿ ಈ ಅರ್ಥದಲ್ಲಿ ಬಳಕೆಗೆ ಬಂದ ಪೇಟೆಂಟ್ ಶಬ್ದಕ್ಕೆ ಕನ್ನಡದಲ್ಲಿ ಬಳಸಲಾಗಿರುವ ಸಮಾನಾರ್ಥಕ ಶಬ್ದ. ಪ್ರಶಸ್ತಿ ಪ್ರಧಾನ, ಅಧಿಕಾರಿಗಳ ನೇಮಕ, ಸಂಘ ಸ್ಥಾಪನೆಯ ಸನ್ನದಿನ ನೀಡಿಕೆ, ಹೊಸ ಆವಿಷ್ಕಾರಗಳ ತಯಾರಿಕೆ ಬಳಕೆ ಅನುಭವ ಮಾರಾಟಗಳ ಹಕ್ಕಿನ ಕೊಡುಗೆ – ಇವೆಲ್ಲವೂ ಲೆಟರ್ಸ್ ಪೇಟೆಂಟ್ ಎಂಬ ಬಹಿರಂಗ ಪತ್ರಗಳ ಮುಖೇನವೇ ಆಗುತ್ತಿದ್ದುವಾದರೂ ಇಂಗ್ಲಿಷಿನ ಪೇಟೆಂಟ್ ಎಂಬ ಶಬ್ದ ಇವುಗಳ ಪೈಕಿ ಕೊನೆಯದಕ್ಕೆ ಮಾತ್ರ ಸಾಮಾನ್ಯವಾಗಿ ಅನ್ವಯವಾಗುತ್ತದೆ. ವಾಣಿಜ್ಯ ಕ್ಷೇತ್ರದಲ್ಲಿ ಯಾರಿಗೇ ಆಗಲಿ ಏಕಸ್ವಾಮ್ಯದ ಸಂಪೂರ್ಣ ಹಾಗೂ ನಿರವಧಿ ಹಕ್ಕುಗಳನ್ನು ನೀಡುವುದು ಈಚೆಗೆ ಸರ್ಕಾರಗಳ ನೀತಿಯಾಗಿರುವುದಿಲ್ಲವಾದ್ದರಿಂದ ಈ ಬಗೆಯ ಪ್ರದಾನ ಈಗ ಸಾಮಾನ್ಯವಾಗಿ ಯಾವುದಾದರೊಂದು ಆವಿಷ್ಕಾರದ (ಇನ್‌ವೆನ್‌ಷನ್) ಅಥವಾ ಪರಿಶೋಧನೆಯ (ಡಿಸ್ಕವರಿ) ಫಲವಾದ ಉತ್ಪನ್ನಗಳಿಗೆ ಮಾತ್ರ ಸೀಮಿತವಾಗಿರುತ್ತದೆ; ಒಂದು ಕ್ಲುಪ್ತವಾದ ಅವಧಿಗೆ ಮಾತ್ರ ಇದನ್ನು ಕೊಡಮಾಡಲಾಗುತ್ತದೆ. ವಿಜ್ಞಾನ ಮತ್ತು ಉಪಯುಕ್ತ ಕಲೆಗಳಲ್ಲಿ ಹೊಸ ಹೊಸ ಸಂಶೋಧನೆ ಪ್ರಯೋಗಗಳು ನಡೆಯುವಂತೆ ಉತ್ತೇಜನ ನೀಡುವ ಉದ್ದೇಶದಿಂದ ಈ ಬಗೆಯ ಮಿತವ್ಯಾಪ್ತಿಯ ಹಾಗೂ ಮಿತ ಅವಧಿಯ ಏಕಸ್ವ ಹಕ್ಕುಗಳನ್ನು ಕೊಡಲಾಗುತ್ತಿದೆ.

**ಬ್ರಿಟನ್ನಿನಲ್ಲಿ:** ಹೊಸ ಉಪಯುಕ್ತ ಆವಿಷ್ಕಾರಗಳ ತಯಾರಿಕೆ ಬಳಕೆ ಮತ್ತು ಮಾರಾಟಗಳ ಬಗ್ಗೆ ಆವಿಷ್ಕರ್ತರಿಗೆ (ಇನ್ವೆಂಟರ್ಸ್) ಒಂದು ಕ್ಲುಪ್ತ ಅವಧಿಗೆ ಸಂಪೂರ್ಣ ಹಕ್ಕು ನೀಡುವ ಅಧಿಕಾರ ಇಂಗ್ಲೆಂಡಿನ ದೊರೆಗೆ ಬಲು ಹಿಂದಿನಿಂದಲೂ ಇತ್ತು. ಆದರೆ ಸಂಪ್ರದಾಯ ನ್ಯಾಯ ಇದಕ್ಕೆ ಖಚಿತವೂ ಸ್ಪಷ್ಟವೂ ಆದ ಕೆಲವು ಇತಿಮಿತಿಗಳನ್ನು ವಿಧಿಸಿತ್ತು. ಸಾಮಾನ್ಯ ಬಳಕೆಯ ವಸ್ತುಗಳ ಮಾರಾಟದ ಸಂಪೂರ್ಣ ಹಕ್ಕು ನೀಡುವ ಅಧಿಕಾರ ದೊರೆಗೆ ಇರಲಿಲ್ಲ. ಸರ್ವಮಾನ್ಯವಾದ ಕಸಬೊಂದರ ಬಗ್ಗೆ ಯಾರೊಬ್ಬರಿಗೂ ಸಂಪೂರ್ಣ ಹಕ್ಕು ನೀಡುವಂತಿರಲಿಲ್ಲ. ಹಕ್ಕು ಪಡೆದಾತನೇ ಆವಿಷ್ಕರ್ತನಾಗಿಲ್ಲದಿದ್ದರೂ ಆ ಆವಿಷ್ಕಾರವನ್ನು ದೇಶದಲ್ಲಿ ಅವನೇ ಚಾಲ್ತಿಗೆ ತಂದವನಾದರೂ ಆಗಿರಬೇಕು. ಇತರರಿಗೆ ಅದು ವೇದ್ಯವಾಗುವುದಕ್ಕೆ ಅಗತ್ಯವಾಗುವಷ್ಟು ಅವಧಿಗೆ ಮಾತ್ರ ಈ ಹಕ್ಕು ನೀಡತಕ್ಕದ್ದು. ಈ ಏಕಸ್ವದ ಕೊಡುಗೆಗೆ ಕಾರಣವಾದ ವಸ್ತುವಿನಿಂದ ಹೊಸ ವ್ಯಾಪಾರ ಅಥವಾ ತಯಾರಿಕೆಯಾಗುವಂತಿರಬೇಕು. ಏಕಸ್ವ ನೀಡಲಾದ ಆವಿಷ್ಕಾರದಲ್ಲಿ ಉಪಯುಕ್ತತೆ ಮತ್ತು ಹೊಸತನಗಳಿರಬೇಕು. ಇದರಿಂದ ವ್ಯಾಪಾರಕ್ಕೆ ಅನನುಕೂಲವಾಗಲಿ ಧಕ್ಕೆಯಾಗಲಿ ಒದಗಬಾರದು. ಇವು ಸಂಪ್ರದಾಯನ್ಯಾಯದ ಪ್ರಕಾರ ವಿಧಿಸಲಾಗುತ್ತಿದ್ದ ಕೆಲವು ಷರತ್ತುಗಳು.

ಒಂದನೆಯ ಎಲಿಜಬೆತ್ ಮತ್ತು ಒಂದನೆಯ ಜೇಮ್ಸರ ಕಾಲದಲ್ಲಿ ಏಕಸ್ವವನ್ನು ಕುರಿತ ಸಂಪ್ರದಾಯ ನ್ಯಾಯವನ್ನು ಮೂಲೆಗೊತ್ತಲಾಯಿತು. ದೇಶ ಹಿತಾರ್ಥವಾಗಿ ಹಾಗೂ ವ್ಯಾಪಾರಾಭಿವೃದ್ಧಿಗಾಗಿ ಏಕಸ್ವಗಳನ್ನು ನೀಡಬಹುದೆಂಬ ನಿಯಮವನ್ನು ಮುಂದಿಟ್ಟು ಅನೇಕ ಆವಶ್ಯ ವಸ್ತುಗಳ ವ್ಯಾಪಾರದಲ್ಲಿ ಏಕಸ್ವ ನೀಡಲಾಯಿತು. ಇದನ್ನು ವಿರೋಧಿಸಿ ತೀವ್ರ ಚಳವಳಿ ಹೂಡಿದ ಮೇಲೆ ಕೊನೆಗೂ ಈ ಬಗೆಯ ನ್ಯಾಯಬಾಹಿರ ಏಕಸ್ವಾಮ್ಯ ತೆರವಾಯಿತು. ಇದಕ್ಕಾಗಿ 1624ರಲ್ಲಿ ಜಾರಿಗೆ ಬಂದ ಕಾಯಿದೆ ಬಲು ಮುಖ್ಯವಾದ್ದು. ಒಂದು ಹೊಸ ತಯಾರಿಕೆಗೆ ಸಂಬಂಧಿಸಿದಂತೆ ಅದರ ಪ್ರಥಮ ಆವಿಷ್ಕರ್ತನಿಗೆ (ಅಥವಾ ಆವಿಷ್ಕರ್ತರಿಗೆ) 14 ವರ್ಷಗಳಿಗೆ ಮೀರದಂತೆ ಸಂಪೂರ್ಣ ಹಕ್ಕು ನೀಡಬಹುದೆಂದೂ ಆದರೆ ಬೆಲೆ ಏರಿಸುವ, ವ್ಯಾಪಾರ ಕುಂಠಿಸುವ ಅಥವಾ ದುಷ್ಪರಿಣಾಮವಾಗುವ ಯಾವ ಬಗೆಯ ಹಕ್ಕುಗಳನ್ನೂ ನೀಡಬಾರದೆಂದೂ ವಿಧಿಸಲಾಯಿತು. ಇಂಗ್ಲಿಷ್ ಏಕಸ್ವ ಪದ್ಧತಿಗೆ ಇದೇ ಮೂಲಾಧಾರ. ಮುಂದೆ ಈ ಅವಧಿಯನ್ನು 14 ರಿಂದ 16 ವರ್ಷಗಳಿಗೆ ಏರಿಸಲಾಯಿತು. (1919).

**ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ:** ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಪ್ರಥಮ ಏಕಸ್ವ ಕಾಯಿದೆ ಜಾರಿಗೆ ಬಂದದ್ದು 1790ರಲ್ಲಿ. ಇದರ ಪ್ರಕಾರ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಅದುವರೆಗೂ ಗೊತ್ತಿಲ್ಲದ ಅಥವಾ ಬಳಸಲಾಗಿಲ್ಲದ ಯಾವುದೇ ಆವಿಷ್ಕಾರದ ನಿಜವಾದ ಕರ್ತನಿಗೆ 14 ವರ್ಷಗಳ ಅವಧಿಯ ಏಕಸ್ವ ಕೊಡಬಹುದಾಗಿತ್ತು. 1793ರಲ್ಲಿ ಇನ್ನೊಂದು ಕಾಯಿದೆ ಜಾರಿಗೆ ಬಂತು. ಇಂದು ಜಾರಿಯಲ್ಲಿರುವ ಏಕಸ್ವ ನ್ಯಾಯಕ್ಕೆ 1836ರ ಕಾಯಿದೆಯೇ ಆಧಾರ. ಇದು 1870ರ ಕಾಯಿದೆಯಿಂದ ವಿಸ್ತೃತಗೊಂಡಿತು. ಅಲ್ಲಿಂದೀಚೆಗೆ ಇದಕ್ಕೆ ಪದೇ ಪದೇ ತಿದ್ದುಪಡಿಗಳಾಗಿವೆ. ಏಕಸ್ವಗಳಿಗೂ ಕೈಗಾರಿಕೆಗೂ ಇರುವ ಸಂಬಂಧವನ್ನೂ ಕೈಗಾರಿಕೆಯ ಹಿತದೃಷ್ಟಿಯಿಂದ ಎಷ್ಟರಮಟ್ಟಿಗೆ ಇವು ಸೂಕ್ತವೆಂಬುದನ್ನೂ ಪರಿಶೀಲಿಸಲಾಗುತ್ತಿದೆ. ಪರಿಷ್ಕರ್ತನಿಗೆ ನೀಡಲಾಗುವ ಏಕಸ್ವದ ಅವಧಿ 17 ವರ್ಷ. ಸಸ್ಯಗಳ ಹೊಸ ತಳಿಗಳ ಪರಿಶೋಧನೆ ಮತ್ತು ಆವರ್ತನೆಗಳಿಗೆ ಏಕಸ್ವ ಪಡೆಯಲು 1930ರಲ್ಲಿ ಅವಕಾಶ ನೀಡಲಾಯಿತು.

**ಭಾರತದಲ್ಲಿ:** ಭಾರತ ಸರ್ಕಾರ 1970ರಲ್ಲಿ ಏಕಸ್ವಗಳ ಮತ್ತು ನಕ್ಷೆಗಳ ಕಾಯಿದೆ 1911ನ್ನು(ದಿ ಪೇಟೆಂಟ್ಸ್ ಅಂಡ್ ಡಿಸೈನ್ಸ್ ಆಕ್ಟ್) ಜಾರಿಗೆ ತಂದಿತು. ಏಕಸ್ವಕ್ಕೆ ಸಂಬಂಧಪಟ್ಟ ವಿಚಾರಗಳನ್ನು ವ್ಯವಸ್ಥೆಯಿಂದ ನಡೆಸಲು ಏಕಸ್ವ ಕಚೇರಿಯನ್ನು ನಿರ್ಮಿಸಿದೆ. ಇದಕ್ಕೆ ಒಬ್ಬ ಮುಖ್ಯಾಧಿಕಾರಿ–ನಿಯಂತ್ರಿಕ (ಕಂಟ್ರೋಲರ್)–ಇರುತ್ತಾನೆ.

**ಏಕಸ್ವ ಪಡೆಯುವ ಕ್ರಮ:** ಏಕಸ್ವವನ್ನು ಪಡೆಯಲು ಇಚ್ಛಿಸುವಾತ (ಅಥವಾ ಇಂಥ ಹಲವರು) ಏಕಸ್ವ ಕಚೇರಿಗೆ ನಿರ್ದಿಷ್ಟ ನಮೂನೆಯಲ್ಲಿ (ಫಾರ್ಮ್) ಅರ್ಜಿ ಬರೆದುಕೊಳ್ಳಬೇಕು. ಅರ್ಜಿದಾರ ಭಾರತೀಯ ಪ್ರಜೆಯೇ ಆಗಬೇಕೆಂದಿಲ್ಲ. ನವೀನ ಆವಿಷ್ಕಾರದ (ಶೋಧನೆಯ) ಸ್ವಾಧೀನ ಪಡೆದಿರುವುದಾಗಿ ಅಭ್ಯರ್ಥಿ ತನ್ನ ಅರ್ಜಿಯಲ್ಲಿ ನಿರೂಪಿಸಬೇಕು. ಅಭ್ಯರ್ಥಿ–ಅಥವಾ ಅಭ್ಯರ್ಥಿಗಳಲ್ಲಿ ಒಬ್ಬ–ಪರಿಷ್ಕರ್ತನಾಗಿರಬೇಕು; ಅಥವಾ ಪರಿಷ್ಕಾರದ ಒಡೆಯನೋ ಅದನ್ನು ಬೇರೆಯವರಿಂದ ಪಡೆದವನೋ ಆಗಿರಬೇಕು. ಅರ್ಜಿಯೊಂದಿಗೆ ಶೋಧನೆಯ ರೂಪುರೇಷೆಗಳನ್ನು ಒಳಗೊಂಡ ತಾತ್ಕಾಲಿಕ ಅಥವಾ ಪರಿಪೂರ್ಣ ವಿವರಣೆ ಕೊಡಬೇಕು. ಅಭ್ಯರ್ಥಿಗಳಲ್ಲಿ ಯಾರೂ ಆವಿಷ್ಕರ್ತರಾಗಿರದಿದ್ದರೆ ಆವಿಷ್ಕರ್ತನ ವಿವರಗಳನ್ನು ಕೊಟ್ಟು ಆ ಹಕ್ಕು ತಮಗೆ ಯಾವ ರೀತಿ ಬಂತೆಂದು ನಿರೂಪಿಸಬೇಕು. ವಿವರಣೆ ಪತ್ರ ಅತಿಮುಖ್ಯ ದಾಖಲೆ. ಆವಿಷ್ಕಾರ ಯಾವ ರೀತಿಯದು ಎಂಬುದು ಸುಸ್ಪಷ್ಟವಾಗಿ ಅದರಿಂದ ತಿಳಿಯುವಂತಿರಬೇಕು. ಅದನ್ನು ಅಲ್ಲಿ ಹೆಸರಿಸಬೇಕು. ಆವಿಷ್ಕಾರ ಯಾವ ಬಗೆಯದು, ಅದನ್ನು ಕಾರ್ಯಗತಗೊಳಿಸುವ ಕ್ರಮ ಯಾವುದು–ಮುಂತಾದ ಅಂಶಗಳು ಪರಿಪೂರ್ಣ ವಿವರಣಪತ್ರದಲ್ಲಿ ಇರುವುದು ಆವಶ್ಯ. ಆವಿಷ್ಕಾರವನ್ನು ಕುರಿತ ಹೆಚ್ಚಿನ ವಿವರ ಆವಶ್ಯವೆಂದು ನಿಯಂತ್ರಕನಿಗೆ ಎನಿಸಿದರೆ ಆತ ಆ ಬಗ್ಗೆ ಆದೇಶ ನೀಡಬಹುದು. ತಾತ್ಕಾಲಿಕ ವಿವರಣ ಪತ್ರ ಸಲ್ಲಿಸಿದ್ದ ಪಕ್ಷದಲ್ಲಿ ಮುಂದಿನ ಒಂಬತ್ತು ತಿಂಗಳೊಳಗೆ ಪರಿಪೂರ್ಣ ಪತ್ರ ಸಲ್ಲಿಸತಕ್ಕದ್ದು. ಈ ಅವಧಿಯನ್ನು ಮತ್ತೆ ಹತ್ತು ತಿಂಗಳಿಗೆ ವಿಸ್ತರಿಸಬಹುದು. ಇಷ್ಟರೊಳಗೂ ಸಂಪೂರ್ಣ ವಿವರಣ ಪತ್ರ ಬಾರದಿದ್ದಲ್ಲಿ ಅಭ್ಯರ್ಥಿಗಳು ಅದನ್ನು ಬಿಟ್ಟಂತೆ ಲೆಕ್ಕ.

ನಿಯಮಿತ ಕಾಲದೊಳಗೆ ಪರಿಪೂರ್ಣ ವಿವರಣ ಪತ್ರವೇ ಮುಂತಾದವು ಬಂದಲ್ಲಿ ಅರ್ಜಿ ಕಾನೂನುಬದ್ಧವಾಗಿದೆಯೆ ಎಂಬ ಎಲ್ಲ ವಿಚಾರಗಳನ್ನು ವಿಮರ್ಶಿಸಲು ನಿಯಂತ್ರಕ ಈ ಪತ್ರಗಳನ್ನು ಪರೀಕ್ಷಕನಿಗೆ (ಎಗ್ಸಾಮಿನರ್) ಕಳುಹಿಸುತ್ತಾನೆ. ಈ ವಿಚಾರದಲ್ಲಿ ಆತನಿಂದ ಬಂದ ವರದಿಯ ಆಧಾರದ ಮೇಲೆ ನಿಯಂತ್ರಕ ತೀರ್ಮಾನ ಕೈಗೊಳ್ಳುತ್ತಾನೆ. ಆತ ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸಬಹುದು; ಅಥವಾ ನಕ್ಷೆಯ ವಿವರಣೆಗಳಲ್ಲಿ ತಿದ್ದುಪಡಿ ಮಾಡುವಂತೆ ಆದೇಶಿಸಬಹುದು. ಅರ್ಜಿಯಲ್ಲಿ ಒಂದು ಶೋಧನೆಗಿಂತ ಹೆಚ್ಚಿನ ಶೋಧನೆಗಳು ಅಡಕವಾಗಿದ್ದಲ್ಲಿ ಇವಕ್ಕೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕೆಂದು ನಿರ್ದೇಶಿಸಬಹುದು.

ಹದಿನೆಂಟು ತಿಂಗಳ ಒಳಗೆ ಅರ್ಜಿಯ ಸ್ವೀಕಾರ ಪ್ರಕಟವಾಗಬೇಕು. ಇಲ್ಲದಿದ್ದಲ್ಲಿ ಅದು ಅಸ್ವೀಕೃತವಾಯಿತೆಂದು ಅರ್ಥ. ಇದರ ಬಗ್ಗೆ ಆಕ್ಷೇಪಣೆಯೇನಾದರು ಇದ್ದರೆ ಅದನ್ನು ಅರ್ಜಿ ಸ್ವೀಕೃತವಾಯಿತೆಂದು ಪ್ರಕಟವಾದ ನಾಲ್ಕು ತಿಂಗಳ ಒಳಗೆ ಕಚೇರಿಗೆ ತಿಳಿಸಬೇಕು. ಅರ್ಜಿದಾರ ತನ್ನಿಂದಲೋ ತಾನು ಯಾರ ಪ್ರತಿನಿಧಿಯೋ ಅವನಿಂದಲೋ ಅಥವಾ ತನಗೆ ಆ ಹಕ್ಕನ್ನು ವರ್ಗಾಯಿಸಿದವರಿಂದಲೋ ಇದನ್ನು ಪಡೆದಿದ್ದಾನೆಂದು ಕಕ್ಷಿಯ ಆಕ್ಷೇಪವಿರಬಹುದು. ಇದಕ್ಕೆ ಮುಂಚೆಯೆ ಹಾಕಿದ ಅರ್ಜಿಯಲ್ಲಿ ನಮೂದಿಸಿರುವ ವಿವರಗಳನ್ನೇ ಇದೂ ಒಳಗೊಂಡಿದೆಯೆಂದೂ ಆದ್ದರಿಂದ ಇದಕ್ಕೆ ಏಕಸ್ವ ಕೊಡಲಾಗದೆಂದೂ ತಕರಾರು ಹೂಡಬಹುದು; ಅಥವಾ ಈ ಅರ್ಜಿಯಲ್ಲಿ ಕಾಣಿಸಿರುವ ಆವಿಷ್ಕಾರ ಭಾರತದಲ್ಲಿ ಆಗಲೇ ಬಳಕೆಯಲ್ಲಿತ್ತೆಂದೂ ಇದರ ಉಪಯೋಗ ಮೊದಲೇ ತಿಳಿದಿತ್ತೆಂದೂ ವಾದಿಸಬಹುದು. ಇಂಥ ಆಕ್ಷೇಪಣೆಯನ್ನು ವಿಚಾರಿಸಿ ಸೂಕ್ತ ತೀರ್ಪು ನೀಡುವುದು ನಿಯಂತ್ರಕನ ಕರ್ತವ್ಯ.

ಯಾರ ಆಕ್ಷೇಪಣೆಯೂ ಇರದಿದ್ದರೆ ಅಥವಾ ಆಕ್ಷೇಪಣೆಯನ್ನು ತಳ್ಳಿಹಾಕಿದರೆ ಸರ್ಕಾರ ಸೂಚಿಸಿದ ಸೂಕ್ತ ಷರತ್ತುಗಳಿಗೆ ಒಳಪಡಿಸಿ ಏಕಸ್ವ ಕಚೇರಿ ತನ್ನ ಮೊಹರು ನಿಶಿ ಅರ್ಜಿದಾರನಿಗೆ ಅಥವಾ ಅರ್ಜಿದಾರರಿಗೆ ಏಕಸ್ವ ನೀಡುತ್ತದೆ. ಈ ಏಕಸ್ವವನ್ನು ಪಡೆದವರಿಗೆ ಇದರಲ್ಲಿ ನಮೂದಿಸಿದ ಹೊಸ ಆವಿಷ್ಕಾರದ ಪ್ರಕಾರ ವಸ್ತುವನ್ನು ಭಾರತದಲ್ಲಿ ತಯಾರಿಸಲು, ಅದನ್ನು ಉಪಯೋಗಿಸಲು ಮತ್ತು ಅದನ್ನು ಮಾರಲು ಮಾತ್ರವಲ್ಲದೆ ಈ ಅಧಿಕಾರವನ್ನು ಇನ್ನೊಬ್ಬರಿಗೆ ವರ್ಗಾಯಿಸಲೂ ಹಕ್ಕು ಬರುತ್ತದೆ. ಸಾಮಾನ್ಯವಾಗಿ ಏಕಸ್ವವನ್ನು ಅರ್ಜಿಯ ತಾರೀಖಿನಿಂದ ಇಪ್ಪತ್ನಾಲ್ಕು ತಿಂಗಳುಗಳ ಒಳಗೆ ಕೊಡಬೇಕು. ನಿಯಂತ್ರಕ ಕೊಟ್ಟ ತೀರ್ಪಿನಿಂದಲೋ ತಕರಾರು ಅರ್ಜಿಯನ್ನು ತಳ್ಳಿ ಹಾಕಿದ್ದೇ ಮುಂತಾದ್ದರಿಂದಲೋ ತೊಂದರೆಗೆ ಒಳಗಾದವನು ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡಲು ಶಾಸನದಲ್ಲಿ ಅವಕಾಶವುಂಟು.

**ರಕ್ಷಣೆ:** ಏಕಸ್ವ ನೀಡುವ ವಿಚಾರದ ತೀರ್ಮಾನಕ್ಕೆ ಯಾವ ಬಾಧಕವೂ ಬಾರದ ರೀತಿಯಲ್ಲಿ ಅರ್ಜಿಯ ತಾರೀಖಿನಿಂದ ಏಕಸ್ವ ನೀಡುವ ತಾರೀಖಿನವರೆಗೆ ಸಂಬಂಧಪಟ್ಟ ವಸ್ತುವನ್ನು ಉಪಯೋಗಿಸಲೂ ಅದರ ಬಗ್ಗೆ ಪ್ರಚಾರ ಮಾಡಲೂ ಅರ್ಜಿದಾರರಿಗೆ ಹಕ್ಕುಂಟು. ಇದನ್ನು ತಾತ್ಕಾಲಿಕ ರಕ್ಷಣೆಯೆಂದು ಕರೆಯಲಾಗುತ್ತದೆ.

ಏಕಸ್ವದ ಅವಧಿ ಅದರಲ್ಲಿ ಹಾಕಿದ ತಾರೀಖಿನಿಂದ ಹದಿನಾರು ವರ್ಷ. ಅವಧಿ ಮುಗಿಯುವುದಕ್ಕೆ ಆರು ತಿಂಗಳ ಮುನ್ನ ಈ ಅವಧಿಯನ್ನು ಮುಂದುವರಿಸಲು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ಆ ವಿಚಾರದಲ್ಲಿ ಬಹಿರಂಗವಾದ ಪ್ರಕಟಣೆಯನ್ನು ನಿರ್ದಿಷ್ಟ ಕ್ರಮದಲ್ಲಿ ಕೊಡಬೇಕು. ಅದಕ್ಕೆ ಯಾರಾದರೂ ಆಕ್ಷೇಪಣೆ ಸಲ್ಲಿಸುವುದಿದ್ದರೆ ನಿರ್ದಿಷ್ಟ ಸಮಯದ ಒಳಗೆ ಅದನ್ನು ಸಲ್ಲಿಸಬಹುದು. ಅವಧಿ ಮುಂದುವರಿಸಲು ಮಾಡಿದ ಅರ್ಜಿಯನ್ನು ಕೇಂದ್ರ ಸರ್ಕಾರ ತಾನೇ ಪರಾಮರ್ಶೆ ಮಾಡಿ ನಿರ್ಧರಿಸಬಹುದು. ಅಗತ್ಯ ಕಂಡಲ್ಲಿ ಉಚ್ಚನ್ಯಾಯಾಲಯಕ್ಕೆ ತೀರ್ಮಾನಕ್ಕೆ ಕಳುಹಿಸಬಹುದು. ನಿಯಂತ್ರಕನೂ ಆಕ್ಷೇಪಣೆ ಕೊಟ್ಟವನೂ ಈ ವ್ಯಾಜ್ಯದ ಪಕ್ಷಗಳೆಂದು (ಪಾರ್ಟಿ) ಉಚ್ಚನ್ಯಾಯಾಲಯದಲ್ಲಿ ತಿಳಿಯಲಾಗುತ್ತದೆ. ಕೊಟ್ಟ ಏಕಸ್ವದಿಂದ ಸರಿಯಾದ ಉತ್ಪತ್ತಿ ದೊರಕಿಲ್ಲವಾದರೆ ಕೇಂದ್ರ ಸರ್ಕಾರ ಅಥವಾ ಉಚ್ಚನ್ಯಾಯಾಲಯ ಏಕಸ್ವವನ್ನು ಐದು ವರ್ಷ (ವಿಶೇಷ ಸಂದರ್ಭದಲ್ಲಿ ಹತ್ತು ವರ್ಷಗಳ ಕಾಲ) ಮುಂದುವರಿಸಬಹುದು.

**ಏಕಸ್ವಕ್ಕೆ ಮೋಸದ ಅರ್ಜಿ:** ಯಾರಾದರೂ ಸುಳ್ಳು ಅರ್ಜಿ ನೀಡಿ ಏಕಸ್ವ ಪಡೆದಿದ್ದರೆ ಅದರಿಂದ ಮೊತ್ತ ಮೊದಲಿನ ಆವಿಷ್ಕರ್ತನಿಗೆ ಅಥವಾ ಅವನ ವಾರಸುದಾರ ಅಥವಾ ಅವನಿಂದ ಆವಿಷ್ಕಾರವನ್ನು ಪಡೆದವನಿಗೆ ಯಾವ ಬಗೆಯ ಧಕ್ಕೆಯೂ ಒದಗದೆಂದು ಕಾಯಿದೆ ಸ್ಪಷ್ಟಪಡಿಸುತ್ತದೆ. ಮೋಸದ ಅರ್ಜಿಯಿಂದ ಪಡೆದ ರಕ್ಷಣೆಯಿಂದ ಮೊತ್ತ ಮೊದಲಿನ ಆವಿಷ್ಕರ್ತನ ಹಕ್ಕಿಗೆ ಯಾವ ಕುಂದೂ ಉಂಟಾಗುವುದಿಲ್ಲ.

ಅರ್ಜಿದಾರರು ಪ್ರಥಮ ಆವಿಷ್ಕರ್ತರಲ್ಲವೆಂಬ ಕಾರಣದಿಂದ ಏಕಸ್ವವನ್ನು ಉಚ್ಚನ್ಯಾಯಾಲಯ ರದ್ದು ಮಾಡಿದರೆ ಅಥವಾ ಅದೇ ಕಾರಣಕ್ಕಾಗಿ ಆಕ್ಷೇಪಣೆ ಅರ್ಜಿಯನ್ನು ನಿಯಂತ್ರಕ ಎತ್ತಿ ಹಿಡಿದಲ್ಲಿ ಕಾಯಿದೆಯ ಪ್ರಕಾರ ಮೊದಲಿನ ಆವಿಷ್ಕರ್ತ ಅರ್ಜಿ ಬರೆದುಕೊಂಡರೆ ಆತನಿಗೆ ಏಕಸ್ವ ನೀಡಬಹುದು.

ಏಕಸ್ವ ಪಡೆದವರ ಹೆಸರು, ಏಕಸ್ವದ ವಿವರ, ಅದರ ವರ್ಗಾವಣೆ, ಏಕಸ್ವದ ಉಪಯೋಗಕ್ಕೆ ಕೊಟ್ಟ ಪರವಾನಿಗೆ (ಲೈಸೆನ್ಸ್), ಏಕಸ್ವದ ಸನ್ನದಿಗೆ ಮಾಡಿದ ತಿದ್ದುಪಡಿ ಮುಂತಾದವುಗಳನ್ನು ತೋರಿಸುವ ರಿಜಿಸ್ಟರನ್ನು ಏಕಸ್ವದ ಕಚೇರಿಯಲ್ಲಿ ಇಟ್ಟಿರಬೇಕು. ಇದರಲ್ಲಿ ಬರೆಯಬೇಕೆಂದು ವಿಧಿಸಲಾಗಿರುವ ಎಲ್ಲಾ ವಿಚಾರಗಳಲ್ಲೂ ಇದು ಆಪಾತತಃ (ಪ್ರೈಮ ಫೇಷಿಯೀ) ದಾಖಲೆ.

ಕಾಯಿದೆಯ ಪ್ರಕಾರ ಕೊಟ್ಟ ಹಕ್ಕುಗಳ ಹೊರತು ಸರ್ಕಾರಕ್ಕೆ ಏಕಸ್ವ ಹಕ್ಕಿಗೆ ಚ್ಯುತಿ ತರುವ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಅರ್ಜಿದಾರನಿಗೆ ಅಥವಾ ಏಕಸ್ವದಾರನಿಗೆ ಜಾಹೀರು ಮಾಡಿ ಸರ್ಕಾರದ ಕೆಲಸಕ್ಕಾಗಿ ಏಕಸ್ವದ ಆವಿಷ್ಕಾರವನ್ನು ಉಪಯೋಗಿಸುವ ಹಕ್ಕು ಸರ್ಕಾರದ ಯಾವುದೇ ಇಲಾಖೆಯ ಅಧಿಕಾರಿಗೆ ಇದೆ. ಯುದ್ಧಕ್ಕೆ ಸಂಬಂಧಪಟ್ಟ ಆವಿಷ್ಕಾರಗಳನ್ನು ಆವಿಷ್ಕರ್ತ ಸರ್ಕಾರಕ್ಕೆ ಬಿಟ್ಟು ಕೊಡಬಹುದು.

**ಪರವಾನೆ:** ಏಕಸ್ವಸನ್ನದನ್ನು ಮೊಹರು ಮಾಡಿದ ಮೂರು ವರ್ಷಗಳ ಬಳಿಕ ಕಾಯಿದೆಯಲ್ಲಿ ನಮೂದಿಸಿರುವ ಕಾರಣಗಳಿಗಾಗಿ ಬೇರೆ ಯಾರಾದರೂ ಅದರ ಉಪಯೋಗವೇ ಮುಂತಾದವುಗಳ ಬಗ್ಗೆ ಪರವಾನೆ ಬಯಸಿ ಕೇಳಬಹುದು. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿದ ಏರ್ಪಾಡು. ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರವಾಗಲಿ ಹಕ್ಕಿನ ಪರವಾನೆಯನ್ನು ಭಾರತದ ವಾಣಿಜ್ಯ ಬೆಳವಣಿಗೆಯ ದೃಷ್ಟಿಯಿಂದ ಕೇಳಬಹುದು. ಇಂಥ ಅರ್ಜಿಗಳಿಗೆ ಇರಬೇಕಾದ ಕಾರಣಗಳು, ಅರ್ಜಿಗಳನ್ನು ತೀರ್ಮಾನ ಮಾಡುವ ವಿಧಾನ, ಇದಕ್ಕಾಗಿ ಕೊಡತಕ್ಕ ಪರಿಹಾರ, ಅಪೀಲು ಇತ್ಯಾದಿಗಳ ಬಗ್ಗೆ ಕಾಯಿದೆಯಲ್ಲಿ ಸೂಕ್ತ ವಿಧಿಗಳನ್ನು ನಿರ್ಮಿಸಲಾಗಿದೆ.

ಏಕಸ್ವವನ್ನು ಬಿಟ್ಟುಕೊಡುವುದಾಗಿ ಅದರ ಹಕ್ಕುದಾರ ಇಚ್ಛಿಸಿದ ಪಕ್ಷದಲ್ಲಿ ನಿಯಂತ್ರಕ ಸೂಕ್ತವಾದ ಜಾಹೀರು ನೀಡಿ ಯುಕ್ತ ವಿಚಾರಣೆ ನಡೆಸಿ ಅನಂತರ ಅದನ್ನು ರದ್ದು ಪಡಿಸಬಹುದು. ಯಾವುದೇ ಏಕಸ್ವದಿಂದ ದೇಶಕ್ಕೆ ಅಥವಾ ಸಾರ್ವಜನಿಕರಿಗೆ ಅಪಚಾರವಾಗಿದೆಯೆಂದು ಪ್ರಕಟಿಸಿ ಸರ್ಕಾರ ಆ ಏಕಸ್ವವನ್ನು ರದ್ದು ಪಡಿಸಬಹುದು.

ಯಾರಿಂದಲಾದರೂ ಏಕಸ್ವಕ್ಕೆ ಚ್ಯುತಿ ಬಂದಾಗ ಆ ಬಗ್ಗೆ ಜಿಲ್ಲಾ ನ್ಯಾಯಾಲಯದ ಮುಂದೆ ವ್ಯವಹಾರ ಮಾಡಬಹುದು. ಏಕಸ್ವನ್ನು ರದ್ದು ಮಾಡಬೇಕೆಂದು ಪ್ರತಿ ಅಭ್ಯರ್ಥನೆ ಇದ್ದಲ್ಲಿ ವ್ಯವಹಾರದ ತೀರ್ಮಾನಕ್ಕೆ ಉಚ್ಚನ್ಯಾಯಾಲಯಕ್ಕೆ ಕಳುಹಿಸಬೇಕು. ಆದರೆ ಏಕಸ್ವದ ತಿಳಿವಳಿಕೆ ಇಲ್ಲದೆ ಅಥವಾ ತಿಳಿಯಲು ಆಸ್ಪದವಿಲ್ಲದೆ ಒಬ್ಬ ಏಕಸ್ವಕ್ಕೆ ಚ್ಯುತಿ ತಂದಿದ್ದರೆ ಅವನ ಮೇಲೆ ನಷ್ಟಕ್ಕೆ ದಾವೆ ನಿಲ್ಲಲಾರದು. ಆದರೂ ನ್ಯಾಯಾಲಯದಲ್ಲಿ ತಡೆಯಾಜ್ಞೆಯ (ಇಂಜೆಕ್ಷನ್) ವ್ಯವಹಾರ ಮಾಡಲು ಯಾವ ಅಡ್ಡಿಯೂ ಇಲ್ಲ. ಈ ವ್ಯಾಜ್ಯದ ಅರ್ಜಿ ಸೂಕ್ತವೆನಿಸಿದಲ್ಲಿ ಕೋರ್ಟು ಈ ಬಗ್ಗೆ ಆದೇಶ ನೀಡುವುದಲ್ಲದೆ ಲೆಕ್ಕಪತ್ರಗಳ ಪರಿಶೀಲನೆಯೇ ಮೊದಲಾದ ನಿವೃತ್ತಿಗಳನ್ನೂ ಕೊಡಬಹುದು. ಉಚ್ಚನ್ಯಾಯಾಲಯದಲ್ಲಿ ನಡೆದ ಮೊಕದ್ದಮೆಯ ತೀರ್ಪನ್ನೂ ಅದು ನಿಯಂತ್ರಕನಿಗೆ ಕಳುಹಿಸಬೇಕು. ನಿಯಂತ್ರಕ ಈ ತೀರ್ಮಾನದ ವಿವರಗಳನ್ನು ಏಕಸ್ವ ರಿಜಿಸ್ಟರಿನಲ್ಲಿ ದಾಖಲು ಮಾಡಿಕೊಳ್ಳುತ್ತಾನೆ.

ತಾನೇ ಏಕಸ್ವ ಹಕ್ಕುದಾರನೆಂದು ಹೇಳುತ್ತಾ ಬೇರೊಬ್ಬ ಅದಕ್ಕೆ ಚ್ಯುತಿ ತಂದನೆಂದು ಆರೋಪಿಸಿ ನಷ್ಟಕ್ಕೆ ಅಥವಾ ಇತ್ಯಾದಿಗಳಿಗೆ ವ್ಯಾಜ್ಯ ಮಾಡುವುದಾಗಿ ಹೆದರಿಸಿ ಬಹಿರಂಗ ಪತ್ರ, ಜಾಹೀರಾತು ಇತ್ಯಾದಿಗಳನ್ನು ಮಾಡಿದರೆ ಅವನ ಮೇಲೆ ತೊಂದರೆಗೆ ಈಡಾದವ ಜಿಲ್ಲಾ ನ್ಯಾಯಾಲಯದಲ್ಲಿ ಸೂಕ್ತ ನಿರ್ದೇಶನಕ್ಕೂ ನಷ್ಟಕ್ಕೂ ವ್ಯಾಜ್ಯ ಹೂಡಬಹುದು.

ಏಕಸ್ವಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳು ನೀಡಿರುವ ತೀರ್ಪುಗಳಿಂದ ಕೆಲವು ವಿಚಾರಗಳು ಸಿದ್ಧಪಡುತ್ತವೆ. ಹೊಸ ಆವಿಷ್ಕಾರವೆಂದರೇನು ಎಂಬುದು ಒಂದು ಮುಖ್ಯ ವಿಚಾರ. ಇನ್ನೊಬ್ಬರು ಆ ಸಮಯದ ತನಕ ಕಂಡು ಹಿಡಿಯದ ಯಾವುದನ್ನಾದರೂ ಅನೇಕ ವಿಧಾನಗಳಿಂದ ಒಬ್ಬ ಕಂಡುಹಿಡಿಯಬಹುದು. ಇದರಿಂದಾಗಿ ಇವನ ಹಿಂದಿನವನ ಅರ್ಜಿ ಹಾಕಿ ಏಕಸ್ವ ಪಡೆಯಲು ತೊಂದರೆಯೇನೂ ಬರುವುದಿಲ್ಲ. ಒಂದು ಆವಿಷ್ಕಾರದ ಏಕಸ್ವವನ್ನು ಅದು ಹೊಸತಲ್ಲವೆಂಬ ಕಾರಣದಿಂದ ನಿರಾಕರಿಸುವಾಗ ಆ ಆವಿಷ್ಕಾರ ಉಪಯೋಗದಲ್ಲಿ ಇತ್ತು. ಅದು ತಿಳಿದೂ ಇತ್ತು ಎಂದು ತೋರಿಸಿಕೊಡಬೇಕಾದುದಿಲ್ಲ. ಅದರ ವರ್ಣನೆ ಒಂದು ಪುಸ್ತಕದಲ್ಲಿ ವಿವರಿಸಲಾಗಿದ್ದು ಸಾರ್ವಜನಿಕರ ಅವಗಾಹನೆಗೆ ಬಂದಿದ್ದರೆ ಆ ಆವಿಷ್ಕಾರ ತಿಳಿದಿತ್ತು ಎಂಬುದಾಗಿ ತೀರ್ಮಾನಿಸಬಹುದು. ಒಂದು ಆವಿಷ್ಕಾರದಿಂದ ಹಿಂದೆ ಗೊತ್ತಿದ್ದ ಆವಿಷ್ಕಾರದ ಸುಧಾರಣೆಯಾಗಿದ್ದರೆ ಅದು ನವೀನ ಆವಿಷ್ಕಾರ ಎನಿಸಿಕೊಳ್ಳುತ್ತದೆ. ಆವಿಷ್ಕಾರ ಮಾಡುವ ಸಲುವಾಗಿ ಒಬ್ಬ ಹಣ ಒದಗಿಸಿದ ಮಾತ್ರಕ್ಕೆ ಆತನೇ ಆವಿಷ್ಕರ್ತನಾಗಲಾರ. ಒಂದು ಸಂಸ್ಥೆ ಏಕಸ್ವ ಪಡೆಯಬಹುದಾದರೂ ಅದೇ ಆವಿಷ್ಕರ್ತವೆಂದೆನಿಸಿ ಕೊಳ್ಳಬೇಕಾದುದಿಲ್ಲ. ಏಕಸ್ವ ಪಡೆದವನೆಂದರೆ ಅದನ್ನು ಇತರರಿಂದ ಪಡೆದವನೂ ಸೇರುತ್ತಾನೆ.

ಹೊಸ ಆವಿಷ್ಕಾರದ ಗಂಧಗಾಳಿಯೂ ಇಲ್ಲದೆ ಎರಡು ಅಥವಾ ಹೆಚ್ಚು ವಸ್ತುಗಳನ್ನು ಜೋಡಿಸಿದ ಮಾತ್ರಕ್ಕೆ ನವೀನ ಆವಿಷ್ಕಾರವಾಗಲಾರದು. ಏಕಸ್ವದ ಚ್ಯುತಿಯ ವ್ಯಾಜ್ಯ ಬಂದಾಗ ಆ ಆವಿಷ್ಕಾರ ಉಪಯುಕ್ತವೇ ಅಲ್ಲವೆ ಎಂಬುದನ್ನು ನೋಡಬೇಕು. ಏಕಸ್ವದ ಸಿಂಧುತ್ವಕ್ಕೆ ಪ್ರಧಾನವಾದ ಅಂಶವೆಂದರೆ ಅದರ ನಾವೀನ್ಯ.

ಏಕಸ್ವದ ಚ್ಯುತಿಗೆ ವ್ಯಾಜ್ಯವಾದಾಗ ಏಕಸ್ವದ ಸಿಂಧುತ್ವವನ್ನು ಪ್ರಶ್ನಿಸಬಹುದು. ನಷ್ಟಕ್ಕೆ ಮಾಡಿದ ದಾವೆಯಲ್ಲಿ ಏಕಸ್ವದ ತಿಳಿವಳಿಕೆಯಿರಲಿಲ್ಲ, ಅದನ್ನು ತಿಳಿದುಕೊಳ್ಳಲು ಆಸ್ಪದವಿರಲಿಲ್ಲ–ಎಂದು ಪ್ರತಿವಾದಿ ವಾದಿಸಬಹುದು. ಪ್ರತಿವಾದಿಯ ಮೇಲೆ ತಡೆಯಾಜ್ಞೆಯ ವ್ಯವಹಾರ ಕೈಗೊಂಡಾಗ ತಾತ್ಕಾಲಿಕ (ವ್ಯಾಜ್ಯ ಮುಗಿಯುವ ತನಕ) ತಡೆಯಾಜ್ಞೆ ಕೇಳಬಹುದು. ಸೂಕ್ತವೆನಿಸಿದಾಗ ನ್ಯಾಯಾಲಯ ತಡೆಯಾಜ್ಞೆ ನೀಡಬಹುದು. **(ಕೆ.ಜಿ.ಬಿ)**

**ಅಂತಾರಾಷ್ಟ್ರೀಯ ಏಕಸ್ವ ಹಕ್ಕುಗಳು:** ಒಂದು ಏಕಸ್ವದ ಹಕ್ಕುಗಳ ವ್ಯಾಪ್ತಿಯಿರುವುದು ಅದನ್ನು ನೀಡುವ ದೇಶದ ಗಡಿಯೊಳಗೆ ಮಾತ್ರ. ನಾನಾ ದೇಶಗಳಲ್ಲಿ ಏಕಸ್ವ ಹಕ್ಕು ಹೊಂದಬೇಕೆಂದು ಬಯಸುವವರು ಈಗ ದೇಶಗಳಲ್ಲಿ ಒಂದೊಂದರಲ್ಲೂ ಪ್ರತ್ಯೇಕವಾಗಿ ಇದನ್ನು ಪಡೆಯುವುದವಶ್ಯ. ವಿಶ್ವವ್ಯಾಪಕವಾದ ಏಕಸ್ವ ವ್ಯವಸ್ಥೆ ಯಾವುದೂ ಇದುವರೆಗೆ ಇಲ್ಲ. ಇನ್ನೊಂದು ದೇಶದಲ್ಲಿ ನೀಡಲಾದ ಏಕಸ್ವವನ್ನು ತಮ್ಮ ದೇಶಗಳಲ್ಲೂ ನೋಂದಣಿ ಮಾಡಿಸಬಹುದೆಂದೂ ಅವು ಊರ್ಜಿತವೆಂದೂ ಕೆಲವು ದೇಶಗಳ ಕಾಯಿದೆಗಳಲ್ಲಿ ನಮೂದಿಸಲಾಗಿದೆ.

ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಏಕಸ್ವ ಕಾಯಿದೆಗಳಿವೆ. ಇವುಗಳು ಸ್ಥೂಲವಾಗಿ ಒಂದೇ ಬಗೆಯವು. ಏಕಸ್ವದ ವಸ್ತುವಿನ ವ್ಯಾಖ್ಯೆ. ಆವಿಷ್ಕಾರದ ಹೊಸತನ ಕಳೆದು ಹೋಗುವ ಸಂದರ್ಭ, ಏಕಸ್ವದ ಅವಧಿ. ಏಕಸ್ವ ಪಡೆಯುವ ವಿಧಾನ–ಮುಂತಾದ ವಿಚಾರಗಳಲ್ಲಿ ಮಾತ್ರ ವ್ಯತ್ಯಾಸಗಳಿವೆ. ಸೋವಿಯತ್ ಒಕ್ಕೂಟದಲ್ಲೂ ಏಕಸ್ವ ಪಡೆಯಲು ಅವಕಾಶವುಂಟು. ಆದರೆ ಇದು ವಿರಳ. ಅಲ್ಲಿ ಲೇಖಕನ ಮತ್ತು ಆವಿಷ್ಕರ್ತನ ಹಕ್ಕು ಪತ್ರಗಳನ್ನು ಕೊಡುವುದುಂಟು. ಈ ಸಂದರ್ಭಗಳಲ್ಲಿ ಆವಿಷ್ಕರ್ತನಿಗೆ ಪರಿಹಾರಧನ ನೀಡಲಾಗುವುದೇ ವಿನಾ ಆತನಿಗೆ ಸಂಪೂರ್ಣ ಹಕ್ಕು ದೊರಕುವುದಿಲ್ಲ.

ವಿಶ್ವದ ಏಕಸ್ವ ಕಾಯಿದೆಗಳ ಸಾರಾಂಶಗಳನ್ನು ಸಂಗ್ರಹಿಸಿ ಪ್ರಕಟಿಸಬೇಕೆಂಬುದು ನಾನಾ ದೇಶಗಳ ಆವಿಷ್ಕರ್ತರ ಹಾಗೂ ಶಾಸಕರ ದೀರ್ಘಕಾಲದ ಬಯಕೆಯಾಗಿತ್ತು. 1851ರಷ್ಟು ಹಿಂದೆಯೇ ಏಕಸ್ವಧಾರಿಗಳ (ಪೇಟೆಂಟೀಸ್) ಸಂಘವೊಂದು ಈ ಬಗ್ಗೆ ಸಲಹೆ ಮಾಡಿತ್ತು. ಆವಿಷ್ಕರ್ತರ ಪರಸ್ಪರ ಹಕ್ಕುಗಳ ಪುರಸ್ಕಾರಕ್ಕಾಗಿ ಅಂತಾರಾಷ್ಟ್ರೀಯ ಒಡಂಬಡಿಕೆಯಾಗಬೇಕೆಂಬುದೂ ಅದರ ಇಚ್ಛೆಯಾಗಿತ್ತು. 1873ರಲ್ಲಿ ವಿಯೆನ್ನದಲ್ಲೂ

1878ರಲ್ಲಿ ಪ್ಯಾರಿಸ್ಸಿನಲ್ಲೂ ಸೇರಿದ್ದ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಈ ಅಭಿಪ್ರಾಯಕ್ಕೆ ಪುಷ್ಟಿ ದೊರಕಿತು. ಕೈಗಾರಿಕಾ ಸ್ವಾಮ್ಯದ ರಕ್ಷಣೆಗಾಗಿ ಅಂತಾರಾಷ್ಟ್ರೀಯ ಒಡಂಬಡಿಕೆ ಯೊಂದಕ್ಕೆ ಸಹಿಯಾದ್ದು 1883ರ ಮಾರ್ಚ್ 20 ರಂದು ಪ್ಯಾರಿಸ್ಸಿನಲ್ಲಿ. ಈ ಒಡಂಬಡಿಕೆ ಯಿಂದ ಒಂದು ದೇಶದಲ್ಲಿ ಏಕಸ್ವ ಪಡೆದವನು ಇನ್ನೊಂದು ದೇಶದಲ್ಲೂ ಪಡೆಯಲು ಕೆಲವು ಅನುಕೂಲಗಳು ಲಭಿಸಿದುವು. *

**ಏಕಸ್ವಾಮ್ಯ:** ಗೊತ್ತಾದ ಮಾರುಕಟ್ಟೆಯಲ್ಲಿ ಒಂದು ಸರಕು ಅಥವಾ ಸೇವೆಯ ಸರಬರಾಯಿಯ ವಿಶಿಷ್ಟ ಹತೋಟಿ ಅಥವಾ ಒಂದು ಮಾರುಕಟ್ಟೆಯಲ್ಲಿ ಅದನ್ನು ಮಾರುವ ಅಥವಾ ಕೊಳ್ಳುವ ಬಗ್ಗೆ ಪಡೆದಿರುವ ವಿಶಿಷ್ಟ ಹಕ್ಕು (ಮೊನಾಪೊಲಿ). ವ್ಯಾಪಾರದಲ್ಲಿ ಸಹಜವಾಗಿ ಕಂಡುಬರುವ ಸ್ಪರ್ಧೆಯ ಪರಿಣಾಮವಾಗಿ ಏಕಸ್ವಾಮ್ಯ ಪರಿಸ್ಥಿತಿ ಉದ್ಭವಿಸಬಹುದು ಅಥವಾ ಸರ್ಕಾರವೇ ಕೆಲವು ಉದ್ದೇಶಗಳಿಗಾಗಿ ಈ ವಿಶಿಷ್ಟ ಹಕ್ಕು ನೀಡಬಹುದು. ಮೊನಾಪೊಲಿ ಎಂಬ ಶಬ್ದದವ್ಯುತ್ಪತ್ತಿಯ ದೃಷ್ಟಿಯಿಂದ ವಿಚಾರ ಮಾಡಿದ್ದಾದರೆ, ಒಬ್ಬ ವ್ಯಾಪಾರಗಾರನೇ ಒಂದು ಸರಕಿನ ಸರಬರಾಜುದಾರನಾಗಿದ್ದು, ಈ ಸರಕಿಗೆ ಪ್ರತಿಯಾಗಿ ಬೇರಾವ ಸರಕನ್ನೂ ಸಾಮಾನ್ಯವಾಗಿ ಬಳಸುವುದು ಸಾಧ್ಯವಿಲ್ಲದಂಥ ಸ್ಥಿತಿಯೇ ಏಕಸ್ವಾಮ್ಯ ಆದರೆ ವಿಕ್ರಯದಾರರ ನಡುವೆ ಪರಿಪೂರ್ಣ ಸ್ಪರ್ಧೆಯಿಲ್ಲದಂಥ ಪೇಟೆಯ ಪರಿಸ್ಥಿತಿಯನ್ನೂ ಏಕಸ್ವಾಮ್ಯವೆಂದೇ ಪರಿಗಣಿಸುವುದು ರೂಢಿಯಲ್ಲಿ ಬಂದಿದೆ. ಪದಾರ್ಥಗಳ ಉತ್ಪಾದನೆ, ಸರಬರಾಜು ಮತ್ತು ಬೆಲೆಯ ನಿರ್ಣಯ ಒಬ್ಬನ ಅಥವಾ ಕೆಲವು ಉದ್ಯಮಿಗಳ ಇಲ್ಲವೇ ಒಂದು ಅಥವಾ ಕೆಲವು ಉದ್ಯಮ ಸಂಸ್ಥೆಗಳ ಹತೋಟಿಯಲ್ಲಿರುವುದೇ ಏಕಸ್ವಾಮ್ಯವೆನ್ನಬಹುದು. ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಬೆಲೆಯ ನಿಷ್ಕರ್ಷೆಯಾಗುವುದು ಇಡೀ ಮಾರುಕಟ್ಟೆಯಲ್ಲಿನ ಪದಾರ್ಥದ ಬೇಡಿಕೆ ಮತ್ತು ಸರಬರಾಜಿನಿಂದ. ಆದರೆ ಏಕಸ್ವಾಮ್ಯದಲ್ಲಿ ಒಟ್ಟು ಸರಬರಾಜನ್ನು ಹೆಚ್ಚು ಕಡಿಮೆ ಮಾಡಿ ಆ ಮೂಲಕ ವಸ್ತುಗಳ ಬೆಲೆಯನ್ನು ಬದಲಾಯಿಸುವುದು ಸಾಧ್ಯ. ಏಕಸ್ವಾಮ್ಯ ಹೊಂದಿದವನಿಗೆ ಪ್ರತಿಸ್ಪರ್ಧಿಗಳ ಭಯವಿರುವುದಿಲ್ಲ. ಪೂರೈಕೆಯ ಮೇಲೆ ಸಂಪೂರ್ಣ ಹತೋಟಿಯಿರುವುದರಿಂದ, ಉತ್ಪಾದನೆಯ ವೆಚ್ಚಕ್ಕಿಂತ ಶಕ್ಯವಿರುವಷ್ಟು ಹೆಚ್ಚಿನ ಬೆಲೆಗೆ ವಸ್ತುಗಳನ್ನು ಮಾರಬಹುದು. ಆದ್ದರಿಂದ, ಬಹು ಸಾಮಾನ್ಯವಾಗಿ, ಏಕಸ್ವಾಮ್ಯದ ಬೆಲೆ ಸ್ಪರ್ಧೆಯ ಬೆಲೆಗಿಂತ ಹೆಚ್ಚಾಗಿರುತ್ತದೆ. ಉತ್ಪಾದನೆ ಸರಬರಾಜುಗಳ ಮೇಲೆ ಹತೋಟಿಯಿರುವುದರಿಂದ ವಿಶೇಷ ಲಾಭ ಗಳಿಸಬಹುದು.

ಉದ್ಯಮಿಗಳು ತಮ್ಮ ಪ್ರತಿಸ್ಪರ್ಧಿಗಳನ್ನು ವ್ಯವಹಾರದಿಂದ ಹೊರದೂಡಿ ಏಕಸ್ವಾಮ್ಯ ಹೊಂದಲು ಪ್ರಯತ್ನಿಸುವರು. ಏಕಸ್ವಾಮ್ಯ ಪರಿಸ್ಥಿತಿಯಲ್ಲೂ ಕೆಲವು ಉದ್ಯಮಿಗಳಲ್ಲಿ ಸ್ಪರ್ಧೆ ಇರಬಹುದು. ಅನೇಕ ಬಾರಿ ಅವರು ತಮ್ಮ ತಮ್ಮೊಳಗೆ ಸ್ಪರ್ಧೆ ನಿಲ್ಲಿಸಿ, ಪರಸ್ಪರ ಒಪ್ಪಂದದ ಮೇಲೆ ವಿಸ್ತೃತ ಏಕಸ್ವಾಮ್ಯ ನಿರ್ಮಿಸುತ್ತಾರೆ. ವ್ಯಾಪಾರ ಸಂಸ್ಥೆಗಳೂ ಇಂಥ ಕಾರ್ಯ ಕೈಗೊಳ್ಳಬಹುದು.

ಏಕಸ್ವಾಮ್ಯವನ್ನು (1) ಸ್ವಾಭಾವಿಕ, (2) ಸಾಮಾಜಿಕ, (3) ನ್ಯಾಯಬದ್ಧ ಮತ್ತು (4) ಐಚ್ಛಿಕ ಎಂದು ನಾಲ್ಕು ರೀತಿಯಾಗಿ ವಿಂಗಡಿಸಬಹುದು. ಸ್ವಾಭಾವಿಕ ಕಾರಣಗಳ ಫಲವಾಗಿ ಕೆಲವು ಪದಾರ್ಥಗಳನ್ನು ಒಂದು ದೇಶದಲ್ಲಿ ಮಾತ್ರ ಉತ್ಪಾದಿಸುವುದು ಸಾಧ್ಯ. (ಉದಾ: ಆಫ್ರಿಕದಲ್ಲಿ ವಜ್ರಗಳ ಉತ್ಪಾದನೆ) ಇಲ್ಲಿ ಸ್ವಾಭಾವಿಕವಾಗಿಯೇ ಏಕಸ್ವಾಮ್ಯಕ್ಕೆ ಆಸ್ಪದವುಂಟು. ಸರ್ವಜನೋಪಯೋಗಿ ಉದ್ಯಮ ಕ್ಷೇತ್ರಗಳಾಗಿ ರೈಲ್ವೆಗಳು. ಪರಮಾಣುಶಕ್ತಿ ಉತ್ಪಾದನೆ ಮುಂತಾದವುಗಳಲ್ಲಿ ಸ್ಪರ್ಧೆ ನಡೆಯುವುದು. ಸಮಾಜ ಹಿತಸಾಧನೆಯ ದೃಷ್ಟಿಯಿಂದ ಒಳ್ಳೆಯದಲ್ಲ ಆದ್ದರಿಂದ, ಇಂಥವುಗಳಿಗೆ ನೀಡಿದ ಏಕಸ್ವಾಮ್ಯ ಸಾರ್ವಜನಿಕ ಏಕಸ್ವಾಮ್ಯವೆನಿಸಿಕೊಳ್ಳುತ್ತದೆ. ಒಂದು ಗ್ರಂಥದ ಹಕ್ಕು, ವ್ಯಾಪಾರ ಚಿಹ್ನೆ ಮುಂತಾದವುಗಳ ಬಗ್ಗೆ ಕಾನೂನಿನ ಸಂರಕ್ಷಣೆ ಇರುತ್ತದೆ. ಇದು ನ್ಯಾಯಬದ್ಧ ಏಕಸ್ವಾಮ್ಯ. ಕೆಲವು ಉದ್ಯಮಗಳಲ್ಲಿ ಸ್ಪರ್ಧೆಯ ಪರಿಸ್ಥಿತಿಯಿಂದ ಏಕಸ್ವಾಮ್ಯ ಸ್ಥಿತಿಗೆ ಕಾಲಾನುಕ್ರಮದಲ್ಲಿ ಪರಿವರ್ತನೆಯಾಗಬಹುದು. ಪ್ರಾರಂಭದಲ್ಲಿ ಪರಸ್ಪರ ಸ್ಪರ್ಧಿಗಳಾಗಿದ್ದ ಉದ್ಯಮಿಗಳು ಸ್ಪರ್ಧೆಯಿಂದ ಹಾನಿಯಾಗುವುದನ್ನು ಮನಗಂಡು ತಮ್ಮತಮ್ಮಲ್ಲೇ ಒಂದು ರೀತಿಯ ಒಪ್ಪಂದಕ್ಕೆ ಬರಬಹುದು. ಶಕ್ತವಾದ ಸಂಸ್ಥೆ ಇತರ ಸಂಸ್ಥೆಗಳನ್ನು ವಿಲೀನಗೊಳಿಸಿಕೊಳ್ಳಬಹುದು. ಎರಡು ಅಥವಾ ಹೆಚ್ಚು ಸಂಸ್ಥೆಗಳು ಸಂಯೋಗ ಹೊಂದಬಹುದು. ಹೀಗೆ ಸಂಭವಿಸಿದ್ದೇ ಐಚ್ಛಿಕ ಏಕಸ್ವಾಮ್ಯ.

**ಏಕಸ್ವಾಮ್ಯದಲ್ಲಿ ಬೆಲೆಯ ನಿರ್ಣಯ:** ಜನಹಿತ ದೃಷ್ಟಿಯಿಂದ ಸ್ಥಾಪಿತವಾದ ಏಕಸ್ವಾಮ್ಯಗಳಲ್ಲಿ ಲಾಭಕ್ಕಿಂತ ಸೇವೆಯೇ ಮುಖ್ಯೋದ್ದೇಶ. ಇತರ ಏಕಸ್ವಾಮ್ಯಗಳಲ್ಲಿ ಪರಿಸ್ಥಿತಿಯ ಉಪಯೋಗ ಪಡೆದು ಪರಮಾವಧಿ ಲಾಭ ಗಳಿಸಬೇಕೆಂಬುದೇ ಉದ್ಯಮಿಗಳ ಉದ್ದೇಶವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲೂ ಏಕಸ್ವಾಮ್ಯ ಸಂಸ್ಥೆ ಅಥವಾ ವ್ಯಕ್ತಿಗೆ ಸಂಪೂರ್ಣ ಅಧಿಕಾರ ಯಾವಾಗಲೂ ಇರುವುದಿಲ್ಲ. ಇಷ್ಟಾದರೂ ಸ್ಪರ್ಧೆ ಇದ್ದಿರಬಹುದು. ಸ್ಪರ್ಧೆ ಇರಲಿ ಇಲ್ಲದಿರಲಿ, ಏಕಸ್ವಾಮ್ಯದ ಪದಾರ್ಥಕ್ಕೆ ಪ್ರತಿಯಾಗಿ ಬಳಸಬಹುದಾದ ಸರಕುಗಳು ಇರಲಿ, ಇಲ್ಲದಿರಲಿ ಎಲ್ಲ ಏಕಸ್ವಾಮ್ಯಗಳೂ ಸಂಪೂರ್ಣ ಸರ್ವಾಧಿಕಾರಿ ಮನೋಭಾವದಿಂದ ವರ್ತಿಸುವುದು ಸರ್ವಥಾ ಸಾಧ್ಯವಿಲ್ಲ. ಸಾರ್ವಜನಿಕ ಅಸಮಾಧಾನ, ಬಹಿಷ್ಕಾರ, ಸರ್ಕಾರದ ನಿಯಂತ್ರಣ–ಮುಂತಾದವು ಏಕಸ್ವಾಮ್ಯದ ಕೈ ತಡೆಯುವ ಕೆಲವು ಅಂಶಗಳು. ಆದರೂ ಏಕಸ್ವಾಮಿ ಪರಮಾವಧಿ ಲಾಭದ ಮೇಲೆ ಸಾಮಾನ್ಯವಾಗಿ ಕಣ್ಣಿಟ್ಟೇ ಇರುತ್ತಾನೆ. ಈ ಉದ್ದೇಶಸಾಧನೆಗಾಗಿ ಆತ ತನ್ನಿಚ್ಛೆಯಂತೆ ಪದಾರ್ಥದ ಬೆಲೆ ನಿಷ್ಕರ್ಷೆ ಮಾಡಬಹುದು ಅಥವಾ ತನಗೆ ಸರಿ ತೋರಿದಷ್ಟು ಪರಿಮಾಣದಲ್ಲಿ ಸರಕನ್ನು ಮಾರಾಟಕ್ಕೆ ಬಿಡುಗಡೆ ಮಾಡಬಹುದು. ಗರಿಷ್ಠ ಧನಲಾಭದ ಬಿಂದುವಿನವರೆಗೆ ಆತ ಉತ್ಪಾದನೆ ಮಾಡುತ್ತಾನೆ; ಬೆಲೆ ಏರಿಸುತ್ತಾನೆ. ಯಾವ ಮಟ್ಟದಲ್ಲಿ ಆತನ ಲಾಭದ ಮೊತ್ತ ಅತ್ಯಂತ ಹೆಚ್ಚಾಗಿರುತ್ತದೋ ಅದು ಆತನ ಸಮತೋಲ ಸ್ಥಿತಿ ಅಧಿಕಾಧಿಕವಾಗಿ ಉತ್ಪಾದಿಸಿದಷ್ಟೂ, ಆ ಉತ್ಪಾದನೆಯ ಒಂದೊಂದು ಅಂಚಿನ ಘಟಕದ ವೆಚ್ಚಕ್ಕಿಂತ ಹುಟ್ಟುವಳಿ ಹೆಚ್ಚಾಗಿರುವವರೆಗೂ, ಆತ ಉತ್ಪಾದನೆ ಹೆಚ್ಚಿಸುತ್ತ ಹೋಗುತ್ತಾನೆ. ಅಂಚಿನ ವೆಚ್ಚವೂ ಅಂಚಿನ ಹುಟ್ಟುವಳಿಯೂ ಸಮನಾಗಿರುವಲ್ಲೇ ಸಮತೋಲ. ಅಲ್ಲಿಂದಾಚೆಗೆ ಉತ್ಪಾದನೆ ಲಾಭದಾಯಕವಲ್ಲ; ಅಂಚಿನ ಉತ್ಪತ್ತಿಯ ಹುಟ್ಟುವಳಿಗಿಂತ ಅಂಚಿನ ವೆಚ್ಚವೇ ಹೆಚ್ಚಾಗುವುದರಿಂದ ಅಲ್ಲಿ ನಿಲ್ಲುವುದು ವಿವೇಕ.



ನಕ್ಷೆ 1

ಏಕಸ್ವಾಮ್ಯ ಸಂಸ್ಥೆಯ ಬೆಲೆ–ವೆಚ್ಚ ಸಮತೋಲವನ್ನು ನಕ್ಷೆ 1ರಲ್ಲಿ ವಿವರಿಸಿದೆ. ಈ ನಕ್ಷೆಯಲ್ಲಿ AR ಎಂಬುದು ಪದಾರ್ಥದ ಬೇಡಿಕೆ ರೇಖೆ ಅಥವಾ ಸರಾಸರಿ ಹುಟ್ಟುವಳಿ ರೇಖೆ. ಪದಾರ್ಥದ ಬೆಲೆ ಏರಿದಷ್ಟೂ ಅದಕ್ಕೆ ಬೇಡಿಕೆ ಕಡಿಮೆಯಾಗುವುದರಿಂದ ಇದು ಬಲಗಡೆಗೆ ಬಾಗಿದೆ; ಪದಾರ್ಥದ ತಯಾರಿಕೆಯ ಸರಾಸರಿ ವೆಚ್ಚ (AC) ಇಳಿಮೊಗನಾಗಿದೆಯೆಂದು ಇಲ್ಲಿ ಭಾವಿಸಿಕೊಳ್ಳಲಾಗಿದೆ. ಅಂಚಿನ ಹುಟ್ಟುವಳಿ ಅಥವಾ ಅಂಚಿನ ಬೇಡಿಕೆಯೂ (MR) ಸರಾಸರಿ ಬೇಡಿಕೆ ಅಥವಾ ಸರಾಸರಿ ಹುಟ್ಟುವಳಿಯಂತೆಯೇ ಬಲಕ್ಕೆ ಬಾಗಿದೆ.

ಆದರೆ ಸರಾಸರಿ ಬೇಡಿಕೆ ಅಥವಾ ಸರಾಸರಿ ಹುಟ್ಟುವಳಿ (AR) ಇದರ (MR) ಪರಿಣಾಮವಾದ್ದರಿಂದ ಇದು (MR) AR ಗಿಂತ ಹೆಚ್ಚು ಕಡಿದು. ಸರಾಸರಿ ವೆಚ್ಚದ ರೇಖೆಯೂ (AC) ಅಂಚಿನ ವೆಚ್ಚದ ರೇಖೆಯೂ (MC) ಇಳಿಮುಖ ಪ್ರವೃತ್ತಿ ತೋರಿಸುತ್ತಿವೆ. ಅಂಚಿನ ಘಟಕದ ಉತ್ಪಾದನೆಯ ವೆಚ್ಚವೂ (MC) ಅಂಚಿನ ಘಟಕದ ಮಾರಾಟದಿಂದ ಲಭಿಸುವ ಹಣದ ಹುಟ್ಟುವಳಿಯೂ (MR) ಎಲ್ಲಿ ಸಮನಾಗಿರುತ್ತವೋ (ಸಂಧಿಸುತ್ತವೋ) ಅಲ್ಲಿ ಏಕಸ್ವಾಮ್ಯ ಸಂಸ್ಥೆ ಉತ್ಪಾದನೆಯನ್ನು ನಿಲ್ಲಿಸಬೇಕು. ಈ ಘಟ್ಟದಲ್ಲಿ ಅದರ ಉತ್ಪತ್ತಿ OM; ಬೆಲೆ OP. ಸರಾಸರಿ ವೆಚ್ಚ OW; ಏಕಸ್ವಾಮ್ಯದ ಲಾಭ PRLW. ಇದು ಆ ಸಂಸ್ಥೆಯ ಸಮತೋಲ ಸ್ಥಿತಿ. ಏಕಸ್ವಾಮ್ಯ ಉತ್ಪಾದಕನ ಸಮತೋಲ ಸ್ಥಿತಿಯಲ್ಲಿ ಆತನ ಪದಾರ್ಥದ ಬೇಡಿಕೆಯ ಪುಟಿತ ಒಂದಕ್ಕಿಂತ ಹೆಚ್ಚಾಗಿಯೇ ಇರುತ್ತದೆಯೆಂಬುದನ್ನು ಗಮನಿಸಬೇಕು. ಅದು ಒಂದಕ್ಕಿಂತ ಕಡಿಮೆಯಾಗಿದ್ದಾಗ ಉತ್ಪಾದನೆಯನ್ನು ಹೆಚ್ಚು ಉತ್ಪಾದಿಸಿದಷ್ಟೂ ಒಟ್ಟು ಹುಟ್ಟುವಳಿ ಇಳಿಯುತ್ತದೆ; ಉತ್ಪಾದನೆಯಲ್ಲಿ ಕಡಿತ ಮಾಡಿದಷ್ಟೂ ಒಟ್ಟು ಹುಟ್ಟುವಳಿ ಹೆಚ್ಚುತ್ತದೆ. ಎಂದರೆ ಬೇಡಿಕೆಯ ಪುಟಿತ ಒಂದಕ್ಕಿಂತ ಕಡಿಮೆಯಿದ್ದಾಗ ಅಂಚಿನ ಹುಟ್ಟುವಳಿ ಋಣಾತ್ಮಕವಾಗಿರುತ್ತದೆ (ನೆಗೆಟಿವ್). ಆದ್ದರಿಂದ ಇಂಥ ಪರಿಸ್ಥಿತಿಯಲ್ಲಿ ಏಕಸ್ವಾಮ್ಯದ



ನಕ್ಷೆ 2

ಸಮತೋಲ ಸಾಧ್ಯವಿರುವುದಿಲ್ಲ. ಅಂಚಿನ ವೆಚ್ಚ ಇಳಿಮುಖವಾಗಿರುವುದೆಂದು ಊಹಿಸಿಕೊಂಡು ನಕ್ಷೆ 1ರಲ್ಲಿ ಏಕಸ್ವಾಮಿಯ ಸಮತೋಲ ಸ್ಥಿತಿಯನ್ನು ನಿಷ್ಕರ್ಷಿಸಿದ್ದಾಯಿತು. ಅಂಚಿನ ವೆಚ್ಚ ಏರುಮುಖವಾಗಿದ್ದಾಗಲೂ ಅದು ಒಂದೇ ಸಮನಾಗಿರುವಾಗಲೂ ಆತನ ಉತ್ಪಾದನೆ ಮತ್ತು ಬೆಲೆಗಳ ಸಮತೋಲವನ್ನು ಕ್ರಮವಾಗಿ ನಕ್ಷೆ 2 ಮತ್ತು 3ರಲ್ಲಿ ತೋರಿಸಿದೆ.

ಅಂಚಿನ ವೆಚ್ಚ (MC) ಇಳಿಮುಖವಾಗಿರುವಾಗ (ನಕ್ಷೆ 1) MC ರೇಖೆ ಸರಾಸರಿ ವೆಚ್ಚರೇಖೆಯ (AC) ಕೆಳಗಡೆಯಿರುತ್ತದೆಂಬುದನ್ನೂ ಅಂಚಿನ ವೆಚ್ಚ ಏರುಮುಖವಾಗಿರುವಾಗ ಅದು AC ರೇಖೆಯ ಮೇಲುಗಡೆಯಿರುತ್ತದೆಂಬುದನ್ನೂ ಅಂಚಿನ ವೆಚ್ಚ ಒಂದೇ ಸಮನಾಗಿರುವಾಗ AC, MCಗಳೆರಡೂ ಒಂದೇ ಆಗಿರುವುದೆಂಬುದನ್ನೂ ಗಮನಿಸಬೇಕು. ಈ ಪರಿಸ್ಥಿತಿಗಳಲ್ಲೂ MR ಮತ್ತು MC ಸಂಧಿಸುವ ಎಡೆಯಲ್ಲೇ ಸಮತೋಲ. OW ವೆಚ್ಚದಲ್ಲಿ OM ಉತ್ಪತ್ತಿ ಮಾಡಿ OP ಬೆಲೆಗೆ ಮಾರಿದಾಗ ಗರಿಷ್ಠ ಲಾಭ (PRLW).



ನಕ್ಷೆ 3

ಮೇಲಣ ಮೂರೂ ಪರಿಸ್ಥಿತಿಗಳಲ್ಲಿ ಏಕಸ್ವಾಮಿಗೆ ಉತ್ಪಾದನೆಯ ವೆಚ್ಚ ಇದೆಯೆಂದು ಊಹಿಸಿಕೊಳ್ಳಲಾಗಿದೆ. ಆದರೆ ಉತ್ಪಾದನೆಯ ವೆಚ್ಚವೇ ಇಲ್ಲದ ಏಕಸ್ವಾಮ್ಯವೂ ಇರುವುದು ಸಾಧ್ಯ. (ಉದಾಹರಣೆ : ಔಷಧದ ಗುಣವುಳ್ಳ ನೀರಿನ ಊಟೆ). ನಕ್ಷೆ 4ರಲ್ಲಿ ಈ ಪರಿಸ್ಥಿತಿಯಲ್ಲಿ ಉತ್ಪಾದಕನ ಬೆಲೆ-ಉತ್ಪನ್ನಗಳ ಸಮತೋಲ ಎಲ್ಲಿ ಸಂಭವಿಸುವುವೆಂಬ ಪ್ರಶ್ನೆ ಉದ್ಭವಿಸುತ್ತದೆ. ಅಂಚಿನ ಹುಟ್ಟುವಳಿ ರೇಖೆ (MR) OX ಅಕ್ಷವನ್ನು (ಉತ್ಪತ್ತಿಯದು) ಸಂಧಿಸುವ ಎಡೆಯಲ್ಲಿ (M) ಸಮತೋಲ ಏರ್ಪಡುತ್ತದೆ. ಆತ OM ಉತ್ಪಾದಿಸಿ OP ಬೆಲೆಯಲ್ಲಿ ಮಾರುವುದರಿಂದ ಗರಿಷ್ಠ ಲಾಭ (PRMO) ದೊರಕುತ್ತದೆ.

ಏಕಸ್ವಾಮ್ಯದಲ್ಲೇ ಆಗಲಿ, ಸಂಪೂರ್ಣ ಸ್ಪರ್ಧೆಯಲ್ಲೇ ಆಗಲಿ, ಉತ್ಪಾದಕರು ಅಂಚಿನ ವೆಚ್ಚವನ್ನೂ ಅಂಚಿನ ಹುಟ್ಟುವಳಿಯನ್ನೂ ಸಮತೂಗಿಸಲು ಪ್ರಯತ್ನಿಸುತ್ತಾರೆ. ಆದರೆ ಸಂಪೂರ್ಣ ಸ್ಪರ್ಧೆಯ ಪೇಟೆಗಳಲ್ಲಿ ಯಾವ ಒಬ್ಬ ಉತ್ಪಾದಕನೂ ವೈಯಕ್ತಿಕವಾಗಿ ಬೆಲೆಯ ಮೇಲೆ ಪರಿಣಾಮವನ್ನುಂಟು ಮಾಡಲು ಸಾಧ್ಯವಾಗದ್ದರಿಂದ ಆತ ಪೇಟೆಯ ಧಾರಣೆಯನ್ನು ಒಪ್ಪಿಕೊಂಡು ಆ ಧಾರಣೆಯಲ್ಲಿ ಸಾಧ್ಯವಾದಷ್ಟು ಸರಕುಗಳನ್ನು ಮಾರುತ್ತಾನೆ. ಅವನಿಗೆ ಆ ಬೆಲೆಯೇ ಅಂಚಿನ ಹುಟ್ಟುವಳಿ. ಆದರೆ ಏಕಸ್ವಾಮಿಗೆ ಅಂಚಿನ ಹುಟ್ಟುವಳಿ ಸರಕಿನ ಬೆಲೆಗಿಂತ ಕಡಿಮೆ ಇರುತ್ತದೆ. ಆತ ಸರಬರಾಜನ್ನು ಸಂಪೂರ್ಣ ಹತೋಟಿಯಲ್ಲಿಟ್ಟು ಆ ಮೂಲಕ ಬೆಲೆಯ ಮೇಲೆ ಪರಿಣಾಮವನ್ನುಂಟುಮಾಡುತ್ತಾನೆ.



ನಕ್ಷೆ 4

ಏಕಸ್ವಾಮಿ ತನ್ನ ಉತ್ಪಾದನೆಯನ್ನೆಲ್ಲ ಗ್ರಾಹಕರಿಗೆ ಒಂದೇ ಬೆಲೆಗೆ ಮಾರಬೇಕಾಗಿಲ್ಲ. ತನ್ನ ವಸ್ತುಗಳಿಗಿರುವ ಪೇಟೆಯನ್ನು ವಿವಿಧ ರೀತಿಯಲ್ಲಿ ವಿಂಗಡಿಸಿ, ಪ್ರತಿಯೊಂದು ಪೇಟೆಯಲ್ಲೂ ಅಥವಾ ಪೇಟೆಯ ಬೇರೆ ಬೇರೆ ವಲಯಗಳಲ್ಲೂ ಬೇರೆ ಬೇರೆ ಬೆಲೆಗಳಿಗೆ ಮಾರುವುದು ಸಾಧ್ಯವಾಗುತ್ತದೆ. ಈ ರೀತಿ ಮಾರುವ ಬೆಲೆಯಲ್ಲಿ ಪಕ್ಷಪಾತ ಕಂಡುಬರುತ್ತದೆ.

**ಏಕಸ್ವಾಮ್ಯದ ಪ್ರತಿಕೂಲಗಳು:** ಖಾಸಗಿ ಏಕಸ್ವಾಮ್ಯ ಪರಿಸ್ಥಿತಿಯಿಂದ ಅನೇಕ ಪ್ರತಿಕೂಲಗಳುಂಟು. ಸರಕುಗಳ ಬೆಲೆ ಪೈಪೋಟಿಯ ಬೆಲೆಗಿಂತ ಹೆಚ್ಚಾಗಿರುತ್ತದೆ. ಸರಬರಾಜಿಗೆ ಕೃತಕ ಅಡ್ಡಿ ತಂದೊಡ್ಡಿ ವಿಶೇಷ ಲಾಭ ಬರುವಂತೆ ಆತ ಬೆಲೆ ಹೆಚ್ಚಿಸುತ್ತಾನೆ. ಇದಕ್ಕಾಗಿ ಉತ್ಪಾದನೆಯ ಪ್ರಮಾಣವನ್ನು ಕಡಿಮೆ ಮಾಡಲೂ ಆತ ಅಂಜುವುದಿಲ್ಲ. ಬಾಹ್ಯ ಮತ್ತು ಆಂತರಿಕ ಮಿತವ್ಯಯಗಳಿಂದಾಗಬಹುದಾದ ಉಳಿತಾಯಕ್ಕೆ ಆಸ್ಪದ ಕಡಿಮೆಯಾಗುತ್ತದೆ. ಹೊಸ ಉದ್ಯಮಗಳಿಗೆ ಬಂಡವಾಳ ಹಾಕಲು ಅವಕಾಶ ದೊರೆಯುವುದಿಲ್ಲ. ಹೊಸ ಸಂಸ್ಥೆಗಳು ಪ್ರವೇಶಿಸಿ ಸ್ಪರ್ಧಿಸುವುದೂ ಸಾಧ್ಯವಾಗುವುದಿಲ್ಲ. ಉತ್ಪಾದನೆಯ ವಿಷಯದಲ್ಲಿ ತಾಂತ್ರಿಕ ಪ್ರಗತಿಗೆ ಯಾವ ಜರೂರೂ ಇರುವುದಿಲ್ಲ. ಆರ್ಥಿಕ ವಿಷಮತೆ ಹೆಚ್ಚುತ್ತದೆ. ಏಕಸ್ವಾಮಿಗಳ ಮತ್ತು ಅವರ ಸಂಬಂಧಿಗಳ ಹಿತಾಸಕ್ತಿಗಳ ಬೆಳವಣಿಗೆಯಾಗಿ ಸಮಾಜಹಿತಕ್ಕೆ ಧಕ್ಕೆಯುಂಟಾಗುತ್ತದೆ.

**ಏಕಸ್ವಾಮ್ಯದ ಅನುಕೂಲಗಳು:** ಏಕಸ್ವಾಮ್ಯದಲ್ಲಿ ಕೆಲವು ಅನುಕೂಲಗಳೂ ಉಂಟು. ಸ್ಪರ್ಧೆಯ ಪರಿಸ್ಥಿತಿಯಲ್ಲಿ ಪ್ರತಿಯೊಂದು ಸಂಸ್ಥೆಯೂ ತನ್ನ ಸರಕಿನ ಜಾಹೀರಾತಿಗಾಗಿ ಅಗಾಧ ಹಣ ಖರ್ಚು ಮಾಡುತ್ತದೆ. ಆದರೆ ಏಕಸ್ವಾಮ್ಯದಲ್ಲಿ ಇದರ ಆವಶ್ಯಕತೆ ಬೀಳದಿರುವುದರಿಂದ ಅದರ ಮಾರಾಟದ ಖರ್ಚಿನಲ್ಲಿ ಮಿತವ್ಯಯವಾಗುತ್ತದೆ. ಅಧಿಕ ಬಂಡವಾಳದ ಬೆಂಬಲವಿರುವುದರಿಂದ ದೊಡ್ಡ ಪ್ರಮಾಣದ ಉತ್ಪಾದನೆಗೆ ಬೇಕಾದ ಸುಧಾರಿಸಿದ ಯಂತ್ರೋಪಕರಣಗಳನ್ನೂ ಸರಕು ಸಾಮಾನುಗಳನ್ನೂ ಕೊಳ್ಳುವುದು ಸಾಧ್ಯ. ಇದರಿಂದ ಉತ್ಪಾದನೆಯ ಖರ್ಚು ಕಡಿಮೆಯಾಗಬಹುದು. ಬೃಹತ್ ಗಾತ್ರದ ಉತ್ಪಾದನೆಯ ಸೌಲಭ್ಯಗಳೆಲ್ಲ ಇದಕ್ಕೆ ಲಭಿಸುತ್ತವೆ. ಅಧಿಕ ಪ್ರಮಾಣದ ಉತ್ಪಾದನೆಯಿಂದ ವಸ್ತುಗಳನ್ನು ಶಕ್ಯವಾದಷ್ಟು ಕಡಿಮೆ ಬೆಲೆಗೆ ಮಾರಲು ಅವಕಾಶವಾಗುತ್ತದೆ.

**ಏಕಸ್ವಾಮ್ಯದ ನಿಯಂತ್ರಣ:** ಏಕಸ್ವಾಮ್ಯ ಪರಿಸ್ಥಿತಿಯಲ್ಲಿ ಕೆಲವು ನಿರ್ಬಂಧಗಳು ತಾವಾಗಿಯೇ ಕಾಣಿಸಿಕೊಳ್ಳುವುವು. ಏಕಸ್ವಾಮ್ಯದ ಬೆಲೆಯನ್ನು ಅತಿಯಾಗಿ ಹೆಚ್ಚಿಸಿದರೆ, ಅವನ ಸರಕುಗಳಿಗೆ ಸಾರ್ವತ್ರಿಕ ಬಹಿಷ್ಕಾರ ಉದ್ಭವಿಸುವ ಭಯವಿದೆ. ಇಲ್ಲವೇ, ಆ ಪದಾರ್ಥಗಳಿಗೆ ಬದಲಾಗಿ ಬೇರೆ ಪದಾರ್ಥಗಳನ್ನು ಕೊಳ್ಳುವ ಮನೋವೃತ್ತಿ ಜನಗಳಲ್ಲಿ ಬೆಳೆಯಬಹುದು.

ಸರ್ಕಾರಗಳೂ ಸಾರ್ವಜನಿಕ ಹಿತರಕ್ಷಣೆಯ ದೃಷ್ಟಿಯಿಂದ ಏಕಸ್ವಾಮ್ಯದ ವ್ಯವಹಾರಗಳನ್ನು ನಿಯಂತ್ರಿಸಬೇಕಾಗುತ್ತದೆ. ಈ ಕಾರ್ಯನಿರ್ವಹಣೆಗೆ, ಬೆಲೆಯ ನಿಯಂತ್ರಣಗಳನ್ನೂ ಏಕಾಧಿಕಾರದ ಸಂಸ್ಥೆಗಳು ಸ್ಥಾಪಿತವಾಗದಂತೆ ಸೂಕ್ತವಾದ ಕಾಯಿದೆಗಳನ್ನೂ ಜಾರಿಗೆ ತರಬಹುದು. ಏಕಸ್ವಾಮ್ಯಗಳ ಸಮಾಜವಿರೋಧಿ ಪ್ರವೃತ್ತಿಗಳನ್ನು ಪ್ರತಿಭಟಿಸಲು ಬಳಕೆದಾರರ ಸಂಘಗಳಿಗೆ ಉತ್ತೇಜನ ಕೊಡಬಹುದು. ಸ್ಪರ್ಧಿಗಳ ನಡುವೆ ಜೀವನ್ಮರಣ ಹೋರಾಟ ಹೆಚ್ಚಿ, ಶಕ್ತ ಸಂಸ್ಥೆ ಉಳಿದುಕೊಂಡು ಉಳಿದವನ್ನೆಲ್ಲ ನಿರ್ಮೂಲಗೊಳಿಸುವುದು ಸಾಧ್ಯವಾಗುವಂಥ ಪ್ರವೃತ್ತಿಗಳನ್ನೂ ಪರಿಸ್ಥಿತಿಗಳನ್ನೂ ತಡೆಗಟ್ಟಬಹುದು. ಇದಲ್ಲದೆ, ಏಕಸ್ವಾಮ್ಯದ ವ್ಯವಹಾರಗಳನ್ನು ಸರ್ಕಾರದ ಮೇಲ್ವಿಚಾರಣೆಗೊಳಪಡಿಸಿ, ಅವರ ಕೃತ್ರಿಮ ರೀತಿನೀತಿಗಳನ್ನು ಸಾರ್ವಜನಿಕರಿಗೆ ತಿಳಿಯುವಂತೆ ಪ್ರಕಟಿಸುವುದೂ ಒಂದು ಮಾರ್ಗ. (ಡಿ.ಎಂ.ಎನ್.)

**ಏಕಾಂಕ ನಾಟಕ:** ಒಂದೇ ಅಂಕವನ್ನುಳ್ಳ ಒಂದು ಬಗೆಯ ನಾಟಕ. ಮೊದಮೊದಲಿಗೆ ಹಗುರ ನಾಟಕವಾಗಿ (ವಾದವಿಲ್) ಕಾಣಿಸಿಕೊಂಡು ಅನಂತರ ಕಿರುನಾಟಕವಾಗಿ (ದಿ ಕರ್ಟನ್ ರೈಸರ್) ವಿಕಾಸಹೊಂದಿ ಈ ನಾಟಕಪ್ರಕಾರ ತನ್ನದೇ ಆದ ಒಂದು ವಿಶಿಷ್ಟರೂಪವನ್ನು ಪಡೆದು ಇಂಗ್ಲಿಷ್ ಮತ್ತು ಯುರೋಪಿಯನ್ ಭಾಷೆಗಳಲ್ಲಿ ಗಣ್ಯಸ್ಥಾನಗಳಿಸಿತು.

ಇಂಗ್ಲೆಂಡಿನ ನಾಟಕಮಂದಿರಗಳಲ್ಲಿ ಮುಖ್ಯನಾಟಕ ಪ್ರಾರಂಭವಾಗುವುದಕ್ಕೆ ಅರ್ಧ ಅಥವಾ ಮುಕ್ಕಾಲು ಗಂಟೆ ಮುಂಚೆ ಪ್ರಾಸ್ತಾವಿಕವಾಗಿ ಯಾವುದಾದರೊಂದು ಪುಟ್ಟ ನಾಟಕವನ್ನೊ ಕೆಲವು ಪುಟ್ಟ ದೃಶ್ಯಾವಳಿಗಳನ್ನೋ ಅಭಿನಯಿಸುತ್ತಿದ್ದರು. ಇವನ್ನು ಕಿರುನಾಟಕಗಳೆಂದು ಕರೆದರು. ಪ್ರೇಕ್ಷಕರ ಗಮನವೆಲ್ಲವೂ ಮುಖ್ಯನಾಟಕದ ಕಡೆ ಕೇಂದ್ರೀಕೃತವಾಗುತ್ತಿದ್ದುದರಿಂದ ಪ್ರಾಸ್ತಾವಿಕವಾದ ಈ ಪುಟ್ಟ ದೃಶ್ಯಗಳು ಅಥವಾ ಕಿರುನಾಟಕಗಳು ತಮ್ಮದೇ ಆದ ವಿಶಿಷ್ಟಸ್ಥಾನವನ್ನು ಪಡೆಯಲು ಹಲವು ಕಾಲ ಹಿಡಿಯಿತು. ಇಂಗ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ಪ್ರಾರಂಭವಾದ ಸಣ್ಣ ನಾಟಕಮಂದಿರದ ಚಳವಳಿಯಿಂದ ಏಕಾಂಕ ನಾಟಕಗಳು ಬಹು ಬೇಗ ಜನಪ್ರಿಯವಾಗಿ ದೊಡ್ಡ ನಾಟಕಗಳ ಬೆಳವಣಿಗೆಗೆ ಸಹಾಯಕವಾದವು.

ಏಕಾಂಕ ನಾಟಕವೆಂದರೆ ಕೇವಲ ಸಣ್ಣ ನಾಟಕವೆಂದಲ್ಲ, ಏಕತೆಯಲ್ಲಿ (**ನೋಡಿ- ಏಕತೆಗಳು**), ಸಂಕ್ಷಿಪ್ತತೆಯಲ್ಲಿ, ಅದು ದೊಡ್ಡ ನಾಟಕಕ್ಕಿಂತ ಬೇರೆಯಾದುದು. ತೀವ್ರಗತಿಯ ನಿರೂಪಣೆ, ಸಂಕ್ಷಿಪ್ತತೆ, ಸಮತೂಕವಾದ ಪರಿಣಾಮ ಇವು ಏಕಾಂಕ ನಾಟಕದ ಮುಖ್ಯ ಗುಣಗಳು. 3-4 ಗಂಟೆಗಳಲ್ಲಿ ನಡೆಯುವ ದೊಡ್ಡ ನಾಟಕದಲ್ಲೂ ಇವು ಬೇಕು. ಆದರೆ ಏಕಾಂಕ ನಾಟಕದಲ್ಲಿ ಇವುಗಳ ಆವಶ್ಯಕತೆ ಹೆಚ್ಚು. ಏಕಾಂಕ ನಾಟಕದಲ್ಲಿನ ಪ್ರತಿಯೊಂದು ಸನ್ನಿವೇಶ, ಪಾತ್ರಗಳ ಅಭಿನಯ ಮತ್ತು ಮಾತುಗಳು ಶಕ್ತಿಯುತವಾಗಿರಬೇಕು; ನವಿರಾಗಿರಬೇಕು; ಗಂಭೀರವಾಗಿ ಅಥವಾ ಲಕ್ಷಣವಾಗಿ

ಅಥವಾ ಕಾವ್ಯಮಯವಾಗಿ ಬೇಕಾದ ಪರಿಣಾಮಕ್ಕನುಸಾರವಾಗಿ ಅವು ಅಭಿವ್ಯಕ್ತ ಗೊಳ್ಳಬೇಕು. ಪ್ರೇಕ್ಷಕರ ಚಿತ್ತವನ್ನು ಅವು ಮೊದಲ ದೃಶ್ಯದಿಂದ ಕೊನೆಯವರೆಗೂ ಆವರಿಸಿಕೊಳ್ಳಬೇಕು. ಇದೇ ಉತ್ತಮ ನಾಟಕದ ಗುರಿ ಮತ್ತು ನೀತಿ. ಇಂಥ ಏಕತೆಯನ್ನು ಸಾಧಿಸಬೇಕಾದರೆ ನಾಟಕದ ಭಾವದಲ್ಲಿ ವಸ್ತುವಿನಲ್ಲಿ ಏಕತೆಯಿರಬೇಕು. ಹಲವಾರು ಘಟನೆಗಳು ಏಕಗತಿಯಲ್ಲಿ ಮುಂದುವರಿದು ಪರಿಣಾಮಕಾರಿಯಾದ ಒಂದು ಘಟ್ಟದಲ್ಲಿ ಪರ್ಯವಸಾನ ಹೊಂದಬೇಕು.

ಏಕಾಂಕ ನಾಟಕದಲ್ಲಿ ಸಾಮಾನ್ಯವಾಗಿ ಬರುವ ಪಾತ್ರಗಳ ಸಂಖ್ಯೆ ಅತಿ ಕಡಿಮೆ. ನಾಟಕದ ಕಥೆ ಒಂದೆರಡು ಪಾತ್ರಗಳ ಸುತ್ತಲೂ ತಿರುಗುತ್ತದೆ. ಆದರೆ ಪಾತ್ರಗಳ ಸಂಖ್ಯೆ ಮುಖ್ಯವಲ್ಲ. ಅವು ಒಂದಕ್ಕೊಂದು ಹೊಂದಿಕೊಂಡು ಭಾವೈಕ್ಯವನ್ನು ಸಾಧಿಸಬೇಕು, ಅಂತಿಮ ಪರಿಣಾಮಕ್ಕೆ ಪುಷ್ಟಿ ಕೊಡಬೇಕು. ಉದಾಹರಣೆಗೆ ದಿ ಲಿಟಲ್ ಸ್ಟೋನ್ ಹೌಸ್ ಎಂಬ ತನ್ನ ಏಕಾಂಕ ನಾಟಕದಲ್ಲಿ ಜಾರ್ಜ್ ಕಾಲ್ಡೆರಾನ್ ಹಲವಾರು ಪುಟ್ಟ ಪುಟ್ಟ ಪಾತ್ರಗಳನ್ನು ಸುಂದರವಾಗಿ ಸೃಷ್ಟಿಸಿ ಅವುಗಳ ಮೂಲಕ ರಸಪುಷ್ಟಿಯನ್ನುಂಟು ಮಾಡುತ್ತಾನೆ. ಒಟ್ಟಿನಲ್ಲಿ ಹೇಳುವುದಾದರೆ ದೊಡ್ಡ ನಾಟಕ ವಿಸ್ತಾರವಾಗಿ ಸಾಧಿಸುವ ರಸಪುಷ್ಟಿಯನ್ನು ಏಕಾಂಕ ನಾಟಕ ಸೂಚ್ಯವಾಗಿ, ಸೂಕ್ಷ್ಮವಾಗಿ ಸಾಧಿಸುತ್ತದೆ. ಇಂಥ ಸೂಕ್ಷ್ಮವಾದ ಕಾವ್ಯಕುಶಲತೆ ಹಾಗೂ ರಸಸಿದ್ಧಿಯನ್ನು ನಾವು ಉತ್ತಮ ಏಕಾಂಕ ನಾಟಕಗಳಾದ ದಿ ರೈಡರ್ಸ್ ಟು ದಿ ಸೀ, ಎ ನೈಟ್ ಎಟ್ ಎನ್ ಇನ್ ಮುಂತಾದ ಕಲಾ ಕೃತಿಗಳಲ್ಲಿ ಕಾಣಬಹುದು.

ಏಕಾಂಕ ನಾಟಕಗಳನ್ನು ರಚಿಸಿದವರಲ್ಲಿ ಸಿಂಜ್, ಲೇಡಿ ಗ್ರೆಗರಿ, ಲಾರ್ಡ್ ಡನ್ಸನಿ, ಸ್ಟೇಡನ್ ಸ್ಮಿಥ್, ನೋಯೆಲ್ ಕವರ್ಡ್ ಮುಂತಾದವರು ಮುಖ್ಯರು.

ಏಕಾಂಕ ನಾಟಕಗಳನ್ನು ರೇಡಿಯೊ ಮತ್ತು ಟೆಲಿವಿಷನ್‌ಗಳಿಗೆ ಅಳವಡಿಸಿ ಉತ್ತಮ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಚಿರಪರಿಚಿತವಾದ ಉತ್ತಮ ನಾಟಕವೊಂದರ ಸೂಚ್ಯ ಸನ್ನಿವೇಶವೊಂದನ್ನು ಆರಿಸಿಕೊಂಡು ಅದಕ್ಕೆ ತಮ್ಮದೇ ಆದ ಕಾಲ್ಪನಿಕ ಪಾತ್ರ ಮತ್ತು ಘಟನೆಗಳನ್ನು ಸೇರಿಸಿ ಉತ್ಕೃಷ್ಟವಾದ ಏಕಾಂಕ ನಾಟಕಗಳನ್ನು ರಚಿಸಿದ್ದಾರೆ. ಹೀಗೆ ತನ್ನದೇ ಆದ ವಿಶಿಷ್ಟ ಜಾಡನ್ನು ಹಿಡಿದು ಏಕಾಂಕ ನಾಟಕ ಸಾಗುತ್ತಿದೆ.

ಕನ್ನಡದಲ್ಲಿ ಕೈಲಾಸಂ, ಕುವೆಂಪು, ಬೇಂದ್ರೆ, ಕೈವಾರ ರಾಜಾರಾವ್, ಶ್ರೀರಂಗ, ಪರ್ವತವಾಣಿ, ಕ್ಷೀರಸಾಗರ ಮುಂತಾದವರು ಸೊಗಸಾದ ಏಕಾಂಕ ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಅನೇಕ ಕೃತಿಗಳು ರಂಗಮಂದಿರಗಳಲ್ಲಿ ಅಭಿನಯಿಸಲ್ಪಟ್ಟು ಬಹು ಜನಪ್ರಿಯವಾಗಿವೆ **(ನೋಡಿ– ಉಪನಾಟಕಗಳು)**. (ಎಚ್.ಕೆ.ಆರ್.)

ಏಕಾಂಕ ನಾಟಕವು ಭಾರತೀಯ ರಂಗಭೂಮಿಗೆ ಅಪರಿಚಿತವಲ್ಲ. ಭಾಸನು ಏಕಾಂಕ ನಾಟಕಗಳನ್ನು ರಚಿಸಿದ. 20ನೆಯ ಶತಮಾನದಲ್ಲಿ ಪಾಶ್ಚಾತ್ಯ ರಂಗಭೂಮಿಯಿಂದ ಬಂದ ಏಕಾಂಕ ನಾಟಕವು ಕನ್ನಡ ರಂಗಭೂಮಿಯಲ್ಲಿಯೂ ಜನಪ್ರಿಯವಾಯಿತು ಶ್ರೀರಂಗರು ಐವತ್ತಕ್ಕಿಂತ ಹೆಚ್ಚು ಏಕಾಂಕ ನಾಟಕಗಳನ್ನು ರಚಿಸಿದ್ದಾರೆ. ಅವರು ಪೌರಾಣಿಕ ಕಥಾವಸ್ತುಗಳನ್ನು ಬಹು ಪರಿಣಾಮಕಾರಿಯಾಗಿ ಬಳಸಿಕೊಂಡರು. ಅಹಲ್ಯೋದ್ಧಾರ ಅಶ್ವಮೇಧ, ನಿರುತ್ತರ ಕುಮಾರ ಮೊದಲಾದ ನಾಟಕಗಳು ನಿದರ್ಶನಗಳು. ಸೊಗಸಾದ ಏಕಾಂಕ ನಾಟಕಗಳನ್ನು ಬರೆದ ಮತ್ತೊಬ್ಬ ಪ್ರತಿಭಾವಂತರು ಪರ್ವತವಾಣಿ. ಬಹುಮಟ್ಟಿಗೆ ಏಕಾಂಕ ನಾಟಕಗಳು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ, ಹೆಚ್ಚು ರಂಗಸಜ್ಜಿಕೆಯ ಅಗತ್ಯವಿಲ್ಲ ಮತ್ತು ಹೆಚ್ಚು ಪಾತ್ರಗಳಿರುವುದಿಲ್ಲ ಎನ್ನುವ ಕಾರಣಗಳಿಗಾಗಿ ಕನ್ನಡ ನಾಡಿನಲ್ಲಿ ವ್ಯಾಪಕವಾಗಿ ಪ್ರದರ್ಶಿತವಾದವು. ಸಣ್ಣ ಊರುಗಳಲ್ಲಿ ಕೆಲವರು ಹವ್ಯಾಸಿ ನಟರು ಇಂಥ ನಾಟಕಗಳನ್ನು ಪ್ರದರ್ಶಿಸುವುದು ಸಾಧ್ಯವಾದುದರಿಂದ, ಹೆಚ್ಚಿನ ಚಲನಚಿತ್ರಗಳ ಜನಪ್ರಿಯತೆಯ ಕಾಲದಲ್ಲಿಯೂ ಇವು ರಂಗಭೂಮಿಯನ್ನು ಜೀವಂತವಾಗಿ ಉಳಿಸಿದವು. (ಎಲ್.ಎಸ್.ಎಸ್)

**ಏಕಾಂತದ ರಾಮಯ್ಯ:** ಕನ್ನಡ ನಾಡಿನಲ್ಲಿ ಶೈವನಿಷ್ಠೆಯ ಮೇಲ್ಮೆಯನ್ನು ಪ್ರಸ್ಥಾಪಿಸಿದ ವೀರ ಶಿವಭಕ್ತರಲ್ಲಿ ಗಣ್ಯ. ಕಾಲ 12ನೆಯ ಶತಮಾನದ ಉತ್ತರಾರ್ಧ. ಸೋಮನಾಥನ ಗಣಸಹಸ್ರನಾಮಾವಳಿಯಲ್ಲಿ ಇವನ ಹೆಸರಿದೆ. ಈತ ತನ್ನ ಪವಾಡಗಳನ್ನು ಮೆರೆದ ಸ್ಥಳ ಅಬ್ಬಲೂರು. ಅಲ್ಲಿನ ಶಿಲಾಶಾಸನವೊಂದರಲ್ಲಿ ಇವನ ಬಗ್ಗೆ ಉಲ್ಲೇಖವಿದೆ, ಹರಿಹರ ಇವನನ್ನು ಕುರಿತು ಒಂದು ರಗಳೆಯನ್ನು ಬರೆದಿದ್ದಾನೆ.

ಈತನ ಊರು ಅಲಂದೆನಗರ ಅಂದರೆ ಗುಲ್ಬರ್ಗ ಜಿಲ್ಲೆಯಲ್ಲಿ ಆಳಂದ ಎಂಬ ಗ್ರಾಮ. ಶ್ರೀವತ್ಸಗೋತ್ರದ ಪುರುಷೋತ್ತಮ, ಪದ್ಮಾಂಬಿಕೆ ಎಂಬ ಬ್ರಾಹ್ಮಣ ದಂಪತಿಗಳಲ್ಲಿ ವೀರಭದ್ರನ ವರಪ್ರಸಾದದಿಂದ ಜನಿಸಿದ. ಹೆಸರು ರಾಮ, ಅಲಂದೆಯ ಸೋಮನಾಥ ಶಿವನನ್ನು ಏಕಾಂತದಲ್ಲಿ ಏಕಾಗ್ರ ಭಕ್ತಿಯಿಂದ ಆರಾಧಿಸಿ, ಮೆಚ್ಚಿಸಿದುದರಿಂದಾಗಿ ಈತನಿಗೆ ಏಕಾಂತದ ರಾಮಯ್ಯ ಎಂಬ ಅರ್ಥಪೂರ್ಣ ಹೆಸರು ಬಂತು. ರಾಮಯ್ಯ ಶೈವ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ ಹುಲಿಗೆರೆಗೆ (ಇಂದಿನ ಲಕ್ಷ್ಮೇಶ್ವರ) ಬಂದು, ಅಲ್ಲಿಯ ದಕ್ಷಿಣ ಸೋಮನಾಥನನ್ನು ಪೂಜಿಸಿದ. ಈ ದೇವನ ಆದೇಶದಂತೆ ಜೈನಕೇಂದ್ರವಾಗಿದ್ದ ಅಬ್ಬಲೂರಿಗೆ ಆಗಮಿಸಿದ.

ರಾಮಯ್ಯ ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದಲ್ಲಿ ನಿರ್ಭಯವೃತ್ತಿಯಿಂದ ವಾಸವಾಗಿರಲು, ಆ ಪುರದ ಪ್ರಮುಖ ಗಾವುಂಡನೇ ಮೊದಲಾದ ಜೈನಧರ್ಮೀಯರು ಅಲ್ಲಿಗೆ ಬಂದು ಜಿನನೇ ಶ್ರೇಷ್ಠನೆಂದು ವಾದಹೂಡಿ ಆತಂಕ ಮಾಡಿದರು. ಶಿವನೇ ಶ್ರೇಷ್ಠ ನೆಂದು ಪ್ರತಿಪಾದಿಸಿದ ರಾಮಯ್ಯನನ್ನು ಪ್ರತಿಭಟಿಸಿದರು. ಶಿವನೇ ಶ್ರೇಷ್ಠನೆಂದು ಪ್ರಸ್ಥಾಪಿಸಲು ತನ್ನ ಶಿರವನ್ನು ಕೊಯ್ದು ಅದನ್ನು ಪುನಃ ಪಡೆಯುವಂತೆ ಆತನಿಗೆ ಆಹ್ವಾನವಿತ್ತರು.

ಈ ಆಹ್ವಾನವನ್ನು ಅಂಗೀಕರಿಸಿ ತನ್ನ ಶಿರವನ್ನು ಕೊಯ್ದು ರಾಮಯ್ಯ ಶಿವಪಾದದಲ್ಲಿ ಅರ್ಪಿಸಿದ. ಅದು ಏಳು ದಿನ ಅಲ್ಲಿ ಉಳಿದುಕೊಂಡು, ಬಳಿಕ ತನ್ನ ಸ್ಥಳಕ್ಕೆ ಸೇರಿಕೊಂಡಿತು. ಈ ಅದ್ಭುತವನ್ನು ಕಂಡ ಜೈನರು ದಿಗ್ಭ್ರಾಂತರಾದರು. ರಾಮಯ್ಯ ತನ್ನ ಪ್ರತಿಜ್ಞೆಯಂತೆ ಜಿನನನ್ನು ಧ್ವಂಸಮಾಡಲು ಮುಂದುವರಿದ. ಆತನನ್ನು ವಿರೋಧಿಸಿದ ಜೈನರೆಲ್ಲರೂ ಸೋತು ಶರಣಾಗತರಾಗಿ ರಾಮಯ್ಯನಿಗೆ ಜಯಪತ್ರವನ್ನು ಬರೆದುಕೊಟ್ಟು ಶೈವಧರ್ಮಾ ವಲಂಬಿಗಳಾದರು.

ಅನಂತರ ಜೈನರು ರಾಮಯ್ಯನ ವಿರುದ್ಧವಾಗಿ ಬಿಜ್ಜಳನಲ್ಲಿ ದೂರು ಸಲ್ಲಿಸಿದರು. ಬಿಜ್ಜಳ ರಾಮಯ್ಯನ ಪ್ರಭಾವವನ್ನು ಅರಿತವನಾಗಿ ಜೈನರ ದೂರನ್ನು ತಿರಸ್ಕರಿಸಿದ. ರಾಮಯ್ಯನನ್ನು ಸತ್ಕರಿಸಿದ್ದಲ್ಲದೆ ಅಬ್ಬಲೂರಿನ ವೀರ ಸೋಮನಾಥದೇವನಿಗೆ ಭೂದಾನ ಮಾಡಿದ. ರಾಮಯ್ಯನ ಕೀರ್ತಿಯನ್ನು ಕೇಳಿ ಬೇರೆ ರಾಜರು ಪ್ರಭಾವಿತರಾದರು. ಚಾಲುಕ್ಯ ನಾಲ್ಕನೆಯ ಸೋಮೇಶ್ವರ, ಕದಂಬ ಕಾಮದೇವರಿಂದ ಈತ ಸನ್ಮಾನಿತನಾದ. ಇದು ಶಾಸನದಲ್ಲಿರುವ ಸಂಗತಿ. ಈ ಶಾಸನ ವೃತ್ತಾಂತದ ಕೆಲವು ವಿವರಗಳು ಹರಿಹರನ ರಗಳೆಯಲ್ಲಿ ಸಿಕ್ಕುವುದಿಲ್ಲ. ಶಾಸನಗಳಲ್ಲಿರದ ಒಂದೆರಡು ಹೆಚ್ಚಿನ ಅಂಶಗಳು ಹೀಗಿವೆ :

ಹುಲಿಗೆರೆಯ ಅಗ್ಗಣಿಯ ಹೊನ್ನಿತಂದೆಯೆಂಬ ಶಿವಭಕ್ತ ಜೈನಪರಾಜಯ ಕಾರ್ಯದಲ್ಲಿ ರಾಮಯ್ಯನಿಗೆ ಸಹಾಯಕನಾದ. ರಾಮಯ್ಯನ ರುಂಡವನ್ನು ಪುಲಿಗೆರೆ, ಅಣ್ಣಿಗೆರೆ, ಕೆಂಬಾವಿ, ಕಪ್ಪಡಿಸಂಗಮ, ನಾಗನಾಥ, ಸೊನ್ನಲಿಗೆ, ಹಂಪೆ ಮೊದಲಾದ ಶೈವಕ್ಷೇತ್ರಗಳಲ್ಲಿ ಏಳು ದಿನಗಳವರೆಗೆ ಮೆರೆಯಿಸಿದ.

ರಾಮಯ್ಯನ ಕಥೆ ತೆಲುಗು ಬಸವಪುರಾಣ, ಕನ್ನಡ ಬಸವಪುರಾಣ, ಮೊದಲಾದ ಈಚೆಯ ವೀರಶೈವ ಪುರಾಣಕಾವ್ಯಗಳಲ್ಲಿ ಪವಾಡಗಳಿಂದ ಕೂಡಿ ರಂಜಕವಾಗಿ ನಿರೂಪಿತವಾಗಿದೆ.

ರಾಮಯ್ಯ ಪ್ರತಿಷ್ಠೆಮಾಡಿದ ವೀರಸೋಮೇಶ್ವರ ದೇವಾಲಯ ಈಗಲೂ ಅಬ್ಬಲೂರಲ್ಲಿದೆ. ಈ ದೇವಾಲಯದ ಭಿತ್ತಿಗಳ ಮೇಲೆ ರಾಮಯ್ಯನ ಜಿನವಿಜಯದ ಸನ್ನಿವೇಶಗಳನ್ನು ಜೊತೆಯ ವಿವರಣೆಗಳೊಂದಿಗೆ ಚಿತ್ತಾಕರ್ಷಕವಾಗಿ ಕೆತ್ತಲಾಗಿದೆ. ಭೂಗತವಾಗಿದ್ದ ನೂರಾರು ಚಿಕ್ಕ ಶಿವಲಿಂಗಗಳು ಕೆಲವರ್ಷಗಳ ಹಿಂದೆ ಈ ಊರಲ್ಲಿ ದೊರೆತಿವೆ. ದೇವಾಲಯದಲ್ಲಿ ಸೋಮೇಶ್ವರ ಲಿಂಗವಲ್ಲದೆ ರಾಮಯ್ಯ, ಅಗ್ಗಣಿಯ ಹೊನ್ನಯ್ಯರ ಸ್ಮಾರಕಗಳಾದ ಎರಡು ಬೃಹತ್ ಲಿಂಗಗಳಿವೆ. (ಪಿ.ಬಿ.ಡಿ.; ಬಿ.ಎಸ್.)

**ಏಕಾಣುಜೀವಿಕ, ಸೋಂಕಿನ ರೋಗಗಳು:** ಒಂದು ಜೀವಿಯಿಂದ ಇನ್ನೊಂದು ಜೀವಿಗೆ ಹರಡುವ ರೋಗಗಳೇ ಸೋಂಕಿನ ರೋಗಗಳು (ಇನ್‌ಫೆಕ್ಷಿಯಸ್ ಡಿಸೀಸಸ್). ಇನ್ನೂ ನಿಖರವಾಗಿ ಹೀಗೆ ಹೇಳಬಹುದು. ಆತಿಥೇಯ ಜೀವಿಯನ್ನು (ಹೋಸ್ಟ್) ಆಕ್ರಮಿಸಿ ಅದರ ಊತಕಗಳನ್ನು ಪ್ರವೇಶಿಸಿ ಅಲ್ಲಿ ವಿಪರೀತವಾಗಿ ವೃದ್ಧಿಗೊಳ್ಳುವ ಸೂಕ್ಷ್ಮಜೀವಿಗಳಿಂದ ಜನಿಸುವ ರೋಗಗಳು. ಆತಿಥೇಯ ಜೀವಿ ಮನುಷ್ಯ, ಪ್ರಾಣಿ, ಸಸ್ಯ. ಕೀಟ ಅಥವಾ ಬೇರೆ ಒಂದು ಸೂಕ್ಷ್ಮಜೀವಿಯೇ ಆಗಬಹುದು. ಉದಾಹರಣೆಗೆ ಏಕಾಣುಜೀವಿಗಳಲ್ಲೇ (ಬ್ಯಾಕ್ಟೀರಿಯ) ರೋಗಗಳನ್ನು ಉಂಟುಮಾಡಬಲ್ಲ ವೈರಸ್ ಸೂಕ್ಷ್ಮ ಜೀವಿಗಳಿವೆ. ಇವುಗಳ ಹೆಸರು ಏಕಾಣುಜೀವಿಗಳು (ಬ್ಯಾಕೀರಿಯೋಫೇಜಸ್). ಮುಖ್ಯ ವಿಷಯವಿಷ್ಟೇ–ಸೂಕ್ಷ್ಮಜೀವಿ ಊತಕದಲ್ಲಿ ನೆಲೆಸಬೇಕು. ವೃದ್ಧಿಗೊಳ್ಳಬೇಕು ಮತ್ತು ಊತಕವನ್ನು ಘಾಸಿಗೊಳಿಸಬೇಕು. ಈ ಕೊನೆಯ ಅಂಶ ನೆರವೇರದಿದ್ದರೆ ಅಂಥ ಸೂಕ್ಷ್ಮ ಜೀವಿಗಳು ರೋಗವನ್ನು ಉಂಟು ಮಾಡುವುದಿಲ್ಲ–ಅವು ಆತಿಥೇಯ ಜೀವಿಯನ್ನು ಅವಲಂಬಿಸಿರುವ ಪರಪಿಂಡಿ ಜೀವಿಗಳಷ್ಟೇ **(ನೋಡಿ– ಪರಪಿಂಡಿ–ಶಾಸ್ತ್ರ)**.

**ಸೋಂಕು ರೋಗದ ಹುಟ್ಟು:** ಜೀವವಿಕಾಸದಲ್ಲಿ ಸೋಂಕು ಹೇಗೆ ಎಲ್ಲಿ ಹುಟ್ಟಿತೆಂದು ಇನ್ನೂ ಖಚಿತವಾಗಿ ತಿಳಿದಿಲ್ಲ. ಮೊಟ್ಟಮೊದಲಲ್ಲಿ ಜೀವವಿಲ್ಲದ ವಸ್ತುಗಳನ್ನು ಆಹಾರವಾಗಿ ಬಳಸಿ ಕೊಳೆತಿನಿ ಜೀವಿಗಳಾಗಿ (ಸ್ಯಾಪ್ರೊಫೈಟ್ಸ್) ಏಕಾಣುಜೀವಿಗಳು ವಿಕಾಸಗೊಂಡವು ಎನ್ನಬಹುದು. ಮಣ್ಣಲ್ಲೂ ಕೊಳೆಯುತ್ತಿರುವ ಸೊಪ್ಪುಸದೆಗಳಲ್ಲೂ ಬಿದ್ದಿದ್ದ ಇವುಗಳಲ್ಲಿ ಕೆಲವು ಪ್ರಾಣಿಗಳ ಗಾಯಗಳ ಮೂಲಕ ಆಗಾಗ್ಗೆ ಒಳಹೊಕ್ಕಿರಬೇಕು. ಆದರೆ ಆತಿಥೇಯದ ರಸಗಳ ಹೆಚ್ಚಿನ ಬಲದಿಂದಲೋ ಅವುಗಳಿಂದ ಸಾಕಷ್ಟು ಪೋಷಣೆ ದಕ್ಕದೆಯೋ ಇವುಗಳಲ್ಲಿ ಬಹುಪಾಲು ಸತ್ತರೂ ಕೆಲವಾದರೂ ಜಗ್ಗದೆ ನೆಲೆಯೂರಿರ

ಬೇಕು. ಆಗಿನ ಹೊಸ ಪರಿಸರ ಸಂದರ್ಭಗಳಿಗೆ ತಕ್ಕಂತೆ ಹೊಂದಿಕೊಂಡಂಥ ಏಕಾಣುಜೀವಿಗಳು ಮಾತ್ರ ಉಳಿದಿರಬೇಕು. ಈ ಪ್ರಯತ್ನದಲ್ಲಿ ರೋಗಾಣುಗಳು ಹೊರಬಿಟ್ಟ ವಿಷ ಆತಿಥೇಯ ಜೀವಿಯನ್ನು ಬಲಿತೆಗೆದುಕೊಂಡಿರಲೂಬಹುದು. ಇಂಥ ಪರಿಸ್ಥಿತಿಯಿಂದ ರೋಗಾಣುಗಳಿಗೂ ಕೇಡು ತಪ್ಪಿದ್ದಲ್ಲ. ಆಗ ಬೇರೊಂದು ಪ್ರಾಣಿಯಲ್ಲಿ ಅವು ಸೇರಿಕೊಂಡು ಹೊಸ ನೆಲೆಯಲ್ಲಿ ಮತ್ತೆ ಪರಪಿಂಡಿಯಾಗಿ ಬಾಳಬೇಕಾಗುತ್ತದೆ. ವಿಕಾಸದಲ್ಲಿ ಇಂಥ ಸರಣಿಗಳು ಲೆಕ್ಕವಿಲ್ಲದಷ್ಟು ನಡೆದುಹೋಗಿವೆ. ಪರಿಸರಕ್ಕೆ ಹೊಂದಿಕೊಂಡ ರೋಗಾಣುಗಳು ಬದಲಾದುವು, ಉಳಿದುಕೊಂಡವು. ಹೊಂದಲಾಗದವು ನಿರ್ನಾಮವಾಗಿ ಹೋದುವು.

ಪ್ರಪಂಚದಲ್ಲಿರುವ ರೋಗಾಣುಗಳಿಗೆ ಲೆಕ್ಕವೇ ಇಲ್ಲ. ಒಂದೊಂದು ಬಗೆಯದು ಗೊತ್ತಾದ ಒಂದೊಂದು ರೋಗ ಹುಟ್ಟಿಸಬಹುದು. ಆದರೆ ರೋಗಾಣುಗಳ ದಾಳಿಯನ್ನು ಎದುರಿಸುವುದರಲ್ಲಿ ದೇಹ ಎದುರಿಸುವ ಬಗೆಗಳು ಮಾತ್ರ ಕೆಲವೇ ಆಗಿರುವುದರಿಂದ ಬಹುಪಾಲು ರೋಗಗಳನ್ನು ಖಚಿತವಾಗಿ ಗುರುತಿಸಬೇಕಾದರೆ ಪ್ರಯೋಗಾಲಯದ ಪರೀಕ್ಷೆಗಳಾಗಬೇಕು. ಇದರಿಂದಲೇ ಈಗ ಬೇರೆ ಬೇರೆ ಎಂದು ಗುರುತಿಸಿರುವ ಎಷ್ಟೋ ರೋಗಗಳು ಮೊದಲು ಹಾಗೆ ತಿಳಿದಿರಲಿಲ್ಲ. ಉರಿಶೀತ (ಇನ್‌ಫ್ಲುಯೆಂಜ) ಹಿಂದೆ ಬೇರೆ ಕಾಯಿಲೆಗಳ ಲೆಕ್ಕಕ್ಕೆ ಸೇರುತ್ತಿತ್ತು. ಕುಷ್ಠರೋಗಕ್ಕೂ ಬಿಳಿಯ ತೊನ್ನಿಗೂ ಚರ್ಮದ ಇನ್ನೂ ಹಲವಾರು ಬೇರೂರಿದ ರೋಗಗಳಿಗೂ ವ್ಯತ್ಯಾಸಗಳನ್ನೇ ಹಿಂದಿನ ಕಾಲದಲ್ಲಿ ಕಾಣದೆ ಎಲ್ಲವನ್ನೂ ಕುಷ್ಠ ಎನ್ನುತ್ತಿದ್ದರು. ಹಾಗೇ ವಿಪರೀತ ವಾಂತಿ, ಭೇದಿ ಆಯಿತೆಂದರೆ ಸಾಕು, ಕಾಲರ ಎನ್ನುವ ಕಾಲ ಈಗಲೂ ಇದೆ. ಹಿಂದೆ ಮಹಾಮಾರಿ ಎಂದು ಹೆಸರಾಗಿದ್ದ ಪ್ಲೇಗಿನಲ್ಲಿ ಇನ್ನೂ ಬೇರೆ ರೋಗಗಳೂ ಸೇರಿಕೊಳ್ಳುತ್ತಿದ್ದುವು. ಪುರಾತನ ರೋಗಗಳಾದ ಸಿಡುಬೂ ಘುಪ್ಪುಸದ್ದಲ್ಲದ ಕ್ಷಯವೂ ಈಜಿಪ್ಟಿನ ಮಮ್ಮಿಗಳಲ್ಲೂ ಇದ್ದುದರ ಗುರುತುಗಳು ಕಂಡುಬಂದಿವೆ. ಗ್ರೀಕರ, ಅದಕ್ಕೂ ಹಿಂದಿನ ನಾಗರಿಕ ಸಮಾಜಗಳಲ್ಲಿ ಗಂಟಲಮಾರಿ (ಡಿಫ್ತೀರಿಯ), ಘುಪ್ಪುಸುರಿತ (ನ್ಯುಮೋನಿಯ), ಕಾಲರ ರೋಗಗಳಿದ್ದ ಕುರುಹುಗಳು ದೊರೆತಿವೆ.

**ಚರಿತ್ರೆ:** ಸೋಂಕಿನ ರೋಗಗಳ ಗುಣ, ಕಾರಣಗಳ ವಿಷಯದಲ್ಲಿ ಪೂರ್ವ ಕಾಲದಿಂದಲೂ ಬಲು ವಿಚಿತ್ರ ನಂಬಿಕೆಗಳಿದ್ದುವು. ಇಂಥ ರೋಗಗಳು ಯಾವುದೋ ಕಾಣದ ಶಕ್ತಿಯ ಕಾಟವೆಂದೇ ಜನ ನಂಬಿದ್ದರು. ಆಮೇಲಿನ ಶೋಧಕರಿಗೆ ನಿಜದಕತೆ ಕಂಡುಕೊಳ್ಳುವುದರಲ್ಲಿ ಇವು ಯಾವುವೂ ನೆರವಾಗಲೇ ಇಲ್ಲ. ಆದರೆ ಉಪದಂಶದ (ಸಿಫಿಲಿಸ್) ವಿಷಯವಾಗಿ ಫ್ರಾಕಸ್ಟೋರಿಯಸನಂಥವರು ಹೇಳಿದ್ದು ನಿಜವಿಚಾರಕ್ಕೆ ಹತ್ತಿರ ಬಂದಿದ್ದರೂ ಆಗ ಅದನ್ನು ಖಚಿತಪಡಿಸುವ ಪರಿಕರ, ಮುಟ್ಟುಗಳೂ ವಿಧಾನಗಳೂ ಇಲ್ಲದ್ದರಿಂದ ದೃಢಗೊಳಿಸಲಾಗಲಿಲ್ಲ. 17ನೆಯ ಶತಮಾನದಲ್ಲಿ ಆಂಟನಿ ವಾನ್ ಲೀವನ್‌ಹಾಕ್ ಕೋಶದ ಸೂಕ್ಷ್ಮದರ್ಶಕವನ್ನು ತಯಾರಿಸುವತನಕ ಒಂಟಿ ಕೋಶದ ಜೀವಿಗಳನ್ನು ಯಾರಿಗೂ ನೋಡುವುದು ಸಾಧ್ಯವಾಗಿರಲಿಲ್ಲ. ಅಷ್ಟಾದರೂ ಬೇಕಾದ ಇತರ ವಿಧಾನಗಳೂ ಆಗಿನ್ನೂ ಗೊತ್ತಿರದಿದ್ದುದರಿಂದ ರೋಗಕಾರಣಗಳನ್ನು ಕಂಡು ಹಿಡಿಯುವುದರಲ್ಲಿ ಯಾವ ಮುನ್ನಡೆಯೂ ಆಗಲಿಲ್ಲ.

ಸೂಕ್ಷ್ಮಜೀವಿವಿಜ್ಞಾನ (ಮೈಕ್ರೊಬಯಾಲಜಿ) ನಿಜವಾಗಿ ಹುಟ್ಟಿದ್ದು ಲೂಯಿಪ್ಯಾಶ್ಚರ್‌ನಿಂದ, **(ನೋಡಿ– ಪಾಸ್ತರ್,–ಲೂಯಿ)** ಕೆಲವು ಜೈವಿಕ ಸಂಯುಕ್ತಗಳು ಒಡೆಯುವುದಕ್ಕೂ ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣಬರುವ, ಬದುಕಿರುವ ಜೀವಾಣುಗಳು ಇರುವುದಕ್ಕೂ ನಿಕಟಸಂಬಂಧ ಇರುವುದನ್ನು ಈತ ಚುರುಕಾಗಿ ಗುರುತಿಸಿದ. ಒಂದೊಂದು ಜೀವಾಣುವಿನಿಂದಲೂ ಬೇರೆ ಬೇರೆ ತೆರನಾಗಿ ಹುದುಗೇಳುವುದನ್ನು (ಫರ್ಮೆಂಟೇಷನ್) ಕಂಡುಕೊಂಡ. ಇನ್ನೂ ಹೆಚ್ಚಿನದಾಗಿ ಜೀವಿಗಳು ಇದ್ದಕ್ಕಿದ್ದ ಹಾಗೆ ಹುಟ್ಟಿಕೊಳ್ಳುತ್ತವೆಂಬ ಅಂದಿನ ನಂಬಿಕೆಯನ್ನೂ ಎದುರಿಸಿ, ಚಾಲೂಕಿನ ಪ್ರಯೋಗ ಸಾಲುಗಳಿಂದ, ಮೊದಲೇ ಇರುವ ಜೀವಾಣುಗಳೇ ವೃದ್ಧಿಗೊಂಡು ಅದೇ ತೆರನ ಜೀವಾಣುಗಳು ಹುಟ್ಟಿಕೊಳ್ಳುತ್ತವೆಂದು ಅನುಮಾನವಿಲ್ಲದಂತೆ ತೋರಿಸಿ ಕೊಟ್ಟ. ಪರಿಸರ, ಸ್ಥಿತಿಗಳು ಅನುಕೂಲವಾಗಿದ್ದರೆ, ಜೀವಾಣುಗಳ ತಳಿ ಸಾಲುಗಳನ್ನೇ ದ್ರವಮಾಧ್ಯಮಗಳಲ್ಲಿ (ಮೀಡಿಯ) ಬೆಳೆಸಬಹುದೆಂದೂ ಅವುಗಳಲ್ಲಿರುವ ಜೀವಿಗಳನ್ನೆಲ್ಲ ಕುದಿಸಿ ಕೊಂದುಬಿಟ್ಟಮೇಲೆ ಬದುಕಿರುವ ಜೀವಿಗಳು ಒಳಹೋಗದಂತೆ ಎಚ್ಚರದಿಂದಿದ್ದರೆ ಯಾವ ಜೀವಿಯೂ ಬೆಳೆಯಲಾರದೆಂದೂ ಕೆಲವು ಹೊಸ ಜೀವಿಗಳನ್ನು ಒಳಬಿಟ್ಟರೆ ಅದರ ಗೊತ್ತಾದ ತೆರನ ಹುದುಗೇಳುವುದನ್ನೂ ಅನುಮಾನವಿಲ್ಲದಂತೆ ತೋರಿಸಿದ. ಇನ್ನಿತರ ಚಟುವಟಿಕೆಗಳಿಂದ ರೋಗಕಾರಣಗಳನ್ನು ಹುಡುಕಲು ತೊಡಗಿ ಕೊನೆಗೆ ಅನೇಕ ರೋಗಗಳಲ್ಲಿ ಊತಕಗಳಲ್ಲಿ ಗೊತ್ತಾದ ಸೂಕ್ಷ್ಮಜೀವಿಗಳು ಬೆಳೆಯುತ್ತಿರುವುದನ್ನು ರುಜುವಾತುಪಡಿಸಿ ಅಂದಿನ ವೈದ್ಯಕುಲದ ಮೂಢನಂಬಿಕೆ ಎದುರು ಹೋರಾಡಿ, ರೋಗಗಳು ಹರಡುವ ಇಡೀ ಕಲ್ಪನೆಯಲ್ಲಿಯೇ ಕ್ರಾಂತಿ ಎಬ್ಬಿಸಿದ.

ಬೇರೆ ಬೇರೆ ಸೂಕ್ಷ್ಮಜೀವಾಣುಗಳ ಅಚ್ಚ ತಳಿಗಳನ್ನು ಬೆಳೆಸುವ ತಾಂತ್ರಿಕ ವಿಧಾನಗಳನ್ನು ಜರ್ಮನಿಯ ಏಕಾಣುಜೀವಿವಿಜ್ಞಾನಿ ರಾಬರ್ಟ್ ಕಾಕ್ **(ನೋಡಿ– ಕಾಕ್, ರಾಬರ್ಟ್)** ಜಾರಿಗೆ ತಂದು ಕ್ಷಯ, ಕಾಲರ ರೋಗಗಳ ಕಾರಣಗಳಾದ ಜೀವಾಣುಗಳನ್ನು ವಿವರಿಸಿ ತೋರಿಸಿದ. ಪ್ಯಾಶ್ಚರ್, ಕಾಕ್ ಇವರೊಡನೆ ಅಭ್ಯಸಿಸಿದವರೇ ರೋಗಗಳಿಗೆ ಕಾರಣಗಳಾದ ರೋಗಕಾರಕಗಳನ್ನು ಕಂಡುಹಿಡಿದರು. ಗಾಯಗಳಲ್ಲಿ ನಂಜಾಗುವುದನ್ನು ತಪ್ಪಿಸಲು, ಗ್ಲಾಸ್ಗೋದಲ್ಲಿದ್ದ ಜೋಸೆಫ್ ಲಿಸ್ಟರ್, ಪ್ಯಾಶ್ಚರನ ತತ್ತ್ವಗಳನ್ನು ಅನುಸರಿಸಿದ್ದರಿಂದ ಶಸ್ತ್ರವೈದ್ಯ ಚೆನ್ನಾಗಿ ಕೈಗೂಡಿದ್ದು ಇಡೀ ಶಸ್ತ್ರ ವೈದ್ಯದಲ್ಲೇ ಒಂದು ಹೊಸ ಯುಗ ಕಾಲಿಟ್ಟಿತು. ನೆಲ ಫಲವತ್ತಾಗಿರಬೇಕಾದರೆ, ಕೇವಲ ಸೂಕ್ಷ್ಮಜೀವಿಗಳ ಚಟುವಟಿಕೆಯಿಂದಲೇ ಎನ್ನುವುದು ಬೇಸಾಯದ ಶೋಧನೆಗಳಿಂದ ತೋರಿಬಂದಿತು. ಪ್ರಾಣಿಗಳ, ಗಿಡಮರಗಳ ಪ್ರಪಂಚಗಳಲ್ಲಿ ಸೋಂಕಿನ ರೋಗಗಳು ಗೊತ್ತಾದ ಸೂಕ್ಷ್ಮಜೀವಿಗಳಿಂದಲೇ ಏಳುವುದು ಖಚಿತವಾಯಿತು. ರೋಗನಿದಾನ (ಡಯಗ್ನೋಸಿಸ್), ಚಿಕಿತ್ಸೆಗಳ ವಿಧಾನಗಳು ಪ್ಯಾಶ್ಚರನ ಮೂಲ ಶೋಧನೆಗಳ ಪರಿಣಾಮ ಎನ್ನುವುದರಲ್ಲಿ ಅನುಮಾನವೇ ಇಲ್ಲ.

**ಕಾರಣಗಳು:** ಒಂದು ರೋಗ ಬರಿಸುವುದರಲ್ಲಿ ಒಂದು ಸೂಕ್ಷ್ಮಜೀವಿಯ ಗೊತ್ತಾದ ಪಾತ್ರವನ್ನು ಕಂಡುಕೊಳ್ಳುವುದರಲ್ಲಿ ಕಾಕ್‌ನ ಮೂರು ಮುಖ್ಯ ಮೂಲ ಸೂತ್ರಗಳು ಇಂದಿಗೂ ಹೆಸರಾಗಿವೆ–1 ಒಂದು ರೋಗ ಅನುಭವಿಸುವ ಒಬ್ಬೊಬ್ಬರಲ್ಲೂ ರೋಗಕಾರಕ ಜೀವಾಣುಗಳು ಇದ್ದೇ ತೀರಬೇಕು. ಯಾವ ಅಂಗದಲ್ಲಿ ಯಾವ ತೆರನ ರೋಗ ಹೇಗೆ ಕಾಣಿಸಿಕೊಂಡಿದೆ ಎನ್ನುವುದಕ್ಕೆ ತಕ್ಕಂತೆ ರೋಗಾಣುಗಳನ್ನು ಅರಸಬೇಕು. 2 ರೋಗ ಹತ್ತಿರುವ ಊತಕಗಳಿಂದ ರೋಗಾಣುಗಳನ್ನು ಬೇರ್ಪಡಿಸಿ ಹಲವಾರು ತಲೆಮಾರಿನ ಅಚ್ಚ ತಳಿಗಳನ್ನು ಎಬ್ಬಿಸಿ ಬೆಳೆಸುವಂತಿಬೇಕು. 3 ಅಚ್ಚ ತಳಿಯ ರೋಗಾಣುಗಳನ್ನು ಆ ರೋಗಕ್ಕೀಡಾಗುವ ಪ್ರಾಣಿಗೆ ಹತ್ತಿಸಿದರೆ ಆ ರೋಗ ಅದರಲ್ಲಿ ತಲೆದೋರಬೇಕು; ಆ ರೋಗದ ಪ್ರಾಣಿಯ ಊತಕಗಳಿಂದ ಅದೇ ರೋಗಾಣುಗಳನ್ನು ಹೊರತೆಗೆವಂತಿರಬೇಕು. ಬಹುಪಾಲು ಏಕಾಣುಜೀವಿಕ ರೋಗಗಳಲ್ಲಿ ಈ ಮೂಲಸೂತ್ರಗಳು ಚೆನ್ನಾಗಿ ಹೊಂದಿಕೊಳ್ಳುತ್ತವೆ. ಆದರೆ, ಕುಷ್ಠರೋಗದಲ್ಲಿ 2, 3ನೆಯವನ್ನು ಈಗಲೀಗ ಬಲು ಕಷ್ಟದಿಂದ ಮಾತ್ರ ತೋರಬಹುದು. ಕುಷ್ಠ ರೋಗಿಗಳು ಎಲ್ಲರಲ್ಲೂ ಇದರ ರೋಗಾಣುಗಳು ಇದ್ದೇ ಇರುವುದರಿಂದ, ಮೂಲಸೂತ್ರ ರೀತಿಯಲ್ಲಿ ಅನುಮಾನವೇ ಇಲ್ಲ.

ಕೆಲವೇಳೆ (ರಿಕೆಟ್ಸನ ವಿಷಕಣಗಳ ಸೋಂಕುಗಳ ತೆರದಲ್ಲಿ ಇದ್ದಹಾಗೆ) ರೋಗಾಣುಗಳನ್ನು ಪ್ರಯೋಗಾಲಯದ ಕೃತಕ ಮಾಧ್ಯಮಗಳಲ್ಲಿ ಬೆಳೆಸುವುದು ಆಗಲಿಲ್ಲ. ಅಲ್ಲಿ ಈ ಮೂಲಸೂತ್ರಗಳೆಲ್ಲ ನಡೆಯದ್ದರಿಂದ, 2ನೆಯ ಮೂಲಸೂತ್ರದಲ್ಲಿ ಪ್ರಾಣಿಯ ಬದಲಾಗಿ ರೋಗಾಣುಗಳನ್ನು ಬೆಳೆಸಲು ಊತಕಗಳ ತಳಿವರಸೆಯನ್ನೂ (ಕಲ್ಚರ್) ಕೋಳಿಮರಿ ಪಿಂಡವನ್ನೂ ಬಳಸಬೇಕಾಯಿತು. ಸೂಕ್ಷ್ಮದರ್ಶಕದಲ್ಲೂ ಕಾಣದಿದ್ದು ಜೀವವಿರದ ವಸ್ತುಗಳಿಂದ ಬೇರೆಯಾಗಿ ಗುರುತಿಸಲಾಗದ ಸಣ್ಣ ವಿಷಕಣಗಳ ವಿಚಾರದಲ್ಲಿ ಮೊದಲನೆಯ ಮೂಲಸೂತ್ರವನ್ನು ಕೂಡ ತೋರುವುದು ಬಲುಕಷ್ಟ. ಇದಕ್ಕೆ ಸರಿಯಾದ ಉಪಾಯಗಳಾಗಿ, ಬಗೆಬಗೆಯ ಮಟ್ಟದ ಸೋಸಿಕಗಳಿಂದಲೂ ವಿಪರೀತ ವೇಗದಿಂದ ಸುತ್ತುವ ಅಪಕೇಂದ್ರಣ ಯಂತ್ರದಿಂದ (ಸೆಂಟ್ರಿಫ್ಯೂಜ್) ವಿಷಕಣಗಳ ಗಾತ್ರವೂ ಕೊಂಚಮಟ್ಟಿಗೆ ಆಕಾರವೂ ಗೊತ್ತಾಗುತ್ತವೆ. ಅಲ್ಲದೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ನೆರವೂ ಅಪಾರ. ಕಾಕ್‌ನ ಕಾಲದಿಂದೀಚೆಗೆ ರೋಗಕಾರಣಗಳಾದ ಜೀವಾಣುಗಳನ್ನು ಖಚಿತಪಡಿಸಲು ಹೊಸ ವಿಧಾನಗಳು ಬಂದಿವೆ. ರೋಗ ಹತ್ತಿದ ಮೇಲೆ ರಕ್ತದ ಹರಿವಿನಲ್ಲಿ ಪ್ರತಿ ರಕ್ಷಣೆಕೊಡುವ (ಇಮ್ಯುನೈಸಿಂಗ್) ವಸ್ತುಗಳು ಹುಟ್ಟಿ, ಅನುಮಾನವಿರುವ ರೋಗಾಣು ಅಂಟಣಿಸುವ (ಅಗ್ಲೂಟಿನೇಟಿಂಗ್) ಇಲ್ಲವೇ ಲಯಿಸುವ ಅದರ ಸೋಂಕು ಬಲ ಇಲ್ಲವೇ ವಿಷವನ್ನು ತಟಸ್ಥಗೊಳಿಸುವ (ನ್ಯೂಟ್ರಲೈಸಿಂಗ್) ಗುಣಗಳನ್ನು ತೋರುವುದರಿಂದ ರೋಗವನ್ನು ಕಂಡುಕೊಳ್ಳಬಹುದು.

**ರೋಗಕಾರಕಗಳು:** ಸಾಮಾನ್ಯವಾಗಿ, ಈ ಸೂಕ್ಷ್ಮಜೀವಿಗಳಲ್ಲಿ ಹಲವಾರು ಬಗೆಗಳಿರುವುವು. ಏಕಾಣುಜೀವಿಗಳಿಂದ ಏಳುವ ರೋಗಗಳಲ್ಲಿ ಮುಖ್ಯವಾದವನ್ನು ಲೇಖನದ ಕೊನೆಯಲ್ಲಿರುವ ವಿವರಪಟ್ಟಿಯಲ್ಲಿ ಕೊಟ್ಟಿದೆ. ರೋಗಕಾರಕ ಏಕಾಣುಜೀವಿಗಳ ಸೋಂಕು ಅಂಟಿಸುವ ಮೈ ಒಳನುಗ್ಗುವ ಬಲಗಳು ಒಂದೊಂದರದೂ ಒಂದೊಂದು ತೆರ. ಇವುಗಳಲ್ಲಿ ಬಹುಪಾಲು ಮೈಯೊಳಗೇ ವೃದ್ಧಿಗೊಂಡು ಒಳಜೀವಿವಿಷಗಳನ್ನು (ಎಂಡೊಟಾಕ್ಸಿನ್ಸ್) ಹೊರಬಿಡುವುವು. ಗಂಟಲಮಾರಿ, ಸೆಟೆಬೇನೆ ತೆರನ ಕೆಲವು ಮಾತ್ರ ಗಂಟಲಲ್ಲೋ ಗಾಯದಲ್ಲೋ ಒಂದೆಡೆಯಲ್ಲಿ ಹೊರಗೇ ಇದ್ದು ಸುರಿಸಿದ ಬಲು ಬಲವಾದ ಹೊರಜೀವಿವಿಷಗಳು (ಎಕ್ಸೊಟಾಕ್ಸಿನ್ಸ್) ರಕ್ತದ ಹರಿವಿನಲ್ಲಿ ಬೇರೆ ಭಾಗಗಳಿಗೆ ಸಾಗುತ್ತವೆ. ಊರುಬಾಡುಬೇನೆಯ ಕದಿರುಜೀವಿ (ಕ್ಲಾಸ್ಟ್ರಿಡಿಯಂ ಬಾಟುಲೈನಂ) ಪರಪಿಂಡಿ ಅಲ್ಲವೇ ಅಲ್ಲ. ಸರಿಯಾದ ಆವರಣದಲ್ಲಿರುವ ಆಹಾರದೊಳಗೆ ಇದು ಸೇರಿಬಿಟ್ಟರೆ ವೃದ್ಧಿಗೊಳ್ಳುತ್ತ ಹೊರಜೀವಿವಿಷವನ್ನು ಸುರಿಸುವುದರಿಂದ, ಇದರಿಂದೇಳುವ ರೋಗ ವಿಷವೇರಿಕೆಯೇ ಹೊರತು ಸೋಂಕು ಎನ್ನಿಸಿಕೊಳ್ಳದು.

ಸಾಮಾನ್ಯವಾಗಿ ಆರ್ತ್ರೊಪಾಡುಗಳ ಕರುಳಲ್ಲಿರುವ ಪುಟ್ಟ ಜೀವಾಣುಗಳಾದ ರಿಕೆಟ್ಸ ರೋಗಾಣುಗಳಲ್ಲಿ ಕೆಲವು ಮಾನವನಿಗೂ ಒಗ್ಗಿಕೊಂಡು, ಟೈಫಸ್ ಜ್ವರ, ರಾಕಿ ಪರ್ವತದ ಚುಕ್ಕೆ ಜ್ವರ, ಸುಟ್ಸುಗಮೂಷಿ, ಕ್ಯುಜ್ವರ, ಟ್ರೆಂಚ್ ಜ್ವರಗಳನ್ನು ಬರಿಸಬಲ್ಲವು. ಹೇನು ಕೂರೆಗಳು, ಚಿಗಟಗಳು, ಉಣ್ಣೆಗಳು, ನುಸಿಗಳಿಂದ ಮಾನವನಿಗೆ ಈ ಸೋಂಕುಗಳು ಸಾಗಿ ಬರುತ್ತವೆ.

ವೈರಸ್‌ಕಣಗಳು ರಿಕೆಟ್ಸ್ ರೋಗಾಣುಗಳಿಗಿಂತಲೂ ಸಣ್ಣವು. ಸಾಧಾರಣ ಸೂಕ್ಷ್ಮದರ್ಶಕದಲ್ಲಿ ಇವು ಕಾಣಿಸವು. ಏಕಾಣುಜೀವಿಗಳ ಶೋಧಕಗಳ (ಫಿಲ್ಟರ್ಸ್) ಮೂಲಕ ತೂರುತ್ತವೆ. ಬದುಕಿರುವ ಊತಕಗಳಿಲ್ಲದಿದ್ದರೆ ಬೆಳೆಯವು. ಕೆಲವಂತೂ ಮಾನವನಲ್ಲಿ ಮಾತ್ರ ಪರಪಿಂಡಿಗಳಾಗಿ ಗೊತ್ತಾದ ರೋಗಗಳನ್ನು ಬರಿಸುತ್ತವೆ. ಇನ್ನು ಹಲವು ಪ್ರಾಣಿಗಳನ್ನು ಹತ್ತಿಕೊಂಡರೆ, ಮತ್ತೆ ಬೇರೆಯವು ಪ್ರಾಣಿ, ಮಾನವ ಇಬ್ಬರನ್ನೂ ಕಾಡುತ್ತವೆ. ಎಷ್ಟೋ ವೇಳೆ ಗಾಳಿಯ ಮೂಲಕ ತೇಲಿ ಬಂದರೂ ಕೀಟಗಳ ಕಡಿತದಿಂದಲೂ ಕೆಲವೇಳೆ ಆಹಾರ ಮಾರ್ಗವಾಗಿ ಒಳಸೇರಿ ಹಲವು ಬಗೆಗಳ ರೋಗವೇಳಿಸುವುವು.

ಹುಗುಳು (ತ್ರಷ್) ರೋಗದ ಬಿಳಿಯ ಕಾಯಿಕ (ಕಾಂಡಿಡ ಆಲ್ಬಿಕಾನ್ಸ್), ಇನ್ನೂ ಹಲವಾರು ಘುಪ್ಘುಸ ರೋಗಗಳಿಗೂ ಕಾರಣವಾಗುವಂಥ ಹುದುಗು ಜೀವಿಗಳೂ (ಯೀಸ್ಟ್) ಅದೇ ತೆರನ ಬೂಷ್ಟುಗಳೂ (ಫಂಗಸ್) ಮಾನವನಿಗೆ ರೋಗಕಾರಕಗಳು. ಹಲವಾರು ಅಣಬೆಗಳಲ್ಲಿ ತೀರ ಸಾಮಾನ್ಯವಾದ ಹುಳುಕಡ್ಡಿ (ಗಜಕಡ್ಡಿ) ತೆರನ ಎಷ್ಟೊ ಬೂಷ್ಟುಗಳೂ ರೋಗಕಾರಕಗಳು.

ಒಂಟಿ ಊತಕ ಜೀವಿಗಳಾದ ಪ್ರೋಟೊಜೋವಾಗಳಿಂದ ಬರುವ ರೋಗಗಳಲ್ಲಿ ಮಲೇರಿಯ, ಬೈರೊಡಲಿಬೇನೆ (ಟ್ರಿಪನೊಸೋಮಿಯಾಸಿಸ್). ಲೀಷ್ಮನ್ ಬೇನೆ (ಲೀಷ್ಮಾನಿಯಾಸಿಸ್), ಅಮೀಬ ಆಮಶಂಕೆಗಳಿವೆ. ಆಮಶಂಕೆ ಸೋಂಕು ಬಾಯ ಮೂಲಕ ಹರಡುವುದಾದರೂ ಉಳಿದವುಗಳ ಸೋಂಕು ಮಾನವನನ್ನು ಕಡಿದು ರಕ್ತಹೀರುವ ಕೀಟಗಳಿಂದ ಆಗುತ್ತದೆ.

**ಹರಡಿಕೆ:** ಸಾಂಕ್ರಾಮಿಕತೆ : ಜನರಲ್ಲಿ ಒಂದು ರೋಗ ಹರಡಿರುವುದಕ್ಕೆ, ರೋಗ ಹರಡುವ ರೀತಿ, ಸೋಂಕು ಅಂಟಿಸುವ ರೋಗಾಣುವಿನ ತೀವ್ರತೆ, ಸೋಂಕಿಗೊಡ್ಡಿರುವ ಜನರ ವಯಸ್ಸು, ಲಿಂಗ, ಕಸಬು, ಪೌಷ್ಟಿಕತೆ, ರೋಗನಿರೋಧಕ ಬಲ, ಹವಾಮಾನ ಮುಂತಾದವು ಕಾರಣವಾಗುವುವು. ಇವುಗಳಲ್ಲಿ ಒಂದೊಂದೂ ಏರುಪೇರಾಗಿರಬಹುದು. ಆದ್ದರಿಂದಲೇ, ಜನರಲ್ಲಿ ಒಂದು ಸೋಂಕು ಕಾಲಿಟ್ಟಿತೆಂದರೆ, ಇನ್ನಷ್ಟು ವಿವರಗಳು ದೊರೆವತನಕ ಏನಾಗಬಹುದೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಒಟ್ಟಿನಲ್ಲಿ ಏಕಾಣುಜೀವಿಗಳು ಮೈ ಒಳಹೋಗಲು ಉಸಿರಾಟ ಮಂಡಲ, ಬಾಯಿ, ಮೈಮೇಲಿನ ಗಾಯಗಳು, ನೇರವಾಗಿ ಕೀಟಗಳ ಕಡಿತದ ತೆರನ ಚುಚ್ಚಿಕೆಗಳ ಮಾದರಿಯ ಹಲವಾರು ದಾರಿಗಳಿವೆ.

**ಉಸಿರಾಟ ಮಂಡಲದ ಮೂಲಕ:** ಮೂಗು, ಬಾಯಿ, ಗಂಟಲು ಲೋಳೆಪೊರೆಗಳ ಮೂಲಕ ಎಷ್ಟೊ ರೋಗಕಾರಕ ಏಕಾಣುಜೀವಿಗಳು ಒಳನುಗ್ಗಿ ರೋಗ ಬರಿಸುತ್ತವೆ. ಗಂಟಲಮಾರಿ ದಂಡಾಣುಜೀವಿ (ಬ್ಯಾಸಿಲಸ್), ಕೆಂಜ್ವರ (ಸ್ಕಾರ್ಲೆಟ್ ಫೀವರ್), ಮೆಂಡಿಕೆಯುರಿತಗಳಿಗೆ (ಟಾನ್ಸಿಲೈಟಿಸ್) ಕಾರಣವಾದ ಸರಕಾಯ್ಜೀವಿ (ಸ್ಟ್ರೆಪ್ಟೊಕಾಕಸ್), ನಾಯಿಕೆಮ್ಮಿನ ದಂಡಾಣುಜೀವಿ ಮುಖ್ಯವಾದವು. ಉಗುಳು, ಕೆಮ್ಮು, ಸೀನುಗಳಿಂದ ರೋಗಾಣುಗಳು ಸುತ್ತಲೂ ಹರಡುತ್ತಿರುವುದರಿಂದ ಈ ಬೇನೆಗಳಿಂದ ನರಳುತ್ತಿರುವವರು ಬೇರೆಯವರಿಗೆ ಸೋಂಕು ಅಂಟಿಸುವಂತಿರುವರು. ಘುಪ್ಪುಸಗಳ ಒಳಗೂ ಸೋಂಕು ಹತ್ತಿಸುವ ಕ್ಷಯ ದಂಡಾಣುಜೀವಿ, ನ್ಯುಮೊಕಾಕ್ಕೈ ಸೊಂಕುಗಳಲ್ಲೂ ಅಷ್ಟೆ. ಕೆಮ್ಮಿದಾಗ ಉಗುಳು, ಎಂಜಲು, ಲೋಳೆಗೂಡಿದ ಬೇರೆಬೇರೆ ಗಾತ್ರಗಳ ಸಣ್ಣ ತುಂತುರುಗಳ ಧೂಳುಮೋಡವೇ ರಭಸದಿಂದ ಹೊರಬೀಳುವುದು. ಇದರಲ್ಲಿ ಬಲುಮಟ್ಟಿಗೆ ರೋಗಾಣುಗಳೂ ಇರುವುದರಿಂದ ಇದು ಇತರರ ಉಸಿರಲ್ಲಿ ಸೇರಿದರೆ ಸೋಂಕು ಅಂಟುತ್ತದೆ. ಕ್ಷಯರೋಗ ಹರಡುವುದರಲ್ಲಿ ಈ ವಿಧಾನದ ಪಾತ್ರವನ್ನು ಮೊದಲು ತೋರಿದವನು ಫ್ಲುಗ್ಗೆ (19ನೆಯ ಶತಮಾನದ ಕೊನೆ).

ಕೆಮ್ಮು, ಉಗುಳುಗಳಲ್ಲಿನ ತುಂತುರುಗಳ ಮುಂದಿನ ಗತಿ ಏನಾಗುವುದೆಂಬುದು ಮುಖ್ಯವಾಗಿ ಅವುಗಳ ಗಾತ್ರಕ್ಕೆ ತಕ್ಕ ಹಾಗಿರುತ್ತದೆ. ಅವುಗಳ ಅಡ್ಡಗಲದ ವರ್ಗೀಕರಣಕ್ಕೆ ತಕ್ಕಂತೆ ಅವು ಕೆಳಗೆ ಬೀಳುವ ವೇಗ ಇರುವುದು. ದೊಡ್ಡ ದೊಡ್ಡ ಕಣಗಳು ತುಸು ದೂರ ಹಾರಿ ಬಿದ್ದು ಒಣಗಿ ಧೂಳಾಗುತ್ತವೆ. ಮಿಲಿಮೀಟರಿಗೂ ಕಿರಿಯವು ಮಾತ್ರ ಬಲು ಬೇಗನೆ ಆರಿಹೋಗಿ ನೆಲಕ್ಕೆ ಬೀಳದೆ ಗಾಳಿಯಲ್ಲಿ ತೇಲುಕಣಗಳಾಗಿ ಬಿಡುತ್ತವೆ. ಸಾಮಾನ್ಯ ಅನಿಲಗಳಂತೆ ಇವು ವರ್ತಿಸಿ ಗಾಳಿ ಬೀಸಿದಾಗ ಬಲುದೂರ ಸಾಗಬಲ್ಲವು. ಆದ್ದರಿಂದ ತುಂತುರುಗಳಲ್ಲಿ ಸೇರಿದ ಸೊಂಕು ಹರಡುವ ಕಣಗಳು ಕೆಮ್ಮು, ಸೀನುಗಳಲ್ಲಿ ನಿಂತವನ ಸುತ್ತ ಐದಾರು ಅಡಿಗಳ ದೂರದಲ್ಲಿ ನೆಲದ ಮೇಲೆ ಬೀಳುವುದರಿಂದ, ಕೇವಲ ಅಕ್ಕಪಕ್ಕಗಳಲ್ಲಿ ಇರುವವರಿಗೆ ಮಾತ್ರ ಹರಡಿಕೊಳ್ಳುತ್ತವೆ. ಅದೂ ಅಲ್ಲದೆ, ಈ ಕಣಗಳು ತುಂಬ ಏಕಾಣುಜೀವಿಗಳೂ ತುಂಬಿದ್ದು, ಅವು ಪರಿಸರದ ಹಾನಿಗಳಿಗೆ ಸಿಕ್ಕಿಬೀಳದೆಯೇ ಇನ್ನೊಬ್ಬರಲ್ಲಿ ಬೇಗನೆ ಸೇರಿಕೊಳ್ಳಬಹುದು. ಸೋಂಕು ಹರಡಲು ಧೂಳು ಬಲು ಸಹಾಯಕಾರಿ.

**ಬಾಯ ಮೂಲಕ:** ಬಾಯಲ್ಲಿ ಹೊಕ್ಕ ರೋಗಾಣುಗಳು ಜಠರ, ಕರುಳುಗಳಲ್ಲಿ ಏನಾದರೂ ಒಂದು ಬಗೆಯ ಉರಿತವೇಳಿಸುವುವು. ಇದರಿಂದ ಮಲ ಸಾಮಾನ್ಯವಾಗಿ ಸೋಂಕುಕಾರಕ ವಸ್ತುವಾಗುತ್ತದೆ. ಇದಕ್ಕೆ ಕೆಲವು ವಿನಾಯಿತಿಗಳಿವೆ. ಗಂಟಲಿಗೂ ಉಸಿರ್ನಾಳಕ್ಕೂ ಸಂಬಂಧವಿರುವುದರಿಂದ ಉಸಿರಾಟ ಮಂಡಲದ ಸೊಂಕಿನಿಂದ ಬರುವ ಕೆಂಜ್ವರ, ಗಂಟಲಮಾರಿ ತೆರನ ರೋಗಗಳು ರೋಗಿಯ ಎಂಜಲು, ಉಗುಳು ತಾಕಿರುವ ಆಹಾರವನ್ನು ತಿನ್ನುವುದರಿಂದಲೂ ಈ ರೋಗಾಣುಗಳ ಸೋಂಕು ಹತ್ತಿರುವ ಕೆಚ್ಚಲು ಇರುವ ಹಸುಗಳ ಹಾಲನ್ನು ಕಾಯಿಸದೆ ಕುಡಿಸುವುದರಿಂದಲೂ ಬರಬಹುದು. ಇನ್ನೊಂದು ವಿನಾಯಿತಿ ದನದ ಕ್ಷಯ ರೋಗಾಣು. ಹಾಲಿನಲ್ಲಿ ಇದನ್ನು ಸೇವಿಸಿದರೆ, ಗಂಟಲು ಇಲ್ಲವೇ ಕರುಳಿನ ಹಾಲುರಸದ (ಲಿಂಫ್ಯಾಟಿಕ್) ಊತಕದ ಮೂಲಕ ತೂರಿ ಕರುಳಿಗಿಂತಲೂ ಹೆಚ್ಚಾಗಿ, ದೂರದ ಮೂಳೆಗಳು, ಕೀಲುಗಳು, ಗ್ರಂಥಿಗಳು, ಮಿದುಳು ಪೊರೆಗಳು (ಮೆನಿಂಜೀಸ್) ಮತ್ತಿತರ ಅಂಗಗಳಲ್ಲಿ ರೋಗವಾಗಿ ಕಾಣಿಸಿಕೊಳ್ಳುತ್ತದೆ.

ಇವನ್ನೂ ಮತ್ತು ಬ್ರೂಸೆಲ್ಲೋಸಿಸ್‌ನಂಥ ಹಾಲಿನ ಮೂಲಕ ಪಸರಿಸುವ ಕಾಯಿಲೆಗಳನ್ನೂ ಬಿಟ್ಟು ಮಲಜನ್ಯವಾದ ಸೋಂಕು ಬಾಯ ಮೂಲಕ ಹರಡಲು ಮುಖ್ಯ ಕಾರಣಗಳು ಮೂರು–ಆಹಾರ, ನೊಣಗಳು ಮತ್ತು ಕೊಳಕು ಬೆರಳುಗಳು. ಕರುಳಿನಲ್ಲಿ ಸೊಂಕು ಹೊತ್ತಿರುವವರೂ ರೋಗಿಗಳೂ ಕಕ್ಕಸಿಗೆ ಹೋಗಿ ಬಂದ ಮೇಲೆ ಕೂಡಲೇ ಕೈಯನ್ನು ಚೆನ್ನಾಗಿ ತೊಳೆದುಕೊಳ್ಳದಿದ್ದರೆ ಅವರ ಬೆರಳುಗಳಲ್ಲಿ, ಉಗುರು ಸಂದುಗಳಲ್ಲಿ ಸೊಂಕು ಅಂಟಿರುವುದರಿಂದ ಅವರು ಮುಟ್ಟಿದಲ್ಲೆಲ್ಲ ರೋಗದ ಸೊಂಕು ಹತ್ತಿಕೊಳ್ಳುವುದು. ಇದನ್ನು ತಾಕಿಸಿಕೊಂಡವರಿಗೂ ಅವರವರ ಬೆರಳುಗಳ ಮೂಲಕ ಬಾಯಿ, ಮೂಗುಗಳಿಗೆ ಸೇರಿ ಅಲ್ಲಿಂದ ಕರುಳಗಳನ್ನು ಹೊಗುವುದು. ಅಡುಗೆ ಮಾಡುವವರಲ್ಲೂ ಬಡಿಸುವವರಲ್ಲೂ ಸೋಂಕುಗಳು ಹೀಗೆ ಹತ್ತಿದ್ದರಂತೂ ಬಲು ಅಪಾಯಕರ. ಏಕೆಂದರೆ, ಕರುಳಲ್ಲಿ ಸೇರುವ ಏಕಾಣುಜೀವಿಗಳು ಬಹುಪಾಲು ಆಹಾರ ಪದಾರ್ಥಗಳಲ್ಲಿ ಹುಲುಸಾಗಿ ಬೆಳೆಯುತ್ತವೆ. ಆಹಾರವನ್ನು ಸರಿಯಾದ ಕಾವಿನಲ್ಲಿ ಇರಿಸಿದ್ದರೆ, ಏಕಾಣುಜೀವಿಗಳು ವಿಪುಲವಾಗಿ ಬೆಳೆಯುವುದರಿಂದ, ಅಂಥವನ್ನು ಸೇವಿಸಿದಲ್ಲಿ ರೋಗ ಹತ್ತುವುದು ಏನೂ ಹೆಚ್ಚಲ್ಲ. ಏಕಾಣುಜೀವಿಗಳು ದಂಡಿಯಾಗಿ ಬೆಳೆವ ಆಹಾರಗಳು ಗಂಜಿ, ಸಾರು ಮಾಂಸದ ತಿಂಡಿಗಳು ಮುಂತಾದವು. ಬೆರಳುಗಳಿಂದಲೇ ಅಲ್ಲದೆ, ಧೂಳು, ನೊಣಗಳಿಂದ ಕೂಡ ಸೋಂಕು ಅಂಟಬಹುದು. ಒಳಚರಂಡಿ ಸಾಗಣೆ ಏರ್ಪಾಡಿಲ್ಲದ ಊರುಗಳಲ್ಲಿ, ಎಲ್ಲೆಂದರಲ್ಲಿ ಮಲ ವಿಸರ್ಜಿಸುವುದರಿಂದ ನೆಲದ ಮೇಲೆ ಬಿದ್ದ ಮಲ ಒಣಗಿ ಧೂಳಾಗಿ ಗಾಳಿಯಲ್ಲಿ ಸೇರುವುದರಿಂದಲೂ ನೊಣಗಳಿಂದಲೂ ಆಹಾರ ಕೊಳಕಾಗಬಹುದು. ಒಳಚರಂಡಿ ನೀರು ಬಂದು ಸೇರುವ ಖಾರಿಗಳಲ್ಲಿರುವ ಚಿಪ್ಪು ಮೀನುಗಳಲ್ಲಿ ಮಾನವನ ಕರುಳಿನಲ್ಲಿರುವ ಏಕಾಣುಜೀವಿಗಳಿರುವುದು ಕಂಡು ಬಂದಿದೆ. ಆದ್ದರಿಂದ ಈ ಚಿಪ್ಪುಮೀನುಗಳಲ್ಲಿ ವಿಷಮಶೀತಜ್ವರದ (ಟೈಫಾಯ್ಡ್) ತೆರನ ರೋಗಾಣುಗಳಿದ್ದಲ್ಲಿ ತಿನ್ನುವವರಿಗೂ ಸೋಂಕು ಹತ್ತಬಹುದು.

ಗಾಯಗಳ, ಚರ್ಮ ತರಚಿಕೆಗಳ ಮೂಲಕ: ಹೊರಗಿನ ಯಾವ ರೋಗಾಣುವೂ ಮೈಯ ಒಳಹೋಗದಂತೆ ದೇಹವನ್ನು ರಕ್ಷಿಸುವ ದೊಡ್ಡ ಸಾಧನವೇ ಚರ್ಮ. ಒಡೆಯದ, ಬಿರಿಯದ ಚರ್ಮವನ್ನು ಯಾವ ರೋಗಕಾರಕ ಜೀವಾಣುಗಳೂ ತೂರಿ ಒಳಹೋಗುವಂತಿಲ್ಲ. ಆದರೆ ಕೊಂಚ ತರಚಿಕೊಂಡರೂ ಇನ್ನೂ ಹೆಚ್ಚಾಗಿ ಗಾಯವಾಗಿದ್ದರೂ ಸೋಂಕಿನ ಜೀವಾಣುಗಳು ಚರ್ಮದೊಳಗೆ ನುಗ್ಗಿ ಚರ್ಮದಡಿಯ ಊತಕ, ಸ್ನಾಯುಗಳಲ್ಲಿ ನೆಲೆಸಬಹುದು; ಒಂದೆಡೆ ರೋಗವೆಬ್ಬಿಸಬಹುದು; ಹಾಲುರಸ, ರಕ್ತಗಳಲ್ಲಿ ಸಾಗಿ ದೂರದ ಅಂಗಗಳಲ್ಲಿ ವೃದ್ಧಿಗೊಳ್ಳಬಹುದು. ಚರ್ಮ ಇಲ್ಲವೇ ಲೋಳೆಪೊರೆ ಸೋಂಕು ಇರುವವರಿಗೆ ತಾಕಿದರೆ ಮೇಹರೋಗ ನೇರವಾಗಿ ಹತ್ತಿಕೊಳ್ಳಬಹುದು. ಚರ್ಮದ ಮೇಲೆ ಯಾವಾಗಲೂ ಇರುವ ಜೀವಿಗಳು ಕೆರೆದ, ಗೀಚಿದ, ತರಚಿಕೊಂಡ ಇಲ್ಲವೇ ಬಲವಾಗಿ ಒತ್ತಿದ ಕಡೆ ಒಳನುಗ್ಗಿ ಕೀವುಗೂಡಿಸಿ ಕುರುಗಳೇಳಿಸಬಹುದು.

**ಕೀಟಗಳಿಂದ:** ಕೆಲವು ರೋಗಗಳ ಹರಡಿಕೆಗೆ ರಕ್ತಹೀರುವ ಕೀಟಗಳು ಕಾರಣ. ಉದಾಹರಣೆಗೆ, ಮಲೇರಿಯ. ಈ ಕಾಯಿಲೆಯಲ್ಲಿ ರೋಗಿಯ ಚರ್ಮದಲ್ಲಿನ ಲೋಮನಾಳಗಳ ರಕ್ತದಲ್ಲಿನ ರೋಗಾಣುಗಳನ್ನು ಸೊಳ್ಳೆ ಕಚ್ಚಿ ಕುಡಿಯುತ್ತದೆ. ಕೀಟದಲ್ಲಿ ಇವು ವೃದ್ಧಿಗೊಂಡು ಕೆಲವು ದಿನಗಳಲ್ಲಿ ಜೊಲ್ಲು ಗ್ರಂಥಿಗಳಲ್ಲಿ ಸೇರಿಕೊಳ್ಳುತ್ತವೆ.

ಸೊಳ್ಳೆ ಇನ್ನೊಬ್ಬರನ್ನು ಕಡಿದಾಗ ಮಲೇರಿಯ ರೋಗಾಣುಗಳು ಅವರಿಗೆ ಸಾಗುತ್ತವೆ. ಸೊಕ್ಕಿನ ಜ್ವರದಲ್ಲಿ ಸೋಂಕುಸಾಗಣೆ ಕೂರೆಗಳಿಂದಾಗುವುದು. ಕೂರೆಯ ಕರುಳಿನ ಗೋಡೆಯಲ್ಲಿ ಈ ಜ್ವರದ ರೋಗಾಣುಗಳೂ ಬೆಳೆದು ಅದರ ಮಲದಲ್ಲಿ ಹೊರಬೀಳುತ್ತವೆ. ಕೂರೆ ಕಡಿದೆಡೆ ಕೆರೆದುಕೊಂಡರೆ ಚರ್ಮ ಗಾಯವಾಗಿ ಈ ಮಲದಲ್ಲಿನ ರೋಗಾಣುಗಳು ಒಳನುಗ್ಗುತ್ತವೆ. ಕೀಟಗಳು ಸಾಗಿಸುವ ಸೋಂಕು ಬಹುಮಟ್ಟಿಗೆ ಪ್ರಾಣಿಗಳಲ್ಲೇ ಹೆಚ್ಚು; ಆಗಾಗ್ಗೆ ಮಾನವನಿಗೂ ಹರಡಿಕೊಳ್ಳುವುದು. ಆದರೆ ಮಲೇರಿಯ ತೆರನ ಕೆಲವು ರೋಗಗಳು ಮಾನವನಿಗೇ ಮೀಸಲು.

**ರೋಗದ ಉಗ್ರತೆ, ಪ್ರತಿರಕ್ಷಣೆ:** ಆತಿಥೇಯದ ಮೈಒಳಹೊಕ್ಕು, ಊತಕಗಳಲ್ಲಿ ವೃದ್ಧಿಗೊಂಡು ರೋಗ ಬರಿಸುವ, ಜೀವಾಣುವಿನ ಕಸುವೇ ಉಗ್ರತೆ. ಹೀಗಾಗುವುದು ಮೈಯಲ್ಲಿನ ರೋಗ ತಡೆವ ಬಲವಾದ ಪ್ರತಿರಕ್ಷಣೆಯ (ಇಮ್ಯೂನಿಟಿ) ಮಟ್ಟಕ್ಕೆ ತಕ್ಕಂತಿರುವುದು. ಪ್ರತಿರಕ್ಷಣೆ ಕಡಿಮೆ ಇದ್ದವನಿಗೆ ಒಂದು ಉಗ್ರ ರೋಗಾಣು ತಗುಲಿದರೆ ರೋಗ ಹತ್ತುತ್ತದೆ. ಪ್ರತಿರಕ್ಷಣೆ ಬಲವಾಗಿದ್ದವನಲ್ಲಿ ರೋಗಾಣುವಿನ ಆಟ ಏನೂ ನಡೆಯದಿರಬಹುದು. ರೋಗಾಣುವಿನ ಉಗ್ರತೆ, ಆತಿಥೇಯದ ಪ್ರತಿರಕ್ಷಣೆ ಎಂಬೀ ಪದಗಳು ಸಾಪೇಕ್ಷಕವೆಂದು ತಿಳಿಯಬೇಕು. ಒಂದು ಜೀವಾಣು ಏನೇನೂ ಉಗ್ರವಾಗಿಲ್ಲವೆಂದೋ ಒಬ್ಬ ಆತಿಥೇಯು ಯಾವ ರೋಗಾಣುವಿಗೂ ಜಗ್ಗುವುದಿಲ್ಲವೆಂದೋ ಹೇಳುವುದು ರೋಗಕಾರಕವಲ್ಲದ ಜೀವಾಣುಗಳಿಗೆ ಮಾತ್ರ. ಯಾವಾಗಲೂ ಜೀವಾಣುಗಳಲ್ಲಿ ಒಂದು ತಳಿಯದು ಇನ್ನೊಂದರಕ್ಕಿಂತ ಉಗ್ರವಾಗಿರಬಹುದು, ಇಲ್ಲವೇ ಒಬ್ಬ ಆತಿಥೇಯ ಇನ್ನೊಬ್ಬನಿಗಿಂತ ಚೆನ್ನಾಗಿ ರೋಗವನ್ನು ತಡೆದುಕೊಳ್ಳಬಹುದು. ಆದ್ದರಿಂದ ಆತಿಥೇಯನ ರೋಗನಿರೋಧಕ ಬಲವನ್ನು ಗಮನಿಸದೆ ಒಂದು ರೋಗಾಣು ಉಗ್ರವಾದದ್ದು ಎನ್ನುವಂತಿಲ್ಲ.

ರೋಗಾಣುಗಳ ಬೇರೆ ಬೇರೆ ಜಾತಿಗಳ ಉಗ್ರತೆಯೂ ಬೇರೆ ಬೇರೆ. ಅಲ್ಲದೇ ಒಂದೇ ಜೀವಾಣುವಿನ ಉಗ್ರತೆ ಬೇರೆ ಬೇರೆ ಕಾಲಗಳಲ್ಲಿ ಬದಲಾಯಿಸಬಹುದು. ಕಾಲು, ಬಾಯಿ ರೋಗದ ವಿಷಕಣದ ತೆರನ ಜೀವಾಣು ಮಾನವನಿಗೆ ರೋಗ ಹತ್ತಿಸುವುದೇ ಇಲ್ಲ. ಅದೇ ಮಾನವನ ಕ್ಷಯರೋಗಾಣು ಮಾನವನಿಗೆ ಸುಲಭವಾಗಿ ಅಂಟಿಕೊಳ್ಳುವುದು. ದಡಾರದ ವಿಷಕಣ ಮಾತ್ರ, ಪ್ರತಿರಕ್ಷಣೆಯಿಲ್ಲದೆ ಯಾರಿಗೆ ತಗುಲಿದರೂ ಉಗ್ರವಾದ ರೋಗವನ್ನೇ ಎಬ್ಬಿಸುತ್ತದೆ.

ಆದ್ದರಿಂದ ಸೋಂಕು ಅಂಟಿದ್ದರ ಪರಿಣಾಮ, ರೋಗಾಣುವಿನ ಉಗ್ರತೆ, ಆತಿಥೇಯದ ಪ್ರತಿರಕ್ಷಣೆ ಸಮತೋಲಕ್ಕೆ ತಕ್ಕ ಹಾಗಿರುವುದು. ರೋಗ ತಡೆವ ಬಲ ಜೋರಾಗಿದ್ದವ ಸೋಂಕಿಗೆ ಇನಿತೂ ಜಗ್ಗದೆ, ನೆಲೆಯೂರಿ ಹಾನಿಗೊಳಿಸುವ ಮುಂಚೆಯೇ ರೋಗಾಣುಗಳನ್ನು ಹಾಳುಗೆಡವಬಹುದು. ಅಷ್ಟೊಂದು ಪ್ರತಿರಕ್ಷಣೆ ಇಲ್ಲದವನಲ್ಲಿ ರೋಗಾಣು ಊತಕಗಳಲ್ಲಿ ನೆಲೆಯೂರಬಹುದಾದರೂ ರೋಗ ಎಬ್ಬಿಸದಂತಾಗಬಹುದು. ಇಂಥವನು ಆರೋಗ್ಯವಾಹಕ (ಹೆಲ್ತ್ ಕ್ಯಾರಿಯರ್) ಎಂದೆನ್ನಿಸುವನು. ಪ್ರತಿರಕ್ಷಣೆ ಇನ್ನಷ್ಟು ಕಡಿಮೆ ಇದ್ದು ಕೊಂಚ ಜಗ್ಗುವಂತಿರುವವರಲ್ಲಿ ರೋಗಾಣು ಮೈ ಒಳಹೊಕ್ಕು ಒಂದಿಷ್ಟು ಚಟುವಟಿಕೆ ತೋರಿ ಕೊಂಚ ರೋಗದ ಲಕ್ಷಣಗಳು ತೋರುವಂತೆ ಮಾಡಿದರೂ ಕೊನೆಗೆ ಮೈಯೇ ಗೆಲ್ಲುತ್ತದೆ. ಸಹಜವಾಗಿ ಈಡಾಗುವವರಲ್ಲಿ ಊತಕದಲ್ಲಿ ರೋಗಾಣ ನೆಲೆಸಿ ವಿಪರೀತ ವೃದ್ಧಿಗೊಂಡು ವಿಷವನ್ನು ಹೊರಬಿಡುತ್ತ ಪೂರ್ತಿ ರೋಗವನ್ನು ಬರಿಸುತ್ತದೆ. ಸಹಜವಾಗಿ ರೋಗವನ್ನು ತಡೆವ ಬಲ ಏನೇನೂ ಇಲ್ಲದೆ ರೋಗಕ್ಕೆ ಬಲು ಈಡಾಗುವವರಲ್ಲಂತೂ ರೋಗಾಣುಗಳು ಬೇಗನೆ ವೃದ್ಧಿಗೊಂಡು ರೋಗ ಇದ್ದಕ್ಕಿದ್ದಂತೆ ತಲೆದೋರುವುದು. ರೋಗಾಣುವಿನ ಸೋಂಕು ಹರಡುವ ತೀವ್ರತೆ ಆತಿಥೇಯದ ಪ್ರತಿರಕ್ಷಣೆಯ ಮಟ್ಟಕ್ಕೆ ತಕ್ಕಂತೆ ರೋಗಿಗೆ ಮಾರಕವಾಗುವುದು. ಕೆಲವು ರೋಗಗಳಂತೂ ಹೆಚ್ಚು ಬಲಿ ತೆಗೆದುಕೊಳ್ಳುತ್ತವೆ.

ರೋಗಾಣುಗಳ ತೀವ್ರತೆ ಕೂಡ ಆಗಾಗ್ಗೆ ಹೆಚ್ಚು ಕಡಿಮೆ ಆದಂತೆ ತೋರುವುದು. ಒಂದು ರೋಗ ಸಾಂಕ್ರಾಮಿಕ ಆದುದಕ್ಕೆ ಅದರ ರೋಗಾಣುವಿನ ಸೋಂಕು ಅಂಟಿಸುವ ತೀವ್ರತೆ ಹೆಚ್ಚಿದ್ದೇ ಕಾರಣವೆಂದು ಹೇಳಿಬಿಡಬಹುದಾದರೂ ಎಂದಿನಂತೆ ಹೀಗಾಗುವುದನ್ನು ಅನುಮಾನ ಇಲ್ಲದಂತೆ ರುಜುವಾತಿಸುವುದು ಕಷ್ಟವೇ. ಸಾಮಾನ್ಯವಾಗಿ ಒಂದು ಸ್ಥಾನಿಕ (ಎಂಡೆಮಿಕ್) ರೋಗ ಸಾಂಕ್ರಾಮಿಕ ಆಗುವುದಕ್ಕೆ ಮುಖ್ಯ ಕಾರಣ ಆಯಾ ಪ್ರದೇಶದ ಜನರಲ್ಲಿನ ಪ್ರತಿರಕ್ಷಣೆಯ ಕುಗ್ಗೇ ಆಗಿದೆ. ಬಹುಪಾಲು ನಾಗರಿಕ ನಾಡುಗಳಲ್ಲಿ ದಡಾರ ಎಳೆಯ ಮಕ್ಕಳಿಗೇ ತಾಕುತ್ತದೆ. ಇದರ ರೋಗಾಣು ಬಲು ಉಗ್ರವಾದದ್ದರಿಂದ, ಇದಕ್ಕೊಡ್ಡಿದ ಎಲ್ಲ ಮಕ್ಕಳಿಗೂ ಅಂಟುತ್ತದೆ. ಈ ರೋಗದಿಂದ ಮುಕ್ತರಾಗುವ ಮಕ್ಕಳು ಶಾಶ್ವತವಾಗಿ ಪ್ರತಿರಕ್ಷಣೆ ಪಡೆದಿರುವರು. ಆಗ ರೋಗ ಇಳಿದು ಹೋದರೆ, ಅದರ ರೋಗಾಣುವಿನ ಉಗ್ರತೆ ಕುಂದಿತೆಂದಲ್ಲ, ಈಡಾಗುವವರು ಇಲ್ಲದ್ದೇ ಕಾರಣ. ಮತ್ತೆ ಈ ರೋಗಕ್ಕೀಡಾಗುವವರು ವಯಸ್ಸಿಗೆ ಬರುವ ತನಕ, ಮುಂದಿನ ಸುಮಾರು ವರ್ಷವೆಲ್ಲ ರೋಗ ಅಡಗಿಯೇ ಇರುತ್ತದೆ. ಆದರೆ ಎಲ್ಲ ಸಾಂಕ್ರಾಮಿಕಗಳಿಗೂ ಇದೇ ಕಾರಣ ಹೇಳುವಂತಿಲ್ಲ. ಕೆಲವು ವರ್ಷಗಳಿಗೊಂದು ಬಾರಿ ನಾಡಿನ ಜನರಿಗೆ ಉರಿಶೀತ (ಇನ್ ಫ್ಲೂಯೆಂಜ) ತಾಕಿ ಎಷ್ಟೊ ಮಂದಿ ಬೇನೆ ಬಿದ್ದರೂ ಸಾವು ಕಡಿಮೆ. ಆದರೆ ಆಗಾಗ್ಗೆ, ಇದ್ದಕ್ಕಿದ್ದ ಹಾಗೆ ಪಿಡುಗು ಜೋರಾಗಿ ಬಹಳ ಮಂದಿಯನ್ನು ಬಲಿತೆಗೆದುಕೊಳ್ಳುವುದು. ಹೀಗೆ ಬಲು ಜೋರಾದ ಸಾಂಕ್ರಾಮಿಕ ಆಗುವುದರ 20 ವರ್ಷಗಳ ಹಿಂದೂ ಮುಂದೂ ಇದ್ದುದಕ್ಕಿಂತಲೂ ಉರಿಶೀತವನ್ನು ತಡೆವ ಬಲ ಇದ್ದಕ್ಕಿದ್ದಂತೆ 1918–19ರ ಸಾಂಕ್ರಾಮಿಕವಾದಾಗ ಇಳಿದುಹೋಗಿತ್ತೆಂದು ಊಹಿಸಲು ಕಾರಣಗಳೇ ಇಲ್ಲ. ಆದ್ದರಿಂದ ಆ ವಿಷಕಣದ ಬಲು ವಿಷಕರವಾದ ತಳಿ ಬೆಳೆದು ಹರಡಿರಬೇಕು.

**ರೋಗ ತಲೆದೋರಲು ಇನ್ನಷ್ಟು ಕಾರಣಗಳು:** ಜನರ ವಯಸ್ಸು, ಲಿಂಗ, ಕಸುಬುಗಳಿಗೂ ಸೋಂಕುಕಾರಕ ರೋಗಗಳಿಗೂ ಸಂಬಂಧವಿದೆ. ಎಷ್ಟೋ ರೋಗಗಳು ಚಿಕ್ಕಂದಿನಲ್ಲೆ ಅಂಟುತ್ತವೆ. ಆಮೇಲೆ ದೊಡ್ಡವರಾದಾಗ ಮತ್ತೆ ಅದೇ ರೋಗಗಳು ಅಂಟದ ಹಾಗೆ ತಡೆವಂತೆ ಪ್ರತಿರಕ್ಷಣೆ ಆಗಿರುತ್ತದೆ. ಅಂತೂ ಎಳೆತನದಲ್ಲಿ ಮಕ್ಕಳು ಬಹುಮಟ್ಟಿಗೆ ಅನೇಕ ರೋಗಗಳಿಗೆ ಈಡಾಗುವಂತಿರುವುವು. ಆದರೆ ಬೆಳೆದವರಲ್ಲೂ ವಿಷಮಜ್ವರದ ತೆರನ ಕೆಲವು ರೋಗಗಳು ಸಾಮಾನ್ಯ. ಮತ್ತೆ ಮುದಿತನದಲ್ಲಿ ಮೈಯಲ್ಲಿ ರೋಗ ತಡೆಯುವ ಬಲ ಕುಂದಿರುವುದು. ಹರೆಯದಲ್ಲಿ ಏನೂ ಕೆಡಕುಮಾಡದ ಸಣ್ಣ ಬೇನೆಗಳೇ ಆಗ ಅವರಿಗೆ ಮಾರಕವಾಗುತ್ತವೆ.

ರೋಗಕ್ಕೆ ಈಡಾಗುವುದರಲ್ಲಿ ಹೆಣ್ಣು ಗಂಡುಗಳ ವ್ಯತ್ಯಾಸ ಅಷ್ಟಾಗಿಲ್ಲವಾದರೂ ಪುಪ್ಫುಸದ ಕ್ಷಯ ಹುಡುಗರಿಗಿಂತ ಹುಡುಗಿಯರಲ್ಲೇ ಹೆಚ್ಚು. ಕೆಲವು ರೋಗಗಳು ಆಯಾ ಕಸುಬುಗಳ ಕೆಲಸಗಾರರಿಗೆ ಅಂಟುತ್ತವೆ. ಪ್ರಾಣಿ ಚರ್ಮಗಳನ್ನು ಸಾಗಿಸುವ ಕೂಲಿಗಾರರಲ್ಲಿ ನೆರಡಿ (ಅಂತ್ರಾಕ್ಸ್) ರೋಗ ಸಾಮಾನ್ಯ ಕೋಲಾರದ ಚಿನ್ನದ ಗಣಿಗಳ ಆಳದಲ್ಲಿ 15–20 ವರ್ಷಗಳಷ್ಟು ಹೆಚ್ಚು ಕಾಲ ಕೆಲಸ ಮಾಡುವವರಲ್ಲಿ ಮೊದಲು ಸಿಲಿಕಬೇನೆ (ಸಿಲಿಕೋಸಿಸ್) ತಲೆದೋರಿ ಅನಂತರ ಸುಲಭವಾಗಿ ಕ್ಷಯ ಹತ್ತುವಂತೆ ಕೆಲವೇಳೆ ಕಸುಬಿನಿಂದ ರೋಗಕ್ಕೀಡಾಗುವುದು ಕಂಡುಬರುತ್ತದೆ.

ಪುಷ್ಟಿಯಾದ ಆಹಾರ ಇಲ್ಲವಾದರೆ ಸೋಂಕುಗಳಿಗೆ ಈಡಾಗುವುದು ಹೆಚ್ಚುವುದೆಂದು ಜನರಲ್ಲಿ ನಂಬಿಕೆ ಇರುವುದಾದರೂ ಕೂರಾದ (ಅಕ್ಯೂಟ್) ಸೋಂಕುಕಾರಕ ರೋಗಗಳಲ್ಲಂತೂ ಪೌಷ್ಟಿಕ ಆಹಾರ ಅಷ್ಟೇನೂ ಪರಿಣಾಮಕಾರಿಯಲ್ಲ. ಪುಷ್ಟಿಗೊಂಡ ಮಕ್ಕಳಲ್ಲೂ ಬಡಕಲ ಮಗುವಿನಲ್ಲೂ ದಡಾರ ಸೋಂಕು ಹತ್ತುವುದರಲ್ಲಿ ಏನೇನೂ ವ್ಯತ್ಯಾಸವಿಲ್ಲದ್ದು ಒಂದು ಉದಾಹರಣೆ. ಇತರ ಸೋಂಕುರೋಗಗಳಿಗೂ ಇದನ್ನೇ ಹೇಳಬಹುದು. ಆದರೆ, ಆಹಾರದಲ್ಲಿ ಎ ಜೀವಾತಿನ ತೆರನ ಕೆಲವು ಅಂಶಗಳ ವಿಪರೀತ ಕೊರೆಗಳಿದ್ದರೆ ಮಾತ್ರ ರೋಗ ತಡೆವ ಬಲ ಇಳಿದು ಹೋಗುವುದು. ಅಲ್ಲದೆ ಯುರೋಪಿನ ಹರೆಯದವರಲ್ಲಿ ಒಳಗೆ ಹುದುಗಿರುವ ಕ್ಷಯರೋಗ ಪುಷ್ಟಿಗೆಟ್ಟವರಲ್ಲಿ ಹೊರದೋರುವುದು. ಆದ್ದರಿಂದ ಪುಷ್ಟಿಗೊಂಡಿದ್ದವರು ಯಾವ ಸೋಂಕುರೋಗಗಳಿಗೂ ಈಡಾಗರೆನ್ನುವುದು ಸರಿಯಲ್ಲ.

ಸೋಂಕುರೋಗ ಹರಡುವುದಕ್ಕೂ ಹವಾಗುಣಕ್ಕೂ ಇರುವ ಸಂಬಂಧವನ್ನು ಬಿಡಿಯಾಗಿ ಕಾಣುವಂತಿಲ್ಲ. ಉಷ್ಣ ದೇಶಗಳಲ್ಲಿ ಉಸಿರಾಟ ಮಂಡಲದ ರೋಗಗಳೂ ಹೆಚ್ಚು ಸಾಮಾನ್ಯ. ಆದರೆ ಉಷ್ಣ ದೇಶಗಳಲ್ಲಿ ಮಲ, ಕೊಚ್ಚೆಗಳ ಸಾಗಣೆ ಸರಿಯಾಗಿರದೆ ಸೋಂಕು ಅಂಟುವ ಅವಕಾಶಗಳೂ ಆಹಾರ ತಯಾರಿಸುವವರ ಕೊಳಕುತನವೂ ಚಳಿದೇಶದಲ್ಲಿ ಬೆಚ್ಚಗೆ ಬಹಳ ಮಂದಿ ತಂಡಗಳಲ್ಲಿ ಒಂದೆಡೆ ಸೇರುವುದೂ ಉಸಿರಾಟ ಮಂಡಲದ ಸೋಂಕುರೋಗಗಳು ಸುಲಭವಾಗಿ ಹರಡುವುದೂ ಕಾರಣಗಳು ಎನ್ನಬಹುದು. ಮಳೆ ಬಿದ್ದರೆ ಧೂಳು ಅಡಗುವುದರಿಂದ ದೂಳಿಂದ ಹರಡುವ ಸೋಂಕುರೋಗಗಳು ಮಳೆಗಾಲದಲ್ಲಿ ತಗ್ಗುತ್ತವೆ.

**ಜನಾಂತರ ಸಾಂಕ್ರಾಮಿಕ ರೋಗಗಳು:** ಎಷ್ಟೊ ಶತಮಾನಗಳಿಂದಲೂ ಒಂದು ರೋಗಾಣು ಒಂದು ನಾಡಿನಲ್ಲಿದ್ದು ನಾಗರಿಕರಿಗೆ ಎಲ್ಲೆಲ್ಲೂ ತಾಕುತ್ತಲೇ ಇದ್ದರೆ, ಕೊನೆಗೆ ಅದು ಬಹಳ ಮಂದಿಯನ್ನು ಸಾಯಿಸದೆ ಉಳಿಯುವ ಸಮತೋಲಕ್ಕೆ ಬಂದಿರುತ್ತದೆ. ಮೊದಮೊದಲ ತಲೆಮಾರುಗಳಲ್ಲಿರುವ ಈ ರೋಗಕ್ಕೆ ಈಡಾಗುವವರೆಲ್ಲ ಇದಕ್ಕೆ ಬಲಿಯಾಗಿ ಆಮೇಲೆ ಇದಕ್ಕೆ ಜಗ್ಗದ ವಂಶದವರೇ ಉಳಿದು ರೋಗ ಜನಾಂತರವಾಗಿರುವುದು. ಇಂಗ್ಲೆಂಡಿನಲ್ಲಿ ಕ್ಷಯ, ಉಪದಂಶಗಳು (ಸಿಫಿಲಿಸ್) ಇದರ ಉದಾಹರಣೆಗಳು.

ಜನಾಂತರವಾಗಿರುವ ಯಾವುದೇ ರೋಗ ಸಾಂಕ್ರಾಮಿಕವಾಗಬಹುದು. ಇದಕ್ಕೆ ಕಾರಣ ಏನು ಎಂಬುದು ಇನ್ನೂ ಚೆನ್ನಾಗಿ ತಿಳಿದಿಲ್ಲ. ಹಾಗಾಗಬೇಕಾದರೆ ಜನರಲ್ಲಿ ಈ ರೋಗಕ್ಕೆ ಈಡಾಗುವವರು ಸಾಕಷ್ಟು ಮಂದಿ ಇರಬೇಕು, ಸೋಂಕುಕಾರಕ ಜೀವಾಣು

ಬಲು ಬೇಗನೆ ಎಲ್ಲರಲ್ಲೂ ಹಬ್ಬಿಕೊಳ್ಳಲು ಅನುಕೂಲವಿರಬೇಕು. ಉರಿಶೀತದ ತೆರನ ರೋಗದಲ್ಲಿ ಸಾಂಕ್ರಾಮಿಕ ಜೀವಾಣು ಬಲು ಮುಂಚೆ ಅಲ್ಲಲ್ಲಿ ಚೆಲ್ಲಿದಂತೆಲ್ಲ (ಸ್ಪೊರ್ಯಾಡಿಕ್) ಹೆಚ್ಚುಹೆಚ್ಚು ಮಂದಿಗಳಲ್ಲಿ ರೋಗ ತಲೆದೋರುವುದು. ಬಲು ಬೇಗನೆ ಕಾಯಿಲೆಗಳು ಕೊನೆಯ ಮಿತಿಗೇರಿ ಆಮೇಲೆ ನಿಧಾನವಾಗಿ ಮೊದಲಿನ ಇರವಿಗೆ ಇಳಿವುದು. ಈ ಏರಿಳಿತಗಳು ಒಂದೇ ವೇಗದಲ್ಲಿ ಇರುವುದರಿಂದ, ರೋಗಿಗಳ ಅಂಕಿಗಳನ್ನು ಒಂದು ಗ್ರಾಫಿನಲ್ಲಿ ಬಿಡಿಸಿದರೆ ಗಂಟೆಯ ಆಕಾರ ತೋರುವುದು. ಸೋಂಕು ಅಂಟಿರುವ ನೀರು, ಹಾಲು, ಐಸ್ ಕ್ರೀಮ್ ಆಹಾರಗಳನ್ನು ಸೇವಿಸಿ ರೋಗಕ್ಕೆ ಅವಕಾಶ ಕೊಡುವ ಒಂದು ಭಾಗದ ಜನರಲ್ಲಿ ಮಾತ್ರ ತಲೆ ಹಾಕುವ ಸಾಂಕ್ರಾಮಿಕ ಎಂದರೆ ವಿಷಮಜ್ವರ. ಹೀಗೆ ಏಳುವ ಸಾಂಕ್ರಾಮಿಕಗಳು ಸಿಡಿದೆದ್ದಂತೆ ತಲೆದೋರುತ್ತವೆ. ಗ್ರಾಫಿನಲ್ಲಿ ಇದರ ರೋಗಿಗಳ ಅಂಕಿಗಳನ್ನು ಹಾಕಿದಾಗ, ವಕ್ರರೇಖೆಯ ತುದಿ ಚೂಪಾಗಿದ್ದು, ಏರುವ ಕಾಲು ಕಡಿದಾಗೂ ಮರುಚಲದ (ಸೆಕೆಂಡರಿ) ಸೋಂಕುಗಳೇಳುವುದರಿಂದ, ಇಳಿವ ಕಾಲು ಕೊಂಚ ಚಪ್ಪಟೆಯಾಗೂ ಇರುವುವು. ಸಾಂಕ್ರಾಮಿಕಗಳಾಗುವ ಕಾರಣಗಳು ಇನ್ನುಳಿದ ಎಷ್ಟೋ ರೋಗಗಳಲ್ಲಿ ಬೇರೆ ಬೇರೆ ಆಗಿವೆ.

**ಸೋಂಕುಕಾರಕ ರೋಗಗಳ ಲಕ್ಷಣಗಳು:** ಸೋಂಕುಕಾರಕ ಜೀವಾಣು ಮೈ ಒಳಹೊಕ್ಕಮೇಲೆ ರೋಗದ ಲಕ್ಷಣಗಳು ಕಾಣಿಸಿಕೊಳ್ಳಲು ಹಿಡಿವ ಉದ್ಭವನ (ಇಂಕ್ಯುಬೇಷನ್) ಕಾಲ ಒಂದೊಂದರಲ್ಲಿ ಒಂದೊಂದು ಬಗೆ. ಹೆಣವನ್ನು ಕೊಯ್ದು ಪರೀಕ್ಷಿಸುವಾಗ ಗಾಯವಾದರೆ ಸರಕಾಯ್ಜೀವಿಯ ನಂಜುರಕ್ತವಾಗಿ (ಸೆಪ್ಟಿಸೀಮಿಯ) 24 ತಾಸುಗಳಲ್ಲೇ ಸಾಯುವುದು ಇದ್ದಕ್ಕಿದ್ದ ಹಾಗೆ ಆಗುವುದರ ಉದಾಹರಣೆ. ಇನ್ನೊಂದು ಕೊನೆಯಲ್ಲಿರುವ ಕುಷ್ಠರೋಗದಲ್ಲಿ ಸೋಂಕು ಹತ್ತಿದ ಮೇಲೆ ರೋಗಲಕ್ಷಣಗಳು ಕಾಣಿಸಿಕೊಳ್ಳಲು ಹಲವಾರು ವರ್ಷಗಳೇ ಹಿಡಿಯಬಹುದು. ದಡಾರದ ತೆರನ ದದ್ದುಗಳೇಳುವ ಮಕ್ಕಳ ಜ್ವರಗಳ ಉದ್ಭವನ ಕಾಲ 2–3 ವಾರಗಳವರೆಗೇ ಇರಬಹುದು. ನಾಯಿಹುಚ್ಚು, ಬ್ರುಸೆಲ್ಲಬೇನೆಗಳಲ್ಲಿ ಇದು 6 ವಾರಗಳಿಗೂ ಮೀರಿರುವುದು. ಕೆಲವೇಳೆ ಸೋಂಕು ಹತ್ತಿದಮೇಲೆ ಕ್ಷಯರೋಗ ಹೊರದೋರಲು ಒಂದೆರಡು ವರ್ಷಗಳೇ ಬೇಕು.

ದದ್ದುಗಳೇಳುವ ಜ್ವರಗಳಲ್ಲಿ, ಆತಿಥೇಯದಲ್ಲಿ ಸಾಕಷ್ಟು ಹಾನಿಗೊಳಿಸುವಂತೆ ವೃದ್ಧಿಗೊಳ್ಳುವ ರೋಗಾಣುವಿಗೆ ಹಿಡಿವ ವೇಳೆಯನ್ನು ಉದ್ಭವನ ಕಾಲ ಸೂಚಿಸಬಹುದು. ಸೋಂಕು ಹತ್ತಿದ ಕೆಲವೇ ವಾರಗಳಲ್ಲಿ ಕ್ಷಯರೋಗ ತಲೆದೋರಬಹುದಾದರೂ ಇದರಿಂದ ಹೆಚ್ಚಿನ ಪರೀಕ್ಷೆಗಳಿಂದ ಮಾತ್ರ ಪತ್ತೆ ಮಾಡಬಹುದಾದ, ಅವಿತ ಸೋಂಕೆದ್ದು, ಒಂದಷ್ಟು ಕಾಲ ಕಳೆದಮೇಲೆ ರೋಗ ಹೊರಗಾಣಬಹುದು, ಇಲ್ಲವೇ ಬರುಬರುತ್ತ ಅಣಗಿ ವಾಸಿಯಾಗಬಹುದು. ಪರಪಿಂಡಿಗೂ ಆತಿಥೇಯಕ್ಕೂ ನಡುವೆ ನಾಜೂಕಿನ ಸಮತೋಲ ಏರ್ಪಟ್ಟು ಸಹಜವಾಗಿರುವ ಮೈಯ ರೋಗ ತಡೆವ ಬಲದಲ್ಲಿ ಕೊಂಚ ಕಾಲ ಇಳುಗಡೆಯಾದರೂ ಏರುಪೇರಾಗುತ್ತದೆ.

ಯಾವ ಕೀಟದಿಂದಲೇ ಸೋಂಕು ಹತ್ತಿದರೂ ಮೈಯಲ್ಲಿನ ಊತಕಗಳಲ್ಲಿ ಪ್ರತಿಕ್ರಿಯೆಗಳ ಸಾಲುಗಳೇ ಏಳುತ್ತವೆ. ಉರಿತ ಇಂಥ ಒಂದು ಪ್ರತಿಕ್ರಿಯೆ. ಉರಿತದಲ್ಲಿ ಸೋಂಕನ್ನು ಒಂದೆಡೆಗೆ ಮಿತಿಗೊಳಿಸಿ ಒಳನುಗ್ಗಿರುವ ರೋಗಾಣುವನ್ನು ಹಾಳುಗೆಡಿಸುವಂತೆ ರಕ್ತನಾಳಗಳ, ರಕ್ತಕಣಗಳ ಬದಲಾವಣೆಗಳಾಗುತ್ತವೆ. ಬಹುಮಟ್ಟಿಗೆ ಎಲ್ಲ ಜೀವಿಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಕಾಣಬರುವ ಸಾಮಾನ್ಯ ಪ್ರತಿಕ್ರಿಯೆ ಉರಿತ. ಜೀವಾಣುಗಳು ಒಳಹೋಗುವುದರಿಂದಲೇ ಅಲ್ಲದೆ ಊತಕಗಳೊಳಕ್ಕೆ ಹೊರಗಿಂದ ಯಾವ ಕೆರಳಿಸುವ ವಸ್ತು ಸೇರಿದರೂ ಉರಿತವಾಗುತ್ತದೆ. ಆದರೆ ಜೀವಾಣುಗಳಿಂದೇಳುವ ಪ್ರತಿಕ್ರಿಯೆಗಳು ಮಾತ್ರ ಆಯಾ ಮಾದರಿಯ ಜೀವಾಣುವಿಗೆ ವಿಶಿಷ್ಟ. ಒಟ್ಟಾಗಿ ನವಿರುಜಾಲದ ಒಳಪೊರೆಯ ಮಂಡಲ (ರೆಟಿಕ್ಯುಲೋ–ಎಂಡೋತೀಲಿಯಲ್ ಸಿಸ್ಟಂ) ಎನಿಸಿಕೊಂಡ, ಮೈಯಲ್ಲಿರುವ ಕೆಲವು ಗೊತ್ತಾದ ಜೀವಕಣಗಳಲ್ಲಿ, ಸೋಂಕಿಗೆ ಕಾರಣವಾದ ಆಯಾ ಮಾದರಿಯ ರೋಗಾಣುವಿನ ಮೇಲೆ ವರ್ತಿಸುವ, ನಿರೋಧಕಗಳೆಂಬ (ಆಂಟಿಬಾಡೀಸ್) ಕೆಲವು ವಿಶೇಷ ಪದಾರ್ಥಗಳು ತಯಾರಾಗುತ್ತವೆ. ನಿರೋಧಕಕ್ಕೂ ಅದರ ಎದುರು ಸಮನಾಗಿ ರೋಗಾಣುವಿನಲ್ಲಿರುವ ನಿರೋಧಜನಕ (ಆಂಟಿಜನ್) ಎಂದಿರುವುದಕ್ಕೂ ಕೂಡಿಕೆ ತೀರ ವಿಶಿಷ್ಟ; ಅಂದರೆ ಇದು ಬೀಗ, ಕೀಲಿಯಂತಿರುವುದು. ರಕ್ತದಲ್ಲಿ ನಿರೋಧಕಗಳು ಸಾಕಷ್ಟಿದ್ದಲ್ಲಿ, ಹಲವಾರು ಬಗೆಗಳಲ್ಲಿ ರೋಗಾಣುಗಳ ಮೇಲೆ ವರ್ತಿಸಿ, ರಕ್ತ, ಊತಕಗಳಲ್ಲಿ ಯಾವಾಗಲೂ ಇರುವ ತಿನಿಕಣಗಳಿಗೆ (ಫ್ಯಾಗೊಸೈಟ್ಸ್) ಬಲಿಯಾಗುವ ಹಾಗೆ ಅವನ್ನು ಬದಲಿಸುತ್ತವೆ. ಹೀಗೆ ಗಳಿಸಿದ ವಿಶಿಷ್ಟ ಪ್ರತಿರಕ್ಷಣೆ ಬಾಳಿನುದ್ದಕ್ಕೋ ಕೆಲವೇ ಕಾಲವೋ ಉಳಿಯಬಹುದು. ಬಾಳಿನುದ್ದಕ್ಕೂ ಇದ್ದರೆ, ಅದೇ ರೋಗ ಮತ್ತೆ ಅಂಟುವಂತಿಲ್ಲ. ಕೊಂಚ ಕಾಲವಿದ್ದರೆ 2, 3, 4 ಬಾರಿಯಾದರೂ ಮೇಲಿಂದಮೇಲೆ ಸೋಂಕಿಗೆ ಈಡಾಗಬಹುದು.

ಬೇರೆ ಬೇರೆ ರೋಗಗಳಲ್ಲಿ ಗಳಿಸಿದ ಪ್ರತಿರಕ್ಷಣೆಯ ಮಟ್ಟ ಇರುವ ಕಾಲಗಳನ್ನು ನಿರ್ಧರಿಸುವ ಅಂಶಗಳ ವಿಚಾರದ ತಿಳಿವು ಏನೇನೂ ಸಾಲದು. ಸಾಮಾನ್ಯವಾಗಿ ಮೈಯೆಲ್ಲ ಹರಡಿಕೊಳ್ಳುವ ವಿಷಕಣಗಳ ಸೋಂಕಿನಿಂದ ಬಲವಾದ ಶಾಶ್ವತ ಪ್ರತಿರಕ್ಷಣೆ ಲಭಿಸುತ್ತದೆ. ಆದರೆ, ಏಕಾಣುಜೀವಿಗಳಿಂದೇಳುವ ಉಸಿರಾಟದ ಸೋಂಕಿನಿಂದ ಬಲವಿಲ್ಲದ ಪ್ರತಿರಕ್ಷಣೆ ಕೊಂಚ ಕಾಲ ಇದ್ದು ಹೋಗುವುದು.

**ಹತೋಟಿ: ನಿರೋಧ:** ಸೋಂಕಿನ ವಸ್ತುವಿನ ಪ್ರಮಾಣದ ಇಳುಗಡೆ, ಸೋಂಕು ಸಾಗಣೆಯ ಸಾಧನಗಳ ಹತೋಟಿ, ಆತಿಥೇಯದ ರೋಗ ತಡೆವ ಬಲದ ಹೆಚ್ಚಳಿಕೆ ಇವುಗಳಿಂದ ಸೋಂಕುಕಾರಕ ರೋಗಗಳು ಬಾರದಂತೆ ತಡೆಯಬಹುದು.

ರೋಗ ಅಂಟಿಸುವ ವಸ್ತುವಿನ ಪ್ರಮಾಣವನ್ನು ಇಳಿಸುವ ಉಪಾಯಗಳು, ಸೋಂಕಿನ ವಸ್ತುವಿನ ಗುಣ, ಮೂಲಗಳಿಗೆ ತಕ್ಕಹಾಗೆ ಹಲತೆರನಾಗಿರುವುವು. ಕೈವಸ್ತ್ರ, ಕೆಲವೆಡೆ ಇಟ್ಟಿರುವ ಉಗುಳುದಾನಿಗಳ ಹೊರತಾಗಿ ಎಲ್ಲೆಂದರಲ್ಲಿ ಉಗುಳು, ಸೀನು, ಎಂಜಲು ತೆಮಡೆಗಳನ್ನು ಎಸೆಯಬಾರದು. ಸೋಂಕುರೋಗಿಗಳನ್ನು, ಬೇರೆಯಾಗಿ ಇರಿಸಬೇಕು. ವಾಹಕಿಗಳ ಕಸಬುಗಳಲ್ಲಿ ಯಾವ ಅಡ್ಡಿಯನ್ನೂ ಹಾಕಬೇಕಿಲ್ಲ. ಅವರನ್ನು ಕೆಲಸದಿಂದ ತೆಗೆದುಹಾಕಿ ಬೇರೆ ಇರಿಸಬೇಕಿಲ್ಲ. ಸಿಡುಬು ಕಾಲರ ರೋಗಿಗಳನ್ನು ಬೇರೆ ಇರಿಸಿದರೆ, ಯಾರೂ ಅಡ್ಡಿಪಡಿಸರು. ಆದರೆ ಅದೇ ಕ್ಷಯರೋಗಿಗಳನ್ನು ಬೇರೆ ಇರಿಸುವುದಿರಲಿ, ಒಂದೆಡೆ ಕೂಡಿ ಹಾಕುವುದಕ್ಕೂ, ಯಾರಾದರೂ ಸರಿಯೇ, ಒಪ್ಪುವುದು ಇನ್ನೂ ಕಷ್ಟ. ಪ್ಲೇಗು, ಕಾಲರ, ಸಿಡುಬು. ಹಳದಿಜ್ವರದ ರೋಗಿಗಳಿರುವ ಹಡಗುಗಳಿಗೆ ಬಲವಂತವಾಗಿ ಕ್ವಾರಂಟೀನ್ (ನಲವತ್ತು ದಿನಗಳ ತಡೆ) ಹಾಕಿರಿಸಬಹುದು. ಇಲ್ಲೂ ಅಷ್ಟೇ, ಸಾಮಾಜಿಕ, ಹಣಕಾಸಿನ ಕಷ್ಟಗಳಿಂದ ಒಂದು ಮಿತಿಗೊಂಡ ರೂಪದ ಹೊರತಾಗಿ, ಈ ವಿಧಾನ ಜಾರಿಗೆ ತರುವುದು ಕಷ್ಟ. ಕಟ್ಟುನಿಟ್ಟಾಗಿ ಪಾಲಿಸುವುದಂತೂ ಆಗೇ ಆಗದು. ಮುಖ್ಯರಾದ ಕೆಲವರ ತುರ್ತಿನ ಕೆಲಸಗಳಿಗಾಗಿ ಆರೋಗ್ಯಪಾಲನೆಯ ನಿಯಮಗಳನ್ನು ಸಡಿಲಿಸಬೇಕಾಗುವುದು. ಕೊಂಚವಾದರೂ ಸಡಿಲಿಸಿ, ರೋಗಲಕ್ಷಣಗಳು ಹೊರಗೆ ತೋರದವರನ್ನು ಮುಂದೆ ಸಾಗಲು ಬಿಡಬಹುದು. ಅವರು ಹೋಗುವ ಸ್ಥಳದ ಆರೋಗ್ಯಾಧಿಕಾರಿಗೆ ಸುದ್ದಿ ಕೊಟ್ಟು, ಬೇನೆ ಬಿದ್ದರೆ ಕೂಡಲೇ ವೈದ್ಯರನ್ನು ಕಾಣುವಂತೆ ಸೂಚಿಸಬಹುದು. ಯಾರಲ್ಲಾದರೂ ರೋಗ ಕಾಣಿಸಿಕೊಂಡರೆ ಕೂಡಲೇ ರೋಗವನ್ನೂ ಗುರುತಿಸಿ ತಕ್ಕ ನಿರೋಧ ಕ್ರಮಗಳನ್ನೂ ಕೈಗೊಳ್ಳಬಹುದು.

ಕಾವಿನಿಂದಲೊ ರಾಸಾಯನಿಕ ಸೋಂಕು ನಾಶಕಗಳಿಂದಲೊ ಸೋಂಕಿನ ಕಾರಕಗಳನ್ನು ಕೆಲವು ಸಮಯಗಳಲ್ಲಿ ಮಾತ್ರ ಹಾಳುಮಾಡಬಹುದೇ ಹೊರತು, ಎಲ್ಲೆಲ್ಲೂ ಇದನ್ನು ಪಾಲಿಸುವಂತಿಲ್ಲ. ಗಾಳಿಯಲ್ಲಿ ಸಾಗಿಬರುವ ಸೋಂಕನ್ನು ತಡೆಯಲು ಕಟ್ಟಡಗಳಲ್ಲಿ ಹವೆಯಾಡುವಿಕೆ (ವೆಂಟಿಲೇಷನ್) ಬಲು ಮುಖ್ಯ ವಿಧಾನ. ಇದರಿಂದ ಗಾಳಿಯಲ್ಲಿರುವ ರೋಗಾಣುಗಳೂ ಕಡಿಮೆಯಾಗಿ, ಒಳಗೆ ವಾಸಿಸುವವನಿಗೆ ಒಂದೇ ಬಾರಿಗೆ ಅವನ ಊತಕಗಳು ತಡೆದುಕೊಳ್ಳುವಷ್ಟಕ್ಕಿಂತ ಹೆಚ್ಚಾಗಿರವು. ಚೊಕ್ಕತೆಯಿಂದ ಧೂಳಿಲ್ಲದಂತೆ ನೋಡಿಕೊಂಡರೆ ಬಲು ಅನುಕೂಲ. ಏಕಾಣುಜೀವಿಗಳನ್ನು ಬಿಸಿಲು ಹಾನಿಗೊಳಿಸುವುದರಿಂದ, ಮನೆಯೊಳಕ್ಕೆ ಸಾಕಷ್ಟು ಬಿಸಿಲೂ ಬೆಳಕೂ ಬೀಳುವಂತೆ ಕಿಟಕಿ, ಬಾಗಿಲುಗಳ ಪರದೆಗಳನ್ನು ಕಳಚಿಟ್ಟು ಮಾಮೂಲಿನಂತೆ ನೀರು, ಸಾಬೂನುಗಳನ್ನು ಬಳಸಬಹುದು. ಬಿಸಿಲು ಇಲ್ಲವಾದಾಗ ಅತಿನೇರಿಳೆ ಬೆಳಕಿನ ವಿಕಿರಣತೆಯಿಂದಲೂ ಸೋಂಕು ಕಳೆವ ಸಿಂಪಡಿಕೆಗಳನ್ನು (ಸ್ಪ್ರೇಸ್) ಆಗಾಗ್ಗೆ ಚಿಮುಕಿಸುವುದರಿಂದಲೂ ಕೋಣೆಯ ರೋಗಾಣುಗಳನ್ನು ಸಾಯಿಸಲು ಯತ್ನಿಸಬಹುದು. ಆದರೆ, ಇವು ಬಿಸಿಲು, ಹೊಸ ಗಾಳಿಗಳ ಸಮಕ್ಕೆ ಬಾರವು.

ಸೋಂಕು ಕಾರಕಗಳ ಸಾಗಣೆಯ ಸಾಧನಗಳ ಹತೋಟಿಯನ್ನು ಕರುಳಿನ ರೋಗಗಳಲ್ಲಿ ಬಲು ಚೆನ್ನಾಗಿ ಜಾರಿಗೆ ತರಬಹುದು. ಮುಂದುವರಿದ ಹಲವು ನಾಡುಗಳಲ್ಲಿ ಒಳ್ಳೆಯ ನೀರಿನ ಪೂರೈಕೆಯಿಂದ ಕಾಲರ ರೋಗದ ಹೆಸರಿಲ್ಲವಾಗಿದೆ. ವಿಷಮ ಜ್ವರದ ಹಾವಳಿಯೂ ತಗ್ಗಿದೆ. ಹಾಗೇ ಪಾಶ್ಚುರೀಕರಣದಿಂದಾಗಿ, ಹಾಲಿನಿಂದ ಸಾಗಿಬರುವ ರೋಗಗಳೂ ಇಲ್ಲವಾಗಿವೆ.

ಆಹಾರದ ಶುಚಿತ್ವವನ್ನು ಕುರಿತು ಬಲು ಎಚ್ಚರವಿರಬೇಕು. ಮಾಂಸಕ್ಕಾಗಿ ಕೊಲ್ಲುವ ಮೊದಲೇ ಕಡ್ಡಾಯವಾಗಿ ಪ್ರಾಣಿಗಳ ಪರೀಕ್ಷೆ ಆಗಬೇಕು. ಕಸಾಯಿಖಾನೆಗಳಲ್ಲಿ ಚೊಕ್ಕತೆ, ಕಚರಸಾಗಣೆ ಚೆನ್ನಾಗಿರಬೇಕು. ಕೊಂದಮೇಲೆ ಮಾಂಸದ ಪರೀಕ್ಷೆ ಪರಿಣತರಿಂದ ಆಗಬೇಕು. ಊಟ ತಿಂಡಿಗಳ ಮಂದಿರಗಳು, ವಿದ್ಯಾರ್ಥಿ ನಿಲಯ, ವಸತಿಗೃಹಗಳು ಮತ್ತು ಮನೆಗಳಲ್ಲಿ ಆಹಾರವನ್ನು ಮುಟ್ಟಿ ಅಡುಗೆ ಮಾಡುವವರು ಬಡಿಸುವವರು ಆರೋಗ್ಯನಿಯಮಗಳಂತೆ ತುಂಬ ಚೊಕ್ಕತೆ ಪಾಲಿಸಬೇಕು. ಆಹಾರದಿಂದ ರೋಗಗಳು ಬರದಿರಬೇಕಾದರೆ ಆಹಾರವನ್ನು ತಯಾರಿಸುವ ಕೂಡಿಡುವ ಪಾತ್ರೆಪಡಿಗಗಳು ಚೊಕ್ಕವಾಗಿರಬೇಕು. ಅವು ಎಂದಿಗೂ ಇಲಿ ಹೆಗ್ಗಣಗಳಿಗಾಗಲಿ, ನೊಣ, ಕೀಟಕಗಳಿಗಾಗಲಿ ಸಿಗುವಂತಿರಬಾರದು.

**ಮಾನವನಲ್ಲಿ ರೋಗಕಾರಕ ಏಕಾಣುಜೀವಿಗಳ ಕೆಲವು ಮುಖ್ಯ ಗುಂಪುಗಳು**

| ಏಕಾಣುಜೀವಿ | ರೋಗ | ಮದ್ದು ಚಿಕಿತ್ಸೆ | ಷರಾ |
|---|---|---|---|
| ಉರಿಶೀತದ ರಕ್ತಾನುರಾಗಿ | ಉರಿಶೀತ, ಮಿದುಳು ಪೊರೆಯುರಿತ | ಮಿದುಳು ಪೊರೆಯುರಿತಕ್ಕೆ ರೋಧರಸಿಕೆ ಸ್ಟ್ರೆಪ್ಟೊಮೈಸಿನ್ | ಉರಿಶೀತಕ್ಕೆ ಮದ್ದಿಲ್ಲ |
| ಊರುಬಾಡುಬೇನೆ ಕದಿರುಜೀವಿ | ಊರುಬಾಡುಬೇನೆ | ಜೀವಿವಿಷರೋಧಕ | ಆಹಾರ ವಿಷವೇರಿಕೆ, ಸೋಂಕಲ್ಲ |
| ಎಸ್ಕರೀಷನ ಹೆಗ್ಗರುಳಜೀವಿ | ಎಳೆಗೂಸುಗಳ ಉಚ್ಚಾಟ | ಸಲ್ಫಡಯಜೀನ್, ಕ್ಲೋರಾಂ ಫೆನಿಕಾಲ್ | ....... |
| ಕಾಮಾಲೆ ರಕ್ತಸುರಿತದ ತೆಳುಸುರುಳಿ | ವೀಲನ ರೋಗ | ಪೆನಿಸಿಲಿನ್? | ಇಲಿಕಡಿತದ ರೋಗ |
| ಕಾಲರದ ಬಳುಕಜೀವಿ | ಕಾಲರ | ಸಲ್ಫೋನೇಮೈಡುಗಳು, ಜೀವಿರೋಧಕಗಳು | ರೋಗಲಕ್ಷಣ ಚಿಕಿತ್ಸೆ ಬೇಕು |
| ಕಿರಣಣಬೆ ವರ್ಗ | ಕಿರಣಣಬೇನೆ ಗಲ್ಲಕಟ್ಟು<br>ಹುತ್ತಗಾಲು<br>ಇಲಿಕಡಿತದ ಜ್ವರ | ಪೆನಿಸಿಲಿನ್, ಟೆರ್ರ್ ಮೈಸಿನ್, ಆರಿಯೊಮೈಸಿನ್<br>.......<br>....... | ಉಗ್ರವಲ್ಲ<br>.......<br>ಇಲಿಯ ಮೂಗಿನ ಪರಪಿಂಡಿ |
| ಕುಷ್ಠದ ಅಣಬೆಯ ಏಕಾಣುಜೀವಿ | ಕುಷ್ಠರೋಗ | ಡ್ಯಾಪ್ಸೋನ್ | ....... |
| ಕ್ಷಯದ ಅಣಬೆಯ ಏಕಾಣುಜೀವಿಗಳು | ಕ್ಷಯ | ಸ್ಟ್ರೆಪ್ಟೊಮೈಸಿನ್, ಐಸೋನಿಯಾಜಿಡ್, ಪಾಸ್ | ....... |
| ಗಂಟಲಮಾರಿ ದಂಡೇಕಾಣುಜೀವಿ | ಗಂಟಲಮಾರಿ | ನಿರೋಧಕ್ಕಾಗಿ ಜೀವಿವಿಷದಿಂದ, ಜೀವಿವಿಷರೋಧಕ | ....... |
| ತಿರುದಾರಕ ಜಾತಿ | ಉಪದಂಶ, ಯಾಸ್ | ಸೋಮಲ, ಪೆನಿಸಿಲಿನ್ | ಮೇಹರೋಗ ಉಪದಂಶ |
| ನಾಯಿಕೆಮ್ಮು ರಕ್ತಾನುರಾಗಿ | ನಾಯಿಕೆಮ್ಮು | ನಿರೋಧಕ್ಕೆ ಲಸಿಕೆಗಳು | ....... |
| ನೆರಡಿ ದಂಡಾಣುಜೀವಿ | ವಿಷಮ ಬೊಕ್ಕೆ, ಉಣ್ಣೆಕಾರರ ರೋಗ | ಆರಿಯೊಮೈಸಿನ್, ಪೆನಿಸಿಲಿನ್, ರೋಧರಸಿಕೆ | ಪ್ರಾಣಿಗಳಲ್ಲಿ ಮಾತ್ರ ನೆರಡಿ |
| ಪರಮಾ ನೀಸರ್ ಜೀವಿ | ಪರಮಾಮೇಹರೋಗ | ಸಲ್ಫೋನೇಮೈಡುಗಳು, ಪೆನಿಸಿಲಿನ್ | ....... |
| ಪ್ಲೇಗು ದಂಡಾಣುಜೀವಿ | ಪ್ಲೇಗು | ಸಲ್ಫಡಯಜೀನ್, ಸ್ಟ್ರೆಪ್ಟೊಮೈಸಿನ್, ಕ್ಲೋರಾಂಫೆನಿಕಾಲ್ | ಚಿಗಟಗಳಿಂದ ಸೋಂಕು |
| ಬಾರ್ಟೊನೆಲ್ಲ ದಂಡಾಣುಜೀವಿ | ಒರೋಯ ಜ್ವರ | ಕ್ಲೋರಾಂಫೆನಿಕಾಲ್ ? | ಉಸುಬಿನ ನೊಣದ ಸೋಂಕು |
| ಬ್ರೂಸೆಲ್ಲ ಜಾತಿ | ಬ್ರೂಸೆಲ್ಲ ಬೇನೆ | ಟೆರ್ರಮೈಸಿನ್, ಆರಿಯಮೈಸಿನ್ | ದನಗಳಲ್ಲಿ ಕಂದುಹಾಕುವಿಕೆ |
| ಮಿದುಳು ಪೊರೆಯುರಿತದ ನೀಸರ್ ಜೀವಿ | ಮಿದುಳು ಬೆನ್ನುಹುರಿಯ ಜ್ವರ | ಪೆನಿಸಿಲಿನ್, ಸಲ್ಫೋನೇಮೈಡುಗಳು | ....... |
| ವಿಸರ್ಪಿ ರೋಗಾಣು | ವಿಸರ್ಪಿ | ರೋಧರಸಿಕೆ | ....... |
| ವೆಲ್ಷನ ಕದಿರುಜೀವಿ | ಅನಿಲ ಅಳಿಗೊಳಮು, ಕೆಲವೇಳೆ ಆಹಾರ ವಿಷವೇರಿಕೆ | ಜೀವಿವಿಷರೋಧಕ | ಗಾಯದ ಸೋಂಕು |
| ಸರಕಾಯ್ಜೀವಿಗಳು | ಕೆಂಜ್ವರ, ವಿಸರ್ಪಿ, ಮೆಂಡಿಕೆಯುರಿತ, ಬಾಣಂತಿ ಜ್ವರ, ಕೀಲುವಾತದ ಜ್ವರ, ಪುಪ್ಪುಸ ಉರಿತ | ಸಲ್ಫೋನೇಮೈಡುಗಳು, ಪೆನಿಸಿಲಿನ್ | ....... |
| ಸುರುಳಿಕ ಜೀವಿ | ಇಲಿಕಡಿತದ ಒಂದು ಜ್ವರ | ಸೋಮಲ, ಪೆನಿಸಿಲಿನ | ....... |
| ಸೆಟೆಬೇನೆ ಕದಿರುಜೀವಿ | ಸೆಟೆಬೇನೆ | ಜೀವಿವಿಷರೋಧಕ | ಗಾಯದ ಸೋಂಕು |
| ಷೀಗಜೀವಿ ವರ್ಗ | ಏಕಾಣುಜೀವಿಗಳಿಂದಾದ ಆಮಶಂಕೆ | ಸಲ್ಫೋನೇಮೈಡುಗಳು | ....... |
| ಹೊಂಬಣ್ಣ ಗುತ್ತಿಕಾಯ್ಜೀವಿಗಳು | ಕುರುಗಳು, ಗಾಯ ಕೀವು, ಆಹಾರ ವಿಷವೇರಿಕೆ | ಸಲ್ಫೋನೇಮೈಡುಗಳು ಪೆನಿಸಿಲಿನ್, ಟೆರ್ರಮೈಸಿನ್ ಆರಿಯೊಮೈಸಿನ್ | ....... |

(ಡಿ.ಎಸ್.ಎಸ್.)

ನಾಯಿಗಳಿಂದ ನಾಯಿಹುಚ್ಚು ಬರುವುದನ್ನು ಪೂರ್ತಿ ತಪ್ಪಿಸಬೇಕಾದರೆ ಬೀದಿ ನಾಯಿಗಳೇ ಇಲ್ಲದಂತೆ ನೋಡಿಕೊಂಡು, ಹೊರನಾಡುಗಳಿಂದ ಬರುವವುಗಳ ಮೇಲೆ ಉಸ್ತುವಾರಿ ಇಡಬೇಕು. ಮೊಟ್ಟೆಯಿಟ್ಟು ಮರಿ ಮಾಡುವ ಜಾಗಗಳನ್ನು ಹಾಳು ಮಾಡುವುದರಿಂದಲೂ ವೈರಿಕೀಟಗಳನ್ನು ರಾಸಾಯನಿಕಗಳಿಂದ ಸಾಯಿಸುವುದರಿಂದಲೂ ಕಚ್ಚಿ ರಕ್ತ ಹೀರುವ ಕೀಟಗಳಿಂದೇಳುವ ರೋಗಗಳು ಬಲು ಮಟ್ಟಿಗೆ ಅಣಗಿವೆ.

ಒಳ್ಳೆಯ ಆಹಾರ, ಹೊತ್ತೊತ್ತಿನ ಊಟ, ಮೈ ಚೊಕ್ಕತೆ, ಹೊಸಗಾಳಿ, ಸಾಕಷ್ಟು ಕೈಕಾಲಾಡಿಕೆ, ಬೇಕಿರುವಷ್ಟು ನಿದ್ರೆ ಇವಾವುದರಲ್ಲೂ ಮಿತಿಗೆಡದಿರುವುದೇ ಮುಂತಾದ ಎಂದಿನ ಆರೋಗ್ಯ ಸೂತ್ರಗಳನ್ನು ಪಾಲಿಸಿದರೆ ರೋಗಕ್ಕೆ ಒಡ್ಡಿರುವ ಜನರ ರೋಗ ತಡೆವ ಬಲವನ್ನು ಕೊಂಚಮಟ್ಟಿಗೆ ಹೆಚ್ಚಿಸಬಹುದು. ಆದರೆ ಇವನ್ನು ಮಾತ್ರ ಪಾಲಿಸಿಬಿಟ್ಟರೇ ಸೋಂಕಂಟಿಸುವ ರೋಗಗಳಿಂದ ತಪ್ಪಿಸಿಕೊಂಡ ಹಾಗಲ್ಲ. ಚಿಕ್ಕಂದಿನಲ್ಲಿ ಬಗೆಬಗೆಯ ಸೋಂಕುಗಳಿಗೊಡ್ಡಿ ಅವುಗಳೆದುರು ಒಂದಿಷ್ಟಾದರೂ ಪ್ರತಿರಕ್ಷಣೆ ಗಳಿಸಿಕೊಂಡಿರುವ ಪಟ್ಟಣಗಳಲ್ಲಿನ ಸಣಕಲರಿಗಿಂತಲೂ ಹಳ್ಳಿಗಾಡಿಂದ ಬಂದ, ಬಲು ಕಟ್ಟುಮಸ್ತಾಗಿ ಬೆಳೆದವರೇ ಸೋಂಕು ರೋಗಗಳಿಗೆ ಸುಲಭವಾಗಿ ಈಡಾಗುವರು.

ಸೋಂಕು ರೋಗ ಹತ್ತಿ ಒಂದಷ್ಟು ಮಂದಿ ಸತ್ತು, ಉಳಿದವರಲ್ಲಿ ರೋಗ ತಡೆವ ಬಲ ಹೆಚ್ಚುವಂತೆ ಲಸಿಕೆಗಳನ್ನು ಹಾಕುವುದರಿಂದಲೂ ರೋಗಕ್ಕೆ ಒಡ್ಡಿರುವ ಜನರ ರೋಗ ತಡೆವ ಬಲವನ್ನು ಹೆಚ್ಚಿಸಬಹುದು. ರೋಗ ಬಾರದಂತೆ ತಡೆಯಲು ಇದರಂಥ ಉಪಾಯ ತಾತ್ವಿಕವಾಗಿ ಇನ್ನಿಲ್ಲ ಎನಿಸಿದರೂ ಇದನ್ನು ಮಾಡಿನೋಡುವಾಗ ಹಲವಾರು ತೊಡಕುಗಳೂ ಮಿತಿಗಳೂ ಎದುರಾಗುತ್ತವೆ. ಬಹುಮಟ್ಟಿಗೆ ರೋಗಗಳು ಬಾರದಂತೆ ತಡೆವ ಲಸಿಕೆಗಳು ಎಲ್ಲೊ ಕೆಲವು ರೋಗಗಳೆದುರು ಮಾತ್ರ ಇವೆ. ಉಳಿದವಕ್ಕಿಲ್ಲ; ಇದ್ದರೂ ಸಾಕಷ್ಟು ಬಲವಾಗಿಲ್ಲ. ಅದೂ ಅಲ್ಲದೆ, ಸೋಂಕು ರೋಗಗಳೇ ಬಾರದಂತೆ ತಡೆಗಟ್ಟಬೇಕಾದರೆ ಸೋಂಕಿಗೆ ಈಡಾಗುವಂತೆ ಇರುವವರೆಲ್ಲರಿಗೂ ಒಂದೊಂದು ರೋಗದ ಎದುರೂ ಲಸಿಕೆ ಹಾಕುವುದಲ್ಲದೆ, ಮತ್ತೆ ಮತ್ತೆ ಹಾಕುತ್ತಲೂ ಇರಬೇಕಾಗುತ್ತದೆ. ಸೇನೆಯಲ್ಲಂತೂ ಇದು ಸರಾಗವಾಗಿ ಕೈಗೂಡಬಹುದು. ಜನಸಾಮಾನ್ಯರಲ್ಲಿ ಆಗದು. ನಿಜವಾದ ರೋಗದಿಂದ ಬಂದುದಕ್ಕೆ ತಕ್ಕಂತೆ ಅದರ ಲಸಿಕೆಯಿಂದೇಳುವ ಪ್ರತಿರಕ್ಷಣೆಯ ಮಟ್ಟವೂ ಇರುವುದು. ಅಂದರೆ ಬಾಳಿನುದ್ದಕ್ಕೂ ಶಾಶ್ವತ ಪ್ರತಿರಕ್ಷಣೆ ಕೊಡುವ ಮತ್ತೆ ಮರುಕಳಿಸಿದ ರೋಗಗಳಲ್ಲಿ ಮಾತ್ರ ಲಸಿಕೆ ಹಾಕುವಿಕೆಯಿಂದ ಅನುಕೂಲವಿದೆ. ಸಿಡುಬು ಇದರ ಒಳ್ಳೆಯ ಉದಾಹರಣೆ.

ಹೊರಜೀವಿವಿಷವನ್ನು ಸುರಿಬಿಡುವ ಸೆಟೆಬೇನೆ, ಗಂಟಲಮಾರಿ ತೆರನ ಏಕಾಣುಜೀವಿಗಳಿಂದ ಏಳುವ ಹಲವು ರೋಗಗಳ ಎದುರೂ ಬಲವಾದ ಲಸಿಕೆಗಳಿವೆ. ಗಂಟಲ ಮಾರಿಯದಂತೂ ಚೆನ್ನಾಗಿ ಎದ್ದುಕಾಣುವಂಥದು. ಕೇವಲ ಮಗುವನ್ನು ಈ ರೋಗದಿಂದ ಕಾಪಿಡುವುದಲ್ಲದೆ, ಇಡೀ ನಾಡಿನಿಂದಲೇ ರೋಗವನ್ನು ಹೋಗಲಾಡಿಸಬಹುದು. ಈ ರೋಗಕ್ಕೀಡಾಗುವ ವಯಸ್ಸಿನವರನ್ನೂ ಸೇರಿಸಿಕೊಂಡು ಜನರಲ್ಲಿ ಸಾಕಷ್ಟು ಮಂದಿಗೆ ನಾಲ್ವರಲ್ಲಿ ಮೂವರಿಗಾದರೂ ಪ್ರತಿರಕ್ಷಣೆ ಪಡೆಯಲು ಲಸಿಕೆ ಹಾಕಬೇಕು. ಶಾಲಾ ಮಕ್ಕಳಿಗೆ ಸುಮಾರು 5 ವರ್ಷಗಳಿಗೊಮ್ಮೆಯಾದರೂ ಹಾಕದಿದ್ದಲ್ಲಿ ರೋಗ ಹರಡುತ್ತಲೇ ಇರುವುದು. ಇತರ ಏಕಾಣುಜೀವಿಗಳಿಂದ ಬರುವ ರೋಗಗಳ ಎದುರು ಲಸಿಕೆಗಳು ಅಷ್ಟು ಪರಿಣಾಮಕಾರಿಗಳಲ್ಲ. ವಿಷಮಜ್ವರ, ನಾಯಿ ಕೆಮ್ಮು, ಸೊಕ್ಕಿನಜ್ವರ, ಪ್ಲೇಗು, ಕಾಲರಗಳೆದುರು ಲಸಿಕೆಗಳಿದ್ದರೂ ಅವುಗಳಿಂದ ಲಭಿಸುವ ಪ್ರತಿರಕ್ಷಣೆ ಎಷ್ಟೇ ಬೇಕೆನಿಸಿದರೂ ಬಲವಾದುವಲ್ಲ. ಉಸಿರಾಟ ಮಂಡಲದ ರೋಗಗಳೆದುರು ಲಸಿಕೆಗಳಿಲ್ಲ. ತತ್ಕಾಲಕ್ಕೆ ರೋಗವನ್ನು ತಡೆವ ಬಲ ಕೊಡಲು ನಿರೋಧಕಲಸಿಕೆಗಳನ್ನು (ಆಂಟಿಸೀರಮ್) ಕೆಲವೇಳೆ ಕೊಡಬಹುದು. ಗಂಟಲಮಾರಿ, ಸೆಟೆಬೇನೆ, ಅನಿಲದ ಅಳಿಕೊಳಮುಗಳಲ್ಲಿ (ಗ್ಯಾಸ್ ಗ್ಯಾಂಗ್ರೀನ್) ಮಾತ್ರ ಹೀಗೆ ಮಾಡಬಹುದು. ಇನ್ನಾವ ವಿಧಾನಗಳಿಂದಲೂ ಆಗದಿದ್ದರೆ, ಕೆಲವು ವೇಳೆ ದಿನವೂ ಮದ್ದುಗಳನ್ನು ಕೊಡುವುದರಿಂದ ಸಾಧಿಸಬಹುದು. ಕಳೆದ ಮಹಾಯುದ್ಧ ಕಾಲದಲ್ಲಿ ಮೆಪಕ್ರೀನ್ (ಆಟೆಬ್ರೀನ್) ಕೊಡುತ್ತಿದ್ದುದರಿಂದ ಮಲೇರಿಯ ಬರದಂತೆ ತಡೆಯಲು ಸಾಧ್ಯವಾಯಿತು. ಹಾಗೇ ಕೆಲವೆಡೆ ಸಲ್ಫೋನೇಮೈಡುಗಳನ್ನು ಕೊಡುತ್ತಿದ್ದುದರಿಂದ ಉಸಿರಾಟ ಮಂಡಲದ ಬೇನೆಗಳನ್ನು ತಡೆವುದಾಯಿತು. ಆದರೆ, ಮುಂದೆ ಸಲ್ಫೋನೇಮೈಡುಗಳಿಗೆ ಜಗ್ಗದ ರೋಗಾಣುಗಳ ತಳಿಗಳು ಬೆಳೆಯಬಹುದಾದ್ದರಿಂದ, ಈ ಮದ್ದುಗಳನ್ನು ಸುಮ್ಮನೆ ಯಾವಾಗಲೂ ಕೊಡುವುದು ಒಳ್ಳೆಯದಲ್ಲ.

**ಚಿಕಿತ್ಸೆ :** ಮೈ ಒಳ ಹೊಕ್ಕಿರುವ ಏಕಾಣುಜೀವಿಗಳ ನಾಶದೊಂದಿಗೆ, ರೋಗಿಯ ರೋಗಲಕ್ಷಣಗಳ ಶಮನ ಮಾಡುವುದೇ ಸೋಂಕುಕಾರಕ ರೋಗಗಳ ಚಿಕಿತ್ಸೆ. ಕುರುವಿನಲ್ಲಿದ್ದ ಹಾಗೆ ಎಲ್ಲಾದರೂ ಕೀವು ಸೇರಿದ್ದರೆ ಇಲ್ಲವೇ ರೋಗ ಒಂದೆಡೆ ನೆಲೆಸಿದ್ದರೆ ಅದನ್ನು ಹೋಗಲಾಡಿಸಲು ಶಸ್ತ್ರಕ್ರಿಯೆ ಮಾಡಬೇಕಾಗುತ್ತದೆ. ಆದರೆ ರೋಗ ಮೈಯಲ್ಲೆಲ್ಲ ಹರಡಿದ್ದಲ್ಲಿ ಬೇರೆ ವಿಧಾನಗಳಾಗಬೇಕು. ಗಂಟಲಮಾರಿ, ಸೆಟೆಬೇನೆಗಳ ತೆರನ ರೋಗಗಳಲ್ಲಿ ರೋಗಾಣುಗಳು ಸುರಿಬಿಡುವ ಜೀವಿವಿಷವನ್ನು ಸಾಕಷ್ಟು ಪ್ರಮಾಣಗಳಲ್ಲಿ ಜೀವಿವಿಷರೋಧಕಗಳಿಂದ (ಆಂಟಿಟಾಕ್ಸಿನ್ಸ್) ಸಯ್ಯೊಗಿಸಬಹುದು. ಬಲವಾದ ಹೊರ ಜೀವಿವಿಷವನ್ನು ಸುರಿಬಿಡದ ಜೀವಾಣುಗಳಿಂದೇಳುವ ರೋಗಗಳ ಚಿಕಿತ್ಸೆಯಲ್ಲಿ ಲಸಿಕೆಗಳಿಂದ ಅನುಕೂಲವಿಲ್ಲ. 1939ರಿಂದೀಚೆಗೆ ಸಲ್ಫೋನೇಮೈಡುಗಳೂ ಜೀವಿರೋಧಕಗಳೂ (ಆಂಟಿಬಯೋಟಿಕ್ಸ್) ಜಾರಿಗೆ ಬಂದಾಗಿನಿಂದ ಸೋಂಕುಕಾರಕ ರೋಗಗಳ ಚಿಕಿತ್ಸೆಯಲ್ಲಿ ಕ್ರಾಂತಿಯೇ ಆಗಿದೆ. ಗಾಳಿಕಾಯ್ಜೀವಿಯ (Pnemococci), ಸರಕಾಯ್ಜೀವಿಯು (Streptococci), ಮಿದುಳು ಪೊರೆಕಾಯ್ಜೀವಿಯು (ಮೆನಿಂಗೊಕಾಕಲ್), ರೇತುಕಾಯ್ಜೀವಿಯ (ಗಾನೊಕಾಕಲ್) ಸೋಂಕುಗಳ ಚಿಕಿತ್ಸೆಗೆ ಸಲ್ಫೋನೇಮೈಡುಗಳ ಪರಿಣಾಮಕಾರಿಗಳು.

ಸಲ್ಫೋನೇಮೈಡುಗಳು ಏಕಾಣುಜೀವಿಗಳ ಜೀವವಸ್ತು ಕರಣದಲ್ಲಿ ಅಡ್ಡಿಯಾಗಿ ಅವು ಬೆಳೆಯಲು ಬೇಕೇ ಬೇಕಿರುವ ಕೆಲವು ಪದಾರ್ಥಗಳನ್ನೂ ಬಳಸದಂತೆ ಮಾಡುತ್ತವೆ. ಏಕಾಣುಜೀವಿಗಳ ರೋಗಗಳ ಚಿಕಿತ್ಸೆಯಲ್ಲಿ ಬಲು ಮುಖ್ಯವಾದ ಜೀವಿರೋಧಕಗಳು ಪೆನಿಸಿಲಿನ್, ಸ್ಟ್ರೆಪ್ಟೊಮೈಸಿನ್, ಕ್ಲೋರಾಂಫೆನಿಕಾಲ್, ಕ್ಲೋರ್ ಟೆಟ್ರಸೈಕ್ಲೀನ್ (ಆರಿಯೊಮೈಸಿನ್), ಆಕ್ಸಿಟೆಟ್ರಸೈಕ್ಲೀನ್ (ಟೆರ್ರಮೈಸಿನ್). ಎಲ್ಲ ಏಕಾಣುಜೀವಿಗಳೂ ಈ ಮದ್ದುಗಳಿಗೆ ಮಣಿಯವು. ಒಂದೆರಡು ದೊಡ್ಡವನ್ನು ಬಿಟ್ಟರೆ ಯಾವ ವಿಷಕಣಗಳ ಸೋಂಕಿನೆದುರೂ ಸರಿಯಾದ ಮದ್ದೇ ಇಲ್ಲ. ಹೊಸ ಹೊಸ ಮದ್ದುಗಳಂತೂ ತಯಾರಾಗುತ್ತಲೇ ಇವೆ. ಬಹಳ ದಿನಗಳೂ ತಿಂಗಳುಗಳೂ ಕೊಡುತ್ತಲೇ ಇದ್ದರೆ, ಕೆಲವು ಏಕಾಣುಜೀವಿಗಳು ಸಲ್ಫೋನೇಮೈಡುಗಳಿಗೂ ಜೀವರೋಧಕಗಳಿಗೂ ಜಗ್ಗದಂತಾಗುವುವು. ಅಷ್ಟೇ ಅಲ್ಲದೆ, ಹೀಗೆ ಜಗ್ಗದ ರೋಗಾಣುಗಳ ತಳಿಗಳೇ ಬೆಳೆದು ಎಲ್ಲೆಲ್ಲೂ ಹಬ್ಬಿಕೊಂಡು ಹೊಸ ಮದ್ದುಗಳಿಗೂ ಮಣಿಯದಂತಾಗುತ್ತವೆ **(ನೋಡಿ– ಉರಿತ) (ನೋಡಿ– ಏಕಾಣುಜೀವಿವಿಜ್ಞಾನ) (ನೋಡಿ– ತೀನಿ–ಕಣತೆ) (ನೋಡಿ– ಪರಪಿಂಡಿ–ಶಾಸ್ತ್ರ).** (ಡಿ.ಎಸ್.ಎಸ್.)

**ಏಕಾಣುಜೀವಿವಿಜ್ಞಾನ:** ವಿಕಾಸದ ದೃಷ್ಟಿಯಿಂದ ಅತ್ಯಂತ ಕೆಳವರ್ಗದ ಮತ್ತು ಒಂದೇ ಕೋಶವಿರುವ ಜೀವಿಗಳಾದ ಏಕಾಣುಜೀವಿಗಳ ಅಥವಾ ಸೂಕ್ಷ್ಮಾಣುಜೀವಿಗಳ (ಬ್ಯಾಕ್ಟೀರಿಯಾ) ಶಾಸ್ತ್ರೀಯ ಅಭ್ಯಾಸ (ಬ್ಯಾಕ್ಟೀರಿಯಾಲಜಿ). ಈ ವಿಜ್ಞಾನದ ಶಾಖೆಗಳು ಅನೇಕ ವಿಜ್ಞಾನ ಕ್ಷೇತ್ರಗಳಲ್ಲಿ ವ್ಯಾಪಿಸಿವೆ. ಉದಾಹರಣೆಗೆ ವೈದ್ಯವಿಜ್ಞಾನದ ಸೂಕ್ಷ್ಮಜೀವಿವಿಜ್ಞಾನ (ಮೆಡಿಕಲ್ ಮೈಕ್ರೊಬಯಾಲಜಿ), ಕೃಷಿ ವಿಜ್ಞಾನದ (ಅಗ್ರಿಕಲ್ಚರಲ್ ಬ್ಯಾಕ್ಟೀರಿಯಾಜಲಿ ಭೂ ಏಕಾಣುಜೀವಿವಿಜ್ಞಾನ (ಸಾಯಿಲ್ ಬ್ಯಾಕ್ಟೀರಿಯಾಲಜಿ), ಕೈಗಾರಿಕಾ ಏಕಾಣುಜೀವಿವಿಜ್ಞಾನ (ಇಂಡಸ್ಟ್ರಿಯಲ್ ಬ್ಯಾಕ್ಟೀರಿಯಾಲಜಿ)–ಇತ್ಯಾದಿ.

ಒಂದೇ ಕೋಶವುಳ್ಳ ಈ ಜೀವಿಗಳು ಅತಿಸೂಕ್ಷ್ಮ ಗಾತ್ರದವು. ಇವು ಬರಿಯ ಕಣ್ಣುಗಳಿಗೆ ಅಗೋಚರ. ಸೂಕ್ಷ್ಮದರ್ಶಕಗಳ ಮೂಲಕ ಮಾತ್ರ ಇವನ್ನು ನೋಡಬಹುದು. ಇವುಗಳಲ್ಲಿ ಅನೇಕ ವಿಧಗಳಿವೆ. ಕೆಲವು ಮಾನವವರ್ಗಕ್ಕೆ ಉಪಕಾರಿಗಳು ಮತ್ತೆ ಕೆಲವು ಹಾನಿಕಾರಕಗಳು.

ಏಕಾಣುಜೀವಿಗಳು ಪ್ರಾಣಿವರ್ಗಕ್ಕೂ ಸೇರಿಲ್ಲ ಅಥವಾ ಸಸ್ಯವರ್ಗಕ್ಕೂ ಸೇರಿಲ್ಲ. ಸಸ್ಯವರ್ಗಕ್ಕೆ ಸೇರಿದ ಶೈವಲ ಮತ್ತು ಶಿಲೀಂಧ್ರಗಳಿಗಿಂತಲೂ ಪ್ರಾಣಿವರ್ಗಕ್ಕೆ ಸೇರಿದ ಮೂಲಜೀವಿಗಳಿಗಿಂತಲೂ (ಪ್ರೋಟೊಜೋವ) ಹಿಂದಿನ ಆದಿಮಜೀವಿಗಳೆಂದು ಪರಿಗಣಿಸಲಾಗಿದೆ. ಹೋಲಿಕೆಯಲ್ಲಿ ಶೈವಲ ಶಿಲೀಂಧ್ರಗಳಿಗೇ ಸಮೀಪ ಸಂಬಂಧ. ಆದ್ದರಿಂದ ಏಕಾಣುಜೀವಿಗಳನ್ನು ಸ್ಕಿಜೋಮೈಸೀಟ ಎಂಬ ಗುಂಪಿನಲ್ಲಿ ಶೈವಲ ಶಿಲೀಂಧ್ರಗಳ ನಡುವೆ ತೋರಿಸಲಾಗಿತ್ತು. ಇತ್ತೀಚಿನ ವರ್ಗೀಕರಣದ ಪ್ರಕಾರ ಇವು ಪ್ರೋಕ್ಯಾರಿಯೋಟ ಗುಂಪಿಗೆ ಸೇರಿವೆ.

**ಪೂರ್ವೇತಿಹಾಸ:** ಈ ವಿಜ್ಞಾನ ಇತ್ತೀಚಿನದೆಂದೇ ಹೇಳಬಹುದು. ಸೂಕ್ಷ್ಮದರ್ಶಕ ವನ್ನು ಕಂಡುಹಿಡಿದ ಅನಂತರವೇ ಏಕಾಣುಜೀವಿಗಳ ಅರಿವು ನಮಗೆ ಉಂಟಾದುದು. 1592ರಲ್ಲಿ ಎಚ್. ಜಾನ್ಸನ್ ಸಂಯುಕ್ತ ಸೂಕ್ಷ್ಮದರ್ಶಕವನ್ನು (ಕಾಂಪೌಂಡ್ ಮೈಕ್ರೊಸ್ಕೋಪ್) ಕಂಡುಹಿಡಿದನಾದರೂ ಅದರಲ್ಲಿ ಏಕಾಣುಜೀವಿಗಳಷ್ಟು ಸೂಕ್ಷ್ಮಗಾತ್ರದಜೀವಿಗಳನ್ನು ಕಾಣಲು ಸಾಧ್ಯವಾಗಲಿಲ್ಲ. 1659ರಲ್ಲಿ ಎ. ಕರ್ಶರ್ ಎಂಬ ವಿಜ್ಞಾನಿ ಹುಳಿಯಾದ ಹಾಲಿನಲ್ಲಿ ಹಾಗೂ ಕೊಳೆಯುತ್ತಿರುವ ಮಾಂಸದಲ್ಲಿ ಅತಿಪುಟ್ಟ ಸೂಕ್ಷ್ಮಜೀವಿಗಳನ್ನು ಕಂಡುದಾಗಿ ತಿಳಿಸಿದ. ಆದರೆ ಇವು ಏಕಾಣುಜೀವಿಗಳೆಂದು ಹೇಳಲು ಸಾಕಷ್ಟು ಆಧಾರವಿರಲಿಲ್ಲ. ಇವನ್ನು ಮೊತ್ತಮೊದಲು ನೋಡಿದವ ಪ್ರಾಯಶಃ ಎ. ಫಾನ್ ಲ್ಯೂವೆನ್‌ಹಾಕ್ ಎಂಬ ಡಚ್ ವಿಜ್ಞಾನಿ ಎಂದು ಊಹಿಸಬಹುದು. ಈತ ನೀರು, ಜೊಲ್ಲು ಇತ್ಯಾದಿಯಲ್ಲಿ ತಾನು ಕಂಡ ಕೆಲವು ಸಜೀವ ಸೂಕ್ಷ್ಮ ಪ್ರಾಣಿಗಳ

ವರ್ಣನೆಯನ್ನು ಮಾಡಿ ಇದನ್ನು ಒಳಗೊಂಡ ಲೇಖನವನ್ನು ಲಂಡನ್ನಿನ ರಾಯಲ್ ಸೊಸೈಟಿಯ ಅವಗಾಹನೆಗೆ ಒಪ್ಪಿಸಿದ. ಏಕಾಣುಜೀವಿಗಳಲ್ಲಿ ಕೆಲವು ದೊಡ್ಡವು ಕೆಲವು ಚಿಕ್ಕವು. ಲ್ಯೂವೆನ್‌ಹಾಕ್ ಕಂಡ ಜೀವಿಗಳು ದೊಡ್ಡವಿರಬೇಕು.

ಪ್ರತಿಯೊಂದು ರೋಗಕ್ಕೂ ಕಾರಣವಾದ ಒಂದು ನಿರ್ದಿಷ್ಟ ಸೂಕ್ಷ್ಮಜೀವಿ ಇದ್ದೇ ಇರುತ್ತದೆಂಬ ಸಿದ್ಧಾಂತವನ್ನು 1762ರಲ್ಲಿ ಎಂ.ಎ.ಪ್ಲೆನ್‌ಸಿಜ್ ಪ್ರತಿಪಾದಿಸಿದ. ಅಷ್ಟೇ ಅಲ್ಲದೆ ಈ ಜೀವಿಗಳು ದೇಹದಿಂದ ಹೊರಗಡೆಯೂ ಬದುಕಿ ಬೆಳೆಯಬಲ್ಲವು ಹಾಗೂ ಇವು ಗಾಳಿಯಲ್ಲಿ ಒಂದು ಕಡೆಯಿಂದ ಮತ್ತೊಂದೆಡೆಗೆ ಹಾಯುವುವು ಎಂದೂ ಹೇಳಿದ. ಆದರೆ ಏಕಾಣುಜೀವಿಗಳ ವಿಚಾರದಲ್ಲಿ ಈ ಸಮಯದಲ್ಲಿ ನಮ್ಮ ಜ್ಞಾನ ಅಷ್ಟು ಮುಂದುವರಿದಿರಲಿಲ್ಲ. ಆದ್ದರಿಂದ ಈ ಸಿದ್ಧಾಂತ ವಿಜ್ಞಾನಿಯ ದೂರ ದರ್ಶಿತ್ವವನ್ನು ಎತ್ತಿಹಿಡಿಯುತ್ತದೆಂದು ಹೇಳಬಹುದು. ಮೊತ್ತಮೊದಲು ಸಂಯುಕ್ತ ಸೂಕ್ಷ್ಮದರ್ಶಕದಲ್ಲಿ ವಸ್ತುವನ್ನು 1000 ದಷ್ಟು ದೊಡ್ಡದನ್ನಾಗಿ ಕಾಣುವಂತೆ ಅಳವಡಿಸಿದ ಖ್ಯಾತಿ ಜಿ.ಡೋಲೆಂಡ್ ಎಂಬುವನಿಗೆ ಸಲ್ಲತಕ್ಕದ್ದು (1844). ಇದರ ಬಿಂಬ ದೊಡ್ಡದೇನೋ ಆಯಿತು ಆದರೆ ವಿವರ ಸ್ಫುಟವಾಗಲಿಲ್ಲ. 1870ರಲ್ಲಿ ಜಿ. ಎಬ್ಬೆ ಎಂಬ ವಿಜ್ಞಾನಿ ಸಂಯುಕ್ತ ಸೂಕ್ಷ್ಮದರ್ಶಕವನ್ನು ಎಲ್ಲ ವಿಧಗಳಿಂದಲೂ ಸಮರ್ಪಕವಾಗಿರುವಂತೆಯೂ ವಸ್ತುಗಳು ಸ್ಫುಟವಾಗುವಂತೆಯೂ ಅನೇಕ ಮಾರ್ಪಾಡುಗಳನ್ನು ಮಾಡಿ ಪರಿಷ್ಕರಿಸಿದ. ಈ ವೇಳೆಗೆ ತಕ್ಕಮಟ್ಟಿಗೆ ಏಕಾಣುಜೀವಿಗಳ ಪರಿಚಯವಾಗಿತ್ತೆಂದು ಹೇಳಬಹುದು. ಜೀವರಾಶಿಯಲ್ಲಿ ಇವುಗಳ ಸ್ಥಾನ ನಿಷ್ಕರ್ಷೆಯಾಗಿತ್ತು ಹಾಗೂ ಏಕಾಣುಜೀವಿಗಳಲ್ಲೇ ವಿವಿಧ ಜಾತಿಯ ವಿಂಗಡಣೆಗೂ ಗಮನ ಕೊಡಲಾಗಿತ್ತು. ಪ್ರತಿಜಾತಿಯ ಏಕಾಣುಜೀವಿಗಳಲ್ಲಿಯೂ ಆಯಾ ಜಾತಿಯ ಪೂರ್ಣಲಕ್ಷಣಗಳು ಇದ್ದುದು ವಿಂಗಡಣೆಗೆ ಸಹಾಯವಾಯಿತು. ಅವುಗಳ ಲಕ್ಷಣಗಳಲ್ಲೇ ವೈವಿಧ್ಯ ಕಂಡು ಬಂದಿದ್ದರೆ ಈ ವಿಂಗಡಣೆ ಕಷ್ಟಸಾಧ್ಯವಾಗುತ್ತಿತ್ತು. ಕೆಲವು ಏಕಾಣುಜೀವಿಗಳ ಸಂತಾನೋತ್ಪತ್ತಿ ಕೋಶಬೀಜಗಳಿಂದ (ಸ್ಪೋರ್ ಫಾರ್ಮೇಶನ್) ಎಂಬುದನ್ನು 1857ರಲ್ಲಿ ಕಾನ್ ಕಂಡುಹಿಡಿದ. ಅದೇ ವರ್ಷದಲ್ಲಿ ಏಕಾಣುಜೀವಿಗಳ ಅಧ್ಯಯನ, ಸಂಶೋಧನೆಗಳಿಗೆ ಹೆಸರಾಗಿರುವ ಲೂಯಿ ಪಾಶ್ಚರ್ ಹಾಲು ಹುಳಿಯಾಗುವುದು ಒಂದು ವಿಧದ ಏಕಾಣುಜೀವಿಗಳಿಂದ ಎಂದು ಆಧಾರಗಳ ಸಮೇತ ಮಂಡಿಸಿದ. ಯೂರಿಯ ಲವಣ ಹುದುಗಿನಿಂದ ಅಮೋನಿಯ ಉತ್ಪಾದನೆಯಾಗುವುದೂ ಒಂದು ರೀತಿಯ ಏಕಾಣುಜೀವಿಗಳ ಚಟುವಟಿಕೆಯಿಂದಾಗಿ ಎಂದು ಶ್ರುತಪಡಿಸಿದ (1802). ವಸ್ತುಗಳು ಕೊಳೆತು ನಾರುವುದೂ ಏಕಾಣುಜೀವಿಗಳ ಕ್ರಿಯೆಯಿಂದಲೇ ಎಂಬುದೂ ತಿಳಿಯಿತು.

ಏಕಾಣುಜೀವಿಗಳ ವಿಚಾರದಲ್ಲಿ ನಮ್ಮ ಜ್ಞಾನ ಬೆಳೆಯುವ ಮುನ್ನ ಎರಡು ವಿಚಾರಗಳನ್ನು ಪ್ರತಿಪಾದಿಸಲಾಗಿತ್ತಾದರೂ ಅವು ಸಂಶೋಧನೆಗಳ ಆಧಾರವಿಲ್ಲದೆ ಸಮಸ್ಯೆಗಳಾಗಿಯೇ ಉಳಿದಿದ್ದುವು. ಇದ್ದಕ್ಕಿದ್ದಂತೆ ಪುನರ್ಜನ್ಮ ತಾಳುವ ಸಿದ್ಧಾಂತ (ಥಿಯೊರಿ ಆಫ್ ಸ್ಪಾಂಟೇನಿಯಸ್ ರೀಜನರೇಶನ್) ಒಂದು; ಹುದುಗುವಿಕೆಗೂ ಮಾನವನ ಕೆಲವು ರೋಗಗಳಿಗೂ ಇರುವ ಸಂಬಂಧ ಇನ್ನೊಂದು. ಪುನರ್ಜನ್ಮದ ಸಿದ್ಧಾಂತಕ್ಕೆ ಆಧಾರವಿಲ್ಲವೆಂಬುದರ ಅರಿವಾಯಿತು. ಹುದುಗುವಿಕೆ ಏಕಾಣುಜೀವಿಗಳಿಲ್ಲದೆ ಸಾಧ್ಯವಿಲ್ಲವೆಂಬುದೂ ಪಾಶ್ಚರ್ ನಡೆಸಿದ ಸಂಶೋಧನೆ ಪ್ರಯೋಗಗಳಿಂದ ತಿಳಿದುಬಂತು.

ಏಕಾಣುಜೀವಿಗಳಿಗೆ ಕೆಲವು ವರ್ಣದ್ರವ್ಯಗಳೊಂದಿಗೆ ಸಂಪರ್ಕ ಕಲ್ಪಿಸಿ ಕೆಲವು ವಿಶಿಷ್ಟ ರೀತಿಯ ಕ್ರಮಗಳನ್ನನುಸರಿಸಿ ಅವು ಬಣ್ಣ ಹೀರುವಂತೆ ಮಾಡಿ ಬಣ್ಣ ಕಟ್ಟುವ ಮರ್ಮವನ್ನು ವೈಗರ್ಟ್ ಎಂಬಾತ ಕಂಡುಹಿಡಿದ. ವಿವಿಧ ವರ್ಣದ್ರವ್ಯಗಳನ್ನು ಹೀರುವ ಲಕ್ಷಣಗಳಿಂದ ಆಯಾ ಏಕಾಣುಜೀವಿಗಳನ್ನು ಸುಲಭವಾಗಿ ಗೊತ್ತುಹಚ್ಚುವುದಕ್ಕೆ ಸಾಧ್ಯವಾಯಿತಷ್ಟೇ ಅಲ್ಲದೆ ವಿವಿಧ ಏಕಾಣುಜೀವಿಗಳ ವಿಂಗಡಣೆಗೂ ಸಹಾಯವಾಯಿತು.

ಪ್ರಖ್ಯಾತ ವಿಜ್ಞಾನಿ ರಾಬರ್ಟ್ ಕಾಕ್, ವಿವಿಧ ಏಕಾಣುಜೀವಿಗಳನ್ನು ಸಂಶೋಧನಾಲಯದಲ್ಲಿ ಬೆಳೆಸಿ, ಬೇಕಾದುದನ್ನು ಪ್ರತ್ಯೇಕವಾಗಿ ವಿಂಗಡಿಸಿ ಬೆರಕೆಯಿಲ್ಲದೆ ಒಂದೇ ವಿಧದ ಏಕಾಣುಜೀವಿಗಳನ್ನು ಪಡೆಯುವ ವಿಧಾನ ಕಂಡುಹಿಡಿದ. ಅಗಾರ್ ಅಗಾರ್ ಎಂಬ ಮಾಧ್ಯಮವನ್ನು ಉಪಯೋಗಿಸಿಕೊಂಡು ಅದಕ್ಕೆ ಏಕಾಣುಜೀವಿ ಬೆಳೆಯಲು ಹಿತಕರವಾದ ಆಹಾರ ಸತ್ತ್ವಗಳನ್ನು ಸೇರಿಸಿ ಅವು ಬೆಳೆಯುವಂತೆ ಅಳವಡಿಸಿಕೊಂಡ.

ಇದೇ ಸಮಯದಲ್ಲಿ ಪಾಶ್ಚರ್ ತನ್ನ ಸಂಶೋಧನೆಗಳಿಂದ ಕೋಳಿಗಳ ಕಾಲರಾ ರೋಗ ಹಾಗೂ ಪ್ರಾಣಿಗಳ ಆಂಥ್ರಾಕ್ಸ್ ರೋಗಗಳಿಂದ ಪ್ರತಿಬಂಧಕ ಚುಚ್ಚುಮದ್ದುಗಳನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾದ. ರೋಗಗಳನ್ನು ಉಂಟುಮಾಡುವ ಏಕಾಣುಜೀವಿಗಳನ್ನು ಸಂಶೋಧನಾಲಯದಲ್ಲಿ ಬೆಳೆಸಿ ಮೊದಲ ಪೀಳಿಗೆಯ ಜೀವಿಗಳಿಂದ ಎರಡನೆಯದು, ಎರಡನೆಯ ಪೀಳಿಗೆಯಿಂದ ಮೂರನೆಯದು ಹೀಗೆ ಕ್ರಮವಾಗಿ ಪೀಳಿಗೆಯಿಂದ ಪೀಳಿಗೆಯನ್ನು ಬೆಳೆಸುತ್ತ ಬಂದಾಗ ಕಡೆಕಡೆಯ ಪೀಳಿಗೆಯ ಏಕಾಣುಜೀವಿಗಳಿಂದ ಆಯಾ ಪ್ರಾಣಿಗಳ ದೇಹಕ್ಕೆ ಸೋಂಕು ತಗುಲಿದಾಗ ಅವು ರೋಗಪ್ರಚೋದಕ ಶಕ್ತಿಯನ್ನು ಕಳೆದುಕೊಂಡದ್ದು ಕಂಡುಬಂತು. ಅಷ್ಟೇ ಅಲ್ಲದೆ ಇನ್ನೂ ಮಹತ್ತರವಾದ ಪ್ರಭಾವ ಬೀರುವ ಪರಿಣಾಮವೆಂದರೆ ಈ ನಿಶ್ಚೇತನ ಏಕಾಣುಜೀವಿಗಳನ್ನು ದೇಹಕ್ಕೆ ಅಂಟಿಸಿದ ಕೆಲವು ದಿವಸಗಳ ತರುವಾಯ ರೋಗ ಪ್ರಚೋದಕ ಏಕಾಣುಜೀವಿಗಳಿಂದ ಸೋಂಕು ಅಂಟಿಸಿದಾಗ ಪ್ರಾಣಿಗಳಿಗೆ ರೋಗ ತಗುಲಲಿಲ್ಲ. ಅವು ಆಗ ರೋಗನಿರೋಧಕ ಶಕ್ತಿಯನ್ನು ಪಡೆದಿದ್ದವು. ಇದರಿಂದ ಮುಂದೆ ಮಾನವ ಕುಲವನ್ನೇ ಪೀಡಿಸುತ್ತಿದ್ದ ಅನೇಕ ಭೀಕರ ಸೋಂಕು ಜಾಡ್ಯಗಳಿಗೆ ನಿರೋಧಶಕ್ತಿಯನ್ನು ಪ್ರಚೋದಿಸುವ ನಿರೋಧಕಗಳನ್ನು ಕಂಡುಹಿಡಿಯಲು ಮಾರ್ಗವಾಯಿತೆಂದು ಹೇಳಬಹುದು.

ಇಲ್ಲಿಂದ ಮುಂದೆ ಏಕಾಣುಜೀವಿಗಳ ವಿಚಾರವಾಗಿ ನಮ್ಮ ಜ್ಞಾನ ಅಗಾಧವಾಗಿ ಬೆಳೆಯುತ್ತ ಬಂದಿದೆ. ಮಾನವಕುಲದಲ್ಲಿ, ಪ್ರಾಣಿಗಳಲ್ಲಿ ಹಾಗೂ ಸಸ್ಯಗಳಲ್ಲಿ ಕಂಡುಬರುವ ಅನೇಕ ರೋಗಗಳಿಗೆ ವಿವಿಧ ರೀತಿಯ ಏಕಾಣುಜೀವಿಗಳೇ ಕಾರಣವೆಂಬುದೂ ತಿಳಿಯಿತು. ಅನೇಕ ಮೂಢನಂಬಿಕೆಗಳೂ ಮಾಯವಾದವು. ಉದಾಹರಣೆಗೆ ಏಕಾಣುಜೀವಿಗಳೆಲ್ಲ ಒಂದಲ್ಲ ಒಂದು ರೋಗಕ್ಕೆ ಕಾರಣವೆಂಬ ನಂಬಿಕೆಗೆ ಬುಡವಿಲ್ಲವೆಂಬುದು ತಿಳಿದುಬಂತು. ಮಾನವಕೋಟಿಗೆ ಮಹತ್ತರವಾದ ಉಪಕಾರ ಮಾಡುವ ಹಾಗೂ ಕೃಷಿಕೈಗಾರಿಕೆ ಮತ್ತಿತರ ಕ್ಷೇತ್ರಗಳಲ್ಲಿಯೂ ಉಪಯೋಗಕರವಾದ ಏಕಾಣುಜೀವಿಗಳು ಹೇರಳವಾಗಿವೆ ಎಂಬುದೂ ಅರಿವಾಯಿತು.

20ನೆಯ ಶತಮಾನದಲ್ಲಿ ಇಂದಿನವರೆಗೆ ಅನೇಕ ಹೊಸ ವಿಷಯಗಳು ಸಂಶೋಧನಾಲಯಗಳಲ್ಲಿನ ಪ್ರಯೋಗಗಳಿಂದ ಹೊರಬಿದ್ದಿವೆ ಮತ್ತು ಹೊರ ಬೀಳುತ್ತಲೂ ಇವೆ. ಏಕಾಣುಜೀವಿಗಳ ವಿಚಾರದಲ್ಲಿ ನಮ್ಮ ಜ್ಞಾನ ಅತ್ಯಂತ ಉನ್ನತಮಟ್ಟದಲ್ಲಿದೆ ಎಂದು ಹೇಳಬಹುದಾದರೂ ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯುವ ದಾಹವಿದ್ದೇ ಇರುವುದರಿಂದ ಸತತವಾಗಿ ಪ್ರಯೋಗ ಮತ್ತು ಸಂಶೋಧನೆಗಳು ನಡೆಯುತ್ತಲೇ ಇವೆ.

ಏಕಾಣುಜೀವಿಗಳ ಇತಿಹಾಸದ ಹಿನ್ನೆಲೆಯಲ್ಲಿ ಅವುಗಳ ರೂಪ, ರಚನೆ, ಶೋಷಕ್ರಿಯೆ ಇತ್ಯಾದಿಗಳನ್ನು ತಿಳಿಯೋಣ. ಸಜೀವ ವಸ್ತುಗಳಲ್ಲಿ ಏಕಾಣುಜೀವಿಗಳೇ ಅತ್ಯಂತ ಪುಟ್ಟವು. ಇದರಿಂದ, ಏಕಾಣುಜೀವಿಗಳನ್ನು ಅಣುಜೀವಿಗಳು, ಜೀವಾಣುಗಳು ಸೂಕ್ಷ್ಮಜೀವಿಗಳು ಎಂಬ ಇತರ ಹೆಸರುಗಳಿಂದಲೂ ಕರೆಯುವುದುಂಟು. ಇವುಗಳಲ್ಲಿ ಕೆಲವು ದುಂಡಾಗಿರುತ್ತವೆ (ಕಾಕೈ), ಕೆಲವು ಉದ್ದುದ್ದ (ಬ್ಯಾಸಿಲೈ) ಮತ್ತೆ ಕೆಲವು ಸುರುಳಿ ಗಳು (ಸ್ಪೈರಿಲಂ) ಇನ್ನು ಕೆಲವು ತಿರುಪುಗಳು. ಇವನ್ನು ಕೇವಲ ಬರಿಗಣ್ಣಿನಿಂದಾಗಲೀ ಅಥವಾ ಸಾಧಾರಣವಾದ ಸೂಕ್ಷ್ಮದರ್ಶಕದಲ್ಲಾಗಲೀ ಕಾಣಲು ಸಾಧ್ಯವಿಲ್ಲ. ಉದ್ದದಲ್ಲಿ 0.001 ಮಿ.ಮೀ. (=1 ಮೈಕ್ರಾನ್, ಸಂಕೇತ $\mu$ ). ಅಥವಾ 1 $\mu$ ನಿಂದ 2 $\mu$ ಗಳಷ್ಟು ಗಾತ್ರದಲ್ಲಿ 0.5 $\mu$ ನಷ್ಟಿರುವುದು ಸಾಮಾನ್ಯ 2,50,000 ಜೀವಿಗಳು ಒಂದು ಸೂಜಿಯ ತುದಿಯಲ್ಲಿರಬಹುದು. ಸೂಕ್ಷ್ಮದರ್ಶಕ ಕಡೇ ಪಕ್ಷ ಇವನ್ನು 1000ದಷ್ಟು ದೊಡ್ಡದಾಗಿ ಕಾಣುವಂತೆ ಮಾಡಿದರೆ ಮಾತ್ರ ಇವನ್ನು ನೋಡಬಹುದು.

ಏಕಾಣುಜೀವಿ ಜೀವದ್ರವ್ಯ ತುಂಬಿದ ಒಂದು ಕೋಶ. ಕೋಶಕ್ಕೆ ಹೊರ ಆವರಣ ಇದೆ. ಅದರ ಒಳಗೆ ಸುತ್ತಲೂ ಒಂದು ಪೊರೆ. ಹೊರಭಾಗವನ್ನು ಲೋಳೆವಸ್ತು ಆವರಿಸಿಕೊಂಡಿದೆ. ಇದು ಪಾಲಿಸ್ಯಾಕರೈಡ್ ಎಂಬ ರಾಸಾಯನಿಕದ ಗುಂಪಿಗೆ ಸೇರಿದೆ. ಕೆಲವು ಏಕಾಣುಜೀವಿಗಳಲ್ಲಿ ಲೋಳೆವಸ್ತು ಇರುವುದಿಲ್ಲ, ಆದರೆ ಅನೇಕ ಏಕಾಣುಜೀವಿಗಳ ಒಂದು ಗುಂಪಿಗೆ ಲೋಳೆವಸ್ತು ಆವರಿಸಿಕೊಂಡಿರಬಹುದು (ಜೂಗ್ಲಿಯಾ). ಕೆಲವಕ್ಕೆ ಚಾವಟಿಯನ್ನು ಹೋಲುವ ಕಶಾಂಗ (ಫ್ಲಾಜೆಲಂ) ಇರುತ್ತದೆ. ಇದರ ಸಹಾಯದಿಂದ ಅವು ಚಲಿಸಲು ಸಾಧ್ಯ. ಈ ಕಶಾಂಗ ಒಂದೇ ಇರಬಹುದು ಅಥವಾ ಬಹುಸಂಖ್ಯೆಯಲ್ಲಿರಬಹುದು. ಕೆಲವಕ್ಕೆ ಕುಚ್ಚಿನಂತೆ ಇರುತ್ತವೆ. ಕಶಾಂಗಗಳು ವಿವಿಧ ಬಗೆಯವಾಗಿವೆ.

ಪ್ರತಿ ಏಕಾಣುಜೀವಿಯ ಕೋಶದ್ರವ್ಯದೊಳಗೆ ಕೋಶ ಕೇಂದ್ರ (ನ್ಯೂಕ್ಲಿಯಸ್) ಉಂಟು. ಇದಕ್ಕೆ ಪೊರೆ ಇಲ್ಲ. ಕೇಂದ್ರದಲ್ಲೂ ಇತರ ಜೀವಿಗಳ ಕೇಂದ್ರದಲ್ಲಿರುವ ಡೆಸಾಕ್ಸಿರಿಬೋ ನ್ಯೂಕ್ಲಿಯಕ್ ಆಮ್ಲ ಇರುತ್ತದೆ. ಜೀವಕಣಗಳ ವಿಭಜನೆಯ ಸಮಯದಲ್ಲಿ ಕಾಣುವ ಸೂಕ್ಷ್ಮ ತಂತುಗಳನ್ನು (ಮಿಟೋಟಿಕ್ ಫಿಗರ್ಸ್) ಇದರಲ್ಲೂ ಗಮನಿಸಲಾಗಿದೆ. ಕೋಶ ದ್ರವ್ಯದಲ್ಲಿ ಮರಳಿನಂತಿರುವ ಸೂಕ್ಷ್ಮ ಬಿಂದುಗಳನ್ನು ಕಾಣಬಹುದು. ಈ ಸೇರ್ಪಡೆಗಳಲ್ಲಿ (ಇನ್‌ಕ್ಲೂಶನ್ಸ್) ಮೇದಸ್ಸು ಇದೆ. ಕೋಶದಲ್ಲಿ ದುಂಡಗೆ ಅಥವಾ ಅಂಡಾಕಾರದಲ್ಲಿ ಪಾರದರ್ಶಕ ಜಾಗಗಳನ್ನು ನೋಡಬಹುದು. ಇವು ಸೂಕ್ಷ್ಮ ಕುಹರಗಳು (ವ್ಯಾಕ್ಯೂಲ್ಸ್). ಏಕಾಣುಜೀವಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಇವುಗಳ ಕೋಶದಲ್ಲಿ ಸಸ್ಯಗಳಲ್ಲಿರುವ ಪತ್ರಹರಿತ್ತು ಇರುವುದಿಲ್ಲ. ಆದ್ದರಿಂದ ಈ ವರ್ಗದ ಏಕಾಣುಜೀವಿಗಳಲ್ಲಿ ದ್ಯುತಿಸಂಶ್ಲೇಷಣ ಕ್ರಿಯೆಗೆ ಅವಕಾಶವಿಲ್ಲ.

**ಇತರ ಮೂಲ ಜೀವಿಗಳೊಂದಿಗೆ ಏಕಾಣುಜೀವಿಗಳ ಸ್ಥಾನ:** ಏಕಾಣುಜೀವಿಗಳು ಮೂಲಸಸ್ಯಗಳನ್ನು ಹೋಲುತ್ತವೆ. ಉದಾಹರಣೆಗೆ ನೀಲಪಚ್ಚೆ ಪಾಚಿ ಮತ್ತು ಶಿಲೀಂಧ್ರಗಳಿಗೂ ಇವಕ್ಕೂ ಅನೇಕ ಹೋಲಿಕೆಗಳಿವೆ. ಆದರೆ ವ್ಯತ್ಯಾಸಗಳು ಸಾಕಷ್ಟು ಇರುವುದರಿಂದ ಏಕಾಣುಜೀವಿಗಳನ್ನು ಜೀವಿಗಳನ್ನು ಬೇರೆಗುಂಪಿಗೆ ಸೇರಿಸಲಾಗಿದೆ. ಮೂಲ ಪ್ರಾಣಿವರ್ಗದಲ್ಲಿ ಸೇರಿರುವ ಒಂದೇ ಜೀವಕೋಶವುಳ್ಳ ಅಮೀಬ, ಪ್ಯಾರಾಮೀಶಿಯಂ, ಪ್ಲಾಸ್ಮೋಡಿಯಂಗಳು (ಮಲೇರಿಯಾಕಾರಕ) ಈ ಏಕಾಣುಜೀವಿಗಳನ್ನು ಹೋಲುವುದಿಲ್ಲ.

ಏಕಾಣುಜೀವಿಗಳ ವರ್ಗೀಕರಣ ಅಷ್ಟು ಸುಲಭವಲ್ಲ. ಆದರೂ ಕೆಲವು ವಿಶಿಷ್ಟ ಲಕ್ಷಣಗಳ ಆಧಾರದ ಮೇಲೆ ಇದನ್ನು ಮಾಡಲಾಗಿದೆ. ಅವು ಹೀಗಿವೆ: 1. ಆಕೃತಿ ರಚನೆ (ಮಾರ್ಫಾಲಜಿ), 2. ಚಯಾಪಚಯಕ್ರಿಯೆ (ಮೆಟಬಾಲಿಸಂ), 3. ಹುದುಗು ಮತ್ತು ಅದರ ಅಂತಿಮ ಉತ್ಪನ್ನ, 4. ಸಸಾರಜನಕ ಪರಿವರ್ತನೆ, 5. ಸಂತಾನವೃದ್ಧಿಗೆ ಅವಶ್ಯಕವಾಗಿ ಒದಗಿಸಬೇಕಾದ ಕೃತಕ ಆಹಾರಸತ್ತ್ವಾಂಶಗಳು, 6. ಸೋಂಕು ಪ್ರಾಣಿಗಳಿಗೆ ಅಂಟಿಸಿದಲ್ಲಿ ಅವುಗಳ ಮೇಲಾಗುವ ಪರಿಣಾಮ ಮತ್ತು ನಿರೋಧಶಕ್ತಿ.

ಏಕಾಣುಜೀವಿಗಳ ಗುಂಪಿಗೆ ಸೇರದ ಇನ್ನೂ ಕೆಲವು ಸೂಕ್ಷ್ಮಜೀವಿಗಳೂ ಇವೆ. ಇವು ರಿಕೆಟ್ಸಿಯೆ ಮತ್ತು ವೈರಸ್. ಇವು ಗಾತ್ರದಲ್ಲಿ ಏಕಾಣುಜೀವಿಗಳಿಗಿಂತ ಸಣ್ಣವೂ ಸೂಕ್ಷ್ಮವೂ ಆಗಿವೆ. ಅತಿ ಸೂಕ್ಷ್ಮಶೋಧಕಗಳ ಮೂಲಕವೂ ವೈರಸ್ಸುಗಳು ಹಾಯಬಲ್ಲವು. ಎಚ್.ಟಿ. ರಿಕೆಟ್ಸ್ ಎಂಬ ವಿಜ್ಞಾನಿಯ ಯಶಸ್ವಿ ಸಂಶೋಧನೆಯಿಂದ ಪತ್ತೆಯಾದ ಸೂಕ್ಷ್ಮ ಜೀವಿಗಳಿಗೆ ರಿಕೆಟ್ಸಿಯೆ ಎಂಬ ಹೆಸರನ್ನೇ ಆತನ ಸ್ಮಾರಕವಾಗಿ ಇಡಲಾಯಿತು. ಇವು ಜೀವಂತ ಊತಕಗಳಲ್ಲಿ (ಟಿಶ್ಯೂಸ್) ಮಾತ್ರ ಬೆಳೆಯಲಾರವು. ರಿಕೆಟ್ಸಿಯೆಗಳನ್ನು ಪುಟ್ಟ ಏಕಾಣುಜೀವಿಗಳೆನ್ನಬಹುದು ($0.3\mu$–$0.4\mu$). ರಿಕೆಟ್ಸಿಯೆ ಮತ್ತು ವೈರಸುಗಳು ಪೂರ್ಣ ಪರಾವಲಂಬಿಗಳು. ಇವುಗಳಲ್ಲಿ ಕೆಲವು ಮಾನವನಿಗೆ ರೋಗಕಾರಕಗಳೂ ಹೌದು. ಉದಾಹರಣೆಗೆ ಕಲ್ಡಡಾರ (ಟೈಫಸ್) ರಿಕೆಟ್ಸಿಯೆ ಸೂಕ್ಷ್ಮಜೀವಿಗಳಿಂದುಟಾಗುವ ರೋಗ. ನೆಗಡಿ, ಇನ್‌ಫ್ಲೂಯೆಂಜ ಕಾಮಾಲೆ ಇವು ಒಂದೊಂದು ವಿಧದ ವೈರಸುಗಳು ಸೋಂಕಿನಿಂದ ಬರುವ ರೋಗಗಳು. ಇವನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಮಾತ್ರ ನೋಡಲು ಸಾಧ್ಯ. ಇವನ್ನು ಬೇರೆಯೇ ಗುಂಪಿಗೆ ಸೇರಿಸಲಾಗಿದೆ.

ತಮ್ಮ ತಮ್ಮ ನಿತ್ಯಕರ್ಮಗಳನ್ನೆಸಗಲು ಜೀವಿಗಳಿಗೆ ಶಕ್ತಿ ಆವಶ್ಯಕ. ಏಕಾಣುಜೀವಿಗಳು ಈ ಶಕ್ತಿಯನ್ನು ಅನೇಕ ವಿಧಗಳಲ್ಲಿ ಒದಗಿಸಿಕೊಳ್ಳುತ್ತವೆ. ಇವುಗಳಿಗೂ ಕೆಲವು ಕಿಣ್ವಗಳಿಗೂ (ಎಂಜೈಮುಗಳು) ನಿಕಟ ಸಂಬಂಧವಿರುವುದು ತಿಳಿದಿದೆ. ಇವನ್ನು ಉಪಯೋಗಿಸಿಕೊಂಡು ಬೇಕಾದ ನೈಟ್ರೋಜನ್, ಪಿಷ್ಟ ಮತ್ತಿತರ ಸಾವಯವ ವಸ್ತುಗಳ (ಆರ್ಗ್ಯಾನಿಕ್ ಮ್ಯಾಟರ್) ವಿಭಜನೆಯಿಂದ ಅವುಗಳನ್ನು ಮೂಲ ಅಂಶಗಳಿಗೆ ಪರಿವರ್ತಿಸಿಕೊಂಡು ತಮ್ಮ ಶಕ್ತಿ ಸಂಪಾದನೆ ಮಾಡಿಕೊಳ್ಳುತ್ತವೆ. ಕೆಲವು ಏಕಾಣುಜೀವಿಗಳಿಗೆ ಈ ರೀತಿ ಶಕ್ತಿಯನ್ನು ಪಡೆಯುವುದು ಅಸಾಧ್ಯ. ಅಂಥವು ಸರಳವಾದ ಆಹಾರವಸ್ತುಗಳು ಎಂದರೆ ಸಕ್ಕರೆ, ಸಾವಯವ ಆಮ್ಲ (ಆರ್ಗ್ಯಾನಿಕ್ ಆಸಿಡ್). ಅಮೈನೋ ಆಮ್ಲ ಮತ್ತು ಆಲ್ಕೊಹಾಲ್ ಇತ್ಯಾದಿ ಅಂಶಗಳು ತಮ್ಮ ಕೋಶಪೊರೆಯನ್ನು ಒಳಹೊಕ್ಕು ಬಂದಾಗ ಅವನ್ನು ಪರಿವರ್ತಿಸಿಕೊಂಡು ಅವಶ್ಯಕವಾದ ಆಹಾರಾಂಶಗಳಿಂದ ಶಕ್ತಿಯನ್ನು ಪಡೆಯುತ್ತವೆ. ಮತ್ತೆ ಕೆಲವು ಏಕಾಣುಜೀವಿಗಳು ಕೇವಲ ಅಜೈವಿಕ (ಇನಾರ್ಗ್ಯಾನಿಕ್) ವಸ್ತುಗಳಿಂದ ಶಕ್ತಿ ಪಡೆಯುತ್ತವೆ. ಅಮೋನಿಯ, ಗಂಧಕ, ಹೈಡ್ರೊಜನ್ ಸಲ್ಫೈಡ್ ಇತ್ಯಾದಿ ಲವಣಗಳನ್ನು ಉತ್ಕರ್ಷಣ ಕ್ರಿಯೆಯಿಂದಲೂ ತಮ್ಮ ಸಂತಾನೋತ್ಪತ್ತಿಗೆ ಬೇಕಾಗುವ (ಹೊಸ ಕೋಶವನ್ನು ರೂಪಿಸಿಕೊಳ್ಳಲು) ನೈಟ್ರೋಜನ್ ಅಂಶಗಳನ್ನು ಅಮೋನಿಯ ಮತ್ತು ಕಾರ್ಬನ್ ಡೈ ಆಕ್ಸೈಡ್‌ಗಳಿಂದಲೂ ಪಡೆಯುತ್ತವೆ. ಅಂದರೆ ಕೆಲವು ಏಕಾಣುಜೀವಿಗಳು ಸಾವಯವ ವಸ್ತುಗಳ ಪರಿವರ್ತನೆಯಿಂದ ಮತ್ತೆ ಕೆಲವು ಇನಾರ್ಗ್ಯಾನಿಕ್ ವಸ್ತುಗಳ ಪರಿವರ್ತನೆಯಿಂದ ತಮ್ಮ ಜೀವಪೋಷಣೆಗೆ ಅತ್ಯಾವಶ್ಯಕವಾದ ಆಹಾರ ಶಕ್ತಿಯನ್ನು ಒದಗಿಸಿಕೊಳ್ಳುತ್ತವೆ. ಸಾವಯವ ವಸ್ತುಗಳ ಉಪಯೋಗದಿಂದಲೇ ಜೀವಿಸುವ ಏಕಾಣುಜೀವಿಗಳಿಗೆ ಸ್ವಪೋಷಿತಗಳೆಂದೂ (ಅಟೊಟ್ರೋಫಿಕ್) ಇನಾರ್ಗ್ಯಾನಿಕ್ ವಸ್ತುಗಳ ಪರಿವರ್ತನೆಯಿಂದ ಜೀವಿಸುವ ಏಕಾಣುಜೀವಿಗಳಿಗೆ ಅನ್ಯಪೋಷಿತಗಳೆಂದೂ (ಹೆಟೆರೊಟ್ರೋಫಿಕ್) ಹೆಸರು. ಆದರೆ ಈ ವಿಂಗಡಣೆ ಅಷ್ಟು ಕಟ್ಟುನಿಟ್ಟಲ್ಲ. ಸ್ವಪೋಷಿತ ಜೀವಿಗಳು ಕೆಲವು ಸಂದರ್ಭಗಳಲ್ಲಿ ಅನ್ಯಪೋಷಿತಗಳಾಗಿಯೂ ಅನ್ಯಪೋಷಿತಗಳು ಸ್ವಪೋಷಿತಗಳಾಗಿಯೂ ಮಾರ್ಪಾಡಾಗಬಹುದು.

ಆವಶ್ಯಕ ಶಕ್ತಿ ಪಡೆಯಲು ಮೇಲೆ ಹೇಳಿದ ಎರಡು ರೀತಿಯಲ್ಲಿ ಅಲ್ಲದೇ ಕೆಲವು ಏಕಾಣುಜೀವಿಗಳು ಮತ್ತೊಂದು ವಿಧದಲ್ಲೂ ಆಹಾರಾಂಶಗಳನ್ನು ಪಡೆದು ಶಕ್ತಿ ಉತ್ಪಾದನೆ ಮಾಡಿಕೊಳ್ಳುತ್ತವೆ. ಸಸ್ಯಗಳು ತಮ್ಮ ಕೋಶಗಳಲ್ಲಿರುವ ಪತ್ರಹರಿತ್ತುವಿನಿಂದ ಸೂರ್ಯರಶ್ಮಿಯನ್ನು ಉಪಯೋಗಿಸಿಕೊಂಡು ದ್ಯುತಿಸಂಶ್ಲೇಷಣ (ಫೋಟೋಸಿಂಥೆಸಿಸ್) ಕ್ರಿಯೆಯಿಂದ ಆಹಾರಾಂಶ ಪಡೆಯುವಂತೆ ಕೆಲವು ಏಕಾಣುಜೀವಿಗಳು ತಮ್ಮ ಕೋಶದಲ್ಲಿರುವ ಪತ್ರಹರಿತ್ತುವಿನಿಂದ ಆಹಾರ ಶಕ್ತಿ ರೂಪಿಸಿಕೊಳ್ಳುತ್ತವೆ.

**ಏಕಾಣುಜೀವಿಗಳ ಸಂತಾನವೃದ್ಧಿ :** ಸಂತಾನವೃದ್ಧಿ ಸಾಮಾನ್ಯವಾಗಿ ವಿಭಜನೆಯಿಂದ ಅಥವಾ ಮೊಗ್ಗೊಡೆಯುವಿಕೆ (ಕಾನಿಡಿಯ ಫಾರ್ಮೇಶನ್) ಮತ್ತು ಬೀಜಕೋಶಗಳ ಉತ್ಪತ್ತಿಯಿಂದ. ಇತ್ತೀಚೆಗೆ ಕೆಲವು ಜೀನುಗಳ ಅಧ್ಯಯನ ಸಮಯದಲ್ಲಿ ನಡೆಸಿದ ಸಂಶೋಧನೆಗಳಿಂದ ಏಕಾಣುಜೀವಿಗಳೂ ಲೈಂಗಿಕ ರೀತಿಯಿಂದ ತಮ್ಮ ಸಂತಾನವನ್ನು ಬೆಳೆಸುತ್ತವೆಂಬುದಕ್ಕೆ ಆಧಾರಗಳು ದೊರಕಿವೆ.

**ವಿಭಜನೆ:** ತಾಯಿಕೋಶ ವಿಭಜನೆಯಾಗುವ ಮುನ್ನ, ಕೋಶದ್ರವ್ಯ ವಿಸ್ತರಿಸಿ ಗಾತ್ರ ದೊಡ್ಡದಾಗುತ್ತದೆ. ಮೊದಲಿನ ಅಗತ್ಯಕ್ಕಿಂತ ಸುಮಾರು ಎರಡರಷ್ಟಾದಾಗ ಕೋಶದ ನಡುಮಧ್ಯದಲ್ಲಿ ಸಂಕುಚಿತವಾಗಿ ಎರಡು ಭಾಗವಾಗಲು ಪ್ರಾರಂಭಿಸಿ ಬರು ಬರುತ್ತ ಮಧ್ಯೆ ಗೋಡೆ ಅಡ್ಡಲಾಗಿ ಹಾಯ್ದು ಬಂದು ಇಬ್ಭಾಗವಾಗಿ ಒಂದಿದ್ದದ್ದು ಎರಡಾಗುತ್ತದೆ.

ಇವುಗಳಿಗೆ ತಕ್ಕ ವಾತಾವರಣವಿದ್ದಲ್ಲಿ ಸಂತಾನವೃದ್ಧಿ ಅತ್ಯಂತ ಭರದಿಂದ ಸಾಗುತ್ತದೆ. ಒಂದು ಎರಡಾಗಲು ಕೇವಲ 20–30 ಮಿನಿಟುಗಳು ಸಾಕು. ಇದು ಎಷ್ಟು ದೊಡ್ಡ ಪ್ರಮಾಣದ್ದೆಂದು ಊಹಿಸುವುದೂ ಕಷ್ಟ. ಬೆಳೆಯುವ ದರವನ್ನು ಕೆಳಗೆ ತೋರಿಸಿದೆ: 1 ಏಕಾಣುಜೀವಿ 2 ಗಂಟೆಗಳ ಕೊನೆಯಲ್ಲಿ $1\frac{3}{2}2^{2}=4$ ಏಕಾಣುಜೀವಿಗಳಾಗಿ ವೃದ್ಧಿಗೊಂಡಿರುತ್ತದೆ; ಮುಂದಿನ 2 ಗಂಟೆಗಳ ಕೊನೆಯಲ್ಲಿ ಈ 4 ಜೀವಿಗಳು $4\frac{3}{2}2^{2}=16$ ಜೀವಿಗಳಾಗಿರುತ್ತವೆ; ಹೀಗೆಯೇ ಮುಂದುವರಿಸಿದರೆ ಪ್ರಾರಂಭದಲಿದ್ದ 1 ಏಕಾಣುಜೀವಿ 64 ಗಂಟೆಗಳ ಕೊನೆಯಲ್ಲಿ $4^{32}$ ಏಕಾಣುಜೀವಿಗಳಾಗಿ ವೃದ್ಧಿಗೊಂಡಿರುತ್ತದೆ. ($4^{32}$=18,500,000,000,000,000,000 ಸುಮಾರಾಗಿ). ಇವು 18,500,000,000 ಘನ ಮಿಲಿಮೀಟರ್ ಸ್ಥಳವನ್ನು ತುಂಬಲು ಸಾಕು; ಈ ಸಮೂಹವನ್ನು ಬರಿಗಣ್ಣಿಂದ ನೋಡಬಹುದು. ಕಣ್ಣಿಗೆ ಗೋಚರವಾಗುವಷ್ಟು ದೊಡ್ಡ ಸಮೂಹಕ್ಕೆ ಏಕಾಣುಜೀವಿಗಳ ವಸಾಹತು ಎಂದು ಹೆಸರು. ಬೆಳೆಸಿದರೆ ಒಂದೇ ರಾತ್ರಿಯಲ್ಲಿ ಈ ಭಯಂಕರ ಉತ್ಪಾದನೆ ಕಾಣುವುದೇನೂ ಅತಿಶಯವಲ್ಲ. ಆದರೆ ಅದೃಷ್ಟವಶಾತ್ ಪ್ರಕೃತಿಯಲ್ಲಿ ಈ ರೀತಿಯ ಅನಿಯಮಿತ ಉತ್ಪತ್ತಿಗೆ ಅನೇಕ ಅಡಚಣೆಗಳುಂಟು. ಸಂಶೋಧನಾಲಯಗಳಲ್ಲಿ ಅವುಗಳ ಬೆಳವಣಿಗೆಗೆ ತಕ್ಕ ವಾತಾವರಣವನ್ನು ಕಲ್ಪಿಸಿ ಬೇಕಾದ ಆಹಾರ ಸತ್ತ್ವಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಿದರೆ ಮಾತ್ರ ಈ ರೀತಿ ಭಾರಿ ಪ್ರಮಾಣದ ಉತ್ಪಾದನೆ ಸಾಧ್ಯ. ಉತ್ಪಾದನೆಯ ಸಮಯದಲ್ಲಿ ಉದ್ಭವಿಸುವ ಅನೇಕ ಸ್ಥಿತಿಗತಿಗಳು ಮತ್ತು ಆಮ್ಲಗಳು ಉತ್ಪತ್ತಿನಿರೋಧಕಗಳಾಗಿ ಪರಿಣಮಿಸಿ ಜೀವಿಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ.

**ಮೊಗ್ಗೊಡೆಯುವಿಕೆ ವಿಧಾನದಿಂದ ಸಂತಾನೋತ್ಪತ್ತಿ (ಫಾರ್ಮೇಶನ್ ಆಫ್ ಕಾನಿಡಿಯ):** ಏಕಾಣುಜೀವಿ ಇದ್ದಕ್ಕಿದ್ದಂತೆ ಒಂದು ಕಡೆಯಲ್ಲಿ ಒಂದು ಮೊಗ್ಗನ್ನು ಸೃಷ್ಟಿಸುತ್ತದೆ. ಇದರಿಂದ ಒಂದಾದಮೇಲೊಂದು ಬಂದು, ಒಂದೊಂದಾಗಿ ಕಾಯಿಯಿಂದ ಬೇರೆಯಾಗಿ ತಾನೇ ಸ್ವತಂತ್ರ ಜೀವಿಯಾಗುತ್ತದೆ.

**ಬೀಜಕೋಶ ಉತ್ಪತ್ತಿ (ಸ್ಪೋರ್ ಫಾರ್ಮೇಶನ್):** ಕೆಲವು ದಂಡಾಣುಜೀವಿಗಳು (ಬ್ಯಾಸಿಲೈ) ಬೀಜಕೋಶ ಅಥವಾ ಬೀಜಕಣಗಳನ್ನು ಉತ್ಪತ್ತಿಮಾಡಿ ವೃದ್ಧಿಗೊಳ್ಳುತ್ತವೆ. ಬೀಜಕೋಶ ತಾಯಿಕೋಶದಲ್ಲೇ ರೂಪುಗೊಳ್ಳುತ್ತದೆ. ಆದ್ದರಿಂದ ಇದನ್ನು ಅಂತರ್ಬೀಜಕೋಶ (ಎಂಡೊಸ್ಪೋರ್) ಎಂದು ಕರೆಯುವುದು ವಾಡಿಕೆ. ಎಂದಿನಂತೆ ವಿಭಜನೆಯಾಗಿ ವೃದ್ಧಿಹೊಂದಲು ಅಡಚಣೆಗಳಿದ್ದರೆ ಆ ಸಂದರ್ಭಗಳಲ್ಲಿ ಮಾತ್ರ ತಾಯಿ ಏಕಾಣುಜೀವಿ ಬೀಜಕೋಶವಾಗಿ ಮಾರ್ಪಾಡಾಗಿ ಪುನಃ ಸ್ಥಿತಿಗತಿಗಳು ಉತ್ತಮಗೊಂಡಾಗ ಬೀಜಕೋಶ ಏಕಾಣುಜೀವಿಯಾಗಿ ರೂಪುಗೊಳ್ಳುತ್ತದೆ. ಅಂದರೆ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾದಾಗಲೆಲ್ಲ ಏಕಾಣುಜೀವಿ ಬೀಜಕಣವಾಗುತ್ತದೆ.

ಬೀಜಕೋಶ ರೂಪುಗೊಳ್ಳುವುದನ್ನು ಸೂಕ್ಷ್ಮದರ್ಶಕದಲ್ಲಿ ಗಮನಿಸಬಹುದು. ಮೊತ್ತಮೊದಲು ಕೋಶದ್ರವ್ಯದಲ್ಲಿ ಒಂದು ಬೆಳಕಿನ ಬಿಂದು ಕಾಣಿಸಿಕೊಳ್ಳುತ್ತದೆ. ಇದು ಬರಬರುತ್ತ ದೊಡ್ಡದಾಗಿ ದುಂಡಗೆ ಅಥವಾ ಅಂಡಾಕಾರವಾಗಿ ಕಾಣಿಸಿ ದಪ್ಪ ಆವರಣವನ್ನು ಕಲ್ಪಿಸಿಕೊಳ್ಳುತ್ತದೆ. ಇದೇ ಬೀಜಕೋಶ. ಈ ಬದಲಾವಣೆಗೆ ಅನೇಕ ಗಂಟೆಗಳು ಹಿಡಿಯಬಹುದು. ಒಂದು ಏಕಾಣುಜೀವಿಯಿಂದ ಒಂದೇ ಬೀಜಕೋಶವಾಗಬಲ್ಲದು. ಪುನಃ ಬೀಜಕೋಶ ಮೊಳಕೆಯಾದಾಗ ಅದರಿಂದ ಒಂದೇ ಏಕಾಣುಜೀವಿಯಾಗಲು ಮಾತ್ರ ಸಾಧ್ಯ. ಆಗಲೇ ಹೇಳಿದಂತೆ ಬೀಜಕೋಶವಾಗಿ ಪರಿವರ್ತನೆ ಹೊಂದುವುದು ಏಕಾಣುಜೀವಿಗಳ ಸಹಜ ವರ್ತನೆಯಲ್ಲ.

ಉಷ್ಣತೆ ಅಧಿಕವಾದರೆ, ನೀರು ಹಿಂಗಿದರೆ, ಸೂರ್ಯನ ಬೆಳಕು ತೀವ್ರವಾದರೆ ಅಥವಾ ಸಾಧಾರಣ ಕ್ರಿಮಿನಾಶಕಗಳನ್ನು ಬಳಸಿದರೆ ಬೀಜಕೋಶಗಳು ನಾಶವಾಗುವುದಿಲ್ಲ. ಹದಗೆಟ್ಟ ಪರಿಸ್ಥಿತಿಗಳಲ್ಲಿ ಕೆಲವು ವೇಳೆ ಬೀಜಕೋಶ ಹತ್ತು ವರ್ಷಗಳವರೆಗೆ ಜೀವಂತವಾಗಿದ್ದು ಅನಂತರ ಮೊಳಕೆಯಾಗಿ ಮೊದಲಿನಂತೆ ಏಕಾಣುಜೀವಿಯಾಗ ಬಲ್ಲುದು ಹಾಗೂ ಅಲ್ಲಿಂದಾಚೆಗೆ ಎಂದಿನಂತೆ ವಿಭಜನೆಯಿಂದಲೇ ಸಂತಾನವೃದ್ಧಿ

ಮಾಡಿಕೊಳ್ಳಬಲ್ಲುದು. ರೋಗಕಾರಕ ಏಕಾಣುಜೀವಿಗಳಲ್ಲಿ ಕೆಲವೇ ಬೀಜಕಣವಾಗಬಲ್ಲವು. ಇದು ನಮ್ಮ ಅದೃಷ್ಟ. ಏಕೆಂದರೆ ಬೀಜಕಣವಾಗಿ ಪರಿವರ್ತನೆ ಹೊಂದಬಲ್ಲ ಏಕಾಣುಜೀವಿಗಳು ಕಷ್ಟಪರಿಸ್ಥಿತಿಗಳನ್ನೆದುರಿಸಿ ಅನೇಕ ಕಾಲ ಜೀವಂತವಾಗುಳಿದು ರೋಗ ತರಬಲ್ಲವು. ಅವನ್ನು ನಾಶಪಡಿಸುವುದೂ ಸುಲಭವಲ್ಲ. ಏಕಾಣುಜೀವಿಗಳಿರುವ ಪರಿಸರ ಬದಲಾಗದೆ ಒಂದೇ ಸಮಸ್ಥಿತಿಯಲ್ಲಿದ್ದರೆ ಅವುಗಳ ಲಕ್ಷಣರೂಪ ರಚನೆಗಳೂ ಬದಲಾಗುವುದಿಲ್ಲ. ಈ ಸ್ಥಿರತೆ ಜೀನುಗಳಲ್ಲಿದ್ದು ತಾಯಿಕೋಶದ ವಿಭಜನೆಯ ಸಮಯದಲ್ಲಿ ಎರಡಾಗಿ ಮಕ್ಕಳಲ್ಲಿ ಪುನರಾವರ್ತನೆಯಾಗುತ್ತದೆ. ಅಂದರೆ ತದ್ವತ್ ಜೀನುಗಳೇ ಪೀಳಿಗೆಯಿಂದ ಪೀಳಿಗೆಗೆ ಹಾಯುತ್ತವೆ. ಏಕಾಣುಜೀವಿಗಳಿರುವ ಪರಿಸರ ಬದಲಾದಲ್ಲಿ ಈ ಬದಲಾದ ಪರಿಸರಕ್ಕೆ ಹೊಂದಿಕೊಳ್ಳಲು ಅವುಗಳಿಗೆ ತಮ್ಮ ರೂಪ, ರಚನೆ ಹಾಗೂ ಲಕ್ಷಣಗಳನ್ನು ಮಾರ್ಪಾಡು ಮಾಡಿಕೊಳ್ಳುವ ಸಾಮರ್ಥ್ಯವಿದೆ. ಬದಲಾವಣೆ ಹೊಂದಬಲ್ಲ ಶಕ್ತಿಗೆ ಪರಿವರ್ತನೆ (ವೇರಿಯೇಷನ್) ಎಂದು ಹೆಸರು. ಹೀಗೆ ಹೊಸ ವಂಶವೇ ಉತ್ಪನ್ನವಾಗುವ ಪರಿಣಾಮವುಳ್ಳ ಈ ವ್ಯತ್ಯಯ (ಮ್ಯುಟೇಶನ್) ಏಕಾಣುಜೀವಿಗಳ ಒಂದು ಮುಖ್ಯ ಲಕ್ಷಣ.

**ಅಳಿವು–ಉಳಿವು:** ಆಹಾರ, ಉಷ್ಣತೆ, ತೇವ, ಬೆಳಕು, ಆಕ್ಸಿಜನ್, ಕ್ರಿಮಿನಾಶಕ ಮತ್ತು ನಂಜುರೋಧಕಗಳು (ಆಂಟಿಸೆಪ್ಟಿಕ್) ಏಕಾಣುಜೀವಿಗಳ ಮೇಲೆ ಪ್ರಭಾವ ಬೀರುವ ಕೆಲವು ಮುಖ್ಯ ಅಂಶಗಳು.

**ಆಹಾರ:** ಸೂಕ್ತವಾದ ಆಹಾರ ದೊರಕದಿದ್ದಲ್ಲಿ ಯಾವ ಜೀವಿಯೂ ಬದುಕದು, ಬೆಳೆಯದು. ಹಾಲು ಮಕ್ಕಳಿಗೆಷ್ಟು ಉತ್ತಮ ಮತ್ತು ಪೂರ್ಣ ಆಹಾರವೋ ಏಕಾಣುಜೀವಿಗಳಿಗೂ ಅಷ್ಟೆ. ಹಾಲಿನಲ್ಲಿ ಇವೂ ಸಹ ಚೆನ್ನಾಗಿ ಬದುಕಿ ವೃದ್ಧಿಯಾಗಬಲ್ಲವು. ಅಗತ್ಯವಾದ ನೈಟ್ರೋಜನ್ ಸಕ್ಕರೆ, ಪಿಷ್ಟಗಳು, ಮೇದಸ್ಸು, ಜೀವಾತುಗಳು, ಲವಣಗಳು ಮತ್ತು ನೀರು ಹಾಲಿನಲ್ಲಿ ಸಾಕಷ್ಟು ಇವೆ. ಏಕಾಣುಜೀವಿಗಳ ಕೋಶದಲ್ಲಿ ಪತ್ರಹರಿತ್ತು ಇಲ್ಲದಿರುವುದರಿಂದ ಇವು (ಸಸ್ಯಗಳಂತೆ) ಗಾಳಿಯಲ್ಲಿರುವ ಕಾರ್ಬನ್‌ಡೈಆಕ್ಸೈಡ್ ಮತ್ತು ಸೂರ್ಯನ ಬೆಳಕನ್ನು ಉಪಯೋಗಿಸಿಕೊಂಡು ಆಹಾರವನ್ನು ತಯಾರಿಸಿಕೊಳ್ಳಲಾರವು. ಬದಲು, ಇವು ಇತರ ಮೂಲ ವಸ್ತುಗಳಿಂದ ತಮಗೆ ಬೇಕಾದ ಆಹಾರವನ್ನು ತಯಾರಿಸಿಕೊಳ್ಳುತ್ತವೆ.

ಕೆಲವು ಏಕಾಣುಜೀವಿಗಳು ತಮಗೆ ಬೇಕಾದ ಆಹಾರಸತ್ತ್ವಗಳನ್ನು ತಾವೇ ಸಿದ್ಧಪಡಿಸಿಕೊಳ್ಳಬಲ್ಲವು. ಇನ್ನು ಕೆಲವಕ್ಕೆ ಇದು ಸಾಧ್ಯವಿಲ್ಲ. ಆಹಾರ ಅತ್ಯಗತ್ಯವಾದುದರಿಂದ ಸುತ್ತಮುತ್ತಲಿರುವ ಆಹಾರಾಂಶಗಳನ್ನೇ ಅಳವಡಿಸಿಕೊಂಡು ತಮಗೆ ಸೂಕ್ತವಾದ ಆಹಾರವನ್ನು ಪಡೆಯುತ್ತವೆ. ಕೆಲವು ನೈಟ್ರೋಜನ್‌ಉತ್ಪಾದಕ (ನೈಟ್ರಿಫೈಯಿಂಗ್) ಮತ್ತು ಸಲ್ಫರ್ ಉತ್ಪಾದಕ ಏಕಾಣುಜೀವಿಗಳು ತಮ್ಮ ಸ್ವಂತ ಶಕ್ತಿಯಿಂದ ಉತ್ಪಾದನೆಮಾಡಿಕೊಂಡ ಅಮೋನಿಯ ಮತ್ತು ಸಲ್ಫರ್ ಆಕ್ಸೈಡುಗಳ ಉಪಯೋಗದಿಂದ ಬೇಕಾದ ಇಂಗಾಲವನ್ನು ಇತರ ಮೂಲವಸ್ತುಗಳಿಂದ ಪಡೆಯುತ್ತವೆ.

ಅನೇಕ ಏಕಾಣುಜೀವಿಗಳಿಗೆ ಸಾವಯವ ವಸ್ತುಗಳಲ್ಲಿ ಅಡಕವಾಗಿರುವ ನೈಟ್ರೋಜನ್ ಅವಶ್ಯಕ. ಹಾಲು, ದನದ ಮಾಂಸದ ಭಟ್ಟಿಗಳಲ್ಲಿ ಇದು ದೊರಕುತ್ತದೆ. ಸಂಶೋಧನಾಲಯಗಳಲ್ಲಿ ಕೃತಕವಾಗಿ ಇವನ್ನು ಬೆಳೆಸುವಾಗ ಅವುಗಳಿಗೆ ಈ ಆಹಾರಾಂಶಗಳೊಂದಿಗೆ ಸುಲಭವಾಗಿ ಉಪಯೋಗಮಾಡಲು ಸಾಧ್ಯವಾಗುವಂಥ ಇತರ ವಸ್ತುಗಳನ್ನೂ ಸತ್ತ್ವಗಳನ್ನೂ ಸೇರಿಸುತ್ತಾರೆ. ಉದಾಹರಣೆಗೆ ಪೆಪ್ಟೋನ್ ಎಂಬ ನೈಟ್ರೋಜನ್ ಯುಕ್ತ ಜೀವಾತುಗಳನ್ನೂ ಸೂಕ್ತಪ್ರಮಾಣಗಳಲ್ಲಿ ಲವಣ ಇತ್ಯಾದಿಗಳನ್ನೂ ಬೆರೆಸುವುದು ವಾಡಿಕೆ. ಜೀವಾತುಗಳಲ್ಲಿ ಮುಖ್ಯವಾದವುಗಳೆಂದರೆ ಥೈಯಮಿನ್ (ಜೀವಾತು), ರೈಬೊಫ್ಲೇವಿನ್ (ಜೀವಾತು), ನಯಸಿನ್, ಬಯೋಟಿನ್, ಪ್ಯಾಂಟೋಥೆನಿಕ್ ಆಮ್ಲ, ಫೋಲಿಕ್ ಆಮ್ಲ.

**ಉಷ್ಣತೆ:** ಸಾಮಾನ್ಯವಾಗಿ ಹೇಳುವುದಾದರೆ ಏಕಾಣುಜೀವಿಗಳ ಉಳಿವಿಗೆ ಸೂಕ್ತವಾದ ಉಷ್ಣತೆ ಸುಮಾರು $25^0$–$30^0$ ಸೆ. ಮನುಷ್ಯ ಮತ್ತು ಪ್ರಾಣಿಗಳಲ್ಲಿ ವೃದ್ಧಿಗೊಳ್ಳುವ ಏಕಾಣುಜೀವಿಗಳಿಗೆ $37^0$ ಸೆ. ಉಷ್ಣತೆ ಅತ್ಯಂತ ಹಿತಕರ. ಇವು ನಾಶವಾಗದೆ ತಡೆಯಬಲ್ಲ ಅತಿ ಶೀತಲಾವಸ್ಥೆ ಎಂದರೆ $5^0$–$6^0$ ಸೆ. ಹಾಗೂ ಅತ್ಯಂತ ಅಧಿಕ ಉಷ್ಣತೆ ಸುಮಾರು $38^0$–$48^0$ ಸೆ, ಎಂದು ಹೇಳಬಹುದು. ಅಧಿಕ ಉಷ್ಣತೆಗಿಂತ ಶೀತಲಾವಸ್ಥೆಯನ್ನು ಅವು ಹೆಚ್ಚು ಕಾಲ ಎದುರಿಸಿ ಜೀವಂತವಾಗಿರಬಲ್ಲವು. ಒಂದು ತೊಟ್ಟಿಯಲ್ಲಿರುವ ಎಲ್ಲ ಏಕಾಣುಜೀವಿಗಳನ್ನು ಹತ್ತು ಮಿನಿಟುಗಳಲ್ಲಿ ನಾಶಮಾಡಬಲ್ಲ ಕನಿಷ್ಠ ಉಷ್ಣತೆಯನ್ನು ತಜ್ಞರು ನಿಗದಿ ಮಾಡಿದ್ದಾರೆ. ಸ್ವಲ್ಪ ಹೆಚ್ಚಿನ ಉಷ್ಣತೆಯಿದ್ದಲ್ಲಿ ಏಕಾಣುಜೀವಿಗಳು ಸ್ಥಗಿತಗೊಳ್ಳುತ್ತವೆ. ಇವು ನಾಶ ಹೊಂದುವ ಅತ್ಯಂತ ಅಧಿಕ ಉಷ್ಣತೆ ಇಷ್ಟೇ ಎಂದು ನಿಗದಿಮಾಡಲು ಸಾಧ್ಯವಿಲ್ಲ. ಅನೇಕ ರೋಗಕಾರಕ ಏಕಾಣುಜೀವಿಗಳು–ಉದಾಹರಣೆಗೆ ವಿಷಮಶೀತಜ್ವರ, ಆಮಶಂಕೆ, ಭೇದಿ ಇತ್ಯಾದಿ ಏಕಾಣುಜೀವಿಗಳು ಮಂಜುಗಡ್ಡೆಗಳಲ್ಲಿ ಅಥವಾ ಐಸ್ ಕ್ರೀಂನಲ್ಲಿ ಬದುಕಿದ್ದು ಅನಂತರ ಚೇತನಗೊಳ್ಳುತ್ತವೆ. $-252^0$ ಸೆ. ಉಷ್ಣತೆಯ ದ್ರವಗಾಳಿ ಅಥವಾ ದ್ರವಜಲಜನಕಗಳಲ್ಲಿ ಘನೀಭವಿಸಿದ ಏಕಾಣುಜೀವಿಗಳಲ್ಲಿ ಕೆಲವು, ಉಷ್ಣತೆ ಹಿತಕರವಾದಾಗ ಪುನಶ್ಚೇತನಗೊಂಡಿರುವ ನಿದರ್ಶನಗಳಿವೆ. ಏಕಾಣುಜೀವಿಗಳಲ್ಲೇ ಕೆಲವು ಉಷ್ಣಪ್ರೇಮಿಗಳು (ಥರ್ಮೋಫಿಲಿಕ್) ಇವೆ. ಇವು $50^0$–$60^0$ ಸೆ. ಉಷ್ಣತೆಗಳಲ್ಲೂ ಬದುಕಿರಬಲ್ಲವು ಮತ್ತು ಎಂದಿನಂತೆ ತಮ್ಮ ಜೀವನವ್ಯಾಪಾರಗಳನ್ನು ನಡೆಸಬಲ್ಲವು. ಆದರೆ ಈ ಶಕ್ತಿ ಇವುಗಳಿಗೆ ಹೇಗೆ ಪ್ರಾಪ್ತವಾಗಿದೆ ಎಂಬ ಸಮಸ್ಯೆ ಇನ್ನೂ ಬಗೆಹರಿದಿಲ್ಲ.

**ಜೀವಾಣುನಾಶನ (ಸ್ಟರಿಲೈಸೇಷನ್):** ಆಗಲೇ ತಿಳಿಸಿದಂತೆ ಸಾಮಾನ್ಯವಾಗಿ ಈ ಜೀವಿಗಳು ಅಧಿಕ ಉಷ್ಣತೆಯಲ್ಲಿ ಜೀವಿಸಿರಲಾರವು. $50^0$ –$60^0$ ಸೆಂ. ಉಷ್ಣತೆಯ ಪ್ರಭಾವದಿಂದ ಇವನ್ನು ನಾಶಪಡಿಸಬಹುದು. ಕುದಿಯುವ ನೀರು, ಆವಿ ಅಥವಾ ಪಾಶ್ಚುರೀಕರಣಗಳ ಪ್ರಭಾವದಿಂದಲೂ ಈ ಜೀವಿಗಳು ನಿರ್ನಾಮವಾಗುತ್ತವೆ. ಆದರೆ ಬೀಜಕೋಶಗಳು ಈ ಮಟ್ಟದ ಉಷ್ಣತೆಯಲ್ಲಿ ಸುಲಭವಾಗಿ ನಾಶವಾಗವು; ಆಗಲೂ ಬಹಳ ಕಾಲ ಬೇಕು. $120^0$ ಸೆಂ. ಉಷ್ಣತೆಯ ಆವಿಯನ್ನು ಹೆಚ್ಚು ಒತ್ತಡಕ್ಕೆ ಒಳಪಡಿಸಿದಲ್ಲಿ ಬೀಜಕಣಗಳು ಅಲ್ಪಕಾಲಾವಧಿಯಲ್ಲೇ ನಾಶಗೊಳ್ಳುತ್ತವೆ. ಒಣಬೀಜಕೋಶಗಳನ್ನು (ಡ್ರೈಸ್ಪೋರ್ಸ್) ಇನ್ನೂ ಹೆಚ್ಚು ಒತ್ತಡ ಮತ್ತು ಅಧಿಕ ಉಷ್ಣತೆಗಳಿಂದ ನಾಶಪಡಿಸಬಹುದು. $170^0$ ಸೆಂ. ಉಷ್ಣತೆಯಲ್ಲಿ ಒಂದು ಗಂಟೆ ಕಾಲವಿಟ್ಟರೆ ಅವು ನಾಶವಾಗುತ್ತವೆ.

**ತೇವ:** ಭೂಮಿಯಲ್ಲಿ ಶೇ. 2–3ರಷ್ಟಾದರೂ ತೇವವಿಲ್ಲದಿದ್ದಲ್ಲಿ ಏಕಾಣುಜೀವಿ ಉತ್ಪತ್ತಿಯಾಗದೆಂಬುದು ಸಂಶೋಧನೆಯಿಂದ ತಿಳಿದ ವಿಷಯ. ಶೇ. 5–10 ತೇವವಿದ್ದರೆ ಇವು ಚೇತನಗೊಳ್ಳುತ್ತವೆ ಹಾಗೂ ಶೇ. 25–40ರಷ್ಟು ತೇವವಿದ್ದಲ್ಲಿ ಇವುಗಳ ಬೆಳವಣಿಗೆಗೆ ಸಮರ್ಪಕವಾದ ಸ್ಥಿತಿಯಿದೆಯೆಂದು ಹೇಳಬಹುದು. ಏಕಾಣುಜೀವಿಗಳಿಗೆ ಆಹಾರ ಸೇವಿಸಲು ಬಾಯಿ ಇಲ್ಲ. ಯಾವ ಆಹಾರವಾದರೂ ದ್ರವರೂಪದಲ್ಲೇ ಕೋಶಾವರಣದ ಮೂಲಕ ಸೋಸಿ ಹೋಗಬೇಕು. ಆದ್ದರಿಂದ ತೇವದ ಪ್ರಾಮುಖ್ಯ ಎಷ್ಟೆಂದು ತಿಳಿಯುತ್ತದೆ. ತೇವವಿಲ್ಲದ ಸ್ಥಿತಿಯನ್ನು ವಿರೋಧಿಸುವುದರಲ್ಲಿ ಈ ಜೀವಿಗಳಲ್ಲಿ ವೈವಿಧ್ಯವನ್ನು ಕಾಣಬಹುದು. ತೇವವಿಲ್ಲದ ಪರಿಸ್ಥಿತಿಗಳಲ್ಲಿ ಸುಲಭವಾಗಿ ನಾಶಗೊಳ್ಳುವ ಕೆಲವು ಏಕಾಣುಜೀವಿಗಳಿವೆ. ಈ ಲಕ್ಷಣವನ್ನು ಆಹಾರಸಾಮಗ್ರಿಗಳ ರಕ್ಷಣೆಗೆ ಬಳಸಿಕೊಳ್ಳಲಾಗುತ್ತದೆ. ಆಹಾರಗಳಿಂದ ತೇವವನ್ನು ಸಂಪೂರ್ಣ ತೆಗೆದಲ್ಲಿ ಏಕಾಣುಜೀವಿ ಚಟುವಟಿಕೆ ಸ್ಥಗಿತಗೊಂಡು ಆಹಾರ ಬಹಳ ದಿನಗಳು ಕೆಡದೆ ಉತ್ತಮ ಸ್ಥಿತಿಯಲ್ಲಿರುತ್ತದೆ. ತೇವರಹಿತ ಸ್ಥಿತಿಯಲ್ಲಿ ಎಲ್ಲ ಏಕಾಣುಜೀವಿಗಳು ಸಾಯದಿರಬಹುದು ಹಾಗೂ ತಕ್ಕಷ್ಟು ತೇವ ಒದಗಿದಲ್ಲಿ ಅವು ಪುನಃ ಚೇತನಗೊಂಡು ಆಹಾರವನ್ನು ಕೆಡಿಸಲೂಬಹುದು. ಶಿಲೀಂಧ್ರಗಳು ಕಡಿಮೆ ತೇವವಿದ್ದಾಗ್ಯೂ ಬೆಳೆಯಬಲ್ಲವು.

**ಆಕ್ಸಿಜನ್:** ಏಕಾಣುಜೀವಿಗಳು ಗಾಳಿಯಲ್ಲಿರುವ ಆಕ್ಸಿಜನ್ನಿನ ಬಳಕೆಯಲ್ಲಿ ವಿಧ ವಿಧವಾಗಿ ನಡೆದುಕೊಳ್ಳುತ್ತವೆ. ಕೆಲವಕ್ಕೆ ಉಸಿರಾಡಲು ಆಕ್ಸಿಜನ್ನಿನ ಅವಶ್ಯಕತೆಯಿರುವುದರಿಂದ ಅದಿಲ್ಲದಿದ್ದರೆ ಬೆಳೆಯಲಾರವು–ಇಂಥವು ವಾಯುಜೀವಿಗಳು (ಏರೋಬ್ಸ್). ಮತ್ತೆ ಕೆಲವು ಆಕ್ಸಿಜನ್ ಇಲ್ಲದೆಯೂ ಬೆಳೆಯುತ್ತವೆ. ಇದ್ದರೂ ಅದನ್ನವು ಉಪಯೋಗಿಸಿಕೊಳ್ಳಲಾರದವಾಗಿವೆ. ಇಂಥವು ಅವಾಯುಜೀವಿಗಳು (ಅನೇರೋಬ್ಸ್). ಮತ್ತೆ ಕೆಲವು ಎರಡು ಸ್ಥಿತಿಗಳಲ್ಲೂ ಊರ್ಜಿತವಾಗಬಲ್ಲವು. ಇವನ್ನು ಐಚ್ಛಿಕ (ಫ್ಯಾಕಲ್‌ಟೇಟಿವ್) ಜೀವಿಗಳೆನ್ನಬಹುದು. ಅವಾಯುಜೀವಿಗಳನ್ನು ಕೊಳೆಯುವ ಮತ್ತು ಕೊಳೆಯುತ್ತಿರುವ ವಸ್ತುಗಳಲ್ಲಿ, ಭೂಮಿ ಹಾಗೂ ಕೊಳ ಕೆರೆಗಳ ತಳದಲ್ಲಿರುವ ಮಣ್ಣಿನಲ್ಲಿ ಕಾಣಬಹುದು. ಅಪಕರ್ಷಣಕಾರಿಗಳು (ರೆಡ್ಯೂಸಿಂಗ್ ಏಜೆಂಟ್ಸ್) ಸಾಕಷ್ಟಿದ್ದರೆ (ಸಿಸ್ಟೈನ್ ಇತ್ಯಾದಿ) ಅವಾಯುಜೀವಿಗಳನ್ನು ಸಹ ಗಾಳಿಯಲ್ಲಿ ಬೆಳೆಸಬಹುದು. ಆಹಾರವಸ್ತುಗಳನ್ನು ಡಬ್ಬಗಳಲ್ಲಿ ಹಾಕಿ ರಕ್ಷಿಸುವ (ಟಿನ್ನಿಂಗ್) ಉದ್ಯಮದಲ್ಲಿ ಬೀಜಕೋಶ ಉತ್ಪತ್ತಿಯಾಗುವ ಏಕಾಣುಜೀವಿಗಳನ್ನು ಹೊರಗಿಡುವುದು ಪ್ರಯಾಸವೇ ಸರಿ. ಕಾರ್ಯಗತಿಯ ಭರದಲ್ಲಿ ಸಾಕಷ್ಟು ಉಷ್ಣತೆಗೆ ಒಳಪಡಿಸಿ ಬೀಜಕೋಶಗಳನ್ನು ನಾಶಪಡಿಸದಿದ್ದಲ್ಲಿ ಅವನ್ನು ಡಬ್ಬದಲ್ಲಿಟ್ಟು ಮುಚ್ಚಿದ ಅನಂತರ ಈ ಆಕ್ಸಿಜನ್ ರಹಿತ ಮುಚ್ಚಿದ ಡಬ್ಬಗಳಲ್ಲಿ ಬೀಜಕೋಶಗಳು ಮೊಳಕೆಯಾಗಿ ವೃದ್ಧಿಗೊಳ್ಳುತ್ತವೆ. ಒಂದು ವೇಳೆ ಈ ಜೀವಿಗಳು ವಿಷವನ್ನು (ಟಾಕ್ಸಿನ್) ತಯಾರಿಸುವವೂ ಆಗಿದ್ದಲ್ಲಿ (ಕ್ಲಾಸ್ಟ್ರಿಡಿಯಂ ಬಾಟ್ಯುಲೈನಂ ಏಕಾಣುಜೀವಿ) ಈ ವಿಷವುಳ್ಳ ಆಹಾರವನ್ನು ಸೇವಿಸಿದವರು ಕೂಡಲೇ ವಿಷದ ಪರಿಣಾಮಕ್ಕೊಳಗಾಗಿ ನರಳುವುದುಂಟು. ಅತಿ ಅಲ್ಪ ಪರಿಮಾಣದಲ್ಲೂ ಈ ವಿಷ ಅಪಾಯಕಾರಿ.

**ಬೆಳಕು:** ಕತ್ತಲಿದ್ದಲ್ಲಿ ಏಕಾಣುಜೀವಿಯ ವೃದ್ಧಿ ಭರದಿಂದ ಆಗುತ್ತದೆ. ಬೆಳಕಿಗೆ ಬಂದರೆ ಇವುಗಳ ಚಲನವಲನ ಸ್ಥಗಿತಗೊಳ್ಳುತ್ತದೆ. ಸೂರ್ಯನ ಬೆಳಕಿನಲ್ಲಿ ಅವು ಹೆಚ್ಚೆಂದರೆ 10–15 ಮಿನಿಟುಗಳ ಕಾಲ ಉಳಿಯಬಹುದು; ಮತ್ತೆ ನಾಶವಾಗಿ ಹೋಗುತ್ತವೆ.

ಆ ಬೆಳಕಿನಲ್ಲಿರುವ ಅತಿನೇರಿಳೆ ಕಿರಣಗಳು ಇವುಗಳಿಗೆ ಅಪಾಯಕಾರಿ. ಬೀಜಕೋಶರಹಿತ ಏಕಾಣುಜೀವಿಗಳಿಗೆ 30–60 ಸೆಂಮೀ. ದೂರದಿಂದ ಈ ಕಿರಣಗಳನ್ನು ಹಾಯಿಸಿದಲ್ಲಿ ಅವು ಕೆಲವೇ ಮಿನಿಟುಗಳಲ್ಲಿ ನಾಶಹೊಂದುತ್ತವೆ. ಪೂರ್ಣ ಉಪಯೋಗ ಪಡೆಯಲು ಈ ಕಿರಣಗಳನ್ನು ಸೂಕ್ತರೀತಿಯಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕ.

ಬೆಳೆಸಲು ಉಪಯೋಗಿಸುವ ಕೃತಕ ಮಾಧ್ಯಮ (ಮೀಡಿಯಂ) : ಮಾಧ್ಯಮದ ಆಮ್ಲತೆ ಅಥವಾ ಕ್ಷಾರಸ್ವಭಾವ ಏಕಾಣುಜೀವಿಗಳ ಬೆಳವಣಿಗೆಯ ದೃಷ್ಟಿಯಿಂದ ಅತಿ ಮುಖ್ಯ. ಆಮ್ಲೀಯವೂ ಅಲ್ಲದ ಕ್ಷಾರೀಯವೂ ಅಲ್ಲದ ಮಾಧ್ಯಮ ಬಲುಮಟ್ಟಿಗೆ ಎಲ್ಲ ಏಕಾಣುಜೀವಿಗಳ ಬೆಳವಣಿಗೆಗೂ ಹಿತಕರವೆನ್ನಬಹುದು. ಆದರೆ ಸ್ವಲ್ಪಮಟ್ಟಿಗೆ ಆಮ್ಲೀಯತೆ ಅಥವಾ ಕ್ಷಾರೀಯತೆಯನ್ನು ಬಯಸುವ ಅನೇಕ ಏಕಾಣುಜೀವಿಗಳೂ ಇವೆ.

**ನಂಜುರೋಧಕ ಹಾಗೂ ಕ್ರಿಮಿನಾಶಕಗಳ ಪರಿಣಾಮ:** ಇದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಕೆಲವು ನಾಶಕಗಳೂ ಏಕಾಣುಜೀವಿಗಳನ್ನು ನಾಶಪಡಿಸುತ್ತವೆ. ಮತ್ತೆ ಕೆಲವು ಅವುಗಳ ಚಟುವಟಿಕೆಯನ್ನು ಸ್ಥಗಿತಗೊಳಿಸುತ್ತವೆ. ಅಧಿಕ ಸಾರದ ನಾಶಕಗಳನ್ನು ಉಪಯೋಗಿಸಿದಾಗ ನಾಶವಾಗುವ ಜೀವಿಗಳು ಸಾರಗುಂದಿಸಿದ ಅವೇ ನಾಶಕಗಳನ್ನು ಉಪಯೋಗಿಸಿದಾಗ ನಿಶ್ಚೇತನ ಮಾತ್ರ ಆಗುತ್ತವೆ. ಆದರೆ ಈ ನಾಶಕಗಳಿಂದ ಸಾಮಾನ್ಯವಾಗಿ ಎಲ್ಲ ಏಕಾಣುಜೀವಿಗಳ ಜೀವಕ್ರಿಯೆಗಳೂ ಕುಂದುವು ದೊಂದೇ ಅಲ್ಲದೆ ಸಂತಾನವೃದ್ಧಿಗೂ ಪೂರ್ಣವಿರಾಮವಾಗುತ್ತದೆ. ಕಾರ್ಬಾಲಿಕ್ ಆಮ್ಲ, ಆಲ್ಕೊಹಾಲ್ ಇತ್ಯಾದಿ ನಾಶಕಗಳು, ಗಂಧಕೀಯಗಳು, ಪ್ರತಿಜೀವಕಗಳು (ಆಂಟಿಬಯೊಟಿಕ್ಸ್) ಜೀವಕ್ರಿಯೆಗಳನ್ನು ಕುಂದಿಸಿ ಸಂತಾನೋತ್ಪತ್ತಿಯನ್ನು ನಿಲ್ಲಿಸುವ ಔಷಧಗಳು. ಏಕಾಣುಜೀವಿಗಳ ಸೋಂಕಿನಿಂದ ಆಹಾರಗಳನ್ನು ಸುರಕ್ಷಿತವಾಗಿಡಲು ನಂಜುರೋಧಕಗಳನ್ನು ಮುಖ್ಯವಾಗಿ ಉಪಯೋಗಮಾಡಲಾಗುತ್ತಿದೆ. ಕ್ರಿಮಿನಾಶಕಗಳನ್ನು ಗಾಯಗಳ ಶುದ್ಧೀಕರಣ, ನೀರಿನಲ್ಲಿರುವ ರೋಗಕಾರಕ ಏಕಾಣುಜೀವಿಗಳ ನಾಶ ಮುಂತಾದವುಗಳಲ್ಲಿ ಉಪಯೋಗಮಾಡಲಾಗುತ್ತಿದೆ. ಕ್ರಿಮಿನಾಶಕಗಳ ಶಕ್ತಿಯನ್ನು ಅನೇಕ ವಿದ್ಯಮಾನಗಳು ಕುಂದಿಸುತ್ತವೆ. ಇವುಗಳಲ್ಲಿ ಮುಖ್ಯವಾದವು–1 ದ್ರವವೃದ್ಧಿ (ಡೈಲ್ಯೂಷನ್), 2 ಏಕಾಣುಜೀವಿಗಳೊಂದಿಗೆ ಹೊಂದಿರುವ ಸಂಪರ್ಕಸಮಯ, 3 ಏಕಾಣುಜೀವಿಗಳ ಸಂಖ್ಯೆ ಮತ್ತು ಅವುಗಳ ಗುಂಪು, 4 ಉಷ್ಣತೆ, 5 ಮೇಲ್ಮೈ ಎಳೆತ (ಸರ್ಫೇಸ್ ಟೆನ್‌ಷನ್), 6 ಪರಿಸರದ ಸ್ಥಿತಿಗಳು.

ಬೀಜಕಣಗಳು ಪ್ರತಿಕೂಲ ಸ್ಥಿತಿಗಳನ್ನು ಏಕಾಣುಜೀವಿಗಳಿಗಿಂತ ಹೆಚ್ಚು ಕಾಲ ನಿರೋಧಿಸಿ ಜೀವಂತವಾಗಿರಬಲ್ಲವು. ಒಂದು ಕ್ರಿಮಿನಾಶದ ಪರಿಣಾಮ ಎಲ್ಲ ಏಕಾಣುಜೀವಿಗಳ ಮೇಲೂ ಒಂದೇ ರೀತಿ ಎಂದು ಹೇಳಲಾಗುವುದಿಲ್ಲ. ಕೀವಿನಲ್ಲಿರುವ ಸ್ಟೆಫೈಲೊಕಾಕ್ಕೆ ಏಕಾಣುಜೀವಿಗಳು ಸ್ವಲ್ಪಮಟ್ಟಿಗೆ ಕ್ರಿಮಿನಾಶಕಗಳ ಪ್ರಭಾವವನ್ನೆದುರಿಸಬಲ್ಲವು. ವಿಷಮಶೀತಜ್ವರ ತರುವ ಏಕಾಣುಜೀವಿಗಳು ಸೂಕ್ಷ್ಮ ಕ್ರಿಮಿನಾಶಕಗಳಿಂದ ಸುಲಭವಾಗಿ ನಾಶಹೊಂದುತ್ತವೆ. ಕ್ರಿಮಿನಾಶಕಗಳ ಶಕ್ತಿಯನ್ನು ನಿರ್ಧರಿಸುವಾಗ ಏಕಾಣುಜೀವಿಗಳನ್ನು ನಾಶಮಾಡುವ ಶಕ್ತಿಯೊಂದೇ ಮುಖ್ಯವೆಂದು ಹೇಳಲಾಗುವುದಿಲ್ಲ. ಇವು ಊತಕಗಳ ಮೇಲೆ ಇತರ ಕೆಟ್ಟ ಪರಿಣಾಮಗಳನ್ನು ಮಾಡಕೂಡದು.

**ಗಾಳಿಯ ಮತ್ತು ನೀರಿನ ಏಕಾಣುಜೀವಿಗಳು:** ಏಕಾಣುಜೀವಿಗಳಿಲ್ಲದ ಜಾಗಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ಕೆರೆ, ಕುಂಟೆ, ಚರಂಡಿ, ಗೊಬ್ಬರದ ಗುಂಡಿ, ನದಿ, ನೆಲ ಇತ್ಯಾದಿ ಎಲ್ಲ ಕಡೆಗಳಲ್ಲೂ ಇವು ಇದ್ದೇ ಇವೆ. ಇವುಗಳ ಆಹಾರ ಜೈವಿಕವಸ್ತುಗಳು. ಆದ್ದರಿಂದ ಜೈವಿಕವಸ್ತುಗಳಿರುವಲ್ಲೆಲ್ಲ ಈ ಜೀವಿಗಳು ಹೇರಳವಾಗಿರುತ್ತವೆ. ದ್ರವಗಳಲ್ಲಿ ಅಂದರೆ ಹಾಲು, ಹೆಂಡ, ರಕ್ತ, ಮೂತ್ರ ಇತ್ಯಾದಿಗಳಲ್ಲಿಯೂ ಘನಸ್ಥಿತಿಯ ಆಹಾರಗಳಲ್ಲಿ ಅಂದರೆ ತರಕಾರಿ, ಹಣ್ಣು, ಧಾನ್ಯ, ಮಾಂಸ ಇತ್ಯಾದಿ ಪದಾರ್ಥಗಳಲ್ಲಿಯೂ ಇವುಗಳಿವೆ. ತೇವ, ಉಷ್ಣತೆ ಹಿತಕರವಾಗಿದ್ದಲ್ಲೆಲ್ಲ ಬೆಳೆದು ವೃದ್ಧಿಯಾಗುತ್ತವೆ. ಇಂಥ ಬೆಳವಣಿಗೆಗೆ ಮಿತಿ ಎಂಬುದೇ ಇಲ್ಲ. ಆದರೆ ಇಂಥ ವೃದ್ಧಿಯ ಜೊತೆಯಲ್ಲೇ ನಾಶವಾಗಲು ಬೇಕಾದ ಸ್ಥಿತಿಗಳೂ ಅಲ್ಲಿ ಹುಟ್ಟಿಕೊಳ್ಳುತ್ತವೆ. ತೇವವಿಲ್ಲದ ಸ್ಥಿತಿ, ಅಧಿಕ ಆಮ್ಲತೆ, ಸೂರ್ಯಕಿರಣಗಳು ಮುಂತಾದವುಗಳ ಪರಿಣಾಮದಿಂದ ಇವುಗಳ ಈ ವೃದ್ಧಿಗೆ ತಡೆಯುಂಟಾಗುವುದು.

ನಾವು ಕೆಮ್ಮುವಾಗ, ಸೀನುವಾಗ ಹಾಗೂ ಮಾತನಾಡುವಾಗ ನಮ್ಮ ಬಾಯಿ, ಗಂಟಲುಗಳಲ್ಲಿರುವ ಏಕಾಣುಜೀವಿಗಳು ಹೊರಬಿದ್ದು ಗಾಳಿಯಲ್ಲಿ ಸೇರುತ್ತವೆ. ಈ ಗಾಳಿಯನ್ನು ಮತ್ತೊಬ್ಬ ಉಸಿರಾಡುವಾಗ ತೆಗೆದುಕೊಂಡಲ್ಲಿ ಅವನ ಗಂಟಲು ಶ್ವಾಸಕೋಶಗಳಿಗೆ ಇವು ಹಾಯ್ದು ನೆಲೆಸಿ ವೃದ್ಧಿಯಾಗಿ ಸೋಂಕನ್ನುಂಟುಮಾಡುತ್ತವೆ. ಈ ರೀತಿ ಅನೇಕ ರೋಗಗಳ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಉದಾಹರಣೆಗೆ, ಎಲ್ಲ ಶ್ವಾಸಕೋಶದ ರೋಗಗಳು–ಕ್ಷಯ, ಇನ್‌ಫ್ಲೂಯೆಂಜ, ನ್ಯೂಮೋನಿಯ, ಗಂಟಲುಮಾರಿ, ನಾಯಿಕೆಮ್ಮು ಇತ್ಯಾದಿ.

ಹರಿಯುವ ನೀರಿಗೆ ಅಸಂಖ್ಯಾತ ಏಕಾಣುಜೀವಿಗಳು ಬಂದು ಸೇರಿಕೊಳ್ಳುತ್ತವೆ. ಭೂಮಿಯ ಮೇಲ್ಪದರಗಳಲ್ಲಿರುವ ಏಕಾಣುಜೀವಿಗಳೂ ಇದರಲ್ಲಿ ಸೇರುತ್ತವೆ. ಈ ರೀತಿ ಸೇರಿದವು ನೀರಿನಲ್ಲಿ ಬಹಳ ಕಾಲ ಜೀವಿಸಿರಲಾರವು. ಅವು ಕ್ರಮೇಣ ನಾಶವಾಗುತ್ತವೆ. ಕೆಲವು ವೇಳೆ ನೀರು ಬಹಳ ಕಲ್ಮಷಯುಕ್ತವಾಗಿದ್ದು ಅದರಲ್ಲಿ ಜೈವಿಕ ವಸ್ತುಗಳು ಸಾಕಷ್ಟು ಇದ್ದರೆ ಏಕಾಣುಜೀವಿಗಳ ವೃದ್ಧಿಗೆ ಧಾರಾಳ ಅವಕಾಶ ಒದಗುತ್ತದೆ.

ಏಕಾಣುಜೀವಿಗಳೆಲ್ಲವೂ ವ್ಯಾಧಿಕಾರಕಗಳೆಂದೇನೂ ತಿಳಿಯಬೇಕಾಗಿಲ್ಲ. ಹಲವಾರು ಜೀವಿಗಳು ಮಾನವಕುಲಕ್ಕೆ ಉಪಕಾರಿಗಳು. ಹಾಲು ಮತ್ತು ಅದಕ್ಕೆ ಸಂಬಂಧಪಟ್ಟ ಪದಾರ್ಥಗಳ ತಯಾರಿಕೆಯಲ್ಲಿ ಸಹಾಯಮಾಡುವ ಮತ್ತು ಹೊಲಸು ತುಂಬಿದ ಭೂಮಿಯನ್ನು ಫಲವತ್ತಾಗಿ ಮಾಡುವ ಹಾಗೂ ಗ್ರಾಮಸಾರವನ್ನು ಸೃಷ್ಟಿಮಾಡುವ ಏಕಾಣುಜೀವಿಗಳು ಇವುಗಳಲ್ಲಿ ಅತಿಮುಖ್ಯವಾದವು.

ಹಸುವಿನ ಕೆಚ್ಚಲಿನಿಂದ ಬರುವ ಹಾಲಲ್ಲೇ ಕೆಲವು ವಿಧದ ಏಕಾಣುಜೀವಿಗಳಿರುತ್ತವೆ. ಆದರೆ ಇವು ಕೆಡಕುಂಟುಮಾಡುವವಲ್ಲ. ಹಾಲಿನಲ್ಲಿ ಏಕಾಣುಜೀವಿಗಳು ವೃದ್ಧಿಯಾಗಲು ಬೇಕಾದ ಸೌಲಭ್ಯಗಳೆಲ್ಲ ಇವೆ. ಇವುಗಳಲ್ಲಿ ಕೆಲವು ಮುಖ್ಯವಾಗಿ ಸಸಾರಜನಕಾಂಶವನ್ನು ಆಕ್ರಮಣಮಾಡಿ ಅದನ್ನು ಒಡೆಯುತ್ತವೆ. ಆ ಸಂದರ್ಭದಲ್ಲಿ ಹಾಲಿಗೆ ಕೆಟ್ಟ ವಾಸನೆ ಬರುತ್ತದೆ. ಮತ್ತೆ ಕೆಲವು ಹಾಲಿನಲ್ಲಿರುವ ಶರ್ಕರಪಿಷ್ಟ ಅಂಶಗಳನ್ನು ಆಕ್ರಮಿಸಿ ಹಾಲನ್ನು ಹೆಪ್ಪುಗಟ್ಟಿಸುತ್ತವೆ. ಬಿಸಿಮಾಡದ ಹಾಲಿನಲ್ಲಿ ಲ್ಯಾಕ್ಟೋಬ್ಯಾಸಿಲೈ ಎಂಬ ಏಕಾಣುಜೀವಿ ವೃದ್ಧಿಹೊಂದಿ ಹಾಲನ್ನು ಕೆಡಿಸದೆ ಹುಳಿ ಮಾಡಬಹುದು. ಹುಳಿ ಮಾಡುವ ಏಕಾಣುಜೀವಿಗಳನ್ನು ನೇರವಾಗಿ ಹಾಲಿಗೆ ಬೆರೆಸಿ ಕೃತಕವಾಗಿ ಹುಳಿ ತರಿಸಲೂಬಹುದು. ಹಾಲಿನಲ್ಲಿ ರೋಗಕಾರಕ ಏಕಾಣುಜೀವಿಗಳು ಸೇರಬಹುದು. ಇವು ಮುಖ್ಯವಾಗಿ ಕಲಬೆರಕೆ ಮಾಡುವ ನೀರಿನಿಂದ, ಹಾಲು ಕರೆಯುವವನಿಂದ, ಪಾತ್ರೆಯಿಂದ ಅಥವಾ ಹಾಲನ್ನು ಉಪಯೋಗಿಸುವಾಗ ಸೇರುತ್ತವೆ. ಹಾಲಿನಲ್ಲಿ ಈ ರೋಗಕಾರಕಗಳು ಸೇರಿ ವೃದ್ಧಿಯಾಗದಂತೆ ಅದನ್ನು ಅತಿ ಶೀತಲಾವಸ್ಥೆಯಲ್ಲಿ ರಕ್ಷಿಸಬಹುದು. ರೋಗಕಾರಕಗಳನ್ನು ನಾಶಪಡಿಸಲು ಪಾಶ್ಚುರೀಕರಣ ಮಾಡಬಹುದು. **(ನೋಡಿ– ಪಾಶ್ಚುರೀಕರಣ)** ಹಾಲಿನಿಂದ ಉತ್ಪಾದಿಸುವ ಬೆಣ್ಣೆ, ಗಿಣ್ಣು, ಮೊಸರು ಇತ್ಯಾದಿಗಳಲ್ಲಿ ಏಕಾಣುಜೀವಿಗಳು ಬಹಳ ಪ್ರಮುಖಪಾತ್ರ ವಹಿಸುತ್ತವೆ. ಇವುಗಳಿಲ್ಲದೆ ಬೆಣ್ಣೆ, ಗಿಣ್ಣು ಮೊಸರು ಮಾಡಲಾಗುವುದಿಲ್ಲ.

ತಳಿಯೆಬ್ಬಿಸಿ ಬಣ್ಣ ಹಾಕಿದ ಕಾಲರಾ ಬಳುಕುಜೀವಿ. ಬಲಗಡೆಯದರಲ್ಲಿ ಅವುಗಳ ಕೊರಡಂಗಗಳೂ ಕಾಣುತ್ತಿವೆ.

ಪ್ಲೇಗು ಗಡ್ಡೆಯಿಂದ ತೆಗೆದು ಬಣ್ಣಹಾಕಿದ ಪ್ಲೇಗು ದಂಡಾಣುಜೀವಿಗಳು ರಕ್ತಕಣಗಳ ನಡುವೆ ಇವೆ.

3 ದಿನಗಳು ತಳಿಯೆಬ್ಬಿಸಿ ಬಣ್ಣ ಹಾಕಿದ ಸೆಟಬೇನೆ ಬೀಜಕಣಗಳು ಎಡಕ್ಕಿವೆ. ಬಲಕ್ಕಿರುವವು 12 ತಾಸು ತಳಿಯೆಬ್ಬಿಸಿ ಬಣ್ಣ ಹಾಕಿದಾಗ ಕೊರಡಂಗಗಳನ್ನು ತೋರುತ್ತಿವೆ.

ಅನಿಲದ ಅಳಿಕೊಳಪಿನ ಗಾಯದಿಂದ ತೆಗೆದು ಬಣ್ಣಹಾಕಿದ ವೆಲ್ಚನ ದಂಡಾಣುಜೀವಿಗಳು. ಕೆಳಗಿರುವವಲ್ಲಿ, ಅವುಗಳ ಕವಚಗಳು ಚೆನ್ನಾಗಿ ತೋರುತ್ತಿವೆ.

ಕಿರಣಣಬೆಬೇನೆಯ ಕೀವುಕುರು ಎದ್ದಿರುವ ಈಲಿಯ ಅಡ್ಡಕೊಯ್ತ. ಮೇಲಿನ ಭಾಗ ಕೀವು, ಕೆಳಗಿನ ಭಾಗ ಕಿರಣಣಬೆ ಜೀವಿಗಳದು.

ದನದ ಅರಟನಾಲಗೆಯಲ್ಲಿ ಕಂಡುಬರುವ ಹುಣ್ಣು. ಸರಗೂದಲಿ ಕಿರಣಣಬೆಜೀವಿ ನಡುವೆ ಇದೆ.

ಉಪದಂಶ ಮೇಹರೋಗದ ಹುಣ್ಣಿಂದ ತೆಗೆದು ಕತ್ತಲ ಹಿನ್ನೆಲೆ ಬೆಳಗಿಸಿದಾಗ ಕಾಣುವ ನೋಟ ಮೇಲಿನದು. ಅದಕ್ಕೆ ಬಣ್ಣ ಹಾಕಿದ್ದು ಕೆಳಗಿನದು.

ಹುಳುಕಡ್ಡಿ ಹತ್ತಿದ ತಲೆಯ ಕೂದಲಿಗೆ ಬಣ್ಣ ಹಾಕಿದಾಗ ಒಳಗೆ ಕಾಣುವ ಮಿಣಿಬೀಜಕಣಜೀವಿಗಳು ಎಡಪಕ್ಕದಲ್ಲಿವೆ. ಬಲಪಕ್ಕದಲ್ಲಿರುವವು ಅದರ ಇನ್ನೊಂದು ಬಗೆ.

ಕೂಸಿನಲ್ಲೇಳುವ ಹುಗುಳಿನ ಹುಣ್ಣಿಂದ ತೆಗೆದು ತಳಿಯೆಬ್ಬಿಸಿ ಬಣ್ಣಹಾಕಿದ ಬಿಳಿಚಿಕ ಅಂಡಣಬೆ ಜೀವಾಣುಗಳು.

ಮಲದಿಂದ ತೆಗೆದು ಬಣ್ಣಹಾಕಿದ ಕರುಳುಚಲಕಣಗಳು. ಎಡಗಡೆಯಲ್ಲಿ ಹೆಗ್ಗರುಳಿನವೂ ಬಲಗಡೆಯಲ್ಲಿ ಊತಕಲಯಕದವೂ ಇವೆ.

ಕಾಳಜ್ವರದ ರೋಗಿಯ ತೊರಳೆಯಿಂದ ರಕ್ತ ತೆಗೆದು ಬಣ್ಣ ಹಾಕಿದ ಲೀಷ್ಮನ್ ಕಾಯಗಳು ರಕ್ತಕಣಗಳಲ್ಲೂ ಹೊರಗೂ ಕಾಣುತ್ತಿವೆ.

ಸತ್ತ ಹುಚ್ಚುನಾಯಿಯ ಮಿದುಳಿನ ನೀಲಿಯ ನರಕಣಗಳಲ್ಲಿ ನೆಗ್ರಿಕಾಯಗಳು ದಪ್ಪ ಕೆಂಪು ಬಟ್ಟುಗಳಂತೆ ಇವೆ.

ಭೂಮಿಯ ಮೇಲ್ಪದರಗಳಲ್ಲಿ ಕೋಟ್ಯನುಕೋಟಿ ಏಕಾಣುಜೀವಿಗಳಿವೆ. ಇವುಗಳ ಸಂಖ್ಯೆ ಭೂಸಾರ ಹಾಗೂ ಆಳಗಳನ್ನು ಅವಲಂಬಿಸಿದೆ. ಸಾಗುವಳಿ ಮಾಡದ ಭೂಮಿಯಲ್ಲಿ ಒಂದು ಗ್ರಾಂ ಮಣ್ಣಿನಲ್ಲಿ 100,000 ಏಕಾಣುಜೀವಿಗಳಿವೆ. ತೋಟ ಮಾಡುವ ಭೂಮಿಯಲ್ಲಿ 1,500,000 ಏಕಾಣುಜೀವಿಗಳಿವೆ ಎಂದು ಅಂದಾಜುಮಾಡಲಾಗಿದೆ. ಇವು ಸಂಶೋಧನಾಲಯಗಳಲ್ಲಿ ಬೆಳೆಯಬಹುದಾದವು ಮಾತ್ರ. ಏಕಾಣುಜೀವಿಗಳ ಸಂಖ್ಯೆ ಭೂಮಿಯ ಮೇಲ್ಪದರದಿಂದ ಆಳ ಹೋದಷ್ಟೂ ಕಡಿಮೆಯಾಗುತ್ತದೆ. ಸುಮಾರು 1.2–2ಮೀ ಕೆಳಗೆ ಇವು ಬಹು ಕಡಿಮೆ; ಇಲ್ಲವೆಂದೇ ಹೇಳಬಹುದು. 3–4ಮೀ ಆಳದಲ್ಲಿ ಇವುಗಳ ಸುಳಿವೇ ಇಲ್ಲ. ಭೂಮಿಯಲ್ಲಿರುವ ಏಕಾಣುಜೀವಿಗಳು ವಿಧವಿಧವಾದವು. ಅವುಗಳ ಕಾರ್ಯಾಚರಣೆಗಳಲ್ಲೂ ಬಹುಮಟ್ಟಿಗೆ ವೈವಿಧ್ಯಗಳಿವೆ. ಒಂದು ವಿಧದ ಏಕಾಣುಜೀವಿ ಮತ್ತೊಂದು ವಿಧದ ಏಕಾಣುಜೀವಿಯ ಮೇಲೆ ಪ್ರಭಾವ ಬೀರುತ್ತದೆ. ಕೆಲವು ಮತ್ತೆ ಕೆಲವಕ್ಕೆ ಉತ್ತೇಜಕಾರಕ. ಇನ್ನೂ ಕೆಲವು ಇತರ ಏಕಾಣುಜೀವಿಗಳೂ ವೃದ್ಧಿಯಾಗಲು ಅಡ್ಡಿ ತಂದೊಡ್ಡುತ್ತವೆ. ಇವುಗಳ ವೃದ್ಧಿ ಹಿತಕರವಾದ ಉಷ್ಣತೆ, ತೇವ ಇತ್ಯಾದಿಯನ್ನವಲಂಬಿಸಿದೆ. ಪ್ರಾಣಿಗಳು, ಸಸ್ಯಗಳು ಹಾಗೂ ಮನುಷ್ಯ ಭೂಮಿಯ ಮೇಲೆ ಜೀವಿಸಲು ಸಾಧ್ಯವಾಗಿರುವುದು ಈ ಏಕಾಣುಜೀವಿಗಳ ಚಟುವಟಿಕೆಗಳಿಂದಲೇ ಎಂದು ಹೇಳಿದರೆ ಉತ್ಪ್ರೇಕ್ಷೆಯೇನಲ್ಲ.

ಜೀವರಾಶಿಯ ಉಳಿವಿಗೆ ಏಕಾಣುಜೀವಿಗಳ ಚಟುವಟಿಕೆಯಿಂದಾಗುವ ನೈಟ್ರೋಜನ್ ಸ್ಥಿರೀಕರಣ (ನೈಟ್ರೋಜನ್ ಫಿಕ್ಸೇಶನ್) ಮೂಲಾಧಾರ. ವಾಯುಮಂಡಲದಲ್ಲಿ ಶೇ. 80 ನೈಟ್ರೋಜನ್ ಇದೆ. ಈ ಅಂಶ ಗಾಳಿಯಿಂದ ಇತರ ವಸ್ತುಗಳೊಡನೆ ಬೆರೆತು ಪ್ರೋಟೀನಾಗಿ ಪರಿವರ್ತನೆಗೊಂಡು, ಜೀವರಾಶಿಗೇ ಅತ್ಯಾವಶ್ಯಕ ಆಹಾರವಾಗುತ್ತದೆ. ನೈಟ್ರೋಜನ್ ಪ್ರತಿಕ್ರಿಯೆ ಇಲ್ಲದ ಒಂದು ಜಡಾನಿಲವಾದ್ದರಿಂದ ಜೀವಕೋಶಗಳಿಂದ ಈ ಪರಿವರ್ತನೆ ಸಾಧ್ಯವಾಗದು. ಇಲ್ಲಿ ಏಕಾಣುಜೀವಿಗಳ ಪಾತ್ರ ಬಲು ಮಹತ್ವದ್ದು. ಈ ರೀತಿಯಲ್ಲಿ ಸಾರಜನಕ ಸ್ಥಿರೀಕರಣ ಮಾಡುವ ಏಕಾಣುಜೀವಿಗಳು ರೈಜೋಬಿಯಂ, ಕ್ಲಾಸ್ಟ್ರಿಡಿಯಂ, ಎಝೋಟೊಬ್ಯಾಕ್ಟರ್ ಎಂಬ ಮೂರು ಗುಂಪಿಗೆ ಸೇರಿದವು. ಭೂಮಿಯಲ್ಲಿ ಸ್ಥಿರೀಕರಣ ಅದ್ಭುತ ಒಂದು ಕಡೆಯಾದರೆ ಮತ್ತೊಂದು ಕಡೆ ಸಾವಯವ ವಸ್ತುಗಳು ಕೊಳೆತು ಅದರಿಂದ ಯಾವ ರೀತಿಯ ಬಾಧಕ ಹಾಗೂ ಅಸಹ್ಯವಾಗಲೀ ಇಲ್ಲದ ರಾಸಾಯನಿಕ ಲವಣಗಳ ಪರಿವರ್ತನೆ ಮತ್ತೊಂದು ಅದ್ಭುತ. ಸಸ್ಯ ಮತ್ತು ಪ್ರಾಣಿಗಳ ಸಾವಿನಿಂದ ನೈಟ್ರೋಜನ್ ಮತ್ತು ಕಾರ್ಬನ್‍ಗಳು ಭೂಮಿಯನ್ನು ಸೇರುತ್ತವೆ. ಭೂಮಿಯಲ್ಲಿರುವ ಅಸಂಖ್ಯಾತ ಏಕಾಣುಜೀವಿಗಳು ಈ ಅಣುಗಳನ್ನು ಕಿಣ್ವಗಳ ಪ್ರತಿಕ್ರಿಯೆಯಿಂದ ಸರಳ ವಸ್ತುಗಳಿಗೆ ವಿಭಜಿಸುತ್ತವೆ. ನೈಟ್ರೋಜನ್ ವಿಭಜನೆಯಿಂದ ಉತ್ಪತ್ತಿಯಾಗುವ ರಾಸಾಯನಿಕಗಳಲ್ಲಿ ಅಮೋನಿಯ ಒಂದು. ಇದು ಉತ್ಪತ್ತಿಯಾಗುವ ರೀತಿಗೆ ಅಮೋನಿಫಿಕೇಶನ್ ಎಂದು ಹೆಸರು. ಅಮೋನಿಯ ಸರಳ ರೀತಿಯ ರಾಸಾಯನಿಕ ಮತ್ತು ಅದು ಸುಲಭವಾಗಿ ಪರಿವರ್ತನೆಹೊಂದಿ ನೈಟ್ರೇಟ್ ಆಗಬಲ್ಲುದು. ಅಂದರೆ ಅಮೋನಿಯ ಆಕ್ಸಿಜನ್ನಿನೊಂದಿಗೆ ಸಂಯೋಜಿಸಿ ಆಗಿ ಅನಂತರ ನೈಟ್ರೇಟ್ ಲವಣವಾಗುತ್ತದೆ. ಈ ರೀತಿಯ ಪರಿವರ್ತನೆಗೆ ನೈಟ್ರಿಫಿಕೇಶನ್ ಎಂದು ಹೆಸರು. ಕೇವಲ ಕೆಲವೇ ಏಕಾಣುಜೀವಿಗಳು ಈ ಕಷ್ಟಸಾಧ್ಯವಾದ ಪರಿವರ್ತನೆ ಮಾಡಬಲ್ಲವು. ನೈಟ್ರೋಸೋಕಾಕಸ್–ಇವೆರಡೂ ಬಗೆಯ ಅಮೋನಿಯವನ್ನು ನೈಟ್ರೇಟ್ ಆಗಿ ಪರಿವರ್ತಿಸುವುವು. ನೈಟ್ರೋಬ್ಯಾಕ್ಟರ್ ಏಕಾಣುಜೀವಿಗಳು ನೈಟ್ರೇಟನ್ನು ನೈಟ್ರೈಟ್ ಆಗಿ ಪರಿವರ್ತಿಸುತ್ತವೆ. ಈ ನೈಟ್ರೇಟ್ ಲವಣಗಳು ಸಸ್ಯಗಳ ಪ್ರಮುಖ ಆಹಾರ.

ನೈಟ್ರೋಜನ್ ರಹಿತ ರಾಸಾಯನಿಕಗಳನ್ನೂ ಇದೇ ರೀತಿ ಭೂಮಿಯ ಏಕಾಣು ಜೀವಿಗಳು ಪರಿವರ್ತನೆ ಮಾಡಬಲ್ಲವು. ಕಾರ್ಬನ್ ಹೈಡ್ರೋಜನ್ ಆಕ್ಸಿಜನ್, ಜಲಜನಕ, ಆಮ್ಲಜನಕಗಳನ್ನೊಳಗೊಂಡ ದೊಡ್ಡ ದೊಡ್ಡ ಅಣುಗಳನ್ನು ವಿಭಜಿಸಿ ಸರಳ ರೀತಿಯ ಸೆಲ್ಯುಲೋಸ್ ಮತ್ತು ಪಿಷ್ಟ ಪರಿವರ್ತನೆ ಏಕಾಣುಜೀವಿಗಳಿಂದಲೇ ನಡೆಯುತ್ತದೆ. ಸೆಲ್ಯುಲೋಸ್, ಪಿಷ್ಟಗಳು ಸಹ ಇನ್ನೂ ಸರಳ ರೀತಿಯ ರಾಸಾಯನಿಕಗಳಾಗಿ ಪಚನ ಹೊಂದಿ ಅವಶ್ಯಕ ಶಕ್ತಿಯನ್ನು ಒದಗಿಸುತ್ತವೆ.

ಗಂಧಕ, ರಂಜಕ, ಕಬ್ಬಿಣ ಮತ್ತಿತರ ಅಜೈವಿಕ ವಸ್ತುಗಳ ಪರಿವರ್ತನೆಯೂ ಭೂಮಿಯಲ್ಲಿರುವ ಏಕಾಣುಜೀವಿಗಳಿಂದಾಗುತ್ತದೆ. ಜೀವವಿಲ್ಲದ ಪ್ರಾಣಿಗಳು, ಸಸ್ಯ ಹಾಗೂ ಕೆಲವು ಸೂಕ್ಷ್ಮಜೀವಿಗಳ ಕೋಶಗಳ ಸಸಾರಜನಕಾಂಶಗಳಲ್ಲಿ ಗಂಧಕಾಂಶವಿರುತ್ತದೆ. ಪ್ರಕೃತಿಯಲ್ಲೂ ಗಂಧಕ, ಸಲ್ಫೇಟ್ ಉಪ್ಪು ಹಾಗೂ ಹೈಡ್ರೋಜನ್ ಸಲ್ಫೈಡುಗಳಲ್ಲೂ ಗಂಧಕವಿದೆ. ಇವುಗಳ ಪರಿವರ್ತನೆಯಲ್ಲಿ ಅನೇಕ ಏಕಾಣುಜೀವಿಗಳು ಭಾಗವಹಿಸುತ್ತವೆ.

**ಗ್ರಾಮಸಾರದ ಶುದ್ಧೀಕರಣ:** ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಊರುಗಳಲ್ಲಿ ಗ್ರಾಮಸಾರ ಮತ್ತು ಅದನ್ನು ಕೊಂಡೊಯ್ಯುವ ನೀರಿನ ಶುದ್ಧೀಕರಣ ಮುಖ್ಯವಾಗಿ ಏಕಾಣುಜೀವಿಗಳಿಂದ ಆಗುತ್ತದೆ. ಈ ನೀರಿನಲ್ಲಿ ಅಸಂಖ್ಯಾತ ಏಕಾಣುಜೀವಿಗಳಿರುತ್ತವೆ. ಇವುಗಳಲ್ಲಿ ಕೆಲವು ಮನುಷ್ಯನ ಕರುಳಿನಿಂದ ಮಲದೊಂದಿಗೆ ಹೊರಹಾಯ್ದುವು, ಕೆಲವು ಗಾಳಿಯ ಏಕಾಣುಜೀವಿಗಳು, ಕೆಲವು ಭೂಮಿಯ ಏಕಾಣುಜೀವಿಗಳು. ಇವುಗಳಲ್ಲನೇಕವು ಜೈವಿಕ ವಸ್ತುಗಳನ್ನು ಪರಿವರ್ತಿಸಿ ಅವುಗಳಿಂದ ಯಾವ ಕೆಡಕೂ ಉಂಟಾಗದಂತೆ ಜಡಸ್ಥಿತಿಗೆ ಇಳಿಸುತ್ತವೆ. ರೋಗಕಾರಕ ಏಕಾಣುಜೀವಿಗಳಿಗೂ ಈ ಪರಿವರ್ತನೆಗಳಿಂದ ಉಳಿಗಾಲವಿಲ್ಲ. ಮುಖ್ಯ ಪರಿವರ್ತನೆಯೆಂದರೆ ಜೈವಿಕವಸ್ತುಗಳ ಕೊಳೆತದ ಫಲವಾಗಿ ಮೀಥೇನ್, ಇಂಗಾಲಾಮ್ಲ, ಸಾರಜನಕ ಮತ್ತು ಅಮೋನಿಯ– ಇವು ಉತ್ಪತ್ತಿಯಾಗುತ್ತವೆ. ಮೊದಲೇ ತಿಳಿಸಿದಂತೆ ಅಮೋನಿಯ ಆಕ್ಸಿಜನ್ ಸಂಯೋಗದಿಂದ ನೈಟ್ರೈಟ್ ಆಗಿ ಅನಂತರ ನೈಟ್ರೇಟ್ ಆಗುತ್ತದೆ. ಅಂದರೆ ಮೊದಲು ಕೊಳೆತು ನಾರುತ್ತಿದ್ದ ಮಲ ಈ ಏಕಾಣುಜೀವಿಗಳ ಸತತ ಕ್ರಿಯೆಯಿಂದ ವಾಸನೆಯಿಲ್ಲದ, ಯಾರಿಗೂ ಅಪಾಯವಿಲ್ಲದ ಲವಣವಾಗಿ ಪರಿವರ್ತನೆ ಹೊಂದುತ್ತದೆ. ಈ ಕ್ರಿಯೆಗಳು ಅತ್ಯಲ್ಪಕಾಲದಲ್ಲಿ ಹೆಚ್ಚಿಗೆ ವಿನಿಯೋಗವಾಗದಂತೆ ಕೃತಕವಾಗಿ ವ್ಯವಸ್ಥೆ ಮಾಡಲು ಅನೇಕ ಸಾಧನಸಲಕರಣೆಗಳನ್ನು ಅಳವಡಿಸಲಾಗಿದೆ.

**ಕೈಗಾರಿಕೋದ್ಯಮಗಳಲ್ಲಿ ಏಕಾಣುಜೀವಿಗಳ ಪಾತ್ರ:** ಇವುಗಳಲ್ಲಿ ಮುಖ್ಯವಾಗಿ ಪರಿಶೀಲಿಸಬೇಕಾದವು 1. ಬ್ರೆಡ್ ಮಾಡಲು ಉಪಯೋಗಿಸುವ ಯೀಸ್ಟ್; 2. ನಾರಿನ ಉತ್ಪಾದನೆ; 3. ಸಕ್ಕರೆ, ಪಿಷ್ಟಗಳನ್ನು ಉಪಯೋಗಿಸಿ ಬೀರ್ ದ್ರಾಕ್ಷಾರಸಗಳ ತಯಾರಿಕೆ; 4. ಕಿಣ್ವಗಳ ತಯಾರಿಕೆ; 5. ಜೀವಾತುಗಳ ಉತ್ಪಾದನೆ, 6. ಪ್ರತಿ ಜೀವಕಗಳು.

1. ಬ್ರೆಡ್ ಉಬ್ಬಿಕೊಂಡು ಮೆತ್ತಗೂ ರುಚಿಯಾಗಿಯೂ ಇರುವಂತೆ ಮಾಡಲು ಸೂಕ್ತರೀತಿಯ ಯೀಸ್ಟನ್ನೂ (ಹುದುಗು) ಉಪಯೋಗಿಸುತ್ತಾರೆ. ಇದರಿಂದ ಬ್ರೆಡ್ ಬೇಗ ತಯಾರಾಗುವುದಲ್ಲದೆ ಬೇರೆ ಯಾವ ರೀತಿಯ ಏಕಾಣುಜೀವಿಗಳೂ ಅದರಲ್ಲಿ ಸೇರಲು ಅವಕಾಶವಿಲ್ಲದಂತಾಗುತ್ತದೆ.

2. ಕೆಲವು ವಿಶಿಷ್ಟ ಸಸ್ಯಗಳಿಂದ ನಾರು ತಯಾರುಮಾಡುತ್ತಾರೆ. ಅಂಥ ಸಸ್ಯದಲ್ಲಿ ಪೆಕ್ಟಿನ್ ಲವಣ ಇರುವ ಅಂಗಾಂಶವನ್ನು ಕೊಳೆಸಿ ನಾರುಮಾಡುತ್ತಾರೆ. ಈ ಅಂಗಾಂಶ ಮೆತುವಾಗುವಂತೆ ಮಾಡುವ ಕಿಣ್ವಗಳಿರುವ ಏಕಾಣುಜೀವಿಗಳು ಕೆಲವು ಮಾತ್ರ. ಇವುಗಳಲ್ಲಿ ಮುಖ್ಯವಾದವು ಕ್ಲಾಸ್ಟ್ರಿಡಿಯಂ ಫೆಲ್ಸಿನಿಯಂ ಮತ್ತು ಕ್ಲಾಸ್ಟ್ರಿಡಿಯಂ ಬ್ಯೂಟೈರಿಕಂ. ಇವುಗಳ ಕ್ರಿಯೆಗೆ ಒಳಪಡಿಸದೆ ಕೃತಕವಾಗಿ ಪೆಕ್ಟಿನ್ ಮೆತುಮಾಡಲು ಪ್ರಯತ್ನಗಳು ನಡೆದಿವೆಯಾದರೂ ಅವು ಇದುವರೆಗೂ ಸಫಲವಾಗಿಲ್ಲ.

3. ಪ್ರಾಚೀನ ಕಾಲದಿಂದಲೂ ಮಾದಕಗಳು ಎಂದರೆ ಸುರೆ, ಸೋಮ, ದ್ರಾಕ್ಷಾರಸಗಳನ್ನು ಈ ಏಕಾಣುಜೀವಿಗಳ ಬಳಕೆಯಿಂದ ಉತ್ಪಾದನೆ ಮಾಡಲಾಗುತ್ತಿದೆ. ಇಷ್ಟೇ ಅಲ್ಲದೆ ಎಥನಾಲ್ ಅಥವಾ ಈಥೈಲ್ ಆಲ್ಕೊಹಾಲ್, ಗ್ಲಿಸರಾಲ್, ಬ್ಯೂಟೆನಾಲ್, ಅಸಿಟೋನ್, ಅಸಿಟಿಕ್ ಆಮ್ಲ, ಸಿಟ್ರಿಕ್ ಆಮ್ಲ ಮುಂತಾದವುಗಳ ತಯಾರಿಕೆಯೂ ವಿಧವಿಧವಾದ ಏಕಾಣುಜೀವಿಗಳಿಂದಲೇ ನಡೆಯುತ್ತದೆ.

4. ಪ್ರೋಟೀನ್ ಮತ್ತು ಪಿಷ್ಟಗಳನ್ನು ವಿಭಜಿಸಲು ಬೇಕಾದ ಕಿಣ್ವಗಳನ್ನು ಕೆಲವು ಶಿಲೀಂಧ್ರಗಳನ್ನು ಉಪಯೋಗಿಸಿ ಅಥವಾ ಏಕಾಣುಜೀವಿಗಳ ಕ್ರಿಯೆಗಳಿಂದ ಉತ್ಪಾದನೆ ಮಾಡಲಾಗುತ್ತಿದೆ.

5. ಏಕಾಣುಜೀವಿಗಳಲ್ಲಿ ಅನೇಕವು ಮನುಷ್ಯವರ್ಗಕ್ಕೂ ಪ್ರಾಣಿವರ್ಗಕ್ಕೂ ಅವಶ್ಯಕವಾದ ಬಿ ಜೀವಾತುಗಳನ್ನು ತಾವೇ ತಯಾರಿಸಬಲ್ಲವು. ಏಕಾಣುಜೀವಿಗಳೇ ಕೆಲವು ಜೀವಾತುಗಳ ಮೂಲವೆಂದು ಹೇಳಬಹುದು. ಅನೇಕ ರೀತಿಯ ಯೀಸ್ಟುಗಳಲ್ಲಿ ಬಿ ಅಥವಾ ಥಯಮಿನ್ ಜೀವಾತು ತುಂಬಿದೆ. ಬಿ ಅಥವಾ ರೈಬೊಫ್ಲೇವಿನ್ ಸಹ ಯೀಸ್ಟ್ ಬಳಸಿ ಉತ್ಪಾದಿಸಲಾಗುತ್ತಿದೆ. ಸ್ಟ್ರೆಪ್ಟೋಮೈಸಿನ್ ಎಂಬ ಪ್ರತಿ ಜೀವಿಯನ್ನು ತಯಾರಿಸುವಾಗ ಉಪಯೋಗಿಸುವ ಸ್ಟ್ರೆಪ್ಟೋಮೈಸಿನ್ ಗ್ರೈಸಿಯೊಸ್ ಸಾಕಷ್ಟು ಬಿ ಜೀವಾತನ್ನು ಸಹ ಕೊಡುತ್ತದೆ. ಎರ್ಗೊಸ್ಟಿರಾಲ್ (ಅಂದರೆ ಡಿ ಜೀವಾತು ಕೊಡುವ) ಯೀಸ್ಟಿನಲ್ಲಿದೆ. ಇವೇ ಅಲ್ಲದೇ ಇನ್ನೂ ಅನೇಕ ಏಕಾಣುಜೀವಿಗಳ ಉಪಯೋಗದಿಂದ ಜೀವಾತುಗಳನ್ನು ತಯಾರಿಸಬಹುದು.

6 ಸೂಕ್ಷ್ಮಜೀವಿಗಳು ಉತ್ಪತ್ತಿಮಾಡುವ ರಾಸಾಯನಿಕ ವಸ್ತುವೇ ಪ್ರತಿಜೀವಕಗಳು. ಇವನ್ನು ದ್ರವೀಕರಿಸಿ ಏಕಾಣುಜೀವಿಗಳೊಂದಿಗೆ ಸಂಪರ್ಕ ಕಲ್ಪಿಸಿದರೆ ಅವುಗಳ ಸಂತಾನೋತ್ಪತ್ತಿ ಮತ್ತು ಚಟುವಟಿಕೆಗಳು ನಿಲ್ಲುತ್ತವೆ ಅಥವಾ ಅವನ್ನು ನಾಶಮಾಡಲೂ ಬಹುದು. ಈ ರೀತಿಯ ಒಂದು ಶಕ್ತಿ ಕೆಲವು ತಂತುಶಿಲೀಂಧ್ರಗಳ (ಫಿಲಮೆಂಟಸ್ ಫಂಗಸ್) ಗುಂಪಿಗೆ ಸೇರಿದ ಜೀವಿಗಳಿಗಿವೆ ಎಂಬುದು ಬಹಳ ಹಿಂದಿನಿಂದಲೂ ನಮಗೆ ತಿಳಿದಿತ್ತು. ನಮಗೆ ತಿಳಿದಿದ್ದರೂ ಈ ಶಕ್ತಿಯನ್ನು ಮಾನವನಲ್ಲಿ ರೋಗಕಾರಕ ಏಕಾಣುಜೀವಿಗಳ ಮೇಲೆ ಪ್ರಯೋಗಿಸಿ ಅದರಿಂದ ಫಲ ಪಡೆದಿರಲಿಲ್ಲ. ಉದಾಹರಣೆಗೆ, ಪೆನಿಸಿಲಿಯ ಮತ್ತು ಆಸ್ಪರ್‌ಗಿಲ್ಲಿ ಶಿಲೀಂಧ್ರಗಳಿಗೆ ಈ ಶಕ್ತಿ ಇದೆ.

ಅಲೆಕ್ಸಾಂಡರ್ ಫ್ಲೆಮಿಂಗ್ ಪೆನಿಸಿಲಿಯಂನಿಂದ ಉತ್ಪತ್ತಿಯಾದ ಪೆನಿಸಿಲಿನ್ ಕಡೆ ಗಮನ ಸೆಳೆದು (1920) ಇಡೀ ಮಾನವಕೋಟಿಗೇ ಮಹತ್ತ್ವದ ಸೇವೆ ಸಲ್ಲಿಸಿದನೆಂದು ಹೇಳಬಹುದು. ಸಾವಿರಾರು ಪ್ರತಿಜೀವಕಗಳ ಪ್ರಭಾವವನ್ನು ರೋಗಕಾರಕ ಏಕಾಣುಜೀವಿಗಳ ಮೇಲೆ ಪ್ರಯೋಗಿಸಿ ಪರಿಶೀಲಿಸಲಾಯಿತು. ಇವುಗಳಲ್ಲಿ ಕೆಲವು ಅತ್ಯಂತ ಯಶಸ್ವಿಯಾದವು. ಅನೇಕ ರೋಗಗಳಿಗೆ ರಾಮಬಾಣದಂತೆ ಪರಿಣಾಮಕಾರಿಗಳಾಗಿದ್ದುದು ಕಂಡುಬಂತು. ಈ ರೀತಿ ಸಂಶೋಧನೆ ನಡೆಸಿ ಜಯಗಳಿಸಿದ ಪ್ರಖ್ಯಾತ ವಿಜ್ಞಾನಿ ಅಮೆರಿಕ ಸಂಯುಕ್ತಸಂಸ್ಥಾನಗಳ ಸೆಲ್ ಮನ್ ಎ. ವಾಕ್ಸ್ ಮನ್. ಈ ಪ್ರತಿಜೀವಕಗಳನ್ನು ಈಗ ಭಾರಿ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಅನೇಕ ಪ್ರತಿಜೀವಕಗಳ ರಾಸಾಯನಿಕ ಅಂಶಗಳನ್ನು ಕಂಡು ಹಿಡಿದು ಕೃತಕವಾಗಿ ಪ್ರತಿಜೀವಕಗಳನ್ನು ತಯಾರುಮಾಡಲು ಸಾಧ್ಯವಾಗಿದೆ. ಎಲ್ಲವನ್ನೂ ಕೃತಕವಾಗಿ ತಯಾರಿಸಲು ಸಾಧ್ಯವಾಗಿಲ್ಲ.

ಏಕಾಣುಜೀವಿಗಳಿಂದ ಉಪಯೋಗವೇನೋ ಇದೆ. ಆದರೆ ಅವುಗಳ ಅನಿಯಂತ್ರಿತ ವೃದ್ಧಿ ಮತ್ತು ಚಟುವಟಿಕೆಯಿಂದಾಗಿ ಅನೇಕ ಕಷ್ಟನಷ್ಟಗಳೂ ಸಂಭವಿಸುತ್ತವೆ. ಈ ವೃದ್ಧಿಯನ್ನು ನಿಯಂತ್ರಿಸಿ ಅವುಗಳ ಮೇಲೆ ಹತೋಟಿ ಇಟ್ಟುಕೊಳ್ಳಬೇಕಾದ ಸಂದರ್ಭಗಳೂ ಅನೇಕವಿವೆ. ಉದಾಹರಣೆಗೆ, ಹತ್ತಿಬಟ್ಟೆ ಉದ್ಯಮದಲ್ಲಿ ನೂಲು ಮತ್ತು ನೇಯ್ದ ವಸ್ತುಗಳಿಗೆ ಇವು ಬಹಳ ನಷ್ಟಮಾಡುತ್ತವೆ. ಮಾಂಸಾಹಾರ ತಯಾರಾಗುವ ಕಡೆಯೂ ಇವುಗಳ ಸೋಂಕಿನಿಂದ ಬಹಳ ನಷ್ಟವುಂಟಾಗುತ್ತದೆ.

ಏಕಾಣುಜೀವಿಗಳಲ್ಲಿ ಕೆಲವು ರೋಗಕಾರಕಗಳು, ಇವುಗಳಲ್ಲಿ ಮುಖ್ಯವಾದವು ಸ್ಟ್ರೆಪ್ಟೊಕಾಕಸ್, ಸ್ಟೆಫೈಲೋಕಾಕಸ್, ನ್ಯೂಮೋಕಾಕಸ್, ನೈಸೀರಿಯ, ಕೋರಿನಿಬ್ಯಾಕ್ಟೀರಿಯಂ, ಸಾಲ್ಮನೆಲ್ಲ, ಶೀಗೆಲ್ಲ, ವಿಬ್ರಿಯೋ, ಪ್ಯಾಸ್ಚುರೆಲ್ಲ, ಬ್ರೂಸೆಲ್ಲ, ಮೈಕೋಬ್ಯಾಕ್ಟೀರಿಯಂ ಮತ್ತು ಸ್ಪೈರೋಕೀಟ ಇತ್ಯಾದಿ. ಇವುಗಳ ಸೋಂಕಿನಿಂದ ಮನುಷ್ಯರು ಅನುಭವಿಸಬೇಕಾದ ರೋಗಗಳೆಂದರೆ ಸಂಧಿವಾತ, ಹೃದಯದ ಒಳಪೊರೆಯ ಉರಿಯೂತ, ಕೀವು ಹುಣ್ಣುಗಳು, ಶ್ವಾಸಕೋಶಗಳ ಉರಿಯೂತ, ಮೇಹ, ಗಂಟಲುಮಾರಿ, ಶೀತಜ್ವರ, ಪ್ಲೇಗು, ಕಾಲರಾ ಇತ್ಯಾದಿ. ಮಾನವಕೋಟಿಗೇ ಇವು ಶತ್ರುಗಳು. ಭಯಂಕರ ಅಂಟುಜಾಡ್ಯಗಳನ್ನು ಸೋಂಕಿನ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ಹರಡುವುವು. ಈ ಗುಂಪುಗಳ ಏಕಾಣುಜೀವಿಗಳಲ್ಲಿ ಅನೇಕವನ್ನು ನಾವು ಜಯಿಸಿದ್ದೇವೆ. ಅವುಗಳಿಂದ ಉಂಟಾಗುವ ರೋಗಗಳಿಗೆ ಪ್ರತಿಬಂಧಕಗಳನ್ನಾಗಲೀ ಅಥವಾ ಬಂದ ಅನಂತರ ಅವುಗಳನ್ನು ಹತೋಟಿಗೆ ತರಲು ಪ್ರಬಲ ಔಷಧಗಳನ್ನಾಗಲೀ ಆಗಲೇ ಕಂಡುಹಿಡಿದಿದ್ದೇವೆ. ಆದರೂ ಅವುಗಳಿಂದ ಕಾಟ ತಪ್ಪಿಲ್ಲ. ಇವನ್ನು ಜಯಿಸಲು ನಿರಂತರ ಹೋರಾಟ ನಡೆದಿದೆ. (ಆರ್.ಎಸ್.ವಿ.)

**ಏಕಾದಶಿ:** ದಶಮಿಯ ಮಾರನೆಯ ತಿಥಿ. ಹರಿವಾಸರ ಹರಿದಿನ ಎಂದೂ ಹೇಳುವುದುಂಟು. ಏಕಾದಶೀ ವ್ರತ ಮಾಹಾತ್ಮ್ಯ ಪ್ರಾಯಶಃ ಎಲ್ಲ ಪುರಾಣಗಳಲ್ಲೂ ಪ್ರತಿಪಾದಿತವಾಗಿದೆ. ಅಮಾವಾಸ್ಯೆ ಅಥವಾ ಪೂರ್ಣಿಮೆಯ ದಿನದಿಂದ ಹನ್ನೊಂದನೆಯ ದಿನ ಏಕಾದಶಿಯಾಗುತ್ತದೆ. ಆ ದಿನ ಸಂಪೂರ್ಣವಾಗಿ ಆಹಾರವನ್ನು ಬಿಟ್ಟು ಬ್ರಹ್ಮಚರ್ಯಾದಿ ನಿಯಮಗಳಿಂದ ಇದ್ದು ಭಗವಂತನ ಧ್ಯಾನ, ಅರ್ಚನೆ ಮುಂತಾದ ಸತ್ಕರ್ಮಗಳಿಂದ ದಿನವೆಲ್ಲ ಕಳೆದು, ರಾತ್ರಿಯಲ್ಲಿ ಜಾಗರಣವಿದ್ದು ಮರುದಿನ ಬೆಳಗ್ಗೆ ಪಾರಣೆ ಮಾಡಬೇಕು. ಇದು ಈ ವ್ರತದ ಸಂಕ್ಷಿಪ್ತ ಪರಿಚಯ. ಸಂಪೂರ್ಣವಾಗಿ ಆಹಾರವನ್ನು ಬಿಡಲು ಶಕ್ತಿಯಿಲ್ಲದವರು ಫಲಾಹಾರದಲ್ಲಿದ್ದು ಇದನ್ನು ಆಚರಿಸಬಹುದು. ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಸಕಲ ವಿಧಫಲಗಳನ್ನೂ ಈ ವ್ರತ ಕೊಡಬಲ್ಲದ್ದೆಂದು ಹೇಳಲಾಗಿದೆ. ಲೌಕಿಕವಾದ ಯಾವ ಫಲವನ್ನೂ ಅಪೇಕ್ಷಿಸದೆ ಕೇವಲ ಕರ್ತವ್ಯದೃಷ್ಟಿಯಿಂದ ಇದನ್ನು ಆಚರಿಸಿದರೆ ಮೋಕ್ಷ ಪ್ರಾಪ್ತಿಯಾಗುತ್ತದೆ. ಆಗ ಇದನ್ನು ನಿತ್ಯವ್ರತ ಎಂದು ಕರೆಯುತ್ತಾರೆ. ಅವರವರಿಗೆ ಬೇಕಾದ ಫಲಗಳಿಗೋಸ್ಕರವೂ ಸಕಲ ವಿಧದ ಪಾಪಗಳ ಪ್ರಾಯಶ್ಚಿತ್ತರೂಪದಲ್ಲೂ ಇದನ್ನು ಕಾಮ್ಯವ್ರತವಾಗಿಯೂ ಆಚರಿಸಬಹುದು. ಏಕಾದಶೀವ್ರತಾಚರಣೆಯಲ್ಲಿ ಪ್ರಸಿದ್ಧನಾದವನೆಂದರೆ ರುಕ್ಮಾಂಗದ. ಇವನ ಚರಿತ್ರೆಯನ್ನು ನಾರದೀಯ ಪುರಾಣದಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಇವನಲ್ಲದೆ ಮುಖ್ಯವಾಗಿ–ಶ್ರೀರಾಮ, ನಾರದ, ಅಂಬರೀಷ, ಮಾಂಧಾತ, ಮುಚುಕುಂದ, ಹರಿಶ್ಚಂದ್ರ, ಪಂಚಪಾಂಡವರು–ಮುಂತಾದ ಅನೇಕರು ತಮ್ಮತಮ್ಮ ಅಭೀಷ್ಟವನ್ನೂ ಮೋಕ್ಷವನ್ನೂ ಪಡೆದರೆಂದು ಆಯಾ ಪುರಾಣಗಳಿಂದ ತಿಳಿಯಬಹುದು. ಏಕಾದಶಿಯಂದು ಪಾಲಿಸಬೇಕಾದ ಉಪವಾಸ, ಜಾಗರಣೆ ಮುಂತಾದವು ಎಷ್ಟು ಮುಖ್ಯವೋ ಅಷ್ಟೇ ದ್ವಾದಶಿಯಂದು ಪಾಲಿಸಬೇಕಾದ ಪಾರಣೆ ಮೊದಲಾದವೂ ಮುಖ್ಯ. ಆ ವಿವರಗಳಿಗೆ **(ನೋಡಿ– ದ್ವಾದಶೀ).** (ಆರ್.ಎಸ್.ವಿ.)

**ಏಕಾಭಿಮುಖ ವಿಕಾಸವಾದ:** ಜೀವಿಗಳ ವಿಕಾಸಗತಿಯಲ್ಲಿ ಆಗುವ ಬೆಳೆವಣಿಗೆಗಳು ಹಂತಹಂತವಾಗಿ, ಯಾವಾಗಲೂ ಮುಮ್ಮೊಗವಾಗಿ ಖಚಿತಮಾರ್ಗದಲ್ಲೇ ಸಾಗುತ್ತವೆ ಎಂಬ ವಾದ (ಆರ್ಥೋಜೆನೆಸಿಸ್), ಇದನ್ನು ನಿರ್ಧಾರಿತ ವಿಕಾಸವೆಂದೂ ಹೇಳಲಾಗಿದೆ. ಏಕಮುಖವಿಕಾಸವಾದದ ಮೂಲ ಪ್ರವರ್ತಕರಲ್ಲೊಬ್ಬನಾದ ಥಿಯೋಡರ್ ಐಮರ್ ಚಿಟ್ಟೆಗಳ ರೆಕ್ಕೆಯಲ್ಲಿನ ದಿಂಡು ಮತ್ತು ನರರಚನೆಗಳ ವಿಕಾಸವನ್ನು ತನ್ನ ವಾದಕ್ಕೆ ಆಧಾರವಾಗಿ ಒದಗಿಸಿದ. ಅನೇಕ ಅಕಶೇರುಕ ಪಳೆಯುಳಿಕೆಗಳು ಈ ವಾದಕ್ಕೆ ಪುಷ್ಟಿ ನೀಡಿವೆ. ಎಚ್. ಎಫ್. ಆಸ್‍ಬಾರ್ನ್. ಡಬ್ಲ್ಯು. ಕೆ. ಗ್ರಿಗೋರಿ ಮುಂತಾದ ಜೀವವಿಜ್ಞಾನಿಗಳೂ ತಾವು ಅಭ್ಯಾಸ ಮಾಡಿದ ಕಶೇರುಕ ಜೀವ್ಯವಶೇಷ ವಿಜ್ಞಾನದಿಂದ ಇದೇ ವಾದವನ್ನು ಎತ್ತಿ ಹಿಡಿದರು. ಈ ವಾದಕ್ಕೆ ಮತ್ತೊಂದು ಪ್ರಬಲ ಉದಾಹರಣೆಯೆಂದರೆ ಅಶ್ವ ಕುಟುಂಬದ ವಿಕಾಸ. ಹೈರಕೋಥೀರಿಯಂ ಜೀವಿಯಿಂದ ನೇರವಾಗಿ ಇಂದಿನ ಅಶ್ವಕುಟುಂಬ ಹುಟ್ಟಿದೆಯೆಂದು ಅಂದಿನಿಂದ ಇಂದಿನವರೆಗೆ ಸಿಕ್ಕಿರುವ ಪಳೆಯುಳಿಕೆಗಳನ್ನು ಸಾಲಾಗಿ ಜೋಡಿಸಿ ಸಮರ್ಥಿಸುವುದುವುಂಟು. ಏಕಮುಖ ವಿಕಾಸಕ್ಕೆ ಮತಸಂಬಂಧವಾದ ನಿಗೂಢ ಕಾರಣಗಳನ್ನು ಕೊಟ್ಟವರೂ ಇದ್ದಾರೆ. ಮೊದಲೇ ನಿರ್ಧಾರವಾದ ವಿಕಾಸದ ಹಾದಿಯಲ್ಲಿ ನಡೆಯುವಂತೆ ಜೀವಿಯನ್ನು ಯಾವುದೋ ಒಂದು ಅಂತಃಶಕ್ತಿ ಪ್ರೇರೆಪಿಸುತ್ತದೆನ್ನುವವರೂ ಇದ್ದಾರೆ. ವೈಜ್ಞಾನಿಕವಾಗಿ ಜೀವದ್ರವ್ಯದಲ್ಲಿನ ನಿಜಮೌಲ್ಯಗಳು ಅದರ ವಿಕಾಸದ ಹಾದಿಯನ್ನು ರೂಪಿಸುತ್ತವೆ ಎಂಬ ಮಾತಂತೂ ನಿಜ. ವಿಕಾಸದ ಒಂದು ಭಾಗವಾದ ಆನುವಂಶಿಕ ಸರಣಿಯನ್ನು ಪ್ರತ್ಯೇಕಿಸಿ ನೋಡಿದಾಗ ಅದು ಏಕಾಭಿಮುಖವಾಗಿ ತೋರುವುದು ಸಹಜ. ಸಹಜವಷ್ಟೇ ಅಲ್ಲ, ಆನುವಂಶೀಕ ಸರಣಿ ತೋರುವ ವಿಕಾಸ ಮಾರ್ಗ ಮುಖ್ಯವಾದುದು ಹೌದು. ಈ ದೃಷ್ಟಿಯಿಂದ ಏಕಾಭಿಮುಖ ವಿಕಾಸವಾದವನ್ನು ವಿಕಾಸವಾದದ ತಳಹದಿ ಎಂದು ಒಪ್ಪಬಹುದೇ ಹೊರತು ಅದನ್ನೇ ವಿಕಾಸವಾದದ ಏಕೈಕಮಾರ್ಗ ಎನ್ನಲಾಗುವುದಿಲ್ಲ. ವಿಕಾಸ ನೇರವಾಗಿ ಅಥವಾ ಏಕಾಭಿಮುಖವಾಗಿ ನಡೆಯುವ ಕ್ರಿಯೆಯಲ್ಲ. ವಾಸ್ತವವಾಗಿ ಅದು ಬಹುಮುಖ್ಯವಾದದ್ದು. ಈ ರೀತಿಯ ಸಿದ್ಧಾಂತಕ್ಕೆ ತಳಿವಿಜ್ಞಾನದ ಕೊಡುಗೆ ಅಪಾರ. ಯಾವುದೇ ಜೀವಿಯಲ್ಲಿ ನಡೆಯುವ ಜೀನುವಿಕೃತಿಗಳು ಆ ಜೀವಿಯ ಉನ್ನತಿಗಾಗಿಯೇ ಅಥವಾ ವಿಕಾಸಕ್ಕಾಗಿಯೇ ನಡೆಯುತ್ತವೆ ಎಂಬ ಮಾತೂ ಸರಿಯಾಗಲಾರದು. ವಿಕೃತಿಗಳಿಂದಾಗಿ ಜೀವಿಗಳಲ್ಲಿ ವೈವಿಧ್ಯ ತಲೆದೋರುತ್ತದೆ. ಯಾವ ವಿಕೃತಿ ಪ್ರಕೃತಿಯ ಆಯ್ಕೆಯನ್ನು ಯಶಸ್ವಿಯಾಗಿ ಎದುರಿಸಿ ಬದುಕುತ್ತದೆಯೊ ಅದು ಉಳಿಯುತ್ತದೆ, ಮಿಕ್ಕವು ನಾಶಹೊಂದುತ್ತವೆ. ಜೀವಿಗೆ ಅನುಕೂಲವಲ್ಲದ, ಆತಂಕ ತರಬಲ್ಲ ರೂಪಭೇದಗಳು ಕೆಲವು ಸಾರಿ ಕಾಣಿಸಿಕೊಂಡು ತಲತಲಾಂತರವಾಗಿ ಬೆಳೆದು ಬರುವುದೂ ಉಂಟು. ಐರ್ಲೆಂಡಿನ ಎಲ್ಕ್ ಸಾರಂಗದ ಶೃಂಗಗಳು ಅಡ್ಡಾದಿಡ್ಡಿಯಾಗಿ ಬೆಳೆದು ಹೊರಲಾರದಷ್ಟು ಭಾರವಾಗಿವೆ. ಹೀಗಾಗಲು ಕಾರಣವನ್ನು ಹುಡುಕುವುದು ಸ್ವಲ್ಪ ಕಷ್ಟದ ಕೆಲಸವಾಗಬಹುದು. ಮೂಲದ್ರವ್ಯದ ವಿಕೃತಿ ಒಂದಕ್ಕಿಂತ ಹೆಚ್ಚಿನ ಮಾರ್ಪಾಟುಗಳಿಗೆ ಕಾರಣವಾದಾಗ ಆ ಮಾರ್ಪಾಟುಗಳಲ್ಲಿ ಕೆಲವು ಅತ್ಯಗತ್ಯವಾಗಿದ್ದು ಕೆಲವು ಅನಗತ್ಯವಾಗಿದ್ದರೂ ಅಗತ್ಯವಾದವುಗಳೊಡನೆ ಅನಗತ್ಯವಾದವನ್ನೂ ಜೀವಿ ಉಳಿಸಿಕೊಳ್ಳಬೇಕಾಗುತ್ತದೆ. ಹೈರಕೋಥೀರಿಯಂ ನೇರವಾಗಿ ಅಶ್ವಕುಟುಂಬದ ವಿಕಾಸಕ್ಕೆ ಎಡೆ ಮಾಡಿಕೊಟ್ಟಿಲ್ಲ. ಇದರ ವಿಕಾಸದ ಹಾದಿಯಲ್ಲಿ ನಾನಾ ಕವಲುಗಳಿವೆ. ಆದರೆ ಆ ಕವಲುಹಾದಿಗಳಲ್ಲಿ ವಿಕಾಸಗೊಂಡ ಜೀವಿಗಳು ಇಂದಿಲ್ಲ ಅಷ್ಟೇ. ಗಿಡ ಬೆಳೆಯುವಾಗ ನಾನಾ ರೀತಿಯ ಕವಲು ಕೊಂಬೆಗಳು ಹುಟ್ಟಿದುವು. ಆದರೆ ಅವೆಲ್ಲವೂ ಪರಿಸರವನ್ನೆದುರಿಸಲಾರದೆ ಹುಟ್ಟಿದಷ್ಟೇ ಬೇಗ ನಾಶಹೊಂದಿವೆ. ಆದ್ದರಿಂದ ಬೆಳೆದ ಗಿಡ ನೇರವಾಗಿ ಕಂಡಿತು. ಏಕಮುಖ ವಿಕಾಸವಾದಿಗಳು ಅಂಥ ಗಿಡವನ್ನೋ ಅಥವಾ ಅಂಥದೊಂದು ರೆಂಬೆಯನ್ನೋ ತಮ್ಮ ವಾದ ಸಮರ್ಥನೆಗೆ ನಿದರ್ಶನವಾಗಿ ನೀಡುತ್ತಾರೆ.

ವಿಕಾಸ ಯಾವಾಗಲೂ ಮುಮ್ಮೊಗನಾದುದು ಎಂಬ ವಾದವೂ ಸರಿಯಲ್ಲ. ಅದು ಹಿಮ್ಮೊಗನಾಗಿರುವುದನ್ನು ಪರಿಶೋಧನೆಗಳಿಂದ ಸಮರ್ಥಿಸಲಾಗಿದೆ **(ನೋಡಿ– ವಿಕಾಸವಾದ).** (ಜಿ.ಹೆಚ್.ಎಲ್.ಎಸ್.ಜಿ)

ಸಂಸ್ಕೃತಿಯ ವಿಕಾಸವನ್ನು ಕುರಿತ ವಿವೇಚನೆಯಲ್ಲೂ ಏಕಾಭಿಮುಖ ವಿಕಾಸವಾದದ ಪ್ರಭಾವ ಬಿದ್ದಿದೆಯೆಂಬುದು ಗಮನಾರ್ಹ. ಸಂಸ್ಕೃತಿಯ ಬೆಳವಣಿಗೆಯಲ್ಲಿ ಮನಸ್ಸಿನ ಪಾತ್ರ ಪ್ರಧಾನವೆಂಬುದು 18ನೆಯ ಶತಮಾನದ ಭಾವನೆಯಾಗಿತ್ತು. 19ನೆಯ ಶತಮಾನದ ವೈಜ್ಞಾನಿಕ ಭಾವನೆಗಳ ಪ್ರಸಾರದೊಂದಿಗೆ ಸಂಸ್ಕೃತಿ ವಿಕಾಸದ ಕಾರ್ಯ–ಕಾರಣ ಸಂಬಂಧವನ್ನು ಕುರಿತ ಅಧ್ಯಯನವೂ ಆರಂಭವಾಯಿತು. ಜೀವವಿಕಾಸದಲ್ಲಿ ಒಂದು ಕ್ರಮವಿರುವ ಹಾಗೆ ಸಂಸ್ಕೃತಿ ವಿಕಾಸದಲ್ಲೂ ಒಂದು ಕ್ರಮವನ್ನು ಕಾಣಬಹುದೇ– ಎಂಬ ಪ್ರಶ್ನೆಗೆ ಉತ್ತರದ ಅನ್ವೇಷಣೆಯಲ್ಲಿ ತೊಡಗಿದ್ದವರಿಗೆ ಏಕಾಭಿಮುಖ ವಿಕಾಸವಾದ ಅನುವಾಗಿ ಒದಗಿಬಂತೆನ್ನಬಹುದು. ಸಮಾಜವಿಕಾಸ ಪ್ರಜ್ಞಾಪೂರ್ವಕವಾದದ್ದಲ್ಲವಾ

ದರೂ ಅದು ಅನಿವಾರ್ಯವೆಂಬುದಂತೂ ನಿಜ. ಈ ಸಂತತಿ ನವೀಕರಣ ಕ್ರಿಯೆಯ ವಿಧಾನವನ್ನರಿಯುವುದು ಅಶಕ್ಯ. ಇದರಲ್ಲಿ ಒಂದು ಕ್ರಮವಿಲ್ಲವಾದರೂ ಈ ವಿಕಾಸ ಏಕಾಭಿಮುಖ. ಇದು ಸದಾ ಮುಮ್ಮೊಗನಾದದ್ದು–ಎಂಬುದು ಆಗಿನ ಮಾನವಕುಲ ವಿಜ್ಞಾನಿಗಳ ಮತವಾಗಿತ್ತು.

ಸಾಮೂಹಿಕ ಸಮಾಜವಾದದ ಪ್ರತಿಪಾದಕರಾದ ಮಾರ್ಕ್ಸ್–ಎಂಗೆಲ್ಲರು ಈ ವಾದದ ಪ್ರತಿಪಾದನೆಯಲ್ಲಿ ಮಾನವಕುಲವಿಜ್ಞಾನಿಗಳಿಗಿಂತಲೂ ಮುಂದೆ ಹೋದರು. ಇವರು ಕಂಡ ಸಾಮಾಜಿಕ ಪ್ರಗತಿಯ ದರ್ಶನ ಇನ್ನೂ ನಿಚ್ಚಳವಾದದ್ದು, ಖಚಿತವಾದದ್ದು. ಇಡೀ ಸಮಾಜವೇ ಸಾಮೂಹಿಕ ಸಾಮ್ಯವಾದದ ಗುರಿಯತ್ತ ಅನಿವಾರ್ಯವಾಗಿ ಮುಂದುವರಿಯುತ್ತದೆ; ಸಮಾಜದ ಆಂತರಿಕ ಪ್ರವೃತ್ತಿಗಳು ಈ ಬದಲಾವಣೆಗೆ ಪ್ರೇರಕವಾಗಿರುತ್ತವೆ–ಎಂದು ಇವರು ತರ್ಕಿಸಿದರು.

ಮುಂದೆ ಜೀವವಿಕಾಸ ಕ್ಷೇತ್ರದಲ್ಲಿ ಏಕಾಭಿಮುಖವಿಕಾಸವಾದದ ಬಗ್ಗೆ ಅನೇಕ ಪ್ರಶ್ನೆಗಳೂ ಸಂಶಯಗಳೂ ಉದ್ಭವಿಸಿದಾಗ ಸಂಸ್ಕೃತಿವಿಕಾಸಕ್ಕೆ ಸಂಬಂಧಿಸಿದಂತೆಯೂ ಈ ವಾದದಲ್ಲಿ ಅನೇಕ ತೊಡಕುಗಳು ಹುಟ್ಟಿಕೊಂಡುವು. ಸಮಾಜವಿಜ್ಞಾನಿಗಳು ಸಮಾಜವಿಕಾಸಕ್ಕಿಂತ ಹೆಚ್ಚಾಗಿ ಅದರ ಸಂಘಟನೆಯ ಬಗ್ಗೆ ಹೆಚ್ಚು ವಿಚಾರ ಹರಿಸಲಾರಂಭಿಸಿದರು. *

**ಏಕೀಕರಣ:** ಅಪೂರ್ಣವಾದ್ದಕ್ಕೆ ಇತರ ಭಾಗಗಳನ್ನು ಸೇರಿಸಿಯೋ ಬೇರೆ ಬೇರೆ ಭಾಗಗಳನ್ನು ಸಂಯೋಜಿಸಿಯೋ ಸಾಧಿಸುವ ಸಮಗ್ರೀಕರಣ, ಪೂರ್ಣಕರಣ; ಅನುಬಂಧ; ಅನುಕಲನ (ಇಂಟಿಗ್ರೇಷನ್). ಈ ಪ್ರಕ್ರಿಯೆಯ ಫಲವಾಗಿ ಪ್ರತಿ ಬಿಡಿ ಭಾಗವೂ ಪೂರ್ಣತೆಯ ಅಥವಾ ಸಮಗ್ರತೆಯ ಅಂಗವಾಗಿ ಮಾರ್ಪಾಡುತ್ತದೆ. ಆ ಭಾಗಗಳು ಪರಸ್ಪರವಾಗಿಯಲ್ಲದೆ ಪೂರ್ಣತೆಯ ಜೊತೆಗೆ ಸಂಬಂಧ ತಳೆಯುತ್ತವೆ; ತಮ್ಮ ಪ್ರತ್ಯೇಕತೆಯನ್ನು ಕರಗಿಸಿಕೊಳ್ಳುತ್ತವೆ. ಐಕ್ಯ ಸ್ಥಾಪಿಸುವ ಎಲ್ಲ ಕ್ರಿಯೆಯೂ ಏಕೀಕರಣವೇ. ಸಮಾಜ, ಸಂಸ್ಕೃತಿ, ರಾಜಕೀಯ, ಆಡಳಿತ, ಕೈಗಾರಿಕೆ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಏಕೀಕರಣ ಸಾಧ್ಯ. ಈ ನಾನಾ ಬಗೆಯ ಏಕೀಕರಣಗಳನ್ನು ಕುರಿತ ಲೇಖನಗಳನ್ನು ಮುಂದೆ ಕೊಡಲಾಗಿದೆ. *

**ಏಕೀಕರಣ, ಆಡಳಿತ ಮತ್ತು ರಾಜಕೀಯ:** ಆಡಳಿತ: ಆಡಳಿತ ವೈಯಕ್ತಿಕವಾಗಿರಬಹುದು ಅಥವಾ ಸಾರ್ವಜನಿಕವಾಗಿರಬಹುದು. ಸರ್ಕಾರ ನಿಶ್ಚಿತ ಗುರಿ ತಲುಪಲು ಕೈಕೊಳ್ಳುವ ಚಟುವಟಿಕೆ ಅಥವಾ ಕಾರ್ಯವಿಧಾನವೇ ಸಾರ್ವಜನಿಕ ಆಡಳಿತ. ಸರ್ಕಾರ ಆಡಳಿತ ಶಾಖೆಗಳಿಂದ ಕೂಡಿದ ವ್ಯವಸ್ಥೆ. ಸಾರ್ವಜನಿಕ ಆಡಳಿತ ಸುಲಭವಾದ ಕಾರ್ಯವಲ್ಲ. ಅದು ಅನೇಕ ಗುರಿಗಳನ್ನು ಏಕಕಾಲಕ್ಕೆ ಸಾಧಿಸಬೇಕಾಗುತ್ತದೆ. ಆದ್ದರಿಂದ ಅದು ಅನೇಕ ಆಡಳಿತ ಇಲಾಖೆಗಳನ್ನು ಹೊಂದಿರಬೇಕಾದ್ದು ಅನಿವಾರ್ಯ. ಆಧುನಿಕ ಸರ್ಕಾರಗಳ ಕಾರ್ಯವ್ಯಾಪ್ತಿ ವಿಸ್ತಾರಗೊಂಡಿದ್ದು ಅದು ರಕ್ಷಣೆ, ವಿದೇಶ ವ್ಯವಹಾರ, ಸಾರಿಗೆ ಸಂಪರ್ಕ, ಗೃಹ, ಹಣಕಾಸು, ವಾಣಿಜ್ಯ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ಕಾಯಿದೆ ಮುಂತಾದ ಅನೇಕ ಇಲಾಖೆಗಳನ್ನು ಹೊಂದಿರುತ್ತದೆ. ಈ ವಿಧದ ಇಲಾಖೆಗಳು ಏಕಕಾಲಕ್ಕೆ ಪ್ರತ್ಯೇಕವಾಗಿಯೂ ಆಡಳಿತಯಂತ್ರದ ಅಂಗಗಳಾಗಿಯೂ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ವಿವಿಧ ಇಲಾಖೆಗಳನ್ನು ಏಕೀಕರಿಸಿ ಒಂದು ಆಡಳಿತ ಯಂತ್ರವನ್ನು ಸಂಘಟಿಸುವ ಕಾರ್ಯವಿಧಾನವೇ ಆಡಳಿತ ಏಕೀಕರಣ. ಇಂಥ ಏಕೀಕೃತ ಆಡಳಿತಯಂತ್ರದಲ್ಲಿ ನಾನಾ ಇಲಾಖೆಗಳು ಅದರ ಅಂಗಗಳಾಗಿ ಚಟುವಟಿಕೆ ನಡೆಸಿ ಅದಕ್ಕೆ ಪೂರ್ಣತೆ ನೀಡುತ್ತವೆ. ಹೀಗೆ ಏಕೀಕರಿಸಲಾದ ಆಡಳಿತ ವ್ಯವಸ್ಥೆಯಲ್ಲಿ ಪ್ರತಿ ಕಾರ್ಯಸಂಸ್ಥೆಯೂ ನೇರವಾಗಿಯಾಗಲಿ ಇಲಾಖೆಗಳ ಮೂಲಕವಾಗಿಯಾಗಲಿ ಮುಖ್ಯ ಕಾರ್ಯದರ್ಶಿಯ ಅಥವಾ ಶಾಸನಾಂಗದ ನೇರ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಇದರಿಂದ ಯಾವುದೇ ನಿರ್ಣಯವನ್ನು ಕೈಗೊಳ್ಳಲು ಅಥವಾ ಯೋಜನೆಯನ್ನು ಸಿದ್ಧಪಡಿಸಲು ಅನುಕೂಲವಾಗುತ್ತದೆ. ಇಂಥ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರ ಮುಖ್ಯ ಕಾರ್ಯದರ್ಶಿಯಿಂದ ವಿವಿಧ ಇಲಾಖೆಗಳ ಮೂಲಕ ತಳದ ಕೊನೆಯವರೆಗೆ ಪಸರಿಸುತ್ತದೆ.

ಇಂದು ಸಾಮಾನ್ಯವಾಗಿ ಎಲ್ಲ ಸರ್ಕಾರಗಳೂ ಈ ವ್ಯವಸ್ಥೆ ಅನುಸರಿಸುತ್ತಿವೆ. ಭಾರತದಲ್ಲಿ ಕೂಡ ಏಕೀಕೃತ ಆಡಳಿತ ವ್ಯವಸ್ಥೆಯಿದೆ. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ರಾಷ್ಟ್ರಪತಿಯ ಹೆಸರಿನಲ್ಲಿ ಮತ್ತು ಪ್ರಧಾನ ಮಂತ್ರಿಯ ನೇತೃತ್ವದಲ್ಲಿ ಮುಖ್ಯ ಕಾರ್ಯದರ್ಶಿಯ ಅಧೀನಕ್ಕೊಳಪಟ್ಟಿರುತ್ತವೆ. ಈ ಪದ್ಧತಿ ಅನೇಕ ರೀತಿಯಿಂದ ಪ್ರಯೋಜನಕಾರಿಯಾದದ್ದು. ಇದರಿಂದಾಗಿ ಸರ್ಕಾರದ ವಿವಿಧ ಸೇವಾಸಂಸ್ಥೆಗಳನ್ನು ಒಗ್ಗೂಡಿಸಲು ಅನುಕೂಲವಾಗುತ್ತದೆ; ಅಧಿಕಾರವ್ಯಾಪ್ತಿ ಸರಾಗವಾಗಿ ಹೊಣೆಗಾರಿಕೆ ನಿಶ್ಚಿತವಾಗುತ್ತದೆ. ಅಲ್ಲದೆ ವಿವಿಧ ಇಲಾಖೆಗಳು ಒಂದೆಡೆ ಬರುವುದರಿಂದ ತಾಂತ್ರಿಕ ಆವಶ್ಯಕತೆಗಳನ್ನು ಸುಲಭವಾಗಿ ಪೂರೈಸಿಕೊಳ್ಳಬಹುದು. ಕಾರ್ಯದ ಪುನರಾವರ್ತನೆ ಅಥವಾ ಘರ್ಷಣೆಯಾಗದಂತೆ ನೋಡಿಕೊಳ್ಳುವುದು ಸಾಧ್ಯ. ಇಲಾಖೆ–ಇಲಾಖೆಗಳ ನಡುವೆ ಸಹಕಾರ ಹೆಚ್ಚಿಸಿ ಆಡಳಿತ ಮಟ್ಟವನ್ನು ಸುಧಾರಿಸಲು ಅನುವಾಗುತ್ತದೆ. ಇದಲ್ಲದೆ ಆಯವ್ಯಯಗಳ ಅಂದಾಜನ್ನು ಯೋಗ್ಯರೀತಿಯಲ್ಲಿ ರಚಿಸಿ ಯೋಜನೆಗಳನ್ನು ಯಶಸ್ವಿಯಾಗಿಸಲೂ ಸಹಕಾರಿಯಾಗುತ್ತದೆ. ಆದ್ದರಿಂದ ಏಕೀಕೃತ ಆಡಳಿತ ವ್ಯವಸ್ಥೆಯಲ್ಲಿ ಸಮತೋಲನ ಸಾಧ್ಯ.

ಈ ಬಗೆಯ ವ್ಯವಸ್ಥೆಯನ್ನು ಜಾರಿಗೆ ತರಬೇಕಾದರೆ ಆಡಳಿತ ಸಂಸ್ಥೆಗಳ ಪುನರ್ ವಿಂಗಡಣೆಯಾಗುವುದು ಅವಶ್ಯ. ಭಾರತ ಸ್ವಾತಂತ್ರ್ಯ ಪಡೆದ ಅನಂತರ ಈ ಪ್ರಕಾರದ ಆಡಳಿತ ವ್ಯವಸ್ಥೆ ರಚಿತವಾಗಿದ್ದು, ಆ ಕಾರ್ಯ ಮುಂದುವರಿಯುತ್ತಿದೆ. ಈ ರೀತಿ ಏಕೀಕೃತವಾದ ಆಡಳಿತ ವ್ಯವಸ್ಥೆಗೂ ಕೇಂದ್ರೀಕೃತ ಆಡಳಿತ ವ್ಯವಸ್ಥೆಗೂ ಬಹಳ ವ್ಯತ್ಯಾಸವುಂಟು. ಕೇಂದ್ರೀಕೃತ ಆಡಳಿತ ವ್ಯವಸ್ಥೆ ವಸ್ತುತಃ ಏಕೀಕೃತ ಆಡಳಿತ ವ್ಯವಸ್ಥೆಗೆ ವಿರುದ್ಧವಾದದ್ದು. ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ, ಮೇಲಿನಿಂದ ಕೆಳಗಿನವರೆಗೆ ಅಧಿಕಾರ ಹಂತಹಂತವಾಗಿ ಹರಿದುಬರುತ್ತದೆ. ಇಂಥ ವ್ಯವಸ್ಥೆಯಲ್ಲಿ ಆಡಳಿತಯಂತ್ರ ನಿಧಾನವಾಗಿ ಚಲಿಸುವುದರಿಂದ ಆಡಳಿತ ಕಾರ್ಯಗಳಲ್ಲಿ ವಿಳಂಬವಾಗುವುದು ಸಹಜ. ಈ ದೋಷವನ್ನು ನಿವಾರಿಸಲೆಂದೇ ಆಡಳಿತದ ವಿಕೇಂದ್ರೀಕರಣವನ್ನು ಅನುಮೋದಿಸಲಾಗಿದೆ. ಆದರೆ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲೂ ಅನೇಕ ನ್ಯೂನತೆಗಳಿರುವುದು ಕಂಡುಬಂದಿದೆ. ಹೀಗೆ ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಗಳಿಗಿಂತ ಏಕೀಕೃತ ಆಡಳಿತ ವ್ಯವಸ್ಥೆಯೇ ಹೆಚ್ಚು ಉಪಯುಕ್ತವಾದದ್ದೆನ್ನಬಹುದು. ಈ ಕಾರಣದಿಂದ ಇಂದು ಅನೇಕ ರಾಷ್ಟ್ರಗಳು ತಮ್ಮ ಆಡಳಿತ ಯಂತ್ರರಚನೆಯಲ್ಲಿ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣಗಳಿಗಿಂತ ಏಕೀಕೃತ ಆಡಳಿತ ವ್ಯವಸ್ಥೆಯನ್ನು ಹೆಚ್ಚುಹೆಚ್ಚಾಗಿ ಅಳವಡಿಸಿಕೊಳ್ಳುತ್ತಲಿವೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲೂ ಏಕೀಕೃತ ಆಡಳಿತ ವ್ಯವಸ್ಥೆಯನ್ನು ಕಾಣಬಹುದು.

**ರಾಜಕೀಯ:** ಒಂದು ಭೌಗೋಳಿಕ ಪ್ರದೇಶದಲ್ಲಿರುವ ಜನರನ್ನೆಲ್ಲ ಒಂದು ಸರ್ಕಾರ ಅಥವಾ ಆಡಳಿತವ್ಯವಸ್ಥೆಗೆ ಒಳಪಡಿಸಿ, ಅವರಲ್ಲಿ ತಾವೆಲ್ಲ ಒಂದೆಂಬ ಭಾವನೆ ಮೂಡುವಂತೆ ಕ್ರಮಕೈಕೊಳ್ಳುವುದೇ ರಾಜಕೀಯ ಏಕೀಕರಣ. ಒಂದು ಆಡಳಿತವ್ಯವಸ್ಥೆಗೆ ಒಳಪಟ್ಟವರು ಒಂದು ರಾಷ್ಟ್ರದವರೆಂಬ ಕಲ್ಪನೆ ಹೊಂದಿ ಏಕೀಭವಿಸುವುದು ಸಹಜವೂ ಅನಿವಾರ್ಯವೂ ಆಗಿ ಪರಿಣಮಿಸಬಹುದು.

ಸಾಮಾನ್ಯವಾಗಿ ಒಂದು ರಾಷ್ಟ್ರದಲ್ಲಿ ಅನೇಕ ಬುಡಕಟ್ಟುಗಳೂ ಜನಾಂಗಗಳೂ ಧರ್ಮಗಳೂ ಹಿತಾಸಕ್ತಿಗಳೂ ರಾಜಕೀಯ ಪಕ್ಷಗಳೂ ಗುಂಪುಗಳೂ ಪ್ರದೇಶಗಳೂ ಇರುತ್ತವೆ. ಇವನ್ನೆಲ್ಲ ಒಂದುಗೂಡಿಸಿ ಇವೆಲ್ಲ ಯಾವುದಾದರೊಂದು ಸಾಮಾನ್ಯ ಸೂತ್ರಕ್ಕೆ ಬದ್ಧವಾಗುವ ಹಾಗೆ ಮಾಡುವುದು ರಾಜಕೀಯ ಏಕೀಕರಣದ ಗುರಿ. ರಾಜಕೀಯ ವ್ಯಕ್ತಿಗಳ, ಘಟಕಗಳ, ಗುಂಪುಗಳ, ಸ್ಥಳೀಯ ಸಂಸ್ಥೆಗಳ, ಪ್ರದೇಶಗಳ ಅಥವಾ ದೇಶಗಳ ನಡುವೆ ಏಕತೆ ಸಾಧಿಸಿ ಅವುಗಳ ಪರಸ್ಪರ ರಾಜಕೀಯ ಚಟುವಟಿಕೆಗಳಿಗೆ ಒಂದು ನಿರ್ದಿಷ್ಟ ರೂಪು ಕೊಡುವುದೇ ರಾಜಕೀಯ ಏಕೀಕರಣ ಅಥವಾ ಅನುಕಲನ.

ರಾಜಕೀಯ ಏಕೀಕರಣದ ಬಗ್ಗೆ ಏಕ್ ಕೆಲವು ಮುಖ್ಯ ಅಂಶಗಳನ್ನು ಸೂಚಿಸಿದ್ದಾನೆ:

1. ರಾಜ್ಯದ ಆಡಳಿತದ ಬಗ್ಗೆ ಪ್ರಜೆಗಳಿಗೆ ದೃಢವಾದ ಭಕ್ತಿಯಿರಬೇಕು. ರಾಜ್ಯ ತಮಗಿಂತಲೂ ಮಹತ್ತರವಾದ್ದು ಎಂಬ ನಂಬುಗೆ ಅವರಿಗೆ ಇರಬೇಕು.
2. ರಾಜಕೀಯ ಪಕ್ಷಗಳು ಒಂದಾಗಿ ಸಹಕರಿಸುವ ಅವಕಾಶವಿರಬೇಕು.
3. ಪೈಪೋಟಿಗಿಳಿದಿರುವ ಹಿರಿಯ ರಾಜಕೀಯ ಪಕ್ಷಗಳ ಗಮನವನ್ನು ಬೇರೆ ಕಡೆ ತಿರುಗಿಸಬೇಕು.
4. ರಾಜಕೀಯ ಪಕ್ಷಗಳ ಸದಸ್ಯರು ರಾಜಕೀಯ ಹುದ್ದೆಯ ಬಗ್ಗೆ ಗೌರವದಿಂದ ನಡೆದುಕೊಳ್ಳಬೇಕಲ್ಲದೆ, ಆ ಹುದ್ದೆಯನ್ನು ಅಲಂಕರಿಸುವ ವ್ಯಕ್ತಿಯನ್ನಲ್ಲ.
5. ರಾಜ್ಯಗಳು ಎಲ್ಲ ಸಂದರ್ಭದಲ್ಲೂ ಒಕ್ಕೂಟಕ್ಕೆ ವಿಧೇಯವಾಗಿರಬೇಕು.
6. ಬಹುಕಾಲದಿಂದ ಸ್ಥಿರವಾಗಿರುವ ಗುಂಪಿನಲ್ಲಿ ಏಕೀಕರಣವಾಗಬೇಕು.
7. ರಾಜಕೀಯ ವ್ಯವಸ್ಥೆ ಮೇಲಿಂದ ಮೇಲೆ ಮಾರ್ಪಡಿಸಲು ಬಾರದಂತಿರಬೇಕು.

ರಾಜಕೀಯ ಏಕೀಕರಣದಲ್ಲಿ ಮುಖ್ಯವಾಗಿ ಭೌಗೋಳಿಕ ಪ್ರದೇಶಗಳನ್ನು ಮತ್ತು ಅದರ ಜನತೆಯನ್ನು ಒಂದು ರಾಜಕೀಯ ವ್ಯವಸ್ಥೆಯ ಕಕ್ಷೆಯಲ್ಲಿ ತರುವ ಪ್ರಯತ್ನವನ್ನು ಕಾಣಬಹುದು. ಭಿನ್ನ ರೀತಿಯ ಜನರನ್ನು, ಭಿನ್ನ ರೀತಿಯ ಪ್ರದೇಶಗಳನ್ನು ಒಂದುಗೂಡಿಸುವಾಗ ಅವುಗಳಲ್ಲಿ ಒಂದೇ ವಿಧದ ವರ್ತನೆಯನ್ನುಂಟುಮಾಡುವ ಕೆಲವು ಅಂಶಗಳು ಇರುವುದು ವಿಹಿತ. ಉದಾಹರಣೆಗಾಗಿ, ಸ್ವತಂತ್ರವಾಗಿದ್ದ ದೇಶಗಳು ತಮ್ಮ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದಾಗಲಿ ಇತರ ಪ್ರಬಲ ರಾಷ್ಟ್ರಗಳಿಂದ ಒದಗಬಹುದಾದ ಗಂಡಾಂತರ ಮತ್ತು ಆಕ್ರಮಣವನ್ನು ಎದುರಿಸುವುದಕ್ಕಾಗಲಿ ತಮ್ಮಲ್ಲೇ

ಒಂದು ಕೂಟ ರಚಿಸಿಕೊಂಡು ಸಂಯುಕ್ತ ರಾಜ್ಯವಾಗಿ ಪರಿವರ್ತಿತವಾಗಬಹುದು. ಈ ಬಗೆಯ ಒಕ್ಕೂಟದಲ್ಲಿ ಸೇರುವಂಥ ಜನರು ಒಂದೇ ಬಗೆಯ ಧರ್ಮ ಸಂಸ್ಕೃತಿಗಳಿಗೆ ಒಳಪಟ್ಟವರೂ ಒಂದೇ ಭಾಷೆ ಆಡುವವರೂ ಆಗಿದ್ದರೆ ಅದು ಹೆಚ್ಚು ಭದ್ರವಾಗಿರುತ್ತದೆ. ಇಂಗ್ಲೆಂಡ್ ಮತ್ತು ವೇಲ್ಸ್ ದೇಶಗಳು ಒಂದುಗೂಡಿದಾಗ ಇದು ಕೇವಲ ರಾಜಕೀಯ ಒಂದುಗೂಡಿಕೆ ಮಾತ್ರವಾಗಿರದೆ ಇಂಗ್ಲೆಂಡಿನ ಚರ್ಚಿನ ಮುಖಾಂತರ ಧಾರ್ಮಿಕ ಒಂದುಗೂಡುವಿಕೆಯೂ ಆಗಿತ್ತು. ಆದರೆ ಅಮೆರಿಕ ಸಂಯುಕ್ತಸಂಸ್ಥಾನ ಒಂದುಗೂಡಿದಾಗ ಅದಕ್ಕೆ ಇಂಥ ಧಾರ್ಮಿಕ ತಳಹದಿ ಇರಲಿಲ್ಲ. ಅಂದು ವಸಾಹತುಗಳಾಗಿದ್ದ ಅನೇಕ ಪ್ರದೇಶಗಳು ತಮ್ಮವೇ ಆದ ಪರಂಪರೆಗಳನ್ನು ಹೊಂದಿದ್ದ ಭಾಗಗಳಾಗಿದ್ದರೂ ಅವು ಅಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯ ಕಾರಣಗಳಿಂದಾಗಿ ಒಂದಾಗಬೇಕಾಯಿತು. ಭಾರತ ಬ್ರಿಟಿಷರ ಆಡಳಿತದಲ್ಲಿದ್ದಾಗ ಒಂದು ರೀತಿಯ ರಾಜಕೀಯ ಏಕೀಕರಣ ಹಾಗೂ ಆಡಳಿತ ಏಕತೆ ಉಂಟಾಗಿತ್ತು. ಆದರೆ ಅದು ಸಂಪೂರ್ಣ ಐಕ್ಯವಾಗಿರಲಿಲ್ಲ. ರಾಜಕೀಯವಾಗಿ ಇಲ್ಲಿ ಹಲವಾರು ಪ್ರಾಂತ್ಯಗಳೂ ದೇಶೀಯ ಸಂಸ್ಥಾನ 'ಗಳೂ ಇದ್ದುವು. ಸ್ವಾತಂತ್ರ್ಯಾನಂತರ ಸಂವಿಧಾನದಲ್ಲಿ ಭಾರತ ಒಕ್ಕೂಟವನ್ನು ಸ್ಥಾಪಿಸಲಾಯಿತು. ರಾಜ್ಯಗಳನ್ನೂ ಕೇಂದ್ರ ಶಾಸಿತ ಪ್ರದೇಶಗಳನ್ನೂ ಒಳಗೊಂಡ ಭಾರತ ಒಕ್ಕೂಟ ಈಗ ಅಸ್ತಿತ್ವದಲ್ಲಿದೆ. ಭಾರತದಲ್ಲಿ ಭಿನ್ನ ಪ್ರದೇಶಗಳೂ ಭಿನ್ನ ಭಾಷೆಗಳೂ ಭಿನ್ನ ಧರ್ಮಗಳೂ ಭಿನ್ನ ಸಂಸ್ಕೃತಿಗಳೂ ಇದ್ದರೂ ರಾಜಕೀಯ ಏಕೀಕರಣವನ್ನು ಕಾಣಬಹುದು. ಆದರೆ ಇಂಥ ಸಂದರ್ಭದಲ್ಲಿ ಒಂದು ವಿಶಿಷ್ಟ ಸಮಸ್ಯೆ ಉದ್ಭವಿಸುತ್ತದೆ. ಎಂದರೆ ವಿಭಿನ್ನ ರೀತಿಯ ಜನ ಹಾಗು ಪ್ರದೇಶಗಳು ಯಾವುದೇ ಸಂದರ್ಭದಲ್ಲಿ ಅನಿವಾರ್ಯವಾಗಿ ರಾಜಕೀಯ ಒಗ್ಗಟ್ಟನ್ನು ಸ್ಥಾಪಿಸಿದರೂ ಇಂಥ ಏಕೀಕರಣ ಸುಮಧುರ ಮತ್ತು ಶಾಶ್ವತ ಆಗಬೇಕಾದರೆ ಕೇವಲ ಬಾಹ್ಯ ಒಂದುಗೂಡುವಿಕೆ ಇದ್ದರೆ ಸಾಲದು. ಅದರೊಡನೆ ಆಂತರಿಕ ಒಂದುಗೂಡುವಿಕೆ ಅಥವಾ ಭಾವೈಕ್ಯ ಅತ್ಯವಶ್ಯ. ಹಾಗಿಲ್ಲದ ಪಕ್ಷದಲ್ಲಿ ಅಂಥ ರಾಜಕೀಯ ಒಂದುಗೂಡುವಿಕೆ ಅಪಾಯಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದಲೇ ಭಾರತದ ಪ್ರಧಾನಮಂತ್ರಿಯಾಗಿದ್ದ ಜವಾಹರಲಾಲ್ ನೆಹರೂರವರು ಭಾರತೀಯರಲ್ಲಿ ಆತ್ಮೀಯತೆ ಬೆಳೆದು ಭಾವೈಕ್ಯ ಉಂಟಾಗಬೇಕೆಂದು ಪದೇ ಪದೇ ಹೇಳುತ್ತಿದ್ದರು. ಇಲ್ಲದಿದ್ದರೆ ಅಂತಃಕಲಹಗಳು ಹೆಚ್ಚಾಗಿ ಒಕ್ಕೂಟದ ರಾಜ್ಯಗಳ ನಡುವೆ ಗಡಿಸಂಬಂಧವಾಗಿಯಾಗಲಿ ನದೀ ನೀರಿನ ವಿತರಣೆಗಾಗಲಿ ಕಲಹಗಳು ಉಂಟಾಗಿ ಏಕತೆಗೆ ಧಕ್ಕೆ ತಗಲಬಹುದು. ಸಾಂಸ್ಕೃತಿಕವಾಗಿಯೂ ಧಾರ್ಮಿಕವಾಗಿಯೂ ಭದ್ರವಾದ ಏಕತೆ ಸ್ಥಾಪಿಸಿರುವೆವೆಂದು ಕೊಂಡಿರುವ ದೇಶಗಳಲ್ಲೂ ಪದೇ ಪದೇ ಪ್ರಾದೇಶಿಕ ಸಾಂಸ್ಕೃತಿಕ ಅಥವಾ ಆರ್ಥಿಕ ಹಿತಾಸಕ್ತಿ ಭಿನ್ನತೆಗಳು ಬೃಹದಾಕಾರ ತಾಳಿ ರಾಜಕೀಯ ಏಕತೆಯನ್ನೊಡೆಯುವಂಥ ಅಪಾಯದ ಹಂತ ಮುಟ್ಟುವುದುಂಟು. ಬ್ರಿಟಿಷ್ ಸಂಯುಕ್ತ ರಾಜ್ಯದಲ್ಲಿ ವೆಲ್ಸ್ ಹಾಗೂ ಸ್ಕಾಟ್ ಜನರ ಆತ್ಮಪ್ರತ್ಯಯ ಬೆಳೆಯುತ್ತಿರುವುದಾದರೂ ಅದು ಏಕತೆಯ ಕಟ್ಟನ್ನೊಡೆಯುವ ಹಂತಕ್ಕೆ ಬಂದಿಲ್ಲ. ಆದರೆ ಭಾರತದಲ್ಲಿ ಹಲವು ಶತಮಾನಗಳ ಕಾಲ ಒಟ್ಟಿಗಿದ್ದವರೇ ಭಾರತ-ಪಾಕಿಸ್ತಾನಗಳ ಅಡಿಯಲ್ಲಿ ರಾಜ್ಯವನ್ನು ಹಂಚಿಕೊಂಡದ್ದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಭಿನ್ನತೆಗಳ ವೈಪರೀತ್ಯದ ಪರಿಣಾಮ. ನಾನಾ ಸಂಸ್ಕೃತಿಯುಕ್ತವಾದ ಮತ್ತು ಹಲವಾರು ರಾಷ್ಟ್ರೀಯ ಮನೋಧರ್ಮಗಳಿರುವ ರಾಜ್ಯಗಳು ಸೋವಿಯತ್ ಒಕ್ಕೂಟದಡಿಯಲ್ಲಿ ಸಾಧಿಸಿರುವ ಏಕತೆಯನ್ನು ಭಿನ್ನತೆಗಳ ನಡುವಣ ಏಕತೆಯೆನ್ನ ಬಹುದು. ಸಮಾನ ಗುರಿಯೇ ಈ ಭಿನ್ನ ಸಂಸ್ಕೃತಿಗಳ ಏಕತೆಯ ಸೂತ್ರ.

ಇದೂ ಅಲ್ಲದೆ ಇಂದು ಜಾಗತಿಕ ಸರ್ಕಾರ ಸ್ಥಾಪನೆಯ ದಿಶೆಯಲ್ಲಿ ಹಲವರು ವಿಚಾರ ಮಾಡುತ್ತಿದ್ದಾರೆ. ಕೇವಲ ರಾಷ್ಟ್ರಗಳ ಒಕ್ಕೂಟವಲ್ಲದೆ ಅಂತಾರಾಷ್ಟ್ರೀಯ ಒಕ್ಕೂಟ ಸಾಧಿಸುವುದರ ಮೂಲಕ ಜಾಗತಿಕ ಸರ್ಕಾರ ಸ್ಥಾಪಿಸುವ ಕನಸು ಕಾಣುವವರಿದ್ದಾರೆ. ಈ ಒಕ್ಕೂಟದ ಮೂಲಕ ವಿಶ್ವಶಾಂತಿ ಸ್ಥಾಪನೆಯಾಗಬೇಕೆಂಬ ಆಕಾಂಕ್ಷೆಯಿಂದ 19ನೆಯ ಶತಮಾನದ ಕೊನೆಯ ಭಾಗದಿಂದ ಇಂದಿನವರೆಗೆ ಅನೇಕ ಪ್ರಯತ್ನಗಳು ನಡೆದಿವೆ. ಅಂತಾರಾಷ್ಟ್ರೀಯ ಅಂಚೆಸಂಸ್ಥೆ, ಅಂತಾರಾಷ್ಟ್ರೀಯ ಕಾರ್ಮಿಕಸಂಸ್ಥೆ, ಅಂತಾರಾಷ್ಟ್ರೀಯ ರೆಡ್‌ಕ್ರಾಸ್, ಅಂತಾರಾಷ್ಟ್ರೀಯ ಸಂಪರ್ಕಸಾಧನ ಸಂಸ್ಥೆ ಮುಂತಾದವುಗಳಲ್ಲದೆ ರಾಷ್ಟ್ರಕೂಟ ವಿಶ್ವಸಂಸ್ಥೆ ಇವು ಈ ಬಗೆಯ ವಿಶ್ವ ಏಕೀಕರಣ ಪ್ರಯತ್ನದ ನಿದರ್ಶನಗಳು.

(ಎ.ಎಂ.ಆರ್.)

**ಏಕೀಕರಣ, ಕೈಗಾರಿಕೆಯಲ್ಲಿ:** ಆಧುನಿಕ ಕೈಗಾರಿಕೆಯ ಒಂದು ಮುಖ್ಯ ಲಕ್ಷಣವೆಂದರೆ ಕಾರ್ಖಾನೆಗಳ ಗಾತ್ರದಲ್ಲಿ ಕಂಡುಬರುವ ಅತಿ ಬೆಳವಣಿಗೆಯ ಪ್ರವೃತ್ತಿ. ಕಾರ್ಖಾನೆಗಳ ಗಾತ್ರ ಎರಡು ವಿಧಗಳಲ್ಲಿ ಬೆಳೆಯುತ್ತದೆ. ಕಾರ್ಖಾನೆಗಳು ಸ್ವಾಭಾವಿಕ ವಾಗಿಯೇ ಬೆಳೆದು ದೊಡ್ಡ ಉದ್ಯಮಗಳಾಗಿ ಪರಿಣಮಿಸಬಹುದು. ಉದಾಹರಣೆಗೆ 1,000 ಘಟಕಗಳನ್ನು ಉತ್ಪಾದಿಸುತ್ತಿರುವ ಒಂದು ಕಾರ್ಖಾನೆ ಕೆಲವು ವರ್ಷಗಳ ಅನಂತರ 10,000 ಘಟಕಗಳನ್ನು ತಯಾರಿಸುವ ದೊಡ್ಡ ಉದ್ಯಮವಾಗಿ ಬೆಳೆಯಬಹುದು. ಸ್ವಾಭಾವಿಕ ಬೆಳವಣಿಗೆಯಿಂದ ಕಾರ್ಖಾನೆಗಳು ಬೃಹದ್ ಗಾತ್ರ ಪಡೆಯಬೇಕಾದರೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಸಣ್ಣ ಉದ್ಯಮ ಸಂಸ್ಥೆಗಳು ಅತ್ಯಲ್ಪಕಾಲದಲ್ಲಿ ಬೃಹತ್ ಉದ್ಯಮಗಳಾಗಿ ಬೆಳೆಯುವ ಮತ್ತೊಂದು ಮಾರ್ಗವೆಂದರೆ ಏಕೀಕರಣ.

ಸ್ಪರ್ಧೆಯ ಅನಿಷ್ಟಗಳನ್ನು ನಿವಾರಿಸಿಕೊಳ್ಳಲೋ ಬೃಹದ್ ಗಾತ್ರದ ಅನುಕೂಲಗಳನ್ನು ಪಡೆಯಲೋ ಹಲವು ಉದ್ಯಮಗಳು ಒಂದಾಗುವ ಎಲ್ಲ ಕ್ರಮಗಳೂ ಸ್ಥೂಲವಾಗಿ ಏಕೀಕರಣವೇ, ಇದನ್ನು ಉದ್ಯಮಕೂಟ ಎಂಬ ಲೇಖನದಲ್ಲಿ ವಿವರಿಸಲಾಗಿದೆ. ಏಕೀಕರಣದ ಫಲವಾಗಿ ಒಂದು ಕೈಗಾರಿಕಾ ಸಂಸ್ಥೆಯ ಬೆಳವಣಿಗೆಯಾಗುವುದಕ್ಕೂ ಉದ್ಯಮಗಳ ಸಂಘಟನೆಯಿಂದ ಆಗುವ ಬೆಳವಣಿಗೆಗೂ ಬಹಳ ವ್ಯತ್ಯಾಸವುಂಟು. ಕಚ್ಚಾಸಾಮಗ್ರಿಯನ್ನು ಪಡೆಯುವುದರಿಂದ ಹಿಡಿದು ಪದಾರ್ಥಗಳು ಅನುಭೋಗಿಯ ಕೈಸೇರುವವರೆಗೆ ತಯಾರಿಕೆ ಹಂಚಿಕೆಗಳ ಎಲ್ಲ ಘಟ್ಟಗಳ ಮೇಲೂ ಹತೋಟಿ ಹೊಂದುವುದೇ ಕೈಗಾರಿಕೆಯ ಏಕೀಕರಣ. ತಯಾರಿಕೆಯ ಒಂದು ಕಾರ್ಯಗತಿಯಿಂದ ಇನ್ನೊಂದು ಕಾರ್ಯಗತಿಗೆ ಸುಲಲಿತವಾಗಿ ಮುಂದುವರಿಯುವಂಥ ಸುವ್ಯವಸ್ಥೆಯೇ ಕೈಗಾರಿಕೆಯ ನಿಜವಾದ ಏಕೀಕರಣವೆನ್ನಬಹುದು; ಸಂಘಟಿತ ಉದ್ಯಮಗುಂಪುಗಳದ್ದು ಇನ್ನೊಂದು ಬಗೆಯ ಏಕೀಕರಣ. ಇಲ್ಲಿ ಈ ಉದ್ಯಮಗಳು ಸಂಘಟಿತವಾಗದಿದ್ದರೆ ಮಾರುಕಟ್ಟೆಯಲ್ಲಿ ಇವುಗಳ ನಡುವೆ ಸ್ಪರ್ಧೆ ಇರುತ್ತದೆ. ಕೈಗಾರಿಕೆಯ ನಾನಾ ಕಾರ್ಯಗತಿಗಳ ಸಂಯೋಜನೆಯಿಂದ ಸಂಭವಿಸುವ ಏಕೀಕರಣದ ವಿವಿಧ ಘಟಕಗಳ ನಡುವೆ ವಾಸ್ತವವಾಗಿ ಪರಸ್ಪರ ಸ್ಪರ್ಧೆಯ ಪ್ರಶ್ನೆಯೇ ಇರುವುದಿಲ್ಲ. ಕಚ್ಚಾಸಾಮಗ್ರಿಯ ಸರಬರಾಜು ಮತ್ತು ಮಾರುಕಟ್ಟೆಗಳ ಹತೋಟಿ ಹೊಂದಬಯಸುವ ತಯಾರಿಕೆದಾರನ ವತಿಯಿಂದಲೋ ತಾನು ಮಾರಾಟಮಾಡುವ ಸರಕುಗಳ ಮೇಲೆ ಸಮರ್ಪಕ ನಿಯಂತ್ರಣ ಹೊಂದಲಿಚ್ಛಿಸುವ ವ್ಯಾಪಾರಿಯ ಪ್ರಯತ್ನದಿಂದಲೋ ತನ್ನ ಉತ್ಪಾದನೆಗೆ ಗ್ರಾಹಕರ ಭರವಸೆ ಪಡೆಯಬಯಸುವ ಕಚ್ಚಾಸಾಮಗ್ರಿ ತಯಾರಕನಿಂದಲೋ ಅಥವಾ ಇವರೆಲ್ಲರ ಪರಸ್ಪರಾವಲಂಬನದ ಅರಿವಿನ ಫಲವಾಗಿಯೋ ಈ ಬಗೆಯ ಏಕೀಕರಣ ಸಾಧ್ಯವಾಗಬಹುದು. ಆದ್ದರಿಂದ ಒಂದು ದೃಷ್ಟಿಯಿಂದ ಉದ್ಯಮ ಕೂಟಗಳು ಏಕೀಕರಣ ಪ್ರಯತ್ನಗಳೇ ಆದರೂ ಸ್ಪರ್ಧೆಯ ನಿವಾರಣೆಗಿಂತ ಹೆಚ್ಚಾಗಿ ಕೈಗಾರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಏಕೀಕರಣವನ್ನು ಇಲ್ಲಿ ಪರಿಶೀಲಿಸಲಾಗಿದೆ.

**ಉದಗ್ರ ಏಕೀಕರಣ:** ಸ್ಥೂಲವಾಗಿ ಹೇಳುವುದಾದರೆ ಎಲ್ಲ ಉದ್ಯಮಗಳಲ್ಲೂ ಇಷ್ಟಿಷ್ಟು ಏಕೀಕರಣ ಇದ್ದೇ ಇರುವುದುಂಟು. ಇದು ಸಾಪೇಕ್ಷವಾದ್ದು. ಬಲು ಸಣ್ಣ ಪದಾರ್ಥವಾದ ಗುಂಡುಸೂಜಿಯ ತಯಾರಿಕೆಯಿಂದ ಹಿಡಿದು, ಅತಿ ದೊಡ್ಡ ಯಂತ್ರಸ್ಥಾವರದ ನಿರ್ಮಾಣದವರೆಗೆ ಪ್ರತಿಯೊಂದು ಉದ್ಯಮವೂ ನಾನಾ ಕಾರ್ಯಗತಿಗಳ ಸಮ್ಮಿಲನದ ಫಲ. ಒಂದು ಕಾರ್ಯಗತಿಯ ಪೂರೈಕೆಯಲ್ಲೇ ಇನ್ನೊಂದು ಕಾರ್ಯಗತಿಯ ಆರಂಭ. ಅದು ಮತ್ತೊಂದಕ್ಕೆ ಪೂರಕ. ಉತ್ಪಾದನೆಯ ಗಾತ್ರ ಹೆಚ್ಚಿದಂತೆಲ್ಲ ಇಡೀ ಉತ್ಪಾದನೆಯನ್ನೇ ಅಧಿಕಾಧಿಕ ಕಾರ್ಯಗತಿಗಳಾಗಿ ವಿಂಗಡಿಸಿ ಅವಕ್ಕೆ ವಿಶಿಷ್ಟವಾದ ಯಂತ್ರೋಪಕರಣಗಳನ್ನು ಅಳವಡಿಸುವ ಪ್ರಯತ್ನ ನಡೆಯುವಂತೆ, ಈ ಇಡೀ ಕೈಗಾರಿಕೆಯೇ ಒಂದು ಕಾರ್ಯಗತಿಯಾಗಿ ಪರಿಣಮಿಸಿ ಇದಕ್ಕೆ ಹಿಂದಣ ಮುಂದಣ ಕೊಂಡಿಗಳನ್ನೆಲ್ಲ ಕೂಡಿಸುವ ಪ್ರಯತ್ನವೂ ಸಾಗಬಹುದು. ಅಚ್ಚುಕೂಟದಲ್ಲಿ ಅಕ್ಷರಸಂಯೋಜನೆ, ಪಡಿಯಚ್ಚು ತಯಾರಿಕೆ, ಮುದ್ರಣ, ಮಡಿಸುವಿಕೆ, ಅಂಚು ಕತ್ತರಿ, ಹೊಲಿಗೆ, ಕಟ್ಟು ಮುಂತಾದ ನಾನಾ ಕಾರ್ಯಗತಿಗಳಿರಬಹುದು. ಆದರೆ ಇಡೀ ಅಚ್ಚುಕೂಟದ ಉದ್ಯಮವೇ ಒಂದು ಕಾರ್ಯಗತಿಯೆಂದು ಪರಿಗಣಿಸಿ ಇದಕ್ಕೆ ಹಿಂದಿನ ಕಾಗದತಯಾರಿಕೆ, ಇದಕ್ಕೆ ಹೊಂದಿಕೊಳ್ಳಬಹುದು. ಹೀಗೆ ತುದಿಯಿಂದ ಕೆಳಮೊಗನಾಗಿಯೋ ಬುಡದಿಂದ ಮೇಲುಮೊಗನಾಗಿಯೋ ನಡುವಿನಿಂದ ಊರ್ಧ್ವ ಮತ್ತು ಅಧೋಮುಖಗಳಲ್ಲೂ ಇದು ಬೆಳೆಯಬಹುದು. ಈ ನಾನಾ ಉದ್ಯಮಗಳನ್ನೆಲ್ಲ ಕೂಡಿಸಿ ಒಂದೇ ಆಡಳಿತದೊಳಗೆ ಬರುವಂತೆ ವ್ಯವಸ್ಥೆಯಾಗಬಹುದು. ವಾಸ್ತವವಾಗಿ ಇದು ಉದಗ್ರ ಏಕೀಕರಣ ಅಥವಾ ಕೂಟವೇ ಎನ್ನಬಹುದು.

ಇಲ್ಲಿ ಒಂದು ಉದ್ಯಮದ ಪದಾರ್ಥವೇ ಇನ್ನೊಂದರ ಕಚ್ಚಾಸಾಮಗ್ರಿ. ನಾನಾ ಉದ್ಯಮಗಳ ಏಕೀಕರಣದಿಂದ ಇಡೀ ಉತ್ಪಾದನಸರಣಿಯೇ ಬಹುತೇಕ ಸ್ವಯಂಪೂರ್ಣ ವಾಗಿ ಪರಿಣಮಿಸುವುದಲ್ಲದೆ ನಾನಾ ಬಿಡಿ ಕೈಗಾರಿಕೆಗಳ ಉಪೋತ್ಪನ್ನಗಳ ಸದುಪಯೋಗ ವಾಗುತ್ತದೆ. ಈ ಉದಗ್ರ ಏಕೀಕರಣದಿಂದ ಲಭಿಸುವ ಅನುಕೂಲಗಳಿವು: ಒಂದನೆಯದಾಗಿ, ಕಚ್ಚಾಪದಾರ್ಥಗಳಿಗಾಗಿ ಇತರ ಉದ್ಯಮ ಸಂಸ್ಥೆಗಳ ಮೇಲೆ ಅವಲಂಬಿಸುವ ಅಗತ್ಯವಿರು ವುದಿಲ್ಲ. ಉತ್ಪಾದಿಸಿದ ಪದಾರ್ಥದ ಉತ್ಕೃಷ್ಟತೆ ಏಕರೀತಿಯಾಗಿರುವುದು ಸಾಧ್ಯ. ಕಚ್ಚಾಪದಾರ್ಥದ ವ್ಯವಸ್ಥಿತ ಸರಬರಾಜಿನ ಫಲವಾಗಿ ಉತ್ಪಾದನೆ ಕ್ರಮಬದ್ಧವಾಗಿರುತ್ತದೆ. ಎರಡನೆಯದಾಗಿ, ಒಂದೇ ವಸ್ತುವನ್ನು ಬೇರೆ ಬೇರೆ ಉದ್ಯಮ ಸಂಸ್ಥೆಗಳು ಉತ್ಪಾದಿಸುವಾಗ

ಪ್ರತಿಯೊಂದು ಸಂಸ್ಥೆಯೂ ತನ್ನ ಪದಾರ್ಥದ ಮಾರಾಟಕ್ಕಾಗಿ ಮತ್ತೊಂದನ್ನವಲಂಬಿಸ ಬೇಕಾಗುತ್ತದೆ. ತಮ್ಮ ಪೂರೈಸಿದ ವಸ್ತುಗಳ ಕ್ರಮಬದ್ಧ ಮಾರಾಟ ಸೌಕರ್ಯ ಪಡೆಯುವ ದೃಷ್ಟಿಯಿಂದ ಇಂಥ ಸಂಸ್ಥೆಗಳು ತಮ್ಮ ಪದಾರ್ಥಗಳನ್ನು ಕೊಳ್ಳುವ ಸಂಸ್ಥೆಗಳೊಡನೆ ಏಕೀಕರಣ ಹೊಂದಬಹುದು. ಬೃಹದ್ ಗಾತ್ರ ಉತ್ಪಾದನೆಯ ಫಲವಾಗಿ ಇದಕ್ಕೆ ಅಗತ್ಯವಾದ ಕಚ್ಚಾಸಾಮಗ್ರಿಯ ಪರಿಮಾಣವೂ ಮಾರಾಟಕ್ಕಾಗಿ ಉತ್ಪಾದಿಸುವ ಸರಕುಗಳ ಮೊತ್ತವೂ ಅಧಿಕವಾಗಿರುವುದರಿಂದ ಈ ಬಗೆಯ ಉದಗ್ರ ಏಕೀಕರಣದಿಂದ ಹೆಚ್ಚು ಸೌಕರ್ಯವೂ ಉಳಿತಾಯವೂ ಸಂಭವಿಸುತ್ತವೆ.

**ಸಮತಲ ಏಕೀಕರಣ:** ಒಂದೇ ಬಗೆಯ ಪದಾರ್ಥಗಳನ್ನು ಉತ್ಪಾದಿಸಿ ಮಾರಾಟ ಮಾಡುವ ಸಂಸ್ಥೆಗಳ ಏಕೀಕರಣವೂ ದಕ್ಷತೆಯಲ್ಲೂ ಮಿತವ್ಯಯದಲ್ಲೂ ಪರಿಣಮಿಸುತ್ತದೆ. ಒಂದೇ ಪದಾರ್ಥವನ್ನು ಅಥವಾ ಸಾಮ್ಯವಿರುವ ಅನೇಕ ಪದಾರ್ಥಗಳನ್ನು ಉತ್ಪಾದಿಸುವ ಬೇರೆ ಬೇರೆ ವ್ಯವಸ್ಥಾಪಕರ ಹತೋಟಿಯಲ್ಲಿರುವ ಅನೇಕ ಉದ್ಯಮಸಂಸ್ಥೆಗಳನ್ನು ಸಂಯೋಜಿಸಿದರೆ ಸಂಭವಿಸುವ ಸಮತಲ ಏಕೀಕರಣ ದಿಂದ ಈ ಪದಾರ್ಥಗಳ ಉತ್ಪಾದನೆಯ ಗಾತ್ರ ದೊಡ್ಡದಾಗಿ, ಬೃಹದ್ ಗಾತ್ರದ ಉತ್ಪಾದನೆಯ ಎಲ್ಲ ಅನುಕೂಲಗಳೂ ದೊರಕುತ್ತವೆ.

**ಪಾರ್ಶ್ವಸ್ಥ ಏಕೀಕರಣ:** ವಿವಿಧವಾದರೂ ಸಂಬಂಧಿವಸ್ತುಗಳನ್ನು ಉತ್ಪಾದಿಸುವ ಸಂಸ್ಥೆಗಳು ಸಂಯೋಜಿಸಿದರೆ ಅದು ಪಾರ್ಶ್ವಸ್ಥ ಏಕೀಕರಣವೆನಿಸುತ್ತದೆ. ಚಕ್ಕಳದಿಂದ ಜೀನು, ಎಕ್ಕಡ, ಕೈಚೀಲ ಮುಂತಾದವನ್ನು ಉತ್ಪಾದಿಸಬಹುದು. ಈ ಪದಾರ್ಥಗಳ ಉತ್ಪಾದನೆಯನ್ನು ಪ್ರತ್ಯೇಕವಾಗಿ ಬೇರೆ ಬೇರೆ ಉದ್ಯಮ ಸಂಸ್ಥೆಗಳು ಕೈಗೊಳ್ಳುವುದಕ್ಕೆ ಬದಲಾಗಿ ಒಂದೇ ಉದ್ಯಮ ಸಂಸ್ಥೆ ಇವೆಲ್ಲವನ್ನೂ ಉತ್ಪಾದಿಸಿದರೆ ಹಲವು ಸೌಕರ್ಯಗಳನ್ನು ಪಡೆಯಬಹುದು. ಹೀಗಾಗಿ, ಚಕ್ಕಳವನ್ನು ಕಚ್ಚಾಸಾಮಗ್ರಿಯಾಗಿ ಉಪಯೋಗಿಸುವ ಅನೇಕ ಸಂಸ್ಥೆಗಳು ಪಾರ್ಶ್ವಸ್ಥ ಏಕೀಕರಣ ಹೊಂದಬಹುದು.

ಪಾರ್ಶ್ವಸ್ಥ ಏಕೀಕರಣ ಎರಡು ಬಗೆಯದಾಗಿರಬಹುದು. ಮೇಲಿನ ಉದಾಹರಣೆ ಯಲ್ಲಿ ತೋರಿಸಿರುವಂತೆ ಒಂದೇ ಕಚ್ಚಾಪದಾರ್ಥದಿಂದ ಉತ್ಪಾದಿಸಲಾಗುವ ಅನೇಕ ಪೂರೈಸಿದ ವಸ್ತುಗಳನ್ನು ತಯಾರುಮಾಡುವ ಉದ್ಯಮಗಳು ಏಕೀಕರಣ ಹೊಂದಿದರೆ ಅದು ವಿಭಿನ್ನ ಪಾರ್ಶ್ವಸ್ಥ ಏಕೀಕರಣ. ಏಕೆಂದರೆ ಇಲ್ಲಿ ಒಂದೇ ಕಚ್ಚಾವಸ್ತುವಾದ ಚಕ್ಕಳ ವಿಭಿನ್ನ ಪದಾರ್ಥಗಳಿಗೆ ಕಚ್ಚಾಸಾಮಗ್ರಿಯಾಗಿ ಪರಿಣಮಿಸುತ್ತದೆ. ಈ ಉದ್ಯಮಗಳನ್ನು ಸಂಯೋಜಿಸಿದರೆ ಕಚ್ಚಾಸಾಮಗ್ರಿಯಾದ ಚಕ್ಕಳವನ್ನು ಅಧಿಕ ಪ್ರಮಾಣದಲ್ಲಿ ಕೊಳ್ಳುವ ಕಾರಣ ಬೃಹದ್ ಗಾತ್ರದ ಕೊಳ್ಳುವಿಕೆಯ ಸೌಕರ್ಯಗಳನ್ನು ಪಡೆಯಲು ಸಾಧ್ಯ. ಇದಕ್ಕೆ ವಿರುದ್ಧವಾಗಿ ಒಂದೇ ಸಿದ್ಧ ವಸ್ತುವನ್ನು ಉತ್ಪಾದಿಸುವ ಸಂಸ್ಥೆಗಳಿಗೆ ಬೇಕಾಗುವ ಬೇರೆ ಬೇರೆ ಕಚ್ಚಾಸಾಮಗ್ರಿಗಳನ್ನು ಪ್ರತ್ಯೇಕವಾಗಿ ಸರಬರಾಜು ಮಾಡುವ ಅನೇಕ ಉದ್ಯಮಗಳು ಏಕೀಕರಣ ಹೊಂದಬಹುದು. ಉದಾಹರಣೆಗೆ, ಉಕ್ಕು ತಯಾರಿಸುವ ಸಂಸ್ಥೆಗೆ ಕಬ್ಬಿಣದ ಅದಿರು, ಕಲ್ಲಿದ್ದಲು, ಕಲ್ಲಿದ್ದಲಿನ ಕಿಟ್ಟ ಮೊದಲಾದವು ಆವಶ್ಯಕ. ಇವನ್ನು ತಯಾರಿಸುವ ಉದ್ಯಮಗಳೆಲ್ಲ ಒಂದಾದರೆ ಅದರಿಂದ ಮಾರುಕಟ್ಟೆಯ ವೆಚ್ಚಗಳೆಷ್ಟೋ ಕಡಿಮೆಯಾಗುವುದಲ್ಲದೆ ಸಿದ್ಧಗೊಂಡ ಪದಾರ್ಥದ ಗುಣಮಟ್ಟ ಏಕರೀತಿಯಾಗಿರುತ್ತದೆ.

**ಬಹುಭುಜ ಏಕೀಕರಣ:** ಯಾವುದೇ ಉದ್ಯಮಸಂಸ್ಥೆ ತನ್ನ ಉತ್ಪಾದನ ಪರಂಪರೆಗೆ ಬೇಕಾಗುವ ಸಹಾಯಕ ವಸ್ತುಗಳನ್ನಾಗಲಿ ಸೇವೆಗಳನ್ನಾಗಲಿ ತನ್ನಲ್ಲಿಯೆ, ಆಂತರಿಕವಾಗಿ, ಒದಗಿಸುವ ವ್ಯವಸ್ಥೆ ಮಾಡಿಕೊಂಡ ಪಕ್ಷದಲ್ಲಿ ಅದು ಬಹುಭುಜ ಏಕೀಕರಣ. ಉದಾಹರಣೆಗೆ, ಪಾದರಕ್ಷೆ ತಯಾರಕ ತನಗೆ ಬೇಕಾಗುವ ದಾರ, ಮೊಳೆ, ರಟ್ಟುಪೆಟ್ಟಿಗೆ, ಡಬ್ಬಗಳು ಮೊದಲಾದವುಗಳನ್ನು ತನ್ನಲ್ಲಿಯೇ ತಯಾರಿಸಬಹುದು. ಹಾಗೆಯೇ ತನ್ನವೇ ಉಪಕರಣಗಳಿಂದ ತನ್ನ ಕಾರ್ಮಿಕರ ಸೇವೆಗಳನ್ನು ಉಪಯೋಗಿಸಿ ದುರಸ್ತು ಕಾರ್ಯವನ್ನೂ ಕೈಗೊಳ್ಳಬಹುದು. ಇದು ಬಹುಭುಜ ಏಕೀಕರಣ. ವೆಚ್ಚವನ್ನು ಕಡಿಮೆಗೊಳಿಸುವುದೇ ಇದಕ್ಕೆ ಮೂಲ ಪ್ರೇರಣೆ.

ಯಾವುದೇ ಬಗೆಯ ಏಕೀಕರಣವಾಗಲಿ, ಉದ್ಯಮಸಂಸ್ಥೆಯ ಗಾತ್ರವನ್ನು ಅಧಿಕಗೊಳಿಸಿ ಅಧಿಕ ಉತ್ಪಾದನೆಯ ಅನುಕೂಲವನ್ನೊದಗಿಸುತ್ತದೆ. ಈ ವ್ಯವಸ್ಥೆಯಿಂದ ಉದ್ಯಮಸಂಸ್ಥೆಗಳು ತಮಗೆ ಬೇಕಾದ ಕಚ್ಚಾಸಾಮಗ್ರಿಗಳ ಮೇಲೆ ಹತೋಟಿ ಸ್ಥಾಪಿಸಿಕೊಳ್ಳುವವು. ತಮ್ಮ ಪದಾರ್ಥಗಳ ಮಾರಾಟವನ್ನು ನಿಶ್ಚಿತಗೊಳಿಸುವವು. ಅಲ್ಲದೆ ಮಾರುಕಟ್ಟೆ ವೆಚ್ಚ ಮೊದಲಾದವುಗಳನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸುವ ಅನುಕೂಲಗಳೂ ಇವಕ್ಕೆ ಲಭಿಸುತ್ತವೆ.

ಆದರೆ ಈ ಪ್ರವೃತ್ತಿ ಮಿತಿಮೀರಿ ಬೆಳೆದರೆ ಕೈಗಾರಿಕೆಯ ಏಕಸ್ವಾಮ್ಯ ಬೆಳೆದು ಸಮಾಜಕ್ಕೆ ಅಪಾಯಕಾರಿಯಾಗಿಯೂ ಪರಿಣಮಿಸಬಹುದು. ಇಂಥ ಸಂಭವವನ್ನು ನಿವಾರಿಸಲು ಎಲ್ಲ ಮುಂದುವರಿದ ದೇಶಗಳಲ್ಲೂ ಸೂಕ್ತ ಕಾನೂನುಗಳು ಜಾರಿಯಲ್ಲಿವೆ.

(ಎ.ಬಿ.ಎ.)

**ಏಕೀಕರಣ, ರಾಷ್ಟ್ರೀಯ:** ಒಂದೇ ಪ್ರಭುತ್ವದ ಅಡಿಯಲ್ಲಿ, ಸಾರ್ವಜನಿಕವಾಸ ಒಂದೇ ಸೀಮೆಯಲ್ಲಿ ವಾಸಿಸುತ್ತಿರುವ, ಎಂದರೆ ಸಮಾನ ಆಡಳಿತ ಮತ್ತು ಸಾಂಸ್ಕೃತಿಕ ಲಕ್ಷಣಗಳನ್ನು ಪಡೆದಿರುವ ಜನಸಮುದಾಯವೇ ರಾಷ್ಟ್ರ, ಎಂಬ ವ್ಯಾಖ್ಯೆಯಲ್ಲಿಯೇ ಏಕೀಕರಣದ ತತ್ತ್ವ ಅಡಗಿದೆ. ಆದರೆ ಈ ವ್ಯಾಖ್ಯೆಯನ್ನು ಕಟ್ಟುನಿಟ್ಟಾಗಿ ಅನ್ವಯಿಸುವುದಾದರೆ ವಿಶ್ವದ ಅನೇಕ ದೇಶಗಳು ರಾಷ್ಟ್ರಗಳೆನಿಸಿಕೊಳ್ಳಲಾರವು. ಈ ವ್ಯಾಖ್ಯೆ ಒಂದು ಆದರ್ಶವಷ್ಟೆ. ಸಂಪೂರ್ಣ ಏಕತಾಭಾವ ಇಂಥ ಸಂದರ್ಭದಲ್ಲಿ ಮಾತ್ರ ಸಾಧ್ಯ. ಆಗಲೂ ಜೀವನ ವಿಧಾನಗಳಲ್ಲಿನ ಭಿನ್ನತೆ, ವರಮಾನ ಸಂಪತ್ತುಗಳ ತರ–ತಮ, ಸಂಪರ್ಕಸಾಧನಗಳ ಅಸಮರ್ಪಕತೆ ಮುಂತಾದ ನಾನಾ ಕಾರಣಗಳಿಂದ ಈ ಏಕತೆಗೆ ಭಂಗ ಬರಬಹುದು. ಆದರೆ ನಿಸ್ತೇಜವೂ ವರ್ಣರಹಿತವೂ ಆದ ಸಮಾನತೆಯೇ ಏಕತೆಯಲ್ಲ. ಭಿನ್ನ ಭಾಷೆ ಧರ್ಮ ಸಂಸ್ಕೃತಿಗಳ ಜನ ಒಂದಾಗಿ ಬಾಳುವುದು ಸಾಧ್ಯ. ಎಲ್ಲ ರೀತಿಯಲ್ಲೂ ಅಖಂಡವೆನಿಸಿದ ರಾಷ್ಟ್ರ ಗತಕಾಲದ ಮೃತಕಲ್ಪನೆ. ಇಂಥ ಕಲ್ಪನೆಯ ಫಲವಾಗಿ ಅನೇಕ ರಾಷ್ಟ್ರಗಳಲ್ಲಿ ಇಡೀ ಜನಾಂಗಗಳೇ ಕಷ್ಟಕ್ಕೆ ಒಳಗಾಗಿ ಆ ರಾಷ್ಟ್ರಗಳ ಹಿತಕ್ಕೆ ಧಕ್ಕೆ ಒದಗಿರುವುದು ಇತಿಹಾಸದ ಸಂಗತಿ. ಜನಾಂಗ ಪರಿವರ್ತನೆ ಮತ್ತು ಬಹಿಷ್ಕಾರಗಳ ಮೂಲಕ ರಾಷ್ಟ್ರೀಯ ಭಾವೈಕ್ಯ ಸ್ಥಾಪಿಸುವ ಯತ್ನಗಳೆಲ್ಲ ಸಾಮಾನ್ಯವಾಗಿ ವಿಫಲಗೊಂಡಿವೆ. ಬ್ರಿಟನ್, ಫ್ರಾನ್ಸ್, ಸ್ಪೇನ್‍ಗಳು ಯುರೋಪಿನ ಅತ್ಯಂತ ಪ್ರಾಚೀನ ರಾಷ್ಟ್ರಗಳು. ಆದರೆ ಅವು ಕೂಡ ಸಂಪೂರ್ಣ ಭಾವೈಕ್ಯ ಪಡೆದ ರಾಷ್ಟ್ರಗಳೆನ್ನಲಾಗುವುದಿಲ್ಲ. ಅಲ್ಲಿನ ಜನ ಉಜ್ವಲ ರಾಷ್ಟ್ರಪ್ರೇಮಿಗಳು. ಆದರೆ ಅಲ್ಲೂ ಪ್ರಾದೇಶಿಕ ವೈವಿಧ್ಯಗಳುಂಟು. ಬ್ರಿಟನ್ ಸ್ಕಾಟ್, ಇಂಗ್ಲಿಷ್ ಮತ್ತು ವೆಲ್ಷ್ ಜನರ ತಮ್ಮತನ ಗಮನಾರ್ಹವಾದ್ದು. ಕೆನಡದಲ್ಲಿ ಕ್ವಿಬೆಕ್ ಪ್ರಾಂತ್ಯದ ಜನ ಹೊರಡಿರುವ ಪ್ರತ್ಯೇಕತಾ ಚಳವಳಿಯನ್ನೂ ಉದಾಹರಿಸಬಹುದು. ಫ್ರಾನ್ಸಿನಲ್ಲೂ ಪ್ರಾಂತೀಯ ಭಿನ್ನತೆಗಳುಂಟೇ ಉಂಟು. ಸ್ಪೇನಿನ ಕ್ಯಾಟಲೇನಿಯ ಪ್ರಾಂತ್ಯದ ಸ್ವಾಯತ್ತೆಯ ಚಳವಳಿಯ ಹಿಂದೆ ಪ್ರತ್ಯೇಕತಾಭಾವವನ್ನು ಕಾಣಬಹುದು. ಆದರೂ ಈ ದೇಶಗಳ ಏಕತೆಗೆ ಧಕ್ಕೆ ಬಂದಿದೆಯೆಂದು ಭಾವಿಸಲಾಗುವುದು. 20ನೆಯ ಶತಮಾನದ ಕಲ್ಪನೆಯೇ ಬೇರೆ ತರ. ಸರ್ವಜನಹಿತ ಸಾಧಿಸುವ ಉದ್ದೇಶ ಹೊಂದಿರುವ ರಾಜಕೀಯ ವ್ಯವಸ್ಥೆಯ ಅಡಿಯಲ್ಲಿ ಭಿನ್ನ ಭಾಷೆ ಧರ್ಮ ಸಂಸ್ಕೃತಿಗಳ ಜನಾಂಗಗಳು ಸಹಜೀವನ ನಡೆಸುವಂತಾಗಬೇಕೆಂಬುದೇ 20ನೆಯ ಶತಮಾನದ ಆದರ್ಶ. ಸೋವಿಯತ್ ದೇಶ ಅನೇಕ ಜನಾಂಗಗಳ ಒಕ್ಕೂಟ. ಅಲ್ಲೂ ಅಯಾ ಪ್ರಾದೇಶಿಕ ವೈಶಿಷ್ಟ್ಯಗಳಿಲ್ಲದೆ ಇಲ್ಲ. ಜಾರ್ಜಿಯ, ಉಕ್ರೇನ್ ಮುಂತಾದವು ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಸಾಹಿತ್ಯಿಕವಾಗಿಯೂ ತಮ್ಮ ವೈಶಿಷ್ಟ್ಯಗಳನ್ನು ಬೆಳಸಿಕೊಳ್ಳುತ್ತಿವೆ. ಪಶ್ಚಿಮ ಯುರೋಪಿನ ಸಂಘಟನೆಯ ಪ್ರಯತ್ನ ನಡೆಯುತ್ತಿರುವಾಗಲೇ ಅಲ್ಲಿನ ರಾಷ್ಟ್ರಗಳ ವಿಭಿನ್ನ ಧರ್ಮ ಸಂಸ್ಕೃತಿಗಳ ರಕ್ಷಣೆಗೂ ಮಹತ್ತ್ವ ಕೊಡಲಾಗಿದೆ. ಭಿನ್ನತೆಗಳೇನೇ ಇರಲಿ, ಸರ್ವರಿಗೂ ಸಮಾನವಾದ ವಿಶಾಲ ತತ್ತ್ವಗಳ ತಳಹದಿಯ ಮೇಲೆ ಏಕೀಕರಣ ಸಾಧಿಸುವುದೇ ಇಂದಿನ ಆದರ್ಶ.

**ಭಾರತದ ಭಾವೈಕ್ಯ:** ರಾಜಕೀಯವಾಗಿಯೂ ಭೌಗೋಳಿಕವಾಗಿಯೂ ಒಂದಾಗಿರುವ ಸ್ವತಂತ್ರ ಭಾರತದ ಅಖಂಡತೆಯ ಕಲ್ಪನೆ ಬಲು ಪುರಾತನವಾದ್ದು; ಆಡಳಿತ ದೃಷ್ಟಿಯಿಂದ ಇಡೀ ದೇಶ ಒಂದಾಗದಿದ್ದಾಗಲೂ ಇದು ಇದ್ದದ್ದು. ರಾಷ್ಟ್ರದ ಅಖಂಡತೆಯ ದೃಷ್ಟಿ ಬ್ರಿಟಿಷರ ಕೊಡುಗೆಯೆಂದೂ ಭಾರತದಲ್ಲಿ ಇದು ಅತ್ಯಂತ ಈಚೆಗೆ ಬಂದ ಭಾವನೆಯೆಂದೂ ಪರಿಗಣಿಸುವುದು ತಪ್ಪು. ಬ್ರಿಟಿಷರ ಆಡಳಿತದ ಕಾಲದಲ್ಲಿ ಇಡೀ ದೇಶ ಒಂದೇ ಆಡಳಿತಕ್ಕೆ ಒಳಪಟ್ಟಿತ್ತಾದರೂ ಇದಕ್ಕೂ ಹಿಂದೆ ಈ ಬಗೆಯ ಸಾಧನೆ ಆಗಿಲ್ಲದಿರಲಿಲ್ಲ. ಅಶೋಕನ ಸಾಮ್ರಾಜ್ಯ ಅಫ್ಘಾನಿಸ್ತಾನದಿಂದ ಕರ್ನಾಟಕದವರೆಗೆ ಹಬ್ಬಿತ್ತು. ಗುಪ್ತರೂ ಚೋಳರೂ ಮೊಘಲರೂ ಭಾರತದ ಬಹು ಭಾಗದ ಮೇಲೆ ತಮ್ಮ ಸಾಮ್ರಾಜ್ಯ ವಿಸ್ತರಿಸಿದ್ದರು. ಬ್ರಿಟಿಷರ ಕಾಲದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ಅಖಂಡ ಪ್ರದೇಶ ಅವರ ಆಡಳಿತಕ್ಕೆ ಬಂತು. ಎಲ್ಲರಿಗೂ ಸಮಾನವಾಗಿದ್ದ ದಾಸ್ಯವೂ ಕ್ಲೈಬ್ಯವೂ ಭಾರತೀಯರ ಮನಸ್ಸಿನಲ್ಲಿ ಸ್ವಾತಂತ್ರ್ಯದ ಹಂಬಲವನ್ನೂ ಏಕತೆಯ ಕಲ್ಪನೆಯನ್ನೂ ಭದ್ರಗೊಳಿಸದುವೆಂಬುದು ನಿಸ್ಸಂಶಯ.

ಆದರೆ ಪ್ರಾಂತ್ಯ, ಜಾತಿ, ಧರ್ಮ, ಭಾಷೆಗಳನ್ನೂ ಮೀರಿದ ಭಾರತೀಯತ್ವ ಬಲು ಹಳೆಯದು. ನಾನಾ ಧರ್ಮಗಳನ್ನು ಅನುಸರಿಸುವ, ಅನೇಕ ಭಾಷೆಗಳನ್ನಾಡುವ ಜನರಿರುವ ದೇಶವೆಂದು ಇದನ್ನು ಹೊಗಳಿರುವ ಮಾತು ಅಥರ್ವವೇದದಲ್ಲಿದೆ. ವಿಷ್ಣುಪುರಾಣ, ಮಹಾಭಾರತ, ಕಾಳಿದಾಸನ ರಘುವಂಶ ಮುಂತಾದ ಅಸಂಖ್ಯಾತ ಕೃತಿಗಳಲ್ಲಿ ಭಾರತದ ಭೌಗೋಳಿಕ ಏಕತೆಯ ಚಿತ್ರ ನಿಚ್ಚಳವಾಗಿ ಮೂಡಿಬಂದಿದೆ. ಸಮಾನ ಸುಖ, ಸಮಾನ ದುಃಖ ಮತ್ತು ಸಮಾನ ಆಕಾಂಕ್ಷೆಗಳ ದೃಷ್ಟಿಯಿಂದ ಭಾರತದ ಜನವೆಲ್ಲ ಒಂದು.

ಭಾರತದಲ್ಲಿ ಹಿಂದಿನಿಂದಲೂ ಅನೇಕ ಧರ್ಮಗಳ ಜನ ಒಂದಾಗಿ ಬಾಳಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ನಡೆದಂಥ ಧರ್ಮಮೂಲ ಯುದ್ಧಗಳು ಭಾರತದಲ್ಲಿ ಎಂದೂ ನಡೆದಿಲ್ಲ. ಪರ್ಷಿಯನರು, ಗ್ರೀಕರು, ಶಕರು, ಹೂಣರು ಮುಂತಾದ ಅನೇಕ ಜನ ಭಾರತದ ಮೇಲೆ ಆಕ್ರಮಣ ನಡೆಸಿದ್ದುಂಟು. ಇವರಲ್ಲನೇಕರು ಕೊಳ್ಳೆಯೊಂದಿಗೆ ಹಿಂದಿರುಗಿದರು. ಇಲ್ಲೇ ಉಳಿದವರು ಭಾರತೀಯರೇ ಆದರು. ಅವರಿಂದ ಭಾರತೀಯ ಸಂಸ್ಕೃತಿ ಹೆಚ್ಚು ವಿಶಾಲವಾಯಿತು. ಭಾರತದಲ್ಲಿ ದೇವರುಗಳು ಕೂಡ ಕಾಲದಿಂದ ಕಾಲಕ್ಕೆ ಬದಲಾಗಿರುವುದನ್ನು ಕಾಣಬಹುದು. ಇದಕ್ಕೆ ಏಕೀಕರಣದ ಪ್ರಭಾವವೂ ಒಂದು ಮುಖ್ಯಕಾರಣ. ಏಕತೆಯಲ್ಲಿ ಅನೇಕತೆಯ ತತ್ತ್ವವೇ ಭಾರತದ ಧರ್ಮ ಸಂಸ್ಕೃತಿ ಭಾಷೆ ಸಾಹಿತ್ಯಗಳ ತಳಹದಿ.

ಮುಸ್ಲಿಮರು ಭಾರತವನ್ನು ಗೆದ್ದಾಗ ಭಾವೈಕ್ಯಕ್ಕೆ ಇನ್ನೊಂದು ಮುಖ ಬಂತು. ಹಿಂದಿನ ಆಕ್ರಮಣಕಾರರಂತೆ ಇವರು ಭಾರತದ ಆದುವರೆಗಿನ ಸಂಸ್ಕೃತಿಯಲ್ಲಿ ಒಂದಾಗಲಿಲ್ಲ. ಇವರು ದೇಶ ಗೆದ್ದದ್ದೇ ಅಲ್ಲದೆ ತಮ್ಮ ಧರ್ಮದ ಪ್ರಸಾರವನ್ನೂ ಮಾಡಿದರು. ಭಾರತದಲ್ಲಿ ಇವರ ವೈಶಿಷ್ಟ್ಯ ಉಳಿದುಕೊಂಡು ಬಂತು; ಭಾರತೀಯರನೇಕರು ಮುಸ್ಲಿಮರಾಗಿ ಮತಾಂತರ ಹೊಂದಿದರು. ಹೊರಗಿನಿಂದ ಬಂದು ಇಲ್ಲೇ ಉಳಿದುಕೊಂಡವರೂ ಭಾರತೀಯರೇ ಆದರು. ಇವರ ಧರ್ಮವೂ ಭಾರತೀಯವೇ ಆಯಿತು. ಹಿಂದೂ–ಮುಸ್ಲಿಂ ಸಾಮರಸ್ಯ ಪ್ರಯತ್ನ ಸಂತತವಾಗಿ ಸಾಗಿತು; ಬಹಳಮಟ್ಟಿಗೆ ಸಿದ್ಧಿಸಿತು.

ಅನಂತರ ಮೊಘಲ್ ಸಾಮ್ರಾಜ್ಯ ಮುರಿದು ಬಿತ್ತು. ಬ್ರಿಟಿಷರು ಭಾರತಕ್ಕೆ ಬಂದಾಗ ಸಾಮರಸ್ಯ ಪ್ರಯತ್ನ ಸ್ಥಗಿತವಾಯಿತು. ಸಾಮ್ರಾಜ್ಯವನ್ನು ಕಳೆದುಕೊಂಡ ನೋವು ಅನೇಕ ಮುಸ್ಲಿಮರ ಮನಸ್ಸಿನಲ್ಲಿದ್ದುದರಿಂದ ಅವರು ಪ್ರತ್ಯೇಕವಾಗುಳಿದರು. ಬ್ರಿಟಿಷರೂ ಈ ಪ್ರತ್ಯೇಕತೆಯನ್ನು ಪೋಷಿಸಿ ಭಾರತೀಯರ ಭಾವೈಕ್ಯಕ್ಕೆ ಭಂಗ ತಂದರು.

ಸ್ವತಂತ್ರ ಭಾರತ, ರಾಜ್ಯಗಳ ಒಕ್ಕೂಟ ಮಾತ್ರವಲ್ಲ. ಸಂಸ್ಕೃತಿಗಳ ಕೂಟ. ಇಡೀ ಭಾರತಕ್ಕೆ ಏಕತೆಯನ್ನೂ, ಮಹತ್ತ್ವವನ್ನೂ ನೀಡಿರುವ ಹಿಂದೂ ಸಂಸ್ಕೃತಿಯೊಂದಿಗೆ ಮುಸ್ಲಿಂ ಸಂಸ್ಕೃತಿಯ ವೈಶಿಷ್ಟ್ಯವೂ ಸಹಬಾಳ್ವೆ ನಡೆಸುತ್ತಿದೆ. ಜೊತೆಗೆ ಪಾರ್ಸಿ, ಆಂಗ್ಲೊ–ಇಂಡಿಯನ್ ಮುಂತಾದ ಅಲ್ಪಸಂಖ್ಯಾತ ಸಂಸ್ಕೃತಿ ಸಮೂಹವೂ ಭಾರತದಲ್ಲಿ ಬೆರೆತುಕೊಂಡಿದೆ. ಇವುಗಳ ಜೊತೆಗೆ ಪ್ರಾದೇಶಿಕ ವೈಶಿಷ್ಟ್ಯಗಳೂ ಉಂಟು. 'ಏಕದಲ್ಲಿ ಅನೇಕ' ಎಂಬುದು ಇಲ್ಲಿನ ಹಳೆಯ ಸೂತ್ರ. ರಾಷ್ಟ್ರದ ಕಲ್ಪನೆ ಎಲ್ಲರಿಗೂ ಸಮಾನವಾದ್ದು. ಇತ್ತೀಚಿನ ಇತಿಹಾಸ, ಭೌಗೋಳಿಕ ಪರಿಸ್ಥಿತಿ, ಆರ್ಥಿಕ ಕ್ಷೇತ್ರದ ಸಮಾನ ಹಿತ, ಸಾರ್ವತ್ರಿಕ ಆಕಾಂಕ್ಷೆ–ಇವು ಭಾರತದ ಭಾವೈಕ್ಯವನ್ನು ಸ್ಥಿರಗೊಳಿಸುತ್ತಿರುವ ಪ್ರಧಾನ ಅಂಶಗಳು.

(ಎಂ.ಆರ್.)

**ಏಕೀಕರಣ, ಸಾಂಸ್ಕೃತಿಕ:** ಸಂಕೇತಗಳು ಸಂಸ್ಕೃತಿಯ ಲಕ್ಷಣಗಳು. ಈ ಲಕ್ಷಣಗಳ ಪರಸ್ಪರ ಸಂಬಂಧವೇ ಸಾಂಸ್ಕೃತಿಕ ಏಕೀಕರಣ. ಸಂಸ್ಕೃತಿಯ ಹುರುಳಿನ ಅರಿವು, ಸಾಂಸ್ಕೃತಿಕ ಏಕೀಕರಣದ ವರ್ಗೀಕರಣ ಮತ್ತು ಸಂಕೇತಗಳ ನಡುವಣ ಸಂಬಂಧ ಅಥವಾ ಸಾಂಸ್ಕೃತಿಕ ಏಕೀಕರಣದ ರೂಪ–ಈ ಪ್ರಶ್ನೆಗಳು ವಿದ್ವಾಂಸರನ್ನು ಕಾಡುತ್ತಿರುವ ಮುಖ್ಯ ಸಮಸ್ಯೆಗಳು.

ಸಂಸ್ಕೃತಿಯ ವಿವಿಧ ಅಂಗಗಳು ಪರಸ್ಪರ ಸಮ್ಮಿಲನಗೊಳ್ಳಬಲ್ಲವು ಎಂಬ ಭಾವನೆ ಹಲವಾರು ಸಂದರ್ಭಗಳಲ್ಲಿ ಪ್ರಯೋಜನಕಾರಿಯಾಗಿದೆ. ವಿವಿಧ ಸಂಸ್ಕೃತಿಗಳ ಸಾಮ್ಯತೆಗಳನ್ನು ಆದರ್ಶಭಾವನಾಪ್ರಧಾನವಾಗಿ ವರ್ಣಿಸುವಾಗ, ಒಂದು ಸಂಸ್ಕೃತಿಯ ವಿಶಿಷ್ಟಗುಣಗಳನ್ನು ಬೇರೆ ಸಂಸ್ಕೃತಿಯ ಜನ ಸ್ವೀಕರಿಸುವಾಗ, ಅಧಿಕಾರವರ್ಗದವರು ವಿವಿಧ ಸಂಸ್ಕೃತಿಗಳಿಗೆ ಸೇರಿದ ಜನರಿಂದ ಸ್ವೀಕೃತವಾಗಬಹುದಾದ ಸುಧಾರಣೆಗಳನ್ನು ಆಚರಣೆಗೆ ತರುವಾಗ, ಹಲವಾರು ಸಾಮಾಜಿಕ ನ್ಯೂನತೆಗಳನ್ನು ತಡೆಹಿಡಿಯಬೇಕಾದಾಗ ಅಥವಾ ವಿವಿಧ ಸಂಸ್ಕೃತಿಗಳ ತುಲನಾತ್ಮಕ ವಿಮರ್ಶೆಮಾಡುವಾಗ ಈ ರೀತಿಯ ಸಾಂಸ್ಕೃತಿಕ ಸಮ್ಮಿಲನ ಸಾಧ್ಯವೆಂಬ ನಂಬಿಕೆ ಉಪಯೋಗಕ್ಕೆ ಬರುತ್ತದೆ. ಆಧುನಿಕ ಸಮಾಜದಲ್ಲಿನ ಆಗುಹೋಗುಗಳು ಈ ಭಾವನೆಯ ಉಪಯುಕ್ತತೆಯನ್ನು ಎತ್ತಿ ತೋರಿಸಿವೆ. ಪ್ರೌಢಶಿಕ್ಷಣ, ರೇಡಿಯೋ, ಟೆಲಿವಿಷನ್, ಚಲನಚಿತ್ರ ಮುಂತಾದ ಬಹುಮುಖ ಸಂಪರ್ಕಮಾಧ್ಯಮ, ವಿರೋಧಾತ್ಮಕ ಸಂಸ್ಕೃತಿಗಳಲ್ಲಿ ಏರ್ಪಡುವ ಸಂಪರ್ಕ ಇವೇ ಮುಂತಾದ ಕಾರಣಗಳಿಂದ ಸಾಂಸ್ಕೃತಿಕ ಏಕೀಕರಣಭಾವನೆಗೆ ಹೆಚ್ಚು ಪ್ರಾಶಸ್ತ್ಯ ದೊರಕುತ್ತಿದೆ. ವಿಶ್ವದಾದ್ಯಂತ ನಡೆಯುತ್ತಿರುವ ಸಾಂಪ್ರದಾಯಿಕ ಮತ್ತು ಆಧುನಿಕ ಸವಾಜಗಳ ಏಕೀಕರಣಕ್ಕೆ ತಳಹದಿಯಾಗಬೇಕೆಂಬ ಆಶಯಕ್ಕೆ ಇದು ಪೂರಕವಾಗಬೇಕಾಗಿದೆ.

ಸಾಂಸ್ಕೃತಿಕ ವಿಧಾನಗಳ ಸಮೂಹದಲ್ಲಿರಬೇಕಾದ ಆಂತರಿಕ ಹೊಂದಾಣಿಕೆಯೆ ಸಂಸ್ಕೃತಿ ಚಿಂತಕರ ಮುಖ್ಯ ಸಮಸ್ಯೆಯೆಂದು ಹಲವು ವಿದ್ವಾಂಸರು ವಾದಿಸಿದ್ದಾರೆ. ವಿವಿಧ ಸಂಸ್ಕೃತಿ ಸಮಾಜಗಳ ವಿಭಿನ್ನ ಲಕ್ಷಣಗಳ ವಿಶದೀಕರಣ ಮತ್ತು ಅವುಗಳ ಸಮನ್ವಯಕ್ಕೆ ಆಧುನಿಕ ವಿದ್ವಾಂಸರು ಮಾಡುತ್ತಿರುವ ಪ್ರಯತ್ನಗಳಿಗೆ ಈ ಸಮಸ್ಯೆ ಸಂಬಂಧಿಸಿದೆ. ಕೆಲವು ಹಳೆಯ ವಿದ್ವಾಂಸರು ಏಕೀಕರಣವೆಂಬ ಪದವನ್ನು ಶಿಥಿಲ ಮತ್ತು ಹೆಚ್ಚು ವಿಸ್ತರಿಸಿದ ಅರ್ಥದಲ್ಲಿ ಉಪಯೋಗಿಸಿದ್ದಾರೆ. ವೃತ್ತಿಸಂಬಂಧ ಮತ್ತು ತಾರ್ಕಿಕ ಅಥವಾ ಅರ್ಥವತ್ತಾದ ಏಕೀಕರಣವೆಂಬ ಎರಡು ವಿಧವಾದ ಏಕೀಕರಣವನ್ನು ಸೊರೊಕಿನ್ ವಿವೇಚಿಸಿದ್ದಾನೆ. ಈ ರೀತಿಯಲ್ಲಿ ನಿಖರವಾದ ಅರ್ಥ ವ್ಯಾಪ್ತಿಯನ್ನು ಕೊಡುವಾಗ ಸಾಂಸ್ಕೃತಿಕ ಏಕೀಕರಣದ ಆಧಾರ, ರೂಪ, ವ್ಯಾಪ್ತಿ ಮತ್ತು ಫಲಿತಾಂಶಗಳ ವಿಷಯವಾಗಿ ಸಾಕಷ್ಟು ಚರ್ಚೆ ನಡೆದಿದ್ದು, ಇದು ಏಕೀಕರಣದ ಭಾವನೆಗೆ ಭದ್ರವಾದ ಬುನಾದಿಯನ್ನೊದಗಿಸಿರುವುದಲ್ಲದೆ, ಅದಕ್ಕೊಂದು ನಿರ್ದಿಷ್ಟರೂಪವನ್ನೂ ಕೊಟ್ಟಿದೆ. ಈ ಪ್ರಯತ್ನಗಳ ಫಲವಾಗಿ ಸಾಮಾಜಿಕ ಸಾಂಸ್ಕೃತಿಕ ಪದ್ಧತಿಗಳಲ್ಲಿ ಆಂತರಿಕ ಸಮನ್ವಯ ಮತ್ತು ಐಕ್ಯಗಳನ್ನು ಕಾಣಬಹುದೆಂದು ವಿದ್ವಾಂಸರು ಒಪ್ಪಿಕೊಳ್ಳುವಂತಾಯಿತು.

ಸಂಸ್ಕೃತಿಗಳು ಪೂರ್ಣ ಸಮ್ಮಿಲನಗೊಂಡ ಸಂಸ್ಥೆಗಳೆಂಬ ವಾದವನ್ನು ಇತ್ತೀಚೆಗೆ ನಡೆದ ಮಾನವಿಕವಿಜ್ಞಾನದ ಶೋಧನೆಗಳು ಒಪ್ಪುವುದಿಲ್ಲ. ಸಾಂಸ್ಕೃತಿಕ ಏಕೀಕರಣ ಕೇವಲ ಪ್ರಗತಿಯ ಲಕ್ಷಣ; ಸಹಜವಾದ ಉಪಾಧಿಯಲ್ಲ; ಬಲುಮಟ್ಟಿಗೆ ಆಂತರಿಕವಾಗಿ ಹೊಂದಾಣಿಕೆಯಿರುವ ಪ್ರಗತಿಪರ ನಡೆಯ ಪ್ರಕ್ರಿಯೆ ಎಂದು ಪರಿಗಣಿಸಲಾಗಿದೆ. ಈ ವಾದದ ಆಧಾರದ ಮೇಲೆ ವಿವಿಧ ಸಂಸ್ಕೃತಿಗಳು ಎಷ್ಟರಮಟ್ಟಿಗೆ ಸಮ್ಮಿಲನ ಹೊಂದಿವೆಯೆಂಬ ಅಂಶವನ್ನು ವಿದ್ವಾಂಸರು ವಿವೇಚಿಸಲಾರಂಭಿಸಿದ್ದಾರೆ. ಕೆಲವು ಸಂಸ್ಕೃತಿಗಳು ಪೂರ್ಣ ಸಮ್ಮಿಲನ ಹೊಂದಿವೆಯೆಂದು ಈಚಿನವರೆಗೂ ರೂಢಿಯಲ್ಲಿದ್ದ ವಾದವನ್ನು ಪ್ರಶ್ನಿಸಲಾರಂಭಿಸಿದ್ದಾರೆ. ಕಾರಣಾಂತರಗಳಿಂದ ಪ್ರತಿಯೊಂದು ಸಮಾಜ ದಲ್ಲೂ ಬದಲಾವಣೆಗಳು ಉಂಟಾಗುತ್ತಿರುವುದರಿಂದ ಅಂಥ ಸಂಸ್ಕೃತಿಗಳು ಪೂರ್ಣವಾಗಿ ಸಮ್ಮಿಲನ ಹೊಂದಿರಲು ಸಾಧ್ಯವಿಲ್ಲ. ಒಂದು ಸಂಸ್ಕೃತಿಯ ವಿವಿಧ ಆಚಾರ ಪದ್ಧತಿಗಳನ್ನು ಒಟ್ಟುಗೂಡಿಸಿದ ಮಾತ್ರಕ್ಕೆ ಆ ಸಂಸ್ಕೃತಿಯ ಪೂರ್ಣರೂಪವಾಗುವುದಿಲ್ಲ. ಯಾವುದೇ ಒಂದು ಅಂಶವನ್ನು ಇತರ ಅಂಶಗಳಿಂದ ಪೂರ್ಣವಾಗಿ ಬೇರ್ಪಡಿಸಲೂ ಸಾಧ್ಯವಿಲ್ಲ. ಈ ಮೇಲಿನ ವಾದದಿಂದ ಸಾಂಸ್ಕೃತಿಕ ಏಕೀಕರಣ ಪೂರ್ಣವಲ್ಲವೆಂಬ ಮತ್ತು ಎಲ್ಲ ಹಂತಗಳಲ್ಲೂ ನಡೆಯುತ್ತಿರುವ ಒಂದು ಗುಣವೆಂಬ ಅಂಶ ವ್ಯಕ್ತವಾಗುತ್ತದೆ. ಇತ್ತೀಚೆಗೆ ಈ ಏಕೀಕರಣ ಸಮಸ್ಯೆಯನ್ನು ಆದರ್ಶದ ಮಟ್ಟಕ್ಕೆತ್ತಲಾಗಿದೆ. ಹಿಂದಿನ ಸಮಾಜಗಳಲ್ಲಿ ನೆಲಸಿದ್ದ ಪೂರ್ಣ ಸಮನ್ವಯವೇ ಆ ಸಂಸ್ಕೃತಿಗಳ ಮುಖ್ಯ ಲಕ್ಷಣವೆಂದು ಮತ್ತು ಆಧುನಿಕ ಸಮಾಜದ ಕುಂದುಕೊರತೆಗಳಿಗೆ ಆ ಸಮಾಜದಲ್ಲಿ ಕಂಡುಬರುವ ವಿಚ್ಛಿದ್ರಕಾರಕ ಶಕ್ತಿಗಳೇ ಕಾರಣವೆಂದು ವಾದಿಸಲಾಗಿದೆ. ಇತ್ತೀಚೆಗೆ ಸಮಾಜವಿಜ್ಞಾನರಂಗದಲ್ಲಿ ನಡೆದಿರುವ ಪ್ರಗತಿಪರ ಶೋಧನೆಗಳು ಸಾಂಸ್ಕೃತಿಕ ಏಕೀಕರಣ ಸ್ವಾಭಾವಿಕವೇ ಅಲ್ಲವೇ ಎಂಬಂಶವನ್ನು ಕಡೆಗಣಿಸಿ ಯಾವ ರೀತಿಯ ಪ್ರಯೋಜನಗಳು ಉಂಟಾಗುತ್ತವೆ ಎಂಬ ಅಂಶಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿವೆ.

ಸಾಂಸ್ಕೃತಿಕ ಏಕೀಕರಣ ಮಾನಸಿಕ ಭಾವನೆ ಅಥವಾ ಸಾಮಾಜಿಕ ವರ್ಗಗಳ ಹಿತಾಸಕ್ತಿಗಳನ್ನು ತರ್ಕಸಮ್ಮತವಾಗಿ ಕೈಗೂಡಿಸುವ ಒಂದು ಸಾಧನವೆಂಬ ಹಳೆಯ ವಾದಗಳು ತಿರಸ್ಕೃತವಾಗಿ ಪ್ರಗತಿಪರ ಸಂಸ್ಕೃತಿಗಳ ಮುಖ್ಯ ಲಕ್ಷಣಗಳೇ ಏಕೀಕರಣದ ಬುನಾದಿಯೆಂಬ ಭಾವನೆಗೆ ಆಧುನಿಕ ವಿದ್ವಾಂಸರಲ್ಲಿ ಪ್ರಾಶಸ್ತ್ಯ ದೊರಕುತ್ತಿದೆ. (ಬಿ.ಕೆ.ಜಿ.)

**ಏಕೀಕರಣ, ಸಾಮಾಜಿಕ:** ವಿವಿಧ ಸಾಮಾಜಿಕ ಪದ್ಧತಿಗಳ ಅಥವಾ ವಿಭಿನ್ನ ಸಾಮಾಜಿಕ ಅಂಗಗಳ ಏಕೀಕರಣದ ಪ್ರಶ್ನೆ ದೀರ್ಘಕಾಲದಿಂದ ಬೌದ್ಧಿಕ ಮತ್ತು ವೈಜ್ಞಾನಿಕ ಆಸಕ್ತಿ ಕೆರಳಿಸಿದೆ. ಕೈಗಾರಿಕಾ ಕ್ರಾಂತಿಯ ಫಲವಾಗಿ ಸಾಮಾಜಿಕ ಸಂಬಂಧಗಳಲ್ಲಿ ಸಂಭವಿಸಿರುವ ಏರುಪೇರುಗಳಿಂದ ಸಮಾಜದ ಪುನರೇಕೀಕರಣ ಸಾಧಿಸುವ ಆವಶ್ಯಕತೆ ತೀವ್ರವೂ ಜರೂರೂ ಆಗಿ ಪರಿಣಮಿಸಿದೆ. ಸಣ್ಣ ಗುಂಪುಗಳಿಂದ ಆರಂಭಿಸಿ ವಿಶಾಲ ಸವಾಜದಂಥ ವಿವಿಧ ಹಂತಗಳಲ್ಲಿ ಈ ಏಕೀಕರಣ ನಡೆಯಬೇಕಾಗಿರುವುದರಿಂದ ಹಲವಾರು ಸಮಸ್ಯೆಗಳು ಉದ್ಭವಿಸುವುದು ಸಹಜವೇ. ಆಯಾ ಹಂತಗಳಿಗೆ ಅನುಸಾರವಾಗಿ ಏಕೀಕರಣ ನಡೆಯಬೇಕು. ವಿವಿಧ ಪಂಗಡಗಳ ಏಕೀಕರಣದಲ್ಲಿ ಉದ್ಭವಿಸುವ ಸಮಸ್ಯೆಗಳಿಗಿಂತ ಅಂಥ ಪಂಗಡಗಳನ್ನೊಳಗೊಂಡ ವಿಶಾಲಜನಾಂಗಗಳ ಏಕೀಕರಣದ ಸಮಸ್ಯೆಗಳು ಕ್ಲಿಷ್ಟತರ. ಮೊದಲಿಗೆ ವಿದ್ವಾಂಸರು ಸಾಂಸ್ಕೃತಿಕ ಸಾಮಾಜಿಕ ಏಕೀಕರಣಗಳ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಿದ್ದರೂ ಕಳೆದ ಎರಡು ದಶಕಗಳಿಂದೀಚೆಗೆ ಪ್ರತ್ಯೇಕತೆ ಬೆಳೆದುಬಂದಿದೆ. ಸಾಮಾಜಿಕ ಮೌಲ್ಯ ಮತ್ತು ನಂಬಿಕೆಗಳು ಭಿನ್ನಸಮಾಜಗಳಲ್ಲಿ ಸಮಾನವಾಗಿದ್ದು, ಈ ಜನ ಫಲಪ್ರದವಾಗಿ ಸಹಕರಿಸುವದು ಯಾಂತ್ರಿಕ ಒಗ್ಗಟ್ಟೆಂದೂ ಏಕತೆ ಮತ್ತು ಪರಸ್ಪರ ಅವಲಂಬನೆಯಿಂದ ಸಂಭವಿಸುವುದು ಆಂಗಿಕ ಒಗ್ಗಟ್ಟೆಂದೂ ಕೆಲವು ವಿದ್ವಾಂಸರು ವಾದಿಸಿದರು.

ಯಾಂತ್ರಿಕ ಒಗ್ಗಟ್ಟಿನಲ್ಲಿ ಸಮಾಜ ವಿಧಿಸಿದ ನಿಯಮಗಳಿಗನುಸಾರವಾಗಿ ಎಲ್ಲರೂ ನಡೆಯಬೇಕಾದರೆ, ಆಂಗಿಕ ಒಗ್ಗಟ್ಟಿನಲ್ಲಿ ಪರಸ್ಪರ ವೈವಿಧ್ಯ ಭಿನ್ನತೆಗಳನ್ನು ಸಮತೋಲ ಮಾಡಿಕೊಳ್ಳುವುದು ಮುಖ್ಯ ಲಕ್ಷಣ. ಸುಪ್ರಸಿದ್ಧ ಸಮಾಜವಿಜ್ಞಾನಿ ಸೊರೊಕಿನ್ ಈ

ವಾದವನ್ನು ಒಪ್ಪುವುದಿಲ್ಲ. ಆತನ ಅಭಿಪ್ರಾಯದಂತೆ ಚಲನಾತ್ಮಕ ಸಮಾಜದಲ್ಲಿ ಸಾಂಸ್ಕೃತಿಕ ಅಂಶಗಳು ಪರಸ್ಪರಾವಲಂಬಿಗಳಾಗಿರುತ್ತವೆಯಾದ್ದರಿಂದ ಸಾಂಸ್ಕೃತಿಕ ಮತ್ತು ವೃತ್ತಿಸಹಜ ಏಕೀಕರಣ ವಿಧಾನಗಳೆರಡೂ ಒಂದೇ ಆಗಿರುತ್ತವೆ. ತಾರ್ಕಿಕ ಅರ್ಥಪೂರ್ಣ ಏಕೀಕರಣ ಉತ್ತಮ ದರ್ಜೆಯದಾಗಿದ್ದು ಮೊದಲನೆಯ ರೀತಿಯ ಏಕೀಕರಣ ಕೀಳ್ತರದ್ದೆಂದು ತಿರಸ್ಕೃತ. ಆದರೆ ತಾರ್ಕಿಕ–ಅರ್ಥಪೂರ್ಣ ಏಕೀಕರಣ ಸಾಂಸ್ಕೃತಿಕವಾದ್ದರಿಂದ ಅದು ಇಲ್ಲಿ ಅಪ್ರಕೃತ. ಅನಂತರ ಕಾಲದ ಸಮಾಜವಿಜ್ಞಾನಿಗಳು ಪ್ರಮಾಣಸಂಬಂಧ ಮತ್ತು ವೃತ್ತಿಸಂಬಂಧವೆಂಬ ಎರಡು ರೀತಿಯ ಏಕೀಕರಣಗಳನ್ನು ಸಾಂಸ್ಕೃತಿಕ ಏಕೀಕರಣದಿಂದ ಬೇರ್ಪಡಿಸಿದರು. ಇತ್ತೀಚೆಗೆ ಸಂಪರ್ಕಮೂಲ ಏಕೀಕರಣವೆಂಬ ಹೊಸ ವಿಧಾನವೊಂದು ಮಾನ್ಯವಾಗುತ್ತಿದೆ.

ಸಮಾಜದ ಸಾಮಾನ್ಯ ಮೌಲ್ಯಗಳು ಒಟ್ಟುಗೂಡಿ ಸಂಸ್ಥೀಕರಿಸಲ್ಪಟ್ಟು ಸಮಾಜ ವ್ಯವಸ್ಥೆ ಏರ್ಪಡುವುದಕ್ಕೆ ಪ್ರಮಾಣಸಂಬಂಧ ಏಕೀಕರಣವೆಂದು ಹೇಳಲಾಗಿದೆ. ವ್ಯಕ್ತಿಗಳ ನಡುವೆ, ಸಂಸ್ಥೆಗಳ ನಡುವೆ ಅಥವಾ ಸಂಸ್ಥಾಂತರ್ಗತ ಪ್ರತ್ಯೇಕ ಅಂಗಗಳ ನಡುವೆ ಈ ರೀತಿಯ ಏಕೀಕರಣ ಸಾಧ್ಯ. ಅನೇಕ ಸಂದರ್ಭಗಳಲ್ಲಿ ಈ ಬಗೆಯ ಏಕೀಕರಣ ಸಾಮಾಜಿಕ ಸಂಬದ್ಧತೆಯನ್ನು ಅವಲಂಬಿಸಿರುತ್ತದೆ. ಬಾಹ್ಯಾತಂಕಗಳು ಹೆಚ್ಚಾದಾಗ ಸಮಾಜದಲ್ಲಿ ಆಂತರಿಕ ಸಂಬದ್ಧತೆಯೇರ್ಪಡುತ್ತದೆಂದು ಜನಸಾಮಾನ್ಯರ ನಂಬಿಕೆ. ಆದರೆ ಈ ಏಕತೆಯ ಅಡಿಪಾಯವಾಗಿ ಕೆಲವು ಮೂಲಭೂತ ಸಾಮ್ಯಗಳಿದ್ದರೆ ಮಾತ್ರ ಇಂಥ ಐಕ್ಯ ಸಾಧ್ಯ. ಪ್ರಮಾಣ ಸಂಬಂಧ ಏಕೀಕರಣದ ವಿವಿಧ ಮಟ್ಟಗಳ ಪ್ರಭಾವ ಇತರ ಸಾಮಾಜಿಕ ಘಟನೆಗಳ ಮೇಲೆ ಯಾವ ರೀತಿಯದೆಂಬುದು ಮುಖ್ಯವಾದ ಅಂಶ. ಅದರ ಪ್ರಭಾವದಿಂದ ಸಾಮಾಜಿಕ ವ್ಯವಸ್ಥೆ ಸ್ಥಿರಗೊಳ್ಳುವುದೆಂದು ಕೆಲವರ ನಂಬಿಕೆ. ಮತ್ತೆ ಕೆಲವರು ಹಲವಾರು ಸಂದರ್ಭಗಳಲ್ಲಿ ನಿಯಮಿತ ವೃತ್ತಿಮಾರ್ಗ ಬಿಡುವುದರಿಂದಲೇ ಪ್ರಗತಿ ಸಾಧ್ಯವೆಂದು ವಾದಿಸುತ್ತಾರೆ.

ವೃತ್ತಿಸಂಬಂಧ ಏಕೀಕರಣವಾದದ ಪ್ರಕಾರ ವೃತ್ತಿಪ್ರಾವೀಣ್ಯವೇ ಸಮಾಜದ ಪ್ರಗತಿಗೆ ಸಾಧನ. ವಿವಿಧ ಅಂಗಗಳು ಒಂದೇ ಸಮಾಜದ ಪ್ರಗತಿಗಾಗಿ ಶ್ರಮಿಸುವುದರಿಂದ ಪರಸ್ಪರ ಪೂರಕಗಳಾಗುತ್ತವೆ. ಕೆಲವು ಬಾರಿ ವಿವಿಧ ಅಂಗಗಳಲ್ಲಿ ಪೂರ್ಣ ಸಮನ್ವಯ ಇಲ್ಲದಿರುವುದರಿಂದ ಏಕೀಕರಣ ಅಪೂರ್ಣವಾಗಿರಲು ಸಾಧ್ಯ.

ಚಲನಾತ್ಮಕ ಸಮತೋಲವೇ ಸಾಮಾಜಿಕ ಏಕೀಕರಣದ ಮುಖ್ಯಲಕ್ಷಣವೆಂದು ಕೆಲವರ ವಾದ. ಆದರೆ ಸಮಾಜದ ಭಿನ್ನ ಅಂಗಗಳಲ್ಲಿ ಸಾಕಷ್ಟು ಸಂಬದ್ಧತೆಯಿಲ್ಲವಾದಾಗ ಏಕೀಕರಣದ ಬದಲು ಸಮಾಜದಲ್ಲಿ ಅಸಮತೆ ಹೆಚ್ಚಾಗಿ ವಿಚ್ಛಿದ್ರಗೊಳ್ಳಬಹುದೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ.

ಸಂಪರ್ಕಮೂಲ ಏಕೀಕರಣವಾದದ ಪ್ರಕಾರ ಆಧುನಿಕ ಸಮಾಜಗಳಲ್ಲಿ ರೇಡಿಯೋ, ಟೆಲಿವಿಷನ್, ಚಲನಚಿತ್ರ ಮುಂತಾದ ಸಂಪರ್ಕಮಾಧ್ಯಮಗಳ ಮೂಲಕ ಸಮಾಜದ ಏಕೀಕರಣದ ಸಾಧನೆಯಾಗುತ್ತದೆ. ಈ ಮಾಧ್ಯಮಗಳ ಮೂಲಕ ಸಮಾಜದ ಕೇಂದ್ರಸ್ಥ ಮತ್ತು ಎಲ್ಲೆಗಳಲ್ಲಿರುವ ಅಂಶಗಳಲ್ಲಿ ಪರಿಣಾಮಕಾರಿ ಸಂಪರ್ಕವೇರ್ಪಟ್ಟು ಒಂದುಗೂಡಲು ಸಾಧ್ಯವಾಗುತ್ತದೆ.

ಸಾಮಾಜಿಕ ಏಕೀಕರಣ ಅನೇಕರ ಮಹದಾಶಯವಾಗಿದೆ. ಆದರೆ ಈ ಬಗ್ಗೆ ಸಾಕಷ್ಟು ಸಂಶೋಧನೆ ನಡೆಯದಿರುವುದರಿಂದಲೂ ಸಂಶೋಧಕರು ತಮ್ಮ ಮೂಲ ತತ್ತ್ವಗಳನ್ನು ಶ್ರುತಪಡಿಸದಿರುವುದರಿಂದಲೂ ಇದು ಇನ್ನೂ ಸಂಪೂರ್ಣ ಫಲಕಾರಿಯಾಗಿಲ್ಲ.

(ಬಿ.ಕೆ.ಜಿ.)

**ಏಕೆನ್, ಕಾನ್‌ರ್ಯಾಡ್ ಪಾಟರ್:** 1889–ಅಮೆರಿಕದ ಕವಿ, ಕಾದಂಬರಿಕಾರ. ಜಾರ್ಜಿಯ ಪ್ರಾಂತ್ಯದ ಸವಾನದಲ್ಲಿ ವೈದ್ಯನೊಬ್ಬನ ಮಗ. ಇವನಿಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗ ತಂದೆ ತಾಯಿಯನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡ. ಏಕೆನ್ ಹಾರ್ವರ್ಡಿನಲ್ಲಿ ವ್ಯಾಸಂಗ ಮುಂದುವರಿಸಿದ. ಅಲ್ಲಿ ಇವನೂ ಟಿ.ಎಸ್. ಎಲಿಯಟನೂ ಸಮಕಾಲೀನ ವಿದ್ಯಾರ್ಥಿಗಳಾಗಿದ್ದರು (1911). ಏಕೆನ್ 1912ರಲ್ಲಿ ಮೊದಲ ಮದುವೆಯಾಗಿ ಮೆಸಾಚೂಸೆಟ್ಸ್‌ನಲ್ಲಿ ನೆಲೆಸಿ ತನ್ನ ವೇಳೆಯನ್ನೆಲ್ಲ ಸಾಹಿತ್ಯಕ್ಕಾಗಿ ಮೀಸಲಾಗಿರಿಸಿದ. ಕಾವ್ಯರಚನೆಯೂ ಒಂದು ಆವಶ್ಯ ಕೈಗಾರಿಕೆಯಾದ್ದರಿಂದ ನಾನು ಯುದ್ಧ ಮಾಡಲೊಲ್ಲೆ–ಎಂದು ವಾದಿಸಿ ಈತ ಒಂದನೆಯ ಮಹಾಯುದ್ಧದಲ್ಲಿ ಕಡ್ಡಾಯ ಸೈನಿಕ ಸೇವೆಯಿಂದ ವಿನಾಯಿತಿ ಪಡೆದ. 1914ರಲ್ಲಿ ಈತನ ಮೊದಲನೆಯ ಕೃತಿ ಅರ್ತ್ ಟ್ರೈಯಂಫಂಟ್ ಪ್ರಕಟವಾಯಿತು. 1915ರಿಂದ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಈತ ಸಫಲವಾಗಿ ಕಾವ್ಯ ರಚಿಸಿದ್ದಾನೆನ್ನಬಹುದು. ಸಂಗೀತ ಪ್ರಧಾನವಾದ ಶುದ್ಧ ಕಾವ್ಯರಚನೆಯೇ ಆಗ ಈತನ ಉದ್ದೇಶವಾಗಿತ್ತು. ಮುಂದೆ ಕಥನಕವನಗಳನ್ನೂ ಭಾವಗೀತೆಗಳನ್ನು ಚಿಂತನಪರಕಾವ್ಯವನ್ನೂ ಸೃಷ್ಟಿಸಿದ. 1929ರಲ್ಲಿ ಪ್ರಕಟಿತವಾದ ಸೆಲೆಕ್ಟೆಡ್ ಪೋಯೆಮ್ಸ್ ಎಂಬ ಕೃತಿ ಪುಲೆಟ್‌ಜರ್ ಪಾರಿತೋಷಕವನ್ನೂ ಶೆಲ್ಲಿ ಸ್ಮಾರಕ ಬಹುಮಾನವನ್ನೂ ಪಡೆಯಿತು. ಮಹಾಯುದ್ಧಾನಂತರ ಕಾಲದಲ್ಲಿ ಈತ ಮತ್ತೆ ಸಂಗೀತಪ್ರಧಾನ ಕಾವ್ಯರಚನೆಯಲ್ಲಿ ತೊಡಗಿದ. ಅವುಗಳಲ್ಲಿ ಮನೋವೈಜ್ಞಾನಿಕ ಲಕ್ಷಣಗಳು ಹೆಚ್ಚಾಗಿವೆ. ಈ ಕಾಲದ ಇಂಥ ಕೃತಿಗಳಲ್ಲಿ ದಿ ಸೋಲ್ಜರ್ (1944), ದಿ ಕಿಡ್ (1947). ಸ್ಕೈಲೈಟ್ ಒನ್ (1949) ಮುಖ್ಯವಾದವು. ಈತನ ಕಲೆಕ್ಟೆಡ್ ಪೋಯೆಮ್ಸ್ 1953ರಲ್ಲಿ ಹೊರಬಂತು.

ಏಕೆನನ ಪ್ರತಿಭೆ ಕಾವ್ಯಸೃಷ್ಟಿಯಷ್ಟಕ್ಕೇ ಸೀಮಿತವಾದದ್ದಲ್ಲ. ಈತ ಐದು ಕಾದಂಬರಿಗಳನ್ನೂ ಬರೆದ. ಇವುಗಳ ಪೈಕಿ ಬ್ಲೂ ವಾಯೇಜ್ (1927) ಮೊದಲನೆಯದು. ನಾಲ್ಕು ಕಥಾಸಂಕಲನಗಳೂ ಇವನಿಂದ ಪ್ರಕಟವಾಗಿವೆ. (1950ರಲ್ಲಿ ಪ್ರಕಟವಾದ ಸಂಕಲನ ಪ್ರಾತಿನಿಧಿಕವಾದದ್ದು.) ಈ ಕಥೆಗಳು ಮುಖ್ಯವಾಗಿ ಮನೋವಿಶ್ಲೇಷಣಾತ್ಮಕ ವಾದವು. ಈತ ಅನೇಕ ವಿಮರ್ಶಾತ್ಮಕ (ಉದಾ: ಮಿ. ಆರ್ಕ್ಯುಲಂಸ್, 1949) ಆತ್ಮಕಥಾತ್ಮಕ (ಉಷಾಂತ್, 1952) ಪ್ರಬಂಧಗಳನ್ನೂ ಬರೆದಿದ್ದಾನೆ. 1953ರಲ್ಲಿ ಏಕೆನ್ನನ 900 ಪುಟಗಳ ಕವನ ಸಂಕಲನ ಪ್ರಕಟವಾದಾಗಲೇ ಈತನ ಕೃತಿಯ ಮಹತ್ತೂ ಬೃಹತ್ತೂ ಮೊಟ್ಟಮೊದಲ ಬಾರಿಗೆ ಹಲವರ ಗಮನ ಸೆಳೆಯಿತೆನ್ನಬಹುದು. ಬಹು ದೀರ್ಘಕಾಲ ಈತ ಅಜ್ಞಾತ ಲೇಖಕನಾಗಿಯೇ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದ.

ಟಿ. ಎಸ್. ಎಲಿಯಟನ ದಿ ವೇಸ್ಟ್ ಲ್ಯಾಂಡ್ ಕವನ ಈತನ ದಿ ಹೌಸ್ ಆಫ್ ಡಸ್ಟ್ (1920) ನಿಂದ ಪ್ರಭಾವಿತವಾಗಿದೆಯೆಂದು ಕೆಲವರ ಅಭಿಪ್ರಾಯ. ಸಂಗೀತ ತಂತ್ರ, ಪ್ರತಿಮಾವಿಧಾನ–ಇವು ಈತನ ಕಾವ್ಯದ ವೈಶಿಷ್ಟ್ಯಗಳೆಂದು ವಿಮರ್ಶಕರ ಮತ.

(ಎಂ.ಎ.ಎನ್.)

**ಏಕೆರ್ನಾಡ್: ನೋಡಿ – ಎರಿಡೆನಸ್**

**ಏಕೇಶವಾದ:** ದೇವತ್ರಯೈಕತ್ವವಾದದ ವಿರುದ್ಧವಾಗಿ ದೇವರ ಏಕವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ವಾದ (ಯುನಿಟೇರಿಯನಿಸಂ). ದೇವತ್ರಯೈಕತ್ವವಾದ ದೇವರನ್ನು ಪಿತ, ಸುತ ಮತ್ತು ದೇವಾತ್ಮ ಎಂಬ ಮೂರು ರೂಪಗಳಲ್ಲಿ ಗ್ರಹಿಸುತ್ತದೆ. ಏಕೇಶವಾದ ದೇವರನ್ನು ಪಿತನೆಂಬ ಒಂದೇ ರೂಪದಲ್ಲಿ ಗ್ರಹಿಸುತ್ತದೆ. ಆದಿಕ್ರೈಸ್ತ ಸಭೆಯಲ್ಲಿ ಏರಿಯನ್ ಪಂಥ, ಮಾನಾರ್ಕಿಯನಿಸಮುಗಳೇ ಮೊದಲಾದ ರೂಪದಲ್ಲಿ ಈ ಬೋಧನೆ ಪ್ರಚಾರದಲ್ಲಿತ್ತು. ನೈಸಿಯ (ಪ್ರ.ಶ. 326) ಮತ್ತು ಕಾನ್‌ಸ್ಟ್ಯಾಂಟಿನೋಪಲ್‌ಗಳಲ್ಲಿ (ಪ್ರ.ಶ. 381) ಜರುಗಿದ ಧಾರ್ಮಿಕ ಮಹಾಸಭೆಗಳಲ್ಲಿ ಇದನ್ನು ಖಂಡಿಸಿ ದೇವತ್ರಯೈಕತ್ವವನ್ನು ಕ್ರೈಸ್ತ ಅಧಿಕೃತ ಧರ್ಮ ಸಿದ್ಧಾಂತವಾಗಿ ಸಾರಿದರು.

ವಿದ್ಯೆಯ ಪುನರುಜ್ಜೀವನದ (ರಿನೇಸಾನ್ಸ್) ಕಾಲದಲ್ಲಿ ಜನ ಧಾರ್ಮಿಕ ವಿಷಯಗಳನ್ನು ಕುರಿತು ನಿರ್ಭಯವಾಗಿ ಹಾಗೂ ಸ್ವತಂತ್ರವಾಗಿ ಆಲೋಚನೆ ಮಾಡತೊಡಗಿದಾಗ ಆಧುನಿಕ ಏಕೇಶವಾದ ಮತ್ತೆ ತಲೆದೋರಿತು. ಮಾರ್ಟಿನ್ ಸೆಲ್ಲೇರಿಯಸ್ (1499–1564) ಎಂಬಾತ ಈ ಬೋಧನೆಯ ಪ್ರಥಮ ಪ್ರತಿಪಾದಕ. 16–17ನೆಯ ಶತಮಾನದಲ್ಲಿ ಇದು ಒಂದು ಸಂಘವಾಗಿ ಪೋಲೆಂಡ್, ಹಂಗೇರಿ ಮತ್ತು ಇಂಗ್ಲೆಂಡುಗಳಲ್ಲಿ ಸ್ಥಾಪಿತವಾಯಿತು. 1803ರಲ್ಲಿ ವಿಲಿಯಂ ಇಲ್ಲಿರಿಚಾರ್ಲ್‌ಸ್ಸನ್ ಎಂಬಾತ ಈ ಬೋಧನೆಯನ್ನು ಅಮೆರಿಕದಲ್ಲಿ ಪ್ರಚಾರ ಮಾಡಿದ. ಅಲ್ಲಿಯ ಕಾಂಗ್ರಿಗೇಷನಲ್ ಸಭೆಗಳಲ್ಲಿ ಅದು ವಿಶೇಷ ಪ್ರಸಿದ್ಧಿ ಪಡೆಯಿತು. ಇಂದಿಗೂ ಇಂಗ್ಲೆಂಡ್ ಮತ್ತು ಅಮೆರಿಕಗಳ ಏಕೇಶವಾದ ಒಂದು ಪ್ರಮುಖ ಧಾರ್ಮಿಕ ಶಕ್ತಿಯಾಗಿದೆ. (ಎಂ.ಪಿ.ಎಸ್.)

**ಏಕೋತ್ತರ ಶತಸ್ಥಲಗಳು:** ಲಿಂಗಸ್ಥಲ ಮತ್ತು ಅಂಗಸ್ಥಲಗಳು ಸೂಕ್ಷ್ಮಪ್ರಭೇದಗಳಿಂದ ನೂರೊಂದು ಸ್ಥಲಗಳಾಗಿ ಪರಿಣಮಿಸುವುದನ್ನೇ ರೇಣುಕ ಮೊದಲಾದ ಆಚಾರ್ಯರು ಮತ್ತು ಶಿವಶರಣರು ಏಕೋತ್ತರ ಶತಸ್ಥಲ ಎಂದು ವಿವರಿಸಿರುತ್ತಾರೆ. ಭಗವತ್ಪಾದ ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳಿಗೆ ಬೋಧಿಸಿದ ಏಕೋತ್ತರ ಶತಸ್ಥಲಗಳು ಸಿದ್ಧಾಂತ ಶಿಖಾಮಣಿಯಲ್ಲಿ (ಶಿವಯೋಗಿ ಶಿವಾಚಾರ್ಯಕೃತ ಸು. 1000) ನಿರೂಪಿತವಾಗಿವೆ. ಈ ವಿಷಯದಲ್ಲಿ ಮಹಾಲಿಂಗದೇವನ (1425) ಏಕೋತ್ತರ ಶತಸ್ಥಲ, ಜಕ್ಕಣಾರ್ಯನ (1430) ನೂರೊಂದು ಸ್ಥಲಗಳು, ಗಿರೀಂದ್ರನ (ಸು. 1430) ಏಕೋತ್ತರ ಶತಸ್ಥಲ ಟೀಕೆ, ಮೊಗ್ಗೆ ಮಾಯಿದೇವನ (ಸು. 1430) ಏಕೋತ್ತರ ಶತಸ್ಥಲ (ಷಟ್ಪದಿ) ಇವು ಮುಖ್ಯ ಗ್ರಂಥಗಳು. 4 ಮತ್ತು 5ನೆಯ ಗ್ರಂಥಗಳು ಉಪಲಬ್ಧವಿಲ್ಲ. ಗುಬ್ಬಿ ಮಲ್ಲಣಾರ್ಯರ (1475) ಗಣಭಾಷಿತರತ್ನ ಮಾಲೆಗಳಲ್ಲಿ ಉಕ್ತವಾಗಿರುವ ಏಕೋತ್ತರ ಶತಸ್ಥಲಗಳಲ್ಲಿ ತೋರುವ ಅಂತರವಿಷಯವನ್ನು ಅನುಭವಕ್ಕೆ ತಂದುಕೊಂಡ ಅನುಭಾವಿಗಳಲ್ಲಿ ಕಾಲಕಾಲಕ್ಕೆ ಆಗಿರುವ ಅನುಭಾವವಿಕಾಸದ ಕುರುಹಾಗಿದೆ. ಈ ದೃಷ್ಟಿಯಿಂದ ಏಕೋತ್ತರ ಶತಸ್ಥಲಗಳಲ್ಲಿ ಭಕ್ತ ಮೊದಲಾದ ಆರು ಸ್ಥಲಗಳಲ್ಲಿ ಜೀವಪಿಂಡ, ಪಿಂಡಜ್ಞಾನಿ ಮುಂತಾದ ಅವಾಂತರ ಪ್ರಭೇದಗಳು ಕಂಡುಬರುತ್ತವೆ.

ಅಂಗಸ್ಥಲದಲ್ಲಿ ಉಕ್ತವಾದ 44 ಪ್ರಭೇದಗಳು ಅನುಷ್ಠಾನದಿಂದ ಸಾಧಕ ಜೀವನ್ಮುಕ್ತಸ್ಥಿತಿಯನ್ನು ಪಡೆಯುತ್ತಾನೆ. ಆಗ ಅವನಿಗೆ ಶಿವಯೋಗಿ ಎಂಬ ಉಪಾಧಿ ಲಭಿಸುತ್ತದೆ. ಗುರು-ಜಂಗಮ ಪದವಿಯ ಅಧಿಕಾರಿಗಳ ಆಚಾರವಿಚಾರಗಳು ಜೀವನ್ಮುಕ್ತಾತ್ಮನ ಬಗೆಯನ್ನೇ ಬಣ್ಣಿಸುತ್ತವೆ. ಇಲ್ಲಿ 44 ಪ್ರಭೇದಗಳ ಸಂಗ್ರಹವಿವರಣೆ ಇದೆ. ಬೀಜವೃಕ್ಷನ್ಯಾಯಸ್ಥಲವೆಂದು ಪ್ರಸಿದ್ಧವಿರುವ ಭಕ್ತಸ್ಥಲದಲ್ಲಿ ಪಿಂಡ, ಪಿಂಡಜ್ಞಾನ, ಸಂಸಾರಹೇಯ, ಗುರುಕಾರುಣ್ಯ, ಲಿಂಗಧಾರಣ, ಭಸ್ಮಧಾರಣ, ರುದ್ರಾಕ್ಷಧಾರಣ, ಪಂಚಾಕ್ಷರ ಜಪ, ಭಕ್ತಮಾರ್ಗ ಕ್ರಿಯಾ, ಉಭಯ, ತ್ರಿವಿಧಸಂಪತ್ತಿ, ಪ್ರಸಾದ ಸ್ವೀಕಾರ, ಸೋಪಾಧಿದಾನ, ನಿರುಪಾಧಿದಾನ, ಸಹಜದಾನ-ಎಂಬ ಹದಿನೈದು ಸ್ಥಲಗಳಿವೆ. ಇವು ಭಕ್ತನ ಆಚಾರವಿಚಾರಗಳನ್ನು ಸೂಚಿಸುತ್ತವೆ. ಇಲ್ಲಿ ಭಕ್ತನಲ್ಲಿ ಬೀಜರೂಪದಿಂದ ಪ್ರವೇಶಿಸಿದ ಭಕ್ತಿಯೇ ಬೆಳೆದು ತರುವಾಗಿ ಮುಕ್ತಿಫಲ ನೀಡುತ್ತದೆ.

ಸಲಿಲವುಕ್ತನ್ಯಾಯಸ್ಥಲವೆಂದು ಪ್ರಸಿದ್ಧವಿರುವ ಮಹೇಶಸ್ಥಲದಲ್ಲಿ ಮಹೇಶ್ವರಪ್ರಶಂಸಾ, ಲಿಂಗನಿಷ್ಠಾ, ಪೂರ್ವಾಶ್ರಯ ನಿರಸನ, ಸರ್ವಾದ್ವೈತ ನಿರಸನ, ಆಹ್ವಾನ ನಿರಸನ, ಅಷ್ಟಮೂರ್ತಿ ನಿರಸನ, ಸರ್ವಗತತ್ತ್ವ ನಿರಸನ, ಶಿವಜಗನ್ಮಯತ್ವ, ಭಕ್ತದೇಹಿಕ ಲಿಂಗ ಎಂಬ ಒಂಬತ್ತು ಸ್ಥಲಗಳು ಉಕ್ತವಾಗಿವೆ. ಇವುಗಳ ಅನುಷ್ಠಾನದಿಂದ ಭಕ್ತನಲ್ಲಿ ಶ್ರದ್ಧೆ ಘನೀಭೂತವಾಗಿ ನಿಷ್ಠೆಯೆನಿಸುವುದು. ಅನಲಕಾಷ್ಠನ್ಯಾಯಸ್ಥಲವೆನಿಸಿದ ಪ್ರಸಾದಿಸ್ಥಲದಲ್ಲಿ ಅವಧಾನ (ಏಕಾಗ್ರತೆ) ಭಕ್ತಿವಿಶಿಷ್ಟನಾದ ಮಾಹೇಶನೇ ಪ್ರಸನ್ನ ಮನಃಪರಿಪಾಕವನ್ನು ಪಡೆದು ಪ್ರಸಾದಿಯೆನಿಸುತ್ತಾನೆ. ಇಲ್ಲಿಯ ಏಳು ಪ್ರಭೇದಗಳು ಸಾಧಕನ ಮನಃಪ್ರಸನ್ನತೆಯ ಕುರುಹುಗಳು. ಅವು ಕ್ರಮವಾಗಿ ಪ್ರಸಾದಿ, ಗುರುಮಾಹಾತ್ಮ್ಯ, ಲಿಂಗಮಾಹಾತ್ಮ್ಯ, ಜಂಗಮಮಾಹಾತ್ಮ್ಯ, ಭಕ್ತಮಾಹಾತ್ಮ್ಯ, ಶರಣಮಾಹಾತ್ಮ್ಯ,




ಪ್ರಸಾದಮಾಹಾತ್ಮ್ಯ ಎಂದು ಏಳು ಹಂತಗಳಲ್ಲಿವೆ. ಭ್ರಮರಕೀಟನ್ಯಾಯಸ್ಥಲವೆನಿಸಿದ ಪ್ರಾಣಲಿಂಗಿಸ್ಥಲದಲ್ಲಿ ಸಾಧಕನಿಗೆ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ ಎಂಬ ಅನುಭವ ವಾಗುತ್ತದೆ. ಇದನ್ನು ಇಲ್ಲಿನ ಪ್ರಭೇದಗಳಲ್ಲಿ ಗುರುತಿಸಬಹುದು. ಪ್ರಾಣಲಿಂಗಿ, ಪ್ರಾಣಲಿಂಗಾರ್ಚನ, ಶಿವಯೋಗ ಸಮಾಧಿ, ಲಿಂಗನಿಜ, ಅಂಗಲಿಂಗ-ಎಂದು ಇಲ್ಲಿ ಐದು ವಿಭಾಗಗಳಿವೆ. ಸತೀಪತಿ ನ್ಯಾಯಸ್ಥಲವೆಂದು ಹೆಸರಾದ ಶರಣಸ್ಥಲದಲ್ಲಿ ಶರಣ ಸತಿಲಿಂಗ ಪತಿ ಎಂಬ ಅನುಭವ ಸಾಧಕನಿಗೆ ಉಂಟಾಗಿ ಆತ ಆನಂದ ಭಕ್ತಿಮಗ್ನನಾಗುವ ಕುರುಹುಗಳು ಕಂಡು ಬರುತ್ತವೆ. ಶರಣ, ತಾಮಸನಿರಸನ, ನಿರ್ದೇಶ, ಶೀಲಸಂಪಾದನ ಎಂಬ ನಾಲ್ಕು ಹಂತಗಳು ಇಲ್ಲಿವೆ. ಶಿಖೀಕರ್ಪೂರನ್ಯಾಯಸ್ಥಲವೆಂದು ಪ್ರಸಿದ್ಧವಿರುವ ಐಕ್ಯಸ್ಥಲದಲ್ಲಿ ಆನಂದಪರವಶವಾದ ಜೀವ ಸಮರಸಭಕ್ತಿಯ ಪ್ರಭಾವದಿಂದ ಶಿವನಲ್ಲಿ ಬೆರೆದು ಬೇರಿಲ್ಲದ ಸ್ಥಿತಿಯನ್ನೈದುವನು. ಐಕ್ಯ, ಆಚಾರಸಂಪತ್ತಿ, ಏಕಭಾಜನ, ಸಹಭಾಜನ ವೆಂಬ ಇಲ್ಲಿನ ನಾಲ್ಕು ಹಂತಗಳಲ್ಲಿ ಸಮರತೆಯ ಸೂಕ್ಷ್ಮವಿಕಾಸವನ್ನು ಕಾಣಬಹುದು.

ದೀಕ್ಷಾಗುರುಸ್ಥಲ ಮೊದಲಾಗಿ ಜ್ಞಾನಶೂನ್ಯಸ್ಥಲದವರೆಗಿರುವ 57 ಲಿಂಗಸ್ಥಲಗಳು ಕೂಡ ಭಕ್ತಾದಿ ಆರು ಸ್ಥಲಗಳನ್ನೇ ಆಶ್ರಯಿಸಿವೆ. ಎಂದರೆ ಜೀವನ್ಮುಕ್ತನೂ ಸಹ ತನ್ನ ನಿತ್ಯಾಚರಣೆಯಲ್ಲಿ ಭಕ್ತಾದಿ ಷಟ್‌ಸ್ಥಲಗಳನ್ನು ಅನುಷ್ಠಾನದಲ್ಲಿಟ್ಟುಕೊಂಡಿರಬೇಕು. ಏಕೆಂದರೆ ಇದರಿಂದ ಆತ ಗಳಿಸಿರುವ ಜೀವನ್ಮುಕ್ತಸ್ಥಿತಿ ದೇಹಾವಸಾನದವರೆಗೆ ದೃಢವಾಗಿರುವುದಲ್ಲದೆ ಇದರಿಂದ ಉಳಿದ ಸಾಧಕರಿಗೆ ಮಾರ್ಗದರ್ಶನವೂ ಆಗುತ್ತದೆ. ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು, ಕ್ರಿಯಾಗುರು, ಭಾವಲಿಂಗ, ಜ್ಞಾನಲಿಂಗ, ಸ್ವಸ್ಥಲ, ಚರಸ್ಥಲ, ಪರಸ್ಥಲವೆಂಬ ಒಂಬತ್ತು ಪ್ರಭೇದಗಳನ್ನೊಳಗೊಂಡ ಆಚಾರಲಿಂಗ ಸ್ಥಲದಲ್ಲಿ ಜೀವನ್ಮುಕ್ತನಾದ ಶಿವಯೋಗಿ ದೇಹಾಭಿಮಾನವನ್ನು ತೊರೆದು ತನ್ನ ದರ್ಶನಾದಿಗಳಿಂದ ಲೋಕವನ್ನು ಪಾವನವನ್ನಾಗಿ ಮಾಡುತ್ತಾನೆ. ಇದು ಭಕ್ತಸ್ಥಲಕ್ಕೆ ಸಂವಾದಿಯಾಗಿದೆ. ಕ್ರಿಯಾಗಮ, ಭಾವಾಗಮ, ಜ್ಞಾನಾಗಮ, ಸಕಾಯ, ಅಕಾಯ, ಪರಕಾಯ, ಧರ್ಮಾಚಾರ, ಭಾವಾಚಾರ ಮತ್ತು ಜ್ಞಾನಾಚಾರಗಳೆಂಬ ಹತ್ತು ಭಾಗಗಳನ್ನುಳ್ಳ ಗುರುಲಿಂಗಸ್ಥಲ ಮಾಹೇಶಸ್ಥಲಕ್ಕೆ ಸಂವಾದಿಯಾಗಿದೆ. ಇದರಲ್ಲಿ ಜೀವನ್ಮುಕ್ತ ಸುಜ್ಞಾನದಿಂದ ಪ್ರಾಕೃತಾತ್ಮ ಪ್ರಪಂಚ ಅಳಿದಿರಲು ದಿವ್ಯಯೋಗಿಯೆನಿಸಿರುತ್ತಾನೆ. ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ, ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣ, ಶಿಷ್ಯ, ಶುಶ್ರೂಷೆ, ಸೇವ್ಯ ಎಂಬ ಒಂಬತ್ತು ಬಗೆಗಳನ್ನುಳ್ಳ ಶಿವಲಿಂಗಸ್ಥಲ ಪ್ರಸಾದಿ ಸ್ಥಲಕ್ಕೆ ಸಂವಾದಿಯಾಗಿದ್ದು ಇಲ್ಲಿ ಸಾಧಕ ಉಂಡೂ ಉಪವಾಸಿ, ಬಳಸಿಯೂ ಬ್ರಹ್ಮಚಾರಿ ಎಂಬಂತೆ ವಿಷಯಸಂಗರಹಿತನಾಗಿ ಅನಾಸಕ್ತಸ್ಥಿತಿಯನ್ನೈದುತ್ತಾನೆ. ಆತ್ಮ, ಅಂತರಾತ್ಮ, ಪರಮಾತ್ಮ, ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ, ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ ಎಂಬ ವಿವಿಧ ಪ್ರಭೇದಗಳನ್ನುಳ್ಳ ಜಂಗಮ ಲಿಂಗಸ್ಥಲ ಪ್ರಾಣಲಿಂಗಸ್ಥಲಕ್ಕೆ ಸಂವಾದಿಯಾಗಿದೆ. ಇಲ್ಲ ಶಿವಯೋಗಿ ದೇಹಭ್ರಾಂತಿಯಳಿದು ಶಿವೈಕ್ಯಜ್ಞಾನಾರೂಢನಾಗುತ್ತಾನೆ. ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕ, ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ, ಪಿಂಡಾಕಾಶ, ಬಿಂದ್ವಾಕಾಶ, ಮಹಾಕಾಶ, ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ ಎಂಬ ವಿವಿಧ ಸ್ತರಗಳನ್ನುಳ್ಳ ಪ್ರಸಾದಲಿಂಗಸ್ಥಲ ಶರಣಸ್ಥಲಕ್ಕೆ ಸಂವಾದಿಯಾಗಿದೆ. ಇಲ್ಲಿ ಶಿವಾದ್ವೈತಜ್ಞಾನದಲ್ಲಿದ್ದು ಭಕ್ತ ಸಂಸಾರದಿಂದ ವಿಮುಕ್ತನಾಗುತ್ತಾನೆ. ಸ್ವೀಕೃತ ಪ್ರಸಾದ, ಶಿಷ್ಟೌದನ, ಚರಾಚರಲಯ, ಭಾಂಡ, ಭಾಜನ, ಅಂಗಾಲೇಪನ, ಸ್ವಪರಾಜ್ಞ, ಭಾವಾಭಾವಲಯ, ಜ್ಞಾನಶೂನ್ಯ ಎಂಬ ಒಂಬತ್ತು ಪ್ರಭೇದಗಳ ಮಹಾಲಿಂಗಸ್ಥಲ ಐಕ್ಯಸ್ಥಲಕ್ಕೆ ಸಂವಾದಿಯಾಗಿದೆ. ಈ ಸ್ಥಲಗಳ ಅಂತಿಮ ಫಲವೇ ಸಾಮರಸ್ಯಮುಕ್ತಿ.

ಸ್ಥಲ ಶಬ್ದದ ವ್ಯಾಖ್ಯಾನಕ್ಕೂ ಏಕೋತ್ತರಶತಸ್ಥಲಗಳ ಮೂಲಾಧಾರಗಳಾದ ಷಟ್‌ಸ್ಥಲಗಳ ವಿವರಗಳಿಗೂ **ನೋಡಿ - ಷಟ್‌ಸ್ಥಲ ಸಿದ್ಧಾಂತ.** (ಎಂ.ಜಿ.ಎನ್.; ಬಿ.ಎಸ್.)

**ಏಕೋರಾಮ:** 1150-. ವೀರಶೈವ ಆಚಾರ್ಯರಲ್ಲಿ ಒಬ್ಬ. ಬಸವಣ್ಣನವರ ಸಮಕಾಲೀನ. ಜನ್ಮಸ್ಥಳ ಕಲ್ಬುರ್ಗಿ ಜಿಲ್ಲೆಯ ಮುದೇನೂರು ಅಥವಾ ಮುದ್ರಾಪುರ. ತಂದೆ ರಾಮರುದ್ರ, ಹೆಂಡತಿ ಕಾಮಿಕಾದೇವಿ. ರಾಮನಾಥ ಈತನ ಕುಲದೈವ. ರಾಮನಾಥಾಚಾರ್ಯರಿಂದ ಶಿವದೀಕ್ಷೆಯನ್ನು ಪಡೆದು ಶಿವಪಾರಮ್ಯವನ್ನು ನೆಲೆಗೊಳಿಸಿ ವೀರಶೈವರ ಪಂಚಪೀಠಗಳಲ್ಲಿ ಒಂದಾದ ಹಿಮಾಲಯದ ಕೇದಾರ ಪೀಠದ ಅಧ್ಯಕ್ಷನಾಗಿ ಆಚಾರ್ಯನೆನಿಸಿಕೊಂಡ. ಮೊದಲು ಶೈವನಾಗಿದ್ದು ಶಿವದೀಕ್ಷೆಯನ್ನು ಪಡೆದ ಮೇಲೆ ವೀರಶೈವವನ್ನು ಆಚರಿಸುತ್ತ ಮುದ್ರಾಪುರದ ರಾಜ ಭಾಸ್ಕರನ ಆಸ್ಥಾನದಲ್ಲಿ ಅಯೋಧ್ಯೆಯ

ವ್ಯಾಸದೀಕ್ಷಿತನನ್ನು ವಾದದಲ್ಲಿ ಸೋಲಿಸಿ ಅವನಿಗೆ ಶಿವದೀಕ್ಷೆಯನ್ನು ಕೊಟ್ಟ. ಜೈನರಿಗೆ ಮತ್ತು ಬ್ರಾಹ್ಮಣರಿಗೆ ಲಿಂಗದೀಕ್ಷೆಯನ್ನು ಕೊಟ್ಟು ಅನೇಕ ಮಹಿಮೆಗಳನ್ನು ಮೆರೆದ. ದೇವರ ದಾಸಿಮಯ್ಯನಾದ ಮೇಲೆ ಅದೇ ಪ್ರಾಂತ್ಯದಲ್ಲಿ ಹುಟ್ಟಿ ಆತನ ಕಾರ್ಯವನ್ನು ಯಶಸ್ವಿಯಾಗಿ ಮುಂದುವರಿಸಿ ಆ ಧರ್ಮದಲ್ಲಿ ಉನ್ನತ ಸ್ಥಾನವನ್ನು ಗಳಿಸಿದ ಮಹಂತನೀತ. ಹರದನಹಳ್ಳಿಯ ನಂಜಣಾಚಾರ್ಯ ಬರೆದಿರುವ ಏಕೋರಾಮಾರಾಧ್ಯ ಪುರಾಣದಲ್ಲಿ ಇವನ ಕಥೆ ವರ್ಣಿತವಾಗಿದೆ. ಅದರ ಪ್ರಕಾರ ಇವನ ವಂಶಾವಳಿ ಈ ರೀತಿ ಇದೆ: ದೂರ್ವಾಸ ದೇವನ ಮಗ ಶಿವಾನಂದ, ಅವನ ಮಗ ಶ್ರೀಕಂಠ, ಅವನ ಮಗ ರಾಮರುದ್ರ. ಈ ರಾಮರುದ್ರನ ಮಗನೇ ಏಕೋರಾಮ. ಕೊನೆಯಲ್ಲಿ ಏಕೋರಾಮ ಶಂಕುಕರ್ಣನಿಗೆ ದೀಕ್ಷೆ ಕೊಟ್ಟು ಗುರುಪಟ್ಟವನ್ನು ಕಟ್ಟಿ ರಾಮನಾಥಲಿಂಗದಲ್ಲಿಯೇ ಐಕ್ಯವಾದ. (ಬಿ.ಎಸ್.ಸಿ.)

**ಏಕೋರಾಮ ಸಿದ್ಧ:** 1120. ಪೂರ್ವೋತ್ತರ ಮೀಮಾಂಸೆ, ತರ್ಕ, ವ್ಯಾಕರಣ ಶಾಸ್ತ್ರಗಳಲ್ಲಿ ನಿಪುಣನಾದ ಶಿವಾಚಾರ್ಯ. ಏಕೋರಾಮಸಿದ್ಧ ಭಗವತ್ಪಾದ ತನ್ನ ಗುರುವೆಂದು ಶ್ರೀಪತಿ ಪಂಡಿತ (1120) ತನ್ನ ಶ್ರೀಕರಭಾಷ್ಯದ ಪ್ರಾರಂಭದಲ್ಲಿ ಹೊಗಳಿದ್ದಾನೆ. ಈ ಗುರು ಶಿಷ್ಯ ಸಂಬಂಧ ನಿಜವಿರಬೇಕು. ಮೇಲಾಗಿ ಶ್ರೀಪತಿ ಪಂಡಿತ ಶ್ರೀಶೈಲ ಪೀಠಾಧಿಪತಿಗಳಾಗಿದ್ದ ವಿರೂಪಾಕ್ಷದೇಶಿಕೇಂದ್ರರಿಂದ ಲಿಂಗದೀಕ್ಷೆಯನ್ನು ಕಾಶಿಯಲ್ಲಿ ಪಡೆದ ಆರಾಧ್ಯಬ್ರಾಹ್ಮಣನೆಂದು ಪಲ್ಲಕವಿಕೃತ ಶ್ರೀಶೈಲ ಪಂಡಿತಾರಾಧ್ಯ ಚರಿತ್ರದಲ್ಲಿ ಹೇಳಿದೆ. ಈ ವಿರೂಪಾಕ್ಷದೇಶಿಕ ದೇವರದಾಸಿಮಯ್ಯನಿಗೆ (1100) ಶಿವದೀಕ್ಷೆ ನೀಡಿದ ಚಂದ್ರಗುಂಡದೇಶಿಕೇಂದ್ರರ ಗುರು. ಈ ಕಾರಣಗಳಿಂದ ಶ್ರೀಪತಿಪಂಡಿತನ ಶ್ರೀಕರಭಾಷ್ಯೋಕ್ತ ಏಕೋರಾಮಸಿದ್ಧ ಮತ್ತು ಶ್ರೀಶೈಲದ ವಿರೂಪಾಕ್ಷ ದೇಶಿಕೇಂದ್ರ– ಇವರು ಒಬ್ಬನೇ ಆಗಿದ್ದ ಪಕ್ಷದಲ್ಲಿ ಈ ಏಕೋರಾಮ ಆದಯ್ಯನ ವಚನಗಳಲ್ಲಿ ಹೇಳಿರುವ ರೇವಣಸಿದ್ಧನ ಶಿಷ್ಯನಾದ ಮರುಳಸಿದ್ಧನ ಶಿಷ್ಯ ಏಕೋರಾಮನಿರಬಹುದು. ಶ್ರೀಕರಭಾಷ್ಯದಲ್ಲಿ ಈತನನ್ನು ದೇಶಿಕೇಂದ್ರ ಎಂದು ಹೇಳಿರುವುದು ಇದಕ್ಕೆ ಪೋಷಕ. ಆಗ ಏಕೋರಾಮ ಎಂಬ ಹೆಸರು ಶ್ರೀಕರಭಾಷ್ಯದ ಉಲ್ಲೇಖದಂತೆ ವಿರೂಪಾಕ್ಷದೇಶಿಕರ ಅನ್ವರ್ಥಕನಾಮವಿರಬೇಕೆನಿಸುತ್ತದೆ. ಅಂತೂ ಈತ ಕೇದಾರ ಪೀಠಾಚಾರ್ಯ ಏಕೋರಾಮನಿಗಿಂತ ಭಿನ್ನ. (ಎಂ.ಜಿ.ಎನ್.)

**ಏಕ್ವಿಲ:** ಖಗೋಳದ 88 ನಕ್ಷತ್ರ ಪುಂಜಗಳಲ್ಲಿ ಒಂದು; ಉತ್ತರಾರ್ಧ ಗೋಳದಲ್ಲಿ ಆಕಾಶಗಂಗೆಯಲ್ಲಿ ಇದೆ. ಇದರ ವ್ಯಾಪ್ತಿಯ ವಿವರ : ವಿಷುವದಂಶ (ರೈಟ್ ಅಸೆನ್ಷನ್) 18 ಗಂ. 40 ಮಿ.–20 ಗಂ. 35 ಮಿ.; ಘಂಟಾವೃತ್ತಾಂಶ (ಡೆಕ್ಲಿನೇಷನ್) $18^0$ ಉ–$12^0$ ದ. ಏಕ್ವಿಲ ಪುಂಜದ ಪ್ರಧಾನ ನಕ್ಷತ್ರ ಶ್ರವಣ (ಆಲ್ಟೇರ್). ಇದು ಬರಿಗಣ್ಣಿಗೆ ಸುಲಭವಾಗಿ ಕಾಣುತ್ತದೆ. ಇದರ ಒತ್ತೊತ್ತಿಗೆ ಎರಡು ಬದಿಗಳಲ್ಲಿ ಒಂದೊಂದು ಕ್ಷೀಣ ನಕ್ಷತ್ರ ಇದೆ. ಇವು ಮೂರೂ ಸರಿಸುಮಾರಾಗಿ ಉತ್ತರ–ದಕ್ಷಿಣಕ್ಕೆ ಚಾಚಿರುವ ಕಿರಿ ಸರಳರೇಖೆ ರಚಿಸುತ್ತವೆ. ನಡುವಿನ ಪ್ರಕಾಶಮಾನ ನಕ್ಷತ್ರವೇ ಶ್ರವಣ. ಏಕ್ವಿಲ ಪುಂಜದಲ್ಲಿ ಹಲವಾರು ನೋವಾ ನಕ್ಷತ್ರಗಳು ಕಾಣಿಸಿಕೊಂಡಿವೆ. ಇವುಗಳ ಪೈಕಿ ಸುಪ್ರಸಿದ್ಧವಾದದ್ದು ಏಕ್ವಿಲೇ III (1918). *

**ಏಗ್ನಾತ:** ಆದಿಕಶೇರುಕಗಳ ಗುಂಪು. ಈ ಗುಂಪಿನ ಪ್ರಾಣಿಗಳು ಮೀನಿನಂತೆ ಕಂಡರೂ, ಇವಕ್ಕೆ ದವಡೆಗಳಿಲ್ಲ. ಈ ಮುಖ್ಯ ಲಕ್ಷಣದಿಂದ ಇವನ್ನು ಮೀನು ಮತ್ತು ನೆಲವಾಸಿ ಕಶೇರುಕಗಳಿಂದ ಪ್ರತ್ಯೇಕಿಸಬಹುದು. ದವಡೆಗಳಿಲ್ಲದಿರುವುದರಿಂದ ಇವನ್ನು ಸಾಮಾನ್ಯವಾಗಿ ದವಡೆರಹಿತ ಕಶೇರುಕಗಳು ಎಂದು ಕರೆಯುತ್ತಾರೆ. ಇವು ಜಲವಾಸಿಗಳು. ಆರ್ಡೊವಿಶಿಯನ್ ಕಾಲದಲ್ಲಿ ಕೆಲವೇ ಸಂಖ್ಯೆಯಲ್ಲಿದ್ದವು. ಈ ಪ್ರಾಣಿಗಳಿಗೆ ಶಿರದ ತಳಭಾಗದಲ್ಲಿ ಚಕ್ರಾಕಾರದ ಹೀರುವ ಬಾಯಿ, ಕಿವಿರುಗಳು ಮತ್ತು ಕಿವಿರುರಂಧ್ರಗಳು, ತಲೆಯ ಮೇಲಿರುವ ಒಂದೇ ಒಂದು ಮಧ್ಯದ ಮೂಗುಹೊಳ್ಳೆ, ಅದರ ಹಿಂದಿರುವ ಪೈನಿಯಲ್ ಕಣ್ಣು, ಮಿದುಳುಕೋಶ, ದೇಹಕ್ಕೆ ಆಧಾರವಾಗಿರುವ ಆದ್ಯಮೃದ್ವಸ್ಥಿಪಟ್ಟೆ (ನೋಟೊಕಾರ್ಡ್), ಒಳ ಕಿವಿಯಲ್ಲಿ ಒಂದು ಅಥವಾ ಎರಡು ಅರ್ಧಚಂದ್ರಾಕಾರದ ನಾಳಗಳು ಇವೆ. ಜೋಡಿ ಈಜು ರೆಕ್ಕೆಗಳಿಲ್ಲ.

ಈ ಗುಂಪಿನ ಪ್ರತಿನಿಧಿಗಳು ಸೈಲೂರಿಯನ್ ಕಾಲದಲ್ಲಿ, ಸಿಹಿನೀರಿನ ತಳಭಾಗದಲ್ಲಿ ಜೀವಿಸುತ್ತಿದ್ದುವು. ಡಿವೋನಿಯನ್ ಕಾಲದಲ್ಲಿ ಬಹಳ ಅಭಿವೃದ್ಧಿಯಾಗಿ ಅನೇಕ ಗುಂಪುಗಳಾಗಿ ಬೆಳೆದುವು. ಆದರೆ ಡಿವೋನಿಯನ್ ಕಾಲದ ಅಂತ್ಯದಲ್ಲಿ ಈ ಗುಂಪಿನ ಎಲ್ಲ ಮೀನುಗಳೂ ಅಳಿದು ಹೋಗಿ ಒಂದು ವರ್ಗದವು ಮಾತ್ರ ಉಳಿದವು. ಇವೇ ಈಗ ಬದುಕುಳಿದಿರುವ ದುಂಡು ಬಾಯಿ ಮೀನುಗಳು (ಸೈಕ್ಲೊಸ್ಟೋಮ್ ಮೀನುಗಳು).

ದವಡೆರಹಿತ ಮೀನುಗಳನ್ನು ಎರಡು ವರ್ಗಗಳನ್ನಾಗಿ ವಿಂಗಡಿಸಿದೆ : 1 ಆಸ್ಟ್ರಕೊಡರ್ಮ್, 2 ಸೈಕ್ಲೊಸ್ಟೋಮೇಟ.

**ಆಸ್ಟ್ರಕೊಡರ್ಮ್ ಮೀನುಗಳು:** ಈಗ ಜೀವಿಸಿರುವ ದುಂಡುಬಾಯಿ ಮೀನುಗಳನ್ನು ಕೆಲವು ಮುಖ್ಯ ಲಕ್ಷಣಗಳಲ್ಲಿ ಹೋಲುತ್ತವಾದರೂ ಕೆಲವು ಲಕ್ಷಣಗಳಲ್ಲಿ ಅವಕ್ಕಿಂತ ಬೇರೆಯಾಗಿವೆ. ಆಸ್ಟ್ರಕೊಡರ್ಮ್‌ಗಳಿಗೆ ಮೂಳೆಯ ರಕ್ಷಾಕವಚವಿತ್ತು. ಕೆಲವಲ್ಲಿ ಹೊರಗೂ ಒಳಗೂ ಮೂಳೆ ದೇಹಕ್ಕೆ ಆಧಾರವಾಗಿತ್ತೆಂದು ಪಳಿಯುಳಿಕೆಗಳಿಂದ ತಿಳಿದುಬಂದಿದೆ. ಆದ್ದರಿಂದ ಇವನ್ನು ಅಸ್ಥಿಕವಚದ ಮೀನುಗಳೆನ್ನಲಾಗಿದೆ. ಈಗ ಈ ಮೀನುಗಳ ಪ್ರತಿನಿಧಿಗಳಾವುವೂ ಇಲ್ಲ **(ನೋಡಿ– ಅಸ್ಥಿಕವಚದ–ಮೀನುಗಳು)**.

**ಸೈಕ್ಲೊಸ್ಟೋಮ್‌ಮೀನುಗಳು :** ದೇಹ ಸಂಪೂರ್ಣವಾಗಿ ಮೃದ್ವಸ್ಥಿಯಿಂದ ಆಧಾರಿತವಾಗಿ ಹಾವಿನಂತೆ ನೀಳವಾಗಿದೆ. ಹೀರುವ ಬಾಯಿ ದುಂಡಗಿದ್ದು ಮುಳ್ಳುಗಳಿಂದ ಕೂಡಿದೆ. ಅರದಂಥ ನಾಲಗೆ ಇದೆ. ಕಿವಿರುಗಳು ಸಣ್ಣ ಚೀಲದಂತಿವೆ. ನಾಸಿಕದ್ವಾರ ನೆತ್ತಿಯ ಮೇಲಿದೆ. ಒಳಕಿವಿಯಲ್ಲಿ ಎರಡು ಅರ್ಧಚಂದ್ರಾಕಾರದ ಎರಡು ನಾಳಗಳಿವೆ. ಇವು ಪರತಂತ್ರ ಜೀವನವನ್ನು ನಡೆಸುತ್ತವೆ. ಹೀರುವ ಬಾಯಿಗಳಿರುವುದರಿಂದ ಬೇರೆ ಮೀನುಗಳಿಗೆ ಅಂಟಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗುತ್ತವೆ. ಇವುಗಳಲ್ಲಿ ಎರಡು ವಿಧ : 1 ಲ್ಯಾಂಪ್ರೆ ಮೀನು, 2 ಮಿಕ್ಸಿನ್ ಮೀನು.

**1. ಲ್ಯಾಂಪ್ರೆ ಮೀನು:** ಈ ಮೀನುಗಳ ಚರ್ಮ ನುಣುಪು. ಏಳು ಜೊತೆ ಕಿವಿರುಗಳಿವೆ. ಪರಾವಲಂಬಿಗಳಾದರೂ ಬೇರೆ ಮೀನುಗಳಿಗೆ ಅಷ್ಟು ಹಾನಿಕಾರಕವಲ್ಲ.

**2. ಮಿಕ್ಸಿನ್ ಮೀನು:** ಮಿಕ್ಸಿನ್ ಮೀನುಗಳ ಚರ್ಮ ಸುಕ್ಕುಸುಕ್ಕಾಗಿರುವುದರಿಂದ ಅವುಗಳಿಗೆ ಸುಕ್ಕು ಮೀನುಗಳು ಎಂದೂ ಹೆಚ್ಚಾಗಿ ಒಂದು ತರಹ ಲೋಳೆಯನ್ನು ವಿಸರ್ಜಿಸುವುದರಿಂದ ಲೋಳೆ ಮೀನುಗಳು ಎಂದೂ ಹೆಸರಿದೆ. ಇವುಗಳಲ್ಲಿ ಕಿವಿರುಗಳು 6–14 ಜೊತೆ. ಬೇರೆ ಮೀನಿಗೆ ಅಂಟಿಕೊಳ್ಳುವುದೊಂದೇ ಅಲ್ಲದೆ ಅದರ ಚರ್ಮವನ್ನು ಗಾಯಗೊಳಿಸಿ ಕ್ರಮೇಣ ಅದರ ದೇಹದೊಳಕ್ಕೆ ಪ್ರವೇಶಿಸಿ ಒಳಗಿನ ಅಂಗಾಂಗಗಳನ್ನು ತಿಂದು ಆತಿಥೇಯ ಪ್ರಾಣಿಯನ್ನು ಪೂರ್ಣ ನಾಶಗೊಳಿಸುತ್ತವೆ. (ಎನ್.ವಿ.ಎ)

**ಏಚಲದೇವಿ:** ಕನ್ನಡನಾಡಿನ ಇತಿಹಾಸದಲ್ಲಿ ಈ ಹೆಸರಿನ ಮೂವರು ಕಾಣಸಿಗುತ್ತಾರೆ. ಹೊಯ್ಸಳ ಇಮ್ಮಡಿ ವಿನಯಾದಿತ್ಯನ ಮಗನಾದ ಎರೆಯಂಗನ **(ನೋಡಿ– ಎರೆಯಂಗ)** ಮೊದಲನೆಯ ಹೆಂಡತಿ ಏಚಲದೇವಿ ಈ ಮೂವರ ಪೈಕಿ ಒಬ್ಬಳು. ಈಕೆ ಎಡತೊರೆಮಂಡಲದಲ್ಲಿ (ಈಗಿನ ಹೆರಗೆ ಗ್ರಾಮದ ಸುತ್ತಲಿನ ಪ್ರದೇಶ) ಆಳುತ್ತಿದ್ದ ಸಾಮಂತ ಪ್ರಭು ಗಂಗ ಮನೆತನದ ಹೆರ್ಮಾಡಿದೇವನ ಮಗಳು. ಈಕೆಯ ಗಂಡ, ಯುವರಾಜ ಎರೆಯಂಗ 1067ರಿಂದ 1100ರ ವರೆಗೆ ತಂದೆಗೆ ಸಹಾಯಕನಾಗಿ ರಾಜ್ಯಭಾರದಲ್ಲಿ ಪಾತ್ರ ವಹಿಸುತ್ತಿದ್ದನೆಂದೂ ಬಹುಶಃ ತಂದೆಗಿಂತ ಮೊದಲೇ ತೀರಿಕೊಂಡನೆಂದೂ ಒಂದು ಅಭಿಪ್ರಾಯವಿದೆ. ಈತನ ತಂದೆ 1067ರಲ್ಲೋ ಅದರ ಮರುವರ್ಷವೋ ಕಾಲವಾದನೆಂದೂ ಆಮೇಲೆ ಎರೆಯಂಗ ಸ್ವಲ್ಪ ಕಾಲ ರಾಜ್ಯವಾಳಿದನೆಂದೂ ಇನ್ನೊಂದು ಮತ. ಎರೆಯಂಗ ಮತ್ತು ಏಚಲದೇವಿಯರ ಗಂಡು ಮಕ್ಕಳು ಮೂವರು: ಒಂದನೆಯ ಬಲ್ಲಾಳ, ವಿಷ್ಣುವರ್ಧನ ಮತ್ತು ಉದಯಾದಿತ್ಯ. ಕೊನೆಯವನಾದ ಉದಯಾದಿತ್ಯನಿಗೆ ಏಚಲದೇವಿ ಎಂಬ ಹೆಸರಿನ ಮಗಳೊಬ್ಬಳಿದ್ದಳು.

ವಿಷ್ಣುವರ್ಧನನ ಮಗನಾದ ಒಂದನೆಯ ನರಸಿಂಹನ (1143–73) ರಾಣಿಯ ಹೆಸರೂ ಏಚಲದೇವಿಯೇ. ಮಹದೇವಿ ಎಂಬುದು ಇವಳ ರೂಢನಾಮ, ಈಕೆಯನ್ನು ರೂಪಗುಣಸಂಪನ್ನೆಯೆಂದು ಹಲವು ಶಾಸನಗಳಲ್ಲಿ ವರ್ಣಿಸಲಾಗಿದೆ. ಗಂಡನೊಡನೆ ಈಕೆಯೂ ರಾಜ್ಯಭಾರ ಮಾಡುತ್ತಿದ್ದಳು (1168–69). ಹೊಯ್ಸಳ ರಾಜರಲ್ಲಿ ಅತ್ಯಂತ ಪ್ರಸಿದ್ಧನಾದ ಇಮ್ಮಡಿ ವೀರಬಲ್ಲಾಳ ಈಕೆಯ ಮಗ. (ಜಿ.ಆರ್.ಆರ್.)

**ಏಡನ್:** ಅರೇಬಿಯದ ದಕ್ಷಿಣ ತುದಿಯಲ್ಲಿರುವ ರೇವುಪಟ್ಟಣ ಹಾಗೂ ಇದರ ಸುತ್ತಣ ಪ್ರದೇಶ. 26ನೆಯ ನವೆಂಬರ್ 1967ರಿಂದ ಇದು ದಕ್ಷಿಣ ಯೆಮನ್ ಜನತಾ ಗಣರಾಜ್ಯದ ಒಂದು ಭಾಗ. ಬಾಬ್ ಎಲ್ ಮಾಂಡೆಬ್ ಜಲಸಂಧಿಯಿಂದ ಪೂರ್ವಕ್ಕೆ 160 ಕಿಮೀ ದೂರಕ್ಕೆ 540 ಮೀ ಎತ್ತರದ ಬಂಡೆಗಾಡಿನ ಏಡನ್ ಪರ್ಯಾಯದ್ವೀಪದ ಪೂರ್ವಭಾಗದಲ್ಲಿ ಮೃತ ಅಗ್ನಿಪರ್ವತವೊಂದರ ಕುಸಿದ ಬಾಯಿಯ ಮೇಲೆ ಏಡನ್ ಹಳೆಯ ನಗರ ಇದೆ. ಇದರ ಪಶ್ಚಿಮದಲ್ಲಿ ಏಡನ್ ಕೊಲ್ಲಿಯ ಮೇಲೆ ಹೊಸ ಬಂದರನ್ನೂ ಲಿಟ್ಲ್ ಏಡನ್ ಎಂಬ ಬಡಾವಣೆಯನ್ನೂ ಕಾಣಬಹುದು. ಇಲ್ಲೊಂದು ತೈಲಶೋಧನಾಗಾರವೂ ಇದೆ. ವಾಣಿಜ್ಯ ಮಾತ್ರವಲ್ಲದೆ ಆಯಕಟ್ಟಿನ ಪ್ರಾಮುಖ್ಯವೂ ಏಡನಿನ ಬೆಳವಣಿಗೆಗೆ ಕಾರಣ. 1853ರಿಂದಲೂ ಸ್ವತಂತ್ರ ಬಂದರೆನಿಸಿಕೊಂಡಿದ್ದು ಕೇಬಲ್ ಮತ್ತು ರೇಡಿಯೊ ಕೇಂದ್ರವಾಗಿರುವ ಏಡನ್ ಸುತ್ತಣ ದೇಶಗಳ ಸರಕು ಸಂಗ್ರಹಿಸಿ ಮತ್ತೆ ಬೇರೆ ದೇಶಗಳಿಗೆ ರವಾನೆ ಮಾಡುವ ಕೇಂದ್ರವಾಗಿದೆ. ಹತ್ತಿ ಜವಳಿ, ಉಪ್ಪು, ಕಾಫಿ, ಚರ್ಮ, ಚಕ್ಕಳ, ಧಾನ್ಯ, ಗೋಂದು, ಹೊಗೆಸೊಪ್ಪು, ಸಕ್ಕರೆ–ಇವು ಈ ರೇವಿನ ಮೂಲಕ ಸಾಗುವ ಮುಖ್ಯ ವಸ್ತುಗಳು. 16 ಕಿಮೀ ದೂರದಲ್ಲಿ

ಕಂಡುಹಿಡಿಯಲಾದ ನೆಲದಡಿಯ ಜಲವಸತಿಯಿಂದ ಈಗ ನಗರಕ್ಕೆ ಧಾರಾಳವಾಗಿ ಕುಡಿಯುವ ನೀರು ಒದಗುತ್ತಿದೆ. ಮಳೆಯ ವಾರ್ಷಿಕ ಸರಾಸರಿ 24 ಸೆಂ.ಮೀ. ಅನೇಕ ವರ್ಷಗಳ ಕಾಲ ಇಲ್ಲಿ ಮಳೆಯೇ ಆಗದಿರುವುದು ಉಂಟು.

ಸೂಯೆಜ್ ಕಾಲುವೆ ತೆರೆದಿರುವಾಗ ಪರ್ಷಿಯನ್ ಖಾರಿಗೂ ಭಾರತವೇ ಮುಂತಾದ ಪೂರ್ವದೇಶಗಳಿಗೂ ಯುರೋಪಿಗೂ ನಡುವೆ ಏಡನ್ ಮುಖ್ಯ ಹಡಗುತಾಣ. ಇಲ್ಲೊಂದು ತೈಲಶೋಧನಾಗಾರವೂ ಇದೆ. ಜನಸಂಖ್ಯೆಯ ಶೇಕಡ 90 ಭಾಗ ಮುಸ್ಲಿಮರು. ಭಾರತೀಯರೂ ಸೋಮಾಲಿಗಳೂ ಐರೋಪ್ಯರೂ ಯೆಹೂದ್ಯರೂ ಇದ್ದಾರೆ.

ಏಡನ್ ನಗರವನ್ನೊಳಗೊಂಡ ಇಡೀ ಏಡನ್ ಪರ್ಯಾಯದ್ವೀಪ ಏಡನ್ ಖಾರಿಯ ಅಂಚಿನಲ್ಲಿ 1200 ಕಿಮೀ ಉದ್ದವಿದ್ದು 160 ಕಿಮೀ ಪರಮಾವಧಿ ಅಗಲ ಹೊಂದಿದೆ. ಇದನ್ನು ಪೂರ್ವ–ಪಶ್ಚಿಮ ಏಡನ್‍ಗಳೆಂದು ಎರಡು ಭಾಗ ಮಾಡಬಹುದು. ಪಶ್ಚಿಮ ಏಡನ್ ಚಿಕ್ಕದು. ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಇಲ್ಲಿ ವಾಸಿಸುತ್ತಾರೆ. ಹಳ್ಳತಿಟ್ಟುಗಳಿಂದ ಕೂಡಿದ ಈ ನಾಡು ಯೆಮನ್ ಗಡಿಯವರೆಗೆ ಏರುತ್ತ ಹಬ್ಬಿದೆ. ಪೂರ್ವ ಏಡನ್ ಹಳ್ಳತಿಟ್ಟುಗಳಿಂದ ಕೂಡಿದ್ದರೂ ಒಟ್ಟಿನಲ್ಲಿ ಇದು ಪಶ್ಚಿಮ ಪ್ರದೇಶಕ್ಕಿಂತ ತಗ್ಗು. ಅಲ್ ಮುಕಲ್ಲಾ ಈ ಭಾಗದ ಮುಖ್ಯ ಬಂದರು. (ಪಿ.ಎಚ್.)

**ಇತಿಹಾಸ:** ಕ್ರಿಸ್ತಶಕೆಗೂ ಹಿಂದಿನ ಕಾಲದಲ್ಲೂ ಏಡನ್ ಯುರೋಪ್ ಮತ್ತು ಪೂರ್ವದೇಶಗಳ ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು. ಭಾರತ, ಚೀನ, ಇಂಡೊನೇಷ್ಯ ಮತ್ತು ಆಫ್ರಿಕಗಳಿಂದ ಪದಾರ್ಥಗಳನ್ನು ಏಡನಿನ ಮೂಲಕ ಸಾಗಿಸಲಾಗುತ್ತಿತ್ತೆಂದು ತಿಳಿದು ಬರುತ್ತದೆ. ಕ್ರಿಸ್ತಶಕೆಯ ಆರಂಭದ ಶತಮಾನಗಳಲ್ಲಿ ಭಾರತಕ್ಕೂ ಕೆಂಪುಸಮುದ್ರಕ್ಕೂ ನೇರವಾದ ವ್ಯಾಪಾರ ಬೆಳೆದು ಏಡನಿನ ಪ್ರಾಮುಖ್ಯ ಬಹಳ ಕಡಿಮೆಯಾಗಿತ್ತು. ಆದರೆ ಮಧ್ಯಯುಗದಲ್ಲಿ ಇದು ಮತ್ತೆ ಕುದುರಿಕೊಂಡು ತನ್ನ ಹಿಂದಿನ ಸ್ಥಿತಿಗಿಂತಲೂ ಹೆಚ್ಚು ಅಭಿವೃದ್ಧಿ ಹೊಂದಿತು. ಪೂರ್ವರಾಷ್ಟ್ರಗಳ ಬಟ್ಟೆ, ಮೆಣಸು ಮುಂತಾದ ಪದಾರ್ಥಗಳಿಗೆ ಏಡನ್ ಪ್ರಮುಖ ವ್ಯಾಪಾರಕೇಂದ್ರವಾಗಿತ್ತು. ಮಾರ್ಕೊಪೋಲೊ ತನ್ನ ಪೂರ್ವದೇಶ ಯಾತ್ರೆ ಮುಗಿಸಿ ಹಿಂದಿರುಗುತ್ತಿದ್ದಾಗ ಹಾದಿಯಲ್ಲಿ ಏಡನನ್ನು ಸಂದರ್ಶಿಸಿದ್ದ. ಆಗ ಇದು ವಾಣಿಜ್ಯ ಚಟುವಟಿಕೆಯ ಕೇಂದ್ರವಾಗಿತ್ತು. 1513ರಲ್ಲಿ ಪೋರ್ಚುಗೀಸರು ಇದನ್ನು ಆಕ್ರಮಿಸಿಕೊಳ್ಳಲು ಯತ್ನಿಸಿ ವಿಫಲರಾದರು. 1538ರಲ್ಲಿ ಇದು ತುರ್ಕಿಗಳ ವಶವಾಯಿತು. ಒಂದು ಶತಮಾನದ ಅನಂತರ ಯೆಮನಿ ಅರಬ್‍ಗಳು ಉತ್ತರದಿಂದ ಇದನ್ನಾಕ್ರಮಿಸಿದರು. 1728ರಲ್ಲಿ ಲಹೇಜ್‍ನ ಸುಲ್ತಾನ ಯೆಮನಿನ ಇಮಾಮರ ವಿರುದ್ಧ ದಂಗೆ ಎದ್ದು ಏಡನನ್ನು ವಶಪಡಿಸಿಕೊಂಡದ್ದಲ್ಲದೆ ಅದನ್ನು ಸಂಪೂರ್ಣವಾಗಿ ಲೂಟಿಮಾಡಿದ. ಯುರೋಪಿನಿಂದ ಭಾರತಕ್ಕೆ ಸಮುದ್ರಮಾರ್ಗವನ್ನು ಕಂಡು ಹಿಡಿದಾಗ ಸ್ವಲ್ಪ ಕಾಲ ಇದರ ಪ್ರಾಮುಖ್ಯ ತಗ್ಗಿತ್ತಾದರೂ ಫ್ರೆಂಚರು ಈಜಿಪ್ಟನ್ನು ಆಕ್ರಮಿಸಿಕೊಂಡಾಗ (1798) ಬ್ರಿಟಿಷ್ ಸೇನೆಯೊಂದು ಇದನ್ನು ವಶಪಡಿಸಿಕೊಂಡಿತ್ತು. ಕೆಂಪುಸಮುದ್ರದಲ್ಲಿ ಬ್ರಿಟಿಷರು ಪ್ರಬಲರಾದಾಗ ಏಡನಿನ ಮೇಲೆ ಅವರ ಕಣ್ಣು ಬಿತ್ತು. ಲಹೇಜಿನ ಸುಲ್ತಾನನೊಂದಿಗೆ ಇದಕ್ಕಾಗಿ ಸಂಧಾನ ನಡಸುತ್ತಿದ್ದಾಗ ಅಷ್ಟರಲ್ಲೇ ಆತ ಭಾರತದ ಹಡಗೊಂದನ್ನು ಕೊಳ್ಳೆಹೊಡೆದನೆಂಬ ಕಾರಣದಿಂದ ಈಸ್ಟ್ ಇಂಡಿಯ ಕಂಪನಿ ಈ ಪ್ರದೇಶವನ್ನು 1839ರಲ್ಲಿ ವಶಪಡಿಸಿಕೊಂಡು ಭಾರತದ ಆಡಳಿತಕ್ಕೆ ಸೇರಿಸಿಕೊಂಡಿತು. ಆ ಸುಲ್ತಾನ ಬ್ರಿಟಿಷರೊಂದಿಗೆ ಸ್ನೇಹದ ಒಪ್ಪಂದ ಮಾಡಿಕೊಂಡ. ಆಮೇಲೆ ಸುತ್ತಮುತ್ತಣ ಪ್ರದೇಶಗಳು ಒಂದೊಂದಾಗಿ ಬ್ರಿಟಿಷರ ಅಧೀನಕ್ಕೆ ಬಂದುವು. ಒಳನಾಡಿನ ಜನ ಆಗಿಂದಾಗ್ಗೆ ದಂಗೆಯೇಳುತ್ತಿದ್ದರು. ಇವರ ಮೇಲೆ ಸುಲ್ತಾನನ ಹತೋಟಿಯಿರಲಿಲ್ಲ. 1888ರ ವೇಳೆಗೆ ಇವರೆಲ್ಲ ತಣ್ಣಗಾದರು. ಒಂದನೆಯ ಮಹಾಯುದ್ಧದ ಕಾಲದಲ್ಲಿ ತುರ್ಕಿಯ ಸೇನೆ ಸುಲ್ತಾನನ ಪ್ರದೇಶವನ್ನಾಕ್ರಮಿಸಿಕೊಂಡಿತ್ತು. ಯುದ್ಧ ಅಂತ್ಯವಾದಾಗ ಲಹೇಜ್ ಸುಲ್ತಾನ ಮತ್ತೆ ಬಂದು ಕೂತ.

ಕೆಲಕಾಲದ ವರೆಗೆ ಏಡನ್ ಅಂದಿನ ಮುಂಬಯಿ ಸರ್ಕಾರದ ಅಧೀನದಲ್ಲಿದ್ದು 1932ರಿಂದ 1937ರವರೆಗೆ ಅಂದಿನ ಭಾರತ (ಬ್ರಿಟಿಷ್) ಸರ್ಕಾರದ ವಶಕ್ಕೆ ಬಂತು. 1937ರಲ್ಲಿ ಇದು ಬ್ರಿಟಿಷರ ನೇರವಾದ ವಸಾಹತಾಯಿತು. ವಿಧಾನಪರಿಷತ್ತು ಸ್ಥಾಪಿತವಾದ್ದು 1947ರಲ್ಲಿ. ಇದಕ್ಕೆ ಚುನಾವಣೆಯ ವ್ಯವಸ್ಥೆ ಜಾರಿಗೆ ಬಂದದ್ದು 1955ರಲ್ಲಿ. 1959ರಲ್ಲಿ ಜಾರಿಗೆ ಬಂದ ಸಂವಿಧಾನದ ಪ್ರಕಾರ ಬಹುಮತಾಧಿಕಾರದ ತತ್ತ್ವದ ಮೇಲೆ 1961ರಲ್ಲಿ ಮಂತ್ರಿವ್ಯವಸ್ಥೆ ಜಾರಿಗೆ ಬಂತು.

1963ರಲ್ಲಿ ಇದು ದಕ್ಷಿಣ ಅರೇಬಿಯ ಸಂಯುಕ್ತ ರಾಷ್ಟ್ರದ ಸದಸ್ಯರಾಜ್ಯವಾಯಿತಾದರೂ ಇದರ ಮೇಲೆ ಬ್ರಿಟಿಷ್ ಅಧಿಕಾರ ಹೋಗಲಿಲ್ಲ.

ಈ ಪ್ರದೇಶದ ಜನ ಸಂಪೂರ್ಣ ಸ್ವಾತಂತ್ರ್ಯಕ್ಕೆ ಹಾತೊರೆಯುತ್ತಿದ್ದದ್ದರಿಂದ 1964ರ ಒಪ್ಪಂದವೊಂದರ ಪ್ರಕಾರ ದಕ್ಷಿಣ ಅರೇಬಿಯ ಸಂಯುಕ್ತ ರಾಷ್ಟ್ರಕ್ಕೆ 1968ರೊಳಗೆ ಸ್ವಾತಂತ್ರ್ಯ ನೀಡುವುದಾಗಿಯೂ ಬ್ರಿಟಿಷ್ ಪಡೆಗಳನ್ನು ಹಿಂತೆಗೆದುಕೊಳ್ಳಲಾಗುವುದೆಂದೂ ಬ್ರಿಟಿಷರು ಸಾರಿದರು. ಆದರೆ ಆ ಕಾಲದಲ್ಲಿ ಬಂಡಾಯಗಾರ ಚಳವಳಿ ನಿಲ್ಲಲಿಲ್ಲ. ಇವರಿಗೆ ಅರಬರ ಪ್ರೋತ್ಸಾಹವೂ ಇತ್ತು. 1965ರಲ್ಲಿ ಏಡನ್ ರಾಜ್ಯದ ಸಂವಿಧಾನವನ್ನು ರದ್ದುಮಾಡಿ ಅದರ ಮೇಲೆ ಹೈಕಮಿಷನರನಿಗೆ ಸಂಪೂರ್ಣ ಅಧಿಕಾರ ನೀಡಲಾಯಿತು.

1967ರ ಹೊತ್ತಿಗೆ ಪರಿಸ್ಥಿತಿ ವಿಷಮಿಸಿ ಬ್ರಿಟಿಷ್ ಸೇನೆಯ ವಿರುದ್ಧ ಅನೇಕ ಹಿಂಸಾತ್ಮಕ ಪ್ರದರ್ಶಗಳು ನಡೆದುವು. ರಾಷ್ಟ್ರೀಯ ವಿಮೋಚನಾರಂಗ ಹಾಗೂ ದಕ್ಷಿಣ ಯೆಮನ್ ವಿಮೋಚನಾರಂಗ (ಫ್ಲಾಸಿ)–ಈ ಎರಡು ಪಕ್ಷಗಳು ಪ್ರಬಲವಾಗಿ ಅಧಿಕಾರಕ್ಕಾಗಿ ಸ್ಪರ್ಧಿಸತೊಡಗಿದವು. ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಂಡಿತೆನ್ನಬಹುದು. 1967ರಲ್ಲಿ ಇಲ್ಲಿನ ಪರಿಸ್ಥಿತಿಯನ್ನು ವೀಕ್ಷಿಸುವ ಸಲುವಾಗಿ ವಿಶ್ವಸಂಸ್ಥೆಯ ನಿಯೋಗವೊಂದು ಇಲ್ಲಿಗೆ ಬಂದಾಗ ನಡೆದ ಸಾಮೂಹಿಕ ಚಳವಳಿಗಳೂ ಹಿಂಸಾತ್ಮಕ ಗಲಭೆಗಳೂ ಹಿಂದೆಂದೂ ನಡೆಯದಷ್ಟು ಭೀಕರವಾಗಿದ್ದುವು. ಕೊನೆಗೂ 1967ರ ನವೆಂಬರಿನಲ್ಲಿ ಬ್ರಿಟಿಷ್ ಸೇನೆ ಇಲ್ಲಿಂದ ಕಾಲ್ತೆಗೆಯಿತು. ಏಡನ್ ಒಳಗೊಂಡ ದಕ್ಷಿಣ ಯೆಮನ್ ಸ್ವತಂತ್ರ ರಾಷ್ಟ್ರದ ಉದಯವಾದ್ದು ಆ ತಿಂಗಳ 26ರಂದು. (ಸಿ.ಪಿ.)

**ಏಡಿ:** ಜಲವಾಸಿಯಾದ ಈ ಪ್ರಾಣಿ ಅಕಶೇರುಕಗಳ ಗುಂಪಿನ ಸಂಧಿಪದಿ ವಂಶಕ್ಕೆ (ಆರ್ತ್ರಾಪೊಡ) ಸೇರಿದೆ. (ಕ್ರ್ಯಾಬ್) ವರ್ಗ ಕ್ರಸ್ಟೇಸಿಯ. ಗಣ ಡೆಕಾಪೊಡ. ಉಪಗಣ ಬ್ರಾಕಿಯೂರ.

ಗಂಡು ಏಡಿಯ ಬೆನ್ನುಭಾಗ. ಉದರ ಭಾಗವನ್ನು ಕೆಳಗಡೆ ಪ್ರತ್ಯೇಕವಾಗಿ ತೋರಿಸಿದೆ.

ನಳ್ಳಿ ಪರ್ಯಾಯ ಪದ. ಏಡಿಗಳು ಕಠಿಣ ಚರ್ಮಿಗಳು, ತುಂಡು ಬಾಲದವು. ಸಾಧಾರಣವಾಗಿ ಜಲವಾಸಿಗಳು. ಹಲವು ಜಾತಿಯ ಏಡಿಗಳು ಕಡಲಿನಲ್ಲಿ ವಾಸಿಸುತ್ತವೆ. ಕೆಲವು ಉಷ್ಣ ಮತ್ತು ಸಮಶೀತೋಷ್ಣವಲಯಗಳ ಹೊಳೆ, ತೊರೆ, ನಾಲೆ, ಝರಿ, ಕಾಲುವೆ ಮತ್ತು ನೀರು ತುಂಬಿದ ಗದ್ದೆಗಳಲ್ಲೂ ವಾಸಿಸುತ್ತವೆ. ಸಾಮಾನ್ಯವಾಗಿ ಬಂಡೆಗಳಿಂದ ಕೂಡಿದ ತೀರ ಮತ್ತು ತಳಪ್ರದೇಶಗಳೇ ಇವುಗಳ ನೆಲೆ. ಬಂಡೆಗಳ ಬಿರುಕು ಮತ್ತು ಬಿಲಗಳೇ ಇವುಗಳ ಬೀಡು. ಇದಲ್ಲದೆ ಕಡಲತೀರದ ಜೌಗುಪ್ರದೇಶ ಮತ್ತು ತೇವಮಯವಾದ ಗದ್ದೆಗಳಲ್ಲೂ ಬಿಲತೋಡಿ ವಾಸಿಸುವ ಏಡಿಗಳಿವೆ. ಇವು ಸಂಜೆ ಮತ್ತು ರಾತ್ರಿಯ ವೇಳೆ ತಮ್ಮ ಆಹಾರವನ್ನು ಹುಡುಕಲು ಹೊರಗೆ ಬರುತ್ತವೆ. ಭೂಮಿಯ ಬಿಲಗಳಲ್ಲಿ ವಾಸಿಸುವ ಏಡಿಗಳೆಲ್ಲವೂ ಜಲಚರ ಏಡಿಗಳಂತೆಯೇ ತಮ್ಮ ಪ್ರಾರಂಭಿಕ ಜೀವನವನ್ನು ನೀರಿನ ಆಸರೆಯಲ್ಲಿಯೇ ಕಳೆಯುತ್ತವೆ.



ಗಂಡು ಏಡಿಯ ಬೆನ್ನುಭಾಗ, ಉದರ ಭಾಗವನ್ನು ಕೆಳಗಡೆ ಪ್ರತ್ಯೇಕವಾಗಿ ತೋರಿಸಿದೆ

**ದೇಹ:** ಅಡ್ಡವಾದ ಅಂಡಾಕಾರ ಅಥವಾ ಸರಿಸುಮಾರು ಚೌಕ ಅಥವಾ ತ್ರಿಕೋನಾಕಾರ; ಸ್ವಲ್ಪ ಮಟ್ಟಿಗೆ ಚಪ್ಪಟೆ. ತಲೆ ಮತ್ತು ಎದೆಭಾಗಗಳು ಒಂದುಗೂಡಿ ಶಿರೋವಕ್ಷವಾಗಿ ಮಾರ್ಪಟ್ಟಿದೆ. ಇಡೀ ದೇಹವನ್ನು ಕ್ಯಾರಪೇಸ್ ಎಂಬ ಒಂದು ಗಡುಸಾದ ಚಿಪ್ಪು ಆವರಿಸಿದೆ. ಎದೆಯ ಭಾಗದಲ್ಲಿ ಐದು ಜೊತೆ ಕಾಲುಗಳಿವೆ. ಅವುಗಳ ಪೈಕಿ ಮೊಟ್ಟಮೊದಲಿನ ಜೊತೆಕಾಲುಗಳು ವಿಶೇಷವಾಗಿ ಭಾರಿ ಗಾತ್ರದ್ದಾಗಿದೆ. ತುದಿಭಾಗಗಳು ಚಿಮ್ಮಟದಂತೆ ಮಾರ್ಪಟ್ಟಿವೆ. ಇವುಗಳಿಂದ ಆಹಾರ ಅಥವಾ ಇತರ ವಸ್ತುಗಳನ್ನು ಹಿಡಿಯುವುದು ಸಾಧ್ಯವಾಗುವುದು. ಆತ್ಮರಕ್ಷಣಾಸಾಧನಗಳಾಗಿಯೂ ಇವುಗಳ ಉಪಯೋಗವಿದೆ. ಏಡಿಗಳ ಓಟದ ದಾರಿಯನ್ನು ಅಡ್ಡಗಟ್ಟಿದರೆ ಅಥವಾ ಒಂದು ಮೂಲೆಗೆ ಅಟ್ಟಿ ನಿಲ್ಲಿಸಿದರೆ ಅವು ತಮ್ಮ ಇಕ್ಕುಳದಂಥ ಪಾದಗಳನ್ನು ಮೇಲೆತ್ತಿ ಭೀತಿಯುಂಟುಮಾಡಲು ಯತ್ನಿಸುತ್ತವೆ. ಒಂದು ವಸ್ತುವನ್ನು ಏಡಿ ಹಿಡಿದುಕೊಂಡಿತೆಂದರೆ ಅದನ್ನು ಬಡಪೆಟ್ಟಿಗೂ ಬಿಡುವುದಿಲ್ಲ. ಉಳಿದ ನಾಲ್ಕು ಜೊತೆ ಪಾದಗಳ ರಚನೆ ಸರಳ. ಅವು ಚಲನೆಯಲ್ಲಿ ನೆರವಾಗುತ್ತವೆ. ಏಡಿಯ ನಡಿಗೆ ಬಲು ವಿಶಿಷ್ಟವಾದದ್ದು. ಇದು ಭೂಮಿಯ ಮೇಲಾಗಲೀ ನೀರಿನ ತಳದಲ್ಲಾಗಲೀ ನಡೆಯುವಾಗ ಈ ಚಲನಪಾದಗಳ ತುದಿಯ ಮೇಲೆ ಭಾರ ಹಾಕಿ ಅಡ್ಡಲಾಗಿ ನಡೆಯುತ್ತದೆ. ಕೆಲವು ಜಾತಿಯ ಸಮುದ್ರದ ಏಡಿಗಳ ಕೊನೆಯ ಜೊತೆಕಾಲುಗಳ ತುದಿಭಾಗಗಳು ಅಗಲವಾಗಿ ಹುಟ್ಟಿನಂತೆ ಮಾರ್ಪಟ್ಟು ಈಜುವುದಕ್ಕೆ ನೆರವಾಗುತ್ತವೆ. ಶತ್ರುವಿನೊಡನೆ ಹೋರಾಡುವಾಗ ಏಡಿ ಅದರ ಕಾಲುಗಳನ್ನು ಕಳೆದುಕೊಳ್ಳಬಹುದು. ಆದರೆ ಹೀಗೆ ನಷ್ಟವಾದ ಕಾಲು ಅಥವಾ ಅಂಗ ಪುನಃ ಚಿಗುರುತ್ತದೆ. ಎರಡು ಸಂಯುಕ್ತ ಕಣ್ಣುಗಳು ಚಲನಶೀಲತೊಟ್ಟಿನ

ತುದಿಯಲ್ಲಿವೆ. ಮೇಲ್ಚಿಪ್ಪಿನ (ಕ್ಯಾರಪೇಸ್) ಮುಂಭಾಗದ ಗುಳಿಗಳಲ್ಲಿ ಒಳಕ್ಕೆ ಎಳೆದುಕೊಳ್ಳುವಂತೆ ಇವುಗಳ ರಚನೆ. ಏಡಿಗೆ ಆರು ಜೊತೆ ಬಾಯಿಯ ಸುತ್ತಾ ಅಂಗುಳದಲ್ಲಿ ಅಳವಡಿಸಿರುವ ಶಿರೋಪಾಂಗಗಳಿವೆ.

ಉದರ ಭಾಗ ಕ್ಷೀಣಗೊಂಡು ಶಿರೋವಕ್ಷಕ್ಕಿಂತಲೂ ಚಿಕ್ಕದಾಗಿರುವುದಲ್ಲದೆ ಎದೆಯ ಭಾಗದ ತಳದಲ್ಲಿ ಮಡಿಚಿಕೊಂಡಿದೆ. ಉದರ ಮತ್ತು ಕೀಲೇಟ್ ಪಾದಗಳ ಸಹಾಯದಿಂದ ಗಂಡು ಹೆಣ್ಣುಗಳನ್ನು ಸುಲಭವಾಗಿ ಗುರುತಿಸಬಹುದು. ಉದರ ಭಾಗ ಗಂಡಿನಲ್ಲಿ ಹೆಚ್ಚು ಕಿರಿದು ಮತ್ತು ತ್ರಿಕೋನಾಕೃತಿಯದು. ಅದು ಹೆಣ್ಣಿನಲ್ಲಿ ಅಗಲ ಮತ್ತು ದುಂಡಗಿದೆ. ಗಂಡಿನ ಕೀಲೇಟ್ ಪಾದಗಳು ಹೆಣ್ಣಿನದಕ್ಕಿಂತ ಹೆಚ್ಚು ದೊಡ್ಡವೂ ಮತ್ತು ಬಲಯುತವೂ ಆಗಿವೆ. ಫಿಡ್ಲರ್ ಏಡಿಗಳಲ್ಲಿ ಗಂಡಿನ ಒಂದು ಕೀಲೇಟ್ ಪಾದ ಮತ್ತೊಂದಕ್ಕಿಂತ ದೊಡ್ಡದು. ಹೆಣ್ಣಿನ ಪ್ಲವಪಾದಗಳು ಗಂಡಿನದಕ್ಕಿಂತ ಪುಷ್ಟವಾಗಿ ಬೆಳೆದಿರುತ್ತವೆ. ಸಂತಾನೋತ್ಪತ್ತಿಕಾಲದಲ್ಲಿ ಹೆಣ್ಣು ಏಡಿ ತಾನಿಟ್ಟ ಮೊಟ್ಟೆಗಳೆಲ್ಲವನ್ನು ಒಂದುಗೂಡಿಸಿ ತನ್ನ ಉದರದ ಪ್ಲವಪಾದಗಳಿಗೆ ಅಂಟಿಸಿಕೊಳ್ಳುತ್ತದೆ.


ಗಂಡು ಏಡಿಯ ಉದರ ಭಾಗ

ಮೊಟ್ಟೆಯ ಗೊಂಚಲು ದಪ್ಪನಾಗಿರುವುದರಿಂದ ಅದು ದೇಹದಿಂದ ಹೊರಚಾಚುತ್ತದೆ.


ಹೆಣ್ಣು ಏಡಿಯ ಉದರ ಭಾಗ

ಏಡಿಗಳು ಸಾಮಾನ್ಯವಾಗಿ ಸರ್ವಭಕ್ಷಕಗಳು. ಮಾಂಸಾಹಾರಿ ಮತ್ತು ಸಸ್ಯಾಹಾರಿಗಳೆಂಬ ಎರಡು ಬಗೆಯ ಏಡಿಗಳು ಇವೆ. ಒಮ್ಮೊಮ್ಮೆ ಕೆಲವು ಬಗೆಯ ಏಡಿಗಳು ತಮಗಿಂತಲೂ ಸಣ್ಣದಾದ ಏಡಿಗಳನ್ನು ಹಿಡಿದು ತಿನ್ನುವುದೂ ಉಂಟು. ಅಂತೂ ಅನೇಕ ಏಡಿಗಳು ಕೊಳೆತಿನಿಗಳಾಗಿದ್ದು ಪರಿಸರವನ್ನು ಸ್ವಚ್ಛಗೊಳಿಸುತ್ತವೆ.

ಏಡಿ ಪರತಂತ್ರಜೀವಿಗಳಲ್ಲ. ಆದರೆ ಆತ್ಮರಕ್ಷಣೆಗಾಗಿ ಹಲವು ಬಗೆಯ ಉಪಾಯಗಳನ್ನು ಅವು ಕೈಗೊಂಡಿರುತ್ತವೆ. ಕೆಲವು ಬಗೆಯ ಏಡಿಗಳಿಗೆ ಪರಿಸರದಲ್ಲಿರುವ ಸಣ್ಣಸಣ್ಣ ಕಲ್ಲುಗಳ ಆಕಾರ, ಗಾತ್ರ ಮತ್ತು ವರ್ಣವಿನ್ಯಾಸಗಳೇ ಇವೆ. ಈ ಕಾರಣದಿಂದ ಅವು ಶತ್ರುವಿನ ಕಣ್ಣಿಗೆ ಸುಲಭವಾಗಿ ಬೀಳುವುದಿಲ್ಲ. ಕೆಲವು ಏಡಿಗಳು ತಮ್ಮ ಪರಿಸರದಲ್ಲಿ ಬೆಳೆಯುವ ಜೊಂಡು ಮತ್ತು ಸ್ಪಂಜು ಪ್ರಾಣಿಗಳನ್ನು ಬೆನ್ನಿನ ಮೇಲೆ ಸಮುದ್ರದ ಅನಿಮೋನನ್ನು ಕೂರಿಸಿಕೊಂಡು ಸಹಜೀವನ ನಡೆಸುವುವು. ಇಂಥ ಸಹಜೀವನದಿಂದ ಏಡಿಗಳಿಗೆ ಸುಲಭವಾಗಿ ಆತ್ಮರಕ್ಷಣೆ ಒದಗುತ್ತದೆ. ಇದರೊಂದಿಗೆ, ಚಲನಸಾಮರ್ಥ್ಯವಿಲ್ಲದ ಅನಿಮೋನಿಗೆ ಒಂದೆಡೆಯಿಂದ ಮತ್ತೊಂದೆಡೆಗೆ ಸವಾರಿ ಹೋಗುವ ಅವಕಾಶ ಸಿಗುತ್ತದೆ.


ಪಿಟೀಲು ಏಡಿ

**ಸಂತಾನೋತ್ಪತ್ತಿ:** ಕಾರ್ಸಿನಸ್ ಜಾತಿಯ ಏಡಿಯಲ್ಲಿ ಸಾಕಷ್ಟು ಮಾಹಿತಿಗಳು ದೊರೆತಿವೆ. ಮೊಟ್ಟೆಯಿಟ್ಟ ಎರಡು ವಾರಗಳಾದ ಅನಂತರ ಮೊಟ್ಟೆಯಿಂದ ಮರಿ ಅಥವಾ ಲಾರ್ವಗಳು ಹೊರಬರುತ್ತವೆ. ಇವು ಹೆತ್ತವರನ್ನು ಹೋಲುವುದಿಲ್ಲ. ಬೆಳೆದಂತೆ ತಮ್ಮ ಹೊರಕವಚವನ್ನು ಹಲವಾರು ಬಾರಿ ಕಳಚಿಕೊಂಡು ಕೊನೆಗೆ ಮರಿ ರೂಪಾಂತರಗೊಳ್ಳುತ್ತದೆ. ಇದರಲ್ಲಿ ಎರಡು ಪ್ರಮುಖ ಲಾರ್ವಹಂತಗಳನ್ನು ಕಾಣಬಹುದು. ಮೊಟ್ಟೆಯಿಂದ ಹೊರಬರುವ ಲಾರ್ವದ ಘಟ್ಟಕ್ಕೆ ಜೋಯೆಯ ಎಂದು ಹೆಸರು. ಇದರ ದೇಹದ ಉದ್ದ ಒಂದು ಮಿಲಿಮೀಟರ್. ಇದು ಪಾರದರ್ಶಕ. ಇಂಥವು ಸಾಗರದ ಮೇಲ್ಮೈನಲ್ಲಿ ಈಜುತ್ತ ತಮ್ಮ ಪರಿಸರದ ಸೂಕ್ಷ್ಮಜೀವಿಗಳನ್ನು ತಿಂದು ದೊಡ್ಡದಾಗುತ್ತವೆ. ದೇಹ ದುಂಡಗೆ, ಒಂದು ಜೊತೆ ಸಂಯುಕ್ತ ಕಣ್ಣುಗಳು, ರೋಸ್ಟ್ರಮ್ ಮತ್ತು ಕ್ಯಾರಪೇಸುಗಳಿವೆ.


ಏಡಿ ಲಾರ್ವದ ಎರಡು ಘಟ್ಟಗಳು
ಎಡಗಡೆಯದು ಜೋಯೆಯ, ಬಲಗಡೆಯದು ಮೆಗಲೋಪ

4–5 ಖಂಡಗಳಿಂದ ಕೂಡಿದ ಉದರ ಭಾಗ ಅದರ ಬಾಲದಂತಿದೆ. ಎದೆಯ ಭಾಗದಲ್ಲಿ ಮೊದಲ ಎರಡು ಜೊತೆಪಾದಗಳು ಮಾತ್ರ ಇವೆ. ಇದರ ಕವಚ ಒಂದೆರಡು ಬಾರಿ ಕಳಚಿಯಾದ ಮೇಲೆ ಬೆನ್ನಿನ ಮೇಲೆ ಒಂದು ನೀಳವಾದ ಮುಳ್ಳು ರೂಪುಗೊಳ್ಳುತ್ತದೆ. ಜೋಯೆಯ ಲಾರ್ವ ಪ್ರೌಢಜೀವಿಯಂತಿದ್ದರೂ ಇದರ ಉದರ ಭಾಗ ಶಿರೋವೃಕ್ಷದ ತಳಭಾಗದಲ್ಲಿ ಮಡಿಚಿಕೊಂಡಿರದೆ ಹಿಂದಕ್ಕೆ ಚಾಚಿಕೊಂಡಿದೆ. ಇದಕ್ಕೆ ಈಜಲು ನೆರವಾಗುವ ಉಪಾಂಗಗಳಿವೆ. ಇದು ಕೊನೆಗೆ ನೀರಿನ ತಳಭಾಗಕ್ಕಿಳಿದು ಕವಚವನ್ನು ವಿಸರ್ಜಿಸಿ ಮರಿ ಏಡಿಯಾಗುತ್ತದೆ. ಇದರ ಗಾತ್ರ ಮೂರು ಮಿಲಿಮೀಟರಿನಷ್ಟು. ಇದು ಬೆಳೆದಂತೆಲ್ಲ ಕಾಲಕಾಲಕ್ಕೆ ತನ್ನ ಗಡುಸಾದ ಹೊರಕವಚವನ್ನು ವಿಸರ್ಜಿಸಿ ಹೊಸದನ್ನು ಪುನಃಪುನಃ ರೂಪಿಸಿಕೊಂಡು ದೊಡ್ಡದಾಗುತ್ತದೆ. ಈ ಪರ್ವಕಾಲದಲ್ಲಿ ಅದರ ಹೊರಕವಚ ಮೃದುವಾಗಿರುತ್ತದೆ; ಅದಕ್ಕೆ ಸ್ಥಿತಿಸ್ಥಾಪಕಶಕ್ತಿ ಇರುತ್ತದೆ. ಇದು ಕ್ರಮೇಣ ಗಟ್ಟಿಯೂ ಗಡಸೂ ಆಗುವುದು.


ಎಡಗಡೆಯದು : ಶಂಖದೊಡನಿರುವ ಸಂನ್ಯಾಸಿ ಏಡಿ
ಬಲಗಡೆಯದು : ಶಂಖದಿಂದ ಹೊರಬಂದಿರುವ ಸಂನ್ಯಾಸಿ ಏಡಿ

ಏಡಿಯ ಮಾಂಸ ಬಲು ರುಚಿಕರ. ಹೀಗಾಗಿ ಏಡಿಯ ಪ್ರಭೇದಗಳನ್ನು ಜನ ಆಹಾರಕ್ಕಾಗಿ ಉಪಯೋಗಿಸುತ್ತಾರೆ. ಇದರ ಮಾಂಸ ಮೀನಿನ ಮಾಂಸದಷ್ಟು ಪುಷ್ಟಿದಾಯಕವಲ್ಲ. ಆದರೆ ಇದರಲ್ಲಿ ಔಷಧದ ಮೌಲ್ಯಗಳಿವೆಯೆಂದು ಪರಿಗಣಿಸಲಾಗಿದೆ. ಭಾರತದ ಹಲವು ಕಡೆ ಏಡಿಮಾಂಸದ ಸಾಂಬಾರು ಗೂರಲು ಕೆಮ್ಮು ಮತ್ತು ಬಹು ಕಾಲದ ಜ್ವರಗಳಿಂದ ನರಳುವವರಿಗೆ ಉಪಶಮನಕಾರಿಯೆಂದು ಜನ ನಂಬುತ್ತಾರೆ. ಕೆಲವು ಏಡಿಗಳ ಮಾಂಸದ ಸಾರು ಶಕ್ತಿವರ್ಧಕ. ಏಡಿಯ ಸುಲಿದ ಕವಚವನ್ನು ಪುಡಿ ಮಾಡಿ ಹಂದಿ ಮತ್ತು ಕೋಳಿಗಳ ತಿನಿಸಿನಲ್ಲಿ ಬೆರಸುವುದು ಉಂಟು. ಅದನ್ನು ಗೊಬ್ಬರಕ್ಕಾಗಿ ಉಪಯೋಗಿಸುವುದು ಉಂಟು.

ಭಾರತದಲ್ಲಿ ಆಹಾರಕ್ಕಾಗಿ ಬಳಸುವ ಏಡಿಗಳು. **1 ಪಿಲ್ಲ ಸೆರೇಟ :** ಇದು ಸಮುದ್ರದ ಕೊಲ್ಲಿ, ಖಾರಿ, ನದೀಮುಖಜದ ಜೌಗುಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಇದರ ಕೊನೆಯ ಜೊತೆಕಾಲುಗಳ ತುದಿಭಾಗ ಅಗಲವಾಗಿ ಹುಟ್ಟಿನಂತೆ

ಮಾರ್ಪಟ್ಟಿರುವುದರಿಂದ ಇದು ನೀರಿನಲ್ಲಿ ಸುಲಭವಾಗಿ ಈಜಬಲ್ಲದು. ಬಿಲಗಳಲ್ಲಿ ಇದರ ವಾಸ. ಭಾರತದಲ್ಲಿ ಕಂಡುಬರುವ ಏಡಿಗಳಲ್ಲೆಲ್ಲ ಇದು ಬಲು ದೊಡ್ಡದು. ಚಿಕ್ಕ ಸರೋವರದಲ್ಲಿ ಬೆಳೆಯುವ ಷಿಲ್ಲಜಾತಿಯ ಏಡಿಗಳ ಕ್ಯಾರಪೇಸಿನ ಅಡ್ಡ ಅಳತೆ 40 ಸೆಂಮೀ ಗಳಷ್ಟಿರುತ್ತದೆ. ಬೇಸಿಗೆಯಲ್ಲಿ ಇವು ಯಥೇಚ್ಚವಾಗಿ ದೊರಕುವುವು. ಆಗ ಇವನ್ನು ದೋಣಿಗಟ್ಟಲೆ ಹಿಡಿಯುತ್ತಾರೆ.

**2 ನೆಪ್ಚೂನಸ್ ಜಾತಿಯ ಏಡಿಗಳು**: ಇಲ್ಲಿ ಎರಡು ಜೀವಪ್ರಭೇಧಗಳು ಪ್ರಮುಖವಾದುವು; ನೆ. ಪೆಲಾಜಿಕಸ್ ಮತ್ತು ನೆ. ಸ್ಯಾಂಗ್ವಿನೋಲೆಂಟಸ್. ಇವು ಷಿಲ್ಲಿ ಜಾತಿಯ ಏಡಿಗಳಲ್ಲಿ ಈಜು ಜೀವನ ಸಾಗಿಸತಕ್ಕವು. ಬಂಗಾಲ, ಒರಿಸ್ಸ, ದಕ್ಷಿಣ ಭಾರತದ ತೀರ ಪ್ರದೇಶಗಳಲ್ಲಿ ವಾಸಿಸುತ್ತವೆ. ಇವುಗಳ ಕ್ಯಾರಪೇಸ್ ಅಗಲ ಸುಮಾರು 12–14 ಸೆಂಮೀ ನಷ್ಟು.

**3 ಚೌರಿಬ್ಡಿಸ್ ಕ್ರೂಸಿಫೆರ್**: ದಕ್ಷಿಣಭಾರತದ ತೀರಪ್ರದೇಶದಲ್ಲಿ ಇದರ ವಾಸ. ಈಜುವ ಸಾಮರ್ಥ್ಯ ಇದೆ. ಕ್ಯಾರಪೇಸಿನ ಮೇಲೆ ವರ್ಣವಿನ್ಯಾಸವಿದೆ.

**4 ವರುಣ ಲಿಟ್ಟರೇಟ**: ಗಂಗಾನದಿ ಮುಖಜ ಭೂಪ್ರದೇಶಗಳಲ್ಲಿ ಅಸಂಖ್ಯಾತವಾಗಿ ದೊರೆಯುತ್ತದೆ. ಅಲ್ಲದೆ ಕೆರೆ ಕೊಳಗಳ ದಂಡೆಗಳಲ್ಲಿ ಬಿಲ ತೋಡಿಯೂ ವಾಸಿಸುವುದು. ಕೆರೆಯ ನೀರು ಬತ್ತಿಹೋಗುವ ಸಂದರ್ಭಗಳಲ್ಲಿ ತೇವವಿರುವ ಕೆರೆಯಂಗಳದಲ್ಲಿ ಈ ಏಡಿಗಳು ಗುಂಪುಗೂಡುತ್ತವೆ. ಅಲ್ಲಿಯ ಜನರು ಈ ಸಮಯವನ್ನೇ ಕಾದಿದ್ದು ಆಯಾಸವಿಲ್ಲದೆ ಸುಲಭವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಇವನ್ನು ಹಿಡಿಯುತ್ತಾರೆ.

**5 ಪಾರಟೆಲ್ಫೂಸ ಸ್ಪೈನಿಜೆರ**: ಕೆರೆ, ತೊರೆ, ಕಾಲುವೆಗಳದಂಡೆಗಳಲ್ಲಿ ಬಿಲಗಳಲ್ಲಿ ವಾಸ. ನೀರಿನಲ್ಲಿ ಹರಿಯಬಲ್ಲುದೇ ವಿನಾ ಈಜಲಾರದು. ಇದರ ಕ್ಯಾರಪೇಸಿನ ಅಡ್ಡಳತೆ 8 ಸೆಂಮೀ ನಷ್ಟಿದೆ.

ಬಿಲಗಳಲ್ಲಿ ಮತ್ತು ಕಲ್ಲಿನ ಪೊಟರೆಗಳಲ್ಲಿ ವಾಸಿಸುವ ಏಡಿಗಳನ್ನು ಮತ್ತು ನೀರಿನಲ್ಲಿ ಈಜುವ ಮತ್ತು ಹರಿದಾಡುವ ಏಡಿಗಳನ್ನು ಹಿಡಿಯುವ ರೀತಿಗಳು ಬೇರೆ ಬೇರೆ. ಒಂದು ಬಿದಿರಿನ ಗಳುವನ್ನು ಬಿಲಗಳಲ್ಲಿಯೋ ಅಥವಾ ಬಿರುಕು ಅಥವಾ ಪೊಟರೆಗಳಲ್ಲಿಯೋ ತುರುಕಿದಾಗ ಭಯಗೊಂಡು ಏಡಿ ತನ್ನ ಹಿಡಿಗಾಲುಗಳಿಂದ ಅದನ್ನು ಬಲವಾಗಿ ಹಿಡಿದುಕೊಳ್ಳುತ್ತದೆ. ಹಾಗೆ ಹಿಡಿದುಕೊಂಡ ಏಡಿಯನ್ನು ಹಾಗೆಯೇ ಹೊರಕ್ಕೆಳೆದು ಹಿಡಿಯುವುದು ಒಂದು ವಿಧಾನ. ಕೆಲವು ಸಂದರ್ಭಗಳಲ್ಲಿ ಗಳು ಅಥವಾ ಕೋಲಿನ ತುದಿಗೆ ಸತ್ತ ಮೀನು ಅಥವಾ ಇತರ ಸಣ್ಣ ಪ್ರಾಣಿಯನ್ನು ಕಟ್ಟುವುದೂ ಉಂಟು. ಖಾರಿ, ಕೊಲ್ಲಿಗಳಲ್ಲಿ ಈಜಾಡುವ ಏಡಿಗಳನ್ನು ಹಿಡಿಯುವ ವಿಧಿವಿಧಾನಗಳೇ ಬೇರೆ. ಕಡಲ ಏಡಿಗಳನ್ನು ವೃತ್ತಾಕಾರದ ಬಲೆಗಳನ್ನು ಬೀಸಿ ಹಿಡಿಯುವುದುಂಟು. ಖಾರಿ, ಕೊಲ್ಲಿಯ ದಂಡೆಯಲ್ಲಿ ಒಂದು ಕಂಬವನ್ನು ನೆಟ್ಟು ಮತ್ತು ಅದಕ್ಕೆ ಒಂದು ಹಗ್ಗದ ಕೊನೆಯನ್ನು ಬಿಗಿದು ಮತ್ತೊಂದು ಕೊನೆಯನ್ನು ತಮ್ಮ ದೋಣಿಗೆ ಕಟ್ಟುತ್ತಾರೆ. ಸತ್ತ ಮೀನುಗಳನ್ನು ನೇತಾಡುವ ಹಗ್ಗಗಳ ಸಹಾಯದಿಂದ ಇಳಿಬಿಡುತ್ತಾರೆ. ಇವು ನೀರಿನಲ್ಲಿ ಮುಳುಗಲು ಸಣ್ಣ ಸಣ್ಣ ಕಲ್ಲುಗಳನ್ನು ಮೀನಿನೊಂದಿಗೆ ಬಿಗಿಯುತ್ತಾರೆ. ಏಡಿಗಳು ಮೀನುಗಳನ್ನು ತಮ್ಮ ಹಿಡಿಗಾಲುಗಳಿಂದ ಬಲವಾಗಿ ಹಿಡಿದು ಕೆಳಕ್ಕೆ ಜಗ್ಗುತ್ತವೆ. ಹಗ್ಗ ಭಾರವಾಗಿರುವುದನ್ನು ಕಂಡು, ಅದನ್ನು ಮೇಲಕ್ಕೆ ಎತ್ತಿ ಏಡಿಗಳನ್ನು ಸಂಗ್ರಹಿಸುತ್ತಾರೆ.

ಜಪಾನ್ ಮತ್ತು ಅಮೆರಿಕ ದೇಶಗಳಲ್ಲಿ ಏಡಿಯ ಮಾಂಸವನ್ನು ಹದಗೊಳಿಸಿ ಡಬ್ಬಗಳಲ್ಲಿ ತುಂಬುವ ಉದ್ಯಮಗಳು ಬೆಳೆದಿವೆ. ಅಲ್ಲಿ ಮೊದಲು ಏಡಿಗಳನ್ನು 15–20 ನಿಮಿಷಗಳ ಕಾಲ ಕುದಿಯುವ ನೀರಿನಲ್ಲಿ ಅದ್ದಿ ಅನಂತರ ಅವುಗಳ ಹೊರ ಕವಚ ಮತ್ತು ಇತರ ಮೃದುವಾದ ಪಚನಾಂಗ, ಶ್ವಾಸಾಂಗ, ಜನನಾಂಗಗಳನ್ನು ಹೊರತೆಗೆದು ಶುದ್ಧವಾದ ನೀರಿನಿಂದ ಚೆನ್ನಾಗಿ ತೊಳೆಯುತ್ತಾರೆ. ಅನಂತರ ಅವನ್ನು ಶೇ.1 ಉಪ್ಪುನೀರಿನಲ್ಲಿ ತೊಳೆದು ಜಜ್ಜಿ ಶುದ್ಧಗೊಳಿಸಿ ಡಬ್ಬಗಳಲ್ಲಿ ತುಂಬಿ ರಕ್ಷಿಸುತ್ತಾರೆ. ಹೀಗೆ ಸಿದ್ಧಗೊಳಿಸಿದ ಕೈಸೊನೆಕ್ಸ್ ಫೆಲಾಂಜಿಯಂ ಎಂಬ ಏಡಿಯ ಮಾಂಸ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಸರಾಗಿದೆ.

ಏಡಿಗಳ ಗಾತ್ರ ಸಾಮಾನ್ಯವಾಗಿ ಚಿಕ್ಕದು. ಕೆಲವು ಮಾತ್ರ ದೊಡ್ಡದಾಗಿರುವುದುಂಟು. ಒಂದೆರಡು ಜಾತಿಯ ಏಡಿಗಳು ರಾಕ್ಷಸಾಕಾರದಷ್ಟು ಬೆಳೆದಿರುತ್ತವೆ. ಉದಾಹರಣೆಗೆ ಜಪಾನಿನ ರಾಕ್ಷಸ ಏಡಿಯ ಕ್ಯಾರಪೇಸ್ 30 ಸೆಂಮೀಗಿಂತಲೂ ಹೆಚ್ಚಿನ ವ್ಯಾಸವುಳ್ಳದ್ದು. ಅದರ ಕಾಲುಗಳ ಉದ್ದ 3 ಮೀಗಳಷ್ಟಿದೆ.

ಬ್ರಾಕಿಯೂರದ ಹತ್ತಿರಸಂಬಂಧಿ ಉಪಗಣವಾದ ಅನೊಮುರದಲ್ಲಿ ಕೆಲವು ಕಠಿಣ ಚರ್ಮಿಗಳನ್ನು ಏಡಿಗಳೆಂದು ರೂಢಿನಾಮವಾಗಿ ಕರೆಯುವುದುಂಟು. ಈ ಗುಂಪಿನ ದಶಪಾದಿಗಳಿಗೂ ಉದರ ಮೊಟಕು. ಅದು ಶಿರೋವಕ್ಷಕ್ಕಿಂತಲೂ ಚಿಕ್ಕದು; ಮತ್ತು ಶಿರೋವಕ್ಷದ ತಳಭಾಗದಲ್ಲಿ ಅದು ಶಾಶ್ವತವಾಗಿ ಮಡಿಚಿಕೊಂಡಿರುತ್ತದೆ. ಈ ಗುಂಪಿನಲ್ಲಿ ಏಡಿಗಳೆಂದು ಕರೆಯಲಾಗುವ ಪ್ರಾಣಿಗಳ ಪೈಕಿ ಸಂನ್ಯಾಸಿ ಏಡಿ ಚಿರ ಪರಿಚಿತ. ಇವು ಸಾಮಾನ್ಯವಾಗಿ ಬಸವನಹುಳು ವರ್ಗದ ಉದರಪಾದಿಗಳ ಬರಿದಾದ ಶಂಖಗಳಲ್ಲಿ ವಾಸಿಸುತ್ತವೆ. ಇವುಗಳ ಉದರಭಾಗ ಮೃದುವಾಗಿರುವುದಲ್ಲದೆ ಶಂಖಗಳ ಆಕಾರದಂತೆ ಸುರುಳಿ ಸುತ್ತಿಕೊಂಡಿರುತ್ತವೆ. ಇವುಗಳ ಎಡಭಾಗದ ಉದರದ ಉಪಾಂಗಗಳು ಕ್ಷೀಣಗೊಂಡಿವೆ ಮತ್ತು ಬಲಭಾಗ ನಶಿಸಿ ಹೋಗಿವೆ. ಶಂಖದ ಒಳತುದಿ ಹಿಡಿದುಕೊಳ್ಳಲು ಸಹಾಯಕವಾಗಲು ಅದರ ಕೊನೆಯ ಉದರದ ಉಪಾಂಗಗಳು ಮತ್ತು ಲಾಂಗುಲಾಪಾದಗಳು. ಕೊಕ್ಕೆಯಂತೆ ಮಾರ್ಪಾಟಾಗಿವೆ. ಇದರ ಆಂಟೆನಗಳು ಉದ್ದವಾಗಿವೆ. ಮೊದಲ ಕೀಲೇಟು ಪಾದಗಳಲ್ಲಿ ಅಸಮವಾಗಿ ಬೆಳೆದಿರುವ ಕೀಲೇಟುಗಳಿವೆ. ಕೊನೆಯ ಎರಡು ಜೊತೆ ವಕ್ಷದ ಕಾಲುಗಳು ಕ್ಷೀಣಗೊಂಡಿವೆ. ಸಂನ್ಯಾಸಿ ಏಡಿಗಳು ದೊಡ್ಡವಾದಂತೆಲ್ಲ ಹಳೆಯ ಶಂಖವನ್ನು ತ್ಯಜಿಸಿ ಹೊಸ ದೊಡ್ಡ ಶಂಖದಲ್ಲಿ ಮನೆ ಮಾಡಿಕೊಳ್ಳುತ್ತವೆ. ಇವು ಸಾಮಾನ್ಯವಾಗಿ ಸಮುದ್ರ ತೀರದ ಖಾರಿಗಳಲ್ಲಿ ಕಂಡುಬರುತ್ತವೆ. ಈ ಗುಂಪಿನಲ್ಲಿ ಬಿರ್ಗಸ್ ಲ್ಯಾಟ್ರೊ ಎಂಬ ತೆಂಗಿನಕಾಯಿ ಏಡಿ ಅಥವಾ ದರೋಡೆಕಾರ ಏಡಿಯನ್ನು ಅದು ದೊರಕುವ ಸ್ಥಳದಲ್ಲಿ ವಾಸಿಸುವ ಜನರು ಆಹಾರಕ್ಕಾಗಿ ಉಪಯೋಗಿಸುತ್ತಾರೆ. ಇದೂ ಕೂಡ ಸಂನ್ಯಾಸಿ ಏಡಿಯೇ. ಹಿಂದೂಸಾಗರದ ಸೆಂಟಿನೆಲ್ ದ್ವೀಪ ಮತ್ತು ಬಂಗಾಲಕೊಲ್ಲಿಯ ನಿಕೋಬಾರ್ ದ್ವೀಪಗಳಿಗೆ ಇದು ಸೀಮಿತಗೊಂಡಿದೆ. ಇದರ ಕಿವಿರುಗಳು ಕ್ಷೀಣಗೊಂಡಿರುವುದರಿಂದ ಗಾಳಿಯನ್ನು ಉಸಿರಾಡಲು ಕಿವಿರು ಅಂಗುಳದಲ್ಲಿ ರಕ್ತನಾಳಗಳಿಂದ ತುಂಬಿದ ಗೊಂಡೆಗಳಿವೆ. ತೀರಗಳಲ್ಲಿ ಹೆಚ್ಚು ಕಾಲ ವಾಸಿಸಲು ಇವು ಹೊಂದಿಕೊಂಡಿದ್ದರೂ ಆಗಾಗ್ಗೆ ಸಮುದ್ರಕ್ಕೆ ಭೇಟಿಕೊಟ್ಟು ತಮ್ಮ ಕಿವಿರುಗಳನ್ನು ಒದ್ದೆಮಾಡಿಕೊಳ್ಳುತ್ತದೆ. ಅಲ್ಲದೆ ಸಂತಾನೋತ್ಪತ್ತಿಯೂ ಕೂಡ ಸಮುದ್ರದಲ್ಲಿಯೇ ನಡೆಯಬೇಕು. ಏಕೆಂದರೆ ಜೋಯೆಯ ಲಾರ್ವಗಳು ಜಲವಾಸಿಗಳು. ಅವು ಮರದಿಂದ ಬಿದ್ದ ತೆಂಗಿನಕಾಯಿಗಳ ಸಿಪ್ಪೆಯನ್ನು ಬಿಚ್ಚಿ ಅದರಲ್ಲಿರುವ ಕರಟವನ್ನು ಒಡೆದು ತೆಂಗಿನಕಾಯಿಯನ್ನು ತಿನ್ನಬಲ್ಲವು. ಹಲವು ಸಂದರ್ಭಗಳಲ್ಲಿ ತೆಂಗಿನಗಿಡಗಳನ್ನೂ ಹತ್ತಬಲ್ಲವು. ತಮ್ಮ ರಕ್ಷಣೆಗಾಗಿ ಒಡೆದ ಕರಟಗಳಲ್ಲಿ ಮನೆಮಾಡಿಕೊಂಡಿರುವುದು ಇವುಗಳ ಹುಟ್ಟುಗುಣ. ಈ ಕಾರಣಗಳಿಂದಲೇ ಇವಕ್ಕೆ ತೆಂಗಿನ ಏಡಿಗಳೆಂದು ಕರೆಯುವುದೂ ಉಂಟು. (ಬಿ.ಎನ್.ಬಿ.)



ಬಿರ್ಗಸ್ ಲಾತ್ರೊ (ತೆಂಗಿನಕಾಯಿ ಏಡಿ)

**ಏಡಿಗಂತಿ:** ದೇಹದ ಯಾವುದೇ ಭಾಗ ಅಥವಾ ಅಂಗದಲ್ಲಿ ಸ್ವತಂತ್ರ್ಯವಾಗಿ ಬೆಳೆಯುವ ಊತಕ. ಇದರಿಂದ ದೇಹಕ್ಕೆ ಯಾವ ಉಪಯೋಗವೂ ಇಲ್ಲ ಅಡೆತಡೆಯಿಲ್ಲದೆ ವರ್ಧಿಸಬಲ್ಲುದು. ಪ್ರಾಥಮಿಕ ಬೆಳವಣಿಗೆಯ (ಪ್ರೈಮರಿ ಗ್ರೋತ್) ಸ್ಥಳದಿಂದ ದೂರವಾಗಿ ದೇಹದ ಬೇರೆ ಬೇರೆ ಭಾಗಗಳಲ್ಲಿ ತದ್ರೂಪದ ದ್ವಿತೀಯಕ ಬೆಳವಣಿಗೆಗಳನ್ನು ಉಂಟು ಮಾಡಬಲ್ಲುದು (ಕ್ಯಾನ್ಸರ್). ಅರ್ಬುದ ನಳ್ಳಿ, ಜಾಡ್ಯ ಪರ್ಯಾಯ ಪದಗಳು. ಏಡಿಯ ಕಾಲುಗಳಂತೆ ಎಲ್ಲ ದಿಕ್ಕುಗಳಲ್ಲೂ ಹರಡುವುದರಿಂದ ಏಡಿಗಂತಿ ಎಂದು ಹೆಸರಾಗಿದೆ. ಈ ರೋಗಕ್ಕೆ ಬಲಿಯಾದ ವ್ಯಕ್ತಿ ಅತಿ ಶೀಘ್ರವಾಗಿಯೂ ತೀವ್ರವಾಗಿಯೂ ಕ್ಷೀಣಿಸಿ ಕೊನೆಯಲ್ಲಿ ಸಾವಿಗೇ ಒಳಗಾಗುವುದರಿಂದ ಇದನ್ನು ವಿಷಮಗಂತಿ, ವಿಷಮಜಾಡ್ಯ ಎಂದೂ ಕರೆಯುವುದುಂಟು.

ಏಡಿಗಂತಿಯ ವಿಷಮತೆಯ ಮಟ್ಟ ಒಂದೊಂದು ಬಗೆಯದರಲ್ಲೂ ಒಂದೊಂದು ವಿಧ. ಇದನ್ನು ಕೆಳಗಿನ ಅಂಶಗಳನ್ನು ಆಧರಿಸಿ ನಿರ್ಧರಿಸಲಾಗುತ್ತದೆ.

1. ಏಡಿಯ ಮೈಯಿಂದ ಸುತ್ತಲೂ ಚಾಚಿ ಹರಡುವ ಕೈಕಾಲುಗಳಂತೆ ಅಕ್ಕಪಕ್ಕದ ಊತಕಗಳ ಬಹುಬಗೆಯ ಆಕ್ರಮಣ.

2. ಏಡಿಗಂತಿಯನ್ನು ಶಸ್ತ್ರಕ್ರಿಯೆಯಿಂದ ಪೂರ್ಣವಾಗಿ ಕತ್ತರಿಸಿ ತೆಗೆದು ಹಾಕಿದೆವೆಂದು ಭಾವಿಸುತ್ತಿರುವಾಗಲೇ ಅಲ್ಲಿ ಉಳಿದಿರಬಹುದಾದ ಕೆಲವೇ ಏಡಿಗಂತಿಕೋಶಗಳ ಪರಿಣಾಮವಾಗಿ ಅದೇ ಜಾಗದಲ್ಲಿ ವ್ಯಾಧಿ ಪುನಃ ತಲೆದೋರುತ್ತದೆ; ಮತ್ತು ಈ ಕೋಶಗಳು ಯಥಾಪ್ರಕಾರ ವೃದ್ಧಿಗೊಳ್ಳುತ್ತವೆ.

3. ದೇಹದ ಸಹಜ ಊತಕಗಳ ಬೆಳೆವಣಿಗೆಗೆ ಇರುವ ಯಾವ ನಿಯಮ ನಿರ್ಬಂಧಗಳಿಗೂ ಏಡಿಗಂತಿಯ ಕೋಶಗಳು ಬದ್ಧವಾಗಿಲ್ಲ. ವಿಭಜನೆಗೊಂಡು ಇವು ಸ್ವಸಾಮರ್ಥ್ಯದಿಂದ ಸ್ವೇಚ್ಛೆಯಾಗಿ ಬೇಗ ಬೇಗ ವಿಪರೀತವಾಗಿ ವೃದ್ಧಿಯಾಗಬಲ್ಲುವು.

4. ವ್ಯಾಧಿಯ ವಿಷಮತೆ ತೀವ್ರಗೊಂಡಂತೆ ಏಡಿಗಂತಿಯ ಕೋಶಗಳಿಗೂ ಅದು ಹುಟ್ಟಿದ ಊತಕದ ಕೋಶಗಳಿಗೂ ಇರುವ ಹೋಲಿಕೆ ಕಡಿಮೆ ಆಗುತ್ತದೆ. ಇಷ್ಟು ಮಾತ್ರವಲ್ಲ. ಏಡಿಗಂತಿಯ ಕೋಶಗಳು ಊತಕದ ರಚನೆಯನ್ನಾಗಲೀ ಊತಕದಲ್ಲಿನ ಕೋಶದ ನಮೂನೆಯನ್ನಾಗಲೀ ಪಾಲಿಸುವುದಿಲ್ಲ. ಅವು ಗೋಜುಗೋಜಲಾಗಿ ಬೆಳೆದುಕೊಂಡು ಹೋಗುತ್ತವೆ.

5. ಬಹುಪಾಲು ಏಡಿಗಂತಿಗಳಿಗೆ ಒಂದೇ ದೇಹದಲ್ಲಿ ಮೂಲಸ್ಥಾನದಿಂದ ಬಲು ದೂರದಲ್ಲಿ ದ್ವಿತೀಯ ಗಂತಿಗಳನ್ನು(ಎಂದರೆ ಪ್ರಾಥಮಿಕ ಗಂತಿಗೂ ದ್ವಿತೀಯಕ ಬೆಳೆವಣಿಗೆಗೂ ಯಾವ ಸಂಬಂಧವೂ ಇಲ್ಲದಂತೆ) ಪ್ರಚೋದಿಸುವ ಶಕ್ತಿಯಿದೆ. ಈ ಶಕ್ತಿಯ ಹೆಸರು ಸ್ಥಾನಾಂತರಿಕೆ (ಮೆಟಾಸ್ಟ್ಯಾಸಿಸ್). ಹಾಲುರಸ ನಾಳಗಳು (ಲಿಂಫ್ಯಾಟಿಕ್ಸ್) ರಕ್ತನಾಳಗಳು ಮುಂತಾದ ದೇಹದ ಸಹಜ ಸಾಗುದಾರಿಗಳಲ್ಲೋ ಪೊಳ್ಳುಗಳ ಮೂಲಕವೋ ಏಡಿಗಂತಿಯ ಕೋಶಗಳು ಸಾಗಿ ಹೋಗುವುದರಿಂದ ಇದು ಸಂಭವಿಸುತ್ತದೆ. ಇಂಥ ಕೋಶಗಳು ದೇಹದ ದೂರದೂರದ ಭಾಗಗಳಲ್ಲಿ ನೆಲೆಗೊಂಡು ಅಲ್ಲಿ ಏಡಿಗಂತಿಯ ತದ್ರೂಪಗಳಾಗಿ ಬೆಳೆಯುತ್ತವೆ. ಈ ಸ್ಥಾನಾಂತರಿಕೆಗಳ ವಿತರಣೆಯನ್ನು-ಎಂದರೆ ದ್ವಿತೀಯಕ ಬೆಳೆವಣಿಗೆಗಳು ಕಾಣಿಸಿಕೊಳ್ಳುವ ಸ್ಥಾನಗಳನ್ನು-ದೇಹದಲ್ಲಿ ಪ್ರಾಥಮಿಕ ಬೆಳೆವಣಿಗೆಯ ಸ್ಥಾನ, ವ್ಯಾಧಿಗ್ರಸ್ಥ ಅಂಗ ಮತ್ತು ಅದಕ್ಕೂ ಹಾಲುರಸ ನಾಳಗಳು, ರಕ್ತ ನಾಳಗಳು, ಸಹಜಸಾಗುದಾರಿಗಳು ಮತ್ತು ದೇಹದ ಪೊಳ್ಳುಗಳು ಇವಕ್ಕೂ ಇರುವ ಸಂಬಂಧದಿಂದ ನಿರ್ಧರಿಸಬಹುದು.

ಸ್ಥಾನಾಂತರಿಕೆಗಳು ಉಂಟಾಗುವ ಕಾಲ ಸಹ ಬದಲಾಗುತ್ತದೆ. ಕೆಲವು ವಿಧದ ಏಡಿಗಂತಿಗಳಲ್ಲಿ ಪ್ರಾಥಮಿಕ ಬೆಳೆವಣಿಗೆ ಚಿಕ್ಕದು ಮತ್ತು ಗಮನಾರ್ಹವಲ್ಲದುದಾಗಿದ್ದು ಯಾವ ಚಿಹ್ನೆಗಾಳನ್ನಾಗಲೀ ಲಕ್ಷಣಗಳನ್ನಾಗಲೀ ಪ್ರಕಟಪಡಿಸದಿರುವಾಗಲೂ ಸ್ಥಾನಾಂತರಿಕೆಗಳು ಉಂಟಾಗಬಹುದು. ಬೇರೆ ವಿಧದವುಗಳಲ್ಲಿ, ಪ್ರಾಥಮಿಕ ಗಂತಿಯನ್ನು ಶಸ್ತ್ರಚಿಕಿತ್ಸೆಯಿಂದ ನಿರ್ಮೂಲಗೊಳಿಸಿದ ದೀರ್ಘ ಕಾಲಾನಂತರವೂ ಸ್ಥಾನಾಂತರಿಕೆಗಳು ತಲೆದೋರಬಹುದು. ಸ್ಥಾನಾಂತರಿಕೆಗಳು ಒಂದು ಸಲ ತಲೆದೋರಿದ ತರುವಾಯ ಪ್ರಾಥಮಿಕ ಗಂತಿಯನ್ನು ಶಸ್ತ್ರಕ್ರಿಯೆಯಿಂದ ನಿರ್ಮೂಲಗೊಳಿಸಿದರೂ ಪ್ರಯೋಜನ ಏನು ಆಗದು. ಏಡಿಗಂತಿ ಖಾಯಿಲೆಯ ಅನಿವಾರ್ಯ ಅಂತಿಮ ಘಟ್ಟವನ್ನು ನಿರ್ಧರಿಸಲು ದ್ವಿತೀಯಕ ಬೆಳೆವಣಿಗೆಗಳು ಬಲು ಸಹಾಯಕಾರಿ ಅಂಶಗಳು.

ವಿಧಗಳು: ಎರಡು ಪ್ರಧಾನ ವಿಧದ ಏಡಿಗಂತಿಗಳಿವೆ-ಕಾರ್ಸಿನೋಮ ಮತ್ತು ಸಾರ್ಕೋಮ.

ಕಾರ್ಸಿನೋಮ :ಇದು ಚರ್ಮ, ಲೋಳೆಪರೆಗಳು, ನರಗಳು, ಮಿದುಳು, ಗ್ರಂಥಿಗಳ ತೆರನ ಮೇಲ್ಪರೆಯಿಂದ ಏಳುತ್ತದೆ. ಆದ್ದರಿಂದ ಚರ್ಮ, ಬಾಯಿ, ಒಸಡು, ಉಸಿರ್ನಾಳ, ಫುಪ್ಫುಸಗಳು, ಅನ್ನನಾಳ, ಜಠರ, ಕರುಳುಗಳು, ನಟ್ಟಗರುಳು (ರೆಕ್ಟಂ), ಅಂತಃಸ್ರಾವೀ ಗ್ರಂಥಿಗಳು, ಮೂತ್ರಪಿಂಡ, ಈಲಿ, ಮಾಂಸಲಿ, ಪಿತ್ತಕೋಶ, ಮೂತ್ರಕೋಶ, ಮೊಲೆ, ಜನನಾಂಗಗಳು, ಮಿದುಳು, ನರಗಳು, ಇವಲ್ಲೆಲ್ಲ ಏಳುವ ಏಡಿಗಂತಿಗಳು ಕಾರ್ಸಿನೋಮ.

ಸಾರ್ಕೋಮ: ಜೋಡಿಸುವ ಊತಕಗಳು-ಎಂದರೆ ತಂತುಕ (ಫೈಬ್ರಸ್), ಕೊಬ್ಬಿನ, ಸ್ನಾಯುವಿನ, ಮೆಲ್ಲೆಲುಬಿನ (ಕಾರ್ಟಿಲೇಜಿನಸ್), ಎಲುಬಿನ, ಹಾಲು ರಸದ, ರಕ್ತವನ್ನು ತಯಾರಿಸುವ ಊತಕಗಳು-ಇವೇ ಮುಂತಾದವುಗಳಿಗೆ ಬರುವ ವ್ಯಾಧಿ. ಆದ್ದರಿಂದ ಲೋಳೆಪರೆಗಳ, ಚರ್ಮದ ಅಡಿಯ ಅಂಗಗಳಲ್ಲಿ ಇರುವ ತಂತುಕ ಅಲ್ಲದೆ ಕೊಬ್ಬಿನ ಊತಕಗಳು, ಸ್ನಾಯುಗಳು, ಮೆಲ್ಲೆಲುಬುಗಳು, ಮೂಳೆಗಳು, ಹಾಲುರಸ ಗ್ರಂಥಿಗಳು, ತೊರಳೆ (ಸ್ಪ್ಲೀನ್), ಎಲುಬಿನ ಮಜ್ಜೆ (ಬೋನ್ ಮ್ಯಾರ್ರೋ), ರಕ್ತದಲ್ಲಿರುವ ಬಿಳಿಯ ಅಲ್ಲದೆ ಕೆಂಪು ರಕ್ತಗೋಳಕಗಳೇ ಮುಂತಾದುವಲ್ಲಿ ಏಳುವ ಏಡಿಗಂತಿಗಳು ಸಾರ್ಕೋಮ.

ಲಿಂಗ, ವಯಸ್ಸು: ಏಡಿಗಂತಿ ಏಳುವುದಕ್ಕೆ ಲಿಂಗ, ವಯಸ್ಸುಗಳ ತಾರತಮ್ಯವೇನು ಇರುವ ಹಾಗೆ ತೋರುವುದಿಲ್ಲ. ಆದರೆ ಜಠರ, ಗಂಟಲು ಮತ್ತು ಫುಪ್ಫುಸಗಳ ಏಡಿಗಂತಿ ಗಂಡಸರಲ್ಲಿ ಅಧಿಕ; ಮೊಲೆ ಮತ್ತು ಗರ್ಭಕೋಶಗಳ ಏಡಿಗಂತಿ ಹೆಂಗಸರಲ್ಲಿ ಅಧಿಕ. ಪ್ರಾಯದ ರೀತಿ ಪರಿಶೀಲಿಸಿದಲ್ಲಿ ಸಾರ್ಕೊಮ ಕಡಿಮೆ ವಯಸ್ಸಿನಲ್ಲೂ ಕಾರ್ಸಿನೋಮ ಹೆಚ್ಚು ವಯಸ್ಸಿನಲ್ಲೂ ತಲೆದೋರುವುದು ಕಂಡುಬಂದಿದೆ.

**ಕಾರಣ:** ಕೋಶದ ಬೆಳೆವಣಿಗೆಯಲ್ಲಿ ತಲೆದೋರುವ ಅಕ್ರಮವೇ ಏಡಿಗಂತಿ. ದೇಹದಲ್ಲಿನ ಕೋಶಗಳ ಸಹಜ ಬೆಳೆವಣಿಗೆಯ ಮತ್ತು ವೃದ್ಧಿಯ ನಿಯಮಗಳಿಂದ ಏಡಿಗಂತಿ ಕೋಶಗಳು ಅತೀತವಾಗಿವೆ. ಇವುಗಳ ಬೆಳೆವಣಿಗೆ ಹಾಗೂ ವೃದ್ಧಿ ಸ್ವತಂತ್ರ ಮತ್ತು ಶಾಶ್ವತ. ಇತರ ಕೋಶಗಳ ಜೀವವಸ್ತುಕರಣದ ನಿಯಮಕ್ಕಿಂತ ಇವುಗಳ ನಿಯಮ ಭಿನ್ನವಾಗಿದೆ. ಹೀಗಾಗಿ ಇವು ಅಪರಿಮಿತವಾಗಿ ವೃದ್ಧಿಸಬಲ್ಲುವು. ಇನ್ನು ಗಾತ್ರ, ಆಕಾರ ಹಾಗೂ ಇತರ ಲಕ್ಷಣಗಳಲ್ಲಾದರೋ ಈ ಕೋಶಗಳಲ್ಲಿ ಗಮನಾರ್ಹ ವ್ಯತ್ಯಾಸಗಳಿವೆ. ಅವು ಉತ್ಪನ್ನವಾಗುವ ಮೂಲ ಊತಕಗಳ ಕೋಶಗಳಿಗೂ ಏಡಿಗಂತಿ ಕೋಶಗಳಿಗೂ ಯಾವುದೇ ವಿಧದ ಹೋಲಿಕೆಯೂ ಇಲ್ಲದಿರುವುದಿದೆ. ಕೋಶಗಳಲ್ಲಿ ಏಡಿಗಂತಿಯಿಂದ ಉಂಟಾಗುವ ಈ ಮೂಲಭೂತ ವ್ಯತ್ಯಾಸದ ಕಾರಣವೇನೆಂಬುದು ಗಹನ ಅನ್ವೇಷಣೆ ಮತ್ತು ಸಂಶೋಧನೆಗಳ ವಸ್ತು. ಏಡಿಗಂತಿಗೆ ಇಂಥದೇ ಒಂದು ಕಾರಣ ಎಂದು ಹೇಳುವಂತಿಲ್ಲ; ಇದರ ಬದಲು ಹಲವಾರು ಕಾರಣಗಳ ಪ್ರಭಾವದಿಂದ ಕೋಶಗಳಲ್ಲಿ ಏಡಿಗಂತಿ ತಲೆದೋರುವುದೆಂದು ತಿಳಿದಿದೆ. ಕೋಶದಲ್ಲಿ ನಡೆಯುವ ಜೀವಕ್ರಿಯೆಗಳಲ್ಲಿ ಒಂದು ಮೂಲಭೂತ ವ್ಯತ್ಯಾಸವನ್ನು ಯಾವುದೋ ಒಂದು ಆರಂಭಿಕಕಾರಕ (ಇನಿಶಿಯೇಟಿಂಗ್ ಏಜೆಂಟ್) ತೊಡಗಿಸಬಹುದು. ಮುಂದೆ ಪ್ರೇರಕಕಾರಕ (ಪ್ರಮೋಟಿಂಗ್ ಏಜೆಂಟ್) ಎಂಬ ಇನ್ನೊಂದು ಕಾರಕ ದೀರ್ಘಕಾಲ ಈ ಕೋಶದ ಮೇಲೆ ಕ್ರಿಯೆ ಎಸಗುವುದು. ಇದರ ಪರಿಣಾಮವಾಗಿ ಮೂಲಭೂತ ವ್ಯತ್ಯಾಸ ಅವಿಪರ್ಯಯವಾಗುತ್ತದೆ (ಇರ್ರಿವರ್ಸಿಬಲ್). ಇಂಥ ಅಂಶಗಳನ್ನು ಅಥವಾ ಕಾರಕಗಳನ್ನು ಏಡಿಗಂತಿಜನಕಗಳೆಂದು (ಕಾರ್ಸಿನೋಜೆನ್ಸ್) ಕರೆಯುವುದುಂಟು. ಇವು ಭೌತ, ರಾಸಾಯನಿಕ, ಜೈವಿಕ (ವೈರಸ್ ಮಾದರಿಯ ಅತಿಸೂಕ್ಷ್ಮ ಜೀವಿಗಳಂಥವು) ಆಗಿರಬಹುದು.

ಭೌತ ಮತ್ತು ರಾಸಾಯನಿಕ ಏಡಿಗಂತಿಜನಕಗಳು : ಕ್ರಿಯಾಶೀಲ ಬೆಳಕು (ಆಕ್ಟಿನಿಕ್ ಲೈಟ್), ಎಕ್ಸ್ ಕಿರಣಗಳು, ರೇಡಿಯಂ (ಸಂಕ್ಷೇಪವಾಗಿ, ಅಯಾನೀಕರಿಸುವ ವಿಸರಣೆಯ ವಿವಿಧ ರೂಪಗಳು) ಭೌತ ಏಡಿಗಂತಿಜನಕಗಳು, ಮಾನವ ಕುಲವು ಪರಮಾಣುಯುಗದ ಹೊಸ್ತಿಲನ್ನು ದಾಟುತ್ತಿರುವುದರಿಂದ ಈ ಬಗೆಯ ವಿಸರಣೆಯಿಂದ ಆಗುವ ಅಪಾಯಗಳು ಹೆಚ್ಚು ಹೆಚ್ಚಾಗುತ್ತಿವೆ **(ನೋಡಿ- ಏಡಿಗಂತಿಜನಕ-ರಾಸಾಯನಿಕಗಳು)**.

**ಜೈವಿಕ ಏಡಿಗಂತಿಜನಕಗಳು** : ಸಾಮಾನ್ಯವಾಗಿ ಪ್ರಾಣಿಗಳಲ್ಲೂ ಸಸ್ಯಗಳಲ್ಲೂ ಏಡಿಗಂತಿಯನ್ನು ಉಂಟುಮಾಡುವ ವೈರಸುಗಳಿಗೆ ಸಾಕಷ್ಟು ನಿದರ್ಶನಗಳಿವೆ. ಈ ಅತಿ ಸೂಕ್ಷ್ಮಜೀವಿಗಳು ಬಲು ಸುಲಭವಾಗಿ ಕೋಶಗಳನ್ನು ಪ್ರವೇಶಿಸಿ ಅಲ್ಲಿ ಉಪಸ್ಥಿತವಾಗುವುವು; ತರುವಾಯ ಆ ಕೋಶಗಳ ಜೀವನವ್ಯಾಪಾರಗಳಲ್ಲಿ ತಲೆಹಾಕಿ ಅವನ್ನು ಮಾರ್ಪಡಿಸಿ ವಿಷಮ ವ್ಯತ್ಯಾಸಗಳನ್ನು ಉಂಟುಮಾಡುತ್ತವೆ; ಇವೇ ಮುಂದೆ ವಿಷಮಗಂತಿಗಳಾಗಿ ಏಡಿಗಂತಿಜನಕಗಳಾಗುತ್ತವೆ. (ಸಿ.ಡಿ.)

**ಏಡಿಗಂತಿಜನಕ ರಾಸಾಯನಿಕಗಳು:** ಜೀವಿಯ ದೇಹದಲ್ಲಿ ಏಡಿಗಂತಿಯನ್ನು (ಕ್ಯಾನ್ಸರ್) ಉಂಟುಮಾಡಬಲ್ಲ ರಾಸಾಯನಿಕಗಳು (ಕಾರ್ಸಿನೋಜೇನಿಕ್ ಕೆಮಿಕಲ್ಸ್). ದೇಹದ ಸಹಜ ಕೋಶಗಳಲ್ಲಿ ವಿವಿಧ ಬಗೆಯ ರಾಸಾಯನಿಕಗಳು ವಿಷಮ ಬದಲಾವಣೆಗಳನ್ನು ಉಂಟುಮಾಡಬಲ್ಲವು. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಬಗೆಯ ಏಡಿಗಂತಿಯ ಮಾರ್ಪಾಡುಗಳನ್ನು ಉಂಟುಮಾಡಬಲ್ಲ ರಾಸಾಯನಿಕಗಳೇ ಏಡಿಗಂತಿಜನಕ ರಾಸಾಯನಿಕಗಳು. ಏಡಿಗಂತಿ ಬಹುಕೋಶ ಜೀವಿಗಳಿಗೆ (ಮಲ್ಟಿಸೆಲ್ಯುಲರ್ ಆರ್ಗ್ಯಾನಿಸಮ್ಸ್) ಬರುವ ಒಂದು ಕಾಯಿಲೆ. ಜೀವಿಯ ಸಹಜ ಕೋಶಗಳೇ ಅವಾಸ್ತವಿಕರೂಪ ತಳೆದು ಅನಿಯಂತ್ರಿತ ವೃದ್ಧಿಹೊಂದುವಿಕೆ ಮತ್ತು ಜೀವಿಯಲ್ಲಿ ಹರಡುವಿಕೆ-ಇವು ಈ ಕಾಯಿಲೆಯ ಲಕ್ಷಣ. ಏಡಿಗಂತಿ ಒಂದು ಕಾಯಿಲೆ ಅಲ್ಲ; ಹಲವಾರು ಕಾರ್ಯಕಾರಣ ಸಂಬಂಧಗಳ (ಏಟಿಯಾಲಜಿ) ಪರಿಣಾಮವಾಗಿ ಉಂಟಾಗುವ ಹಲವಾರು ಕಾಯಿಲೆಗಳ ಒಂದು ಗುಂಪೇ ಆಗಿದೆ. ಆದ್ದರಿಂದ ಏಡಿಗಂತಿಯ ಬೆಳೆವಣಿಗೆಗೆ ಯಾವುದೇ ಒಂದು ವಿಶಿಷ್ಟ ಕಾರ್ಯಕಾರಣ ಸಂಬಂಧವನ್ನು ಇನ್ನೂ ಕಂಡುಹಿಡಿಯಲಾಗಿಲ್ಲ. ಇದುವರೆಗಿನ ಅನುಭವದ ಪ್ರಕಾರ ಏಡಿಗಂತಿಯ ಹಲವಾರು ನಮೂನೆಗಳಲ್ಲಿ ಬಹುಸಂಖ್ಯೆಯ ಕಾರ್ಯಕಾರಣ ಸಂಬಂಧಗಳು ಅಡಕವಾಗಿವೆಯೆಂದೂ ಇವುಗಳಲ್ಲಿ ಕೆಲವು ಇತರವುಗಳಿಗಿಂತ ಪ್ರಧಾನವಾಗಿವೆಯೆಂದೂ ತಿಳಿದಿವೆ. ಇಂಥವುಗಳಲ್ಲಿ ರಾಸಾಯನಿಕಗಳಿಂದ ಉತ್ಪನ್ನವಾಗುವ ಏಡಿಗಂತಿಗಳಿಗೆ (ಕಾರ್ಸಿನೋಜೆನಿಸಿಸ್) ಗಮನಾರ್ಹ ಸ್ಥಾನವಿದೆ.

ರಾಸಾಯನಿಕಜನ್ಯ ಏಡಿಗಂತಿಯನ್ನು ಮೊದಲು ಸೂಚಿಸಿದಾತ ಪರ್ಸಿವಾಲ್ ಪಾಟ್ (1775). ಹೊಗೆಕೊಳವೆಗಳಲ್ಲಿ ಕಟ್ಟಿಕೊಂಡಿದ್ದ ಕಿಟ್ಟ ತೆಗೆದು ಚೊಕ್ಕಪಡಿಸುತ್ತಿದ್ದ ಹುಡುಗರಲ್ಲಿ ತರಡಿನ ಏಡಿಗಂತಿ ಸಾಮಾನ್ಯವಾಗಿ ಏಳಲು ಹೊಗೆಕರಿ ಕಾರಣವಿರುವುದೆಂದು ಈತ ಬಗೆದ. ಕಾರ್ಖಾನೆಗಳ ಕೆಲಸಗಾರರಲ್ಲಿ ಕಂಡುಬರುವ ಚರ್ಮದ ಏಡಿಗಂತಿಯ (ಇಂಡಸ್ಟ್ರಿಯಲ್ ಸ್ಕಿನ್ ಕ್ಯಾನ್ಸರ್) ಕಾರಣ ಅಲ್ಲಿ ಚರ್ಮಕ್ಕೆ ತಾರೆಣ್ಣೆಯೊಡನೆ ಒದಗುವ ಸಂಪರ್ಕ ಎಂದು ಒಂದು ಶತಮಾನದ ತರುವಾಯ ವಾನ್ ವಾಲ್ಕ್ ಮ್ಯಾನ್ ಸೂಚಿಸಿದ (1875). ಶೇಲ್ ಎಣ್ಣೆಯ ಪರಿಣಾಮವಾಗಿ ಉಂಟಾಗುವ ಪ್ಯಾರಾಫಿನ್ ಏಡಿಗಂತಿಯನ್ನು (ಒಂದು ವರ್ಷದ ಅನಂತರ) ಶೋಧಿಸಿದಾತ ಬೆಲ್, ಕೈಗಾರಿಕೆಗಳು ಸರ್ವವ್ಯಾಪ್ತಿಯಾಗಿ ಬೆಳೆದಂತೆ ಖನಿಜದ ಎಣ್ಣೆ, ತಾರೆಣ್ಣೆ, ಹೊಗೆಕರಿ ಇವನ್ನೆಲ್ಲ ತಾಗಿಸಿಕೊಳ್ಳುವ ಕೆಲಸಗಾರರಲ್ಲಿ ಆ ಪರಿಣಾಮವಾಗಿ ಎದ್ದ ಗಂತಿಗಳು ಗಮನಕ್ಕೆ ಬಂದುವು.

ರಾಸಾಯನಿಕಗಳು ಏಡಿಗಂತಿಜನಕಗಳಾಗಬಹುದೆಂಬುದನ್ನು ಈ ಅನುಭವಗಳು ಸೂಚಿಸಿದುವು. ಆದರೆ ಈ ಭಾವನೆ ಖಚಿತವಾದದ್ದು ಯೋಮಗಾವ ಮತ್ತು ಇಚಿಕಾವ ಎಂಬ ವಿಜ್ಞಾನಿಗಳ 1915ರಲ್ಲಿ ಮಾಡಿದ ಸುಪ್ರಸಿದ್ಧ ಪರಿಶೋಧನೆಯಿಂದ–ಅವರು ಮೊಲಗಳ ಕಿವಿಗಳಿಗೆ ಟಾರೆಣ್ಣೆ ಲೇಪಿಸಿ ಅಲ್ಲಿ ವಿಷಮಗಂತಿಗಳು (ಮ್ಯಾಲಿಗ್ನೆಂಟ್ ಟ್ಯೂಮರ್ಸ್) ಏಳುವುದನ್ನು ಗಮನಿಸಿದರು. ಮುಂದೆ 1918ರಲ್ಲಿ ಇದೇ ತೆರನ ಪ್ರಯೋಗದಿಂದ ಚಿಟ್ಟಿಲಿಗಳ (ಮೈಸ್) ಚರ್ಮದ ಮೇಲೆ ಗಂತಿಗಳನ್ನು ಉಂಟು ಮಾಡುವುದು ಸುಟ್ಲೊಯಿಗೆ ಸಾಧ್ಯವಾಯಿತು. ಇಂಥ ಪ್ರಯೋಗಗಳ ಪರಿಣಾಮವಾಗಿ ಟಾರೆಣ್ಣೆ, ಖನಿಜದ ಎಣ್ಣೆ ಮುಂತಾದವುಗಳಲ್ಲಿ ಇರುವ ಏಡಿಗಂತಿಜನಕ ರಾಸಾಯನಿಕಗಳನ್ನು ಬೇರ್ಪಡಿಸಿ ಅಭ್ಯಸಿಸಲು ಹೊಸ ಹುರುಪು ಬಂತು.

1933ರಲ್ಲಿ ಕುಕ್, ಕೆನ್ನವೇ ಮತ್ತು ಹೀಜರ್ ಎಂಬುವರು ಟಾರೆಣ್ಣೆಯಲ್ಲಿರುವ ಏಡಿಗಂತಿಜನಕ ಹೈಡ್ರೊಕಾರ್ಬನ್ನನ್ನು ಪ್ರತ್ಯೇಕಿಸಿ ಅದು 3–4 ಬೆಂಜೋಪೈರೀನ್ ಎಂದು ತೋರಿಸಿಕೊಟ್ಟರು. ಪಾಲಿಸೈಕ್ಲಿಕ್ ಆರೋಮ್ಯಾಟಿಕ್ ಹೈಡ್ರೊಕಾರ್ಬನ್ನುಗಳ ಗುಂಪಿಗೆ ಬೆಂಜೋಪೈರೀನ್ ಸೇರಿರುವುದರಿಂದ ಇಡೀ ಗುಂಪಿನ ವಿವಿಧ ಹೈಡ್ರೊಕಾರ್ಬನ್ನುಗಳ ಸಂಶ್ಲೇಷಣೆ ಹಾಗೂ ಪರೀಕ್ಷೆಗಳನ್ನು ನಡೆಸಲಾಯಿತು.

ಮಾನವನಿಗೆ ಆತನ ವೃತ್ತಿಗಳ ಕಾರಣವಾಗಿ ಉಂಟಾಗುವ ಅಪಾಯಗಳನ್ನು ರಾಸಾಯನಿಕ ಏಡಿಗಂತಿಜನಕಗಳ ಪರಿಶೀಲನೆಯಿಂದ ಗುರುತಿಸಲು ಸಾಧ್ಯವಾಗಿದೆ. ಮಾನವನ ಪರಿಸರದಲ್ಲಿ ಏಡಿಗಂತಿಜನಕಗಳಾಗಿ ರಾಸಾಯನಿಕಗಳು ವ್ಯಾಪಿಸಿರಬಹುದಾದುದರ ಪ್ರಾಮುಖ್ಯ ಈಗ ಮನದಟ್ಟಾಗಿದೆ. ಬಾಹ್ಯ ಪರಿಸರದಲ್ಲಿ ಮಾತ್ರವಲ್ಲ, ಆಹಾರಪದಾರ್ಥಗಳಲ್ಲಿ ಮತ್ತು ಅವುಗಳೊಡನೆ ಬೆರೆಯುವ ಇತರ ಪದಾರ್ಥಗಳಲ್ಲಿ ಸಹ ಏಡಿಗಂತಿಯನ್ನುಂಟು ಮಾಡುವಲ್ಲಿ ಮುಖ್ಯ ಪಾತ್ರವಹಿಸಬಹುದಾದ ತೀಕ್ಷ್ಣಸಂಯುಕ್ತಗಳು ಇರುತ್ತವೆ. ಈ ಸಂಗತಿ ಈಚೀಚೆಗೆ ಹೆಚ್ಚುಹೆಚ್ಚಾಗಿ ಖಚಿತವಾಗುತ್ತಿದೆ.

ರಾಸಾಯನಿಕ ಏಡಿಗಂತಿಜನಕಗಳನ್ನು ಪರಿಶೋಧಿಸಿದ್ದು ಮತ್ತು ಪರಿಶೋಧಿಸುತ್ತಿರುವುದು ಹೇಗೆ ಎಂಬುದನ್ನು ತಿಳಿಯುವುದು ಕುತೂಹಲಪ್ರದವಾಗಿದೆ. ಪರ್ಸಿವಾಲ್ ಪಾಟನ ಕಾಲದಲ್ಲಿ ಇದ್ದಹಾಗೆಯೇ ಇಂದು ಸಹ ಪರಿಸರದ ಪ್ರಭಾವದಿಂದ ಉಂಟಾಗುವ ಏಡಿಗಂತಿಗಳ ಮೇಲಿನ ಸಂಶೋಧನೆಗಳೇ ಗಮನ ಸೆಳೆಯುತ್ತಿವೆ. ವೃತ್ತಿಜನ್ಯ ಏಡಿಗಂತಿಯ ಅಭ್ಯಾಸದಿಂದ ಪಾಲಿಸೈಕ್ಲಿಕ್ ಹೈಡ್ರೊಕಾರ್ಬನ್ನುಗಳ ಏಡಿಗಂತಿಜನಕಗುಣಗಳು ತಿಳಿದುವು. ಇದರ ಪ್ರಕಾರ ಆರೋಮ್ಯಾಟಿಕ್ ಅಮೈನುಗಳು ಮೂತ್ರಕೋಶದ ಏಡಿಗಂತಿಜನಕಗಳು; ನಿಕ್ಕಲ್ ಲೋಹ ಮೂಗಿನ ಏಡಿಗಂತಿಜನಕವಾದರೆ ಲೋಹಗಳು ಸಾಮಾನ್ಯವಾಗಿ ಫುಪ್ಫುಸದ ಏಡಿಗಂತಿಜನಕಗಳು; ಟ್ಯಾನಿಕ್ ಆಮ್ಲ, ಆಲ್ಕಲಾಯ್ಡುಗಳು, ಕ್ಲೋರೋಕಾರ್ಬನುಗಳು, ಡೈ ಆಲ್ಕೈಲ್ ಅರಿಶಿನಾರಿಗೆಯನ್ನೂ (ಲಿವರ್ ಸಿರೋಸಿಸ್) ಉಂಟುಮಾಡುವುವು; ರೇಡಿಯೋ ರಾಸಾಯನಿಕಗಳು ಮೂಳೆಯ ಲ್ಯುಕೇಮಿಯ ಮತ್ತು ಮೂಳೆಯ ಏಡಿಗಂತಿಜನಕಗಳು.

ದೇಹದಲ್ಲಿ ಸಾಮಾನ್ಯವಾಗಿ ಇರುವ ರಾಸಾಯನಿಕಗಳ ಅಭ್ಯಾಸದ ಪರಿಣಾಮವಾಗಿ ದೇಹದ ಒಳಗೆ ಉತ್ಪನ್ನವಾಗುವ (ಅಂತರ್ಜಾತ–ಎಂಡೋಜಿನಸ್) ರಾಸಾಯನಿಕ ಏಡಿಗಂತಿಜನಕಗಳನ್ನು ಕುರಿತ ಒಳನೋಟ ಲಭಿಸಿದೆ. ಅಂತಃಸ್ರಾವೀಗ್ರಂಥಿಗಳ (ಎಂಡೋಕ್ರೈನ್ ಗ್ಲ್ಯಾಂಡ್ಸ್) ಬೆಳವಣಿಗೆ ಹಾಗೂ ವಿಶಿಷ್ಟ ರಚನೆಯಲ್ಲಿ ಪೋಷಕವಾಗಿರುವ ಮತ್ತು ಮೊಲೆ ಹಾಗೂ ಗರ್ಭಕೋಶದ ಮೇಲೆ ಪ್ರಭಾವ ಬೀರುವ ಚೋದನಿಕಗಳು (ಹಾರ್ಮೋನ್ಸ್) ಇವುಗಳಲ್ಲಿ ಪ್ರಧಾನವಾದವು. ದೇಹದಲ್ಲಿ ಇರುವ ಸಮಸ್ಥಿತಿಯನ್ನು (ಹೋಮಿಯೊಸ್ಟ್ಯಾಟಿಕ್ ಬ್ಯಾಲೆನ್ಸ್) ಅಧಿಕ ಚೋದನಿಕಗಳು ವ್ಯತ್ಯಾಸಗೊಳಿಸಿದರೆ ಚೋದನಿಕಗಳಿಗೆ ಪ್ರತಿಕ್ರಿಯೆ ತೋರಿಸುವ ಅಂಗಗಳಲ್ಲಿ (ರೆಸ್ಪಾನ್ಸಿವ್ ಆರ್ಗನ್ಸ್) ಏಡಿಗಂತಿ ಉಂಟಾಗುವುದು.

ರೋಗ ಚಿಕಿತ್ಸೆಗಾಗಿ ಬಳಸುವ ಮದ್ದುಗಳ ಪರಿಣಾಮಗಳ ಅಭ್ಯಾಸದಿಂದ ರಾಸಾಯನಿಕಗಳ ಏಡಿಗಂತಿಜನಕ ಗುಣಗಳನ್ನು ತಿಳಿಯಲಾಗಿದೆ. ಗಾಯಗಳಿಗೆ ಲೇಪಿಸುವ ಸ್ಕಾರ್ಲೆಟ್ ರೆಡ್ ಎಂಬ ರಾಸಾಯನಿಕದ ಪರಿಣಾಮಗಳ ಪರಿಶೀಲನೆಯಿಂದ ಏಡಿಗಂತಿಜನಕ ಆಜೋಡೈ, ಆರ್ಥೋ ಅಮೈನೋ, ಅಜೋ ಟಾಲೀನ್ ಇವುಗಳ ಶೋಧನೆ ಆಯಿತು. ಏಡಿಗಂತಿ ರೋಗ ಚಿಕಿತ್ಸೆಯಿಂದ ನೈಟ್ರೊಜನ್ ಮಸ್ಟರ್ಡುಗಳ ಏಡಿಗಂತಿಜನಕ ಗುಣ ಗೊತ್ತಾಯಿತು.

ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಫುಪ್ಫುಸದ ಏಡಿಗಂತಿಯ ವ್ಯಾಪ್ತಿಯ ಆಧಿಕ್ಯವನ್ನು ಏಡಿಗಂತಿಯ ಸಾಂಕ್ರಾಮಿಕ ವಿಜ್ಞಾನ (ಎಪಿಡೆಮಿಯಾಲಜಿ) ವಿಶದೀಕರಿಸಿತು. ಇದರ ಒಂದು ಕಾರ್ಯಕಾರಣ ಸಂಬಂಧ ಸಿಗರೆಟ್ ಸೇವನೆಯಿರಬಹುದೇ ಎಂಬ ಶೋಧನೆಗೆ ಇದು ಎಡೆಮಾಡಿಕೊಟ್ಟಿತು. ಸಿಗರೆಟ್ ಹೊಗೆಯನ್ನು ವಿಶ್ಲೇಷಿಸಿ ತಂಬಾಕಿನ ಕೆಲವು ಏಡಿಗಂತಿಜನಕ ರಾಸಾಯನಿಕಗಳನ್ನು ಪ್ರತ್ಯೇಕಿಸಲಾಗಿದೆ. ಇಂಥ ಕೆಲಸದಲ್ಲಿ ಇರುವ ಆಸಕ್ತಿ ಎರಡು ಬಗೆಯದು. ರಾಸಾಯನಿಕ ಏಡಿಗಂತಿಜನಕಗಳ ಶೋಧನೆ ಹಾಗೂ ಸಮರ್ಪಕ ರಕ್ಷಣೆಯ ಏರ್ಪಾಡು, ಒಂದು, ಏಡಿಗಂತಿಯ ಅಭಿವೃದ್ಧಿ ಬೇರೆ ಬೇರೆ ರಾಸಾಯನಿಕಗಳ ಕಾರಣವಾಗಿ ಹೇಗೆ ಆಗುತ್ತದೆ ಎಂದು ತಿಳಿಯುವುದು, ಇನ್ನೊಂದು.

ಕೆಲವು ಏಡಿಗಂತಿಜನಕ ವಸ್ತುಗಳು, ರಾಸಾಯನಿಕಗಳು ಮತ್ತು ಗಂತಿಯ ಬೆಳವಣಿಗೆಯ ಸ್ವರೂಪವನ್ನು ಮುಂದೆ ಪಟ್ಟಿಮಾಡಿದೆ.

1. ಕಲ್ನಾರು : ಫುಪ್ಫುಸದ ಏಡಿಗಂತಿಗೆ ಸಂಬಂಧಿಸಿದೆ. ಕಲ್ನಾರಿನಲ್ಲಿರುವ ಸಿಲಿಕ ಏಡಿಗಂತಿಗೆ ಕಾರಣವಾಗಿರಬಹುದೆಂದು ಶಂಕೆ; ಇದನ್ನು ಪ್ರಾಯೋಗಿಕವಾಗಿ ಖಚಿತಪಡಿಸಿಲ್ಲ.

2. ಕ್ರೋಮಿಯಂ : ಬಣ್ಣದ ವಸ್ತುಗಳ ತಯಾರಿಕೆಯಲ್ಲೂ ಸತು ಮತ್ತು ಸೀಸದ ಕ್ರೋಮೇಟುಗಳ ತಯಾರಿಕೆಯಲ್ಲೂ ಕೆಲಸ ಮಾಡುವವರಿಗೆ ಫುಪ್ಫುಸದ ಏಡಿಗಂತಿ ಬರಬಹುದು.

3. ನಿಕ್ಕಲ್ : ಉಸಿರಾಟದ ಸಾಗುನಾಳದ ಏಡಿಗಂತಿ ತಲೆದೋರಬಹುದು.

4. ಕಪ್ಪುರಾಳ (ಪಿಚ್), ಟಾರೆಣ್ಣೆ, ಹೊಗೆಕರಿ (ಸೂಟ್) ಮತ್ತು ಖನಿಜದ ಎಣ್ಣೆ : ಇವು ಕಾರ್ಖಾನೆಗಳಲ್ಲಿ ಕೈಗಾರಿಕೆಗಳಲ್ಲಿ ಚರ್ಮದ ಏಡಿಗಂತಿಜನಕಗಳಾಗಿವೆ. ಪಾಲಿಸೈಕ್ಲಿಕ್ ಆರೋಮ್ಯಾಟಿಕ್ ಹೈಡ್ರೊಕಾರ್ಬನ್ನುಗಳು ಕಪ್ಪುರಾಳ, ಟಾರೆಣ್ಣೆ ಮತ್ತು ಹೊಗೆಕರಿಯಲ್ಲಿರುವ ಏಡಿಗಂತಿಜನಕಗಳು. ಖನಿಜದ ಎಣ್ಣೆಯಲ್ಲಿರುವ ರಾಸಾಯನಿಕ ಯಾವುದೆಂದು ಇನ್ನೂ ತಿಳಿದಿಲ್ಲ.

5. ಆರೋಮ್ಯಾಟಿಕ್ ಅಮೈನುಗಳು : ಇವನ್ನು ಸಂಶ್ಲೇಷಿತ ವರ್ಣದ್ರವ್ಯಗಳ ತಯಾರಿಕೆಯಲ್ಲೂ ರಬ್ಬರ್ ಉದ್ಯಮದಲ್ಲೂ ಉಪಯೋಗಿಸುತ್ತಾರೆ; ಇವು ಮೂತ್ರಕೋಶದ ಏಡಿಗಂತಿಜನಕಗಳು (ಬೆಂಜಿಡೀನ್, ನ್ಯಾಫ್ತೈಲಮೈನ್).

6. ತಂಬಾಕು : ತಂಬಾಕು ಸೇವನೆಯಿಂದ ಫುಪ್ಫುಸದ್ದೇ ಅಲ್ಲದೆ ಬಾಯಿ, ಧ್ವನಿನಾಳ, ಅನ್ನನಾಳ, ಮೂತ್ರಕೋಶಗಳಲ್ಲೂ ಏಡಿಗಂತಿಗಳಾಗಿವೆ. ಪಾಲಿಸೈಕ್ಲಿಕ್ ಆರೋಮ್ಯಾಟಿಕ್ ಹೈಡ್ರೊಕಾರ್ಬನ್ನುಗಳು ಮತ್ತು ನ್ಯಾಫ್ತೈಲಮೈನುಗಳಂಥ ಏಡಿಗಂತಿಜನಕ ರಾಸಾಯನಿಕಗಳನ್ನು ತಂಬಾಕುವಿನಿಂದ ಪ್ರತ್ಯೇಕಿಸಲಾಗಿದೆ.

7. ಬಹ್ವಂಗಗಳು (ಪಾಲಿಮರ್ಸ್) ಮತ್ತು ಪ್ಲಾಸ್ಟಿಕ್ಕುಗಳು : ಇಲಿಗಳಲ್ಲಿ ಬೇಕಲೈಟಿನ ಬಿಲ್ಲೆಗಳಿಂದ ತಂತು ಸ್ನಾಯುಗಂತಿಯೂ (ಫೈಬ್ರೋಸಾರ್ಕೋಮಾ) ಸೆಲ್ಲೋಫೇನಿನ ಬಿಲ್ಲೆಯಿಂದ ಮೂತ್ರಪಿಂಡದ ಸುತ್ತಲಿನ ಸ್ನಾಯುಗಂತಿಯೂ ಎದ್ದಿವೆ. ಈ ಬೃಹದಣುಕಾರಕಗಳಿಂದ (ಮ್ಯಾಕ್ರೋಮೊಲೆಕ್ಯುಲರ್ ಏಜೆಂಟ್ಸ್) ಉಂಟಾಗುವ ಏಡಿಗಂತಿಯ ಕಾರಣವಿನ್ನೂ ತಿಳಿದಿಲ್ಲ.

8. ಆರ್ಸೆನಿಕ್ : ಕುರಿಗುಣಿಮದ್ದು (ಷೀಪ್ ಡಿಪ್), ವರ್ಣದ್ರವ್ಯಗಳು ಇವುಗಳ ತಯಾರಿಕೆಯಲ್ಲಿ ವಿಪುಲವಾಗಿ ಬಳಸುವ ಆರ್ಸೆನಿಕ್ ಈ ಖನಿಜದ ಗಣಿ ಕೆಲಸಗಾರರಲ್ಲಿ ಫುಪ್ಫುಸದ ಏಡಿಗಂತಿಯನ್ನು ಉಂಟುಮಾಡುವುದೆಂದುಗೊತ್ತಾಗಿದೆ. ಕೀಟನಾಶಕ ಆರ್ಸೆನಿಕ್ ತಯಾರಿಕರಿಗೆ ಚರ್ಮದ ಏಡಿಗಂತಿ ಆಗುವುದೂ ತಿಳಿದಿದೆ.

9. ಬೂಷ್ಟಿನ ಜೀವವಿಷಗಳು (ಫಂಗಲ್ ಟಾಕ್ಸಿನ್ಸ್) : ಆಹಾರ ಪದಾರ್ಥಗಳ ಮೇಲೆ ಬೆಳೆಯುವ ಬೂಷ್ಟುಗಳು ಉತ್ಪಾದಿಸುವ ಜೀವವಿಷಪದಾರ್ಥಗಳನ್ನು ತಿನ್ನುವುದರಿಂದ ಏಡಿಗಂತಿ ಬರುವುದೆಂದು ಗೊತ್ತಾಗಿದೆ. ಈ ಶೋಧನೆ ರಾಸಾಯನಿಕ ಏಡಿಗಂತಿಜನಕಗಳ ಪ್ರಪಂಚದಲ್ಲಿ ಒಂದು ಹೊಸ ವಲಯವನ್ನೇ ಅನಾವರಣ ಮಾಡಿದೆ. ಅಸ್ಪರ್ಜಿಲ್ಲಸ್ ಫ್ಲೇವಸ್ ಎಂಬ ಹೆಸರಿನ ಬೂಷ್ಟು ಬೆರೆತಿದ್ದ ಕಡಲೆಕಾಯಿ ಹಿಂಡಿಯಿಂದ ತಯಾರಿಸಿದ ಆಹಾರ ಸೇವಿಸಿದ ಕೋಳಿಗಳಲ್ಲಿ ಒಂದು ವಿಚಿತ್ರ ವ್ಯಾಧಿ ತಲೆದೋರಿತು. ಇದರ ಶೋಧನೆಯ ಪರಿಣಾಮವಾಗಿ ಅಫ್ಲಟಾಕ್ಸಿನ್ ಎಂಬ ಹೊಸತೊಂದು ಏಡಿಗಂತಿಜನಕ ರಾಸಾಯನಿಕವನ್ನು ಪ್ರತ್ಯೇಕಿಸುವುದು ಸಾಧ್ಯವಾಯಿತು. ಹಳದಿ ಬಣ್ಣಕ್ಕೆ ತಿರುಗಿದಂಥ ಅಕ್ಕಿ ಮತ್ತು ಇಂಥ ಇತರ ಆಹಾರ ಪದಾರ್ಥಗಳ ಸೇವನೆಯಿಂದ ಈಲಿಯಲ್ಲಿ ಗಂತಿಗಳು ಏಳಬಹುದು.

**ರಾಸಾಯನಿಕ ಏಡಿಗಂತಿಜನಕಗಳು ಮತ್ತು ಅವುಗಳ ವರ್ತನೆಯ ವಿಧಾನ:** ರಾಸಾಯನಿಕ ಏಡಿಗಂತಿಜನಕಗಳು ಏಡಿಗಂತಿಯನ್ನು ಪ್ರಚೋದಿಸುವ ಜೀವ ರಾಸಾಯನಿಕ ಕ್ರಿಯಾತಂತ್ರವೇನೆಂದು ಇನ್ನೂ ತಿಳಿದಿಲ್ಲ. ಗಂತಿಗಳನ್ನು ಉಂಟು ಮಾಡುವ ರಾಸಾಯನಿಕ ಕಾರಕಗಳು ಬಲು ವಿಧದವು. ಈ ವೈವಿಧ್ಯದ ಪರಿಣಾಮವಾಗಿ ಎಲ್ಲ ರಾಸಾಯನಿಕಗಳಿಗೂ ಅನ್ವಯಿಸುವಂತೆ ಅವುಗಳ ಏಡಿಗಂತಿಜನಕ ಕ್ರಿಯೆಯನ್ನು ನಿಖರವಾಗಿ ಸೂಚಿಸಬಲ್ಲ ಪರಮಾಣುಸೂತ್ರಗಳನ್ನು ವ್ಯಾಖ್ಯಿಸುವುದು ಸಾಧ್ಯವಾಗುವುದಿಲ್ಲ.

ಇಂದಿನ ಆಧಾರಭಾವನೆಯನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು : 1 ಕೋಶದ ಮೇಲ್ಮೈ ಮೇಲೆ ರಾಸಾಯನಿಕ ವರ್ತಿಸುತ್ತದೆ, ಮತ್ತು 2 ವಂಶವಾಹಿಯಾಗಿ (ಜೆನೆಟಿಕಲಿ) ಬಲು ಮುಖ್ಯವಾಗಿರುವ ನ್ಯೂಕ್ಲಿಯಿಕ್ ಆಮ್ಲಗಳೊಡನೆ ಈ

ರಾಸಾಯನಿಕಗಳು ನೇರವಾಗಿ ಅಂತರಕ್ರಿಯೆ ಎಸಗುತ್ತವೆ. ಏಡಿಗಂತಿಜನಕಗಳ ಕ್ರಿಯೆಯ ಹಿನ್ನೆಲೆಯಲ್ಲಿರುವ ನಿಖರವಾದ ರಾಸಾಯನಿಕ ಕ್ರಿಯಾತಂತ್ರ ಏನೇ ಇರಲಿ, ಅವು ವಂಶವಾಹೀ ವಸ್ತುವಿನೊಡನೆ ಅಥವಾ ಅದರ ಮುನ್ಸೂಚಕಗಳೊಡನೆ (ಪ್ರಿಕರ್ಸರ್ಸ್) ಸಂಯೋಜಿಸುವುದರ ಪ್ರಾಮುಖ್ಯವನ್ನು ಕುರಿತು ಎಳ್ಳಷ್ಟೂ ಸಂಶಯವಿಲ್ಲ. ಈ ಸಂಯೋಜನೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಹಜ ಬೆಳವಣಿಗೆಯನ್ನು ನಿಯಂತ್ರಿಸಲು ಅತ್ಯಾವಶ್ಯಕಗಳಾದ ಕೆಲವು ಮುಖ್ಯ ಪ್ರೋಟೀನುಗಳನ್ನು ನಿರ್ಮೂಲಗೊಳಿಸಬಹುದು.

ಇಂಥ ಸಂಯೋಜನೆಯಿಂದ ಹಲವು ಮೂಲ ಸಂಶ್ಲೇಷಣ ಕ್ರಿಯೆಗಳು ನಡೆದು ತರುವಾಯ, ಈ ಕ್ರಿಯೆಗಳನ್ನು ಆಧರಿಸಿರುವ ಜೀವಕೋಶ ವಿಭಜನೆ ಯಾವ ಹತೋಟಿಯೂ ಇಲ್ಲದೆ ನಡೆಯುತ್ತದೆ.

ಪ್ರಯೋಗಲಭ್ಯ ಪುರಾವೆಗಳಿಂದಲೂ ಗಂತಿಯನ್ನು ಉಂಟುಮಾಡುವ ಹಾಗೂ ಬೆಳೆಸುವ ಕ್ರಿಯೆಯ ಅಭ್ಯಾಸದಿಂದಲೂ ಏಡಿಗಂತಿಜನಕಗಳನ್ನು ಕುರಿತು ಎರಡು ಹಂತಗಳ ಕ್ರಿಯಾತಂತ್ರವನ್ನು ನಿರೂಪಿಸಬಹುದು–ಆರಂಭಿಕ, ಪ್ರೇರಕ, ಸಹಜ ಜೀವಕೋಶಗಳನ್ನು ಏಡಿಗಂತಿಕೋಶಗಳಾಗಿ ಪರಿವರ್ತಿಸವ ಗುಣ ಕೆಲವು ರಾಸಾಯನಿಕಗಳಿಗೆ ಇದೆ. ಇವು ಆರಂಭಿಕಗಳು (ಇನಿಷಿಯೇಟರ್ಸ್). ಪಾಲಿಸೈಕ್ಲಿಕ್ ಹೈಡ್ರೊಕಾರ್ಬನ್ನುಗಳು, ಅಜ಼ೋ ಏಡಿಗಂತಿಜನಕಗಳು ಮತ್ತು ಆರೋಮ್ಯಾಟಿಕ್ ಅಮೈನುಗಳು ಈ ಗುಂಪಿನ ವಿಶಿಷ್ಟ ಉದಾಹರಣೆಗಳು. ಎರಡನೆಯ ಗುಂಪಿನ ರಾಸಾಯನಿಕಗಳಿಗೆ ಏಡಿಗಂತಿಯ ಬದಲಾವಣೆಯನ್ನು ಆರಂಭಿಸಲು ಆಗುವುದಿಲ್ಲ; ಬದಲು, ಆಗಲೇ ಬದಲಾಗಿರುವ ಜೀವಕೋಶದ ಅನಿಯಂತ್ರಿತ ಬೆಳವಣಿಗೆಗೆ ಒತ್ತಾಸೆಯನ್ನೋ ಶಕ್ತಿಯನ್ನೋ ನೀಡಿ ಅದನ್ನು ಗಂತಿಯಾಗಿ ಮಾರ್ಪಡಿಸುತ್ತವೆ. ಇವುಗಳಿಗೆ ಪ್ರೇರಕಗಳೆಂದು (ಪ್ರಮೋಟರ್ಸ್) ಹೆಸರು. ಈ ಗುಂಪಿನಲ್ಲಿ ಜಾಪಾಳದ ಎಣ್ಣೆ, ಫಿನಾಲುಗಳು, ನಾನಯಾನಿಕ್ ಶುದ್ಧಿಕಾರಕಗಳು (ನಾನಯಾನಿಕ್ ಡಿಟರ್ಜೆಂಟ್ಸ್), ಈಳೆಯ (ಸಿಟ್ರಸ್) ಎಣ್ಣೆಗಳು, ಯುಫೋರ್ಬಿಯ ಲೇಟೆಕ್ಸುಗಳು ಸೇರಿವೆ. ಆರಂಭಿಕಗಳೇ ಪ್ರೇರಕಗಳಾಗಬಹುದು; ಆದರೆ ಇದರ ವಿಲೋಮ ಅಸಾಧ್ಯ.

ಒಂದೇ ಏಡಿಗಂತಿಜನಕಕ್ಕೆ ಒಡ್ಡಿದ ಎಲ್ಲ ಜನರಲ್ಲೂ ಏಡಿಗಂತಿ ಏಕೆ ಏಳುವುದಿಲ್ಲ ಎನ್ನುವ ಸಮಸ್ಯೆಗೆ ಆರಂಭಿಕ, ಪ್ರೇರಕ ಎಂಬ ಈ ಪರಿಕಲ್ಪನೆ ಒಂದು ಪರಿಹಾರ ನೀಡಬಹುದು. ಏಡಿಗಂತಿ ಎದ್ದು ಕಾಣಿಸಿಕೊಳ್ಳುವಂತೆ ಮಾಡುವುದರಲ್ಲಿ ನಮ್ಮ ಪರಿಸರದಲ್ಲಿರುವ ಪ್ರೇರಕಕಾರಕಗಳು ಎಷ್ಟು ಮುಖ್ಯ ಎಂಬುದು ಇದರಿಂದ ಖಚಿತವಾಗುತ್ತದೆ. ಆದ್ದರಿಂದ ಏಡಿಗಂತಿ ಬರದಂತೆ ಕಾಪಾಡಿಕೊಳ್ಳಬೇಕಾದರೆ ರಾಸಾಯನಿಕ ಏಡಿಗಂತಿಜನಕಗಳೊಂದಿಗೆ (ಆರಂಭಿಕಗಳು) ಮಾತ್ರವಲ್ಲ ಪ್ರೇರಕ ಕಾರಕಗಳೊಡನೆ ಸಹ ಸಂಪರ್ಕ ಒದಗದಂತೆ ಎಚ್ಚರ ವಹಿಸಬೇಕು.

ಸಂಶೋಧನೆಯಿಂದ ಪ್ರಾಣಿಗಳಿಗೆ ಏಡಿಗಂತಿಜನಕಗಳಾದ ವಸ್ತುಗಳ ಪರಂಪರೆಯೇ ಬೆಳೆಯುತ್ತಿದೆ; ಇವು ಪ್ರಾಯಶಃ ಮನುಷ್ಯನಿಗೂ ಅಪಾಯಕಾರಿ. ಇವು ಸರ್ವವ್ಯಾಪಿಯಾಗಿ ರುವಂತೆ ಭಾಸವಾಗುತ್ತದೆ. ನಾವು ಸೇವಿಸುವ ಗಾಳಿಯಲ್ಲಿ, ಕುಡಿಯುವ ನೀರಿನಲ್ಲಿ, ತಿನ್ನುವ ಆಹಾರದಲ್ಲಿ, ಸೇವಿಸುವ ಹಲವಾರು ಔಷಧಿಗಳಲ್ಲಿ ಅಂಗರಾಗದ್ರವ್ಯ ಗಳಲ್ಲಿ ಕಾರ್ಖಾನೆಗಳಲ್ಲಿ ವಿಪುಲವಾಗಿ ಬಳಸುವ ರಾಸಾಯನಿಕಗಳಲ್ಲಿ ಅವು ಇವೆ. (ಎಂ.ಎಸ್.ಐ.)

**ಏಡಿಗಂತಿ ಸಂಶೋಧನೆ:** ಏಡಿಗಂತಿಗಳು ಮೈಯಲ್ಲಿ ಉಂಟಾಗುತ್ತಿರುವ ಬಗ್ಗೆ ಅಂಕಿ ಅಂಶ, ಹರಡುವ ರೀತಿ, ರೋಗಚಿಕಿತ್ಸೆಯ ಅನುಭವ, ಪ್ರಾಣಿಗಳ ಮೇಲಿನ ಪ್ರಯೋಗ ಇವೆಲ್ಲ ಏಡಿಗಂತಿಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತಿವೆ. ಪ್ರಯೋಗಾಲಯಗಳಲ್ಲಿ ಪ್ರಾಣಿಗಳ ಮೇಲೆ ಮೂಲ ಸಂಶೋಧನೆ ನಡೆಸಿ ಅದರಲ್ಲಿ ಅನುಕೂಲವಾಗಿ ಕಂಡುದನ್ನು ರೋಗಿಗೆ ಕೊಟ್ಟು ಪರಿಶೀಲಿಸುತ್ತಾರೆ. ಅಂತಿಮಗುರಿ ಏಡಿಗಂತಿ ರೋಗಿಯೇ. ಆಸ್ಪತ್ರೆಗಳ ಒಳ–ಹೊರ ರೋಗಿಗಳ ಚಿಕಿತ್ಸಾಲಯದಲ್ಲೂ ತಜ್ಞರ ಸಲಹೆಯ ಕೋಣೆಗಳಲ್ಲೂ ನಡೆವ ನಿತ್ಯದ ರೋಗಿ ಪರೀಕ್ಷೆ, ಚಿಕಿತ್ಸೆಗಳಿಂದ ಇದು ಕೈಗೂಡುತ್ತದೆ.

**ಮೂಲಗುಣ :** ಸಾಮಾನ್ಯವಾದವಕ್ಕಿಂತ ಏಡಿಗಂತಿಯ ಜೀವಕಣಗಳಲ್ಲಿ ಚಯಾಪಚಯ (ಮೆಟಬಾಲಿಸಂ) ಬಲು ಹೆಚ್ಚು. ಇದನ್ನೂ ಪುನರುತ್ಪತ್ತಿಯನ್ನೂ (ರಿಪ್ರೊಡಕ್ಷನ್) ಹತೋಟಿಯಲ್ಲಿಡುವ ಕ್ರೊಮೋಸೋಮಲ್ ಜೀನುಗಳ ಮತ್ತು ಕಿಣ್ವಗಳ ಬಲು ಗಹನವಾದ ನಾಜೂಕಿನ ಹೊಂದಾಣಿಕೆಯ ಹತೋಟಿ ವ್ಯವಸ್ಥೆಗೆ ಏಡಿಗಂತಿಯಿಂದ ಎಷ್ಟೋ ಬಗೆಗಳ ಧಕ್ಕೆ ಬರಬಹುದು. ಇದರಿಂದ ಸ್ಥಿರವಾದ ಮಾರ್ಪಾಡೋ ಜೀನುಗಳಲ್ಲಿ ವ್ಯತ್ಯಯವೋ (ಮ್ಯುಟೇಷನ್) ಆಗಬಹುದು. ಈ ವ್ಯತ್ಯಯ ಸಾಕಷ್ಟಿದ್ದರೆ ಜೀವಕಣ ಸಾಯುತ್ತದೆ. ಧಕ್ಕೆ ಜೀವಾಣು ಸ್ಥಿರವಾಗಿ ಜೀವಾಣು ಭಾಜ್ಯತೆಯನ್ನು (ಮೈಟೋಟಿಕ್ ರೇಟ್) ವೇಗಗೊಳಿಸಿದರೆ ಏಳುವುದೇ ಏಡಿಗಂತಿ.

ಸಹಜವಾದ ಎಂದಿನ ಹತೋಟಿ ವ್ಯವಸ್ಥೆಗೆ ಧಕ್ಕೆ ತರುವ ತಿಳಿವಳಿಕೆಯು ಏಡಿಗಂತಿಜನನ (ಕಾರ್ಸಿನೋಜನಿಸಿಸ್) ಮತ್ತು ಹತೋಟಿಗಳ ಬಗ್ಗೆ ಸಂಶೋಧಿಸಲು ಮಹಾ ಅಸ್ತ್ರ. ಗಡಿಯಾರದ ವೇಗವನ್ನು ಹೆಚ್ಚು ಕಡಿಮೆ ಮಾಡುವಂತೆಯೇ ಜೀವಾಣು ಭಾಜ್ಯತೆಯ ವೇಗವನ್ನೂ ಏಡಿಗಂತಿಜನಕಗಳಿಂದ (ಕಾರ್ಸಿನೋಜನ್ಸ್) ಏರಿಸಬಹುದು; ವಿಕಿರಣತೆ (ರೇಡಿಯೇಷನ್), ಕಾಲ್ಚಿಸಿನುಗಳಿಂದ ನಿಧಾನಗೊಳಿಸಬಹುದು. ಒಂದೊಂದು ಜೀವಾಣುವೂ 16 ಬಾರಿ ಗುಣಿತವಾದಾಗ 60,000 ಮರಿ ಜೀವಕಣಗಳು ಹುಟ್ಟುವುದರಿಂದ, ಜೀವಾಣು ಭಾಜ್ಯತೆಯ ವೇಗ ತಾಳಗತಿಗಳು ಸ್ವಲ್ಪ ಹೆಚ್ಚಿದರೂ ಬಲುಬೇಗನೆ ಏಡಿಗಂತಿ ಏಳುವುದು ಸುಸ್ಪಷ್ಟ.

**ಏಡಿಗಂತಿ ಹುಟ್ಟು:** ಎಡೆಬಿಡದೆ ಉರಿಯುತ್ತಿರುವ ಬೆಂಕಿ ಏಡಿಗಂತಿ. ಕಿಚ್ಚೆಬ್ಬಿಸುವ ವಿಧಾನಗಳು ಎಷ್ಟೋ ಇವೆ. ಅಂತೆಯೇ ಏಡಿಗಂತಿಜನಕಗಳಲ್ಲಿ ಕೆಲವು ಭೌತಿಕವಾದರೆ, ಕೆಲವು ರಾಸಾಯನಿಕವಾಗಿವೆ; ಮತ್ತೆ ಕೆಲವು ಮೈ ಒಳಗಿನವು ಇಲ್ಲವೇ ಹೊರಗಿನವು. ಅಂಗಾಂಗಗಳಲ್ಲಿ ಬಗೆಬಗೆಯ ಏಡಿಗಂತಿಗಳಾಗುವುದಕ್ಕೆ ಹಲವು ವಿಧಾನಗಳಿವೆ : 1. ಜೀನ್ ಅಂಶಗಳು (ಜೆನೆಟಿಕ್ ಫ್ಯಾಕ್ಟರ್ಸ್), 2. ರಾಸಾಯನಿಕಕಾರಕಗಳು (ಕೆಮಿಕಲ್ ಏಜೆಂಟ್ಸ್), 3. ಭೌತಿಕಕಾರಕಗಳು, 4. ವೈರಸುಗಳು, 5. ಚೋದನಿಕಗಳು (ಹಾರ್ಮೋನ್ಸ್), 6. ಸಂಪ್ರದಾಯ, ರೂಢಿ, ಪದ್ಧತಿಗಳು, ಚಟಗಳು. 7. ಭೂಗುಣ, ಹವಗಳು, 8. ಉಳಿದ ಕಾರಣಗಳು.

**1 ಜೀನ್ ಅಂಶಗಳು:** ಏಡಿಗಂತಿ ಆಗುವುದನ್ನೂ ಆಗದ್ದನ್ನೂ ಪ್ರಯೋಗ ಪ್ರಾಣಿಗಳ ತಳಿ ಎಬ್ಬಿಸುವುದರಲ್ಲಿ ತೋರಿಸುವುದು ಸುಲಭ. ಕೆಲವು ವಂಶಗಳ ಜನರಲ್ಲೂ ಕಣ್ಣಾಲನೆಗಂತಿ (ರೆಟೀನೊಬ್ಲಾಸ್ಟೋಮ) ಬಹುನರತಂತುಗಳು (ಮಲ್ಟಿಪಲ್ ನ್ಯೂರೋಬ್ಲಾಸ್ಟೋಸಿಸ್) ಇತ್ಯಾದಿ ಏಡಿಗಂತಿಗಳು ನಾಲ್ಕು ತಲೆಮಾರುಗಳ ತನಕವೂ ಮರುಕಳಿಸಿರುವುದು ರುಜುವಾತಾಗಿದೆ. ಮಿಗಿಲಾಗಿ ಬೇರೂರಿದ ಬಿಳಿಕಣರಕ್ತದಲ್ಲಿ (ಕ್ರಾನಿಕ್ ಲುಕೇಮಿಯ) ದೊರೆತಿರುವ ಫಿಲಡೆಲ್ಫಿ ಕ್ರೋಮೋಸೋಮ್ ಏಡಿಗಂತಿ ಕೆಲವು ವಂಶಗಳಲ್ಲಿ ಬರುವುದನ್ನು ತೋರಿಸುತ್ತದೆ.

**2 ರಾಸಾಯನಿಕಗಳು: (ನೋಡಿ– ಏಡಿಗಂತಿಜನಕ–ರಾಸಾಯನಿಕಗಳು)**

**3 ಭೌತಿಕ ಕಾರಕಗಳು:** ವಿಕಿರಣಶೀಲ (ರೇಡಿಯೋಆಕ್ಟಿವ್) ಕೋಬಾಲ್ಟ್ ಆರ್ಸಿನೈಡ್ ಅದಿರನ್ನು ತೆಗೆವ ಜರ್ಮನಿಯ ಗಣಿ ಕೆಲಸಗಾರರಲ್ಲಿ ಫುಪ್ಫುಸದ ಗಂತಿಗಳಾದುದು 1926ರಲ್ಲಿ ಖಚಿತವಾಯಿತು. ಅಮೆರಿಕದ ಗಡಿಯಾರದ ಕಾರ್ಖಾನೆಗಳಲ್ಲಿ, ಕತ್ತಲಲ್ಲಿ ಮಿನುಗುವ ರೇಡಿಯಂ ಬಣ್ಣ ಹಚ್ಚುವ ಕುಂಚಗಳನ್ನು ಬಾಯಿಯಿಂದ ಒದ್ದೆಮಾಡುತ್ತಿದ್ದ ಹೆಣ್ಣಾಳುಗಳ ರಕ್ತಜನಕ ಮೂಳೆಗಳಲ್ಲಿ ಗಂತಿ ಬೆಳೆದು ಅವರು ಮಾರಕ ರಕ್ತಕೊರೆಗೆ ಈಡಾದರು. ಈ ಬಗ್ಗೆ ಮುನ್ನೆಚ್ಚರಿಕೆ ಪಡೆದ ಯುರೋಪಿನ ಕೆಲಸಗಾರರು ಇದೇ ಕಂಟಕದಿಂದ ಪಾರಾದರು. ಮೊದಮೊದಲಿಗೆ ಎಕ್ಸ್ ಕಿರಣಗಳೊಂದಿಗೆ ಕೆಲಸಮಾಡುತ್ತಿದ್ದವರಿಗೆ ಕೈಚರ್ಮದ ಗಂತಿ ಏಳುತ್ತಿತ್ತು. ಹಿರೋಷಿಮಾ ನಾಗಸಾಕಿಗಳಲ್ಲಿ ಪರಮಾಣು ಬಾಂಬ್ ಸಿಡಿದಮೇಲೆ ಅಳಿದುಳಿದವರಲ್ಲಿ ಬಿಳಿಕಣರಕ್ತತೆಯೂ ವಿಕಿರಣಚೋದಿತ ಗಂತಿಗಳೂ ಸಾಮಾನ್ಯರಿಗಿಂತ ಹತ್ತರಷ್ಟು ಹೆಚ್ಚಾಗಿತ್ತು. ಬಿಸಿಲಿಗೆ ವಿಪರೀತ ಮೈಯೊಡ್ಡುವುದು ಚರ್ಮಗಂತಿಗೆ ಕಾರಣವಾಗಬಹುದು. ಕಡಿಮೆ ತರಂಗಾಂತರದ ಅತಿನೇರಳೆ ಕಿರಣಗಳು ಮಿತಿಮೀರಿದರೆ ಚರ್ಮಕ್ಕೆ ಹಾನಿಕರ.

**4 ವೈರಸುಗಳು:** ಎಲೆಕ್ಟ್ರಾನ್ ಸೂಕ್ಷ್ಮದರ್ಶಕಕ್ಕೆ ಮಾತ್ರ ನಿಲುಕುವ ವೈರಸುಗಳು ಜೀವಕೋಶದಲ್ಲಿ ಹೆಗ್ಗುಣಿತವಾಗಿ ಮರಿ ಜೀವಕಣಗಳ ಒಳಹೊಗಬಲ್ಲುವು. ಕೋಳಿ, ಕಪ್ಪೆ, ಮೊಲ ಮುಂತಾದ ಪ್ರಯೋಗದ ಪ್ರಾಣಿಗಳಲ್ಲಿ ಇವುಗಳಿಂದ ಏಡಿಗಂತಿ ಏಳುವುದು ಖಚಿತವಾಗಿದೆ. ಮಾನವರಲ್ಲೂ ವೈರಸ್ಸುಗಳಿಂದ ನರೋಲಿ (ವಾರ್ಟ್) ಆಗುವುದು ನಿಶ್ಚಿತ.

**5 ಚೋದನಿಕಗಳು:** ಬಗೆಬಗೆಯ ಅದರಲ್ಲೂ, ಲೈಂಗಿಕ ಚೋದನಿಕಗಳು ಪ್ರಾಣಿಗಳಲ್ಲಿ ಗಂತಿಯನ್ನು ಚೋದಿಸಬಲ್ಲವು. ಪಿಟ್ಯುಟರಿ ಗ್ರಂಥಿಯ ಚೋದನಿಕಗಳು ಬೆಳವಣಿಗೆಯನ್ನೂ ಅಂಗಕೆಲಸಗಳನ್ನೂ ನಿಯಂತ್ರಿಸುವ, ನಾಲ್ಕು ಅಂಗಗಳಲ್ಲೇ (ಮೊಲೆ, ಗರ್ಭಕೋಶ, ಅಂಡಾಶಯ, ಪ್ರಾಸ್ಟೇಟ್) ದೇಹದ ಒಟ್ಟು ಏಡಿಗಂತಿಗಳಲ್ಲಿ ಶೇ.25 ರಷ್ಟು ತೋರುತ್ತವೆ. ಮೊಲೆಯ, ಪ್ರೋಸ್ಟೇಟಿನ ಗಂತಿಗಳು ಅಂಡಾಶಯವನ್ನೋ ಅಥವಾ ತರಡನ್ನೋ ತೆಗೆದರೆ ಕಂಡಹಾಗೇ ತಗ್ಗುತ್ತವೆ.

**6 ಸಂಪ್ರದಾಯ, ರೂಢಿ, ಪದ್ಧತಿಗಳು, ಚಟಗಳು:** ಎಳೆಗೂಸಾಗಿರುವಾಗಲೇ ಶಿಶ್ನದ ಮುಂದೊಗಲನ್ನು ಕತ್ತರಿಸುವ ಮುಸ್ಲಿಮರು, ಯೆಹೂದಿಯರಲ್ಲಿ ಶಿಶ್ನದ ಏಡಿಗಂತಿ ಅತಿವಿರಳ. ಹಾಗೆ ಕತ್ತರಿಸದಿರುವ ಹಿಂದೂಗಳಲ್ಲಿ ಹೆಚ್ಚು. ಇದರೊಂದಿಗೇ ಗರ್ಭಗೊರಳಿನ (ಸರ್ವಿಕ್) ಏಡಿಗಂತಿ ಯೆಹೂದಿ, ಮುಸ್ಲಿಂ ಹೆಂಗಸರಲ್ಲಿ ಅತಿ ವಿರಳ. ಹಿಂದೂ ಹೆಂಗಸರಲ್ಲಿ ಹೆಚ್ಚು. ಶಿಶ್ನದ ಮುಂದೊಗಲಡಿಯಲ್ಲಿ ಸೇರುವ ಕೊಳಕು, ಶಿಶ್ನದ ಹಾಗೂ

ಗರ್ಭಗೊರಳಿನ ಏಡಿಗಂತಿಗಳಿಗೆ ಕಾರಣವೆಂಬ ಬಲವಾದ ಶಂಕೆಯಿದೆ. ಬಾಲ್ಯ ಮದುವೆಯಾಗಿ ಹೆರಿಗೆಗಳು ಹೆಚ್ಚಾದಷ್ಟೂ ಮುಂದೊಗಲಲ್ಲಿ ಕೊಳೆ ಸೇರಿದಷ್ಟೂ ಇವು ಆಗುವ ಸಂಭವ ಹೆಚ್ಚು.

ಕಾಶ್ಮೀರಿಗಳು ಕಲ್ಲಿದ್ದಲಿನ ಉರಿಕೆಂಡಗಳಿರುವ ಬಿಸಿಬುಟ್ಟಿಯನ್ನು (ಕಾಂಗ್ರಿ) ಹೊಟ್ಟೆ ತೊಡೆಗಳ ಮೇಲೆ ಧರಿಸುವುದರಿಂದ ಅಲ್ಲೆಲ್ಲ ಚರ್ಮ ಬೆಂದು ಏಡಿಗಂತಿಯಾಗುವುದು ಸಾಮಾನ್ಯ. ಪ್ರಪಂಚದಲ್ಲಿ ಬೇರೆ ಯಾರೂ ಈ ಪದ್ಧತಿಯನ್ನೂ ಅನುಸರಿಸುವುದಿಲ್ಲ. ಆದ್ದರಿಂದ ಬೇರೆಲ್ಲೂ ಈ ಕಾಂಗ್ರಿ ಏಡಿಗಂತಿ ಕಾಣದು.

**ಹೊಗೆಸೇದಿಕೆ:** ಪ್ರತಿ ದಿನವೂ ಹೆಚ್ಚಾಗಿ ಸೇದುವ ಸಿಗರೇಟುಗಳ ಸಂಖ್ಯೆ, ಸೇದುವ ಅವಧಿಗಳಿಗೆ ತಕ್ಕಂತೆ ಘುಪ್ಪುಸ ಗಂತಿಯ ಕಂಟಕ ಹೆಚ್ಚುತ್ತದೆ. ಸೇದದವರಿಗಿಂತ ಶೇ.20–30ರಷ್ಟು ಹೆಚ್ಚು. ಇಷ್ಟಲ್ಲದೆ ಧೂಮಪಾನಿಗಳಲ್ಲಿ ದನಿನಾಳ, ಬಾಯಿ, ಅನ್ನನಾಳ, ಮೂತ್ರಕೋಶದ ಗಂತಿಗಳಾಗುವ ಗಂಡಾಂತರ ಹೆಚ್ಚು. ದಶಲಕ್ಷ ಜನರಲ್ಲಿ ಅಮೆರಿಕದ ಗಂತಿಸಂಸ್ಥೆ ನಡೆಸಿದ ಶೋಧನೆಯಿಂದ ಈ ನಿಜಾಂಶಗಳು ತಿಳಿದುಬಂದಿವೆ. ಬೀಡಿ ಸೇದುವ, ತಂಬಾಕು ಮೆಲ್ಲುವ ಗುಜರಾತಿಗಳಲ್ಲಿ ನಾಲಗೆಬುಡ, ಮೆಂಡಿಕೆಗಳ (ಟಾನ್ಸಿಲ್) ಏಡಿಗಂತಿ ಸಾಮಾನ್ಯ.

ಉರಿವ ತುದಿಯನ್ನು ಬಾಯೊಳಗಿಟ್ಟುಕೊಂಡು ಚುಟ್ಟ ಸೇದುವ ರೂಢಿ ಆಂಧ್ರ ಪ್ರದೇಶದಲ್ಲಿದೆ. ಬಿಸಿ ಹೊಗೆ ಬಡಿಯುವ ಬಾಯಿಯ ಗಡುಸು ಅಂಗುಳದಲ್ಲಿ (ಹಾರ್ಡ್ ಪ್ಯಾಲೆಟ್) ಏಡಿಗಂತಿ ಹೆಚ್ಚು. ಒಂದೇ ಸಮನೆ ತಾಕುವ ಕಾವೂ ತಂಬಾಕಿನ ಹೊಗೆಯೂ ಈ ಇಂಥ ಏಡಿಗಂತಿಗೆ ಮುಖ್ಯ ಕಾರಣಗಳು.

**ತಾಂಬೂಲ:** ಭಾರತದಲ್ಲಿ ಎಲ್ಲೆಲ್ಲೂ ತಾಂಬೂಲ ಮೆಲ್ಲುವುದು ಸಾಮಾನ್ಯ ಪದ್ಧತಿ. ಅಡಕೆಯಲ್ಲಿ ಒಗರು ಕೊಡುವ ಟ್ಯಾನಿನ್ ಅಲ್ಲದೆ, ಕನಿಷ್ಠ ಪಕ್ಷ ಆರು ಆಲ್ಕಲಾಯ್ಡುಗಳಿವೆ. ತಾಂಬೂಲದಲ್ಲಿ ವೀಳೆಯದೆಲೆ, ಅಡಕೆ, ಸುಣ್ಣ, ಶುಂಠಿ, ತಂಬಾಕು, ಮೆಣಸು ಮತ್ತಿತರ ಪದಾರ್ಥಗಳನ್ನು ಸೇರಿಸುವುದುಂಟು. ಚೆನ್ನೈನ ಒಟ್ಟು ಏಡಿಗಂತಿಗಳಲ್ಲಿ ಶೇ. 34 ಪಾಲು ಬಾಯಿಗಂತಿಗೆ ಬಹು ಹೆಚ್ಚಾಗಿ ವೀಳ್ಯ, ಅಡಕೆಗಳೊಂದಿಗೆ ತಂಬಾಕು ಅಗಿಯುತ್ತ ಬಾಯಲ್ಲಿ ಒಂದೆಡೆಗೆ ಒತ್ತಲಿಸುವುದು ಕಾರಣ ಎಂದು ನುರಿತವರ ಅಭಿಮತ. ಖೈನಿ ಎಂಬ ತಂಬಾಕು ಸುಣ್ಣಗಳನ್ನು ತಾಂಬೂಲದಲ್ಲಿ ಗಂಟೆಗಟ್ಟಲೆ ದವಡೆಯಲ್ಲಿಟ್ಟುಕೊಂಡು ಮೆಲ್ಲುವ ಬಿಹಾರ, ಉತ್ತರ ಪ್ರದೇಶದ ಜನರಲ್ಲಿ ಬಾಯಿ, ಅನ್ನನಾಳಗಳ ಏಡಿಗಂತಿ, ತಾಂಬೂಲ ಹಾಕದವರಿಗಿಂತ ಎಂಟರಷ್ಟು ಹೆಚ್ಚು. ಬಾಯಿಯ ದುರ್ಗಂಧ, ಹಲ್ಲುಗಳ ರೋಗ, ಅನ್ನಾಂಗಗಳ ಕೊರತೆ ಸಹಾಯಕ ಕಾರಣಗಳಿರಬಹುದು.

**ಧೋತಿ ಗಂತಿ:** ಧೋತಿ ಅಥವಾ ಪಂಚೆಯನ್ನು ಸೊಂಟದ ಸುತ್ತ ಬಿಗಿಯಾಗಿ ಕಟ್ಟಿ ಇನ್ನೊಂದು ತುದಿಯನ್ನು ತೊಡೆ ಸಂದಿನಲ್ಲಿ ತೂರಿಸಿ ಸೊಂಟದ ಹಿಂಭಾಗದಲ್ಲಿ ಬಿಗಿಸುತ್ತಾರೆ. ಸೊಂಟ ಮೂಳೆ ಮೇಲೂ ತೊಡೆಸಂದುಗಳಲ್ಲೂ ಚರ್ಮದ ಒತ್ತು ಹುಣ್ಣಾಗಿ (ಪ್ರೆಷರ್ ಸೋರ್) ಏಡಿಗಂತಿಯಾಗುವುದು ಹೆಚ್ಚು. ಬಡವರಲ್ಲಿ ಇದು ಸಾಮಾನ್ಯ. ಕೊಳಕುತನವೇ ಈ ಗಂತಿಗೆ ಕಾರಣವಿರಬಹುದು.

**7 ಭೂಗುಣ–ಹವಾಗುಣಗಳು :** ಮೊಲೆಗಂತಿ ಭಾರತ ಜಪಾನುಗಳಲ್ಲಿ ವಿರಳ; ಯುರೋಪ್, ಉತ್ತರ ಅಮೆರಿಕಗಳಲ್ಲಿ ಹೆಚ್ಚು.. ಜಪಾನಿನಲ್ಲಿ ಜಠರದ ಏಡಿಗಂತಿ ಬಹಳ ಹೆಚ್ಚು; ಉತ್ತರ ಯುರೋಪ್, ಅಮೆರಿಕಗಳಲ್ಲಿ ಅಧಿಕ, ಭಾರತದಲ್ಲಿ ವಿರಳ. ಚೀನಿಯರಲ್ಲಿ ಮೂಗುಗಂಟಲ್ಕುಳಿಯ (ನೇಸೊಫ್ಯಾರಿಂಕ್ಸ್) ಗಂತಿ ಬಲು ಹೆಚ್ಚು. ಉಷ್ಣವಲಯದ ಬಿಳಿಜನರಲ್ಲಿ ಬಿಸಿಲಿನಿಂದ ಚರ್ಮದ ಏಡಿಗಂತಿ ಆಗುವುದು ಹೆಚ್ಚು. ಚರ್ಮದಲ್ಲಿ ಮೆಲನಿನ್ ಹೆಚ್ಚಿದ್ದು ಇದನ್ನು ತಡೆಗಟ್ಟುವ ಗುಣ ಆಫ್ರಿಕದವರಲ್ಲಿ ಇರುವುದರಿಂದ ಇದು ಕಡಿಮೆ.

**8 ಉಳಿದ ಕಾರಣಗಳು:** ಮದ್ಯಪಾನ ಮಾಡುವವರಲ್ಲಿ ದನಿನಾಳ, ಅನ್ನನಾಳಗಳ ಏಡಿಗಂತಿ ಹೆಚ್ಚು. ಆಫ್ರಿಕದ ಬಂಟುಜನಾಂಗಗಳಲ್ಲಿ ಆಹಾರದ ನ್ಯೂನತೆ ಅಥವಾ ಆಹಾರಾಂಶಗಳಲ್ಲಿ ವಿಷವಸ್ತು (ಉದಾ: ಅಫ್ಲೊಟಾಕ್ಸಿನ್) ಈಲಿಯ ಏಡಿಗಂತಿಗೆ ಕಾರಣ. ಏಡಿಗಂತಿ ರೋಗಿಗಳಲ್ಲಿ ಬೇರೆ ಬಗೆಯ ಗಂತಿ ಏಳುವುದೂ 2–6ರಷ್ಟೂ ಹೆಚ್ಚು. ಮೊಲೆಗಂತಿ ಮದುವೆ ಆಗದವರಿಗಿಂತ ಆದವರಲ್ಲಿ ಕಡಿಮೆ. ಮಕ್ಕಳಿಗೆ ಎದೆಹಾಲು ಕೊಡುವ ತಾಯಂದಿರಲ್ಲಿ ಇನ್ನೂ ಕಡಿಮೆ.

**ಏಡಿಗಂತಿಯ ಲಕ್ಷಣಗಳು:** ಹತೋಟಿಗೆಟ್ಟಿರುವುದೂ ಜೀವಕಣಗಳ ಹುಟ್ಟುಮರಳಿಕೆಯೂ (ಅನಾಪ್ಲೇಸಿಯ) ಏಡಿಗಂತಿಯ ಮುಖ್ಯ ಗುಣಗಳು. ಸುತ್ತಣ ಅಂಗಾಂಶಗಳು ಒಳನುಗ್ಗುವುದು, ಮರುಕಳಿಕೆ, ಬೇರೆ ಅಂಗಾಂಗಗಳಿಗೆ ಗುಳೆಯ (ಮೆಟಸ್ಟೇಸಿಸ್) ಹೋಗುವುದು, ಜೀವಾಣುವಿನ (ನ್ಯೂಕ್ಲಿಯಸ್) ಮಾರ್ಪಾಟುಗಳು, ಧ್ರುವೀಕರಣದ (ಪೊಲಾರಿಟಿ) ನಾಶ, ಮಾರಕ ಪರಿಣಾಮ, ಈ ಮುಖ್ಯ ಗುಣಗಳಲ್ಲಿ ಬಗೆಬಗೆಯ ಏಡಿಗಂತಿಗಳೂ ತರಾವರಿಯಾಗಿರುತ್ತವೆ.

**ಏಡಿಗಂತಿ ಹರಡುವ ವಿಧಾನಗಳು:** ಒಳಪಸರಿಕೆ (ಇನ್‌ಫಿಲ್ಟ್ರೇಷನ್) ಹಾಲು ರಸನಾಳಗಳು (ಲಿಂಫ್ಯಾಟಿಕ್ಸ್), ರಕ್ತನಾಳಗಳ ಮೂಲಕ ಅನ್ನನಾಳ, ಕರುಳು, ಮೂತ್ರನಾಳ ಇತ್ಯಾದಿ ಸಹಜ ಅಂಗ ಹೊರದಾರಿಗಳಿಂದ; ಗುಂಡಿಗೆ, ಘುಪ್ಪುಸ, ಪಚನಾಂಗಗಳ ಸುತ್ತಪೊರೆಗಳ ಪೊಳ್ಳುಗಳ ಮೂಲಕ; ಚುಚ್ಚಿಳಿತ (ಇನಾಕ್ಯುಲೇಷನ್).

ಮುನ್ನೇಡಿಗಂತಿ (ಪ್ರಿಕ್ಯಾನ್ಸರಸ್‌ಲೀಷನ್) : ಬಾಯಿಯ, ಹೆಣ್ಣಿನ ಜನನಾಂಗದ ಬಿಳಿಮಚ್ಚೆ (ಲ್ಯೂಕೊಪ್ಲೇಕಿಯ), ಮುಪ್ಪಿನ ಕೊಂಪೊರೆತನ (ಕೆರಟೋಸಿಸ್) ಮತ್ತಿತರ ಬೇನೆಗಳಲ್ಲಿ ಗಂತಿಯಾಗುವ ಸಂಭವ ಬಹು ಹೆಚ್ಚು.

ಮೈಯಲ್ಲಿ ಪರಿಣಾಮಗಳು : ತೂಕವಿಳಿದು ನವೆದು ಜಡತೆಯನ್ನಪ್ಪುವುದು ದೇಹಾದ್ಯಂತ ಹರಡಿಕೊಂಡ ಏಡಿಗಂತಿಯಲ್ಲಿ ಹೆಚ್ಚು. ಹೀಗಾಗಲು, ಗಂತಿಯ ನಿರ್ದಿಷ್ಟ ಸ್ವಭಾವಕ್ಕಿಂತ–ಹಸಿವಿಲ್ಲದಿರುವಿಕೆ, ರಕ್ತನಷ್ಟ, ಭೇದಿ, ವಾಂತಿ, ಜ್ವರ ಇತ್ಯಾದಿಗಳೇ ಕಾರಣ. ಚಯಾಪಚಯ ಕ್ರಿಯೆಯಲ್ಲಿ ಮೈಕಡಿತ, ರಕ್ತಸಕ್ಕರೆ ತಗ್ಗುವುದು, ಕ್ಯಾಲ್ಸಿಯಂ ಹೆಚ್ಚಳ ಮತ್ತಿತರ ನಿರ್ದಿಷ್ಟ ಬದಲಾವಣೆಗಳಾಗಬಹುದು.

ರೋಗಿ ಬೇರಾವ ರೋಗಕ್ಕೂ ಏಡಿಗಂತಿಯಷ್ಟು ಅಂಜುವುದಿಲ್ಲ. ಏಡಿಗಂತಿ ಚಿಕಿತ್ಸೆ ಚೆನ್ನಾದಷ್ಟೂ ಈ ರೀತಿ ಅಂಜಿಕೆ ಇಳಿಯಬಹುದು. ಏಡಿಗಂತಿಯನ್ನು ಎಳೆಯದರಲ್ಲೇ ಕಂಡುಹಿಡಿವುದೂ ನಿರೋಧಕ ಕ್ರಮಗಳೂ ತಕ್ಕ ಚಿಕಿತ್ಸೆಯೂ ಮುಖ್ಯ.

ಏಡಿಗಂತಿ ಸಂಶೋಧನೆಯ ಅಂತಿಮ ಗುರಿಗಳಿವು : 1. ಸುಧಾರಿತ ಪರೀಕ್ಷಾ ವಿಧಾನಗಳಿಂದ ಗಂತಿಯನ್ನು ಎಳೆತನದಲ್ಲೇ ಪತ್ತೆ ಹಚ್ಚಿ, ಗೊತ್ತಿರುವ ಚಿಕಿತ್ಸಾ ವಿಧಾನಗಳಿಂದ ಹೆಚ್ಚಿನ ಗುಣ ಪಡೆಯುವುದು. 2. ಸುಧಾರಿತ ಚಿಕಿತ್ಸೆಗಳಿಂದ ವಿಳಂಬಿತ ಹಾಗೂ ದುರ್ಲಕ್ಷಿತ ರೋಗಿಗಳು ಸಫಲಗುಣ ಪಡೆಯುವುದು. 3. ಸಫಲ ನಿರೋಧಕ ಕ್ರಮಗಳಿಂದ ರೋಗಪರೀಕ್ಷೆ ಹಾಗೂ ಚಿಕಿತ್ಸೆಯನ್ನು ಅನಗತ್ಯಗೊಳಿಸುವುದು.

ಎಳೆಯದರ ಶೋಧನೆ : ಇದನ್ನು ಸಾಧಿಸಲು ಆವಶ್ಯಕ್ರಮಗಳು–ಪ್ರಸ್ತುತ ಪರೀಕ್ಷಾಸಾಧನಗಳನ್ನು ಸದುಪಯೋಗಿಸುವುದು ಹಾಗೂ ಪರಿಪೂರ್ಣಗೊಳಿಸುವುದು; ರೋಗಲಕ್ಷಣ ಚಿಹ್ನೆಗಳು ತಲೆದೋರುವ ಮುನ್ನವೇ ತಾಂತ್ರಿಕ ನವ ಸಾಧನಗಳಿಂದ ಏಡಿಗಂತಿಯನ್ನು ಗೊತ್ತುಹಚ್ಚುವುದು.

**ಏಡಿಗಂತಿಯ ಎಚ್ಚರಿಕೆಯ ಸಂಕೇತಗಳು;** ಬೇರೆಬೇರೆ ಏಡಿಗಂತಿಗಳ ರೋಗ ಚಿಹ್ನೆ ಲಕ್ಷಣಗಳು ವಿಭಿನ್ನವಾಗಿದ್ದರೂ ಕೆಲವು ಲಕ್ಷಣಗಳನ್ನು ಜನಸಾಮಾನ್ಯರೂ ಗುರುತಿಸಬಹುದು. ಈ ಸಂಕೇತಗಳಿಂದ ಏಡಿಗಂತಿ ರುಜುವಾತಾಗುವುದಿಲ್ಲ; ಆದರೆ ಇವು ರೋಗಿಯನ್ನು ವೈದ್ಯರ ಪರೀಕ್ಷೆ ಸಲಹೆಗಳಿಗೆ ಕರೆತರಬಲ್ಲವು. ಇವು ಸುಳ್ಳೆಂದು ನಿರ್ಧಾರವಾದಾಗ ವ್ಯಕ್ತಿ ನಿಶ್ಚಿಂತನಾಗಬಹುದು. ಸಕಾಲದಲ್ಲಿ ಏಡಿಗಂತಿ ಗೊತ್ತಾದರೆ ತಕ್ಕ ಚಿಕಿತ್ಸೆಯಿಂದ ಪೂರಾ ಗುಣಪಡಿಸಬಹುದು. ಏಡಿಗಂತಿಗಿಂತಲೂ ಅದನ್ನು ಕುರಿತ ಅಂಜಿಕೆ ಹೆಚ್ಚು ಹಾನಿಕರ. ಈ ಭಯದಿಂದ ವೈದ್ಯಪಟುವಿನ ಸಲಹೆ ಪಡೆಯುವುದು ತಡವಾಗುತ್ತದೆ; ತಡವಾದರೆ ಪೂರ್ತಿ ಗುಣ ಕೈಗೂಡದು. ಎಚ್ಚರಿಕೆಯ ಲಕ್ಷಣ: 1. ಗಡ್ಡೆ ಅಥವಾ ಊದು ಕಾಣಿಸಿಕೊಂಡು ಬೆಳೆಯುತ್ತಲೇ ಇರುವುದು. 2. ದೇಹದ ಸಹಜ ಮಾರ್ಗಗಳಿಂದ ಆಮು, ಕಫ, ಮಲ, ಮೂತ್ರ ಇತ್ಯಾದಿಗಳ ಮಿತಿಗೆಟ್ಟ ವಿಸರ್ಜನೆ ಅಥವಾ ರಕ್ತಸ್ರಾವ. 3. ಕಾರಣವಿಲ್ಲದೆ ಒಂದೆಡೆ ಕಾಣಿಸಿಕೊಳ್ಳುವ ಚಿಹ್ನೆ ರೋಗಗಳು (i) ಒಡೆದ ದನಿ, (ii) ಎಡೆಬಿಡದ ಕೆಮ್ಮು, (iii) ಕಷ್ಟನುಂಗಣೆ, (iv) ಎಡೆಬಿಡದೆ ಅಜೀರ್ಣ, (v) ಗೊತ್ತುಗೆಟ್ಟ ಭೇದಿ ಇಲ್ಲವೇ ಮಲಗಟ್ಟು, (vi) ಬಾಯಿ, ಚರ್ಮಗಳಲ್ಲಿ ವಾಸಿಯಾಗದ ಹುಣ್ಣು, (vii) ಮೊಲೆಯಲ್ಲಿ ನೋವಿಲ್ಲದ ಗಡ್ಡೆ, (viii) ಕ್ರಮ ತಪ್ಪಿ ಆಗುವ ಮುಟ್ಟು, ಅನಿರೀಕ್ಷಿತ ರಕ್ತಸ್ರಾವ.

ಎಚ್ಚರಿಕೆ ಸಂಕೇತಗಳ ನಕಾರ (ನೆಗೆಟಿವ್) : ರೋಗಲಕ್ಷಣಗಳು ಹೆಚ್ಚಿರುವುದಕ್ಕಿಂತ ಇವು ತೋರುವುದು ಹೆಚ್ಚು ಹಾನಿಕರ. ಇದು ನೋವಿನ ಬಗ್ಗೆಯಂತೂ ಅಕ್ಷರಶಃ ನಿಜ. ರೋಗಿಗೆ ಇದು ದೈವಪ್ರಸಾದ ಎನಿಸಬಹುದು: ಆದರೆ ಬರಬರುತ್ತ ದುರಂತ ತಪ್ಪುವುದಿಲ್ಲ. ಏಡಿಗಂತಿಯ ಪ್ರಾರಂಭಲಕ್ಷಣ ನೋವೇ ಆಗಿದ್ದರೆ, ಎಳೆಯದರಲ್ಲೇ ಅದನ್ನು ಸುಲಭವಾಗಿ ಗುರುತಿಸಿ ಅಷ್ಟೇ ಸರಾಗವಾಗಿ ಗುಣಪಡಿಸಬಹುದಿತ್ತು.

ಜನರಲ್ಲಿ ತಿಳಿವಳಿಕೆ : ಇಂದಿನ ಪರೀಕ್ಷಾವಿಧಾನಗಳ ಸದುಪಯೋಗಕ್ಕೆ ಮೊಟ್ಟ ಮೊದಲಾಗಿ ಜನರಲ್ಲಿ ಏಡಿಗಂತಿ ವಿಚಾರವಾಗಿ ತಿಳಿವು ಹೆಚ್ಚಿಸಬೇಕು. ಯಾವ ಚಿಕಿತ್ಸೆಗೂ ಜಗ್ಗದ ಸ್ಥಿತಿಯಲ್ಲಿ ಕೈಮೀರಿದ ಮೇಲೆ ರೋಗಿ ವೈದ್ಯಸಲಹೆಗೆ ಬಂದರೆ ಯಾವ ವಿಧಾನಗಳೂ ಹಿಡಿಯವು. 35 ವಯಸ್ಸು ದಾಟಿದ ಆರೋಗ್ಯವಂತರು ಒಂದೆರಡು ಬಾರಿಯಾದರೂ ಏಡಿಗಂತಿ ಶೋಧನಾ ಶಿಬಿರಗಳಿಗೆ ಬರಬೇಕು. ಈ ಕೆಲಸ ಸೇವೆಗಳು ಸಾಮಾನ್ಯ ವೈದ್ಯ ಸಂಸ್ಥೆಗಳನ್ನವಲಂಬಿಸದೆ ಶೀಘ್ರಶೋಧನೆ, ಅದರಿಂದಾಗುವ ಸಫಲ ಚಿಕಿತ್ಸೆ ನಡೆಸುವ ರಾಷ್ಟ್ರೀಯ ಏಡಿಗಂತಿ ಸ್ವಯಂಸೇವಾ ಸಂಸ್ಥೆಗಳ ಆಶ್ರಯದಲ್ಲಿ ನಡೆಯಬೇಕು.

ಸುಧಾರಿತ ಪರೀಕ್ಷಾ ವಿಧಾನಗಳು : ಏಡಿಗಂತಿಶೋಧನೆ ಕಷ್ಟವಾದಾಗ ಈ ವಿಧಾನಗಳು ಗುಣಕಾರಕ ವೇಗವನ್ನು ಗಮನೀಯವಾಗಿ ಹೆಚ್ಚಿಸಬಲ್ಲವು.

ಸರಳ ಪರೀಕ್ಷೆ. ಗಂತಿ ಬರಿಗಣ್ಣಿನಿಂದ ನೋಡುವಂತಿರುವಾಗ ಅಥವಾ ಮುಟ್ಟಿದರೆ ಗೋಚರವಾಗುವಾಗ ಇದನ್ನು ಮಾಡಬೇಕು.

ರೋಗಿ ಹೇಳಿಕೆಯನ್ನು ಮನವರಿಕೆ ಮಾಡಿಕೊಳ್ಳುವುದು.

ಎಕ್ಸ್ ಕಿರಣ ಪರೀಕ್ಷೆ ಜನರು ಮುಂದೆ ಬಂದು ಎಕ್ಸ್ ಕಿರಣ ಪರೀಕ್ಷೆಗೆ ಈಡಾಗದಿದ್ದಲ್ಲಿ ಏಡಿಗಂತಿಗಳನ್ನು ಗುರುತಿಸಲು ಯಾವಾಗಲೂ ಸಾಧ್ಯವಿಲ್ಲ. ಅನೇಕ ಬಾರಿ ಗಂತಿ ಎಕ್ಸ್ ಕಿರಣ ಫಲಕದ ಮೇಲೆ ಎದ್ದು ತೋರಬಹುದು, ನೆರಳು ಬೀಳಿಸಬಹುದು. ಇದನ್ನು ಸರಿಯಾಗಿ ಅರ್ಥಮಾಡಿಕೊಂಡು ಬಳಸಿದರೆ ಒಳ್ಳೆಯ ಸಾಧನ.

ವಿಕಿರಣ ಅಪಾರದರ್ಶಕ ರಾಸಾಯನಿಕಗಳು : ಇವನ್ನು ರೋಗಿಗೆ ನುಂಗಿಸಿದರೆ, ಕೆಲವು ಗಂತಿಗಳಿಗೆ ಅಂಟಿಕೊಂಡು ಎಕ್ಸ್ ಕಿರಣ ಚಿತ್ರದಲ್ಲಿ ನೆರಳಾಗಿ ತೋರಬಹುದು. ಇವನ್ನು ಅಂಟಿಸಿಕೊಳ್ಳದ ಗಂತಿಗಳು ಅಪಾರದರ್ಶಕ ಹಿನ್ನೆಲೆಯಲ್ಲಿ ಚೆನ್ನಾಗಿ ಗೋಚರಿಸುತ್ತವೆ.

ಕೆಲವು ವಿಶೇಷ ಎಂಡೊಸ್ಕೋಪುಗಳ ನೆರವಿನಿಂದ ಉಸಿರ್ನಾಳ, ಜಠರ, ಮೂತ್ರಕೋಶ, ಹೆಗ್ಗರುಳು ಮುಂತಾದ ಒಳಾಂಗಗಳಲ್ಲಿನ ಗಂತಿಗಳನ್ನು ಬರಿಗಣ್ಣಿನಿಂದ ನೋಡಬಹುದು. ಜೀವುಂಡಿ (ಬಯಾಪ್ಸಿ) ತೆಗೆದುಕೊಳ್ಳುವುದು. ಶಸ್ತ್ರಕ್ರಿಯೆ ನಡೆಯುತ್ತಿದ್ದಂತೆಯೇ ಅನುಮಾನಿತ ಗಡ್ಡೆಯಿಂದ ಕೊಯ್ದೆಗೆದ ಚೂರನ್ನು (ಜೀವುಂಡಿಗೆ) ಕೂಡಲೇ ನೀರ್ಗಲ್ಲಾಗಿಸಿ ಗಡಸುಗಟ್ಟಿಸಿ, ನೀರ್ಗಲ್ಲಾಗಿಸುವ ಚಿಕ್ಕ ಕತ್ತರಿಯಿಂದ ಕತ್ತರಿಸಿ, ಸೂಕ್ಷ್ಮದರ್ಶಕದಡಿಯಲ್ಲಿ ಪರೀಕ್ಷಿಸಬೇಕು. ಈ ವಿಧಾನದಿಂದ ಗಂತಿಯ ಇರವು, ರೋಗದ ಬಗೆ–ಇವನ್ನು ಕೆಲಕ್ಷಣಗಳಲ್ಲೇ ತಿಳಿದು ಮುಂದಿನ ತಕ್ಕ ಚಿಕಿತ್ಸೆಯನ್ನು ಖಚಿತವಾಗಿ ನಿರ್ಧರಿಸಬಹುದು. ಇದರಿಂದ ಮತ್ತೊಂದು ಬಾರಿ ಶಸ್ತ್ರಕ್ರಿಯೆಗೊಳಗಾಗುವ ತೊಂದರೆ ತಪ್ಪುತ್ತದೆ. ಬಹುಬೇಗ ಮಾಡುವ ಈ ಏರ್ಪಾಡಿನಿಂದ ಜೀವುಂಡಿಗೆಯ ಊರಿಗೆ (ಫಿಕ್ಸೇಷನ್) ಬಣ್ಣವೇರಿಸಿಕೆ (ಸ್ಟೈನಿಂಗ್) ಇನ್ನೂ ಚೆನ್ನಾಗಬೇಕು.

ಪದರ ಜೀವಾಣುಕೋಶ (ಎಕ್ಸ್ ಫೋಲಿಯೇಟಿವ್ ಸೈಟಾಲಜಿ) : ಸಾಮಾನ್ಯವಾಗಿ ಏಡಿಗಂತಿಯ ಜೀವಕೋಶಗಳು ಒಂದಕ್ಕೊಂದು ಅಂಟಿಕೊಳ್ಳುವ ಬಲ ಕಡಿಮೆ, ಬೆಳೆತದ ಮೇಲ್ಮೈ ತೊಳೆತದ ದ್ರವ್ಯದಲ್ಲಿ ಅಥವಾ ಅಂಗದ ರಸದಲ್ಲಿ ಪೊರೆಪೊರೆಯಾಗಿ ಎದ್ದುಬರುವ ಗಂತಿಕಣಗಳನ್ನು ಗುರುತಿಸುವ ವಿಧಾನವೇ ಪದರ ಜೀವಾಣುವಿಜ್ಞಾನ.

ಎಳ್ಳಷ್ಟೂ ರೋಗಲಕ್ಷಣಗಳಿರದ ಹೆಂಗಸರ ಯೋನಿಸುರಿತದಲ್ಲಿ ಕಂಡುಬರುವ ಗಂತಿಜೀವಕೋಶಗಳನ್ನು ಪೆಪ್ ಲೇಪ ಶೋಧನೆ (ಪೆಪ್ ಸ್ಮಿಯರ್ ಟೆಸ್ಟ್) ಎಂದು ಜನಪ್ರಿಯವಾಗಿ ಹೆಸರಾದ ಪೆಪಾನಿಕೋಲನ ವಿಧಾನದಿಂದ ಸೂಕ್ಷ್ಮದರ್ಶಕದಡಿಯಲ್ಲಿ ಪರೀಕ್ಷಿಸಿ ಎಳೆಯದರಲ್ಲೇ ಗೊರಳಿನ ಏಡಿಗಂತಿಯನ್ನು ಗೊತ್ತುಹಚ್ಚಬಹುದು. ಈ ವಿಧಾನ ಆನೇಕ ಜನರ ಪರೀಕ್ಷೆಗೆ ಬಳಸುವಷ್ಟು ಸರಳವೂ ಚುರುಕಾದುದೂ ಆಗಿದೆ.

ಗಂತಿಕಣಗಳ ಪರೀಕ್ಷೆಯಿಂದ ಅನೇಕ ಅಂಗಗಳ ಏಡಿಗಂತಿಗಳನ್ನು ಗೊತ್ತು ಹಚ್ಚಬಹುದು–ದನಿನಾಳ (ಕಫ), ಫುಪ್ಫುಸ (ಉಗುಳು, ಉಸಿರ್ನಾಳದ ತೊಳೆತಗಳು), ಮೂತ್ರಪಿಂಡ, ಮೂತ್ರಕೋಶ (ಮೂತ್ರ), ಜಠರ ಕರುಳು (ಉಪ್ಪುನೀರಿನ ತೊಳೆತಗಳು), ಪಿತ್ತನಾಳ (ದುರಾರ್ಗರುಳಿನ ತೊಳೆಗಳು) ಮತ್ತು ಮೊಲೆಯಿಂದ ಬರುವ ಸುರಿಕೆ, ಇಷ್ಟಲ್ಲದೆ ಮಿದುಳು, ಬೆನ್ನುಹುರಿಯ ದ್ರವ (ಸೆರಿಬ್ರೊಸ್ಪೈನಲ್ ಫ್ಲೂಯಿಡ್), ಸುತ್ತಂಚಿನ (ಪೆರಿಫೆರಲ್) ರಕ್ತದಲ್ಲಿ ಪೊರೆಯ ಚೀಲ, ಪೊಳ್ಳುಗಳಲ್ಲಿನ (ಫುಪ್ಫುಸ, ಗುಂಡಿಗೆ ಪಚನಾಂಗಗಳ ಸುತ್ತ ಪೊರೆ, ಕೀಲುಗಳ) ಕವಚ ದ್ರವ್ಯಗಳಲ್ಲಿ ಹಲವಾರು ಸಲ ಗಂತಿಕಣಗಳನ್ನು ಗುರುತಿಸಬಹುದು. ಎಷ್ಟಾದರೂ ಇದಕ್ಕೆಲ್ಲ ರೋಗಿಯನ್ನು ವಿವಿಧ ಗಂತಿಗಳಿಗೆ ಸಿದ್ಧಗೊಳಿಸುವುದು, ಗಂತಿಕಣಗಳು ಕೆಡುವ ಮುನ್ನವೇ ಪರೀಕ್ಷಕ ಪದಾರ್ಥಗಳನ್ನು ಸೇರಿಸಿ ಅಣಿಗೊಳಿಸುವುದು, ಅತಿ ಜಾಗ್ರತ ಕೌಶಲದಿಂದ ಅನೇಕ ಲೇಪಗಳನ್ನು ಮೊಟಕಾದ ಪರೀಕ್ಷೆ, ಗಂಟೆಗಟ್ಟಲೆ ತಜ್ಞರ ಕಾಲಾವಧಿ ಹಾಗೂ ಪರಿಶ್ರಮ ಬೇಕೇ ಬೇಕು. ಖಚಿತತೆಯನ್ನು ಬಲಿಗೊಡದೆ ಈ ತ್ರಾಸದಾಯಕ ಕ್ರಿಯಾವಿಧಾನವನ್ನು ಸರಳಗೊಳಿಸಬೇಕಾಗಿದೆ.

ಜೀವವಿದ್ಯುನ್ಮಾಪಕ (ಬಯೋ ಎಲೆಕ್ಟ್ರೊಮೀಟರ್) : ಏಡಿಗಂತಿ ಮತ್ತಿತರ ರೋಗಗಳನ್ನು ಗುರುತಿಸುವ ಈ ಮಾಪಕಕ್ಕೆ ದೇಹದ ಜೀವವಿದ್ಯುತ್ತೇ ಆಧಾರ. ಈ ಉಪಕರಣದಿಂದ ಎಡಬಲದ ವಿದ್ಯುತ್ ವಿಭವ ವ್ಯತ್ಯಾಸಗಳನ್ನು (ಪೊಟೆನ್‌ಷಿಯಲ್ ಡಿಫರೆನ್ಸ್) ಅಳೆಯಬಹುದು. ಬೆರಳಿಗೆ ತಾಕಿರುವ ವೋಲ್ಟ್ ಮಾಪಿಯು ವಿದ್ಯುನ್ಮಂಡಲಕ್ಕೆ ಹೊಂದಿಕೊಂಡಿರುತ್ತದೆ.

ಚರ್ಮದ ವಿದ್ಯುದ್ವಾಹಕತೆ (ಕಂಡಕ್ಟಿವಿಟಿ) ಮತ್ತು ಏರುಸಿರಾಟಕ್ಕೆ (ಹೈಪರ್ ವೆಂಟಿಲೇಷನ್) ಈ ಮಾಪಕದ ಅಳತೆಗಳು, ಏಡಿಗಂತಿ ಮತ್ತಿತರ ವ್ಯಾಧಿಗಳನ್ನಷ್ಟೇ ಅಲ್ಲದೆ, ಎಲ್ಲಕ್ಕಿಂತ ಹೆಚ್ಚು ರೋಗಲಕ್ಷಣಗಳ ಸುಳಿವಿಲ್ಲದಿದ್ದರೂ ಏಡಿಗಂತಿ ಉಂಟಾಗುವ ಸಂಭವವನ್ನು ಗೊತ್ತುಹಚ್ಚುತ್ತವೆ.

192 ಏಡಿಗಂತಿ ರೋಗಿಗಳಲ್ಲಿ ಶೇ. 40 ಮಾತ್ರ ವೆಚ್ಚದ ಪೆಪ್ ಲೇಪ ಶೋಧನೆ ಅಗತ್ಯ. ಮಿಕ್ಕ ಶೇ. 60ಕ್ಕೆ ಬೇಕಿಲ್ಲವೆಂದು ಈ ಮಾಪಕದಿಂದ ಮಾರ್ಟನ್ ವಿಟ್‌ಬಿ ಸಾಧಿಸಿದ್ದಾನೆ. ಅಂದರೆ ಇದು ಸರ್ಕಾರಕ್ಕೆ ಪ್ರತಿ ಲಕ್ಷ ಜನರ ಪರೀಕ್ಷೆಗೆ 20 ಲಕ್ಷ ರೂಪಾಯಿಗಳಷ್ಟು ಉಳಿಸುತ್ತದೆ.

**ನಿರೋಧಕ ಕ್ರಮಗಳು:** ಏಡಿಗಂತಿಯ ಭೌಗೋಳಿಕತೆ, ಹವಾಮಾನ, ಅಪಾಯಕರ ಕಸುಬುಗಳ ಸ್ಥಿತಿಗತಿಗಳು, ರೂಢಿ ಸಂಪ್ರದಾಯಗಳು, ಚಟಗಳು, ಹರವು ಇತ್ಯಾದಿಗಳ ಅಂಕಿಅಂಶಗಳ ಶೋಧನೆ ಏಡಿಗಂತಿ ನಿವಾರಣೆಗೆ ಮಹಾಕೊಡುಗೆಗಳು. ಪರಿಸರ ಹಾಗೂ ಮೈಯಲ್ಲಿನ ಗಂತಿಕಾರಕಗಳನ್ನು ಹೆಚ್ಚುಹೆಚ್ಚಾಗಿ ಗುರುತಿಸಿ ಮುಕ್ಕಾಲು ಭಾಗದಷ್ಟು ಗಂತಿಗಳನ್ನು ತಡೆಗಟ್ಟಲು ಸಾಧ್ಯವಾಗಿದೆ.

ಕೈಗಾರಿಕೆಯಲ್ಲಿನ ವಿವಿಧ ಹಂತಗಳಲ್ಲಿ ಅನೇಕ ವಸ್ತುಗಳಿಂದ ಗಂತಿ ಹೇಳಬಹುದು.– ವಿಕಿರಣಶಕ್ತಿ ಅದಿರಿನಲ್ಲಿ, ಬಣ್ಣವಸ್ತುಗಳ ತಯಾರಿಕೆಯಲ್ಲಿ, ಕ್ರೋಮಿಯಂ ತಯಾರಿಕೆಯ ಉತ್ಪನ್ನಗಳಲ್ಲಿ, ಎಕ್ಸ್ ಕಿರಣ ಕೊಳವೆಗಳಿಂದ, ಹರಿದಳ, ಕಲ್ನಾರುಗಳಲ್ಲಿ ಅದಿರಿನಿಂದ ಬಳಕೆಯ ರೂಪದ ತನಕ–ಇತ್ಯಾದಿ ಸರಿಯಾದ ನಿವಾರಣೋಪಾಯಗಳು ಏಡಿಗಂತಿಯಾಗುವುದನ್ನು ತಪ್ಪಿಸುತ್ತವೆ. ಈ ಕ್ರಮಗಳಿಂದ ವಸ್ತುಗಳ ಬಣ್ಣ ಕಾರ್ಖಾನೆಗಳಲ್ಲಿ ಮೂತ್ರಕೋಶದ ಗಂತಿ ವಿರಳವಾಗಿದೆ. ವಿಕಿರಣದ ಎದುರು ಎಲ್ಲರೂ ರಕ್ಷಿತರಾಗಬೇಕೆಂದು ಕಾನೂನುಗಳಿವೆ. ವಿವಿಧ ವಿಕಿರಣಮಾಪಕಗಳು ಬಳಕೆಯಲ್ಲಿವೆ–ಗೀಗರ್ ಮುಲ್ಲರ್ ಗುಣಕ (ಕೌಂಟರ್), ಕೊಡುಗೆಮಾಪಕ (ಡೋಸಿಮೀಟರ್), ಪಟಲ ಪದಕ (ಫಿಲ್ಮ್ ಬ್ಯಾಡ್ಜ್) ಇತ್ಯಾದಿ. ಬಾಳಿನುದ್ದಕ್ಕೂ ಮಾನಿತ ವಿಕಿರಣತೆಯ ಪ್ರಮಾಣದ ಘಟ್ಟವೂ ನಿಶ್ಚಿತವಾಗಿದೆ. ಸೀಸದ ಮುಂಕವಚ (ಏಪ್ರನ್) ಕೈಗವುಸುಗಳೂ ಈ ಕೆಲಸಗಾರರನ್ನು ಕಾಪಾಡುತ್ತವೆ.

**ಎಳೆಯದರಲ್ಲಿ ಏಡಿಗಂತಿ ಚಿಕಿತ್ಸೆ:** ಏಡಿಗಂತಿ ಕೊಲ್ಲುವಷ್ಟೇ ಜನರನ್ನು ವಿಳಂಬವೂ ಕೊಲ್ಲುತ್ತದೆ. ಯಾವ ರೋಗವನ್ನೇ ಆಗಲಿ ತಡಮಾಡದೆ ಬೇಗನೆ ಚಿಕಿತ್ಸೆ ಕೈಗೊಳ್ಳುವುದು ಬಲು ಒಳ್ಳೆಯದು. ಮರವಾಗಿ ಬೆಳೆಯ ಬಿಡುವುದಕ್ಕಿಂತ ಏಡಿಗಂತಿಯನ್ನು ಚಿಗುರಿನಲ್ಲಿ ಚಿವುಟುವುದು ಸುಲಭ. ಜನರು ವಿಳಂಬಮಾಡುವ ಕಾರಣಗಳು ಅಂಜಿಕೆ ಶೇ. 75, ಅಜ್ಞಾನ ಶೇ.20, ಇತರ ಕಾರಣಗಳು ಶೇ.5.

**ಏಡಿಗಂತಿಯ ಗುಣಕಾರಕ ವೇಗಗಳು**

| ಅಂಗ | ಶೀಘ್ರ ಚಿಕಿತ್ಸೆ (%) | ವಿಳಂಬಿತ ಚಿಕಿತ್ಸೆ (%) |
|---|---|---|
| ದನಿನಾಳ | 75 | 5 |
| ತುಟಿ | 85 | 15 |
| ಬಾಯಿ | 60 | 5 |
| ಚರ್ಮ | 90 | 30 |
| ತರಡು (ಬೀಜ) | 75 | 15 |
| ಗರ್ಭಕಂಠ | 70 | 10 |
| ಮೂತ್ರಕೋಶ | 50 | 15 |
| ಸ್ತನ | 70/75 | 10 |

**ಏಡಿಗಂತಿಯ ಚಿಕಿತ್ಸೆ:** ಏಡಿಗಂತಿ ನಿರ್ಮೂಲಕ್ಕೆ ಶಸ್ತ್ರವೈದ್ಯ ಹಾಗೂ ವಿಕಿರಣ ರೋಗ ಚಿಕಿತ್ಸೆ (ರೇಡಿಯೋತೆರಪಿ) ನೆರವಾಗುತ್ತವೆ. ಇವೆರಡನ್ನೂ ಬೇರೆ ಬೇರೆಯಾಗೋ ಇಲ್ಲವೆ ಒಟ್ಟಾಗೋ ಬಳಸಬಹುದು. ಗುಣವಾದ ಗಂತಿಯ ಶಮನ ಇವೆರಡರಿಂದಲೂ ರಾಸಾಯನಿಕ ರೋಗ ಚಿಕಿತ್ಸೆಯಿಂದಲೂ (ಕೀಮೋತೆರಪಿ) ಸಾಧ್ಯ.

**ಶಸ್ತ್ರವೈದ್ಯ:** ತಾಂತ್ರಿಕತೆಯ ಮುನ್ನಡೆ, ಏಡಿಗಂತಿ ಹೇಗೆ ಬೆಳೆಯುತ್ತದೆ ಎಂಬುದರ ಕುರಿತು ಹೆಚ್ಚಿನ ತಿಳಿವಳಿಕೆ ಅರಿವಳಿಕೆ–ಇವು ಶಸ್ತ್ರವೈದ್ಯದ ಉಪಯುಕ್ತತೆಯನ್ನು ಮೈಯಲ್ಲಿ ಏಳುವ ಎಲ್ಲ ತೆರನ ಗಂತಿಗಳಿಗೂ ಪಸರಿಸಿವೆ. ಶಸ್ತ್ರವೈದ್ಯದ ಸೂತ್ರಗಳಿವು–ಗಂತಿಯ ಬುಡಮುಟ್ಟ ಕೊಯ್ತೆಗೆತ, ಮೊದಲು ರೋಗಹತ್ತಿದ ನೇರಹರಡಿಕೆ ಪಾಲ್ಗೊಳ್ಳುವ ಪಕ್ಕಪಕ್ಕದ ಹಾಗೂ ಹಾಲುರಸ ಬಸಿವ ಊತಕಗಳನ್ನೆಲ್ಲ ಒಟ್ಟಿಗೆ ತೆಗೆಯುವುದು. ಈ ನಿರ್ಮೂಲನ ಶಸ್ತ್ರಕ್ರಿಯೆಯ ಮೊದಲ ಉತ್ಸಾಹಕ್ಕೆ ಬದುಕುಳಿವವರ ಅಂಕಿಯ ಎದ್ದುಕಾಣುವ ಹೆಚ್ಚಳದ ಆಧಾರ ಇನ್ನೂ ದೊರತಿಲ್ಲ.

**ವಿಕಿರಣ ಚಿಕಿತ್ಸೆ:** ಕೆಲವು ಗಂತಿಗಳಿಗೆ ಇದು ಗುಣಪ್ರದ. ಏಳೆಯ ಮೇಲ್ಮೈಲಿರುವ ಸುಲಭಸಾಧ್ಯಗಳಲ್ಲಿ ಬಹು ಫಲಕಾರಿ. ಹರಡಿರುವ ಗಂತಿಗಳ ನಿರ್ವಹಣೆಗೆ (ಉದಾ : ಮೊಲೆಯಿಂದ ಮೂಳೆಗೆ ಹರಡಿಹೋದ) ಹಲವೇಳೆ ಫಲಯುಕ್ತ. ಶಸ್ತ್ರಕ್ರಿಯೆ ಆದ ಮೇಲೆ ಶಲ್ಯಕ್ಕೆ (ಸ್ಕಾಲ್ಪೆಲ್) ಸಿಗದಿರುವ ಏಡಿಗಂತಿ ಕ್ಷಣಗಳ ನಾಶಕ್ಕೆ ಫಲಪ್ರದ, ವಿಕಿರಣ ಚಿಕಿತ್ಸೆಯನ್ನು ಶಸ್ತ್ರಕ್ರಿಯೆ ಅಥವಾ ರಸಾಯನರೋಗ ಚಿಕಿತ್ಸೆಯೊಡನೆ ಸೇರಿಸಿದರೆ ಹಲವಾರು ಸಲ ಒಂದೇ ವಿಧಕ್ಕಿಂತ ಹೆಚ್ಚು ಫಲಕಾರಿ.

ಎಕ್ಸ್ ಕಿರಣಗಳು, ವಿಕಿರಣಶೀಲ ಕಿರಣಗಳು, ವಿಕಿರಣಶೀಲ ಐಸೊಟೋಪುಗಳು [ಗುರಾಣಿಕ (ಥೈರಾಯ್ಡ್) ಗ್ರಂಥಿಯ ಗಂತಿಗೆ ವಿಕಿರಣಶೀಲ ಅಯೊಡಿನ್], ಕೋಬಾಲ್ಟ್–60 ಬಳಕೆಯಲ್ಲಿವೆ. ಅತ್ಯಧಿಕ ವೋಲ್ಟ್ ಹರಿವಿನ ಕಿರಣಾವಳಿಗಳಿಂದ ಆಳದಲ್ಲಿರುವ ಗಂತಿಗಳ (ಫುಪ್ಫುಸ, ಅನ್ನನಾಳ) ಚಿಕಿತ್ಸಾಫಲದ ನಿರ್ಣಯವಿನ್ನೂ ಆಗುವುದರಲ್ಲಿದೆ. ಇವನ್ನು ಸರಿಯಾಗಿ ಬಳಸಿದರೆ, ರೋಗಿ ತಿಂಗಳು ಅಥವಾ ವರ್ಷಗಟ್ಟಲೆ ಚೈತನ್ಯಕರ, ನೋವಿಲ್ಲದ ಉಪಯುಕ್ತವಾದ ಜೀವನವನ್ನು ಸಾಗಿಸಬಹುದು.

ರಸಾಯನ ರೋಗಚಿಕಿತ್ಸೆ : ಗಂತಿಕಣಗಳ ಮೇಲೆ ಫಲಕಾರಿಯಾಗುವ ಮದ್ದು ಕಂಡುಹಿಡಿದ ಯತ್ನ ಇನ್ನೂ ಕೈಗೂಡಿಲ್ಲ. ಮುಖ್ಯವಾಗಿ ಹರಡಿದ ಗಂತಿಗಳಲ್ಲಿ ಬಿಳಿಕಣರಕ್ತೆ ಹಾಗೂ ವಿಕಿರಣತೆ ಮತ್ತು ಶಸ್ತ್ರಕ್ರಿಯೆಗಳಿಗೆ ಸಹಾಯಕವಾಗಿ ರಸಾಯನರೋಗ ಚಿಕಿತ್ಸೆಯನ್ನು ಬಳಸುತ್ತಾರೆ. ಏಡಿಗಂತಿ ಮೇಲೆ ಪ್ರಭಾವತೋರುವ ಎಷ್ಟೋ ಮದ್ದುಗಳನ್ನು ನೋಡಿದ್ದಾಗಿದೆ. ಈಗ ಬಳಕೆಯಲ್ಲಿರುವುವು : 1. ವಿಕಿರಣ ಅಣಕಗಳು (ರೇಡಿಯೋಮಿಮೆಟಿಕ್ಸ್), 2. ಜೀವವಸ್ತು ರೋಧಕಗಳು (ಆಂಟಿಮೆಟಬೊಲೈಟ್ಸ್), 3. ಜೀವಿವಿರೋಧಕಗಳು (ಆಂಟಿಬಯೋಟಿಕ್ಸ್), 4. ಚೋದನಿಕಗಳು, 5. ಆಲ್ಕಲಾಯಿಡ್ಸ್.

ಭವಿಷ್ಯ ಸೂಚಿ : ಅನುದಿನ ಸತತ ಸುಧಾರಣೆಯಾಗುತ್ತಿರುವ ಚಿಕಿತ್ಸಾವಿಧಾನಗಳು, ಬಹುಕಾಲ ಕವಿದಿದ್ದ ಕಾರ್ಗತ್ತಲಿನ ಮೇಲೆ, ಬೆಳಕು ಹರಿಸಿ ಆಶಾದಾಯಕ ಗಂತಿಚಿಕಿತ್ಸೆಗೆ ಭರವಸೆಯನ್ನೀಯುತ್ತಿವೆ. (ಜಿ.ಟಿ.ಪಿ.)

**ಏಡಿ ನೆಬ್ಯುಲ:** ವೃಷಭರಾಶಿಯ ಹಿನ್ನೆಲೆಯಲ್ಲಿ ದೂರದರ್ಶಕದ ಸಹಾಯದಿಂದ ಕಾಣಸಿಗುವ ಒಂದು ಅನಿಯತ (ಇರ್‍ಗ್ಯುಲರ್) ನೆಬ್ಯುಲ (ಕ್ರ್ಯಾಬ್ ನೆಬ್ಯುಲ). ಮೊದಲಿಗೆ ಐರ್ಲೆಂಡಿನ ಲಾರ್ಡ್ ರಾಸ್ (1800–1867) ಎಂಬ ಖಗೋಳವಿಜ್ಞಾನಿ ಇದನ್ನು ಪರಿಶೀಲಿಸಿ (1848) ಇದು ವೃತ್ತಾಕಾರದಲ್ಲಿ ಆವರ್ತಿಸುತ್ತಿದೆ, ಇದರ ಮೇಲ್ಮೈಯಿಂದ ಹೊರಹೊಮ್ಮುವ ಅನಿಲಗಳು ಏಡಿಯ ಕಾಲುಗಳಂತಿವೆ, ಇದು ದಿನೇ ದಿನೇ ಹಿಗ್ಗುತ್ತಿದೆ ಎಂದು ತಿಳಿಸಿದ. ಇದಕ್ಕೆ ಕ್ರ್ಯಾಬ್ (ಎಂದರೆ ಏಡಿ) ನೆಬ್ಯುಲ ಎಂದು ಹೆಸರಿತ್ತವನು ಇವನೇ. ಹಳೆಯ ಚೀನೀ ವರದಿಗಳ ಪ್ರಕಾರ 1054ರ ಜುಲೈ 4 ರಂದು ಒಂದು ಅಪೂರ್ವ ನಕ್ಷತ್ರ ವೃಷಭರಾಶಿಯಲ್ಲಿ ಕಾಣಿಸಿಕೊಂಡು, ಸುಮಾರು ಒಂದು ವರ್ಷದ ಅನಂತರ ಕ್ರಮೇಣ ಕಾಣದಾಯಿತು. ಚೀನೀ ವಿದ್ವಾಂಸರು ಸೂಚಿಸಿದ ಈ ಸ್ಥಳದಲ್ಲಿ

ಏಡಿ ನೆಬ್ಯುಲ ಇರುವುದು ಸ್ಥಿರಪಟ್ಟಿದೆ. ಈ ನಕ್ಷತ್ರ ನೋವ ಅಥವಾ ಮಹಾನೋವ ಆಗಿ ಅಸ್ಫೋಟಿಸಿರಬೇಕು, ಆಗಿನ ಇದರ ಕಾಂತಿವರ್ಗ–16 ಇದ್ದಿರಬೇಕೆಂದು ಊಹಿಸಲಾಯಿತು. ಇದರ ಅವಶೇಷವೇ ಈ ಏಡಿನೆಬ್ಯುಲ ಎಂದು ತೀರ್ಮಾನಿಸಿದ್ದಾರೆ. ಕೇಂಬ್ರಿಜ್ ವಿಶ್ವ ವಿದ್ಯಾನಿಲಯದ ವಿಜ್ಞಾನಿ ಫ್ರೆಡ್ ಹಾಯ್ಲ್‌ನ ಗಣನೆಯಂತೆ ಇದು 1045ರಲ್ಲಿ ಸ್ಫೋಟಗೊಂಡು ಮಹಾನೋವ ಆಗಿರಬಹುದು. ಇದರ ಛಾಯಾಚಿತ್ರಗಳ ಅಧ್ಯಯನ ಮತ್ತು ಧ್ರುವೀಕರಣ ಅಳತೆಗಳಿಂದಾಗಿ ಈ ನೆಬ್ಯುಲದ ಒಳ ಭಾಗದಲ್ಲಿ ಕಾಂತಕ್ಷೇತ್ರವಿದೆ ಎಂಬುದು ತಿಳಿದುಬಂದಿದೆ. ಏಡಿನೆಬ್ಯುಲ ಒಂದು ಎಕ್ಸ್‌ಕಿರಣಾಕರವೂ ಹೌದು (ನೋಡಿ–ಎಕ್ಸ್‌ಕಿರಣ–ಖಗೋಳಶಾಸ್ತ್ರ). ಸೂರ್ಯನಿಂದ ಏಡಿನೆಬ್ಯುಲದ ದೂರ ಸು. 6,000 ಜ್ಯೋತಿರ್ವರ್ಷಗಳೆಂದು ಅಂದಾಜು ಮಾಡಲಾಗಿದೆ. ನೆಬ್ಯುಲದ ವ್ಯಾಸ ಸುಮಾರು 3 ಜ್ಯೋತಿರ್ವರ್ಷಗಳು. ನೋಡುವ ದಿಕ್ಕಿನ ನೇರಕ್ಕೆ ಲಂಬವಾಗಿ ಸೆಕೆಂಡಿಗೆ ಸುಮಾರು 1,300 ಕಿಮೀಗಳ ದೂರದಲ್ಲಿ ಇದು ಹಿಗ್ಗುತ್ತಿದೆ. ಏಡಿ ನೆಬ್ಯುಲದ ದ್ರವ್ಯರಾಶಿ ಸೂರ್ಯನ ದ್ರವ್ಯರಾಶಿಯ ಶೇ.10 ರಷ್ಟು ಇದೆ. ಭೂಮಿಯ ಮೇಲೆ ಕಾಣಬರುವ ವಿಶ್ವ ಕಿರಣಗಳ ಆಕರ–ಈ ಏಡಿ ನೆಬ್ಯುಲ ಎಂಬುದು ಕೆಲವು ವಿಜ್ಞಾನಿಗಳ ಮತ. *

**ಏಡ್ರಿಯಾಟಿಕ್ ಕಡಲು:** ಮೆಡಿಟರೇನಿಯನ್ ಸಮುದ್ರದ ಒಂದು ಕವಲು. ಇಟಲಿ, ಬಾಲ್ಕನ್ ಪರ್ಯಾಯದ್ವೀಪ–ಇವುಗಳ ನಡುವೆ ಇದೆ. ಉತ್ತರ ಅಕ್ಷಾಂಶ $40^0$ ಯಿಂದ $45^0$ 41' ವರೆಗೆ–800 ಕಿಮೀ ಉದ್ದಕ್ಕೆ–ಹಬ್ಬಿದೆ. ಇದರ ಅಗಲ 72ರಿಂದ 225 ಕಿಮೀ (ಸರಾಸರಿ 175 ಕಿಮೀ) ವಿಸ್ತೀರ್ಣ ಸುಮಾರು 60,000 ಚ. ಮೈ. ಇಡೀ ಮೆಡಿಟರೇನಿಯನಿನಲ್ಲಿ ಇದು ಅತ್ಯಂತ ಕಿರಿ ಆಳದ ಜಲಪ್ರದೇಶ. ಉತ್ತರಾರ್ಧದಲ್ಲಿ ಇದರ ಆಳ ಇನ್ನೂ ಕಡಿಮೆಯಾಗುತ್ತ ಹೋಗುತ್ತವೆ. ಈ ಕಡಲಿನ ಅತಿ ಹೆಚ್ಚಿನ ಆಳವೆಂದರೆ 1220 ಮೀ ಇದರ ನೀರಿನ ಲವಣತ್ವ ಪ್ರತಿ ಸಾವಿರಕ್ಕೆ 18ರಿಂದ 35ರವರೆಗೆ ವ್ಯತ್ಯಾಸವಾಗುತ್ತದೆ.

ರೋಮನ್ನರ ಕಾಲದಲ್ಲಿ ಈ ಕಡಲ ದಂಡೆಯ ಏಡ್ರಿಯ ಎಂಬ ಬಂದರು ಬಲು ಪ್ರಸಿದ್ಧವಾಗಿತ್ತು. ಅದರಿಂದಲೇ ಈ ಕಡಲಿಗೆ ಏಡ್ರಿಯಾಟಿಕ್ ಎಂಬ ಹೆಸರು ಬಂದಿದೆ. ಈ ಬಂದರು ಕಡಲಂಚಿನಿಂದ ಒಳನಾಡಿನಲ್ಲಿ 22.5 ಮೀ ದೂರದಲ್ಲಿದೆ. ಆಲ್ಪ್ಸ್ ಮತ್ತು ಅಪೆನ್ನೈನ್ ಪರ್ವತಗಳಿಂದ ಹರಿದು ಬಂದು ಈ ಕಡಲನ್ನು ಸೇರುವ ನದಿಗಳು ಸತತವಾಗಿ ಮಣ್ಣನ್ನು ತಂದು ಇದರಲ್ಲಿ ತುಂಬುತ್ತಲೇ ಇರುವುದರಿಂದ ಈ ನದಿಗಳ ಮುಖಜಭೂಮಿ ಸಮುದ್ರದ ಕಡೆಗೆ ಇಂದಿಗೂ ಬೆಳೆಯುತ್ತಲೇ ಇದೆ. ಕೆಲವು ಕಡೆಗಳಲ್ಲಿ ವರ್ಷಕ್ಕೆ 9 ಮೀಗಳಂತೆ ಸಮುದ್ರ ಹಿಂದೆ ಸರಿಯುತ್ತಿದೆ.

ಏಡ್ರಿಯಾಟಿಕಿನಲ್ಲಿ ಸ್ಥೂಲವಾಗಿ ಮೆಡಿಟರೇನಿಯನ್ ವಾಯುಗುಣವಿದೆಯೆನ್ನಬಹುದಾದರೂ ಇದರ ಉತ್ತರದ ಕಡೆಯಲ್ಲಿ ಖಂಡಾಂತರ ವಾಯುಗುಣದ ಲಕ್ಷಣಗಳೂ ಉಂಟು. ಈ ಕಡಲಿನ ಇಟಲಿಯ ಕಡೆಯ ದಂಡೆಗೂ ಬಾಲ್ಕನ್ ದಂಡೆಗೂ ನಡುವೆ ಹಲವು ವ್ಯತ್ಯಾಸಗಳನ್ನು ಕಾಣಬಹುದು. ಇಟಾಲಿಯನ್ ಕರಾವಳಿ ಹೆಚ್ಚು ನೇರ; ಇಲ್ಲಿ ಜೌಗು ಸಾಮಾನ್ಯ. ಬಾಲ್ಕನ್ ತೀರ ಅಂಕುಡೊಂಕು; ಕಡಿದು, ಬಂಡೆಮಯ. ಇಟಲಿಯ ಕಡೆಯಲ್ಲಿ ನೈಸರ್ಗಿಕ ಬಂದರು ಇಲ್ಲವೇ ಇಲ್ಲವೆನ್ನಬಹುದು. ಇಟಲಿಯ ತೀರದ ನಡುಗಡ್ಡೆಯಲ್ಲಿ, ಸುಣ್ಣಕಲ್ಲಿನ ಬಂಡೆಯ ಭೂಶಿರದ ರಕ್ಷೆಯಲ್ಲಿರುವ ಆಂಕೋನ ಬಂದರಿನಿಂದಾಚೆಗೆ ಮತ್ತೆ ಈ ಬಗೆಯ ಬಂಡೆಗಲ್ಲಿನ ತೀರ ಸಿಕ್ಕುವುದು ಟ್ರಿಯೆಸ್ಟೆ ಬಂದರಿನ ಬಳಿಯಲ್ಲೆ.

ಈ ಕಡಲಿನ ಇಟಾಲಿಯನ್ ತೀರದಲ್ಲಿ ಒಳ್ಳೆಯ ಬಂದರುಗಳೂ ಇದರ ತೀರಪ್ರದೇಶದಿಂದ ಒಳನಾಡಿಗೆ ನೈಸರ್ಗಿಕ ಭೂಮಾರ್ಗಗಳೂ ಇಲ್ಲವಾದರೂ ಈ ಕಡಲು ಮಧ್ಯ ಯುರೋಪಿನ ವಕ್ಷಸ್ಥಲದವರೆಗೂ ಚಾಚಿ ನಿಂತಿರುವುದರಿಂದ ಇದರ ಪ್ರಾಮುಖ್ಯ ಬಹಳ ಹೆಚ್ಚು. ಇದು ಐರೋಪ್ಯ ವ್ಯಾಪಾರದ ರಾಜಮಾರ್ಗ. ರೋಮನರ ಕಾಲದಿಂದಲೂ ಇಲ್ಲಿನ ಹಲವು ಬಂದರುಗಳು ವ್ಯಾಪಾರ ಕೇಂದ್ರಗಳಾಗಿವೆ. ವೆನಿಸಿನ ಬೆಳವಣಿಗೆಯಾದಾಗ ಏಡ್ರಿಯಾಟಿಕ್ ಮಾರ್ಗಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಬಂತು. ಸೂಯೆಜ್ ಕಾಲುವೆಯ ನಿರ್ಮಾಣದಿಂದ ವೆನಿಸ್ ಟ್ರಿಯೆಸ್ಟೆಗಳ ವ್ಯಾಪಾರ ಹೆಚ್ಚಿತು. ಇಂದು ಇವೆರಡು ಬಂದರುಗಳ ಪೈಕಿ ಟ್ರಿಯೆಸ್ಟೆಯದು ಸಿಂಹಪಾಲು. ಲಂಬರ್ಡಿ ಮೈದಾನದ ಆಯಾತ–ನಿರ್ಯಾತಗಳಿಗೆ ವೆನಿಸ್ ಇಂದಿಗೂ ಹೆಬ್ಬಾಗಿಲು. ಈ ಎರಡರ ಜೊತೆಗೆ ಆಂಕೋನ, ಬ್ರಿಂಡಿಸಿ, ರಿಯೆಕ ಮತ್ತು ಡೂಬ್ರೊವ್‌ನಿಕ್ ಬಂದರುಗಳೂ ಈ ಕಡಲ ಮಾರ್ಗದ ವ್ಯಾಪಾರದಲ್ಲಿ ಪಾಲ್ಗೊಂಡಿವೆ. ಏಡ್ರಿಯಾಟಿಕಿನ ಪೂರ್ವ ಪಶ್ಚಿಮ ದಂಡೆಗಳ ಜನರಿಗೆ ಮೀನುಗಾರಿಕೆ ಒಂದು ಮುಖ್ಯ ಕಸಬು. (ಎಂ.ಎ.ಎಚ್.)

**ಏಣಗಿಬಾಳಪ್ಪ:** 1916–. ರಂಗಭೂಮಿಯ ಪ್ರಸಿದ್ಧ ನಟರು. ಸವದತ್ತಿ ತಾಲ್ಲೂಕಿನ ಏಣಗಿಯಲ್ಲಿ ಬಡಕುಟುಂಬ ಒಂದರಲ್ಲಿ ಜನಿಸಿದ ಇವರು ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಪೋಷಣೆಯಲ್ಲಿ ಬೆಳೆದರು. ಇವರಿಗೆ ಬಂದೊದಗಿದ ಕಷ್ಟದಿಂದ ಶಾಲಾಶಿಕ್ಷಣ ಪ್ರಾಥಮಿಕ ಮೂರನೆಯ ತರಗತಿಯವರೆಗೆ ಮಾತ್ರ ದೊರಕಿತು. ಚಿಕ್ಕಂದಿನಿಂದಲೂ ಇವರಿಗೆ ಬಯಲಾಟ, ಸಂಗೀತ ಎಂದರೆ ಬಹಳ ಆಸಕ್ತಿ. ಐದಾರು ವರ್ಷದ ಹುಡುಗನಾಗಿದ್ದಾಗ ಬಯಲಾಟಗಳಲ್ಲಿ ಚಿಕ್ಕಪಾತ್ರಗಳನ್ನುಅಭಿನಯಿಸಿ ಜನರ ಪ್ರಶಂಸೆ ಪಡೆದರು. ಹನ್ನೊಂದು ವರ್ಷದ ಹುಡುಗನಾಗಿದ್ದಾಗ ಗರೂಡ ಸದಾಶಿವರಾಯರ ಪಾದುಕಾಪಟ್ಟಾಭಿಷೇಕ ನಾಟಕದಲ್ಲಿ ಭರತನ ಪಾತ್ರವಹಿಸುವ ಅವಕಾಶ ಒದಗಿಬಂತು. ಆ ನಾಟಕದಲ್ಲಿ ಇವರ ಪಾತ್ರ ಯಶಸ್ವಿಯಾಯಿತು.

ಇವರು ತಮ್ಮ ಮುಂದಿನ ಜೀವನದಲ್ಲಿ ಸಾಕಷ್ಟು ಬಡತನ ಎಡರು ತೊಡರುಗಳನ್ನು ಅನುಭವಿಸಿದರು. ಆ ಸಮಯದಲ್ಲಿ ಕವಿ ಹಾಗೂ ನಾಟಕಕಾರರಾದ ಶಿವಲಿಂಗಸ್ವಾಮಿಗಳು ಇವರ ಹಿತಚಿಂತಕರೂ ಮಾರ್ಗದರ್ಶಿಯೂ ಆಗಿದ್ದರು. ಅಬ್ಬಿಗೇರಿ ಬಂಧುಗಳಿಂದ ಆರಂಭವಾದ ಅಬ್ಬಿಗೇರಿ ನಾಟಕ ಸಂಘವನ್ನು ಇವರು 1926ರಲ್ಲಿ ಪ್ರವೇಶಿಸಿದರು. ಇದರೊಂದಿಗೆ ಇವರ ಕಲಾಜೀವನ ಆರಂಭವಾಯಿತು. ಆಗ ಇವರು ಅಭಿನಯಿಸಿದ ಕಿತ್ತೂರ ಚೆನ್ನಮ್ಮ ನಾಟಕ ಕರ್ನಾಟಕದಲ್ಲಿ ರಾಷ್ಟ್ರೀಯ ಇತಿಹಾಸವನ್ನು ನಿರ್ಮಿಸಿತು.

ಅನಂತರ 1928ರಲ್ಲಿ ಮೈಲಾರೀ ಪ್ರಾಸಾದಿತ ಸಂಗೀತ ನಾಟಕ ಮಂಡಳಿಯನ್ನು ಪ್ರವೇಶಿಸಿದರು. 1932ರಲ್ಲಿ ಹುಚ್ಚಪ್ಪ ಸೂಡಿ ಎಂಬ ಸ್ನೇಹಿತರ ಸಹಕಾರದೊಂದಿಗೆ ಗುರುಸೇವಾ ಸಂಗೀತ ನಾಟಕ ಮಂಡಳಿಯನ್ನು ಕಟ್ಟಿದರು.

ಇವರು ಮುಖ್ಯವಾಗಿ ಸ್ತ್ರೀಪಾತ್ರಗಳನ್ನು ಹಾಕಿ ವಿವಿಧ ಕಂಪೆನಿಗಳಲ್ಲಿ ಆ ಮೂಲಕ ತಮ್ಮ ರಂಗ ಸೇವೆಯನ್ನು ಸಲ್ಲಿಸಿದ್ದಾರೆ. ಮಾರಿಕಾಂಬಾ ಪ್ರಾಸಾದಿಕ ನಾಟಕ ಮಂಡಳಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಮತ್ತು ಕಿತ್ತೂರು ರುದ್ರಮ್ಮ ಈ ಎರಡೂ ನಾಟಕಗಳಲ್ಲಿ ಇವರು ವಹಿಸುತ್ತಿದ್ದ ನಾಯಕಿಯ ಪಾತ್ರಗಳು ತುಂಬ ಜನಪ್ರಿಯವಾದವು. ಮುಂದೆ ಇವರು ಪುರುಷ ಪಾತ್ರಗಳನ್ನು ಹಾಕಿ ಪ್ರಖ್ಯಾತಿ ಪಡೆದರು.



ಕೆಲವು ಕಾಲಾನಂತರ ಇವರು ಕಲಾವೈಭವ ನಾಟಕ ಮಂಡಳಿ ಎಂಬ ಸ್ವಂತ ಕಂಪೆನಿಯನ್ನು ಪ್ರಾರಂಭಿಸಿದರು. ಈ ಮಂಡಳಿಯ ನೇತಾರರಾಗಿ ಅವಿಶ್ರಾಂತವಾಗಿ ರಂಗಭೂಮಿಯ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಕರುಣ ವೀರ ಹಾಸ್ಯರಸಗಳನ್ನು ಅಭಿವ್ಯಕ್ತಪಡಿಸುವಲ್ಲಿ ಶ್ರೀಯುತರು ತೋರುವ ಅಭಿನಯ, ಕಲೆಗಾರಿಕೆ ಮೆಚ್ಚುವಂಥದ್ದು. ಕರ್ನಾಟಕದ ರಂಗಭೂಮಿಯಲ್ಲಿ ಹವ್ಯಾಸಿ ಹಾಗೂ ವೃತ್ತಿರಂಗಗಳಿಗಿರುವ ಅಂತರವನ್ನು ತೊಡೆದುಹಾಕಬೇಕೆಂಬುದು ಇವರ ಮುಖ್ಯೋದ್ದೇಶ ವಾಗಿದೆ. ಇವರ ಮಾವ ಬಂದನಪೋ ಮಾವ ಎಂಬ ಸಾಮಾಜಿಕ ವಿಡಂಬನೆ ಈ ನಿಟ್ಟಿನಲ್ಲಿ ಒಂದು ಹೊಸ ಪ್ರಯೋಗ. ಇವರು ಬೆಳ್ಳಿತೆರೆಯಲ್ಲೂ ಅಭಿನಯಿಸಿದ್ದಾರೆ. ಇವರ ಅಭಿನಯ ಚಾತುರ್ಯವನ್ನು ಮೆಚ್ಚಿ ಕರ್ನಾಟಕ ಸರ್ಕಾರ ಪ್ರತಿಷ್ಠಿವಿತ ಗುಬ್ಬಿ ವೀರಣ್ಣ ಪ್ರಶಸ್ತಿ ನೀಡಿ ಗೌರವಿಸಿದೆ (1994). ನಾಟ್ಯ ಭೂಷಣ ಅಭಿನಂದನಾ ಎಂಬ ಗ್ರಂಥವನ್ನು ಇವರಿಗೆ ಸಮರ್ಪಿಸಲಾಗಿದೆ (1998). ಪ್ರಸಿದ್ಧ ನಟ ಏಣಗಿ ನಟರಾಜ್ ಇವರ ಮಗ. (ಎನ್.ಕೆ.ಕೆ.)

**ಏಣುಗಳು:** ಪಕ್ಷೀಕೃತ ಪರ್ವತಗಳಲ್ಲಿನ ನೆರಿಗೆಗಳಲ್ಲಿರುವ ಗಟ್ಟಿಯಾದ ಶಿಲೆಗಳ ಮೇಲಿನ ಮೃದು ಶಿಲೆಗಳು ಹರಿಯುವ ನೀರಿನಿಂದ ಸವೆದು ನಶಿಸಿ ಹೋಗಲಾಗಿ ಉಳಿದು ತೋರುವ ಚೂಪಾದ ಶಿಖರವುಳ್ಳ ಬೆಟ್ಟದ ಬೆನ್ನೇರುಗಳು (ಹಾಗ್ ಬ್ಯಾಕ್ಸ್). ಅವುಗಳ ಒಂದು ಬದಿಯಲ್ಲಿ ವಾಲಿದ ಮುಖವೂ ಇನ್ನೊಂದು ಬದಿಯಲ್ಲಿ ಗಟ್ಟಿಯಾದ ಶಿಲೆಗಳಿಂದ ಭದ್ರವಾಗಿರಿಸಲ್ಪಟ್ಟ ಇಳಿಜಾರು ಭಾಗವೂ ಗೋಚರಿಸುತ್ತವೆ. ವಾಲಿಕೊಂಡ



ಉತ್ತರ ಅಮೆರಿಕದ ಐರನ್ ಪರ್ವತಗಳಲ್ಲಿನ ಏಣುಗಳು

ಜಲಜಶಿಲೆಗಳಿಂದ ರಚಿತವಾದ ಎಲ್ಲ ಪಕ್ಷೀಕೃತ ಪರ್ವತಗಳ ಪಾರ್ಶ್ವಗಳಲ್ಲೂ ಏಣುಗಳನ್ನು ಕಾಣಬಹುದು. ಅಪಲೇಷಿಯನ್ ಮತ್ತು ರಾಕಿ ಪರ್ವತಗಳ ಅನೇಕ ಬೆಟ್ಟದ ಸಾಲುಗಳು ಏಣುಗಳಿಂದೊಡಗೂಡಿವೆ. ಪಶ್ಚಿಮ ಕೊಲರ್‍ಯಾಡೊ ಮೇಲಿರುವಂತೆ ಏಣುಗಳೇ ಬೇರೆಯಾಗಿ ಕಾಣುವ ದೃಶ್ಯಗಳು ಮಾತ್ರ ತೀರ ವಿರಳ. ಶುಷ್ಕ ಹವಾಮಾನದ ಪ್ರದೇಶದಲ್ಲಿ ಸವೆತದ ಮೂಲಕ ಶಿಥಿಲಗೊಳ್ಳುವ ಕಾರ್ಯ ನಿಧಾನವಾದುದರಿಂದಲೂ ಕಾಡುಗಳ ಅಭಾವದಿಂದಲೂ ಏಣುಗಳು ಅತ್ಯಂತ ಸ್ಫುಟವಾಗಿ ತೋರಿಬರುತ್ತವೆ.

ಭಾರತದಲ್ಲಿ ಸಿವಾಲಿಕ್ ಗುಡ್ಡಗಳ ಮುಂದುಗಡೆಯ ಶ್ರೇಣಿಯೂ ಅದಕ್ಕೂ ಹೆಚ್ಚಾಗಿ ಕಿರಿ ಹಿಮಾಲಯದ (ಹಿಮಾಚಲ) ಗುಡ್ಡಗಳೂ ಪೂರ್ವದ ಬರೈಲ್ ಗುಡ್ಡಗಳೂ ಕಾಶ್ಮೀರದ ಪೀರ್ ಪಂಜಲ್ ಶ್ರೇಣಿಯೂ ಏಣುಗಳ ದೃಶ್ಯಗಳಿಂದ ಕೂಡಿವೆ. (ಎಂ.ವಿ.)

**ಏತ:** ನೀರಿನ ಮಟ್ಟ ನೆಲಮಟ್ಟಕ್ಕೆ ಆದಷ್ಟು ಸಮೀಪವಿರುವ ಬಾವಿ, ಹೊಳೆ ಮುಂತಾದ ಮೂಲಗಳಿಂದ ನೀರನ್ನೆತ್ತಿ ಪಕ್ಕದ ಹೊಲಗಳಿಗೆ ಮೊಗೆಯುವ ಒಂದು ಸಾಧನ. ಎತ್ತಬೇಕಾದ ಎತ್ತರ 30 ಮೀಗಳಿಗಿಂತ ಕಡಿಮೆಯಿದ್ದರೆ ಮಾತ್ರ ಏತ ಉಪಯುಕ್ತ. ಏತಗಳಲ್ಲಿ ಎರಡು ವಿಧ– ಮನುಷ್ಯಚಾಲಿತ ಮತ್ತು ಪಶುಚಾಲಿತ. ಮೊದಲಿನದರಲ್ಲಿ ಬಾನೆ(ನೀರನ್ನು ತುಂಬುವ ಸಾಧನ)ಯನ್ನು ಕೆಳಗಿಳಿಸುವ ಮತ್ತು ಮೇಲೆತ್ತುವ ಕೆಲಸಗಳನ್ನು ಮನುಷ್ಯನೇ ಮಾಡಿದರೆ, ಎರಡನೆಯ ವಿಧದಲ್ಲಿ ಪಶುಗಳು ಈ ಕೆಲಸ ಮಾಡುತ್ತವೆ. ಮನುಷ್ಯ ಪಶುಗಳ ಚಲನೆಯನ್ನು ನಿಯಂತ್ರಿಸುತ್ತಾನೆ.

**ಮನುಷ್ಯ ಚಾಲಿತ ಏತ:** ಇದನ್ನು ಕೆಲವೆಡೆ **'ಡೆಂಕ್ಲಿ'** ಎನ್ನುತ್ತಾರೆ. ಸಾಮಾನ್ಯವಾಗಿ ನೀರಿನ ಮಟ್ಟ ನೆಲಮಟ್ಟದಿಂದ 15 ಮೀಟರುಗಳಿಗಿಂತ ಕಡಿಮೆ ಇರುವ ಬಾವಿ ಅಥವಾ ಕೆರೆಗಳಿಂದ ನೀರನ್ನೆತ್ತಿ ಸಣ್ಣ ಮಟ್ಟ ಹೊಲಗಳಿಗೆ ಪೂರೈಸಲು ಇದು ಉಪಯುಕ್ತ. ಇಂಥ ಏತದ ಚಿತ್ರ ಇಲ್ಲಿದೆ. ಬಾವಿಯ ಪಕ್ಕದಲ್ಲಿ ನೇರವಾದ ಒಂದು ಕಂಬ ನೆಟ್ಟು,



ಮನುಷ್ಯಚಾಲಿತ ಏತ – ಚಿತ್ರ

ಅದರ ತುದಿಗೆ ಮೇಲೆ, ಕೆಳಗೆ ಓಲಾಡುವ ಒಂದು ಬಲವಾದ ಸನ್ನೆಕೋಲನ್ನಿರಿಸುತ್ತಾರೆ. ಕೋಲಿನ ಅರ್ಧಭಾಗ ಬಾವಿಯ ಒಳಕ್ಕೆ ಇನ್ನರ್ಧಭಾಗ ಬಾವಿಯಿಂದ ಹೊರಕ್ಕೆ ಚಾಚಿರುತ್ತದೆ. ಬಾವಿಯೊಳಕ್ಕೆ ಚಾಚಿರುವ ಅರ್ಧಭಾಗದ ತುದಿಗೆ ಒಂದು ಹಗ್ಗ ಕಟ್ಟಿ ಬಾನೆಯನ್ನು ಇದರ ತುದಿಗೆ ಕಟ್ಟಲಾಗುವುದು. ಸನ್ನೆಕೋಲಿನ ಇನ್ನೊಂದು ತುದಿಯಲ್ಲಿ ಸಮಭಾರದ ಒಂದು ಕಲ್ಲನ್ನು ಪ್ರತಿಭಾರವಾಗಿ ಕಟ್ಟಿರುತ್ತಾರೆ. ಬಾನೆಯನ್ನು ನೀರಿನಲ್ಲಿ ಮುಳುಗಿಸಲು ಅದಕ್ಕೆ ಆಧಾರವಾದ ಹಗ್ಗವನ್ನು ಕೆಲಸಗಾರ ಕೆಳಗಿಳಿಸುತ್ತಾನೆ. ಅದರಲ್ಲಿ ನೀರು ಪೂರ್ತಿಯಾಗಿ ತುಂಬಿದ ಬಳಿಕ ಬಾನೆಯನ್ನು ನೇರವಾಗಿ ಮೇಲೆತ್ತುತ್ತಾನೆ. ಸನ್ನೆಕೋಲಿನ ಇನ್ನೊಂದು ಕೊನೆಗೆ ಪ್ರತಿಭಾರವಿರುವುದರಿಂದ ಬಾನೆ ಮನುಷ್ಯ ಶಕ್ತಿಯ ಸಹಾಯವಿಲ್ಲದೆ ಮೇಲೇರುತ್ತದೆ. ಖಾಲಿ ಬಾನೆಯನ್ನು ಕೆಳಗಿಳಿಸಲು ಮಾತ್ರ ಆತ ಅಲ್ಪಶಕ್ತಿಯನ್ನು ಉಪಯೋಗಿಸಿದರೆ ಸಾಕು. ಮೇಲೇರುವ ಬಾನೆ ಬಾವಿಯ ಅಂಚಿಗೆ ತಗುಲಿ ನೀರು ಚೆಲ್ಲದಂತೆ ಎಚ್ಚರವಹಿಸಬೇಕು.

**ಪಶುಚಾಲಿತ ಏತ:** ಇದನ್ನು ಬಳಸಿ ನೆಲದಿಂದ ಸುಮಾರು 30 ಮೀನಷ್ಟು ಆಳದಲ್ಲಿರುವ ನೀರನ್ನು ಮೇಲೆತ್ತಬಹುದು. ಇಂಥ ಬಾವಿಗಳಿಗೆ ಕಪಿಲೆ ಬಾವಿಗಳೆಂದು ಹೆಸರು. ಚಿತ್ರದಲ್ಲಿ ಒಂದು ಪಶುಚಾಲಿತ ಏತವನ್ನು ತೋರಿಸಿದೆ. ಇದರಲ್ಲಿ ನೀರನ್ನು ತುಂಬಿ ಮೇಲೆತ್ತಲು ಒಂದು ದೊಡ್ಡ ಚರ್ಮದ ಚೀಲ ಅಗತ್ಯ. ಚೀಲದ ಒಂದು ತುದಿಯಲ್ಲಿ ದೊಡ್ಡದಾದ ಒಂದು ರಂಧ್ರ ಇನ್ನೊಂದು ತುದಿಯಲ್ಲಿ ಒಂದು ಸಣ್ಣ ರಂಧ್ರ ಇವೆ. ಉದ್ದವಾದ ಹಗ್ಗದ ಒಂದು ತುದಿಯನ್ನು ದೊಡ್ಡ ರಂಧ್ರದ ಬಳಿ ಚೀಲಕ್ಕೆ ಕಟ್ಟಿ, ಈ ಹಗ್ಗವನ್ನು ಬಾವಿಯ ಮೇಲ್ಭಾಗದ ರಾಟೆಯ ಮೂಲಕ ಹಾಯಿಸಿ ಎತ್ತುಗಳ ನೊಗಕ್ಕೆ ಕಟ್ಟಬೇಕು. ಮತ್ತೊಂದು ಹಗ್ಗದ ಒಂದು ತುದಿಯನ್ನು ಚರ್ಮದ ಚೀಲದ ಚಿಕ್ಕ ರಂಧ್ರದ ಬಳಿ ಕಟ್ಟಿ ಅದನ್ನು ಬಾವಿಯ ಮೇಲ್ಭಾಗದ ಎರಡನೆಯ ರಾಟೆಯ ಮೂಲಕ ಹಾಯಿಸಿ ಎತ್ತುಗಳ ನೊಗಕ್ಕೆ ಕಟ್ಟಬೇಕು. ಬಾವಿಯಿಂದ ಸ್ವಲ್ಪ ದೂರದವರೆಗೆ ಎತ್ತುಗಳ ಚಲನೆಗೆ ಒಂದು ಇಳಿಜಾರಿನ ದಾರಿಯನ್ನು ಮಾಡುತ್ತಾರೆ. ನೀರನ್ನೆಳೆಯುವ ಎತ್ತುಗಳು ಇಳಿಜಾರು ದಾರಿಯಲ್ಲಿ ಮುಂದಕ್ಕೆ ಮತ್ತು ಹಿಂದಕ್ಕೆ

ಚಲಿಸುತ್ತವೆ. ಚೀಲಕ್ಕೆ ಕಟ್ಟಿದ ಹಗ್ಗಗಳು, ಎತ್ತುಗಳು ಬಾವಿಯ ಬಳಿಯಿದ್ದಾಗ ಚರ್ಮದ ಚೀಲ ಪೂರ್ತಿಯಾಗಿ ನೀರಿನಲ್ಲಿ ಮುಳುಗುವಷ್ಟು ಉದ್ದವಾಗಿರಬೇಕು. ಚೀಲದೊಳಗೆ ನೀರು ಪೂರ್ತಿಯಾಗಿ ತುಂಬಿದೊಡನೆ ಎತ್ತುಗಳು ಇಳಿಜಾರು ದಾರಿಯಲ್ಲಿ ಬಾವಿಯಿಂದ ದೂರಕ್ಕೆ ಚಲಿಸುತ್ತವೆ. ಅವು ಮುಂದಕ್ಕೆ ಚಲಿಸಿದಂತೆ ನೀರಿನಿಂದ ತುಂಬಿದ ಚೀಲ ಮೇಲೇರುತ್ತದೆ. ಆಗ ಅದರ ಎರಡೂ ರಂಧ್ರಗಳು ಚಿತ್ರದಲ್ಲಿ ತೋರಿಸಿದಂತೆ ಮೇಲಕ್ಕೆ



ಪಶುಚಾಲಿತ ಏತ

ಬರುವುದರಿಂದ ನೀರು ಚೀಲದಿಂದ ಸೋರಿಹೋಗುವುದಿಲ್ಲ. ಎತ್ತುಗಳು ಇಳಿಜಾರಿನ ಕೊನೆ ತಲುಪಿದಾಗ ಚೀಲ ಸಂಪೂರ್ಣವಾಗಿ ಬಾವಿಯಿಂದ ಮೇಲೆ ಬಂದಿರುತ್ತದೆ. ಆಗ ಚೀಲದ ಸಣ್ಣ ತೂತಿನ ಮೂಲಕ ನೀರು ಬಾವಿಯ ಅಂಚಿನ ಮೇಲಿರುವ ತೊಟ್ಟಿಗೆ ಸುರಿಯುವುದು. ಅಲ್ಲಿಂದ ನೀರನ್ನು ಹೊಲಗಳಿಗೆ ಹರಿಯಬಿಡುತ್ತಾರೆ. (ಕೆ.ಸಿ.ಜಿ.)

**ಏನ್ಸ್‌ವರ್ತ್, ವಿಲಿಯಂ ಹ್ಯಾರಿಸನ್:** 1805–82. ಇಂಗ್ಲಿಷ್ ಕಾದಂಬರಿಕಾರ. ಮ್ಯಾಂಚೆಸ್ಟರಿನ ವಕೀಲನೊಬ್ಬನ ಮಗ. ಗ್ರ್ಯಾಮರ್ ಶಾಲೆಯಲ್ಲಿ ಓದಿದ. ವಕೀಲಿಯಲ್ಲಿ ಆಸಕ್ತಿ ಇಲ್ಲದೆ ಸಾಹಿತ್ಯರಂಗಕ್ಕಿಳಿದ. ಪ್ರಕಾಶಕನೊಬ್ಬನ ಮಗಳನ್ನು ಮದುವೆಯಾಗಿ ತಾನೂ ಪ್ರಕಾಶಕನಾಗಿ 11 ತಿಂಗಳು ಕೆಲಸಮಾಡಿದ. 1834ರಲ್ಲಿ ಇವನ ಪ್ರಥಮ ಕಾದಂಬರಿ ರೂಕ್‌ವುಡ್ ಬೆಳಕಿಗೆ ಬಂತು. ಇದರಲ್ಲಿನ ಒಬ್ಬ ವ್ಯಕ್ತಿ ಡಿಕ್ ಟರ್ಪಿನ್ ಎಂಬಾತ ಯಾರ್ಕಿಗೆ ಬರುವ ದೃಶ್ಯ ಕಣ್ಣಿಗೆ ಕಟ್ಟುವಂತಿದೆ. 1881ರ ಸುಮಾರಿಗೆ ಈತನ 39 ಕೃತಿಗಳು ಪ್ರಕಾಶನಗೊಂಡಿದ್ದುವು. ಇವುಗಳಲ್ಲಿ ಅನೇಕ ಪುಸ್ತಕಗಳು ಬೆಂಟ್ಲೀಸ್ ಮಿಸಲೆನಿ, ಏನ್ಸ್‌ವರ್ತ್ ಮ್ಯಾಗಜೀನ್ ಮತ್ತು ನ್ಯೂಮಂತ್ಲಿ ಎಂಬ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು. ಇವುಗಳಲ್ಲಿ ಸಾಹಿತ್ಯ ದೃಷ್ಟಿಯಿಂದ ಪ್ರಸಿದ್ಧವಾದುವೆಂದರೆ ದಿ ಟವರ್ ಆಫ್ ಲಂಡನ್ (1840), ಗೈ ಫಾಕ್ಸ್ (1841), ಮೈಸರ್ಸ್ ಡಾಟರ್ (1842), ವಿಂಡ್ಸರ್ ಕ್ಯಾಸಲ್ (1843), ಸೇಂಟ್ ಜೇಮ್ಸ್ (1844). ಇವುಗಳೊಂದಿಗೆ ಕ್ರಿಚ್‌ಟನ್ (1837), ಓಲ್ಡ್ ಸೇಂಟ್ ಪಾಲ್ಸ್ (1841) ಮತ್ತು ಲ್ಯಾಂಕಷೈರ್ ವಿಚಸ್ (1848) ಗಳನ್ನೂ ಸೇರಿಸಬಹುದು. (ಎಚ್.ವಿ.ಎಸ್.)

**ಏಪಸ್:** ಖಗೋಳದ ದಕ್ಷಿಣಾರ್ಧದಲ್ಲಿರುವ ಒಂದು ನಕ್ಷತ್ರ ಪುಂಜ. ವಿಷುವದಂಶ 13 ಗಂ. 45 ಮಿ.–18 ಗಂ. 10 ಮಿ. ಘಂಟಾವೃತ್ತಾಂಶ $68^0$ ದ. – $82^0$ ದ. ಇದೊಂದು ಕ್ಷೀಣ ಪುಂಜ. ಇದಕ್ಕೆ ದೇವವಿಹಗ ಎಂದು ಹೆಸರಿದೆ. *

**ಏಪ್ರಿಲ್:** ಕ್ರಿಸ್ತವರ್ಷದ ನಾಲ್ಕನೆಯ ತಿಂಗಳು. ಈ ತಿಂಗಳಲ್ಲಿ 30 ದಿವಸಗಳಿವೆ. ರೋಮ್ ಪಟ್ಟಣದ ಸ್ಥಾಪಕ ರೋಮ್ಯುಲಸ್ ಎಂಬುವನಿಂದ ಈ ಸಂಖ್ಯೆ ವಿಧಿತವಾಯಿತೆಂದು ರೋಮನ್ ಐತಿಹ್ಯದಿಂದ ತಿಳಿದುಬರುತ್ತದೆ. ನ್ಯೂಮ ಪಾಂಪಿಲಿಯಸ್ ಎಂಬಾತ ಈ ತಿಂಗಳಿಗೆ 29 ದಿವಸಗಳನ್ನು ನಿಗದಿಪಡಿಸಿದ. ಆದರೆ ಜೂಲಿಯಸ್ ಸೀಸರ್ 30 ದಿವಸಗಳೆಂಬುದನ್ನೇ ಸ್ಥಿರೀಕರಿಸಿದ. ಇಂದಿಗೂ ಇದೇ ಸಂಖ್ಯೆ ಉಳಿದಿದೆ. ಮೂಲ ಅಲ್ಬೇನಿಯನ್ ಅಥವಾ ಲ್ಯಾಟಿನ್ ತಾರೀಖು ಪಟ್ಟಿಗಳಲ್ಲಿ ಏಪ್ರಿಲಿಗೆ 36 ದಿವಸಗಳನ್ನು ಕಾಣಿಸಿದ್ದು, ಇದನ್ನೇ ಮೊದಲನೆಯ ತಿಂಗಳೆಂದು ಗಣಿಸಲಾಗಿತ್ತು. ರೋಮನರು ಈ ತಿಂಗಳನ್ನು ಶುಕ್ರನಿಗೆ ಪವಿತ್ರವಾದ ತಿಂಗಳೆಂದು ಪರಿಗಣಿಸಿದ್ದರು. ಗ್ರೀಕ್ ಭಾಷೆಯಲ್ಲಿ ಶುಕ್ರನಿಗಿರುವ ಆಫ್ರೋಡೈಟ್ ಎಂಬ ಪದದಿಂದ ಏಪ್ರಿಲ್ ಪದ ನಿಷ್ಪನ್ನವಾಗಿದೆಯೆಂದು ತಿಳಿಯಲಾಗಿತ್ತು. ರೋಮನಿನ ಏಪ್ರಿಲಿಸ್ ಎಂಬ ಪದದಿಂದ ಏಪ್ರಿಲ್ ಆವಿರ್ಭವಿಸಿದ್ದು ತೆಗೆ, ಪ್ರಾರಂಭಿಸು ಎಂಬ ಅರ್ಥ ನೀಡುತ್ತದೆ. ಹೂ, ಗಿಡ–ಮರಗಳು ಚಿಗುರುವ ಕಾಲದ ಸೂಚಕವಾಗಿ ಈ ಹೆಸರನ್ನು ಇಟ್ಟುಕೊಂಡಿದ್ದಿರಬಹುದು. ವಸಂತಕಾಲದ ಪ್ರಾರಂಭವನ್ನು ಏಪ್ರಿಲ್ ಸೂಚಿಸುವುದು. ಇಂದಿಗೂ ಏಪ್ರಿಲ್ 21ರಂದು ರೋಮ್‌ನಗರದ ಹುಟ್ಟುಹಬ್ಬ ರೋಮಿನಲ್ಲಿ ಅತಿ ವಿಜೃಂಭಣೆಯಿಂದ ನಡೆಯುತ್ತದೆ.

ಭಾರತೀಯ ಪಂಚಾಂಗದ ಫಾಲ್ಗುಣ–ಚೈತ್ರಮಾಸಗಳು ಸಾಮಾನ್ಯವಾಗಿ ಈ ತಿಂಗಳಲ್ಲಿ ಸೇರಿಕೊಂಡಿರುತ್ತವೆ. ಸೌರಮಾನ ಯುಗಾದಿ ಸಾಮಾನ್ಯವಾಗಿ ಏಪ್ರಿಲ್ 13, 14ರಂದೇ ಬರುತ್ತದೆ. ಅಧಿಕಮಾಸ ಬಂದ ವರ್ಷದ ಮೂರನೆಯ ವರ್ಷದಲ್ಲಿ ಚಾಂದ್ರಮಾನ ಯುಗಾದಿ, ಶ್ರೀರಾಮನವಮಿ ಮುಂತಾದ ಹಬ್ಬಗಳು ಈ ತಿಂಗಳಲ್ಲೇ ಬರುತ್ತವೆ. *

**ಏಬ್ರಹಾಂ:** ಯೆಹೂದಿ ನಂಬಿಕೆಯ ಪ್ರಕಾರ ಪ್ರಾಚೀನ ಹೀಬ್ರೂ ರಾಷ್ಟ್ರದ ಸ್ಥಾಪಕ. ಏಬ್ರಹಾಂ ಎಂದರೆ ಹಲವರ ತಂದೆ ಎಂದು ಬೈಬಲಿನ ಅರ್ಥ. ಈತನನ್ನು ಏಬ್ರಾಂ ಎಂದೂ ಕರೆಯಲಾಗಿದೆ. ಈ ತಂದೆ ಮಹೋನ್ನತ–ಎಂಬುದು ಏಬ್ರಾಂ ಪದವನ್ನು ಕುರಿತ ವ್ಯಾಖ್ಯಾನ. ಐಸಾಕ್ ಇವನ ಸಂತಾನ. ಆದ್ದರಿಂದ ಈತ ಯೆಹೂದ್ಯರ ಆದ್ಯಪುರುಷ. ಇಸ್ಮಾಯೀಲ್ (ಇಷ್ಮೇಅಲ್) ಈತನ ಮಗನೇ ಆದ್ದರಿಂದ ಈತ ಅರಬ್ಬರಿಗೂ ಹಿರಿಯ.

ದಕ್ಷಿಣ ಬ್ಯಾಬಿಲೋನಿಯದ ಕಾಲ್ಡೀಸಿನ ಅರ್ ನಲ್ಲಿ ಏಬ್ರಹಾಂ ಜನಿಸಿದ. ಇವನ ತಂದೆ ಟೆರಾ; ಒಬ್ಬ ವಿಗ್ರಹಾರಾಧಕ. ಇವನ ಹೆಂಡತಿಯ ಹೆಸರು ಸಾರಾ. ಅನೇಕ ಕಡೆಗಳಲ್ಲಿ ಸಂಚರಿಸಿ ಹಾರಾನ್ ನಲ್ಲಿ ನೆಲೆಸಿದ್ದಾಗ ದೇವರು ಇವನಿಗೆ ಪ್ರತ್ಯಕ್ಷನಾದ. ಆತನ ಆಜ್ಞೆಯಂತೆ ಕ್ಯಾನಾನಿಗೆ ಹೋಗಿ ಅಲ್ಲಿ ಹೊಸ ರಾಷ್ಟ್ರ ಸ್ಥಾಪಿಸುವ ಉದ್ದೇಶದಿಂದ ತನ್ನ ಮಗ ಐಸಾಕನನ್ನೇ ಬಲಿಕೊಡಲು ಉದ್ಯುಕ್ತನಾಗಿದ್ದಾಗ ದೇವರು ಪ್ರತ್ಯಕ್ಷನಾಗಿ ಈ ಬಲಿಯನ್ನು ತಡೆದನಲ್ಲದೆ ಈತನ ದೃಢಭಕ್ತಿಗೆ ಮೆಚ್ಚಿ ಅನುಗ್ರಹಿಸಿದ. ನಿನ್ನ ವಂಶಜರಿಂದ ಎಲ್ಲ ರಾಷ್ಟ್ರಗಳೂ ಪುನೀತವಾಗಲಿ ಎಂಬುದು ದೇವರು ಈತನಿಗೆ ಕೊಟ್ಟ ವರ.

ಇಸ್ಲಾಂ ನಂಬಿಕೆಯ ಪ್ರಕಾರ ನೂಹ್ ಪ್ರವಾದಿಗಳಿಗೆ ಹಾಂ, ಸಾಂ ಮತ್ತು ಯಾಫುಸ್ ಎಂಬ ಮೂವರು ಮಕ್ಕಳಿದ್ದರು. ಏಬ್ರಹಾಂನದು ಸಾಂ ವಂಶ. ಈತನ ಅಡ್ಡ ಹೆಸರು ದೇವರ ಮಿತ್ರ. ತಂದೆ ಅಜರ್, ರಾಜನಾದ ನಮ್ರೂದನ ನೌಕರ, ಜೊತೆಗೆ ವಿಗ್ರಹ ತಯಾರಕ. ತನ್ನ ಕಾಲದಲ್ಲಿ ಒಬ್ಬ ಮಹಾವ್ಯಕ್ತಿಯ ಜನ್ಮವಾಗುವುದೆಂದೂ ಅವನಿಂದ ಅವನೂ ಅವನ ರಾಜ್ಯವೂ ನಾಶವಾಗುವುದಾಗಿಯೂ ನುಡಿದ ಭವಿಷ್ಯವಾಣಿಯಿಂದ ಕಿಡಿಯಾದ ನಮ್ರೂದ್ ದೊರೆ ಎಲ್ಲ ಎಳೆ ಮಕ್ಕಳನ್ನೂ ಕೊಲ್ಲಬೇಕೆಂದು ಆಜ್ಞಾಪಿಸಿದ. ಆದ್ದರಿಂದ ಏಬ್ರಹಾಂ ಹುಟ್ಟಿದ್ದು ಊರ ಹೊರಗಿನ ಒಂದು ಗುಹೆಯಲ್ಲಿ. ತಾಯಿ ತನ್ನ ಮಗುವನ್ನು ಅಲ್ಲೇ ಗುಟ್ಟಾಗಿ ಇಟ್ಟು ಎದೆ ಹಾಲು ಕೊಟ್ಟು ಬೆಳೆಸಿದಳು. ಏಬ್ರಹಾಂ ದೊಡ್ಡವನಾದ ಮೇಲೆ ದೊರೆಯ ಕೋಪಕ್ಕೆ ಪಾತ್ರನಾಗಿ ಅವನಿಂದ ತಪ್ಪಿಸಿಕೊಂಡು ಸಿರಿಯಕ್ಕೆ ಹೋಗಿ ಅಲ್ಲಿ ಸಾರಾಳನ್ನು ಮದುವೆಯಾಗಿ ಈಜಿಪ್ಟಿಗೆ ಹೋದ. ಸುಂದರಿ ಪತ್ನಿಯ ದೆಸೆಯಿಂದ ಬಲು ಕಷ್ಟಪಟ್ಟು ಅಲ್ಲಿಂದಲೂ ತಪ್ಪಿಸಿಕೊಂಡ. ಅಲ್ಲಿ ಈತನಿಗೆ ದಾಸಿಯಾಗಿ ದೊರಕಿದ ಹಾಜರಾಳಲ್ಲಿ ಹುಟ್ಟಿದ ಮಗುವಿನ ಹೆಸರು ಇಸ್ಮಾಯಿಲ್. ಸವತಿ ಸಾರಾಳ ಮತ್ಸರಕ್ಕೆ ತುತ್ತಾದ ದಾಸಿಯೂ ಆಕೆಯ ಪುತ್ರನೂ ದೇಶಭ್ರಷ್ಟರಾಗಿ ಮೆಕ್ಕಾಕ್ಕೆ ಬಂದರು. ಅಲ್ಲಿ ಇವರು ಬಾಯಾರಿದಾಗ ಇಸ್ಮಾಯಿಲನ ಕಾಲ ಬಳಿಯಲ್ಲೇ ನೀರಿನ ಚಿಲುಮೆ ಸಿಕ್ಕಿತೆಂದೂ ಮುಂದೆ ಏಬ್ರಹಾಮನೂ ಇಲ್ಲಿಗೆ ಬಂದು ಮಗನನ್ನು ಕೂಡಿಕೊಂಡು ಇಲ್ಲಿ ಕಾಬಾ ಕಟ್ಟಡ ಕಟ್ಟಿದನೆಂದೂ ನಂಬಿಕೆಯಿದೆ. ಮುಸ್ಲಿಮರು ಪ್ರಾರ್ಥನೆ ಮಾಡುವಾಗ ಕಾಬಾದ ಕಡೆ ಮುಖ ತಿರುಗಿಸಿಕೊಳ್ಳುತ್ತಾರೆ. ಏಬ್ರಹಾಂ ಯೆಹೂದ್ಯರ ತಂದೆಯೆಂದು ಇವರೂ ನಂಬುತ್ತಾರೆ. (ಎಸ್.ಎ.ಟಿ.ಕೆ.)

**ಏಬ್ರಹಾಂ, ಅ ಸಾಂಟಕ್ಲಾರ:** 1644–1709. ಜರ್ಮನಿಯ ಧರ್ಮಬೋಧಕ. ವಿಡಂಬನಕಾರ. ಸಾಂಟಕ್ಲಾರ ಎಂಬುದು ಕೆಥೊಲಿಕ್ ಪಂಥದ ಸನ್ಯಾಸಿಯಾಗಿ ಆತ ತೆಗೆದುಕೊಂಡ ಹೆಸರು. ಉಲ್ರಿಚ್ ಮೆಗೆರ್ಲೆ ಎಂಬುದು ಅವನ ಮೊದಲಿನ ಹೆಸರು. ದಕ್ಷಿಣ ಬೇಡೆನ್ ಪ್ರಾಂತ್ಯದ ಮೆಸ್‌ಕರ್ಚ್ ಎಂಬೆಡೆ ಹುಟ್ಟಿದ ಆತ ಕಾಲಕ್ರಮೇಣ ವಿಯನ್ನ ನಗರದಲ್ಲಿ ರಾಜಾಸ್ಥಾನದ ಬೋಧಕನಾದ (1677). ಆದರೆ ಇತರ ಬೋಧಕರಂತೆ ಆತ ಶ್ರೀಮದ್ಗಾಂಭೀರ್ಯದ ಮುಸುಕನ್ನು ಹೊದೆದವನಲ್ಲ. ಹಾಸ್ಯ ಮತ್ತು ವಿಡಂಬನೆಗಳು ಅವನಿಗೆ ಹುಟ್ಟುಗುಣಗಳಾಗಿ ಬಂದಿದ್ದುವು. 1679ರಲ್ಲಿ ವಿಯನ್ನದಲ್ಲಿ ಪ್ಲೇಗ್‌ವ್ಯಾಧಿ ಹರಡಿತು. ಆಗ ಆತ ಧರ್ಮಬೋಧನೆಯನ್ನು ಸ್ವಲ್ಪಕಾಲ ನಿಲ್ಲಿಸಬೇಕಾಯಿತು. ಹೀಗೆ ದೊರೆತ ವಿರಾಮವನ್ನು ಲೇಖನಕಾರ್ಯದಲ್ಲಿ ಕಳೆದ. ವಾಚಕರ ಆಲಸ್ಯವನ್ನು ಹೋಗಲಾಡಿಸುವ ಸಾಮರ್ಥ್ಯ ಆತನ ಬರೆಹಗಳ ಮುಖ್ಯ ಗುಣ. 1683ರಲ್ಲಿ ವಿಯನ್ನ ತುರ್ಕಿಯ ಸೇನೆಗಳ ಮುತ್ತಿಗೆಗೆ ಗುರಿಯಾದಾಗ ಅವುಫ್,

ಅವುಫ್, ಇಹ್ರ್ ಕ್ರಿಶ್ಚಿಯನ್ (ಏಳಿ, ಏಳಿ, ಕ್ರೈಸ್ತಯೋಧರೆ,) ಎಂಬ ಸ್ಫೂರ್ತಿದಾಯಕವಾದ ಲೇಖನವೊಂದನ್ನು ಬರೆದ. ಆತನ ಕೃತಿಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಜೂಡಾಸ್ ಡೆರ್ ಎರ್ಟ್ಜ್‌ಷೆಲ್ಮ್ (1686–95). ಕಥಾನಿರೂಪಣೆ ಮತ್ತು ಬೋಧನಾತ್ಮಕ ಪ್ರವಚನಗಳು ಜೊತೆ ಜೊತೆಗೆ ಬರುವ ಈ ಗ್ರಂಥ ಏಸುಕ್ರಿಸ್ತನನ್ನು ರೋಮನ್ ಅಧಿಕಾರಿಗಳಿಗೆ ತೋರಿಸಿಕೊಟ್ಟು ಅವನ ಸಾವಿಗೆ ಕಾರಣನಾದ ಗುರುದ್ರೋಹಿ ಜೂಡಾಸನನ್ನು ಕುರಿತದ್ದು. ವಿನೋದ, ವ್ಯಂಗ್ಯೋಕ್ತಿ, ವಿಡಂಬನೆ, ನೀತಿಬೋಧನೆ ಮತ್ತು ಸತ್ತ್ವಯುತವಾದ ಭಾಷಾ ಪ್ರಯೋಗ–ಇವುಗಳ ಮಿಶ್ರಣ ಸಾಂಟಕ್ಲಾರನ ಶೈಲಿಯ ವೈಶಿಷ್ಟ್ಯ. ಈ ತರದ ಬರೆಹದ ಮೂಲಕ ಜನರ ರೀತಿನೀತಿಗಳನ್ನು ಉತ್ತಮಪಡಿಸುವುದೇ ಆತನ ಉದ್ದೇಶವಾಗಿತ್ತು.

(ಎಂ.ಆರ್.; ಜಿ.ವಿ.ಎಸ್.)

**ಏರಣ್:** ಮಧ್ಯಪ್ರದೇಶ ರಾಜ್ಯದ ಸಾಗರ ಜಿಲ್ಲೆಯಲ್ಲಿ ಬೀನ ನದಿಯ ದಡದಲ್ಲಿರುವ ಒಂದು ಸಣ್ಣ ಗ್ರಾಮ. ಪ್ರ.ಶ.ಪೂ. 2000ದಿಂದ 700 ವರ್ಷಗಳವರೆಗೂ ಇಲ್ಲಿ ತಾಮ್ರಶಿಲಾಯುಗದ ಸಂಸ್ಕೃತಿ ನೆಲೆಸಿದ್ದು, ಸೂಕ್ಷ್ಮಶಿಲಾಯುಧಗಳೂ ಕೆಂಪು ಹಿನ್ನೆಲೆಯ ಮೇಲೆ ಕಪ್ಪು ಬಣ್ಣದಿಂದ ಚಿತ್ರಿತವಾದ ಮಡಕೆಗಳೂ ಉಪಯೋಗದಲ್ಲಿದ್ದುದಾಗಿ ಇಲ್ಲಿ ನಡೆದ ಭೂ ಶೋಧನೆಗಳಿಂದ ತಿಳಿದುಬಂದಿದೆ. ವ್ಯವಸಾಯ ಪ್ರಧಾನವಾದ ಈ ಸಂಸ್ಕೃತಿ ಪ್ರ.ಶ.ಪೂ. ಸುಮಾರು 700ರ ವೇಳೆಗೆ ಕೊನೆಗೊಂಡು ಕಬ್ಬಿಣಯುಗದ ಮತ್ತು ಪ್ರಾಚೀನ ಐತಿಹಾಸಿಕ ಸಂಸ್ಕೃತಿಗಳ ಲಕ್ಷಣಗಳನ್ನೊಳಗೊಂಡ ಸಂಸ್ಕೃತಿಯೊಂದು ಪ್ರಾರಂಭವಾಯಿತು. ಅನಂತರ ಇಲ್ಲಿ ಸುವ್ಯವಸ್ಥಿತ ರಾಜ್ಯಪದ್ಧತಿ ಬಳಕೆಗೆ ಬಂದಂತೆ ಕಾಣುತ್ತದೆ. ಭಾರತದಲ್ಲೇ ಅತ್ಯಂತ ಪ್ರಾಚೀನ ಲಿಪಿಯುಕ್ತ ನಾಣ್ಯಗಳು ಇಲ್ಲಿ ದೊರೆತಿವೆ. ಅಶೋಕನ ಕಾಲದ್ದಕ್ಕಿಂತ ಹಳೆಯ ಬ್ರಾಹ್ಮೀಲಿಪಿಯಲ್ಲಿ ಧರ್ಮಪಾಲಸ ಮತ್ತು ಏರಾಕನ್ಯ ಎಂಬ ಬರೆಹಗಳನ್ನು ಉಳ್ಳ ತಾಮ್ರದ ಅಥವಾ ಕಂಚಿನ ನಾಣ್ಯಗಳು ಇಲ್ಲಿ ದೊರಕಿವೆ. ಕೆಲವು ನಾಣ್ಯಗಳ ಮೇಲೆ ನದಿಯ ಚಿಹ್ನೆ ಕಂಡು ಬರುತ್ತದೆ. ಈ ನಾಣ್ಯಗಳು ವಿದೇಶೀ ನಾಣ್ಯಪದ್ಧತಿಯಿಂದ ಪ್ರಭಾವಿತವಾಗಿರುವುವೆಂದು ನಿಸ್ಸಂದೇಹವಾಗಿ ಹೇಳಬಹುದು. ಸಮುದ್ರಗುಪ್ತನ ಒಂದು ಶಾಸನವೂ ಪ್ರ.ಶ. 5ನೆಯದರಿಂದ 11ನೆಯ ಶತಮಾನದವರೆಗಿನ ಕಟ್ಟಡಗಳೂ ಇಲ್ಲಿ ದೊರಕಿವೆ. ಇಲ್ಲಿನ ಒಂದೇ ಕಲ್ಲಿನ ಸ್ತಂಭ, ವಿಷ್ಣು, ವರಾಹ ಮತ್ತು ನರಸಿಂಹ ದೇವಾಲಯಗಳು ಉತ್ತರಕಾಲೀನ ಗುಪ್ತರ ಕಾಲಕ್ಕೆ ಸೇರಿದವು. ಏರಣ್‌ವರೆಗೂ ದಾಳಿಮಾಡಿದ ಹೂಣರನ್ನು ಭಾನುಗುಪ್ತ ಸೋಲಿಸಿ ಓಡಿಸಿದ. (ಬಿ.ಕೆ.ಜಿ.)

**ಏರನ್:** ಬೈಬಲಿನಂತೆ ಯಹೂದ್ಯ ಯಾಜಕ ಸಂಘದ ಮೊದಲ ಯಜಮಾನ ಅಥವಾ ಅಧ್ಯಕ್ಷ. ಮೋಸೆಸನ ಸಹೋದರ. ಮೋಸೆಸನೊಡನೆ ಇಸ್ರೇಲಿಗಳನ್ನು ಈಜಿಪ್ಟಿಗೆ ಕರೆದೊಯ್ದನಲ್ಲದೆ ಅವನೊಡನೆ ರೆಫಿಡಿಮ್ ಯುದ್ಧದಲ್ಲಿ ಭಾಗವಹಿಸಿದ. ಅವನ ಪರವಾಗಿ ಈಜಿಪ್ಟಿನಲ್ಲಿ ಧರ್ಮಪ್ರಚಾರ ಮಾಡಿದ. ಸುವರ್ಣ ಕರುವನ್ನು ರಚಿಸಿ ಅದರ ಆರಾಧನೆಯನ್ನು ಪ್ರಾರಂಭಿಸಿದ. ಪರದೇಶದವಳೊಬ್ಬಳನ್ನು ಮೋಸೆಸ್ ಮದುವೆಯಾದಾಗ ಏರನ್ ಮತ್ತು ಅವನ ಸೋದರಿ ಮಿರಿಯಮ್ ಇಬ್ಬರೂ ಅದನ್ನು ತೀವ್ರವಾಗಿ ವಿರೋಧಿಸಿದರು. (ಜಿ.ಎಚ್.)

**ಏರಿ:** ಸುತ್ತಲಿನ ನೆಲದ ಮಟ್ಟಕ್ಕಿಂತ ಎತ್ತರವಾಗಿ ಮಣ್ಣು ಇಲ್ಲವೆ ಕಲ್ಲಿನಿಂದ ಕಟ್ಟಿರುವ ರಚನೆ (ಡೈಕ್). ಇದು ತ್ರಾಪಿಜ್ಯದ ಆಕಾರದಲ್ಲಿದೆ; ಎಂದರೆ ಬುಡ ಅಗಲ, ಮೇಲೆ ಕಿರಿದು. ಏರಿಯನ್ನು ಕಟ್ಟುವುದರಲ್ಲಿನ ಉದ್ದೇಶಗಳು ಹಲವಾರು. ಪ್ರಾಚೀನ ಈಜಿಪ್ಟಿನಲ್ಲಿ ಪ್ರ.ಶ.ಪೂ. 4,000ದ ಸುಮಾರಿನಲ್ಲಿ ನೈಲ್ ನದಿಯ ದಡಗಳ ಮೇಲೆ ಸಮಾಂತರವಾಗಿ ಕಿಲೋಮೀಟರುಗಳ ಏರಿಗಳನ್ನೂ ಅವುಗಳಿಗೆ ಸಮಕೋನವಾಗಿ ಸಣ್ಣ ಏರಿಗಳನ್ನೂ ಕಟ್ಟಿ ತೊಟ್ಟಿಗಳಲ್ಲಿ ಹೇಗೋ ಹಾಗೆ ಏರಿಗಳ ಮಧ್ಯೆ ಪ್ರವಾಹದ ನೀರನ್ನು ನಿಲ್ಲಿಸುವ ಏರ್ಪಾಡು ಇತ್ತು. ದೊಡ್ಡ ಏರಿಗಳಲ್ಲಿ ಬಾಗಿಲುಗಳಿಂದ ಮುಚ್ಚಬಹುದಾದ ತೂಬುಗಳನ್ನಿಟ್ಟು ಅವುಗಳಿಂದ ಬೇಕಾದಾಗ ತೊಟ್ಟಿಗಳೊಳಕ್ಕೆ ನೀರನ್ನು ಬಿಡಬಹುದಿತ್ತು. ಈ ನೀರಿನಲ್ಲಿದ್ದ ಫಲವತ್ತಾದ ಗೋಡುಮಣ್ಣು ಆಹಾರ ಧಾನ್ಯಗಳನ್ನು ವಿಶೇಷವಾಗಿ ಬೆಳೆಸಲು ಉಪಯೋಗಕಾರಿ. ಇದರಿಂದಾಗಿ ಪ್ರ.ಶ.ಪೂ. ಒಂದನೆಯ ಶತಮಾನದಲ್ಲಿ ಈಜಿಪ್ಟ್ ದೇಶ ರೋಮನ್ ಚಕ್ರಾಧಿಪತ್ಯದ ಉಗ್ರಾಣವೆನಿಸಿಕೊಂಡಿತ್ತು.

ಸಮುದ್ರ, ಹೊಳೆ ಇಲ್ಲವೆ ಪ್ರವಾಹದ ನೀರು ಊರಿನೊಳಕ್ಕೆ ನುಗ್ಗದ ಹಾಗೆ ಏರಿ ತಡೆಯುತ್ತದೆ. ಹಾಲೆಂಡ್, ಇಂಗ್ಲೆಂಡಿನ ಫೆನ್ ಪ್ರಾಂತ್ಯ, ಅಮೆರಿಕದಲ್ಲಿ ಮಿಸಿಸಿಪಿ ನದಿಯ ಕೆಳಕಣಿವೆ ಮತ್ತು ಚೀನದ ತಗ್ಗಾದ ಪ್ರದೇಶ–ಇಲ್ಲೆಲ್ಲ ಪ್ರವಾಹದ ನೀರನ್ನು ಹೊರಕ್ಕೆ ಸಾಗಿಸಲು ಏರಿಗಳನ್ನೂ ಎರಡು ದಡಗಳಲ್ಲಿಯೂ ಕಟ್ಟುತ್ತಾರೆ. ಹಾಲೆಂಡಿನ ಆರ್ಥಿಕ ಜೀವನ ನಿಂತಿರುವುದೇ ಈ ಏರಿಗಳಿಂದ–ಸಮುದ್ರದ ತೀರದಲ್ಲಿ ದೊಡ್ಡ ಏರಿಗಳನ್ನೂ ಕಟ್ಟೆಗಳನ್ನೂ ಒಳನಾಡಿನಲ್ಲಿ ನೂರಾರು ಕಿಲೋಮೀಟರುಗಳ ಏರಿಗಳನ್ನೂ ಅಪಾರವಾದ ವೆಚ್ಚದಿಂದ ಕಟ್ಟಿ ಅವನ್ನೇ ಜಾಗರೂಕತೆಯಿಂದ ರಕ್ಷಿಸುವುದರ ಮೂಲಕ. ಇವುಗಳಲ್ಲಿ ಒಂದು ಏರಿಯ ಉದ್ದ 3,600 ಮೀ ಎತ್ತರ 7 ಮೀ ಚಪ್ಪಟೆಯಾದ ಇಳಿಕಲಿನ ಉದ್ದ 90 ಮೀ ಇದನ್ನು ಕಾಂಕ್ರೀಟಿನ ದಿಮ್ಮಿಗಳಿಂದ ಭದ್ರಪಡಿಸಿದ್ದಾರೆ. ಈ ಏರಿಯ ಮೇಲೆ ಒಂದು ರಸ್ತೆ ಮತ್ತು ಒಂದು ರೈಲು ಮಾರ್ಗ ಸಹ ಇವೆ.

ಯುರೋಪಿನಲ್ಲಿ ಹಿಂದಿನ ಕಾಲದಲ್ಲಿ ಸಣ್ಣ ರಾಷ್ಟ್ರಗಳ ಗಡಿಗಳನ್ನು ಗುರುತು ಮಾಡುವುದಕ್ಕಾಗಿ ಒಂದೆರಡು ಕಿಲೋಮೀಟರುಗಳಿಂದ ನೂರಾರು ಕಿಲೋಮೀಟರುಗಳವರೆಗೂ ಏರಿಗಳನ್ನು ಹಾಕುತ್ತಿದ್ದರು. ಗಡಿಯ ಅಂಚಿನಲ್ಲಿ ಮಣ್ಣನ್ನು ತೋಡಿ ಅದನ್ನೇ ತಮ್ಮ ರಾಷ್ಟ್ರದ ಕಡೆಗೆ ಏರಿಯ ಹಾಗೆ ತುಂಬುತ್ತಿದ್ದರು. ಹೀಗೆ ಉಂಟಾದ ಕಂದಕಗಳಲ್ಲಿ ಕ್ರಮೇಣ ಮಳೆಯ ನೀರು ನಿಂತು ಅವು ಶತ್ರುಗಳಿಗೆ ದುರ್ಗಮ ಪ್ರದೇಶಗಳಾಗುತ್ತಿದ್ದುವು. ಇಂಥ ಏರಿಗಳು ಹಳ್ಳಗಳ ಮೇಲೂ ಗುಡ್ಡಗಳ ಮೇಲೂ ಬಳಸಿಕೊಂಡು ಹೋಗಿ ದೇಶಕ್ಕೆ ಸುಲಭರಕ್ಷಣೆ ಒದಗಿಸುತ್ತಿದ್ದುವು. ತಮ್ಮ ಆಡಳಿತದಲ್ಲಿ ಇದ್ದಾಗ ರೋಮನರು ಬ್ರಿಟನ್ನಿನಲ್ಲಿ ಇಂಥ ಹಲವಾರು ಏರಿಗಳನ್ನು ಕಟ್ಟಿದ್ದರು. ಇದೇ ಮಾದರಿಯಲ್ಲಿ ಮುಂದಿನ ಶತಮಾನಗಳಲ್ಲಿಯೂ ಏರಿಗಳು ನಿರ್ಮಾಣವಾದುವು.

ಕೆಲವು ದೇಶಗಳಲ್ಲಿ ಶತ್ರುಗಳ ದೆಸೆಯಿಂದ ರಾಜ್ಯವನ್ನು ರಕ್ಷಿಸಿಕೊಳ್ಳಲು ಏರಿಗಳನ್ನು ಕಟ್ಟುತ್ತಾರೆ. ಯುರೋಪಿನಲ್ಲಿ ಒಂದು ಯುದ್ಧದಲ್ಲಿ ಉದ್ದೇಶಪೂರ್ವಕವಾಗಿ ಏರಿಯನ್ನು ಒಡೆದು ಕೂಡಿಟ್ಟ ನೀರನ್ನು ಒತ್ತಿಬರುತ್ತಿದ್ದ ಶತ್ರುಗಳ ಮೇಲೆ ನುಗ್ಗಿಸಿ ಅವರನ್ನು ಕೊಂದು ದೇಶರಕ್ಷಣೆ ಮಾಡಿಕೊಂಡರು. ಎರಡನೆಯ ಮಹಾಯುದ್ಧದಲ್ಲಿ ಎಷ್ಟೋ ಸಾರಿ ಶತ್ರುಗಳು ಒಡೆದಿದ್ದ ಏರಿಗಳನ್ನು ಮತ್ತೆ ಪ್ರವಾಹ ಬರುವುದಕ್ಕೆ ಮುಂಚೆ ಆತುರವಾಗಿ ಪುನರ್ನಿರ್ಮಾಣ ಮಾಡಿ ನೀರನ್ನು ತುಂಬಿಸಬೇಕಾಯಿತು.

ಹರಿಯುವ ನೀರಿನ ಪ್ರವಾಹವನ್ನು ತಡೆಯುವುದಕ್ಕಾಗಿಯೂ ಏರಿಗಳನ್ನು ಕಟ್ಟಬೇಕಾಗುತ್ತದೆ. ಹೊಳೆಯನ್ನೋ ನಾಲೆಯನ್ನೋ ಒಂದು ಗಡಿಯ ಆಚೆಗೆ ಹೋಗದಂತೆ ಏರಿಗಳು ತಡೆಯುತ್ತವೆ. ಪ್ರವಾಹದಲ್ಲಿ ಮುಳುಗಿ ಹೋಗುವ ಭೂಮಿಯಲ್ಲಿ ನೆಲದ ಮಟ್ಟದ ಮೇಲೆ ಏರಿಗಳನ್ನು ಕಟ್ಟಿ ನೀರನ್ನು ನಾಲೆಗಳ ಮೂಲಕ ಹರಿಸುತ್ತಾರೆ. ಸಮುದ್ರತೀರದಲ್ಲಿಯೂ ಅಳಿವೆಗಳ ಬಾಯಲ್ಲಿಯೂ ಇರುವ ಏರಿಗಳು ಕರಾವಳಿ ಕೊರೆದುಹೋಗದಂತೆ ಕಾಪಾಡುತ್ತವೆ. ಭೂಮಿಯನ್ನು ಮರುಪಡೆವ ಯೋಜನೆಗಳಲ್ಲಿ ಏರಿಗಳ ಜೊತೆಗೆ ಕಲ್ಲಿನ ಗೋಡೆಗಳೂ ಬೇಕಾಗಬಹುದು. ಹಳ್ಳಗಳಿಗೆ ಅಡ್ಡಲಾಗಿ ಮಣ್ಣಿನ ಏರಿಗಳನ್ನು ಕಟ್ಟಿ ಕೆರೆಗಳನ್ನು ನಿರ್ಮಿಸಿ ಕೂಡಿಟ್ಟ ನೀರನ್ನು ನೀರಾವರಿಗಾಗಿ ಬಳಸಿಕೊಳ್ಳುತ್ತಾರೆ. ಮಣ್ಣಿನ ಏರಿಗಳಲ್ಲಿ ನೀರು ಕೊಂಚವೂ ಸೋರದ ಹಾಗೆ ಮಾಡುವುದು ಕಷ್ಟ. ಜೇಡಿಮಣ್ಣು, ಕಾಂಕ್ರೀಟಿನ ತಡಿಕೆ ಗೋಡೆಗಳು ಇಲ್ಲವೆ ಉಕ್ಕಿನ ತಗಡಿನ ದಸಿಗಳನ್ನು ಅವಶ್ಯವಾದ ಕಡೆ ಉಪಯೋಗಿಸಿ ನೀರು ಸೋರದಂತೆ ತಡೆಯಬೇಕಾಗುತ್ತದೆ. ಪ್ರವಾಹದಿಂದ ಅಥವಾ ಅಲೆಗಳಿಂದ ನೀರಿನ ಕಡೆಯ ಇಳಿಕಲು ಕೊರೆಯದ ಹಾಗೆ ಕಲ್ಲು ಇಲ್ಲವೆ ಕಾಂಕ್ರೀಟಿನಿಂದ ಕಟ್ಟಣೆಯನ್ನು ಕಟ್ಟಬೇಕು.

ನದಿಗಳು ನಗರಗಳ ಮಧ್ಯದಲ್ಲಿ ಹರಿಯುವಾಗ ದಡಗಳ ಮೇಲೆ ಕಲ್ಲಿನ ಅಥವಾ ಕಾಂಕ್ರೀಟಿನ ಆಧಾರವನ್ನು ಕೊಟ್ಟು ಹಿಂದುಗಡೆ ಉದ್ದವಾದ ಮಣ್ಣಿನ ಏರಿಗಳಿಂದ ಪ್ರವಾಹಗಳ ಹಾವಳಿಯನ್ನು ತಪ್ಪಿಸುತ್ತಾರೆ. ಲಂಡನ್ ನಗರದಲ್ಲಿ ಥೇಮ್ಸ್ ನದಿಯ ಏರಿಯ ಮೇಲೆ ಅಗಲವಾದ ರಸ್ತೆಯನ್ನು ಮಾಡಿದ್ದಾರೆ. ಸಾಮಾನ್ಯವಾಗಿ ನದಿ ನಗರದ ಮಧ್ಯದಲ್ಲಿ ಹರಿದುಹೋದರೆ ಪ್ರವಾಹದ ಹಾವಳಿಯನ್ನು ಒಂದಲ್ಲ ಒಂದು ಸಾರಿ ಎದುರಿಸಲೇಬೇಕಾಗುತ್ತದೆ. 1923ನೆಯ ಇಸವಿಯಲ್ಲಿ ಬಂದ ತುಂಗಾನದಿಯ ಮಹಾ ಪ್ರವಾಹದಲ್ಲಿ ಶಿವಮೊಗ್ಗ ಪಟ್ಟಣ ವಿಶೇಷ ನಷ್ಟವನ್ನನುಭವಿಸಿತು. ಹೀಗೆ ಹೈದರಾಬಾದ್ ಮತ್ತು ಪೂನ ನಗರಗಳಲ್ಲಿ ನದಿಗಳು ವಿಶೇಷ ಅನಾಹುತವನ್ನುಂಟು ಮಾಡಿವೆ. ಇಂಥ ಸಂದರ್ಭಗಳಲ್ಲಿ ಎರಡು ದಡಗಳಲ್ಲಿಯೂ ಭದ್ರವಾದ ಏರಿಗಳನ್ನು ಕಟ್ಟಬೇಕಾಗುತ್ತದೆ.

ಹಾಲೆಂಡ್ ತಗ್ಗಾದ ಭೂಪ್ರದೇಶ. ಆದ್ದರಿಂದ ನೆಲಕ್ಕೆ ನೀರು ನುಗ್ಗದಂತೆ ಏರಿಗಳು ಇಲ್ಲಿ ಅತ್ಯಾವಶ್ಯ. ಇಂಥ ಏರಿಗಳಿಗೆ ಡೈಕುಗಳೆನ್ನುತ್ತಾರೆ. ರೇವುಪಟ್ಟಣಗಳಲ್ಲಿ ಹಡಗಿನ ಭರ್ತಿ ಕಟ್ಟೆಯೂ (ಕ್ವೇ) ಒಂದು ಏರಿ. ಹೀಗೆ ಏರಿಯ ಉಪಯೋಗ ಸಾರ್ವತ್ರಿಕವಾಗಿದೆ.

ಏರಿಗಳು ಇತರ ಇಂಜಿನಿಯರಿಂಗ್ ಕಟ್ಟಡಗಳ ಭಾಗಗಳಾಗಿಯೂ ಇರಬಹುದು. ರೈಲ್ವೆಗಳು, ರಸ್ತೆಗಳು ಮತ್ತು ನಾಲೆಗಳು ತಗ್ಗಾದ ಭೂಮಿಯನ್ನು ದಾಟಿ ಒಂದೇ ಮಟ್ಟದಲ್ಲಿ ಹೋಗಬೇಕಾದಾಗ ಏರಿಗಳು ಆವಶ್ಯವಾಗುತ್ತವೆ. ಇಂಥ ಏರಿಗಳನ್ನು ಮಣ್ಣಿನಿಂದ ಕಟ್ಟಿ ಇಳಿಕಲಿನಲ್ಲಿ ಕಲ್ಲುಕಟ್ಟಣೆಯನ್ನು ಕಟ್ಟಬಹುದು. ಜೌಗು ನೆಲದ ಮೇಲೂ ಸರೋವರಗಳ ತಳದಲ್ಲಿಯೂ ನದಿಗಳ ಪ್ರವಾಹಗಳ ಬಯಲುಗಳಲ್ಲಿಯೂ ರೈಲ್ವೆಗಳನ್ನೂ ರಸ್ತೆಗಳನ್ನೂ ಸಾಗಿಸಬೇಕಾದಾಗ ಏರಿಗಳು ಕುಸಿದು ಮಟ್ಟ ತಗ್ಗದಂತಿರಬೇಕು. ಆಗ ಏರಿಯ ಖರ್ಚು ಹೆಚ್ಚೋ ಸೇತುವೆಯ ಖರ್ಚು ಹೆಚ್ಚೋ ಎಂದು ನೋಡಬೇಕಾಗುತ್ತದೆ.

ಭಾರತದಲ್ಲಿ ಏರಿಯ ಉಪಯೋಗ ವಿಶೇಷವಾಗಿರುವುದು ನೀರಾವರಿಯ ಕೆರೆಗಳ ನಿರ್ಮಾಣದಲ್ಲಿ. ಹಳ್ಳಗಳಿಗೆ ಅಡ್ಡಲಾಗಿ ಮಣ್ಣಿನ ಏರಿಗಳನ್ನು ಕಟ್ಟಿ ನಿರ್ಮಿಸಿದ ಸಣ್ಣ ಜಲಾಶಯಗಳಿಗೆ ಕೆರೆಗಳು ಎನ್ನುತ್ತಾರೆ. ಏರಿ ಕೆರೆಯ ಒಂದು ಅಂಗ. ಮೊದಲಿಗೆ ಕೆರೆ ಎಂದರೆ ಏರಿ ಎಂದೇ ಅರ್ಥವಿತ್ತೆಂದು ತಿಳಿದು ಬಂದಿದೆ. ಕೆರೆ ತುಂಬಿದ ಮೇಲೆ ಹೆಚ್ಚಾಗಿ ಬಂದ ನೀರನ್ನು ಏರಿಗೆ ಅಪಾಯವಾಗದ ಹಾಗೆ ಹೊರಕ್ಕೆ ಸಾಗಿಸುವ ಕೋಡಿ ಮತ್ತು ಶೇಖರವಾದ ನೀರನ್ನು ಕೆರೆಯಿಂದ ಏರಿಯ ಮೂಲಕ ಹಿಂದುಗಡೆಗೆ ಸಾಗಿಸಲು ತೂಬು–ಇವು ಉಳಿದ ಅಂಗಗಳು. ತೂಬಿನಿಂದ ಹರಿಯುವ ನೀರನ್ನು ಸಾಗುವಳಿಯಾಗುವ ಜಮೀನುಗಳಿಗೆ, ನಾಲೆ ಸಾಗಿಸುತ್ತದೆ.

ಮಣ್ಣಿನ ಏರಿಯ ನಮೂನೆಗಳು : ಏರಿಯ ಪಾರ್ಶ್ವಗಳಲ್ಲಿ ಮಣ್ಣನ್ನು ಮೂರು ವಿಧವಾಗಿ ತುಂಬಬಹುದು : 1 ಎಲ್ಲ ಕಡೆಯಲ್ಲಿಯೂ ಒಂದೇ ವಿಧವಾದ ಮಣ್ಣನ್ನು ತುಂಬುವುದು; 2 ಮಧ್ಯದಲ್ಲಿ ಜಿಗುಟಾದ ಮಣ್ಣನ್ನು ತುಂಬಿ ಹೊರಗಡೆ ಎರಡು ಪಕ್ಕಗಳಲ್ಲಿಯೂ ನೀರು ಜಿನುಗಬಹುದಾದ ಹರಳುಮಣ್ಣನ್ನು ತುಂಬುವುದು; 3 ಒಳಗಡೆ ನೀರು ಜಿನುಗಲಾರದ ಜೇಡಿಮಣ್ಣು ಇಲ್ಲವೆ ಕಲ್ಲುಗಾರೆಯ ಗೋಡೆಯನ್ನು ಮಧ್ಯದಲ್ಲಿ ಕಟ್ಟಿ, ಸುತ್ತಲೂ ಒಂದೇ ವಿಧವಾದ ಮಣ್ಣನ್ನು ತುಂಬುವುದು. ಇವುಗಳ ವಿವರಗಳನ್ನು ಮುಂದೆ ಹೇಳಿದೆ.

1. ಉತ್ತರ ಕರ್ನಾಟಕದ ಕೆಲವು ಭಾಗಗಳನ್ನೂ ಮುಂಬಯಿಯ ಕೆಲವು ಭಾಗಗಳನ್ನೂ ಬಿಟ್ಟು ಉಳಿದ ಕಡೆಗಳಲ್ಲಿ ಒಂದೇ ರೀತಿಯ ಮಣ್ಣನ್ನು ಉಪಯೋಗಿಸುವುದು ರೂಢಿ. ಕೆರೆಯ ಅಂಗಳದಲ್ಲಿ ಏರಿಯಿಂದ 15 ಮೀ ದೂರದಲ್ಲಿ 45–90 ಸೆಂಮೀ ಆಳ, 1.8 ಮೀ ಅಗಲ, 4.6–9.2 ಮೀ ಉದ್ದವಾದ ಗುಂಡಿಗಳನ್ನು ತೆಗೆದು ಮಣ್ಣನ್ನು ತಲೆಹೊರೆಯ ಮೇಲೆ ಏರಿಗೆ ಸಾಗಿಸಿ ಸಣ್ಣ ಕೆರೆಗಳನ್ನು ಕಟ್ಟುತ್ತಾರೆ. ಹೀಗೆ ಬೇರೆ ಬೇರೆಯ ಪ್ರದೇಶಗಳಲ್ಲಿ ಉಪಯೋಗಿಸುವ ಮಣ್ಣುಗಳಲ್ಲಿ ಬಹಳ ವ್ಯತ್ಯಾಸಗಳಿವೆ.

2. ಮೇಲಿನ ಮಣ್ಣು 90–180 ಸೆಂಮೀ ವರೆಗೂ ಕರಿ ಹತ್ತಿಯ ಮಣ್ಣಾಗಿದ್ದು ಅದರ ಕೆಳಗೆ ಶಿಥಿಲವಾದ ಹಿಟ್ಟು ಬಂಡೆಯಿದ್ದರೆ ಈ ನಮೂನೆಯನ್ನು ಉಪಯೋಗಿಸಬೇಕು. ಬರಿಯ ಕಪ್ಪು ಮಣ್ಣಿನಿಂದಲೇ ಕಟ್ಟಿದ ಏರಿ ಒಣಗಿದಾಗ ಬಿರುಕುಬಿಡುತ್ತದೆ. ಕೆರೆಯಲ್ಲಿ ನೀರು ಕೆಳಕ್ಕೆ ಇಳಿದಾಗ ಈ ಬಿರುಕುಗಳು ಏರಿಯ ಹೊಟ್ಟೆಯವರೆಗೂ ಹೋಗುತ್ತವೆ. ಆಮೇಲೆ ಮಳೆ ಬಂದು ಕೆರೆ ಏಕಾಏಕಿ ತುಂಬಿದರೆ ಬಿರುಕುಗಳ ಮೂಲಕ ಒಳಕ್ಕೆ ನುಗ್ಗುವ ನೀರಿನಿಂದ ಕೆರೆಗೆ ವಿಪತ್ತು ಸಂಭವಿಸಬಹುದು. ಏರಿಯ ಮುಂಭಾಗ ನೆನೆದಾಗ ಜಾರುವ ಸಂಭವವೂ ಉಂಟು. ಹರಳು ಮಣ್ಣಿನಿಂದಲೇ ಏರಿಯನ್ನು ಕಟ್ಟಿದರೆ ನೀರು ಧಾರಾಳವಾಗಿ ಸೋರಿ ಹೋಗುತ್ತದೆ. ಜಿನುಗುವ ನೀರಿನ ವೇಗವೂ ಮಿತಿಮೀರಿ ಏರಿಗೆ ತೊಂದರೆಯಾಗಬಹುದು. ಆದರೆ ಏರಿಯ ಮಧ್ಯದಲ್ಲಿ ಜಿಗಟು ಮಣ್ಣನ್ನೂ ಪಕ್ಕಗಳಲ್ಲಿ ಹರಳು ಮಣ್ಣನ್ನೂ ಉಪಯೋಗಿಸಿದರೆ ಜಿಗಟು ಮಣ್ಣು ನೀರು ಜಿನುಗುವುದನ್ನು ತಪ್ಪಿಸುತ್ತದೆ. ಜಿಗಟು ಮಣ್ಣು ಒಣಗಿ ಬಿರುಕು ಬಿಡುವುದನ್ನು ಹೊರಗಡೆ ಇರುವ ಹರಳು ಮಣ್ಣು ತಪ್ಪಿಸುತ್ತದೆ. ಹೀಗೆ ಒಂದೊಂದು ಮಣ್ಣು ಅದರದರ ಗುಣಕ್ಕೆ ಸರಿಯಾಗಿ ಉಪಯೋಗವಾಗುತ್ತದೆ. ಮುಂಭಾಗದ ಹರಳುಮಣ್ಣಿನಲ್ಲಿ ನೀರು ನುಗ್ಗುವುದೇನೋ ಒಂದು ದೋಷ. ಇದ್ದದ್ದರಲ್ಲಿ ಜಿಗಟಾದ ಮಣ್ಣನ್ನೇ ಮುಂಭಾಗದಲ್ಲಿ ಸೇರಿಸಬೇಕು.

3 ಈ ನಮೂನೆಗೂ 2 ನೆಯ ನಮೂನೆಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಮಧ್ಯದಲ್ಲಿ ಜಿಗಟುಮಣ್ಣಿಗೆ ಬದಲಾಗಿ ಜೇಡಿಮಣ್ಣಿನ ಇಲ್ಲವೆ ಕಲ್ಲುಗಾರೆಯ ಕಿರಿದಾದ ಗೋಡೆಯಿರುತ್ತದೆ. ಇದರ ಮುಂಭಾಗದಲ್ಲಿ ಸಾಧ್ಯವಾದಷ್ಟು ನೀರು ಜಿನುಗದಂಥ ಮಣ್ಣನ್ನು ಹಾಕಬೇಕು. ಸಾಕಾದಷ್ಟು ಒಳ್ಳೆಯ ಮಣ್ಣು ಸಿಕ್ಕದೆ ಇರುವ ಕಡೆಗಳಲ್ಲಿ 2ನೆಯ ನಮೂನೆಯ ಜಿಗಟುಮಣ್ಣಿನ ನಡುವಿನ ಏರಿಯ ಜೊತೆಗೆ ನೀರು ಅಡಿಪಾಯದಲ್ಲಿ ಜಿನುಗದ ಹಾಗೆ ಜೇಡಿಮಣ್ಣಿನಿಂದ ತುಂಬಿದ ಕಂದಕವನ್ನಾದರೂ ಇಡಬಹುದು. ಮಣ್ಣಿನ ಏರಿಯ ಸಂವಿಧಾನವನ್ನು ಕಲ್ಲುಗಾರೆಯ ಕಟ್ಟೆಯ ಹಾಗೆ ಲೆಕ್ಕಾಚಾರದಿಂದ ಗೊತ್ತು ಮಾಡುವುದು ಸಾಧ್ಯವಿಲ್ಲ. ಅನುಭವದಿಂದಲೂ ಒಂದೊಂದು ಕಡೆಯೂ ದೊರೆಯುವ ಮಣ್ಣಿನ ಲಕ್ಷಣಗಳಿಂದಲೂ ಹೊಸ ಕೆರೆಯ ಏರಿಯ ಅಡ್ಡ ಕೊಯ್ತವನ್ನು ನಿರ್ಣಯಿಸಬೇಕು.

ಮಣ್ಣಿನ ಏರಿಗಳು ನಾಲ್ಕು ವಿಧಗಳಲ್ಲಿ ಉರುಳಬಹುದು : 1. ಒಳಕ್ಕೆ ನೀರು ಜಿನುಗುವುದರಿಂದ; 2. ಏರಿಯ ಮಣ್ಣು ಜಾರುವುದರಿಂದ; 3. ನೀರಿನ ಅಲೆಗಳ ಕೊರೆತದಿಂದ; 4. ಏರಿಯ ಮೇಲೆ ನೀರು ಉರುಳುವುದರಿಂದ. ಇವುಗಳ ವಿವರ ಹೀಗಿದೆ:

1. ಕೆರೆಯ ನೀರು ಏರಿಯ ಅಡಿಪಾಯದ ಕೆಳಗಿನಿಂದಲೂ ಏರಿಯ ಮಣ್ಣಿನಿಂದಲೂ ಜಿನುಗುವಾಗ ಜೊತೆಯಲ್ಲಿ ಮಣ್ಣಿನ ಕಣಗಳನ್ನು ಒಯ್ಯುತ್ತದೆ. ಆಗ ಡೊಗರುಗಳು ಪ್ರಾರಂಭವಾಗಿ ಹರಡಿ ಏರಿ ಕುಸಿಯುತ್ತದೆ. ಕೊನೆಯಲ್ಲಿ ನೀರು ಏರಿಯ ಮೇಲೆ ಹರಿದು ಮಣ್ಣನ್ನು ಕೊರೆದು ಏರಿಯನ್ನು ಉರುಳಿಸುತ್ತದೆ. ಜಿನುಗುವ ನೀರಿನ ದಾರಿ ಚಿಕ್ಕದಾಗಿದ್ದು, ನೀರಿನ ವೇಗ ಮಣ್ಣು ತಡೆಯಲಾರದ ಮಟ್ಟಕ್ಕೆ ಏರಬಹುದು. ಆಗ ಕೊಳವಿಯಲ್ಲಿ ನೀರು ಏರಿದ ಹಾಗೆ ಏರಿ ಉರುಳಬಹುದು.

2. ಮಣ್ಣು ನಿಲ್ಲಬಹುದಾದ ಇಳಿಜಾರಿಗಿಂತ ಕಡಿದಾಗಿ ನಿಂತಾಗ ಏರಿ ಜಾರುತ್ತದೆ. ಜಿಗಟುಮಣ್ಣಿನಲ್ಲಿ ಘರ್ಷಣಶಕ್ತಿ ಮತ್ತು ಅಂಟಿಕೊಳ್ಳುವ ಶಕ್ತಿ ಅದರಲ್ಲಿನ ತೇವಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತವೆ. ಒಣಗಿರುವ ಜಿಗಟುಮಣ್ಣಿನಲ್ಲಿ ಎರಡು ಶಕ್ತಿಗಳೂ ಹೆಚ್ಚಾಗಿಯೇ ಇರುವುವು. ಸ್ವಲ್ಪವೇ ನೀರು ಬೆರೆತಾಗ ಅಂಟಿಕೊಳ್ಳುವ ಶಕ್ತಿ ಇನ್ನೂ ಹೆಚ್ಚಾಗುತ್ತದೆ. ಆದರೆ ಮತ್ತಷ್ಟು ನೀರು ಸೇರಿದರೆ ಎರಡು ಶಕ್ತಿಗಳೂ ಕಡಿಮೆಯಾಗುತ್ತವೆ. ನೆನೆದಾಗ ಜಿಗಟುಮಣ್ಣು ಕೆಸರಾಗುತ್ತದೆ. ನೀರೇ ಇಲ್ಲದೆ ಒಣಗಿದಾಗ ಬಿರಿಯುತ್ತದೆ. ಏರಿ ಜಾರದ ಹಾಗೆ ಇರ ಬೇಕಾದರೆ ಅದರ ಮಣ್ಣು ಯಾವ ಇಳಿಜಾರಿನಲ್ಲಿ ನಿಲ್ಲಬಹುದೋ ಅದನ್ನು ಪರೀಕ್ಷೆ ಮಾಡಿ ಏರಿಯ ಎರಡು ಮುಖಗಳನ್ನೂ ಅದಕ್ಕಿಂತ ಹೆಚ್ಚು ಚಪ್ಪಟೆಯಾಗಿ ಇಡಬೇಕು. ಹಿಂಭಾಗ ನೀರಿನಲ್ಲಿ ನೆನೆಯುವ ಹಾಗಿರಬಾರದು. ಹುಡಿಮಣ್ಣು ನಿಲ್ಲುವ ಇಳಿಜಾರಿಗಿಂತ ಈ ಮುಖ ಹೆಚ್ಚು ಚಪ್ಪಟೆಯಾಗಿರಬೇಕು.

3. ಮುಂಭಾಗದಲ್ಲಿ ನೀರಿನ ಅಲೆಗಳು ಕೊರೆದಾಗ ಮಣ್ಣು ನೀರಿನಲ್ಲಿ ಕೊರೆದು ಹೋಗಿ ಮೇಲಿನ ಭಾಗ ಜಾರುತ್ತದೆ. ಹೀಗೆಯೇ ಆಗಿ ಏರಿಯ ಅಗಲವೇ ಕಿರಿದಾಗಿ ಕ್ರಮೇಣ ನೀರು ಏರಿಯ ಮೇಲೆ ಹರಿಯುತ್ತದೆ. ಮುಂಭಾಗದಲ್ಲಿ ಕಲ್ಲಿನ ಕಟ್ಟಡವನ್ನು ಕಟ್ಟುವುದರಿಂದ ಇದನ್ನು ತಡೆಯಬಹುದು.

4. ಕೆರೆಯಲ್ಲಿ ನೀರಿನ ಮಟ್ಟ ಏರಿಯ ತಲೆಯ ಮಟ್ಟಕ್ಕಿಂತಲೂ ಮೇಲಕ್ಕೆ ಏರಿದಾಗ ಏರಿ ಕೊರೆದುಹೋಗಿ ಉರುಳುತ್ತದೆ. ಇದನ್ನು ತಪ್ಪಿಸಲು ನೀರು ಪರಮಾವಧಿಯ ಮಟ್ಟಕ್ಕಿಂತ ಮೇಲೆ ಕೆರೆಯಲ್ಲಿ ಏರದ ಹಾಗೆ ಕೋಡಿಯನ್ನು ದೊಡ್ಡದು ಮಾಡಬೇಕು. ಏರಿಯ ಮೇಲೆ ದನಕರುಗಳು ಓಡಾಡಿ ಮಳೆಯಲ್ಲಿ ನೆನೆದು ಏರಿ ಕುಗ್ಗದ ಹಾಗೆ ಆಗಾಗ ಭರ್ತಿ ಮಾಡುತ್ತಿರಬೇಕು.

ಚರಂಡಿಗಳು : ಕೆರೆಯ ನೀರು ಜಿನುಗಿದ್ದರಿಂದಾಗಲೀ ಮಳೆಯ ನೀರು ಏರಿಯ ಹಿಂಭಾಗದ ಮೇಲೆ ಬಿದ್ದು ಒದ್ದೆಯಾದ್ದರಿಂದಾಗಲೀ ಏರಿಯ ಒಳಗಡೆ ಸೇರಿಕೊಂಡ ನೀರನ್ನು ದಪ್ಪಕಲ್ಲಿನಿಂದ ತುಂಬಿದ ಚರಂಡಿಗಳ ಮೂಲಕ ಹೊರಕ್ಕೆ ಸಾಗಿಸಬೇಕು.

ಏರಿಗಳ ಕಟ್ಟಡ : ಏರಿಯ ಕಟ್ಟಬೇಕಾದ ಸ್ಥಳವೂ ಅದರ ಅಳತೆಗಳೂ ನಿಶ್ಚಯವಾದ ಮೇಲೆ ಏರಿಯ ಅಡಿಪಾಯವನ್ನು 90–120 ಸೆಂಮೀ ಆಳವಾಗಿ ತೆಗೆದು ತಳವನ್ನು ಒರಟಾಗಿರುವ ಹಾಗೆ ಮಾಡಿ ನೀರನ್ನು ಚಿಮುಕಿಸಿ ಹೊಸ ಪರೀಕ್ಷೆ ಮಾಡಬೇಕು. ಇದ್ದುದರಲ್ಲಿ ಜಿಗಟಾದ ಮಣ್ಣನ್ನು ಏರಿಯ ಮಧ್ಯದಲ್ಲಿ ಹಾಕಬೇಕು. ಮೊದಲು ದೂರದ ಗುಂಡಿಗಳಿಂದ ಮಣ್ಣನ್ನು ಉಪಯೋಗಿಸಬೇಕು. ಏರಿಯ ಅಗಲದಲ್ಲಿ ಈ ಕೊನೆಯವರೆಗೂ ನಡುವಿನ ಕಡೆ ಕೊಂಚ ಇಳಿಜಾರಾಗಿ ಮಣ್ಣನ್ನು 15–25 ಸೆಂ. ಮೀ. ವರಸೆಗಳಲ್ಲಿ ಹಾಕಬೇಕು. ಈ ಮಣ್ಣನ್ನು ಸಣ್ಣ ಏರಿಗಳಲ್ಲಿ ಎಮ್ಮೆಗಳನ್ನೋ ದನಗಳನ್ನೋ ಓಡಿಸಿಯೂ ದೊಡ್ಡ ಏರಿಗಳಲ್ಲಿ ರೋಲರುಗಳಿಂದಲೂ ಅಡಕಿಸಬೇಕು. ಏರಿ ಪೂರೈಸಿದ ಮೇಲೆ ಕೊಂಚ ತಗ್ಗುತ್ತದೆ. ಅದಕ್ಕಾಗಿ ಗಟ್ಟಿಯಾದ ಮಣ್ಣಿನಲ್ಲಿ 12 ಸೆಂಮೀ ಗೆ 1 ಸೆಂಮೀ ನಂತೆಯೂ ಸಾಧಾರಣ ಮಣ್ಣಿನಲ್ಲಿ 1.5 ಸೆಂಮೀ ನಂತೆಯೂ ಕರಿಮಣ್ಣಿನಲ್ಲಿ 2 ಸೆಂಮೀನಂತೆಯೂ ಹೆಚ್ಚು ಎತ್ತರವಾಗಿ ಏರಿಯನ್ನು ಕಟ್ಟಬೇಕು. ತಗ್ಗಿದ ಮೇಲೆ ಅದು ಸರಿಯಾದ ಎತ್ತರಕ್ಕೆ ಬರುತ್ತದೆ. ಒಂದು ವರ್ಷ ಮಾಡಿದ ಮಣ್ಣು ಕೆಲಸದ ಮೇಲೆ ಮಾರನೆಯ ವರ್ಷ ಕೆಲಸವನ್ನು ಪ್ರಾರಂಭಿಸುವಾಗ ಅಡ್ಡಕೊಯ್ತದಲ್ಲಿ ಮೆಟ್ಟಲಾಗಿಯೂ ಮಟ್ಟದಲ್ಲಿ ಹಲ್ಲು ಹಲ್ಲಾಗಿಯೂ ಹಳೆಯ ಮಣ್ಣು ಕೆಲಸವನ್ನು ಕತ್ತರಿಸಿ ಅದರೊಂದಿಗೆ ಬೆರೆಯುವಂತೆ ಹೊಸ ಮಣ್ಣನ್ನು ಹಾಕಬೇಕು. ಏರಿಯ ಮುಂಭಾಗ ನೀರಿನ ಅಲೆಗಳ ಹೊಡೆತದಿಂದ ಕೊರೆಯದ ಹಾಗೆ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ಕಲ್ಲು ಕಟ್ಟಡವನ್ನು ಕಟ್ಟಬೇಕು. (ಎಚ್.ಸಿ.ಕೆ.)

**ಏರಿಯನ್ ತತ್ತ್ವ:** ಕ್ರಿಸ್ತ ದೈವಾಂಶ ಸಂಭೂತನೇ ಹೊರತು ದೇವರೇ ಅಲ್ಲ ಎಂದು ಹೇಳುವ ಒಂದು ಪಂಥದ ತತ್ತ್ವಸರಣಿ. ಇದನ್ನು ಪ್ರತಿಪಾದಿಸಿದವ ಅಲೆಕ್ಸಾಂಡ್ರಿಯದಲ್ಲಿ ಪ್ರ.ಶ. 4ನೆಯ ಶತಮಾನದಲ್ಲಿದ್ದ ಏರಿಯಸ್ ಎಂಬ ಕ್ರೈಸ್ತ ತಾತ್ತ್ವಿಕ. ಏರಿಯಸ್‌ಗಿಂತ ಮುಂಚೆ ಲೂಷಿಯನ್ನನ ಬರವಣಿಗೆಗಳಲ್ಲಿ ಬೀಜರೂಪವಾಗಿ ಈ ಭಾವನೆ ವ್ಯಕ್ತವಾಗಿದೆಯಾದರೂ ಅದನ್ನು ಸ್ಪಷ್ಟವಾಗಿ ಯಾರೂ ಘೋಷಿಸಿರಲಿಲ್ಲ. ಏರಿಯಸ್ ಅದನ್ನು ಘಂಟಾಘೋಷವಾಗಿ ಸಾರಿದ್ದರಿಂದ ಆ ತತ್ತ್ವ ಅವನದೇ ಎಂಬ ನಂಬಿಕೆಗೆ ಅವಕಾಶವಾಯಿತು. ಕ್ರಿಸ್ತ ದೇವರೆಂದೇ ನಂಬಿದ್ದ ಜನ ಏರಿಯಸ್‌ಗೆ ಬಹಿಷ್ಕಾರ ಹಾಕಿದರು (319). ಹಾಗೆಯೇ ಅನೇಕ ಬಿಷಪರು ಏರಿಯಸ್‌ನ ಪಕ್ಷವನ್ನು ಸಮರ್ಥಿಸಿ ವಿವಾದ ಹೂಡಿದರು. ಈ ವಿಚಾರವಾಗಿ ತೀರ್ಮಾನ ಕೊಡಲು ಕಾನ್‌ಸ್ಟ್ಯಾಂಟೈನ್

ಒಂದು ಸಮಿತಿಯನ್ನು ಏರ್ಪಡಿಸಿದ. ಈ ಸಮಿತಿಯವರು ಪವಿತ್ರಾತ್ಮನ ಸತ್ತ್ವವೂ ಕ್ರೈಸ್ತನ ಸತ್ತ್ವವೂ ಒಂದೇ ಆದುದರಿಂದ ಕ್ರಿಸ್ತ ದೇವರೇ ಹೊರತು ಮಾನವನಲ್ಲವೆಂದು ತೀರ್ಪುಕೊಟ್ಟರು.

ಆದರೂ ಏರಿಯಸ್‍ನ ವಾದ ಅಡಗಲಿಲ್ಲ. ಅದು ಪುನಃ ಜನಮೆಚ್ಚಿನ ಭಾವನೆಯಾಯಿತು. ಪ್ರ.ಶ. 381ರಲ್ಲಿ ಅದನ್ನು ವಿಮರ್ಶಿಸಲು ಕಾನ್‍ಸ್ಟ್ಯಾಂಟಿನೋಪಲ್‍ನಲ್ಲಿ ಇನ್ನೊಂದು ಸಮಿತಿಯನ್ನು ರಚಿಸಲಾಯಿತು. ಅದೂ ಏರಿಯನ್ ತತ್ತ್ವಕ್ಕೆ ವಿರುದ್ಧವಾಗಿಯೇ ತೀರ್ಪುಕೊಟ್ಟಿತು. ಈ ವಾದ ಅಲ್ಲಿಗೇ ಮುಕ್ತಾಯವಾಯಿತೆಂದು ಹೇಳಲಾಗುವುದಿಲ್ಲ. ಇದರ ಅನುಯಾಯಿಗಳು ಈಗಲೂ ಇದ್ದಾರೆ. (ಜಿ.ಎಚ್.)

**ಏರುಮುಖ ಪ್ರತಿಫಲ ಸೂತ್ರ:** ಉತ್ಪಾದನೆಯಲ್ಲಿ ತೊಡಗಿಸಲಾಗುವ ಅಂಗಗಳ ಪೈಕಿ ಒಂದನ್ನೋ ಹಲವನ್ನೋ ಸ್ಥಿರವಾಗಿರಿಸಿ ಉಳಿದ ಅಂಗವನ್ನು ಅಥವಾ ಅಂಗಗಳನ್ನು ಸ್ಥಿರವಾದ ಅಂಗಗಳೊಂದಿಗೆ ಹೆಚ್ಚುಹೆಚ್ಚಾಗಿ ಸಂಯೋಜಿಸಿದಾಗ, ಹೀಗೆ ಅಧಿಕವಾಗಿ ತೊಡಗಿಸಿದ ಅಂಗ ಅಥವಾ ಅಂಗಗಳಿಂದ ದೊರಕುವ ಪ್ರತಿಫಲ ಅಥವಾ ಉತ್ಪತ್ತಿ ಒಂದು ಘಟ್ಟದವರೆಗೂ ಏರುಗತಿಯಲ್ಲಿ ಹೆಚ್ಚುತ್ತಿರುತ್ತದೆ. ಉತ್ಪಾದನೆಯ ಎಲ್ಲ ಅಂಶಗಳನ್ನೂ ಹೆಚ್ಚಿಸಿದಾಗಲೂ–ಎಂದರೆ ಈ ಉತ್ಪಾದನಾಂಗಗಳ ನಡುವಣ ಪ್ರಮಾಣಗಳನ್ನು ಹೆಚ್ಚು ಕಡಿಮೆ ಮಾಡದೆ ಎಲ್ಲವನ್ನೂ ಒಟ್ಟಿಗೆ ಹೆಚ್ಚಿಸಿದಾಗಲೂ (ಉದಾಹರಣೆಗೆ, ಅವನ್ನು ಇಮ್ಮಡಿಸಿದಾಗ, ಮುಮ್ಮಡಿಸಿದಾಗ)–ಅವುಗಳ ಇಡೀ ಗಾತ್ರವನ್ನೇ ವಿಸ್ತರಿಸಿದಾಗಲೂ–ಪ್ರತಿಫಲ ಹೆಚ್ಚಬಹುದು. ಈ ಎರಡೂ ಸಂದರ್ಭಗಳಲ್ಲಿ ಸಂಭವಿಸುವ ಏರುಮುಖ ಪ್ರತಿಫಲ ಪ್ರವೃತ್ತಿಯ ವಿವೇಚನೆಯೇ ಏರುಮುಖ ಪ್ರತಿಫಲಸೂತ್ರ (ಲಾ ಆಫ್ ಇನ್‍ಕ್ರೀಸಿಂಗ್ ರಿಟರ್ನ್ಸ್).

ಉತ್ಪಾದನಾಂಗಗಳ ಪರಸ್ಪರ ಪ್ರಮಾಣಗಳನ್ನು ವ್ಯತ್ಯಾಸ ಮಾಡಿದಾಗ ಅವುಗಳಿಂದ ಪ್ರತಿಫಲದ ಮೇಲಾಗುವ ಪರಿಣಾಮಗಳನ್ನು ಪ್ರತಿಫಲ ಸೂತ್ರಗಳೆಂದು ಪರಿಗಣಿಸುವುದು ವಾಡಿಕೆಯಾಗಿ ಬಂದಿದೆ. ಎಲ್ಲಿಯವರೆಗೆ ಈ ಉತ್ಪಾದನಾಂಗಗಳ ಪರಸ್ಪರ ಸಂಯೋಜನೆ ಪರಮಾವಧಿ ಮುಟ್ಟಿರುವುದಿಲ್ಲವೋ ಅಲ್ಲಿಯವರೆಗೆ ಇವುಗಳ ಪ್ರಮಾಣಗಳ ವ್ಯತ್ಯಾಸದಿಂದ ಪ್ರತಿಫಲವೂ ಏರುಗತಿಯಲ್ಲೇ ಏರುತ್ತಿರುತ್ತದೆ. ಅಲ್ಲಿಂದಾಚೆಗೆ ಉತ್ಪಾದನಾಂಗಗಳಲ್ಲಿ ಯಾವುದೊಂದನ್ನು ಹೆಚ್ಚಿಸಿದರೂ ಈ ಹೆಚ್ಚಿನ ಘಟಕದಿಂದಾಗಿ ದೊರಕುವ ಪ್ರತಿಫಲ ಹಿಂದಿನ ಘಟಕದ ಪ್ರತಿಫಲಕ್ಕಿಂತ ಹೆಚ್ಚಾಗಿರುವುದು ಸಾಧ್ಯವಿಲ್ಲ. ಇದು ಸ್ಥಿರವಾಗಿಯೇ ಮುಂದುವರಿಯಬಹುದು; ಅಥವಾ ಇಳಿಮುಖವಾಗಬಹುದು. ಆದ್ದರಿಂದ ವಿವೇಕಿಯಾದ ಉತ್ಪಾದಕ ಈ ಘಟ್ಟದಲ್ಲಿ ನಾನಾ ಉತ್ಪಾದನಾಂಗಗಳ ಪರಸ್ಪರ ಪ್ರಮಾಣಗಳನ್ನು ವ್ಯತ್ಯಾಸಗೊಳಿಸುವ ಪ್ರಯತ್ನವನ್ನು ಸ್ಥಗಿತಗೊಳಿಸುತ್ತಾನೆ. ಉತ್ಪಾದನೆಯ ಈ ಗಾತ್ರಕ್ಕೆ ಇದೇ ಪರಮಾವಧಿಯ ಸ್ಥಿತಿ.

ಒಂದು ಉದ್ಯಮದ ಉತ್ಪಾದನೆಯ ಏರುಮುಖ, ಇಳಿಮುಖ ಮತ್ತು ಸ್ಥಿರ ಪ್ರವೃತ್ತಿಗೆ ಸಂಬಂಧಿಸಿದಂತೆ ಕ್ರಮವಾಗಿ ಏರುಮುಖ, ಇಳಿಮುಖ ಮತ್ತು ಸ್ಥಿರ ಪ್ರತಿಫಲ ಸೂತ್ರಗಳೆಂಬ ಮೂರುಸೂತ್ರಗಳನ್ನು ಪ್ರತಿಪಾದಿಸುವುದು ಅರ್ಥಶಾಸ್ತ್ರಜ್ಞರಲ್ಲಿ ರೂಢಿಯಾಗಿ ಬಂದಿದೆ. ಆದರೆ ಉತ್ಪಾದನಾಂಗಗಳ ವ್ಯತ್ಯಾಸದಿಂದ ಪ್ರತಿಫಲಿಸುವ ಈ ಮೂರೂ ಪ್ರವೃತ್ತಿಗಳನ್ನೂ ಚರ ಅನುಪಾತ ಸೂತ್ರವೆಂಬ (ಲಾ ಆಫ್ ವೇರಿಯಬಲ್ ಪ್ರಪೋರ್ಷನ್ಸ್) ಒಂದೇ ಸೂತ್ರದ ಮೂರು ಮುಖಗಳೆಂದು ಪರಿಗಣಿಸುವುದು ಹೆಚ್ಚು ಸಮಂಜಸವೆಂಬುದಾಗಿ ವಾದಿಸಲಾಗಿದೆ. ಉತ್ಪಾದನ ಕಾರ್ಯದಲ್ಲಿ ಪ್ರಕೃತಿಯ ಕೈವಾಡ ಎಲ್ಲಿ ಅಧಿಕವಾಗಿದೆಯೋ ಅಲ್ಲಿ ಇಳಿಮುಖ ಪ್ರತಿಫಲ ಪ್ರವೃತ್ತಿ ಪ್ರಬಲವಾಗಬಹುದೆಂದೂ (ಉದಾಹರಣೆ : ಕೃಷಿ) ಮಾನವನ ಕೈ ಎಲ್ಲಿ ಮೇಲೋ ಅಲ್ಲಿ ಏರುಮುಖ ಪ್ರತಿಫಲ ಪ್ರವೃತ್ತಿ ಹೆಚ್ಚು ಪ್ರಬಲವೆಂದೂ (ಉದಾಹರಣೆ: ಕೈಗಾರಿಕೆ) ಮಾರ್ಷಲ್ ಹೇಳಿದ್ದಾನೆ. ಒಟ್ಟಿನಲ್ಲಿ ಉತ್ಪಾದನಾಂಗಗಳ ಅಧಿಕ ನಿಯೋಜನೆಯಿಂದ ಅದರ ಅನುಪಾತಕ್ಕಿಂತ ಅಧಿಕ ಪ್ರತಿಫಲ ದೊರಕಿದಾಗ ಏರುಮುಖ ಪ್ರತಿಫಲ ಸೂತ್ರದ ಪ್ರಭಾವವಿದೆಯೆಂದು ಹೇಳಬಹುದು. ವೆಚ್ಚದ ದೃಷ್ಟಿಯಿಂದ ಹೇಳುವುದಾದರೆ, ಏರುಮುಖ ಪ್ರತಿಫಲ ಪ್ರವೃತ್ತಿಯಿದ್ದಾಗ ಅಂಚಿನ ಘಟಕದ ವೆಚ್ಚ ಕಡಿಮೆಯಾಗುವ ಪ್ರವೃತ್ತಿಯಿರುತ್ತದೆ. ಉತ್ಪಾದನೆ ಹೆಚ್ಚಿದಂತೆಲ್ಲ ಉತ್ಪನ್ನದ ಬೆಲೆ ಇಳಿಯುತ್ತಿದ್ದ ಪಕ್ಷದಲ್ಲಿ ಏರುಮುಖ ಪ್ರತಿಫಲ ಸೂತ್ರವಿದೆಯೆಂದು ತಿಳಿಯತಕ್ಕದ್ದು.

ಏರುಮುಖ ಪ್ರತಿಫಲ ಅಥವಾ ಇಳಿಮುಖ ವೆಚ್ಚಕ್ಕೆ ಅನೇಕ ಕಾರಣಗಳುಂಟು. ಉತ್ಪಾದನೆಯ ಗಾತ್ರ ವಿಸ್ತರಿಸಿದಂತೆ ವಿಶೇಷಜ್ಞತೆ ಅಥವಾ ಶ್ರಮ ವಿಭಜನೆಯನ್ನ ನುಸರಿಸಲು ಅವಕಾಶ ಕಲ್ಪಿತವಾಗುವುದು. ಕಾರ್ಮಿಕರನ್ನು ಅಧಿಕ ಸಂಖ್ಯೆಯಲ್ಲಿ ನಿಯಮಿಸಿದಂತೆಲ್ಲ ಕಾರ್ಯಭಾರವನ್ನು ವಿಭಜಿಸಿ ಪ್ರತಿ ಕಾರ್ಯವನ್ನೂ ವಿಶೇಷಜ್ಞನಾದ ಕಾರ್ಮಿಕನಿಗೆ ವಹಿಸಿಕೊಡಲು ಅನುಕೂಲವಾಗುತ್ತದೆ. ಇದರಿಂದ ಕಾರ್ಯದಕ್ಷತೆ ಅಧಿಕಗೊಂಡು ಉತ್ಪನ್ನ ಅಧಿಕ ಪ್ರಮಾಣದಲ್ಲಿ ವೃದ್ಧಿಗೊಳ್ಳಲು ಸಾಧ್ಯವಾಗುವುದು. ಎರಡನೆಯದಾಗಿ, ಉತ್ಪಾದನೆಯ ಗಾತ್ರ ಕೆಳಮಟ್ಟದ್ದಾಗಿದ್ದಾಗ ಕಾರ್ಖಾನೆಯಲ್ಲಿ ತಯಾರಾಗುವಂಥ ಹಲವು ರೀತಿಯ ಸಾಮಗ್ರಿಗಳು ಸಾಧನಗಳ ಅಭಾವದ ಕಾರಣದಿಂದ ವ್ಯರ್ಥವಾಗುವ ಸಂಭವವಿರುತ್ತದೆ. ಆದರೆ ಉತ್ಪಾದನ ಶ್ರೇಣಿ ವಿಸ್ತಾರಗೊಂಡಂತೆ ಅಂಥ ಸಾಮಗ್ರಿಗಳು ವ್ಯರ್ಥವಾಗದಂತೆ ಅವುಗಳಿಂದ ಉಪವಸ್ತುಗಳನ್ನು ನಿರ್ಮಿಸಿ ಉತ್ಪತ್ತಿಯ ಸರಾಸರಿ ವೆಚ್ಚವನ್ನು ಕಡಿಮೆಮಾಡುವ ಸಾಧ್ಯತೆಯಿರುತ್ತದೆ. ಅಲ್ಲದೆ ಪ್ರತಿಫಲವನ್ನು ಅಧಿಕಗೊಳಿಸುವ ಕಾರಣಗಳು ಸಾಮಾನ್ಯವಾಗಿ ಆಯಾಮಿಕ (ಡೈಮೆನ್ಷನಲ್) ಸಂಬಂಧವುಳ್ಳವು. ಉದಾಹರಣೆಗೆ, ತಲಾ 1 ಮೀ ಬದಿ ಇರುವ ಪೆಟ್ಟಿಗೆಯಲ್ಲಿ ಹಿಡಿಸುವುದರ 27ರಷ್ಟು ವಸ್ತುಗಳು ತಲಾ 3 ಮೀ ಬದಿ ಇರುವ ಪೆಟ್ಟಿಗೆಯಲ್ಲಿ ಹಿಡಿಸುತ್ತವೆ. ಆದರೆ ದೊಡ್ಡ ಪೆಟ್ಟಿಗೆಯನ್ನು ತಯಾರುಮಾಡಲು ಚಿಕ್ಕದಕ್ಕೆ ಬೇಕಾಗುವ ಒಂಬತ್ತರಷ್ಟು ಹಲಗೆ ಆದರೆ ಸಾಕು. ಹಾಗೆಯೆ 200 ಟನ್ನಿನ ಧಾರಣಶಕ್ತಿಯಿರುವ ಐದು ಕುಲುಮೆಗಳನ್ನು ಕಟ್ಟಲು 1,000 ಟನ್ನಿನ ಧಾರಣಶಕ್ತಿಯಿರುವ ಒಂದೇ ಕುಲುಮೆ ಕಟ್ಟುವುದಕ್ಕಿಂತ ಸರಾಸರಿಯಲ್ಲಿ ಅಧಿಕ ವೆಚ್ಚ ಬೀಳುತ್ತದೆ. ಉತ್ಪಾದನೆಯ ಕೆಳಶ್ರೇಣಿಯಿಂದ ಉನ್ನತ ಶ್ರೇಣಿಗಳಿಗೆ ಹೋದಂತೆಲ್ಲ ಉದ್ಯಮಿಗೆ ಮೇಲೆ ಹೇಳಿದ ಕೆಲವು ಅನುಕೂಲಗಳು ಲಭಿಸುತ್ತವೆ. ಇವು ಆಂತರಿಕ ಅನುಕೂಲಗಳು ಅಥವಾ ಮಿತವ್ಯಯಗಳು. ಇವುಗಳ ಜೊತೆಗೆ ಕೆಲವು ಬಾಹ್ಯ ಅನುಕೂಲಗಳು ಲಭಿಸುವುದುಂಟು (ಉದಾಹರಣೆ: ಸಾಗಣೆ ವೆಚ್ಚ, ವಿದ್ಯುಚ್ಛಕ್ತಿ, ಸಾಮಗ್ರಿಯ ಸಂಗ್ರಹಣ ಮತ್ತು ಮಾರುಕಟ್ಟೆಯ ವೆಚ್ಚಗಳಲ್ಲಿ ರಿಯಾಯಿತಿ). ಕೈಗಾರಿಕೆ ವಿಸ್ತಾರಗೊಂಡಂತೆ ಹಲವು ಪೂರಕ ಕಾರ್ಖಾನೆಗಳು ಬೆಳೆದು ಸಲಕರಣೆ, ಕಚ್ಚಾಸಾಮಗ್ರಿ ಮೊದಲಾದ ಈ ಕೈಗಾರಿಕೆಗಳಿಗೆ ಕಡಿಮೆ ದರಗಳಲ್ಲಿ ಒದಗಬಹುದು. ಈ ಎಲ್ಲ ವೆಚ್ಚಗಳ ಇಳಿತದಿಂದಾಗಿ ಉತ್ಪನ್ನದ ಆಂಶಿಕ ವೆಚ್ಚವೂ ಇಳಿಯುವುದು ಸಹಜ (**ನೋಡಿ– ಬೃಹದ್ಗಾತ್ರ–ಉತ್ಪಾದನೆ; ಗಾತ್ರಾನುಗುಣ–ಪ್ರತಿಫಲ**). (ಎಬಿ.ಎ.)

**ಏರೈಡೆಸ್:** ಆರ್ಕಿಡೇಸಿ ಸಸ್ಯ ಕುಟುಂಬದಲ್ಲಿ (ಫ್ಯಾಮಿಲಿ) ಅತಿ ಮುಖ್ಯವಾದ ಜಾತಿ. ಇದರಲ್ಲಿ ಅರುವತ್ತಕ್ಕೂ ಹೆಚ್ಚು ಪ್ರಭೇದಗಳು (ಸ್ಪೀಶೀಸ್) ಇವೆ. ಇವು ಆರ್ಕಿಡ್ ಸಸ್ಯಗಳು; ಬಲು ಸರಳ ಮತ್ತು ಸುಂದರವಾಗಿರುವುದರಿಂದ ಜನಪ್ರಿಯವಾಗಿವೆ. ಫ್ಲೋರಾಕೊಚಿನ್ ಚೈನೆನ್‍ಸಿಸ್ ಎಂಬ ಗ್ರಂಥದಲ್ಲಿ (1790) ಏರೈಡೆಸ್ ಓಡರೇಟಂ ಎಂಬ ಜಾತಿಯ ಆರ್ಕಿಡ್ಡಿನ ಉಲ್ಲೇಖವಿದೆ. ಏರೈಡೆಸ್ ಆರ್ಕಿಡ್ಡುಗಳು ಏಷ್ಯಖಂಡದ ಮೂಲವಾಸಿಗಳು. ಏರೈಡೆಸ್ ಜಾತಿಯವು ಸಾಮಾನ್ಯವಾಗಿ ಅಪ್ಪು ಸಸ್ಯಗಳಾಗಿಯೂ ಶಿಲಾಸಸ್ಯಗಳಾಗಿಯೂ ಬೆಳೆಯುತ್ತವೆ. ಇವು ವಾಂಡಾ ಜಾತಿಯ ಆರ್ಕಿಡ್ಡುಗಳನ್ನು ಅನೇಕ ವಿವರಗಳಲ್ಲಿ ಹೋಲುತ್ತವೆ. ಇವುಗಳಲ್ಲಿ ಹಳೆಯ ಎಲೆಗಳ ಸ್ವಲ್ಪಭಾಗ ಉಳಿದಿರುವುದು ಗಮನಾರ್ಹ ವ್ಯತ್ಯಾಸ. ಈ ಜಾತಿಯ ಸಸ್ಯಗಳ ಹೂ ಗೊಂಚಲುಗಳು ನರಿಯ ಬಾಲದಂತಿರುವುದರಿಂದ ನರಿಬಾಲದ ಆರ್ಕಿಡ್ಡುಗಳೆಂದು ಇವುಗಳಿಗೆ ಹೆಸರು. ಹೂ ಗೊಂಚಲು ಅಂತ್ಯಾರಂಬಿ (ರೇಸಿಮೋಸ್); ಕೊಳವೆಯಾಕಾರ. ಪರಿಮಳವನ್ನು ಬೀರುವ ಆರ್ಕಿಡ್ಡುಗಳಲ್ಲಿ ಇವು ಅಗ್ರಸ್ಥಾನ ಪಡೆದಿವೆ. ಹೂಗಳ ಬಣ್ಣ ವಿವಿಧ, ಪುಷ್ಪಪತ್ರ ಮತ್ತು ದಳ ಅಗಲ. ಪಕ್ಕದ ಹೂವಿನ ಪುಷ್ಪಪತ್ರಗಳು ಮೇಲಿನ ಹೂವಿನ ಪುಷ್ಪಪತ್ರಗಳಿಗಿಂತ ಅಗಲವಾಗಿರುತ್ತವೆ. ಪುಷ್ಪಮಂಜರಿಯ ಕಂಬದ ಬುಡದ ಭಾಗ ದಪ್ಪವಾಗಿ ಹಕ್ಕಿ ತಲೆಯ ಆಕಾರವನ್ನು ಹೋಲುತ್ತವೆ. ಹೂವಿನ ಭಾಗಗಳು ವಿವಿಧ ಬಣ್ಣಗಳಲ್ಲಿರುವುದರಿಂದ ಬಹಳ ಸುಂದರವಾಗಿ ಕಾಣುತ್ತವೆ. *

ಏರೈಡೆಸ್ ಓಡರೇಟಂ

**ಏರ್ಲಂಗ:** ಈಗ ಇಂಡೊನೇಷ್ಯದ ಭಾಗವಾಗಿರುವ ಜಾವಾ ರಾಜ್ಯದ ದೊರೆಗಳಲ್ಲೊಬ್ಬ. ಪೂರ್ವ ಜಾವಾ ರಾಜನಾಗಿದ್ದ ಧರ್ಮವಂಶನ ಅಳಿಯ. ಧರ್ಮವಂಶನ ಆಳ್ವಿಕೆಯ ಕಾಲದಲ್ಲಿ ಆ ರಾಜ್ಯ ತಕ್ಕಮಟ್ಟಿನ ಪ್ರಗತಿ ಹೊಂದಿತ್ತು. ಮಲಕ್ಕಾ ಸುಮಾತ್ರಗಳೊಂದಿಗೆ ವ್ಯಾಪಾರ ಬೆಳೆಸಿತ್ತು. ಆದರೆ ಕೆಲವು ಜಲಸಂಧಿಗಳ

ಹತೋಟಿ ಯಾರದಾಗಿರಬೇಕೆಂಬ ಪ್ರಶ್ನೆಯ ಬಗ್ಗೆ ಸುಮಾತ್ರದ ಶ್ರೀವಿಜಯ ಸಾಮ್ರಾಜ್ಯಕ್ಕೂ ಧರ್ಮವಂಶನಿಗೂ ವ್ಯಾಜ್ಯ ಹುಟ್ಟಿದ ಫಲವಾಗಿ ಸುಮಾತ್ರನರು ಜಾವ ದ್ವೀಪವನ್ನು ಆಕ್ರಮಿಸಿ ರಾಜಮನೆತನದವರನ್ನು ಕೊಂದು ರಾಜಧಾನಿಯನ್ನು ಧ್ವಂಸಮಾಡಿದರು (1006). ಧರ್ಮವಂಶನ ರಾಜ್ಯ ಚುಕ್ಕುಚೂರಾಯಿತು. ಆದರೆ ಏರ್ಲಂಗ ಶತ್ರುಗಳ ಕೈಗೆ ಸಿಕ್ಕದೆ ತಲೆತಪ್ಪಿಸಿಕೊಂಡು ಅಲೆದಾಡಿ, ಶಕ್ತಿವರ್ಧಿಸಿಕೊಂಡು, ಬೆಂಬಲಿಗರ ನೆರವಿನಿಂದ ರಾಜ್ಯವನ್ನು ಗೆದ್ದ (1010). 1019ರಲ್ಲಿ ಪಟ್ಟಾಭಿಷಿಕ್ತನಾಗಿ ಹಲು ಶ್ರೀಧರ್ಮವಂಶ ಏರ್ಲಂಗ ಅನಂತ ವಿಕ್ರಮೋತ್ತುಂಗ ದೇವ ಎಂಬ ಹೆಸರಿನಿಂದ ಮಹಾರಾಜನಾದ. ಈತನ ಆಳ್ವಿಕೆಯ ಕಾಲದಲ್ಲಿ ರಾಜ್ಯ ಮತ್ತೆ ಒಂದಾಗಿ ಪ್ರಬಲವಾಯಿತು. ಏರ್ಲಂಗ ರಾಜನಾದ ಕೂಡಲೇ ಭೀಷ್ಮ ಪ್ರಭಾವ, ಅಧಮಾಪನು ಮುಂತಾದ ಸಣ್ಣ ರಾಜರುಗಳನ್ನು ಗೆದ್ದ. ದಕ್ಷಿಣ ಜಾವದಲ್ಲಿ ಆಳುತ್ತಿದ್ದ ರಾಣಿಯೊಬ್ಬಳ ಮೇಲೆ 1032ರಲ್ಲಿ ಯುದ್ಧಮಾಡಿ ಅವಳನ್ನು ಸೋಲಿಸಿದ. ಏರ್ಲಂಗನ ಸ್ಥಾನ ಭದ್ರವಾಯಿತು. ಪ್ರ.ಶ. 1035ರಲ್ಲಿ ವೆಂಗ್‌ಕರ್ ರಾಜ್ಯದ ವಿಜಯನ ಮೇಲೆ ದಂಡೆತ್ತಿಹೋಗಿ ಅವನನ್ನೂ ಸೋಲಿಸಿದ. ತನ್ನ ಶಕ್ತಿ ಪ್ರತಿಷ್ಠೆಗಳಿಗೆ ತಕ್ಕಂತೆ ಕಹುರಿಪನ್ ಎಂಬಲ್ಲಿ ಹೊಸ ರಾಜಧಾನಿ ಸ್ಥಾಪಿಸಿದ. ರಾಜ್ಯದಲ್ಲಿ ಸುಭಿಕ್ಷೆ ಹೆಚ್ಚಿತು. ಕಳಿಂಗ, ಕರ್ನಾಟಕ ಮುಂತಾದ ದೂರ ದೇಶಗಳಿಂದ ವ್ಯಾಪಾರಗಾರರು ಇಲ್ಲಿಗೆ ಬರುತ್ತಿದ್ದರು. ಏರ್ಲಂಗನೂ ಈತನ ಮಾವನಂತೆ ಅನೇಕ ಹಿಂದೂ ದೇವಸ್ಥಾನಗಳನ್ನೂ ಬೌದ್ಧ ಆಶ್ರಮಗಳನ್ನೂ ಸ್ಥಾಪಿಸಿದ. ಸಾಹಿತ್ಯ ಕಲೆಗಳಿಗೆ ಆಶ್ರಯ ನೀಡಿದ. ಕಣ್ವ ಕವಿಯ ಅರ್ಜುನವಿವಾಹ ಎಂಬ ಗ್ರಂಥ ಈತನ ಪ್ರೋತ್ಸಾಹದಿಂದ ರಚಿತವಾಯಿತೆಂದು ಹೇಳಲಾಗಿದೆ. ನ್ಯಾಯಸಂಹಿತೆಯೂ ಹಿಂದೂ ಕಾವ್ಯಗಳೂ ಸಂಸ್ಕೃತದಿಂದ ಜಾವಾನೀಸ್ ಭಾಷೆಗೆ ಅನುವಾದವಾದವು. ಭಾರತೀಯ ಜ್ಞಾನಭಂಡಾರದ ಬಾಗಿಲನ್ನು ಜಾವದ ಸಾಮಾನ್ಯ ಜನಕ್ಕೂ ತೆರೆಯಲು ಸಾಧ್ಯವಾದದ್ದು ಆಗ.

ಏರ್ಲಂಗ ತನ್ನ ರಾಜ್ಯವನ್ನು ಇಬ್ಬರು ಮಕ್ಕಳಲ್ಲಿ ಹಂಚಿದ. ಈತ ಸತ್ತದ್ದು 1049ರಲ್ಲಿ. ಬೆಲ್‌ಹನ್‌ನಲ್ಲಿ ಇವನ ಕಳೇಬರಕ್ಕೆ ಸಮಾಧಿ ಮಾಡಲಾಯಿತು. ಆ ಸ್ಥಳದಲ್ಲಿ ಸ್ಥಾಪಿಸಲಾದ ವಿಷ್ಣುವಿಗ್ರಹ ಏರ್ಲಂಗನ ಕಾಲದ ಶಿಲ್ಪಕಲೆಯ ಪ್ರತೀಕವಾಗಿದೆ. (ಎ.ವಿ.ಎನ್.)

**ಏರ್ಲಿಕ್, ಪಾಲ್:** 1854–1915. ಜರ್ಮನಿಯ ಪ್ರಸಿದ್ಧ ವೈದ್ಯ. ಅಣುಜೀವಿವಿಜ್ಞಾನಿ ಮತ್ತು ರಸಾಯನವಿಜ್ಞಾನಿ. 1908ರಲ್ಲಿ ಈತನಿಗೆ ವೈದ್ಯವಿಜ್ಞಾನದಲ್ಲಿ ನೊಬೆಲ್ ಪಾರಿತೋಷಕ ದೊರೆಯಿತು. ರಸಾಯನವಿಜ್ಞಾನವನ್ನು ವೈದ್ಯವಿಜ್ಞಾನ, ಜೀವವಿಜ್ಞಾನಗಳಿಗೆ ಹೊಂದಿಸಿದ್ದು ಈತನ ಬಲು ಮುಖ್ಯಕಾರ್ಯ. ಮೊದಲು ಈತ ವೈದ್ಯವಿಜ್ಞಾನವನ್ನು ಅಭ್ಯಸಿಸಿದ. ಬಳಿಕ ರಸಾಯನವಿಜ್ಞಾನ ಈತನನ್ನು ಆಕರ್ಷಿಸಿತು. ಜೀವಕೋಶದ ವಿವಿಧ ಭಾಗಗಳನ್ನು ನಿರ್ದಿಷ್ಟ ವರ್ಣದ್ರವ್ಯಗಳಿಂದ ಬಣ್ಣಗಟ್ಟುವುದನ್ನು (ಸ್ಟೈನಿಂಗ್) ಕಂಡುಹಿಡಿದು ರಕ್ತಪರೀಕ್ಷಾವಿಜ್ಞಾನಕ್ಕೆ ತಳಹದಿ ಹಾಕಿದ. ಜೀವಂತ ಪ್ರಾಣಿಗೆ ತೊಂದರೆಯಾಗದಂತೆ ಅದರ ನಿರ್ದಿಷ್ಟ ಅಂಗಗಳಿಗೆ ಬಣ್ಣಗಟ್ಟುವುದನ್ನು ಕಂಡುಹಿಡಿದ. ಕ್ಷಯರೋಗದ ಅಣುಜೀವಿಯನ್ನು ಸೂಕ್ಷ್ಮದರ್ಶಕದಲ್ಲಿ ನೋಡಲು ಒಂದು ವಿಧಾನವನ್ನು ಆವಿಷ್ಕರಿಸಿದ್ದೂ ಈತನೇ. ಇಮ್ಯೂನಾಲಜಿ ಕ್ಷೇತ್ರದಲ್ಲಿ ಈತ ಬಹಳ ಉಪಯುಕ್ತ ಕಾರ್ಯಗಳನ್ನು ನಡೆಸಿದ. ಇದೆಲ್ಲಕ್ಕಿಂತ ಮುಖ್ಯವೆಂದರೆ ಆಧುನಿಕ ರಾಸಾಯನಿಕ ಚಿಕಿತ್ಸಾಕ್ರಮ ಈತನಿಂದಲೇ ಮೊದಲಾದದ್ದು. ಸಿಫಿಲಿಸ್ ರೋಗದ ಔಷಧಿಯಾದ ಸಾಲ್ವರ್ಸಾನ್–606ನ್ನು ಕಂಡು ಹಿಡಿದುದು ಈತನ ಗಮನಾರ್ಹ ಸಾಧನೆ. ತರ್ಕಬದ್ಧವಾಗಿ ಯೋಚಿಸಿ ಒಂದು ಹೊಸ ರಾಸಾಯನಿಕ ಸಂಯುಕ್ತವನ್ನು ಯಾವುದೇ ಒಂದು ರೋಗಕ್ಕೆ ಹೇಳಿ ಮಾಡಿಸಿದಂತೆ ಔಷಧವಾಗಿ ತಯಾರಿಸುವುದು ಅಂದಿನಿಂದ ಮೊದಲಾಯಿತು. ಈಗ ಇಂಥ ಔಷಧಗಳ ತಯಾರಿಕೆ ಒಂದು ಬೃಹತ್ ಕೈಗಾರಿಕೆಯಾಗಿದೆ. (ಎಂ.ಆರ್.ಆರ್.)

**ಏರ್ಲಿಕ್, ಯುಜೀನ್:** 1862–1918. ಶುದ್ಧ ಸಮಾಜವಿಜ್ಞಾನಕ್ಕೂ ನ್ಯಾಯಶಾಸ್ತ್ರಕ್ಕೂ ಮಧ್ಯವರ್ತಿಯೆನ್ನಬಹುದಾದ ನೈಯಾಯ ಸಮಾಜವಿಜ್ಞಾನದ (ಸೋಷಿಯಾಲೊಜಿ ಆಫ್ ಲಾ) ಜನಕ. ನ್ಯಾಯಶಾಸ್ತ್ರವನ್ನು ಸಮಾಜವಿಜ್ಞಾನದ ಹಿನ್ನೆಲೆಯಲ್ಲಿಟ್ಟು ಅಧ್ಯಯನ ಮಾಡುವುದರಿಂದ ಅದರ ನೈಜ ಸ್ವರೂಪ ಅರ್ಥವಾಗುತ್ತದೆಂಬ ವಾದದ ಪ್ರತಿಪಾದಕ. ಆಗ ಆಸ್ಟ್ರಿಯನ್ ಚಕ್ರಾಧಿಪತ್ಯದ ಭಾಗವಾಗಿದ್ದು ಈಗ ರಷ್ಯದಲ್ಲಿರುವ ಬುಕೋವಿನ ಪ್ರಾಂತ್ಯದ ಮುಖ್ಯ ಪಟ್ಟಣವಾದ ಚೆರ್ನಾವಿಟ್ಸ್‌ನಲ್ಲಿ ಏರ್ಲಿಕ್ ಜನಿಸಿದ. ವಿಯೆನ್ನ ವಿಶ್ವವಿದ್ಯಾಲಯದಲ್ಲಿ ನ್ಯಾಯಶಾಸ್ತ್ರದ ಪದವಿ ಪಡೆದ ಮೇಲೆ ತನ್ನ ಹುಟ್ಟೂರಿನ ವಿಶ್ವವಿದ್ಯಾಲಯದಲ್ಲಿ ಈತನಿಗೆ 1897ರಲ್ಲಿ ರೋಮನ್ ನ್ಯಾಯದ ಖಾಸಗಿ ಅಧ್ಯಾಪಕ ಹುದ್ದೆ (ಪ್ರೀವಾಟ್ ಡೊಟ್ಸೆಂಟ್) ದೊರಕಿತು. ಕೊನೆಗಾಲದವರೆಗೂ ಈತ ಅಲ್ಲೇ ಉಳಿದ. ಈತ 1918 ಅಥವಾ 1919ರಲ್ಲಿ ಅಸುನೀಗಿರಬೇಕೆಂದು ಹೇಳಲಾಗಿದೆ. ಬುಕೋವಿನ ಪ್ರಾಂತ್ಯವನ್ನು ರೂಮೇನಿಯಕ್ಕೆ ವರ್ಗಾಯಿಸಿದ್ದರಿಂದ ಆ ಸಮಯದಲ್ಲಿ ಅಲ್ಲಿ ಬಹಳ ಗಲಭೆ ಏರ್ಪಟ್ಟಿದ್ದ ಪರಿಣಾಮವಾಗಿ ಆತ ಸತ್ತ ದಿನ ಯಾವುದೆಂಬುದು ತಿಳಿಯಲಿಲ್ಲ.

ತನ್ನ ಜೀವಿತದ ಮುಖ್ಯ ಕಾಲದಲ್ಲಿ ಏರ್ಲಿಕ್ ರೂಢಿಸಿಕೊಂಡ ಅಭಿಪ್ರಾಯಗಳ ಕ್ರೋಢೀಕೃತ ರೂಪವೇ ಈತನ ಫಂಡಮೆಂಟಲ್ ಪ್ರಿನ್ಸಿಪಾಲ್ಸ್ ಆಫ್ ದಿ ಸೋಷಿಯಲೊಜಿ ಆಫ್ ಲಾ (1913) ಎಂಬ ಗ್ರಂಥ. ಆಗ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡ್ ವಿನಾ ಉಳಿದ ದೇಶಗಳಲ್ಲಿನ ನ್ಯಾಯಪದ್ಧತಿಯೆಲ್ಲ ಆ ಕಾಲದಲ್ಲಿ ಪ್ರಚಲಿತವಿದ್ದ ಕಲ್ಪನೆಯ ತಳಹದಿಯ ಮೇಲೆ ಕಟ್ಟಿದ್ದಾಗಿತ್ತು. ವ್ಯವಹಾರ ಯಾವುದೇ ಇರಲಿ, ಪ್ರಚಲಿತವಿರುವ ಕಾಯಿದೆಗಳ ಹಾಗೂ ಅಧಿಕೃತ ನ್ಯಾಯಾಲಯಗಳ ತೀರ್ಪುಗಳ ವ್ಯವಸ್ಥೆಯ ಆಧಾರದಮೇಲೆ ಅದನ್ನು ಇತ್ಯರ್ಥ ಮಾಡುವುದು ಸಾಧ್ಯವೆಂಬುದು ಸ್ಥೂಲವಾಗಿ ಈ ಮತ. ಈ ಸಿದ್ಧಾಂತವನ್ನು ಪ್ರಧಾನವಾಗಿ ವಿರೋಧಿಸಿದವನೆಂದರೆ ಜರ್ಮನಿಯ ಹರ್ಮನ್ ಕಾಂಟರೋವಿಚ್. ಆತನದು ಸ್ವತಂತ್ರ ನ್ಯಾಯದ ಸಿದ್ಧಾಂತ. ಏರ್ಲಿಕ್ ಇದನ್ನು ಸಮರ್ಥಿಸಿದನಾದರೂ ಇದನ್ನೇ ಸಂಪೂರ್ಣವಾಗಿ ಅನುಸರಿಸಲಿಲ್ಲ; ಇದರಿಂದಲೂ ಮುಂದೆ ಹೋದ. ನ್ಯಾಯ ತೀರ್ಪುಗಳಲ್ಲಿ ವ್ಯಕ್ತವಾದ ನ್ಯಾಯಕ್ಕೂ ಸಾಮಾಜಿಕ ಕಟ್ಟಳೆಗಳಲ್ಲಿ ಪ್ರಕಟವಾಗಿರುವ ನ್ಯಾಯಕ್ಕೂ ಇರುವ ವ್ಯತ್ಯಾಸವನ್ನೂ ಗಮನಿಸಬೇಕೆಂಬುದು ಏರ್ಲಿಕನ ವಾದ. ಸಮಾಜದಲ್ಲಿ ಇಡೀ ನ್ಯಾಯವ್ಯವಸ್ಥೆಯನ್ನರಿಯಲು ಕಾಯಿದೆಗಳ ನ್ಯಾಯವಷ್ಟೇ ಸಾಲದು ಎಂಬ ವಾದವನ್ನು ಮಂಡಿಸಿದವರಲ್ಲಿ ಏರ್ಲಿಕನೇ ಮೊದಲಿಗನಲ್ಲ. ರಸ್ಸೊ–ಪೋಲಿಷ್ ನ್ಯಾಯಶಾಸ್ತ್ರಜ್ಞ ಲೆಪ್ ಪೆಟ್ರಜಿಟ್ಸ್ಕಿ ಈ ಬಗ್ಗೆ ಚರ್ಚಿಸಿದ್ದಾನೆ (1905–07). ನ್ಯಾಯಕ್ಕೆ ಮನೋವಿಜ್ಞಾನವೇ ತಳಹದಿಯೆಂದೂ ವ್ಯಕ್ತಿಯ ಮನಸ್ಸಿನ ವರ್ತನೆಯೇ ಇದರ ಬಗ್ಗೆ ನಿರ್ಣಾಯಕವೆಂದೂ ಆತನ ವಾದ. ಪಿಟಿರಿಮ್ ಎ. ಸರೋಕಿನ್ ಮತ್ತು ನಿಕೊಲಸ್ ಟಿಮಷೆಫ್ ಆತನ ಪಂಥದವರು. ಆದರೆ ವ್ಯಕ್ತಿಗತ ಮನೋವಿಜ್ಞಾನಕ್ಕೆ ಆತ ನೀಡಿದ ಮಹತ್ವ ತಪ್ಪೆಂದು ಇವರ ಮತ. ಸಾಮೂಹಿಕ ಮನೋವಿಜ್ಞಾನದ ಪ್ರಾಮುಖ್ಯವನ್ನು ಇವರು ಒತ್ತಿ ಹೇಳಿದರಲ್ಲದೆ ಕೊನೆಗೆ ನ್ಯಾಯವನ್ನು ಸಮಾಜಶಾಸ್ತ್ರದ ಸೀಮೆಯೊಳಕ್ಕೆ ತಂದರೆನ್ನಬಹುದು.

ಏರ್ಲಿಕನ ಕಾಲದಲ್ಲೇ ಬದುಕಿದ್ದ ರಾಸ್ಕೊ ಪೌಂಡನೂ ಸಮಾಜಶಾಸ್ತ್ರೀಣ ನ್ಯಾಯಶಾಸ್ತ್ರದ ಬಗ್ಗೆ ಲೇಖನಗಳನ್ನು ಬರೆದ. ಪುಸ್ತಕ ನ್ಯಾಯಕ್ಕೂ ಜೀವನ ನ್ಯಾಯಕ್ಕೂ ಇರುವ ವ್ಯತ್ಯಾಸವನ್ನು ತೋರಿಸಲು ಈತ ಯತ್ನಿಸಿದ್ದಾನೆ.

ಏರ್ಲಿಕನ ಹಾದಿಯಲ್ಲೇ ವಿಚಾರ ಮಾಡಿದ ಇತರರೆಂದರೆ ಸ್ವೀಡನಿನ ಅಪ್ಸಾಲ ಪಂಥದವರು. ನ್ಯಾಯದ ಮೂಲ ಕಲ್ಪನೆಗಳೇ ತಪ್ಪೆಂಬುದು ಇವರ ಮತ. ಹಕ್ಕುಗಳು ಬಾಧ್ಯತೆಗಳು ಎಂಬುವೇ ಇಲ್ಲ; ಈ ಬಗ್ಗೆ ಮಾನವನ ಭಾವನೆಗಳಿವೆ ಅಷ್ಟೆ, ಎಂದು ಇವರು ವಾದಿಸಿದ್ದಾರೆ.

ಪುಸ್ತಕದ ಬದನೆಕಾಯಷ್ಟೆ ನ್ಯಾಯವಲ್ಲ; ಇದು ಸಮಾಜದ ಒಂದು ವಾಸ್ತವ ಸಂಗತಿ ಎಂಬ ಬಗ್ಗೆ ವಿಚಾರ ಹರಿಸಿದವೆಂಬ ದೃಷ್ಟಿಯಲ್ಲಿ ಈ ಅಧ್ಯಯನಗಳೆಲ್ಲ ಉಪಯುಕ್ತವಾಗಿವೆ. ಮಾನವ ಯಾವ ರೀತಿ ವರ್ತಿಸುತ್ತಾನೆ ಎಂಬುದರ ಮೇಲಿಂದ ಇದನ್ನರಿಯಬಹುದು. ಸಂಘಟಿತ ಸಮಾಜದಲ್ಲೆಲ್ಲ ಇದನ್ನು ಕಾಣಬಹುದು ಎಂದು ಈತ ವಾದಿಸಿದ. ಆದ್ದರಿಂದ ನ್ಯಾಯದ ಇರುವಿಕೆ, ವ್ಯಾಪ್ತಿ, ಅದರ ಕಟ್ಟಾಜ್ಞೆ–ಇವು ಪೂರ್ವ ನಿಯಮಿತ ಕಲ್ಪನೆಗಳಿಂದ ಉಂಟಾಗುವುದಿಲ್ಲ; ಸಮಾಜದ ಸತ್ಯಗಳನ್ನು ಇದು ಪ್ರತಿಬಿಂಬಿಸ ಬೇಕಾಗುತ್ತದೆ. ಆದುದರಿಂದ ನ್ಯಾಯಾಲಯ ಇರುವ ನ್ಯಾಯವನ್ನೇ ಎತ್ತಿ ಹಿಡಿಯುತ್ತದೆಯೆಂದು ಹೇಳುವುದಾದರೆ ಅದು ತಪ್ಪಾಗುತ್ತದೆ. ಸಾಮಾಜಿಕ ಸತ್ಯಗಳನ್ನು ಒಳಗೊಂಡ ನ್ಯಾಯವನ್ನು ನ್ಯಾಯಾಲಯ ನಿರ್ಮಾಣ ಮಾಡಬೇಕಾಗುತ್ತದೆ. ಏಕೆಂದರೆ, ಸಮಾಜದಲ್ಲಿ ಕೇವಲ ಅಧಿಕಾರಾರೂಢ ನ್ಯಾಯವಲ್ಲದೆ, ಅನಧಿಕಾರಾರೂಢ ಕಟ್ಟಳೆಗಳು ಅನೇಕವಿರುತ್ತವೆ ಮತ್ತು ವ್ಯಕ್ತಿಗಳು ಈ ಅನಧಿಕಾರಾರೂಢ ನ್ಯಾಯವನ್ನೂ ಪರಿಪಾಲಿಸುತ್ತಿರುತ್ತಾರೆ. ಹಾಗೆ ವ್ಯಕ್ತಿಗಳು ನ್ಯಾಯವನ್ನು ಪರಿಪಾಲಿಸಲಿಕ್ಕೂ, ಪರಿಪಾಲನೆ ಮಾಡದಿರುವುದಕ್ಕೂ ಅವರ ಮನೋಭೀಷ್ಟ ಸನ್ನಿವೇಶಗಳು ಮೂಲಕಾರಣ. ನೈಜವಾದ ನ್ಯಾಯ ದೊರಕಬೇಕಾದರೆ ಈ ಸಾಮಾಜಿಕ ಸನ್ನಿವೇಶಗಳು ಮತ್ತು ವ್ಯಕ್ತಿಗಳ ಮನೋಭೀಷ್ಟಗಳನ್ನು ನೆನಪಿನಲ್ಲಿಟ್ಟು ನ್ಯಾಯ ಮಾಡಬೇಕು ಮತ್ತು ದೊರಕಿಸಿಕೊಡಬೇಕು ಎಂಬುದು ಏರ್ಲಿಕನ ತರ್ಕದ ತಿರುಳು.

ನಿರೀಕ್ಷಣ, ಸಾಧಾರಣೀಕರಣ, ಅವಲೋಕಿತಾಂಶಗಳ ಜೋಡಣೆ, ನಿರ್ದಿಷ್ಟ ಸಂದರ್ಭಗಳಲ್ಲಿ ಈ ಫಲಿತಾಂಶಗಳ ಅನ್ವಯ ಈ ವಿಧಾನದಿಂದ ಸಮಾಜದ ಕಟ್ಟಳೆಗಳನ್ನರಿಯಬಹುದೆಂದು ಏರ್ಲಿಕ್ ಸೂಚಿಸಿದ್ದಾನೆ. ಇದು ಆಗಿನ ಸಮಾಜವಿಜ್ಞಾನಿ ಅನುಸರಿಸುತ್ತಿದ್ದ ವಿಧಾನವೇ ಆಗಿದೆ.

ಸಾಮಾಜಿಕ ನ್ಯಾಯಶಾಸ್ತ್ರದ ಜೊತೆಗೆ ಈ ಪುಸ್ತಕದಲ್ಲಿ ಏರ್ಲಿಕ್ ನಾನಾ ದೇಶಗಳ ನ್ಯಾಯ ಬೆಳೆವಣಿಗೆಯನ್ನು ಕುರಿತು ವಿವೇಚಿಸಿದ್ದಾನೆ. ನ್ಯಾಯಾ ಸಮಾಜವಿಜ್ಞಾನಕ್ಕಾಗಿ ಮೀಸಲಾದ ಅಧ್ಯಾಯಗಳು ಕೊನೆಯ ಎರಡು ಮಾತ್ರ, ಆದರೆ ಇದು ಒಂದು

ಸಮರ್ಪಕ ಶಾಸ್ತ್ರವಾಗಿ ಬೆಳೆಯುವುದಕ್ಕೆ ಆವಶ್ಯವಾದಷ್ಟು ನೇರ್ಪಾಗಿ ಇಲ್ಲಿ ಈ ಬಗ್ಗೆ ವಿವೇಚನೆ ನಡೆದಿಲ್ಲ. ಯಾವ ನಿಟ್ಟಿನಲ್ಲಿ ಇದು ಬೆಳೆಯಬಲ್ಲದೆಂಬ ನಿರ್ದಿಷ್ಟ ಕಲ್ಪನೆಯೂ ಇಲ್ಲ.

ನ್ಯಾಯದ ಬೆಳೆವಣಿಗೆ, ಅದರ ವಿನ್ಯಾಸ–ಇವುಗಳ ಬಗ್ಗೆ ಈ ತೆರನಾದ ಅಧ್ಯಯನ ಆವಶ್ಯಕವಾದರೂ ಯಾವುದು ನ್ಯಾಯ ಎಂಬುದನ್ನು ಯಾವ ಮಾಪನ ಕ್ರಮದಿಂದ ಕಂಡುಹಿಡಿಯಬೇಕೆನ್ನುವುದರ ಬಗ್ಗೆ ಸಾಕಷ್ಟು ಮಾರ್ಗದರ್ಶನವನ್ನು ಈ ಸಾಮಾಜಿಕ ಅಧ್ಯಯನಕ್ರಮ ನೀಡಲಿಲ್ಲ. ನ್ಯಾಯಕ್ಕೆ ಉಗಮಸ್ಥಾನವಾದ ಸಮಾಜ ವ್ಯವಸ್ಥೆಯನ್ನೂ ಅದು ಎಡೆಕೊಡುವ ಹಿತಾಸಕ್ತಿಗಳನ್ನೂ ಗಮನಕ್ಕೆ ತಂದುಕೊಂಡಿಲ್ಲವಾದ ಕಾರಣ ಈ ತೆರನಾದ ಅಧ್ಯಯನ ಅಪ್ರಬುದ್ಧ ಶಾಸ್ತ್ರವಾಗಿಯೇ ಉಳಿದಿದೆ. (ಎಲ್.ಎಸ್.)

**ಏಲಂ:** ನೈರುತ್ಯ ಪರ್ಷಿಯದಲ್ಲಿದ್ದ ಒಂದು ಪ್ರಾಚೀನ ದೇಶ. ಸ್ಥೂಲವಾಗಿ ಈಗಿನ ಕೂಜಿಸ್ತಾನ್ ಪ್ರಾಂತ್ಯದಲ್ಲಿತ್ತೆನ್ನಬಹುದು. ಭೌಗೋಳಿಕವಾಗಿಯೂ ಸಾಂಸ್ಕೃತಿಕವಾಗಿಯೂ ಬ್ಯಾಬಿಲೋನಿಯದ ಪೂರ್ವಕ್ಕೆ ಯುಫ್ರೇಟೀಸ್ ಮತ್ತು ಟೈಗ್ರಿಸ್ ನದಿಗಳ ದಕ್ಷಿಣ ಪ್ರದೇಶವೇ ಏಲಮಿನ ಮುಖ್ಯ ಭಾಗ. ಆಗಿಂದಾಗ್ಗೆ ಇಲ್ಲಿನ ಜನ ನೆರೆಹೊರೆಯ ಪ್ರದೇಶಗಳ ಜನರೊಂದಿಗೆ ಹೋರಾಡುತ್ತಿದ್ದುದರಿಂದ ಈಶಾನ್ಯ ಆಗ್ನೇಯಗಳ ಬೆಟ್ಟಗಾಡುಗಳೂ ಈ ದೇಶದ ಎಲ್ಲೆಯೊಳಕ್ಕೆ ಸೇರಿದ್ದುದುಂಟು. ಇದರ ಎಲ್ಲೆಯನ್ನು ಖಚಿತವಾಗಿ ಹೇಳುವುದು ಅಸಾಧ್ಯ. ಯುಫ್ರೇಟಿಸ್ ಟೈಗ್ರಿಸ್ ನದಿಗಳ ಮುಖದ ಜೌಗುಪ್ರದೇಶವನ್ನು ಬೈಬಲಿನಲ್ಲಿ ಏಲಂ ಎಂದು, ಕರೆಯಲಾಗಿದೆ.

ಮೊದಲಿಗೆ ಇಲ್ಲಿ ಅನೇಕ ಬುಡಕಟ್ಟುಗಳ ಜನ ವಾಸಿಸುತ್ತಿದ್ದರು. ಇವರ ಪೈಕಿ ಸೀಮೈಟ್‌ಗಳೂ ಕ್ಯಾಸೈಟ್‌ಗಳೂ ಮುಖ್ಯರಾದವರು. ಕ್ಯಾಸೈಟ್‌ಗಳಿಂದಾಗಿ ಈ ಪ್ರದೇಶಕ್ಕೆ ಸಿಸ್ಸೆ ಅಥವಾ ಸಿಸ್ಸಿಯ ಎಂದು ಹೆಸರಾಗಿ ಏಲಮಿನ ಮುಖ್ಯಪಟ್ಟಣಕ್ಕೆ ಸೂಸಿಯಾನೆ ಅಥವಾ ಸೂಸ ಎಂದು ಹೆಸರಾಯಿತೆಂದು ಒಂದು ವಾದವಿದೆ. ಸುಮೇರಿಯನ್ ಗ್ರಂಥಗಳಲ್ಲಿ ಈ ಪ್ರದೇಶಕ್ಕೆ ನಮ್ಮ (ಎತ್ತರದ ಪ್ರದೇಶ) ಎಂಬ ಹೆಸರಿದ್ದು ಸಿಮೆಟಿಕ್ ಭಾಷಾಂತರದಲ್ಲಿ ಅದು ಏಲಮ್ಟು ಅಥವಾ ಏಲಂ ಎಂದಾಯಿತು. ಏಲಂನಲ್ಲಿ ಆವಾನ್, ಅನಾಸ್, ಸಿಮಾಷ್ ಮತ್ತು ಸೂಸ ಎಂಬ ನಾಲ್ಕು ಪ್ರದೇಶಗಳಿದ್ದುವೆಂದು ಪುರಾತನ ಆಕರಗಳಿಂದ ತಿಳಿದು ಬರುತ್ತದೆ.

ಪೂರ್ವಶಿಲಾಯುಗದ ಅವಶೇಷಗಳು ಇಲ್ಲಿ ದೊರಕಿಲ್ಲ. ಮಧ್ಯ ಶಿಲಾಯುಗದ ಮಾಹಿತಿಗಳು ಸ್ಪಷ್ಟವಾಗಿಲ್ಲ. ನವಶಿಲಾಯುಗ ಕಾಲದ ಅನೇಕ ಅವಶೇಷಗಳು ದೊರಕಿವೆ. ಇಲ್ಲಿನ ಜನಕ್ಕೆ ವ್ಯವಸಾಯವೂ ಪಶುಪೋಷಣೆಯೂ ಗೊತ್ತಿದ್ದುವೆಂದೂ ಇವರು ಗ್ರಾಮವಾಸಿಗಳೆಂದೂ ಹೇಳಬಹುದು. ನೆಲ ಉತ್ತು, ಬಿತ್ತಿ, ಕಲ್ಲಿನ ಹಲ್ಲುಗಳಿದ್ದ ಮೂಳೆಯ ಕುಡುಗೋಲುಗಳಿಂದ ಫಸಲು ಕೊಯ್ಯುತ್ತಿದ್ದದ್ದುಂಟು ಸ್ವಲ್ಪ ಮಟ್ಟಿಗೆ ಲೋಹದ ಬಳಕೆಯೂ ಇವರಿಗೆ ಗೊತ್ತಿತ್ತು. ಬೇಟೆಗಾರಿಕೆ ಇವರ ಮುಖ್ಯ ಕಸಬುಗಳಲ್ಲೊಂದು. ಶವಗಳನ್ನು ಮನೆಗಳಲ್ಲೂ, ಹೊರಗೂ ಹೂಳುತ್ತಿದ್ದರು. ಬುಟ್ಟಿಗಳ ನೇಯ್ಗೆ ಮತ್ತು ಲಿನನ್ ಬಟ್ಟೆ ತಯಾರಿಕೆ ಗೊತ್ತಿತ್ತು. ಪ್ರ.ಶ.ಪೂ. 3800ರಲ್ಲೆ ಇಲ್ಲಿ ಕೋಟೆಯಿಂದ ರಕ್ಷಿತವಾದ ನಾಗರಿಕತೆ ಪ್ರಾರಂಭವಾಗಿತ್ತು. ಆ ಕಾಲದ ಮಡಕ್ಕು ಮತ್ತು ಬೈಡಾಲು ಎಂಬಲ್ಲಿಯೂ ಕೋಟೆಗಳಿದ್ದುವು. ಪ್ರ.ಶ.ಪೂ. 28ನೆಯ ಶತಮಾನದಲ್ಲಿ (?) ಮೆಸೊಪೊಟೇಮಿಯದ ದೊರೆ ಸಾರ್ಗಾನ್ ಏಲಮನ್ನು ಗೆದ್ದ. ಆ ವೇಳೆಗೆ ಸುಮೇರಿಯನ್ ಸಂಸ್ಕೃತಿ ಹರಡಿತ್ತು. ಅಲ್ಲಿ ನಗರ ರಾಜ್ಯಗಳು ಇದ್ದುದಲ್ಲದೆ ಸುಮೇರಿಯನ್ ದೇವತೆಗಳ ಆರಾಧನೆಯೂ ನಡೆದಿತ್ತು. ಅರ್ ಬಳಿಯಲ್ಲಿ, ಯೂಫ್ರೇಟಿಸ್ ನದಿಯ ದಡದಲ್ಲಿದ್ದ ಎರೆಕ್ ರಾಜ್ಯದ ದೊರೆ ಏಲಮನ್ನೂ ಗೆದ್ದುದಾಗಿ ಹೇಳಲಾಗಿದೆ. ಸಾರ್ಗಾನನ ಮೊಮ್ಮಗ ನರಮ್ಸಿನನಿಂದ ಇದರ ಆಡಳಿತಕ್ಕೆ ನೇಮಿತವಾಗಿದ್ದ ಪ್ರಾಂತ್ಯಾಧಿಕಾರಿ ಸ್ವತಂತ್ರನಾಗಿ ಆಳಿದನೆಂದೂ ತಿಳಿದುಬಂದಿದೆ. ಪ್ರಶ.ಪೂ. 3ನೆಯ ಸಹಸ್ರಮಾನದಲ್ಲಿ ಇಲ್ಲಿನ ಗುಟಿ ಜನ ಮೆಸೊಪೊಟೇಮಿಯವನ್ನು ಗೆದ್ದರು. ಮುಂದೆಯೂ ಇಲ್ಲಿ ಅನೇಕ ಸ್ವತಂತ್ರ ನಗರ ರಾಜ್ಯಗಳಿದ್ದರೂ ಇವುಗಳಲ್ಲಿ ಕೆಲವು ಸುಮೇರಿಯನ್ನರ ವಶವಾಗಿದ್ದುವು. ಸುಮೇರಿಯದ ಅರ್ ರಾಜ್ಯವನ್ನು ಇವರು ಒಮ್ಮೆ ಗೆದ್ದುಕೊಂಡಿದ್ದರು. ಏಲಂ ಪ್ರ.ಶ.ಪೂ. 17ನೆಯ ಶತಮಾನದಲ್ಲಿ ಬ್ಯಾಬಿಲೋನಿನ ಹಮುರಬಿಯ ವಶವಾಯಿತು. ಆಗ ಅನೇಕ ಸಾಂಸ್ಕೃತಿಕ ಅಂಶಗಳು ಮರೆಯಾದರೂ ಬರೆವಣಿಗೆ ಮುಂದುವರಿಯಿತು. ಪ್ರ.ಶ.ಪೂ. 8ನೆಯ ಶತಮಾನದಲ್ಲಿ ಅಸ್ಸೀರಿಯನ್ನರೊಡನೆ ಯುದ್ಧಮಾಡಿ ಬ್ಯಾಬಿಲೋನನ್ನು ಉಳಿಸಿಕೊಂಡ ಈ ಜನ ಅವರಿಂದ ಮುಂದೆ ಹಲವು ಸಲ ಸೋತರೂ ನೆರೆಹೊರೆಯ ದೊರೆಗಳ ಸಹಾಯದಿಂದ ಪ್ರ.ಶ.ಪೂ. 612ರಲ್ಲಿ ಆ ಚಕ್ರಾಧಿಪತ್ಯದ ನಾಶಕ್ಕೆ ಕಾರಣರಾದರು; ಅನಂತರ ಪರ್ಷಿಯದ ಅಕೆಮಿನಿಡ್ ಚಕ್ರಾಧಿಪತ್ಯದಲ್ಲಿ ಲೀನವಾಗಿ ಏಲಂ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡಿತು. (ಬಿ.ಕೆ.ಜ.)

ಏಲಮಿನ ಸಾಂಸ್ಕೃತಿಕ ಧಾರ್ಮಿಕ ವಿಚಾರಗಳ ಬಗ್ಗೆ ವಿವರಗಳೇನೂ ತಿಳಿದುಬಂದಿಲ್ಲ. ಆಗಿನ ಕಾಲದ ಬರೆವಣಿಗೆಗಳೆಲ್ಲ ಬಹುತೇಕ ಯುದ್ಧಗಳಲ್ಲಿ ಪಡೆದ ವಿಜಯವನ್ನು ಕುರಿತಂಥವು. ಇಷಿಷಿನಾಕ್, ಹುಬನ್, ಕಿರಿರಿಷ, ನಹುಂಟೆ ಮತ್ತು ಷಿಮುಟ್ ಇವು ಆ ಕಾಲದ ಕೆಲವು ಮುಖ್ಯ ದೇವತೆಗಳು. ಆದರೆ ಇವುಗಳ ಗುಣಧರ್ಮ, ಶಕ್ತಿ ಪ್ರಭಾವಗಳೇನು ಎಂಬುದು ತಿಳಿದುಬಂದಿಲ್ಲ.

ಏಲಂ ಭಾಷೆ ಸುಲಭಗ್ರಾಹ್ಯವಲ್ಲ. ಅದು ಒಂದು ಸಂಶ್ಲೇಷ ಭಾಷೆ. ಆದರೆ ಇದರ ಆ ಕಾಲದ ಸಂಬಂಧಿಗಳಾಗಲಿ, ಈ ವಂಶಕ್ಕೆ ಸೇರಿದ ಆಧುನಿಕ ಭಾಷೆಗಳಾಗಲಿ ಯಾವುವೂ ಇಲ್ಲ. ಏಲಂ ಪರ್ಷಿಯದ ಅಧೀನರಾಜ್ಯವಾದಾಗ ಬರೆಯಲಾದ ಅನೇಕ ದಸ್ತಾವೇಜುಗಳು ದೊರೆತಿವೆ. ಆದರೆ ಆ ವೇಳೆಗಾಗಲೇ ಮೂಲಭಾಷೆಯ ರಚನೆಯಲ್ಲಿ ಬಹಳಮಟ್ಟಿನ ಬದಲಾವಣೆಗಳಾಗಿದ್ದವು.

ಏಲಮಿನ ಕಲೆ ವಾಸ್ತುಶಿಲ್ಪಗಳು ಬ್ಯಾಬಿಲೋನಿಯದವುಗಳ ಮಾದರಿಯವು. *

**ಏಲಕ್ಕಿ:** ಸೈಟಾಮಿನೆ ಉಪವರ್ಗದ ಜಿಂಜಿಬರೇಸಿ ಕುಟುಂಬಕ್ಕೆ ಸೇರಿದ ಏಕದಳ ಪಂಗಡದ ಬಹುವಾರ್ಷಿಕ ಸಸ್ಯಗಳಲ್ಲೊಂದು; ಎಲೆಟೇರಿಯ ಕಾರ್ಡಮೋಮಮ್ ಎಂಬುದು ಇದರ ವೈಜ್ಞಾನಿಕ ಹೆಸರು. ಸಂಸ್ಕೃತದಲ್ಲಿ ಉಪಕುಂಚಿಕ ಎನ್ನುತ್ತಾರೆ. ಇದರಲ್ಲಿ ಒಂದೇ ಪ್ರಭೇದವಿದ್ದು ಇದು ಮುಖ್ಯವಾಗಿ ಭಾರತ ಮತ್ತು ಮಲಯ ಪರ್ಯಾಯದ್ವೀಪಗಳ ಸಸ್ಯವಾಗಿದೆ. ಜಗತ್ತಿನಲ್ಲೇ ಅತಿ ಪ್ರಮುಖವಾದ ಹಾಗೂ ಬೆಲೆ ಬಾಳುವ ಸಾಂಬಾರ ಪದಾರ್ಥವೆನಿಸಿದೆ. ಇದು ಪ್ರಪಂಚದ ಕೆಲವೇ ಭಾಗಗಳಲ್ಲಿ ಮಾತ್ರ ಬೆಳೆದರೂ ಬಹಳ ಹಿಂದಿನ ಕಾಲದಿಂದಲೂ ಅನೇಕ ದೇಶಗಳಲ್ಲಿ ಪ್ರಾಮುಖ್ಯ ಪಡೆದಿದೆ.

ಅಲ್ಲಲ್ಲಿ ಕಾಡಿನಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಈ ಗಿಡವನ್ನು ಈಚೆಗೆ ವಾಣಿಜ್ಯ ಬೆಳೆಯನ್ನಾಗಿ ದೊಡ್ಡ ತೋಟಗಳಲ್ಲಿ ಬೆಳೆಸುತ್ತಿದ್ದಾರೆ. ಕಾಯಿಯ ಗಾತ್ರದ ಮೇಲೆ ಏಲಕ್ಕಿಯನ್ನು ಮೂರು ವಿಧವಾಗಿ ವಿಂಗಡಿಸಲಾಗಿದೆ. ಸಿಲೋನ್ ಶ್ರೀಲಂಕ ಏಲಕ್ಕಿ ತೀರ ಉದ್ದವಾಗಿದೆ. ಮೈಸೂರು ಏಲಕ್ಕಿ ಅಷ್ಟು ಉದ್ದವಿಲ್ಲ. ಮಲಬಾರ್ ಏಲಕ್ಕಿ ಇನ್ನೂ ಗಿಡ್ಡ. ಏಲಕ್ಕಿ ದಕ್ಷಿಣ ಭಾರತದಲ್ಲಿ ಅಧಿಕವಾಗಿಯೂ ಸಿಲೋನ್, ಜಾವಗಳಲ್ಲಿ ಸ್ವಲ್ಪಮಟ್ಟಿಗೂ ಬೆಳೆಯುತ್ತದೆ. ನಿಜವಾದ ಏಲಕ್ಕಿಗೆ ಸಂಬಂಧಿಸಿದ ಇನ್ನೊಂದು ವಿಧದ ದೊಡ್ಡ ಏಲಕ್ಕಿ (ಅಮೋಮಮ್ ಕಾರ್ಡಮನ್) ಎಂಬುದು ಮುಖ್ಯವಾಗಿ ಭಾರತ ಮತ್ತು ಮಲಯ ಪರ್ಯಾಯ ದ್ವೀಪದಲ್ಲಿ ಇದನ್ನು ಬೆಳೆಯಲಾಗುತ್ತಿತ್ತು. ಈಗ ಇದು ತನ್ನ ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಗ್ವಾಟೆಮಾಲ, ಟಾಂಜೇನಿಯ, ಶ್ರೀಲಂಕಾ, ಥಾಯ್‌ಲೆಂಡ್, ಲಾವೋಸ್, ವಿಯೆಟ್ನಾಂ, ಕೊಸ್ಟಾರಿಕಾ, ಎಲ್‌ಸಾಲ್ವೆಡಾರ್ ಮೊದಲಾದ ದೇಶಗಳಲ್ಲೂ ಇದನ್ನು ಬೆಳೆಯಲಾಗುತ್ತಿದೆ. ಅಲ್ಲಲ್ಲಿ ಕಾಡಿನಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಈ ಗಿಡದ ಹಣ್ಣುಗಳ ಪ್ರಯೋಜನವನ್ನು ಗುರುತಿಸಿ ಇದನ್ನು ತೋಟಗಳಲ್ಲಿ ಬೆಳೆಯಲು ಪ್ರಾರಂಭಿಸಲಾಯಿತು. ಕ್ರಿಸ್ತಪೂರ್ವದ ಶತಮಾನಗಳಲ್ಲಿ ರೋಮನ್ ಸಾಮ್ರಾಜ್ಯ ಪೂರ್ವದೇಶಗಳೊಂದಿಗೆ ನಡೆಸುತ್ತಿದ್ದ ವಾಣಿಜ್ಯದ ಸರಕು ಪಟ್ಟಿಯಲ್ಲಿ ಏಲಕ್ಕಿಯ ಉಲ್ಲೇಖವಿದೆ. ಇದನ್ನು ಇಲಾಚಿ ಎಂದೂ ಕರೆಯಲಾಗುತ್ತಿತ್ತು. ಅಂತಾರಾಷ್ಟ್ರೀಯ ವಾಣಿಜ್ಯ ವಿಸ್ತರಿಸಿದಂತೆಲ್ಲ, ಮಧ್ಯಪ್ರಾಚ್ಯ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಇದರ ಬೇಡಿಕೆ ಹೆಚ್ಚಿತು. ಶೀತ ಹವಾಗುಣವಿರುವ ದೇಶಗಳಲ್ಲಿ ಕಾಫಿ, ಟೀ ಮತ್ತು ತಂಪು ಪಾನೀಯಗಳೊಂದಿಗೆ ಇದನ್ನು ಸೇರಿಸಿ ಸೇವಿಸುವ ಪದ್ಧತಿ ರೂಢಿಗೆ ಬಂತು. ಅಡುಗೆಯಲ್ಲಿ ಇದನ್ನು ಇದರ ಪರಿಮಳ ಗುಣಕ್ಕಾಗಿ ಬಳಸಲಾಗುತ್ತದೆ. ಔಷಧೀಯ ಗುಣಗಳಿಗಾಗಿಯೂ ಇದು ಪ್ರಸಿದ್ಧವಾಗಿದೆ.

ಏಲಕ್ಕಿ ಗಿಡದ ಎಲೆ, ಪ್ರಕಂದ ಮತ್ತು ಹೂಗೊಂಚಲು

ಇದನ್ನು ಮುಖ್ಯವಾಗಿ ಮೂರು ಬಗೆಗಳಾಗಿ ವಿಂಗಡಿಸಲಾಗುವುದು. ಸಿಲೋನ್ ಏಲಕ್ಕಿ, ಮೈಸೂರು ಏಲಕ್ಕಿ ಮತ್ತು ಮಲಬಾರ್ ಏಲಕ್ಕಿ. ಮೊದಲನೆಯದು ಸ್ವಲ್ಪ ಉದ್ದ ಕಾಯಿಯಾದರೆ, ಇನ್ನೆರಡು ಚಿಕ್ಕ ಗಾತ್ರದವು. ಏಲಕ್ಕಿಯ ಇನ್ನೂ ದೊಡ್ಡ ಬಗೆಯದು ಆಗ್ನೇಯ ಏಷ್ಯ ಮತ್ತು ಆಫ್ರಿಕದ ಭೂಮಧ್ಯ ರೇಖಾ ವಲಯದ ಹವಾಗುಣದಲ್ಲಿ

ಬೆಳೆಯುತ್ತದೆ. ಇದು ಮುಖ್ಯವಾಗಿ ಮಳೆಯಾಶ್ರಿತ ಬೆಳೆ. ತಂಪಾಗಿರುವ ಹಸುರು ಕಾಡಿನಿಂದ ಕೂಡಿರುವ ತೇವಾಂಶಭರಿತ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಇಂತಹ ಈ ಬೆಳೆ ಬೆಳೆಯುವ ಶ್ರೇಷ್ಠ ವಿವಾದ ಸ್ಥಳಕ್ಕೆ ಕರ್ನಾಟಕದ ಮಲೆನಾಡು ಭಾಗದಲ್ಲಿ ಹನಾಲು, ಹಡ್ಲು ಎಂದು ಕರೆಯುತ್ತಾರೆ. ಇಳಿಜಾರಿನ ಜಾಗದಲ್ಲೂ ಈ ಬೆಳೆಯನ್ನು ಬೆಳೆಯಬಹುದು. ಹಿಂದೆ ಕರ್ನಾಟಕದ ಕಾಡುಗಳಲ್ಲಿ ಅಲ್ಲಲ್ಲಿ ಕೆಲವು ಮರಗಳನ್ನು ಕಡಿದು ಉರುಳಿಸಿದಾಗ ಪ್ರಾಣಿ ಪಕ್ಷಿಗಳು ಹಿಕ್ಕೆಯ ರೂಪದಲ್ಲಿ ತಂದು ಹಾಕಿರುವ ಏಲಕ್ಕಿ ಬೀಜ ಗಳು ಸೂರ್ಯನ ಬಿಸಿಲಿಗೆ ಮೊಳಕೆಯೊಡೆದು ಗಿಡಗಳಾಗಿ ಬೆಳೆಯುತ್ತಿದ್ದವು. ಮೂರು ವರ್ಷಗಳಲ್ಲಿ ಗಿಡ ಬಲಿತು ಕಾಯಿ ಬಿಡುತ್ತಿತ್ತು. ಹಣ್ಣು ಪಕ್ವವಾದ ಮೇಲೆ ಕುಯ್ದು ತಂದು ವ್ಯಾಪರಸ್ಥರಿಗೆ ಮಾರುತ್ತಿದ್ದರು. ಆದರೆ ಕಾಡು ಕಡಿಮೆಯಾದಂತೆ ವ್ಯವಸ್ಥಿತವಾದ ಕೃಷಿ ಪದ್ಧತಿಯಿಂದ ಮಾತ್ರ ಏಲಕ್ಕಿ ಬೆಳೆಯುವುದು ಸಾಧ್ಯವಾಗಿದೆ.

**ನರ್ಸರಿಯಲ್ಲಿ ಬೆಳೆಯುತ್ತಿರುವ ಏಲಕ್ಕಿ ಸಸ್ಯಗಳು**

ಸಾಮಾನ್ಯವಾಗಿ ಇದನ್ನು ಬೀಜಗಳಿಂದ ವೃದ್ಧಿ ಮಾಡಲಾಗುತ್ತದೆ. ಉತ್ತಮ ಇಳುವರಿ ಮತ್ತು ಗುಣಗಳನ್ನು ಹೊಂದಿರುವ ಈ ಗಿಡಗಳಲ್ಲಿ ಹಿಡಿದಿರುವ ಇದರ ಹಣ್ಣನ್ನು ಆರಿಸಿ ಕುಯ್ದು ಬೀಜ ಮಾಡಲು ಬಳಸುತ್ತಾರೆ. ಇದರ ಸಿಪ್ಪೆ ತೆಗೆದು ಬೀಜವನ್ನು ಬೂದಿಯಿಂದ ಮಿಶ್ರಮಾಡಿ ನೆರಳಿನಲ್ಲಿ ಒಣಗಿಸಿ ಒಂದು ವಾರ ಬಿಟ್ಟು ನೆಲದಲ್ಲಿ ಅಂದರೆ ಮಡಿಗಳಲ್ಲಿ ಹಾಕಿ, ಕಾವು ಬರುವಂತೆ ಬತ್ತದ ಹುಲ್ಲು ಅಥವಾ ಚಿಮ್ಮಿ ಸೊಪ್ಪು ಅಥವಾ ಸೀಮೆಸೀಗೆ (ಲಂಟಾನ) ಸೊಪ್ಪನ್ನು ಮುಚ್ಚಿ ಮೇಲಕ್ಕೆ ಮೂರು ನಾಲ್ಕು ಅಡಿಗಳ ಎತ್ತರದಲ್ಲಿ ಚಪ್ಪರ ಹಾಕಿ ನೆರಳನ್ನು ಕಲ್ಪಿಸಲಾಗುತ್ತದೆ. ಹೀಗೆ ಒಟ್ಟು ಪಾತಿ ಮಾಡುವ ಜಮೀನನ್ನು ಬಹಳ ಸೂಕ್ಷ್ಮವಾಗಿ ಹದಮಾಡಿ ತಯಾರು ಮಾಡಬೇಕು. ಫಲವತ್ತಾದ ಮಣ್ಣನ್ನು ಅಷ್ಟೇ ಗೊಬ್ಬರದೊಂದಿಗೆ ಮಿಶ್ರಮಾಡಿ ಏರುಮಡಿಗಳನ್ನು ರಚಿಸಲಾಗುತ್ತದೆ. ಸಾಮಾನ್ಯವಾಗಿ

**ಮಂಜರಾಬಾದ್ ಏಲಕ್ಕಿ – ಹೂಗೊಂಚಲುಗಳು ನೆಲದ ಮೇಲೆ ಹರಡಿಕೊಂಡಿವೆ. ಎಲೆಗಳ ಕೆಳಭಾಗ ನಯವಾಗಿದೆ.**

ಈ ಮಡಿ ಅಥವಾ ಪಾತಿಗಳಿಗೆ ನಾಲ್ಕು ಅಡಿ ಅಗಲದ ಮುಕ್ಕಾಲು ಅಡಿ ಎತ್ತರದ ಪಾತಿ ಮಾಡುತ್ತಾರೆ. ಇದರಿಂದ ಮಳೆಗಾಲದಲ್ಲಿ ಹೆಚ್ಚಾದ ನೀರು ಬಸಿದು ಹೋಗಿ ಸಸಿಗಳು ಕೊಳೆಯದಂತೆ ರಕ್ಷಿಸಲು ಸಾಧ್ಯವಾಗುತ್ತದೆ. ಈ ಏರು ಮಡಿಗಳಲ್ಲಿ ಬೀಜಗಳನ್ನು ಬಿತ್ತಿ ಸ್ವಲ್ಪ ಮಣ್ಣಿನೊಳಗೆ ಹುಗಿದುಕೊಳ್ಳುವಂತೆ ಮೇಲ್ಮಣ್ಣನ್ನು ಚೆಲ್ಲುತ್ತಾರೆ. ಬೀಜ ಬಿತ್ತಿದ ಒಂದು ತಿಂಗಳ ಅನಂತರ ಮೊಳಕೆ ಬರಲು ಪ್ರಾರಂಭಿಸಿ ಸುಮಾರು ಎಂಟು ತಿಂಗಳಲ್ಲಿ ಸಸಿ ದೊಡ್ಡದಾಗುತ್ತದೆ. ಆಗ ತೀರ ಉದ್ದ ಅಂದರೆ ಎರಡು ಮೂರು ಅಡಿ ಉದ್ದ ಬಂದ ಸಸಿಗಳನ್ನು ಕಿತ್ತು ನೇರವಾಗಿ ತೋಟಗಳಲ್ಲಿ ಹಾಕುತ್ತಾರೆ. ಸಸಿಗಳು ಇನ್ನೂ ಚಿಕ್ಕವಾಗಿದ್ದರೆ ಮೂರು ನಾಲ್ಕು ಇಂಚಿಗೊಂದು ಗಿಡ ಬಿಟ್ಟು ಉಳಿದ ಸಸಿಗಳನ್ನು ಕಿತ್ತು ಪ್ರತ್ಯೇಕವಾಗಿ ಮಾಡಿದ ಪಾತಿಯಲ್ಲಿ ನೆಟ್ಟು ಮರುವರ್ಷ ಅವನ್ನೆಲ್ಲ ಕಿತ್ತು ತೋಟದಲ್ಲಿ ನೆಡುತ್ತಾರೆ. ಇತ್ತೀಚೆಗೆ ಬೀಜದಿಂದ ಮಾಡಿದ ಸಸಿಗಿಂತ ಗಿಡಗಳ ಬುಡದಲ್ಲಿ ಬರುವ ಕಂದುಗಳನ್ನು ನೇರವಾಗಿ ತೋಟದಲ್ಲಿ ನೆಡುವುದರಿಂದ ಅವು ಬೇಗ ಫಸಲು ಬಿಡುತ್ತವೆ

**ಸಿಲೋನ್ ಏಲಕ್ಕಿ – ಹೂಗೊಂಚಲುಗಳು ನೇರವಾಗಿವೆ. ಕಾಂಡ ಕೊಂಚ ಕೆಂಪಾಗಿದೆ**

ಮತ್ತು ಅಧಿಕ ಇಳುವರಿ ಕೊಡುತ್ತವೆ ಎಂದು ಕಂಡುಕೊಳ್ಳಲಾಗಿದೆ. ಇದಕ್ಕಾಗಿ ತೋಟದಲ್ಲಿ ಬಿಡಿ ಗಿಡಗಳನ್ನು ನೀರಿನ ಕೊರಕಲಿಗೆ ಹಾಕಿ ನೆಟ್ಟು ಅದರಿಂದ ಬರುವ ನಾಲ್ಕೈದು ಕಂದುಗಳನ್ನು ಅನಂತರ ಕಿತ್ತು ತೋಟಕ್ಕೆ ಹಾಕುವುದುಂಟು.

ತೋಟದಲ್ಲಿ ಸುಮಾರು ನಾಲ್ಕು ಐದಡಿ ದೂರಕ್ಕೊಂದು ಗುಂಡಿ ಬರುವಂತೆ ತೆಗೆದು ಬಡ್ಡೆಗಳನ್ನು ನೆಡಲಾಗುತ್ತದೆ. ಅವನ್ನು ದನಕರುಗಳು ತಿನ್ನದಂತೆ ನೋಡಿಕೊಳ್ಳಬೇಕು. ಕಳೆ ತೆಗೆದು ಗೊಬ್ಬರ ಹಾಕಿ, ಅಗತ್ಯ ಕ್ರಿಮಿನಾಶಕ ಸಿಂಪಡಿಸಿ ಪೋಷಿಸಬೇಕು. ಈ ಬೆಳೆಗೆ ಆಯ್ದುಕೊಂಡ ಜಾಗ ಫಲವತ್ತಾಗಿದ್ದು ಬೇಸಗೆಯಲ್ಲಿ



**ತೊಟ್ಟು ತೆಗೆದ ಮತ್ತು ಸಂಸ್ಕರಿಸಿದ ಏಲಕ್ಕಿಯ ರಾಶಿ**

ನೀರಾವರಿ ಅಥವಾ ಹನಿ ನೀರಾವರಿ ಒದಗಿಸುವುದು ಸಾಧ್ಯವಿದ್ದರೆ ಬೆಳೆ ಬೇಗ ಅಭಿವೃದ್ಧಿಯಾಗುತ್ತದೆ. ಗಿಡ ನೆಟ್ಟ ಮೂರು ವರ್ಷಗಳಲ್ಲಿ ಫಸಲು ಬರಲು ಪ್ರಾರಂಭವಾಗುತ್ತದೆ. ಆಯಾ ಭೂಮಿಯನ್ನನುಸರಿಸಿ ಐದರಿಂದ ಹತ್ತು ವರ್ಷಗಳವರೆಗೂ ಸುಸ್ಥಿತಿಯಲ್ಲಿರುತ್ತದೆ. ಸಾಂದ್ರ ಬೇಸಾಯ ಅನುಸರಿಸದೆ ಮಳೆಯನ್ನೇ ಆಧರಿಸಿ ಬೆಳೆ ಬೆಳೆದು ಸಾಮಾನ್ಯ ಕೃಷಿ ಮಾಡಿದರೆ ಎರಡು ಮೂರು ಫಸಲು ಕುಯ್ಯುವಷ್ಟರಲ್ಲಿ

ತೋಟ ಕಳಪೆಯಾಗುತ್ತದೆ. ಮತ್ತೆ ಹೊಸದಾಗಿ ಗಿಡ ಹಾಕಬೇಕಾಗುತ್ತದೆ. ಏಲಕ್ಕಿ ಗಿಡಗಳಿಗೆ ರಾಸಾಯನಿಕ ಗೊಬ್ಬರಕ್ಕಿಂತ ಸಾವಯವ ಗೊಬ್ಬರ ಹೆಚ್ಚು ಸೂಕ್ತವೆಂದು ತಿಳಿದುಬಂದಿದೆ. ಆಯಾ ಮಣ್ಣಿನ ಗುಣವನ್ನು ಪರೀಕ್ಷಿಸಿ ಸ್ವಲ್ಪ ಪ್ರಮಾಣದ ರಾಸಾಯನಿಕ ಗೊಬ್ಬರವನ್ನೂ ನೀಡಬಹುದು. ಈ ಬೆಳೆಯನ್ನು ಹೆಚ್ಚು ಸ್ಥಿರ ಬೆಳೆಯಾಗಿ ಮಾಡಲು ಪ್ರಯತ್ನಗಳು ಮುಂದುವರಿದಿವೆ.

1957ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಮೂಡಿಗೆರೆ ಕೈಮರದ ಬಳಿ ಇದರ ಪ್ರಾದೇಶಿಕ ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಯಿತು. ಇದು ಪ್ರಾರಂಭದಲ್ಲಿ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅನಂತರ ಇದನ್ನು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿಸಲಾಯಿತು (1965). ಈ ಸಂಸ್ಥೆ ಕಡೂರು– ಮಂಗಳೂರು ಹೆದ್ದಾರಿಯಲ್ಲಿದ್ದು ನೂರಾರು ಎಕರೆಗಳ ಜಮೀನು ಹೊಂದಿದೆ. ಈಗ ಇದೇ ಆವರಣದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪಿತವಾಗಿದೆ. ಏಲಕ್ಕಿ, ಮೆಣಸು, ಕಿತ್ತಳೆ ಇತ್ಯಾದಿಗಳನ್ನು ವೈಜ್ಞಾನಿಕವಾಗಿ ಬೆಳೆಸುವುದು ಮತ್ತು ಅವುಗಳ ಹೊಸ ತಳಿಗಳನ್ನು

ಏಲಕ್ಕಿಯನ್ನು ಸಂಸ್ಕರಣಕ್ಕೆ ಸಿದ್ಧಪಡಿಸಿರುವುದು

ಅಭಿವೃದ್ಧಿಪಡಿಸುವುದು ಈ ಸಂಸ್ಥೆಯ ಉದ್ದೇಶ. 1984ರಲ್ಲಿ ಈ ಸಂಸ್ಥೆಯ ವಿಜ್ಞಾನಿಗಳು ರೂಪಿಸಿದ ಮೂಡಿಗೆರೆ 1 ಏಲಕ್ಕಿ ತಳಿಯನ್ನು ಬಿಡುಗಡೆ ಮಾಡಲಾಯಿತು. 1994ರಲ್ಲಿ ಇನ್ನೂ ಸುಧಾರಿತ ತಳಿಯಾದ ಮೂಡಿಗೆರೆ 2ನ್ನು ಬಿಡುಗಡೆ ಮಾಡಲಾಯಿತು. ಬೆಳೆಗಾರರಿಗೆ ಸಸಿಗಳನ್ನು ಒದಗಿಸುವುದು, ಮಾದರಿ ಪ್ರಾತ್ಯಕ್ಷಿಕೆ ನಡೆಸಿ ಅವರಿಗೆ ತರಬೇತಿ ನೀಡುವುದು ಇದರ ಕಾರ್ಯಕ್ರಮಗಳಲ್ಲಿ ಸೇರಿವೆ.

ಈ ಗಿಡ ಸಮಗ್ರವಾಗಿ ಬೆಳೆದಾಗ ಐದು ಆರು ಅಡಿ ಎತ್ತರದವರೆಗೂ ಬೆಳೆಯುತ್ತದೆ. ಶುಂಠಿ, ಅರಿಶಿಣದಂತೆ ಈ ಸಸ್ಯ ಕಂಡುಬಂದರೂ ನೆಲದ ಒಳಗೆ ಗೆಡ್ಡೆ ರೂಪದಲ್ಲಿ ಫಲ ಬಿಡುವುದಿಲ್ಲ. ಕಾಂಡದಲ್ಲೂ ಫಲ ಬಿಡುವುದಿಲ್ಲ. ಏಲಕ್ಕಿ ಗಿಡದ ಬುಡದಲ್ಲಿ ಸುತ್ತ ಗರಿಗಳು ಬರುತ್ತವೆ. ಗರಿ ಎಂದರೆ ಉದ್ದಕ್ಕೆ ಬೇರಿನಂತಿರುವ, ಮಧ್ಯೆ ಮಧ್ಯೆ ಟಿಸಿಲೊಡೆದಿರುವ ಒಳ್ಳೆಯ ಮಾದರಿ. ಇದು ಏಪ್ರಿಲ್, ಮೇ ತಿಂಗಳಿನಿಂದಲೇ ಮೊದಲ ಮಳೆಗೆ ಹೊರಹೊಮ್ಮಲು ಪ್ರಾರಂಭವಾಗುತ್ತದೆ. ಒಂದು ಗಿಡಕ್ಕೆ ಇಂಥ ನಾಲ್ಕು ಗರಿಗಳು ಹೊರಟು ಹತ್ತಾರು ಟಿಸಿಲುಗಳೊಂದಿಗೆ ನೆಲದ ಮೇಲೆ ಸು.2 ಅಡಿಗಳವರೆಗೂ ಹಬ್ಬಿ ಹರಡಿಕೊಳ್ಳುತ್ತದೆ. ಮುಂಗಾರು ಮಳೆ ಹೆಚ್ಚಿದಂತೆಲ್ಲ ಈ ಗರಿಗಳಲ್ಲಿ ನೀಲಿ ಬಣ್ಣದ ಹೂ ಬಿಟ್ಟು ಕಾಯಿಗಟ್ಟುವ ಪ್ರಕ್ರಿಯೆ ನಡೆಯುತ್ತಿರುತ್ತದೆ. ಈ ಕಾಯಿಗಳು ಸೆಪ್ಟೆಂಬರ್ ಪ್ರಾರಂಭಕ್ಕೆಲ್ಲ ಪಕ್ವವಾಗತೊಡಗುತ್ತವೆ. ಹಣ್ಣಾದಂತೆಲ್ಲ ಕಿತ್ತು ಒಣಗಿಸಿ ಸಂಸ್ಕರಿಸಿ ಮಾರಾಟಕ್ಕೆ ಬಿಡುಗಡೆ ಮಾಡಲಾಗುತ್ತದೆ. ಹೂ ಬಿಡುವ ಕಾರ್ಯ ಮಳೆ ಚೆನ್ನಾಗಿದ್ದರೆ ನವೆಂಬರ್‌ವರೆಗೂ ಮುಂದುವರಿಯುತ್ತದೆ. ಆದ್ದರಿಂದ ಏಲಕ್ಕಿ ಕುಯಿಲು ಸಹ ಡಿಸೆಂಬರ್ ಅಂತ್ಯದವರೆಗೂ ನಡೆಯುತ್ತದೆ.

ಬಲಿತ ಹಣ್ಣು ಕಾಯಿಗಳನ್ನು 4–5 ದಿವಸಗಳ ಕಾಲ ಪದೇಪದೇ ಬಿಸಿಲಿನಲ್ಲಿ ಒಣಗಿಸಿ, ಸ್ವಚ್ಛಗೊಳಿಸಿ ವ್ಯಾಪಾರಕ್ಕೆ ಅಣಿಮಾಡುತ್ತಾರೆ. ತೊಟ್ಟು ಉದುರಿಸಿ ಸ್ವಚ್ಛಮಾಡಲು ಈಗ ಯಂತ್ರಗಳು ಬಂದಿವೆ. ಬಿಸಿಲು ಸಾಕಾಗದೆ ಮೋಡಗಟ್ಟಿದ ವಾತಾವರಣದಲ್ಲಿ ಒಣಗಿಸಿದರೆ ಇದರ ಗುಣಮಟ್ಟ ಹಾಳಾಗುತ್ತದೆ. ಇದನ್ನು ನಿವಾರಿಸುವ ಸಲುವಾಗಿ ಮಣ್ಣಿನ ಗೂಡು ಕಟ್ಟಿ ಮೇಲೆ ಸಾರಿಸಿ, ಅದರ ಮೇಲೆ ಇದರ ಹಣ್ಣು ಹರಡಿ ಗೂಡಿನ ಒಳಗೆ ಬೆಂಕಿ ಹಾಕಿ ಅದರ ಕಾವಿನಿಂದ ಇದು ಒಣಗುವಂತೆಯೂ ಮಾಡುತ್ತಾರೆ. ಈ ಕ್ರಮದಿಂದ ಇದು ಹಸುರು ಬಣ್ಣಕ್ಕೆ ತಿರುಗುತ್ತದೆ. ಇದನ್ನು ಒಣಗಿಸಲು ಈಗ ಆಧುನಿಕ ಯಂತ್ರಗಳೂ ಬಂದಿವೆ. ಸುಸ್ಥಿತಿಯಲ್ಲಿರುವ ತೋಟದಲ್ಲಿ ವರ್ಷಕ್ಕೆ ಎಕರೆ ಒಂದಕ್ಕೆ ಐವತ್ತರಿಂದ ಅರವತ್ತು ಕೆ.ಜಿ. ಕುಯ್ಲುಮಾಡಬಹುದು. ಆಧುನಿಕ ಕೃಷಿ ಅನುಸರಿಸಿ ಬೇಸಿಗೆಯಲ್ಲಿ ತುಂತುರು ನೀರಾವರಿ ನೀಡಿದರೆ 500 ಕೆ.ಜಿ.ಗೂ ಹೆಚ್ಚು ಇದನ್ನು ಬೆಳೆಯಬಹುದೆಂದು ಕಂಡುಬಂದಿದೆ. ಈ ಬೆಳೆ ಸಮೃದ್ಧವಾಗುವುದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೀಳುವ ಮಳೆಯನ್ನು ಹೆಚ್ಚಾಗಿ ಅವಲಂಬಿಸಿದೆ. ಆಗ ಸರಿಯಾದ ಪ್ರಮಾಣದಲ್ಲಿ ಮತ್ತು ಸರಿಯಾದ ಬಿಡುವಿನಲ್ಲಿ ಮಳೆಯಾಗದಿದ್ದರೆ ಮುಂದೆ ಎಷ್ಟೇ ಮಳೆ ಬಂದರೂ ಫಸಲಿಗೆ ಧಕ್ಕೆಯಾಗುತ್ತದೆ. ಕೃತಕವಾಗಿ ತುಂತುರು ಅಥವಾ ಹನಿ ನೀರಾವರಿಯಿಂದ ಈ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಪರಿಹರಿಸಿ ಕೊಳ್ಳಬಹುದು. ಆದರೆ ವಾತಾವರಣದಲ್ಲಿ ಹೆಚ್ಚಿನ ತೇವಾಂಶ ಇಲ್ಲದಿದ್ದರೆ ಆಗಲೂ ಫಸಲು ಕಡಿಮೆಯಾಗುತ್ತದೆ.

ಒಣಗಿಸುವ ಕೋಣೆ: ಏಲಕ್ಕಿ ಕಾಯಿಗಳನ್ನು ತಟ್ಟೆಗಳಲ್ಲಿ ಹರಡಲಾಗಿದೆ.

ಇದಕ್ಕೆ ಅನೇಕ ರೋಗಬಾಧೆಗಳುಂಟು. ನಾನಾ ತರದ ಕೀಟಗಳು ಇದರ ಹೀಚು ಮಿಡಿಗೆ ಸೋಂಕಿ ಕಾಯಿ ಬಲಿಯದೆ ಪೊಳ್ಳಾಗುವಂತೆ ಮಾಡುತ್ತವೆ. ನುಸಿರೋಗ ತಗುಲಿದರೆ ಹೀಚಿನಲ್ಲೇ ಕಾಯಿಯ ಬೆಳವಣಿಗೆ ಕುಂಠಿತವಾಗಿ ಕಜ್ಜಿ ಕಾಯಿ ಎನಿಸಿಕೊಳ್ಳುತ್ತದೆ. ಕಾಂಡ ಕೊರಕ ಕೀಟಗಳು ಗಿಡಗಳ ದಿಂಡನ್ನು ತಿಂದು ಟೊಳ್ಳು ಮಾಡಿ ಗಿಡಗಳನ್ನೇ ನಾಶಪಡಿಸುತ್ತವೆ. ಇವುಗಳ ನಿವಾರಣೆಗೆ ವಿವಿಧ ಕ್ರಿಮಿನಾಶಕಗಳು ಮಾರುಕಟ್ಟೆಗೆ ಬಂದಿವೆ. ಅವುಗಳಲ್ಲಿ ಬೋರ್ಡೊ ಮಿಶ್ರಣ, ಮೋನೋ ಕ್ರೊಟೋಫಾಸ್ (ನುವಕ್ರಾನ್) ಫೋಸೋಲಾನ್ (ಝೋಲಾನ್) ಮುಖ್ಯವಾದವು. ಇವನ್ನು ನಿಗದಿತ

ಏಲಕ್ಕಿ ಕಾಯಿಗಳು

ಪ್ರಮಾಣದಲ್ಲಿ ಸಿಂಪಡಿಸಿ ಕೀಟ ಬಾಧೆಯನ್ನು ನಿವಾರಿಸಿಕೊಳ್ಳಬಹುದು. ಈ ಗಿಡಗಳಿಗೆ ಬೇರಿನ ಸೋಂಕಿನಿಂದ ಕಟ್ಟೆರೋಗ ಬರುವುದುಂಟು. ಹಣ್ಣುಗಳಿಗೆ ಅಳಿಲು, ಹಕ್ಕಿಗಳ ಕಾಟವೂ ಇದೆ. ಮಂಗಗಳ ಕಾಟವೂ ಉಂಟು. ಮಂಗಗಳು ಗಿಡಗಳನ್ನು ಸಿಗಿದು ಹಾಳು ಮಾಡುವುದುಂಟು.

ಇದಕ್ಕಿರುವ ಬೇಡಿಕೆ ಮತ್ತು ಬೆಲೆಯಿಂದಾಗಿ ವಿವಿಧ ರಾಷ್ಟ್ರಗಳು ಹೊಸದಾಗಿ ಇದನ್ನು ಬೆಳೆಯಲು ಮುಂದಾಗಿವೆ. ಇದನ್ನು ಬೆಳೆಯುವ ಒಟ್ಟು ಪ್ರದೇಶದ ಸೇ.90ರಷ್ಟು ಪ್ರದೇಶ ಗ್ವಾಟೆಮಾಲದಲ್ಲಿದ್ದು ಅಲ್ಲಿನ ಉತ್ಪತ್ತಿ ಪ್ರಪಂಚದ ಇದರ ಉತ್ಪತ್ತಿಯ ಸೇ.48ರಷ್ಟು ಆಗುತ್ತದೆ. ಭಾರತದ ಕೇರಳದಲ್ಲಿ 44,250 ಹೆಕ್ಟೇರು, ಕರ್ನಾಟಕದಲ್ಲಿ 33,743 ಹೆಕ್ಟೇರು ಮತ್ತು ತಮಿಳುನಾಡಿನಲ್ಲಿ 6048 ಹೆಕ್ಟೇರುಗಳಲ್ಲಿ ಇದನ್ನು ಬೆಳೆಯಲಾಗುತ್ತಿದೆ. ಈ

ಏಲಕ್ಕಿಯನ್ನು ಸಣ್ಣ ಏಲಕ್ಕಿ ಎಂದು ಕರೆಯಲಾಗುತ್ತದೆ. ಈಶಾನ್ಯ ಭಾರತದ ರಾಜ್ಯಗಳಾದ ಅಸ್ಸಾಂ, ಮಣಿಪುರ, ಮೇಘಾಲಯಗಳಲ್ಲೂ ಇದನ್ನು ಬೆಳೆಯುತ್ತಿದ್ದು ಆ ಏಲಕ್ಕಿಯನ್ನು ದೊಡ್ಡ ಏಲಕ್ಕಿ ಎಂದು ಕರೆಯಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಬೆಳೆಯುವ ಜಿಲ್ಲೆ ಕೊಡಗು (14,500 ಹೆಕ್ಟೇರ್). ಹಾಸನ (8,480 ಹೆಕ್ಟೇರ್), ಚಿಕ್ಕಮಗಳೂರು (5,347 ಹೆಕ್ಟೇರ್), ಶಿವಮೊಗ್ಗ (318 ಹೆಕ್ಟೇರ್) ಮತ್ತು ಉತ್ತರ ಕನ್ನಡ (317 ಹೆಕ್ಟೇರ್) ಜಿಲ್ಲೆಗಳು ಅನಂತರದ ಸ್ಥಾನದಲ್ಲಿ ಬರುತ್ತವೆ. ಹಾಸನ ಜಿಲ್ಲೆಯ ಮಂಜರಾಬಾದ್ ಅಥವಾ ಸಕಲೇಶಪುರ ತಾಲ್ಲೂಕಿನ ಏಲಕ್ಕಿ ಉತ್ತಮ ಗುಣಮಟ್ಟದ್ದು. ಇದಕ್ಕೆ ಸಿಗುವ ಬೆಲೆಯೂ ಹೆಚ್ಚು.

ಇಂದು ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಈ ಬೆಳೆ ಕ್ಷೀಣ ಸ್ಥಿತಿಯಲ್ಲಿದೆ. ಕಾಡಿನ ನಾಶ ಮತ್ತು ಪಾರಂಪರಿಕವಾಗಿ ಏಲಕ್ಕಿ ಬೆಳೆಯುತ್ತಿದ್ದ ಪ್ರದೇಶಗಳಲ್ಲಿ ಕಾಫಿ ಸಾಗುವಳಿಯನ್ನು ವಿಸ್ತರಿಸಿದ್ದು ಇಂಥ ಕ್ಷೀಣ ಸ್ಥಿತಿಗೆ ಕಾರಣಗಳಾಗಿವೆ ಎನ್ನಬಹುದು. *

**ಏಲಕ್ಕಿ ಬೆಟ್ಟ:** ನೀಲಗಿರಿ ಬೆಟ್ಟಗಳ ದಕ್ಷಿಣಕ್ಕೆ, ಪಾಲ್ಘಾಟ್ ಕಣಿವೆಯಿಂದಾಚೆಗಿರುವ ಬೆಟ್ಟಗಳಲ್ಲೊಂದು. (ಕಾರ್ಡಮಂ ಹಿಲ್ಸ್). ಅಣ್ಣಾಮಲೈ ಮತ್ತು ಪಾಲಂ ಈ ಗುಂಪಿನ ಇನ್ನೆರಡು ಬೆಟ್ಟಗಳು. ಈ ಬೆಟ್ಟಗಳ ಪೈಕಿ ಇದೇ ಅತ್ಯಂತ ದಕ್ಷಿಣಕ್ಕಿದೆ. ಏಲಕ್ಕಿ ಬೆಟ್ಟದ ಮೈಯೂ ವೈಗೈ ನದಿಯ ದಕ್ಷಿಣಕ್ಕಿರುವ ಈ ಬೆಟ್ಟದ ಚಾಚುಭಾಗವೂ ಬಲು ಕಡಿದು. ಆದರೆ ಇದರ ವಾಯವ್ಯಭಾಗ ಆಗ್ನೇಯಾಭಿಮುಖವಾಗಿ ಹಬ್ಬಿ ಎತ್ತರದ ಕಣಿವೆಗಳನ್ನೊಳಗೊಂಡಿದೆ. ಇಲ್ಲಿಯ ನದಿಗಳ (ಉದಾ: ಪೆರಿಯಾರ್) ಹರಿವು ನೇರ; ಉತ್ತರದಿಂದ ದಕ್ಷಿಣಾಭಿಮುಖಿ. ನದಿಗಳ ಅಡ್ಡಕ್ಕೆ ಹಬ್ಬಿರುವ ಕಮರಿಗಳಿಂದಾಗಿ ಇಡೀ ಪ್ರದೇಶ ಅಪ್ಪಟ ಜಾಲರಿಗಳೋಪಾದಿಯಲ್ಲಿದೆ. ಈ ಬೆಟ್ಟದ ಪೂರ್ವ ಪಶ್ಚಿಮ ಬದಿಗಳ ಇಳಿಜಾರುಗಳಲ್ಲಿ ಪ್ಲಾಂಟೇಷನ್‌ಗಳುಂಟು. ಆದರೆ ಇವು ಪಶ್ಚಿಮದ ಬದಿಯಲ್ಲಿ ಹೆಚ್ಚು. ಇಲ್ಲಿನ ಕಣಿವೆಗಳು ಬೇಸಾಯಕ್ಕೆ ಮೀಸಲು. ಇಳಿಜಾರಿನ ಕೆಳಭಾಗಗಳಲ್ಲಿ 80"–120" ಮಳೆ ಬೀಳುವಲ್ಲೆಲ್ಲ, 1,300 ಮೀಟರ್ ಎತ್ತರದವರೆಗೆ ರಬ್ಬರ್ ಬೆಳೆಸುತ್ತಾರೆ. ಅಲ್ಲಿಂದ ಮೇಲುಗಡೆಗೆ–2,000 ಮೀಟರ್ ಎತ್ತರದವರೆಗೆ 100"–150" ಮಳೆಯಾಗುವಲ್ಲೆಲ್ಲ ಚಹ ಮುಖ್ಯಬೆಳೆ. (ಎನ್.ಎ.)

**ಏಲೇಶ್ವರದ ಕೇತಯ್ಯ:** ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಗುಲ್ಬರ್ಗ ಜಿಲ್ಲೆಯ ಏಲೇಶ್ವರ ಅಥವಾ ಈಗಿನ ಏಲೇರಿ ಈತನ ಜನ್ಮಸ್ಥಳ. ಇವನ ಹೆಂಡತಿ ಸಾಯಿದೇವಿ, ಮಗ ಶಿವಣ್ಣ, ಮಗಳು ಶಿವಕ್ಕ. ಕೇತಯ್ಯ ವೀರಶೈವಾಚಾರದಲ್ಲಿ ಅತ್ಯಂತ ನಿಷೆವಿಯುಳ್ಳವನಾಗಿದ್ದ. ಈತ ರಾಜ ದಯಪಾಲಿಸಿದ ಲಿಂಗಮುದ್ರೆಯ ಭೂಮಿಯಲ್ಲಿ ವ್ಯವಸಾಯ ಮಾಡಿ ಉಪಜೀವನ ನಡೆಸುತ್ತಿದ್ದ. ಈತ ಭವಿಸಂಪರ್ಕವೇ ಇಲ್ಲದೆ ಇರಲು ಕೆಲವರು ವೀರಶೈವ ಸಂಪ್ರದಾಯ ದ್ರೋಹಿಗಳು ಇವನ ಕಣಜಕ್ಕೆ ಬೆಂಕಿಯನ್ನು ಹಾಕಿ ಉರಿಸಿಟ್ಟಾಗ ಬೆಂದ ಬೀಜವನ್ನೇ ಬಿತ್ತಿ ಬೆಳೆದನೆಂದೂ ತನ್ನನ್ನು ಕೊಲ್ಲಲು ಬಂದ ಕಟುಕರಿಗೆ ತನ್ನ ವಚನಗಳಮೂಲಕ ವೀರಶೈವಧರ್ಮ ಬೋಧಿಸಿ, ಅವರಿಗೆ ವೀರಶೈವದೀಕ್ಷೆ ಕೊಟ್ಟನೆಂದೂ ಕಥೆಯಿದೆ.

ಈತ ಸು.200 ವಚನಗಳನ್ನು ಬರೆದಿದ್ದಾನೆ. ರಾಮೇಶ್ವರಲಿಂಗ ಅಥವಾ ಏಲೇಶ್ವರಲಿಂಗ ಎಂಬುದು ಇವನ ವಚನಗಳ ಅಂಕಿತ. ಭಕ್ತರಿಗೆ ಬಯಕೆಯುಂಟೆ? ನಿತ್ಯಂಗೆ ಸಾವುಂಟೇ? ಸದ್ಭಕ್ತರಿಗೆ ಮಿಥ್ಯತಥ್ಯವುಂಟೇ? ಕೃತಕೃತ್ಯನಾದ ಠಾವಿನಲಿ ಪ್ರತ್ಯುತ್ತರಗೆಯ್ದಡೆ ಸತ್ಯ ಸದಾಚಾರಕ್ಕೆ ಹೊರಗೂ ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದ ಆಣೆ ಎಂಬ ವಚನ ಇವನ ಶೈಲಿಗೆ ಉದಾಹರಣೆಯಾಗಿದೆ. (ಎಸ್.ಐ.)

**ಏಷ್ಯ:** ಪ್ರಪಂಚದ ಅತ್ಯಂತ ದೊಡ್ಡ ಖಂಡ. ವಿಸ್ತೀರ್ಣ 44,680,718 ಚ.ಕಿಮೀ. ಇದು ಭೂಪ್ರದೇಶದ ಮೂರನೆಯ ಒಂದು ಭಾಗವನ್ನಾವರಿಸಿದೆ.

ಯೂರಲ್ ಪರ್ವತ, ಯೂರೆಲ್ ನದಿ, ಕ್ಯಾಸ್ಪಿಯನ್ ಸಮುದ್ರ, ಕಾಕಸಸ್ ಪರ್ವತ, ಕಪ್ಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ–ಇವು ಈ ಖಂಡದ ಪಶ್ಚಿಮ ಮೇರೆ. ಪೂರ್ವದಲ್ಲಿ ಪೆಸಿಫಿಕ್ ಸಾಗರ, ದಕ್ಷಿಣದಲ್ಲಿ ಹಿಂದೂಸಾಗರ ಮತ್ತು ಉತ್ತರದಲ್ಲಿ ಆರ್ಕ್‌ಟಿಕ್ ಸಾಗರಗಳು ಎಲ್ಲೆಗಳಾಗಿವೆಯೆನ್ನಬಹುದು. ಆದರೆ ಇಂಡೋನೇಷ್ಯನ್ ದ್ವೀಪಸ್ತೋಮ, ದಕ್ಷಿಣೋತ್ತರವಾಗಿ ಪೆಸಿಫಿಕ್‌ನಲ್ಲಿ ಹಬ್ಬಿರುವ ದ್ವೀಪಗಳ ಸಾಲು–ಇವೆಲ್ಲ ಏಷ್ಯಕ್ಕೆ ಸೇರಿದ ಪ್ರದೇಶಗಳೇ. ಇಡೀ ಭೂಮಿಯ ಮೇಲೆ ಇದೊಂದು ಬೃಹತ್ ಸಮದ್ವಿಭುಜ ತ್ರಿಭುಜದಂತೆ ಕಾಣುತ್ತದೆ.

ಇದರ ಬೃಹತ್ ಸಮಭುಜಗಳ ಪೈಕಿ ಒಂದು ಏಡನ್ನಿನಿಂದ ಬೇರಿಂಗ್ ಜಲ ಸಂಧಿಯವರೆಗೂ ಇನ್ನೊಂದು ಸಿಂಗಪುರದಿಂದ ಬೇರಿಂಗಿನವರೆಗೂ ಇವೆ. ಇವುಗಳಲ್ಲಿ ಒಂದೊಂದರ ಉದ್ದವೂ 10460.736 ಕಿಮೀ. ಏಡನ್ನಿನಿಂದ ಸಿಂಗಪುರದವರೆಗೆ ಸಾಗಿರುವ ಮೂರನೆಯ ಭುಜದ ಉದ್ದ 7242.048 ಕಿಮೀ.

ಈ ವಿಶಾಲವಾದ ಭೂಖಂಡದ ಒಂದು ವೈಶಿಷ್ಟ್ಯವೆಂದರೆ ಇದು ಇತರ ಖಂಡಗಳೊಂದಿಗೆ ಹೊಂದಿರುವ ಸಂಪರ್ಕ. ಯುರೋಪು ವಾಸ್ತವವಾಗಿ ಇದರ ಪಶ್ಚಿಮಭಾಗ. ಏಷ್ಯವೂ ಆಫ್ರಿಕವೂ ಸೂಯೆಜಿನ ಬಳಿ ಸೇರುತ್ತವೆ. ಉತ್ತರ ಅಮೆರಿಕಕ್ಕೂ ಏಷ್ಯಕ್ಕೂ ನಡುವೆ ಬೇರಿಂಗ್ ಜಲಸಂಧಿಯಿದೆ. ಇಂಡೋನೇಷ್ಯನ್ ದ್ವೀಪಸ್ತೋಮಗಳಾಚೆಯೇ ಆಸ್ಟ್ರೇಲಿಯ. ಹೀಗೆ ಇದರ ಸನ್ನಿವೇಶದ ಪ್ರಾಮುಖ್ಯ ಹೆಚ್ಚಿನದು. ಏಷ್ಯದ ಇತಿಹಾಸವೇ ಮುಂತಾದ ನಾನಾ ಅಂಶಗಳ ಮೇಲೆ ಈ ಸನ್ನಿವೇಶವೂ ಸಾಕಷ್ಟು ಪ್ರಭಾವ ಬೀರಿದೆಯೆನ್ನಬಹುದು.

ಅಸ್ಸಾಮಿ ಉಡುಗೆ ತೊಡುಗೆ

ಸಾಗರಗಳೊಂದಿಗೂ ಏಷ್ಯದ್ದು ಇದೇ ರೀತಿಯ ಸಂಬಂಧ. ಈ ಖಂಡದ ಒಂದು ಭಾಗವಾದ ಏಷ್ಯಮೈನರ್ ಮೆಡಿಟರೇನಿಯನ್ ಸಮುದ್ರದಲ್ಲಿ ಚಾಚಿದೆ. ಇದರ ಮೂಲಕ ಈ ಖಂಡಕ್ಕೆ ಅಟ್ಲಾಂಟಿಕ್ ಸಾಗರದ ಸಂಪರ್ಕವುಂಟು. ಏಷ್ಯದ ಉತ್ತರದಲ್ಲಿರುವುದು ಆರ್ಕ್‌ಟಿಕ್ ಸಾಗರ. ಏಷ್ಯದ ಭಾಗಗಳಾದ ಕ್ಯಾಮ್‌ಚ್ಯಾಟ್ಕ ಸ್ಯಾಕಲೀನ್, ಜಪಾನ್ ಮತ್ತು ಫಿಲಿಪೀನ್ಸ್ ಪೆಸಿಫಿಕ್ ಸಾಗರದಲ್ಲೆ ಇವೆ. ಅರೇಬಿಯ, ದಕ್ಷಿಣ ಭಾರತ ಮತ್ತು ಮಲಯ ಈ ಮೂರು ಪರ್ಯಾಯದ್ವೀಪಗಳು ಹಿಂದೂಸಾಗರದ ಜಲದಲ್ಲಿ ಮೈ ತೊಳೆಯುತ್ತವೆ.

ರಾಜಸ್ಥಾನದ ಸುಂದರಿ

$26^0$ಪೂ. ರೇಖಾಂಶದಿಂದ $170^0$ ಪ. ರೇಖಾಂಶದ ವರೆಗೂ $82^0$ ಉ. ಅಕ್ಷಾಂಶದಿಂದ $10^0$ ದ. ಅಕ್ಷಾಂಶದ ವರೆಗೂ ಈ ಖಂಡ ಹರಡಿದೆ. ದಕ್ಷಿಣದಲ್ಲಿ ಈಸ್ಟ್ ಇಂಡೀಸ್ ಮುಖಾಂತರ ಸಮಭಾಜಕವೃತ್ತ ಹಾದು ಹೋಗುತ್ತದೆ. ಅರೇಬಿಯ, ಭಾರತ ಮತ್ತು ಮಯನ್ಮಾರ್‌ಗಳ ಮಧ್ಯಭಾಗದಲ್ಲೂ ದಕ್ಷಿಣ ಚೀನದ ಮುಖಾಂತರವೂ ಹಾದು ಹೋಗುವ ರೇಖೆ ಕರ್ಕಾಟಕ ಸಂಕ್ರಾಂತಿವೃತ್ತ. ಸೈಬೀರಿಯದ ಉತ್ತರದ ಅಂಚಿನಲ್ಲಿ ಉತ್ತರ ಮೇರುವೃತ್ತವಿದೆ. ಉತ್ತರಾರ್ಧ ಗೋಳದಲ್ಲಿನ ಸುಮಾರು ಅರ್ಧ ಪ್ರದೇಶ ಏಷ್ಯದಲ್ಲಿದೆ.

ಈ ಖಂಡದ ಸಮುದ್ರತೀರ ಅಸ್ತವ್ಯಸ್ತವಾಗಿದೆ. ಇದರ ಮೂರು ಕಡೆಗಳಲ್ಲಿ ಸಮುದ್ರವಿದ್ದರೂ ಇದರ ವಿಸ್ತಾರದ ದೃಷ್ಟಿಯಿಂದ ಸಮುದ್ರತೀರ ಬಹಳ ಕಡಿಮೆ (53108.352ಕಿಮೀ). ಅಲ್ಲದೆ ಇದು ಹೆಚ್ಚು ಡೊಂಕಾಗಿಯೂ ಇಲ್ಲ.

ಹಲವು ವಿಚಾರಗಳಲ್ಲಿ ಈ ಖಂಡ ವೈಶಿಷ್ಟ್ಯಪೂರ್ಣ. ಇಲ್ಲಿರುವ ಮೃತಸರೋವರ ಪ್ರಪಂಚದ ಅತ್ಯಂತ ತಗ್ಗಿನ ಪ್ರದೇಶದಲ್ಲಿದೆ (ಸಮುದ್ರ ಮಟ್ಟಕ್ಕಿಂತ 1,286' ಕೆಳಗೆ). ವಿಶ್ವದ ಅತ್ಯಂತ ಎತ್ತರದ ಪರ್ವತ ಶಿಖರವೂ ಇಲ್ಲುಂಟು (ಎವರೆಸ್ಟ್). ಅತ್ಯಂತ ಕಡಿಮೆ ಹಾಗೂ ಅತ್ಯಂತ ಹೆಚ್ಚಿನ ಉಷ್ಣತೆಗಳನ್ನೂ ಇಲ್ಲಿ ಕಾಣಬಹುದು. ಜಗತ್ತಿನ ಪ್ರಮುಖ ನಾಗರಿಕತೆಗಳೆಲ್ಲ ಹುಟ್ಟಿದ್ದು ಇಲ್ಲೆ. ಎಲ್ಲ ರೀತಿಯ ಜನರೂ ಇಲ್ಲಿ ವಾಸಿಸುತ್ತಾರೆ. ಅಲೆಮಾರಿ ಜನಾಂಗದವರೂ ಅತ್ಯಂತ ಮುಂದುವರಿದ ಜನಾಂಗದವರೂ ಇಲ್ಲಿ ಇದ್ದಾರೆ. ಜಗತ್ತಿನ ಮುಖ್ಯ ಧರ್ಮಗಳಿಗೆಲ್ಲ ಏಷ್ಯವೇ ಉಗಮಸ್ಥಾನ. ಜುಡಾಯಿಸಂ ಜೆರುಸಲೆಂನಲ್ಲಿ ಜನಿಸಿತು. ಕ್ರೈಸ್ತ ಧರ್ಮ ಪ್ಯಾಲೆಸ್ಟೈನಿನಲ್ಲಿ ಜನಿಸಿ ಜಗತ್ತಿನಾದ್ಯಂತ ಹರಡಿತು. ಅರೇಬಿಯದಲ್ಲಿ ಜನಿಸಿದ ಇಸ್ಲಾಂ ಧರ್ಮ ಪೂರ್ವಾರ್ಧಗೋಳದಲ್ಲೆಲ್ಲ ಹರಡಿದೆ. ಬೌದ್ಧ ಹಾಗೂ ಹಿಂದೂಧರ್ಮಗಳು ಭಾರತದಲ್ಲಿ ಜನ್ಮ ತಳೆದವು. ಇರಾನಿನ ಪಾರ್ಸೀಧರ್ಮ, ಜಪಾನಿನಲ್ಲಿನ ಷಿಂಟೊ, ಚೀನದ ಕನ್‌ಫ್ಯೂಷಿಯನಿಸಂ ಮತ್ತು ಟಾವೊಇಸಂ–ಇವು ಪ್ರಪಂಚದ ಇತರ ಧರ್ಮಗಳು–ಇವೂ ಏಷ್ಯದಲ್ಲಿ ಜನಿಸಿದವು. ಪ್ರಪಂಚಕ್ಕೆ ಬೇಕಾದ ಸಂಬಾರಪದಾರ್ಥ, ರೇಷ್ಮೆ, ಪೆಟ್ರೋಲಿಯಂ, ಮ್ಯಾಂಗನೀಸ್, ಅಭ್ರಕಗಳನ್ನು ಒದಗಿಸುವುದೂ ಈ ಖಂಡವೇ. ಜಗತ್ತಿನಲ್ಲಿರುವ ಎಲ್ಲ ರೀತಿಯ ಸಸ್ಯವರ್ಗಗಳೂ ಖನಿಜಗಳೂ ಇಲ್ಲಿ ದೊರೆಯುತ್ತವೆ. ಅತ್ಯಂತ ಕಡಿಮೆ ಹಾಗೂ ಅತ್ಯಂತ ಹೆಚ್ಚಿನ ಜನಸಾಂದ್ರತೆಯ ಪ್ರದೇಶಗಳು ಇಲ್ಲುಂಟು. ವಿಸ್ತಾರದಲ್ಲಿ ವಿಶ್ವದ $\frac{1}{3}$ ಭಾಗದಷ್ಟಿರುವ ಈ ಖಂಡದಲ್ಲಿ ಅದರ $\frac{2}{3}$ರಷ್ಟು ಜನ ವಾಸಿಸುತ್ತಾರೆ.

ಮೇಲ್ಮೈಲಕ್ಷಣ: ಏಷ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು:

1. ಉತ್ತರದ ತಗ್ಗು ಪ್ರದೇಶ. ಆರ್ಕ್‌ಟಿಕ್ ಸಾಗರದಿಂದ ನೈಋತ್ಯಾಭಿಮುಖವಾಗಿ ಮಹಾತ್ರಿಭುಜದಂತೆ ಹಬ್ಬಿರುವ ಈ ಭಾಗ ಸೈಬೀರಿಯದ ಬಹು ಭಾಗವನ್ನೊಳಗೊಂಡಿದೆ. ಯುರೋಪಿನ ಮಹಾಮೈದಾನಕ್ಕೂ ಇದಕ್ಕೂ ನಡುವೆ ಯೂರಲ್ ಪರ್ವತಗಳು ಗಡಿರೇಖೆ. ಇಲ್ಲಿ ಹರಿಯುವ ಆಬ್, ಯೆನಿಸೇ ಮತ್ತು ಲೀನ ನದಿಗಳು ಬಲು ಉದ್ದ, ನಿಧಾನ. ಆರ್ಕ್‌ಟಿಕ್ ಸಾಗರದ ಕಡೆಗೆ ನೆಲದ ಇಳಿಜಾರು ಬಲು ಅಲ್ಪ. ಇವುಗಳ ಮುಖಭಾಗದಲ್ಲಿ ನೀರು ವರ್ಷದಲ್ಲಿ ಕೆಲಕಾಲ ಹೆಪ್ಪುಗಟ್ಟುತ್ತದೆ. ಆಗ ಮೇಲ್ಗಡೆಯಿಂದ ಹರಿದು ಬಂದ ನೀರು ಮುಂದಾರಿಗಾಣದೆ ನೆಲದ ಮೇಲೆ ಹರಡುವುದು ಅನಿವಾರ್ಯ. ತತ್ಫಲವಾಗಿ ಆ ಭೂಮಿಯೆಲ್ಲ ಜೌಗಾಗಿ ಪರಿಣಮಿಸುತ್ತದೆ. ನೈಋತ್ಯದಲ್ಲಿ ಆರಲ್ ಸರೋವರದ ಪ್ರದೇಶ ಒಂದು ಬೋಗುಣಿಯಂತಿದ್ದು ಇದರೊಳಕ್ಕೆ ಕೆಲವು ನದಿಗಳು ಹರಿಯುತ್ತವೆ.

2. ಉತ್ತರದ ತಗ್ಗುನೆಲಕ್ಕೆ ದಕ್ಷಿಣದಲ್ಲಿರುವ ಕೇಂದ್ರೀಯ ತ್ರಿಭುಜವೇ ಏಷ್ಯದ ಎರಡನೆಯ ಭಾಗ. ಏಷ್ಯದ ಮಹಾ ಪರ್ವತಶ್ರೇಣಿಗಳನ್ನೂ ಅವುಗಳ ಹೆಗಲ ಮೇಲೆ ಕುಳಿತ ಪ್ರಸ್ಥಭೂಮಿಗಳನ್ನೂ ಒಳಗೊಂಡಿರುವುದು. ಈ ಪ್ರದೇಶವೇ, ಈ ತ್ರಿಭುಜದ ಪಶ್ಚಿಮಕ್ಕೆ ಏಷ್ಯ ಮೈನರ್‌ವರೆಗೂ ಆಗ್ನೇಯದಲ್ಲಿ ಇಂಡೋ–ಚೀನ ಮತ್ತು ಈಸ್ಟ್ ಇಂಡೀಸ್‌ಗಳ ಉದ್ದಕ್ಕೂ ಪರ್ವತಗಳು ಕವಲೊಡೆದಿವೆ.

ಹೀಗೆ ಕೆಂಪು ಸಮುದ್ರದಿಂದ ಬೇರಿಂಗ್ ಜಲಸಂಧಿಯವರೆಗೂ ಹಬ್ಬಿರುವ ಪರ್ವತಾವಳಿಗಳು ಅತ್ಯಂತ ಆಕರ್ಷಣೀಯ. ಇವು ಪ್ರಪಂಚದ ಮಧ್ಯಂತರ ಪರ್ವತಾವಳಿಯ ಒಂದು ಭಾಗ. ಆಗ್ನೇಯ ಹಾಗೂ ವಾಯವ್ಯ ಏಷ್ಯಗಳ ಮಧ್ಯೆ ವಾಯುಗುಣದ ಪ್ರಭಾವ ಹಾಗೂ ಸಂಚಾರ ಮಾರ್ಗಗಳಿಗೆ ಇವು ದೊಡ್ಡ ಅಡ್ಡಿ. ಆರ್ಮೀನಿಯನ್ ಮತ್ತು ಪಾಮಿರ್ ಪರ್ವತಗ್ರಂಥಗಳಲ್ಲಿ ಇವುಗಳ ಉಗಮ. ಇವು ಒಳನಾಡಿನ ಜಲಾನಯನ ಪ್ರದೇಶಗಳು.

ಆರ್ಮೀನಿಯನ್ ಗ್ರಂಥಿಯಿಂದ ಪೂರ್ವದ ಕಡೆಗೆ ಇರಾನ್ ಪ್ರಸ್ಥಭೂಮಿಯ ಉತ್ತರಕ್ಕೆ ಇರುವ ಪರ್ವತಗಳು ಎಲ್‌ಬರ್ಜ್ ಮತ್ತು ಕೊಪೆಟ್‌ದಾಗ್. ಡಮಾವಂಡ್ (18,580) ಅತ್ಯುನ್ನತ ಶಿಖರ. ಈ ಪರ್ವತಗಳು ಹಿಂದೂಕುಷ್ ಪರ್ವತಗಳ ಮುಖಾಂತರ ಪಾಮಿರ್ ಗ್ರಂಥಿ ತಲಪುತ್ತವೆ. ಇದರ ಇನ್ನೊಂದು ಕವಲೇ ಸುಲೇಮಾನ್ ಪರ್ವತವಾಗಿ ಪಾಮಿರ್ ಗ್ರಂಥಿಯನ್ನು ತಲಪುತ್ತದೆ. ಇಲ್ಲಿ ಭೂಕಂಪಗಳು ಹೆಚ್ಚು. ಈ ಭೂಭಾಗ ಇನ್ನೂ ಅಸ್ಥಿರ ಎಂಬುದು ಸ್ಪಷ್ಟ.

ಇಲ್ಲಿನ ಆನೇಕ ಪರ್ವತಾವಳಿಗಳು ಚೆಲ್ಲಾಪಿಲ್ಲಿಯಾಗಿ ಅವ್ಯವಸ್ಥಿತವಾಗಿ ಹರಡಿವೆಯಾದರೂ ಮುಖ್ಯವಾದ ಪರ್ವತಸಾಲುಗಳು ಇರಾನಿನಿಂದ ಪೆಸಿಫಿಕ್ ಸಾಗರದವರೆಗೆ ಕ್ರಮಬದ್ಧವಾದ ರೀತಿಯಲ್ಲಿ ಹರಡಿವೆ.

ಇವುಗಳ ಪೈಕಿ ಅತ್ಯಂತ ಉತ್ತರದಲ್ಲಿ ಆಗ್ನೇಯಾಭಿಮುಖವಾಗಿ ಸಾಗುವುದೇ ಟಿಯೆನ್ ಷಾನ್ ಶ್ರೇಣಿ. ಚೀನದವರು ಇದನ್ನು ಸ್ವರ್ಗಪರ್ವತವೆಂದು ಕರೆಯುತ್ತಾರೆ. ಇದರಿಂದ ಭಿನ್ನವಾಗಿರುವುದು ಆಲ್ಟೈ ಪರ್ವತ. ಟಿಯೆನ್ ಷಾನ್ ದಕ್ಷಿಣಕ್ಕಿರುವ ಎರಡು–ಮೂರನೆಯ ಶ್ರೇಣಿಗಳು ಕೂನ್‌ಲೂನ್ ಮತ್ತು ಆಸ್ಟಿನ್‌ಟಾ. ಕೂನ್‌ಲೂನ್ ಏಷ್ಯದ ಬೆನ್ನೆಲುಬು, ಚೀನದ ಬೀಸಣಿಗೆ. ಹಲವು ಕವಲುಗಳಿರುವ ಈ ಪರ್ವತದ ವಿಸ್ತಾರ 1126.54008 ಕಿಮೀ. ಒಂದು ದೃಷ್ಟಿಯಲ್ಲಿ ಆಸ್ಟಿನ್ ಟಾ ಇದರ ಭಾಗ. ಇದು ಪುರಾತನ, ನಗ್ನೀಕೃತ, ಷಿಷಿಹ್‌ಷಾನ್ ಇನ್ನೊಂದು ಕವಲು. ಇದರ ಎತ್ತರ ಇನ್ನೂ ಪತ್ತೆಯಾಗಿಲ್ಲ.

ಇವೆಲ್ಲಕ್ಕಿಂತ ಭವ್ಯವಾಗಿರುವ ಶ್ರೇಣಿಗಳೆಂದರೆ ಹಿಮಾಲಯ. ಹಿಮಾಲಯದಲ್ಲಿ ಐದು ಸಮಾನಾಂತರ ಉಪಶ್ರೇಣಿ ವಿಭಾಗಗಳಿವೆ. ಬೃಹತ್ ಹಿಮಾಲಯದಲ್ಲಿ 24,000′ ಗಿಂತಲೂ ಎತ್ತರವಾಗಿರುವ 60ಕ್ಕಿಂತಲೂ ಹೆಚ್ಚು ಶಿಖರಗಳುಂಟು. ಕಿರಿ ಹಿಮಾಲಯದಲ್ಲಿರುವ ಪರ್ವತಸಾಲುಗಳು ಅನೇಕ. 29,028′ ಎತ್ತರವಾಗಿರುವ ಎವರೆಸ್ಟ್ ವಿಶ್ವದ ಮಹೋನ್ನತ ಶಿಖರ. ಇದು ಜಗತ್ತಿನ ಮಾತೃದೇವತೆ (ಜೋಮೊಉಂಗ್ಮ). ಕಾಂಚನಗಂಗಾ (ಕಂಚೆನ್‌ಜಂಗಾ–28,146′), ಮಕಲು (27,790′), ಧವಳಗಿರಿ (26,826′), ನಂಗಾಪರ್ಬತ್ (26,660′). ಅನ್ನಪೂರ್ಣ (26,503′) ಗೋಸ್ಸೈನ್‌ಟಾನ್ (26,291′)–ಇವು ಇತರ ಕೆಲವು ಮುಖ್ಯ ಶಿಖರಗಳು.

ಮಯನ್ಮಾರ್‌ನಲ್ಲಿ ಈ ಪರ್ವತಗಳು ದಕ್ಷಿಣಾಭಿಮುಖವಾಗಿ ಮುಂದುವರಿಯುತ್ತವೆ. ಅಲ್ಲಿ ಇವುಗಳ ಹೆಸರು ಅರಕಾನ್ ಹಾಗೂ ಪೆಗು ಯೋಮ. ಅಂಡಮಾನ್, ನಿಕೋಬಾರ್ ಮತ್ತು ಇಂಡೋನೇಷ್ಯಗಳ ಮುಖಾಂತರ ಸಾಗುವ ಈ ಪರ್ವತಶ್ರೇಣಿಗಳು ಮಲಯ ಮತ್ತು ಅನ್ನಾಂ ಪರ್ವತಗಳಾಗಿ ಒಡೆದು ಮುಂದುವರಿದು ಕಣ್ಮರೆಯಾಗುತ್ತವೆ.

ಹಿಮಾಲಯಕ್ಕಿಂತ ಕಡಿಮೆ ಎತ್ತರ ಉಳ್ಳದ್ದೆಂದರೆ ಕಾರಕೋರಂ. ಇದು ವಾಯವ್ಯದ ಕಡೆ ತುರ್ಕಿಸ್ತಾನದ ಕಡೆಗೆ ಮುಂದುವರಿಯುತ್ತದೆ. ಇಲ್ಲಿ ಗಾಡ್ವಿನ್ ಆಸ್ಟಿನ್ ಎಂಬ ಶಿಖರವಿದೆ. ಇದು ಜಗತ್ತಿನ ಎರಡನೆಯ ಉನ್ನತ ಶಿಖರ (28,250′) ಇದರೊಂದಿಗೆ ಗಷೆರ್ ಬ್ರುಮ್ (26,470′) ಮತ್ತು ರಕಪೂಷಿ (25,560′) ಶಿಖರಗಳೂ ಇಲ್ಲಿವೆ.

ಪರ್ವತಗಳ ಮಧ್ಯದಲ್ಲಿರುವ ಟಿಬೆಟ್ ಒಂದು ಬೃಹತ್ ಪ್ರಸ್ಥಭೂಮಿ: ಪ್ರಪಂಚದ ಮೇಲ್ಛಾವಣೆ 16,000′–18,000′ ಎತ್ತರ. 2414.016 ಕಿಮೀ ಉದ್ದ, 1287.4752 ಕಿಮೀ ಅಗಲ ಇದೆ.

ಪಾಮಿರ್ ಗ್ರಂಥಿ ಇನ್ನೂ ಎತ್ತರ (20,000'). ಈ ಗ್ರಂಥಿಯಲ್ಲಿ ಒಂದರೊಳಗೊಂದು ಸೇರಿರುವ ಕಡಿದು ಬಂಡೆಗಳೂ ಶಿಲಾಪರ್ವತಗಳೂ ಇವೆ.

ಏಷ್ಯದ ಪೂರ್ವದ ಅಂಚಿನ ಉದ್ದಕ್ಕೂ ಮಾಲೆಯಾಕಾರದಲ್ಲಿ ಹಬ್ಬಿರುವ ದ್ವೀಪಗಳ ಮೇಲೆ ಪರ್ವತಗಳ ಹಲವು ಸರಪಣಿಗಳಿವೆ. ಈ ದ್ವೀಪಗಳು ಅಗ್ನಿಪರ್ವತಗಳಿಂದಾದವು.

ಏಷ್ಯದ ಮಡಿಕೆ ಪರ್ವತಶ್ರೇಣಿಗಳ ನಡುವಣ ಪ್ರದೇಶಗಳು ಪ್ರಸ್ಥ ಭೂಮಿಗಳು. ಇವುಗಳಲ್ಲಿ ಹಲವು ಚಪ್ಪಟೆಯಾಗಿವೆ. ಹಿಮಾಲಯ ಕೂನ್‌ಲೂನ್ ಪರ್ವತಗಳ ನಡುವೆ ಇರುವುದು ಟಿಬೆಟ್ ಪ್ರಸ್ಥಭೂಮಿ. ಕೂನ್‌ಲೂನಿಗೂ ಆಸ್ಟಿನ್ ಟಾ ಪರ್ವತಗಳಿಗೂ ನಡುವೆ ಇರುವ ಸಣ್ಣ ಬೋಗುಣಿ ಟಿಬೆಟ್ ಪ್ರಸ್ಥಭೂಮಿಗಿಂತ ಸ್ವಲ್ಪ ತಗ್ಗು; ಜೌಗು. ಆಸ್ಟಿನ್ ಟಾ ಟಿಯೆನ್ ಷಾನ್‌ಗಳ ನಡುವೆ ಇರುವ ಡಾರೀಮ್ ಬೋಗುಣಿ ಶುಷ್ಕ. ನಡುವೆ ಒಂದು ಸಣ್ಣ ಸರೋವರವಿದೆ. ಆಲ್ಟೈಗೆ ದಕ್ಷಿಣದಲ್ಲಿ ಆಸ್ಟಿನ್ ಟಾ ಪರ್ವತಗಳ ಈಶಾನ್ಯಕ್ಕೆ ಇರುವ ಪ್ರದೇಶವೇ ಗೋಬಿ ಮರುಭೂಮಿ. ಪಾಮಿರ್ ಗ್ರಂಥಿಯ ಪಶ್ಚಿಮದ ಉತ್ತರ ದಕ್ಷಿಣ ಪರ್ವತ ಕವಲುಗಳ ನಡುವೆ, ಪರ್ಷಿಯದ ಬಹುಭಾಗನ್ನಾವರಿಸಿರುವುದು ಇರಾನ್ ಪ್ರಸ್ಥಭೂಮಿ. ಕಪ್ಪು ಸಮುದ್ರಕ್ಕೂ ಮೆಡಿಟರೇನಿಯನ್ ಸಮುದ್ರಕ್ಕೂ ನಡುವೆ, ಆರ್ಮೀ ನಿಯನ್ ಗ್ರಂಥಿಗೆ ಪಶ್ಚಿಮದಲ್ಲಿ, ಏಷ್ಯ ಮೈನರ್ ಪ್ರಸ್ಥಭೂಮಿ ಇದೆ.

3. ದಕ್ಷಿಣದ ಪುರಾತನ ಪ್ರಸ್ಥಭೂಮಿಗಳು ಏಷ್ಯದ ಇನ್ನೊಂದು ಭೌಗೋಳಿಕ ವಿಭಾಗ, ಅರೇಬಿಯ ಪ್ರಸ್ಥಭೂಮಿ ಹಳೆಯ ಗಟ್ಟಿ ಬಂಡೆಗಳಿಂದ ಕೂಡಿದ್ದು. ಪಶ್ಚಿಮದ ಕೆಂಪು ಸಮುದ್ರದ ಅಂಚು ಕಡಿದು, ಎತ್ತರ. ಪೂರ್ವಾಭಿಮುಖವಾಗಿ ಇಳಿಜಾರು. ಟೈಗ್ರಿಸ್ ಕಣಿವೆಯಲ್ಲಿ ಇದು ಅಂತ್ಯವಾಗುತ್ತದೆ. ಈ ಪ್ರದೇಶ ಬಲು ಶುಷ್ಕ. ಇಲ್ಲಿ ನದಿಗಳಿಲ್ಲ. ಆದ್ದರಿಂದ ಬಹುತೇಕ ಅಖಂಡ.

ಭಾರತ ಪರ್ಯಾಯದ್ವೀಪದ ದಕ್ಷಿಣದ ಪ್ರಸ್ಥಭೂಮಿಯೂ ಪಶ್ಚಿಮದಿಂದ ಪೂರ್ವಕ್ಕೆ ಇಳುಕಲಾಗಿದೆ. ಇದರ ಪಶ್ಚಿಮದ ಸೆರಗೇ ಪಶ್ಚಿಮ ಘಟ್ಟ. ಪೂರ್ವದಲ್ಲಿ ತಗ್ಗಾದ ಪೂರ್ವಘಟ್ಟ. ಮಹಾನದಿ, ಗೋದಾವರಿ ಮುಂತಾದ ನದಿಗಳು ಅಲ್ಲಲ್ಲಿ ಈ ಪ್ರಸ್ಥಭೂಮಿಯನ್ನು ಛೇದಿಸಿವೆ.

ಮಯನ್ಮಾರ್‌ದಿಂದ ಪೂರ್ವಕ್ಕಿರುವುದು ಇನ್ನೊಂದು ಪ್ರಸ್ಥಭೂಮಿ, ಪುರಾತನ ಶಿಲಾಶಾಖೆಯೊಂದು ಮಲಯ ಪರ್ಯಾಯದ್ವೀಪದ ವರೆಗೂ ಹಬ್ಬಿದೆ. ಈ ಪ್ರಸ್ಥಭೂಮಿಗೆ ಅಡ್ಡಲಾಗಿಯೂ ಹಲವು ನದಿಗಳಿವೆ. (ಉದಾ: ಸಾಲ್ವೀನ್, ಮೇಕಾಂಗ್, ಯಾಂಗ್ಟ್ಸಿ).


ಬೇರಿಂಗ್ ಸಮುದ್ರ
ಗ್ರೇಟ್ ಸೈಬೀರಿಯನ್ ಮೈದಾನ
ರಷ್ಯ
ಯೂರೋಪ್
ಗ್ರೇಟ್ ಲೊಲ್ಯಾಂಡ್ ಮೈದಾನ
ಓಕೋಟ್‌ಸ್ಕ ಸಮುದ್ರ
ಮೆಡಿಟರೇನಿಯನ್ ಸಮುದ್ರ
ಕಪ್ಪುಸಮುದ್ರ
ಕ್ಯಾಸ್ಪಿಯನ್ ಸಮುದ್ರ
ಮಂಗೋಲಿಯ
ಮಂಗೋಲಿಯನ್ ಪ್ರಸ್ಥಭೂಮಿ
ಜಪಾನ್ ಸಮುದ್ರ
ಜಪಾನ್
ಹಳದಿ ಸಮುದ್ರ
ಚೀನ ಮಹಾಮೈದಾನ
ಸೌದಿಅರೇಬಿಯ
ಸಿಂಧೂನದಿ ಮೈದಾನ
ಗ್ರೇಟ್ ಇಂಡಿಯನ್ ಮರುಭೂಮಿ
ಗಂಗಾನದಿ ಮೈದಾನ
ಎವರೆಸ್ಟ್ ಪರ್ವತ
ಚೀನ
ಪೂರ್ವ ಚೀನ ಸಮುದ್ರ
ಪೆಸಿಫಿಕ್ ಮಹಾಸಾಗರ
ಭಾರತ
ವಿಂಧ್ಯಪರ್ವತ
ಡೆಕನ್ ಪ್ರಸ್ಥಭೂಮಿ
ಆಫ್ರಿಕ
ಅರಬ್ಬಿ ಸಮುದ್ರ
ಬಂಗಾಳಕೊಲ್ಲಿ
ಬ್ಯಾಂಕಾಕ್
ದಕ್ಷಿಣ ಚೀನ ಸಮುದ್ರ
ಸುಲು ಸಮುದ್ರ
ಲಕ್ಷದ್ವೀಪ
ಶ್ರೀಲಂಕ
ಸೆಲಬಸ್ ಸಮುದ್ರ
ಮಾಲ್ಡೀವ್ಸ್
ಹಿಂದೂ ಮಹಾಸಾಗರ
ಸಿಂಗಾಪುರ್
ಬೋರ್ನಿಯೊ
ನ್ಯೂಗಿನಿ
ಸುಮಾತ್ರ
ಜಾವಾ ಸಮುದ್ರ
ಸೆಲೆಬಸ್
ಅರಾಪುರ ಸಮುದ್ರ
ಸುಂದ ದ್ವೀಪಗಳು
ಏಷ್ಯ ಸ್ವಾಭಾವಿಕ

4. ಏಷ್ಯದ ನಾಲ್ಕನೆಯ ಮುಖ್ಯ ಭೌಗೋಳಿಕ ವಿಭಾಗವೇ ಮಹಾನದಿಗಳ ಮೈದಾನಗಳು. ಇವು ಫಲವತ್ತಾದ ತಗ್ಗುನೆಲಗಳು. ಯುಫ್ರೇಟೀಸ್ ಮತ್ತು ಟೈಗ್ರಿಸ್ ಮೈದಾನ, ಸಿಂಧೂನದೀ ಬಯಲು, ಗಂಗಾ–ಬ್ರಹ್ಮಪುತ್ರಾ ಮೈದಾನ, ಇರವಾಡಿ ಬಯಲು, ಮೇನಾಮ್ ಮೇಕಾಂಗ್ ನದೀ ಕಣಿವೆಗಳು, ಯಾಂಗ್ಟ್ಸಿ ಕಣಿವೆ, ಹ್ವಾಂಗ್ ಹೋ ನದೀ ಪ್ರದೇಶ – ಇವು ಈ ವಿಭಾಗಕ್ಕೆ ಸೇರಿದವು.

ಏಷ್ಯದಲ್ಲಿ ಎತ್ತರವಾಗಿರುವ ಪ್ರದೇಶಗಳಿರುವಂತೆ ಅತ್ಯಂತ ಆಳವಾದ ತಗ್ಗು ಪ್ರದೇಶಗಳೂ ಜೌಗುಪ್ರದೇಶಗಳೂ ಇವೆ. ಪ್ರಪಂಚದಲ್ಲಿ ಎಲ್ಲಕ್ಕಿಂತ ಆಳವಾದ ತಗ್ಗುಪ್ರದೇಶವೆಂದರೆ ಜಾರ್ಡನ್‌ನಲ್ಲಿರುವ ಮೃತಸರೋವರ ಪ್ರದೇಶ. ಇದು ಮೆಡಿಟರೇನಿಯನ್ ಸಮುದ್ರ ಮಟ್ಟಕ್ಕಿಂತ 1,286′ ತಗ್ಗಿನಲ್ಲಿದೆ. ಮಂಗೋಲಿಯದಲ್ಲಿನ ಅನೇಕ ಪ್ರದೇಶಗಳೂ ಕ್ಯಾಸ್ಪಿಯನ್ ಸಮುದ್ರದ ಉತ್ತರ ಹಾಗೂ ಪೂರ್ವ ತೀರಗಳೂ ಇಂಥ ಇನ್ನೆರಡು ಪ್ರದೇಶಗಳೂ. ಚೀನದ ಚೆಂಘೈಯಲ್ಲಿನ ಟ್ಸೈಡಾಂ ಜೌಗುಪ್ರದೇಶ 900′ ತಗ್ಗಿನಲ್ಲೂ ಟರ್ಫಾನ್ ಓಯಸಿಸ್ 900′ ಕೆಳಗೂ ಇವೆ.

ನದಿಗಳು : ಖಂಡದ ಹೆಚ್ಚುಭಾಗ ಸಾಮಾನ್ಯ ರೀತಿಯ ನದಿ ಹಂಚಿಕೆ ವ್ಯವಸ್ಥೆಯನ್ನು ಹೊಂದಿದ್ದರೂ ಮಧ್ಯದ ಒಳಪ್ರದೇಶ ನದಿಗಳ ಮುಖಾಂತರ ಸಾಗರದೊಂದಿಗೆ ಸಂಬಂಧ ಹೊಂದಿಲ್ಲ. ಇದು ಖಂಡದ ಹೃದಯಭಾಗ. ಇದನ್ನು ಪರ್ವತಶ್ರೇಣಿಗಳು ಸುತ್ತುವರಿದಿವೆ. ಅನೇಕ ಖಂಡಾಂತರ ಜಲಾನಯನ ಪ್ರದೇಶಗಳು ಇಲ್ಲಿವೆ. 129.4995 ಲಕ್ಷ ಚ.ಕಿಮೀ ವಿಸ್ತಾರವಾಗಿರುವ ಈ ಪ್ರದೇಶದಲ್ಲಿ ಮಳೆ ವಿರಳ. ನೀರು ಅತಿಯಾಗಿ ಆವಿಯಾಗುತ್ತದೆ. ಆದ್ದರಿಂದ ಸಾಗರಗಳನ್ನು ತಲಪುವ ಮಟ್ಟಿಗೂ ನೀರು ಒದಗಿಸಲು ನದಿಗಳಿಗೆ ಸಾಧ್ಯವಾಗಿಲ್ಲ. ಇಲ್ಲಿನ ಒಂದು ತೊಟ್ಟು ಮಳೆ ನೀರೂ ಸಾಗರ ಸೇರುವುದಿಲ್ಲ.

ಅಫ್ಘಾನಿಸ್ತಾನದ ಪರ್ವತಗಳಿಂದ ಹರಿದು ಬರುವ, ಕರಗಿದ ಹಿಮಜಲದಿಂದ ಕೂಡಿರುವ, ಹೆಲ್‌ಮಂಡ್ ನದಿ ಇರಾನಿನ ಸೈಸ್ತಾನಿನ ಉಪ್ಪುನೀರಿನ ಸರೋವರಗಳಿಂದ ಕೂಡಿದ ಜೌಗುಪ್ರದೇಶದಲ್ಲಿ ಕಣ್ಮರೆಯಾಗುತ್ತದೆ. ಹಿಂದೂಕುಷ್ ಪರ್ವತಗಳಿಂದ ಉತ್ತರದ ಕಡೆ ಹರಿಯುವ ಆಮೂ ದಾರ್ಯಾ (2253.0816 ಕಿಮೀ) ಮತ್ತು ಸಿರ್ ದಾರ್ಯಾ (2414.016 ಕಿಮೀ)ಗಳಿಗೆ ಆರಲ್ ಸಮುದ್ರವೇ ಗುರಿ. ಪೂರ್ವದ ಕಡೆ ಒಂದು ಸಾವಿರಾರು ಕಿಮೀಗಿಂತಲೂ ಹೆಚ್ಚು ದೂರ ಹರಿಯುವ ಟಾರೀಮ್ ನದಿ ಲೋಬ್‌ನೋರ್ ಎಂಬ ಶುಷ್ಕ ಶೂನ್ಯ ಪ್ರದೇಶದಲ್ಲಿ ಕಣ್ಮರೆಯಾಗುತ್ತದೆ. ಇಲ್ಲಿ ನದಿಯ ಲೀನ ಬಾಲ್ಕಷ್ ಸರೋವರದಲ್ಲಿ.

ಆದರೆ ಏಷ್ಯದ ಮಧ್ಯದಲ್ಲಿ ಹುಟ್ಟುವ ಅನೇಕ ಬೃಹತ್ ನದಿಗಳು ಸಾಗರಗಳನ್ನು ತಲುಪುತ್ತವೆ. ಈಗಿನ ಸಿಂಧು, ಗಂಗಾ, ಬ್ರಹ್ಮಪುತ್ರಾ ಮೂಲನದಿಗಳನ್ನೂ ಅವುಗಳ ಉಪನದಿಗಳನ್ನೂ ಒಳಗೊಂಡಂತೆ ಇಂಡೋ–ಬ್ರಹ್ಮ ನದಿ ಸುಮಾರು ಎರಡು ಕೋಟಿ ವರ್ಷಗಳ ಹಿಂದೆ ಹಿಮಾಲಯ ಪ್ರದೇಶಗಳಲ್ಲಿ ಹುಟ್ಟಿ 4023.36 ಕಿಮೀ ಉದ್ದದ ಕಣಿವೆಯೊಂದರಲ್ಲಿ ಬೃಹದ್ ಪ್ರಮಾಣದಲ್ಲಿ ಪ್ರವಹಿಸಿ ಅರಬ್ಬೀ ಸಮುದ್ರವನ್ನು ಸೇರುತ್ತಿತ್ತೆಂದು ಅಭಿಪ್ರಾಯಪಡಲಾಗಿದೆ (**ನೋಡಿ: ಇಂಡೋ–ಬ್ರಹ್ಮ–ನದಿ**). ಜಗತ್ತಿನ 12 ದೊಡ್ಡ ನದಿಗಳಲ್ಲಿ ಏಳು ಇಲ್ಲಿಯೇ ಇವೆ. ಇವುಗಳಲ್ಲಿ ಮೂರು ನದಿಗಳು (ಆಬ್, ಎನಿಸೇ, ಲೀನಾ) ಉತ್ತರದ ಕಡೆ ಹರಿದು ಆರ್ಕ್‌ಟಿಕ್ ಸಾಗರ ಸೇರುತ್ತವೆ. ಬೇಸಗೆಯಲ್ಲಿ ಆಬ್ ನದಿ ಇರ್‌ಟಿಷ್‌ನೊಂದಿಗೆ ಕೂಡಿ ಪಾತ್ರವನ್ನು ಮೀರಿ ದಡಗಳಲ್ಲಿ ಹರಿದು 258.990ಚಕಿಮೀ ಅಭೇದ್ಯ ಜೌಗುಪ್ರದೇಶ ನಿರ್ಮಿಸುತ್ತದೆ. ಎನಿಸೇ (4506.1632 ಕಿಮೀ) ಮತ್ತು ಲೀನಾ (4828.032 ಕಿಮೀ) ಕೆಲವು ಕಡೆ 32 ಕಿಮೀಗಳಷ್ಟು ಅಗಲವಾಗಿವೆ. ಯಾನ, ಇಂಡಿಗರ್ಕಾ ಮತ್ತು ಕೊಲಿಮಗಳು–ಇಲ್ಲಿನ ಚಿಕ್ಕ ನದಿಗಳು. ಇವೆಲ್ಲವೂ ಚಳಿಗಾಲದಲ್ಲಿ (ಹೆಚ್ಚಾಗಿ ಉತ್ತರಾರ್ಧ ಭಾಗಗಳು) ಹೆಪ್ಪುಗಟ್ಟುತ್ತವೆ. ಪೆಸಿಫಿಕ್ ಸಾಗರವನ್ನು ಸೇರುವ ಹಾಗೂ ಪೂರ್ವದ ಕಡೆ ಹರಿಯುವ ನದಿಗಳಲ್ಲಿ ಆಮೂರ್ (2864.63232 ಕಿಮೀ ಉದ್ದ) ಹ್ವಾಂಗ್‌ಹೋ (4345.2288 ಕಿಮೀ ಉದ್ದ) ಯಾಂಗ್ಟ್ಸೀ (4988.9664 ಕಿಮೀ ಉದ್ದ ಮತ್ತು ಮೇಕಾಂಗ್ (4184.2944 ಕಿಮೀ ಉದ್ದ) ಮುಖ್ಯವಾದವು. ಆಮೂರ್ ನದಿ ಮಂಚೂರಿಯದ ಉತ್ತರದ ಅಂಚಿನಲ್ಲಿ ಹರಿದು, ಉತ್ತರದ ಕಡೆ ತಿರುಗಿ ಓಕಾಟ್ಸ್ಕ್ ಸಮುದ್ರ ಸೇರುತ್ತದೆ. ಹ್ವಾಂಗ್ ಹೋ ಅತ್ಯಂತ ನಿರ್ದಯಿ ನದಿ. ಚೀನರ ಕಣ್ಣೀರು ಎಂದು ಇದರ ನಾಮಧೇಯ. ಯಾಂಗ್ಟ್ಸೀ ಕಿಯಾಂಗ್ ಕಡಿದಾದ ಬೆಟ್ಟಗಳಿಂದ ಹರಿದು ಬಂದು ಚೀನವನ್ನು ಉತ್ತರ–ದಕ್ಷಿಣಾರ್ಧಗಳನ್ನಾಗಿ ಮಾಡಿ, ಪೆಸಿಫಿಕ್ ಸಾಗರ ಸೇರುತ್ತದೆ. ಯುವಾನ್, ಮಿನಾಂ, ಸಿಯಾಂಗ್, ಮಿನ್ ಹ್ವಾಯಿ, ಹಾಯಿ, ಲಿಆವೊ–ಇಲ್ಲಿನ ಚಿಕ್ಕ ನದಿಗಳು.

ಆಗ್ನೇಯ ಏಷ್ಯದಲ್ಲಿನ ಮೇಕಾಂಗ್, ಇರವಾಡಿ, ಸಾಲವೀನ್ (2816.352 ಕಿಮೀ) ನದಿಗಳು ಒಂದಕ್ಕೊಂದು ಸಮಾನಾಂತರವಾಗಿ, ಉತ್ತರ–ದಕ್ಷಿಣವಾಗಿ ಹರಿಯುತ್ತವೆ.

ಹಿಂದೂ ಸಾಗರವನ್ನು ಸೇರುವ ನದಿಗಳಲ್ಲಿ ಸಿಂಧೂ (2735.8848 ಕಿಮೀ) ಗಂಗಾ (2494.4832 ಕಿಮೀ) ಮುಖ್ಯ. ಟಿಬೆಟ್ಟಿನಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಹರಿಯುವ ಬ್ರಹ್ಮಪುತ್ರಾ ನದಿ ಬಂಗಾಲ ಕೊಲ್ಲಿ ಸೇರುವುದಕ್ಕೆ ಮುಂಚೆ ಹಿಮಾಲಯಗಳಿಂದ ಹರಿದು ಬರುವ ಗಂಗಾ ನದಿಯನ್ನು ಕೂಡಿ, ಪ್ರಪಂಚದಲ್ಲಿ ಅತ್ಯಂತ ವಿಶಾಲ ಮುಖಜಭೂಮಿಯನ್ನು ನಿರ್ಮಾಣಮಾಡಿದೆ. ಸಿಂಧೂನದಿ ಹಿಮಾಲಯ ಪರ್ವತಗಳಲ್ಲಿ ಜನಿಸಿ, ಉಪ–ನದಿಗಳೊಂದಿಗೆ ಕೂಡಿ ಅರಬ್ಬೀ ಸಮುದ್ರ ಸೇರುತ್ತದೆ. ಸಾಲ್ವೀನ್, ಸಿಟ್ಟಾಂಗ್, ಇರವಾಡಿ ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿ ನರ್ಮದಾ, ತಪತಿ–ಇಲ್ಲಿನ ಇತರ ನದಿಗಳು. ಅತ್ಯಂತ ಪಶ್ಚಿಮದಲ್ಲಿರುವ ಯುಫ್ರೇಟೀಸಿನ ಉದ್ದ 2735.8848 ಕಿಮೀ ಇದು ಟೈಗ್ರಿಸಿನೊಂದಿಗೆ (1770.2784 ಕಿಮೀ) ಕೂಡಿ ಪರ್ಷಿಯ ಕೊಲ್ಲಿ ಸೇರುತ್ತದೆ.

ರಾಜಸ್ಥಾನಿಗಳು

ಸರೋವರಗಳು : ಅತಿಯಾದ ತೇವದಿಂದ ಕೂಡಿದ್ದ ಪ್ರಾರಂಭಿಕ ಯುಗದಲ್ಲಿ ಆರಲ್ ಸಮುದ್ರ ವಿಸ್ತಾರವಾಗಿ, ವಿಶಾಲವಾದ ಕ್ಯಾಸ್ಪಿಯನ್ ಸಮುದ್ರದವರೆಗೂ ಹರಡಿದ್ದು ಅಲ್ಲಿಂದ ಮುಂದೆ ಕಪ್ಪು ಸಮುದ್ರದವರೆಗೂ ತನ್ನ ಕೈಚಾಚಿತ್ತು. ಕಪ್ಪು ಸಮುದ್ರವೇ ಪ್ರಪಂಚದ ಅತ್ಯಂತ ದೊಡ್ಡ ನಡುಗಡಲು (271174.464 ಚ.ಕಿಮೀ) ಆರಲ್ ಸಮುದ್ರದ ವಿಸ್ತೀರ್ಣ 67339.74 ಚ.ಕಿಮೀ ಬಾಲ್ಕಾಷ್ (17352.933 ಚ.ಕಿಮೀ) ಮತ್ತು ಇಸ್ಸಿಕ್ ಕಲ್ (5697.978 ಚ.ಕಿಮೀ) – ಇವೂ ಪ್ರಪಂಚದ ಪ್ರಮುಖ ಸರೋವರಗಳಲ್ಲಿ ಸೇರಿವೆ. ದಕ್ಷಿಣ ಸೈಬೀರಿಯದಲ್ಲಿರುವ ಬೇಕಲ್ ಸರೋವರ (31494.2784 ಚ.ಕಿಮೀ) ಪ್ರಪಂಚದ ಅತಿ ವಿಶಾಲವಾದ ಸಿಹಿನೀರಿನ ಸರೋವರ. ಸರಾಸರಿ 6,360' (ಒಂದು ಮೈಲಿ) ಆಳವಾಗಿರುವುದರಿಂದ ಬೃಹತ್ ಪ್ರಮಾಣದ ನೀರು ಇದರಲ್ಲಿದ್ದು ಇತರ

ನಾಗಾ ಜನಪದ ನೃತ್ಯ

ವಿಶಾಲ ಸರೋವರಗಳಿಗಿಂತಲೂ ಇದು ಹೆಚ್ಚು ನೀರನ್ನು ಹೊಂದಿದೆ. ಟಿಬೆಟ್ ಮತ್ತು ತುರ್ಕಿಗಳಲ್ಲಿ ಅನೇಕ ಉಪ್ಪು ನೀರಿನ ಸರೋವರಗಳಿವೆ. ತುರ್ಕಿಯಲ್ಲಿನವಾನ್ ಮತ್ತು ಇರಾನಿನಲ್ಲಿನ ಉರ್ಮಿಯಾ ಸರೋವರಗಳು. ಖನಿಜ ಭರಿತ ಜಲದಿಂದ ಕೂಡಿವೆ. ಚೀನದಲ್ಲಿ ಟುಂಗ್ ಟಿಂಗ್ ಎಂಬುದು ಒಂದು ಮುಖ್ಯ ಸರೋವರ. ಇದರ ವಿಸ್ತಾರ ಯಾಂಗ್ಟ್ಸಿ ನದಿಯ ನೀರಿನ ಪ್ರಮಾಣಕ್ಕೆ ತಕ್ಕಂತೆ ಬದಲಾವಣೆಯಾಗುತ್ತ ಹೋಗುತ್ತದೆ. ಉತ್ತರ ಚೀನದಲ್ಲಿ ಕೊಕೊ–ನೋರ್ (5956.977 ಚ.ಕಿಮೀ) ಉಪ್ಪು ನೀರಿನ ಸರೋವರ.

ವಾಯುಗುಣ : ಖಂಡದ ಅಸಾಧ್ಯ ವಿಸ್ತಾರ, ನಿಬಿಡತೆ, ಅಕ್ಷಾಂಶಗಳ ವ್ಯತ್ಯಾಸ, ಭೂಮಿಯ ಮೇಲ್ಮೈ ಇವು ಅನೇಕ ವಾಯುಗುಣವೈಲಕ್ಷಣ್ಯಗಳನ್ನು ನಿರ್ಮಿಸಿವೆ. ಖಂಡದ ಹೆಚ್ಚು ಭಾಗ ಸಮುದ್ರಕ್ಕೆ ಬಲು ದೂರದಲ್ಲಿರುವುದರಿಂದ ಸೆಕೆ ಮತ್ತು

ಚಳಿಗಳ ಅತಿರೇಕಗಳನ್ನೊಳಗೊಂಡ ಖಂಡಾಂತರ ವಾಯುಗುಣವನ್ನು ಕಾಣಬಹುದು. ಅಲ್ಲದೆ ಬೇರೆ ಯಾವ ಖಂಡದಲ್ಲೂ ಪರ್ವತಶ್ರೇಣಿಗಳು ವಾಯುಗುಣದ ಮೇಲೆ ಇಲ್ಲಿಯಷ್ಟು ಪ್ರಭಾವ ಬೀರುವುದಿಲ್ಲ. ಉತ್ತರದಿಂದ ಬರುವ ಶೀತಪ್ರಭಾವಗಳನ್ನು ಮತ್ತು ದಕ್ಷಿಣದಿಂದ ಬರುವ ಉಷ್ಣತೆಯ ಪ್ರಭಾವ ಹಾಗೂ ಜಲಮಾರುತಗಳನ್ನು ಇವು ತಡೆಗಟ್ಟುತ್ತವೆ.

ಜನವರಿಯ ಉಷ್ಣತೆ ದಕ್ಷಿಣದಿಂದ ಉತ್ತರದ ಕಡೆಗೆ ಹೋದಂತೆ ಕಡಿಮೆಯಾಗುತ್ತದೆ. ಸಮತಾಪರೇಖೆಗಳು ಸಾಮಾನ್ಯವಾಗಿ ಪೂರ್ವ ಪಶ್ಚಿಮವಾಗಿದೆ. ಮಧ್ಯ ಮತ್ತು ಉತ್ತರ ಏಷ್ಯಗಳಲ್ಲಿನ ಉಷ್ಣತೆ $0^0$ ಫ್ಯಾ. ಗಿಂತಲೂ ಕಡಿಮೆ. ಸೈಬೀರಿಯದಲ್ಲಿ ಚಳಿ ವಿಪರೀತ. ಲೀನಾ ನದೀ ತೀರದಲ್ಲಿನ ಸರಾಸರಿ ಉಷ್ಣತೆ ವರ್ಷಪೂರ್ತಿ ಸೊನ್ನೆಗಿಂತ $1^0$ ಫ್ಯಾ. ಮೇಲಿರುತ್ತದೆ. ಹಿಮ ಹೂಳುಗಳ ನಾನಾ ಪದರಗಳಿಂದ ನಿರ್ಮಾಣವಾಗಿರುವ ದೊಡ್ಡ ದ್ವೀಪಗಳು ಬೇಚ್ಚನೆಯ ಹವೆಯಲ್ಲಿ ಕರಗಿ ಹೋಗುತ್ತವೆ. ಲೀನಾ ನದಿ ವರ್ಷದಲ್ಲಿ ಎರಡು ತಿಂಗಳು ಮಾತ್ರ. ಹಿಮದ ಕಾಟದಿಂದ ದೂರವಿದ್ದರೂ ಇದಕ್ಕೆ ಹೊಂದಿಕೊಂಡಿರುವ ಉಪನದಿಗಳೂ ಮತ್ತಿತರ ಜಲವಿಭಾಗಗಳೂ ವರ್ಷಾಂತರಗಳಿಂದ ಹೆಪ್ಪುಗಟ್ಟಿವೆ. ಇಷ್ಟಾದರೂ ಅತ್ಯಂತ ಚಳಿಪ್ರದೇಶ ಮೇರುವಿನ ಬಳಿ ಇಲ್ಲ. ಯಾನಾ ನದಿಯ ಕಂದರದಲ್ಲಿರುವ ವರ್ಕೊಯಾನ್ಸ್ಕ್ ಅತ್ಯಂತ ಚಳಿಪ್ರದೇಶವಾಗಿದೆ.

ಬೇಕಲ್ ಸರೋವರದ ಬಳಿ 30.5" ಒತ್ತಡ ನಿರ್ಮಾಣವಾಗಿ ಏಕಪ್ರಕಾರವಾಗಿ ಮುಂದುವರಿದು ಉತ್ತರದ ಬೆಟ್ಟಗಳವರೆಗೂ ಹರಡುತ್ತದೆ. ಇದನ್ನು ಆರ್ಕ್‍ಟಿಕ್‍ನ ಕಡಲ್ಗಾಳಿಗಳು ಹಿಂದಕ್ಕೆ ತಳ್ಳುತ್ತವೆ. ಬ್ಯೂರಾನ್ (ಪುರ್ಗಾ) ಅಥವಾ ಬ್ಯೂರ್ ಫಾಸ್ ಚಂಡಮಾರುತ ಅತ್ಯಂತ ಭಯಾನಕ.

ಮಾರ್ಕೊಯಾನ್ಸ್ಕನಲ್ಲಿನ ಜುಲೈ ಉಷ್ಣತೆ ಸ್ಯಾನ್ ಫ್ರಾನ್ಸಿಸ್ಕೊವಿನದಕ್ಕಿಂತಲೂ ಹೆಚ್ಚು.

ಹೀಗಾಗಿ ಖಂಡದ ಹೆಚ್ಚುಭಾಗ ಜನವರಿಯಲ್ಲಿ ಹೆಚ್ಚು ಒತ್ತಡದ ಪ್ರದೇಶವಾಗಿರುತ್ತದೆ.

ಇದಕ್ಕೆ ಪ್ರತಿಯಾಗಿ ನೈಋತ್ಯ ಏಷ್ಯ ಅತ್ಯುಷ್ಣಪ್ರದೇಶ. ಅರೇಬಿಯದ ಒಳಭಾಗದಲ್ಲಿ ವಾರ್ಷಿಕ ಆವಿಯಾಗುವಿಕೆ ಸುಮಾರು 160". ಇದರ ಪರಿಣಾಮವಾಗಿ ನೆಲ ಸೋಕುವುದಕ್ಕೆ ಮೊದಲೇ ಮಳೆ ಹಾಗೆಯೇ ಆವಿಯಾಗುವುದೂ ಉಂಟು. ಬಿಸಿಲಿಗೆ ನೇರವಾಗಿರುವ ಶಿಲೆಗಳು ಒಡೆದು ಸಿಡಿಯುತ್ತವೆ. ಮರಳು ನೀರಿನ ಕುದಿಯುವ ಉಷ್ಣತೆ ಪಡೆಯುವುದರಿಂದ ಇಲ್ಲಿ ಸಾಮಾನ್ಯವಾಗಿ ದಿನದಲ್ಲಿ ಪ್ರಯಾಣಮಾಡುವುದನ್ನು ತಪ್ಪಿಸಿ, ರಾತ್ರಿಯ ಹೊತ್ತು ಒಂಟೆಗಳ ಮೇಲೆ ನಕ್ಷತ್ರ ಮಾರ್ಗದರ್ಶನದಲ್ಲಿ ಪ್ರಯಾಣ ಮಾಡುವುದು ರೂಢಿ. ಪರ್ಷಿಯನ್ ಕೊಲ್ಲಿಯಲ್ಲಿನ ನೀರು ಅತ್ಯುಷ್ಣ. ಇಲ್ಲಿನ ಉಷ್ಣತೆ $96^0$ ಫ್ಯಾ. ತೀರಗಳಲ್ಲಿ ಕೆಲವು ಸಲ $120^0$ ಫ್ಯಾ. ಇರುತ್ತದೆ. ಭಾರತದ ಥಾರ್ ಮರುಭೂಮಿಯ ಪ್ರದೇಶಗಳಲ್ಲಿ ಹೊಪ್ಪಳೆಗಳೇಳುವ ಉಷ್ಣತೆಯಿಂದ ಚಂಗೇಸ್‍ಖಾನನ ಬಲಿಷ್ಠ ಸೈನ್ಯವೇ ಹೆದರಿತೆಂದು ಹೇಳಲಾಗಿದೆ. ಜುಲೈ ತಿಂಗಳಲ್ಲಿ ಮರುಭೂಮಿ ಪ್ರದೇಶಗಳೆಲ್ಲ ಅತ್ಯಂತ ಕಡಿಮೆ ಒತ್ತಡ ಪ್ರದೇಶಗಳಾಗುತ್ತವೆ.

ಅರಬ್ಬೀ ಸಮುದ್ರ ಮತ್ತು ಬಂಗಾಲ ಕೊಲ್ಲಿಗಳು ಮಾನ್ಸೂನ್ ಮಾರುತಗಳ ಕೇಂದ್ರಗಳು, ಪೂರ್ವಚೀನ ಸಮುದ್ರದಲ್ಲೂ ಇದೇ ರೀತಿಯ ಮಾನ್ಸೂನ್ ಮಾರುತಗಳ ಕೇಂದ್ರವಿದೆ. ಅನೇಕ ಪ್ರದೇಶಗಳು ಮಾರುತಗಳ ಶಾಪಕ್ಕೆ ಬಲಿಯಾಗಿವೆಯೆನ್ನಬಹುದು. ವಿಶಾಲ ಪ್ರದೇಶವಾದ ಗೋಬಿ ಮರುಭೂಮಿಯಲ್ಲಿನ ಕರಬುರಾನ್ ಮಾರುತಗಳು ತುರ್ಕಿಯ ಮರುಭೂಮಿ ಹಾಗೂ ಸ್ಟೆಪ್‍ಗಳ ಮೂಲಕ ಹಾದು, ಅಲ್ಲಲ್ಲಿರುವ ಸರೋವರಗಳ ಮತ್ತು ನದಿಗಳ ನೀರಿನ ತೇವ ಪಡೆದು ಕ್ಯಾಸ್ಪಿಯನ್ ಸಮುದ್ರದ ಮುಖಾಂತರ ಹಾದುಹೋಗುತ್ತವೆ. ಇವು ವಿಶಾಲವಾದ ಮಳೆ ನೆರಳಿನ ಮರುಭೂಮಿಯಿಂದ ಬರುತ್ತವೆ.

ಇರಾನಿನ ಕೆಲವು ಪ್ರದೇಶಗಳಲ್ಲಿ ಸೈಸ್ಟಾನ್ ಎಂಬ 120 ದಿನಗಳ ಮಾರುತಗಳು ಗಂಟೆಗೆ 112.65408 ಕಿಮೀ ವೇಗದಲ್ಲಿ ಬೀಸುತ್ತವೆ. ಕೆಲವು ಸಮಯದಲ್ಲಿ ಬಿರುಗಾಳಿ ಇನ್ನೂ ಪ್ರಕೋಪ ಹೊಂದಿ ಗಂಟೆಗೆ 193.12128 ಕಿಮೀಗಿಂತಲೂ ಹೆಚ್ಚು ವೇಗವಾಗಿ ಬೀಸುವುದುಂಟು. ತುರ್ಕಿಯ ಕಡೆಯಿಂದ ಪರ್ಷಿಯನ್ ಕೊಲ್ಲಿಯ ಕಡೆ ಇದೇ ರೀತಿ ಬೀಸುವುದು ಷಾಮಲ್ ಮಾರುತ.

ಟಿಬೆಟ್ ಇತ್ಯಾದಿ ಎತ್ತರದ ಪ್ರದೇಶಗಳು ಅತ್ಯುಷ್ಣತೆಯ ಕಾಟವನ್ನೇನೊ ತಪ್ಪಿಸಿಕೊಳ್ಳುತ್ತವೆ. ಆದರೆ ಶುಷ್ಕ ಮಾರುತಗಳು ಉತ್ತರದ ಕಡೆಯಿಂದ ಬೀಸುವುದರಿಂದ ಪರಿಸ್ಥಿತಿ ಅಸಹನೀಯ.

ಭಯಾನಕ ಹೊಯ್ಗಾಳಿಗಳು ಅರೇಬಿಯ ಮರುಭೂಮಿಯಿಂದ ಬೀಸಿ ದೂರದಲ್ಲಿ ಸಮುದ್ರದಲ್ಲಿರುವ ಹಡಗುಗಳನ್ನು ಮರಳಿನಿಂದ ಬಡಿಯುವುದುಂಟು. ಉತ್ತರ ಚೀನದಲ್ಲಿ ಇಂಥ ಮಾರುತಗಳ ಪ್ರಭಾವ ಅಧಿಕ. ಅಲ್ಲಿನ ಧೂಳು ಮಧ್ಯ ಏಷ್ಯದಲ್ಲಿ ವಿಸ್ತರಿಸಿ ನೂರಾರು ಕಿಮೀ ಅಗಲ, ಸಾವಿರಾರು ಅಡಿಗಳ ಆಳ ಸಂಚಿತವಾಗಿರುತ್ತದೆ.

ಹಿಂದೂ ಸಾಗರದಲ್ಲಿನ ಮಾನ್ಸೂನ್ ಮಾರುತಗಳ ಪ್ರಭಾವವನ್ನು ದಕ್ಷಿಣ ಏಷ್ಯದಲ್ಲೆಲ್ಲ ಕಾಣಬಹುದು. ಇವು ಈಶಾನ್ಯದಿಂದ ಆರು ತಿಂಗಳ ಕಾಲ ಬೀಸಿ, ಆಮೇಲೆ ನೈಋತ್ಯದಿಂದ ಬೀಸುತ್ತವೆ. ಪೂರ್ವಕ್ಕೆ ಹೋದಂತೆ ಅವುಗಳ ಪಥವೂ ಕಾಲಾವಧಿಯೂ ವ್ಯತ್ಯಾಸಗೊಳ್ಳುವವು. ಜೂನಿನಿಂದ ಸೆಪ್ಟೆಂಬರ್‍ವರೆಗೆ ಬೀಸುವ ಈ ಮಾರುತಗಳು ಮಳೆಯನ್ನು ತರದಿದ್ದರೆ ಕೋಟ್ಯಂತರ ಜನ ಕ್ಷಾಮಕ್ಕೆ ಬಲಿಯಾಗುತ್ತಾರೆ. ದಕ್ಷಿಣ ಚೀನ ಮತ್ತು ಜಪಾನ್ ತೀರದಲ್ಲಿ ಬೀಸುವ ಕಡಲ್ಗಾಳಿಗಳು ಅಪಾಯಕಾರಿ.

ಏಷ್ಯದಲ್ಲಿ ಮಳೆ ಹಂಚಿಕೆ ಬಲು ಅಸಮವಾದದ್ದು. ಸೈಬೀರಿಯದಲ್ಲಿ ವಾರ್ಷಿಕ ಮಳೆ 20" ಗಳಿಗಿಂತಲೂ ಕಡಿಮೆ. ಆದರೆ ಜಗತ್ತಿನಲ್ಲೆ ಅತ್ಯಂತ ಹೆಚ್ಚಿನ ಮಳೆ ಬೀಳುವ ಪ್ರದೇಶ ಅಸ್ಸಾಮಿನಲ್ಲಿದೆ. ಚಿರಾಪೂಂಜಿಯಲ್ಲಿ ವಾರ್ಷಿಕ ಸರಾಸರಿ ಮಳೆ 424". 24 ಗಂಟೆಗಳಲ್ಲಿ 36" ಕ್ಕೂ ಹೆಚ್ಚು ಮಳೆ ಬೀಳುವುದುಂಟು. ಆದರೆ ಮಳೆ ಹಂಚಿಕೆ ವರ್ಷಪೂರ್ತಿ ಅಸಮರ್ಪಕ. ಇಲ್ಲಿನ ಒಟ್ಟು ಮಳೆ ಐದು ತಿಂಗಳಲ್ಲಿ ಮಾತ್ರ ಬೀಳುತ್ತದೆ; ವರ್ಷದ ಉಳಿದ ತಿಂಗಳುಗಳಲ್ಲಿ ಸಾಮಾನ್ಯವಾಗಿ ಮಳೆ ಇಲ್ಲ.

ಲದಾಖಿ ಸ್ತ್ರೀಪುರುಷರು

ದಕ್ಷಿಣ ಚೀನ, ಮಯನ್ಮಾರ್, ಇಂಡೋ–ಚೀನ, ಶ್ರೀಲಂಕ–ಮಲಯ, ಇವು ಅಧಿಕ ಮಳೆಯ ಪ್ರದೇಶಗಳು. ಫಾರ್ಮೋಸದ ಕೆಲವು ಕಡೆಗಳಲ್ಲಿ 300" ಗಳಷ್ಟು ಮಳೆಯಾಗುವುದುಂಟು. ಉಜಾನ್‍ನಲ್ಲಿ ಇದು ಇನ್ನೂ ಹೆಚ್ಚು. ಮಲಯದಲ್ಲಿ ಒಂದು ಗಂಟೆಯಲ್ಲಿ ಧಾರಾಕಾರ ಮಳೆ; ಮರುಗಳಿಗೆಯಲ್ಲೆ ಅಸಾಧ್ಯ ಒಣಹವೆ. ವೆರ್ಖೋೀಯಾನ್ಸ್ಕ್‍ನಲ್ಲಿ ವಾರ್ಷಿಕ ಉಷ್ಣತೆಯ ವ್ಯತ್ಯಾಸ ತೀವ್ರ; ಮಲಯದಲ್ಲಿ $10^o$. ಏಷ್ಯದ ಮುಖ್ಯ ವಾಯುಗುಣಗಳಿವು: 1. ಉಷ್ಣವಲಯದ ಮಾನ್ಸೂನ್ ವಾಯುಗುಣ ಭಾರತ, ಪಾಕಿಸ್ತಾನ, ಇಂಡೋ–ಚೀನ, ದಕ್ಷಿಣ ಚೀನಗಳಲ್ಲಿ.

2. ಭೂಮಧ್ಯರೇಖೆಯ ವಾಯುಗುಣ: ಮಲಯ, ಇಂಡೋನೇಷ್ಯಗಳಲ್ಲಿ, ಇದು ಅಕ್ಷಾಂಶ ಹಾಗೂ ಸಾಗರಿಕ ಪ್ರಭಾವಗಳಿಗೆ ತಕ್ಕಂತೆ ಬದಲಾಗುವುದುಂಟು. ಉಷ್ಣತೆ ಸಾಮಾನ್ಯವಾಗಿ ಹೆಚ್ಚು. ವರ್ಷಪೂರ್ತಿ ಮಳೆ. ಆದರೆ ಮೇ–ಅಕ್ಟೋಬರ್ ಅವಧಿಯಲ್ಲಿ ಅತ್ಯಂತ ಹೆಚ್ಚು ಮಳೆ. ಡಿಸೆಂಬರ್–ಜನವರಿಗಳು ಸಾಮಾನ್ಯವಾಗಿ ಶುಷ್ಕ.

3. ಸಮಶೀತೋಷ್ಣ ಮಾನ್ಸೂನ್ ವಾಯುಗುಣ: ಮಧ್ಯ ಮತ್ತು ಉತ್ತರ ಚೀನ, ಮಂಚೂರಿಯ, ಮಧ್ಯ ಮತ್ತು ದಕ್ಷಿಣ ಜಪಾನ್‍ಗಳನ್ನೊಳಗೊಂಡ ಈಶಾನ್ಯ ಏಷ್ಯ.

4. ಮರುಭೂಮಿ ಮತ್ತು ಶುಷ್ಕ ಮರುಭೂಮಿ ವಾಯುಗುಣ: ಮಾನ್ಸೂನ್ ಪ್ರದೇಶದ ವಾಯವ್ಯಕ್ಕೆ ಅರೇಬಿಯದಿಂದ ಇರಾನ್ ತುರ್ಕಿಸ್ತಾನಗಳ ಮುಖಾಂತರ ಗೋಬಿ ಮರುಭೂಮಿಯ ಅಂಚಿನ ವರೆಗೆ. ಇಲ್ಲಿ ಮಳೆ ಇಲ್ಲ. ಬೆಳೆಯೂ ಇಲ್ಲ. ಇರಾನ್‍ವರೆಗಿನ ಪ್ರದೇಶದಲ್ಲಿ ಉಷ್ಣವಲಯ ವಾಯುಗುಣ, ಉಳಿದ ಕಡೆಗಳಲ್ಲಿ ಸಮಶೀತೋಷ್ಣವಲಯ ವಾಯುಗುಣ.

5. ಮೆಡಿಟರೇನಿಯನ್ ಸಮುದ್ರ ವಾಯುಗುಣ: ಮರುಭೂಮಿ ವಾಯುಗುಣ ಪ್ರದೇಶದ ವಾಯವ್ಯಕ್ಕೆ, ಮೆಡಿಟರೇನಿಯನ್ ಸಮುದ್ರದ ಅಂಚಿನಲ್ಲಿ, ಮತ್ತು ತುರ್ಕಿ, ಸಿರಿಯ, ಇಸ್ರೇಲ್, ಜಾರ್ಡನ್‍ಗಳಲ್ಲಿದೆ. ಉಷ್ಣತೆಯ ಒಣ ಬೇಸಿಗೆಗಳೂ ಮಳೆಯಿಂದ

ಕೂಡಿದ ಚಳಿಗಾಲಗಳೂ ಈ ವಾಯುಗುಣದ ವೈಶಿಷ್ಟ್ಯ. ಇದರ ಪ್ರಭಾವವನ್ನು ಇರಾನ್ ಪ್ರಸ್ಥಭೂಮಿಯವರೆಗೂ ಕಾಣಬಹುದು.

6. ತಂಡ್ರ ವಾಯುಗುಣ: ಇದು ಉತ್ತರದ ಅಂಚಿನಲ್ಲಿದೆ.

7. ಶೀತ ಹಿತೋಷ್ಣ (ಕೋಲ್ಡ್ ಟೆಂಪರೇಟ್) ವಾಯುಗುಣ: ಸೈಬೀರಿಯದ ಹೆಚ್ಚು ಪ್ರದೇಶಗಳಲ್ಲಿ.

ಸ್ವಾಭಾವಿಕ ಸಸ್ಯವರ್ಗ: ಏಷ್ಯದ ಸಸ್ಯವರ್ಗ ಅಲ್ಲಿನ ವಾಯುಗುಣ ಭೂಗುಣಗಳಿಗೆ ಅನುಸಾರವಾದದ್ದು. ಉಷ್ಣತೆಯೂ ತೇವವೂ ಇದನ್ನು ತೀರ್ಮಾನಿಸುತ್ತವೆ. ಉತ್ತರದಲ್ಲಿ ಚಟುವಟಿಕೆಯ ಸಸ್ಯ ಬೆಳೆವಣಿಗೆ ವರ್ಷದಲ್ಲಿ ಕೇವಲ ಮೂರು ತಿಂಗಳು ಮಾತ್ರ; ಆಗ್ನೇಯದಲ್ಲಿ ವರ್ಷಪೂರ್ತಿ ಸಸ್ಯ ಬೆಳೆವಣಿಗೆಯಾಗುತ್ತದೆ.

ಖಂಡದ ಉತ್ತರದ ಅಂಚಿನಲ್ಲಿ ಆರ್ಕ್‍ಟಿಕ್ ತೀರದುದ್ದಕ್ಕೂ ತಂಡ್ರ ಸಸ್ಯವರ್ಗ. ಸಾವಿರಾರು ಕಿಮೀಗಳ ವಿಸ್ತಾರದ ಒಳಮಣ್ಣು ಶಾಶ್ವತವಾಗಿ ನೂರಾರು ಮೀಗಳವರೆಗೆ ಹೆಪ್ಪುಗಟ್ಟಿರುತ್ತದೆ. ಬೇಸಗೆ ಬಲು ಕಡಿಮೆಯಾದ್ದರಿಂದ ಶಾಶ್ವತ ಸಸ್ಯವರ್ಗವಿಲ್ಲ. ಹಾವಸೆಗಳು ಜೌಗು ಪ್ರದೇಶಗಳಿಗೆ ಕಚ್ಚಿಕೊಂಡಿರುತ್ತವೆ. ನೀರು ಹಬ್ಬೆಗಿಡಗಳು ಬಿಳಲುಗಳಂತೆ ಅಲ್ಲಲ್ಲಿ ಇಳಿ ಬಿದ್ದಿರುವುದುಂಟು. ಆಸ್ಪ್ ಮತ್ತು ಭೂರ್ಜ ಸಸಿಗಳು ನೆಲದ ಮೇಲೆ ಕೆಲವು ಅಂಗುಲಗಳವರೆಗೆ ಕಾಣಿಸಿಕೊಳ್ಳುತ್ತವೆ. ತಗ್ಗು ಪ್ರದೇಶಗಳಲ್ಲಿ ತಂಡ್ರ ಸಸ್ಯವರ್ಗದೊಂದಿಗೆ ಚಿಕ್ಕ ಮರಗಳೂ ಬೆರೆತಿರುವುದುಂಟು.

ತಂಡ್ರದ ದಕ್ಷಿಣದಲ್ಲಿ ಖಂಡದ ಅಗಲಕ್ಕೂ ಪ್ರಪಂಚದಲ್ಲೆಲ್ಲ ಅತ್ಯಂತ ವಿಶಾಲವಾದ ಕಾಡುಗಳು ಕಂಡು ಬರುತ್ತವೆ. ಇವನ್ನು ಸೈಬೀರಿಯನ್ ಟೈಗ ಎಂದು ಕರೆಯುತ್ತಾರೆ. ಉತ್ತರ ಯುರೋಪಿನಿಂದ ಉತ್ತರ ಏಷ್ಯದ ಮುಖಾಂತರ ಪೆಸಿಫಿಕ್‍ವರೆಗೆ ಇವು ಹರಡಿವೆ. ಪೈನ್, ಲಾರ್ಚ್, ಸ್ಪ್ರೂಸ್, ಫರ್ ಇತ್ಯಾದಿ ಮರಗಳೊಂದಿಗೆ ಭೂರ್ಜ ಹಾಗೂ ಆಸ್ಪ್‍ಮರಗಳೂ ಮಿಶ್ರವಾಗಿವೆ. ಅಲ್ಲಲ್ಲಿ ಜೌಗುಪ್ರದೇಶಗಳೂ ಉಂಟು.

ಇವುಗಳ ದಕ್ಷಿಣಕ್ಕೆ ಹಾಗೂ ಆಗ್ನೇಯದಲ್ಲಿ ಚಳಿಗಾಲದಲ್ಲಿ ಎಲೆಗಳುದುರುವ, ಅಗಲವಾದ ಎಲೆಗಳುಳ್ಳ ಮರಗಳ ಕಾಡುಗಳು ಕಂಡುಬರುತ್ತವೆ. ಈಶಾನ್ಯ ಏಷ್ಯದಲ್ಲಿರುವವು ತಣ್ಣಗಿನ ಸಮಶೀತೋಷ್ಣವಲಯ ಕಾಡುಗಳು. ಎತ್ತರದ ಪ್ರದೇಶಗಳಲ್ಲಿ ಮೊನಚಾದ ಎಲೆಗಳ ಮರಗಳುಂಟು. ಓಕ್, ಬೀಚ್, ಮತ್ತು ಕರ್ಪೂರ ಮರಗಳು ಇಲ್ಲಿ ಮುಖ್ಯ. ಉತ್ತರದಲ್ಲಿರುವವು ಕೊಡೆ ರೀತಿಯ ಮರಗಳು.

ಪೂರ್ವ ಏಷ್ಯದ ಉತ್ತರ ಭಾಗದಲ್ಲಿ ಓಕ್, ಎಲ್ಮ್ ಇತ್ಯಾದಿಮರಗಳ ಕಾಡುಗಳಿವೆ. ಕೊರಿಯದಲ್ಲಿ ಗಟ್ಟಿಮುಟ್ಟಾದ ಬಿದಿರು ದೊರೆಯುತ್ತದೆ. ಮಧ್ಯ ಚೀನ ಮತ್ತು ಜಪಾನ್‍ಗಳಲ್ಲಿ ಬೆಚ್ಚಗಿರುವ ಸಮಶಿತೋಷ್ಣವಲಯ ಕಾಡುಗಳುಂಟು. ಭೂತಾಕಾರದ ರೆಡ್‍ವುಡ್ ಮರಗಳು ಇಲ್ಲಿವೆ. ಚೀನದಲ್ಲೂ ಕಾಡುಗಳನ್ನು ಕಾಣಬಹುದು. ದಕ್ಷಿಣ ಚೀನದಲ್ಲಿ ಸವನ್ನವುಂಟು. ಆಗ್ನೇಯ ಮತ್ತು ದಕ್ಷಿಣ ಏಷ್ಯದಲ್ಲಿ ಉಷ್ಣವಲಯ ಕಾಡುಗಳು ಇವೆ.

ಸದಾ ಹಸಿರಾಗಿರುವ ಕಾಡುಗಳಲ್ಲಿ ತೇಗ ಹೇರಳ. ಹಡಗು ನಿರ್ಮಾಣದಲ್ಲಿ ತೇಗ ಅಸಮಾನವಾದುದು. ಮಹಾಗನಿಯ ಅನೇಕ ವಿಧಗಳು ಇಂಡೋನೇಷ್ಯ ಫಿಲಿಪೀನ್ಸ್‍ನಲ್ಲಿ ಕಂಡುಬರುತ್ತವೆ.

ಮಧ್ಯದ ಪರ್ವತಗಳಲ್ಲಿರುವ ಪರ್ವತಸಸ್ಯಗಳು ನೆಲದ ಎತ್ತರಕ್ಕೆ ತಕ್ಕಂತೆ ಬದಲಾಗುತ್ತದೆ. ಸಾಮಾನ್ಯ ಎತ್ತರ ಪ್ರದೇಶಗಳಲ್ಲಿ ಓಕ್, ಮೇಪಲ್ ಇತ್ಯಾದಿ ಗಟ್ಟಿ ಮರಗಳು ಬೆಳೆಯುತ್ತವೆ. ಹಿಮಾಲಯಗಳ ದಕ್ಷಿಣದಲ್ಲಿ 17,000′ ವರೆಗೆ ಇರುವವು ಎಲೆ ಮೊನಚಾದ ಕಾಡುಗಳು. ಹಿಮರೇಖೆಯ ವರೆಗೆ ಇರುವುದು ಆಲ್ಪೈನ್ ಸಸ್ಯವರ್ಗ.

ಮರುಭೂಮಿ ಪ್ರದೇಶದ ಅಂಚುಗಳಲ್ಲಿ, ಅರೇಬಿಯದಿಂದ ಭಾರತದವರೆಗೆ ಜಾಲಿಯ ಮರಗಳು ಮುಳ್ಳಿನ ಪೊದೆಗಳೊಂದಿಗೆ ಬೆಳೆಯತ್ತವೆ. ಇದರಿಂದ ನರುಗಂಪುಳ್ಳ ಅಂಟುಗಳು, ರಾಳ ಮತ್ತು ವೈದ್ಯಕ್ಕೆ ಬೇಕಾಗುವ ಔಷಧಗಳನ್ನು ತಯಾರಿಸುತ್ತಾರೆ. ಓಯಸಿಸ್‍ಗಳಿರುವ ಕಡೆ ಖರ್ಜೂರದ ಮರಗಳಿವೆ.

ಏಷ್ಯ ಮೈನರಿನಲ್ಲಿ ಆಲಿವ್, ಓಕ್ ಮರಗಳಿರುವ ಮೆಡಿಟರೇನಿಯನ್ ಸಸ್ಯವರ್ಗವನ್ನು ಕಾಣಬಹುದು.

ಅರೇಬಿಯದಲ್ಲಿನ ಕೆಲವೇ ಸಸ್ಯಗಳು ಬೂದುಬಣ್ಣ ಇಲ್ಲವೆ ಬೆಳ್ಳಗಿರುತ್ತವೆ.

ದಕ್ಷಿಣ ರಷ್ಯದಿಂದ ಮಂಚೂರಿಯದವರೆಗೆ ಹಬ್ಬಿರುವುದು ಸ್ಟೆಪ್-ಹುಲ್ಲುಗಾವಲು. ಮಧ್ಯೆ ಮಧ್ಯೆ ಇರುವ ಪರ್ವತಾವಳಿಗಳು ಮತ್ತು ಮರುಭೂಮಿಗಳಿಂದ ಸ್ಟೆಪ್ ಅಷ್ಟು ಪ್ರಭಾವಿತವಾಗಿಲ್ಲ. ತುರ್ಕಿಸ್ತಾನ್ ಮತ್ತು ಮಧ್ಯ ಏಷ್ಯದ ಹುಲ್ಲುಗಾವಲುಗಳು ಅನಾದಿಕಾಲದಿಂದಲೂ ದನಕರುಗಳ ಸಾಕಾಣಿಕೆಗೆ ಅನುಕೂಲ ಮಾಡಿಕೊಟ್ಟಿವೆ.

ಪ್ರಾಣಿವರ್ಗ: ಏಷ್ಯದ ವೈಶಾಲ್ಯಕ್ಕೆ ತಕ್ಕಂತೆ ವೈವಿಧ್ಯಪೂರ್ಣ ಪ್ರಾಣಿವರ್ಗವಿದೆ. ಕುದುರೆ ಇಲ್ಲಿನ ಅಲೆಮಾರಿ ಜನಾಂಗಕ್ಕೆ ಸುಮಾರು 5,000 ವರ್ಷಗಳಿಂದಲೂ ಸೇವೆ ಸಲ್ಲಿಸುತ್ತ ಬಂದಿದೆ. ಈ ಖಂಡ ಶೀಘ್ರಗಾಮಿ ಹೇಸರಗತ್ತೆಗಳ ಮೂಲಸ್ಥಾನ. ಪ್ರಾಚೀನತಮ ಮೇಕೆಗಳಿರುವುದು ತುರ್ಕಿಯಲ್ಲಿ. ಒಂಟೆ ಮರುಭೂಮಿಯ ಅತ್ಯಮೂಲ್ಯ ಪ್ರಾಣಿ. ಟಿಬೆಟಿನಲ್ಲಿ ಯಾಕ್ ಭಾರ ಹೊರುವುದಲ್ಲದೆ ಬೆಣ್ಣೆ, ಚರ್ಮ ಮತ್ತು ಮಾಂಸಗಳನ್ನು ಒದಗಿಸುತ್ತದೆ.

ನರಿಯ ಗಾತ್ರದ ನಾಯಿಜಾತಿಯ ಪ್ರಾಣಿ

ಕಾಡುವೃಷಭಗಳು ಭಾರತ ಮಲಯಗಳಲ್ಲಿ ಕಂಡುಬರುತ್ತವೆ. ಭಾರತದಿಂದ ಇಂಡೋನೇಷ್ಯದವರೆಗೆ ಎಮ್ಮೆಗಳನ್ನು ಕಾಣಬಹುದು.

ಸೈಬೀರಿಯದ ವಿಶಾಲ ಪ್ರದೇಶಗಳಲ್ಲಿ ಹಿಮಸಾರಗಗಳು ಗುಂಪು ಗುಂಪಾಗಿ ಓಡಾಡುತ್ತವೆ. ಹಿಮನೆಲದ ಮೇಲೆ ಚಕ್ರಗಳಿಲ್ಲದ ವಾಹನಗಳನ್ನೆಳೆಯಲು ಇವು ಸಹಾಯಕ. ಚರ್ಮ ಮತ್ತು ಮಾಂಸಗಳನ್ನೂ ಇವು ಒದಗಿಸುತ್ತವೆ.

ನೇಪಾಲ, ಸಿಕ್ಕಿಂ, ಕಾಶ್ಮೀರ ಇತ್ಯಾದಿ ಪರ್ವತ ಪ್ರದೇಶಗಳಲ್ಲಿ ಕಸ್ತೂರಿ ಮೃಗಗಳು ಧಾರಾಳ. ಪಾಮಿರಿನಲ್ಲಿಯ ಓವಿಸ್ ಪೋಲಿ ಎನ್ನುವ ಹಿಮ ಕುರಿಗಳ ಕೋಡುಗಳು ಅತ್ಯಂತ ಉಪಯುಕ್ತ. ಏಷ್ಯದಲ್ಲಿ ಅನೇಕ ರೀತಿಯ ಚಿಗರಿಗಳುಂಟು. ಬೊಗಳುವ ಜಿಂಕೆಗಳು ಚೀನದಲ್ಲಿವೆ.

ಕಂಬಳಿ ಹುಳು

ಶ್ರೀಲಂಕ, ಸುಮಾತ್ರ, ಭಾರತ, ಮಯನ್ಮಾರ್, ಮಲಯಗಳಲ್ಲಿ ಇಂದಿಗೂ ಆನೆಗಳ ಹಿಂಡುಗಳಿವೆ ಇವುಗಳನ್ನು ಪಳಗಿಸಿ, ಅನೇಕ ರೀತಿಯ ಕಾರ್ಯಗಳನ್ನು ಇವುಗಳಿಂದ ಮಾಡಿಸಿಕೊಳ್ಳುತ್ತಾರೆ. ಈ ಖಂಡದಲ್ಲಿ ಮೂರು ರೀತಿಯ ನೀರಾನೆಗಳಿವೆ-ಒಂದು ಕೊಂಬಿನವು ನೇಪಾಲ, ಅಸ್ಸಾಂಗಳಲ್ಲಿವೆ; ಎರಡು ಕೊಂಬಿನವೂ ಜಾವ, ಸುಮಾತ್ರ, ಮಲಯ, ಮಯನ್ಮಾರ್, ಬೋರ್ನಿಯೊಗಳಲ್ಲಿವೆ. ಮಲಯ, ಸುಮಾತ್ರಗಳಲ್ಲಿ ಘೇಂಡಾಮೃಗಗಳಿವೆ. ಭಾರತದಲ್ಲಿ ಕಿರುಬಗಳೂ ಹಿಮಾಲಯ, ಕುನ್‍ಲೂನ್‍ಗಳಲ್ಲಿ ಚಿರತೆಗಳೂ ಉಂಟು. ಪ್ರಪಂಚದಲ್ಲೇ ವಿರಳವಾಗುತ್ತಿರುವ ಸಿಂಹಗಳು ಗುಜರಾತಿನ ಗಿರ್ ಕಾಡುಗಳಲ್ಲಿವೆ. ಸೈಬೀರಿಯ ಹಾಗೂ ಭಾರತದ ಕಾಡುಗಳಲ್ಲಿ ತೋಳಗಳೂ ಉಂಟು.

ಏಷ್ಯದಲ್ಲಿ ಅನೇಕ ವಿಧವಾದ ಕರಡಿಗಳಿವೆ. ಇವುಗಳಲ್ಲಿ ಅತ್ಯಂತ ದೊಡ್ಡದಾದ ಬಿಳಿ ಕರಡಿಗಳು ಆಗಾಗ ಆರ್ಕ್‍ಟಿಕ್ ತೀರಗಳಲ್ಲಿ ಕಂಡುಬರುತ್ತವೆ. ಮಾಂಸಾಹಾರಿಗಳಲ್ಲಿ ಅತ್ಯಂತ ಭಯಾನಕ ಪ್ರಾಣಿ ಎಂದರೆ ಹುಲಿ. ಏಷ್ಯದಲ್ಲಿ ವಿನಾ ಮತ್ತೆಲ್ಲೂ ಇವು ದೊರೆಯುವುದಿಲ್ಲ. ಸಾಮಾನ್ಯವಾಗಿ ಭಾರತ, ಬೋರ್ನಿಯೊ, ಶ್ರೀಲಂಕ, ಮಲಯ,


ಏಷ್ಯ ರಾಜಕೀಯ
ಹಿಂದೂ ಮಹಾಸಾಗರ
ಪೆಸಿಫಿಕ್ ಮಹಾಸಾಗರ
ಮಂಗೋಲಿಯ
ಚೀನ
ರಷ್ಯ
ಜಪಾನ್ ಸಮುದ್ರ
ಮೆಡಿಟರೇನಿಯನ್ ಸಮುದ್ರ
ಅರಬಿಯ ಸಮುದ್ರ
ಬಂಗಾಳ ಕೊಲ್ಲಿ

ಸುಮಾತ್ರ, ಜಾವ ಮತ್ತು ಬಾಲಿಗಳಲ್ಲಿನ ಕಾಡುಗಳಲ್ಲಿ ಇವೆ. ಸೈಬೀರಿಯದ ಹುಲಿಗೆ ಒತ್ತಾದ ಕೂದಲು ಒಂದು ವಿಶೇಷ.

ಚೀನದಲ್ಲಿ ಕಂಡುಬರುವ ಪಂಡ ಎನ್ನುವ ಮಾಂಸಾಹಾರಿ ಬಹಳ ವಿಚಿತ್ರ ಪ್ರಾಣಿ. ಕರಡಿಯಂತೆ ಕಾಣುವ ಈ ಪ್ರಾಣಿಗೆ ಬಿದಿರಿನ ಮೊಳಕೆಯೇ ಆಹಾರ. ಇದರ ತೂಕ 350 ಪೌಂಡುಗಳಿಗಿಂತಲೂ ಹೆಚ್ಚು.

ದಕ್ಷಿಣ ಏಷ್ಯದಲ್ಲಿ ಅನೇಕ ರೀತಿಯ ಮಂಗಗಳನ್ನೂ ಕಾಣಬಹುದು. ಮಲಯದಲ್ಲಿರುವ ಗಿಬನ್ ಎನ್ನುವ ನಿಡುದೋಳಿನವಾನರ ಮನುಷ್ಯನಂತೆ ಎರಡು ಕಾಲ ಮೇಲೆ ಚಲಿಸುತ್ತದೆ. ಮರದಲ್ಲಿ ವಾಸಿಸುವ ಉದ್ದತೋಳಿನ ಒರ್‍ಯಾಂಗೂಟ್ಯಾನ್ ಎನ್ನುವ ಉದ್ದ ತೋಳಿನ ನರವಾನರ ಬೋರ್ನಿಯೊ, ಸುಮಾತ್ರಗಳಲ್ಲಿ ವಾಸಮಾಡುತ್ತದೆ.

ಏಷ್ಯದಲ್ಲಿ ಅನೇಕ ರೀತಿಯ ಪಕ್ಷಿಗಳಿವೆ. ಮಯನ್ಮಾರ್, ಥೈಲೆಂಡ್, ಇಂಡೋ-ಚೀನ, ಮಲಯ, ಸುಮಾತ್ರ, ಬೋರ್ನಿಯೊ ಕಾಡುಗಳಲ್ಲಿ ಜೀವಂಜೀವ, ಕೊಕ್ಕರೆ, ಮತ್ತು ಬೆಳ್ಳಕ್ಕಿಗಳು ಉಂಟು. ಲ್ಯಾಮ್ಮರ್ ಜೀಯಿರ್ ಎಂಬ ಬೃಹತ್ ಪಕ್ಷಿಯ ರೆಕ್ಕೆಯ ಹರಡು 10½. ನವಿಲುಗಳೂ ಡೇಗಗಳೂ ಬೇಕಾದಷ್ಟು ಕಂಡುಬರುತ್ತವೆ. ಪಾರಿವಾಳ, ಕೆಂಪುಂಗುರದ ಉದ್ದ ತೋಕೆಯ ಸಣ್ಣಗಿಳಿ, ಕೊಂಬುಕೊಕ್ಕಿನ ಹಕ್ಕಿ, ಕೋಗಿಲೆ, ಹದ್ದು, ಗಿಡುಗ ಮತ್ತು ಮರಕುಟುಕ, ಕಾಗೆ, ಮೈನ-ಇತ್ಯಾದಿ ಪಕ್ಷಿಗಳು ದಕ್ಷಿಣ ಮತ್ತು ಆಗ್ನೇಯ ಏಷ್ಯಗಳಲ್ಲಿ ಧಾರಾಳ.

ಭಾರತದಲ್ಲಿರುವ ವಿಷಸರ್ಪಗಳು ಅಸಂಖ್ಯಾತ. ನಾಗರಹಾವು ಪ್ರತಿವರ್ಷ ಸಾವಿರಾರು ಜನರನ್ನು ಆಹುತಿ ತೆಗೆದುಕೊಳ್ಳುತ್ತದೆ. ಹೆಬ್ಬಾವುಗಳೂ ಹೇರಳ. ಆಮೆಗಳೂ ಹೆಚ್ಚು.



ಏಷ್ಯನ್ ಮರಳುಗಾಡಿನ ಒಂದು ವಿಷಸರ್ಪ

ಭಾರತದ ನದಿಗಳಲ್ಲೂ ಮಲಯದ ಬಳಿಯ ಸಮುದ್ರ ತೀರಗಳಲ್ಲೂ ಮೊಸಳೆಗಳುಂಟು. ಡೂಗಾಂಗ್ ಎನ್ನುವ ಸಸ್ಯಾಹಾರಿ ಸ್ತನಿ ಪ್ರಾಣಿ ಹಿಂದೂ ಸಾಗರದಲ್ಲಿ ಕಾಣುತ್ತದೆ. ಆದರೆ ಕಡಲ ಹಂದಿಗಳು ಗಂಗಾನದಿಯಲ್ಲಿ ಮಾತ್ರ ಉಂಟು. ಬೇಕಲ್ ಸರೋವರದಲ್ಲಿ ಸಿಹಿನೀರಿನ ತಿಮಿಂಗಿಲಗಳನ್ನು ಕಾಣಬಹುದು. ಅಸಂಖ್ಯಾತ ಉರಗಗಳಿದ್ದರೂ ಊಸರವಳ್ಳಿ, ಹೆಂಟೆಗೊದ್ದಗಳು ಭಾರತ ಮತ್ತು ಶ್ರೀಲಂಕಗಳಲ್ಲಿ ಮಾತ್ರ ಕಂಡುಬರುತ್ತವೆ.

ವ್ಯವಸಾಯ ಮತ್ತು ಪಶುಪಾಲನೆ: ಈ ಶತಮಾನದ ಆದಿಯಲ್ಲಿ ಪ್ರಾರಂಭವಾದ ವ್ಯವಸಾಯಕ್ರಾಂತಿಯಿಂದ ಸೋವಿಯತ್ ಏಷ್ಯದ ಸ್ವರೂಪವೇ ಬದಲಾಯಿಸಿತೆನ್ನಬಹುದು. ಕಪ್ಪು ಮಣ್ಣಿನಿಂದ ಕೂಡಿರುವ ಸ್ಟೆಪ್ ಸೋವಿಯತ್ ಒಕ್ಕೂಟದ ಹೆಚ್ಚುವರಿ ಧಾನ್ಯ ಬೆಳೆಯುವ ಪ್ರದೇಶ. ಗೋಧಿ, ರೈ ಮತ್ತು ಬಾರ್ಲಿ ಮುಖ್ಯ ಬೆಳೆ. ಸೋವಿಯತ್ ಮಧ್ಯ ಏಷ್ಯ ಮತ್ತು ಟ್ರಾನ್ಸ್ ಕಕೇಷಿಯಗಳಲ್ಲಿ ಹತ್ತಿ ಪ್ರಮುಖ ಬೆಳೆ. ಸೂರ್ಯಕಾಂತಿ ಮತ್ತು ಅಗಸೆಗಳನ್ನು ಎಣ್ಣೆಗಾಗಿ ಬೆಳೆಯುತ್ತಾರೆ.

ಶುಷ್ಕ ಸ್ಟೆಪ್‌ಗಳಲ್ಲಿ ಕುರಿ ಮತ್ತು ಮೇಕೆಗಳನ್ನೂ ವ್ಯವಸಾಯ ಪ್ರದೇಶಗಳಲ್ಲಿ ದನಕರುಗಳನ್ನೂ ತಂಡ್ರ ಟೈಗಗಳಲ್ಲಿ ಹಿಮಸಾರಗಗಳನ್ನೂ ಸಾಕುತ್ತಾರೆ.

ನೈಋತ್ಯ ಏಷ್ಯದಲ್ಲಿ (ಮಧ್ಯ ಪ್ರಾಚ್ಯ) ಭೂಮಧ್ಯ ಸಮುದ್ರದ ಕಡೆಯಿಂದ ಪೂರ್ವದ ಕಡೆಗೆ ವ್ಯವಸಾಯ ಪ್ರದೇಶ ಕಡಿಮೆಯಾಗುತ್ತ ಹೋಗಿ, ಸೌದಿ ಅರೇಬಿಯದಲ್ಲಿ ಇಲ್ಲದಂತಾಗಿದೆ. ಜೋಳ ಬತ್ತಗಳನ್ನು (ನೀರಾವರಿ ಬೆಳೆ) ಇರಾಕ್ ತುರ್ಕಿ, ಕ್ಯಾಸ್ಪಿಯನ್ ತೀರಗಳಲ್ಲೂ ಬೀಟ್‌ರೂಟ್ ಹತ್ತಿಗಳನ್ನು ತುರ್ಕಿ, ಇರಾನ್, ಇಸ್ರೇಲ್‌ಗಳಲ್ಲೂ ಬೆಳೆಯುತ್ತಾರೆ. ಇಸ್ರೇಲ್, ಲೆಬನನ್, ಸಿರಿಯಗಳಲ್ಲಿ ಈಳೆಜಾತಿಯ ಹಣ್ಣುಗಳನ್ನು ಬೆಳೆಯುತ್ತಾರಲ್ಲದೆ, ಅವನ್ನು ರಫ್ತು ಕೂಡ ಮಾಡುತ್ತಾರೆ. ಪ್ರಪಂಚದ 415 ಪಾಲು ಖರ್ಜೂರ್ ಇರಾನಿನಿಂದ ಬರುತ್ತದೆ. ಅರೇಬಿಯದಲ್ಲೂ ಇದನ್ನು ಬೆಳೆಯುತ್ತಾರೆ. ತುರ್ಕಿ, ಇರಾನ್‌ಗಳಲ್ಲಿ ದ್ರಾಕ್ಷಿಯನ್ನು ಬೆಳೆಸಿ ಒಣಗಿಸುತ್ತಾರೆ.

ಮರುಭೂಮಿ ಮತ್ತು ಅರೆ ಮರುಭೂಮಿಗಳಲ್ಲಿ ಕುರಿ ಮತ್ತು ಮೇಕೆಗಳನ್ನು ಸಾಕುವುದುಂಟು. ಅರೇಬಿಯದ ಠಾಕಣಗಳು ಬಲು ಪ್ರಸಿದ್ಧ.

ಭಾರತ, ಪಾಕಿಸ್ತಾನ, ಶ್ರೀಲಂಕಗಳಲ್ಲಿ ಶೇ. 60 ಭಾಗದ ಭೂಮಿ ವ್ಯವಸಾಯಕ್ಕೆ ಒಳಪಟ್ಟಿದೆ. ಬತ್ತ, ಗೋಧಿ, ಮಿಲೆಟ್, ಜೋಳ-ಇಲ್ಲಿನ ಮುಖ್ಯ ಆಹಾರ ಬೆಳೆಗಳು. ಬಂಗಾಲ, ಅಸ್ಸಾಂ, ಒರಿಸ್ಸಾ, ದಖನ್ ಪ್ರಸ್ಥಭೂಮಿಯ ತೀರ ಮತ್ತು ಶ್ರೀಲಂಕಗಳಲ್ಲಿ ಬತ್ತದ ಸಾಂದ್ರಬೇಸಾಯವಾಗುತ್ತಿದೆ. ಪಂಜಾಬ್ (ಭಾರತ ಮತ್ತು ಪಾಕಿಸ್ತಾನ್) ಮತ್ತು ಉತ್ತರ ಪ್ರದೇಶಗಳಲ್ಲಿ ಗೋಧಿ ಮುಖ್ಯ ಬೆಳೆ. ಗಂಗಾನದಿಯ ಮುಖಜಭೂಮಿಯಲ್ಲಿ (ಭಾರತ ಮತ್ತು ಪಾಕಿಸ್ತಾನ್) ಉತ್ತಮ ಮಟ್ಟದ ಸೆಣಬನ್ನು ಬೆಳೆಯಲಾಗುತ್ತದೆ. ಪಶ್ಚಿಮ ಪಾಕಿಸ್ತಾನ ಮತ್ತು ದಖನ್ ಪ್ರಸ್ಥಭೂಮಿಯ ವಾಯವ್ಯ ಭಾಗಗಳಲ್ಲಿ ಹತ್ತಿಯನ್ನು ಹೇರಳವಾಗಿ ಬೆಳೆಯುತ್ತಾರೆ. ಅಸ್ಸಾಂ, ಪಶ್ಚಿಮ ಬಂಗಾಲ, ಸಿಲ್ಹೆಟ್, ನೀಲಗಿರಿ ಬೆಟ್ಟಗಳು, ಶ್ರೀಲಂಕಗಳಲ್ಲಿ ವಿಶಾಲ ಚಹ ತೋಟಗಳಿವೆ. ಕೇರಳ ಶ್ರೀಲಂಕಗಳಲ್ಲಿ ರಬ್ಬರ್ ಮತ್ತು ಕರ್ನಾಟಕದಲ್ಲಿ ಕಾಫಿ ತೋಟಗಳಿವೆ.

ಆಗ್ನೇಯ ಏಷ್ಯದ ಫಲವತ್ತಾದ ಪ್ರದೇಶಗಳಲ್ಲಿ ಬತ್ತವನ್ನು ಬೆಳೆಯಲಾಗುತ್ತದೆ. ಇರವಾಡಿ, ಮೇನಾಂ, ಮೇಕಾಂಗ್ ನದಿಗಳ ಮುಖಜಭೂಮಿ ಪ್ರದೇಶಗಳಲ್ಲಿ ಅನೇಕ ಶತಮಾನಗಳಿಂದ ಬತ್ತ ಬೆಳೆಯುತ್ತಿದ್ದಾರೆ. ಇಲ್ಲಿಂದ ಬೇರೆ ಕಡೆಗೆ ಇದರ ಹೆಚ್ಚುವರಿ ರಫ್ತಾಗುತ್ತದೆ. ಉತ್ತರ ವಿಯೆಟ್ನಾಂ ಹಾಗೂ ಜಾವದಲ್ಲಿ ಬೆಳೆಯುವ ಬತ್ತ ಸ್ಥಳೀಯ ಆವಶ್ಯಕತೆಗಳನ್ನು ಪೂರೈಸಲು ಸಾಕು. ಜಾವ, ಫಿಲಿಪೀನ್ಸ್‌ಗಳಲ್ಲಿ ಬೆಟ್ಟಗಳನ್ನು ಮೆಟ್ಟಲುಮೆಟ್ಟಲಾಗಿ ಕಡಿದು, ಬತ್ತದ ಗದ್ದೆಗಳನ್ನು ಮಾಡಲಾಗಿದೆ. ಮಧ್ಯ ಮಯನ್ಮಾರ್, ಥೈಲೆಂಡ್, ಕೋರೆಟ್ ಪ್ರಸ್ಥಭೂಮಿಗಳಲ್ಲಿ ನೀರಾವರಿ ಅನುಕೂಲದಿಂದ ಬತ್ತ ಬೆಳೆಯಲಾಗುತ್ತದೆ. ತಂಬಾಕು, ಕಬ್ಬು, ಸೋಯಾಬೀನುಗಳನ್ನು ಇಲ್ಲೆಲ್ಲ ಬೆಳೆಯುತ್ತಾರೆ. ಇಲ್ಲಿನ ಬೆಳೆಗಳಲ್ಲಿ ತೋಟದವು ಬಲು ಮುಖ್ಯ. ಮಲೆಯ ಮತ್ತು ಇಂಡೋನೇಷ್ಯಗಳು ಪ್ರಪಂಚದ ಹೆಚ್ಚು ಪಾಲು ಸ್ವಾಭಾವಿಕ ರಬ್ಬರನ್ನು ಒದಗಿಸುತ್ತವೆ. ದಕ್ಷಿಣ ವಿಯೆಟ್ನಾಂ ಮತ್ತು ಥೈಲೆಂಡ್‌ಗಳಲ್ಲೂ ಇದನ್ನು ಬೆಳೆಯುತ್ತಾರೆ. ಇಂಡೊನೇಷ್ಯ, ಮಲೆಯಗಳು ಕೊಬ್ಬರಿ ತಯಾರಿಕೆಯಲ್ಲಿ ಪ್ರಮುಖವಾದುವು. ಮಲೆಯ, ಸುಮಾತ್ರಗಳಲ್ಲಿ ತಾಳೆಮರ ಹೆಚ್ಚು ಜನಪ್ರಿಯ. ಜಾವದಲ್ಲಿ ಚಹ ಬೆಳೆಯುತ್ತಾರೆ.

ಚೀನದ ಉತ್ತರದಲ್ಲಿ ಗೋಧಿ, ಬಾರ್ಲಿ, ಸೋಯಾಬೀನ್ಸ್ ಬೆಳೆಯುತ್ತಾರೆ. ದಕ್ಷಿಣ ಚೀನ ಮತ್ತು ಫಾರ್ಮೋಸಗಳಲ್ಲಿ ಬತ್ತ ಪ್ರಮುಖ ಬೆಳೆ. ಮಂಚೂರಿಯದಲ್ಲಿ ಸೋಯಾಬೀನ್ಸನ್ನೂ ಚೀನದ ಉತ್ತರಾರ್ಧದಲ್ಲಿ ಜೋಳವನ್ನೂ ಬೆಳೆಯಲಾಗುವುದು. ಉತ್ತರ ಚೀನ ಮಧ್ಯ ಯಾಂಗ್‌ಟ್ಸಿಗಳಲ್ಲಿ ಹತ್ತಿಯೂ ದಕ್ಷಿಣ ಚೀನ ಬೆಟ್ಟಗಳ ಮತ್ತು ಫಾರ್ಮೋಸ ಪ್ರದೇಶಗಳಲ್ಲಿ ಚಹವೂ ಮುಖ್ಯ ವಾಣಿಜ್ಯ ಬೆಳೆಗಳು. ಎಳ್ಳು, ರೇಪ್ ಮತ್ತು ಸೋಯಾಬೀನ್ಸ್ ಬೆಳೆಯಲ್ಲಿ ಚೀನದ್ದು ಮೊದಲನೆಯ ಸ್ಥಾನ. ದಕ್ಷಿಣ ಚೀನ ಮತ್ತು ಫಾರ್ಮೋಸಗಳಲ್ಲಿ ಕಬ್ಬು, ತಂಬಾಕು ಮತ್ತು ಈಳೆಜಾತಿಯ ಹಣ್ಣುಗಳನ್ನು ಬೆಳೆಯಲಾಗುತ್ತದೆ.

ಮರುಳುಗಾಡಿನ ಒಂದು ಹಲ್ಲಿ

ಜಪಾನ್ ಕೊರಿಯಗಳಲ್ಲಿ ವ್ಯವಸಾಯಕ್ಕೆ ತಂದಿರುವ ಪ್ರದೇಶಗಳು ಬಲು ಕಡಿಮೆ. ಆದರೂ ಉತ್ತಮ ವ್ಯವಸಾಯ ವಿಧಾನಗಳನ್ನು ಅನುಸರಿಸಿ, ಹೆಚ್ಚಿನ ಬೆಳೆ ತೆಗೆಯುತ್ತಾರೆ. ಜಪಾನಿನಲ್ಲಿ ಬತ್ತದ ಸಾಗುವಳಿಯಾಗುವುದು ನೀರಾವರಿಯಿಂದ. ಉತ್ತರ ಕೊರಿಯದಲ್ಲಿ ಮಿಲೆಟ್ಸ್ ಮತ್ತು ಗೋಧಿಯೂ ದಕ್ಷಿಣ ಕೊರಿಯದಲ್ಲಿ ಬಾರ್ಲಿಯೂ ಮುಖ್ಯ ಆಹಾರ ಬೆಳೆಗಳು. ಜಪಾನಿನಲ್ಲಿ ಗೋಧಿ, ಬಾರ್ಲಿ, ಓಟ್ಸ್-ಇವು ಬತ್ತದ ಅನಂತರದ ಮುಖ್ಯ ಬೆಳೆಗಳು. ಕೊರಿಯದಲ್ಲಿ ಹತ್ತಿಯೂ ದಕ್ಷಿಣ ಜಪಾನಿನಲ್ಲಿ ಹಿಪ್ಪುನೇರಳೆ ಮತ್ತು ಚಹವೂ ವಾಣಿಜ್ಯ ಬೆಳೆಗಳು.

ಖನಿಜಗಳು ಮತ್ತು ಕೈಗಾರಿಕೆಗಳು: ಏಷ್ಯದಲ್ಲಿ ಹೇರಳವಾದ ಖನಿಜ ಸಂಪತ್ತಿದೆ. ಮುಖ್ಯವಾದ ವಲಯಗಳಿವು.

(ಎ) ಸೋವಿಯತ್ ಏಷ್ಯ: ಕ್ಯಾಸ್ಪಿಯನ್ ಸುತ್ತಮುತ್ತ ಎಣ್ಣೆಬಾವಿಗಳಿವೆ. ಮಧ್ಯ ಏಷ್ಯದ ಫರ್ಗನಾ, ಲೀನಾ ಬಯಲುಗಳಲ್ಲೂ ಸ್ಯಾಕಲೀನ್ ಬಯಲುಗಳಲ್ಲೂ ಎಣ್ಣೆ ಸಾಮಾನ್ಯ ಪ್ರಮಾಣದಲ್ಲಿ ದೊರೆಯುತ್ತದೆ. ಪಶ್ಚಿಮ ಸೈಬೀರಿಯದ ಕುಜ್ನೆಟ್ಸ್ಕ್ ಬಯಲು ಸೋವಿಯತ್ ಒಕ್ಕೂಟದ ಎರಡನೆಯ ದೊಡ್ಡ ಕಲ್ಲಿದ್ದಲುಗಣಿ ಪ್ರದೇಶ. ಕಾಜ಼ಾಕ್‌ಸ್ತಾನದಲ್ಲಿನ ಕಾರಾಗಾಂಡಾ ಕಲ್ಲಿದ್ದಲು ಗಣಿಗಳು ಯೂರಲ್ ಪರ್ವತಗಳಲ್ಲಿರುವ ಲೋಹ ಕೈಗಾರಿಕೆಗಳಿಗೆ ಕಲ್ಲಿದಲನ್ನು ಒದಗಿಸುತ್ತವೆ. ಪೂರ್ವ ಸೈಬೀರಿಯದಲ್ಲಿನ ಇರ್ಕಟ್‌ಸ್ಕ ಮತ್ತು ವ್ಲಾಡಿವೋಸ್ಟಾಕ್ ಬಯಲುಗಳಲ್ಲಿನ ಕಲ್ಲಿದ್ದಲು ಸ್ಥಳೀಯ ಕೈಗಾರಿಕೆಗಳಿಗೆ ಸಹಾಯಕವಾಗಿರುವುದಲ್ಲದೆ, ಟ್ರಾನ್ಸ್-ಸೈಬೀರಿಯನ್ ರೈಲ್ವೆಗೆ ಅನುಕೂಲಕರ. ಟುಂಗುಸ್ಕ ಮತ್ತು ಲೀನಾ ಬಯಲುಗಳಲ್ಲಿ ಕಲ್ಲಿದ್ದಲು ನಿಕ್ಷೇಪಗಳು ಹೇರಳವಾಗಿವೆಯೆಂದು ನಂಬಲಾಗಿದೆ.

ಮಧ್ಯ ಏಷ್ಯದ ಟುಯ-ಮುಯುನ್‌ನಲ್ಲಿ ಯುರೇನಿಯಂ ದೊರೆಯುತ್ತದೆ. ಕುಜ್ನೆಟ್ಸ್ಕ್, ಖಬರೋವ್‌ಸ್ಕ್, ಕಾಜ಼ಾಕ್‌ಸ್ತಾನ್‌ಗಳಲ್ಲಿ ಕಬ್ಬಿಣದ ಅದಿರು, ಮ್ಯಾಂಗನೀಸ್, ಕ್ರೋಂ, ಕೋಬಾಲ್ಟ್ ಇವೆ. ಬಾಲ್ಕಾಷ್ ಸರೋವರದ ಪೂರ್ವದಲ್ಲಿ ತಾಮ್ರವುಂಟು. ಕಾಜ಼ಾಕಾಸ್ತನ್, ಮಧ್ಯ ಏಷ್ಯ, ಪಶ್ಚಿಮ ಸೈಬೀರಿಯಗಳಲ್ಲಿ ಅನೇಕ ತಾಮ್ರದ ಗಣಿಗಳಿವೆ.

ಅರಬ್ಬಿ ಜಿಂಕೆ

ಪೂರ್ವ ಸೈಬೀರಿಯದಲ್ಲಿ ತವರವಿದೆ. ಕುಜ್ನೆಟ್ಸ್ಕ್ ಸತುವಿಗೂ ಸೋರಿಲಿಸ್ಕ್ ನಿಕಲಿಗೂ ಕಾಜ಼ಾಕ್‌ಸ್ತಾನ್ ಮತ್ತು ಕುಜ್ನೆಟ್ಸ್ಕ್ ಅಲ್ಯೂಮಿನಿಯಂಗೂ ಪ್ರಸಿದ್ಧ. ಇವಲ್ಲದೆ ಸೈಬೀರಿಯದಲ್ಲಿ ನಿಕಲ್, ಬಾಕ್ಸೈಟ್ ಮತ್ತು ಅಲ್ಯೂಮಿನಿಯಂ, ಯೂರಲ್ ಪರ್ವತಗಳಲ್ಲಿ ತಾಮ್ರ, ಕ್ರೋಮಿಯಂ, ಚಿನ್ನ ಮತ್ತು ಪಚ್ಚೆಗಳ ಹೇರಳ ನಿಕ್ಷೇಪಗಳಿವೆಯೆಂದು ಊಹಿಸಲಾಗಿದೆ.

ಖನಿಜಗಳು ಸಿಗುವ ಪ್ರದೇಶಗಳಲ್ಲಿ ಕೈಗಾರಿಕೆಗಳು ಬೆಳೆದಿರುವುದು ಆಶ್ಚರ್ಯವಲ್ಲ. ಆದರೂ ಸೋವಿಯತ್ ಒಕ್ಕೂಟದ ಐರೋಪ್ಯ ಪ್ರದೇಶದಷ್ಟು ಮಟ್ಟಿಗೆ ಏಷ್ಯನ್ ಪ್ರದೇಶದ ಅಭಿವೃದ್ಧಿಯಾಗಿಲ್ಲ. ಕುಜ್ನೆಟ್ಸ್ಕ್‌ನಲ್ಲಿ ಅನೇಕ ಭಾರಿ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಟ್ರಾನ್ಸ್-ಸೈಬೀರಿಯನ್ ರೈಲ್ವೆಯೂ ಮಧ್ಯ ಏಷ್ಯದಲ್ಲಿ ಎಂಜಿನಿಯರಿಂಗ್ ಮತ್ತಿತರ ಕೈಗಾರಿಕೆಗಳೂ ಸ್ಥಾಪನೆಯಾಗಿವೆ. ಸೋವಿಯತ್ ಮಧ್ಯ ಏಷ್ಯದಲ್ಲಿ ಬಟ್ಟೆಗಿರಣಿಗಳೂ ವ್ಲಾಡಿವೋಸ್ಟಾಕ್ ಸುತ್ತಮುತ್ತ ಮರ ಕೊಯ್ಯುವ ಕೈಗಾರಿಕೆಗಳೂ ಹರಡಿವೆ.

(ಬಿ) ಪಶ್ಚಿಮ ಏಷ್ಯ: ಅಮೂಲ್ಯವಾದ ಪೆಟ್ರೋಲಿಯಂ ಮತ್ತು ಕಲ್ಲಿದ್ದಲು ಗಣಿಗಳು ಇಲ್ಲಿರುವುದು ಈ ಪ್ರದೇಶದ ಅದೃಷ್ಟವೆಂದೇ ಹೇಳಬೇಕು. ತುರ್ಕಿಯಲ್ಲಿರುವ ಅಮೂಲ್ಯ ಕಲ್ಲಿದ್ದಲು ಗಣಿಗಳು ಕೈಗಾರಿಕೆಗಳಿಗೆ ಸಹಾಯಕ. ಯುಫ್ರೇಟೀಸ್-ಟೈಗ್ರಿಸ್ ಮತ್ತು ಪರ್ಷಿಯನ್ ಕೊಲ್ಲಿಯ ಸುತ್ತಮುತ್ತಲ ಮರುಭೂಮಿ ಪ್ರದೇಶಗಳಲ್ಲಿ ಅಪಾರವಾದ ಪೆಟ್ರೋಲಿಯಂ ನಿಕ್ಷೇಪಗಳಿದ್ದು, ಅನೇಕ ಎಣ್ಣೆಬಾವಿಗಳಿವೆ. ಜ಼ಾಗ್ರಾಸ್ ಪರ್ವತಗಳ ಪಾದಗಳ ಬಳಿಯಲ್ಲಿ ಇರಾನ್ ಇರಾಕ್‌ಗಳಲ್ಲಿ ವಿಶಾಲ ಎಣ್ಣೆಬಾವಿಗಳುಂಟು. ಆದರೆ ಇತ್ತೀಚೆಗೆ ಪರ್ಷಿಯನ್ ಖಾರಿಯ ಕುವೈತ್, ಬಹ್ರೈನ್, ಕಾಟಾರ್ ಇತ್ಯಾದಿ ದೇಶಗಳು ಪೆಟ್ರೋಲಿಯಂ ತಯಾರಿಕೆಗೆ ಹೆಸರಾಗಿವೆ.

ತುರ್ಕಿಯಲ್ಲಿ ದೊರಕುವ ಖನಿಜಗಳು ಅನೇಕ. ಭೂಮಧ್ಯಸಮುದ್ರ ತೀರಗಳಲ್ಲಿ ಮ್ಯಾಂಗನೀಸ್ ದೊರೆಯುತ್ತದೆ. ಈ ದೇಶ ಕ್ರೋಂ ತಯಾರಿಕೆಯಲ್ಲಿ ಪ್ರಪಂಚದಲ್ಲಿ ಮೊದಲನೆಯ ಸ್ಥಾನ ಪಡೆದಿದೆ. ತಾಮ್ರ ಇನ್ನೊಂದು ಮುಖ್ಯ ಲೋಹ. ಸೌದಿ ಅರೇಬಿಯದಲ್ಲಿ ಚಿನ್ನವೂ ಉಂಟು. ಮೃತ ಸರೋವರದ ಬಳಿ ಪೊಟ್ಯಾಷ್, ತುರ್ಕಿಯಲ್ಲಿ ಗಂಧಕ, ಜಾರ್ಡನ್‌ನಲ್ಲಿ ರಂಜಕ ಶಿಲೆ ಹೆಸರಿಸುವಂಥ ಖನಿಜಗಳು. ಯುಫ್ರೇಟೀಸ್-ಟೈಗ್ರಿಸ್ ಕಣಿವೆ ಹೇರಳವಾದ ತಾಮ್ರ, ಕಬ್ಬಿಣ ಮತ್ತು ಗಂಧಕ ನಿಕ್ಷೇಪಗಳನ್ನು ಹೊಂದಿದೆ. ಇಲ್ಲಿಯ ಸೀಸದ ಗಣಿಗಳು ಅನೇಕ ಶತಮಾನಗಳಿಂದ ನಡೆದುಕೊಂಡು ಬರುತ್ತಿವೆ.

ಈ ಪ್ರದೇಶದಲ್ಲಿ ಪೆಟ್ರೋಲಿಯಂ ಶೋಧನೆ ಮುಖ್ಯ ಕೈಗಾರಿಕೆ. ತುರ್ಕಿ, ಸಿರಿಯ, ಲೆಬನನ್, ಇಸ್ರೇಲ್ ಮತ್ತು ಇರಾನಿನ ಅನೇಕ ನಗರಗಳಲ್ಲೂ ಇರಾಕ್, ಆಫ್‌ಘಾನಿಸ್ತಾನಗಳ ರಾಜಧಾನಿಗಳಲ್ಲೂ ಹತ್ತಿ ಗಿರಣಿ ಕೈಗಾರಿಕೆಗಳುಂಟು.

(ಸಿ) ದಕ್ಷಿಣ ಏಷ್ಯ: ಭಾರತದಲ್ಲಿ ಹೇರಳವಾದ ಕಲ್ಲಿದ್ದಲು ನಿಕ್ಷೇಪಗಳಿವೆ. ದಖನ್ ಪ್ರಸ್ಥಭೂಮಿಯ ಈಶಾನ್ಯದಲ್ಲಿ ಇದು ಕೇಂದ್ರೀಕೃತ. ಅಸ್ಸಾಮಿನ ದಿಗ್ಬಾಯ್ ಮತ್ತು ಪಶ್ಚಿಮ ಪಾಕಿಸ್ಥಾನದ ಅಟಕ್‌ನಲ್ಲಿ ಪೆಟ್ರೋಲಿಯಂ ಎಣ್ಣೆಬಾವಿಗಳುಂಟು. ಪ್ರಪಂಚದಲ್ಲೇ ಶ್ರೇಷ್ಠವಾದ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ದೊರಕುವುದು ಭಾರತದ ದಖನ್ ಪ್ರಸ್ಥಭೂಮಿಯ ಈಶಾನ್ಯದಲ್ಲಿ. ಇಲ್ಲಿ ತಾಮ್ರ, ತವರ, ಕ್ರೋಮೈಟ್, ಚಿನ್ನ, ಬಾಕ್ಸೈಟುಗಳೂ ಉಂಟು. ರಾಜಾಸ್ಥಾನದ ಗಣಿಗಳಿಂದ ತೆಗೆಯುವ ಲವಣದ ಜೊತೆಗೆ ಮಹಾರಾಷ್ಟ್ರ, ಗುಜರಾತ್, ತಮಿಳುನಾಡುಗಳಲ್ಲಿ ಸಮುದ್ರದಿಂದ ಉಪ್ಪನ್ನು ತಯಾರಿಸಲಾಗುತ್ತಿದೆ. ಪ್ರಪಂಚದ ಕಾಗೆಬಂಗಾರದ ಉತ್ಪತ್ತಿಯಲ್ಲಿ ಶೇ. 80 ದೊರಕುವುದು ಛೋಟಾನಾಗಪುರದಲ್ಲಿ (ಭಾರತ). ಮೊನಾಜೈಟ್ ನಿಕ್ಷೇಪಗಳಿರುವುದು ಕೇರಳದಲ್ಲಿ. ಪಾಕಿಸ್ತಾನದಲ್ಲಿ ಕ್ರೋಮೈಟ್, ಲವಣಶಿಲೆ ಇತ್ಯಾದಿಗಳು ಕಡಿಮೆ ಪ್ರಮಾಣದಲ್ಲಿ ದೊರೆಯುತ್ತವೆ.

ಭಾರತದಲ್ಲಿ ಎರಡು ಪ್ರಮುಖ ಕೈಗಾರಿಕಾ ವಲಯಗಳಿವೆ: 1 ಜೆಮ್‌ಷೆಡ್‌ಪುರದಿಂದ ಕೋಲ್ಕೊತ್ತದ ವರೆಗಿನ ಪ್ರದೇಶ, 2. ಮುಂಬಯಿಂದ ಅಹಮದಾಬಾದ್‌ವರೆಗಿನ ಪ್ರದೇಶ. ಇತರ ಕಡೆಗಳಲ್ಲೂ ಕೈಗಾರಿಕೆಗಳುಂಟು.

(ಡಿ) ಆಗ್ನೇಯ ಏಷ್ಯ: ಆಗ್ನೇಯ ಏಷ್ಯದಲ್ಲಿನ ಖನಿಜ ಸಂಪತ್ತು ಗಮನಾರ್ಹವಾದದ್ದು. ಪ್ರಪಂಚದ ತವರದ ಉತ್ಪತ್ತಿಯಲ್ಲಿ $\frac{1}{3}$ ಭಾಗ ಬರುವುದು ಮಲೆಯದಿಂದ. ಮಲೆಯ ಮತ್ತು ಇಂಡೋನೇಷ್ಯಗಳು ತವರ ತಯಾರಿಕೆಯಲ್ಲಿ ಪ್ರಪಂಚದಲ್ಲಿ ಮೊದಲನೆಯ ಮತ್ತು ಮೂರನೆಯ ಸ್ಥಾನಗಳನ್ನೂ ಥೈಲೆಂಡ್ ಮತ್ತು ಮಯನ್ಮಾರ್‌ಗಳು ಐದನೆಯ ಮತ್ತು ಎಂಟನೆಯ ಸ್ಥಾನಗಳನ್ನೂ ಪಡೆದಿವೆ. ಉತ್ತರ ವಿಯೆಟ್ನಾಮಿನಲ್ಲಿ ಕಲ್ಲಿದ್ದಲು ಗಣಿಗಳಿವೆ. ಮಲೆಯ, ಬೋರ್ನಿಯೊ, ಸುಮಾತ್ರಗಳಲ್ಲಿ ಈ ನಿಕ್ಷೇಪಗಳುಂಟು. ಪ್ರಪಂಚದ ದೃಷ್ಟಿಯಿಂದ ಮುಖ್ಯವಾದ ಎಣ್ಣೆಬಾವಿಗಳು ಮಧ್ಯ ಮಯನ್ಮಾರ್, ಜಾವ, ಸುಮಾತ್ರ ಬೋರ್ನಿಯಗಳಲ್ಲಿವೆ. ಮಲೆಯ, ಫಿಲಿಪೀನ್ಸ್‌ಗಳಲ್ಲಿ ದೊರೆಯುವ ಕಬ್ಬಿಣದ ಅದಿರನ್ನು ಜಪಾನಿಗೆ ರಫ್ತು ಮಾಡಲಾಗುತ್ತದೆ. ಉತ್ತರ ವಿಯೆಟ್ನಾಂ, ಮಲೆಯ, ಜಾವ, ಫಿಲಿಪೀನ್ಸ್‌ಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಮ್ಯಾಂಗನೀಸ್ ದೊರೆಯುತ್ತದೆ. ಮಧ್ಯ ಮಯನ್ಮಾರ್‌ನಲ್ಲಿ ಸೀಸ, ಸತು ಮತ್ತು ನಿಕ್ಕಲ್ ದೊರೆಯುತ್ತವೆ. ಪ್ರಪಂಚದ ಕ್ರೋಮಿಯಂ ತಯಾರಿಕೆಯಲ್ಲಿ ಫಿಲಿಪೀನ್ಸ್‌ನದು 4ನೆಯ ಸ್ಥಾನ. ಫಿಲಿಪೀನ್ಸ್, ಥೈಲೆಂಡ್, ಮಲೆಯ, ಸುಮಾತ್ರ, ದಕ್ಷಿಣ ವಿಯೆಟ್ನಾಂಗಳಲ್ಲಿ ಚಿನ್ನದೊರೆತರೂ ಅಷ್ಟೇನೂ ಮುಖ್ಯವಲ್ಲ.

ಈ ಪ್ರದೇಶಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಯಾಗಿಲ್ಲ. ಶಕ್ತಿಸಾಧನಗಳಿಲ್ಲದ್ದೇ ಕಾರಣ. ಸಿದ್ಧವಸ್ತು ತಯಾರಿಕೆಯ ಕೈಗಾರಿಕೆಗಳು ಇಲ್ಲಿಲ್ಲ. ಸಿಂಗಪುರದಲ್ಲಿ ತವರ ಕರಗಿಸುವ ಕೈಗಾರಿಕೆ ಯುಂಟು. ಜಾವದಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳೂ ಮಯನ್ಮಾರ್, ಥೈಲೆಂಡ್, ಇಂಡೋನೇಷ್ಯ, ಫಿಲಿಪೀನ್ಸ್ ಮತ್ತು ಉತ್ತರ ವಿಯೆಟ್ನಾಂಗಳಲ್ಲಿ ಹತ್ತಿ ಗಿರಣಿ ಕೈಗಾರಿಕೆಗಳೂ ಇವೆ.

(ಇ) ಪೂರ್ವ ಏಷ್ಯ: ಕಲ್ಲಿದ್ದಲು, ಮ್ಯಾಂಗನೀಸ್, ಕಬ್ಬಿಣ, ಬಾಕ್ಸೈಟ್, ತವರ ಆಂಟಿಮೊನಿ, ಬಿಸ್ಮತ್, ಗ್ರಾಫೈಟ್ ಮತ್ತು ಮ್ಯಾಗ್ನಸೈಟ್‌ಗಳು ಮುಖ್ಯ ಖನಿಜಗಳು. ಚೀನದ ಪ್ರಸ್ಥಭೂಮಿಯಲ್ಲಿ ಪೆಟ್ರೋಲಿಯಂ, ಉಪ್ಪು ದೊರೆಯುತ್ತವೆ. ಜಪಾನಿನಲ್ಲಿ ಖನಿಜಗಳು ಸಾಕಷ್ಟಿಲ್ಲವಾದರೂ ಇದು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ದೇಶ.

ಮಂಚೂರಿಯ ಕೊರಿಯಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯೂ ಚೀನದಲ್ಲಿ ಕಬ್ಬಿಣ ಮತ್ತು ಉಕ್ಕು, ನೂಲು, ಯಂತ್ರೋಪಕರಣ, ವಾಹನ ಮತ್ತು ರಾಸಾಯನಿಕ ವಸ್ತುಗಳ ಭಾರಿ ಪ್ರಮಾಣದ ಕೈಗಾರಿಕೆಗಳೂ ಬೆಳೆದಿವೆ.

ಜನಸಂಖ್ಯೆ: ಏಷ್ಯ ಖಂಡದಲ್ಲಿ ಜನಸಂಖ್ಯೆಯದು ಒಂದು ಸಮಸ್ಯೆ. ಪ್ರಪಂಚದ ಜನಸಂಖ್ಯೆಯಲ್ಲಿ ಶೇ. 69 (ಸೋವಿಯತ್ ವಿಭಾಗವನ್ನು ಬಿಟ್ಟು) ಈ ಖಂಡದಲ್ಲಿದೆ. ಏಷ್ಯದ ಜನಸಂಖ್ಯೆ 164,05,39,000. ಜನಸಾಂದ್ರತೆ ಚ.ಕಿಮೀ.ಗೆ 300. ಪ್ರಶ. 2020ರಷ್ಟು ಹೊತ್ತಿಗೆ ಏಷ್ಯದ ಜನಸಂಖ್ಯೆ ಬಹಳ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ ಮತ್ತು ಜನಸಾಂದ್ರತೆ 421 ಆಗುವುದೆಂದು ನಿರೀಕ್ಷಿಸಲಾಗಿದೆ. ಹೆಚ್ಚು ಜನ ಗ್ರಾಮವಾಸಿಗಳು. ಜಪಾನ್ ವಿನಾ ಉಳಿದಕಡೆಗಳಲ್ಲಿ ಕೈಗಾರಿಕಾನಗರಗಳ ಜನಸಂಖ್ಯೆಯ ಪ್ರಮಾಣ ಕಡಿಮೆ.

ಪಶ್ಚಿಮ ಪಾಕಿಸ್ತಾನದಿಂದ ಹಿಡಿದು ಉತ್ತರ ಚೀನ ಮತ್ತು ಜಪಾನ್‍ವರೆಗಿನ ಪ್ರದೇಶದಲ್ಲಿ ಜನನಿವಾಸಕ್ಕೆ ಅನುಕೂಲಕರ ವಾಯುಗುಣ, ಫಲವತ್ತಾದ ಭೂಮಿ, ವ್ಯವಸಾಯ ಮತ್ತು ಕಸಬು ಇವೆ. ಇಲ್ಲಿನ ಜನಸಾಂದ್ರತೆ ಚ.ಕಿಮೀ.ಗೆ 400. ಪೂರ್ವ ಚೀನದಲ್ಲಿ ಇದು 900ಕ್ಕಿಂತ ಹೆಚ್ಚಾದರೂ, ಕೆಲವು ವ್ಯವಸಾಯ ಪ್ರದೇಶಗಳಲ್ಲಿ ಚ.ಕಿಮೀ.ಗೆ 2000ದಿಂದ 3000ದವರೆಗೂ ಇದೆ. ಜಗತ್ತಿನ ಮೂರು ಅತ್ಯಂತ ಜನ ಸಮದ್ಧಿ ಪ್ರದೇಶಗಳಲ್ಲಿ ಎರಡು ಏಷ್ಯದಲ್ಲೇ ಇವೆ. ಇವುಗಳಲ್ಲಿ ಪೂರ್ವ ಚೀನವೇ ಕೇಂದ್ರವಾಗಿರುವ ಪೂರ್ವ ಏಷ್ಯ ಅತ್ಯಂತ ದೊಡ್ಡ ಪ್ರದೇಶ. ಎರಡನೆಯ ಜನಸಾಂದ್ರ ಪ್ರದೇಶವೆಂದರೆ ಆಫ್‍ಘಾನಿಸ್ತಾನ್, ಪಾಕಿಸ್ತಾನ್, ಭಾರತ, ಸಿಲೋನ್‍ಗಳನ್ನೊಳಗೊಂಡ ದಕ್ಷಿಣ ಏಷ್ಯ. ಇಡೀ ಖಂಡದ ವಿಸ್ತೀರ್ಣದಲ್ಲಿ ಅರ್ಧಕ್ಕಿಂತ ಕಡಿಮೆ ಇರುವ ದಕ್ಷಿಣ ಹಾಗೂ ಆಗ್ನೇಯ ಏಷ್ಯದಲ್ಲಿ ಏಷ್ಯದ ಶೇಕಡಾ 90ರಷ್ಟು ಜನವಾಸಿಸುತ್ತಾರೆ. (ಕೆ.ಆರ್.ಆರ್.)

**ಏಷ್ಯದ ಅಭಿವೃದ್ಧಿ ಬ್ಯಾಂಕು:** ವಿಶ್ವಸಂಸ್ಥೆ ಸ್ಥಾಪಿಸಿದ ಏಷ್ಯ ಮತ್ತು ದೂರದ ಪೌರ್ವಾತ್ಯ ರಾಷ್ಟ್ರಗಳಿಗೆ ಸಂಬಂಧಿತ ಆರ್ಥಿಕ ಮಂಡಳಿಯು ಜನವರಿ 31, 1966ರಲ್ಲಿ ಈ ಸಂಸ್ಥೆಯನ್ನು ಹುಟ್ಟುಹಾಕಿತು. ಡಿಸೆಂಬರ್ 4, 1965 ರಲ್ಲಿ ವಿಶ್ವಸಂಸ್ಥೆಯ ಲಿಖಿತ ಸಂವಿಧಾನವು 31 ರಾಷ್ಟ್ರಗಳಿಂದ ಸಹಿ ಮಾಡಲ್ಪಟ್ಟರೂ ಇದು ಜನವರಿ1, 1967 ರಿಂದ ಕಾರ್ಯಾರಂಭ ಮಾಡತೊಡಗಿತು. ಅಧಿಕೃತ ಬಂಡವಾಳ 2985.71 ಡಾಲರ್‍ಗಳಾಗಿದ್ದು ಅದರಲ್ಲಿ 1091.75 ದಶಲಕ್ಷ ಡಾಲರ್‍ಗಳು ವಂತಿಗೆ ಬಂಡವಾಳವಾಗಿದೆ.

1966ರ ಡಿಸೆಂಬರಿನಲ್ಲಿ ಇದು ಕಾರ್ಯಾರಂಭ ಮಾಡಿತು. ಈ ಪ್ರದೇಶಕ್ಕೆ ಸೇರಿದ 19 ಮತ್ತು ಇದರ ಹೊರಗಿನ 13 ದೇಶಗಳು ಏಷ್ಯದ ಅಭಿವೃದ್ಧಿ ಬ್ಯಾಂಕಿನ ಸದಸ್ಯತ್ವ ಪಡೆದಿವೆ. ಬ್ಯಾಂಕಿನ ಪ್ರಧಾನ ಕಚೇರಿ ಇರುವುದು ಫಿಲಿಪೀನ್ಸ್ ದೇಶದ ಮನಿಲ ನಗರದಲ್ಲಿ.

ಬ್ಯಾಂಕು ತನ್ನ ಉದ್ದೇಶ ಸಾಧನೆಗಾಗಿ ಅನುಸರಿಸುವ ಕ್ರಮಗಳು ಇವು: 1. ಅಭಿವೃದ್ಧಿಗಾಗಿ ಸರ್ಕಾರಿ ಮತ್ತು ಖಾಸಗಿ ಬಂಡವಾಳ ನಿಯೋಜನೆಯ ಪ್ರವರ್ತನೆ; 2. ಇಡೀ ಪ್ರದೇಶದ ಸಮಾನ ಆರ್ಥಿಕಾಭಿವೃದ್ಧಿಗೆ ಅತ್ಯಂತ ಪರಿಣಾಮಕಾರಿಯಾಗಿ ನೆರವಾಗುವಂತೆ, ಕಿರಿಯ ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ಸದಸ್ಯರಾಷ್ಟ್ರಗಳ ಅಗತ್ಯಗಳಿಗೆ ವಿಶೇಷ ಗಮನ ದೊರಕುವಂತೆ, ಪ್ರಾದೇಶಿಕ, ಉಪಪ್ರಾದೇಶಿಕ ಮತ್ತು ರಾಷ್ಟ್ರೀಯ ಯೋಜನೆಗಳಿಗೂ ಕಾರ್ಯಕ್ರಮಗಳಿಗೂ ಆದ್ಯಗಮನವಿರುವಂಥ ಅಭಿವೃದ್ಧಿ ಪ್ರಯತ್ನಗಳಿಗೆ ಹಣ ಒದಗಿಸುವ ಸಲುವಾಗಿ ಲಭ್ಯವಿರುವ ಸಾಧನ ಸಂಪತ್ತಿನ ಬಳಕೆ; 3 ಈ ಪ್ರದೇಶದ ಸದಸ್ಯರಾಷ್ಟ್ರಗಳ ಸಾಧನ ಸಂಪತ್ತು ಉತ್ತಮವಾಗಿ ಬಳಕೆಯಾಗುವಂತೆಯೂ ಅರ್ಥ ವ್ಯವಸ್ಥೆಗಳು ಪರಸ್ಪರ ಪೂರಕವಾಗುವಂತೆಯೂ ವಿದೇಶೀವ್ಯಾಪಾರ–ಅದರಲ್ಲೂ ಅಂತರ್‍ಪ್ರದೇಶ ವ್ಯಾಪಾರ–ಸುವ್ಯವಸ್ಥಿತವಾಗಿ ಬೆಳೆಯುವಂತೆಯೂ ಮಾಡುವ ಉದ್ದೇಶದಿಂದ ಇವುಗಳ ಅಭಿವೃದ್ಧಿ ನೀತಿಗಳನ್ನೂ ಯೋಜನೆಗಳನ್ನೂ ಸುಸಂಘಟಿಸುವ ಕಾರ್ಯದಲ್ಲಿ ರಾಷ್ಟ್ರಗಳಿಂದ ಬರುವ ಬೇಡಿಕೆಗಳ ಈಡೇರಿಕೆ; 4. ನಿಶ್ಚಿತ ಕಾರ್ಯಸೂಚಿಗಳನ್ನು ರೂಪಿಸುವುದೂ ಸೇರಿದಂತೆ ಅಭಿವೃದ್ಧಿಕಾರ್ಯಕ್ರಮಗಳ ತಯಾರಿಕೆ, ಹಣನಿರ್ವಹಣೆ, ಕಾರ್ಯಾನ್ವಯಗಳೇ ಮುಂತಾದ ಎಲ್ಲ ವಿಚಾರಗಳಲ್ಲೂ ಸೂಕ್ತ ತಾಂತ್ರಿಕ ನೆರವಿನ ನೀಡಿಕೆ; ಅಲ್ಲದೆ ಕೃಷಿ, ಕೈಗಾರಿಕೆ, ಸಾರ್ವಜನಿಕ ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಅಥವಾ ಪ್ರಾದೇಶಿಕ ಮಟ್ಟದಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೆ ತಾಂತ್ರಿಕ ನೆರವು ನೀಡಿಕೆ ಮತ್ತು ಹೊಸ ಸಂಸ್ಥೆಗಳ ರಚನೆ; 5. ಈ ಪ್ರದೇಶದಲ್ಲಿ ಅಭಿವೃದ್ಧಿಗಾಗಿ ಹಣ ನಿಯೋಜಿಸಬಹುದಾದ ವಿಶ್ವಸಂಸ್ಥೆ ಮತ್ತು ಅದರ ಉಪಾಂಗಗಳೊಂದಿಗೂ (ಸಬ್ಸಿಡಿಯರಿ) ಕಾರ್ಯಕರ್ತೃಗಳೊಂದಿಗೂ (ಏಜೆನ್ಸೀಸ್) ಇತರ ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೂ ಸಹಕಾರ ಕಲ್ಪನೆ.

**ರಚನೆ :** ಬ್ಯಾಂಕಿನ ಅಧಿಕಾರವೆಲ್ಲ ನಿಹಿತವಾಗಿರುವುದು (ವೆಸ್ಟೆಡ್) ಶಾಸಕ ಮಂಡಲಿಯಲ್ಲಿ (ಬೋರ್ಡ್ ಆಫ್ ಗವರ್ನರ್ಸ್). ಹೊಸ ಸದಸ್ಯರ ಪ್ರವೇಶ, ಬ್ಯಾಂಕಿನ ಅಧಿಕೃತ ಬಂಡವಾಳದಲ್ಲಿ ಬದಲಾವಣೆ, ನಿರ್ದೇಶಕರ (ಡೈರೆಕ್ಟರ್ಸ್) ಮತ್ತು ಅಧ್ಯಕ್ಷರ ಚುನಾವಣೆ, ಪ್ರಣಾಳಿಕೆಯ ತಿದ್ದುಪಡಿ ಮುಂತಾದ ವಿಷಯಗಳನ್ನು ಬಿಟ್ಟು ಉಳಿದ ಅಧಿಕಾರಗಳನ್ನು ಇದು ನಿರ್ದೇಶಕ ಮಂಡಲಿಗೆ ವಹಿಸಿಕೊಡಬಹುದು. ಪ್ರತಿಯೊಂದು ಸದಸ್ಯ ರಾಷ್ಟ್ರವೂ ಒಬ್ಬ ಶಾಸಕನನ್ನೂ ಒಬ್ಬ ಪರ್ಯಾಯ (ಆಲ್ಟರ್ನೇಟ್) ಶಾಸಕನನ್ನೂ ನೇಮಿಸುತ್ತದೆ. ಶಾಸಕ ಮಂಡಲಿ ಕನಿಷ್ಠ ಪಕ್ಷ ವರ್ಷಕ್ಕೊಮ್ಮೆಯಾದರೂ ಸೇರಬೇಕು.

ಬ್ಯಾಂಕಿನ ಕಲಾಪಗಳ ಸಾಮಾನ್ಯ ನಿರ್ದೇಶನವೇ ನಿರ್ದೇಶಕ ಮಂಡಲಿಯ ಹೊಣೆ. ಶಾಸಕ ಮಂಡಲಿ ವಹಿಸಿಕೊಡುವ ಅಧಿಕಾರಗಳನ್ನು ಇದು ಚಲಾಯಿಸುತ್ತದೆ. ನಿರ್ದೇಶಕ ಮಂಡಲಿಯ ಸದಸ್ಯರ ಸಂಖ್ಯೆ ಹತ್ತು. ಇವರನ್ನು ಶಾಸನ ಮಂಡಲಿ ಚುನಾಯಿಸುತ್ತದೆ. ಇವರ ಪೈಕಿ ಏಳು ಜನರು ಪ್ರಾದೇಶಿಕ ಸದಸ್ಯರಾಷ್ಟ್ರಗಳ ಪ್ರತಿನಿಧಿಗಳು; ಮೂವರು ಪ್ರದೇಶಾತೀತ ಸದಸ್ಯರಾಷ್ಟ್ರಗಳ ಪ್ರತಿನಿಧಿಗಳು, ಪ್ರತಿ ನಿರ್ದೇಶಕನ ಅಧಿಕಾರಾವಧಿ ಎರಡು ವರ್ಷ; ಅವಧಿ ಪೂರೈಸಿದ ಮೇಲೆ ಈತ ಮತ್ತೆ ಚುನಾವಣೆಯಾಗಬಹುದು. ಬ್ಯಾಂಕಿನ ಅಧ್ಯಕ್ಷನೇ ಈ ಮಂಡಲಿಯ ಪೀಠಾಧಿಪತಿ (ಚೇರ್‍ಮನ್). ಇವನು ನಿರ್ದೇಶಕನೇ ಆಗಿರಬೇಕಾದುದಿಲ್ಲ. ಸದಸ್ಯರಾಷ್ಟ್ರಗಳ ಚುನಾವಣೆ ಹಕ್ಕಿಗೆ ಅವುಗಳ ಬಂಡವಾಳವೇ ಆಧಾರ. ಒಟ್ಟು ಮತಚಲಾವಣೆ ಹಕ್ಕಿನ ಶೇಕಡಾ 20ರಷ್ಟನ್ನು ಎಲ್ಲ ಸದಸ್ಯರಾಷ್ಟ್ರಗಳಲ್ಲೂ ಸಮನಾಗಿಯೂ ಉಳಿದದ್ದನ್ನು ಆಯಾ ರಾಷ್ಟ್ರಗಳ ಬಂಡವಾಳಗಳಿಗೆ ಅನುಗುಣವಾಗಿಯೂ ಹಂಚಲಾಗಿದೆ.

**ಹಣಕಾಸಿನ ರಚನೆ:** ಬ್ಯಾಂಕಿನ ಅಧಿಕೃತ ಬಂಡವಾಳ 110 ಕೋಟಿ ಅಮೆರಿಕನ್ ಡಾಲರು, ಚಂದಾ ಎತ್ತಿದ ಬಂಡವಾಳ 97 ಕೋಟಿ ಡಾಲರು. ಪ್ರತಿ ಸದಸ್ಯರಾಷ್ಟ್ರವೂ ತನ್ನ ಅಪೇಕ್ಷಿತ (ಸಬ್‍ಸ್ಕ್ರೈಬ್ಡ್) ಬಂಡವಾಳದಲ್ಲಿ ಅರ್ಧಭಾಗವನ್ನೂ ಐದು ಸಮಾನ ವಾರ್ಷಿಕ ಕಂತುಗಳಲ್ಲಿ ಸಲ್ಲಿಸಬೇಕು. ಪ್ರತಿ ಕಂತಿನ ಅರ್ಧ ಭಾಗವನ್ನು ಚಿನ್ನದಲ್ಲಾಗಲಿ ಪರಿವರ್ತನೀಯ (ಕನ್‍ವರ್ಟಿಬಲ್) ನಾಣ್ಯದಲ್ಲಾಗಲಿ ಕೊಡತಕ್ಕದ್ದು. ಉಳಿದರ್ಧವನ್ನು ಸ್ಥಳೀಯ ನಾಣ್ಯದಲ್ಲಿ ಪಾವತಿ ಮಾಡಬಹುದು. ಅಪೇಕ್ಷಿತ ಬಂಡವಾಳದ ಉಳಿದರ್ಧಭಾಗ ಆಹ್ವಾನಿತ ಷೇರುಗಳಾಗಿ, ಬ್ಯಾಂಕಿನ ಹೊಣೆಗಳಿಗೆ ಭರವಸೆಯ ಬೆಂಬಲವಾಗಿ ಇರುತ್ತದೆ. ಅಪೇಕ್ಷಿತ ಬಂಡವಾಳವಾದ 97 ಕೋಟಿ ಡಾಲರುಗಳಲ್ಲಿ ಪ್ರಾದೇಶಿಕ ಮತ್ತು ಪ್ರದೇಶಾತೀತ ಸದಸ್ಯರಾಷ್ಟ್ರಗಳ ಪಾಲು ಅನುಕ್ರಮವಾಗಿ 61.5 ಕೋಟಿ ಮತ್ತು 35.5 ಕೋಟಿ, ವಿವರಗಳು ಈ ರೀತಿ ಇವೆ :

| ದೇಶ | | ಚಂದಾ | |
|---|---|---|---|
| **ಪ್ರಾದೇಶಿಕ ಸದಸ್ಯ ರಾಷ್ಟ್ರಗಳು :** | | **ಕೋಟಿ ಡಾಲರುಗಳಲ್ಲಿ** | |
| ಆಫ್ಘಾನಿಸ್ತಾನ | ... | 0.478 | |
| ಆಸ್ಟ್ರೇಲಿಯ | ... | 8.500 | |
| ಇಂಡೊನೇಷ್ಯ | ... | 2.500 | |
| ಕಾಂಬೋಡಿಯ | ... | 0.350 | |
| ಕೊರಿಯ ಗಣರಾಜ್ಯ | ... | 3.000 | |
| ಜಪಾನ್ | ... | 20.000 | |
| ತೈವಾನ್ | ... | 1.600 | |
| ಥೈಲೆಂಡ್ | ... | 2.000 | |
| ನ್ಯೂಜಿಲೆಂಡ್ | ... | 2.256 | |
| ನೇಪಾಲ | ... | 0.216 | |
| ಪಶ್ಚಿಮ ಸಮೋವ | ... | 0.006 | |
| ಪಾಕಿಸ್ತಾನ | ... | 3.200 | |
| ಫಿಲಿಪೀನ್ಸ್ | ... | 3.500 | |
| ಭಾರತ | ... | 9.300 | |
| ಮಲೇಷ್ಯ | ... | 2.000 | |
| ಲಾವೋಸ್ | ... | 0.042 | |
| ವಿಯೆಟ್ನಾಂ ಗಣರಾಜ್ಯ | ... | 1.200 | |
| ಸಿಂಗಪುರ | ... | 0.500 | |
| ಶ್ರೀಲಂಕ | ... | 0.852 | **61,500** |
| **ಪ್ರದೇಶಾತೀತ ಸದಸ್ಯರಾಷ್ಟ್ರಗಳು :** | | | |
| ಅಮೇರಿಕ ಸಂಯುಕ್ತ ಸಂಸ್ಥಾನ | ... | 20.000 | |
| ಇಟಲಿ | ... | 0.500 | |
| ಕೆನಡ | ... | 2.000 | |
| ಜರ್ಮನ್ ಒಕ್ಕೂಟ ಗಣರಾಜ್ಯ | ... | 3.400 | |
| ಡೆನ್ಮಾರ್ಕ್ | ... | 0.500 | |
| ನಾರ್ವೇ | ... | 0.500 | |
| ನೆದರ್ಲೆಂಡ್ಸ್ | ... | 1.100 | |
| ಬೆಲ್ಜಿಯಂ | ... | 0.500 | |
| ಫಿನ್ಲೆಂಡ್ | ... | 0.500 | |
| ಸಂಯುಕ್ತ ರಾಜ್ಯ (ಬ್ರಿಟನ್) | ... | 3.000 | |
| ಸ್ವಿಟ್ಜರ್ಲೆಂಡ್ | ... | 0.500 | |
| ಸ್ವೀಡನ್ | ... | 0.500 | **35.500** |
| | | ಒಟ್ಟು | **97,000** |

ಬ್ಯಾಂಕಿನ ಕಲಾಪಗಳಿಗೆ ಅಗತ್ಯವಾದ ಹಣ ಒದಗಿರುವುದು ಮುಖ್ಯವಾಗಿ ಬಂಡವಾಳ ಮತ್ತು ಸಾಲಗಳಿಂದ. ಸರ್ಕಾರಗಳಿಗೂ ರಾಷ್ಟ್ರೀಯ ಅಭಿವೃದ್ಧಿಕಾರ್ಯಗಳಿಗೂ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೂ ಅಂತರರಾಷ್ಟ್ರೀಯ ಕಾರ್ಯಕರ್ತ್ರಗಳಿಗೂ ಕೈಗಾರಿಕೆ, ಕೃಷಿ, ವಿದ್ಯುತ್, ಸಾರಿಗೆ ಮತ್ತು ಸಂಪರ್ಕ ಮುಂತಾದ ಕ್ಷೇತ್ರಗಳಲ್ಲಿ ನಿರ್ದಿಷ್ಟ ಅಭಿವೃದ್ಧಿ ಕಾರ್ಯಕ್ರಮಗಳಿಗೂ ನೇರವಾಗಿ ಈ ಹಣದಿಂದ ಸಾಲ ನೀಡಲಾಗುತ್ತದೆ. ಬ್ಯಾಂಕಿನ ಉದ್ದೇಶಗಳಿಗೆ ಭಂಗ ಬಾರದಂಥ ಯಾವುದೇ ಕಾರ್ಯಕ್ಕಾದರೂ ವಿಶೇಷ ನಿಧಿಗಳಿಗಾಗಿ ಬ್ಯಾಂಕು ಪ್ರದಾತೃಗಳಿಂದ ಹಣದ ಕೊಡುಗೆ ಸ್ವೀಕರಿಸಬಹುದು. ಸಾಮಾನ್ಯ ನಿಧಿಯ ವ್ಯವಹಾರಗಳದಕ್ಕಿಂತ ಹೆಚ್ಚು ಧಾರಾಳವಾದ ಷರತ್ತುಗಳ ಮೇಲೆ ಸಾಲ ನೀಡಲು ವಿಶೇಷ ನಿಧಿಗಳಿಗಾಗಿ ಬ್ಯಾಂಕು ತನಗೆ ಪಾವತಿಯಾದ ಬಂಡವಾಳದಲ್ಲಿ ಶೇ. 10ರಷ್ಟನ್ನು ಎತ್ತಿಡಬಹುದು. ವಿಶೇಷ ಕೃಷಿನಿಧಿ ಈಗಾಗಲೇ ನಿರ್ಮಿತವಾಗಿದೆ.

ಈ ಪ್ರದೇಶದ ಕೃಷಿ ಕ್ಷೇತ್ರದಲ್ಲಿ ಕಾರ್ಯಾಚರಣೆ ಸಾಧ್ಯವಾಗುವಂತೆ ಬ್ಯಾಂಕು ಈ ಕ್ಷೇತ್ರದ ಸರ್ವೆ ನಡೆಸಿದೆ. ಸಾರಿಗೆ ಕ್ಷೇತ್ರದಲ್ಲಿ ಉಪ–ಪ್ರಾದೇಶಿಕ ಸರ್ವೆಯನ್ನೂ ಮಾಡಲಾಗುತ್ತಿದೆ.

ನಾನಾ ವಿಧವಾಗಿ ರೂಢಿಸಿಕೊಂಡ ಬಂಡವಾಳವನ್ನು ಈ ಪ್ರದೇಶದ ಸದಸ್ಯ ರಾಷ್ಟ್ರಗಳು ಕೈಗೊಳ್ಳುವ ನಿರ್ದಿಷ್ಟ ಯೋಜನೆಗಳಲ್ಲಿ ವಿನಿಯೋಗಿಸಲಾಗುವುದು. ಏಷ್ಯದ ಬಹುತೇಕ ರಾಷ್ಟ್ರಗಳಲ್ಲಿ ವ್ಯವಸಾಯ ಪ್ರಧಾನ ಕಸುಬಾಗಿರುವುದರಿಂದ, ವ್ಯವಸಾಯ ಮತ್ತು ಇತರ ಮೂಲಭೂತ ಅವಶ್ಯಕತೆಗಳಿಗೆ ಆದ್ಯತೆ ನೀಡಲಾಗುವುದು. ನಿರ್ದಿಷ್ಟ ಯೋಜನೆಗಳಿಗೆ ಸಾಲ ನೀಡುವಾಗ ಬ್ಯಾಂಕು ಕೆಲವು ಸ್ಪಷ್ಟನೀತಿಗಳನ್ನು ಗಮನದಲ್ಲಿಟ್ಟು ಕೊಳ್ಳುವುದು ಅವಶ್ಯಕವೆನಿಸುವುದು, ಮೊದಲನೆಯದಾಗಿ, ಸಾಲ ನೀಡಿಕೆಗೆ ಯೋಜನೆಗಳನ್ನು ಆಯ್ಕೆ ಮಾಡುವಾಗ ಪ್ರದೇಶದ ಸಾಮರಸ್ಯ ಅಭಿವೃದ್ಧಿಯನ್ನು ಮತ್ತು ತೀರಾ ಹಿಂದುಳಿದ ಸಣ್ಣ ರಾಷ್ಟ್ರಗಳ ಆವಶ್ಯಕತೆಗಳನ್ನು ಬ್ಯಾಂಕು ಗಮನದಲ್ಲಿಡುವುದು. ಎರಡನೆಯದಾಗಿ, ಸಾಲ ನೀಡಿಕೆಯ ಸಂದರ್ಭದಲ್ಲಿ ಆಯಾ ರಾಷ್ಟ್ರಗಳು ಹೊಂದಿರುವ ಇತರ ಸಾಲ ಸೌಲಭ್ಯಗಳನ್ನೂ ಗಣನೆಗೆ ತೆಗೆದುಕೊಳ್ಳಲಾಗುವುದು. ಇದರ ಪರಿಣಾಮವಾಗಿ, ಅಸಹಾಯಕ ರಾಷ್ಟ್ರಗಳಿಗೆ ಹೆಚ್ಚಿನ ಸಾಲ ಸೌಲಭ್ಯಗಳು ದೊರಕುವಂತಾಗುವುದು. ಮೂರನೆಯದಾಗಿ, ಸಾಲ ನೀಡಿಕೆ ಆಯಾ ಯೋಜನೆಗಳ ಸಾಮರ್ಥ್ಯವನ್ನು ಸಹ ಅವಲಂಬಿಸಿರುತ್ತದೆ. ಒಟ್ಟಿನಲ್ಲಿ ಇದು ಸಾಲ ನೀಡುವಾಗ ಬ್ಯಾಂಕ್ ಉದ್ಯಮದ ಎಲ್ಲ ಸುಷ್ಠು ತತ್ತ್ವಗಳನ್ನೂ ಅನುಸರಿಸುತ್ತದೆ.

ಇವಲ್ಲದೆ, ಹಿಂದುಳಿದ ರಾಷ್ಟ್ರಗಳ ಶಾಸಕರು, ಸೂಚಿಸಿರತಕ್ಕ ಮತ್ತೊಂದು ನಿಯಮವೂ ಗಮನಾರ್ಹ. ಇದರ ಪ್ರಕಾರ ಬ್ಯಾಂಕುಸಾಲಗಳು ಯಾವುದೇ ರಾಷ್ಟ್ರದಲ್ಲೂ ಕೇಂದ್ರೀಕೃತವಾಗದಂತೆ ಬ್ಯಾಂಕು ತನ್ನ ಕಾರ್ಯವನ್ನು ನಿರ್ವಹಿಸಬೇಕಾಗುವುದು. ಅಂದರೆ, ಬ್ಯಾಂಕಿನ ಸಾಲಗಳು ಪ್ರದೇಶದ ಇಲ್ಲ ರಾಷ್ಟ್ರಗಳಲ್ಲಿ ಆದಷ್ಟು ಸೂಕ್ತ ಪ್ರಮಾಣದಲ್ಲಿ ವಿನಿಯೋಗವಾಗಬೇಕೆಂಬುದು ಇದರ ಹಿಂದಿನ ಉದ್ದೇಶ.

ಆರ್ಥಿಕಾಭಿವೃದ್ಧಿ ಬಂಡವಾಳದಿಂದಲೇ ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿದೆ. ಆದ್ದರಿಂದ, ಅಭಿವೃದ್ಧಿಹೊಂದಿದ ರಾಷ್ಟ್ರಗಳ ಇತರ ಅವಶ್ಯಕತೆಗಳನ್ನು ಪೂರೈಸುವುದ ಕ್ಕಾಗಿಯೂ ಬ್ಯಾಂಕು ಶ್ರಮಿಸುತ್ತದೆ. ತತ್ಪರಿಣಾಮವಾಗಿ, ಸದಸ್ಯರಾಷ್ಟ್ರಗಳಿಗೆ ತಾಂತ್ರಿಕ ಸಹಾಯ ನೀಡಲು ಬ್ಯಾಂಕಿನ 21ನೆಯ ವಿಧಿ ತಿಳಿಸುತ್ತದೆ. ಏಷ್ಯದ ರಾಷ್ಟ್ರಗಳಲ್ಲಿ ಅನುಕೂಲಕರವಾದ ಸಾಮಾಜಿಕ ಮತ್ತು ಆರ್ಥಿಕ ವಾತಾವರಣವನ್ನು ಸೃಷ್ಟಿಸುವುದರಲ್ಲೂ ಸದಸ್ಯರಾಷ್ಟ್ರಗಳ ಅಭಿವೃದ್ಧಿ ಯೋಜನೆಗಳು ಹೊಂದಿಕೊಂಡು ಹೋಗಲೂ ಏಷ್ಯದ ಅಂತರಪ್ರಾಂತೀಯ ವ್ಯಾಪಾರ ಅಭಿವೃದ್ಧಿಗೊಳ್ಳಲೂ ಬ್ಯಾಂಕು ಸಹಾಯ ಮಾಡುತ್ತದೆ. ಇದಕ್ಕೆ ಪೋಷಕವಾಗಿ ಎಂಬಂತೆ ಬ್ಯಾಂಕು ಏಷ್ಯದ ವ್ಯವಸಾಯ ಸಮೀಕ್ಷೆ, ಪ್ರಾದೇಶಿಕ ಸಾರಿಗೆ ವ್ಯವಸ್ಥೆ ಸಮೀಕ್ಷೆ ಮತ್ತು ಇತರ ಸಮೀಕ್ಷೆಗಳನ್ನು ಕೈಗೊಳ್ಳುತ್ತದೆ.

**ಬ್ಯಾಂಕಿನ ಪ್ರಗತಿ:** ಕೆಲವು ರಾಷ್ಟ್ರಗಳಿಗೆ ನಿರ್ದಿಷ್ಟ ಕ್ಷೇತ್ರಗಳಲ್ಲಿ ಬ್ಯಾಂಕು ನೆರವು ನೀಡುತ್ತಿದೆ. ಈವರೆಗೆ ನೆರವು ಪಡೆದಿರುವ ದೇಶಗಳೆಂದರೆ ಇಂಡೊನೇಷ್ಯ (ಆಹಾರ ಉತ್ಪಾದನೆ ಮತ್ತು ಸರಬರಾಯಿ), ಕೊರಿಯ ಗಣರಾಜ್ಯ (ಕೃಷಿ ಮತ್ತು ಮೀನುಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್), ಫಿಲಿಪೀನ್ಸ್ (ನೀರಾವರಿ ಮತ್ತು ಜಲ ನಿರ್ವಹಣೆ ಅಭಿವೃದ್ಧಿ; ಮನಿಲಾದಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಆಧುನಿಕ ರೇವು ನಿರ್ಮಾಣ), ವಿಯಟ್ನಾಂ ಗಣರಾಜ್ಯ (ಕೈಗಾರಿಕಾಭಿವೃದ್ಧಿ ಹಣಕಾಸು ಸಂಸ್ಥೆಗಳು), ನೇಪಾಳ (ಕೃಷಿ ಅಭಿವೃದ್ಧಿ ಬ್ಯಾಂಕು). ಬ್ಯಾಂಕು ತನ್ನ ಸಾಲ ನೀಡಿಕೆಯಲ್ಲಿ ನೀರಾವರಿ ಹಾಗೂ ಜಲನಿಯಂತ್ರಣ ಕಾರ್ಯಕ್ರಮಗಳಿಗೂ ಸಾರಿಗೆ ವ್ಯವಸ್ಥೆ ಮತ್ತು ಮೂಲ ಕೈಗಾರಿಕೆಗಳಿಗೂ ಆದ್ಯತೆ ಕೊಡುತ್ತಿದೆ.

ಏಷ್ಯದ ಅಭಿವೃದ್ಧಿ ಬ್ಯಾಂಕು ತನ್ನ ಪ್ರಾರಂಭದ ಅತ್ಯಲ್ಪ ಕಾಲದಲ್ಲಿಯೇ ಸಾಧಿಸಿರುವ ಪ್ರಗತಿ ಆಶಾಭಾವನೆಯನ್ನು ಉಂಟುಮಾಡಿದೆ. ಹೆಚ್ಚುಹೆಚ್ಚಾಗಿ ಸ್ಥಳೀಯ ಬಂಡವಾಳದ ಉಪಯೋಗ, ಅಂತರ್‌ಪ್ರಾದೇಶಿಕ ವ್ಯಾಪಾರದ ಪ್ರೋತ್ಸಾಹ, ಅವಶ್ಯಕ ತಾಂತ್ರಿಕ ಜ್ಞಾನ ಒದಗಿಸುವಿಕೆ ಮುಂತಾದ ಉದ್ದೇಶಗಳನ್ನು ಸಾಧಿಸುವ ಕೆಲಸದಲ್ಲಿ ಏಷ್ಯದ ಬ್ಯಾಂಕು ಮುನ್ನಡೆದಿದೆ. ವಿದೇಶೀ ಹಣದ ಮೇಲೆ ರಾಷ್ಟ್ರದ ಅವಲಂಬನೆಯನ್ನು ಕಡಿಮೆ ಮಾಡುವುದರ ಮೂಲಕ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವ ಉದ್ದೇಶವನ್ನು ಹಲವು ದೇಶಗಳು ಸ್ವಾಗತಿಸಿವೆ. ಈ ದಿಸೆಯಲ್ಲಿ ಬ್ಯಾಂಕಿನ ಅತಿ ಮುಖ್ಯವಾದ ಸಮಸ್ಯೆ ಅದರ ಬಂಡವಾಳದ ಗಾತ್ರ. ಏಕೆಂದರೆ, ಬ್ಯಾಂಕು ಕೈಕೊಳ್ಳಬೇಕಾದ ಕಾರ್ಯಗಳ ಮತ್ತು ಅದರ ಬಂಡವಾಳದ ಗಾತ್ರದ ನಡುವಿನ ಅಂತರ ಬಹಳವಿದೆ. ಪ್ರಪಂಚ ಬ್ಯಾಂಕಿನ ಮತ್ತು ಇತರ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳ ಸಹಕಾರ ದೊರಕುತ್ತಿದೆ.

(ಜಿ.ಟಿ.ಎಚ್.ಸಿ.ಸಿ.ಪಿ.)

**ಏಷ್ಯದ ಅರ್ಥವ್ಯವಸ್ಥೆ:** ಪ್ರಪಂಚದ ಶೇ.55ರಷ್ಟು ಜನ ಏಷ್ಯದಲ್ಲಿದ್ದಾರೆ. ಆದರೆ ಇವರು ಪ್ರಪಂಚದ ಒಟ್ಟು ಸಂಪತ್ತು ಮತ್ತು ಉತ್ಪನ್ನದ ಕೇವಲ 1/10 ಅಂಶವನ್ನು ಮಾತ್ರ ಅನುಭೋಗಿಸುತ್ತಿದ್ದಾರೆ. ಇದು ಈ ಖಂಡದ ಆರ್ಥಿಕ ಸ್ಥಿತಿಯ ಸ್ಥೂಲ ಚಿತ್ರ. ಈ ಖಂಡವೆಂದೊಡನೆ ಆರ್ಥಿಕ ಬೆಳವಣಿಗೆಯ ಸಿದ್ಧಾಂತಗಳಿಗೆ ತೊಡಕಾಗಿ, ವಿವಿಧ ಹಾಗೂ ಜಟಿಲ ಆರ್ಥಿಕ ಪ್ರಯೋಗದಲ್ಲಿ ತೊಡಗಿರುವ ರಾಷ್ಟ್ರಗಳ ಚಿತ್ರ ಮೂಡುತ್ತದೆ. ಆರ್ಥಿಕ ಪ್ರಗತಿಗೆ ಇರುವ ಸಮಸ್ಯೆಗಳು ಅನೇಕ ಹಾಗೂ ಜಟಿಲ. ಕೃಷಿಯೇ ಪ್ರಧಾನವಾದ ಈ ಖಂಡದಲ್ಲಿ ಶೇ. 70–80ರಷ್ಟು ಜನ ಪ್ರಾಚೀನ ನಂಬಿಕೆಗಳಿಗೆ ಅಂಟಿಕೊಂಡಿರುವಂಥವರು.

ಎರಡನೆಯ ಮಹಾಯುದ್ಧದ ಅನಂತರದಲ್ಲಿ ಮಾತ್ರ ಇಲ್ಲಿನ ಅನೇಕ ರಾಷ್ಟ್ರಗಳು ಪ್ರಗತಿಯ ಪ್ರಯತ್ನದಲ್ಲಿ ತೊಡಗಿವೆ.

ಏಷ್ಯದ ಅರ್ಥವ್ಯವಸ್ಥೆಯಲ್ಲಿ ಒಂದು ರಾಷ್ಟ್ರ ಪ್ರತ್ಯೇಕವಾಗಿ ಎದ್ದು ನಿಲ್ಲುತ್ತದೆ. ಅದು ಜಪಾನ್, ಅದೊಂದು ಪೌರಸ್ತ್ಯ ಪವಾಡ. ಏಷ್ಯದ ಪ್ರಗತಿ ಪಥದಲ್ಲಿ ಅದು ಉಳಿದ ರಾಷ್ಟ್ರಗಳಿಗಿಂತ ಬಲು ಮುಂದಿದೆ. ವಿಶ್ವದಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ ದೃಷ್ಟಿಯಿಂದ ಅದಕ್ಕೆ ಹಿರಿಯ ಸ್ಥಾನ. ಏಷ್ಯನ್ ರಾಷ್ಟ್ರಗಳು ಜಪಾನಿನಂತೆಯೇ ಮುಂದುವರಿಯುವ ಆರ್ಥಿಕ ಪ್ರಯತ್ನದಲ್ಲಿ ತೊಡಗಿವೆ. ಆದುದರಿಂದ ಏಷ್ಯದ ಅರ್ಥವ್ಯವಸ್ಥೆಯನ್ನು ಒಟ್ಟಾಗಿ ವಿವೇಚಿಸುವಾಗ, ಪಾಶ್ಚಾತ್ಯ ರಾಷ್ಟ್ರಗಳ ಹೆಗಲಿಗೆ ಸಮನಾಗಿ ನಿಂತಿರುವ ಜಪಾನು ಅನೇಕ ವಿಚಾರಗಳಲ್ಲಿ ಅಪವಾದ.

**ಕೃಷಿ:** ಕೃಷಿಯೇ ಏಷ್ಯದ ಅರ್ಥವ್ಯವಸ್ಥೆಯ ಬೆನ್ನೆಲುಬು. ಇದು ಇಲ್ಲಿನ ಹೆಚ್ಚು ಜನರಿಗೆ ಜೀವನಾಧಾರ ಮತ್ತು ಸಂಪನ್ಮೂಲ. ಆದರೆ ಇಂದೂ ಇಲ್ಲಿನ ಕೃಷಿ ವಿಧಾನ ತೀರ ಹಳೆಯ ರೀತಿಯದು. ಆಧುನಿಕ ಬೇಸಾಯದ ಕ್ರಮಗಳಾದ ಜಲಾಶಯದ ಉಪಯೋಗ, ರಾಸಾಯನಿಕ ಗೊಬ್ಬರಗಳ ಪ್ರಯೋಗ, ಬೇಸಾಯದಲ್ಲಿ ಯಾಂತ್ರೀಕರಣ– ಇವು ಏಷ್ಯದ ರಾಷ್ಟ್ರಗಳಲ್ಲಿ ಪ್ರಾರಂಭವಾಗಿವೆ.

20ನೆಯ ಶತಮಾನದ ಪ್ರಥಮಾರ್ಧದಲ್ಲಿ ಭಾರತದ ಆಹಾರಧಾನ್ಯ ಉತ್ಪನ್ನ ಸರಾಸರಿ ಶೇ. 0.5ರಷ್ಟು ಹೆಚ್ಚಿತು. ಏಷ್ಯದ ಉಳಿದ ರಾಷ್ಟ್ರಗಳಲ್ಲೂ ಹೆಚ್ಚು ಕಡಿಮೆ ಇದೇ ಪ್ರಮಾಣದ ಬೆಳವಣಿಗೆಯನ್ನು ಕಾಣಬಹುದು. 1950ರಿಂದೀಚೆಗೆ ಕೃಷಿರಂಗದಲ್ಲಿ ವೇಗವಾದ ಸುಧಾರಣೆಗಳು ಪ್ರಾರಂಭವಾಗಿವೆ. ಏಷ್ಯದ ರಾಷ್ಟ್ರಗಳ ಸರ್ಕಾರಗಳು ಕೃಷಿರಂಗದಲ್ಲಿ ಪ್ರಗತಿ ಸಾಧಿಸಲು ಮನಃಪೂರ್ವಕವಾಗಿ ಪ್ರಯತ್ನ ನಡೆಸುತ್ತಿವೆ. 1960ನೆಯ ದಶಕದ ಪ್ರಥಮ ಆರು ವರ್ಷಗಳಲ್ಲಿ ಏಷ್ಯದ ರಾಷ್ಟ್ರಗಳ ಆಹಾರ ಧಾನ್ಯಗಳ ಉತ್ಪನ್ನ ಸರಾಸರಿ ಶೇ. 1ರಷ್ಟು ವೃದ್ಧಿಯಾಗಿದೆ ಎಂದು ಆಹಾರ ಮತ್ತು ಕೃಷಿ ಸಂಸ್ಥೆ ಅಂದಾಜು ಮಾಡಿದೆ.

ಏಷ್ಯನ್ ರಾಷ್ಟ್ರಗಳು ಎದುರಿಸುತ್ತಿರುವ ಕೃಷಿ ಸಮಸ್ಯೆಗಳು ಅಪಾರ. ಕೃಷಿ ಇಲ್ಲಿ ವರುಣನ ಕೃಪೆ. ಒಂದೇ ರಾಷ್ಟ್ರದಲ್ಲಿ ಕೆಟ್ಟ ಹವಾಮಾನ ಪರಿಸ್ಥಿತಿಗಳಿಂದ ಕೋಟಿ ಕೋಟಿ ಟನ್ ಆಹಾರ ಬೆಳೆ ನಷ್ಟವಾಗುತ್ತಿರುವ ಉದಾಹರಣೆಗಳುಂಟು. ನಿರೀಕ್ಷಿತ ಸಮಯಕ್ಕಿಂತ ಮುಂಚೆಯೋ ಸ್ವಲ್ಪ ತಡೆದೋ ಮಳೆ ಬಂದರೆ ಬೆಳೆಯಲ್ಲಿ ಅಪಾರವಾದ ನಷ್ಟ ಸಂಭವಿಸುತ್ತದೆ. ಕ್ಷಾಮ ಮತ್ತು ನೆರೆ ಏಷ್ಯನ್ ರೈತರ ಎರಡು ಶತ್ರುಗಳು. ಇವುಗಳಿಂದ ಆತನನ್ನು ರಕ್ಷಿಸಲು ಜಲಾಶಯ ನಿರ್ಮಾಣ, ಅಣೆಕಟ್ಟು, ಭೂಸಾರ ರಕ್ಷಣೆ ಮುಂತಾದವು ಈ ರಾಷ್ಟ್ರಗಳಲ್ಲಿ ಇನ್ನೂ ಬಹಳ ಬಾಲ್ಯಾವಸ್ಥೆಯಲ್ಲಿವೆ. ಹಿಂದುಳಿದ ಕೃಷಿ ವ್ಯವಸ್ಥೆಯಿಂದಾಗಿ ಅನೇಕ ರಾಷ್ಟ್ರಗಳು ಆಹಾರ ಸಮಸ್ಯೆಯನ್ನೆದುರಿಸುತ್ತಿವೆ.

ಏಷ್ಯದ ಎಲ್ಲ ರಾಷ್ಟ್ರಗಳೂ ಭೂಸುಧಾರಣಾಕ್ರಮಕ್ಕೆ ಪಣ ತೊಟ್ಟಿವೆ. ಜಪಾನಿನ ಯುದ್ಧೋತ್ತರ ಪವಾಡದ ಹಿನ್ನೆಲೆಯೆಂದರೆ ಅಲ್ಲಿ ನಡೆದ ಭೂಸುಧಾರಣೆ, ಟೈವಾನ್‌ನಲ್ಲಿ ಉಳುವವನಿಗೇ ಭೂಮಿ ಯೋಜನೆ ಫಲಗೊಂಡು ಮುಕ್ತಾಯ ಘಟ್ಟಕ್ಕೆ ಬಂದಿದೆ. ಭಾರತದಲ್ಲಿ ಹಂತಹಂತವಾಗಿ ಭೂಸುಧಾರಣೆ ಪ್ರಗತಿ ಹೊಂದುತ್ತಿದೆ. ಫಿಲಿಪೀನ್ಸ್ ಮತ್ತು ಇತರ ಕಡೆ ಇದು ಇನ್ನೂ ಬಹಳ ಹಿಂದುಳಿದಿದೆ. ಚೀನ, ಸೋವಿಯತ್ ಏಷ್ಯ, ಉತ್ತರ ವಿಯಟ್ನಾಂ, ಉತ್ತರ ಕೊರಿಯ ಮತ್ತು ಮಂಗೋಲಿಯಗಳಲ್ಲಿ ಭೂಸುಧಾರಣೆಯನ್ನು ಸಹಕಾರ ಮತ್ತು ಸಾಮೂಹಿಕ ಬೇಸಾಯದ ಮೂಲಕ ಪ್ರಯತ್ನಿಸಲಾಗಿದೆ. ಏಷ್ಯದ ಕಮ್ಯೂನಿಸ್ಟೇತರ ರಾಷ್ಟ್ರಗಳಲ್ಲಿ ಭೂಸುಧಾರಣೆ ಅನೇಕ ಆರ್ಥಿಕ ಹಾಗೂ ಸಾಮಾಜಿಕ ಅಡೆತಡೆಗಳನ್ನು ದಾಟಬೇಕಾಗಿದೆ.

ಭೂಸುಧಾರಣೆಯ ಜೊತೆಗೆ ಯಾಂತ್ರಿಕ ಸುಧಾರಣೆಗಳನ್ನು ಸಾಧಿಸುವುದು ಈ ರಾಷ್ಟ್ರಗಳ ಧ್ಯೇಯ. ಏಷ್ಯದ ಕೇವಲ 1/3 ಭಾಗ ಮಾತ್ರ ವ್ಯವಸಾಯ ಯೋಗ್ಯವಾಗಿದ್ದು, ಅನೇಕ ರಾಷ್ಟ್ರಗಳು ವ್ಯವಸಾಯದ ಭೂಮಿಯನ್ನು ವಿಸ್ತರಿಸುವ ಕಾರ್ಯಕ್ರಮವನ್ನು ಕೈಗೊಂಡಿವೆ. ಈ ಎಲ್ಲ ರಾಷ್ಟ್ರಗಳಲ್ಲೂ ಭೂಮಿಯ ಇಳುವರಿಯನ್ನು ವೃದ್ಧಿಸಲು ಕೈಗೊಂಡಿರುವ ಮುಖ್ಯ ಕ್ರಮಗಳೆಂದರೆ, ಉತ್ತಮ ರೀತಿಯ ಬೀಜದ ಉಪಯೋಗ, ರಾಸಾಯನಿಕ ಗೊಬ್ಬರಗಳ ಪ್ರಯೋಗ ಮತ್ತು ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಮತ್ತು ಯಂತ್ರಸಾಧನೆಗಳ ಅನ್ವಯ, ಆದರೆ ಈ ಕ್ರಮಗಳನ್ನು ಸತತವಾಗಿ ನಡೆಸಿಕೊಂಡು ಹೋಗಲು ಸಹ ಈ ರಾಷ್ಟ್ರಗಳು ತೊಂದರೆಯನ್ನೆದುರಿಸಬೇಕಾಗಿದೆ. ಮುಖ್ಯವಾದ ಸಮಸ್ಯೆಯೆಂದರೆ ಈ ಕ್ರಮಗಳು ದುಬಾರಿ. 1960ರ ಮಧ್ಯಭಾಗದಿಂದ ಮಾತ್ರ ಭಾರತದಲ್ಲಿ ಮತ್ತು ಚೀನದಲ್ಲಿ ರಾಸಾಯನಿಕ ಗೊಬ್ಬರದ ಬಳಕೆಯ ಪ್ರಾಮುಖ್ಯವನ್ನು ಕಾಣಬಹುದು. ಆದರೂ ಈ ಎರಡು ರಾಷ್ಟ್ರಗಳು ಒಂದು ಎಕರೆಗೆ ಬಳಸುತ್ತಿರುವ ರಾಸಾಯನಿಕ ಗೊಬ್ಬರ. ಜಪಾನ್ ಎಕರೆಯೊಂದಕ್ಕೆ ಬಳಸುವುದರ ಕೇವಲ 1/8ರಷ್ಟು; ನೀರಾವರಿಯನ್ನೊದಗಿಸುವುದೂ ಸಮಸ್ಯೆಯೇ ಆಗಿದೆ. ಏಷ್ಯದ ವ್ಯವಸಾಯ ಜಮೀನಿನಲ್ಲಿ 1/3 ಭಾಗಕ್ಕಿಂತಲೂ ಕಡಿಮೆ ಪ್ರದೇಶಕ್ಕೆ ನೀರಾವರಿ ಸೌಕರ್ಯ ಸೀಮಿತವಾಗಿದೆ. ಏಷ್ಯದ ಎಲ್ಲ ರಾಷ್ಟ್ರಗಳಿಗೂ ಇರುವ ಸಂಪತ್ತೆಂದರೆ ಶ್ರಮ. ಬಂಡವಾಳ ಕೊರತೆಯಿದ್ದು, ಯಾಂತ್ರಿಕ ಬೇಸಾಯ ದುಬಾರಿಯಾಗಿರುವುದರಿಂದ ಬೇಸಾಯ ಅವಲಂಬಿಸಿರುವುದು ಶ್ರಮಸಂಪತ್ತನ್ನೇ. ಅಧಿಕ ಇಳುವರಿ ನೀಡುವ ಉತ್ತಮ ಬೀಜಗಳ ಬಿತ್ತನೆಗೆ ಅತ್ಯಂತ ಹೆಚ್ಚಿನ ಗಮನ ಕೊಡಲಾಗುತ್ತಿದೆ.

ಇಷ್ಟಾಗಿಯೂ ಏಷ್ಯ ತನಗೆ ಅಗತ್ಯವಾದಷ್ಟು ಆಹಾರ ಸಾಮಗ್ರಿಗಳನ್ನು ಉತ್ಪಾದಿಸಿಕೊಳ್ಳುತ್ತಿಲ್ಲ. ಪ್ರತಿವರ್ಷ ಭಾರತ ಸು. 0.9 ಕೋಟಿ ಟನ್ ಆಹಾರ ವಸ್ತುಗಳನ್ನೂ ಚೀನ ಸು. 0.5 ಕೋಟಿ ಟನ್ನನ್ನೂ ಹೊರಗಿನಿಂದ ಆಮದು ಮಾಡಿಕೊಳ್ಳುತ್ತಿವೆ. ಏಷ್ಯ ವರ್ಷಕ್ಕೆ 1.5 ಕೋಟಿ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳುತ್ತಿದೆ. ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 70ರಷ್ಟು ಅಕ್ಕಿ ಉತ್ಪಾದಿಸುವ ಈ ಖಂಡ 1964 ರಿಂದೀಚೆಗೆ ಅದನ್ನೂ ಆಮದು ಮಾಡಿಕೊಳ್ಳುತ್ತಿದೆ. ಗೋಧಿ ಮತ್ತು ಅಕ್ಕಿ ಆಮದಿನ ಹೆಚ್ಚಿನ ಅಂಶ ಬರುವುದು ಉತ್ತರ ಅಮೆರಿಕದಿಂದ, ಕೃಷಿಯಲ್ಲಿನ ಪ್ರಗತಿ ವೇಗವಾಗಿ ನಡೆಯುತ್ತಿಲ್ಲದಿರುವುದೇ ಇದರ ಕಾರಣಗಳಲ್ಲೊಂದು. ತಲಾ ಆದಾಯ ಹೆಚ್ಚಿದಂತೆ ಜನಸಂಖ್ಯೆ ಹೆಚ್ಚಿ ಆಹಾರದ ಬೇಡಿಕೆಯೂ ಹೆಚ್ಚುತ್ತಿರುವುದು ಈ ರಾಷ್ಟ್ರಗಳ ಸಾಮಾನ್ಯ ಅನುಭವ. ಉದಾಹರಣೆಗೆ, ಅಭಿವೃದ್ಧಿ ಹೊಂದುತ್ತಿರುವ ಏಷ್ಯನ್ ರಾಷ್ಟ್ರಗಳಾದ ಶ್ರೀಲಂಕ. ಚೀನ (ಟೈವಾನ್), ಭಾರತ, ಇಂಡೊನೇಷ್ಯ, ಪಾಕಿಸ್ತಾನ, ಫಿಲಿಪೀನ್ಸ್ ಮತ್ತು ಥೈಲೆಂಡ್ ಇವೆಲ್ಲ ರಾಷ್ಟ್ರಗಳನ್ನೂ ಒಟ್ಟಾಗಿಸಿ, ಲೆಕ್ಕ ಹಾಕಿದಾಗ, ಇಲ್ಲಿ ತಲಾ ಆದಾಯ ಶೇ. 1ರಷ್ಟು ವೃದ್ಧಿಯಾದಾಗ ಆಹಾರ ಉತ್ಪನ್ನದ ಬೇಡಿಕೆಯ ಹೆಚ್ಚಳ 0.89 ರಷ್ಟಾಗುತ್ತದೆ. ಅಮೆರಿಕ ಮತ್ತು ಆಸ್ಟ್ರೇಲಿಯ ಗಳಲ್ಲಿ ಈ ಬೇಡಿಕೆಯ ಹೆಚ್ಚಳ ಕೇವಲ 0.15 ಮತ್ತು 0.11 ಏಷ್ಯದ ಪ್ರತಿ ವ್ಯಕ್ತಿಯ ಸರಾಸರಿ ಅನುಭೋಗ ದಿನಕ್ಕೆ 2,050 ಕೆಲೊರಿ. ಇದು ಅಗತ್ಯಕ್ಕಿಂತ ಬಹಳ ಕಡಿಮೆ.

ವಾಣಿಜ್ಯ ಬೆಳೆಗಳಾದ ಚಹ, ಕಬ್ಬು, ರಬ್ಬರ್ ಮತ್ತು ತೈಲೋತ್ಪಾದಕ ಸಸ್ಯಗಳೂ ಏಷ್ಯದ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಏಷ್ಯನ್ ರಾಷ್ಟ್ರಗಳ ನಿರ್ಯಾತ ಅವಲಂಬಿಸಿರುವುದು ಈ ಮೂಲವಸ್ತುಗಳನ್ನೇ.

ಆದರೆ ಈ ವಸ್ತುಗಳ ಬೆಲೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯಾವಾಗಲೂ ಕುಸಿಯುತ್ತಿದ್ದು, ಯಾಂತ್ರಿಕ ವಸ್ತುಗಳ ಬೆಲೆ ಏರುತ್ತಿದ್ದು, ಏಷ್ಯನ್ ರಾಷ್ಟ್ರಗಳ ಅಂತಾರಾಷ್ಟ್ರೀಯ ವ್ಯಾಪಾರವನ್ನು ಕುಂಠಿತಗೊಳಿಸುತ್ತಿವೆ. ಈ ರಾಷ್ಟ್ರಗಳ ತಮ್ಮ ಪ್ರಗತಿಗೆ ಬೇಕಾದ ಯಂತ್ರಸಾಮಗ್ರಿಗಳನ್ನು ಅನಿವಾರ್ಯವಾಗಿ ಕೊಳ್ಳಬೇಕಾಗಿರುವುದರಿಂದ ಈ ಸಮಸ್ಯೆ ಇನ್ನೂ ಜಟಿಲ. ಇಷ್ಟೇ ಅಲ್ಲದೆ ಅತ್ಯಂತ ಹಳೆಯ ಕಾಲದ ಬೇಸಾಯಕ್ಕೇ ಆತುಕೊಂಡಿರುವ ಈ ರಾಷ್ಟ್ರಗಳು ಕೃಷಿರಂಗದಲ್ಲಿ ಸಹ ಪಾಶ್ಚಾತ್ಯ ರಾಷ್ಟ್ರಗಳ ಪೈಪೋಟಿಯನ್ನೆದುರಿಸುತ್ತಿವೆ. ಏಷ್ಯದ ಕೆಲವು ರಾಷ್ಟ್ರಗಳ ಕೃಷಿ ಉತ್ಪನ್ನವನ್ನೂ ಅದರ ಸರಾಸರಿ ಹೆಚ್ಚಳವನ್ನೂ ಕೆಳಗಿನ ಯಾದಿಯಲ್ಲಿ ಕೊಡಲಾಗಿದೆ.

ವಿದೇಶೀ ವ್ಯಾಪಾರಕ್ಕೆ ಕೃಷಿಯ ಮೇಲೆ ಮುಖ್ಯವಾಗಿ ಅವಲಂಬಿತವಾಗಿರುವ ಏಷ್ಯನ್ ರಾಷ್ಟ್ರಗಳು ಆಂತರಿಕವಾಗಿ ಕೃಷಿ ವಸ್ತುಗಳ ಉತ್ಪನ್ನದ ಡೋಲಾಯಮಾನ ಸ್ಥಿತಿಗೂ ಬಾಹ್ಯವಾಗಿ ಅವುಗಳ ಬೆಲೆಯ ಕುಸಿತದ ಸಮಸ್ಯೆಗೂ ಹೊಂದಿಕೊಳ್ಳಬೇಕಾಗಿದ್ದು, ವಿದೇಶೀ ವ್ಯಾಪಾರದಿಂದ ಪಡೆಯುವ ಲಾಭ ಯಾವಾಗಲೂ ವ್ಯತ್ಯಾಸ ಹೊಂದುವ ಪರಿಸ್ಥಿತಿಯನ್ನೆದುರಿಸಬೇಕಾಗಿದೆ.

**ಕೈಗಾರಿಕೆ:** ಇದೂ ಏಷ್ಯದ ರಾಷ್ಟ್ರಗಳ ಒಂದು ಪ್ರಮುಖ ಸಮಸ್ಯೆ. ದೊಡ್ಡ ಉತ್ಪಾದನೋದ್ಯಮಗಳ ಜೊತೆಗೆ ಈ ರಾಷ್ಟ್ರಗಳು ಸಾರಿಗೆ, ಬ್ಯಾಂಕಿಂಗ್ ಸಂಪರ್ಕ, ವಿದ್ಯುತ್, ಜಲಾಶಯ-ಇವೆಲ್ಲವನ್ನೂ ವ್ಯವಸ್ಥಿತವಾಗಿ ನಿರ್ಮಾಣ ಮಾಡಿಕೊಳ್ಳಬೇಕಾಗಿದೆ. ತಮ್ಮ ರಾಷ್ಟ್ರಗಳಲ್ಲಿನ ವರಮಾನ ಹೆಚ್ಚಬೇಕಾದರೆ ತಾವೂ ಕೈಗಾರಿಕೆ ಬೆಳೆಸಬೇಕು ಎಂಬುದನ್ನು ಈ ರಾಷ್ಟ್ರಗಳು ಈಗ ಮನಗಂಡಿವೆ. ಅಷ್ಟೇ ಅಲ್ಲ, ಪಾಶ್ಚಾತ್ಯಾವಲಂಬನ ದಿಂದ ವಿಮೋಚನೆ ಹೊಂದಲೂ ಇದೇ ಮಾರ್ಗ.

ಏಷ್ಯದ ಹೆಚ್ಚಿನ ರಾಷ್ಟ್ರಗಳು ಕೈಗಾರಿಕಾ ರಂಗದಲ್ಲಿ ಹೆಚ್ಚು ಮುನ್ನಡೆಯುವುದಕ್ಕೆ ಸಾಧ್ಯವಾಗಿಲ್ಲ. ಅವಕ್ಕೆ ಈ ರಂಗದಲ್ಲಿನ ಸಮಸ್ಯೆಗಳು ಅಪಾರ. ಆದರೂ ಈ ರಾಷ್ಟ್ರಗಳು 20ನೆಯ ಶತಮಾನದ ಐದು-ಆರನೆಯ ದಶಕಗಳಲ್ಲಿ ಪ್ರಗತಿಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಿವೆ. ವಿಶ್ವಸಂಸ್ಥೆಯ ಅಂಕಿ-ಅಂಶಗಳ ಪ್ರಕಾರ ಕಳೆದು 20 ವರ್ಷಗಳಲ್ಲಿ ಏಷ್ಯದ ಕೈಗಾರಿಕಾ ಉತ್ಪನ್ನ ಹತ್ತು ಪಟ್ಟು ಹೆಚ್ಚಿದೆ. ಬೃಹತ್ ಕೈಗಾರಿಕೆಗಳನ್ನೂ ಸೇರಿಸಿದರೆ ಈ ಸಂಖ್ಯೆ ಇನ್ನೂ ಹೆಚ್ಚು.

ಏಷ್ಯದ ಪ್ರಗತಿ ಹೊಂದುತ್ತಿರುವ ರಾಷ್ಟ್ರಗಳ ಕೈಗಾರಿಕಾ ಉತ್ಪನ್ನ 1960ರ ದಶಕದಲ್ಲಿ ವರ್ಷಕ್ಕೆ ಸರಾಸರಿ ಶೇ. 8ರಂತೆ ಏರಿತು. ಅಂದರೆ, ಈ ರಂಗದ ಉತ್ಪನ್ನದ ಬೆಳವಣಿಗೆ ಉಳಿದ ರಂಗಗಳದಕ್ಕಿಂತ ಎರಡರಷ್ಟು ಹೆಚ್ಚು. ಯಾಂತ್ರಿಕ ಸಾಧನಗಳ ತಯಾರಿಕೆಯಲ್ಲಿ ನಿರ್ಯಾತ ಮಾಡುವಷ್ಟರಮಟ್ಟಿಗಿನ ಸಿದ್ಧಿಯನ್ನು ಭಾರತ, ಚೀನ ಸಾಧಿಸಿವೆ. ಇವೆರಡೂ ಸಾಕಷ್ಟು ಪ್ರಗತಿ ಹೊಂದಿದ ಅಣುಶಕ್ತಿ ಕೇಂದ್ರಗಳನ್ನು ಸಹ ಹೊಂದಿವೆ.

ಏಷ್ಯದ ಕೈಗಾರಿಕಾ ರಂಗ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಬಂಡವಾಳದ, ತಜ್ಞರ, ಉದ್ಯಮಿಗಳ ಮತ್ತು ವ್ಯವಸ್ಥಾಪಕರ ಕೊರತೆ ಬಹಳ ಮುಖ್ಯ. ಜಪಾನನ್ನುಳಿದು ಇತರ ಎಲ್ಲ ರಾಷ್ಟ್ರಗಳೂ ತಮ್ಮ ಕೈಗಾರಿಕಾ ಪ್ರಗತಿಗೆ ಒಂದಲ್ಲ ಒಂದು ದೃಷ್ಟಿಯಿಂದ ಪಾಶ್ಚಾತ್ಯ ದೇಶಗಳನ್ನು ಅವಲಂಬಿಸಬೇಕಾಗಿದೆ.

ಸತತವಾಗಿ ಬಂಡವಾಳಕ್ಕಾಗಿ ಪರಾವಲಂಬಿಗಳಾಗಿರುವುದು ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಬಹಳ ಅಪಾಯಕಾರಿ ಎಂಬುದನ್ನು ಏಷ್ಯನ್ ರಾಷ್ಟ್ರಗಳು ಮನಗಂಡಿವೆ. ಹೀಗಾಗಿ ತಮ್ಮಲ್ಲಿಯೇ ಸಾಧ್ಯವಾದಷ್ಟು ಬಂಡವಾಳವನ್ನು ಒದಗಿಸಿಕೊಳ್ಳುವ ಪ್ರಯತ್ನ ನಡೆದಿದೆ. 1960ರಲ್ಲಿ ಅಸ್ತಿತ್ವಕ್ಕೆ ಬಂದ ಏಷ್ಯದ ಅಭಿವೃದ್ಧಿ ಬ್ಯಾಂಕು ಈ ದಿಶೆಯಲ್ಲೊಂದು ಮೈಲಿಗಲ್ಲು. ಆದರೂ ಸದ್ಯದಲ್ಲಿ ಈ ರಾಷ್ಟ್ರಗಳು ಬಂಡವಾಳದ ದೃಷ್ಟಿಯಿಂದ ಸ್ವಾವಲಂಬಿಗಳಾಗುವುದು ಕಠಿಣ.

ಏಷ್ಯದ ರಾಷ್ಟ್ರಗಳು ಕೈಗಾರಿಕಾಭಿವೃದ್ಧಿಗೆ ಸತತವಾಗಿ ಪ್ರಯತ್ನ ಪಡುತ್ತಿವೆ. ಅನೇಕ ರಾಷ್ಟ್ರಗಳು ಪ್ರಗತಿ ಸಾಧಿಸಿವೆ. ಇದಕ್ಕೆ ಒಂದು ನಿದರ್ಶನವೆಂದರೆ, ಅನೇಕ ಏಷ್ಯನ್ ರಾಷ್ಟ್ರಗಳಲ್ಲಿ ಕೈಗಾರಿಕೆ ಹಾಗೂ ಯಂತ್ರಗಳ ಉತ್ಪನ್ನದ ಬೆಳೆವಣಿಗೆಯ ವೇಗ, ಮುಖ್ಯವಾದ ಕೃಷಿರಂಗದ ಉತ್ಪನ್ನದ ವೇಗಕ್ಕಿಂತ ಹೆಚ್ಚಾಗಿದೆ. ಕೆಲವು ರಾಷ್ಟ್ರಗಳ ಕೈಗಾರಿಕೆ ಮತ್ತು ಯಂತ್ರೋತ್ಪಾದನೆಯ ಬೆಳೆವಣಿಗೆಯನ್ನು ಮುಂದಿನ ಯಾದಿಯಲ್ಲಿ ಕೊಟ್ಟಿದೆ.

ಯುದ್ಧಾನಂತರದಲ್ಲಿ ಕೈಗಾರಿಕೆಗೆ ತೀವ್ರವಾಗಿ ಗಮನ ಕೊಟ್ಟ ಏಷ್ಯನ್ ರಾಷ್ಟ್ರಗಳು ಪ್ರಾರಂಭಕ್ಕೆ ಬೃಹದ್‌ಕೈಗಾರಿಕೆಗಳ ನಿರ್ಮಾಣದ ಆಸೆಯನ್ನಿರಿಸಿಕೊಂಡಿದ್ದುವು. ಭಾರತ ಮತ್ತು ಚೀನಗಳು ರಷ್ಯವನ್ನು ಆದರ್ಶವಾಗಿಟ್ಟುಕೊಂಡು ಮುಂದುವರಿದುವು. ಅವು ಉಕ್ಕು ಕಾರ್ಖಾನೆ, ವಿದ್ಯುತ್ ಆಗಾರ, ಎಂಜಿನಿಯರಿಂಗ್ ಕೈಗಾರಿಕೆ, ರಾಸಾಯನಿಕ ಕಾರ್ಖಾನೆ ಇವಕ್ಕೆ ಹೆಚ್ಚು ಹಣ ಹೂಡಿದವು. ಬೇಸಾಯವಿಲ್ಲದೆ ಬದುಕಿಲ್ಲ ಎಂಬುದನ್ನು ಅರಿತು, ಆಹಾರದಲ್ಲಿ ಸ್ವಾವಲಂಬನೆ ಸಾಧಿಸುವ ದೃಷ್ಟಿಯಿಂದ ಈ ರಂಗದಲ್ಲಿ ಈಚೆಗೆ ಹೆಚ್ಚಿನ ನಿಯೋಜನೆ ಪ್ರಾರಂಭವಾಗಿದೆ. ಸಣ್ಣ ಕೈಗಾರಿಕೆ ಹಾಗೂ ಕೃಷಿವಸ್ತುಗಳ ನಿರ್ಯಾತದಲ್ಲಿ ಸಹ ಪ್ರಮುಖ ಪಾತ್ರ ವಹಿಸುತ್ತಿರುವುದರಿಂದ ಇದಕ್ಕೆ ಭದ್ರವಾದ ತಳಹದಿ ಹಾಕುವ ಯತ್ನ ಏಷ್ಯನ್ ರಾಷ್ಟ್ರಗಳಲ್ಲಿ ಇಂದು ನಡೆಯುತ್ತಿದೆ.

ಕಮ್ಯೂನಿಸ್ಟ್ ರಾಷ್ಟ್ರಗಳನ್ನು ಬಿಟ್ಟರೆ ಏಷ್ಯದಲ್ಲಿ ಉಳಿದೆಲ್ಲೆಡೆ ಕೈಗಾರಿಕಾ ರಂಗದ ಮಾಲೀಕತ್ವ ಸರ್ಕಾರ ಹಾಗೂ ಖಾಸಗಿಯವರಲ್ಲಿ ನೆಲೆಸಿದೆ. ಇದು ಬಂಡವಾಳ ನಿಯೋಜನೆಯ ದೃಷ್ಟಿಯಿಂದ ಹಿತವೆಂದು ಈ ರಾಷ್ಟ್ರಗಳ ನಂಬಿಕೆ; ಕೈಗಾರಿಕೆಯ ಪ್ರಗತಿಯಿಲ್ಲದೆ ತಾವು ಪಾಶ್ಚಾತ್ಯ ರಾಷ್ಟ್ರಗಳು ಭುಜಕೊಟ್ಟು ನಿಲ್ಲುವುದು ಸಾಧ್ಯವಿಲ್ಲವೆಂದು ಅರಿತಿರುವ ಏಷ್ಯನ್ ರಾಷ್ಟ್ರಗಳು ಈ ಹಾದಿಯಲ್ಲಿ ಪ್ರಗತಿ ಸಾಧಿಸಲು ಮನಃಪೂರ್ವಕವಾಗಿ ಶ್ರಮಿಸುತ್ತಿವೆ.

**ಹಣಕಾಸು:** ಏಷ್ಯನ್ ರಾಷ್ಟ್ರಗಳ ಕೃಷಿರಂಗದ ಪ್ರಗತಿಯಾಗಲಿ, ಕೈಗಾರಿಕಾರಂಗದ ಪ್ರಗತಿಯಾಗಲಿ, ಹಣಕಾಸು ಎಷ್ಟು ದೊರೆಯುತ್ತದೆ ಎಂಬುದರ ಮೇಲೆ ಅವಲಂಬಿತವಾಗಿವೆ. ತಮ್ಮ ಬಡತನದಿಂದಾಗಿ ಕಡಿಮೆ ಆದಾಯ, ಕಡಿಮೆ ಜೀವನಮಟ್ಟ, ಕಡಿಮೆ ಉಳಿತಾಯ ಮತ್ತು ಕಡಿಮೆ ಬಂಡವಾಳ ಶೇಖರಣೆ-ಇವುಗಳ ವಿಷವೃತ್ತದಲ್ಲಿ ಸಿಕ್ಕಿರುವ ಏಷ್ಯನ್ ರಾಷ್ಟ್ರಗಳು ಹಣಕಾಸಿನ ಕ್ಷೇತ್ರದಲ್ಲಿ ಎದುರಿಸಬೇಕಾದ ಸಮಸ್ಯೆಗಳು ಅಪಾರ. ಈ ರಾಷ್ಟ್ರಗಳ ಉಳಿತಾಯ, ಬಂಡವಾಳ ಶೇಖರಣೆ ತೀರ ಅಲ್ಪ.

ಏಷ್ಯದ ಹೆಚ್ಚಿನ ರಾಷ್ಟ್ರಗಳು ತಮ್ಮ ಆದಾಯಕ್ಕೆ ನೇರವಾಗಿ ವರಮಾನ ತೆರಿಗೆಯನ್ನೇ ಅವಲಂಬಿಸಿವೆ. ಈ ರಾಷ್ಟ್ರಗಳು ತಮ್ಮ ಆದಾಯದ 1/5 ಭಾಗವನ್ನು ವರಮಾನ ತೆರಿಗೆಗಳ ಮೂಲದಿಂದ ಪಡೆದುಕೊಳ್ಳುತ್ತವೆ. ಆಯಾತ ಕರ ಮತ್ತು ಇತರ ಪರೋಕ್ಷ

ತೆರಿಗೆಗಳೂ ಮುಖ್ಯವೇ. ಈ ರಾಷ್ಟ್ರಗಳಿಗೆ ಪಾಶ್ಚಾತ್ಯ ರಾಷ್ಟ್ರಗಳಂತೆ ಕಡ್ಡಾಯ ಉಳಿತಾಯವನ್ನು ಪ್ರೇರೇಪಿಸುವ ತೆರಿಗೆಗಳನ್ನು ವಿಧಿಸುವುದು ಕಠಿಣವಾದ ವಿಷಯ. ಇವು ಸತತವಾಗಿ ಎದುರಿಸುತ್ತಿರುವ ಸಮಸ್ಯೆಯೆಂದರೆ ಹಣದ ಉಬ್ಬರ; ಇದರಿಂದ ಜೀವನಮಟ್ಟ ಕಡಿಮೆಯಾಗುವುದು ಅನಿವಾರ್ಯ. ಉದಾಹರಣೆಗೆ, 1961–66ರಲ್ಲಿ ಇಂಡೋನೇಷ್ಯದಲ್ಲಿ ಅನುಭೋಗ ವಸ್ತುಗಳ ಬೆಲೆ ಶೇ. 600 ರಷ್ಟು ಹೆಚ್ಚಿತು. ಹಣಕಾಸಿನ ಸ್ಥಿತಿ ತೀರ ಅಸಮರ್ಪಕವಾಗಿರುವುದರಿಂದ ಈ ರಾಷ್ಟ್ರಗಳು ವಿದೇಶೀ ಬಂಡವಾಳದ ಕಡೆ ನೋಡುವುದು ಸಹಜ. 1965ರಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಂದ ಪೂರ್ವ ಮತ್ತು ದಕ್ಷಿಣ ಏಷ್ಯಕ್ಕೆ ಹರಿದು ಬಂದ ಬಂಡವಾಳ 280 ಕೋಟಿ ಡಾಲರ್ (ವಿಶ್ವಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳ ಮೂಲದಿಂದ). ಇದು ಅಲ್ಲಿಂದೀಚೆಗೆ ಪ್ರತಿ ವರ್ಷ ಅದೇ ಪ್ರಮಾಣದಲ್ಲಿ ಮುಂದುವರಿದಿದೆ. ಸೋವಿಯತ್ ವಲಯದಿಂದ ಬಂದ ಸಹಾಯಧನ 1965ರ ವರೆಗೆ ತಲಾ 300 ಕೋಟಿ ಡಾಲರ್. ಬಂಡವಾಳಕ್ಕಾಗಿ ಈ ರೀತಿಯ ಪರಾವಲಂಬನೆ ಏಷ್ಯದ ರಾಷ್ಟ್ರಗಳಿಗೆ ಪ್ರಗತಿಯ ದೃಷ್ಟಿಯಿಂದ ಅನಿವಾರ್ಯ.

**ಜನಸಂಖ್ಯೆ:** ಏಷ್ಯದ ಪ್ರಗತಿಯನ್ನೆಲ್ಲ ಕಬಳಿಸುತ್ತಿರುವುದು ಇಲ್ಲಿನ ಜನಸಂಖ್ಯೆಯ ಬೆಳವಣಿಗೆ. ಅನೇಕ ಏಷ್ಯನ್ ರಾಷ್ಟ್ರಗಳಲ್ಲಿ ನಡೆದ ಜನಗಣತಿಯಂತೆ ಇಲ್ಲಿ ಜನಸಂಖ್ಯೆ ವರ್ಷಕ್ಕೆ ಶೇ. 2.5ರಂತೆ ಬೆಳೆಯುತ್ತಿದೆ. ಈ ರೀತಿಯ ಜನಸಂಖ್ಯಾ ಸ್ಫೋಟ ಏಷ್ಯವನ್ನು ಭವಿಷ್ಯದಲ್ಲಿ ದೊಡ್ಡ ವಿಪತ್ತಿಗೆ ಈಡು ಮಾಡುತ್ತದೆಂಬುದು ತಜ್ಞರ ಅಭಿಮತ.

ಹೀಗೆ ಅತ್ಯಧಿಕ ವೇಗದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಕಾರಣಗಳು ಹಲವಾರು. 1950ರಿಂದ ಏಷ್ಯದ ಅನೇಕ ರಾಷ್ಟ್ರಗಳಲ್ಲಿ ಮರಣಸಂಖ್ಯೆ ಬಹಳ ಮಟ್ಟಿಗೆ ಕಡಿಮೆಯಾಗಿದೆ. ವೈದ್ಯಕೀಯ ಸೌಲಭ್ಯ ಮತ್ತು ಆರೋಗ್ಯ ಮುನ್ನಡೆ ಇವೇ ಅದಕ್ಕೆ ಕಾರಣ. ಆದರೆ ಜನಸಂಖ್ಯೆಯ ಏರುಗತಿಯನ್ನು ಕಡಿಮೆ ಮಾಡುವುದಕ್ಕೆ ಹೆಚ್ಚು ಪ್ರಾಧಾನ್ಯ ದೊರೆಯಲಿಲ್ಲ. ದೊಡ್ಡ ಕುಟುಂಬವೇ ಭಾಗ್ಯ ಮತ್ತು ಭದ್ರತೆ ಎಂದು ನಂಬಿರುವ ಹೆಚ್ಚಿನ ಜನಕ್ಕೆ ಅದರ ಆರ್ಥಿಕ ತೊಂದರೆಗಳನ್ನು ಮುಂಗಾಣುವ ವಿದ್ಯಾಭ್ಯಾಸವಾಗಲಿ, ದೂರದೃಷ್ಟಿಯಾಗಲಿ ಇಲ್ಲ. ಕುಟುಂಬ ಯೋಜನೆಗೆ ಇರುವ ಸಾಮಾಜಿಕ ಹಾಗೂ ಆರ್ಥಿಕ ಅಡೆತಡೆಗಳು ಹಲವು. ಅನೇಕ ದೇಶಗಳ ಜನ ಇಂದು ಸಹ ವಿಸ್ತಾರ ಕುಟುಂಬಗಳ ಕಡೆಗೇ ತಮ್ಮ ಒಲವನ್ನು ತೋರಿಸುತ್ತಿದ್ದಾರೆ. ಆದರೆ ಜಪಾನ್ ಮಾತ್ರ ಕಾಯಿದೆ ತಂದು ತನ್ನ ಜನಸಂಖ್ಯೆ ಬೆಳವಣಿಗೆಯ ವೇಗವನ್ನು ಶೇ. 2.0 ರಿಂದ ಶೇ. 1.0ಕ್ಕೆ ಕಳೆದ ಎರಡು ಶತಕಗಳಲ್ಲಿ ಇಳಿಸಿಕೊಂಡಿದೆ. ಭಾರತದ ಯೋಜನೆಗಳಲ್ಲಿ ಕುಟುಂಬಯೋಜನೆ ಹೆಚ್ಚಿನ ಮಹತ್ತ್ವ ನೀಡಲಾಗಿದ್ದರೂ ಪ್ರಗತಿ ಗಮನಾರ್ಹವಾಗಿ ಆಗಿಲ್ಲ. ಈ ರಾಷ್ಟ್ರಗಳಲ್ಲಿ ಸಾಮಾಜಿಕ ಬದಲಾವಣೆಯಾದ ಹೊರತು ಈ ದಿಕ್ಕಿನಲ್ಲಿ ಯಾವ ಪ್ರಗತಿಯನ್ನೂ ಆಶಿಸುವಂತಿಲ್ಲ. ವಿದ್ಯಾಭ್ಯಾಸ ಮುನ್ನಡೆದಂತೆ ಕುಟುಂಬಯೋಜನೆ ಸಿದ್ಧಿಸುವ ಆಸೆ ಈ ರಾಷ್ಟ್ರಗಳಿಗಿದೆ. ಆದರೆ ಅಲ್ಲಿಯವರೆಗೆ ಜನಸಂಖ್ಯೆಯಲ್ಲಾಗುವ ಬೆಳವಣಿಗೆಯಿಂದ ಈ ರಾಷ್ಟ್ರಗಳ ಪ್ರಗತಿಯ ಮೇಲೆ ಆಗುವ ಪರಿಣಾಮ ತೀವ್ರ.

ಇದನ್ನು ಹೇಗೆ ತಡೆಗಟ್ಟಬಹುದು ಎನ್ನುವುದೇ ಬೃಹದ್ ಸಮಸ್ಯೆ. ಈ ರಾಷ್ಟ್ರಗಳ ಸರ್ಕಾರಗಳು ಇದರ ಪರಿಣಾಮವನ್ನು ಮನಗಂಡು ಅನೇಕ ರೀತಿಯ ಯೋಜನೆಗಳನ್ನು ಕೈಗೊಂಡಿವೆ. ಏಷ್ಯನ್ ರಾಷ್ಟ್ರಗಳು ಶಕ್ತಿಮೀರಿ ದುಡಿದರೆ ಆರ್ಥಿಕ ಪ್ರಗತಿ ವರ್ಷಕ್ಕೆ ಶೇ. 5ರಂತೆ ಮುಂದುವರಿಯುತ್ತದೆ. ಆದರೆ ಜನಸಂಖ್ಯೆ ಶೇ. 2.5ರಂತೆ ಹೆಚ್ಚಿದರೆ ಜೀವನಮಟ್ಟದ ಮೇಲೆ ಆರ್ಥಿಕ ಪ್ರಗತಿಯಿಂದ ಯಾವ ಪರಿಣಾಮವೂ ಆಗದು. ಕಮ್ಯೂನಿಸ್ಟ್ ರಾಷ್ಟ್ರವಾದ ಚೀನಾ ಸಹ ಜನಸಂಖ್ಯೆಯ ಈ ಮಟ್ಟದ ಬೆಳವಣಿಗೆಯಿಂದ ಆರ್ಥಿಕ ಪ್ರಗತಿ ಕುಂಠಿತವಾಗುವುದೆಂಬುದನ್ನು ಮನಗಂಡಿದೆ.

ಬರುವ ದಶಕಗಳಲ್ಲಿ ಜನಸಂಖ್ಯಾ ಸಮಸ್ಯೆಯನ್ನೆದುರಿಸುವುದೇ ಏಷ್ಯನ್ ರಾಷ್ಟ್ರಗಳ ಪ್ರಮುಖ ಆರ್ಥಿಕ ಸಮಸ್ಯೆಯಾಗಬಹುದು.

**ಆರ್ಥಿಕ ಯೋಜನೆಗಳು:** ಏಷ್ಯದ ರಾಷ್ಟ್ರಗಳೆಲ್ಲವೂ ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿಕೊಂಡಿವೆ. ಏಷ್ಯದಲ್ಲಿ ಹಾಂಗ್‌ಕಾಂಗ್ ಮಾತ್ರ ಇದಕ್ಕೆ ಅಪವಾದ. ಅದು ತಟಸ್ಥ್ಯ ನೀತಿಗೆ (ಲೇಸೇ ಫೇರ್) ಗಟ್ಟಿಯಾಗಿ ಅಂಟಿಕೊಂಡಿದೆ. ಆ ಮಾರ್ಗದಿಂದಲೇ ಪ್ರಗತಿ ಸಾಧಿಸುವ ಹಂಬಲ ಆ ದೇಶದ್ದು. ಭಾರತ, ಚೀನ ಮತ್ತು ಪಾಕಿಸ್ತಾನ ಕ್ರಮವಾಗಿ 1951, 1953 ಮತ್ತು 1955ರಲ್ಲಿ ತಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಗಳನ್ನು ಆರಂಭಿಸಿದುವು.

ಏಷ್ಯದಲ್ಲಿ ಯೋಜನೆಗಳ ಹಾದಿ ಬಲು ಕಠಿಣ. ಚೀನ ತನ್ನ ಎರಡನೆ ಯೋಜನೆ ಪ್ರಾರಂಭವಾಗುವುದಕ್ಕೆ ಮುಂಚೆಯೇ ಮುನ್ನೆಗೆತ ಕಾರ್ಯಕ್ರಮವನ್ನು ಆರಿಸಿಕೊಂಡು ಎರಡನೆಯ ಯೋಜನೆಯನ್ನು ಹಿಂತಳ್ಳಿತು. ಆರ್ಥಿಕ ಹೊಡೆತಗಳಿಂದಾಗಿ ಮೂರನೆಯ ಯೋಜನೆಯನ್ನು ಸಹ 3 ವರ್ಷ ಕಾಲ ಮುಂದಕ್ಕೆ ಹಾಕಬೇಕಾಯಿತು. ಭಾರತ ಮೂರು ಯೋಜನೆಗಳನ್ನು ಕ್ರಮವಾಗಿ ಮುಗಿಸಿದರೂ ನಾಲ್ಕನೆಯ ಯೋಜನೆಯನ್ನು ಮೂರು ವರ್ಷ ಕಾಲ ಮುಂದಕ್ಕೆ ಹಾಕಬೇಕಾಯಿತು. ಆರ್ಥಿಕ ಅಡಚಣೆ, ಪಾಕಿಸ್ತಾನದೊಡನೆ ಯುದ್ಧ, ಅನಾವೃಷ್ಟಿಯ ಫಲವಾಗಿ ಬೆಳೆಯಲ್ಲಿನ ನಷ್ಟ–ಇವು ನಾಲ್ಕನೆಯ ಯೋಜನೆಗೆ ಒದಗಿದ ವಿಘ್ನಗಳು. ಆದರೂ ಭಾರತದ ಯೋಜನೆ ಇಡೀ ಏಷ್ಯಕ್ಕೆ ಆದರ್ಶಪ್ರಾಯವಾಗಿದೆ. ವ್ಯವಸ್ಥಿತ ನಿರೂಪಣೆ, ಯೋಜನಾ ಆಯೋಗ, ಸರ್ಕಾರಿ ಹಾಗೂ ಖಾಸಗಿ ವಲಯಗಳ ಕಾರ್ಯಕ್ಷೇತ್ರ ನಿಷ್ಕರ್ಷೆ–ಇವು ಅದರ ವೈಶಿಷ್ಟ್ಯಗಳು. ಇಂಡೋನೇಷ್ಯ, ಚೀನ (ಟೈವಾನ್), ಬರ್ಮಾ (ಮಯನ್ಮಾರ್), ಆಫ್ಘಾನಿಸ್ತಾನ, ನೇಪಾಲ, ದಕ್ಷಿಣ ವಿಯೆಟ್ನಾಂ, ಲಾವೋಸ್, ಕಾಂಬೋಡಿಯ, ದಕ್ಷಿಣ ಕೊರಿಯ, ಮಂಗೋಲಿಯ, ಫಿಲಿಪೀನ್ಸ್, ಶ್ರೀಲಂಕ, ಮಲಯ ಈ ರಾಷ್ಟ್ರಗಳು ಯೋಜನೆಗಳನ್ನು ರೂಪಿಸಿಕೊಂಡು ಶ್ರದ್ಧಾಪೂರ್ವಕವಾಗಿ ಆರ್ಥಿಕ ಪ್ರಗತಿಗಾಗಿ ಶ್ರಮಿಸುತ್ತಿವೆ. ಜಪಾನ್ 1961–71ರಷ್ಟು ದೀರ್ಘಾವಧಿಯ ಯೋಜನೆಯನ್ನು ರೂಪಿಸಿಕೊಂಡಿದೆ. ಜಪಾನಿನ ಯೋಜನೆಯಲ್ಲಿ ಸರ್ಕಾರಿ ರಂಗಕ್ಕೆ ಕಡಿಮೆ ಪ್ರಾಧಾನ್ಯ. ಖಾಸಗಿ ವಲಯದ ಮೇಲೆ ಕಡಿಮೆ ಹಿಡಿತವಿರುವ ಯೋಜನೆ ಇದರದು.

ತಮ್ಮ ಯೋಜನೆಗಳಲ್ಲಿ ರೂಪಿಸಿಕೊಂಡಿರುವ ಪ್ರಮಾಣದ ಆರ್ಥಿಕ ಬೆಳವಣಿಗೆಯನ್ನು ಮುಟ್ಟುವುದು ಈ ರಾಷ್ಟ್ರಗಳಿಗೆ ಕಠಿಣವಾಗಿದ್ದರೂ ಇವು ಯೋಜನೆಯಿಂದ ತಕ್ಕಮಟ್ಟಿನ ಬೆಳವಣಿಗೆ ಸಾಧಿಸಿವೆ. 1950ರ ದಶಕ ಹಾಗೂ 60ರ ಪ್ರಾರಂಭದಲ್ಲಿ ಏಷ್ಯನ್ ರಾಷ್ಟ್ರಗಳಲ್ಲಿ (ಜಪಾನನ್ನು ಬಿಟ್ಟು) ವರ್ಷಕ್ಕೆ ಶೇ. 4ರಂತೆ ಆರ್ಥಿಕ ಬೆಳವಣಿಗೆಯಾಗಿದೆ. ಮತ್ತೊಂದು ಕುತೂಹಲಕರವಾದ ಅಂಶವೆಂದರೆ, ಭಾರತ ಚೀನಗಳಿಗಿಂತ ತಡವಾಗಿ ಯೋಜನೆಯನ್ನು ಪ್ರಾರಂಭಿಸಿದ ಕೆಲವು ಸಣ್ಣ ರಾಷ್ಟ್ರಗಳು ಹೆಚ್ಚಿನ ಆರ್ಥಿಕ ಬೆಳವಣಿಗೆಯನ್ನು ತಮ್ಮ ಯೋಜನೆಗಳ ಮೂಲಕ ಸಾಧಿಸಿವೆ. 1960ರ ದಶಕದಲ್ಲಿ ವರ್ಷಕ್ಕೆ ಶೇ. 5ಕ್ಕಿಂತಲೂ ಹೆಚ್ಚಾಗಿ ಬೆಳವಣಿಗೆಯನ್ನು ಸಾಧಿಸಿರುವ ಏಷ್ಯನ್ ರಾಷ್ಟ್ರಗಳುಂಟು.

ಏಷ್ಯದ ಆರ್ಥಿಕ ವ್ಯವಸ್ಥೆಯನ್ನು ಒಟ್ಟಾಗಿ ವಿವೇಚಿಸಿದಾಗ ಕಂಡುಬರುವ ಅಂಶವೆಂದರೆ, ಈ ರಾಷ್ಟ್ರಗಳು ತಮ್ಮ ಆರ್ಥಿಕ ಪ್ರಗತಿಗಾಗಿ ಬಡತನವನ್ನು ನೀಗಿಸಿಕೊಳ್ಳುವುದಕ್ಕಾಗಿ ಅಪಾರ ಶ್ರದ್ಧೆ ಮತ್ತು ಶ್ರಮ ವಹಿಸುತ್ತಿವೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಕ್ರಾಂತಿ ನಡೆದಾಗ ಅವರಿಗಿದ್ದ ಸಾಮಾಜಿಕ, ರಾಜಕೀಯ ಸಮಸ್ಯೆಗಳು ಕಡಿಮೆ. ಏಷ್ಯದ ರಾಷ್ಟ್ರಗಳು ತಮ್ಮ ಸಾಮಾಜಿಕ ಸಮಸ್ಯೆಗಳನ್ನು ಗೆದ್ದು ಅನಂತರ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದ ಸಂದಿಗ್ಧ ಸಮಯ ಒದಗಿದೆ. ಅವುಗಳ ಆರ್ಥಿಕ ಮುನ್ನಡೆಯ ಪ್ರಯೋಗಗಳು ಸಿದ್ಧಿಯ ಹಂತದಲ್ಲಿವೆ. (ಸಿ.ಕೆ.ಆರ್.)

**ಏಷ್ಯದ ಇತಿಹಾಸ:** ಏಷ್ಯದ ಇತಿಹಾಸ ಐದಾರು ಸಾವಿರ ವರ್ಷಗಳಷ್ಟು ದೀರ್ಘವಾದದ್ದು. ಸಂಕುಚಿತಾರ್ಥದಲ್ಲಿ ಏಷ್ಯವೆಂದರೆ ಏಜಿಯನ್‌ಗೆ ಪೂರ್ವಕ್ಕಿದ್ದ ರೋಮನರ ಪ್ರಾಂತ್ಯ; ಆಗ ಇದರಲ್ಲಿ ಮಿಸಿಯ, ಲಿಡಿಯ, ಕೇರಿಯ ಮತ್ತು ಫ್ರಿಜಿಯಗಳು ಅಡಕವಾಗಿದ್ದುವು. ಕಾಲಕ್ರಮೇಣ ಏಷ್ಯ ಪ್ರಾಂತ್ಯದಲ್ಲಿ ರೋಮನ್ನರು ಅನೇಕ ಬದಲಾವಣೆಗಳನ್ನು ಮಾಡಿದರು. ಈಗ ಇಡೀ ಖಂಡಕ್ಕೇ ಏಷ್ಯ ಎಂಬ ಹೆಸರಿದೆ.

ಏಷ್ಯದ ಜನಾಂಗಗಳಲ್ಲಿ ಏಕರೂಪತೆ ಇಲ್ಲ. ಉದಾಹರಣೆಗೆ ತುರ್ಕಿಯವರು, ಭಾರತೀಯರು, ಚೀನಿಯರು ಮತ್ತು ಜಪಾನೀಯರ ನಡುವೆ ಅನೇಕ ವ್ಯತ್ಯಾಸಗಳಿವೆ. ಏಷ್ಯದಲ್ಲಿನ ಸಂಸ್ಕೃತಿಗಳ ಹಿನ್ನೆಲೆಯನ್ನು ಅಭ್ಯಾಸ ಮಾಡಿದಾಗ ವ್ಯಕ್ತಿಗಳು ಪ್ರಧಾನವಲ್ಲ. ಸಮಾಜದಲ್ಲಿನ ಕುಟುಂಬಜೀವನವೂ ರಾಜಕೀಯ ಜೀವನವೂ ವಿಶಿಷ್ಟವಾಗಿ ಎದ್ದು ಕಾಣುತ್ತವೆ. ಆದ್ದರಿಂದ ಏಷ್ಯದ ಇತಿಹಾಸವೂ ಸರಳವಾದ ಹಾಗೂ ವಿಶಾಲವಾದ ರೂಪರೇಷೆಗಳನ್ನು ಪಡೆದಿದೆ. ಯುರೋಪಿನ ಇತಿಹಾಸಕ್ಕಿಂತಲೂ ಏಷ್ಯದ ಇತಿಹಾಸ ಬಹಳ ದೊಡ್ಡದು. ಆದರೆ ಏಷ್ಯದ ಇತಿಹಾಸವನ್ನು ಸಮಗ್ರವಾಗಿ ನೋಡಿದಾಗ ಯುರೋಪಿಯನ್ನರ ಇತಿಹಾಸದಲ್ಲಿ ಕಂಡುಬರುವಂಥ ಕುತೂಹಲಪೂರ್ಣ, ವಿಶಿಷ್ಟ ಘಟನಾವಳಿಗಳೂ ವ್ಯಕ್ತಿಗಳೂ ಕಂಡುಬರುವುದಿಲ್ಲವೆನ್ನಬಹುದು. ಆದರೂ ಏಷ್ಯದ ಇತಿಹಾಸದಲ್ಲಿ ಬರುವ ಚೆಂಗೇಸ್‌ಖಾನ್ ಮತ್ತು ತೈಮೂರರು ನೆಪೋಲಿಯನ್ ಮತ್ತು ಹಿಟ್ಲರರನ್ನೂ ಮೀರಿಸಿದವರೆನ್ನಬಹುದು. ಅಷ್ಟೇ ಅಲ್ಲ, ವಿಶ್ವದ ಇತಿಹಾಸದ ಮೇಲೆ ಪ್ರಭಾವ ಬೀರಿದ ಯೇಸು, ಬುದ್ಧ, ಮಹಮ್ಮದರಂಥವರು ಹುಟ್ಟಿ ಬಾಳಿದ್ದು ಏಷ್ಯದಲ್ಲಿ. ಹಿಂದೂ, ಬೌದ್ಧ, ಕ್ರಿಸ್ತ, ಇಸ್ಲಾಂ, ಜುಡಾಯಿಸಮ್, ಪಾರ್ಸಿ, ಟಾವೊ ಮುಂತಾದ ಧರ್ಮಗಳು ಹುಟ್ಟಿದ್ದೂ ಏಷ್ಯದಲ್ಲೇ.

ಬ್ಯಾಬಿಲೋನಿಯ ನಾಗರಿಕತೆಯನ್ನು ಬಿಟ್ಟರೆ, ಪ್ರ.ಶ.ಪೂ. 1500ಕ್ಕಿಂತ ಹಿಂದಿನ ಏಷ್ಯನ್ ಇತಿಹಾಸವನ್ನು ಸಮಗ್ರವಾಗಿ ಅಭ್ಯಾಸ ಮಾಡುವುದು ಕಷ್ಟ. ಏಕೆಂದರೆ ಆ ಕಾಲಕ್ಕೆ ಸಂಬಂಧಿಸಿದಂತೆ ದೊರೆತಿರುವ ಆಧಾರಗಳು ಸ್ವಲ್ಪ. ಹೆಚ್ಚಾಗಿ ಊಹೆಯಿಂದಲೇ ಮುಂಚಿನ ಇತಿಹಾಸವನ್ನು ಚಿತ್ರಿಸಿಕೊಳ್ಳಬೇಕಾಗಿದೆ. ಭಾರತದಲ್ಲಿ ಪ್ರ.ಶ.ಪೂ. 5000 ವರ್ಷಗಳಷ್ಟು ಹಿಂದೆ ಇದ್ದ ಹರಪ್ಪ–ಮೊಹೆಂಜೋದಾರೊ ನಾಗರಿಕತೆ ಬೆಳಕಿಗೆ ಬಂದಿದೆ.

ಸು. ಪ್ರ.ಶ.ಪೂ. 1500ರ ವೇಳೆಗೆ ಚೀನಿಯರು ಹ್ವಾಂಗ್ ಹೊ ನದಿಯ ತೀರದಲ್ಲಿ ಬಂದು ನೆಲೆಸುತ್ತಿದ್ದರು; ಆರ್ಯರು ಭಾರತವನ್ನು ಪ್ರವೇಶಿಸುತ್ತಿದ್ದರು; ಬ್ಯಾಬಿಲೋನಿಯದ ಕೀರ್ತಿ ಮತ್ತು ಪ್ರಭಾವ ಅತಿ ಹೆಚ್ಚಿನದಾಗಿತ್ತು.

ಏಷ್ಯದ ರಾಷ್ಟ್ರಗಳು ಪಾಶ್ಚಾತ್ಯರ ಹತೋಟಿಗೆ ಬಂದ ವಿಷಯವನ್ನು ಬಿಟ್ಟು, ಸು. 2000 ವರ್ಷಗಳ ಏಷ್ಯದ ಇತಿಹಾಸದಲ್ಲಿ ಪ್ರಮುಖವಾಗಿ ಚೀನೀ, ಭಾರತೀಯ, ಮುಸ್ಲಿಂ ಮತ್ತು ಮಧ್ಯ ಏಷ್ಯ–ಹೀಗೆ ನಾಲ್ಕು ಪ್ರಭಾವಗಳನ್ನು ಕಾಣಬಹುದು. ಇವುಗಳಲ್ಲಿ ಮೊದಲ ಮೂರು ಪ್ರಭಾವಗಳು ಭಿನ್ನ ಸಂಸ್ಕೃತಿಗಳ ಪ್ರತೀಕಗಳಾಗಿವೆ. ನಾಲ್ಕನೆಯದು ನವೀನವಲ್ಲದಿದ್ದರೂ ವಿವಿಧ ಜನಾಂಗಗಳನ್ನು ಒಂದು ಕಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯುವುದರಲ್ಲೂ ರಾಜಕೀಯ ಬಲವನ್ನು ಹಂಚುವುದರಲ್ಲೂ ಹೆಚ್ಚಿನ ಪಾತ್ರ ವಹಿಸಿದೆ.

ಪೂರ್ವ ಏಷ್ಯದ ನಾಗರಿಕತೆಗಳ ಮೇಲೆ ಚೀನ ತನ್ನದೇ ಆದ ಮುದ್ರೆಯನ್ನೊತ್ತಿದೆ. ಕೊರಿಯ, ಜಪಾನ್ ಮತ್ತು ವಿಯೆಟ್ನಾಂಗಳು ಚೀನದ ನೇರ ಪ್ರಭಾವಕ್ಕೆ ಒಳಗಾದ ಪ್ರದೇಶಗಳು. ಹೊರವಲಯದಲ್ಲಿ ಮಂಗೋಲಿಯ, ಟಿಬೆಟ್, ಸಯಾಂ, ಕಾಂಬೋಡಿಯ ಮತ್ತು ಮಯನ್ಮಾರ್‌ಗಳಿವೆ. ಈ ಪ್ರದೇಶಗಳಲ್ಲಿ ಭಾರತೀಯ ಹಾಗೂ ಚೀನೀ ನಾಗರಿಕತೆಗಳ ಪ್ರಭಾವಗಳು ಸಮ್ಮಿಶ್ರಗೊಂಡಿವೆ. ಭಾರತೀಯರ ಪ್ರಭಾವ ಸ್ವಲ್ಪ ಹೆಚ್ಚಿನದು ಎಂದೇ ಹೇಳಬಹುದು. ಚೀನೀಯರ ಪ್ರಭಾವ ಹೆಚ್ಚಾಗಿದ್ದ ಪ್ರದೇಶಗಳಲ್ಲಿ ಕನ್‌ಫ್ಯೂಷಿಯನ್ ಧರ್ಮ ಪ್ರಮುಖವಾಯಿತು. ಇದರ ಜೊತೆಗೆ ವಿಶಿಷ್ಟ ಚೀನೀ ಕಲೆಯೂ ಬರೆವಣಿಗೆಯ ಕ್ರಮವೂ ಹಬ್ಬಿದುವು.

ಭಾರತೀಯ ಪ್ರಭಾವ ಮುಖ್ಯವಾಗಿ ಬೌದ್ಧಧರ್ಮದ ಪ್ರಸಾರದಿಂದ ಬಂದದ್ದು ಎನ್ನಬಹುದು. ಇಂಡೋ–ಚೀನ, ಮಲೆಯ ಪರ್ಯಾಯದ್ವೀಪ, ಟಿಬೆಟ್ ಮತ್ತು ಮಂಗೋಲಿಯಗಳು ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟ ಪ್ರದೇಶಗಳು. ಚೀನ ಮತ್ತು ಜಪಾನ್ ದೇಶಗಳು ಹೆಚ್ಚಾಗಿ ಬೌದ್ಧಧರ್ಮವನ್ನು ಅವಲಂಬಿಸಿದ್ದರಿಂದ, ಆ ದೇಶಗಳೂ ಭಾರತದ ಸಂಸ್ಕೃತಿಯ ಪ್ರಭಾವ ವಲಯಕ್ಕೊಳಗಾದ ಪ್ರದೇಶಗಳೆಂದು ಹೇಳಬಹುದು. ಆದರೆ ಈ ಪ್ರಭಾವ ಪರಸ್ಪರವಲ್ಲ. ಏಕೆಂದರೆ ಚೀನೀಯರ ಕಲೆ, ಸಾಹಿತ್ಯ ಅಥವಾ ಧರ್ಮನೀತಿ ಯಾವುದೂ ಭಾರತದ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿಲ್ಲ. ಆದರೆ ಬೌದ್ಧಧರ್ಮದ ಪ್ರಭಾವ ಧರ್ಮಕ್ಕೆ ಮಾತ್ರವೇ ಸೀಮಿತಗೊಳ್ಳದೆ, ಅದರ ಜೊತೆಗೆ ಭಾರತೀಯ ಕಲೆ ಮತ್ತು ಸಾಹಿತ್ಯವೂ ಜಾವ ಕಾಂಬೋಡಿಯಗಳಲ್ಲಿ ಅವರ ವರ್ಣಮಾಲೆಯೂ ಪ್ರಭಾವ ಬೀರಿದುವು.

ಇಸ್ಲಾಂ ಧರ್ಮ ಪಶ್ಚಿಮ ಏಷ್ಯದಲ್ಲಿ ಹೆಚ್ಚು ಪ್ರಭಾವಯುತವಾಯಿತು. ಇಂದಿಗೂ ಅದು ಆ ಪ್ರದೇಶದಲ್ಲಿ ವಾಸಮಾಡುತ್ತಿರುವ ಜನಾಂಗದ ಮುಖ್ಯ ಧರ್ಮ. ಉತ್ತರ ಮತ್ತು ಮಧ್ಯ ಭಾರತದಲ್ಲಿ ಇಸ್ಲಾಂ ಪ್ರಬಲಗೊಂಡಿತು. ಇಂದಿಗೆ ಒಟ್ಟು ಜನಸಂಖ್ಯೆಯ 1/5ರಷ್ಟು ಜನ ಆ ಧರ್ಮದ ಅನುಯಾಯಿಗಳಾಗಿದ್ದಾರೆ. ಭಾರತದಿಂದ ಪೂರ್ವಕ್ಕೆ ಮಲೆಯ ಮತ್ತು ಇಂಡೋನೇಷ್ಯಗಳಿಗೆ ಈ ಧರ್ಮ ಹಬ್ಬಿ ಅಲ್ಲಿದ್ದ ಹಿಂದೂ ಧರ್ಮದ ಪ್ರಭಾವವನ್ನು ಮೀರಿ ತನ್ನ ಪ್ರಾಬಲ್ಯ ಸ್ಥಾಪಿಸಿತು. ಇಂಡೋ–ಚೀನದಲ್ಲಾಗಲಿ, ಜಪಾನಿನಲ್ಲಾಗಲಿ, ಇಸ್ಲಾಂ ಹೆಚ್ಚಿನ ಪ್ರಗತಿ ಸಾಧಿಸಲಿಲ್ಲ. ಚೀನದ ಸಿಂಕಿಯಾಂಗ್ ಪ್ರಾಂತ್ಯದಲ್ಲಿ ಮುಸ್ಲಿಮರಿದ್ದಾರೆ. ಇಸ್ಲಾಂ ತನ್ನದೇ ಆದ ಕಲೆ ಮತ್ತು ನಾಗರಿಕತೆಗಳನ್ನು ಈ ಪ್ರದೇಶಗಳಿಗೆ ಕೊಂಡೊಯ್ದಿದೆ. ಅರಬ್ಬೀ ಅಕ್ಷರಮಾಲೆ ಮತ್ತು ಅರಬ್ಬೀ ಭಾಷೆ, ಪದಸಂಪತ್ತು ಎಲ್ಲವೂ ಇಸ್ಲಾಂ ಧರ್ಮದೊಡನೆ ಈ ಪ್ರದೇಶಕ್ಕೆ ಬಂದವು.

ಮಧ್ಯ ಏಷ್ಯದ ಅನೇಕ ಜನಾಂಗಗಳು ಏಷ್ಯದ ಇತಿಹಾಸದಲ್ಲಿ ಹೆಚ್ಚಿನ ಪಾತ್ರ ವಹಿಸಿದ್ದರೂ ಅವಕ್ಕೆ ಸಾಮಾನ್ಯವಾದ ಒಂದೇ ಹೆಸರಿಲ್ಲದೆ ಇರುವುದರಿಂದ ಅವುಗಳ ಪಾತ್ರವನ್ನು ಇತಿಹಾಸದಲ್ಲಿ ಗುರುತಿಸುವುದು ಕಷ್ಟದ ಕೆಲಸ. ತುರ್ಕಿಯವರು, ಮಂಗೋಲರು ಮತ್ತು ಹೂಣರು ಎಂದು ಈ ಜನಾಂಗಗಳನ್ನು ಗುರುತಿಸಬಹುದು. ಪ್ರಸಕ್ತಶಕದ ಆರಂಭದಲ್ಲಿ ಮಧ್ಯ ಏಷ್ಯ ಕುದಿದೆದ್ದು, ಇಲ್ಲಿನ ಜನ ಹಲವಾರು ದಾಳಿಗಳಿಗೆ ಕಾರಣರಾದರೂ; ಆವರ್‌ಗಳೂ (ಪ್ರ.ಶ.ಸು. 600–900) ಹೂಣರೂ (ಪ್ರ.ಶ.ಸು. 400–500) ಬಲ್ಗೇರಿಯನ್ನರೂ (ಪ್ರ.ಶ.ಸು. 7ನೆಯ ಶತಮಾನ) ಯುರೋಪಿನ ಮೇಲೆ ಮಾಡಿದ ಆರಂಭದ ದಾಳಿಗಳೂ ಮಂಗೋಲರು ರಷ್ಯದ ಮೇಲೆ ನಡೆಸಿದ ದಾಳಿಯೂ ತೈಮೂರನ ದಂಡಯಾತ್ರೆಯೂ ತುರ್ಕರ ಪಶ್ಚಿಮ ಏಷ್ಯನ್ ಮತ್ತು ಪೂರ್ವ ಯುರೋಪಿಯನ್ ಆಕ್ರಮಣವೂ ಮೊಘಲರ ಭಾರತದ ಆಕ್ರಮಣವೂ ಕೂಬ್ಲಖಾನನ ನೇತೃತ್ವದಲ್ಲಿ ಮಂಗೋಲರು ಚೀನದ ಮೇಲೆ ನಡೆಸಿದ ಆಕ್ರಮಣವೂ ಅನಂತರ ಮಂಚುಗಳ ಚೀನದೇಶದ ಆಕ್ರಮಣವೂ ಉದಾಹರಣೆಗಳು. ಇವುಗಳ ಜೊತೆಗೆ ಭಾರತ, ಚೀನ ಮತ್ತು ಪರ್ಷಿಯಗಳ ಮೇಲೆ ಮಧ್ಯ ಏಷ್ಯದ ಬುಡಕಟ್ಟಿನವರು ನಡೆಸಿದ ಸಣ್ಣಪುಟ್ಟ ದಂಡಯಾತ್ರೆಗಳನ್ನೂ ಸೇರಿಸಬಹುದು.

ಆಡಳಿತಕ್ಕಿಂತ ಹೆಚ್ಚಾಗಿ ಯುದ್ಧಪ್ರೇಮಿಗಳಾಗಿದ್ದ ಈ ಜನ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸತತವಾಗಿ ಹೋಗುತ್ತಿದ್ದುದರಿಂದ ಇವರು ಧರ್ಮೀಯ ಹಾಗೂ ಸಾಂಸ್ಕೃತಿಕ ಭಾವನೆಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೊಂಡೊಯ್ಯುವ ಮಧ್ಯವರ್ತಿಗಳಾದರು. ಭಾರತದಲ್ಲಿ ಇಸ್ಲಾಂ ಧರ್ಮವೂ ಯುರೋಪಿನಲ್ಲಿ ಗ್ರೀಕ್–ಬ್ಯಾಕ್ಟ್ರಿಯನ್ ನಾಗರಿಕತೆಯೂ ಹಬ್ಬಲು ಇವರೇ ಕಾರಣರೆನ್ನಬಹುದು.

ಮಧ್ಯ ಏಷ್ಯದಲ್ಲಿ ಚೀನ, ಭಾರತ, ಇರಾನ್ ಮತ್ತು ಗ್ರೀಕ್ ಸಂಸ್ಕೃತಿಗಳ ಮಿಶ್ರಣದಿಂದುಂಟಾದ ಒಂದು ಸಂಸ್ಕೃತಿ ಇದ್ದ ವಿಷಯ ಈಚಿನ ಸಂಶೋಧನೆಗಳಿಂದ ಬೆಳಕಿಗೆ ಬಂದಿದೆ; ಬೌದ್ಧ, ಕ್ರೈಸ್ತ ಮತ್ತು ಮ್ಯಾನಕಿಯ ಶಾಸನಗಳೂ ಹಲವಾರು ಕಡೆ ವಿವಿಧ ಭಾಷೆಗಳ ಗ್ರಂಥಭಂಡಾರಗಳೂ ದೊರೆತಿವೆ.

ಇವೆಲ್ಲ ಹೆಚ್ಚಾಗಿ ಏಷ್ಯದ ಈಚಿನ ಇತಿಹಾಸಕ್ಕೆ ಸಂಬಂಧಪಟ್ಟವು. ಆದರೆ ಅತ್ಯಂತ ಪೂರ್ವಕಾಲದಲ್ಲಿ ಬ್ಯಾಬಿಲೋನಿಯ ಮತ್ತು ಅಸ್ಸೀರಿಯಗಳು ಸಂಸ್ಕೃತಿಯ ಕೇಂದ್ರಗಳಾಗಿದ್ದುವು. ಪ್ರ.ಶ.ಪೂ. 7ನೆಯ ಶತಮಾನದ ವೇಳೆಗೆ ಈ ರಾಜ್ಯಗಳು ಕ್ಷೀಣಸ್ಥಿತಿಗೆ ಬಂದುವು. ಅವುಗಳ ಸ್ಥಾನವನ್ನು ಪರ್ಷಿಯನ್ ಸಾಮ್ರಾಜ್ಯ ಆಕ್ರಮಿಸಿಕೊಂಡಿತು. ಸುಮೇರಿಯನ್ ನಾಗರಿತೆಯೂ ವೈಶಿಷ್ಟ್ಯಪೂರ್ಣವಾದದ್ದು. ಪ್ರ.ಶ.ಪೂ. 4000 ದಷ್ಟು ಹಿಂದಿನ ಬರೆವಣಿಗೆಗಳನ್ನು ಸುಮೇರಿಯನ್ನರು ನಮಗೆ ಬಿಟ್ಟುಹೋಗಿದ್ದಾರೆ. ಯುಫ್ರೆಟೀಸ್ ಮತ್ತು ಟೈಗ್ರಿಸ್ ನದಿಗಳ ನಡುವಣ ಫಲವತ್ತಾದ ಪ್ರದೇಶ (ಮೆಸೊಪೊಟೇಮಿಯ) ಅನೇಕ ನಾಗರಿಕತೆಗಳ ತೊಟ್ಟಿಲಾಗಿತ್ತು. ಬ್ಯಾಬಿಲೋನಿನ ಹಮುರಬಿ (ಪ್ರ.ಶ.ಪೂ. 2123–2081) ನ್ಯಾಯವಾದಿ ಎಂದು ಹೆಸರಾಗಿದ್ದಾನೆ. ಪ್ರ.ಶ.ಪೂ. 1950ರ ವೇಳೆಗೆ ಹಿಟ್ಟೈಟರು ಸಿರಿಯ, ಪಶ್ಚಿಮ ಏಷ್ಯಗಳನ್ನೊಳಗೊಂಡ ಒಂದು ಸಾಮ್ರಾಜ್ಯವನ್ನೇ ಕಟ್ಟಿದ್ದರು. ಅವರ ಬರೆವಣಿಗೆಯನ್ನು ಸಂಪೂರ್ಣವಾಗಿ ಇನ್ನೂ ಓದಲು ಸಾಧ್ಯವಾಗಿಲ್ಲ. ಪ್ರ.ಶ.ಪೂ. 9 ಮತ್ತು 10ನೆಯ ಶತಮಾನಗಳ ವೇಳೆಗೆ ಅಸ್ಸೀರಿಯನರು ಪ್ರಬಲರಾದರು. ಇವರು ಬ್ಯಾಬಿಲೋನಿಯರ ಬುಡಕಟ್ಟಿಗೆ ಸೇರಿದವರಾಗಿದ್ದರೂ ವಿಶಿಷ್ಟವಾದ ಕಲೆ ಮತ್ತು ಧರ್ಮ ಹೊಂದಿದ್ದರು. ಪರ್ಷಿಯನರು ಅಸ್ಸೀರಿಯನರನ್ನು ಪ್ರ.ಶ.ಪೂ. 606ರಲ್ಲಿ ಸೋಲಿಸಿದರು. ಪರ್ಷಿಯನ್ ಚಕ್ರವರ್ತಿ ಸೈರಸ್ ಪ್ರ.ಶ.ಪೂ. 555ರಲ್ಲಿ ಬ್ಯಾಬಿಲೋನ್ ಪಟ್ಟಣವನ್ನು ತನ್ನ ಕೈವಶಮಾಡಿಕೊಂಡ. ಅಸ್ಸೀರಿಯ ಪ್ರಮುಖವಾಗಿ ಬಲದ ಮೇಲೆ ನಿಂತಿದ್ದರಿಂದ, ಪರ್ಷಿಯನರ ದಾಳಿಗೆ ತುತ್ತಾದಾಗ ಅದು ಸಂಪೂರ್ಣ ನಾಶವಾಯಿತು.

**ಚೀನ:** ಏಷ್ಯದಲ್ಲಿ ಚೀನ ಅತ್ಯಂತ ಪ್ರಾಚೀನ ದೇಶ. ಚೀನದ ಇತಿಹಾಸ ಪ್ರ.ಶ.ಪೂ. 12ನೆಯ ಶತಮಾನಕ್ಕೂ ಹಿಂದೆ ಹೋಗುತ್ತದೆ. ಚೀನೀಯರ ಉಗಮದ ಬಗ್ಗೆ ಹೆಚ್ಚಿಗೆ ತಿಳಿದಿಲ್ಲ. ಆದರೆ ಅವರು ಪಶ್ಚಿಮದಿಂದ ಬಂದರೆಂದು, ಹ್ವಾಂಗ್ ಹೋ ನದಿಯ ತೀರದಲ್ಲಿ ಸು.ಪ್ರ.ಶ.ಪೂ. 3000ದಲ್ಲಿ ಬಂದು ನೆಲೆಸಿದರೆಂದು ಖಚಿತವಾಗಿ ಹೇಳಬಹುದು. ಇತಿಹಾಸದ ಪ್ರಾರಂಭದಲ್ಲಿ ಚೀನದಲ್ಲಿ ಚಿಕ್ಕಪುಟ್ಟ ಪಾಳೆಯಪಟ್ಟುಗಳಿದ್ದವು. ಪ್ರ.ಶ.ಪೂ. ಸುಮಾರು 220ರಲ್ಲಿ ಟ್ಸಿನ್ ಅಥವಾ ಚಿನ್ (ಚೀನ ಎಂಬ ಹೆಸರು ಬಂದದ್ದು ಇದರಿಂದ) ಎಂಬ ರಾಜ್ಯ ಉದಯವಾಗಿ ಸಣ್ಣಪುಟ್ಟ ಪಾಳೆಯಪಟ್ಟುಗಳನ್ನು ಅದು ತನ್ನ ಹತೋಟಿಯಲ್ಲಿಟ್ಟುಕೊಂಡಿತು. ಹ್ಯಾನ್ ಸಾಮ್ರಾಜ್ಯ (ಪ್ರ.ಶ.ಪೂ. 206ರಿಂದ ಪ್ರ.ಶ. 220) ಉದಯವಾಗುವವರೆಗೂ ಚೀನದಲ್ಲಿ ಆಂತರಿಕ ಕಲಹ ಸಾಮಾನ್ಯವಾಗಿತ್ತು. ಹ್ಯಾನ್ ಮತ್ತು ಟಾಂಗ್ (ಪ್ರ.ಶ. 618–907) ರಾಜರುಗಳ ಕಾಲದಲ್ಲಿ ಚೀನದ ಸ್ಥಿತಿ ಉತ್ತಮಗೊಂಡಿದ್ದಲ್ಲದೆ ಇದು ಏಷ್ಯದಲ್ಲೆ ಒಂದು ಪ್ರಬಲ ದೇಶವಾಯಿತು. 13ನೆಯ ಶತಮಾನದಲ್ಲಿ ಕೂಬ್ಲಖಾನನ ಸಾಮ್ರಾಜ್ಯ ಒಂದು ಶತಮಾನದಷ್ಟು ಕಾಲ ಬಾಳಿತು. ಚೀನೀ ಮಿಂಗ್ ವಂಶೀಯರು ಅನಂತರ 300 ವರ್ಷ ಆಳಿದರು. 1644ರಲ್ಲಿ ಉತ್ತರದ ಜನಾಂಗದವರಾದ ಮಂಚುಗಳು ರಾಜಧಾನಿ ಪೀಕಿಂಗನ್ನು ಆಕ್ರಮಿಸಿ, 1912ರ ವರೆಗೆ ಚೀನವನ್ನಾಳಿದರು. ಆ ವರ್ಷ ಕ್ರಾಂತಿಯ ಪರಿಣಾಮವಾಗಿ ರಾಜಾಧಿಕಾರ ಕೊನೆಗೊಂಡು ಗಣರಾಜ್ಯ ಸ್ಥಾಪಿತವಾಯಿತು. ದೇಶವನ್ನು ಆಳುವ ಹಕ್ಕು ಒಂದೇ ರಾಜವಂಶಕ್ಕೆ ಸೀಮಿತವಾಗಿರಲಿಲ್ಲ. ಪ್ರ.ಶ.ದ ಆದಿಯಿಂದ ಚೀನವನ್ನಾಳಿದ ರಾಜವಂಶಗಳ ಸಂಖ್ಯೆ ಸು. 20. ಇವು ಅನೇಕ ವೇಳೆ ಸುತ್ತಮುತ್ತಲಿನ ಪ್ರದೇಶಗಳನ್ನು ತಮ್ಮ ರಾಜಕೀಯ ಹತೋಟಿಗೆ ಒಳಪಡಿಸಿಕೊಂಡಿದ್ದುವು. ಚೀನೀ ತತ್ತ್ವಜ್ಞರಲ್ಲಿ ಕನ್‌ಫ್ಯೂಷಿಯಸ್ (ಪ್ರ.ಶ.ಪೂ. 551–478) ಬಹಳ ಪ್ರಖ್ಯಾತ. ಚೀನೀಯರ ಕುಟುಂಬಜೀವನ, ರಾಜಕೀಯ ಹಾಗೂ ಸಾಮಾಜಿಕ ಪದ್ಧತಿಗಳ ಮೇಲೆ ಆತನ ಪ್ರಭಾವ ಬಹಳ ಹೆಚ್ಚಿನದು. ಮಾನವಾನುಕಂಪಿ, ಶಾಂತಿದೂತ ಎಂದು ಕನ್‌ಫ್ಯೂಷಿಯಸ್ ಹೆಸರಾಗಿದ್ದಾನೆ.

ಮುಖ್ಯವಾಗಿ ಭಾರತದಿಂದ ಸಂಸ್ಕೃತಿಯನ್ನು ಪಡೆದ ಟಿಬೆಟ್ 8ನೆಯ ಶತಮಾನದಲ್ಲಿ ಮಧ್ಯ ಏಷ್ಯದ ಸಾಮ್ರಾಜ್ಯವೆಂದು ಹೆಸರು ಗಳಿಸಿ, ಅನಂತರ ಚೀನದ ರಾಜಕೀಯದ ಪ್ರಭಾವಕ್ಕೆ ಒಳಪಟ್ಟು ತನ್ನ ಸ್ವಾತಂತ್ರ್ಯ ಕಳೆದುಕೊಂಡಿತು. ಭಾರತದಿಂದ

ಬೌದ್ಧಧರ್ಮ ಟಿಬೆಟಿಗೆ ಹೋಯಿತು. ಪೋಪನಂತೆ ಮಠಾಧಿಪತಿಗಳಾದ ಲಾಮಗಳು ಲೌಕಿಕ ಪ್ರಪಂಚದಲ್ಲೂ ಮುಖ್ಯರಾಗಿ ಅಧಿಕಾರ ನಡೆಸಿದರು.

ಮಂಗೋಲರು ಚೀನವನ್ನು ಮತ್ತು ಯುರೋಪಿನ ಅನೇಕ ಭಾಗಗಳನ್ನು ಆಕ್ರಮಣ ಮಾಡಿದ್ದರು. ಅನೇಕ ಮಂಗೋಲರು ರಷ್ಯದಲ್ಲಿ ವಾಸಿಸುತ್ತಿದ್ದಾರೆ. ಅವರ ಮೂಲ ಸಂಸ್ಕೃತಿ ಭಾರತೀಯ ಮತ್ತು ಚೀನೀ ಸಂಸ್ಕೃತಿಗಳ ಸಮ್ಮಿಶ್ರಣವಾಗಿತ್ತು. ಅವರು ಉಪಯೋಗಿಸುತ್ತಿದ್ದ ಅಕ್ಷರಮಾಲೆ ಸಿರಿಯ ಅಕ್ಷರಮಾಲೆಯಿಂದ ಬಂದದ್ದು. ಇದನ್ನು ನೆಸ್ಟೋರಿಯನ್ ಪಾದ್ರಿಗಳು ಮಂಗೋಲಿಯಕ್ಕೆ ತಂದಿದ್ದರು.

**ಜಪಾನ್:** ಜಪಾನ್ ಏಷ್ಯದ ಒಂದು ಮುಖ್ಯ ದೇಶ. ಐನಸ್ ಜನಾಂಗದವರು ಜಪಾನಿನ ಮೂಲನಿವಾಸಿಗಳು. ಕಾಲಕ್ರಮೇಣ ಈ ಜನಾಂಗದವರನ್ನು ಉತ್ತರದ ದ್ವೀಪಗಳಿಗೆ ಒತ್ತರಿಸಲಾಯಿತು. ಅವರು ಜಪಾನೀಯರೊಡನೆ ನಡೆಸಿದ ಯುದ್ಧಗಳು ಐತಿಹಾಸಿಕವಾದರೂ ನಮಗೆ ಅವುಗಳ ಬಗ್ಗೆ ಸಾಕಷ್ಟು ಆಧಾರಗಳು ದೊರೆತಿಲ್ಲ. ಜಪಾನೀಯರು ಎಲ್ಲಿಂದ ಬಂದರೆಂದು, ಯಾವಾಗ ಬಂದರೆಂದು ಹೇಳುವುದು ಕಷ್ಟ. ಜಪಾನೀಯರದು ಒಂದು ಮಿಶ್ರ ಜನಾಂಗ. ಮಧ್ಯ ಏಷ್ಯ ಮತ್ತು ಮಲಯ ಅಥವಾ ಪಾಲಿನೇಷಿಯದ ಜನಾಂಗದವರ ಸಮ್ಮಿಶ್ರಣದಿಂದ ಜಪಾನೀಯರು ಬಂದಿರಬಹುದು. 6ನೆಯ ಶತಮಾನದಲ್ಲಿ ಚೀನೀ ನಾಗರಿಕತೆ ಮತ್ತು ಬೌದ್ಧಧರ್ಮ ಜಪಾನಿಗೆ ಬಂದ ಕಾಲದಿಂದ ಜಪಾನೀಯರ ಇತಿಹಾಸ ನಿರ್ದಿಷ್ಟವಾಗಿ ಪ್ರಾರಂಭವಾಗುತ್ತದೆ. ಕೊರಿಯದ ಮೂಲಕ ಚೀನೀ ನಾಗರಿಕತೆ ಜಪಾನಿಗೆ ಹಬ್ಬಿತು. ಕೆಲವೇ ಪಾಳೆಯಗಾರರ ಮನೆತನದವರು ಚಕ್ರವರ್ತಿಯನ್ನು ಬದಿಗೊತ್ತಿ, 645ರಲ್ಲಿ ಚೀನೀ ಸರ್ಕಾರಕ್ಕೆ ಅನುವರ್ತಿಯಾದ ರಾಜ್ಯವೊಂದನ್ನು ಕಟ್ಟಿದರು. ಫೂಜಿವಾರ ಮನೆತನದವರು ಮೊದಲಿಗೆ ಅಧಿಕಾರಕ್ಕೆ ಬಂದರು. ಅನಂತರ ತೈರಾ ಮತ್ತು ಮಿನಮೋಟೊ ಮನೆತನಗಳ ನಡುವೆ ಪೈಪೋಟಿ ನಡೆಯಿತು. 1192ರಲ್ಲಿ ಮಿನಮೋಟೊ ಮನೆತನದವರು ಗೆದ್ದು ಒಂದು ದ್ವಂದ್ವ ಆಡಳಿತ ಸ್ಥಾಪನೆ ಮಾಡಿದರು. ಈ ಸರ್ಕಾರದ ರಚನೆಯಲ್ಲಿ ಹೆಸರಿಗೆ ಚಕ್ರವರ್ತಿ ಸಾರ್ವಭೌಮನಾದರೂ ನಿಜವಾದ ಅಧಿಕಾರ ಈ ಪಾಳೆಯಗಾರರ ಮನೆತನದವರ ಕೈಯಲ್ಲಿತ್ತು. ಈ ರೀತಿಯಲ್ಲಿ ಕಾಮಾಕುರಾ ನಗರದ ಹೋಜೋ ಉತ್ತರಾಧಿಕಾರಿಗಳು 1205ರಿಂದ 1333ರ ವರೆಗೆ ಆಡಳಿತ ನಡೆಸಿದರು. ಕೂಬ್ಲಖಾನ್ ದಂಡೆತ್ತಿ ಬಂದಾಗ ಅವನನ್ನು ತಡೆಗಟ್ಟಿ ಓಡಿಸಿದರು. ಅನಂತರ ಅಧಿಕಾರ ಆಷಿಕಾಗಾ ಮನೆತನಕ್ಕೆ ಹೋಯಿತು. 1338 ರಿಂದ 1565ರವರೆಗೆ ಆಳಿದ ಆಷಿಕಾಗಾ ಮನೆತನದವರು ಕಲೆ, ಸಂಸ್ಕೃತಿಗಳಿಗೆ ಬಹಳ ಪ್ರೋತ್ಸಾಹ ಕೊಟ್ಟು ಪ್ರಖ್ಯಾತರಾದರು. 16ನೆಯ ಶತಮಾನದ ಮಧ್ಯಭಾಗದಲ್ಲಿ ಪೋರ್ಚುಗೀಸರು ಜಪಾನಿಗೆ ಬಂದಾಗ ಅಲ್ಲಿ ಅನಾಯಕತ್ವ ತಲೆದೋರಿತ್ತು. ಪೋರ್ಚುಗೀಸರು ಜಪಾನಿನಲ್ಲಿ ಕ್ರೈಸ್ತಧರ್ಮ ಹರಡಲು ಯತ್ನಿಸಿದರು. ವೀರ ಹಿದೆಯೊಷಿ ಈ ಕಾಲದಲ್ಲಿ ಕೊರಿಯ ದೇಶದ ಮೇಲೆ ದಂಡಯಾತ್ರೆ ಕೈಗೊಂಡ. ಆದರೆ ಅಕಾಲಮರಣದಿಂದಾಗಿ ಅವನ ಯೋಜನೆ ಪೂರ್ಣವಾಗಲಿಲ್ಲ. ಉತ್ತರಾಧಿಕಾರಿಯಾದ ಇಯೆಯಾಸು ಹೊರದೇಶಗಳ ಸಂಪರ್ಕವನ್ನು ಪೂರ್ತಿ ಕಡಿದುಹಾಕಿದ. ಪರದೇಶಗಳನ್ನು ಗೆಲ್ಲುವ ಯೋಜನೆಯನ್ನು ತಳ್ಳಿಹಾಕಿ, ಕ್ರೈಸ್ತಧರ್ಮಕ್ಕೆ ಬಹಿಷ್ಕಾರ ಹಾಕಿ, ಪರಕೀಯರು ಜಪಾನಿಗೆ ಬರದಂತೆ ಮಾಡಿದ. ಮುಂದೆ ಸು. 216 ವರ್ಷಗಳ ಕಾಲ ಕೆಲವು ಡಚ್ಚರ ಮತ್ತು ಚೀನೀಯರ ವಿನಾ ಎಲ್ಲ ವಿದೇಶೀಯರಿಗೂ ಜಪಾನ್ ತನ್ನ ದ್ವಾರವನ್ನು ವ್ಯಾಪಾರಕ್ಕೆ ಮುಚ್ಚಿತ್ತು. 1845ರಲ್ಲಿ ಅಮೆರಿಕ ಜಪಾನನ್ನು ಬಗ್ಗಿಸಿತು. ಪರದೇಶೀಯರ ಆಗಮನಕ್ಕೆ ಎಡೆಕೊಡುವುದೇ ಮುಂತಾದ ವ್ಯಾಪಕ ಒಪ್ಪಂದಕ್ಕೆ ಒಡಂಬಡಿಸಿತು. ಐರೋಪ್ಯರೊಡನೆ ಹೋರಾಡಬೇಕಾದರೆ ಅವರಂತೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಪಡೆಯಬೇಕೆಂಬ ವಿಚಾರ ಜಪಾನಿಗೆ ಬಂದದ್ದು ಆಗ. ಐರೋಪ್ಯರ ಅನುಭವದಿಂದ ಅದು ಪಾಠ ಕಲಿತು, 1868ರಲ್ಲಿ ಏಷ್ಯದ ಇತಿಹಾಸದಲ್ಲಿ ಒಂದು ಹೊಸ ಯುಗವನ್ನೆ ಪ್ರಾರಂಭಮಾಡಿತು. 1867ರಲ್ಲಿ ಮೇಜಿ ದೊರೆಯ ವಂಶದ ಆಗಮನದಿಂದ ಪ್ರಾರಂಭವಾದ ಕ್ರಾಂತಿ ಜಪಾನನ್ನು ಒಂದು ಬಲಯುತ ಆಧುನಿಕ ರಾಷ್ಟ್ರವನ್ನಾಗಿ ಮಾಡಿತು. ಅಲ್ಲಿಂದ 1945ರ ವರೆಗೆ ಜಪಾನ್ ಏಷ್ಯದಲ್ಲಿ ತನ್ನದೇ ಆದ ಸಾಮ್ರಾಜ್ಯವನ್ನು ಕಟ್ಟಲು ಹವಣಿಸಿ, ಅದರಲ್ಲಿ ಜಯಗಳಿಸಿ, ಎರಡನೆಯ ಮಹಾಯುದ್ಧದಲ್ಲಿ ಸಂಪೂರ್ಣ ಸೋತು ಅನಂತರ ಹೊಸ ಹಾದಿ ಹಿಡಿಯಿತು.

**ಕೊರಿಯ:** ವರ್ಣ ಮತ್ತು ಭಾಷೆಗಳಲ್ಲಿ ಕೊರಿಯ ಉಳಿದ ರಾಷ್ಟ್ರಗಳಿಂದ ಭಿನ್ನವಾದ ರಾಷ್ಟ್ರವಾದರೂ ನಾಗರಿಕತೆಯ ಅಂಶಗಳನ್ನು ಚೀನದಿಂದ ಪಡೆಯಿತು. ಇತಿಹಾಸದ ಅನೇಕ ಘಟ್ಟಗಳಲ್ಲಿ ಅದು ಚೀನೀ ಸಾರ್ವಭೌಮತ್ವವನ್ನು ಒಪ್ಪಿಕೊಂಡಿತ್ತು. ಚೀನದ ಚಕ್ರವರ್ತಿಗಳಿಗೆ ಕಪ್ಪಕಾಣಿಕೆಗಳನ್ನು ಸಹ ಕೊಡುತ್ತಿತ್ತು. 16ನೆಯ ಶತಮಾನದಲ್ಲಿ ಸ್ವಲ್ಪ ಕಾಲದವರೆಗೆ ಜಪಾನೀಯರು ಕೊರಿಯವನ್ನು ಆಕ್ರಮಿಸಿಕೊಂಡಿದ್ದರು. 1894ರಲ್ಲಿ ಅದು ಸಂಪೂರ್ಣ ಸ್ವಾತಂತ್ರ್ಯ ಪಡೆಯಿತು. ಆದರೆ ಆ ಸ್ವಾತಂತ್ರ್ಯ ಬಹು ಕಾಲ ಉಳಿಯಲಿಲ್ಲ. 1904–05ರಲ್ಲಿ ನಡೆದ ರಷ್ಯ–ಜಪಾನ್ ಯುದ್ಧದ ತರುವಾಯ ಜಪಾನೀಯರು 1910ರಲ್ಲಿ ಕೊರಿಯವನ್ನು ತಮ್ಮ ಸಂಪೂರ್ಣ ಹತೋಟಿಗೆ ತಂದುಕೊಂಡು, ಆ ದೇಶವನ್ನು ಒಂದು ವಸಾಹತಿನಂತೆ ಆಳಿದರು.

**ಭಾರತ:** ಏಷ್ಯದ ಮುಖ್ಯ ದೇಶಗಳಲ್ಲಿ ಒಂದಾದ ಭಾರತಕ್ಕೆ ಸು. 5000 ವರ್ಷಗಳಿಗಿಂತ ಮಿಗಿಲಾದ ಭವ್ಯ ಇತಿಹಾಸವಿದೆ. ಭಾರತದ ಇತಿಹಾಸ ಸು. ಪ್ರ.ಶ.ಪೂ. 5000ಕ್ಕೂ ಹಿಂದೆ ಇದ್ದ ಸಿಂಧೂ ಕೊಳ್ಳದ ನಾಗರಿಕತೆಯಿಂದ ಪ್ರಾರಂಭವಾಗುತ್ತದೆ. ಪ್ರ.ಶ.ಪೂ. ಸು. 1500ರಲ್ಲಿ ಆರ್ಯರು ಭಾರತಕ್ಕೆ ವಲಸೆ ಬಂದು, ಗಂಗಾ ಬ್ರಹ್ಮಪುತ್ರಾ ನದಿಗಳ ತೀರಗಳಲ್ಲಿ ನೆಲಸಿ ಭವ್ಯ ವೈದಿಕ ಸಂಸ್ಕೃತಿಯನ್ನು ಸೃಷ್ಟಿಸಿ ಬೆಳೆಸಿದರು. ಹಿಂದೆ ಇದ್ದ ಸಿಂಧೂ ಕೊಳ್ಳದ ನಾಗರಿಕತೆಯನ್ನೂ ದ್ರಾವಿಡ ಸಂಸ್ಕೃತಿಯ ಕೆಲವು ಅಂಶಗಳನ್ನೂ ಆರ್ಯರು ತಮ್ಮ ಸಂಸ್ಕೃತಿಯಲ್ಲೂ ಅಳವಡಿಸಿಕೊಂಡು ಸಮಗ್ರ ಹಿಂದೂ ಸಂಸ್ಕೃತಿಗೆ ಬುನಾದಿ ಹಾಕಿದರು. ಮುಂದೆ 2,000 ವರ್ಷಗಳ ಕಾಲ ಭಾರತಕ್ಕೆ ಅನೇಕ ಜನಾಂಗಗಳವರು ವಲಸೆ ಬಂದರು. ಇದರಿಂದಾಗಿ ಬೇರೆ ಬೇರೆ ಸಂಸ್ಕೃತಿಗಳ ಕ್ರಿಯೆ ಪ್ರತಿಕ್ರಿಯೆ ನಡೆದು ಒಂದು ವಿಶಿಷ್ಟವಾದ ಸಂಸ್ಕೃತಿ ಬೆಳೆಯಲು ಅವಕಾಶವಾಯಿತು. ವೇದಗಳು ಕಾಲದಲ್ಲಿ ಜಾತಿ ಪದ್ಧತಿ, ಗ್ರಾಮಜೀವನ ವ್ಯವಸ್ಥೆ ಮತ್ತು ರಾಜಕೀಯ ಪದ್ಧತಿಗಳು ರೂಪುಗೊಂಡವು. ಪ್ರಖ್ಯಾತವಾದ, ವಿಪುಲವಾದ ದಾರ್ಶನಿಕ ಸಾಹಿತ್ಯ ನಿರ್ಮಾಣವಾಯಿತು. ಉಪನಿಷತ್ತುಗಳು, ವೇದ ವೇದಾಂಗಗಳು ಮತ್ತು ಪುರಾಣಗಳು ರಚಿತವಾದುವು. ಪ್ರ.ಶ.ಪೂ. 542–490ರಲ್ಲಿ ಮಗಧದಲ್ಲಿ ಆಳುತ್ತಿದ್ದ ಬಿಂದುಸಾರನದೇ ಮೊದಲನೆಯ ಮುಖ್ಯ ರಾಜ್ಯ.

ಅಲೆಕ್ಸಾಂಡರ್ ಭಾರತದ ಮೇಲೆ ದಂಡಯಾತ್ರೆ ನಡೆಸಿದ್ದು ಪ್ರ.ಶ.ಪೂ.327ರಲ್ಲಿ ಆದರೆ ಅದರಿಂದ ಹೆಚ್ಚಿನ ಪರಿಣಾಮವೇನೂ ಆಗಲಿಲ್ಲ. ಚಂದ್ರಗುಪ್ತಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿ ಭಾರ 'ತದ ಇತಿಹಾಸದಲ್ಲೆ ಮೊದಲನೆಯ ಚಕ್ರವರ್ತಿ ಎಂಬ ಕೀರ್ತಿ ಪಡೆದ. ಈ ವಂಶದವನಾದ ಅಶೋಕ (ಪ್ರ.ಶ.ಪೂ.273–232) ಪ್ರಾಚೀನ ಭಾರತದ ಇತಿಹಾಸದಲ್ಲಿ ಶ್ರೇಷ್ಠ ರಾಜನೆಂದು ಗೌರವ ಗಳಿಸಿ, ಬೌದ್ಧಧರ್ಮ ದೇಶ ವಿದೇಶಗಳಲ್ಲಿ ಹರಡಲು ಪ್ರೋತ್ಸಾಹಿಸಿದ. ಅವನ ಕಾಲಾನಂತರ ಚಿಕ್ಕಪುಟ್ಟ ರಾಜ್ಯಗಳು ತಲೆ ಎತ್ತಿದುವು. 4 ಮತ್ತು 5ನೆಯ ಶತಮಾನಗಳಲ್ಲಿ ಉತ್ತರಭಾಗದಲ್ಲಿ ಗುಪ್ತ ಸಾಮ್ರಾಜ್ಯ ಪ್ರಸಿದ್ಧಿಗೆ ಬಂತು. ಈ ಕಾಲವನ್ನು ಭಾರತದ ಇತಿಹಾಸದಲ್ಲಿ ಸುವರ್ಣಯುಗವೆಂದು ಕರೆಯುತ್ತಾರೆ. ಈ ಯುಗದಲ್ಲಿ ಸಾಹಿತ್ಯ, ಕಲೆ, ವಿಜ್ಞಾನಗಳು ಹೆಚ್ಚಿನ ಪ್ರಗತಿ ಸಾಧಿಸಿದುವಲ್ಲದೆ, ಭಾರತೀಯ ಸಂಸ್ಕೃತಿ ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಹರಡಿತು. 7ನೆಯ ಶತಮಾನದಲ್ಲಿ ಹರ್ಷ ಚಕ್ರವರ್ತಿ ಸ್ವಲ್ಪ ಕಾಲ ಐಕ್ಯ ಸಾಧಿಸಿದ ತರುವಾಯ ಮತ್ತೆ ದೇಶದಲ್ಲೆಲ್ಲ ಚಿಕ್ಕಪುಟ್ಟ ರಾಜ್ಯಗಳು ತಲೆ ಎತ್ತಿಕೊಂಡುವು, ದಕ್ಷಿಣದಲ್ಲಿ ಚೋಳ, ಪಲ್ಲವ, ಚಾಲುಕ್ಯ, ಕದಂಬ, ಹೊಯ್ಸಳ, ರಾಷ್ಟ್ರಕೂಟ ಮೊದಲಾದ ಸಾಮ್ರಾಜ್ಯಗಳು ಹೊಮ್ಮಿ ಭಾರತೀಯ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಿಕೊಂಡು ಬಂದುವಲ್ಲದೆ, ಅದಕ್ಕೆ ವಿಶಿಷ್ಟ ರೀತಿಯ ಕಾಣಿಕೆಗಳನ್ನು ಸಲ್ಲಿಸಿದುವು.

ಉತ್ತರದಲ್ಲಿ ರಜಪೂತರು 700ರಿಂದ 1000ವರೆಗೆ ಪ್ರಬಲರಾಗಿದ್ದರು. ಅವರ ತರುವಾಯ ಮುಸ್ಲಿಮರು ಭಾರತಕ್ಕೆ ದಂಡೆತ್ತಿ ಬಂದು 12ನೆಯ ಶತಮಾನದಲ್ಲಿ ದೆಹಲಿಯಲ್ಲಿ ಸಾಮ್ರಾಜ್ಯ ಸ್ಥಾಪಿಸಿದರು. 1526ರಲ್ಲಿ ಮೊಘಲ್ ಸಾಮ್ರಾಜ್ಯ ಬಾಬರನ ನೇತೃತ್ವದಲ್ಲಿ ಸ್ಥಾಪಿತವಾಯಿತು. ಈ ಕಾಲದಲ್ಲಿ ಹೊಸ ಹೊಸ ವಿಷಯಗಳು ಭಾರತಕ್ಕೆ ಬಂದುವು, ಕಲೆ, ಸಾಹಿತ್ಯ, ಸಾಮಾಜಿಕ ಜೀವನ, ರಾಜಕೀಯ ಜೀವನ, ಮತೀಯ ಜೀವನ–ಈ ಎಲ್ಲ ಕ್ಷೇತ್ರಗಳಲ್ಲೂ ಹಿಂದೂ ಮುಸ್ಲಿಂ ನಾಗರಿಕತೆಗಳ ಪರಸ್ಪರ ಮಿಲನದಿಂದ ಒಂದು ನವೀನ ನಾಗರಿಕತೆಯ ಪರಂಪರೆಯ ಹುಟ್ಟಿಕೊಂಡಿತು. ಸಮಗ್ರ ಭಾರತೀಯ ಸಂಸ್ಕೃತಿ ಮತ್ತಷ್ಟು ಶ್ರೀಮಂತವಾಯಿತು. ಮೊಘಲ ಸಾಮ್ರಾಜ್ಯ ಔರಂಗಜೇಬನ ಕಾಲಕ್ಕೆ ಉನ್ನತಮಟ್ಟಕ್ಕೇರಿ ಅನಂತರ ಅವನತಿಯ ಹಾದಿ ಹಿಡಿಯಿತು. ತಾಜ್‌ಮಹಲಿನಂಥ ವಿಶ್ವವಿಖ್ಯಾತ ಶಿಲ್ಪಕಲಾಕೌಶಲಗಳು ಭಾರತದಲ್ಲಿ ನಿರ್ಮಿತವಾದದ್ದು ಮೊಘಲರ ಕಾಲದಲ್ಲಿ. 18ನೆಯ ಶತಮಾನದಲ್ಲಿ ಭಾರತದಲ್ಲಿ ದೇಶಿಯ ಗುಂಪುಗಳಾದ ಮರಾಠಿ, ರಜಪೂತ, ಸಿಖ್ ಮತ್ತು ಆಫ್ಘನರಿಗೂ ವಿದೇಶೀ ಗುಂಪುಗಳಾದ ಬ್ರಿಟಿಷ್ ಮತ್ತು ಫ್ರೆಂಚರಿಗೂ ನಡುವೆ ಅಧಿಕಾರಕ್ಕಾಗಿ ಹೋರಾಟಗಳಾಗಿ ಕಡೆಗೆ ಫ್ರೆಂಚರನ್ನು ಓಡಿಸಿದ ಬ್ರಿಟಿಷರು 19ನೆಯ ಶತಮಾನದ ವೇಳೆಗೆ ಇಡೀ ಭಾರತದಲ್ಲೇ ಪ್ರಬಲರಾದರು. 19ನೆಯ ಶತಮಾನದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಜಾಗೃತಿಯುಂಟಾಗಿ, 20ನೆಯ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಭಾರತೀಯ 1947ರಲ್ಲಿ ಮಹಾತ್ಮಾ ಗಾಂಧಿಯ ನೇತೃತ್ವದಲ್ಲಿ ಸ್ವಾತಂತ್ರ್ಯ ಪಡೆದರು.

**ಶ್ರೀಲಂಕ:** ಪ್ರ.ಶ.ಪೂ.6ನೆಯ ಶತಮಾನದಲ್ಲಿ ಆರ್ಯರು ಶ್ರೀಲಂಕದ ಮೇಲೆ ಆಕ್ರಮಣ ನಡೆಸಿದರೆಂಬುದು ಐತಿಹ್ಯ. ಅಶೋಕನ ಕಾಲದಲ್ಲಿ ಸಿಂಹಳ ಬೌದ್ಧಧರ್ಮದ ಕೇಂದ್ರವಾಗಿ ಮಯನ್ಮಾರ್ ಮತ್ತು ಥೈಲೆಂಡ್‌ಗಳಲ್ಲಿ ಪ್ರಭಾವ ಬೀರಿತು. ತಮಿಳರಿಗೂ

ಶ್ರೀಲಂಕರಿಗೂ ನಡೆದ ಹೋರಾಟದ ಕಥೆಯೇ ಶ್ರೀಲಂಕದ ಮಧ್ಯಯುಗದ ಚರಿತ್ರೆ. 12ನೆಯ ಶತಮಾನದಲ್ಲಿ ಶ್ರೀಲಂಕ ರಾಜಮನೆತನವೊಂದು ಪ್ರಬಲವಾಗಿ ಆಡಳಿತ ನಡೆಸಿದ ಮೇಲೆ ಪೋರ್ಚುಗೀಸರು ಮತ್ತು ಅನಂತರ ಡಚ್ಚರು ಶ್ರೀಲಂಕದ ಮೇಲೆ ತಮ್ಮ ಹತೋಟಿ ಸ್ಥಾಪಿಸಿದರು. 1796ರಲ್ಲಿ ಬ್ರಿಟಿಷರು ಡಚ್ಚರನ್ನು ಓಡಿಸಿದರು. ಸ್ವಾತಂತ್ರ್ಯಗಳಿಸುವವರೆಗೂ (1948) ಶ್ರೀಲಂಕ ಬ್ರಿಟಿಷರ ಅಧೀನದಲ್ಲಿತ್ತು.

**ಪರ್ಷಿಯ:** ಪರ್ಷಿಯ ಅಥವಾ ಆಧುನಿಕ ಇರಾನ್ ಏಷ್ಯದ ಇತಿಹಾಸದಲ್ಲಿ ಮಹತ್ತ್ವದ ಪಾತ್ರವಹಿಸಿದೆ. ಮೂಲತಃ ಆರ್ಯರಾಗಿದ್ದ ಪರ್ಷಿಯನ್ನರು (ಹಿಂದೂಗಳಂತೆ) ಮಧ್ಯ ಏಷ್ಯದಿಂದ ಬಂದಿರಬಹುದು. ಪರ್ಷಿಯನ್ನರ ಧರ್ಮಕ್ಕೂ ಪ್ರಾಚೀನ ಭಾರತೀಯ ವೈದಿಕ ಧರ್ಮಕ್ಕೂ ಅನೇಕ ಸಾಮ್ಯಗಳಿವೆ. ಪ್ರ.ಶ.ಪೂ. 7ನೆಯ ಶತಮಾನದಲ್ಲಿದ್ದ ಜಾರತೂಷ್ಟ್ರ ಪರ್ಷಿಯನ್ನರ ಧರ್ಮವನ್ನು ಕ್ರೋಡೀಕರಿಸಿದ. ಸೈರಸ್, ಡೇರಿಯಸ್, ಸರ್‌ಕ್ಸಿಸ್ ಮೊದಲಾದ ಪರ್ಷಿಯನ್ ಚಕ್ರವರ್ತಿಗಳ ಕೈಕೆಳಗೆ ಪರ್ಷಿಯನ್ ಸಾಮ್ರಾಜ್ಯ ಏಷ್ಯ ಮೈನರಿನಿಂದ ಭಾರತದ ಗಡಿಯವರೆಗೆ ಹಬ್ಬಿತ್ತು. ಗ್ರೀಕರಿಂದ ಪರಾಜಿತರಾದ ಮೇಲೆ ಅವರ ಪ್ರಭಾವ ಕಡಿಮೆಯಾಯಿತು. 7ನೆಯ ಶತಮಾನದಲ್ಲಿ ಪರ್ಷಿಯ ಮುಸ್ಲಿಮರ ಆಕ್ರಮಣಕ್ಕೆ ತುತ್ತಾಗಿ ಇಸ್ಲಾಂ ಧರ್ಮವನ್ನು ಪ್ರಧಾನ ಧರ್ಮವಾಗಿ ಅಂಗೀಕರಿಸಿತು. ಮುಸ್ಲಿಮರ ಕಾಲದಲ್ಲಿ ಸಣ್ಣಪುಟ್ಟ ರಾಜವಂಶಗಳು ಉಳಿದುವು. ಹೆಚ್ಚಾಗಿ ಅರಾಜಕತೆ ನೆಲೆಸಿತ್ತು. 1585ರಿಂದ 1628ರ ವರೆಗೆ ಆಳಿದ ಅಬ್ಬಾಸ್‌ಷಾ ಚಕ್ರವರ್ತಿಯ ನೇತೃತ್ವದಲ್ಲಿ ಪರ್ಷಿಯ ಹೆಚ್ಚಿನ ಕೀರ್ತಿ ಮತ್ತು ವೈಭವ ಗಳಿಸಿತು. ಅನಂತರ ಕಾಲದಲ್ಲಿ ಆಫ್ಘನ್ನರ ಆಕ್ರಮಣದಿಂದಾಗಿ ಅನಾಯಕತ್ವ ಉಂಟಾಯಿತು. 1907ರ ಆಂಗ್ಲೊ-ರಷ್ಯನ್ ಒಪ್ಪಂದದ ಪ್ರಕಾರ ಪರ್ಷಿಯ ಸ್ವತಂತ್ರವಾಗಿರಬೇಕೆಂದು ತೀರ್ಮಾನಿಸಲಾಯಿತು. 1941ರಲ್ಲಿ ರಷ್ಯ-ಬ್ರಿಟಿಷ್ ಒಪ್ಪಂದ ಕೊನೆಗೊಂಡಿತು. ಅದರೊಡನೆ ಪರ್ಷಿಯದ ಮೇಲಿದ್ದ ದ್ವಂದ್ವ ರೀತಿಯ ನಿಯಂತ್ರಣವೂ ಕೊನೆಗೊಂಡಿತು.

**ತುರ್ಕಿ:** 545ರಲ್ಲಿ ಮೊಟ್ಟಮೊದಲ ಬಾರಿಗೆ ಜೀವನ ಗಡಿಪ್ರದೇಶಗಳಲ್ಲಿ ಕಾಣಿಸಿಕೊಂಡ ತುರ್ಕಿ ಜನಾಂಗದವರು ಅನಂತರ ಏಷ್ಯ ಯುರೋಪ್ ಖಂಡಗಳಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದರು. ವೀಗುರ್ ಜನರೂ ಸೆಲ್ಜೂಕರೂ ಉಸ್ಮಾನ್‌ಲಿಗಳೂ ತುರ್ಕಿ ಜನಾಂಗದ ಮುಖ್ಯ ಆಕ್ರಮಣಕಾರಿ ಮತ್ತು ಯುದ್ಧ ಪ್ರೇಮಿ ಗುಂಪುಗಳು. 1453ರಲ್ಲಿ ಉಸ್ಮಾನ್‌ಲಿಗಳು ಕಾನ್‌ಸ್ಟ್ಯಾಂಟಿನೋಪಲ್ ನಗರವನ್ನು ಹಿಡಿದು. ಆಟೋಮನ್ ಸಾಮ್ರಾಜ್ಯ ಸ್ಥಾಪಿಸಿದರು. 1922ರಲ್ಲಿ ಇದು ಗಣರಾಜ್ಯವಾಗಿ ಪರಿವರ್ತನೆಗೊಂಡು ಅಂಕಾರವನ್ನು ರಾಜಧಾನಿಯಾಗಿ ಮಾಡಿಕೊಂಡು, ಐರೋಪ್ಯ ಸಂಸ್ಕೃತಿಯ ಆಚಾರ ವ್ಯವಹಾರಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿತು. ಎರಡನೆಯ ಮಹಾಯುದ್ಧದಲ್ಲಿ ಫೆಬ್ರುವರಿ 1945ರ ವರೆಗೆ ತಟಸ್ಥವಾಗಿದ್ದು ಅನಂತರ ಜರ್ಮನಿ ಮತ್ತು ಜಪಾನ್‌ಗಳ ಮೇಲೆ ಯುದ್ಧ ಘೋಷಿಸಿತು.

**ಇಸ್ರೇಲ್:** ಯಹೂದಿಗಳ ಮೂಲಸ್ಥಾನವಾದ ಇಸ್ರೇಲ್ ಅಥವಾ ಪ್ಯಾಲೆಸ್ಟೈನ್ ಏಷ್ಯದಲ್ಲಿದ್ದರೂ ಇತಿಹಾಸದ ಉದ್ದಕ್ಕೂ ಈ ಜನ ಬೇರೆ ದೇಶಗಳಲ್ಲಿ ಹಂಚಿ ಹೋಗಿದ್ದು, ವ್ಯಾಪಾರ ವಾಣಿಜ್ಯಗಳಲ್ಲಿ ಪ್ರಮುಖರಾಗಿದ್ದು, 1948ರಿಂದೀಚೆಗೆ ತಮ್ಮದೇ ಆದ ದೇಶ ರಚಿಸಿಕೊಂಡಿದ್ದಾರೆ (**ನೋಡಿ- ಇಸ್ರೇಲ್**).

**ಅರಬ್ಬರು:** ಪ್ರ.ಶ.ಪೂ.9ನೆಯ ಶತಮಾನದ ತರುವಾಯದ ಕಾಲದಲ್ಲಿ ಅರಬ್ಬರ ಹೆಸರು ಅಕ್ಕಪಕ್ಕದ ರಾಷ್ಟ್ರಗಳಲ್ಲಿ ಕೇಳಿಬಂದಿತು. ಇಸ್ಲಾಂ ಧರ್ಮದ ಸ್ಥಾಪಕನಾದ ಮಹಮದನಿಗಿಂತ ಮುಂಚೆ ಅರಬ್ಬರಿಗೆ ತಮ್ಮದೇ ಆದಂಥ ಇತಿಹಾಸವಿದ್ದಿರಲಿಲ್ಲ. ಇಸ್ಲಾಂ ಪ್ರಬಲವಾದ ತರುವಾಯ ಅರಬ್ಬರು ಆ ಧರ್ಮವನ್ನು ಆಗಿನ ಪ್ರಪಂಚದಲ್ಲೆಲ್ಲ ಹರಡುವ ಪ್ರಯತ್ನ ನಡೆಸಿದರು. ಪೂರ್ವದಲ್ಲಿ ಭಾರತ, ಪರ್ಷಿಯ ಮತ್ತು ಮಧ್ಯ ಏಷ್ಯಗಳನ್ನೂ ಪಶ್ಚಿಮದಲ್ಲಿ ಸ್ಪೇನ್ ಮತ್ತು ಮೊರಾಕೊಗಳನ್ನೂ ಆಕ್ರಮಿಸಿದರು. ಡಮಾಸ್ಕಸಿನ ಓಮಯಾದ್ ಖಲೀಫರು ಮತ್ತು ಬಾಗ್ದಾದಿನ ಅಬ್ಬಾಸಿದ್ ಖಲೀಫರು ಪಶ್ಚಿಮ ಏಷ್ಯದಲ್ಲಿ ರಾಜಕೀಯ ಪ್ರಭಾವವನ್ನು ವಿಸ್ತರಿಸಿ ಪ್ರಖ್ಯಾತರಾದರು. ಐಕಮತ್ಯದ ಕೊರತೆಯಿಂದಾಗಿ ಚಕ್ರಾಧಿಪತ್ಯದ ಅನೇಕ ಭಾಗಗಳು ಸ್ವಾತಂತ್ರ್ಯ ಘೋಷಿಸಿದವು. ಉಳಿದಷ್ಟು ಭಾಗಗಳನ್ನು ತುರ್ಕಿಯವರು ವಶಪಡಿಸಿಕೊಂಡರು. ಅರಬ್ಬರು ಸ್ಪೇನಿನಲ್ಲೂ ಸ್ವಲ್ಪ ಕಾಲ ಆಳಿದರಲ್ಲದೆ ಯುರೋಪನ್ನು ಸಂಪೂರ್ಣವಾಗಿ ತಮ್ಮ ಹತೋಟಿಗೆ ತಂದುಕೊಳ್ಳುವ ಯತ್ನ ನಡೆಸಿದರು. 15ನೆಯ ಶತಮಾನದವರೆಗೆ ಈ ಪ್ರಯತ್ನಗಳು ನಡೆದುವು. ಅನಂತರ ಅರಬ್ಬರ ರಾಜಕೀಯ ಪ್ರಾಬಲ್ಯ ಕುಸಿಯಿತು. ಆದಾಗ್ಯೂ ಅರಬ್ಬರ ಧರ್ಮೀಯ ಭಾವನೆಗಳು ಮತ್ತು ಸಾಹಿತ್ಯ ಪಶ್ಚಿಮ ಏಷ್ಯ ಮತ್ತು ಉತ್ತರ ಆಫ್ರಿಕಗಳಲ್ಲಿ ಪ್ರಬಲವಾದ ಮತ್ತು ಪ್ರಭಾವಯುತವಾದ ಶಕ್ತಿಗಳಾಗಿವೆ. ಒಂದನೆಯ ಮಹಾಯುದ್ಧದ ತರುವಾಯ ಸವೂದಿ ಅರೇಬಿಯ ಪ್ರಾಮುಖ್ಯ ಗಳಿಸಿತು. ಅರಬ್ಬರಲ್ಲಿ ರಾಷ್ಟ್ರೀಯತೆಯ ಮನೋಭಾವ ಬೆಳೆಯಿತು. 1945ರಲ್ಲಿ ನಡೆದ ಮಾಲ್ಟ ಸಮ್ಮೇಳನದಲ್ಲಿ ಐರೋಪ್ಯ ಹಾಗೂ ಅಮೆರಿಕನ್ ನಾಯಕರು ಅರಬ್ಬರ ರಾಷ್ಟ್ರೀಯತೆಯ ಮನೋಭಾವಗಳನ್ನು ಗುರುತಿಸಿ ಸೂಕ್ತರೀತಿಯಲ್ಲಿ ನಡೆದುಕೊಳ್ಳುವ ಭರವಸೆ ಇತ್ತರು.

**ಆಗ್ನೇಯ ಏಷ್ಯ:** ಏಷ್ಯದ ಮತ್ತೊಂದು ಬುಡಕಟ್ಟಿನವರಾದ ಮಲೆಯರು ಮಲೆಯ ಪರ್ಯಾಯದ್ವೀಪ. ಜಾವ, ಸುಮಾತ್ರ ಮತ್ತು ಫಿಲಿಪೀನ್ಸ್‌ನಲ್ಲೂ ಅನೇಕ ಚಿಕ್ಕಪುಟ್ಟ ದ್ವೀಪಗಳಲ್ಲೂ ಫಾರ್ಮೋಸ ಮತ್ತು ಮಡಗಾಸ್ಕರ್‌ಗಳಲ್ಲೂ ಹರಡಿ ಹೋಗಿದ್ದಾರೆ. ಇಷ್ಟು ವಿಶಾಲವಾಗಿ ಹರಡಿರುವ ಈ ಜನರಿಗೆ ತಮ್ಮದೇ ಆದ ಏಕರೀತಿಯ ರಾಜ್ಯಾಂಗವಿಲ್ಲ. ಏಷ್ಯದ ಮಲೆಯರು ಸಮುದ್ರಯಾನ ಮಾಡುವುದರಲ್ಲಿ ಗಟ್ಟಿಗರು. ಈ ಜನಾಂಗದ ಇತಿಹಾಸದಲ್ಲಿ ಮುಖ್ಯವಾಗಿ ಮೂರು ಘಟ್ಟಗಳನ್ನು ಗುರುತಿಸಬಹುದು. ಮೊದಲನೆಯದು ಹಿಂದುಳಿದ ಸಂಸ್ಕೃತಿಯ ಪರಿಸ್ಥಿತಿ. ಈಗಿನ ಬೋರ್ನಿಯೊ ದ್ವೀಪಗಳಲ್ಲಿ ವಾಸಿಸುವ ದೇಶೀಯರಂತೆ ಇದ್ದದ್ದು. ಎರಡನೆಯ ಘಟ್ಟದಲ್ಲಿ ಈ ಜನಾಂಗದವರು ಜಾವ, ಸುಮಾತ್ರ ಮತ್ತು ಮಲೆಯಗಳಲ್ಲಿ ಹಿಂದೂ ಸಂಸ್ಕೃತಿಯಿಂದ ಪ್ರಭಾವಿತರಾದರು. ಸುಮಾತ್ರದಲ್ಲಿ ಉದಯವಾದ ಶ್ರೀ ವಿಜಯ ಸಾಮ್ರಾಜ್ಯ 7 ರಿಂದ 14ನೆಯ ಶತಮಾನದವರೆಗೆ ಬಹಳ ಪ್ರಸಿದ್ಧವಾಗಿತ್ತು. ಮೂರನೆಯ ಘಟ್ಟದಲ್ಲಿ, ಬಲಿದ್ವೀಪವನ್ನು ಬಿಟ್ಟು ಉಳಿದ ಎಲ್ಲ ಪ್ರದೇಶಗಳಲ್ಲೂ ಹಿಂದೂ ಧರ್ಮವನ್ನು ಹಿಂದಕ್ಕೆ ತಳ್ಳಿ ಇಸ್ಲಾಂ ಪ್ರಬಲಗೊಂಡಿತು. ಒಟ್ಟಿನಲ್ಲಿ ಮಲೆಯ ಜನಾಂಗದವರು ಆಗ್ನೇಯ ಏಷ್ಯದ ಆಧುನಿಕ ಇತಿಹಾಸದಲ್ಲಿ ಅಂಥ ಹೆಚ್ಚಿನ ಪಾತ್ರ ವಹಿಸಲಿಲ್ಲವೆನ್ನಬಹುದು.

ಆಗ್ನೇಯ ಏಷ್ಯದ ಉಳಿದ ಭಾಗಗಳಾದ ಮಯನ್ಮಾರ್, ಥೈಲೆಂಡ್ (ಸಯಾಂ), ಕಾಂಬೋಡಿಯ, ಉತ್ತರ ಮತ್ತು ದಕ್ಷಿಣ ವಿಯೆಟ್ನಾಂ ಮತ್ತು ಲಾವೋಸ್‌ಗಳು ಹಿಂದಿನಿಂದಲೂ ಭಾರತೀಯ ಮತ್ತು ಚೀನೀ ಸಂಸ್ಕೃತಿಗಳಿಂದ ಪ್ರಭಾವಿತವಾಗಿವೆ. ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಾಂಗದವರು ಹತ್ತಾರು ಗುಂಪುಗಳಿಗೆ ಸೇರಿದವರಾಗಿದ್ದಾರೆ. ಇತಿಹಾಸದಲ್ಲಿ ಮೊದಲು ಪ್ರಾಮುಖ್ಯ ಗಳಿಸಿದವರೆಂದರೆ ಖ್ಮೆರ್ ಜನಾಂಗದವರು. 800-1200ರಲ್ಲಿ ಖ್ಮೆರ್ ಸಾಮ್ರಾಜ್ಯ ಉನ್ನತ ಸ್ಥಿತಿಯಲ್ಲಿತ್ತೆನ್ನಬಹುದು. 2ನೆಯ ಶತಮಾನದಲ್ಲಿ ಸ್ಥಾಪಿತವಾದ, ಈಗಿನ ವಿಯಟ್ನಾಂ ಪ್ರದೇಶದಲ್ಲಿದ್ದ ಚಂಪ ಸಾಮ್ರಾಜ್ಯ ಇಂಡೋಚೀನದಲ್ಲೆಲ್ಲ ಪ್ರಸಿದ್ಧವಾಗಿ ಹಿಂದೂ ಸಂಸ್ಕೃತಿಯಿಂದ ಪ್ರಭಾವಿತವಾಗಿ ಅನೇಕ ಕಲಾಕೌಶಲಗಳನ್ನು ರಚಿಸಲು ಪ್ರೋತ್ಸಾಹಿಸಿತು. ಜಾವದ ಮುಖಾಂತರ ಹಿಂದೂ ಸಂಸ್ಕೃತಿ ಚಂಪಕ್ಕೆ ಹೋಗಿರಬಹುದು. ವಿಯಟ್ನಾಮಿನಲ್ಲಿ ವಾಸಿಸುವ ಅನ್ನಾಮೀಯರು ಚಂಪ ರಾಜ್ಯವನ್ನು ನಾಶಗೊಳಿಸಿ ವಿಯಟ್ನಾಮಿನ ಮೇಲೆ ತಮ್ಮ ಪ್ರಭಾವ ಬೀರಿದರು. ಇವರು ಚೀನಿ ಸಂಸ್ಕೃತಿಯಿಂದ ಪ್ರಭಾವಿತರಾದರು. ಮಯನ್ಮಾರರು ಟಿಬೆಟಿನ ಜನಾಂಗದ ಗುಂಪಿಗೆ ಸೇರಿದವರಾಗಿದ್ದು ಈಗಿನ ಮಯನ್ಮಾರ್‌ನಲ್ಲಿ 12, 16 ಮತ್ತು 18ನೆಯ ಶತಮಾನಗಳಲ್ಲಿ ಪ್ರಸಿದ್ಧ ಸಾಮ್ರಾಜ್ಯ ಕಟ್ಟಿ, 19ನೆಯ ಶತಮಾನದ ವೇಳೆಗೆ ಬ್ರಿಟಿಷರಿಗೆ ಶರಣಾಗತರಾದರು. ಬರ್ಮೀಯರು ಬಹುತೇಕ ಬೌದ್ಧಧರ್ಮೀಯರಾದರೂ ಹಿಂದೂ ಸಂಸ್ಕೃತಿಯ ಹಲವಾರು ಅಂಶಗಳನ್ನು ಪಡೆದಿದ್ದಾರೆ. ಚೀನೀ ಜನಾಂಗಕ್ಕೆ ಹತ್ತಿರದವರಾದ ಸಾಯ್ ಜನಾಂಗ 13ನೆಯ ಶತಮಾನದಲ್ಲಿ ಈಗಿನ ಥೈಲೆಂಡ್ ಪ್ರದೇಶದಲ್ಲಿ ರಾಜ್ಯ ಕಟ್ಟಿ, ಬೌದ್ಧಧರ್ಮಾವಲಂಬಿಗಳಾಗಿ, ಭಾರತದಿಂದ ಅಕ್ಷರಮಾಲೆಯನ್ನೂ ಭಾರತೀಯ ಸಂಸ್ಕೃತಿಯ ಇನ್ನೂ ಅನೇಕ ಅಂಶಗಳನ್ನೂ ಪಡೆದುಕೊಂಡರು. ಆಧುನಿಕ ಕಾಲದಲ್ಲಿ ಆಗ್ನೇಯ ಏಷ್ಯದಲ್ಲಿ ಥೈಲೆಂಡ್ ಮಾತ್ರ ಪಾಶ್ಚಾತ್ಯರ ನೇರವಸಾಹತು ಆಡಳಿತದಿಂದ ತಪ್ಪಿಸಿಕೊಂಡು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡಿತು.

**ಪಾಶ್ಚಾತ್ಯ ಸಾಮ್ರಾಜ್ಯ:** 15ನೆಯ ಶತಮಾನದ ಕೊನೆಗೆ ವಾಸ್ಕೋಡಗಾಮನ ನೇತೃತ್ವದಲ್ಲಿ ಪೋರ್ಚುಗೀಸ್ ನೌಕೆ ಗುಡ್‌ಹೋಪ್ ಭೂಶಿರದ ಮಾರ್ಗವಾಗಿ ಹಿಂದೂ ಮಹಾಸಾಗರವನ್ನು ಪ್ರವೇಶಿಸಿತು. ಏಷ್ಯದ ಆಧುನಿಕ ಇತಿಹಾಸದಲ್ಲಿ ಇದೊಂದು ಮುಖ್ಯ ಘಟನೆ. ಏಕೆಂದರೆ ಇಲ್ಲಿಂದಾಚೆಗೆ ಐರೋಪ್ಯರು ಏಷ್ಯವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವ ಪ್ರಯತ್ನ ನಡೆಸಿದರು. ಈ ಘಟನೆ ಭಾರತದಲ್ಲಿ ಮೊಘಲ್ ಸಾಮ್ರಾಜ್ಯ ಆರಂಭವಾಗುವುದಕ್ಕೆ ಸುಮಾರು 25 ವರ್ಷಗಳ ಹಿಂದೆ ನಡೆಯಿತು. ಚೀನದ ಕೊನೆಯ ಅರಸರಾದ ಮಂಚುಗಳು ಪ್ರಾಬಲ್ಯಕ್ಕೆ ಬರಲು ಇನ್ನೂ ಸುಮಾರು ಅರ್ಧ ಶತಮಾನವಿತ್ತು. ಪೋರ್ಚುಗೀಸರು ಹಿಂದೂ ಮಹಾಸಾಗರದಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದಲ್ಲದೆ ಪೂರ್ವಕ್ಕಿರುವ ಎಲ್ಲ ಸಮುದ್ರಗಳ ಮೇಲೂ ತಮ್ಮ ಹತೋಟಿಯನ್ನಿಟ್ಟುಕೊಂಡರು. ಪೋರ್ಚುಗೀಸರು ಹೋದಲ್ಲಿ ಅವರನ್ನು ಹಿಂಬಾಲಿಸಿ ಸ್ಪಾನಿಷರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲಿಷರು ನಡೆದರು. ಎಲ್ಲಕ್ಕಿಂತ ಮಿಗಿಲಾಗಿ ಇವರೆಲ್ಲ ವ್ಯಾಪಾರವನ್ನೇ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿದ್ದರು. ಏಷ್ಯದ ರೇಷ್ಮೆ ಮತ್ತು ಸಂಬಾರ ಪದಾರ್ಥಗಳು ಪಾಶ್ಚಾತ್ಯರನ್ನು ಆಕರ್ಷಿಸಿದುವು. ವ್ಯಾಪಾರವನ್ನು ಹಿಂಬಾಲಿಸಿ ಪಾಶ್ಚಾತ್ಯರ ಧರ್ಮ ಬಂತು. ಕ್ರೈಸ್ತ ಧರ್ಮವನ್ನು ಹರಡಲು ಅನೇಕ ಪ್ರಯತ್ನಗಳು ನಡೆದುವು. ಪೋರ್ಚುಗೀಸರು ಈ ದಿಸೆಯಲ್ಲಿ ಎಲ್ಲರಿಗಿಂತ ಮಿಗಿಲಾಗಿ ಹೆಣಗಾಡಿದರು.

ಪೋರ್ಚುಗೀಸರು ಗೋವ ಮತ್ತು ಮೆಕಾವ್‌ಗಳಲ್ಲೂ ಸ್ಪಾನಿಷರು ಫಿಲಿಪೀನ್ಸ್‌ನಲ್ಲೂ (1565) ತಮ್ಮ ಕೋಠಿಗಳನ್ನು ಕಟ್ಟಿದರು. ಐರೋಪ್ಯ ರಾಷ್ಟ್ರಗಳು ಮಧ್ಯೆ ಇದ್ದ ಪೈಪೋಟಿ ಏಷ್ಯಕ್ಕೂ ಹಬ್ಬಿತು. ಡಚ್ಚರು ಪೋರ್ಚುಗೀಸರನ್ನು ಓಡಿಸಿ ಜಾವ ದ್ವೀಪದಲ್ಲಿ ತಮ್ಮ ಸಾಂಬಾರು ಪದಾರ್ಥಗಳ ಒಂದು ಸಮ್ರಾಜ್ಯವನ್ನೇ ಕಟ್ಟಿದರು. ಕ್ರಮೇಣ ಸುಮಾತ್ರ ದ್ವೀಪವೂ ಅವರ ವಶವಾಗಿ, ಜಾವದ ಬಟೇವಿಯ ಡಚ್ಚರ ವಸಾಹತುಗಳ ಕೇಂದ್ರವಾಯಿತು. 1749 ಮತ್ತು 1805ರ ನಡುವಣ ಕಾಲದಲ್ಲಿ ಫ್ರೆಂಚರಿಗೂ ಬ್ರಿಟಿಷರಿಗೂ ಭಾರತದಲ್ಲಿ ಪ್ರಭಾವ ಗಳಿಸುವ ಸಲುವಾಗಿ ಯುದ್ಧಗಳು ನಡೆದುವು. ಆ ವೇಳೆಗೆ ಮೊಘಲ್ ಸಾಮ್ರಾಜ್ಯ ನಶಿಸಿಹೋಗಿ, ಒಂದು ಕೇಂದ್ರಾಡಳಿತವಿಲ್ಲದಂಥ ಪರಿಸ್ಥಿತಿ ಒದಗಿತ್ತು. ಇದರ ಜೊತೆಗೆ ಭಾರತೀಯರಲ್ಲೇ ಇದ್ದ ಪರಸ್ಪರ ಕಲಹಗಳು ಬ್ರಿಟಿಷರಿಗೆ ತಮ್ಮ ಸಾಮ್ರಾಜ್ಯವನ್ನು ಕಟ್ಟಲು ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಟ್ಟಿತು. 19ನೆಯ ಶತಮಾನದಲ್ಲಿ ಬ್ರಿಟಿಷರು ಬಹು ಸುಲಭವಾಗಿ ಭಾರತವನ್ನೆಲ್ಲ ಜಯಿಸಿದರು. ಭಾರತದಲ್ಲಿ ಕಟ್ಟಿದ ಈ ಸಾಮ್ರಾಜ್ಯವನ್ನು ಕಾಪಾಡಲು, ಏಡನ್, ಪರ್ಷಿಯ, ಅರೇಬಿಯ, ಮಯನ್ಮಾರ್ ಮತ್ತು ಸಿಂಗಪುರಗಳಲ್ಲಿ ಕೋಟೆಕೊತ್ತಲಗಳನ್ನು ಕಟ್ಟಿದರು.

ಪರಾಜಿತರಾದ ಫ್ರೆಂಚರು ಭಾರತದಿಂದ ಪೂರ್ವಕ್ಕೆ ಹೋಗಿ ಆಗ್ನೇಯ ಏಷ್ಯದ ಭಾಗಗಳಲ್ಲಿ ತಮ್ಮ ಪ್ರಭಾವ ಬೀರತೊಡಗಿದರು. ಮಯನ್ಮಾರ್‌ನಲ್ಲೂ ಸ್ವಲ್ಪ ಕಾಲ ತಮ್ಮ ಪ್ರಭಾವ ಸ್ಥಾಪಿಸಲು ಪ್ರಯತ್ನ ನಡೆಸಿದರು. ಬರ್ಮವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡು ಭಾರತದಲ್ಲಿದ್ದ ಬ್ರಿಟಿಷರೊಡನೆ ಹೋರಾಟ ನಡೆಸುವುದೆ ಇವರ ಉದ್ದೇಶವಾಗಿತ್ತು. ಆದರೆ ಫ್ರೆಂಚರ ಈ ಉದ್ದೇಶ ಪೂರ್ಣವಾಗಲಿಲ್ಲ. ಕಡೆಗೆ ಫ್ರೆಂಚರು ಕೊಚಿನ್, ಚೀನ, ಅಸ್ಸಾಂ, ಟಾಂಕಿಂಗ್, ಲಾವೋಸ್ ಮತ್ತು ಕಾಂಬೋಡಿಯಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಆ ಪ್ರದೇಶದಲ್ಲಿ ಆಳುತ್ತಿದ್ದ ರಾಜರು ಫ್ರೆಂಚರ ಅಧೀನರಾಗಿ ಅವರ ಪೋಷಣೆಗೆ ಒಳಪಟ್ಟರು. ಆಗ್ನೇಯ ಏಷ್ಯದಲ್ಲಿ ಥೈಲೆಂಡ್ ಅಥವಾ ಸಯಾಂ ಮಾತ್ರ ಪಾಶ್ಚಾತ್ಯರ ವಸಾಹತು ನೀತಿಗೆ ತುತ್ತಾಗದೆ ತನ್ನ ಸ್ವಾತಂತ್ರ್ಯ ಕಾಪಾಡಿಕೊಂಡಿತು. ಥೈಲೆಂಡಿನ ಅಕ್ಕಪಕ್ಕಗಳಲ್ಲಿದ್ದ ಫ್ರೆಂಚರೂ ಬ್ರಿಟಿಷರೂ ಆ ದೇಶ ತಮ್ಮಿಬ್ಬರ ಪ್ರಭಾವ ವಲಯಗಳ ನಡುವಿನ ಪ್ರದೇಶವಾಗಿ ಸ್ವತಂತ್ರವಾಗಿ ಇರಬೇಕೆಂದು ಒಪ್ಪಂದ ಮಾಡಿಕೊಂಡಿದ್ದೇ ಇದಕ್ಕೆ ಕಾರಣ.

ಪಶ್ಚಿಮ ಏಷ್ಯದಲ್ಲಿ ಆಟೋಮನ್ನರ ಸಾಮ್ರಾಜ್ಯ ಪ್ರಭಾವಶಾಲಿಯಾಗಿತ್ತು. ಆದರೆ 16ನೆಯ ಶತಮಾನದಿಂದೀಚೆಗೆ ಆ ಸಾಮ್ರಾಜ್ಯ ಅವನತಿಯ ಹಾದಿ ಹಿಡಿದಿತ್ತು. 1882ರಲ್ಲಿ ಬ್ರಿಟಿಷರು ಆ ಸಾಮ್ರಾಜ್ಯದ ಅಧೀನದಲ್ಲಿದ್ದ ಈಜಿಪ್ಟನ್ನು ತಮ್ಮ ಹತೋಟಿಗೆ ತಂದುಕೊಂಡರು. ಈಜಿಪ್ಟ್ ಬ್ರಿಟನಿನ ವ್ಯಾಪಾರ ಮಾರ್ಗಕ್ಕೆ ಅತ್ಯಂತ ಆವಶ್ಯಕವಾಗಿತ್ತು. ಸೂಯೆಜ್ ಕಾಲುವೆ ರಚಿಸಿದ ಅನಂತರ ಈಜಿಪ್ಟಿನ ಉಪಯೋಗ ಹೆಚ್ಚಿತು. ಆಮೇಲೆ ಬ್ರಿಟಿಷರು ತಮ್ಮ ಹತೋಟಿಯನ್ನು ಇಟ್ಟುಕೊಳ್ಳುವ ಸಲುವಾಗಿ ಈಜಿಪ್ಟನ್ನು ತಮ್ಮ ಪ್ರಭಾವ ವಲಯದೊಳಕ್ಕೆ ತಂದುಕೊಂಡರು. ಫ್ರೆಂಚರು ಸಿರಿಯದಲ್ಲಿ ತಮ್ಮ ಪ್ರಭಾವವನ್ನು ಸ್ಥಾಪಿಸಿದರು. ದೂರ ಪ್ರಾಚ್ಯ ದೂರವಿದ್ದುದ್ದರಿಂದಲೊ ಏನೊ, ಸ್ವಲ್ಪ ಕಾಲ ಪಾಶ್ಚಾತ್ಯರ ವಸಾಹತು ನೀತಿಗೆ ತುತ್ತಾಗದೆ ಉಳಿದಿತ್ತು. ಆದರೆ 1842ರಿಂದಾಚೆಗೆ ಚೀನ ದೇಶ ಪಾಶ್ಚಾತ್ಯರಿಗೆ ವ್ಯಾಪಾರಕ್ಕಾಗಿ ತನ್ನ ಬಾಗಿಲು ತೆಗೆಯಬೇಕಾಯಿತು. ಚೀನೀಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಹೆಚ್ಚಿನ ರಿಯಾಯಿತಿಗಳು 1930ರ ದಶಕದವರೆಗೆ ನಡೆದುಕೊಂಡು ಬಂದುವು. ಇವಕ್ಕೆಲ್ಲ ಚೀನ ದೇಶವನ್ನು 1911ರ ವರೆಗೆ ಆಳಿದ ಮಂಚುಗಳೇ ಕಾರಣವೆನ್ನಬಹುದು. ಅನಂತರ ಸ್ಥಾನಮಾನಗಳಿಗಾಗಿ ನಡೆದ ಆಂತರಿಕ ಕಲಹಗಳಿಂದ ಚೀನ ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ.

ಈ ಕಾಲದಲ್ಲೇ ರಷ್ಯ ಉತ್ತರ ಮತ್ತು ಮಧ್ಯ ಏಷ್ಯಗಳಲ್ಲಿ ತನ್ನ ಪ್ರಭಾವವನ್ನು ಸ್ಥಾಪಿಸುವ ಪ್ರಯತ್ನ ನಡೆಸಿತು. ಸೈನ್ಯಬಲ, ರಾಜಕೀಯ ಕುಟಿಲನೀತಿ ಮತ್ತು ವಸಾಹತುಗಳ ಸ್ಥಾಪನೆ-ಇವೇ ರಷ್ಯನ್ನರ ಅಸ್ತ್ರಗಳಾಗಿದ್ದುವು. 1900ರ ವೇಳೆಗೆ ರಷ್ಯ ಪೆಸಿಫಿಕ್ ಮಹಾಸಾಗರದ ತೀರದವರೆಗೆ ತನ್ನ ಹತೋಟಿ ಹಬ್ಬಿಸಿತ್ತು. ಚೀನ ಮತ್ತು ಕೊರಿಯಗಳು ರಷ್ಯನ್ನರ ಈ ಮುನ್ನುಗ್ಗುವಿಕೆಯಿಂದ ತತ್ತರಿಸಿದುವು.

**ಏಷ್ಯದ ಜಾಗೃತಿ:** 19ನೆಯ ಶತಮಾನದ ಶತಮಾನದ ಇತಿಹಾಸ ಮುಖ್ಯವಾಗಿ ಪಾಶ್ಚಾತ್ಯರು ಏಷ್ಯದಲ್ಲಿ ವಿವಿಧ ರೀತಿನೀತಿಗಳಿಂದ, ಕುಟಿಲೋಪಾಯಗಳಿಂದ ಹೇಗೆ ತಮ್ಮ ಪ್ರಭಾವ (ರಾಜಕೀಯ, ಸಾಮಾಜಿಕ, ಹಾಗೂ ಧರ್ಮೀಯ) ಸ್ಥಾಪಿಸಿದರು ಎಂಬುದನ್ನು ತೋರಿಸಿದರೆ, 20ನೆಯ ಶತಮಾನದ ಏಷ್ಯದ ಇತಿಹಾಸ, ಏಷ್ಯ ಹೇಗೆ ಇಂಥ ಬಂಧನದಿಂದ ಮುಕ್ತವಾಗಿ ತನ್ನದೇ ಆದ ಆದರ್ಶಗಳನ್ನು ರೂಪಿಸಿಕೊಳ್ಳತೊಡಗಿತು ಎಂಬುದನ್ನು ತೋರಿಸುತ್ತದೆ. 20ನೆಯ ಶತಮಾನದ ಹೊತ್ತಿಗೆ ಏಷ್ಯದ ವಿವಿಧ ಜನಾಂಗದವರು ಯುರೋಪಿನ ವಿರುದ್ಧ ಎಚ್ಚೆತ್ತು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧರಾದರು. ಏಷ್ಯದಲ್ಲಿ ಮೊತ್ತಮೊದಲ ಬಾರಿಗೆ ಜಪಾನ್ ಯುರೋಪಿನಿಂದಲೇ ಪಾಠ ಕಲಿತು, ಅದರ ಅಸ್ತ್ರಗಳಿಂದಲೇ ಎದುರಿಸುವ ಸಿದ್ಧತೆ ನಡೆಸಿತು. 1868ರಿಂದೀಚೆಗೆ ಅನೇಕ ಸುಧಾರಣೆಗಳನ್ನು ಮಾಡಿ ಜಪಾನ್ ಆಧುನಿಕ ರಾಷ್ಟ್ರವಾಯಿತು. ಹೊಸದಾಗಿ ಸೃಷ್ಟಿಸಿದ ಈ ಬಲವನ್ನು 1894-95ರಲ್ಲಿ ಚೀನದ ವಿರುದ್ಧವಾಗಿಯೂ 1904-05ರಲ್ಲಿ ರಷ್ಯದ ವಿರುದ್ಧವಾಗಿಯೂ ಪ್ರಯೋಗಿಸಿ, ಆ ದೇಶಗಳನ್ನು ಸೋಲಿಸಿದ್ದು ಒಂದು ಮಹಾಸಾಧನೆ. ಪಾಶ್ಚಾತ್ಯರಂತೆ ಜಪಾನ್ ಸಹ ಏಷ್ಯದಲ್ಲಿ ವಸಾಹತುಗಳನ್ನು ಸ್ಥಾಪಿಸುವ ಪ್ರಯತ್ನ ನಡೆಸಿತು. ಮೇಲೆ ತಿಳಿಸಿದ ಎರಡು ಯುದ್ಧಗಳ ಪರಿಣಾಮವಾಗಿ ಫಾರ್ಮೋಸ, ಕೊರಿಯ ಮತ್ತು ಮಂಚೂರಿಯಗಳಲ್ಲಿ ಜಪಾನ್ ತನ್ನ ಪ್ರಭಾವ ಸ್ಥಾಪಿಸಿತು. 1945ರಲ್ಲಿ ಎರಡನೆಯ ಮಹಾಯುದ್ಧದಲ್ಲಿ ಸಂಪೂರ್ಣ ಸೋಲನ್ನು ಅನುಭವಿಸುವವರೆಗೂ ಜಪಾನಿನ ಈ ಕನಸಿಗೆ ತಡೆಯೇ ಇರಲಿಲ್ಲ.

ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಏಷ್ಯನ್ ರಾಷ್ಟ್ರಗಳಲ್ಲಿ ಒಂದು ಜಾಗೃತಿ ಯುಂಟಾಯಿತು. ಜಪಾನ್ ರಷ್ಯದ ಮೇಲೆ ಗಳಿಸಿದ ವಿಜಯವೂ (1905) ಚೀನ ದೇಶದ ಕ್ರಾಂತಿಯೂ ಸುಧಾರಣಾ ಚಳವಳಿಯೂ (1911) ಪ್ರಪಂಚದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಭಾರತದಲ್ಲಿ ನಡೆದ ಅಹಿಂಸಾತ್ಮಕ ಚಳವಳಿಯೂ ಏಷ್ಯದ ಇತರ ರಾಷ್ಟ್ರಗಳ ನಾಯಕರನ್ನು ಹುರಿದುಂಬಿಸಿದುವು. ರಷ್ಯದಲ್ಲಿ ಸಂಭವಿಸಿದ ಕ್ರಾಂತಿಯಿಂದ ಏಷ್ಯದ ರಾಷ್ಟ್ರಗಳ ಮೇಲೂ ಪರಿಣಾಮವಾಗದಿರಲಿಲ್ಲ.

ಎರಡನೆಯ ಮಹಾಯುದ್ಧದ ಪರಿಣಾಮವೂ ಅಲ್ಪವೇನಲ್ಲ. ಇದರಿಂದ ಪಾಶ್ಚಾತ್ಯ ಸಾಮ್ರಾಜ್ಯಶಾಹಿಗೆ ಬಲವಾದ ಪೆಟ್ಟು ಬಿತ್ತು. ಭಾರತದ ವಿಭಜನೆ ಮತ್ತು ಸ್ವಾತಂತ್ರ್ಯ ಸಂಪಾದನೆ, ಬರ್ಮ, ಮಲೆಯ, ಇಂಡೊನೇಷ್ಯ ಮುಂತಾದ ರಾಷ್ಟ್ರಗಳ ವಿಮೋಚನೆ, ಇಂಡೋ-ಚೀನ ಪ್ರದೇಶದ ರಾಜ್ಯಗಳಿಗೆ ಸ್ವಾತಂತ್ರ್ಯದಾನ, ಫಿಲಿಪೀನ್ಸಿನ ಬಿಡುಗಡೆ, ಚೀನದಲ್ಲಿ ಕಮ್ಯೂನಿಸ್ಟ್ ಪ್ರಭುತ್ವ ಸ್ಥಾಪನೆ, ವಿಯೆಟ್ನಾಂ ಕಲಹ, ಪಶ್ಚಿಮ ಏಷ್ಯದ ಅಸ್ಥಿರ ರಾಜಕೀಯ-ಇವು ಕೆಲವು ಮುಖ್ಯ ಘಟನೆಗಳು.

ಪಾಶ್ಚಾತ್ಯ ರಾಷ್ಟ್ರಗಳು ದಾಸ್ಯದಿಂದ ಬಿಡುಗಡೆಯಾದ ಮೇಲೆ ಏಷ್ಯದ ರಾಷ್ಟ್ರಗಳೂ ಆಧುನಿಕ ರೀತಿಯಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸಲು ಪ್ರಯತ್ನ ನಡೆಸಿದುವು. ಹಳೆಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ಕೈಬಿಡದೆ, ಪಾಶ್ಚಾತ್ಯರಿಂದ ಕಲಿಯ ಬಹುದಾದ ಆಧುನಿಕ ಭಾವನೆಗಳನ್ನು ಕಲಿತು ಮುಂದುವರಿಯಲು ಏಷ್ಯ ಯತ್ನಿಸಿತು. ಆಧುನಿಕ ಏಷ್ಯದಲ್ಲಿ ಪೂರ್ವ-ಪಶ್ಚಿಮಗಳ ಸಂಗಮವನ್ನು ನೋಡಬಹುದಾಗಿದೆ. ಅಷ್ಟಾದರೂ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಳು ರಾಜಕೀಯ ಬದಲಾವಣೆಯಷ್ಟೇ ವೇಗದಿಂದ ನಡೆಯುತ್ತಿಲ್ಲ. ಇದೊಂದು ಸಮಸ್ಯೆ. ಪಾಶ್ಚಾತ್ಯ ಪ್ರಜಾಪ್ರಭುತ್ವ, ಕಮ್ಯೂನಿಸ್ಟ್ ವ್ಯವಸ್ಥೆ ಇವುಗಳ ನಡುವೆ ಏಷ್ಯದ ರಾಷ್ಟ್ರಗಳು ಉಯ್ಯಾಲೆಯಾಡುತ್ತಿವೆ. ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಶೀಘ್ರವಾಗಿ ಮುಂದುವರಿಯಲಾಗದ ದೇಶಗಳು ಸರ್ವಾಧಿಕಾರಕ್ಕೂ ಎಡೆಗೊಡುತ್ತಿವೆ. (ಎಸ್.ಕೆ.ಎಸ್.)

**ಏಷ್ಯದ ಪ್ರಾಗಿತಿಹಾಸ:** ವಿಶ್ವದಲ್ಲೇ ಬಲುದೊಡ್ಡದಾದ ಏಷ್ಯ ಖಂಡ ಆದಿಕಾಲದಿಂದಲೂ ವೈವಿಧ್ಯಗಳ ಆಗರವೆನಿಸಿದೆ. ಈ ವೈವಿಧ್ಯಗಳನ್ನು ಮಾನವನ ಉಗಮ ಕಾಲದಿಂದಲೇ ನೋಡಬಹುದು. ಪೂರ್ವಶಿಲಾಯುಗದ ಆರಂಭ ಕಾಲದಲ್ಲಿ ಮಾನವ ಆಫ್ರಿಕ ಪ್ರದೇಶಗಳಲ್ಲಿ ಉಗಮ ಹೊಂದಿ ತನ್ನ ಸಂಸ್ಕೃತಿ ಕಾರ್ಯವನ್ನು ಪ್ರಾರಂಭಿಸಿ ಕ್ರಮೇಣ ವಿಶ್ವದ ಇತರ ಭಾಗಗಳಿಗೆ ಪ್ರಸರಿಸಿದನೆಂಬುದು ಕೆಲವು ವಿದ್ವಾಂಸರ ನಂಬಿಕೆ. ಈ ವಿಷಯದಲ್ಲಿ ಖಚಿತವಾದ ಸಾಕ್ಷ್ಯಾಧಾರಗಳು ಇನ್ನೂ ದೊರಕಿಲ್ಲ. ಮಧ್ಯ ಪ್ಲಿಸ್ಟೋಸೀನ್ ಯುಗದ ವೇಳೆಗಾಗಲೇ ಏಷ್ಯದ ಹಲವು ಭಾಗಗಳಲ್ಲಿ ಮಾನವನಿದ್ದ ಬಗ್ಗೆ ಆಧಾರಗಳು ಸಿಕ್ಕಿವೆ. ಇಂಡೋನೇಷ್ಯದ ಜಾವದ್ವೀಪ ಮತ್ತು ಚೀನದ ರಾಜಧಾನಿ ಪೀಕಿಂಗ್ ಬಳಿಯ ಚೌಕಾಟಿಯನ್ ಗುಹೆಗಳಲ್ಲಿ ಪೂರ್ವ ಶಿಲಾಯುಗದ ಆದಿಕಾಲಕ್ಕೆ ಸೇರಿದ ಮಾನವನ ಪಳೆಯುಳಿಕೆಗಳು (ಫಾಸಿಲ್ಸ್) ದೊರಕಿದ್ದು ಆತ ಏಷ್ಯದ ಕಪಿಮಾನವ (ಪಿಥೆಕಾಂಥ್ರೋಪಸ್ ಏಷ್ಯಾಟಿಕಸ್) ಸಂತತಿಗೆ ಸೇರಿದವನೆಂದು ತಿಳಿದುಬಂದಿದೆ. ಇಂಡೋನೇಷ್ಯದ ಪಜ್ಜಿಟೇನಿಯನ್, ಚೀನದ ಚೌಕಾಟಿಯನ್, ಮಲೆಯದ ತಂಪಾನಿಯನ್, ಮಯನ್ಮಾರ್‌ನ ಅನ್ಯಾಥಿಯನ್ ಮತ್ತು ವಾಯವ್ಯ ಭಾರತದ ಸೋಹನ್ ಸಂಸ್ಕೃತಿಗಳು ಉಂಡೆಕಲ್ಲಿನಿಂದ ಮಾಡಿದ ತುಂಡುಕೊಡಲಿ, ಒರೆಯುವ ಕತ್ತಿ ಮತ್ತು ಚಕ್ಕೆಕಲ್ಲಿನಾಯುಧಗಳಿಂದ ಕೂಡಿ ಒಂದೇ ರೀತಿಯವಾಗಿರುವುದರಿಂದ ಈ ಕಪಿಮಾನವನೇ ಈ ಸಂಸ್ಕೃತಿಗಳ ಕರ್ತೃವೆಂದು ಅಭಿಪ್ರಾಯ ಪಡಲಾಗಿದೆ. ಇದೇ ಕಾಲದಲ್ಲಿ ಭಾರತದ ಇತರ ಭಾಗಗಳಲ್ಲಿ (ಮುಖ್ಯವಾಗಿ ಮಧ್ಯ ಮತ್ತು ದಕ್ಷಿಣಭಾರತ) ಮತ್ತು ಪಶ್ಚಿಮ ಏಷ್ಯದ ಅನೇಕ ಭಾಗಗಳಲ್ಲಿ ಇದಕ್ಕಿಂತಲೂ ಮುಂದುವರಿದ ಕೈಗೊಡಲಿ ಸಂಸ್ಕೃತಿ ಹರಡಿತ್ತು. ಭಾರತ ಪರ್ಯಾಯದ್ವೀಪದ ನರ್ಮದ, ಗೋದಾವರಿ, ಕೃಷ್ಣ ಮತ್ತು ಪಾಲಾರ್ ನದೀಕಣಿವೆಗಳಲ್ಲಿ ಅಬೆವಿಲಿಯನ್ ಮತ್ತು ಅಷುಲಿಯನ್ ಹಂತಗಳಿಗೆ ಸೇರಿದ ಕೈಗೊಡಲಿ ಸಂಸ್ಕೃತಿ ಬಹಳ ಪ್ರಬಲವಾಗಿತ್ತು. ಪಶ್ಚಿಮ ಏಷ್ಯದಲ್ಲಿ ಇತ್ತೀಚಿನ

ಸಂಶೋಧನೆಗಳಿಂದ ಈ ಸಂಸ್ಕೃತಿಯ ವಿಷಯ ಸ್ವಲ್ಪಮಟ್ಟಿಗೆ ಬೆಳಕಿಗೆ ಬಂದಿದೆ. ಇರಾನಿನ ಅನೇಕ ಪರ್ವತಗುಹೆ ಮತ್ತು ಮೈದಾನ ಪ್ರದೇಶಗಳಲ್ಲೂ ಮಧ್ಯ ಅರೇಬಿಯದ ಅಡ್‌ಡಾವಾದಿಮಿ, ಇರಾಕಿನ ಬಾರ್ಡ್ಬಲ್ಕಾ, ಜಾರ್ಡನಿನ ಬಯಿರ್‌ವೆಲ್ಸ್ ಬಳಿಯಲ್ಲೂ ವಿವಿಧ ಹಂತಗಳಿಗೆ ಸೇರಿದ ಕೈಗೊಡಲಿ ಮತ್ತು ಇತರ ಆಯುಧಗಳು ದೊರಕಿ, ಪೂರ್ವಶಿಲಾಯುಗದ ಮಾನವನ ಬಗೆಗೆ ಮಾಹಿತಿಗಳನ್ನು ಒದಗಿಸಿವೆ. ಪೂರ್ವ ಏಷ್ಯ ಪ್ರದೇಶಗಳಲ್ಲಿ ಮೇಲೆ ಹೇಳಿದ ಉಂಡೆಕಲ್ಲಿನಾಯುಧಗಳ ಸಂಸ್ಕೃತಿಗಳು ಪ್ಲಿಸ್ಟೋಸೀನ್



ಚೌಕಾಟಿಯೆನ್ ಗುಹೆಗಳ ವಾಸಿ–ಕಪಿಮಾನವ

ಯುಗದ ಬಹುಭಾಗದವರೆಗೂ ಮುಂದುವರಿಯುತ್ತಿದ್ದು ಅಂತ್ಯಭಾಗದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಹೊಂದಿದಂತೆ ಕಾಣುತ್ತದೆ. ವಾಯವ್ಯ ಭಾರತದ ಸುಧಾರಿತ ಸೋಹನ್ ಸಂಸ್ಕೃತಿ ಮತ್ತು ಚೌಕಾಟಿಯನ್ ಮೇಲ್ಗುಹೆಯಲ್ಲಿನ ಅವಶೇಷಗಳು ಈ ಹಂತಕ್ಕೆ ಸೇರಿದವು. ಮೊದಲ ಕಾಲದ ತುಂಡು ಕೊಡಲಿ ಮತ್ತು ಒರೆಯುವ ಕತ್ತಿಗಳ ಬಳಕೆ ಅಲ್ಪಸ್ವಲ್ಪ ಮುಂದುವರಿದರೂ ಈ ಹಂತದಲ್ಲಿ ಚಕ್ಕೆಕಲ್ಲುಗಳಿಂದ ಮಾಡಿದ ಒರೆಯುವ ಆಯುಧ



ಕೈಗೊಡಲಿಗಳು: ಭಾರತ

ಮತ್ತು ಮೊನೆಗಳೇ ಪ್ರಧಾನವಾಗಿದ್ದುವು. ಚೀನಾದ ಷಾನ್ಸಿ ಪ್ರಾಂತ್ಯದ ಟಿಂಗ್‌ತ್ಸುನ್ ನೆಲೆಯಲ್ಲೂ ಈ ರೀತಿಯ ಅವಶೇಷಗಳು ದೊರಕಿವೆ. ಕೈಗೊಡಲಿ ಸಂಸ್ಕೃತಿಗಳು ಬಳಕೆಯಲ್ಲಿದ್ದ ದಕ್ಷಿಣ ಮತ್ತು ಪಶ್ಚಿಮ ಏಷ್ಯದ ಅನೇಕ ಪ್ರದೇಶಗಳಲ್ಲಿ ಆಯುಧ ತಯಾರಿಕೆ ವಿಧಾನಗಳಲ್ಲಿ ಪ್ರಗತಿ ಕಂಡುಬಂದದ್ದಲ್ಲದೆ ಕ್ರಮೇಣ ಕೈಗೊಡಲಿ ಸಂಸ್ಕೃತಿ ಮರೆಯಾಗಿ ಚಕ್ಕೆಕಲ್ಲಿನಾಯುಧಗಳು ಹೆಚ್ಚು ಬಳಕೆಗೆ ಬಂದುವು. ಭಾರತದ ಬಹುಭಾಗಗಳಲ್ಲಿ ಮಧ್ಯ ಶಿಲಾಯುಗ ಸಂಸ್ಕೃತಿಯೆಂದು ಹೆಸರಾಗಿರುವ ಈ ಸಂಸ್ಕೃತಿಯಲ್ಲಿ ಆಯ್ದ ಕಲ್ಲುಗಳಿಂದ ಮಾಡಿದ ಸಣ್ಣ ಗಾತ್ರದ ವಿವಿಧ ರೀತಿಯ ಒರೆ ಯುವ, ಕೊರೆಯುವ ಆಯುಧ ಗಳೂ ಮೊನೆಗಳೂ ಪ್ರಧಾನವಾಗಿವೆ. ಪಶ್ಚಿಮ ಏಷ್ಯ ಪೂರ್ವಶಿಲಾಯುಗ ಸಂಸ್ಕೃತಿಗಳ ಕೇಂದ್ರವಾದ ಯುರೋಪಿನ ನೆರೆಯಲ್ಲಿದ್ದದ್ದರಿಂದ ಅಲ್ಲಿನ ಪ್ರಭಾವ ಹೆಚ್ಚಾಗಿದ್ದು ಅಲ್ಲಿನ ಮಧ್ಯಶಿಲಾಯುಗೀನ ಮೌಸ್ಟೀರಿ ಯನ್ ಮತ್ತು ಲೆವಾಲ್ವಾಸಿಯನ್ ಸಂಸ್ಕೃತಿಯ ರೀತಿಯ ಅವಶೇಷಗಳು ಉತ್ತರ ಆಫ್ಘಾನಿಸ್ತಾನದ ಬ್ಯಾಕ್ಟ್ರಿಯ ಪ್ರದೇಶದ ಬಾಲ್ಕ್ ಮತ್ತು ಹೈಬಕ್ ಪಟ್ಟಣಗಳ ಪರಿಸರದಲ್ಲೂ ಇರಾನಿನ ಕರ್ಮನ್‌ಷಾ ಮತ್ತು ಇರಾಕಿನ ಕುರ್ಡಿಸ್ತಾನದಲ್ಲಿ ಹಲವೆಡೆಗಳಲ್ಲೂ ಸಿರಿಯ ಮತ್ತು ಪ್ಯಾಲೆಸ್ಟೈನಿನ ಹಲವಾರು ಪ್ರದೇಶಗಳಲ್ಲೂ ದೊರಕಿವೆ. ಪಶ್ಚಿಮ ಏಷ್ಯ ಪೂರ್ವಶಿಲಾ ಯುಗದ ಅಂತ್ಯಭಾಗದಲ್ಲಿ ಮಾನವನ ಕಾರ್ಯರಂಗದ ಕೇಂದ್ರ ವಾಗಿತ್ತು. ಆಧುನಿಕ ಮಾನವ (ಹೋಮೋಸೇಪಿಯನ್) ಈ ಪ್ರದೇಶದಲ್ಲಿ ಉಗಮಿಸಿ ಕ್ರಮೇಣ ಯುರೋಪಿಗೆ ಕೂರಲಗು ಆಯುಧಗಳ ಸಂಸ್ಕೃತಿಗಳೊಂದಿಗೆ ಪ್ರವೇಶಿಸಿ, ಅಲ್ಲಿನ ಪೂರ್ವಶಿಲಾಯುಗದ ಅಂತ್ಯಕಾಲೀನ ಸಂಸ್ಕೃತಿಗೂ ಅಭೂತಪೂರ್ವ ಕಲೆಗಳಿಗೂ ಕಾರಣಕರ್ತನಾದನೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆತ ಯುರೋಪಿನಲ್ಲಿ ಸಾಧಿಸಿದಷ್ಟು ಪ್ರಗತಿಯನ್ನು ತನ್ನ ಉಗಮಸ್ಥಾನವಾದ ಪ್ಯಾಲೆಸ್ಟೈನಿನಲ್ಲಿ ಸಾಧಿಸದಿದ್ದರೂ ಪಶ್ಚಿಮ ಏಷ್ಯದ ಅನೇಕ ಪ್ರದೇಶಗಳಲ್ಲಿ ಇಂಥ ಸಂಸ್ಕೃತಿಗಳ ಅವಶೇಷಗಳನ್ನು ಉಳಿಸಿದ್ದಾನೆ. ಇರಾಕ್, ಪ್ಯಾಲೆಸ್ಟೈನ್, ಸಿರಿಯ ಮತ್ತು ಜಾರ್ಡನ್‌ಗಳಲ್ಲಿ ಈ ಅವಶೇಷಗಳು ದೊರಕಿವೆ.

**ಮಧ್ಯಶಿಲಾಯುಗ:** ಮಧ್ಯ ಶಿಲಾಯುಗಕ್ಕೆ ಸೇರಿದ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗಳು ಸಹ ಪಶ್ಚಿಮ ಏಷ್ಯದಲ್ಲಿ ವಿಶೇಷವಾಗಿ ನೆಲೆಸಿದ್ದವು. ಜಾರ್ಡನಿನ ಆಗ್ನೇಯ ಭಾಗಗಳಲ್ಲಿ ಅಂತ್ಯಪೂರ್ವಶಿಲಾಯುಗದಿಂದ ಕ್ರಮೇಣ ಬದಲಾಗುತ್ತ ಮಧ್ಯಶಿಲಾಯುಗೀನ ಸಂಸ್ಕೃತಿ ರೂಪಕ್ಕೆ ಪರಿವರ್ತನೆಗೊಳ್ಳುತ್ತಿರುವ ಹಂತದ ಅವಶೇಷಗಳು ಕಂಡುಬಂದಿವೆ. ಪ್ಯಾಲೆಸ್ಟೈನಿನ ಮೌಂಟ್ ಕಾರ್ಮೆಲಿನ ವಾಡಿ–ಎಲ್–ನಟೂಫ್ ಗುಹೆಗಳಲ್ಲಿನ ಸೂಕ್ಷ್ಮಶಿಲಾಯುಧದ ನಟೂಫಿಯನ್ ಸಂಸ್ಕೃತಿ ಬಹಳ ಪ್ರಸಿದ್ಧವಾದದ್ದು. ಇದು ಯುರೋಪಿನ ಸಮಕಾಲೀನ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳನ್ನು ಹೋಲುತ್ತಿದ್ದರೂ ಕ್ರಮೇಣ ಮಾನವನ ಸಂಸ್ಕೃತಿಯ ಪ್ರಗತಿ ಯಲ್ಲಿ ಪ್ರಧಾನ ಹಂತವಾದ ಆಹಾರೋತ್ಪಾದನೆಗೆ ಕಾರಣವಾದ ನವಶಿಲಾಯುಗ ಕ್ರಾಂತಿಗೆ ಈ ನಟೂಫಿಯನ್ ಸಂಸ್ಕೃತಿಯೇ ಮೂಲಾಧಾರವೆಂದು ಪ್ರಾಕ್ತನ ಶಾಸ್ತ್ರಜ್ಞರು ಸಾಧಿಸಿದ್ದಾರೆ. ಈ ಜನ ಮೊದಲ ಹಂತದ ವ್ಯವಸಾಯೋ ದ್ಯಮ ಮತ್ತು ಪಶುಪಾಲನೆಯನ್ನು ರೂಢಿಗೆ ತಂದವರೆಂಬುದನ್ನು ಇವರು ಉಪಯೋಗಿಸುತ್ತಿದ್ದ ಅಲಂಕೃತ ಕುಡುಗೋಲು ಮತ್ತು ಅರೆಯುವ ಕಲ್ಲುಗಳು ವ್ಯಕ್ತಪಡಿಸುತ್ತವೆ. ಇವರು ಪರ್ವತಗುಹೆಗಳಿಂದ ಕ್ರಮೇಣ ಮೈದಾನ ಪ್ರದೇಶಗಳಿಗೆ ವಲಸೆ ಬರುತ್ತಿದ್ದರೆಂಬುದು ಸ್ವಲ್ಪ ಅನಂತರದ ಕಾಲದ ಐನ್ ಮಲ್ಲಹಾ ನೆಲೆಯಿಂದ ಸಿದ್ಧಪಡುತ್ತದೆ. ಮುಂದಿನ ಹಂತವನ್ನು ರೂಪಿಸುವ ಜೆರಿಕೋ ನೆಲೆಯ ಕೆಳಗಿನ ಪದರಗಳ ಸಂಸ್ಕೃತಿಯೊಂದಿಗೆ ಸಂಪರ್ಕ ವಿತ್ತೆಂಬುದನ್ನೂ ಇದು ಸೂಚಿಸುತ್ತದೆ. ಸಿರಿಯ, ಇರಾಕಿನ ಹಜರ್ ಮದ್ ಮತ್ತು ಷನಿದಾರ್ ಗುಹೆಗಳು, ಜರ್ಜಿ ಮತ್ತು ಪಲೇಗಾವ್ರಾ ನೆಲೆಗಳು, ಇರಾನಿನ ಕರ್ಮನ್‌ಕ್ಷಾ ಬಳಿಯ ಟಿಪೆ ಅಸಿಯಾಬ್, ಆಫ್ಘಾನಿಸ್ತಾನದ ಕಾರಾಕಾಮರ್ ಮುಂತಾದೆಡೆ ಗಳಲ್ಲೂ ಸಮಕಾಲೀನ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳ ಅವಶೇಷಗಳು ದೊರಕಿವೆ.



ಚೀನದ ನವಶಿಲಾಯುಗದ ಆಯುಧಗಳು

ಭಾರತದಲ್ಲಿ ಮಧ್ಯಶಿಲಾಯುಗಕ್ಕೆ ಸೇರುವ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳ ಅವಶೇಷಗಳು ಹಲವಾರೆಡೆಗಳಲ್ಲಿ ಸಿಕ್ಕಿವೆ. ದಕ್ಷಿಣದಲ್ಲಿ ತಿರುನೆಲ್ವೇಲಿ ಜಿಲ್ಲೆಯಲ್ಲಿರುವ ಸಾಯರ್‌ಪುರಂ ಮುಂತಾದ ತೇರಿನೆಲೆಗಳಲ್ಲೂ ದಾಮೋದರ್ ನದೀಕಣಿವೆಯಲ್ಲಿರುವ ಬೀರ್‌ಭಾನ್ಪುರದ ಬಳಿಯೂ ಸಿಂಗ್ರೌಲಿ ನದೀಕಣಿವೆಯಲ್ಲಿ ವಿಂಧ್ಯಪರ್ವತದ ಪಚ್‌ಮಾರಿ ಮುಂತಾದ ಪ್ರದೇಶದಲ್ಲೂ ಮುಂಬೈ ಬಳಿಯ ಖಾಂಡಿವ್ಲಿ ಮತ್ತು ಬೋರಿವ್ಲಿ ಬಳಿಯೂ

ದೊರಕಿರುವ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳ ಅವಶೇಷಗಳು ಪ್ರ.ಶ.ಪೂ. 4–5ನೆಯ ಸಹಸ್ರಮಾನಗಳಿಗೋ ಇನ್ನೂ ಮೊದಲಕಾಲಕ್ಕೋ ನಿರ್ದೇಶಿತವಾದರೆ ಇತರೆಡೆಗಳಲ್ಲಿನ ಆ ಸಂಸ್ಕೃತಿಯ ಮಾಹಿತಿಗಳು ಅನಂತರದ ಕಾಲಕ್ಕೆ ಸೇರುತ್ತವೆ. ಗುಜರಾತಿನ ಲಂಘನಾಜ್, ಹೀರ್‌ಪುರ, ಪಾಕಿಸ್ತಾನದ ಸುಕ್ಕೂರ್ ಮತ್ತು ರೋಹ್ರಿಗಳಲ್ಲಿ ಈ ಹಂತದಿಂದ ಕ್ರಮೇಣ ಆಹಾರೋತ್ಪಾದನೆಯ ಹಂತವನ್ನು ತಲುಪುತ್ತಿರುವ ಮಾಹಿತಿಗಳೂ ಕಂಡುಬಂದಿವೆ.

ಸಮಕಾಲೀನ ಚೀನದಲ್ಲಿ ಮಧ್ಯಶಿಲಾಯುಗ ಸಂಸ್ಕೃತಿಗಳ ರೂಪ ಬೇರೆಯಾಗಿಯೇ ಕಂಡುಬಂದಿದೆ. ಪ್ಲಿಸ್ಟೊಸೀನ್ ಯುಗದ ಅಂತ್ಯಭಾಗದಲ್ಲಿ ಬಳಕೆಗೆ ಬಂದ ಆರ್ಡಾಸ್ ಸಂಸ್ಕೃತಿ ಹಳದಿ ನದಿಯ ತಿರುವಿನಲ್ಲಿರುವ ಆರ್ಡಾಸ್ ಹುಲ್ಲುಗಾವಲು ಪ್ರದೇಶದ ದಕ್ಷಿಣದಂಚಿನಲ್ಲಿ ಕಂಡುಬಂದಿದೆ. ಸಮಕಾಲೀನ ಮಾನವ ಅವಶೇಷಗಳು ಈವರೆಗೂ ದೊರಕಿಲ್ಲ. ಷು ಇ ಟುಂಗ್ ಕಾ ಎಂಬ ನೆಲೆಯಲ್ಲಿ ಬೂದಿಯೊಡ ಗೂಡಿದ ಐದು ಒಲೆಗಳೂ ಹೇರಳವಾಗಿ ಕಲ್ಲಿನಾಯುಧಗಳೂ ದೊರಕಿವೆ. ಒರೆಯುವ, ಕೊರೆಯುವ ಆಯುಧಗಳೂ ಮೊನೆಗಳೂ ವಿಶೇಷವಾಗಿರುವ ಈ ಸಂಸ್ಕೃತಿಯನ್ನು ಪ್ಲಿಸ್ಟೋಸಿನ್ ಯುಗದ ಅಂತ್ಯಭಾಗಕ್ಕೆ ನಿರ್ದೇಶಿಸ ಲಾಗಿದ್ದರೂ ಮಧ್ಯಶಿಲಾಯುಗ ಸಂಸ್ಕೃತಿಗಳ ಹಲವಂಶಗಳು ಇಲ್ಲಿ ಕಂಡುಬಂದು ಇವು ಮುಂದಿನ ಹಂತವನ್ನು ಸೂಚಿಸುವುವೆಂದು ಹೇಳಬಹುದಾಗಿದೆ. ಅನಂತರದ ಕಾಲದಲ್ಲಿ ಯುರೋಪಿನ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳಿಗೆ ಹೋಲಿಸಬಹುದಾದ ಸಂಸ್ಕೃತಿಗಳ ಅವಶೇಷಗಳು ವಿಶೇಷವಾಗಿಲ್ಲ ದಿದ್ದರೂ ದಕ್ಷಿಣದ ಕ್ವಾಂಗ್ಸೀ ಪ್ರದೇಶದ ಗುಹೆಯಲ್ಲಿನ ಅವಶೇಷಗಳು ವಿಯೆಟ್ನಾಮಿನ ಬ್ಯಾಕ್ಸನ್ ಸಂಸ್ಕೃತಿಯನ್ನು ಹೋಲುತ್ತವೆ. ಉತ್ತರದಲ್ಲಿ ಮಂಗೋಲಿಯ, ಮಂಚೂರಿಯ ಪ್ರದೇಶಗಳಲ್ಲಿ ಹವಾಗುಣದ ಬದಲಾವಣೆಯಿಂದ ಆಹಾರ ಸಂಗ್ರಹಣೆ ಮತ್ತು ಬೇಟೆಯ ಮೇಲೆ ಆಧಾರಿತವಾಗಿದ್ದ ಸಂಸ್ಕೃತಿಗಳು ಕ್ರಮೇಣ ಪರಿವರ್ತನೆಗೊಂಡು ಜನ್ಮತಳೆದ ಪ್ರಾರಂಭ ದೆಶೆಯ ವ್ಯವಸಾಯ ಸಂಸ್ಕೃತಿಗಳ ಅವಶೇಷಗಳು ಅನೇಕ ನೆಲೆಗಳಲ್ಲಿ ಕಂಡುಬರುತ್ತವೆ. ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳನ್ನು ಹೋಲುವ ಈ ಅವಶೇಷಗಳು ಗೋಬಿ ಮರುಭೂಮಿ, ಮಂಚೂರಿಯ ಮತ್ತು ಆರ್ಡಾಸ್ ಪ್ರಾಂತ್ಯಗಳಲ್ಲಿ ವಿಶೇಷ; ಈ ಸಂಸ್ಕೃತಿಯ ಮುಖ್ಯ ನೆಲೆ ಷಬರಕ್–ಉಸು. ಪೂರ್ವ ಷೆನ್ಸಿ ಪ್ರಾಂತ್ಯದಲ್ಲಿ ಮಧ್ಯಶಿಲಾಯುಗದ ಅಂತ್ಯ–ನವಶಿಲಾಯುಗ ಪ್ರಾರಂಭಕಾಲಗಳಿಗೆ ಸೇರುವ ಸಂಸ್ಕೃತಿಯ ಅವಶೇಷಗಳು 15 ಮರಳು ದಿಬ್ಬಗಳ ಮೇಲೆ ಕಂಡುಬಂದಿದೆ. ಷ–ಯುವಾನ್ ಸಂಸ್ಕೃತಿಯೆಂದು ಇದರ ಹೆಸರು. ಇದು ಗೋಬಿ ಸಂಸ್ಕೃತಿಯ ದಕ್ಷಿಣದ ಎಲ್ಲೆಯನ್ನು ಸೂಚಿಸುತ್ತದೆಂದು ಹೇಳಬಹುದು.



ಕಲ್ಲಿನ ಆಯುಧಗಳು, ಮೌಂಟ್ ಕಾರ್ಮೆಲ್



ಚೌಕಾಟಿಯನ್ ಮೇಲ್ಗುಹೆಯಲ್ಲಿನ ಕಲ್ಲಿನಾಯುಧಗಳು

ದಕ್ಷಿಣ ಚೀನ, ಇಂಡೋ–ಚೀನ ಮತ್ತು ಇಂಡೋನೇಷ್ಯ ಪ್ರದೇಶಗಳಲ್ಲಿ ಈ ಕಾಲದ ಸಂಸ್ಕೃತಿಗಳ ರೂಪುರೇಷೆಗಳು ಸಾಕಷ್ಟು ವಿಶದವಾಗಿಲ್ಲ. ಈ ಪ್ರದೇಶಗಳಲ್ಲಿ ಪ್ರಮುಖ ಕಾಣಿಕೆಯೆಂದರೆ ಆಗ್ನೇಯ ಏಷ್ಯ ಮತ್ತು ಶಾಂತಿಸಾಗರದ ದ್ವೀಪಸ್ತೋಮಗಳಲ್ಲಿ ತಮ್ಮ ಸಂಸ್ಕೃತಿಯ ಪ್ರಸಾರ. ಬಹುಶಃ ಏಷ್ಯದಲ್ಲಿ ಬತ್ತದ ವ್ಯವಸಾಯ ಕಲೆಯನ್ನು ಹರಡಿದುದಕ್ಕೆ ಇವೇ ಕಾರಣ. ಇದು ಚೀನದ ಲುಂಗ್‌ಷಾನ್ ಸಂಸ್ಕೃತಿಯ ಕೊಡುಗೆಯಾಗಿರಬಹುದು. ಈ ಪ್ರದೇಶಗಳಲ್ಲಿ ಆಗ ಹರಡಿದ್ದ ಬ್ಯಾಕ್ಸನ್ ಅಥವಾ ಹೋಬಿನ್ಹಿಯನ್ ಸಂಸ್ಕೃತಿಯಲ್ಲಿ ಮುಖ್ಯ ಆಯುಧ ಪೂರ್ವಶಿಲಾಯುಗ ಕಾಲದಿಂದಲೂ ಬಳಕೆಯಲ್ಲಿದ್ದ ತುಂಡು ಕೊಡಲಿ. ಇದಲ್ಲದೆ ಅನೇಕ ಚಕ್ಕೆಕಲ್ಲಿನಾಯುಧಗಳೂ ಬಳಕೆ ಯಲ್ಲಿದ್ದುವು. ಪೆಜ್ವಾನ್, ಕ್ವಾಂಗ್ಸಿ, ವಿಯೆಟ್‌ನಾಮ್, ಥೈಲೆಂಡ್, ಮಲಯ ಮತ್ತು ಇಂಡೋನೇಷ್ಯ ಗಳಲ್ಲಿ ಹಬ್ಬಿದ್ದ ಈ ಸಂಸ್ಕೃತಿಯ ಜನ ಗುಹೆಗಳಲ್ಲಿ ವಾಸಿಸುತ್ತಿದ್ದು ಕಾಡುಹಂದಿ, ಜಿಂಕೆ, ಪಶುಗಳು, ಆಮೆ ಮುಂತಾದ ಪ್ರಾಣಿಗಳನ್ನು ತಿನ್ನುತ್ತಿದ್ದರು. ವಿವಿಧ ರೀತಿಯ ಜಲಚರಗಳೂ ಇವರ ಆಹಾರ. ಅರೆಯುವ ಕಲ್ಲುಗಳು ದೊರಕಿ ರುವುದರಿಂದ ಸಸ್ಯಾಹಾರಿಗಳೂ ಆಗಿದ್ದರೆಂದು ಹೇಳಬಹುದು. ಕ್ರಮೇಣ ಈ ಜನ ನವಶಿಲಾಯುಗ ಸಂಸ್ಕೃತಿಗಳನ್ನಳವಡಿಸಿಕೊಂಡು, ನಯಮಾಡಿದ ಕಲ್ಲಿನಾಯುಧ ಮತ್ತು ಮಡಿಕೆಗಳನ್ನು ಉಪಯೋಗಿಸುತ್ತಿದ್ದುದಲ್ಲದೆ ವ್ಯವಸಾಯೋಪ ಜೀವಿಗಳೂ ಆದರೆಂಬುದಕ್ಕೆ ಮಾಹಿತಿಗಳು ಕೆಲವಾರು ನೆಲೆಗಳಲ್ಲಿ ದೊರಕಿವೆ. ಆಗ್ನೇಯ ಏಷ್ಯದ ದ್ವೀಪಗಳಲ್ಲಿ ಸೂಕ್ಷ್ಮಶಿಲಾಯುಧಗಳು ಪ್ರಮುಖವಾಗಿರುವ ಹಲವಾರು ನೆಲೆಗಳು ಬೆಳಕಿಗೆ ಬಂದಿವೆ. ಬೇಟೆಯನ್ನು ಮುಖ್ಯ ಕಸುಬಾಗಿ ಹೊಂದಿದ್ದ ಗುಹೆಗಳಲ್ಲಿ ವಾಸಿಸುತ್ತಿದ್ದ ಈ ಜನ ಏಷ್ಯದ ಮುಖ್ಯ ಭೂಭಾಗದ ಸಂಸ್ಕೃತಿಗಳೊಂದಿಗೆ ಯಾವ ರೀತಿಯ ಸಂಪರ್ಕ ಹೊಂದಿದ್ದರೆಂಬುದನ್ನು ನಿರ್ಧರವಾಗಿ ಹೇಳಲಾಗಿಲ್ಲ. ಸುಮಾತ್ರದ ಜಾಂಬಿ ಜಿಲ್ಲೆಯ ಗುಹೆಗಳಲ್ಲೂ ಜಾವದ ಬ್ಯಾಂಡಿಯೊಂಗ್ ಬಳಿಯ ಸರೋವರ ತೀರದಲ್ಲೂ ಫಿಲಿಪೀನ್ಸ್ ನಲುಜ಼ೋನ್ ಜಿಲ್ಲೆಯಲ್ಲೂ ಆಬ್ಸಿಡಿಯನಿನಿಂದ ಮಾಡಿದ ಸೂಕ್ಷ್ಮವಾದ ಆಯುಧಗಳು ದೊರಕಿವೆ. ಸಿಲೆಬಸ್ ದ್ವೀಪದ ನೈರುತ್ಯಭಾಗ ದಲ್ಲಿನ ಗುಹೆಗಳಲ್ಲಿ ಈ ಗುಂಪಿಗೆ ಸೇರಿದ ಅವಶೇಷಗಳು ಪ್ರಾಣಿಗಳ ಅವಶೇಷಗಳೊಂದಿಗೆ ಸಿಕ್ಕಿವೆ. ನಾಯಿಯ ನ್ನುಳಿದು ಇಲ್ಲಿ ದೊರಕಿದ ಇತರ ಪ್ರಾಣಿಗಳ ಅವಶೇಷಗಳು ಸಾಕುಪ್ರಾಣಿಗಳ ವರ್ಗಕ್ಕೆ ಸೇರದಿರುವುದರಿಂದ ಬೇಟೆ ಈ ಜನರ ಮುಖ್ಯ ಕಸುಬಾಗಿದ್ದಿತೆಂದು ತಿಳಿದುಬರುತ್ತದೆ. ಈ ಸಂಸ್ಕೃತಿಗಳು ಇಂಡೋನೇಷ್ಯ ಸಂಸ್ಕೃತಿಗಳಿಂದ ಹುಟ್ಟಿದವೋ ಅಥವಾ ಉತ್ತರ ಚೀನ ಪ್ರಾಂತ್ಯದಿಂದ ಹುಟ್ಟಿದವೋ ಎಂಬುದು ಸಮಸ್ಯೆಯಾಗೇ ಉಳಿದಿದೆ.



ಜಾವದ ಕಲ್ಲಿನ ಆಯುಧಗಳು



ಚೀನದ ಕಲ್ಲಿನ ಆಯುಧಗಳು, ಅಂತ್ಯ ಪೂರ್ವಶಿಲಾಯುಗ

**ನವಶಿಲಾಯುಗ:** ನವಶಿಲಾಯುಗ ಕಾಲದಲ್ಲಿ ಪಶ್ಚಿಮ ಏಷ್ಯ ಬಹಳ ಪ್ರಧಾನಪಾತ್ರ ವಹಿಸಿತ್ತು. ಈ ಮೊದಲೇ ತಿಳಿಸಿರುವಂತೆ ಪ್ಯಾಲೆಸ್ಟೈನ್ ಮತ್ತು ಸಿರಿಯದ ಕೆಲಭಾಗಗಳಲ್ಲಿ ಮಧ್ಯಶಿಲಾಯುಗದ ನಟೂಫಿಯನ್ನರು ಬೆಟ್ಟಗುಡ್ಡ ಪ್ರದೇಶಗಳಿಂದ ಮೈದಾನ ಪ್ರದೇಶಗಳಿಗೆ ಇಳಿದುಬಂದು ಕ್ರಮೇಣ ಆಹಾರೋತ್ಪಾದನೆಯ ಚಟುವಟಿಕೆಗಳಲ್ಲಿ ತೊಡಗಲಾರಂಭಿಸಿದ್ದರು. ಪ್ಯಾಲೆಸ್ಟೈನಿನ ಮೌಂಟ್ ಕಾರ್ಮೆಲ್ ಗುಹೆಗಳು, ಐನ್ ಮಲ್ಲಹಾ, ಜೆರಿಕೊ, ಜಾರ್ಡನಿನ ಸೆಯ್ಲ್–ಅಕ್ಲಟ್, ಇರಾಕಿನ ಜಾ ವಿ ಷೆಮಿ, ಷನಿದಾರ್, ಕರೀಮ್ ಷಾಹಿರ್, ಮ್ಲಾಫಾತ್ ಮುಂತಾದ ನೆಲೆಗಳು ನವಶಿಲಾಯುಗದ ಕ್ರಾಂತಿಯ ವಿವಿಧ ಹಂತಗಳನ್ನು ಕ್ರಮಾಗತವಾಗಿ ನಿರೂಪಿಸುತ್ತವೆ. ಪ್ರ.ಶ.ಪೂ. 9ನೆಯ ಸಹಸ್ರಮಾನಕ್ಕೆ ನಿರ್ದೇಶಿತವಾಗುವ ಈ ನೆಲೆಗಳ ಮೊದಲ ಹಂತದಲ್ಲಿ ನಯಮಾಡಿದ ಕಲ್ಲಿನ ಕೊಡಲಿಗಳಿಗೂ ಅಗೆಯುವ ಕೋಲಿನ ಭಾರದ ಗುಂಡುಗಳೂ ಅರೆಯುವ ಕಲ್ಲುಗಳೂ ಒರಟಾಗಿ ಕಟ್ಟಿದ ಗುಡಿಸಲ ಅವಶೇಷಗಳೂ ಸಾಕುಪ್ರಾಣಿಗಳಾದ ಆಡು, ಕುರಿ ಮತ್ತು



ಉಂಡೆಕಲ್ಲಿನಾಯುಧಗಳು

ದನಗಳ ಅವಶೇಷಗಳೂ ದೊರಕಿ, ವ್ಯವಸಾಯ, ಮಾನವನ ಸ್ಥಿರವಸತಿ ಮತ್ತು ಪಶುಸಂಗೋಪನೆಗಳು ಜನರ ಮುಖ್ಯ ಚಟುವಟಿಕೆ ಗಳಾಗಿದ್ದುವೆಂಬುದನ್ನು ತಿಳಿಸುತ್ತವೆ. ಈ ಜನ 200ಕ್ಕೂ ಮಿಗಿಲಾದ ಮನೆಗಳಿದ್ದ ತಮ್ಮ ಗ್ರಾಮವನ್ನು ರಕ್ಷಿಸಲು ಕೋಟೆ ಕಂದಕಗಳನ್ನು ನಿರ್ಮಿಸಿಕೊಂಡಿದ್ದರೆಂಬುದು ಜೆರಿಕೋ ನೆಲೆಯಲ್ಲಿ ದೊರಕಿದ ಮಾಹಿತಿಗಳಿಂದ ತಿಳಿದುಬರುತ್ತದೆ. ಇವರು ಕೆಲಕಾಲದಲ್ಲೆ ಮಡಕೆ ಕುಡಿಕೆಗಳನ್ನು ಉಪಯೋಗಿಸಲಾರಂಭಿಸಿದರು. ಸಮಕಾಲೀನ ಸಂಸ್ಕೃತಿಗಳು ಇರಾಕೀ ಕುರ್ಡಿಸ್ತಾನದ ಜಾರ್ಮೋ ನೆಲೆಯಲ್ಲೂ ಕಂಡು ಬಂದಿವೆ. ಮೊದಲಿಗೆ ಮಣ್ಣಿನ ಪಾತ್ರೆಗಳು ಬಳಕೆಯಲ್ಲಿರಲಿಲ್ಲ. ಇವರ ಆಯುಧೋಪಕರಣಗಳು ಕಲಾಕುಶಲತೆಯಿಂದ ಕೂಡಿದ್ದುವು. ಇವರ ಮತೀಯ ಮತ್ತು ಸಾಮಾಜಿಕ ಪ್ರಗತಿಯ ಬಗೆಗೂ ಆಧಾರಗಳು ದೊರಕಿವೆ. ಜೆರಿಕೋ ಸಂಸ್ಕೃತಿ ಗಿಂತಲೂ ಸ್ವಲ್ಪ ಈಚಿನದಾದ ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ. 6750. ಇದರ ಮುಂದಿನ ಹಂತವಾದ ಸುಧಾರಿತ ನವಶಿಲಾಯುಧ ಸಂಸ್ಕೃತಿಯ ಚಿಹ್ನೆಗಳು ಇರಾಕಿನ ಹಸುನಾ, ಮಟಾರ್‍ರಾ, ನಿನಿವ್ಹೆ ಮುಂತಾದ ನೆಲೆಗಳಲ್ಲೂ ಪ್ಯಾಲೆಸ್ಟೈನ್, ಸಿರಿಯ, ಜಾರ್ಡನ್ ಪ್ರದೇಶಗಳ ಹಲವಾರು ನೆಲೆಗಳಲ್ಲೂ ಇರಾನಿನ ಟಿಪೆಸರಬ್‌ನಲ್ಲೂ ಅದರ ಮುಂದಿನ ಹಂತ ಸಿಯಾಲ್ಕ್, ಚಷ್ಮಾಅಲಿ, ಅನೌ ಮುಂತಾದ ನೆಲೆಗಳಲ್ಲೂ ಆಫ್ಘಾನಿಸ್ತಾನದ ಮುಂಡೀಗಕ್ ನೆಲೆಯಲ್ಲೂ ಕಂಡು ಬಂದಿದೆ. ಪಶ್ಚಿಮ ಏಷ್ಯದಲ್ಲಿ ಮಾನವನ ಸಂಸ್ಕೃತಿಯ ಪ್ರಗತಿಯ ಚಿತ್ರ ಪಡೆಯಲು ಇವೆಲ್ಲ ಸಹಾಯಕ.



ಉಂಡೆಕಲ್ಲಿನಾಯುಧಗಳ ಮತ್ತೊಂದು ಜೋಡಿ

ಮುಂದಿನ ಹಂತವಾದ ಇರಾಕಿನ ಹಲಾಫ್ ಸಂಸ್ಕೃತಿಯ ಕಾಲದಲ್ಲಿ ನವಶಿಲಾಯುಗದ ಸಂಸ್ಕೃತಿಯ ಪ್ರಮುಖ ವಾಗಿದ್ದರೂ ಮೊತ್ತ ಮೊದಲಿಗೆ ತಾಮ್ರದ ಪರಿಚಯವಾದದ್ದು ಆಗಲೇ. ಆ ವರೆಗೂ ಸಂಸ್ಕೃತಿಯ ಪ್ರಗತಿ ಸಾಧನೆಯಲ್ಲಿ ಅಗ್ರಗಣ್ಯವಾಗಿದ್ದ ಈ ಪ್ರದೇಶಕ್ಕೆ ಹೊರಗಿನ ಪ್ರದೇಶಗಳಿಂದ ಮೊತ್ತಮೊದಲಿಗೆ ಮಾರ್ಗದರ್ಶನ (ಕೆಲವಿಷಯಗಳಲ್ಲಿ ಮಾತ್ರ) ದೊರಕಿತೆಂದು ಹೇಳಬಹುದು. ತಾಮ್ರದ ಉಪಯೋಗ ಮತ್ತು ತಯಾರಿಕೆಯ ವಿಧಾನಗಳು ಮೊದಲಿಗೆ ಉತ್ತರ ಇರಾನಿನಲ್ಲಿ ಕಂಡುಹಿಡಿಯಲಾಗಿದ್ದು ಕ್ರಮೇಣ ಇವನ್ನು ಇರಾಕಿಗೆ ತರಲಾಯಿತೆಂದು ತಿಳಿದುಬರುತ್ತದೆ. ಆ ವರೆವಿಗೂ ಉತ್ತರ ಇರಾಕಿನಲ್ಲಿ ಮಾತ್ರ ಜನವಸತಿಯಿತ್ತು. ದಕ್ಷಿಣಭಾಗವಾಗ ಜೌಗುಪ್ರದೇಶ. ಆದರೆ ಆ ಕಾಲದಲ್ಲಿ ಪ್ರಾರಂಭವಾದ ಉಬೇದ್ ಸಂಸ್ಕೃತಿ ದಕ್ಷಿಣಭಾಗಕ್ಕೂ ಮೊದಲ ಬಾರಿಗೆ ಪ್ರಸರಿಸಿ ಅಲ್ಲಿನ ಫಲವತ್ತಾದ ಮೆಕ್ಕಲು ಮಣ್ಣಿನ ಪ್ರದೇಶಗಳಲ್ಲಿ ಸಂಪದ್ಯುಕ್ತ ವ್ಯವಸಾಯ ಪದ್ಧತಿಯನ್ನು ಸ್ಥಾಪಿಸಿದ್ದಲ್ಲದೆ ನಾಗರಿಕಜೀವನದ ಬುನಾದಿ ಹಾಕಿತು. ಈ ತಾಮ್ರಶಿಲಾಯುಗೀನ ಸಂಸ್ಕೃತಿಗಳು ಇರಾಕಿನಲ್ಲಿ ಪ್ರಾರಂಭವಾಗಿ ಕಾಲಕ್ರಮೇಣ ನೆರೆಹೊರೆಯ ಪ್ರದೇಶಗಳಾದ ಸಿರಿಯ, ಪ್ಯಾಲೆಸ್ಟೈನ್, ಜಾರ್ಡನ್ ಪ್ರದೇಶಗಳಿಗೂ ಹರಡಿತು. ಇರಾನಿನ ಉತ್ತರ ಭಾಗದಲ್ಲಿ ಸೂಸ ಮುಂತಾದ ನೆಲೆಗಳಲ್ಲಿ



ಪ್ರಗತಿದಾಯಕ ಸಂಸ್ಕೃತಿಗಳು ನೆಲೆಗೊಂಡವು. ಸುಮಾರು ಇದೇ ಸಮಯದಲ್ಲಿ ಇರಾಕ್ ಮತ್ತು ಇರಾನ್‌ಗಳಲ್ಲಿ ಚಿತ್ರಲಿಪಿ ಬಳಕೆಗೆ ಬಂತು. ನೆರೆಯ ಪ್ರದೇಶಗಳೊಡನೆ ವಾಣಿಜ್ಯವೂ ಬೆಳೆದು, ಸಂಪದ್ಯುಕ್ತ ನಾಗರಿಕ ಜೀವನ ತ್ವರಿತಗತಿಯಲ್ಲಿ ಬೆಳೆಯಿತು. ಮುಂದಿನ ಹಂತಗಳಾದ ಉರೂಕ್ ಮತ್ತು ಜೆಂಡೆಟ್‌ನಾಸರ್ ಸಂಸ್ಕೃತಿಗಳ ಕಾಲದಲ್ಲಿ ಹೆಚ್ಚು ಪ್ರಗತಿ ಆಯಿತು. ನೀರಾವರಿ ವ್ಯವಸಾಯ, ಬರೆವಣಿಗೆಯ ಉಪಯೋಗ ಮತ್ತು ಇಟ್ಟಿಗೆಯ ಕಟ್ಟಡ–ಇವು ಹೆಚ್ಚಾಗಿ ಬಳಕೆಗೆ ಬಂದು ಕೊನೆಗೆ ಸುವ್ಯವಸ್ಥಿತ ರಾಜ್ಯಪದ್ಧತಿಗಳು ಸ್ಥಾಪಿತವಾದುವು. ಐತಿಹಾಸಿಕ ಯುಗದ ಸುಮೇರಿಯನ್ ಸಂಸ್ಕೃತಿ ಪ್ರಾರಂಭವಾದದ್ದು ಆಗಲೇ. ಸಿರಿಯ, ಪ್ಯಾಲೆಸ್ಟೈನ್ ಮತ್ತು ಇರಾನ್‌ಗಳಲ್ಲಿ ಇಷ್ಟು ಬೇಗ ಐತಿಹಾಸಿಕ ಯುಗ ಪ್ರಾರಂಭವಾಗಿದ್ದರೂ ಕ್ರಮೇಣ ಇರಾಕಿನ ಸುಮೇರಿಯನ್ ನಾಗರಿಕತೆಯ ಪ್ರಭಾವದಿಂದ ನಾಗರಿಕತೆ ಹರಡಿತು. ಭಾರತದಲ್ಲಿ ನವಶಿಲಾಯುಗದ ಸಂಸ್ಕೃತಿ ಪ್ರಾದೇಶಿಕ ವೈವಿಧ್ಯಗಳಿಂದ ಕೂಡಿದೆ. ಇರಾನಿನ ಸಮಕಾಲೀನ ಸಂಸ್ಕೃತಿಗಳ ಪ್ರಭಾವ ಕಂಡುಬರುವ ನವಶಿಲಾಯುಗ ಸಂಸ್ಕೃತಿ ದಖನ್ ಪ್ರದೇಶದಲ್ಲೂ ಪೂರ್ವತೀರದಲ್ಲೂ ಪ್ರ.ಶ.ಪೂ. 2300ರ ಸುಮಾರಿನಲ್ಲಿ ತಲೆದೋರಿ, ಬಳ್ಳಾರಿ ರಾಯಚೂರು ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿತ್ತು. ಇದು ಕ್ರಮೇಣ ಕರ್ನಾಟಕದ ಇತರ ಪ್ರದೇಶಗಳಿಗೂ ಆಂಧ್ರದ ಪಶ್ಚಿಮ ಮತ್ತು ಉತ್ತರ ಭಾಗಗಳಿಗೂ ತಮಿಳುನಾಡಿನ ಉತ್ತರಭಾಗಗಳಿಗೂ ಹಬ್ಬಿತು. ನಯ ಮಾಡಿದ ಕಲ್ಲಿನಾಯುಧಗಳು ಕೈಯಲ್ಲಿ ರೂಪಿಸಿದ ಮಣ್ಣಿನ ಪಾತ್ರೆಗಳ ಮತ್ತು ಪಶುಪಾಲನೆಯ ಉಪಯೋಗ ತಿಳಿದಿದ್ದ ಈ ಜನ ಕ್ರಮೇಣ ವ್ಯವಸಾಯವನ್ನು ಆರಂಭಿಸಿ ಬೆಟ್ಟದ ತಪ್ಪಲುಗಳಿಂದ ಮೈದಾನ ಪ್ರದೇಶಗಳಿಗೆ ಬಂದು ನೆಲೆಸಿದರು. ರಾಯಚೂರು ಜಿಲ್ಲೆಯ ಪಿಕ್ಲಿಹಾಲ್, ಮಸ್ಕಿ, ಬಳ್ಳಾರಿ ಜಿಲ್ಲೆಯ ಸಂಗಕಲ್ಲು, ತೆಕ್ಕಲಕೋಟೆ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಆಂಧ್ರಪ್ರದೇಶದ ನಾಗಾರ್ಜುನಕೊಂಡ, ಯಲ್ಲೇಶ್ವರಂ ಮುಂತಾದವು ಇವರ ಮುಖ್ಯ ನೆಲೆಗಳಲ್ಲಿ ಕೆಲವು. ಇದೇ ಸುಮಾರಿನಲ್ಲಿ ಕಾಶ್ಮೀರದಲ್ಲಿ ಚೀನದ ಪ್ರಭಾವವಿದ್ದ ನವಶಿಲಾಯುಗ ಸಂಸ್ಕೃತಿ ಬಳಕೆಯಲ್ಲಿತ್ತು. ಈ ಜನ ಮೇಲೆ ಹೇಳಿದ ಸಂಸ್ಕೃತಿ ಲಕ್ಷಣಗಳನ್ನು ಹೊಂದಿದ್ದುದಲ್ಲದೆ ನೆಲದಲ್ಲಿ ಹಳ್ಳಗಳನ್ನಗೆದು ಅವುಗಳ ಮೇಲೆ ಹುಲ್ಲುಚಾವಣಿಗಳನ್ನು ಹೊದಿಸಿ ರಚಿಸಿದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಮೊದಲು ಪಶುಪಾಲನೆ, ಬೇಟೆ ಇವರ ಮುಖ್ಯ ಕಸುಬುಗಳಾಗಿದ್ದರೂ ಕ್ರಮೇಣ ವ್ಯವಸಾಯವನ್ನು ಪ್ರಾರಂಭಿಸಿದುದಾಗಿ ತಿಳಿದುಬರುತ್ತದೆ. ಪೂರ್ವಭಾಗದಲ್ಲಿ ಅಸ್ಸಾಂ, ಬಂಗಾಲ, ಬಿಹಾರ್ ಮತ್ತು ಒರಿಸ್ಸ ಪ್ರಾಂತ್ಯಗಳಲ್ಲಿ ಆಗ್ನೇಯ ಏಷ್ಯ ಮತ್ತು ದಕ್ಷಿಣ ಚೀನಗಳ ಪ್ರಭಾವವಿದ್ದ ನವಶಿಲಾಯುಗಕ್ಕೆ ನಿರ್ದೇಶಿತವಾಗುವ ಅವಶೇಷ ಗಳು ದೊರಕಿದ್ದರೂ ಪ್ರ.ಶ.ಪೂ. ಒಂದನೆಯ ಸಹಸ್ರಮಾನಕ್ಕೆ ಸೇರಬಹುದಾದ ಈ ಹಿಂದುಳಿದ ಸಂಸ್ಕೃತಿಯ ವಿಷಯವಾಗಿ ಹೆಚ್ಚಿನ ಮಾಹಿತಿಗಳು ಗೊತ್ತಾಗಿಲ್ಲ. ಮಧ್ಯ ಮತ್ತು ಪಶ್ಚಿಮ ಭಾರತಗಳಲ್ಲಿ ಭೌಗೋಳಿಕ ಕಾರಣಗಳಿಂದ ಈ ನವಶಿಲಾ ಯುಗ ಸಂಸ್ಕೃತಿ ಹರಡಲು ಸಾಧ್ಯವಾಗದೆ ಸೂಕ್ಷ್ಮಶಿಲಾ ಯುಗದ ಸಂಸ್ಕೃತಿಗಳ ಅನಂತರ ತಾಮ್ರಶಿಲಾಯುಗದ ಸಂಸ್ಕೃತಿಗಳು ಬಳಕೆಗೆ ಬಂದವು. ನಾಗರಿಕತೆಯ ಉನ್ನತ ಮಟ್ಟ ತಲಪಿದ್ದ ಹರಪ್ಪ ನಾಗರಿಕತೆ ವಾಯವ್ಯದಲ್ಲಿ ಸಿಂಧೂ ನದೀತೀರದಲ್ಲಿ ಮೊದಲಿಗೆ ಪ್ರಾರಂಭವಾಗಿ ಕ್ರಮೇಣ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಹರಡಿತು. ಆಫ್ಘಾನಿಸ್ತಾನ ಮತ್ತು ಬಲೂಚಿಸ್ತಾನಗಳ ಪರ್ವತ ಪ್ರದೇಶಗಳಲ್ಲಿ ನೆಲೆಸಿದ್ದ, ಆಹಾರೋತ್ಪಾದನೆಯ ಹಂತದ ಪಂಗಡಗಳಿಂದ ಕ್ರಮೇಣ ಬೆಳೆದು ಬಂದ, ಮತ್ತು ಸುಮೇರಿಯನ್ ನಾಗರಿಕತೆಯೊಡನೆ ಸಂಪರ್ಕ ಪಡೆದಿದ್ದ ಈ ಸಂಸ್ಕೃತಿ ವ್ಯವಸಾಯ ಮತ್ತು ಕೈಗಾರಿಕೆಗಳ ಮೇಲೆ ಆಧಾರಿತವಾಗಿದ್ದು, ಭಾರತದ ಇತರ ಕೆಲವು ಪ್ರದೇಶಗಳೊಂದಿಗೂ ಹೊರದೇಶಗಳೊಂದಿಗೂ ವ್ಯಾಪಾರ ಸಾಂಸ್ಕೃತಿಕ ಸಂಪರ್ಕಗಳನ್ನು ಬೆಳೆಸಿಕೊಂಡಿತ್ತು. ಈ ಸಂಸ್ಕೃತಿಯ ಮುಖ್ಯ ನೆಲೆಗಳಾಗಿದ್ದ ರಾಬಿ ನದಿ ದಂಡೆಯ

ಹರಪ್ಪ ಮತ್ತು ಸಿಂಧೂ ನದಿ ದಂಡೆಯ ಮೊಹೆಂಜೊದಾರೊಗಳಲ್ಲಿನ ಉತ್ಖನನಗಳಿಂದ ಈ ಅಂಶ ವ್ಯಕ್ತಪಡುತ್ತದೆ. ಈ ಅಕ್ಷರಸ್ಥ ನಾಗರಿಕತೆ ಬಹು ಶೀಘ್ರವಾಗಿ ಉನ್ನತ ಮಟ್ಟ ತಲಪಿ ತನ್ನ ಪ್ರಭಾವವನ್ನು ನೆರೆಯ ಗಂಗಾ–ಯಮುನಾ ಬಯಲಿಗೂ ಸೌರಾಷ್ಟ್ರ ಪ್ರದೇಶಕ್ಕೂ ಬಲೂಚಿಸ್ತಾನ ಮತ್ತು ಸಿಂಧ್ ಪ್ರಾಂತ್ಯಗಳಿಗೂ ವಿಸ್ತರಿಸಿತ್ತು. ಆದರೆ ಕ್ರಮೇಣ ಆಂತರಿಕ ಕಾರಣಗಳ ಒತ್ತಡಗಳಿಗೊಳಗಾಗಿ ಕ್ಷೀಣಗೊಂಡಿತು. ಈ ನಾಗರಿಕತೆಯ ಜೀವಿತ ಕಾಲವನ್ನು ಪ್ರ.ಶ.ಪೂ.2300–1700 ಎಂದು ನಿರ್ದೇಶಿಸಲಾಗಿದೆ. ಇದರ ಅವನತಿಯ ಅನಂತರ ಗಂಗಾನದಿ ಬಯಲಿನಲ್ಲೂ ಮಧ್ಯ ಮತ್ತು ಪಶ್ಚಿಮ ಭಾರತ ಪ್ರದೇಶಗಳಲ್ಲೂ ಇದರ ಮತ್ತು ಮೊದಲಿನ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳಿಂದ ಉದಿಸಿದ ತಾಮ್ರ ಶಿಲಾಯುಗೀನ ಸಂಸ್ಕೃತಿಗಳು ರೂಢಿಗೆ ಬಂದುವು. ಹರಪ್ಪ ನಾಗರಿಕತೆಯಲ್ಲಿ ರೂಢಿಯಲ್ಲಿದ್ದ ಅಕ್ಷರತೆ ಮತ್ತು ನಗರ ಜೀವನ ಕಣ್ಮರೆಯಾದರೂ ಮುಂದುವರಿದ ವ್ಯವಸಾಯ ಪದ್ಧತಿಯೂ ಗ್ರಾಮೀಣ ಜೀವನವೂ ಇದಕ್ಕೆ ಸಂಬಂಧಿಸಿದ ಕೈಗಾರಿಕೆಗಳೂ ಪ್ರಧಾನವಾಗಿದ್ದ ಈ ಪ್ರಾಗೈತಿಹಾಸಿಕ ಸಂಸ್ಕೃತಿಯ ಕಾಲದಲ್ಲಿ ಫಲವತ್ತಾದ ಗಂಗಾ ಯಮುನಾ ನದೀಬಯಲಿನಲ್ಲಿ ಹೆಚ್ಚು ಪ್ರಗತಿಯಾಯಿತು. ಕಬ್ಬಿಣ ಬಳಕೆಗೆ ಬಂದದ್ದು ಪ್ರ.ಶ.ಪೂ. 2ನೆಯ ಸಹಸ್ರಮಾನದ ಕೊನೆಯಲ್ಲಿ. ಕ್ರಮೇಣ ಮಧ್ಯ ಮತ್ತು ದಕ್ಷಿಣ ಭಾರತಗಳಿಗೂ ಕಬ್ಬಿಣಯುಗದ ಸಂಸ್ಕೃತಿ ಹರಡಿತು. ಈ ವೇಳೆಗಾಗಲೇ ಉತ್ತರ ಭಾರತದಲ್ಲಿ ಮೊದಲ ಐತಿಹಾಸಿಕ ರಾಜ್ಯಗಳು ಸ್ಥಾಪಿತವಾಗಿ ಚಾರಿತ್ರಿಕಯುಗದ ಪ್ರಾರಂಭವಾಗಿತ್ತು. ದಕ್ಷಿಣ ಭಾರತದಲ್ಲಿ ಕಬ್ಬಿಣಯುಗವನ್ನು ಪ್ರಾಗಿತಿಹಾಸ ಕಾಲವೆಂದು ಪರಿಗಣಿಸಲಾಗಿದೆ. ಆ ಸಮಯದಲ್ಲಿ ಪ್ರಭಾವಶಾಲಿಯಾಗಿದ್ದ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಜನ ಸುಧಾರಿತ ನೀರಾವರಿ ವ್ಯವಸಾಯ, ಕುಂಬಾರ ಚಕ್ರದಿಂದ ತಯಾರಾದ ಮಣ್ಣಿನ ಪಾತ್ರೆ, ಕಬ್ಬಿಣದಿಂದ ಮಾಡಿದ ಆಯುಧೋಪಕರಣ–ಇವನ್ನು ಬಳಕೆಗೆ ತಂದು ಗ್ರಾಮೀಣ ಜೀವನ ಪದ್ಧತಿ ಸ್ಥಾಪಿಸಿದರು. ಪ್ರ.ಶ.ಪೂ. 5–4ನೆಯ ಶತಮಾನಗಳ ವೇಳೆಗೆ ಇಲ್ಲಿ ಬರೆವಣಿಗೆ, ರಾಜ್ಯಭಾರ ಪದ್ಧತಿ ಮತ್ತು ನಗರಜೀವನ ಕ್ರಮಗಳು ರೂಢಿಗೆ ಬಂದು ಇತಿಹಾಸ ಯುಗ ಪ್ರಾರಂಭವಾಯಿತು.



ಯಾಂಗ್–ಷಾವೋ ಸಂಸ್ಕೃತಿಯ ವರ್ಣಚಿತ್ರಿತ ಮಡಕೆಗಳು

ಪೂರ್ವ ಏಷ್ಯ ಮತ್ತು ಚೀನ ಪ್ರದೇಶಗಳಲ್ಲಿ ಪ್ರ.ಶ.ಪೂ. 3000ದ ಸುಮಾರಿಗೆ ಸೈಬೀರಿಯ, ಮಂಚೂರಿಯ ಮತ್ತು ಮಂಗೋಲಿಯ ಪ್ರದೇಶಗಳಲ್ಲಿ ನೆಲಸಿದ್ದ ಸೂಕ್ಷ್ಮಶಿಲಾಯುಧ ಸಂಸ್ಕೃತಿಗಳ ಜನ ನಯಗೊಳಿಸಿದ ಕಲ್ಲಿನಾಯುಧ ಮತ್ತು ಮಣ್ಣಿನ ಪಾತ್ರೆಗಳ ಉಪಯೋಗವನ್ನು ಪಶ್ಚಿಮದಿಂದ ಕಲಿತುಕೊಂಡರು. ವ್ಯವಸಾಯ ಮತ್ತು ಪಶುಪಾಲನೆಗಳ ಪರಿಚಯವಿಲ್ಲದಿದ್ದರೂ ಈ ಸಂಸ್ಕೃತಿಗಳನ್ನು ನವಶಿಲಾಯುಗ ಸಂಸ್ಕೃತಿಗಳೆಂದು ಹೆಸರಿಸಲಾಗಿದೆ. ಬೇಟೆ ಮುಖ್ಯ ಕಸಬಾಗಿದ್ದು ಈ ಜನ ಇದಕ್ಕಾಗಿ ಸಾಕಿದ ನಾಯಿಗಳನ್ನುಪಯೋಗಿಸುತ್ತಿದ್ದರು. ಮಡಕೆಗಳನ್ನು ಹಗ್ಗದ ಗುರುತುಗಳಿಂದ ಅಲಂಕರಿಸುತ್ತಿದ್ದರು. ಚೀನದ ಹ್ವಾಂಗ್ ಹೋ ಕಣಿವೆಯಲ್ಲಿ ನೆಲೆಸಿದ್ದ ನವಶಿಲಾಯುಗ ಸಂಸ್ಕೃತಿ ಹೆಚ್ಚು ಪ್ರಗತಿಪರವಾಗಿತ್ತು. ವ್ಯವಸಾಯ ಬಳಕೆಯಲ್ಲಿತ್ತು. ಅನಂತರ ದಕ್ಷಿಣ ಚೀನ, ಇಂಡೋಚೀನ ಪ್ರದೇಶಗಳಲ್ಲಿ ಹರಡಿದ ಈ ಸಂಸ್ಕೃತಿ ಕ್ರಮೇಣ ಪ್ರಬಲಗೊಂಡಿತು. ಇಂಡೋ–ಚೀನದ ಟಾಂಕಿಂಗ್ ಪ್ರದೇಶದ ಹೋಬಿನ್ಹ್ ಎಂಬಲ್ಲಿ ಸಣ್ಣ ಗಾತ್ರದ ಕಲ್ಲಿನಾಯುಧಗಳು ಬಳಕೆಯಲ್ಲಿದ್ದರೆ, ಬ್ಯಾಕ್ಸನಿನಲ್ಲಿ ಅಂಚುಗಳನ್ನು ನಯಗೊಳಿಸಿದ ಕಲ್ಲಿನ ಕೊಡಲಿ ಮತ್ತು ಒರಟಾದ ಮಡಕೆಗಳು ಬಳಕೆಯಲ್ಲಿದ್ದುವು. ಈ ಪ್ರದೇಶದಲ್ಲೆಲ್ಲ ಕ್ರಮೇಣ ಪೂರ್ಣವಾಗಿ ನಯಗೊಳಿಸಿದ ಚೌಕಾಕಾರದ ಕೊಡಲಿ ಪ್ರಧಾನ ಆಯುಧವಾಯಿತು. ಹಿಡಿಯಲ್ಲಿ ಸೇರಿಸಲು ಅನುಕೂಲವಾಗುವಂಥ ಭುಜಗಳುಳ್ಳ ಕೊಡಲಿಗಳೂ ಸ್ವಲ್ಪಕಾಲಾನಂತರ ಬಳಕೆಗೆ ಬಂದುವು. ಈ ವೇಳೆಗೆ ಚೀನದ ದಕ್ಷಿಣ ಭಾಗಗಳಲ್ಲಿ ಕಂಚಿನ ಬಳಕೆ ರೂಢಿಗೆ ಬಂದು ಕ್ರಮೇಣ ಈ ಪ್ರದೇಶಗಳಿಗೂ ಹಬ್ಬಿತು. ಕಲ್ಲಿನ ಆಯುಧಗಳನ್ನು ಸಹ ಕಂಚಿನ ಆಯುಧಗಳ ಮಾದರಿಯಲ್ಲಿ ಅದೇ ತಯಾರಿಕಾ ವಿಧಾನಗಳಿಂದ ಮಾಡುತ್ತಿದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆಗ್ನೇಯ ಏಷ್ಯದಾದ್ಯಂತ ಪ್ರಬಲವಾಗಿದ್ದ ಈ ಸಂಸ್ಕೃತಿಯ ಪ್ರಭಾವ ಪೂರ್ವಭಾರತದ ಅಸ್ಸಾಂ ಬಂಗಾಲ ಪ್ರದೇಶಗಳ ಮೇಲೆ ಆದದ್ದು ಬಹುಶಃ ಈ ಹಂತದಲ್ಲೆ.

ವ್ಯವಸಾಯಾಧಾರಿತ ಪಂಗಡಗಳು ಮಧ್ಯ ಚೀನದ ಹೋನಾನ್ ಪ್ರಾಂತ್ಯದ ಹ್ವಾಂಗ್ ಹೋ ಮತ್ತು ಷೆನ್ಸಿಗಳಲ್ಲಿ ಹಳದಿ ಮೆಕ್ಕಲುಮಣ್ಣಿನ ಮೈದಾನಗಳಲ್ಲಿ ತಲೆದೋರಿತು. ಬಹುಶಃ ಮಧ್ಯ ಮತ್ತು ಪಶ್ಚಿಮ ಏಷ್ಯದಿಂದ ಬಂದ ಈ ವ್ಯವಸಾಯ ಮತ್ತು ಪಶುಸಂಗೋಪನೋದ್ಯಮಗಳು ಕ್ರಮೇಣ ಹೋನಾನ್ ಪ್ರಾಂತ್ಯದ ಇತರ ಭಾಗಗಳಲ್ಲೂ ಕಾನ್ಸು ಪ್ರಾಂತ್ಯದಲ್ಲೂ ಹರಡಿ ಜನಜೀವನ ರೀತಿಯನ್ನು ಸುಧಾರಿತಗೊಳಿಸಿತು. ಈ ಪ್ರಭಾವಗಳೊಡನೆ ಮಡಕೆಗಳನ್ನು ಬಣ್ಣಗಳಿಂದ ಅಲಂಕರಿಸುವ ಕಲೆಯೂ ಬಂದಂತೆ ಕಾಣುತ್ತದೆ. ಯಾಂಗ್–ಷಾವೊ ಸಂಸ್ಕೃತಿಯೆಂದು ಹೆಸರಾದ ಈ ಸಂಸ್ಕೃತಿಯ ಜನಕ್ಕೆ ಮೊದಲಿನಿಂದಲೂ ಧಾನ್ಯಗಳನ್ನು ಬೆಳೆಯುವ ವಿಧಾನ ಗೊತ್ತಿತ್ತು. ಇವರು ಬತ್ತದ ಬೇಸಾಯವನ್ನು ದಕ್ಷಿಣ ಪ್ರದೇಶಗಳಿಂದ ಕಲಿತುಕೊಂಡರು. ವಿಶಾಲವಾದ ಗ್ರಾಮಗಳಲ್ಲಿ ಚಚ್ಚೌಕದ ಮನೆಗಳಲ್ಲಿ ವಾಸಿಸುತ್ತಿದ್ದ ಈ ಜನ ಧಾನ್ಯಗಳನ್ನು ನೆಲದೊಳಗಿನ ಹಳ್ಳಗಳಲ್ಲಿ ಶೇಖರಿಸುತ್ತಿದ್ದರು. ಗ್ರಾಮದ ಹೊರಭಾಗಗಳಲ್ಲಿ ಶವಗಳನ್ನು ಹೂಳುತ್ತಿದ್ದರು. ಮಣ್ಣಿನ ಪಾತ್ರೆಗಳನ್ನು ಕೈಯಿಂದ ತಯಾರಿಸುತ್ತಿದ್ದರು. ಅವುಗಳನ್ನು ಬಣ್ಣಗಳಿಂದ ಅಲಂಕರಿಸುತ್ತಿದ್ದರು.



ಮೊಹೆಂಜೊದಾರೊ ಸಂಸ್ಕೃತಿಯ ಮುದ್ರೆಗಳು

ಅನಂತರದ ಮುಂದುವರಿದ ಸಂಸ್ಕೃತಿಯ ಮಾಹಿತಿಗಳೂ ಹ್ವಾಂಗ್ ಹೊ ಕಣಿವೆಯ ಪೂರ್ವಭಾಗಗಳಲ್ಲಿ ದೊರಕಿವೆ. ಇವು ಲುಂಗ್–ಷಾನ್ ಸಂಸ್ಕೃತಿಯೆಂದು ಹೆಸರಾಗಿದೆ. ಯಾಂಗ್–ಷಾವೊ ಸಂಸ್ಕೃತಿ ಯೊಂದಿಗೆ ಅನೇಕ ಹೋಲಿಕೆ ಗಳಿರುವ ಲುಂಗ್–ಷಾನ್ ಸಂಸ್ಕೃತಿಯ ಮಡಕೆಗಳು ಹೆಚ್ಚು ನಯ, ಕುಂಬಾರ ಚಕ್ರದ ಮೇಲೇ ಮಾಡಲ್ಪಟ್ಟಿದ್ದು. ಇವುಗಳ ಬಣ್ಣ ಕಪ್ಪು, ಹೊಸ ಹೊಸ ಆಕಾರದ ಮಡಕೆಗಳೂ ಬಳಕೆಗೆ ಬಂದುವು. ಈ ಹಂತದಲ್ಲಿ ಜನಜೀವನ ರೀತಿ ಸುಧಾರಿತವಾಯಿತು. ದನಕುರಿ ಗಳನ್ನೂ ಕೆಲವು ಸಲ ಕುದುರೆ ಗಳನ್ನೂ ಸಾಕುವುದು ರೂಢಿಗೆ ಬಂತು. ಮುಂದುವರಿದ ವ್ಯವಸಾಯ ವಿಧಾನಗಳಿಂದ ಐಶ್ವರ್ಯ ಅಭಿವೃದ್ಧಿ ಹೊಂದಿ ನಾಗರಿಕತೆ ಬೆಳೆಯಲಾರಂಭಿಸಿತು. ಮತೀಯ, ಸಾಮಾಜಿಕ ಆಚಾರಪದ್ಧತಿಗಳು ಬೆಳೆದುವು. ಲುಂಗ್–ಷಾನ್ ಕೊನೆಯ ಹಂತದ ಹ್ಸಿಯಾವೊ–ತ್ಸನ್ ಸಂಸ್ಕೃತಿ ಕಾಲ ಕ್ರಮದಲ್ಲಿ ಯಾಂಗ್ಟ್ಸಿ ಬಯಲು, ಷೆಜ್ವಾನ್, ದಕ್ಷಿಣ ಸಮುದ್ರತೀರ ಮತ್ತು ಆಗ್ನೇಯ ಏಷ್ಯಗಳಿಗೆ ಹರಡಿ ಬಲು ಪ್ರಭಾವಶಾಲಿಯಾಯಿತೆನ್ನಬಹುದು. ಬತ್ತದ ಬೇಸಾಯ ಪದ್ಧತಿ ಪೂರ್ವ ಏಷ್ಯದಲ್ಲೆಲ್ಲ ಹರಡಿದ್ದು ಅಕ್ಕಿ ಈ ಪ್ರದೇಶದ ಮುಖ್ಯ ಆಹಾರವಾಗಿದ್ದು ಆಗಲೇ. ಪ್ರ.ಶ.ಪೂ. 2ನೆಯ ಸಹಸ್ರಮಾನದ ಅಂತ್ಯಕಾಲದ ವೇಳೆಗೆ ನಗರಸ್ಥ ಜೀವನ ನೆಲೆಯಾಗಿ ನಿಂತು ಐತಿಹಾಸಿಕ ಚೀನೀ ಸಂಸ್ಕೃತಿಯ ಆಸ್ತಿಭಾರವೇರ್ಪಟ್ಟಿತೆಂಬುದು ಷಾಂಗ್ ವಂಶದ

ಸ್ಥಾಪನೆಯಿಂದಲೂ ಹ್ಸಿಯಾವೊ-ತ್ಸುನ್ ನಗರದ ಸಂಪದ್ಭರಿತ ಸ್ಥಿತಿಗಳಿಂದಲೂ ತಿಳಿದುಬರುತ್ತದೆ. ವಿಶಾಲ ಸುವ್ಯವಸ್ಥಿತ ನಗರದಲ್ಲಿ ಅರಮನೆ, ಕುಶಲಕರ್ಮಿಗಳ ವಸತಿಗಳು, ಆಯಾಕಾರದ ಮರದ ಕಟ್ಟಡಗಳು, ಕಲ್ಲಿನ ಅಥವಾ ಕಂಚಿನ ಪೀಠಗಳ ಮೇಲೆ ನಿಲ್ಲಿಸಿದ ಕಂಬಗಳ ಸಾಲುಗಳಿಂದ ಕೂಡಿದ ವಿಶಾಲ ಭವನಗಳು-ಇವೆಲ್ಲ ಈ ನಾಗರಿಕತೆಯ ಮಟ್ಟವನ್ನು ಸೂಚಿಸುತ್ತವೆ. ಪುರಾತನ ವಿಶ್ವದ ನಾಗರಿಕತೆಗಳ

ಮೊಹೆಂಜೋದಾರೊ ಕೋಟೆಕೊತ್ತಲಗಳು

ಕುರುಹುಗಳಲ್ಲಿ ಷಾಂಗ್ ಸಂಸ್ಕೃತಿಕಾಲದ ಕಂಚಿನ ವಸ್ತುಗಳದು ವಿಶಿಷ್ಟ ಸ್ಥಾನ. ಈ ಕಾಲದ ಸಮಾಧಿಗಳಲ್ಲಿರುವ ಐಶ್ವರ್ಯ ಈ ಜನರ ಪ್ರಗತಿಯನ್ನು ಸೂಚಿಸುತ್ತದೆಂದು ಹೇಳಬಹುದು. ಈ ಜನಕ್ಕೆ ಬರೆವಣಿಗೆ ಗೊತ್ತಿತ್ತು ಎಂಬುದು ಕಂಚಿನ ಪಾತ್ರೆಗಳ ಮೇಲಿನ ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಈ ಶಾಸನಗಳದು ಚೀನೀ ಭಾಷೆ. ಇತಿಹಾಸಯುಗಕ್ಕೆ ಸೇರಿದ ಚೌ ವಂಶ ಅಧಿಕಾರಕ್ಕೆ ಬಂದದ್ದು ಅನಂತರ (ಪ್ರ.ಶ.ಪೂ.1027-222).

ಮಣ್ಣಿನ ವರ್ಣಚಿತ್ರಿತ ಜಾಡಿ

ಇಂಡೋ-ಚೀನದಲ್ಲಿ ಹೋಬಿನ್ಹಿಯನ್ ಬ್ಯಾಕ್ಸೋನಿಯನ್ ಸಂಸ್ಕೃತಿಗಳು ಬಹಳಕಾಲ ಬಳಕೆಯಲ್ಲಿದ್ದು ಪ್ರ.ಶ.ಪೂ. ಮೊದಲನೆಯ ಸಹಸ್ರಮಾನದ ಮಧ್ಯಕಾಲದಲ್ಲಿ ಕ್ರಮೇಣ ಕಂಚು ಮತ್ತು ಕಬ್ಬಿಣಗಳ ಉಪಯೋಗ ಗೊತ್ತಿದ್ದ ಡಾಂಗ್ಸನ್ ಸಾಮ್ರಾಂಗ್‍ಸನ್ ಸಂಸ್ಕೃತಿಗಳು ರೂಢಿಗೆ ಬಂದವಲ್ಲದೆ ವ್ಯವಸಾಯ ಪಶುಪಾಲನೆಗಳು ಹರಡಿದುವು. ಕೆಲವು ಪ್ರದೇಶಗಳಲ್ಲಿ ಇತ್ತೀಚಿನವರೆಗೂ ಬಳಕೆಯಲ್ಲಿದ್ದ ಬಾಕು. ರಂಧ್ರವಿರುವ ಕೊಡಲಿ, ಭರ್ಜಿಯ ಮೊನೆ ಮತ್ತು ತಾಮ್ರದ ಬುರುಡುಮದ್ದಲೆಗಳು ಬಳಕೆಗೆ ಬಂದದ್ದೂ ಈ ಕಾಲದಲ್ಲೆ. ಕ್ರಮೇಣ ಚೀನ ಮತ್ತು ಭಾರತಗಳ ಸಂಸ್ಕೃತಿಗಳು ಪ್ರ.ಶ. ಮೊದಲನೆಯ ಸಹಸ್ರಮಾನದ ದೀರ್ಘಕಾಲದಲ್ಲಿ ಈ ಪ್ರದೇಶಗಳಿಗೆ ಹರಡುವವರೆಗೂ ಇವು ಪ್ರಾಗಿತಿಹಾಸ ಮಟ್ಟದಲ್ಲೇ ಇದ್ದು ಮಧ್ಯಯುಗೀನ ಇತಿಹಾಸ ಕಾಲದಲ್ಲಿ ಚಾರಿತ್ರಿಕ ಯುಗವನ್ನು ಪ್ರವೇಶಿಸಿದುವು.

16-17ನೆಯ ಶತಮಾನಗಳಲ್ಲಿ ಮಲೇಷ್ಯದ ದ್ವೀಪಗಳನ್ನು ಐರೋಪ್ಯರು ಪ್ರವೇಶಿಸುವವರೆಗೂ ಇಲ್ಲಿ ಅನಾಗರಿಕ ಶಿಲಾಯುಗ ಹಂತದ ಪಂಗಡಗಳಿದ್ದುವು. ಈ ಜನಕ್ಕೆ ಅಕ್ಕಿಯ ಉಪಯೋಗ ಗೊತ್ತಿರಲಿಲ್ಲ. ಬಾಳೆ, ಹಲಸು, ತೆಂಗು ಮುಂತಾದ ಬೆಳೆಗಳನ್ನಿವರು ಬೆಳೆಯುತ್ತಿದ್ದರು. ಹಂದಿ, ನಾಯಿ, ಕೋಳಿ ಮತ್ತು ಜಲಚರಗಳೂ ಇವರ ಆಹಾರ ಪೂರೈಕೆಯ ಸಾಧನಗಳಾಗಿದ್ದವು. ನಯಗೊಳಿಸಿದ ಕಲ್ಲಿನಾಯುಧಗಳನ್ನು ಉಪಯೋಗಿಸುತ್ತಿದ್ದರು. ಕೈಯಿಂದ ಮಾಡಿದ ಮಡಕೆಗಳು ಬಳಕೆಯಲ್ಲಿದ್ದವು.

ಕೊರಿಯದಲ್ಲಿ ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಉತ್ತರ ಏಷ್ಯದ ಪ್ರಭಾವ ಬೀರುವ ನವಶಿಲಾಯುಗ ಸಂಸ್ಕೃತಿಗಳು ತಲೆದೋರಿದುವು. ಮೊದಮೊದಲು ಬೇಟೆ ಮತ್ತು ಮೀನುಗಾರಿಕೆ ಇಲ್ಲಿಯ ಜನರ ಮುಖ್ಯ ಕಸಬು. ಕ್ರಮೇಣ ಮಣ್ಣಿನ ಪಾತ್ರೆಗಳ ಉಪಯೋಗವನ್ನೂ ಕಲ್ಲಿನ ಕಟ್ಟಡಕಲೆಯನ್ನೂ ಇವರು ಅರಿತರು. ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಕಂಚು ಮತ್ತು ಕಬ್ಬಿಣಗಳ ಬಳಕೆಯೂ ಅನಂತರ ವ್ಯವಸಾಯವೂ ರೂಢಿಗೆ ಬಂದುವು. ಪ್ರ.ಶ.ದ ಆರಂಭಕಾಲದಲ್ಲಿ ಜಪಾನ್ ಚೀನಗಳ ಪ್ರಭಾವ ಹೆಚ್ಚಿದಾಗ ಇಲ್ಲಿ ಐತಿಹಾಸಿಕ ಯುಗದ ಆರಂಭವಾಯಿತು.

ಜಪಾನಿನ ಅತ್ಯಂತ ಪುರಾತನ ಅವಶೇಷಗಳು ಪ್ರ.ಶ.ಪೂ. 3-2ನೆಯ ಸಹಸ್ರಮಾನಗಳ ನವಶಿಲಾಯುಗ ಸಂಸ್ಕೃತಿಗಳಿಗೆ ಸೇರಿದವು. ಈ ಸಂಸ್ಕೃತಿಗಳಲ್ಲಿ ಎರಡು ಹಂತಗಳುಂಟು. ಮೊದಲನೆಯದಾದ ಜಮೋನ್ ಸಂಸ್ಕೃತಿಯಲ್ಲಿ (ಪ್ರ.ಶ.ಪೂ. 2500-250) ಹಗ್ಗದ ಗುರುತಿರುವ ಮಡಕೆಗಳ ಉಪಯೋಗ ಗೊತ್ತಿದ್ದು ಇದು ಪೂರ್ವ ಸೈಬೀರಿಯದ ಸಂಸ್ಕೃತಿಗಳನ್ನು ಹೋಲುತ್ತದೆ. ಈ ಸಂಸ್ಕೃತಿಯ ಜನಕ್ಕೆ ವ್ಯವಸಾಯ ಗೊತ್ತಿರಲಿಲ್ಲ. ನಯಗೊಳಿಸಿದ ಕಲ್ಲಿನಾಯುಧಗಳು ಆಗ ಬಳಕೆಯಲ್ಲಿದ್ದವು. ಬೇಟೆ ಮತ್ತು ಮೀನುಗಾರಿಕೆ ಮುಖ್ಯ ಕಸಬು. ನೆಲದಲ್ಲಿ ತೋಡಿದ ಹಳ್ಳಗಳ ಮೇಲೆ ಭೂಮಿಯಲ್ಲಿ ನೆಟ್ಟ ಕಂಬದ ಸಹಾಯದಿಂದ ನಿಲ್ಲಿಸಿದ್ದ ಚಾವಣಿಗಳಿದ್ದ ಗುಡಿಸಲುಗಳಲ್ಲಿ ಇವರ ವಾಸ. ಎರಡನೆಯ ಯ ಯೋ ಇ ಸಂಸ್ಕೃತಿ ಕಾಲದಲ್ಲಿ (ಪ್ರ.ಶ.ಪೂ. 250-ಪ್ರ.ಶ. 250) ಇವರಿಗೆ ವ್ಯವಸಾಯದ ಪರಿಚಯವಾಯಿತು. ಬತ್ತದ ಬೇಸಾಯ ರೂಢಿಗೆ ಬಂದದ್ದು ಆಗ, ಸ್ವಲ್ಪ ಕಾಲಾನಂತರ ಕಂಚಿನ ಉಪಯೋಗ ತಿಳಿದುಬಂದು, ಪ್ರಗತಿಯ ವೇಗ ಹೆಚ್ಚಿತು. ಕುಂಬಾರಚಕ್ರದಿಂದ ತಯಾರಿಸಿದ ಮಡಕೆಗಳೂ ಬತ್ತದ ನೀರಾವರಿ ಬೇಸಾಯವೂ ಈ ಸಂಸ್ಕೃತಿಯ ಮುಖ್ಯಲಕ್ಷಣಗಳು. ಅನಂತರ ಈ ಪ್ರದೇಶ ಚೀನದ ದಾಳಿಗಳಿಗೆ ತುತ್ತಾಯಿತು. ಆಗ ಚರಿತ್ರಯುಗ ಪ್ರಾರಂಭವಾಯಿತೆನ್ನಬಹುದು. (ಬಿ.ಕೆ.ಜಿ.)

**ಏಷ್ಯದ ಭೂ ಇತಿಹಾಸ:** ಏಷ್ಯಖಂಡದ ಬೆಳೆವಣಿಗೆಯಲ್ಲಿ ಪರ್ವತಜನ್ಯ ಶಕ್ತಿಗಳು ಪ್ರಮುಖಪಾತ್ರ ವಹಿಸಿವೆ ಎಂದು ಭಾವಿಸಲಾಗಿದೆ. ಮೊದಲಿಗೆ ಅಲ್ಲಲ್ಲೇ ಶಾಶ್ವತಭೂಖಂಡಭಾಗಗಳು (ಷೀಲ್ಡ್) ಇದ್ದವು. ಭೂಇತಿಹಾಸದ ನಾನಾ ಯುಗಗಳಲ್ಲಿ ತಲೆದೋರಿದ ಪರ್ವತಜನ್ಯ ಶಕ್ತಿಗಳ ಪ್ರಭಾವದಿಂದ ವಿಸ್ತೀರ್ಣ ಅಭಿನತಿಗಳಲ್ಲಿ (ಜಿಯೊಸಿಂಕ್ಲೈನ್ಸ್) ಸಂಗ್ರಹವಾಗಿದ್ದ ನಿಕ್ಷೇಪಗಳು ಮೇಲಕ್ಕೆ ಎತ್ತಲ್ಪಟ್ಟು ವಿವಿಧ ತೆರನಾಗಿ ಮಡಿಕೆ ಬಿದ್ದು ಹೊಸ ಭೂಭಾಗಗಳಾಗಿ ಮಾರ್ಪಟ್ಟುವು. ಅಲ್ಲದೆ ಕ್ರಮೇಣ ಈ ಹೊಸ ಭೂಭಾಗಗಳು ಶಾಶ್ವತ ಭೂಖಂಡ ಕೇಂದ್ರಗಳೊಡನೆ ಮಿಲನಗೊಂಡು ಭೂಖಂಡದ ವಿಸ್ತೀರ್ಣ ಬೆಳೆಯುತ್ತ ಈಗಿನ ಖಂಡಭಾಗ ರೂಪುಗೊಂಡಿತೆಂದು ಊಹಿಸಲಾಗಿದೆ.

ಈ ಬೃಹತ್ ಖಂಡದ ಭೂ ಇತಿಹಾಸವನ್ನು ತಿಳಿಯಲು ಅದನ್ನು ಎಂಟು ಭಾಗಗಳಾಗಿ ವಿಭಜಿಸಲಾಗಿದೆ:-1 ಅರೇಬಿಯ ಪರ್ಯಾಯದ್ವೀಪ ಮತ್ತು ಇರಾಕ್ ಬಯಲು, 2 ಭಾರತ ಪರ್ಯಾಯದ್ವೀಪ ಮತ್ತು ಸಿಂಧೂ-ಗಂಗಾಬಯಲು, 3 ತುರ್ಕಿಕಕೇಸಿಯ, ಇರಾನ್ ಮತ್ತು ಆಫ್ಘಾನಿಸ್ತಾನ್ ಪರ್ವತಶ್ರೇಣಿ, 4 ಬಲೂಚಿಸ್ತಾನದಿಂದ ಬರ್ಮದವರೆಗೆ ಹಬ್ಬಿರುವ ಹಿಮಾಲಯ ಪರ್ವತಶ್ರೇಣಿ, 5 ಮಧ್ಯ ಏಷ್ಯ, 6 ಏಷ್ಯಾಟಿಕ್ ರಷ್ಯದ ತಗ್ಗುಪ್ರದೇಶಗಳು, 7 ಪೆಸಿಫಿಕ್ ತೀರಪ್ರದೇಶಗಳು, 8 ದ್ವೀಪಸ್ತೋಮಗಳು.

**1. ಅರೇಬಿಯ ಪರ್ಯಾಯದ್ವೀಪ ಮತ್ತು ಇರಾಕ್ ಬಯಲು ಪ್ರದೇಶ:** ಪೂರ್ವಕೇಂಬ್ರಿಯನ್ ಶಿಲೆಗಳು ಕೆಂಪು ಸಮುದ್ರದ ತೀರದುದ್ದಕ್ಕೂ ಕೇಂದ್ರ ಅರೇಬಿಯದಲ್ಲೂ ವಿಸ್ತಾರವಾಗಿ ಹರಡಿವೆ. ಅಲ್ಲದೆ ಕೇಂಬ್ರಿಯನ್ ಕಾಲದಿಂದೀಚಿನ ಇತರ ಭೂಯುಗಗಳ ಜಲಜಶಿಲೆಗಳೂ ನಿಕ್ಷೇಪಗೊಂಡಿವೆ. ಇವುಗಳಲ್ಲಿ ಮಿಸೊಜೋಯಿಕ್ ಮತ್ತು ಟರ್ಷಿಯರಿ ಯುಗದ ನಿಕ್ಷೇಪಗಳು ಅತ್ಯಂತ ಉತ್ತಮರೀತಿಯಲ್ಲಿ ಕಂಡುಬರುತ್ತವೆ. ಇವು ಜೋರ್ಡನ್, ತುರ್ಕಿ ಮತ್ತು ಇರಾನ್‍ಗಳಲ್ಲಿ ಕಮಾನಿನಂತೆ ಮೇಲಕ್ಕೆ ಎತ್ತಲ್ಪಟ್ಟಿವೆ. ಶಿಲಾಪ್ರಸ್ತರಗಳು ತಮ್ಮ ಜಾಡಿನಲ್ಲಿ ಹಲವೆಡೆ ಭಂಗಗೊಂಡಿರುವುದೂ ಉಂಟು. ಮಧ್ಯ ಏಷ್ಯದ ಪ್ರಸಿದ್ಧ ತೈಲಪ್ರದೇಶಗಳು ಹರಡಿರುವುದು ಈ ಭಾಗದಲ್ಲೇ. ಈ ಪ್ರದೇಶದ ಬಹುಮುಖ್ಯ ರಚನಾ ವೈವಿಧ್ಯವೆಂದರೆ ಟರ್ಷಿಯರಿ ಯುಗದ ಕಮರಿಗಳ ಶ್ರೇಣಿ. ಕೆಂಪು ಸಮುದ್ರ, ಮೃತ್ಯುಸಮುದ್ರ, ಮತ್ತು ಜೋರ್ಡನ್ ಕಣಿವೆಗಳು ಈ ಶ್ರೇಣಿಯವು. ಇವುಗಳಿಗೆ ಸಂಬಂಧಿಸಿದಂತೆ ತೀವ್ರ ರೀತಿಯಲ್ಲಿ ಜ್ವಾಲಾಮುಖಿಗಳ ಕಾರ್ಯಾಚರಣೆಯೂ ಉಂಟಾಯಿತು. ಹೀಗಾಗಿ ಯೆಮನ್‍ನಲ್ಲಿ 3742ಮೀ ಉತ್ತರ ಹೆಜಾಸಿನಲ್ಲಿ 2851ಮೀ ಮತ್ತು ದಕ್ಷಿಣ ಸಿರಿಯದಲ್ಲಿ 660ಮೀ ಮಂದದ ಲಾವಾಪ್ರಸ್ತರಗಳ ಶ್ರೇಣಿಗಳಿವೆ. ಅನೇಕ ಕಡೆ ಈ ಶ್ರೇಣಿಗಳು ಸ್ತರಭಂಗಗಳಿಗೆ ಒಳಗಾಗಿವೆ.

**2. ಭಾರತ ಪರ್ಯಾಯದ್ವೀಪ ಮತ್ತು ಸಿಂಧೂ-ಗಂಗಾ ಬಯಲು:** ಪೂರ್ವ ಕೇಂಬ್ರಿಯನ್ ಕಾಲದಿಂದಲೂ ಪರ್ಯಾಯದ್ವೀಪಭಾಗ ಭೂಖಂಡವೆನಿಸಿದೆ. ಮುಂದೆ ತೀವ್ರಸ್ತರಭಂಗ ಮತ್ತು ಭೂಹೊರಚಿಪ್ಪಿನ ರಚನೆಯಲ್ಲಾದ ಬದಲಾವಣೆಗಳು ಈ ಭೂಭಾಗದ ಶಿಲಾವಿನ್ಯಾಸವನ್ನು ಸಾಕಷ್ಟು ಕ್ಲಿಷ್ಟಗೊಳಿಸಿವೆ. ಪರ್ಯಾಯದ್ವೀಪದ ಬಹುಭಾಗ ಗೀರುಶಿಲೆ (ನೈಸ್) ಮತ್ತು ಕಣಶಿಲೆ (ಗ್ರಾನೈಟ್) ಗಳಿಂದ ಆವೃತವಾಗಿದೆ.

ಮಧ್ಯ ಭಾರತದ ಹಲವಾರು ಕಡೆ ಕಾರ್ಬಾನಿಫೆರಸ್ ಯುಗದ ಅಂತ್ಯದಿಂದ ಹಿಡಿದು ಕ್ರಿಟೇಷಿಯಸ್ ಯುಗದ ಮೊದಲ ಹಂತದವರೆಗಿನ ಗೊಂಡ್ವಾನ ಕಾಲದಲ್ಲಿ ಉಂಟಾದ ಭೂಚಟುವಟಿಕೆಗಳ ನಿಮಿತ್ತ ಶಿಲಾಪ್ರಸ್ತರಗಳು ಅಲ್ಲಲ್ಲೇ ಕುಸಿದು ಬೃಹದಾಕಾರದ ಇಳುಕಲುಗಳುಂಟಾದವು. ನದಿಗಳು ಕೊಚ್ಚಿ ತಂದ ಮರಳು, ಮಣ್ಣು ಮತ್ತು ಮೆಕ್ಕಲಿನೊಡನೆ ಸಸ್ಯವರ್ಗಗಳ ಭಾಗಗಳೂ ಈ ಭೂತೊಟ್ಟಿಗಳಲ್ಲಿ ನಿಕ್ಷೇಪಹೊಂದಿ ಕಾಲಕ್ರಮೇಣ ಕಲ್ಲಿದ್ದಲಿನ ನಿಕ್ಷೇಪಗಳಾಗಿ ರೂಪಾಂತರಗೊಂಡುವು. ಇವುಗಳಲ್ಲಿ ಬಹು ಪ್ರಸಿದ್ಧವಾದುದು ದಾಮೋದರ್ ಕಣಿವೆಯ ಪ್ರದೇಶ. ಇದೇ ಕಾಲದಲ್ಲಿ ಪೂರ್ವ ಮತ್ತು ಪಶ್ಚಿಮ ತೀರಪ್ರದೇಶಗಳನ್ನು ಸಮುದ್ರ ಪದೇ ಪದೇ ಆವರಿಸಿಕೊಂಡಿತ್ತು. ಮುಂದೆ ಈಗಿನ ಪುಣೆ-ಮುಂಬೈ ಪ್ರದೇಶದಲ್ಲಿ ಅಸಂಖ್ಯಾತ ಬಿರುಕುಗಳ ಮೂಲಕ ಬೆಸಾಲ್ಟ್ ಲಾವಾಪ್ರವಾಹಗಳು ಹೊರಹೊಮ್ಮಿ ಸುಮಾರು 3,22,000ಚಕಿಮೀ ವಿಸ್ತಾರವಾದ ಪ್ರದೇಶವನ್ನು ಆವರಿಸಿದುವು. ಇಂದಿಗೂ ಈ ಪ್ರಾಂತ್ಯದಲ್ಲಿ ಕರಿಯ ಶಿಲೆಯ, ಮೆಟ್ಟಿಲುಮೆಟ್ಟಿಲಾಗಿರುವ, ಬೆಟ್ಟಸಾಲುಗಳನ್ನು ನೋಡಬಹುದು.

ಪರ್ಯಾಯದ್ವೀಪದ ಪಶ್ಚಿಮ ಮತ್ತು ಪೂರ್ವತೀರಗಳುದ್ದಕ್ಕೂ ಬೆಟ್ಟಸಾಲುಗಳಿವೆ. ಇವೇ ಪಶ್ಚಿಮಘಟ್ಟಗಳು ಮತ್ತು ಪೂರ್ವಘಟ್ಟಗಳು. ಇವು ಕಬ್ಬಿಣ, ಬೆಣಚು, ಪ್ರಸ್ತರೀಶಿಲೆ, ಗ್ರಾನೈಟ್, ಚಾರ್ನಕೈಟ್ ಇತ್ಯಾದಿ ಶಿಲೆಗಳನ್ನು ಹೊಂದಿವೆ. ಸಾಮಾನ್ಯವಾಗಿ ಸಮುದ್ರಮಟ್ಟದಿಂದ 910ಮೀ-1517ಮೀ ಎತ್ತರ ಮುಟ್ಟಿವೆ. ಇವಲ್ಲದೆ ಛೋಟಾನಾಗಪುರ ಮತ್ತು ಷಿಲ್ಲಾಂಗ್ ಪ್ರಸ್ಥಭೂಮಿಗಳನ್ನೂ ಹೆಸರಿಸಬೇಕು. ಇವು ಸುಮಾರು 607ಮೀ-910ಮೀ ಎತ್ತರವಿವೆ.

ಆರಾವಳಿ ಮತ್ತು ವಿಂಧ್ಯಪರ್ವತಗಳಿರುವುದೂ ಈ ಭಾಗದಲ್ಲೇ ಇವುಗಳ ಉತ್ತರಕ್ಕೆ ಬಹು ವಿಸ್ತಾರವಾದ ಸಿಂಧೂ-ಗಂಗಾ ಬಯಲು ಪ್ರದೇಶವಿದೆ. ಇದು ಉತ್ತಮ ಬಗೆಯ ನದೀ ಮೆಕ್ಕಲಿನಿಂದ ಕೂಡಿದೆ.

**3. ತುರ್ಕಿ, ಇರಾನ್ ಮತ್ತು ಆಫ್ಘಾನಿಸ್ತಾನ್:** ಈ ಭೂಭಾಗ ಮಡಿಕೆಬಿದ್ದು ಅಸ್ತವ್ಯಸ್ತವಾಗಿರುವ ಅಸಂಖ್ಯಾತ ಶಿಲಾಶ್ರೇಣಿಗಳಿಂದ ಕೂಡಿದೆ. ಅಲ್ಲಲ್ಲೆ ಸ್ತರಭಂಗಗಳಿಂದುಂಟಾದ ಚಚ್ಚೌಕಾಕೃತಿಯ ಪರ್ವತಗಳನ್ನೂ (ಬ್ಲಾಕ್ ಮೌಂಟನ್ಸ್) ವಿಶಾಲವಾದ ಇಳುಕಲುಗಳನ್ನೂ ನೋಡಬಹುದು, ಉತ್ತರ ಇರಾನಿನ ಎಲ್‌ಬುರ್ಸ್ ಮತ್ತು ಕೋಪೆಡಾಗ್ ಪರ್ವತಶ್ರೇಣಿಗಳು ಪೂರ್ವದಿಕ್ಕಿನತ್ತ ಆಫ್ಘಾನಿಸ್ತಾನದ ಹಿಂದೂಕುಷ್ ಪರ್ವತದ ಕಡೆಗೆ ತಮ್ಮ ಜಾಡನ್ನು ಹರಿಸಿವೆ. ದಕ್ಷಿಣದಲ್ಲಿ ಬಹು ವಿಶಾಲವಾದ ಜಾಗ್ರೋಸ್ ಶ್ರೇಣಿ ಇದೆ. ಇದರಲ್ಲಿ 1556ಮೀ ಗಳಿಗೂ ಮೀರಿದ ಎತ್ತರದ ಹಲವಾರು ಶಿಖರಗಳಿವೆ. ಇದರ ಜಾಡು ವಾಯವ್ಯ- ಆಗ್ನೇಯವಾಗಿದ್ದು ಇರಾನ್, ಮಯನ್ಮಾರ್ ಮತ್ತು ಬಲೂಚಿಸ್ತಾನಗಳಲ್ಲೆಲ್ಲ ಪ್ರಸರಿಸಿದೆ. ಮಧ್ಯ ಏಷ್ಯದ ಪ್ರಮುಖ ತೈಲಕ್ಷೇತ್ರಗಳಿಗೂ ಜಾಗ್ರೋಸ್ ಶ್ರೇಣಿಗೂ ನಿಕಟಸಂಬಂಧ. ಅದರಲ್ಲೂ ಅರೇಬಿಯನ್ ಪ್ರಸ್ಥಭೂಮಿಗೆ ಒತ್ತಿನಿಂತಿರುವ ಈ ಶ್ರೇಣಿಯ ಅಲೆಯಾಕೃತಿಯ ಮಡಿಕೆಗಳು ಈ ದೃಷ್ಟಿಯಲ್ಲಿ ಬಹು ಪ್ರಮುಖಸ್ಥಾನವನ್ನಾಕ್ರಮಿಸಿವೆ. ಅಲ್ಲದೆ ಈ ಶ್ರೇಣಿಗಳಲ್ಲಿ ಹಲವಾರು ಲವಣ ಇಳುಕಲುಗಳೂ ಜ್ವಾಲಾಮುಖಿಗಳೂ ಇವೆ.

ತುರ್ಕಿಯ ಭೂವಿನ್ಯಾಸ ಕ್ಲಿಷ್ಟವಾದುದು. ಇದರಲ್ಲಿ ಪ್ಲಿಯೊಸೀನ್ ಕಾಲದ 5140ಮೀ ಎತ್ತರದ ಮೌಂಟ್ ಅರಾರಟ್ ಜ್ವಾಲಾಮುಖಿ ಶಿಖರವೇ ಸರಳವಾದ ರಚನೆಯುಳ್ಳದ್ದೆಂದು ಭೂವಿಜ್ಞಾನಿಗಳ ಅಭಿಪ್ರಾಯ. ಈ ಕೇಂದ್ರದಿಂದ ಉಗಮವಾಗುವ ಆಂಟಿ-ಟಾರಸ್ ಮತ್ತು ಟಾರಸ್ ಪರ್ವತಗಳು ಮೆಡಿಟರೇನಿಯನ್ ತೀರದುದ್ದಕ್ಕೂ ಪಾಂಟಕ್ ಪರ್ವತ ಕಪ್ಪು ಸಮುದ್ರದುದ್ದಕ್ಕೂ ಹಬ್ಬಿವೆ. ಈ ಶ್ರೇಣಿಯ ಅನಟೋಲಿಯನ್ ಪ್ರಸ್ಥಭೂಮಿಯಲ್ಲಿ ಅಸಂಖ್ಯಾತ ತಗ್ಗುಗಳಿವೆ. ಇವುಗಳಲ್ಲಿ ಟುಜ್ ಮತ್ತು ವಾನ್ ಎಂಬ ಕ್ಷಾರಸರೋವರಗಳನ್ನು ಹೆಸರಿಸಬಹುದು. ಕಪ್ಪು ಸಮುದ್ರದ ಜೋಂಗುಲ್ ಡಾಕ್ ಎಂಬಲ್ಲಿ ಬಹುಪ್ರಸಿದ್ಧವಾದ ಕಾರ್ಬಾನಿಫೆರಸ್ ಯುಗದ ಕಲ್ಲಿದ್ದಲ ನಿಕ್ಷೇಪಗಳಿವೆ. ಇತರೆಡೆಗಳಲ್ಲಿ ಕ್ರೋಮ್ ಮತ್ತು ಮ್ಯಾಂಗನೀಸ್ ಅದಿರುಗಳ ವಿಶಾಲ ನಿಕ್ಷೇಪಗಳಿವೆ. ಈ ಭೂಭಾಗದಲ್ಲಿ ಆಗಾಗ್ಗೆ ಆಗುತ್ತಿದ್ದ ಭೂಕಂಪನಗಳು ಪ್ರದೇಶದ ಅಸ್ಥಿರತೆಯನ್ನು ಸೂಚಿಸುತ್ತವೆ.

**4. ಹಿಮಾಲಯ ಶ್ರೇಣಿ:** ಪೂರ್ವ-ಪಶ್ಚಿಮದುದ್ದಕ್ಕೂ ಹಿಮಾಲಯ ಸುಮಾರು 2415ಕಿಮೀ ಹಬ್ಬಿದೆ. ಈ ಜಾಡಿನುದ್ದಕ್ಕೂ ಇದನ್ನು ಐದು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಉತ್ತರದಲ್ಲಿನ ಟಿಬೆಟ್ ಪ್ರಸ್ಥಭೂಮಿಗೂ ಈ ಶ್ರೇಣಿಗೂ ನಡುವೆ ಮೇಲಿನ ಸಿಂಧೂ ಮತ್ತು ಬ್ರಹ್ಮಪುತ್ರ ಕಣಿವೆಗಳಿವೆ. ಇದರ ದಕ್ಷಿಣಕ್ಕೆ ಬೃಹದ್ ಹಿಮಾಲಯ ಶ್ರೇಣಿ ಪ್ರಾರಂಭವಾಗುತ್ತದೆ. ಶ್ರೇಣಿಯಲ್ಲಿ 7280ಮೀ ಗಳಿಗೂ ಮೀರಿದ ಎತ್ತರದ 60 ಶಿಖರಗಳಿವೆ. ಇವುಗಳಲ್ಲಿ ಬಹುಮುಖ್ಯವಾದುವು : ಎವರೆಸ್ಟ್ ಅಥವಾ ಗೌರೀಶಂಕರ (8805ಮೀ), ನಂಗಾಪರ್ವತ (8087ಮೀ) ಮತ್ತು ನಾಮ್‌ಚೆಬರ್ವ (7719ಮೀ). ಇವುಗಳ ದಕ್ಷಿಣದತ್ತ ಹಲವಾರು ಮೊನಚಾದ ಬೆಟ್ಟದ ಚಾಚುಗಳೂ ಆಳವಾದ ಕಣಿವೆಗಳೂ ಇವೆ. ಇಲ್ಲಿನ ಮುಖ್ಯ ಶಿಖರಗಳ ಎತ್ತರ 4550ಮೀ. ಮತ್ತೂ ದಕ್ಷಿಣಕ್ಕೆ ಕೆಳ ಹಿಮಾಲಯ ಶ್ರೇಣಿ ಇದೆ. ಇಲ್ಲಿ ಕೆಲವು ಶಿಖರಗಳು 3640ಮೀ ಎತ್ತರವನ್ನು ಮುಟ್ಟಿವೆ. ಹಲವಾರು ತಗ್ಗು ಪ್ರದೇಶಗಳೂ ಇವೆ. ಇವುಗಳಲ್ಲಿ ಮುಖ್ಯವಾದುದು ಕಾಶ್ಮೀರ ಕಣಿವೆ. ಇದರ ದಕ್ಷಿಣದ ಪರ್ವತಶ್ರೇಣಿಯ ಎತ್ತರ ಬಹುಮಟ್ಟಿಗೆ ಕುಗ್ಗಿ ಕೇವಲ 1925ಮೀ ಎತ್ತರದ ಶಿವಾಲಿಕ್ ಬೆಟ್ಟಗಳ ಸಾಲಾಗಿದೆ. ಇದು ಬಹುತೇಕ ಮಧ್ಯ ಪ್ಲೀಸ್ಟೊಸೀನ್ ಯುಗದಲ್ಲಿ ಮೇಲುಮೇಲಕ್ಕೆ ಏರುತ್ತಿದ್ದ ಹಿಮಾಲಯ ಪರ್ವತಶ್ರೇಣಿಗಳ ಸವೆತದಿಂದ ದೊರೆತ ಶಿಲಾಚೂರುಗಳಿಂದ ಕೂಡಿದೆ.

**5. ಮಧ್ಯ ಏಷ್ಯ:** ಇದರಲ್ಲಿ ಮುಖ್ಯವಾದ ಟಿಬೆಟ್ ಪ್ರಸ್ಥಭೂಮಿ 4853ಮೀ ಎತ್ತರವನ್ನು ಮುಟ್ಟಿದೆ. ಇಲ್ಲಿಯ ಕಾರಕೋರಂ ಪರ್ವತಶ್ರೇಣಿಯ ಗಾಡ್ವಿನ್-ಆಸ್ಟಿನ್ (K-2) ಶಿಖರ 8569ಮೀ ಎತ್ತರವಿದೆ. ಪಾಮಿರ್ ಮತ್ತು ಟಿಯನ್-ಷಾನ್ ಶ್ರೇಣಿಗಳಲ್ಲಿ 6067ಮೀ ಗಳಿಗೂ ಮೀರಿದ ಶಿಖರಗಳುಂಟು. ಅಲ್ಲದೆ 2730ಮೀ ಆಳದ ತಗ್ಗು ಪ್ರದೇಶಗಳೂ ಇವೆ. ಇದಕ್ಕೆ ಉತ್ತಮ ಉದಾಹರಣೆ ಚೀನದ ಸಿಂಘಾಯ್ ಪ್ರಾಂತ್ಯದ ಸ್ಯೆಡಂ ತಗ್ಗು. ಪ್ರಸಿದ್ಧವಾದ ಟುರ್‌ಫಾನ್ ಓಯಸಿಸ್ ಸಮುದ್ರಮಟ್ಟಕ್ಕೆ 297ಮೀ ತಗ್ಗಿನಲ್ಲಿದೆ. ವಾಯವ್ಯದ ಭಾಗದಲ್ಲಿ ಗೋಬಿ ಮರುಭೂಮಿ ಇದೆ.

**6. ಏಷ್ಯಾಟಿಕ್ ರಷ್ಯದ ತಗ್ಗು ಪ್ರದೇಶಗಳು:** ಈ ವಿಭಾಗದ ಕೇಂದ್ರ ಸೈಬೀರಿಯನ್ ಪ್ರಸ್ಥಭೂಮಿ ಲೇನಾ ಮತ್ತು ಏನಿಸೈ ಕಣಿವೆಗಳ ಮಧ್ಯೆ 910ಮೀ ಗಳಿಗೂ ಕಡಿಮೆ ಎತ್ತರವಾಗಿದೆ. ಏನಿಸೈನ ಪಶ್ಚಿಮಕ್ಕಿರುವ ಪಶ್ಚಿಮ ಸೈಬೀರಿಯನ್ ಬಯಲಿನಲ್ಲಿ ಮಡಿಕೆ ಬೀಳದೆ ಮೀಸೋಜ಼ೋಯಿಕ್ ಮತ್ತು ಟರ್ಷಿಯರಿ ನಿಕ್ಷೇಪಗಳಿವೆ. ಇವು ಯೂರಲ್ ಶ್ರೇಣಿಯ ತನಕ ಹಬ್ಬಿವೆ. ಈ ಭೂಭಾಗ ಸಾಮಾನ್ಯವಾಗಿ ಜೌಗುಪ್ರದೇಶ. ಇದರಲ್ಲಿ ಬಹು ಪ್ರಸಿದ್ಧವಾದುದು ವಾಸ್ಯು ಜೇನ್ ಜೌಗುಪ್ರದೇಶ. ಆಗ್ನೇಯ ಭಾಗದ ಕುಸ್ನೆಸ್ಕ್ ಮತ್ತು ಮಿನುಸಿನ್‌ಸ್ಕ್ ತಗ್ಗುಗಳಲ್ಲಿ ಪೇಲಿಯೊ ಜ಼ೋಯಿಕ್ ಯುಗದ ಕಲ್ಲಿದ್ದಲ ನಿಕ್ಷೇಪಗಳಿವೆ. ಇವು ಅಲ್ಟಾಯ್ ಮತ್ತು ಸಾಯನ್ ಪರ್ವತಶ್ರೇಣಿಗಳ ತಪ್ಪಲು. ದಕ್ಷಿಣದಲ್ಲಿ ಕಷಾಕ್ ದಿಬ್ಬ ಪ್ರದೇಶವಿದೆ. ಇದರ ಸಾಮಾನ್ಯ ಎತ್ತರ 303ಮೀ ಕ್ಯಾಸ್ಪಿಯನ್ ಸಮುದ್ರದ ಉತ್ತರ ತೀರ ಪ್ರದೇಶದಲ್ಲಿ ತೈಲಕೇಂದ್ರಗಳಿವೆ.

**7. ಪೆಸಿಫಿಕ್ ತೀರಪ್ರದೇಶಗಳು:** ಪೂರ್ವ ಸೈಬೀರಿಯದಿಂದ ಪ್ರಾರಂಭವಾಗಿ ಚೀನದ ಮೂಲಕ ಹಾದು ಮಲೇಷಿಯವನ್ನು ಮುಟ್ಟುವ ಈ ಭೂಭಾಗದಲ್ಲಿ ವಿವಿಧ ವಿನ್ಯಾಸದ ಪ್ರದೇಶಗಳಿವೆ. ಲೇನಾದ ಪೂರ್ವಕ್ಕಿರುವ ವೆರ್ಖೋಯಾನ್‌ಸ್ಕ್ ಮತ್ತು ಚೆರ್‌ಸ್ಕಿ ಶ್ರೇಣಿಗಳು 2487ಮೀ ಗಳಿಗೂ ಮೀರಿ ಎತ್ತರವಾಗಿವೆ. ಕಾಮ್‌ಚಾಟ್ಕ ಪ್ರದೇಶದ 4550ಮೀ ಎತ್ತರದಲ್ಲಿ ಜ್ವಾಲಾಮುಖಿಗಳಿವೆ.

ಚೀನದಲ್ಲಿ ಯೆನ್-ಷಾನಿಯನ್ ಪರ್ವತಜನ್ಯ ಯುಗಕ್ಕೆ ಒಳಗಾಗಿ ಭೂಭಾಗ ಪುನರುಜ್ಜೀವನಗೊಂಡು ಸ್ತರಭಂಗಗಳ ಪ್ರಭಾವದಿಂದ ಚಚ್ಚೌಕಾಕೃತಿಯ ಬೆಟ್ಟಗಳೂ ಇತ್ತೀಚೆಗೆ ತಲೆದೋರಿದ ಮೆಕ್ಕಲು ಪ್ರದೇಶಗಳೂ ಅಕ್ಕಪಕ್ಕದಲ್ಲಿವೆ. ಮಂಚೂರಿಯ ಬಯಲಿನ ಇಕ್ಕೆಗಳಲ್ಲಿ ಖಿಂಗನ್, ಜೆಹೋಲ್, ಲಿಯೊಟುಂಗ್ ಮೊದಲಾದ ತಲೆಕೆಳಗಾದ ವಿನ್ಯಾಸವುಳ್ಳ ಚಚ್ಚೌಕಾಕೃತಿಯ ಭೂಭಾಗಗಳನ್ನು ಗುರುತಿಸಬಹುದು.

ಕೊರಿಯದಲ್ಲಿ ಭೂಚಟುವಟಿಕೆಗಳಿಂದ ಛೇದಿತವಾದ ಪ್ರಸ್ಥಭೂಮಿಗಳೂ ಮೀಸೋಜ಼ೋಯಿಕ್ ಮಡಿಕೆಗಳೂ ಇವೆ. ಆಗ್ನೇಯ ಚೀನ ಸಹ ಹೆಚ್ಚಿನ ರೀತಿಯ ಸ್ತರಭಂಗಗಳಿಗೆ ಒಳಗಾಗಿದೆ. ಇಲ್ಲಿನ ಪೋ'ಯಾಂಗ್, ಟುಂಗ್ ಟಿಂಗ್ ಸರೋವರಗಳು ಮತ್ತು ಸಿಕಿಯಾಂಗ್ ಕಣಿವೆ ಜೇಡು ಮತ್ತು ಸ್ಲೇಟ್ ಶಿಲಾಪ್ರಸ್ತರಗಳಿಂದ ಆವೃತವಾದ ತಗ್ಗುಪ್ರದೇಶಗಳಲ್ಲಿವೆ. ಪಶ್ಚಿಮದತ್ತ ಸರಿದರೆ ಬಹು ಆಳವಾಗಿ ಛೇದಿತವಾದ ಕಣಿವೆಗಳನ್ನು ಹಾದುಹೋಗಬೇಕು, ಅನಂತರ 1820ಮೀ ಎತ್ತರದ ಪಶ್ಚಿಮ ಯುನಾನ್ ಪ್ರಸ್ಥಭೂಮಿ ಸಿಗುತ್ತದೆ. ಇದಕ್ಕೆ ಉತ್ತರದಲ್ಲಿ ಕಡಿದಾದ ಸಿನ್‌ಲಿಂಗ್ ಷಾನ್ ಪರ್ವತಶ್ರೇಣಿ ಇದೆ.

ಪರ್ಮಿಯನ್ ಯುಗದಿಂದೀಚೆಗೆ ಶಾಶ್ವತ ಭೂಖಂಡವೆನಿಸಿದ ಓರ್ ಡೋಸ್ ಪ್ರಸ್ಥಭೂಮಿ. ವಾಯವ್ಯ ಚೀನದ ಕೇಂದ್ರ ಭಾಗವೇ ಇಲ್ಲಿ ಪುರಾತನ ನೆಲಭಾಗದ ನಿಕ್ಷೇಪಗಳನ್ನೂ ಎತ್ತರವಾಗಿರುವ ಮತ್ತು ಯಾವ ತೆರನಾದ ಭೂ ಚಟುವಟಿಕೆಗಳಿಗೂ ಒಳಗಾಗಿ ಅಸ್ತವ್ಯಸ್ತಗೊಂಡಿರದ ಲೋಯೆಸ್ ಎಂಬ ಒಂದು ಬಗೆಯ ಹಳದಿ ದೂಳು ಮಣ್ಣಿನ ನಿಕ್ಷೇಪಗಳಿವೆ. ಲೋಯೆಸ್ ಭಾಗದಲ್ಲಿ ಪ್ರಸಿದ್ಧವಾದ ಹಳದಿ ನದಿ, ಯಾಂಗಿಟ್ಸಿ ಬಯಲು, ಸರೋವರಗಳು ಮತ್ತು ನೈಸರ್ಗಿಕ ಕಾಲುವೆಗಳೂ ಇವೆ.

ದಕ್ಷಿಣಭಾಗದ ಯುನಾನ್ ಪ್ರಸ್ಥಭೂಮಿ ಬರ್ಮ ಮತ್ತು ಇಂಡೊ-ಚೀನಗಳಿಗೂ ವ್ಯಾಪಿಸಿದೆ. ಮಯನ್ಮಾರ್‌ನಲ್ಲಿ ಇದನ್ನು ಷಾನ್ ಪ್ರಸ್ಥಭೂಮಿ ಎನ್ನುತ್ತಾರೆ. ಇದರಲ್ಲಿ ಅನೇಕ ಕಡೆ ಸಲ್‌ವೀನ್ ಮತ್ತು ಮೆಕಾಂಗ್ ನದಿಗಳಿಂದಾದ ಆಳವಾದ ಕಣಿವೆಗಳಿವೆ.

**8. ದ್ವೀಪಸ್ತೋಮಗಳು:** ಇಂಡೋನೇಷ್ಯದಿಂದ ಜಪಾನ್ ತನಕ ಹಬ್ಬಿರುವ ಈ ಭೂಭಾಗ ಬಹು ಅಸ್ಥಿರವಾದುದು. ಈ ಪ್ರದೇಶದಲ್ಲಿ ಅಸಂಖ್ಯಾತ ಜ್ವಾಲಾಮುಖಿಗಳೂ ಅವುಗಳಿಗೆ ಸಂಬಂಧಿಸಿದ ದ್ವೀಪಗಳೂ ಇವೆ. ಪರ್ವತಜನ್ಯ ಶಕ್ತಿಗಳ ಚಟುವಟಿಕೆಯೂ ಬಹು ತೀವ್ರ. ಮಲೇಷಿಯ ಮತ್ತು ಬೋರ್ನಿಯೊಗಳಲ್ಲಿ ಮೀಸೊಝೋಯಿಕ್ ಶಿಲೆಗಳೂ ಉಳಿದೆಡೆ ಟರ್ಷಿಯರಿ ನಿಕ್ಷೇಪಗಳೂ ಮಡಿಕೆಗಳೂ ಕಂಡುಬಂದಿವೆ. ಇವುಗಳಲ್ಲಿ ತೈಲಪ್ರದೇಶಗಳೂ ಇವೆ. ಇಂಡೋನೇಷ್ಯದಲ್ಲಿ ಹಲವು ಜ್ವಾಲಾಮುಖಿಗಳ ಶಿಖರಗಳು 3033ಮೀಗಳ ಎತ್ತರವನ್ನೂ ಮೀರಿವೆ. ಅಗ್ನಿ ಪರ್ವತಗಳ ತೀವ್ರಗತಿಯ ಕಾರ್ಯಾಚರಣೆ ಇದ್ದೂ ಭೂಭಾಗ ಮಡಿಕೆ ಬೀಳದೆ ಅಲ್ಲಿನ ಶಿಲಾಪ್ರಸ್ತರಗಳ ಜಾಡಿನಲ್ಲಿ ಭಂಗವಾಗದಿರುವುದು ಜಪಾನಿನ ಭೂವಿನ್ಯಾಸದ ವೈಶಿಷ್ಟ್ಯ. ಇಲ್ಲಿಯ ಅತ್ಯಂತ ದೊಡ್ಡ ಭೂ ಇಳುಕಲಿನಲ್ಲಿ 3758ಮೀ ಎತ್ತರದ ಫೂಜಿಯಾಮ ಅಗ್ನಿಪರ್ವತವಿದೆ. ಪೂರ್ವಭಾಗದಲ್ಲಿ ಮಡಿಕೆ ಬಿದ್ದಿರುವ ಮತ್ತು ಸ್ತರಭಂಗಗಳಿಂದ ಛೇದಿತವಾದ ಪ್ರಾಚೀನ ಶಿಲಾಪ್ರಸ್ತರಗಳ ಮೇಲೆ ಕಡಿದಾದ ಪರ್ವತಶ್ರೇಣಿ ಇದೆ. ಪಶ್ಚಿಮದತ್ತ ಸ್ತರಭಂಗಗಳಿಗೊಳಗಾಗದ ಕಿರಿಯ ನಿಕ್ಷೇಪಗಳೂ ಅಸಂಖ್ಯಾತ ಅಗ್ನಿ ಪರ್ವತಗಳೂ ಇವೆ. (ಬಿ.ವಿ.ಜಿ.)

**ಏಷ್ಯದ ಮಾನವ ಬುಡಕಟ್ಟುಗಳು:** ಏಷ್ಯದಲ್ಲಿ ಮುಖ್ಯವಾಗಿ ಕಾಕೇಶಿಯನ್, ಮಂಗೋಲ್ ಮತ್ತು ನೀಗ್ರೊ ಎಂಬ ಮೂರು ಬುಡಕಟ್ಟುಗಳಿವೆ. ಪ್ರತಿಯೊಂದು ಬುಡಕಟ್ಟಿನಲ್ಲೂ ಬೇರೆ ಬೇರೆ ವಿಭಾಗಗಳೂ ಉಪವಿಭಾಗಗಳೂ ಇವೆ. ಕಾಕೇಶಿಯನ್ ಬುಡಕಟ್ಟಿನಲ್ಲಿ ನಾರ್ಡಿಕ್, ಆಲ್ಪೈನ್ ಮತ್ತು ಮೆಡಿಟರೇನಿಯನ್; ಮಂಗೋಲಿಯನ್ ಬುಡಕಟ್ಟಿನಲ್ಲಿ ಮಂಗೋಲಿಯನ್, ಮಲೆಸಿಯನ್ ಮತ್ತು ಅಮೆರಿಕನ್ ಇಂಡಿಯನ್; ನೀಗ್ರೊ ಬುಡಕಟ್ಟಿನಲ್ಲಿ ಆಫ್ರಿಕದ ನೀಗ್ರೊ, ಮಲನೇಸಿಯ ಕಾಂಗೋದ ಪಿಗ್ಮಿ, ಏಷ್ಯದ ಪಿಗ್ಮಿ ಮತ್ತು ಹೋಟೆಂಟಾಟ್-ಇವು ವಿಭಾಗಗಳು. ಜನರ ಬಾಹ್ಯ ಲಕ್ಷಣಗಳೂ ಸಂಸ್ಕೃತಿಯೂ ಒಂದೊಂದರಲ್ಲಿಯೂ ಬೇರೆಬೇರೆಯಾಗಿವೆ.

ಮೇಲ್ಕಂಡ ಎಲ್ಲ ಬುಡಕಟ್ಟುಗಳ ವಿಭಾಗಗಳೂ ಏಷ್ಯದಲ್ಲಿ ಕಂಡುಬರುತ್ತಿಲ್ಲ ಎಂದು ತಜ್ಞರು ವಾದಿಸುತ್ತಾರೆ. ಮೆಡಿಟರೇನಿಯನ್, ಮಂಗೋಲಿಯನ್ ಮತ್ತು ನೀಗ್ರೊಗಳ ಕೆಲವು ವಿಭಾಗಗಳವರು ಏಷ್ಯದಲ್ಲಿ ಅತಿಯಾಗಿ ನೆಲೆಸಿದ್ದಾರೆಂದು ಭಾವನೆಯಿದೆ. ಕಪಾಲ ಸೂಚ್ಯಂಕ, ಕಣ್ಣುಗಳ ಲಕ್ಷಣಗಳು, ಮೂಗಿನ ಸೂಚಿ, ದವಡೆ ಮುಂದಕ್ಕೆ ಚಾಚಿಕೊಂಡಿರುವ ಚಿಹ್ನೆ, ಕೂದಲಿನ ಲಕ್ಷಣ, ಚರ್ಮದ ಬಣ್ಣ, ಎತ್ತರ ಇವೇ ಮೊದಲಾದ ಆಧಾರಗಳನ್ನು ಇಟ್ಟುಕೊಂಡು, ಈ ಬುಡಕಟ್ಟುಗಳ ಹಲವು ವಿಭಾಗಗಳ ಜನ ಏಷ್ಯದಲ್ಲಿ ನೆಲೆಸಿದ್ದಾರೆಂದು ನಿರ್ಧರಿಸಲಾಗಿದೆ.

ಏಷ್ಯದಲ್ಲಿ ಮಾನವ ಬುಡಕಟ್ಟುಗಳನ್ನು ಪೂರ್ವ ಏಷ್ಯದ ಬುಡಕಟ್ಟುಗಳು, ಪಶ್ಚಿಮ ಏಷ್ಯದ ಬುಡಕಟ್ಟುಗಳು, ಏಷ್ಯದ ಆಗ್ನೇಯ ಭಾಗದ ಬುಡಕಟ್ಟುಗಳು ಮತ್ತು ಭಾರತದ ಬುಡಕಟ್ಟುಗಳು ಎಂದು ವಿಭಾಗಿಸಿದ್ದಾರೆ. ಪೂರ್ವ ಏಷ್ಯದ ಉಪವಿಭಾಗಗಳಲ್ಲಿ ಚೀನಿಯರೂ ಜಪಾನೀಯರೂ ಬಹು ಮುಖ್ಯವಾದವರು. ಚೀನಿಯರು ಮಂಗೋಲಿಯನ್ ಬುಡಕಟ್ಟಿಗೆ ಸೇರಿದವರು. ಹಾಗೆಯೇ ಜಪಾನಿನವರೂ ಮಂಗೋಲಿಯನ್ನರ ಬುಡಕಟ್ಟಿಗೆ ಸೇರಿದವರೆಂದು ಖಚಿತಪಟ್ಟಿದೆ. ಆದ್ದರಿಂದ ಈ ಎರಡು ಉಪ ವಿಭಾಗಗಳ ಜನರ ಬಾಹ್ಯ ರಚನೆ ಗಳಲ್ಲಿ ಅಷ್ಟೊಂದು ವ್ಯತ್ಯಾಸ ಕಂಡು ಬರುವುದಿಲ್ಲ. ಇವೆರಡು ಉಪವಿಭಾಗಗಳ ಒಳಪಂಗಡಗ ಳಾದ ಉತ್ತರ ಚೀನಿಯರೂ ದಕ್ಷಿಣ ಚೀನಿಯರೂ ಟಿಬೆಟಿನವರೂ ದಕ್ಷಿಣ ಚೀನದ ಆದಿವಾಸಿಗಳೂ ಮಂಗೋಲರೂ ತುರ್ಕಿಯವರ ಕೆಲವು ಗುಂಪುಗಳವರೂ ತುಂಗುಸರೂ ಕೊರಿಯ ನರೂ ಏಷ್ಯದ ಆದಿವಾಸಿಗಳೂ ಮಂಗೋಲಿಯನ್ ಬುಡಕಟ್ಟಿಗೆ ಸೇರಿದವರೆಂದು ಹೇಳಬಹುದು. ಇವರ ಬಾಹ್ಯ ರೂಪಗಳಲ್ಲಿ ಒಬ್ಬರಿಗೊಬ್ಬರಿಗೆ ಹೆಚ್ಚಿನ ತಾರತಮ್ಯಗಳೇನೂ ಕಾಣಬರುವು ದಿಲ್ಲವೆಂಬ ಒಂದು ವಾದವೂ ಇದೆ.



ರಾಜಸ್ಥಾನಿ ರೈತ

ಒಟ್ಟಿನಲ್ಲಿ ಪೂರ್ವ ಏಷ್ಯದ ಜನ ಎತ್ತರದಲ್ಲಿ 5'2" ದಿಂದ 5'6". ಅವರ ಮುಂಡ ಉದ್ದ. ಭುಜಗಳು ಚಾಚಿಕೊಂಡಂತೆ ಇವೆ. ಮೊಣಕೈಗಳು ತೋಳುಗಳಿಗಿಂತ ಚಿಕ್ಕವು. ಕೈಗಳೂ ಪಾದಗಳೂ ಚಿಕ್ಕವೇ. ಉಗುರುಗಳು ಬುಷ್ ಜನರ ಉಗುರುಗಳಂತಿವೆ. ಬೆನ್ನು ನೇರ, ಎದೆ ಅಗಲ, ತೊಡೆಯ ಹಿಂದಿನ ಮೇಲ್ಭಾಗ ಚಿಕ್ಕದು, ಚರ್ಮ ನುಣುಪು, ಕೇಶರಹಿತ. ತಲೆಯ ಮೇಲೆ ಮಾತ್ರ ಬಹಳ ಉದ್ದನೆಯ ಕೂದಲುಂಟು. ಕೂದಲು ಉದುರಿ ಬೋಳು ತಲೆಯಾಗುವವರೇ ವಿರಳ. ಬಹಳ ವಯಸ್ಸಾದ ಮೇಲೆ ಮಾತ್ರವೇ ತಲೆ ನರೆಯುತ್ತದೆ.

ತಲೆಯ ಆಕಾರದಲ್ಲಿ ಒಂದೊಂದು ಒಳಪಂಗಡಕ್ಕೂ ವ್ಯತ್ಯಾಸಗಳು ಕಂಡುಬರುತ್ತವೆ. ಉತ್ತರ ಚೀನೀಯರ ತಲೆಯ ಆಕಾರ ಮಧ್ಯಮವರ್ಗದ್ದು, ದಕ್ಷಿಣ ಚೀನಿಯರದು ಮೋಟು ತಲೆ. ಕೊರಿಯನ್ ಮತ್ತು ಜಪಾನೀಯರದು ಚಾಚಿಕೊಂಡಂತಿರುವ ಮೋಟು ತಲೆ. ಮಂಗೋಲಿಯನ್ನರದು ಉದ್ದ ತಲೆ. ಸಾಮಾನ್ಯವಾಗಿ ಈ ಎಲ್ಲ ಒಳಗುಂಪಿನವರ ಕಣ್ಣುಗಳು ಬೇರೆ ಬುಡಕಟ್ಟುಗಳ ಜನರ ಕಣ್ಣುಗಳಿಗಿಂತ ಸಣ್ಣವಾಗಿರುತ್ತವೆ.



ಟಿಬೆಟ್ ಶ್ರೀಮಂತ

ಪಶ್ಚಿಮ ಏಷ್ಯದ ಜನರಲ್ಲಿ ಮಂಗೋಲಿಯನ್ ಬುಡಕಟ್ಟಿನ ಲಕ್ಷಣಗಳನ್ನು ಕಾಣಬಹುದು. ಇವರ ಜೊತೆಗೆ ಫ್ರೆಂಚರು ಮತ್ತು ಗ್ರೀಕರಿಗೆ ಹೋಲುವಂಥವರ ಪಂಗಡಗಳೂ ಸೇರಿಕೊಂಡಿವೆ. ಇರಾನ್ ದೇಶದ ವಾಯವ್ಯ ಪ್ರದೇಶದಲ್ಲೂ ಆಫ್ಘಾನಿಸ್ತಾನದ ಪಶ್ಚಿಮ ಪ್ರದೇಶದಲ್ಲೂ ಮಂಗೋಲಿಯನ್ ಸಂಬಂಧ ಯಥೇಚ್ಛ. ಅರೇಬಿಯದ ಸುತ್ತಮುತ್ತ ಮೆಡಿಟರೇನಿಯನ್ನರ ಗುಂಪಿಗೆ ಸೇರಿದ ಜನ ಇದ್ದಾರೆ. ದಕ್ಷಿಣ ಅರೇಬಿಯದಲ್ಲಿ ಇವರ ಜೊತೆಗೆ ನೀಗ್ರೊ ಬುಡಕಟ್ಟಿನ ಜನಗಳನ್ನೂ ಕಾಣಬಹುದು.

ಮೇಲ್ಕಂಡ ಬುಡಕಟ್ಟಿನ ಜನಗಳಲ್ಲಿ ನೀಗ್ರೊಗಳನ್ನು ಬಿಟ್ಟರೆ ಉಳಿದವರ ಬಾಹ್ಯ ಲಕ್ಷಣಗಳು ಸಾಮಾನ್ಯವಾಗಿ ಒಂದೇ. ಇವರಲ್ಲಿ ಬಹು ಮಂದಿಯನ್ನು ಏಷ್ಯದ ಎತ್ತರ ಪ್ರದೇಶವಾಸಿಗಳೆಂದು (ಹೈಲ್ಯಾಂಡರ್ಸ್) ಕರೆಯುವವು ವಾಡಿಕೆ ಇದೆ. ಇವರ ಮೈಬಣ್ಣ ಸ್ವಲ್ಪ ಹಳದಿ. ಕೂದಲು ಕಪ್ಪು, ಮೈ ಮತ್ತು ಹುಬ್ಬುಗಳ ಮೇಲೆ ದಟ್ಟ; ತಲೆಯ ಮೇಲಿನ ಕೂದಲು ನೇರ, ಗಡ್ಡದ ಮೇಲಿನ ಕೂದಲು ಕೆಲವು ಸಾರಿ ಗುಂಗುರು. ಇವರ ದೇಹ ಗುಂಡಗಿರುತ್ತದೆ. ಎತ್ತರ 180-200 ಸೆಂಮೀ ಹಣೆ ಮುಂದಕ್ಕೆ ಚಾಚಿಕೊಂಡಂತಿರುತ್ತದೆ. ಹಣೆಗೆ ತಕ್ಕಂತೆ ದವಡೆಗಳು; ಮೂಗು ಬುಡದಲ್ಲಿ ಎತ್ತರ, ಆಮೇಲೆ ಉದ್ದ. ತುರ್ಕಿ, ಸಿರಿಯ, ಲೆಬನನ್, ಕುರ್ಡಿಸ್ತಾನಗಳಲ್ಲಿನ ಜನರಲ್ಲಿ ಈ ಲಕ್ಷಣಗಳನ್ನು ಕಾಣಬಹುದು. ಮರಳುಗಾಡಿನಲ್ಲಿ ಮತ್ತು ಗುಡ್ಡ ಗಾಡಿನಲ್ಲಿ ವಾಸವಾಗಿರುವ ಅರಬ್ಬರಲ್ಲಿ ಈ ಲಕ್ಷಣಗಳು ಮಾರ್ಪಾಟುಗೊಂಡಿರುತ್ತವೆ.



ನೇಪಾಳಿ ಬ್ರಾಹ್ಮಣ

ಅರಬ್ಬರಲ್ಲಿ ಅವರು ವಾಸವಾಗಿರುವ ಸನ್ನಿವೇಶಕ್ಕನು ಗುಣವಾಗಿ ಸಮಾಜ ಧೋರಣೆಗಳು ಕಂಡುಬರುತ್ತವೆ. ರವಲ ಮತ್ತು ಷಮ್ಮಾರರು ಒಂಟೆಗಳನ್ನು ಸಾಕಿಕೊಂಡು ತಾವು ಸಮಾಜ ಧುರೀಣರು ಎಂದು ಮೇಲ್ಮಟ್ಟದ ಜೀವನ ನಡೆಸಿಕೊಂಡು ಸಮಾಜ ದಲ್ಲಿ ಅಗ್ರಸ್ಥಾನ ಹೊಂದಿರುತ್ತಾರೆ. ಇವರಿಗಿಂತ ಕಡಿಮೆ ದರ್ಜೆಯವರು ಎಂದರೆ ಓಯಸಿಸುಗಳ ಹತ್ತಿರ ಇರುವ ಹಳ್ಳಿಗಾಡಿನವರು. ಇವರು ಆಡಂಬರವಿಲ್ಲದ ಜೀವನವನ್ನು ನಡೆಸಿಕೊಂಡು ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಇವರು ಮಧ್ಯಮವರ್ಗಕ್ಕೆ ಸೇರಿದವರು. ಗುಲಾಮರೆನಿಸಿಕೊಂಡು ಸತತವೂ ಇತರರಿಗಾಗಿ ದುಡಿಯತ್ತಿರುವವರು ಕೊನೆಯ ದರ್ಜೆಗೆ ಸೇರಿದವರು.

ಸಮಾಜದಲ್ಲಿ ಅಗ್ರಸ್ಥಾನವನ್ನು ಪಡೆದ ಮೊದಲನೆಯ ದರ್ಜೆಯವರು ದಾಯಾದಿಗಳಲ್ಲೇ ಮದುವೆಯ ಸಂಬಂಧ ಬೆಳೆಸುತ್ತಾರೆ. ತಮ್ಮ ಚಿಕ್ಕಪ್ಪನ ಮಕ್ಕಳನ್ನೇ

ಅವರು ಮದುವೆಯಾಗುವುದರಿಂದ ಬಾಹ್ಯರೂಪಗಳಲ್ಲಿ ಹೆಚ್ಚು ವ್ಯತ್ಯಾಸಗಳಿಲ್ಲ. ಬೆಡವಿನ್ ಎಂಬ ಈ ಗುಂಪಿನಲ್ಲಿ ಅನೇಕ ಜನ ಒಂದೇ ರೀತಿಯಲ್ಲಿ ಕಾಣುತ್ತಾರೆ. ಇವರಿಗೂ ಎತ್ತರ ಪ್ರದೇಶವಾಸಿಗಳಿಗೂ ಅಲ್ಪಸ್ವಲ್ಪ ವ್ಯತ್ಯಾಸಗಳು ಮಾತ್ರ ಉಂಟು. ಬೆಡವಿನರ ಮೈ ಸ್ವಲ್ಪ ಸಣ್ಣ. ಕಾಲುಗಳು ಉದ್ದ. ಅವರ ಎದೆ ಸಣ್ಣ, ತಲೆ ಉದ್ದ, ಉಳಿದೆಲ್ಲ ಬಾಹ್ಯಲಕ್ಷಣಗಳಲ್ಲಿ ಬೆಡವಿನರಿಗೂ ಎತ್ತರ ನೆಲವಾಸಿಗಳಿಗೂ ಅಷ್ಟು ಹೆಚ್ಚಾದ ವ್ಯತ್ಯಾಸಗಳು ಕಂಡುಬರುವುದಿಲ್ಲ.

ಪಠಾಣ

ಸಲುಬ್ಬರು ಬೆಡವಿನರ ಹತ್ತಿರ ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ. ಇವರ ಮೈ ನುಣುಪು, ದವಡೆಗಳು ಸಣ್ಣ, ಕೋಲುಮುಖ. ಹೆಚ್ಚು ಕೂದಲಿಲ್ಲ. ಇವರು ಇಲ್ಲಿಯ ಆದಿವಾಸಿಗಳ ಗುಂಪಿಗೆ ಸೇರಿದವರು. ಈ ಭಾಗದಲ್ಲಿರುವ ಜಿಪ್ಸಿಗಳು ಕೂಲಿ ಕೆಲಸವನ್ನು ಸಣ್ಣ ಪುಟ್ಟ ವ್ಯಾಪಾರಗಳನ್ನೂ ಮಾಡಿಕೊಂಡಿರುತ್ತಾರೆ. ಆದರೆ ಇವರ ಸಂಖ್ಯೆ ಅತಿ ಕಡಿಮೆ.

ಅರೇಬಿಯದ ದಕ್ಷಿಣದ ಕಡೆಗೆ ಬೇಸಿಗೆಯಲ್ಲಿ ಮಳೆ ಬೀಳುವುದರಿಂದ ವ್ಯವಸಾಯದ ಕೆಲಸವನ್ನು ಮಾಡಲು ಅಲ್ಲಿನ ಜನಾಂಗಕ್ಕೆ ಬಹಳ ಅನುಕೂಲವಾಗಿದೆ. ಇಲ್ಲಿ ವಾಸವಾಗಿರುವ ಜನಾಂಗ ಬೆಡವಿನರಿಗಿಂತ ಕುಳ್ಳು, ಹೆಚ್ಚು ಹಳದಿ. ಈ ಭಾಗದಲ್ಲಿರುವ ತಿಹಮ ಎಂಬ ಸ್ಥಳದಲ್ಲಿ ಅವರು ನೀಗ್ರೊಗಳನ್ನು ದುಡಿಸಿಕೊಂಡು ಜೀವನ ಮಾಡುತ್ತಾರೆ. ಇಲ್ಲಿನ ಸುತ್ತಮುತ್ತಲಿನ ರೇವುಪಟ್ಟಣಗಳಲ್ಲಿ ಇತರರೂ ಉಂಟು. ಇವರು ಅಲ್ಲಿನ ಆದಿವಾಸಿಗಳೊಂದಿಗೆ ಹೊಂದಿಕೊಂಡು ಕೂಲಿ ಕೆಲಸ ಮಾಡಿ ಜೀವನ ನಡೆಸುತ್ತಾರೆ.

ಏಷ್ಯದ ಆಗ್ನೇಯ ಭಾಗದ ಬುಡಕಟ್ಟಿನ ಜನ ಟಿಬೆಟಿನ ಮತ್ತು ಚೀನದ ದಕ್ಷಿಣಕ್ಕೂ ಹೆಚ್ಚಾಗಿ ವಾಸವಾಗಿದ್ದಾರೆ. ಇವರಲ್ಲಿ ಬರ್ಮೀಯರು, ಮಿಯಾವೊ, ಯಾವೊ, ಲ್ಯಾವೋಟ್ ಮತ್ತು ಮೊಂಟಗ್ನಾರ್ಡರು ಸೇರಿದ್ದಾರೆ. ಥಿಯಾಸರೂ ಲ್ಯಾವೋಟರೂ ವಿಯೆಟ್‌ನಾಮರೂ ಕಾಂಬೋಡಿಯದ ಖ್ಮೇರರೂ ಮಯನ್ಮಾರ್ ಮಾನ್ಸರೂ ಮಲಯದವರೂ ಇಂಡೋನೇಷ್ಯದವರೂ ಈ ಗುಂಪಿಗೆ ಸೇರಿದವರು. ಯುಂಬ್ರಿ, ಶಕೈ, ಪುನನ್ಯ, ಕುಬು ಮತ್ತು ಲುಬು ಷಾಮ್‌ಪೆನ್ ಜನರೂ ಇವರ ಲಕ್ಷಣಗಳನ್ನೇ ಹೊಂದಿದ್ದಾರೆ. ಲುಜನ್, ಮಿಂಡನ್‌ಪೊ ಮತ್ತು ಪಲವನ್ ಪ್ರದೇಶಗಳಲ್ಲಿ ವಾಸಿಸುವರು. ಕಾಡುಜನರಂತೆಯೇ ಇದ್ದಾರೆ. ನೀರಿನ ಹಳ್ಳಗಳನ್ನು ತೋಡುವುದರಲ್ಲೂ ತರಕಾರಿ ಸಂಗ್ರಹಿಸಿ ಮಾರುವುದರಲ್ಲೂ ಸಣ್ಣಪುಟ್ಟ ಮೃಗಗಳನ್ನು ಬೇಟೆಯಾಡುವುದರಲ್ಲೂ ಅವರು ನಿಪುಣರು. ಮೈಬಣ್ಣ ಹಳದಿ ಮಿಶ್ರಿತ ಕಂದು. ಕೆಲವರ ಮೈಬಣ್ಣ ಕಪ್ಪು. ತಲೆಕೂದಲು ಗುಂಗುರು. ಮುಖ ಆಸ್ಟ್ರೇಲಿಯಾದ ಆದಿವಾಸಿಗಳದಿದ್ದಂತೆ. ಮಲೆಯದ ಮಾಂಗರು ಇವರಿಗಿಂತ ಎತ್ತರ. ಅವರ ಮೈಬಣ್ಣ ಕಪ್ಪು. ಅವರ ಹೆಂಗಸರ ಮುಖ ಮಕ್ಕಳ ಮುಖದಂತೆ ಕಾಣಿಸುತ್ತದೆ. ಅಂಡಮಾನದ ಬುಡಕಟ್ಟಿನವರಲ್ಲಿ ಜರವರೂ ಬಂಗೆ ಎಂಬ ಪಂಗಡಗಳೂ ಮುಖ್ಯ. ಇವರಲ್ಲಿ ಜರವರು ಜಗಳಗಂಟಿಗಳು, ಶುದ್ಧ ಒರಟರು. ಇವರು ಸಾಮಾನ್ಯವಾಗಿ 140 ಸೆಂಮೀ ಎತ್ತರ. ಇವರ ಮೈ ಕಪ್ಪು. ಕೂದಲು ಗುಂಗುರು. ಇಲ್ಲಿರುವ ಯುಂಬ್ರಿ ಎಂಬ ಬೇಟೆಯಾಡುವ ಜನರ ಸಂಖ್ಯೆ ಕಡಿಮೆಯಾಗಿದೆ. ಉಳಿದಿರುವ ಅಲ್ಪಸ್ವಲ್ಪ ಜನಸಂಖ್ಯೆಯೂ ರೋಗಕ್ಕೆ ಬಲಿಯಾಗುತ್ತಿದೆ. ಬೋರ್ನಿಯೊದ ಪುನನರು ಯುಂಬ್ರಿಯರಿಗಿಂತ ಹೆಚ್ಚು ಆರೋಗ್ಯವಂತರು. ಬೇಟೆಯೂ ವ್ಯವಸಾಯವೂ ಶಕೈಯರ ಕಸುಬು. ಕುಬು ಮತ್ತು ಬುಲು ಜನ ಕಾಡಿನಲ್ಲಿ ಸಿಕ್ಕುವ ಗೋಂದು, ಮೇಣ ಮುಂತಾದವನ್ನು ಮಾರಿ ಬಟ್ಟೆ, ಚಾಕು ಮುಂತಾದವನ್ನು ಕೊಂಡು ಜೀವನ ಸಾಗಿಸುತ್ತಾರೆ. ಷಾಂಪೆನರು ನಿಕೋಬಾರ್ ದ್ವೀಪವಾಸಿಗಳು. ಕಾಡು ಜನರಂತೆಯೇ ಇವರ ವರ್ತನೆ. ಕಾಂಬೋಡಿಯನರು, ಥೈಗಳು, ಮಯನ್ಮಾರ್ ಮಾನ್ಯರು ಮತ್ತು ಇಂಡೋನೇಷ್ಯರು ಸಾಮಾನ್ಯವಾಗಿ ಕುಳ್ಳರು. 155–158ಸೆಂಮೀ ಎತ್ತರ. ಇವರು ಅಷ್ಟೇನೂ ಸ್ಥೂಲಕಾಯರಲ್ಲ. ಮೈ ಹಳದಿ ಅಥವಾ ಕಂದು ಬಣ್ಣ. ಕೂದಲು ನೇರ. ಇವರ ಮುಖ ಮಂಗೋಲಿಯನರ ಮುಖದಂತೆ. ಅಗಲವಾಗಿರುವುದಿಲ್ಲ. ಕಾಂಬೋಡಿಯನರ ಮೈಬಣ್ಣ ಬಹಳ ಕಂದು, ಮೂಗು ಅಗಲ. ಅವರದು ಗುಂಗುರು ಕೂದಲು. ಬರ್ಮೀಯರು ಮಂಗೋಲಿಯನರ ಬಾಹ್ಯಲಕ್ಷಣಗಳನ್ನೇ ಹೊಂದಿದ್ದಾರೆ. ಇಂಡೋನೇಷ್ಯರು ಮಂಗೋಲ್ ಮತ್ತು ಆಸ್ಟ್ರಲಾಯ್ಡರ ಬೆರಕೆಯ ಗುಣ ಹೊಂದಿದ್ದಾರೆ. ಇವರ ಜೊತೆಗೆ ಇಂಡೋನೇಷ್ಯದಲ್ಲಿ ನೀಗ್ರೊ ಬುಡಕಟ್ಟಿಗೆ ಸೇರಿದವರೂ ಉಂಟು. ಕಾಕಸಾಯಿಡ್, ಆಸ್ಟ್ರಲಾಯಿಡ್ ಮತ್ತು ಮಂಗೋಲಾಯಿಡ್ ಈ ಮೂರು ಗುಂಪುಗಳೂ ಅವುಗಳ ಉಪ ಪಂಗಡಗಳೂ ನಾನಾ ರೀತಿಯ ವ್ಯವಸ್ಥಿತ ಗುಂಪುಗಳ ನ್ನೊಳಗೊಂಡ ಮತಗಳೂ ಭಾಷೆಗಳೂ ಸಾಮಾಜಿಕ ಗುಂಪುಗಳೂ ಭಾರತದಲ್ಲಿರಲು ಅಲ್ಲಿನ ಅನುಕೂಲಕರ ವಾಯುಗುಣವೂ ಮೇಲ್ಮೈ ಲಕ್ಷಣಗಳೂ ಕಾರಣ, ದ್ರಾವಿಡ ಭಾಷೆಗಳನ್ನಾಡುವ ಜನರಲ್ಲಿ ಹೆಚ್ಚು ಮಂದಿ ಆಗ್ನೇಯ ಏಷ್ಯದ ಜನರನ್ನು ಹೋಲುತ್ತಾರೆ.

ಷಾನ್ ಮಹಿಳೆ (ಉತ್ತರ ಮಯನ್ಮಾರ್)


ಭೂತಾನದ ಸಂನ್ಯಾಸಿ

ಟಿಬೆಟಿಗೆ ಸೇರಿದ ಮಂಗೋಲಾಯಿಡ್ ಜನ ಬಹು ಹಿಂದಿನ ಕಾಲದಿಂದ ಹಿಮಾಲಯ ಪರ್ವತದ ಸುತ್ತ ಮುತ್ತಲೂ ವಾಸವಾಗಿದ್ದಾರೆ. ಅವರು ಭಾರತದಲ್ಲಿ ನೆಲೆಸಿದ್ದು ಯಾವಾಗ ಎಂಬುದನ್ನು ಖಚಿತ ಪಡಿಸುವುದು ಕಷ್ಟವಾಗಿದೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಅವರು ಇಲ್ಲಿ ನೆಲೆಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

ಛೋಟಾನಾಗಪುರದ ಮುಂಡ ಹೆಂಗಸು

ಮುಂಡ ಮಾತನಾಡುವವರು ಛೋಟಾನಾಗಪುರದ ಬೆಟ್ಟಗಳಲ್ಲಿಯೂ ಇತರ ಗುಡ್ಡಗಾಡುಗಳಲ್ಲಿಯೂ ವಾಸವಾಗಿದ್ದಾರೆ. ಇವರು ಆಗ್ನೇಯ ಏಷ್ಯದ ಬುಡಕಟ್ಟಿಗೆ ಸೇರಿದವರಾಗಿ, ಆರ್ಯರು ಭಾರತಕ್ಕೆ ಬರುವುದಕ್ಕೆ ಮೊದಲೇ ಬಂದು ನೆಲೆಸಿದ್ದರೆಂದು ಹೇಳಲಾಗಿದೆ. ಅಸ್ಸಾಮಿನ ಖಾಸಿ ಜನರೂ ಈ ಗುಂಪಿಗೆ ಸೇರಿದವರು. ಈ ಗುಂಪುಗಳಲ್ಲದೆ ನಿಜವಾದ ಆದಿವಾಸಿಗಳೆಂದು ಪರಿಗಣಿಸಲಾಗಿರುವ ಬೇಟೆಗಾರರು ಮತ್ತು ಕಾಡುಜನರ ಗುಂಪುಗಳು ಇಲ್ಲಿ ವಾಸವಾಗಿವೆ. ಇವರ ಮೇಲೆ ದಂಡೆತ್ತಿಬಂದ ಹಲವಾರು ಗುಂಪು ಗಳು ಇವರನ್ನು ಗುಡ್ಡಗಾಡುಗಳಿಗೂ ಅರಣ್ಯಗಳಿಗೂ ಓಡಿಸಿದುವು. ಇವರ ಬಾಹ್ಯರೂಪಗಳನ್ನು ನೋಡಿದರೆ ಇವರು ಬೇರೆ ಬುಡಕಟ್ಟಿನ ಜನಗಳೊಂದಿಗೆ ಅತಿಯಾಗಿ ಮಿಶ್ರ ವಾಗಿಲ್ಲವೆಂದು ತಿಳಿದುಬರುತ್ತದೆ. ಗುಡ್ಡಗಾಡಿನ ಮತ್ತು ಕಾಡುಗಳ ಜನರಾದ ಒಡ್ಡರು (ವೆಡ್ಡರು) ಈಗಲೂ ಶ್ರೀಲಂಕ ದ್ವೀಪದಲ್ಲಿದ್ದಾರೆ. ಇವರು ಹೆಚ್ಚಾಗಿ ಇತರ ಗುಂಪಗಳೊಂದಿಗೆ ಸಮ್ಮಿಳನವಾಗಿಲ್ಲ. ಸುಮಾರು 400 ವರ್ಷಗಳ ಹಿಂದೆ ಒಡ್ಡರು

ಶ್ರೀಲಂಕದ ಬಹುಭಾಗದ ಕಾಡುಗಳಲ್ಲಿ ವಾಸವಾಗಿದ್ದರು. ಇವರೇ ಶ್ರೀಲಂಕದ ಆದಿವಾಸಿಗಳೆಂದು ಖಚಿತಪಟ್ಟಿದೆ. ಇವರು ಕುಳ್ಳರು; ಸುಮಾರು 154 ಸೆಂಮೀ ಎತ್ತರ. ಕಾಡಿನಲ್ಲಿ ಸಂಚರಿಸುವುದೆಂದರೆ ಇವರಿಗೆ ಹೆಚ್ಚು ಪ್ರೀತಿ. ಇವರು ಬಹುಕಾಲದ ಹಿಂದೆ, ಕಾಕಸಾಯಿಡರ ಮತ್ತು ಆಸ್ಟ್ರಲಾಯಿಡರ ಮಿಶ್ರತೆಯಿಂದ ಉದ್ಭವಿಸಿದ್ದಾರೆಂದು ತಜ್ಞರು ವಾದಿಸುತ್ತಾರೆ. ಕೇರಳದ ಉರುಲಿಸರು ಆಸ್ಟ್ರಲಾಯಿಡರ ಗುಂಪಿಗೂ ಛೋಟಾನಾಗಪುರದ ಬಿರ್‌ಹೋರರು ಕಾಕಸಾಯಿಡರ ಗುಂಪಿಗೂ ಸೇರಿದವರು. ಕೇರಳದ ಅಣ್ಣಾಮಲೆಯಲ್ಲಿರುವ ಕಾಡರರು ಕೆಲವು ಮಿಶ್ರಿತ ಬುಡಕಟ್ಟುಗಳಿಗೆ ಸೇರಿದವರು. 1941ರಲ್ಲಿ ಇವರ ಸಂಖ್ಯೆ 566. ಇವರು ಗೆಡ್ಡೆಗೆಣಸುಗಳನ್ನು ತಿಂದು, ಜೇನುತುಪ್ಪವನ್ನು ಮಾರಿ ಜೀವನ ನಡೆಸುತ್ತಾರೆ. ಇವರಲ್ಲಿ ತಮ್ಮ ಚಿಕ್ಕಪ್ಪನ ಮಗಳನ್ನು ಮದುವೆಯಾಗುವುದು ರೂಢಿ. ಬಹುಪತಿತ್ವ ಇವರಲ್ಲಿರುವ ಪದ್ಧತಿ. ಇವರು ಕುಳ್ಳರು; ಚಾಕಲೇಟ್ ಬಣ್ಣದವರು. ಇವರದು ಗುಂಗುರು ಕೂದಲು, ಇವರನ್ನು ಆಸ್ಟ್ರಲಾಯಿಡ್ ಗುಂಪಿಗೆ ಸೇರಿದವರೆಂದು ಹೇಳಬಹುದು. ಬಿಹಾರದ ದಕ್ಷಿಣ ಭಾಗದ ಛೋಟಾನಾಗಪುರದ ಬೆಟ್ಟಗಳಲ್ಲೂ ಈ ಬೆಟ್ಟಗಳ ಸುತ್ತಮುತ್ತಲಿನ ಹಳ್ಳಿಗಳಲ್ಲೂ ವಾಸವಾಗಿರುವ ಜನ ಮುಂಡ, ಸಂತಾಲ ಮುಂತಾದ ಭಾಷೆಗಳನ್ನಾಡುತ್ತಾರೆ. ಅವರು ಭೂವ್ಯವಸಾಯದಲ್ಲಿ ತೊಡಗಿದ್ದಾರೆ. ಎತ್ತರ ಸರಾಸರಿ 157 ಸೆಂಮೀ ಸಣ್ಣ ಮತ್ತು ಉದ್ದ ತಲೆ. ಕಂದುಬಣ್ಣದ ಮೈ. ಮೂಗಿನ ಬುಡ ಅಗಲ. ಮೈಮೇಲೆ ಹೆಚ್ಚು ಕೂದಲಿಲ್ಲ. ಅನೇಕರಿಗೆ ತುಟಿಗಳು ದಪ್ಪವಾಗಿವೆ. ಇವರು ಮಲೆನೇಸಿಯನರಂತೆ ಬಾಹ್ಯರೂಪರೇಖೆ ಪಡೆದಿದ್ದಾರೆ. ಇವರೂ ಮಂಗೋಲಾಯಿಡರ ಮತ್ತು ಆಸ್ಟ್ರಲಾಯಿಡರ ಸಮ್ಮಿಶ್ರವಿರಬೇಕೆಂದು ಸುಲಭವಾಗಿ ಹೇಳಬಹುದು.



ನಿಕೋಬಾರ್ ದ್ವೀಪದ ಒಬ್ಬ ಬಾಲಕಿ

ತಾಯಿ–ಮಗು (ಅಂಡಮಾನ್)

ಖಾಸಿಬೆಟ್ಟಗಳಲ್ಲಿ ವಾಸವಾಗಿರುವವರು ಹೆಚ್ಚುಕಡಿಮೆ, ಸಂತಾಲರ ಗುಂಪಿಗೆ ಸೇರಿದವರು. ಇವರು ಯಾವುದೋ ಒಂದು ಗೊತ್ತಿಲ್ಲದ ಕಾಲದಲ್ಲಿ ಆಗ್ನೇಯ ಏಷ್ಯದಿಂದ ಭಾರತಕ್ಕೆ ವಲಸೆ ಬಂದು ವ್ಯವಸಾಯ ಉದ್ಯಮಗಳಲ್ಲಿ ನಿರತರಾಗಿದ್ದಾರೆ. ಇವರು ಸು. 1520ಸೆಂಮೀ ಎತ್ತರದಲ್ಲಿರುವ ಬೆಟ್ಟಗಳಲ್ಲಿ ಚಳಿ, ಮಳೆ ಮತ್ತು ಮೋಡಗಳನ್ನೊಳ ಗೊಂಡ ಸನ್ನಿವೇಶದಲ್ಲಿ ತಮ್ಮ ದಿನಚರಿಯ ಕೆಲಸಗಳನ್ನು ಸಾಗಿಸಿ ಕೊಂಡು ಹೋಗುತ್ತಿದ್ದಾರೆ. ಇವರ ಮುಂಡ ಉದ್ದ, ಕಾಲುಗಳು ಮೋಟು, ಮುಖ ಮತ್ತು ಮೂಗು ದೊಡ್ಡವು. ಇವರದು ಹಳದಿ ಅಥವಾ ಕೆಂಪು ಮಿಶ್ರಿತ. ಕಂದು ಬಣ್ಣ ಮೈ. ಕೂದಲು ನೇರ, ಸು. ಶೇ. 60ರಷ್ಟು ಜನರ ಕಣ್ಣರೆಪ್ಪೆಗಳು ಮುಚ್ಚಿಕೊಂಡಂತೆ ಇರುತ್ತವೆ. ಒಟ್ಟಿನಲ್ಲಿ ಮಂಗೋಲಾಯಿಡರ ಬಾಹ್ಯ ಲಕ್ಷಣಗಳು ಅವರಲ್ಲಿ ಅತಿಯಾಗಿಯೂ, ಆಸ್ಟ್ರಲಾಯಿಡರ ಲಕ್ಷಣ ಸ್ವಲ್ಪ ಕಡಿಮೆಯಾಗಿಯೂ ಇರುವುದೆಂದು ಹೇಳಬಹುದು. ಗೇರೋ ಬೆಟ್ಟಗಳಲ್ಲಿ ವಾಸಿಸುವ ಗೇರೋ ಜನರೂ ಮಂಗೋಲಾಯಿಡರ ಮತ್ತು ಆಸ್ಟ್ರಲಾಯಿಡರ ಮಿಶ್ರವೆಂದು ಖಚಿತವಾಗಿ ಹೇಳಬಹುದು. ಇವರಿಬ್ಬರಿಗೂ ಹೆಚ್ಚು ವ್ಯತ್ಯಾಸಗಳು ಕಂಡುಬಂದಿಲ್ಲ. ಇರುವ ಅಲ್ಪಸ್ವಲ್ಪ ವ್ಯತ್ಯಾಸಗಳು ಇವರು ವಾಸವಾಗಿರುವ ಸನ್ನಿವೇಶಗಳಿಗೆ ಮಾತ್ರ ಅನ್ವಯಿಸಿವೆ.

ಉತ್ತರ ಬೋರ್ನಿಯೊ ನಿವಾಸಿ

ಛೋಟಾನಾಗಪುರದ ಅಸುರರು

ದಕ್ಷಿಣ ಭಾರತದಲ್ಲಿ ದ್ರಾವಿಡಭಾಷೆಗಳಾದ ತಮಿಳು, ತೆಲುಗು, ಕನ್ನಡ, ಮಲೆಯಾಳಂ ಮತ್ತು ತುಳು ಬಳಕೆಯಲ್ಲಿವೆ, ದ್ರಾವಿಡರು 160–166 ಸೆಂಮೀ ಬೆಳೆಯುತ್ತಾರೆಂದೂ ಕಪ್ಪು ಮೈಬಣ್ಣದಿಂದ ಮೊದಲ್ಗೊಂಡು ಕಪ್ಪು ಮಿಶ್ರಿತ ಕಂದು ಬಣ್ಣದವರಾಗಿ ಇರುತ್ತಾರೆಂದೂ ಹೇಳಲಾಗಿದೆ. ಇವರು ಕಣ್ಣುಗಳು ಸಾಮಾನ್ಯವಾಗಿ ಕಪ್ಪುಗುಡ್ಡೆಗಳುಳ್ಳವಾಗಿ ಚರ್ಮದ ಬಣ್ಣಕ್ಕೆ ಹೋಲಿಕೆಯಾಗುತ್ತವೆ. ತಲೆ ಕೂದಲು ಕಪ್ಪಾಗಿಯೂ ಅಂದವಾಗಿಯೂ ಹೆಚ್ಚಾಗಿಯೂ ಇರುತ್ತದೆ. ಒಟ್ಟಿನಲ್ಲಿ ದ್ರಾವಿಡ ಪಂಗಡದವರು ಕಾಕಸಾಯಿಡರ ಬಾಹ್ಯಗುಣಗಳುಳ್ಳವರಾಗಿದ್ದಾರೆಂದೂ ಅವರ ಬುಡಕಟ್ಟಿಗೆ ಸೇರಿದ್ದಾರೆಂದೂ ಹೇಳಬಹುದು.

ಅಸ್ಸಾಮಿನ ಖಾಸಿ ಬೆಟ್ಟಗಳ ಹೆಂಗಸು

ಶ್ರೀಲಂಕದ ವೆಡ್ಡ

ಹಿಮಾಲಯದ ತಪ್ಪಲಲ್ಲಿ ವಾಸವಾಗಿರುವ ಮಂಗೋಲಾಯಿಡರ ವಿಭಾಗಕ್ಕೆ ಸೇರಿದವರು ಆರ್ಯರಿಗಿಂತ ಹಿಂದೆಯೇ ಪಾಕಿಸ್ತಾನ. ನೇಪಾಳ, ಸಿಕ್ಕಿಂ, ಭೂತಾನಗಳಲ್ಲಿ ನೆಲೆಸಿದ್ದರು. ಇವರೆಲ್ಲರನ್ನೂ ಭೂಟಿಯರು ಮತ್ತು ಬೆಟ್ಟದಲ್ಲಿ ವಾಸವಾಗಿರುವ ಜನರೆಂದು ವಿಭಾಗಿಸಬಹುದು. ಭೂಟಿಯರನ್ನು ಷೆರ್ಪಾಸರೆಂದೂ ಭೂತಾನಿಗಳೆಂದೂ ಕರೆಯುವುದು ವಾಡಿಕೆ. ಮಂಗೋಲಾಯಿಡ್ ವಿಭಾಗಕ್ಕೆ ಸೇರಿದ ಇವರು ಅತಿ ಎತ್ತರವಾದ ಸ್ಥಳದಲ್ಲಿ, ಅಂದರೆ ಸು. 250 ಸೆಂಮೀಗಳ ಮೇಲೆ, ವಾಸವಾಗಿದ್ದಾರೆ, ಉದ್ದ ಮುಂಡ, ಉದ್ದ ಮತ್ತು ಅಗಲ ತಲೆ, ಮಂಗೋಲಾಯಿಡರ ಕಣ್ಣುಗಳಂತೆ ಕಣ್ಣು, ಅಗಲ ಮುಖ – ಇವು ಇವರ ಬಾಹ್ಯಲಕ್ಷಣಗಳು. ಇವರಲ್ಲಿ ಕೆಲವರ ಕೈಗಳು ಮತ್ತು ಕಾಲುಗಳು ಉದ್ದವಾಗಿ ಇರುವುದೂ ಉಂಟು. ಕಾಫಿರ್, ಲಹುಲಿ, ಮಂಚಾಟಿಸ್, ಕನವಾರ್, ದತ್ತಿಯಲ್, ಮಾಗ, ಗುರುಂಗ, ತಮಂಗ, ತರುವ, ರಿಯಾಸ, ಲುಂಬುಸ ಮತ್ತು ಲೆಪ್ಚಸರು ಹಿಮಾಲಯದ ಗುಡ್ಡಗಾಡುಗಳಲ್ಲಿ ವಾಸಿಸುತ್ತಾರೆ. ಇವರೂ ಮಂಗೋಲಾಯಿಡ್ ಮತ್ತು ಕಾಕಸಾಯಿಡ್ ಮಿಶ್ರಿತರು. ನ್ಯೂಯರು ಖಟ್ಮಂಡುವಿನ ಕಣಿವೆಯ ಹಲವು ಭಾಗಗಳಲ್ಲಿ ವಾಸವಾಗಿದ್ದಾರೆ. ಅವರ ಮೈಬಣ್ಣ ಸುಮಾರು ಹಳದಿ; ಚೀನೀಯರಂತೆ ಕಾಣಿಸುತ್ತಾರೆ. ಅವರ ಸಮೀಪದಲ್ಲೇ ವಾಸವಾಗಿರುವ ಖಾಸರ ಭಾಷೆ ನೇಪಾಲ, ಮೊಗಲರ

ಕಾಲದಲ್ಲಿ ಕೆಲವು ರಜಪೂತರು ಉತ್ತರ ದಿಕ್ಕಿಗೆ ಹೋಗಿ ಅಲ್ಲಿ ನೆಲೆಸಿ ರಾಜ್ಯ ಕಟ್ಟಿ ಆಮೇಲೆ ಅಲ್ಲಿನ ಜನಗಳಲ್ಲಿ ಮಿಶ್ರಿತರಾಗಿ ಹೋದರು. ಅವರು ಈಗಿನ ಖಾಸರು. ಮಯನ್ಮಾರ್ ಉತ್ತರಭಾಗದ ಪರ್ವತ ಶ್ರೇಣಿಯ ತಪ್ಪಲಲ್ಲಿ ವಾಸವಾಗಿರುವ ನಾಗರು ಕೆಂಪು ಮಿಶ್ರಿತ ಕಂದುಬಣ್ಣದವರು. ಅವರು ಏಷ್ಯದ ಮಂಗೋಲಾಯಿಡ್ ಗುಂಪಿಗೆ ಸೇರಿದವರು; ಅಮೆರಿಕದ ರೆಡ್ ಇಂಡಿಯನರಂತೆ ಕಾಣಿಸುತ್ತಾರೆ.

ಈ ಪಂಗಡಗಳನ್ನು ಬಿಟ್ಟರೆ ಉಳಿದೆಲ್ಲ ಜನರೂ ಅಖಂಡ ಭಾರತದಲ್ಲಿ ಕಾಕಸಾಯಿಡರ ಗುಂಪಿಗೆ ಸೇರಿದವರು. ಇವರೆಲ್ಲರೂ ಪಶ್ಚಿಮ ಏಷ್ಯದಿಂದ ವಲಸೆ ಬಂದವರ ವಂಶಕ್ಕೆ ಸೇರಿದವರು. ಅವರು ಇಲ್ಲಿನ ಮೂಲವಾಸಿಗಳೊಂದಿಗೆ ಮಿಶ್ರಗೊಂಡು, ಭಾರತದ ವಾಯುಗುಣ ಭೂಲಕ್ಷಣಗಳಿಗೆ ತಕ್ಕಂತೆ ಪರಿವರ್ತನೆಗೊಂಡರು.

(ಕೆ.ಎನ್.ವಿ.)

**ಏಷ್ಯದ ವಾಸ್ತುಶಿಲ್ಪ, ಕಲೆ:** ಕಲೆ ಮತ್ತು ವಾಸ್ತುಶಿಲ್ಪಗಳ ಅಧ್ಯಯನ ದೃಷ್ಟಿಯಿಂದ ಏಷ್ಯವನ್ನು ಪಶ್ಚಿಮ ಪೂರ್ವ, ದಕ್ಷಿಣ, ಉತ್ತರ, ಆಗ್ನೇಯ, ಮಧ್ಯ ಎಂದು ವಿಭಾಗಿಸಬಹುದು. ಪ್ರ.ಶ.ಪೂ. 5ನೆಯ ಸಹಸ್ರಮಾನದಿಂದ ಪ್ರಾರಂಭವಾಗಿ ಇಂದಿನವರೆಗೂ ಏಷ್ಯದಲ್ಲಿ ಕಲೆಗಳು ಉಜ್ವಲವಾಗಿ ಬೆಳೆದುಬಂದಿವೆ. ವಿಶ್ವದ ಪ್ರಮುಖ ಸಂಸ್ಕೃತಿಗಳು ಇಲ್ಲಿಯೇ ಜನ್ಮ ತಳೆದು ವಾಸ್ತುಶಿಲ್ಪ ಮತ್ತು ಇತರ ಕಲೆಗಳಿಗೆ ಸುಭದ್ರ ಬುನಾದಿ ಹಾಕಿದುವು. ಈ ದೃಷ್ಟಿಯಿಂದ ಮೆಸೊಪೊಟೇಮಿಯ, ಸಿಂಧೂ ಕೊಳ್ಳ ಮುಂತಾದವು ಗಮನಾರ್ಹವಾದವು.

ಮೈತ್ರೇಯ ಬುದ್ಧನ ಕಂಚಿನ ಪ್ರತಿಮೆ (ಚೀನ)

**ಪಶ್ಚಿಮ ಏಷ್ಯ:** ಅನೇಕ ಪ್ರಾಚೀನ ನಾಗರಿಕತೆಗಳಿಗೆ ಜನ್ಮವಿತ್ತ ಪಶ್ಚಿಮ ಏಷ್ಯ ಕಲೆಯ ದೃಷ್ಟಿಯಿಂದಲೂ ಪ್ರಮುಖಸ್ಥಾನ ಪಡೆದಿದೆ. ಇದರಲ್ಲಿ ಮೆಸೊಪೊಟೇಮಿಯ, ಅನಟೋಲಿಯ ಮತ್ತು ಸಿರಿಯ ಮುಖ್ಯ. ಪ್ರ.ಶಪೂ. 4ನೆಯ ಸಹಸ್ರಮಾನದಿಂದ ಪ್ರಾರಂಭವಾದ ಕಲಾಪರಂಪರೆ ಪಶ್ಚಿಮ ಏಷ್ಯದಲ್ಲಿ ಈಗ ಅನೇಕ ರೂಪಾಂತರ ಹೊಂದಿ ಮುಂದುವರಿದಿದೆ. ಮೆಸೊಪೊಟೇಮಿಯದ ಉರೂಕ್ ಸಂಸ್ಕೃತಿಯ ಕಾಲದಲ್ಲಿ ವಾಸ್ತುಕಲೆ ಚೆನ್ನಾಗಿ ಅಭಿವೃದ್ಧಿ ಹೊಂದಿತ್ತು. ಈರೆಕ್‌ನಲ್ಲಿ ದೊರಕಿರುವ ಅರಮನೆಯೂ ದೇವಾಲಯಗಳೂ ಮನೆಗಳೂ ಉರೂಕ್ ಸಂಸ್ಕೃತಿಯ ಪ್ರತಿನಿಧಿಗಳಾಗಿದ್ದು ಅವುಗಳ ಬೃಹತ್ಪ್ರಮಾಣ ಮತ್ತು ಆಂತರಿಕ ಅಲಂಕಾರಗಳಿಂದ ಮೆಚ್ಚಿಗೆಗೆ ಅರ್ಹವಾಗಿವೆ. ಜಂಡಟ್‌ನಾಸ್ರ್‌ನಲ್ಲಿ ಈ ಸಂಸ್ಕೃತಿಯೂ ಕಲೆಗಳೂ ಮುಂದುವರಿದವು. ವರ್ಣಚಿತ್ರಗಳು ವಿಶೇಷವಾಗಿ ಬಳಕೆಗೆ ಬಂದುವು. ಶಿಲ್ಪ ಕಲೆಯಲ್ಲೂ ಗಮನಾರ್ಹ ಬೆಳವಣಿಗೆಗಳಾದವು. ಈ ಕಾಲದ ಶಿಲ್ಪವೆಲ್ಲವೂ ಧಾರ್ಮಿಕ ಮತ್ತು ಮತೀಯ ಉದ್ದೇಶಗಳಿಗೇ ಮೀಸಲಾಗಿದ್ದುದರಿಂದ, ರಾಜರೂ ಪುರೋಹಿತರೂ ನಿರ್ದೇಶಿಸಿದಂತೆ ಶಿಲ್ಪಗಳನ್ನು ತಯಾರಿಸಬೇಕಾಗಿತ್ತು. ಶಿಲ್ಪಿಗೆ ತನ್ನ ಕಲ್ಪನೆಗೆ ತಕ್ಕಂತೆ ಶಿಲ್ಪಗಳನ್ನು ತಯಾರಿಸುವ ಅವಕಾಶವಿಲ್ಲದಿದ್ದರೂ ಆ ಕಾಲದ ಶಿಲ್ಪಗಳು ಬಹು ಮನೋಹರವಾಗಿವೆ. ಕಲ್ಲಿನ ಶಿಲ್ಪಗಳ ಜೊತೆಗೆ ಜೇಡಿಮಣ್ಣಿನ ವಿಗ್ರಹ ತಯಾರಿಸುವ ಕಲೆಯೂ ಬೆಳೆದು ಬಂತು. ಮುದ್ರೆಗಳ ತಯಾರಿಕೆಯಲ್ಲಿ ಈ ಕಾಲದ ಕಲಾಕಾರನಿಗೆ ಹೆಚ್ಚಿನ ಪರಿಶ್ರಮವಿತ್ತು.

ಸಾರ್ಗನಾಯಿಡ್ ಕಾಲದಲ್ಲಿ ಆಕ್ಕಾಡ್ ನಗರ ಚೆನ್ನಾಗಿ ಅಭಿವೃದ್ಧಿಯಾಯಿತು **(ನೋಡಿ– ಅಕ್ಕಾಡ್)**. ಬ್ಯಾಬಿಲೋನಿಯನ್ ಸಂಸ್ಕೃತಿಯ ಕಾಲದಲ್ಲಿ ಬೃಹತ್ಪ್ರಮಾಣದಲ್ಲಿ ಜಿಗುರೇಟ್ ದೇವಾಲಯಗಳ ನಿರ್ಮಾಣ ಪ್ರಾರಂಭವಾಯಿತು. ಅರ್‌ನಲ್ಲಿ ನಿರ್ಮಿಸಿದ ದೇವಾಲಯ ಆ ಕಾಲದ ವಾಸ್ತುಕಲೆಗೆ ಉತ್ತಮ ನಿದರ್ಶನ. ಪ್ರ.ಶ.ಪೂ. 2ನೆಯ ಸಹಸ್ರಮಾನದ ಕೊನೆಯಲ್ಲಿ ಅಸ್ಸೀರಿಯನ್ ಸಂಸ್ಕೃತಿ ಅಭಿವೃದ್ಧಿ ಹೊಂದಿತು. ಈ ಕಾಲದ ಕಟ್ಟಡಗಳಿಗಿಂತ ಶಿಲ್ಪ ಹೆಚ್ಚು ಕಾಣಸಿಗುತ್ತವೆ. ಮೆಸೊಪೊಟೇಮಿಯದ ಕಲಾಸಂಪ್ರದಾಯಗಳಿಂದ ಪ್ರಭಾವಿತಗೊಂಡು ಅಭಿವೃದ್ಧಿಹೊಂದಿದ ಕಲೆಗಳಲ್ಲಿ ಅನಟೋಲಿಯ ಮತ್ತು ಆರ್ಮೀನಿಯದ ಕಲೆಗಳು ಮುಖ್ಯ. ಪ್ರ.ಶ.ಪೂ. 2ನೆಯ ಸಹಸ್ರಮಾನದಿಂದ ಹಿಟ್ಟೈಟ್ ಸಂಸ್ಕೃತಿಯ ಆಶ್ರಯದಲ್ಲಿ ಅನಟೋಲಿಯದಲ್ಲಿ ವಾಸ್ತುಶಿಲ್ಪ ಕಲೆ ಉಚ್ಛ್ರಾಯ ಸ್ಥಿತಿ ಮುಟ್ಟಿತು. ಹಿಟ್ಟೈಟ್ ಸಂಸ್ಕೃತಿಯ ಪತನಾನಂತರ ಆರ್ಮೀನಿಯದಲ್ಲಿ ಕಲೆ ಅಭಿವೃದ್ಧಿ ಹೊಂದಿದ್ದು. ಹಿಟ್ಟೈಟ್ ಕಾಲದ ಕಟ್ಟಡಗಳು ವಿಶೇಷವಾಗಿ ಕಲ್ಲಿನಿಂದ ನಿರ್ಮಾಣವಾದವು. ಹಿಟ್ಟೈಟ್ ರಾಜ ಹತ್‌ಹುಯಿಕ್ ಪ್ರ.ಶ.ಪೂ. 14ನೆಯ ಶತಮಾನದಲ್ಲಿ ಉತ್ತರ ಸಿರಿಯದ ಭಾಗಗಳನ್ನು ತನ್ನ ವಶಮಾಡಿಕೊಂಡು ಹತ್ತುಶಾಶ್ ಎಂಬ ರಾಜಧಾನಿಯನ್ನು ಸ್ಥಾಪಿಸಿದ. ಈತ ಇಲ್ಲಿ ಎತ್ತರವಾದ ತೋರಣಗಳನ್ನೂ ಸಿಂಹದ ಶಿಲ್ಪಗಳನ್ನೂ ನಿರ್ಮಿಸಿ ವಿಶಾಲವಾದ ಕಟ್ಟಡಗಳನ್ನು ಕಟ್ಟಿಸಿದ. ವಾಸ್ತುಶಿಲ್ಪದೃಷ್ಟಿಯಿಂದ ಇದೊಂದು ಪರ್ವಕಾಲ. ಈ ರಾಜ್ಯದ ಪತನವಾದ ಅನಂತರ ಉರರ್ತು ಎಂಬ ರಾಜ್ಯ ಪ್ರ.ಶ.ಪೂ. 7ನೆಯ ಶತಮಾನದಲ್ಲಿ ತಲೆಯೆತ್ತಿತ್ತು. ಈ ಕಾಲದಲ್ಲಿ ಲೋಹಶಿಲ್ಪಕಲೆ ಉಚ್ಛ್ರಾಯ ಸ್ಥಿತಿ ಮುಟ್ಟಿತು. ಕಂಚು, ತಾಮ್ರ ಮೊದಲಾದ ಲೋಹಗಳಲ್ಲಿ ಮಾಡಿದ ಬೃಹತ್ ಪ್ರಮಾಣದ ಸಿಂಹದ ಮುಖಗಳೂ ಪಾತ್ರೆಗಳೂ ಕಲಾತ್ಮಕವಾಗಿವೆ. ಈ ಪಾತ್ರೆಗಳ ಮೇಲೆ ರೇಖಾಚಿತ್ರಗಳೂ ತಗ್ಗುಮಾದರಿಯ ಶಿಲ್ಪಗಳೂ ವಿಶೇಷವಾಗಿವೆ. ಇದರಲ್ಲಿ ಅಸ್ಸೀರಿಯನ್ ಸಂಸ್ಕೃತಿಯ ಪ್ರಭಾವಗಳನ್ನು ಗುರುತಿಸಬಹುದು.

ಸಿರಿಯದಲ್ಲಿ ಪ್ರ.ಶ.ಪೂ. 2ನೆಯ ಸಹಸ್ರಮಾನದಿಂದಲೇ ಅರಮನೆ ಮತ್ತು ದೇವಾಲಯಗಳ ನಿರ್ಮಾಣ ಕಲೆ ಪ್ರಾರಂಭವಾಯಿತು. ಸಿರಿಯನ್ ಕಲೆಯಲ್ಲಿ ವಿಶೇಷವಾಗಿ ಅನಟೋಲಿಯ ಮತ್ತು ಹಿಟ್ಟೈಟ್ ಕಲಾಪ್ರಭಾವಗಳನ್ನೇ ಕಾಣಬಹುದು. ಆದ್ದರಿಂದ ಪ್ರಾಚೀನ ಸಿರಿಯನ್ ಕಲೆ ಮಿಶ್ರಜಾತಿಯದು. ಅಲಲಖ್ ಮತ್ತು ಉಗರಿಟ ಪ್ರದೇಶಗಳಲ್ಲಿ ಪ್ರಾಚೀನತಮ ಕಟ್ಟಡಗಳ ಅವಶೇಷಗಳು ದೊರಕಿವೆ. ಆದರೆ ಈ ಕಾಲದಲ್ಲಿ ಶಿಲ್ಪ ಇನ್ನೂ ಚೆನ್ನಾಗಿ ಅಭಿವೃದ್ಧಿಯಾಗಿರಲಿಲ್ಲ. ಇದು ವಿಕಾಸ ಹೊಂದಿದ್ದು ಪ್ರ.ಶ.ಪೂ. 15ನೆಯ ಶತಮಾನದ ಹೊತ್ತಿಗೆ. ಇದನ್ನು ಸಿರೋ–ಫಿನೀಷಿಯನ್ ಕಲಾಶೈಲಿಯೆನ್ನಬಹುದು. ಇದ್ರಿಮಿ ರಾಜನ ಶಿಲ್ಪವಾಗಲಿ ಅದರ ಸಮೀಪದಲ್ಲಿ ದೊರಕಿರುವ ಸಿಂಹಗಳ ಶಿಲ್ಪಗಳೇ ಆಗಲಿ ಪ್ರಬುದ್ಧಶೈಲಿಗೆ ಸೇರಿದವುಗಳಲ್ಲವೆನ್ನುವುದು ಸುಲಭವಾಗಿ ಗೊತ್ತಾಗುತ್ತದೆ. ಮೆದುಕಲ್ಲಿನಲ್ಲಿ ಮಾಡಲಾದ ಈ ಶಿಲ್ಪಗಳಲ್ಲಿ ಮೆರಗು ಕೊಟ್ಟು ಮಾಡಿರುವ ಕಣ್ಣುಗಳು ಗಮನಾರ್ಹ, ಈ ಕಾಲದ ಕಂಚಿನ ವಿಗ್ರಹಗಳೂ ಪಾತ್ರೆಗಳೂ ಆಗಿನ ಶಿಲ್ಪಶೈಲಿಯನ್ನೇ ಅನುಸರಿಸಿವೆ. ಆದರೆ ಚಿನ್ನದ ಪಾತ್ರೆಗಳು ಬಹಳ ನಾಜೂಕಾಗಿ ತಯಾರಿಸಿದವು. ಇವುಗಳ ಮೇಲೆ ಕೆತ್ತಲಾದ ರೇಖಾಚಿತ್ರಗಳು ಬಹು ರಮ್ಯ. ದಂತದಲ್ಲಿ ತಯಾರಿಸಲಾದ ಸಣ್ಣ ಸಣ್ಣ ಶಿಲ್ಪಗಳು ಚಿನ್ನದ ಕೆಲಸದಂತೆಯೇ ಉತ್ತಮ ಮಟ್ಟದಲ್ಲಿವೆ.

ಪ್ರ.ಶ.ಪೂ. 1200ರ ಸಮಯಕ್ಕೆ ಉಂಟಾದ ರಾಜಕೀಯ ಬದಲಾವಣೆಗಳಿಂದ ಮತ್ತೊಂದು ಶೈಲಿಯ ಕಲೆ ಸಿರಿಯದಲ್ಲಿ ಪ್ರಾರಂಭವಾಯಿತು. ಇದು ಸಿರೋ–ಹಿಟ್ಟೈಟ್ ಶೈಲಿ. ಇದು ಸಿರೋ–ಫಿನೀಷಯನ್ ಶೈಲಿಗಿಂತ ಹೆಚ್ಚು ವಿಕಾಸ ಹೊಂದಿದ್ದು, ಇದರಲ್ಲಿ ಉತ್ತಮ ಶಿಲ್ಪಗಳಿವೆ.

ಪಶ್ಚಿಮ ಏಷ್ಯದಲ್ಲಿ ಪ್ರಾಚೀನ ಸಂಸ್ಕೃತಿಗಳು ಪತನವಾದ ಅನಂತರ ಈ ಪ್ರದೇಶದ ಬಹು ಭಾಗಗಳನ್ನು ಅರಬರು ಆಕ್ರಮಿಸಿಕೊಂಡರು. ಈ ಆಕ್ರಮಣದೊಂದಿಗೆ ಕಲೆಯಲ್ಲಿಯೂ ಬದಲಾವಣೆಗಳುಂಟಾದವು **(ನೋಡಿ– ಇಸ್ಲಾಮೀ–ವಾಸ್ತುಶಿಲ್ಪ–ಕಲೆ)**.

**ಪೂರ್ವ ಏಷ್ಯ :** ಪೂರ್ವ ಏಷ್ಯದಲ್ಲಿ ಕಲೆಯ ದೃಷ್ಟಿಯಿಂದ ಮುಖ್ಯವಾದ ರಾಜ್ಯಗಳೆಂದರೆ ಚೀನ, ಜಪಾನ್ ಮತ್ತು ಕೊರಿಯ. ಈ ಮೂರು ದೇಶಗಳ ವಾಸ್ತುಶಿಲ್ಪ ಮತ್ತು ಕಲೆಗಳಲ್ಲಿ ಪರಸ್ಪರ ಸಂಬಂಧಗಳೂ ಪ್ರಭಾವಗಳೂ ಕಾಣಬರುತ್ತವೆ. ಚೀನೀಯರು ಪ್ರ.ಶ.ಪೂ. 12ನೆಯ ಶತಮಾನದಿಂದಲೇ ಕಟ್ಟಡಗಳ ನಿರ್ಮಾಣದಲ್ಲಿ ಪರಿಣತರಾಗಿದ್ದರು. ಪ್ರ.ಶ.ಪೂ. 214ರಲ್ಲಿ ಪ್ರಾರಂಭಿಸಲಾದ ಬೃಹತ್ ಗೋಡೆ (2400ಕಿಮೀ ಉದ್ದ) ಅಲ್ಲಿನ ಪ್ರಾಚೀನ ಅವಶೇಷಗಳಲ್ಲಿ ಮುಖ್ಯವಾದದ್ದು. ಮಿಂಗ್ ರಾಜವಂಶಕ್ಕೆ ಪೂರ್ವದ



ಆಂಗ್ಕೋರ್‌ವಾಟದ ಒಂದು ಶಿಲ್ಪ

ಕಟ್ಟಡಗಳು ಅಷ್ಟಾಗಿ ಉಳಿದಿಲ್ಲ. ಮಿಂಗ್ ರಾಜರ ಅರಮನೆಗಳು ಚೌಕವಾದ ಮತ್ತು ವೃತ್ತಾಕಾರದ ವಿವಿಧ ಭಾಗಗಳನ್ನೊಳಗೊಂಡು ಬಹಳ ರಮಣೀಯವಾದುವೆಂದು ಹೆಸರು ಪಡೆದಿವೆ. ಈ ಅರಮನೆಗಳು ಬಣ್ಣ ಬಣ್ಣದ ಹೆಂಚುಗಳಿಂದಲೂ ಅಮೃತಶಿಲೆಯ ಆಲಂಕಾರಿಕ ಬಳ್ಳಿಗಳಿಂದಲೂ ಚಿನ್ನದ ತಗಡುಗಳಿಂದಲೂ ಕೂಡಿವೆ. ಕಿರಿದೂ ಎತ್ತರವೂ ಆದ ಮತ್ತು ಅಂತಸ್ತುಗಳುಳ್ಳ ಗೋಪುರಗಳ ನಿರ್ಮಾಣ ಚೀನೀ ವಾಸ್ತುಕಲೆಯ ಒಂದು ವೈಶಿಷ್ಟ್ಯ. ಬೌದ್ಧ ದೇವಾಲಯಗಳನ್ನು ಮೊದಮೊದಲು ಈ ರೀತಿಯಲ್ಲೇ ಕಟ್ಟಲಾಗುತ್ತಿದ್ದು, ಕಾಲ ಕ್ರಮದಲ್ಲಿ ಅರಮನೆಯ ಗೋಪುರಗಳೂ ಈ ರೀತಿಯಲ್ಲೇ ನಿರ್ಮಾಣವಾಗತೊಡಗಿದವು. 17ನೆಯ ಶತಮಾನದಲ್ಲಿ ಪೀಕಿಂಗಿನಲ್ಲಿ ನಿರ್ಮಿಸಲಾದ ಸಿಂಹಾಸನ ಭವನ, ಚಿಯನ್‌ಮೆನನ ಹೆಬ್ಬಾಗಿಲು ಮುಂತಾದವು ಈ ರೀತಿಯ ವಾಸ್ತುಕಲೆಗೆ ಉತ್ತಮ ಉದಾಹರಣೆಗಳು. ಇದು ಚೀನೀಯರ ರಾಷ್ಟ್ರೀಯ ವಾಸ್ತುಕಲೆಯಾಗಿ ಮುಂದುವರಿಯುತ್ತಿದೆ.

ಹರಿಹರ, ನಾಮ್ ದ (ಜಾವ)

ಚೀನದಲ್ಲಿ ಬೌದ್ಧಧರ್ಮದ ಪ್ರಭಾವ ಬೆಳೆದ ಮೇಲೆ ಭಾರತೀಯ ಮತ್ತು ಚೀನೀ ಸಂಪ್ರದಾಯಗಳೆರಡೂ ಬೆರೆತುವು. ಆಗ ನಿರ್ಮಿತವಾದ ಬುದ್ಧವಿಗ್ರಹಗಳೂ ಗುಹಾಲಯಗಳೂ ಈ ಮಿಶ್ರಶೈಲಿಯಲ್ಲಿ ಅಭಿವ್ಯಕ್ತವಾಗಿವೆ. ಇದನ್ನು ಚೀನೀ–ಭಾರತೀಯ ಶೈಲಿ ಎಂದು ಕರೆಯಬಹುದು. ಮರ, ಕಂಚು ಮತ್ತು ಇತರ ಲೋಹಗಳಲ್ಲಿ ವಿಗ್ರಹಗಳನ್ನು ಮಾಡುವುದರಲ್ಲಿ ಚೀನೀಯರು ಪರಿಶ್ರಮ ಹೊಂದಿದ್ದರೂ ಕಲ್ಲಿನಿಂದ ವಿಗ್ರಹಗಳನ್ನು ಮಾಡುವುದು ಅಷ್ಟಾಗಿ ಜನಾನುರಾಗಿಯಾಗಿರಲಿಲ್ಲ. ಚೀನೀಯಾತ್ರಿಕರು ಭಾರತದಿಂದ ಹಿಂದಿರುಗುವಾಗ ಬುದ್ಧನ ಪ್ರತಿಮೆಗಳನ್ನು ತಮ್ಮೊಡನೆ ತೆಗೆದುಕೊಂಡು ಹೋಗಿದ್ದರು. ಇವುಗಳ ಆಧಾರದ ಮೇಲೆ ಚೀನದಲ್ಲಿ ಶಿಲ್ಪಗಳು ತಯಾರಾದುವು. ಯುನ್‌ಕಾಂಗ್ ಮತ್ತು ಲಾಂಗ್‌ಮನ್ ಪ್ರದೇಶಗಳಲ್ಲಿ ಬೌದ್ಧ ಕಲೆಯನ್ನು ವಿಶೇಷವಾಗಿ ಕಾಣುತ್ತೇವೆ. 414ರಲ್ಲಿ ತಾನ್‌ಯಾವೊ ಎಂಬ ಬೌದ್ಧ ಭಿಕ್ಷುವಿನ ನೇತೃತ್ವದಲ್ಲಿ ತೈ–ತ್ಸಾಂಗ್ ದೊರೆಯ ಕಾಲದಲ್ಲಿ ಇವು ನಿರ್ಮಾಣವಾದವು. ಭಾರತದ ಬುದ್ಧಗಯಾ ದೇವಾಲಯದ ಮಾದರಿಯಲ್ಲಿ ಕಿನ್ಸ್‌ಸೈಯಲ್ಲಿ 665ರಲ್ಲಿ ಒಂದು ದೇವಾಲಯದ ನಿರ್ಮಾಣವಾಯಿತು. ವರ್ಣಚಿತ್ರ ಕಲೆಯಲ್ಲೂ ಭಾರತೀಯ ಪ್ರಭಾವಗಳನ್ನು ಸುಲಭವಾಗಿ ಗುರುತಿಸಬಹುದು. ಭಾರತೀಯ ಚಿತ್ರಕಾರರಾದ ಶಾಕ್ಯಬುದ್ಧ, ಬುದ್ಧಕೀರ್ತಿ, ಕುಮಾರಬೋಧಿ ಮುಂತಾದವರು ಅನೇಕ ಬೌದ್ಧ ಚಿತ್ರಗಳನ್ನು ಬರೆದರು. ಜೇಡಿಮಣ್ಣಿನ ಪಾತ್ರೆಗಳನ್ನು ತಯಾರಿಸುವುದರಲ್ಲಿ ಚೀನೀಯರು ಅದ್ಭುತ ಪ್ರಗತಿ ಸಾಧಿಸಿದ್ದಾರೆ. ನೂರಾರು ವರ್ಷಗಳಿಂದ ಚೀನೀಯರು ಇವುಗಳನ್ನು ಪ್ರಪಂಚದ ಎಲ್ಲ ಕಡೆಗಳಿಗೂ ರಫ್ತು ಮಾಡುತ್ತಿದ್ದಾರೆ. ಉತ್ತಮ ರೇಷ್ಮೆ ಬಟ್ಟೆಗಳ ತಯಾರಿಕೆಗೂ ಚೀನೀಯರು ಪ್ರಾಚೀನ ಕಾಲದಿಂದಲೂ ಪ್ರಸಿದ್ಧರಾಗಿದ್ದಾರೆ.

ಜಪಾನಿನ ವಾಸ್ತುಶಿಲ್ಪ ವಿಶೇಷವಾಗಿ ಚೀನೀ ವಾಸ್ತುಶಿಲ್ಪವನ್ನೇ ಅನುಸರಿಸಿದೆ. ಅಲ್ಲಿ ರಾಷ್ಟ್ರೀಯ ಭಾವನೆ ಜಾಗೃತವಾದಾಗ, ಜಪಾನೀಯರೂ ಚೀನೀ ಸಂಪ್ರದಾಯಕ್ಕೆ ಭಿನ್ನವಾದ ಪರಂಪರೆಯನ್ನು ರೂಢಿಸಿಕೊಂಡರು. ಜಪಾನಿನಲ್ಲಿ ಒಳ್ಳೆಯ ಮರಗಳ ಕಾಡುಗಳಿವೆ. ಭೂಕಂಪಗಳ ಹೆದರಿಕೆಯಿಂದ ಅಲ್ಲಿನ ಜನ ಮರಗಳನ್ನು ವಿಶೇಷವಾಗಿ ಬೆಳೆಸುತ್ತಾರೆ. ಕಟ್ಟಡಗಳ ನಿರ್ಮಾಣದಲ್ಲಿ ಬೊಂಬುಗಳ ಬಳಕೆ ಹೆಚ್ಚು. ಷಿಂಟೋಧರ್ಮಕ್ಕೆ ಸಂಬಂಧಪಟ್ಟ ದೇವಾಲಯಗಳೆಲ್ಲವೂ ಸಾಮಾನ್ಯವಾಗಿ ಬೊಂಬುಗಳಿಂದ ಕಟ್ಟಲಾದ ಮತ್ತು ತಡಿಕೆಯಿಂದ ಮುಚ್ಚಿದ್ದ ಒಂದಂತಸ್ತಿನ ಸರಳ ಕಟ್ಟಡಗಳು. ಬೌದ್ಧ ಧರ್ಮ

ಚೀನದಿಂದ ಜಪಾನಿಗೆ ಬಂದ ಮೇಲೆ ಇಲ್ಲಿ ಚೀನೀ ಪ್ರಭಾವ ಹೆಚ್ಚಿತು. ಆಗ ಬೌದ್ಧ ದೇವಾಲಯಗಳು ಚೀನೀ ವಾಸ್ತುಶೈಲಿಯಲ್ಲೂ ಷಿಂಟೋ ದೇವಾಲಯಗಳು ಹಳೆಯ ಜಪಾನ್ ಶೈಲಿಯಲ್ಲೂ ನಿರ್ಮಾಣವಾಗುತ್ತಿದ್ದವು. ಕಾಲಕ್ರಮೇಣ ಈ ಎರಡು ಶೈಲಿಗಳೂ ಪರಸ್ಪರ ಬೆರೆತವು. ತಾಂತ್ರಿಕ ಬೌದ್ಧಧರ್ಮ ಜಪಾನಿನಲ್ಲಿ ತಲೆಯೆತ್ತಿದ ಅನಂತರ ಕಟ್ಟಡ ನಿರ್ಮಾಣದಲ್ಲೂ ಬದಲಾವಣೆಗಳಾದವು. ಬೆಟ್ಟಗಳ ಮೇಲೆ ದೇವಾಲಯ ಕಟ್ಟುವ ಪದ್ಧತಿ ಪ್ರಾರಂಭವಾಯಿತು. 9ನೆಯ ಶತಮಾನದಿಂದ 12ನೆಯ ಶತಮಾನದವರೆಗೆ ಜಪಾನಿನ ವಿಶಿಷ್ಟ ಶೈಲಿಯೊಂದು ಬೆಳೆಯಿತೆನ್ನಬಹುದು. ಇದನ್ನು

ಜೇಡಿಮಣ್ಣಿನಿಂದ ಮಾಡಿದ ಬೋಧಿಸತ್ವನ ವರ್ಣಚಿತ್ರಿತ ವಿಗ್ರಹ (ಜಪಾನ್)

ಷಿಂಡೆನ್‌ಜುಕಾರಿ ಶೈಲಿ ಎಂದು ಕರೆಯುತ್ತಾರೆ. ಅಕ್ಕಪಕ್ಕದಲ್ಲಿ ಕಟ್ಟಲಾದ ಅನೇಕ ಕಟ್ಟಡಗಳಿಗೆ ಸೇರಿಕೊಂಡಂತೆ ಅಂಗಳಗಳನ್ನೂ ಮಧ್ಯದಲ್ಲಿ ಒಂದು ಸರೋವರವನ್ನೂ ನಿರ್ಮಿಸುವುದು ಈ ಶೈಲಿಯ ಮುಖ್ಯ ಲಕ್ಷಣ. ಇದು ಮೂರು-ನಾಲ್ಕು ಶತಮಾನಗಳವರೆಗೆ ಜಪಾನಿನ ವಾಸ್ತುಕಲೆಯ ವೈಶಿಷ್ಟ್ಯವಾಗಿತ್ತು. ಹನ್ನೆರಡನೆಯದರಿಂದ ಹದಿನಾರನೆಯ ಶತಮಾನದವರೆಗೆ ಮತ್ತು ವಿಶೇಷವಾದ ಚೀನೀ ಪ್ರಭಾವಕ್ಕೆ ಇದು ಒಳಗಾಯಿತು. 16ನೆಯ ಶತಮಾನದ ಕೊನೆಯ ಭಾಗದಲ್ಲಿ ಮೊಮೊಯಾಮ ಎಂಬ ರಾಷ್ಟ್ರೀಯ ಶೈಲಿ ವಿಕಾಸ ಹೊಂದಿತು. ಇದು ಜಪಾನಿನ ವಾಸ್ತುಕಲೆಯಲ್ಲಿ ವೈಭವದ ಕಾಲ. ಮೂರು ಶತಮಾನಗಳ ಕಾಲ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಈ ಶೈಲಿ 19ನೆಯ ಶತಮಾನದಿಂದ ಪಾಶ್ಚಾತ್ಯ ಪ್ರಭಾವಕ್ಕೊಳಗಾಯಿತು.

ಕಲ್ಲಿಗಿಂತ ಮರವನ್ನೇ ವಿಶೇಷವಾಗಿ ಶಿಲ್ಪಕ್ಕೂ ಬಳಸುವುದು ಜಪಾನಿನ ವೈಶಿಷ್ಟ್ಯ 8ನೆಯ ಶತಮಾನ ಶಿಲ್ಪಕಲೆಯ ದೃಷ್ಟಿಯಿಂದ ಮಹತ್ತರ ಕಾಲ. ಕಂಚು, ಮರ, ದಂತಗಳಿಂದ ಮಾಡಲಾದ ಬುದ್ಧನ ವಿಗ್ರಹಗಳು ವಿಶೇಷವಾಗಿ ದೊರಕಿವೆ. ತೋಡೈಜಿ ದೇವಾಲಯಗಳಲ್ಲಿರುವ 16 ಮೀಗಳು ಕಂಚಿನ ವಿರೋಚನ ಬುದ್ಧನ ವಿಗ್ರಹ ಜಪಾನಿನ ಶಿಲ್ಪಕಲೆಯ ಔನ್ನತ್ಯಕ್ಕೆ ಉತ್ತಮ ಉದಾಹರಣೆ. 10ನೆಯ ಶತಮಾನದಲ್ಲಿ ಇಳಿಮುಖವಾದ ಈ ಕಲೆ ಮತ್ತೆ ಹದಿಮೂರನೆಯ ಶತಮಾನದಲ್ಲಿ ಅಭಿವೃದ್ಧಿ ಹೊಂದಿತು.

ಜಪಾನೀಯರು ಶಿಲ್ಪಕಲೆಗಿಂತ ಹೆಚ್ಚಾಗಿ ವರ್ಣಚಿತ್ರಕಲೆಯಲ್ಲಿ ಪರಿಶ್ರಮ ಪಡೆದರು. ಬೌದ್ಧಧರ್ಮದ ಬೆಳವಣಿಗೆಯೊಂದಿಗೆ ವರ್ಣಚಿತ್ರಕಲೆಯೂ ಜಪಾನಿನಲ್ಲಿ ಅಭಿವೃದ್ಧಿಯಾಯಿತು. ಜಪಾನಿನ ವರ್ಣಚಿತ್ರಗಳು ವಿಶೇಷವಾಗಿ ರೇಷ್ಮೆ ಬಟ್ಟೆಗಳ ಮೇಲೆ ಮಾಡಿದವು. ಇವು ಗಳನ್ನು ಬೌದ್ಧ ದೇವಾಲಯ ಗಳಲ್ಲಿ ಪೂಜೆಗಾಗಿ ತೂಗು ಹಾಕುವ ಪದ್ಧತಿ ಬೆಳೆಯಿತು. ವರ್ಣಚಿತ್ರಕಲೆಯಲ್ಲೂ ಚೀನೀ ಪ್ರಭಾವಗಳ ಮತ್ತು ರಾಷ್ಟ್ರೀಯ ಶೈಲಿಯ ಲಕ್ಷಣಗಳ ಮಿಶ್ರಣವನ್ನು ಕಾಣಬಹುದು.

ಕೊರಿಯದ ವಾಸ್ತುಶಿಲ್ಪ ಮತ್ತು ಇತರ ಕಲೆಗಳಲ್ಲಿ ಚೀನೀ ಸಂಪ್ರದಾಯಗಳೇ ವಿಶೇಷ. ಒಂದು ದೃಷ್ಟಿಯಲ್ಲಿ ಅದು ಚೀನೀ ಶೈಲಿಯ ಒಂದು ಸ್ಥಳೀಯ ವೈವಿಧ್ಯವಷ್ಟೆ. ಕೊರಿಯದಲ್ಲಿ ಬೌದ್ಧ ಧರ್ಮದೊಂದಿಗೆ ಬೌದ್ಧ ಕಲೆಯೂ ಬೆಳೆಯಿತು.

**ದಕ್ಷಿಣ ಏಷ್ಯ:** ದಕ್ಷಿಣ ಏಷ್ಯದಲ್ಲಿ ಭಾರತವೇ ಅತಿ ಮುಖ್ಯ ರಾಷ್ಟ್ರ. ವಾಸ್ತುಶಿಲ್ಪ ಮತ್ತು ಕಲೆಗಳ ದೃಷ್ಟಿಯಿಂದಲೂ ಭಾರತ ಪ್ರಾಮುಖ್ಯ ಗಳಿಸಿದೆ. ಪ್ರ.ಶ.ಪೂ.3ನೆಯ ಸಹಸ್ರಮಾನ ದ ಸಿಂಧೂ ನಾಗರಿಕತೆಯಿಂದ ಭಾರತೀಯ ವಾಸ್ತುಶಿಲ್ಪ ಮತ್ತು ಇತರ ಕಲೆಗಳ ಚರಿತ್ರೆ ಪ್ರಾರಂಭವಾಗುತ್ತದೆ. ಬೃಹದಾಕಾರದ ಕೋಟೆಗಳು, ಮನೆಗಳು, ಸ್ನಾನಗೃಹ, ಕಂಚಿನ ವಿಗ್ರಹ, ಇತರ ಶಿಲ್ಪಗಳು, ಶಾಸನವುಳ್ಳ ಮುದ್ರೆಗಳು, ವಿವಿಧ ವರ್ಣಗಳ ಮಡಕೆಗಳು ಮುಂತಾದವು ಭಾರತೀಯ ಕಲಾಕೃತಿಯ ಸಂಪ್ರದಾಯಕ್ಕೆ ಭದ್ರ ಬುನಾದಿ ಹಾಕಿವೆ. ಮೌರ್ಯರ ಕಾಲದಲ್ಲಿ ಕಲ್ಲಿನಿಂದ ವಾಸ್ತುಶಿಲ್ಪ ಕೃತಿಗಳನ್ನು ನಿರ್ಮಿಸುವ ಕಲೆ ಅಭಿವೃದ್ಧಿ ಹೊಂದಿತು. ಅಶೋಕ ನಿರ್ಮಿಸಿದ ಕಲ್ಲುಕಂಬಗಳು ಪರ್ಷಿಯನ್ ಪ್ರಭಾವವನ್ನು ವ್ಯಕ್ತಪಡಿಸಿದರೂ ಉತ್ತಮ ಕೃತಿಗಳಾಗಿವೆ. ಗುಪ್ತರ ಕಾಲದಲ್ಲಿ ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳು ಉಚ್ಛ್ರಾಯಸ್ಥಿತಿ ಮುಟ್ಟಿದುವು. ದಕ್ಷಿಣದಲ್ಲಿ ಗುಹಾದೇವಾಲಯಗಳ ಪರಂಪರೆ ಪ್ರಾರಂಭವಾಗಿ ಕಾರ್ಲ, ಭೇಡ್ಸ ಮುಂತಾದಲ್ಲಿ ಗುಹೆಗಳು ನಿರ್ಮಾಣವಾಗಿ ಅಜಂತ, ಎಲ್ಲೋರದಂಥ ವಿಶ್ವವಿಖ್ಯಾತ ಕೃತಿಗಳ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟವು. ನಾಗರ, ದ್ರಾವಿಡ ಮತ್ತು ವೇಸರ ಎಂಬ ಮೂರು ಪ್ರಕಾರದ ದೇವಾಲಯಗಳ ನಿರ್ಮಾಣ ಪ್ರಾರಂಭವಾಗಿ ದೇಗುಲನಿರ್ಮಾಣಕಲೆ ಅಭಿವೃದ್ಧಿ ಹೊಂದಿತು. ಬಾದಾಮಿ, ಪಟ್ಟದಕಲ್ಲು, ಐಹೊಳೆ, ಕಂಚಿ, ತಂಜಾವೂರು, ಭುವನೇಶ್ವರ ಮೊದಲಾದ ಕಡೆಗಳಲ್ಲಿ ವಿವಿಧ ಶೈಲಿಗಳ ದೇಗುಲಗಳು ತಲೆ ಎತ್ತಿದುವು. ಕರ್ನಾಟಕದಲ್ಲಿ ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ರಾಜ್ಯಗಳ ಕಾಲದಲ್ಲಿ ಕಟ್ಟಲಾದ ದೇವಾಲಯಗಳು ಪ್ರಸಿದ್ಧವಾಗಿವೆ. ವಿಜಯನಗರ ಸಾಮ್ರಾಜ್ಯದ ಅನಂತರ ದಕ್ಷಿಣ ಭಾರತದ ನಾಯಕರು ದೇವಾಲಯ ನಿರ್ಮಾಣ ಕಾರ್ಯಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟರು. ಗುಜರಾತಿನಲ್ಲಿನ ಜೈನ ದೇವಾಲಯಗಳು ನಿರ್ಮಾಣವಾದವು.

ಬೋಧಿಸತ್ವ ಅವಲೋಕಿತೇಶ್ವರನ ಮರದ ವಿಗ್ರಹ (ಚೀನ)

ಭಾರತದಲ್ಲಿ ಮಹಮ್ಮದೀಯರ ರಾಜ್ಯ ಸ್ಥಾಪನೆಯಾದ ಮೇಲೆ ಇಂಡೋ-ಸಾರ್ಸನಿಕ್ ಶೈಲಿಯ ಕಟ್ಟಡಗಳು ನಿರ್ಮಾಣವಾಗಲು ಪ್ರಾರಂಭವಾದುವು. ಮೊಗಲ್ ರಾಜರು ಕಟ್ಟಡನಿರ್ಮಾಣಕಾರ್ಯಗಳಲ್ಲಿ ವಿಶೇಷ ಆಸಕ್ತಿ ವಹಿಸಿದರು. ದೆಹಲಿ, ಆಗ್ರಾ, ಲಖ್‌ನೌ, ಫತೇಪುರ್-ಸಿಕ್ರಿ ಮುಂತಾದ ಕಡೆಗಳಲ್ಲಿ ಉತ್ತಮ ವಾಸ್ತುಕೃತಿಗಳು ನಿರ್ಮಾಣವಾದವು. ಡಚ್, ಪೋರ್ಚುಗೀಸ್ ಮತ್ತು ಬ್ರಿಟಿಷರ ಆಗಮನದಿಂದ ಆಯಾ ಶೈಲಿಗಳ ಚರ್ಚುಗಳು ಮತ್ತು ಇತರ ಕಟ್ಟಡಗಳು ನಿರ್ಮಾಣವಾದವು.

ದಕ್ಷಿಣ ಭಾರತದಲ್ಲೂ ಉತ್ತರ ಪ್ರದೇಶ, ಮಧ್ಯ ಪ್ರದೇಶ, ಆಂಧ್ರ ಮುಂತಾದ ಕಡೆಗಳಲ್ಲೂ ಆದಿಮ ಜನ ವಾಸಿಸುತ್ತಿದ್ದಾರೆ. ಇವರ ಕುಶಲಕಲೆಗಳಾದ ವರ್ಣಚಿತ್ರ, ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು, ಕಂಚಿನ ಪ್ರತಿಮೆಗಳ ನಿರ್ಮಾಣ ಮುಂತಾದವು ಪ್ರಚಲಿತವಾಗಿದ್ದು ಉನ್ನತ ಮಟ್ಟದಲ್ಲಿವೆ. ಪ್ರಾಚೀನ ಕಾಲದಿಂದಲೂ ಭಾರತೀಯರು ಸಂಗೀತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದು, ಒಂದು ವಿಶಿಷ್ಟ ಸಂಗೀತ ಪರಂಪರೆಯನ್ನು ಬೆಳೆಸಿಕೊಂಡಿದ್ದಾರೆ. ವೇದಕಾಲದಿಂದ ಹಿಡಿದು ಇಂದಿನವರೆಗೆ ಸಂಗೀತ ಕಲೆ ಅವಿಚ್ಛಿನ್ನವಾಗಿ ಬೆಳೆದುಬಂದಿದೆ. ಅನೇಕ ಪ್ರಾಚೀನ ಕಲೆಗಳು ತಮ್ಮ ಉಚ್ಛ್ರಾಯಸ್ಥಿತಿಯನ್ನು ಕಳೆದುಕೊಂಡು ಗ್ರಾಮಗಳಲ್ಲಿ ಕುಶಲ ಕಲೆಗಳಾಗಿ ಮುಂದುವರಿಯುತ್ತಿವೆ.

ಪ್ರಾಚೀನ ಭಾರತ ತನ್ನ ಕಲೆಯನ್ನು ತಾನು ರೂಪಿಸಿಕೊಂಡಿದ್ದುದೇ ಅಲ್ಲದೆ, ಅಕ್ಕಪಕ್ಕದ ರಾಜ್ಯಗಳಾದ ಶ್ರೀಲಂಕ, ಆಫ್ಘಾನಿಸ್ತಾನ ಮತ್ತು ಆಗ್ನೇಯ ಏಷ್ಯನ್ ರಾಜ್ಯಗಳ ಕಲಾಪರಂಪರೆಯನ್ನು ರೂಢಿಸಿಕೊಳ್ಳಲು ಸಹಾಯಮಾಡಿತು. ಈ ದೃಷ್ಟಿಯಿಂದ ಈ ರಾಜ್ಯಗಳೆಲ್ಲವೂ ಸಾಂಸ್ಕೃತಿಕ ಭಾರತದ ಅವಿಭಾಜ್ಯ ಅಂಗಗಳಾಗಿದ್ದುವೆಂದು ಖಚಿತವಾಗಿ ಹೇಳಬಹುದು. ಅದರಿಂದಲೇ ಈ ರಾಜ್ಯಗಳನ್ನು ಬೃಹದ್ಭಾರತ ಎಂದು ಕರೆಯುತ್ತಾರೆ.

ಭಾರತಕ್ಕೆ ಬಹು ಸಮೀಪವಾಗಿರುವ ಶ್ರೀಲಂಕದ್ವೀಪ ದಕ್ಷಿಣ ಭಾರತದ ಪಲ್ಲವರು ಮತ್ತು ಚೋಳರೊಂದಿಗೆ ರಾಜಕೀಯ ಸಂಪರ್ಕ ಹೊಂದಿತ್ತು. ಕ್ರಿಸ್ತಶಕದ ಆರಂಭದ ಸಮಯಕ್ಕೆ ಇಲ್ಲಿ ಅನೇಕ ವಿಹಾರಗಳೂ ಚೈತ್ಯಗಳೂ ನಿರ್ಮಾಣವಾದವು. ಮೊದಲನೆಯ ಕಾಶ್ಯಪರಾಜನಿಂದ ನಿರ್ಮಿತವಾದ ಸೀಗಿರಿಯ ಗುಹಾದೇವಾಲಯಗಳಲ್ಲಿ ವರ್ಣಚಿತ್ರಗಳಿವೆ. ಇವು ಅಜಂತ ಶೈಲಿಗೆ ಸೇರಿದವು. ಕುಂಚದ ಅತಿಸೂಕ್ಷ್ಮ ಕೆಲಸವನ್ನು ಇಲ್ಲಿ ಕಾಣಬಹುದು. ಪೊಲನ್ನಾರುವದಲ್ಲಿರುವ ಕಟ್ಟಡಗಳು ದ್ರಾವಿಡ ಸಂಪ್ರದಾಯಕ್ಕೆ ಸೇರಿದವು. ಚೋಳರು ಇಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಇಲ್ಲಿರುವ ಶಿವದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಅರ್ಧ ಮಂಡಪ, ಮಂಡಪ ಮುಂತಾದ ಭಾಗಗಳಿವೆ. ಸಿಂಹಳದ ಮೂರ್ತಿಶಿಲ್ಪಗಳಲ್ಲಿ ಅಮರಾವತಿ ಮತ್ತು ನಾಗಾರ್ಜುನಕೊಂಡದ ಶಿಲ್ಪಪ್ರಭಾವಗಳನ್ನು ಸುಲಭವಾಗಿ ಗುರುತಿಸಬಹುದು. ಕಂಚು ಮತ್ತು ತಾಮ್ರದಿಂದ ವಿಗ್ರಹಗಳನ್ನು ಮಾಡುವ

**ಬಾಂಟೇಯ್ ಸ್ರೈನಲ್ಲಿನ ಅಪ್ಸರೆ**

ಕಲೆ 5ನೆಯ ಶತಮಾನದಿಂದ ಪ್ರಾರಂಭವಾಗಿ 12ನೆಯ ಶತಮಾನದವರೆಗೆ ಉಚ್ಛ್ರಾಯಸ್ಥಿತಿಯಲ್ಲಿತ್ತು. ಶಿವ, ನಟರಾಜ, ಗಣೇಶ, ಪಾರ್ವತಿ, ವಿಷ್ಣು, ಲಕ್ಷ್ಮಿ ಮುಂತಾದ ದೇವತೆಗಳ ವಿಗ್ರಹಗಳು ದಕ್ಷಿಣ ಭಾರತದ ಶೈಲಿಯಲ್ಲಿವೆ.

ಚೀನೀ ಯಾತ್ರಿಕರಾದ ಫಾಹಿಯಾನ್ ಮತ್ತು ಹ್ಯುಯೆನ್‌ತ್ಸಾಂಗರ ಬರೆವಣಿಗೆಯ ಪ್ರಕಾರ ಆಫ್ಘಾನಿಸ್ತಾನದ ಹೆಚ್ಚು ಭಾಗ ಪ್ರಾಚೀನ ಭಾರತಕ್ಕೆ ಸೇರಿತ್ತು. ಆದ್ದರಿಂದ ಇಲ್ಲೂ ಭಾರತೀಯ ಪ್ರಭಾವಿತ ವಾಸ್ತುಶಿಲ್ಪಗಳನ್ನು ಕಾಣಬಹುದು. ಬಮಿಯಾನ್, ಕಪಿಶಾ, ಬೆಗ್ರಾಮ್‌ಗಳು ಇಲ್ಲಿನ ಮುಖ್ಯ ಕಲಾಕೇಂದ್ರಗಳು. 4–5ನೆಯ ಶತಮಾನಗಳಿಗೆ ಸೇರಿದ 4.50–5 ಮೀಗಳ ಎರಡು ಕಲ್ಲಿನ ಬುದ್ಧವಿಗ್ರಹಗಳು ಬಮಿಯಾನ್‌ನಲ್ಲಿ ದೊರಕಿವೆ. ಇವುಗಳಲ್ಲಿ ಭಾರತೀಯ, ಇರಾನೀ, ಮತ್ತು ಗಾಂಧಾರ ಪ್ರಭಾವಗಳು ಮಿಳಿತವಾಗಿವೆ. ಕಪಿಶಾದಲ್ಲಿ ಅನೇಕ ವಿಹಾರಗಳೂ ವೈದಿಕ ದೇವಾಲಯಗಳೂ ಇದ್ದವು. ಹಡ್ಡದಲ್ಲಿ 531 ಸ್ತೂಪಗಳು ಅವಶೇಷಗಳೂ 500ಕ್ಕೂ ಹೆಚ್ಚು ಬೌದ್ಧಶಿಲ್ಪಗಳೂ ದೊರಕಿವೆ. ಬಮಿಯಾನಿನಲ್ಲಿ ಬುದ್ಧನ ವಿಗ್ರಹಗಳು ಮಾತ್ರವಲ್ಲದೆ, ಅನೇಕ ಭಿತ್ತಿ ಚಿತ್ರಗಳು ದೊರಕಿವೆ. ಗುಪ್ತಶೈಲಿಯ ಅನೇಕ ದೇವಾಲಯಗಳನ್ನು ಇಲ್ಲಿ ಪತ್ತೆ ಹಚ್ಚಲಾಗಿದೆ. ಬೆಗ್ರಾಮಿನಲ್ಲಿ ದೊರಕಿರುವ ದಂತದ ವಿಗ್ರಹಗಳು ಭಾರತದ ಮಥುರಾ ಶಿಲ್ಪಶೈಲಿಗಳಿಗೆ ಸೇರಿದವೆಂದು ಸುಲಭವಾಗಿ ಗುರುತಿಸಬಹುದು. ಜೇಡಿಮಣ್ಣಿನ ವಿಗ್ರಹಗಳು ಇಲ್ಲಿ ವಿಶೇಷವಾಗಿ ದೊರಕಿವೆ. ಇವು ಗುಪ್ತಸಂಪ್ರದಾಯಕ್ಕೆ ಸೇರಿದವು. ಬೆಗ್ರಾಮ್‌ನಲ್ಲಿ ದೊರಕಿರುವ ವರ್ಣಚಿತ್ರಗಳಲ್ಲಿ ಗುಪ್ತ ಮತ್ತು ಪಾಲರ ಕಾಲದ ಪ್ರಭಾವಗಳನ್ನು ವಿಶೇಷವಾಗಿ ಕಾಣಬಹುದು. ಇಸ್ಲಾಮೀ ಕಲಾಸಂಪ್ರದಾಯಕ್ಕೆ ಸೇರಿದ ಕಟ್ಟಡಗಳನ್ನು ಹೆರಾತ್, ಕಾಂದಹಾರ್, ಘಜ್ನಿ ಮುಂತಾದಲ್ಲಿ ಕಾಣಬಹುದು **(ನೋಡಿ– ಆಫ್ಘಾನಿಸ್ತಾನ)**.

**ಆಗ್ನೇಯ ಏಷ್ಯ:** ಆಗ್ನೇಯ ಏಷ್ಯದ ವಿವಿಧ ರಾಜ್ಯಗಳಲ್ಲಿ ಪ್ರಸಕ್ತಶಕದ ಆರಂಭದಿಂದ ಹಿಂದೂ ರಾಜ್ಯಗಳು ಸ್ಥಾಪನೆಯಾದವು. ಇವುಗಳ ಆಶ್ರಯದಲ್ಲಿ ಭಾರತೀಯ ಸಂಸ್ಕೃತಿ ಈ ರಾಜ್ಯಗಳಲ್ಲಿ ಅಭಿವೃದ್ಧಿ ಹೊಂದಿತು. ಪ್ರಾಚೀನ ಸಂಸ್ಕೃತಿಯ ದೃಷ್ಟಿಯಿಂದ ಆಗ್ನೇಯ ಏಷ್ಯವನ್ನು ಬೃಹದ್‌ಭಾರತ ಎಂದು ಕರೆಯಬಹುದು. ಸಾಮಾಜಿಕ, ಮತೀಯ ಮತ್ತು ಧಾರ್ಮಿಕ ಸ್ಥಿತಿಗಳಲ್ಲಿ ಭಾರತೀಯ ಪ್ರಭಾವ ಆಗ್ನೇಯ ಏಷ್ಯದ ರಾಜ್ಯಗಳಲ್ಲಿ ಯಾವ ರೀತಿ ಬೆಳೆಯಿತೋ ಅದಕ್ಕೂ ವಿಶೇಷವಾಗಿ ಭಾರತೀಯ ವಾಸ್ತುಶಿಲ್ಪ ಮತ್ತು ಕಲೆಗಳು ಅಲ್ಲಿ ವಿಕಾಸಹೊಂದಿದವು. ಆದ್ದರಿಂದ ಆಗ್ನೇಯ ಏಷ್ಯದ ಪ್ರಾಚೀನ ವಾಸ್ತುಶಿಲ್ಪಕಲೆ ಭಾರತೀಯ ವಾಸ್ತುಶಿಲ್ಪ ಪಂಥಕ್ಕೇ ಸೇರಿದ್ದವು. ದೇವಾಲಯಗಳ ನಿರ್ಮಾಣದಲ್ಲಂತೂ ಚಾಳುಕ್ಯ, ಪಲ್ಲವ ಮುಂತಾದ ಶೈಲಿಗಳನ್ನು ಅನುಸರಿಸಲಾಯಿತು. ಮೊದಮೊದಲು ಭಾರತೀಯ ಶೈಲಿಯ ಪೂರ್ಣಪ್ರಭಾವಗಳನ್ನು ಕಾಣಬಹುದಾದರೂ ಕಾಲಕ್ರಮದಲ್ಲಿ ಸ್ಥಳೀಯ ಲಕ್ಷಣಗಳು ತಲೆದೋರಿದವು. ಕಾಂಬೋಡಿಯದಲ್ಲಿ ಭಾರತೀಯ ಶೈಲಿ,

**ಕಂಚಿನ ಬುದ್ಧವಿಗ್ರಹಗಳು (ಜಪಾನ್)**

ಇಂಡೋ–ಖ್ಮೆರ್ ಶೈಲಿ ಮತ್ತು ಖ್ಮೆರ್ ಶೈಲಿ ಎಂದು ಮೂರು ಶೈಲಿಗಳನ್ನು ಸುಲಭವಾಗಿ ಗುರುತಿಸಬಹುದು. ಇವೇ ರೀತಿಯ ಶೈಲಿಗಳು ಜಾವಾದಲ್ಲೂ ಇವೆ. ಈ ವಾಸ್ತುಶಿಲ್ಪ ಕೃತಿಗಳೆಲ್ಲವೂ ಹಿಂದೂ ಧಾರ್ಮಿಕ ಭಾವನೆಗಳ ಮೇಲೆ ಆಧಾರಿತವಾಗಿದ್ದುದರಿಂದ ಇವು ಆಂತರಿಕವಾಗಿ ಹಿಂದೂ ಶೈಲಿಗೆ ಸಂಬಂಧಿಸಿದರೂ ಬಾಹ್ಯರೂಪದಲ್ಲಿ ಸ್ಥಳೀಯ ಲಕ್ಷಣಗಳನ್ನೇ ಹೊಂದಿದ್ದುವು. ಮುಖದಲ್ಲಿ ಈ ಲಕ್ಷಣಗಳು ಎದ್ದು ಕಾಣುತ್ತವೆ. ಪೂರ್ಣ ಭಾರತೀಯ ಶೈಲಿಯ ಕಾಂಬೋಡಿಯದ ಶಿಲ್ಪದಲ್ಲಿಯೂ ದೇವತೆಗಳ ಮುಖ್ಯಲಕ್ಷಣಗಳು ಭಾರತೀಯವಾಗಿರದೆ ಖ್ಮೇರ್ ಲಕ್ಷಣಗಳನ್ನೇ ಹೊಂದಿ ನಮ್ಮ ಗಮನ ಸೆಳೆಯುತ್ತವೆ. ಆಗ್ನೇಯ ಏಷ್ಯದಲ್ಲಿ ನಿರ್ಮಾಣವಾದ ವಾಸ್ತುಶಿಲ್ಪ ಕಲಾಕೃತಿಗಳಲ್ಲಿ ಆಂಗ್ಕೋರ್‌ವಾಟ್, ಬೊರೊಬೊದೂರ್, ಆನಂದ ದೇವಾಲಯ, ಬೆಲ್‌ಹನ ವಿಷ್ಣು ಮುಂತಾದವು ಗಮನಾರ್ಹ **(ನೋಡಿ– ಆಗ್ನೇಯ–ಏಷ್ಯ)**.

**ಮಧ್ಯ ಏಷ್ಯ :** ಪ್ರಾಚೀನ ಪ್ರಪಂಚದಲ್ಲಿ ಮಧ್ಯ ಏಷ್ಯ ಅನೇಕ ಸಂಸ್ಕೃತಿಗಳ ಸಂಗಮಸ್ಥಾನವಾಗಿತ್ತು. ಸೋವಿಯತ್ ಪುರಾತತ್ತ್ವಜ್ಞರು ಮಧ್ಯ ಏಷ್ಯದ ಅನೇಕ ಸ್ಥಳಗಳಲ್ಲಿ ನಡೆಸಿರುವ ಉತ್ಖನನಗಳಿಂದ, ಈ ಪ್ರದೇಶದಲ್ಲಿ ನೂತನ ಶಿಲಾಯುಗದ ಕಾಲದಲ್ಲಿಯೇ ಮಡಕೆಗಳ ಮೇಲೆ ವಿವಿಧ ರೀತಿಯ ವರ್ಣಚಿತ್ರಗಳನ್ನು ಬರೆಯುವ ಪರಂಪರೆ ಪ್ರಾರಂಭವಾಯಿತೆಂದು ಗೊತ್ತಾಗುತ್ತದೆ. ಪ್ರ.ಶ.ಪೂ. 1ನೆಯ ಸಹಸ್ರಮಾನದ ಕರಸುಕ್ ಸಂಸ್ಕೃತಿಯ ಕಂಚಿನ ವಿಗ್ರಹಗಳು ಒಳ್ಳೆಯ ಕಲಾತ್ಮಕ ವಸ್ತುಗಳು. ಪ್ರಸಕ್ತಶಕದ ಆರಂಭದ ಹೊತ್ತಿಗೆ ಬೌದ್ಧಧರ್ಮ ಈ ಪ್ರದೇಶಗಳಲ್ಲೆಲ್ಲ ಹರಡಿ, ಕುಶಾನರ ಆಸಕ್ತಿಯಿಂದ ಗಾಂಧಾರ ಶೈಲಿ ಪ್ರಾರಂಭವಾಯಿತು. ಇದು ಭಾರತೀಯ ಶೈಲಿಯಿಂದ ಪ್ರಭಾವಿತಗೊಂಡ

ಚೆಯ್ಯಾದ ಅವಲೋಕಿತೇಶ್ವರ (ಸಯಾಂ)

ಒಂದು ನೂತನ ಶೈಲಿ. ಸೊಗ್ಡಿಯಾನದಲ್ಲಿ ಈ ಪಂಥಕ್ಕೆ ಸೇರಿದ ಅನೇಕ ಪ್ರಾಚೀನ ನೆಲೆಗಳನ್ನು ಶಹರಿಸ್ತಾನ್, ವರಖ್ಷ ಮುಂತಾದ ಕಡೆಗಳಲ್ಲಿ ಗುರುತಿಸಲಾಗಿದೆ. ಎತ್ತರವಾದ ಮತ್ತು ವಿಶಾಲವಾದ ಕೋಟೆಗಳೂ ಅರಮನೆಗಳೂ ದೇವಾಲಯಗಳೂ ಅವುಗಳಲ್ಲಿನ ಭಿತ್ತಿಚಿತ್ರಗಳೂ ಇವುಗಳಲ್ಲಿ ಮುಖ್ಯವಾದುವು. ಪ್ರ.ಶ. 5ನೆಯ ಶತಮಾನದ ಸಮಯದಲ್ಲಿ ಕುಶಾನರ ಪ್ರಭಾವ ಕಡಿಮೆಯಾದಾಗ ಹೊರಗಡೆಯಿಂದ ಇಲ್ಲಿಗೆ ಬಂದ ಎಫ್ಥಲೈಟ್ ಜನರು ಬೌದ್ಧಧರ್ಮವನ್ನೂ ಅದರಿಂದ ಪ್ರಭಾವಿತಗೊಂಡಿದ್ದ ಕಲೆಯನ್ನೂ ನಾಶಮಾಡಿದರು. ದೇವಾಲಯಗಳನ್ನು ಕೆಡವಿಸಿದರು. ಹೀಗಾಗಿ ಈ ಪ್ರದೇಶದಲ್ಲಿ ಬೌದ್ಧ ವಾಸ್ತುಶಿಲ್ಪ ಅಥವಾ ವರ್ಣಚಿತ್ರಕಲೆ ಮತ್ತೆ ಅಭಿವೃದ್ಧಿಯಾಗಲಿಲ್ಲ. ಅರಬರು ಈ ದೇಶದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ ಮೇಲೆ ಇಸ್ಲಾಮಿ ಕಲೆ ಇಲ್ಲಿ ಅಭಿವೃದ್ಧಿಯಾಯಿತು.

ಸರಿಂಡಿಯ ಎಂದು ಪ್ರಸಿದ್ಧವಾಗಿರುವ ಚೀನೀ ಮತ್ತು ಸೋವಿಯತ್ ತುರ್ಕಿಸ್ತಾನಗಳಲ್ಲಿ ವಿಶ್ವವಿಖ್ಯಾತವಾದ ಬೌದ್ಧಕಲಾಪರಂಪರೆ ಅಭಿವೃದ್ಧಿಹೊಂದಿತು. 1ನೆಯ ಶತಮಾನದಿಂದ ಮಹಮ್ಮದೀಯರ ದಾಳಿಗಳವರೆಗೆ ಇಲ್ಲಿ ನಿರ್ಮಿತವಾದ ಕಲೆ ಮತ್ತು ವಾಸ್ತುಶಿಲ್ಪಗಳಲ್ಲಿ ಗಾಂಧಾರ ಮತ್ತು ಪಶ್ಚಿಮ ಏಷ್ಯದ ಪ್ರಭಾವಗಳನ್ನೂ ಅನಂತರ ಬಂದ ಚೀನೀ ಪ್ರಭಾವಗಳನ್ನೂ ಕಾಣಬಹುದು. ಭಾರತೀಯ ಪ್ರಭಾವ ಇಲ್ಲಿ ನಿಂತು ಹೋದ ಮೇಲೆ ಚೀನೀ ಸಂಪ್ರದಾಯಗಳು ವಿಶೇಷವಾದವು. ಕೊನೆಗೆ ಮಹಮ್ಮದೀಯರ ದಾಳಿಗಳ ಅನಂತರ ಇಸ್ಲಾಮೀ ಕಲಾಪ್ರಭಾವ ಬೆಳೆಯಿತು. ಸರ್ ಆರಲ್ ಸ್ಟೇನ್ ಎಂಬ ವಿಖ್ಯಾತ ಪುರಾತತ್ತ್ವಜ್ಞ ಇಲ್ಲಿ ನಡೆಸಿದ ಸಂಶೋಧನೆಗಳಿಂದಾಗಿ ಈ ಪ್ರದೇಶದಲ್ಲಿದ್ದ ವಾಸ್ತುಶಿಲ್ಪಕೃತಿಗಳು ಬೆಳಕಿಗೆ ಬಂದಿವೆ. ಮಿರನ್ ಎಂಬಲ್ಲಿ ಒಂದು ದೊಡ್ಡ ಸ್ತೂಪ ದೊರಕಿದ್ದು, ಅದರ ಸುತ್ತಲೂ ಇರುವ ಕಟ್ಟಡಗಳಲ್ಲಿ ವರ್ಣಚಿತ್ರಗಳಿವೆ. ತುರ್ಕಿಸ್ತಾನದಲ್ಲೆ ಅತ್ಯಂತ ಪ್ರಾಚೀನವಾದ ವರ್ಣಚಿತ್ರವಿದು. ಇದರ ಕಾಲ 3ನೆಯ ಶತಮಾನ. ಇದರಲ್ಲಿ ಕಾಣಬರುವ ವಿಶ್ವಂತರ ಜಾತಕದ ವರ್ಣಚಿತ್ರದಲ್ಲಿ ಗಾಂಧಾರಶೈಲಿಯ ಪ್ರಭಾವವನ್ನು ಕಾಣಬಹುದು. ತಿತ ಎಂಬ ಕಲಾಕಾರ ಈ ಚಿತ್ರಗಳನ್ನು ಬರೆದವನೆಂದು ಗೊತ್ತಾಗುತ್ತದೆ. ಈತ ಏಷ್ಯದಲ್ಲಿ ನೆಲೆಸಿದ ರೋಮನ್ ಪ್ರಜೆಯಿರಬೇಕು. ಈ ವರ್ಣಚಿತ್ರಗಳಲ್ಲಿ ರೋಮನ್ ಮತ್ತು ಗ್ರೀಕ್ ಪ್ರಭಾವಗಳನ್ನು ಕಾಣಬಹುದು. ಈ ಪ್ರಭಾವಗಳು ಇಲ್ಲಿಗೆ ಹೇಗೆ ಬಂದವು ಎಂಬ ವಿಚಾರದಲ್ಲಿ ಖಚಿತವಾದ ಮಾಹಿತಿ ದೊರಕಿಲ್ಲ.

5–8ನೆಯ ಶತಮಾನಗಳವರೆಗೆ ಬೌದ್ಧಧರ್ಮದಿಂದ ಪ್ರಭಾವಗೊಂಡ ಕಲೆ ಖೊಟಾನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಹೊಂದಿತು. ಸ್ತೂಪಗಳು, ವಿಹಾರಗಳು ಮತ್ತು ವರ್ಣಚಿತ್ರಗಳು ಭಾರತೀಯ ಕಲಾ ಸಂಪ್ರದಾಯಕ್ಕೆ ಸೇರಿದವು. ಕಾಶ್ಮೀರದ ಮೂಲಕ ಈ ಪ್ರಭಾವಗಳು ಖೋಟಾನಿಗೆ ಬಂದುವು. ಗುಪ್ತರ ಕಾಲದ ಕಲಾಶೈಲಿಗೆ ಸೇರಿದ ಅನೇಕ ಪ್ರಭಾವಗಳನ್ನು ಇಲ್ಲಿ ಸುಲಭವಾಗಿ ಗುರುತಿಸಬಹುದು.

ಯೋತ್ಕಾನ್ ಪ್ರದೇಶದಲ್ಲಿ ದಂದನ್ ಉಯಿಲಿಕ್ ಎಂಬಲ್ಲಿ ಅನೇಕ ವಿಹಾರಗಳು ಕಾಣಬಂದಿವೆ. ಈ ವಿಹಾರಗಳಲ್ಲಿನ ವರ್ಣಚಿತ್ರಗಳು ಮುಖ್ಯವಾದುವು. ಇಲ್ಲಿ ಬೋಧಿಸತ್ವ, ಗಂಧರ್ವ, ಯಕ್ಷ, ಧರ್ಮಚಕ್ರ, ಅಷ್ಟದಳಪದ್ಮ, ನಾಗ, ನರ್ತನ ಮಾಡುತ್ತಿರುವ ಸ್ತ್ರೀಯರು ಮುಂತಾದ ವರ್ಣಚಿತ್ರಗಳುಂಟು. ರವಾಕ್‌ನಲ್ಲಿರುವ ಮಹಾವಿಹಾರದ ಅವಶೇಷಗಳು ವಾಸ್ತುಕಲೆಗೆ ಪ್ರಸಿದ್ಧವಾಗಿವೆ. 3ನೆಯ ಶತಮಾನದಲ್ಲಿ ನಿರ್ಮಿತವಾದ ಈ ವಿಹಾರದಲ್ಲಿ ಮೂರು ಅಂತಸ್ತಿನ ಸ್ತೂಪವೂ ಅದರ ಸುತ್ತಲೂ ಇರುವ ಗೋಡೆಗಳಲ್ಲಿ ಎತ್ತರದ ಬುದ್ಧನ ವಿಗ್ರಹಗಳೂ ಇವೆ. ಈ ವಿಗ್ರಹಗಳಿಗೆ ಆ ಕಾಲದಲ್ಲಿ ವಿವಿಧ ವರ್ಣಗಳನ್ನು ಹಚ್ಚಲಾಗಿತ್ತು. ಈ ವರ್ಣಗಳು ಈಗ ಬಹಳಮಟ್ಟಿಗೆ ಮಾಸಿವೆ.

ನಿಯ ಎಂಬಲ್ಲಿ ವಿಹಾರಗಳೂ ಸ್ತೂಪಗಳೂ ಕಂಡುಬಂದಿವೆ. ಇವು ಮೇಲೆ ಹೇಳಿದ ವಿಹಾರಗಳಿಗಿಂತ ಬೃಹತ್ ಪ್ರಮಾಣದವು. ಇಲ್ಲಿ ಭಾರತೀಯ, ಗಾಂಧಾರ ಮತ್ತು ಚೀನೀ ಪ್ರಭಾವಗಳನ್ನು ಗುರುತಿಸಬಹುದು. ಖರೋಷ್ಠೀ ಮತ್ತು ಚೀನೀ ಲಿಪಿಗಳ ಶಾಸನಗಳು ಇಲ್ಲಿ ದೊರಕಿರುವುದು ಇದನ್ನು ಸಮರ್ಥಿಸುತ್ತದೆ. ತುಮ್‌ಷುಕ್ ಎಂಬಲ್ಲಿಯೂ ಇದೇ ರೀತಿಯ ವಾಸ್ತುಶಿಲ್ಪಕೃತಿಗಳು ದೊರಕಿವೆ.

ಮಧ್ಯ ಏಷ್ಯದಲ್ಲಿನ ಕುಚಿದ್ವೀಪ ವಾಸ್ತುಶಿಲ್ಪ ಮತ್ತು ವರ್ಣಚಿತ್ರ ಕಲೆಗೆ ಹೆಸರಾದದ್ದು. ಕಿಜಿಲ್ ಮತ್ತು ಕುಂತುರು ಎಂಬಲ್ಲಿ ಪತ್ತೆಹಚ್ಚಲಾಗಿರುವ ಗುಹಾದೇಗುಲಗಳು ಭಾರತೀಯ ಗುಹಾದೇವಾಲಯಗಳನ್ನು ಹೋಲುತ್ತವೆ. 4ನೆಯ ಶತಮಾನದಿಂದ 8ನೆಯ ಶತಮಾನದವರೆಗೆ ಬಳಕೆಯಲ್ಲಿದ್ದ ಈ ಗುಹೆಗಳು ವರ್ಣಚಿತ್ರಕ್ಕೆ ಪ್ರಸಿದ್ಧವಾದವು. ವರ್ಣಚಿತ್ರದಲ್ಲಿ ಗುಪ್ತರ ಶೈಲಿಯ ಪ್ರಭಾವಗಳನ್ನು ವಿಶೇಷವಾಗಿ ಕಾಣಬಹುದು, ಬುದ್ಧನ ಜೀವನಕ್ಕೆ ಸಂಬಂಧಿಸಿದ ಕಥೆಗಳನ್ನು ಚಿತ್ರಿಸಿರುವ ಭಿತ್ತಿಚಿತ್ರಗಳು ಬಹು ಗಮನಾರ್ಹ. ಕುಂತುರುದಲ್ಲಿರುವ ಗುಹಾಲಯಗಳ ಭಿತ್ತಿ ಚಿತ್ರಗಳು ಕಿಜಿಲ್ ಚಿತ್ರಶೈಲಿಗೇ ಸೇರಿದವು, ಆದರೆ ಇಲ್ಲಿನ ವರ್ಣಚಿತ್ರಗಳು ಹೆಚ್ಚು ಶ್ರೀಮಂತವಾಗಿವೆ. ನಾಗರಾಜಗುಹೆ ಮತ್ತು ನಿರ್ವಾಣಗುಹೆಗಳಲ್ಲಿರುವ ಅಪ್ಸರೆಯರು, ನವಿಲುಗಳು ಮತ್ತು ಇತರ ಪ್ರಾಣಿಗಳು ಬಹಳ ಉತ್ತಮವಾಗಿವೆ 6ನೆಯ ಶತಮಾನದ ಅನಂತರದ ಇಲ್ಲಿನ ಗುಹೆಗಳಲ್ಲಿನ ವರ್ಣಚಿತ್ರಗಳಲ್ಲಿ ಚೀನೀ ಪ್ರಭಾವಗಳನ್ನು ಕಾಣಬಹುದು. ದುಲ್ದುರ್, ಅಖುರ್, ಸುಬಾಷಿ ಮತ್ತು ಹಿಸಾರ್‌ಗಳಲ್ಲಿ ದೊರಕಿರುವ ವಿಹಾರಗಳೂ ವರ್ಣಚಿತ್ರಗಳೂ ಕಿಜಿಲ್ ಶೈಲಿಗೇ ಸೇರಿದವು.

ಕರಶಹರ್ ಮತ್ತೊಂದು ಮುಖ್ಯ ಕಲಾಕೇಂದ್ರ. ಇಲ್ಲಿಯೂ ಅನೇಕ ದೇವಾಲಯಗಳೂ ಬುದ್ಧನ ಶಿಲ್ಪಗಳಿರುವ ಗುಹೆಗಳೂ ದೊರಕಿವೆ. ಈ ಶಿಲ್ಪಗಳಲ್ಲಿ ಬುದ್ಧನ ಪರಿನಿರ್ವಾಣ ಮುಖ್ಯವಾದದ್ದು. ಇಲ್ಲಿನ ವರ್ಣಚಿತ್ರಗಳು ಉತ್ತಮವಾಗಿವೆ. ಇವು ಕಿಜಿಲ್ ಶೈಲಿಗಿಂತ ಭಿನ್ನ, ಚಿತ್ರಗಳಲ್ಲಿ ರೂಪಿತವಾಗಿರುವ ಮನುಷ್ಯರ ಭಾವಭಂಗಿಗಳೂ ಮುದ್ರೆಗಳೂ ಗಮನಾರ್ಹ, ಮೆದುಗಾರೆಯಿಂದ ವಿಗ್ರಹಗಳನ್ನು ತಯಾರು ಮಾಡಲು ಉಪಯೋಗಿಸುತ್ತಿದ್ದ ಜೇಡಿಮಣ್ಣಿನ ಸುಟ್ಟ ಅಚ್ಚುಗಳು ಇಲ್ಲಿ ದೊರಕಿವೆ. ಈ ವಿಗ್ರಹಗಳಲ್ಲೂ ಗುಪ್ತಶೈಲಿಯ ಪ್ರಭಾವವೇ ಹೆಚ್ಚು.

ತುರ್ಫಾನ್ ಮಿಕ್ಕ ಎಲ್ಲ ರಾಜ್ಯಗಳಿಗಿಂತ ಹೆಚ್ಚು ಕಾಲ ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾಗಿತ್ತು. ಇಲ್ಲಿ 15ನೆಯ ಶತಮಾನದಲ್ಲೂ ಬೌದ್ಧಧರ್ಮ ಪ್ರಚಲಿತವಿತ್ತೆಂದು ತಿಳಿದುಬರುತ್ತದೆ. ತುರ್ಫಾನಿನಲ್ಲಿ ದೇವಾಲಯಗಳು ಮಾತ್ರವಲ್ಲದೆ ಕೋಟೆಗಳು, ಅರಮನೆಗಳು, ಮನೆಗಳು, ಬುರುಜುಗಳು ಮುಂತಾದವೂ ಬೆಳಕಿಗೆ ಬಂದಿವೆ. ತುರ್ಫಾನಿನ ಈ ಅವಶೇಷಗಳನ್ನು ಮುಖ್ಯವಾಗಿ ಇದಿಕುತ್‌ಶಹರಿ, ಖೋಜೊ, ಮುರ್ತುಕ್, ಬೆಜೆಕ್ಲಿಕ್ ಮುಂತಾದ ಕಡೆಗಳಲ್ಲಿ ನೋಡಬಹುದು. ವಾಸ್ತು ಕಲೆಯ ದೃಷ್ಟಿಯಿಂದ ಖೋಜೊ ಮತ್ತು ಇದಿಕುತ್‌ಶಹರಿ ಮುಖ್ಯ. ಕೋಶ್‌ಗುಂಬಜ್ ವೃತ್ತಾಕಾರದ ತಲವಿನ್ಯಾಸ ಮತ್ತು ಗುಮ್ಮಟವನ್ನುಳ್ಳ ಒಂದು ಕಟ್ಟಡ ಇದರೊಳಗಿನ ಗೋಡೆಯ ಚಿತ್ರಗಳು ಬಹಳಮಟ್ಟಿಗೆ ನಾಶವಾಗಿವೆ. ಈ ಚಿತ್ರಗಳಲ್ಲಿ ಚೀನೀ ಪ್ರಭಾವವೇ ವಿಶೇಷ.

ಮಧ್ಯ ಏಷ್ಯದ ಭಾಗಗಳೇ ಆದರೂ ಇನ್ನೂ ಪೂರ್ವಕ್ಕಿರುವ ಲೌ–ಲಾನ್, ತಾನ್–ಹುವಾಂಗ್ ಮತ್ತು ಕರಖೋಟೊಗಳಲ್ಲಿ ಉಪಲಬ್ಧವಾಗಿರುವ ಅವಶೇಷಗಳಲ್ಲಿ ಚೀನೀ ಪ್ರಭಾವಗಳೇ ವಿಶೇಷವಾಗಿ ಕಾಣಬರುತ್ತವೆ. ಲೌ–ಲಾನಿನಲ್ಲಿ ದೊರಕಿರುವ ಕಂಚಿನ, ಚಿನ್ನದ ಮತ್ತು ಇತರ ಲೋಹಗಳ ಪಾತ್ರೆಗಳು ಕಲಾತ್ಮಕವಾದವು. ತಾನ್–ಹುವಾಂಗ್ ಗುಹೆಗಳಲ್ಲಿನ ವರ್ಣಚಿತ್ರಗಳು ಬುದ್ಧನ ಜೀವನಕ್ಕೆ ಸಂಬಂಧಿಸಿದವುಗಳಾದರೂ ಅವುಗಳಲ್ಲಿ ಕಾಣಬರುವ ಮುಖಲಕ್ಷಣ, ಅಲಂಕಾರಿಕ ನಮೂನೆಗಳು, ಪ್ರಾಣಿಗಳು ಮತ್ತು ವರ್ಣಸಂಯೋಜನೆ–ಇವೆಲ್ಲವೂ ಚೀನೀ ವರ್ಣಚಿತ್ರ ಶೈಲಿಗೆ ಸೇರಿದವು; ಇವು 5–8ನೆಯ ಶತಮಾನಗಳ ಅವಧಿಯಲ್ಲಿ ನಿರ್ಮಿತವಾದವು. ಒಟ್ಟಿನಲ್ಲಿ ಮಧ್ಯ ಏಷ್ಯದಲ್ಲಿ ಇಸ್ಲಾಮೀ ಕಲೆ ಪ್ರಾರಂಭವಾಗುವವರೆಗೂ ವಿಶೇಷವಾಗಿ ಭಾರತೀಯ ಶಿಲ್ಪಶೈಲಿಯಿಂದ ಪ್ರಭಾವಿತವಾದ ಕಲೆಯೇ ಪ್ರಚಲಿತವಾಗಿತ್ತೆಂದು ಗೊತ್ತಾಗುತ್ತದೆ.

**ಉತ್ತರ ಏಷ್ಯ :** ಉತ್ತರ ಏಷ್ಯದಲ್ಲಿ ಸೈಬೀರಿಯ ಅತಿ ಮುಖ್ಯ ದೇಶ ಇದು 17ನೆಯ ಶತಮಾನದವರೆಗೆ ಪ್ರಾಗ್ಯೈತಿಹಾಸಿಕ ಸಂಸ್ಕೃತಿಯ ನೆಲೆಯಾಗಿತ್ತು. ರಷ್ಯನ್ ವಸಾಹತುಗಳು ಇಲ್ಲಿ ಸ್ಥಾಪನೆಯಾಗುವವರೆಗೆ ಇಲ್ಲಿ ಯಾವ ಗಮನಾರ್ಹವಾದ



ನೇಪಾಳದ ಒಂದು ದೇಗುಲ

ವಾಸ್ತುಶಿಲ್ಪಗಳೂ ನಿರ್ಮಿತವಾಗಲಿಲ್ಲ. ಸೈಬೀರಿಯದ ಪ್ರಾಗ್ಯೈತಿಹಾಸಿಕ ಕಲೆಯ ವಿಚಾರವಾಗಿಯೂ ವಿಶೇಷವಾದ ಮಾಹಿತಿಗಳು ದೊರಕಿಲ್ಲ. (ಎ.ವಿ.ಎನ್.)

**ಏಷ್ಯದ ಶಾಸನಗಳು, ನಾಣ್ಯಗಳು:** ಏಷ್ಯದ ಶಾಸನಗಳನ್ನು, ಅವುಗಳನ್ನು ಬರೆಯಲು ಬಳಸಲಾಗಿರುವ ಲಿಪಿಗಳ ದೃಷ್ಟಿಯಿಂದ, ಭಾವಲಿಪಿಗಳ (ಈಡಿಯೋಗ್ರಾಫ್) ಮತ್ತು ಧ್ವನಿನಿರೂಪಕ (ಫೊನೆಟಿಕ್) ವರ್ಣಲಿಪಿಗಳ (ಆಲ್ಫಬೆಟ್) ಶಾಸನಗಳೆಂದು ಸಾಮಾನ್ಯವಾಗಿ ವಿಂಗಡಿಸಬಹುದಾಗಿದೆ.

ಭಾವಲಿಪಿ ಶಾಸನಗಳ ಪೈಕಿ ಪ್ರ.ಶ.ಪೂ. ಸು. 20ನೆಯ ಶತಮಾನದಲ್ಲಿ ಹುಟ್ಟಿರಬಹುದಾದ (ಇಂದಿನ ಇರಾಕ್ ದೇಶದ) ಸುಮೇರಿಯನ್ ಜನಾಂಗದವರ ನೂರಾರು ಶಿಲಾ ಮತ್ತು ಜೇಡಿಮಣ್ಣಿನ ಫಲಕ ಶಾಸನಗಳೇ ಪ್ರಾಚೀನತಮವಾದವು. ಇವುಗಳನ್ನು ಬರೆಯುವಲ್ಲಿ ಬೆಣೆಯಾಕಾರದ (ಕ್ಯೂನಿಫಾರಂ) ಭಾವಲಿಪಿಗಳನ್ನು ಬಳಸಲಾಗಿದೆ. ಇಂಥ ಲಿಪಿಗಳನ್ನು ತಮ್ಮ ಶಾಸನಗಳಿಗಾಗಿ ಬಳಸಿಕೊಂಡವರಲ್ಲಿ ಬ್ಯಾಬಿಲೋನಿಯನ್, ಅಸ್ಸಿರಿಯನ್ ಮತ್ತು ಪರ್ಷಿಯನ್ ಜನಾಂಗದವರು ಸೇರಿದ್ದಾರೆ. ವಿಶ್ವ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಹಮುರಬಿಯ ಧರ್ಮಸೂತ್ರಗಳ ಶಿಲಾಸ್ತಂಭ ಶಾಸನ ಇದೇ ಲಿಪಿಯಲ್ಲಿದೆ. ಅಲ್ಲದೆ ಏಷ್ಯ ಮೈನರಿನ ಇಲಾಮೈಟ್, ಕಸ್ಸೈಟ್, ಹಿಟ್ಟೈಟ್, ಮಿಟನ್ನಿ, ಹುರ್ರಿಯನ್, ಉರರ್ತು, ಕ್ಯಾಪ್ಪಡೋಸಿಯನ್, ಕೇನನೈಟ್ ಇತ್ಯಾದಿ ಜನಾಂಗಗಳವರು ಪ್ರಾಚೀನ ಕಾಲದಲ್ಲಿ ಸುಮೇರಿಯನ್ನರ ಈ ಬೆಣೆಯಾಕಾರದ ಭಾವಲಿಪಿಗಳನ್ನು ಬಳಸಿ ತಮ್ಮ ಶಾಸನಗಳನ್ನು ಬರೆಯುತ್ತಿದ್ದರೆನ್ನುವುದಕ್ಕೆ ಆಧಾರಗಳಿವೆ. ಈ ಲಿಪಿಯ ಇತ್ತೀಚೆಗಿನ ಶಾಸನ ಪ್ರ.ಶ.ಪೂ. 6ನೆಯ ವರ್ಷದ್ದಾಗಿದ್ದು, ಪ್ರಸಕ್ತಶಕದ ಪ್ರಾರಂಭದ ವೇಳೆಗೆ ಈ ಲಿಪಿಯ ಬಳಕೆ ತಪ್ಪಿಹೋಯಿತೆಂದು ಊಹಿಸಲಾಗಿದೆ.

ಪಶ್ಚಿಮ ಪಾಕಿಸ್ತಾನ ಹಾಗೂ ವಾಯವ್ಯ ಮತ್ತು ಪಶ್ಚಿಮ ಭಾರತದಲ್ಲಿ ಪ್ರ.ಶ.ಪೂ. ಸು. 2400 ರಿಂದ 1700 ರವರೆಗೆ ಪ್ರಚಲಿತವಾಗಿದ್ದ ಸಿಂಧೂ ಕಣಿವೆಯ (ಅಥವಾ ಹರಪ್ಪ) ಸಂಸ್ಕೃತಿಗೆ ಸಂಬಂಧಿಸಿದ ನೂರಾರು ಸಾಬೂನುಗಲ್ಲಿನ ಮುದ್ರೆಗಳು ದೊರೆತಿವೆ. ಅವುಗಳ ಮೇಲಿನ ಬರೆಹಗಳಿಗೆ ಆ ಕಾಲದ ಭಾರತೀಯರು 200ಕ್ಕೂ ಹೆಚ್ಚಿನ ಸಾಂಕೇತಿಕಾಕ್ಷರಗಳನ್ನು ಬಳಸಿರುವರು. ಈ ಚಿತ್ರ ಲಿಪಿಯನ್ನು ಅರ್ಥೈಸಲು ಇಲ್ಲಿಯವರೆಗೆ ಅನೇಕ ಪ್ರಯತ್ನಗಳು ನಡೆದಿದ್ದರೂ ಸರ್ವಸಮ್ಮತವಾದ ಪರಿಹಾರ ದೊರೆಯದಾಗಿದೆ.

ಏಷ್ಯ ಮೈನರ್ ಮತ್ತು ಉತ್ತರ ಸಿರಿಯದ ನಿವಾಸಿಗಳಾಗಿದ್ದ ಹಿಟ್ಟೈಟ್ ಜನಾಂಗದವರ ಚಿತ್ರಲಿಪಿ ಶಾಸನಗಳು ಪ್ರಶ.ಪೂ.1500 ರಿಂದ 600ರ ವರೆಗಿನವು. ಈ ಶಾಸನಗಳ ಸಾಂಕೇತಿಕ ಚಿತ್ರಗಳನ್ನು ಅರ್ಥೈಸುವಲ್ಲಿಯೂ ವಿದ್ವಾಂಸರ ನಡುವೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಕಾಲ ಕ್ರಮೇಣ ಈ ಜನಾಂಗದವರು ಬ್ಯಾಬಿಲೋನಿಯನ್ನರ ಭಾವಲಿಪಿಗಳನ್ನು ಬಳಸಿ ತಮ್ಮದೇ ಆದ ಬೆಣೆಯಾಕಾರದ ಲಿಪಿಮಾಲೆಯನ್ನು ಸೃಷ್ಟಿಸಿಕೊಂಡರೆನ್ನುವುದಕ್ಕೆ ಶಾಸನಗಳ ಆಧಾರವಿದೆ.

ಪ್ರ.ಶ.ಪೂ. 8ನೆಯ ಶತಮಾನದ ವೇಳೆಗೆ ಏಷ್ಯ ಮೈನರಿನಲ್ಲಿ ಅತಿ ಪ್ರಬಲರಾಗಿದ್ದ ಫ್ರಿಜಿಯನ್ ಜನಾಂಗದವರ ಕೆಲವು ಶಾಸನಗಳು ಪ್ರ.ಶ.ಪೂ. 8–7ನೆಯ ಶತಮಾನಗಳಷ್ಟು ಹಳೆಯವು. ಇವರ ಶಾಸನಗಳಲ್ಲಿಯ ಲಿಪಿಗೆ ಗ್ರೀಕ್ ಲಿಪಿಯೇ ಮೂಲ. ಇವರ ರೋಮನ್ ಯುಗದ ಶಾಸನಗಳಂತೂ ಗ್ರೀಕ್ ಲಿಪಿಯಲ್ಲೇ ಇವೆ. ಏಷ್ಯ ಮೈನರಿನ ಪ್ಯಾಂಫಿಲಿಯದವರ ಪ್ರಾಚೀನ ಶಾಸನಗಳ ಲಿಪಿಯೂ ಗ್ರೀಕ್ ಲಿಪಿಯಿಂದಲೇ ಹುಟ್ಟಿದ್ದಾಗಿದೆ. ಅನಂತರ ಕಾಲದ ಗ್ರೀಕ್–ಅರಮೈಯಿಕ್ ಮಿಶ್ರಿತ ಲಿಪಿಯ ಶಾಸನಗಳೂ ದೊರೆತಿವೆ.

ಫ್ರಿಜಿಯನ್ ರಾಷ್ಟ್ರದ ಪತನದ ಅನಂತರ ಏಷ್ಯ ಮೈನರಿನ ಪ್ರಭಾವಶಾಲಿ ರಾಷ್ಟ್ರವಾಗಿ ಬೆಳಗಿದ ಲಿಡಿಯದ ಶಾಸನಗಳು ಹಲವು ಪ್ರ.ಶ.ಪೂ. 5–4ನೆಯ ಶತಮಾನಗಳಷ್ಟು ಪುರಾತನವಾದವು. ಲಿಡಿಯನ್ ಲಿಪಿಗೂ ಗ್ರೀಕ್ ಲಿಪಿಯೇ ಮೂಲ. ಲಿಡಿಯನ್ ಮತ್ತು ಗ್ರೀಕ್ ದ್ವಿಭಾಷಾಶಾಸನಗಳೂ ಎರಡು ದೊರೆತಿವೆ. ಲಿಡಿಯನ್ ಲಿಪಿಯನ್ನು ಸಾಮಾನ್ಯವಾಗಿ ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು.

ಲಿಡಿಯಕ್ಕೆ ದಕ್ಷಿಣದಲ್ಲಿದ್ದ ಕೇರಿಯನ್ ರಾಷ್ಟ್ರದ ಶಾಸನಗಳ ಪೈಕಿ ಪ್ರಾಚೀನತಮವಾದದ್ದು ಪ್ರ.ಶ.ಪೂ. 7ನೆಯ ಶತಮಾನದಷ್ಟು ಹಳೆಯದು. ಕೇರಿಯನ್ ಲಿಪಿಯೂ ಗ್ರೀಕ್ ಲಿಪಿಯಿಂದಲೇ ಹುಟ್ಟಿದ್ದಾದರೂ ಸ್ವಲ್ಪಮಟ್ಟಿಗೆ ಅದು ಕ್ರೀಟ್ ಮತ್ತು ಸೈಪ್ರಸ್‍ಗಳ ಪ್ರಾಚೀನ ಲಿಪಿಗಳಿಂದಲೂ ಪ್ರಭಾವಿತವಾಗಿತ್ತು.

ಚೀನದ ಪ್ರಾಚೀನ ಮತ್ತು ಆಧುನಿಕ ಸ್ವದೇಶೀ ಲಿಪಿಗಳು ಭಾವಲಿಪಿಗಳೇ ಆಗಿವೆ. ಆ ನಾಡಿನಲ್ಲಿ ದೊರೆತಿರುವ ಅನೇಕ ಕಂದು ಕಂಚಿನ ಪ್ರತಿಮೆಗಳ ಮೇಲಿನ ಶಾಸನಗಳ ಮೇಲಿನ ಪೈಕಿ ಪ್ರ.ಶ.ಪೂ. 12–11ನೆಯ ಶತಮಾನದಷ್ಟು ಹಳೆಯವು ಕೇವಲ ಕೆಲವೇ ಭಾವಲಿಪಿಗಳಿಂದ ಕೂಡಿರುತ್ತವೆ. ಆ ಕಾಲದಿಂದೀಚೆಗಿನ ಕಂದು ಕಂಚಿನ ಪ್ರತಿಮಾಶಾಸನಗಳ ಪಾಠಗಳು ಸಾಕಷ್ಟು ದೀರ್ಘವಾಗಿದ್ದು ಅವುಗಳಲ್ಲಿ ಹೆಚ್ಚಿನವು ತೇದಿಯ ವಿವರಗಳನ್ನೂ ಒಳಗೊಂಡಿರುತ್ತವೆ. ಚೀನದ ಉತ್ತರ ಹೋನಾನ್ ಪ್ರಾಂತ್ಯದ ಷಿಯಾವೊ–ತುನ್ ಗ್ರಾಮದಲ್ಲಿ ಉತ್ಖನನ ಸಮಯದಲ್ಲಿ ದೊರೆತ ನೂರಾರು ಎಲುಬುಗಳ ಹಾಗೂ ಆಮೆಚಿಪ್ಪುಗಳ ಚೂರುಗಳ ಮೇಲಿನ ಪ್ರಾಚೀನ ಭಾವಲಿಪಿಗಳ ಪೈಕಿ ಕೆಲವಾದರೂ ಪ್ರ.ಶ.ಪೂ. 11ನೆಯ ಶತಮಾನದಷ್ಟು ಹಳೆಯವೆಂಬುದು ಕೆಲವು ಸಂಶೋಧಕರ ಅಭಿಪ್ರಾಯ. ತಮ್ಮ ತಮ್ಮ ಭವಿಷ್ಯಗಳ ಬಗೆಗೆ ಜನ ಕೇಳಿದ ಪ್ರಶ್ನೆಗಳಿಗೆ ಕಾಲಜ್ಞಾನಿಗಳು ನೀಡಿದ ಉತ್ತರಗಳನ್ನೇ ಈ ಚೂರುಗಳ ಮೇಲೆ ಬರೆಯಲಾಗಿದೆ ಎಂದು ನಂಬಲಾಗಿದೆ. ಚೀನದ ರಾಜಧಾನಿ ಪೀಕಿಂಗಿನ ಕನ್‍ಫ್ಯೂಷಿಯನ್ ದೇವಾಲಯದ ಮಹಾದ್ವಾರದಲ್ಲಿ ಇಡಲಾಗಿರುವ ನಗಾರಿರೂಪದ ಕಲ್ಲುಗಳ ಮೇಲೆ ಕೊರೆಯಲಾಗಿರುವ ಭಾವಲಿಪಿ ಶಾಸನಗಳು ಪ್ರ.ಶ.ಪೂ. 9ನೆಯ ಶತಮಾನಕ್ಕಿಂತಲೂ ಪೂರ್ವಕಾಲದವು. ಚೀನದಲ್ಲಿ ಕೇವಲ ಕೆಲವೇ ಶಿಲಾಶಾಸನಗಳು ದೊರೆತಿರುವುದು ಅಚ್ಚರಿಯ ಸಂಗತಿ. ಪ್ರಾಚೀನ ಚೀನೀಯರು ಮರದ ಹಲಗೆ, ಬಿದಿರು, ಕಾಗದ ಮುಂತಾದ ನಶ್ವರವಸ್ತುಗಳ ಮೇಲೆ ಬರೆಯುತ್ತಿದ್ದುದ್ದೇ ಇದಕ್ಕೆ ಕಾರಣವೆಂದು ಊಹಿಸಲಾಗಿದೆ. ಚೀನದ ನೇರ ಪ್ರಭಾವಕ್ಕೊಳಗಾದ ಜಪಾನ್, ಕೊರಿಯ, ಉತ್ತರ ವಿಯಟ್ನಾಂ, ಮಂಗೋಲಿಯ ಮುಂತಾದ ಕೆಲವು ರಾಷ್ಟ್ರಗಳದ್ದೂ ಇದೇ ಪರಿಸ್ಥಿತಿ, ಚೀನೀ ತುರ್ಕಿಸ್ತಾನದ ಮರುಭೂಮಿಯಲ್ಲಿ ನಡೆಸಲಾದ ಅಗೆತಗಳಲ್ಲಿ ಮರದ ಹಲಗೆ, ಚರ್ಮ, ಭೂರ್ಜಪತ್ರ ಇತ್ಯಾದಿಗಳ ಮೇಲೆ ಬರೆಯಲಾದ ಪ್ರಾಚೀನ ದಾಖಲೆಗಳು ದೊರೆತಿರುವುದು ಈ ಊಹೆಗೆ ಪೋಷಕವಾಗಿದೆ. ಟಿಬೆಟ್ಟಿನ ಉತ್ತರಕ್ಕೆ ಚೀನದಲ್ಲಿ 10–13ನೆಯ ಶತಮಾನಗಳಲ್ಲಿ ಅಸ್ತಿತ್ವದಲ್ಲಿದ್ದ ತಂಗುತ್ ಅಥವಾ ಪಶ್ಚಿಮ ಹಿಯ ರಾಷ್ಟ್ರದ ಅರಸರ ಕೆಲವು ಭಾವಲಿಪಿಶಾಸನಗಳು 11–13ನೆಯ ಶತಮಾನಗಳವಾಗಿವೆ.

ಚೀನದಲ್ಲಿ ಪ್ರಾಚೀನ ಶಾಸನಗಳ ಅಧ್ಯಯನ ಹಿಂದಿನಿಂದಲೂ ನಡೆದುಬಂದಿದೆ. 11ನೆಯ ಶತಮಾನದಲ್ಲಿ ಪ್ರಕಟವಾದ ಗ್ರಂಥವೊಂದರಲ್ಲಿ ಚೀನದ 400 ಪ್ರಾಚೀನ ಶಾಸನಗಳನ್ನು ಕುರಿತ ಸಂಶೋಧನಾತ್ಮಕ ವಿವರಣೆಗಳಿವೆ.

ಪ್ರಾಚೀನ ಸಿರಿಯದ ಬಿಬ್ಲೋಸ್ ಜನಾಂಗಕ್ಕೆ ಸೇರಿದ ಶಾಸನಗಳದು ಪ್ರ.ಶ.ಪೂ. ಸು. 1500–1300ರ ಒಂದು ರೀತಿಯ ಚಿತ್ರಲಿಪಿಯಾಗಿದೆ. ಈ ಶಾಸನಗಳ ಭಾಷೆ ಫಿನಿಷಿಯನ್ ಎಂದೂ ಬಳಸಲಾಗಿರುವ ಸಾಂಕೇತಿಕ ಚಿತ್ರಗಳಿಗೂ ಅವುಗಳ ಧ್ವನಿರೂಪಕ ಮೌಲ್ಯಗಳಿಗೂ ಸಂಬಂಧವಿಲ್ಲವೆಂದೂ ಆದಕಾರಣ ಈ ಲಿಪಿಯನ್ನು ಉಚ್ಚಾರಾಂಶದ (ಸಿಲ್ಯಾಬಿಕ್) ಲಿಪಿಯೆನ್ನಬೇಕೆಂದೂ ವಿದ್ವಾಂಸರ ಅಭಿಪ್ರಾಯ. ಈ ಶಾಸನಗಳಲ್ಲಿ ಉಪಯೋಗಿಸಲಾಗಿರುವ ಸಾಂಕೇತಿಕಾಕ್ಷರಗಳಿಗೂ ಈಜಿಪ್ಟ್, ಕ್ರೀಟ್, ಸೈಪ್ರಸ್, ಕೇನನ್, ಸಿಂಧೂ ಕಣಿವೆ ಮುಂತಾದ ಪ್ರಾಂತ್ಯಗಳ ಸಾಂಕೇತಿಕಾಕ್ಷರಗಳಿಗೂ ಗಮನಾರ್ಹ ಪ್ರಮಾಣದ ಹೋಲಿಕೆಗಳಿರುವುದು ಕುತೂಹಲಕಾರಿಯಾದ ವಿಷಯ.

ಸೈಪ್ರಸಿನಲ್ಲಿ ಇಲ್ಲಿಯವರೆಗೆ ಸು.200 ಪ್ರಾಚೀನ ಶಾಸನಗಳು ದೊರೆತಿದ್ದು, ಅವುಗಳಲ್ಲಿ ಹೆಚ್ಚಿನವು ಗ್ರೀಕ್ ಭಾಷೆಯಿಂದ ಪ್ರಭಾವಿತವಾಗಿವೆ. ಈ ದ್ವೀಪದಲ್ಲಿ ಪ್ರ.ಶ.ಪೂ. 6–2ನೆಯ ಶತಮಾನಗಳಲ್ಲಿ ಉಚ್ಚಾರಾಂಶದ ಲಿಪಿಗಳನ್ನು ಬಳಸಿ ಶಾಸನಗಳನ್ನು ಬರೆಯಲಾಗುತ್ತಿತ್ತು. ಅದರ ಮೊದಲಿನ ಭಾವಲಿಪಿ ಶಾಸನಗಳು ಪ್ರ.ಶ.ಪೂ.ಸು. 2100 ರಿಂದ 1200ರ ವರೆಗಿನವಾಗಿದೆ.

ಪ್ರಾಚೀನ ಪರ್ಷಿಯಾದ ಪ್ರ.ಶ.ಪೂ. 6–3ನೆಯ ಶತಮಾನಗಳಿಗೆ ಸೇರಿದ ಶಾಸನಗಳ ಬೆಣೆಯಾಕಾರದ ಲಿಪಿ ಉಚ್ಚಾರಾಂಶದ ಲಿಪಿಯೂ ಹೌದು; ಧ್ವನಿನಿರೂಪಕ ವರ್ಣಮಾಲೆಯೂ ಹೌದು. ಈ ಲಿಪಿಯ ಉತ್ಪತ್ತಿಗೆ ಆರಮೇಯಿಕ್ ಲಿಪಿ ಮೂಲವೆಂದು ಪರಿಗಣಿಸಲಾಗಿದೆ. ಈ ಲಿಪಿಯ ಶಾಸನಗಳಲ್ಲಿ ಹಲವು ಪರ್ಷಿಯದ ಪರ್ಸೆಪೊಲಿಸ್ ನಗರದ ಅದ್ಭುತ ಐತಿಹಾಸಿಕ ಕಟ್ಟಡಗಳಲ್ಲಿ ಕಾಣಸಿಗುತ್ತವೆ. ಈ ಲಿಪಿಯ ಬಂಗಾರದ, ಬೆಳ್ಳಿಯ ಹಾಗೂ ಜೇಡಿಮಣ್ಣಿನ ಫಲಕಶಾಸನಗಳೂ ದೊರೆತಿವೆ. ಕಾಲಕ್ರಮದಲ್ಲಿ ಜಂಬು ಕಾಗದದ ಬಳಕೆ ಹೆಚ್ಚಿದಂತೆ ಈ ಲಿಪಿಯ ಶಾಸನಗಳ ಸಂಖ್ಯೆ ಕಡಿಮೆ ಆಗುತ್ತ ಬಂತು.

ಧ್ವನಿನಿರೂಪಕ ವರ್ಣಮಾಲೆಗಳನ್ನು ಬಳಸಿ ಬರೆದ ಶಾಸನಗಳ ಪೈಕಿ ದಕ್ಷಿಣ ಅರೇಬಿಯದಲ್ಲಿ ದೊರೆತಿರುವ, ಪ್ರ.ಶ.ಪೂ. 8ನೆಯ ಶತಮಾನದ ದಕ್ಷಿಣ ಸಿಮಿಟಿಕ್ ಶಾಸನಗಳೇ ಪ್ರಾಚೀನತಮವಾದವು. ದಕ್ಷಿಣ ಅರೇಬಿಯದ ಪ್ರಾಚೀನ ಇತಿಹಾಸ, ಭಾಷೆ, ಲಿಪಿ–ಇವುಗಳನ್ನು ಕುರಿತ ನಮ್ಮ ತಿಳಿವಳಿಕೆ ಪೂರ್ತಿ ಈ ಶಾಸನಗಳ ಮೇಲೆ ಆಧಾರಿತವಾಗಿದೆ, ಈ ಪ್ರಾಂತ್ಯದಲ್ಲಿ ಇಲ್ಲಿಯವರೆಗೆ ನೂರಾರು ಶಾಸನಗಳು ದೊರೆತಿದ್ದು, ಅವುಗಳ ಸುಂದರ ಲಿಪಿಯನ್ನು ಸಬೀಯನ್ ಎಂದೂ ಕರೆಯುವುದು ವಾಡಿಕೆಯಲ್ಲಿದೆ. ಅವುಗಳಲ್ಲಿ ಹೆಚ್ಚಿನವನ್ನು ಬಲದಿಂದ ಎಡಕ್ಕೆ ಬರೆಯಲಾಗಿದೆ ಮತ್ತು ಆ ಶಾಸನಗಳು ಪ್ರಾಚೀನತಮ ಅರಾಬಿಕ್ ಭಾಷೆಯ ಮೇಲೆ ಬೆಳಕು ಚೆಲ್ಲುವಂಥವಾಗಿವೆ. ಉತ್ತರ ಅರೇಬಿಯದ ವಾಯವ್ಯ ಸಿರಿಯ ಮತ್ತು ಟ್ರಾನ್ಸ್ ಜಾರ್ಡನ್ ಪ್ರಾಂತ್ಯಗಳಲ್ಲೂ ಸು. 1,800 ದಕ್ಷಿಣ ಸಿಮಿಟಿಕ್ ಶಾಸನಗಳು ದೊರೆತಿದ್ದು, ಅವು ಪ್ರ.ಶ.ಪೂ. ಸು. 500 ರಿಂದ ಪ್ರ.ಶ. ಸು. 400ರ ವರೆಗಿನವಾಗಿವೆ.

ಸರಿಸುಮಾರಾಗಿ ಈಗ ಪ್ಯಾಲೆಸ್ಟೈನ್ ಇರುವ ಭಾಗಕ್ಕೆ ಸಂಬಂಧಿಸಿದ ಕೇನನೈಟ್ ಶಾಖೆಯ ಭಾಷೆಗಳೂ ಆರಮೇಯಿಕ್ ಶಾಖೆಯ ಭಾಷೆಗಳೂ ವಾಯವ್ಯ ಸಿಮಿಟಿಕ್ ಕುಟುಂಬಕ್ಕೆ ಸೇರಿದವು. ಇವುಗಳ ಪೈಕಿ ಕೇನನೈಟ್ ಶಾಖೆಯ ಹಿಬ್ರೂವಿನಲ್ಲಿರುವ ಶಾಸನಗಳು ಕೆಲವು ಮಾತ್ರ ಇಸ್ರೇಲಿನಲ್ಲಿ ದೊರೆಯುತ್ತವೆ. ಪ್ಯಾಲೆಸ್ಟೈನಿನಲ್ಲಿ ಮೇಲಿಂದ ಮೇಲೆ ನಡೆದುಹೋದ ಯುದ್ಧಗಳ ಪರಿಣಾಮವಾಗಿ ಅಲ್ಲಿಯ ಅನೇಕ ಶಾಸನಗಳು ನಾಶಗೊಂಡಿರಬಹುದೆಂದು ಊಹಿಸಲಾಗಿದೆ. ಆದರೂ, ದೊರೆತಿರುವ ಶಾಸನಗಳು ರಾಷ್ಟ್ರದ ಪ್ರಾಚೀನ ಇತಿಹಾಸ, ಭಾಷೆ ಮತ್ತು ಲಿಪಿಗಳ ಅಧ್ಯಯನಕ್ಕೆ ಸಾಕಷ್ಟು ಸಹಕಾರಿಯಾಗಿವೆ. ಹೀಬ್ರೂ ಶಾಸನಗಳ ಪೈಕಿ ಪ್ರಾಚೀನತಮವಾದದ್ದೆಂದರೆ ಪ್ರ.ಶ.ಪೂ. 11ನೆಯ ಶತಮಾನದ ಗೆಜೆರ್ ಪಂಚಾಂಗ. ಇದರ ಅಕ್ಷರಗಳಲ್ಲಿ ಹಲವು ಉತ್ತರ ಸಿಮಿಟಿಕ್ ಶಾಸನಗಳ ಅಕ್ಷರಗಳಿಗೆ ಸರಿಹೊಂದುತ್ತವೆ. ಜೂಡಿಯ ಅಥವಾ ದಕ್ಷಿಣ ಪ್ಯಾಲೆಸ್ಟೈನಿನ ಶಾಸನಗಳಲ್ಲಿ ಪ್ರ.ಶ.ಪೂ. ಸು. 700ರ ಸಿಲೋಂ ಶಾಸನ ಪ್ರಾಚೀನತಮವಾದದ್ದು. ಪ್ಯಾಲೆಸ್ಟೈನಿನ ಬರೆಹಗಳಿಂದ ಕೂಡಿದ ಹಲವು ತೂಕದ ಬಟ್ಟುಗಳೂ ಅಳತೆಗಳೂ ದೊರೆತಿವೆ. ಅಲ್ಲದೆ, ಕೇನನೈಟ್ ಶಾಖೆಯ ಇತರ ಭಾಷೆಗಳಾದ ಮೋಬೈಟ್, ಅಮೋನೈಟ್ ಮತ್ತು ಎಡೋಮೈಟ್ ಭಾಷೆ ಲಿಪಿಗಳ ಶಾಸನಗಳೂ ದೊರೆತಿದ್ದು, ಅವು ಪ್ರ.ಶ.ಪೂ. 9–7ನೆಯ ಶತಮಾನದವಾಗಿವೆ.

ಬಿಬ್ಲೋಸ್ ಜನಾಂಗದವರ ಫಿನಿಷಿಯನ್ ಭಾಷೆಯ ಪ್ರಾಚೀನತಮ ಶಾಸನಗಳ ಪ್ರಸ್ತಾಪ ಮೇಲೆ ಬಂದಿದೆ. ಅನಂತರಕಾಲದ ಫಿನಿಷಿಯದ ಶಾಸನಗಳು ಆ ಪ್ರಾಂತ್ಯದಲ್ಲಷ್ಟೇ ಅಲ್ಲದೆ ಸೈಪ್ರಸ್, ಗ್ರೀಸ್, ಉತ್ತರ ಆಫ್ರಿಕ, ಮಾಲ್ಟ, ಸಿಸಿಲಿ, ಸಾರ್ಡೀನಿಯ, ಫ್ರಾನ್ಸ್, ಸ್ಪೇನ್ ಮುಂತಾದ ರಾಷ್ಟ್ರಗಳಲ್ಲೂ ದೊರೆತಿವೆ. ಲಿಪಿ ಶಾಸ್ತ್ರದೃಷ್ಟಿಯಿಂದ ಫಿನಿಷಿಯನ್ ಶಾಸನಗಳಿಗಿರುವ ಸ್ಥಾನ ಮಹತ್ತ್ವದ್ದು.

ಪ್ರ.ಶ.ಪೂ.11–10ನೆಯ ಶತಮಾನಗಳಿಂದ ಮೆಸೊಪೊಟೇಮಿಯ ಮತ್ತು ಪಶ್ಚಿಮ ಸಿರಿಯಗಳಲ್ಲಿ ಪ್ರಬಲರಾಗಿ ಬೆಳಗಿದ ಆರಮೇಯನ್ ಜನಾಂಗದವರ ಪ್ರಾಚೀನತಮ ಆರಮೇಯಿಕ್ ಶಾಸನ ಪ್ರ.ಶ.ಪೂ. 9ನೆಯ ಶತಮಾನದಷ್ಟು ಹಳೆಯದು. ಆ ವೇಳೆಗೆ ಆರಮೇಯಿಕ್ ಲಿಪಿ ಪರ್ಷಿಯನ್ ಸಾಮ್ರಾಜ್ಯದ ಪಶ್ಚಿಮ ಪ್ರಾಂತ್ಯಗಳಲ್ಲಿ ಅಧಿಕೃತವಾಗಿ ಬಳಕೆಗೆ ಬಂದಿತ್ತು. ಅಚ್ಚರಿಯ ಸಂಗತಿಯೆಂದರೆ, ಹೆಚ್ಚಿನ ಮಹತ್ತ್ವದ ಆರಮೇಯಿಕ್ ಶಾಸನಗಳು ದೊರೆತಿರುವುದು ಆರಮೇಯನರ ಆಳ್ವಿಕೆಗೆ ಹೊರಗಿದ್ದ ಅಸ್ಸಿರಿಯ, ಪರ್ಷಿಯ, ಕ್ಯಾಪ್ಪಡೋಸಿಯ, ಲಿಸಿಯ, ಲಿಡಿಯ, ಸಿಲಿಸಿಯ, ಉತ್ತರ ಅರೇಬಿಯ, ಗ್ರೀಸ್, ಆಫ್‌ಘಾನಿಸ್ತಾನ, ಭಾರತ, ಪಾಕಿಸ್ತಾನ ಇತ್ಯಾದಿ ದೂರದೇಶಗಳಲ್ಲಿ ಮತ್ತು ಆರಮೇಯನರ ಪ್ರಭಾವ ಸಾಕಷ್ಟು ಇಳಿಮುಖವಾದ ಅನಂತರ, ಈ ಸಂದರ್ಭದಲ್ಲಿ ಪಾಕಿಸ್ತಾನದಲ್ಲಿ ದೊರೆತಿರುವ ಅಶೋಕನ ಆರಮೇಯಿಕ್ ಶಾಸನವನ್ನೂ ಆಫ್‌ಘಾನಿಸ್ತಾನದಲ್ಲಿ ದೊರೆತಿರುವ ಅದೇ ಚಕ್ರವರ್ತಿಯ ಪ್ರ.ಶ.ಪೂ. ಗ್ರೀಕ್–ಆರಮೇಯಿಕ್ ದ್ವಿಭಾಷಾಶಾಸನವನ್ನೂ ಪ್ರಸ್ತಾಪಿಸಬಹುದಾಗಿದೆ.

ಆರಮೇಯಿಕ್ ಲಿಪಿಯಿಂದ ಹುಟ್ಟಿದ ಹೀಬ್ರೂ ಲಿಪಿಯಲ್ಲಿ ಬರೆದ ರೋಮ್ ಮತ್ತು ವೆನೋಸಗಳಲ್ಲಿಯ ಸಮಾಧಿಗುಹೆಗಳ ಮೇಲಿನ ಯೆಹೂದ್ಯ ಶಾಸನಗಳು 6ನೆಯ ಶತಮಾನದಿಂದ ಕಾಣಿಸಿಕೊಳ್ಳುತ್ತವೆ.

ಉತ್ತರ ಅರೇಬಿಯ, ಟ್ರಾನ್ಸ್‌ಜಾರ್ಡನ್ ಮತ್ತು ಸಿನಾಯ್‌ಗಳ ಮಧ್ಯಭಾಗದ ನಿವಾಸಿಗಳಾಗಿದ್ದ ನಬತೇಯನ್ ಜನಾಂಗದವರದು ಅರಾಬಿಕ್ ಸಂಸ್ಕೃತಿಯೇ ಆಗಿದ್ದರೂ ಅವರ ಪ್ರ.ಶ.ಪೂ. 2–ಪ್ರ.ಶ. 2ನೆಯ ಶತಮಾನಗಳ ಶಾಸನಗಳು ಆರಮೇಯಿಕ್ ಭಾಷೆಯಲ್ಲಿವೆ. ಈಜಿಪ್ಟ್ ಮತ್ತು ಇಟಲಿಯಲ್ಲೂ ಈಜಿಯನ್ ದ್ವೀಪವಾದ ಕೋಸ್‌ನಲ್ಲೂ ಕೆಲವು ನಬತೇಯನ್ ಶಾಸನಗಳು ದೊರೆತಿವೆ.

ಇಂದಿನ ಮಾನವ ಸಮಾಜದಲ್ಲಿ ರೋಮನ್ ಲಿಪಿಯನ್ನು ಬಿಟ್ಟರೆ ಹೆಚ್ಚಾಗಿ ಬಳಕೆಯಲ್ಲಿರುವುದು ಅರೇಬಿಕ್ ಲಿಪಿ. 7–8ನೆಯ ಶತಮಾನಗಳಲ್ಲಿ, ಇಸ್ಲಾಂ ಧರ್ಮ ಹುಟ್ಟಿದ ಅನಂತರ, ಅರಬರು ಕೈಗೊಂಡ ವಿಜಯ ಪ್ರಯಾಣಗಳ ಪರಿಣಾಮವಾಗಿ ಇಂದು ಭಾರತದಿಂದ ಅಟ್ಲಾಂಟಿಕ್ ಸಾಗರದವರೆಗಿನ ಪ್ರದೇಶಗಳಲ್ಲಿ ಅರಾಬಿಕ್ ಭಾಷೆ ಒಂದಲ್ಲ ಒಂದು ರೂಪದಲ್ಲಿ ಪ್ರಚಲಿತವಾಗಿದೆ. ಭಾಷೆಗಿಂತಲೂ ಹೆಚ್ಚಾಗಿ ಹರಡಿದ ಅರಾಬಿಕ್ ಲಿಪಿ ಇಂದು ಪರ್ಷಿಯ, ಬಾಲ್ಕನ್ ದ್ವೀಪ ಕಲ್ಪ, ಆಗ್ನೇಯ ರಷ್ಯ, ಪಶ್ಚಿಮ, ಮಧ್ಯ ಹಾಗೂ ಆಗ್ನೇಯ ಏಷ್ಯ ಮತ್ತು ಆಫ್ರಿಕದ ಬಹುಭಾಗಗಳಲ್ಲಿ ಬಳಕೆಯಲ್ಲಿದೆ. ಈ ಲಿಪಿಯ ಪ್ರಾಚೀನತಮ ಸುಳುಹುಗಳು ಕಾಣಸಿಗುವುದು ಸಿರಿಯದ ನಬತೇಯನರ 324ರ ಒಂದು ಶಾಸನದಲ್ಲಿ ಅರಾಬಿಕ್ ಲಿಪಿಯ ಪೂರ್ಣ ಬೆಳವಣಿಗೆಯನ್ನು ತೋರಿಸಿಕೊಡುವ ಪ್ರಾಚೀನತಮ ಶಾಸನ 512ರದಾಗಿದ್ದು, ಅದು ಗ್ರೀಕ್–ಸಿರಿಯಕ್–ಅರಾನೋಲ್ ಭಾಷೆಗಳಲ್ಲಿದೆ. ಆರಮೇಯಿಕ್‌ನಂತೆಯೇ ಅರಾಬಿಕ್ ಲಿಪಿಯೂ ಬಲದಿಂದ ಎಡಕ್ಕೆ ಬರೆಯುವಂಥದು. 7ನೆಯ ಶತಮಾನದಿಂದ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಕೂಫಿಕ್ ಹಾಗೂ ನಸ್‌ಖಿ ಲಿಪಿಗಳು ಅರಾಬಿಕ್‌ನ ಎರಡು ಮಾದರಿಗಳೇ ಆಗಿದ್ದು, ಕಾಲಕ್ರಮೇಣ ಹುಟ್ಟಿದ ಇತರ ಅನೇಕ ಲಿಪಿಗಳ ಮೂಲಲಿಪಿಗಳಾಗಿವೆ.

ಸಿರಿಯದ ಮರುಭೂಮಿಯಲ್ಲಿ ನೆಲೆಸಿದ ಪಾಲ್ಮೈರದ ಅರಬರ ಪ್ರ.ಶ.ಪೂ. 1–ಪ್ರ.ಶ. 3ನೆಯ ಶತಮಾನಗಳ ಶಾಸನಗಳು ಆರಮೇಯಿಕ್‌ನಿಂದ ಹುಟ್ಟಿದ ಪಾಲ್ಮೈರೀನ್ ಲಿಪಿಯಲ್ಲಿವೆ. ಇಂಥ ಶಾಸನಗಳು ಪ್ಯಾಲೆಸ್ಟೈನ್, ಉತ್ತರ ಆಫ್ರಿಕ, ಹಂಗರಿ, ಇಟಲಿ, ಇಂಗ್ಲೆಂಡ್ ಮುಂತಾದ ದೂರದೇಶಗಳಲ್ಲೂ ದೊರೆತಿವೆ.

ಆರಮೇಯಿಕ್ ಲಿಪಿಯಿಂದಲೇ ಹುಟ್ಟಿದ ಸಿರಿಯಕ್ ಲಿಪಿಯನ್ನು ಬಳಸಿ ಬರೆಯಲಾಗಿರುವ ಕ್ರೈಸ್ತಧರ್ಮದವರ ಸಮಾಧಿಗಳ ಮೇಲಿನ ಶಾಸನಗಳು 1ನೆಯ ಶತಮಾನದಿಂದ ಕಾಣಿಸಿಕೊಳ್ಳುತ್ತವೆ. ಕ್ರೈಸ್ತಧರ್ಮವನ್ನು ಹರಡಿಸುವ ಸಲುವಾಗಿ 7ನೆಯ ಶತಮಾನದಲ್ಲಿ ಮಧ್ಯ ಏಷ್ಯ ಹಾಗೂ ಚೀನಕ್ಕೆ ಬಂದ ನೆಸ್ಟೋರಿಯನ್ ಚರ್ಚಿನ ಧರ್ಮಪ್ರಚಾರಕರು ಸಿರಿಯಕ್ ಲಿಪಿಯದೇ ಒಂದು ಮಾದರಿಯಾದ ನೆಸ್ಟೋರಿಯನ್ ಲಿಪಿಯ ಶಾಸನಗಳನ್ನು ಆ ಪ್ರದೇಶಗಳಲ್ಲಿ ಕೆತ್ತಿಸಿದ್ದಾರೆ. ಇವುಗಳಲ್ಲಿ 781ರ ನೆಸ್ಟೋರಿಯನ್–ಚೀನಿ ದ್ವಿಭಾಷಾ ಶಾಸನವೊಂದೂ ಸೇರಿದೆ. 13–14ನೆಯ ಶತಮಾನಗಳ ಅನೇಕ ನೆಸ್ಟೋರಿಯನ್ ಶ್ಮಶಾನಗಳನ್ನು ರಷ್ಯಾದ ದಕ್ಷಿಣ ಸೈಬೀರಿಯದಲ್ಲಿ ಪತ್ತೆ ಹಚ್ಚಲಾಗಿದೆ. ಅವುಗಳಲ್ಲಿ ಹಲವು ನೆಸ್ಟೋರಿಯನ್ ಶಾಸನಗಳು ದೊರೆತಿವೆ. ಕ್ರೈಸ್ತಧರ್ಮದವರೂ ಬ್ಯಾಬಿಲೋನಿಯದ ನಿವಾಸಿಗಳೂ ಆಗಿದ್ದ ಮ್ಯಾಂಡೇಯನ್ ಜನಾಂಗದವರ 7–8ನೆಯ ಶತಮಾನಗಳ ಕೆಲವು ಶಾಸನಗಳು ದೊರೆತಿವೆ. ಅವನ್ನು ಸೀಸದ ಮೇಲೆ ಹಾಗೂ ಮಣ್ಣ ಬೋಗುಣಿಗಳ ಒಳಭಾಗದಲ್ಲಿ ಬರೆದಿದೆ. ಭಾಷೆ

ಆರಮೇಯಿಕ್, ಪರ್ಷಿಯನ್ ಹಾಗೂ ಅರಾಬಿಕ್‌ಗಳಿಂದ ಪ್ರಭಾವಿತವಾಗಿದೆ. ಜರತುಷ್ಟ್ರ, ಯೆಹೂದ್ಯ, ಕ್ರೈಸ್ತ, ಬೌದ್ಧ ಮತ್ತು ಇಸ್ಲಾಂ ಧರ್ಮಗಳ ಮುನ್ನಡೆಯೊಂದಿಗೆ ಏಷ್ಯದಲ್ಲಿ ಆರಮೇಯಿಕ್ ಲಿಪಿಯ ವಿಕಾಸವೂ ನಡೆದುಬಂದಿತ್ತು. ಅಶೋಕನ ಕೆಲವು ಶಾಸನಗಳ ಖರೋಷ್ಠಿ ಲಿಪಿ ಆರಮೇಯಿಕ್‌ನಿಂದಲೇ ಹುಟ್ಟಿದ್ದು. 4–5ನೆಯ ಶತಮಾನಗಳ ಅನಂತರ ಬಳಕೆ ತಪ್ಪಿಹೋದ ಖರೋಷ್ಠಿ ಲಿಪಿಯ ಶಾಸನಗಳು ಮತ್ತು ದಾಖಲೆಗಳು ಪೂರ್ವ ಆಫ್‌ಘಾನಿಸ್ತಾನದ ಗಾಂಧಾರಪ್ರಾಂತ್ಯ, ಉತ್ತರ ಪಂಜಾಬ್ ಹಾಗೂ ಪೂರ್ವ ತುರ್ಕಿಸ್ತಾನಗಳಲ್ಲಿ ದೊರೆತಿವೆ. ಆರಮೇಯಿಕ್‌ನಿಂದ ಪರ್ಷಿಯನರು ರೂಪಿಸಿಕೊಂಡ ಪಹ್ಲವಿ ಲಿಪಿಯ, ಪಹ್ಲವಿ ಭಾಷೆಯ ಶಾಸನಗಳು ಪ್ರ.ಶ.ಪೂ. 3–ಪ್ರ.ಶ. 3ನೆಯ ಶತಮಾನಗಳವು. ಈ ಶಾಸನಗಳಲ್ಲಿ ಆರಮೇಯಿಕ್ ಭಾಷೆಯ ಕೆಲವು ಶಬ್ದಗಳನ್ನು ಭಾವಲಿಪಿಯಲ್ಲಿ ಬರೆಯಲಾಗಿರುವುದು ಕುತೂಹಲಕಾರಿಯಾದ ಸಂಗತಿ.

ರಷ್ಯದ ಇಂದಿನ ಉಜ್ಬೆಕಿಸ್ತಾನದಲ್ಲಿ ವಾಸಿಸುತ್ತಿದ್ದ ಸೋಗ್ದಿಯನ್ ಜನಾಂಗದವರ ಸೋಗ್ದಿಯನ್ ಲಿಪಿಯೂ ಆರಮೇಯಿಕ್ ಲಿಪಿ ಮತ್ತು ಭಾಷೆಗಳೂ ಮಧ್ಯ ಏಷ್ಯದಲ್ಲಿ ಪ್ರಚಾರದಲ್ಲಿದ್ದವು. 9ನೆಯ ಶತಮಾನದ ಮಧ್ಯೆ ಏಷ್ಯದ ತ್ರಿಭಾಷಾ ಶಾಸನವೊಂದು ತುರ್ಕಿ–ಸೋಗ್ದಿಯನ್–ಚೀನಿ ಭಾಷೆಗಳಲ್ಲಿದೆ. ಸೋಗ್ದಿಯನ್ ಶಾಸನವೊಂದು ಭಾರತದ ಲದಾಖಿನಲ್ಲೂ ದೊರೆತಿದೆ. ಪೂರ್ವ ತುರ್ಕಿಸ್ತಾನದಲ್ಲೂ ವಾಯವ್ಯ ಚೀನದಲ್ಲೂ 2–9ನೆಯ ಶತಮಾನಗಳ ಸೋಗ್ದಿಯನ್ ಹಸ್ತಪ್ರತಿಗಳಿದ್ದವು. 7–8ನೆಯ ಶತಮಾನಗಳ ಹಲವು ಶಾಸನಗಳು ಮಧ್ಯ ಸೈಬೀರಿಯ, ವಾಯವ್ಯ ಮಂಗೋಲಿಯ ಮತ್ತು ಈಶಾನ್ಯ ತುರ್ಕಿಸ್ತಾನದಲ್ಲಿ ದೊರೆತಿದ್ದು, ಅವುಗಳ ಲಿಪಿ ಸೈಬೀರಿಯನ್ ಅಥವಾ ಕೊಕ್ ತುರ್ಕಿ ಆಗಿದೆ. ಈ ಲಿಪಿ ಸೋಗ್ದಿಯನ್ ಲಿಪಿಯಿಂದ ಹುಟ್ಟಿರಬಹುದು. ಈ ಶಾಸನಗಳ ಭಾಷೆ ಪ್ರಾಚೀನ ತುರ್ಕಿ.

ಪ್ರ.ಶ.ಪೂ. 3ನೆಯ ಶತಮಾನದಿಂದೀಚೆಗೆ, ಎಂದರೆ ಭಾರತದ ಇತಿಹಾಸ ಕಾಲ ಆರಂಭವಾದಾಗಿನಿಂದ, ದೇಶದ ಮೂಲೆಮೂಲೆಗಳಲ್ಲೂ ಸಹಸ್ರಾರು ಸಂಖ್ಯೆಯಲ್ಲಿ ದೊರೆಯುವ ಶಾಸನಗಳೇ ಅದರ ಚರಿತ್ರೆಗೆ ಆಧಾರ. ಈ ಶಾಸನಗಳ ಪೈಕಿ ಹೆಚ್ಚಿನವು ಬಿಡಿ ಅಥವಾ ಬಂಡೆಕಲ್ಲುಗಳ ಮತ್ತು ತಾಮ್ರದ ತಗಡುಗಳ ಮೇಲೆ ಕೊರೆಯಲ್ಪಟ್ಟವು. ಬಂಗಾರ, ಬೆಳ್ಳಿ, ಕಬ್ಬಿಣ, ಕಂದು ಕಂಚು, ಮರ, ಭೂರ್ಜ ಪತ್ರ, ಸಾಚಿಪತ್ರ, ಬಟ್ಟೆ, ಚರ್ಮ, ಇಟ್ಟಿಗೆ ಇತ್ಯಾದಿಗಳ ಮೇಲೂ ಶಾಸನಗಳನ್ನು ಬರೆಯಲಾಗುತ್ತಿತ್ತೆನ್ನುವುದಕ್ಕೆ ನಿದರ್ಶನಗಳು ಇಲ್ಲವೇ ಸೂಚನೆಗಳು ದೊರೆತಿವೆ.

ಅಶೋಕನ ಶಾಸನಗಳನ್ನು ಬರೆಯುವಲ್ಲಿ ಬ್ರಾಹ್ಮೀ, ಖರೋಷ್ಠಿ, ಗ್ರೀಕ್ ಮತ್ತು ಆರಮೇಯಿಕ್ ಲಿಪಿಗಳನ್ನು ಬಳಸಲಾಗಿದೆ. ಇಂದಿನ ಭಾರತದ ಎಲ್ಲ ಹಿಂದೂ ಲಿಪಿಗಳು ಹಾಗೂ ನೇಪಾಳ, ಟಿಬೆಟ್, ಪೂರ್ವ ತುರ್ಕಿಸ್ತಾನ, ಮಯನ್ಮಾರ್, ಥೈಲೆಂಡ್, ಮಲೇಷಿಯ, ಇಂಡೋನೇಷ್ಯ, ಕಾಂಬೋಡಿಯ, ದಕ್ಷಿಣ ವಿಯೆಟ್ನಾಂ, ಶ್ರೀಲಂಕ ಮುಂತಾದ ರಾಷ್ಟ್ರಗಳಲ್ಲಿ ಇಂದಿಗೂ ಬಳಕೆಯಲ್ಲಿರುವ ಅಥವಾ ಇಸ್ಲಾಮಿನ ಪ್ರಭಾವ ಹೆಚ್ಚಾಗುವ ತನಕ ಬಳಕೆಯಲ್ಲಿದ್ದ ಲಿಪಿಗಳು ಅಶೋಕನ ಕಾಲದ ಬ್ರಾಹ್ಮೀ ಲಿಪಿಯಿಂದಲೇ ಹುಟ್ಟಿದವು.

ಅಶೋಕನ ಶಾಸನಗಳು ಪ್ರಾಕೃತ, ಗ್ರೀಕ್ ಮತ್ತು ಆರಮೇಯಿಕ್ ಭಾಷೆಗಳಲ್ಲಿವೆ. 3–4ನೆಯ ಶತಮಾನದ ವೇಳೆಗೆ ಉತ್ತರ ಭಾರತದಲ್ಲೂ 4ನೆಯ ಶತಮಾನದ ಉತ್ತರಾರ್ಧದ ವೇಳೆಗೆ ದಕ್ಷಿಣ ಭಾರತದಲ್ಲೂ ಅಲ್ಲಿಯ ತನಕ ಪ್ರಧಾನ ಶಾಸನಭಾಷೆಯಾಗಿ ಮೆರೆದ ಪ್ರಾಕೃತವನ್ನು ಸಂಸ್ಕೃತ ಆಕ್ರಮಿಸಿಕೊಂಡಿತು. ಕಾಲಕ್ರಮೇಣ ಭಾರತದ ಮತ್ತು ಭಾರತದಿಂದ ಪ್ರಭಾವಿತವಾದ ಮಧ್ಯ ಮತ್ತು ಆಗ್ನೇಯ ಏಷ್ಯದ ರಾಷ್ಟ್ರಗಳ ಶಾಸನಗಳನ್ನು ಪ್ರಾಂತೀಯ ಭಾಷೆಗಳಲ್ಲೂ ಬರೆಯುವ ರೂಢಿ ಬಂತು. ಉತ್ತರ ಭಾರತದ ಪ್ರಾಂತೀಯ ಭಾಷೆಗಳು ಬಳಕೆಗೆ ಬಂದದ್ದು ಅನಂತರ. ಉತ್ತರ ಭಾರತದಿಂದ ಪ್ರಭಾವಿತವಾದ ಮಧ್ಯ ಮತ್ತು ಆಗ್ನೇಯ ಏಷ್ಯದ ರಾಷ್ಟ್ರಗಳ ಶಾಸನಗಳನ್ನು ಬರೆಯುವಲ್ಲಿ ಪ್ರಾಂತೀಯ ಭಾಷೆಗಳು ಬಳಕೆಗೆ ಬಂದವು. ಉತ್ತರ ಭಾರತದ ಪ್ರಾಂತೀಯ ಭಾಷೆಗಳ ಪೈಕಿ 10ನೆಯ ಶತಮಾನದಿಂದ ಮರಾಠಿ, 11ನೆಯ ಶತಮಾನದಿಂದ ಹಿಂದಿ ಮತ್ತದರ ಉಪಭಾಷೆಗಳು, 13ನೆಯ ಶತಮಾನದಿಂದ ಒರಿಯ, 13–14ನೆಯ ಶತಮಾನದಿಂದ ಕಾಶ್ಮೀರಿ ಮತ್ತದರ ಉಪಭಾಷೆಗಳು, 16ನೆಯ ಶತಮಾನದಿಂದ ಅಸ್ಸಾಮಿನ ಅಹೋಂ, 17ನೆಯ ಶತಮಾನದಿಂದ ಮೈಥಿಲೀ ಶಾಸನಭಾಷೆಗಳಾಗಿ ಕಾಣಿಸಿಕೊಳ್ಳುತ್ತವೆ. ದಕ್ಷಿಣ ಭಾರತದಲ್ಲಿ ತಮಿಳುನಾಡಿನ ಕೆಲವು ಗುಹೆಗಳಲ್ಲಿ ಕೊರೆಯಲಾಗಿರುವ ಶಾಸನಗಳು ತಮಿಳು ಭಾಷೆಯಲ್ಲಿದ್ದು ಅವು 3ನೆಯ ಶತಮಾನದಷ್ಟಾದರೂ ಹಳೆಯವೆಂದು ಲಿಪಿಶಾಸ್ತ್ರದೃಷ್ಟಿಯಿಂದ ಹೇಳಬಹುದಾಗಿದೆ. ಕನ್ನಡಶಾಸನಗಳ ಮಟ್ಟಿಗೆ 5ನೆಯ ಶತಮಾನದ ಮಧ್ಯ ಭಾಗದಲ್ಲಿ ಹುಟ್ಟಿದ ಹಲ್ಮಿಡಿ ಶಾಸನವೇ ಇದುವರೆಗೆ ತಿಳಿದಿರುವಂತೆ ಪ್ರಾಚೀನತಮವಾದದ್ದು. ತೆಲುಗುಭಾಷೆಯ ಪ್ರಾಚೀನತಮ ಶಾಸನ 6ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದ್ದು. 13–14ನೆಯ ಶತಮಾನದಿಂದ ಮಲಯಾಳಂ ಮತ್ತು ತುಳು ಶಾಸನಗಳು (ಐದಾರು) ಕಾಣಿಸಿಕೊಳ್ಳುತ್ತವೆ. ಭಾರತದ ನೇರ ಪ್ರಭಾವಕ್ಕೊಳಗಾಗಿದ್ದ ರಾಷ್ಟ್ರಗಳ ಪೈಕಿ ಪಾಕಿಸ್ತಾನದಲ್ಲಿ ಅಶೋಕನ ಆರಮೇಯಿಕ್ ಮತ್ತು ಪ್ರಾಕೃತ ಶಾಸನಗಳೂ ಆಫ್‌ಘಾನಿಸ್ತಾನದಲ್ಲಿ ಅವನ ಗ್ರೀಕ್ ಮತ್ತು ಆರಮೇಯಿಕ್, ಶಾಸನಗಳೂ ನೇಪಾಲದಲ್ಲಿ ಅದೇ ಅರಸನ ಪ್ರಾಕೃತ ಶಾಸನಗಳೂ ದೊರೆತಿವೆ. ನೇಪಾಲದಲ್ಲಿ ಪ್ರ.ಶ. 5ನೆಯ ಶತಮಾನದಿಂದ ಸಂಸ್ಕೃತ ಶಾಸನಗಳೂ 14–15ನೆಯ ಶತಮಾನದಿಂದ ನೀವಾರೀ ಶಾಸನಗಳೂ ಕಾಣಿಸಿಕೊಳ್ಳುತ್ತವೆ. ಬರ್ಮದಲ್ಲಿ ಸಂಸ್ಕೃತ, ಮೋನ್ ಮತ್ತು ಪ್ಯೂ ಭಾಷೆಗಳ ಶಾಸನಗಳು ಪ್ರ.ಶ. 6ನೆಯ ಶತಮಾನದಿಂದಲೂ ಥೈಲೆಂಡಿನ ಸಂಸ್ಕೃತ ಮತ್ತು ಸಯಾಮೀ ಶಾಸನಗಳು ಪ್ರ.ಶ. 5–6ನೆಯ ಶತಮಾನದಿಂದಲೂ ಇಂಡೋನೇಷ್ಯದ ಸಂಸ್ಕೃತ ಮತ್ತು ಕವಿ ಶಾಸನಗಳು ಅನುಕ್ರಮವಾಗಿ ಪ್ರ.ಶ. 5, 8ನೆಯ ಶತಮಾನಗಳಿಂದಲೂ ಕಾಂಬೋಡಿಯದ ಸಂಸ್ಕೃತ ಮತ್ತು ಖ್ಮೆರ್ ಶಾಸನಗಳು ಅನುಕ್ರಮವಾಗಿ 5, 7ನೆಯ ಶತಮಾನಗಳಿಂದಲೂ ದಕ್ಷಿಣ ವಿಯೆಟ್ನಾಮಿನ (ಪ್ರಾಚೀನ ಚಂಪ) ಸಂಸ್ಕೃತ ಶಾಸನಗಳು 4–5ನೆಯ ಶತಮಾನಗಳಿಂದಲೂ ಕಾಣಿಸಿಕೊಳ್ಳುತ್ತವೆ. ಶ್ರೀಲಂಕದಲ್ಲಿ ಪ್ರಾಕೃತ ಹಾಗೂ ಪಾಲಿಭಾಷೆಗಳೇ ಪ್ರಧಾನ ಶಾಸನ ಭಾಷೆಗಳಾಗಿದ್ದುವಾಗಿದ್ದರಿಂದ ಅಲ್ಲಿ ದೊರೆತಿರುವ ಸಂಸ್ಕೃತ ಶಾಸನಗಳು ಕೆಲವು ಮಾತ್ರ. ಆ ದ್ವೀಪದ ಪ್ರಾಕೃತ, ಪಾಲಿ ಶಾಸನಗಳ ಪೈಕಿ ಪ್ರಾಚೀನತಮವಾದವು ಪ್ರ.ಶ.ಪೂ. 2ನೆಯ ಶತಮಾನದವು. ಪ್ರಾಚೀನತಮ ಸಂಸ್ಕೃತ, ಶ್ರೀಲಂಕ ಶಾಸನಗಳು ಅನುಕ್ರಮವಾಗಿ 5,8ನೆಯ ಶತಮಾನಗಳವು. 11ನೆಯ ಶತಮಾನದ ಚೋಳರ ಹಲವು ಶಾಸನಗಳೂ ಸೇರಿದಂತೆ ಅನೇಕ ತಮಿಳು ಶಾಸನಗಳು ಶ್ರೀಲಂಕದಲ್ಲಿ ದೊರೆತಿವೆ.

ಭಾರತದಲ್ಲಿ ಅರಬ್ಬೀ ಮತ್ತು ಪರ್ಷಿಯನ್ ಶಾಸನಗಳು ಪ್ರ.ಶ. 12ನೆಯ ಶತಮಾನದ ಕೊನೆಯ ದಶಕದಿಂದ ದೊರೆಯುತ್ತವೆ. ಈ ಶಾಸನಗಳಲ್ಲಿ ಹೆಚ್ಚಿನವು ಮಸೀದಿಗಳಲ್ಲೂ ಸಮಾಧಿಗಳ ಮೇಲೂ ಬರೆಯಲಾದವು. ಅರಬ್ಬೀ–ಪರ್ಷಿಯನ್ ಶಾಸನಗಳ ಪೈಕಿ ಹೆಚ್ಚಿನವುಗಳಲ್ಲಿ ಪರ್ಷಿಯನ್ ಭಾಷೆಯನ್ನು ಬಳಸಲಾಗಿದೆ. ಭಾರತಕ್ಕೆ ಬಂದು ನೆಲೆಸಿದಾಗಿನಿಂದಲೂ ಮುಸ್ಲಿಂ ಇತಿಹಾಸಕಾರರು ನಾಡಿನ ಬೇರೆ ಬೇರೆ ಮಹಮ್ಮದೀಯ ಅರಸುಮನೆತನಗಳ ಚರಿತ್ರೆಯನ್ನು ಬರೆದಿಟ್ಟಿರುವರಾದ ಕಾರಣ, ಇತಿಹಾಸ ದೃಷ್ಟಿಯಿಂದ ಭಾರತದ ಅರಬ್ಬೀ–ಪರ್ಷಿಯನ್ ಶಾಸನಗಳಿಗೆ ಹೆಚ್ಚಿನ ಮಹತ್ತ್ವವಿಲ್ಲ.

**ನಾಣ್ಯಗಳು:** ನಿರ್ದಿಷ್ಟ ತೂಕದ ನಾಣ್ಯಗಳನ್ನು ಮಾನವ ಮಾಡತೊಡಗಿದ್ದು ಪ್ರ.ಪೂ 7ನೆಯ ಶತಮಾನದಲ್ಲಿ ಮಾತ್ರ. ಅದರ ಮೊದಲು ಜಗತ್ತಿನ ಎಲ್ಲೆಡೆಗಳಲ್ಲೂ ವಸ್ತುಗಳ ಅದಲುಬದಲಿಯಿಂದಲೇ ವ್ಯಾಪಾರ ಸಾಗುತ್ತಿತ್ತು. ನಾಣ್ಯಗಳೂ ಹುಟ್ಟುವ ಮೊದಲು ಚಿನ್ನದ ಉಂಗುರಗಳೂ ಓಲೆಗಳೂ ಆಭರಣಗಳಾಗಿರುವುದರ ಜೊತೆಗೆ ಹಣದ ಕೆಲಸವನ್ನೂ ಪೂರೈಸುತ್ತಿದ್ದವು.

ಪ್ರ.ಶ.ಪೂ. 7ನೆಯ ಶತಮಾನದಲ್ಲಿ ಏಷ್ಯ ಮೈನರಿನ ಲಿಡಿಯದ ಖಾಸಗಿ ವ್ಯಾಪಾರಿಯೊಬ್ಬ (ಚಿನ್ನ ಮತ್ತು ಬೆಳ್ಳಿಗಳಿಂದಾದ) ಇಲೆಕ್ಟ್ರಂ ಎಂಬ ಮಿಶ್ರಲೋಹದಿಂದ ಅವರೆಯ ರೂಪದ ತುಂಡುಗಳನ್ನು ಮಾಡಿ ಅವುಗಳ ಮೇಲೆ ತನ್ನದೇ ಆದ ಒಂದು ಗುರುತನ್ನು ಮುದ್ರಿಸಿದಾಗ ಜಗತ್ತಿನ ಪ್ರಾಚೀನತಮ ನಾಣ್ಯಗಳು ಹೊರಬಿದ್ದವು. ಅಂದಿನಿಂದ ಜಗತ್ತಿನ ಬೇರೆ ಬೇರೆ ಪ್ರಾಂತ್ಯಗಳಲ್ಲಿ, ಕಾಲಗಳಲ್ಲಿ ಬೇರೆ ಬೇರೆ ಅರಸುಮನೆತನಗಳಿಂದ, ನಗರಗಳಿಂದ, ಸಂಘಸಂಸ್ಥೆಗಳಿಂದ, ವ್ಯಕ್ತಿಗಳಿಂದ ಹೊರಡಿಸಲಾಗಿರುವ ನಾಣ್ಯಗಳಿಗೆ ಲೆಕ್ಕವಿಲ್ಲ. ಮಾನವನ ಗತಕಾಲದ ಇತಿಹಾಸವನ್ನು ಪುನಾರಚಿಸುವಲ್ಲಿ ಶಾಸನಾದಿ ದಾಖಲೆಗಳು ಮುಖ್ಯ ಮೂಲ ಸಾಮಗ್ರಿಗಳಾದರೆ, ನಾಣ್ಯಗಳು ಪೋಷಕ ಆಧಾರವಸ್ತುಗಳಾಗಿವೆ; ಅವು ಇತರ ಐತಿಹಾಸಿಕ ಆಧಾರಗಳ ಅಧ್ಯಯನದಿಂದ ಉಂಟಾಗಬಹುದಾದ ತಪ್ಪು ತಿಳಿವಳಿಕೆಗಳನ್ನು ತಿದ್ದುವಂಥವೂ ಹೌದು. ಅಲ್ಲದೆ, ಪ್ರಾಚೀನಕಾಲದಿಂದಲೂ ಜಗತ್ತಿನ ಬೇರೆ ಬೇರೆ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದ ವಿವಿಧ ಜನಾಂಗಗಳು ಯುದ್ಧ, ವ್ಯಾಪಾರ, ಧರ್ಮಪ್ರಚಾರ ಇತ್ಯಾದಿಗಳ ಮೂಲಕ ದೂರದೂರದ ರಾಷ್ಟ್ರಗಳ ಮೇಲೆ ಉಂಟುಮಾಡಿರಬಹುದಾದ ಪ್ರಭಾವವನ್ನು ತಿಳಿದುಕೊಳ್ಳುವಲ್ಲಿ ನಾಣ್ಯಗಳ ಪಾತ್ರ ಅತಿ ಮುಖ್ಯವಾದದ್ದು.

ಏಷ್ಯ ಮೈನರಿನ ಲಿಡಿಯ ಅಯೋನಿಯ ದ್ವೀಪಗಳು, ತ್ರೋಅಸ್, ಈಲಿಸ್, ಲೆಸ್ಬೋಸ್, ಮೈಸಿಯ, ಬಿಥಿನಿಯ ರಾಷ್ಟ್ರಗಳು ಪ್ರ.ಶ.ಪೂ. 7–5ನೆಯ ಶತಮಾನಗಳ ಅವಧಿಯಲ್ಲಿ ಹೊರಡಿಸಿದ ಇಲೆಕ್ಟ್ರಂ ನಾಣ್ಯಗಳು ದೊರೆತಿವೆ. ಅವುಗಳ ಮೇಲ್ಭಾಗದಲ್ಲಿ ಸಿಂಹದ ಮುಖಮುದ್ರೆಯೂ ಹಿಂಭಾಗದಲ್ಲಿ ಎರಡು ಮೂರು ಮುದ್ರೆಗಳೂ ಕಂಡುಬರುತ್ತವೆ, ಏಷ್ಯ ಮೈನರಿನ ಅನೇಕ ರಾಷ್ಟ್ರಗಳು ಹಾಗೂ ಸ್ವತಂತ್ರ ನಗರಗಳು ಹೊರಡಿಸಿದ ಬಂಗಾರದ ಮತ್ತು ಬೆಳ್ಳಿಯ ನಾಣ್ಯಗಳು ಪ್ರ.ಶ.ಪೂ. 6ನೆಯ ಶತಮಾನದಿಂದಲೂ ಕಂದು ಕಂಚಿನ ನಾಣ್ಯಗಳು ಪ್ರ.ಶ.ಪೂ. 5ನೆಯ ಶತಮಾನದಿಂದಲೂ ಕಂಡುಬಂದಿವೆ. ಆ ಪ್ರದೇಶದಲ್ಲಿ ಗ್ರೀಕರ, ರೋಮನರ, ಈಜಿಪ್ಟಿನ ಟಾಲೆಮಿ ವಂಶದವರ ನಾಣ್ಯಗಳೂ ದೊರೆತಿವೆ.

ಭಾರತದಲ್ಲಿ ಬಳಕೆಯಲ್ಲಿದ್ದ ನಾಣ್ಯಗಳ ಪೈಕಿ ಪ್ರಾಚೀನತಮವಾದವು ಪುರಾಣಗಳು. ಪ್ರಾಚೀನ ಸಾಹಿತ್ಯದಲ್ಲಿ ಬಂಗಾರ, ಬೆಳ್ಳಿ ಮತ್ತು ತಾಮ್ರದ ಪುರಾಣಗಳ ಪ್ರಸ್ತಾಪವಿದ್ದರೂ ಬಂಗಾರದ ಪುರಾಣಗಳು ಇಲ್ಲಿಯವರೆಗೆ ದೊರೆತಿಲ್ಲ. ಈ ನಾಣ್ಯಗಳ ಮೇಲೆ ಸಾಂಕೇತಿಕ ಮುದ್ರೆಗಳು ಕಂಡುಬರುವ ಕಾರಣ ಇವನ್ನು ಮುದ್ರೆಯೊತ್ತಿನ ನಾಣ್ಯಗಳೆಂದು ಕರೆಯುವುದು ವಾಡಿಕೆ. ಸೂರ್ಯ, ಆನೆ, ಹಸು, ರಥ, ಕುದುರೆ, ವೃಷಭ, ಮರ, ಹುಲಿ, ಸಿಂಹ ಇತ್ಯಾದಿಗಳು ಈ ಮುದ್ರೆಗಳು, ಪರದೇಶಗಳ ಸತ್ತೇರ್, ಡೇರಿಕ್, ದೀನಾರ ಮುಂತಾದ ನಾಣ್ಯಗಳೂ ಭಾರತದಲ್ಲಿ ದೊರೆತಿವೆ. ಪ್ರ.ಶ.ಪೂ. 2-1ನೆಯ ಶತಮಾನಗಳ ಅವಧಿಯಲ್ಲಿ ವಾಯವ್ಯ ಭಾರತದ ಕೆಲವು ಪ್ರಾಂತ್ಯಗಳ ದೊರೆಗಳಾಗಿ ಮೆರೆದ ಇಂಡೋ-ಗ್ರೀಕ್ ಅರಸುಗಳ ಗ್ರೀಕ್ ಮತ್ತು ಖರೋಷ್ಠೀ ಆಲೇಖ್ಯಗಳಿಂದ ಕೂಡಿದ ನಾಣ್ಯಗಳೂ ಪ್ರ.ಶ.ಪೂ. 3ನೆಯ ಶತಮಾನದಿಂದ 3ನೆಯ ಶತಮಾನದವರೆಗಿನ ಅವಧಿಯಲ್ಲಿ ಮಧ್ಯಭಾರತ, ಕರ್ನಾಟಕ, ಆಂಧ್ರಪ್ರದೇಶಗಳ ಅರಸುಗಳಾಗಿದ್ದ ಶಾತವಾಹನರ (ಬೆಳ್ಳಿ-ತಾಮ್ರಗಳ) ಮಿಶ್ರಲೋಹದ ಹಾಗೂ ಸೀಸದ ನಾಣ್ಯಗಳೂ ಶಾತವಾಹನರ ಅಧೀನರಾಗಿ ಬನವಾಸಿ, ಚಂದ್ರವಳ್ಳಿ ಇತ್ಯಾದಿ ಪ್ರಾಂತ್ಯಗಳನ್ನು ಆಳುತ್ತಿದ್ದ ಚುಟು ಮತ್ತು ಮಹಾರಠಿಗಳ ನಾಣ್ಯಗಳೂ ಉಂಟು. ಕ್ರಿಸ್ತಶಕದ ಪ್ರಾರಂಭದಿಂದೀಚೆಗಿನ ಭಾರತದಲ್ಲಿ ರಾಜ್ಯವಾಳಿದ ಕುಷಾನರ, ಗುಪ್ತರ, ಶಕಜನಾಂಗದ, ಪಶ್ಚಿಮ ಕ್ಷತ್ರಪರ, ವರ್ಧಮಾನವಂಶದವರ ರಜಪೂತ ಅರಸುಮನೆತನಗಳ, ಕಲ್ಯಾಣದ ಪಶ್ಚಿಮ ಚಾಳುಕ್ಯರ, ವೇಂಗಿಯ ಪೂರ್ವ ಚಾಲುಕ್ಯರ, ಕರ್ನಾಟಕದ ಕಲಚುರಿಗಳ, ತಮಿಳುನಾಡಿನ ಚೋಳರ, ಪಾಂಡ್ಯರ, ಕೇರಳದ ಚೇರರ, ತಲಕಾಡಿನ ಗಂಗರ, ವಿಜಯನಗರ ಸಾಮ್ರಾಟರ ನಾಣ್ಯಗಳು ಬೇಕಷ್ಟು ದೊರೆತಿವೆ. ದೆಹಲಿಯ ಸುಲ್ತಾನರು ಮತ್ತು ಮೈಸೂರಿನ ಸುಲ್ತಾನರೂ ಸೇರಿದಂತೆ ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ರಾಜ್ಯಗಳನ್ನು ಕಟ್ಟಿ ಆಳಿದ ಮಹಮ್ಮದೀಯ ಅರಸುಮನೆತನಗಳ ನಾಣ್ಯಗಳಂತೂ ಹೇರಳ. 1661 ರಿಂದ ಮದ್ರಾಸಿನ ಟಂಕಶಾಲೆಯಿಂದ ಈಸ್ಟ್ ಇಂಡಿಯ ಕಂಪನಿಯವರ ಪಗೋಡ ನಾಣ್ಯಗಳು ಕಣ್ಮರೆಯಾಗಿ ರೂಪಾಯಿ ನಾಣ್ಯಗಳ ಇತಿಹಾಸ ಪ್ರಾರಂಭವಾಯಿತು. ಭಾರತದ ಕೆಲವು ಭಾಗಗಳಲ್ಲಿ ಕೆಲವು ಶತಮಾನಗಳ ಹಿಂದೆ ಇಂಡೋ-ಪೋರ್ಚುಗೀಸ್, ಇಂಡೋ-ಡೇನಿಸ್, ಇಂಡೋ-ಫ್ರೆಂಚ್ ಇಂಡೋ-ಡಚ್ ನಾಣ್ಯಗಳೂ ಚಲಾವಣೆಯಲ್ಲಿದ್ದವು.

ಪ್ರಾಚೀನ ಚೀನದಲ್ಲಿ ಬೇಸಾಯದ ಉಪಕರಣಗಳನ್ನೇ ವ್ಯಾಪಾರ ಕ್ಷೇತ್ರದಲ್ಲಿ ಉಪಯೋಗಿಸುತ್ತಿದ್ದರಾಗಿ ಆ ದೇಶದ ಪ್ರ.ಶ.ಪೂ. 8ನೆಯ ಶತಮಾನದ ಪ್ರಾಚೀನತಮ ನಾಣ್ಯಗಳು ಅಂಥ ಉಪಕರಣಗಳ ರೂಪದಲ್ಲೇ ಇದ್ದವು. ಅನಂತರ ಕಾಲದ ಚೀನದ ಬಂಗಾರ, ಬೆಳ್ಳಿ ಮತ್ತು ಕಂದು ಕಂಚಿನ ಪ್ರಾಚೀನ ನಾಣ್ಯಗಳು ದೊರೆತಿವೆ. 622ರಲ್ಲಿ ತಂಗ್ ವಂಶದವರು ಹೊರಡಿಸಿದ ನಾಣ್ಯಗಳು ಅವುಗಳಿಂದೀಚೆಗಿನ ಚೀನೀ ನಾಣ್ಯಗಳಿಗೆ ಮಾದರಿಗಳಾದವು. ಕೊರಿಯ, ವಿಯೆಟ್ನಾಂ ಹಾಗೂ ಇಂಡೋನೇಷ್ಯ ರಾಷ್ಟ್ರಗಳ ಗತಕಾಲದ ನಾಣ್ಯಗಳು ಚೀನಿ ನಾಣ್ಯಗಳಿಂದ ಪ್ರಭಾವಿತವಾಗಿದ್ದವು. ಹಾಗೆಯೇ ಜಪಾನಿನ ನಾಣ್ಯಗಳೂ ಸ್ವಲ್ಪ ಮಟ್ಟಿಗೆ ಚೀನೀ ಪ್ರಭಾವವನ್ನು ಪ್ರದರ್ಶಿಸುವಂಥವಾಗಿದ್ದುವು. ಜಪಾನಿನಲ್ಲಿ 5ನೆಯ ಶತಮಾನದಿಂದ ಲೋಹನಾಣ್ಯಗಳ ಚಲಾವಣೆ ಪ್ರಾರಂಭವಾಯಿತೆನ್ನ ಬಹುದಾಗಿದೆ. ಆ ರಾಷ್ಟ್ರದಲ್ಲಿ 1870ರಲ್ಲಿ ಯುರೋಪಿನ ಮಾದರಿಯ ನಾಣ್ಯಪದ್ಧತಿಯನ್ನು ಜಾರಿಗೆ ತರಲಾಯಿತು.

ಪ್ರಾಚೀನ ಬರ್ಮದಲ್ಲಿ ಬಸವನ ಹುಳುವಿನ ಚಿಪ್ಪಿನ ಆಕಾರದ ಬೆಳ್ಳಿ ನಾಣ್ಯಗಳೂ ಪ್ರಾಚೀನ ಥೈಲೆಂಡಿನಲ್ಲಿ ವಲಯಾಕಾರದ ಬೆಳ್ಳಿ ನಾಣ್ಯಗಳೂ ಚಲಾವಣೆಯಲ್ಲಿದ್ದವು.

12ನೆಯ ಶತಮಾನದ ಶ್ರೀಲಂಕ ಅರಸುಗಳ ನಾಣ್ಯಗಳು ತಮಿಳುನಾಡಿನ ಚೋಳರ ನಾಣ್ಯಗಳಿಂದ ಪ್ರಭಾವಿತವಾಗಿದ್ದವು. 16-17ನೆಯ ಶತಮಾನಗಳಲ್ಲಿ ಹಿಂದೂ ಮಹಾಸಾಗರ ಹಾಗೂ ಪರ್ಷಿಯನ್ ಖಾರಿಯ ಪ್ರದೇಶಗಳಲ್ಲಿ ಲಾರಿನ್ ಎಂಬ ಬೆಳ್ಳಿ ಸರಿಗೆಯ ತುಂಡುಗಳು ನಾಣ್ಯಗಳಾಗಿದ್ದು, ಅವು ಶ್ರೀಲಂಕದಲ್ಲಿ ಗಾಳದ ಕೊಕ್ಕೆಯ ರೂಪದಲ್ಲಿ ವ್ಯವಹಾರದಲ್ಲಿದ್ದವು. ಕಾಗದದ ಹಣ ಚೀನದಲ್ಲಿ 9ನೆಯ ಶತಮಾನದಷ್ಟು ಹಿಂದೆಯೇ ಚಲಾವಣೆಗೆ ಬಂದಿತ್ತು. (ಕೆ.ವಿ.ಆರ್.)

**ಏಷ್ಯನ್ ಕ್ರೀಡೆಗಳು:** ನವದೆಹಲಿಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ, 1951ರ ಮಾರ್ಚ್ 4 ರಂದು ಬೆಳಗಿದ ಏಷ್ಯನ್ ಕ್ರೀಡಾಜ್ಯೋತಿ, ಐದು ದಶಕಗಳ ನಂತರವೂ ಉಜ್ವಲವಾಗಿ ಬೆಳಗುತ್ತಿದೆ. ಒಲಿಂಪಿಕ್ ಕ್ರೀಡೆಗಳ ಮಾದರಿಯಲ್ಲೇ, ಅಂದು ಆರಂಭವಾದ ಏಷ್ಯನ್ ಕ್ರೀಡೆಗಳು, ನಾಲ್ಕು ವರ್ಷಗಳಿಗೊಮ್ಮೆ, ಏಷ್ಯ ಖಂಡದ ಅತ್ಯುನ್ನತ ಕ್ರೀಡಾಕೂಟವಾಗಿ ನಡೆಯುತ್ತಿದೆ.

ಎರಡನೆಯ ಮಹಾಯುದ್ಧದಲ್ಲಿ ತತ್ತರಿಸಿಹೋಗಿದ್ದ ಏಷ್ಯದ ರಾಷ್ಟ್ರಗಳಲ್ಲಿ ಹೊಸ ಚೇತನ ಮೂಡಿಸುವ, ಆರ್ಥಿಕ ಶಕ್ತಿ ಚಿಗುರಿಸುವ ಕನಸು ಕಂಡವರು ಪಂ. ಜವಾಹರಲಾಲ್ ನೆಹರೂ. ಗುರುದತ್ತ ಸೋಂಧಿ, ಅಂತೋನಿ ಡಿಮೆಲ್ಲೊ, ಪಾಟಿಯಾಲಾದ ಮಹಾರಾಜ ಯದುವೇಂದ್ರ ಸಿಂಹ ಅವರ ಪ್ರಯತ್ನಕ್ಕೆ, ಏಷ್ಯದ ರಾಷ್ಟ್ರಗಳು ಬೆಂಬಲ ಸೂಚಿಸಿದವು. 1949ರಲ್ಲಿ ಏಷ್ಯನ್ ಗೇಮ್ಸ್ ಫೆಡರೇಷನ್ ಅಸ್ತಿತ್ವಕ್ಕೆ ಬರುವುದರೊಂದಿಗೆ ಏಷ್ಯದ ಕ್ರೀಡಾ ಆಂದೋಲನಕ್ಕೆ ಚಾಲನೆ ದೊರೆಯಿತು. 'ಕ್ರೀಡೆಯನ್ನು ಕ್ರೀಡಾಕೆಚ್ಚಿನಿಂದಲೇ ಆಡಿ' ಎಂಬ ನೆಹರೂ ಸಂದೇಶವೇ, ಮೊದಲ ಏಷ್ಯನ್ ಕ್ರೀಡೆಗಳ ಧ್ಯೇಯವಾಕ್ಯವಾಗಿತ್ತು.

ಒಲಿಂಪಿಕ್ ಕ್ರೀಡೆಗಳಂತೆ, ಏಷ್ಯನ್ ಕ್ರೀಡೆಗಳನ್ನೂ ರಾಜಕೀಯ ಭಾದಿಸಿದೆ. ಎಂಟನೆಯ ಏಷ್ಯನ್ ಕ್ರೀಡೆಗಳನ್ನು 1982ರಲ್ಲಿ ನಡೆಸುವ ಜವಾಬ್ದಾರಿ ಭಾರತದ ಮೇಲೆ ಬಿದ್ದಿತ್ತು. ಆದರೆ, ಭಾರತದಂಥ ಬಡದೇಶದಲ್ಲಿ, ಏಷ್ಯನ್ ಕ್ರೀಡೆಗಳಿಗೆ ನೂರಾರು ಕೋಟಿ ರೂ. ಖರ್ಚು ಮಾಡುವುದು ವ್ಯರ್ಥ ಎಂಬ ಅಭಿಪ್ರಾಯ ರಾಜಕಾರಣಿಗಳಲ್ಲಿ ಮೂಡಿತ್ತು. ಆದರೆ, 1980ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಇಂದಿರಾ ಗಾಂಧೀ, ತಮ್ಮ ತಂದೆ ಬೆಳಗಿದ್ದ ಕ್ರೀಡಾಜ್ಯೋತಿ ನಂದುವಂತೆ ಮಾಡಲು ಸಿದ್ಧರಿರಲಿಲ್ಲ. ನವದೆಹಲಿಯಲ್ಲಿ ಏಷ್ಯನ್ ಕ್ರೀಡೆಗಳು ಯಶಸ್ವಿಯಾಗಿ ನಡೆದವು. ಅದೇ ವರ್ಷ, ಅಂದರೆ 1982ರಲ್ಲಿ 'ಏಷ್ಯನ್ ಗೇಮ್ಸ್ ಫೆಡರೇಷನ್' ಎಂಬುದು 'ಏಷ್ಯನ್ ಒಲಿಂಪಿಕ್ ಕೌನ್ಸಿಲ್' ಎಂದು ಬದಲಾಯಿತು.

ಏಷ್ಯನ್ ಕ್ರೀಡೆಗಳಿಗೆ ಚಾಲನೆ ನೀಡಿದ ಭಾರತವೇ ಪದಕಪಟ್ಟಿಯಲ್ಲಿ ಒಮ್ಮೆಯೂ ಅಗ್ರಸ್ಥಾನ ಪಡೆದಿಲ್ಲ. ಮೊದಲ ಏಷ್ಯನ್ ಕ್ರೀಡೆಗಳ (1951) ಪದಕಪಟ್ಟಿಯಲ್ಲಿ ಜಪಾನ್ ಅಗ್ರಸ್ಥಾನ ಗಳಿಸಿದ್ದರೆ, ಭಾರತ 15 ಚಿನ್ನ, 16 ಬೆಳ್ಳಿ, 21 ಕಂಚಿನ ಪದಕಗಳೊಡನೆ ಎರಡನೇ ಸ್ಥಾನ ಗಳಿಸಿತ್ತು.

1962ರಲ್ಲಿ, ಜಕಾರ್ತದಲ್ಲಿ ನಡೆದ ನಾಲ್ಕನೆಯ ಏಷ್ಯನ್ ಕ್ರೀಡೆಗಳಲ್ಲಿ ಭಾರತ 10 ಚಿನ್ನ, 13 ಬೆಳ್ಳಿ, 11 ಕಂಚಿನ ಪದಕಗಳೊಡನೆ ಮೂರನೇ ಸ್ಥಾನ ಗಳಿಸಿತ್ತು. ಅಲ್ಲಿಂದ 2002ರ ಕ್ರೀಡೆಗಳ ವರೆಗೆ ಭಾರತ ಮೊದಲ ಮೂರರಲ್ಲಿ ಸ್ಥಾನ ಪಡೆದೇ ಇಲ್ಲ. ಜಪಾನ್ 1951 ರಿಂದ 1978ರವರೆಗೆ ಅಗ್ರಸ್ಥಾನದಲ್ಲಿತ್ತು. 1974ರ ಟೆಹರಾನ್ ಕ್ರೀಡೆಗಳಿಂದ ಏಷ್ಯನ್ ಕ್ರೀಡಾಕುಟುಂಬದಲ್ಲಿ ಸ್ಥಾನ ಪಡೆದ ಚೀನ, 1982ರಲ್ಲಿ ಜಪಾನನ್ನು ಪದಕಪಟ್ಟಿಯಲ್ಲಿ ಎರಡನೆಯ ಸ್ಥಾನಕ್ಕೆ ದೂಡಿದ ಅನಂತರ, ಇದುವರೆಗೂ ಅಗ್ರಸ್ಥಾನ ಬಿಟ್ಟುಕೊಟ್ಟಿಲ್ಲ.

ಬುಸಾನ್‌ನಲ್ಲಿ 2002ರಲ್ಲಿ ನಡೆದ 14ನೇ ಏಷ್ಯನ್ ಕ್ರೀಡೆಗಳಲ್ಲೂ ಚೀನಕ್ಕೇ ಅಗ್ರಸ್ಥಾನ. ಚೀನ ಒಟ್ಟು 150 ಚಿನ್ನ, 84 ಬೆಳ್ಳಿ, 74 ಕಂಚಿನ (ಒಟ್ಟು 308) ಪದಕಗಳೊಡನೆ ತನ್ನ ಪ್ರಭುತ್ವವನ್ನು ಮತ್ತೊಮ್ಮೆ ಮೆರೆಯಿತು. ದಕ್ಷಿಣ ಕೊರಿಯ (96+80+84=260) ಎರಡನೆಯ ಸ್ಥಾನ ಪಡೆದರೆ, ಜಪಾನ್ (44+73+72=189) ಮೂರನೆಯ ಸ್ಥಾನ ಗಳಿಸಿತು. ಭಾರತ 11 ಚಿನ್ನ, 12 ರಜತ, 13 ಕಂಚಿನ (ಒಟ್ಟು 36) ಪದಕಗಳೊಡನೆ ಏಳನೆಯ ಸ್ಥಾನ ಗಳಿಸಿತು.

ಏಷ್ಯನ್ ಕ್ರೀಡೆಗಳಲ್ಲಿ ಭಾರತದ ಸಾಧನೆಯ ಬಗ್ಗೆ ಕೇಳಿದರೆ ಮೊದಲು ನೆನಪಾಗುವ ಹೆಸರು ಪಿ.ಟಿ. ಉಷಾ. ಈ ಓಟದ ರಾಣಿಗೆ 'ಚಿನ್ನದ ರಾಣಿ' ಎಂದು ಹೆಸರು ಬಂದಿದ್ದು ಏಷ್ಯನ್ ಕ್ರೀಡೆಗಳ ಮೂಲಕವೇ. 1986ರ ಸೋಲ್ ಏಷ್ಯನ್ ಕ್ರೀಡೆಗಳಲ್ಲಿ ನಾಲ್ಕು ಚಿನ್ನ ಮತ್ತು ಒಂದು ರಜತ ಪದಕ ಗೆದ್ದರು. ಉಷಾ ಅನಂತರ ಅಂಥ ಸಾಧನೆಯನ್ನು ತೋರದಿದ್ದರೂ, ಅವರಂತೆ ಏಷ್ಯನ್ ಕ್ರೀಡೆಗಳಲ್ಲಿ ಯಶಸ್ವಿಯಾದ ಅಥ್ಲೀಟ್ ಮತ್ತೊಬ್ಬರಿಲ್ಲ.

**14ನೇ ಏಷ್ಯನ್ ಕ್ರೀಡೆಗಳ ಪದಕ ಪಟ್ಟಿ**

| ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಚೀನ | 150 | 84 | 74 | 308 |
| ದಕ್ಷಿಣ ಕೊರಿಯ | 96 | 80 | 84 | 260 |
| ಜಪಾನ್ | 44 | 73 | 72 | 189 |
| ಕಜಖ್‌ಸ್ತಾನ್ | 20 | 26 | 30 | 76 |
| ಉಜ್ಬೆಕಿಸ್ತಾನ್ | 15 | 12 | 24 | 51 |
| ಥೈಲ್ಯಾಂಡ್ | 14 | 19 | 10 | 43 |
| ಭಾರತ | 11 | 12 | 13 | 36 |
| ಚೈನೀಸ್ ತೈಪೆ | 10 | 17 | 25 | 52 |
| ಉತ್ತರ ಕೊರಿಯ | 9 | 11 | 13 | 36 |
| ಇರಾನ್ | 8 | 14 | 14 | 36 |
| ಸೌದಿ ಅರೇಬಿಯ | 7 | 1 | 1 | 9 |
| ಮಲೇಷಿಯ | 6 | 8 | 16 | 30 |
| ಸಿಂಗಪುರ | 5 | 2 | 10 | 17 |
| ಇಂಡೊನೇಷ್ಯ | 4 | 7 | 12 | 23 |
| ವಿಯೆಟ್ನಾಮ್ | 4 | 7 | 7 | 18 |
| ಹಾಂಗ್‌ಕಾಂಗ್ | 4 | 6 | 11 | 21 |

| | | | | |
|---|---|---|---|---|
| ಖತಾರ್ | 4 | 5 | 8 | 17 |
| ಫಿಲಿಪೈನ್ಸ್ | 3 | 7 | 16 | 26 |
| ಬಹ್ರೈನ್ | 3 | 2 | 2 | 7 |
| ಕುವೈತ್ | 2 | 1 | 5 | 8 |
| ಶ್ರೀಲಂಕ | 2 | 1 | 3 | 6 |
| ಪಾಕಿಸ್ತಾನ | 1 | 6 | 6 | 13 |
| ಕಿರ್ಗಿಸ್ತಾನ್ | 1 | 5 | 6 | 12 |
| ಮಯನ್ಮಾರ್ | 1 | 5 | 6 | 12 |
| ತುರ್ಕ್‌ಮೆನಿಸ್ತಾನ್ | 1 | 2 | 1 | 4 |
| ಮಂಗೋಲಿಯ | 1 | 1 | 12 | 14 |
| ಲೆಬನಾನ್ | 1 | 0 | 0 | 1 |
| ತಜ್ಕಿಸ್ತಾನ್ | 0 | 2 | 4 | 6 |
| ಮಕಾಉ | 0 | 2 | 2 | 4 |
| ಅರಬ್ ಸಂಯುಕ್ತ ಸಂಸ್ಥಾನಗಳು | 0 | 2 | 1 | 3 |
| ಬಾಂಗ್ಲಾದೇಶ | 0 | 1 | 0 | 1 |
| ನೇಪಾಲ | 0 | 0 | 3 | 3 |
| ಸಿರಿಯ | 0 | 0 | 3 | 3 |
| ಜೋರ್ಡಾನ್ | 0 | 0 | 2 | 2 |
| ಲಾವೋಸ್ | 0 | 0 | 2 | 2 |
| ಆಫ್ಘಾನಿಸ್ತಾನ | 0 | 0 | 1 | 1 |
| ಬ್ರೂನೈ | 0 | 0 | 1 | 1 |
| ಪ್ಯಾಲೆಸ್ಟೈನ್ | 0 | 0 | 1 | 1 |
| ಯೆಮೆನ್ | 0 | 0 | 1 | 1 |
| **ಒಟ್ಟು** | **427** | **421** | **502** | **1,350** |

(ಜಿ.ಎಸ್.)

ಹದಿನೈದನೆಯ ಏಷ್ಯನ್ ಕ್ರೀಡೆಗಳು 2006ರಲ್ಲಿ ಖತಾರಿನ ದೋಹಾದಲ್ಲಿ ನಡೆದವು. ಹದಿನಾರನೆಯ ಏಷ್ಯನ್ ಕ್ರೀಡೆಗಳು 2010ರಲ್ಲಿ ಚೀನದ ಗುವಾಂಗ್‌ಜೋ ಎಂಬಲ್ಲಿ ನಡೆದವು.

| ಸ್ಥಾನ | ರಾಷ್ಟ್ರ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಚೀನ | 1,342 | 900 | 653 | 2,895 |
| 2 | ದಕ್ಷಿಣ ಕೊರಿಯ | 957 | 980 | 913 | 2,850 |
| 3 | ಜಪಾನ್ | 696 | 606 | 761 | 2,063 |
| 4 | ಇರಾನ್ | 159 | 161 | 175 | 495 |
| 5 | ಕಜ಼ಖ್‌ಸ್ತಾನ್ | 140 | 141 | 200 | 481 |
| 6 | ಭಾರತ | 139 | 178 | 285 | 602 |

ಈಚೆಗೆ 2014ರಲ್ಲಿ ಹದಿನೇಳನೆಯ ಏಷ್ಯನ್ ಕ್ರೀಡೆಗಳು ದಕ್ಷಿಣ ಕೊರಿಯಾದ ಇಂಚಿಯಾನ್ ಎಂಬಲ್ಲಿ ನಡೆದವು. 2018ರ ಹದಿನೆಂಟನೆಯ ಏಷ್ಯನ್ ಕ್ರೀಡೆಗಳು ಇಂಡೋನೇಷ್ಯದ ಜಕಾರ್ತದಲ್ಲಿ ನಡೆಯತಕ್ಕದ್ದೆಂದು ತೀರ್ಮಾನವಾಗಿದೆ.

ಕೊರಿಯದ ಇಂಚಿಯಾನಿನಲ್ಲಿ ನಡೆದ 17ನೆಯ ಏಷ್ಯನ್ ಕ್ರೀಡೆಗಳಲ್ಲಿ ವಿಜೇತ ದೇಶಗಳ ಪೈಕಿ ಎಂಟನೆಯ ಸ್ಥಾನವನ್ನು ಪಡೆದಿರುವ ಭಾರತ 11 ಚಿನ್ನದ ಪದಕಗಳನ್ನು, 10 ಬೆಳ್ಳಿ ಪದಕಗಳನ್ನು ಹಾಗೂ 36 ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದು ಒಟ್ಟು 57 ಪದಕಗಳನ್ನು ಸಂಪಾದಿಸಿದೆ. ಮೊದಲ ಸ್ಥಾನದಲ್ಲಿರುವ ಚೀನ ಪಡೆದಿರುವ ಪದಕಗಳ ಸಂಖ್ಯೆ ಒಟ್ಟು 342 ಆಗಿದ್ದು ಇದರಲ್ಲಿ ಚಿನ್ನ–151, ಬೆಳ್ಳಿ–108 ಮತ್ತು ಕಂಚು–83 ಸೇರಿವೆ.

*

**ಏಷ್ಯ ಮತ್ತು ದೂರ ಪ್ರಾಚ್ಯಗಳ ಆರ್ಥಿಕ ಆಯೋಗ:** ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿ ಏರ್ಪಡಿಸಿರುವ ನಾಲ್ಕು ಪ್ರಾದೇಶಿಕ ಸಂಸ್ಥೆಗಳಲ್ಲಿ ಒಂದು. ಇದರ ಎಕನಾಮಿಕ್ ಕಮಿಷನ್ ಫಾರ್ ಏಷ್ಯ ಅಂಡ್ ದಿ ಫಾರ್ ಈಸ್ಟ್ ಎಂಬ ಇಂಗ್ಲಿಷ್ ಹೆಸರಿನ ಮುಖ್ಯ ಶಬ್ದಗಳ ಮೊದಲಕ್ಷರಗಳಾದ ಇ.ಸಿ.ಎ.ಎಫ್.ಇ ಎಂಬ ಅಕ್ಷರಗಳನ್ನು ಸೇರಿಸಿ ಇಕಾಫೆ ಎಂದು ಕರೆಯುವುದು ರೂಢಿಯಾಗಿದೆ. ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಒಂದು ನಿರ್ಣಯದ ಮೇರೆಗೆ ಇದು 1947 ಮಾರ್ಚ್ 28ರಂದು ಅಸ್ತಿತ್ವಕ್ಕೆ ಬಂತು. ಇದರ ಪ್ರಥಮ ಸಭೆ ಅದೇ ವರ್ಷದ ಜೂನಿನಲ್ಲಿ ನಡೆಯಿತು. ಈ ಆಯೋಗದ ಮೂಲಕ ಏಷ್ಯ ಮತ್ತು ದೂರಪ್ರಾಚ್ಯ ಪ್ರದೇಶಗಳ ಶೀಘ್ರಪ್ರಗತಿ ಸಾಧಿಸುವುದೇ ಇದನ್ನು ಸ್ಥಾಪಿಸಿದ ಉದ್ದೇಶ.

ಇಕಾಫೆ ಮಂಡಳಿಯ ಕಾರ್ಯಚಟುವಟಿಕೆಗಳ ಭೌಗೋಳಿಕ ವ್ಯಾಪ್ತಿಗೆ ಒಳಪಟ್ಟಿರುವ ಆಫ್ಘಾನಿಸ್ತಾನ, ಬ್ರೂನೈ, ಮಯನ್ಮಾರ್, ಕಾಂಬೋಡಿಯ, ಶ್ರೀಲಂಕ, ಚೀನ, ಮಲಯ, ಹಾಂಗ್‌ಕಾಂಗ್, ಭಾರತ, ಇಂಡೋನೇಷ್ಯ, ಇರಾನ್, ಜಪಾನ್, ಕೊರಿಯ, ಲಾವೋಸ್, ಮಂಗೋಲಿಯ, ನೇಪಾಲ, ಉತ್ತರ ಬೋರ್ನಿಯೊ, ಪಾಕಿಸ್ತಾನ, ಫಿಲಿಪೀನ್ಸ್, ಸಾರವಾಕ್, ಸಿಂಗಪುರ, ಥೈಲೆಂಡ್ ಮತ್ತು ವಿಯಟ್ನಾಂ.

ಇಕಾಫೆ ಮಂಡಳಿಯಲ್ಲಿ 27 ಸದಸ್ಯರಾಷ್ಟ್ರಗಳೂ ಎರಡು ಸಹಸದಸ್ಯ ರಾಷ್ಟ್ರಗಳೂ ಇವೆ (1969). ಆಫ್ಘಾನಿಸ್ತಾನ, ಆಸ್ಟ್ರೇಲಿಯ, ಬರ್ಮ, ಕಾಂಬೋಡಿಯ, ಶ್ರೀಲಂಕ, ಚೀನ, ಫ್ರಾನ್ಸ್, ಭಾರತ, ಇಂಡೋನೇಷ್ಯ, ಇರಾನ್, ಜಪಾನ್, ಕೊರಿಯ ಗಣರಾಜ್ಯ, ಲಾವೋಸ್, ಮಲೇಷಿಯ, ಮಂಗೋಲಿಯ, ನೇಪಾಲ, ನೆದರ್ಲೆಂಡ್ಸ್, ನ್ಯೂ ಜ಼ೀಲೆಂಡ್, ಪಾಕಿಸ್ತಾನ, ಫಿಲಿಪೀನ್ಸ್, ಸಿಂಗಪುರ ಥೈಲೆಂಡ್, ಸೋವಿಯತ್ ಒಕ್ಕೂಟ, ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ, ಫ್ರಾನ್ಸ್, ಸೋವಿಯತ್ ಒಕ್ಕೂಟ, ನೆದರ್ಲೆಂಡ್ಸ್, ಆಸ್ಟ್ರೇಲಿಯ, ನ್ಯೂ ಜ಼ೀಲೆಂಡ್ ಇವು ಏಷ್ಯ ಮತ್ತು ದೂರ ಪ್ರಾಚ್ಯ ಪ್ರದೇಶದ ಹೊರಗಿರುವ ಸದಸ್ಯರಾಷ್ಟ್ರಗಳು. ಈ ರಾಷ್ಟ್ರಗಳಿಂದ ಆರ್ಥಿಕ ಸಹಾಯ ಪಡೆದುಕೊಳ್ಳುವುದು ಆಯೋಗದ ಉದ್ದೇಶ. ಆಯೋಗದ ಸಭೆಗೆ ಈ ಸದಸ್ಯರನ್ನಲ್ಲದೆ ವಿವಿಧ ದೇಶಗಳಿಂದ ಸಮಾಲೋಚಕ ಸದಸ್ಯರನ್ನೂ ಆಹ್ವಾನಿಸುವುದುಂಟು.

ಆಯೋಗದ ಮುಖ್ಯ ಉದ್ದೇಶಗಳಿವು: 1 ಇಕಾಫೆ ಪ್ರದೇಶದಲ್ಲಿರುವ ರಾಷ್ಟ್ರಗಳ ಆರ್ಥಿಕ ಗತಿಯನ್ನು ಚುರುಕುಗೊಳಿಸುವುದು. ಆ ರಾಷ್ಟ್ರಗಳಲ್ಲಿ ಎಲ್ಲ ರಂಗಗಳಲ್ಲೂ ಪರಸ್ಪರ ಸಂಪರ್ಕವನ್ನು ವೃದ್ಧಿಗೊಳಿಸುವುದು. ಆ ರಾಷ್ಟ್ರಗಳು ವಿಶ್ವದ ಎಲ್ಲ ರಾಷ್ಟ್ರಗಳೊಡನೆ ಸಹಕಾರ ಬೆಳೆಸುವಂತೆ ನೋಡಿಕೊಳ್ಳುವುದು. ಆ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯನ್ನು ಚುರುಕುಗೊಳಿಸುವುದು. 2 ಆರ್ಥಿಕ ಹಾಗೂ ತಾಂತ್ರಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಸಂಶೋಧನೆಗಳನ್ನು ನಡೆಸುವುದು ಮತ್ತು ನಿಯೋಜಿಸುವುದು. 3 ಆರ್ಥಿಕ, ತಾಂತ್ರಿಕ ವಿಷಯಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಪ್ರಕಟಿಸುವುದು. 4 ವಿಶ್ವಸಂಸ್ಥೆಯ ತಾಂತ್ರಿಕ ನೆರವಿನ ಯೋಜನೆಯಲ್ಲಿ ಸೇರಿರದ ವಿಷಯಗಳ ಬಗ್ಗೆ ಸದಸ್ಯರಾಷ್ಟ್ರಗಳಿಗೆ ಸಲಹೆ ನೀಡುವುದು. 5 ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳು ಸಫಲವಾಗುವಂತೆ, ಆರ್ಥಿಕ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿ ಅದಕ್ಕೆ ಸಹಾಯ ಮಾಡುವುದು. 6 ಆರ್ಥಿಕ ಅಭಿವೃದ್ಧಿಯ ಸಾಮಾಜಿಕ ವಿಷಯಗಳಲ್ಲಿ ಸಹಾಯ ಮಾಡುವುದು.

ಒಟ್ಟಿನಲ್ಲಿ ತನ್ನ ಸದಸ್ಯರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸುವುದು ಇಕಾಫೆಯ ಗುರಿ. ಈ ಆಯೋಗ ಇಕಾಫೆ ಕ್ಷೇತ್ರಕ್ಕೆ ಸಂಬಂಧಿಸಿದ್ದಾದರೂ ಇದು ಒಟ್ಟಿನಲ್ಲಿ ಅಂತಾರಾಷ್ಟ್ರೀಯ ಸಹಕಾರವೃದ್ಧಿಗಾಗಿ ಏರ್ಪಟ್ಟಿರುವ ಒಂದು ಸಂಸ್ಥೆ.

ಇದು ಮಾತೃಸಂಸ್ಥೆಯಾದ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ (ಎಕನಾಮಿಕ್ ಅಂಡ್ ಸೋಷಿಯಲ್ ಕೌನ್ಸಿಲ್) ಮತ್ತು ವಿಶ್ವಸಂಸ್ಥೆಯ ಮಹಾಸಭೆಯ ನಿರ್ದೇಶಕ್ಕನುಗುಣವಾಗಿ ಕಾರ್ಯ ನಡೆಸುತ್ತದೆ. ಇದರ ಕಾರ್ಯಕ್ರಮ ರೂಪಿತವಾಗುವುದು ವಾರ್ಷಿಕ ಸಭೆಗಳಲ್ಲಿ. ಆಯೋಗದ ಮುಖ್ಯ ಕಚೇರಿ ಬ್ಯಾಂಗ್‌ಕಾಕಿನಲ್ಲಿದೆ.

ಪ್ರಾರಂಭದ ವರ್ಷಗಳಲ್ಲಿ ವರ್ಷಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಇದರ ಅಧಿವೇಶನಗಳು ನಡೆಯುತ್ತಿದ್ದುವು. ಆದರೆ 1949ರಿಂದೀಚೆಗೆ ಇದು ವರ್ಷಕ್ಕೊಮ್ಮೆ ಮಾತ್ರ ನಡೆಯುತ್ತದೆ. ಸಭೆ ಸದಸ್ಯರಾಷ್ಟ್ರಗಳಲ್ಲಿ ಎಲ್ಲಾದರೂ ನಡೆಯಬಹುದು. ಈ ಅಧಿವೇಶನಗಳನ್ನು ಏಷ್ಯದ ಆರ್ಥಿಕ ಪಾರ್ಲಿಮೆಂಟ್ ಎಂಬುದಾಗಿ ಹೇಳಲಾಗಿದೆ. ಸದಸ್ಯರಾಷ್ಟ್ರಗಳಿಗೆ ಸಂಬಂಧಪಟ್ಟ ಎಲ್ಲ ಆರ್ಥಿಕ ಸಮಸ್ಯೆಗಳನ್ನೂ ಕೂಲಂಕಷವಾಗಿ ಚರ್ಚಿಸುವುದಲ್ಲದೆ ಇವನ್ನು ಯಾವ ರೀತಿಯಲ್ಲಿ ಎದುರಿಸಬೇಕು ಎಂಬುದನ್ನೂ ನಿರ್ಧರಿಸಲಾಗುತ್ತದೆ.

ಇಕಾಫೆ ಆಯೋಗದಲ್ಲಿ ಮೂರು ಖಾಯಂ ಸಮಿತಿಗಳಿವೆ: ಔದ್ಯೋಗಿಕ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಸಮಿತಿ, ವ್ಯಾಪಾರ ಸಮಿತಿ ಹಾಗೂ ಅಂತರ್ವ್ಯಾಪಾರ ಮತ್ತು ಸಂಪರ್ಕ ಸಮಿತಿ. ಈ ಸಮಿತಿಗಳು ವರ್ಷಕ್ಕೊಮ್ಮೆ ಕೂಡುತ್ತವೆ. ಅದರಲ್ಲಿ ಮಂಡಳಿಯ ಎಲ್ಲ ಸದಸ್ಯರಾಷ್ಟ್ರಗಳೂ ಸಹಸದಸ್ಯರಾಷ್ಟ್ರಗಳೂ ಭಾಗವಹಿಸುತ್ತವೆ. ನಿರ್ದಿಷ್ಟ ಸಮಸ್ಯೆಗಳನ್ನು ಪರಿಶೀಲಿಸುವುದಕ್ಕೋಸ್ಕರ ರಚಿತವಾಗಿರುವ ಅನೇಕ ಉಪ ಸಂಸ್ಥೆಗಳುಂಟು. ಕ್ರಿಯಾತಂಡಗಳೂ ಚರ್ಚಾಗೋಷ್ಠಿಗಳೂ ಸಮಾಲೋಚಕ ತಂಡಗಳೂ ಅಧ್ಯಯನ ತಂಡಗಳೂ ಆಯೋಗದ ಕಾರ್ಯಗಳ ವಿವಿಧ ಸಮಸ್ಯೆಗಳನ್ನು ಪರಿಶೀಲಿಸುತ್ತವೆ. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ತಾಂತ್ರಿಕ ಸಹಾಯ ಕಾರ್ಯಮಂಡಳಿಯೊಂದಿಗೆ.

(ಬ್ಯೂರೊ ಆಫ್ ಟೆಕ್ನಿಕಲ್ ಆಸಿಸ್ಟೆನ್ಸ್ ಆಪರೇಷನ್ಸ್) ವಿಚಾರ ವಿನಿಮಯ ನಡೆಸುತ್ತದೆ. ಅನೇಕ ರಾಷ್ಟ್ರಗಳ ಸರಕಾರೇತರ ಸಂಸ್ಥೆಗಳಿಂದಲೂ ಆಯೋಗಕ್ಕೆ ದೊರಕುತ್ತಿರುವ ಸಹಾಯ ಅಪಾರ.

ಆಯೋಗದ ಕಾರ್ಯಕ್ರಮಕ್ಕೆ ಮುಖ್ಯವಾಗಿ ಮೂರು ಮುಖಗಳಿವೆ : 1 ಮಾಹಿತಿಯ ಸಂಗ್ರಹಣೆ, ವಿಶ್ಲೇಷಣೆ. 2 ರಾಷ್ಟ್ರಗಳಿಗೆ ಸಂಬಂಧಿಸಿದ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಕಾರ್ಯಾಚರಣೆಯ ನಿರ್ದೇಶನ, 3 ತಾಂತ್ರಿಕ ಮತ್ತು ವಿಶೇಷ ಆರ್ಥಿಕ ನಿಧಿಯ ಯೋಜನೆಯ ಬಗ್ಗೆ ಸಲಹೆ ಸೇವೆಗಳ ನೀಡಿಕೆ. ಅಧ್ಯಯನ ಮತ್ತು ಸಂಶೋಧನೆಗಳಿಂದ ನಿರ್ದಿಷ್ಟ ಕಾರ್ಯಾಚರಣೆಗಳ ಬಗ್ಗೆ ಮಂಡಳಿಯ ಗಮನ ಈಚೆಗೆ ಹರಿದಿದೆ. ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳು, ಸಂಶೋಧನೆ ಮತ್ತು ಅಂಕಿ-ಅಂಶಗಳು, ವಿದೇಶೀ ವ್ಯಾಪಾರ, ಕೈಗಾರಿಕಾಕ್ಷೇತ್ರ ಮತ್ತು ಪ್ರಾಕೃತಿಕ ಸಂಪನ್ಮೂಲಗಳು, ಸಾರಿಗೆ ಮತ್ತು ಸಂಪರ್ಕ, ಪ್ರವಾಹ ಹತೋಟಿ ಮತ್ತು ಜಲಸಂಪದಭಿವೃದ್ಧಿ, ಕೃಷಿ, ಸಮಾಜಕಲ್ಯಾಣ-ಇವು ಆಯೋಗದ ಗಮನ ಸೆಳೆದಿರುವ ಕೆಲವು ಮುಖ್ಯ ಕ್ಷೇತ್ರಗಳು.

ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳು: 1959ರ ವರೆಗೆ ಆಯೋಗ ತನ್ನ ರಾಷ್ಟ್ರಗಳಿಗೆ ಯೋಜನೆಗಳನ್ನು ರೂಪಿಸಲು ಅನೇಕ ಬಗೆಯಲ್ಲಿ ಸಹಾಯ ಮಾಡಿತು. ಯೋಜನೆಗಳನ್ನು ಹೆಚ್ಚು ದೃಢವೂ ಪರಿಣಾಮಕಾರಿಯೂ ಆಗುವಂತೆ ಮಾಡಲು 1959 ರಿಂದ ಹೊಸ ಬಗೆಯ ಯತ್ನ ನಡೆದಿದೆ. ಅಭಿವೃದ್ಧಿಯೋಜನೆಗಳ ಸಿದ್ಧಾಂತ ಮತ್ತು ಅನುಷ್ಠಾನಗಳ ಬಗ್ಗೆ ಚರ್ಚೆ ನಡೆಸಲು ಪ್ರತಿವರ್ಷವೂ ತಜ್ಞರು ಸಭೆ ಸೇರುತ್ತಾರೆ. ಮೊದಲನೆಯ ಸಭೆಯ ವರದಿ 1960ರಲ್ಲಿ ಪ್ರಕಟವಾಯಿತು. ಇಂಥ ಉಪಯಕ್ತ ವರದಿಗಳು ಅನಂತರ ಸಹ ಪ್ರಕಟವಾಗುತ್ತ ಬಂದಿವೆ. ಏಷ್ಯದ ಆರ್ಥಿಕ ಯೋಜಕರ ಪ್ರಥಮ ಸಮ್ಮೇಳನ ನಡೆದದ್ದು 1961ರಲ್ಲಿ. 1964ರ ಜನವರಿಯಲ್ಲಿ ಏಷ್ಯನ್ ಆರ್ಥಿಕಾಭಿವೃದ್ಧಿ ಸಂಸ್ಥೆ (ಏಷ್ಯನ್ ಇನ್ಸ್ಟಿಟ್ಯೂಟ್ ಫಾರ್ ಎಕನಾಮಿಕ್ ಡೆವೆಲಪ್‌ಮೆಂಟ್) ಅಸ್ತಿತ್ವಕ್ಕೆ ಬಂತು. ಪರಿಣತ ಯೋಜನಾ ಸಿಬ್ಬಂದಿಗೆ ಇಲ್ಲಿ ತರಬೇತಿ ಕೊಡಲಾಗಿದೆ.

ಸಂಶೋಧನೆ ಮತ್ತು ಅಂಕಿ-ಅಂಶ: ಏಷ್ಯ ಮತು ದೂರಪ್ರಾಚ್ಯಗಳ ಆರ್ಥಿಕ ಆಯೋಗ ತನ್ನ ಆರಂಭದ ದಿನಗಳಿಂದಲೂ ಸದಸ್ಯರಾಷ್ಟ್ರಗಳಿಗೆ ಸಂಬಂಧಿಸಿದಂತೆ ಉಪಯುಕ್ತ ಅಂಕಿ-ಅಂಶಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದೆ. 1957ರಿಂದ ಏಷ್ಯನ್ ಅಂಕಿ-ಅಂಶ ತಜ್ಞರ ಸಮ್ಮೇಳನಗಳು ಆಗಿಂದಾಗ್ಗೆ ನಡೆಯುತ್ತಿವೆ. ಸದಸ್ಯರಾಷ್ಟ್ರಗಳಲ್ಲಿ ಅಂಕಿ-ಅಂಶ ವಿಧಾನಗಳನ್ನು ಹೆಚ್ಚು ವೈಜ್ಞಾನಿಕವನ್ನಾಗಿ ಮಾಡುವುದು. ಅವುಗಳನ್ನು ಯೋಜನೆಗಳಿಗೆ ಪೂರಕವನ್ನಾಗಿ ಮಾಡುವುದು-ಇವು ಈ ಸಮ್ಮೇಳನಗಳ ಗುರಿ. ಜನಸಂಖ್ಯೆ, ಗೃಹವಸತಿ ಮತ್ತು ಕೃಷಿಯ ಬಗ್ಗೆ ಅನೇಕ ಉಪಯುಕ್ತ ಅಂಕಿ-ಅಂಶಗಳನ್ನು ಸಂಗ್ರಹಿಸಲಾಗಿದೆ.

ವಿದೇಶೀ ವ್ಯಾಪಾರ: ವ್ಯಾಪಾರ ಸಮಿತಿ ಈ ಆಯೋಗದ ಒಂದು ಪ್ರಮುಖ ಅಂಗ. ಸದಸ್ಯರಾಷ್ಟ್ರಗಳ ನಡುವಿನ ವ್ಯಾಪಾರ, ಅದರ ಪ್ರಗತಿ, ಹೊರ ಪ್ರದೇಶದ ವ್ಯಾಪಾರದಿಂದ ಮಂಡಳಿಯ ಮೇಲೆ ಆಗುತ್ತಿರುವ, ಆಗಬಹುದಾದ ಪರಿಣಾಮ-ಇವುಗಳನ್ನು ಕುರಿತು ವಿವೇಚನೆ ನಡೆಸುವುದು ಇದರ ಉದ್ದೇಶ.

ಪ್ರಾದೇಶಿಕ ವ್ಯಾಪಾರ ಒಪ್ಪಂದಗಳಿಂದ (ಉದಾ: ಐರೋಪ್ಯ ಸಾಮಾನ್ಯ ಮಾರುಕಟ್ಟೆ) ಆಯೋಗದ ಸದಸ್ಯರಾಷ್ಟ್ರಗಳ ವ್ಯಾಪಾರದ ಮೇಲಿನ ಪರಿಣಾಮಗಳು, ಆಯಾತ-ನಿರ್ಯಾತ ನಿಯಮಗಳ ಬದಲಾವಣೆಯ ಕಾಯಿದೆಗಳು, ಅಂತಾರಾಷ್ಟ್ರ ವ್ಯಾಪಾರ ಪ್ರದರ್ಶನಗಳ ಸಾಧ್ಯತೆಗಳು, ಜಹಜು ಮತ್ತು ಸಮುದ್ರ ಸಾಗಾಣಿಕೆಯ ಮೇಲೆ ನಿರ್ಧರಿಸಬಹುದಾದ ದರಗಳು, ಸುಂಕನಿರ್ವಹಣೆ, ಪ್ರಾದೇಶಿಕ ವ್ಯಾಪಾರ ಸಹಕಾರ ಸಾಧ್ಯತೆ ಮುಂತಾದವು ವ್ಯಾಪಾರ ಸಮಿತಿಯ ವಾರ್ಷಿಕ ಸಮ್ಮೇಳನಗಳ ಮುಂದೆ ಚರ್ಚೆಗೆ ಬರುವ ವಿಚಾರಗಳು.

ಅಂತಾರಾಷ್ಟ್ರೀಯ ವ್ಯಾಪಾರ ವರ್ಧನ ಸಮ್ಮೇಳನ ಪ್ರತಿವರ್ಷವೂ ನಡೆಯುವುದುಂಟು. ಸುಂಕನಿಯಮಗಳನ್ನು ಪರಸ್ಪರ ರಾಷ್ಟ್ರಗಳ ಸಡಿಲಗೊಳಿಸಬಹುದಾದ ಸಾಧ್ಯತೆ ಬಗ್ಗೆ ಸುಂಕನಿರ್ವಹಣೆಯ ಕ್ರಿಯಾಮಂಡಲಿ ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ಇವಲ್ಲದೆ ವಾಣಿಜ್ಯಕ ಪಂಚಾಯತಿ ಪದ್ಧತಿಯ ಪ್ರೋತ್ಸಾಹಕ್ಕಾಗಿ ಒಂದು ಕೇಂದ್ರವನ್ನು ತೆರೆಯಲಾಗಿದೆ. ಅದು ಏಷ್ಯನ್ ರಾಷ್ಟ್ರಗಳ ವ್ಯಾಪಾರದ ಬಗ್ಗೆ ಒಂದು ಒಪ್ಪಂದಕ್ಕೆ ಬರುವುದಕ್ಕೆ ಸಹಾಯ ಮಾಡುತ್ತಿದೆ. 1966ರ ಡಿಸೆಂಬರಿನಲ್ಲಿ ಪ್ರಪ್ರಥಮವಾಗಿ ಥೈಲೆಂಡಿನಲ್ಲಿ ಏಷ್ಯನ್ ಅಂತಾರಾಷ್ಟ್ರೀಯ ವ್ಯಾಪಾರಮೇಳವನ್ನು ನಡೆಸಲಾಯಿತು. ಏಷ್ಯ ಹಾಗೂ ಏಷ್ಯೇತರ ರಾಷ್ಟ್ರಗಳಿಂದ ಸು. 3,000 ರಾಷ್ಟ್ರಗಳು ಈ ಮೇಳದಲ್ಲಿ ಭಾಗವಹಿಸಿದ್ದುವು.

ಕೈಗಾರಿಕೆಯ ಮತ್ತು ಪ್ರಾಕೃತಿಕ ಸಂಪನ್ಮೂಲಗಳು: ಕೈಗಾರಿಕಾ ಕ್ಷೇತ್ರದಲ್ಲಿ ಆಯೋಗದ ಕೆಲಸ ಮುಖ್ಯವಾಗಿ ವಿದ್ಯುಚ್ಛಕ್ತಿ, ಖನಿಜ ಅಭಿವೃದ್ಧಿ, ಎಂಜಿನಿಯರಿಂಗ್, ಸಣ್ಣಪ್ರಮಾಣದ ಕೈಗಾರಿಕೆ, ವಸತಿನಿರ್ಮಾಣ ಇವುಗಳಿಗೆ ಸಂಬಂಧಿಸಿದೆ.

ಏಷ್ಯ ಮತ್ತು ದೂರಪ್ರಾಚ್ಯ ರಾಷ್ಟ್ರಗಳಲ್ಲಿನ ಒಂದು ಪ್ರಮುಖ ಕೊರತೆಯೆಂದರೆ, ವ್ಯವಸ್ಥಿತವಾಗಿ ತಯಾರಾದ ಕೈಗಾರಿಕಾ ಯೋಜನಾರಾಹಿತ್ಯ ಮತ್ತು ಯಾವ ಯಾವ ಕೈಗಾರಿಕೆಗಳಲ್ಲಿ ಹಣ ನಿವೇಶಿಸಬಹುದು ಮುಂತಾದ ವಿಷಯಗಳ ಬಗ್ಗೆ ಸರಿಯಾದ ಮಾಹಿತಿಯ ಅಭಾವ. ಆದ್ದರಿಂದ ಆಯೋಗ ಪ್ರಾದೇಶಿಕ ಕೈಗಾರಿಕಾ ಸಮಸ್ಯೆಗಳ ಪರಿಶೀಲನೆ ನಡೆಸುತ್ತಿದೆ. ಮಯನ್ಮಾರ್ ಮತ್ತು ಸಿಂಗಪುರಗಳಲ್ಲಿ ಕೈಗಾರಿಕಾ ಸಾಧ್ಯತೆ ಸಮೀಕ್ಷೆ ನಡೆಸಲಾಗಿದೆ. ಕೈಗಾರಿಕಾ ಹಾಗೂ ಪ್ರಕೃತಿ ಸಂಪತ್ತಿನ ಸಮಿತಿಯ ಕೈಕೆಳಗೆ ವಿದ್ಯುಚ್ಛಕ್ತಿ, ಖನಿಜಸಂಪತ್ತು, ಕಬ್ಬಿಣ ಮತ್ತು ಉಕ್ಕು ಇವುಗಳಿಗೆ ಸಂಬಂಧಪಟ್ಟ ಸಮಿತಿಗಳು ಕೆಲಸ ಮಾಡುತ್ತಿವೆ.

ವಿದ್ಯುಚ್ಛಕ್ತಿ: ಏಷ್ಯ ಮತ್ತು ದೂರಪ್ರಾಚ್ಯ ಪ್ರದೇಶಗಳ ಪ್ರಗತಿಗೆ ಅತ್ಯಂತ ಮುಖ್ಯವಾದದ್ದು ವಿದ್ಯುಚ್ಛಕ್ತಿ, ಆದ್ದರಿಂದ ಆಯೋಗ ವಿದ್ಯುಚ್ಛಕ್ತಿ ಉತ್ಪನ್ನಕ್ಕೆ ಮೂಲ ಸಂಪತ್ತಾದ ಜಲ, ಕಲ್ಲಿದ್ದಲು ಮತ್ತು ಪರಮಾಣುಶಕ್ತಿ ಸಾಧನಗಳ ಬಗ್ಗೆ ವಿವರವಾದ ಮಾಹಿತಿಯನ್ನು ಸಂಪಾದಿಸಿ ಪ್ರಕಟಿಸುತ್ತಿದೆ. ವಿದ್ಯುಚ್ಛಕ್ತಿ ಬುಲೆಟಿನ್ ಎಂಬ ವಾರ್ಷಿಕ ಪತ್ರಿಕೆಯಲ್ಲಿ ಈ ವಿಷಯಗಳನ್ನು ಪ್ರಕಟಿಸಲಾಗುತ್ತಿದೆ. ವಿದ್ಯುಚ್ಛಕ್ತಿಯ ಸಮಿತಿ ಆಗಿಂದಾಗ್ಗೆ ಸಭೆ ಸೇರಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ವಿಷಯಗಳನ್ನೆಲ್ಲ ಪರಿಶೀಲಿಸುತ್ತದೆ.

ಏಷ್ಯನ್ ರಾಷ್ಟ್ರಗಳಲ್ಲಿ ಕೈಗಾರಿಕೆ ಅಭಿವೃದ್ಧಿಯನ್ನು ತೀವ್ರಗೊಳಿಸುವ ಉದ್ದೇಶದಿಂದ 1966 ಮಾರ್ಚ್‌ನಲ್ಲಿ ಸ್ಥಾಪಿತವಾದ ಏಷ್ಯನ್ ಕೈಗಾರಿಕಾಭಿವೃದ್ಧಿ ಸಮಿತಿ ಮತ್ತು ಕೈಗಾರಿಕೀಕರಣ ಸಮ್ಮೇಳನ ಖಾಯಂ ವಿಭಾಗಗಳು.

ಪ್ರಾದೇಶಿಕ ಕೈಗಾರಿಕಾಭಿವೃದ್ಧಿ ಮತ್ತು ಯೋಜನಾ ಕೇಂದ್ರ ಸ್ಥಾಪಿತವಾದದ್ದು 1965ರ ಜನವರಿಯಲ್ಲಿ. ಸದಸ್ಯರಾಷ್ಟ್ರಗಳಲ್ಲಿ ರಾಷ್ಟ್ರೀಯ ಕೈಗಾರಿಕಾ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸುವುದು ಮತ್ತು ಮಾಹಿತಿಯನ್ನು ಪ್ರಕಟಿಸುವುದು, ಸಹಕಾರ ಸಾಧ್ಯವಿರುವ ಕೈಗಾರಿಕಾ ಕ್ಷೇತ್ರಗಳನ್ನು ಗುರುತಿಸುವುದು-ಮುಂತಾದ ನಾನಾ ವಿಚಾರಗಳಲ್ಲಿ ಇದರ ಪರಿಣತರು ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳ ವಿದ್ಯುಚ್ಛಕ್ತಿ ಆವಶ್ಯಕತೆಗಳನ್ನು ಆಯೋಗ ಮನಗಂಡಿದೆ. ಈ ಬಗ್ಗೆ ಅದು ವಿವರವಾದ ಅಧ್ಯಯನ ನಡೆಸಿ ಮಾಹಿತಿಯನ್ನು ಪ್ರಕಟಿಸಿದೆ. ಗ್ರಾಮಾಂತರ ವಿದ್ಯುಚ್ಛಕ್ತಿ ಸರಬರಾಯಿಯ ವಿಷಯದಲ್ಲಿ ಪರಿಣತರ ತಂಡವೊಂದು ರಚಿತವಾಗಿದೆ. ಸದಸ್ಯರಾಷ್ಟ್ರಗಳ ಕೋರಿಕೆಯ ಮೇರೆಗೆ ಅವುಗಳಿಗೆ ಭೇಟಿ ನೀಡಿ ಸಲಹೆ ನೀಡುವುದು ಈ ತಂಡದವರ ಕಾರ್ಯಭಾರ.

ಖನಿಜ ಸಂಪತ್ತಿನ ಅಭಿವೃದ್ಧಿ: ಆಯೋಗದ ಭೂವಿಜ್ಞಾನ ಕಾರ್ಯತಂಡ 1954ರಲ್ಲಿ ತನ್ನ ಕೆಲಸ ಪ್ರಾರಂಭಿಸಿ, ಈ ಪ್ರದೇಶದ ಭೂವೈಜ್ಞಾನಿಕ ಪಟಗಳ ಕೆಲಸ ಮುಗಿಸಿದೆ. ಈ ಕ್ಷೇತ್ರದ ಪ್ರತಿಯೊಂದು ರಾಷ್ಟ್ರಕ್ಕೂ ಭೂವೈಜ್ಞಾನಿಕ ಹಾಗೂ ಖನಿಜ ಸಾಧನೆಗಳ ಪಟಗಳನ್ನು ತಯಾರಿಸಲಾಗಿದೆ. ಭಾರತದ ಭೂವೈಜ್ಞಾನಿಕ ಸರ್ವೆಯ ನಿರ್ದೇಶಕರು ಪ್ರಾದೇಶಿಕ ಭೂವೈಜ್ಞಾನಿಕ ಪಟಗಳ ಸಮನ್ವಯಾಧಿಕಾರಿಯಾಗಿದ್ದರು. ಪೆಟ್ರೋಲಿಯಂ ಕ್ಷೇತ್ರದಲ್ಲಿ ಸಮಾವೇಶ ನಡೆಸಲು ಆಸಕ್ತಿವಹಿಸಿದ ಪ್ರಥಮ ವಿಶ್ವಸಂಸ್ಥೀಯ ಅಂಗವೆಂದರೆ ಇದೇ. 1958 ಡಿಸೆಂಬರ್‌ನಲ್ಲಿ ಏಷ್ಯ ಹಾಗೂ ದೂರಪ್ರಾಚ್ಯದ ಪೆಟ್ರೋಲಿಯಂ ಸಂಪತ್ತಿನ ಅಭಿವೃದ್ಧಿಯನ್ನು ಕುರಿತ ಸಮಾವೇಶವನ್ನು ನವದೆಹಲಿಯಲ್ಲಿ ನಡೆಸಲಾಯಿತು. ಎರಡನೆಯ ಸಮಾವೇಶ ಸೇರಿದ್ದು 1962 ಸೆಪ್ಟೆಂಬರ್‌ನಲ್ಲಿ-ಟೆಹರಾನಿನಲ್ಲಿ.

ಎಂಜಿನಿಯರಿಂಗ್: ಲೋಹ ಮತ್ತು ಎಂಜಿನಿಯರಿಂಗ್ ಉಪಸಮಿತಿಯ ಮೂಲಕ ಏಷ್ಯ ಹಾಗೂ ಏಷ್ಯೇತರ ತಜ್ಞರನ್ನು ವಿಚಾರ ವಿನಿಮಯಕ್ಕಾಗಿ ಒಂದುಗೂಡಿಸಲಾಗುತ್ತಿದೆ. ಈ ಉಪಸಮಿತಿ ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಗಳ ಬಗ್ಗೆ ಹೊಸ ವಿಧಾನವನ್ನು ಸೂಚಿಸಿದೆ. ಈ ಪ್ರದೇಶದ ದೇಶಗಳಲ್ಲಿ ಸಿಗುವ ನಾನ್‌ಕೋಕಿಂಗ್ ಕಲ್ಲಿದ್ದಲನ್ನು ಹೇಗೆ ಉಪಯೋಗಿಸಿಕೊಳ್ಳಬಹುದೆಂಬುದರ ಬಗ್ಗೆ ಸಲಹೆಗಳನ್ನು ಕೊಟ್ಟಿದೆ. ಆಗಿಂದಾಗ್ಗೆ ಪ್ರಕಟವಾಗುವ 'ಕಬ್ಬಿಣ ಮತ್ತು ಉಕ್ಕು' ಪತ್ರಿಕೆಯ ಮೂಲಕ ಈ ಬಗ್ಗೆ ಉಪಯುಕ್ತ ಮಾಹಿತಿಗಳು ಪ್ರಕಟವಾಗುತ್ತಿವೆ.

ಹಡಗು ಮತ್ತು ದೋಣಿ ನಿರ್ಮಾಣ, ಯಂತ್ರ ಕೈಗಾರಿಕೆ ಮುಂತಾದವಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಆಯೋಗ ಪರಿಶೀಲಿಸುತ್ತದೆ. ಇವುಗಳ ಅಭಿವೃದ್ಧಿಯ ಬಗ್ಗೆ ಇದು ಸದಸ್ಯರಾಷ್ಟ್ರಗಳಿಗೆ ನೀಡುತ್ತಿರುವ ಸಲಹೆ ಸಹಾಯ ಅಪಾರ.

ವಸತಿನಿರ್ಮಾಣ: ಕಡಿಮೆ ವರಮಾನದ ಜನಗಳ ವಸತಿ ಸಮಸ್ಯೆಗಳನ್ನು ಬಗೆಹರಿಸಲು ಪ್ರತ್ಯೇಕವಾದ ಕಾರ್ಯತಂಡವೊಂದುಂಟು. ವಸತಿ ನಿರ್ಮಾಣ ಸಮಸ್ಯೆಗಳನ್ನು ಸತತವಾಗಿ ಅಭ್ಯಸಿಸಲು ವಿಶ್ವರಾಷ್ಟ್ರಸಂಸ್ಥೆ ಮತ್ತಿತರ ರಾಷ್ಟ್ರಗಳ ಸಹಕಾರದೊಂದಿಗೆ ನವದೆಹಲಿ ಮತ್ತು ಬಾಂಡುಂಗ್‌ಗಳಲ್ಲಿ ಪ್ರಾದೇಶಿಕ ಗೃಹನಿರ್ಮಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಸಾರಿಗೆ ಮತ್ತು ಸಂಪರ್ಕ: ಇದಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರಕ್ಕಾಗಿ ಒಳನಾಡಿನ ಸಾರಿಗೆ ಮತ್ತು ಸಂಪರ್ಕ ಸಮಿತಿ ವಿವಿಧ ಸಾರಿಗೆ ವ್ಯವಸ್ಥೆಗಳ ಸಮನ್ವಯ ಸಾಧ್ಯತೆ, ಸಾರಿಗೆ ಅಭಿವೃದ್ಧಿ ಮತ್ತು ಯೋಜನೆ ಮುಂತಾದ ವಿಷಯಗಳಲ್ಲಿ ಅಧ್ಯಯನ ನಡೆಸಿದೆ. ರೈಲ್ವೆ ಮತ್ತು ರಸ್ತೆ ಸಾರಿಗೆ ಸಂಪರ್ಕ ಮುಂತಾದವುಗಳ ಅಭಿವೃದ್ಧಿಗಾಗಿ ಅನೇಕ ಅಧ್ಯಯನ ತಂಡಗಳೂ ಸಮೀಕ್ಷೆಗಳೂ ನಡೆದಿವೆ. ಆಯೋಗದ ಗಮನ ಸೆಳೆದಿರುವ ಇನ್ನೊಂದು ಮುಖ್ಯ ವಿಚಾರವೆಂದರೆ ಪ್ರವಾಸೋದ್ಯಮ.

ಪ್ರವಾಹ ಹತೋಟಿ, ಜಲಸಂಪತ್ತು ಮತ್ತು ಕೃಷಿ ಅಭಿವೃದ್ಧಿ: ಪ್ರವಾಹ ಹತೋಟಿ ಮತ್ತು ಜಲಸಂಪದಭಿವೃದ್ಧಿ ಬ್ಯೂರೋವನ್ನು 1949ರಲ್ಲಿ ಸ್ಥಾಪಿಸಲಾಯಿತು. ಈ ಬ್ಯೂರೋ ಸದಸ್ಯ ರಾಷ್ಟ್ರಗಳಲ್ಲಿನ ಜಲಸಂಪದಭಿವೃದ್ಧಿಯನ್ನು ಕುರಿತ ವಿಷಯಗಳ ಅಧ್ಯಯನ, ಪ್ರಕಟನೆ, ಸೂಕ್ತನೆರವು ನೀಡುತ್ತಿರುವುದಲ್ಲದೆ ಕೃಷಿ ಅಭಿವೃದ್ಧಿಗಾಗಿ ಈ ಆಯೋಗ ಆಹಾರ ಮತ್ತು ಕೃಷಿ ಸಂಸ್ಥೆಯೊಂದಿಗೆ ಸಹವರ್ತಿಸುತ್ತಿದೆ. (ಸಿ.ಕೆ.ಆರ್.)

**ಏಷ್ಯ ಮೈನರ್:** ಏಷ್ಯದ ಪಶ್ಚಿಮದ ತುದಿಯಲ್ಲಿ, ಆಧುನಿಕ ತುರ್ಕಿಯ ಏಷ್ಯನ್ ಭಾಗವನ್ನೊಳಗೊಂಡ ಪರ್ಯಾಯದ್ವೀಪ. ವಿಸ್ತೀರ್ಣ 74332.713 ಚ.ಕಿಮೀ. ಆಂಟಿ-ಟಾರಸ್ ಪರ್ವತಶ್ರೇಣಿಯೇ ಇದರ ಪೂರ್ವದ ಗಡಿ. ಪಶ್ಚಿಮ ಉತ್ತರ ದಕ್ಷಿಣಗಳಲ್ಲಿ ಕ್ರಮವಾಗಿ ಏಜಿಯನ್, ಕಪ್ಪು ಮತ್ತು ಮೆಡಿಟರೇನಿಯನ್ ಸಮುದ್ರಗಳಿವೆ. ಏಜಿಯನ್ ಸಮುದ್ರಕ್ಕೂ ಕಪ್ಪು ಸಮುದ್ರಕ್ಕೂ ನಡುವೆ ಕೊಂಡಿಯಂತಿರುವ ಮಾರ್ಮರ ಸಮುದ್ರದಿಂದ ಐರೋಪ್ಯ ತುರ್ಕಿಯೂ ಏಷ್ಯನ್ ತುರ್ಕಿಯೂ ಪ್ರತ್ಯೇಕಗೊಂಡಿವೆ.

ಏಷ್ಯ ಮೈನರ್ ಎಂಬ ಹೆಸರನ್ನು ಈಗಿನ ಅರ್ಥದಲ್ಲಿ ಮೊಟ್ಟಮೊದಲಿಗೆ ಬಳಸಲಾದದ್ದು 5ನೆಯ ಶತಮಾನದಲ್ಲಿ-ಒರೋಸ್ಟಿಯಸ್ ಬರೆದ ಹಿಸ್ಟೋರಿಯ ಅಡ್ವರ್ಸಸ್ ಪೆಗಾನೋಸ್ ಕೃತಿಯಲ್ಲಿ ರೋಮಿನ ಏಷ್ಯನ್ ಪ್ರಾಂತ್ಯವನ್ನು ಸೂಚಿಸಲಿಕ್ಕಾಗಿ ಅನಟೋಲಿಯ ಅಥವಾ ಲೆವಾಂಟ್ ಎಂಬುದಕ್ಕೆ ಏಷ್ಯ ಮೈನರ್ ಪರ್ಯಾಯಶಬ್ದವಾಗಿತ್ತು. ಅನಂತರ ಬೈಜಾಂಟೈನರಿಂದ ತುರ್ಕರು ಗೆದ್ದುಕೊಂಡ ಪ್ರದೇಶಕ್ಕೆ ಈ ಹೆಸರು ಬಂದದ್ದು 10ನೆಯ ಶತಮಾನದಲ್ಲಿ.

**ಭೂರಚನೆ, ಮೇಲ್ಮೈ ಲಕ್ಷಣ:** ಪೋರ್ಚುಗಲ್ಲಿನಿಂದ ಮಲಯ ದ್ವೀಪಸ್ತೋಮದವರೆಗೆ ಅಕ್ಷಾಂಶರೇಖೆಗಳಂತೆ ಹಬ್ಬಿರುವ ಮಡಿಕೆ ಪರ್ವತಗಳ ಪಟ್ಟಿಯಲ್ಲಿ ಏಷ್ಯ ಮೈನರ್ ಪ್ರದೇಶವೂ ಒಂದು ಭಾಗ. ಪರ್ವತರಚನೆಯ ಕಾರ್ಯ ಇಲ್ಲಿ ಇತ್ತೀಚೆಗೆ ತಾನೇ ಮುಗಿದಿದೆ. ಆದರೆ ಟ್ರೋಆಡ್‌ನಲ್ಲಿ ಪದೇ ಪದೇ ಸಂಭವಿಸುವ ಭೂಕಂಪಗಳೂ ಕೇರಿಯದ ಕೆಲವು ಭಾಗಗಳಲ್ಲಿ ಹೊಮ್ಮುವ ಬಿಸಿ ಬುಗ್ಗೆಗಳೂ ವಿಷಾನಿಲಗಳೂ ಯಾನಾರ್ ಟಾಸಿನ ಸತತಜ್ವಾಲೆಯೂ ಇದಕ್ಕೆ ಸಾಕ್ಷಿ. ಏಷ್ಯ ಮೈನರಿನಲ್ಲಿ ಜೀವಂತ ಅಗ್ನಿಪರ್ವತಗಳು ಯಾವುವೂ ಈಗ ಇಲ್ಲ.

ಏಷ್ಯ ಮೈನರಿನ ನಡುವಣ ಪ್ರಸ್ಥಭೂಮಿ ಪಶ್ಚಿಮದಲ್ಲಿ ಸಮುದ್ರಮಟ್ಟದಿಂದ 425ಮೀ ಎತ್ತರವಾಗಿದ್ದು ಪೂರ್ವದ ತುದಿಯಲ್ಲಿ 1125ಮೀಗಳಿಗೆ ಏರುತ್ತದೆ. ಇದಕ್ಕೆ ಆಗ್ನೇಯದಲ್ಲೂ ದಕ್ಷಿಣದಲ್ಲೂ ಟಾರಸ್ ಪರ್ವತಶ್ರೇಣಿಗಳು ಹಬ್ಬಿವೆ. ಇವು ಈಶಾನ್ಯಾಭಿಮುಖವಾಗಿ ಹಬ್ಬಿ ಅಮಾನಸ್ ಶ್ರೇಣಿಗಳೊಂದಿಗೆ ಕೂಡಿಕೊಂಡು ಮುಂದುವರಿದು ಆಂಟಿ-ಟಾರಸ್ ಎನಿಸಿಕೊಳ್ಳುತ್ತವೆ. ಸಿಲಿಸಿಯ ಕರಾವಳಿ ಪ್ರದೇಶವಿರುವುದು ಟಾರಸ್ ಮತ್ತು ಅಮಾನಸ್ ಮಡಿಕೆಗಳಿಂದ ಸಂಭವಿಸಿರುವ ಕೋನ ಪ್ರದೇಶದಲ್ಲಿ.

ಏಷ್ಯ ಮೈನರಿನ ಉತ್ತರದಲ್ಲಿರುವವು ಪಾಂಟಿಕ್ ಪರ್ವತಶ್ರೇಣಿಗಳು. ಇವು ದಕ್ಷಿಣ ಮತ್ತು ಪೂರ್ವದ ಶ್ರೇಣಿಗಳಿಗಿಂತ ತಗ್ಗು ಇವನ್ನು ಅನೇಕ ನದಿಗಳು ವಿಭಾಗಿಸುತ್ತವೆ.

ಪರ್ಯಾಯದ್ವೀಪದ ಪಶ್ಚಿಮ ಪರ್ವತಗಳು ಪೂರ್ವ-ಪಶ್ಚಿಮವಾಗಿ ಹಬ್ಬಿರುವ ಮಡಿಕೆ ಶ್ರೇಣಿಗಳು. ಕರಾವಳಿಯಿಂದ ಪ್ರಸ್ಥಭೂಮಿ ಪ್ರದೇಶಕ್ಕೆ ಹಾದುಹೋಗಲು ಅನುಕೂಲವಾದ ವಿಶಾಲ ಕಣಿವೆಗಳು ಇಲ್ಲಿ ಅನೇಕ ಉಂಟು. ಇಲ್ಲಿನ ಪರ್ವತಶ್ರೇಣಿಗಳು ಪಶ್ಚಿಮದ ಸಮುದ್ರದೊಳಕ್ಕೆ ಇಳಿದಿರುವುದರಿಂದ ಸಮುದ್ರತೀರ ಅಂಕುಡೊಂಕು. ತೀರದ ದ್ವೀಪಗಳಿಗೂ ಕರಾವಳಿಗೂ ನಡುವಣ ಸಮುದ್ರದ ಆಳ ಹೆಚ್ಚು. ಈ ಕಾರಣಗಳಿಂದಾಗಿ ಇಲ್ಲಿ ನೈಸರ್ಗಿಕ ಬಂದರುಗಳು ಅನೇಕ. ಮಾರ್ಮರ ಸಮುದ್ರದೊಳಕ್ಕೂ ಲಂಬಕೋನೀಯವಾಗಿ ಪರ್ವತಶ್ರೇಣಿಗಳು ಇಳಿದಿವೆ. ಏಷ್ಯ ಮೈನರಿನ ನದಿಗಳು ವರ್ಷವೆಲ್ಲ ತುಂಬಿ ಹರಿಯುವುದಿಲ್ಲ. ಇವುಗಳ ಕೆಳಭಾಗದಲ್ಲಿ ಮರಳು ಹೆಚ್ಚು. ಇವುಗಳಿಂದಾಗಿ ಈ ಪ್ರದೇಶದ ಕರಾವಳಿಯ ರೇಖೆಯೇ ಹಿಂದಿನ ಕಾಲಕ್ಕೂ ಈಗ್ಗೂ ಬಹಳ ವ್ಯತ್ಯಾಸಗೊಂಡಿದೆ. ಏಷ್ಯ ಮೈನರಿನ ಮುಖ್ಯ ನದಿಗಳಿವು: ಪಶ್ಚಿಮದಲ್ಲಿ ಗೆಡಿಜ್, ಬುಯುಕ್ ಮೆಂಡೆರಿಸ್ ಮತ್ತು ಕೋಕ; ಉತ್ತರದಲ್ಲಿ ಸಕರ್ಯ, ಕಿಜೆಲ್ ಇರ್ಮಕ್ ಮತ್ತು ಯೆಸಿಲ್ ಇರ್ಮಕ್; ದಕ್ಷಿಣದಲ್ಲಿ ಸೇಹಾನ್ ಮತ್ತು ಕೇಹಾನ್. ಪ್ರಸ್ಥಭೂಮಿಯ ನಟ್ಟನಡುವೆ ಇರುವ ಟಜ್ ಗೋಲು ಅದರ ಹೆಸರೇ ಸೂಚಿಸುವಂತೆ ಲವಣಸರೋವರ.

**ವಾಯುಗುಣ:** ಪರ್ಯಾಯ ದ್ವೀಪವನ್ನು ಸುತ್ತುವರಿದ ಪರ್ವತಶ್ರೇಣಿಗಳಿಂದಾಗಿ ನಡುವಣ ಪ್ರಸ್ಥಭೂಮಿಯಲ್ಲಿನ ವಾಯುಗುಣ ವೈಪರಿತ್ಯಗಳಿಂದ ಕೂಡಿದ್ದಾಗಿದೆ. ಅಲ್ಲಿ ವರ್ಷಕ್ಕೆ 3-4 ತಿಂಗಳು ಹಿಮದ ಹೊದಿಕೆ; ನಡುಬೇಸಿಗೆಯಲ್ಲಿ ಬಿಸಿಲು ಧಗೆ ಅಸಾಧ್ಯ. ಎಲ್ಲ ಋತುಗಳಲ್ಲೂ ಗಾಳಿ ಮೊರೆಯುತ್ತ ಬೀಸುತ್ತದೆ. ಮಳೆಯಾಗುವುದು ವಸಂತ ಋತುವಿನಲ್ಲಿ ಮತ್ತು ಬೇಸಿಗೆಯ ಆದಿಯಲ್ಲಿ. ಚಳಿಗಾಲದಲ್ಲಿ ಪ್ರಸ್ಥಭೂಮಿಯ ನಡುಭಾಗದಿಂದ ದಕ್ಷಿಣಕ್ಕೆ ಬೀಸುವ ಗಾಳಿ ಸಮುದ್ರತೀರಕ್ಕೆ ಇಳಿಯುವಾಗ ತನ್ನ ಶೈತ್ಯವನ್ನು ತ್ಯಜಿಸುತ್ತದೆ. ಆದರೂ ಒಮ್ಮೊಮ್ಮೆ ಥಂಡಿ ಅಧಿಕವಾಗಿ ಅಲ್ಲಿನ ಕಿತ್ತಳೆ ಫಸಲೆಲ್ಲ ನಾಶವಾಗುವುದುಂಟು.

ಚಳಿಗಾಲದಲ್ಲಿ ಪೂರ್ವಾಭಿಮುಖವಾಗಿ ಬೀಸುವ ಚಕ್ರಮಾರುತಗಳಿಂದ ತೀರಪ್ರದೇಶಗಳಲ್ಲಿ ಮಳೆಯಾಗುತ್ತದೆ.



ನವಶಿಲಾಯುಗದ ಆಯುಧಗಳು (ಮೆರ್ಸಿನ್)

**ಸಸ್ಯ ಪ್ರಾಣಿವರ್ಗ:** ಏಷ್ಯ ಮೈನರಿನ ಸಸ್ಯ ವೈವಿಧ್ಯಮಯ. ಆದರೆ ಮಧ್ಯ ಮತ್ತು ಪೂರ್ವ ಪ್ರದೇಶಗಳಲ್ಲಿರುವುದೆಷ್ಟೋ ಇನ್ನೂ ತಿಳಿದು ಬಂದಿಲ್ಲ. ಪೂರ್ವದಿಂದ ಪಶ್ಚಿಮಕ್ಕೂ ಪಶ್ಚಿಮದಿಂದ ಪೂರ್ವಕ್ಕೂ-ಏಷ್ಯ ಯುರೋಪುಗಳ ನಡುವೆ-ಸಸ್ಯಗಳು ವಲಸೆ ಹೋಗುವ ಮುಖ್ಯ ಮಾರ್ಗ ಏಷ್ಯ ಮೈನರ್. ನಿತ್ಯಹಸುರಿನ ಸಸ್ಯಗಳಿಂದ ಮರುಭೂಮಿಯ ಕುರುಚಲವರೆಗೆ ನಾನಾ ಬಗೆಯ ಸಸ್ಯಗಳನ್ನು ಇಲ್ಲಿ ಕ್ರಮವಾಗಿ ಗುರುತಿಸಬಹುದು. ಪ್ರಾಣಿಗಳಲ್ಲೂ ಇದೇ ಬಗೆಯ ವೈವಿಧ್ಯವುಂಟು.

**ಪ್ರಾಗಿತಿಹಾಸ:** ಏಷ್ಯ ಮೈನರಿನ ಪ್ರಾಗಿತಿಹಾಸವನ್ನು ಆಗಿನ ಕಾಲದ ನಾನಾ ಅವಶೇಷಗಳು, ಬಂಡೆಗೆತ್ತನೆಗಳು ಮುಂತಾದ ಮಾಹಿತಿಗಳಿಂದ ರಚಿಸಿಕೊಳ್ಳಬೇಕಾಗಿದೆ. ಪೂರ್ವಶಿಲಾಯುಗದ ಅಬ್ಬೆವಿಲ್ಲಿಯನ್ ಹಂತಕ್ಕೆ ಸೇರುವ ಕೈಗೊಡಲಿಗಳು ಅಂಕಾರ, ಇಸ್ತಾನ್‌ಬುಲ್ ಪ್ರದೇಶಗಳಲ್ಲಿ ದೊರಕಿದ್ದರೂ ಅವುಗಳ ಕಾಲ ನಿರ್ಣಯಿಸಲು ಆವಶ್ಯವಾದ ಮಾಹಿತಿಗಳು ದೊರಕಿಲ್ಲ. ಅನಂತರದ ಅಷ್ಯೂಲಿಯನ್ ಹಂತದ ಕೈಗೊಡಲಿಗಳು ಸಮ್‌ಸುನ್ ಬಳಿಯ ತೆಕ್ಕೆಕೋಯ್ ಬಳಿ ದೊರಕಿವೆ. 1937ರಲ್ಲಿ ನಡೆದ ಉತ್ಖನನಗಳಲ್ಲಿ ಅಷ್ಯೂಲಿಯನ್ ಹಂತದ ಅಂತ್ಯಕಾಲಕ್ಕೆ ಸೇರುವ ಮಿಕಾಕ್ವಿಯನ್ ರೀತಿಯ ಕೈಗೊಡಲಿಗಳು ಅಂಕಾರ ಬಳಿ ಎಟಿಯೋ ಕುಸು ಎಂಬಲ್ಲಿನ ನದೀಮಟ್ಟಗಳಿಂದ ದೊರಕಿವೆ. ಇವು ಮಧ್ಯ ಪ್ಲಿಸ್ಟೋಸೀನ್ ಯುಗದ ಕೊನೆಗಾಲಕ್ಕೆ ಸೇರಿದವು. ಸಮಕಾಲೀನ ಚಕ್ಕೆ ಕಲ್ಲಿನಾಯುಧಗಳು ಮೌಸ್ಟೀರಿಯನ್ ಮತ್ತು ಲೆವಾಲ್ವಾಸಿಯನ್ ಸಂಸ್ಕೃತಿಗಳಿಗೆ ಸೇರಿದವು. ಇವು ಆ ಸುತ್ತಿನ ಇತರ ನದೀಮಟ್ಟಗಳಿಂದ ದೊರಕಿವೆ.

ಇಂಥ ಆಯುಧಗಳು ಏಷ್ಯ ಮೈನರಿನ ಮೈದಾನ ಪ್ರದೇಶದ ದಕ್ಷಿಣಭಾಗದ ಅನೇಕ ನೆಲೆಗಳಲ್ಲೂ ಸಿಕ್ಕಿವೆಯಾದ್ದರಿಂದ ಈ ಸಂಸ್ಕೃತಿ ಅಲ್ಲೆಲ್ಲ ವಿಸ್ತಾರವಾಗಿ ಹರಡಿತ್ತೆನ್ನಬಹುದು. ಮೌಸ್ಟೀರಿಯನ್ ರೀತಿಯ ಆಯುಧಗಳು ಮಲಾಟ್ಯದ ಬಳಿಯ ಅಡಿಯಮನ್, ಸಮ್‌ಸುನ್ ಬಳಿಯ ತೆಕ್ಕೆಕೋಯ್ ಮತ್ತು ಅಂಟಾಲ್ಯದ ಬಳಿಯ ಯಾಗ್ಗಕೋಯದ ನೆರೆಯಲ್ಲಿರುವ ಕರಾಯಿನ್ ಗುಹೆ-ಇಲ್ಲೆಲ್ಲ ಕಂಡುಬಂದಿವೆ. ಪೂರ್ವಶಿಲಾಯುಗದ ಅಂತ್ಯಕಾಲದ ಅರಿಗ್ನೇಸಿಯನ್ ಸಂಸ್ಕೃತಿಯ ಅವಶೇಷಗಳು ಇಸ್ಪಾರ್ಟ ಪ್ರಾಂತ್ಯದ ಬೊಜನೊನು ಗುಹೆಯಲ್ಲೂ ಅಡಿಯಮನ್ ಬಳಿಯೂ ದೊರಕಿವೆ. ಅಡಿಯಮನ್ ಬಳಿಯ ಕಲ್ಲುಬಂಡೆಗಳ ಮೇಲೆ ಸಮಕಾಲೀನವಾದ ರೇಖಾಚಿತ್ರಗಳ ಕೆತ್ತನೆ ಕಂಡುಬಂದಿದೆ. ಆ ಕಾಲದ ಇತರ ಸಂಸ್ಕೃತಿಗಳ ಅವಶೇಷಗಳು ಈ ಪ್ರದೇಶದಲ್ಲಿ ಇನ್ನೂ ಕಂಡುಬಂದಿಲ್ಲ.

ಮಧ್ಯಶಿಲಾಯುಗಕ್ಕೆ ಸೇರುವ ಸೂಕ್ಷ್ಮ ಶಿಲಾಯುಧ ಸಂಸ್ಕೃತಿಯ ಅವಶೇಷಗಳು ಸಿವಾಸ್ ಬಳಿ ಹಫೀಕ್ ಸರೋವರದ ತೀರದಲ್ಲೂ ಇಸ್ಪಾರ್ಟ ಬಳಿಯ ಬಲಾಡಿಜ್‌ನಲ್ಲೂ ಸಮ್‌ಸುನ್ ಬಳಿಯಿರುವ ಹಲವಾರು ಗುಹೆಗಳು ಮತ್ತಿತರ ನೆಲೆಗಳಲ್ಲೂ ದೊರಕಿವೆ. ಮೊದಲು ಹೇಳಿದ ನೆಲೆಯಲ್ಲಿ ಮರದ ಉಪಕರಣಗಳನ್ನು ಬಳಸುತ್ತಿದ್ದುದಾಗಿ ತಿಳಿದುಬಂದಿದೆ. ಈ ಸಂಸ್ಕೃತಿಕಾಲದ ಅಂತ್ಯಭಾಗಕ್ಕೆ ನಿರ್ದೇಶಿಸಬಹುದಾದ ಅಂಟಾಲ್ಯ ಬಳಿಯ ಬೆಲ್‌ಡಿಬಿ ಗುಹಾಮುಖ ನೆಲೆಯಲ್ಲಿ ಕ್ರಮೇಣ ನವಶಿಲಾಯುಗ ಸಂಸ್ಕೃತಿಯತ್ತ ಆಗುತ್ತಿದ್ದ ಪರಿವರ್ತನೆಯ ಸೂಚನೆಗಳು ಕಂಡುಬರುತ್ತವೆ. ಅಲ್ಲಿನ ಶಿಲೆಗಳ ಮೇಲೆ ಕಂಡುಬರುವ ವರ್ಣಚಿತ್ರಗಳು ಗಮನಾರ್ಹ.

ನವಶಿಲಾಯುಗ ಸಂಸ್ಕೃತಿ ಏಷ್ಯ ಮೈನರಿನಲ್ಲಿ ವಿಶೇಷವಾಗಿ ಹಬ್ಬಿದಂತೆ ಕಂಡುಬರುವುದಿಲ್ಲ. ಮೈದಾನ ಪ್ರದೇಶದಲ್ಲಿ ಲವಣ ಸರೋವರದ ಸುತ್ತಮುತ್ತ ಕೆಲವು ನವಶಿಲಾಯುಗ ಸಂಸ್ಕೃತಿ ರೀತಿಯ ಕಲ್ಲಿನಾಯುಧಗಳು ದೊರಕಿದ್ದರೂ ಅಂಥ ಅವಶೇಷಗಳು ದಕ್ಷಿಣಕ್ಕೆ 482.8032 ಕಿಮೀ ದೂರದ ಮೆರ್ಸಿನ್ ಮತ್ತು ಸಕ್‌ಜಗೋಜು ನೆಲೆಗಳವರೆಗೂ ಕಂಡುಬಂದಿಲ್ಲ. ಆದ್ದರಿಂದ ಮೈದಾನ ಪ್ರದೇಶದ ಈ ಅವಶೇಷಗಳು ಲವಣಶೋಧನೆಗಾಗಿ ಅಲೆಯುತ್ತಿದ್ದ ಜನರು ತಂಡಗಳಾಗಿರಬೇಕೆಂದೂ ಆ ಪ್ರದೇಶದಲ್ಲಿ ನವಶಿಲಾಯುಗೀಣ ಜನವಸತಿಯಿರಲಿಲ್ಲವೆಂದೂ ಅಭಿಪ್ರಾಯ ಪಡಲಾಗಿದೆ. ಈ ಸಂಸ್ಕೃತಿ ಬಹುಶಃ ದಕ್ಷಿಣದ ಪ್ರಭಾವದಿಂದ ಇಲ್ಲಿ ಪ್ರವೇಶಿಸಿ, ಕೆಲವಾರು ಶತಮಾನಗಳ ಕಾಲ ರೂಢಿಯಲ್ಲಿದ್ದು ಕ್ರಮೇಣ ತಾಮ್ರ-ಶಿಲಾಯುಗೀನ ಸಂಸ್ಕೃತಿಗೆ ದಾರಿಮಾಡಿಕೊಟ್ಟಿತೆಂಬುದು ಮೆರ್ಸಿನ್ ಮತ್ತು ಸಕ್‌ಜಗೋಜು ನೆಲೆಗಳಿಂದ ದೊರೆತ ಮಾಹಿತಿಗಳಿಂದ ವ್ಯಕ್ತವಾಗುತ್ತದೆ.

ಪ್ರ.ಶ.ಪೂ. 3500ಕ್ಕೂ ಮೊದಲ ಕಾಲಕ್ಕೆ ಸೇರುವ ತಾಮ್ರಶಿಲಾಯುಗೀನ ಸಂಸ್ಕೃತಿಯ ಅವಶೇಷಗಳು ಮೈದಾನ ಪ್ರದೇಶದ ಹಲವಾರು ನೆಲೆಗಳಲ್ಲಿ ದೊರಕಿವೆ. ಆ ಕಾಲದ ಸಂಸ್ಕೃತಿಗಳು ಇಲ್ಲಿ ಕೇಂದ್ರೀಕೃತವಾಗಿದ್ದವೆನ್ನಬಹುದು. ಮೆರ್ಸಿನ್ ನೆಲೆಯಲ್ಲಿ ಸಿಕ್ಕಿರುವ ಅವಶೇಷಗಳು ಪ್ರ.ಶ.ಪೂ. 4000ಕ್ಕೂ ಹಿಂದಿನವು. ಕ್ರಮೇಣ ಅಲಿಷಾರ್-ಹುಯುಕ್, ಹಿಸಾರ್ಲಿಕ್, ಥೆರ್ಮಿ, ಯೊರ್ಟಾನ್ ಮುಂತಾದ ನೆಲೆಗಳಲ್ಲೂ ಇವು ಕಂಡುಬರುತ್ತವೆ. ಸಾಧಾರಣವಾಗಿ ಅಲಂಕಾರರಹಿತವಾದ ಕಪ್ಪು ಬಣ್ಣದ ಮಡಕೆಗಳು ಉಪಯೋಗಿಸಲ್ಪಡುತ್ತಿದ್ದರೂ ಕೆಲವೇಳೆ ಮಡಕೆಗಳ ಮೇಲೆ ಹಲವು ರೀತಿಯ ವಿನ್ಯಾಸಗಳನ್ನು ಕೊರೆದು ಆ ಗೆರೆಗಳಲ್ಲಿ ಬಿಳಿಯ ಸುಣ್ಣವನ್ನು ತುಂಬಿ ವಿನ್ಯಾಸಗಳು ಕಾಣುವಂತೆ ಮಾಡಲಾಗುತ್ತಿತ್ತು; ಅಥವಾ ಬಿಳಿಯ ಬಣ್ಣದಿಂದ ವಿನ್ಯಾಸಗಳನ್ನು ಬಿಡಿಸಲಾಗುತ್ತಿತ್ತು. ಅಕ್ಕಪಕ್ಕದ ಸೈಲೀಷಿಯ, ಸಿರಿಯ, ಇರಾಕ್, ಇರಾನ್ ಮುಂತಾದ ಪ್ರದೇಶಗಳಲ್ಲಿ ವಿವಿಧ ರೀತಿಯ ವರ್ಣರಂಜಿತ ಮಡಕೆಗಳನ್ನು ಉಪಯೋಗಿಸುತ್ತಿದ್ದ ಸಂಸ್ಕೃತಿಗಳು ನೆಲೆಸಿದ್ದರೂ ಏಷ್ಯ ಮೈನರ್ ತನ್ನ ಪ್ರತ್ಯೇಕತೆಯನ್ನುಳಿಸಿಕೊಂಡಿತ್ತು. ಬಹುಶಃ ಈ ಸಂಸ್ಕೃತಿ ಉತ್ತರ ಇರಾಕ್ ಮತ್ತು ಸಿರಿಯಗಳು ನವಶಿಲಾಯುಗ ಸಂಸ್ಕೃತಿಗಳಿಂದ ಹುಟ್ಟಿರಬಹುದು. ದಕ್ಷಿಣದಂಚಿನ ಕೆಲನೆಲೆಗಳಲ್ಲಿ ಉತ್ತರ ಇರಾಕ್ ಸಿರಿಯ ಪ್ರದೇಶಗಳ ಸಂಸ್ಕೃತಿಗಳಿಗೆ ಸೇರಿದ ವರ್ಣಚಿತ್ರಿತ ಮಡಕೆಗಳು ಉಪಯೋಗದಲ್ಲಿದ್ದರೂ ಅವು ಆ ಸಂಸ್ಕೃತಿಯ ಮುಖ್ಯ ಲಕ್ಷಣವಾಗಿರಲಿಲ್ಲ.

ಅನಂತರದ ತಾಮ್ರಯುಗೀನ ಸಂಸ್ಕೃತಿ ಮೈದಾನದಲ್ಲೆಲ್ಲ ಪ್ರಬಲವಾಯಿತು. ಪ್ರ.ಶ.ಪೂ. 2ನೆಯ ಸಹಸ್ರಮಾನದ ಅಂತ್ಯದವರೆಗೂ ಬಳಕೆಯಲ್ಲಿದ್ದ ಈ ಸಂಸ್ಕೃತಿಯ ಕಾಲದಲ್ಲಿ ಮೊತ್ತಮೊದಲಿಗೆ ಏಷ್ಯ ಮೈನರ್ ಸಾಂಸ್ಕೃತಿಕವಾಗಿ ನೆರೆಯ ಪ್ರಾಂತ್ಯಗಳ ಮೇಲೆ ಪ್ರಭಾವ ಬೀರಲಾರಂಭಿಸಿತು. ಮೊದಲ ತಾಮ್ರಶಿಲಾಯುಗೀಣ ಸಂಸ್ಕೃತಿಗಳಲ್ಲಿದ್ದ ರೀತಿಯ ಮಡಕೆಗಳ ಉಪಯೋಗ ಮುಂದುವರಿದವು ಅವುಗಳ ಆಕಾರ ಮತ್ತು ಗಾತ್ರಗಳಲ್ಲಿ ವೈವಿಧ್ಯ ಕಂಡುಬರುತ್ತದೆ. ಆಲಂಕಾರಿಕ ಹಿಡಿಗಳು ಮತ್ತು ನೀಳ ಹಿಡಿಗಳು ಇರುವ ತಟ್ಟೆಗಳು, ಎರಡು ಹಿಡಿಗಳ ಬಟ್ಟಲುಗಳು ಮೊದಲಾದವನ್ನು ಲೋಹದ ಪಾತ್ರೆಗಳ ಮಾದರಿಯಲ್ಲಿ ತಯಾರಿಸಿದಂತೆ ತೋರುತ್ತದೆ. ಈ ಸುಮಾರಿನಲ್ಲಿ ಖಿರ್ಬೆಟ್ ಕೆರಾಕ್ ಮೃಣ್ಪಾತ್ರೆಗಳೆಂದು ಹೆಸರಾಗಿರುವ ಹೊಸ ರೀತಿಯ ಮಡಕೆಗಳು ಬಳಕೆಗೆ ಬಂದವು. ಪ್ರ.ಶ.ಪೂ. 2600ರ ಸುಮಾರಿನಿಂದ ಪ್ಯಾಲೆಸ್ಟೈನಿನಲ್ಲಿ ಈ ಪಾತ್ರೆಗಳನ್ನು ಬಳಸಲಾಗುತ್ತಿತ್ತು. ಏಷ್ಯ ಮೈನರ್ ಪ್ರದೇಶ ಹೊರಗಿನವರ ದಾಳಿಗೆ ಗುರಿಯಾಯಿತೆಂಬುದನ್ನು ಇದು ಸೂಚಿಸುತ್ತದೆ. ದಕ್ಷಿಣ ರಷ್ಯದ ಕಾಕಸಸ್



ಯಾಂಗ್ ಷಾವೊ ಸಂಸ್ಕೃತಿಯ ಮಾನವಾಕೃತಿಯ ಮಡಕೆಮುಚ್ಚಳಗಳು

ಪರ್ವತಪ್ರಾಂತ್ಯದಿಂದ ಹೊರಟು ದಾಳಿ ನಡೆಸಿದ ಹಿಟ್ಟೈಟ್ ಜನರೇ ಇದಕ್ಕೆ ಕಾರಣರೆಂದು ಲಿಯೋನಾರ್ಡ್ ವುಲ್ಲಿ ಅಭಿಪ್ರಾಯಪಟ್ಟಿದ್ದಾನೆ. ಇದೇ ಸುಮಾರಿನಲ್ಲಿ ಏಷ್ಯ ಮೈನರಿನ ತಾಮ್ರಯುಗದ ಕಪ್ಪು ಬಣ್ಣದ ಮಡಕೆಗಳು ಗ್ರೀಸ್, ಸೈಲೀಷಿಯ, ಸಿರಿಯ ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತವೆ. ತಾಮ್ರಯುಗದ ಸಂಸ್ಕೃತಿಯ ಉಳಿಕೆಗಳಲ್ಲಿ ಮುಖ್ಯವಾದವೆಂದರೆ ಅಲಾಕ ಹುಯುಕ್ ಬಳಿ ಕಂಡುಬಂದಿರುವ ರಾಜಮನೆತನದವರ ಅಥವಾ ಶ್ರೀಮಂತರ 13 ಸಮಾಧಿಗಳು, ಇವುಗಳನ್ನು ಪ್ರ.ಶ.ಪೂ.2500ರಿಂದ 2300ರ ಕಾಲಕ್ಕೆ ನಿರ್ದೇಶಿಸಲಾಗಿದೆ.

ಅನಂತರ ಪ್ರ.ಶ.ಪೂ. 2100ರ ಸುಮಾರಿಗೆ ಕಂಚಿನ ಯುಗ ಪ್ರಾರಂಭವಾಯಿತು. ಸುಮಾರು ಎರಡೂವರೆ ಶತಮಾನಗಳ ಅವಧಿ ಕಂಚಿನ ಯುಗದ ಸಂಸ್ಕೃತಿಯ ಆದಿಭಾಗ. ಈ ಕಾಲದಲ್ಲಿ ಬರವಣಿಗೆ ಬಳಕೆಗೆ ಬಂತು. ಬರವಣಿಗೆಗಳುಳ್ಳ ಮಣ್ಣಿನ ಫಲಕಗಳು ಉತ್ಖನನಗಳಲ್ಲಿ ದೊರಕಿವೆ. ಏಷ್ಯ ಮೈನರಿನೊಡನೆ ವ್ಯಾಪಾರ ಸಂಬಂಧ ಸ್ಥಾಪಿಸಿದ ಅಸ್ಸೀರಿಯದ ವರ್ತಕರು ತಮ್ಮ ಲೆಕ್ಕಪತ್ರಗಳನ್ನು ಬರೆದಿಟ್ಟುಕೊಳ್ಳಲು ಉಪಯೋಗಿಸಿದ ಫಲಕಗಳೇ ಹೆಚ್ಚು ಸಂಖ್ಯೆಯಲ್ಲಿದ್ದರೂ, ಕೆಲ ಫಲಕಗಳು ನ್ಯಾಯಸಂಬಂಧವಾದ ವಿವರಣೆಗಳನ್ನೀಯುತ್ತವೆ. ಬರವಣಿಗೆಯ ಸಂಪ್ರದಾಯ



ಅಲಾಕದ ಭೂಸಮಾಧಿಗಳಲ್ಲಿದ್ದ ಚಿನ್ನ, ಬೆಳ್ಳಿ ಮತ್ತು ತಾಮ್ರದ ವಸ್ತುಗಳು

ಅಸ್ಸಿರಿಯನ್ನರ ಕೊಡುಗೆ. ಇದು ಸಮಕಾಲೀನ ಮೆಸೊಪೊಟೇಮಿಯದ ಪ್ರಭಾವಕ್ಕೊಳಗಾಗಿತ್ತು. ಈ ಕಾಲದಲ್ಲಿ ವರ್ಣಚಿತ್ರಿತವಾದ ಹೊಸ ರೀತಿಯ ಮಡಕೆಗಳ ಸಂಸ್ಕೃತಿ ತಲೆದೋರಿತು. ಇದು ಕಪ್ಪಡೋಸಿಯನ್ ವರ್ಣಚಿತ್ರಿತ ಮಡಕೆಗಳ ಸಂಸ್ಕೃತಿಯೆಂದು ಹೆಸರಾಗಿದೆ. ಈ ಸಂಸ್ಕೃತಿಯ ಜನ ಪೂರ್ವ ದಿಕ್ಕಿನಿಂದ ಬಂದಂತೆ ಕಾಣುತ್ತದೆ. ಇದೇ ಸುಮಾರಿಗೆ ಹಿಟ್ಟೈಟ್ ಜನ ಹೆಚ್ಚು ಸಂಖ್ಯೆಯಲ್ಲಿ ಮೈದಾನ ಪ್ರದೇಶದಲ್ಲಿ ನೆಲೆಸಲಾರಂಭಿಸಿದುದರಿಂದ ಅವರೇ ಕಪ್ಪಡೋಸಿಯನ್ ಸಂಸ್ಕೃತಿಯಲ್ಲಿ ಏಷ್ಯ ಮೈನರಿಗೆ ತಂದಿರಬೇಕೆಂದು ಭಾವಿಸಲಾಗಿದೆ. ಆದರೆ ಪ್ರ.ಶ.ಪೂ. 1850 ರಿಂದ-ಹಿಟ್ಟೈಟ್ ರಾಜ್ಯ ಸ್ಥಾಪನೆಯಾದ ಮೇಲೆ-ಕಪ್ಪಡೋಸಿಯನ್ ಮಡಕೆಗಳು ಕಣ್ಮರೆಯಾದುವು. ಆ ವೇಳೆಗೆ ಹಿಟ್ಟೈಟರು ಸ್ಥಳೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡದ್ದೇ ಇದಕ್ಕೆ ಕಾರಣವಾಗಿರಬಹುದು.

ಹಿಟ್ಟೈಟ್ ರಾಜ್ಯಸ್ಥಾಪನೆಯೊಂದಿಗೆ ಚಾರಿತ್ರಿಕಯುಗ ಪ್ರಾರಂಭವಾಯಿತು. ಅಲ್ಲಿಂದ ಮುಂದಿನ ಕಾಲಕ್ಕೆ ಸಂಬಂಧಿಸಿದಂತೆ ದೊರಕಿರುವ ಅನೇಕ ಲಿಖಿತ ಆಧಾರಗಳಿಂದ ಏಷ್ಯ ಮೈನರಿನ ಮುಂದಿನ ಇತಿಹಾಸ ಸ್ಪಷ್ಟವಾಗುತ್ತದೆ. (ಬಿ.ಕೆ.ಜೆ.)

**ಇತಿಹಾಸ:** ಪ್ರಾಕ್ತನವಸ್ತು ಸಂಶೋಧನೆಯಿಂದ ದೊರೆತಿರುವ ಮುದ್ರೆಗಳು, ಶಾಸನಗಳು, ಸ್ಮಾರಕಗಳು ಮತ್ತು ಮಣ್ಣಿನ ಮಡಕೆ ಕುಡಿಕೆಗಳು ಏಷ್ಯ ಮೈನರಿನ ಪ್ರಾಚೀನ ಇತಿಹಾಸವನ್ನು ನಿರೂಪಿಸುವ ವಸ್ತುಗಳಾಗಿವೆ. ಬಹಳ ಹಿಂದೆ, ಅಂದರೆ ಪ್ರ.ಶ.ಪೂ. 3000 ದಿಂದ 1000 ವರ್ಷಗಳವರೆಗೆ, ಸೆಮೈಟರು, ಲಿಡಿಯನರು ಕೇರಿಯನರು, ಲಿಸಿಯನರು, ಗ್ರೀಕರು, ರೋಮನರು ಮತ್ತು ಫಿನಿಷಿಯನರು ತಮ್ಮ ಒಡೆತನವನ್ನಿಲ್ಲಿ ಸ್ಥಾಪಿಸಿದ್ದರು. ಪೂರ್ವಕ್ಕೂ ಪಶ್ಚಿಮಕ್ಕೂ ಮಧ್ಯೆ ಇರುವ ಸಮರ ಕ್ಷೇತ್ರವೆಂದೇ ಮೊದಲಿಂದಲೂ ಏಷ್ಯ ಮೈನರಿನ ಖ್ಯಾತಿ.

ಪ್ರ.ಶ.ಪೂ. ಸು. 1950ರಲ್ಲಿ ಏಷ್ಯ ಮೈನರಿನ ಪಶ್ಚಿಮಭಾಗ ಹಿಟ್ಟೈಟ್ ರಾಜರ ಸ್ವಾಧೀನದಲ್ಲಿತ್ತು. ಪ್ರ.ಶ.ಪೂ. 1500ರ ವೇಳೆಗೆ ಇವರು ಹೇಟಿ ಅಥವಾ ಈಗಿನ ಬಾಘೊಸ್ ಕೀಯಲ್ಲಿ ಪ್ರಬಲ ಸಾಮ್ರಾಜ್ಯ ಸ್ಥಾಪಿಸಿ ಏಷ್ಯ ಮೈನರನ್ನು ಆಳಿದರಲ್ಲದೆ ಸಿರಿಯ ಮತ್ತು ಮಿಟ್ಟಾನಿಗಳ ಮೇಲೆ ಪ್ರಭುತ್ವಕ್ಕಾಗಿ ಕ್ರಮವಾಗಿ ಈಜಿಪ್ಟಿನ ಅರಸರೊಡನೆಯೂ ಅಸ್ಸಿರಿಯನ್ನರೊಡನೆಯೂ ಕಾದಾಡಿದರು.

ಇಂಡೋ-ಯುರೋಪಿಯನ್ ಬುಡಕಟ್ಟಿಗೆ ಸೇರಿದ ಗ್ರೀಕರು ಹಿಟ್ಟೈಟ್ ಸಾಮ್ರಾಜ್ಯವನ್ನು ನಾಶಮಾಡಿ ಏಜಿಯನ್ ಸಮುದ್ರತೀರದ ಸುತ್ತ ಅನೇಕ ವಸಾಹತುಗಳನ್ನು ಸ್ಥಾಪಿಸಿದರು. ಕ್ರಮೇಣ ಫ್ರಿಜಿಯನ್ ರಾಜ್ಯದ ಉದಯವಾಯಿತು. ಇದರ ಕುರುಹುಗಳು ಶಿಲಾಸ್ಮಾರಕಗಳಲ್ಲೂ ಶಿಲಾಸಮಾಧಿಗಳಲ್ಲೂ ಕೋಟೆಗಳಲ್ಲೂ ನಗರಗಳಲ್ಲೂ ಗ್ರೀಕರ ದಂತಕಥೆಗಳಲ್ಲೂ ಉಳಿದಿವೆ. ಪ್ರ.ಶ.ಪೂ.8ನೆಯ ಶತಮಾನದಲ್ಲಿ ಆರ್ಮೀನಿಯದಿಂದ ಬಂದ ಸಿಮ್ಮೆರಿಯನರು ಫ್ರಿಜಿಯನ್ ರಾಜ್ಯವನ್ನಾಕ್ರಮಿಸಿದರು. ಅದರ ನಾಶವಾದ ಬಳಿಕ ಸಾರ್ಡಿನ್ ಕೇಂದ್ರವಾಗುಳ್ಳ ಲಿಡಿಯ ರಾಜ್ಯ ಮೂಡಿತು. ಕೊನೆಯ ದೊರೆಯಾದ ಕ್ರೋಸಸ್ ಹೆಲಿಸ್‌ವರೆಗೂ ರಾಜ್ಯ ವಿಸ್ತರಿಸಿದನಲ್ಲದೆ ತೀರಪ್ರದೇಶದಲ್ಲಿ ಅಭಿವೃದ್ಧಿ ಸ್ಥಿತಿಯಲ್ಲಿದ್ದ ಗ್ರೀಕರ ವಸಾಹತುಗಳನ್ನು ವಶಪಡಿಸಿಕೊಂಡ. ಪ್ರ.ಶ.ಪೂ.546ರಲ್ಲಿ ಪರ್ಷಿಯದ ದೊರೆ ಸೈರಸ್ ಲಿಡಿಯದ ಮೇಲೆ ದಂಡೆತ್ತಿಹೋಗಿ ಸಾರ್ಡಿಸನ್ನು ವಶಪಡಿಸಿಕೊಂಡ ಮೇಲೆ ಗ್ರೀಕರ ವಸಾಹತುಗಳು ಯಾವ ಪ್ರತಿರೋಧ ಶಕ್ತಿಯಿಲ್ಲದೆ ಸುಲಭವಾಗಿ ಪರ್ಷಿಯಕ್ಕೆ ಸೇರಿಹೋದುವು. ಪರ್ಷಿಯನ್ನರ ಆಳ್ವಿಕೆಯಲ್ಲಿ ಏಷ್ಯ ಮೈನರ್ ನಾಲ್ಕು ಸಂಸ್ಥಾನಗಳಾಗಿ ವಿಭಾಗವಾಯಿತಾದರೂ ಗ್ರೀಕರ ನಗರ ರಾಜ್ಯಗಳನ್ನಾಳುತ್ತಿದ್ದವರು ಗ್ರೀಕರೇ. ಸಾಮ್ರಾಜ್ಯ ಸ್ಥಾಪನೆಗಾಗಿ ಇತಿಹಾಸದಲ್ಲಿ ಗ್ರೀಕರಿಗೂ ಪರ್ಷಿಯನರಿಗೂ ನಡುವೆ ದೀರ್ಘ ಕಾಲದ ಹೋರಾಟ ನಡೆದು ಕೊನೆಗೆ ಗ್ರೀಕರ ಅಲೆಕ್ಸಾಂಡರ್ ಪ್ರಶ.ಪೂ.334ರಲ್ಲಿ ಏಷ್ಯ ಮೈನರನ್ನು ಮುತ್ತಿ ಪರ್ಷಿಯನರನ್ನು ಸಂಪೂರ್ಣ ಸೋಲಿಸಿದ.

ಅಲೆಕ್ಸಾಂಡರನ ಮರಣಾನಂತರ ಇತರ ಅನೇಕ ರಾಜರು ಏಷ್ಯ ಮೈನರಿನ ವಿವಿಧ ಭಾಗಗಳಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದರು.

ಪ್ರ.ಶ.ಪೂ.190ರಲ್ಲಿ ಏಷ್ಯ ಮೈನರ್ ರೋಮನರ ಕೈಸೇರಿ ಪ್ರಭಾವಶಾಲಿಗಳಾದ ಅವರ ಆಳ್ವಿಕೆಯಲ್ಲಿ ಹೆಚ್ಚು ಅಭಿವೃದ್ಧಿಹೊಂದಿತು. ಪ್ರ.ಶ.3ನೆಯ ಶತಮಾನದ ಕೊನೆಯಲ್ಲಿ ಆಳಿದ ರೋಮನ್ ಚಕ್ರವರ್ತಿ ಡಯೋಕ್ಲಿಷಿಯನ್ ಕಾಲದಲ್ಲಿ ಕ್ರೈಸ್ತ ಧರ್ಮದ ಪ್ರಚಾರ ಬಿರುಸಾಗಿ ನಡೆದು ಅನೇಕ ಕ್ರೈಸ್ತ ಮಠಗಳು ಅಲ್ಲಲ್ಲಿ ಕಾಣಿಸಿಕೊಂಡುವು.

395ರಲ್ಲಿ ರೋಮನ್ ಚಕ್ರಾಧಿಪತ್ಯ ಇಬ್ಭಾಗವಾದಾಗ ಏಷ್ಯ ಮೈನರ್ ಕಾನ್‌ಸ್ಟಾಂಟಿನೋಪಲ್ ರಾಜಧಾನಿಯಾಗುಳ್ಳ ಬೈಜಾಂಟಿಯ ಚಕ್ರಾಧಿಪತ್ಯದಲ್ಲಿ ವಿಲೀನವಾಯಿತು. ಪ್ರಾಂತೀಯ ಭಾಷೆಗಳೂ ಹಳೆಯ ಮತಧರ್ಮಗಳೂ ಕ್ರಮೇಣ ಅದೃಶ್ಯವಾಗಿ ದೇಶವೆಲ್ಲ ಗ್ರೀಕ್ ಸಂಸ್ಕೃತಿಯ ಪೂರ್ಣ ಪ್ರಭಾವಕ್ಕೊಳಗಾಯಿತು. 6ನೆಯ ಶತಮಾನದ ಕೊನೆಯಲ್ಲಿ ಏಷ್ಯ ಮೈನರ್ ಸಂಪದ್ಭರಿತ ಪ್ರದೇಶವಾಗಿ ಅನೇಕ ಶತಮಾನಗಳ ಕಾಲ ಶಾಂತಿಯ ನೆಲೆವೀಡಾಗಿತ್ತು. 668ರಲ್ಲಿ ಅರಬರು ಏಷ್ಯ ಮೈನರನ್ನು ಪ್ರವೇಶಿಸಿ ಕಾನ್‌ಸ್ಟಾಂಟಿನೋಪಲನ್ನು ಮುತ್ತಿದರು. ಇಲ್ಲಿಂದ ಮೂರು ಶತಮಾನಗಳ ಪರ್ಯಂತರ ಯುಫ್ರೇಟೀಸ್ ಮತ್ತು ಸೈಲೀಷಿಯನ್ ದ್ವಾರಗಳಲ್ಲಿನ ಸೇತುವೆಗಳ ಒಡೆತನಕ್ಕಾಗಿ ಬಿಜಾಂಟಿನರಿಗೂ ಬಾಗ್ದಾದಿನ ಕಲೀಫರಿಗೂ ಪದೇ ಪದೇ ಯುದ್ಧಗಳು ಸಂಭವಿಸಿದುವು.

11ನೆಯ ಶತಮಾನದಲ್ಲಿ ಸೆಲ್ಜುಕ್ ತುರ್ಕರು ಏಷ್ಯ ಮೈನರನ್ನು ನಾಶಗೊಳಿಸಿದ ಮೇಲೆ ಅನೇಕ ಅನಾಗರಿಕ ತುರ್ಕರ ಪಂಗಡಗಳು. ಹುಟ್ಟಿಕೊಂಡುವು. ಹಾಗೆ ಹುಟ್ಟಿಕೊಂಡ ಪಂಗಡಗಳಲ್ಲಿ ಮಂಗೋಲ್ ಪಂಗಡವೂ ಒಂದು. ಮಂಗೋಲರ ರೀತಿ ವರ್ತನೆಗಳು ಇತಿಹಾಸದಲ್ಲೇ ಭಯಾನಕವಾದವು. ಇವರಲ್ಲಿ ಕುಂಟ ತೈಮೂರ್ ಒಬ್ಬ. ಮಂಗೋಲರ ದಾಳಿಯಿಂದ ಜನನಿಬಿಡ ಪ್ರದೇಶಗಳು ನಿರ್ಜನ ಪ್ರದೇಶಗಳಾದವು. ಭೂಮಿ ಬಂಜರಾಯಿತು. ನಗರಗಳ ಲೂಟಿಯಾಯಿತು. ಐತಿಹಾಸಿಕ ಸ್ಮಾರಕಗಳ ಧ್ವಂಸವಾಯಿತು. ಸಮಸ್ತ ಕ್ರೈಸ್ತ ಪಂಗಡಗಳ ಸಂಹಾರವಾಯಿತು. ಈ ಮಹಾ ವಿಪತ್ಪರಂಪರೆಗಳಿಂದ ಏಷ್ಯ ಮೈನರ್ ಮತ್ತೆ ಚೇತರಿಸಿಕೊಳ್ಳಲಾಗಲಿಲ್ಲ.

ತೈಮೂರನ ಮರಣಾನಂತರ ಆಟೋಮನರು ಪ್ರಬಲರಾಗಿ ಏಷ್ಯ ಮೈನರಿನ ಮೇಲೆ ದೀರ್ಘಕಾಲ ತಮ್ಮ ಒಡೆತನ ಸ್ಥಾಪಿಸಿದರು. ಆದರೆ ಮೊದಲನೆಯ ಮಹಾಯುದ್ಧ ಮುಗಿದ ಬಳಿಕ ಅವರ ಆಳ್ವಿಕೆ ಕೊನೆಗೊಂಡಿತು. ಬ್ರಿಟಿಷ್ ಪಡೆಗಳು ಏಷ್ಯ ಮೈನರಿನ ಅರಬ್ಬೀ ಭಾಷೆಯನ್ನಾಡುವ ಜನರಿರುವ ಪ್ರದೇಶಗಳನ್ನೆಲ್ಲ ಸ್ವಾಧೀನ ಪಡಿಸಿಕೊಂಡವು. 1919ರಲ್ಲಿ ಗ್ರೀಕ್ ಪಡೆ ಸ್ಮರ್ನವನ್ನು ಆಕ್ರಮಿಸಿತು.

1920 ಆಗಸ್ಟ್ ತಿಂಗಳಲ್ಲಿ ತುರ್ಕರು ಸಹಿ ಮಾಡಿದ ಸೇವ್ರ್ ಒಪ್ಪಂದದ ಪ್ರಕಾರ ಏಷ್ಯ ಮೈನರ್ ಭೌಗೋಳಿಕವಾಗಿ ಕ್ಷಯಿಸತೊಡಗಿತು. ರಾಷ್ಟ್ರ ಸಂಘದ ಆಜ್ಞಾನುಸಾರ ಗ್ರೇಟ್ ಬ್ರಿಟನ್, ಪ್ಯಾಲೆಸ್ಟೈನ್ ಮತ್ತು ಇರಾಕುಗಳ ಮೇಲೂ ಫ್ರಾನ್ಸ್, ಸಿರಿಯಗಳ ಮೇಲೂ ಪ್ರಭಾವ ಸ್ಥಾಪಿಸಿತು. ಇದೇ ಸಂದರ್ಭದಲ್ಲಿ ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತು ಇಟಲಿ ರಾಷ್ಟ್ರಗಳು ಒಂದು ಕರಾರಿಗೆ ಸಹಿ ಹಾಕಿದವು. ಈ ಮೂರು ರಾಷ್ಟ್ರಗಳು ಏಷ್ಯ ಮೈನರಿನ ದಕ್ಷಿಣ ಮತ್ತು ಆಗ್ನೇಯ ಭಾಗಗಳನ್ನು ತಮ್ಮಲ್ಲೇ ಹಂಚಿಕೊಂಡುವು.

ಮುಸ್ತಾಫ ಕೆಮಲ್ ಪಾಷನ ಶ್ರೇಷ್ಠ ನಾಯಕತ್ವದಲ್ಲಿ ನಡೆದ ತುರ್ಕಿ ರಾಷ್ಟ್ರೀಯ ಚಳವಳಿ ಚರಿತ್ರಾರ್ಹವಾದದ್ದು. ತುರ್ಕರು ಬೇಗ ಸೈಲೇಷಿಯದಿಂದ ಫ್ರೆಂಚರನ್ನೂ ಗ್ರೀಕರನ್ನೂ ಹೊಡೆದೋಡಿಸಿದರು. 1923 ಜುಲೈ ತಿಂಗಳಲ್ಲಿ ಅಂಗೀಕೃತವಾದ ಲೋಸನ್ ಕೌಲಿನ ಪ್ರಕಾರ ತುರ್ಕಿ ಸ್ವತಂತ್ರ ರಾಷ್ಟ್ರವಾಯಿತು. ಕ್ರಮೇಣ ಅಲ್ಲಿನ ಸುಲ್ತಾನರ ಆಳ್ವಿಕೆ ಕೊನೆಗೊಂಡಿತು. ತುರ್ಕಿ ಗಣರಾಜ್ಯವಾಯಿತು. ಲೋಸನ್ ಕೌಲಿನ ಜೊತೆಯಲ್ಲೆ ಗ್ರೀಕರಿಗೂ ತುರ್ಕರಿಗೂ ಒಪ್ಪಂದ ನಡೆದು ಪಶ್ಚಿಮ ಏಷ್ಯ ಮೈನರಿನಲ್ಲಿ ವಾಸಿಸುತ್ತಿದ್ದ ಸುಮಾರು ಹತ್ತು ಲಕ್ಷ ಗ್ರೀಕರು ಸ್ವಸ್ಥಳಗಳಾದ ಗ್ರೀಸ್ ಮತ್ತು ಮ್ಯಾಸಿಡೋನಿಯ ದೇಶಗಳಿಗೆ ಸ್ಥಳಾಂತರಗೊಂಡರು. (ಸಿ.ಕೆ.ವೈ.ಡಿ.)

**ಏಷ್ಯಾಟಿಕ್ ಸೊಸೈಟಿ ಆಫ್ ಬಾಂಬೆ:** ಪಶ್ಚಿಮ ಭಾರತದಲ್ಲಿ ಪ್ರಾಚ್ಯಶಾಸ್ತ್ರ, ಭಾಷಾವಿಜ್ಞಾನ, ಭೂಗೋಳ, ಇತಿಹಾಸ ಹಾಗೂ ಭಾರತೀಯ ಸಾಹಿತ್ಯ ಸಂಶೋಧನೆಗಾಗಿ ರೂಪುಗೊಂಡಿರುವ ಸಂಸ್ಥೆ. ಬೊಂಬಾಯಿಯ ರಿಕಾರ್ಡರ್ ಹುದ್ದೆಯಲ್ಲಿದ್ದ ಸರ್ ಜೇಮ್ಸ್ ಮ್ಯಾಕಿಂಟಾಷನಿಂದ 1804 ನವೆಂಬರ್ 26ರಂದು ಲಿಟರರಿ ಸೊಸೈಟಿ ಅಫ್ ಬಾಂಬೆ ಎಂಬ ಹೆಸರಿನಿಂದ ಪ್ರಾರಂಭವಾಗಿ, 1829ರಲ್ಲಿ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಅಂಡ್ ಐರ್ಲೆಂಡಿನ ಅಂಗಸಂಸ್ಥೆಯಾದ ಮೇಲೆ ಈ ಹೆಸರು ಪಡೆಯಿತು. ಲಿಟರರಿ ಸೊಸೈಟಿ ಎಂಬ ಹೆಸರು ತಳೆದಿದ್ದಾಗ ಸರ್ ಮ್ಯಾಕಿಂಟಾಷ್ ಈ ಸಂಸ್ಥೆಯ ಪ್ರಥಮ ಅಧ್ಯಕ್ಷನಾಗಿ ಆಯ್ಕೆಯಾದ. ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿ ಇವರುಗಳಿದ್ದ ಇದರ ಕಾರ್ಯಕಾರಿ ಸಮಿತಿ ಕ್ರಮೇಣ ಬೆಳೆದು, ನಾಲ್ಕು ಜನ ಉಪಾಧ್ಯಕ್ಷರನ್ನೂ ಒಬ್ಬ ಸಹಕಾರ್ಯದರ್ಶಿಯನ್ನೂ ಪಡೆಯಿತು. ಬೊಂಬಾಯಿ ಪ್ರಾಂತ್ಯದ ಗವರ್ನರನ್ನು ಇದರ ಪೋಷಕರ ಸ್ಥಾನಕ್ಕೆ ನಿವೇದಿಸಲಾಯಿತು.

ಸ್ಥಾಪನೆಯಾದ ಕೆಲವೇ ವರ್ಷಗಳಲ್ಲಿ ಇದು ಗಮನಾರ್ಹ ಪ್ರಗತಿ ಸಾಧಿಸಿತು. ಪ್ರ.ಶ.1819ರಲ್ಲಿ ಇದರ ಟ್ರಾನ್‌ಸ್ಯಾಕ್ಷನ್ ಆಫ್ ದಿ ಲಿಟರೆರಿ ಸೊಸೈಟಿ ಎಂಬ ಪತ್ರಿಕೆಯ ಮೂರು ಸಂಪುಟಗಳು ಪ್ರಕಟವಾದುವು. ಏಷ್ಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಡನ್ ಅಂಡ್ ಐರ್ಲೆಂಡ್ ಸಂಸ್ಥೆಯ ಸೂಚನೆಯ ಪ್ರಕಾರ ಅದರ ಅಂಗಸಂಸ್ಥೆಯಾದ ಮೇಲೆ ಈ ಎರಡು ಸಂಸ್ಥೆಗಳಲ್ಲಿ ಯಾವುದೇ ಒಂದರ ಸದಸ್ಯರಾಗಿದ್ದವರಿಗೆ ಇನ್ನೊಂದರ ಸದಸ್ಯತ್ವವೂ ಲಭಿಸುವಂತಾಯಿತು. 1955ರಿಂದೀಚೆಗೆ ಈ ಸಂಸ್ಥೆ ಏಷ್ಯಾಟಿಕ್ ಸೊಸೈಟಿ ಆಫ್ ಬಾಂಬೆ ಎಂದು ವಿದಿತವಾಗಿದೆ.

1829ರಿಂದ 1841ರ ವರೆಗೆ ಈ ಸಂಸ್ಥೆಯ ಕಾರ್ಯಕಲಾಪಗಳು ಹಾಗೂ ಸಂಶೋಧನ ಪ್ರಬಂಧಗಳು ದಿ ರಾಯಲ್ ಏಷ್ಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. 1841ರಲ್ಲಿ ಈ ಸಂಸ್ಥೆ ತನ್ನದೇ ಆದ ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ ಎಂಬ ನಿಯತಕಾಲಿಕವನ್ನು ಪ್ರಕಟಿಸಲು ಆರಂಭಿಸಿತು. 1925ರವರೆಗೆ ಇದರ ಗೌರವ ಕಾರ್ಯದರ್ಶಿಯೇ ಸಂಪಾದಕನ ಕಾರ್ಯನಿರ್ವಹಿಸುತ್ತಿದ್ದ. ಈ ಪತ್ರಿಕೆಯ ಪ್ರಥಮ ಸಂಪಾದಕ ಓರ್ಲಿಬರ್ 1842ರಲ್ಲಿ ನಿವೃತ್ತನಾದ ಮೇಲೆ ಅವನ ಸ್ಥಾನಕ್ಕೆ ಬಂದ ಜಾನ್ ಗ್ರ್ಯಾಂಟ್ ಮಾಲ್‌ಕಮ್‌ಸನನ ನೇತೃತ್ವದಲ್ಲಿ ಈ ಸಂಸ್ಥೆ ಅನೇಕ ರೀತಿಗಳಲ್ಲಿ ಪ್ರಗತಿ ಸಾಧಿಸಿತು. ಈತನ ಕಾಲದಲ್ಲಿ ಸ್ಥಾಪಿತವಾದ ವಸ್ತುಸಂಗ್ರಹಾಲಯ ಕ್ರಮೇಣ ಬೆಳೆದು ಇಂದು

ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ಎಂಬ ಹೆಸರಿನಿಂದ ವಿಖ್ಯಾತವಾಗಿದೆ. 1925ರಿಂದ ಈ ಸಂಸ್ಥೆಯ ನಿಯತಕಾಲಿಕದ ಎರಡನೆಯ ಶ್ರೇಣಿ ಪ್ರಾರಂಭವಾಗಿದ್ದು ಆ ವರ್ಷದಿಂದ ಪತ್ರಿಕೆಯ ಸಂಪಾದಕತ್ವ ಗೌರವ ಕಾರ್ಯದರ್ಶಿಯಿಂದ ಬೇರೆಯಾಗಿ ಆ ಕೆಲಸಕ್ಕೆ ಗಣ್ಯ ವಿದ್ವಾಂಸರನ್ನು ನಿಯಮಿಸಲಾಗುತ್ತಿದೆ. ಇವರಲ್ಲಿ 1925 ರಿಂದ 1942ರವರೆಗೆ (ಸಂಪುಟ 1–28) ಸಂಪಾದಕತ್ವ ವಹಿಸಿದ್ದ ವಿ.ಎಸ್. ಸುಕ್ತಂಕರ್ ಮತ್ತು 1942ರಿಂದ ಈ ಕಾರ್ಯ ನಿರ್ವಹಿಸುತ್ತಿರುವ ಪಿ.ವಿ. ಕಾಣೆ ಈ ಪತ್ರಿಕೆಯ ಏಳಿಗೆಗೆ ಅವಿರತ ಶ್ರಮಿಸಿದ್ದಾರೆ. ಈ ಪತ್ರಿಕೆಯ 68ಕ್ಕೂ ಅಧಿಕ ಸಂಪುಟಗಳು ಬೆಳಕಿಗೆ ಬಂದಿವೆ.

ಕಳೆದ ಸುಮಾರು 166 ವರ್ಷಗಳಲ್ಲಿ ಈ ಸಂಸ್ಥೆ ವಿವಿಧ ರೀತಿಗಳಲ್ಲಿ ಸೇವೆ ಸಲ್ಲಿಸಿ ಭಾರತೀಯ ಸಂಶೋಧನ ಕ್ಷೇತ್ರದಲ್ಲಿ ತನ್ನದೇ ಆದ ಒಂದು ಸ್ಥಾನ ಗಳಿಸಿದೆ. 1831ರಲ್ಲಿ ಸ್ಥಾಪಿತವಾದ ಬಾಂಬೆ ಜಿಯೊಗ್ರಾಫಿಕ್ ಸೊಸೈಟಿ ಈ ಸಂಸ್ಥೆಯೊಂದಿಗೆ 1873ರಲ್ಲಿ ವಿಲೀನವಾಯಿತು. 1831ರಲ್ಲಿ ಆ ಸಂಸ್ಥೆಯ ಇಂಗ್ಲೆಂಡಿನ ಓರಿಯಂಟಲ್ ಟ್ರಾನ್ಸ್‌ಸ್ಯಾಕ್ಷನ್ ಕಮಿಟಿಯವರಿಗೆ ಭಾರತೀಯ ಗ್ರಂಥಗಳ ಇಂಗ್ಲಿಷ್, ಫ್ರೆಂಚ್ ಹಾಗೂ ಲ್ಯಾಟಿನ್ ಭಾಷಾಂತರ ಒದಗಿಸುವುದರಲ್ಲಿ, 1837ರಲ್ಲಿ ಬ್ರಿಟನಿನ ರಾಯಲ್ ಏಷ್ಯಾಟಿಕ್ ಸೊಸೈಟಿಗೆ ಭಾರತದ ಭೂ ಉತ್ಪಾದನ ಶಕ್ತಿಯ ಬಗ್ಗೆ ಮಾಹಿತಿ ಕೊಡುವುದರಲ್ಲಿ, 1846ರಲ್ಲಿ ಮುಂಬೈ ಸರ್ಕಾರಕ್ಕಾಗಿ ಅಂಕಿ–ಅಂಶ ಸಂಗ್ರಹಿಸುವುದರಲ್ಲಿ, 1847ರಲ್ಲಿ ಭಾರತ ಸರ್ಕಾರದ ಸೂಚನೆಯ ಮೇರೆಗೆ ಭಾರತದ ಮಧ್ಯ ಏಷ್ಯ ವಿಜ್ಞಾನ ಸಂಶೋಧನ ಸಮಿತಿಗೂ 1848ರಲ್ಲಿ ಭಾರತದ ಗುಹಾದೇವಾಲಯಗಳ ಸಂಬಂಧ ನಿಯಮಿತವಾದ ಸಮಿತಿಗೂ ದೇವಾಲಯ ಚಿತ್ರೀಕರಣ ಹಾಗೂ ಶಾಸನಸಂಗ್ರಹಣಗಳಲ್ಲಿ ಮಹತ್ತ್ವದ ಸಹಕಾರವನ್ನಿತ್ತಿತ್ತಲ್ಲದೆ, 1865ರಲ್ಲಿ ಲಿವಿಂಗ್‌ಸ್ಟನನಿಗೆ ಆಫ್ರಿಕದ ಅನ್ವೇಷಣೆಗಾಗಿ ಹಣ ಸಂಗ್ರಹಿಸಿಕೊಟ್ಟಿತು. ಮುಂಬೈಯ ಖಗೋಳವೀಕ್ಷಣಾಲಯ ಈ ಸಂಸ್ಥೆಯ ಸಹಾಯದಿಂದಲೇ ಸ್ಥಾಪಿತವಾಯಿತು.

ಈ ಸಂಸ್ಥೆಗೆ ಅನೇಕ ಮಹನೀಯರು ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಸರ್ ಜೇಮ್ಸ್ ಮ್ಯಾಕಿಂಟಾಷ್, ಜೆ. ಕ್ಯಾಂಬೆಲ್, ಎಂ.ಎಸ್. ಎಲ್ಫಿನ್‌ಸ್ಟನ್, ಜಾನ್‌ವಿಲ್ಸನ್, ಮಾಲ್‌ಕಮ್‌ಸನ್, ವ್ಯಾನ್ಸ್ ಕೆನಡಿ, ಎ.ಎ.ಮ್ಯಾಕ್‌ಡನೆಲ್, ಜಾರ್ಜ್ ಗ್ರಿಯರ್‌ಸನ್, ಆರ್.ಜಿ. ಭಂಡಾರ್‌ಕರ್, ಕೆ.ಟಿ. ತೆಲಂಗ್, ಭಾವು ದಾಜಿ, ವಿ.ಎಸ್. ಸುಕ್ತಂಕರ್ ಹಾಗೂ ಪಿ.ವಿ. ಕಾಣೆ ಇವರು ಮುಖ್ಯರಾದ ಕೆಲವರು. (ಎಂ.ಎನ್.ಕೆ.)

**ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್:** ಏಷ್ಯದ ಇತಿಹಾಸ, ಪ್ರಾಚೀನ ಸಂಪ್ರದಾಯ, ಕಲೆ, ಶಾಸ್ತ್ರ, ಸಾಹಿತ್ಯಗಳೇ ಮುಂತಾದವುಗಳ ಕ್ರಮಬದ್ಧ ಅಧ್ಯಯನದಲ್ಲಿ ಆಸಕ್ತರಾದ ವಿದ್ವಾಂಸರನ್ನುಳ್ಳ ಸಭೆ. 1784ರ ಜನವರಿ 15ರಂದು, ಆಗ ಭಾರತದ ಗವರ್ನರ್–ಜನರಲ್ ಆಗಿದ್ದ ವಾರನ್ ಹೇಸ್ಟಿಂಗ್ಸನ ಬೆಂಬಲದಿಂದ, ಕೋಲ್ಕತ್ತೆಯ ವರಿಷ್ಠ ನ್ಯಾಯಾಧೀಶ ಸರ್ ವಿಲಿಯಂ ಜೋನ್ಸನಿಂದ ಸ್ಥಾಪಿತವಾಯಿತು. ಆಗ ಇದರ ಹೆಸರು ಏಷ್ಯಾಟಿಕ್ ಸೊಸೈಟಿ ಎಂದು ಮಾತ್ರ ಇತ್ತು. ಈ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ ಸರ್ ರಾಬರ್ಟ್ ಚೇಂಬರ್ಸನ ಅಧ್ಯಕ್ಷತೆಯಲ್ಲಿ ಕೋಲ್ಕತ್ತೆಯಲ್ಲಿ ಅಂದು ಸೇರಿದ್ದ ಸಭೆಯಲ್ಲಿ ಸರ್ ವಿಲಿಯಂ ಜೋನ್ಸ್ ಭಾಷಣ ಮಾಡುತ್ತ, ಪ್ರಕೃತಿಯ ಅಗಾಧ ಚೌಕಟ್ಟಿನಲ್ಲಿ ಏನೇನು ವಿರಳವಾಗಿದೆಯೋ ಅದನ್ನೆಲ್ಲ ಕುರಿತು ನೀವು ಅನ್ವೇಷಣೆ ನಡೆಸಬೇಕು. ಹೊಸ ಹೊಸ ಅವಲೋಕನ ಮತ್ತು ಪರಿಶೋಧನೆಗಳಿಂದ ಏಷ್ಯದ ಭೂವಿವರಣೆಯನ್ನು ತಿದ್ದಬೇಕು. ಒಮ್ಮೆ ಜನವಸತಿಯಿದ್ದ ಆಮೇಲೆ ಪರಿತ್ಯಕ್ತವಾದ ರಾಷ್ಟ್ರಗಳ ಇತಿಹಾಸವನ್ನೂ ಸಂಪ್ರದಾಯ ಗಳನ್ನೂ ಅನ್ವೇಷಿಸಬೇಕು. ಏಷ್ಯದ ಜನರ ನಾನಾ ಸರ್ಕಾರ ಪ್ರಕಾರಗಳನ್ನೂ ಸಾಮಾಜಿಕ ಧಾರ್ಮಿಕ ಸಂಸ್ಥೆಗಳನ್ನೂ ಬೆಳಕಿಗೆ ತರಬೇಕು. ಅಂಕಗಣಿತ, ಜ್ಯಾಮಿತಿ, ತ್ರಿಕೋಣಮಿತಿ, ಅಂಕಣಮಾನ, ಬಲವಿಜ್ಞಾನ, ದೃಗ್ವಿಜ್ಞಾನ, ಖಗೋಳವಿಜ್ಞಾನ ಮತ್ತು ಸಾಮಾನ್ಯ ಭೌತವಿಜ್ಞಾನಗಳ ಕ್ಷೇತ್ರಗಳಲ್ಲಿ ಅವರು ಮಾಡಿದ ಸುಧಾರಣೆಗಳನ್ನೂ ಅನುಸರಿಸಿದ ವಿಧಾನಗಳನ್ನೂ ಪರೀಕ್ಷಿಸಬೇಕು. ಅವರ ನೀತಿವ್ಯವಸ್ಥೆ, ವ್ಯಾಕರಣ, ಅಲಂಕಾರಶಾಸ್ತ್ರ ಮತ್ತು ಮೀಮಾಂಸಶಾಸ್ತ್ರಗಳನ್ನೂ ಶಸ್ತ್ರಚಿಕಿತ್ಸೆ ಮತ್ತು ವೈದ್ಯಗಳಲ್ಲಿ ಅವರ ಕೌಶಲವನ್ನೂ ಅಂಗರಚನಾವಿಜ್ಞಾನದಲ್ಲೂ ರಸಾಯನವಿಜ್ಞಾನದಲ್ಲೂ ಅವರು ಪಡೆದಿರಬಹುದಾದ ಪ್ರಗತಿಯನ್ನೂ ಪರೀಕ್ಷಿಸಬೇಕು. ಅವರ ವ್ಯವಸಾಯ, ಉತ್ಪಾದನೆ, ವ್ಯಾಪಾರಗಳನ್ನು ಕುರಿತು ಸಂಶೋಧನೆ ನಡೆಸಬೇಕಲ್ಲದೆ ಅವರ ಸಂಗೀತ, ಶಿಲ್ಪ, ಚಿತ್ರಕಲೆ, ಕಾವ್ಯಗಳನ್ನೂ ಅಧ್ಯಯನ ಮಾಡಬೇಕು. ಸಮಾಜಜೀವನದ ಸುಖಸಾಧನೆಗಳನ್ನು ನಯನಾಜೋಕು ಗಳನ್ನೂ ಸ್ವಲ್ಪವಾದರೂ ಒದಗಿಸುವ ಅಥವಾ ಅಧಿಕಗೊಳಿಸುವ ಸಣ್ಣಪುಟ್ಟ ಕಲೆಗಳನ್ನೂ ನೀವು ಕಡೆಗಣಿಸಬಾರದು' ಎಂದು ಹೇಳಿದರು. ಒಟ್ಟಿನಲ್ಲಿ ಏಷ್ಯದ ಲೌಕಿಕ ಪ್ರಾಕೃತಿಕ ಇತಿಹಾಸ, ಪ್ರಾಚೀನತೆ, ಕಲೆ, ವಿಜ್ಞಾನ ಮತ್ತು ಸಾಹಿತ್ಯಗಳನ್ನು ಕುರಿತ ಸಂಶೋಧನೆಯೂ ಜ್ಞಾನಪ್ರಸಾರವೂ ಏಷ್ಯಾಟಿಕ್ ಸೊಸೈಟಿಯ ಉದ್ದೇಶ.

ಕಳೆದ ಸುಮಾರು 187 ವರ್ಷಗಳಲ್ಲಿ ಈ ಸಂಸ್ಥೆ ತನ್ನ ಕಾರ್ಯನಿರ್ವಹಣೆಯಲ್ಲಿ ಬಹಳವಾಗಿ ಸಫಲವಾಗಿದೆ. ಇಂಥ ಸಂಸ್ಥೆಗಳಲ್ಲಿಯೇ ಪ್ರಪ್ರಥಮವಾದ ಈ ಸಂಸ್ಥೆ ಏಷ್ಯದಲ್ಲಿ, ಅದರಲ್ಲೂ ಭಾರತದಲ್ಲಿ, ಸಾಹಿತ್ಯ, ವಿಜ್ಞಾನ ಮತ್ತು ಪ್ರಾಚ್ಯಸಂಶೋಧನೆಗಳ ಕ್ಷೇತ್ರಗಳಲ್ಲಿ ಇಂದು ಕಂಡುಬಂದಿರುವ ಪ್ರಗತಿಗೆ ಒಂದಿಲ್ಲೊಂದು ರೀತಿಯಲ್ಲಿ ಕಾರಣವಾಗಿದೆ. ಪ್ರಾರಂಭದಲ್ಲಿ ಇದರ ಕಾರ್ಯಕಾರಿಸಮಿತಿ ಒಬ್ಬ ಅಧ್ಯಕ್ಷ, ನಾಲ್ಕು ಜನ (ತರುವಾಯ ಮೂರು ಜನ) ಉಪಾಧ್ಯಕ್ಷರು, ಒಬ್ಬ ಕಾರ್ಯದರ್ಶಿ ಹಾಗೂ ಒಬ್ಬ ಕೋಶಾಧಿಕಾರಿ–ಇವರನ್ನೊಳಗೊಂಡಿದ್ದು, ಭಾರತದ ಗವರ್ನರ್–ಜನರಲ್ ಹಾಗೂ ಅವರ ಕಾರ್ಯಕಾರಿ ಮಂಡಲಿಯವರನ್ನು (ಲಾರ್ಡ್ ವಿಲಿಯಂ ಬೆಂಟಿಂಕನ ತರುವಾಯ ಗವರ್ನರ್–ಜನರಲನ್ನು ಮಾತ್ರ) ಪೋಷಕರನ್ನಾಗಿ ನಿವೇದಿಸುತ್ತ ಬಂದಿದ್ದು, ಇಂದು ಬಂಗಾಲದ ರಾಜ್ಯಪಾಲರು ಈ ಸ್ಥಾನವನ್ನಲಂಕರಿಸುತ್ತಾರೆ. ಇದರ ಸದಸ್ಯತ್ವದಲ್ಲಿ ಪ್ರಾರಂಭದಲ್ಲಿ ಸಾಮಾನ್ಯ ಸದಸ್ಯ, ಸಹಸದಸ್ಯ, ಪತ್ರಕರ್ತಸದಸ್ಯ, ಮೊದಲಾದ ವರ್ಗಗಳಿದ್ದುವು. 1869ರ ಅನಂತರ ಪತ್ರಕರ್ತಸದಸ್ಯರನ್ನು ನಿಯಮಿಸುವ ರೂಢಿ ಮುಂದುವರಿಯಲಿಲ್ಲ. 1829ರವರೆಗೆ ಆಂಗ್ಲರಿಗೆ ಮಾತ್ರ ಸದಸ್ಯತ್ವಕ್ಕೆ ಪ್ರವೇಶವಿದ್ದು. ಆ ವರ್ಷದಿಂದ ಭಾರತೀಯ ಹಾಗೂ ಉಳಿದ ದೇಶಗಳ ಜನರಿಗೂ ಸದಸ್ಯತ್ವ ಲಭ್ಯವಾಯಿತು. 1851ರಲ್ಲಿ ಗೌರವ ಸದಸ್ಯರನ್ನಾರಿಸುವ ಕ್ರಮವನ್ನು ಜಾರಿಗೆ ತರಲಾಯಿತು. 1796ರಿಂದ ಸದಸ್ಯರಿಗೆ ಚಂದಾಹಣ ವಿಧಿಸಲಾಯಿತು. ಇತ್ತೀಚಿನ ಕೆಲವರ್ಷಗಳಿಂದ ಈ ಸಂಸ್ಥೆ ತನ್ನ ಫೆಲೋಷಿಪ್ಪನ್ನು ಗಣ್ಯ ವಿದ್ವಾಂಸರಿಗೆ ನೀಡುತ್ತಿದೆ. ಇದು 1784ರಿಂದ 1832ರ ವರೆಗೆ ಏಷ್ಯಾಟಿಕ್ ಸೊಸೈಟಿ ಎಂದೂ 1832ರಿಂದ 1935ರವರೆಗೆ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಂದೂ 1935ರಿಂದ 1951ರವರೆಗೆ ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಂದೂ ತರುವಾಯ ಪುನಃ ಏಷ್ಯಾಟಿಕ್ ಸೊಸೈಟಿ ಎಂದೂ ಪ್ರಸಿದ್ಧವಾಗಿದೆ. ಲಂಡನ್‌ನಲ್ಲಿ ಪ್ರಾರಂಭವಾದ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಸಂಸ್ಥೆ 1829ರಲ್ಲಿ ಬಂಗಾಲದ ಏಷ್ಯಾಟಿಕ್ ಸೊಸೈಟಿ ತನ್ನೊಡನೆ ವಿಲೀನವಾಗಲು ಬಯಸಿದ್ದರೂ ಇದು ಆ ಕೋರಿಕೆಗೆ ಒಡಂಬಡಲಿಲ್ಲ.

1788ರಲ್ಲಿ ಈ ಸಂಸ್ಥೆಯ ಏಷ್ಯಾಟಿಕ್ ರಿಸರ್ಚಸ್ ಎಂಬ ಪತ್ರಿಕೆಯ ಪ್ರಥಮ ಸಂಪುಟ ಹೊರಬಂತು. 1839ರ ವರೆಗೆ ಇದರ 20 ಸಂಪುಟಗಳು ಪ್ರಕಟವಾದ ಅನಂತರ ಈ ಪತ್ರಿಕೆಯ ಪ್ರಕಟನೆ ಮುಂದುವರಿಯಲಿಲ್ಲ. 1821ರಲ್ಲಿ ವಿಲ್‌ಸನ್‌ರಿಂದ ಕ್ವಾರ್ಟರ್ಲಿ ಓರಿಯಂಟಲ್ ಜರ್ನಲ್ ಎಂಬ ಪತ್ರಿಕೆಯ ಪ್ರಕಟನೆ ಪ್ರಾರಂಭವಾಯಿತು. ಈ ಸಂಸ್ಥೆ ಟ್ರಾನ್ಸ್‌ಸಾಕ್ಷನ್ಸ್ ಆಫ್ ದಿ ಮೆಡಿಕಲ್ ಅಂಡ್ ಫಿಸಿಕಲ್ ಸೊಸೈಟಿ ಎಂಬ ಪತ್ರಿಕೆ ಪ್ರಾರಂಭಿಸಿತು. 1827ರ ತರುವಾಯ ಇವು ಹೊರಬರಲಿಲ್ಲ. 1829ರಲ್ಲಿ ಕ್ಯಾಪ್ಟನ್ ಹರ್ಬರ್ಟ್ ಗ್ಲೀನಿಂಗ್ಸ್ ಇನ್ ಸೈನ್ಸ್ ಎಂಬ ಮಾಸಪತ್ರಿಕೆ ಪ್ರಾರಂಭಿಸಿದ. ಅವನ ತರುವಾಯ ಅದರ ಸಂಪಾದಕನಾದ ಜೇಮ್ಸ್ ಪ್ರಿನ್ಸೆಪ್ ಈ ಪತ್ರಿಕೆಯ ಹೆಸರನ್ನು ಜರ್ನಲ್ ಆಫ್ ದಿ ಏಷ್ಯಾಟಿಕ್ ಸೊಸೈಟಿ ಎಂದು ಬದಲಿಸಿದ. 1832ರಲ್ಲಿ ಈ ಪತ್ರಿಕೆಯ ಮೊದಲನೆಯ ಸಂಪುಟ ಜರ್ನಲ್ ಆಫ್ ದಿ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಂಬ ಹೆಸರಿನಿಂದ ಹೊರಬಂತು. ಅಂದಿನಿಂದ ಇಂದಿನವರೆಗೆ ಇದು ನಾಲ್ಕು ಶ್ರೇಣಿಗಳಲ್ಲಿ ಪ್ರಕಟವಾಗಿದ್ದು ಇಲ್ಲಿಯವರೆಗೆ ಇದರ 136ಕ್ಕೂ ಹೆಚ್ಚು ಸಂಪುಟಗಳು ಬೆಳಕು ಕಂಡಿವೆ. ಈ ಪತ್ರಿಕೆಯಲ್ಲದೆ, ಈ ಸಂಸ್ಥೆಯ ಇತರ ಪ್ರಕಟನೆಗಳ ಪೈಕಿ ಇಯರ್ ಬುಕ್ ಆಫ್ ದಿ ಏಷ್ಯಾಟಿಕ್ ಸೊಸೈಟಿ; ಬಿಬ್ಲಿಯೊಥಿಕ್ ಏಷ್ಯಾಟಿಕ್, ಬಿಬ್ಲಿಯೊಥಿಕ್ ಇಂಡಿಕ, ರಾಮಾಯಣ, ಋಗ್ವೇದ (ಮಾಕ್ಸ್‌ಮುಲ್ಲರನಿಂದ ಸಂಪಾದಿತವಾದ್ದು)–ಇವು ಮುಖ್ಯವಾಗಿವೆ.

ಬಹುಕಾಲದವರೆಗೆ ಈ ಸಂಸ್ಥೆಯ ಅಧೀನದಲ್ಲಿದ್ದ ಪ್ರಾಚ್ಯಸಂಶೋಧನೆ, ಭೂಗರ್ಭವಿಜ್ಞಾನ, ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ ಮೊದಲಾದವುಗಳಿಗೆ ಸಂಬಂಧಪಟ್ಟ ವಸ್ತುಸಂಗ್ರಹಾಲಯಗಳನ್ನು 1866ರಲ್ಲಿ ಒಂದು ನ್ಯಾಸ ಮಂಡಲಿಗೆ (ಬೋರ್ಡ್ ಆಫ್ ಟ್ರಸ್ಟೀಸ್) ವರ್ಗಾಯಿಸಲಾಯಿತು. ಭಾರತದ ಬೃಹದ್‌ವಸ್ತುಸಂಗ್ರಹಾಲಯಗಳಲ್ಲಿ ಒಂದಾದ ಇಂಡಿಯನ್ ಮ್ಯೂಸಿಯಂ ಉಗಮವಾದದ್ದೂ ಇವುಗಳಿಂದ.

ಈ ಸಂಸ್ಥೆ ಈ ರೀತಿ ಮಹತ್ತರವಾದ ಸೇವೆ ಸಲ್ಲಿಸಲು ಅನೇಕ ಪಾಶ್ಚಾತ್ಯ ಹಾಗೂ ಭಾರತೀಯ ಸಂಶೋಧಕರೂ ಉನ್ನತಾಧಿಕಾರಿಗಳೂ ವಿದ್ವಾಂಸರೂ ಕಾರಣ. ಅವರಲ್ಲಿ ಈ ಸಂಸ್ಥೆಯ ಸಂಸ್ಥಾಪಕರೂ ಪ್ರಥಮ ಅಧ್ಯಕ್ಷರೂ ಆದ ಸರ್ ವಿಲಿಯಂ ಜೋನ್ಸ್, ಸರ್ ಜಾನ್ ಶೋರ್, ಸರ್ ಚಾರ್ಲ್ಸ್ ವಿಲ್ಕಿನ್ಸ್, ಹೆನ್ರಿ ಥಾಮಸ್ ಕೋಲ್‌ಬ್ರೂಕ್, ಎಚ್.ಎಚ್. ವಿಲ್‌ಸನ್, ಜೇಮ್ಸ್ ಪ್ರಿನ್ಸೆಪ್, ಈಶ್ವರಚಂದ್ರ ವಿದ್ಯಾಸಾಗರ, ಸುನೀತಕುಮಾರ ಚಟ ರ್ಜಿ ಹಾಗೂ ಆರ್.ಸಿ. ಮಜುಮ್‌ದಾರ್ ಇವರು ಉಲ್ಲೇಖಾರ್ಹರು (**ನೋಡಿ–ಏಷ್ಯಾಟಿಕ್–ಸೊಸೈಟಿ–ಆಫ್–ಬಾಂಬೆ**). (ಎಂ.ಎನ್.ಕೆ.; ಬಿ.ಕೆ.ಸಿ.)

**ಏಹಾರ್ಡ್ಟ್, ಲುಡ್‌ವಿಗ್:** (1897– ). ಜರ್ಮನಿಯ ಫೆಡರಲ್ ಗಣರಾಜ್ಯದ ಅಧ್ಯಕ್ಷ (ಛಾನ್ಸೆಲರ್) (1963–1966) ಆಗಿದ್ದವ. ಬವೇರಿಯದಲ್ಲಿದ್ದ ಜವಳಿ ವ್ಯಾಪಾರಿಯೊಬ್ಬನ ಮಗ. ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿ ಗಾಯಗೊಂಡು ದರ ಫಲವಾಗಿ ಕಸಬಿನ ಅರ್ಥಶಾಸ್ತ್ರಜ್ಞನಾದ. ಅಂದು ಪ್ರಬಲವಾಗಿದ್ದ ನಾಜಿ ಪಕ್ಷವನ್ನು ಸೇರಲು ಇಷ್ಟಪಡದ ಕಾರಣ ಇವನನ್ನು 1942ರಲ್ಲಿ ನಾಜಿಗಳು ತಮ್ಮ ಪಕ್ಷದಿಂದ ತೆಗೆದುಹಾಕಿದರು. ಅನಂತರ ಈತ ಔದ್ಯೋಗಿಕ ಸಂಶೋಧನಸಂಸ್ಥೆಯೊಂದನ್ನು ಸ್ಥಾಪಿಸಿದ. ದೊಡ್ಡ ರಾಜಕಾರಣಿಯಾದದ್ದರಿಂದ ಈತನನ್ನು ಬವೇರಿಯದ ಅರ್ಥಸಚಿವನನ್ನಾಗಿ ನೇಮಿಸಲಾಯಿತು (1945). ರಾಜ್ಯದ ರಾಜಕೀಯದಿಂದ 1947ರಲ್ಲಿ ಹೊರ ಬಂದು ಕ್ರಿಶ್ಚಿಯನ್ ಡೆಮೋಕ್ರೆಟಿಕ್ ಯೂನಿಯನನ್ನು ಸೇರಿ ಯಶಸ್ವೀ ಹಣಕಾಸಿನ ಸುಧಾರಣೆಗಳನ್ನು ಯೋಜಿಸಿದ (1948). ಇದಾದ ಒಂದು ವರ್ಷದಲ್ಲೇ ಆಗಿನ ಜರ್ಮನಿಯ ಅಧ್ಯಕ್ಷನಾಗಿದ್ದ ಕೊನ್ರಾಡ್ ಅಡೆನೋವರನ ಸಚಿವಸಂಪುಟವನ್ನು ಸೇರಿದ. 1957ರ ಚುನಾವಣೆಯಲ್ಲಿ ಪಶ್ಚಿಮ ಜರ್ಮನಿಯ ಉಪಾಧ್ಯಕ್ಷನಾಗಿಯೂ (ವೈಸ್ ಛಾನ್ಸೆಲರ್) ನೇಮಕಹೊಂದಿದ. ಅಡೆನೋವರ್ ರಾಜೀನಾಮೆಯನ್ನಿತ್ತಮೇಲೆ ಕ್ರಿಶ್ಚಿಯನ್ ಡೆಮೋಕ್ರ್ಯಾಟ್ ಆಗಿದ್ದ ಈತ ಅಧ್ಯಕ್ಷನಾದ (1963). ಈತನ ಅಧಿಕಾರಾವಧಿಯಲ್ಲಿ ಅನೇಕ ಸಾಮಾಜಿಕ ಸುಧಾರಣೆಗಳಾದುವು. ಹೊರನಾಡುಗಳಲ್ಲಿ ಅನಿರ್ಬಂಧಿತ ವ್ಯಾಪಾರ ತಾತ್ತ್ವಿಕವಾಗಿಯಾದರೂ ಮಿತಿಯಲ್ಲಿರಬೇಕೆಂಬುದು ಈತನ ಮತ. ಪಶ್ಚಿಮ ಜರ್ಮನಿಯ ಬೃಹದ್ ಆರ್ಥಿಕ ಪುನಶ್ಚೇತನಕ್ಕೆ ಈತನ ನಿರ್ದೇಶನ ಮತ್ತು ಸಹಾಯವೇ ಮುಖ್ಯಕಾರಣ. ಆದರೆ ಒಳಾಡಳಿತದಲ್ಲಿ ಶಕ್ತಿ ಕೇಂದ್ರೀಕರಣದ ಬಗ್ಗೆ ಇದ್ದ ತೀವ್ರಾಸಕ್ತಿ ಮತ್ತು ರಾಜಕೀಯ ಪುಡಾರಿತನಗಳಿಂದಾಗಿ ಈತ ಅನೇಕ ಆಕ್ಷೇಪಣೆಗಳಿಗೆ ಒಳಗಾದ. ಅಡೆನೋವರ್ 1966ರ ಮಾರ್ಚ್‌ವರೆಗೂ ಪಕ್ಷದ ಅಧ್ಯಕ್ಷನಾಗಿದ್ದ. ಅಡೆನೋವರನ ಅನಂತರ ಈತನೇ ಪಕ್ಷದ ಅಧ್ಯಕ್ಷನೂ ಆದ. *

**ಏಳು ವರ್ಷಗಳ ಯುದ್ಧ:** 1756–1763. ಫ್ರಾನ್ಸ್, ಆಸ್ಟ್ರಿಯ, ರಷ್ಯ, ಸ್ಯಾಕ್ಸನಿ, ಸ್ವೀಡನ್ ಮತ್ತು (1762ರಿಂದ) ಸ್ಪೇನ್ ಇವುಗಳಿಗೂ ಪ್ರಷ್ಯ, ಇಂಗ್ಲೆಂಡ್ ಮತ್ತು ಹ್ಯಾನೊವರ್‌ಗಳಿಗೂ ನಡುವೆ, ಯುರೋಪ್, ಉತ್ತರ ಅಮೆರಿಕ ಮತ್ತು ಭಾರತ ಕ್ಷೇತ್ರಗಳಲ್ಲಿ ನಡೆದ ಜಾಗತಿಕ ಯುದ್ಧ (ಸೆವೆನ್ ಇಯರ್ಸ್ ವಾರ್). ಇದಕ್ಕೆ ಕಾರಣಗಳು ಸ್ಥೂಲವಾಗಿ ಎರಡು. ಉತ್ತರ ಅಮೆರಿಕದಲ್ಲೂ ಭಾರತದಲ್ಲೂ ವಸಾಹತಿಗಾಗಿ ಫ್ರೆಂಚರಿಗೂ ಇಂಗ್ಲಿಷರಿಗೂ ನಡುವೆ ನಡೆದಿದ್ದ ಸ್ಪರ್ಧೆ ಒಂದು ಮುಖ್ಯಕಾರಣ. ಅಮೆರಿಕದಲ್ಲಿ ಇಂಗ್ಲಿಷರು ಅಲಿಘನಿ ಪರ್ವತಗಳನ್ನು ದಾಟಿ ಪಶ್ಚಿಮಾಭಿಮುಖವಾಗಿ ಪದಾಕ್ರಮಣ ಮಾಡುತ್ತಿದ್ದಾಗ ಫ್ರೆಂಚರು ಕೆನಡದಿಂದ ನೈಋತ್ಯಾಭಿಮುಖವಾಗಿ ನಡೆಯುತ್ತ ಇಂಗ್ಲಿಷರ ಹಾದಿಯಲ್ಲಿ ಅಡ್ಡಹಾಯ್ದದ್ದರಿಂದ ವಿರಸಕ್ಕೆ ಆಸ್ಪದವುಂಟಾಯಿತು. ಜರ್ಮನಿಯ ಅಧಿನಾಯಕತ್ವಕ್ಕಾಗಿ ಆಸ್ಟ್ರಿಯದ ಮೇರಿಯಾಥೆರೀಸಗೂ ಪ್ರಷ್ಯದ ಎರಡನೆಯ ಫ್ರೆಡರಿಕನಿಗೂ ನಡುವೆ ವಿರಸವೇರ್ಪಟ್ಟದ್ದೂ ಯುದ್ಧಕ್ಕೆ ಕಾರಣವಾಯಿತು. ಆಸ್ಟ್ರಿಯದ ಉತ್ತರಾಧಿಕಾರದ ನಡೆದ ಯುದ್ಧ ಯುದ್ಧಕ್ಕೆ ಕಾರಣವಾಯಿತು. ಆಸ್ಟ್ರಿಯದ ಉತ್ತರಾಧಿಕಾರದ ಬಗ್ಗೆ ನಡೆದ ಯುದ್ಧ 1748ರಲ್ಲಿ ಕೊನೆಗೊಂಡಿತ್ತಾದರೂ ಅನಂತರದ ವರ್ಷಗಳಲ್ಲೂ ದ್ವೇಷದ ಹೊಗೆಯಾಡುತ್ತಲೇ ಇತ್ತು. ಯುರೋಪಿನಲ್ಲಿ ಯಾರು ಹೆಚ್ಚು ಬಲಿಷ್ಠರು ಎಂಬ ಬಗ್ಗೆ ಮತ್ತೊಮ್ಮೆ ಪರೀಕ್ಷೆ ನಡೆಸಬೇಕೆಂಬ ಚಪಲ ಬೆಳೆಯುತ್ತಿತ್ತು. ತಾನು ಹಿಂದಿನ ಯುದ್ಧದಲ್ಲಿ ಕಳೆದುಕೊಂಡಿದ್ದ ಸೈಲೀಷಿಯ ಪ್ರಾಂತ್ಯವನ್ನು ಮರಳಿ ಪಡೆಯಬೇಕೆಂಬುದು ಆಸ್ಟ್ರಿಯದ ಹಂಬಲವಾದರೆ ಅದನ್ನು ತಾನೇ ಉಳಿಸಿಕೊಂಡು ಆಸ್ಟ್ರಿಯವೇ ಮುಂತಾದ ನೆರೆರಾಷ್ಟ್ರಗಳ ಹಮ್ಮನ್ನು ಮುರಿಯಬೇಕೆಂಬುದು ಪ್ರಷ್ಯದ ಆಕಾಂಕ್ಷೆ. ರಾಜಕಾರ್ಯ, ಯುದ್ಧವಿದ್ಯೆ ಎರಡರಲ್ಲೂ ಅಸಾಧಾರಣ ಪ್ರತಿಭೆ ಹೊಂದಿದ್ದ ಫ್ರೆಡರಿಕ್ ಆಗ ಪ್ರಷ್ಯದ ದೊರೆಯಾಗಿದ್ದ, ಪೂರ್ವದಲ್ಲಿ, ಹದಿನೆಂಟನೆಯ ಶತಮಾನದವರೆಗೂ, ತೀರ ಹಿಂದುಳಿದಿದ್ದ ರಷ್ಯ ಈಗ ಗಣನೀಯ ಪ್ರಗತಿ ಹೊಂದಿ ಇತರ ರಾಷ್ಟ್ರಗಳ ಮೇಲೆ ತನ್ನ ಪ್ರಭಾವ ಬೀರಲು ಪ್ರಾರಂಭಿಸಿತ್ತು. ಹೀಗಾಗಿ ಒಂದು ಕಡೆ ಇಂಗ್ಲೆಂಡ್ ಮತ್ತು ಪ್ರಷ್ಯ ಇವೂ ಇನ್ನೊಂದು ಕಡೆ ಆಸ್ಟ್ರಿಯ, ಫ್ರಾನ್ಸ್ ಇವೂ ಇದ್ದ ಎರಡು ಬಣಗಳೇರ್ಪಟ್ಟಿದ್ದುವು.

ಸೈಲೀಷಿಯವನ್ನು ಪುನಃ ಪಡೆಯಬೇಕೆಂಬ ನಿರ್ಧಾರದಿಂದ ಆಸ್ಟ್ರಿಯದ ರಾಣಿ ಮೇರಿ ಥೆರೀಸ ತನ್ನ ದೇಶದ ಉತ್ತರ ಗಡಿಯಲ್ಲಿ ಸೈನ್ಯಸಂಗ್ರಹ ಮಾಡುತ್ತಿದ್ದಾಳೆಂಬ ನೆಪ ಹೂಡಿ, ಫ್ರೆಡರಿಕ್ 1756ರಲ್ಲಿ ಸ್ಯಾಕ್ಸನಿಯನ್ನಾಕ್ರಮಿಸಿದ. ಫ್ರಾನ್ಸಿನಿಂದೊದಗಬಹುದಾದ ಅಪಾಯವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಆತ ಇಂಗ್ಲೆಂಡಿನ ಒಪ್ಪಿಗೆಯೊಡನೆ ಹ್ಯಾನೊವರನ್ನು ಆಕ್ರಮಿಸಿಕೊಂಡ. ಇದರಿಂದ ಫ್ರಾನ್ಸಿನ ಸೈನ್ಯಗಳು ಪ್ರಷ್ಯದೊಳಗೆ ನುಗ್ಗಲು ಅಡಚಣೆಯಾಯಿತು. ಆದರೆ ದಕ್ಷಿಣದಲ್ಲಿ ಆಸ್ಟ್ರಿಯದ ಪಡೆ ಸಜ್ಜಾಗಿ ಕದನಕ್ಕೆ ನಿಂತಿತ್ತು. ಪೂರ್ವದಿಂದ ರಷ್ಯನ್ ಸೈನ್ಯ ತನ್ನ ದೇಶದೊಳಕ್ಕೆ ನುಗ್ಗುವ ಭಯವೂ ಇತ್ತು. ಇವೆರಡು ಕಡೆಯಲ್ಲೂ ಶತ್ರುಗಳನ್ನು ಪ್ರಷ್ಯ ಎದುರಿಸಬೇಕಾಗಿತ್ತು. ಫ್ರಾನ್ಸಿನ ಸೈನ್ಯವನ್ನೆದುರಿಸಲು ಇಂಗ್ಲೆಂಡಿನಿಂದ ಸೈನ್ಯ ಸಹಾಯ ಬಂದಿತ್ತು.

ಯುದ್ಧದ ಮೊದಲ ಐದು ವರ್ಷ ಇಂಗ್ಲೆಂಡಿಗೂ ಪ್ರಷ್ಯಕ್ಕೂ ಅನುಕೂಲಕರವಾಗಿರಲಿಲ್ಲ. ಫ್ರೆಡರಿಕನ ಸಹಾಯಕ್ಕೆ ಕೊಂಚ ಸೈನ್ಯವನ್ನೂ ಅಪಾರ ಹಣವನ್ನೂ ಕಳುಹಿಸಿ, ಯುರೋಪಿನಲ್ಲೆ ಯುದ್ಧ ಮುಂದುವರಿಯುವಂತೆ ಮಾಡಿದರೆ ಫ್ರಾನ್ಸ್ ತನ್ನ ಸೈನ್ಯದ ಬಹುಭಾಗವನ್ನು ಯುರೋಪಿನಲ್ಲೇ ಇಟ್ಟುಕೊಳ್ಳಬೇಕಾಗುತ್ತದೆ. ಅದರ ವಸಾಹತುಗಳಿಗೆ ಸೈನ್ಯ ಕಳುಹಿಸುವ ಸ್ಥಿತಿಯಲ್ಲಿರುವುದಿಲ್ಲ. ಇದರಿಂದ ಆ ಪ್ರದೇಶಗಳಲ್ಲಿ ಬ್ರಿಟಿಷ್ ಫ್ರಾನ್ಸಿನ ಪ್ರಾಬಲ್ಯ ಮುರಿಯಬಹುದು–ಎಂಬುದು ಇಂಗ್ಲೆಂಡಿನ ಯುದ್ಧಮಂತ್ರಿ ಲಾರ್ಡ್ ಚಾಥಮನ ಹಂಚಿಕೆ. ಆದರೂ ಮೊದಲು ಶತ್ರುಗಳ ಕೈ ಮೇಲಾಗಿ ಇಂಗ್ಲೆಂಡ್ ಪ್ರಷ್ಯಗಳಿಗೆ ಗಂಭೀರ ಪರಿಸ್ಥಿತಿಯುಂಟಾಯಿತು. ಫ್ರೆಡರಿಕ್ ಕೊಲ್ಲಿನಿನಲ್ಲಿ ಸೋತು ಬೊಹಿಮಿಯವನ್ನು ಶತ್ರುಗಳಿಗೆ ಬಿಟ್ಟುಕೊಡಬೇಕಾಯಿತು. 1758–1759ರಲ್ಲಂತೂ ಪ್ರಷ್ಯದ ಸ್ಥಿತಿ ತೀರ ಹದಗೆಟ್ಟಿತು. ಜ್ಹಾರೆನ್ ಡಾರ್ಫ್ ಕದನದಲ್ಲಿ ಪ್ರಷ್ಯ ಗೆದ್ದಿತಾದರೂ ಅದಕ್ಕೆ ಸಂಭವಿಸಿದ ನಷ್ಟ ಅಪಾರ. ಮರುವರ್ಷ ಕ್ಯೂನೆರ್ಸ್‌ಡಾರ್ಫಿನಲ್ಲಿ ಸೋಲೇ ಕಾದಿತ್ತು. ಭಾರತದಲ್ಲಿ ಫೋರ್ಟ್ ಸೇಂಟ್ ಡೇವಿಡ್ ಫ್ರೆಂಚರ ವಶವಾದ್ದರಿಂದ ಮದರಾಸು ಇಂಗ್ಲಿಷರ ಕೈಬಿಟ್ಟುಹೋಗುವ ಸ್ಥಿತಿ ಬಂದಿತ್ತು. ಉತ್ತರ ಅಮೆರಿಕದಲ್ಲೂ ಬ್ರಿಟಿಷರ ಪರಿಸ್ಥಿತಿ ಆಶಾದಾಯಕವಾಗಿರಲಿಲ್ಲ.

ಆದರೆ ಕೊನೆಯ ಮೂರು ವರ್ಷಗಳಲ್ಲಿ ಶತ್ರುಗಳ ಬಲ ಕುಂದುತ್ತ ಬಂತು. ಪ್ಲಾಸಿ ಕದನದಲ್ಲಿ ಬ್ರಿಟಿಷರು ಬಂಗಾಳ ಗೆದ್ದುಕೊಂಡರಲ್ಲದೆ 1760ರಲ್ಲಿ ನಡೆದ ವಾಂಡಿವಾಷ್ ಕದನದಿಂದ ದಕ್ಷಿಣ ಭಾರತದಲ್ಲೂ ಫ್ರೆಂಚರ ಪ್ರಾಬಲ್ಯ ಮುರಿದುಬಿತ್ತು. ಉತ್ತರ ಅಮೆರಿಕದಲ್ಲಿ ಕರ್ನಲ್ ವುಲ್ಫ್ ಕ್ವಿಬೆಕ್ ಕೋಟೆಯನ್ನು ಹಿಡಿದ. ಯೂರೋಪಿನಲ್ಲಿ ಲೀಗ್‌ನಿಟ್ಸ್ ಮತ್ತು ಟೋರ್ಗಾನ್ ಕದನಗಳಲ್ಲಿ ಆಸ್ಟ್ರಿಯದ ಸೈನ್ಯವನ್ನು ಫ್ರೆಡರಿಕ್ ಸೋಲಿಸಿ ಹಿಮ್ಮೆಟ್ಟಿಸಿದ. ಇದೇ ಸಮಯಕ್ಕೆ ಸರಿಯಾಗಿ ರಷ್ಯದ ರಾಣಿ ಒಂದನೆಯ ಎಲಿಜಬೆತಳ ಮರಣ ಸಂಭವಿಸಿತು. ಅವಳ ಅನಂತರ ಸಿಂಹಾಸನವೇರಿದ ಪೀಟರ್ ದೊರೆ ಫ್ರೆಡರಿಕನ ಅಭಿಮಾನಿ. ಇದರಿಂದ ರಷ್ಯದಿಂದಲೂ ಫ್ರೆಡರಿಕನಿಗೆ ವಿರೋಧ ಅಡಗಿಹೋಯಿತು.

1763ರಲ್ಲಿ ಹ್ಯೂಬರ್ಟ್ಸ್‌ಬರ್ಗಿನಲ್ಲಿ ಪ್ರಷ್ಯಕ್ಕೂ ಆಸ್ಟ್ರಿಯಕ್ಕೂ ಒಪ್ಪಂದವಾಗಿ ಯುದ್ಧ ನಿಂತಿತು. ಸೈಲೀಷಿಯ ಪ್ರಷ್ಯಕ್ಕೆ ಸೇರಿಹೋಯಿತು. ಅದೇ ವರ್ಷ ನಡೆದ ಪ್ಯಾರಿಸ್ ಒಪ್ಪಂದದಲ್ಲಿ ಕೆನಡ ಬ್ರಿಟಿಷರದಾಯಿತು. ಭಾರತದಲ್ಲೂ ಫ್ರೆಂಚರ ಪ್ರಾಬಲ್ಯ ಕೊನೆಗೊಂಡಿತು. ಈ ಎಲ್ಲ ಪರಾಭವಗಳಿಂದ ಫ್ರಾನ್ಸಿನ ಕೀರ್ತಿಗೆ ತಟ್ಟಿದ ಕಳಂಕ ಅಷ್ಟಿಷ್ಟಲ್ಲ. ಮುಂದೆ ಜರುಗಿದ ಮಹಾಕ್ರಾಂತಿಗೆ ಈ ಅವಮಾನವೂ ಒಂದು ಪ್ರಬಲ ಕಾರಣ. ಬ್ರಿಟಿಷರಿಗಂತೂ ಆಗ ಯಾವ ಅಡಚಣೆಯೂ ಇರಲಿಲ್ಲ. ಮುಂದಿನ ವರ್ಷಗಳಲ್ಲಿ ಅದು ಮಹಾಚಕ್ರಾಧಿಪತ್ಯವೊಂದನ್ನು ಕಟ್ಟಲು ಅನುಕೂಲಕರವಾದ ವಾತಾವರಣ ಏರ್ಪಟ್ಟಂತಾಯಿತು. (ಎ.ಎಂ.)

**ಏಳು ವಾರಗಳ ಯುದ್ಧ:** ಆಸ್ಟ್ರಿಯ, ಸ್ಯಾಕ್ಸನಿ, ಹ್ಯಾನೊವರ್, ಬವೇರಿಯ, ವರ್ಟೆಂಬರ್ಗ್, ಬಾಡೆನ್, ಹೆಚ್–ಕ್ಯಾಸಲ್, ಹೆಸ್–ಡಾರ್ಮ್‌ಷ್ಟಾಟ್ ಮತ್ತು ನಾಸೊಗಳಿಗೂ ಪ್ರಷ್ಯ ಮತ್ತು ಇಟಲಿಗಳಿಗೂ ನಡುವೆ 1866ರಲ್ಲಿ ನಡೆದ ಯುದ್ಧ (ಸೆವೆನ್ ವೀಕ್ಸ್ ವಾರ್). ಮುಖ್ಯವಾಗಿ ಆಸ್ಟ್ರಿಯ–ಪ್ರಷ್ಯಗಳ ದೀರ್ಘ ವಿರಸದ ಫಲವಾಗಿದ್ದು, ಅಂತ್ಯದಲ್ಲಿ ಇದು ಪರಿಹಾರವಾದ್ದರಿಂದ ಇದು ಆಸ್ಟ್ರೊ–ಪ್ರಷ್ಯನ್ ಯುದ್ಧವೆಂದೂ ಹೆಸರಾಗಿದೆ.

1815ರಲ್ಲಿ ಸ್ಥಾಪಿತವಾಗಿದ್ದ ಜರ್ಮನ್ ಸಂಧಿಕೂಟದಲ್ಲಿ ಪ್ರಾಬಲ್ಯ ಗಳಿಸಲು ಆಸ್ಟ್ರಿಯಕ್ಕೂ ಪ್ರಷ್ಯಕ್ಕೂ ನಡುವೆ ತೀವ್ರ ಸ್ಪರ್ಧೆ ನಡೆದಿತ್ತು. ಪ್ರಷ್ಯ ಆಗ ರಾಷ್ಟ್ರೀಯತ್ವ ಪ್ರತಿಪಾದಕ ರಾಷ್ಟ್ರ. ಆಸ್ಟ್ರಿಯ ಇದಕ್ಕೆ ವಿರುದ್ಧ, ಆಸ್ಟ್ರಿಯವನ್ನುಳಿದು ಎಲ್ಲ ಜರ್ಮನ್ ರಾಜ್ಯಗಳನ್ನೂ ಒಗ್ಗೂಡಿಸುವುದು ಪ್ರಷ್ಯದ ಬಯಕೆ. ಆದರೆ ಆಸ್ಟ್ರಿಯದ ವಿರೋಧದಿಂದ ಇದು ಸಾಧ್ಯವಾಗಿರಲಿಲ್ಲ. ಆಸ್ಟ್ರಿಯನ್ ಸಾಮ್ರಾಜ್ಯವನ್ನು ಜರ್ಮನ್ ಸಂಧಿಕೂಟದೊಂದಿಗೆ ಸೇರಿಸಬೇಕೆಂಬ ಆಸ್ಟ್ರಿಯನ್ ಹಂಬಲವನ್ನು ಡ್ರೆಸ್ಡನ್ ಸಮ್ಮೇಳನ ತಿರಸ್ಕರಿಸಿತ್ತು. 1862ರಲ್ಲಿ ಪ್ರಷ್ಯದ ಪ್ರಧಾನಿಯಾಗಿದ್ದ ಬಿಸ್ಮಾರ್ಕ್ ಜರ್ಮನಿಯನ್ನು ಒಗ್ಗೂಡಿಸುವ ಕಾರ್ಯದಲ್ಲಿ ಉದ್ಯುಕ್ತನಾಗಿದ್ದ. ಇದು ಆಸ್ಟ್ರಿಯಕ್ಕೆ ಸಹ್ಯವಾಗಿರಲಿಲ್ಲ.

ಭೌಗೋಳಿಕ ಕಾರಣಗಳಿಗಾಗಿ ಸ್ಯಾಕ್ಸನಿ ಆಸ್ಟ್ರಿಯದ ಕಡೆ ಸೇರಿಕೊಂಡಾಗ ಪ್ರಷ್ಯ ಸೈನ್ಯಗಳನ್ನು ಜಮಾಯಿಸಿಕೊಂಡು ಸ್ಯಾಕ್ಸನಿ ಮತ್ತು ಬೊಹಿಮಿಯಗಳ ಆಕ್ರಮಣ ನಡೆಸಿತು. ಅನಂತರ ಸ್ಯಾಡೋವಾದಲ್ಲಿ ಆಸ್ಟ್ರಿಯ ಸೈನ್ಯಕ್ಕೂ ಪರಾಭವವುಂಟಾಯಿತು. ಆಸ್ಟ್ರಿಯದ ಕಡೆ ಒಲಿದಿದ್ದ ಕೆಲವು ಜರ್ಮನ್ ರಾಜ್ಯಗಳು ಪ್ರಷ್ಯದ ಅಧಿನಾಯಕತ್ವವನ್ನು ಒಪ್ಪಿಕೊಳ್ಳಬೇಕಾಯಿತು. ಏಳು ವಾರಗಳಲ್ಲಿ ಮುಗಿದ ಈ ಯುದ್ಧವೇ ಜರ್ಮನಿಯ

ಏಕೀಕರಣಕ್ಕೆ ನಾಂದಿಯಾಯಿತೆನ್ನಬಹುದು. ಪ್ರಷ್ಯದೊಡನೆ ಸೇರಿದ್ದಕ್ಕಾಗಿ ವಿನೀಷಿಯ ಸಿಕ್ಕಿದ್ದೇ ಇಟಲಿಗೆ ಆದ ಲಾಭ. (ಎ.ಎಂ.)

**ಏಳೆ :** ಅಚ್ಚಕನ್ನಡ ಛಂದಸ್ಸಿನ ಒಂದು ಪದ್ಯಜಾತಿ. ಇದರ ಲಕ್ಷಣವನ್ನು ಮೊದಲು ನಾಗವರ್ಮನ (ಸು. 990) ಛಂದೋಂಬುಧಿಯಲ್ಲೂ ಅನಂತರ ಜಯಕೀರ್ತಿಯ (ಸು. 1050) ಛಂದೋನುಶಾಸನ ಎಂಬ ಸಂಸ್ಕೃತ ಛಂದೋಗ್ರಂಥ ಮತ್ತು ಶಾರ್ಙ್ಗದೇವನ (ಸು. 1250) ಸಂಗೀತರತ್ನಾಕರ ಎಂಬ ಸಂಗೀತಶಾಸ್ತ್ರ ಗ್ರಂಥಗಳಲ್ಲಿಯೂ ನಿರೂಪಿಸಲಾಗಿದೆ.

ಛಂದೋಂಬುಧಿಯಲ್ಲಿ ಹೀಗೆ ಹೇಳಿದೆ: ಭುಜಪಕ್ಷಪುರಗಣ ವ್ರಜದೊಳಾಱ ಱಯೊಳಕ್ಕು ಮಜಗಣಮೇಳೆಗಿಭಗತೀ॥ ಕ್ರಮವಾಗಿ 2, 2 ಮತ್ತು 3 ಗಣಗಳ ಗುಂಪಿನಲ್ಲಿ 6ನೆಯದು ಬ್ರಹ್ಮಗಣವಾಗಿರುವುದು ಏಳೆಯ ಲಕ್ಷಣ–ಎಂಬುದು ಪದ್ಯದ ಆಶಯ. ಈ ಲಕ್ಷಣಪದ್ಯ ಅದರ ಲಕ್ಷ್ಯವೂ ಆಗಿದೆ. ಆದ್ದರಿಂದ ಉಳಿದ ಗಣಗಳು ವಿಷ್ಣುಗಣಗಳಾಗಿರುತ್ತವೆಯೆಂದೂ ಎರಡು ಪಾದಗಳಿರುವ ಈ ಮಟ್ಟಿನ ಮೊದಲನೆಯ ಪಾದದಲ್ಲಿ 2 ಗಣಗಳಾದ ಮೇಲೆ ಪ್ರಾಯಃ ಯತಿ ಬಂದು 3ನೆಯ ಗಣದಲ್ಲಿ ಒಳಪ್ರಾಸ ಪಾಲಿತವಾಗುತ್ತದೆಯೆಂದೂ ತಿಳಿಯಲವಕಾಶವಿದೆ.

ಛಂದೋನುಶಾಸನದಲ್ಲಿ ಹೀಗೆ ಹೇಳಿದೆ: ತ್ರಿಪದೀ ತೃತೀಯಾಂ ಹ್ರಾ ವಪಮುಜ್ಝ ತೈಲೇತೀ॥ ಸುಪಠಿತಾ ಗೇಯವಿದಜನ್ಯೈಃ॥ 3ನೆಯ ಪಾದವನ್ನು ಬಿಟ್ಟರೆ ತ್ರಿಪದಿಯೇ ಏಳೆಯಾಗುತ್ತದೆಯೆಂಬುದಾಗಿ ಗೇಯವಿದರಾದ ಜನರಿಂದ ಹೇಳಲ್ಪಟ್ಟಿದೆ–ಎಂಬುದು ಪದ್ಯದ ಆಶಯ. ಜಯಕೀರ್ತಿ ತ್ರಿಪದಿಯ ಮೊದಲ ಪಾದವನ್ನು 2–2 ಗಣಗಳಿಗೆ ಒಂದೊಂದು ಪಾದವಾಗಿ ಗಣಿಸಿರುವುದರಿಂದ ನಾವು 2ನೆಯ ಪಾದವೆಂದು ತಿಳಿಯುವುದು ಆತನ ಅಭಿಪ್ರಾಯದಂತೆ 3ನೆಯದಾಗಿದೆ. ಆ ಕಾರಣ ಆತನ ಮತದಂತೆ ತ್ರಿಪದಿಯಲ್ಲಿ 2ನೆಯ ಪಾದವನ್ನು ಬಿಟ್ಟರೆ ಉಳಿಯುವ 1–3ನೆಯ ಪಾದಗಳ ಲಕ್ಷಣವೇ ಏಳೆಯ ಲಕ್ಷಣ, ಇದು ನಾಗವರ್ಮ ಹೇಳಿರುವ ಲಕ್ಷಣಕ್ಕೆ ಸಮಾನವಾದುದೇ ಆಗಿದೆ.

ಸಂಗೀತರತ್ನಾಕರದಲ್ಲಿ ಕನ್ನಡ ಏಳೆಯನ್ನು ಕುರಿತಾಗ, ಪಂಚಕಾಮಾ ರತಿಶ್ಚೈವ ಕಮೋಽಂತೇ ಚರಣತ್ರಯೇ–ಎಂದು ಹೇಳಿದೆ. 5 ಮದನ (= ವಿಷ್ಣು) ಗಣಗಳು, 1 ರತಿ (=ಬ್ರಹ್ಮ) ಗಣ. ಕೊನೆಗೊಂದು ಮದನ (=ವಿಷ್ಣು) ಗಣ–ಹೀಗೆ ಬರುವ 3 ಪಾದಗಳನ್ನು (ಎಂದರೆ ನಮ್ಮ ಗಣನೆಯಂತೆ 2 ಪಾದಗಳನ್ನು) ಉಳ್ಳದ್ದು ಏಳೆ–ಎಂದು ಇಲ್ಲೂ ಹೇಳಿರುವುದು ಕಾಣುತ್ತದೆ.

ಕನ್ನಡ, ಸಂಸ್ಕೃತ ಲಾಕ್ಷಣಿಕರು ಏಳೆಗೆ ಹೇಳಿರುವ ಮೇಲಿನ ಲಕ್ಷ ನಿರ್ವಚನವನ್ನು ಸಾಹಿತ್ಯದಲ್ಲಿ ದೊರೆಯುವ ಅದರ ನಿದರ್ಶನಗಳಿಗೆ ಅನ್ವಯಿಸಿ ನೋಡಿ, ಅದರ ಸಾಮಾನ್ಯ ಲಕ್ಷಣವನ್ನೂ ಅಪವಾದಗಳನ್ನೂ ಹೀಗೆ ಹೇಳಬಹುದು. ಎರಡು ಪಾದಗಳು; ಮೊದಲ ಪಾದದಲ್ಲಿ 4 ವಿಷ್ಣುಗಣಗಳು (2 ಗಣಗಳು ಬಳಿಕ ಯತಿ ಮತ್ತು 3ನೆಯ ಗಣದಲ್ಲಿ ಒಳ ಪ್ರಾಸ ಎಂದರೆ ದ್ವಿತೀಯಾಕ್ಷರ ಪ್ರಾಸದ ಆವೃತ್ತಿ); ಎರಡನೆಯ ಪಾದದಲ್ಲಿ, ಒಟ್ಟು ಪದ್ಯದ 5ನೆಯ ಗಣ ವಿಷ್ಣು, 6ನೆಯದು ಬ್ರಹ್ಮ, 7ನೆಯದು ವಿಷ್ಣು, ಇದನ್ನು ಹೀಗೆ ತೋರಿಸಬಹುದು.

ವಿ+ವಿ+ವಿ+ವಿ।
ವಿ+ಬ್ರ+ವಿ॥

ಇದು ಸಾಮಾನ್ಯ ಲಕ್ಷಣ. ಏಳೆಯ ಎಲ್ಲ ನಿದರ್ಶನಗಳೂ ಈ ಸಾಮಾನ್ಯ ಲಕ್ಷಣಕ್ಕೆ ಹೊಂದಿಕೊಂಡಿರುತ್ತವೆಯೆಂದು ಹೇಳುವಂತಿಲ್ಲ. ಇತರ ಅಂಶವೃತ್ತಗಳಿಗೆ ಸಹಜವಾಗಿರುವ ಅಪವಾದಗಳು ಇಲ್ಲೂ ಉಂಟು. ಆದಿಪ್ರಾಸ ಅಥವಾ ಒಳಪ್ರಾಸ ಅಥವಾ ಈ ಎರಡು ಬಗೆಯ ಪ್ರಾಸಗಳೂ ಇಲ್ಲದೆ ಹೋಗಬಹುದು. ವಿಷ್ಣುಗಣಗಳಿಗೆ ಪರ್ಯಾಯವಾಗಿ ಯಾವುದೇ ಗಣಸ್ಥಾನದಲ್ಲಿ ರುದ್ರವೋ ಬ್ರಹ್ಮವೋ ಬರಬಹುದು. ಹಾಗೂ 6ನೆಯ ಬ್ರಹ್ಮಗಣ ಸ್ಥಾನದಲ್ಲಿಯೇ ವಿರಳವಾಗಿ ವಿಷ್ಣುವೋ ರುದ್ರವೋ ಬರಬಹುದು.

ಇಲ್ಲಿ ಗಮನಿಸತಕ್ಕ ಒಂದು ಸಂಗತಿಯಿದೆ. 3ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲೂ (1129) ಶಾರ್ಙ್ಗದೇವನ ಸಂಗೀತರತ್ನಾಕರದಲ್ಲೂ ಇತರ ಕೆಲವು ಶಾಸ್ತ್ರಗ್ರಂಥಗಳಲ್ಲೂ ಸಂಸ್ಕೃತ ಛಂದಸ್ಸಿನ ವಿಷಯಗಳನ್ನು ವಿವರಿಸುವಾಗ ಏಲಾ ಎಂಬೊಂದು ಸಂಸ್ಕೃತ ಪದ್ಯಜಾತಿಯ ಮತ್ತು ಅದರ ಪ್ರಭೇದಗಳ ಲಕ್ಷಣಗಳನ್ನು ಲಕ್ಷ್ಯಸಹಿತವಾಗಿ ನಿರೂಪಿಸಿರುವುದು ಕಂಡುಬರುತ್ತದೆ. ಗಣೈಲಾ ಮಾತ್ರೈಲಾ ವರ್ಣೈಲಾ ಎಂಬುದಾಗಿಯೂ ಕರ್ಣಾಟೀ ಏಲಾ, ಲಾಟೀ ಏಲಾ ಎಂದು ಮುಂತಾಗಿಯೂ ಪ್ರಕಾರಗಳನ್ನು ಮಾಡಿಕೊಂಡು ಒಂದೊಂದಕ್ಕೂ ಹಲವು ಪ್ರಭೇದಗಳನ್ನು ಕಲ್ಪಿಸಿ ಆ ಗ್ರಂಥಗಳಲ್ಲಿ ವಿವರಿಸಿದೆ. ಇವುಗಳಿಗೂ ಅಂಶ ಗಣಾತ್ಮಕವಾಗಿ ನಿರೂಪಿಸಿರುವ ನಾಗವರ್ಮ ಜಯಕೀರ್ತಿಗಳ ಕನ್ನಡ ಏಳೆಗೂ ಯಾವ ಸಂಬಂಧವೂ ಇಲ್ಲವೆಂದು ಹೇಳಬಹುದು. ಸಂಸ್ಕೃತದ ಗೀತನಾಮವಾದ ಏಲಾ ಎಂಬುದರ ತದ್ಭವವಾಗಿ ಏಳೆ ಎಂಬುದು ಬಂದಿರಬಹುದೆಂದು ಮಾತ್ರ ತೋರುತ್ತದೆ.

ಈವರೆಗೆ ತಿಳಿದಿರುವಂತೆ, ಕನ್ನಡದ ಯಾವ ಶಾಸನದಲ್ಲಿಯೇ ಆಗಲಿ ಕಾವ್ಯದಲ್ಲಿಯೇ ಆಗಲಿ ಏಳೆಯ ಛಂದಸ್ಸಿನಲ್ಲಿರುವ ಪದ್ಯ ದೊರೆತಿಲ್ಲ. ಜಾನಪದ ಸಾಹಿತ್ಯದಲ್ಲಿ ಮಾತ್ರ ಅಂಥ ಪದ್ಯಗಳು ತಕ್ಕಮಟ್ಟಿಗೆ ದೊರೆಯುತ್ತವೆ. ಪ್ರಯೋಗಶೀಲ ಕವಿಗಳ ಪ್ರಯತ್ನದಿಂದ ಹೊಸಗನ್ನಡ ಕಾಲದಲ್ಲೂ ಈ ಹಳೆಯ ಛಂದಸ್ಸು ಪುನರುಜ್ಜೀವನಗೊಂಡಿರುವುದು ಕಾಣುತ್ತದೆ. ಎಸ್.ವಿ.ಪರಮೇಶ್ವರಭಟ್ಟರ ತುಂಬೆಹೂವು (1968) ಎಂಬುದು 700 ಏಳೆಗಳ ಸ್ವತಂತ್ರ ಕೃತಿ. ಏಳೆ ಅಚ್ಚಕನ್ನಡ ಛಂದಸ್ಸಿನಲ್ಲಿ ತುಂಬ ಹಳೆಯ ಪದ್ಯಜಾತಿಯಾಗಿರುವುದು ಸಾಧ್ಯ. ಏಳೆಯೇ ತ್ರಿಪದಿಯಾಗಿ ರೂಪುಗೊಂಡಂತೆ ತೋರುವುದರಿಂದ ತ್ರಿಪದಿ ವ್ಯಾಪಕವೂ ಪ್ರಿಯವೂ ಆಗಿ ಬೆಳೆಯತೊಡಗಿದಂತೆ ಏಳೆ ರಚನೆಯಲ್ಲಿ ಹಿಂದೆ ಬಿದ್ದಿರಬೇಕೆಂದು ತೋರುತ್ತದೆ. (ಪ್ರಾಯಃ ಹಾಡಿಕೆಯಲ್ಲಿ ಅದರ 2ನೆಯ ಪಾದದ ಪುನರಾವರ್ತನೆ ಕಾರಣವಾಗಿ ಒಂದು ಗಣ ಕೂಡಿ, ಇಡಿಯ ಏಳೆಯೇ ಮತ್ತೆ ಮಗುಚಿ ಬಂದಂತಾಗಿ ತ್ರಿಪದಿ ಕಾಣಿಸಿಕೊಂಡಿರುವುದು ಶಕ್ಯ. ಹಾಡಿನಲ್ಲಿ ತ್ರಿಪದಿಯ 2ನೆಯ ಪಾದದ 3 ಗಣಗಳ ಪುನರಾವೃತ್ತಿಯನ್ನು ಬಿಟ್ಟರೆ ಅದರ 3 ಪಾದಗಳ ಸಾಹಿತ್ಯ ಉಳಿಯುತ್ತದೆ. ಅಥವಾ ಹಾಡಿನಲ್ಲಿ ಏಳೆಯ 2ನೆಯ ಪಾದದ 3 ಗಣಗಳನ್ನೂ ಹೇಳಿ ಮುಗಿಯುತ್ತಿದ್ದಂತೆ, ಮೀಟಿಗೆ ಇನ್ನೊಂದು ಗಣ ಕೂಡಿ, ಅದೇ ಪಾದದ ಮೊದಲ ಮೂರು ಗಣಗಳು ಇನ್ನೊಮ್ಮೆ ಆವೃತ್ತಿಗೊಂಡು ಕೂಡ ತ್ರಿಪದಿಯಾಗಿರುವುದು ಸಾಧ್ಯ.)

ಅಚ್ಚಕನ್ನಡ ಛಂದಸ್ಸಿನ ಮಟ್ಟುಗಳಲ್ಲಿ ಏಳೆಯೇ ಅತಿಚಿಕ್ಕದು. ಅದರಲ್ಲಿ ವಿವರವಾದ ಭಾವವನ್ನಾಗಲಿ ಸಂಗತಿಯನ್ನಾಗಲಿ ತರುವುದು ಸಾಧ್ಯವಿಲ್ಲ. ಆದಕಾರಣ ಚುರುಕಿನ ನಡೆಯ ಕೋಲಾಟ, ಪ್ರಶ್ನೋತ್ತರ ಮೊದಲಾದವುಗಳಲ್ಲಿ ಇದು ಹೆಚ್ಚಾಗಿ ಬಳಕೆಗೆ ಬಂದಿರಬಹುದು ಎಂದು, ನಿದರ್ಶನಗಳನ್ನು ಗಮನಿಸಿ, ಊಹಿಸಬಹುದಾಗಿದೆ. ಏಳೆಯೇ ಗೀತಿಕೆ, ಸಾಂಗತ್ಯ ಮೊದಲಾದ ಇತರ ಕೆಲವು ಅಂಶವೃತ್ತಗಳಿಗೆ ಮೂಲವೆಂದು ಕೆಲವರು ಭಾವಿಸುತ್ತಾರೆ. ಆದರೆ ಇದನ್ನು ಖಚಿತವಾಗಿ ಸಾಧಿಸುವುದಕ್ಕೆ ಆಯಾ ಮಟ್ಟಿನ ಸಾಮಾನ್ಯ ಲಕ್ಷಣದ ಗಣರಚನೆ ಎಡೆಗೊಡುವುದಿಲ್ಲ. ತಮಿಳಿನ ಪ್ರಾಚೀನ ಗುಱಳ್ವೆಣ್ಬಾ ವೃತ್ತವನ್ನು ಏಳೇ ಹೋಲುತ್ತದೆ. ತಮಿಳು ಮತ್ತು ಕನ್ನಡಗಳ ಅಂಶಗಣರಚನೆ ವಿಶಿಷ್ಟವಾದುದೆಂಬುದನ್ನು ನೆನೆದರೆ ಆ ಎರಡು ಪದ್ಯ ಜಾತಿಗಳ ಪ್ರತ್ಯೇಕತೆ ಮನವರಿಕೆಯಾಗುತ್ತದೆ.

ಈಗ ಏಳೆಯ ಲಕ್ಷಣ ಹೇಗೆ ಕೆಲವು ನಿದರ್ಶನಗಳಲ್ಲಿ ಗೋಚರವಾಗುತ್ತದೆ ಎಂಬುದನ್ನು ನೋಡಬಹುದು :

1 ಸಾಮಾನ್ಯ ಲಕ್ಷಣಕ್ಕೆ ಹೊಂದುವ ಲಕ್ಷ್ಯ :

ವಿ ವಿ * ವಿ ವಿ
ಹಡೆದ ತಾಯಿಗೆ ಬನ್ನಿ । ಹಡೆದ ತಂದೆಗೆ ಬನ್ನಿ।
ವಿ ಬ್ರ ವಿ
ಪಡೆದ ಗಂಡನಿಗೆ। ನಮ ಬನ್ನಿ॥

2 ಅಪವಾದ ರೀತಿಯ ರಚನೆಗೆ ಲಕ್ಷ್ಯ :

ರು
i ಚಿನ್ನದ । ಕೈಗಡಗ । ಚೆನ್ನೇರು । ಇಟಗೊಂಡು ।
ಚಿನ್ನದಾಭರಣ । ನಡಬಾಗಿ॥
ರು
ii ಹಂದರದ । ಜನ ಕೇಳಿ । ಒಂಧು ಬಾಳಗ ಕೇಳಿ।
ರು
ಒಪ್ಪಿ ಮಗ । ಳೆನಗ । ಕೊಡಬೇಕ॥
iii ಆರಿಯ । ಹೆಡೆಯಾಗಿ । ಬಾರಿಯ । ಗಣೆಯಾಗಿ ॥
ವಿ
ಮುತ್ತಿನ । ಹಗ್ಗಕ । ಕಡಗೋಲ ॥
iv ಮೂಡಣ । ದಿಕ್ಕಿನ । ಕತ್ತಲ । ಹರಿದ್ಹೋಗಿ ।
ದಾಳಿಂಬ । ಕದವು । ಡಣಲಂದು ॥ (ಟಿ.ವಿ.ವಿ.)

**ಐ** ಕನ್ನಡ ವರ್ಣಮಾಲೆಯ ಹನ್ನೊಂದನೆಯ ಅಕ್ಷರ. ದೀರ್ಘ ಸ್ವರ. ಸಾಮಾನ್ಯವಾಗಿ ಸ್ವತಂತ್ರವಾಗಿ ದೊರಕುವುದು ಕಷ್ಟ. ವ್ಯಂಜನಗಳ ಜೊತೆಯಲ್ಲಿ ಮಾತ್ರ ದೊರೆಯುತ್ತದೆ. ಅಶೋಕನ ಕಾಲದ ಬ್ರಾಹ್ಮೀ ಲಿಪಿಯಲ್ಲಿ ವ್ಯಂಜನದ ಬಲಗಡೆ ಎರಡು ಸಣ್ಣ ಗೆರೆಗಳ ಮೂಲಕ ಬರೆಯುತ್ತಿದ್ದುದು ಕಾಣಬರುತ್ತದೆ. ಕಾಲಕ್ರಮೇಣ ಈ ಎರಡೂ ರೇಖೆಗಳು ಕೊಂಡಿಯ ರೂಪವನ್ನು ತಾಳಿ, ಅಕ್ಷರದ ಕೆಳಭಾಗದಲ್ಲಿ ಬರೆಯುವ ಕ್ರಮ ರೂಢಿಗೆ ಬಂತು. ಶಾಸನಗಳಲ್ಲಿ ಐದು ಎಂಬುದನ್ನು ಅಯಿದು ಎಂದೂ ಐವತ್ತು ಎಂಬುದನ್ನು ಅಯವತ್ತು ಎಂದೂ ಬರೆದಿರುವುದನ್ನು ಗಮನಿಸಿದಲ್ಲಿ ಈ ಅಕ್ಷರದ ಉಚ್ಚಾರಣಾ ವೈವಿಧ್ಯ ಗೊತ್ತಾಗುತ್ತದೆ. ಇದು ಸಂಯುಕ್ತ ಸ್ವರ.




(ಎ.ವಿ.ಎನ್.)

**ಐಂಥೋವೆನ್, ವಿಲೆಂ:** 1860–1927. ಲೀಡನ್ ವಿಶ್ವವಿದ್ಯಾನಿಲಯದಲ್ಲಿ ಅಂಗರಚನಾವಿಜ್ಞಾನದ ಪ್ರಾಧ್ಯಾಪಕ. ಆಸಕ್ತಿ ಭೌತವಿಜ್ಞಾನದಲ್ಲೂ ಇತ್ತು. ಗುಂಡಿಗೆಯ ವಿದ್ಯುದ್ದ್ವಿಭವಗಳಲ್ಲಿ ಉಂಟಾಗುವ ಸೂಕ್ಷ್ಮತಮ ವ್ಯತ್ಯಾಸಗಳನ್ನು ಗುರುತಿಸುವ ಎಲೆಕ್ಟ್ರೊ ಕಾರ್ಡಿಯೋಗ್ರಾಫ್ ಸಾಧನವನ್ನು ಕಂಡುಹಿಡಿದ. ಇದಕ್ಕಾಗಿ ಈತನಿಗೆ 1924ರಲ್ಲಿ ನೊಬೆಲ್‌ಪಾರಿತೋಷಕ ದೊರೆಯಿತು. ಗುಂಡಿಗೆಯಲ್ಲೇಳುವ ವಿದ್ಯುತ್ತಿನ ವಿಚಾರದಲ್ಲಿ ಮೊದಲಿನಿಂದಲೂ ಬಲು ಆಸಕ್ತನಾಗಿದ್ದು, ಗುಂಡಿಗೆ ಬಡಿದುಕೊಳ್ಳುವಾಗ ಏಳುವ ವಿದ್ಯುತ್ತಿನ ಸೂಕ್ಷ್ಮತಮ ವಿದ್ಯುದ್ದ್ವಿಭವ ವ್ಯತ್ಯಾಸಗಳನ್ನು ತೋರುವ ದಾರದ ಗ್ಯಾಲ್ವನೊಮೀಟರನ್ನು ಕಂಡುಹಿಡಿದ. ಅದು ಸೂಚಿಸುವ ವ್ಯತ್ಯಾಸಗಳನ್ನು ಗುರುತಿಸುವ ಯಂತ್ರಸಾಧನವಾಗಿ ಎಲೆಕ್ಟ್ರೊಕಾರ್ಡಿಯೋಗ್ರಾಫ್ ಸುಮಾರು 20 ವರ್ಷಗಳ ಕಾಲ ಬಳಕೆಯಲ್ಲಿತ್ತು. ಹೀಗೆ ಗುರುತಿಸಿದ ಚಿತ್ರವನ್ನು ಗುಂಡಿಗೆಯ ತಂತಿ ಸುದ್ದಿ ಎಂದು ಅವನು ಕರೆಯುತ್ತಿದ್ದ. ಇದೇ ಅಲ್ಲದೆ ಇದನ್ನು ಚಿತ್ರಿಸಲು ಮೈಯಲ್ಲಿ ತಂತಿಗಳನ್ನು ಎಲ್ಲೆಲ್ಲಿ ತಗುಲಿಸಬೇಕೆಂದೂ ಇವನು ನಿರ್ಧರಿಸಿದ್ದು ಈಗಲೂ ಜಾರಿಯಲ್ಲಿದೆ. ಇಂದು ಬಳಕೆಯಲ್ಲಿರುವ ಸುಧಾರಿತ ಎಲೆಕ್ಟ್ರೊಕಾರ್ಡಿಯೋಗ್ರಾಫ್ ಕೂಡ ಇದೇ ಮಾದರಿಯದು.

(ಡಿ.ಎಸ್.ಎಸ್.)

**ಐಕ್‌ಮನ್, ಕ್ರಿಶ್ಚಿಯಾನ್:** 1858–1930. ಆಹಾರ ಪುಷ್ಟಿಯನ್ನು ಕುರಿತ ಸಂಶೋಧನೆಗಳಿಗೆ ಹೆಸರಾದ ಡಚ್ ರೋಗವಿಜ್ಞಾನಿ. ಬೆರಿಬೆರಿ ರೋಗವನ್ನು ನಿವಾರಿಸುವ ಜೀವಾಣುವಾದ ಅನ್ಯೂರಿನನ್ನು ಕಂಡುಹಿಡಿದು ನೊಬೆಲ್ ಬಹುಮಾನ ಪಡೆದ (1929). ಆಂಸ್ಟರ್ಡಾಂ ವಿಶ್ವವಿದ್ಯಾನಿಲಯದಲ್ಲಿ ವೈದ್ಯ ಪದವೀಧರನಾದ. ಬರ್ಲಿನ್‌ನಲ್ಲಿದ್ದ ವಿಶ್ವ ಪ್ರಸಿದ್ಧ ರಾಬರ್ಟ್ ಕಾಕ್ ಕೈಕೆಳಗೆ ಏಕಾಣುಜೀವಿವಿಜ್ಞಾನ ಕಲಿತ. ಅಲ್ಲಿಂದ ಡಚ್ಚರ ವಸಾಹತಾಗಿದ್ದ ಬಟೇವಿಯ (ಇಂದಿನ ಇಂಡೋನೇಷ್ಯ)ಕ್ಕೆ ಹೋಗಿ ಅಲ್ಲಿ ರೋಗವಿಜ್ಞಾನ ಸಂಶೋಧನಾ ಸಂಸ್ಥೆಗೆ ನಿರ್ದೇಶಕನಾದ. ಆ ದೇಶದಲ್ಲಿ ಬಹುವಾಗಿ ಹರಡಿ ಕಾರಣವೇ ಗೊತ್ತಿಲ್ಲದೆ ಜನರು ಬಲಿಯಾಗುತ್ತಿದ್ದ ಬೆರಿಬೆರಿ ರೋಗದ ಸಂಶೋಧನೆಯನ್ನು 1890ರಿಂದ ಸುಮಾರು ಏಳು ವರ್ಷಗಳ ಕಾಲ ನಡೆಸಿದ. ಹೊಳಪಿಟ್ಟ ಬಿಳಿಯ ಅಕ್ಕಿ ಹಾಕಿ ಪಾರಿವಾಳಗಳನ್ನು ಸಾಕಿ ಬೆರಿಬೆರಿ ರೋಗ ಬರುವುದನ್ನು ಮೊದಲು ತೋರಿಸಿಕೊಟ್ಟ ಇನ್ನೊಬ್ಬ ಡಚ್ ವೈದ್ಯ ಗ್ರಿನ್ಸ್‌ನೊಂದಿಗೆ ಸೇರಿ ಬೆರಿಬೆರಿ ರೋಗಕ್ಕೆ ಅಕ್ಕಿ ತವುಡೇ ಮದ್ದು ಎನ್ನುವುದನ್ನು ತೋರಿಸಿದಾಗ ಇಡೀ ಜೀವಾಣುಗಳ ಶೋಧನೆಯ ನಾಂದಿ ಆಯಿತು. ಐಕ್‌ಮನ್ ಮತ್ತೆ ಹಾಲೆಂಡಿಗೆ ಮರಳಿ 1928ರವರೆಗೂ ಆರೋಗ್ಯವಿಜ್ಞಾನ ಪ್ರಾಧ್ಯಾಪಕನಾಗಿದ್ದ. ಸಾಯುವ 2 ವರ್ಷ ಮುಂಚೆ ನಿವೃತ್ತನಾದ.

(ಡಿ.ಎಸ್.ಎಸ್.)

**ಐಕ್ಹಾರ್ನಿಯ:** ನೀರಿನಲ್ಲಿ ಅಥವಾ ಹೆಚ್ಚಿನ ತೇವದಲ್ಲಿ ಬೆಳೆಯುವ, ಮೂಲಿಕೆಯಂಥ ಒಂದು ಏಕದಳ ಸಸ್ಯಜಾತಿ ಪಾಂಟಿಡೇರಿಯೇಸಿ ಕುಟುಂಬಕ್ಕೆ ಸೇರಿದೆ. ಈ ಜಾತಿಯಲ್ಲಿ 5 ಪ್ರಭೇದಗಳಿವೆ. ಅವುಗಳಲ್ಲಿ ಐ. ಕ್ರ್ಯಾಸಿಪೆಸ್ ಎಂಬುದು ಮುಖ್ಯವಾದದ್ದು.

ಐಕಾರ್ನಿಯ ಸಸ್ಯದ ಕಾಂಡ ಸಂಯುಕ್ತ ರೀತಿಯದು. ಪಕ್ಕದ ಕಾಂಡ ಮುಖ್ಯ ಕಾಂಡಕ್ಕೆ ಅಂಟಿಕೊಂಡಿರುತ್ತದೆ. ಗಿಣ್ಣಿನ ಬಳಿ ಬೇರು. ಎಲೆಗಳು ಚಕ್ರ ಅಥವಾ ಹೃದಯದ ಆಕಾರವಾಗಿರುತ್ತವೆ. ಐ. ಕ್ರ್ಯಾಸಿಪೆಸಿನಲ್ಲಿ ಎಲೆಯ ತೊಟ್ಟು ಚೀಲದಂತೆ ಊದಿಕೊಂಡಿರುತ್ತದೆ. ಹೂಗೊಂಚಲು ತೆನೆಯಾಗಿದ್ದು ಉಪಪತ್ರ ಅಥವಾ ಯುಗದಿಂದ ಆವೃತವಾಗಿರುತ್ತದೆ. ಹೂಗಳು ದ್ವಿಲಿಂಗಿಗಳಾಗಿಯೂ ಪಾರ್ಶ್ವಸೌಷ್ಠವವುಳ್ಳವಾಗಿಯೂ ಇವೆ. ಪುಷ್ಪಾಂಗ ಸಂಖ್ಯೆ ಮೂರರ ಅಪವರ್ತ್ಯದಲ್ಲಿದೆ. ಆಲಿಕೆಯಾಕಾರದಲ್ಲಿರುವ ಪುಷ್ಪಾವರಣ ನೀಲನೇರಳೆ ಅಥವಾ ಬಿಳಿ ಬಣ್ಣದ್ದು. ಅದರಲ್ಲಿ 6 ಪುಷ್ಪಪತ್ರಗಳಿರುತ್ತವೆ. ಕೇಸರಗಳು 6. ಕೇಸರದಂಡಗಳಲ್ಲಿ 3 ಉದ್ದವಾಗಿಯೂ 3 ಚಿಕ್ಕವಾಗಿಯೂ ಇವೆ. ಅಂಡಕೋಶದಲ್ಲಿ 3 ಭಾಗಗಳಿವೆ. ಅಂಡಾಶಯ ಉಚ್ಚಸ್ಥಿತಿಯಲ್ಲಿದೆ. ಅಂಡಕಗಳು ಪ್ರತಿಕುಹರದಲ್ಲೂ ಅಧಿಕ ಸಂಖ್ಯೆಯಲ್ಲಿವೆ.



ಐಕ್ಹಾರ್ನಿಯ ಕ್ರ್ಯಾಸಿಪೆಸ್

ಐ.ಕ್ರ್ಯಾಸಿಪೆಸ್ ಎಂಬ ಪ್ರಭೇದ ಅಮೆರಿಕ, ಆಸ್ಟ್ರೇಲಿಯಾ, ಜಾವ, ಭಾರತ, ಪಾಕಿಸ್ತಾನ ಮುಂತಾದ ದೇಶಗಳಲ್ಲಿ ಹೆಚ್ಚಾಗಿದ್ದು ನೀರಿನಲ್ಲಿ ಬೃಹತ್ ಕಳೆಯಾಗಿ ವ್ಯಾಪಿಸಿ ತೊಂದರೆಯನ್ನುಂಟುಮಾಡುತ್ತಿದೆ. ಕೆಲವು ಕಡೆಗಳಲ್ಲಿ ಹಡಗಿನ ಸಂಚಾರಕ್ಕೂ ಅಡ್ಡಿಯನ್ನುಂಟುಮಾಡಿದೆ. ಕೆರೆ, ಕಾಲುವೆ, ಕುಂಟೆಗಳಲ್ಲಿ ಒತ್ತಾಗಿ ಬೆಳೆದು ಸೊಳ್ಳೆಗಳ ಉದ್ಭವಸ್ಥಾನವಾಗಿದೆ. ಈ ಸಸ್ಯವನ್ನು ನಿರ್ಮೂಲ ಮಾಡುವುದು ಒಳ್ಳೆಯದಾದರೂ ಈ ಜಾತಿಯ ಕೆಲವು ಪ್ರಭೇದಗಳನ್ನಾದರೂ ಅವುಗಳ ಚೆಲುವಾದ ಹೂಗಳಿಗಾಗಿ ಉಳಿಸಿಕೊಳ್ಳಬೇಕಾಗುತ್ತದೆ.

(ಬಿ.ಎನ್.ಎನ್.ಆರ್.)

**ಐಗಂಡಪುರ:** ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರುಘಟ್ಟ ಕೆರೆಯ ದಕ್ಷಿಣ ದಂಡೆಯಲ್ಲಿರುವ ಗ್ರಾಮ. ಇದರ ಪ್ರಾಚೀನ ಹೆಸರು ಐವರ್ಕಂಡಪುರವೆಂದೂ ಐದು ಜನ– ಪಂಚಪಾಂಡವರು– ಕಂಡು ನೆಲೆಸಿದ ಗ್ರಾಮವಾದ್ದರಿಂದ ಇದಕ್ಕೆ ಈ ಹೆಸರು ಬಂದಿತೆಂದೂ ಹೇಳಲಾಗಿದೆ. ಇಲ್ಲಿ ಧರ್ಮೇಶ್ವರ ಎಂಬ ದೊಡ್ಡ ದೇವಾಲಯವಿದ್ದು ಅದರೊಳಗೆ ಭೀಮ, ನಕುಲ, ಸಹದೇವ ಮತ್ತು ಕುಂತಿಯರ ಹೆಸರಿನಲ್ಲಿ ಲಿಂಗಗಳನ್ನೊಳಗೊಂಡ ಸಣ್ಣ ಗುಡಿಗಳಿವೆ. ಧರ್ಮೇಶ್ವರಾಲಯ ದಕ್ಷಿಣಾಭಿಮುಖವಾಗಿದ್ದರೂ ಗರ್ಭಗುಡಿಯ ಲಿಂಗ ಪೂರ್ವಾಭಿಮುಖವಾಗಿದೆ. ಗರ್ಭಗೃಹ ಸುಕನಾಸಿ ಮತ್ತು ನವರಂಗಗಳನ್ನೊಳಗೊಂಡಿದೆ. ಗರ್ಭಗೃಹದ ಮೇಲೆ ಪಲ್ಲವ ಶೈಲಿಯ ಮೆಟ್ಟಲು ಮೆಟ್ಟಲಿನ ವಿಮಾನವಿದೆ. ಒಳಗೆ ಲಿಂಗೋದ್ಭವ ಮೂರ್ತಿಯ ವಿಗ್ರಹವೊಂದಿದೆ. ಲಿಂಗಪೀಠದ ಮೇಲಿರುವ ಸು.11ನೆಯ ಶತಮಾನದ ಪದ್ಯಶಾಸನಗಳಿಂದ ಈ ಪೀಠವನ್ನು ವಾಮನನ ಅಧೀನನಾದ ಮಾದನಾಯಕ ಮಾಡಿಸಿದುದಾಗಿ ತಿಳಿದುಬರುತ್ತದೆ.

ಇಲ್ಲಿನ ತಮಿಳು ಶಾಸನಗಳಿಂದ ಈ ಗ್ರಾಮದ ಮತ್ತು ಆಲಯ ಕುರಿತಾದ ಹೆಚ್ಚಿನ ವಿವರಗಳು ಲಭಿಸಿವೆ. ಚೋಳ ಮನೆತನದ 1ನೆಯ ರಾಜೇಂದ್ರ ಮತ್ತು 1ನೆಯ ಕುಲೋತ್ತುಂಗರು ಕ್ರಮವಾಗಿ 1033–34 ಮತ್ತು 1113–14ನೆಯ ವರ್ಷದ ಮತ್ತು ಹೊಯ್ಸಳ ರಾಮನಾಥನ ಆಳ್ವಿಕೆಯ 38ನೆಯ ವರ್ಷದ ಹಾಗೂ ಮುಮ್ಮಡಿ ಬಲ್ಲಾಳ 1302ರಲ್ಲಿ ಹೊರಡಿಸಿದ ತಮಿಳು ಶಾಸನಗಳು ಇಲ್ಲಿವೆ. ಚೋಳರ ಶಾಸನಗಳಿಂದ ಈ ಗ್ರಾಮ ವಿಕ್ರಮಚೋಳಮಂಡಲದ ಕುಕ್ಕನೂರು ನಾಡಿಗೆ ಸೇರಿದುದಾಗಿ ತಿಳಿದಿದೆ. ರಾಜೇಂದ್ರನ ಶಾಸನದಲ್ಲಿ ಈ ಗ್ರಾಮವನ್ನು ಕೊಳಿಸಂಪ್ರಚ್ಚೆ ಎಂದೂ ಕುಲೋತ್ತುಂಗನ ಶಾಸನದಲ್ಲಿ ಪೆರಿಯಮತ್ತಕ್ಕೂರು ಎಂದೂ ಕರೆದಿದೆ. ಹೊಯ್ಸಳ ರಾಮನಾಥನ ಶಾಸನದಲ್ಲಿ ಇಲ್ಲೆಪಾಕನಾಡಿಗೆ ಸೇರಿದ ತೀಗೈಕೋಟ್ಟೆಪಯರ್ ಕಟ್ಟಂ ಎಂದಿದೆ. ಎಲ್ಲ ಶಾಸನಗಳಲ್ಲಿಯೂ ದೇವರನ್ನು ಐವರ್‌ಗಂಡ ಮಹಾದೇವ, ಐವರ್ಕಂಡೀಶ್ವರಮುಡೈಯ ಮಹಾದೇವ ಮತ್ತು ಐವರ್ಕಂಡೀಶ್ವರ ನಾಯನಾರ್ ಎಂದು ಕರೆದಿದೆ. ರಾಜೇಂದ್ರನ ಶಾಸನದಲ್ಲಿ ಈ ದೇವರನ್ನು ಸಿದ್ಧೇಶ್ವರನೆಂದು ಸಂಬೋಧಿಸಿದೆ. ಇದನ್ನು ಕಟ್ಟಿಸಿದಾತ ಯುದ್ಧಮಲ್ಲ. ದಂಡನಾಯಕ ಅಪ್ಪಯನ್ ವಾಮನಯ್ಯನ್ ಎಂದು

ಹೇಳಿದೆ. ಲಿಂಗಪೀಠದಲ್ಲಿ ದೊರೆತ ಶಾಸನದಲ್ಲಿ ಉಕ್ತನಾದ ವಾಮನ ಈತನೇ ಆಗಿರಬೇಕು. ಈ ದೇವಾಲಯ 11ನೆಯ ಶತಮಾನದ ಕಟ್ಟಡವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕುಂತಿಲಿಂಗದ ಗುಡಿಯ ಬಳಿ ದೊರೆತ ಹೊಯ್ಸಳ ನರಸಿಂಹನ ಕನ್ನಡ ಶಾಸನದಲ್ಲಿ ಈ ದೇವರನ್ನು ಅಯ್ವರಗಂಡ ದೇವನೆಂದೇ ಕರೆದಿದೆ. (ಬಿ.ಆರ್.ಜಿ.)

**ಐಚ್ಛಿಕ ವಿಷಯಗಳು:** ವಿದ್ಯಾರ್ಥಿ ತನ್ನ ಇಚ್ಛೆಗೆ ಅನುಸಾರವಾಗಿ ಆರಿಸಿಕೊಳ್ಳುವ ಅಧ್ಯಯನ ವಿಷಯಗಳು (ಆಪ್ಷನಲ್ ಸಬ್ಜೆಕ್ಟ್ಸ್). ಭಾರತದಲ್ಲಿ ಸಾಮಾನ್ಯವಾಗಿ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಹೀಗೆ ಆರಿಸಿಕೊಳ್ಳುವ ಅವಕಾಶವಿರುತ್ತದೆ. ಕೆಲವು ಕಡೆಗಳಲ್ಲಿ ಪ್ರಾಥಮಿಕ ಶಾಲೆಯ ಮೇಲ್ತರಗತಿಗಳಲ್ಲೂ ಇಂಥ ಅವಕಾಶ ಉಂಟು. ವಿಷಯದ ಆಯ್ಕೆಗೆ ವಿದ್ಯಾರ್ಥಿಯ ಆಸಕ್ತಿ ಅಭಿರುಚಿಗಳೇ ನಿರ್ಣಾಯಕ ಕಾರಣಗಳು. ಜೊತೆಗೆ ತಾನು ಕೈಗೊಳ್ಳಬೇಕೆಂದಿರುವ ಕಸುಬಿಗೆ ಅನುಕೂಲವಾಗುವಂಥ ವಿಷಯಗಳನ್ನು ಆಯ್ದುಕೊಂಡು ಅವುಗಳಲ್ಲಿ ಪರಿಣತಿಯನ್ನು ಸಾಧಿಸಿದರೆ ಇನ್ನೂ ಉತ್ತಮ.

ಪ್ರೌಢಶಾಲೆಗಳಲ್ಲಿ ಹುಡುಗರ ಆಸಕ್ತಿಗಳಿಗೆ ಅನುಗುಣವಾಗಿ ಅವರವರ ಯೋಗ್ಯತೆಗೆ ತಕ್ಕಂತೆ ಅನೇಕ ಐಚ್ಛಿಕ ವಿಷಯಗಳಿವೆ. ಇವನ್ನು ಎರಡು ಮತ್ತು ಮೂರನೆಯ ವರ್ಷಗಳಲ್ಲಿ ವ್ಯಾಸಂಗ ಮಾಡಬೇಕು. ಇತ್ತೀಚಿನವರೆಗೂ ಕರ್ನಾಟಕ ರಾಜ್ಯದಲ್ಲಿ ಮೂರು ವಿಷಯಗಳನ್ನು ಒಳಗೊಂಡ ಒಂದು ಅಧ್ಯಯನ ಸಮೂಹವನ್ನು ಆರಿಸಿಕೊಳ್ಳಲು ಅವಕಾಶವಿತ್ತು. ಅಂಥ ಎಂಟು ಅಧ್ಯಯನ ವಿಷಯ ಸಮೂಹಗಳನ್ನೂ ಒಂದೊಂದು ವಿಷಯದಲ್ಲೂ ಆಯಬಹುದಾದ ವಿಷಯಗಳನ್ನೂ ಕೆಳಗೆ ಸೂಚಿಸಿದೆ : 1 ಮಾನವಿಕ ಗುಂಪಿನ ವಿಷಯಗಳು: i ಆಧುನಿಕ ಭಾಷೆ (ಕನ್ನಡ, ತೆಲುಗು, ಹಿಂದಿ, ಮರಾಠಿ, ಉರ್ದು, ಇಂಗ್ಲಿಷ್, ಫ್ರೆಂಚ್ ಮತ್ತು ಜರ್ಮನ್) ii ಪ್ರಾಚೀನ ಭಾಷೆ (ಸಂಸ್ಕೃತ, ಪಾಳಿ, ಪ್ರಾಕೃತ, ಪರ್ಷಿಯನ್ ಅಥವಾ ಅರಬ್ಬೀ ಭಾಷೆ) iii ಗಣಿತ iv ಚರಿತ್ರೆ v ಭೂಗೋಳವಿಜ್ಞಾನ vi ಅರ್ಥಶಾಸ್ತ್ರ vii ರಾಜನೀತಿವಿಜ್ಞಾನ viii ಪೌರನೀತಿ ix ಸಮಾಜವಿಜ್ಞಾನ 2. ವಿಜ್ಞಾನಶಾಸ್ತ್ರದ ಗುಂಪಿನ ವಿಷಯಗಳು : ಇವುಗಳಲ್ಲಿ ಯಾವುದಾದರೂ ಒಂದು ಗುಂಪನ್ನು ಆರಿಸಬಹುದು. i ಭೌತವಿಜ್ಞಾನ, ರಸಾಯನವಿಜ್ಞಾನ, ಮತ್ತು ಗಣಿತವಿಜ್ಞಾನ ii ಭೌತವಿಜ್ಞಾನ, ರಸಾಯನವಿಜ್ಞಾನ ಮತ್ತು ಜೀವವಿಜ್ಞಾನ 3 ತಾಂತ್ರಿಕ ಗುಂಪಿನ ವಿಷಯಗಳು; i ಗಣಿತವಿಜ್ಞಾನ ii ಭೌತವಿಜ್ಞಾನ, iii ರಸಾಯನವಿಜ್ಞಾನ iv ಎಂಜಿನಿಯರಿಂಗ್, ಡ್ರಾಯಿಂಗ್. 4 ಕೃಷಿವಿಜ್ಞಾನ; i ರಸಾಯನವಿಜ್ಞಾನ ii ಜೀವವಿಜ್ಞಾನ iii ಪಶುಸಂಗೋಪನ iv ತೋಟಗಾರಿಕೆ ಮತ್ತು ಕೃಷಿವಿಜ್ಞಾನ. 5 ವಾಣಿಜ್ಯದ ಗುಂಪಿನ ವಿಷಯಗಳು: ಇವುಗಳಲ್ಲಿ ಯಾವುದಾದರೂ ಮೂರು ವಿಷಯಗಳು: i ವಾಣಿಜ್ಯಶಾಸ್ತ್ರ ii ಜಮಾಖರ್ಚು ಅಥವಾ ಬುಕ್‌ಕೀಪಿಂಗ್ iii ಟೈಪ್‌ರೈಟಿಂಗ್ iv ಅರ್ಥಶಾಸ್ತ್ರ v ಸಹಕಾರಶಾಸ್ತ್ರ vi ಶೀಘ್ರಲಿಪಿ ಅಥವಾ ಷಾರ್ಟ್‌ಹ್ಯಾಂಡ್ vii ವಾಣಿಜ್ಯ ಭೂಗೋಳ, 6 ಗೃಹವಿಜ್ಞಾನ: i ಅ. ಗೃಹಕಾರ್ಯ ನಿರ್ವಹಣೆ ಆ. ನೆಯ್ಗೆ, ಬಟ್ಟೆಗಳು. ii ಆಹಾರ, ದೇಹಪೋಷಣೆ ಮತ್ತು ಅಡಿಗೆ iii ಶಿಶು ಸಂರಕ್ಷಣೆ ಮತ್ತು ಮಕ್ಕಳ ಬೆಳೆವಣಿಗೆ ಮತ್ತು ತಾಯ್ತನದ ಕಲೆ. 7. ಲಲಿತಕಲೆಗಳು: ಚಿತ್ರಕಲೆ ಮತ್ತು ವರ್ಣಕಲೆ ಸಂಗೀತ–ಕರ್ಣಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಪಾಶ್ಚಾತ್ಯ ಸಂಗೀತ ನೃತ್ಯ–ಭರತನಾಟ್ಯ; ಕಥಕ್ಕಳಿ; ಶಿಲ್ಪಶಾಸ್ತ್ರ. 8. ಮತ್ಸ್ಯೋದ್ಯಮಶಾಸ್ತ್ರದ ಗುಂಪಿನ ವಿಷಯಗಳು: i ರಸಾಯನವಿಜ್ಞಾನ ii ಜೀವವಿಜ್ಞಾನ iii ಮತ್ಸ್ಯೋದ್ಯಮ, ತಂತ್ರ.

ಮಾಧ್ಯಮಿಕ ಶಾಲಾ ಘಟ್ಟದಲ್ಲೂ ಐಚ್ಛಿಕ ವಿಷಯಗಳನ್ನು ಇಟ್ಟಿದ್ದಾರೆ. ಅವುಗಳಲ್ಲಿ ಬಡಗಿ ಕೆಲಸ, ವ್ಯವಸಾಯ, ದರ್ಜಿ ಕೆಲಸ, ಕಮ್ಮಾರನ ಕೆಲಸ ಇತ್ಯಾದಿಗಳು ಮುಖ್ಯವಾದವು. ಈ ಐಚ್ಛಿಕ ವಿಷಯಗಳ ಉದ್ದೇಶ ಬಾಲಕರು ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸದ ಅನಂತರ ಸೂಕ್ತ ಉದ್ಯೋಗಗಳನ್ನು ಕೈಗೊಳ್ಳಲು ಅನುವು ಮಾಡುವುದೇ ಆಗಿದೆ.

ಐಚ್ಛಿಕ ವಿಷಯಗಳ ಬಗ್ಗೆ ಹೊಸ ಪ್ರಯೋಗಗಳು: 1956ರಲ್ಲಿ ಪ್ರಕಟವಾದ ಕೊಠಾರಿ ಶಿಕ್ಷಣ ಆಯೋಗದ ಸಲಹೆಯಂತೆ ಪ್ರೌಢಶಾಲೆಯ ಹಂತದಲ್ಲಿ ಐಚ್ಛಿಕ ವಿಷಯಗಳನ್ನು ಆರಂಭಿಸುವುದನ್ನು ಮುಂದೆ ಹಾಕುವ ಯತ್ನ ನಡೆಯುತ್ತಿದೆ. ಆಧುನಿಕ ಸಮಾಜಜೀವನ ಹೆಚ್ಚು ಹೆಚ್ಚು ಸಂಕೀರ್ಣವಾದಂತೆ ಹೆಚ್ಚಿನ ಸಾಮಾನ್ಯ ಶಿಕ್ಷಣ ಅಗತ್ಯವೆಂದೂ ವಿಶಿಷ್ಟ ಅಧ್ಯಯನಕ್ಷೇತ್ರಕ್ಕೆ ಕಾಲಿಡಲು ಅದು ತೀರ ಎಳೆಯ ವಯಸ್ಸೆಂದೂ ಈ ಸಲಹೆಯನ್ನು ಮಾಡಲಾಗಿದೆ. ಕೆಲವು ರಾಜ್ಯಗಳಲ್ಲಿ ಈ ಸಲಹೆಯನ್ನನುಸರಿಸಿ ಪ್ರೌಢಶಾಲೆಗಳಲ್ಲಿ ಐಚ್ಛಿಕ ವಿಷಯಗಳನ್ನೇ ತೆಗೆದುಹಾಕಿ ಜೂನಿಯರ್ ಕಾಲೇಜಿನಲ್ಲಿ ಅವಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಈ ಹೊಸ ಪ್ರಯೋಗದ ಬಗ್ಗೆ ಶಿಕ್ಷಣವೇತ್ತರಲ್ಲಿ ಒಮ್ಮತ ಅಭಿಪ್ರಾಯವಿಲ್ಲ. ಸದ್ಯದ ಪ್ರಯೋಗದ ಫಲಾಫಲಗಳನ್ನು ನೋಡಿಕೊಂಡು ಮುಂದೆ ಆ ಬಗ್ಗೆ ಸಾರ್ವತ್ರಿಕವೂ ಸಾಧುವೂ ಆದ ತೀರ್ಮಾನಗಳನ್ನು ಕೈಗೊಳ್ಳಬೇಕಾಗುತ್ತದೆ. (ಕೆ.ಆರ್.ವಿ.)

**ಐಡರ್ ಬಾತು:** ಸೊಮಟೇರಿಯ ಜಾತಿಗೆ ಸೇರಿದ ಕಡಲಬಾತು. ಇವುಗಳಲ್ಲಿ ಹಲವು ಬಗೆಯ ಪ್ರಭೇದಗಳಿದ್ದರೂ ಅಮೆರಿಕದ ಐಡರ್ *(ಸೊ.ಡ್ರೆಸ್ಸೇರಿ)* ಮತ್ತು ಯುರೋಪಿನ ಐಡರ್ *(ಸೊ.ಮೊಲ್ಲಿಸ್ಸಿಮ)* ಎಂಬುವು ಪ್ರಸಿದ್ಧವಾದುವು. ಇವು ಲ್ಯಾಬ್ರಡಾರ್, ನ್ಯೂಫೌಂಡ್‌ಲೆಂಡ್, ಗ್ರೀನ್‌ಲೆಂಡ್, ಐಸ್ಲೆಂಡ್ ಮತ್ತು ನಾರ್ವೆಗಳ ಕಡಲ ತೀರ ಪ್ರದೇಶಗಳಲ್ಲಿ ವಾಸಿಸುತ್ತವೆ. ಇವುಗಳ ತಲೆ ವಿಚಿತ್ರ ಹಾಗೂ ವೈಶಿಷ್ಟ್ಯಪೂರ್ಣವಾದದ್ದು, ತಲೆ ದಪ್ಪ: ಕೊಕ್ಕು ಮೂರು ಅಂಗುಲಗಳಷ್ಟು ಉದ್ದವಿದ್ದು ಮುಂದಲೆಯಿಂದ ಹೊರಟ ಪುಕ್ಕ ಮೂಗಿನ ಹೊಳ್ಳೆಯುವರೆಗೂ ಚಾಚಿರುವುದರಿಂದ ಹಳದಿಬಣ್ಣದ ಕೊಕ್ಕು ಪುಕ್ಕಮಯವಾಗಿರುವಂತೆ ಕಾಣುತ್ತದೆ. ಗಂಡುಬಾತಿನ ತಳಭಾಗದಲ್ಲಿ ಕಪ್ಪು ಪುಕ್ಕಗಳಿವೆ. ತಲೆ ಮತ್ತು ಬೆನ್ನಿನ ಭಾಗವೆಲ್ಲ ಬಿಳುಪು ಪುಕ್ಕಗಳಿಂದ ಆವೃತವಾಗಿದೆ. ಹೆಣ್ಣಿನ ರೆಕ್ಕೆಯನ್ನು ಅಗಲಿಸಿದರೆ ಕೆಂಪು ಚುಕ್ಕೆಗಳಿಂದ ಕೂಡಿದ ಎರಡು ಕಪ್ಪು ಪಟ್ಟೆಗಳನ್ನು ಕಾಣಬಹುದು. ಈ ಹಕ್ಕಿಗಳು ಏಡಿ, ಕಡಲ ಡುಬ್ಬೆ ಮತ್ತು ಕಪ್ಪೆ ಚಿಪ್ಪು ಹುಳುಗಳನ್ನು ನುಂಗಿ ಜೀರ್ಣಿಸಿಕೊಳ್ಳುತ್ತವೆ. ಚೆನ್ನಾಗಿ ಈಜುತ್ತವೆ. 7–9 ಮೀಗಳ ಆಳದವರೆಗೂ ನೀರಿನಲ್ಲಿ ಮುಳುಗಬಲ್ಲುವು. ಸಂತಾನೋತ್ಪತ್ತಿ ಕಾಲದಲ್ಲಿ ಹೆಣ್ಣು ಬಾತು ಸಮುದ್ರದ ದಡದ ಮೇಲೆ

ಬೆಳೆದಿರುವ ಜೊಂಡುಹುಲ್ಲಿನ ಸಹಾಯದಿಂದ ಗೂಡನ್ನು ಮಾಡಿಕೊಂಡು ಅದರಲ್ಲಿ ತನ್ನ ಎದೆಯ ಪುಕ್ಕವನ್ನು ಚೆಲ್ಲಿ ಮೃದುವಾದ ಹಾಸಿಗೆಯನ್ನು ಮಾಡಿಕೊಂಡು ಮೊಟ್ಟೆಗಳನ್ನಿಡುತ್ತದೆ. ಒಂದೊಂದು ಗೂಡಿನಲ್ಲಿ ಸರಾಸರಿ ಐದು ಮೊಟ್ಟೆಗಳಿರುತ್ತವೆ. ಗೂಡು ಬಿಟ್ಟು ಹೊರಗೆ ಬರುವಾಗಲೆಲ್ಲ ಹೆಣ್ಣು ಬಾತು ತನ್ನ ಎದೆಯಭಾಗದ ಪುಕ್ಕವನ್ನು ಮೊಟ್ಟೆಗಳ ಮೇಲೆ ಉದುರಿಸಿ ಹೊದಿಕೆ ಮಾಡುತ್ತದೆ.

ಅಲ್ಲಿನ ನಿವಾಸಿಗಳು ತಮ್ಮ ಆಹಾರಕ್ಕಾಗಿ ಮೊಟ್ಟೆಗಳನ್ನೂ ಹಾಸಿಗೆ ಮತ್ತು ಹೊದಿಕೆಗಳ ತಯಾರಿಕೆ ಪುಕ್ಕಗಳನ್ನೂ ಸಂಗ್ರಹಿಸುತ್ತಾರೆ. ಗೂಡು ಖಾಲಿಯಾದಂತೆಲ್ಲ ಹೆಣ್ಣು ಬಾತು ಮತ್ತೆ ಪುಕ್ಕಗಳನ್ನು ಬಿಚ್ಚಿ ಹಾಸಿಗೆ ಮಾಡಿಕೊಂಡು ಮೊಟ್ಟೆಗಳನ್ನು ಇಡುತ್ತದೆ. ಹೆಣ್ಣು ಐಡರ್ ಬಾತಿನ ಪುಕ್ಕ ಗಂಡಿನದಕ್ಕಿಂತ ಮೃದು, ಹಗುರ ಮತ್ತು ಸ್ಥಿತಿಸ್ಥಾಪಕ ಶಕ್ತಿಯುಳ್ಳದ್ದು. ಹೆಚ್ಚು ಶಾಖ ಕೊಡುವ ಈ ಪುಕ್ಕಗಳಿಂದ ಬೆಲೆಬಾಳುವ ಹಾಸಿಗೆ ಮತ್ತು ಹೊದಿಕೆಗಳು ತಯಾರಾಗುತ್ತವೆ. ಗಂಡಿನ ಪುಕ್ಕಗಳಿಂದ ಮಾಡಿದ ಹಾಸಿಗೆಗಳಿಗೆ ಬೆಲೆ ಕಡಿಮೆ. ಹೆಚ್ಚು ಮೊಟ್ಟೆಗಳನ್ನಿಡುತ್ತದಾದರೂ ಜನಶೋಷಣೆಯಿಂದಾಗಿ ಈ ಜಾತಿಯ ಸಂತಾನ ಕ್ರಮೇಣ ಕ್ಷೀಣಿಸುತ್ತಿದೆ. ಈಚೆಗೆ ಕಾನೂನಿನ ರಕ್ಷಣೆ ನೀಡಿ ಈ ಜಾತಿಯನ್ನು ಸಂರಕ್ಷಿಸಲು ಏರ್ಪಾಟು ಮಾಡಿದ್ದಾರೆ. (ಬಿ.ಎನ್.ಬಿ.; ಕೆ.ಎಸ್.ಎನ್.)

**ಐಡಿಯಲಿಸಂ:** ಪಾಶ್ಚಾತ್ಯ ದರ್ಶನ ಪದ್ಧತಿಯಲ್ಲಿ ಪ್ರಸಿದ್ಧವಾದ ಒಂದು ಪಂಥ. ಇದನ್ನು ಧ್ಯೇಯವಾದ ಅಥವಾ ಚಿದೇಕಸತ್ಯತಾವಾದ ಎಂದು ಭಾಷಾಂತರಿಸಬಹುದು. ಮೊದಲ ಅರ್ಥದಲ್ಲಿ ಪ್ಲೇಟೊವಿನ ಸಿದ್ಧಾಂತವನ್ನು ಐಡಿಯಲಿಸಂ ಎಂದು ವ್ಯವಹರಿಸುವುದುಂಟು. ಐಡಿಯಲ್ ಎಂದರೆ ಧ್ಯೇಯ, ಆದರ್ಶ, ಗುರಿ ಎಂದು ಅರ್ಥ. ಪ್ಲೇಟೊ ಪ್ರತ್ಯಕ್ಷ ಸಿದ್ಧವಾದ ಪ್ರಪಂಚಕ್ಕಿಂತ ಸತ್ಯ ಸೌಂದರ್ಯ ಮತ್ತು ಧಾರ್ಮಿಕ ಪುರುಷಾರ್ಥಗಳು ಹೆಚ್ಚು ಮೂಲಭೂತವಾದ ತತ್ತ್ವಗಳೆಂದೂ ಅವೇ ವಿಶ್ವದ ತಳಹದಿಯಾಗಿರುವುವಲ್ಲದೆ ಅಂತಿಮ ಪ್ರಯೋಜನಗಳಾಗಿಯೂ ಇವೆಯೆಂದು ಸಾಧಿಸಿದ್ದರಿಂದ ಅವನ ಸಂಪ್ರದಾಯಕ್ಕೆ ಐಡಿಯಲಿಸಂ ಎಂದು ಪ್ರಸಿದ್ಧಿ ಬಂತು. ಆಧುನಿಕ ಐರೋಪ್ಯ ದರ್ಶನದಲ್ಲಿ ಬಾರ್ಕ್ಲೆ ಎಂಬುವನ ವಾದಕ್ಕೆ ಐಡಿಯಲಿಸಂ ಎಂದು ಹೆಸರು ಬಂದಿತು. ಇವರ ಪ್ರಕಾರ ಬಾಹ್ಯಪ್ರಪಂಚ, ಭೌತಿಕ ವಸ್ತು ಎಂಬುವುದು ಇಲ್ಲವೇ ಇಲ್ಲ. ಕೇವಲ ಚಿತ್ ಅಥವಾ ಜ್ಞಾನ ಮಾತ್ರ ಸತ್ಯ. ಬಾಹ್ಯಪ್ರಪಂಚ ಕೇವಲ ಚಿತ್ಕಲ್ಪಿತ. ಇವರ ನಿಲುವು ಪ್ರತ್ಯೇಕಪ್ರತ್ಯೇಕವಾದ ಜೀವಚೈತನ್ಯವನ್ನು ಅವಲಂಬಿಸಿರುವುದರಿಂದ, ಈ ಪಕ್ಷಕ್ಕೆ ವ್ಯಕ್ತಿನಿಷ್ಠ ಚಿದೇಕ ಸತ್ಯವಾದ ಎಂದು ಹೆಸರಾಯಿತು. ಇದು ಭಾರತೀಯ ದರ್ಶನದ ಯೋಗಾಚಾರಕ್ಕೆ ಹೋಲುತ್ತದೆ. ಮುಂದೆ ಬಂದ ಫಿಷ್ಟೆ, ಷಿಲಿಂಗ್, ಹೆಗೆಲ್ ಇವರು ಮೂಲಭೂತವಾದ ಅನಂತಚೈತನ್ಯ ಒಂದೇ ಸತ್ಯವೆಂದು ವಾದಿಸಿದರು. ಇವರ ಮತ ಅದ್ವೈತವೇದಾಂತವನ್ನು ಹೋಲುತ್ತದೆ. ವಿಶ್ವಚೈತನ್ಯವನ್ನು ಏಕಮಾತ್ರ ಪರಮಾರ್ಥವೆಂದು ಎತ್ತಿಹಿಡಿದಿದ್ದರಿಂದ ಈ ಪಂಥಕ್ಕೆ ವಿಶ್ವಚೈತನ್ಯ ಸತ್ಯತಾವಾದ (ಆಬ್ಜೆಕ್ಟಿವ್, ಸ್ಪೆಕ್ಯುಲೆಟಿವ್,

ಆಬ್ಸಲೂಟ್ ಐಡಿಯಲಿಸಂ) ಎಂದು ಖ್ಯಾತಿ ಬಂದಿತು. ಐಡಿಯಲಿಸಂ ಬಹಳ ಮೇಧಾವಿ ತಾತ್ತ್ವಿಕರಿಂದ ಪೋಷಿತವಾಗಿದ್ದು ಇಡೀ ದರ್ಶನಪ್ರಪಂಚದಲ್ಲೇ ಒಂದು ಪ್ರಧಾನ ಮಾರ್ಗವಾಗಿದೆ. ಇತ್ತೀಚಿನ ದರ್ಶನ ವಿಮರ್ಶೆಯಲ್ಲಿ ಇದರ ಪ್ರಾಬಲ್ಯ ಸ್ವಲ್ಪ ಕಡಿಮೆಯಾಗಿದೆ. ಸ್ಥಿತಿ ಹೀಗೆಯೇ ಮುಂದೆಯೂ ಇರುವುದೆಂದು ಹೇಳಬರದು. (ಎಸ್.ಎಸ್.ಆರ್.)

**ಐತರೇಯ:** 'ಇತರಾ'ದಿಂದ ಬಂದಿದೆ. ಇತರಾ ಎಂಬುವಳ ಪುತ್ರನಿರಬಹುದು. ಐತರೇಯ ಬ್ರಾಹಣ, ಐತರೇಯ ಆರಣ್ಯಕ, ಐತರೇಯ ಉಪನಿಷತ್ತು ಎಂಬ ಗ್ರಂಥಗಳು, ಈ ಹೆಸರಿನಲ್ಲಿ ಉಪಲಬ್ಧವಾಗಿವೆ. ಸಾಯಣಾಚಾರ್ಯರ ಪ್ರಕಾರ ಇತರಾ ಎಂಬವಳು ಬಹು ಪ್ರಾಚೀನನಾದ ಒಬ್ಬ ಋಷಿಯ ಪತ್ನಿ. ಇವಳಲ್ಲಿ ಜನಿಸಿದ ಪುತ್ರ ಮಹೀದಾಸ ಐತರೇಯ. ಈ ವಿಚಾರವಾಗಿ ಐತರೇಯ ಆರಣ್ಯಕದಲ್ಲಿ ಉಲ್ಲೇಖವಿದೆ. (ಬಿ.ಕೆ.ಎಸ್.)

**ಐತರೇಯ ಆರಣ್ಯಕ:** ಋಗ್ವೇದಕ್ಕೆ ಸೇರಿದ ಐತರೇಯ ಬ್ರಾಹ್ಮಣದ ಕಡೆಯ ಅಧ್ಯಾಯಗಳು. ಇದರಲ್ಲಿ ಆರಣ್ಯಕಗಳೆಂಬ ಐದು ಭಾಗಗಳಿವೆ. ಮಹೀದಾಸ ಐತರೇಯ ಇದರ ಋಷಿ. ಬ್ರಹ್ಮ, ಆತ್ಮ, ಜನ್ಮಾಂತರ ಮತ್ತು ಸೃಷ್ಟಿಕ್ರಮದ ತತ್ತ್ವಗಳನ್ನು ಇದು ಚರ್ಚಿಸುತ್ತದೆ. ಈ ಭಾವನೆಗಳೇ ಐತರೇಯ ಉಪನಿಷತ್ತಿನಲ್ಲಿ ಬೃಂಹಿತವಾಗಿ ಗಹನವೂ ಮಹತ್ತರವೂ ಆದ ದರ್ಶನಗಳಾಗಿವೆ. (ಸಿ.ಜಿ.ಪಿ.)

**ಐತರೇಯ ಉಪನಿಷತ್ತು:** ಇದು ಋಗ್ವೇದಶಾಖೆಗೆ ಸೇರಿದ ಇದೇ ಹೆಸರಿನ ಆರಣ್ಯಕದ ಕೆಲವು ಅಧ್ಯಾಯಗಳನ್ನು ಒಳಗೊಂಡಿದೆ. ಬಹ್ವೃಚೋಪ ನಿಷತ್ತೆಂತಲೂ ಮಹಾ ಐತರೇಯ ಉಪನಿಷತ್ತೆಂತಲೂ ಇದಕ್ಕೆ ಹೆಸರುಗಳಿವೆ. ಆರಣ್ಯಕ ಮತ್ತು ಉಪನಿಷತ್ತುಗಳನ್ನು ವಿಂಗಡಿಸಿ ಇದಿಷ್ಟು ಆರಣ್ಯಕ, ಇದು ಉಪನಿಷತ್ತು ಎಂದು ಪರಿಗಣಿಸುವುದರಲ್ಲಿ ಅಭಿಪ್ರಾಯ ಭೇದವಿದೆ.

ಮಹೀದಾಸ ಐತರೇಯ ಇದರ ಋಷಿ (ಮಂತ್ರದ್ರಷ್ಟೃ). ಅದರಿಂದ ಇದಕ್ಕೆ ಈ ಹೆಸರು. ಈತ ವಿಶಾಲಾ ಎಂಬಾಕೆಯ ಪುತ್ರನೆಂದೂ ಶ್ರೀಮನ್ನಾರಾಯಣನ ಅವತಾರವೆಂದೂ ಮಧ್ವಾಚಾರ್ಯರ ಭಾವನೆ. ಇತರಾ ಎಂಬುವಳ ಮಗ ಮಹಿದಾಸ. ಯಜ್ಞಸಭೆಗಳಲ್ಲಿ ತಂದೆ ತನ್ನ ಇತರ ಪತ್ನಿಯರ ಮಕ್ಕಳೊಡನೆ ಈತನನ್ನು ತೊಡೆಯ ಮೇಲೆ ಕೂರಿಸಿಕೊಳ್ಳದೆ ತಾತ್ಸಾರ ತೋರಿಸಲು, ಕರುಳು ನೊಂದ ತಾಯಿ ತನ್ನ ಕುಲದೈವ ಮಹೀ(ಭೂಮಿ) ದೇವಿಯನ್ನು ಪ್ರಾರ್ಥಿಸಲು ಆಕೆಯ ವರಪ್ರಸಾದದಿಂದ ಈತನಿಗೆ ಅಸಮಾನವಾದ ದಿವ್ಯಜ್ಞಾನ ಸಿದ್ಧಿಸಿತು–ಎನ್ನುವ ಈ ಐತಿಹ್ಯವೊಂದನ್ನು ಸಾಯಣರು ಉಲ್ಲೇಖಿಸುತ್ತಾರೆ.

ಇದು ಅತಿ ಪುರಾತನವಾದ ಗದ್ಯರೂಪದಲ್ಲಿದೆ, ಪುರಾತನವಾದ ಉಪನಿಷತ್ತುಗಳಲ್ಲಿ ಇದೂ ಒಂದು. ಇರುವುದು ಚಿಕ್ಕ ಚಿಕ್ಕ ಮೂರೇ ಅಧ್ಯಾಯಗಳು. ಒಟ್ಟು ಐದು ಖಂಡಗಳೆಂಬ ಉಪವಿಭಾಗಗಳು. ಹತ್ತು ಪಾಯಿಂಟ್ ಅಚ್ಚುಮೊಳೆಗಳಲ್ಲಿ ಮುದ್ರಿಸಿದರೆ ಸುಮಾರು ಎರಡು ಕಲಮುಗಳಾಗುವಷ್ಟು ಇದರ ಗಾತ್ರ. ಅತಿ ಚಿಕ್ಕ ಉಪನಿಷತ್ತುಗಳಲ್ಲಿ ಪ್ರಾಯಶಃ ಇದಕ್ಕೆ ಮೂರನೆಯ ಸ್ಥಾನ. ವಾಙ್ಮೇ ಮನಸಿ ಪ್ರತಿಷ್ಠಿತಾ ಎಂಬುದು ಇದರ ಶಾಂತಿಮಂತ್ರ. ಕೊನೆಯಲ್ಲಿ ಪ್ರಜ್ಞಾನಂ ಬ್ರಹ್ಮ ಎಂಬ ಉಪದೇಶವಿದೆ.

1. ಇದೆಲ್ಲವೂ ಮೊಟ್ಟಮೊದಲು ಆತ್ಮವೊಂದೇ ಆಗಿತ್ತು; ಮತ್ತೇನೂ ಇರಲಿಲ್ಲ ಎಂದು ಪ್ರಾರಂಭವಾಗಿ ಆತ್ಮ ಲೋಕಸೃಷ್ಟಿ ಮಾಡಲು ಇಚ್ಛಿಸಿ ಅಂಭೋ ಲೋಕ, ಮರೀಚಿಲೋಕ, ಮರ(ಮರ್ತ್ಯ) ಲೋಕ ಮತ್ತು ಆಪೋಲೋಕಗಳನ್ನೂ ಲೋಕಪಾಲಕರನ್ನೂ ಸೃಷ್ಟಿಸುತ್ತಾನೆ.

2. ಈ ರೀತಿ ಸೃಷ್ಟರಾದ ಲೋಕಪಾಲಕರು ಅಸ್ತಿತ್ವದ ಮಹಾರ್ಣವಕ್ಕೆ ಬಿದ್ದು ಅಶನ ಮತ್ತು ಪಿಪಾಸೆಗಳಿಗೆ ಸಿಲುಕಿದರು; ಅವರಿಗೊಂದು ಭೌತಿಕ ನೆಲೆ ಬೇಕಾಯಿತು; ಇತರ ಯಾವ ಪ್ರಾಣಿಗಳ ಶರೀರವೂ ಒಗ್ಗದೆ ಮಾನವ ಶರೀರ ಮೆಚ್ಚುಗೆಯಾಯಿತು; ಪಂಚೇಂದ್ರಿಯತತ್ತ್ವಗಳೂ, ಪಾಂಚಭೌತಿಕತತ್ತ್ವಗಳೂ, ಮೃತ್ಯು, ಅಪಾನವಾಯು, ರೇತಸ್ಸು ಮುಂತಾದ ಲೋಕಪಾಲರೂ ಅದರಲ್ಲಿ ಮನೆ ಮಾಡಿಕೊಂಡರು. ಹಸಿವು ತೃಷೆಗಳಿಗೂ ಅಲ್ಲಿ ಸ್ಥಾನ ಸಿಕ್ಕಿತು.

3. ಲೋಕಗಳಿಗಾಗಿ, ಲೋಕಪಾಲಕರಿಗಾಗಿ ಅನ್ನ ಸೃಷ್ಟಿಯಾಯಿತು; ಆ ಅನ್ನವನ್ನು ಇತರ ಲೋಕಪಾಲಕರು ಗ್ರಹಿಸಲಾಗಲಿಲ್ಲ; ಅಪಾನವಾಯು ಮಾತ್ರ ಗ್ರಹಿಸಿತು; ಆದ್ದರಿಂದ ಅದಕ್ಕೆ ಅನ್ನಾಯುವೆಂದು ಮತ್ತೊಂದು ಹೆಸರು; ಕಡೆಯಲ್ಲಿ ಆತ್ಮ ಶಿರಃಕಪಾಲವನ್ನು ಭೇದಿಸಿಕೊಂಡು ಪ್ರವೇಶಿಸಿದ. ಇದೇ ಆತನ ನಾಂದನವೆಂಬ ಸ್ಥಾನ.

ಅಲ್ಲಿ ಜೀವಾತ್ಮನಾದ ಅವನಿಗೆ ಮೂರು ಅವಸ್ಥೆ (ಸ್ವಪ್ನ) ಗಳಿಗೆ ಉಚಿತವಾದ ಮೂರು ಆವಾಸಸ್ಥಾನ (ಅವಸಥ) ಗಳು; ಅಲ್ಲಿ ಅವನು ತನ್ನ ಸುತ್ತೆಲ್ಲ ಇದ್ದ ನಾಮರೂಪಾತ್ಮಕವಾದ ಚರಾಚರ ಜಗತ್ತನ್ನು ನೋಡಿದ. ಆದರೆ ಅದೊಂದು ಅದ್ಭುತ– ಅದೆಲ್ಲವೂ ತಾನೇ–ಬ್ರಹ್ಮನೇ–ಆಗಿತ್ತು.

4. ಎರಡನೆಯ ಅಧ್ಯಾಯ ಜನ್ಮಾಂತರಕ್ಕೊಳಗಾದ ಆತ್ಮ ಮಾನವ ಶರೀರದಲ್ಲಿ ಹುಟ್ಟಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡು ಅಮೃತಾತ್ಮವಾಗುವುದೆಂಬ ಸಂದೇಶವನ್ನು ಕೊಡುತ್ತದೆ.

5. ನಾವು ಆತ್ಮವೆಂದು ಉಪಾಸಿಸುವ ಇವನು ಯಾರು? ಪರಬ್ರಹ್ಮ ಮತ್ತು ಅಪರಬ್ರಹ್ಮರಿಬ್ಬರಲ್ಲಿ ಇವನು ಯಾರು? ಎಂದು ಪ್ರಶ್ನಿಸಿಕೊಂಡು ಪಂಚೇಂದ್ರಿಯ ತತ್ತ್ವಗಳು, ಪಾಂಚಭೌತಿಕ ತತ್ತ್ವಗಳು, ಹೃದಯ, ಮನಸ್ಸು, ಸಂಜ್ಞಾನ, ವಿಜ್ಞಾನ, ಪ್ರಜ್ಞಾನಾದಿಗಳೂ, ಇಂದ್ರ, ಪ್ರಜಾಪತಿ ಮುಂತಾದ ದೈವೀತತ್ತ್ವಗಳು ಸಕಲ ಚರಾಚರ ಜಗತ್ತು–ಇವೆಲ್ಲ ಪ್ರಜ್ಞಾಪ್ರತಿಷ್ಠಿತವಾದ ಬ್ರಹ್ಮವೆಂದು ಮೂರನೆಯ ಅಧ್ಯಾಯ ಹೇಳಿ ಸೃಷ್ಟಿ ಬ್ರಹ್ಮನಿಂದ– ಆತ್ಮನಿಂದ–ವಿಕಾಸಗೊಂಡು, ಅಂತ್ಯದಲ್ಲಿ (?) ಅಲ್ಲಿಯೇ ಪ್ರತಿಷ್ಠಿತವಾಗುತ್ತದೆಂದು ಸಾರುತ್ತದೆ. (ಸಿ.ಜಿ.ಪಿ.)

**ಐತರೇಯ ಬ್ರಾಹ್ಮಣ:** ಶ್ರುತಿ ಎಂದು ಪ್ರಸಿದ್ಧವಾಗಿರುವ ವೇದದ ಬ್ರಾಹ್ಮಣಭಾಗದಲ್ಲಿ ಋಗ್ವೇದಕ್ಕೆ ಸಂಬಂಧಪಟ್ಟಂತೆ ಉಪಲಬ್ಧವಾಗಿರುವ ಎರಡು ಬ್ರಾಹ್ಮಣಗ್ರಂಥಗಳಲ್ಲಿ ಒಂದು; ಮತ್ತೊಂದು ಕೌಷೀತಕಿ ಬ್ರಾಹ್ಮಣ. ಐತರೇಯ ಎಂಬುದು ಇತರಾ ಎಂಬ ಪದದಿಂದ ಬಂದಿದೆ; ಇತರಾ ಎಂಬ ಋಷಿಪತ್ನಿಯಲ್ಲಿ ಜನಿಸಿದ ಮಹೀದಾಸ ಐತರೇಯನ ಕರ್ತೃತ್ವಕ್ಕೆ ಸೇರಿಸಲ್ಪಟ್ಟಿದೆ. ಇದರ ನಲವತ್ತು ಅಧ್ಯಾಯಗಳು ಐದೈದು ಅಧ್ಯಾಯಗಳ ಎಂಟು ಪಂಚಿಕಗಳಾಗಿ ವಿಭಾಗಗೊಂಡಿವೆ; ಈ ಎಂಟನ್ನು ಅಷ್ಟಕಗಳೆಂದು ಕರೆದಿದ್ದಾರೆ. ಈ ಗ್ರಂಥವು ಯಜ್ಞಯಾಗಗಳನ್ನು ಕುರಿತ ವಿಚಾರಗಳನ್ನೊಳಗೊಂಡಿದೆ. ಇದರಲ್ಲಿ ಸೋಮಯಾಗದ ವಿವರಣೆ ಪ್ರಮುಖವಾಗಿರುವುದಲ್ಲದೆ, ಯಾಗಾದಿಗಳ ಮಹತ್ತ್ವದ ನಿರೂಪಣೆಯೂ ಗಮನಾರ್ಹವಾಗಿದೆ.

ಮೊದಲ ಹದಿಮೂರು ಅಧ್ಯಾಯಗಳಲ್ಲಿ ಐದು ದಿನ ನಡೆಯಬೇಕಾದ ಅಗ್ನಿಷ್ಟೋಮದ ದೀಕ್ಷೆ, ಪ್ರವರ್ಗ್ಯ, ಉಪಸದ್, ಅಗ್ನಿಪ್ರಣಯನ, ಸೋಮಪಾನ ಮುಂತಾದ ವಿಹಿತಕರ್ಮಗಳೂ ಇವಕ್ಕನ್ವಯಿಸುವಂತೆ ಹೋತೃ ಎಂಬ ಋತ್ವಿಕ್ಕಿನ ಕರ್ತವ್ಯಗಳೂ ಪ್ರತಿಪಾದಿತವಾಗಿವೆ. ಅಲ್ಲದೆ ಪ್ರಾತಃಕಾಲ ಮಧ್ಯಾಹ್ನ ಸಾಯಂಕಾಲಗಳ ಸೋಮಸೇವನಗಳಲ್ಲಿ ಹೋತೃ ಪಠಿಸಬೇಕಾದ ಪ್ರಶಂಸಾತ್ಮಕ ಮಂತ್ರಗಳಾದ ಶಸ್ತ್ರಗಳ ವಿವರಣೆಯೂ ಇದೆ. ಬಳಿಕ ನಾಲ್ಕು ಅಧ್ಯಾಯಗಳಲ್ಲಿ ಎಲ್ಲ ಸೋಮಯಾಗಗಳಿಗೂ ಮಾದರಿಯಾಗಿ ಅವುಗಳ ಪ್ರಕೃತಿ ಎನಿಸಿಕೊಂಡಿರುವ ಅಗ್ನಿಷ್ಟೋಮದ ವೈಶಿಷ್ಟ್ಯ ವಿಚಾರವೂ ಅದರ ಮುಖ್ಯವಿಧಗಳಾದ ಉಕ್ಥ್ಯ, ಷೋಡಶೀ, ಅತಿರಾತ್ರ–ಇವುಗಳ ವಿವರಣೆಯೂ ಕಂಡುಬರುತ್ತದೆ. ಅತಿರಾತ್ರಕ್ಕನ್ವಯಿಸುವಂತೆ ಸತ್ತ್ರಗಳೂ ಹೋತೃವಿನ ಕರ್ತವ್ಯಗಳೂ ಮುಂದಿನ ಒಂದು ಅಧ್ಯಾಯದ ವಿಷಯ. ಅನಂತರ ಆರು ಅಧ್ಯಾಯಗಳು ದ್ವಾದಶಾಹ ಎಂಬ ಯಾಗದ ಹತ್ತು ದಿನಗಳಲ್ಲಿ ಹೋತೃ ಮಾಡಬೇಕಾದ ಕೆಲಸಗಳನ್ನು ತಿಳಿಸುತ್ತವೆ. ಮುಂದಿನ ಒಂದು ಅಧ್ಯಾಯ ಅಗ್ನಿಹೋತ್ರ ಆಚರಿಸಬೇಕಾದ ಕೆಲವು ವ್ರತಗಳನ್ನೂ ಬ್ರಹ್ಮನೆಂಬ ಋತ್ವಿಕ್ಕಿನ ಕರ್ತವ್ಯಗಳನ್ನೂ ಕುರಿತಿದೆ. ಅಲ್ಲಿಂದ ಮುಂದೆ ಐದು ಅಧ್ಯಾಯಗಳಲ್ಲಿ, ಪ್ರಧಾನರಲ್ಲದ ಆರು ಜನ ಹೋತೃಗಳಿಗೆ ಸಂಬಂಧಪಟ್ಟ ಕರ್ತವ್ಯಗಳ ಮತ್ತು ಅವರು ಕೌಶಲದಿಂದ ಪಠಿಸಬೇಕಾದ ಶಿಲ್ಪಶಾಸ್ತ್ರಗಳ ವಿಚಾರವಿದೆ. ಈ ಐದು ಅಧ್ಯಾಯಗಳು ಅವುಗಳ ಹಿಂದಿನ ಹತ್ತಕ್ಕೆ ಪೂರಕಗಳಂತಿವೆ.

ಕಡೆಯ ಹತ್ತು ಅಧ್ಯಾಯಗಳು ಪ್ರಧಾನವಾಗಿ ಕ್ಷತ್ರಿಯರಿಂದ ಆಚರಿಸಲ್ಪಡಬೇಕಾಗಿರುವ ಯಜ್ಞಯಾಗಗಳಿಗೆ ಸಂಬಂಧಪಟ್ಟಿವೆ. ಇವು ಚಾರಿತ್ರಿಕ ದೃಷ್ಟಿಯಿಂದಲೂ ಮುಖ್ಯವಾದ ಅಧ್ಯಾಯಗಳಾಗಿವೆ. ರಾಜರುಗಳು ಮಾಡುವ ಯಾಗಾದಿಗಳ ಪ್ರಾರಂಭಕರ್ಮಗಳು ಕೆಳಕಂಡ ಪ್ರಸಿದ್ಧವಾದ ಶುನಃಶೇಫಾಖ್ಯಾನದ ಮೂಲಕ ಈ ಭಾಗದಲ್ಲಿ ಪ್ರತಿಪಾದಿತವಾಗಿವೆ.

ಇಕ್ಷ್ವಾಕುವಂಶದ ರಾಜನಾದ ಹರಿಶ್ಚಂದ್ರನಿಗೆ ಪುತ್ರಸಂತಾನವಿರಲಿಲ್ಲವಾಗಿ ಆಸ್ಥಾನದಲ್ಲಿದ್ದ ನಾರದನೆಂಬ ಋಷಿಯ ಉಪದೇಶದ ಪ್ರಕಾರ ವರುಣದೇವತೆಯನ್ನು ಪ್ರಾರ್ಥಿಸಿ, ಪುತ್ರನೊಬ್ಬನನ್ನು ಅನುಗ್ರಹಿಸುವುದಾದರೆ ಅವನನ್ನು ಆ ದೇವತೆಗೇ ಅರ್ಪಿಸುವುದಾಗಿ ವಾಗ್ದಾನ ಮಾಡುತ್ತಾನೆ. ಅನಂತರ ರೋಹಿತನೆಂಬ ಒಬ್ಬ ಪುತ್ರನನ್ನು ಪಡೆಯುತ್ತಾನೆ. ಶಿಶು ಹುಟ್ಟಿದಂದಿನಿಂದ ಶಸ್ತ್ರೋಪೇತನಾಗುವವರೆಗಿನ ಬೆಳೆವಣಿಗೆಯ ಹಲವಾರು ಸ್ಥಿತಿಗಳಲ್ಲಿ ವರುಣ ಕೇಳಿದಾಗಲೆಲ್ಲ ಮುಂದುಮುಂದಿನ ಸ್ಥಿತಿ ಬರಲೆಂದು ನೆಪ ಹೇಳುತ್ತ ಹರಿಶ್ಚಂದ್ರ ಕಾಲ ತಳ್ಳುತ್ತಾನೆ. ಪುತ್ರ ಶಸ್ತ್ರೋಪೇತನಾಗಿದ್ದ ಸ್ಥಿತಿಯಲ್ಲಿ ಯಥಾಪ್ರಕಾರ ವರುಣನಿಂದ ತಗಾದೆ ಬರುತ್ತದೆ. ಆಗ ರಾಜ ತಾನು ವರುಣನಿಗೆ ಕೊಟ್ಟ ವಾಗ್ದಾನದ ವಿಚಾರವನ್ನು ಮಗನಿಗೆ ತಿಳಿಸಿ, ಅದರ ಈಡೇರಿಕೆಗೆ ಅವನ ಒಪ್ಪಿಗೆಯನ್ನು ಕೇಳುತ್ತಾನೆ. ಆದರೆ ಅವನು ಅದನ್ನು ಒಪ್ಪದೆ ಧನುಸ್ಸನ್ನು ಹಿಡಿದು ಕಾಡಿಗೆ ಹೋಗಿ ತಪ್ಪಿಸಿಕೊಳ್ಳುತ್ತಾನೆ.

ಈ ಮಧ್ಯೆ ವರುಣನ ಆಗ್ರಹದಿಂದ ಹರಿಶ್ಚಂದ್ರ ರೋಗಗ್ರಸ್ತನಾಗುತ್ತಾನೆ. ರೋಹಿತನಿಗೆ ಈ ವಿಚಾರ ತಿಳಿದು ಗ್ರಾಮವೊಂದಕ್ಕೆ ಬರುತ್ತಾನೆ. ಅಲ್ಲಿ ಇಂದ್ರ ಅವನಿಗೆ ಕಾಣಿಸಿಕೊಂಡು ಸಂಚಾರ ಬಹು ಸ್ವಾರಸ್ಯಕರವೆಂದು ತಿಳಿಸುವುದಲ್ಲದೆ ಮತ್ತೆ ಸಂಚಾರದಲ್ಲಿ ತೊಡಗಬೇಕೆಂದು ಅವನನ್ನು ಪ್ರೇರೇಪಿಸುತ್ತಾನೆ. ಅದರಂತೆ ರೋಹಿತ ಪುನಃ ಕೆಲವು ವರ್ಷಗಳ ಪರ್ಯಂತ ಸಂಚಾರ ಮಾಡುತ್ತಾನೆ. ಆರು ವರ್ಷಗಳ ಸಂಚಾರದ ಕಡೆಯಲ್ಲಿ ಉಪವಾಸದಿಂದ ತೊಳಲುತ್ತಿದ್ದ ಅಜೀಗರ್ತನೆಂಬ ಮುನಿಯನ್ನು ಸಂಧಿಸುತ್ತಾನೆ. ಆ ಮುನಿಗೆ ಶುನಃಪುಚ್ಛ, ಶುನಃಶೇಫ, ಶುನೋಲಾಂಗೂಲ ಎಂಬ ಮೂವರು ಪುತ್ರರು. ನೂರು ಹಸುಗಳನ್ನು

ಕೊಟ್ಟು ರೋಹಿತ ಅಜೀಗರ್ತನಿಂದ ಅವನ ಮಧ್ಯಮ ಮಗನಾದ ಶುನಃಶೇಫನನ್ನು ವಹಿಸಿಕೊಂಡು ತಂದೆಯಾದ ಹರಿಶ್ಚಂದ್ರರಾಜನ ಬಳಿಗೆ ಕರೆತರುತ್ತಾನೆ. ರಾಜ ತನ್ನ ಮಗನ ಪರವಾಗಿ ಶುನಃಶೇಫನನ್ನೇ ಅರ್ಪಿಸುವುದಾಗಿ ವರುಣನಲ್ಲಿ ಬಿನ್ನವಿಸಿಕೊಳ್ಳುತ್ತಾನೆ. ಇದಕ್ಕೆ ವರುಣನ ಒಪ್ಪಿಗೆಯೂ ದೊರಕುತ್ತದೆ. ಆ ಸಂದರ್ಭದಲ್ಲಿ ರಾಜನಿಗೆ ರಾಜಸೂಯಯಾಗದ ಕರ್ಮಾದಿಗಳನ್ನು ವರುಣ ವಿವರಿಸುತ್ತಾನೆ. ಯಾಗದ ಪ್ರಾರಂಭದಲ್ಲಿ ನಡೆಯುವ ಅಭಿಷೇಚನೀಯದಲ್ಲಿ ಶುನಃಶೇಫನೇ ಯಜ್ಞಪಶುವಾಗಿ ಬಂಧಿಸಲ್ಪಡುತ್ತಾನೆ.

ತನ್ನ ನಿಸ್ಸಹಾಯಕತೆಯನ್ನು ಮನಗಂಡ ಶುನಃಶೇಫ ಹಲವಾರು ದೇವತೆಗಳ ಶರಣುಹೋಗಿ, ಕಡೆಯಲ್ಲಿ ಉಷಸ್ಸಿನ ಪ್ರಾರ್ಥನೆ ಮಾಡುತ್ತಿರುವಾಗ ಅವನ ಬಂಧನ ನಿವಾರಣೆಯಾಗುವುದಲ್ಲದೆ ಹರಿಶ್ಚಂದ್ರನ ರೋಗವೂ ಪರಿಹಾರವಾಗುತ್ತದೆ.

ಮೇಲ್ಕಂಡ ಆಖ್ಯಾನ ಈ ಗ್ರಂಥದಲ್ಲಿ ರಾಜಸೂಯಯಾಗದ ಪೀಠಿಕೆಯನ್ನು ಒದಗಿಸಿಕೊಟ್ಟಿದೆ. ಶುನಃಶೇಫ ಯಜ್ಞಪಶುವಾಗಿರುವ ಅಲ್ಲಿನ ಪ್ರಸಂಗ ಕೇವಲ ಸಾಂಕೇತಿಕವೆಂದು ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ಗ್ರಂಥದ ಕಡೆಯ ಅಧ್ಯಾಯ ರಾಜ ತನ್ನ ಮನೆಯಲ್ಲಿ ಕರ್ಮಾದಿಗಳ ಮೇಲ್ವಿಚಾರಣೆಗೆ ಪುರೋಹಿತನನ್ನು ನೇಮಿಸಿಕೊಳ್ಳುವ ವಿಚಾರಕ್ಕೆ ಸಂಬಂಧಪಟ್ಟಿದೆ.

ಗ್ರಂಥದಲ್ಲಿ ಕಂಡುಬರುವ ಪುನರುಕ್ತಿ, ಪ್ರಕ್ಷಿಪ್ತ ಮುಂತಾದವುಗಳ ದೃಷ್ಟಿಯಿಂದ ಅದು ಏಕಕರ್ತೃಕವೆಂಬ ವಿಚಾರದಲ್ಲಿ ಸಂಶಯವಿದೆ. ಶೈಲಿಯೇನೊ ಉದ್ದಕ್ಕೂ ಬಹುಮಟ್ಟಿಗೆ ಒಂದೇ ತರಹದ್ದಾಗಿದೆ. ಭಾಷೆ ಋಗ್ವೇದಾದಿ ಸಂಹಿತೆಗಳಿಗಿಂತ ಈಚಿನದು. ಆದರೆ ಅದು ಸಂಸ್ಕೃತಕಾವ್ಯಭಾಷೆಯಂತಿಲ್ಲ. ಅದರಲ್ಲಿ ವೈದಿಕ ಭಾಷೆಯ ಅನೇಕ ರೂಪಗಳು ಕಂಡುಬರುತ್ತವೆ. ಒಟ್ಟಿನಲ್ಲಿ ಗ್ರಂಥದ ಬಹುಭಾಗ ಒಬ್ಬನೇ ಕರ್ತೃವಿನಿಂದ ರಚಿತವಾಗಿದ್ದಿರಬೇಕು.

ಈ ಗ್ರಂಥದಲ್ಲಿ ಅಲ್ಲಲ್ಲೇ ಕಂಡುಬರುವ 'ದೇವಾ ವೈ ಯಜ್ಞೇನ ಶ್ರಮೇಣ ತಪಸಾಹುತಿಭಿಃ ಸ್ವರ್ಗಂ ಲೋಕಮಾಯನ್', 'ಸಖಾ ಹಿ ಜಾಯಾ', 'ಶ್ರದ್ಧಾ ಪತ್ನೀ, ಸತ್ಯ ಯಜಮಾನಃ, ಶ್ರದ್ಧಾ-ಸತ್ಯ' ಮುಂತಾದ ಆದರ್ಶವಾಕ್ಯಗಳು ಗಮನಾರ್ಹವಾಗಿವೆ.

ಹೀಗೆ ಮಂತ್ರಗಳು, ಗಾಥ, ಇತಿಹಾಸ, ಹೋತೃವಿನ ಕರ್ತವ್ಯಕ್ಕೆ ಸಂಬಂಧಪಟ್ಟ ವಿಧಿಗಳು, ವಿಹಿತಕರ್ಮಾದಿಗಳ ವಿವರಣೆಗಳು-ಇವೇ ಮುಂತಾದ ವಿಷಯಗಳ ಪ್ರತಿಪಾದನೆಯಿಂದ ಕೂಡಿರುವ ಈ ಗ್ರಂಥ ಅದರ ಶಾಖಾನುಯಾಯಿಗಳಿಗೆ ವಿಹಿತ ಕರ್ಮಗಳ ಒಂದು ಕೋಶದಂತಿದೆ. (ಬಿ.ಕೆ.ಎಸ್.)

**ಐತಿಹಾಸಿಕ ಕಾದಂಬರಿ:** ಇತಿಹಾಸದ (ಚರಿತ್ರೆ) ವಸ್ತುವನ್ನಾರಿಸಿಕೊಂಡು ರಚಿಸಿದ ಕಾದಂಬರಿ (ಹಿಸ್ಟಾರಿಕಲ್ ನಾವೆಲ್). ಹಿಂದೆ ಆಗಿಹೋದ ಸಂಗತಿಗಳನ್ನು ಹೆಚ್ಚಿಸದೆ ಕುಗ್ಗಿಸದೆ ಯಥಾವತ್ತಾಗಿ ನಿರೂಪಿಸುವ ಲೇಖನವೇ ಇತಿಹಾಸ. ಮುಖ್ಯವಾಗಿ ಅದು ನಡೆದ ನಿಜಾಂಶದ ಪ್ರಾಮಾಣಿಕ ವರದಿ. ಅದರಲ್ಲಿ ಇತಿಹಾಸಕಾರನ ವೈಯಕ್ತಿಕ ಅಭಿಮತಕ್ಕಾಗಲಿ ಸ್ವಂತ ಕಲ್ಪನೆಗಾಗಲಿ ಆಸ್ಪದ ದೊರಕದು. ಕಾದಂಬರಿಯಾದರೋ ಸಾಹಿತಿ ತಾನೇ ನಿರ್ಮಾಣಗೈಯುವ ಕಥನಸಾಹಿತ್ಯ. ಮನುಷ್ಯರನ್ನೂ ಅವರ ಹಿನ್ನೆಲೆಯನ್ನೂ ತಸ್ವೀರು ತೆಗೆಯುವಂತೆ ಪ್ರತಿಚಿತ್ರಿಸುವ ಹೆಬ್ಬಯಕೆಯ ದೃಢನಿಷ್ಠುರ ವಾಸ್ತವಿಕ ಕಾದಂಬರಿಯಲ್ಲೂ ಅಂಶಗಳ ಆಯ್ಕೆ, ಬದಲಾವಣೆ, ಅಷ್ಟಿಷ್ಟು ಜರುಗುವುದರಿಂದ ಕೃತಿಕಾರನ ಕೈವಾಡ ಕಂಡೇ ಕಾಣುತ್ತದೆ. ಹಾಗಾದರೆ ಇತಿಹಾಸದ ಹೊಣೆಗಾರಿಕೆಯನ್ನೂ ಕಾದಂಬರಿಯ ಹೊಣೆಗಾರಿಕೆಯನ್ನೂ ಒಂದೇ ಕೃತಿಯಲ್ಲಿ ನೆರವೇರಿಸಿ ಗೆಲ್ಲುವುದೆಂತು? ಬಂಧನ, ಸ್ವಾತಂತ್ರ್ಯ ಎರಡನ್ನೂ ಒಟ್ಟಿಗೇ ಸಾಧಿಸಿ ನಿಲ್ಲುವುದೆಂತು? ಅದೇ ಐತಿಹಾಸಿಕ ಕಾದಂಬರಿಯ ಪ್ರಧಾನ ಸಮಸ್ಯೆ, ಅಚ್ಚರಿ, ಸೊಬಗು, ಆನಂದ.

ಬಿಡಿಸುವುದಕ್ಕೆ ಕಷ್ಟಕರವಾದರೂ ಬಿಡಿಸಲೇ ಆಗದ ಪ್ರಶ್ನೆಯಲ್ಲ, ಈ ಯಥಾರ್ಥತೆ ಕಲ್ಪನೆಗಳ ಸಮರಸ ಮಿಳಿತ. ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳು ಕೆಲವಾದರೂ ಹುಟ್ಟಿಬಂದಿವೆ. ಮೊದಲನೆಯದಾಗಿ, ಸಾಹಿತಿಯ ವಿಭಾವನಾಶಕ್ತಿ (ಇಮ್ಯಾಜಿನೇಷನ್) ಸ್ಮೃತಿಶಕ್ತಿಯಾಗಿಯೂ (ಮೆಮೊರಿ) ಸೃಷ್ಟಿಶಕ್ತಿಯಾಗಿಯೂ (ಕ್ರಿಯೇಷನ್) ಅವಿರೋಧ ಹೊಂದಾಣಿಕೆಯಿಂದ ಕೆಲಸಮಾಡಬಲ್ಲುದು. ಟಾಲ್‌ಸ್ಟಾಯ್ ಮಹಾಶಯನ ವಾರ್ ಅಂಡ್ ಪೀಸ್ ಎಂಬ ಮೇರುಕಾದಂಬರಿಯಲ್ಲಿ ರಷ್ಯದ ಮೇಲೆ ನೆಪೋಲಿಯನ್ ಹೂಡಿದ ದಂಡಯಾತ್ರೆಯ ನೂರಾರು ವಿವರಗಳೂ ಆ ಕಾಲದಲ್ಲಿದ್ದು ಬದುಕು ಸಾಗಿಸಿದವೆನ್ನಲಾದ ಕೆಲವು ಕುಟುಂಬಗಳ ಕಾಲ್ಪನಿಕ ವ್ಯಕ್ತಿಚಿತ್ರಣವೂ ಅಚ್ಚುಕಟ್ಟಾಗಿ ಸುರಮ್ಯವಾಗಿ ಕೂಡಿಕೊಂಡಿವೆ. ಹೆನ್ರಿ ಎಸ್ಮಂಡ್ ಕಾದಂಬರಿಯಲ್ಲಿ ಥ್ಯಾಕರೆ ತನ್ನ ಹಿಂದಣ ಶತಮಾನದ ರಾಜಕೀಯ ಆಗುಹೋಗನ್ನು ಹಿನ್ನೆಲೆಯಾಗಿಟ್ಟುಕೊಂಡು ಒಂದು ಶ್ರೀಮಂತ ಸಂಸಾರದ ಸುಖದುಃಖಕ್ಕೆ ಜೀವಂತ ಕಳೆಕೊಟ್ಟಿದ್ದಾನೆ. ಎರಡನೆಯದಾಗಿ, ಚರಿತ್ರೆಯ ಹಲವು ಘಟನಾವಳಿಗಳಿಗೆ ಸಮಂಜಸ ಪ್ರಾರಂಭ, ಮಧ್ಯ, ಮುಕ್ತಾಯಗಳಿದ್ದು ಮಾರ್ಪಾಟು ಕೇಳದೆ ಸಾಹಿತ್ಯ, ಕಥೆಗಳಾಗುವ ಗುಣವುಂಟು. ಹೀಗಾಯ್ತು ಎಂಬುದು ಚರಿತ್ರೆಯ ಗುರಿ; ಹೀಗಾಗಬಹುದು ಎಂಬುದು ಸಾಹಿತ್ಯದ ಗುರಿ. ಎರಡೂ ವಿಭಿನ್ನವಾದರೂ ಕೆಲವೊಮ್ಮೆ ಹಾಗಾಗಬಹುದು ಎಂಬಂತೆಯೇ ಹಾಗಾದದ್ದು ಮನವೊಪ್ಪಿರುತ್ತದೆ. ಚರಿತ್ರೆಯ ಯಥಾರ್ಥ ಸತ್ಯವೇ ಸಾಹಿತ್ಯದ ವಿಭಾವನಾ ಸತ್ಯದ ರೂಪವನ್ನು ತಳೆಯುತ್ತದೆ.

ಭೂತಕಾಲದ ಯಾವುದೇ ಶತಮಾನವಾಗಲಿ ಅದನ್ನು ಐತಿಹಾಸಿಕ ಕಾದಂಬರಿಕಾರ ತನ್ನ ಕಥೆಗೆ ಅಳವಡಿಸಿಕೊಳ್ಳಬಹುದು; ಎಂದರೆ ಅದರಲ್ಲೇ ತಾನು ಜೀವಿಸುತ್ತಿರುವೆನೆಂಬ ಭಾವನೆಯೂ ಆ ಸಮಯದ ಸಮಾಜವೇ ತನ್ನದು, ಆ ಜನರೇ ತನ್ನ ನೆರೆಹೊರೆ, ಗುರುತುಪರಿಚಯ ಎಂಬ ತನ್ಮಯತೆಯೂ ಅವನಿಗೆ ಅತ್ಯಾವಶ್ಯಕ. ಅಳಿದುಹೋಗಿರುವ ಸ್ಥಿತಿಗತಿ, ವ್ಯವಹಾರ, ವಾತಾವರಣಗಳಿಗೆ ಅವ ನು ಒಂದು ವಿಧದ ಪರಕಾಯಪ್ರವೇಶ ನಡೆಸಬೇಕು. ಬೆನ್ನಿಗಂಟಿದ ಭೂತದಂತಿರುವ ಸಮಕಾಲೀನತೆಯನ್ನು ಪೂರ್ತಿಯಾಗಿ ಉಚ್ಚಾಟನೆ ಮಾಡಬೇಕು. ಇಲ್ಲದಿದ್ದರೆ ಸತ್ಯಕ್ಕೆ ಫಾಸಿ ಬರಬಹುದು. ನಂಬಿಕೆ, ನಡೆವಳಿಕೆ, ಸಂಕಲ್ಪ, ಸಾಧನೆಗಳಲ್ಲಿ ದೇಶದೇಶಕ್ಕೆ ವ್ಯತ್ಯಾಸ; ಅವಧಿ ಅವಧಿಗೆ ವ್ಯತ್ಯಾಸ. ಕಲಬೆರಕೆ ಮಾಡಿ ಕೆಡಿಸಿದ್ದಾನೆಂಬ ಆಪಾದನೆ ತಟ್ಟದಂತೆ ಬಲು ಎಚ್ಚರದಿಂದ ಇರಬೇಕಾಗುತ್ತದೆ, ಐತಿಹಾಸಿಕ ಕಾದಂಬರಿಕಾರ. ಬಿಲ್ಲುಬಾಣ ಕತ್ತಿ ಭರ್ಜಿಗಳೇ ಆಯುಧವಾಗಿದ್ದ ಘಟ್ಟವನ್ನು ಚಿತ್ರಿಸುತ್ತ ಬಂದೂಕು ಬಾಂಬುಗಳ ಮಾತನ್ನು ಎತ್ತದೇ ಸಾಗುವುದು ಸುಲಭ. ಸ್ತ್ರೀಸ್ವಾತಂತ್ರ್ಯ ಧಣಿಯೂ ಮನುಷ್ಯ ಜೀತದಾಳೂ ಮನುಷ್ಯ ಎಂಬ ಬುದ್ಧಿ, ದೇಶಭಕ್ತಿ ಬೇರೆ ರಾಜ ಭಕ್ತಿ ಬೇರೆ ಎಂಬ ತತ್ತ್ವ- ಮೊದಲಾದ ಆಧುನಿಕ ಧೋರಣೆಗಳನ್ನು ಮಧ್ಯಯುಗಕ್ಕೊ ಪ್ರಾಚೀನಕಾಲಕ್ಕೊ ಕಿಂಚಿತ್ತೂ ಅನ್ವಯಿಸದೆ ಇರುವುದು ಅಷ್ಟೊಂದು ಸುಲಭವಲ್ಲ. ಅಲ್ಲೊಂದು ಇಲ್ಲೊಂದು ಪ್ರಾಸಂಗಿಕ ವಾಕ್ಯ, ಅದೊಂದು ಇದೊಂದು ಸಣ್ಣಪುಟ್ಟ ಕಾರ್ಯ-ಇಂಥ ಅಮುಖ್ಯ ವಿಚಾರದಲ್ಲಿ ಮಿಶ್ರಣವಾದರೆ ಅದೇನೂ ದೊಡ್ಡ ದೋಷವಲ್ಲ; ಕಾದಂಬರಿಯ ಹರವು ವಿಶಾಲ. ಕಂಬಳಿಯಲ್ಲಿ ಬೆರತಿರುವ ಪಕರಿ ನೂಲಿನ ಎಳೆಗಳನ್ನು ಎಣಿಸುವವರಾರು? ಅಂಥ ಎಷ್ಟು ಹಿಂದಿನದನ್ನು ಎಟುಕಿಸಿಕೊಳ್ಳಬಹುದೋ ಅಷ್ಟೇ ಹಿಂದಕ್ಕೆ ಕಾದಂಬರಿಕಾರ ಕೈ ನೀಡಿದರೆ ಲೇಸು. ಗೌತಮಬುದ್ಧನ ವಿಷಯವಾಗಿ ಕಾದಂಬರಿ ಬರೆಯಲು ಯಾವ ಸಾಹಿತಿಗೆ ತಾನೇ ಅಭಿಲಾಷೆಯಿಲ್ಲ? ಆದರೆ ಬರೆಯಬಲ್ಲ ಸಮರ್ಥರು ಎಷ್ಟು ಮಂದಿ?

ಸಮಯ, ಸನ್ನಿವೇಶದ ವರ್ಣನೆಗೆ ಹೆಚ್ಚು ಜಾಗವನ್ನಿತ್ತು ಪಾತ್ರವರ್ಗದ ಕೆತ್ತನೆಗೆ ಕಡಿಮೆ ಲಕ್ಷ್ಯ ನೀಡಿದರೆ ಚರಿತ್ರೆಗೇನೂ ಊನವಿಲ್ಲ; ಆದರೆ ಕಾದಂಬರಿ ಹಾಗೆ ಮಾಡಿದರೆ ಅದು ಚರಿತ್ರೆಯ ನಕಲಾಗುತ್ತದೆಯೇ ವಿನಾ ಸಾಹಿತ್ಯವಾಗಿ ಪರಿಗಣಿತವಾಗಲಾರದು. ಕಾರ್ಲೈಲನ ಅಭಿಪ್ರಾಯದಂತೆ ಚರಿತ್ರೆಯೂ ಪ್ರಬಲ ವ್ಯಕ್ತಿಗಳ ಆಳ್ವನದ ನಿರೂಪಣೆ. ಎಂದಮೇಲೆ ಅಪ್ಪಟ ಗದ್ಯಸಾಹಿತ್ಯವಾದ ಕಾದಂಬರಿಯಲ್ಲಿ ಪಾತ್ರಗಳಿಗೇ ಪ್ರಾಧಾನ್ಯವಲ್ಲವೇ? ಐತಿಹಾಸಿಕ ಕಾದಂಬರಿಯ ಜನಕನೆಂಬ ಹೆಸರನ್ನು ಪಡೆದ ಸರ್ ವಾಲ್ಟರ್ ಸ್ಕಾಟ್ ಪಾತ್ರವರ್ಗದ ವಿಷಯದಲ್ಲಿ ಒಂದು ನಿಯಮವನ್ನು ತನ್ನ ಅನುಷ್ಠಾನಕ್ಕೆ ವಿಧಿಸಿಕೊಂಡಂತೆ ಕಾಣುತ್ತದೆ. ನಾಯಕಸ್ಥಾನವನ್ನು ದೊರೆ, ದಂಡಾಧೀಶ ಇತ್ಯಾದಿ ಪ್ರಖ್ಯಾತರಿಗೆ ಕೊಡಕೂಡದು; ಸಾಹಸಿಗಳಾದರೂ ಸಾಮಾಜಿಕ ಹಂತಗಳಲ್ಲಿ ಕೊಂಚ ಕೆಳಗಿನವರಿಗೆ ಕೊಡತಕ್ಕದ್ದು. ಇದೇ ಆ ಸೂತ್ರ. ಐತಿಹಾಸಿಕ ಕಾದಂಬರಿಕಾರರೆಲ್ಲರೂ ಸರಿಸುಮಾರಾಗಿ ಸ್ಕಾಟನ ಪದ್ಧತಿಯನ್ನೇ ಹಿಂಬಾಲಿಸಿದ್ದಾರೆ. ಹಾಗೆ ನಿಯಂತ್ರಿಸುವುದರಿಂದ ಕೃತಿಕಾರನಿಗೆ ಯಥೋಚಿತವಾಗಿ ಕಲ್ಪನೆಮಾಡುವ ಧಾರಾಳ ಲಭಿಸುತ್ತದೆ. ಸ್ಕಾಟನ ಕ್ವೆಂಟಿನ್ ಡರ್ವರ್ಡ್ ಕಥೆಯಲ್ಲಿನ ಕಥಾನಾಯಕ ಒಬ್ಬ ಆಗಂತುಕ ತರುಣ ಯೋಧ. ಅರಸ ಲೂಯಿ ಮತ್ತು ಪ್ರಾಂತಾಧೀಶ ಬರ್ಗಂಡಿ-ಇವರ ಹೋರಾಟ ಹಿನ್ನೆಲೆಯ ಕಥಾವಸ್ತು. ಹಾಗೆಯೇ ಅಲೆಕ್ಸಾಂಡರ್ ಡ್ಯೂಮಾನ ದಿ ತ್ರಿ ಮಸ್ಕೆಟಿಯರ್ಸ್ ಎಂಬ ಕಥೆಯಲ್ಲಿ ಆಥೊ, ಪೋರ್ತೊ ಮೊದಲಾದ ನಾಲ್ವರು ಅಸದೃಶ ವೀರಭಟರೇ ಕಥಾನಾಯಕರು. ರಾಜ, ರಾಣಿ, ಪ್ರಧಾನಿಗಳ ಸೆಣಸಾಟ ಹಿನ್ನೆಲೆಯ ಕಥಾವಸ್ತು.

ಸ್ಕಾಟ್ ಮತ್ತು ಡ್ಯೂಮಾರ ರಚನೆಗಳು ದಿಟವಾಗಿ ಐತಿಹಾಸಿಕ ಕಾದಂಬರಿಗಳಲ್ಲ, ಇತಿಹಾಸದ ಛಾಯೆಯನ್ನು ಹೊತ್ತ ಸಾಹಸಕಥೆಗಳು, ಅಚ್ಚರಿ ಕಥೆಗಳು (ರೊಮಾನ್ಸಸ್)- ಎಂಬ ಆಕ್ಷೇಪಣೆಯಿದೆ. ಅದು ಸ್ವಲ್ಪಮಟ್ಟಿಗೆ ಸರಿ. ಐತಿಹಾಸಿಕತೆ ಡ್ಯೂಮಾಗಿಂತ ಸ್ಕಾಟನಲ್ಲಿ ಅಧಿಕ. ಆದರೂ ಇಬ್ಬರೂ ರೊಮ್ಯಾಂಟಿಕ್ ಯುಗದ ಸಾಹಿತಿಗಳು. ರೋಮಾಂಚಗೊಳಿಸುವ ಧೀರ ಕೃತ್ಯಗಳ ಕಡೆಗೇ ಅವರ ಒಲವು. ಹದಿನೆಂಟನೆಯ ಶತಮಾನದ ಕೊನೆ ಭಾಗದಲ್ಲಿ ಅಮಾನುಷ ವಿದ್ಯಮಾನಗಳೂ ಇತರ ವೈಪರೀತ್ಯಗಳೂ ನಿಬಿಡವಾದ ಕಟ್ಟುಕಥೆಗಳನ್ನು ಚಾರಿತ್ರಿಕವೆಂದು ಪ್ರಕಟಿಸುವ ವ್ಯಾಪಾರವಿತ್ತು. ಅಂಥ ವಿಕೃತಿಗಳ ವಿಕಾರವನ್ನು ತೊಡೆದುಹಾಕಿ ನಿಜವಾಗಿ ಚಾರಿತ್ರಿಕವೆನಿಸಿಕೊಳ್ಳಬಲ್ಲ ಕಾದಂಬರಿಯನ್ನು ಹೊರತಂದ ಕೀರ್ತಿ ಸ್ಕಾಟನದು. ಯುರೋಪಿನ ಮಧ್ಯಯುಗದ ಬಾಹ್ಯಲಕ್ಷಣಗಳನ್ನು ಬಣ್ಣಿಸುವಾಗ ಆತ ಏನೇ ತಪ್ಪು ಮಾಡಿದರೂ ಅದರ ಆಂತರ್ಯವನ್ನು ಚೆನ್ನಾಗಿ ಪ್ರತಿಬಿಂಬಿಸಿದ. ಅವನ ವಿಧಾನದ ಕಾದಂಬರಿಯನ್ನು ಐತಿಹಾಸಿಕ ಸಾಹಸದ ಕಥೆ, ಅಚ್ಚರಿ ಕಥೆಯೆಂದು (ಹಿಸ್ಟಾರಿಕಲ್ ರೊಮಾನ್ಸ್) ಕರೆದಿದ್ದಾರೆ. ಹಾಗೆ ಕರೆದರೆ ಅನ್ಯಾಯವಲ್ಲ.

ಐತಿಹಾಸಿಕ ಕಾದಂಬರಿಯ ವಿಮರ್ಶೆಯಲ್ಲಿ ಅದರಲ್ಲಿರುವ ನಿರ್ದುಷ್ಟ ಚಾರಿತ್ರಿಕಾಂಶ ಎಷ್ಟು, ಖಚಿತ ಕವಿಕಲ್ಪನಾಂಶ ಎಷ್ಟು ಎಂಬ ತಾರತಮ್ಯ ವೀಕ್ಷಣೆ ಅತ್ಯಂತ ಮುಖ್ಯ. ಕನ್ನಡದಲ್ಲಿ ಬಂದಿರುವ ರಾಜಪುತ್ರರನ್ನು ಕುರಿತ ಕಥೆಗಳನ್ನೂ ಶಿವಾಜಿ, ಶಾಂತಲ, ಟಿಪ್ಪೂಸುಲ್ತಾನ್, ಚನ್ನಬಸವನಾಯಕ ಮುಂತಾದವರ ಕಥೆಗಳನ್ನೂ ಈ ದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ಪರಿಶೀಲಿಸಬೇಕು.

ಐತಿಹಾಸಿಕ ಕಾದಂಬರಿಕಾರ ಸುತ್ತುನೋಟ ನೋಡುತ್ತ ಹಿಂದಣ ಕೆಲವು ತಲೆಮಾರುಗಳ ದೃಶ್ಯಪರಂಪರೆಯನ್ನು ಓದುಗರ ಮುಂದೆ ಇಡಬಹುದು. ಅಂಥ ವಿರಚನೆಗೆ ಕಾಲದ ಒಂದು ಅವಧಿಯ ಕಾದಂಬರಿಯೆಂದು ಹೆಸರು ಅಥವಾ ಒಬ್ಬ ವ್ಯಕ್ತಿಯನ್ನು ಕೇಂದ್ರದಲ್ಲಿಟ್ಟು ಅವನಿಗೆ ಸಂಬಂಧಿಸಿದ ಘಟನಾವಳಿಗಳನ್ನು ಮಾತ್ರ ನಾಟಕೀಯವಾಗಿ ವಿವರಿಸುತ್ತ ಕಥೆ ಹೇಳಬಹುದು. ಇಂಥ ಕೃತಿ ಉತ್ಪ್ರೇಕ್ಷೆಯನ್ನು ಒಳಗೊಂಡು ಅಚ್ಚರಿ ಕಥೆಯಾಗಿ ಬಿಡುವ ಸಂಭವವುಂಟು ಅಥವಾ ಅವಧಿಯೂ ವ್ಯಕ್ತಿಗಳೂ ಸಮಪ್ರಮಾಣದಲ್ಲಿ ಯುಕ್ತರೀತಿಯಿಂದ ಸೇರಿಕೊಂಡು ಅದು ಹೆಚ್ಚೋ ಇವರು ಹೆಚ್ಚೋ ಎಂಬ ಸಂದೇಹ ಏಳದಂತೆ ಸುಂದರ ಸಾಹಿತ್ಯಮಾರ್ಗವನ್ನು ಕೃತಿಕಾರ ತುಳಿಯಬಹುದು. ಇದೇ ಐತಿಹಾಸಿಕ ಕಾದಂಬರಿಯ ನೈಜ ಪ್ರಕಾರವೆಂದು ತಜ್ಞರ ಮತ.

ಚರಿತ್ರೆಯಿಂದ ನಮಗೆ ಗತಕಾಲದ ಕೇವಲ ಹೊರಮೈನ ವಿಶದ ಪರಿಚಯವಾಗುತ್ತದೆ–ಎಂಬ ದೂರು ಉಂಟು. ಇದು ಅತಿಯಾದ ಅಭಿಮಾನದಿಂದ ಹೇಳುವ ಮಾತು. ಉತ್ತಮ ಚರಿತ್ರಕಾರನಿಗೆ ಒಳಗಣ್ಣು ಇದ್ದೇ ಇರುತ್ತದೆ. ಆಗುಹೋಗುಗಳ ಆಂತರ್ಯವನ್ನು ಭೇದಿಸಿ ಅಲ್ಲಿ ಹುದುಗಿರುವ ಒಲವು ನಿಲುವು ಉದ್ದೇಶ ಮುಂತಾದ ಮೂಲಾಂಶಗಳನ್ನು ಆತ ಹೊರಕ್ಕೆಳೆಯಬಲ್ಲ. ಆದರೆ ಹಾಗೆ ಮಾಡುವಾಗ ಅವನು ಕೋಚುಪಾಚನ್ನು ತಿದ್ದಲಾಶಿಸುವುದಿಲ್ಲ. ನಿಜತ್ವವೇ ಅವನ ಏಕೈಕ ಗುರಿ. ಐತಿಹಾಸಿಕ ಕಾದಂಬರಿಕಾರ ಓರೆಕೋರೆಗಳು ಬಾಧಿಸದ ಸಂಗತಿಗಳನ್ನು ಆಯ್ದುಕೊಂಡು, ಸ್ವಲ್ಪ ಸೇರಿಸಿ, ಎಲ್ಲವನ್ನೂ ಸರಿಯಾಗಿ ಜೋಡಿಸಿ, ಒಟ್ಟಿನಲ್ಲಿ ಕಥೆ ಸ್ವಾರಸ್ಯಪೂರ್ಣವೂ ಆಹ್ಲಾದಕರವೂ ಆಗುವಂತೆ ಮಾಡುತ್ತಾನೆ. ಮೇಲಾಗಿ ಜೀವಂತ ಪಾತ್ರಗಳ ರಸಭರಿತ ನಾಟಕವನ್ನು ಆಡಿಸುತ್ತಾನೆ, ನಮ್ಮ ಮುಂದೆ. (ಎಸ್.ವಿ.ಆರ್.)

**ಐತಿಹಾಸಿಕ ಕಾವ್ಯ:** ಐತಿಹಾಸಿಕ ಕಾವ್ಯವೆಂಬುದು ಕಥನಕಾವ್ಯದ (ನ್ಯಾರೆಟಿವ್ ಪೊಯಟ್ರಿ) ಒಂದು ಪ್ರಭೇದ (ಹಿಸ್ಟಾರಿಕಲ್ ಪೊಯಟ್ರಿ). ಒಂದು ಪ್ರಭೇದ (ಹಿಸ್ಟಾರಿಕಲ್ ಪೊಯಟ್ರಿ) ವಿವರದಲ್ಲೊ ಪರಿಣಾಮದಲ್ಲೊ ದಿಟವಾಗಿ ಚಾರಿತ್ರಿಕವೆಂದು ಶ್ಲಾಘಿಸಬಲ್ಲ ಹಲವು ಘಟನಾವಳಿಗಳ ಪ್ರಕರಣವನ್ನು ಅದು ಪದ್ಯರೂಪದಲ್ಲಿ ಕಥೆಯಾಗಿ ಹೇಳುತ್ತದೆ. ಕಾರ್ಯ ಮತ್ತು ಕಾರ್ಯಾವಳಿಯ ಕಡೆಗೇ ಕವಿಯ ಮುಖ್ಯ ಗಮನ, ಹೆಚ್ಚು ಆಸಕ್ತಿ. ದೇಶ ಕಾಲ ಪರಿಸ್ಥಿತಿಯ ವರ್ಣನೆ ಅಲ್ಲಲ್ಲಿ ಎಷ್ಟು ಬೇಕೊ ಅಷ್ಟು ಸಂಕ್ಷಿಪ್ತವಾಗಿ ಬರುತ್ತದೆ. ಕ್ರಿಯಾಶೀಲ ವ್ಯಕ್ತಿಗಳೇ ನಾಯಕ ಪ್ರತಿನಾಯಕಾದಿ ಪಾತ್ರಗಳು. ಅವರ ಸ್ವಭಾವ ಚಿತ್ರಣವೂ ಸಂಕಲ್ಪನಿರೂಪಣೆಯೂ ಅವರ ಕೆಲವೇ ಮಾತುಗಳಿಂದಲೂ ನಾನಾ ಓಡಾಟ ಮಾಡಾಟದಿಂದಲೂ ಆಗಬೇಕು, ಆಗುತ್ತದೆ. ದೀರ್ಘ ಭಾಷಣಕ್ಕಾಗಲಿ, ಅಪ್ರಾಸಂಗಿಕ ಭಾವನಾಪುಂಜಕ್ಕಾಗಲಿ ಅದರಲ್ಲಿ ಆಸ್ಪದವಿಲ್ಲ. ಈ ಬಗೆಯ ಕೃತಿಗಳಲ್ಲಿ ಯಾವ ಬಗೆಯ ವಿಳಂಬವೂ ಕ್ಲುಪ್ತ ಮಿತಿಯನ್ನು ಮೀರಿದ ವೈಶಾಲ್ಯವೂ ಕೂಡದು.

ಪುರಾತನ ಕಾಲದಲ್ಲಿ ಮೊದಲು ಹುಟ್ಟಿಬಂದ ಕಾವ್ಯಜಾತಿ ಎಪಿಕ್ ಎಂಬ ಅಂಕಿತದ ಭವ್ಯಕಾವ್ಯ. ಅದರಲ್ಲಿ ಅನೇಕ ಕಥನಾವಳಿಯ ಕಥನವಿದ್ದರೂ ಅದು ಕಥನಕಾವ್ಯಕ್ಕಿಂತ ಬಹಳ ಮಿಗಿಲಾದದ್ದು. ಜನಾಂಗದ ಹೋರಾಟ, ಬೆಳವಣಿಗೆ, ಭಾವ, ಭಾವನಾಸಮೂಹ, ಸಂಸ್ಕೃತಿ–ಎಲ್ಲವೂ ಅದರಲ್ಲಿ ಪ್ರತಿಬಿಂಬಿತವಾಗಿರುತ್ತದೆ. ಹಿಂದಣವರಿಗೆ ಭವ್ಯಕಾವ್ಯವೇ ಚರಿತ್ರೆಯಾಗಿತ್ತು. ಭಾರತೀಯ ಸಾಹಿತ್ಯದಲ್ಲಿ ಮಹಾಭಾರತಕ್ಕೆ ಇತಿಹಾಸವೆಂಬ ನಾಮಧೇಯವಿಲ್ಲವೇ? ಪುರಾಣ ಕಥಾವಳಿಯ ಅಕಿಲೀಸನಿಗೂ ಚಾರಿತ್ರಿಕ ಅಲೆಕ್ಸಾಂಡರನಿಗೂ ಭೇದ ಕಾಣಿಸಲಿಲ್ಲ, ಅವರಿಗೆ. ಜೂಲಿಯಸ್ ಸೀಸರನಂತೆ ಇನಿಯಾಸನೂ ಅವರ ದೃಷ್ಟಿಗೆ ವಾಸ್ತವಿಕ ಮಹಾಪುರುಷ. ಅಂಥ ಅಭಿಪ್ರಾಯಕ್ಕೆ ಈಗ ಮನ್ನಣೆಯಿಲ್ಲ.

ಹೊಸ ಹುಟ್ಟಿನ ಅವಧಿಯಲ್ಲಿ ಸ್ವಂತ ನಾಡು ಮತ್ತು ನುಡಿಯ ಪ್ರೇಮ ವೆಗ್ಗಳವಾಯ್ತು. ಗತಕಾಲದ ರಾಜರು ಮತ್ತು ಇತರ ಶೂರರ ವಿಚಾರವಾಗಿ ಕುತೂಹಲ ಕೆರಳಿತು. ಕೆಲವು ಲೇಖಕರು ಹಳೆಯ ದಾಖಲೆ, ಅವಶೇಷ, ದಂತಕಥೆ ಮುಂತಾದ ಆಧಾರವನ್ನು ಬಳಸಿಕೊಂಡು ಐತಿಹಾಸಿಕ ವೃತ್ತಾಂತವೆಂಬ (ಉದಂತ; ಕ್ರಾನಿಕಲ್) ಪ್ರಬಂಧಗಳನ್ನು ಗದ್ಯದಲ್ಲಿ ಬರೆದರು. ಅವುಗಳಿಂದ ದೊರೆತ ಕಥಾ ಸಾಮಗ್ರಿ ನಾಟಕಕಾರರಿಗೂ ಕವಿಗಳಿಗೂ ತುಂಬ ಉಪಯುಕ್ತವಾಯ್ತು. ಹಲವು ಪದ್ಯವೃತ್ತಾಂತಗಳೂ ಹೊರಬಂದುವು. ಕ್ರಮೇಣ ಅದೊಂದು ಕಾವ್ಯಪ್ರಕಾರವೇ ಆಯ್ತು. ಬರುಬರುತ್ತ ಅದರ ಪ್ರಶಸ್ತಿ ಕುಂದಿಹೋದರೂ ಅದು ಪೂರ್ತಿ ಕಣ್ಮರೆಯಾಗಿಲ್ಲ. ಈ ಶತಮಾನದ ಆರಂಭದಲ್ಲಿ ಸರ್ ಫ್ರಾನ್ಸಿಸ್ ಡ್ರೇಕನ ಸಾಹಸಗಳನ್ನು ಹೊಗಳುವ ಒಂದು ಸುದೀರ್ಘ ಪದ್ಯಕಾವ್ಯ ಪ್ರಕಟವಾಯಿತು. ಅದೊ ಇದೊ ಚಾರಿತ್ರಿಕ ಘಟನೆಯನ್ನೊ ಘಟನಾವಳಿಯನ್ನೊ ನಿರೂಪಿಸುವ ಕಿರುಕಾವ್ಯ, ನೀಳ ಕಾವ್ಯ ರಚಿತವಾಗುತ್ತಲೇ ಬಂದಿವೆ. ಅವುಗಳಲ್ಲಿ ಚಾರಿತ್ರಿಕ ಸತ್ತ್ವವೂ ವಿಭಾವನಾ ಸತ್ವವೂ ಅಚ್ಚುಕಟ್ಟಾಗಿ ಕೂಡಿಕೊಂಡಿದ್ದರೆ ಅವನ್ನು ನಾವು ಮೆಚ್ಚಲೇಬೇಕು. ಆದರೆ ಅನೇಕ ಪದ್ಯವೃತ್ತಾಂತಗಳು ಬೇಸರ ತರುವಷ್ಟು ನೀರಸ, ಸಪ್ಪೆ ಗದ್ಯಕ್ಕೆ ಛಂದೋಬದ್ಧ ಶೈಲಿಯ ಕವುದಿಯನ್ನು ಹೊದಿಸಿದಂತೆ!

ಹೊಸ ಹುಟ್ಟಿನ ಕಾಲದಲ್ಲೇ ಇನ್ನೊಂದು ಬಗೆಯ ಅರ್ಧ ಚಾರಿತ್ರಿಕ ಮಹಾಕಾವ್ಯವೂ ಎದ್ದುಬಂತು. ವೀರಕಾವ್ಯ (ಹೀರೋಯಿಕ್ ಪೊಯಮ್) ಎಂದು ಅದರ ನಾಮಧೇಯ. ಸುಮ್ಮನೆ ರೊಮಾನ್ಸ್ ಎಂದು ಅದನ್ನು ಕರೆಯುವ ವಾಡಿಕೆಯೂ ಇತ್ತು. ಸ್ಪೆನ್ಸರ್, ಆರಿಯೋಸ್ಟೊ ಮೊದಲಾದ ಶ್ರೇಷ್ಠ ಕವಿಗಳಿಂದ ಆ ಕಾವ್ಯ ಪ್ರಕಾರಕ್ಕೆ ಮನ್ನಣೆಯೂ ಯಶಸ್ಸೂ ಯಥೇಚ್ಛವಾಗಿ ದಕ್ಕಿತು. ಅವರ ಉದ್ದೇಶ ಬೆರಗಾಗಿಸುವ ಮಹೋದ್ದೇಶ. ಆದಿಕವಿಯೆಂದು ಪ್ರಶಂಸೆಗೊಂಡ ಪ್ರಾಚೀನ ಗ್ರೀಸಿನ ಹೋಮರ್, ಅವನನ್ನು ಅನುಸರಿಸಿ, ಅವನಂತೆಯೇ ಹೆಸರಾಂತ ಪ್ರಾಚೀನ ರೋಮಿನ ವರ್ಜಿಲ್–ಇವರು ಇಡೀ ಪಾಶ್ಚಾತ್ಯ ಲೋಕಕ್ಕೆ ಕವಿಕುಲಗುರುದ್ವಯರು. ಹೊಸ ಹುಟ್ಟಿನ ಅತ್ಯುತ್ಸಾಹದಲ್ಲಿ, ಪ್ರಾಚೀನರೊಡನೆ ಸ್ಪರ್ಧೆ ನಿಂತು ಅರ್ವಾಚೀನರೂ ಮಹೋನ್ನತ ಕಾವ್ಯಗಳನ್ನು ಕಟ್ಟಲಾರರೇ ಎಂಬ ಭಾವನೆ ಹುಟ್ಟಿ ಬೆಳೆದು ವೀರಕಾವ್ಯ ವಿರಚನೆಗೆ ಪ್ರೇರಣೆಯಾಯ್ತು. ಹಿಂದಣವರ ಭವ್ಯಕಾವ್ಯಕ್ಕೂ ಈಚಿನವರ ವೀರಕಾವ್ಯಕ್ಕೂ ದೊಡ್ಡ ವ್ಯತ್ಯಾಸವೊಂದಿದೆ. ಎರಡರಲ್ಲೂ ಅಸಾಧಾರಣ ವ್ಯವಹಾರಗಳೂ, ಅತಿಮಾನುಷದ ವ್ಯಕ್ತಿಗಳೂ ಉಂಟು. ಆದರೆ ಭವ್ಯಕಾವ್ಯದುದ್ದಕ್ಕೂ ಸ್ಫುಟ ಮಾನವೀಯತೆಯ ಪ್ರಕಾಶ ತಾನೇ ತಾನು; ವೀರಕಾವ್ಯದಲ್ಲಾದರೂ ಅಮಾನುಷತ್ವ ಕೆಂಬೆಳಕು ಹೆಚ್ಚು. ಅದರಲ್ಲಿ ಬರುವವರು ಬಲು ಎತ್ತರದ ಆದರ್ಶ ಮಾನವರಾದರೂ ನಮ್ಮ ಪ್ರಪಂಚಕ್ಕೆ ಸೇರಿದವರೆ; ಇದರಲ್ಲಿ ಬರುವವರು ಯಾವುದೋ ವಿಚಿತ್ರ ಕಲ್ಪನಾಲೋಕಕ್ಕೆ ಸೇರಿದವರು. ಅದರಲ್ಲಿ ನೇರ ಕಥನಕ್ಕೂ ನಿಲ್ಲದ ಹಾಗೂ ತ್ವರೆಗೊಳ್ಳದ ಮಧ್ಯಮ ಗತಿಯ ನಡಿಗೆಗೂ ಪುರಸ್ಕಾರ; ಇದರಲ್ಲಿ ವಿಳಂಬಕ್ಕೂ ವರ್ಣನಾಚಾಪಲ್ಯಕ್ಕೂ ಮರ್ಯಾದೆ.

ಕನ್ನಡದ ಚಂಪೂ ಕವಿಗಳು ಅನುಸರಿಸುತ್ತಿದ್ದ ಒಂದು ಕ್ರಮವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ತಮ್ಮ ಮತ್ತು ತಮ್ಮ ಆಶ್ರಯದಾತರ ವಂಶಾವಳಿಯನ್ನು ಘೋಷಿಸಿ ಪ್ರಶಂಸಾಪದ್ಯಗಳನ್ನು ಪೀಠಿಕೆಯಲ್ಲೂ ಕೆಲವೊಮ್ಮೆ ಸಮಾಪ್ತಿಯಲ್ಲೂ ಅವರು ಇಡುತ್ತಿದ್ದರು. ಕಾವ್ಯದ ನಾಯಕನಿಗೂ ತಮ್ಮ ರಾಜನಿಗೂ ಹೋಲಿಕೆ ಕಾಣುತ್ತಿದ್ದರು. ಚಾರಿತ್ರಿಕವಾದರೂ ಅವು ಕಾವ್ಯದ ವಿಷಯದಿಂದ ತೀರ ಪ್ರತ್ಯೇಕ. ಕೆಲವು ಕವಿಗಳು ಅರಸರ ಇತಿಹಾಸಭಾಗಗಳನ್ನು ಕಥನಗೈದರು. ಕೆಳದಿನೃಪವಿಜಯ, ಚಿಕ್ಕದೇವರಾಜವಿಜಯ ಮುಂತಾದವು ಒಂದು ಬಗೆಯ ಐತಿಹಾಸಿಕ ಕಾವ್ಯ. ಅವುಗಳಲ್ಲಿ ಹಲಕೆಲವು ನಡೆದ ಸಂಗತಿಗಳ ಉಲ್ಲೇಖವಿದ್ದರೂ ವಿವರದಲ್ಲೂ, ಪಾತ್ರಚಿತ್ರಣದಲ್ಲೂ, ಉದ್ದೇಶದಲ್ಲೂ, ರೀತಿಯಲ್ಲೂ, ಆದರ್ಶ, ಉತ್ಪ್ರೇಕ್ಷೆ, ಸಾಂಪ್ರದಾಯಿಕತೆಗಳ ನರ್ತನವೇ ಹೆಚ್ಚು. ಅಲಂಕಾರಶಾಸ್ತ್ರವನ್ನು ಬರೆಯುತ್ತ ಉದಾಹರಣೆಯೆಲ್ಲಕ್ಕೂ ರಾಜನ ಗುಣಶೀಲ, ಸಾಹಸಕಾರ್ಯವನ್ನೇ ವಸ್ತುವನ್ನಾಗಿಸಿಕೊಳ್ಳುವ ಚಮತ್ಕಾರವನ್ನೂ ಮೆರೆದ ಕವಿಗಳುಂಟು.

ಐತಿಹಾಸಿಕ ಘಟನಾವಳಿ ಸೂಕ್ತವಾಗಿ ಕಾವ್ಯಕ್ಕೆ ಹೊಂದಿಕೊಳ್ಳುವುದು ದಿಟವಾಗಿ ಅಪರೂಪ. ಆದ್ದರಿಂದಲೇ ಐತಿಹಾಸಿಕ ಕಾವ್ಯವೆಂಬುದೂ ವಿರಳ. (ಎಸ್.ವಿ.ಆರ್.)

**ಐತಿಹಾಸಿಕ ನಾಟಕ:** ಇತಿಹಾಸದ ವಸ್ತುವನ್ನೇ ಬಳಸಿಕೊಂಡು ಕಟ್ಟಿದ ನಾಟಕ. ಚರಿತ್ರೆಯಲ್ಲಿ ಆಗಿಹೋದ ಗತಕಾಲದ ವ್ಯಕ್ತಿಗಳು ಇತಿಹಾಸಕಾರನ, ಜೀವನಚರಿತ್ರೆ ಬರೆಯುವವನ, ಕಲ್ಪನೆಯನ್ನು ಹೇಗೆ ಕೆರಳಿಸಿದವೋ ಹಾಗೆ ಗ್ರೀಕರ ಕಾಲದಿಂದಲೂ ನಾಟಕಕಾರನ ಪ್ರತಿಭೆಯನ್ನೂ ಸೆಳೆದಿವೆ. ಪ್ರಾಚೀನ ಗ್ರೀಕ್ ನಾಟಕಕಾರರಲ್ಲಿ ಪ್ರಸಿದ್ಧರಾದ ಈಸ್ಕಿಲಸ್, ಯೂರಿಪಿಡೀಸ್ ಮತ್ತು ಸೊಫೊಕ್ಲೀಸರು ಗ್ರೀಸಿನ ಇತಿಹಾಸ ಮತ್ತು ಐತಿಹ್ಯಗಳಿಂದ ವಸ್ತುವನ್ನಾಯ್ದುಕೊಂಡು ಅದ್ಭುತವಾದ ನಾಟಕಗಳನ್ನು ರಚಿಸಿದ್ದಾರೆ. ಇತಿಹಾಸವೆಂದರೆ ಈಗಿನ ಅರ್ಥದಂತೆ ಚರಿತ್ರೆಯ ನಾಟಕಗಳನ್ನು ರಚಿಸಿದ್ದಾರೆ. ಇತಿಹಾಸವೆಂದರೆ ಈಗಿನ ಅರ್ಥದಂತೆ ಚರಿತ್ರೆಯೇ ಎಂಬ ಭಾವನೆ ಪ್ರಬಲವಾದಂತೆಲ್ಲ ಚಾರಿತ್ರಿಕ ಅಥವಾ ಐತಿಹಾಸಿಕ ನಾಟಕದ ಕಲ್ಪನೆ ಖಚಿತವಾಗತೊಡಗಿತು. ನಾಟಕಕಾರನಿಗಿಂತ ಕಾದಂಬರಿಕಾರನಿಗೆ ಹೆಚ್ಚು ಸ್ವಾತಂತ್ರ್ಯವಿದೆಯೆಂದು ಗಾಲ್ಸ್‌ವರ್ದಿ ಹೇಳಿದ ಮಾತು ಐತಿಹಾಸಿಕ ನಾಟಕ ಬರೆಯುವವನಿಗೆ ಅಷ್ಟಾಗಿ ಅನ್ವಯಿಸುವುದಿಲ್ಲ. ಐತಿಹಾಸಿಕ ನಾಟಕದಲ್ಲಿ ಬರುವ ವಾಸ್ತವಿಕ ಜೀವನದ ವ್ಯಕ್ತಿಗಳು ಪ್ರಧಾನ ಪಾತ್ರವಹಿಸಿ ನಾಟಕಕ್ಕೆ ಆವಶ್ಯಕವಾದ ರೂಪವನ್ನು ನೀಡುತ್ತಾರೆ. ಅನೇಕ ಐತಿಹಾಸಿಕ ನಾಟಕಗಳನ್ನು ನಾಟಕೀಯ ಜೀವನಚರಿತ್ರೆ ಅಥವಾ ಚರಿತ್ರೆಯ ತುಣುಕುಗಳೆಂದು ಕರೆಯಬಹುದು. ಉದಾಹರಣೆಗೆ, ಮಾರ್ಲೊ ಬರೆದ ಟ್ಯಾಂಬರ್‌ಲೇನ್, ಷೇಕ್ಸ್‌ಪಿಯರನ ಐತಿಹಾಸಿಕ ನಾಟಕಗಳು, ಬರ್ನಾರ್ಡ್ ಷಾನ ಸೇಂಟ್ ಜೋನ್, ಡೊನಾಲ್ಡ್ ಕಾರ್ಸ್‌ವೆಲ್‌ನ ಚಿಕ್ಕದಾದರೂ ಗಮನಾರ್ಹ ಕೃತಿ ಕೌಂಟ್ ಆಲ್‌ಬೆನಿ. ಐತಿಹಾಸಿಕ ನಾಟಕದ ತಂತ್ರ ಕಾದಂಬರಿಕಾರನ ತಂತ್ರದಿಂದ ಬೇರೆಯಾದದ್ದು. ಗತಕಾಲದ ಘಟನೆಗಳಲ್ಲಿ ಸುಲಭವಾಗಿ

ಎದ್ದು ತೋರುವ ನಾಟಕೀಯ ಅಂಶವನ್ನು ನಾಟಕಕಾರ ನೇರವಾಗಿ ತನ್ನ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಾನೆ. ಚರಿತ್ರೆಯಲ್ಲಿ ಬಾಳಿಬದುಕಿದ ಮಾನವ ವ್ಯಕ್ತಿಗಳ ಸ್ವಭಾವ, ಕ್ರಿಯೆಗಳು ಯಾವ ವಾಸ್ತವಿಕ ಘಟನೆಗಳನ್ನು ಸೃಷ್ಟಿಸಿದವೆನ್ನುವುದನ್ನು ಗುರುತಿಸುವುದು ನಾಟಕಕಾರನ ಉದ್ದೇಶ. ಮಧ್ಯಯುಗದ ಉಜ್ಜ್ವಲ ಪ್ರದರ್ಶನಗಳಿಂದ (ಪೇಜೆಂಟ್ರಿ) ವಿಕಾಸವಾದ ನಾಟಕ ಮಾನವಸಹಜ ಭಾವೋದ್ರೇಕವನ್ನೂ ಮೈಗೂಡಿಸಿಕೊಂಡಂತೆ, ಇತಿಹಾಸಕಾರನ 'ಕ್ರಾನಿಕಲ್' ನಿರೂಪಣೆಯಲ್ಲಿನ ರಾಗವೈವಿಧ್ಯ, ಉಜ್ಜ್ವಲ ಚಿತ್ರಣದೊಂದಿಗೆ ಬೆರೆತಾಗ, ಈ ವರ್ಣರಂಜಿತ ಐತಿಹಾಸಿಕ ವ್ಯಕ್ತಿಗಳು ನಾಟಕಕಾರನ ವಿಭಾವನೆಯನ್ನು ಪ್ರಬಲವಾಗಿ ಸೆಳೆದುವು. ಈ ವೇಳೆಗೆ ನಿಚ್ಚಳವಾದ ರೂಪ ಪಡೆದಿದ್ದ ನಾಟಕಪ್ರಕಾರ ಚರಿತ್ರೆಯ ಈ ಎಲ್ಲ ನಾಟಕೀಯ ಅಂಶಗಳನ್ನೂ ಅಳವಡಿಸಿಕೊಂಡಿತು. ಮಿಂಚಿನಂತೆ ಸುಳಿಯುವ ದೃಶ್ಯಾವಳಿಗಳ ಮೂಲಕ ಕಥೆಯನ್ನು ನಿರೂಪಿಸುವ ಹಿತಮಿತವಾದ ತಂತ್ರ ಕಥನಕ್ಕೊಂದು ಸಾಂಗತ್ಯವನ್ನು ತಂದುಕೊಟ್ಟಿತು. ಹೀಗೆ ವಿಕಾಸವಾದ, ಮಧ್ಯಯುಗದ 'ಕ್ರಾನಿಕಲ್' ನಾಟಕಗಳಿಂದ ಹೀರಿಕೊಂಡ ಅಂಶಗಳನ್ನು ಷೇಕ್ಸ್‌ಪಿಯರ್ ತನ್ನ ಕಲ್ಪನೆ ಹಾಗೂ ಸಮಾಜಪ್ರಜ್ಞೆಯ ಮೂಸೆಯಲ್ಲಿಟ್ಟು ಕರಗಿಸಿ ರಮ್ಯ ಐತಿಹಾಸಿಕ ನಾಟಕಗಳನ್ನು ರಚಿಸಿದ. ಮೂಲದ 'ಕ್ರಾನಿಕಲ್' ನಾಟಕಗಳಲ್ಲಿಲ್ಲದ ರಚನಾಕೌಶಲ, ಪಾತ್ರವಿನ್ಯಾಸ, ಇತಿಹಾಸಪ್ರಜ್ಞೆ ಇವನ್ನು ಷೇಕ್ಸ್‌ಪಿಯರ್ ಸಾಧಿಸಿದ. ಐತಿಹಾಸಿಕ ನಾಟಕ ಬರೆಯುವವರಿಗೆ ಅವನು ಒಳ್ಳೆಯ ಮಾರ್ಗದರ್ಶಕನಾಗಿದ್ದಾನೆ.

ಇತಿಹಾಸದ ವಾಸ್ತವಾಂಶಗಳು ನಾಟಕಕಲೆಯ ಕಲ್ಪನೆಯೊಡನೆ ಯಾವ ಪ್ರಮಾಣದಲ್ಲಿ ಬೆರೆಯಬೇಕೆನ್ನುವುದು ನಾಟಕಕಾರನ ಪ್ರತಿಭೆಯನ್ನೇ ಅನುಸರಿಸುತ್ತದೆ. ಇತಿಹಾಸದ ವ್ಯಕ್ತಿಗಳನ್ನು ಸನ್ನಿವೇಶ ಘಟನೆಗಳನ್ನು ಸಮಕಾಲೀನಪ್ರಜ್ಞೆಯ ಮೂಲಕ ವೀಕ್ಷಿಸಿ, ಭೂತ-ವರ್ತಮಾನ ಕಾಲಗಳಿಗೆ ಸೇತುವೆಯಾಗಿ ನಿರ್ಮಿಸುವ ಕಾರ್ಯವನ್ನು ಈಚಿನ ಹಲವು ಪ್ರತಿಭಾವಂತ ನಾಟಕಕಾರರು ಸೊಗಸಾಗಿ ನೆರವೇರಿಸಿದ್ದಾರೆ. ಆಸ್‌ಬಾರ್ನ್ ಬರೆದ ಮಾರ್ಟಿನ್ ಲೂಥರ್, ಬ್ರೆಕ್ಟ್‌ನ ಗೆಲಿಲಿಯೊ, ಬಹಳ ಹಿಂದೆಯೇ ಆಧುನಿಕ ಕಾವ್ಯನಾಟಕಕ್ಕೊಂದು (ಪೊಯೆಟಿಕ್ ಡ್ರಾಮ) ರೂಪವಿತ್ತ ಟಿ.ಎಸ್.ಎಲಿಯಟ್‌ನ ಮರ್ಡರ್ ಇನ್ ದಿ ಕೆಥೆಡ್ರಲ್-ಇವುಗಳಲ್ಲಿ ಆಧುನಿಕ ಐತಿಹಾಸಿಕ ನಾಟಕದ ರೂಪರೇಷೆಗಳನ್ನು ಕಾಣಬಹುದು.

ಗತಕಾಲದ ಒಂದು ಸನ್ನಿವೇಶವನ್ನೊ ಘಟನೆಯನ್ನೊ ಒಬ್ಬನ ಜೀವನದ ಪ್ರಮುಖ ಸಂಗತಿಯನ್ನೊ ತದ್ವತ್ತಾಗಿ ಚಿತ್ರಿಸುವುದು ಐತಿಹಾಸಿಕ ನಾಟಕಗಳ ಮುಖ್ಯ ಉದ್ದೇಶ. ಹಾಗೆ ಮಾಡುವಲ್ಲಿ ಪ್ರಧಾನ ವ್ಯಕ್ತಿಗಳು ಬದಲಾಗದೆ ಹಾಗೆಯೇ ಬಂದರೂ ಪೋಷಕವಾಗಿ ಬರುವ ಅನೇಕ ವಿಷಯಗಳು ಮತ್ತು ಪಾತ್ರಗಳು ಕಾಲ್ಪನಿಕವಾಗಿರಬಹುದು. ಅಲ್ಲದೆ ನಾಟಕಕಾರ ತನ್ನ ಯಾವುದೋ ಒಂದು ಉದ್ದೇಶ ಸಾಧನೆಗಾಗಿ ಐತಿಹಾಸಿಕ ಘಟನೆಯೊಂದನ್ನು ಎತ್ತಿಕೊಂಡಾಗ ಸ್ಥೂಲವಾಗಿ ನಾಟಕ ಇತಿಹಾಸಕ್ಕೆ ಅವಿರುದ್ಧವಾಗಿ ಕಂಡರೂ ಸಂಭಾಷಣೆ, ಸನ್ನಿವೇಶ, ಪಾತ್ರಪೋಷಣೆಗಳೆಲ್ಲ ಕಾಲ್ಪನಿಕವಾಗಿಬಿಡಬಹುದು. ಈ ಎಲ್ಲಕ್ಕೂ ಪ್ರಸಿದ್ಧ ನಾಟಕಗಳಲ್ಲಿ ಉದಾಹರಣೆಗಳು ದೊರೆಯುತ್ತವೆ. (ಎಚ್.ಕೆ.ಆರ್.)

**ಸಂಸ್ಕೃತದಲ್ಲಿ ಐತಿಹಾಸಿಕ ನಾಟಕಗಳು:** ಹಿಂದಿನ ಭಾರತೀಯರಿಗೆ ಐತಿಹಾಸಿಕ ಬುದ್ಧಿಯೇ ಇಲ್ಲವೆಂದು ಆಧುನಿಕ ಇತಿಹಾಸಕಾರರ ಆಕ್ಷೇಪಣೆ. ಭಾರತದಲ್ಲಿ ಪ್ರಾಚೀನ ಇತಿಹಾಸದ ಮುಖ್ಯ ಘಟನೆಗಳನ್ನು ಕಾಲನಿರ್ದೇಶ ಸಮೇತವಾಗಿ ಸ್ವೀಕಾರಾರ್ಹವೆನಿಸುವಂತೆ ರಚಿಸಿದ ಬರೆಹಗಳ ಅಭಾವವೇ ಇದಕ್ಕೆ ಮುಖ್ಯ ಆಧಾರ. ಮೊದಲು, ಜನಪ್ರಿಯವೂ ರೋಚಕವೂ ಆದ ರೀತಿಯಲ್ಲಿ ರಾಜರ ಚರಿತ್ರೆಗಳನ್ನು ಕಥಾಕಲ್ಪನೆಗಳೊಂದಿಗೆ ಕೂಡಿಸಿಯೇ ಕಾವ್ಯರಚನೆ ಮಾಡುತ್ತಿದ್ದರು. ಈ ದೃಷ್ಟಿಯಿಂದ ರಾಮಾಯಣ, ಮಹಾಭಾರತ, ಪುರಾಣದಲ್ಲಿ ಬರುವ ರಾಜಚರಿತ್ರೆಗಳು-ಎಲ್ಲವೂ ಇತಿಹಾಸವೆನಿಸುತ್ತಿತ್ತು. ಆದರೆ ಇವುಗಳಲ್ಲಿ ಎಲ್ಲೂ ಕಾಲಗಣನೆಯ ನಿರ್ದೇಶನವೇ ಇಲ್ಲ. ಕೇವಲ ಕಲ್ಪಿತಾಂಶಗಳಿಂದಲೇ ನೇಯ್ದ ಅದ್ಭುತರಮ್ಯ ಚರಿತ್ರೆ ಕಥೆಯೆನಿಸುತ್ತಿತ್ತು ಅಷ್ಟೆ.

ಸಂಸ್ಕೃತದ ನಾಟಕಗಳೆಲ್ಲ ಪ್ರಾಯಿಕವಾಗಿ ಈ ಮೂರು ಬಗೆಯ (ಇತಿಹಾಸ, ಪುರಾಣ ಮತ್ತು ಕಥೆ) ಮೂಲವಸ್ತುವನ್ನೇ ಅವಲಂಬಿಸಿರುತ್ತಿದ್ದುವು. ರಾಜ ಸಚಿವಾದಿಗಳ ವೀರ ಇಲ್ಲವೆ ಶೃಂಗಾರಕಾರ್ಯಗಳಿಗೆ ನಾಟಕಗಳಲ್ಲಿ ಪರಮಪ್ರಾಶಸ್ತ್ಯವಿದ್ದರೂ ನಾಟಕಕಾರ ಸಮಕಾಲೀನರನ್ನು ನಾಯಕರನ್ನಾಗಿ ತರುವ ಪರಿಪಾಠ ಹೆಚ್ಚಾಗಿರಲಿಲ್ಲ. ಆದರೂ ಈಗ ಉಪಲಬ್ಧವಾಗಿರುವ ಕೆಲವೊಂದು ನಾಟಕಗಳ ಸಮಕಾಲೀನ ರಾಜವೃತ್ತಾಂತವನ್ನೇ ಒಳಗೊಳ್ಳುವುದರಿಂದ ಭಾರತೀಯರಿಗೆ ಕ್ವಚಿತ್ತಾದರೂ ಐತಿಹಾಸಿಕ ಬುದ್ಧಿಯಿತ್ತೆಂದು ಸಾಧಿಸುವಂತಾಗಿದೆ.

ಐತಿಹಾಸಿಕ ನಾಟಕಗಳ ನೂತನ ಪರಂಪರೆಗೆ ಕಾಳಿದಾಸನೇ ಪ್ರವರ್ತಕನೆಂದರೂ ಸಲ್ಲುತ್ತದೆ. ಏಕೆಂದರೆ ಪ್ರಾಚೀನ ಪುರಾಣೇತಿಹಾಸಗಳಲ್ಲಿ ಪ್ರಸಿದ್ಧನಲ್ಲದ ಅಗ್ನಿಮಿತ್ರ ರಾಜನನ್ನು ನಾಯಕನನ್ನಾಗಿ ಮಾಡಿ ಅವನು ಮಾಳವಿಕಾಗ್ನಿಮಿತ್ರವನ್ನು ಬರೆದಿದ್ದಾನೆ. ಕೆಲವು ವಿದ್ವಾಂಸರು ಕಾಳಿದಾಸ ಅಗ್ನಿಮಿತ್ರ ರಾಜನ ಸಮಕಾಲೀನನೆಂಬ ವಾದವನ್ನು ಕೂಡ ಪುರಸ್ಕರಿಸುತ್ತಾರೆ. (ಕುನ್ಹನ್ ರಾಜಾ ಮತ್ತು ವಿ.ರಾಘವನ್ ಮೊದಲಾದವರು) ಈ ರಾಜನ ಶೃಂಗಾರವಿಲಾಸವನ್ನೇ ಸ್ವಾರಸ್ಯಕೇಂದ್ರವೆಂದರೂ ಇದರ ಹಿನ್ನೆಲೆಯಲ್ಲಿ ಸತ್ಯವಾದ ಚಾರಿತ್ರಾಂಶಗಳನ್ನೊಳಗೊಳ್ಳುವ ರಾಜಕೀಯ ಪರಿಸ್ಥಿತಿ ವರ್ಣಿತವಾಗಿದೆ. ಪಾಟಲಿಪುತ್ರದಲ್ಲಿ ರಾಜನಾಗಿರುವ ವೃದ್ಧ ಪುಷ್ಯಮಿತ್ರ; ಅವನ ಪ್ರತಿನಿಧಿಯಾಗಿ ವಿದಿಶಾಪಟ್ಟಣವನ್ನಾಳುತ್ತಿರುವ ಮಗ ಅಗ್ನಿಮಿತ್ರ ; ಕೆಳಗೆ ವಿದರ್ಭದಲ್ಲಿ ರಾಜ್ಯಕ್ಕಾಗಿ ಇಬ್ಬರ ಕಲಹ. ಪಾಟಲಿಪುತ್ರದ ಪೂರ್ವ ರಾಜರಾದ ಮೌರ್ಯರ ಸಚಿವನ ಸಹಾಯ ಒಬ್ಬನಿಗೆ; ಅಗ್ನಿಮಿತ್ರನ ಸಹಾಯ ಇನ್ನೊಬ್ಬನಿಗೆ. ಅಗ್ನಿಮಿತ್ರನ ರಾಜ್ಯತಂತ್ರದ ವಿಜಯ. ವಿದರ್ಭರಾಜಪುತ್ರಿಯ ಪಾಣಿಗ್ರಹಣ. ಅತ್ತ ಯವನರಿಂದ ಪುಷ್ಯಮಿತ್ರನ ಯಜ್ಞಾಶ್ವಬಂಧನ. ಅಗ್ನಿಮಿತ್ರನ ಮಗನಾದ ವಸುಮಿತ್ರನಿಗೂ ಯವನರಿಗೂ ಕಾಳಗ. ಯುದ್ಧದಲ್ಲಿ ವಸುಮಿತ್ರನ ವಿಜಯ. ನಮಗೆ ಉಪಲಬ್ಧವಿರುವ ಇತರ ಐತಿಹಾಸಿಕ ಘಟನೆಗಳೊಂದಿಗೆ ಈ ನಾಟಕದಲ್ಲಿ ಪ್ರಥಮತಃ ಉಲ್ಲೇಖಿತವಾಗಿರುವ ಈ ಘಟನೆಗಳು ಕೂಡ ಅವಿರುದ್ಧವಿದ್ದು ಪೂರಕವೆನಿಸುವಂತಾಗಿವೆ.

ಇದೇ ರೀತಿ, ವಿಶಾಖದತ್ತನ (ಸು.600) ಮುದ್ರಾರಾಕ್ಷಸ ನಾಟಕದ ಮೂಲ ಅಚ್ಚು ಕಥಾಸಾಹಿತ್ಯದಿಂದ ಬಂದುದಾದರೂ ಅಲ್ಲಿ ಜೀವಂತವಾಗಿ ಕಣ್ಣುಮುಂದೆ ಸುಳಿಯುವ ಪರ್ವತರಾಜ, ಅಮಾತ್ಯರಾಕ್ಷಸ, ಮಲಯಕೇತು ಮುಂತಾದ ಪಾತ್ರಗಳು ನಾಟಕಕಾರನ ಐತಿಹಾಸಿಕ ಪ್ರಜ್ಞೆಗೆ ಮಾನದಂಡಗಳಂತಿವೆ.

ಇದೇ ಕವಿಯ ದೇವೀಚಂದ್ರಗುಪ್ತವೆಂಬ ನಾಟಕದ ತುಣುಕುಗಳು ಭೋಜನ ಶೃಂಗಾರಪ್ರಕಾಶ ಮುಂತಾದ ಲಕ್ಷಣಗ್ರಂಥಗಳಲ್ಲಿ ಉದಾಹೃತವಾಗಿವೆ. ಗುಪ್ತ ಸಾಮ್ರಾಟ್ ಎರಡನೆಯ ಚಂದ್ರಗುಪ್ತನ ಹಿರಿಯಣ್ಣ ರಾಮಗುಪ್ತ, ಅವನ ರಾಣಿ ಧ್ರುವದೇವಿ. ಶಕರೊಡನೆ ಯುದ್ಧದಲ್ಲಿ ಸೋತ ರಾಮಗುಪ್ತ ವಿಷಮಘಳಿಗೆಯಲ್ಲಿ ತನ್ನ ರಾಣಿಯನ್ನೇ ಶಕರಾಜನಿಗೆ ಒಪ್ಪಿಸುವ ಅವಮಾನಕರ ಒಪ್ಪಂದ ಮಾಡಿಕೊಳ್ಳುತ್ತಾನೆ. ಇದನ್ನು ಸಹಿಸಲಾರದ ಚಂದ್ರಗುಪ್ತ ರಾಣಿಯ ವೇಷದಲ್ಲಿ ಶಕರಾಜನ ಅಂತಃಪುರಕ್ಕೆ ಸೇರಿ ಅವನನ್ನು ಕೊಂದು ಹಿಂದಿರುಗಿ ಅಣ್ಣ ಸತ್ತಮೇಲೆ ತಾನೇ ಧ್ರುವದೇವಿಯನ್ನು ಮದುವೆಯಾಗುತ್ತಾನೆ. ಆಕೆಯೇ ಕುಮಾರಗುಪ್ತನ ತಾಯಾಗುತ್ತಾಳೆ. ಇಷ್ಟೆಲ್ಲ ಐತಿಹಾಸಿಕ ಸಂಗತಿಗಳನ್ನು ಈ ನಾಟಕದ ತುಣುಕುಗಳು ಮೊತ್ತ ಮೊದಲಿಗೆ ನಮ್ಮ ಗಮನಕ್ಕೆ ತರುತ್ತವೆ.

ಹೀಗೆಯೇ ಇತಿಹಾಸಕಾರನ ಗಮನವನ್ನು ಸೆಳೆವ ಮತ್ತೊಂದು ನಾಟಕ ಈ ಶತಮಾನದಲ್ಲಿಯೇ ಮೊದಲು ಅಚ್ಚಾಯಿತು: ಕೌಮುದೀಮಹೋತ್ಸವವೆಂದು ಅದರ ಹೆಸರನ್ನು ಊಹಿಸಲಾಗಿದೆ. ಬರೆದಾಕೆ ವಿಜ್ಜಿಕಾ ಎಂದಿರಬಹುದೆನ್ನುತ್ತಾರೆ. ಅದರಲ್ಲಿ ರಾಜ್ಯಭ್ರಷ್ಟನಾದ ಕಲ್ಯಾಣವರ್ಮನೆಂಬಾತ ಹೇಗೆ ಪೂರ್ವಮಂತ್ರಿಯಾದ ಮಂತ್ರಗುಪ್ತನ ಹಂಚಿಕೆಗಳಿಂದ ಮರಳಿ ತನ್ನ ರಾಜ್ಯವನ್ನು ಪಡೆದನೆಂಬ ಕಥೆ ಬರುತ್ತದೆ. ಮಗಧರಾಜನ ಸೇನಾಧಿಪತಿಯಾಗಿದ್ದ ಚಂಡಸೇನ ಮ್ಲೇಚ್ಛರಾದ ಲಿಚ್ಛವಿಗಳೊಡನೆ ಕೂಡಿಕೊಂಡು ಪಾಟಲಿಪುತ್ರವನ್ನು ಮುತ್ತಿ, ತನ್ನ ಪ್ರಭು ಸುಂದರವರ್ಮನನ್ನು ಕೊಂದು, ಮಗ ಕಲ್ಯಾಣವರ್ಮನನ್ನು ಓಡಿಸಿ, ತಾನೇ ರಾಜನಾದುದನ್ನು ಈ ನಾಟಕ ತಿಳಿಸುತ್ತದೆ. ಇತರ ಶೃಂಗಾರ ನಾಟಕಗಳಂತೆ ನಾಯಕ ಕಲ್ಯಾಣವರ್ಮನಿಗೆ ಶೂರಸೇನರಾಜನ ಮಗಳಾದ ಕೀರ್ತಿಸೇನೆಯೆಂಬ ಕನ್ಯಾರತ್ನ ಪ್ರಾಪ್ತಿಯನ್ನು ವರ್ಣಿಸುತ್ತದೆ. ಈ ಮಗಧರಾಜ್ಯ ಚರಿತ್ರೆ ನಮಗೆ ಅನ್ಯತ್ರ ಉಪಲಬ್ಧವಿಲ್ಲ.

ಮಾಳವಿಕಾಗ್ನಿಮಿತ್ರ ಮತ್ತು ರತ್ನಾವಳೀ ನಾಟಕಗಳ ಮಾದರಿಯಲ್ಲಿ ಬರೆಯಲಾಗಿರುವ ಬಿಲ್ಹಣಕವಿಯ (11ನೆಯ ಶತಮಾನ) ಕರ್ಣಸುಂದರೀ ಎಂಬ ನಾಟಕ ಸಮಕಾಲೀನನಾದ ಅಣಹಿಲವಾಡದ ಕರ್ಣದೇವನೃಪನನ್ನು ಕುರಿತಿದ್ದರೂ ಅದರಲ್ಲಿ ಶೃಂಗಾರವಸ್ತು ಹೆಚ್ಚು; ಐತಿಹಾಸಿಕ ವಸ್ತು ಕಡಿಮೆ. ಹೀಗೆಯೇ ಮೃಚ್ಛಕಟಿಕ ಮುಂತಾದ ಪ್ರಕರಣಗಳಲ್ಲಿ ಆರ್ಯಕ ಪಾಲಕರ ಘರ್ಷಣೆಯೇ ಮುಂತಾದ ರಾಜಕೀಯ ವೃತ್ತಾಂತಗಳು ಬರುವುದುಂಟು. ಸಂಸ್ಕೃತದಲ್ಲಿ ಐತಿಹಾಸಿಕ ನಾಟಕಗಳ ಪರಂಪರೆ ಒಂದುಂಟೆಂದು ಹೇಳಲು ಮೇಲಿನ ಈ ಕೆಲವು ನಿದರ್ಶನಗಳು ಸಾಕು. (ಕೆ.ಕೆ.)

**ಕನ್ನಡದಲ್ಲಿ ಐತಿಹಾಸಿಕ ನಾಟಕಗಳು:** ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ನಾಟಕಗಳು ಹೇಳಿಕೊಳ್ಳುವಷ್ಟಿಲ್ಲವಾದರೂ ಈ ಪ್ರಕಾರ ಕನ್ನಡಕ್ಕೆ ಹೊಸದೇನೂ ಅಲ್ಲ. ರಾಮಾಯಣ ಮಹಾಭಾರತಗಳನ್ನು ಅವಲಂಬಿಸಿದ ಸಂಸ್ಕೃತ ನಾಟಕಗಳು ಕನ್ನಡಕ್ಕೆ ಬಂದಾಗಲೇ ಕನ್ನಡದಲ್ಲಿ ಐತಿಹಾಸಿಕ ನಾಟಕಗಳ ಜನನವೂ ಆಯಿತೆನ್ನಬಹುದು. ಸಾಮಾನ್ಯವಾಗಿ ಈ ನಾಟಕಗಳೆಲ್ಲ ರೂಪಾಂತರಗಳು ಇಲ್ಲವೇ ಭಾಷಾಂತರಗಳು. ಹೀಗೆ ಉಪಲಬ್ಧವಾದ ಮೊದಲ ಕನ್ನಡ ನಾಟಕ ಮಿತ್ರವಿಂದಾ ಗೋವಿಂದ; ಸಂಸ್ಕೃತ ರತ್ನಾವಳಿಯ ಭಾಷಾಂತರ. ಇದರ ಕರ್ತೃ ಮೈಸೂರರಸ ಚಿಕ್ಕದೇವರಾಜ ಒಡೆಯರ ಆಸ್ಥಾನಕವಿ ಸಿಂಗರಾರ್ಯ. ಈ ನಾಟಕದಲ್ಲಿ ಇತಿಹಾಸದ ಅಂಶಕ್ಕಿಂತ ಕಲ್ಪನಾಂಶವೇ ಹೆಚ್ಚು.

ಅನಂತರ ನಮ್ಮ ದೃಷ್ಟಿಗೆ ಬರುವವರು ಬಸವಪ್ಪಶಾಸ್ತ್ರಿಗಳು. ಶಾಕುಂತಲ, ವಿಕ್ರಮೋರ್ವಶೀಯ, ರತ್ನಾವಳಿ, ಉತ್ತರರಾಮಚರಿತ್ರೆ, ಮಾಲತೀಮಾಧವ, ಚಂಡಕೌಶಿಕ ನಾಟಕಗಳ ಭಾಷಾಂತರಗಳನ್ನೂ ಷೇಕ್ಸ್‌ಪಿಯರನ ಒಥೆಲೋವನ್ನು ಅನುಸರಿಸಿ ಶೂರಸೇನ

ಚರಿತ್ರೆಯನ್ನೂ ಇವರು ರಚಿಸಿದ್ದಾರೆ. ಭಾಷಾಂತರ ಕಲೆಯನ್ನು ರಮ್ಯವಾಗಿ ಕರಗತಮಾಡಿಕೊಂಡವರಲ್ಲಿ ಶ್ರೇಷ್ಠರಿವರು. ಇವರ ಹಿಂದೆಯೇ ಬೆಳ್ಳಾವೆ ನರಹರಿಶಾಸ್ತ್ರಿ, ಚುರಮುರಿ ಶೇಷಗಿರಿರಾವ್ ಮತ್ತು ಬಿ. ಕೃಷ್ಣಪ್ಪ–ಇವರು ಬೆಳಕಿಗೆ ಬಂದರು.

ಚಂಡಕೌಶಿಕ ನಾಟಕದ ನಾಲ್ಕು ಅಂಕಗಳು ಮಾತ್ರ ಭಾಷಾಂತರವಾಗಿದ್ದಾಗ ಅವರೊಡನೆ ಆ ಕಾರ್ಯದಲ್ಲಿ ಸರಿತೂಗಿ ಉಳಿದ ಭಾಗವನ್ನು ಮುಗಿಸಿದವರು ಅಳಸಿಂಗರಾಚಾರ್ಯರು. ಭಾಸನ ಸ್ವಪ್ನವಾಸದತ್ತ ಮತ್ತು ಪಂಚರಾತ್ರಗಳನ್ನು ಇವರು ಕನ್ನಡಿಸಿದರು. ಪಂಚರಾತ್ರವನ್ನು ಇವರಲ್ಲದೆ ಕೆ.ಆರ್.ರಾಮಸ್ವಾಮಿ, ಪಾನ್ಯಂ ಸುಂದರಶಾಸ್ತ್ರಿ ಮತ್ತು ಎನ್.ಎಸ್.ನಾರಾಯಣಶಾಸ್ತ್ರಿಗಳೂ ಅನುವಾದಿಸಿದ್ದಾರೆ.

ಪ್ರತಿಮಾ ನಾಟಕ ಮೈಸೂರು ಸೀತಾರಾಮಶಾಸ್ತ್ರಿಗಳಿಂದ, ಉಳಿದ ಭಾಸನಾಟಕಗಳು ಎಲ್.ಗುಂಡಪ್ಪನವರಿಂದ ಭಾಷಾಂತರವಾಗಿವೆ. ಶ್ರೀಹರ್ಷನ ನಾಗಾನಂದವನ್ನು ಮೈಸೂರಿನ ಅನಂತನಾರಾಯಣ ಶಾಸ್ತ್ರಿಗಳೂ, ಶೂದ್ರಕನ ಮೃಚ್ಛಕಟಿಕವನ್ನು ಗರಣಿ ವೈ.ಕೃಷ್ಣಾಚಾರ್ಯರೂ, ಧೋಂಡೋ ನರಸಿಂಹ ಮುಳಬಾಗಿಲ ಅವರೂ, ನಂಜನಗೂಡು ಸುಬ್ಬಾಶಾಸ್ತ್ರಿಗಳೂ, ಭಟ್ಟನಾರಾಯಣನ ವೇಣೀಸಂಹಾರವನ್ನು ಜಯರಾಮಾಚಾರ್ಯರೂ, ಕಾಳಿದಾಸನ ಮಾಲವಿಕಾಗ್ನಿಮಿತ್ರವನ್ನು ಶ್ರೀಕಂಠಶಾಸ್ತ್ರಿಗಳೂ ಧಾರವಾಡದ ನಾ.ಗು.ಕರಗುದರಿ ಅವರೂ, ವಿಶಾಖದತ್ತನ ಮುದ್ರಾರಾಕ್ಷಸವನ್ನು ಎಂ.ರಾಮಶೇಷಶಾಸ್ತ್ರಿಗಳೂ ರಾಕ್ಷಸನ ಮುದ್ರಿಕೆ ಎಂಬ ಹೆಸರಿನಿಂದ, ತೀ.ನಂ.ಶ್ರೀಕಂಠಯ್ಯ ಅವರೂ ಅನುವಾದಿಸಿದ್ದಾರೆ.

ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ಅನ್ನು ಎಂ.ಎಲ್.ಶ್ರೀಕಂಠೇಶಗೌಡ ಮತ್ತು ಡಿ.ವಿ.ಗುಂಡಪ್ಪ–ಇವರು ಭಾಷಾಂತರಿಸಿದ್ದಾರೆ. ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ಅನ್ನು ಶ್ರೀಕಂಠೇಶಗೌಡರು ಪ್ರಮೀಳಾರ್ಜುನೀಯವೆಂದೂ ಕೆರೂರು ವಾಸುದೇವಾಚಾರ್ಯರು ಪಾತ್ರಗಳ ಹೆಸರು ಹೊರತು ಉಳಿದುದನ್ನು ಸಂಪೂರ್ಣವಾಗಿಯೂ ಪರಿವರ್ತಿಸಿದ್ದಾರೆ. ಕೆರೂರರ ಭಾಷಾಂತರವನ್ನು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲೇ ಬಂದ ಶ್ರೇಷ್ಠನಾಟಕಗಳಲ್ಲೊಂದೆಂದು ಪರಿಗಣಿಸಲಾಯಿತು. ಇದೇ ಸಾಲಿನಲ್ಲಿ ಕುವೆಂಪು ಅವರ ಬಿರುಗಾಳಿ (ಟೆಂಪೆಸ್ಟ್) ಬಿ.ಎಂ.ಶ್ರೀ. ಅವರ ಪಾರಸೀಕರು ಬರುತ್ತವೆ.

ಸೋಸಲೆ ಗರಳಪುರಿ ಶಾಸ್ತ್ರಿಗಳು ಲಾರೆನ್ಸ್ ಹೌಸ್‌ಮನನ ಸಾಕ್ರಟೀಸನ ಕೊನೆಯ ದಿನಗಳು, ಇಬ್ಸೆನನ ಆರ್ಯಕ ಮತ್ತು ಸೂತ್ರದ ಬೊಂಬೆಗಳನ್ನು ತಂದಿತ್ತರು. ಸಿ.ಆನಂದರಾಯರು ರಾಮವರ್ಮ–ಲೀಲಾವತಿ (ರೋಮಿಯೊ ಅಂಡ್ ಜೂಲಿಯೆಟ್) ಮತ್ತು ಹ್ಯಾಮ್ಲೆಟ್ ಅನುವಾದಿಸಿದರು. ಜಾನ್ ಮೇಸ್‌ಫೀಲ್ಡನ ಟ್ರಯಲ್ ಆಫ್ ಜೀಸಸ್ ಅನ್ನು ದೇವುಡು ನರಸಿಂಹಶಾಸ್ತ್ರಿಗಳು ವಿಚಾರಣೆ ಎಂಬ ಹೆಸರಿನಲ್ಲಿ ತಂದರು. ಮಧುಸೂದನದತ್ತರ ಬಂಗಾಳಿ ನಾಟಕ ಕೃಷ್ಣಾಕುಮಾರಿಯನ್ನು ಬೆನಗಲ್ ರಾಮರಾಯರು ಪರಿವರ್ತಿಸಿದರು; ದ್ವಿಜೇಂದ್ರಲಾಲ್ ರಾಯ್‌ರ ಪುನರ್ಜನ್ಮ, ಮೇವಾಡಪತನ, ಷಹಜಹಾನ್ ನಾಟಕಗಳೂ ಕನ್ನಡಕ್ಕೆ ಬಂದಿವೆ. ಪೌರಾಣಿಕ–ಐತಿಹಾಸಿಕಗಳನ್ನೂ ಐತಿಹಾಸಿಕಗಳೆಂದುಕೊಂಡು ನಾಟಕ ರಚಿಸಿದವರಲ್ಲಿ ಅಗ್ರಗಣ್ಯರಾದವರು ಮೂವರು– ಉತ್ತರ ಕರ್ನಾಟಕದ ಬಾಳಾಚಾರ್ಯ ಸಕ್ಕರಿ (ಶಾಂತಕವಿ), ಮೈಸೂರಿನ ಬೆಳ್ಳಾವೆ ನರಹರಿಶಾಸ್ತ್ರಿ ಮತ್ತು ನಂಜನಗೂಡು ಶ್ರೀಕಂಠಶಾಸ್ತ್ರಿ. ಜಿ.ಪಿ.ರಾಜರತ್ನಂ ರಚಿಸಿರುವ ಗಂಡುಗೊಡಲಿ ಪೌರಾಣಿಕ–ಐತಿಹಾಸಿಕ ನಾಟಕಗಳಲ್ಲಿ ಉನ್ನತಮಟ್ಟದ್ದು.

ಸದಾಶಿವರಾವ್ ಗರುಡರು ಎಚ್ಚಮನಾಯಕವನ್ನೂ ಕೆರೂರು ವಾಸುದೇವಾಚಾರ್ಯರು ನಳ–ದಮಯಂತಿಯನ್ನೂ ಬರೆದಿದ್ದಾರೆ. ಪುರಂದರದಾಸ, ಮೀರಾಬಾಯಿ, ಭದ್ರಾಚಲ ರಾಮದಾಸ್ ಇತ್ಯಾದಿ ಭಗವದ್ಭಕ್ತರನ್ನು ಕುರಿತ ನಾಟಕಗಳೂ ವಿಪುಲವಾಗಿ ಬಂದಿವೆ. ಬಿ.ಪುಟ್ಟಸ್ವಾಮಯ್ಯನವರು ಗೌತಮಬುದ್ಧ, ಷಹಜಹಾನ್ ಮುಂತಾದುವನ್ನು ಹೃದಯಂಗಮವಾಗಿ ಬರೆದಿದ್ದಾರೆ.

ಬಿ.ಎಂ.ಶ್ರೀ. ಅವರ ಜಾಡಿನಲ್ಲೇ ನಡೆದ ಕೆ.ವಿ.ರಾಘವಾಚಾರ್ಯರು ಗ್ರೀಕ್ ಮೂಲದಿಂದಲೇ ಅಂತಿಗೊನೆಯನ್ನು ಭಾಷಾಂತರಿಸಿ ನಾಟಕರತ್ನವೊಂದನ್ನು ಇತ್ತಿದ್ದಾರೆ. ಕುವೆಂಪು ಅವರು ಮಹಾರಾತ್ರಿಯಲ್ಲಿ ಸಿದ್ಧಾರ್ಥನ ರಾಜ್ಯತ್ಯಾಗವನ್ನು ಬಣ್ಣಿಸಿದ್ದಾರೆ. ಸಣ್ಣ ಕಥೆಯ ಶ್ರೀನಿವಾಸರು ಒಂಬತ್ತು ನಾಟಕಗಳನ್ನು ರಚಿಸಿದ್ದಾರೆ. ತಿರುಪಾಣಿ, ಯಶೋಧರಾಗಳು ಚಾರಿತ್ರಿಕ ವಸ್ತುಗಳನ್ನು ಒಳಗೊಂಡಿದ್ದರೂ ಚಿರಕಾವ್ಯಗಳ ಗುಂಪಿಗೆ ಸೇರುತ್ತವೆ. ಶಾಂತಾ, ಸಾವಿತ್ರಿ, ಉಷಾ ಇವು ಪೌರಾಣಿಕ–ಐತಿಹಾಸಿಕಗಳೆಂದರೆ ಸಲ್ಲುತ್ತದೆ. ಅಚ್ಚ ಐತಿಹಾಸಿಕಗಳೆಂದು ಕಾಕನಕೋಟೆ, ತಾಳೀಕೋಟೆ, ಶಿವಛತ್ರಪತಿ ನಾಟಕಗಳನ್ನು ಹೆಸರಿಸಬಹುದು. ಕಾಕನಕೋಟೆ ಶುದ್ಧ ಚಾರಿತ್ರಿಕರೂಪಕವಾಗಿದ್ದು, ಗದ್ಯ ಮತ್ತು ಪದ್ಯದಿಂದ ಕೂಡಿ ಮನೋಜ್ಞವಾಗಿದೆ. ಉಳಿದೆರಡು ಸಂಪೂರ್ಣವಾಗಿ ಗದ್ಯನಾಟಕಗಳು. ವಸ್ತುವಿನಲ್ಲಿ, ಶೈಲಿಯಲ್ಲಿ ವೈವಿಧ್ಯವಿದ್ದು, ವಾಚಕರ ಮತ್ತು ಪ್ರೇಕ್ಷಕರ ಮನವನ್ನು ಇವು ಹಿಡಿದು ನಿಲ್ಲಿಸುತ್ತವೆ. ಪೌರಾಣಿಕವೆನಿಸಿಕೊಳ್ಳುವಷ್ಟು ಪ್ರಾಚೀನವಲ್ಲದ್ದೂ ಆಧುನಿಕ–ಐತಿಹಾಸಿಕವೆನ್ನುವಷ್ಟು ಈಚಿನದೂ ಅಲ್ಲದ್ದು ಶ್ರೀನಿವಾಸರ ಯಶೋಧರಾ. ಸಿದ್ಧಾರ್ಥ ಬುದ್ಧನಾದ ಮೇಲೆ ಮೊಟ್ಟಮೊದಲಿಗೆ ಕಪಿಲವಸ್ತುವಿನಲ್ಲಿ ತನ್ನ ಪೂರ್ವಾಶ್ರಮದ ಹೆಂಡತಿಯಾದ ಯಶೋಧರೆಯನ್ನು ಹೇಗೆ ಕಂಡುಕೊಂಡನೆಂಬ ವಿಷಯವೇ ಇದರ ವಸ್ತು. ಯಶೋಧರೆಯ ಪಾತ್ರ ಇಲ್ಲಿ ವಿನೂತನವಾಗಿ ಚಿತ್ರಿತವಾಗಿದೆ.

ಮೈಸೂರಿನ ಪ್ರಾಚೀನ ಚರಿತ್ರೆಯನ್ನೇ ವಸ್ತುವನ್ನಾಗಿ ಆರಿಸಿಕೊಂಡು ಹಲವಾರು ನಾಟಕರಚನೆ ಮಾಡಿದವರಲ್ಲಿ ಮೊದಲಿಗರೆಂದರೆ–ಸಂಸ ಎಂಬ ಕಾವ್ಯನಾಮದ ಎ.ಎನ್. ಸಾಮಿ ವೆಂಕಟಾದ್ರಿ (1898–1939). ಇವರು ಇಪ್ಪತ್ತಮೂರು ನಾಟಕಗಳನ್ನು ಬರೆದಿದ್ದಾರಾದರೂ ಎಲ್ಲವೂ ಉಪಲಬ್ಧವಿಲ್ಲ. ಬಿರುದೆಂತೆಂಬರ ಗಂಡ, ಸುಗುಣಗಂಭೀರ, ವಿಗಡವಿಕ್ರಮರಾಯ–ಇವು ಮೊದಲು ಬೆಳಕು ಕಂಡ ಮೂರು ನಾಟಕಗಳು. ಅನಂತರ ಬೆಟ್ಟದ ಅರಸು, ವಿಜಯನರಸಿಂಹ, ಮಂತ್ರಶಕ್ತಿ–ಇವು ದೊರಕಿದವು. ಇವು ಆರೂ ಅನರ್ಘ್ಯ ರತ್ನಗಳು.

ರಾಜ ಒಡೆಯರ ಅಣ್ಣ ಬೆಟ್ಟದ ಚಾಮರಾಜರ ಬಂಗಾರದವಳ ಮಗ ಬೆಟ್ಟದ ಅರಸು ರಾಜ ಒಡೆಯರ ಮರಣಕ್ಕೆ ಮುಂಚೆ ದಳವಾಯಿಯಾಗಿ ನೇಮಕವಾದವನು. ಅನಂತರ ಪಟ್ಟಕ್ಕೆ ಬಂದ ಚಾಮರಾಜ ಒಡೆಯರ ಕಾಲದಲ್ಲೂ ದಳವಾಯಿಯಾಗಿದ್ದು, ನಿಷ್ಠೆಯಿಂದ ಸೇವೆ ಸಲ್ಲಿಸಿದ. ಅದಕ್ಕೆ ಅವನಿಗಾದ ಪ್ರತಿಫಲ ಸೆರೆಯವಾಸ, ಕಣ್ಣುಗಳಿಗೆ ಭಾಂಡಕರ್ಪೂರದ ಕಟ್ಟು; ನಿಸ್ಸೀಮ ರಾಜಭಕ್ತ ರಾಜದ್ರೋಹಿಯೆನಿಸಿ ತಾನೆಸಗದಿದ್ದ ದ್ರೋಹ ಕಪಟಗಳಿಗೆ ಬಲಿಯಾದ. ಇವನಾದ ಮೇಲೆ ಮೂರನೆಯ ದಳವಾಯಿಯಾಗಿ ವಿಗಡವಿಕ್ರಮರಾಯ ಬಂದ. ತನ್ನ ಕುಟಿಲ ಕ್ರೂರತನದಿಂದ ಎಲ್ಲರನ್ನೂ ಬದಿಗೊತ್ತಿ ರಾಜ್ಯಾಡಳಿತವನ್ನು ತಾನೇ ವಹಿಸಿಕೊಂಡ, ಈ ಬೆಟ್ಟದ ಅರಸು ನಾಟಕ ನಾಯಕ ಬಿದ್ದುದನ್ನೂ ವಿಕ್ರಮನ ಅಭ್ಯುದಯವನ್ನೂ ಚಿತ್ರಿಸುತ್ತದೆ. ಉಳಿದ ಐದು ನಾಟಕಗಳಂತೆ ಹಲವಾರು ಪಾರಿಭಾಷಿಕ ಪದಪ್ರಯೋಗದಿಂದ ಹಳೆಯ ಕಾಲದ ಅರಸೊತ್ತಿಗೆಯ ಆವರಣವನ್ನು ಕಲ್ಪಿಸಿ ಓದುಗರನ್ನು ಆ ಕಾಲಕ್ಕೆ ಕರೆದೊಯ್ಯುವ ಕೆಲಸವನ್ನು ನಾಟಕಕಾರ ಸಮರ್ಥವಾಗಿ ನಿರ್ವಹಿಸಿದ್ದಾನೆ. ವಿಜಯನಾರಸಿಂಹ ನಾಟಕದ ನಾಯಕ ರಣಧೀರ ಕಂಠೀರವ ನರಸರಾಜ. ರಾಜ್ಯದೊಳಗೂ ಹೊರಗೂ ತನ್ನ ಶಕ್ತಿ ಧೋರಣೆಗಳಿಗೆ ಹೆದರಿದ್ದ ವಿರೋಧಶಕ್ತಿಗಳನ್ನು ತನ್ನ ಆಪ್ತ ಆಯುಧವಾದ ವಿಜಯನಾರಸಿಂಹ ಖಡ್ಗದ ಸಹಾಯದಿಂದ, ಅಸಮಸಾಹಸದಿಂದ ಅಡಗಿಸಿ, ವಿಜಯಿಯಾಗಿ ಮೈಸೂರಿನ ಮಲ್ಲರ ಕೀರ್ತಿ ಮೆರೆಸುತ್ತಾನೆ. ಬೆಟ್ಟದ ಅರಸು ನಾಟಕದಲ್ಲಿ ರಾಜ್ಯದ ಕಾರುಬಾರು ವಹಿಸಿಕೊಂಡು ದರ್ಪದಿಂದ ಕ್ರೌರ್ಯದಿಂದ ರಾಜ್ಯಾಡಳಿತ ನಡೆಸುತ್ತಿದ್ದ ದಳವಾಯಿ ವಿಕ್ರಮರಾಯ, ತನ್ನಿಷ್ಟದಂತೆ ನಡೆಯಲೊಪ್ಪದಿದ್ದ ಮಹಾರಾಜ ಇಮ್ಮಡಿ ರಾಜಒಡೆಯರಿಗೇ ವಿಷವುಣಿಸಿ, ಕೊಲ್ಲಿಸಿ, ಕಂಠೀರವ ನರಸರಾಜನನ್ನು ಕರೆಸಿ ಸಿಂಹಾಸನದ ಮೇಲೆ ಕೂಡಿಸಿ ಅವನನ್ನು ತನ್ನ ಕೈಗೊಂಬೆಯಾಗಿ ಮಾಡಿಕೊಳ್ಳುವ ಉದ್ದೇಶಪಟ್ಟು ತನ್ನ ವಿಗಡತನದ ವಿಜೃಂಭಣೆಗೆ ತೊಡಗುತ್ತಾನೆ. ಅಷ್ಟರಲೇ ಗೂಢಚಾರರಿಂದ ತನ್ನ ಬಗ್ಗೆ ರಣಧೀರನ ಮನೋಗತವೆಂತೆಂಬು ದನ್ನು ಹಠಾತ್ತನೆ ಕಂಡುಕೊಂಡ ವಿಕ್ರಮರಾಯ ತಾನಾಗಿ ಬಹುಮರ್ಯಾದೆಯಿಂದ ರಣಧೀರನನ್ನು ಕರೆಸಿ ಅರಮನೆಯಲ್ಲಿ ಬಂಧಿಯಾಗಿರಿಸುತ್ತಾನೆ. ರಣಧೀರನ ಗೆಳೆಯರು ನಿರೀಶನ ನಾಯಕತ್ವದಲ್ಲಿ ರಣಧೀರನನ್ನು ಸೆರೆಯಿಂದ ಬಿಡಿಸಬೇಕೆನ್ನುವಷ್ಟರಲ್ಲಿ ಅರಮನೆಯ ಸೇವಕರಾದ ಚೆನ್ನ ಮತ್ತು ರಂಗರು ರಾಜಮನೆತನದ ಮೇಲಿನ ಭಕ್ತಿಯಿಂದ ಪ್ರಭಾವಿತರಾಗಿ ವಿಕ್ರಮನ ವಿಗಡತನಕ್ಕೆ ರೋಸಿ ಅವನೊಬ್ಬನೇ ಸಿಕ್ಕಿದಾಗ ಅವನ ರುಂಡ ಹಾರಿಸುತ್ತಾರೆ. ಕಂಠೀರವನಿಗೆ ಪಟ್ಟಾಭಿಷೇಕವಾಗುತ್ತದೆ. ಸರ್ವಾಧಿಕಾರದ ಸವಿಗಂಡು ನರರಾಕ್ಷಸನಾದ ವಿಕ್ರಮನ ದ್ರೋಹದ ದುಷ್ಟಶಕ್ತಿಯನ್ನು ಹತ್ತಿಕ್ಕಲು ರಣಧೀರನ ರಾಜಭಕ್ತಿ, ನಿರೀಶನ ಸ್ನೇಹಶಕ್ತಿ, ರಾಜಮಾತೆಯ ಮತ್ತು ಪೌರರ ಪ್ರತೀಕಾರಶಕ್ತಿ–ಇವಿಷ್ಟೂ ಒಗ್ಗೂಡಬೇಕಾಗುತ್ತದೆ. ವಿಕ್ರಮನ ವಿಗಡತನ ಇಲ್ಲಿ ಪ್ರಮುಖವಾಗಿದ್ದು ಸುತ್ತಬರುವ ಪಾತ್ರಗಳೆಲ್ಲ ಜೀವಕಳೆಯಿಂದ ತುಂಬಿ ಒಬ್ಬೊಬ್ಬರ ಒಂದೊಂದು ಮಾತು, ಚಲನೆ, ಕೊನೆಗೆ ಮಾತಿನ ನಡುವೆ ಅನಿವಾರ್ಯವಾಗಿ ಬರುವ ಮೌನ ಕೂಡ ನಾಟಕವನ್ನು ಜೀವಂತವಾಗಿಸಿವೆ. ಸಂಸರ ಶೈಲಿ ಗಂಡುಶೈಲಿ. ಚಾರಿತ್ರಿಕ ಕಾಲಕ್ಕೆ ತಕ್ಕ ಗದ್ಯಬಂಧವನ್ನು ರೂಪಿಸಬಲ್ಲದ್ದು. ಬೆಟ್ಟದ ಅರಸು ನಾಟಕದಿಂದ ಆರಂಭವಾದ ಮೂರು ನಾಟಕಗಳ ಚಕ್ರ ವಿಜಯನಾರಸಿಂಹವನ್ನು ದಾಟಿ ವಿಗಡವಿಕ್ರಮರಾಯದಲ್ಲಿ ಕೊನೆಯಾಗುತ್ತದೆ. ಮಂತ್ರಶಕ್ತಿ ಎಂಬ ನಾಟಕ ಕಂಠೀರವ ನರಸರಾಜರ ಶಕ್ತಿತ್ರಯದಲ್ಲಿ ಒಂದಾದ ಮಂತ್ರಶಕ್ತಿಯನ್ನು ವಿಜೃಂಭಿಸುತ್ತದೆ. 'ಬಿರುದೆಂತೆಂಬರ ಗಂಡ' ಮೈಸೂರಿನ ರಾಜಮನೆತನಕ್ಕೆ ಸೇರಿದ ಇಮ್ಮಡಿ ತಿಮ್ಮರಾಜ ಒಡೆಯರನ್ನು ಕುರಿತ ಏಕಾಂಕ ನಾಟಕ. 'ಸುಗುಣಗಂಭೀರ' ಬೋಳಚಾಮರಾಜರ ಕಾಲದಲ್ಲಿ ನಡೆದ ಘಟನೆಯನ್ನು ವಸ್ತುವಾಗಿ ಉಳ್ಳದ್ದು. ಕಳಕಳಿಸುವ ಪಾತ್ರಗಳಿಂದ ತುಂಬಿ, ವೀರರಸಪ್ರಧಾನವಾದ ಈ ನಾಟಕ ಕರುಣೆಯ ಝರಿಯನ್ನು ಹರಿಸುತ್ತ ಮನೋಜ್ಞವಾಗಿದೆ. ಐತಿಹಾಸಿಕ ವಸ್ತುಗಳನ್ನು ಆಧರಿಸಿ ನಾಟಕ ರಚಿಸಿದ ಸಂಸರ ಹೆಸರನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು. ಅವರು ವಸ್ತುವನ್ನು ಬಳಸಿರುವ ರೀತಿ, ಭಾಷೆಯ ಶೈಲಿ, ರಚನಾತಂತ್ರ ಅದ್ಭುತ.

ಎಂ.ಆರ್. ಶ್ರೀನಿವಾಸಮೂರ್ತಿ ಅವರ ಕಂಠೀರವ ವಿಜಯ ಎಂಬ ನಾಟಕ ಜಗಜಟ್ಟಿ ನರಸರಾಜ ಒಡೆಯರು ತಿರುಚಿನಾಪಳ್ಳಿಯ ಜಟ್ಟಿಯನ್ನು ಮಲ್ಲಕಾಳಗದಲ್ಲಿ ಗೆದ್ದು ಮೈಸೂರಿನ ಹಿರಿಮೆಯನ್ನು ಸ್ಥಾಪಿಸಿದ ಕಥೆ. ಅಭಿನಯಯೋಗ್ಯವಾಗಿ ಸರಳವಾಗಿದೆ. ಎಂ.ಆರ್.ಶ್ರೀ. ಅವರ ಎರಡನೆಯ ಐತಿಹಾಸಿಕ ನಾಟಕ ಧರ್ಮದುರಂತ ನಾಲ್ಕನೆಯ ಮೈಸೂರು ಯುದ್ಧದ ಟಿಪ್ಪುವಿನ ಕಾಲದ ಕಥೆ. ರಾಮರಾಯ ಮಹಮದೀಯನಾದದ್ದು, ಅವನ ಹೆಂಡತಿ ಲಲಿತೆ ಮತ್ತು ಆಯಷೆಯರು ಅವನ ಮೇಲಿನ ನಿರ್ವ್ಯಾಜಪ್ರೇಮದಿಂದಲೇ ಪ್ರಾಣತ್ಯಾಗಮಾಡಿದ್ದು-ಈ ವಸ್ತುವನ್ನು ಒಳಗೊಂಡ ಈ ನಾಟಕ ಚೇತೋಹಾರಿಯಾಗಿದೆ.

ಶ್ರೀನಿವಾಸರ ತಾಳೀಕೋಟೆ ಎಂಬ ರೂಪಕ ವಿಜಯನಗರದ ರಾಮರಾಯ, ಆಯಷೆ, ರುಸ್ತುಂ, ತಿರುಮಲಾಂಬ-ಮುಂತಾದ ಚಾರಿತ್ರಿಕ ವ್ಯಕ್ತಿಗಳನ್ನೊಳಗೊಂಡಿದೆ. ಪಾತ್ರಗಳ ಸ್ವಭಾವನಿರೂಪಣೆ, ಗುಪ್ತಪ್ರೇಮದ ಫಲವಾಗಿ ರಾಮರಾಯ ತನ್ನ ಮಗನಾದ ರುಸ್ತುಮನಿಂದಲೇ ಅಪರಿಹಾರ್ಯವಾಗಿ ಕೊಲೆಯಾದುದು ಮುಂತಾದ ಸನ್ನಿವೇಶಗಳ ಸಮರ್ಥ ಚಿತ್ರಣದಿಂದ ನಾಟಕ ಅಗ್ರಸ್ಥಾನ ಪಡೆದಿದೆ. ಇಲ್ಲಿ ವಿಧಿ ತನ್ನ ಆಟ ಹೂಡಿ ಘಟನೆಗಳನ್ನು ನಡೆಸುವುದರಿಂದ ಕೊಲೆಗಡುಕ ರುಸ್ತುಮನಲ್ಲೂ ಅನುಕಂಪ ಹುಟ್ಟುವುದು ಅನಿವಾರ್ಯ. ಜೊತೆಗೆ ಮತಸಂಬಂಧವಾದ ಯುದ್ಧ ಒದಗಿತೆಂದರೆ ವಿಜಯನಗರದಂಥ ಮಹಾಸಾಮ್ರಾಜ್ಯವನ್ನೂ ಮುಳುಗಿಸುವಷ್ಟು ಭೀಕರವಾಗಿ ಪರಿಣಮಿಸುತ್ತದೆನ್ನುವುದೂ ಇಲ್ಲಿ ಚಿತ್ರಿತವಾಗಿದೆ. ಭರತಖಂಡ ಅನ್ಯಮತೀಯರ ಪದಾಘಾತಕ್ಕೆ ಸಿಕ್ಕಿ ಶತಚೂರ್ಣವಾಗುವುದರಲ್ಲಿದ್ದಾಗ ಭಾರತದಲ್ಲಿ ಹಿಂದೂಧರ್ಮವನ್ನು ಉದ್ಧಾರಮಾಡಲೆಂದು ಕಾರಣ ಪುರುಷನಂತೆ ಜನಿಸಿದವ ಶಿವಾಜಿ. ಈ ಮಹಾಪುರುಷ, ನಾಡನ್ನೂ ಧರ್ಮವನ್ನೂ ಉದ್ಧರಿಸಿದ ಈ ಗಹನವಸ್ತುವನ್ನು ಆಧಾರವಾಗಿ ಉಳ್ಳದ್ದು ಶ್ರೀನಿವಾಸರ ಶಿವಛತ್ರಪತಿ. ಚರಿತ್ರೆಯಲ್ಲಿ ವೀರರಸವೇ ಮೂರ್ತಿವೆತ್ತಂತಿರುವ ಶಿವಾಜಿ ಇಲ್ಲಿ ವೇದಾಂತಿಯೂ ಆಗಿದ್ದಾನೆ.

ಕಂಠೀರವ ನರಸರಾಜರ ಆಳ್ವಿಕೆಯಲ್ಲಿ ಕಾಡುಕುರುಬರ ದೊರೆಗೆ ಸಂದಾಯ ಮಾಡಬೇಕಾಗಿದ್ದ ಕಪ್ಪಕಾಣಿಕೆಗಳ ವಿಷಯದಲ್ಲಿ ಅವರಿಗೂ ಹೆಗ್ಗಡದೇವನಕೋಟೆಯ ಹೆಗ್ಗಡೆಗೂ ವಿವಾದ ಉಂಟಾಗಿ, ಕುರುಬರ ಮುಖಂಡ ಕಾಚ ಮಹಾರಾಜರನ್ನೇ ಕಂಡು ಅವರ ಮನ ಒಲಿಸಿಕೊಂಡು ತನ್ನ ಜನಾಂಗಕ್ಕೆ ಒದಗಿದ್ದ ಕಷ್ಟ ನಿವಾರಿಸಿಕೊಂಡ ವಸ್ತುವನ್ನು ಆಧರಿಸಿ ಬರೆದ ನಾಟಕ ಕಾಕನಕೋಟೆ. ಕಾಡುಜನರ ನಿಜಜೀವನ, ಊರ ಜನರ ನಿಜಜೀವನ, ಇವೆರಡನ್ನೂ ಇಲ್ಲಿ ಹದವಾಗಿ ಜೋಡಿಸಿ ಚಿತ್ರಿಸುವ ಸಾಧನವಾಗಿದ್ದಾನೆ, ಕಾಚ.

ಐತಿಹಾಸಿಕ ನಾಟಕ ರಚನೆಯಲ್ಲಿ ಹಿರಿಯ ಸ್ಥಾನ ಕುವೆಂಪು ಅವರ ರಕ್ತಾಕ್ಷಿಗೆ ಸಲ್ಲುತ್ತದೆ. ಬಿದನೂರು ನಾಯಕನ ಮರಣ, ಆತನ ರಾಣಿಯ ದುರ್ನಡತೆ, ಪರಿಣಾಮವಾಗಿ ಆ ರಾಜ್ಯ ಹೈದರಾಲಿಯ ಪಾಲು ಆದದ್ದು-ಈ ಚಾರಿತ್ರಿಕ ವಸ್ತುವನ್ನು ಆಧರಿಸಿ ರಚಿತವಾದುದೀ ನಾಟಕ. ಷೇಕ್ಸ್‌ಪಿಯರ್ ನಾಟಕಗಳಿಂದ ಪ್ರಭಾವಿತರಾದ ಕುವೆಂಪು ಅವರು ಈ ನಾಟಕದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಆರ್ಜಿಸಿದ್ದಾರೆ. ಇಲ್ಲಿನ ಸಂವಿಧಾನಕೌಶಲ, ಪಾತ್ರಸೃಷ್ಟಿಗಳು ಅನ್ಯಾದೃಶ. ಇದೊಂದು ಶ್ಲಾಘ್ಯವಾದ ಸ್ವತಂತ್ರ ಐತಿಹಾಸಿಕ ನಾಟಕ, ಕನ್ನಡ ನಾಟಕಲೋಕಕ್ಕೊಂದು ಕಲಶ.

ವಿಜಯನಗರದ ಇತಿಹಾಸವನ್ನೇ ಕಥಾವಸ್ತುವನ್ನಾಗಿ ಉಪಯೋಗಿಸಿಕೊಂಡು, ರಂ.ಶ್ರೀ. ಮುಗಳಿಯವರು ವಿಜಯಸಾಮ್ರಾಜ್ಯ, ಸೇವಾಪ್ರದೀಪಗಳನ್ನು ರಚಿಸಿದ್ದಾರೆ. ವಿಜಯನಗರದ ಸಾಮ್ರಾಜ್ಯ 1336-1346ರ ವರೆಗೆ ಹತ್ತು ವರ್ಷ ತಳವೂರಿದ ಕ್ರಮವನ್ನು ವಿಜಯನಗರ ಸಾಮ್ರಾಜ್ಯದಲ್ಲೂ ವಿಜಯನಗರದ ಮೊದಲ ದೇವರಾಯ ಅರಸು ಮುದಗಲ್ಲಿನ ಪರ್ತಳ ಎಂಬ ಒಕ್ಕಲು ಮಗಳನ್ನು ಮೋಹಿಸಿ ಮದುವೆಯಾಗಲು ಮಾಡಿದ ಪ್ರಯತ್ನವನ್ನು ಸೇವಾಪ್ರದೀಪದಲ್ಲೂ ವಸ್ತುವಾಗಿ ಬಳಸಿದೆ. ಮುಗಳಿಯವರು ಸೂಕ್ಷ್ಮವಿಮರ್ಶಾತ್ಮಕ ದೃಷ್ಟಿಯಿಂದ ತಮಗೆ ಕಂಡ ಸತ್ಯವನ್ನು ಈ ನಾಟಕಗಳಲ್ಲಿ ಪ್ರತಿಪಾದಿಸಿದ್ದಾರೆ. ಹಿಂದೂ ಮಹಮ್ಮದೀಯರ ಸಂಬಂಧ ಪ್ರಯೋಜನಕಾರಿಯಾಗಿ ಪರಿಣಮಿಸಬೇಕೇ ಹೊರತು ಜನಜೀವನಕ್ಕೆ ಕಂಟಕವಾಗಬಾರದೆಂಬ ಸೂಚನೆ ವಿಜಯಸಾಮ್ರಾಜ್ಯದಲ್ಲಿದೆ.

ರತ್ನ ಸಿಂಹಾಸನ ಎಂ.ನರಸಿಂಹಮೂರ್ತಿಯವರ ಐತಿಹಾಸಿಕ ನಾಟಕ, ಭಾಷಾಭಿಮಾನ, ದೇಶಾಭಿಮಾನಗಳಿಗೆ ಬೆಲೆ ಕೊಟ್ಟು ಒಂದು ಜನಾಂಗವನ್ನೇ ಎಚ್ಚರಿಸಿ ಕಾರ್ಯೋನ್ಮುಖರಾಗುವಂತೆ ಮಾಡಬೇಕೆನ್ನುವ ಪ್ರಯತ್ನವನ್ನೂ ಇಲ್ಲಿ ಕಾಣುತ್ತೇವೆ. ರಾಜ ಒಡೆಯರ ರಾಜ್ಯಸ್ಥಾಪನೆ ಇಲ್ಲಿನ ನಾಟಕದ ವಸ್ತು. ರಾಜ ಒಡೆಯರು ಪಟ್ಟಕ್ಕೆ ಬಂದುದು ಬೆಟ್ಟದ ಚಾಮರಾಜರಿಗೆ ಅಸಮಾಧಾನಕರವಾಗಿದ್ದರೂ ಕಾರುಗಹಳ್ಳಿ ಪಾಳೆಯಗಾರನ ಮುತ್ತಿಗೆಯಿಂದಾಗಿ ಅಣ್ಣತಮ್ಮ ಇಬ್ಬರೂ ಒಟ್ಟುಗೂಡಿ ಮೈಸೂರು ರಾಜ್ಯವನ್ನು ಭದ್ರಪಡಿಸಿ ವಿಸ್ತರಿಸಿದರು. ಈ ವಸ್ತು ಒಳ್ಳೆಯ ಐತಿಹಾಸಿಕ ನಾಟಕವೊಂದರ ರಚನೆಗೆ ಕಾರಣವಾಗಿರುವುದರಿಂದ ಗಮನಾರ್ಹವಾಗಿದೆ.

ವೀರರಸ ಪ್ರಧಾನವಾಗಿದ್ದು ದೇಶಭಕ್ತಿ, ನಾಡಭಕ್ತಿಗಳನ್ನು ದೇದೀಪ್ಯಮಾನವಾಗಿಸುವ ನಾಟಕಗಳೆಂದರೆ-ಎಚ್ಚಮನಾಯಕ, ವೀರರಾಣಿ ಕಿತ್ತೂರು ರುದ್ರಮ್ಮ, ಇವೆರಡೂ ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿವೆ. ಇವುಗಳ ಕರ್ತೃ ಅಭಿನಯದಲ್ಲಿ ಎತ್ತಿದಕೈ ಎನಿಸಿದ ಸದಾಶಿವರಾವ್ ಗರುಡ್. ವಿಶಾಖದತ್ತನ ಮುದ್ರಾರಾಕ್ಷಸದ ಮೂರು ಅನುವಾದಗಳು ಕನ್ನಡಕ್ಕೆ ಬಂದಿವೆ. ಗಂಡು ಹೆಣ್ಣಿನ ಪ್ರೇಮ ದ್ವೇಷಮಾತ್ಸರ್ಯಗಳ ಮಹಾಬೆಂಕಿಯನ್ನು ಹೊತ್ತಿಸಿ ಇಡೀ ಭರತಖಂಡವನ್ನೇ ಹೇಗೆ ಪರಕೀಯರ ದಾಳಿಗೆ ಪದೇ ಪದೇ ಒಡ್ಡಿತು ಎಂಬ ದುರಂತವಸ್ತುವುಳ್ಳದ್ದು ಪೃಥ್ವೀರಾಜ-ಸಂಯುಕ್ತೆಯರ ಪ್ರಣಯ ಕಥೆ. ಎಂ.ಗೋವಿಂದರೆಡ್ಡಿಯವರು ಈ ವಸ್ತುವನ್ನು ಆಧರಿಸಿ ಪೃಥ್ವೀಸಂಯುಕ್ತೆ ಎಂಬ ನಾಟಕ ರಚಿಸಿದ್ದಾರೆ. ಪ್ರತಾಪಗಡ ಜೋಧಪುರಗಳ ನಡುವೆ ನಡೆದ ವ್ಯವಹಾರವೊಂದು ಕಥಾವಸ್ತುವಾಗುಳ್ಳ ಐದುಅಂಕಗಳ ನಾಟಕ ಬೆಳ್ಳಿಭುಜಂಗರಾಯರ ಉದ್ಧಾರ. ತೆಲುಗಿನಿಂದ ಕನ್ನಡಕ್ಕೆ ಬಂದಿರುವ ವಿ.ಬ. ಈಶ್ವರರಾಯರ ತಿಷ್ಯರಕ್ಷಿತೆ ಎಂಬುದು ಅಶೋಕನ ಮೂರನೆಯ ಪತ್ನಿ ಮಗ ಕುನಾಲನೊಡನೆ ನಡೆಸಿದ ಪ್ರೇಮ ವ್ಯವಹಾರ ಕುರಿತಾದದ್ದು.

ಡಿ.ವಿ.ಜಿ. ರಚಿಸಿರುವ ವಿದ್ಯಾರಣ್ಯವಿಜಯ ಉತ್ತಮ ಕಥಾವಸ್ತು ಮತ್ತು ಉತ್ತಮ ಶೈಲಿಗಳಿಂದಾಗಿ ಕನ್ನಡದ ಶ್ರೇಷ್ಠ ನಾಟಕಗಳಲ್ಲೊಂದೆನಿಸಿದೆ. ಈಚೆಗೆ ಸಮೇತನಹಳ್ಳಿ ರಾಮರಾಯರು ತಲಕಾಡುಗೊಂಡ ಎಂಬ ಐತಿಹಾಸಿಕ ನಾಟಕವನ್ನು ಇತ್ತಿದ್ದಾರೆ. ಹೊಸ ದೃಷ್ಟಿ, ಹೊಸ ತಂತ್ರ, ಹೊಸ ಶೈಲಿಗಳಿಗಾಗಿ ಶ್ರೀರಂಗರ ಪುಲಿಕೇಶಿ ಎಂಬ ನಾಟಕವನ್ನೂ ಗಿರೀಶ್ ಕಾರ್ನಾಡರ ತುಘಲಕ್ ನಾಟಕವನ್ನೂ ಹೆಸರಿಸಬಹುದು. (ಬಿ.ಎಸ್.ಆರ್.ಆರ್.)

**ಐತಿಹಾಸಿಕ ಪಂಥ:** ಅಭಿಜಾತ ಅರ್ಥಶಾಸ್ತ್ರಜ್ಞರ ಅಮೂರ್ತ ಹಾಗೂ ನಿಗಮನ ಸಿದ್ಧಾಂತಗಳಿಗೆ ಪ್ರತಿಕ್ರಿಯೆಯಾಗಿ ಪ್ರಥಮತಃ ಜರ್ಮನಿಯಲ್ಲೂ ಅನಂತರ ಇತರ ದೇಶಗಳಲ್ಲೂ ಉದ್ಭವಿಸಿದ ಪಂಥ (ಹಿಸ್ಟಾರಿಕಲ್ ಸ್ಕೂಲ್). ಆರ್ಥಿಕ ಜೀವನದ ವಸ್ತುಸ್ಥಿತಿಗತಿಗಳನ್ನು ಅರಿಯಬೇಕಾದರೆ ಅರ್ಥಶಾಸ್ತ್ರಜ್ಞರು ಇತಿಹಾಸವನ್ನು ವೀಕ್ಷಿಸಬೇಕೆಂಬುದು ಈ ಪಂಥದ ಲೇಖಕರ ಮುಖ್ಯ ವಾದ. ಆರ್ಥಿಕ ಸೂತ್ರಗಳ ವಿಕಸನ ಶೀಲತೆಯನ್ನು ವಿಶೇಷವಾಗಿ ಒತ್ತಿ ಹೇಳಿದ್ದು ಈ ಪಂಥದವರ ಮುಖ್ಯ ಸಾಧನೆ.

ವಾಸ್ತವವಾಗಿ ನೋಡುವುದಾದರೆ ಇದು ಒಂದು ಪಂಥವಲ್ಲ; ಹಲವು ಪಂಥಗಳ ಒಂದು ಗುಂಪು. ಒಂದು ರಾಷ್ಟ್ರದ ಆರ್ಥಿಕ ಜೀವನದ ಸ್ವರೂಪ. ಆ ದೇಶದ ಇತಿಹಾಸದ ಒಂದು ಮುಖ. ಅದು ಆ ದೇಶಕ್ಕೆ ಆ ಕಾಲಕ್ಕೆ ವಿಶಿಷ್ಟವಾದದ್ದು. ಅದು ಗತಕಾಲದ ಸಂತಾನವಾದ್ದರಿಂದ ಇತಿಹಾಸದ ಅಭ್ಯಾಸದಿಂದ ಮಾತ್ರವೇ ಸುಸ್ಪಷ್ಟವಾಗತಕ್ಕದ್ದು. ಇದು ಈ ಪಂಥದವರ ವಾದಮೂಲ. ಅಭಿಜಾತ ಪಂಥದವರ ದೃಷ್ಟಿ ಕಾಲದೇಶಾತೀತ. ಇಡಿಯಾಗಿ ನೋಡುವ ಬದಲು ಬಿಡಿಯಾಗಿ ನೋಡುವುದೇ ಅವರ ಪದ್ಧತಿಯಾಗಿತ್ತು. ಆದರೆ ಮಾನವ ಸಾಮಾಜಿಕವಾಗಿ ಪಾತ್ರವಹಿಸುವ ಎಲ್ಲ ಕ್ಷೇತ್ರಗಳ ಕುಂದಣದಲ್ಲಿ ಅರ್ಥಶಾಸ್ತ್ರವನ್ನೂ ಇಟ್ಟು ನೋಡುವ ಪರಿಪಾಟಿಯನ್ನು ಬೆಳೆಸಿದವರು ಐತಿಹಾಸಿಕ ಪಂಥದವರು. ಅರ್ಥಶಾಸ್ತ್ರಕ್ಕೆ ಸಾಮಾಜಿಕ ಸಿದ್ಧಾಂತದ ತಳಹದಿ ಹಾಕಿದವರು ಇವರೇ ಎನ್ನಬಹುದು.

**ಆದ್ಯಪ್ರವರ್ತಕರು:** ಜರ್ಮನ್ ಭಾಷೆಯಾಡುವ ದೇಶಗಳಲ್ಲಿ 1843ರಿಂದ ಸುಮಾರು ನಲವತ್ತು ವರ್ಷಗಳ ಕಾಲ ಅತ್ಯಂತ ಪ್ರಭಾವಶಾಲಿಯಾಗಿದ್ದ ಐತಿಹಾಸಿಕ ಪಂಥವನ್ನು ಆಡಂ ಮುಲ್ಲರನ (1779-1820) ಕಾಲದಿಂದಲೂ ಅರಸಬಹುದಾಗಿದೆ. ಮುಲ್ಲರನ ದೃಷ್ಟಿಯಲ್ಲಿ ಅರ್ಥವ್ಯವಸ್ಥೆಯೆಂಬುದು ಲಾಭಕ್ಕಾಗಿ ಶ್ರಮಿಸುವವರ ಒಂದು ಪ್ರತ್ಯೇಕ ವಿಭಾಗವಲ್ಲ. ಇದು ಆರ್ಷೇಯ ಕಾಲದಿಂದಲೂ ಬೆಳೆದು ಬಂದಿರುವ ಸಾಮಾಜಿಕ ವ್ಯವಸ್ಥೆಯ ಒಂದು ಅಂಗ. ಕಟ್ಟು, ಕಟ್ಟಳೆ, ಶಿಕ್ಷಣ, ರಾಜಕೀಯ, ಮತ ಇವುಗಳಿಗೂ ಅರ್ಥವ್ಯವಸ್ಥೆಗೂ ವಿನಾ ಸಂಬಂಧ. ಇತಿಹಾಸದೊಂದಿಗೆ ಇವು ಬದಲಾದಂತೆಲ್ಲ ಅರ್ಥವ್ಯವಸ್ಥೆಯೂ ವ್ಯತ್ಯಾಸವಾಗುವುದು ಅನಿವಾರ್ಯ. ಹಣವೆಂಬುದು ಕೂಡ ಆಂತರಿಕ ಸಹಕಾರ ಮನೋಭಾವದ ಒಂದು ಮೂರ್ತರೂಪ. ಅನೇಕ ಅಭಿಜಾತ ಅರ್ಥಶಾಸ್ತ್ರಜ್ಞರು ಭಾವಿಸಿದ್ದಂತೆ ಇವನ ದೃಷ್ಟಿಯಲ್ಲಿ ಸರ್ಕಾರ ಅನಿಷ್ಟವೂ ಅನಿವಾರ್ಯವೂ ಆದ, ಹದ್ದುಬಸ್ತಿನಲ್ಲಿಡಬೇಕಾದ ಒಂದು ವ್ಯವಸ್ಥೆಯಲ್ಲ. ಸರ್ಕಾರೀ ಅರ್ಥನೀತಿ ಈತನ ದೃಷ್ಟಿಯಲ್ಲಿ ಒಂದು ಉತ್ಪಾದೀ ಬಲ.

ಆಡಂ ಮುಲ್ಲರನಿಗೂ ಆತನ ಜಾಡಿನಲ್ಲಿ ನಡೆದ ಇತರ ಅರ್ಥಶಾಸ್ತ್ರಜ್ಞರಿಗೂ ಸ್ಥೂಲವಾಗಿ ಜೆ.ಜಿ. ಫಿಕ್ಟೆ ಮತ್ತು ಜಾರ್ಜ್ ವಿಲ್ಹೆಲ್ಮ್ ಫ್ರೆಡ್ರಿಕ್ ಹೆಗೆಲ್ ಈ ದಾರ್ಶನಿಕರ ಭಾವನೆಗಳು ಆಧಾರ. ಉದಾರ ಅಭಿಜಾತ ಪಂಥೀಯರಂತೆ ಫಿಕ್ಟೆಯೂ ವ್ಯಕ್ತಿಸ್ವಾತಂತ್ರ್ಯದ ಪ್ರಬೋಧಕ ಆದರ್ಶವನ್ನೇ ಎತ್ತಿಹಿಡಿದನಾದರೂ ಸರ್ಕಾರಕ್ಕೊಂದು ಸಾಮಾಜಿಕ ಗುರಿಯಿರಬೇಕೆಂದೂ ಸರ್ಕಾರದ ಅಧಿಕಾರದ ವಿಸ್ತರಣೆಯಾಗಬೇಕೆಂದೂ ಆತ ವಾದಿಸಿದ. ಹೆಗೆಲನಂತೂ ಸರ್ಕಾರದ ಸ್ವತಂತ್ರ ಸರ್ವವ್ಯಾಪಕತ್ವದ ಪ್ರತಿಪಾದಕ. ಅವನ ದೃಷ್ಟಿಯಲ್ಲಿ ವ್ಯಕ್ತಿಗಳು ಇದರ ಸಾಧನಗಳು ಮಾತ್ರ; ಸರ್ಕಾರವೆಂಬ ಶರೀರದಲ್ಲಿ ವ್ಯಕ್ತಿಗಳಿಗೆ ಅಂಗಗಳ ಸ್ಥಾನ. ಆದರೆ ಬ್ರಿಟಿಷ್ ಮತ್ತು ಫ್ರೆಂಚ್ ಅಭಿಜಾತ ಅರ್ಥಶಾಸ್ತ್ರಜ್ಞರ ಅಭಿಪ್ರಾಯ ಇದಕ್ಕೆ ವ್ಯತಿರಿಕ್ತವಾಗಿತ್ತು. ವಿವಿಧ ವ್ಯಕ್ತಿಗಳ ಹಿತಾಸಕ್ತಿಗಳ ಮತ್ತು ವಿವೇಚನಾಯುತ ಕಾರ್ಯಾಚರಣೆಗಳ ಅನ್ಯೋನ್ಯ ಕ್ರಿಯೆಗಳ ಪರಿಣಾಮವಾಗಿ ಆರ್ಥಿಕ ಜೀವನ ರೂಪುಗೊಳ್ಳುವುದೆಂಬುದು ಅವರ ಭಾವನೆಯಾಗಿತ್ತು. ಒಬ್ಬೊಬ್ಬನೂ ತನ್ನತನ್ನ ಹಿತ ಸಾಧಿಸಿಕೊಂಡರೆ ಸಮಷ್ಟಿಯ ಹಿತವೂ ಸಾಧಿಸಿದಂತೆ - ಎಂಬುದು ಅವರ ನಂಬಿಕೆ.

ಐತಿಹಾಸಿಕ ಪಂಥದ ಮೇಲೆ ಮೊಟ್ಟಮೊದಲು ಹೆಚ್ಚಿನ ಪ್ರಭಾವ ಬೀರಿದವನೆಂದರೆ ಫ್ರೆಡರಿಕ್ ಲಿಸ್ಟ್. 1841ರಲ್ಲಿ ಪ್ರಕಟವಾದ ಆತನ ಅಭಿಪ್ರಾಯಗಳಿಗೆ ಜರ್ಮನ್ ರಾಷ್ಟ್ರೀಯತ್ವದ ಭಾವನೆಯೇ ಮೂಲ. ನೆಪೋಲಿಯನ್ನನ ವಿರುದ್ಧವಾಗಿ ಪ್ರಬಲ ಜರ್ಮನ್ ರಾಷ್ಟ್ರ ನಿರ್ಮಾಣ ಮಾಡಬೇಕೆಂಬ ಹಂಬಲಕ್ಕೆ ಬೆಂಬಲವಾಗಿ ಲಿಸ್ಟನ ಆರ್ಥಿಕ ಭಾವನೆಗಳು ರೂಪುಗೊಂಡುವು. ಪ್ರಪಂಚದ ನಾನಾ ರಾಷ್ಟ್ರಗಳು ಸಮಾನವಾದ ಶಕ್ತಿ ಗಳಿಸದಿರುವುದಕ್ಕೆ ಆಯಾ ರಾಷ್ಟ್ರಗಳ ಇತಿಹಾಸ ಸಂಗತಿಗಳೇ ಕಾರಣ. ಅಭಿವೃದ್ಧಿ ಹೊಂದದ ರಾಷ್ಟ್ರಗಳ ಬೆಳೆವಣಿಗೆಗಾಗಿ ಶೈಶವ ಕೈಗಾರಿಕೆಗಳಿಗೆ ರಕ್ಷಣೆ ನೀಡಬೇಕೆಂಬುದು ಅವನ ಸಿದ್ಧಾಂತ. ಆಡಂ ಸ್ಮಿತ್ತನ ದೃಷ್ಟಿಯಲ್ಲಿ ಪದಾರ್ಥೋತ್ಪಾದನೆ ಮಾತ್ರವೇ ಉತ್ಪಾದಿಶ್ರಮ; ಉಳಿದದ್ದೆಲ್ಲ ವ್ಯರ್ಥ. ಆದರೆ ಲಿಸ್ಟ್ ಹೀಗೆ ಭಾವಿಸಿರಲಿಲ್ಲ. ಆತನ ದೃಷ್ಟಿಯಲ್ಲಿ ಒಂದು ದೇಶದ ನಿಜವಾದ ಸಂಪತ್ತು ಅವರ ಸರಕುದಾಸ್ತಾನುಗಳಲ್ಲ; ಅಲ್ಲಿಯ ಜನರ ಬುದ್ಧಿಶಕ್ತಿ, ಕ್ರಿಯಾಸಾಮರ್ಥ್ಯ ಇವೇ ನಿಜವಾದ ಸಂಪತ್ತು.

**ಹಳೆಯ ಪಂಥ:** ಮುಲ್ಲರ್, ಲಿಸ್ಟ್ ಮುಂತಾದವರ ಮೂಲಭಾವನೆಗಳ ತಳಹದಿಯ ಮೇಲೆ ಜರ್ಮನಿಯ ಹಳೆಯ ಇತಿಹಾಸ ಪಂಥ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನಿಚ್ಚಳವಾಗಿ ಮೂಡಿ ಬಂತು. ಇದರ ಅಧ್ವರ್ಯುಗಳು ಮೂರು ಜನ: ಡಬ್ಲ್ಯು. ರಾಷೆರ್ (1817–94). ಬ್ರೂನೊ ಹಿಲ್ಡೆ ಬ್ರಾಂಟ್ (1812–78) ಮತ್ತು ಕೆ.ಕ್ನೀಸ್ (1821–98). ಇವರು ಮೂವರೂ ಮಾರ್ಕ್ಸನ ಸಮಕಾಲೀನರು. ಇತಿಹಾಸ, ರಾಜ್ಯಶಾಸ್ತ್ರಗಳೆರಡನ್ನೂ ಅಭ್ಯಾಸ ಮಾಡಿದ್ದ ರಾಷೆರ್ ವಿವೇಕಯುತ ರಾಜಕಾರಣಕ್ಕೆ ಇತಿಹಾಸದ ಅನುಭವವೇ ಆಧಾರವಾಗಬೇಕೆಂದು ಪ್ರತಿಪಾದಿಸಿದ. ಆರ್ಥಿಕ ವಿವೇಚನೆಯ ಹಿಂದೆ ಇತಿಹಾಸ ಪ್ರಜ್ಞೆ ಇರಬೇಕೆಂಬುದು ಅವನ ವಾದ. ರಿಕಾರ್ಡೊವಿನ ನಿಗಮನ ಸಿದ್ಧಾಂತಗಳನ್ನು ಈತ ತಳ್ಳಿಹಾಕಲಿಲ್ಲವಾದರೂ ಅನುಭವಕ್ಕೆ ಇವನು ಕೊಟ್ಟ ಬೆಲೆ ಅಧಿಕ. ಅರ್ಥಶಾಸ್ತ್ರಕ್ಕೆ ಇತಿಹಾಸ ಪೋಷಕವಾಗಬೇಕು; ಆರ್ಥಿಕ ವ್ಯವಸ್ಥೆಗಳ ಮತ್ತು ಸ್ಥಿತಿಗತಿಗಳ ವರ್ಣನೆಯೇ ಅರ್ಥಶಾಸ್ತ್ರದ ಆದಿ ಮತ್ತು ಅಂತ್ಯ ಎಂಬುದು ಈತನ ವಾದ ಸಾರವೆನ್ನಬಹುದು.

ಅಭಿಜಾತ ಮಾರ್ಗವನ್ನು ಇನ್ನೂ ತರ್ಕಬದ್ಧವಾಗಿ ಟೀಕಿಸಿದವನೆಂದರೆ ಬ್ರೂನೊ ಹಿಲ್ಡ್‌ಬ್ರಾಂಟ್. ಎಲ್ಲ ಕಾಲದೇಶಗಳಿಗೂ ಅನ್ವಯವಾಗುವ ಸಹಜ ಆರ್ಥಿಕ ಸೂತ್ರಗಳನ್ನು ಅನ್ವೇಷಿಸುವುದಾಗಿಯೂ ಕಂಡುಹಿಡಿದಿರುವುದಾಗಿಯೂ ಹೇಳಿಕೊಳ್ಳುತ್ತಿದ್ದ ಅಭಿಜಾತ ಪಂಥದ ವಾದವನ್ನು ಈತ ತಳ್ಳಿಹಾಕಿದ. ವಿಭಿನ್ನ ರಾಷ್ಟ್ರಗಳ ಮತ್ತು ಇಡೀ ಮಾನವತೆಯ ಬೆಳೆವಣಿಗೆಯನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡುವುದು ಅರ್ಥಶಾಸ್ತ್ರದ ಉದ್ದೇಶ ಎಂದು ಈತ ಬರೆದಿದ್ದಾನೆ.

ಹಳೆಯ ಐತಿಹಾಸಿಕ ಪಂಥದ ಸ್ಥಾಪಕ ತ್ರಿಮೂರ್ತಿಗಳಲ್ಲಿ ಮೂರನೆಯವನಾದ ಕೆ.ಕ್ನೀಸನದು ಇತರರಿಗಿಂತ ಹೆಚ್ಚು ಖಚಿತವಾದ ವಿಚಾರಧಾರೆಯೆನ್ನಬಹುದು. ಇತಿಹಾಸದ ಅಧ್ಯಯನವೇ ಅರ್ಥಶಾಸ್ತ್ರದ ನ್ಯಾಯವಾದ ಮಾರ್ಗವೆಂದು ಇವನ ವಾದ. ಭೌತವಿಜ್ಞಾನಗಳಲ್ಲಿರುವಂಥ ಸೂತ್ರಗಳನ್ನು ಅಳವಡಿಸುವುದು ಸಾಧ್ಯವಿಲ್ಲ. ಸಾಮಾಜಿಕ ಬೆಳೆವಣಿಗೆಯ ಕ್ರಮದಲ್ಲಿ ಆವರ್ತಿಸುವ ಕೆಲವು ಪ್ರವೃತ್ತಿಗಳನ್ನು ಗಮನಿಸಿ ಅವುಗಳ ಸಾದೃಶ್ಯಗಳನ್ನು ಸೂಚಿಸಬಹುದಷ್ಟೆ ಇದು ಸಾಹಸ ಅಭಿಪ್ರಾಯ.

ಸಾಮ್ಯವಾದದ ಪ್ರತಿಪಾದಕನಾದ ಕಾರ್ಲ್‌ಮಾರ್ಕ್ಸನ ಮಾರ್ಗವೂ ಹಳೆಯ ಐತಿಹಾಸಿಕ ಪಂಥವೂ ಮೂಲತಃ ಒಂದೇ ಎಂದು ತೋರುವುದಾದರೂ ಇವೆರಡೂ ವಿಭಿನ್ನವಾದವು. ಇತಿಹಾಸ ದೃಷ್ಟಿಯೇನೋ ಎರಡಕ್ಕೂ ಸಾಮಾನ್ಯ ಉತ್ಪಾದನ ಬಲಗಳಿಗೆ ಅನುಗುಣವಾದ ಮಾನವರ ಪ್ರತಿಕ್ರಿಯೆಯನ್ನು ಕುರಿತು ಇಬ್ಬರೂ ವಿವೇಚನೆ ನಡೆಸಿದರು. ಆದರೆ ನಾನಾ ಅರ್ಥವ್ಯವಸ್ಥೆಗಳು ಬದಲಾಗಿ ಅಂತಿಮವಾಗಿ ಸಾಮ್ಯವಾದದ ಸ್ಥಾಪನೆಯಾಗುವುದೆಂದು ಮಾರ್ಕ್ಸ್ ನಂಬಿದ್ದ. ಐತಿಹಾಸಿಕ ಪಂಥದವರು ಈ ದೃಷ್ಟಿಯನ್ನೊಪ್ಪಲು ಸಿದ್ಧರಿರಲಿಲ್ಲ. ಇತಿಹಾಸದ ಗತಿಯನ್ನಷ್ಟೆ ಅವರು ಒತ್ತಿ ಹೇಳಿದರು. ನಾನಾ ಸಮಾಜ ವ್ಯವಸ್ಥೆಗಳು ಇರುವುದು ಸಾಧ್ಯವೆಂದು ಅವರ ನಂಬಿಕೆ. ಅರ್ಥವ್ಯವಸ್ಥೆಯ ಅಡಿಪಾಯದ ಮೇಲೆ ಸಾಮಾಜಿಕ ವ್ಯವಸ್ಥೆಗಳ ರಚನೆಯಾಗುವುದೆಂದು ಮಾರ್ಕ್ಸ್ ನಂಬಿದ್ದರೆ, ಇದಕ್ಕೆ ವಿರುದ್ಧವಾದ ಕಲ್ಪನೆ ಐತಿಹಾಸಿಕ ಪಂಥೀಯರದು.

**ಆಧುನಿಕ ಪಂಥ:** ಆಧುನಿಕ ಐತಿಹಾಸಿಕ ಪಂಥದ ಅರ್ಥಶಾಸ್ತ್ರಜ್ಞರು ಹಳೆಯ ಪಂಥದವರು ಬಿಟ್ಟಲ್ಲಿಂದ ಮುನ್ನಡೆದರು. ವಿಶ್ವದ ಐತಿಹಾಸಿಕ ಆರ್ಥಿಕ ಅಭಿವೃದ್ಧಿಯತ್ತ ಹಳೆಯ ಪಂಥದವರು ದೃಷ್ಟಿ ಹಾಯಿಸಿದರೆ ಹೊಸ ಪಂಥದವರು ವಿಶಿಷ್ಟ ಕ್ಷೇತ್ರಗಳ ಅಭ್ಯಾಸಕ್ಕೆ ಈ ದೃಷ್ಟಿಯನ್ನು ಅನ್ವಯಿಸಲು ಯತ್ನಿಸಿದರು. ಗಸ್ಟಾಫ್ ಷ್ಮಾಲರ್ (1838–1917) ಹೊಸ ಪಂಥದ ಸ್ಥಾಪಕ. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲೂ ಇದು ಪ್ರಚಾರವಾಯಿತು. ಐತಿಹಾಸಿಕ ಅನುಗಮನ–ನಿಗಮನ, ವಿಶಿಷ್ಟದೃಷ್ಟಿ–ಸಾಧಾರಣೀಕರಣ, ವಿವರಣೆ, ಸಮಾಜನೀತಿ, ಕಾರ್ಮಿಕ ಸಮಸ್ಯೆ ಮುಂತಾದ ವಿಚಾರಗಳಲ್ಲಿ ಇತಿಹಾಸ ಪಂಥದವರು ಹೆಚ್ಚು ಆಸಕ್ತಿ ವಹಿಸಿದರು. 19ನೆಯ ಶತಮಾನ ಮುಕ್ತಾಯವಾಗುವ ವೇಳೆಗೆ ಜರ್ಮನಿಯ ಸಾಂಬಾರ್ಟ್, ಮ್ಯಾಕ್ಸ್ ವೆಬರ್ ಮುಂತಾದವರು ಈ ನಿಟ್ಟಿನಲ್ಲಿ ಹೆಚ್ಚಿನ ವಿಚಾರ ಹರಿಸಿದರು.

ಐತಿಹಾಸಿಕ ಪಂಥದಿಂದ ಪ್ರಭಾವಿತರಾದ ಅಮೆರಿಕನ್ ಅರ್ಥಶಾಸ್ತ್ರಜ್ಞರು ಅನೇಕ ಮಂದಿ. 1920ರ ದಶಕದಲ್ಲಿ ಜೆ.ಆರ್.ಕಾಮನ್ಸ್, ಆರ್.ಜಿ.ಟಗ್ವೆಲ್, ಎ.ಬಿ.ವುಲ್ಫ್, ಸಿ.ಇ.ಏರ್ಸ್, ಡಬ್ಲ್ಯು. ಎಚ್.ಹ್ಯಾಮಿಲ್ಟನ್, ಎ.ಎಂ. ಕೋಪಲ್ಯಾಂಡ್, ಡಬ್ಲ್ಯು.ಇ. ಆಟ್ಕಿನ್ಸ್ ಮುಂತಾದವರು ಅಮೆರಿಕನ್ ಬೋಧನ ಸಂಶೋಧನ ವಿಧಾನವೊಂದರ ಪ್ರತಿಪಾದಕರು. ಬ್ರಿಟಿಷ್ ನವ ಅಭಿಜಾತ ಪಂಥದ ಅಮೂರ್ತ ಸಿದ್ಧಾಂತ ದೃಷ್ಟಿಯನ್ನೆ ಬಿಟ್ಟುಕೊಡಲು ಹವಣಿಸಿದವರು ಇವರು. ಸಾಮಾಜಿಕ–ಮಾನಸಿಕ ಮತ್ತು ಸಾಮಾಜಿಕ–ನೈತಿಕ ದೃಷ್ಟಿಯಲ್ಲಿ ಆರ್ಥಿಕ ವರ್ತನೆಯ ನಿರೀಕ್ಷಣೆಗೆ ಇವರು ನೀಡಿದ ಪ್ರಾಶಸ್ತ್ಯ ಹೆಚ್ಚಿನದು. ಆರ್ಥಿಕ ಮಾನವನೆಂಬ ಮಿಥ್ಯೆಯ ಗುಳ್ಳೆಯನ್ನು ಇವರು ಒಡೆಯಲೆತ್ನಿಸಿದರು. ಮಾನವನ ಚರ್ಯೆಯ ಹಿಂದೆ ಸುಖದೃಷ್ಟಿಯೇ ಪ್ರಧಾನವೆಂಬ ವಾದವೂ ಇವರಿಂದ ಗೇಲಿಗೆ ಒಳಗಾಯಿತು. ಮಾನವನ ವರ್ತನೆ, ಅವನ ಅಗತ್ಯಗಳು, ಬಯಕೆಗಳು, ಆತನ ಸಾಧನೋಪಾಯಗಳು–ಇವೆಲ್ಲ ಅತ್ಯಂತ ಜಟಿಲವೂ ಸರ್ವದಾ ಪರಿವರ್ತನಶೀಲವೂ ಆದ ವಿಕಾಸದ ಪರಿಣಾಮಗಳು. ವಿಶಿಷ್ಟ ಸಾಮಾಜಿಕ ಸಂಸ್ಥೆ ಸಂಪ್ರದಾಯಗಳಿಂದ ಈ ವಿಕಾಸ ರೂಪುಗೊಳ್ಳುತ್ತದೆಯಾದ್ದರಿಂದ ಇದು ಒಂದು ದೃಷ್ಟಿಯಲ್ಲಿ ಸಾಂಸ್ಥಿಕವಾದದ್ದು (ಇನ್ಸ್‌ಟಿಟ್ಯೂಷನಲ್). ಆರ್ಥಿಕ ಸಂಸ್ಥೆಗಳ ವಿಕಾಸ ಮಾರ್ಗದಲ್ಲಿ ಅವು ಅನುಭವಿಸುವ ಪರಿವರ್ತನೆಗಳ, ಮಾನವರ ಆರ್ಥಿಕ ವರ್ತನೆಯ ಹಿಂದಿನ ಮನೋವೈಚಿತ್ರ್ಯಗಳ ಆಮೂಲಾಗ್ರ ಅಭ್ಯಾಸದಿಂದ ಮಾತ್ರವೇ ಆರ್ಥಿಕ ಸಂಬಂಧಗಳ ನಿಜ ಸ್ವರೂಪವನ್ನರ್ಥಮಾಡಿಕೊಳ್ಳುವುದು ಸಾಧ್ಯ. ಅರ್ಥವ್ಯವಸ್ಥೆಯ ಚಲನಾತ್ಮಕ ಸ್ವಭಾವದ ಅವಲೋಕನವೇ ಸಂಸ್ಥಾವಾದಿಗಳ (ಇನ್ಸ್‌ಟಿಟ್ಯೂಷನಲಿಸ್ಟ್) ದೃಷ್ಟಿಯಲ್ಲಿ ಪ್ರಧಾನ. ಜರ್ಮನ್ ಐತಿಹಾಸಿಕ ಪಂಥದ ಮೂಲ ಭಾವನೆಗಳನ್ನೆ ಅಮೆರಿಕನ್ ಸಂಸ್ಥಾವಾದವೂ ಹೋಲುವುದೆಂಬುದು ಗಮನಿಸಬೇಕಾದ ಅಂಶ. ಜರ್ಮನ್ ಇತಿಹಾಸ ಪಂಥದವರಂತೆ ಸಂಸ್ಥಾವಾದಿಗಳು ಕೂಡ ಅರ್ಥನೀತಿಯ ಗುರಿಗಳನ್ನು ನಿರ್ದೇಶಿಸುವಾಗ ಈ ಗುರಿಗಳಿಂದ ಜನತೆಯ ಮೇಲಾಗುವ ಮಾನಸಿಕ ಪರಿಣಾಮಗಳನ್ನೂ ಸಾಮಾಜಿಕ–ನೈತಿಕ ಪ್ರಭಾವಗಳನ್ನೂ ಗಮನಿಸಬೇಕೆಂದು ಹೇಳಿದರು.

ಸಂಸ್ಥಾವಾದಿಗಳ ಈ ಮೌಲ್ಯನಿರೀಕ್ಷಣವಾದವನ್ನು ಹ್ಯಾಡ್ಲೆ, ಸೆಲಿಗ್ಮನ್, ಮೇಯೊ–ಸ್ಮಿತ್ ಮೊದಲಾದ ಅನೇಕರು ಒಪ್ಪಲಿಲ್ಲ.

ಈ ಎಲ್ಲ ವಾದ–ಪ್ರತಿವಾದಗಳಿಂದ ಅರ್ಥನೀತಿಯ ಮೇಲೆ ಪರಿಣಾಮಗಳಾದುವು. ನಿರಪೇಕ್ಷ ಆರ್ಥಿಕ ಸ್ವಾತಂತ್ರ್ಯದ ಅಮೂರ್ತ ಸಿದ್ಧಾಂತಗಳನ್ನು ಬದಿಗೊತ್ತಿ, ಆರ್ಥಿಕ ಸಂಸ್ಥೆಗಳ ವಾಸ್ತವಿಕ ಬೆಳೆವಣಿಗೆಗಳಿಗೂ ವ್ಯಕ್ತಿಗಳ ಮತ್ತು ಸಾಮಾಜಿಕ–ಆರ್ಥಿಕ ಗುಂಪುಗಳ ವರ್ತನೆಗೂ ಹೆಚ್ಚಿನ ಪ್ರಾಧಾನ್ಯ ನೀಡಬೇಕೆಂಬುದು ಸಂಸ್ಥಾವಾದಿಗಳ ತರ್ಕಸಾರ. ಅಗತ್ಯವೆಂದು ಕಂಡುಬಂದರೆ ಸರ್ಕಾರಿ ಆರ್ಥಿಕ ಯೋಜನೆ, ನಿಯಂತ್ರಣ ಇವನ್ನು ಸ್ವಾಗತಿಸಬೇಕೆಂದೂ ಇವರು ವಾದಿಸಿದರು. ಸಾಮಾಜಿಕ–ನೈತಿಕ ಕಲ್ಯಾಣ ಸಾಧಿಸುವುದು ಮುಖ್ಯವೆಂಬುದು ಇವರ ಮತವಾಗಿತ್ತು.

ಅಮೂರ್ತ ಸಿದ್ಧಾಂತ, ಅನುಭವವೇದ್ಯ ವಿಚಾರ, ಅಂಕಿ–ಅಂಶಗಳ ಅಧ್ಯಯನ, ಗಣಿತಶಾಸ್ತ್ರ–ಇತಿಹಾಸ ದೃಷ್ಟಿಗಳ ಅನ್ವಯ–ಇವೆಲ್ಲವನ್ನೂ ಒಳಗೊಂಡ ಸಮಗ್ರ ಅರ್ಥಶಾಸ್ತ್ರ ಈಗತಾನೇ ಮೈತಳೆಯುತ್ತಿದೆಯೆನ್ನಬಹುದು. ಸಮಾಜ ಜೀವನದ ಸಮಗ್ರದೃಷ್ಟಿಯನ್ನು ಪ್ರತಿಪಾದಿಸಿ, ನಾನಾ ಸಾಮಾಜಿಕ ವರ್ತನೆಗಳು ಪರಸ್ಪರ ಪೂರಕವೆಂಬ ವಿಚಾರಕ್ಕೆ ಪ್ರಚೋದನೆ ನೀಡಿದ್ದೇ ಐತಿಹಾಸಿಕ ಪಂಥದ ನಿಜವಾದ ಸಾಧನೆ. (ಕೆ.ಡಿ.)

**ಐತಿಹ್ಯ:** ಚಾರಿತ್ರಿಕವೆಂದು ಜನ ಸಾಮಾನ್ಯವಾಗಿ ಅಂಗೀಕರಿಸಿದ್ದು ಪರಂಪರಾಗತವಾದ ವಿಶೇಷ ಘಟನೆ (ಲೆಜೆಂಡ್). ಇಲ್ಲಿನ ಸಂಗತಿಗಳನ್ನು ಇತಿಹಾಸದ ಸಂಗತಿಗಳಂತೆ ತಾಳೆ ನೋಡಲು ಆಗುವುದಿಲ್ಲವಾದರೂ ವಸ್ತು ಸಾಕಷ್ಟು ಪ್ರಾಚೀನ ಮೂಲದ್ದಾಗಿರುತ್ತದೆ. ಪ್ರಾಚೀನ ಕಾಲದ ಚಾರಿತ್ರಿಕ ಸಂಗತಿಯೊಂದು ಕ್ರಮೇಣ ಅಪೂರ್ವವೂ ಅದ್ಭುತವೂ ಆದ ಸನ್ನಿವೇಶಗಳನ್ನು ಒಳಗೊಳ್ಳುತ್ತ ತಲೆಮಾರುಗಳ ಮೂಲಕ ಹರಿದು ಬರುವಾಗ ಐತಿಹ್ಯ ಬಹುಶಃ ರೂಪುಗೊಂಡಿರಬೇಕೆಂದು ತೋರುತ್ತದೆ. ಐತಿಹ್ಯದಲ್ಲಿ ಚಾರಿತ್ರಿಕ ಅಂಶ ಎಷ್ಟು, ಕಾಲ್ಪನಿಕ ಅಂಶ ಎಷ್ಟು ಎಂದು ಗೆರೆಯೆಳೆದು ತೋರಿಸಲುಬಾರದು. ಐತಿಹ್ಯಗಳು ವ್ಯಕ್ತಿಗಳ ಸ್ಥಳಗಳ ಅಥವಾ ಘಟನೆಗಳ ವಾಸ್ತವ ಅಥವಾ ತೋರ್ಕೆಯ ನಂಬಿಕೆಗಳನ್ನೊಳಗೊಂಡ ಕಥನಗಳು. ಇವು ನಡೆದ ಘಟನೆಗಳ ಪಳೆಯುಳಿಕೆಗಳೆನ್ನಬಹುದು. ಹೇಳುವವರ ನಂಬಿಕೆಯಂತೆ ಉಳಿದುಬಂದವು. ಪ್ರಥಮತಃ ಗೊತ್ತಾದ ಸ್ಥಳಗಳಿಗೆ ಸಂಬಂಧಿಸಿದವು. ಆದರೆ ಬೇರೆ ಬೇರೆ ಸ್ಥಳಗಳಲ್ಲಿ ಇಂಥದೇ ರೀತಿಯ ಕಥನನಂಬಿಕೆ ಕಂಡುಬಂದಲ್ಲಿ ಆಶ್ಚರ್ಯಪಡಬೇಕಾದುದಿಲ್ಲ.

ಮೂಲತಃ ಲೆಜೆಂಡ್ ಪದ ಧಾರ್ಮಿಕ ರೀತಿಯ ಕಥನವೊಂದಕ್ಕೆ ಅನ್ವಯಿಸುತ್ತಿದ್ದು ಆಮೇಲೆ ಚಾರಿತ್ರಿಕ ಆಧಾರವಿರದಿದ್ದರೂ ಜನಾದರಣೀಯ ಸತ್ಯವಾಗಿ ತಲೆಮಾರಿನಿಂದ ತಲೆಮಾರಿಗೆ ಬಂದಿರುವ ಕಥೆಗೂ ಬಳಕೆಯಾಯಿತು. ಪ್ರಥಮ ಹಂತದಲ್ಲಿ ಈ ಪದ ಸಾಧುಜೀವನಕ್ಕೆ ಸಂಬಂಧಿಸಿದ ಕಥೆಗಳನ್ನು ಸೂಚಿಸುತ್ತಿದ್ದಂತೆ ತೋರುತ್ತದೆ. ಉದಾಹರಣೆಗೆ, ಜಾಕಬ್ಸ್ ಡೇ ವರಾಗಿನೆ ಅವರ ಗೋಲ್ಡನ್ ಲೆಜೆಂಡ್ ಎಂಬ ಸಾಧುಕಥೆಗಳ ಸಂಗ್ರಹ

(ಇಂಗ್ಲಿಷ್ ಭಾಷಾಂತರ ಪ್ರ.ಶ.1483ರಲ್ಲಿ ಪ್ರಕಟವಾಯಿತು.) ಲೆಜೆಂಡ್ ಎಂಬ ಪದ ಮಧ್ಯಕಾಲೀನ ಲ್ಯಾಟಿನ್ನಿನ ಲೆಜೆಂಡಾ ಎಂಬುದರಿಂದ ನಿಷ್ಪನ್ನವಾದುದು. ಇದರ ಅರ್ಥ ಪಠಿಸಬಹುದಾದದ್ದು-ಎಂದು. ಆದ್ದರಿಂದ ಆರಾಧನಾ ಮಂದಿರಗಳಲ್ಲಿ ಪಠನೆಗಳಿಗಾಗಿ ಉಪಯೋಗಿಸುತ್ತಿದ್ದ, ಬೈಬಲ್ಲಿನಿಂದ ಮತ್ತು ಸಾಧುಜೀವನದಿಂದ ತೆಗೆದ ಭಾಗಗಳಿಗೆ ಈ ಪದವನ್ನು ಬಳಸಲಾಯಿತು. ಪಾಶ್ಚಾತ್ಯ ಸಂಸ್ಕೃತಿಯಲ್ಲಿನ ಕ್ರೈಸ್ತ ಸಾಧುಗಳನ್ನು ಕುರಿತ ಐತಿಹ್ಯಗಳನ್ನು ನೋಡಿಯೇ ಯುರೋಪಿನ ಕೆಲವು ಲೇಖಕರು ಲೆಜೆಂಡ್ ಪದವನ್ನು ಸಾಧು ಐತಿಹ್ಯಕ್ಕೆ ನಿಶ್ಚಿತಗೊಳಿಸಿದ ಹಾಗೆ ಕಾಣುತ್ತದೆ.

ಇತರ ಮಧ್ಯಯುಗದ ಐತಿಹ್ಯಗಳಲ್ಲಿ ಇತಿಹಾಸ ಮತ್ತು ನೀತಿಕಥೆಗಳು ಬಿಡಿಸಲಾಗದ ರೀತಿಯಲ್ಲಿ ಸೇರಿಕೊಂಡಿರುವುದನ್ನು ಕಾಣಬಹುದು. ಇತಿಹಾಸದ ಬರೆವಣಿಗೆ ಹೆಚ್ಚು ವ್ಯವಸ್ಥಿತವಾಗಿ ಬಂದು, ತನ್ನ ವಸ್ತುವಿನ ನಿಜತ್ವವನ್ನು ದೃಢಪಡಿಸಿಕೊಂಡ ಮೇಲೆ, ಉಳಿದ ನೀತಿಕಥೆಗಳು ಮತ್ತು ನಂಬಲಾಗದ ಕಥೆಗಳು ಐತಿಹ್ಯದ ಕ್ಷೇತ್ರಕ್ಕೆ ಬಂದುವೆಂದು ಕೆಲವರ ಅಭಿಪ್ರಾಯ.

ಆಧುನಿಕ ಬಳಕೆಯಲ್ಲಿ ಈ ಪದಕ್ಕೆ ಪ್ರಧಾನವಾಗಿ ಎರಡು ಅರ್ಥವಿದೆ: ಒಂದು-ನಾಣ್ಯ, ಸ್ಮಾರಕಪದಕ ಇತ್ಯಾದಿಗಳ ಮೇಲಿನ ಶಾಸನ; ಮತ್ತೊಂದು-ಇತಿಹಾಸದ ಹಾಗೆ ತಾಳೆನೋಡಲಾಗದ ಮತ್ತು ಪುರಾತನ ಮೂಲವುಳ್ಳದ್ದೆಂದು ಗ್ರಹಿಕೆಯಾಗಿರುವ ಬರೆವಣಿಗೆಯ ಕಥನ. ಕೆಲವು ಆಧುನಿಕ ಲೇಖಕರು ಆರ್ಷೇಯ ಶೈಲಿಯಲ್ಲಿ ಶುದ್ಧ ಕಲ್ಪನಾತ್ಮಕ ಕಥೆಗಳನ್ನು ಬರೆದು, ಅವನ್ನು ಲೆಜೆಂಡ್‌ಗಳೆಂದು ಕರೆದಿರುವುದೂ ಉಂಟು. ಇದರಿಂದಾಗಿ, ಅಕ್ಷರಸ್ಥರ ನಡುವೆ, ಈ ಪದ ಜಾನಪದಕ್ಕಿಂತ ಭಿನ್ನವಾದ ಪುರಾತನ ಗ್ರಂಥವೊಂದರಿಂದ ಬಂದ ಕಥೆಯೊಂದಕ್ಕೆ ಅನ್ವಯಿಸುತ್ತಿದ್ದಂತೆ ತಿಳಿಯುತ್ತದೆ. ಆದರೆ ಇತ್ತೀಚೆಗೆ ಜಾನಪದ ವಿದ್ವಾಂಸರು ಇದನ್ನು ಕಂಠಸ್ಥವಾಗಿ ಸಂವಹನಗೊಂಡ ಕಥೆಗಳಿಗೆ ಅನ್ವಯಿಸಿ, ಇದರ ಅರ್ಥವನ್ನು ನಿಗದಿಪಡಿಸಿದ್ದಾರೆ. ಈ ದೃಷ್ಟಿಯಲ್ಲಿ ಐತಿಹ್ಯವೆಂದರೆ, ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದನ್ನು ಕುರಿತಂತೆ ಸಾಂಪ್ರದಾಯಿಕ ಮೂಲವಸ್ತುಗಳೊಡನೆ ನಿಜಾಂಶವೊಂದರ ಮೇಲೆ ಆಧಾರಿತವಾಗಿದೆಯೆಂದು ಭಾವಿಸುವ ಕಥನವೇ ಆಗಿದೆ.

ಐತಿಹ್ಯಗಳು ಮೊದಮೊದಲು ಸಂಕ್ಷಿಪ್ತವೂ ಸರಳವೂ ಆಗಿದ್ದು, ಕ್ರಮೇಣ ಉತ್ಪ್ರೇಕ್ಷಿತ ವಿವರಣೆಗಳ ದೀರ್ಘ ಹಾಗೂ ಕಲ್ಪನಾತ್ಮಕ ಕಥೆಗಳಾಗಿ ಬೆಳವಣಿಗೆ ಹೊಂದಿದುವು. ಮೂಲದಲ್ಲಿ ಇವು ಚಾರಿತ್ರಿಕವೆನಿಸಿದರೂ ಅನಂತರದಲ್ಲಿ ಸಾಂಪ್ರದಾಯಿಕವೆನಿಸಿದುವು. ಕೆಲವರು ಐತಿಹ್ಯ ಮತ್ತು ಸಂಪ್ರದಾಯಗಳನ್ನು ಜೊತೆಜೊತೆಯಲ್ಲಿ ನೋಡಿರಲು ಈ ದೃಷ್ಟಿಯೇ ಕಾರಣವಾಗಿರಬೇಕು. ಸಾಮಾನ್ಯವಾಗಿ ಐತಿಹ್ಯದಲ್ಲಿ ಏಕಮಾತ್ರ ಕಥನಾಶಯ ಕಂಡುಬರುತ್ತದೆ.

ವಸ್ತುವಿನ ದೃಷ್ಟಿಯಿಂದ ಐತಿಹ್ಯಗಳನ್ನು ಮೂರು ಪ್ರಧಾನ ಗುಂಪುಗಳಾಗಿ ವಿಂಗಡಿಸಬಹುದು: 1 ಸೃಷ್ಟಿ ಅಥವಾ ಜಗತ್ತಿನ ಮೂಲವನ್ನು ಕುರಿತಾದ ವಿವರಣಾತ್ಮಕ ಐತಿಹ್ಯಗಳು; 2 ಅತಿಮಾನುಷ ವ್ಯಕ್ತಿಗಳನ್ನು ಕುರಿತ ಐತಿಹ್ಯಗಳು; 3 ಐತಿಹಾಸಿಕ ಅಥವಾ ಮಿಥ್ಯೈತಿಹಾಸಿಕ ಐತಿಹ್ಯಗಳು. ಸೃಷ್ಟಿಕಾರ್ಯದ ಉಗಮ, ಭೂಮಿ ರೂಪಿತವಾದ ಬಗೆ ಮೊದಲಾದ ವಿಷಯಗಳನ್ನೊಳಗೊಂಡ ಐತಿಹ್ಯಗಳು ಬಹುಮಟ್ಟಿಗೆ ಪುರಾಣದ ಸಂಪರ್ಕವನ್ನು ಪಡೆದಿರುತ್ತವೆ. ಈ ಬಗೆಗಿನ ಕಥೆಗಳು ಜಗತ್ತಿನ ಎಲ್ಲ ಕಡೆಯಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ದೊರಕುತ್ತವೆ. ಇವುಗಳ ಮೇಲೆ ಆಯಾ ದೇಶದ ಪವಿತ್ರ ಧಾರ್ಮಿಕ ಗ್ರಂಥಗಳು ಪ್ರಭಾವ ಬೀರಿರುವುದನ್ನು ಕಾಣಬಹುದು. ಜನಪದ ಇನ್ನೂ ನಂಬಿಕೊಂಡಿರುವ ಕಿನ್ನರ, ದೆವ್ವ, ಪಿಶಾಚಿ, ರಾಕ್ಷಸ ಮೊದಲಾದ ಅದ್ಭುತಗಳನ್ನು ಒಳಗೊಂಡಿರುವ ಕಥೆಗಳೇ ಎರಡನೆಯ ವಿಭಾಗದ ಐತಿಹ್ಯಗಳು. ಇದರಲ್ಲಿ ಕಿನ್ನರ ಕಥೆಗಳಿಗೂ ಐತಿಹ್ಯಗಳಿಗೂ ಇರುವ ಸಂಬಂಧವನ್ನು ಅವುಗಳಲ್ಲಿರುವ ಸಮಾನಾಂಶವಾದ ಅದ್ಭುತಗಳಿಂದ ಗುರುತಿಸಬಹುದು. ಇನ್ನು ಮೂರನೆಯ ವಿಭಾಗದ ಐತಿಹ್ಯಗಳು ಚಾರಿತ್ರಿಕ ಲಕ್ಷಣಗಳನ್ನು ಆಶ್ರಯಿಸಿರುವ ರಚನೆಗಳನ್ನು ತಿಳಿಸುತ್ತವೆ. ಐತಿಹ್ಯದ ವಸ್ತು ಸಮಗ್ರವಾಗಿ ಕಲ್ಪನಾತ್ಮಕವೆಂದು ಕರೆಯಬೇಕಾಗಿಲ್ಲ, ಕಲ್ಪನೆಗೆ ಆಧಾರ ಕೊಡುವ ಸತ್ಯಾಂಶಗಳೂ ಅಲ್ಲಿರುತ್ತವೆ. ಐತಿಹ್ಯಗಳು ಐತಿಹಾಸಿಕ ಗಣ್ಯವ್ಯಕ್ತಿಗಳ ಸುತ್ತ ಗುಂಪುಗೂಡಿ ಬೆಳೆದಿರುವ ಹಾಗೆ ಕಾಣುತ್ತದೆ. ಪುರಾತನ ಐತಿಹಾಸಿಕ ವ್ಯಕ್ತಿ ಕ್ರಮೇಣ ಐತಿಹ್ಯದ ವಸ್ತುವಾಗಿ, ಅವನ ಗುಣಗೌರವ ವೈಶಿಷ್ಟ್ಯಗಳ ಮೇಲೆ ಐತಿಹ್ಯದ ಕಥೆಗಳು ರೂಪುಗೊಂಡಿರಬೇಕು. ಜನ ಸಾಮಾನ್ಯರಲ್ಲಿ ಐತಿಹ್ಯವನ್ನು ಇತಿಹಾಸದ ಜೊತೆಗೆ ತಪ್ಪು ಕಲ್ಪಿಸಿಕೊಳ್ಳುವುದೂ ಒಂದು ಸಾಮಾನ್ಯ ಪ್ರವೃತ್ತಿ. ಅಂತೂ, ಕಾಲದಿಂದ ಕಾಲಕ್ಕೆ ನೆನಪಾಗಿ ಉಳಿದುಕೊಂಡಿರುವ ಕೆಲವು ಐತಿಹಾಸಿಕ ಲಕ್ಷಣಗಳನ್ನು ಐತಿಹ್ಯಗಳು ವ್ಯಕ್ತಪಡಿಸುತ್ತವೆ. ಆದರೆ ಕೆಲವುಸಾರಿ ಇವು ಭ್ರಾಂತಿಮೂಲವೂ ಅಸಂಬದ್ಧವೂ ಆಗಿರುವುದುಂಟು. ಉದಾಹರಣೆ-ಪೈಡ್ ಪೈಪರ್ ಆಫ್ ಹ್ಯಾಮಲಿನ್-ಎಂಬ ಕಿನ್ನರಿ ಜೋಗಿಯ ಕಥೆ.

ವಿತರಣೆಯ ದೃಷ್ಟಿಯಿಂದ ಐತಿಹ್ಯಗಳನ್ನು ಸ್ಥಳೀಯ ಐತಿಹ್ಯ ಮತ್ತು ವಲಸೆಯ ಐತಿಹ್ಯಗಳೆಂದು ಎರಡು ದೊಡ್ಡ ಗುಂಪುಗಳಾಗಿ ವಿಂಗಡಿಸಬಹುದು. ಸ್ಥಳೀಯ ಐತಿಹ್ಯಗಳು ಗೊತ್ತಾದ ಸ್ಥಳವೊಂದಕ್ಕೆ ಸಂಬಂಧಿಸಿದವು. ಭೂವಲಯದ ಅಥವಾ ಹೆಸರಿನ ಕೆಲವು ಸ್ಥಳೀಯ ವೈಲಕ್ಷಣ್ಯಗಳನ್ನು ವಿವರಿಸುವುದಕ್ಕಾಗಿಯೊ ಸ್ಥಳೀಯ ಸಂಪ್ರದಾಯದ ಕಥೆಯೊಂದನ್ನು ಹೇಳುವುದಕ್ಕಾಗಿಯೊ ಅವು ಸೃಷ್ಟಿಯಾಗಿರುತ್ತವೆ. ಸಂಗ್ರಹವಾಗಿ ಹೇಳುವುದಾದರೆ, ಸ್ಥಳೀಯ ಐತಿಹ್ಯ ಚಿಕ್ಕದಾದುದು, ಘಟನಾತ್ಮಕವಾದುದು, ವಿವರಣಾತ್ಮಕವಾದುದು. ಇದರ ರಚನೆ ಸರಳ, ತಂತ್ರದಲ್ಲಿ ಕಿನ್ನರಕಥೆಯನ್ನು ಇದು ಹೋಲುತ್ತದೆ. ಇದರ ಕ್ಷೇತ್ರ ತುಂಬ ಪರಿಮಿತ. ಬಹು ಹಿಂದಿನ ಸಂಪ್ರದಾಯಗಳನ್ನೂ ನೀತಿಪದ್ಧತಿಗಳನ್ನೂ ಹೊಂದಿ ಪುರಾತನತ್ವದ ಸೂಚಿಯಾಗಿರುತ್ತದೆ. ಸಾಮಾನ್ಯವಾಗಿ ಹರ್ಷಾಂತವಾದರೂ ದುಃಖಾಂತವಾಗಿಯೂ ಕೊನೆಗೊಳ್ಳುವ ಐತಿಹ್ಯಗಳು ಹಲವಾರಿವೆ. ಇವುಗಳ ಇನ್ನೊಂದು ಗುಣ ಬೋಧಪರತೆ ಮತ್ತು ನೀತಿಪರತೆ. ಭೂತ, ಪ್ರೇತ ಮೊದಲಾದವುಗಳಲ್ಲಿನ ನಂಬಿಕೆ ಇವುಗಳ ಮತ್ತೊಂದು ಲಕ್ಷಣ. ಸ್ಥಳೀಯ ಐತಿಹ್ಯಗಳು ವಲಸೆ ಹೋಗುವುದಿಲ್ಲ. ಅವು ಸಂಕ್ಷಿಪ್ತವಾಗಿದ್ದು ಕೆಲವು ಆಶಯಗಳನ್ನು ಒಳಗೊಂಡಿರುತ್ತವೆ. ಈ ಪರಿಮಿತ ಆಶಯಗಳೇ ಯಾವಾಗಲೂ ಆವರ್ತನಗೊಳ್ಳುತ್ತಿರುತ್ತವೆ.

ಸ್ಥಳೀಯ ಐತಿಹ್ಯಗಳಲ್ಲಿ ಹಲವಾರು ಪ್ರಕಾರಗಳಾಗಿವೆ. ಮುಖ್ಯವಾದವನ್ನು ಮಾತ್ರ ಇಲ್ಲಿ ಹೆಸರಿಸಲಾಗಿದೆ. ಜಗತ್ತಿನಾದ್ಯಂತ ಕಂಡುಬರುವ ಇಂಥದೊಂದು ಪ್ರಕಾರವೆಂದರೆ, ಪ್ರವಾಹ ಐತಿಹ್ಯ, ಕೆರೆ, ಕೊಳ, ಸರೋವರಗಳು ಇರುವಲ್ಲೆಲ್ಲ ಈ ರೀತಿಯ ಐತಿಹ್ಯಗಳು ಪ್ರಚಲಿತವಾಗಿವೆ. ಇವುಗಳಿಗೆ ಆಳವನ್ನು ಕಂಡರಿಯವೆಂದೂ ಕಂಡುಹಿಡಿಯಲು ಹೊರಟರೆ ವಿಪತ್ತು ತಪ್ಪದಿದ್ದಲ್ಲವೆಂದೂ ನಂಬಿಕೆ ಇದೆ. ಕೆರೆ ಅಥವಾ ಸರೋವರದ ಮಧ್ಯಭಾಗದಲ್ಲಿ ಭೂಭಾಗವೊಂದು ಇದ್ದು, ಅಲ್ಲಿಯ ನಿವಾಸಿಗಳ ನಾಸ್ತಿಕತೆಯಿಂದಾಗಿ ಪ್ರವಾಹ ಬಂದು ಮುಳುಗಿಹೋಯಿತೆಂದು ಕಥೆಯುಂಟು. ಈ ಬಗೆಯ ಐತಿಹ್ಯಗಳಲ್ಲಿ ಪ್ರಮುಖವಾದುದು ನೋಹ ಮತ್ತು ಅವನ ದೋಣಿಯ ಕಥೆ. ಇದಲ್ಲದೆ ಆಲ್ಬನ್ ಲೇಕ್ ಐತಿಹ್ಯವನ್ನೆ ತೆಗೆದುಕೊಳ್ಳಬಹುದು. ಆಲ್ಬಲಾಂಗಾ ಎಂಬುವನೊಬ್ಬ ಮಾನವ ರೂಪದಲ್ಲಿ ದೇವತೆಯನ್ನು ನಿರ್ಮಿಸಿ, ಜುಪಿಟರ್ ದೇವತೆಯ ಗುಡುಗು ಮಿಂಚುಗಳನ್ನು ಅಣಕಿಸಿದನಂತೆ. ಈ ಅನೀತಿವರ್ತನೆಗಾಗಿ ಈತನ ಮತ್ತು ಅರಮನೆ ಬರಸಿಡಿಲಿಗೆ ತುತ್ತಾದುದಲ್ಲದೆ, ಆಲ್ಬನ್ ಸರೋವರ ಉಕ್ಕಿಬಂದು ಅರಮನೆಯನ್ನು ಮುಳುಗಿಸಿದಂತೆ ಕಥೆ ಇದೆ. ನಾಶಹೊಂದಿದ ಅರಮನೆಯನ್ನು ಆ ಸರೋವರದ ತಳಭಾಗದಲ್ಲಿ ಇವತ್ತಿಗೂ ನೋಡಬಹುದೆಂದು ಪ್ರಾಚೀನ ಉದಂತಕಾರನೊಬ್ಬ ಹೇಳಿದ್ದಾನೆ. ಪ್ರಳಯದ ಈ ಪ್ರಧಾನಾಶ್ರಯ ಮತ್ತು ನಿವಾಸಿಗಳ ನಿರೀಶ್ವರವಾದ ಮಧ್ಯಯುಗದ ಮಾದರಿಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅಂಥ ಅನೇಕ ಐತಿಹ್ಯಗಳು ಸ್ವತಂತ್ರ ಬೆಳವಣಿಗೆಗಳಾಗಿರುವುದಲ್ಲದೆ, ಕೆಲವು ವೇಳೆ ನಿಜವಾದ ಸ್ಥಳಗಳು ದುರಂತಗಳ ಜ್ಞಾಪಕಗಳಾಗಿಯೂ ಉಳಿದಿವೆ. ಈ ಚಾರಿತ್ರಿಕ ಜ್ಞಾಪಕಾಂಶಗಳ ಜೊತೆಗೆ ಭೂಗರ್ಭವಿಜ್ಞಾನಿಯ ಊಹೆಗಳು, ಆಶಯಗಳು, ವಲಸೆ ಹೋಗುವಿಕೆ-ಈ ಎರಡು ವಿಷಯಗಳನ್ನು ಗಮನಿಸಬೇಕಾಗುತ್ತದೆ.

ಐತಿಹ್ಯದ ಮತ್ತೊಂದು ಜನಪ್ರಿಯಪ್ರಕಾರ ಬಲಿಕೊಡುವ ವಿಷಯವನ್ನು ಕುರಿತದ್ದು. ಕಟ್ಟಡ, ಕೋಟೆ, ಆರಾಧನಮಂದಿರ, ಸೇತುವೆ ಹಾಗೂ ಕೆರೆಗಳ ಏರಿಗಳು ಶಾಶ್ವತವಾಗಿ ನಿಲ್ಲಲು ಕೊಡುತ್ತಿದ್ದ ಆಸ್ತಿಭಾರ-ಬಲಿಗಳನ್ನು ಇವು ತಿಳಿಸುತ್ತವೆ. ಕೆರೆಯ ಏರಿ ನಿಲ್ಲಲು ಬಲಿ ಅರ್ಪಿಸಿದ ಕಥೆಯೊಂದು ನಾಗಮಂಡಲದ ಸಮೀಪದ ಸೂಳೆಕೆರೆಯ ಬಗ್ಗೆ ಪ್ರಚಲಿತವಾಗಿದೆ. ರಾಜ ಕಟ್ಟಿಸುತ್ತಿದ್ದ ಕೆರೆಯ ಏರಿ ನಿಲ್ಲದಿದ್ದಾಗ ರಾಜನ ಸೂಳೆಯೊಬ್ಬಳು ಅದಕ್ಕೆ ತಾನೇ ಬಲಿಯಾದ ಪ್ರಸಂಗ ಇಲ್ಲಿದೆ. ಕೆರೆ ತೋಡಿ ನೀರು ಬರದಿದ್ದಾಗಲೂ ಬಲಿಕೊಟ್ಟ ಪ್ರಸಂಗಗಳನ್ನು ಹೇಳುವ ಹಲವಾರು ಐತಿಹ್ಯಗಳು ಪ್ರಚುರವಾಗಿದೆ. ಸಾಮಾನ್ಯವಾಗಿ ಇಲ್ಲಿ ಬಲಿಯಾಗುವವಳು ಕಿರಿಯ ಸೊಸೆ. ಕೆರೆಗೆ ಹಾರ ಎಂಬ ಕಥೆಯನ್ನೇ ಇಲ್ಲಿ ಉದಾಹರಿಸಬಹುದು. ಇದನ್ನೆ ಬಹುಮಟ್ಟಿಗೆ ಹೋಲುವಂಥ ಐತಿಹ್ಯವೊಂದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಳ್ತೆಗ್ರಾಮದ ಹೊನ್ನಮ್ಮನ ಕೆರೆಯ ಬಗ್ಗೆ ಇರುವುದನ್ನು ಶ್ರೀ ಟಿ.ಎಸ್. ರಾಜಪ್ಪ ಅವರು ಸಂಗ್ರಹಿಸಿದ್ದಾರೆ. ಹೊನ್ನಮ್ಮನ ಬಗೆಗಿನ ಇಂಥ ಐತಿಹ್ಯಗಳು ಹಲವು ಕಡೆ ಹರಡಿಕೊಂಡಿವೆ. ಈ ರೀತಿಯ ಕಥೆಯೊಂದು ಮಂಡ್ಯಜಿಲ್ಲೆಯ ಮದ್ದೂರು ಕೆರೆಯ ಬಗ್ಗೆಯೂ ಇದೆ. ಇವುಗಳಲ್ಲಿ ಕಾಣಬರುವ ಮತ್ತೊಂದು ಆಶಯವೆಂದರೆ, ಬಲಿಯಾದವರು ದೇವತೆಗಳಾಗಿ ಬಡಬಗ್ಗರಿಗೆ ವಿಶೇಷ ಸಂದರ್ಭಗಳಲ್ಲಿ ಒಡವೆ ಕೊಡುತ್ತಿದ್ದುದು, ಮಾತನಾಡುತ್ತಿದ್ದುದು, ಆಮೇಲೆ ಒಮ್ಮೆ ಶೂದ್ರನೊಬ್ಬ ನಿನ್ನ ಸೊಲ್ಲು ಬೆಲ್ಲವಾಗಲಿಲ್ಲವೆ-ಎಂದಮೇಲೆ ಅದು ನಿಂತು ಹೋದದ್ದು.

ಬಲಿ ಐತಿಹ್ಯಗಳ ಐತಿಹಾಸಿಕತೆಯ ಬಗ್ಗೆ ಒಂದು ಮಾತು. ಹಲವಾರು ಕಟ್ಟಡಗಳನ್ನು ಕೆಡವಿ ಶೋಧಿಸಿ ತೆಗೆದಾಗ ಅನೇಕ ಆಸ್ತಿಭಾರದಲ್ಲಿ ಅಸ್ಥಿಪಂಜರುಗಳು ದೊರೆತಿವೆ. 19ನೆಯ ಶತಮಾನದಲ್ಲಿ ಉತ್ತರ ಜರ್ಮನಿಯಲ್ಲಿ ಇಂಥದೊಂದು ಸಂಶೋಧನೆ ನಡೆದು ಆಸ್ತಿಭಾರ-ಬಲಿಯ ಉಳಿಕೆಯೊಂದು ಪತ್ತೆಯಾಗಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಇವನ್ನು ಗಮನಿಸಿದರೆ ಬಲಿ ಕಥೆಗಳ ಪ್ರಚುರ್ಯಕ್ಕೆ ಜನಪ್ರಿಯತೆಗೆ ಬೆಂಬಲ ಸಿಕ್ಕಂತಾಗುತ್ತದೆ.

ಕಟ್ಟಡದ ಬಲಿಗೆ ಸಂಬಂಧಿಸಿದ ಮತ್ತೊಂದು ಪ್ರಕಾರವೆಂದರೆ, ವೀರನೊಬ್ಬ ಸತ್ತ ಅನಂತರ ಅವನನ್ನು ನಗರದ ಹೆಬ್ಬಾಗಿಲು ಅಥವಾ ದೇಶದ ಗಡಿಗಳಲ್ಲಿ ಹೂಳುವುದರಿಂದ ಆಕ್ರಮಣವನ್ನು ತಪ್ಪಿಸಬಹುದು–ಎಂಬುದು.

ಪರ್ವತ ಕಂದರಗಳಲ್ಲಿ ಶತ್ರುಗಳು ಬೆನ್ನಟ್ಟಿಬಂದಾಗ ವೀರನೊಬ್ಬ ಮತ್ತು ಸೆರೆಯಿಂದ ಬಿಡಿಸಿಕೊಂಡು ಬಂದ ಕನ್ಯೆಯೊಬ್ಬಳು ಹಾರಿ ಬಿದ್ದು ಪಾರಾದ ಬಗ್ಗೆ, ಸತ್ತ ಬಗ್ಗೆ ಅನೇಕ ಬಗೆಯ ಐತಿಹ್ಯಗಳು ಬೆಳೆದಿವೆ. ಈ ತೆರದ ಐತಿಹ್ಯದ ಜನನಕ್ಕೆ ಸಮಾನ ಸಂಪ್ರದಾಯವೊಂದು ಕಾರಣವಾಗಿರಬೇಕೆನಿಸುತ್ತದೆ.

ಐತಿಹ್ಯದ ಮತ್ತೊಂದು ಪ್ರಕಾರ ಕೌಟುಂಬಿಕ ಐತಿಹ್ಯ. ಕೆಲವು ಕುಟುಂಬಗಳಲ್ಲಿ ಸಾವು ಸೂಚಿಸಿ ಅಳುವ ದೆವ್ವಗಳು ಆಗಾಗ್ಗೆ ಕಾಣಿಸಿಕೊಳ್ಳುತ್ತವಂತೆ. ಈ ದೆವ್ವ ನಿರಾಕರಿಸಿದ ಪತ್ನಿಯಾಗಿದ್ದು, ತನ್ನ ಪ್ರೀತಿಯ ಮೊದಲ ವಸ್ತುವಾಗಿದ್ದವರ ಮೇಲೆ ಸೇಡು ತೀರಿಸಿಕೊಳ್ಳುವುದೇ ಆಗಿದೆ. ಕ್ರಾಪ್ಪೆಯವರ ಅಭಿಪ್ರಾಯದಂತೆ ದೆವ್ವದ ಅಸ್ತಿತ್ವ ಹಾಗೂ ಅದು ನಿಯತಕಾಲಿಕವಾಗಿ ಕಾಣಿಸಿಕೊಳ್ಳುವಿಕೆ ಐತಿಹ್ಯದ ಜನಪ್ರಿಯ ಭಾಗವಾಗಿದೆ.

ವ್ಯಾಪಕವಾಗಿ ಹರಡಿಕೊಂಡಿರುವ ಮತ್ತೊಂದು ಐತಿಹ್ಯದ ಪ್ರಕಾರವೆಂದರೆ, ಇತಿಹಾಸದ ಘಟನೆಯಂತೆ ತೋರುವ ಐತಿಹ್ಯಗಳು. ಇವು ನಿಜವಾಗಿ ಹೆಸರಾಂತಿದ್ದರೂ ಇವನ್ನು ಕುರಿತ ಸ್ಪಷ್ಟವಾದ ಇತಿಹಾಸವಾವುದೂ ಸಿಕ್ಕದು. ಉದಾಹರಣೆಗೆ, ಅಲೆಗ್ಸಾಂಡರ್ ಬಗೆಗಿನ ಕಥೆಗಳು. ಐತಿಹಾಸಿಕ ಐತಿಹ್ಯಗಳಲ್ಲಿರುವ ಅರ್ಧ ಸಾಹಿತ್ಯಕ ಲಕ್ಷಣಕ್ಕೆ ಪ್ರಖ್ಯಾತ ರಾಜರ ಹೆಸರಿನ ಜೊತೆಗೆ ಸೇರಿಕೊಂಡಿರುವ ಐತಿಹ್ಯಗಳು ನಿದರ್ಶನವಾಗುತ್ತವೆ. ಸೈನ್ಯ, ವೀರರು, ಮನೆತನದ ಬಿರುದುಗಳು, ಲಾಂಛನಗಳು, ಧ್ವಜಗಳು ಮೊದಲಾದ ಯುದ್ಧವಿಷಯಿಕ ಕಥೆಗಳೂ ಕೆಲಮಟ್ಟಿಗೆ ಐತಿಹಾಸಿಕ ಐತಿಹ್ಯಗಳಿಗೆ ಸಂಬಂಧಪಟ್ಟವೆ. ಇವುಗಳ ಹಿಂದಿನ ಸತ್ಯಾಂಶಗಳನ್ನು ತಿಳಿಯಬಯಸುವ ಸಂಶೋಧಕರಿಗೆ ಸ್ವಲ್ಪವಾದರೂ ಇವುಗಳಿಂದ ವಿವರಣೆ ದೊರೆಯಬಹುದು, ಅಷ್ಟೆ ವಿನಾ ಇವೆಲ್ಲ ಪೂರ್ಣ ನಡೆದ ಘಟನೆಗಳಲ್ಲ. ಸಾರ್ವತ್ರಿಕ ಆಧಾರದ ಮೇಲೆ ನಿಂತಿರುವ ಐತಿಹ್ಯಗಳಲ್ಲಿ ನಿಕ್ಷೇಪದ ಕಥೆಗಳು ಮತ್ತು ಗಡೀಪಾರಿಗೆ ಸಂಬಂಧಿಸಿದ ಕಥೆಗಳು ಮುಖ್ಯವೆನಿಸಿವೆ. ಪ್ರತಿಮೆಯ ಐತಿಹ್ಯಗಳನ್ನೂ ಇಲ್ಲೇ ಹೇಳಬೇಕು.

ಸ್ಥಳೀಯ ಐತಿಹ್ಯಗಳಲ್ಲಿ ಅತ್ಯಂತ ದೊಡ್ಡ ಗುಂಪೆಂದರೆ ಜನಪದ ನಿರುಕ್ತಿಗೆ ಸಂಬಂಧಿಸಿದವು. ಸ್ಥಳದ ಹೆಸರೊಂದಕ್ಕೆ ನಿಜವಾದ ನಿಷ್ಪತ್ತಿ ತಿಳಿಯದಿದ್ದಾಗ, ತಪ್ಪು ವ್ಯಾಖ್ಯಾನ ಮಾಡುವುದೇ ಇದು. ಈ ತಪ್ಪು ನಿಷ್ಪತ್ತಿ ಅಪರಿಚಿತ ಹೆಸರಿಗೆ ವಿವರಣೆ ಕೊಡಲು ಕಾರ್ಯಕಾರಣ ಕಥೆಯೊಂದನ್ನು ಸೃಜಿಸುತ್ತದೆ. ಉದಾಹರಣೆಗೆ, ಬೆಂದಕಾಳೂರು ಎಂಬುದರಿಂದಲೇ ಬೆಂಗಳೂರು ಎಂಬ ಹೆಸರು ಬಂತೆಂದು ಹೇಳುವ, ಕೆಂಪೇಗೌಡನಿಗೆ ಸಂಬಂಧಿಸಿದ ಐತಿಹ್ಯಗಳು.

ಸ್ಥಳೀಯ ಐತಿಹ್ಯಕ್ಕೆ ತುಂಬ ಸಂಬಂಧವಿರುವ ಮತ್ತೊಂದು ಭಾಗ ವಿವರಣಾತ್ಮಕ ಐತಿಹ್ಯ. ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಸ್ಥಳೀಯ ಐತಿಹ್ಯಗಳಲ್ಲಿಯೂ ಈ ಕಾರ್ಯಕಾರಣ ಅಂಶ ಇರುವುದಾದರೂ ಇದರಲ್ಲಿ ಅದೇ ಪ್ರಧಾನ. ಪ್ರಾಣಿಗಳ, ಸಸ್ಯಗಳ, ನಕ್ಷತ್ರಗಳ ಮಾನವಕುಲದ ಮೂಲ ಮತ್ತು ವೈಲಕ್ಷಣ್ಯಗಳನ್ನು ವಿವರಿಸುವುದಕ್ಕಾಗಿ ಹುಟ್ಟಿಕೊಂಡವು ಇವು. ಕ್ರಮೇಣ ಈ ವಿವರಣೆಗಳೇ ಕಥೆಗಳ ರೂಪವನ್ನು ತಾಳಿರಬಹುದು ಅಥವಾ ಕಥೆಯೊಂದಕ್ಕೆ ಸೇರಿಕೊಂಡಿರಲೂಬಹುದು. ಅಂತೂ ಯಾವುದಾದರೂ ವಿಶೇಷ ಲಕ್ಷಣಕ್ಕೆ ವಿವರಣೆ ನೀಡುವುದು ಇವುಗಳ ಕೆಲಸ.

ಎಲ್ಲೆಲ್ಲಿ ಒಂಟಿಯಾದ ಬಂಡೆಗಳು ಬಿದ್ದಿರುತ್ತವೆಯೋ ಅಲ್ಲೆಲ್ಲ ಅವನ್ನು ಬೃಹದ್ದೇಹಿಯೊಬ್ಬನು ಯಾವುದಾದರೂ ಉದ್ದೇಶಕ್ಕೆ ತೆಗೆದುಕೊಂಡು ಹೋಗುತ್ತಿದ್ದಾಗ ಬಿದ್ದವೆಂದು ಹೇಳುತ್ತಾರೆ. ಸಾಲಿಗ್ರಾಮದ ಸಮೀಪದಲ್ಲಿ ಒಂದು ಬಂಡೆಯಿದೆ. ಇದು ಹಿಂದೆ ರಾಮಚಂದ್ರ ಸಮುದ್ರಕ್ಕೆ ಸೇತುವೆ ಕಟ್ಟಿದ ಸಂದರ್ಭದಲ್ಲಿ, ಆಂಜನೇಯನ ಕೈಯಿಂದ ಜಾರಿ ಬಿದ್ದಿತೆಂದೂ ಇವತ್ತಿಗೂ ಜನ ನಂಬಿಕೊಂಡಿದ್ದಾರೆ. ಆ ಕಲ್ಲು ಭೂಮಿಯ ಮೇಲೆ ಕುಳಿತಿಲ್ಲವೆಂದೂ ಮಧ್ಯೆ ತೆಳುವಾದ ಬಟ್ಟೆಯೊಂದನ್ನು ತೂರಿಸಬಹುದೆಂದೂ ಹೇಳುತ್ತಾರೆ. ಇದಕ್ಕೆ ಆಂಜನೇಯ ಕಲ್ಲು ಎಂದೇ ಹೆಸರಿದೆ. ಇದಲ್ಲದೆ ಸೀತೆ ಸ್ನಾನ ಮಾಡಿದಳೆಂದು ಹೇಳುವ, ಶ್ರೀರಾಮನ ಹೆಜ್ಜೆ ಗುರುತುಗಳೆಂದು ತೋರಿಸುವ ಜಾಗಗಳು ನಾಡಿನ ಬೇರೆ ಬೇರೆ ಕಡೆಗಳಲ್ಲಿ ಹರಡಿಕೊಂಡಿವೆ. ಇವುಗಳಲ್ಲದೆ ಸ್ಮಾರಕ ಐತಿಹ್ಯಗಳು, ಮತಾನುಚರಣೆಯ ಐತಿಹ್ಯಗಳು, ಮೂಢಾಚರಣೆಯ ಐತಿಹ್ಯಗಳು, ಸ್ವಪ್ನಾನುಭವದ ಐತಿಹ್ಯಗಳು–ಇತ್ಯಾದಿಯಾಗಿ ಇನ್ನೂ ಹಲವಾರು ಪ್ರಕಾರಗಳು ಸ್ಥಳೀಯ ಐತಿಹ್ಯಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಸ್ಥಳೀಯ ಐತಿಹ್ಯಗಳಲ್ಲಿನ ಕೆಲವು ವರ್ಗಗಳಿಗೆ ಖಂಡಿತವಾಗಿಯೂ ಮೂಲವನ್ನು ಹೇಳಲು ಸಾಧ್ಯವಿದೆ. ಯಾವುದೇ ಐತಿಹ್ಯ–ಅದು ಏನೇ ಆಗಿರಲಿ–ಮೂಲತಃ ಅದು ಚಾರಿತ್ರಿಕವಾದುದೆಂಬುದನ್ನು ಮರೆಯುವಂತಿಲ್ಲ. ಆದರೆ ಜನತೆಯ ಮೇಲಿನ ಧಾರ್ಮಿಕ ಗ್ರಂಥಗಳ ಪ್ರಭಾವದಿಂದಾಗಿ, ಅಲ್ಲಿನ ಎಷ್ಟೋ ಕಥೆಗಳು ಐತಿಹ್ಯಗಳಾಗಿ ಚಾಲ್ತಿಯಲ್ಲಿರುವುದನ್ನೂ ದೂರೀಕರಿಸುವ ಹಾಗಿಲ್ಲ. ಯುರೋಪಿನ ಎಷ್ಟೋ ಐತಿಹ್ಯ ಕಥೆಗಳು ಬೈಬಲಿನ ಯಥಾವತ್ತಾದ ಪ್ರತಿಗಳಾಗಿವೆ. ಅಂಥ ಜನಪ್ರಿಯ ಕಥನಗಳ ಎಲ್ಲ ವರ್ಗಗಳಿಗಿಂತಲೂ ಸ್ಥಳೀಯ ಐತಿಹ್ಯ ತನ್ನ ವಿಶೇಷ ಅವಶೇಷಗಳಿಂದಾಗಿ ಮಾನವಶಾಸ್ತ್ರೀಯ ಪಂಥದ ವಾದಗಳನ್ನು ಸಮರ್ಥಿಸುತ್ತದೆ ಎಂಬುದನ್ನು ಒಪ್ಪಬಹುದು.

ಪ್ರಸಾರದ ದೃಷ್ಟಿಯಿಂದ ಅತ್ಯಂತ ಮಹತ್ತ್ವದ್ದೆಂದರೆ ಎರಡನೆಯ ವರ್ಗದ ವಲಸೆಯ ಐತಿಹ್ಯ. ಯಾವುದೋ ಒಂದು ಸ್ಥಳದಲ್ಲಿ ಹುಟ್ಟಿ ಅನಂತರ ವಿಶ್ವವ್ಯಾಪಕತೆಯನ್ನು ಪಡೆದುಕೊಂಡದ್ದು ಇದು. ವಲಸೆಯ ಐತಿಹ್ಯ ಕೆಲಮಟ್ಟಿಗೆ ದೀರ್ಘವಿರುವ ಆದರೆ ಕಿನ್ನರ ಕಥೆಗಿಂತ ಚಿಕ್ಕದಾದ ಗದ್ಯಕಥನ. ಪಾಠಾಂತರಗಳು ಪರಿಮಿತ ಸಂಖ್ಯೆಯವು, ಆಶಯಗಳು ಬಹಳ ಸಂಖ್ಯೆಯಲ್ಲಿದ್ದರೂ ಸ್ಥಿರವಾದವು ಮತ್ತು ವಲಸೆಯಿಂದ ಅವು ವ್ಯತ್ಯಾಸವಾಗವು. ಆದ್ದರಿಂದ ಬಹುಮೂಲ ಸಿದ್ಧಾಂತ ಇಲ್ಲಿ ಅನ್ವಯವಾಗುವುದಿಲ್ಲ. ಈ ಐತಿಹ್ಯ ಮೂಲತಃ ಸ್ಥಳೀಕೃತ ಕಥೆಯಾದುದಾದರೂ ವಿಸ್ತಾರವಾಗಿ ಹರಡಿಕೊಂಡಿರುವುದರಿಂದ ಕೆಲವು ಸಮಯದಲ್ಲಿ ಮೂಲವನ್ನು ಪತ್ತೆಹಚ್ಚಲು ಕಷ್ಟವಾಗಬಹುದು. ಆದರೆ ಉಳಿದವುಗಳಿಗಿಂತ ಇಲ್ಲಿ ಅನ್ವೇಷಣೆ ಸುಲಭ. ಇದರ ಹರಡುವಿಕೆ ದುರ್ಗಾಭಾಗವತರು ಹೇಳುವಂತೆ ಸ್ಥಳೀಯ ಐತಿಹ್ಯಕ್ಕಿಂತ ವಿಸ್ತಾರವಾದುದು, ಕಿನ್ನರಕಥೆಗಿಂತ ಪರಿಮಿತವಾದುದು. ಇದರ ಕ್ಷಿಪ್ರಗತಿಯ ಪ್ರಸಾರಕ್ಕೆ ಎಲ್ಲ ಕಡೆಯೂ ಕಾಣಬರುವ ಮೂಲಭೂತ ಭಾವನೆ ಕಾರಣವೆನ್ನಬಹುದು. ವಲಸೆಯ ಐತಿಹ್ಯಕ್ಕೆ ಅತ್ಯುತ್ತಮ ಉದಾಹರಣೆ ವಿಕ್ಟಿಮ್ಸ್ ಲಾಸ್ಟ್ ವರ್ಡ್ಸ್ ಎಂಬ ಕಥೆ. ಬೌದ್ಧ ಧರ್ಮದ ಮೂಲಭೂತ ತತ್ತ್ವವನ್ನು ಆಧರಿಸಿರುವ ಇದು ಭಾರತದಲ್ಲಿ ಹುಟ್ಟಿ ಅನಂತರ ಇತರ ಕಡೆಗೆ ಹರಡಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಚಂದ್ರಹಾಸನ ಕಥೆ ಮತ್ತೊಂದು ನಿದರ್ಶನ.

ವಲಸೆಯ ಐತಿಹ್ಯ ದೇಶ, ಧರ್ಮಗಳ ತಾರತಮ್ಯವಿಲ್ಲದ ವಿಸ್ತೃತ ಆಧಾರದ ಸಾಮಾನ್ಯ ಮಾನವಮೂಲವಸ್ತುವನ್ನು ಒಳಗೊಂಡಿರುವುದಿಲ್ಲ. ಅವು ಒಂದು ಕಡೆ ಹುಟ್ಟುತ್ತಲೇ ಅಲ್ಲಿನ ಸ್ಥಿತಿ ಅನುಷ್ಠಾನ ನಂಬಿಕೆ ಹಾಗೂ ಸಾಂಪ್ರದಾಯಿಕ ಪದ್ಧತಿಗಳನ್ನು ಮೈಗೂಡಿಸಿಕೊಳ್ಳುತ್ತವೆ. ಬೇರೆ ಕಡೆಗೆ ವಲಸೆ ಹೋದಾಗ ಅಲ್ಲಿನ ಪರಿಸ್ಥಿತಿಗೆ ಅನಾಮತ್ತಾಗಿ ಒಪ್ಪಿಗೆಯಾಗಬಹುದು ಅಥವಾ ಅಲ್ಲಿನ ಧಾರ್ಮಿಕ ಪದ್ಧತಿಗಳಲ್ಲಿ ವಿಲೀನವಾಗಬಹುದು. ಕೆಲವು ವೇಳೆ ಹೆಸರಿನ ಆಕಸ್ಮಿಕ ಉಲ್ಲೇಖ ತನ್ನ ಎಲ್ಲ ಪರ್ಯಾಯಗಳ ಮೂಲಕ ಪಟ್ಟು ಹಿಡಿದು ಅಂಟಿಕೊಂಡಿದ್ದು ಬೆಲೆಯುಳ್ಳ ಸೂಚನೆಯನ್ನು ಒದಗಿಸುತ್ತದೆ. ಕಥೆಗಳನ್ನು ಮತ್ತೆ ಮತ್ತೆ ಹೇಳುವಾಗ ಕಥಾವಕ್ತೃಗಳ ಔದಾಸೀನ್ಯದಿಂದಾಗಿ ಕಥೆಗಳು ಆಗಾಗ್ಗೆ ಬದಲಾಗುವುದುಂಟು.

ಇಲ್ಲಿನ ಪ್ರಮುಖ ಸಮಸ್ಯೆಯೊಂದೆಂದರೆ, ಈ ಕಥೆಗಳು ಕೆಲವು ದೇಶಗಳಿಂದ ಮತ್ತೆ ಕೆಲವಕ್ಕೆ ಏಕೆ ವಲಸೆ ಹೋಗುತ್ತವೆ ಎಂಬುದು. ಇದಕ್ಕೆ ಬೆನ್ಫೆ ಭಾರತೀಯ–ಮೂಲವಾದದ ಮೂಲಕ ಕೆಲಮಟ್ಟಿಗೆ ಉತ್ತರ ಕೊಟ್ಟಿದ್ದಾನೆ. ಅವನ ಅಭಿಪ್ರಾಯ ಪ್ರಚಾರಕರು ಕಾರಣವಾಗಿರಬೇಕೆಂಬುದು. ಆದರೆ ಈತ ಆಧರಿಸಿದುದು ಬರೆವಣಿಗೆಯ ರೂಪದ ಕಥೆಗಳನ್ನು–ಎಂಬುದನ್ನು ಮರೆಯಬಾರದು. ಆದ್ದರಿಂದ ವಾಕ್ ಸಂಪ್ರದಾಯದ ಕಥೆಗಳಿಗೆಲ್ಲ ಪ್ರಚಾರವೇ ಕಾರಣವಾಯಿತೆಂದು ಹೇಳಲಾಗುವುದಿಲ್ಲ. ಕಥೆಗಳ ಪ್ರಸಾರಕ್ಕೆ ಧಾರ್ಮಿಕ ಚಳವಳಿ ಒಂದು ಕಾರಣವಾಗಿರುವಂತೆ, ಇದಕ್ಕಿಂತಲೂ ಆಳವಾದ ಮತ್ತೊಂದು ಕಾರಣ ಇರಬೇಕು. ಅಂತೂ ಸಾಕಷ್ಟು ಸಂಖ್ಯೆಯ ಐತಿಹ್ಯಗಳ ಪ್ರಸಾರಕ್ಕೆ ಪ್ರತ್ಯೇಕ ಜನವರ್ಗವೊಂದು ಕಾರಣವಾಗಿದ್ದು ಇವರು ಧರ್ಮ ಪ್ರಚಾರಕರೇ ಆಗಿರಬೇಕೆಂದು ತೋರುತ್ತದೆ.

ಹೀಗೆ ಐತಿಹ್ಯಗಳನ್ನು ಸ್ಥಳೀಯ ಮತ್ತು ವಲಸೆಯ ಐತಿಹ್ಯಗಳೆಂದು ಎರಡು ವಿಧವಾಗಿ ವಿವೇಚಿಸಬಹುದು. ಇವುಗಳಿಗೆ ಪರಸ್ಪರ ವ್ಯತ್ಯಾಸವಿರುವಂತೆ ಇವುಗಳಲ್ಲಿ ಆಂತರಿಕ ಸಂಬಂಧವೂ ಇದೆ. ಸ್ಥಳೀಯ ಐತಿಹ್ಯ, ತಾನು ಸಂಯೋಜಿಸಿರುವ ಆಶಯಗಳಲ್ಲಿ ಪರಿಮಿತಿ ಪ್ರದೇಶದಲ್ಲಿ ವಲಸೆಬಂದಂತೆ ಕಾಣಬಂದರೂ ಒಂದು ಕಡೆ ನೆಲೆಯಾಗಿ ನಿಂತುಕೊಂಡದ್ದು, ವಲಸೆಯ ಐತಿಹ್ಯ ವಿಸ್ತಾರವಾದ ಭೂ ಪ್ರದೇಶದಲ್ಲಿ ಸರ್ವ ಕಡೆಗೂ ವಲಸೆ ಹೋದದ್ದೇ ಆಗಿದೆ. ಒಂದು ಬಹುಮೂಲಕ್ಕೆ ಸಂಬಂಧಿಸಿದುದು, ಇನ್ನೊಂದರಲ್ಲಿ ಅದನ್ನು ಹೇಳಲಾಗುವುದಿಲ್ಲ. ಹೀಗೆ ಇವೆರಡಕ್ಕೂ ಇರುವ ವ್ಯತ್ಯಾಸವನ್ನು ತೋರಿಸುವುದಾದರೂ ವಲಸೆಯ ಐತಿಹ್ಯ ಸ್ಥಳೀಕೃತವಾಗಿರುವುದಿಲ್ಲವೆಂದಾಗಲಿ, ವ್ಯಕ್ತಿಗಳಿಗೆ ಸಂಬಂಧಿಸಿರುವುದಿಲ್ಲವೆಂದಾಗಲಿ ಹೇಳಲಾಗದು. ಅಂತು ಇವುಗಳ ನಡುವಣ ಗಡಿರೇಖೆಯನ್ನು ನಿರ್ಮಿಸುವುದು ಕಷ್ಟಸಾಧ್ಯವಾದ ಕೆಲಸ.

ಐತಿಹ್ಯಕ್ಕೆ ಸಂಬಂಧಿಸಿದ ಇನ್ನೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಬೇಕು. ಮೊದಲನೆಯದಾಗಿ ಐತಿಹ್ಯಕ್ಕೂ ಸಾಹಿತ್ಯಕ್ಕೂ ಇರುವ ಸಂಬಂಧ. ಸಾಹಿತ್ಯದಲ್ಲಿ ಐತಿಹ್ಯದ ಪಾತ್ರ ಮಹತ್ತ್ವಪೂರ್ಣವಾದುದು. ಚಾರಿತ್ರಿಕ ಆಭಾಸದ ಸಾಹಿತ್ಯ ವಿಶೇಷವಾಗಿ ಐತಿಹ್ಯದ ಮೂಲವಸ್ತುವನ್ನು ಅವಲಂಬಿಸಿರುತ್ತದೆ. ಇತಿಹಾಸ ದಾಖಲೆಗಳಿಗಿಂತ ಸಂಪ್ರದಾಯದ ಮೇಲೆ ಅವಲಂಬಿತವಾದಾಗ ಚರಿತ್ರೆಗೂ ಐತಿಹ್ಯಕ್ಕೂ ಇರುವ ವ್ಯತ್ಯಾಸ ಅಸ್ಪಷ್ಟವಾಗಿದೆ.

ಕುಮಾರರಾಮನ ಬಗೆಗಿನ ಕಥೆಗಳನ್ನೇ ಇಲ್ಲಿ ಉಲ್ಲೇಖಿಸಬಹುದು. ಇವನ ವೀರ್ಯವತ್ತಾದ ಜೀವನವನ್ನೂ ಪರನಾರೀಸೋದರತ್ವವನ್ನೂ ಪ್ರಕಾಶಗೊಳಿಸಲು ಇಂಥ ಕಥೆಗಳು ಆಮೇಲೆ ಹುಟ್ಟಿಕೊಂಡಿರಬೇಕೆಂದು ತೋರುತ್ತದೆ. ಆದರೆ ಬಹಳ ವರ್ಷಗಳ ತರುವಾಯ ಬಂದ ನಂಜುಂಡ ಕವಿಗೆ ಚಾರಿತ್ರಿಕ ಹಾಗೂ ಚಾರಿತ್ರಿಕ ಆಭಾಸದ ಸಂಗತಿಗಳೆಲ್ಲ ಕಾವ್ಯಕ್ಕೆ ವಸ್ತುವಾದುವು; ಮಾತ್ರವಲ್ಲ, ಐತಿಹ್ಯವೆನಿಸಿರುವ ಕಥೆಗಳೇ ಕಾವ್ಯದಲ್ಲಿ ಮನಸೆಳೆಯುವ ಪ್ರಸಂಗಗಳಾಗಿವೆ. ಅಲ್ಲದೆ, ಇಡೀ ರಾಮಾಯಣ ಭಾರತಗಳೇ ಒಂದು ಕಾಲಕ್ಕೆ ಚಾರಿತ್ರಿಕವಾಗಿದ್ದು, ಕ್ರಮೇಣ ಐತಿಹ್ಯದ ಹಲವು ಕಥೆಗಳಿಂದ ಮುಂದೆ ಬೆಳವಣಿಗೆಯಾಗಿರಬೇಕೆಂದು ತೋರುತ್ತದೆ. ಸಾಹಿತ್ಯಕ್ಕೆ ಐತಿಹ್ಯ ಹೇಗೆ ಮಹತ್ತ್ವದ ವಸ್ತುವಾಗುತ್ತದೆ ಎಂಬುದನ್ನಿಲ್ಲಿ ಕಾಣಬಹುದು.

ಪರಿಶೀಲಿಸಬೇಕಾದ ಎರಡನೆಯ ವಿಚಾರವೆಂದರೆ, ಐತಿಹ್ಯಕ್ಕೂ ಪುರಾಣಕ್ಕೂ ಇರುವ ವ್ಯತ್ಯಾಸ ಹಾಗೂ ಸಂಬಂಧಗಳು. ಐತಿಹ್ಯದ ಮೂಲ ಸಂಪ್ರದಾಯದ ಸಂಬಂಧವನ್ನು ಹೊಂದಿದುದಾದರೂ ಅಲ್ಲಿಯ ವೀರನ ದೊಡ್ಡತನವನ್ನು ಮತ್ತಷ್ಟು ಆಶಯಗೊಳಿಸುವ ಸಲುವಾಗಿ ಪೌರಾಣಿಕ ಲಕ್ಷಣಗಳನ್ನು ಆರೋಪಿಸುವುದು ಸಾಮಾನ್ಯ. ಈ ರೀತಿಯಾಗಿಯೇ ರಾಮ, ಕೃಷ್ಣ ಮೊದಲಾದವರು ಪುರಾಣ ಕಥೆಗಳ ವೀರರಾಗಿ ಮಾರ್ಪಾಡಾಗಿರುವುದು. ಇದೇ ಪ್ರವೃತ್ತಿಯನ್ನು ಜನಪದ ಐತಿಹ್ಯಗಳಲ್ಲಿಯೂ ಕಾಣುತ್ತೇವೆ. ಬಹುತೇಕ ಸಾಂಸ್ಕೃತಿಕ ವೀರರು ಪೌರಾಣಿಕ ವೀರರಾದುದೂ ಕೂಡ ಇದೇ ರೀತಿಯಲ್ಲಿ. ಆದ್ದರಿಂದಲೇ ಐತಿಹ್ಯಕ್ಕೂ ಪುರಾಣಕ್ಕೂ ಇರುವ ಗಡಿರೇಖೆಯನ್ನು ಗುರುತಿಸುವುದು ಸುಲಭವಲ್ಲ.

ಅಂತು ಐತಿಹ್ಯ ಮತ್ತು ಪುರಾಣಗಳಿಗಿರುವ ಸಂಬಂಧ ತುಂಬ ಸಮಸ್ಯಾತ್ಮಕವಾದುದು. ಪುರಾಣಕಥೆಯ ಪ್ರಧಾನ ಪಾತ್ರಗಳು ದೇವತೆಗಳು ಮತ್ತು ಪ್ರಕೃತಿ ಶಕ್ತಿಗಳು. ಉದ್ದೇಶವಿವರಣೆ ಐತಿಹ್ಯಗಳು ಪ್ರಾಚೀನ ವೀರರನ್ನು ಕುರಿತವು. ಈ ವೀರರ ಕಥೆಗಳು ಆಗಾಗ್ಗೆ ಪೌರಾಣಿಕ ಹಾಗೂ ಭ್ರಾಮಕ ಅಂಶಗಳನ್ನು ಒಳಗೊಂಡಿರುತ್ತವೆ; ಸತ್ಯಾಂಶವೆಲ್ಲಿ ಕೊನೆಗೊಳ್ಳುತ್ತದೆ ಮತ್ತು ಕಲ್ಪನೆ ಎಲ್ಲಿ ಪ್ರಾರಂಭವಾಗುತ್ತದೆ ಎಂಬುದನ್ನು ತೀರ್ಮಾನಿಸಲು ಕೆಲವು ಸಾರಿ ಅಸಾಧ್ಯವಾಗಬಹುದು. ಆದರೆ ಐತಿಹ್ಯಗಳು ಸಾಕಷ್ಟು ಪ್ರಮಾಣದ ವಾಸ್ತವಿಕ ಅಥವಾ ಚಾರಿತ್ರಿಕ ಸತ್ಯದ ಆಧಾರಗಳ ಮೇಲೆ ರೂಪಿತವಾಗಿರುತ್ತವೆ ಎಂಬುದನ್ನು ಮರೆಯಬಾರದು. (ಆರ್.ಜಿ.)

**ಐನಾಪುರ:** ಬೆಳಗಾಂವಿ ಜಿಲ್ಲೆ ಅಥಣಿ ತಾಲ್ಲೂಕಿನ ಒಂದು ಗ್ರಾಮ. ಅಥಣಿಯಿಂದ 4ಕಿಮೀ ದೂರದಲ್ಲಿ ಕೃಷ್ಣಾನದಿ ತೀರದಲ್ಲಿದೆ. ಈ ಊರಿನ ಪ್ರಪ್ರಥಮ ಉಲ್ಲೇಖ 1639ರಲ್ಲಿ ಜರ್ಮನಿಯ ಪ್ರವಾಸಿ ಮಂಡೆಲ್‍ಸ್ಲೂನ ಕಥನದಲ್ಲಿ ದೊರೆಯುತ್ತದೆ. ಅವನು ಇದನ್ನು ಈಯನಟೂರ್ ಎಂದು ಕರೆದಿದ್ದಾನೆ. 1791ರಲ್ಲಿ ಟಿಪ್ಪುವಿನ ವಿರುದ್ಧ ಮರಾಠರ ಸಹಾಯಕ್ಕಾಗಿ ಕಳುಹಿಸಲ್ಪಟ್ಟ ಕ್ಯಾಪ್ಟನ್ ಮೂರ್ ಐನಾಪುರದಲ್ಲಿ ಹಿಂದು ಮತ್ತು ಮುಸ್ಲಿಂ ವಾಸ್ತುಶೈಲಿಯ ಕಟ್ಟಡಗಳಿರುವುದನ್ನು ವರ್ಣಿಸಿರುವನು. 1942ರಲ್ಲಿ ಮೀರಜದ ಗೋಪಾಲರಾವ್ ಪಟವರ್ಧನನ ನಿಧನಾನಂತರ ಈ ಊರು ಬ್ರಿಟಿಷರ ಆಳಿಕೆಗೆ ಒಳಪಟ್ಟಿತ್ತು. ಐನಾಪುರ ಎಂಬ ಹೆಸರು ಜೈನಾಪುರದಿಂದ ಉತ್ಪತ್ತಿಯಾಗಿರಬೇಕೆಂದೂ ಅಯ್ಯನಾಪುರವೇ ಇಲ್ಲಿ ಐನಾಪುರವಾಗಿರಬೇಕೆಂದೂ ಅಭಿಮತವಿದೆ. ಇಲ್ಲಿ ಬ್ರಹ್ಮದೇವ, ವಿಶ್ವನಾಥ, ಸಿದ್ಧೇಶ್ವರ, ವೆಂಕಟರಮಣ, ಹನುಮಂತ, ರಾಮಲಿಂಗ ಮುಂತಾದ ದೇವಾಲಯಗಳಿವೆ. ವಿಶ್ವನಾಥ ದೇವಾಲಯ ಕೊನೆಯ ಚಾಳುಕ್ಯರ ಶೈಲಿಯ ಕಟ್ಟಡವಾಗಿದ್ದು ಗರ್ಭಗೃಹ ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ನವರಂಗದ ಕಂಬಗಳು ವರ್ತುಲಾಕಾರ ಮತ್ತು ಅಷ್ಟಕೋನಾಕೃತಿಯವು. ಈ ಊರ ಸರಹದ್ದಿನಲ್ಲಿ ಎತ್ತರವಾದ ಪ್ರದೇಶದಲ್ಲಿ ಭಾಗಶಃ ಶಿಥಿಲಗೊಂಡ ಒಂದು ದೇವಾಲಯವಿದೆ. ಈಗ ಇದನ್ನು ಗುಂಪು ಎಂದು ಕರೆಯುವರು. ಈ ದೇವಾಲಯದ ಗರ್ಭಗೃಹ ನಕ್ಷತ್ರಾಕಾರದಲ್ಲಿದೆ. ದೇವಾಲಯದ ಹೊರಗೋಡೆ ಸುಂದರವಾಗಿ ಕೆತ್ತಲ್ಪಟ್ಟಿದೆ. ನಾಟ್ಯ ಸರಸ್ವತಿ ಮತ್ತು ಮದನಿಕಾ ವಿಗ್ರಹಗಳ ಸಾಲು ಕೆತ್ತನೆ ಸುಂದರವಾಗಿದೆ. ಗರ್ಭಗೃಹದ ಬಾಗಿಲು ಸಮೃದ್ಧವಾಗಿ ಅಲಂಕರಿಸಲ್ಪಟ್ಟಿದೆ. ಇದು ವಿಷ್ಣುದೇವಾಲಯ ವಾಗಿರಬೇಕು. ಇದೇ ಗ್ರಾಮದ ಸರಹದ್ದಿನಲ್ಲಿ ಸಣ್ಣಗುಡ್ಡದ ಮೇಲೆ ಕಟ್ಟಲಾಗಿರುವ ರಾಮಲಿಂಗ ದೇವಾಲಯ ವಿಜಯನಗರದ ಅನಂತರದ ಶೈಲಿಯದು. ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ದೇವಾಲಯದ ಹೊರಬದಿಯಲ್ಲಿ 4 ಕಂಬಗಳುಳ್ಳ ಚಿಕ್ಕದಾದ ನಂದಿ ಮಂಟಪವಿದ್ದು, ಭಾಗಶಃ ಹಾಳಾಗಿದೆ. ಈ ದೇವಾಲಯದ ಸಮೀಪವಿರುವ ಚಿಕ್ಕಗುಡ್ಡದ ಮೇಲೆ ಹೊಸದಾಗಿ ಕಟ್ಟಲ್ಪಟ್ಟ ಎಲ್ಲಮ್ಮನ ದೇವಾಲಯವಿದೆ. ವಿಜಯನಗರದ ಅನಂತರದ ಶೈಲಿಯಲ್ಲಿ ನಿರ್ಮಿತವಾಗಿದ್ದ ಸಿದ್ಧೇಶ್ವರ ದೇವಾಲಯ ಈಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಸಿದ್ಧೇಶ್ವರ ದೇವರ ವಾರ್ಷಿಕ ಜಾತ್ರೆ ಜನವರಿ ತಿಂಗಳಲ್ಲಿ ನಡೆಯುತ್ತದೆ. ಆಗ ದನಗಳ ಜಾತ್ರೆಯೂ ಸೇರುವುದು.

ಇಲ್ಲಿರುವ ಆದಿನಾಥ ಮತ್ತು ಪಾರ್ಶ್ವನಾಥ ಬಸದಿಗಳು ಅನಂತರದ ಚಾಳುಕ್ಯ ಶೈಲಿಯಲ್ಲಿವೆ. ಪೂರ್ವದಿಕ್ಕಿನ ಕಡೆಗೆ ಮುಖ ಮಾಡಿರುವ ಆದಿನಾಥ ಬಸದಿಯಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿವೆ. ಆದಿನಾಥನ ಮೂರ್ತಿಯನ್ನು ಬಿಜಾಪುರದಿಂದ ತರಲಾಗಿದೆ ಎಂದು ಪ್ರತೀತಿ. ಪಾರ್ಶ್ವನಾಥ ಬಸದಿ, ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಇತ್ತೀಚೆಗೆ ಕಂಚಿನ ಪಾರ್ಶ್ವನಾಥ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಬಲಭಾಗದಲ್ಲಿ ಪಾರ್ಶ್ವನಾಥಮೂರ್ತಿ ಮತ್ತು ಎಡಭಾಗದಲ್ಲಿ ಧ್ಯಾನದಲ್ಲಿರುವ ಮಹಾವೀರನ ಮೂರ್ತಿಗಳಿವೆ. ಅವುಗಳ ಪಾದಪೀಠದಲ್ಲಿ ಶಾಸನಗಳಿವೆ. ನವರಂಗದ ಬಲ ಮೂಲೆಯಲ್ಲಿ ನೆಲಮಾಳಿಗೆಯ ಕೋಣೆಗಳಿಗೆ ಹೋಗಲು ಕಿಂಡಿದಾರಿಯಿದೆ. ಸುಮಾರು ನೂರು ವರ್ಷಗಳ ಹಿಂದೆ ಆಚಾರ್ಯ ಕುಂತುಸಾಗರಜಿ ಎಂಬ ಜೈನಮುನಿ ಇಲ್ಲಿ ವಾಸವಾಗಿದ್ದರಂತೆ. ಮುಖಮಂಟಪದಲ್ಲಿ ಸಹಸ್ರ ಜಿನಬಿಂಬಗಳ ಕೆತ್ತನೆಯುಳ್ಳ ಚಿಕ್ಕ ಸ್ತಂಭವಿದೆ. ದೇವಾಲಯದ ಮುಂಭಾಗದಲ್ಲಿ ಸು.12ಮೀ ಎತ್ತರದ ಒಂದು ಮಾನಸ್ತಂಭವಿದೆ. ಗರ್ಭಗೃಹದ ತುದಿಯಲ್ಲಿ ಶಂಖಾಕಾರದ ಶಿಖರವಿದೆ. ಇದರ ಒಳಭಾಗದ ಒಂದು ಮಂಟಪದಲ್ಲಿ ಅಮೃತಶಿಲೆಯ ನೇಮಿನಾಥ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಊರಲ್ಲಿ ಸಯ್ಯದ್ ಉಮರ್ ಖಾದ್ರಿ ಎಂಬವರಿಗೆ ಸಂಬಂಧಿಸಿದ ಒಂದು ದರ್ಗಾ ಇದೆ. ಇಲ್ಲಿ ಬಕ್ರೀದ್ ಹಬ್ಬದ ತರುವಾಯ ಮೂರು ದಿನಗಳವರೆಗೆ ಉರುಸ್ ನಡೆಯುತ್ತದೆ. (ಆರ್.ಐ.)

**ಐನಾರ್ಸನ್, ಇಂಡ್ರೀಡಿ:** 1851–1939. ಐಸ್ಲೆಂಡಿನ ಸಂಸತ್ ಸದಸ್ಯ, ಬ್ಯಾಂಕೊಂದರ ಹಾಗೂ ಹಣಕಾಸು ಇಲಾಖೆಯ ನಿರ್ದೇಶಕ, ಅಲ್ಲದೆ ನಾಟಕಕಾರ, ಭಾಷಾಂತರಕಾರ. ಹೀಗೆ ಶೋಭಿಸಿದ ಈತನದು ಬಹುಮುಖ ಪ್ರತಿಭೆ. ಐಸ್ಲೆಂಡಿನ ರಾಷ್ಟ್ರೀಯ ರಂಗಭೂಮಿಯನ್ನು ಸ್ಥಾಪಿಸಿ, ನಡೆಸಿದ ಕೀರ್ತಿಯೂ ಈತನದೇ. ಷೇಕ್ಸ್‍ಪಿಯರ್, ಇಬ್ಸೆನ್, ಜಾರ್ನ್‍ಸನ್ ಇವರ ನಾಟಕಗಳನ್ನೂ ಈತ ಭಾಷಾಂತರಿಸಿದ್ದಾನೆ.

1872ರಲ್ಲಿ ನೀಯಾರ್‍ಸ್ನಾಟನ್ (ಹೊಸ ವರ್ಷದ ಹೊಸ್ತಿಲಲ್ಲಿ) ಎಂಬ ಮೊದಲ ಪ್ರೇಮನಾಟಕವನ್ನು ಬರೆದು ಖ್ಯಾತಿ ಗಳಿಸಿದ. ಬ್ರಾಂಡಿಸ್, ಇಬ್ಸೆನ್, ಜಾರ್ನ್‍ಸನ್ ಈತನ ಮೇಲೆ ಪ್ರಭಾವ ಬೀರಿದರು. ಸಾಮಾಜಿಕ ನಾಟಕ ಸ್ಕೈಪಿಡ್ ಸೆಕ್ಕೂರ್‍ನಲ್ಲಿ (1902) ನೈಜಚಿತ್ರಣವನ್ನು ತರಲು ಯತ್ನಿಸಿದ. ಆದರೂ ಸಾಹಸಪೂರ್ಣ ಪ್ರವೃತ್ತಿಯ ಕಡೆಗೆ ತನಗಿರುವ ಒಲವನ್ನು ಬಿಡಲಾಗದೆ ಚಾರಿತ್ರಿಕ ನಾಟಕಗಳ ವಸ್ತುವಿಗಾಗಿ ಜಾನಪದ ಕಥೆಗಳು, ವಂಶಚರಿತ್ರೆಗಳನ್ನು ಶೋಧಿಸಿದ. ಡ್ಯಾನ್ಸಿನ್ ಇ ಹುನಿ (ಹುನಿ ಎಂಬಲ್ಲಿ ನೃತ್ಯ) ಎನ್ನುವ ಇವನ ಸರಳರಗಳೆಯ ನಾಟಕ ತುಂಬ ಯಶಸ್ವಿಯಾಯಿತು. (ಟಿ.ವಿ.ಎಸ್.)

**ಐನೂ:** ಜಪಾನಿನ ಒಂದು ಹಳೆಯ ಜನಾಂಗ. ಬಹುಶಃ ಹಿಂದೆ ಜಪಾನಿನ ಅನೇಕ ದ್ವೀಪಗಳಲ್ಲಿ ಹರಡಿದ್ದಿರಬಹುದಾದರೂ ಈಗ ಇವರು ಹಾಕ್ಕೈಡೋ, ಸ್ಯಾಕಲೀನ್, ಕೂರಿಲ್ ದ್ವೀಪಗಳಿಗೆ ಮಾತ್ರ ಸೀಮಿತರಾಗಿದ್ದಾರೆ. ಈಗಿವರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ನೆರೆಹೊರೆಯವರೊಂದಿಗೆ ವಿವಾಹಸಂಬಂಧ ಬೆಳೆಸದಿದ್ದರೆ ಇವರ ವಂಶವೇ ನಶಿಸಿ ಹೋಗಬಹುದು. ಇವರು ಒಂದಾನೊಂದು ಕಾಲದಲ್ಲಿ ಉತ್ತರ ಏಷ್ಯಾವನ್ನೆಲ್ಲ ಆವರಿಸಿಕೊಂಡಿದ್ದ ಕಾಕಸಾಯ್ಡರ ವಂಶಜರಿರಬಹುದು. ಆಸ್ಟ್ರೇಲಿಯ–ನ್ಯೂಜಿಲೆಂಡುಗಳ ಆಸ್ಟ್ರಲಾಯ್ಡರಿಗೂ ಇವರಿಗೂ ಸಾಮ್ಯವುಂಟೆಂದು ಕೆಲವು ವಿದ್ವಾಂಸರ ಮತ. ಐನೂಗಳು ಕುಳ್ಳರು. ಇವರ ಮೈಮೇಲೆ ದಟ್ಟ ಕೂದಲು. ಇದುವರೆಗೆ ತಿಳಿದಿರುವ ಮಟ್ಟಿಗೆ ಬೇರೆ ಯಾವ ಮಾನವಗುಂಪಿಗೂ ಇಷ್ಟೊಂದು ದಟ್ಟ ಕೂದಲಿಲ್ಲ. ಇವರ ಅಕ್ಕಪಕ್ಕಗಳಲ್ಲಿರುವ ಮಂಗೋಲಾಯ್ಡರಿಗೆ ಮೈಮೇಲೆ ಕೂದಲು ಬಲು ಕಡಿಮೆ. ಐನೂಗಳ ಭಾಷೆಗೂ ಇತರ ಭಾಷೆಗಳಿಗೂ ಯಾವ ಹೋಲಿಕೆಯೂ ಕಾಣಿಸುವುದಿಲ್ಲ. ಇವರ ಧರ್ಮ ಯುರೋಪ್ ಉತ್ತರ ಏಷ್ಯಾಗಳ ಪ್ರಾಚೀನ ಧರ್ಮಗಳೊಂದಿಗೆ ಹೋಲುವುದೆಂದು ಹೇಳಲಾಗಿದೆ. ಅನ್ನಾಮಿನ ಖಾ ಜನರ ರಕ್ತಗುಂಪು ಇವರದು. ಕಡಲು ಬಳಿಯ ಪುಟ್ಟ ಹಳ್ಳಿಗಳಲ್ಲಿ ವಾಸಿಸುವ ಈ ಜನರ ಕಸಬು ಬೇಟೆ, ಮೀನುಗಾರಿಕೆ ಮುಂತಾದವು. ಈಚೆಗೆ ತೋಟಗಾರಿಕೆಯಲ್ಲೂ ಇವರು ನಿರತರಾಗಿದ್ದಾರೆ. ಗಂಡಸರು ಗಡ್ಡಧಾರಿಗಳು. ಹೆಂಗಸರು ಬಾಯ ಸುತ್ತ ಮೀಸೆಯೋಪಾದಿಯಲ್ಲಿ ಹಚ್ಚೆ ಹೊಯ್ಯಿಸಿಕೊಳ್ಳುತ್ತಾರೆ. ಮರದ ತೊಗಟೆ ಅಥವಾ ಪ್ರಾಣಿಯ ತೊಗಲು ಇವರ ಬಟ್ಟೆ. ಇದರ ಮೇಲೆ ಜ್ಯಾಮಿತಿಯ ಚಿತ್ತಾರ. ಪ್ರಕೃತಿಯ ಆರಾಧನೆ, ಪಿತೃಪೂಜೆ, ಕರಡಿಯ ಬಲಿ–ಇವು ಇವರ ಕೆಲವು ಆಚಾರಗಳು. ಜಪಾನಿನ ಹೊಸ ಶಿಲಾಯುಗ ಸಂಸ್ಕೃತಿಯ ಜನರಿವರೆಂದು ಹೇಳಲು ಕೆಲವು ಆಧಾರಗಳಿವೆ. ಯುವ ಐನೂಗಳು ಜಪಾನೀ ಆಚಾರವಿಚಾರಗಳನ್ನು ತಮ್ಮ ಬಾಳಿನಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. (ಎಸ್.ಎನ್.)

**ಐನೇ ಅಕ್ಬರಿ:** ಅಕ್ಬರನ ಆಸ್ಥಾನದಲ್ಲಿದ್ದ ಅಬುಲ್ ಫಜ಼ಲ್ (**ನೋಡಿ– ಅಬುಲ್–ಫಜ಼ಲ್**) ಪರ್ಷಿಯನ್ ಭಾಷೆಯಲ್ಲಿ ಬರೆದ ಅಕ್ಬರ್‌ನಾಮಾ ಎಂಬ ಬೃಹದ್‌ಗ್ರಂಥದ ಐದು ಭಾಗಗಳಲ್ಲಿ ಮೂರನೆಯದು–ಅತ್ಯಂತ ಪ್ರಸಿದ್ಧವಾದದ್ದು. ಸ್ವತಂತ್ರ ಕೃತಿ ಎಂದೂ ಹೇಳಬಹುದು. ಅಕ್ಬರನ ಪ್ರೇರಣೆ, ಪ್ರೋತ್ಸಾಹ ಮತ್ತು ಆಜ್ಞೆಗನುಗುಣವಾಗಿ ಐದು ಬಾರಿ ಪರಿಷ್ಕಾರಗೊಂಡು ಈ ಕೃತಿ ಹೊರಬಂತು. ಅಬುಲ್ ಫಜ಼ಲ್ ಇತರ ಗ್ರಂಥಗಳನ್ನು

ಬರೆದಿರುವನಾದರೂ ಆತನ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿದ್ದು ಈ ಗ್ರಂಥವೇ. ಅಬುಲ್ ಫಜ಼ಲನೇ ಉಲ್ಲೇಖಿಸಿರುವಂತೆ ಆತ ಪುಸ್ತಕ ಬರೆಯಲು ಕಾರಣವೆಂದರೆ ಮಹಾನ್ ಸಾಮ್ರಾಟನೊಬ್ಬನ ಸ್ಮೃತಿಯನ್ನು ರಕ್ಷಿಸಿಡುವುದು ಮತ್ತು ಜಿಜ್ಞಾಸುಗಳಿಗೆ ಒಳ್ಳೆಯ ಮಾರ್ಗದರ್ಶನ ನೀಡುವುದು. ಮೊಗಲರ ಕಾಲದ ಇಸ್ಲಾಮೀ ಪ್ರಪಂಚದಲ್ಲಿ ಇದಕ್ಕೆ ಸಾಕಷ್ಟು ಮರ್ಯಾದೆ ದೊರಕಿತ್ತು. ಆದರೆ ವಾರೆನ್ ಹೇಸ್ಟಿಂಗ್ಸನ ಕಾಲದಲ್ಲಿ ಗ್ಲೈಡ್‌ವಿನ್ ಇದರ ಭಾಗವೊಂದನ್ನು ಇಂಗ್ಲಿಷಿಗೆ ಅನುವಾದಿಸುವವರೆಗೆ ಐರೋಪ್ಯ ವಿದ್ವಾಂಸರ ಹಾಗೂ ಭಾರತೀಯರ ಗಮನ ಇದರತ್ತ ಹರಿದಿರಲೇ ಇಲ್ಲ. ಅನಂತರ ಬ್ಲಾಕ್‌ಮನ್ (1873) ಮತ್ತು ಜ್ಯಾರಟ್ (1891; 1894) ಇದನ್ನು ಸಂಪೂರ್ಣವಾಗಿ ಭಾಷಾಂತರಿಸಿದರು.

(ಎಸ್.ಎಂ.ಎಚ್.)

ಇದನ್ನು ಮುಗಿಸಲು ಅಬುಲ್ ಫಜ಼ಲನಿಗೆ ಏಳು ವರ್ಷಗಳು ಬೇಕಾದುವು. ಕೃತಿ ಸಂಪೂರ್ಣಗೊಂಡಿದ್ದು 1598ರಲ್ಲಿ. ಮೊದಲನೆಯ ಭಾಗದಲ್ಲಿ ಸಾಮ್ರಾಟನ ಪ್ರಶಸ್ತಿ, ಅರಮನೆಗಳು ಮತ್ತು ದರಬಾರುಗಳ ವಿವರಣೆ ಇದೆ. ಎರಡನೆಯ ಭಾಗದಲ್ಲಿ ರಾಜ್ಯ ನೌಕರರು ಮತ್ತು ಸೈನಿಕರೇ ಅಲ್ಲದೆ ವಿವಾಹ ಮತ್ತು ಶೈಕ್ಷಣಿಕ ನಿಯಮಗಳು, ವಿವಿಧ ಮನೋರಂಜನೆಯ ಸಾಧನಗಳು ಮತ್ತು ರಾಜದರ್ಬಾರಿನ ಪ್ರಮುಖ ಆಶ್ರಿತರಾದ ಸಾಹಿತ್ಯಕಾರರು, ಸಂಗೀತಜ್ಞರುಗಳು ಮುಂತಾದ ವಿವರಣೆ ಇದೆ. ಮೂರನೆಯ ಭಾಗದಲ್ಲಿ ನ್ಯಾಯ ಮತ್ತು ನಿರ್ವಾಹಕ ವಿಭಾಗಗಳ ಕಾನೂನುಗಳು, ಕೃಷಿಶಾಸನದ ವಿವರಗಳು ಮತ್ತು ಹನ್ನೆರಡು ಸುಬಾಗಳ ವಿವರಗಳುಂಟು. ಹಿಂದೂಗಳ ಸಾಮಾಜಿಕ ಸ್ಥಿತಿಯ ಮತ್ತು ಅವರ ಧರ್ಮ ದರ್ಶನ ಸಂಸ್ಕೃತಿಗಳ, ವಿದೇಶೀ ಆಕ್ರಮಣಕಾರರ, ಪ್ರಮುಖ ವಿದೇಶೀ ಯಾತ್ರಿಕರ ಮತ್ತು ಮುಸಲ್ಮಾನ್ ಸಂತರ ವರ್ಣನೆಗಳನ್ನು ನಾಲ್ಕನೆಯ ಭಾಗ ಒಳಗೊಂಡಿದೆ. ಅಕ್ಬರನ ಸುಭಾಷಿತಗಳಿಗೆ ಐದನೆಯ ಭಾಗ ಮೀಸಲು. ಈ ರೀತಿಯಾಗಿ ಸಾಮ್ರಾಟ, ಸಾಮ್ರಾಜ್ಯ ಮತ್ತು ಪ್ರಜೆಗಳ ಬಗ್ಗೆ ಅನೇಕ ವಿವರಗಳನ್ನು ಒಳಗೊಂಡಿರುವ ಈ ಗ್ರಂಥದಲ್ಲಿ ಯುದ್ಧ, ರಾಜಕೀಯ ಮುಂತಾದವು ತುಂಬಿದ್ದರೂ ಪ್ರಜೆಗಳಿಗೂ ಸಾಕಷ್ಟು ಪ್ರಾಧಾನ್ಯವುಂಟು. ಹೀಗಾಗಿ ಇದನ್ನು ಆಧುನಿಕ ಭಾರತದ ಮೊದಲನೆಯ ಗೆಜ಼ೆಟಿಯರ್ ಎಂದು ಹೇಳಬಹುದು. ಅಂದಿನ ಧಾರ್ಮಿಕ ಒತ್ತಡ ಮತ್ತು ಮತಾಂಧತೆಗಳನ್ನು ಮೀರಿ ನಿಂತು, ಹಿಂದೂ ಸಮಾಜ, ಧರ್ಮ ಮತ್ತು ದರ್ಶನಗಳನ್ನು ಪ್ರಗತಿಶೀಲವೂ ಉದಾರವೂ ಆದ ದೃಷ್ಟಿಯಲ್ಲಿ ವಿವರಿಸಿರುವುದರಿಂದ ಪುಸ್ತಕದ ಮೌಲ್ಯ ಹೆಚ್ಚಿದೆ.

ಗ್ರಂಥದಲ್ಲಿ ಬರುವ ಸಾಮ್ರಾಟನ ಪ್ರಶಸ್ತಿಗಳಲ್ಲಿ ಅತಿಶಯೋಕ್ತಿ ಇದೆಯೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಗ್ರಂಥವನ್ನು ಅಕ್ಬರನ ಕಾಲದ ರಾಜಕೀಯ ಆರ್ಥಿಕ ಹಾಗೂ ಸಾಮಾಜಿಕ ಜೀವನಗಳ ಕೋಶವೆನ್ನಬಹುದು. ಇತಿಹಾಸದಲ್ಲಿ ಅಕ್ಬರನ ಸ್ಥಾನವನ್ನು ನಿರ್ದೇಶಿಸುವಲ್ಲಿ ಇದರ ಪಾತ್ರ ಬಲು ಮುಖ್ಯ. *

**ಐನ್‌ಸ್ಟೈನ್, ಆಲ್ಬರ್ಟ್:** 1879–1955. ಸೈದ್ಧಾಂತಿಕ ಭೌತವಿಜ್ಞಾನಿ. ಭೌತವಿಜ್ಞಾನದ ಮೂಲಭಾವನೆ ಮತ್ತು ತತ್ತ್ವಗಳನ್ನು ಅನೇಕ ರೀತಿಯಲ್ಲಿ ಮಾರ್ಪಡಿಸಿ ವಿಜ್ಞಾನಿಗಳ ವೈಚಾರಿಕ ಮನೋದೃಷ್ಟಿಯನ್ನೆ ಬದಲಾಯಿಸಿದ ಯುಗಪುರುಷ; ಸಾಪೇಕ್ಷ ಸಿದ್ಧಾಂತದ (ಥಿಯೊರಿ ಆಫ್ ರಿಲೆಟಿವಿಟಿ) ಮಂಡನಕಾರ; ಪರಮಾಣುಶಕ್ತಿಯ ರಹಸ್ಯವನ್ನು ಶ್ರುತಪಡಿಸಿದಾತ; ಮಾನವಕಲ್ಯಾಣದಲ್ಲಿಯೂ ವಿಶ್ವಶಾಂತಿಯಲ್ಲಿಯೂ ಅಪಾರ ಆಸಕ್ತಿ ತಳೆದಿದ್ದ ಶಾಂತಿದೂತ. ಬುದ್ಧಿಶಕ್ತಿ, ಬಹುಮುಖ ಸಂಶೋಧನ ಸಾಮರ್ಥ್ಯ, ಮೂಲಭೂತ ಪ್ರಶ್ನೆಗಳ ಬಗ್ಗೆ ಆಸಕ್ತಿ ಹಾಗೂ ಚಿಂತನ ಶಕ್ತಿ–ಇವನ್ನೆಲ್ಲ ಗಮನಿಸಿದರೆ ಈತನನ್ನು 20ನೆಯ ಶತಮಾನದ ನ್ಯೂಟನ್ ಎನ್ನಬಹುದು.

**ಬಾಲ್ಯ:** 1879 ಮಾರ್ಚ್ 14ರಂದು ಜರ್ಮನಿಯ ಸ್ವೆಬಿಯಾ ಪ್ರಾಂತ್ಯದ ಉಲ್ಮ್ ಎಂಬ ಊರಿನಲ್ಲಿ ಐನ್‌ಸ್ಟೈನ್ ಹುಟ್ಟಿದ. ಮರುವರ್ಷವೇ ಆತನ ತಂದೆ ಜೀವನೋಪಾಯಕ್ಕಾಗಿ ಈ ಊರನ್ನು ಬಿಟ್ಟು ಮ್ಯೂನಿಚ್ ನಗರ ಸೇರಬೇಕಾಯಿತು. ಅಲ್ಲಿ ತನ್ನ ತಮ್ಮನ ಸಹಾಯದಿಂದ ಒಂದು ವಿದ್ಯುದ್ರಾಸಾಯನಿಕ ಕಾರ್ಖಾನೆಯನ್ನು ಸ್ಥಾಪಿಸಿ ಅದರ ಉತ್ಪನ್ನಗಳ ಮಾರಾಟದಿಂದ ಜೀವನಕ್ಕೆ ಬೇಕಾದ ಹಣವನ್ನು ಸಂಪಾದಿಸತೊಡಗಿದ. ಹಿರಿಯ ಐನ್‌ಸ್ಟೈನ್ ಜನ್ಮತಃ ಯೆಹೂದಿ; ಧರ್ಮಸಂಪ್ರದಾಯಗಳ ವಿಷಯದಲ್ಲಿ ಈತನದು ವಿಶಾಲ ಮನೋಭಾವ. ಹೀಗಾಗಿ ಮಗನನ್ನು ಮ್ಯೂನಿಚಿನ ಕೆಥೊಲಿಕ್ ಕ್ರೈಸ್ತ ಶಾಲೆಗೆ ಸೇರಿಸುವುದರಲ್ಲಿ ಆತನಿಗೆ ಏನೂ ಅಳುಕು ಇರಲಿಲ್ಲ. ಹತ್ತು ವರ್ಷ ತುಂಬುವ ವೇಳೆಗೆ ಈ ಅಣುಗನ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಯಿತು. ಮುಂದೆ ಅದೇ ನಗರದ ಜಿಮ್ನಾಸಿಯಂನಲ್ಲಿ (ಅಂದಿನ ವಿವಿಧೋದ್ದೇಶ ಶಾಲೆಗಳ ಹೆಸರು) ತನ್ನ ವ್ಯಾಸಂಗವನ್ನು ಮುಂದುವರಿಸಿದ. ಈ ಶಾಲೆಗಳಲ್ಲಿ ಅನುಸರಿಸುತ್ತಿದ್ದ ಪಠ್ಯಕ್ರಮ, ಬೋಧನವಿಷಯ ಐನ್‌ಸ್ಟೈನನಿಗೆ ಅಷ್ಟಾಗಿ ರುಚಿಸಲಿಲ್ಲ. ಕೆಲವು ವೇಳೆ ಬೇಸರವೇ ಆಗುತ್ತಿತ್ತು. ಆದ್ದರಿಂದ ಶಾಲೆಯಲ್ಲಿ ಇತರರಂತೆಯೇ ಅವನು ಸಾಧಾರಣ ವಿದ್ಯಾರ್ಥಿಯಾಗಿಯೇ ಉಳಿದ. ಆದರೆ ಸ್ವಭಾವತಃ ಈತ ಬಲು ಕುತೂಹಲಿ. ಸ್ವತಃ ಅನೇಕ ವಿಷಯಗಳನ್ನು ಅರಿಯಲು ಪ್ರಯತ್ನಪಟ್ಟ. ಇಲ್ಲಿ ಅವನಿಗೆ ವಿಶೇಷ ಸಹಕಾರ ದೊರೆತದ್ದು ಅವನ ಚಿಕ್ಕಪ್ಪನಿಂದ. ಗಣಿತವಿಜ್ಞಾನದ ವಿಭಾಗಗಳಾದ ಬೀಜರೇಖಾಗಣಿತ ಹಾಗೂ ಅವಕಲನಶಾಸ್ತ್ರಗಳನ್ನು ಈತನಿಂದ ಕಲಿತದ್ದು ಮಾತ್ರವಲ್ಲ, ಅವುಗಳಲ್ಲಿ ಸಾಕಷ್ಟು ಪ್ರೌಢಿಮೆಯನ್ನೂ ಸಹ ಐನ್‌ಸ್ಟೈನ್ ಗಳಿಸಿಕೊಂಡ. ವಿಜ್ಞಾನದ ವಿವಿಧ ವಿಭಾಗಗಳು, ಹಳೆಯ ಮತ ಗ್ರಂಥಗಳು, ಸಾಹಿತ್ಯ, ವಯೊಲಿನ್ ಇಲ್ಲೆಲ್ಲ ಈತನ ಬಲು ಚುರುಕಾದ ಮನಸ್ಸು ವ್ಯಾಪಕವಾಗಿ ಹರಿಯಿತು. ಮನಸ್ಸು ವ್ಯಾಕುಲಗೊಂಡಾಗ ಅದನ್ನು ಮರೆಯಲು ವಯೊಲಿನ್ ವಾದನದಲ್ಲಿ ತಲ್ಲೀನತೆ ಪಡೆಯುತ್ತಿದ್ದ.

**ವಿದ್ಯೆ:** 1894ರಲ್ಲಿ ಐನ್‌ಸ್ಟೈನನ ತಂದೆತಾಯಿಯರು ಮ್ಯೂನಿಚ್ ನಗರವನ್ನು ತೊರೆದು ಇಟಲಿ ದೇಶದ ಮಿಲಾನ್ ನಗರವನ್ನು ಸೇರಿದರು. ಕಿರಿಯ ಐನ್‌ಸ್ಟೈನ್ ವಿದ್ಯಾಭ್ಯಾಸದ ಪ್ರಯುಕ್ತ ಮ್ಯೂನಿಚಿನಲ್ಲಿಯೇ ಉಳಿಯಬೇಕಾಯಿತು. ಆದರೆ ಈ ಏರ್ಪಾಡು ಬಲುಕಾಲ ಸುಗಮವಾಗಿ ಸಾಗಲಿಲ್ಲ. ಉಳಿದಿದ್ದ ಮಾರ್ಗ ಒಂದೇ–ಜ್ಯೂರಿಕ್ ನಗರದ ಸ್ವಿಸ್ ಪಾಲಿಟೆಕ್ನಿಕನ್ನು ಸೇರುವುದು. ಇವನಿಗಾಗ 15 ವರ್ಷ ಪ್ರಾಯ. ಈತ ಗಣಿತವಿಜ್ಞಾನದಲ್ಲಿ ಮಾತ್ರ ಅಸಾಮಾನ್ಯ



ವಿದ್ವತ್ತು ಗಳಿಸಿದ್ದ. ನಿಜ; ಆದರೆ ಇತರ ವಿಷಯಗಳಲ್ಲಿ ಸಾಕಷ್ಟು ಪರಿಣತನಾಗಿರದಿದ್ದುದರಿಂದ ಸ್ವಿಸ್ ಪಾಲಿಟೆಕ್ನಿಕನ್ನು ಸೇರಲು ಮಾಡಿದ ಪ್ರಥಮ ಪ್ರಯತ್ನ ಸಫಲವಾಗಲಿಲ್ಲ. ಮುಂದಿನ ವರ್ಷ (1896) ಇಲ್ಲಿ ಜಯ ಸಿದ್ಧಿಸಿತು. ಪಾಲಿಟೆಕ್ನಿನಲ್ಲಿ ಗಣಿತ ಹಾಗೂ ಭೌತ ವಿಜ್ಞಾನಗಳನ್ನು ಐಚ್ಛಿಕ ವಿಷಯಗಳಾಗಿ ಆರಿಸಿಕೊಂಡ.

ವಿದ್ಯಾಸಂಸ್ಥೆಯೇನೋ ಬದಲಾಯಿತು; ಆದರೆ ಹಾಡು ಹಿಂದಿನದೇ–ಬೋಧನ ವಿಷಯಗಳಲ್ಲಿ ಹಿರಿಮೆ ಇರಲಿಲ್ಲ, ಬೋಧನ ವಿಧಾನದಲ್ಲಿ ರಸವಿರಲಿಲ್ಲ. ಸಾಕಷ್ಟು ವಿರಾಮ ಲಭಿಸುತ್ತಿದ್ದುದೊಂದು ಅನುಕೂಲ. ಇದರಿಂದ ಸ್ವತಂತ್ರ ವ್ಯಾಸಂಗ ಮತ್ತು ಚಿಂತನೆಗಳಿಗೆ ಧಾರಾಳವಾದ ಅವಕಾಶ ದೊರೆಯಿತು. ಬೋಲ್ಟ್ಸ್‌ಮನ್, ಮ್ಯಾಕ್ಸ್‌ವೆಲ್, ಹೆಲ್ಮ್‌ಹೋಲ್ಟ್ಸ್, ಹರ್ಟ್ಸ್ ಮುಂತಾದ ಉದ್ದಾಮ ವಿಜ್ಞಾನಿಗಳ ಗ್ರಂಥಗಳನ್ನೂ ಸಂಶೋಧನ ಲೇಖನಗಳನ್ನೂ ವಿದ್ಯಾರ್ಥಿ ಐನ್‌ಸ್ಟೈನ್ ಸ್ವತಂತ್ರವಾಗಿ ಅಭ್ಯಸಿಸಿ ಗಹನಪಾಂಡಿತ್ಯ ಸಂಪಾದಿಸಿದ. ಮ್ಯಾಕ್ಸ್‌ವೆಲ್ಲನ ಕ್ಷೇತ್ರ ಸಿದ್ಧಾಂತ ಇವನ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿದ್ದು ಮಾತ್ರವಲ್ಲ, ಭೌತಶಾಸ್ತ್ರದ ಸಿದ್ಧಾಂತಗಳ ಬಗ್ಗೆ ಈತನ ದೃಷ್ಟಿಕೋನವನ್ನೇ ಬದಲಾಯಿಸಿತು. ಮ್ಯಾಕ್ಸ್‌ವೆಲ್ ತನ್ನ ಸಿದ್ಧಾಂತದಲ್ಲಿ ಕ್ಷೇತ್ರದ ಭಾವನೆಗೆ ಆದ್ಯತೆ ನೀಡಿದ್ದನಲ್ಲದೆ ಅದರ ಆಧಾರದ ಮೇಲೆ ಎಲ್ಲ ಕ್ರಿಯೆಗಳನ್ನೂ ವಿವರಿಸುವ ಪ್ರಯತ್ನ ಮಾಡಿದ್ದ. ಆ ದಿವಸಗಳಲ್ಲಿ ಐನ್‌ಸ್ಟೈನನಿಗೆ ವಿಖ್ಯಾತ ಗಣಿತವಿಜ್ಞಾನಿ ಮಿಂಕೊವಿಸ್ಕಿಯ ಪರಿಚಯ ಲಾಭವಾಯಿತು. ಈತ ಮುಂದೆ ವಿಶಿಷ್ಟ ಸಾಪೇಕ್ಷ ಸಿದ್ಧಾಂತಕ್ಕೆ (ಸ್ಪೆಷಲ್ ಥಿಯೊರಿ ಆಫ್ ರಿಲೆಟಿವಿಟಿ) ಒಂದು ಪರ್ಯಾಯ ವ್ಯಾಖ್ಯೆಯನ್ನೇ ನೀಡಿದ ಮಹಾಮೇಧಾವಿ.

**ಉದ್ಯೋಗ:** ಪಾಲಿಟೆಕ್ನಿಕ್ ವ್ಯಾಸಂಗ ಮುಗಿಯುವಾಗ ಐನ್‌ಸ್ಟೈನನ ಪ್ರಾಯ ಇಪ್ಪತ್ತು ವರ್ಷ. ಮುಂದೆ ಜೀವನ ನಿರ್ವಹಣೆ ನಡೆಯಲು ಸಂಪಾದನೆ ಅಗತ್ಯವಾಗಿತ್ತು. ಸ್ವಲ್ಪ ಕಾಲ ಉಪಾಧ್ಯಾಯ ವೃತ್ತಿಯನ್ನು ಹಿಡಿದ. 1902ರಲ್ಲಿ ಬರ್ನ್ ಪಟ್ಟಣದಲ್ಲಿ ಏಕಸ್ವ ಕಚೇರಿಯಲ್ಲಿ (ಪೇಟೆಂಟ್ ಆಫೀಸ್) ಏಕಸ್ವ ಪರೀಕ್ಷಕನಾಗಿ ನೇಮಕಗೊಂಡ. ಅಲ್ಲಿ ವಿಶೇಷ ಕೆಲಸವಿಲ್ಲದಿದ್ದುದರಿಂದ ಐನ್‌ಸ್ಟೈನನಿಗೆ ತನ್ನ ವ್ಯಾಸಂಗವನ್ನು ಯಾವ ಅಡಚಣೆಯೂ ಇಲ್ಲದೆ ಮುಂದುವರಿಸಲು ಅನುಕೂಲವಾಯಿತು.

ಇದೇ ವೇಳೆಗೆ ಆ ಮೊದಲು ಜ್ಯೂರಿಕ್ ಪಾಲಿಟೆಕ್ನಿಕಿನಲ್ಲಿ ತನ್ನ ಸಹಪಾಠಿಯಾಗಿದ್ದ ಮಿಲೇವಮ್ಯೂಟ್ರಿಷ್ ಎಂಬಾಕೆಯನ್ನು ಮದುವೆಯಾದ. ಆಕೆಯೂ ಭೌತವಿಜ್ಞಾನದಲ್ಲಿ ಆಸಕ್ತಳಾಗಿದ್ದುದೇ ಮದುವೆಗೆ ಮುಖ್ಯ ಕಾರಣ. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಆದರೆ ದಾಂಪತ್ಯಜೀವನ ಮೊದಲು ನಿರೀಕ್ಷಿಸಿದಷ್ಟು ತೃಪ್ತಿಕರವಾಗಿ ಸಾಗಲಿಲ್ಲ. ಗಂಡಹೆಂಡಿರ ಮನೋದೃಷ್ಟಿ ಅನೇಕ ರೀತಿಯಲ್ಲಿ ಸರಿ ಹೊಂದದೆ ಕಾಲಕ್ರಮೇಣ ಸಂಸಾರದಲ್ಲಿ ಅಹಿತ ವಾತಾವರಣವೇರ್ಪಟ್ಟಿತು. ಆದರೆ ಐನ್‌ಸ್ಟೈನ್ ತನ್ನ ಸಂಶೋಧನ ಕಾರ್ಯಗಳಲ್ಲಿಯೇ ನಿರತನಾಗಿ ಇದನ್ನು ಮರೆಯುತ್ತಿದ್ದ.

**ಸಾಪೇಕ್ಷವಾದ:** ದಿನಗಳು ಕಳೆದಂತೆ ಐನ್‌ಸ್ಟೈನ್‌ನ ಸಂಶೋಧನೆ ಮತ್ತು ಚಿಂತನೆ ಹೆಚ್ಚು ಹೆಚ್ಚು ಭರದಿಂದ ಮುಂದುವರಿದುವು. 1905ರಲ್ಲಿ ಮಹತ್ತ್ವಪೂರಿತವಾದ ನಾಲ್ಕು ಸಂಶೋಧನ ಲೇಖನಗಳನ್ನು ಪ್ರಕಟಿಸಿದ. ಇವುಗಳಲ್ಲಿ ಎರಡು ವಿಶಿಷ್ಟ ಸಾಪೇಕ್ಷ ಸಿದ್ಧಾಂತಕ್ಕೆ

ಸಂಬಂಧಿಸಿದವು; ಉಳಿದೆರಡು ಕ್ರಮವಾಗಿ ಬ್ರೌನಿಯನ್ ಚಲನೆ ಮತ್ತು ದ್ಯುತಿವಿದ್ಯುತ್ಕ್ರಿಯೆಗಳಿಗೆ ಸಂಬಂಧಿಸಿದವು. ಈ ಲೇಖನಗಳಿಂದ ಐನ್‌ಸ್ಟೈನ್ ಜಗದ್ವಿಖ್ಯಾತನಾದ. ಇವುಗಳಿಂದ ಅವನಿಗೆ ಲಭಿಸಿದ ಗೌರವ ಪರಂಪರೆಗಳಲ್ಲಿ ಹೆಸರಾಂತವು–ಜ್ಯೂರಿಕ್ ವಿಶ್ವವಿದ್ಯಾನಿಲಯ ನೀಡಿದ ಡಾಕ್ಟರೇಟ್ ಪದವಿ ಮತ್ತು 1910–11ರಲ್ಲಿ ಅದೇ ವಿಶ್ವವಿದ್ಯಾನಿಲಯ ನೀಡಿದ ಭೌತವಿಜ್ಞಾನ ಪ್ರಾಧ್ಯಾಪಕತ್ವದ ಆಹ್ವಾನ. ಐನ್‌ಸ್ಟೈನ್ ಇದನ್ನು ಸ್ವೀಕರಿಸಿದ. 1911ರಲ್ಲಿ ವಿಸ್ತೃತ ಸಾಪೇಕ್ಷ ಸಿದ್ಧಾಂತದ (ಜನರಲ್ ರಿಲೆಟಿವಿಟಿ) ಮೊದಲ ಹಂತವೆಂದು ಪರಿಗಣಿಸಬಹುದಾದ ಗುರುತ್ವತೂಕ ಮತ್ತು ಜಡತ್ವತೂಕಗಳ ಸಾಮ್ಯಕ್ಕೆ ಸಂಬಂಧಿಸಿದಂತೆ ಒಂದು ಮುಖ್ಯ ಲೇಖನವನ್ನು ಪ್ರಕಟಿಸಿದ. 1914ರಲ್ಲಿ ಅಂದರೆ ಮೊದಲ ಮಹಾಯುದ್ಧ ಪ್ರಾರಂಭಕ್ಕೆ ಸ್ವಲ್ಪ ಮುಂಚೆ ಬರ್ಲಿನ್ನಿನ ಪ್ರಷ್ಯನ್ ವಿಜ್ಞಾನ ಅಕಾಡೆಮಿ ಐನ್‌ಸ್ಟೈನನನ್ನು ಅದರ ಭೌತವಿಜ್ಞಾನ ಸಂಸ್ಥೆಯ ನಿರ್ದೇಶಕನನ್ನಾಗಿ ನೇಮಿಸಿ ಅವನಿಗೆ ಆಹ್ವಾನವನ್ನು ಕಳುಹಿಸಿತು. ಅದನ್ನು ಸ್ವೀಕರಿಸಿದ ಅವನು ಬರ್ಲಿನ್ ನಗರವನ್ನು ಸೇರಿದ. ಇಲ್ಲಿ ಅವನ ಸಂಶೋಧನೆಗಳು ಮುಂದುವರಿದುವು. ವಿಸ್ತೃತ ಸಾಪೇಕ್ಷಸಿದ್ಧಾಂತಕ್ಕೆ ಸಂಬಂಧಿಸಿದ ಲೇಖನಗಳನ್ನು 1915–16 ರಲ್ಲಿಯೂ ವ್ಯಾಪಕವಾದ ಈ ಸಿದ್ಧಾಂತದಿಂದ ವಿಶ್ವ ರಚನೆ ಮತ್ತು ಸ್ವರೂಪಕ್ಕೆ ಸಂಬಂಧಪಟ್ಟಂತೆ ಲಭಿಸುವ ತೀರ್ಮಾನಗಳನ್ನು 1917ರಲ್ಲಿಯೂ ಪ್ರಕಟಿಸಿದ.

ಬರ್ಲಿನ್ ನಗರಕ್ಕೆ ಬಂದು ನೆಲೆಸಿದ ತರುವಾಯವೂ ಐನ್‌ಸ್ಟೈನನ ದಾಂಪತ್ಯ ಜೀವನ ಸುಖಮಯವಾಗಿರಲಿಲ್ಲ. ಮನೆಯ ವಾತಾವರಣ ಇನ್ನಷ್ಟು ಕಹಿಯಾಯಿತು. ಬೇರೆ ಮಾರ್ಗವಿಲ್ಲದೆ 1919ರಲ್ಲಿ ಮೊದಲ ವಿವಾಹವನ್ನು ವಿಚ್ಛೇದಿಸಿ ಅದೇ ವರ್ಷ ತನ್ನ ಸೋದರಮಾವನ ಮಗಳಾದ ಎಲ್ಸಾಳನ್ನು ಮದುವೆಯಾದ.



ಓಪೆನ್‌ಹೀಮರನೊಡನೆ ಐನ್‌ಸ್ಟೈನ್

ಮೊದಲನೆಯ ಮಹಾಯುದ್ಧ ಮುಗಿಯಿತು. ಸಾರಿಗೆ ಸಂಪರ್ಕ ಸುಗಮವಾದದ್ದರಿಂದ ಐನ್‌ಸ್ಟೈನ್ ಬ್ರಿಟನ್ ಮತ್ತು ಅಮೆರಿಕ ದೇಶಗಳಿಗೆ ಭೇಟಿಯಿತ್ತು ಬರ್ಲಿನಿಗೆ ಮರಳಿದ. ಈ ವೇಳೆಗಾಗಲೇ ಆತನ ಕೀರ್ತಿ ಎಲ್ಲೆಲ್ಲಿಯೂ ಹರಡಿ ಅವನಿಗೆ ಅನೇಕ ರೀತಿಯ ಅಧಿಕ ಗೌರವ ಮನ್ನಣೆಗಳು ದೊರೆತವು. ದ್ಯುತಿ ವಿದ್ಯುತ್ಕ್ರಿಯೆ ಮತ್ತು ತಾತ್ತ್ವಿಕ ಭೌತವಿಜ್ಞಾನಗಳಿಗೆ ಸಂಬಂಧಿಸಿದ ಆತನ ಸಂಶೋಧನೆಗಳನ್ನು ಗಮನಿಸಿದ ಸ್ವೀಡಿಷ್ ರಾಯಲ್ ವಿಜ್ಞಾನ ಸಂಸ್ಥೆ 1921ರಲ್ಲಿ, ವಿಜ್ಞಾನಪ್ರಪಂಚದಲ್ಲಿ ಅತ್ಯಂತ ಗೌರವಪೂರ್ವಕವಾದ ನೊಬೆಲ್ ಪಾರಿತೋಷಕವನ್ನು ನೀಡಿತು. ಮರುವರ್ಷ ಲೀಗ್ ಆಫ್ ನೇಷನ್ಸ್ ಸಂಸ್ಥೆಯ ಬೌದ್ಧಿಕ ಸಹಕಾರ ಸಂಘದ ಸದಸ್ಯನಾಗಿ ಚುನಾವಣೆಗೊಂಡ.

ಯೆಹೂದಿಗಳಿಗೆ ಪವಿತ್ರವಾದ ಪ್ಯಾಲೆಸ್ಟೈನ್ ದೇಶವನ್ನು ಐನ್‌ಸ್ಟೈನ್ ಸಂದರ್ಶಿಸಿದ್ದು 1922ರಲ್ಲಿ. ಅಲ್ಲಿನ ಪರಿಸ್ಥಿತಿಗಳ ಪರಿಶೀಲನೆಯಿಂದ ಅಲ್ಲೊಂದು ಯೆಹೂದಿ ರಾಷ್ಟ್ರವನ್ನು ಸ್ಥಾಪಿಸುವುದೇ ವಿಶ್ವ ಯೆಹೂದಿ ಪ್ರಶ್ನೆಗೆ ಸರಿಯಾದ ಪರಿಹಾರವೆಂಬ ತೀರ್ಮಾನಕ್ಕೆ ಬಂದ. ಸಹಜವಾಗಿಯೇ ಈ ಗುರಿಯನ್ನು ಸಾಧಿಸಲು ಹೋರಾಡುತ್ತಿದ್ದ ಸಯೋನಿಸ್ಟ್ ಚಳವಳಿಗೆ ತನ್ನ ಬೆಂಬಲ ನೀಡಿದ. ಆದರೆ ಈ ಯೆಹೂದಿ ರಾಷ್ಟ್ರ ಯಾವ ರೀತಿಯ ಸಂಕುಚಿತ ಭಾವನೆಯನ್ನೂ ಹೊಂದಿರಬಾರದು, ಪ್ಯಾಲೆಸ್ಟೈನ್ ಅರಬ್ಬರಿಗೂ ಈ ರಾಷ್ಟ್ರಗಳಲ್ಲಿ ಸಮಾನಸ್ಥಾನವಿರಬೇಕು, ಯೆಹೂದಿಗಳು ಮತ್ತು ಅರಬ್ಬರು ಸೌಹಾರ್ದದಿಂದ ಒಟ್ಟಿಗೆ ಬಾಳಬೇಕು–ಎಂಬ ತನ್ನ ಖಚಿತ ಅಭಿಪ್ರಾಯಗಳನ್ನು ಚಳವಳಿಯ ಮುಖಂಡನಾದ ವೀಸ್‌ಮನನಿಗೆ ಸ್ಪಷ್ಟವಾಗಿ ತಿಳಿಸಿದ. ಇದೇ ಅಭಿಪ್ರಾಯಗಳನ್ನು ಅನೇಕ ಸಾರ್ವಜನಿಕ ಸಭೆಗಳಲ್ಲೂ ವ್ಯಕ್ತಪಡಿಸಿದ.

ವಿಸ್ತೃತ ಸಾಪೇಕ್ಷಸಿದ್ಧಾಂತ ಅಸ್ತಿತ್ವಕ್ಕೆ ಬಂದು ಅನೇಕ ರೀತಿಯಲ್ಲಿ ಸಮರ್ಥಿತವಾದ ಮೇಲೆ ಐನ್‌ಸ್ಟೈನ್ ತನ್ನ ಸಂಶೋಧನೆಗಳನ್ನು ಮುಂದುವರಿಸಿ ಸಮಗ್ರ ಅಥವಾ ಏಕೀಕೃತ ಕ್ಷೇತ್ರಸಿದ್ಧಾಂತವನ್ನು ನಿರ್ಮಿಸುವ ಪ್ರಯತ್ನಗಳನ್ನು ಕೈಗೊಂಡ. ಈ ದಿಕ್ಕಿನಲ್ಲಿ ಸಂಶೋಧನೆಗಳೇನೊ ಮುಂದುವರಿಯುತ್ತಿದ್ದುವು. ಆದರೆ ದೇಶದಲ್ಲಿ ನಾಜಿಗಳ ದೌರ್ಜನ್ಯ ಮತ್ತು ಹಿಂಸಾಕೃತ್ಯಗಳ ವಿರೋಧಿಗಳ ಬಗ್ಗೆ ಅವರ ಅಪಪ್ರಚಾರ, ಯೆಹೂದಿಗಳ ಬಗ್ಗೆ ದ್ವೇಷ ಇವೆಲ್ಲ ದಿನೇ ದಿನೇ ಹೆಚ್ಚುತ್ತ ಬಂದು ರಾಜಕೀಯ ವಾತಾವರಣ ಬಲುಮಟ್ಟಿಗೆ ಹದಗೆಟ್ಟಿತು. ವಿಶ್ವವಿದ್ಯಾನಿಲಯಗಳಲ್ಲಿ ಕೂಡ ಬೌದ್ಧಿಕ ವಾತಾವರಣ ಬಲುಮಟ್ಟಿಗೆ ಕಲುಷಿತವಾಯಿತು. 1930–32 ಅಮೆರಿಕಕ್ಕೆ ಎರಡು ಸಲ ಭೇಟಿಕೊಟ್ಟು ಹಿಂತಿರುಗಿದ ಅನಂತರ ಇನ್ನು ಹೆಚ್ಚು ಕಾಲ ಜರ್ಮನಿಯಲ್ಲಿ ತಾನಿರುವುದು ಸಾಧ್ಯವಿಲ್ಲ, ಹಾಗೆ ಇರುವುದು ಕ್ಷೇಮಕರವೂ ಅಲ್ಲ ಎಂಬುದು ಸ್ಪಷ್ಟವಾಯಿತು. ಭಾರವಾದ ಹೃದಯದಿಂದ ಜರ್ಮನಿ ದೇಶವನ್ನು ತೊರೆಯಬೇಕಾಯಿತು. ಆಗ ಐನ್‌ಸ್ಟೈನನನ್ನು ಪ್ರೀತಿವಿಶ್ವಾಸಗಳಿಂದ ಸ್ವಾಗತಿಸಿದ್ದು (1935) ಅಮೆರಿಕ ದೇಶ. ಅಲ್ಲಿನ ವಿಜ್ಞಾನಿಗಳು ಮತ್ತು ಸರ್ಕಾರ ಈತನನ್ನು ಬಹಳ ಗೌರವದಿಂದ ಬರಮಾಡಿಕೊಂಡರು. ಪ್ರಿನ್ಸ್‌ಟನ್ನಿನಲ್ಲಿರುವ ಪ್ರೌಢವ್ಯಾಸಂಗ ಸಂಸ್ಥೆಯ ಆಜೀವಾಂತ ಸದಸ್ಯನಾಗಿ ಈತನನ್ನು ನೇಮಿಸಿದ್ದು ಮಾತ್ರವಲ್ಲ, ಸಂಶೋಧನೆಯನ್ನು ಮುಂದುವರಿಸಲು ಬೇಕಾಗುವ ಸಕಲ ಸೌಕರ್ಯಗಳನ್ನೂ ಒದಗಿಸಿಕೊಟ್ಟರು. ಪ್ರತಿಭೆಯ ವಿಕಾಸ ನಿರ್ವಿಘ್ನವಾಗಿ ಮುಂದುವರಿಯಲು ಅವಕಾಶ ಒದಗಿತು. ಐನ್‌ಸ್ಟೈನನ ಉಳಿದ ಜೀವನಾವಧಿ ಕಳೆದದ್ದು ಇಲ್ಲಿಯೇ. 1940ರಲ್ಲಿ ಈತನನ್ನು ಅಮೆರಿಕ ದೇಶ ತನ್ನ ಪ್ರಜೆಯಾಗಿ ಸ್ವೀಕರಿಸಿತು.

ಈ ಮಧ್ಯೆ 1939ನೆಯ ಸೆಪ್ಟೆಂಬರಿನಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. ಇಷ್ಟರಲ್ಲೇ ಯುರೋಪಿನ ಅನೇಕ ಪ್ರಮುಖ ವಿಜ್ಞಾನಿಗಳು ನಾಜಿ ಮತ್ತು ಫಾಸಿಸ್ಟ್ ದೌರ್ಜನ್ಯಗಳಿಂದ ತಪ್ಪಿಸಿಕೊಂಡು ಅಮೆರಿಕದಲ್ಲಿ ಬಂದು ನೆಲೆಸಿದರು. ಇವರು ಮತ್ತು ಅಮೆರಿಕದ ಕೆಲವು ಪ್ರಮುಖ ವಿಜ್ಞಾನಿಗಳು ಅಂದಿನ ಅಂತಾರಾಷ್ಟ್ರೀಯ ಪರಿಸ್ಥಿತಿಯನ್ನು ಗಮನಿಸಿ ಎಲ್ಲ ದೃಷ್ಟಿಯಿಂದಲೂ ಅಮೆರಿಕ ದೇಶ ಪರಮಾಣುಬಾಂಬು ತಯಾರಿಕೆಯ ದಿಕ್ಕಿನಲ್ಲಿ ಪ್ರಯತ್ನವನ್ನು ಪ್ರಾರಂಭಿಸುವುದು ಒಳ್ಳೆಯದೆಂಬ ತೀರ್ಮಾನಕ್ಕೆ ಬಂದರು. ತಮ್ಮ ಸಲಹೆಗಳ ಪರವಾಗಿ ಅಧ್ಯಕ್ಷ ರೂಸ್‌ವೆಲ್ಟ್‌ರವರಿಗೆ ಐನ್‌ಸ್ಟೈನ್ ಕಾಗದ ಬರೆಯುವಂತಾದರೆ ತಮ್ಮ ಪ್ರಯತ್ನ ಸಫಲವಾಗುವುದೆಂದು ಫರ್ಮಿ, ಸಿಲಾರ್ಡ್, ಟೆಲ್ಲರ್ ಮುಂತಾದ ಅನೇಕ ಪ್ರಮುಖ ವಿಜ್ಞಾನಿಗಳು ಭಾವಿಸಿದರು. ತಮ್ಮ ಸಲಹೆಗಳನ್ನು ಐನ್‌ಸ್ಟೈನನಿಗೆ ವಿವರಿಸಿ ಈ ಬಗ್ಗೆ ಅಧ್ಯಕ್ಷರಿಗೆ ತಮ್ಮೆಲ್ಲರ ಪರವಾಗಿ ಕಾಗದವೊಂದನ್ನು ಬರೆಯಬೇಕೆಂದು ಮನವಿ ಮಾಡಿಕೊಂಡಾಗ ಸ್ವಭಾವತಃ ಶಾಂತಿಪ್ರಿಯ ಹಾಗೂ ಶಾಂತಿವಾದಿಯಾದ ಈತ ಒಂದು ಧರ್ಮಸಂಕಟದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಆದರೆ ಅಂದಿನ ಸಮಯ ಸಂದರ್ಭಗಳನ್ನೆಲ್ಲ ಕೂಲಂಕಷವಾಗಿ ಪರ್ಯಾಲೋಚಿಸಿ ಪರಮಾಣು ಬಾಂಬು ತಯಾರಿಕೆ ಪ್ರಯತ್ನವನ್ನು ಅಮೆರಿಕ ಕೈಗೊಳ್ಳುವುದು ಎಲ್ಲ ಜನರ ಹಿತ ದೃಷ್ಟಿಯಿಂದಲೂ ಸರಿ ಎಂಬ ತೀರ್ಮಾನಕ್ಕೆ ಆತ ಬಂದ. ಇದಲ್ಲದಿದ್ದರೆ ನಾಜ಼ಿ ಜರ್ಮನಿ ಈ ಸಿದ್ಧಿ ಪಡೆಯುವುದು ನಿಶ್ಚಯ, ಇದರಿಂದ ಪ್ರಪಂಚವಿನಾಶ ಕಟ್ಟಿಟ್ಟದ್ದು ಎಂಬುದು ಆತನ ಮನಸ್ಸಿನ ಹಿನ್ನೆಲೆಯಲ್ಲಿದ್ದ ಭಾವ. ವಿಜ್ಞಾನಿಗಳ ಪರವಾಗಿ ಅಧ್ಯಕ್ಷ ರೂಸ್‌ವೆಲ್ಟರಿಗೆ ಕಾಗದ ಬರೆದು ಬಹುಶಃ ಈಗಾಗಲೇ ಜರ್ಮನಿ ಈ ದಿಕ್ಕಿನಲ್ಲಿ ಪ್ರಯತ್ನಗಳನ್ನು ಕೈಗೊಂಡು ಮುಂದುವರಿದಿರಬಹುದೆಂದೂ ಅಮೆರಿಕ ಯೋಗ್ಯ ಪ್ರಯತ್ನಗಳನ್ನು ಕೈಗೊಳ್ಳದಿದ್ದಲ್ಲಿ ಮುಂದೆ ವಿಪರೀತ ಅನಾಹುತಕ್ಕೆ ಎಡೆಯಾಗುವುದೆಂದೂ ಸ್ಪಷ್ಟವಾಗಿ ತಿಳಿಸಿದ.

ಈ ಕಾಗದವನ್ನು ಅಪಾರ್ಥಮಾಡಿಕೊಂಡ ಅನೇಕರು ಐನ್‌ಸ್ಟೈನನನ್ನು ಬಲುಕಟುವಾಗಿ ಟೀಕಿಸಿ ಪರಮಾಣು ಬಾಂಬಿನ ತಯಾರಿಕೆಯ ನೈತಿಕ ಜವಾಬ್ದಾರಿ ಆತನದೇ ಎಂದು ತೀವ್ರ ವಾಗಿ ದೂಷಿಸಿದ್ದಾರೆ. ಈ ಟೀಕೆಗಳಿಗೆ ಉತ್ತರವಾಗಿ ಜಪಾನ್ ದೇಶದ ಪತ್ರಿಕಾ ಸಂಪಾದಕ ರೊಬ್ಬರಿಗೆ ಬರೆದ ಪತ್ರದಲ್ಲಿ ಐನ್‌ಸ್ಟೈನ್ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದಾನೆ. ಶಾಂತಿಸ್ಥಾಪನೆ ಮತ್ತು ಶಾಂತಿಪಾಲನೆಯಲ್ಲಿ ತನಗೆ ಅಚಲವಾದ ನಂಬಿಕೆ ಇರುವುದಾದರೂ ಜನಜೀವನವನ್ನೇ ಹಾಳು ಮಾಡುವ ದುರುದ್ದೇಶವುಳ್ಳ ರಾಕ್ಷಸೀಬಲಗಳನ್ನು ಎದುರಿಸುವಾಗ ಎಲ್ಲ ವಿಧವಾದ ಅಸ್ತ್ರಗಳನ್ನೂ ಬಳಸುವುದು ಅನಿವಾರ್ಯವೆಂಬ ಅಂಶ ಆ ಪತ್ರದಲ್ಲಿ ನಿರೂಪಿತವಾಗಿದೆ.

ಪ್ರಿನ್ಸ್‌ಟನ್ನಿನ ಪ್ರಶಾಂತ ಬೌದ್ಧಿಕ ವಾತಾವರಣದಲ್ಲಿ ಐನ್‌ಸ್ಟೈನನ ಸಂಶೋಧನೆ ಮತ್ತು ಚಿಂತನೆಗಳು ಮುಂದುವರಿದುವು. ಏಕೀಕೃತ ಕ್ಷೇತ್ರಸಿದ್ಧಾಂತವೊಂದನ್ನು ನಿರ್ಮಿಸುವ ಆಶಯದಿಂದ 1920ರಲ್ಲೇ ಪ್ರಾರಂಭಿಸಿದ್ದ ಪ್ರಯತ್ನಗಳನ್ನು ಮುಂದುವರಿಸಿ 1949ರಲ್ಲಿ ಹೊಸ ಏಕೀಕೃತ ಕ್ಷೇತ್ರಸಿದ್ಧಾಂತವನ್ನು ಪ್ರಕಟಿಸಿದ. ಈ ಸಿದ್ಧಾಂತವನ್ನು ಪುನಃ ಪರಿಷ್ಕರಿಸಿ ಪರಿಷ್ಕೃತ ಸಿದ್ಧಾಂತವನ್ನು 1952ರಲ್ಲಿ ಪ್ರಕಟಿಸಿದ. ಇದು ಅತಿ ಕ್ಲಿಷ್ಟವಾದ ಸಿದ್ಧಾಂತ. ಇದನ್ನು ಈವರೆಗೂ ಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಎಲ್ಲ ವಿಧವಾದ ಮೂಲ ಘಟನೆಗಳನ್ನೂ ವಿವರಿಸಬಹುದಾದ ಏಕೈಕ ಸಮಗ್ರ ಸಿದ್ಧಾಂತವನ್ನು ನಿರ್ಮಿಸುವುದು ಅಗತ್ಯ ಮತ್ತು ಸಾಧ್ಯ ಎಂದು ನಂಬಿದ್ದ ಐನ್‌ಸ್ಟೈನ್ ಕೊನೆಯವರೆಗೂ ತನ್ನ ಪ್ರಯತ್ನವನ್ನು ಮುಂದುವರಿಸಿದ. ಆದರೆ ಇದು ಸಫಲವಾಗುವ ಮುನ್ನವೇ ವಿಧಿವಶನಾದ (1955). ಅಂದು ಅರ್ಧ ಶತಮಾನಕಾಲ ಸತತವಾಗಿ ಸತ್ಯಾನ್ವೇಷಣೆಯಲ್ಲಿ ತೊಡಗಿ ಇತರರಿಗೆ ಮಾರ್ಗದರ್ಶಿಯಾಗಿದ್ದ ಮಹಾಚೇತನವೊಂದು ಕಣ್ಮರೆಯಾಯಿತು.

**ಬೌದ್ಧಿಕ ಜೀವನ ಹಾಗೂ ಸಾಧನೆ:** ಐನ್‌ಸ್ಟೈನನ ಕ್ಷೇತ್ರ ತಾತ್ತ್ವಿಕ ಭೌತಶಾಸ್ತ್ರವಿಜ್ಞಾನಕ್ಕೇ ಬಹು ಪಾಲು ಮೀಸಲು. ಆದರೆ ಆತನ ಕುತೂಹಲಕ್ಕೆ ಮೇರೆ ಇರಲಿಲ್ಲ. ವಿಜ್ಞಾನ ಮೀಮಾಂಸೆ, ರಾಜಕೀಯ ಮತ್ತು ಧಾರ್ಮಿಕ ಪ್ರಶ್ನೆಗಳು, ಯೆಹೂದಿ ಪ್ರಶ್ನೆ, ನಿಶ್ಶಸ್ತ್ರೀಕರಣ, ಶಾಂತಿಸ್ಥಾಪನೆ, ವಿಶ್ವಸರ್ಕಾರ, ಜೀವನದರ್ಶನ– ಇವೆಲ್ಲ ವಿಚಾರಗಳಲ್ಲಿಯೂ ಆಳವಾಗಿ ಚಿಂತಿಸಿ ಖಚಿತ ಅಭಿಪ್ರಾಯಗಳನ್ನು ಆತ ತಳೆದಿದ್ದನಲ್ಲದೆ ಯುಕ್ತಕಂಡಲ್ಲಿ ಅವನ್ನು ವ್ಯಕ್ತಪಡಿಸಿಯೂ ಇದ್ದ.

ಐನ್‌ಸ್ಟೈನನ ಮುಖ್ಯ ಕೊಡುಗೆ ಸಾಪೇಕ್ಷಸಿದ್ಧಾಂತ ಮತ್ತು ಅದರ ಬೆಳೆವಣಿಗೆ. ಆದರೆ ಶಕಲಸಿದ್ಧಾಂತದ (ಕ್ವಾಂಟಂ ಥಿಯೊರಿ) ಪ್ರಾರಂಭದ ದೆಸೆಯಲ್ಲಿ ಈತ ಅದರಲ್ಲಿ ಸಾಕಷ್ಟು ಭಾಗವಹಿಸಿದ್ದ. ಹಾಗಿದ್ದರೂ 1925ರ ಅನಂತರ ಹೈಸನ್‌ಬರ್ಗನ ಅನಿಶ್ಚಿತತ್ವ ನಿಯಮದ ಆಧಾರದ ಮೇಲೆ ಬೆಳೆದ ಹೊಸ ಶಕಲ ಸಿದ್ಧಾಂತದ ಬಗ್ಗೆ ಈತನಿಗೆ ಅಷ್ಟಾಗಿ ಸಹಾನುಭೂತಿ ಇರಲಿಲ್ಲ. ಅದರಲ್ಲಿಯೂ ಈ ಸಿದ್ಧಾಂತದ ಸಂಭವನೀಯಾತ್ಮಕ ವಿವರಣೆ ಮತ್ತು ವ್ಯಾಖ್ಯೆಗಳಲ್ಲಿ ಸ್ವಲ್ಪವೂ ನಂಬಿಕೆ ಇರಲಿಲ್ಲ. ಇದೊಂದು ಕೇವಲ ತಾತ್ಕಾಲಿಕ ಪರಿಹಾರ ಎಂದೇ ಈತನ ನಂಬಿಕೆಯಾಗಿತ್ತು. ಈ ಸಿದ್ಧಾಂತ ಮತ್ತು ಇತರ ಮೂಲ ಸಿದ್ಧಾಂತಗಳನ್ನು ಒಳಗೊಂಡ ಒಂದು ಸಮಗ್ರ ಕ್ಷೇತ್ರಸಿದ್ಧಾಂತದ ನಿರ್ಮಾಣ ಅಗತ್ಯ ಮತ್ತು ಸಾಧ್ಯ, ಈ ಸಮಗ್ರ ಸಿದ್ಧಾಂತ ಸಂಭವನೀಯಾತ್ಮಕವಾಗಿರದೆ, ನಿರ್ಣಯಾತ್ಮಕವಾಗಿಯೇ ಇರುತ್ತದೆ ಎಂದು ಐನ್‌ಸ್ಟೈನನ ದೃಢ ನಂಬಿಕೆ.

ವಿಜ್ಞಾನ ಮೀಮಾಂಸೆಯ ಮುಖ್ಯ ಭಾಗಗಳಲ್ಲೊಂದಾದ ವಿಜ್ಞಾನದ ವಿಚಾರ ಮಾರ್ಗದ ಬಗ್ಗೆ ಐನ್‌ಸ್ಟೈನ್ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ. ವಿಜ್ಞಾನದ ಬೆಳೆವಣಿಗೆ ಮತ್ತು ಸ್ವರೂಪಗಳನ್ನು ಗಮನಿಸಿದರೆ ವೈಜ್ಞಾನಿಕ ಸಿದ್ಧಾಂತಗಳಿಗೆ ಅನುಭವಲಭ್ಯ ವಿಷಯಗಳೇ ಅಲ್ಲದೆ ಕೆಲವು ಮೂಲ ಪರಿಕಲ್ಪನೆ ಮತ್ತು ಮೂಲಭಾವನೆಗಳು ಆಧಾರವಾಗಿರುವುದು ಕಂಡುಬರುತ್ತದೆ. ಐನ್‌ಸ್ಟೈನನ ಪ್ರಕಾರ ಈ ಪರಿಕಲ್ಪನೆ ಮತ್ತು ಭಾವನೆಗಳು ತಾರ್ಕಿಕದೃಷ್ಟಿಯಿಂದ ಅತಿಸರಳವಾಗಿಯೂ ಪರಸ್ಪರ ಸಮಂಜಸವಾಗಿಯೂ ಇರಬೇಕು. ಇವನ್ನು ಯಾವ ರೀತಿಯಿಂದಲೂ ಇಂದ್ರಿಯಗೋಚರ ವಿಷಯಗಳಿಂದ ಉತ್ಪತ್ತಿಸುವುದು ಸಾಧ್ಯವಿಲ್ಲ. ವಿಜ್ಞಾನಿ ತನ್ನ ಬುದ್ಧಿ ಮತ್ತು ಪ್ರತಿಭಾಶಕ್ತಿಯಿಂದ ಇವನ್ನು ಅನಿರ್ಬಂಧಿತವಾಗಿ ಸೃಜಿಸುತ್ತಾನೆ. ಆದರೆ ಇವು ಭಾವನೆಗಳಾಗಿ ಯಥಾರ್ಥ ಜ್ಞಾನವನ್ನು ನೀಡಲು ಸಹಾಯಕಾರಿಯಾಗಬೇಕಾದರೆ ವಾಸ್ತವವಿಷಯಗಳೊಂದಿಗೆ ಸಂಬಂಧ ಪಡೆಯಬೇಕು; ಈ ಸಂಬಂಧದ ಅರಿವು ನಮ್ಮ ಪ್ರಜ್ಞೆಗೆ ಸ್ವಯಂಗೋಚರವಾಗುತ್ತದೆಯೇ ವಿನಾ ತಾರ್ಕಿಕ ತೀರ್ಮಾನವಾಗಿ ಲಭಿಸುವುದಿಲ್ಲ. ಈ ಭಾವನೆಗಳ ಯಥಾರ್ಥ್ಯಕ್ಕೆ ಈ ಸಂಬಂಧವೊಂದೇ ಸಾಲದು. ಇವು ಯಾವ ರೀತಿಯಲ್ಲೂ ಅನುಭವಸಿದ್ಧವಾದ ಯಥಾರ್ಥ ವಿಷಯಗಳಿಗೆ ವಿರೋಧವಾಗಿರಬಾರದು ಮತ್ತು ಇವುಗಳಿಂದ ಲಭಿಸುವ ತೀರ್ಮಾನಗಳು ಅನುಭವ ಸಮರ್ಥನೀಯವಾಗಿರಬೇಕು.

ಸಾಮಾನ್ಯವಾಗಿ ಬಹುತೇಕ ವಿಜ್ಞಾನಿಗಳು ರಾಜಕೀಯ ಮತ್ತು ಸಾಮಾಜಿಕ ವ್ಯವಹಾರಗಳಿಂದ ದೂರವಿರುವುದನ್ನು ಕಾಣುತ್ತೇವೆ. ಐನ್‌ಸ್ಟೈನನ ಅಭಿಪ್ರಾಯದಲ್ಲಿ ವಿಜ್ಞಾನಿಗಳು ಮತ್ತು ಇತರ ಬುದ್ಧಿಜೀವಿಗಳು ಈ ವ್ಯವಹಾರಗಳಲ್ಲಿ ನೇರವಾಗಿ ಭಾಗವಹಿಸದಿದ್ದರೂ ಇವುಗಳ ಬಗ್ಗೆ ಆಲೋಚಿಸಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಅಗತ್ಯ ಎಂದಿತ್ತು. ಲೇಖನ ಮತ್ತು ಸಾರ್ವಜನಿಕ ಭಾಷಣಗಳ ಮೂಲಕ ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಐನ್‌ಸ್ಟೈನ್ ವ್ಯಕ್ತಪಡಿಸುತ್ತಿದ್ದ. ಚಿಕ್ಕಂದಿನಿಂದಲೂ ಸಮಾಜದ ದರಿದ್ರ ಮತ್ತು ಶೋಷಿತ ವರ್ಗಗಳ ಬಗ್ಗೆ ಆತನಿಗೆ ಒಂದು ವಿಧವಾದ ಸಹಜ ಅನುಕಂಪವಿತ್ತು. ಸಮಾಜದಲ್ಲಿ ವರ್ಗವರ್ಗಗಳಿಗಿರುವ ಅಂತರ ಭೇದಭಾವನೆಗಳು, ಆರ್ಥಿಕ ಮತ್ತು ಸಾಮಾಜಿಕ ಶೋಷಣೆ–ಇವನ್ನು ಆತ ಸರ್ವಥಾ ಸಹಿಸುತ್ತಿರಲಿಲ್ಲ. ರಷ್ಯಾದಲ್ಲಿ ಕಮ್ಯೂನಿಸಂ ತತ್ತ್ವಗಳಿಗನುಸಾರವಾಗಿ ಸ್ಥಾಪಿತವಾದ ಸಮತಾವಾದಿ ಸಮಾಜ ವ್ಯವಸ್ಥೆಯನ್ನು ಆತ ಒಪ್ಪಲಿಲ್ಲ. ಒಂದು ರೀತಿಯ ಪ್ರಜಾಸತ್ತಾತ್ಮಕ ಸಮತಾವಾದದಲ್ಲಿ ಅವನಿಗೆ ನಂಬಿಕೆ ಇತ್ತು; ನೈತಿಕದೃಷ್ಟಿಯಿಂದ ಈ ವಾದ ಅತಿ ಸಮರ್ಥನೀಯವೆಂದು ಭಾವಿಸಿದ್ದ. ಪ್ರತಿಯೊಬ್ಬನಿಗೂ ಕನಿಷ್ಠ ಜೀವನಸೌಲಭ್ಯಗಳನ್ನು ಒದಗಿಸುವುದು ಸಮಾಜದ ಹೊಣೆ, ಅವನವನ ಶಕ್ತಿಸಾಮರ್ಥ್ಯಾನುಸಾರ ವ್ಯಕ್ತಿತ್ವದ ಬೆಳೆವಣಿಗೆಗೆ ಪ್ರತಿಯೊಬ್ಬನಿಗೂ ಅವಕಾಶವಿರಬೇಕು; ಅವನ ಮೂಲಹಕ್ಕುಗಳನ್ನು ಯಾವ ವಿಧದಲ್ಲೂ ಕುಂಠಿತಮಾಡದೆ ಅವನ್ನು ಸಂರಕ್ಷಿಸುವುದು ಸಮಾಜ ಮತ್ತು ಸರ್ಕಾರದ ಕರ್ತವ್ಯ ಎಂದು ಅನೇಕ ಸಂದರ್ಭಗಳಲ್ಲಿ ಅವನ್ನು ಶ್ರುತಪಡಿಸುವುದಿತ್ತು. ಪ್ರತಿಯೊಬ್ಬ ವ್ಯಕ್ತಿಗೂ ಎಲ್ಲ ವಿಧವಾದ ಸ್ವಾತಂತ್ರ್ಯ, ಅದರಲ್ಲೂ ಅವನಿಗೆ ಇಷ್ಟ ಬಂದ ಕ್ಷೇತ್ರದಲ್ಲಿ ಅನ್ವೇಷಣೆ ಮಾಡಲು ಮತ್ತು ಅನ್ವೇಷಣೆಯ ತೀರ್ಮಾನಗಳನ್ನು ಅಭಿವ್ಯಕ್ತಪಡಿಸಲು, ಸಂಪೂರ್ಣ ಬೌದ್ಧಿಕ ಸ್ವಾತಂತ್ರ್ಯವಿರಬೇಕೆಂಬುದು ಈತನ ಬಲು ಖಚಿತವಾದ ನಿಲುವು. ಆದ್ದರಿಂದ ವ್ಯಕ್ತಿಸ್ವಾತಂತ್ರ್ಯ ವಿರೋಧಿಗಳಾದ ಇಟಲಿ ದೇಶದ ಫ್ಯಾಸಿಸ್ಟ್ ಮತ್ತು ಜರ್ಮನಿಯ ನಾಜ಼ಿ ಸರ್ಕಾರಗಳನ್ನು ಈತ ಬಲು ತೀವ್ರವಾಗಿ ಖಂಡಿಸಿದ. ಮಾನವ ಸಹೋದರತ್ವದ ಆದರ್ಶದಲ್ಲಿ ಅವನಿಗೆ ಅಪಾರ ನಂಬಿಕೆ. ಅನೇಕ ಸಂದರ್ಭದಲ್ಲಿ ಅಮೆರಿಕದ ಬಿಳಿಯ ಜನರು ನೀಗ್ರೋಗಳ ಬಗ್ಗೆ ತೋರುತ್ತಿದ್ದ ಅವಹೇಳನ ಮನೋಭಾವವನ್ನು ಸಹಿಸಲಾರದೆ ಖಂಡಿಸುತ್ತಿದ್ದ.

ಸ್ವಭಾವತಃ ಮಾನವ ಹಿತಚಿಂತಕನಾದ ಐನ್‌ಸ್ಟೈನನಿಗೆ ಚಿಕ್ಕಂದಿನಿಂದಲೇ ಮಿಲಿಟರಿ ಶಿಸ್ತು ಎಂದರೆ ಜುಗುಪ್ಸೆ ಮತ್ತು ವಿರೋಧ. ಎರಡು ಮಹಾಯುದ್ಧಗಳಿಂದ ಸಂಭವಿಸಿದ ಅಪಾರ ಕಷ್ಟನಷ್ಟಗಳನ್ನು ಕಣ್ಣಾರೆ ಕಂಡಮೇಲಂತೂ ಈ ಯುದ್ಧ ವಿರೋಧಿಭಾವ ಅತಿಯಾಗಿ ಬಲಗೊಂಡಿತು. ಪ್ರಪಂಚದ ಭವಿಷ್ಯ ಮತ್ತು ಎಲ್ಲ ಜನರ ಹಿತದೃಷ್ಟಿಯಿಂದ ಸಾರ್ವತ್ರಿಕ ನಿಶ್ಶಸ್ತ್ರೀಕರಣ ಅತ್ಯಗತ್ಯ; ಯುದ್ಧಸಂಭವನೆಯ ಮೂಲ ಕಾರಣಗಳನ್ನೆ ನಿರ್ಮೂಲಗೊಳಿಸಬೇಕು; ಶಾಂತಿಯನ್ನು ಸ್ಥಾಪಿಸಿ ಅದರ ಪಾಲನೆಗೆ ವಿಶ್ವಸರ್ಕಾರವನ್ನು ಸ್ಥಾಪಿಸಬೇಕು; ಎಲ್ಲ ರಾಷ್ಟ್ರಗಳೂ ಇದರ ಅಧೀನಕ್ಕೆ ಒಳಪಡಬೇಕು ಎಂದು ಅನೇಕ ಸಲ ಒತ್ತಿ ಒತ್ತಿ ತನ್ನ ಅಭಿಪ್ರಾಯಗಳನ್ನು ತಿಳಿಸಿದ. ರಾಷ್ಟ್ರರಾಷ್ಟ್ರಗಳ ನಡುವೆ ಉದ್ಭವಿಸುವ ಸಮಸ್ಯೆಗಳನ್ನು ವಿಶ್ವಸರ್ಕಾರದ ನೆರವಿನಿಂದ ಶಾಂತಿಯುತವಾಗಿ ಪರಿಹರಿಸಬೇಕು; ಇಂಥ ಸಂದರ್ಭದಲ್ಲಿ ಮಹಾತ್ಮಗಾಂಧಿ ತೋರಿಸಿಕೊಟ್ಟಿರುವ ಶಾಂತಿಮಾರ್ಗವನ್ನು ಅನುಸರಿಸುವುದು ಸೂಕ್ತವೆಂದು ವಾದಿಸಿದ. ಗಾಂಧಿ ಬಗ್ಗೆ ಐನ್‌ಸ್ಟೈನನಿಗೆ ಅಪಾರ ಗೌರವವಿತ್ತು.

ಐನ್‌ಸ್ಟೈನ್ ಜನ್ಮತಃ ಯೆಹೂದಿ. ಆದರೆ ತನ್ನ ಮತ, ಧರ್ಮ ಮತ್ತು ಆಚರಣೆಗಳಿಗೆ ಆತ ಎಂದೂ ಕಟ್ಟು ಬೀಳದೆ ಒಂದು ವಿಧವಾದ ಸ್ವತಂತ್ರ ಮನೋಭಾವವನ್ನೇ ತಳೆದಿದ್ದ. ಸದಾ ಆತ ಒಬ್ಬ ಬುದ್ಧಿಜೀವಿಯಾಗಿಯೇ ಉಳಿದ. ಹೀಗೆಂದ ಮಾತ್ರಕ್ಕೆ ಅವನು ನಾಸ್ತಿಕನಲ್ಲ. ಅವನಿಗೆ ಎಲ್ಲ ಮತಗಳ ಮೂಲ ಭಾವನೆಗಳ ಬಗ್ಗೆ ಗೌರವವಿತ್ತು. ಮತ, ಧರ್ಮ ಮತ್ತು ದೇವರು ಇವುಗಳ ಬಗ್ಗೆ ಅವನ ಕಲ್ಪನೆಯೇ ಬೇರೆ. ದೇವರು ಎಂದರೆ ಸತ್ಯ ಸೌಂದರ್ಯಗಳ ಮೂರ್ತರೂಪ ಹಾಗೂ ಆಧ್ಯಾತ್ಮಿಕ ಸ್ವರೂಪಿಯಾದ ಶಕ್ತಿ ಎಂಬುದೇ ಅವನ ಕಲ್ಪನೆ. ಈ ಶಕ್ತಿ ಅನುಭವಾತೀತವಲ್ಲ. ವಿಶ್ವ ಹಾಗು ನಮ್ಮ ಭಾವನೆಗಳಲ್ಲಿ ನಾವು ಕಾಣುವ ಅದ್ಭುತ ರಚನೆ ಮತ್ತು ಭವ್ಯತೆ ಈ ಆದಿಶಕ್ತಿಯ ಅರಿವನ್ನು ಮೂಡಿಸುತ್ತವೆ. ಇಂಥ ಅರಿವು ನಮ್ಮಲ್ಲಿ ಒಂದು ವಿಧವಾದ ಪೂಜ್ಯ ಅಂದರೆ ಆಸ್ತಿಕ ಮನೋಭಾವವನ್ನು ಉಂಟು ಮಾಡುತ್ತದೆ ಎಂದು ಆತನ ನಂಬಿಕೆ. ಕೇವಲ ಭಯ ಭಾವನೆಯಿಂದಾಗಲಿ ಅಥವಾ ನೀತಿ ಸಂರಕ್ಷಣೆಗಾಗಲೀ ಹುಟ್ಟಿಕೊಂಡ ಮಾತುಗಳು ಅಷ್ಟೇನೂ ಶ್ರೇಷ್ಠವಲ್ಲ ಜೀವನದ ಪರಮಮೌಲ್ಯ ಮತ್ತು ಗುರಿಗಳ ಪ್ರಜ್ಞೆಯನ್ನು ಒದಗಿಸಿ ಅವು ನಮ್ಮ ಅಂತರಾಳದಲ್ಲಿ ರೂಢವಾಗಿ ಆತ್ಮಪರಿಶುದ್ಧತೆಯನ್ನು ಸಾಧಿಸಲು ಸಹಾಯಕವಾಗುವ ಮತವೇ ಅತಿ ಶ್ರೇಷ್ಠವೆಂದು ಅವನು ಭಾವಿಸಿದ್ದ. ಸತ್ಯಾನ್ವೇಷಣೆ, ಪರಮ ಮೌಲ್ಯಗಳ ಅರಿವು, ಜೀವನದಲ್ಲಿ ಅವುಗಳ ಸಾಧನೆಗಾಗಿ ಪ್ರಯತ್ನ–ಇದೇ ಧರ್ಮ, ಇದೇ ಆಸ್ತಿಕತೆ ಎಂದು ಅವನ ಭಾವನೆ.

ಇಂದ್ರಿಯಗೋಚರವಾದ ವಿಷಯಗಳನ್ನೆಲ್ಲ ಸುವ್ಯವಸ್ಥಿತವಾಗಿ ಒಟ್ಟುಗೂಡಿಸಿ ಅವನ್ನು ಅರ್ಥಪೂರ್ಣವಾಗಿ ವಿವರಿಸುವುದೇ ವಿಜ್ಞಾನದ ಗುರಿ. ಇದನ್ನು ಸಾಧಿಸಲು ವಿಜ್ಞಾನ ಅನುಸರಿಸುವ ವಿಧಾನ ನಮಗೆ ಜೀವನದ ಪರಮಾಕಾಂಕ್ಷೆಗಳ ಅರಿವನ್ನು ಕೊಡಲು ಅಶಕ್ಯ. ಈ ಅರಿವನ್ನು ಒದಗಿಸುವ ಅನುಭವಮೂಲವೇ ಬೇರೆ ಎಂಬುದು ಐನ್‌ಸ್ಟೈನನ ಅಭಿಪ್ರಾಯ. ಈ ದೃಷ್ಟಿಯಿಂದ ಅವನು ವಿಜ್ಞಾನ ಮತ್ತು ಆಸ್ತಿಕತೆಗಳ ಸಂಬಂಧವನ್ನು ವಿವೇಚಿಸಿ ಅವುಗಳ ನಡುವೆ ಯಾವ ವಿಧವಾದ ತಿಕ್ಕಾಟಕ್ಕೂ ಆಸ್ಪದವಿಲ್ಲ; ಅವೆರಡೂ ಪರಸ್ಪರ ಪೂರಕ; ಎರಡನ್ನೂ ಸಂಗತಗೊಳಿಸಿ ಸಮಗ್ರಜೀವನ ದರ್ಶನವನ್ನು ರೂಪಿಸುವುದು ಸಾಧ್ಯ ಮತ್ತು ಅತ್ಯಗತ್ಯ ಎಂದು ತನ್ನ ಹಲವಾರು ಲೇಖನಗಳಲ್ಲಿ ಬರೆದಿದ್ದಾನೆ.

ಐನ್‌ಸ್ಟೈನ್ ತನ್ನ ಅನುಭವ, ಚಿಂತನೆ ಮತ್ತು ಅನ್ವೇಷಣೆಗಳ ಬಗ್ಗೆ ಮಾತನಾಡುತ್ತ ತನ್ನ ಇಡೀ ಜೀವನಕ್ಕೆ ಸ್ಫೂರ್ತಿಯನ್ನು ಒದಗಿಸಿ ಮಾರ್ಗದರ್ಶನ ನೀಡಿದ ಉದಾತ್ತ ಮೌಲ್ಯಗಳ ಬಗ್ಗೆ ಈ ರೀತಿ ನುಡಿದಿದ್ದಾನೆ; "ನನ್ನ ಜೀವನದ ಹಾದಿಯನ್ನು ಬೆಳಗಿಸಿ ಹಸನ್ಮುಖಿಯಾಗಿ ಮತ್ತೆ ಮತ್ತೆ ಜೀವನವನ್ನು ಎದುರಿಸಲು ಧೈರ್ಯ ತಂದುಕೊಟ್ಟ ಪರಮ ಮೌಲ್ಯಗಳೆಂದರೆ ದಯೆ, ಸೌಂದರ್ಯ ಮತ್ತು ಸತ್ಯ'. **(ನೋಡಿ– ಸಾಪೇಕ್ಷತಾಸಿದ್ಧಾಂತ)**

**(ಕೆ.ಎಸ್.ಆರ್.ಐ.)**

**ಐನ್‌ಸ್ಟೈನಿಯಂ:** ನಿಸರ್ಗದಲ್ಲಿ ಇಲ್ಲದಿರುವ ಆದರೆ ಕೃತಕವಾಗಿ ಸೃಷ್ಟಿ ಮಾಡಲಾಗಿರುವ ಯುರೇನಿಯಂ ಅತೀತ (ಟ್ರಾನ್ಸ್‌ಯುರೇನಿಯಂ) ಧಾತುಗಳಲ್ಲಿ ಒಂದು. ಪರಮಾಣು ಸಂಖ್ಯೆ 99. ಸಂಕೇತ Es. ಅತಿಸ್ಥಿರ ಸಮಸ್ಥಾನಿಯ ಭಾರ ಸಂಖ್ಯೆ 254. ಎಲೆಕ್ಟ್ರಾನಿಕ್ ವಿನ್ಯಾಸ ಪ್ರಾಯಶಃ

$$1s^2 2s^2 2p^6 3s^2 3p^6 3d^{10} 4s^2 4p^6 4d^{10} 4f^{14} 5s^2 5p^6 5d^{10} 5f^{11} 6s^2 6p^6 7s^2$$

ಜಗದ್ವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನನ ಜ್ಞಾಪಕಾರ್ಥವಾಗಿ ಈ ಧಾತುವಿಗೆ ಈ ಹೆಸರು ಕೊಡಲಾಗಿದೆ.

ಪರಮಾಣು ಸಂಖ್ಯೆ 99 ಮತ್ತು 100 ಇರುವ ಐನ್‌ಸ್ಟೈನಿಯಂ ಮತ್ತು ಫರ್ಮಿಯಂ ಧಾತುಗಳನ್ನು ಕಂಡುಹಿಡಿದ ಪ್ರಸಂಗ ಅನುದ್ದೇಶಿತ ಮತ್ತು ಅನಿರೀಕ್ಷಿತ ಆವಿಷ್ಕಾರಕ್ಕೆ ಒಂದು ಸೊಗಸಾದ ನಿದರ್ಶನ. 1952ರ ನವೆಂಬರಿನಲ್ಲಿ ಪೆಸಿಫಿಕ್ ಸಾಗರದ ಒಂದು ಚಿಕ್ಕ ದ್ವೀಪದ ಮೇಲೆ ನಡೆಸಿದ ಮೊತ್ತಮೊದಲ ಪರೀಕ್ಷಾರ್ಥ ಉಷ್ಣಬೈಜಿಕ (ಥರ್ಮೋನ್ಯೂಕ್ಲಿಯರ್) ಆಸ್ಫೋಟನೆಯ (ಹೈಡ್ರೋಜನ್ ಬಾಂಬ್) ಪರಿಣಾಮವಾಗಿ ಮೇಲೆದ್ದ ಸ್ಫೋಟನ ಮೇಘಗಳ (ಎಕ್ಸ್‌ಪ್ಲೋಷನ್ ಕ್ಲೌಡ್ಸ್) ಮೂಲಕ ಹಾರಾಟ ನಡೆಸಿದ ವಿಮಾನಗಳು ಸೋಸುವ ಕಾಗದದ (ಫಿಲ್ಟರ್ ಪೇಪರ್) ಮೇಲೆ ಸಂಗ್ರಹಿಸಿದ ಅವಶೇಷ ವಸ್ತುವನ್ನು ಪರೀಕ್ಷೆಗಾಗಿ ಅಮೆರಿಕದ ವಿವಿಧ ಸಂಶೋಧನಾಲಯಗಳಿಗೆ ಕಳಿಸಲಾಯಿತು. ಅದರಲ್ಲಿ ಭಾರವಾದ ಕೆಲವು ಹೊಸ ಪ್ಲುಟೋನಿಯಂ ಸಮಸ್ಥಾನಿಗಳು (ಐಸೊಟೋಪ್ಸ್) ಕಂಡುಬಂದುದರಿಂದ ಇನ್ನೂ ಭಾರವಾದ ಧಾತುಗಳು ಸಂಶ್ಲೇಷಿತವಾಗಿರಬಹುದೆಂಬ ಸಂದೇಹ ಉಂಟಾಯಿತು. ಅದನ್ನು ಪರೀಕ್ಷಿಸಿ ನೋಡುವ ಸಲುವಾಗಿ ನಡೆದ ಸ್ಥಳದ ನೆರೆಹೊರೆಯ ಹವಳದ ದಿಬ್ಬಗಳಿಂದ ನೂರಾರು ಪೌಂಡುಗಳಷ್ಟು ಹವಳವನ್ನು ಸಂಗ್ರಹಿಸಿ ತರಲಾಯಿತು. ಅದರಲ್ಲಿ 99 ಮತ್ತು 100ನೆಯ ಧಾತುಗಳನ್ನು ಘಿಯಾರ್ಸೊ ಮತ್ತು ಸಂಗಡಿಗರು ಖಚಿತವಾಗಿ ಗುರುತಿಸಿದರು.

ಉಷ್ಣಬೈಜಿಕ ಆಸ್ಫೋಟನೆಯ ಸಂದರ್ಭದಲ್ಲಿ ಯುರೇನಿಯಂ–238 ಬೀಜ ಒಂದಾದ ಮೇಲೊಂದರಂತೆ ನ್ಯೂಟ್ರಾನುಗಳನ್ನು ಹೀರಿಕೊಂಡು ಕ್ಷಣಮಾತ್ರದಲ್ಲಿ ಅತ್ಯಂತ ಭಾರವಾದ ಯುರೇನಿಯಂ ಸಮಸ್ಥಾನಿಗಳಾಗಿ ಪರಿವರ್ತನೆಗೊಳ್ಳುತ್ತದೆ. ಭಾರ 255ರ ವರೆಗೂ ಉಳ್ಳ ಈ ಯುರೇನಿಯಂ ಬೀಜಗಳು ಎಲೆಕ್ಟ್ರಾನುಗಳನ್ನು ಹೊರಹಾಕಿ ಪ್ಲುಟೋನಿಯಂ, ಅಮೆರಿಸಿಯಂ, ಕ್ಯೂರಿಯಂ, ಬರ್ಕೇಲಿಯಂ, ಕ್ಯಾಲಿಫೋರ್ನಿಯಂ ಮತ್ತು 99, 100 ಭಾರದ ಐನ್‌ಸ್ಟೈನಿಯಂ, ಫರ್ಮಿಯಂ ಧಾತುಗಳ ಸಮಸ್ಥಾನಿಗಳಾಗಿ ಮಾರ್ಪಡುತ್ತವೆ.

1954ರ ವರೆಗೆ ಈ ಫಲಿತಾಂಶಗಳನ್ನು ಗೋಪ್ಯವೆಂದು ವರ್ಗೀಕರಿಸಲಾಗಿತ್ತು 1954ರಲ್ಲಿ ಸಾರ್ವಜನಿಕರ ತಿಳಿವಳಿಕೆಗಾಗಿ ಇವನ್ನು ಪ್ರಕಟಿಸುವ ವೇಳೆಗೆ ಈ ಧಾತುವನ್ನು ಇನ್ನೂ ಇತರ ವಿಧಾನಗಳಿಂದಲೂ ತಯಾರಿಸಲಾಗಿತ್ತು. ಅವುಗಳಲ್ಲಿ ಮುಖ್ಯವಾದುವೆಂದರೆ ಪ್ಲುಟೋನಿಯಂ ಧಾತುವನ್ನು 2–3 ವರ್ಷಗಳ ಕಾಲ ಸತತವಾಗಿ ರಿಯಾಕ್ಟರುಗಳಲ್ಲಿ ಉತ್ಪತ್ತಿಯಾಗುವ ತೀಕ್ಷ್ಣವಾದ ನ್ಯೂಟ್ರಾನ್ ಪ್ರವಾಹಕ್ಕೆ ಗುರಿಪಡಿಸುವುದು. ಈ ವಿಧಾನವಲ್ಲದೆ, ಯುರೇನಿಯಂ–238ನ್ನು ನೈಟ್ರೋಜನ್ ಬೀಜಗಳಿಂದ ತಾಡಿಸಿಯೂ ಐನ್‌ಸ್ಟೈನಿಯಮನ್ನು ಉತ್ಪತ್ತಿಮಾಡಿದ್ದಾರೆ.

246ರಿಂದ ಪ್ರಾರಂಭವಾಗಿ 256ರ ವರೆಗಿನ ಒಟ್ಟು ಹನ್ನೊಂದು ಐನ್‌ಸ್ಟೈನಿಯಂ ಸಮಸ್ಥಾನಿಗಳು ಪತ್ತೆಯಾಗಿವೆ. ಇವುಗಳಲ್ಲಿ ಬಹುಪಾಲು ಅಲ್ಪಾಯುಗಳು. ಆದರೆ Es-253 ಮತ್ತು Es-254 ತಕ್ಕಮಟ್ಟಿಗೆ ದೀರ್ಘಾಯುಗಳು. ಮೊದಲನೆಯದರ ಅರ್ಧಾಯು 20 ದಿವಸಗಳು; ಎರಡನೆಯದರದ್ದು ಸುಮಾರು 300 ದಿವಸಗಳು. ಎರಡೂ ಆಲ್ಫ ವಿಸರ್ಜಕಗಳು (ಆಲ್ಫ ಎಮಿಟರ್ಸ್), ಅಂದರೆ ಆಲ್ಫ ಕಣಗಳನ್ನು ಹೊರಸೂಸಿ ಕ್ಷಯಿಸುತ್ತವೆ. ಮೊತ್ತಮೊದಲ ಬಾರಿ ಐನ್‌ಸ್ಟೈನಿಯಮನ್ನು ಗುರುತಿಸಿದಾಗ ಉತ್ಪತ್ತಿಯಾಗಿದ್ದುದು ಕೇವಲ ಎಣಿಸಲು ಬರುವಷ್ಟು ಪರಮಾಣುಗಳು. ಅದಕ್ಕಾಗಿ ವಿಶೇಷ ವಿಧಾನಗಳನ್ನು ಬಳಸಲಾಯಿತು. ಆದರೆ ದೀರ್ಘಾಯುವಿನ ಎರಡು ಸಮಸ್ಥಾನಿಗಳು ಈಗ ಪತ್ತೆಯಾಗಿರುವುದರಿಂದ ಐನ್‌ಸ್ಟೈನಿಯಮನ್ನು ಗಣನೀಯ ಪ್ರಮಾಣದಲ್ಲಿ ತಯಾರಿಸುವುದು ಸಾಧ್ಯವಾಗಿದೆ.

**(ಜಿ.ಆರ್.ಎಲ್.)**

**ಐಪೋಮಿಯ:** ಕನ್ವಾಲ್ವುಲೇಸಿ ಕುಟುಂಬಕ್ಕೆ ಸೇರಿದ ಒಂದು ದೊಡ್ಡ ಸಸ್ಯಜಾತಿ. ಬಹುಪಾಲು ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಮೂಲವಾಸಿಗಳು. ಈ ಜಾತಿಯಲ್ಲಿ ಏಕಋತುವಿನ ಸಸ್ಯಗಳಿಂದ ಹಿಡಿದು ಬಹುವಾರ್ಷಿಕ ಸಸ್ಯಗಳವರೆಗೆ ಮೂಲಿಕೆ, ಬಳ್ಳಿ, ಪೊದೆ ಮತ್ತು ಮರದಂತಿರುವ ಸಸಿಗಳು ಸೇರಿವೆ. ಅವುಗಳಲ್ಲಿ ಸುಂದರವಾಗಿ ಹೂ ಬಿಡುವ ಕೆಲವು ಬಳ್ಳಿಗಳು ತೋಟಗಾರಿಕೆಯಲ್ಲಿ ಪ್ರಾಮುಖ್ಯ ಪಡೆದಿವೆ. ಈ ಬಳ್ಳಿಗಳ ಕಾಂಡದಲ್ಲಿ ಅಂಟಾದ ದ್ರವವಿರುತ್ತದೆ. ಈ ಸಸ್ಯಗಳು ತಮ್ಮ ಕಾಂಡಗಳ ಸಹಾಯದಿಂದ ಹಬ್ಬುತ್ತವೆ. ಎಲೆಗಳಿಗೆ ತೊಟ್ಟುಂಟು. ಜೋಡಣೆ ಪರ್ಯಾಯವಾಗಿ. ಆಕಾರ ಹೃದಯ ಅಥವಾ ಕರನೆಯಂತೆ. ಅಂಚು ನಯ ಅಥವಾ ಗರಗಸದಂತೆ ಮುಳ್ಳುಮುಳ್ಳು. ತುದಿ ಸಾಮಾನ್ಯವಾಗಿ ಮೊನಚು ಅಥವಾ ಲಂಬಾಗ್ರ. ಹೂ ಒಂಟಿಯಾಗಿಯೂ ಗೊಂಚಲಾಗಿಯೂ ಇರುತ್ತದೆ. ಆಕಾರ ಆಲಿಕೆಯಂತೆ ಅಥವಾ ಗಂಟೆಯಂತೆ. ಪ್ರಭೇದಗಳನ್ನನುಸರಿಸಿ ಹೂವಿನ ಬಣ್ಣ. ಪುಷ್ಪಪತ್ರ ಸಮೂಹ ಆಳವಾಗಿ ಭಾಗವಾಗಿರುತ್ತದೆ. ಕೂಡುಹೂದಳ ಐದು ಭಾಗವಾಗಿದೆ. ಕೇಸರಗಳು 5:2 ರಿಂದ 4 ಕೋಶದ ಅಂಡಾಶಯವಿದೆ. ಶಲಾಕಾಗ್ರ ಸ್ಪಷ್ಟಗೊಂಚಲು ಮಾದರಿಯದು. ಪರಾಗಸ್ಪರ್ಶ ಹಕ್ಕಿಗಳಿಂದ ಅಥವಾ ಗಾಳಿಯಿಂದ ಆಗುತ್ತದೆ. ಹಣ್ಣು ಸಂಪುಟ (ಕ್ಯಾಪ್ಸೂಲ್) ಮಾದರಿಯದು.

ಐಪೋಮಿಯ ಜಾತಿಯಲ್ಲಿ ಸುಮಾರು 400 ಪ್ರಭೇದಗಳಿವೆ. ಅವುಗಳಲ್ಲಿ 50 ಪ್ರಭೇದಗಳು ಭಾರತದಲ್ಲಿ ಬೆಳೆಯುತ್ತವೆ. ಕೆಲವು ಪ್ರಭೇದಗಳನ್ನು ಈಚೆಗೆ ಕ್ವಾಮೊಕ್ಲಿಟ್, ಮಿನಾ, ಮೆರಿಮಿಯ ಮುಂತಾದ ಅನ್ಯಜಾತಿಗಳಿಗೆ ಸೇರಿಸಲಾಗಿದೆ. ತೋಟಗಾರಿಕೆಯಲ್ಲಿ ಪ್ರಾಮುಖ್ಯ ಪಡೆದಿರುವ ಹನ್ನೊಂದು ಪ್ರಭೇದಗಳನ್ನು ಇಲ್ಲಿ ಪರಿಶೀಲಿಸಬಹುದು.

**1 ಐಪೋಮಿಯ ಟ್ರೈ ಕಲರ್:** ಈ ಪ್ರಭೇದದ ಹೂ ನಸುಗೆಂಪು, ಕೆಂಪು ಮತ್ತು ನೀಲಿ ಬಣ್ಣಗಳಿಂದ ಕೂಡಿದೆ. ಇದು ಮೆಕ್ಸಿಕೋ ದೇಶದ ಮೂಲವಾಸಿ. ಈಗ ಉಷ್ಣವಲಯದ ಎಲ್ಲ ಭಾಗಗಳಿಗೂ ವ್ಯಾಪಿಸಿದೆ. ಬಹುವಾರ್ಷಿಕವಾದ ಈ ಬಳ್ಳಿ ಅತಿಯಾಗಿ ಬೆಳೆದು ವಿಸ್ತಾರವಾಗಿ ಹಬ್ಬುತ್ತದೆ. ಕೊಳವೆಯಾಕಾರದ ಕಾಂಡದಲ್ಲಿ ಅಲ್ಲಲ್ಲಿ ಕಡುಗೆಂಪು ಬಣ್ಣವಿದೆ. ಎಲೆ ದಟ್ಟ ಹಸಿರು. ಈ ಪ್ರಭೇದದ ಸಸ್ಯಗಳು ಸೆಪ್ಟೆಂಬರ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ಹೂ ಬಿಡುತ್ತವೆ. ಹೂಗೊಂಚಲು ತುದಿಯಲ್ಲಿದ್ದು ಪ್ರತಿ ಹೂಗೊಂಚಲಿನಲ್ಲಿ 3 ರಿಂದ 4 ಹೂಗಳಿರುತ್ತವೆ. ಈ ಸಸ್ಯ ಬಹುವಾರ್ಷಿಕವಾದರೂ ಪ್ರತಿವರ್ಷ ಕಳೆಗುಂದುವುದ ರಿಂದ, ಇದನ್ನು ವಾರ್ಷಿಕವಾಗಿ ಬೆಳೆಸುವುದು ರೂಢಿಯಲ್ಲಿದೆ. ಇದನ್ನು ಬೀಜಗಳಿಂದ ವೃದ್ಧಿ ಮಾಡಬಹುದು. ಇದರ ಬೇಸಾಯಕ್ಕೆ ಭೂಮಿ ಅಷ್ಟು ಫಲವತ್ತಾಗಿರಬೇಕಾಗಿಲ್ಲ.

**2 ಐಪೋಮಿಯ ಕ್ವಾಮೊಕ್ಲಿಟ್:** ಈ ಪ್ರಭೇದಕ್ಕೆ ಸೈಪ್ರೆಸ್ ವೈನ್, ಇಂಡಿಯನ್ ಪಿಂಕ್ ಎಂಬ ಸಾಮಾನ್ಯ ಹೆಸರುಗಳು ಬಳಕೆಯಲ್ಲಿವೆ. ಇದು ಏಕ ಋತುವಿನ ಹಬ್ಬುಬಳ್ಳಿ, ಕಾಂಡ ಸಣ್ಣದಾಗಿ ಸುಮಾರು 20' ಎತ್ತರ ಹಬ್ಬುತ್ತದೆ. ಎಲೆಗೆ ಚಿಕ್ಕ ತೊಟ್ಟಿರುತ್ತದೆ ಅಥವಾ ತೊಟ್ಟಿಲ್ಲದೆ ಇದ್ದು ಗರಿ ರೂಪದಲ್ಲಿ ಭಾಗಿತವಾಗಿರುತ್ತದೆ. ಹೂಗೊಂಚಲಿನಲ್ಲಿ ಹಲವು ಹೂಗಳಿರುತ್ತವೆ. ಗೊಂಚಲ ತೊಟ್ಟು ಹೂವಿನ ತೊಟ್ಟಿಗಿಂತ ಉದ್ದ. ಹೂ 1" ರಿಂದ 1 1/2 " ಉದ್ದ. ಬಣ್ಣ ಕೇಸರಿ. ಆಕಾರ ತಟ್ಟೆಯಂತೆ. ಈ ಸಸ್ಯ ಮಳೆಗಾಲದಲ್ಲಿ ಹೂ ಬಿಡುತ್ತದೆ. ಡಿಸೆಂಬರ್ ತಿಂಗಳಲ್ಲಿ ಫಲ ಕೊಡುತ್ತದೆ. ಇದು ಅಮೆರಿಕದ ಉಷ್ಣಪ್ರದೇಶದ ಮೂಲವಾಸಿ. ಈಗ ಇದು ಉಷ್ಣವಲಯದ ಎಲ್ಲ ಭಾಗಗಳಿಗೆ ವ್ಯಾಪಿಸಿದೆ. ಇದನ್ನು ಬೀಜಗಳಿಂದ ವೃದ್ಧಿ ಮಾಡಬಹುದು. ಆಯುರ್ವೇದೀಯ ಔಷಧವಾಗಿ ಈ ಸಸ್ಯ ಪ್ರಾಮುಖ್ಯ ಪಡೆದಿದೆ.

**3 ಐಪೋಮಿಯ ಹಾರ್ಸ್‌ಫಾಲಿಯೆ:** ಜ್ಞಾಪಕಾರ್ಥವಾಗಿ ಇದಕ್ಕೆ ಈ ಹೆಸರು ಕೊಡಲಾಗಿದೆ. ಇದು ಎತ್ತರವಾಗಿ ಬೆಳೆಯುವ ಬಹುವಾರ್ಷಿಕ ಬಳ್ಳಿ; ಎಲೆ ಹಸ್ತಾಕಾರ. ಒಂದು ಎಲೆಯಲ್ಲಿ 5 ರಿಂದ 7 ಕಿರು ಎಲೆಗಳು ಇರುತ್ತವೆ; ಕಿರು ಎಲೆ ಭರ್ಜಿಯಾಕಾರ, ಕದಿರಿನಾಕಾರ. ಗಾತ್ರದಲ್ಲಿ ದಪ್ಪ. ಅಂಚು ನಯ. ತುದಿ ಲಂಬಾಗ್ರ. ಹೂಗೊಂಚಲು ಮಧ್ಯಾರಂಭಿ. ಹೂಗೊಂಚಲಿನ ತೊಟ್ಟು, ಹೂ ತೊಟ್ಟಿನಷ್ಟೆ ಉದ್ದ ಅಥವಾ ಹೂತೊಟ್ಟಿಗಿಂತ ಸ್ವಲ್ಪ ಉದ್ದ. ಸಮವಾಗಿರುವ 5 ಪುಷ್ಪಪತ್ರಗಳೂ 5 ಕೂಡು ಹೂದಳಗಳೂ ಇವೆ. ಬಣ್ಣ ಗುಲಾಬಿ. ಭಾರತ ದೇಶದಲ್ಲಿ ಈ ಸಸ್ಯ ಚೆನ್ನಾಗಿ ಫಲ ಕೊಡುತ್ತಿಲ್ಲ. ಈಗ ಉಷ್ಣವಲಯದ ಎಲ್ಲ ಭಾಗಗಳಲ್ಲೂ ಇದರ ಬೇಸಾಯವಿದೆ. ಈ ಸಸ್ಯವನ್ನು ಬೇರುತುಂಡುಗಳಿಂದ ವೃದ್ಧಿ ಮಾಡಬಹುದಾದರೂ ಗಿಡ ಬೇಗ ಅಂಟದು.

**4 ಐಪೋಮಿಯ ಲಿಯರಿಯೈ:** ಶ್ರೀಲಂಕ ದೇಶದಲ್ಲಿ ಸಸ್ಯಗಳನ್ನು ಸಂಗ್ರಹಣೆ ಮಾಡಿದ ಲಿಯರ್ ಮಹಾಶಯನ ಗೌರವಾರ್ಥವಾಗಿ ಈ ಪ್ರಭೇದಕ್ಕೆ ಈ ಹೆಸರು ಬಂದಿದೆ. ಶೀಘ್ರವಾಗಿ ಮತ್ತು ಎತ್ತರವಾಗಿ ಬೆಳೆಯುವ ಈ ಸಸ್ಯದ ಬುಡ ಗಟ್ಟಿಯಾಗಿದೆ. ತುದಿ ನವುರಾದ ರೋಮಗಳಿಂದ ಕೂಡಿದೆ. ಉದ್ದವಾದ ತೊಟ್ಟಿರುವ ಎಲೆ

ಕರನೆಯಾಕಾರದ್ದು. ಅಂಚು ನಯ, ಕೆಲವು ಸಾರಿ 3 ರಿಂದ 5 ಭಾಗವಾಗಿರುತ್ತದೆ. ತುದಿ ಮೊನಚು; ಬುಡದಲ್ಲಿನ ನಾಭಿ ಆಳವಾಗಿರುತ್ತದೆ. ಮೇಲು ಮತ್ತು ತಳಭಾಗಗಳಲ್ಲಿ ನಯವಾದ ರೋಮಗಳಿವೆ. ಹೂಗೊಂಚಲಿನಲ್ಲಿ 5 ಅಥವಾ ಅದಕ್ಕಿಂತ ಹೆಚ್ಚು ಹೂಗಳಿವೆ. ಅವುಗಳ ಬಣ್ಣ ಊದಾ ಮತ್ತು ನೀಲಿ ಮಿಶ್ರಣದ್ದು. ಕೂಡು ಹೂದಳದ ಮೇಲೆ 5 ನಸುಗೆಂಪು ಗೆರೆಗಳು ಇರುತ್ತವೆ. ಈ ಸಸ್ಯ ಆಗಸ್ಟ್ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಹೂ ಬಿಡುತ್ತದೆ. ಇದು ದಕ್ಷಿಣ ಅಮೆರಿಕದ ಮೂಲವಾಸಿ. ಈಗ ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ವ್ಯಾಪಿಸಿದೆ. ಈ ಸಸ್ಯವನ್ನು ಬೀಜಗಳಿಂದ ವೃದ್ಧಿ ಮಾಡಬಹುದು. ಮಳೆಗಾಲದ ಪ್ರಾರಂಭ ಬೀಜ ಬಿತ್ತಲು ಯೋಗ್ಯವಾದ ಕಾಲ.

**5 ಐಪೋಮಿಯ ಪಾಮೇಟ:** ಈ ಸಸ್ಯ ಹಸ್ತಾಕಾರದ ಎಲೆಗಳನ್ನು ಹೊಂದಿರುವುದರಿಂದ ಇದಕ್ಕೆ ಈ ಹೆಸರು. ರೈಲ್ವೆ ಬಳ್ಳಿ ಎಂಬ ಮತ್ತೊಂದು ಹೆಸರೂ ಬಳಕೆಯಲ್ಲಿದೆ. ಇದು ಬಹುವಾರ್ಷಿಕ. ಕಾಂಡದ ಮೇಲುಭಾಗದಲ್ಲಿ ರೋಮಗಳಿವೆ. ಎಲೆ ಹಸ್ತಾಕಾರ. ಒಂದು ಎಲೆಯಲ್ಲಿ 5 ರಿಂದ 7 ಕಿರು ಎಲೆಗಳು ಇರುತ್ತವೆ. ಕಿರು ಎಲೆಗಳು ಭರ್ಜಿಯಾಕಾರದಲ್ಲಿ ಅಥವಾ ಕದಿರಿನ ಆಕಾರದಲ್ಲಿ ಇವೆ. ಅಂಚು ನಯ. ತುದಿ ಮೊನಚು. ಹೂಗೊಂಚಲು 2–3 ಹೂಗಳಿರುವ ಮಧ್ಯಾರಂಬಿ. ಹೂವು ಗಂಟೆಯಾಕಾರವಾಗಿದೆ. ಬಣ್ಣ ನಸುಗೆಂಪು.

ಈ ಪ್ರಭೇದದ ಸಸ್ಯ ವರ್ಷ ಪೂರ್ತಿ ಹೂ ಮತ್ತು ಹಣ್ಣುಗಳನ್ನು ಬಿಡುತ್ತದೆ. ಇದನ್ನು ಬಳ್ಳಿ ತುಂಡುಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಕಾಂಡದ ಮೇಲಿರುವ ಗಂಟುಗಳು ಭೂಮಿಯ ಸಂಪರ್ಕಕ್ಕೆ ಬಂದಾಗ ಸಹಜವಾಗಿ ಬೇರು ಬಿಡುತ್ತವೆ.



ಐಪೋಮಿಯ ಡಿಜಿಟಾಟ

**6 ಐಪೋಮಿಯ ಕಾರ್ನಿಯ:** ಈ ಪ್ರಭೇದದ ಹೂ ಮಾಂಸದ ಬಣ್ಣದ್ದಾದುದರಿಂದ ಇದಕ್ಕೆ ಈ ಹೆಸರು. ಕಾಂಡ ದಪ್ಪ ಬಹುವಾಗಿ ಕವಲೊಡೆದು ವಿಶಾಲವಾಗಿ ಹರಡಿಕೊಂಡಿರುತ್ತದೆ. ಕಾಂಡದಲ್ಲಿ ಅಂಟಾದ ದ್ರಾವಣವಿದೆ. ಈ ಸಸ್ಯ ಚಳಿಗಾಲವನ್ನು ಬಿಟ್ಟು ಉಳಿದ ಎಲ್ಲ ಕಾಲಗಳಲ್ಲೂ ಹೂ ಬಿಡುತ್ತದೆ. ಇದು ದಕ್ಷಿಣ ಅಮೆರಿಕದ ಮೂಲವಾಸಿ. ಇದನ್ನು ಬಳ್ಳಿ ತುಂಡುಗಳಿಂದ ವೃದ್ಧಿಮಾಡಬಹುದು. ಎಲೆಗಳು ಜಾನುವಾರುಗಳಿಗೆ ವಿಷಕರವಾದದ್ದು.

**7 ಐಪೋಮಿಯ ವಿಟಿಪೋಲಿಯ:** ಇದರ ಎಲೆ ದ್ರಾಕ್ಷಿ ಎಲೆಯಂತೆ ಇರುವುದರಿಂದ ಇದಕ್ಕೆ ಈ ಹೆಸರು. ವಿಶಾಲವಾಗಿ ಬೆಳೆದು ಸದಾ ಹಸಿರಾಗಿರುವ ಬಹುವಾರ್ಷಿಕ ಬಳ್ಳಿಯಿದು. ಈ ಸಸ್ಯ ಅಕ್ಟೋಬರ್ ತಿಂಗಳಿಂದ ಮಾರ್ಚಿ ತಿಂಗಳವರೆಗೆ ಹೂ ಬಿಡುತ್ತದೆ. ಹೂವಿನ ಬಣ್ಣ ಗಂಧಕದ ಹಳದಿ. ಹಣ್ಣು ನಾಲ್ಕು ಬೀಜವಿರುವ ಸಂಪುಟದ ಮಾದರಿಯದು. ಬಳ್ಳಿ ತುಂಡುಗಳಿಂದ ಸುಲಭವಾಗಿ ಈ ಸಸ್ಯವನ್ನು ವೃದ್ಧಿಮಾಡಬಹುದು. ಎಲೆಗಳಿಗೆ ಉತ್ತಮ ಔಷಧಿ ಗುಣಗಳಿವೆ.

**8 ಐಪೋಮಿಯ ಕಾಕ್ಸಿನಿಯ:** ಹೈ ಕಡುಗೆಂಪು ಬಣ್ಣದಿಂದ ಕೂಡಿರುವುದರಿಂದ ಈ ಹೆಸರು. ಇದು ದುರ್ಬಲ ಕಾಂಡದ ವಾರ್ಷಿಕ ಬಳ್ಳಿ. ಈ ಸಸ್ಯ ಮಳೆಗಾಲದಲ್ಲಿ ಹೂಬಿಟ್ಟು ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಹಣ್ಣು ಕೊಡುತ್ತದೆ. ಇದು ಮೆಕ್ಸಿಕೋ ಮತ್ತು ಅರಿಜೋನ ದೇಶಗಳ ಮೂಲವಾಸಿ. ಈಗ ಭಾರತದ ಎಲ್ಲ ಭಾಗಗಳಲ್ಲೂ ಬೇಸಾಯದಲ್ಲಿದೆ. ಇದನ್ನು ಬೀಜಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಈ ಸಸ್ಯ ಔಷಧಿಯ ಪ್ರಾಮುಖ್ಯ ಪಡೆದಿದೆ.

**9 ಐಪೋಮಿಯ ಲೋಬೇಟ:** ಎಲೆಗಳು ಭಾಗಿತವಾಗಿರುವುದರಿಂದ ಇದಕ್ಕೆ ಈ ಹೆಸರು. ಇದು ಕುಳ್ಳಾಗಿ, ಶೀಘ್ರವಾಗಿ ಬೆಳೆಯುವ ವಾರ್ಷಿಕ ಬಳ್ಳಿ. ಹೂಗಳ ಬಣ್ಣ ಕಡುಗೆಂಪು ಅಥವಾ ಕಿತ್ತಲೆ. ಅರಳಿದ ಅನಂತರ ಇವು ಹಳದಿ ಬಣ್ಣಕ್ಕೆ ತಿರುಗುತ್ತವೆ. ಈ ಸಸ್ಯ ಸೆಪ್ಟೆಂಬರ್ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಹೂ ಬಿಡುತ್ತದೆ. ಇದು ಮೆಕ್ಸಿಕೋ ದೇಶದ ಮೂಲವಾಸಿ. ಈಗ ಇದರ ಬೇಸಾಯ ಉಷ್ಣವಲಯದ ಎಲ್ಲ ಭಾಗಗಳಲ್ಲೂ ಇದೆ.

**10 ಐಪೋಮಿಯ ಪರ್‌ಪ್ಯೂರಿಯ:** ಹೂವಿನ ಬಣ್ಣ ಕೆನ್ನೀಲಿಯಾದ್ದರಿಂದ ಸಸ್ಯಕ್ಕೆ ಈ ಹೆಸರು. ಇದು ವಾರ್ಷಿಕ ಸಸ್ಯ. ಬಳ್ಳಿಯ ಮೇಲೆ ನಯವಾದ ರೋಮಗಳಿವೆ. ಹೂವಿನದು ಆಲಿಕೆಯಾಕಾರ. ಬಣ್ಣ ಬಿಳುಪಿನಿಂದ ಕೆನ್ನೀಲಿವರೆಗೆ; ಮಳೆಗಾಲದಲ್ಲಿ ಹೂ ಬಿಟ್ಟು ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಹಣ್ಣು ಕೊಡುತ್ತದೆ. ಇದು ಅಮೆರಿಕದ ಉಷ್ಣಪ್ರದೇಶಗಳ ಮೂಲವಾಸಿ; ಭಾರತದಲ್ಲಿ ಅಷ್ಟೇ ಚೆನ್ನಾಗಿ ಬೆಳೆಯುತ್ತದೆ. ಬೀಜಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಆಫ್ರಿಕಾದಲ್ಲಿ ಇದನ್ನು ಔಷಧಿಗಳಿಗಾಗಿ ಉಪಯೋಗಿಸುತ್ತಾರೆ.

**11 ಐಪೋಮಿಯ ಸಿನ್ಯುಯೇಟ:** ಈ ಬಳ್ಳಿ ವಿಶಾಲವಾಗಿ ಬೆಳೆಯುತ್ತದೆ. ಮೈಮೇಲೆ ಹಳದಿ ಬಣ್ಣದ ರೋಮಗಳಿವೆ. ಎಲೆ ಹಸ್ತಾಕಾರದ್ದು. ಹೂಗೊಂಚಲಿಗೆ ಉದ್ದವಾದ ತೊಟ್ಟು ಇದ್ದು ತುದಿಯಲ್ಲಿ ಎರಡು ಹೂಗಳಿರುತ್ತವೆ. ಹೂವಿನ ಆಕಾರ ಗಂಟೆಯಂತೆ. ಬಣ್ಣ ಬಿಳಿ.

**ಆರ್ಥಿಕ ಪ್ರಾಮುಖ್ಯ:** ಈ ಜಾತಿಯ ಒಂದು ಪ್ರಭೇದವಾದ ಐಪೋಮಿಯ ಬಟಾಟಸ್ ಎಂಬುದೇ ಗೆಣಸಿನ ಸಸ್ಯ. ಇದು ಮಾನವನ ಆಹಾರ ಹಾಗೂ ತರಕಾರಿಯ ರೂಪದಲ್ಲೂ ಇತರ ವಿಧಗಳಲ್ಲೂ ಬಳಕೆಯಲ್ಲಿದೆ. ಐಪೋಮಿಯ ಪರ್ಗ ಮತ್ತು ಐಪೋಮಿಯ ಟರ್ಪೆಥಂ ಎಂಬ ಪ್ರಭೇದಗಳಿಂದ ಜಲಾಪ ಎಂಬ ಭೇದಿ ಔಷಧಿಯನ್ನು ತಯಾರಿಸುತ್ತಾರೆ. ಹಿಂದೆ ವಿವರಿಸಿರುವ ಹಲವು ಪ್ರಭೇದಗಳನ್ನು ಅವುಗಳ ಅಲಂಕಾರದ ಹೂಗಳಿಗಾಗಿ ಉದ್ಯಾನಗಳಲ್ಲೂ ಮನೆಗಳ ಮುಂದೆಯೂ ಬೆಳೆಸುತ್ತಾರೆ. ಮರಳು ದಿಣ್ಣೆಗಳು ಕುಸಿಯದಂತೆ ತಡೆಯಲು ಐಪೋಮಿಯ ಪ್ರೆಸ್ ಕ್ಯಾಪ್ರೆ ಎಂಬ ಪ್ರಭೇದವನ್ನು ಬೆಳೆಸುವರು. (ಡಿ.ಎಂ.ಎಸ್.ಎನ್.ಆರ್.)

**ಐಫಲ್, ಅಲೆಕ್ಸಾಂಡರ್ ಗಸ್ಟಾವ್:** 1832–1923. ಪ್ಯಾರಿಸ್ ನಗರದಲ್ಲಿರುವ ವಿಶ್ವವಿಖ್ಯಾತ ಐಫಲ್ ಗೋಪುರದ **(ನೋಡಿ– ಐಫಲ್–ಗೋಪುರ)** ನಿರ್ಮಾತೃ. ಇವನೊಬ್ಬ ಫ್ರೆಂಚ್ ಎಂಜಿನಿಯರ್. 1855ರಲ್ಲಿ ಪ್ಯಾರಿಸಿನಲ್ಲೇ ಪದವೀಧರನಾಗಿ ಬೃಹತ್ ಲೋಹ ರಚನಾಕೃತಿಗಳನ್ನು ರೂಪಿಸುವುದರಲ್ಲಿ ವಿಶೇಷ ಜ್ಞಾನ ಸಂಪಾದಿಸಿ, ಈ ಕ್ಷೇತ್ರದಲ್ಲಿ ಹೆಚ್ಚಿನ ಪ್ರವರ್ಧಮಾನಕ್ಕೆ ಬಂದ. ಅಂತರ್ಜಲ ಅಡಿಪಾಯಗಳಿಗೆ **(ನೋಡಿ– ಅಂತರ್ಜಲ ಸಂಪುಟ)** ಒತ್ತರಗೊಂಡ ಗಾಳಿಯನ್ನು ಮೊದಲು ಬಳಸಿದವರಲ್ಲಿ ಈತನೂ ಒಬ್ಬ. ಫ್ರಾನ್ಸಿನಲ್ಲಲ್ಲದೆ ಹೊರನಾಡುಗಳಲ್ಲೂ ಮುಖ್ಯ ಸೇತುವೆಗಳನ್ನೂ ಸೇತುವೆಮಾರ್ಗಗಳನ್ನೂ ರೂಪಿಸಿದ ಖ್ಯಾತಿ ಇವನದು. ಹಂಗೆರಿಯ ರಾಜಧಾನಿ ಬುಡಾಪೆಸ್ಟಿನ ಮುಖ್ಯ ರೈಲುನಿಲ್ದಾಣದಲ್ಲಿ ಒಂದು ಬೃಹದ್ ಮೇಲ್ಚಾವಣಿಯನ್ನು ಈತ ರಚಿಸಿದನಲ್ಲದೆ 1878ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಒಂದು ವಸ್ತು ಪ್ರದರ್ಶನಕ್ಕೆ ಬೇರೆ ಬೇರೆ ಪ್ರದರ್ಶನ ಮಂಟಪ ನಮೂನೆಗಳನ್ನೂ ರಚಿಸಿಕೊಟ್ಟ. ಎಲ್ಲಕ್ಕಿಂತಲೂ ಮಿಗಿಲಾದ ಇವನ ದೊಡ್ಡ ಕೆಲಸವೆಂದರೆ ಪ್ಯಾರಿಸಿನ ಚಾಂಪ್ ಡಿ ಮಾರ್ಸ್‌ನಲ್ಲಿರುವ ಐಫಲ್ ಗೋಪುರದ ನಿರ್ಮಾಣ (1889).

ಪನಾಮ ಕಾಲುವೆಯ ನಿರ್ಮಾಣದಲ್ಲಿ ಹಡಗುಕಟ್ಟೆಗಳನ್ನು ರೂಪಿಸುವ ಕೆಲಸಕ್ಕೆ ಐಫಲ್‌ನನ್ನು ಕರೆಯಿಸಿಕೊಳ್ಳಲಾಯಿತು. ಇದನ್ನು ಪೂರ್ಣಗೊಳಿಸಲು ತೀರ ಹೆಚ್ಚು ಕಾಲವನ್ನು ಅಂದರೆ ಮೂವತ್ತು ವರ್ಷಗಳನ್ನು ತೆಗೆದುಕೊಂಡನೆಂಬ ದೂರಿಗೆ ಈತ ಒಳಗಾಗಬೇಕಾಯಿತು. ಅನಂತರ ತನ್ನ ವೇಳೆಯನ್ನು ವಾಯುಗತಿವಿಜ್ಞಾನದ ಸಂಶೋಧನೆ ಮತ್ತು ಪ್ರಯೋಗಗಳಿಗೆ ಈತ ಮೀಸಲಾಗಿಸಿದ. ಇದರಿಂದಾಗಿ ವಾಯುಗತಿವಿಜ್ಞಾನದ ಮೊದಲ ಪ್ರಯೋಗಾಲಯವನ್ನು ಓಟಈ ಎಂಬಲ್ಲಿ 1912ರಲ್ಲಿ ಸ್ಥಾಪಿಸಿದ. 1907–19ರ ಅವಧಿಯಲ್ಲಿ ಈತ ನಡೆಸಿದ ಅಧ್ಯಯನ ಮತ್ತು ರಚಿಸಿದ ಗ್ರಂಥಗಳಿಂದಾಗಿ ವಿಮಾನ ರಚನೆಯ ಬಗ್ಗೆ ಅನೇಕ ಮೂಲಭೂತ ಅಂಶಗಳು ಬೆಳಕಿಗೆ ಬಂದುವು. ಗಾಳಿಗಿಂತ ಹಗುರವಾದ ವಾಯುಯಾನದ ಬಗ್ಗೆ ಈತನದೇ ಒಂದು ವ್ಯಾಪಕ ಸಿದ್ಧಾಂತವಿದೆ. ಯಂತ್ರಶಿಲ್ಪವಿಜ್ಞಾನದ ಅಗತ್ಯಗಳಿಗೆ ಅನುಗುಣವಾಗಿ ವಿಮಾನಗಳ ರಚನೆಯನ್ನು ಅನುಮಾಡಿಕೊಂಡು, ವಾಯು–ಸುರಂಗ ಮತ್ತು ಗಾಳಿತಡೆಯ ಮೇಲಿನ ಅಂಕಿ–ಅಂಶಗಳ ನಡುವೆ ಒಂದು ಗಮನಾರ್ಹ ಸಂಬಂಧವನ್ನು ಈತ ಸಾಧಿಸಿಕೊಟ್ಟ. ರೆಸಿಸ್ಟೆನ್ಸ್ ಆಫ್ ದಿ ಏರ್ ಅಂಡ್ ಏವಿಯೇಷನ್ ಎಂಬ ಈತನ ಪುಸ್ತಕ 1913ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ನೌಕಾಪಡೆಯ ಕಮಾಂಡರ್ ಜೆರೋಮ್ ಸಿ ಹನ್‌ಸಕರ್ ಎಂಬುವನಿಂದ ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿದೆ. ತಾನು ಸ್ಥಾಪಿಸಿದ ಓಟ ಈ ಪ್ರಯೋಗ ಶಾಲೆಯನ್ನು 1920ರಲ್ಲಿ ಫ್ರೆಂಚ್ ಸರ್ಕಾರಕ್ಕೆ ಈತ ವಹಿಸಿಕೊಟ್ಟ. ಈತ ನಿಧನನಾದದ್ದು ಪ್ಯಾರಿಸಿನಲ್ಲೇ.

*

**ಐಫಲ್ ಗೋಪುರ:** ಫ್ರಾನ್ಸ್ ದೇಶದ ಪ್ಯಾರಿಸ್ ನಗರದಲ್ಲಿರುವ ಮಹಾನ್ ಗೋಪುರ. ಪ್ಯಾರಿಸಿನ ವಸ್ತುಪ್ರದರ್ಶನಕ್ಕೋಸ್ಕರ ಇದನ್ನು ನಿರ್ಮಿಸಲಾಯಿತು (1889). ಫ್ರಾನ್ಸ್ ದೇಶದ ಪ್ರಸಿದ್ಧ ಇಂಜಿನಿಯರ್ ಮತ್ತು ಸೇತುವೆ ನಿರ್ಮಾಣಕಾರನಾದ ಅಲೆಕ್ಸಾಂಡರ್ ಗಸ್ಟಾವ್ ಐಫಲ್ ಈ ಪ್ರಖ್ಯಾತ ಗೋಪುರವನ್ನು ರೂಪಿಸಿ, ನಿರ್ಮಿಸಿದ. (**ನೋಡಿ– ಐಫಲ್,–ಅಲೆಕ್ಸಾಂಡರ್–ಗಸ್ಟಾವ್**) ಈತನ ಹೆಸರನ್ನೇ ಗೋಪುರಕ್ಕೆ ಇಡಲಾಗಿದೆ.



ಐಫಲ್ ಗೋಪುರ

ಪ್ಯಾರಿಸಿನ ಚ್ಯಾಂಪ್ ಡಿ ಮಾರ್ಸ್‌ನಲ್ಲಿರುವ ಈ ಬೃಹದ್‌ಗೋಪುರದ ಎತ್ತರ 298 ಮೀ. ಸುಮಾರು 340 ಚ.ಅ. ಜಾಗವನ್ನಿದು ಆಕ್ರಮಿಸಿದೆ. ಮೆದು ಕಬ್ಬಿಣದಿಂದಾದ ಇದರ ತೂಕ 7,300 ಟನ್ನುಗಳು. ಇದರ ನಿರ್ಮಾಣಕ್ಕೆ ಹತ್ತು ಲಕ್ಷಕ್ಕಿಂತ ಹೆಚ್ಚು ಡಾಲರುಗಳನ್ನು ವ್ಯಯಮಾಡಲಾಗಿದೆ. ಈ ಗೋಪುರದಿಂದಾಗಿ ಪ್ಯಾರಿಸಿನ ಸೌಂದರ್ಯ ಹೆಚ್ಚಿದೆ. 63 ಜನರನ್ನು ಒಟ್ಟಿಗೆ ಒಯ್ಯಬಲ್ಲ ಮೂರು ವಿದ್ಯುಚ್ಚಾಲಿತ ಎತ್ತಿಗೆ ಯಂತ್ರಗಳು ಕುತೂಹಲವುಳ್ಳವರನ್ನು ಗೋಪುರದ ತುದಿಗೊಯ್ಯುತ್ತವೆ. ಗೋಪುರದ ನೆತ್ತಿಯಿಂದ ಸುತ್ತಲ 136 ಕಿಮೀಗಳ ದೃಶ್ಯ ಗೋಚರವಾಗುತ್ತವೆ. ಹೀಗಾಗಿ ಪ್ರವಾಸಿಗಳ ಮುಖ್ಯ ಆಕರ್ಷಣೆಗಳಲ್ಲಿ ಇದೂ ಒಂದಾಗಿದೆ. ಇದರಲ್ಲೇ 55' ಎತ್ತರದ ಪ್ರಸಾರ ಕೇಂದ್ರವನ್ನು ಅಳವಡಿಸಲಾಗಿದೆ. (ಎಂ.ಜಿ.ಎಸ್.)

**ಐಬಿಸ್:** ಕ್ರೌಂಚ (ಹೆರಾನ್) ಮತ್ತು ಕೊಕ್ಕರೆಯ (ಸ್ಟಾರ್ಕ್) ಕುಟುಂಬಕ್ಕೆ ಸೇರಿದ ಒಂದು ನೀರುಹಕ್ಕಿ. ಇದರಲ್ಲಿ ಅನೇಕ ಪ್ರಭೇದಗಳಿವೆ. ಇವು ಪ್ರಪಂಚದ ನಾನಾ ಭಾಗಗಳಲ್ಲಿ ಹರಡಿವೆ. ಭಾರತದ ಹಲವೆಡೆಗಳಲ್ಲಿ ಕರ್ನಾಟಕ ರಾಜ್ಯದ ಅನೇಕ ಭಾಗಗಳಲ್ಲಿ ಹರಡಿವೆ. ಭಾರತದ ಹಲವೆಡೆಗಳಲ್ಲಿ ಕರ್ನಾಟಕ ರಾಜ್ಯದ ಅನೇಕ ಭಾಗಗಳಲ್ಲಿ ಬಿಳಿ ಮತ್ತು ಕರಿಯ ಎರಡು ಪ್ರಭೇದಗಳು ಕಾಣಸಿಗುತ್ತವೆ. ಐಬಿಸ್ ಹಕ್ಕಿ ಗಾತ್ರದಲ್ಲಿ ದೊಡ್ಡದು. ಕೊಕ್ಕು ಉದ್ದವಾಗಿ ಪಿಕಾಸಿಯ ಅಲಗಿನಂತೆ ಮುಂದಕ್ಕೆ ಬಾಗಿರುತ್ತದೆ. ಅನೇಕ ಬಗೆಯವಕ್ಕೆ ತಲೆಯ ಮೇಲೆ ಪುಕ್ಕಗುಚ್ಛವಿದೆ. ಬಿಳಿ ಮತ್ತು ಕರಿ ಐಬಿಸುಗಳಿಗೆ ಬಣ್ಣದಲ್ಲಿ ಮಾತ್ರ ವ್ಯತ್ಯಾಸವುಂಟು. ಅಮೆರಿಕದ ಉಷ್ಣವಲಯ ಪ್ರದೇಶಗಳಲ್ಲಿ ಕೆಂಪು ಐಬಿಸ್ ಇದೆ. ಕೆಂಪು ರೆಕ್ಕೆ ಪುಕ್ಕಗಳಿಗಾಗಿ ಈ ಹಕ್ಕಿಯನ್ನು ಎರಡು ಶತಮಾನ ಬೇಟೆಯಾಡಿದರಾಗಿ ಇದರ ವಂಶ ತೀರ ನಶಿಸಿಹೋಗಿದೆ. ಅಳಿದುಳಿದ ಕೆಲವು ಕುಟುಂಬಗಳನ್ನು ಕಾನೂನಿನ ಬಂಧನ ಹಾಕಿ ಈಗ ಕಾಪಾಡಲಾಗಿದೆ.

ಐಬಿಸ್ ಹಕ್ಕಿಯ ಜೀವನ ಕ್ರಮವೆಲ್ಲ ಕ್ರೌಂಚ, ಬಕಗಳಂತೆಯೆ. ಇದು ಗುಂಪಿನಲ್ಲಿ ವಾಸಿಸುತ್ತದೆ. ಕೆಲವೇಳೆ ಒಂದು ಗುಂಪಿನಲ್ಲಿ ಸಾವಿರ ಹಕ್ಕಿಗಳಿರುವುದೂ ಉಂಟು. ನೀರಿನ ಆಶ್ರಯದಲ್ಲಿದ್ದು ಮೀನು, ಏಡಿ, ಕಪ್ಪೆ ಮೊದಲಾದುವನ್ನು ಇದು ಹಿಡಿದು ತಿನ್ನುತ್ತದೆ. ದೊಡ್ಡ ಮರದ ಕವೆಗೊಂಬಿನಲ್ಲಿ ಕಡ್ಡಿಗಳಿಂದ ಗೂಡು ಕಟ್ಟಿಕೊಂಡು ಇದು ವಾಸಿಸುತ್ತದೆ. ವಾಡಿಕೆಯಾಗಿ ಒಂದು ಬಾರಿಗೆ ಎರಡರಿಂದ ನಾಲ್ಕು ಮೊಟ್ಟೆ ಇಡುತ್ತದೆ.

ಈ ಹಕ್ಕಿ ಓಸಿರಿಸ್ ದೇವತೆಯ ದೂತವಾಗಿದ್ದುಕೊಂಡು ಮಾನವರು ಮಾಡುವ ತಪ್ಪುಗಳನ್ನೆಲ್ಲ ಎಣಿಕೆಹಾಕಿ ವರದಿ ಒಪ್ಪಿಸುತ್ತದೆಂದು ಈಜಿಪ್ಟಿನವರು ನಂಬಿದ್ದರು. (ಜಿ.ಎಂ.ಬಿ.)



ಪ್ರ.ಶ.ಪೂ. 3ನೆಯ ಶತಮಾನದಲ್ಲಿದ್ದ ಪ್ರಾಚೀನ ಗ್ರೀಕ್ ಕವಿ ಕಲ್ಲಿಮಾಕಸ್ ಮತ್ತು ಆತನ ಸ್ಪರ್ಧಿ ಅಪೊಲೋನಿಯಸ್–ಇವರ ಮಧ್ಯೆ ನಡೆದ ವಿರಸದಲ್ಲಿ ಜನಿಸಿದ ಪದ್ಯವೊಂದಕ್ಕೆ ಐಬಿಸ್ ಎಂಬ ಹೆಸರಿದೆ. ಇದರ ಪ್ರತಿ ಈಗ ಸಿಕ್ಕಿಲ್ಲದಿದ್ದರೂ ಓವಿಡ್ ಮತ್ತು ಸುಯಿದಾಸ್ ಕವಿಗಳು ಇದರ ಬಗ್ಗೆ ಹೇಳಿದ್ದಾರೆ. ಈ ಪದ್ಯದ ವಸ್ತು ಅಪೊಲೋನಿಯಸ್ ಮೇಲಿನ ಟೀಕೆ. ಐಬಿಸ್ ಎಂಬುದು ಈಜಿಪ್ಟಿನ ಹಕ್ಕಿ. ಅದು ನೋಡಲು ಅಂದವಿಲ್ಲ. ಕರ್ಕಶ ಧ್ವನಿಯೇ ಅದರ ಸ್ವರ. ಅದರ ಸ್ವಭಾವಗಳು ಬೇಸರ ತರಿಸುವಂಥವು. ಕಲ್ಲಿಮಾಕಸ್ ಅಪೊಲೋನಿಯಸನನ್ನು ಐಬಿಸ್ ಹಕ್ಕಿಗೆ ಹೋಲಿಸಿದ್ದಾನೆ. ಅಲ್ಲದೆ ಈ ಪದ್ಯಗಳ ಹಲವು ಭಾಗಗಳು ಸಮಸ್ಯಾತ್ಮಕವಾಗಿವೆಯೆಂದು ಹೇಳುತ್ತಾರೆ.

ಈ ವಿವರದಿಂದ ಐಬಿಸ್ ಹಕ್ಕಿಯ ವಿಷಯದಲ್ಲಿ ಈಜಿಪ್ಟಿನವರಿಗಿದ್ದ ಅಭಿಪ್ರಾಯ ಇನ್ನೂ ಸ್ಪಷ್ಟವಾಗುತ್ತದೆ. (ಟಿ.ವಿ.ಎಸ್.)

**ಐಬೀರಿಯನ್ ಪರ್ಯಾಯದ್ವೀಪ:** ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ಸಮುದ್ರಗಳ ನಡುವೆ ಇರುವ, ಸ್ಪೇನ್ ಪೋರ್ಚುಗಲ್ಲುಗಳನ್ನೊಳಗೊಂಡ, ಆಗ್ನೇಯ ಯೂರೋಪಿನ ಪರ್ಯಾಯದ್ವೀಪ. ಇದನ್ನು ಯುರೋಪ್ ಖಂಡದ ಉಳಿದ ಭಾಗದಿಂದ ಪಿರನೀಸ್ ಪರ್ವತವೂ ಉತ್ತರ ಆಫ್ರಿಕಾದಿಂದ ಜಿಬ್ರಾಲ್ಟರ್ ಜಲಸಂಧಿಯೂ ಪ್ರತ್ಯೇಕಿಸುತ್ತವೆ. ನವಶಿಲಾಯುಗದಲ್ಲಿ ಆಫ್ರಿಕಾದಿಂದ ಇಲ್ಲಿಗೆ ವಲಸೆ ಬಂದರೆಂದು ನಂಬಲಾಗಿರುವ ಪುರಾತನ ಐಬೀರಿಯನರಿಂದ ಇದಕ್ಕೆ ಈ ಹೆಸರು ಬಂದಿದೆ. ಇದರ 4/5 ಭಾಗವನ್ನು ಸ್ಪೇನ್ ದೇಶ ಆವರಿಸಿದೆ; ಇದರ ಹೆಚ್ಚು ಭಾಗ ಪ್ರಸ್ಥಭೂಮಿ. ಸುತ್ತ ಇರುವ ಪರ್ವತಶ್ರೇಣಿಗಳಿಂದ ಹರಿಯುವ ನದಿಗಳ ಪೈಕಿ ಟೇಗಸ್, ಡೋರೂ, ಗ್ವಾಡಲ್‌ಕ್ವಿವರ್ ಮತ್ತು ಏಬ್ರೋ ಮುಖ್ಯ. ಇದರ ವಿಸ್ತೀರ್ಣ 581174 ಚ.ಕಿಮೀ ಕರಾವಳಿಯ ಮೈದಾನ ಕಿರಿದು.

ಈ ಪರ್ಯಾಯದ್ವೀಪದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಸಾಕಷ್ಟು ಮಳೆಯಾಗುತ್ತದೆ; ಒಳಭಾಗಗಳಲ್ಲಿ ಕಡಿಮೆ. ಕಣಿವೆಗಳಲ್ಲೂ ಪರ್ವತಗಳ ಮೇಲೂ ಸಾಧಾರಣವಾಗಿ ಕಾಡುಗಳು ಬೆಳೆದಿವೆ. ಬಯಲುಪ್ರದೇಶಗಳಲ್ಲಿ ಗೋದಿ, ಬಾರ್ಲಿ, ಮೆಕ್ಕೆಜೋಳ, ರೈ, ಆಲಿವ್, ಹೊಗೆಸೊಪ್ಪು, ಹಣ್ಣು ಮತ್ತು ಬತ್ತ ಮುಖ್ಯ ಬೆಳೆಗಳು. ದನಕರು ಮತ್ತು ಕುರಿಗಳನ್ನು ಮಾಂಸ, ಚರ್ಮ, ಹಾಲು ಮತ್ತು ಉಣ್ಣೆಗಳಿಗಾಗಿ ಸಾಕುತ್ತಾರೆ. ಮೀನುಗಾರಿಕೆಯೂ ಒಂದು ಮುಖ್ಯ ಕಸುಬು. ಈ ಪ್ರದೇಶದಲ್ಲಿ ಪಾದರಸ, ಕಲ್ಲಿದ್ದಲು, ಕಬ್ಬಿಣ, ಸೀಸ, ತವರ, ತಾಮ್ರ, ಸತು, ಪೊಟ್ಯಾಷ್ ಖನಿಜಗಳು ಸಿಕ್ಕುವುವು. ಇವುಗಳಲ್ಲಿ ಹೆಚ್ಚು ಪಾಲು ರಫ್ತಾಗುತ್ತವೆ. ಹತ್ತಿ, ಧಾನ್ಯ, ಸಕ್ಕರೆ, ಕಾಫಿ, ಯಂತ್ರೋಪಕರಣಗಳು, ಬಟ್ಟೆ, ಪೆಟ್ರೋಲಿಯಂ ಮುಂತಾದವು ಆಮದಾಗುತ್ತವೆ. ಕಬ್ಬಿಣ ಮತ್ತು ಉಕ್ಕು, ಬಟ್ಟೆಗಳು, ಸಿಗರೇಟು, ಚರ್ಮದ ಸಾಮಾನುಗಳು, ಮದ್ಯ–ಇವು ಈ ಪ್ರದೇಶದ ಕೆಲವು ಮುಖ್ಯ ಕೈಗಾರಿಕೆಗಳು. ಒಳನಾಡಿನಲ್ಲಿ ಹೆಚ್ಚಿನ ಮಾರ್ಗಾನುಕೂಲಗಳಿಲ್ಲದಿರುವುದಕ್ಕೆ ಪ್ರಾಕೃತಿಕ ಅಡಚಣೆಯೂ, ವಿರಳ ಜನಸಂಖ್ಯೆಯೂ ಕಾರಣ. ಆದರೆ ಕರಾವಳಿಯ ಮೈದಾನಗಳಲ್ಲಿ ಮತ್ತು ನದೀ ಕಣಿವೆಗಳಲ್ಲಿ ಸಂಚಾರಸೌಲಭ್ಯಗಳು ಹೆಚ್ಚು ಸಮರ್ಪಕ. ಜನ ಹೆಚ್ಚಾಗಿ ಚಿಕ್ಕ ಪಟ್ಟಣಗಳಲ್ಲಿ ವಾಸಿಸುತ್ತಾರೆ. ಮ್ಯಾಡ್ರಿಡ್ ಸ್ಪೇನಿನ ರಾಜಧಾನಿ ಮತ್ತು ಕೈಗಾರಿಕಾ ಕೇಂದ್ರ, ಮಾರ್ಗಸಂಧಿ. ಲಿಸ್ಬನ್ ಪೋರ್ಚುಗಲ್ಲಿನ ರಾಜಧಾನಿ ಮತ್ತು ಬಂದರು. (ಎ.ಕೆ.)

**ಐಬೀರಿಯನ್ ಸಂಸ್ಕೃತಿ:** ಪ್ರಾಚೀನ ಗ್ರೀಕ್ ಚರಿತ್ರಕಾರರು ವಿಶಾಲವಾದ ಅರ್ಥದಲ್ಲಿ ನೈಋತ್ಯ ಯುರೋಪಿನ ಪ್ರಾಚೀನ ಜನಗಳನ್ನು ಐಬೀರಿಯನರೆಂದು ಕರೆದರು. ಆದರೆ ಸಾಮಾನ್ಯವಾಗಿ ಪೂರ್ವ ಸ್ಪೇನಿನಲ್ಲಿ, ಅದರಲ್ಲೂ ಐಬರಸ್ ನದಿಯ (ಈಗಿನ ಏಬ್ರೋ) ಕೊಳ್ಳದಲ್ಲಿ ವಾಸಿಸುತ್ತಿದ್ದ ಜನಾಂಗದವರನ್ನು ಐಬೀರಿಯನರೆಂದು ಕರೆಯಬಹುದು. ಇವರು ಉತ್ತರ ಆಫ್ರಿಕದಿಂದ ದಕ್ಷಿಣ ಯುರೋಪಿಗೆ ನೂತನಶಿಲಾಯುಗದ ಕಾಲದಲ್ಲಿ ಅಂದರೆ ಪ್ರ.ಶ.ಪೂ. ಸು. 3,000ದಲ್ಲಿ ಬಂದು ನೆಲೆಸಿದರು. ಇವರು ಹ್ಯಾಮಿಟಿಕ್ ಬುಡಕಟ್ಟಿನವರು. ಒಂದು ಸಿದ್ಧಾಂತದ ಪ್ರಕಾರ ಇತಿಹಾಸ ಪೂರ್ವಕಾಲದಲ್ಲಿ ಐಬೀರಿಯನರು ಯುರೋಪಿನ ವಿವಿಧ ಭಾಗಗಳನ್ನು ಆಕ್ರಮಿಸಿಕೊಂಡಿದ್ದರೆಂದೂ ಕಾಲಕ್ರಮದಲ್ಲಿ ಅವರ ಬುಡಕಟ್ಟು ನಾಶವಾಯಿತೆಂದೂ ಇಂದಿನ ಬಾಸ್ಕ್ ಬುಡಕಟ್ಟಿನ ಜನ ಐಬೀರಿಯನರಿಂದಲೇ ಹುಟ್ಟಿದವರೆಂದೂ ತಿಳಿದುಬರುತ್ತದೆ. ಇತಿಹಾಸಪೂರ್ವಕಾಲದ ಫ್ರಾನ್ಸ್, ಗ್ರೇಟ್ ಬ್ರಿಟನ್, ಐರ್‌ಲೆಂಡ್‌ಗಳಲ್ಲಿ ಐಬೀರಿಯನ್ ಸಂಸ್ಕೃತಿಗೆ ಸೇರಿದ ಅವಶೇಷಗಳು ದೊರಕಿವೆ. ರೋಮನ್ ಚರಿತ್ರಕಾರರ ಅಭಿಪ್ರಾಯದಂತೆ ಐಬೀರಿಯನರು ಕುಳ್ಳರು, ಕಪ್ಪು ವರ್ಣದವರು, ಸಣ್ಣ ಮುಖ ಮತ್ತು ದಪ್ಪ ಕೆಳತುಟಿ ಉಳ್ಳವರು. ಐಬೀರಿಯನ್ ಜನಾಂಗದಲ್ಲಿ ಅನೇಕ ಪ್ರಭೇದಗಳಿವೆ. ಆಲ್ಮೇರಿಯಾದಲ್ಲಿ ವಾಸಿಸುತ್ತಿದ್ದ ಬಸ್ತೆತನಿಗಳೂ ಪಶ್ಚಿಮದಲ್ಲಿದ್ದ ಟರ್ಟೆಸ್ಸಿಯನರೂ ಇವರಲ್ಲಿ ಮುಖ್ಯರಾದವರು.

ಪ್ರ.ಶ.ಪೂ. 6 ಮತ್ತು 7ನೆಯ ಶತಮಾನಗಳಲ್ಲಿ ಕೆಲ್ಟಿಕ್ ದಂಡಯಾತ್ರೆಗಳಿಗೆ ಐಬೀರಿಯನರು ಒಳಗಾದರು. ಅನಂತರ ಗ್ರೀಕರು ಇವರ ಮೇಲೆ ದಾಳಿ ನಡೆಸಿದರು. ಪ್ರ.ಶ.ಪೂ. 4ನೆಯ ಶತಮಾನದ ಹೊತ್ತಿಗೆ ಕಾರ್ಥೇಜಿಯನರ ಪ್ರಭಾವ ಹೆಚ್ಚಾಯಿತು. ಅನಂತರ ರೋಮನ್ ದಾಳಿಗಳಿಗೆ ಒಳಗಾಗಿ ಐಬೀರಿಯನ್ ಸಂಸ್ಕೃತಿ ನಾಶವಾಯಿತು.

ಎತ್ತರವಾದ ಗೋಡೆಗಳಿಂದ ಆವೃತವಾದ ನಗರಗಳಲ್ಲಿ ಐಬೀರಿಯನರ ವಾಸ. ಟ್ಯಾರಗೋನ, ಟಾರ್ಟೆಸಸ್, ಮಸ್ಸಿಯ ಮುಂತಾದ ಕಡೆಗಳಲ್ಲಿ ಕಾಣಬರುವ ಮಹತ್ತರವಾದ ಗೋಡೆಗಳು ಐಬೀರಿಯನರ ರಾಜಕೀಯ ಭದ್ರತೆಯನ್ನೂ ಮಹತ್ತ್ವವನ್ನೂ ಸೂಚಿಸುತ್ತವೆ. ಈ ಕೋಟೆಗಳು ಕಾರ್ಥೇಜಿಯನರಿಂದ ನಾಶವಾದುವು. ವ್ಯವಸಾಯ, ಗಣಿಗಾರಿಕೆ, ಲೋಹವಿದ್ಯೆ ಮುಂತಾದವುಗಳಲ್ಲಿ ಇವರು ನಿಷ್ಣಾತರಾಗಿದ್ದರು. ಐಬೀರಿಯನರ ನಾಣ್ಯಗಳು ವಿಶೇಷವಾಗಿ ದೊರಕಿವೆ. ಪ್ರ.ಶ.ಪೂ. 5ನೆಯ ಶತಮಾನದ ಗ್ರೀಕ್ ನಾಣ್ಯಗಳ ಪ್ರಭಾವಗಳನ್ನು ಎತ್ತಿತೋರಿಸುವ ಇವರ ನಾಣ್ಯಗಳು ವೈವಿಧ್ಯಮಯ. ರೋಮನರ ದಂಡಯಾತ್ರೆಗಳ ಅನಂತರ ರೋಮನ್ ನಾಣ್ಯಗಳ ಪ್ರಭಾವಗಳು ವಿಶೇಷವಾದುವು. ಈ ನಾಣ್ಯಗಳ ಮುಂಬದಿಯಲ್ಲಿ ಐಬೀರಿಯನರ ಮುಖ್ಯ ನಗರಗಳ ಹೆಸರುಗಳೂ ಅಶ್ವಾರೋಹಿ ಯೋಧನ ಚಿತ್ರವೂ ಹಿಂಬದಿಯಲ್ಲಿ ರಾಜನ ತಲೆಯ ಚಿತ್ರವೂ ಇವೆ. ಇವುಗಳಲ್ಲಿರುವ ಬರೆವಣಿಗೆಯನ್ನು ಇನ್ನೂ ಪೂರ್ಣವಾಗಿ ಓದಲಾಗಿಲ್ಲವೆಂದೇ ಹೇಳಬೇಕು. ಈ ಲಿಪಿ ಪಶ್ಚಿಮ ಗ್ರೀಕ್ ಮತ್ತು ಪ್ಯೂನಿಕ್ ಲಿಪಿಗಳನ್ನು ವಿಶೇಷವಾಗಿ ಹೋಲುತ್ತದೆ. ಇವರ ಪ್ರಾಚೀನ ಗ್ರಂಥಗಳು ನಮಗೆ ಉಪಲಬ್ಧವಾಗಿಲ್ಲದಿದ್ದರೂ ಐಬೀರಿಯನರು ಉತ್ತಮ ಸಾಹಿತ್ಯ ಹೊಂದಿದ್ದರೆಂದು ಹೇಳಲು ಆಧಾರಗಳಿವೆ.

ಇವರ ಕುಂಭನಿರ್ಮಾಣದಲ್ಲಿ ಐಬೀರಿಯನ್ ಕಲೆಯ ಪರಿಪೂರ್ಣತೆಯನ್ನು ಕಾಣಬಹುದು. ಇದು ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿ ಮುಟ್ಟಿತ್ತು. ಮಡಕೆಗಳ ಮೇಲಿನ ಪ್ರಾಣಿಗಳು, ಗಿಡಮರಗಳು, ಪಕ್ಷಿಗಳು, ಮನುಷ್ಯರು ಮತ್ತು ಜ್ಯಾಮಿತಿಯ ವಿವಿಧ ಚಿಹ್ನೆಗಳ ಕೌಶಲಭರಿತ ವರ್ಣಚಿತ್ರಗಳಿವೆ. ಹೂಜಿಗಳ ಮೇಲಿನ ವರ್ಣಚಿತ್ರಗಳಂತೂ ಉತ್ತಮಮಟ್ಟದವು. ಯುದ್ಧ, ನಾಟ್ಯ, ಬೇಟೆ, ಸಂಸಾರ ಮುಂತಾದವುಗಳ ವರ್ಣಚಿತ್ರಗಳನ್ನು ಹೂಜಿಗಳ ಮೇಲೆ ಬಿಡಿಸಲಾಗಿದೆ. ಈ ಹೂಜಿಗಳ ಮೇಲೆ ಐಬೀರಿಯನ್ ಲಿಪಿಯ ಶಾಸನಗಳೂ ಇರುವುದರಿಂದ, ಇವುಗಳ ಪ್ರಾಮುಖ್ಯ ಹೆಚ್ಚು. ಕಂಚಿನ ಯುಗಕ್ಕೆ ಸೇರಿದ ಅನೇಕ ಕಂಚಿನ ಪಾತ್ರೆಗಳು ದೊರಕಿವೆ. ಅವುಗಳಲ್ಲಿ ವೈಶಿಷ್ಟ್ಯವೇನೂ ಕಾಣುವುದಿಲ್ಲ.

ಐಬೀರಿಯನ್ ಶಿಲ್ಪ ಗ್ರೀಕ್ ಶಿಲ್ಪದಿಂದ ಪ್ರಭಾವಿತವಾಗಿತ್ತು. ಮರ್ಸಿಯ, ಅಲ್ಬಸೆಟ್ ಮುಂತಾದ ಕಡೆಗಳಲ್ಲಿ ದೊರಕಿರುವ ಐಬೀರಿಯನರ ಶಿಲ್ಪಗಳು ಮನಮೋಹಕವಾಗಿವೆ. ಕಂಚಿನ ವಿಗ್ರಹಗಳಲ್ಲೂ ಗ್ರೀಕರ ಪ್ರಭಾವ ಎದ್ದು ಕಾಣುತ್ತದೆ. ಸ್ಪೇನಿನಲ್ಲಿ ರೋಮನರು ಪ್ರಮುಖರಾಗುವುದಕ್ಕೆ ಮುಂಚೆ ಐಬೀರಿಯನರು ಇಡೀ ಪ್ರದೇಶವನ್ನು ಆಕ್ರಮಿಸಿಕೊಂಡರು. ಅನಂತರ ಒಂದು ಶತಮಾನಕ್ಕೂ ಹೆಚ್ಚಿನ ಕಾಲ ಐಬೀರಿಯನ್ ಮತ್ತು ರೋಮನ್ ಸಂಸ್ಕೃತಿಗಳು ಒಟ್ಟಿಗೇ ಸಹಬಾಳ್ವೆ ನಡೆಸಿದುವು. ಪುರಾತನ ನೆಲೆಗಳಲ್ಲಿ ನಡೆದ ಅಗೆತಗಳಲ್ಲಿ ರೋಮನ್ ಮತ್ತು ಐಬೀರಿಯನ್ ಶೈಲಿಯ ಮಡಕೆಗಳು, ಶಿಲ್ಪಗಳು ಒಟ್ಟಿಗೆ ದೊರಕಿರುವುದು ಇದನ್ನು ಸಮರ್ಥಿಸುತ್ತದೆ. ಕಾಲಕ್ರಮದಲ್ಲಿ ಕ್ರಿಸ್ತನ ಕಾಲದ ಸುಮಾರಿಗೆ ಐಬೀರಿಯನ್ ಸಂಸ್ಕೃತಿ ನಾಶವಾಗಿ ರೋಮನ್ ಸಂಸ್ಕೃತಿಯೊಡನೆ ಮಿಳಿತವಾಗಿ ಹೋಯಿತು. 3000 ವರ್ಷ ಪ್ರವರ್ಧಮಾನ ಸ್ಥಿತಿಯಲ್ಲಿದ್ದ ಈ ಸಂಸ್ಕೃತಿ ಯುರೋಪಿನಲ್ಲಿ ಒಂದು ಹೊಸ ಸಂಸ್ಕೃತಿಗೆ ಕಾರಣವಾಯಿತು. (ಎ.ವಿ.ಎನ್.)

**ಐಬೆಕ್ಸ್:** ದಕ್ಷಿಣ ಯುರೋಪು, ಮಧ್ಯ ಏಷ್ಯ, ಏಷ್ಯ ಮೈನರುಗಳಲ್ಲಿ ಕಂಡುಬರುವ, ಸ್ಥೂಲವೂ ದೃಢವೂ ಆದ ಮೈಕಟ್ಟುಳ್ಳ ಕಾಡುಮೇಕೆಗಳ ಪೈಕಿ ಒಂದು. ಕ್ಯಾಪ್ರ ಜಾತಿಗೆ ಸೇರಿದೆ. ಪರ್ವತ ಪ್ರದೇಶಗಳಲ್ಲೇ ಇದರ ವಾಸ ಹೆಚ್ಚು. ಒಂದಾನೊಂದು ಕಾಲದಲ್ಲಿ ಜರ್ಮನಿ ಮತ್ತು ಸ್ವಿಟ್ಜರ್‌ಲೆಂಡ್ ದೇಶಗಳ ಪರ್ವತ ಶ್ರೇಣಿಗಳಲ್ಲಿ ಇದು ಕಾಣಸಿಗುತ್ತಿತ್ತು.

ಐಬೆಕ್ಸ್ ನೋಡುವುದಕ್ಕೆ ಅಂದವಾದ ಪ್ರಾಣಿ. ಹೆಗಲವರೆಗಿನ ಎತ್ತರ 40". ಉದ್ದ ಸು. 4¼'. ಕೊಂಬು ಬಾಗಿದ್ದು ಉದ್ದಕ್ಕೂ ಗಚ್ಚುಗಚ್ಚಾಗಿ, ಗರಗಸದಂತಿದೆ. ಹೆಣ್ಣುಗಳ ಕೊಂಬು ನೇರ, ಮೋಟು. ಗಂಡುಗಳಿಗೆ ಗಡ್ಡವುಂಟು. ಅವುಗಳ ಮೈತುಂಬ ಒರಟಾದ



ಬಿರುಸು ಕೂದಲುಗಳಿವೆ. ಬೇಸಗೆಯಲ್ಲಿ ಕೂದಲು ಸಣ್ಣಗಿದ್ದು ಬೂದುಬಣ್ಣಕ್ಕಿರುತ್ತದೆ. ಶೀತಕಾಲದಲ್ಲಿ ಉದ್ದವಾದ ಹಳದಿ–ಕೆಂಪು ಬಣ್ಣದ ಕೂದಲು ಈ ಸಣ್ಣ ತೆಳು ಕೂದಲನ್ನು ಮುಚ್ಚಿಕೊಳ್ಳುತ್ತದೆ.

ಏಷ್ಯದ ಐಬೆಕ್ಸಿನ ಕೊಂಬುಗಳೂ ಮೈಬಣ್ಣವೂ ಮಿಕ್ಕ ಪ್ರದೇಶಗಳವಕ್ಕಿಂತ ಭಿನ್ನವಾಗಿವೆ. ಬೇಸಗೆಯಲ್ಲಿ ಅವು ಝರಿಗಳ ಕಡಿದಾದ ಇಳಿಜಾರುಗಳಲ್ಲಿ ಮೊಳೆಯುವ ಹುಲ್ಲುಚಿಗುರುಗಳಿಂದ ಆಕರ್ಷಿತವಾಗಿ ಹಿಮ ಪಂಕ್ತಿಯಿಂದ ಕೆಳಕ್ಕೆ ಇಳಿದು ಬರುತ್ತವೆ. ಗುಂಪಿನಲ್ಲಿ 12 ರಿಂದ 40 ಪ್ರಾಣಿಗಳಿರುತ್ತವೆ. ಸಾಮಾನ್ಯವಾಗಿ ಇವು ಮುಂಜಾವಿನಲ್ಲಿ, ಅನಂತರ ಮರಳಿ ಮುನ್ನೆಚ್ಚರಿಕೆಯಲ್ಲಿ ಮೇಯುತ್ತವೆ. ಅಲ್ಲದೆ ತಮ್ಮ ತಮ್ಮ ಮೇವಿನ ಸ್ಥಳಗಳನ್ನು ಪದೇ ಪದೇ ಬದಲಾಯಿಸುತ್ತಿರುತ್ತವೆ. ಮೇಯುವ ಸ್ಥಳಗಳ ಹಿಂದುಗಡೆಯ ಬೆಟ್ಟದ ಬೆನ್ನೇಣುಗಳೂ ಕಮರಿಗಳೂ ಅವಕ್ಕೆ ಒಳ್ಳೆಯ ಆಶ್ರಯವನ್ನು ಕೊಡುತ್ತವೆ. ಈ ಉನ್ನತ ಪ್ರದೇಶಗಳಿಗೆ ಅವು ವಿಶ್ರಾಂತಿಗಾಗಿಯೋ ಇಲ್ಲ ಭಯದಿಂದ ಪಾರಾಗಲೋ ಹೋಗುತ್ತವೆ. ಈ ಪ್ರದೇಶಗಳು ದುರ್ಗಮವಾಗಿರುವುದರಿಂದಲೂ ಈ ಪ್ರಾಣಿಗಳ ಹೆಣ್ಣುಗಳಿಗೆ ಚುರುಕಾದ ಕಣ್ಣುಗಳೂ ಶತ್ರುಗಳ ವಾಸನೆಯನ್ನು ಕಂಡುಹಿಡಿಯುವ ಸಾಮರ್ಥ್ಯವೂ ಜಾಗರೂಕತೆಯೂ ಇರುವುದರಿಂದ ಇವು ಆ ಜಾಗಗಳಲ್ಲಿ ನೆಮ್ಮದಿಯಾಗಿರಬಲ್ಲವು.

ಮುಂಬೇಸಗೆಯಲ್ಲಿ ವಯಸ್ಸಾದ ಗಂಡುಗಳು ಹೆಣ್ಣುಗಳ ಮತ್ತು ಮರಿಗಳ ಹತ್ತಿರದಲ್ಲಿದ್ದು ಗುಂಪಿನ ಯೋಗಕ್ಷೇಮ ನೋಡಿಕೊಳ್ಳುತ್ತವೆ. ಅಕ್ಟೋಬರ್ ತಿಂಗಳು ಇವಕ್ಕೆ ಬೆದೆಗಾಲ. ಮೇ ಅಥವಾ ಜೂನ್ ತಿಂಗಳಿನಲ್ಲಿ ಆಹಾರ ಸಮೃದ್ಧಿಯಾಗಿರುವಾಗ ಮರಿಹಾಕುತ್ತವೆ. ಈ ಮರಿಗಳು ಇತರೆಲ್ಲ ಮೇಕೆ ಕುರಿಗಳಂತೆ ಬಲುಬೇಗ ತಮ್ಮ ತಾಯ ಜೊತೆಗೆ ಬೆಟ್ಟದ ಬಿರುಕುಗಳಲ್ಲಿಯೂ ಬಂಡೆಗಳಲ್ಲಿಯೂ ಓಡಿಯಾಡಲು ಪ್ರಾರಂಭಿಸುತ್ತವೆ. ಮೈಕೆಳಭಾಗದಲ್ಲಿ ದಟ್ಟವಾದ ತುಪ್ಪಟವಿರುವುದರಿಂದ ಇವಕ್ಕೆ ಚಳಿ ಸೋಕದು. ಸಮೃದ್ಧವಾಗಿಯೂ ಮೃದುವಾಗಿಯೂ ದಟ್ಟವಾಗಿಯೂ ಇರುವ ಈ ತುಪ್ಪಳಕ್ಕಾಗಿ ಇವನ್ನು ಜನ ಬೇಟೆಯಾಡುತ್ತಾರೆ.

ಸೈಬೀರಿಯದ ಐಬೆಕ್ಸ್ ಉಳಿದೆಲ್ಲ ಬೆಟ್ಟದ ಆಡುಗಳಿಗಿಂತ ದೊಡ್ಡದು. ಅಂದರೆ ಗಂಡು ಐಬೆಕ್ಸ್ ಗಾತ್ರದಲ್ಲಿ ಒಂದು ಸಣ್ಣ ಕತ್ತೆಯಷ್ಟಿರುತ್ತದೆ. (ಎ.)

**ಐಯಾಂಬ್ಲಿಕಸ್:** 250–330. ಸಿರಿಯ ದೇಶದ ಒಬ್ಬ ತತ್ತ್ವಜ್ಞಾನಿ. ತನ್ನ ಗುರುವಾದ ಪಾರ್ಫಿರಿಯ ಗ್ರಂಥಗಳಿಂದ ಸ್ಫೂರ್ತಿ ಪಡೆದನಾದರೂ ಅವನ ಅಭಿಪ್ರಾಯಗಳನ್ನು ಒಪ್ಪದೆ ಆತನ ಗುರುವಾದ ಪ್ಲೋಟೈನಸಿನಿಂದ ಪ್ರಚುರವಾದ ನಿಯೊ ಪ್ಲೇಟೋನಿಸಂ ಪಂಥದ ರೂಪರೇಷೆಗಳನ್ನು ತಿದ್ದಿ ಆ ಪಂಥದ ಧೀರ ಪ್ರತಿನಿಧಿ ಎಂದು ಹೆಸರು ಗಳಿಸಿದ. ಕ್ರೈಸ್ತಮತದ ವಿರುದ್ಧ ನಿಯೊ ಪ್ಲೇಟೋನಿಸಂ ತತ್ತ್ವವನ್ನು ಸಂಘಟಿಸಿದವರಲ್ಲಿ ಅಗ್ರಗಣ್ಯನೆಂದು ಈತನನ್ನು ಹೊಗಳಲಾಗಿದೆ. ಎರಡು ಶತಮಾನಗಳವರೆಗೆ ನಿಯೊ ಪ್ಲೇಟೋನಿಸಂ ವಿಚಾರದಲ್ಲಿ ಈತನದೇ ಅಧಿಕೃತ ವಾಣಿಯಾಗಿತ್ತೆಂದು ಹೇಳಿದರೆ ಇವನ ಪ್ರಭಾವ ಎಷ್ಟೆಂದು ಊಹಿಸಬಹುದು.

ಪ್ಲೋಟೈನಸನ ಸಿದ್ಧಾಂತಕ್ಕೆ ಪಾರ್ಫಿರಿ ಮಾಡಿದ ಅದ್ವೈತ ಪರವಾದ ವ್ಯಾಖ್ಯಾನವನ್ನು ತಿರಸ್ಕರಿಸಿದ ಐಯಾಂಬ್ಲಿಕಸ್ ತನ್ನದೇ ಆದ ವಿಚಾರಣೆಯನ್ನು ಮಂಡಿಸುತ್ತ ತತ್ತ್ವ ಅನೇಕ ಮುಖವಾದುದು, ಅನೇಕ ರೀತಿಯಲ್ಲಿ ಅಸ್ತಿತ್ವವನ್ನು ಹೊಂದಿರುವಂಥದು, ಆತ್ಮತತ್ತ್ವ ಬುದ್ಧಿತತ್ತ್ವಕ್ಕಿಂತ ಭಿನ್ನ, ಆತ್ಮ ಆತ್ಮಕ್ಕೂ ವ್ಯತ್ಯಾಸವುಂಟು, ಮಾನವನ ಆತ್ಮ ಶುದ್ಧ ಅಥವಾ ಪರಮಾತ್ಮ ತತ್ತ್ವಕ್ಕಿಂತ ಭಿನ್ನ–ಎಂದು ನಿರೂಪಿಸಿದ. ಆಧ್ಯಾತ್ಮಿಕ ಪ್ರಪಂಚದಲ್ಲಿರುವ

ನಿತ್ಯಸತ್ತ್ವಗಳ ವಿಶ್ಲೇಷಣೆಯನ್ನು ಮಾಡುವುದರ ಮೂಲಕ ಸತ್ಯ ಅಥವಾ ಸತ್ ಎನ್ನುವುದು ಸಂಕೀರ್ಣವಾದುದೆಂದೂ ಹಂತಹಂತಗಳಿಂದ ಕೂಡಿದ ರಚನೆ ಇರುವಂಥದೆಂದೂ ಹೇಳಿದ. ಈ ಹಂತಗಳಲ್ಲಿ ರೂಪುಗೊಂಡ ಅಂಶಗಳು ತಮ್ಮ ತಮ್ಮ ಸ್ಥಾನದಲ್ಲಿದ್ದುಕೊಂಡು ಸತ್‌ತತ್ತ್ವಕ್ಕೆ ಪೋಷಕ ಅಥವಾ ಪೂರಕಗಳಾಗಿ ವರ್ತಿಸುತ್ತವೆ. ಯಾವುದನ್ನೂ ಅಲ್ಲಗಳೆಯಲು ಸಾಧ್ಯವಿಲ್ಲ. ಸಣ್ಣ ದೊಡ್ಡ ಎರಡೂ ಸತ್ಯ, ವ್ಯಷ್ಟಿ ಸಮಷ್ಟಿ ಎರಡೂ ಸತ್ಯ, ಬುದ್ಧಿ ಬುದ್ಧಿಗಮ್ಯ ಎರಡೂ ಸತ್ಯ. ಹೀಗೆ ಸತ್ಯದ ಮಳಿಗೆಯಲ್ಲಿ ಅನೇಕತ್ವಕ್ಕೆ ಸ್ಥಾನವಿದೆ. ಈ ಅನೇಕತ್ವದ ಹಂತವನ್ನು ಅರಿತುಕೊಂಡು ಸಾಧಕ ಮೇಲೇರಬೇಕು. ತನ್ನತನವನ್ನು ತಾನು ಕಂಡುಕೊಳ್ಳಬೇಕು–ಎಂದು ಐಯಾಂಬ್ಲಿಕಸ್ ವಾದಿಸುತ್ತಾನೆ.

ಈತನ ವಿಶ್ಲೇಷಣದ ಆಧಾರದ ಮೇಲೆ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ತತ್ತ್ವಶಾಸ್ತ್ರಕ್ಕೂ ಮನೋವಿಜ್ಞಾನಕ್ಕೂ ಇರುವ ವ್ಯತ್ಯಾಸವನ್ನು ಕಾಣುವಂತಾಯಿತು ಎಂದು ಹಲವಾರು ಅಭಿಪ್ರಾಯಪಡುತ್ತಾರೆ.

ಐಯಾಂಬ್ಲಿಕಸ್ ಅನೇಕ ಗ್ರಂಥಗಳನ್ನು ಬರೆದಿದ್ದರೂ ಕೆಲವು ಮಾತ್ರ ಈಗ ಉಳಿದಿವೆ. ಅವುಗಳಲ್ಲಿ ಮುಖ್ಯವಾದವೆಂದರೆ–ದಿ ಮಿಸ್ಟರೀಸ್; ಲೈಫ್ ಆಫ್ ದಿ ಸೋಫಿಸ್ಟ್, ಫಿಲಾಸಫಿ ಡೆರ್ ಗ್ರೀಷನ್. (ಕೆ.ಬಿ.ಆರ್.)

**ಐರಣಿ:** ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಒಂದು ಗ್ರಾಮ ಮತ್ತು ಪುಣ್ಯಕ್ಷೇತ್ರ. ತುಂಗಭದ್ರಾ ನದಿಯ ಎಡದಂಡೆಯ ಮೇಲೆ ರಾಣೆಬೆನ್ನೂರಿಗೆ ಪ್ರರ್ವದಲ್ಲಿ ಸು.22ಕಿಮೀ ದೂರದಲ್ಲೂ ಚಳಗೇರಿ ರೈಲು ನಿಲ್ದಾಣಕ್ಕೆ 10 ಕಿಮೀ ದೂರದಲ್ಲೂ ಇದೆ. ಮೆಡ್ಲೇರಿ ಹೋಬಳಿಗೆ ಸೇರಿದೆ. ಕೈಮಗ್ಗದ ಒರಟು ಉಣ್ಣೆಯ ಬಟ್ಟೆಗೆ ಈ ಗ್ರಾಮ ಪ್ರಸಿದ್ಧ. ಇಲ್ಲಿ ಪ್ರತಿ ಶುಕ್ರವಾರ ಸಂತೆ ಸೇರುತ್ತದೆ. ಈ ಗ್ರಾಮದ ಸಮೀಪದಲ್ಲಿ 762 ಮೀ ಎತ್ತರವಿರುವ ಐರಣಿ ಬೆಟ್ಟವಿದೆ.

ಐರಣಿಯಿಂದ 30 ಮೀ ದೂರದಲ್ಲಿ ತುಂಗಭದ್ರಾನದಿಯ ಎಡದಂಡೆಯ ಮೇಲೆ ಒಂದು ಹಳೆಯ ಕೋಟೆಯ ಅವಶೇಷವಿದೆ. ಶ್ರೀ ಜಗದ್ಗುರು ಮುಪ್ಪಿನಾರ್ಯ ಮಹಾಸ್ವಾಮಿಗಳು ಕಟ್ಟಿಸಿದ ಕೊಟ್ಟೂರೇಶ್ವರ ಮಠ ಅಥವಾ ಹೊಳೆ ಮಠವಿದೆ. ಇದನ್ನು ಮೊದಲು ಐರಾವತ ಕ್ಷೇತ್ರವೆಂದು ಕರೆಯುತ್ತಿದ್ದರೆಂದು ಹೇಳುವರು. ಇಲ್ಲಿ ಹುಚ್ಚಬಸವ ಸ್ವಾಮಿಗಳ, ಕೊಟ್ಟೂರಸ್ವಾಮಿಗಳ, ಉರಿಲಿಂಗದೇವರ ಮತ್ತು ಲಿಂಗಪ್ಪದೇವರ ಗದ್ದುಗೆಗಳಿವೆ. ಗೋಣಿಸ್ವಾಮಿ ಮಠ, ಕಣವಿಸಿದ್ದೇಶ್ವರ ಆಲಯ, ತುಂಗಭದ್ರಾ ತಟಾಕದಲ್ಲಿ ಸಿದ್ಧನಾಯಕನ ಗದ್ದುಗೆಯೂ ಬೆಟ್ಟದ ಮೇಲೆ ಕೊಟ್ಟೂರೇಶ್ವರ, ಮಲ್ಲಿಕಾರ್ಜುನ, ಮುಂಡಬಸಪ್ಪ, ಮಳೆಮಲ್ಲಪ್ಪ ಆಲಯಗಳೂ ಸಿದ್ಧಾಶ್ರಮ ಮತ್ತು ಅವಧೂತಾಶ್ರಮಗಳೂ ಇದ್ದು, ಬೆಟ್ಟದ ಕೆಳಗೆ ಮದ್ದಾನೇಶ್ವರ ಆಲಯವಿದೆ. ಕಾರ್ತೀಕ ಮಾಸದ ಮತ್ತು ಚೈತ್ರ ಶುದ್ಧ ನವಮಿ ಪ್ರಜೆಗೆ ಇಲ್ಲಿ ಸಾವಿರಾರು ಮಂದಿ ಸೇರುವರು. ಐರಣಿಯನ್ನು ದಕ್ಷಿಣಕಾಶಿ ಎಂದೂ ಭಾವಿಸುತ್ತಾರೆ. (ಎಸ್.ಎಸ್.ಎನ್.)

**ಐರಿಷ್ ರಾಷ್ಟ್ರೀಯ ರಂಗಮಂದಿರ:** ಐರಿಷ್ ಸಾಹಿತ್ಯವನ್ನು ಪುನರುಜ್ಜೀವನಗೊಳಿಸುವಲ್ಲಿ ಪ್ರಧಾನ ಪಾತ್ರವಹಿಸಿದ್ದ ಕವಿ ಡಬ್ಲ್ಯೂ.ಬಿ.ಯೇಟ್ಸನೇ ಮುಖ್ಯವಾಗಿ ಈ ರಂಗಮಂದಿರದ ಸ್ಥಾಪಕ ಮತ್ತು ಪ್ರಥಮ ಸಂಚಾಲಕ. ಐರಿಷ್ ಸಂಸ್ಕೃತಿಯನ್ನು ಸಹಜವಾಗಿ ಪ್ರತಿಬಿಂಬಿಸುವಂಥ ನಾಟಕಗಳ ಸೃಷ್ಟಿಗೂ ಪ್ರದರ್ಶನಕ್ಕೂ ಅವರದೇ ಆದ ಒಂದು ರಂಗಮಂದಿರದ ಅಗತ್ಯವಿತ್ತು. ಲಂಡನ್ ಮತ್ತು ಡಬ್ಲಿನ್ ನಗರಗಳಲ್ಲಿದ್ದ ಐರಿಷ್ ಸಾಹಿತ್ಯ ಸಂಘಗಳಿತ್ತ ಬೆಂಬಲದಿಂದಲೂ ಎಡ್ವರ್ಡ್ ಮಾರ್ಟಿನ್, ಜಾರ್ಜ್ ಮೂರ್, ಲೇಡಿ ಗ್ರಿಗರಿ ಮುಂತಾದ ಆಪ್ತರ ಸಹಾಯದಿಂದಲೂ ಯೇಟ್ಸನ ನೇತೃತ್ವದಲ್ಲಿ ಐರಿಷ್ ಸಾಹಿತ್ಯ ನಾಟ್ಯಸಭಾ ಎಂಬ ಸಂಸ್ಥೆ 1899ರಲ್ಲಿ ಸ್ಥಾಪಿತವಾಯಿತು. ಡಬ್ಲಿನ್ ಅದರ ಕೇಂದ್ರವಾಯಿತು. ಮೊದಮೊದಲು ಪ್ರದರ್ಶಿತವಾದ ಯೇಟ್ಸನ ಮತ್ತು ಅವನ ಸಂಗಡಿಗರ ನಾಟಕಗಳಿಗೆ ನಿರೀಕ್ಷಿಸಿದ ಯಶಸ್ಸು ದೊರೆಯಲಿಲ್ಲ. ಆದರೆ ಅನೇಕ ನಾಟಕಕಾರರ ಮತ್ತು ಕಲಾಭಿಮಾನಿಗಳ ಗಮನವನ್ನು ಸೆಳೆಯುವಷ್ಟು ಮಟ್ಟಿಗೆ ಈ ನಾಟ್ಯಮಂಡಲಿ ಬೆಳೆಯಿತು. 1904ರಲ್ಲಿ ಎ.ಇ.ಎಫ್.ಹಾರ್ನಿಮನ್ ಎಂಬ ಐರಿಷ್ ಶ್ರೀಮಂತಳ ಅಭಿಮಾನ ಔದಾರ್ಯಗಳು ನೀಡಿದ ಬಳುವಳಿಯಾಗಿ ಅಬೆ ರಸ್ತೆಯಲ್ಲಿನ ಪುಟ್ಟ ರಂಗಮಂದಿರವೊಂದು ಯೇಟ್ಸನ ನಾಟ್ಯಸಂಸ್ಥೆಗೆ ದೊರೆಯಿತು. ಅಂದಿನಿಂದ ಸಾಹಿತ್ಯ ನಾಟಕ ಮಂಡಳಿಗೆ ಐರಿಷ್ ರಾಷ್ಟ್ರೀಯ ರಂಗಮಂದಿರ ಎಂಬ ಹೊಸ ಹೆಸರಾಯಿತು. ಅಬೆ ರಂಗಮಂದಿರವನ್ನು ಕಾವ್ಯನಾಟಕಗಳ ಪ್ರಯೋಗಕ್ಕೆ ಅಳವಡಿಸಲು ಯೇಟ್ಸ್ ಬಹುವಾಗಿ ಪ್ರಯತ್ನಿಸಿದ. ಈ ಪ್ರಯತ್ನ ಸಫಲವಾದುದಾಗಲಿ ಕಾವ್ಯನಾಟಕಗಳ ಪ್ರಯೋಗ ಯಶಸ್ವಿಯಾದುದಾಗಲಿ ಸಂದೇಹವೇ. ಆದರೆ ಯೇಟ್ಸನ ಅವಿರತ ಪರಿಶ್ರಮದಿಂದ ಈ ರಂಗಮಂದಿರ ಪ್ರಯೋಗಶೀಲತೆಗೆ ಹೆಸರಾಯಿತು. ಪ್ರತಿಭಾಶಾಲಿಗಳಾದ ನಾಟಕಕಾರರಿಗೆ ಸ್ಫೂರ್ತಿಯ ಕೇಂದ್ರವಾಯಿತು. ಜೆ.ಎಂ.ಸಿಂಜ್‌ನಂಥ ಶ್ರೇಷ್ಠ ನಾಟಕಕಾರನ ಪ್ರತಿಭೆಯನ್ನು ಮೊದಲು ಗುರುತಿಸಿ ಸರಿಯಾದ ಮಾರ್ಗದರ್ಶನವಿತ್ತುದೊಂದು ಯೇಟ್ಸನ ಅಮೋಘವಾದ ಕಾಣಿಕೆ. ಐರಿಷ್ ರಂಗಭೂಮಿಗೆ. ನಾಗರಿಕತೆಯ ಕುಪ್ರಭಾವದಿಂದ ದೂರವಾಗಿದ್ದ ಪಶ್ಚಿಮ ಐರ್ಲೆಂಡಿನ ಮುಗ್ಧ ಕೃಷಿಕರ ಸರಳಜೀವನವನ್ನು ಕುರಿತು, ಹಳೆಯ ಗೇಲಿಕ್ ಭಾಷೆಯ ಸತ್ತ್ವವನ್ನೂ ಸೊಗಡನ್ನೂ ಒಳಗೊಂಡ ಇಂಗ್ಲಿಷ್ ಆಡುಮಾತಿನಲ್ಲಿ ಸಿಂಜ್ ನಾಟಕಗಳನ್ನು ಬರೆದ. ಹೀಗೆಯೇ 'ಎ.ಇ.', ಲೇಡಿ ಗ್ರಿಗರಿ, ಪಾದ್ರಿಯಕ್ ಕೋಲಮ್ ಅಪೂರ್ವವಾದ ನಾಟಕಗಳನ್ನು ರಚಿಸಿದರು.

ನಾಟಕ ಮತ್ತು ರಂಗಮಂದಿರಗಳ ಬಗ್ಗೆ ಯೇಟ್ಸ್ ಕೆಲವು ನಿಖರವಾದ ಧ್ಯೇಯ, ಶೀಲ, ನಿಷ್ಠೆಗಳನ್ನಿರಿಸಿಕೊಂಡಿದ್ದ. ರಂಗಮಂದಿರ ದೇಗುಲದಂತೆ ಪವಿತ್ರವಾದುದು. ನಾಟಕದ ಉದ್ದೇಶ ಉದಾತ್ತವಾದುದು, ಜನಜಂಗುಳಿಗೆ ಅಗ್ಗದ ಮನರಂಜನೆಯನ್ನೊದಗಿಸುವುದಿಲ್ಲ. ಕವಿಯ ಅನುಭಾವ, ದರ್ಶನ ಪ್ರೇಕ್ಷಕರ ಮನದಲ್ಲಿ ಪಡಿಮೂಡುವಂತಾಗಬೇಕು.

ವಾಸ್ತವತೆಗಿಂತ ದರ್ಶನಧ್ವನಿಯೇ ಪ್ರಧಾನವಾಗಿದ್ದ ಯೇಟ್ಸನ ಕಾವ್ಯನಾಟಕಗಳು ಸ್ವಪ್ನಶೀಲವಾಗಿದ್ದುವು. ಐರಿಷ್ ಪ್ರೇಕ್ಷಕರ ಮನೋಧರ್ಮ ಆದರ್ಶಕ್ಕಿಂತ ವಾಸ್ತವತೆಯ ಕಡೆಯೇ ಒಲಿಯುತ್ತಿರುವುದು ಸ್ಪಷ್ಟವಾದ ಅನಂತರ ಯೇಟ್ಸ್ ಕಾವ್ಯನಾಟಕಗಳನ್ನು ಬಿಟ್ಟು ಗದ್ಯನಾಟಕಗಳ ರಚನೆಗೆ ತೊಡಗಿದ. ತನ್ನ ಧ್ಯೇಯವನ್ನು ಮಾತ್ರ ಜನ ಅಪೇಕ್ಷಿಸುವ ಅಗ್ಗದ ಮನರಂಜನೆಗೆ ಎಂದಿಗೂ ಬಲಿಕೊಡದೆ ನಾಟ್ಯಮಂದಿರದ, ನಾಟಕಸಾಹಿತ್ಯದ ಶ್ರೇಷ್ಠಮಟ್ಟವನ್ನೂ ಶೀಲವನ್ನೂ ಕೊನೆಯವರೆಗೂ ಕಾಯ್ದುಕೊಂಡು ಬಂದ ಶ್ರೇಯಸ್ಸು ಅವನದು. ಇತಿಹಾಸದಲ್ಲಿ ಐರಿಷ್ ರಾಷ್ಟ್ರೀಯ ರಂಗಮಂದಿರ ಚಿರಸ್ಮರಣೀಯವಾಗಿರುವುದೂ ಅದರಿಂದಲೇ. (ಕೆ.ಬಿ.ಪಿ.)

**ಐರಿಸ್:** ಇರಿಡೇಸಿ ಕುಟುಂಬಕ್ಕೆ ಸೇರಿದ ಒಂದು ಸಸ್ಯಜಾತಿ. ಕಾಮನ ಬಿಲ್ಲಿನಂತೆ ರಂಗುರಂಗಾದ ಹೂಗಳಿವೆಯಾಗಿ ಈ ಹೆಸರು (ಐರಿಸ್–ಕಾಮನಬಿಲ್ಲು). ಇದು ಸುಂದರವಾದ ಹೂ ಬಿಡುವ ಲಶುನ ಸಸ್ಯ. ಆಕರ್ಷಕವಾದ ಈ ಸಸ್ಯ ಆರ್ಕಿಡ್ಡಿನಂತೆ ಕಾಣುತ್ತದೆ. ಇದನ್ನು ಸುಲಭವಾಗಿ ಎಲ್ಲ ಕಡೆಗಳಲ್ಲೂ ಬೆಳೆಸಬಹುದಾದ್ದರಿಂದ ಇದನ್ನು ಬಡವನ ಆರ್ಕಿಡ್ಡು ಎಂದೂ ಕರೆಯುತ್ತಾರೆ. ಇದನ್ನು ಕುಂಡಸಸ್ಯ, ಕಲ್ಲೇರಿ ಸಸ್ಯ ಮತ್ತು ಮನೆ ಅಲಂಕಾರ ಸಸ್ಯಗಳನ್ನಾಗಿ ಬೆಳೆಸುತ್ತಾರೆ. ಹೂಗಳನ್ನು ಬಿಡಿ ಹೂವಾಗಿಯೂ ಕಳಶದ ಅಲಂಕಾರದ ಹೂವಾಗಿಯೂ ಉಪಯೋಗಿಸುತ್ತಾರೆ.

ಐರಿಸ್ ಜಾತಿಯಲ್ಲಿ 200ಕ್ಕೂ ಹೆಚ್ಚು ಪ್ರಭೇದಗಳಿವೆ. ಇವಕ್ಕೆಲ್ಲ ಗುಪ್ತಕಾಂಡಗಳು (ರೈಜೋಮ್ಸ್) ಇವೆ. ನೇರವಾಗಿ ಸರಳವಾಗಿ ಅಥವಾ ಕವಲೊಡೆದು ಬೆಳೆಯುವ ಈ ಸಸ್ಯಗಳ ತುದಿಯಲ್ಲಿ ಹೂ ಮೊಳೆಯುತ್ತದೆ. ಸಾಮಾನ್ಯವಾಗಿ ಬೇರು ಮೂಲಕವೇ ಎಲೆ. ಕೆಲವು ಎಲೆಗಳು ಮಾತ್ರ ಕಾಂಡದ ಮೇಲಿರುತ್ತವೆ. ಎಲೆಯ ಆಕಾರ ಕತ್ತಿಯಂತೆ ನೀಳ. ಹೂ ಒಂಟಿಯಾಗಿಯೂ ಗೊಂಚಲಾಗಿಯೂ ಇರುವುದುಂಟು. ಗೊಂಚಲು ಅಂತ್ಯಾರಂಬಿ, ಇಲ್ಲವೆ ಮಿಶ್ರ ಮಾದರಿಯದು. ಒಂದೊಂದು ಪ್ರಭೇದದಲ್ಲೂ ಹೂವಿನ ಬಣ್ಣ ಒಂದೊಂದು ರೀತಿ. ಹೂವನ್ನು ಎರಡು ಉಪದಳಗಳು ಆವರಿಸಿವೆ. ಹೂಗಳು ದ್ವಿಲಿಂಗಿಗಳು. ಹೂ ರಚನೆ ಸಾಮಾನ್ಯ ರೀತಿಯದು. ಪುಷ್ಪಪತ್ರಗಳಂತೆ ದಳಗಳೂ ಸಂಯೋಗವಾಗಿರುತ್ತವೆ. ಒಂದೇ ಸ್ವರೂಪವನ್ನು (ಪೆರಿಯಾಂತ್) ತಾಳಿವೆ. ಇವು ಆರಾರರ ಎರಡು ವೃತ್ತಗಳಲ್ಲಿವೆ; ಕೇಸರಗಳು 3; ಬಹುಬೀಜಗಳ ಮೂರು ಕೋಶದ ಕೆಳ ಅಂಡಾಶಯವಿದೆ. ಹಣ್ಣು 3 ಅಥವಾ 6 ಮುಖದ ಕ್ಯಾಪ್‌ಸೂಲ್ ಮಾದರಿಯದು.

ಐರಿಸ್ ಆರ್ಕಿಯಾಯ್ಡಿಸ್ ಕುಂಡ ಸಸ್ಯ

ಈ ಜಾತಿಯ ಹಲವು ಪ್ರಭೇದಗಳಲ್ಲಿ ಉದ್ಯಾನಗಾರಿಕೆಯ ದೃಷ್ಟಿಯಿಂದ ಐರಿಸ್ ಚೈನೆನ್ಸಿಸ್, ಐರಿಸ್ ಜರ್ಮ್ಯಾನಿಕ, ಐರಿಸ್ ಜಾಪೋನಿಕ, ಐರಿಸ್ ಸೈಬೀರಿಕ, ಐರಿಸ್ ಹಿಸ್ಪ್ಯಾನಿಕ, ಐರಿಸ್ ಫ್ಲೋರೆಂಟೀನ, ಐರಿಸ್ ಸಿಪಿಯೋಡೆಸ್ ಮತ್ತು ಐರಿಸ ನೆಪಾಲೆನ್ಸಿಸ್ ಎಂಬುವು ಮುಖ್ಯವಾದವು.

ಐರಿಸ್ ಚೈನೆನ್ಸಿಸ್ ಪ್ರಭೇದ ಸಸ್ಯ ಊದಾ ಮತ್ತು ನೀಲಿಮಿಶ್ರಿತ ಬಣ್ಣದ ಹೂಗಳನ್ನು ಬಿಡುತ್ತದೆ. ಇದು ತಗ್ಗುಪ್ರದೇಶಗಳಲ್ಲಿ ಬೆಳೆಯಲು ಯೋಗ್ಯವಾಗಿದೆ.

ಐರಿಸ್ ಜರ್ಮ್ಯಾನಿಕ ಸಸ್ಯದ ಹೂಗಳು ನೀಲಿ, ನಸುಗೆಂಪು ಅಥವಾ ಬಿಳಿಯ ಬಣ್ಣದವು. ಏಪ್ರಿಲ್–ಮೇ ತಿಂಗಳುಗಳಲ್ಲಿ ಹೂ ಬಿಡುತ್ತದೆ.

ಐರಿಸ್ ಜಾಪೋನಿಕ ಪ್ರಭೇದದ ಸಸ್ಯ ಬಿಳುಪು, ನಸುಗೆಂಪು, ಕೆಂಪು, ನೀಲಿ, ಊದಾ ಮುಂತಾದ ಹಲವು ಬಣ್ಣಗಳಲ್ಲಿ ಹೂ ಬಿಡುತ್ತದೆ. ದೊಡ್ಡ ಗಾತ್ರದ ಹೂಗಳಿಗೆ ಈ ಸಸ್ಯ ಪ್ರಸಿದ್ಧಿಯಾಗಿದೆ. ಸಾಮಾನ್ಯವಾಗಿ ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ ಹೂ ಅರಳುತ್ತದೆ.

ಐರಿಸ್ ಜಾಪೋನಿಕ

ಐರಿಸ್ ಸೈಬೀರಿಕ ಸುಂದರವಾದ ಕಿರಿದಾದ ಎಲೆಗಳ ಮಧ್ಯದಲ್ಲಿ ಹೊಳಪಾದ ನೀಲಿ ಹೂಗಳನ್ನು ಬಿಡುವ ಪ್ರಭೇದ.

ಐರಿಸ್ ಹಿಸ್ಪ್ಯಾನಿಕ ಪ್ರಭೇದ ನೀಲಿ, ಹಳದಿ, ಬಿಳುಪು, ಅತಿ ನಸುಗೆಂಪು ಮುಂತಾದ ಬಣ್ಣಗಳ ಹೂ ಬಿಡುತ್ತದೆ.

ಐರಿಸ್ ಫ್ಲೊರೆಂಟೀನ ಪ್ರಭೇದದ ಸಸ್ಯಗಳು ತಂಪಾದ ಹವಾಗುಣಕ್ಕೆ ಹೊಂದಿಕೊಂಡು ಬೆಳೆಯುವ ಗುಣವುಳ್ಳವು. ಬಿಳುಪು ಬಣ್ಣದ ಹೂಗಳನ್ನು ಬಿಡುತ್ತವೆ.

ಐರಿಸ್ ಸಿಫಿಯೋಡೆಸ್ ಪ್ರಭೇದದ ಸಸ್ಯ ಸುಮಾರು 0.6096 ಮೀ ಎತ್ತರ ಬೆಳೆದು ವಿವಿಧ ಬಣ್ಣದ ಹೂಗಳನ್ನು ಬಿಡುತ್ತದೆ.

ಐರಿಸ್ ನೆಪಾಲೆನ್ಸಿಸ್ ಪ್ರಭೇದ ಹಿಮಾಲಯ ಸರಹದ್ದು ಪ್ರದೇಶಗಳಲ್ಲಿ ಹೆಚ್ಚಿನ ಬೇಸಾಯದಲ್ಲಿದೆ. ಇದು ನಸು–ಊದಾ ಬಣ್ಣದ ಹೂಗಳನ್ನು ಬಿಡುತ್ತದೆ.

ಒಂದೊಂದು ಪ್ರಭೇದಕ್ಕೂ ಬೆಳವಣಿಗೆಯಲ್ಲಿ ವ್ಯತ್ಯಾಸವಿರುವುದರಿಂದ ಇವು ಸಸ್ಯವಿಜ್ಞಾನದಲ್ಲಿ ಪ್ರಾಮುಖ್ಯ ಪಡೆದಿವೆ. ಇವನ್ನು ಗುಪ್ತಕಾಂಡದಂತೆ ಬೇರುಬಿಡುವ ಅಥವಾ ಎತ್ತರವಾಗಿ ಬೆಳೆಯುವ ವಿಧ, ಕುಳ್ಳಾಗಿ ಬೆಳೆಯುವ ಅಥವಾ ಜರ್ಮನ್ ವಿಧ. ಲಶುನ ಬೇರು ಬಿಡುವ ಅಥವಾ ಡಚ್, ಸ್ಪ್ಯಾನಿಷ್ ಮತ್ತು ಇಂಗ್ಲಿಷ್ ವಿಧ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಗುಪ್ತಕಾಂಡದಂತೆ ಬೇರು ಬಿಡುವ ವಿಧಗಳ ಬೇಸಾಯ ಸುಲಭ. ಹೆಚ್ಚು ತೇವಾಂಶವಿರುವ ಒಣ ಹವಾಗುಣದ ಫಲವತ್ತಾದ ಮಣ್ಣಿನಲ್ಲಿ ಇವು ಸಮೃದ್ಧಿಯಾಗಿ ಬೆಳೆಯುತ್ತವೆ. ಇವನ್ನು ಗುಪ್ತಕಾಂಡಗಳಿಂದ ಸುಲಭವಾಗಿ ವೃದ್ಧಿ ಮಾಡಬಹುದು. ಈ ವಿಧದಲ್ಲಿ ಐರಿಸ್ ನೆಪಾಲೆನ್ಸಿಸ್, ಐರಿಸ್ ಕುಮಾವೊನೆನ್ಸಿಸ್ ಮತ್ತು ಐರಿಸ್ ಕಾಶ್ಮೀರಿಯಾನ ಪ್ರಭೇದಗಳು ಸೇರಿವೆ. ಇವುಗಳ ಮುಖ್ಯವಾದ ತಳಿಗಳು ಎಂದರೆ ಬಿಳುಪಾದ ಹೂ ಬಿಡುವ ವೈಟ್ ಸಿಟಿ, ಹಳದಿ ಹೂ ಬಿಡುವ ಸಹರ, ಅತೀ ಹಳದಿ ಹೂ ಬಿಡುವ ಸೆಯಿಂಟ್‌ರೋಲಕ್ಸ್, ತಿಳಿನೀಲಿ ಬಣ್ಣದ ಹೂ ಬಿಡುವ ಅಲ್ಲೈನ್, ನೀಲಿ ಬಣ್ಣದ ಹೂ ಬಿಡುವ ಸಿರಿಯಸ್, ಕಪ್ಪು ಅಥವಾ ಕಂದು ಬಣ್ಣದ ಹೂ ಬಿಡುವ ಬ್ಲಾಕ್ ಪ್ಯಾಂತರ್, ಕಡುಗೆಂಪು ಬಣ್ಣದ ಹೂ ಬಿಡುವ ಕೊನಸ್ಟನ್ಸ್ ಮೇಯರ್, ತಾಮ್ರದ ಕೆಂಪು ಬಣ್ಣದ ಹೂ ಬಿಡುವ ಹೆಸ್ಪರ್‌ಪ್ರಿನ್, ಚಿನ್ನದ ಕಂದು ಬಣ್ಣದ ಹೂ ಬಿಡುವ ಕಿಂಗ್ ಮೀಡಸ್ ಮುಂತಾದುವುಗಳು ಹೆಚ್ಚಿನ ಬೇಸಾಯದಲ್ಲಿದೆ. ಕುಳ್ಳಾಗಿ ಬೆಳೆಯುವ ಐರಿಸ್ ಸಸ್ಯಗಳಲ್ಲಿ ಮುಖ್ಯವಾದ ಪ್ರಭೇದಗಳೆಂದರೆ ಐರಿಸ್ ಜಾಪೋನಿಕ ಮತ್ತು ಐರಿಸ್ ಸೈಬೀರಿಕ. ಇವುಗಳಲ್ಲಿ ಮುಖ್ಯವಾಗಿ ಬೇಸಾಯದಲ್ಲಿರುವ ತಳಿಗಳನ್ನು ಮುಂದೆ ಕಾಣಿಸಿದೆ. ರಕ್ತಬಣ್ಣದ ಹೂ ಬಿಡುವ ಬರ್ಗಂಡಿ, ಕಪ್ಪು ಮಿಶ್ರಿತ ಕಂದುಬಣ್ಣದ ಹೂ ಬಿಡುವ ಮರೊಕಯಿನ್, ಹಳದಿ ಬಣ್ಣದ ಹೂ ಬಿಡುವ ಆರೆಂಜ್ ಕ್ವೀನ್, ನೀಲಿ ಬಣ್ಣದ ಹೂ ಬಿಡುವ ಪ್ರೀನ್ ಲೂಯಿಸ್. ಈ ತಳಿಗಳು ಹೆಚ್ಚು ಸುಣ್ಣದ ಅಂಶವಿರುವ ಮಣ್ಣಿನಲ್ಲಿ ಯಶಸ್ವಿಯಾಗಿ ಬೆಳೆಯುವುದಿಲ್ಲ. ಲಶುನ ಬೇರು ಬಿಡುವ, ಡಚ್, ಸ್ಪ್ಯಾನಿಷ್ ಮತ್ತು ಇಂಗ್ಲಿಷ್ ಸಸ್ಯಗಳು ಅಂಚು ಸಸ್ಯಗಳನ್ನಾಗಿ ಬೆಳೆಸಲು ಯೋಗ್ಯವಾದುವು. ಇವುಗಳ ಬಿಡಿ ಹೂಗಳು ಪ್ರಸಿದ್ಧಿಯಾಗಿವೆ. ಇಂಗ್ಲಿಷ್ ತಳಿಗಳ ಬೇಸಾಯ ಹೆಚ್ಚು ತೇವಾಂಶವಿರುವ ಮತ್ತು ತಂಪಾದ ಹವಾಗುಣದಲ್ಲಿ ಸುಗಮವಾಗುತ್ತದೆ; ಡಚ್ ಮತ್ತು ಸ್ಪ್ಯಾನಿಷ್ ಸಸ್ಯಗಳಿಗೆ ಹೆಚ್ಚಿನ ತೇವಾಂಶ ಅಗತ್ಯವಿಲ್ಲ. ಇವುಗಳ ಮುಖ್ಯ ತಳಿಗಳನ್ನು ಮುಂದೆ ಕಾಣಿಸಿದೆ. ನಸುನೀಲಿ ಬಣ್ಣದ ಹೂ ಬಿಡುವ ಚಾಂಪಿಯನ್; ಕಂಚು ಮಿಶ್ರಿತ ನೀಲಿ ಬಣ್ಣದ ಹೂ ಬಿಡುವ ಬ್ರಾಂಜ್ ಬ್ಯೂಟಿ, ನೀಲಿ, ಹಳದಿ ಮತ್ತು ಕಿತ್ತಲೆ ಬಣ್ಣಗಳ ಹೂ ಬಿಡುವ ಹಾರ್ಮೊನಿ, ಅತಿನೀಲಿ ಬಣ್ಣದ ಹೂ ಬಿಡುವ ಇಂಪರೇಟರ್, ಹಾಲಿನ ಬಿಳುಪು ಬಣ್ಣದ ಹೂ ಬಿಡುವ ಇಂಪರೇಟರ್, ಹಾಲಿನ ಬಿಳುಪು ಬಣ್ಣದ ಹೂ ಬಿಡುವ ಜೋನ್ ಆಫ್ ಆರ್ಕ್, ನಸುಹಳದಿ ಬಣ್ಣದ ಹೂ ಬಿಡುವ ಲೆಮನ್‌ಕ್ವೀನ್, ನೀಲಿ ಬಣ್ಣದ ಹೂ ಬಿಡುವ ವೆಡ್ಜುಹುಡ್, ಬಿಳಿ ಹೂ ಬಿಡುವ ಎಕ್ಸೆಲ್ಸಿಯರ್. ಸ್ಪ್ಯಾನಿಷ್ ತಳಿಗಳಲ್ಲಿ ಹೆಚ್ಚಿನ ಬೇಸಾಯದಲ್ಲಿರುವ ತಳಿಗಳು ಎಂದರೆ, ಹಳದಿ ಬಣ್ಣದ ಹೂ ಬಿಡುವ ಜಿಪ್ಸಿ ಗರ್ಲ್, ಅತಿಯಾದ ನೀಲಿಬಣ್ಣದ ಹೂ ಬಿಡುವ ಕಿಂಗ ಆಫ್ ದಿ ಬ್ಲೂ, ಕಂಚು ಮಿಶ್ರಿತ ಕಂದುಬಣ್ಣದ ಹೂ ಬಿಡುವ ಲಿ ಮೊಗೊಲ್, ಕೆನೆ ಬಣ್ಣದ ಹೂ ಬಿಡುವ ಸಲ್ಫರ್ ಬ್ಯೂಟಿ. ಇಂಗ್ಲಿಷ್ ಐರಿಸ್ ತಳಿಗಳಲ್ಲಿ ಹೆಚ್ಚಿನ ಬೇಸಾಯದಲ್ಲಿರುವ ತಳಿಗಳನ್ನು ಮುಂದೆ ಕಾಣಿಸಿದೆ. ಅತಿಯಾದ ಕಂದು ಬಣ್ಣದ ಹೂ ಬಿಡುವ ಮ್ಯಾನ್ಸ್‌ಫೀಲ್ಡ್, ಬಿಳಿ ಹೂ ಬಿಡುವ ಮೌಂಟ್ ಬ್ಲಾಂಕ್, ಅತಿಯಾದ ನೀಲಿ ಬಣ್ಣದ ಹೂ ಬಿಡುವ ಡಲ್ಫ್ವಸ್ ಬ್ಲೂ ಮತ್ತು ಬಣ್ಣದ ಹೂ ಬಿಡುವ ಕ್ವೀನ್ ಆಫ್ ದಿ ಬ್ಲೂ.

ಐರಿಸ್ ಸಸ್ಯಗಳನ್ನು ಗುಪ್ತಕಾಂಡದ ತುಂಡು ಮತ್ತು ಲಶುನಗಳಿಂದ ವೃದ್ಧಿ ಮಾಡಬಹುದು. ಬೀಜಗಳಿಂದಲೂ ವೃದ್ಧಿ ಸಾಧ್ಯ.

ಐರಿಸ್ ಸಸ್ಯಗಳು ಸಮುದ್ರಮಟ್ಟಕ್ಕಿಂತ 3,000' ಎತ್ತರದವರೆಗೆ ಸುಲಭವಾಗಿ ಬೆಳೆಯುತ್ತವೆ. ಫಲವತ್ತಾಗಿರುವ ಮತ್ತು ಜೌಗಿಲ್ಲದ ಮರಳುಗೋಡು ಮಣ್ಣು ಬೇಸಾಯಕ್ಕೆ ಶ್ರೇಷ್ಠವಾದುದು. (ಡಿ.ಎಂ.)

**ಐರಿಸೈನಿ:** ಅಮರಾಂತೇಸಿ ಕುಟುಂಬಕ್ಕೆ ಸೇರಿದ ಸುಮಾರು ಇಪ್ಪತ್ತಕ್ಕೂ ಹೆಚ್ಚು ಪ್ರಭೇದಗಳನ್ನೊಳಗೊಂಡ ಒಂದು ಅಲಂಕಾರದ ಸಸ್ಯಜಾತಿ. ಹೂ ಮತ್ತು ಬೀಜಗಳ ಮೇಲೆ ಮೃದುವಾದ ರೋಮದ ಹೊದಿಕೆಯಿದೆ. ದಳದಂತೆ ಮಾರ್ಪಟ್ಟ ಇದರ ಎಲೆಗಳು (ಪೆಟಲಾಯ್ಡ್) ಆಕರ್ಷಣೀಯ ಬಣ್ಣಗಳ ರಮಣೀಯತೆಯನ್ನು ಪ್ರದರ್ಶಿಸುವುದರಿಂದ ಇವು ಉದ್ಯಾನ ಸಸ್ಯಗಳಾಗಿ ಪ್ರಾಮುಖ್ಯ ಪಡೆದಿವೆ. ಇವನ್ನು ಎಲೆಸಸ್ಯ, ಮಡಿಸಸ್ಯ ಮತ್ತು ಪೊದೆಸಸ್ಯಗಳನ್ನಾಗಿ ಬೆಳೆಸುತ್ತಾರೆ. ಇವುಗಳಲ್ಲಿ ಅನೇಕವು ಅಮೆರಿಕದ ಉಷ್ಣ ಮತ್ತು ಸಮಶೀತೋಷ್ಣವಲಯಗಳ ಮೂಲವಾಸಿಗಳು.

ಐರಿಸೈನಿ ಜಾತಿಯ ಸಸ್ಯಗಳು ನೇರವಾಗಿ ಬೆಳೆಯುವ ದೀರ್ಘಕಾಲದ ಪರ್ಣಸಸಿಗಳು; ಇವುಗಳಲ್ಲಿ ಕುಳ್ಳಾದ ಪೊದೆಗಳು; ಇನ್ನು ಕೆಲವು ಹತ್ತುವ ಬಳ್ಳಿಗಳು; ತೊಟ್ಟಿರುವ ಇದರ ಎಲೆಗಳು ಅಭಿಮುಖಪತ್ರ ಜೋಡಣೆ ಹೊಂದಿವೆ. ಎಲೆಗಳ ಅಂಚು ಗರಗಸದ ಹಲ್ಲಿನಂತಿದೆ; ತುದಿ ಮೊನಚಾಗಿದೆ. ಕಂಕುಳ ತುದಿಯಲ್ಲಿರುವ ಹೂಗೊಂಚಲು ಚೂಪುತುದಿಯದು (ಸ್ಪೈಕ್ ಮಾದರಿ); ಏಕಲಿಂಗ ಮತ್ತು ದ್ವಿಲಿಂಗ ಪುಷ್ಪಗಳೆರಡೂ ಇವೆ. ತೊಟ್ಟಿನ ಮೇಲೆ ಉಪಪುಷ್ಪಪತ್ರಗಳೂ ಪುಷ್ಪಪತ್ರಗಳೂ ಇವೆ; ಪುಷ್ಪಪತ್ರಗಳು ತಳದಲ್ಲಿ ಕೂಡಿದ್ದು ಐದು ಭಾಗಗಳನ್ನು ಒಳಗೊಂಡಿವೆ. ಕೇಸರಗಳು ತಳದಲ್ಲಿ ಕೂಡಿಕೊಂಡಿದ್ದು ಮೇಲ್ಭಾಗದಲ್ಲಿ ಬಿಡಿಬಿಡಿಯಾಗಿವೆ. ಶಲಾಕಾಗ್ರ ಎರಡು ಮೂರು ಭಾಗಗಳಾಗಿವೆ. ಹಣ್ಣು ಒಡೆಯದ ಮಾದರಿಯದು; ಬೀಜ ಒಂದೇ.

ಕಾಂಡದ ತುಂಡುಗಳಿಂದ ಈ ಸಸ್ಯವನ್ನು ವೃದ್ಧಿಮಾಡಬಹುದು. ಹೇನು ಮತ್ತು ನುಸಿ ಹತ್ತುವುದು ಸಾಮಾನ್ಯವಾದ್ದರಿಂದ ಫಾಲಿಡಾಲ್ ಅಥವಾ ಥೀಮೇಟನ್ನು ಬಳಸಬೇಕಾಗುತ್ತದೆ. ಮತ್ತಾವ ತೀವ್ರ ರೀತಿಯ ರೋಗಗಳೂ ಇದಕ್ಕೆ ಅಂಟವು.

**ಐರಿಸೈನಿ ಹರ್ಬ್‌ಸ್ಟ್ :** ಲಂಡನ್ನಿನಲ್ಲಿರುವ ಹೆಸರಾಂತ ಕ್ಯೂ ತೋಟದ ಸಸ್ಯವೃದ್ಧಿಗಾರ ಹರ್ಬ್‌ಸ್ಟ್ ಎಂಬುವನ ಜ್ಞಾಪಕಾರ್ಥವಾಗಿ ಈ ಪ್ರಭೇದಕ್ಕೆ ಈ ಹೆಸರು. ಎಲೆ ಕರನೆಯಾಕಾರದಲ್ಲಿದೆ. ತುದಿ ತಗ್ಗು, ಕೆಂಪುನಾಳಗಳು ಕಮಾನಿನ ಆಕಾರದಲ್ಲಿ ಹರಡಿವೆ. ಹೂ ಹಳದಿ, ತೊಟ್ಟು ಉದ್ದ, ಗಾತ್ರ ಅಲ್ಪ, ಗೊಂಚಲು ಮಿಶ್ರ ಮಾದರಿಯದು.

**ಐರಿಸೈನಿ ಲಿಂಡನೈ :** ಎಕ್ವಡಾರ್ ದೇಶದಲ್ಲಿದ್ದ ಜೆ.ಲಿಂಡನ್ ಎಂಬ ಸಸ್ಯವಿಜ್ಞಾನಿಯ ಜ್ಞಾಪಕಾರ್ಥವಾಗಿ ಈ ಪ್ರಭೇದಕ್ಕೆ ಈ ಹೆಸರು. ಈ ಜಾತಿಯ ಕಾಂಡ ಮತ್ತು ಎಲೆ ಗುಲಾಬಿ ಬಣ್ಣವಾಗಿದ್ದು ಎಲೆ ಕರನೆಯಾಕಾರ ಅಥವಾ ಭರ್ಜಿಯಾಕಾರವಾಗಿರುತ್ತದೆ. ಎಲೆಯ ತುದಿ ಮೊನಚು. ನಾಳಗಳು ಪ್ರಮುಖವಾಗಿ ಹರಡಿಕೊಂಡಿದ್ದು ಆಕರ್ಷಣೀಯವಾಗಿ ಕಾಣುತ್ತವೆ. (ಡಿ.ಎಂ.)

**ಐರೆರ್, ಯಾಕಬ್:** 1544(?)–1605. ಜರ್ಮನಿಯ ನ್ಯೂರೆಂಬರ್ಗ್‌ನಲ್ಲಿ ಹುಟ್ಟಿದ ಈತ ನಾಟಕಕಾರ. 1570ರಲ್ಲಿ ಬ್ಯಾಂಬರ್ಗ್ ಪಟ್ಟಣಕ್ಕೆ ತೆರಳಿ 1593ರಲ್ಲಿ ನೂರೆಂಬರ್ಗಿಗೆ ಹಿಂದಿರುಗಿದ. ವೃತ್ತಿಯಲ್ಲಿ ವಕೀಲ. ಪುರಸಭಾ ಸದಸ್ಯ ಹಾಗೂ ಸರ್ಕಾರ ವಕೀಲ. ಪುರಸಭಾ ಸದಸ್ಯ ಹಾಗೂ ಸರ್ಕಾರದ ವಕೀಲನೂ ಆಗಿದ್ದ.

ಸಂಪ್ರದಾಯದ ರೀತಿಯಲ್ಲಿ ಬರೆದ ಬ್ಯಾಂಬರ್ಗ್ ಚರಿತ್ರೆ ಮತ್ತು ಚರ್ಚ್ ಪ್ರಾರ್ಥನಾಗೀತೆಗಳನ್ನು ಬಿಟ್ಟರೆ ಈತ ನೂರಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾನೆ. ಇವುಗಳಲ್ಲಿ 30 ದುಃಖಾಂತ ಹಾಗೂ ಸುಖಾಂತ ನಾಟಕಗಳು, 36 ಪ್ರಹಸನಗಳು ಮತ್ತಿತರವು ಗೀತನೃತ್ಯಗಳು.

ಪದ್ಯರಚನೆ, ಶೈಲಿಗಳಲ್ಲಿ, ಪಾತ್ರಗಳ ಸರಳ ನಿರೂಪಣೆಯಲ್ಲಿ, ನೀತಿಬೋಧಕ ಪ್ರವೃತ್ತಿಯಲ್ಲಿ, ಸಂಭಾಷಣೆಯ ಅನಾಟಕೀಯತೆಯಲ್ಲಿ, ಕಥೆ ಹೇಳುವ ರೀತಿಯಲ್ಲಿ ನಾಟಕಕಾರ ಹ್ಯಾನ್ಸ್‌ಸ್ಯಾಕ್ಸ್‌ನನ್ನು ಈತ ಹೋಲುತ್ತಾನೆ. ಆದರೆ ಕಥಾನಕಗಳಲ್ಲಿ ಸಣ್ಣಪುಟ್ಟ ವಿವರಗಳು ಹೆಚ್ಚಾಗಿ ಅವು ಸಪ್ಪೆಯಾಗಿವೆ. ಎಲಿಜ಼ಬೆತ್ ಕಾಲದ ನಾಟಕಗಳನ್ನು, ಜರ್ಮನಿಯಲ್ಲಿ 16ನೆಯ ಶತಮಾನದ ಉತ್ತರಾರ್ಧ ಹಾಗೂ 17ನೆಯ ಶತಮಾನದ ಆದಿಯಲ್ಲಿ, ಇಂಗ್ಲಿಷ್ ನಟರು ಪ್ರದರ್ಶಿಸುತ್ತಿದ್ದರು. ಈ ಪ್ರದರ್ಶನಗಳಲ್ಲಿ ನಾಜೂಕಿಲ್ಲದಿದ್ದರೂ ರಂಗದ ಮೇಲೆ ಇವು ಪ್ರಭಾವಯುತವಾಗಿದ್ದುವು. ರಂಗದ ಮೇಲೆ ಹೊರ ಚಲನವಲನಗಳಿಗೆ, ಉದ್ರಿಕ್ತ ಘಟನೆಗಳಿಗೆ, ಪ್ರದರ್ಶನಯುಕ್ತ ಪ್ರಭಾವಗಳಿಗೆ ಹೆಚ್ಚು ಗಮನವೀಯುವುದನ್ನು ಐರೆರ್ ಇಂಗ್ಲಿಷ್ ನಾಟಕಗಳಿಂದ ಕಲಿತ. ಸಾಂಪ್ರದಾಯಿಕವಾಗಿ ದುಃಖಾಂತ ನಾಟಕಗಳಲ್ಲೂ ಕಾಣಿಸಿಕೊಳ್ಳುತ್ತಿದ್ದ ಹಾಸ್ಯನಟ. ಇಂಗ್ಲಿಷ್ ನಾಟಕಗಳಲ್ಲಿರುವಂತೆ ವಿದೂಷಕನಾಗಿ ಮಾರ್ಪಾಡಾದ. ಗ್ರೀಕ್ ನಾಟಕದ ಮೇಳದವರ ಹಾಡಿನ ಲಯದಂತೆ ಸಾಂಪ್ರದಾಯಿಕ ರಾಗಗಳನ್ನೊಳಗೊಂಡ ಗೀತನೃತ್ಯಗಳನ್ನು ಇಂಗ್ಲಿಷ್ ನೃತ್ಯಗಳ ರೀತಿಯಲ್ಲಿ ರಚಿಸಿದ. ಇದಕ್ಕೆ ಇಂಗ್ಲಿಷ್ ನೃತ್ಯಗಳಿಂದ ಸಮೃದ್ಧಿಯಾಗಿ ಕಥಾವಸ್ತು ದೊರೆಯಿತು. ಜರ್ಮನಿಯ ಕಥೆಗಳು, ಲಿಪಿ, ಬೊಕ್ಯಾಚಿಯೊರವರ ಕೃತಿಗಳು, ನಿತ್ಯ ಜೀವನದ ಹಾಸ್ಯ ಸನ್ನಿವೇಶಗಳೂ ಐರೆರ್‌ಗೆ ಸ್ಫೂರ್ತಿಯನ್ನಿತ್ತುವು. ಹಲವು ನೂತನ ಲಕ್ಷಣಗಳಿದ್ದರೂ ಈತ ಹಳೆಯ ಸಂಪ್ರದಾಯದ ಕೊನೆಯ ಕವಿಯಾದ.

ಷೇಕ್ಸ್‌ಪಿಯರನ ನಾಟಕಗಳು ಐರೆರ್‌ಗೆ ಸ್ಫೂರ್ತಿಯನ್ನಿತ್ತುವು. ಅವುಗಳಂತೆ ತನ್ನ ನಾಟಕಗಳಲ್ಲೂ ಅನೇಕ ಕಥಾನಕಗಳನ್ನು ಹಾಸುಹೊಕ್ಕಾಗಿ ಬಳಸಿದರೂ ಕೃತಿ ರಚನೆಯಲ್ಲಿ ಷೇಕ್ಸ್‌ಪಿಯರನ್ನು ಮೀರಿಸಲಾಗಲಿಲ್ಲ.

ಈತನ 69 ನಾಟಕಗಳನ್ನು 1618ರಲ್ಲಿ ಒಟ್ಟಿಗೆ ಪ್ರಕಟಿಸಲಾಯಿತು. ಜರ್ಮನ್ ನಾಟಕದ ಕಥೆ ಹೇಳುವ ದಾಟಿಯನ್ನು, ಅದರ ದ್ವಿಪದಿಪ್ರಾಸ ರೀತಿಯನ್ನು ಇಂಗ್ಲಿಷ್ ಸುಖಾಂತ ನಾಟಕದ ತಂತ್ರ ಹಾಗೂ ಉದ್ವಿಗ್ನತೆಯನ್ನು ಐರೆರ್ ಬೆರೆಸಲು ಯತ್ನಿಸಿದ. ಹ್ಯಾನ್ಸ್ ಸ್ಯಾಕ್ಸ್‌ನನ್ನು ಅನುಕರಣ ಮಾಡಲು ಯತ್ನಿಸಿದರೂ ಆತನ ಸ್ವೋಪಜ್ಞತೆ, ಚತುರೋಕ್ತಿ, ಅಲಂಕಾರಿಕ ಶೈಲಿ ಐರೆರ್‌ಗೆ ಲಭಿಸಲಿಲ್ಲ. (ಟಿ.ವಿ.ಎಸ್.)

**ಐರೋಪ್ಯ ಆರ್ಥಿಕ ಸಮುದಾಯ:** ಬೆಲ್ಜಿಯಂ, ಫ್ರಾನ್ಸ್, ಜರ್ಮನ್ ಗಣರಾಜ್ಯ, ಇಟಲಿ, ಲಕ್ಸೆಂಬರ್ಗ್, ನೆದರ್ಲೆಂಡ್ಸ್–ಈ ಆರು ರಾಷ್ಟ್ರಗಳ ನಡುವಣ ಒಪ್ಪಂದಕ್ಕನುಗುಣವಾಗಿ 1958ರ ಜನವರಿ 1 ರಂದು ಸ್ಥಾಪಿತವಾದ ಸಂಸ್ಥೆ (ಯುರೋಪಿಯನ್ ಎಕನಾಮಿಕ್ ಕಮ್ಯೂನಿಟಿ). ಐರೋಪ್ಯ ಸಾಮಾನ್ಯ ಮಾರುಕಟ್ಟೆ (ಕಾಮನ್ ಮಾರ್ಕೆಟ್) ಎಂಬ ಹೆಸರೂ ಇದಕ್ಕುಂಟು. ಸದಸ್ಯ ರಾಷ್ಟ್ರಗಳಿಗೆ ಸಾಮಾನ್ಯವಾದ ಮಾರುಕಟ್ಟೆಯೊಂದನ್ನು ಸ್ಥಾಪಿಸಿ ಅವುಗಳ ಆರ್ಥಿಕ ನೀತಿಗಳಲ್ಲಿ ಸಾಮರೂಪ್ಯವುಂಟಾಗುವಂತೆ ಮಾಡಿ, ತನ್ಮೂಲಕ ಆ ದೇಶಗಳ ಆರ್ಥಿಕ ಚಟುವಟಿಕೆಗಳ ಸಮರಸ ಬೆಳವಣಿಗೆಯನ್ನೂ ಸ್ಥಿರತೆಯನ್ನೂ ಉಂಟುಮಾಡುವುದೂ ಅಲ್ಲಿನ ಪ್ರಜೆಗಳ ಜೀವನಮಟ್ಟ ಹೆಚ್ಚಿಸುವುದೂ ದೇಶಗಳ ನಡುವೆ ನಿಕಟಸಂಬಂಧ ಬೆಳೆಸುವುದೂ ಸಂಸ್ಥೆಯ ಉದ್ದೇಶ. ಇದರ ಸಾಧನೆಗಾಗಿ ಸಂಸ್ಥೆ ಅನುಸರಿಸುವ ಮುಖ್ಯ ವಿಧಾನಗಳು ಇವು: 1 ಆಮದು–ರಫ್ತು ಸುಂಕಗಳ ಮತ್ತು ನಾನಾ ನಿರ್ಬಂಧಗಳ ರದ್ದು, 2 ಸಮಾನ ಸುಂಕ ವ್ಯವಸ್ಥೆಯ ಮತ್ತು ವಾಣಿಜ್ಯ ನೀತಿಯ ಸ್ಥಾಪನೆ, 3 ಜನ ಸೇವೆ ಮತ್ತು ಬಂಡವಾಳಗಳು ಸುಸೂತ್ರವಾಗಿ ಸಾಗುವಂತೆ ಏರ್ಪಾಡು, 4 ಕೃಷಿ ಮತ್ತು ಸಾರಿಗೆಗೆ ಸಂಬಂಧಿಸಿದಂತೆ ಏಕರೀತಿಯ ನೀತಿಯ, ಪ್ರತಿಷ್ಠಾಪನೆ, 5 ನ್ಯಾಯವಾದ ಸ್ಪರ್ಧೆಯ ವ್ಯವಸ್ಥೆಯ ಕಲ್ಪನೆ, 6 ನಾನಾ ಆರ್ಥಿಕ ನೀತಿಗಳನ್ನು ಸಂಯೋಜನೆಗೆ ಒಳಪಡಿಸಿ ವಿದೇಶೀ ವಿನಿಮಯ ಕ್ಷೇತ್ರದಲ್ಲಿ ಪಾವತಿ ಶಿಲ್ಕುಗಳ (ಬ್ಯಾಲೆನ್ಸ್ ಆಫ್ ಪೇಮೆಂಟ್ಸ್) ಸಮತೋಲನ, 7 ಸದಸ್ಯ ರಾಷ್ಟ್ರಗಳ ಪೌರಸಭಾ ಕಾನೂನುಗಳಲ್ಲಿ ಏಕರೂಪತೆಯ ಸಾಧನೆ, 8 ಸಾಮಾಜಿಕ ನಿಧಿಯ ಮತ್ತು ಐರೋಪ್ಯ ನಿಯೋಜನ ಬ್ಯಾಂಕಿನ (ಇನ್‌ವೆಸ್ಟ್‌ಮೆಂಟ್ ಬ್ಯಾಂಕ್) ರಚನೆ ಮತ್ತು 9 ಕೆಲವು ಸದಸ್ಯ ರಾಷ್ಟ್ರಗಳಿಗೆ ಸಂಬಂಧ ಹೊಂದಿರುವ ಸಾಗರಾಂತರ ದೇಶಗಳೂ ಪ್ರದೇಶಗಳೂ ಈ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪನೆ.

ರಾಷ್ಟ್ರ–ರಾಷ್ಟ್ರಗಳ ಆರ್ಥಿಕ ವ್ಯವಹಾರಗಳಿಗೆ ರಾಜಕೀಯ ಪ್ರತ್ಯೇಕತೆಯಿಂದ ಪ್ರಾಪ್ತವಾಗುವ ಅನೇಕ ಬಗೆಯ ಅಡಚಣೆಗಳನ್ನು ತೊಡೆದು ಹಾಕಿ, ಹಲವಾರು ರಾಷ್ಟ್ರಗಳು ಒಟ್ಟಾಗಿ ಒಂದೇ ರೀತಿಯ ಆರ್ಥಿಕ ನೀತಿಗಳನ್ನು ಅನುಸರಿಸುವುದರ ಮೂಲಕ ಒಂದು ವಿಧದ ಅಂತಾರಾಷ್ಟ್ರೀಯ ಆರ್ಥಿಕ ಸಂಘಟನೆಯನ್ನು ಸಾಧಿಸುವ ಪ್ರಯತ್ನಗಳು ಎರಡನೆಯ ಮಹಾಯುದ್ಧದ ಕಾಲದಿಂದೀಚೆಗೆ ಎದ್ದು ಕಾಣುವ ಆರ್ಥಿಕ ಘಟನೆ. ಪಾಶ್ಚಾತ್ಯ ಯುರೋಪಿನ ರಾಷ್ಟ್ರಗಳು ತಮ್ಮ ಅರ್ಥವ್ಯವಸ್ಥೆಯನ್ನು ಪರಸ್ಪರವಾಗಿ ಸಂಘಟಿತಗೊಳಿಸುವ ಪ್ರಯತ್ನ ಈಚೆಗೆ ಪ್ರಾಮುಖ್ಯ ಗಳಿಸಿದೆ. 17 ಐರೋಪ್ಯ ರಾಷ್ಟ್ರಗಳ ಆರ್ಥಿಕ ಸಹಕಾರ ಸಂಸ್ಥೆ 1948ರ ಏಪ್ರಿಲ್ 16ರಂದು ಸ್ಥಾಪಿತವಾಯಿತು. ಅಂದಿನಿಂದ ಈ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳು ಶಾಶ್ವತವಾಗಿ ಪ್ಯಾರಿಸಿನಲ್ಲಿ ಇದ್ದು ಪ್ರತಿದಿನವೂ ಒಟ್ಟಾಗಿ ಅನೇಕ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತ ಬಂದಿದ್ದಾರೆ. ಹೀಗಾಗಿ ಒಂದು ರಾಷ್ಟ್ರ ಯಾವ ಒಂದು ನೀತಿ ಹಾಗೂ ಕ್ರಮವನ್ನು ಆಲೋಚಿಸುವಾಗಲೂ ಇತರ ಸದಸ್ಯ ರಾಷ್ಟ್ರಗಳ ಮೇಲೆ ಆಗಬಹುದಾದ ಪರಿಣಾಮವನ್ನು ಸ್ವಾಭಾವಿಕವಾಗಿಯೇ ಪರಿಗಣಿಸುವ ರೂಢಿ ಬೆಳೆದು ಬಂದು ಸರ್ವ ಐರೋಪ್ಯವೆಂದು ಹೇಳಬಹುದಾದ ದೃಷ್ಟಿ ಬೇರೂರಿ ಆರ್ಥಿಕ ಸಂಘಟನೆಗಳಿಗೆ ಮಾರ್ಗ ಮಾಡಿಕೊಟ್ಟಂತಾಗಿದೆ. ಬೆನೆಲಕ್ಸ್ ಒಕ್ಕೂಟ ಐರೋಪ್ಯ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ (**ನೋಡಿ– ಐರೋಪ್ಯ–ಕಲ್ಲಿದ್ದಲು–ಮತ್ತು–ಉಕ್ಕು–ಸಮುದಾಯ**) ಮುಂತಾದ ಸಂಘಟನ ಯೋಜನೆಗಳು ರೂಪುಗೊಂಡುವು. ಐರೋಪ್ಯ ಆರ್ಥಿಕ ಸಮುದಾಯದ ಸ್ಥಾಪನೆ ಇವೆಲ್ಲ ಯೋಜನೆಗಳಿಗಿಂತಲೂ ಮುಖ್ಯವಾದ ಆರ್ಥಿಕ ಸಂಘಟನೆಯ ಹೆಜ್ಜೆ.

ಐರೋಪ್ಯ ಆರ್ಥಿಕ ಸಮುದಾಯ ಒಂದು ರೀತಿಯ ರಾಷ್ಟ್ರಾತೀತ ಸರ್ಕಾರವೇ ಆಗಿದೆ ಯೆಂದು ಹೇಳಬಹುದು. ಒಟ್ಟುಗೂಡಿರುವ ಆರು ರಾಷ್ಟ್ರಗಳು ಕೆಲವು ಆರ್ಥಿಕ ವಿಷಯ ಗಳಲ್ಲಿ ವೈಯಕ್ತಿಕ ರಾಷ್ಟ್ರೀಯ ಅಧಿಕಾರವನ್ನು ಸಮುದಾಯಕ್ಕೆ ಬಿಟ್ಟು ಕೊಟ್ಟಿವೆ. ಇದರಿಂದ ಈ ಆರು ರಾಷ್ಟ್ರಗಳ ಆರ್ಥಿಕ ಸಂಘಟನೆ ಸಾಧಿಸಲು ಸಮುದಾಯಕ್ಕೆ ಅವಕಾಶವುಂಟಾಗಿದೆ. ರಾಜಕೀಯವಾಗಿ ಒಂದಾಗದೆ ಸುಭದ್ರವಾದ ಮತ್ತು ಪರಿಪೂರ್ಣವಾದ ಆರ್ಥಿಕ ಸಂಘಟನೆ ಸಾಧ್ಯವಿಲ್ಲವೆಂಬುದು ಪ್ರೊ. ಆರ್ಥರ್ ಲೂಯಿಸ್ ಅಭಿಪ್ರಾಯ. ರಾಜಕೀಯ ಸಂಘಟನೆಯ ಕ್ರಮಗಳನ್ನು ಕೈಕೊಳ್ಳುತ್ತಿರುವುದು ಈಚಿನ ಮಹತ್ವಪೂರಿತ ಬೆಳವಣಿಗೆಗಳಲ್ಲಿ ಒಂದು.

ಐರೋಪ್ಯ ಆರ್ಥಿಕ ಸಮುದಾಯದ ಸ್ಥಾಪನೆಗೆ ರಾಜಕೀಯ, ಧ್ಯೇಯಾತ್ಮಕ ಮತ್ತು ಆರ್ಥಿಕ ಪ್ರೇರಕ ಶಕ್ತಿಗಳಿವೆ. ಯುರೋಪಿನ ರಾಷ್ಟ್ರಗಳೆಲ್ಲವೂ ಸೇರಿ ಒಕ್ಕೂಟ ಒಂದನ್ನು ಸ್ಥಾಪಿಸುವುದರ ಮೂಲಕ ಹೆಚ್ಚು ವಿಶಾಲವಾದ ರಾಜಕೀಯ ಸಂಸ್ಥಾನವಾಗಬೇಕೆಂಬುದು ಸರ್ ವಿನ್‌ಸ್ಟನ್ ಚರ್ಚಿಲ್ ಬಹಳ ಹಿಂದೆಯೇ ಮಾಡಿದ್ದ ಸೂಚನೆ. ಎರಡನೆಯ ಮಹಾಯುದ್ಧದ ತರುವಾಯ ಯುರೋಪಿನಲ್ಲಿ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರವೆಂಬ ಎರಡು ಬಣಗಳು ಒಡೆದು ಮೂಡಿದುವು. ಕಮ್ಯೂನಿಸ್ಟೇತರ ರಾಷ್ಟ್ರಗಳ ಸಂಘಟನೆಯ ಯತ್ನಗಳಲ್ಲಿ ಇದೂ ಒಂದು. ಉತ್ತರ ಅಟ್ಲಾಂಟಿಕ್ ಕೌಲು ಸಂಸ್ಥೆ (**ನೋಡಿ– ಉತ್ತರ–ಅಟ್ಲಾಂಟಿಕ್–ಕೌಲು–ಸಂಸ್ಥೆ**) ಪಶ್ಚಿಮ ಯುರೋಪಿನ ರಾಷ್ಟ್ರಗಳನ್ನೂ, ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನೂ ರಕ್ಷಣಾದೃಷ್ಟಿಯಿಂದ ಒಂದುಗೂಡಿಸಿದೆ. ಆರ್ಥಿಕ ಕ್ಷೇತ್ರದ ಸಂಘಟನೆಗಾಗಿ ಐರೋಪ್ಯ ಆರ್ಥಿಕ ಸಮುದಾಯದ ಉದಯವಾಯಿತು.

ಆರ್ಥಿಕ ಲಾಭದೃಷ್ಟಿ ಸಮುದಾಯದ ಇನ್ನೊಂದು ಮುಖ್ಯ ಪ್ರೇರಕ ಶಕ್ತಿ. ಆಧುನಿಕ ಆರ್ಥಿಕ ಪದ್ಧತಿಯಲ್ಲಿ ಅನೇಕ ಕೈಗಾರಿಕೆಗಳಲ್ಲಿ ಬೃಹದ್ಗಾತ್ರ ಉತ್ಪಾದನ ವ್ಯವಸ್ಥೆಯಿಂದ ಮಾತ್ರ ಆಂತರಿಕ ಆಡಳಿತ ಹಾಗೂ ಇತರ ಸುವ್ಯವಸ್ಥಾ ಕ್ರಮಗಳನ್ನೂ ಬಾಹ್ಯಪರಿಸ್ಥಿತಿಗಳಿಂದ ಪ್ರಯೋಜನ ಹೆಚ್ಚಿಸಿಕೊಳ್ಳುವ ಕ್ರಮಗಳನ್ನೂ ಅನುಸರಿಸುವುದು ಸಾಧ್ಯ. ಯುರೋಪಿನ ಸಣ್ಣಪುಟ್ಟ ರಾಷ್ಟ್ರಗಳು ತಮ್ಮ ತಮ್ಮ ದೇಶೀಯ ಉತ್ಪನ್ನ ಸಾಧನಗಳಿಗೂ ಆಂತರಿಕ ಮಾರುಕಟ್ಟೆಗಳಿಗೂ ಅನುಸಾರವಾಗಿ ಕೈಗಾರಿಕೆಗಳನ್ನು ಹೂಡುವುದಾದರೆ ಸಾಕಷ್ಟು ಪ್ರಮಾಣದ ವಿಸ್ತರಣೆ ಸಾಧ್ಯವಾಗಲಾರದು ಎಂಬ ಕಾರಣ ಒಕ್ಕೂಟಕ್ಕೆ ಪ್ರೇರಕವಾಯಿತು. ಹೀಗೆ ಮಾಡುವುದರಿಂದ ಅರ್ಥವ್ಯವಸ್ಥೆಯ ಕ್ಷೇತ್ರ ವಿಸ್ತಾರಗೊಂಡು ಶ್ರಮ ವಿಭಜನೆಗೂ ಆಂತರಿಕ ಹಾಗೂ ಬಾಹ್ಯ ಮಿತವ್ಯಯಗಳಿಗೂ ಹೆಚ್ಚು ಅವಕಾಶವಾಗುವುದೆಂಬ ಅರಿವು ಉಂಟಾದದ್ದೇ ಈ ಸಮುದಾಯ ಸ್ಥಾಪನೆಗೆ ಆರ್ಥಿಕ ಕಾರಣ.

ಈ ಪ್ರೇರಕ ಶಕ್ತಿಗಳು ಪ್ರಬಲವಾದುದಕ್ಕೆ ಕಾರಣ ಎರಡನೆಯ ಮಹಾಯುದ್ಧದ ತರುವಾಯ ಪ್ರಾಪ್ತವಾದ ಆರ್ಥಿಕ ದುಃಸ್ಥಿತಿ. ಮುರಿದು ಬಿದ್ದ ಅರ್ಥವ್ಯವಸ್ಥೆಗಳನ್ನು ಪುನರ್ವ್ಯವಸ್ಥೆಗೊಳಿಸುವ ಪ್ರಯತ್ನದಲ್ಲಿ ಐರೋಪ್ಯ ರಾಷ್ಟ್ರಗಳೆಲ್ಲ ಒಂದುಗೂಡಲೇಬೇಕಾದ ಅನಿವಾರ್ಯ ಉದ್ಭವಿಸಿತು.

ಈ ಆರ್ಥಿಕ ಸಮುದಾಯದ ಕೆಲವು ಮುಖ್ಯ ಲಕ್ಷಣಗಳನ್ನು ಸ್ಥೂಲವಾಗಿ ಹೀಗೆ ಹೇಳಬಹುದು : ಪರಸ್ಪರ ಸುಂಕ ಹಾಗೂ ವ್ಯಾಪಾರ ಪ್ರಮಾಣ ನಿರ್ಬಂಧಗಳ ನಿರ್ಮೂಲ, ಏಕರೀತಿಯ ಹೊರ ವ್ಯಾಪಾರ ಸುಂಕ, ನಿರಾತಂಕ ಬಂಡವಾಳ ಚಲನೆ, ವಿನಿಮಯ, ವ್ಯವಸಾಯ, ಯಾನವಾಹನ ಮತ್ತು ಇತರ ಆರ್ಥಿಕ ನೀತಿಗಳ ಬಗ್ಗೆ ಏಕರೀತಿಯ ಅನುಸರಣೆ ಇತ್ಯಾದಿ ಕ್ರಮಗಳ ಮೂಲಕ ಆರು ರಾಷ್ಟ್ರಗಳೂ ಸೇರಿ ಒಂದೇ ಆರ್ಥಿಕ ಕ್ಷೇತ್ರವಾಗುವಂತೆ ಮಾಡುವುದೇ ಸಮುದಾಯದ ಮುಖ್ಯ ಆಶಯ. ಇದೇ ಐರೋಪ್ಯ ಸಾಮಾನ್ಯ ಮಾರುಕಟ್ಟೆಯ ಯೋಜನೆ.

ಐರೋಪ್ಯ ಆರ್ಥಿಕ ಸಮುದಾಯದ ಕಾರ್ಯಸಾಧನೆಗಾಗಿ ಅನೇಕ ಸಮಿತಿಗಳು ಸ್ಥಾಪಿತವಾಗಿವೆ. ಇವುಗಳ ಪೈಕಿ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯೂ ಒಂದು. ಇದರಲ್ಲಿ ಸಮುದಾಯದ ಆರು ಸದಸ್ಯ ರಾಷ್ಟ್ರಗಳ ನಾನಾ ಸಾಮಾಜಿಕ ಆರ್ಥಿಕ ಕ್ಷೇತ್ರಗಳನ್ನು ಪ್ರತಿನಿಧಿಸುವ 101 ಮಂದಿ ಸದಸ್ಯರಿದ್ದಾರೆ. ಇದೊಂದು ಸಮಾಲೋಚಕ ಸಮಿತಿ. ಹೆಚ್ಚಾಗಿ ಕೃಷಿ ಮತ್ತು ಸಾರಿಗೆಗೆ ಸಂಬಂಧಿಸಿದಂತೆ ಈ ಸಮಿತಿ ಸಲಹೆ ನೀಡುತ್ತದೆ.

ಈ ಸಮುದಾಯದ ಇತರ ಸಮಿತಿಗಳು ಇಂತಿವೆ : 1 ಹಣ ಸಮಿತಿ: ಸದಸ್ಯ ರಾಷ್ಟ್ರಗಳ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲಿಸಿ ಸಲಹೆ ನೀಡುವುದೂ ರಾಷ್ಟ್ರೀಯ ಹಣನೀತಿಗಳನ್ನು ಸಂಯೋಜಿಸುವುದೂ ಇದರ ಗುರಿ. 2 ಶೀಘ್ರಾವಧಿ ಆರ್ಥಿಕ ನೀತಿ ಸಮಿತಿ: ಸದಸ್ಯ ದೇಶಗಳ ದಿನದಿನದ ಆರ್ಥಿಕ ನೀತಿಗಳನ್ನು ಸಂಯೋಜಿಸಿ ಅವುಗಳ ಆರ್ಥಿಕ ವಿಸ್ತರಣೆ ಕ್ರಮಬದ್ಧವಾಗಿ ನಡೆಯುವ ಸಲಹೆ ನೀಡುವುದು ಈ ಸಮಿತಿಯ ಉದ್ದೇಶ. 3 ಮಧ್ಯಾವಧಿ ಆರ್ಥಿಕ ನೀತಿ ಸಮಿತಿ: ಸಮುದಾಯ ರಾಷ್ಟ್ರಗಳ ಅರ್ಥವ್ಯವಸ್ಥೆಯಲ್ಲಿ ತೋರಿಬರುತ್ತಿದ್ದ ನಾನಾ ಪ್ರವೃತ್ತಿಗಳನ್ನು ಗಮನಿಸಿ, ಅವುಗಳ ಅರ್ಥನೀತಿಗಳ ಹೊಂದಾಣಿಕೆಗಾಗಿ ಸೂಕ್ತ ಸಲಹೆ ನೀಡುವ ಉದ್ದೇಶದಿಂದ ಇದು ಸ್ಥಾಪಿತವಾಗಿದೆ. 4 ಆಯ-ವ್ಯಯ ನೀತಿ ಸಮಿತಿ, ಕೇಂದ್ರ ಬ್ಯಾಂಕ್ ಗವರ್ನರುಗಳ ಸಮಿತಿ. ಸಾರಿಗೆ ಸಮಿತಿ ಮತ್ತು ವಲಸೆ ಹೋಗುವ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಆಡಳಿತ ಆಯೋಗ-ಇವು ಇತರ ಕೆಲವು ಸಮಿತಿಗಳು.

ಸಾಮಾನ್ಯ ಮಾರುಕಟ್ಟೆಯ ರಾಷ್ಟ್ರಗಳಲ್ಲಿನ ಕಾರ್ಮಿಕರ ಉದ್ಯೋಗಾವಕಾಶಗಳನ್ನು ಉತ್ತಮಪಡಿಸಿ ಜೀವನಮಟ್ಟವನ್ನು ಏರಿಸುವ ಉದ್ದೇಶದಿಂದ 1960ರಲ್ಲಿ ಐರೋಪ್ಯ ಸಾಮಾಜಿಕ ನಿಧಿಯ ಸ್ಥಾಪನೆಯಾಯಿತು. ಸರ್ಕಾರಗಳ, ಕಾರ್ಮಿಕ ಸಂಘಗಳ ಮತ್ತು ನೇಮಕದಾರರ (ಎಂಪ್ಲಾಯರ್ಸ್) ಪ್ರತಿನಿಧಿಗಳು ಈ ನಿಧಿಯ ಆಡಳಿತ ಆಯೋಗದಲ್ಲಿರುತ್ತಾರೆ. ಉದ್ಯೋಗ ಪುನರ್ವ್ಯವಸ್ಥೆ ಪುನರ್‌ತರಬೇತಿಗಳಿಗಾಗಿ ಸದಸ್ಯ ರಾಷ್ಟ್ರ ಮಾಡುವ ಖರ್ಚಿನಲ್ಲಿ ಅರ್ಧವನ್ನು ಈ ನಿಧಿಯಿಂದ ಒದಗಿಸಲು ಅವಕಾಶವಿದೆ. ಒಂದು ಉತ್ಪಾದನೆಯಿಂದ ಇನ್ನೊಂದು ಉತ್ಪಾದನೆಗಾಗಿ ಉದ್ಯಮವನ್ನು ಪರಿವರ್ತನೆಗೊಳಿಸಿದ್ದರ ಫಲವಾಗಿ ಕಾರ್ಮಿಕರ ಕೂಲಿಯ ನಷ್ಟವನ್ನು ತುಂಬಿಕೊಡಲೂ ಈ ನಿಧಿಯನ್ನು ಬಳಸಬಹುದು. 1960-1968ರ ಅವಧಿಯಲ್ಲಿ ಈ ನಿಧಿಯಿಂದ 8.026 ಕೋಟಿ ಡಾಲರುಗಳನ್ನು 9,59,258 ಕಾರ್ಮಿಕರ ನೆರವಿಗಾಗಿ ನೀಡಲಾಗಿತ್ತು.

ಸಮುದಾಯ ರಾಷ್ಟ್ರಗಳ ಸಾಗರಾಂತರ ಪ್ರದೇಶಗಳ ಸಾಮಾಜಿಕ ಆರ್ಥಿಕ ಅಭಿವೃದ್ಧಿಗಾಗಿ ಒಂದು ಪ್ರತ್ಯೇಕ ನಿಧಿ ಸ್ಥಾಪಿತವಾಗಿದೆ. 1959ರಲ್ಲಿ ಇದನ್ನು ತೊಡಗಿಸಲಾಯಿತು.

ಸಮುದಾಯ ಹಿತ ಸಾಧಿಸಬಲ್ಲ ಸಾಮಾನ್ಯ ಮಾರುಕಟ್ಟೆಯ ಸುಲಲಿತ ಸರ್ವತೋಮುಖ ಬೆಳವಣಿಗೆಯಾಗುವಂತೆ ಅಭಿವೃದ್ಧಿ ಕಾರ್ಯಗಳಿಗಾಗಿ ಸಾಲ ಕೊಡುವ ಮತ್ತು ಜಾಮೀನು ನೀಡುವ ಉದ್ದೇಶದಿಂದ ಸ್ಥಾಪಿತವಾಗಿರುವ ಐರೋಪ್ಯ ನಿಯೋಜನಾ ಬ್ಯಾಂಕಿನ ಬಂಡವಾಳ 100 ಕೋಟಿ ಡಾಲರ್. ಇದಕ್ಕೆ ಫ್ರಾನ್ಸ್ ಮತ್ತು ಜರ್ಮನ್ ಗಣರಾಜ್ಯ ತಲಾ 30 ಕೋಟಿ ಡಾಲರುಗಳನ್ನೂ ಇಟಲಿ 24 ಕೋಟಿಯನ್ನೂ ಬೆಲ್ಜಿಯಂ 8.65 ಕೋಟಿಯನ್ನೂ ನೆದರ್‌ಲೆಂಡ್ಸ್ 7.15 ಕೋಟಿಯನ್ನೂ ಲಕ್ಸೆಂಬರ್ಗ್ 20 ಲಕ್ಷವನ್ನೂ ಚಂದಾ ಸಲ್ಲಿಸಿವೆ.

15 ವರ್ಷಗಳೊಳಗೆ ಒಪ್ಪಂದದ ರಾಷ್ಟ್ರಗಳೊಳಗೆ ಆಮದು-ರಫ್ತು ಸುಂಕವಿಲ್ಲದೆ ವ್ಯಾಪಾರ ನಡೆಯುವಂತೆ ಮಾಡುವುದು ಸಮುದಾಯದ ಆಶಯ. ಸಮುದಾಯದ ರಾಷ್ಟ್ರಗಳು ಇತರ ರಾಷ್ಟ್ರಗಳೊಡನೆ ನಡೆಸುವ ವ್ಯಾಪಾರಕ್ಕೆ ಏಕರೀತಿಯ ಆಮದು-ರಫ್ತು ನೀತಿ ಹಾಗೂ ಸುಂಕ ದರಗಳ ಪಟ್ಟಿ ಅನುಸರಿಸಲಾಗುವುದು. ಆರಂಭದಲ್ಲಿ 1-1-57ರಲ್ಲಿ ಆರು ರಾಷ್ಟ್ರಗಳು ಅನುಸರಿಸುತ್ತಿದ್ದ ದರಗಳ ಸರಾಸರಿಯೇ. ಈ ಹೊಸ ಸುಂಕ ದರಗಳು; ಇವು ಮುಂದೆ ಕಾಣಿಸಿರುವ ಮಿತಿಗೆ ಹೆಚ್ಚಾಗದಿರಬೇಕೆಂದು ವಿಧಿಸಲಾಗಿದೆ: 1 ಕಚ್ಚಾ ಸಾಮಗ್ರಿಗಳಿಗೆ ಶೇ.3, 2 ಅರ್ಧ ತಯಾರಿಸಿದ ಸರಕುಗಳಿಗೆ ಶೇ.10, 3 ಕೆಲವು ರಾಸಾಯನಿಕ ಸರಕುಗಳಿಗೆ ಶೇ.15-ಶೇ.25, 4 ನಮೂದಿಸಲಾಗಿರುವ ಕೆಲವು ಸರಕುಗಳಿಗೆ ಪರಸ್ಪರ ಮಾತುಕತೆಗಳ ಮೇಲೆ ನಿರ್ಧಾರವಾಗುವ ದರಗಳು. ಹೀಗೆ ಸುಂಕದರಗಳ ಪರಮಾವಧಿ ಮಟ್ಟವನ್ನು ಗೊತ್ತುಮಾಡಿದಂತಾಗಿದೆ. ಈ ಏಕರೂಪದ ಹೊರ ಸುಂಕ ಪದ್ಧತಿ ಮೂರು ಹಂತಗಳಲ್ಲಿ ಜಾರಿಗೆ ಬರತಕ್ಕದ್ದು. ಒಂದು ಸಾರಿ ಸ್ಥಾಪನೆಯಾದ ಸುಂಕದ ಮಟ್ಟ ಬದಲಾವಣೆಯಾಗಬೇಕಾದರೆ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಆವಶ್ಯಕ. ವ್ಯವಸಾಯಗಳ ಮೇಲಿನ ಸುಂಕವನ್ನು ಸದಸ್ಯ ರಾಷ್ಟ್ರ ಸಭೆಯ ಅನುಮತಿಯಿಂದ ಕೆಲವು ಕಾಲದ ವರೆಗೆ ವಜಾ ಮಾಡಬಹುದು.

ಆಮದು ಪ್ರಮಾಣ ಮಿತಿಗೊಳಿಸುವ ಹಸುಗೆ (ಕೋಟ) ಪದ್ಧತಿ ರದ್ದಾಗುತ್ತದೆ. ಮೊದಲ ವರ್ಷದಲ್ಲೇ ಉಭಯ ಪಕ್ಷೀಯ ಹಸುಗೆಗಳು ಕ್ಷೇತ್ರೀಯ ಹಸುಗೆಗಳಾಗಿ ಮಾರ್ಪಟ್ಟವು. ಅಂದರೆ ನಿಗದಿಯಾದ ಆಮದಿನ ಪರಿಮಾಣವನ್ನು ಇನ್ನೊಂದು ರಾಷ್ಟ್ರದಿಂದ ಮಾತ್ರ ಪಡೆಯುವುದಕ್ಕೆ ಬದಲಾಗಿ ಉಳಿದ 5 ರಾಷ್ಟ್ರಗಳಲ್ಲಿ ಯಾವುದರಿಂದ ಬೇಕಾದರೂ ಪಡೆಯಬಹುದು. ಕಾಲಕ್ರಮದಲ್ಲಿ ಹಸುಗೆಯ ಮೂಲಕವಾಗಲಿ ಇತರ ವಿಧದಲ್ಲಾಗಲಿ ಆಮದು ಪ್ರಮಾಣವನ್ನು ನಿರ್ಬಂಧಿಸುವ ಕಟ್ಟುಪಾಡುಗಳನ್ನು ಕ್ಷೇತ್ರದೊಳಗೆ ಪೂರ್ಣವಾಗಿ ರದ್ದುಗೊಳಿಸಿ ವ್ಯಾಪಾರ ಸ್ವಾಭಾವಿಕ ಮಾರ್ಗಗಳಲ್ಲಿ ಬೆಳೆಯುವ ಅವಕಾಶವನ್ನು ಸಮುದಾಯ ಕಲ್ಪಿಸಲಿದೆ.

ವಿದೇಶೀ ವಿನಿಮಯ ಮತ್ತು ವ್ಯಾಪಾರ ನೀತಿಗಳ ಬಗ್ಗೆ ಸಾಮಾನ್ಯ ಮಾರುಕಟ್ಟೆಯ ಆವಶ್ಯಕತೆಗಳಿಗೆ ಅನುಸಾರವಾದ ಕೆಲವು ನಿಯಮಗಳನ್ನು ಒಪ್ಪಂದರಲ್ಲಿ ಸೂಚಿಸಿದೆ. ಸಮುದಾಯದ ಸದಸ್ಯ ರಾಷ್ಟ್ರಗಳೂ ಅಂತಾರಾಷ್ಟ್ರೀಯ ದ್ರವ್ಯನಿಧಿಯ ಸದಸ್ಯತ್ವ ಹೊಂದಿರುವುದರಿಂದ ಅವು ವಿದೇಶೀ ವಿನಿಮಯ ಕ್ಷೇತ್ರದಲ್ಲಿ ಸೂಕ್ತ ಕಟ್ಟುಪಾಡುಗಳಿಗೆ ಒಳಗಾಗಿವೆ. ರಫ್ತು ವ್ಯಾಪಾರಕ್ಕೆ ಸಹಾಯದ್ರವ್ಯ (ಎಕ್ಸ್‌ಪೋರ್ಟ್ ಸಬ್ಸಿಡಿ) ನೀಡಿಕೆ, ವ್ಯವಹಾರ ಕೂಟಗಳ (ಕಾರ್ಟೆಲ್ಸ್) ಮೂಲಕ ಬೆಲೆ ನಿಗದಿ ಪದ್ಧತಿ, ಸರ್ಕಾರಿ ವ್ಯಾಪಾರ ಕಾರ್ಪೊರೇಷನ್‌ಗಳ ಮೂಲಕ ಅನುಚಿತ ಸ್ಪರ್ಧೆಯಲ್ಲಿ ನಿರತವಾಗುವುದು-ಇಂಥ ನೀತಿಗಳನ್ನು ತಪ್ಪಿಸಲು ಒಪ್ಪಂದದಲ್ಲಿ ಸೂಚಿತವಾಗಿರುವ ಪ್ರಕಾರ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಾರ್ವತ್ರಿಕ ಮಾರುಕಟ್ಟೆಯ ನಿಯಮಗಳ ಪ್ರಕಾರ ಸದಸ್ಯರಾಷ್ಟ್ರಗಳ ರೈಲು, ರಸ್ತೆ, ಹಡಗು, ವಿಮಾನ ಇತ್ಯಾದಿ ಸಾರಿಗೆ ಪದ್ಧತಿಗಳಲ್ಲಿ ಆದಷ್ಟುಮಟ್ಟಿಗೆ ಏಕರೂಪದ ರೀತಿನೀತಿಗಳನ್ನು ಜಾರಿಗೆ ತರಲಾಗುವುದು. ಬಂಡವಾಳವನ್ನು ಈ ಆರು ರಾಷ್ಟ್ರಗಳೊಳಗೆ ಜನ ಸುಸೂತ್ರವಾಗಿ ಎಲ್ಲಿ ಬೇಕಾದರೂ ನಿಯೋಜಿಸುವ ಅವಕಾಶ ಉಂಟಾಗುವಂತೆ ಕಟ್ಟುಪಾಡುಗಳನ್ನೆಲ್ಲ ಸಂಪೂರ್ಣವಾಗಿ ವಿಸರ್ಜಿಸುವ ಯತ್ನ ನಡೆದಿದೆ.

ಹಿಂದುಳಿದಿರುವ ಸಮುದಾಯ ರಾಷ್ಟ್ರಗಳ ಆರ್ಥಿಕಾಭಿವೃದ್ಧಿ, ಉತ್ಪನ್ನ ವಿಧಾನದ ಆಧುನೀಕರಣ, ಕೈಗಾರಿಕೆಗಳ ವೈಜ್ಞಾನಿಕ ಪರಿಷ್ಕರಣ (ರ್‍ಯಾಷನಲೈಸೇಷನ್) ಇತ್ಯಾದಿ ಕಾರ್ಯಗಳಿಗೆ ಆವಶ್ಯಕವಾದ ಹಣಕಾಸನ್ನು ಐರೋಪ್ಯ ನಿಯೋಜನ ಬ್ಯಾಂಕು ಒದಗಿಸುತ್ತದೆ.

ಸದಸ್ಯ ರಾಷ್ಟ್ರಗಳ ವ್ಯವಸಾಯ ನೀತಿಗಳ ಸಮನ್ವಯ, ವ್ಯವಸಾಯ ಉತ್ಪನ್ನಗಳ ವಿಚಾರದಲ್ಲೂ ಸಮುದಾಯ ಕ್ಷೇತ್ರಕ್ಕೆಲ್ಲ ಒಂದೇ ಮಾರುಕಟ್ಟೆಯ ನಿರ್ಮಾಣ-ಇವೂ ಸಮುದಾಯದ ಸಹಜವಾಗಿ ಗುರಿಗಳಾಗಿದ್ದಾಗ್ಯೂ ಈ ಭಾಗದಲ್ಲಿ ಕೆಲವು ರಿಯಾಯಿತಿಗಳನ್ನು ತೋರಿಸಲಾಗಿದೆ. ಕೆಲವು ವ್ಯವಸಾಯ ಉತ್ಪನ್ನಗಳ ಮೇಲೆ ಹತೋಟಿ ಸ್ಥಾಪಿಸುವುದಕ್ಕೂ ಅವುಗಳಿಗೆ ರಕ್ಷಣೆ ನೀಡುವುದಕ್ಕೂ ಆಯಾ ರಾಷ್ಟ್ರಗಳ ಸರ್ಕಾರಗಳಿಗೆ ಸ್ವಲ್ಪ ಅವಕಾಶವಿದೆ. ಮಾರಾಟ ಮಂಡಲಿಗಳ ಸ್ಥಾಪನೆ, ಕನಿಷ್ಠ ಬೆಲೆ ನಿಗದಿ, ಕನಿಷ್ಠ ಮಟ್ಟಕ್ಕಿಂತ ಕೆಳಗೆ ಬೆಲೆ ಇಳಿದಾಗ ಆಮದು ನಿಷೇಧ, ವಿಶೇಷ ಧನಸಹಾಯ-ಇವುಗಳ ಮೂಲಕ ಒಂದೊಂದು ರಾಷ್ಟ್ರವೂ ಅದರ ವ್ಯವಸಾಯ ಸ್ಥಿತಿಗಳಿಗೆ ತಕ್ಕಂತೆ ಪ್ರತ್ಯೇಕ ನೀತಿಯನ್ನು ತಾತ್ಕಾಲಿಕವಾಗಿ ಅನುಸರಿಸಬಹುದು. ಹೀಗೆ ವ್ಯವಸಾಯದ ವಿಷಯವಾಗಿ ಕಟ್ಟುಪಾಡುಗಳು ಸ್ವಲ್ಪ ಸಡಿಲವಾಗಿವೆ.

ಮಾರುಕಟ್ಟೆಯ ಏಕತೆಯಿಂದ ಸದಸ್ಯರಾಷ್ಟ್ರಗಳ ಕೈಗಾರಿಕಾ ರಚನೆಯಲ್ಲಿ ಆಗುವ ಬದಲಾವಣೆಗಳು, ಕೆಲಸಗಾರರಿಗೆ ಒಂದು ಸದಸ್ಯರಾಷ್ಟ್ರದಿಂದ ಇನ್ನೊಂದು ಸದಸ್ಯ ರಾಷ್ಟ್ರಕ್ಕೆ ಹೋಗಲು ಇರುವ ಸರಳ ಅವಕಾಶ, ಕ್ಷೇತ್ರಾದ್ಯಂತವೂ ಒಂದು ಬಗೆಯ ಕೆಲಸಕ್ಕೆ ಒಂದೇ ದರದ ಕೂಲಿ ನಿಗದಿ-ಇಂಥ ತೀವ್ರ ಬದಲಾವಣೆಗಳು ಅನೇಕ ಸಾಮಾಜಿಕ ಪರಿಣಾಮಗಳನ್ನೂ ಸಮಸ್ಯೆಗಳನ್ನೂ ಉಂಟುಮಾಡುವುದು ಸ್ವಾಭಾವಿಕ. ಇವನ್ನು ಎದುರಿಸಲು ಸಹಾಯ ನೀಡುವ ಸಲುವಾಗಿ ಐರೋಪ್ಯ ಸಾಮಾಜಿಕ ನಿಧಿಯೊಂದನ್ನು ಸ್ಥಾಪಿಸಲಾಗಿದೆ.

ಈ ಎಲ್ಲ ರೀತಿನೀತಿಗಳ ಮೂಲಕ ಆರ್ಥಿಕ ಸಮುದಾಯ ಒಪ್ಪಂದ ಆರು ಪಾಶ್ಚಾತ್ಯ ಐರೋಪ್ಯ ರಾಷ್ಟ್ರಗಳೊಡನೆ ನಿಕಟ ಆರ್ಥಿಕ ಸಂಘಟನೆ ಸಾಧಿಸುತ್ತಿರುವುದು ಮಹತ್ತ್ವದ ಘಟನೆ. ಆರ್ಥಿಕ ಸಂಘಟನೆಯ ಜೊತೆಗೆ ರಾಜಕೀಯ ಸಂಘಟನೆಯನ್ನೂ ಸಾಧಿಸುವ ಯತ್ನಗಳು ನಡೆಯುತ್ತಿವೆ.

ಆರು ರಾಷ್ಟ್ರಗಳು ಮಾತ್ರವೇ ಕೂಡಿಕೊಂಡು ಸಂಘಟನೆ ಬೆಳೆಸಲುದ್ಯಮಿಸಿರುವುದು ಇತರ ಐರೋಪ್ಯ ರಾಷ್ಟ್ರಗಳಿಗೇ ಅಲ್ಲದೆ ಹೊರಗಿನ ರಾಷ್ಟ್ರಗಳಿಗೂ ಅನೇಕ ಸಮಸ್ಯೆಗಳನ್ನು ತಂದೊಡ್ಡಿದೆ. ಅಲ್ಲದೆ ಪ್ರಪಂಚದ ಇತರ ಭಾಗಗಳಲ್ಲೂ ಇಂಥ ಸಾಮಾನ್ಯ ಮಾರುಕಟ್ಟೆಯ ಸ್ಥಾಪನೆಗೆ ಇದರಿಂದ ಪ್ರೇರಣೆಯುಂಟಾಗಿದೆ.

ಸಾಮಾನ್ಯ ಮಾರುಕಟ್ಟೆಯ ವ್ಯವಸ್ಥೆಯಷ್ಟು ನಿಕಟ ಆರ್ಥಿಕ ಸಂಘಟನೆಗೆ ತಯಾರಾಗಿಲ್ಲದ ಇತರ ಪಾಶ್ಚಾತ್ಯ ಐರೋಪ್ಯ ರಾಷ್ಟ್ರಗಳ ಪೈಕಿ 7 ರಾಷ್ಟ್ರಗಳು ಬ್ರಿಟನಿನ ಮುಂದಾಳುತನದಲ್ಲಿ ನವೆಂಬರ್ 1959ರಲ್ಲಿ ಸಹಿ ಆದ ಸ್ಟಾಕ್ ಹೋಂ ಒಡಂಬಡಿಕೆಯ ಆಧಾರದ ಮೇಲೆ ಐರೋಪ್ಯ ನಿರಾತಂಕ ವ್ಯಾಪಾರ ಸಂಘವೊಂದನ್ನು ಸ್ಥಾಪಿಸಿದುವು. 1961ರಲ್ಲಿ ಬ್ರಿಟನ್ ಐರೋಪ್ಯ ಆರ್ಥಿಕ ಸಮುದಾಯಕ್ಕೆ ಸೇರಲು ಸಂಧಾನಗಳನ್ನು ನಡೆಸಲಾರಂಭಿಸಿತು. ಇದು ಒಂದು ಮುಖ್ಯ ಘಟನೆ.

ಬ್ರಿಟನ್ ಐರೋಪ್ಯ ಸಾಮಾನ್ಯ ಮಾರುಕಟ್ಟೆಗೆ ಸೇರುವ ನಿರ್ಧಾರ ಅನೇಕ ಸಮಸ್ಯೆಗಳನ್ನೆಬ್ಬಿಸಿದೆ. ಮುಖ್ಯವಾಗಿ ಬ್ರಿಟನ್ನಿನ ಹೊರ ವ್ಯಾಪಾರದ ಶೇಕಡಾ 50 ರಷ್ಟು ಭಾಗ ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ನಡೆಯುತ್ತಿದ್ದು ಇವುಗಳ ವ್ಯಾಪಾರಕ್ಕೆ ವಿಶೇಷ ಸುಂಕ ರಿಯಾಯಿತಿಗಳು ಬಹುಕಾಲದಿಂದಲೂ ಜಾರಿಯಲ್ಲಿವೆ. ಈಗ ಈ ಆರ್ಥಿಕ ಬಾಂಧವ್ಯಗಳನ್ನು ಕಡಿದುಹಾಕುವುದು ಕಷ್ಟಕರ. ಭಾರತ ಮತ್ತು ಇತರ ಕಾಮನ್‌ವೆಲ್ತ್ ರಾಷ್ಟ್ರಗಳು ತಮಗೆ ಸಂಭವಿಸುವ ನಷ್ಟದ ಬಗ್ಗೆ ಬ್ರಿಟನಿಗೆ ಹೇಳಿಕೊಂಡಿವೆ. ಇಂಥ ಪರಿಣಾಮಗಳಾಗದಂತೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಬ್ರಿಟನ್ ಭರವಸೆ ನೀಡಿದೆ. ಬ್ರಿಟನ್ನಿನ ದೃಷ್ಟಿಯಿಂದ ಐರೋಪ್ಯ ರಾಷ್ಟ್ರಗಳೊಡನೆ ನಿಕಟ ಸಂಘಟನೆ ಅವಶ್ಯ. ಅಂತೆಯೇ ಕಾಮನ್‌ವೆಲ್ತ್ ರಾಷ್ಟ್ರಗಳ ಸಂಪರ್ಕ ತ್ಯಜಿಸುವುದೂ ಅನುಚಿತ. ಅಂತಿಮವಾಗಿ ಯಾವ ಷರತ್ತುಗಳ ಮೇಲೆ ಬ್ರಿಟನ್ ಸಾಮಾನ್ಯ ಮಾರುಕಟ್ಟೆ ಸೇರುವುದೆಂಬುದನ್ನು ಕಾದು

ನೋಡಬೇಕಾಗಿದೆ. ಐರೋಪ್ಯ ಸಾಮಾನ್ಯ ಮಾರುಕಟ್ಟೆಯ ಮಾದರಿಯ ಆರ್ಥಿಕ ಒಕ್ಕೂಟಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಸ್ಥಾಪಿತವಾಗುತ್ತಿವೆ. ನಾರ್ಡಿಕ್ ಸಾಮಾನ್ಯ ಮಾರುಕಟ್ಟೆ ಯೋಜನೆ (1959), ಮಧ್ಯ ಅಮೆರಿಕನ್ ನಿರಾತಂಕ ವ್ಯಾಪಾರ ಕ್ಷೇತ್ರ (1958). ಲ್ಯಾಟಿನ್ ಅಮೆರಿಕನ್ ನಿರಾತಂಕ ವ್ಯಾಪಾರ ಕ್ಷೇತ್ರ (1960), ಪಶ್ಚಿಮ ಆಫ್ರಿಕನ್ ಸಂಘದ ಕೇಂದ್ರ (1950), ಆಫ್ರಿಕನ್ ಸಾಮಾನ್ಯ ಮಾರುಕಟ್ಟೆ, ವೆಸ್ಟ್ ಇಂಡೀಸ್ ಫೆಡರೇಷನಿನ ಸುಂಕ, ಸಂಘ, ಅರಬ್ ಸಾಮಾನ್ಯ ಮಾರುಕಟ್ಟೆ, ಏಷ್ಯ ಮತ್ತು ದೂರಪ್ರಾಚ್ಯ ಆರ್ಥಿಕ ಸಂಸ್ಥೆ ಇವು ಕೆಲವು ಉದಾಹರಣೆಗಳು. ಇವುಗಳಲ್ಲಿ ಕೆಲವು ಕಾರ್ಯಗತವಾಗಿವೆ; ಉಳಿದವು ರೂಪುಗೊಳ್ಳುತ್ತಿವೆ. ಒಟ್ಟಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೀಗೆ ಬೆಳೆಯುತ್ತಿರುವ ಪ್ರಾದೇಶಿಕ ಆರ್ಥಿಕ ಕೂಟಗಳು ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧಗಳನ್ನು ಬಲುಮಟ್ಟಿಗೆ ಮಾರ್ಪಾಟು ಮಾಡುತ್ತಿರುವುದಂತೂ ನಿಜ. ವಿಶ್ವ ವ್ಯಾಪಾರವನ್ನು ಸ್ವಾಭಾವಿಕ ಮಾರ್ಗಗಳಲ್ಲಿ ವಿಸ್ತರಿಸುವ ಧ್ಯೇಯವುಳ್ಳ, ಸುಂಕಗಳ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದದಂಥ (ಜನರಲ್ ಅಗ್ರಿಮೆಂಟ್ ಆನ್ ಟಾರಿಫ್ಸ್ ಅಂಡ್ ಟ್ರೇಡ್) ವಿಶಾಲವಾದ ಅಂತಾರಾಷ್ಟ್ರೀಯ ವಾಣಿಜ್ಯ ಒಪ್ಪಂದದ ಚೌಕಟ್ಟಿನೊಳಗೇ ಈ ವ್ಯವಸ್ಥೆಗಳೆಲ್ಲ ರಚಿತವಾಗುತ್ತಿರುವುದರಿಂದ ಅಂತಾರಾಷ್ಟ್ರೀಯ ಅರ್ಥವ್ಯವಸ್ಥೆ ಸರಿಯಾದ ಪಥದಲ್ಲಿ ನಡೆಯುತ್ತಿದೆಯೆಂದು ಒಟ್ಟಿನಲ್ಲಿ ಹೇಳಬಹುದು.

(ಎ.ಪಿ.ಎಸ್.)

**ಐರೋಪ್ಯ ಕಲೆ:** ಯುರೋಪಿನ ಶಿಲ್ಪ ಮತ್ತು ಚಿತ್ರಕಲೆಗಳ ಸ್ಥೂಲ ರೂಪರೇಷೆಗಳನ್ನು ಗುರುತಿಸುವುದೇ ಈ ಲೇಖನದ ಉದ್ದೇಶ. ಏಷ್ಯ, ಅಮೆರಿಕ, ಆಫ್ರಿಕ ಮತ್ತು ಆಸ್ಟ್ರೇಲಿಯಗಳಲ್ಲಿನಂತೆ ಯುರೋಪಿನಲ್ಲಿಯೂ ಪ್ರಾಚೀನ ಕಲೆ ಅತಿಪುರಾತನವಾದುದೇ. ಹಿಮಶಿಲಾಯುಗ ಕಳೆದು ನೆಲ ಬಾಳಿಗೆ ಹಸನಾಗುತ್ತಿದ್ದಂತೆ ಉತ್ತರ ಯುರೋಪಿನಿಂದ ಮಧ್ಯಯುರೋಪಿಗೂ ಅಲ್ಲಿಂದ ಸುತ್ತಲೂ ಹರಡಿದ ಮಾನವ ಬುಡಕಟ್ಟುಗಳ ದೈನಂದಿನ ಅಗತ್ಯಗಳು, ಆಶೋತ್ತರಗಳು, ಶಕ್ತಿ ಸಾಮರ್ಥ್ಯಗಳು–ಇವುಗಳಿಗೆ ಅನುಸಾರವಾಗಿ ನಾಗರಿಕತೆ, ಸಂಸ್ಕೃತಿ, ಕಲೆ ಮೊದಲಾದವು ಹರಡಿದುವು. ಮೇಲಿಂದ ಮೇಲೆ ಗುಂಪುಗುಂಪುಗಳಲ್ಲಿ ನಡೆದ ಜಗಳ, ಯುದ್ಧ, ದಾಳಿಗಳಿಂದಾಗಿ ಜೀವನ ಅಲ್ಲೋಲಕಲ್ಲೋಲವಾಯಿತು. ಇದ್ದ ನಾಗರಿಕತೆ ಅಳಿದು ಹೊಸ ನಾಗರಿಕತೆ ಬೆಳೆದು ಅಭಿವೃದ್ಧಿಗೊಂಡಿತು. ಇದರ ಅನೇಕ ವಿವರಗಳನ್ನು ಯುರೋಪಿನ ಪ್ರಾಗಿತಿಹಾಸ ಎಂಬ ಸಚಿತ್ರ ಲೇಖನದಲ್ಲಿ ನೋಡಬಹುದು.

ಕೂಬನ್ ಜಿಲ್ಲೆಯಲ್ಲಿ ದೊರೆತ ಒಂದು ಚಿನ್ನದ ಆಭರಣ. ಮಲಗಿರುವ ಜಿಂಕೆಯಂತಿದೆ. ಏಳು ಮತ್ತು ಆರನೆಯ ಶತಮಾನಗಳ ಸಿಥಿಯನ್ ಕಲೆಗೊಂದು ನಿದರ್ಶನ

**ಗ್ರೀಕ್ ಶೈಲಿ:** ಯುರೋಪಿನ ಇಂದಿನ ನಾಗರಿಕತೆ, ಸಂಸ್ಕೃತಿ ಹಾಗೂ ಕಲೆಗಳಿಗೆ ಮೂಲಸ್ಥಾನವಾದ ಗ್ರೀಸ್ ದೇಶದ ಕಲೆ ಎರಡು ಸಾವಿರ ವರ್ಷಗಳಿಗೂ ಹಳೆಯದು. ಪ್ರ.ಶ.ಪೂ. ಸು. 1000ದಲ್ಲಿ ಡೋರಿಯನರು ಗ್ರೀಸನ್ನು ಆಕ್ರಮಿಸಿದರು. ಆಗಿನಿಂದ ಗ್ರೀಕ್ ಶಿಲ್ಪ ಬೆಳೆಯಿತೆನ್ನಬಹುದು. ಅಲ್ಲಿಂದ ಪ್ರ.ಶ.ಪೂ. 10–6ನೆಯ ಶತಮಾನದವರೆಗೆ ಅದು ಬೆಳೆದು ಬಲಗೊಂಡಿತು. ಒಲಿಂಪಿಯದ ಪ್ರಾಚೀನ ದೇವಾಲಯಗಳಲ್ಲಿ ಡೋರಿಕ್ ಮಾದರಿಗಳನ್ನು ಗುರುತಿಸಬಹುದು. ಗ್ರೀಕ್ ಕಲೆಯ ವೈಭವಾವಶೇಷಗಳನ್ನು ಅಥೆನ್ಸ್ ನಗರದಲ್ಲಿ ಇಂದಿಗೂ ಕಾಣಬಹುದು. ಶಿಲ್ಪ ತಂತ್ರದಲ್ಲಿ ಚಾಚೂ ತಪ್ಪಿಲ್ಲದಂತೆ ಅಷ್ಟೂ ಖಚಿತವಾಗಿ ನಿರ್ಮಾಣಗೊಂಡ ಕಟ್ಟಡವೆಂದರೆ 2,000 ವರ್ಷಗಳ ಹಿಂದೆ ನಿರ್ಮಾಣವಾದ ಪಾರ್ಥೆನಾನ್ ದೇವಾಲಯ. ಪ್ರಪಂಚದಲ್ಲಿ ಇಂಥ ಶುದ್ಧ ಶಿಲ್ಪ ತಂತ್ರದ ಕಟ್ಟಡಗಳು ಬಹಳ ಇಲ್ಲ. ಈಗ ದೇವಾಲಯ ಶಿಥಿಲಗೊಂಡಿದೆಯಾದರೂ ಅದರ ವೈಖರಿಯನ್ನು ಇಂದಿಗೂ ಗುರುತಿಸಬಹುದು. ಬುದ್ಧಿ ಕೌಶಲಕ್ಕೆ ಅಧಿದೇವತೆಯೆನಿಸಿದ ಅಥೀನೆ ಪಾರ್ಥೆನೋಸ್ ದೇವತೆಯ ಹೆಸರಿನಲ್ಲಿ ಇದನ್ನು ನಿರ್ಮಿಸಲಾಯಿತು. ಅಥೆನ್ಸಿನ ಅಕ್ರೊಪೊಲಿಸ್ ಬೆಟ್ಟದ ನೆತ್ತಿಯಲ್ಲಿರುವ ಆ ಭವ್ಯ ಕಟ್ಟಡದ ಅವಶೇಷವನ್ನು ವೀಕ್ಷಿಸಲು ಇಂದಿಗೂ ವಿಶ್ವದ ನಾನಾ ಭಾಗಗಳಿಂದ ಪ್ರೇಕ್ಷಕರು ಬರುತ್ತಿರುತ್ತಾರೆ. ಈ ದೇವಾಲಯಗಳ ಮುಖ್ಯ ಆಕರ್ಷಣೆ ಎಂದರೆ ಇಲ್ಲಿನ ಕಂಬಸಾಲು. ಇವು ಡೋರಿಕ್ ಮಾದರಿಯ ಗಂಡು ಶೈಲಿಯವಾಗಿವೆ. ಈ ಡೋರಿಕ್ ಶೈಲಿ ಸುಮಾರು ಒಂದೂವರೆ ಸಾವಿರ ವರ್ಷ ಜನಪ್ರಿಯವಾಗಿತ್ತು. ಅಲಂಕರಣ ಕಡಿಮೆಯಾದರೂ–ಅದರಿಂದಲೇ ಅಂಥ ಶೈಲಿಯನ್ನು ಗಂಡುಶೈಲಿ ಎಂಬುದು ನೋಟಕ್ಕೆ ಬಲು ಸೊಗಸಾಗಿರುವ ಈ ಕಂಬಗಳನ್ನು ನೆಲದಲ್ಲಿ ನೆಟ್ಟಿಲ್ಲ. ಇವು ಸುಮ್ಮನೆ ಎತ್ತರದ

ಆಟಿಕದ ದಕ್ಷಿಣದ ತುದಿಯ ಭೂಶಿರದ ನೆತ್ತಿಯಲ್ಲಿರುವ ಪೊಸೈಡನ್ ದೇವತಾಮಂದಿರ ಪ್ರಾಚೀನ್ ಗ್ರೀಕ್ ವಾಸ್ತು ಮಾದರಿಯದು

ವೇದಿಕೆಯ ಮೇಲೆ ನಿಂತಿವೆ, ಅಷ್ಟೆ ಅಲ್ಲದೆ ಇವು ಬುಡದಲ್ಲಿ ದಪ್ಪವಾಗಿದ್ದು ಮೇಲೆ ಹೋಗುತ್ತ ಹೋಗುತ್ತ ತೆಳುವಾಗುತ್ತದೆ. ಒಂದೊಂದು ಕಂಬವನ್ನೂ ಎರಡು ಮೂರು ದಪ್ಪಕಲ್ಲುಗಳಿಂದ ಮಾಡಿದ್ದಾರಾದರೂ ಮಧ್ಯದ ಬೆಸುಗೆ ಎಲ್ಲೂ ಕಾಣದು. ಒಂದೇ ಕಲ್ಲಿನ ಕಂಬದಂತೆ ಕಾಣುತ್ತ ಅವು ಪ್ರೇಕ್ಷಕರನ್ನು ದಂಗುಬಡಿಸುತ್ತವೆ. ಗ್ರೀಕರಿಗೆ ಶಿಲ್ಪದಲ್ಲಿ ಅತಿ ಸುಂದರವಾದುದನ್ನು ಕಲ್ಪಿಸುವ ಕಾಣ್ಕೆ ಸಿದ್ಧಿಸಿತ್ತು. ಆದ್ದರಿಂದಲೇ ಅವರು ಅಂಥ ಅದ್ಭುತ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಅವರಾದ ಮೇಲೆ ಅನೇಕರು ಡೋರಿಕ್ ಮೂಲ ಮಾದರಿಯನ್ನು ಅಲ್ಪಸ್ವಲ್ಪ ವ್ಯತ್ಯಾಸ ಮಾಡಿ ಹೊಸ ಶೈಲಿಗಳನ್ನು ರೂಪಿಸಲು ಯತ್ನಿಸಿದರಾದರೂ ಯಾರ ಮಾರ್ಪಾಟೂ ಮೂಲ ಶೈಲಿಯಷ್ಟು ಸುಂದರವಾಗಿಲ್ಲ. ಎರಡು ಸಾವಿರದ ಮುನ್ನೂರು ವರ್ಷಗಳ ಹಿಂದಿನ ಗ್ರೀಕ್ ದೊರೆ ಪೆರಿಕ್ಲೀಸನ ಕಾಲವನ್ನು ಗ್ರೀಸಿನ ಸ್ವರ್ಣಯುಗವೆನ್ನುತ್ತಾರೆ. ಅಂದಿನ ದೇವಾಲಯಗಳು, ದೇವತಾಮೂರ್ತಿಗಳು, ಇತರ ಬೃಹದ್‌ಭವನಗಳು, ಕೋಟೆಕೊತ್ತಳಗಳು, ರಸ್ತೆಗಳು, ಸೇತುವೆಗಳು, ಗೋಪುರಗಳು–ಇವು ಈಗ ಅಳಿದು ಹೋಗಿದ್ದರೂ ಹಿಂದೆ ಇದ್ದವೆನ್ನಲು ಮಾಹಿತಿಯನ್ನೊದಗಿಸುವಷ್ಟು ಮಟ್ಟಿಗೆ ಉಳಿದುಬಂದಿವೆ.

ಗ್ರೀಕರು ತಮ್ಮ ವಾಸ್ತುಶಿಲ್ಪದಲ್ಲಿ ಗಾರೆಯನ್ನು ಬಳಸುತ್ತಿರಲಿಲ್ಲ. ಕಲ್ಲುಗಳನ್ನೇ ಅಚ್ಚುಕಟ್ಟಾಗಿ ಕತ್ತರಿಸಿ ಜೋಡಿಸಿ ಕಟ್ಟಡಗಳನ್ನು ಕಟ್ಟುತ್ತಿದ್ದರು. ಚಿತ್ತಾರಗಳಿಗೆ ಹೊಳಪನ್ನು ಕೊಡುತ್ತಿದ್ದರಲ್ಲದೆ ವಿವಿಧ ಬಣ್ಣಗಳನ್ನು ಬಳಸುತ್ತಿದ್ದರು. ಗ್ರೀಕ್ ಸ್ವಾಸ್ಥ್ಯಗಳಲ್ಲಿ ಪ್ರಾರಂಭವಾದ ಅಯೋನಿಕ್ ಶೈಲಿ ಕ್ರಮೇಣ ಪ್ರ.ಶ.ಪೂ.ಸು.500ರಲ್ಲಿ ಗ್ರೀಸನ್ನು ಪ್ರವೇಶಿಸಿತು. ಇದನ್ನು ಅಥೆನ್ಸಿನ ಎರೆಕ್ತಿಯಂ ದೇವಾಲಯದಲ್ಲಿ ಗುರುತಿಸಬಹುದು. ಗ್ರೀಕ್ ಕಲಾಪರಂಪರೆಯಲ್ಲಿ ಅತಿ ನವೀನವೆನಿಸಿದ ಕಾರಿಂಥಿಯನ್ ಶೈಲಿಯ ಬಳಕೆ ಅಷ್ಟಾಗಿ ಗ್ರೀಸಿನಲ್ಲಿ ಕಂಡುಬರದು. ಅಧಿಕಾರ ಗ್ರೀಸಿನಿಂದ ಏಷ್ಯ ಮೈನರಿಗೆ ವರ್ಗಾವಣೆಯಾದ ಮೇಲೆ (ಪ್ರ.ಶ.ಪೂ. 3ನೆಯ ಶತಮಾನ) ಹೆಲೆನಿಸ್ಟಿಕ್ ವಾಸ್ತುಶಿಲ್ಪಕಲೆ ಮೊದಲಾಯಿತೆನ್ನಬಹುದು. ನಗರರಚನೆಯ ಪ್ರಾಮುಖ್ಯ ಮತ್ತು ಸಂಕೀರ್ಣ ರಚನಾವಿಧಾನಗಳು ಆಗ ಮುಖ್ಯವೆನಿಸಿದುವು.

ಗ್ರೀಕ್ ಶಿಲ್ಪದಲ್ಲಿ ಸಹಜತೆಗೆ ಗಮನಕೊಡಲಾಗಿದೆ. ಅವರು ಕೆತ್ತಿದ ದೇವತಾ ವಿಗ್ರಹಗಳು ಆದರ್ಶ ಸ್ತ್ರೀಪುರುಷರ ದೇಹರಚನೆ, ಸೌಂದರ್ಯಗಳನ್ನುಳ್ಳವಾಗಿವೆ. ಅಪೊಲೊ, ಅಥೀನ, ವೀನಸ್, ಅಲೆಕ್ಸಾಂಡರ್ ಮೊದಲಾದವರ ಮೂರ್ತಿಗಳು ಇದಕ್ಕೆ ಒಳ್ಳೆಯ ಉದಾಹರಣೆ. ಪ್ರ.ಶ.ಪೂ. 500–300ರ ವರೆಗಿನ ಕಾಲದಲ್ಲಿ ಪ್ರಸಿದ್ಧರಾದ ಶಿಲ್ಪಿಗಳೆಂದರೆ ಪ್ರಾಕ್ಸಿಟಿಲಿಸ್, ಲಿಸಿಪಸ್, ಮಿರಾನ್ ಕ್ರಿಸಿಲಾಸ್, ಟಿಮೋತಿಯಸ್, ಬ್ರಯಾಕ್ಸಿಸ್. ವರ್ಣಚಿತ್ರಕಾರರೆಂದರೆ ಅಪೊಲೊಡೋರಸ್, ಜ್ಯೂಕ್ಸಿಸ್, ಪಾರ್ಹಾಸಿಯಸ್ (**ನೋಡಿ– ಅಥೆನ್ಸ್; ಗ್ರೀಕ್–ಕಲೆ,–ವಾಸ್ತು,–ಶಿಲ್ಪ**).

**ರೋಮನ್ ಮಾದರಿ :** ಗ್ರೀಕರಂತೆ ರೋಮನರೂ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿ ವೈಭವದಿಂದ ಹಲವು ಶತಮಾನಗಳ ಕಾಲ ಯುರೋಪಿನ ಬಹು ಭಾಗವನ್ನು ಆಳಿದರು. ಅವರ ಶಿಲ್ಪ ಹಾಗೂ ಕಲೆಗೆ ಸ್ಫೂರ್ತಿ ದೊರೆತದ್ದು ನೆರೆದೇಶವಾದ ಗ್ರೀಸಿನಿಂದ. ದಕ್ಷಿಣ

ಇಟಲಿ ಮತ್ತು ಸಿಸಿಲಿಗಳ ಮಾದರಿಗಳನ್ನು ಅವರು ಅನುಸರಿಸಿದಂತೆ ತೋರುತ್ತದೆ. ಅನಂತರ ನೇರವಾಗಿ ಗ್ರೀಸಿನಿಂದಲೂ ಹೆಲೆನಿಸ್ಟಿಕ್ ಪೂರ್ವರಾಷ್ಟ್ರಗಳಿಂದಲೂ ಅವರು ಅನುಸರಿಸಿದರೆನ್ನಬಹುದು. ಇಟ್ರುಸ್ಕನರಿಂದ ಕಟ್ಟಡ ವಿನ್ಯಾಸದಲ್ಲಿ ನಿಜವಾದ ಕಮಾನು, ಕಮಾನು ಸರಣಿ ಮತ್ತು ಗುಮ್ಮಟದ ಬಳಕೆಯನ್ನು ಅನುಕರಿಸಲಾಯಿತು. ಪ್ರ.ಶ.ಪೂ.ಸು. 2ನೆಯ ಶತಮಾನದ ಹೊತ್ತಿಗಾಗಲೆ ಜಲ್ಲಿಕಲ್ಲಿನ ಗಾರೆ ಬಳಕೆಗೆ ಬಂದದ್ದರಿಂದ ವಾಸ್ತುಶಿಲ್ಪದಲ್ಲಿ ಅಗಾಧ ಬದಲಾವಣೆಗಳಾದುವು. ಕಮಾನಿನ ಬಳಕೆ ಹೆಚ್ಚಿ ಕಂಬ ಸಾಲುಗಳ ಅಲಂಕರಣಕ್ಕೆ ಎಡೆಯಾಯಿತು. ಗೃಹಗಳ ಉದ್ದಗಲಗಳು ಹೆಚ್ಚಿದವು. ಪ್ರಾಚೀನ ರೋಮನ್ ಶಿಲ್ಪತಂತ್ರಕ್ಕೆ ಈಗಿರುವ ಉದಾಹರಣೆಗಳೆಂದರೆ ಅವರು ರೋಮಿನ ಹೊರವಲಯದಲ್ಲಿ ನಿರ್ಮಿಸಿದ ಕಲ್ಲಿನ ಮೇಲು ಕಾಲುವೆಗಳ ಉಳಿಕೆಗಳು ಪ್ರ.ಶ.ಪೂ.100 ಪ್ರ.ಶ. 300ರವರೆಗಿನ ಕಾಲವನ್ನು ರೋಮನರ ಉಚ್ಛ್ರಾಯ ಕಾಲವೆನ್ನಬಹುದು. ಹಸಿ ಇಟ್ಟಿಗೆಗಳನ್ನೇ ಕಟ್ಟಡಗಳಿಗೆ ಬಳಸುತ್ತಿದ್ದರಾದರೂ ಗಾರೆಯ ಗೋಡೆಗಳ ಹೊರಮುಖಕ್ಕೆ ಸುಟ್ಟ ಇಟ್ಟಿಗೆಗಳನ್ನು ಬಳಸುವ ವಾಡಿಕೆ ಹೆಚ್ಚಿತು. ಮುಖ್ಯವಾದ ಕಟ್ಟಡಗಳಿಗೆ ಹೊರಮೈ ನಾಜೂಕಿಗಾಗಿ ನಯಗಾರೆಯನ್ನು ಉಜ್ಜುವ ವಾಡಿಕೆ ಹಿಂದಿನಿಂದ ಇದ್ದದ್ದೆ. ಕಮಾನು ಸರಣಿಗಳನ್ನು ವಿಧವಿಧವಾಗಿ ಬಳಸಿಕೊಳ್ಳಲಾಯಿತು. ಟ್ರಾಜನ್ ಮಹಾರಾಜನ ಕಾಲವನ್ನು ರೋಮನ್ ಶಿಲ್ಪದ ಉತ್ಕೃಷ್ಟ ಕಾಲವೆನ್ನಬಹುದು (98–117). ಗ್ರೀಕ್ ಮಾದರಿಯ ಕುಸುರಿ ಕೆಲಸವಿಲ್ಲದಿದ್ದರೂ ಎಲ್ಲ ಕಾಲದಲ್ಲೂ ರೋಮನರು ತಮ್ಮ ವಾಸ್ತುಕಲೆಯಲ್ಲಿ ವೈಭವಕ್ಕೂ ಅನುಕೂಲಗಳಿಗೂ ಗಮನವಿತ್ತಿರುವುದನ್ನು ಗುರುತಿಸಬಹುದು. ನಗರ ಮಧ್ಯದಲ್ಲಿನ ಸಾರ್ವಜನಿಕ ಕ್ಷೇತ್ರಗಳಾದ ಚಾವಡಿಗಳನ್ನು ಇನ್ನೂ ಹೆಚ್ಚು ವಿಸ್ತಾರವಾಗಿ, ಹೆಚ್ಚು ಸುಂದರವಾಗಿ ಕಟ್ಟುವ ಕಲೆ ಕ್ರಮೇಣ ಬೆಳೆದು ಬಂತು. ರೋಮನರ ಉತ್ಕೃಷ್ಟ ಕಲಾ ಮಾದರಿಗಳೆಂದರೆ ಅವರು ವಿಶೇಷವಾಗಿ ನಿರ್ಮಿಸಿರುವ ಬಸಿಲಿಕಗಳು, ಸ್ನಾನಗೃಹಗಳು, ಅರ್ಧಚಂದ್ರಾಕಾರದ ಪೀಠಪಂಕ್ತಿಯುಳ್ಳ ನಾಟಕ ಮಂದಿರಗಳು, ವಿಜಯ ಸ್ಮಾರಕಗಳಾದ ಬೃಹದ್‌ಕಮಾನುಗಳು. ನಗರವಾಸಿಗಳಾದ ಶ್ರೀಮಂತರು ಬಿಡುವಿನ ದಿನಗಳನ್ನು ವಿರಾಮವಾಗಿ ಹಳ್ಳಿಗಾಡಿನಲ್ಲಿ ಕಳೆಯಲು ತಮಗಾಗಿ ದೂರದ ಪ್ರದೇಶಗಳಲ್ಲಿ ಕಟ್ಟಿಕೊಂಡ ವಿಹಾರ ಗೃಹಗಳು (ವಿಲ್ಲ) ಅವರ ಸೂಕ್ಷ್ಮ ಸೌಂದರ್ಯಾಭಿರುಚಿಗೂ ಅನುಕೂಲ ದೃಷ್ಟಿಗೂ ಸಾಕ್ಷಿಯಾಗಿವೆ.

**ಆಥೆನ್ಸಿನ ಅಕ್ರೊ ಪೋಲಿಸ್ ಬೆಟ್ಟದ ಮೇಲಿರುವ ಪಾರ್ಥೆನಾನ್ ದೇವಾಲಯ, ಬಹು ಸ್ತಂಭಗಳ ಈ ರಚನೆ ಪ್ರಾಚೀನ ಗ್ರೀಕ್ ಶಿಲ್ಪ ಶೈಲಿಗೆ ಪ್ರಸಿದ್ಧ ನಿದರ್ಶನವಾಗಿದೆ.**

ಚಿತ್ರಕಲೆಯಲ್ಲಿ ಮೊದಲ ಹಂತವೆನಿಸಿದ ಇಟ್ರುಸ್ಕನ್ ಶೈಲಿಯಲ್ಲಿ ಪ್ರಾಚೀನ ಗ್ರೀಸಿನ ಅನುಕರಣೆ ಎದ್ದು ಕಾಣುತ್ತಾದರೂ ಸ್ಥಳೀಯವಾದ ವರ್ಣಾಲಂಕರಣ ಹಾಗೂ ವೈಭವಗಳು ಗಮನಾರ್ಹವಾಗಿವೆ. ಬರಬರುತ್ತ ಪ್ರ.ಶ.ಪೂ. ಸು.400 ರಿಂದ ಈಚೆಗೆ ಗ್ರೀಕ್ ಶಿಷ್ಟ ಮಾದರಿಯೇ ರೋಮನರ ಆದರ್ಶವಾಗುತ್ತ ಬಂತು. ಪ್ರ.ಶ.ಪೂ.300–100ರ ವರೆಗೆ ಅವೆರಡರ ಮಿಶ್ರಶೈಲಿಗಳನ್ನೂ ಕಾಣಬಹುದು. ಆಗಸ್ಟಸ್ ಕಾಲದಲ್ಲಿ ( ಪ್ರ.ಶ.ಪೂ.30–ಪ್ರ.ಶ.4) ಗ್ರೀಕರ ಆದರ್ಶ ಪಂಥದೊಂದಿಗೆ ರೋಮನರ ಸಹಜತೆಯನ್ನು ಮಿಳಿತ ಮಾಡುವ ಪ್ರಯತ್ನಗಳು ನಡೆದುವು. ಮುಂದಿನ ದಶಕಗಳಲ್ಲಿ ಎದೆಯವರೆಗಿನ ಮೂರ್ತಿಚಿತ್ರಣದಲ್ಲಿ ಒಂದೊಂದು ವ್ಯಕ್ತಿಯ ಮನಸ್ಸನ್ನೂ ಮುಖದಲ್ಲಿ ಮೂಡಿಸುವ ಪ್ರಯತ್ನ ನಡೆದಿರುವುದನ್ನು ಗುರುತಿಸಬಹುದು. ಟ್ರಾಜನ್ (2ನೆಯ ಶತಮಾನ) ರಾಜನ ಕಾಲದಲ್ಲಿ ಈಜಿಪ್ಟಿನ ಪ್ರಭಾವ ಹೆಚ್ಚಿದಂತೆ ತೋರುತ್ತದೆ. ಇದನ್ನು ರೋಮಿನ ಟ್ರಾಜನ್ ಶ್ರೇಣಿಯಲ್ಲಿ ಗುರುತಿಸಬಹುದು. ಹಾಡ್ರಿಯನ್ (3ನೆಯ ಶತಮಾನ) ರಾಜನ ಕಾಲದಲ್ಲಿ ಪೂರ್ವ ರಾಷ್ಟ್ರಗಳ ಅನುಕರಣೆ ಹೆಚ್ಚಿ ಇದರಿಂದ ಕಲೆಯಲ್ಲಿ ಅಮೂರ್ತತೆ ಬೆಳೆಯಿತೆನ್ನಬಹುದು. ಪಾಂಪೇ ಪ್ರದೇಶದಲ್ಲಿ ಉಳಿದುಬಂದಿರುವ ವರ್ಣಚಿತ್ರಗಳು ರೋಮನ್ ಮಾದರಿಗೆ ಉತ್ತಮ ನಿದರ್ಶನಗಳಾಗಿವೆ. ರೋಮನರು ಮನೆಯ ಹೊರ ಅಂಗಣಕ್ಕಿಂತ ಒಳ ಅಂಗಣಗಳಲ್ಲೇ ತಮ್ಮ ಚಿತ್ರಕಲೆಯನ್ನು ಪ್ರದರ್ಶಿಸಿರುವುದು ಗಮನಾರ್ಹವಾದ ಒಂದು ಅಂಶ. ಚಿತ್ರಕಲೆಯಲ್ಲೂ ಲೋಹಕಲೆ, ಮೃತ್‌ಕಲೆ ಮತ್ತು ಗಾಜುಕಲೆಗಳಲ್ಲೂ ಹೆಚ್ಚಿನ ಅಲಂಕರಣ ಮತ್ತು ತೀಕ್ಷ್ಣ ವರ್ಣಗಳನ್ನು ನಾವು ಕಾಣಬಹುದು.

**ಬೈಜ಼ಾಂಟಿಯನ್ ಶೈಲಿ :** ರೋಮನರ ಅನಂತರ ಪ್ರಾಬಲ್ಯಕ್ಕೆ ಬಂದದ್ದು ಬೈಜ಼ಾಂಟಿಯನ್ ಸಾಮ್ರಾಜ್ಯ. ಇದರ ತಿರುಳು ಪ್ರದೇಶಗಳೆಂದರೆ ಏಷ್ಯ ಮೈನರ್ ಮತ್ತು ಬಾಲ್ಕನ್ ಪ್ರಸ್ಥಭೂಮಿಯ ದಕ್ಷಿಣ ಪ್ರದೇಶ. ಸಾವಿರ ವರ್ಷಗಳ ಇದರ ಚರಿತ್ರೆಯಲ್ಲಿ ಅನೇಕ ಏಳುಬೀಳುಗಳನ್ನು ಕಾಣಬಹುದು. ಬೈಜ಼ಾಂಟಿಯನ್ (ಕಾನ್‌ಸ್ಟ್ಯಾಂಟಿನೋಪಲ್) ಅನ್ನು ರೋಮನ್ ಚಕ್ರಾಧಿಪತ್ಯದ ರಾಜಧಾನಿಯನ್ನಾಗಿ ಮಾಡಿದ (ಪ್ರ.ಶ. 330) ಅನಂತರ ಅಲ್ಲಿ ಬೆಳೆದು ಬಂದ ಶೈಲಿಯನ್ನು ಬೈಜ಼ಾಂಟಿಯನ್ ಶೈಲಿ ಎನ್ನುತ್ತಾರೆ. ರೋಮನ್ ರೀತಿಯಲ್ಲಿಯೇ ಕಟ್ಟಡಗಳನ್ನೂ ಕಟ್ಟಿ ಅವಕ್ಕೆ ಇನ್ನೂ ಹೆಚ್ಚಿನ ಬಣ್ಣಗಳನ್ನೂ ಅಲಂಕರಣಗಳನ್ನೂ ಉಪಯೋಗಿಸಿರುವುದು ಈ ಶೈಲಿಯ ವೈಶಿಷ್ಟ್ಯ. ಈ ಶೈಲಿ ಗ್ರೀಸ್, ಬಾಲ್ಕನ್ ಪ್ರದೇಶಗಳ ಮೂಲಕ ಏಷ್ಯ ಮೈನರನ್ನು ಹೊಕ್ಕು ರಷ್ಯದಲ್ಲಿ ಹರಡಿತು. ಇದರ ಖಚಿತ ಅಭಿವ್ಯಕ್ತಿಯನ್ನು ರಾವೆನ್ನದಲ್ಲಿನ ಸ್ಯಾನ್ವಿಟೇಲನ

**ಮಾಸ್ಕೋದ ಕೆಂಪು ಚೌಕದಲ್ಲಿರುವ ಸಂತ ಬ್ಯಾಸಿಲನ ಕೆಥಡ್ರಲ್, 16ನೆಯ ಶತಮಾನದ ಬಿಜ಼ಾಂಟಿನ್ ಮಾದರಿಯದು**

ಚರ್ಚಿನಲ್ಲೂ ಪ್ರಸಿದ್ಧ ಹಾಜಿಯ ಸೋಫಿಯದಲ್ಲೂ ಕಾಣಬಹುದು. ಅನಂತರ ಈ ಶೈಲಿಯ ಮೇಲೆ ಪೂರ್ವ ರಾಷ್ಟ್ರಗಳ ಪ್ರಭಾವ ಹೆಚ್ಚಿರುವುದನ್ನು ವೆನಿಸಿನ ಸೇಂಟ್ ಮಾರ್ಕನ ಚರ್ಚಿನಲ್ಲಿ ಗುರುತಿಸಬಹುದು. ಬರುಬರುತ್ತ ಈ ಶೈಲಿಯಲ್ಲಿನ ಅಲಂಕರಣ ವಿಧಾನಗಳು ಇನ್ನೂ ವಿಸ್ತಾರಗೊಂಡು ಹೆಚ್ಚು ಹೆಚ್ಚು ಸಂಕೀರ್ಣವಾಗತೊಡಗಿದುವು. ಇದಕ್ಕೆ ಉದಾಹರಣೆಯಾಗಿ ಮಾಸ್ಕೊ ಕೆಥೆಡ್ರಲ್ ಅನ್ನು ಹೆಸರಿಸಬಹುದು.

ಈ ಎಲ್ಲ ಗುಣಗಳನ್ನೂ ಬಿಜ಼ಾಂಟಿನ್ ಚಿತ್ರಕಲೆಯಲ್ಲೂ ಕಾಣಬಹುದು.

**ಪ್ರಾಚೀನ ಕ್ರೈಸ್ತ ಶೈಲಿ :** ಕ್ರೈಸ್ತಧರ್ಮ ಹರಡಲು ಪ್ರಾರಂಭವಾದ ಮೊದಲ ದಿನಗಳಲ್ಲಿನ ಶಿಲ್ಪಶೈಲಿಯನ್ನು ಈ ಹೆಸರಿನಿಂದ ಕರೆಯಬಹುದು. ಎಲ್ಲಿಯವರೆಗೆ ರೋಮನ್ ಚಕ್ರಾಧಿಪತ್ಯದಲ್ಲಿ ಕ್ರೈಸ್ತಧರ್ಮಕ್ಕೆ ಬಹಿಷ್ಕಾರವಿತ್ತೋ ಅಲ್ಲಿಯವರೆಗೆ ಕ್ರೈಸ್ತರು ತಮ್ಮ ದೇವಾಲಯಗಳನ್ನು ನೆಲಮಾಳಿಗೆಯಲ್ಲಿ ಗುಪ್ತವಾಗಿ ನಿರ್ಮಿಸಿಕೊಳ್ಳುತ್ತಿದ್ದರು (ಕ್ಯಾಟಕೂಂಬ್ಸ್). ಪರಿಸ್ಥಿತಿ ಸುಧಾರಿಸಿ ರೋಮನ್ ದೊರೆ ಕಾನ್‌ಸ್ಟ್ಯಾಂಟೈನನೇ ಕ್ರೈಸ್ತಧರ್ಮಾವಲಂಬಿಯಾದಾಗ ಬಳಕೆಯಲ್ಲಿದ್ದ ಬ್ಯಾಸಿಲಿಕಗಳನ್ನೇ ತಮ್ಮ ಚರ್ಚುಗಳನ್ನಾಗಿ ಬಳಸಲಾರಂಭಿಸಿದರು. ಇಂಥ ಅನೇಕ ಚರ್ಚುಗಳು ಹೊರನೋಟಕ್ಕೆ ದೊಡ್ಡ ಉಗ್ರಾಣಗಳಂತೆ ಕಾಣುತ್ತಿದ್ದುವಾದರೂ ಒಳಗಿನ ಅಲಂಕರಣಗಳು ದಂಗುಬಡಿಸುವಂತಿದ್ದುವು. ರೋಮಿನ ಹೊರವಲಯದಲ್ಲಿರುವ ಸೇಂಟ್ ಪಾಲನ ಚರ್ಚು ಇಂಥ ಕಟ್ಟಡಗಳಿಗೆ ಒಂದು ಉತ್ತಮ ನಿದರ್ಶನ. ಇದು ನಿರ್ಮಾಣವಾದದ್ದು 380ರಲ್ಲಿ. ಅಲ್ಲಿಂದ ಮುಂದೆ ಸು.1400 ವರ್ಷಗಳ ಕಾಲ ಜನ ಇಲ್ಲಿ ಪ್ರಾರ್ಥನೆ ನಡೆಸಿದ್ದಾರೆ. 1823ರಲ್ಲಿ ಈ ಕಟ್ಟಡ ಬೆಂಕಿಯಿಂದ ನಾಶವಾಯಿತಾದರೂ ಮತ್ತೆ ಇದನ್ನು ಹಿಂದೆ ಇದ್ದಂತೆಯೇ ಕಟ್ಟಲಾಗಿದ್ದು ಇವತ್ತಿಗೂ ನಾವು ಇದನ್ನು ರೋಮಿನಲ್ಲಿ ನೋಡಬಹುದು.

**ಅಂಧಕಾರ ಯುಗದಲ್ಲಿನ ಕ್ರೈಸ್ತಮತಗಳು:** ತನ್ನ ಕೊನೆಗಾಲದಲ್ಲಿ ರೋಮನ್ ಚಕ್ರಾಧಿಪತ್ಯ ಎರಡಾಗಿ ವಿಭಾಗಗೊಂಡಿತು. ಪೂರ್ವಭಾಗಕ್ಕೆ ಕಾನ್‌ಸ್ಟಾಂಟಿನೋಪಲ್ ಮತ್ತು ಪಶ್ಚಿಮ ಭಾಗಕ್ಕೆ ರೋಂ ರಾಜಧಾನಿಗಳಾದುವು. ಅದೇ ಅವರು ಫ್ರಾನ್ಸ್, ಇಟಲಿ, ಸ್ಪೇನುಗಳನ್ನು ಆಕ್ರಮಿಸಿ ಕೊನೆಗೊಮ್ಮೆ ರೋಮಿನಲ್ಲಿ ತಮ್ಮ ಝುಂಡ ಊರಿದರು. ಓದುಬರೆಹ ಬಾರದ ಈ ಜನ ಒರಟರೂ ಯುದ್ಧಪ್ರಿಯರೂ ಆಗಿದ್ದರು. ಇಂಥವರು ಕ್ರಮೇಣ ಕ್ರೈಸ್ತಮತಾವಲಂಬಿಗಳಾಗಿದ್ದರು. ಇವರ ಆಳ್ವಿಕೆಯ ಕಾಲವನ್ನು ಚರಿತ್ರೆಯಲ್ಲಿ ಅಂಧಕಾರ ಯುಗವೆನ್ನಲಾಗಿದೆ (ಪ್ರ.ಶ. 500 – ಪ್ರ.ಶ. 1000). ಹೀಗೆನ್ನಲು ಅನೇಕ ಕಾರಣಗಳಿವೆ. ಮಧ್ಯಯುರೋಪಿನಲ್ಲಿ ಸುಸಂಘಟಿತವಾದ ಯಾವ ರಾಜಕೀಯ ವ್ಯವಸ್ಥೆಯೂ ಅಂದು ಇರಲಿಲ್ಲ. ಸ್ಪೇನ್, ಇಟಲಿ, ಫ್ರಾನ್ಸ್ ಇವಾವುವೂ

**15ನೆಯ ಶತಮಾನದ ಕೊನೆಯ ಭಾಗದಲ್ಲಿ ರೊಸ್ಟೊವ್ ಕ್ರೆಮ್ಲಿನಿನಲ್ಲಿ ಕಟ್ಟಲಾದ ದಿ ಅಸಂಪ್ಷನ್ ಕೆಥೆಡ್ರಲ್. ಬಿಜ಼ಾಂಟಿನ್ ಕಲೆಗೆ ಇನ್ನೊಂದು ಮಾದರಿ**

ರಾಷ್ಟ್ರಮಟ್ಟವನ್ನು ಮುಟ್ಟಿರಲಿಲ್ಲ. ಸಣ್ಣಮಟ್ಟ ಪ್ರಾಂತ್ಯಗಳು ತಮ್ಮ ತಮ್ಮಲ್ಲಿ ಸದಾ ಹೋರಾಡುತ್ತಿದ್ದುವು. ರೋಮನರ ಭಾಷೆಯಾದ ಲ್ಯಾಟಿನ್ ಮರೆಯಾಗುತ್ತ ಬಂದಿದ್ದು ಅದರಿಂದ ಹುಟ್ಟಿದ್ದ ಅನೇಕ ಉಪಭಾಷೆಗಳು ಬಳಕೆಗೆ ಬರುತ್ತಿದ್ದುವು. ಒಬ್ಬರಾಡಿದ ಭಾಷೆ ಇನ್ನೊಬ್ಬರಿಗೆ ಅರ್ಥವಾಗುವಂತಿರಲಿಲ್ಲ. ಎಲ್ಲ ಮಬ್ಬಾದಂತೆ, ಏನೋ ಕಾವಳ ಕವಿದಂತೆ ಆಗಿತ್ತು. ಇಂಥ ಸಂದಿಗ್ಧ ಸಮಯದಲ್ಲಿ ಟ್ಯೂಟನ್ ದೊರೆಯಾದ ಷಾರ್ಲಮಾನನ ಆಡಳಿತ ತನ್ನದೇ ಆದ ಬೆಳಕಿನಿಂದ ಝಗಝಗಿಸುವ ಅವಧಿಯೆನಿಸಿದೆ. ಆತ ಸ್ವತಃ ಅನಾಗರಿಕ ಮತ್ತು ಅನಕ್ಷರಸ್ಥನಾದರೂ

**ಪ್ರಾಚೀನ ಕ್ರೈಸ್ತ ವಾಸ್ತು ಮಾದರಿಯ (ಪ್ರ.ಶ. 6ನೆಯ ಶತಮಾನ)ಒಂದು ಬ್ಯಾಸಿಲಿಕ. ಇಟಲಿಯ ರಾವೆನ್ನದಲ್ಲಿದೆ**

ದೇಶದ ಹಿತಚಿಂತನೆಯ ದೃಷ್ಟಿಯಿಂದ ಅನೇಕ ಉತ್ತಮ ಕೆಲಸಗಳನ್ನು ಮಾಡಿದ. ಜೊತೆಗೆ ಅಂದಿನ ಕ್ರೈಸ್ತ ಪಾದ್ರಿಗಳು ಹಿಂದಿನ ರೋಮನ್ ಭಾಷಾಸಾಹಿತ್ಯಗಳನ್ನು ಉಳಿಸಿಕೊಂಡು ಬಂದರಲ್ಲದೆ ಅನೇಕ ಹೊಸ ಮಠಗಳನ್ನು ಕಟ್ಟಿಸಿದರು. ಶಿಲ್ಪಕಲೆಯ ದೃಷ್ಟಿಯಿಂದ ಇವು ಪ್ರಮುಖವೆನಿಸಿವೆ. ನಿದರ್ಶನಗಳಾಗಿ ವೆಟ್ಟಿಂಗ್‌ಟನ್ನಿನ ಮೇರಿಯ ಸ್ಟೆಲ ಮಠವನ್ನೂ ರೋಮಿನ ಹೊರವಲಯದಲ್ಲಿದ್ದ ಸೇಂಟ್ ಪಾಲ್ ಮಠವನ್ನೂ ಹೆಸರಿಸಬಹುದು.

**ರೋಮನೆಸ್ಕ್ ಶೈಲಿ:** ಅಂಧಕಾರ ಯುಗ ಕಳೆದ ಮೇಲಿನ ಮೂರುನೂರು ವರ್ಷಗಳ ಐರೋಪ್ಯ ಶಿಲ್ಪ, ಕಲೆಗಳನ್ನು ರೋಮನೆಸ್ಕ್ ಶೈಲಿಯವೆನ್ನುತ್ತಾರೆ (1000–1300). ಒಂದು ಕಾಲದಲ್ಲಿ ರೋಮನ್ ಸಾಮ್ರಾಜ್ಯದ ಭಾಗಗಳಾಗಿದ್ದು ಅನಂತರ ಪ್ರತ್ಯೇಕಾಧಿಕಾರಕ್ಕೊಳಪಟ್ಟ ಇಟಲಿ, ಫ್ರಾನ್ಸ್, ಸ್ಪೇನ್ ಮೊದಲಾದ ಪ್ರಾಂತ್ಯಗಳಲ್ಲಿ ಕಂಡು ಬಂದುದರಿಂದ ಈ ಶಿಲ್ಪಕ್ಕೆ ರೋಮನೆಸ್ಕ್ ಎಂಬ ಹೆಸರು ಬಂತು. ಇವುಗಳಿಗೆಲ್ಲ ಮೂಲ ರೋಮನ್ ಶಿಲ್ಪವಾದರೂ ಈ ಒಂದೊಂದೂ ಪ್ರಾಂತ್ಯ ತನ್ನದೇ ಆದ ರೀತಿಯಲ್ಲಿ ಶಿಲ್ಪ, ಕಲೆಗಳನ್ನು ಬೆಳೆಸಿಕೊಂಡಿರುವುದನ್ನು ನಾವು ನೋಡಬಹುದು. ಇಟಲಿಯ ಪಿಸ ನಗರದ ಓಲು ಗೋಪುರದ ಪಕ್ಕದಲ್ಲಿರುವ ಕೆಥೆಡ್ರಲ್ ರೋಮನೆಸ್ಕ್ ಮಾದರಿಗೆ ಒಳ್ಳೆಯ ನಿದರ್ಶನ. ಅದು ರೋಮನ್ ಶಿಲುಬೆಯಂತಿರದೆ ಲ್ಯಾಟಿನ್ ಶಿಲುಬೆಯ ಆಕಾರದಲ್ಲಿದೆ. ಅಂದರೆ ಅದರ ಒಂದು ದಿಂಡು ಇನ್ನೊಂದಕ್ಕಿಂತ ಉದ್ದವಾಗಿದೆ. ಅಲ್ಲದೆ ಅದರ ಮುಖ ಪೂರ್ವಕ್ಕೆ ತಿರುಗಿದಂತಿದೆ. ಕೆಥೆಡ್ರಲಿನ ಕಂಬಸಾಲುಗಳ ಮೇಲಿನ ಮತ್ತು ಕಿಟಕಿಗಳ ಮೇಲಿನ ಗುಂಡು ಕಮಾನುಗಳು ರೋಮನೆಸ್ಕ್ ಮಾದರಿಯ ಮುಖ್ಯ ಗುಣವನ್ನು ತೋರಿಸುತ್ತವೆ. ಕಂಬಸಾಲುಗಳಲ್ಲಿ ನೆಲದ ಮೇಲಿನ ಮೊದಲ ಸಾಲು ಇದ್ದಷ್ಟು ಎತ್ತರವಾಗಿ ಮಹಡಿಯ ಕಂಬ ಸಾಲುಗಳಿಲ್ಲ. ಹಾಗೆಯೆ ಅದರ ಮೇಲಿನ ಸಾಲಿನ ಎತ್ತರವೂ ಕಡಿಮೆಯಾಗಿದೆ. ಇಟಲಿಯ ಒಂದೊಂದು ಊರಿನಲ್ಲೂ ಒಂದೊಂದು ವಾಸ್ತುಶಿಲ್ಪಕೃತಿಯನ್ನು ಅದರದರ ವೈಶಿಷ್ಟ್ಯಕ್ಕಾಗಿ ನಾವು ಹೆಸರಿಸಬಹುದು. ಫ್ರಾನ್ಸಿನ ಅಂಗುಲೆಮ್ ಕೆಥೆಡ್ರಲ್ ಇನ್ನೊಂದು ಒಳ್ಳೆಯ ಉದಾಹರಣೆ. ಜರ್ಮನಿಯಲ್ಲೂ ಈ ಶೈಲಿಯ ಭವ್ಯ ಕಟ್ಟಡಗಳನೇಕವಿವೆ. ಇಂಗ್ಲೆಂಡಿನಲ್ಲಿ ನಾರ್ಮನರ ಕಾಲದಲ್ಲಾದ ಕಟ್ಟಡಗಳು ಗುಣರೂಪಗಳ ದೃಷ್ಟಿಯಿಂದ ರೋಮನೆಸ್ಕ್ ಶೈಲಿಯವಾದರೂ ಅವನ್ನು ನಾರ್ಮನ್ ಶೈಲಿಯವೆನ್ನುವುದು ವಾಡಿಕೆ.



**ರೋಮನಸ್ಕ್ ವಾಸ್ತುಶಿಲ್ಪದ ಒಂದು ಮಾದರಿ. ಫ್ರಾನ್ಸಿನ ಟೂಲೂಸ್‌ನಲ್ಲಿ ಸೇಂಟ್ ಸರ್ನಿನ್ ಚರ್ಚು. 11ನೆಯ ಶತಮಾನದ ಕೊನೆಯಲ್ಲಿ ನಿರ್ಮಾಣವಾದುದು.**

**ಮಧ್ಯಯುಗದ ಕೋಟೆ ಕೊತ್ತಳಗಳು :** ಪಾಳೆಯಗಾರಿಕೆ ರೂಢಿಯಲ್ಲಿದ್ದ ಮಧ್ಯಯುಗದಲ್ಲಿ ಯುರೋಪಿನಲ್ಲೆಲ್ಲ ಕೋಟೆ ಕೊತ್ತಳಗಳು ನಿರ್ಮಾಣಗೊಂಡುವು. ಸಾಮಾನ್ಯವಾಗಿ ಇವು ಬೆಟ್ಟದ ನೆತ್ತಿಯಲ್ಲಿರುತ್ತವೆ. ಶತ್ರುಗಳ ದಾಳಿಯಿಂದ ಹಾಳಾಗದಿರಲು ಶ್ರೀಮಂತಾಧಿಕಾರಿಗಳು ಕಟ್ಟಿಸಿಕೊಂಡ ಈ ಮನೆಗಳ ಸುತ್ತಲೂ ಬಲವಾದ ಕಲ್ಲಿನ ಕೋಟೆಯಿರುತ್ತದೆ. ಕೋಟೆಗೊಂದು ದಿಡ್ಡಿಬಾಗಿಲಿದ್ದು ಅದು ಬಹು ಭದ್ರವಾಗಿರುತ್ತದೆ. ಸುತ್ತಣ ಪ್ರಾಕಾರದ ತಳದಲ್ಲಿ ಒಂದು ಕಂದಕವಿದ್ದು ಶತ್ರು ಲಗ್ಗೆ ಹತ್ತುವಾಗ ಅದನ್ನು ನೀರಿನಿಂದ ತುಂಬಲಾಗುತ್ತಿತ್ತು. ಗೋಡೆಯ ಮೇಲಿನ ಬುರುಜುಗಳಿಂದ ಸೈನಿಕರು ಶತ್ರುಗಳ ಮೇಲೆ ಅಸ್ತ್ರಪ್ರಯೋಗಮಾಡುವ ಅನುಕೂಲಗಳಿರುತ್ತವೆ. ಒಂದು ಕೋಟೆಮನೆ ಎಂದರೆ ಒಂದು ಚಿಕ್ಕ ಊರು ಇದ್ದಂತೆಯೆ. ಅದರಲ್ಲಿ ಅನುಕೂಲವಾದ ಅರಮನೆ, ವಿಹಾರಸ್ಥಳಗಳು, ಪೂಜಾಗೃಹಗಳು, ಬಂದಿಖಾನೆ, ದಿವಾನಖಾನೆ, ಉಗ್ರಾಣ ಇತ್ಯಾದಿ ಸಕಲವೂ ಇರುತ್ತವೆ. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಸ್ಪೇನ್, ಜರ್ಮನಿ, ಆಸ್ಟ್ರಿಯ, ರಷ್ಯ ಮೊದಲಾದ ಕಡೆ ನೀರನ್ನು, ಬೆಟ್ಟವನ್ನು ಆಶ್ರಯಿಸಿ ನಿಂತಿರುವ ಕೋಟೆಮನೆಗಳನ್ನು ಇಂದಿಗೂ ಕಾಣಬಹುದು.

**ಗಾಥಿಕ್ ಶೈಲಿ :** ಮಧ್ಯಯುಗದ ಕೊನೆಯ ಭಾಗದಲ್ಲಿ ಹಾಗೂ ಪುನರುಜ್ಜೀವನ ಅವಧಿಯ ಪ್ರಾರಂಭದಲ್ಲಿ ಕಂಡುಬರುವ ವಿಶಿಷ್ಟ ವಾಸ್ತುಶಿಲ್ಪಶೈಲಿಗೆ ಈ ಹೆಸರಿದೆ. ಪ್ರ.ಶ. 12–15ನೆಯ ಶತಮಾನದವರೆಗೆ ಯುರೋಪಿನಲ್ಲೆಲ್ಲ ಇದು ಪ್ರಧಾನ ಶೈಲಿಯಾಗಿದ್ದುದು ಕಂಡುಬರುತ್ತದೆ. ಈ ಶೈಲಿಗೆ ಈ ಹೆಸರು ಬರಲು ಇರುವ ಕಾರಣ ಬಹು ವಿಚಿತ್ರವಾಗಿದೆ. ಜರ್ಮನಿಯ ಗಾಥ್ ಜನ ಪಶ್ಚಿಮಕ್ಕೂ ದಕ್ಷಿಣಕ್ಕೂ ನುಗ್ಗಿ ದಾಳಿ ಮಾಡಿ ರೋಮನ್ ಚಕ್ರಾಧಿಪತ್ಯವನ್ನು ಹಾಳು ಮಾಡಿದರಷ್ಟೆ. ಈ ಜನ ಒರಟರು, ಕ್ರೂರಿಗಳು, ವಿಧ್ವಂಸಕಾರಿ ಮನೋಧರ್ಮ ಉಳ್ಳವರು. ತಾವು ಹೋದ ಕಡೆಯೆಲ್ಲ ಕೊಲೆ ಸುಲಿಗೆಗಳನ್ನು ಮಾಡಿದರಲ್ಲದೆ ಕಣ್ಣಿಗೆ ಕಂಡ ಊರು ಕೇರಿಗಳಿಗೆ ಬೆಂಕಿಯಿಟ್ಟು ಸುಟ್ಟರು. ಗಾಥ್ ಜನರ ಆಳ್ವಿಕೆಯ ಕಾಲದಲ್ಲಿ ಬೆಳೆದು ಬಂದ ವಾಸ್ತುಶಿಲ್ಪಶೈಲಿಯನ್ನು ಆ ಜನರ ಹೆಸರಿಗೇ ಕಟ್ಟಿ ಅದನ್ನು ಗಾಥಿಕ್ ಎಂದು ಕರೆದರು ಸಹಜವೇ. ಗಾಥಿಕ್ ಶೈಲಿ ನಿಜಕ್ಕೂ ಬಹು ಸುಂದರವಾದ ಶೈಲಿಯಾದರೂ ಅದು ಪ್ರಾಚೀನ ಗ್ರೀಕ್ ಮತ್ತು ರೋಮನ್ ಶೈಲಿಯಷ್ಟು ಸುಸಂಸ್ಕೃತವೆಂದು ಅಂದಿನ ಜನ ತಿಳಿಯಲಿಲ್ಲ. ಅದರ ಬಗ್ಗೆ ಅವರಿಗೆ ಬಹು ತಾತ್ಸಾರವಿತ್ತು. ಒರಟು,

ಫ್ರಾನ್ಸಿನ ಆರ್ಲ್ಸ್‌ನಲ್ಲಿರುವ ಅರ್ಧವೃತ್ತಾಕಾರದ ರಂಗಮಂದಿರ. ಫ್ಲೇವಿಯನ್ ಮತ್ತು ಆಂಟೋನೈನ್ ಯುಗದ ರೋಮನ್ ಶಿಲ್ಪದ ಮಾದರಿ

ಅಸಂಸ್ಕೃತ, ಅನಾಗರಿಕ ಎಂಬ ಅರ್ಥದಲ್ಲಿ ಗಾಥಿಕ್ ಎಂಬ ಪದವನ್ನಿಲ್ಲಿ ಬಳಸಲಾಗಿದೆ. ಆದರೆ ಗಾಥಿಕ್ ಶೈಲಿ ನಿಜಕ್ಕೂ ವಿಚಿತ್ರವಾಗಿದ್ದು ಬಹು ಸುಂದರವಾಗಿದೆ. ಅಲ್ಲದೆ ಅದನ್ನು ಬಳಕೆಗೆ ತಂದವರು ಗಾಥರಲ್ಲ. ಗಾಥರ ಆಳ್ವಿಕೆಯ ಕಾಲದಲ್ಲಿ ಆಯಾ ಪ್ರಾಂತ್ಯದ ಸ್ಥಳೀಯ ಶಿಲ್ಪಿಗಳು ಸ್ವಸಂತೋಷದಿಂದ, ಧಾರ್ಮಿಕ ತೃಪ್ತಿಗಾಗಿ, ರೋಮನ್ ಮತ್ತು ರೋಮನೆಸ್ಕ್ ಶೈಲಿಗಳನ್ನು ಅನುಕರಿಸಿ, ಆದರೂ ಅದಕ್ಕಿಂತ ಭಿನ್ನವೆನಿಸಿದ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡು ನಿರ್ಮಿಸಿದ ವಾಸ್ತುಶಿಲ್ಪಶೈಲಿಯೇ ಗಾಥಿಕ್ ಶೈಲಿ. ಇದರ ಪ್ರಧಾನ ಲಕ್ಷಣಗಳು ಇವು: ಅದುವರೆಗೂ ಅಡ್ಡಗಲ್ಲಾಗಿ ನೆಲದಲ್ಲಿ ವಿಸ್ತಾರವಾಗಿ ಹರಡಿ ನಿಂತಿರುತ್ತಿದ್ದ ಮನೆಗಳು ನೆಟ್ಟಗೆ ಆಕಾಶದ ಕಡೆಗೆ ಎತ್ತರ ಎತ್ತರವಾಗಿ ಬೆಳೆಯತೊಡಗಿದುವು. ಅಂದರೆ ಹಲವು ಉಪ್ಪರಿಗೆಯ ಮನೆಗಳು ಬಳಕೆಗೆ ಬಂದುವು. ಚಾವಣಿಗಳಿಗೆ ಮರವನ್ನು ಉಪಯೋಗಿಸುವುದನ್ನು ನಿಲ್ಲಿಸಿ ಕಲ್ಲನ್ನೇ ಬಳಸಲು ಪ್ರಾರಂಭಿಸಿದರು. ಕಿಟಕಿ, ಬಾಗಿಲು ಹಾಗೂ ಕಂಬಸಾಲುಗಳ ಮೇಲಿದ್ದ ಕಮಾನುಗಳನ್ನು ಅರ್ಧವೃತ್ತಾಕಾರದಲ್ಲಿ ಮಾಡದೆ ಚೂಪಾಗಿ ನಿರ್ವಹಿಸಲಾಯಿತು. ಇದು ಅಂಥ ಹೊಸ ತಂತ್ರವೇನಲ್ಲ. ಪೂರ್ವರಾಷ್ಟ್ರಗಳಲ್ಲಿ ಚೂಪು ಕಮಾನಿನ ಬಳಕೆ ಬಹಳ ಹಿಂದಿನಿಂದಲೂ ಇತ್ತು. ಧರ್ಮಯುದ್ಧಗಳಿಗಾಗಿ ವಿದೇಶಗಳಿಗೆ ಹೋದ ಯೋಧರು ಅದನ್ನು ಯುರೋಪಿಗೆ ತಂದರು. ಶಿಲ್ಪತಂತ್ರದ ದೃಷ್ಟಿಯಿಂದಲೂ ಗುಂಡು ಕಮಾನಿಗಿಂತ ಚೂಪು ಕಮಾನುಗಳ ನಿರ್ವಹಣೆ ಸುಲಭವೆನ್ನಲಾಗಿದೆ.

ಚೂಪು ಕಮಾನುಗಳು, ಎತ್ತರೆತ್ತರದ ಮಹಡಿಗಳು, ತುದಿಯ ಗೋಪುರಗಳು, ಹೆಚ್ಚಿನ ಚಿತ್ರಕೆಲಸಗಳು, ಬಣ್ಣದ ಗಾಜು–ಇವು ಗಾಥಿಕ್ ಶೈಲಿಯ ಮುಖ್ಯಾಂಶಗಳು. ಫ್ರಾನ್ಸಿನಲ್ಲಿ ಈ ಶೈಲಿಯ ಅನೇಕ ಚರ್ಚುಗಳಿವೆ. ಅವುಗಳಲ್ಲೆಲ್ಲ ಬಹು ಪ್ರಸಿದ್ಧವಾದುದು ಆಮಿಯೆನ್ಸ್ ಕೆಥೆಡ್ರಲ್. ಜೊತೆಗೆ ನೋಟರ್‌ಡೇಮ್, ಸೇಂಟ್ ಚಾಪೆಲ್, ರ್ಹೀಮ್ಸ್‌ಗಳನ್ನು ಹೆಸರಿಸಬಹುದು. ಇಂಗ್ಲೆಂಡಿನಲ್ಲಿ ಗಾಥಿಕ್ ಶೈಲಿಗೆ ಒಳ್ಳೆಯ ಉದಾಹರಣೆಗಳೆಂದರೆ ಸ್ಯಾಲಿಸ್‌ಬರಿ, ಲಿಂಕನ್ ಮತ್ತು ಕ್ಯಾಂಟರ್‌ಬರಿಗಳಲ್ಲಿರುವ ಕೆಥೆಡ್ರಲ್‌ಗಳು. ಸ್ಪೇನಿನ ವಾಸ್ತುಶಿಲ್ಪದಲ್ಲಿ ಅಲಂಕರಣ ಹೆಚ್ಚು ಮತ್ತು ಕಿಟಕಿಗಳು ಬಲು ಚಿಕ್ಕವು. ಜರ್ಮನಿಯ ಕೊಲೋನ್ ಕೆಥೆಡ್ರಲ್, ಬೆಲ್ಜಿಯಮಿನ ಆಂಟ್‌ವರ್ಪ್‌ನಲ್ಲಿರುವ ನಗರ ಸಭಾಭವನ, ಸ್ಪೇನಿನ ಬರ್ಗೋಸ್ ಕೆಥೆಡ್ರಲ್–ಈ ಕೆಲವು ಗಾಥಿಕ್ ಶೈಲಿಯ ಇತರ ಪ್ರಸಿದ್ಧ ನಿದರ್ಶನಗಳು.

**ಮಹಮ್ಮದೀಯ ಶೈಲಿ :** ಇಸ್ಲಾಂ ಧರ್ಮ ಅರೇಬಿಯದಿಂದ ಬಹು ವೇಗವಾಗಿ ಪ್ರಪಂಚದ ಎಲ್ಲೆಡೆಗೂ ಹರಡಿತಷ್ಟೆ. ಅದರೊಂದಿಗೆ ಮುಸ್ಲಿಂ ರಾಷ್ಟ್ರವೂ ವ್ಯಾಪಕವಾಗಿ ಬೆಳೆಯುತ್ತ ಹೋಯಿತು. ಮುಸ್ಲಿಮರು ಮೆಡಿಟರೇನಿಯನ್ ಸಮುದ್ರದ ದಕ್ಷಿಣದಲ್ಲಿ ಈಜಿಪ್ಟ್, ಆಫ್ರಿಕದ ಉತ್ತರ ತೀರಗಳನ್ನು ಆಕ್ರಮಿಸಿ ಕ್ರಮೇಣ ಜಿಬ್ರಾಲ್ಟರ್ ಮುಖಾಂತರ ಸ್ಪೇನನ್ನು ತಲಪಿದರು. ಕಾಲ ಸಂದಂತೆ ಸ್ಪೇನನ್ನೆಲ್ಲ ಆಕ್ರಮಿಸಿ ಫ್ರಾನ್ಸಿನತ್ತ ನಡೆದರು. ಆದರೆ ಫ್ರೆಂಚರು ಟೂರ್ಸ್ ಯುದ್ಧದಲ್ಲಿ ಸೆಣಸಿ ಶತ್ರುಗಳನ್ನು ಹಿಮ್ಮೆಟ್ಟಿಸಿದರು. ಮಹಮ್ಮದೀಯರ ಆಡಳಿತಕ್ಕೆ ಕೆಲಕಾಲ ಒಳಪಟ್ಟಿದ್ದ ಸ್ಪೇನಿನಲ್ಲಿ ಆ ಶೈಲಿಯ ಅನೇಕ ಕಟ್ಟಡಗಳು ನಿರ್ಮಾಣವಾದುವು. ಸ್ಪೇನಿನಲ್ಲಿ ನೆಲೆಸಿದ್ದ ಅರಬ್ಬೀಯರನ್ನು ಮೂರರೆನ್ನುತ್ತಾರೆ. ಇವರ ರಾಜಧಾನಿ ಕಾರ್ಡೋವ. ಮೂರರು ಸ್ಪೇನಿನಲ್ಲಿ ಸುಮಾರು ಏಳುನೂರು ವರ್ಷ ಆಡಳಿತ ನಡೆಸಿ ಕ್ರಿಸ್ಟೋಫರ್ ಕೊಲಂಬಸನ ಕಾಲಕ್ಕೆ ಅಲ್ಲಿಂದ ಕಾಲು ತೆಗೆದರು. ಸ್ಪೇನಿನ ಗ್ರನಾಡದಲ್ಲಿದ್ದ ಅರಸುಮನೆತನದವರು ನಿರ್ಮಿಸಿದ ಆಲ್ಹಂಬ್ರ ಕೋಟೆ, ಅರಮನೆ ಮಹಮ್ಮದೀಯ ಶೈಲಿಗೊಂದು ಒಳ್ಳೆಯ ಉದಾಹರಣೆ. ಕಾರ್ಡೋವದಲ್ಲಿನ ಮಸೀದಿ. ಸೆವಿಲ್‌ನಲ್ಲಿರುವ ಗಿರಾಲ್ಡ ಗೋಪುರಗಳು ಪ್ರಸಿದ್ಧವಿವೆ.

**ಪುನರುಜ್ಜೀವನ (ರೆನೆಸಾನ್ಸ್) ಕಾಲದ ಶಿಲ್ಪ :** ಮಧ್ಯಯುಗದಿಂದ ಆಧುನಿಕ ಯುಗದ ನಡುವಣ ಅವಧಿಯನ್ನು ಪುನರುಜ್ಜೀವನ ಕಾಲವೆನ್ನುತ್ತೇವೆ. ಅದು ಪ್ರ.ಶ.ಸು. 14–16ನೆಯ ಶತಮಾನದವರೆಗಿನ ಕಾಲವನ್ನು ಸೂಚಿಸುತ್ತದೆ. ಇಟಲಿಯಲ್ಲಿ ಪ್ರಾರಂಭವಾದ ಈ ಹೊಸ ಧೋರಣೆ 15 ಮತ್ತು 16 ನೆಯ ಶತಮಾನಗಳಲ್ಲಿ ಪೂರ್ಣವಿಕಾಸಗೊಂಡು ಫ್ರಾನ್ಸ್, ಸ್ಪೇನ್, ಜರ್ಮನಿ, ಇಂಗ್ಲೆಂಡ್ ಮತ್ತು ಇತರ ಐರೋಪ್ಯ ದೇಶಗಳಿಗೆ ಹರಡಿತು. ಇದರಿಂದಾಗಿ ಗಾಥಿಕ್ ಶೈಲಿ ಹಿಂದೆ ಸರಿಯಿತು. ಕಟ್ಟಡದ ಒಟ್ಟು ರಚನೆಗಿಂತ ಅದರ ಮುಖಭಾಗ ಮತ್ತು ಒಳಭಾಗಗಳ ಕುಸುರಿಚಿತ್ರಣಕ್ಕೆ ಪ್ರಾಶಸ್ತ್ಯಬಂತು. ಈ ಶೈಲಿಯ ಪ್ರಾರಂಭಿಕ ಕಾಲದ (1420–1500) ಮುಖ್ಯಶಿಲ್ಪಿಗಳೆಂದರೆ ಬ್ರೂನೆಲೆಷ್ಚಿ, ಆಲ್ಬರ್ಟಿ, ಬ್ರಮಾಂಟೆ. ಫ್ಲಾರೆನ್ಸ್ ಮಿಲಾನ್, ವೆನಿಸ್‌ಗಳಲ್ಲಿ ಇವರ ಕೃತಿಗಳನ್ನು ಕಾಣಬಹುದು. ಮಧ್ಯಕಾಲದಲ್ಲಿ (1500–1780) ರೋಮ್ ನಗರದಲ್ಲಿ ಮತ್ತು ಅದರ ಸುತ್ತಮುತ್ತ ಬ್ರಮಾಂಟೆ ಮತ್ತು ಇತರರು ಕೆಲಸ ಮಾಡಿದರು. ಅವರ ಶಿಷ್ಟ ಶೈಲಿಗೆ ಸೇಂಟ್ ಪೀಟರನ ಚರ್ಚು ಉತ್ತಮ ನಿದರ್ಶನವಾಗಿದೆ. ಪುನರುಜ್ಜೀವನಕಾಲದ ಕೊನೆಯ ಭಾಗದಲ್ಲಿ (1500–1780) ಬ್ಯಾರೋಕ್ ಮತ್ತು ರೊಕೊಕೊ ಶೈಲಿ ಪ್ರಧಾನವಾಯಿತು.



ದಕ್ಷಿಣ ಫ್ರಾನ್ಸಿನ ನೀಮ್‌ನಲ್ಲಿನ ಒಂದು ಸೇತುವೆ: ಆಗಸ್ಟಸ್ ಯುಗದ ರೋಮನ್ ಮಾದರಿಯದು

ಈ ಕಾಲದ ಚಿತ್ರ ಕಲಾಪ್ರೌಢಿಮೆಗೆ ಇಟಲಿಯ ಫ್ಲಾರೆನ್ಸ್ ಕೇಂದ್ರವೆನಿಸಿತು. ಅಲ್ಲಿನ ಪ್ರಸಿದ್ಧ ಚಿತ್ರಕಾರರಲ್ಲಿ ಜ್ಯಾಟ್ಟೊ, ಫ್ರಾ ಅಂಜೆಲಿಕೊ, ಲಿಯೊನಾರ್ಡೊ ಡ ವಿಂಚಿ, ಬಾಟಿಸಿಲಿ, ಮೈಕೆಲೇಂಜಲೊ ಇವರನ್ನು ಹೆಸರಿಸಬಹುದು. ಸಿಯೆನ್ನಾ, ವೆನಿಸ್, ರೋಮ್ ಮತ್ತು ಇತರ ಇಟಲಿಯ ಪ್ರಮುಖ ಪಟ್ಟಣಗಳಲ್ಲಿ ಕಲಾವಿದರು ತಮ್ಮವೇ ಆದ ಪ್ರಸ್ಥಾನಗಳನ್ನು ಬೆಳಕಿಗೆ ತಂದರು. ಇದೇ ಕಾಲದಲ್ಲಿ ಪ್ರಸಿದ್ಧ ಕಲಾವಿದ ರ್‍ಯಾಫೆಲ್ ರೋಮಿನಲ್ಲಿ ತನ್ನ ಕೃತಿರಚನೆ ಮಾಡಿದ. ಎಂಟನೆಯ ಚಾರಲ್ಸ್ ನೇಪಲ್ಸಿನ ಮೇಲೆ ಮಾಡಿದ ದಾಳಿಯಿಂದಾಗಿ

ಪುನರುಜ್ಜೀವನಕಾಲದ ಧೋರಣೆಗಳು ಫ್ರಾನ್ಸಿಸ್ ಪ್ರವೇಶಿಸಿದುವು. ಇಟಲಿಯ ಕಲಾವಿದರನ್ನು ಒಂದನೆಯ ಫ್ರಾನ್ಸಿಸ್ ಆಹ್ವಾನಿಸಿದ. ಎರಡನೆಯ ಹೆನ್ರಿ ಇಟಲಿಯ ಕ್ಯಾಥರೀನ್ ಡಿ ಮೆಡಿಚಿಯನ್ನು ಮದುವೆಯಾದ ಮೇಲಂತೂ ಇಟಲಿಗೆ ಕೋಡು ಕೊನರಿತು. ಸು. 15ನೆಯ ಶತಮಾನದಲ್ಲಿ ಇದರ ಪ್ರಭಾವ ಸ್ಪೇನಿನ ಮೇಲೂ ಆದಂತೆ ಧೋರಣೆಗಳು ಇಂಗ್ಲೆಂಡ್ ಮತ್ತು ಜರ್ಮನಿಗಳ ಮೇಲೆ ಅಷ್ಟು ಪ್ರಭಾವ ಬೀರದಿರುವ ವಿಷಯ ಗಮನಾರ್ಹವಾದುದು.

**ಬ್ಯಾರೋಕ್ ಶೈಲಿ:** ಇಟಲಿಯಲ್ಲಿ 16ನೆಯ ಶತಮಾನದಿಂದಾಚೆ ಬಳಕೆಗೆ ಬಂದ ಶಿಲ್ಪಶೈಲಿ. ಅಭಿಜಾತಶೈಲಿಗೆ ಪ್ರತಿಯಾಗಿ ಹುಟ್ಟಿದುದು. ಅತ್ಯಾಲಂಕಾರವೇ ಇದರ ದಾರಿ. ಅನಂತರ ಸುಮಾರು ಒಂದೂವರೆ ಶತಮಾನ ಇದು ಇಡೀ ಯುರೋಪಿನಲ್ಲೆಲ್ಲ ಖ್ಯಾತ ಪದ್ಧತಿಯಾಗಿತ್ತು. ಅನಂತರ ಮತ್ತೆ 18ನೆಯ ಶತಮಾನದಲ್ಲಿ ಅಭಿರುಚಿ ಅಭಿಜಾತಪದ್ಧತಿಯ ಕಡೆಗೇ ಹೊರಳಿತು. ರೋಮಿನ ಸೇಂಟ್ ಪೀಟರ್ ಚರ್ಚಿನ ಚೌಕದಲ್ಲಿ ಬರ್ನಿನಿ ಈ ಶೈಲಿಯಲ್ಲಿ ಕೆಲಸ ಮಾಡಿದ್ದಾನೆ. ಈ ಪದ್ಧತಿಯಲ್ಲಿ ಉಳಿದ ಪ್ರಸಿದ್ಧರೆಂದರೆ ಬಾರೊಮಿನಿ, ವಿಗ್ನೋಲ. ಫ್ರಾನ್ಸಿನಲ್ಲಿ ಹದಿನಾಲ್ಕನೆಯ ಲೂಯಿಯ ಆಡಳಿತದಲ್ಲಿ ಈ ಶೈಲಿ ಉಚ್ಛ್ರಾಯ ಸ್ಥಿತಿಗೇರಿತು. ಜರ್ಮನಿ, ಆಸ್ಟ್ರಿಯ, ಸ್ಪೇನುಗಳಲ್ಲಿ ಈ ಶೈಲಿಯ ಅತಿರೇಕಗಳನ್ನು ಕಾಣಬಹುದು.

ಬರ್ಗ್‌ಕಾಟ್ಜ್ : ರೈನ್ ನದಿಯ ಮೇಲಿರುವ ಮಧ್ಯಕಾಲೀನ ಕೋಟೆಮನೆ

**ರೊಕೊಕೊ ಶೈಲಿ :** ಬ್ಯಾರೋಕ್ ಶೈಲಿಯಿಂದ ಹೊಮ್ಮಿಬಂದ ಒಂದು ನವುರಾದ ಹೊಸ ಶೈಲಿ. ಫ್ರಾನ್ಸಿನಲ್ಲಿ 15ನೆಯ ಲೂಯಿಯ ಕಾಲದಲ್ಲಿ (18ನೆಯ ಶತಮಾನ) ಬಳಕೆಗೆ ಬಂತು. ಒಳಾಂಗಣಗಳ ಕುಸುರಿ ಚಿತ್ರಣವೇ ಈ ಶೈಲಿಯ ವಿಶಿಷ್ಟ ಗುಣವೆನ್ನಬಹುದು. ಅಲಂಕರಣಕ್ಕಾಗಿ ಕಪ್ಪೆಚಿಪ್ಪು, ಶಂಖ, ಹೂ ಮೊದಲಾದವನ್ನು ಬಳಸಲಾಗಿದೆ. ಈ ಶೈಲಿಯಲ್ಲಿ ಸ್ವಲ್ಪಮಟ್ಟಿಗೆ ಚೀನೀಮಾದರಿಗಳ ಅನುಕರಣೆ ಇದೆ. ರೊಕೊಕೊ ಶೈಲಿಯ ಪ್ರಭಾವ ಜರ್ಮನಿ, ಆಸ್ಟ್ರಿಯ ಮತ್ತು ಇಂಗ್ಲೆಂಡಿನ ಮೇಲೆ ಸಾಕಷ್ಟು ಆಯಿತೆನ್ನಲು ದಾಖಲೆಗಳಿವೆ.

**ಜಾರ್ಜಿಯನ್ ಮತ್ತು ರೀಜೆನ್ಸಿ ಶೈಲಿಗಳು :** ಯುರೋಪಿನ ಪುನರುಜ್ಜೀವನ ಕಾಲದ ಶಿಲ್ಪಶೈಲಿಯನ್ನು ಇಂಗ್ಲೆಂಡಿನಲ್ಲಿ ಈ ಹೆಸರಿನಿಂದ ಕರೆಯಲಾಯಿತು. ರಾಣಿ ಆನಳ ರಾಜ್ಯಭಾರ ಮುಗಿದು ಒಂದನೆಯ ಜಾರ್ಜ್ ಪಟ್ಟಕ್ಕೆ ಬಂದ ಸುಮಾರಿನಲ್ಲಿ (1720) ಪ್ರಾರಂಭವಾದ ಈ ಶೈಲಿ 19ನೆಯ ಶತಮಾನದ ಮೊದಲ ದಶಕ ಮುಗಿಯುವವರೆಗೂ ಉಳಿದು ಬಂದಿತೆನ್ನಬಹುದು. ಅನಂತರ ಎಂದರೆ ನಾಲ್ಕನೆಯ ಜಾರ್ಜ್ ಪ್ರಿನ್ಸ್ ರೀಜೆಂಟ್ ಆದ ಸುಮಾರಿನಲ್ಲಿ (1811) ಇದು ರೀಜೆನ್ಸಿ ಶೈಲಿಯಲ್ಲಿ ಲೀನವಾಯಿತೆನ್ನಬಹುದು.

ಅದು ಎಲ್ಲ ಕಡೆಯೂ ಕೈಗಾರಿಕೆಗಳು ಬೆಳೆಯುತ್ತಿದ್ದ ಕಾಲ. ಜನರೆಲ್ಲ ಬಹು ಸಂಖ್ಯೆಯಲ್ಲಿ ನಗರಗಳಲ್ಲಿ ಬಂದು ನೆಲೆಸಲು ಪ್ರಾರಂಭಿಸಿದ್ದರು. ರೋಮನರ ಕಾಲಕ್ಕೆ ನಿಂತುಹೋಗಿದ್ದ ನಗರನಿರ್ಮಾಣಕಲೆಗೆ ಈಗ ಮತ್ತೆ ಅವಕಾಶ ದೊರಕಿದಂತಾಯಿತು. ಬಾತ್ ಮತ್ತು ಎಡಿನ್‌ಬರೊ ನಗರಗಳಲ್ಲಿ ಜಾರ್ಜಿಯನ್ ಶೈಲಿಗೆ ಉತ್ತಮ ನಿದರ್ಶನಗಳು ದೊರೆಯುತ್ತವೆ. ಅವೆರಡೂ ಕಡೆ ನಗರರಚನೆಯ ಕೆಲಸ ಮಾಡಿದವ ರಾಬರ್ಟ್ ಆಡಮ್, ಇಲ್ಲಿ ಮನೆಗಳು ಅಂದವಾಗಿ ಅನುಕೂಲವಾಗಿ ಕಟ್ಟಲ್ಪಟ್ಟಿವೆ. ರಸ್ತೆಗಳ ಯೋಜನೆಯೂ ಸಮರ್ಪಕವಾಗಿದೆ. ಮನೆಗಳ ಬಾಹ್ಯಾಲಂಕರಣ ಅಭಿಜಾತಮಾದರಿಯಾಗಿದ್ದು ಬಾಗಿಲು ಕಿಟಕಿಗಳು ಗ್ರೀಕ್ ಮತ್ತು ರೋಮನ್ ಶೈಲಿಗಳಲ್ಲಿವೆ. ಈಗಲೇ ಬಹುಮಾಳಿಗೆಯ ವಾಸಗೃಹಗಳ ಬಳಕೆ ಹೆಚ್ಚಿದ್ದು, ಜಾಗ ಉಳಿಸುವುದು ಒಂದು ಉದ್ದೇಶವಾದರೆ ಅನುಕೂಲ ಎರಡನೆಯದು. ಅಕ್ಕಪಕ್ಕಗಳಲ್ಲಿ ಜಾಗ ಬಿಡದೆ ಸಾಲಾಗಿ ಮನೆಗಳನ್ನು ಕಟ್ಟಿ ಸಾರ್ವಜನಿಕರ ಅನುಕೂಲಕ್ಕಾಗಿ ಅಲ್ಲಲ್ಲಿ ಸಾರ್ವಜನಿಕ ಉದ್ಯಾನಗಳನ್ನು ನಿರ್ಮಿಸಲಾಯಿತು. ದಾರಿ ಪಕ್ಕದ ಸಾಲು ಮರಗಳೂ ಹಸಿರು ಮೈದಾನಗಳೂ ಊರಿನ ಸೌಂದರ್ಯವನ್ನು ಹೆಚ್ಚಿಸಿದುವು. ಆಡಮ್ ಸಹೋದರರು ಮಧ್ಯ ಲಂಡನ್ನಿನ ಬಹುಭಾಗದ ವಾಸ್ತುಶಿಲ್ಪಕ್ಕೆ ದಾರಿತೋರಿದರು.

ರೀಜೆನ್ಸಿ ಕಾಲದಲ್ಲಿ ಅಂದರೆ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಅದುವರೆಗೂ ಶ್ರೀಮಂತರ ಮನೆಗಳಿಗೆ ದೊರೆಯಲಾಗಿದ್ದ ಪ್ರಾಶಸ್ತ್ಯ ಸಾಮಾನ್ಯರ ಮನೆಗಳಿಗೂ ಬಂತು. ಇದರಿಂದಾಗಿ ಬಾತ್, ಬ್ರೈಟನ್ ಮೊದಲಾದ ಅನೇಕ ಸುಂದರ ನಗರಗಳು ನಿರ್ಮಾಣವಾದುವು. ಲಂಡನ್ನಿನಲ್ಲಿ ಶಿಲ್ಪಿ ಜಾನ್ ನ್ಯಾಷ್ ಎಂಬಾತ ರೀಜೆಂಟ್ ರಸ್ತೆಗಳಲ್ಲಿ ಅದ್ಭುತವಾದ ಗೃಹಗಳನ್ನು ನಿರ್ಮಿಸಿದ. ಜನ ಈತನ ಕೃತಿಗಳನ್ನು ಅಭಿಜಾತ ಗ್ರೀಕ್ ಕಟ್ಟಡಗಳಂತಿವೆಯೆಂದು ಹೊಗಳಿದರು.

ಅಷ್ಟರಲ್ಲಿ ಕೈಗಾರಿಕಾ ಕ್ರಾಂತಿ ತನ್ನ ಕೈವಾಡವನ್ನು ಪ್ರದರ್ಶಿಸಲಾರಂಭಿಸಿತು. ಕಾರ್ಖಾನೆಗಳ ಸುತ್ತಮುತ್ತ ಕಾರ್ಮಿಕರ ವಸತಿಗಳ ನಿರ್ಮಾಣ ಪ್ರಾರಂಭವಾಯಿತು. ಹಳೆಯ ನಗರ ನಿರ್ಮಾಣಕಾರ್ಯ ಸ್ಥಗಿತಗೊಂಡಿತು. ಇರುವಷ್ಟು ಜಾಗದಲ್ಲೇ ಹೆಚ್ಚು ಹೆಚ್ಚು ಜನರಿಗೆ ವಸತಿಯನ್ನೊದಗಿಸುವುದರ ಕಡೆ ಗಮನಹರಿಯಿತು. ಊರುಗಳಲ್ಲಿನ ಜನಸಂಖ್ಯೆ ಇದ್ದಕ್ಕಿದ್ದಂತೆ ಅಪಾರವಾಗಿ ಬೆಳೆಯತೊಡಗಿತು.

**19ನೆಯ ಶತಮಾನ :** ಯುರೋಪಿನ ಅದರಲ್ಲೂ ಇಂಗ್ಲೆಂಡಿನ ವಾಸ್ತುಶಿಲ್ಪ ಈ ಶತಮಾನದಲ್ಲಿ ಬಹು ಸಂಕೀರ್ಣವಾಯಿತೆನ್ನಬಹುದು. ಒಂದು ಕಡೆ ಅಭಿಜಾತ ಶೈಲಿಗೂ ಮತ್ತೊಂದು ಕಡೆ ಗಾಥಿಕ್ ಶೈಲಿಗೂ ಪೈಪೋಟಿ ನಡೆದುದನ್ನು ಶತಮಾನದ ಉದ್ದಕ್ಕೂ ನಾವು ನೋಡಬಹುದು. ಪಲ್ಲಾಡಿಯನಿಸಂ ಶೈಲಿಯ ಚೇಂಬರ್ಸ್ ಮತ್ತು ಪಾಂಪೇಯ ಶೈಲಿಯ ಆಡಮ್–ಈ ಇಬ್ಬರು ಶಿಲ್ಪಿಗಳೂ ಇಟಲಿಯಿಂದ ತಮ್ಮ ಸ್ಫೂರ್ತಿಯನ್ನು ಪಡೆದರು. ರೀಜೆಂಟ್ ಪಾರ್ಕಿನ ಬೃಹದ್‌ಗೃಹಗಳು, ಹೋವ್, ಬ್ರೈಟನ್, ವೇಮೌತ್, ಚೆಲ್ಟ್‌ನ್‌ಹ್ಯಾಂ, ಕ್ಲಿಫ್ಟನ್, ಟರ್ನ್‌ಬ್ರಿಡ್ಜ್ ವೆಲ್ಸ್ ಮೊದಲಾದ ಕಡೆಗಳಲ್ಲಿನ ವಿವಿಧ ಕಟ್ಟಡಗಳ ಮೂಲಕ ಖ್ಯಾತಿಪಡೆದ ಜಾನ್ ನ್ಯಾಷನಿಗೆ ಮೇಲ್ಪಂಕ್ತಿಯಾದವರು ಚೇಂಬರ್ಸ್ ಮತ್ತು ಆಡಮ್. ನ್ಯಾಷನ ಶೈಲಿಯಲ್ಲಿ ರೋಮನ್ ಮತ್ತು ಗ್ರೀಕ್ ಶೈಲಿಗಳ ಅನುಕರಣೆಯಿದೆ. ಅಷ್ಟು ಹೊತ್ತಿಗಾಗಲೇ ಗ್ರೀಸ್ ಮತ್ತು ರೋಮಿಗೆ ಭೇಟಿಕೊಟ್ಟು ಬಂದಿದ್ದ ಸ್ಟೂಆರ್ಟ್ ಮತ್ತು ರೆವೆಟ್ಟರ ಅಂಟಿಕ್ವಿಟೀಸ್ ಆಫ್ ಅಥೆನ್ಸ್ ಎಂಬ ಗ್ರಂಥ ಅಚ್ಚಾಗಿತ್ತು (1762). ಅಲ್ಲದೆ ಅಥೆನ್ಸಿನ ಅಪೂರ್ವಕೃತಿಗಳಾದ ಎಲ್ಜಿನ್ ಅಮೃತಶಿಲಾಶಿಲ್ಪಗಳು ಲಂಡನ್ನಿಗೆ ಬಂದಿದ್ದುವು (1801). ಹೀಗಾಗಿ ಗ್ರೀಕ್ ಶೈಲಿಯ ಪುನರುದ್ಧರಣ ಕಾರ್ಯ ಅನೇಕ ವರ್ಷ ಯಶಸ್ವಿಯಾಗಿ ನಡೆಯಿತು. ಡಿ.ಬರ್ಟನ್ನನ ಅಥೀನಿಯಂ ಕ್ಲಬ್ ಕಟ್ಟಡವೂ ಎಚ್.ಡಬ್ಲ್ಯೂ. ಇನ್‌ವುಡ್ಡನ ಸೇಂಟ್ ಪಾಂಕ್ರಾಸ್ ಚರ್ಚು ಇದಕ್ಕೆ ಉತ್ತಮ ಉದಾಹರಣೆಗಳು. ಇದೇ ಮಾದರಿಯ ಗ್ರೀಕ್ ಶೈಲಿಯ ಪುನರುಜ್ಜೀವನವನ್ನು ಜರ್ಮನಿಯಲ್ಲೂ ಕಾಣಬಹುದು. ಪರ್ಸಿಯರ್ ಮತ್ತು ಫಾಂಟೇನರ ಪ್ರಾಚೀನ ಶಿಲ್ಪ

ಕೊಲೋನ್ ಕೆಥೆಡ್ರಲಿನ ಒಳಭಾಗದ ಒಂದು ನೋಟ. ಗಾಥಿಕ್ ಶೈಲಿಯ ಭವ್ಯತೆಯನ್ನಿದು ನಿದರ್ಶಿಸುತ್ತದೆ.

ಗ್ರಂಥಗಳಿಂದ ಪ್ರಭಾವಿತರಾದ ಫ್ರಾನ್ಸಿನ ಶಿಲ್ಪಿಗಳು ಹೊಸತಾಗಿ ರೂಢಿಸಿದ ಎಂಪೈರ್ ಶೈಲಿ ಈ ಶತಮಾನದ ಮೊದಲ ಮೂವತ್ತು ವರ್ಷಗಳು ಫ್ರಾನ್ಸಿನಲ್ಲಿ ಪ್ರಸಿದ್ಧವಾಗಿತ್ತು. ಕ್ರಮೇಣ ಈ ಪ್ರಭಾವ ಅಂದಿನ ಅಮೆರಿಕಕ್ಕೂ ಹರಡಿದುದು ಗಮನಾರ್ಹವಾದ ವಿಷಯ.

ಅದುವರೆಗೂ ಬಹು ಜನರ ತಾತ್ಸಾರಕ್ಕೆ ಒಳಗಾಗಿದ್ದ ಗಾಥಿಕ್ ಶೈಲಿಗೆ ಇದ್ದಕ್ಕಿದ್ದಂತೆ ಇಂಗ್ಲೆಂಡಿನಲ್ಲಿ ಪ್ರಾಮುಖ್ಯ ಬಂತು. 1818 ರಲ್ಲಿ ಇಂಗ್ಲೆಂಡಿನ ಸಂಸತ್ ಸಭೆ ಹೊಸ ಆಂಗ್ಲಿಕನ್ ಚರ್ಚುಗಳ ನಿರ್ಮಾಣಕ್ಕೆಂದು ಒಂದು ದಶಲಕ್ಷ ಪೌಂಡುಗಳನ್ನು ಕೊಟ್ಟಾಗ

ಗಾಥಿಕ್ ಶೈಲಿಗೆ ರೆಕ್ಕೆ ಮೂಡಿದಂತಾಯಿತು. ಆಗ ನಿರ್ಮಾಣವಾದ 214 ಚರ್ಚುಗಳಲ್ಲಿ 174 ಈ ಶೈಲಿಯಲ್ಲಿವೆ. ಅವುಗಳಲ್ಲಿ ಬಹು ಪ್ರಸಿದ್ಧವಾದುದೆಂದರೆ ಲಂಡನ್ನಿನಲ್ಲಿರುವ ಸೇಂಟ್ ಲೂಕನ ಚರ್ಚು. ಇಂಥ ಪುನರುಜ್ಜೀವನಕ್ಕೆ ಅಂದಿನ ಇಂಗ್ಲೆಂಡಿನ ಅದ್ಭುತರಮ್ಯ ಸಾಹಿತ್ಯದ ಧೋರಣೆಯೂ ಕಾರಣವಾಯಿತೆನ್ನಬಹುದು. ಗಾಥಿಕ್ ಶೈಲಿಯ ಪ್ರಭಾವ ಇಂಗ್ಲೆಂಡಿನಲ್ಲಿ ಇಡೀ ನೂರು ವರ್ಷ ಇದ್ದಿತೆನ್ನಬಹುದು.

**ಗಾಥಿಕ್ ಮಾದರಿಯ ದೊಡ್ಡ ಕೆಥೆಡ್ರಲ್ ಮಿಲಾನಿನಲ್ಲಿದೆ. ಇದರ ನಿರ್ಮಾಣಕಾರ್ಯ 14ನೆಯ ಶತಮಾನದಲ್ಲೇ ಪ್ರಾರಂಭವಾಯಿತು**

ಇದೇ ಶತಮಾನದ ಸಾರ್ವಜನಿಕ ಭವನಗಳಲ್ಲಿ ಗ್ರೀಕ್, ರೋಮನ್, ಗಾಥಿಕ್ ಮತ್ತು ಎಲಿಜಬೀತನ್ ಶೈಲಿಗಳ ಮಿಶ್ರಣವಿದೆ.

**20ನೆಯ ಶತಮಾನದ ವಾಸ್ತುಶಿಲ್ಪ :** ಒಂದನೆಯ ಮಹಾಯುದ್ಧಕ್ಕೆ ಮೊದಲು ಬಳಕೆಗೆ ಬಂದ ವಾಸ್ತುಶಿಲ್ಪಶೈಲಿಯನ್ನು ಆಧುನಿಕ ಶೈಲಿ ಎನ್ನಲಾಗಿದೆ. ಆಧುನಿಕ ಎಂಬ ಮಾತು ಪ್ರಾಚೀನ, ಮಧ್ಯಕಾಲೀನ ಎಂಬವುಗಳಂತೆ ಸಾಪೇಕ್ಷವಾದದ್ದು. ಅದು ಶಬ್ದಾರ್ಥವನ್ನು ವಿಶದೀಕರಿಸುವುದಿಲ್ಲ. ಉಪಯುಕ್ತತಾಶೀಲ (ಫಂಕ್ಷನಲ್) ಎಂಬ ಮಾತು ಆಧುನಿಕ

**ಪುನರುಜ್ಜೀವನ ಕಾಲದ ಪ್ರಥಮ ಇಟ್ಯಾಲಿಯನ್ ಶಿಲ್ಪಿ ಬ್ರೂನೆಲೆಶ್ಚಿಯ ಕೃತಿ ಸ್ಯಾನ್ ಲೊರೆಂಜೋ ಭವನ, ಫ್ಲಾರೆನ್ಸ್ ಡೊನಟೆಲೊನ ಅಲಂಕರಣವೂ ಸೇರಿದೆ**

ಕಲೆಯನ್ನು ಸರಿಯಾಗಿ ವಿವರಿಸಿತು. ಜನನಿಬಿಡವಾದ ಪಟ್ಟಣಗಳು, ಹೆಚ್ಚಿನ ವಾಹನ ಸಂಚಾರ, ದೊಡ್ಡ ದೊಡ್ಡ ಕಾರ್ಖಾನೆಗಳು, ಕಾರ್ಮಿಕರ ಮತ್ತು ಇತರ ನೌಕರರ ಸಣ್ಣಪುಟ್ಟ ವಸತಿಗೃಹಗಳು, ದೊಡ್ಡ ದೊಡ್ಡ ಕಚೇರಿಗಳು–ಇವೆಲ್ಲವನ್ನೂ ಕೇವಲ ಉಪಯೋಗದ ದೃಷ್ಟಿಯಿಂದ ಹಿಂದಿನ ಅಲಂಕರಣಶೈಲಿ ನಿರರ್ಥಕವಾಗಿ ತೋರಿತು. ಈ ಶತಮಾನದ ಪ್ರಾರಂಭದಲ್ಲಿ ಪ್ರಖ್ಯಾತ ಕಲಾವಿಮರ್ಶಕವೆನಿಸಿದ ಜಾನ್ ರಸ್ಕಿನ್ನನ ಭಾಷಣಗಳು ಮತ್ತು ಗ್ರಂಥಗಳು ಜನರ ಮನೋಧರ್ಮವನ್ನಾಗಲೆ ಬದಲಿಸಿದ್ದುವು. ಅನಂತರ ಅವನ ಶಿಷ್ಯರಲ್ಲಿ ಒಬ್ಬನಾದ ಎಲಿಯಂ ಮಾರಿಸ್ ಅಲಂಕರಣಕ್ಕಿಂತ ಮುಖ್ಯವಾದುದು ಉಪಯುಕ್ತತೆ ಎಂಬ ವಾದವನ್ನು ಮುಂದುವರಿಸಿ ಕೆಂಟ್‌ನಲ್ಲಿ ನವೀನ ಕಟ್ಟಡಗಳನ್ನು ರೂಪಿಸಿದ. 1851ರಲ್ಲಿ ಜೋಸೆಫ್ ಪ್ಯಾಕ್ಸ್‌ನ್ ಎಂಬ ಶಿಲ್ಪಿ ಅಂದಿನ ಮಹಾ ವಸ್ತುಪ್ರದರ್ಶನಕ್ಕಾಗಿ ಹೈಡ್ ಪಾರ್ಕಿನಲ್ಲಿ ನಿರ್ಮಿಸಿದ ಸ್ಫಟಿಕದ ಅರಮನೆಯನ್ನು (ಕ್ರಿಸ್ಟಲ್ ಪ್ಯಾಲೆಸ್) ಕಟ್ಟಲು ಕೇವಲ ಕಬ್ಬಿಣ ಮತ್ತು ಉಕ್ಕಿನ ಕಂಬ ಸಲಾಕೆಗಳನ್ನು ಬಳಸಿದನಷ್ಟೆ; ಅಲ್ಲಿಂದ ಮುಂದೆ ವಾಸ್ತುಶಿಲ್ಪದ ರೀತಿಯೇ ಬೇರೆ ದಾರಿ ಹಿಡಿಯಿತು. ಫ್ರಾನ್ಸಿನಲ್ಲಿ ಪ್ರಾರಂಭವಾದ ಇದರ ಬಳಕೆ ಕ್ರಮೇಣ ಇಡೀ ಯುರೋಪನ್ನೇ ಆಕ್ರಮಿಸಿತು.

ಫ್ರಾನ್ಸಿನ ಲೆ ಕಾರ್ಬೂಸರ್, ಪೆರ್ರೆ, ಫಿನ್ಲೆಂಡಿನ ಆಲ್ಟೊ, ಸಾರಿನೆನ್, ಜರ್ಮನಿಯ ಗ್ರೋಪಿಯಸ್, ಮೆಂಡೆಲ್ಸಾನ್, ಹಾಲೆಂಡಿನ, ಡುಡಾಕ್, ಬ್ರಿಟನ್ನಿನ ಇ.ಎಂ.ಫ್ರೈ, ಗಿಬರ್ಡ್, ಎಚ್.ಎಂ.ರಾಬರ್ಟ್‌ಸನ್–ಈ ಮೊದಲಾದವರು ಆಧುನಿಕ ಶೈಲಿಯ ಅಂಕುರಾರ್ಪಣ ಮಾಡಿದ ಮುಖ್ಯ ಶಿಲ್ಪಿಗಳೆನ್ನಬಹುದು. ಗ್ರೋಪಿಯಸ್ ಮತ್ತು ಕಾರ್ಬೂಸರರ ಗ್ರಂಥಗಳು ಆಧುನಿಕ ಶೈಲಿಗೆ ವ್ಯಾಖ್ಯಾನ ನೀಡುವುದರ ಮೂಲಕ ಅದಕ್ಕೆ ಜನಪ್ರಿಯತೆಯನ್ನು ಗಳಿಸಿಕೊಟ್ಟಿವೆ.

ಆಧುನಿಕ ಶೈಲಿಯ ಮುಖ್ಯ ಗುಣಲಕ್ಷಣಗಳು ಹೀಗಿವೆ: ನಿರ್ಮಾಣವಾದ ಮನೆ ಉದ್ದೇಶಕ್ಕೆ ಅನುಗುಣವಾಗಿರಬೇಕು. ಭಾರ ಹೊರುವ ಗೋಡೆಗಳಾವುವೂ ಅನಾವಶ್ಯಕ. ಅವುಗಳ ಬದಲು ಭದ್ರ ಕಾಂಕ್ರೀಟಿನ ತೆಳ್ಳನೆಯ ಕಂಬಗಳು, ಅದರದೇ ತೊಲೆಗಳು ಇರಬೇಕು. ಸೂರು ಇಪ್ಪಾರಾಗಿರದೆ ಒಪ್ಪಾರಾಗಿದ್ದು, ಮಟ್ಟಸವಾಗಿರಬೇಕು. ಒಟ್ಟು ಮನೆಗೆ ಭದ್ರ ಕಾಂಕ್ರೀಟಿನ ರಕ್ಷಣೆ ಇರಬೇಕು. ಅಗತ್ಯವಿದ್ದಲ್ಲೆಲ್ಲ ಕ್ಯಾಂಟಿಲಿವರುಗಳು ಮತ್ತು ಬಾಲ್ಕನಿಗಳಿದ್ದರೆ ಒಳ್ಳೆಯದು. ಕಿಟಕಿಗಳು ಬಾಗಿಲುಗಳು ಎಷ್ಟು ದೊಡ್ಡವಾಗಿದ್ದರೆ ಅಷ್ಟು ಒಳ್ಳೆಯದು. ಅವುಗಳ ಮೇಲೆ ಯಾವ ಬಗೆಯಾದ ಕಮಾನುಗಳೂ ಬೇಕಿಲ್ಲ. ಅಲಂಕರಣದ ಅಗತ್ಯವೇ ಇಲ್ಲ. ಇಡೀ ಮನೆ ಬೆಂಕಿಯ ಪೊಟ್ಟಣಗಳ ಸಾಲಿನಂತೆ ನೇರವೂ ಸುಲಭವೂ ಆಗಿರಬೇಕು.

**ಚೆರಿಹಣ್ಣುಗಳನ್ನು ಹಿಡಿದ ಬಾಲಕಿ; ಪುನರುಜ್ಜೀವನ ಕಾಲದ ಚಿತ್ರಕಲೆಯ ಒಂದು ಮಾದರಿ. ಬಿ. ಲೂನಿಯ ಒಂದು ಕೃತಿ**

ಶಿಷ್ಪ ಅಳತೆಗೆ ತಕ್ಕಂತೆ ಮೊದಲೇ ಸಿದ್ಧವಾದ (ಪ್ರಿಫ್ಯಾಬ್ರಿಕೇಟೆಡ್) ಬಿಡಿ ಭಾಗಗಳನ್ನು ಹೇರಳವಾಗಿ ಬಳಸುವ ವಾಡಿಕೆ ಹೆಚ್ಚಿತು. ಎರಡನೆಯ ಮಹಾಯುದ್ಧವಾದ ಅನಂತರ ವಾಸದ ಮನೆಗಳ ಅಭಾವ ತೋರಿಬಂದಾಗ ಇಂಥ ಹೊಸ ಮಾದರಿಗಳ ಕಡೆ ಶಿಲ್ಪಿಗಳ ಗಮನ ಹೆಚ್ಚಾಗಿ ಹರಿಯಿತು. ಗಂಡ, ಹೆಂಡತಿ ಮತ್ತು ಇಬ್ಬರು ಮಕ್ಕಳಿಗಾಗುವ ಪುಟ್ಟ ಮನೆಯಿಂದ ಹಿಡಿದು ಎಂಟು ಹತ್ತು ಸಾವಿರ ಜನ ಕೆಲಸ ಮಾಡುವ ಗಿರಣಿಯವರೆಗಿನ ಎಲ್ಲ ಮನೆಗಳನ್ನು ನವವಿಧಾನದಿಂದ ಕಟ್ಟಲಾಗಿದೆ. ಅಲ್ಲಲ್ಲಿನ ನಿವೇಶನಗಳ ಅನುಕೂಲ, ಅಗತ್ಯ, ಉದ್ದೇಶ, ವಾಯುಗುಣಗಳಿಗೆ ಅನುಸಾರವಾಗಿ ಶಿಲ್ಪವಿಧಾನ ಮಾರ್ಪಡುತ್ತದೆ. ಹಿಂದಿನ ಯಾವ ಅಲಂಕರಣಗಳಿಗೂ ಅವಕಾಶ ಕೊಡದ ನವವಿಧಾನದ ಜೊತೆಗೆ ಹಳೆಯ ಸಂಪ್ರದಾಯಗಳ ಹಿತಮಿತ ಮಿಶ್ರಣದಿಂದ ಹೊಸ ಹೊಸ ಸುಂದರ ವಾಸ್ತು ಶೈಲಿಗಳನ್ನು ರೂಢಿಸಿರುವುದೂ ಉಂಟು. ಒಸಾಕದ ಎಕ್ಸ್‌ಪೊ 70ರ ಶಿಲ್ಪ ತಾಂತ್ರಿಕ ಶಿಲ್ಪವಿಧಾನದಲ್ಲಿ ಹೊಸ ದಾಖಲೆಯನ್ನೇ ಸ್ಥಾಪಿಸಿದೆ. **(ನೋಡಿ– ಎಕ್ಸ್‌ಪೊ)** ಪ್ಯಾರಿಸಿನಲ್ಲಿ ಯುನೆಸ್ಕೊ ಕಚೇರಿಗಳಿಗಾಗಿ ಇಂಗ್ಲಿಷಿನ Y ಅಕ್ಷರದ ಆಕಾರದ ಹೊಸ ಕಟ್ಟಡ, ಒಲಂಪಿಕ್ ಆಟಗಳಿಗಾಗಿ ರೋಮಿನಲ್ಲಿ ಶಿಲ್ಪಿ ನರ್ವಿ 1960ರಲ್ಲಿ ಕಟ್ಟಿದ ಭವನ, ಸ್ಪೇನಿನಲ್ಲಿ ಶಿಲ್ಪಿ ಯುಡಾರ್ಡೊ ಟೊರೋಜ ನಿರ್ಮಿಸಿದ ಕುದುರೆ ಪಂದ್ಯದ ಸ್ಟೇಡಿಯಂ–ಇವು ಇತರ ಕೆಲವು ನಿದರ್ಶನಗಳು. ಈಚೆಗಂತೂ ಸೌದನಿರ್ಮಾಣಕ್ಕೆ ಗಾಜು ಮತ್ತು ಪ್ಲಾಸ್ಟಿಕ್‌ಗಳನ್ನೂ ಬಳಸಲಾಗಿದೆ. ರಸ್ತೆಗಳು, ಉದ್ಯಾನಗಳು, ಸೇತುವೆಗಳು, ವಠಾರಗಳು, ಗಗನ ಚುಂಬಿ ಸೌಧಗಳು, ಸುರಂಗಗಳು, ನೆಲಮಾಳಿಗೆಗಳು, ಸಿಡಿಲ ಮೊರೆಯನ್ನೂ ಭೂಕಂಪವನ್ನೂ ಎದುರಿಸುವ ಯೋಜನೆಗಳು, ಕಟ್ಟಿದ ಮನೆಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಒಯ್ಯುವ ವ್ಯವಸ್ಥೆಗಳು–ಇಲ್ಲೆಲ್ಲ ಇಪ್ಪತ್ತನೆಯ ಶತಮಾನದ ತಾಂತ್ರಿಕ ಹಾಗೂ ಕಲಾತ್ಮಕ ಆಧುನಿಕ ವಿಧಾನಗಳನ್ನು ನಾವು ಕಾಣಬಹುದಾಗಿದೆ.

**19ನೆಯ ಶತಮಾನದಿಂದೀಚಿನ ಚಿತ್ರಕಲಾ ಸಮೀಕ್ಷೆ :** ಸಮಾಜದಲ್ಲಿ, ಸಾಹಿತ್ಯದಲ್ಲಿ, ವಾಸ್ತುಶಿಲ್ಪದಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಗಳ ಪ್ರಭಾವ ಚಿತ್ರಕಲೆಯ ಮೇಲೂ ಆಯಿತು. ಫ್ರಾನ್ಸಿನ ಮಹಾಕ್ರಾಂತಿಯ ಕಾಲದ ಒಬ್ಬ ಗಣ್ಯ ಕಲಾಕಾರನೆಂದರೆ ಜ್ಯಾಕ್ವಿಸ್ ಲೂಯಿ ಡೇವಿಡ್. ಈತ ಮೊದಲು ಆಸ್ಥಾನ ಕಲಾವಿದನಾಗಿದ್ದು ಅನಂತರ

ಕ್ರಾಂತಿಕಾರರೊಡಗೂಡಿ ಬಂಡಾಯದಲ್ಲಿ ಭಾಗವಹಿಸಿದವನು. ಅಭಿಜಾತ ಕಲಾಶೈಲಿಯಲ್ಲಿ ಗ್ರೀಕ್ ಮತ್ತು ರೋಮನ್ ಚರಿತ್ರೆಯ ಅನೇಕ ವರ್ಣಚಿತ್ರಗಳನ್ನು ಈತ ರಚಿಸಿದ್ದಾನೆ. ಈತನ ಕೃತಿಯಾದ ಅಶ್ವಾರೂಢ ನೆಪೋಲಿಯನನ ಚಿತ್ರ ಬಹು ಪ್ರಖ್ಯಾತವಾದುದು. ಡೇವಿಡನ ಶಿಷ್ಯ ಇಂಗ್ರೆಸ್ ಗುರುವಿಗಿಂತ ಒಂದು ಹೆಜ್ಜೆ ಮುಂದೆ ನಡೆದನೆನ್ನಬಹುದು.



ಇಪ್ಪತ್ತನೆಯ ಶತಮಾನದ ವಾಸ್ತು, ಶಿಲ್ಪ ವಿಧಾನಕ್ಕೊಂದು ಉಚಿತ ನಿದರ್ಶನ ಎಗನ್ ಮೊಲರ್–ನೀಲ್ಸೆನ್ ಎಂಬ ಶಿಲ್ಪಿ ಕಿರುದಾರಿಯಂಚಿನ ಅಸನಕ್ಕಾಗಿ ರೂಪಿಸಿದ ಒಂದು ಮಾದರಿ

ಅಭಿಜಾತ ಮಾರ್ಗದ ಕಲಾವಿದರು ಚಿತ್ರದಲ್ಲಿನ ವರ್ಣವಿನ್ಯಾಸಕ್ಕೆ ಅಷ್ಟು ಗಮನವಿತ್ತಿರಲಿಲ್ಲ. ಅವರ ಗಮನವೆಲ್ಲ ಗೆರೆಗಳು ಮತ್ತು ಗಾತ್ರಗಳ ಮೇಲಿತ್ತು. ಆದ್ದರಿಂದ ಅಲ್ಲಿನ ವರ್ಣವಿನ್ಯಾಸ

ಮನೆಗಳು : ಘನಾಕೃತಿ ವಿಧಾನ (ಕ್ಯೂಬಿಸಂ) ಬಳಕೆಗೆ ಬಂದ ಮೊದಲ ವರ್ಷಗಳಲ್ಲಿ ಜಾರ್ಜ್‌ನ್ ಬ್ರಾರ್ಕ್ ಎಂಬ ಕಲಾವಿದನಿಂದ ರೂಪಿತವಾದುದು (1908)

ಮಬ್ಬು ಮಬ್ಬಾಗಿ ನಿರ್ಜೀವವಾಗಿತ್ತು. ಇಂಗ್ರೆಸ್ ರೇಖಾಚಿತ್ರವಿನ್ಯಾಸದಲ್ಲಿ ಅಸಾಧಾರಣ ನೈಪುಣ್ಯವನ್ನು ತೋರಿಸಿದ್ದಾನೆ. ಡೇವಿಡನ ಮತ್ತೊಬ್ಬ ಶಿಷ್ಯ ಬ್ಯಾರನ್‌ಗ್ರಾಸ್ ನೆಪೋಲಿಯನನ ಸೈನ್ಯದಲ್ಲಿ ಅಧಿಕಾರಿಯಾಗಿದ್ದುಕೊಂಡು ಅಲ್ಲಿನ ಯುದ್ಧವಿಷಯಗಳನ್ನು ಚಿತ್ರಿಸಿದ್ದಾನೆ. ಸೈನಿಕರ ಶೌರ್ಯದ ಜೊತೆಗೆ ಅವರ ಅತೀವ ವೇದನೆ, ದುಃಖಗಳನ್ನೂ ಗ್ರಾಸ್ ಹೃದಯ ಕರಗುವಂತೆ ಚಿತ್ರೀಕರಿಸಿದ್ದಾನೆ.

ಅನಂತರ ಡೆಲಕ್ರ್ವಾ ಎಂಬ ಫ್ರೆಂಚ್ ಕಲಾವಿದನ ನಾಯಕತ್ವದಲ್ಲಿ ರೊಮ್ಯಾನ್ಟಿಸಿಸ್ವರ ಹೊಸದೊಂದು ಕಲಾಶೈಲಿ ಆವರಿಸಿತು. ಅಭಿಜಾತ ಶೈಲಿಯನ್ನು ಇವರು ಒಪ್ಪಲಿಲ್ಲ. ಅಲ್ಲದೆ ಅಭಿಜಾತ ವಸ್ತುವನ್ನೂ ಇವರು ಆರಿಸಲಿಲ್ಲ. ತಮ್ಮ ಕಾಲದ ಜನಜೀವನವೇ ಚಿತ್ರದ ವಸ್ತುವಾಗಬೇಕೆಂದು ಇವರು ವಾದಿಸಿದರು. ಅಲ್ಲದೆ ಗೀಟು, ಗೆರೆಗಳಿಗಿಂತ ಬಣ್ಣಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡಲಾರಂಭಿಸಿದರು. ಅದರಂತೆ ಡೆಲಕ್ರ್ವಾ ತನ್ನ ಚಿತ್ರಗಳಿಗಾಗಿ ಧರ್ಮಯುದ್ಧನಿರತರಾದ ಯೋಧವೀರರು, ಬೈಬಲಿನ ಕಥೆಗಳು, ಆಲ್ಜಿಯರ್ಸಿನ ಜನತೆ, ಗ್ರೀಕರಿಗೂ ತುರ್ಕರಿಗೂ ಅಂದು ನಡೆಯುತ್ತಿದ್ದ ಯುದ್ಧ–ಇಂಥ ವಸ್ತುಗಳನ್ನಾಯ್ದುಕೊಂಡ. ಸಿಂಹದ ಬೇಟೆ ಎಂಬ ಹೆಸರಿನ ಅವನ ಒಂದು ಚಿತ್ರ ಬಹು ಸಹಜವಾಗಿದೆ.

ಮೆರಿಡಿಯನ್ ಎಂಬ ಶೀರ್ಷಿಕೆಯನ್ನುಳ್ಳ ಒಂದು ವಾಸ್ತುಕೃತಿ, ನಿರ್ಮಾತೃ ಬಾರ್ಬರ ಹೆಪ್‌ವರ್ತ್. ಅಮೂರ್ತ ಕಲಾ ಮಾದರಿಗೊಂದು ನಿದರ್ಶನ

18ನೆಯ ಶತಮಾನದ ಪ್ರಾರಂಭದಲ್ಲಿ ವೆನಿಸಿದಲ್ಲಿ ಟಿಷಿಯನ್, ರೋಮಿನಲ್ಲಿ ಮೈಕೆಲೇಂಜಲೊ, ಸ್ಪೇನಿನಲ್ಲಿ ವೆಲಾಸ್ಕ, ಫ್ಲಾಂಡರ್ಸಿನಲ್ಲಿ ರೂಬೆನ್ಸ್, ನೆದರ್ಲೆಂಡಿನಲ್ಲಿ ರೆಂಬ್ರಾನ್, ಜರ್ಮನಿಯಲ್ಲಿ ಡ್ಯೂರರ್, ಫ್ರಾನ್ಸಿನಲ್ಲಿ ಪೌಸಿನ್–ಇವರು ಪ್ರಸಿದ್ಧರಾದಂತೆ ಇಂಗ್ಲೆಂಡಿನಲ್ಲಿ ವಿಲಿಯಂ ಹೋಗಾರ್ತ್ ತುಂಬ ಖ್ಯಾತನಾದ. ಅನಂತರ ಜೋಷುವ ರೇನಾಲ್ಡ್ಸ್ ಮತ್ತು ಥಾಮಸ್ ಗೇನ್ಸ್‌ಬರೊ ಎಂಬಿಬ್ಬರು ಕಲಾವಿದರು ಮನುಷ್ಯನ ಭಾವ ಚಿತ್ರಣದಲ್ಲಿ ಅಂದರೆ ತಸ್ವೀರು ಚಿತ್ರಣದಲ್ಲಿ ಹೆಸರು ಗಳಿಸಿದರು. ದಿ ಸ್ಟ್ರಾಬೆರಿ ಗರ್ಲ್, ಮಾಸ್ಟರ್ ಹೇರ್, ದಿ ಏಜ್ ಆಫ್ ಇನ್ನೊಸೆನ್ಸ್–ಇವು ರೇನಾಲ್ಡ್ಸನ ಖ್ಯಾತ ಕೃತಿಗಳು. ಲೇಡಿ ವಾಕಿಂಗ್ ಇನ್ ಸೇಂಟ್ ಜೇಮ್ಸ್ ಪಾರ್ಕ್, ಮಿಸ್ಟ್ರೆಸ್ ಸಿಡಾನ್ಸ್, ದಿ ಬ್ಲೂ ಬಾಯ್–ಇವು ಗೇನ್ಸ್‌ಬರೊನ ಕೆಲವು ಖ್ಯಾತ ಚಿತ್ರಗಳು. ಬೆಂಜಮಿನ್ ವೆಸ್ಟ್ ಮತ್ತು ಜಾನ್ ಸಿಂಗಲ್ಟನ್ ಕಾಪ್ಲೆ ಎಂಬಿಬ್ಬರು ಅಮೆರಿಕನ್ನರು ವರ್ಣಚಿತ್ರ ವೀಕ್ಷಣಕ್ಕೆಂದು ಯುರೋಪಿಗೆ ಬಂದವರು ಪ್ರವಾಸಾನಂತರ ಇಂಗ್ಲೆಂಡಿನಲ್ಲಿ ನೆಲೆಸಿ ಅದ್ಭುತ ಚಿತ್ರಗಳನ್ನು ರಚಿಸಿದರು. ಅಮೆರಿಕದಲ್ಲಿ ಸ್ವಾತಂತ್ರ್ಯ ಯುದ್ಧವಾಗುತ್ತಿದ್ದ ಸಮಯದಲ್ಲಿ ಇಂಗ್ಲಿಷ್ ಕವಿಯೊಬ್ಬ ಚಿತ್ರಗಾರನಾಗಿಯೂ ಪ್ರಸಿದ್ಧಿಗೆ ಬಂದ. ಅವನೇ ವಿಲಿಯಂ ಬ್ಲೇಕ್. ಆತ ಪ್ರಧಾನವಾಗಿ ಕೆತ್ತನೆಯ ಕೆಲಸದಲ್ಲಿ ನಿಪುಣ. ಮರದ ಫಲಕಗಳ ಮೇಲೆ ಚಿತ್ರಗಳನ್ನು ಕೊರೆದು ಅಚ್ಚು ತಯಾರಿಸಿ ಅದರಿಂದ ಮುದ್ರಣ ಮಾಡುವುದು ಅವನ ಹವ್ಯಾಸ. ಅದಕ್ಕಾಗಿ ಆತ ಮೊದಲು ಬಣ್ಣಗಳಿಂದ ತಯಾರಿಸುತ್ತಿದ್ದ ಆಲೇಖ್ಯ ಚಿತ್ರಗಳೂ ಅವನ ಕಲಾವಂತಿಕೆಗೆ ಸಾಕ್ಷಿಗಳಾಗಿವೆ. ಮುಂದೆ ಬಂದ ಜಾನ್ ಕಾನ್ಸ್‌ಟಬಲ್ ಚಿತ್ರಗಳಿಗೆ ನೈಜವರ್ಣಗಳನ್ನು ಬಳಸಿ ಅವುಗಳ ಸಹಜತೆಯನ್ನು ಹೆಚ್ಚಿಸಿದನಲ್ಲದೆ ಗುಪ್ಪೆಗುಪ್ಪೆಯಾಗಿ ಗಿಡಮರಗಳಿಗೆ ಕೇವಲ ಕಂದುಬಣ್ಣವನ್ನು ಉಪಯೋಗಿಸುತ್ತಿದ್ದರು. ಕಾನ್ಸ್‌ಟಬಲ್ ಆದರೋ

ಹಸಿರು, ಕಪ್ಪು ಬಣ್ಣಗಳ ಛಾಯೆಗಳನ್ನು ಬಳಸಿ ಅವು ಸಹಜವಾಗಿ ತೋರುವಂತೆ ಮಾಡಿದ. ಸೂರ್ಯೋದಯ ಸೂರ್ಯಾಸ್ತಗಳ ಸಮುದ್ರದ ಸೊಬಗು, ಕಾಂತಿ ಮತ್ತು ಗಾಂಭೀರ್ಯಗಳನ್ನು ವರ್ಣಗಳಲ್ಲಿ ಉಜ್ಜ್ವಲವಾಗಿ ಸೆರೆಹಿಡಿದಿರುವ ಕಲಾವಿದನೆಂದರೆ ಜೋಸೆಫ್ ಮಲ್ಲಾರ್ಡ್ ವಿಲಿಯಂ ಟರ್ನರ್. ಪೆಟ್‌ವರ್ತ್ ಹೌಸಿನಿಂದ ಕಾಣುವ ಸರೋವರ ಮತ್ತು ವಿನಿಸಿನ ಗ್ರ್ಯಾಂಡ್ ಕೆನಾಲ್–ಎಂಬೆರಡು ಚಿತ್ರಗಳು ಟರ್ನರನ ಪ್ರಸಿದ್ಧ ಕೃತಿಗಳಾಗಿವೆ.

ಫ್ರಾನ್ಸಿನ ಬಾರ್ಬಿಜ಼ಾನ್ ಪಂಥದ ಪ್ರಮುಖ ಶ್ರದ್ಧಾಳುಗಳೆಂದರೆ ಥಿಯೊಡರ್ ರೂಸೊ, ಕೇರೊ, ಮಿಲೆ ಇವರು ಬಾರ್ಬಿಜ಼ಾನ್ ಹಳ್ಳಿಯ ಸುತ್ತಣ ಕಾಡುಗಳ ಸಹಜರಮ್ಯತೆಯನ್ನು ಚಿತ್ರಿಸುವಲ್ಲಿ ಸಹಜತೆಯನ್ನೂ ಪರಿಣಾಮ ವಿಧಾನವನ್ನೂ (ಇಂಪ್ರೆಷನಿಸಂ) ಬಳಸಿ ಮುಖ್ಯರೆನಿಸಿದ್ದಾರೆ.

ಇಲ್ಲಿಂದ ಮುಂದೆ ಆಧುನಿಕ ಕಲೆ ಬಹು ವಿಸ್ತಾರವಾಗಿ, ಬಹು ಸಂಕೀರ್ಣವಾಗಿ ಬೆಳೆದು ಬಂದಿದೆ. ಅದು ಸೃಷ್ಟಿಸಿರುವ ಕೆಲವು ಪ್ರಸ್ಥಾನಗಳ ಮೂಲಕ ಕೇವಲ ಸಂಕ್ಷೇಪವಾಗಿ ಅದರ ಚರಿತ್ರೆಯನ್ನು ಇಲ್ಲಿ ಗಮನಿಸಲಾಗಿದೆ.

**ಮಾರಿಸ್ ಡಿ ವ್ಲಾಮಿನ್ಸ್ಕನ (1905) ಒಂದು ವರ್ಣಚಿತ್ರ. ಫಾಮಿಸಂ ಪಂಥದ ಕಲಾ ವಿಧಾನಕ್ಕೊಂದು ನಿದರ್ಶನ. ಛಾಯೆಯಿಲ್ಲದ ಘನ ನಿರ್ಮಾಣವೂ ಪಡಿಯಚ್ಚಿರದ ರೂಪರಚನೆಯೂ ಈ ಪಂಥದವರ ಚಿತ್ರ ವಿಧಾನ**

ಸಾಮಾನ್ಯವಾಗಿ ಚಿತ್ರಕಲೆಯಲ್ಲಿ ಕಣ್ಣಿಗೆ ಕಂಡ ಮೂರ್ತರೂಪಗಳನ್ನು ಹಿಡಿದಿಡುವುದೇ ಮುಖ್ಯವಾದರೂ ಒಂದು ಬಗೆಯ ನವೀನ ಚಿತ್ರಕಲೆ ತದ್ವಿರುದ್ಧವಾದ ದಾರಿಯನ್ನು ಹಿಡಿದಿದೆ. ಅದೇ ಅಮೂರ್ತ ಚಿತ್ರವಿಧಾನ (ಅಬ್‌ಸ್ಟ್ರಾಕ್ಟ್ ಆರ್ಟ್). ಸಾಮಾನ್ಯವಾಗಿ ಸಹಜ ನಿರೂಪಣೆಯದಾದರೂ ಇಲ್ಲಿ ಪದಾರ್ಥಚಿತ್ರಣಕ್ಕಿಂತ ಭಾವ ಚಿತ್ರಣ ಮುಖ್ಯ. ಫಾವಿಸಂ, ಕ್ಯೂಬಿಸಂ (ಘನಾಕೃತಿ ಕಲಾವಿಧಾನ), ಎಕ್ಸ್‌ಪ್ರೆಷನಿಸಂ (ಅಭಿವ್ಯಕ್ತಿ ಪಂಥ) ಇತ್ಯಾದಿ ವಿಧಾನಗಳ ತಳಹದಿಯಾಗಿ ಅಮೂರ್ತ ಚಿತ್ರ ವಿಧಾನ ಇದೆ ಎನ್ನಬಹುದು. ಇದರ ಮೊದಲಿಗ ಕಾಂಡಿಸ್ಕಿ (1910). ಈ ವಿಧಾನದಲ್ಲಿ ಗೀರುಗಳು, ಮೇಲುಮೈ, ಆಕೃತಿಗಳು, ವರ್ಣಗಳು ಎಲ್ಲವೂ ಮೂಲವಸ್ತುವಿಗೆ ಏನೂ ಸಂಬಂಧವಿಲ್ಲದಂತೆ ಮೂಡಿಬಂದಿರುತ್ತವೆ. ಜ್ಯಾಕ್ಸನ್, ಪೊಲಾಕ್, ಕೂನಿಂಗ್, ಹ್ಯಾನ್ಸ್ ಹಾಫ್‌ಮನ್–ಇವರು ಈ ಪಂಥದ ಪ್ರಮುಖರು. ಅಮೂರ್ತ ಚಿತ್ರ ವಿಧಾನದ ಒಂದು ಅಂಗ (ಕನ್‌ಸ್ಟ್ರಕ್ಟಿವಿಸಂ) ರಷ್ಯದಲ್ಲಿ ಬೆಳೆದು ಬಂತು. ನಾಮ್‌ಗಾಬೊ, ಅಂತೊನಿ ಪೆವ್‌ಸ್ನರ್, ಐ ಲಿಸಿಟಸ್ಕಿ–ಇವರು ಈ ಪಂಥದ ಪ್ರಮುಖರು. ಕ್ಯೂಬಿಸಂ (ಘನಾಕೃತಿ ಕಲಾವಿಧಾನ) ಕೂಡ ಅಮೂರ್ತ ಚಿತ್ರವಿಧಾನದ ಪೂರ್ವ ಭಾಗವೇ ಆಗಿದೆ. ಸಹಜ ಆಕೃತಿಗಳಿಗಿಂತ ಜ್ಯಾಮಿತೀಯ ಆಕೃತಿಗಳಿಗೇ ಇಲ್ಲಿ ಪ್ರಾಮುಖ್ಯ. ಈ ಪಂಥದಲ್ಲಿ ಪಿಕಾಸ್ಸೊ ಬ್ರಾರ್ಕ್, ಸೀಸಾನ್, ಗ್ರೀಸ್ ಮತ್ತು ಲೇಗರ್ ಪ್ರಮುಖರು.

ಎಲ್ಲ ಹಳೆಯ ವಿಧಾನಗಳನ್ನೂ ಸಂಪ್ರದಾಯಗಳನ್ನೂ ಪ್ರತಿಭಟಿಸಿ ಹೊಸ ಜಾಡನ್ನು ಅರಸಹೊರಟ (1916–21) ಐರೋಪ್ಯ ಕಲಾವಿದರ ನೂತನ ಶೈಲಿಯನ್ನು ದಾದಾಯಿಸಂ ಎನ್ನುತ್ತಾರೆ. ಇದರ ಪ್ರಭಾವದಿಂದಲೇ ಸರ್ರಿಯಲಿಸಂ (ಅತಿವಾಸ್ತವಿಕ ವಿಧಾನ) ಮೊದಲಾದ ವಿಶೇಷ ವಿಧಾನಗಳು ಆವಿರ್ಭವಿಸಿದುವು. ಹಾಲೆಂಡಿನಲ್ಲಿ 1917–28ರ ಸುಮಾರಿನಲ್ಲಿ ಚೌಕಗಳನ್ನು, ಮೂಲವರ್ಣಗಳನ್ನು ಪ್ರಧಾನವಾಗುಳ್ಳ ಡೇ ಸ್ಟಿಲ್ ಎಂಬ ಶೈಲಿ ಬಳಕೆಗೆ ಬಂತು. ವಾನ್ ಡೋಸ್‌ಬರ್ಗ್, ಮಾಂಡ್ರಿಯನ್ ಮೊದಲಾದವರು ಈ ಹೊಸ ಮಾದರಿಯ ಅಧ್ವರ್ಯುಗಳೆಂದು ಹೆಸರಾಗಿದ್ದಾರೆ.

ಯಾವ ಕಲೆಯಲ್ಲಿ ಪ್ರಕೃತಿಗಿಂತ ಕಲೆಗಾರನ ಭಾವೋದ್ವೇಗಗಳಿಗೆ ಹೆಚ್ಚಿನ ಸ್ಥಾನವಿರುತ್ತದೋ ಅಂಥ ಕೃತಿಗಳನ್ನು ಅಭಿವ್ಯಕ್ತಿ ಪಂಥದವೆನ್ನುತ್ತಾರೆ (ಎಕ್ಸ್‌ಪ್ರೆಷನಿಸಂ). ಮ್ಯಾಟಿಸ್ಸಿ ಈ ಪಂಥದ ಪ್ರಮುಖ ಕಲಾವಿದೆ. ಪರಿಣಾಮ ವಿಧಾನಾನಂತರದ ಚಿತ್ರಕಲೆ ಈ ವಿಭಾಗಕ್ಕೆ ಸೇರುತ್ತದೆ. ಇದರ ಒಂದು ರೂಪವೇ ಫ್ರಾನ್ಸಿನ ಫಾವಿಸಂ. ಸಾಹಿತ್ಯದಲ್ಲೂ



**ಎನ್ರಿಕೊ ಸ್ಕ್ಯಾಂಪೊಲಿನಿ ಎಂಬ ಕಲಾವಿದ ಅಭಿನಯಕ್ಕಾಗಿ ಸಿದ್ಧಪಡಿಸಿದ ರಂಗಮಂದಿರದ ಚಿತ್ರವಿದು. ಸ್ವೇಚ್ಛಾ ಸಂಕೇತ ವಿಧಾನವನ್ನು ಬಳಕೆಗೆ ತಂದು, 1914ರ ಮಹಾಯುದ್ಧ ಕಾಲದಲ್ಲಿ ಆ ಪಂಥ ಇಳಿಗತಿಗೆ ಬಂದಾಗಲೂ ಅದನ್ನು ವಿವಿಧ ರೀತಿಯಲ್ಲಿ ಪುನರುಜ್ಜೀವನಗೊಳಿದವನೀತ**

ಅಭಿವ್ಯಕ್ತಿ ಪಂಥದ ಲೇಖಕರಿದ್ದಾರೆ. ಸ್ವೇಚ್ಛಾ ಸಂಕೇತ ವಿಧಾನ (ಫ್ಯೂಚರಿಸಂ) ಇಟಲಿಯಲ್ಲಿ ಮೂಡಿತೆನ್ನಬಹುದು. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಯಂತ್ರಯುಗದ ಕಾರ್ಯವೈಭವವನ್ನು ಕಲೆಯಲ್ಲಿ ಕೊಂಡಾಡಲು ರೂಪುಗೊಂಡ ಈ ವಿಧಾನವನ್ನು ಪ್ರಾರಂಭಿಸಿದವ ಕವಿ ಮ್ಯಾರಿನೆಟ್ಟಿ.

ಪರಿಣಾಮ ವಿಧಾನವೂ (ಇಂಪ್ರೆಷನಿಸಂ) ಫ್ರಾನ್ಸ್ ದೇಶದ್ದು. ಪ್ರಕೃತಿಯಲ್ಲಿ ನೇರ ಕಣ್ಣಿಗೆ ಕಂಡದ್ದನ್ನು ಕಂಡಂತೆ ಚಿತ್ರಿಸುವುದೇ ಈ ವಿಧಾನದ ಗುರಿ. ಒಂದೇ ಸಮುದ್ರ, ಒಂದೇ ಸೂರ್ಯೋದಯ ದಿನದಿನವೂ ಹೊಸದಾಗಿ ಕಾಣಬಹುದು. ಕಾಣ್ಕೆ ವ್ಯಕ್ತಿ ವ್ಯಕ್ತಿಗೂ ಭಿನ್ನವಾಗಿರಬಹುದು. ಬೇರೆ ಬೇರೆ ಜಾಗದಿಂದ ಅದೇ ವಿಷಯ ಬೇರೆ ಬೇರೆಯಾಗಿ ಭಾಸವಾಗಬಹುದು. ಇದನ್ನು ಹಿಡಿಯುವುದೇ ಪರಿಣಾಮ ವಿಧಾನದ ಉದ್ದೇಶ. ಈ ಪಂಥದವರಲ್ಲಿ ಮಾನೆ, ಸಿಸ್ಲೆ, ಪಿಸ್ಸಾರೋ–ಇವರು ಮುಖ್ಯರು. ಉಳಿದವರೆಂದರೆ ರೆನಾರ್, ಡೆಗಾಸ್.

ಮುಖ್ಯವಾದ ಕೆಲವು ಪಂಥಗಳ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಇಲ್ಲಿ ಹೇಳಲಾಗಿದೆ. ವಿವರಗಳಿಗೆ ಆಯಾ ಪಂಥ ಮತ್ತು ಆಯಾ ದೇಶಗಳ ಕಲಾವಿಭಾಗಗಳನ್ನು ನೋಡಬಹುದು. **(ಪಿ.ಎಸ್.)**

**ಐರೋಪ್ಯ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ:** ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆಲ್ಜಿಯಂ, ನೆದರ್ಲೆಂಡ್ಸ್ ಮತ್ತು ಲಕ್ಸೆಂಬರ್ಗ್‌ಗಳ ಕಲ್ಲಿದ್ದಲು ಮತ್ತು ಉಕ್ಕಿನ ಮೂಲಸಾಧನಗಳನ್ನು ಒಗ್ಗೂಡಿಸಿಕೊಳ್ಳಲು 1952ರಲ್ಲಿ ಆ ರಾಷ್ಟ್ರಗಳ ಸರ್ಕಾರಗಳಿಂದ ಸ್ಥಾಪಿತವಾದ ಸಂಸ್ಥೆ (ಯುರೋಪಿಯನ್ ಕೋಲ್ ಅಂಡ್ ಸ್ಟೀಲ್ ಕಮ್ಯೂನಿಟಿ). ಎರಡನೆಯ ಮಹಾಯುದ್ಧವಾದ ಮೇಲೆ ಯುರೋಪಿನಲ್ಲಿ ಒಂದು ಹೊಸ ವಾತಾವರಣ ಉದ್ಭವಿಸಿತು. ಮಹಾಯುದ್ಧದ ಪರಿಣಾಮದಿಂದ ಅನೇಕ ಐರೋಪ್ಯ ರಾಷ್ಟ್ರಗಳು ತಲ್ಲಣಗೊಂಡವು. ಆರ್ಥಿಕವಾಗಿ ಅನೇಕ ರಾಷ್ಟ್ರಗಳು ಅಗಾಧ ನಷ್ಟಕ್ಕೆ ಒಳಗಾದವು. ಇನ್ನು ಮುಂದೆಯಾದರೂ ಇಂಥ ಅನಾಹುತವನ್ನು ತಪ್ಪಿಸಬೇಕೆಂದು ಇವು ನಿರ್ಧರಿಸಿ ಇದಕ್ಕಾಗಿ ಒಕ್ಕೂಟಗಳನ್ನೂ ಸಂಘಗಳನ್ನೂ ರಚಿಸಿಕೊಳ್ಳಲಾರಂಭಿಸಿದವು. ರಾಜಕೀಯವಾಗಿ ಶಕ್ತರಾಗಬೇಕೆಂಬ ಆಸೆ ವ್ಯಕ್ತವಾಯಿತು. ಆದರೆ ಅನೇಕ ಆರ್ಥಿಕ ಅಡಚಣೆಗಳ ಪರಿಣಾಮವಾಗಿ ಯುರೋಪಿನ ರಾಜಕೀಯ ಐಕ್ಯ ಸಾಧಿಸಲಿಲ್ಲ. ಆರ್ಥಿಕ ವಿಷಯಗಳಲ್ಲಾದರೂ ಪರಸ್ಪರ ಸಹಕಾರ ಏರ್ಪಡಿಸಿಕೊಳ್ಳಬೇಕೆಂಬ ಆಶಯದಿಂದ ಪಶ್ಚಿಮ ಯುರೋಪಿನ ರಾಷ್ಟ್ರಗಳು ವಿವಿಧ ರೀತಿಯ ಆರ್ಥಿಕ ಒಕ್ಕೂಟಗಳನ್ನು ರಚಿಸಿಕೊಂಡವು. ಅಂಥವುಗಳ ಪೈಕಿ ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕಿನ ಸಮುದಾಯ ಒಂದು.

ಅನೇಕ ವರ್ಷಗಳಿಂದಲೂ ಫ್ರಾನ್ಸ್ ಮತ್ತು ಜರ್ಮನಿಗಳು ಉಕ್ಕು ಮತ್ತು ಕಲ್ಲಿದ್ದಲಿನ ಉತ್ಪಾದನೆ ಮತ್ತು ವ್ಯಾಪಾರದ ವಿಷಯದಲ್ಲಿ ಪೈಪೋಟಿ ನಡೆಸುತ್ತಿದ್ದುವು. ಉಕ್ಕು ಮತ್ತು ಕಲ್ಲಿದ್ದಲಿನ ಉತ್ಪಾದನೆಯ ಮೇಲೆ ತಮ್ಮ ಹತೋಟಿ ಹೆಚ್ಚಿಸಿಕೊಳ್ಳಲು ಯತ್ನಿಸಿದಾಗ ಈ ಎರಡು ರಾಷ್ಟ್ರಗಳ ಮಧ್ಯೆ ಕೆಲವು ಬಾರಿ ಘರ್ಷಣೆಗಳು ಉದ್ಭವಿಸಿದ್ದುವು. ಆದ್ದರಿಂದ ಇನ್ನು ಮುಂದೆ ಇಂಥ ಪೈಪೋಟಿಯ ಪರಿಸ್ಥಿತಿ ತಪ್ಪಿಸಿ ಮಧುರ ಬಾಂಧವ್ಯ ಏರ್ಪಡಿಸಲು ಫ್ರಾನ್ಸ್ ಎರಡನೆಯ ಮಹಾಯುದ್ಧವಾದ ಮೇಲೆ ಕಾರ್ಯಕ್ರಮ ಕೈಗೊಂಡಿತು. ಜರ್ಮನಿ ಮತ್ತು ಫ್ರಾನ್ಸ್‍ಗಳ ಮಧ್ಯೆ ಇದ್ದ ದ್ವೇಷವನ್ನು ಕಡಿಮೆ ಮಾಡಿ ಅವೆರಡು ರಾಷ್ಟ್ರಗಳ ಮಧ್ಯೆ ಸಹಕಾರ ಏರ್ಪಡಿಸಿದರೆ ಮಾತ್ರ ಪಶ್ಚಿಮ ಯುರೋಪಿಯನ್ ರಾಷ್ಟ್ರಗಳ ಸರ್ವತೋಮುಖ ಪ್ರಗತಿ ಸಾಧ್ಯವೆಂಬುದನ್ನು ಫ್ರಾನ್ಸಿನ ಪ್ರಮುಖ ಕೈಗಾರಿಕೋದ್ಯಮಿ ಮತ್ತು ಅರ್ಥಶಾಸ್ತ್ರಜ್ಞ ಜೀನ್ ಮಾನೆ ಗ್ರಹಿಸಿದ್ದ. ಜರ್ಮನಿ ಮತ್ತು ಫ್ರಾನ್ಸ್‍ಗಳ ಆರ್ಥಿಕ ತಳಹದಿ ಎನಿಸಿರುವ ಉಕ್ಕು ಮತ್ತು ಕಲ್ಲಿದ್ದಲಿನ ಉತ್ಪಾದನೆ ಮತ್ತು ವಿತರಣೆಯ ವಿಷಯದಲ್ಲಿ ಈ ಎರಡು ರಾಷ್ಟ್ರಗಳ ಮಧ್ಯೆ ಮೊದಲು ಸಹಕಾರ ಏರ್ಪಡಿಸಿದರೆ ಮುಂದೆ ಉಳಿದ ವಿಷಯಗಳಲ್ಲೂ ಈ ಎರಡು ರಾಷ್ಟ್ರಗಳ ಮಧ್ಯೆ ಸಹಕಾರ ತಾನಾಗಿಯೇ ಉದ್ಭವಿಸುತ್ತದೆ ಎಂಬುದು ಇವನ ಅಭಿಪ್ರಾಯ. ತನ್ನ ಅಭಿಪ್ರಾಯವನ್ನು ಕಾರ್ಯಗತಮಾಡಲು ಒಂದು ಯೋಜನೆಯನ್ನು ತಯಾರಿಸಿ ಫ್ರಾನ್ಸಿನ ವಿದೇಶಾಂಗ ಮಂತ್ರಿ ರಾಬರ್ಟ್ ಷೂಮನನ ಮುಂದೆ 1950ರಲ್ಲಿ ಇಟ್ಟರು. ಷೂಮನ್ ಈ ಯೋಜನೆಯನ್ನು ಮೆಚ್ಚಿ ಕಾರ್ಯಗತಗೊಳಿಸಲು ಮನಸ್ಸು ಮಾಡಿದ.

ಕೇವಲ ಜರ್ಮನಿ ಮತ್ತು ಫ್ರಾನ್ಸ್‍ಗಳ ನಡುವೆ ಒಡಂಬಡಿಕೆ ಏರ್ಪಡಿಸಿಕೊಳ್ಳುವುದರ ಬದಲು, ಪಶ್ಚಿಮ ಯುರೋಪಿನಲ್ಲಿರುವ ಇನ್ನೂ ಕೆಲವು ರಾಷ್ಟ್ರಗಳೊಡನೆಯೂ ಒಡಂಬಡಿಕೆ ಏರ್ಪಡಿಸಿಕೊಳ್ಳುವುದು ಒಳ್ಳೆಯದು ಎಂಬುದನ್ನು ಮನಗಂಡು ಷೂಮನ್ ಇತರ ರಾಷ್ಟ್ರಗಳೊಡನೆ ಮಾತುಕತೆ ಪ್ರಾರಂಭಿಸಿದ. ಅದರ ಪರಿಣಾಮವಾಗಿ ಒಟ್ಟು ಆರು ಪಶ್ಚಿಮ ಐರೋಪ್ಯ ರಾಷ್ಟ್ರಗಳು ಷೂಮನ್ ಸಲಹೆಗಳಿಗೆ ಬೆಂಬಲವಿತ್ತುವು. 1951ರ ಏಪ್ರಿಲ್ ತಿಂಗಳಲ್ಲಿ ಷೂಮನನ ಸಲಹೆಯ ಪ್ರಕಾರ ಐರೋಪ್ಯ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ ಸ್ಥಾಪಿಸಲು ಬೆಲ್ಜಿಯಂ, ಪಶ್ಚಿಮ ಜರ್ಮನಿ, ಫ್ರಾನ್ಸ್, ಇಟಲಿ, ಲಕ್ಸೆಂಬರ್ಗ್ ಮತ್ತು ನೆದರ್ಲೆಂಡ್ಸ್ ದೇಶಗಳು ಒಂದು ಒಪ್ಪಂದಕ್ಕೆ ಸಹಿಹಾಕಿದುವು. ಈ ಒಪ್ಪಂದದ ಪ್ರಕಾರ 1952ರ ಜುಲೈಯಲ್ಲಿ ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕಿನ ಸಮುದಾಯ ಅಸ್ತಿತ್ವಕ್ಕೆ ಬಂತು. ಮೇಲ್ಕಂಡ ಏರ್ಪಾಡು ರಾಬರ್ಟ್ ಷೂಮನನ ಯತ್ನದ ಫಲವಾಗಿ ಕಾರ್ಯಗತವಾದ್ದರಿಂದ ಇದನ್ನು ಷೂಮನ್ ಯೋಜನೆಯೆಂದು ಕರೆಯಲಾಗಿದೆ.

ಐರೋಪ್ಯ ಕಲ್ಲಿದ್ದಲು ಮತ್ತು ಉಕ್ಕಿನ ಸಮುದಾಯ ಸ್ಥಾಪಿತವಾದ ಮೇಲೆ ಇದಕ್ಕೆ ಸೇರಿದ ದೇಶಗಳಿಗೆಲ್ಲ ಅನ್ವಯಿಸುವಂತೆ ಒಂದು ಸಾಮಾನ್ಯ ಮಾರುಕಟ್ಟೆ ಪದ್ಧತಿಯನ್ನು 1953ರಲ್ಲಿ ಜಾರಿಗೆ ತರಲಾಯಿತು. ಇದರ ಮುಖ್ಯ ಲಕ್ಷಣಗಳು ಹೀಗಿವೆ: 1. ಈ ಮಾರುಕಟ್ಟೆಗೆ ಸೇರಿದ ಆರು ದೇಶಗಳಲ್ಲಿ ಎಲ್ಲಿಯಾದರೂ ಕಲ್ಲಿದ್ದಲು ಮತ್ತು ಉಕ್ಕು ಮಾರಬಹುದು. 2. ಯಾವ ದೇಶವೂ ಮತ್ತೊಂದು ದೇಶದಿಂದ ಬರುವ ಕಲ್ಲಿದ್ದಲು ಮತ್ತು ಉಕ್ಕಿನ ಮೇಲೆ ಆಮದು ಸುಂಕ ವಿಧಿಸುವಂತಿಲ್ಲ. 3. ಅದೇ ರೀತಿ ದೇಶಗಳು ರಫ್ತು ಸುಂಕ ಹಾಕುವಂತಿಲ್ಲ. 4. ತಮ್ಮ ದೇಶಕ್ಕೆ ಆಮದಾಗುವ ಅಥವಾ ತಮ್ಮಿಂದ ರಫ್ತಾಗುವ ಒಟ್ಟು ಉಕ್ಕು ಮತ್ತು ಕಲ್ಲಿದ್ದಲಿನ ಮೇಲೆ ಯಾವ ರೀತಿಯ ಪ್ರತಿಬಂಧಕವನ್ನೂ ವಿಧಿಸುವ ಹಾಗಿಲ್ಲ. 5 ಯಾವ ಪ್ರಮಾಣದಲ್ಲಿ ಬೇಕಾದರೂ ಪ್ರತಿಯೊಂದು ದೇಶವೂ ಉಕ್ಕು ಮತ್ತು ಕಲ್ಲಿದ್ದಲಿನ ಉತ್ಪಾದನೆ ಮತ್ತು ವಿತರಣೆ ಕೈಗೊಳ್ಳಬಹುದು.

ಹೀಗೆ ಸು. 17 ಕೋಟಿ ಪ್ರಜಾಸಂಖ್ಯೆ ಇರುವ ಪಶ್ಚಿಮ ಯುರೋಪಿನ ರಾಷ್ಟ್ರಗಳ ಮಧ್ಯೆ ನಿರ್ಬಂಧರಹಿತ ಮಾರುಕಟ್ಟೆ ಜಾರಿಗೆ ಬಂತು.

ಕಲ್ಲಿದ್ದಲು ಮತ್ತು ಉಕ್ಕು ಸಮುದಾಯದ ಆಡಳಿತವ್ಯವಸ್ಥೆಯನ್ನು ನೋಡಿಕೊಳ್ಳಲು ಒಬ್ಬರು ಅಧ್ಯಕ್ಷರು, ಇಬ್ಬರು ಉಪಾಧ್ಯಕ್ಷರು ಮತ್ತು ಏಳು ಜನ ಸದಸ್ಯರುಗಳುಳ್ಳ ಒಂದು ಉನ್ನತ ಮಂಡಲಿ ಇದೆ. ಈ ಉನ್ನತಮಂಡಲಿ, 142 ಪ್ರತಿನಿಧಿಗಳನ್ನುಳ್ಳ ಪ್ರತಿನಿಧಿಸಭೆಯ ಹತೋಟಿಗೆ ಒಳಪಟ್ಟಿರುತ್ತದೆ. ಆರು ದೇಶಗಳ ಪಾರ್ಲಿಮೆಂಟುಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಪ್ರತಿನಿಧಿಗಳನ್ನು ಚುನಾಯಿಸಿ ಪ್ರತಿನಿಧಿಸಭೆಗೆ ಕಳುಹಿಸುತ್ತವೆ. ಮೂರನೆಯ ಎರಡು ಬಹುಮತ ಪಡೆಯುವ ಆಧಾರದ ಮೇಲೆ ಪ್ರತಿನಿಧಿಸಭೆ ಯಾವ ಸಂದರ್ಭದಲ್ಲಿ ಬೇಕಾದರೂ ಉನ್ನತ ಮಂಡಲಿಯ ಸದಸ್ಯರನ್ನು ಅಧಿಕಾರದಿಂದ ಕಿತ್ತೊಗೆಯಬಹುದು. ಇದಲ್ಲದೆ ಪ್ರತಿಯೊಂದು ರಾಷ್ಟ್ರವೂ ತನ್ನ ಒಬ್ಬ ಪ್ರತಿನಿಧಿಯನ್ನು ಸಮಾಲೋಚನಾ ಮಂಡಲಿಗೆ ಕಳುಹಿಸುತ್ತದೆ. ಈ ಮಂಡಲಿ, ಪ್ರತಿ ದೇಶದ ಆರ್ಥಿಕ ನೀತಿಗಳ ವಿಷಯದಲ್ಲಿ ಉನ್ನತಮಂಡಲಿ ಯಾವ ರೀತಿ ವರ್ತಿಸಬೇಕು ಎಂಬುದರ ವಿಷಯದಲ್ಲಿ ಸಲಹೆ ನೀಡುತ್ತದೆ.

ಕಲ್ಲಿದ್ದಲು ಮತ್ತು ಉಕ್ಕು ಸಮುದಾಯದ ಆಡಳಿತದ ಖರ್ಚಿಗೆ ಹಣ ಒದಗಿಸಲು ಉನ್ನತ ಮಂಡಲಿ ಸಾಮಾನ್ಯ ಮಾರುಕಟ್ಟೆಯ ಪ್ರದೇಶದಲ್ಲಿ ಉತ್ಪಾದನೆಯಾಗುವ ಒಟ್ಟು ಕಲ್ಲಿದ್ದಲು ಮತ್ತು ಉಕ್ಕಿನ ಮೇಲೆ ಒಂದು ತೆರಿಗೆ ವಿಧಿಸುತ್ತದೆ. ಈ ಪ್ರದೇಶದಲ್ಲಿ ಉಕ್ಕು ಮತ್ತು ಕಲ್ಲಿದ್ದಲು ಉತ್ಪಾದನೆಯಲ್ಲಿ ತೊಡಗಿರುವ ಸಂಸ್ಥೆಗಳಿಗೆ ಬಂಡವಾಳ ಒದಗಿಸುವುದರಲ್ಲೂ ಉನ್ನತ ಮಂಡಲಿ ಸಹಾಯ ಮಾಡುತ್ತದೆ. ಆಗಿಂದಾಗ್ಗೆ ಉನ್ನತ ಮಂಡಲಿ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಡಿಬೆಂಚರುಗಳನ್ನು ಮಾರಿ ನಿಧಿ ಕೂಡಿಸುತ್ತದೆ. ಹೀಗೆ ಪಡೆದ ನಿಧಿಯಿಂದ ಕಲ್ಲಿದ್ದಲು ಮತ್ತು ಉಕ್ಕಿನ ಉತ್ಪಾದನೆಯಲ್ಲಿ ತೊಡಗಿರುವ ಸಂಸ್ಥೆಗಳಿಗೆ ಸಾಲ ಒದಗಿಸಿ ಅವುಗಳ ಅಭಿವೃದ್ಧಿ ಕಾರ್ಯಕ್ಕೆ ನೆರವು ನೀಡುತ್ತದೆ.

ಈ ರಾಷ್ಟ್ರಗಳು ಸಾಮಾನ್ಯ ಮಾರುಕಟ್ಟೆಯ ಪ್ರದೇಶದಲ್ಲಿ ಕಲ್ಲಿದ್ದಲು ಮತ್ತು ಉಕ್ಕಿನ ಉತ್ಪಾದನೆ ಮತ್ತು ವಿತರಣೆ ಯಾವ ನಿರ್ಬಂಧವೂ ಇಲ್ಲದೆ ನಡೆದುಕೊಂಡು ಹೋಗುವಂತೆ ಉನ್ನತ ಮಂಡಲಿ ನೋಡಿಕೊಳ್ಳುತ್ತದೆ. ಈ ಕರ್ತವ್ಯ ನಿರ್ವಹಣೆಯಲ್ಲಿ ಉನ್ನತಮಂಡಲಿ ಯಾವ ರಾಷ್ಟ್ರದ ಸರ್ಕಾರಕ್ಕೂ ಅಧೀನವಾಗಿಲ್ಲ. ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕಿನ ಸಮುದಾಯ ಸ್ಥಾಪಿತವಾದಾಗ ರೂಪಿಸಲಾದ ನಿಯಮಗಳ ಪ್ರಕಾರ ತನ್ನ ಕಾರ್ಯವನ್ನು ಉನ್ನತ ಮಂಡಲಿ ನಿರ್ವಹಿಸುತ್ತದೆ.

ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕಿನ ಸಮುದಾಯ ಸ್ಥಾಪಿತವಾದ ಮೇಲೆ ಐರೋಪ್ಯ ರಾಷ್ಟ್ರಗಳಲ್ಲಿ ಕಲ್ಲಿದ್ದಲು ಮತ್ತು ಉಕ್ಕಿನ ವ್ಯಾಪಾರ ಹೆಚ್ಚಿದುದಲ್ಲದೆ ಹೊರದೇಶಗಳೊಡನೆಯೂ ನಡೆಯುತ್ತಿದ್ದ ವ್ಯಾಪಾರ ಅಧಿಕಗೊಂಡಿತು. ಸಾಮಾನ್ಯ ಮಾರುಕಟ್ಟೆ ಪ್ರದೇಶದಲ್ಲಿ ಉಕ್ಕಿನ ಮತ್ತು ಕಲ್ಲಿದ್ದಲಿನ ಉತ್ಪಾದನೆ ಗಮನಾರ್ಹವಾಗಿ ಬೆಳೆದಿದೆ. ಇದರಿಂದ ಈ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯ ಮೇಲೆ ಒಳ್ಳೆಯ ಪರಿಣಾಮವಾಗಿದೆ. ಈ ರಾಷ್ಟ್ರಗಳು ತಮ್ಮಲ್ಲಿರುವ ಸಂಪನ್ಮೂಲಗಳನ್ನು ವಿವಿಧ ಯೋಜನೆಗಳ ಮೂಲಕ ಉಪಯೋಗಿಸಿಕೊಂಡು ಅದ್ಭುತ ಪ್ರಗತಿ ಸಾಧಿಸಲು ಸಹಾಯವಾಯಿತು. ಜೊತೆಗೆ ಉಳಿದ ಆರ್ಥಿಕ ಕ್ಷೇತ್ರಗಳಲ್ಲೂ ಪರಸ್ಪರ ಸಹಕಾರದ ಮೂಲಕ ಪ್ರಗತಿ ಸಾಧಿಸಬೇಕೆಂಬ ಮನೋಭಾವ ಈ ರಾಷ್ಟ್ರಗಳಲ್ಲಿ ಮೂಡಿತು.

ತಮ್ಮ ಗುರಿಯನ್ನು ಮತ್ತಷ್ಟು ಶೀಘ್ರವಾಗಿ ಮುಟ್ಟಲು 1957ರಲ್ಲಿ ರೋಮಿನಲ್ಲಿ ಮತ್ತೊಂದು ಒಪ್ಪಂದಕ್ಕೆ ಆರು ರಾಷ್ಟ್ರಗಳು ಸಹಿ ಹಾಕಿದುವು. ಅದರ ಪ್ರಕಾರ ಐರೋಪ್ಯ ಆರ್ಥಿಕ ಸಮುದಾಯ (**ನೋಡಿ– ಐರೋಪ್ಯ–ಆರ್ಥಿಕ–ಸಮುದಾಯ**) ಸ್ಥಾಪಿತವಾಯಿತು. ಇದೇ ರೀತಿ ಐರೋಪ್ಯ ಪರಮಾಣುಶಕ್ತಿ ಸಮುದಾಯವೂ (**ನೋಡಿ– ಐರೋಪ್ಯ–ಪರಮಾಣು–ಶಕ್ತಿ–ಸಮುದಾಯ**) ಆರು ರಾಷ್ಟ್ರಗಳ ಸಹಕಾರದ ಫಲವಾಗಿ ಅಸ್ತಿತ್ವಕ್ಕೆ ಬಂತು.

ಹೀಗೆ ಪಶ್ಚಿಮ ಯುರೋಪಿನಲ್ಲಿ ಆರ್ಥಿಕ ಸಹಕಾರದ ಮಹತ್ತ್ವವನ್ನು ಅರಿತುಕೊಂಡು, ರಾಷ್ಟ್ರಗಳು ಒಗ್ಗಟ್ಟಿನಿಂದ ವರ್ತಿಸುವಂತೆ ಮಾಡಲು ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕಿನ ಸಮುದಾಯ ಅಡಿಪಾಯ ಒದಗಿಸಿತೆಂದು ಹೇಳಬಹುದು. (ಎಂ.ಎ.ಎಂ.)

**ಐರೋಪ್ಯ ಪರಮಾಣು ಶಕ್ತಿ ಸಮುದಾಯ:** ಐರೋಪ್ಯ ಆರ್ಥಿಕ ಸಂಘಟನೆ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆಗಳಲ್ಲಿ ಒಂದು. ಎರಡನೆಯ ಮಹಾಯುದ್ಧದ ಅನಂತರದ ಕಾಲದಲ್ಲಿ ಆರ್ಥಿಕ ಸಹಕಾರ ಮತ್ತು ಸಂಘಟನೆಯ ಮೂಲಕ ಉತ್ಪಾದನೆಯನ್ನೂ, ಅಂತಾರಾಷ್ಟ್ರೀಯ ವ್ಯಾಪಾರವನ್ನೂ ಹೆಚ್ಚಿಸಿ ತನ್ಮೂಲಕ ಜನರ ಜೀವನಮಟ್ಟವನ್ನು ಉತ್ತಮಗೊಳಿಸುವುದು ಸಾಧ್ಯವೆಂಬ ಅಭಿಪ್ರಾಯಕ್ಕೆ ವಿಶೇಷ ಮನ್ನಣೆ ದೊರಕಿತು. ಬೆಲ್ಜಿಯಂ, ನೆದರ್‌ಲೆಂಡ್ಸ್ ಮತ್ತು ಲಕ್ಸೆಂಬರ್ಗ್ ಸೇರಿ ಸ್ಥಾಪಿಸಿದ ಬೆನೆಲಕ್ಸ್ (1949), ಮತ್ತು ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆಲ್ಜಿಯಂ, ಲಕ್ಸೆಂಬರ್ಗ್ ಮತ್ತು ನೆದರ್‌ಲೆಂಡ್ಸ್ ಕೂಡಿ ರಚಿಸಿದ ಐರೋಪ್ಯ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ (1952) ಇವು ಐರೋಪ್ಯ ಆರ್ಥಿಕ ಸಂಘಟನೆಯ ಪ್ರಾರಂಭದ ಯತ್ನಗಳಲ್ಲಿ ಮುಖ್ಯವಾದುವು. ಇವುಗಳ ಕಾರ್ಯ ಚಟುವಟಿಕೆಗಳಿಂದ ಲಭ್ಯವಾದ ಅನುಭವವನ್ನಾಧರಿಸಿ ಉನ್ನತಮಟ್ಟದ ಆರ್ಥಿಕ ಸಂಘಟನೆಗಾಗಿ ಪ್ರಯತ್ನ ಪ್ರಾರಂಭವಾಯಿತು. 1955ರಲ್ಲಿ ಸೇರಿದ್ದ ಆರು ಐರೋಪ್ಯ ರಾಷ್ಟ್ರಗಳ ವಿದೇಶೀ ವ್ಯವಹಾರಗಳ ಮಂತ್ರಿಗಳ ಸಭೆಯಲ್ಲಿ, ಐರೋಪ್ಯ ಆರ್ಥಿಕ ಸಂಘಟನೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳುವ ಘಟ್ಟವನ್ನು ತಲಪಿರುವುದಾಗಿ ಭಾವಿಸಿ, ಒಂದು ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಸ್ಥಾಪಿಸುವ ಮತ್ತು ತಾವೆಲ್ಲರೂ ಸೇರಿ ಪರಮಾಣುಶಕ್ತಿಯ ಅಭಿವೃದ್ಧಿಗೆ ಪ್ರಯತ್ನ ಮಾಡುವ ಆಶಯವನ್ನು ವ್ಯಕ್ತಪಡಿಸಲಾಯಿತು. ಈ ಎರಡು ಉದ್ದೇಶಗಳ ಪೈಕಿ ಪರಮಾಣುಶಕ್ತಿ ಅಭಿವೃದ್ಧಿಗೆ ಆರು ರಾಷ್ಟ್ರಗಳೂ ಒಟ್ಟುಗೂಡಿ ಪ್ರಯತ್ನಿಸಬಹುದೆಂಬುದು ಹೆಚ್ಚು ಆಕರ್ಷಕವಾಗಿ ತೋರಿತು. ಆದರೂ ಈ ಎರಡೂ ಉದ್ದೇಶಗಳನ್ನೂ ನೆರವೇರಿಸುವುದಕ್ಕೆ ಒಪ್ಪಂದ ಮಾಡಿಕೊಳ್ಳಬೇಕೆಂದು ಉದ್ದೇಶಿಸಿ, ಈ ಬಗ್ಗೆ ವರದಿಯೊಂದನ್ನು ಸಿದ್ಧಪಡಿಸಲು ಬೆಲ್ಜಿಯಂನ ವಿದೇಶಾಂಗ ವ್ಯವಹಾರಗಳ ಮಂತ್ರಿಯಾಗಿದ್ದ ಪಾಲ್ ಹೆನ್ರಿ ಸ್ಪಾಕ್ ನೇತೃತ್ವದಲ್ಲಿ ತಜ್ಞರ ತಂಡವೊಂದನ್ನು ನೇಮಿಸಲಾಯಿತು. ಈ ತಂಡ ಸಿದ್ಧಪಡಿಸಿದ ವರದಿ ಆರು ಐರೋಪ್ಯ ರಾಷ್ಟ್ರಗಳ ಆರ್ಥಿಕ ಸಂಘಟನೆಯ ಒಪ್ಪಂದಕ್ಕೆ ಆಧಾರವಾಯಿತು. 1957ರ ಮಾರ್ಚ್ 25ರಂದು ರೋಮ್ ನಗರದಲ್ಲಿ ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆಲ್ಜಿಯಂ, ಲಕ್ಸೆಂಬರ್ಗ್ ಮತ್ತು ನೆದರ್‌ಲೆಂಡ್ ಇವು ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಸ್ಥಾಪಿಸುವ ಒಂದು ಒಪ್ಪಂದಕ್ಕೆ ಮತ್ತು

ಐರೋಪ್ಯ ಪರಮಾಣುಶಕ್ತಿ ಸಮುದಾಯವನ್ನು ಸ್ಥಾಪಿಸುವ ಮತ್ತೊಂದು ಒಪ್ಪಂದಕ್ಕೆ ಸಹಿ ಹಾಕಿದವು. 1958ರ ಜನವರಿ ಒಂದರಿಂದ ಈ ಒಪ್ಪಂದಗಳು ಜಾರಿಗೆ ಬಂದವು.

ಐರೋಪ್ಯ ಪರಮಾಣು ಸಮುದಾಯದ ಒಪ್ಪಂದದ ಮೊದಲನೆಯ ವಿಧಿಯಲ್ಲಿ ಹೇಳಿರುವಂತೆ, ತ್ವರಿತವಾಗಿ ಪರಮಾಣು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಅಗತ್ಯವಾದ ಪರಿಸ್ಥಿತಿಯನ್ನುಂಟು ಮಾಡುವುದೇ ಈ ಸಮುದಾಯದ ಮುಖ್ಯ ಗುರಿ. ಜನರ ಜೀವನ ಮಟ್ಟವನ್ನು ಉತ್ತಮಗೊಳಿಸುವುದು, ಈ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದರ ಅಂತಿಮ ಉದ್ದೇಶ. ಶಾಂತಿಯುತ ಬಳಕೆಗಾಗಿ ಪರಮಾಣು ಶಕ್ತಿಯ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳು ಮಾತ್ರ ಸಮುದಾಯದ ವ್ಯಾಪ್ತಿಗೆ ಒಳಪಡುತ್ತವೆ. ರಕ್ಷಣಾವ್ಯವಸ್ಥೆಗಾಗಿ ಉಪಯೋಗ ವಾಗುವ ಪರಮಾಣುಶಕ್ತಿಯ ವಿಷಯದಲ್ಲಿ ಸದಸ್ಯರಾಷ್ಟ್ರಗಳು ಸ್ವತಂತ್ರವಾಗಿ ನಡೆದುಕೊಳ್ಳಬಹುದು. ಆದರೆ ಸಮುದಾಯದ ನಿಯಂತ್ರಣಕ್ಕೆ ಒಳಪಡುವ ಪರಮಾಣು ವಸ್ತುಗಳನ್ನು ಸದಸ್ಯರಾಷ್ಟ್ರಗಳು ರಕ್ಷಣಾವ್ಯವಸ್ಥೆಗೆ ಬಳಸದಂತೆ ಪ್ರತಿಬಂಧಿಸುವ ವ್ಯವಸ್ಥೆ ಮಾಡಲಾಗಿದೆ.

ಸಮುದಾಯದ ಉದ್ದೇಶಗಳ ಸಾಧನೆಗಾಗಿ ಅಷ್ಟಾಂಶಗಳ ಕಾರ್ಯಕ್ರಮವೊಂದನ್ನು ಒಪ್ಪಂದದಲ್ಲಿ ಕೊಡಲಾಗಿದೆ. ಒಪ್ಪಂದದ ಎರಡನೆಯ ವಿಧಿಯಲ್ಲಿ ನಮೂದಿತವಾಗಿರುವ ಅಂಶಗಳು ಈ ರೀತಿ ಇವೆ :

1. ಸಂಶೋಧನೆಯನ್ನು ಅಭಿವೃದ್ಧಿಪಡಿಸಿ ಪರಮಾಣು ಸಂಶೋಧನ ಕೇಂದ್ರದಲ್ಲಿ ಸಂಶೋಧನ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ಸದಸ್ಯರಾಷ್ಟ್ರಗಳು ಪ್ರತ್ಯೇಕವಾಗಿ ಕೈಗೊಳ್ಳುವ ಸಂಶೋಧನ ಕಾರ್ಯಗಳಿಗೆ ಹಣ ಮತ್ತು ಉಪಕರಣಗಳ ರೂಪದಲ್ಲಿ ನೆರವು ನೀಡುವುದು ಮತ್ತು ಸದಸ್ಯರಾಷ್ಟ್ರಗಳಲ್ಲಿ ನಡೆಯುವ ಸಂಶೋಧನೆಯಲ್ಲಿ ಸಂಘಟನೆ ಉಂಟುಮಾಡುವುದು ಸಮುದಾಯದ ಕರ್ತವ್ಯ.

2. ಸಮುದಾಯ ಪರಮಾಣು ಕೇಂದ್ರಗಳಲ್ಲಿ ಕೆಲಸ ಮಾಡುವವರಿಗೆ ಮತ್ತು ನಾಗರಿಕರಿಗೆ ಪರಮಾಣು ವಿಕಿರಣಗಳಿಂದ ಆರೋಗ್ಯ ಕೆಡದಂತೆ ರಕ್ಷಿಸಲು ಕೈಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಿ ಪ್ರತಿ ಸದಸ್ಯರಾಷ್ಟ್ರವೂ ಅವುಗಳನ್ನು ಅನುಸರಿಸುವಂತೆ ಮಾಡಬೇಕು.

3. ಸಮುದಾಯದಲ್ಲಿ ಪರಮಾಣುಶಕ್ತಿಯ ಅಭಿವೃದ್ಧಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವಂತೆ ಖಾಸಗಿ ವಲಯಕ್ಕೆ ಪ್ರೋತ್ಸಾಹ ನೀಡಿ ಈ ಉದ್ದೇಶಕ್ಕಾಗಿ ಹೆಚ್ಚು ಬಂಡವಾಳ ಹೂಡುವಂತೆ ಮಾಡಬೇಕು.

4. ಎಲ್ಲ ಸದಸ್ಯರಾಷ್ಟ್ರಗಳಿಗೂ ಪರಮಾಣು ಇಂಧನ ಯಾವಾಗಲೂ ದೊರಕುವಂತೆ ಏರ್ಪಡಿಸಬೇಕು.

5. ಸೂಕ್ತನಿಯಂತ್ರಣದ ಮೂಲಕ ಪರಮಾಣು ವಸ್ತುಗಳು ಉದ್ದೇಶಿತ ಬಳಕೆಗಲ್ಲದೆ ಬೇರೆ ರೀತಿಯಲ್ಲಿ ಬಳಕೆಯಾಗದಂತೆ ತಡೆಯಬೇಕು.

6. ವಿಶೇಷ ವಿದಳನವಸ್ತುಗಳನ್ನು ಸಮುದಾಯದ ಆಸ್ತಿ ಎಂದು ಪರಿಗಣಿಸಿ, ಇವುಗಳ ಬಳಕೆಯ ವಿಷಯದಲ್ಲಿ ಸಮುದಾಯದ ಆಸ್ತಿಯ ಹಕ್ಕು ಚಲಾಯಿಸಬೇಕು. ಇದರಿಂದ ಪರಮಾಣುವಸ್ತುಗಳ ಬಳಕೆಯ ಮೇಲೆ ಕ್ರಮವಾದ ಹತೋಟಿ ಇಡಲು ಸಾಧ್ಯವಾಗುತ್ತದೆ.

7. ಸಮುದಾಯ ಪರಮಾಣುವಸ್ತುಗಳಿಗೆ ವಿಶಾಲವಾದ ಮಾರುಕಟ್ಟೆ ಒದಗಿಸಬೇಕು ಮತ್ತು ಎಲ್ಲ ಸದಸ್ಯ ರಾಷ್ಟ್ರಗಳೂ ಅತ್ಯುತ್ತಮ ತಾಂತ್ರಿಕ ತಿಳಿವಳಿಕೆ ಪಡೆಯಲು ಅವಕಾಶ ಒದಗಿಸಬೇಕು. ಪರಮಾಣು ವಸ್ತುಗಳಿಗೆ ಮತ್ತು ವಿಶೇಷ ಉಪಕರಣಗಳಿಗೆ ಸಾಮಾನ್ಯ ಮಾರುಕಟ್ಟೆಯನ್ನು ಸ್ಥಾಪಿಸುವುದು, ಪರಮಾಣು ಕೈಗಾರಿಕೆಗಳಲ್ಲಿ ಹೂಡುವ ಬಂಡವಾಳದ ಚಲನೆಗೆ ಅಡ್ಡಿ ಇಲ್ಲದಂತೆ ಮಾಡುವುದು, ತಾಂತ್ರಿಕಜ್ಞಾನ ಪಡೆದಿರುವವರು ಉದ್ಯೋಗಕ್ಕಾಗಿ ಸಮುದಾಯದ ಯಾವುದೇ ರಾಷ್ಟ್ರಕ್ಕಾಗಲಿ ನಿರ್ಬಂಧವಿಲ್ಲದೆ ಹೋಗುವುದಕ್ಕೆ ಅವಕಾಶಮಾಡುವುದು ಮುಂತಾದ ಕ್ರಮಗಳ ಮೂಲಕ ಈ ಉದ್ದೇಶಗಳನ್ನು ಸಫಲಗೊಳಿಸಬಹುದು.

8. ಪರಮಾಣುಶಕ್ತಿಯ ಶಾಂತಿಯುತ ಬಳಕೆಯನ್ನು ಹೆಚ್ಚಿಸುವುದಕ್ಕೆ ಸಹಾಯಕವಾಗುವಂತೆ ಇತರ ರಾಷ್ಟ್ರಗಳೊಡನೆ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಡನೆ ಸಮುದಾಯ ಸಂಪರ್ಕ ಹೊಂದಿರಬೇಕು.

ಪರಮಾಣುಶಕ್ತಿ ಸಂಶೋಧನೆಗಾಗಿ ಮತ್ತು ಮಾನವಕಲ್ಯಾಣಕ್ಕೆ ಪರಮಾಣು ಶಕ್ತಿಯನ್ನು ಹೆಚ್ಚಾಗಿ ಬಳಕೆಗೆ ತರುವುದಕ್ಕಾಗಿ ಕೈಗೊಳ್ಳುವ ಕಾರ್ಯಗಳಿಗೆ ತಗಲುವ ವೆಚ್ಚ ಅಪಾರವಾದದ್ದು. ಅಷ್ಟೇ ಅಲ್ಲದೆ ಈ ಕಾರ್ಯಕ್ರಮಗಳಿಗೆ ಅನೇಕ ತಜ್ಞರ ಸಹಕಾರವೂ ಅಗತ್ಯ. ಇಂಥ ಒಂದು ಕ್ಷೇತ್ರ, ಸಾಮೂಹಿಕವಾಗಿ ಸಂಶೋಧನೆ ನಡೆಸುವುದಕ್ಕೆ ಅತ್ಯಂತ ಯೋಗ್ಯವಾದು ದಾಗಿದೆ. ಕೆಲವು ರಾಷ್ಟ್ರಗಳು ಒಟ್ಟುಗೂಡಿ ಸಂಶೋಧನ ಕಾರ್ಯಗಳನ್ನು ಕೈಗೊಂಡಾಗ ಅವುಗಳಿಗೆ ತಗಲುವ ವೆಚ್ಚವನ್ನು ನಿರ್ವಹಿಸುವುದು ಸುಲಭವಾಗುತ್ತದೆ ಮತ್ತು ತಾಂತ್ರಿಕ ಜ್ಞಾನವನ್ನು ಪರಸ್ಪರ ವಿನಿಮಯಮಾಡಿಕೊಳ್ಳುವುದರ ಮೂಲಕ ಸಂಶೋಧನೆಯಲ್ಲಿ ಕ್ಷಿಪ್ರ ಪ್ರಗತಿ ಸಾಧಿಸಿ ಮಾನವಕಲ್ಯಾಣವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಐರೋಪ್ಯ ಪರಮಾಣು ಸಮುದಾಯದ ಸ್ಥಾಪನೆಯಾಗಿದೆ. (ಬಿ.ಎಸ್.ಎಸ್.ಎ.)

**ಐರೋಪ್ಯ ವ್ಯೂಹ:** ಇಂಗ್ಲೆಂಡು ಐರೋಪ್ಯ ರೇವುಪಟ್ಟಣಗಳೊಂದಿಗೆ ವ್ಯಾಪಾರ ನಡೆಸದಂತೆ ಫ್ರಾನ್ಸಿನ ಒಂದನೆಯ ನೆಪೋಲಿಯನ್ ಚಕ್ರವರ್ತಿ ವ್ಯವಸ್ಥೆಗೊಳಿಸಿದ್ದ ದಿಗ್ಬಂಧನ (ಕಾಂಟಿನೆಂಟಲ್ ಸಿಸ್ಟಮ್). 1793ರ ಯುದ್ಧದ ಆದಿಯಲ್ಲಿ ಫ್ರಾನ್ಸಿನ ಸಾರ್ವಜನಿಕ ಸುರಕ್ಷತಾ ಸಮಿತಿ ಮೊಟ್ಟಮೊದಲಿಗೆ ಇದನ್ನು ಪರಿಶೀಲಿಸಿತ್ತಾದರೂ ಆಗ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿರಲಿಲ್ಲ. 1803ರಲ್ಲಿ ಯುದ್ಧ ಮತ್ತೆ ಆರಂಭವಾದಾಗ ಇದನ್ನು ವಿಧಿಸಲಾಯಿತು. 1804 ನೆಪೋಲಿಯನ್ ಬ್ರಿಟಿಷ್ ವಸ್ತುಗಳ ಆಮದನ್ನು ನಿಷೇಧಿಸಿದ್ದಲ್ಲದೆ ಬ್ರಿಟಿಷ್ ಹಡಗುಗಳಿಗೆ ಫ್ರೆಂಚ್ ಮತ್ತು ಹ್ಯಾನೋವರ್ ಬಂದರುಗಳನ್ನು ಮುಚ್ಚಿದ. ಇದು ಬರ್ಲಿನ್ನಿನಿಂದ ಹೊರಡಿಸಲಾದ ಆಜ್ಞೆ. ಆದರೆ ಇಂಗ್ಲಿಷರು ಬಗ್ಗಲಿಲ್ಲ. ಅವರು ಫ್ರೆಂಚ್ ಬಂದರುಗಳನ್ನೆಲ್ಲ ಬಹಿಷ್ಕರಿಸಿದರು. ಅವುಗಳೊಂದಿಗೆ ವ್ಯಾಪಾರ ನಿಲ್ಲಿಸಿದರು. ಪ್ರತಿಯಾಗಿ ನೆಪೋಲಿಯನ್ ಇನ್ನೊಂದು ಹೆಜ್ಜೆ ಮುಂದೆ ಹೋದ. ಬ್ರಿಟಿಷ್ ದ್ವೀಪಗಳ ಸುತ್ತ ದಿಗ್ಬಂಧನ ವಿಧಿಸಿದ. ಬ್ರಿಟನ್ನಿನೊಂದಿಗಾಗಲಿ ಅದರ ಅಧೀನ ಪ್ರದೇಶಗಳೊಂದಿಗಾಗಲಿ ಯಾರೂ ವ್ಯಾಪಾರ ನಡೆಸದಂತೆ ಆ ಮಾರ್ಗವಾಗಿ ಹೋಗುವ ಹಡಗುಗಳನ್ನೆಲ್ಲ ವಶಪಡಿಸಿಕೊಳ್ಳಲು ಕಟ್ಟಾಜ್ಞೆ ಬಂತು. ಇದು ಮಿಲಾನ್ ಶಾಸನವೆಂದು ಹೆಸರಾಗಿದೆ. ಬ್ರಿಟನ್ನಿನ ಹೊಟ್ಟೆ ಬಿಗಿದು, ಉದ್ಯೋಗ ಬಿದ್ದು, ಸಾಮಾಜಿಕ ಅವ್ಯವಸ್ಥೆಯೇರ್ಪಟ್ಟು, ಅದು ಶಾಂತಿಗಾಗಿ ಮಂಡಿಯೂರಿ ಮುಂದೆ ಬರುವುದೆಂಬುದಾಗಿ ನೆಪೋಲಿಯನ್ ಭಾವಿಸಿದ್ದ.

ಈ ಭಾವನೆಗೆ ಅನುವಾಗಿ ನೆಪೋಲಿಯನ್ ಆಗ ಇಡೀ ಯುರೋಪಿನಲ್ಲೇ ಪ್ರಬಲ ವ್ಯಕ್ತಿಯಾಗಿದ್ದ ಶಕ್ತಿಯಾಗಿದ್ದ. ಅವನ ಕೀರ್ತಿ ಅತ್ಯಂತ ಉನ್ನತ ಮಟ್ಟದಲ್ಲಿತ್ತು. ಆಗ ಆತ ಫ್ರಾನ್ಸಿನ ಚಕ್ರವರ್ತಿ ಮಾತ್ರವೇ ಅಲ್ಲ, ಇಟಲಿಯ ರಾಜ. ಸ್ವಿಟ್ಜರ್‌ಲೆಂಡಿನಲ್ಲಿ ಅವನ ಮಾತು ಆಗ ವೇದವಾಕ್ಯ. ಮೂವರು ತಮ್ಮಂದಿರು ಅವನ ಅಧೀನರಾಜರಾಗಿದ್ದರು. ಒಬ್ಬ ಲೂಯಿ; ಹಾಲೆಂಡಿನ ರಾಜ. ಇನ್ನೊಬ್ಬ ಜೆರೋಮ್; ವೆಸ್ಟ್‌ಫೇಲಿಯದ ದೊರೆ. ನೇಪಲ್ಸ್ ದೇಶದ ರಾಜ ಸೋಸೆಫ್ ಮತ್ತೊಬ್ಬ. ಆಸ್ಟ್ರಿಯ ಪ್ರಷ್ಯಗಳು ನೆಪೋಲಿಯನನಿಗೆ ಸೋತು ಶರಣಾಗತವಾಗಿದ್ದುವು. ರಷ್ಯ ಮಿತ್ರರಾಷ್ಟ್ರವಾಗಿ ಪರಿವರ್ತನೆಗೊಂಡಿತ್ತು. ಯುರೋಪಿನ ಮುಖ್ಯ ರಾಷ್ಟ್ರವಾಗಿದ್ದ ಇಂಗ್ಲೆಂಡ್ ಇಷ್ಟಾದರೂ ಇನ್ನೂ ನೆಪೋಲಿಯನನ ಶತ್ರುವೇ ಆಗಿತ್ತು. ಬ್ರಿಟನ್ ಶರಣಾಗತವಾದರೆ ತನಗೆ ಬೇರೆ ಯಾರೂ ಅಡ್ಡಿಯಿಲ್ಲವೆಂಬುದು ಆಗ ನೆಪೋಲಿಯನ್ ತಳೆದಿದ್ದ ಭಾವನೆ.

ಆದರೆ ನೆಪೋಲಿಯನನ ಬಳಿ ಸುವ್ಯವಸ್ಥಿತ ನೌಕಾಬಲವಿರಲಿಲ್ಲ. ಟ್ರಫಾಲ್‌ಗರ್‌ನಲ್ಲಿ ನಡೆದ ಜಲಯುದ್ಧ ಇದನ್ನು ಸ್ಪಷ್ಟಪಡಿಸಿತ್ತು. ಆದ್ದರಿಂದ ಇಂಗ್ಲೆಂಡ್ ದೇಶವನ್ನು ನೇರವಲ್ಲದ ಮಾರ್ಗದಿಂದ ತನ್ನ ಹತೋಟಿಗೆ ತಂದುಕೊಳ್ಳುವ ಪ್ರಯತ್ನ ನಡೆಸಿದ. ಇಂಗ್ಲೆಂಡಿನ ಶಕ್ತಿಗೆ ಆ ದೇಶ ನಡೆಸುತ್ತಿದ್ದ ವ್ಯಾಪಾರವೇ ಆಧಾರ. ಇಂಗ್ಲೆಂಡಿನ ವಾಣಿಜ್ಯ ಸಂಪರ್ಕವನ್ನು ಕುಂಠಿತಗೊಳಿಸುವುದರಿಂದ ಜಯಗಳಿಸಬಹುದೆಂದು ಅವನಿಗೆ ಅನಿಸಿದ್ದು ಸಹಜವೇ. ರಷ್ಯ ಕೂಡ ಟಿಲ್‌ಸಿಟ್ ಶಾಂತಿ ಒಪ್ಪಂದದ ಪ್ರಕಾರ ಇಂಥ ಶಾಸನಗಳ ಜಾರಿಗೆ ತನ್ನ ಅಂಗೀಕಾರ ಮುದ್ರೆ ಒತ್ತಿತ್ತು.

ಆದರೆ ನೆಪೋಲಿಯನನ ಈ ಯೋಜನೆ ಫಲಕಾರಿಯಾಗಲಿಲ್ಲ. ಏಕೆಂದರೆ ಇಂಗ್ಲೆಂಡು ಹೊಂದಿದ್ದ ವಾಣಿಜ್ಯ ಹಡಗುವ್ಯವಸ್ಥೆ ಅಗಾಧ. ಅದೂ ಅಲ್ಲದೆ ವಸಾಹತುಗಳನ್ನು ಹೊಂದಿದ್ದ ದೇಶಗಳು ತಮ್ಮ ವಸಾಹತುಗಳೊಡನೆ ನಡೆಸುತ್ತಿದ್ದ ಎಲ್ಲ ಆಮದು-ರಫ್ತುಗಳಿಗೂ ಇಂಗ್ಲೆಂಡಿನ ಹಡಗು ವ್ಯವಸ್ಥೆಯನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿತ್ತು. ಆದ್ದರಿಂದ ನೆಪೋಲಿಯನನ ದಿಗ್ಬಂಧನದಿಂದಾಗಿ ಐರೋಪ್ಯ ರಾಷ್ಟ್ರಗಳ ವ್ಯಾಪಾರ ಕುಸಿಯುವಂತಾಯಿತು. ಇದರ ಪರಿಣಾಮವಾಗಿ ದಿನಬಳಕೆಯ ಅಗತ್ಯ ವಸ್ತುಗಳ ಬೆಲೆಗಳು ಏರಿದವು. ಹೆಚ್ಚಿನ ಕಷ್ಟನಷ್ಟ ಆದದ್ದು ಐರೋಪ್ಯರಿಗೇ ಹೊರತು ಬ್ರಿಟಿಷರಿಗಲ್ಲ. ಫ್ರಾನ್ಸಿನ ಮಿತ್ರರಾಷ್ಟ್ರಗಳಿಗೆ ನಿರಾಶೆಯಾಯಿತು. ಅವು ನೆಪೋಲಿಯನನ ಆಡಳಿತವನ್ನು ದ್ವೇಷಿಸತೊಡಗಿದ್ದರಿಂದ ಅವನಿಗಿದ್ದ ಬೆಂಬಲ ಕಡಿಮೆಯಾಯಿತು. ಈ ನಿರ್ಬಂಧಗಳನ್ನು ಕಠಿಣವಾಗಿ ಜಾರಿಗೆ ತರುವ ಭರದಲ್ಲಿ ನೆಪೋಲಿಯನ್ ಅನೇಕ ರಾಷ್ಟ್ರಗಳ ಮೇಲೆ ದಂಡೆತ್ತಿಹೋಗಬೇಕಾಯಿತು. ಇದರಿಂದ ಅವನ ಬಲ ಕುಂದಿತು. ಪೋರ್ಚುಗಲ್ಲಿನ ಮುತ್ತಿಗೆ, ನೆಪೋಲಿಯನನಿಂದ ಸ್ಪೇನಿನ ಸಿಂಹಾಸನದ ಆಕ್ರಮಣ, ಪೋಪನೊಡನೆ ಅವನ ಜಗಳ, ರಷ್ಯದ ಜಾರ್ ಚಕ್ರವರ್ತಿಯೊಡನೆ ವಿರಸ-ಇವೆಲ್ಲವೂ ಐರೋಪ್ಯವ್ಯೂಹವನ್ನು ಜಾರಿಗೆ ತರಲೇಬೇಕೆಂಬ ಹಠದ ಪರಿಣಾಮಗಳು. ರಷ್ಯದ ಚಕ್ರವರ್ತಿ ಇದನ್ನು ವಿರೋಧಿಸಿದಾಗ, ಆ ದೇಶದ ಮೇಲೆ 1812ರಲ್ಲಿ ನೆಪೋಲಿಯನ್ ದಂಡೆತ್ತಿಹೋದ. ಈ ವಿನಾಶಕಾರಿ ದಂಡಯಾತ್ರೆಯೇ ನೆಪೋಲಿಯನನ ಅವನತಿಗೆ ಅಡಿಗಲ್ಲು ಹಾಕಿತು. (ಎಸ್.ಕೆ.ಎಸ್.)

**ಐರೋಪ್ಯ ಸಮುದಾಯಗಳು:** ಬೆಲ್ಜಿಯಂ, ಫ್ರಾನ್ಸ್, ಜರ್ಮನ್ ಗಣರಾಜ್ಯ, ಇಟಲಿ, ಲಕ್ಸೆಂಬರ್ಗ್ ಮತ್ತು ನೆದರ್ಲೆಂಡ್ಸ್ ರಾಷ್ಟ್ರಗಳು ಸೇರಿ ರಚಿಸಿಕೊಂಡಿರುವ ಮೂರು ಸಮುದಾಯಗಳು (ಯುರೋಪಿಯನ್ ಕಮ್ಯೂನಿಟೀಸ್) ಐರೋಪ್ಯ ಆರ್ಥಿಕ ಸಮುದಾಯ. ಐರೋಪ್ಯ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ ಮತ್ತು ಐರೋಪ್ಯ ಪರಮಾಣು ಶಕ್ತಿ ಸಮುದಾಯ (ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ).

ಈ ಮೂರು ಸಂಸ್ಥೆಗಳೂ ಕಾನೂನಿನ ದೃಷ್ಟಿಯಿಂದ ಪ್ರತ್ಯೇಕವಾದರೂ ಇವಕ್ಕೆಲ್ಲ ಸಮಾನವಾದ ಕೆಲವು ವ್ಯವಸ್ಥೆಗಳಿವೆ. ಐರೋಪ್ಯ ಸಂಸತ್ತು, ನ್ಯಾಯಾಲಯ ಇವು ಎಲ್ಲಕ್ಕೂ ಒಂದೇ. ನ್ಯಾಯಿಕ, ಸಾಂಖ್ಯಿಕ ಮತ್ತು ಸಮಾಚಾರ ಸೇವಾ ವ್ಯವಸ್ಥೆಗಳೂ ಸಮಾನವೇ. ಸಂಬಂಧಿಸಿದ ರಾಷ್ಟ್ರಗಳು 1965ರಲ್ಲಿ ಸಹಿ ಹಾಕಲಾದ ಕೌಲಿಗೆ ಅನುಗುಣವಾಗಿ ಈಗ ಮೂರು ಸಮುದಾಯಗಳಿಗೂ ಒಂದೇ ಮಂತ್ರಿ ಸಮಿತಿಯೂ ಒಂದೇ ಆಯೋಗವೂ ಇವೆ. ಪಶ್ಚಿಮ ಯುರೋಪಿನ ರಾಷ್ಟ್ರಗಳು ತಮ್ಮ ನಡುವಣ ಗೋಡೆಗಳನ್ನೆಲ್ಲ ಕೆಳತಳ್ಳಿ ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಇವು ಒಂದು ಸಶಕ್ತ ಸಮುದಾಯವಾಗಿ ಬಾಳುವ ಹಾಗೆ ಮಾಡಲು ಇದು ಮೊದಲ ಘಟ್ಟ. ಮೂರು ಐರೋಪ್ಯ ಸಮುದಾಯಗಳಿಗೂ ಸಮಾನವಾದ ಸಂಸ್ಥೆಗಳ ರೂಪುರೇಷೆಗಳನ್ನು ಮುಂದೆ ಕೊಟ್ಟಿದೆ.

**ಐರೋಪ್ಯ ಸಂಸತ್ತು:** ಮೂರೂ ಸಮುದಾಯಗಳ ನಿರ್ವಹಣಾಂಗಗಳ ಮೇಲೆ ಉಸ್ತುವಾರಿ ಮಾಡುವುದೂ ಸಮುದಾಯಗಳ ವಾರ್ಷಿಕ ಸಾಮಾನ್ಯ ವರದಿಗಳನ್ನೂ ಅವಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಕುರಿತು ಚರ್ಚಿಸುವುದೂ ಇದರ ಉದ್ದೇಶ. ಇದಕ್ಕಾಗಿ ಸಂಸತ್ತು ಅನೇಕ ಸ್ಥಾಯೀ ಸಮಿತಿಗಳನ್ನು ರಚಿಸಿದೆ. ಆರು ರಾಷ್ಟ್ರಗಳ ಸಂಸತ್ತುಗಳಿಂದ ಇದಕ್ಕೆ ಸದಸ್ಯರು ನಾಮಕರಣಗೊಳ್ಳುತ್ತಾರೆ.

**ನ್ಯಾಯಾಲಯ:** ಮೂರು ಸಮುದಾಯಗಳನ್ನು ಸ್ಥಾಪಿಸಿರುವ ಕೌಲುಗಳ ಅನ್ವಯದ ಬಗ್ಗೆ ಕ್ರಮಕೈಕೊಳ್ಳುವುದೂ ರಾಷ್ಟ್ರಗಳ ನಡುವೆ ಉದ್ಭವಿಸಬಹುದಾದ ವ್ಯಾಜ್ಯಗಳ ಬಗ್ಗೆ ತೀರ್ಪು ನೀಡುವುದೂ ಇದರ ಗುರಿ. ನ್ಯಾಯಾಲಯದ ಅಧ್ಯಕ್ಷನನ್ನು ಸದಸ್ಯರಾಷ್ಟ್ರಗಳು ನೇಮಿಸುತ್ತವೆ.

**ಮಂತ್ರಿ ಸಮಿತಿ:** ಸದಸ್ಯರಾಷ್ಟ್ರಗಳ ಆರ್ಥಿಕನೀತಿಗಳ ಸಂಯೋಜನೆ ಮತ್ತು ಕೌಲುಗಳ ಅನ್ವಯಕ್ಕೆ ಅಗತ್ಯವಾದ ತೀರ್ಮಾನ ಕೈಗೊಳ್ಳುವುದಕ್ಕಾಗಿ ಇದು ಸ್ಥಾಪಿತವಾಗಿದೆ. ಪ್ರತಿ ರಾಷ್ಟ್ರವೂ ಒಬ್ಬ ಪ್ರತಿನಿಧಿಯನ್ನು ಇದಕ್ಕೆ ನಾಮಕರಣ ಮಾಡುತ್ತದೆ.

**ಐರೋಪ್ಯ ಸಮುದಾಯ ಆಯೋಗ:** ಇದರ ವ್ಯಾಪ್ತಿ ವಿಶಾಲ. ಕೌಲಿನ ಅನ್ವಯದ ಸ್ಥೂಲ ಪರಿಶೀಲನೆಯೇ ಅಲ್ಲದೆ ವ್ಯತ್ಯಸ್ತ ಹಾಗೂ ವಿಶಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾಗಿ ಆಗಿಂದಾಗ್ಗೆ ಸದಸ್ಯರಾಷ್ಟ್ರಗಳಿಗೆ ಸಲಹೆ ನೀಡುವುದು ಉದ್ದೇಶ. ಇದರ ಸದಸ್ಯರೂ ಕೌಲಿನ ರಾಷ್ಟ್ರಗಳಿಂದಲೇ ನೇಮಕವಾಗುತ್ತಾರೆ.

*

**ಐರೋಪ್ಯ ಸಲ್ಲಿಕೆ ಕೂಟ:** ಐರೋಪ್ಯ ರಾಷ್ಟ್ರಗಳ ನಡುವೆ ಪರಸ್ಪರ ಹಣ ವಿನಿಮಯವನ್ನು ಸುಸೂತ್ರಗೊಳಿಸುವ ಉದ್ದೇಶದಿಂದ 1950ರಲ್ಲಿ ಜಾರಿಗೆ ಬಂದ ಸಂಸ್ಥೆ (ಯುರೋಪಿಯನ್). ಎರಡನೆಯ ಮಹಾಯುದ್ಧಾನಂತರದಲ್ಲಿ ಆರ್ಥಿಕ ಪುನರ್ರಚನೆಗಾಗಿ ಸ್ಥಾಪಿತವಾಗಿದ್ದ ಐರೋಪ್ಯ ಆರ್ಥಿಕ ಸಹಕಾರ ಸಂಸ್ಥೆಯ (ಆರ್ಗನೈಸೇಷನ್ ಫಾರ್ ಯುರೋಪಿಯನ್ ಇಕೊನಾಮಿಕ್ ಕೋ-ಆಪರೇಷನ್) 17 ಪಾಶ್ಚಾತ್ಯ ಐರೋಪ್ಯ ಸದಸ್ಯ ರಾಷ್ಟ್ರಗಳು ಸೇರಿ ಇದನ್ನು ಸ್ಥಾಪಿಸಿಕೊಂಡುವು. ಆಗ ಪರಸ್ಪರವಾಗಿಯೂ ಅಮೆರಿಕ ಸಂಯುಕ್ತ ಸಂಸ್ಥಾನದೊಡನೆಯೂ ಪ್ರಾಪ್ತವಾಗಿದ್ದ ವಿದೇಶೀ ಹಣ ಕೊರತೆ ಐರೋಪ್ಯ ರಾಷ್ಟ್ರಗಳ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿತ್ತು. ರಫ್ತು ಮಾಡುವ ಶಕ್ತಿ ಕುಗ್ಗಿ ಆಮದು ಮಾಡಿಕೊಳ್ಳುವ ಅವಶ್ಯಕತೆ ಹೆಚ್ಚಾಗಿದ್ದುದೇ ಈ ವಿಧದ ಸಮಸ್ಯೆಗೆ ಕಾರಣ. ಹದಗೆಟ್ಟ ಅಂದಿನ ಪರಿಸ್ಥಿತಿಯಲ್ಲಿ ಒಂದೊಂದು ರಾಷ್ಟ್ರವೂ ತನ್ನದೇ ಆದ ಅನೇಕ ವಿನಿಮಯ ಹತೋಟಿ ಕ್ರಮಗಳನ್ನು ಅನುಸರಿಸುತ್ತಿತ್ತು. ಇದರಿಂದ ವ್ಯಾಪಾರ ವ್ಯವಹಾರಗಳಿಗೆ ಅಡ್ಡಿಯಾಗಿತ್ತು. ನೆರೆಯ ರಾಷ್ಟ್ರದಿಂದ ಪಡೆಯಬಹುದಾದ ಪದಾರ್ಥವನ್ನು ವಿದೇಶೀ ವಿನಿಮಯ ತೊಂದರೆಗಳಿಂದಾಗಿ ಅಲ್ಲಿಂದ ಪಡೆಯಲಾಗದೆ, ಸಾಲ ಒದಗಿಸಲು ಸಿದ್ಧವಾಗಿದ್ದ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ಪಡೆಯಬೇಕಾದ ಸಂದರ್ಭಗಳಿದ್ದುವು. ಆರ್ಥಿಕ ಪುನರ್ರಚನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ್ದ ಐರೋಪ್ಯ ರಾಷ್ಟ್ರಗಳು ಇಂಥ ಪರಿಸ್ಥಿತಿಯಲ್ಲಿ ಪರಸ್ಪರ ವಿನಿಮಯ ಸೌಲಭ್ಯಗಳನ್ನು ಏರ್ಪಡಿಸಿಕೊಳ್ಳಬೇಕಾದ ಅವಶ್ಯಕತೆ ಹೆಚ್ಚಾಗಿತ್ತು. ಅಂತೆಯೇ ಐರೋಪ್ಯ ಆರ್ಥಿಕ ಸಹಕಾರ ಸಂಸ್ಥೆಯಿಂದ ಐರೋಪ್ಯ ಸಲ್ಲಿಕೆ ಕೂಟ ಸ್ಥಾಪಿತವಾಯಿತು. ತಾತ್ಕಾಲಿಕ ವ್ಯವಸ್ಥೆಯಾಗಿ ಮೊದಲು ಎರಡು ವರ್ಷಗಳಿಗೆಂದು ರೂಪಿತವಾಗಿದ್ದ ಕೂಟ ತರುವಾಯ ವರ್ಷವರ್ಷವೂ ಹೊಸ ಒಪ್ಪಂದಗಳ ಆಧಾರದ ಮೇಲೆ ಮುಂದುವರಿದು 1958ರವರೆಗೆ ನಡೆದು ಬಂತು.

ಈ ಕೂಟದ ಮುಖ್ಯ ಉದ್ದೇಶಗಳು ಮೂರು: 1. ಸದಸ್ಯರಾಷ್ಟ್ರಗಳ ಪರಸ್ಪರ ಲೇವಾದೇವಿ ಲೆಕ್ಕಗಳ ಬಹುಮುಖ ತೀರುವೆ (ಮಲ್ಟಿಲ್ಯಾಟರಲ್ ಕ್ಲಿಯರಿಂಗ್) ವ್ಯವಸ್ಥೆಯ ಏರ್ಪಾಡು. ಎರಡೆರಡು ರಾಷ್ಟ್ರಗಳು ತಮ್ಮ ಪರಸ್ಪರ ವ್ಯಾಪಾರವನ್ನು ಪ್ರತ್ಯೇಕವಾಗಿಸಬೇಕಾದುದರ ಮತ್ತು ದ್ವಿರಾಷ್ಟ್ರ ಒಪ್ಪಂದಗಳನ್ನು ಏರ್ಪಡಿಸಿಕೊಳ್ಳುವುದರ ಅವಶ್ಯಕತೆಯನ್ನು ಇದು ತಪ್ಪಿಸುತ್ತದೆ. 2. ಸದಸ್ಯರಾಷ್ಟ್ರಗಳ ಲೇಣೀ-ದೇಣಿಯಲ್ಲಿ ಪ್ರಾಪ್ತವಾಗುವ ತಾತ್ಕಾಲಿಕ ಕೊರತೆ ನೀಗಿಸಲು ಸಹಾಯವಾಗುವಂತೆ ಉದ್ದರಿ ಸರಬರಾಯಿ. ಈ ಮೂಲಕ ಪರಸ್ಪರ ವ್ಯಾಪಾರ ಮತ್ತು ಸಲ್ಲಿಕೆ ವ್ಯವಹಾರಗಳಿಗೆ ಅಡ್ಡಿಯಾಗಿರುವ ನಿರ್ಬಂಧಗಳನ್ನು ತೆಗೆಯುವಂತೆ ರಾಷ್ಟ್ರಗಳನ್ನು ಪ್ರೇರೇಪಿಸಬಹುದು. 3. ಸದಸ್ಯ ರಾಷ್ಟ್ರವೊಂದಕ್ಕೆ ತಾತ್ಕಾಲಿಕವಾಗಿ ಸಂಭವಿಸುವ ಸಲ್ಲಿಕೆ ಕೊರತೆ (ಪೇಮೆಂಟ್ಸ್ ಡಿಫಿಸಿಟ್ಸ್) ದೀರ್ಘಕಾಲದ ಸಮಸ್ಯೆಯಾಗದಂತೆ ನೋಡಿಕೊಳ್ಳಲು ರಾಷ್ಟ್ರ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಉತ್ತೇಜನ ನೀಡುವುದು ಕೂಟದ ಮೂರನೆಯ ಉದ್ದೇಶ. ಒಟ್ಟಿನಲ್ಲಿ ಐರೋಪ್ಯ ಸಲ್ಲಿಕೆ ಕೂಟ ಸದಸ್ಯರಾಷ್ಟ್ರಗಳ ವಿದೇಶೀ ವಿನಿಮಯ ವ್ಯವಹಾರಗಳು ಸುಸೂತ್ರವಾಗಿ ನಡೆಯುವಂತೆ ಅನುಕೂಲ ಮಾಡುವ ವ್ಯವಸ್ಥೆಯಾಗಿತ್ತು.

ಈ ಕೂಟ ಐರೋಪ್ಯ ಆರ್ಥಿಕ ಸಹಕಾರ ಸಂಸ್ಥೆಯ ಭಾಗವಾಗಿ ಕಾರ್ಯಾಚರಣೆ ನಡೆಯಿಸುತ್ತಿದ್ದುದರಿಂದ ಆ ಸಂಸ್ಥೆಯ ಸಮಿತಿಯ ಅಧಿಕಾರವ್ಯಾಪ್ತಿಗೆ ಇದು ಒಳಪಟ್ಟಿತ್ತು. ಆಡಳಿತ ಸೌಕರ್ಯಕ್ಕಾಗಿ ಸಮಿತಿ ಪ್ರತಿ ವರ್ಷ ಏಳು ಸದಸ್ಯರನ್ನುಳ್ಳ ಒಂದು ಆಡಳಿತ ಮಂಡಲಿಯನ್ನು ಚುನಾಯಿಸುತ್ತಿತ್ತು. ಕೂಟ ವ್ಯವಸ್ಥೆಯ ಕಾರ್ಯನಿರ್ವಹಣೆ, ಋಣಿ ರಾಷ್ಟ್ರಗಳು ಕೊಡಬೇಕಾದ ಮತ್ತು ಧನಿ ರಾಷ್ಟ್ರಗಳಿಗೆ ನೀಡಬೇಕಾದ ಬಡ್ಡಿದರಗಳ ನಿರ್ಣಯ, ಸದಸ್ಯರಾಷ್ಟ್ರಗಳ ಆರ್ಥಿಕ ಸ್ಥಿತಿಗತಿಗಳ ಅವಲೋಕನ ಇವು ಬೋರ್ಡಿನ ಮುಖ್ಯ ಕರ್ತವ್ಯಗಳು. ಲೇಣಿ-ದೇಣಿ ಕೊರತೆ ಅಥವಾ ಹೆಚ್ಚಳ ಹೊಂದಿರುವ ರಾಷ್ಟ್ರಗಳು ಕೈಗೊಳ್ಳಬೇಕಾದ ನೀತಿಗಳ ಮತ್ತು ಕ್ರಮಗಳ ಬಗ್ಗೆ ಸಲಹೆ ಮಾಡುವ ಅಧಿಕಾರವನ್ನು ಕೂಟ ಪಡೆದಿತ್ತು.

ಐರೋಪ್ಯ ಸಲ್ಲಿಕೆ ಕೂಟದ ವ್ಯವಹಾರಗಳೂ ಲೆಕ್ಕಾಚಾರಗಳೂ 1921ರಲ್ಲಿ ಸ್ಥಾಪನೆಯಾದ ಅಂತಾರಾಷ್ಟ್ರೀಯ ತೀರುವೆ ಬ್ಯಾಂಕಿನ ಮೂಲಕ ನಡೆಯುತ್ತಿದ್ದುವು. ಪ್ರತಿ ಸದಸ್ಯ-ರಾಷ್ಟ್ರವೂ ಇತರ ಒಂದೊಂದು ಸದಸ್ಯ ರಾಷ್ಟ್ರದ ಲೆಕ್ಕದಲ್ಲಿಯೂ ಇಟ್ಟ ಮೊಬಲಗನ್ನು ತಿಂಗಳಿಗೊಮ್ಮೆ ಬ್ಯಾಂಕಿಗೆ ತಿಳಿಸುವುದು; ಈ ಲೆಕ್ಕಗಳ ಆಧಾರದ ಮೇಲೆ ಒಂದೊಂದು ಸದಸ್ಯರಾಷ್ಟ್ರದೊಡನೆಯೂ ಹೊಂದಿದ್ದ ಹೆಚ್ಚಳ ಕೊರತೆ ಸ್ಥಿತಿಯನ್ನು ಬ್ಯಾಂಕು ಲೆಕ್ಕ ಮಾಡಿ, ಇದರ ಆಧಾರದ ಮೇಲೆ ಹೆಚ್ಚಳ ಅಥವಾ ಕೊರತೆಯನ್ನು ಸಂಬಂಧಪಟ್ಟ ಸದಸ್ಯರಾಷ್ಟ್ರ ಬ್ಯಾಂಕಿನೊಡನೆ ಒಂದೇ ವ್ಯವಹಾರದ ಮೂಲಕ ಸರಿತೂಗಿಸುವುದು. ಇದೇ ಸಲ್ಲಿಕೆ ಕೂಟದ ಕಾರ್ಯವಿಧಾನ.

ವಿದೇಶೀ ಸಲ್ಲಿಕೆ ಕೊರತೆ ಹೊಂದಿದ್ದ ಸದಸ್ಯರಾಷ್ಟ್ರಗಳಿಗೆ ಒಂದು ಮಿತಿಯವರೆಗೆ ಕೂಡ ಉದ್ದರಿ ನೀಡುತ್ತಿತ್ತು. ಪ್ರತಿಯೊಂದು ಸದಸ್ಯ ರಾಷ್ಟ್ರವೂ ನಿಗದಿಯಾದ ಪ್ರಮಾಣಕ್ಕೂ ಮೀರಿದ ಕೊರತೆ ಉಂಟಾಗದಂತೆ ಸೂಕ್ತ ಕ್ರಮ ಕೈಕೊಳ್ಳಬೇಕಾಗಿತ್ತು. ಏಕೆಂದರೆ ಕೂಟದ ನಿಯಮಾನುಸಾರ ನಿಗದಿಯಾದ ಒಂದು ಪ್ರಮಾಣಕ್ಕೂ ಮೀರಿದ ಕೊರತೆಯನ್ನು ಚಿನ್ನ ಅಥವಾ ಡಾಲರು ಕೊಟ್ಟು ಸರಿತೂಗಿಸಬೇಕಿತ್ತು. ಇದು ಸಾಮಾನ್ಯವಾಗಿ ಕಷ್ಟವಾಗಿದ್ದುದರಿಂದ ಸದಸ್ಯರಾಷ್ಟ್ರಗಳು ಎಚ್ಚರಿಕೆಯಿಂದ ಕೊರತೆಯ ಪ್ರಮಾಣ ಮಿತಿ ಮೀರದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಿದ್ದುವು. ಕೆಲವು ವಿಶೇಷ ಸಂದರ್ಭಗಳಲ್ಲಿ ಕೂಟ ಹೆಚ್ಚು ಉದ್ದರಿಯ ವ್ಯವಸ್ಥೆ ಮಾಡಿಕೊಟ್ಟಿತು.

ಲೇಣಿ-ದೇಣಿಗಳಲ್ಲಿ ಹೆಚ್ಚಳ ಹೊಂದುವ ಸದಸ್ಯರಾಷ್ಟ್ರಗಳು ಕೂಟದ ಮೇಲೆ ಹೆಚ್ಚು ಹೆಚ್ಚು ಪಾವತಿ ಹಕ್ಕು (ಕ್ಲೇಮ್ಸ್) ಕೂಡಿಸುತ್ತ ಹೋಗದಂತೆಯೂ ಮಿತಿಗಳನ್ನು ವಿಧಿಸಲಾಗಿತ್ತು. ಮಿತಿಮೀರಿದ ಹಕ್ಕುಗಳನ್ನು ಹೊಂದಿದ ರಾಷ್ಟ್ರಗಳೊಡನೆ ಕೂಟ ವಿಶೇಷ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿತ್ತು.

ಮುಖ್ಯವಾಗಿ ಕೂಟರಾಷ್ಟ್ರಗಳೊಳಗೆ ಸಂಭವಿಸುತ್ತಿದ್ದ ಲೇಣೆ-ದೇಣೆಗಳ ಅಸಮತೆ ಸರಿಪಡಿಸಲು ಇದು ನೇರ ನೆರವು ನೀಡುತ್ತಿತ್ತು. ಅಲ್ಲದೆ ಕೊರತೆ ಹೊಂದಿದ್ದ ರಾಷ್ಟ್ರಕ್ಕೆ ಇದು ವಿಶೇಷ ಸಲಹೆ ನೀಡುವ ಅಧಿಕಾರ ಪಡೆದಿದ್ದುದರಿಂದ ಆ ರಾಷ್ಟ್ರವಿದೇಶೀ ಹಣ ಮತ್ತು ವ್ಯಾಪಾರ ನೀತಿಗಳ ಮೇಲೂ ಪ್ರಭಾವ ಹೊಂದಿತ್ತು. ಕೂಟದ ಆಡಳಿತ ಮಂಡಳಿ ಪ್ರತಿಯೊಂದು ಸದಸ್ಯರಾಷ್ಟ್ರದ ವಿದೇಶೀ ವ್ಯವಹಾರಗಳನ್ನೂ ಅದರ ಸಾಮಾನ್ಯ ಆರ್ಥಿಕ ಪರಿಸ್ಥಿತಿಯನ್ನೂ ಆಗಿಂದಾಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಏರುಪೇರುಗಳನ್ನು ಸರಿಪಡಿಸಲು ಸೂಕ್ತಕ್ರಮಗಳನ್ನು ಸೂಚಿಸುತ್ತಿತ್ತು. ಮಿತಿಮೀರಿದ ಕೊರತೆ ಅಥವಾ ಹೆಚ್ಚಳಗಳೇ ಈ ಸಂಸ್ಥೆ ಎದುರಿಸಬೇಕಾಗಿದ್ದ ಮುಖ್ಯ ಸಮಸ್ಯೆಯಾಗಿತ್ತು. ಈ ಸಮಸ್ಯೆಯನ್ನು ನಿವಾರಿಸುವುದರಲ್ಲಿ ಸಂದರ್ಭೋಚಿತ ಕ್ರಮ ಕೈಗೊಂಡು ವಿನಿಮಯದಲ್ಲಿ ರಾಷ್ಟ್ರಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸುವುದೇ ಕೂಟದ ಮುಖ್ಯ ಗುರಿಯಾಗಿತ್ತು.

ಕೂಟ ಸ್ಥಾಪನೆಯಾದ ತಿಂಗಳಲ್ಲೇ ಕೊರಿಯದ ಯುದ್ಧ ಸಂಭವಿಸಿದ್ದರಿಂದ ಇದು ಕಷ್ಟಪರಿಸ್ಥಿತಿ ಎದುರಿಸಬೇಕಾಯಿತು. ಕೆಲವು ಸದಸ್ಯರಾಷ್ಟ್ರಗಳ ಅಂತಾರಾಷ್ಟ್ರೀಯ ಲೇಣೆ-ದೇಣೆಗಳಲ್ಲಿ ಅಸಾಧಾರಣ ಕೊರತೆ ಪ್ರಾಪ್ತವಾಯಿತು; ಇತರ ಕೆಲವು ರಾಷ್ಟ್ರಗಳ ಲೇಣೆ-ದೇಣೆಗಳಲ್ಲಿ ಮಿತಿಮೀರಿದ ಹೆಚ್ಚಳ ಉಂಟಾಯಿತು. ಈ ಎರಡು ರೀತಿಯ ಸಂದರ್ಭಗಳು ವಿಶೇಷ ಸಮಸ್ಯೆಗಳನ್ನೇ ಸೃಷ್ಟಿಸಿದವು.

1950-51ರಲ್ಲಿ ಜರ್ಮನಿಯ ವಿದೇಶೀ ಲೇಣೆ-ದೇಣೆಯಲ್ಲಿ ತೀವ್ರ ಪ್ರಮಾಣದ ಕೊರತೆ ಸಂಭವಿಸಿತು. ಕೂಟ ನೆರವಿಗೆ ಬಾರದಿದ್ದಲ್ಲಿ ಜರ್ಮನಿ ಆಮದು ನಿರ್ಬಂಧ ಕ್ರಮ ಇದರಿಂದಾಗಿ ಬಂದು ತತ್ಪರಿಣಾಮವಾಗಿ ನೆದರ್ಲೆಂಡ್ಸ್, ಡೆನ್ಮಾರ್ಕ್ ಮುಂತಾದ ರಾಷ್ಟ್ರಗಳ ಮೇಲೆ ದುಷ್ಪರಿಣಾಮವಾಗುತ್ತಿದ್ದುದೇ ಅಲ್ಲದೆ ಕ್ರಮೇಣ ಐರೋಪ್ಯ ಆರ್ಥಿಕ

ವ್ಯವಸ್ಥೆಯ ವ್ಯಾಪಾರ ನಿರ್ಬಂಧ ನಿರ್ಮೂಲ ಕಾರ್ಯಕ್ರಮಗಳೆಲ್ಲವೂ ಮುರಿದು ಬೀಳುವಂತಾಗುತ್ತಿತ್ತು. ಕೂಟ ಜರ್ಮನಿಗೆ ಆ ವರ್ಷ (1950–51) ಒದಗಿಸಿದ ಸು. 12 ಕೋಟಿ ಡಾಲರುಗಳ ಉದ್ದರಿಯಿಂದ ಜರ್ಮನಿಯ ಆರ್ಥಿಕ ಪುನರುಜ್ಜೀವನಕ್ಕೆ ಸಹಾಯವಾಯಿತು. ತುರ್ಕಿ, ಗ್ರೀಸ್, ಆಸ್ಟ್ರಿಯ ಮತ್ತು ಐಸ್‍ಲೆಂಡ್‍ಗಳು ಅನುಭವಿಸಿದ ಲೇಣೆ–ದೇಣೆ ಕೊರತೆ ಪರಿಸ್ಥಿತಿ ಎದುರಿಸಲೂ ಐರೋಪ್ಯ ಸಲ್ಲಿಕೆ ಕೂಟ ನೆರವು ನೀಡಿತು.

ಕೂಟ ಸ್ಥಾಪನೆಯಾದ ವರ್ಷ ಬ್ರಿಟನ್, ಫ್ರಾನ್ಸ್, ಪೋರ್ಚುಗಲ್ ಮತ್ತು ಬೆಲ್ಜಿಯಂ ರಾಷ್ಟ್ರಗಳ ಲೇಣೆ–ದೇಣೆಗಳಲ್ಲಿ ಮಿತಿಮೀರಿದ ಹೆಚ್ಚಳಗಳು ಸಂಭವಿಸಿದ್ದಾಗ ವಾಣಿಜ್ಯ ಹಾಗೂ ವಿನಿಮಯ ನಿರ್ಬಂಧಗಳನ್ನು ಸಡಲಿಸಬೇಕೆಂದು ಆ ರಾಷ್ಟ್ರಗಳಿಗೆ ಕೂಟ ಸಲಹೆ ಮಾಡಿತು. ಈ ಸಲಹೆಯ ಪ್ರಕಾರ ಕೈಕೊಂಡ ಕ್ರಮಗಳಿಂದ ಪರಿಸ್ಥಿತಿ ಸುಧಾರಿಸಲು ಅನುಕೂಲವಾಯಿತು.

1954ರಲ್ಲಿ ಕೂಟದ ಒಪ್ಪಂದ ಪುನರ್ ಪರಿಶೀಲನೆಗೆ ಬಂದಾಗ 1950ರಲ್ಲಿ ಸದಸ್ಯ ರಾಷ್ಟ್ರಗಳು ಒಪ್ಪದೆ ಇದ್ದ ಒಂದು ಮುಖ್ಯ ತತ್ತ್ವವನ್ನು ಆಗ ಅಂಗೀಕರಿಸಲಾಯಿತು. ಸದಸ್ಯರಾಷ್ಟ್ರಗಳು ಕೂಟದ ಸಾಲಗಳ ಬಗ್ಗೆ ಸಾಲ ತೀರುವೆ ನಿಧಿಯ ಏರ್ಪಾಡು (ಅಮಾರ್ಟೈಸೇಷನ್) ಕೈಕೊಳ್ಳಬೇಕೆಂಬುದೇ ಈ ಹೊಸ ಕ್ರಮ. ಅಂದಿನಿಂದ 1958ರ ತನಕ ಮಾಡಿದ ಇಂಥ ಸಾಲತೀರುವೆ ನಿಧಿಗಳು ಒಟ್ಟಿನಲ್ಲಿ 112 ಕೋಟಿ ಡಾಲರುಗಳಷ್ಟು ತೀರುವೆಗೆ ಏರ್ಪಾಟು ಮಾಡಿದುವು.

ಒಟ್ಟಿನಲ್ಲಿ 1950–56ರ ಅವಧಿಯಲ್ಲಿ ಸಂಭವಿಸಿದ 3,200 ಕೋಟಿ ಡಾಲರುಗಳಷ್ಟು ಒಟ್ಟು ಹೆಚ್ಚಳ ಮತ್ತು ಕೊರತೆಗಳಲ್ಲಿ ಮುಕ್ಕಾಲು ಭಾಗದಷ್ಟನ್ನು ಪುಸ್ತಕದಲ್ಲೇ ಪರಸ್ಪರ ಜೋಡಣೆಯಿಂದಲೇ ಸರಿತೂಗಿಸಲು ಸಾಧ್ಯವಾಯಿತು; ಉಳಿದ ಕಾಲು ಭಾಗವನ್ನು ಮಾತ್ರ ಚಿನ್ನ ಮತ್ತು ಡಾಲರುಗಳ ಲೇಣೆ–ದೇಣೆ ಮೂಲಕ ಸರಿತೂಗಿಸಲಾಯಿತು. ಈ ವ್ಯವಹಾರದಲ್ಲಿ ಅಮೆರಿಕದ ಸಹಾಯ ಮೊದಮೊದಲು ಹೆಚ್ಚಾಗಿದ್ದು ಕ್ರಮೇಣ ಕಡಿಮೆಯಾಯಿತು. ಅಂತರ–ಐರೋಪ್ಯ ಲೇವಾದೇವಿಯಲ್ಲಿ ಚಿನ್ನ ಹಾಗೂ ಪರಿವರ್ತನೀಯ ಹಣಗಳ ಹೆಚ್ಚುವರಿಯ ಉಪಯೋಗದಿಂದ ಅಂತಾರಾಷ್ಟ್ರೀಯ ವ್ಯಾಪಾರ ಸರ್ವತೋಮುಖವಾಗಿ ಬೆಳೆಯಲು ಮಾರ್ಗ ಏರ್ಪಟ್ಟಿತು. ದ್ವಿಪಕ್ಷೀಯ ವ್ಯಾಪಾರ ಏರ್ಪಾಡುಗಳ ಮೂಲಕ ಕೆಲವು ದುಬಾರಿ ರಫ್ತುದಾರರು ಹಿಂದೆ ಪಡೆಯುತ್ತಿದ್ದ ರಕ್ಷಣೆಯನ್ನು ಒಕ್ಕೂಟದ ಏರ್ಪಾಡುಗಳು ತೆಗೆದುಹಾಕಿದುದರಿಂದ ವ್ಯಾಪಾರಮಾರ್ಗ ಆರ್ಥಿಕ ಬಲಗಳ ನಿರ್ದೇಶನಕ್ಕೆ ಒಳಗಾದಂತಾಯಿತು.

ವ್ಯಾಪಾರ ಪ್ರಮಾಣದ ಬಗ್ಗೆ ಇದ್ದ ಷರತ್ತುಗಳನ್ನು ಸಡಿಲಗೊಳಿಸಿದ್ದರಿಂದ ಅಂತರ ಐರೋಪ್ಯ ವ್ಯಾಪಾರ ನಿರಾತಂಕ ವ್ಯಾಪಾರದತ್ತ ಸಾಗಿತು. ಇವುಗಳಿಂದ ವಿವಿಧ ಐರೋಪ್ಯ ರಾಷ್ಟ್ರಗಳ ಬೆಲೆಮಟ್ಟಗಳಲ್ಲಿ ಹೊಂದಾಣಿಕೆಯುಂಟಾಗುತ್ತ ಬಂತು. ಕೃತಕ ಆರ್ಥಿಕ ಪ್ರತ್ಯೇಕತಾ ಶಕ್ತಿಗಳು ಮಾಯವಾದುವು. ಈ ಕೂಟದಿಂದ ಐರೋಪ್ಯ ಅರ್ಥವ್ಯವಸ್ಥೆಯಲ್ಲಿ ಸ್ವಾಭಾವಿಕ ಸ್ಪರ್ಧಾ ಪ್ರವೃತ್ತಿಗಳನ್ನು ಪುನಃ ಸ್ಥಾಪಿಸಲು ಸಹಾಯವಾಯಿತೆನ್ನಬಹುದು. (ಎ.ವಿ.ಎಸ್.)

**ಐರೋಪ್ಯ ಸಾಮಾನ್ಯ ಮಾರುಕಟ್ಟೆ: ನೋಡಿ– ಐರೋಪ್ಯ–ಆರ್ಥಿಕ–ಸಮುದಾಯ**

**ಐರೋಪ್ಯ ಸಾಹಿತ್ಯ ವಿಮರ್ಶೆಯ ರೂಪರೇಷೆಗಳು:** ಸಾಮಾನ್ಯವಾಗಿ ಪ್ರಚಾರವಾಗಿರುವ ಅಭಿಪ್ರಾಯದಂತೆ ಐರೋಪ್ಯ ಸಾಹಿತ್ಯ ವಿಮರ್ಶೆಯ ಇತಿಹಾಸಕ್ಕೆ ಸ್ಥೂಲವಾಗಿ ಏಳು ಅವಧಿಗಳುಂಟು. ಪ್ರ.ಶ.ಪೂ. 4–1ನೆಯ ಶತಮಾನದ ಕಡೆಯವರೆಗೆ ಹೆಲನಿಕ್ ಮತ್ತು ಹೆಲನಿಸ್ಟಿಕ್ ವಿಭಾಗಗಳನ್ನೊಳಗೊಂಡ ಪ್ರಾಚೀನ ಗ್ರೀಕ್ ಅವಧಿ, ಅಲ್ಲಿಂದ ಸು. ಪ್ರ.ಶ. 500ರ ವರೆಗೆ ಪ್ರಾಚೀನ ರೋಮನ್ ಅವಧಿ, 500–1500ರ ವರೆಗೆ ಮಧ್ಯಯುಗ, 1500–ಸು.1630ರ ತನಕ ಹೊಸ ಹುಟ್ಟಿನ ಕಾಲ, ಅಲ್ಲಿಂದ ಹೆಚ್ಚು ಕಡಿಮೆ 18ನೆಯ ಶತಮಾನದ ಕೊನೆಯವರೆಗೆ ನವಅಭಿಜಾತತೆಯ ಸಮಯ, ಆಮೇಲೆ ಸುಮಾರು ನಲವತ್ತು ಐವತ್ತು ವರ್ಷ ರೊಮ್ಯಾಂಟಿಕತೆಯ ಕಾಲ, ಸು. 19ನೆಯ ಶತಮಾನದ ಮಧ್ಯದಿಂದ ಆಧುನಿಕ ಯುಗ–ಹೀಗೆ. ಪ್ರಾಚೀನ ಗ್ರೀಕ್‍ರನ್ನೂ ರೋಮನರನ್ನೂ ಸಾಹಿತ್ಯದೃಷ್ಟಿಯಿಂದ ಒಟ್ಟುಗೂಡಿಸಿ ಅಭಿಜಾತ ಪದ್ಧತಿಯ ಕಾಲವೆಂದು ಬಗೆಯುವುದು ವಾಡಿಕೆ. ಮಧ್ಯಯುಗದಲ್ಲಿ ಕ್ರೈಸ್ತ ಚರ್ಚಿನ ಪ್ರಭಾವ ಅತ್ಯಂತವಾಗಿ ಇದ್ದದ್ದರಿಂದಲೂ ಲೌಕಿಕ ಸಾಹಿತ್ಯ ಹೆಚ್ಚಾಗಿ ತಲೆಯೆತ್ತದ್ದರಿಂದಲೂ ಮಧ್ಯಯುಗದ ವಿಮರ್ಶೆ ಗಮನಾರ್ಹವಲ್ಲವೆಂದು ಕೆಲವರ ಅಭಿಮತ, ಅದನ್ನು ಒಪ್ಪಲಾಗದು. ನಿಯೋಕ್ಲ್ಯಾಸಿಕಲ್ ಪದ್ಧತಿಯೆಂಬ ನವ ಅಭಿಜಾತ ಪಂಥದ ಹೊಸ ಹುಟ್ಟು ಎದ್ದು ಬಂದಾಗಲೇ ಪ್ರಾರಂಭವಾಯಿತೆಂದು ಕೆಲವರ ಭಾವನೆ. ಹಾಗೆ ಆಗಿರಬಹುದು, ಆದರೂ ಹೊಸ ಹುಟ್ಟಿನ ಸಾಹಿತ್ಯಕ್ಕೂ ಸಾಹಿತ್ಯವಿಮರ್ಶೆಗೂ ಶಿಷ್ಟತೆಯಿಂದ ವಿಭಿನ್ನವಾದ ಸ್ವಂತ ವರ್ಚಸ್ಸು ತುಂಬಿರುವುದರಿಂದ ಅವನ್ನು ನವ ಅಭಿಜಾತತೆಯಿಂದ ಪ್ರತ್ಯೇಕಿಸಿ ಲಕ್ಷಿಸುವುದೇ ಸಾಧು. ಒಬ್ಬಿಬ್ಬರಿಗೆ ಆಧುನಿಕ ಯುಗ ಸು. 1750ರಂದೇ ಉದಯಗೊಂಡಿತೆಂದು ತೋರಿಬಂದಿದೆ. ಅವರ ಭಾವನೆಗೆ ರೊಮ್ಯಾಂಟಿಕ್ ಸಮಯ ಆಧುನಿಕತೆಯಲ್ಲಿ ಅಂತರ್ಗತ. ಇದನ್ನು ಒಪ್ಪಲಾಗದು. ನವ ಅಭಿಜಾತತೆ 19ನೆಯ ಶತಮಾನದ ಒಂದೆರಡು ದಶಕದಲ್ಲೂ ಹಠಹಿಡಿದು ನಿಂತಿದ್ದು ತನ್ನ ಆಡಳಿತ ಬಿಟ್ಟುಕೊಡಲು ಸಮ್ಮತಿಸಲಿಲ್ಲ. ಅದನ್ನು ಪೂರ್ತಿ ಕೆಳಗಿಳಿಸುವುದಕ್ಕೆ ರೊಮ್ಯಾಂಟಿಕತೆಯೊಂದೇ ಸಾಲದಾಯಿತು ವಾಸ್ತವತೆ ವೈಜ್ಞಾನಿಕತೆ ಎರಡೂ ಬೆಂಬಲ ಕೊಟ್ಟ ಮೇಲೆ ನವ ಅಭಿಜಾತತೆಗೆ ಇಳಿಗಾಲ ಪ್ರಾರಂಭವಾಯಿತು. ಅದೂ ಅಲ್ಲದೆ ರೊಮ್ಯಾಂಟಿಕತೆಗೆ ತನ್ನದೇ ಆದ ವೈಶಿಷ್ಟ್ಯವಿದೆ. ಹಿಂದಿನದನ್ನು ಸಂಪೂರ್ಣವಾಗಿ ಕೈಬಿಟ್ಟಲ್ಲದೆ ಇಂದಿನದು ಬದುಕಲಾರದು ಎಂದು ಆಧುನಿಕತೆ ಸಾರಿದರೆ ಹಿಂದಿನದರ ಸ್ಫೂರ್ತಿಯಿಂದ ಕಸುವುಗೊಂಡು ಇಂದಿನದು ಬೆಳೆಯಬೇಕು ಎಂಬುದು ರೊಮ್ಯಾಂಟಿಕತೆಯ ಧ್ಯೇಯ. ಆದ್ದರಿಂದ ರೊಮ್ಯಾಂಟಿಕ್ ಅವಧಿಯನ್ನು ಆಧುನಿಕತೆಯಲ್ಲಿ ವಿಲೀನಗೊಳಿಸುವುದು ಸರಿಯಲ್ಲ.


ಪ್ಲೇಟೊ

ಸಾಹಿತ್ಯವನ್ನು ಕುರಿತ ಸಾಹಿತ್ಯವೇ ವಿಮರ್ಶೆ. ಮೊದಲು ಸಾಹಿತ್ಯ ಅನಂತರ ವಿಮರ್ಶೆ–ಇದು ತರ್ಕಸಮ್ಮತ ಕ್ರಮ. ಪುರಾತನ ಗ್ರೀಕರಲ್ಲಿ ಅದೇ ಕ್ರಮ ಆಗಿ ಬಂದದ್ದರಿಂದ ಅವರು ಕಂಡುಹಿಡಿದ ಕಾವ್ಯತತ್ತ್ವಗಳಿಗೂ ನಿಯಂತ್ರಿಸಿದ ಕಾವ್ಯ ಸೂತ್ರಗಳಿಗೂ ಬಹುಕಾಲ ನಿಲ್ಲುವ ಸತ್ಯತೆಯೂ ಸಾಮರ್ಥ್ಯವೂ ಲಭಿಸಿದುವು. ಪ್ರ.ಶ.ಪೂ. 8ನೆಯ ಶತಮಾನದಿಂದ ಭವ್ಯಕಾವ್ಯಗಳೂ ಪ್ರಗಾಥಗಳೂ ಐದನೆಯ ಶತಮಾನದಲ್ಲಿ ರುದ್ರನಾಟಕ ಹರ್ಷನಾಟಕಗಳೂ ಸಾಕಾದಷ್ಟು ವಿರಚಿತವಾಗಿ ಪ್ರಚಾರ ಗೊಂಡು ಜನರಿಗೆ ಪರಿಚಯ ವಾದುವು. ಭವ್ಯಕವಿ ಹೋಮರ್ ಗ್ರೀಕರಿಗೆ ಅಚ್ಚುಮೆಚ್ಚು. ಅವನ ಕಾವ್ಯಗಳ ಮೇಲೆ ಆರು ಏಳನೆಯ ಶತಮಾನಗಳಲ್ಲಿ ಕೆಲವು ಜ್ಞಾನಿಗಳು ಮಾಡಿದ ಟೀಕೆಟಿಪ್ಪಣಿಗಳು ಈಗಲೂ ಉಳಿದಿವೆ. ತತ್ತ್ವ ವಿಚಾರದಲ್ಲೊ ನೀತಿಬೋಧನೆಯಲ್ಲೊ ಅವರು ಆಡಿದ ಪ್ರಾಸಂಗಿಕ ವಾಕ್ಯಗಳನ್ನು ಸಾಹಿತ್ಯ ವಿಮರ್ಶೆಯೆಂದು ಪರಿಗಣಿಸ ಲಾಗದು. ಹಾಗೆಯೇ ವಿಡಂಬನ ಕಾರನಾದ ವಿನೋದಶೀಲ ಅರಿಸ್ಟೊಫೇನಿಸ್ ತನ್ನ ನಾಟಕದಲ್ಲಿ ಎಸಗಿದ ರುದ್ರನಾಟಕಕಾರರ ತುಲನೆಯನ್ನೂ ಖಚಿತ ವಿಮರ್ಶೆಯೆಂದು ತೆಗೆದುಕೊಳ್ಳುವುದು ಅಸಾಧ್ಯ. ಕಾವ್ಯವಿಮರ್ಶೆ ಅಧಿಕೃತವಾಗಿ ವ್ಯವಸ್ಥಿತವಾಗಿ ಪ್ರಾರಂಭವಾದದ್ದು ನಾಲ್ಕನೆಯ ಶತಮಾನದಲ್ಲಿ, ಮಹಾದಾರ್ಶನಿಕ ಪ್ಲೇಟೊವಿನಿಂದ. ಪ್ಲೇಟೊವನ್ನು ಕಾವ್ಯವಿರೋಧಿ, ಕವಿಗಳ ಶತ್ರು ಎನ್ನುತ್ತಿದ್ದರು. ಅದು ಕೇವಲ ಬಾಹ್ಯನೋಟದ ಪರಿಣಾಮ. ಕವಿತ್ವಕ್ಕೆ ಒಂದು ಬಗೆಯ ದಿವ್ಯಾವೇಶ ಅವಶ್ಯಕವೆಂದು ಅವನಂತೆ ಉತ್ಸಾಹಗೂಡಿ ಸುರಮ್ಯವಾಗಿ ಬಣ್ಣಿಸುವವರು ಅಪರೂಪ. ಕವಿಗಳ ಆ ಸಮ್ಮೋಹನ ಶಕ್ತಿಯೇ ಅವನಲ್ಲಿ ಕೋಪ ಎಬ್ಬಿಸಿತು. ಮಂದಿ ರಾಗಾವೇಶದಿಂದ ಕುಣಿದಾಡುವಂತೆ ಮಾಡಿ ಅವರನ್ನು ದುರ್ಬಲಗೊಳಿಸುತ್ತದೆ, ಕಾವ್ಯ–ಎಂಬುದು ಅವನ ಆಕ್ಷೇಪಣೆ. ಅಲ್ಲದೆ ಆದರ್ಶವಾಗಬೇಕಾದ ಸತ್ಯದ ನಕಲಿನ ನಕಲನ್ನು ಕಾವ್ಯ ತಯಾರಿಸುತ್ತದೆಯಾಗಿ ಅದು ಸತ್ಯದಿಂದ ದೂರ; ದೇವತೆಗಳೂ ವಿಷಯಲಾಂಪಟ್ಯಾದಿ ದೋಷಯುಕ್ತರೆಂದು ಸುಳ್ಳು ಹೇಳಿ ದೈವದೂಷಣೆಯ ಕಡೆಗೆ ಜನರನ್ನು ತಳ್ಳುತ್ತದೆ. ಆದ್ದರಿಂದ ಆದರ್ಶರಾಷ್ಟ್ರದಲ್ಲಿ ಕವಿಗಳಿಗೆ ಜಾಗವಿರಕೂಡದು. ಪ್ರಾಯಶಃ ಕಮ್ಮಾರ, ಕೃಷಿಕ ಮೊದಲಾದವರು ಕವಿವರ್ಗಕ್ಕಿಂತ ಹೆಚ್ಚು ಲೋಕೋಪಕಾರಿಗಳೆಂದು ಪ್ಲೇಟೊವಿನ ನಿರ್ಧಾರ. ಪ್ರಾಚೀನ ಗ್ರೀಕರಿಗೆ ಬಡಗಿ, ವೈದ್ಯ, ಶಿಲ್ಪಿ, ಕವಿ ಎಲ್ಲರೂ ಒಂದೇ ಗುಂಪಿನ ಕೆಲಸಗಾರರು. ಸಮಾಜಸೇವೆ ಎಲ್ಲರಿಗೂ ಗುರಿ.

ಪ್ಲೇಟೊವಿನ ಶಿಷ್ಯರಲ್ಲಿ ಅರಿಸ್ಟಾಟಲ್ ಒಬ್ಬ. ಅವನು ಗುರುವಿನ ಮತವನ್ನು ಖಂಡಿಸಲೋಸ್ಕರವೇ ತನ್ನ ಕಾವ್ಯಕಲೆಯನ್ನು ರೂಪಿಸಲಿಲ್ಲ. ಅವನ ಉದ್ದೇಶಗಳಲ್ಲಿ ಅಂಥ ಪ್ರತಿಭಟನೆ ಒಂದಾಗಿದ್ದರೂ ಇರಬಹುದು. ಅರಿಸ್ಟಾಟಲನ ವಾದಸರಣಿ ಇದು. ಅನುಕರಣೆ ಕಾವ್ಯದ ಕೆಲಸ, ದಿಟ; ಆದರೆ ಅದು ಯಥಾರ್ಥತೆಯನ್ನು ತದ್ವತ್ತಾಗಿ ತಂದಿಡುವುದಿಲ್ಲ; ಒಳಗೆ ಹುದುಗಿರುವ ಆದರ್ಶ ಸತ್ಯವನ್ನು ಪ್ರತಿಬಿಂಬಿಸುತ್ತದೆ. ಕಾವ್ಯ ಇತಿಹಾಸಕ್ಕಿಂತ ಹೆಚ್ಚು ತತ್ತ್ವವತ್ತಾದದ್ದು, ತತ್ತ್ವಶಾಸ್ತ್ರಕ್ಕಿಂತ ಹೆಚ್ಚು ರಸವತ್ತಾದದ್ದು. ಜನರೊಳಗೆ ಇದ್ದುಕೊಂಡು ಮಂದೈಸಿ ಕಸಿವಿಸಿಗೊಳಿಸುವ ಮರುಕ, ಭೀತಿ ಇತ್ಯಾದಿ ಭಾವಗಳು ಹೊರಬೀಳುವಂತೆ ಮಾಡಿ ಹೃದಯ ಶುದ್ಧಿಗೂ ಮನಶ್ಶಾಂತಿಗೂ ಕಾವ್ಯ ಸುಲಭೋಪಾಯವಾಗುತ್ತದೆ. ಮೇಲಾಗಿ ಕಾವ್ಯ ತನಗೆ ಸಮಂಜಸವಾದ ಮತ್ತು ತನ್ನಿಂದ ಮಾತ್ರ ಒದಗಬಲ್ಲ ಸಂತಸವನ್ನು ಕೊಡುವುದರಿಂದ ಅದು ಪುರಸ್ಕಾರಾರ್ಹ.

ಭವ್ಯಕಾವ್ಯ, ರುದ್ರನಾಟಕ, ಹರ್ಷನಾಟಕ ಮುಂತಾದ ಪ್ರಭೇದಗಳ ವಿಂಗಡಣೆ, ರುದ್ರನಾಟಕದ ಆರು ಅಂಗಗಳ ವಿವರಣೆ, ಕವಿಗಳ ಸಾಮ್ಯವೈಷಮ್ಯ ನಿರೂಪಣೆ ಇತ್ಯಾದಿ ಹಲವು ಕಾರ್ಯಗಳನ್ನು ಅರಿಸ್ಟಾಟಲ್ ಸಮರ್ಪಕವಾಗಿ ನಡೆಸಿಕೊಟ್ಟ.

ಪ್ರಾಚೀನ ಗ್ರೀಕರಿಗೆ ಕಾವ್ಯಾಲಾಪ ಹವ್ಯಾಸವಾದರೆ ಭಾಷಣವಿದ್ಯೆ ನಿತ್ಯ ಜೀವನದ ಚರ್ಯೆಯಾಗಿತ್ತು. ಅದಕ್ಕೂ ಒಂದು ಉತ್ತಮ ಕೈಪಿಡಿ ರಚಿತವಾಯಿತು, ಅರಿಸ್ಟಾಟಲನಿಂದ. ಭಾಷಣದ ಜಿಜ್ಞಾಸೆಯ ಮೂಲಕ ಗದ್ಯದ ವಿಚಾರವನ್ನೂ ಆತ ಚೆನ್ನಾಗಿ ಪರಿಶೀಲಿಸಿದ. ಮುಂದೆ ನೂರಾರು ವರ್ಷ ಆ ಪುಸ್ತಕಕ್ಕೆ ಮರ್ಯಾದೆ ದೊರಕಿತೇ ವಿನಾ ಅವನ ಕಾವ್ಯಕಲೆಗಲ್ಲ. ಎಂದರೆ ನಮ್ಮ ದೃಷ್ಟಿಗೆ ಎಷ್ಟೇ ಘನ ವಿಮರ್ಶಕನಾಗಿ ಅರಿಸ್ಟಾಟಲ್ ಕಾಣಬಂದರೂ ಸಾಹಿತ್ಯವಿಮರ್ಶೆಗೆ ಮುಖ್ಯವೃತ್ತಿಯ ಪದವಿಯನ್ನು ಹೊಂದಿಸಿಕೊಡುವುದು ಆಗಲಿಲ್ಲ, ಅವನಿಂದ ಕೂಡ. ವಾಗ್ಮಿತೆಯ ಆಕರ್ಷಣೆಗೆ ಕುಂದು ತಟ್ಟಲಿಲ್ಲ. ಪ್ರಜಾಪ್ರಭುತ್ವ ಕುಸಿದುಬಿದ್ದು ಚಕ್ರಾಧಿಪತ್ಯ ಏರ್ಪಟ್ಟ ಮೇಲೂ ಆ ಕಲೆಗೆ ಪ್ರೋತ್ಸಾಹ ಕಡಿಮೆಯಾಗಲಿಲ್ಲ. ಯುವಕರ ವಿದ್ಯಾಭ್ಯಾಸಕ್ಕೆ ವ್ಯಾಕರಣ ತರ್ಕಗಳೊಂದಿಗೆ ಅದೂ ಒಂದು ಪಠ್ಯವಾಯಿತು.

ಹೆಲನಿಸ್ಟಿಕ್ ಅಥವಾ ಅಲೆಕ್ಸಾಂಡ್ರಿಯನ್ ಅವಧಿಯಲ್ಲಿ ಅನೇಕ ಮಹಾಪಂಡಿತರು ಆಗಿಬಂದರು. ಪ್ಲೋಟಿನಸ್, ಪ್ರೋಕ್ಲಸ್, ಪಾರ್ಫೈರಿ, ಮೆಲೀಗರ್, ಹರ್ಮೋಜೀನಿಸ್, ಡಿಮೆಟ್ರಿಯಸ್ ಮುಂತಾದವರಿಗೆ ವಿಶೇಷ ಸನ್ಮಾನತೆಯಿತ್ತು. ಭಾಷಣ ವಿದ್ಯೆಯೇ ಅವರ ಪ್ರಧಾನ ಆಸಕ್ತಿಯಾಗಿದ್ದರೂ ಸಾಹಿತ್ಯದ ಗೋಜನ್ನು ಅವರು ಬಿಡಲಾಗಲಿಲ್ಲ ಅಥವಾ ಬಿಡಲೊಲ್ಲದೆ ಹೋದರು. ಏತಕ್ಕೆಂದರೆ ವಾದಚಾತುರ್ಯ, ಯುಕ್ತ್ಯಾಲಂಕಾರ, ಉಪಕ್ರಮ, ಮುಕ್ತಾಯ ಮುಂತಾದವಕ್ಕೆಲ್ಲ ಸಾಹಿತ್ಯದಿಂದಲೇ ಸೂಕ್ತ ನಿದರ್ಶನ ಬರಬೇಕಲ್ಲವೇ? ಹೋಮರನನ್ನೂ ಮೂರು ರುದ್ರನಾಟಕಕಾರರನ್ನೂ ಆ ವಿದ್ವಾಂಸರು ಪಠಿಸಿದಂತೆ ಯಾವ ವಿಮರ್ಶಕನೂ ಪಠಿಸಲಾರ. ಹೀಗಾಗಿ ಭಾಷಣವಿದ್ಯೆ ಬರುತ್ತ ಬರುತ್ತ ಸಾಹಿತ್ಯವಿಮರ್ಶೆಯನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ತನ್ನೊಳಕ್ಕೆ ಸೇರಿಸಿಕೊಂಡಿತು. ಸಾವಿರಾರು ನಾಡುನುಡಿಗಳು (ಎಪಿಗ್ರ್ಯಾಮ್) ಪ್ರಚುರಗೊಂಡುವು. ಅವುಗಳಲ್ಲಿ ಹಲವು ಅತ್ಯುತ್ತಮ ವಿಮರ್ಶೆಯ ಕಿಂಚಿತ್ ಛಾಯೆಯಿಂದ ಆಹ್ಲಾದಕರವಾಗಿವೆ. ವಾಗ್ಮಿವಿದ್ಯೆಯ ಆವಶ್ಯಕತೆಯೂ ಮಹತ್ವವೂ ರೋಮನರ ಕಾಲದಲ್ಲಿ ಹೆಚ್ಚಾದುವೇ ಹೊರತು ಕಡಿಮೆಯಾಗಲಿಲ್ಲ.

ರೋಮನರಿಗೆ ಗ್ರೀಕ್ ಭಾಷೆಯನ್ನು ಕಂಡರೆ ಅತೀವ ವ್ಯಾಮೋಹ. ಸುಸಂಸ್ಕೃತ ಪುರುಷರೆಲ್ಲರೂ ಸ್ವಂತ ನುಡಿಯಾದ ಲ್ಯಾಟಿನ್ ಜೊತೆಗೆ ಗ್ರೀಕಿನಲ್ಲೂ ಬಲ್ಲವರಾಗಿದ್ದರು. ಸಿಸಿರೊ ಲ್ಯಾಟಿನ್ ಗದ್ಯದ ಸೀಮಾಪುರುಷರಲ್ಲಿ ಅತಿ ಗಣ್ಯನಾದವ; ಅವನು ಸಮಯ ಸಿಕ್ಕಿದಾಗಲೆಲ್ಲ ಮಾತನಾಡುತ್ತಿದ್ದುದು ಗ್ರೀಕ್. ಕೆಲವು ವಿದ್ವಾಂಸರು ಗ್ರೀಕಿನಲ್ಲೇ ಗ್ರಂಥ ಬರೆದರು. ಪ್ಲೂಟಾರ್ಕನ ಹೆಸರು ಜಗದ್ವಿಖ್ಯಾತವಾದುದು. ಅವನಿಗೆ ಸಾಹಿತ್ಯದ ವಿಚಾರ ಮುಖ್ಯವಾಗಿರಲಿಲ್ಲ. ಡೆಮಾಸ್ತನೀಸ್ ಸಿಸಿರೊಗಳನ್ನು ಹೋಲಿಸಿ ಬರೆದ ಪ್ರಬಂಧದಲ್ಲೂ ಸಾಹಿತ್ಯಸಂಬಂಧಿಯಾದ ವಾಕ್ಯಗಳು ವಿರಳ. ಪ್ರಾಯಶಃ ಅವನಿಗೆ ಗೊತ್ತಿದ್ದ ಲ್ಯಾಟಿನ್ ಬಡಕಲೋ ಏನೊ! ಭಾಷಣವಿದ್ಯೆಯ ಬೋಧಕರಲ್ಲಿ ಒಬ್ಬನಾದ ಲ್ಯೂಸಿಯನ್ ಅರಿಸ್ಟೋಫೇನೀಸನಂತೆ ಅವಹೇಳನಕುಶಲಿ, ನಾವೀನ್ಯದ ವೈರಿ. ಶುದ್ಧಶೈಲಿಯ ಉಪಾಸಕ, ಮಿತತ್ತ್ವದ ಮತ್ತು ಮಧ್ಯಮ ಮಾರ್ಗದ ಪ್ರೇಮಿ. ವಿಮರ್ಶಕನಾಗುವ ವ್ಯಕ್ತಿತ್ವ ಅವನಲ್ಲಿ ಅಂಕುರವಾಗಿದ್ದರೂ ಅದು ಎಲೆಗೂಡಲಿಲ್ಲ, ಹೂಬಿಡಲಿಲ್ಲ.

ಸಾಂಸ್ಕೃತಿಕ ಪರಿಸ್ಥಿತಿ ಹೀಗಿದ್ದರೂ ಪ್ರ.ಶ. ಸು. 250ರಲ್ಲಿ ಉತ್ಕೃಷ್ಟತೆಯಲ್ಲಿದ್ದ ಒಬ್ಬ ವಿಮರ್ಶಕನನ್ನು ಬಹುವಾಗಿ ಶ್ಲಾಘಿಸಲಾಗಿದೆ. ಅವನ ಹೆಸರು ಲಾಂಜೈನಸ್, ನಡೆದಾಡುವ ಪುಸ್ತಕಭಂಡಾರ, ಸಚೇತನ ವಿಶ್ವಕೋಶ–ಎಂಬ ವರ್ಣನೆ ಅವನದ್ದಾಗಿದ್ದಿತಂತೆ. ಅವನ ಒಂದು ಕಿರು ಹೊತ್ತಿಗೆ ಉಪಲಬ್ಧವಾಗಿದೆ. ಅದಕ್ಕೆ ಅಂಟಿಸಿರುವ ಈಚಿನ ಹೆಸರು ಭವ್ಯತೆಯನ್ನು ಕುರಿತು–ಎಂದು. ಅದು ಅಸಮರ್ಪಕವೆಂದು ಕೆಲವು ನುರಿತ ವಿದ್ವಾಂಸರ ಅಭಿಪ್ರಾಯ. ವಾಗ್ವಿಭವೋನ್ನತಿ–ಎಂಬ ನಾಮಧೇಯ ಉಚಿತವೆಂದು ಅವರ ಹೇಳಿಕೆ. ಗ್ರಂಥದಲ್ಲಿ ಉದ್ದಕ್ಕೂ ಸತ್ತ್ವಮಯವಾದ ರಸವದ್ವಾಕ್ಯಗಳು ನರ್ತನಗೈಯುತ್ತವೆ. ಕಾವ್ಯ ಹೇಗೆ ಮಹೋನ್ನತವಾಗಬಲ್ಲುದು ಎಂಬುದನ್ನು ಸೂಕ್ಷ್ಮ ವಿವೇಚನೆಯಿಂದಲೂ ಭಾವಪೂರಿತವಾಗಿಯೂ ಮನವೊಪ್ಪಿಸುವ ಉಜ್ಜ್ವಲ ನುಡಿಯಿಂದಲೂ ಲಾಂಜೈನಸನಂತೆ ವಿವರಿಸಬಲ್ಲ ಜಾಣರು ವಿರಳ. ಕಾವ್ಯ ಶ್ರೇಷ್ಠವೆನಿಸುವುದು ನೀತಿಬೋಧೆಯಿಂದಲ್ಲ, ಓದುಗರಿಗೆ ಪರವಶತೆಯನ್ನುಂಟು ಮಾಡುವುದರಿಂದ. ಮಹೋನ್ನತ ಶೈಲಿಗೆ ಉದಾತ್ತ ಭಾವನೆಗಳೂ ಧಾರಾಳ ಮನಸ್ಸೂ ಸೂಕ್ತ ರಾಗಾವೇಶವೂ ಅಲಂಕಾರಪ್ರಾವೀಣ್ಯವೂ ಅಮೋಘವಾಗ್ಜಾಲವೂ ಉತ್ಕೃಷ್ಟ ಸಂಯೋಜನೆಯೂ ಕಾರಣ. ಸರಿಯಾದ ಉದಾಹರಣೆಗಳ ಮೂಲಕ ಹೇಗೆ ಮಹೋನ್ನತಿ ಕುದುರಿದೆ, ಎಲ್ಲಿ ಅದರ ಆಭಾಸ ಉಂಟಾಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ. ಯಾವ ಅಂಶವನ್ನೇ ಚರ್ಚಿಸುತ್ತಿರಲಿ ಅವನ ಉಕ್ತಿ ತತ್‌ಕ್ಷಣ ನಮ್ಮ ಮನಸ್ಸನ್ನು ಒಲಿಸಿಕೊಳ್ಳುತ್ತದೆ. ದೋಷವಿಲ್ಲದಿರುವಿಕೆ ಎಂಬ ವಿಷಯದಲ್ಲಿ ಅವನದೇ ಕೊನೆಯ ಮಾತು ಎನ್ನಬಹುದು. ಸಾಹಿತ್ಯವನ್ನು ಸಾಹಿತ್ಯವಾಗಿಯೇ ವಿಮರ್ಶಿಸಿದವರಲ್ಲಿ ಅವನೇ ಮೊಟ್ಟಮೊದಲಿಗ. ಲಾಂಜೈನಸ್ ಏಕಾಂಗಿ. ಅವನ ಸನಿಯಕ್ಕೆ ಬರಬಲ್ಲವರು ಹಾಗಿರಲಿ, ಅವನ ಪಥದಲ್ಲಿ ಹೆಜ್ಜೆಯಿಡಲು ಬಯಸಿದ ವಿದ್ವಾಂಸನೊಬ್ಬನೂ ಸಾಹಿತ್ಯ ಚರಿತ್ರೆಯಲ್ಲಿ ನಮಗೆ ಕಾಣಸಿಗರು.

ರೋಮನರಿಗೆ ಗ್ರೀಕರಿಂದ ಆದ ಅನುಕೂಲಗಳಲ್ಲಿ ಮುಖ್ಯವಾದದ್ದು ಇದು; ತಮ್ಮ ಮುಂದಿದ್ದ ವಿಶಾಲ ಗ್ರೀಕ್ ಸಾಹಿತ್ಯದೊಡನೆ ತಮ್ಮ ಸಾಹಿತ್ಯವನ್ನು ಹೋಲಿಸಿ, ತೂಕಮಾಡಿ, ಬೆಲೆ ನಿಷ್ಕರ್ಷಿಸಿ, ವಿಮರ್ಶೆಗೆ ತಿರುಳನ್ನೂ ಸ್ವಾರಸ್ಯವನ್ನೂ ಅವರು ತಂದುಕೊಂಡರು. ಆದರೆ ಅವರು ಸ್ವಭಾವತಃ ಕಾರ್ಯಪಟುಗಳು, ಆಲೋಚನಾ ಪರರಲ್ಲ. ಎರಡನೆಯದಾಗಿ ಲ್ಯಾಟಿನ್ ಸಾಹಿತ್ಯಕ್ಕೆ ಪುಷ್ಟಿ ಕಡಿಮೆಯಾಗಿತ್ತು. ದಣಿಯ ಹಿಂದೆ ಆಳುಗಳು ನಡೆಯುವಂತೆ ವರ್ಜಿಲ್ ಹೋಮರನನ್ನೂ ಸೆನೆಕ ಯೂರಿಪಿಡೀಸನನ್ನೂ ಹೊರೇಸ್ ಅರಿಸ್ಟಾಟಲನನ್ನೂ ಭಯಭಕ್ತಿಯಿಂದ ಹಿಂಬಾಲಿಸಿದರು. ಪ್ರತಿಭಾಶಾಲಿಗಳೇ ಹೀಗೆ ಮಾಡಿದ ಮೇಲೆ ಸಾಧಾರಣ ಸಾಹಿತಿಗಳ ಗತಿಯೇನು! ಲುಕ್ರೀಷಿಯಸ್ ಮತ್ತು ಕ್ಯಾಟಲಸ್ ಇಬ್ಬರೇ ಸ್ವಾವಲಂಬಿಗಳಾಗಿ ಸ್ವತಂತ್ರ ಹಾದಿಯಲ್ಲಿ ಮುಂದುವರಿದು ಅಪ್ಪಟ ರೋಮನರಾದರು; ಆದರೆ ಅವರಿಗೆ ಸಂದಗೌರವ ಅಷ್ಟೇನೂ ಹೇಳುವಂಥದ್ದಲ್ಲ.

ಇದರಿಂದ ಏನು ಉಪಯೋಗ ಎಂಬುದು ರೋಮನರ ಜಾಯಮಾನ. ಭಾಷಣವಿದ್ಯೆ ಅವರಿಗೆ ಬಹುವಾಗಿ ಬೇಕಾಯಿತು. ವಾಗ್ಮಿತೆಯಲ್ಲಿ ಅವರು ಗ್ರೀಕರನ್ನು ಸರಿಗಟ್ಟಬಹುದಾಗಿತ್ತು. ಆದ್ದರಿಂದ ಭಾಷಣವಿದ್ಯೆಯ ಬೋಧಕರೂ ಗ್ರಂಥಕರ್ತರೂ ವ್ಯಾಖ್ಯಾನಕಾರರೂ ಐದನೆಯ ಶತಮಾನದ ಅಂತ್ಯದವರೆಗೂ ಉದಿಸಿಬಂದು ನೇರವಾಗಿ ಅಲ್ಲದಿದ್ದರೂ ಸಾಹಿತ್ಯದ ಮಾತುಕಥೆಯನ್ನು ಪಾಲಿಸಿಕೊಂಡರು. ಅವರಲ್ಲಿ ಕ್ವಿಂಟಿಲಿಯನ್ ಮುಖ್ಯಸ್ಥ. ಅವನೇನೂ ಪ್ರತಿಭಾವಂತನಲ್ಲ. ಆದರೆ ವಾಗ್ಮಿತೆಯ ಸೂತ್ರಗಳಿಗೆ ಉದಾಹರಣೆಗೋಸ್ಕರ ಅವನು ಸಾಹಿತ್ಯವನ್ನು ಆ ಕಡೆಯಿಂದ ಈ ಕಡೆಯವರೆಗೆ ಅಭ್ಯಾಸ ಮಾಡಿದ. ಆಗೊಮ್ಮೆ ಈಗೊಮ್ಮೆ ಅವನ ವದನದಿಂದ ಸಾಹಿತ್ಯವಿಮರ್ಶೆ ಉದುರುತ್ತದೆ–ಅದೂ ಸಾಹಿತ್ಯದ ಮೇಲಣ ಮಮತೆಯಿಂದಲ್ಲ, ವ್ಯಾವಹಾರಿಕ ದಕ್ಷತೆಯ ಸಾಧನೆಗೋಸ್ಕರ. ಸಾಹಿತ್ಯ ಭಾಗಗಳನ್ನು ಉದ್ಧರಿಸದೇ ಬಿಟ್ಟರೆ ಯಾವ ವಕೀಲನಾಗಲಿ ಸೆನೆಟ್ ಸಭಾಸದನಾಗಲಿ ಶೋಭಿಸುವುದಿಲ್ಲವೆಂಬುದು ಅವನ ಭಾವನೆ.

ರೋಮನ್ ಯುಗದಲ್ಲಿ ಅವತರಿಸಿದ ಒಬ್ಬ ಸಾಹಿತಿಗೆ ವಿಮರ್ಶಕನೆಂಬ ಅಪಾರ ಖ್ಯಾತಿ ಒದಗಿಬಂತು. ಕೆಲಕಾಲ ಅವನು ಅರಿಸ್ಟಾಟಲನನ್ನು ಹಿಂದೆ ಹಾಕಿದ. ಬಹಳ ಕಾಲ ಅವನೊಡನೆ ಸಹ ಸಿಂಹಾಸನರೂಢನಾಗಿ ವಿಮರ್ಶಾಸಾಮ್ರಾಜ್ಯವನ್ನು ಆಳಿದ. ಅವನೇ ಹೊರೇಸ್. ಹೊರೇಸ್ ನಿಜವಾಗಿ ಕವಿ, ಮೃದು ವಿಡಂಬನಕಾರ, ಕುಶಲ ಪತ್ರದ ರೀತಿಯ ಲಲಿತಪ್ರಬಂಧಕಾರ. ಉದ್ದೇಶಪೂರ್ವಕವಾಗಿ ಅವನೆಂದೂ ವಿಮರ್ಶೆ ಬರೆದವನಲ್ಲ. ಆದರೂ ಅವನ ಒಂದು ಪದ್ಯಪ್ರಬಂಧ ಕಾವ್ಯಕಲೆ ಎಂಬ ಹೆಸರನ್ನು ಹೊತ್ತು ವಿಮರ್ಶೆಯ ಪ್ರಸ್ಥಾನ ಗ್ರಂಥವಾಯಿತು. ಅದರಲ್ಲಿ ಗಾಢ ಚಿಂತನೆಯ ಗಂಭೀರತೆಗೂ ಭಾವಾವೇಶದ ಉರವಣೆಗೂ ಆಸ್ಪದವಿಲ್ಲ. ಎಲ್ಲೆಲ್ಲೂ ಸರಳವೂ ಸ್ಪಷ್ಟವೂ ವಿವೇಕಯುಕ್ತವೂ ಒಲಿಸಿಕೊಳ್ಳತಕ್ಕವೂ ಆದ ನಿಯಮಾವಳಿಗಳಿವೆ. ಅವು ಸ್ಥಾನದರ್ಪದಿಂದ ಜರುಗುವ ಆಜ್ಞೆಗಳಲ್ಲ, ಅನುಭವಪೂರ್ಣನಾದ ಹಿರಿಯಣ್ಣ ಕೊಡುವ ಸವಿ ಹಿತೋಪದೇಶಗಳು. ಹೊರೇಸನದು ಸೂತ್ರೋಚ್ಚಾರ ವಿಮರ್ಶೆಯಾದರೂ (ಪ್ರಿಸ್ಕ್ರಿಪ್ಟಿವ್ ಕ್ರಿಟಿಸಿಸಂ) ಉಚ್ಚರಿಸುವವ ಸುಶಿಕ್ಷಿತ ಸಂಭಾವಿತನಾಗಿ ನಾಗರಿಕ ವಿನಯ ಮರ್ಯಾದೆಯನ್ನು ಸದಾ ಪಾಲಿಸುವವನಾದ್ದರಿಂದ ರಸಾಹ್ಲಾದ ಉಂಟಾಗುತ್ತದೆಯೇ ಹೊರತು ಆಕ್ರೋಶ ಉತ್ಪತ್ತಿಯಾಗುವುದಿಲ್ಲ. ಅವುಗಳ ಸಾರಸರ್ವಸ್ವವನ್ನೂ ಔಚಿತ್ಯವೆಂಬ ಒಂದೇ ಶಬ್ದದಲ್ಲಿ ಅಡಕ ಮಾಡಬಹುದು. ಕಾವ್ಯ ಪ್ರಕಾರ ಯಾವುದೆಂಬುದನ್ನು ಮರೆಯದಿರಿ, ನಾಟಕಕ್ಕೆ ಐದಂಕವೇ ಇರತಕ್ಕದ್ದು ರೌದ್ರಕೃತ್ಯವಾವುದೂ ರಂಗದ ಮೇಲೆ ಜರುಗಕೂಡದು, ಪ್ರಸ್ತಾವಕ್ಕೂ ಪಾತ್ರಕ್ಕೂ ಅನುಗುಣವಾದ ಮಾತನ್ನೇ ಬಳಸಿ, ಗ್ರೀಕ್ ಗ್ರಂಥಗಳನ್ನು ಹಗಲೂ ಇರುಳೂ ಪಠಿಸಿ–ಇತ್ಯಾದಿ ಸಾರಸ್ವತ ಸಲಹೆಗಳು ಇಡೀ ಯುರೋಪಿಗೇ ಪ್ರಿಯವಾದವು. ಹೊರೇಸನ ನುಡಿಗಳು ನಾಣ್ಣುಡಿಯಂತೆ ಕ್ಷಿಪ್ರಗ್ರಾಹ್ಯವಾದವು, ಸಾಟಿ ನಿಲ್ಲಬಲ್ಲಂಥವು, ಅತ್ಯಂತ ತೃಪ್ತಿಕರವಾದವು. ಅವನ ಅಪಾರ ಪ್ರಶಸ್ತಿ ನ್ಯಾಯವಾದದ್ದೇ.

ಹೊರೇಸ್

ಮಧ್ಯಯುಗ ಸಾಹಿತ್ಯ ವಿಮರ್ಶೆಯ ಕಾಲವಲ್ಲ–ಎಂದು ಕೆಲವು ವಿದ್ವಾಂಸರು, ತೀರ್ಪಿತ್ತಿದ್ದಾರೆ. ಅದು ಅಕ್ಷರಶಃ ನಿಜವಲ್ಲ. ಆಗ ವಿದ್ಯಾವಂತ ವರ್ಗ ಒಂದಲ್ಲ ಒಂದು ಬಗೆಯಲ್ಲಿ ಕ್ರೈಸ್ತ ಚರ್ಚಿಗೆ ಸಂಬಂಧಿಸಿದ್ದರಿಂದ ಅವರ ಹಂಗಿನ ವಿಷಯ ದೇವತಾಶಾಸ್ತ್ರವಾಗಿತ್ತು (ಥಿಯಾಲಜಿ). ಕಾವ್ಯನಾಟಕಾದಿ ಬರೆಹವನ್ನು ಕೇವಲ ಭಾಷಾಜ್ಞಾನದ ಉಪಕರಣವನ್ನಾಗಿ ಉಪಯೋಗಿಸಿಕೊಂಡು ಕೈಬಿಡತಕ್ಕದ್ದಲ್ಲದೆ ಅವಕ್ಕೆ ಚಿತ್ರವನ್ನು ಸೂರೆಗೊಡಬಾರದು–ಎಂದು ಅವರ ದೃಢನಿರ್ಧಾರ. ಅವರ ಕಠಿಣದೃಷ್ಟಿಗೆ ಗ್ರೀಕ್ ಲ್ಯಾಟಿನ್ ಸಾಹಿತ್ಯವೆಲ್ಲ ಮ್ಲೇಚ್ಛಸಾಹಿತ್ಯ (ಪೇಗನ್ ಲಿಟರೇಚರ್). ಅದರ ಕಡೆಗೆ ಮನಸ್ಸನ್ನು ತಿರುಗಿಸುವುದು ಪಾಪಕಾರ್ಯ. ನಾಟಕವನ್ನು ನೋಡುವವರಿಗೆ ನರಕ ಕಾದಿದೆ. ರಸವ್ಯಾಸಂಗ ಬೇಕಾದರೆ ಮಹಾ ಸಾಹಿತ್ಯವಾದ ಬೈಬಲ್ ಇಲ್ಲವೆ? ಎಷ್ಟು ಸಾರಿ ಅದನ್ನು ಓದಿದರೆ ತಾನೆ ತಣಿವುಂಟಾದೀತು!

ಆ ವಿದ್ಯಾವಂತರ ಭಾಷೆ ಸಾಮಾನ್ಯವಾಗಿ ಲ್ಯಾಟಿನ್–ವರ್ಜಿಲ್ ಸಿಸಿರೊ ಹೊರೇಸರ ಗ್ರಾಂಥಿಕ ಲ್ಯಾಟಿನ್. ಕೆಳದರ್ಜೆಯ ಲ್ಯಾಟಿನ್ ಮಿಶ್ರವಾದ ದೇಶಭಾಷೆಗಳೂ ಮಧ್ಯಯುಗದಲ್ಲಿ ಬೆಳೆದುಬಂದುವಲ್ಲದೆ ಅವುಗಳಲ್ಲಿ ನೂರಾರು ಯೋಗ್ಯ ಅದ್ಭುತ ಕಥೆಗಳೂ (ರೊಮಾನ್ಸ್) ಸಾವಿರಾರು ಭಾವಗೀತೆಗಳೂ ಹುಟ್ಟಿ ಬಂದುವು. ಆದರೆ ಅವುಗಳ ಕಡೆಗೆ ಪಂಡಿತರ ಗಮನ ಹರಿಯಲೇ ಇಲ್ಲ. ಅವು ಮಧ್ಯಯುಗದ ಪರಮ ಸಾಹಿತ್ಯ ಎಂಬ ನಿಜಾಂಶ ಯುರೋಪಿಗೆ ಅರಿವಾದದ್ದು 18ನೆಯ ಶತಮಾನದ ಎರಡನೆಯ ಭಾಗದಲ್ಲಿ. ಚರ್ಚಿನ ಆಶ್ರಯದಲ್ಲೇ ರಹಸ್ಯಗಳು, ಪವಾಡಗಳು, ನೀತಿರೂಪಕಗಳು–ಎಂಬ ಮೂರು ಬಗೆಯ ನಾಟಕಗಳು ಮೂಡಿಬಂದುವು. ಅವುಗಳಲ್ಲಿ ಉಪದೇಶ ಹೆಚ್ಚು, ಕಾವ್ಯಾಂಶ ಕಡಿಮೆ. ಅವಕ್ಕೆ ಟ್ರ್ಯಾಜಡಿ, ಕಾಮೆಡಿ–ಎಂಬ ಅಂಕಿತವನ್ನು ಯಾರೂ ಅಂಟಿಸುತ್ತಿರಲಿಲ್ಲ. ಒಂದು ಬಗೆಯ ದೃಷ್ಟಾಂತ ಕಥೆ ಪ್ರಚಾರಕ್ಕೆ ಬಂತು. ಉನ್ನತ ಸ್ಥಾನ ಸಂಪತ್ತಿನಲ್ಲಿ ಇದ್ದು ಬಲು ಸೊಕ್ಕಿ ಪಾತಕಮಾಡಿ ಕೆಳಗುರುಳಿದವನ ಪ್ರಕರಣವೂ ಅದೃಷ್ಟದೇವಿಯ ಅನಿಮಿತ್ತ ಆಗ್ರಹಕ್ಕೆ ಪಕ್ಕಾಗಿ ಬಂತು. ಉನ್ನತ ಸ್ಥಾನ ಸಂಪತ್ತಿನಲ್ಲಿ ಇದ್ದು ಬಲು ಸೊಕ್ಕಿ ಪಾತಕಮಾಡಿ ಕೆಳಗುರುಳಿದವನ ಪ್ರಕರಣವೂ ಆ ಕಥೆಯ ವಿಷಯ. ಅದಕ್ಕೇ ಮಧ್ಯಯುಗದಲ್ಲಿ ಟ್ರ್ಯಾಜಡಿ ಎಂಬ ಹೆಸರು. ಹೀಗೆ ಕೊಂಚಮಟ್ಟಿಗಾದರೂ ಸಾಹಿತ್ಯವಿಮರ್ಶೆ ನಡೆಯುತ್ತಲೇ ಇತ್ತು, ಮಧ್ಯಯುಗದಲ್ಲಿ.

ಅಲ್ಲದೆ ಭಾಷಣವಿದ್ಯೆ ಕಡ್ಡಾಯವಾಗಿ ವಿದ್ಯಾಶಾಲೆಗಳಲ್ಲಿ ಬೋಧನ ಭಾಗವಾಗಿತ್ತು. ಬೀಡ್, ಇಸಿಡೋರ್, ಆಗಸ್ಟೀನ್, ಅಪೊಲೋನಿಯಸ್, ಕ್ಯಾಸಿಯೋಡರಸ್, ಬೋಅಿರೆಯಸ್ ಮೊದಲಾದವರು ಅದರಲ್ಲಿ ಪರಿಣತರಾಗಿದ್ದರು. ಅವರು ಹೊರೇಸ್, ಕ್ವಿಂಟಲಿಯನರನ್ನು ಅನುಸರಿಸಿದರು. ಉದಾಹರಣೆಗಾಗಿ ಕಾವ್ಯಭಾಗಗಳನ್ನು ಉಪಯೋಗಿಸಲೇಬೇಕಾಯಿತು. ತತ್ತ್ವಶಾಸ್ತ್ರದ ಮತ್ತು ದೇವತಾಶಾಸ್ತ್ರದ ತೊತ್ತಿನಂತೆ ಕಾವ್ಯ ಜೀತ ದುಡಿದರೆ ಪರವಾಯಿಲ್ಲ, ಎಂಬುದೇ ಅವರ ಸಮಾಧಾನ.

ಆದರೂ ಕಾವ್ಯವನ್ನು ಕುರಿತು ಮಧ್ಯಯುಗದ ಮುಖಂಡರಿಗೆ ಜುಗುಪ್ಸೆ. ಹಿಂದೆ ಪ್ಲೇಟೊ ನುಡಿದಿದ್ದಂಥ ಆಕ್ಷೇಪವನ್ನೇ ಅವರು ಎತ್ತಿ ಆಡಿದರು. ತಮ್ಮ ದೂರಿಗೆ ವ್ಯಾವಹಾರಿಕ ಕಾರಣ ಮುಂದಿಡುವುದು ಅವರ ನಡೆವಳಿಕೆ. ಎಷ್ಟೇ ಆದರೂ ಕಾವ್ಯಸುಳ್ಳಿನ ಕಂತೆ, ಕಟ್ಟುಕಥೆಯ ಬೊಂತೆ; ಅದರಲ್ಲಿ ತುಂಬಿರುವ ಅಶ್ಲೀಲತೆ ದೈವ ದೂಷಣೆಗಳಿಂದ ಕೆಡುಕೇ ವಿನಾ ಒಳ್ಳೆಯದಲ್ಲ; ಅದು ಚಿತ್ತವನ್ನು ಬಡಿದೆಬ್ಬಿಸಿ ಶಾಂತಿಭಂಗಕ್ಕೆ ದೂಡುತ್ತದೆ. ಮನುಷ್ಯನನ್ನು, ಮ್ಲೇಚ್ಛ ದೇವತೆಗಳನ್ನು ತರುವುದರಿಂದ ಕ್ರೈಸ್ತಮತಕ್ಕೆ ಅದು ವಿರೋಧಿ. ಕಾವ್ಯದಿಂದ ನಡತೆಯನ್ನು ತಿದ್ದುವುದು ಹೇಗೆ? ಇಂಥ ಅಭಿಪ್ರಾಯಗಳನ್ನು ಟರ್ಟುಲಿಯನ್, ಇಸಿಡೋರ್, ಅಕ್ವಿನಸ್ ಮುಂತಾದವರು ಕಟುವಾಗಿ ಹೇಳಿದರು. ಅವರದೇ ಬಲಿಷ್ಠ ಪಕ್ಷ.

ಇನ್ನೊಂದು ಪಕ್ಷವೂ ಇತ್ತೆಂಬುದನ್ನು ಲಕ್ಷಿಸಬೇಕು. ಕಾವ್ಯವನ್ನು ತೀರ ಕೆಟ್ಟದ್ದಲ್ಲವೆಂದೂ ಸ್ವೀಕರಣೀಯವೆಂದೂ ಸಮರ್ಥನ ಮಾಡಲೋಸುಗ ಅವರಲ್ಲಿ ಕೆಲವರು ಯತ್ನಿಸಿದರು. ಕಾವ್ಯದಲ್ಲಿ ಮುಖ್ಯವಾದದ್ದು ಅದರ ಅಭಿಧಾರ್ಥವಲ್ಲ, ಅನ್ಯಾರ್ಥ (ಅಲೆಗೊರಿ) ಎಂದು ಅವರ ವಾದ. ಹರ್‌ಕ್ಯುಲೀಸ್ ಥೀಸಿಯಸ್ ಮುಂತಾದ ವೀರರನ್ನು ಆದಿಕಾಲದ ಜ್ಞಾನಿಗಳಂತೆ ಭಾವಿಸತಕ್ಕದ್ದು. ದುಶ್ಶಾಳಿಗಳನ್ನೂ ಭಾವಾತಿರೇಕವನ್ನೂ ಎದುರಿಸಿ ಬಗ್ಗುಬಡಿಯುವುದೇ ಅವರ ನಿಜ ಸಾಹಸ. ಅವರು ಒಂದು ರೀತಿ ಮ್ಲೇಚ್ಛ ಸಂತರು. ಅನ್ಯಾರ್ಥ ಸಂಕೇತವನ್ನು ಆಮೇಲೆ ಬೈಬಲಿನ ಹಳೆಯ ಒಡಂಬಡಿಕೆಯ ಏಬ್ರಹಾಂ, ಆಡಂ, ಈವ್ ಮತ್ತು ಜೇಕಬರಿಗೂ ಅನ್ವಯಿಸಿದರು. ಆರನೆಯ ಶತಮಾನದ ಫುಲ್ಜೆಂಟಿಯಸನಿಂದ ಹದಿನಾಲ್ಕರ ಪೆಟ್ರಾರ್ಕನವರೆಗೂ ಅನ್ಯಾರ್ಥ ಪ್ರತಿಪಾದನೆಯೇ ಸಮರ್ಪಕ ಸಾಹಿತ್ಯವಿಮರ್ಶೆಯೆಂಬ ಅಭಿಪ್ರಾಯ ಬಳಕೆಯಲ್ಲಿತ್ತು. ಕಾವ್ಯಕ್ಕೆ ವ್ಯಕ್ತಾರ್ಥ, ನೀತ್ಯರ್ಥ–ಈ ಮೂರೂ ಸಲ್ಲುತ್ತವೆಂದು ಬಗೆಯಬೇಕು. ಡಾಂಟೆ ನಾಲ್ಕನೆಯದೊಂದನ್ನು ತಂದು ಸೇರಿಸಿದ. ಅದೇ ಗೂಢಾರ್ಥ ಅಥವಾ ಅತೀಂದ್ರಿಯಾರ್ಥ (ಅನಗೋಜಿ). ಅನ್ಯಾರ್ಥವಾದುದರಿಂದ ಕಾವ್ಯಕ್ಕೆ ಒಂದು ಬಗೆಯ ಆಶ್ರಯ ದೊರೆತರೂ ಅದು ಒಂದು ಸ್ವತಂತ್ರವ್ಯಾಪಾರವೆಂಬುದು ಸ್ಥಿರವಾಗಲಿಲ್ಲ. ದೇವತಾಶಾಸ್ತ್ರದ ಲೌಕಿಕರೂಪ ಅದು ಎಂದಾಯಿತು. ಆದರೆ ಪೆಟ್ರಾರ್ಕ್, ಬೊಕ್ಯಾಚ್ಚೊ ಇಬ್ಬರೂ ದೇವತಾಶಾಸ್ತ್ರ ಒಂದು ಬಗೆಯ ಕಾವ್ಯ, ದೇವರ ಕಾವ್ಯ, ಎಂದು ಯುಕ್ತಿಯುಕ್ತವಾಗಿ ವಾದಿಸಿದರು. ಅವರಿಗೆ ಬೈಬಲ್ ಒಂದು ಕಾವ್ಯವೆಂದು ನಿಶ್ಚಲ ನಂಬಿಕೆ. ಕಾವ್ಯಸಮರ್ಥನೆಯಲ್ಲಿ ಬೊಕ್ಯಾಚ್ಚೊ ಮೊಟ್ಟ ಮೊದಲಣ ಆಧುನಿಕ ಎಂದು ಕೆಲವರು ಹೊಗಳಿದ್ದಾರೆ. ಅವನ ಸಮರ್ಥನೆ ದಿಟವಾಗಿ ಆಧುನಿಕವಲ್ಲ ಮಧ್ಯಯುಗದ್ದು.

ದೇಶಕಾಲಗಳ ಸಂಕಲೆಯನ್ನು ಕಿತ್ತೊಗೆದು ವಿಶ್ವವ್ಯಾಪ್ತ ಅಮರ ವ್ಯಕ್ತಿಯಂತೆ ವಿಹರಿಸುವುದು ಪ್ರಚಂಡಪ್ರತಿಭಾವಂತನಿಗೆ ಸಾಧ್ಯ. ಅಂಥ ಮಹಾಮೇಧಾವಿ ಡಾಂಟೆ. ಅವನ ವಿಮರ್ಶೆ ಹೆಚ್ಚಾಗಿ ಭಾಷಾವಿಚಾರಕ್ಕೆ ಸೇರಿದ್ದು. ಪ್ರಾಸಂಗಿಕವಾಗಿ ಕಾವ್ಯದ ವಿಚಾರಕ್ಕೆ. ಇಟಲಿಯ ಪ್ರಾಂತಭಾಷೆಗಳ ಹೋಲಿಕೆ ಅವುಗಳ ಗುಣದೋಷ, ಟಸ್ಕನ್ ಭಾಷೆಯ ಹಿರಿಮೆ ಮುಂತಾದ ಜಿಜ್ಞಾಸೆಯಲ್ಲಿ ಅವನು ಅತ್ಯುತ್ತಮ ವಿಮರ್ಶಕನ ಲಕ್ಷಣವನ್ನು ಮೆರೆದ ಹಾಗೂ ಪದಗಳ ಸತ್ತ್ವ ಲಾವಣ್ಯಗಳನ್ನು ಅವನು ವಿಂಗಡಿಸಿ ವರ್ಣಿಸಿರುವ ರೀತಿಯೂ ಅದೇ ಬಗೆಯದೇ. ಅವನ ಹಲವು ಚಿಕ್ಕವಾಕ್ಯಗಳೂ ವಿಶೇಷಣಗಳೂ ವಿಮರ್ಶೆಯ ಪರಿಭಾಷೆಯಲ್ಲಿ ಸೇರಿಕೊಂಡಿವೆ. ಕಾವ್ಯದ ವಸ್ತು ಮೂರು; ಯುದ್ಧ, ಪ್ರೇಮ, ಸದ್ಗುಣ ಎಂದು ಅವನ ಅಭಿಮತ. ಶಬ್ದಗಳನ್ನು ಜರಡೆಯಾಡಿದ ಡಾಂಟೆಗೆ ಭಾಷಣವಿದ್ಯೆ ಹೊಲ್ಲ ಎನ್ನಿಸಿತು. ಅವನ ವಿಮರ್ಶೆ ಪ್ರಾಚೀನ ಗ್ರೀಕರ ವಿಮರ್ಶೆಗಿಂತಲೂ ಹೆಚ್ಚು ಉದಾರವಾದದ್ದು ಎಂದಿದ್ದಾರೆ. ಲಾಂಜೈನಸನಂತೆ ಡಾಂಟೆಯೂ ತನ್ನ ಯುಗದಲ್ಲಿ ಒಬ್ಬನೇ ಒಬ್ಬ. ಕಾವ್ಯದ ಬಾಹ್ಯರೂಪ ರಚನಾ ಕಟ್ಟುಪಾಡು ಯಾವುದೇ ಆಗಿರಲಿ ಅದರ ಆಳದಲ್ಲಿನ ಮೂಲ ಸಂಜ್ಞೆ ಸರಿಸುಮಾರಾಗಿ ಒಂದೇ ಗುರುತಿನದು; ಅದನ್ನು ಕಣ್ಣಿಟ್ಟು ನೋಡಿ ಇತರರ ಅವಗಾಹನೆಗೆ ನಿಸ್ಸಂದಿಗ್ಧವಾಗಿ ತರಬಲ್ಲ ವಿಮರ್ಶಕ ರಸಿಕರು ಬೇಡಿದಾಗಲೆಲ್ಲ ಎದ್ದು ಬರುವುದಿಲ್ಲ; ಸೃಷ್ಟಿದೇವಿ ತನ್ನ ಇಚ್ಛೆಯಂತೆ ಡಾಂಟೆಯಂಥ ಕವಿ ವಿಮರ್ಶಕನನ್ನು ಕಳಿಸುತ್ತಾಳೆ ಭೂಮಿಗೆ, ಲೋಕೋದ್ಧಾರಕ್ಕಾಗಿ.

ಹೊಸಹುಟ್ಟು (ನವೋದಯ; ರಿನೆಸಾನ್ಸ್) ಎಂಬುದು ಯುರೋಪಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ನಡೆದ ಒಂದು ದೊಡ್ಡ ಕ್ರಾಂತಿ. ಸು. 15ನೆಯ ಶತಮಾನದಲ್ಲಿ ಮೊದಲು ಇಟಲಿಯಲ್ಲಿ, ಅನಂತರ ಫ್ರಾನ್ಸ್ ಇಂಗ್ಲೆಂಡುಗಳಲ್ಲಿ ಅನಂತರ ಸ್ಪೇನ್, ಜರ್ಮನಿ ಮುಂತಾದ ಇತರ ರಾಷ್ಟ್ರಗಳಲ್ಲಿ ಪ್ರಾರಂಭಗೊಂಡ ನವೋದಯ ಸು. 1630ರ ವರೆಗೂ ಪ್ರಭಾವಯುಕ್ತವಾಗಿತ್ತು. ಆ ಯುಗದಲ್ಲಿ ಮನುಷ್ಯಜೀವನದ ಸಕಲ ಶಾಖೆಗಳಲ್ಲೂ ಸ್ಪಷ್ಟ ಬದಲಾವಣೆ ಉಂಟಾಯಿತು. ಇಲ್ಲಿ ನಮಗೆ ಪ್ರಕೃತವಾಗಿರುವುದು ಸಾಹಿತ್ಯವನ್ನೂ ಸಾಹಿತಿಗಳನ್ನೂ ಕುರಿತು ಆಲೋಚನಾಪರರಲ್ಲಿ ಆದ ದೃಷ್ಟಿ ವ್ಯತ್ಯಾಸ. ಅದಕ್ಕೆ ಮುಖ್ಯ ಕಾರಣ ಅಭಿಜಾತ (ಕ್ಲ್ಯಾಸಿಕಲ್) ಸಾಹಿತ್ಯದ ಪುನರ್ಗಳಿಕೆ. ಹಳೆಯ ಗ್ರೀಕ್ ಲ್ಯಾಟಿನ್ ಕವಿಗಳ ಮತ್ತು ದಾರ್ಶನಿಕರ ಗ್ರಂಥಗಳು ಮೂಲರೂಪದಲ್ಲಿ ಪಂಡಿತರಿಗೆ ಲಭ್ಯವಾದಾಗ ಅವರ ಅಚ್ಚರಿಗೂ ಮೆಚ್ಚಿಕೆಗೂ ಎಣೆಯಿರಲಿಲ್ಲ. ಆ ಪೇಗನ್ ಸಾಹಿತ್ಯದಲ್ಲಿ ಮೂಡಿಬಂದಿದ್ದ ಸಹಜವೂ ಶುದ್ಧವೂ ಆಳವೂ ವಿಶಾಲವೂ ಆದ ಮಾನವತೆಯನ್ನು ಪರಿಭಾವಿಸಿ ಅವರಿಗೆ ಒಂದು ಕಡೆ ನಿಬ್ಬೆರಗು, ಇನ್ನೊಂದು ಕಡೆ ಪರಮಾನಂದ, ಮತ್ತೊಂದು ಕಡೆ ಹುರುಪು ಹುಮ್ಮಸ್ಸು, ಮಗುದೊಂದು ಕಡೆ ಮಾನವ ಜೀವನದ ಹಿರಿಮೆಯಲ್ಲಿ ಭರವಸೆ. ಕ್ರಮೇಣ ಅವರಿಗೆ ಮಾನುಷ ದಾರ್ಶನಿಕರು (ಹ್ಯೂಮನಿಸ್ಟ್ಸ್) ಎಂಬ ಹೆಸರು ಬಂತು. ಗ್ರಂಥಗಳ ಸಂಗ್ರಹಣೆ, ಸಂಪಾದನೆ, ವ್ಯಾಖ್ಯಾನ, ಟಿಪ್ಪಣಿ ಇತ್ಯಾದಿ ಕಾರ್ಯಾವಳಿಯಲ್ಲಿ ಲೇಖಕರು ಆಸಕ್ತಿಯಿಂದ ನಿರತರಾದರು. ಅವರಿಗೆ ದೊರೆತ ಪುಸ್ತಕಗಡಣದಲ್ಲಿ ಬಹು ಮುಖ್ಯವಾದವುಗಳಲ್ಲಿ ಅರಿಸ್ಟಾಟಲನ ಕಾವ್ಯಕಲೆ ಅತಿ ಮುಖ್ಯವಾದುದು. ಆ ಕಾವ್ಯದೀಪಿಕೆಯ ಇತಿಹಾಸ ನಿಜವಾಗಿ ರೋಮಾಂಚಕ. ಹಿಂದೆ ಸೂಚಿಸಿರುವಂತೆ ಅರಿಸ್ಟಾಟಲನ ತರುವಾಯ ಅದಕ್ಕೆ ಸಾಕಷ್ಟು ಪ್ರಸಾರ ಸಿಗಲಿಲ್ಲ. ಕ್ರಮೇಣ ವಿದ್ವಜ್ಜನ ಅದನ್ನು ಮರೆತುಬಿಟ್ಟಂತೆ ತೋರುತ್ತದೆ. ಹೆಲನಿಸ್ಟಿಕ್ ಅವಧಿಯಲ್ಲಾಗಲಿ ರೋಮನರ ಯುಗದಲ್ಲಾಗಲಿ ಅದರ ಪ್ರಸ್ತಾಪ ಏಳಲಿಲ್ಲ; ಸಿಸಿರೊ, ಹೊರೇಸ್, ಕ್ವಿಂಟಿಲಿಯನ್ ಯಾರೂ ಅದನ್ನು ಓದಿದ್ದಂತೆ ಕಾಣುವುದಿಲ್ಲ. ಎಂದಮೇಲೆ ಮಧ್ಯಯುಗದ ಮಾತೇಕೆ! ಹತ್ತನೆಯ ಶತಮಾನದಲ್ಲಿ ಅದರ ಸಿರಿಯಾಕ್ ಭಾಷೆಯ ತರ್ಜುಮೆಯನ್ನು ಅಬುಬಾಸ್ಕರ್ ಅರಬ್ಬೀ ಭಾಷೆಗೆ ಪರಿವರ್ತನೆ ಮಾಡಿದನಂತೆ, ಎರಡು ಶತಮಾನಗಳ ತರುವಾಯ ಅವಿರೊಯಿಜ಼್ ಕೈಯಿಂದ ಇನ್ನೊಂದು ಸಂಕ್ಷಿಪ್ತ ಪ್ರತಿ ತಯಾರಾಯಿತಂತೆ. ಜರ್ಮನಿಯ ಹರ್ಮನ್ ಎಂಬಾತ ಹದಿಮೂರನೆಯ ಶತಮಾನದಲ್ಲಿ ಕಾವ್ಯಕಲೆಯ ಲ್ಯಾಟಿನ್ ಭಾಷಾಂತರ ರಚಿಸಿದ. ಮಧ್ಯಯುಗದಲ್ಲಿ ಅದು ಕೆಲಕೆಲವರಿಗೆ ಪರಿಚಿತವಾಗಿದ್ದರೂ ಅದರ ಪ್ರಭಾವ ಏನೇನೂ ಇರಲಿಲ್ಲ. ಹದಿನಾಲ್ಕನೆಯ ಶತಮಾನದಲ್ಲಿ ಸ್ಪೇನಿನ ಮಾಂಟಿನಸನಿಂದ ಇನ್ನೊಂದು ಭಾಷಾಂತರ ಬಂತು. ಆದರೂ ಪೆಟ್ರಾರ್ಕ್, ಬೊಕ್ಯಾಚ್ಚೊ ಅದರ ಹೆಸರನ್ನೇ ಎತ್ತುವುದಿಲ್ಲ.

ಇಟಲಿಯ ಜಾರ್ಜಿಯೊ ವಲ್ಲ 1498ರಲ್ಲಿ ಲ್ಯಾಟಿನ್ ತರ್ಜುಮೆಯನ್ನು ತಯಾರಿಸಿ, 1508ರಲ್ಲಿ ಗ್ರೀಕ್ ಮೂಲದೊಡನೆ ಅದನ್ನು ಪ್ರಕಟಿಸಿದ. 1536ರಲ್ಲಿ ಅಲೆಗ್ಸಾಂಡ್ರಿಯೊ ಫಾಸ್ಸಿ ಪರಿಷ್ಕರಿಸಿದ ಲ್ಯಾಟಿನ್ ತರ್ಜುಮೆಯನ್ನು ಗ್ರೀಕ್ ಮೂಲದೊಂದಿಗೆ ಪ್ರಕಟಿಸಿದ.

ಅಲ್ಲಿಂದ ಮುಂದೆ ಅರಿಸ್ಟಾಟಲ್ ಸಾಹಿತಿಗಳಿಗೂ ಸಾಹಿತ್ಯ ವಿಮರ್ಶಕರಿಗೂ ಒಂದು ಜ್ಯೋತಿಯಾದ. 1548ರಲ್ಲಿ ರಾಬರ್ಟೆಲ್ಲೋವಿನ ವಿಮರ್ಶಪೂರ್ಣ ಪ್ರಕಟಣೆ ಹೊರಬಂದ ಮೇಲಂತೂ ಅದರ ಪ್ರಶಸ್ತಿಗೆ ಕಳೆಯೇರಿತು.

ಹೊಸ ನೋಟ ಇದ್ದದ್ದು ನಿಜ; ಆದರೆ ಹಳೆಯದೆಲ್ಲವನ್ನೂ ಗುಡಿಸಿ ಬಿಸಾಡಿ ಹೊಸದನ್ನು ತಂದಿಡುವ ವಿಪರೀತ ಮತಿ ಅವರನ್ನು ಎಂದಿಗೂ ಪೀಡಿಸಿಲ್ಲ. ಕೆಲವಂಶಗಳಲ್ಲಿ ಹೊಸಹುಟ್ಟಿನ ಅವಧಿ ಕಂಡ ಹಾಗೆ ಮಧ್ಯಯುಗದ ಮುಂದುವರಿಕೆ ಎಂದರೂ ತಡೆಯುತ್ತದೆ. ಅದು ಬರಿ ಮುಂದುವರಿಕೆಯಲ್ಲ, ಬೆಳವಣಿಗೆ ಕೂಡಿದ ಮುಂದುವರಿಕೆ. ಭಾಷಣವಿದ್ಯೆಯನ್ನು ತೆಗೆದುಕೊಳ್ಳಿ; ವಿದ್ಯಾರ್ಜನೆಗೆ ಅದರ ವಿಶಿಷ್ಟ ಉಪಯೋಗ ಅವಶ್ಯಕವೆಂದು ಮನಗಂಡು ಅದನ್ನು ಹೊಸಹುಟ್ಟಿನಲ್ಲಿ ಇಟ್ಟುಕೊಳ್ಳಲಾಯಿತು. ಭಾಷಣದ ಅವಸರ ಮರೆಯಾಗಿ ಹೋದದ್ದರಿಂದ ಭಾಷಣವಿದ್ಯೆ ಹೆಚ್ಚುಹೆಚ್ಚಾಗಿ ಲೇಖನಕಲೆಯಾಯಿತು (ಕಾಂಪೋಜಿಷನ್); ಕ್ರಮೇಣ ಅಲಂಕಾರಶಾಸ್ತ್ರವಾಗಿ ಪರಿಣಮಿಸಿತು. 19ನೆಯ ಶತಮಾನದ ಕೊನೆಯವರೆಗೂ ಅದು ವಿದ್ಯಾಭ್ಯಾಸಕ್ರಮದ ಒಂದು ಅಂಗವಾಗಿಯೇ ನಡೆದುಬಂತು. ಈ ಶತಮಾನದಲ್ಲೂ ವಿಶಾಲಾರ್ಥವನ್ನು ಅದಕ್ಕೆ ಹೊಂದಿಸಿ ಅದರಿಂದ ಪ್ರಯೋಜನ ಪಡೆಯಬಹುದೆಂದು ಐ.ಎ.ರಿಚರ್ಡ್ಸ್ ಮೊದಲಾದವರ ಮತ. 16, 17ನೆಯ ಶತಮಾನಗಳ ಕವಿಗಳ ಶೈಲಿ ಸಾಮಾನ್ಯವಾಗಿ ಅಲಂಕಾರಮಯವಾಗಿರುವುದಕ್ಕೆ ಅವರಿಗೆ ಅಲಂಕಾರಶಾಸ್ತ್ರದಲ್ಲಿ ಶಿಕ್ಷಣ ಆಗಿದ್ದುದೇ ಕಾರಣ. ಪದ್ಯ ಗದ್ಯ ಎರಡರಲ್ಲೂ ಅಲಂಕಾರವೈಖರಿಗೆ ಎಡೆಯಿತ್ತು.

ಮಾನುಷ್ಯವತ್ಸಲರಾದ ವಿದ್ವಾಂಸರು ಹಲವು ಸಾರಸ್ವತ ಕಾರ್ಯಗಳನ್ನು ತಮ್ಮ ಪಾಲಿಗೆ ಬಂದ ಕರ್ತವ್ಯವೆಂದು ಭಾವಿಸಿ ನಿರಾಲಸ್ಯದಿಂದ ಶ್ರಮಿಸಿ ಅವನ್ನು ನೆರವೇರಿಸಿದರು. ಅವು ಹೀಗಿವೆ: 1. ಮುಖ್ಯವೆನಿಸಿದ ಅಭಿಜಾತ (ಕ್ಲಾಸಿಕಲ್) ಗ್ರಂಥಗಳ ನಿರ್ದುಷ್ಟ ಭಾಷಾಂತರ 2. ಅಭಿಜಾತ ವಿಧಾನದ ದೇಶೀಯ ಕಾವ್ಯರಚನೆ, ಮುಖ್ಯವಾದ ನಾಟಕ ಸಾಹಿತ್ಯದ ರಚನೆ 3. ಸಾಹಿತ್ಯ ಪ್ರಕಾರಗಳ ವಿಂಗಡನೆ ಮತ್ತು ಅವುಗಳ ಭಿನ್ನಲಕ್ಷಣ ನಿರ್ಣಯ 4. ಹಿಂದಣ ಯುಗಗಳಲ್ಲೂ ತಮ್ಮ ಕಾಲದಲ್ಲೂ ಚರ್ಚೆ ಎಬ್ಬಿಸಿದ ಆಕ್ಷೇಪಣೆಗಳಿಂದ ಸಾಹಿತ್ಯವನ್ನು ರಕ್ಷಿಸಿಕೊಳ್ಳುವುದು ಮತ್ತು ಸಾಹಿತ್ಯ ಸಮರ್ಥನೆ 5. ತಮ್ಮ ಕಾಲದ ಕವಿವರ್ಗ ಮನಬಂದಂತೆ ಯದ್ವಾ ತದ್ವಾ ಕಾವ್ಯ ನಿರ್ಮಾಣ ಮಾಡದಂತೆ ತಡೆಗಟ್ಟುವುದು 6. ಹಲವು ಕಾಲ ನಿಲ್ಲತಕ್ಕ ಸಾಹಿತ್ಯ ವಿಮರ್ಶೆಯ ರಚನೆ 7. ಪ್ರಾಚೀನ ಗ್ರೀಕ್ ಲ್ಯಾಟಿನ್ ಸಂಸ್ಕೃತಿ ಸಾಹಿತ್ಯಗಳ ಹಿರಿಮೆ ಉಪಯುಕ್ತತೆಗಳ ಸ್ಥಾಪನೆ.

ಇವುಗಳಲ್ಲಿ ಕೆಲವು ಇಲ್ಲಿ ನಮ್ಮ ಪರಿಶೀಲನೆಗೆ ಬರಬೇಕಾದ್ದಿಲ್ಲ.

ಹೊರೇಸ್ ಜೊತೆಗೆ ಅರಿಸ್ಟಾಟಲ್ ಒದಗಿಬಂದದ್ದರಿಂದ ವಿಮರ್ಶಕರಿಗೆ ಚತುರ್ಭುಜವಾಯಿತು. ಆದರೆ ಪ್ಲೇಟೊ ಬಗೆಗೆ ಅವರಿಗೆ ತುಂಬ ಆತಂಕ. ಅವನನ್ನು ಅವರೆಂದಿಗೂ ಕೈಬಿಡಲಾರರು. ಕಾವ್ಯವನ್ನು ಅವನು ಬಹುವಾಗಿ ಹಳಿದು ಕವಿಗಳಿಗೆ ಬಹಿಷ್ಕಾರ ಹಾಕಿದ್ದರ ಕಾರಣಗಳನ್ನು ಕುರಿತು ಅವರು ಆಳವಾಗಿ ವಿವೇಚಿಸಿದರು.

ಕವಿಗಳ ಸಂರಕ್ಷಣೆ ಹೊರೇಸನ ನೇತೃತ್ವದಲ್ಲಿ ಜರುಗಿತು: 1. ಕಾವ್ಯದಿಂದ ಬೋಧನೆಯೂ ರಸಾಹ್ಲಾದವೂ ಒಟ್ಟಿಗೆ ಆಗುತ್ತವೆ. 2. ನಾಗರಿಕತೆಯ ಸ್ಥಾಪನೆಗೂ ಉತ್ಕರ್ಷಕ್ಕೂ ಕಾವ್ಯವೊಂದು ಉತ್ತಮ ಸಾಧನ. ಆದಿಕವಿಗಳು ಮಹಾಜ್ಞಾನಿಗಳೂ ಪ್ರವಾದಿಗಳೂ ಆಗಿದ್ದರು; ಅಲ್ಲದೆ ಕುಶಲಕಲೆಗಳೂ ಯಂತ್ರೋಪಕರಣಗಳೂ ನಿರ್ಮಿತವಾದದ್ದು ಅವರಿಂದಲೇ. ಉದಾಹರಣೆಗಾಗಿ ಆರ್‌ಫಿಯಸ್ ಮನುಷ್ಯರನ್ನು ದುರ್ಭರ ಹಿಂಸಾಕೃತ್ಯಗಳಿಂದ ಮೇಲಕ್ಕೆತ್ತಿದ. ಆಂಫಿಯನ್ ವಸತಿ ನಿರ್ಮಾಣದ ಜನಕನಾದ. ವಿವಾಹ ಮುಂತಾದ ಒಳ್ಳೆಯ ಕಟ್ಟುಪಾಡನ್ನು ಸಮಾಜ ಸುಭದ್ರತೆಗೆ ಒದಗಿಸಿದವರೂ ಕವಿಗಳೇ. 3. ಕವಿಯ ಪೀಳಿಗೆ ಅತ್ಯಂತ ಪುರಾತನವಾದದ್ದು; ಅವನ ಕೆಲಸವನ್ನು ದೈವಿಕವೆಂದೇ ತಿಳಿಯಬೇಕು. 4. ಜನರ ನಡತೆಯ ಮೇಲೆ ಕಾವ್ಯದ ಪ್ರಭಾವ ಪರಿಣಾಮಕರವೆಂಬ ಬಗೆಗೆ ಹೊಸಹುಟ್ಟಿನ ವಿಮರ್ಶಕರಿಗೆ ಸಂದೇಹವೇ ಇರಲಿಲ್ಲ. ವಿದ್ಯಾಭ್ಯಾಸವೆಂದರೆ ಶೀಲಶಿಕ್ಷಣ. ಅದಕ್ಕೆ ಕಾವ್ಯವನ್ನಲ್ಲದೆ ಮತ್ತಾವುದನ್ನೂ ನೆಮ್ಮದಿಯಿಂದ ಬಳಸಲಾಗುವುದಿಲ್ಲ. 5. ಕಾವ್ಯಕ್ಕೂ ಕವಿಗಳಿಗೂ ವಿಶೇಷ ಮನ್ನಣೆ ಅವಿಚ್ಛಿನ್ನವಾಗಿ ಸಂದು ಬಂದಿದೆ. ಇಟಲಿಯಲ್ಲಿ ಸವೋನರೋಲ ಇಂಗ್ಲೆಂಡಿನಲ್ಲಿ ಗಾಸನ್ ಕವಿಗಳನ್ನು ಬೈಯ್ದು ಗಜರಿ ಗರ್ಜಿಸಿದರು, ನಿಜ. ಅವರ ತಪ್ಪು ತಿಳುವಳಿಕೆಯನ್ನು ಕಂಡು ಕನಿಕರಿಸತಕ್ಕದ್ದೇ ವಿನಾ ಅವರ ಅಭಿಪ್ರಾಯವನ್ನು ಮನ್ನಿಸತಕ್ಕದ್ದಲ್ಲ.

ಇದೆಲ್ಲ ಹೊರಗಣ ವಿಮರ್ಶೆ. ನಿಜವಾದ ಆಂತರಿಕ ವಿಮರ್ಶೆಗೆ ಅರಿಸ್ಟಾಟಲ್ ಪ್ರಬಲ ಪ್ರೇರಕನಾದ. ಅವನ ವಿವರಣೆಯನ್ನು ಅನುಸರಿಸಿ ಈ ಅಭಿಪ್ರಾಯಗಳು ಹೊರಬಂದುವು. ದೇಶದೇಶದವರಿಂದ ಪುನಃಪುನಃ ಘೋಷಣೆಗೊಂಡುವು: 1. ಪ್ರತ್ಯಕ್ಷ ವಾಸ್ತವ್ಯವನ್ನಲ್ಲ ಕಾವ್ಯ ಪ್ರತಿಬಿಂಬಿಸುವುದು, ಪರೋಕ್ಷವೂ ಅತ್ಯುಚ್ಚವೂ ಆದ ಆದರ್ಶ ವಾಸ್ತವ್ಯವನ್ನು. ಅದರ ಮುಖ್ಯ ವಿಷಯ. ವಿಶ್ವವ್ಯಾಪಿಯೂ ಅಮರವೂ ಆದ ಸತ್ಯ: ಬಿಡಿ ಸಂಗತಿಗಳಲ್ಲ, ಬಿಡಿ ವ್ಯಕ್ತಿಗಳಲ್ಲ. ಕೇವಲ ಆಗುಹೋಗಿನ ಪ್ರತಿಚಿತ್ರಣವಲ್ಲ ಅದರ ಕೆಲಸ; ಆಗಬಹುದಾದದ್ದು ಆಗಬೇಕಾದದ್ದು ಅದರ ಲಕ್ಷ್ಯ. 2. ಆದ್ದರಿಂದ ಕಾವ್ಯರೂಪಕ ಭಾವಗಳನ್ನು ಕೆರಳಿಸುವುದೇನೊ ನಿಜ: ಆದರೆ ಅದು ಮೊದಲಣ ಹೆಜ್ಜೆ, ಅಷ್ಟೆ. ಎರಡನೆಯ ಹೆಜ್ಜೆ ಭಾವಗಳನ್ನು ಉಪಶಮನಗೈದು ಸಂಯಮದ ಕ್ಲುಪ್ತಮರ್ಯಾದೆಗೆ ಅವನ್ನು ಒಳಗೊಳಿಸುವುದು. ಹೀಗೆ ಚರಿತ್ರೆಗಿಂತ ಕಾವ್ಯ ಹೆಚ್ಚು ಪ್ರಯೋಜನಕರ, ತತ್ತ್ವಶಾಸ್ತ್ರಕ್ಕಿಂತ ಹೆಚ್ಚು ಸಂತೋಷದಾಯಕ.

ಡೇನಿಯೆಲೊ (1536). ಮಿಂಟೂರ್ನೊ (1559), ಸ್ಕ್ಯಾಲಿಜೊ, ವರ್ಚಿ, ರಾಬರ್ಟೆಲೊ, ಫ್ರಕಾಸ್ಟರೊ (1555) ಮುಂತಾದವರಿಂದ ಕಾವ್ಯಕಲೆ ಎಂಬ ಹೆಸರಿನ ಪ್ರಬಂಧಗಳು ರಚಿತವಾದುವು. ಅವರಲ್ಲಿ ಕೆಲವರಿಗೆ ಅರಿಸ್ಟಾಟಲ್ ಸರಿಯಾಗಿ ಗ್ರಹಿಕೆಯಾಗಲಿಲ್ಲ. ಫ್ರಕಸ್ಟರೊ ಆತನನ್ನು ಹೆಚ್ಚುಕಡಿಮೆ ಸರಿಯಾಗಿ ಅರ್ಥ ಮಾಡಿಕೊಂಡಂತೆ ಭಾಸವಾಗುತ್ತದೆ. ಅಷ್ಟೇ ಅಲ್ಲದೆ ಅರಿಸ್ಟಾಟಲನ ಅನುಕರಣತತ್ತ್ವದ ವಿವರಣೆಗೆ ಪ್ಲೇಟೊವಿನ ಆದರ್ಶ ಸೌಂದರ್ಯವನ್ನು ಫ್ರಕಾಸ್ಟರೂ ಜೋಡಿಸಿದ ಹೊಸ ಹುಟ್ಟಿನ ಅವಧಿಯಲ್ಲಿ ಸೌಂದರ್ಯವನ್ನು ಮೂರು ರೀತಿ ಪರಿಗಣಿಸುತ್ತಿದ್ದರು: 1. ವಸ್ತುನಿಷ್ಠ, ಇಂದ್ರಿಯಗೋಚರ; ಬಾಹ್ಯಾಕಾರದಂತೆ ವರ್ತುಲ ಚಚ್ಚೌಕ ಇತ್ಯಾದಿ. 2. ನೈತಿಕಕೋನದಿಂದ; ಸೌಂದರ್ಯವೂ ಸಜ್ಜನಿಕೆಯೂ ಹತ್ತಿರ ಹತ್ತಿರ, ಬಹುತೇಕ ಒಂದೇ. 3. ಕಲಾಮೂಲ ಭಾವನೆಯಂತೆ; ವಸ್ತುವಿವರ ಪರಿಕರ ಎಲ್ಲವೂ ಚೆನ್ನಾಗಿ ಹೊಂದಿಕೊಂಡದ್ದು.

ಕಾವ್ಯ ಪ್ರಭೇದಗಳು ಮೂರೆಂದು ವಿದ್ವಾಂಸರ ಒಡಂಬಡಿಕೆ: ಗೀತಾತ್ಮಕ, ನಾಟಕೀಯ, ಕಥನರೀತಿಯದು. ಈ ವರ್ಗೀಕರಣ ಗ್ರೀಕರಿಂದ ನಡೆದುಬಂದದ್ದು. ಅದಕ್ಕೆ ಹೆಚ್ಚಿನ ಮಾರ್ಪಾಟು ಸಂದಿಲ್ಲ, ಇಂದಿಗೂ.

ಪ್ಲೇಟೊ ಕವಿಗಳನ್ನು ಹೊರದೂಡಿದ್ದು ಏತಕ್ಕೆ ಎಂಬ ಬಿಡಿ ಪ್ರಶಂಸನೆಯೊಂದು ವಿದ್ವಾಂಸರಿಗೆ ತಲೆನೋವು ತರುತ್ತಿತ್ತು. ಟ್ಯಾಸೊ, ಡೇನಿಯೆಲೊ ಮೊದಲಾದವರು ಪ್ಲೇಟೊ ಕುಕವಿಗಳನ್ನು ನಿಂದಿಸಿದ, ಸತ್ಕವಿಗಳನ್ನಲ್ಲ ಎಂಬ ತರುರೋಕ್ತಿಯಿಂದ ಸಮಾಧಾನ ನೀಡಲು ಬಯಸಿದರು.

ಕಾವ್ಯದ ವಿಚಾರದಲ್ಲಿ ಹೊರೇಸ್ ಅರಿಸ್ಟಾಟಲ್ ಪ್ಲೇಟೊ ಈ ಮೂವರ ಅಭಿಪ್ರಾಯಗಳ ಬೆರಕೆಯಿಂದ ಒಂದು ಮೀಮಾಂಸೆಯನ್ನು ಸಜ್ಜುಗೊಳಿಸುವುದು ಪಂಡಿತರಿಗೆ ಸಾಧ್ಯವಾಯಿತು. ನಾಟಕದ ವಿಚಾರದಲ್ಲಿ ಅರಿಸ್ಟಾಟಲ್ ಹೊರೇಸರ ಜೊತೆಗೆ ಮಧ್ಯಯುಗದಿಂದ ಇಳಿದು ಬಂದಿದ್ದನ್ನು ಹೇಗೊ ಮಿಳಿತಗೊಳಿಸಲೇಬೇಕಾಯಿತು. ಮಧ್ಯಯುಗದ ಭಾವನೆಯೇನು? ಅರಿಸ್ಟಾಟಲನ ತರುವಾಯ ಅವನ ವಿದ್ಯಾಪೀಠಕ್ಕೆ ಗುರುವಾದ ಥಿಯೊಫ್ರಾಸ್ಟಸನವೆಂದು ಹೇಳಲಾದ ಕೆಲವು ವಿವರಣೋಕ್ತಿಗಳೇ ಮಧ್ಯಯುಗದ ತತ್ತ್ವ. ಥಿಯೊಫ್ರಾಸ್ಟಸನ ಅಭಿಮತ ಇದು: ನಾಯಕನ ಜೀವನದಲ್ಲಿ ದೊಡ್ಡ ಬದಲಾವಣೆ ಉಂಟಾಗದೆ ಅದೇ ಟ್ರ್ಯಾಜಿಡಿ; ಕಾಮೆಡಿಯ ಕಥಾವಸ್ತು ಖಾಸಗಿ ಮಂದಿಯ ಬಾಳಿಗೆ ಸಂಬಂಧಿಸಿದ್ದು, ಏನೇನೂ ಅಪಾಯ ಕಾಣದ್ದು. ರೋಮನರಲ್ಲೂ ಕಾಮೆಡಿಯ ಕಲ್ಪನೆ ಇದೇ ಆಗಿತ್ತು. ಅದಕ್ಕೆ ವ್ಯಾಖ್ಯೆ ಬರೆಯುತ್ತ ಮಧ್ಯಯುಗದ ವಿದ್ವಾಂಸರು ಸಂತೃಪ್ತರಾದರು. ಟ್ರ್ಯಾಜಿಡಿಗೂ ಕಾಮೆಡಿಗೂ ವ್ಯತ್ಯಾಸವಿಷ್ಟೆ: 1. ಟ್ರ್ಯಾಜಿಡಿಯ ಮುಖ್ಯ ಪಾತ್ರಗಳು ಅರಸರು. ಜನನಾಯಕರು; ಕಾಮೆಡಿಯಲ್ಲಿ ಸಾಮಾನ್ಯ ದರ್ಜೆಯ ಮಂದಿ. 2. ಟ್ರ್ಯಾಜಿಡಿಯಲ್ಲಿ ಭಾರಿ ಅನಾಹುತಗಳು, ರೌದ್ರಚರ್ಯೆ; ಕಾಮೆಡಿಯಲ್ಲಿ ಸಾಧಾರಣ ಸಾಂಸಾರಿಕ ಜರುಗಣೆಗಳು. 3. ಸುಖದಿಂದ ಪ್ರಾರಂಭವಾದ ಟ್ರ್ಯಾಜಿಡಿ ಅಸೌಖ್ಯದಲ್ಲಿ ಕೊನೆಗೊಳ್ಳುತ್ತದೆ; ಕಾಮೆಡಿಯಲ್ಲಿ ಅದರ ವಿಲೋಮ. 4. ಅದರಲ್ಲಿ ಶಬ್ದ ಪುಂಜವೂ ಶೈಲಿಯೂ ಘನವಾದವು. ಇದರಲ್ಲಿ ಬಳಕೆಯ ಆಡುಮಾತು, ಸಡಿಲ ಶೈಲಿ. 5. ಐತಿಹಾಸಿಕ ಸಂಗತಿಗಳು ಟ್ರ್ಯಾಜಿಡಿಗೆ ಯೋಗ್ಯ. ಕಾಮೆಡಿಗೆ ಕವಿ ತನ್ನ ಮನಬಂದಂತೆ ಕಥೆ ಕಲ್ಪಿಸಬಹುದು. 6. ದೇಶಭ್ರಷ್ಟತೆ ರಕ್ತಪಾತ ಟ್ರ್ಯಾಜಿಡಿಗೆ ಸಲ್ಲುತ್ತವೆ. ಪ್ರೇಮ ಗುಪ್ತಪ್ರಣಯ ಕಾಮೆಡಿಗೆ. ಈ ತೆರನ ಅಭಿಪ್ರಾಯ ಹೊಸಹುಟ್ಟಿನ ಅವಧಿಯಲ್ಲೂ ಆಮೇಲೆ ರೂಢಿಯಲ್ಲಿತ್ತು.

ರೂಪಕ ಮೀಮಾಂಸೆಯಲ್ಲಿ ಅರಿಸ್ಟಾಟಲನನ್ನು ಹಿಂಬಾಲಿಸುವುದೇ ವಿದ್ವಾಂಸರ ಆಶಯವಾಗಿತ್ತು. ಸಿನ್ತಿಯೊ, ಮ್ಯಾಗಿ ಮುಂತಾದವರು ಅದರ ಪ್ರತಿಪಾದಕರಾದರು. ಅವರಲ್ಲಿ ಸ್ಕ್ಯಾಲಿಜರ್ ಮುಖ್ಯನಾದವ. ಟ್ರ್ಯಾಜಿಡಿಯ ವಿವರಣೋಕ್ತಿಯಲ್ಲಿ ಅರಿಸ್ಟಾಟಲನನ್ನೇ ಅವನು ಅನುವಾದಿಸಿದ. ಆದರೆ ಅವನ ಮೆಚ್ಚಿಕೆಗೆ ಪಾತ್ರನಾದ ಟ್ರ್ಯಾಜಿಕ್ ಕವಿ ರೋಮನರ ಸೆನೆಕ, ಗ್ರೀಕರ ಸೋಫಕ್ಲೀಸ್ ಅಲ್ಲ. ಆ ಕಾರಣದಿಂದ ಅವನ ಟ್ರ್ಯಾಜಿಕ್ ಘಟನಾಪಟ್ಟಿಯಲ್ಲಿ ಕಗ್ಗೊಲೆ. ಪೂರ್ಣಹತಾಶೆ, ಶಿರಚ್ಛೇದ, ತಂದೆತಾಯಿಯರ ಹತ್ಯೆ, ಅಕ್ರಮ ಕೂಟ, ಬೆಂಕಿಯಿಂದ ಸರ್ವನಾಶ, ಕರಾಳ ಸಂಗ್ರಾಮ, ಕಿರಿಚು, ರುದ್ರರೋಧನ, ಸಮಾಧಿಗೀತ–ಮುಂತಾದುವೇ ಹೆಚ್ಚು. ಸ್ಕ್ಯಾಲಿಜರನಿಗಿಂತಲೂ ಅಧಿಕನಾದವ ಕ್ಯಾಸಲ್ ಮೆಟ್ರೋ (1570). ಮೂರು ಏಕತೆಗಳು ಎಂಬ ನಿಯಮವನ್ನು ರೂಪಿಸಿ ಸಿದ್ಧಾಂತಕ್ಕೆ ಅದನ್ನು ಅವನೇ ಏರಿಸಿದ. ಅವನ ಅಭಿಮತದಲ್ಲಿ ನಾಟಕಾಲಯದ ನೇಪಥ್ಯ ಕಿರಿದು. ಆದ್ದರಿಂದ ಒಂದೇ ಕಾರ್ಯಾವಳಿ ಒಂದೇ ಸ್ಥಳದಲ್ಲಿ ನಡೆದು ಒಂದೇ ದಿವಸದಲ್ಲಿ ಮುಗಿಯುವುದು ನ್ಯಾಯ. ಅರಿಸ್ಟಾಟಲ್ ಮುಂದಿಟ್ಟ ಭಾವವಿವೇಚನೆಯ (ಕೆಥಾರ್ಸಿಸ್) ತತ್ತ್ವವನ್ನು ಕುರಿತೂ ವಿಮರ್ಶಕರು ವಿಪುಲ ಚರ್ಚೆ ನಡೆಸಿದರು.

ಅರಿಸ್ಟಾಟಲನ ಮತದಂತೆ ಭವ್ಯಕಾವ್ಯ (ಎಪಿಕ್) ಟ್ರ್ಯಾಜಡಿಗೆ ಎರಡನೆಯದು. ಈ ಅಭಿಪ್ರಾಯ ಹೊಸಹುಟ್ಟಿನ ಪಂಡಿತರಿಗೆ ರುಚಿಸಲಿಲ್ಲ. ಅರಿಸ್ಟಾಟಲ್ ಹೋಮರ್ ಒಬ್ಬನನ್ನೇ ದೃಷ್ಟಿಯಲ್ಲಿಟ್ಟುಕೊಂಡಿದ್ದ; ರುದ್ರನಾಟಕಕಾರರು ಹೋಮರನನ್ನು ಮೀರಿಸಿದಂತೆ ಅವನಿಗೆ ತೋಚಿತು. ಹೊಸ ಹುಟ್ಟಿನವರಿಗೆ ವರ್ಜಿಲನ ಪರಿಚಯವೂ ಇದ್ದಿತಾಗಿ ಅವರ ಭವ್ಯಕಾವ್ಯದ ವಿವರಣೆ ಬಹು ಸಂಕ್ಷಿಪ್ತ ಅರಿಸ್ಟಾಟಲನಲ್ಲಿ. ಹೊಸ ಹುಟ್ಟು ಅದರ ವಿಸ್ತಾರ ನಿರೂಪಣೆಯನ್ನು ಕೈಗೊಳ್ಳಬೇಕಾಯಿತು. 1520ಕ್ಕೆ ಹಿಂದೆಯೇ ಇನಿಯಡ್‌ನ್ನೂ ಮಾದರಿಯಾಗಿರಿಸಿಕೊಂಡು ವಿಡಾ ಪದ್ಯರೂಪದಲ್ಲಿ ವಿಮರ್ಶೆ ಬರೆದ. ಟ್ರಿಸ್ಸಿನೊ ಅರಿಸ್ಟಾಟಲನ್ನು ಅನುವಾದ ಮಾಡಿ ಕೊನೆಗೆ ಭವ್ಯ ಕಾವ್ಯಕ್ಕೆ ಯಾವಾಗಲೂ ಬಹಳ ಗೌರವ ಸಿಕ್ಕಿದೆ. ಅದು ಹೆಚ್ಚೊ ಟ್ರ್ಯಾಜಡಿ ಹೆಚ್ಚೊ ಎಂಬುದನ್ನು ಓದುಗರೇ ತೀರ್ಮಾನಿಸಲಿ ಎಂಬ ಟಿಪ್ಪಣಿಯನ್ನು ನುಡಿದ. ಡೇನಿಯೆಲೊ ಹೇಳಿದ ಭವ್ಯಕಾವ್ಯದ ವಿವರಣೋಕ್ತಿಯನ್ನೇ ಅವನು ಸೂಕ್ತವಾಗಿ ಅದಕ್ಕೆ ಅನ್ವಯಿಸಿದ. ಭವ್ಯಕಾವ್ಯಕ್ಕೆ ವೀರಕಾವ್ಯ (ಹಿರಾಯಿಕ್ ಪೊಯಟ್ರಿ) ಎಂಬ ಹೆಚ್ಚು ವೈಶಾಲ್ಯದ ಅಂಕಿತ ರೂಢಿಗೆ ಬಂತು.

ಅದಕ್ಕೆ ಕಾರಣವಿತ್ತು. ಇಟಲಿಯ ಕವಿ ಅರಿಯೋಸ್ಟೊ ಒಂದು ಶ್ರೇಷ್ಠ ಕಥನ ಕಾವ್ಯ ಕಟ್ಟಿ ಲೋಕವನ್ನೇ ಚಕಿತಗೊಳಿಸಿದ. ಹೋಮರ್, ವರ್ಜಿಲ್, ಡಾಂಟೆಗಳ ಭವ್ಯಕಾವ್ಯಕ್ಕೆ ಅದು ಏನೂ ಕಡಿಮೆಯಲ್ಲ ಎಂಬ ಪ್ರಖ್ಯಾತಿ ಆ ಕಾವ್ಯಕ್ಕೆ ಬಂತು. ಅದು ಮಧ್ಯಯುಗದ ಅದ್ಭುತ ಕಥೆಯಂತೆ ಅದ್ಭುತಗಳನ್ನು ಒಳಗೊಂಡಿದ್ದರೂ ಕಾವ್ಯ ಲಕ್ಷಣಗಳಲ್ಲಿ ಅದರಿಂದ ಬೇರೆ. ಆದರೆ ಅರಿಯೋಸ್ಟೊ ಕಾವ್ಯಕ್ಕೂ ರೊಮಾನ್ಸ್ ಎಂದೇ ಹೆಸರಾಯಿತು. ಆಮೇಲೆ ಇಟಲಿಯ ಟ್ಯಾಸೊ, ಇಂಗ್ಲೆಂಡಿನ ಸ್ಪೆನ್ಸರ್ ಇವರು ಬರೆದ ಅದೇ ಮಾದರಿಯ ಕಾವ್ಯಗಳೂ ಹಳೆಯ ಭವ್ಯಕಾವ್ಯದೊಂದಿಗೆ ಸೆಣಸಿದುವು. ಅವನ್ನು ಒಳಕ್ಕೆ ಸೇರಿಸಿಕೊಳ್ಳುವುದಕ್ಕೋಸ್ಕರ ವೀರಕಾವ್ಯ ಮೂರು ನಾಲ್ಕು ಬಗೆ ಎಂದು ಸೂತ್ರಿಸಿದರು. ಆದರೂ ಮಿಂಟೂರ್ನೊ, ಬೆಂಬೊ, ಹಾರ್ವಿ ಮುಂತಾದ ಕೆಲವು ಪ್ರತಿಗಾಮಿಗಳಿಗೆ ರೊಮಾನ್ಸ್ ಕಾವ್ಯಾಭಾಸವೆಂದೇ ತೋರಿಬಂತು.

ಪ್ರಾಚೀನರನ್ನು ಹಿಂಬಾಲಿಸಬೇಕು ಎಂಬ ಧ್ಯೇಯಕ್ಕೆ ಹೊಸಹುಟ್ಟಿನಲ್ಲಿ ಸಾಮಾನ್ಯವಾಗಿ ಮನ್ನಣೆಯಿತ್ತು. ಆದರೂ ಕವಿಗೆ ಸ್ವಾತಂತ್ರ್ಯ ಇಲ್ಲದಿಲ್ಲ. ಮೇಲಾಗಿ ತರ್ಕವಿವೇಚನೆ ಕವಿಗೆ ಅತಿ ಮುಖ್ಯ. ಅದರ ಬೋಧನೆಯಂತೆ ತನ್ನ ಕೆಲಸವನ್ನು ಅವನು ನಡೆಸಿದರೆ ಕ್ಷೇಮ ಎಂಬ ಅಭಿಪ್ರಾಯಕ್ಕೂ ಸಾಕಷ್ಟು ಗೌರವವಿತ್ತು.

ಇಟಲಿಯ ಮೇಲ್ಪಂಕ್ತಿಯೇ ಫ್ರಾನ್ಸ್, ಇಂಗ್ಲೆಂಡ್, ಸ್ಪೇನ್ ಇತ್ಯಾದಿ ರಾಷ್ಟ್ರಗಳಲ್ಲಿ ಗಣ್ಯತೆ ಪಡೆಯಿತು. ಡುಬೆಲ್ಲೆ, ರಾನ್ಸಾ, ಸಿಡ್ನಿ, ಜಾನ್ಸನ್, ಎಸ್ಪಿನಾಡೊ, ಸಪಾಟಿ ಮೊದಲಾದವರ ಹೆಸರುಗಳನ್ನು ಇಲ್ಲಿ ಹೇಳಬಹುದು. ಇವರಾರಲ್ಲೂ ನವೀನವಾದದ್ದು ಏನೂ ಇಲ್ಲ. ಕಾವ್ಯಮೀಮಾಂಸೆಗಿಂತ ಕವಿಗಳಿಗೆ ಬುದ್ಧಿವಾದ ಇವರಲ್ಲಿ ಅಧಿಕ. ಆಲೋಚನಾ ಮೌಲ್ಯಕ್ಕಿಂತ ವ್ಯಾವಹಾರಿಕ ಮೌಲ್ಯಕ್ಕೆ ಹೆಚ್ಚು ಗಮನ.

ಒಟ್ಟಿನಲ್ಲಿ ಹೊಸಹುಟ್ಟಿನ ಸಾಹಿತ್ಯ ವಿಮರ್ಶೆ ಕವಿಗೆ ಉಚಿತ ಸ್ಥಾನಮಾನ ಲಭಿಸುವುದಕ್ಕೆ ನೆರವಾಯಿತು. ಪ್ಲೇಟೊ ಅರಿಸ್ಟಾಟಲ್ ಹೊರೇಸರ ತತ್ತ್ವಗಳ ಒಂದು ಬಗೆಯ ಸಮನ್ವಯವನ್ನು ರೂಪಿಸಲು ಯತ್ನಿಸಿತು. ಪ್ರಾಚೀನರನ್ನು ಅವರ ಅಂತಃಸತ್ತ್ವಕ್ಕಾಗಿಯೂ ಸಾಹಿತ್ಯ ಪರಂಪರೆಯನ್ನು ಪಾಲಿಸುವುದಕ್ಕಾಗಿಯೂ ಉಳಿಸಿಕೊಳ್ಳಬೇಕು ಎಂಬುದು ಅವರ ಮನೋರಥವಾದರೂ ಸಾಹಿತ್ಯ ಹೊಸ ಪಥದಲ್ಲಿ ಸಹಜವಾಗಿಯೂ ಸರಾಗವಾಗಿಯೂ ಸುರಮ್ಯವಾಗಿಯೂ ಚಲಿಸುತ್ತಿರುವುದನ್ನು ಕಾಣುತ್ತ ಅದು ವಿರೋಧ ಸೂಚಿಸಿದರೂ ಅಡ್ಡಗಟ್ಟುವುದಕ್ಕೆ ಹಾತೊರೆಯಲಿಲ್ಲ.

17ನೆಯ ಶತಮಾನದಲ್ಲಿ ವಿಮರ್ಶೆಯ ಆಡಳಿತಸೂತ್ರ ಇಟಲಿಯ ಕೈಯಿಂದ ಫ್ರಾನ್ಸಿಗೆ ವರ್ಗವಾಯಿತು. ಫ್ರೆಂಚ್ ಅಕೆಡಮಿಯ ಸ್ಥಾಪನೆ, ಶ್ರೀಮಂತಿನಿಯರ ಖಾಸಗಿ ಸಾರಸ್ವತ ಗೋಷ್ಠಿಗಳು, 14ನೆಯ ಲೂಯಿಯ ನಿರಂಕುಶಾಧಿಕಾರ–ಮುಂತಾದ ಪ್ರಬಲಶಕ್ತಿಗಳು ಭಾಷೆ, ಸಾಹಿತ್ಯ, ವಿಮರ್ಶೆಗಳೆಲ್ಲವನ್ನೂ ಒಂದು ನಯನಾಜೂಕಿನ ಕಟ್ಟಿನಲ್ಲಿ ಹತೋಟಿಗೈಯುವುದಕ್ಕೆ ಅನುವಾದುವು. ಮೊದಲು ಮಾಲರ್ಬ್, ಆಮೇಲೆ ಬಾಲ್‌ಜ್ಯಾಕ್, ಡೇಕಾರ್ಟ್, ಪ್ಯಾಸ್ಕಲ್, ಆಮೇಲೆ ಡಾಬಿಗ್ನ್ಯಾಕ್, ಬ್ವಾಲೊ, ಲಬ್ರೂಯೇರ್, ಫೆನಿಲನ್ ಮೊದಲಾದ ಉಜ್ವಲ ಮೇಧಾವಿಗಳು ಆ ಜವಾಬ್ದಾರಿಗೆ ಯುಕ್ತ ಕಾರ್ಯವಾಸಿಗಳಾದರು.

ಹೊಸಹುಟ್ಟಿನ ಕವಿಗಳು ಬಹಳ ಧಾರಾಳವಾಗಿ ಪದಗಳನ್ನೂ ಪದಪುಂಜಗಳನ್ನೂ ವಚನವಿಗ್ರಹಗಳನ್ನೂ ತಂದು ಭಾಷೆಗೆ ಸುರಿಸಿದರು. ಅವನ್ನು ಪರೀಕ್ಷಿಸಿ ವಿಚಿತ್ರ ವಾದವನ್ನು ತೊಡೆದುಹಾಕಿ ನುಡಿಗೆ ಸಕ್ರಮ ಸಾಮಂಜಸ್ಯ ತಾರ್ಕಿಕತೆಯನ್ನು ಉಂಟುಮಾಡುವುದು ಮಾಲರ್ಬನ ಹೊಣೆಯಾಯಿತು. ಚಾಪಿಲೇನ್ ಇಟಲಿ ಸ್ಪೇನುಗಳ ಸಾಹಿತ್ಯವನ್ನು ಓದಿದವ; ಹಳೆಯ ಫ್ರೆಂಚ್ ಸಾಹಿತ್ಯವನ್ನೂ ಬಲ್ಲವ. ಪ್ರಧಾನಿ ರಿಷಲುವಿನ ಅಪ್ಪಣೆಯನ್ನು ಶಿರಸಾವಹಿಸಿ ಕಾರ್ನೀಲನ ಲುಸಿಡ್ ನಾಟಕದ ಮೇಲೆ ಕತ್ತಿಕಟ್ಟಿದ. ನಾಟಕದಲ್ಲಿ ಹೊರೇಸ್ ಅರಿಸ್ಟಾಟಲರ ನಿಯಮಾವಳಿಗೆ ಲೋಪ ತರಬಾರದು ಎಂಬುದು ಧರ್ಮಶಾಸ್ತ್ರವಾಗುತ್ತ ಹೋಯಿತು. ಸಾಹಿತ್ಯ ಪ್ರಭೇದಗಳನ್ನೂ ಅವುಗಳ ವಿರಚನಾಕ್ರಮವನ್ನೂ ಯಾವುದು ಗುಣ ಯಾವುದು ದೋಷ ಎಂಬುದನ್ನು ಅವರೀರ್ವರು ಆಗಲೇ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಆದ್ದರಿಂದ ಅವರನ್ನು ಶ್ರದ್ಧೆಯಿಂದ ಹಿಂಬಾಲಿಸುವುದೇ ಕವಿಗಳಿಗೆ ಇರುವ ಏಕೈಕ ಮಾರ್ಗ. ಇದನ್ನು ವಿಮರ್ಶಕರು ಒತ್ತಿ ಒತ್ತಿ ಸಾರಿದರು. ಹೊರೇಸನಂತೆ ಬ್ವಾಲೊ ಒಂದು ಕಾವ್ಯಕಲೆಯನ್ನು ರಚಿಸಿದ. ಅದು ನವಅಭಿಜಾತತೆಯ ಪ್ರಧಾನ ಗ್ರಂಥವಾಯಿತು. ಅದರ ಸಾರಾಂಶ ಇಷ್ಟು. ಕವಿಗೆ ಪ್ರತಿಭೆ ಆವಶ್ಯಕ, ಅದಕ್ಕಿಂತ ಹೆಚ್ಚಾಗಿ ಸುಬುದ್ಧಿಯೂ ತರ್ಕವಿವೇಚನೆಯೂ ಆವಶ್ಯಕ. ಸುಮ್ಮನೆ ಎತ್ತರಕ್ಕೆ ಹಾರಬಯಸಬಾರದು. ಅತಿ ಸೂಕ್ಷ್ಮ ವಿವರಗಳನ್ನು ಕೊಡಲೂಬಾರದು. ಕೆಳಕ್ಕೆ ಇಳಿಯದಂತೆ ಎಚ್ಚರದಿಂದಿರತಕ್ಕದ್ದು. ಸ್ಪಷ್ಟ ಶೈಲಿಗೆ ಸ್ಪಷ್ಟ ಆಲೋಚನೆ ತಾಯಿ. ಔಚಿತ್ಯ ಹೆಗ್ಗುರಿಯಾಗಿರಲಿ; ವಿನಯ, ಮರ್ಯಾದೆ ಕೈಹಿಡಿದು ನಡೆಸಲಿ. ಹೀಗೆ ಹೊರೇಸ್ ಮತ್ತು ಅರಿಸ್ಟಾಟಲರನ್ನು ತನಗೆ ತೋರಿದಂತೆ ಅರ್ಥಮಾಡಿಕೊಂಡು ಬ್ವಾಲೊ ನಿಯಮಾವಳಿ ಸಿದ್ಧಪಡಿಸಿದ. ರ್‍ಯಾಪಿನ್ ಆ ನಿಯಮಗಳನ್ನು ಅನುಮೋದಿಸಿ ಸಾಹಿತ್ಯ ವಿಚಾರಗಳಿಗೆ ಕೆಲವು ತಲೆಚೀಟಿ ಅಂಟಿಸಿ ನವಶಿಷ್ಟತೆಯ ಪಾಲಕನಾದ. ಲುಬಾಸ್ ಭವ್ಯಕಾವ್ಯದ ವಿಷಯವಾಗಿ ಸೂತ್ರ ಹೇಳಿದ. ವಾಲ್ಟೇರ್ ವಿಮರ್ಶೆಯ ಮೂಲಕವೂ ರೂಪಕ ನಿರ್ಮಾಣದ ಮೂಲಕವೂ ನವಅಭಿಜಾತತೆಯನ್ನು ಎತ್ತಿಹಿಡಿದ.

ಇಂಗ್ಲೆಂಡಿನಲ್ಲಿ ಡ್ರೈಡನ್, ಪೋಪ್, ಜಾನ್ಸನ್ ನವಅಭಿಜಾತತೆಯ ಧೀರರಾದರು. ಆದರೆ ಅವರಲ್ಲಿ ಸ್ವಲ್ಪಮಟ್ಟಿನ ಸ್ವಾತಂತ್ರ್ಯ ಕಾಣಬರುತ್ತದೆ. ಕಾರಣ ಇಷ್ಟೆ. ಷೇಕ್ಸ್‌ಪಿಯರ್ ಪ್ರಾಚೀನರ ಸೂತ್ರಗಳಿಗೆ ವಿರುದ್ಧವಾದ ನಾಟಕ ರಚಿಸಿ ಗೆದ್ದನಲ್ಲವೆ? ವಾಲ್ಟೇರನಿಗೆ ಅವನು ಒಡ್ಡೊಡ್ಡಾಗಿ ಕಂಡುಬಂದರೂ ಇಂಗ್ಲಿಷ್ ವಿಮರ್ಶಕರಿಗೆ ಅವನೊಬ್ಬ ಮಹಾ ನಾಟಕಕಾರ. ಅವನು ಒದಗಿಸುವಷ್ಟು ಭಾವಾರ್ಥವನ್ನೂ ಭಾಷಾಲಾವಣ್ಯವನ್ನೂ ಮತ್ತಾರೂ ಒದಗಿಸಿಲ್ಲ, ಬಹುಶಃ ಒದಗಿಸಲಾರರು. ನಿಯಮಕ್ಕೆ ವಿರುದ್ಧವಾಗಿ ಯಾವ ಕೃತಿಯೂ ಹರ್ಷ ಕೊಡಕೂಡದು. ಎಂಬ ಫ್ರೆಂಚರ ಶಾಸನ ಇಂಗ್ಲಿಷರಿಗೆ ಒಗ್ಗಲಿಲ್ಲ. ಆದ್ದರಿಂದ ಅವರು ಪರಮ ಪ್ರತಿಭೆಯ ಕವಿನಿಯಮಗಳನ್ನು ಉಲ್ಲಂಘಿಸಬಹುದು ಎಂದುಬಿಟ್ಟರು. ನವಅಭಿಜಾತತೆಯ ಗೇಣುಸೂತ್ರಗಳಿಂದ ಆಜಾನುಬಾಹು ಷೇಕ್ಸ್‌ಪಿಯರನನ್ನು ಅಳೆಯಹೋಗಿ ರೈಮರ್ ಎಂಬಾತ ನಾಚಿಕೆಗೇಡಾದ. ಪ್ರಚಂಡ ಮೇಧಾವಿಯಾದರೂ ನವಶಿಷ್ಟತೆಯಿಂದ ಅರೆಕುರುಡನಾದ ವಾಲ್ಟೇರನೂ ಹಾಗೆಯೇ. ಅಂತೂ ಸಾಹಿತ್ಯ ವಿಮರ್ಶೆ ಸುಮಾರು 150 ವರ್ಷ ಮಡುಗಟ್ಟಿ ನಿಶ್ಚಲವಾಗಿ ನಿಂತು ಪಾಚಿಕಟ್ಟಿ ಅಂದಗೆಟ್ಟು ಹೋಯಿತು.

ಕವಿಗೆ ಹೆಚ್ಚು ಸ್ವಾತಂತ್ರ್ಯ ಇರತಕ್ಕದ್ದೆಂದು ವಾದಿಸುವ ಮುನ್ನೋಟದ ಯೋಚನಾವಂತರು 18ನೆಯ ಶತಮಾನದಲ್ಲಿ ಆಗಿಬಂದರು. ಆದರೆ ಅವರಿಗೆ ಅಭಿಜಾತತೆಯ ಶಿಸ್ತನ್ನು ಒಡೆಯುವ ಸಾಮರ್ಥ್ಯವಿರಲಿಲ್ಲ. ಆದರೂ ಒಬ್ಬಿಬ್ಬರು ತಮ್ಮ ಪಾಂಡಿತ್ಯ ಪ್ರತಿಭೆಗಳಿಂದ ವಿಮರ್ಶೆ ನಡೆಸಿ ಬೇಗಬೇಗ ನವಅಭಿಜಾತತೆಯ ಸಂಕೋಲೆ ಕಳಚಿ ಬೀಳುವಂತೆ ಎಸಗುವುದರಲ್ಲಿ ನೆರವಾದರು. ಫ್ರೆಂಚರ ಡಿಡಿರೊ ಉದ್ದೇಶಪೂರ್ವಕವಾಗಿ ವಿಮರ್ಶಕನಾಗಲಿಲ್ಲ. ವಿಶ್ವಜ್ಞಾನ ವ್ಯಾಸಂಗಿ ಆದ್ದರಿಂದ ಸಾಹಿತ್ಯವನ್ನು ಕುರಿತು ಅವನು ಸಲಹೆಗಳನ್ನು ಹೇಳಿದ; ಅವುಗಳಲ್ಲಿ ಹಲವು ಅಮೂಲ್ಯ. ಇಂಗ್ಲೆಂಡಿನ ರಿಚರ್ಡ್‌ಸನ್ನನ ಕಾದಂಬರಿಯನ್ನು ಅವನು ಶ್ಲಾಘಿಸಿರುವುದು ಅವನ ಉದಾರನೋಟದ ಕುರುಹು. ನಾನಾ ಲಲಿತಕಲೆಗಳನ್ನು ಕುರಿತು ಅವನು ಚಿಂತನೆಮಾಡಿ ಒಪ್ಪತಕ್ಕ ತೀರ್ಮಾನಗಳನ್ನು ನುಡಿದ.

ಅವನ ಹಾಗೆಯೇ ವಿಶಾಲದೃಷ್ಟಿಯಿಂದ, ಕಲೆ ಸಾಹಿತ್ಯಗಳನ್ನು ವೀಕ್ಷಿಸಿದ ಇನ್ನೊಬ್ಬ ಮಹಾವ್ಯಕ್ತಿ ಜರ್ಮನಿಯ ಲೆಸ್ಸಿಂಗ್. ಅವನು ಬಂದಾಗ ಗಾಟ್‌ಷೆಡ್ ಎಂಬ ಕವಿ ಜರ್ಮನಿಯಲ್ಲಿ ನವಶಿಷ್ಟತೆಯ ಪ್ರಧಾನ ಪುರೋಹಿತನಾಗಿದ್ದ. ಅವನಿಗೆದುರಾಗಿ ಆಗಲೇ ಸ್ವಿಟ್ಜರ್‌ಲೆಂಡಿನ ಬಾಡ್ಮರ್, ಬ್ರೈಟಿಂಗರ್ ಎಂಬಿಬ್ಬರು ಪಂಡಿತರು ಹೋರಾಟ ನಡೆಸಿದ್ದರು. ಅವರಿಗಿಂತ ಹೆಚ್ಚು ಸಾಹಿತ್ಯಜ್ಞಾನ ಲೆಸ್ಸಿಂಗನಿಗಿತ್ತು. ಪ್ರಾಚೀನರನ್ನೂ ಅರ್ವಾಚೀನರನ್ನೂ ಅವನು ಶ್ರದ್ಧೆಯಿಂದ ಪಠಿಸಿದ್ದ. ತೌಲನಿಕ ವಿಮರ್ಶೆಯಲ್ಲಿ ಅವನು ಎತ್ತಿದ ಕೈ. ಅರಿಸ್ಟಾಟಲನ ಅಭಿಪ್ರಾಯವನ್ನು ನೇರವಾಗಿ ವಿವರಿಸಿದ್ದು ಅವನು ನೆರವೇರಿಸಿದ ದೊಡ್ಡ ಕಾರ್ಯ. ನವಅಭಿಜಾತತೆಯ ಫ್ರೆಂಚರು ಹೇಗೆ ಅರಿಸ್ಟಾಟಲನನ್ನು ಅಪಾರ್ಥ ಮಾಡಿಕೊಂಡರೆಂಬುದಕ್ಕೆ ಅವನು ಕನ್ನಡಿ ಹಿಡಿದ. ಅವನ ಒಂದು ಹೇಳಿಕೆ ಸಾಹಿತ್ಯದ ನೈಜ ಸೃಷ್ಟಿಯನ್ನು ತೃಪ್ತಿಕರವಾಗಿ ಬಣ್ಣಿಸುತ್ತದೆ. ಪ್ರತಿಯೊಂದು ಶ್ರೇಷ್ಠ ಕಲಾಕೃತಿಗೂ ಅದರದೇ ಆದ ಆಂತರಿಕ ನಿಯಮವಿದೆ. ಇಂಥ ಹೇಳಿಕೆಗಳು ಅವನ ಇಪ್ಪತ್ತು ಸಂಪುಟಗಳಲ್ಲಿ ಹೇರಳವಾಗಿವೆ.

ಹದಿನೆಂಟನೆಯ ಶತಮಾನದ ಕೊನೆಯಲ್ಲಿ ರೊಮ್ಯಾಂಟಿಕ್ ಚಳವಳಿ ಜರ್ಮನಿಯಲ್ಲಿ ಆರಂಭವಾಗಿ ಕ್ರಮೇಣ ಫ್ರಾನ್ಸ್, ಇಂಗ್ಲೆಂಡ್, ಸ್ಪೇನ್, ರಷ್ಯ ಮುಂತಾದ ದೇಶಗಳಿಗೂ ಹರಡಿತು. ಸಾಹಿತ್ಯಕೃತಿಯನ್ನು ವ್ಯಾಖ್ಯಾನಿಸಿ ಬೆಲೆಕಟ್ಟುವ ಕೆಲಸದಲ್ಲಿ ಅದೇ ಸೂಚಿಸುವ ವಿಧಾನವನ್ನು ಅನುಸರಿಸತಕ್ಕದ್ದು. ಹೊರಗಣ ಕಟ್ಟುಕಟ್ಟಳೆಯನ್ನು ಹಿಡಿದುಕೊಂಡರೆ ಅಪಾಯ.

ಇದೇ ಅದರ ಮೂಲ ನಂಬಿಕೆಗಳಲ್ಲಿ ಒಂದು. ರೊಮ್ಯಾಂಟಿಕತೆಯ ವಾದಿಗಳಿಗೆ ಷೇಕ್ಸ್‌ಪಿಯರ್ ಅತಿ ನೆಚ್ಚಿನ ಕವಿ. ಫ್ರಾನ್ಸಿನಲ್ಲಿ ಮದಾಂ ಡ ಸ್ಟೀಲ್, ಇಂಗ್ಲೆಂಡಿನಲ್ಲಿ ವರ್ಡ್ಸ್‌ವರ್ತ್, ಕೋಲ್‌ರಿಜರು ರೊಮ್ಯಾಂಟಿಕತೆಯ ಸ್ಥಾಪಕರಾದರು.

ಸಾಹಿತ್ಯ ವಿಮರ್ಶೆಯಲ್ಲಿ ಕೋಲ್‌ರಿಜನ ಹೆಸರು ಮೇಲ್ಮಟ್ಟದ್ದು. ದೃಢವಾದ ಜ್ಞಾನವೂ ತೀಕ್ಷ್ಣ ರಸಜ್ಞತೆಯೂ ಅವನ ಹಿರಿಯ ಗುಣ. ಜರ್ಮನಿಯ ತತ್ತ್ವಶಾಸ್ತ್ರದ ಗಾಢಾಭಿಪ್ರಾಯಗಳನ್ನು ಸಾಹಿತ್ಯಕ್ಕೆ ಹೊಂದಿಸಿದುದರಲ್ಲಿ ಅವನು ನಿಸ್ಸೀಮ. ಸಾಹಿತ್ಯ ಸೃಷ್ಟಿಸಬಲ್ಲ ವಿಭಾವನೆಯನ್ನು (ಇಮ್ಯಾಜಿನೇಷನ್) ಅವನಂತೆ ಖಚಿತವಾಗಿ ತಿಳಿಯಹೇಳುವವರು ಅಪೂರ್ವ. ಕವಿಯ ಭಾಷೆ ಛಂದಸ್ಸುಗಳ ವಿಚಾರದಲ್ಲೂ ಅವನ ಹೇಳಿಕೆ ಕಟ್ಟಕಡೆಯ ತೀರ್ಮಾನ ಎನಿಸುತ್ತದೆ. ಹ್ಯಾಸ್‌ಲಿಟ್, ಲ್ಯಾಮ್ ಮೊದಲಾದ ಇತರ ಕೆಲವು ಉತ್ತಮ ವಿಮರ್ಶಕರು ಅದೇ ಕಾಲದಲ್ಲಿ ಎದ್ದು ಬಂದರು. ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಗಳೂ ಉದಿಸಿ ವಿಮರ್ಶೆ ಒಳ್ಳೆಯ ವ್ಯವಸಾಯವೆಂಬ ಭಾವನೆಯನ್ನು ಮೂಡಿಸಿದುವು

ಕೋಲ್‌ರಿಜ್

19ನೆಯ ಶತಮಾನದ ಎರಡನೆಯ ಭಾಗದಲ್ಲಿ ಸಾಹಿತ್ಯ ವಿಮರ್ಶೆಗೆ ಬೇರಾವ ಕಾಲದಲ್ಲೂ ಸಿಗದಷ್ಟು ಗೌರವ ದಕ್ಕಿತು. ವಿಮರ್ಶಕ ಸಮಾಜಕ್ಕೂ ಜನಾಂಗಕ್ಕೂ ಅಗತ್ಯವಾದ ಪ್ರತಿನಿಧಿ ಎಂದಾಯಿತು. ಫ್ರಾನ್ಸಿನಲ್ಲಿ ಸೇಂಟ್ ಬವ್, ರಷ್ಯದಲ್ಲಿ ಬೆಲಿನ್‌ಸ್ಕಿ, ಇಟಲಿಯಲ್ಲಿ ಡಸ್ಯಾಂಕ್ಟಿಸ್, ಡೆನ್‌ಮಾರ್ಕಿನಲ್ಲಿ ಬ್ರ್ಯಾಂಡ್ಸ್, ಇಂಗ್ಲೆಂಡಿನಲ್ಲಿ ಆರ್ನಲ್ಡ್, ಸ್ಪೇನಿನಲ್ಲಿ ಇಪೆಲಾಗೊ ಅಂಥ ಗಣ್ಯ ಪುರುಷರೆಂದು ಪ್ರಸಿದ್ಧಿ ಪಡೆದರು. ಜರ್ಮನಿ, ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಮಾತ್ರ ಹೆಸರಾಂತ ವಿಮರ್ಶಕ ಎದ್ದು ಬರಲಿಲ್ಲ.

ಆಗಲೇ ಪುಷ್ಕಳವಾಗಿ ಬೆಳೆದ ಸಾಹಿತ್ಯವಿಮರ್ಶೆ ಇಪ್ಪತ್ತನೆಯ ಶತಮಾನದಲ್ಲಿ ವಿಪರೀತ ಸಮೃದ್ಧಿಹೊಂದಿ ಕಣಜದ ಗೋಡೆಯನ್ನು ಎಂಟು ಕಡೆಗಳಿಂದಲೂ ಚುಚ್ಚಿ ಬಿರಿಸುತ್ತಿದೆ. ಅದರ ಸಮಗ್ರ ಅವಲೋಕನ ಹಾಗಿರಲಿ, ಸಾಕಷ್ಟು ವೀಕ್ಷಣೆಯೂ ಶ್ರಮಸಾಧ್ಯವಾದ ವ್ಯಾಪಾರ. ಕೆಲವು ಪ್ರಧಾನಾಂಶಗಳನ್ನು ಲಕ್ಷ್ಯದಲ್ಲಿ ಇರಿಸಿಕೊಂಡು ವಿವೇಚಿಸುವುದು ಹಿತ. ಆಧುನಿಕತೆಯ ವಿಚಾರ ಸಂಕೀರ್ಣವಾಗಿದ್ದು ಗೋಜು, ತಬ್ಬಿಬ್ಬು ಹಿಡಿಸುವಂಥಾದ್ದು. ಇಡೀ ಪಾಶ್ಚಾತ್ಯ ಪ್ರಪಂಚ ವಿಮರ್ಶೆಯ ಅಗಾಧ ಪ್ರಯೋಗಶಾಲೆಯಾಯಿತು. ಚಾರಿತ್ರಿಕ ದೃಷ್ಟಿ, ವೈಜ್ಞಾನಿಕತೆ, ಮನೋವಿಜ್ಞಾನ, ವೈಯಕ್ತಿಕತೆ, ಪರಿಣಾಮವಿಧಾನ (ಇಂಪ್ರೆಷನಿಸಂ), ಸಾಂಕೇತಿಕತೆ, ಅತಿವಾಸ್ತವತೆ, ಸಾಪೇಕ್ಷತೆ-ಯಾವುದಿಲ್ಲ? ಯಾವುದುಂಟು? ತತ್ಪರಿಣಾಮವಾಗಿ ಬಹುಮಂದಿ ಒಪ್ಪುವ ಸಿದ್ಧಾಂತವಾಗಲಿ, ತರ್ಕಸಮ್ಮತವಾದ ವಿಧಾನವಾಗಲಿ ಇನ್ನೂ ರೂಪಿತವಾಗಿಲ್ಲ. ಸಾಹಿತ್ಯದ ಮತ್ತು ವಿಮರ್ಶೆಯ ನೆಲೆ, ಮೂಲ ಮೌಲ್ಯ ಇತ್ಯಾದಿ ಅಧಿಷ್ಠಾನ ವಿಷಯವೇ ವಾದಗ್ರಸ್ತವಾಗಿಬಿಟ್ಟಿದೆ.

ಕಳೆದ ನೂರ ಮೂವತ್ತು ನೂರ ನಲವತ್ತು ವರ್ಷಗಳ ವಿಮರ್ಶೆಯನ್ನು ಕಲಾಮೂಲ ಅಥವಾ ಕೃತಿಸೀಮಿತ (ಈಸ್ತೆಟಿಕ್), ವೈಜ್ಞಾನಿಕ, ಮಾನವತಾತಿಷ್ಠ (ಹ್ಯೂಮನಿಸ್ಟಿಕ್) ಎಂಬ ಸ್ಥೂಲ ವಿಭಾಗಗಳಾಗಿ ವಿಂಗಡಿಸಿಕೊಂಡು ವಿವೇಚಿಸುವುದು ಒಳ್ಳೆಯದು.

ಕಲಾಮೂಲ ವಿಮರ್ಶೆಗೆ ಮಹಾದಾರ್ಶನಿಕ ಕ್ಯಾಂಟನೇ ಜನಕನೆಂಬ ಹೇಳಿಕೆಯಿದೆ. ಅವನು ತನ್ನ ಕ್ರಿಟಿಕ್ ಆಫ್ ಜಜ್‌ಮೆಂಟ್ ಗ್ರಂಥದಲ್ಲಿ ಘೋಷಿಸಿದ ತತ್ತ್ವಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರಚೋದಕವಾಗಿದ್ದು ಆ ನಿಟ್ಟಿನಲ್ಲಿ ತುಂಬ ಪ್ರಭಾವ ಬೀರಿದುವು. ಸೃಷ್ಟಿಶಕ್ತಿಯುಳ್ಳ ವಿಭಾವನೆ, ಕಲಾವಿಚಾರದ ಪ್ರತ್ಯೇಕ ಲಕ್ಷಣ, ಉದ್ದೇಶ ತೋರಿಸದ ಉದ್ದೇಶತೆ ಮೊದಲಾದ ಘನಾಭಿಪ್ರಾಯಗಳು ತತ್ತ್ವಜ್ಞರ ವಿವರಣೆಯೊಂದಿಗೆ ವಿಮರ್ಶಕರ ಕೈವಶವಾದುವು. ಕಲಾಮೂಲ ವಿಮರ್ಶೆಯ ವಿಷಯ ಕಲಾಸೃಷ್ಟಿಯ ಕಾರ್ಯ, ಕಲಾಕೃತಿಯ ಗುಣಲಕ್ಷಣ, ವಿಮರ್ಶೆಯ ಕೆಲಸ. ಅದರ ದೃಷ್ಟಿಗೆ ಕಲಾಸ್ವಾದ ವಿಶಿಷ್ಟವಾದೊಂದು ಅನುಭವ. ಅದರಿಂದ ಲಭಿಸುವ ಜ್ಞಾನ ಇತರ ಬಗೆಯ ಜ್ಞಾನದಿಂದ ಬೇರೆ. ವಿಜ್ಞಾನ, ನೀತಿಶಾಸ್ತ್ರಗಳು ತಂದು ಕೊಡುವ ಜ್ಞಾನದಿಂದ ಬೇರೆ. ಆದ್ದರಿಂದ ಕಲಾಕೃತಿಯನ್ನು ವಿಮರ್ಶಿಸುವಾಗ ನೀತಿ, ನಿಯಮಾವಳಿ, ಸನ್ನಿವೇಶ ಮುಂತಾದ ವಿಚಾರವೆಲ್ಲ ಅನ್ಯ; ಅವಾವುವಕ್ಕೂ ಗಮನವೀಯಲಾಗದು. 1790-1820ರ ಅವಧಿಯಲ್ಲಿ ಕ್ಯಾಂಟನನ್ನು ಅನುಸರಿಸಿ ಫಿಶ್ಟೆ, ಷೆಲ್ಲಿಂಗ್, ಸಾಲ್ಗರ್, ಹೆಗಲ್ ಮುಂತಾದವರು ಗ್ರಂಥ ಬರೆದರು. ತತ್ತ್ವಶಾಸ್ತ್ರದ ಮಾರ್ಗದಲ್ಲಿ. ಶ್ಕಿಲ್ಲರ್, ಷೆಗಲ್ ಸಹೋದರರು, ರಿಕ್ಟರ್ ಮೊದಲಾದವರು ಕಾರ್ಯನಿರತ ಕಲೆಗಾರನ ಮಾರ್ಗದಲ್ಲಿ ಗ್ರಂಥ ಬರೆದರು. ಸಾಹಿತ್ಯ ವಿಮರ್ಶಕರೂ ಹಿಂದುಳಿಯಲಿಲ್ಲ. ಕೋಲ್‌ರಿಜನ ಉದ್ಗ್ರಂಥ 1817ರಲ್ಲಿ ಹೊರಬಂತು. ಅನಂತರ ಕಲಾಮೂಲ ವಿಮರ್ಶೆ ಹಲವು ವಿಧಗಳಾಗಿ ಒಡೆಯಿತು. ಫ್ರೆಂಚರೂ ಅವರನ್ನು ಹಿಂಬಾಲಿಸಿ ಇಂಗ್ಲಿಷರೂ ಕಲೆಗಾಗಿ ಕಲೆ (**ನೋಡಿ- ಕಲೆಗಾಗಿ-ಕಲೆ**) ಎಂಬ ಪಂಗಡವನ್ನು ಹೊರ ತಂದರು. ತನಗೆ ತೋಚಿದಂತೆ ವಿಮರ್ಶೆ ನಡೆಸಬೇಕೆಂಬುದು ಬಲಿದು ಪರಿಣಾಮ ವಿಧಾನ (ಇಂಪ್ರೆಷನಿಸಂ) ಹುಟ್ಟಿತು. ಕ್ಯಾಂಟನ ಕಲಾಭಿರುಚಿಯ ತೀರ್ಮಾನಗಳಿಗೆ ವ್ಯಕ್ತಿತಿಷ್ಠ ವಿಶ್ವತ್ವವುಂಟು-ಎಂಬ ಹೇಳಿಕೆ ಹಲವರಿಗೆ ಪ್ರಿಯವಾಯಿತು. ಅವರಿಗೆ ಕಲಾಸೌಂದರ್ಯ ವ್ಯಕ್ತಿತಿಷ್ಠ, ವಸ್ತುತಿಷ್ಠವಲ್ಲ; ಉತ್ತಮ ಕಲಾಕೃತಿಗಳೊಂದಿಗೆ ರಸಿಕ ವ್ಯಕ್ತಿ ನಡೆಸುವ ವೈಯಕ್ತಿಕ ಸಾಹಸಗಳೇ ವಿಮರ್ಶೆ. ವಿಮರ್ಶಕ ತನ್ನ ಆತ್ಮೀಯ ಅನುಭವವನ್ನಲ್ಲದೆ ಮತ್ತೇನನ್ನು ವರ್ಣಿಸಿಯಾನು? ಕಲೆಗಾಗಿ ಕಲೆ, ಪರಿಣಾಮವಿಧಾನ ಎರಡೂ ಯಾವ ವಿಮರ್ಶಾ ಸಿದ್ಧಾಂತವನ್ನೂ ಹೊರತರಲಿಲ್ಲ. ಅಷ್ಟೇಕೆ, ಅವು ವಿಮರ್ಶೆಯಲ್ಲಿ ಒಮ್ಮತ ಅಸಾಧ್ಯವೆಂದೇ ಹೇಳಿಬಿಟ್ಟವು.

ಕೃತಿಸೀಮಿತದಿಂದ ಹುಟ್ಟಿಬಂದ ಇನ್ನೊಂದು ಕಲಾಪದ್ಧತಿ ಸಾಂಕೇತಿಕತೆ. ಅದನ್ನು ಸ್ಥಾಪಿಸಿದಾತ ಫ್ರೆಂಚರ ಸಾಹಿತಿ ಬೋದಿಲೇರ್. ಅವನು ಸ್ವೀಡನ್‌ಬರ್ಗ್ ಎಂಬ ವಿಶಿಷ್ಟ ಲಕ್ಷಣದ ದಾರ್ಶನಿಕನಿಂದ ಸಮರೂಪತೆ ನಿಯಮ ಅಥವಾ ಸಂವಾದಿ ಸಿದ್ಧಾಂತವನ್ನು (ಥಿಯೊರಿ ಆಫ್ ಕರೆಸ್ಪಾಂಡೆನ್ಸ್) ಕಲಿತುಕೊಂಡ. ಫ್ಲಾಬರ್ಟನಿಂದ ಕಲಾವಿರಚನಾ ತಂತ್ರದ ಮುಖ್ಯತೆಯನ್ನು ಅರಿತ. ಮೇಲಾಗಿ ಕೋಲ್‌ರಿಜನ ಮೂಲಕ ಎಡ್ಗರ್ ಆಲನ್ ಪೋಗೆ ಇಳಿದು ಅವನಿಂದ ಬೋದಿಲೇರನ್ನು ಮುಟ್ಟಿದ ಪ್ರಭಾವ ಕ್ಯಾಂಟನದು. ವಿಷಯಾತೀತವೂ ಅನುಭವಜನ್ಯವಲ್ಲದ್ದೂ ಆದ ಗೂಢ ಹೊಂದಿಸುವ ವಿದ್ಯೆಯಲ್ಲಿ ಬೋದಿಲೇರನಿಗೆ ಪೋನೇ ಗುರು. ಬೋದಿಲೇರನ ಶಿಷ್ಯರಾಗಿ ಬಂದವರು ವರ್ಲೇನ್ ಮತ್ತು ಮಲಾರ್ಮೆ. ಆದರೆ ಸಾಂಕೇತಿಕತೆ ಕೇವಲ ವೈಯಕ್ತಿಕ ವೈಚಿತ್ರ್ಯಕ್ಕೆ ತಿರುಗಿ ಸತ್ವ ಕಳೆದುಕೊಂಡಿತು. ಯೇಟ್ಸ್, ಪಾಲ್ ವ್ಯಾಲೆರಿ ಮೊದಲಾದ ಕೆಲವೇ ಕೆಲವರು ಅದನ್ನು ಮತ್ತೆ ರೂಢಿಗೆ ತರಲು ಪ್ರಯತ್ನಿಸಿ ಜಯಗಳಿಸದೇ ಹೋದರು. ಆದರೂ ಸಾಹಿತ್ಯವಿಮರ್ಶೆಯಲ್ಲಿ ಸಂಕೇತದ ವಿಚಾರ ಸೂಕ್ತ ಸಂದರ್ಭದಲ್ಲಿ ಬಳಕೆಗೆ ಬಂತು.

ಕೃತಿಸೀಮಿತತ್ತ್ವದ ತತ್ತ್ವಶಾಸ್ತ್ರೀಯ ಮುಖವನ್ನು ಕ್ರೋಚೆ, ಬರ್ಗ್‌ಸನ್ನರಲ್ಲಿ ಕಾಣಬಹುದು. ಅವರಿಗೆ ಹೆಗಲನ ಮೂಲಕ ಕ್ಯಾಂಟನೇ ಮಾರ್ಗದರ್ಶಕ.

20ನೆಯ ಶತಮಾನದ ಎರಡನೆಯ ದಶಕದಲ್ಲಿ ಹೊಸ ವಿಮರ್ಶೆಯೆಂಬ ಡಾಲಿನ ಸಾಹಿತ್ಯವ್ಯಾಸಂಗ ತಲೆಯೆತ್ತಿತ್ತು. ಹಿಂದಿನಿಂದ ಸಾಂಪ್ರದಾಯಿಕವಾಗಿ ಬಂದ ತತ್ತ್ವಗಳು, ಸೂತ್ರಗಳು, ಸನ್ನಿವೇಶ ವಿವರಣೆ, ಕವಿಸ್ವಭಾವದ ವಿಚಾರ-ಇವೇ ಮುಂತಾದ, ಕೃತಿಯಿಂದ ಹೊರಚ್ಚಾದ ಸಮಸ್ತವನ್ನೂ ಬದಿಗೊತ್ತಿ ಕೃತಿಯೊಂದನ್ನೇ ಪರೀಕ್ಷಿಸಬೇಕು-ಎಂಬುದು ಅದರ ಚಾಲಕಶಕ್ತಿ. ಆದರೆ ಹೊಸ ವಿಮರ್ಶಕರಲ್ಲಿ ಅನೇಕ ವಿಭಿನ್ನ ಗುಂಪುಗಳಾದುವು. ಅವರಿಂದ ಆಗಿರುವ ಒಂದು ಪ್ರಯೋಜನ ಕಲಾಕೃತಿಗೆ ಹೆಚ್ಚುಕಡಿಮೆ ಸಂಪೂರ್ಣವಾಗಿ ಲಕ್ಷ್ಯವೇ ಮೀಸಲಾಗಬೇಕೆಂಬ ಅಭಿಪ್ರಾಯ; ಕಲಾಕೃತಿಗೆ ಆಂಗಿಕ ಹೊಂದಾಣಿಕೆ (ಆರ್ಗ್ಯಾನಿಕ್ ಯೂನಿಟಿ) ಇರಲೇಬೇಕೆಂಬ ತತ್ತ್ವ.

ಇತ್ತೀಚೆಗೆ ಮನೋವಿಜ್ಞಾನಿ ಯೂಂಗನಿಂದ ಪ್ರಚೋದಿತವಾದ ವಿಧಾನವೊಂದು ವಿಮರ್ಶೆಯೊಳಕ್ಕೆ ಕಾಲಿಟ್ಟಿದೆ. ಅವನು ಜಾರಿಗೆ ತಂದ ಭಾವನೆಗಳಲ್ಲಿ ನರರ ಅಂತರಾಳದಲ್ಲಿ ಹುದುಗಿದೆಯೆಂದು ಹೇಳಲಾಗುವ ಸಾಮೂಹಿಕ ಅಪ್ರಜ್ಞೆ (ದಿ ಕಲೆಕ್ಟಿವ್ ಅನ್‌ಕಾನ್ಷಸ್) ಕಡುಪುಳ್ಳದ್ದು. ಕೆಲವೊಮ್ಮೆ ಅದು ಜಾಗರಿತವಾಗಿ ಭಾವ ಭಾವನೆಗಳ ಆದ್ಯ ಮಾದರಿಯ (ಆರ್ಕಿಟೈಪ್ಸ್) ಅರಿವನ್ನು ಒದಗಿಸುತ್ತದೆ. ಕೆಲವರಿಗೆ ಸೃಷ್ಟಿಗೈಯುವ ರಾಗೋತ್ಸಾಹವನ್ನು ಎಬ್ಬಿಸಿ ಕಲಾನಿರ್ಮಿತಿಗೆ ಕಾರಣವಾಗುತ್ತದೆ. ಈ ಅಭಿಪ್ರಾಯದ ಸುಳಿವು ಕ್ಯಾಂಟನ ವಿಭಾವನಾ ಕಲ್ಪನೆಯಲ್ಲಿ ಗೋಚರಿಸಿದೆಯೆಂದು ಕೆಲವರ ಹೇಳಿಕೆ. ಯೂಂಗನ ನಿರ್ಧಾರದಂತೆ ಆದ್ಯ ಮಾದರಿಗಳು ಮೂಲ ಐತಿಹ್ಯ (ಲೆಜೆಂಡ್), ಕಥಾವಳಿ (ಮಿತ್ಸ್), ಶಾಶ್ವತ ಸಂಕೇತಗಳು (ಇಂಟರ್ನಲ್ ಸಿಂಬಲ್ಸ್), ದ್ರವ್ಯವರ್ಗಗಳು (ಕೆಟಗೊರೀಸ್) ಇತ್ಯಾದಿ ರೂಪಗಳಲ್ಲಿ ಪ್ರಕಟಿತವಾಗಿ ನುಡಿದ ವಚನಕ್ಕೆ ಅರ್ಥ ತುಂಬುತ್ತವೆ. ರುದ್ರನಾಟಕ ಭವ್ಯಕಾವ್ಯಪ್ರಭೇದಗಳ ಜಿಜ್ಞಾಸೆಯಲ್ಲೂ ಸಾಂಕೇತಿಕತೆಯ ವ್ಯಾಖ್ಯಾನದಲ್ಲೂ ಆದ್ಯಮಾದರಿಗಳ ಪ್ರಸ್ತಾಪ ಬರುತ್ತಿದೆ. 20ನೆಯ ಶತಮಾನಕ್ಕೆ ಮನಃವಿಜ್ಞಾನದ ಯುಗವೆಂಬ ಹೆಸರು ಯುಕ್ತ.

18ನೆಯ ಶತಮಾನ ಯಂತ್ರೋದ್ಯಮದ ಕಾಲವಾದರೆ 19ನೆಯ ಶತಮಾನ ವಿಜ್ಞಾನ ಯುಗವಾಯಿತು. ನಾನಾ ಪ್ರಬಲ ಸಂಶೋಧನೆಗಳಿಂದ ಮನುಷ್ಯಚಿಂತನೆ ಅಲ್ಲೋಲಕಲ್ಲೋಲಗೊಂಡಿತು. ವಿಜ್ಞಾನಕ್ಕೆ ಹಿಗ್ಗಿಬಂದ ವಿಧಿಗಳು. ವಿಕಾಸ-ಇವು ಸಮಾಜ ಸಂಸ್ಕೃತಿ ಸಾಹಿತ್ಯಕ್ಕೂ ಯಥೋಚಿತವಾಗಿ ಅನ್ವಯವಾಗಬಹುದೆಂದು ಯೋಚನಾಪರರಿಗೆ ಭಾಸವಾಯಿತು. ಬೆಂತಮ್, ಕಾಂಪ್ಟ್, ಹರ್ಬರ್ಟ್ ಸ್ಪೆನ್ಸರ್ ಮೊದಲಾದವರು ವೈಜ್ಞಾನಿಕವಾಗಿ

ಸಮಾಜವಿಜ್ಞಾನ ರಚಿಸುವುದಕ್ಕೆ ಆಸಕ್ತಿವಹಿಸಿದರು. ಕ್ಯಾಂಟನ ತತ್ತ್ವಶಾಸ್ತ್ರ ಬ್ರಿಟನ್ನಿನಲ್ಲಿ ಪ್ರಬಲಗೊಳ್ಳುತ್ತಿದ್ದ ಅನುಭವೈಕವಾದಕ್ಕೆ ತಡೆಹಾಕಲು ಪ್ರಯತ್ನಿಸಿದರೂ ಆ ವಾದ ಬೆಳೆಯುತ್ತಲೇ ಬಂತು; ವೈಜ್ಞಾನಿಕ ಪ್ರಗತಿಯೂ ಯಂತ್ರೋದ್ಯಮ ಪ್ರಗತಿಯೂ ಪ್ರಯೋಗ ಅನುಭವಗಳಿಗೆ ಪ್ರಶಸ್ತಿ ತಂದುಕೊಟ್ಟುವು.

ವೈಜ್ಞಾನಿಕ ವಿಮರ್ಶಕರೆಲ್ಲರೂ ಒಂದೇ ಪಂಗಡದವರಲ್ಲ. ಸಾಮಾಜಿಕ ವಿಮರ್ಶಕರಿಗೆ ಸಂಸ್ಕೃತಿಮೂಲ ಪ್ರಭಾವಗಳು ಮುಖ್ಯ. ಮತಧರ್ಮ, ಅರ್ಥಶಾಸ್ತ್ರ, ರಾಜಕೀಯ ತತ್ತ್ವಗಳಂತೆ ಸಾಹಿತ್ಯ ನಿರ್ಮಾಣಗೊಳ್ಳುತ್ತದೆಂದು ಅವರ ನಿಲುವು. ಸಾಹಿತ್ಯ ಚರಿತ್ರಕಾರರಿಗೆ ಆಧಾರಗಳೂ ಸಂಪ್ರದಾಯಗಳೂ ಮುಖ್ಯ. ಮನೋವಿಜ್ಞಾನಪ್ರೇರಿತ ವಿಮರ್ಶಕರು ಸಾಹಿತಿಗಳ ಸ್ವಂತ ಅನುಭವಗಳನ್ನೂ ಆತ್ಮಚರಿತ್ರೆಯನ್ನೂ ಬಹುವಾಗಿ ಗೌರವಿಸುತ್ತಾರೆ. ಜೋಲ ಮೊದಲಾದ ಕಾದಂಬರಿಕಾರರಿಗೆ ತಮ್ಮ ಕೃತಿಗಳು ವಿಜ್ಞಾನದ ವಿಧಿಗಳಿಗೆ ಅನುರೂಪ ಎಂಬ ಹೆಮ್ಮೆ.

ವೈಜ್ಞಾನಿಕ ವಿಮರ್ಶೆ ಕಲಾಕೃತಿಯಿಂದ ಹೊರಗಣ ಸಂಗತಿಗಳಿಗೆ ಎಡೆಕೊಡುವುದನ್ನು ಧ್ಯೇಯವಾಗಿ ಇಟ್ಟುಕೊಂಡಿರುವುದರಿಂದ ಅದಕ್ಕೂ ಕಲಾಮೂಲ ವಿಮರ್ಶೆಗೂ ಬದ್ಧವೈರ. ಎರಡು ಗುಂಪಿಗೂ ವಾದ ವಿವಾದ ರೊಮ್ಯಾಂಟಿಕರಿಂದ ಪ್ರಾರಂಭವಾಗಿ ಇಪ್ಪತ್ತನೆಯ ಶತಮಾನದಲ್ಲೂ ನಡೆದಿದೆ.

ಮೊದಲು ಎದ್ದುಬಂದ ವೈಜ್ಞಾನಿಕ ವಿಮರ್ಶೆ ಸಮಾಜ ಸಂಬಂಧವಾದದ್ದು. ಅನುವಂಶಿಕತೆ, ವಾಯುಗುಣ, ಸಮಾಜ ಪದ್ಧತಿ ಮುಂತಾದವು ಸಾಹಿತ್ಯಸೃಷ್ಟಿಯಾಗುವ ಬಗೆಯನ್ನು ನಿರ್ಣಯಿಸುತ್ತವೆಯೆಂದೇ ಅದರ ನಂಬಿಕೆ.

ಇಂಥ ಅಭಿಪ್ರಾಯದ ಮುನ್ಸೂಚನೆ 18ನೆಯ ಶತಮಾನದಲ್ಲೇ ಹರ್ಡರ್, ಮಾಂಟೆಸ್ಕ್ಯೂ ಮೊದಲಾದವರಿಂದ ಆಗಿಬಂದರೂ ವೈಜ್ಞಾನಿಕತೆ ಅಧಿಕೃತವಾಗಿ ಜನಿಸಿದ್ದು ಮದಾಂ ಡ ಸ್ಟೀಲಳ ಸಾಹಿತ್ಯವೂ ಸಮಾಜ ಸಂಸ್ಥೆಗಳೂ (1800) ಎಂಬ ಪುಸ್ತಕದಿಂದ. ಸ್ಟೆಂಡಲ್, ಸೇಂಟ್ ಬವ್, ರೀನನ್ ಮೊದಲಾದವರಿಂದ ಅದಕ್ಕೆ ಪುಷ್ಟಿ ದೊರೆಯಿತು. ಟೇನ್ ಬರೆದ ಇಂಗ್ಲಿಷ್ ಸಾಹಿತ್ಯ ಚರಿತ್ರೆ(1864) ಆ ವಿಧಾನದ ವಿವರಣೆಯೂ ಉದಾಹರಣೆಯೂ ಆಯಿತು.

ಜರ್ಮನಿ ತನ್ನದೇ ಆದ ವೈಜ್ಞಾನಿಕ ವಿಮರ್ಶೆಯನ್ನು ಹೊರತಂದಿತು. ಗ್ರಿಮ್ ಸೋದರರು, ವರ್ನರ್, ಷೀರರ್ ಮತ್ತು ಇತರ ವೈಯಾಕರಣಿಗಳು ಭಾಷಾಪ್ರಮುಖ ವಿಮರ್ಶೆಯೂ ಒಂದು ವಿಜ್ಞಾನವಾಗಬಹುದೆಂಬ ಆಶೋತ್ತರ ಪಂಡಿತ ವರ್ಗದಲ್ಲಿ ಹರಡಿತು. 1860–1916ರ ವರೆಗಿನ ಐವತ್ತಾರು ಸಂವತ್ಸರಗಳ ಕಾಲದಲ್ಲಿ ಜರ್ಮನ್ ಪಾಂಡಿತ್ಯ ಜಗತ್ಕೀರ್ತಿಯನ್ನು ಸಂಪಾದಿಸಿಕೊಂಡಿತು. ಅದರ ಬಹುಪಾಲು ಭಾಷಾವಿಜ್ಞಾನಕ್ಕೆ ಸಂಬಂಧಿಸಿದ್ದು. ಬೊ ಅಕ್ ಕೈಫನಾಕ್ ರಚಿಸಿದ ಬೃಹದ್ಗ್ರಂಥಗಳು ಇದಕ್ಕೆ ನಿದರ್ಶನ. ಅದೇ ದಾರಿಯಲ್ಲಿ ಸ್ಕೀಟ್, ಚೇಂಬರ್ಸ್, ಕೋರ್ಟ್‌ಹೋಪ್ ಇತ್ಯಾದಿ ಬ್ರಿಟಿಷ್ ಪಂಡಿತರೂ ನಡೆದರು.

ಡಾರ್ವಿನ್ನನ ಪ್ರಭಾವ ಸಾಹಿತ್ಯ ಚರಿತ್ರೆಯ ಮೇಲೂ ಕಾದಂಬರಿಯ ವಿಮರ್ಶೆಯ ಮೇಲೂ ಬಲವಾಗಿ ಬಿತ್ತು. ಸಾಹಿತ್ಯದ ಶಕ್ತಿಗಳು ವಿಕಾಸ ಹೊಂದುತ್ತ ಹೋಗುತ್ತವೆಂದೂ ಉದ್ಧಕೃತಿಗಳು ಆಗಿಬಂದು ಅವಧಿಯ ಘಟ್ಟಗಳನ್ನು ಏರ್ಪಡಿಸುತ್ತವೆಂದೂ ಬ್ರೂನತೇರ್ ಹೇಳಿದ. ಪ್ಯಾಸ್ಕಲ್, ಚಾಟೊಬ್ರಿಯಾನ್ ಅಂಥ ಕೃತಿಕಾರರು. 1890ರಲ್ಲಿ ಬ್ರೂನತೇರ್ ಸಾಹಿತ್ಯ ಪ್ರಭೇದಗಳ ವಿಕಾಸ ಎಂಬ ಗ್ರಂಥವನ್ನು ಹೊರತಂದ; 1897ರಲ್ಲಿ ಫ್ರೆಂಚ್ ಸಾಹಿತ್ಯದ ಕೈಪಿಡಿಯನ್ನು ಬರೆದ.

ಜೋಲ ಮತ್ತು ಇತರರು ಕಾದಂಬರಿಯ ನಿಯಂತ್ರಣವನ್ನು ವೈಜ್ಞಾನಿಕವಾಗಿ ವಿವರಿಸಿದರು. ಕಾದಂಬರಿಯಲ್ಲೂ ನಾಟಕದಲ್ಲೂ ಸ್ವಭಾವತೆಯೆಂಬ ತತ್ತ್ವ ಲೇಖಕರನ್ನು ಆಳತೊಡಗಿತು. ಜೀವನ ಒಂದು ಗೊಂಡಾರಣ್ಯ, ಬದುಕುವುದು ಹೋರಾಟದಲ್ಲಿ ಗೆದ್ದರೇನೆ. ಆದ್ದರಿಂದ ಲೇಖಕ ಇರುವ ಸ್ಥಿತಿಯನ್ನು ಇದ್ದಂತೆ ಪ್ರತಿಚಿತ್ರಿಸತಕ್ಕದ್ದು. ಇದು ಸ್ವಭಾವತೆ ತತ್ತ್ವದ ತಿರುಳು. ಜೋಲ ತನ್ನ ಕೃತಿಗಳನ್ನು ಪ್ರಾಯೋಗಿಕ ಕಾದಂಬರಿಗಳು ಎಂದು ಹೆಸರಿಟ್ಟು ಕರೆದ (1880).

ವೈಜ್ಞಾನಿಕತೆಯ ಎರಡು ಮುಖ್ಯ ಕವಲುಗಳೆಂದರೆ ಮಾರ್ಕ್ಸ್ ಮತ್ತು ಎಂಗೆಲ್ಸ್, ಫ್ರಾಯ್ಡ್–ಇವರ ತತ್ತ್ವ. ಸಾಹಿತ್ಯಕ್ಕೆ ನಿಜವಾದ ಆಸರೆ ಅದರ ಕಾಲದ ಆರ್ಥಿಕ ವಸ್ತುವ್ಯವಸ್ಥೆ ಎಂಬುದು ಮಾರ್ಕ್ಸ್ ಮತ್ತು ಎಂಗೆಲ್ಸರ ವಾದ. ಕಾವ್ಯ, ಭಾಷೆ, ಪಾತ್ರ ಶಿಲ್ಪ ಸಂವಿಧಾನ ಮೊದಲಾದ ವಿಚಾರಗಳನ್ನು ಮನೋವಿಜ್ಞಾನ ರೀತ್ಯಾ ವಿವರಿಸಿ ಫ್ರಾಯ್ಡ್ ತಾನೇ ಪ್ರಬಂಧ ಬರೆದ. ಹಾಗೆಯೇ ಕವಿಯ ಆತ್ಮಕಥೆ ಸಾಂಕೇತಿಕತೆಗಳ ಮೇಲೂ ಬರೆದ. ಫ್ರಾಯ್ಡನ್ನು ಹಿಂಬಾಲಿಸಿದ ವಿಮರ್ಶೆಗೆ ಕಲಾಕೃತಿಯಲ್ಲಿ ಕಾಣಬಹುದಾದ ಕೃತಿಕಾರನ ಲಕ್ಷಣ ಗಮನೀಯ ಅಂಶ.

ಈ ಶತಮಾನದ ಎರಡನೆಯ ದಶಕದಲ್ಲಿ ಗಣಿತವಿಜ್ಞಾನಕ್ಕೆ ಅಂಗೀಕಾರವಾಗಿರುವ ಅಂಕಿಅಂಶ ನಕ್ಷೆ ಮುಂತಾದ ಕ್ರಮಗಳನ್ನು ಸಾಹಿತ್ಯ ವಿಮರ್ಶೆಯಲ್ಲಿ ಬಳಸಲಾರಂಭಿಸಿದರು. ನಾಮಪದ, ಕ್ರಿಯಾಪದ, ಗುಣವಾಚಕಾದಿಗಳು ಕಾವ್ಯದಲ್ಲಿ ಎಷ್ಟೆಷ್ಟು ಬರುತ್ತವೆಂದು ವರ್ನನ್ ಲೀ ಲೆಕ್ಕಮಾಡಿ ಹೇಳಿದ. ಇತರರಿಂದ ವಿಷಯಗಳ ನಕಾಶೆ, ಪದಗಳ ಸಂವಿಧಾನ ಮುಂತಾದವು ಗಣಿತವಾದುವು. ಷೇಕ್ಸ್‌ಪಿಯರನ ಮತ್ತು ಅವನ ಸಮಕಾಲೀನರ ಕೃತಿಗಳಲ್ಲಿ ಬರುವ ಅಭಿಪ್ರಾಯ ಪ್ರತಿಮೆಗಳನ್ನು ಕ್ಯಾರೊಲೀನ್ ಸ್ಪರ್ಜನ್ ನಕ್ಷೆ ಮಾಡಿದಳು. ಷೇಕ್ಸ್‌ಪಿಯರನ್ನು ಓದುವಾಗ ಅಕ್ಷರಣೆಯೂ (ಸ್ಪೆಲ್ಲಿಂಗ್), ವಿರಾಮ ಚಿಹ್ನೆಗಳೂ ಹೇಗೆ ಬೇಕಾಗುತ್ತವೆಂಬುದನ್ನು ಲಾರಾ ರೈಡಿಂಗ್ ಮತ್ತು ರಾಬರ್ಟ್ ಗ್ರೇವ್ಸ್ ತೋರಿಸಿದ್ದಾರೆ.

ಇಂಥ ವ್ಯವಸಾಯವನ್ನು ಹಿಂಬದಿಗೆ ತಳ್ಳಿ ಶಬ್ದಾರ್ಥ ಪ್ರಮುಖ ವಿಮರ್ಶೆ ಎದ್ದು ಬಂತು. ಅದರ ಪ್ರತಿಪಾದಕರಲ್ಲಿ ಐ.ಎ.ರಿಚರ್ಡ್ಸ್ ಗಣ್ಯನಾದವ.

ಮಾನವತಾಮೂಲ ವಿಮರ್ಶೆ ಸುಲಭವಾಗಿ ಹಿಡಿತಕ್ಕೆ ಸಿಕ್ಕುವಂಥದಲ್ಲ. ತಮ್ಮ ಉದ್ದೇಶ ವಿಧಾನಗಳನ್ನು ಆ ಪಂಗಡದ ವಿಮರ್ಶಕರು ಸ್ಪಷ್ಟವಾಗಿ ವಚನಿಸಿಲ್ಲ. ಅವರ ವಂಶ ಹೊಸ ಹುಟ್ಟಿನವರೆಗೂ ಹಿಂದಕ್ಕೆ ಹೋಗುತ್ತದೆ. ಸಂಸ್ಕೃತಿಯ ಧ್ಯೇಯ ಮತ್ತು ನೀತಿಬೋಧೆ ಅದರ ಪ್ರಧಾನ ಲಕ್ಷಣ. 19ನೆಯ ಶತಮಾನದಲ್ಲಿ ಆದ ವಿಜ್ಞಾನ ಪ್ರಸಾರ, ಕಲೆಗಾರ ಪ್ರತ್ಯೇಕಿಸಲ್ಪಟ್ಟಿದ್ದು, ಸಾರ್ವಜನಿಕ ವಿದ್ಯಾಭ್ಯಾಸ, ಸಾಂಪ್ರದಾಯಿಕ ಮೌಲ್ಯಗಳ ಪರಾಭವ, ಹಳೆಯ ಸಂಸ್ಕೃತಿಯ ಕುಸಿತ ಮೊದಲಾದವನ್ನು ಆ ಕಾಲದ ಸಾಹಿತ್ಯ ವಿಮರ್ಶಕರು ಪರಿಶೀಲಿಸಬೇಕಾಯಿತು. ಅವರಲ್ಲಿ ಕೆಲವರು ಘಂಟಾಘೋಷವಾಗಿ ಬಲಿಷ್ಠ ಕೇಂದ್ರ ಸರ್ಕಾರ, ವ್ಯವಸ್ಥಿತ ಶಿಕ್ಷಣ ಪದ್ಧತಿ ಲಲಿತಕಲೆಗಳಿಗೆ ಸುಭದ್ರಸ್ಥಾನ–ಇವು ಏರ್ಪಡಲೇಬೇಕೆಂದು ಸಾರಿದರು. ಅವರಿಗೆ ಕಲಾಮೂಲ ವಿಮರ್ಶೆ ಹೊಲ್ಲ. ಸಾಹಿತ್ಯದಿಂದ ಶೀಲ ನೆಟ್ಟಗಾಗದಿದ್ದರೆ ಅದು ಸಾಹಿತ್ಯವೇ ಅಲ್ಲ. ಅವರ ನೋಟಕ್ಕೆ. ವೈಜ್ಞಾನಿಕತೆಯೂ ಅವರಿಗೆ ರುಚಿಯೆನಿಸುವುದಿಲ್ಲ. ಏತಕ್ಕೆಂದರೆ ಅದು ಮಾನವ ಸ್ವಾತಂತ್ರ್ಯವನ್ನು ಇಲ್ಲವೆನಿಸುತ್ತದೆ, ನೀತಿ ಧರ್ಮ ಬೇಡ ಎನ್ನುತ್ತದೆ. ಅವರ ಪಾಂಡಿತ್ಯವೆಲ್ಲ ಜೀವವಿಲ್ಲದ ಕ್ಷುಲ್ಲಕ ಸಂಗತಿಗಳ ಮೇಲೆ ಕಟ್ಟಿದುದು. ಅವರಲ್ಲಿ ಅನೇಕರಿಗೆ ಗಯಟೆಯೇ ಮೇಲ್ಪಂಕ್ತಿ. ಏತಕ್ಕೆಂದರೆ ಅವನು ರೊಮ್ಯಾಂಟಿಕತೆಯನ್ನು ಕಾಯಿಲೆಯೆಂದು ಹಳಿದ. ಅಭಿಜಾತ ಸಾಧುವೆಂದು ಹೇಳಿದ. ತೀವ್ರ ರಾಷ್ಟ್ರೀಯತೆಯನ್ನು ಖಂಡಿಸಿ ಜಗತ್ಸಾಹಿತ್ಯವೆಂಬುದನ್ನು ಹೊಗಳಿದ. ಕಲೆಗಾರನಿಂದ ಸಮಾಜದ ನೈತಿಕಾರೋಗ್ಯ ದೃಢವಾಗಿರಬೇಕೆಂಬುದೇ ಅವನ ಸಿದ್ಧಾಂತ. ಆದರೆ ಅವನಲ್ಲಿ ಅನಿಶ್ಚಿತತೆಯೂ ಪೂರ್ವಾಪರ ವಿರೋಧವೂ ಹೇರಳ.

ಇಂಗ್ಲೆಂಡಿನ ಮ್ಯಾಥ್ಯೂ ಆರ್ನಲ್ಡ್ ಮತ್ತು ಫ್ರಾನ್ಸಿನ ಸೇಂತ್ ಬವ್ ಗಯಟೆಯ ಬಗೆಯವರೇ. ಆದರೆ ಅವರ ದೃಷ್ಟಿ ನಿಶ್ಚಂಚಲ, ಅವರ ನುಡಿ ನಿಸ್ಸಂದಿಗ್ಧ. ಚಾರಲ್ಸ್ ಮೌರಾ ಮತ್ತು ಅರ್ವಿಂಗ್ ಬ್ಯಾಬಿಟ್ ಮನುಷ್ಯ ವಾತ್ಸಲ್ಯದ ವಿಮರ್ಶಕರು. ಕೆಲವೊಮ್ಮೆ ಲೋಕವನ್ನು ತಿದ್ದುವ ಚಟಕ್ಕೆ ತುತ್ತಾಗಿದ್ದಾರೆ, ನಿಜ. ಟಾಲ್‌ಸ್ಟಾಯ್ ಮತ್ತು ನೀಚೆ ಅದೇ ಹವ್ಯಾಸದ ವೈಪರೀತ್ಯ. ತಮ್ಮ ಕಾಲದ ಲಲಿತಕಲೆ ಅವರ ಸೂಕ್ಷ್ಮ ನಾಸಿಕಕ್ಕೆ ನಾತಗೂಡಿದ ಕಸ. ಟಾಲ್‌ಸ್ಟಾಯ್ ಕಲೆಯಲ್ಲಿ ಸರಳತೆ, ದೈವಭಕ್ತಿ, ಪ್ರಾಮಾಣಿಕತೆ ಇರಬೇಕೆಂದು ಹಠ ತೊಟ್ಟ; ಒಂದು ಬಗೆಯ ಸಂತೋಷಾವೇಶ ಸ್ಫುರಿಸದಿದ್ದರೆ ಕಲೆ ಕಲೆಯಲ್ಲ–ಎಂಬುದು ನೀಚೆಯ ಮತ.

ಕಲಾಮೂಲ ವಿಮರ್ಶೆಯೂ ವೈಜ್ಞಾನಿಕ ವಿಮರ್ಶೆಯೂ ಅತಿರೇಕಕ್ಕೆ ಹೋಗುವಂತೆ ತೋರಿದಾಗ ಮಾನವತಾ ವಿಮರ್ಶೆ ಮುಂದೆ ಬಂದು ಹಾಳತವನ್ನೂ ಮಿತಿಯನ್ನೂ ಪೋಷಿಸುತ್ತದೆ. ಅದರ ಸಹಾಯದಿಂದ ಇನ್ನೊಂದು ಒಳ್ಳೆಯದಾಗಿದೆ. ಪರಿಣಾಮವಿಧಾನವೂ ವೈಯಕ್ತಿಕತೆಯೂ ಕಲಾಪ್ರಪಂಚದಲ್ಲಿ ಮಿತಿಯನ್ನು ಮೀರಿ ವರ್ತಿಸುವುದುಂಟು; ಹಾಗೆಯೇ ಸಾಂಪ್ರದಾಯಿಕತೆ ಪಾಂಡಿತ್ಯಗಳಿಗೂ ಅತಿಯ ಕಡೆಗೆ ಸರಿಯುವ ಚಾಪಲ್ಯವುಂಟು. ಮಾನವತಾಮೂಲ ವಿಮರ್ಶೆ ಅವನ್ನೂ ಮಧ್ಯಮಾರ್ಗಕ್ಕೆ ಎಳೆತರುವುದರಲ್ಲಿ ಉಪಯುಕ್ತ. ಜಾಕ್ ಮಾರಿಟೇನ್ ಅಂಥ ಸಮತೋಲ ಕಾರ್ಯದಲ್ಲಿ ಪ್ರವೀಣ.

ಮ್ಯಾರಿಟೇನನ ಹೆಸರನ್ನು ಹೇಳಿದ ಕೂಡಲೆ ಯಾವ ಗುಂಪಿಗೂ ಸೇರದೆ ತಮ್ಮ ಅಗಾಧ ಪ್ರತಿಭೆಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಕುತೂಹಲ ಕೆರಳಿಸಿರುವ ಇತರ ಕೆಲವರನ್ನೂ ಒಂದೆರಡು ಪದ್ಧತಿಗಳನ್ನೂ ಹೆಸರಿಸಲೇಬೇಕು; ಅಂದರೆ ಬ್ರಿಟನ್, ಜೀನ್‌ಪಾಲ್ ಸಾರ್ಟ್ರ್, ಇವರ ಕಾಣಿಕೆ ಅಮೂಲ್ಯವಾದುದು. ಮೊದಲ ಮಹಾಯುದ್ಧ ಮುಗಿದ ಮೇಲೆ ಯುರೋಪಿನಲ್ಲಿ ಕಷ್ಟನಷ್ಟ ಆಶಾನಾಶ ನಿರುತ್ಸಾಹ ದುಗುಡಗಳ ಹೆಚ್ಚಳದಿಂದ ಎಲ್ಲ ಕಡೆಯೂ ನೀರಸ ಬಯಲೇ ಇದ್ದಂತೆ ಕಾಣಬಂದಿತು. ಕಲೆಗಾರರು ಹಲವು ಪ್ರಯೋಗಗಳ ಮೂಲಕ ಉಲ್ಲಾಸವುಂಟುಮಾಡಲು ಹವಣಿಸಿದರು. ಅತೀವ ವಾಸ್ತವತೆ (ಸರ್ರಿಯಲಿಸಂ) ಅವುಗಳಲ್ಲಿ ಒಂದು. ಅದರ ತಿರುಳು ಇಷ್ಟೆ; ಮಾನವನ ಅಂತಶ್ಚೇತನ ಅಥವಾ ಆತ್ಮಕ್ಕೆ ಸ್ವಯಂಚಾಲಕ ಶಕ್ತಿಯಿದೆ; ಬುದ್ಧಿ ಭಾವ ಸಂಕಲ್ಪ ಮೊದಲಾದವುಗಳಿಂದ ಅದಕ್ಕೆ ಅಡ್ಡಿ ಹೂಡದೆ ಅದರಷ್ಟಕ್ಕೆ ಅದನ್ನು ಬಿಟ್ಟರೆ ಅದು ಶುದ್ಧವಾದ ಕಲೆಯನ್ನು ರೂಪಿಸುತ್ತದೆ. ಬುದ್ಧಿ ವಿವೇಚನೆಯ ಅಥವಾ ನೈತಿಕ ಭಾವನೆಯ ಅಧಿಕಾರದಿಂದ ಚೇತನವನ್ನು ವಿಮೋಚಿಸಿದಾಗ ಪ್ರಕೃತಿಸಹಜವಾಗಿ ಅದು ಕೆಲಸಮಾಡುತ್ತದೆ. ನಿರ್ಮಲ ನೈಸರ್ಗಿಕ ಕಲೆಯನ್ನು ಸೃಷ್ಟಿಸುತ್ತದೆ. ಸ್ವಪ್ನದಂಥ ಅದರ ಅನಿಸಿಕೆಗಳೂ ತುಡಿತ ಮಿಡಿತಗಳೂ ನೈಜರೂಪದಲ್ಲಿ ಹೊರಬರುವುದೇ ಅತೀವ ವಾಸ್ತವತೆ. ಈ ವಾದಕ್ಕೆ ಫ್ರಾಯ್ಡನ ತತ್ತ್ವಗಳು ಬಹುಮಟ್ಟಿಗೆ ಪ್ರಚೋದಕವೆಂದು ಬೇರೆ ಹೇಳಬೇಕಾಗಿಲ್ಲ.

ಅಸ್ತಿತ್ವ ತತ್ತ್ವ (ಎಕ್ಸಿಸ್ಟೆಂಷಿಯಲಿಸಂ) 1950ರಿಂದ ನಾನಾ ದೇಶಗಳಿಗೆ ಹರಡಿ ಕಲೆ ಸಾಹಿತ್ಯಗಳ ಮೇಲೆ ಪ್ರಭಾವ ಬೀರಿದೆ. ವಿಮರ್ಶೆಯಲ್ಲಿ ಅದರ ಅಭಿಪ್ರಾಯಗಳನ್ನು ಶಕ್ತಿಯುತವಾಗಿ ಮೂಡಿಸಿದವ ಜೀನ್‌ಪಾಲ್ ಸಾರ್ಟ್ರ್. ಮೌಲ್ಯವೆಲ್ಲ ಸಾಪೇಕ್ಷ, ಆದರ್ಶವ್ಯವಸ್ಥೆಯೆಂಬುದಾವುದೂ ಇಲ್ಲವೇ ಇಲ್ಲ. ಆದರೆ ಮನುಷ್ಯ ಕಾರ್ಯ ನಡೆಸಲೇಬೇಕು. ಈ ಪರಸ್ಪರ ವಿರುದ್ಧ ಸಮಸ್ಯೆಯನ್ನು ಜೀವನ ವ್ಯಕ್ತಿಯ ಎದುರು ಒಡ್ಡುತ್ತದೆ. ಅದನ್ನು ಬಿಡಿಸಿ ಬಗೆಹರಿಸುವುದೆಂತು? ಇದಕ್ಕೆ ಸಾರ್ಟ್ರ್ ಕೊಡುವ ಉತ್ತರ ಇದು. ಸಮಸ್ಯೆ ಒಂದು ವಿಧದಲ್ಲಿ ತನ್ನ ವಿರೋಧಾಭಾಸದಿಂದ ನಗುತರುವಂಥದು. ಆದ್ದರಿಂದ ಬಿಡಿ ವ್ಯಕ್ತಿ ಒಂದು ಪರಿಸ್ಥಿತಿಯ ಹೊಣೆಯನ್ನು ಸ್ವಾತಂತ್ರ್ಯದಿಂದ ಗೆಲುವಾಗಿ ಹೊತ್ತುಕೊಳ್ಳಲಿ. ಆ ಹೊಣೆಗಾಗಿ ಶಕ್ತಿಮೀರಿ ಶ್ರಮಿಸಲಿ. ಹಾಗೆ ಮಾಡಿದರೆ ಸರ್ವಸಿದ್ಧಿಯಾಗಿ ಅವನು ವಿಜಯಿಯಾಗುತ್ತಾನೆ. ಕವಿಗೆ ಬೇರಾವ ಸ್ವಾತಂತ್ರ್ಯ ಬೇಕು? ಈ ತತ್ತ್ವ ನಾಟಕ ಕಾದಂಬರಿಗಳ ವಿಮರ್ಶೆಯಲ್ಲಿ ಹಲವು ಉತ್ತಮ ಪರಿಣಾಮಗಳಿಗೆ ಮೂಲವಾಗಿದೆ.

ಬಾಹ್ಯನಿಷ್ಠಾವಾದ (ಫಾರ್ಮಲಿಸಂ) ಎಂಬುದು ಕೆಲಕಾಲ ರಷ್ಯದಲ್ಲಿ ಗಲಭೆ ಮಾಡಿತು. ಅದರ ಧ್ಯೇಯವನ್ನು ವಿವರಿಸಿದ ಲಸ್ಟ್‌ನ ಹೇಳಿಕೆಯಂತೆ ಕಲೆ ಜೀವನದಷ್ಟೇ ಮುಖ್ಯ, ಯಥಾರ್ಥ; ಜೀವನದ ಹಾಗೆಯೇ ಕಲೆಗೂ ಗುರಿಯಿಲ್ಲ, ಅರ್ಥವಿಲ್ಲ. ಕಲೆ ಇರುವುದೇಕೆಂದರೆ ಇರದೇ ಅದಕ್ಕೆ ಗತ್ಯಂತರವಿಲ್ಲ. ಆದ್ದರಿಂದ ಕಲೆಯಲ್ಲಿ ನಾವು ಭಾವಿಸಬೇಕಾದದ್ದು ನಿಪುಣತಂತ್ರದಿಂದ ಅದು ಮುಂದಿಡುವ ಬಾಹ್ಯಾಕೃತಿಯನ್ನು, ಸಾಹಿತ್ಯ ಪ್ರಬಂಧದ ವಿಷಯ ಅದರ ಶೈಲಿಯ ವಿಧಾನ ವಿನ್ಯಾಸವೆಷ್ಟೂ ಅಷ್ಟೆ-ಎಂಬುದು ಮತ್ತೊಂದು ವ್ಯಾಖ್ಯೆ.

ಸಾಹಿತ್ಯ ವಿಮರ್ಶೆಯ ಪ್ರಕಾರಗಳನ್ನು ಕ್ಲ್ಯಾಸಿಕಲ್, ನಿಯೊಕ್ಲ್ಯಾಸಿಕಲ್, ರೊಮ್ಯಾಂಟಿಕ್, ಆಧುನಿಕ ಎಂದು ವಿಭಾಗಿಸಿ ತೃಪ್ತರಾಗುತ್ತಿದ್ದರು. ದಶಕಗಳ ಹಿಂದೆ. ಈಗ ಅದು ಅಪೂರ್ಣ, ಅಸಮರ್ಪಕ-ಎಂದಾಗಿದೆ. ಸಂಪ್ರದಾಯದ ಚಿಂತನೆಯನ್ನು ಬಿಟ್ಟುಕೊಟ್ಟು ವಿಮರ್ಶೆಯ ಕೆಲಸವೇನು ಎಂಬ ವಿಚಾರದಲ್ಲಿ ನಿರತವಾಗಿರುವ ಮತ್ತೊಂದು ಬಗೆಯ ಪಂಗಡಗಳನ್ನು ಕಾಣಬಹುದು. ಕಾವ್ಯಕ್ಕೆ ವ್ಯಾಖ್ಯಾನ ಮಾಡುವುದು, ಕಾವ್ಯದ ಬೆಲೆಕಟ್ಟುವುದು, ಕಾವ್ಯ ಎಬ್ಬಿಸುವ ವಿಮರ್ಶಕನ ಪ್ರತಿಕ್ರಿಯೆಯ ವಿವರಣೆ-ಇವು ಮೂರು ವಿಧದ ವಿಮರ್ಶೆಯನ್ನು ಹೊರತಂದುವು: ವಿಮರ್ಶೆಯಿಂದ ಕವಿಗೆ ಸಹಾಯವಾಗಬೇಕು. ಇವುಗಳಿಂದ ಬೇರೆ ತರಹದ ವಿಮರ್ಶೆ ಉಂಟಾದುವು. ಈ ಪರಿಯ ಅನೇಕ ಅಭಿಪ್ರಾಯಗಳು ಐರೋಪ್ಯ ಸಾಹಿತ್ಯ ವಿಮರ್ಶೆಯನ್ನು ಸಾರವತ್ತಾಗಿಸಿವೆ, ಗೋಜುಗೋಜಾಗಿಸಿವೆ, ಚೈತನ್ಯ ತುಂಬಿ ಬಾಳಿಸುತ್ತಿವೆ. (ಎಸ್.ವಿ.ಆರ್.)

**ಐರ್ಲೆಂಡ್:** ಗ್ರೇಟ್ ಬ್ರಿಟನಿಗೆ ಪಶ್ಚಿಮದಲ್ಲಿ, ಉತ್ತರ ಅಕ್ಷಾಂಶ $51^0$ 25' ನಿಂದ $55^0$ 23'ಗೂ ಪಶ್ಚಿಮ ರೇಖಾಂಶ $5^0$ 25'ನಿಂದ $10^0$ 30'ಗೂ ನಡುವೆ ಸೊಟ್ಟಪಟ್ಟ ಹರಳಿನಂತೆ ಹಬ್ಬಿರುವ ದ್ವೀಪ. ಸರಾಸರಿ 176 ಕಿಮೀ ಅಗಲ ಮತ್ತು 352 ಕಿಮೀ ಉದ್ದ ಇರುವ ಇದರ ವಿಸ್ತೀರ್ಣ 70,273 ಚ.ಕಿಮೀ. ಉತ್ತರ ಐರ್ಲೆಂಡ್ ಮತ್ತು ಐರಿಷ್ ಗಣರಾಜ್ಯಗಳೆಂದು ಇದರಲ್ಲಿ ಎರಡು ರಾಜಕೀಯ ವಿಭಾಗಗಳಿವೆ. ಆದರೆ ಐರ್ಲೆಂಡಿನ ಅತ್ಯಂತ ಉತ್ತರದ ಬಿಂದು ಡಾನೆಗಾಲ್ ಇರುವುದು ಉತ್ತರ ಐರ್ಲೆಂಡಿನಲ್ಲಲ್ಲ. ಐರಿಷ್ ಗಣರಾಜ್ಯದಲ್ಲಿ. ಇತಿಹಾಸ ಪ್ರಸಿದ್ಧವಾದ ಅಲ್ಸ್ಟರ್ ಪ್ರಾಂತ್ಯದ ಒಂಬತ್ತು ಕೌಂಟಿಗಳಲ್ಲಿ (ವಿಭಾಗ) ಆರು ಉತ್ತರ ಐರ್ಲೆಂಡಿನಲ್ಲಿವೆ. ಆದ್ದರಿಂದ ಉತ್ತರ ಐರ್ಲೆಂಡನ್ನು ಅಲ್ಸ್ಟರ್ ಎಂದೂ ಕರೆಯುವುದುಂಟು. ಇದು ಸಂಯುಕ್ತ ಪ್ರಭುತ್ವದಲ್ಲಿದೆ (ಯುನೈಟೆಡ್ ಕಿಂಗ್ಡಮ್). ಐರಿಷ್ ಗಣರಾಜ್ಯದಲ್ಲಿ 26 ಕೌಂಟಿಗಳಿವೆ. ಇದು ಸ್ವತಂತ್ರ ಸಾರ್ವಭೌಮ ರಾಜ್ಯ. ಹಚ್ಚ ಹಸುರು ಹಬ್ಬಿರುವ ಐರ್ಲೆಂಡನ್ನು ಪಚ್ಚೆಯ ದ್ವೀಪವೆಂದು ಕರೆಯುವುದುಂಟು. ಅಂಧಕಾರಯುಗದಲ್ಲಿ ಇದು ಜ್ಞಾನ ನಿಷ್ಠೆಗಳ ಕೇಂದ್ರವಾಗಿತ್ತಂತೆ. ಆದ್ದರಿಂದ ಇದನ್ನು ಸಂತರ ಮತ್ತು ಜ್ಞಾನಿಗಳ ದ್ವೀಪವೆಂದು ಸಂಬೋಧಿಸುವುದೂ ಉಂಟು.

**ಮೇಲ್ಮೈ ಲಕ್ಷಣ:** ಬಟ್ಟಲ ತಟ್ಟೆಯಂತೆ ಸುತ್ತಲೂ ಹರುಕು ಮುರುಕು ಪರ್ವತಗಳು; ನಡುವೆ ಸುಣ್ಣಕಲ್ಲಿನ ಬಯಲು. ಇದು ಸ್ಥೂಲವಾಗಿ ಐರ್ಲೆಂಡಿನ ಸ್ವರೂಪ. ಇದರ ಪೂರ್ವತೀರ ಸಾಮಾನ್ಯವಾಗಿ ನೇರ, ಸರಳ. ಆದರೆ ಪಶ್ಚಿಮದ್ದು ಹಾಗಲ್ಲ. ಅದು ಅತ್ಯಂತ ಅಂಕುಡೊಂಕು; ಹಲವೆಡೆಗಳಲ್ಲಿ ಕೋರೆದಾಡೆಗಳಂತೆ ಸಮುದ್ರದೊಳಕ್ಕೆ ಚಾಚಿರುವ ಕಡಿದಾದ ಬಂಡೆಗಳಿವೆ. ಅಟ್ಲಾಂಟಿಕ್ ಸಾಗರದ ನೆಲಗೊರೆತಕ್ಕೆ ಇವು ಸಾಕ್ಷಿ. ಈ ಕಾರಣದಿಂದಾಗಿ ಈ ತೀರದಲ್ಲಿ ಅನೇಕ ಖಾರಿಗಳೂ ಕೊಲ್ಲಿಗಳೂ ಸಣ್ಣ ದೊಡ್ಡ ದ್ವೀಪಗಳೂ ವಿಸ್ತಾರ ಭೂಪ್ರದೇಶದೊಂದಿಗೆ ಸೂಕ್ಷ್ಮಸಂಬಂಧ ಮಾತ್ರ ಉಳಿಸಿಕೊಂಡಿರುವ ಪರ್ಯಾಯ ದ್ವೀಪಗಳೂ ಅಸಂಖ್ಯಾತವಾಗಿವೆ. ದ್ವೀಪಗಳ ಪೈಕಿ ಅಚಿಲ್ ಮತ್ತು ಆರನ್ ಅತ್ಯಂತ ದೊಡ್ಡವು. ನೈಋತ್ಯದಂಚಿನಲ್ಲಿರುವ ವ್ಯಾಲೆಂಟಿನ ದ್ವೀಪ ಅಟ್ಲಾಂಟಿಕಾಂತರ ಕಡಲತಂತಿಮಾರ್ಗಗಳ ಮುಖ್ಯಕೇಂದ್ರ, ಹವಾವೀಕ್ಷಣಾಲಯ. ಆಳಗಡಲಿನ ಉತ್ತಮ ಬಂದರುಗಳೂ ಇಲ್ಲಿ ಹಲವುಂಟು. ಮಧ್ಯದ ಮೈದಾನದ ಸುಣ್ಣಕಲ್ಲಿನ ಮೆದುನೆಲವನ್ನು ಕೊರೆದು ಒಳಕ್ಕೆ ಚಾಚಿರುವ ಅಟ್ಲಾಂಟಿಕಿನಿಂದಾಗಿರುವ ಮೂರು ದೊಡ್ಡ ಕೊಲ್ಲಿಗಳೆಂದರೆ ಡಾನೆಗಾಲ್, ಸ್ಲೈಗೋ ಮತ್ತು ಗಾಲ್ವೇ. ಈ ಕೊಲ್ಲಿಗಳಿಂದ ಸಂಭವಿಸಿರುವ ಮೂರು ಪರ್ಯಾಯದ್ವೀಪಗಳು ಡಾನೆಗಾಲ್, ಕಾನೆಮಾರ ಮತ್ತು ಕೆರಿ. ನಡುವಣ ಮೈದಾನ ಪೂರ್ವಾಭಿಮುಖವಾಗಿ ಐರಿಷ್ ಸಮುದ್ರದವರೆಗೂ ಹಬ್ಬಿದೆ. ಈ ಭಾಗವೇ ಐರ್ಲೆಂಡಿನ ನಗರಭರಿತ ಪ್ರದೇಶ. ಪುರಾತನ ಕಾಲದಿಂದ ಐರ್ಲೆಂಡಿನ ನಾಗರಿಕತೆ ಹಬ್ಬಿದ್ದು ಇಲ್ಲಿ. ಈ ಮೈದಾನ ಒಂದೇ ಸಮನಾಗಿಲ್ಲ. ಸಮುದ್ರ ಮಟ್ಟಕ್ಕಿಂತ ಸರಾಸರಿ 76 ಮೀ ಎತ್ತರವಿರುವ ಈ ಪ್ರದೇಶದಲ್ಲಿ ವಂಕಿಗಳಂತೆ ಸುತ್ತಿರುವ ಹಲವಾರು ಬೆಟ್ಟಗುಡ್ಡಗಳುಂಟು. ಪೂರ್ವಬಿಟ್ಟು ಉಳಿದೆಲ್ಲ ಕಡೆಗಳಲ್ಲೂ ಈ ಪ್ರದೇಶದ ಸುತ್ತ ಪರ್ವತಗಳು ಮುರಿದು ಉಳಿದುಕೊಂಡಿದೆ. ಐರ್ಲೆಂಡಿನ ದಕ್ಷಿಣದಂಚಿನ ಕೆಮ್ಮರಳು ಬಣ್ಣದ ಬೆಟ್ಟಗಳು ಈ ಭಾಗಕ್ಕೆ ಅಪೂರ್ವವಾದ ಪರ್ವತಶೋಭೆ ತಂದಿವೆ. ಬಾಯಿನ್ ಮತ್ತು ಷ್ಯಾನನ್‌ಗಳು ಮೈದಾನದ ಮುಖ್ಯ ನದಿಗಳು. ಷ್ಯಾನನ್ ನದಿ ಘಟ್ಟವಿಳಿದು ಧುಮ್ಮಿಕ್ಕುವಲ್ಲಿ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಐರ್ಲೆಂಡ್ ಗಣರಾಜಕ್ಕೆ ವಿದ್ಯುತ್ತನ್ನೊದಗಿಸುತ್ತಿರುವುದು ಮುಖ್ಯವಾಗಿ ಇಲ್ಲಿಂದ. ಈ ದೃಷ್ಟಿಯಿಂದ ಉತ್ತರ ಭಾಗದಲ್ಲಿ ಅರ್ನ್ ನದಿ ಮುಖ್ಯವಾದದ್ದು. ಇದು ಉತ್ತರ ಐರ್ಲೆಂಡಿಗೆ ಹರಿಯುವುದರಿಂದ ಈ ನದಿ ಸಮುದ್ರಕ್ಕೆ ಧುಮ್ಮಿಕ್ಕುವಲ್ಲಿ ವಿದ್ಯುದುತ್ಪಾದನೆ ಮಾಡಬಹುದಾದರೂ ಐರ್ಲೆಂಡಿನ ಎರಡು ರಾಜಕೀಯ ವಿಭಾಗಗಳ ನಡುವಣ ವ್ಯಾಜ್ಯದಿಂದ ಇದು ಸಾಧ್ಯವಾಗಿಲ್ಲ.

**ವಾಯುಗುಣ:** ಐರ್ಲೆಂಡ್ ಉತ್ತರ ಅಟ್ಲಾಂಟಿಕ್ ಚಕ್ರಮಾರುತದ ನೇರ ಪ್ರಭಾವಕ್ಕೆ ಒಳಗಾಗಿರುವುದರಿಂದ ಇಲ್ಲಿನ ಹವಾ ಸಾಮಾನ್ಯವಾಗಿ ಹಿತಕರ; ನೈಋತ್ಯದಲ್ಲಿ ಅತ್ಯಂತ ಸಮರ್ಪಕ ($45^0$ ಫ್ಯಾ.-$59^0$ ಫ್ಯಾ.). ಕಡಲ ಸನಿಹದಲ್ಲಿರುವ ಎತ್ತರ ಪರ್ವತಗಳ ಬಳಿ ಪರಮಾವಧಿ ಮಳೆಯಾಗುತ್ತದೆ (80"). ಮೈದಾನದಲ್ಲಿ ಸಾಧಾರಣ (30"-40"). ಅಕ್ಟೋಬರಿನಿಂದ ಡಿಸೆಂಬರ್‌ವರೆಗೆ ಮಳೆಗಾಲ. ಪೂರ್ವ ತೀರದಲ್ಲಿ ಆಗಸ್ಟಿನಲ್ಲಿ ಪರಮಾವಧಿ ಮಳೆ. ವಸಂತದಲ್ಲಿ ಒಣ ಹವೆ ಇರುವುದರಿಂದ ವ್ಯವಸಾಯಕ್ಕೆ ಅನುಕೂಲವುಂಟು. ಆಕಳುಗಳನ್ನು ಸಾಕಲು ಇಲ್ಲಿನ ವಾಯುಗುಣ ಅತ್ಯಂತ ಪ್ರಶಸ್ತವಾಗಿದೆ.



**ಸ್ವಾಭಾವಿಕ ಸಸ್ಯ, ಪ್ರಾಣಿಗಳು:** ಇತಿಹಾಸಪೂರ್ವಕಾಲದಲ್ಲಿ ಇಲ್ಲಿ ಉತ್ತರ ಪರ್ವತ ವಿನಾ ಉಳಿದೆಲ್ಲ ಪ್ರದೇಶಗಳಲ್ಲೂ ದಟ್ಟ ಕಾಡುಗಳಿದ್ದುವು. ಸುಮಾರು ನಾಲ್ಕುಸಾವಿರ ವರ್ಷಗಳ ಕಾಲದಿಂದಲೂ ಇಲ್ಲಿ ಜನ ದನಕರು ಸಾಕಿಕೊಂಡಿದ್ದಾರೆ. ಆದ್ದರಿಂದ ಕಾಡು ಕಡಿಯುವ ಹವ್ಯಾಸ ಅತಿಯಾಗಿ ಹೆಚ್ಚಿ 17ನೆಯ ಶತಮಾನದ ವೇಳೆಗೆ ಇದು ಸಂಪೂರ್ಣವಾಗಿ ನಿರ್ನಾಮವಾಗುವ ಸ್ಥಿತಿಗೆ ಬಂದಿತ್ತು. ಐರ್ಲೆಂಡಿನ ಸಸ್ಯವೈವಿಧ್ಯ ಗ್ರೇಟ್ ಬ್ರಿಟನಿನದಕ್ಕಿಂತ ಕಡಿಮೆ. ಆದರೆ ಐಬೀರಿಯನ್ ಪರ್ಯಾಯದ್ವೀಪಕ್ಕೂ ಉತ್ತರ ಅಮೆರಿಕಕ್ಕೂ ಈ ಪ್ರದೇಶಕ್ಕೂ ಸಂಬಂಧವಿತ್ತೆಂಬುದನ್ನು ಇಲ್ಲಿನ ಸಸ್ಯಗಳೂ ಪ್ರಾಣಿಗಳೂ ಸೂಚಿಸುತ್ತವೆ.

**ಜನಸಂಖ್ಯೆ:** ಯುರೋಪಿನ ದೇಶಗಳ ಪೈಕಿ ಐರ್ಲೆಂಡ್ ಒಂದರಲ್ಲೇ 19ನೆಯ ಶತಮಾನದ ಉತ್ತರಾರ್ಧದಲ್ಲಿ ಜನಸಂಖ್ಯೆ ಇಳಿಯಿತೆನ್ನಬಹುದು. ಇದಕ್ಕೆ ಕ್ಷಾಮವೂ ಇಲ್ಲಿಂದ ಜನ ಹೊರಕ್ಕೆ ವಲಸೆಹೋದದ್ದೂ ಕಾರಣ. 20ನೆಯ ಶತಮಾನದಲ್ಲಿ ಜನಸಂಖ್ಯೆ ಹೆಚ್ಚುಕಡಿಮೆ ಸ್ಥಿರವಾಗಿದೆ. ಹಳ್ಳಿಗರ ಸಂಖ್ಯೆಯೇ ಹೆಚ್ಚು. ದಕ್ಷಿಣಕ್ಕಿಂತ ಉತ್ತರದಲ್ಲಿ ಪಟ್ಟಣಿಗರ ಸಂಖ್ಯೆ ಹೆಚ್ಚು.

**ಉತ್ತರ ಐರ್ಲೆಂಡ್:** ಇದು ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ಪ್ರಭುತ್ವದ ಒಂದು ರಾಜಕೀಯ ವಿಭಾಗ, ಆಂಟ್ರಿಮ್, ಆರ್ಮಾ, ಡೌನ್, ಫರ್ಮೇನ, ಲಂಡನ್‌ಡೆರಿ ಮತ್ತು ಟೈರೋನ್ ಕೌಂಟಿಗಳನ್ನೊಳಗೊಂಡಿದೆ. ಇದನ್ನು ಅಲ್ಸ್ಟರ್ ಎಂದೂ

ಕರೆಯುವುದುಂಟು. ಆದರೆ ಪ್ರಾಚೀನ ಅಲ್ಸ್ಟರ್ ಪ್ರಾಂತ್ಯದ ಮೂರು ಕೌಂಟಿಗಳು (ಕ್ಯಾವೆನ್, ಡಾನೆಗಾಲ್ ಮತ್ತು ಮನಗೆನ್) ಐರ್ಲೆಂಡ್ ಗಣರಾಜ್ಯಕ್ಕೆ ಸೇರಿವೆ. ಇದರ ಉತ್ತರಕ್ಕೆ ಅಟ್ಲಾಂಟಿಕ್ ಸಾಗರವೂ ಈಶಾನ್ಯ ಮತ್ತು ದಕ್ಷಿಣಕ್ಕೆ ಉತ್ತರ ಕಡಲ್ಗಾಲುವೆಯೂ ಐರಿಷ್ ಸಮುದ್ರವೂ ದಕ್ಷಿಣ ಪಶ್ಚಿಮಗಳಲ್ಲಿ ಐರ್ಲೆಂಡ್ ಗಣರಾಜ್ಯವೂ ಇವೆ. ಇದರ ವಿಸ್ತೀರ್ಣ 14,144 ಚ.ಕಿಮೀ.

1920 ಮತ್ತು 1922ರಲ್ಲಿ ಜಾರಿಗೆ ಬಂದ ಕಾಯಿದೆಗಳ ಪ್ರಕಾರ ಉತ್ತರ ಐರ್ಲೆಂಡಿಗೆ ಪ್ರತ್ಯೇಕ ಸಂಸತ್ತು ಸ್ಥಾಪಿತವಾಗಿವೆ. ದೇಶದ ವಿಭಜನೆಯ ಫಲವಾಗಿ ಇದು ರಾಜಕೀಯ ಕ್ಷೋಭೆಗೆ ಒಳಗಾಯಿತು. ಆಗಿಂದಾಗ್ಗೆ ಹಿಂಸಾತ್ಮಕ ಚಳವಳಿಗಳು ನಡೆಯುತ್ತಿವೆ. **(ಪಿ.ಎಚ್.)**

ಉತ್ತರ ಐರ್ಲೆಂಡ್ ಸಂಸತ್ತಿನ ಸಭೆಗಳು ಎರಡು : ಸೆನೆಟ್ ಮತ್ತು ಕಾಮನ್ಸ್ ಸಭೆ. ಸೆನೆಟಿನಲ್ಲಿ 24 ಚುನಾಯಿತ ಮತ್ತು 2 ಅಧಿಕಾರ ಪ್ರಯುಕ್ತ ಸದಸ್ಯರೂ ಕಾಮನ್ಸ್‌ಸಭೆಯಲ್ಲಿ 52 ಸದಸ್ಯರೂ ಇದ್ದಾರೆ. ಸೆನೆಟಿನ ಸದಸ್ಯರ ಅಧಿಕಾರಾವಧಿ ನಿಗದಿಗೊಳಿಸಲಾಗಿದೆ. ಇವರು ಕಾಮನ್ಸ್ ಸಭಾಸದಸ್ಯರಿಂದ ಆಯ್ಕೆ ಹೊಂದುತ್ತಾರೆ. ಕಾಮನ್ಸ್ ಸಭೆಯ ಅವಧಿ ಸಾಮಾನ್ಯವಾಗಿ 5 ವರ್ಷ. ರಾಜತ್ವ, ಯುದ್ಧ ಮತ್ತು ಶಾಂತಿವಿಷಯಗಳು, ರಕ್ಷಣಾಪಡೆಗಳು, ಕೌಲುಗಳು, ಬಿರುದುಗಳು, ರಾಷ್ಟ್ರದ್ರೋಹ ಮುಂತಾದವು ಸಂಯುಕ್ತ ಪ್ರಭುತ್ವದ ಸಂಸತ್ತಿಗೆ ಮೀಸಲಾದ ವಿಷಯಗಳು. ಇವನ್ನು ಬಿಟ್ಟು ಉಳಿದೆಲ್ಲ ವಿಚಾರಗಳಲ್ಲೂ ಇಲ್ಲಿನ ಸಂಸತ್ತಿಗೆ ಅಧಿಕಾರವುಂಟು. ರಾಣಿಯ ಪ್ರತಿನಿಧಿಯಾಗಿ ಆಳುವವನು ಗವರ್ನರ್. ಜವಾಬ್ದಾರಿ ತತ್ತ್ವದ ತಳಹದಿಯ ಮೇಲೆ ರಚಿತವಾದ ಮಂತ್ರಿ ಸಂಪುಟವಿದೆ. **(ಎಂ.ಎಲ್.ಆರ್.)**

ವ್ಯವಸಾಯ ಇಲ್ಲಿನ ಮುಖ್ಯ ಕಸುಬು. ಹಿಡುವಳಿಗಳು ಸಣ್ಣವು. ಬಾರ್ಲಿ, ಓಟ್ಸ್, ಆಲೂಗೆಡ್ಡೆ, ಗೋದಿ, ಟರ್ನಿಪ್-ಇವು ಮುಖ್ಯ ಬೆಳೆಗಳು. ಹಂದಿ, ದನಕರು, ಕುರಿ, ಕೋಳಿ ಮುಖ್ಯ ಸಾಕುಪ್ರಾಣಿಗಳು.

ಉತ್ತರ ಐರ್ಲೆಂಡಿನ ಖನಿಜಗಳು ಅಲ್ಪ. ಜವಳಿ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳು ಮುಖ್ಯ. ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ನೆರವು ನೀಡುತ್ತಿದೆ. ಐರ್ಲೆಂಡಿನ ಆಮದು ವ್ಯಾಪಾರದಲ್ಲಿ ಮುಕ್ಕಾಲು ಭಾಗವು ರಫ್ತಿನಲ್ಲಿ ಶೇ. 90 ಭಾಗವೂ ಗ್ರೇಟ್ ಬ್ರಿಟನಿನೊಂದಿಗೆ ನಡೆಯುತ್ತದೆ. ರಾಜಧಾನಿ ಬೆಲ್‌ಫಾಸ್ಟ್. ಇದರ ಜನಸಂಖ್ಯೆ 3,99,270 (2001). ಲಂಡನ್‌ಡೆರಿಯ ಜನಸಂಖ್ಯೆ 55,681.

**ಐರ್ಲೆಂಡ್ ಗಣರಾಜ್ಯ:** ಉತ್ತರ ಐರ್ಲೆಂಡಿನ 6 ಕೌಂಟಿಗಳನ್ನು ಬಿಟ್ಟು ಉಳಿದ 26 ಕೌಂಟಿಗಳು ಇದಕ್ಕೆ ಸೇರಿವೆ. 1922-1937ರ ವರೆಗೆ ಇದಕ್ಕೆ ಐರಿಷ್ ಸ್ವತಂತ್ರ ರಾಜ್ಯ ಎಂಬ ಹೆಸರಿತ್ತು. 1937ರ ಸಂವಿಧಾನದ ಪ್ರಕಾರ ಇದರ ಹೆಸರು ಐರ್.ದಕ್ಷಿಣ ಐರ್ಲೆಂಡ್ ಎಂದೂ ಇದನ್ನು ಬಳಕೆಮಾತಿನಲ್ಲಿ ಕರೆಯುವುದುಂಟು. ಆದರೆ ಐರ್ಲೆಂಡಿನ ಅತ್ಯಂತ ಉತ್ತರ ಭಾಗ ಇದಕ್ಕೆ ಸೇರಿದೆ. ಇದಕ್ಕೆ ಉತ್ತರ, ವಾಯವ್ಯ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಅಟ್ಲಾಂಟಿಕ್ ಸಾಗರವೂ ಆಗ್ನೇಯದಲ್ಲಿ ಸೇಂಟ್ ಜಾರ್ಜ್ ಕಡಲ್ಗಾಲುವೆಯೂ ಪೂರ್ವದಲ್ಲಿ ಐರಿಷ್ ಸಮುದ್ರವೂ ಈಶಾನ್ಯದಲ್ಲಿ ಉತ್ತರ ಐರ್ಲೆಂಡೂ ಇವೆ. ಲೆನ್ಸ್ಟರ್, ಮನ್ಸ್ಟರ್ ಕನ್ನಾಟ್ ಮತ್ತು ಅಲ್ಸ್ಟರ್ ಎಂಬ ನಾಲ್ಕು ಪ್ರಾಂತ್ಯಗಳಿಂದ ಕೂಡಿರುವ ಈ ದೇಶದ ವಿಸ್ತೀರ್ಣ 70,273 ಚ.ಕಿಮೀ. ಜನಸಂಖ್ಯೆ 39,26,000 (2002).



ದನಗಳ ಹರಾಜು

1918 ಡಿಸೆಂಬರಿನಲ್ಲಿ ಚುನಾವಣೆಗೊಂಡು 1919ರಲ್ಲಿ ಸಮಾವೇಶವಾಗಿದ್ದ ಈ ದೇಶದ ಸ್ವಾತಂತ್ರ್ಯವನ್ನು ರಾಷ್ಟ್ರೀಯ ಸಂಪತ್ತು 1919 ಜನವರಿಯಲ್ಲಿ ಸಾರಿಕೊಂಡಿತಾದರೂ ಬ್ರಿಟಿಷ್ ಕಾಯಿದೆಯ ಪ್ರಕಾರ ಇದು ಸಂಯುಕ್ತ ಪ್ರಭುತ್ವದ ಭಾಗವಾಗಿಯೇ ಮುಂದುವರಿಯಿತು. ಉತ್ತರ ದಕ್ಷಿಣ ಐರ್ಲೆಂಡುಗಳಿಗೆ ಪ್ರತ್ಯೇಕ ಸಂಸತ್ತುಗಳನ್ನು ಸ್ಥಾಪಿಸುವ ಕಾಯಿದೆ ಜಾರಿಗೆ ಬಂದದ್ದು 1920ರಲ್ಲಿ. 1921ರಲ್ಲಿ ಉತ್ತರ ಐರ್ಲೆಂಡಿನ ಸಂಸತ್ತಿನ ಚುನಾವಣೆ ನಡೆಯಿತು. ಐರ್ಲೆಂಡಿನ ಉಳಿದ ಭಾಗದಲ್ಲಿ ಈ ಕಾಯಿದೆ ಜಾರಿಗೆ ಬರಲಿಲ್ಲ. 1921 ಡಿಸೆಂಬರ್ 6ರಂದು ಗ್ರೇಟ್ ಬ್ರಿಟನ್ ಐರ್ಲೆಂಡಿಗಳು ಪ್ರತಿನಿಧಿಗಳ ನಡುವೆ ಒಡಂಬಡಿಕೆಯಾಗಿ, ಐರ್ಲೆಂಡ್ ಗಣರಾಜ್ಯಕ್ಕೆ ಒಳರಾಜ್ಯದ (ಡೊಮಿನಿಯನ್) ಸ್ಥಾನ ಲಭಿಸಿತು. ಉತ್ತರ ಐರ್ಲೆಂಡಿಗೆ ಇದರಿಂದ ಹೊರಬರುವ ಅವಕಾಶ ಕೊಡಲಾಯಿತು. ಐರಿಷ್ ಸ್ವತಂತ್ರರಾಜ್ಯ ಉದಯವಾದದ್ದು ಹೀಗೆ. ಕ್ರಮೇಣ ಇದು ಸಂಯುಕ್ತ ಪ್ರಭುತ್ವದೊಂದಿಗೆ ಸಂಬಂಧ ಕಡಿದುಕೊಂಡಿತು. ಇದು ಐರಿಷ್ ಗಣರಾಜ್ಯವಾದದ್ದು 1937ರಲ್ಲಿ.

ಐರಿಷ್ ಗಣರಾಜ್ಯದ ಸಂಸತ್ತಿನ ಎರಡು ಸಭೆಗಳಲ್ಲಿ ಒಂದು ಪ್ರತಿನಿಧಿ ಸಭೆ; ಇನ್ನೊಂದು ಸೆನೆಟ್. ಐರಿಷ್ ಇಲ್ಲಿನ ಪ್ರಥಮ ಅಧಿಕೃತ ಭಾಷೆ; ಇಂಗ್ಲಿಷ್ ಎರಡನೆಯದು.

ಕೃಷಿಯೇ ಜನರ ಮುಖ್ಯ ಕಸುಬು. ಒಣಹುಲ್ಲು, ಟರ್ನಿಪ್, ಆಲೂಗೆಡ್ಡೆ, ಸಕ್ಕರೆ, ಬೀಟ್, ಬಾರ್ಲಿ, ಓಟ್ಸ್, ಗೋದಿ-ಇವು ಮುಖ್ಯ ಬೆಳೆಗಳು. ಆಕಳು, ಕುರಿ, ಹಂದಿ ಮುಖ್ಯ ಪ್ರಾಣಿಗಳು. ಮೀನುಗಾರಿಕೆಯೂ ಮುಖ್ಯ ಉದ್ಯೋಗ.

ಇಲ್ಲಿ ಖನಿಜಸಂಪತ್ತು ಅಷ್ಟಿಲ್ಲ. ಜಿಪ್ಸಮ್, ಅಮೃತಶಿಲೆ, ಸ್ಲೇಟ್, ಸುಣ್ಣಕಲ್ಲು, ಕಲ್ಲಿದ್ದಲು, ತಾಮ್ರ, ಕಬ್ಬಿಣ, ಸೀಸ, ಬೆರೈಟೀಸ್ ಸಿಗುತ್ತವೆ. ಆಹಾರ, ಹೊಗೆಸೊಪ್ಪು, ಪಾನೀಯ, ಕಾಗದ, ವಿದ್ಯುದುಪಕರಣ, ಜವಳಿ, ರಸಾಯನ ವಸ್ತು-ಈ ಕೈಗಾರಿಕೆಗಳು ಬೆಳೆಯುತ್ತಿವೆ. ವಿದೇಶೀ ವ್ಯಾಪಾರ ಹೆಚ್ಚಾಗಿ ಗ್ರೇಟ್‌ಬ್ರಿಟನ್, ಕೆನಡ, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್‌ಗಳೊಡನೆ ನಡೆಯುತ್ತದೆ. ಡಬ್ಲಿನ್ ರಾಜಧಾನಿ (ಜನಸಂಖ್ಯೆ 5,68,772), ಕಾರ್ಕ್ (1,22,146), ಲಿಮರಿಕ್ (55,912), ವಾಟರ್‌ಫರ್ಡ್ (29,842) ಮತ್ತು ಗಾಲ್‌ವೇ (24,597) ಇತರ ಪಟ್ಟಣಗಳು. **(ಪಿ.ಎಚ್.; ಪಿ.ಎಂ.ಯು.ಎಸ್.)**

**ಐರ್ಲೆಂಡಿನ ಇತಿಹಾಸ:** ಐರ್ಲೆಂಡಿನ ಅತ್ಯಂತ ಪ್ರಾಚೀನ ಇತಿಹಾಸ ಅದರ ಪುರಾಣಗಳಲ್ಲೂ ದಂತಕತೆಗಳಲ್ಲೂ ಹುದುಗಿಹೋಗಿದೆ. ಕೆಲ್ಟರು ಇಲ್ಲಿಗೆ ಬರುವ ಮೊದಲೇ ಇಲ್ಲಿ ನವಶಿಲಾಯುಗದ ಜನ ಅಧಿಕ ಸಂಖ್ಯೆಯಲ್ಲಿ ಇದ್ದಿರಬೇಕು. ಅನಂತರವೂ ಅವರು ಇಲ್ಲಿ ವಾಸವಾಗಿದ್ದರೆಂಬುದಕ್ಕೆ ಆಧಾರಗಳಿವೆ. ಇತರ ದೇಶಗಳಿಗಿಂತ ಇಲ್ಲಿ ಈ ಎರಡು ಜನಾಂಗಗಳೂ ಹೆಚ್ಚಾಗಿ ಬೆರೆತುವು. ಪ್ರ.ಶ.ಪೂ.6ನೆಯ ಶತಮಾನದಲ್ಲೂ ಮತ್ತೆ 3ನೆಯ ಶತಮಾನದಲ್ಲೂ ಕೆಲ್ಟರು ಇಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲಸಿದರು. ಕ್ರಿಸ್ತಶಕೆಯ ಆದಿಯ ವೇಳೆಗೆ ಇವರ ಜೊತೆಗೆ ಪಿಕ್ಟರೂ ಸೇರಿಕೊಂಡಿದ್ದರು. ಬಹುಶಃ ಇವರು ಸ್ಕಾಟ್ಲೆಂಡಿನಿಂದ ಬಂದವರು. ಪ್ರ.ಶ. 4-5ನೆಯ ಶತಮಾನಗಳ ಸುಮಾರಿನಲ್ಲಿ ಐರಿಷರು ವೇಲ್ಸಿನಲ್ಲಿ ವಸಾಹತು ನಿರ್ಮಿಸಿದ್ದರು.

ಉತ್ತರದಲ್ಲಿ ಇರ್ ವಂಶದ ದೊರೆಗಳು ರಾಜ್ಯ ಸ್ಥಾಪಿಸಿದಾಗ (ಪ್ರ.ಶ.ಪೂ.300) ಐರ್ಲೆಂಡಿನ ಇತಿಹಾಸದ ಉದಯವಾಯಿತು. ಟೇರ, ಲೆನ್ಸ್ಟರ್ ಮತ್ತು ಮನ್ಸ್ಟರ್-ಈ ಮೂರು ವಂಶಗಳ ಅರಸರು ಇಡೀ ಐರ್ಲೆಂಡಿನ ನಾನಾ ಭಾಗಗಳನ್ನಾಳುತ್ತಿದ್ದರಲ್ಲದೆ, ಪರಮಾಧಿಕಾರಕ್ಕಾಗಿ ತಮ್ಮತಮ್ಮಲ್ಲೆ ಬಹುಕಾಲ ಕಚ್ಚಾಡಿದರು. 4ನೆಯ ಶತಮಾನದಲ್ಲಿ ಟೇರ ದೊರೆಗಳು ಬಹಳ ಪ್ರವರ್ಧಮಾನಕ್ಕೆ ಬಂದಿದ್ದರು. ಇವರ ಸೇನೆಗಳು ಯುರೋಪ್‌ಖಂಡ ಪ್ರದೇಶದ ಮೇಲೆ ಕೂಡ ಏರಿಹೋಗಿದ್ದುವು.

ಐರ್ಲೆಂಡಿಗೆ ಕ್ರೈಸ್ತಧರ್ಮ ಬಂದ ಸಂದರ್ಭದಲ್ಲಿ ಅಲ್ಲಿದ್ದ ಪ್ರಭುತ್ವಗಳ ಪೈಕಿ ಮುಖ್ಯವಾದವು ನಾಲ್ಕು. ಅವುಗಳ ಒಕ್ಕೂಟಗಳ ಒಡೆಯನೇ ಅಧಿರಾಜ (ಹೈಕಿಂಗ್). ಈ ಸ್ಥಾನ ಕೇವಲ ನಾಮಮಾತ್ರ. ಕೆಲವು ಸ್ವತಂತ್ರರಾಜ್ಯಗಳು ಇದನ್ನು ಒಪ್ಪಿರಲಿಲ್ಲ.

ಐರ್ಲೆಂಡಿನ ಪುರಾತನ ಧರ್ಮ ಯಾವುದೆಂಬುದು ಸ್ಪಷ್ಟವಾಗಿಲ್ಲ. ಇಲ್ಲಿನ ಜನ ಆಗ ಅನೇಕ ದೇವರುಗಳನ್ನು ಆರಾಧಿಸುತ್ತಿದ್ದರು. ಪೂಜಾರಿಗಳ ಪ್ರಭಾವ ಹೆಚ್ಚಿನದಾಗಿತ್ತು. ಜನರ ದೃಷ್ಟಿಯಲ್ಲಿ ಅವರು ಪವಾಡ ಪುರುಷರು.

ಸೇಂಟ್ ಪ್ಯಾಟ್ರಿಕ್ ಇಲ್ಲಿಗೆ ಬರುವ ವೇಳೆಗೆ (432) ಐರಿಷ್ ಜನ ನಾಗರಿಕತೆಯ ಎತ್ತರದ ಹಂತವನ್ನೇರಿದ್ದರು. ಯುರೋಪಿನ ಬಹುಭಾಗ ಕತ್ತಲಲ್ಲಿ ಅಡಗಿದ್ದಾಗ ಈ ಜನ ಉಪಾಧ್ಯಾಯರಿಗೂ, ಕವಿಗಳಿಗೂ, ಚರಿತ್ರಕಾರರಿಗೂ ಹೆಚ್ಚಿನ ಗೌರವ ಸಲ್ಲಿಸುತ್ತಿದ್ದರು. ಪ್ರಸಕ್ತಶಕೆಗೂ ಹಲವು ಶತಮಾನಗಳ ಹಿಂದೆಯೇ ಅಲ್ಲಿ ಕೇಂದ್ರೀಯ ಸಂಸತ್ತಿತ್ತು. ಇದು ವರ್ಷಕ್ಕೆ ಮೂರು ಸಾರಿ ಸಭೆ ಸೇರುತ್ತಿತ್ತು. ಉಪಾಧ್ಯಾಯರೂ ನ್ಯಾಯಮೂರ್ತಿಗಳೂ ಪುರೋಹಿತರೂ ನಾನಾ ಗುಂಪುಗಳ ನಾಯಕರೂ ಇಲ್ಲಿಗೆ ಬಂದು ಶಾಸನ ಮಾಡುತ್ತಿದ್ದರು; ನ್ಯಾಯ ತೀರ್ಪು ನೀಡುತ್ತಿದ್ದರು. ಅಂದಿನ ನ್ಯಾಯಗಳಿಗೆ ಬ್ರೆಹಾನ್ ನ್ಯಾಯಗಳೆಂದು ಹೆಸರು. ಆಧುನಿಕ ನ್ಯಾಯ ವಿದ್ಯಾರ್ಥಿಗಳ ಮನ್ನಣೆಗೂ ಇವು ಪಾತ್ರವಾಗಿವೆ.

4-8ನೆಯ ಶತಮಾನದವರೆಗಿನ ಐರಿಷ್ ರಾಜಕೀಯ ಇತಿಹಾಸ ಅವಿರತ ಗುಂಪುಯುದ್ಧಗಳ ಕಂತೆಬೊಂತೆ. ಚರ್ಚು- ಅಷ್ಟೇನೂ ಪ್ರಭಾವಶಾಲಿಯಾಗಿರಲಿಲ್ಲ. ಅನೇಕವೇಳೆ ಅದೂ ಈ ಜಗಳದಲ್ಲಿ ಪಕ್ಷವಹಿಸುತ್ತಿತ್ತು.

ನಾರ್ಸ್ ಜನ ಐರ್ಲೆಂಡಿನ ಮೇಲೆ ಆಕ್ರಮಣ ನಡೆಸಿದ್ದು 8ನೆಯ ಶತಮಾನದ ಕೊನೆಯಲ್ಲಿ. ಮೊದಲು ನಾರ್ವೀಜಿಯನರೂ ಅನಂತರ ಡೇನರೂ ಅಲ್ಲಿಗೆ ಬಂದರು. ಇದು ಐರ್ಲೆಂಡಿನ ಮೇಲೆ ಪರೋಕ್ಷವಾಗಿ ಒಳ್ಳೆಯ ಪರಿಣಾಮವನ್ನೇ ಉಂಟುಮಾಡಿತೆನ್ನಬಹುದು.

ಐರ್ಲೆಂಡಿನ ಜನ ಪರಕೀಯರ ಸೇನೆಗಳಲ್ಲಿ ಯೋಧರಾಗಿ ಯುದ್ಧವಿದ್ಯೆ ಕಲಿತರು. ಯುರೋಪಿನೊಂದಿಗೆ ಇವರ ಸಂಪರ್ಕ ಬೆಳೆಯಿತು. ವ್ಯಾಪಾರ ಕುದುರಿತು. 10ನೆಯ ಶತಮಾನದಲ್ಲಿ ಬ್ರಿಯಾನ್ ಬೊರೊಯಿಮೆಹಿ ಪ್ರಬಲನಾದ. ಈ ಐರಿಷ್ ದೊರೆ ಡೇನರನ್ನು ಬಗ್ಗುಬಡಿದು ಪರಮಾಧಿಕಾರ ಪಡೆದ. 1002ರಿಂದ 12 ವರ್ಷಕಾಲ ನಡೆದ ಈತನ ಆಡಳಿತ ಶ್ರೇಯಕಾರಕವಾಗಿತ್ತು. 1014ರಲ್ಲಿ ನಡೆದ ಯುದ್ಧದಲ್ಲಿ ಡೇನರ ರೆಕ್ಕೆ ಮತ್ತೆ ಮುರಿಯಿತು. ಆದರೆ ಕಾಳಗದಲ್ಲಿ ಬ್ರಿಯಾನ್ ಮಡಿದ. ಇದರಿಂದ ಐರ್ಲೆಂಡಿನ ಕೇಂದ್ರಶಕ್ತಿ ಮತ್ತೆ ಉಡುಗಿಹೋಯಿತು. ಮುಂದಿನ ಒಂದು ಶತಮಾನಕಾಲದಲ್ಲಿ ಒಳಜಗಳ ಹೆಚ್ಚಿತು.

4–12ನೆಯ ಶತಮಾನದವರೆಗಿನ ಕಾಲದಲ್ಲಿ ಐರ್ಲೆಂಡು ಸಾಮಾಜಿಕವಾಗಿ ಅಷ್ಟೇನೂ ಮುಂದುವರಿಯಲಿಲ್ಲ. ಊಳಿಗಮಾನ್ಯ ಪದ್ಧತಿ ಬೆಳೆಯಿತಾದರೂ ಹಳೆಯ ಗುಂಪು ಜೀವನವೂ ಬ್ರೀಹಾನ್ ನ್ಯಾಯಪದ್ಧತಿಯೂ ಮುಂದುವರಿದುವು.

ಐರ್ಲೆಂಡಿನ ಒಂದು ವಿದ್ಯುತ್ ಕೇಂದ್ರ

ನಾರ್ಮನ್ ದೊರೆ ಎರಡನೆಯ ಹೆನ್ರಿ 1172ರಲ್ಲಿ ಐರ್ಲೆಂಡಿನ ಮೇಲೆ ಪ್ರಭುತ್ವ ಸ್ಥಾಪಿಸಿ ತನ್ನ ರಾಜ್ಯಪಾಲನನ್ನು ಅಲ್ಲಿಗೆ ನೇಮಿಸಿದ. ಒಂದನೆಯ ಹಾಗೂ ಎರಡನೆಯ ಎಡ್ವರ್ಡರ ಕಾಲದಲ್ಲಿ ಇದರ ಮೇಲೆ ಇಂಗ್ಲಿಷರ ಹಿಡಿತ ಹೆಚ್ಚಾಯಿತು. ಐರಿಷರು ಆಂಗ್ಲೋ–ನಾರ್ಮನರೊಂದಿಗೆ ವಿವಾಹಸಂಬಂಧ ಬೆಳೆಸಕೂಡದೆಂದು ಮೂರನೆಯ ಎಡ್ವರ್ಡ್ ದೊರೆಯ ಕಾಲದಲ್ಲಿ ಕಾನೂನೊಂದು ಜಾರಿಗೆ ಬಂತು.

ಬೆಲ್ಫಾಸ್ಟಿನ ಒಂದು ನೂತನ ಗೃಹ

ಐರ್ಲೆಂಡಿನ ಶಾಸನ ಸಭೆಯನ್ನು ಇಂಗ್ಲಿಷ್ ಆಡಳಿತ ಮಂಡಲಿಯ ಅಧೀನಕ್ಕೆ ಒಳಪಡಿಸುವ ಕಾಯಿದೆಯಾದದ್ದು (1494) ಏಳನೆಯ ಹೆನ್ರಿಯ ಕಾಲದಲ್ಲಿ. ಆ ವೇಳೆಗೆ ಅಲ್ಲಿದ್ದ ಆಂಗ್ಲೋ–ನಾರ್ಮನ್ ಸಂಸಾರಗಳು ಸಂಪೂರ್ಣವಾಗಿ ಐರಿಷ್ ಆಗಿ ಪರಿವರ್ತಿತವಾಗಿದ್ದುವು. ಗುಂಪಿನ ಕಟ್ಟಳೆಗಳಿಗೇ ಅವು ಬದ್ಧವಾಗಿದ್ದುವು. ಹೆನ್ರಿ ದೊರೆ ಅಲ್ಲಿನ ಗುಂಪುನಾಯಕರ ಅಧಿಕಾರ ಮುರಿದು ತಾನೇ ಐರ್ಲೆಂಡಿನ ದೊರೆಯೆಂದು ಸಾರಿಕೊಂಡ.

ಮೊದಲನೆಯ ಎಲಿಜಬೆತ್ ಐರ್ಲೆಂಡನ್ನು ಸಂಪೂರ್ಣವಾಗಿ ಅಧೀನಕ್ಕೊಳಪಡಿಸಿಕೊಳ್ಳಬೇಕೆಂದು ಹೆಣಗಿದಳು, ಧರ್ಮವಿಧಿ, ಸಾಮಾಜಿಕ ಕಟ್ಟಳೆ, ಭಾಷೆ ಮುಂತಾದ ಎಲ್ಲ ವಿಚಾರಗಳಲ್ಲೂ ಅದು ಇಂಗ್ಲೆಂಡಿನಂತಾಗಬೇಕೆಂಬುದು ಆಕೆಯ ಬಯಕೆ. ಇದನ್ನು ವಿರೋಧಿಸಿದ ಜನ ಶಿಕ್ಷೆಗೆ ಒಳಗಾದರು. ಇಂಗ್ಲೆಂಡಿನ ಉಪಾಯಗಳೆಲ್ಲ ಐರ್ಲೆಂಡನ್ನು ಶಾಶ್ವತ ದಾಸ್ಯಕ್ಕೊಳಪಡಿಸುವ ಹಂಚಿಕೆಗಳೆಂಬ ಅರಿವು ಮೂಡಿದಾಗ ಅಲ್ಲಿನ ಜನ ಒಗ್ಗಟ್ಟಾದರು. ಕೆಥೊಲಿಕ್ ಧರ್ಮಪ್ರೇಮ, ದೇಶಪ್ರೇಮ–ಇವೆರಡೂ ಈ ಒಗ್ಗಟ್ಟಿನ ಅಡಿಗಲ್ಲುಗಳಾದುವು. ಹೀಗಾಗಿ ಎಲಿಜಬೆತ್ ಐರ್ಲೆಂಡಿನ ವಿರೋಧವನ್ನ ಕಟ್ಟಿಕೊಂಡಳೆನ್ನಬಹುದು.

ಐರಿಷರು ಪದೇ ಪದೇ ದಂಗೆ ಏಳುತ್ತಿದ್ದರು. ಸ್ಪೇನ್, ಇಟಲಿಗಳು ಇವರಿಗೆ ಸಹಾಯ ನೀಡಿದುವು (1579–83). ಇಂಗ್ಲಿಷರು ದಂಗೆ ಅಡಗಿಸಲು ಅನುಸರಿಸಿದ ವಿಧಾನ ಅತ್ಯಂತ ಕ್ರೌರ್ಯಮಯ. ಐರಿಷರು ಕಾಡುಜನರೆಂಬುದು ಇಂಗ್ಲಿಷರ ನಂಬಿಕೆಯಾಗಿತ್ತು. ಐರಿಷರ ಬಗ್ಗೆ ಅವರು ಯಾವ ಕಾಲದಲ್ಲೂ ಸೌಜನ್ಯದಿಂದ ನಡೆದುಕೊಳ್ಳಲಿಲ್ಲ.

ಇಂಗ್ಲೆಂಡಿನಲ್ಲಿ ಒಂದನೆಯ ಚಾರಲ್ಸ್ ದೊರೆಯ ಮರಣದಂಡನೆಯಿಂದ ಐರ್ಲೆಂಡ್ ಸ್ವತಂತ್ರವಾಗಲು ಮತ್ತೊಂದು ಅವಕಾಶ ಸಿಕ್ಕಿತು. ಆದರೆ ಅನಂತರ ಬಂದ ಕ್ರಾಮ್‍ವೆಲನ ಕಟ್ಟುನಿಟ್ಟಿನ ಆಡಳಿತಕಾಲದಲ್ಲಿ ಐರಿಷರು ಬಲವಾದ ಪೆಟ್ಟಿಗೆ ಈಡಾದರು. ಅಲ್ಲಿನ ಕೆಥೊಲಿಕರು ಅನುಭವಿಸಬೇಕಾಗಿದ್ದ ಕೋಟಲೆ ಅಷ್ಟಿಷ್ಟಲ್ಲ.

1688ರ ಕ್ರಾಂತಿಯ ಪರಿಣಾಮವಾಗಿ ಉತ್ತರ ಐರ್ಲೆಂಡಿನಲ್ಲಿ ಕೆಥೊಲಿಕರಿಗೂ ಪ್ರಾಟೆಸ್ಟಂಟರಿಗೂ ಕಾದಾಟ ಪ್ರಾರಂಭವಾಯಿತು. ಬಹುಕಾಲ ಅನಿಶ್ಚಿತತೆಯಿತ್ತು. ಮತ್ತೆ ಅವರು ಸೋಲನ್ನನುಭವಿಸಿದರು.

ಫ್ರಾನ್ಸಿನ ಮಹಾಕ್ರಾಂತಿಯಿಂದ ಐರ್ಲೆಂಡಿನ ಜನರಲ್ಲಿ ಮತ್ತೆ ಉತ್ಸಾಹ ಮೂಡಿತು. ಸಂಯುಕ್ತ ಐರಿಷ್ ಜನ ಎಂಬ ಸಂಸ್ಥೆ ಸ್ಥಾಪಿತವಾಯಿತು. ಐರ್ಲೆಂಡನ್ನು ಹೇಗಾದರೂ ತನ್ನ ಕೈಯಲ್ಲಿಟ್ಟುಕೊಳ್ಳಲು ಇಂಗ್ಲೆಂಡ್ ಪಟ್ಟ ಸಾಹಸ ಅಷ್ಟಿಷ್ಟಲ್ಲ. ಇಂಗ್ಲೆಂಡಿನ ಪಾರ್ಲಿಮೆಂಟು ಜಾರಿಗೆ ತಂದ ಒಕ್ಕೂಟ ಕಾಯಿದೆಯ ಪ್ರಕಾರ (1800) ಪ್ರಾತಿನಿಧ್ಯ ನಿಗದಿಯಾಯಿತು. ಆದರೆ ಕೆಥೊಲಿಕರಿಗೆ ಅವಕಾಶ ದೊರಕಿದ್ದು 1829ರಲ್ಲಿ ಮಾತ್ರ.

17–18ನೆಯ ಶತಮಾನಗಳಲ್ಲಿ ಐರಿಷ್ ರೈತರ ಮುಖ್ಯ ಆಹಾರ ಆಲೂಗೆಡ್ಡೆಯಾಗಿತ್ತು. 1846ರಲ್ಲಿ ಆಲೂಗೆಡ್ಡೆಯ ಕ್ಷಾಮ ಉಂಟಾದಾಗ ಅನೇಕ ಸಾವಿರ ಐರಿಷ್ ಜನ ಸತ್ತರು. ವಿಶ್ವದ ಧಾನ್ಯ ಮಾರುಕಟ್ಟೆಯಲ್ಲಿ ಅಮೆರಿಕನ್ ಸ್ಪರ್ಧೆ ಆರಂಭವಾದ್ದರಿಂದಲೂ ಇಂಗ್ಲೆಂಡು ಆಗ ನಿರಾತಂಕ ವ್ಯಾಪಾರದಲ್ಲಿ ನಂಬಿಕೆಯಿಟ್ಟದ್ದರಿಂದಲೂ ಐರ್ಲೆಂಡಿನ ಧಾನ್ಯಕ್ಕೆ ಸರಿಯಾದ ರಕ್ಷಣೆಯಿಲ್ಲದೆ, ಧಾರಣೆಗಿಟ್ಟದೆ, ಅಲ್ಲಿನ ಜನ ನಷ್ಟಕ್ಕೊಳಗಾದರು. ಈ ಕಾಲದಲ್ಲಿ ಅಮೆರಿಕಕ್ಕೆ ವಲಸೆ ಹೋದವರು ಎಷ್ಟೋ ಜನ. ರಾಜಕೀಯ ಆಂದೋಲನವೂ ಬಲವಾಯಿತು. ಐರ್ಲೆಂಡಿನ ಸ್ವಯಂ ಆಡಳಿತಕ್ಕಾಗಿ ಪಾರ್ಲಿಮೆಂಟಿನ ಮುಂದೆ 1886ರಲ್ಲೂ 1893ರಲ್ಲೂ ಬಂದ ಮಸೂದೆಗಳು ಅಂಗೀಕೃತವಾಗಲಿಲ್ಲ. 1914ರಲ್ಲಿ ತಂದ ಮಸೂದೆಗೆ ಒಪ್ಪಿಗೆ ದೊರೆಯಿತಾದರೂ ಆಗ ಒಂದನೆಯ ಮಹಾಯುದ್ಧ ಅಡ್ಡ ಬಂತು.

ಯುದ್ಧಾನಂತರ ಐರ್ಲೆಂಡಿನ ಸ್ವಾತಂತ್ರ್ಯ ಹೋರಾಟ ಪ್ರಬಲವಾಯಿತು. ಷಿನ್ ಫೇನ್ ಪಕ್ಷದ ಗೆರಿಲ್ಲಾಗಳು ಸರ್ಕಾರಿ ಪಡೆಗಳೊಡನೆ ಕಾದಿದರು. 1921ರಲ್ಲಿ ಅವರೊಂದಿಗೆ ಒಪ್ಪಂದವಾಗಿ, ಉತ್ತರದ ಆರು ಕೌಂಟಿಗಳು ವಿನಾ ಉಳಿದ ಭಾಗಕ್ಕೆ ಸ್ವಾತಂತ್ರ್ಯ ಲಭಿಸಿತು. (ಉತ್ತರ ಐರ್ಲೆಂಡು ಉಳಿದ ಭಾಗದೊಂದಿಗೆ ಸೇರಲಿಲ್ಲ.) ಆಗ ಉದಿಸಿದ ಐರಿಷ್ ಸ್ವತಂತ್ರ ರಾಜ್ಯ ಕ್ರಮೇಣ ಬ್ರಿಟನ್ನಿನ ರಾಜಪ್ರಭುತ್ವದ ಸಂಕೇತವನ್ನೂ ಕಡಿದುಕೊಂಡಾಗ (1927) ಅದು ತಳೆದ ಹೆಸರೇ ಐರಿಷ್ ಗಣರಾಜ್ಯ. (ಪಿ.ಎಂ.ಯು.ಎಸ್.)

**ಐಲಾಂಥಸ್ ಚಿಟ್ಟೆ:** ನಾಕ್ಟುಯಿಡೆ ಕುಲಕ್ಕೆ ಸೇರಿದ ಎಲಿಗ್ಮಾ ನಾರ್ಸಿಸಸ್ ಎಂಬ ವೈಜ್ಞಾನಿಕ ಹೆಸರಿನ ಒಂದು ಚಿಟ್ಟೆ. ದೇವಲೋಕದ ಮರ ಎಂಬ ಹೆಸರು ಗಳಿಸಿ ಬಹಳ ಎತ್ತರವಾಗಿ ಬೆಳೆಯುವ ಐಲಾಂಥಸ್ ಎಕ್ಸೆಲ್ಸ ಎಂಬ ಮರದ ಎಲೆಗಳನ್ನು ತಿಂದು ಹಾಳುಮಾಡುವ ಈ ಚಿಟ್ಟೆಗಳನ್ನು ಆ ಮರದ ಹೆಸರಿಂದಲೇ ಕರೆಯಲಾಗಿದೆ. ಆಕಾರದಲ್ಲಿ ಇದು ದೊಡ್ಡದು; ಬಣ್ಣ ಹಳದಿ; ರೆಕ್ಕೆಗಳ ಮೇಲೆ ಕಂದು ಅಥವಾ ಕಪ್ಪು ಪಟ್ಟೆಗಳಿವೆ. ಮರಿಗಳು ಉದ್ದವಾಗಿದ್ದು ಅವುಗಳ ಮೈಮೇಲೆ ತೆಳುವಾಗಿ ಕೂದಲು ಆವರಿಸಿರುತ್ತದೆ. ಅಲ್ಲಲ್ಲಿ ಕೆಂಪು ಮತ್ತು ಕಪ್ಪು ಪಟ್ಟೆಗಳಿರುತ್ತವೆ. ಮರಿಯ ತಲೆಯ ಬಣ್ಣ ಹಳದಿ. ಇವು ಕೊಂಬೆಗಳ ಮೇಲೆ, ಮಾಸಲು ಹಳದಿ ಬಣ್ಣದ ತೆಳುದಾರದ ಗೂಡು ಕಟ್ಟಿ ಕೋಶಾವಸ್ಥೆ ಹೊಂದುತ್ತವೆ. (ಟಿ.ಎಸ್.ಟಿ.)

**ಐಲ್ ಆಫ್ ಮ್ಯಾನ್:** ಐರಿಷ್ ಸಮುದ್ರ ಮಧ್ಯ ಭಾಗದಲ್ಲಿ ಇರುವ ಒಂದು ಸಣ್ಣ ದ್ವೀಪ. 54°09′ ಉ.ಅ. 4°29′ ಪ.ರೇ.ಗಳಲ್ಲಿ ಇದನ್ನು ಎಲನ್‍ವಾನನ್ ಎಂತಲೂ ಕರೆಯಲಾಗುತ್ತದೆ. ಸ್ವಯಂ ಆಡಳಿತದ ಬ್ರಿಟಿಷ್ ಕ್ರೌನ್ ಅಧೀನದಲ್ಲಿದೆ. ಈ ದ್ವೀಪವು ಬ್ರಿಟಿಷ್ ದ್ವೀಪಗಳ ಭೌಗೋಳಿಕ ಕೇಂದ್ರಸ್ಥಾನವನ್ನು ಹೊಂದಿದೆ. ಭೌಗೋಳಿಕ ಕ್ಷೇತ್ರ 572 ಚ.ಕಿಮೀ ಜನಸಂಖ್ಯೆ 80,058 (2000). ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 131.2. ಇಲ್ಲಿನ ಹಣ ಪೌಂಡ್ ಸ್ಟರ್ಲಿಂಗ್. ರಾಷ್ಟ್ರೀಯ ಆದಾಯ 2,113 ಬಿ.ಡಾಲರ್. ತಲಾ ಆದಾಯ 28,500 ಡಾಲರ್. ಸರ್ಕಾರ ಇಂಗ್ಲೆಂಡಿನ ರಾಜಮನೆತನದ ಅಧೀನಕ್ಕೊಳಪಟ್ಟಿದೆ.

ಐಲ್ ಆಫ್ ಮ್ಯಾನ್ ದ್ವೀಪಸ್ತೋಮ ಕಾಫ್ ಮ್ಯಾನ್, ಚಿಕನ್‌ರಾಕ್ ಮತ್ತು ಸೆಂಟ್ ಪೀಟರ್ ದ್ವೀಪಗಳನ್ನು ಒಳಗೊಂಡಿದೆ. ಈ ದ್ವೀಪಗಳು ಅಟ್ಲಾಂಟಿಕ್ ಸಾಗರದಲ್ಲಿನ ದಕ್ಷಿಣ ಭಾಗದ ಸೆಂಟ್ ಜಾರ್ಜ್ ಕಾಲುವೆ ಮತ್ತು ಐರ್ಲೆಂಡ್, ಪೀಲ್ಸ್ ಮತ್ತು ಕಾರ್ನ್‌ವಾಲ್‌ಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಉತ್ತರದಲ್ಲಿನ ಕಾಲುವೆ ಉತ್ತರ ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳನ್ನು ಸಂಪರ್ಕಿಸುತ್ತದೆ.

ಐಲ್ ಆಫ್‌ಮ್ಯಾನ್ ಬ್ರಿಟಿಷ್ ದ್ವೀಪ ಸಮೂಹದ ಆಗ್ನೇಯ ತೀರಭಾಗವಾಗಿದೆ. ಇದು 48 ಕಿಮೀ ಉದ್ದ ಮತ್ತು 13 ರಿಂದ 24 ಕಿಮೀ ಅಗಲವಾಗಿದೆ. ಸು. 572 ಚ.ಕಿಮೀ ಭೂ ಪ್ರದೇಶವನ್ನು ಹೊಂದಿದೆ. ಉತ್ತರ ಮತ್ತು ದಕ್ಷಿಣ ಭಾಗದ ಬೆಟ್ಟಗಳನ್ನು ಮಧ್ಯಭಾಗದ ಕಣಿವೆ ವಿಭಜಿಸಿದೆ, ಮೇರು ಉತ್ತರಭಾಗ ಸಮತಟ್ಟಾಗಿದೆ. ಇಲ್ಲಿ ಭೂ ಇತಿಹಾಸಕಾಲದಲ್ಲಿ ಹಿಮನದಿ ಕಾರ್ಯಾಚರಣೆಯಿಂದ ಭೂಮಟ್ಟಸವಾಗಿದೆಯೆಂದು ಕಂಡುಬಂದಿದೆ. ಈ ಭಾಗದಲ್ಲಿ ಅತ್ಯಂತ ಎತ್ತರವಾದ ಪರ್ವತ ಸ್ನೆಫ಼ಿಲ್ 621 ಮೀ. ಶಿಖರದ ಮೇಲಿಂದ 6 ರಾಜ್ಯಗಳನ್ನು ಮ್ಯಾನ್, ಸ್ಕಾಟ್ಲೆಂಡ್, ಇಂಗ್ಲೆಂಡ್, ಐರ್ಲೆಂಡ್, ವೇಲ್ಸ್ ಮತ್ತು ಹೆವೆನ್‌ಗಳನ್ನು ಕಾಣಬಹುದು. ಸ್ಥಳೀಯ ಮಾತಿನಂತೆ 7 ನೆಯ ರಾಜ್ಯ ನೆಪ್ಚೂನ್ ಅಥವಾ ಸಮುದ್ರವನ್ನು ಕಾಣಬಹುದು ಎಂಬುದಾಗಿದೆ. ಜನಸಂಖ್ಯೆ 80,058 (2006). ರಾಜಧಾನಿ ಡಾಗ್ಲಾಸ್ (ಡೋಲಿಷ್). ಜನಸಂಖ್ಯೆ 26,218. ಜನಸಂಖ್ಯೆಯ ಶೇ. 93.9 ರಷ್ಟು ಬ್ರಿಟಿಷ್ ದ್ವೀಪವಾಸಿಗಳು. (ಎಸ್.ಎಸ್.ಎಸ್.)

**ಐವರಿ ಕೋಸ್ಟ್:** ಆಫ್ರಿಕದ ಪಶ್ಚಿಮ ತೀರದಲ್ಲಿರುವ ಒಂದು ಗಣರಾಜ್ಯ. ಪಶ್ಚಿಮ ರೇಖಾಂಶ $2^0$ 30' ನಿಂದ $7^0$ 30'ರ ವರೆಗೂ ಉತ್ತರ ಅಕ್ಷಾಂಶ $5^0$ ಯಿಂದ $10^0$ ವರೆಗೂ ಇದು ಹಬ್ಬಿದೆ. ದಕ್ಷಿಣದಲ್ಲಿ ಗಿನಿ ಖಾರಿ, ಪಶ್ಚಿಮದಲ್ಲಿ ಲೈಬೀರಿಯ ಮತ್ತು ಗಿನಿ, ಉತ್ತರದಲ್ಲಿ ಮಾಲಿ ಮತ್ತು ಉತ್ತರ ವೋಲ್ಟ, ಪೂರ್ವದಲ್ಲಿ ಘಾನ-ಇವು ಈ ರಾಜ್ಯವನ್ನು ಸುತ್ತುವರಿದಿವೆ. ರಾಜ್ಯದ ವಿಸ್ತೀರ್ಣ 3,22,500 ಚ.ಕಿಮೀ.

**ಮೇಲ್ಮೈ ಲಕ್ಷಣ:** ಐವರಿ ಕೋಸ್ಟಿನ ಹೆಚ್ಚು ಭಾಗ ವಿಶಾಲವಾದ ಪ್ರಸ್ಥಭೂಮಿ. ಕಾಂಗ್ ಟೆರ್ ಪ್ರಸ್ಥಭೂಮಿಯ ಎತ್ತರ 1549 ಮೀ. ಅಲ್ಲಿಂದ ಸಮುದ್ರಾಭಿಮುಖವಾಗಿ ಇಳಿಜಾರಾಗಿರುವ ನೆಲದ ಕೊನೆಯ 64 ಕಿಮೀ. ಮೈದಾನವೆನ್ನಬಹುದು. ಇಲ್ಲಿ ಹರಿಯುವ ನದಿಗಳು ಅಮುಖ್ಯ: ಕವಾಲಿ, ಸೆಸಾಂಡ್ರ, ಬಂಡಾಮ ಮತ್ತು ಕೋಮೊ. ಇವು ದೋಣಿಸಂಚಾರಕ್ಕೆ ಯೋಗ್ಯವಾಗಿಲ್ಲ.

**ವಾಯುಗುಣ:** ಐವರಿ ಕೋಸ್ಟಿನ ವಾಯುಗುಣ ಶಾಖಶೈತ್ಯಗಳಿಂದ ಕೂಡಿದ್ದು. ಉಷ್ಣತೆ $57^0$ ಫ್ಯಾ. ($14^0$ಸೆಂ.)ನಿಂದ $103^0$ಫ್ಯಾ. ($39^0$ಸೆಂ.)ವರೆಗೆ ವ್ಯತ್ಯಾಸವಾಗುತ್ತದೆ. ಡಿಸೆಂಬರಿನಿಂದ ಮೇವರೆಗೆ ಹೆಚ್ಚು ಮಳೆ (80"-120"). ತೀರಪ್ರದೇಶದಿಂದ ಉತ್ತರಕ್ಕೆ ಸಾಗಿದಂತೆ ಉಷ್ಣವಲಯ ಮರೆಯಾಗಿ ಉಪೋಷ್ಣವಲಯದ ವಾಯುಗುಣ ಕಂಡುಬರುತ್ತದೆ.

**ಸಸ್ಯವರ್ಗ ಮತ್ತು ಪ್ರಾಣಿಗಳು:** ಐವರಿ ಕೋಸ್ಟಿನ ದಕ್ಷಿಣದ ಭಾಗದಲ್ಲೂ ಕವಾಲಿ ಮತ್ತು ಕೋಮೊ ನದೀ ಕಣಿವೆಗಳಲ್ಲೂ ದಟ್ಟವಾದ ನಿತ್ಯಹಸುರಿನ ಕಾಡುಗಳುಂಟು. ಸ್ವಲ್ಪ ಉತ್ತರದಲ್ಲಿ ಎಲೆ ಉದುರುವ ಕಾಡುಗಳಿವೆ.

ನರಿ, ಕತ್ತೆಕಿರುಬ, ಚಿರತೆ, ಕೋತಿ, ಆನೆ, ನೀರ್ಕುದುರೆ, ಮೊಸಳೆ, ಗೋಸುಂಬೆ, ಹಲ್ಲಿ, ಹಾವು, ಕ್ರಿಮಿಕೀಟ, ಚಿಟ್ಟೆ, ಚೇಳು, ಹಕ್ಕಿಗಳು, ರಣಹದ್ದು, ಕೊಕ್ಕರೆ, ಪಾರಿವಾಳ, ಆಮೆ, ಗಿಣಿ-ಇವು ಇಲ್ಲಿ ಧಾರಾಳ.

**ಬೆಳೆ, ಕೈಗಾರಿಕೆ, ವಾಣಿಜ್ಯ:** ಐವರಿ ಕೋಸ್ಟಿನ ಸಂಪತ್ತಿಗೆ ಅರಣ್ಯಗಳು ಬಹಳಮಟ್ಟಿಗೆ ಕಾರಣ. ದೇಶದ ನಿರ್ಯಾತದಲ್ಲಿ ಹೆಚ್ಚಿನ ಪ್ರಮಾಣ ಅರಣ್ಯ ವಸ್ತುಗಳು. ಕಾಡು ಕಡಿದು ವ್ಯವಸಾಯಕ್ಕೆ ಬಳಸಲಾಗಿರುವ ನೆಲ ಕಡಿಮೆ. ರಾಷ್ಟ್ರೀಯ ವರಮಾನದ ಅರ್ಧ ಭಾಗ ಬೇಸಾಯದಿಂದ ಬರುತ್ತದೆ. ಕಾಫಿ ಬೆಳೆಯುವ ದೇಶಗಳಲ್ಲಿ ಐವರಿ ಕೋಸ್ಟಿನದು ಮೂರನೆಯ ಸ್ಥಾನ (ಮೊದಲಿನ ಎರಡು ಬ್ರೆಜ಼ಿಲ್ ಮತ್ತು ಕೊಲಂಬಿಯ). ವಿಶ್ವದ ಒಟ್ಟಿನಲ್ಲಿ ಇದರ ಪಾಲು ಶೇ. 6 ಕೋಕೊ ಬೆಳೆಯಲ್ಲಿ ಐವರಿ ಕೋಸ್ಟ್ ನಾಲ್ಕನೆಯದು (ಘಾನ, ನೈಜೀರಿಯ ಮತ್ತು ಬ್ರೆಜ಼ಿಲ್‌ಗಳು ಮೊದಲ ಮೂರು). ವಿಶ್ವ ಬೆಳೆಯಲ್ಲಿ ಶೇ. 9 ರಷ್ಟನ್ನು ಐವರಿ ಕೋಸ್ಟ್ ಉತ್ಪಾದಿಸುತ್ತದೆ. ಐವರಿ ಕೋಸ್ಟಿನ ನಿರ್ಯಾತಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ಇವುಗಳದು. ಬನಾನ, ತೆಂಗು, ಕೊಬ್ಬರಿ-ಇವು ರಫ್ತಾಗುತ್ತವೆ.

ಐವರಿ ಕೋಸ್ಟಿನ ಮುಖ್ಯ ಆಹಾರ ಬೆಳೆಗಳು ಗೆಣಸು, ಮುಸುಕಿನ ಜೋಳ, ಬತ್ತ, ಮರಗೆಣಸು, ಕಾಳು, ನೆಲಗಡಲೆ ಇತ್ಯಾದಿ. ಕುರಿ ಮತ್ತು ಆಕಳುಗಳನ್ನು ಉತ್ತರದಲ್ಲಿ ಹೆಚ್ಚಾಗಿ ಸಾಕುತ್ತಾರೆ. ಆದರೂ ಹೊರಗಿನಿಂದ ಮಾಂಸ ಆಮದಾಗುತ್ತದೆ. ಅಬಿಜಾನಿನ ಬಳಿ ಮೀನುಗಾರಿಕೆ ಒಂದು ಮುಖ್ಯ ಕಸಬು. ಉತ್ತರದಲ್ಲೂ ಪಶ್ಚಿಮದಲ್ಲೂ ವಜ್ರದ ಉತ್ಪಾದನೆಯಾಗುತ್ತದೆ. ಕರಾವಳಿಯ ಗ್ರಾಂಡ್ ಲಾಹೌ ಬಳಿ ಮ್ಯಾಂಗನೀಸ್ ಗಣಿಗಳಿವೆ. ಖಾದ್ಯ ಎಣ್ಣೆ ತಯಾರಿಕೆ, ಆಹಾರ ಪರಿಷ್ಕರಣ, ಮರಕೊಯ್ತ, ಮೋಟಾರು ಭಾಗಗಳ ಜೋಡಣೆ, ಜವಳಿ-ಇವು ಕೆಲವು ಕೈಗಾರಿಕೆಗಳು. ಐವರಿ ಕೋಸ್ಟಿನಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಬೆಳೆದಿಲ್ಲ. ವಿದೇಶೀ ಬಂಡವಾಳ ನಿಯೋಜನೆಗೆ ಇಲ್ಲಿನ ಸರ್ಕಾರ ವಿಶೇಷವಾಗಿ ಉತ್ತೇಜನ ನೀಡಿದೆ.

ಐವರಿ ಕೋಸ್ಟಿನ ರಸ್ತೆವ್ಯವಸ್ಥೆ ಪಶ್ಚಿಮ ಆಫ್ರಿಕದಲ್ಲೇ ಅತ್ಯಂತ ಉತ್ಕೃಷ್ಟವಾದ್ದು. ಸು. 33,000 ಕಿಮೀಗಳ ಪ್ರಾಥಮಿಕ ಹಾಗೂ ದ್ವಿತೀಯಕ ರಸ್ತೆಗಳಿವೆ. ಐವರಿ ಕೋಸ್ಟಿನಿಂದ ಉತ್ತರ ವೋಲ್ಟಕ್ಕೆ ಮೀಟರ್ ಗೇಜ್ ರೈಲುಮಾರ್ಗವುಂಟು.

ಅಬಿಜಾನ್ ಐವರಿ ಕೋಸ್ಟಿನ ರಾಜಧಾನಿ (ಜನಸಂಖ್ಯೆ 2,60,000). ಇದು ಪಶ್ಚಿಮ ಆಫ್ರಿಕದಲ್ಲೇ ಅತ್ಯುತ್ತಮ ರೇವುಪಟ್ಟಣ. ರೈಲುಮಾರ್ಗದ ಕೊನೆದಾಣ. ವಿಮಾನ ವ್ಯವಸ್ಥೆಯ ಕೇಂದ್ರ. ಬವಾಕೆ, ಬವಾಫ್ಲೆ, ಓಡಿಯೆನೆ, ಸಿಗ್ವೆಲ, ಗಿಗ್ಲೊ, ಗ್ರಾಂಡ್ ಬಸಾರಿ, ಸೆಸಾಂಡ್ರ ಮತ್ತು ಟಾಬೊ ಇತರ ಪಟ್ಟಣಗಳು.

ಐವರಿ ಕೋಸ್ಟಿನ ಅಧಿಕೃತ ಭಾಷೆ ಫ್ರೆಂಚ್. ಅನೇಕ ಸ್ಥಳೀಯ ಭಾಷೆಗಳು ಬಳಕೆಯಲ್ಲಿವೆ. ಸಂಪ್ರದಾಯದ ಆಚರಣೆಗಳಲ್ಲಿ ನಂಬಿಕೆಯಿರುವವರೇ ಹೆಚ್ಚು ಮಂದಿ. ಒಟ್ಟು ಜನಸಂಖ್ಯೆಯ ಶೇ. 12ರಷ್ಟು ಮಂದಿ ಕ್ರೈಸ್ತರು-ಮುಖ್ಯವಾಗಿ ರೋಮನ್ ಕೆಥೊಲಿಕರು. ನೂರಕ್ಕೆ 25 ಮಂದಿ ಮುಸ್ಲಿಮರಿದ್ದಾರೆ. (ಪಿ.ಎಚ್.)

**ಇತಿಹಾಸ, ಆಡಳಿತ:** 15ನೆಯ ಶತಮಾನದ ದ್ವಿತೀಯಾರ್ಧದ ವೇಳೆಗೆ ಪೋರ್ಚುಗೀಸರು ಈ ಪ್ರದೇಶವನ್ನು ಪರಿಶೋಧಿಸಿದ ಮೇಲೆ ದಂತ ಮತ್ತು ಗುಲಾಮ ವ್ಯಾಪಾರಕ್ಕಾಗಿ ಪಾಶ್ಚಾತ್ಯರು ಇಲ್ಲಿಗೆ ಬರಲಾರಂಭಿಸಿದರು. 17ನೆಯ ಶತಮಾನದ ಕೊನೆಯ ವೇಳೆಗೆ ಫ್ರೆಂಚರು ಇಲ್ಲಿನ ಪೂರ್ವತೀರಪ್ರದೇಶದ ಅಸ್ಸಿನಿ ಮತ್ತು ಗ್ರಾಂಡ್ ಬಾಸಮ್‌ಗಳಲ್ಲಿ ಖಾಯಂ ವ್ಯಾಪಾರಕೇಂದ್ರಗಳನ್ನು ಸ್ಥಾಪಿಸಿದ್ದರು. ಕೋಟೆ ಕೊತ್ತಳಗಳು ನಿರ್ಮಿತವಾದುವು. ಸುತ್ತಮುತ್ತಣ ಪ್ರದೇಶಗಳು ಕ್ರಮೇಣ ಸ್ಥಳೀಯ ನಾಯಕರ ಕೈಯಿಂದ ಇವರಿಗೆ ವರ್ಗವಾದುವು. 1870ರಲ್ಲಿ ಫ್ರೆಂಚ್-ಜರ್ಮನ್ ಯುದ್ಧದ ಫಲವಾಗಿ ಫ್ರೆಂಚ್ ಸೇನೆ ಇಲ್ಲಿಂದ ಕಾಲ್ತೆಗೆಯಿತು. ಈ ಪ್ರದೇಶದ ರಕ್ಷಣೆಯ ಜವಾಬ್ದಾರಿಯನ್ನು ಫ್ರೆಂಚ್ ವರ್ತಕರೇ ವಹಿಸಿಕೊಂಡರು. ಇವರು ಘಾನದ ಕಡೆಯಿಂದ ಬರುತ್ತಿದ್ದ ಬ್ರಿಟಿಷ್ ಆಕ್ರಮಣವನ್ನು ಯಶಸ್ವಿಯಾಗಿ ತಡೆಗಟ್ಟಿದರು. ಮಾರ್ಸೆಲ್ ಟ್ರೀಕ್-ಲ್ಯಾಪ್ಲೇನ್ ಇವರ ಪೈಕಿ ಒಬ್ಬ. ಈತನೂ ಕ್ಯಾಪ್ಟನ್ ಬಿಂಗರನೂ ಸೇರಿ ಇತರ ಸ್ಥಳೀಯ ನಾಯಕರನ್ನು ಮುಸಲಾಯಿಸಿ, ಅವರ ನೆಲಗಳ ಮೇಲೆ ತಮ್ಮ ರಕ್ಷಣೆಯ ಕೊಡೆ ಹಿಡಿದರು. 1893ರಲ್ಲಿ ಐವರಿ ಕೋಸ್ಟ್ ಒಂದು ಪ್ರತ್ಯೇಕ ಫ್ರೆಂಚ್ ವಸಾಹತಾಗಿ ಸ್ಥಾಪಿತವಾಯಿತು. ಬಿಂಗರ್ ಪ್ರಥಮ ಗವರ್ನರ್.

ಐವರಿ ಕೋಸ್ಟಿನ ಪಶ್ಚಿಮ ಮತ್ತು ಪೂರ್ವ ಗಡಿಗಳ ನಿಷ್ಕರ್ಷೆ ಕಷ್ಟವಾಗಲಿಲ್ಲ. ಬ್ರಿಟನ್ ಲೈಬೀರಿಯಗಳೊಂದಿಗೆ ಈ ಬಗ್ಗೆ ಒಪ್ಪಂದವಾಯಿತು. ಆದರೆ ಉತ್ತರದ ಗಡಿ ಖಚಿತಗೊಂಡದ್ದು 1898ರಲ್ಲಿ. ಫ್ರೆಂಚರ ರಾಜ್ಯಾಕಾಂಕ್ಷೆಯ ಮಗ್ಗುಲ ಮುಳ್ಳಾಗಿದ್ದ ಸುಡಾನೀ ಬಂಡಾಯಗಾರ ಸ್ಯಾಮೋರಿಯನ್ನು ಫ್ರೆಂಚರು ಹಿಡಿದು ನಿರ್ದಯೆಯಿಂದ ಬೊಕ್ಕೆಗೆ ಹಾಕಿದಾಗಲೇ ಇದು ಸಾಧ್ಯವಾಯಿತು.

ಆದರೂ ಫ್ರೆಂಚರು ಇಲ್ಲಿ ತಳವೂರುವ ಮುನ್ನ ಇನ್ನೂ ಅನೇಕ ವಿಘ್ನಗಳನ್ನೆದುರಿಸಬೇಕಾಯಿತು. ಹಳದಿ ಜ್ವರ ಒಂದು ಶತ್ರು. ಸ್ವಾತಂತ್ರ್ಯಪ್ರಿಯರಾದ ಸ್ಥಳೀಯ ಜನರ ಪ್ರತಿಭಟನೆಯ ಅಪಾಯವಂತೂ ಇದ್ದೇ ಇತ್ತು. 19ನೆಯ ಶತಮಾನ ಉರುಳಿ, 20ನೆಯ ಶತಮಾನದ ಎರಡನೆಯ ದಶಕದ ಅಂತ್ಯ ಸಮೀಪಿಸುವ ವೇಳೆಗೆ ಫ್ರೆಂಚರು ಇಲ್ಲಿ ಭದ್ರವಾಗಿದ್ದರು. ದಕ್ಷಿಣ ತುದಿಯಿಂದ ಉತ್ತರ ವೋಲ್ಟಕ್ಕೆ ಉದ್ದನೆಯ ರೈಲುಮಾರ್ಗವೂ ರಾಜ್ಯದ ನಾನಾ ಕಡೆಗಳನ್ನು ಕೂಡಿಸುವ ಉತ್ತಮ ರಸ್ತೆ ವ್ಯವಸ್ಥೆಯೂ ನಿರ್ಮಿತವಾದುವು. ಅಬಿಜಾನ್ ರಾಜಧಾನಿಯಾಯಿತು. 1951ರಲ್ಲಿ ಬಂದರು ನಿರ್ಮಾಣವಾಯಿತು.

ಎರಡನೆಯ ಮಹಾಯುದ್ಧ ಬಂತು. 1940-42 ರ ವರೆಗೆ ಇದು ಫ್ರಾನ್ಸಿನ ವಿಷಿಯಲ್ಲಿ ಜರ್ಮನರ ಕೈಗೊಂಬೆಯಾಗಿ ರಾಜ್ಯವಾಳುತ್ತಿದ್ದ ಸರ್ಕಾರದ ಅಧೀನದಲ್ಲಿತ್ತು. 1946ರಲ್ಲಿ ಫ್ರೆಂಚಿನ ಒಂದು ಭಾಗವಾಯಿತು. ಆಡಳಿತ ಮತ್ತು ಹಣಕಾಸುಗಳಲ್ಲಿ ಇಷ್ಟಷ್ಟು ಅಧಿಕಾರ ಪ್ರಾಪ್ತವಾಯಿತೇ ವಿನಾ ಇದಕ್ಕೆ ನಿಜವಾದ ಸ್ವಾತಂತ್ರ್ಯ ಲಭಿಸಲಿಲ್ಲ.

1947ರಲ್ಲಿ ಇದರ ಉತ್ತರಭಾಗದ ಜನ ಪ್ರತ್ಯೇಕವಾಗಲು ಬಯಸಿದಾಗ ಫ್ರೆಂಚರು ಅದನ್ನು ಕತ್ತರಿಸಿ ಉತ್ತರ ವೋಲ್ಟವೆಂದು ಹೆಸರಿಸಿದರು. 1958ರ ಡಿಸೆಂಬರ್ 4ರಂದು ಐವರಿ ಕೋಸ್ಟ್ ಸ್ವಯಮಾಡಳಿತವನ್ನೂ 1960ರ ಆಗಸ್ಟ್ 7ರಂದು ಸ್ವಾತಂತ್ರ್ಯವನ್ನೂ ಪಡೆಯಿತು. ಇದಕ್ಕೆಲ್ಲ ಕಾರಣನಾದ ನಾಯಕನೇ ಫೀಲಿಕ್ಸ್ ಹೌಫ್ವೆ-ಬಾಯಿನಿ. ಉತ್ತರ ವೋಲ್ಟ, ನೈಜರ್ ಮತ್ತು ದಹೋಮಿಗಳೊಂದಿಗೆ ಈತ ಮೈತ್ರಿಕೂಟ ಮಾಡಿಕೊಂಡ.

ಈ ರಾಜ್ಯಗಳಿಗೆಲ್ಲ ಸಮಾನವಾದ ಸಂವಿಧಾನ, ಸುಂಕವ್ಯವಸ್ಥೆ, ವಿದೇಶ ಮತ್ತು ರಕ್ಷಣಾನೀತಿ ಮತ್ತು ಅಭಿವೃದ್ಧಿ ಕಾರ್ಯಕ್ಕೆ ಎಲ್ಲರಿಗೂ ಒದಗಿಬರುವ ಬಂಡವಾಳ ಇರಬೇಕೆಂಬುದು ಬಾಯಿನಿಯ ಕನಸು. ಇವಕ್ಕೂ ಫ್ರಾನ್ಸಿಗೂ ನಡುವೆ ಸಹಕಾರದ ಕರಾರುಗಳಿಗೆ 1961ರಲ್ಲಿ ಸಹಿ ಹಾಕಲಾಯಿತು. ಮೈತ್ರಿಕೂಟದ ರಾಷ್ಟ್ರಗಳು ಈಗ ಫ್ರೆಂಚ್ ಸಮುದಾಯಕ್ಕೆ ಸೇರಿಲ್ಲ.

1960ರ ಸಂವಿಧಾನದ ಪ್ರಕಾರ ಐವರಿ ಕೋಸ್ಟ್ ಗಣರಾಜ್ಯದ ಅಧ್ಯಕ್ಷನಿಗೆ ವ್ಯಾಪಕ ಅಧಿಕಾರಗಳುಂಟು. ಸಚಿವರುಗಳನ್ನೂ ಪ್ರಮುಖ ಅಧಿಕಾರಿಗಳನ್ನೂ ನೇಮಕ ಮಾಡುವವನೀತನೇ. ರಾಷ್ಟ್ರೀಯ ಸಭೆಯ ಸದಸ್ಯರ ಸಂಖ್ಯೆ 100. ಇವರು ನೇರವಾಗಿ ಚುನಾಯಿತರಾಗುತ್ತಾರೆ. ದೇಶವನ್ನು ಆಡಳಿತ ಸೌಕರ್ಯಕ್ಕಾಗಿ 19 ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. (ಸಿ.ಪಿ.)

**ಐವಾನ್:** ರಷ್ಯದ ಇತಿಹಾಸದಲ್ಲಿ ಈ ಹೆಸರಿನವರು ಆರು ಜನ. ಇವರಲ್ಲಿ ಮೂವರು ಮಾಸ್ಕೊ ಮಹಾರಾಜರು, ಇಬ್ಬರು ಜ಼ಾರ್ ದೊರೆಗಳು, ಒಬ್ಬ ರಷ್ಯದ ಚಕ್ರವರ್ತಿ.

**ಐವಾನ್ I: 1304–41.** ವ್ಲಾದಿಮಿರ್ ಮತ್ತು ಮಾಸ್ಕೊಗಳ ಮಹಾರಾಜ ಡೇನಿಯಲನ ಮಗ; ಪೂರ್ಣ ಹೆಸರು ಐವಾನ್ ಡ್ಯಾನಿಲೊವಿಚ್. 1325ರಲ್ಲಿ ಟ್ವೆರಿನ ರಾಜ ದಿಮಿತ್ರಿ ಮಿಕೈಲೊವಿಚನಿಂದ ಅವನ ಸಹೋದರ ಯೂರಿ ಕೊಲೆಯಾದಾಗ ಈತ ಮಾಸ್ಕೊವಿನ ಗದ್ದುಗೆಯೇರಿದ. ದಿಮಿತ್ರಿ ನಡೆಸಿದ ಅಮಾನುಷ ಕೃತ್ಯ ಕಂಡ ಉಜ್ಬೆಕಿನ ಖಾನ ದಿಮಿತ್ರಿಯನ್ನು ಸಂಹರಿಸಿದರೂ ಮಹಾರಾಜನೆನಿಸಿಕೊಳ್ಳಲು ಅಗತ್ಯವಾಗಿದ್ದ ವ್ಲಾದಿಮಿರ್ ರಾಜ್ಯ ಐವಾನನ ಆಡಳಿತಕ್ಕೆ ಬರಲಿಲ್ಲ. ವ್ಲಾದಿಮಿರಿನ ಆಡಳಿತ ನಿರ್ವಹಿಸಲು ಖಾನನಿಂದ ನಿಯಮಿತ ನಾಗಿದ್ದವನು ದಿಮಿತ್ರಿಯ ಸಹೋದರ ಅಲೆಕ್ಸಾಂಡರ್. ಆದರೆ 1327ರಲ್ಲಿ ಟ್ವೆರಿನ ಜನ ದಂಗೆಯೆದ್ದು ಮಂಗೋಲ್ ವರ್ತಕರನ್ನೂ ಟ್ವೆರಿನ ಅಧಿಕಾರಿಗಳನ್ನೂ ಕೊಂದಾಗ ಖಾನ್ ಈ ದಂಗೆ ಅಡಗಿಸಲು ಐವಾನನನ್ನು ಸೈನ್ಯಸಮೇತ ಕಳುಹಿಸಿದ. ಐವಾನ್ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಟ್ವೆರ್ ರಾಜ್ಯವನ್ನು ವಶಪಡಿಸಿಕೊಂಡ. ಇದರಿಂದ ಸಂತೋಷಗೊಂಡ ಖಾನ್ ವ್ಲಾದಿಮಿರ್ ರಾಜ್ಯದ ಅರ್ಧಭಾಗವನ್ನು ಇವನ ಆಳ್ವಿಕೆಗೆ ಒಪ್ಪಿಸಿ ಮಹಾರಾಜನೆಂಬ ಬಿರುದು ನೀಡಿದ.

ದೇಶಭ್ರಷ್ಟನಾದ ಅಲೆಕ್ಸಾಂಡರ್ ಹತ್ತು ವರ್ಷಗಳ ಕಾಲ ಪದೇ ಪದೇ ವ್ಲಾದಿಮಿರ್ ಮೇಲೆ ಬೀಳುತ್ತಿದ್ದ. ಕೊನೆಗೊಮ್ಮೆ ಖಾನ್ ಐವಾನನಿಂದ ಪ್ರೇರಿತನಾಗಿ ಅಲೆಕ್ಸಾಂಡರನನ್ನೂ ಅವನ ಮಗನನ್ನೂ ಗಲ್ಲಿಗೇರಿಸಿದ.

ಇವನ ಕಾಲದಲ್ಲಿ ಮಾಸ್ಕೊ ರಾಜ್ಯದ ಎಲ್ಲೆಗಳು ವಿಸ್ತರಿಸಿದುವು. ಈತ ಭೂಕಂದಾಯವನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡಿ ರಾಜ್ಯದ ಬೊಕ್ಕಸವನ್ನು ತುಂಬಿದ. ಅದರಿಂದಾಗಿ ಇವನಿಗೆ ಕಲಿಟ (ಹಣದ ಚೀಲ) ಎಂಬ ಪರ್ಯಾಯನಾಮ ಬಂತು. ರಷ್ಯದಲ್ಲಿ ಶಾಂತಿಸ್ಥಾಪನೆ ಮಾಡಿದವನು ಈತ. ಈತ 1341ರಲ್ಲಿ ನಿಧನನಾದನು.

**ಐವಾನ್ II: 1326–59.** ಮಾಸ್ಕೊ ಮಹಾರಾಜ, ಮೊದಲನೆಯ ಐವಾನನ ಮಗ. ಐವಾನ್ ಐವಾನೊವಿಚ್ ಪೂರ್ಣನಾಮ. ತನ್ನ ಸಹೋದರ ಸೆಮಾನನ ಅನಂತರ ಸಿಂಹಾಸನವನ್ನೇರಿದ. ಸುಜ಼ದಾಲ್ ಜನರ ವಿರೋಧವಿದ್ದರೂ ಖಾನನ ದೃಷ್ಟಿಗೆ ಬಿದ್ದು ಮಹಾರಾಜನೆನಿಸಿದ. ರೈಯೆಜ಼ಾನರು ಪದೇ ಪದೇ ಮಾಸ್ಕೊವಿನ ಮೇಲೆ ಬೀಳುತ್ತಿದ್ದುದನ್ನು ಕಂಡ ಐವಾನ್ ರೈಯೆಜ಼ಾನರನ್ನು ಅಡಗಿಸಿ ಮಾಸ್ಕೊ ಮೇಲೆ ಆಗಬೇಕಿದ್ದ ಯುದ್ಧವನ್ನು ತಪ್ಪಿಸಿದ. ಆದರೆ ಆತನ ಸಲಹೆಗಾರರೆನಿಸಿದ ಬೊಯರ್‍ಗಳು ರಾಜಕೀಯದಲ್ಲಿ ಹೆಚ್ಚಿನ ಪಾತ್ರ ವಹಿಸತೊಡಗಿದರು. ಕೊನೆಗೊಮ್ಮೆ ಐವಾನನ ಖ್ಯಾತ ಸಲಹೆಗಾರ ಅಲೆಕ್ಸಿ ಬೊಯರುಗಳನ್ನು ಕಲೆ ಹಾಕಿ ಐವಾನನ ವಿರುದ್ಧ ಪಿತೂರಿ ನಡೆಸುತ್ತಿದ್ದುದು ತಿಳಿದುಬಂತು. ಅಲೆಕ್ಸಿ ಕೊಲೆಗೆ ಈಡಾದ. ಇದರಿಂದಾಗಿ ಅನೇಕ ಗಣ್ಯ ಬೊಯರುಗಳು ಮಾಸ್ಕೊವಿನಿಂದ ರೈಯೆಜ಼ಾನಿಗೆ ವಾಪಸಾದರು. ಈತ 1359ರಲ್ಲಿ ನಿಧನನಾದ.

**ಐವಾನ್ III: 1440–1505.** ಐವಾನ್ ವ್ಯಾಸಿಲಿಯೆವಿಚ್ ಮಾಸ್ಕೊದ ಪ್ರಸಿದ್ಧ ರಾಜ. ಮಹಾಶಯನೆಂದು ಈತ ಖ್ಯಾತಿ ಗಳಿಸಿದ್ದಾನೆ. ಇವನ ತಂದೆ ಎರಡನೆಯ ವ್ಯಾಸಿಲಿ. ಅವನ ಅನಂತರ ಈತ ಸಿಂಹಾಸನವನ್ನೇರಿದ (1462). ವ್ಯಾಸಿಲಿಯೆವಿಚ್ ಶತ್ರುರಾಜರನ್ನು ಸದೆಬಡಿದು ರಾಜ್ಯದ ಎಲ್ಲೆಯನ್ನು ವಿಸ್ತರಿಸಿದ. ಅವರೆಗೂ ಸ್ವತಂತ್ರ ರಾಜ್ಯವೆನಿಸಿದ್ದ ನೊಫ್‍ಗೊರೊಟನ್ನು 1478ರಲ್ಲಿ ಮುತ್ತಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡ. ಟಾಟರರಿಗೆ ಅಧೀನ ರಾಷ್ಟ್ರವಾಗಿ ಸ್ವಾಮಿನಿಷ್ಠೆ ತೋರುತ್ತಿದ್ದ ಮಾಸ್ಕೊ ಈತನ ಸಾಮರ್ಥ್ಯದ ಫಲವಾಗಿ ಸ್ವಾತಂತ್ರ್ಯ ಪಡೆಯುವ ಯೋಗ್ಯತೆ ಸಂಪಾದಿಸಿತು. 1503ರಲ್ಲಿ ಈತ ನಡೆಸಿದ ಶಾಂತಿ ಸಂಧಾನದ ಪರಿಣಾಮವಾಗಿ ಲಿಥೋನಿಯನರ ಎರಡು ದಂಗೆಗಳು ಅಡಗಿದುವು. ಈತ ತನ್ನ ರಾಜ್ಯಾಡಳಿತವನ್ನು ವೈಟ್ ರಷ್ಯ ಮತ್ತು ಲಿಟಲ್ ರಷ್ಯಕ್ಕೂ ವಿಸ್ತರಿಸಿದ. ಬಿಜ಼ಾನ್‍ಟಿಯಂನ ಕೊನೆಯ ಚಕ್ರವರ್ತಿಯ ಸೋದರಸೊಸೆ ಸೋಫಿಯಳನ್ನು ಮದುವೆಯಾಗಿ ಬಿಜ಼ಾನ್‍ಟಿಯಂನ ರಾಜಗಾಂಭೀರ್ಯ ಹಾಗೂ ಶ್ರೀಮಂತಿಕೆಯ ವೈಭವವನ್ನು ರಷ್ಯದಲ್ಲೂ ಮೆರೆದು ಜ಼ಾರ್ ಬಿರುದು ಪಡೆದ. ಕೈಗಾರಿಕೆ ಮತ್ತು ವಿದೇಶ ವ್ಯಾಪಾರಗಳಿಗೆ ಆದ್ಯತೆ ನೀಡಿದ್ದೂ ರಾಜ್ಯದ ನ್ಯಾಯ ವ್ಯವಸ್ಥೆಯಲ್ಲಿನ ದೋಷಗಳನ್ನು ಕ್ರಮಪಡಿಸಿದ್ದೂ ಈತನ ಇತರ ಸಾಧನೆಗಳು. ಸಾಯುವ ಮುನ್ನ ಈತ ಇಡೀ ರಷ್ಯದ ರಾಜ್ಯವನ್ನು ವಿಸ್ತರಿಸಿ ಒಟ್ಟುಗೂಡಿಸಿ ಬಲಪಡಿಸಿದ.

**ಐವಾನ್ IV:** ಭೀಕರ ಐವಾನ್ ಎಂಬ ಕುಖ್ಯಾತಿ ಗಳಿಸಿ, 1547–84ರ ವರೆಗೆ ಆಳಿದ ರಷ್ಯನ್ ಚಕ್ರವರ್ತಿ. ತಂದೆಯ ಮರಣಾನಂತರ ಪಟ್ಟಕ್ಕೆ ಬಂದಾಗ (1533) ಅವನಿಗಿನ್ನೂ ಮೂರು ವರ್ಷ. ಹದಿನಾಲ್ಕು ವಯಸ್ಸಿನವನಾಗಿದ್ದಾಗಲೇ ಅಧಿಕಾರಸೂತ್ರಗಳನ್ನು ತನ್ನ ಕೈಗೆ ತೆಗೆದುಕೊಂಡ. ಮೂರು ವರ್ಷಗಳ ತರುವಾಯ, ತನ್ನ ಅಧಿಕಾರ ಮಾಸ್ಕೊ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳಿಗೆ ಸೀಮಿತವಾಗಿದ್ದರೂ, ತಾನು ಮಾಸ್ಕೊ ಮತ್ತು ಸಮಗ್ರ ರಷ್ಯದ ಸಾಮ್ರಾಟನೆಂದು ಘೋಷಿಸಿಕೊಂಡ. ಮುಂದೆ 1560ರ ವರೆಗೆ ಕೆಲವು ಸಮರ್ಥ ಸಲಹೆಗಾರರ ನೆರವಿನಿಂದ ರಾಜ್ಯವಾಳಿದ. ಸಾಮಾನ್ಯ ಜನತೆಯಲ್ಲಿ ಪ್ರೀತಿವಿಶ್ವಾಸಗಳನ್ನಿಟ್ಟು ಶ್ರೀಮಂತರ ದರ್ಪವನ್ನೂ ನಿರಂಕುಶ ಪ್ರವೃತ್ತಿಯನ್ನೂ ಅಡಗಿಸಲೆತ್ನಿಸಿದ. ಸ್ಥಳೀಯ ಪ್ರಜಾಧಿಕಾರ ವ್ಯವಸ್ಥೆಯನ್ನು ರಾಜ್ಯದ ನಾನಾಕಡೆ ಜಾರಿಗೆ ತಂದ. ಸಮಗ್ರ ರಷ್ಯದ ಸಾಮ್ರಾಟನೆಂದು ತಾನು ಧರಿಸಿದ ಬಿರುದನ್ನು ಸಮರ್ಥಿಸಿಕೊಳ್ಳಲೆಂಬಂತೆ ಪೂರ್ವದ ಕಸಾನ್ ಮತ್ತು ಆಸ್ಟ್ರಖಾನ್ ಪ್ರಾಂತ್ಯಗಳನ್ನು ವಶಪಡಿಸಿಕೊಂಡ. ಸೈಬೀರಿಯದಲ್ಲಿನ ಅನೇಕ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡ. ಸೈಬೀರಿಯದಲ್ಲಿನ ಅನೇಕ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ಇವನಿಂದ ನಿಯುಕ್ತನಾಗಿದ್ದವನು ಯರ್ಮಾರ್ಕ್. ಪಶ್ಚಿಮದಲ್ಲಿ ಪೋಲೆಂಡ್ ಮತ್ತು ಸ್ವೀಡನ್‍ಗಳ ಮೇಲೆ ನಡೆಸಿದ ಯುದ್ಧಗಳಲ್ಲಿ ಐವಾನ್ ಪರಾಜಯ ಹೊಂದಿದ. ಹೀಗೆ ರಷ್ಯದ ರಾಜ್ಯವಿಸ್ತರಣ ಪೂರ್ವದಲ್ಲೇ ಹೊರತು ಪಶ್ಚಿಮಕ್ಕಲ್ಲ ಎಂಬುದು ಖಚಿತವಾಯಿತು. ಇಂಗ್ಲೆಂಡಿನೊಂದಿಗೆ ಈತ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದ.

1560ರ ವರೆಗೆ ಇವನ ಆಳ್ವಿಕೆ ಪ್ರಗತಿಮಾರ್ಗದಲ್ಲೇ ಸಾಗಿತು. ಆ ವರ್ಷ ಇವನ ಹೆಂಡತಿ ಕಾಲವಾದಳು. ಇವನೂ ಸ್ವಲ್ಪಕಾಲ ಕಾಯಿಲೆಯಿಂದ ನರಳಿದ. ಸ್ವಭಾವತಃ ಒರಟನೂ ನಿಷ್ಠುರನೂ ಆಗಿದ್ದ ಐವಾನ್ ಕ್ರಮೇಣ ಪ್ರಜಾಪೀಡನೂ ಆದ. ಬಲಿಷ್ಠಸಾಮಂತರು ತನಗೆ ವಿರೋಧವಾಗಿ ಒಳಸಂಚು ನಡೆಸುತ್ತಿರುವರೆಂಬ ಕಲ್ಪನೆಯನ್ನು ಬೆಳೆಸಿಕೊಂಡು, ಅವರ ಪ್ರಾಬಲ್ಯ ಮುರಿಯುವುದಕ್ಕೆಂದು ನೇರವಾಗಿ ತನ್ನ ಅಧೀನಕ್ಕೊಳಪಟ್ಟ ಸೈನ್ಯವೊಂದನ್ನು ನಿರ್ಮಿಸಿದ. ಅನೇಕ ಸಾಮಂತರೂ ಶ್ರೀಮಂತರೂ ಮರಣದಂಡನೆಗೊಳಗಾದರು; ಕೆಲವರನ್ನು ಸೈಬೀರಿಯಕ್ಕೆ ಗಡಿಪಾರು ಮಾಡಲಾಯಿತು. ಪಿತೂರಿ ನಡೆಯುತ್ತಿದೆಯೆಂಬ ಸಂದೇಹದಿಂದ 1580ರಲ್ಲಿ ನೊಫ್‍ಗೊರೊಟ್ ನಗರವನ್ನೇ ಹಾಳುಗೆಡವಿದ. ಅದೇ ರೋಷಾವೇಶದಿಂದ ಅಮಾನುಷ ಪ್ರಜಾಪೀಡನೆ; ಆವೇಶ ಇಳಿದಾಗ, ಅಷ್ಟೇ ಉದ್ವೇಗದ ಪಶ್ಚಾತ್ತಾಪ, ಕೊರಗು, ದೇವರಲ್ಲಿ ಕ್ಷಮಾಯಾಚನೆ–ಇದು ಈತನ ಬಾಳಾಯಿತು. ಆದರೂ ಇವನ ಕಾಲದಲ್ಲಿ ಸಣ್ಣದಾಗಿದ್ದ ಮಾಸ್ಕೊ ರಾಜ್ಯ ವಿಸ್ತರಿಸಿ ರಷ್ಯನ್ ಸಾಮ್ರಾಜ್ಯವಾಯಿತು. (ವಿ.ಪಿ.ಎಸ್.; ಎ.ಎಂ.)

**ಐವಾನ್ V: 1666–96.** ಐವಾನ್ ಅಲೆಕ್ಸೆವಿಚ್ ರಷ್ಯದ ಜ಼ಾರ್ ದೊರೆ. ಈತ ದೊರೆ ಆಲೆಕ್ಸಿಯ ಮೊದಲ ಹೆಂಡತಿಯ ಕಿರಿಮಗ. ಈತ ನಿರಂತರ ರೋಗಿ. ದೇಹದಾರ್ಢ್ಯವಿಲ್ಲದ ಬುದ್ಧಿಹೀನ; ರಕ್ತರೋಗಪೀಡಿತ; ಜೊತೆಗೆ ಇವನಿಗೆ ದೃಷ್ಟಿ ಮಾಂದ್ಯ ಬೇರೆ. ಈತ ತನ್ನ ಕೊನೆಯ ದಿನಗಳಲ್ಲಿ ಪಾರ್ಶ್ವವಾಯು ಪೀಡಿತನಾಗಿ ನರಳಿದ. ರಾಜ್ಯದ ಯಾವ ಕಾರ್ಯಭಾರದಲ್ಲೂ ಈತ ಭಾಗವಹಿಸಲಿಲ್ಲ. ದುರಾಶಾಪೀಡಿತೆ ಕುಟಿಲೆ ಅಕ್ಕ ಸೋಫಿಯಳ ಕೈಗೊಂಬೆಯಾಗಿಯೇ ಈತ ಆಯುಷ್ಯವನ್ನೆಲ್ಲ ಕಳೆದ.

**ಐವಾನ್ IV:1740–64.** ರಷ್ಯದ ಚಕ್ರವರ್ತಿ. ಐವಾನ್ ಆಂಟೊನೊವಿಚ್. ತಂದೆ ಬರ್ನ್ಸ್‌ವಿಕ್‍ನ ಆಂಟೊನ್ ಉಲ್ರಿಚ್. ರಷ್ಯದ ಚಕ್ರವರ್ತಿನಿ ಅನ್ನಾ ಐವಾನೊನಾ ಈ ಮಗುವನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಿಸಿದ ಮಾರನೆಯ ದಿನವೇ ಮೃತಳಾದಳು. ಈ ಮಗುವನ್ನು ಚಕ್ರವರ್ತಿಯೆಂದು ಘೋಷಿಸಿ, ಚಕ್ರವರ್ತಿಯ ರೀಜಂಟಾಗಿ ಮೂರು ವಾರಗಳ ಕಾಲ ರಾಜ್ಯಭಾರ ಮಾಡಿದವನು ಕಾರ್ಲೆಂಡಿನ ಡ್ಯೂಕ್. ಅನಂತರ ದೇಶದಲ್ಲಿ ಕ್ಷಿಪ್ರಕ್ರಾಂತಿ ನಡೆದು ಜಾರೆನ್ನಾ ಎಲಿಜ಼ಬೆತಳನ್ನು ಸಿಂಹಾಸನದಲ್ಲಿ ಕೂರಿಸಿ ಐವಾನ್ ಮತ್ತು ಆತನ ಸಂಬಂಧಿಕರನ್ನು ಸೆರೆಯಲ್ಲಿಡಲಾಯಿತು. 20 ವರ್ಷಗಳ ಕಾಲ ಜೈಲಿನಲ್ಲಿ ಯಾರಿಗೂ ತನ್ನ ಗುರುತು ಸಿಗದಂತೆ ಬಾಳಿದ ಐವಾನ್ ಅರೆಹುಚ್ಚನಾದ. ಕೊನೆಗೆ ಐವಾನನ್ನು ಗುರುತು ಹಚ್ಚಿ ಬಿಡುಗಡೆಗೆ ಪ್ರಯತ್ನ ನಡೆಯುತ್ತಿದ್ದಾಗ ಜೈಲಿನ ಅಧಿಕಾರಿಗಳೇ ಐವಾನನನ್ನು ಕೊಲೆ ಮಾಡಿದರು. *

**ಐವಿ:** ಈ ಹೆಸರಿನ ಅನೇಕ ಜಾತಿಯ ಗಿಡಗಳಿವೆ. ಇವುಗಳಲ್ಲಿ ಮುಖ್ಯವಾದುವು ಎರಡು. ಅವು ಇಂಗ್ಲಿಷ್ ಅಥವಾ ಯುರೋಪಿಯನ್ ಐವಿ ಮತ್ತು ವಿಷ ಐವಿ.

ಇಂಗ್ಲಿಷ್ ಐವಿ ಎಂಬುದು ಲಹೆಡೆರ ಹೆಲಿಕ್ಸ್ ಎಂಬ ಶಾಸ್ತ್ರೀಯ ಹೆಸರುಳ್ಳ ಏರಾಲಿಯೇಸಿ ಕುಟುಂಬಕ್ಕೆ ಸೇರಿದ ಬಳ್ಳಿ. ಇದೇ ಹೆಡೆರ ಜಾತಿಗೆ ಸೇರಿದ ಇನ್ನೂ ಹಲವಾರು ಪ್ರಭೇದಗಳೂ ಇವೆ. ಅಲ್ಲದೆ ಹೆಡರ ಹೆಲಿಕ್ಸ್ ಪ್ರಭೇದದಲ್ಲಿಯೇ ಅನೇಕ ವಿಧಗಳೂ ಇವೆ. ಇದು ಸಾಮಾನ್ಯವಾಗಿ ಯುರೋಪ್, ಉತ್ತರ ಆಫ್ರಿಕ, ರಷ್ಯ, ಜಪಾನ್ ಮತ್ತು ಅಮೆರಿಕಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಅಲ್ಲದೆ ಇದನ್ನು ತೋಟಗಳಲ್ಲಿ, ಉದ್ಯಾನಗಳಲ್ಲಿ ಅಂದಕ್ಕಾಗಿ ಬೆಳೆಸುತ್ತಾರೆ. ನಮ್ಮ ದೇಶದಲ್ಲಿ ಹಿಮಾಲಯದಲ್ಲಿ ಹಾಗೂ ಅಸ್ಸಾಂಗಳಲ್ಲಿ ಬೆಳೆಯುತ್ತದೆ.

ಸುಂದರವಾದ, ಯಾವಾಗಲೂ ಹಸಿರಾದ ವಿವಿಧ ಆಕಾರಗಳ ಎಲೆಗಳುಳ್ಳ ಬಳ್ಳಿ ಇದು. ಬೇರೆ ಗಿಡಮರಗಳು, ಕಲ್ಲುಬಂಡೆಗಳು, ಗೋಡೆಗಳು ಇತ್ಯಾದಿ ಆಸರೆಗಳನ್ನು ತನ್ನ ಅಡರು ಬೇರುಗಳ ಸಹಾಯದಿಂದ ಹತ್ತಿಕೊಂಡು ಬೆಳೆಯುತ್ತದೆ. ತನ್ನ ಬೆಳೆವಣಿಗೆಯಲ್ಲಿ ಎರಡು ಅವಸ್ಥೆಗಳನ್ನು ತೋರಿಸುತ್ತದೆ. ಬೆಳವಣಿಗೆಯ ಪ್ರಥಮ ಹಂತದಲ್ಲಿ ಆಸರೆಯನ್ನು ಹಬ್ಬಿಕೊಂಡು ಮೇಲ್ಮುಖವಾಗಿ ಬೆಳೆಯುತ್ತದೆ. ಆಗ ಬಿಡುವ ಎಲೆಗಳಲ್ಲಿ 3–5 ಪತ್ರಪಾಲಿಗಳು (ಲೋಬ್ಸ್) ಇರುತ್ತವೆ. ಇದೇ ಹಂತದಲ್ಲಿ ವಿಪುಲವಾಗಿ ಅಡರು ಬೇರುಗಳು ಹೊರಟು ಗಿಡ ಆಸರೆಯನ್ನು ಹತ್ತಲು ಸಹಾಯಕವಾಗುತ್ತವೆ. ಬಳ್ಳಿ ಆಶ್ರಯದ ಮೇಲ್ತುದಿಯನ್ನು ತಲಪಿದ ಮೇಲೆ ಬೆಳೆವಣಿಗೆಯ ಎರಡನೆಯ ಅವಸ್ಥೆ ಕಾಣಬರುತ್ತದೆ. ಆಗ ಹೊರಡುವ ಕವಲುಗಳು ನೇರವಾಗಿ ಮೇಲಕ್ಕೆ ಬೆಳೆಯದೆ ಅಡ್ಡವಾಗಿ ಬೆಳೆಯತೊಡಗುತ್ತವೆ. ಎಲೆಗಳು ಕಿರಿದು; ಪತ್ರಪಾಲಿಗಳಿರುವುದಿಲ್ಲ. ಇದೇ ಅವಸ್ಥೆಯಲ್ಲಿಯೇ ಗಿಡ ಹೂ ಬಿಡಲು ಪ್ರಾರಂಭಿಸುತ್ತದೆ. ಹೂಗಳ ಬಣ್ಣ ಕೊಂಚ ಹಸಿರು. ಅವು ಅಂಬೆಲ್ ರೀತಿಯ ಹೂಗೊಂಚಲುಗಳಲ್ಲಿ ಇರುತ್ತವೆ. ಹಣ್ಣಿನ ಬಣ್ಣ ಕಪ್ಪು, ಹಳದಿ ಅಥವಾ ಕೆಂಪು.

ಕೊಂಚ ಹಸಿರು. ಅವು ಅಂಬೆಲ್ ರೀತಿಯ ಹೂಗೊಂಚಲುಗಳಲ್ಲಿ ಇರುತ್ತವೆ. ಹಣ್ಣಿನ ಬಣ್ಣ ಕಪ್ಪು, ಹಳದಿ ಅಥವಾ ಕೆಂಪು.

ಐವಿ ಎಂಥ ಭೂಮಿಯಲ್ಲಾದರೂ ಬೆಳೆಯುತ್ತದೆ. ಅಲ್ಲದೆ ಇದಕ್ಕೆ ಬೆಳಕಿನ ಆವಶ್ಯಕತೆ ಹೆಚ್ಚಾಗಿಲ್ಲ. ಇದರ ಸುಂದರವಾದ ಎಲೆಗಳಿಗೋಸ್ಕರ ತೋಟಗಳಲ್ಲಿ, ಉದ್ಯಾನಗಳಲ್ಲಿ ತುಂಡುಗಳ ಮುಖಾಂತರ ಅಥವಾ ಬೀಜಗಳ ಮುಖಾಂತರ ಬೆಳೆಸುತ್ತಾರೆ.

ಒಂದು ಕಾಲದಲ್ಲಿ ಇದರ ಎಲೆ ಮತ್ತು ಕಾಯಿಗಳನ್ನು ಹಲವು ರೋಗಗಳ ನಿವಾರಣೆಗೆ ಬಹಳವಾಗಿ ಬಳಸುತ್ತಿದ್ದರು. ಆದರೆ ಈಚೆಗೆ ಇದರ ಬಳಕೆ ಕಡಿಮೆಯಾಗಿದೆ. ಎಲೆ ಮತ್ತು ಕಾಯಿಗಳ ಉತ್ತೇಜಕ, ಸ್ವೇದಕಾರಿ ಮತ್ತು ವಿರೇಚಕಗಳೆಂದು ಹೇಳುತ್ತಾರೆ. ಎಲೆ, ಬೀಜ ಮತ್ತು ಕಾಯಿಗಳಲ್ಲಿ ಆಲ್ಫ–ಹೆಡರಿನ್ ಎಂಬ ವಿಶೇಷ ವಸ್ತುವಿದೆ. ಇದರ ಸೇವನೆ ದೇಹದ ಮೇಲೆ ತೀವ್ರ ಪರಿಣಾಮಗಳನ್ನು ಉಂಟುಮಾಡುತ್ತದೆ. ಅನ್ನನಾಳವನ್ನು ಉದ್ರೇಕಗೊಳಿಸುವುದಲ್ಲದೆ, ರಕ್ತನಾಳಗಳನ್ನು ಸಂಕುಚಿತಗೊಳಿಸುತ್ತದೆ. ರಕ್ತದ ಒತ್ತಡ ಮತ್ತು ಹೃದಯದ ಬಡಿತದ ಗತಿಯನ್ನು ಕ್ಷೀಣಗೊಳಿಸುವುದರ ಮೂಲಕ ಉಸಿರಾಟಕ್ಕೆ ತೊಂದರೆಯನ್ನು ಉಂಟುಮಾಡಿ ಸಾವನ್ನು ತರಬಲ್ಲುದು. ಅಲ್ಲದೆ ಎಲೆಗಳನ್ನು ತಿಂದರೆ ಚರ್ಮದ ಊತವೂ ಬರಬಹುದೆನ್ನುತ್ತಾರೆ. ಆದರೂ ಇದರ ಎಲೆಗಳ ಕಷಾಯವನ್ನು ಹೇನುಗಳನ್ನು ನಿವಾರಿಸಲು ಕೂದಲಿಗೆ ಹಚ್ಚುತ್ತಾರೆ; ಕಾಯಿಗಳಿಂದ ತಯಾರಿಸಿದ ಕಷಾಯವನ್ನು ಸಂಧಿವಾತರೋಗದ ನಿವಾರಣೆಯಲ್ಲಿ ಉಪಯೋಗಿಸುತ್ತಾರೆ.

ಇನ್ನೊಂದು ಬಗೆಯ ಐವಿ ಗಿಡವಾದ ವಿಷ ಐವಿಯೆಂಬುದು ಅನಕಾರ್ಡಿಯೇಸಿ ಕುಟುಂಬಕ್ಕೆ ಸೇರಿದ ರ್ಹುಸ್ ಟಾಕ್ಸಿಕೊಡೆಂಡ್ರಾನ್ ಅಥವಾ ಟಾಕ್ಸಿಕೊಂಡೆಡ್ರಾನ್ ರಾಡಿಕನ್ಸ್ ಎನ್ನುವ ಪ್ರಭೇದ. ಮೂಲತಃ ಉತ್ತರ ಅಮೆರಿಕದ ನಿವಾಸಿಯಾದ ಇದೂ ಕೂಡ ಇಂಗ್ಲಿಷ್ ಐವಿಯಂತೆ ಬಳ್ಳಿ. ಇದರಲ್ಲಿಯೂ ಹಲವಾರು ಬಗೆಗಳಿದ್ದು ಕೆಲವು ಬಳ್ಳಿಯಂತೆಯೂ ಕೆಲವು ಸಣ್ಣ ಮರಗಳಾಗಿಯೂ ಬೆಳೆಯುತ್ತವೆ. ಸಾಮಾನ್ಯವಾಗಿ ಬಳ್ಳಿಯಂತೆ ಬೆಳೆಯುವ ಈ ಗಿಡದಲ್ಲಿಯೂ ಅಡರು ಬೇರುಗಳಿದ್ದು ಗಿಡ ಆಶ್ರಯವನ್ನು ಹತ್ತಿ ಬೆಳೆಯಲು ಸಹಾಯ ಮಾಡುತ್ತವೆ. ಇದರ ಎಲೆಗಳು ಸಂಯುಕ್ತ ಎಲೆಗಳಾಗಿದ್ದು ಒಂದೊಂದರಲ್ಲೂ ಮೂರು ಉಪಪತ್ರಗಳಿರುತ್ತವೆ. ಇದರ ಹೂಗಳೂ ಹಸಿರು. ಕಾಯಿಗಳ ಬಣ್ಣ ಮಾತ್ರ ಬಿಳಿ.

ಇದರ ಎಲ್ಲ ಪ್ರಭೇದಗಳೂ ವಿಷಪೂರಿತ. ಗಿಡವನ್ನಾಗಲಿ, ಎಲೆಗಳನ್ನಾಗಲಿ ಮುಟ್ಟಿದರೆ ತೀವ್ರವಾದ ಚರ್ಮದ ಊತ ಉಂಟಾಗುತ್ತದೆ. ಎಲೆ, ಹೂ, ಹಣ್ಣು, ತೊಗಟೆ ಮತ್ತು ಬೇರುಗಳಲ್ಲಿ ಅಂಟಿನಂಥ ಯೂರೊಷಿಯೊಲ್ ಎಂಬ ದ್ರವವಿರುತ್ತದೆ. ಚರ್ಮದ ಊತಕ್ಕೆ ಇದೇ ಪ್ರಮುಖ ಕಾರಣವೆಂದು ಕಂಡುಬಂದಿದೆ. ಈ ವಸ್ತು ಬೇಗ ಒಣಗದೆ ಇರುವುದರಿಂದ ಇದರ ಮಾರಕಗುಣ ವರ್ಷಾನುಗಟ್ಟಲೆ ಕಡಿಮೆಯಾಗದಂತೆ ಇರುತ್ತದೆ. ಅಲ್ಲದೆ ಈ ವಸ್ತು ಬಟ್ಟೆ, ಪಾದರಕ್ಷೆ, ಉಪಕರಣಗಳಿಗೆ ಅಂಟಿಕೊಂಡಿದ್ದರೆ, ಅವುಗಳ ಸಂಪರ್ಕಕ್ಕೆ ಬಂದ ಯಾರಲ್ಲಾದರೂ ಚರ್ಮದ ಊತವನ್ನುಂಟುಮಾಡಬಹುದು. (ಕೆ.ಬಿ.ಎಸ್.)

**ಐಶ್ವರ್ಯ:** ಈಶ್ವರಧರ್ಮ ಪ್ರಭುತ್ವ ಹಾಗೂ ಅತಿಮಾನುಷ ಶಕ್ತಿ ಸಂಪತ್ತುಗಳು. ಅಣಿಮಾ, ಲಘಿಮಾ, ಮಹಿಮಾ, ಪ್ರಾಪ್ತಿ, ಪ್ರಾಕಾಮ್ಯ, ವಶಿತ್ವ, ಈಶಿತ್ವ, ಕಾಮಾವಸಾಯಿತ್ವ ಎಂದು ಎಂಟು ಬಗೆಗಳಿವೆ; ಇವನ್ನು ಅಷ್ಟಸಿದ್ಧಿಗಳೆಂದು ಕರೆದಿದ್ದಾರೆ. ಅಂದರೆ ಅಣುವಿನಷ್ಟು ಸಣ್ಣದಾಗುವ ಶಕ್ತಿಯಿಂದ ಹಿಡಿದು ಇಚ್ಛೆಗಳೇ ಇಲ್ಲದ ಸ್ಥಿತಿಯನ್ನುಂಟುಮಾಡಿಕೊಳ್ಳುವವರೆಗೂ ಬೇಕಾಗಿರುವ ವಿವಿಧ ಶಕ್ತಿಗಳು; ಮಧ್ಯದಲ್ಲಿ ಕ್ರಮವಾಗಿ ಅತಿಲಘುವಾಗುವಿಕೆ, ಪರಿಮಾಣವನ್ನು ಹೆಚ್ಚಿಸಿಕೊಳ್ಳುವಿಕೆ. ಸರ್ವಾಭೀಷ್ಟಗಳ ಈಡೇರಿಕೆ, ಮನಸ್ಸಿನ ಸ್ವಾತಂತ್ರ್ಯ ಎಲ್ಲವನ್ನೂ ತನ್ನ ಇಚ್ಛೆಗೆ ಅಧೀನಪಡಿಸಿಕೊಳ್ಳುವುದು, ಪ್ರಭುತ್ವ–ಇವು ಸೇರಿವೆ. ಅಣಿಮಾದಿ ಶಕ್ತಿಗಳನ್ನು ಕೊಡುವ ಬುದ್ಧಿಧರ್ಮವೆಂದು ಕೆಲವರ ಅಭಿಪ್ರಾಯ (**ನೋಡಿ– ಅಷ್ಟಸಿದ್ಧಿಗಳು**). (ಬಿ.ಕೆ.ಎನ್.)

**ಐಸನ್‌ಷ್ಟೇನ್, ಸಿರ್ಗೇ ಮಿಕೈಲೊವಿಚ್:** 1808–1948. ರಷ್ಯದ ಪ್ರಖ್ಯಾತ ಚಲನಚಿತ್ರ ತಂತ್ರನಿಪುಣ. ತಂದೆ ಶ್ರೀಮಂತ; ಹಡಗು ನಿರ್ಮಾಪಕ. ಐಸನ್‌ಷ್ಟೇನ್ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಎಂಜಿನಿಯರಿಂಗ್ ಶಿಕ್ಷಣ ಪಡೆಯುತ್ತಿದ್ದಾಗ ತನ್ನ ಸ್ನೇಹಿತರನೇಕರು ಕೆಂಪು ಸೇನೆಗೆ ಸೇರುತ್ತಿದ್ದುದನ್ನು ಕಂಡು ತಾನೂ ಅದಕ್ಕೆ ಸೇರಿ ಕ್ರಾಂತಿಯಲ್ಲಿ ಭಾಗವಹಿಸಿದ. ಕ್ರಾಂತಿ ಮುಗಿದಮೇಲೆ ಈತನ ಒಲವು ನಾಟಕ ಕಲೆಯತ್ತ ಹರಿಯಿತು. ಆಗ (1920) ಈತ ಅದರಲ್ಲಿ ದೃಶ್ಯಚಿತ್ರಕಾರನಾಗಿ ಸೇರಿ ಕೆಲಕಾಲ ಕೆಲಸ ಮಾಡಿದ. ಟ್ರೆಟ್ಯಕೋಫ್ ವಿರಚಿತ ಗ್ಯಾಸ್ ಮಾಸ್ಕ್ ನಾಟಕವನ್ನು ರಂಗಭೂಮಿಯ ಮೇಲೆ ತಂದಾಗ ಈತನಿಗೆ ಆ ಕ್ಷೇತ್ರದ ಇತಿಮಿತಿಗಳು ಗೋಚರವಾದುವು.

ಐಸನ್‌ಷ್ಟೇನ್ ಚಲನಚಿತ್ರ ಜಗತ್ತನ್ನು ಪ್ರವೇಶಿಸಿ ಸ್ಟ್ರೈಕ್ ಚಿತ್ರ ದಿಗ್ದರ್ಶಿಸಿದ. 1905ರಲ್ಲಿ ನಡೆದ ದಂಗೆಯೊಂದರ ಆಧಾರದ ಮೇಲೆ ರಚಿತವಾದ ಬ್ಯಾಟಲ್‌ಷಿಪ್ ಪೊಟೆಮ್‌ಕಿನ್ ಚಿತ್ರ ಹೊರತಂದಾಗ ಈತನಿಗೆ 26 ವರ್ಷ. ಜೀವನದ ವಾಸ್ತವ ಚಿತ್ರಣವೆಂದು ಇದು ವಿಶ್ವವಿಖ್ಯಾತಿ ಪಡೆಯಿತು. ಅನಂತರ ಬಂದ ಡೆನ್ ಡೇಸ್ ದಟ್ ಷುಕ್ ದಿ ವರ್ಲ್ಡ್ ಮತ್ತು ದಿ ಓಲ್ಡ್ ಅಂಡ್ ದಿ ನ್ಯೂ ಚಿತ್ರಗಳೂ ಅವನ ಗೌರವ ಹೆಚ್ಚಿಸಿದುವು. ಅಮೆರಿಕದ ಪ್ಯಾರಾಮೌಂಟ್ ಸಂಸ್ಥೆಯ ಆಹ್ವಾನದ ಮೇಲೆ ಹಾಲಿವುಡ್ಡಿಗೆ ಬಂದ. ಅಲ್ಲಿ ಈತ ಸೃಷ್ಟಿಸಿದ ಚಿತ್ರಗಳಿಗೆ ಅಮೆರಿಕದಲ್ಲಿ ಮನ್ನಣೆ ದೊರಕಲಿಲ್ಲ. ಮೆಕ್ಸಿಕೋವಿನಲ್ಲಿ 14 ತಿಂಗಳು ಕಳೆದ ಅನಂತರ ಐಸನ್‌ಷ್ಟೇನ್ ಸೋವಿಯತ್ ಸರ್ಕಾರದ ಆದೇಶದ ಮೇಲೆ ರಷ್ಯಕ್ಕೆ ವಾಪಸ್ಸಾದ. ಅಲ್ಲಿ ಇವನು ದಿಗ್ದರ್ಶಿಸಿದ್ದ ಅಲೆಕ್ಸಾಂಡರ್ ನೆವೆಸ್ಕಿ (1938) ಚಿತ್ರಕ್ಕೆ ಲೆನಿನ್ ಪ್ರಶಸ್ತಿ ದೊರಕಿತು. 16ನೆಯ ಶತಮಾನದಲ್ಲಿದ್ದ ರಷ್ಯದ ಚಕ್ರವರ್ತಿಯಾಗಿದ್ದ ನಾಲ್ಕನೆಯ ಝಾರನ ಜೀವನ ಕಥೆಯೇ ಇವನ ಮುಂದಿನ ಚಿತ್ರವಾದ ಐವಾನ್ ದಿ ಟೆರಿಬಲ್‌ನ ವಸ್ತು. ಮೂರು ಭಾಗಗಳಲ್ಲಿ ಹಬ್ಬಿದ ಈ ಚಿತ್ರ ಸೋವಿಯತ್ ಕಮ್ಯೂನಿಸಂ ತತ್ತ್ವಕ್ಕೆ ವಿರುದ್ಧವಾದದ್ದೆಂದು ಅಲ್ಲಿನ ಸರ್ಕಾರ ಇದರ 2ನೆಯ ಭಾಗದ ಮೇಲೆ ಹಾಕಿದ ನಿಷೇಧ 1938ರ ವರೆಗೂ ಮುಂದುವರಿಯಿತು.

ಐಸನ್‌ಷ್ಟೇನ್ 1948ರಲ್ಲಿ ಮಾಸ್ಕೋವಿನಲ್ಲಿ ನಿಧನನಾದ.

ಕ್ಲಿಷ್ಟವೂ ಸಂಕೀರ್ಣವೂ ಆದ ಜೀವನ ವ್ಯಾಪಾರಗಳನ್ನು ವಾಸ್ತವತೆಯ ಕಣ್ಣಿಂದ ಕಂಡು ಅವುಗಳನ್ನು ನಿರೂಪಿಸಲು ಪ್ರತಿಮಾ ವಿಧಾನವನ್ನಳವಡಿಸಿದ ಪ್ರಪ್ರಥಮನೆಂದು ಐಸೆನ್‌ಷ್ಟೇನ್ ಖ್ಯಾತನಾಗಿದ್ದಾನೆ. *

**ಐಸಾಕ್ರಟೀಸ್:** ಪ್ರ.ಶ.ಪೂ. 436–338. ಆಟಿಕ ದೇಶದ ವಾಗ್ಮಿ, ಗ್ರೀಸಿನ ಅಧೀನ ನಗರರಾಜ್ಯವೊಂದರ ಪೌರ ತಿಯೊಡೊರಸನ ಮಗ. ಜನನ ಅಥೆನ್ಸ್‌ನಲ್ಲಿ. ಪ್ರಾಡಿಗಸ್, ಸಾಕ್ರಟೀಸರೊಂದಿಗೂ ಅನಂತರ ಥೆಸಲಿಯಲ್ಲಿ ಗೋರ್ಜಿಯಸನೊಂದಿಗೂ ವಿದ್ಯಾಭ್ಯಾಸ ಮಾಡಿದ. ಪೆಲೊಪೊನೀಸಿಯನ್ ಯುದ್ಧದ ಪರಿಣಾಮವಾಗಿ ಬಡತನ ಬಂದಾಗ ನ್ಯಾಯಾಲಯದ ಬಳಿ ಕುಳಿತು ಅರ್ಜಿ ಬರೆದು ಹಣ ಗಳಿಸಿದ. ಕೊನೆಗೆ 393ರಲ್ಲಿ ಭಾಷಣ ವಿದ್ಯೆಯನ್ನು ಕಲಿಯಲು ಶಾಲೆಯೊಂದನ್ನು ತೆರೆದ. ಈತನ ಕ್ರಮ ಅಂದಿನ ಭಾಷಣತಂತ್ರವನ್ನು ಸಾಕಷ್ಟು ತಿದ್ದಿತು. ಸನ್ನಿವೇಶವನ್ನು ಕಲ್ಪಿಸಿಕೊಂಡು ಅದಕ್ಕೆ ಹೊಂದುವಂಥ ಭಾಷಣವನ್ನು ಬರೆದೋದಬೇಕೆಂದು ಇವನ ಅಭಿಪ್ರಾಯ. ಭಾಷಣದಲ್ಲಿ ವ್ಯಾಕರಣಶುದ್ಧವಾದ ಮತ್ತು ಖಚಿತಾರ್ಥವನ್ನುಳ್ಳ ಪದಗಳನ್ನೇ ಬಳಸಬೇಕು. ಅಲಂಕಾರಗಳು ಇರಬಾರದು. ಅದು ಚರಿತ್ರೆ ಮತ್ತು ತತ್ತ್ವಶಾಸ್ತ್ರದಿಂದ ವಿಪುಲ ಉದಾಹರಣೆಗಳನ್ನೊಳಗೊಂಡಿರಬೇಕು. ಇದೇ ಸರಿಯಾದ ಭಾಷಣ–ಎಂದು ಆತನ ಅಭಿಮತ. ಪೂರ್ಣವಿರಾಮವನ್ನು ಈತ ಯುಕ್ತವಾಗಿ ಬಳಸಿದ. ಸಿಸರೋನ ಮೂಲಕ ಉಳಿದು ಬಂದಿರುವ ಈತನ ಭಾಷಣಗಳು ಇಂದಿಗೂ ಕಲಾಮಯವಾಗಿವೆ. ಇವನದು ಸೋಫಿಸ್ಟ್ ತತ್ತ್ವಕ್ಕೆ ವಿರುದ್ಧವಾದುದು. ಇವನ ಶಾಲೆಯಲ್ಲಿ ಭಾಷಣ ಕಲೆಯೊಂದಿಗೆ ತತ್ತ್ವಶಾಸ್ತ್ರ ಬೋಧನೆಯೂ ನಡೆಯುತ್ತಿತ್ತಲ್ಲದೆ ಸಾಂಪ್ರದಾಯಿಕ ಶಿಸ್ತು ಮತ್ತು ನಡೆವಳಿಕೆಗೆ ಪ್ರಾಧಾನ್ಯವಿತ್ತು. ಈತ ಪ್ಲೇಟೊವನ್ನು ಸಾಮಾನ್ಯವಾಗಿ ಒಪ್ಪಿದ್ದನಾದರೂ ಆತನ ಆಧಾರರಹಿತ ಊಹೆಗಳನ್ನೂ ಭೌತಾತೀತ ನೀತಿತತ್ತ್ವಗಳನ್ನೂ ಖಂಡಿಸುತ್ತಿದ್ದ.

ಇವನ ಕಾಲದಲ್ಲಿ ಗ್ರೀಸಿನ ನಗರರಾಜ್ಯಗಳಲ್ಲಿ ಒಗ್ಗಟ್ಟಿಲ್ಲದೆ ಅಂತಃಕಲಹಗಳಾಗುತ್ತಿದ್ದುವು. ಪರ್ಷಿಯನರು ಗ್ರೀಸಿನ ಮೇಲೆ ದಾಳಿ ನಡೆಸಲಾರಂಭಿಸಿದ್ದರು. ಆಗ ಈತ ಗ್ರೀಸಿನ ಸಂಘಟನೆಗಾಗಿ ಅನೇಕ ಭಾಷಣಗಳನ್ನು ಕೊಟ್ಟ. ಅವು ಉದ್ರೇಕಪೂರ್ಣವಾಗಿದ್ದಂತೆ ವಿದ್ವತ್ಪೂರ್ಣವೂ ಆಗಿದ್ದುವು. ತನ್ನ ವಾಕ್ಚಾತುರ್ಯದಿಂದ ಗ್ರೀಕರನ್ನು ಒಗ್ಗಟ್ಟಾಗಲು ಹೀಗೆ ಈತ ಹುರಿದುಂಬಿಸಿದ. ಪ್ಯಾನೆಗಿರಿಕಸ್ (380) ಎಂಬ ತನ್ನ ಭಾಷಣದಲ್ಲಿ ಪರ್ಷಿಯನರನ್ನು ಎದುರಿಸಲು ಸ್ಪಾರ್ಟ ಮತ್ತು ಅಥೆನ್ಸ್ ಒಟ್ಟುಗೂಡುವ ರಾಷ್ಟ್ರೀಯ ದೃಷ್ಟಿಯನ್ನು ಸೊಗಸಾಗಿ ವರ್ಣಿಸಿದ್ದಾನೆ. ಫಿಲಿಪ್ಪಸ್ ಲೇಖನದಲ್ಲಿ ಪರ್ಷಿಯನರ ವಿರುದ್ಧ ಯುದ್ಧದಲ್ಲಿ ಗ್ರೀಸಿನ ನಾಯಕತ್ವವನ್ನು ವಹಿಸಲು ಮ್ಯಾಸಿಡೋನಿಯದ ದೊರೆಗೆ ಕರೆ ಕೊಟ್ಟಿದ್ದಾನೆ. ಈತನ ಆನ್ ದಿ ಪೀಸ್ (335) ಮತ್ತು ಅರಿಯೊಪಜೆಟಿಕಸ್ ಎಂಬ ಎರಡು ಭಾಷಣಗಳು ಸಾಹಿತ್ಯದೃಷ್ಟಿಯಿಂದ ಅತಿ ಸೊಗಸಾಗಿವೆ. (ಎಸ್.ಕೆ.ಕೆ.)

**ಐಸಿಸ್:** ಈಜಿಪ್ಟ್ ದೇಶದ ಪುರಾಣ ಕಥೆಗಳಲ್ಲಿ ಬರುವ ಪ್ರಸಿದ್ಧ ದೇವತೆ. ಪ್ರ.ಶ.ಪೂ.1500ರ ಹಿಂದೆಯೇ ಈ ದೇವತೆಯ ಆರಾಧನೆ ರೂಢಿಯಲ್ಲಿತ್ತು.

ಪುರಾಣದ ಪ್ರಕಾರ ಈಕೆ ಗೆಬ್ ಮತ್ತು ನಟ್ ಎನ್ನುವವರ ಮಗಳು. ಈಕೆಗೆ ಒಬ್ಬಳು ಸಹೋದರಿ. ನೆಫ್ತಿಸ್ ಎಂದು ಆಕೆಯ ಹೆಸರು. ಹಾಗೆಯೇ ಒಸೈರಿಸ್ ಮತ್ತು ಸೆತ್ ಎನ್ನುವವರು ಸಹೋದರರು. ತನ್ನ ಸಹೋದರನಾದ ಒಸೈರಿಸ್‌ನನ್ನೇ ಮದುವೆ ಮಾಡಿಕೊಂಡು, ಆತನ ಮೂಲಕ ಹೋರಸ್ ಎನ್ನುವ ಮಗನನ್ನು ಪಡೆದವಳೆಂದು ಕಥೆ. ಅಣ್ಣ ತಮ್ಮಂದಿರ ಜಗಳದಲ್ಲಿ ಸೆತ್ ಎನ್ನುವವ ಐಸಿಸಳ ಗಂಡನಾದ ಒಸೈರಿಸನನ್ನು ಕೊಂದು ಆತನ ದೇಹವನ್ನು ತುಂಡು ತುಂಡು ಮಾಡಿ ಈಜಿಪ್ಟ್ ದೇಶದಾದ್ಯಂತ ಚೆಲ್ಲಿಸಿದನೆಂದು ಕಥೆ. ಐಸಿಸಳು ತನ್ನ ಗಂಡನ ಈ ದಾರುಣ ಅಂತ್ಯದಿಂದ ನೊಂದವಳಾಗಿ ಅವನ ದೇಹದ ಭಾಗಗಳನ್ನು ಹುಡುಕಿ ಅವನ್ನು ಒಟ್ಟಿಗೆ ಕೂಡಿಸಿ ಮೇಣವನ್ನು ಹಚ್ಚಿ ಪ್ರಾಣವನ್ನು ಬರಿಸುತ್ತಾಳೆ. ಇದು ಈಕೆಯ ಶಕ್ತಿಯ ನಿದರ್ಶನ ಎಂದು ಪುರಾಣ ಹೇಳುತ್ತದೆ. ಇದೇ ಸಂದರ್ಭದಲ್ಲೇ ಈಕೆ ತನ್ನ ಮಗನಾದ ಹೋರಸ್‌ನನ್ನು ಹೆತ್ತದ್ದು. ತನ್ನ ಸಹೋದರ ಸೆತ್‌ನ ಭಯದಿಂದಾಗಿ ಈಕೆ ಹೋರಸ್‌ನನ್ನು ನೈಲ್ ನದಿಯ ಅಂಚಿನಲ್ಲಿ ಬೆಳೆದ ಪೊದೆಗಳಲ್ಲೇ ಬಚ್ಚಿಟ್ಟು ಸಾಕುತ್ತಾಳೆ. ಹೋರಸ್ಸನು ದೊಡ್ಡವನಾಗಿ ಬಲಿಷ್ಠನಾದ ಮೇಲೆ ತನ್ನ ತಂದೆಯನ್ನು ಹತ್ಯೆ ಮಾಡಿದನಲ್ಲದೆ, ತನ್ನ ತಾಯಿಗೆ ಕಿರುಕುಳವನ್ನು ಕೊಟ್ಟ ಸೆತ್‌ನ ಮೇಲೆ ಕಾಳಗ ಮಾಡಿ ಅವನನ್ನು ಸೋಲಿಸಿ ಬಂಧಿಸಿ ತಾಯಿ ಹತ್ತಿರಕ್ಕೆ ತರುತ್ತಾನೆ. ಆದರೆ ಕರುಣಾಮಯಿಯಾದ ಆಕೆ ಸೆತ್‌ನನ್ನು ಕೊಲ್ಲಲಾಗದೆಂದು ಹೇಳುತ್ತಾಳೆ. ಅದರಿಂದ ಕುಪಿತನಾದ ಹೋರಸ್ ತಲೆಗೆ ಬಲವಾದ ಪೆಟ್ಟನ್ನು ಕೊಡುತ್ತಾನೆ. (ಕೆಲವರು ಹೇಳುವಂತೆ ತಲೆಯನ್ನೇ ಕಡಿಯುತ್ತಾನೆ.) ಆದರೆ ಶಾಪಗ್ರಸ್ತನಾಗಿ ತನ್ನ ಕೈಗಳನ್ನು ಕಳೆದುಕೊಳ್ಳುತ್ತಾನೆ. ಐಸಿಸ್ ಕರುಣಾಮಯಿಯೆಂದೂ ಪ್ರೇಮಮಯಿಯೆಂದೂ ಅತೀವ ದೈವಿಕಶಕ್ತಿಯನ್ನು ಪಡೆದಿದ್ದವಳೆಂದೂ ಎಲ್ಲರ ಆರಾಧ್ಯದೇವತೆಯಾಗಿ ಪೂಜೆ ಪಡೆಯುತ್ತಾಳೆ. ಈಜಿಪ್ಟ್ ದೇಶದ ಧಾರ್ಮಿಕ ಇತಿಹಾಸದಲ್ಲಿ ಈಕೆಯ ಹೆಸರು ಬಹು ಪ್ರಮುಖವಾದುದು.

ಈಕೆಯ ಕೀರ್ತಿ ಈಜಿಪ್ಟ್ ದೇಶವನ್ನು ಮೀರಿ ನೆರೆಹೊರೆಯ ದೇಶಗಳಿಗೂ ಹಬ್ಬಿ ಯುರೋಪನ್ನೆಲ್ಲ ಆವರಿಸಿದಂತೆ ಕಂಡುಬರುತ್ತದೆ. ಪ್ರ.ಶ.ಪೂ. 333ರಲ್ಲಿ ಗ್ರೀಕ್ ದೇಶದ ಪಿರಾಸ್ ಎನ್ನುವಲ್ಲಿ ಈಕೆಗೆ ಒಂದು ದೇವಾಲಯ ನಿರ್ಮಿಸಿದ್ದುಂಟು. ಹಾಗೆಯೇ ಅಥೆನ್ಸ್ ನಗರದಲ್ಲೂ ಈಕೆಗೆ ಸ್ವಾಗತ ಸಿಕ್ಕಿತು. ಪಾಂಪೆಯ ದೊರೆ ಈಕೆಗೆ ಮೀಸಲಾದ ಒಂದು ದೇವಾಲಯ ನಿರ್ಮಿಸಿದನೆಂದು ಗೊತ್ತಾಗುತ್ತದೆ. ಕಾಲಕ್ರಮೇಣ ಈಕೆಯ ಆರಾಧನೆ ಸಿಸಿಲಿ, ಸಾರ್ಡೀನಿಯ, ಮೊರಾಕೊ, ಸ್ಪೇನ್, ಫ್ರಾನ್ಸ್, ಬ್ರಿಟನ್, ಜರ್ಮನಿ, ಡಾನ್ಯೂಬ್ ತೀರದ ದೇಶಗಳು–ಹೀಗೆ ಎಲ್ಲೆಡೆಯಲ್ಲೂ ಹಬ್ಬಿತು. ಈ ವೇಳೆಗೆ ಈ ದೇವತೆ ವಿಶ್ವಮಾತೃ ಎಂದಾಗಿ ಪರಿಗಣಿಸಲ್ಪಟ್ಟು, ಎಲ್ಲರನ್ನೂ ಪವಿತ್ರಗೊಳಿಸುವ, ಎಲ್ಲರಿಗೂ ಅಮೃತತ್ತ್ವವನ್ನು ನೀಡುವ ಮಹಾಮಾತೆಯೆಂದು ಪೂಜೆ ಪಡೆದಿದ್ದಳು.

ಈಜಿಪ್ಟ್ ದೇಶದ ಪುರಾಣಕಥೆಗಳನ್ನು ಬಿಟ್ಟರೆ ಈ ದೇವತೆಯ ಮಹತ್ವವನ್ನು ತಿಳಿಸುವ ಮೂಲಗಳಲ್ಲಿ ಮುಖ್ಯವಾದುದು ಪ್ಲೂಟಾರ್ಕ್ ಕವಿ ಬರೆದ ಡಿ ಐಸೈಡ್ ಎಟ್ ಓಸಿರೈಡ್ ಎನ್ನುವ ಗ್ರಂಥ. ಐಸಿಸ್ ದೇವತೆಯ ಕಲ್ಪನೆಯ ಆಧಾರದ ಮೇಲೆಯೇ ವರ್ಜಿನ್ ಮೇರಿ ಮತ್ತು ಮಡೋನ ಇವರ ಕಲ್ಪನೆಗಳೂ ಹುಟ್ಟಿರಬಹುದೆಂದು ಅನೇಕರ ಅಭಿಪ್ರಾಯ. (ಕೆ.ಬಿ.ಆರ್.)

**ಐಸೆನ್‌ಹೌವರ್, ಡ್ವೈಟ್ ಡೇವಿಡ್:** 1890–1969. ಅಮೆರಿಕನ್ ಜನರಲ್, ಅಮೆರಿಕ ಸಂಯುಕ್ತಸಂಸ್ಥಾನದ 33ನೆಯ ಅಧ್ಯಕ್ಷ.

ಐಸೆನ್‌ಹೌವರ್ ಜನ್ಮ ಟೆಕ್ಸಾಸ್ ರಾಜ್ಯದ ಡೆನಿಸನಿನಲ್ಲಿ. ತಂದೆ ಡೇವಿಡ್ ಐಸೆನ್‌ಹೌವರ್. ಡ್ವೈಟ್ ಐಸೆನ್‌ಹೌವರ್ ಎರಡು ವರ್ಷಗಳ ಮಗುವಾಗಿದ್ದಾಗ ಈ ಸಂಸಾರ ಅಬಿಲೀನಿಗೆ ಬಂತು. ಡೇವಿಡ್ ಐಸೆನ್‌ಹೌವರನ ದೊಡ್ಡ ಸಂಸಾರಕ್ಕೆ ಆಗ ಸರ್ವದಾ ಬಡತನ. ಆರು ಮಂದಿ ಗಂಡುಮಕ್ಕಳೂ ತಂದೆಯೊಂದಿಗೆ ದುಡಿಯಬೇಕಾದ ಪರಿಸ್ಥಿತಿಯಿತ್ತು. ತಂದೆ ತಾಯಿಯರ ಪ್ರೋತ್ಸಾಹದಿಂದ ಐಸೆನ್‌ಹೌವರ್ ವಿದ್ಯಾಭ್ಯಾಸ ನಡೆಯಿತು. 1915ರಲ್ಲಿ ವೆಸ್ಟ್‌ಪಾಯಿಂಟ್ ಮಿಲಿಟರಿ ಅಕೆಡೆಮಿಯಲ್ಲಿ ಪದವಿ ಸಂಪಾದಿಸಿ ಯೋಧನಾಗಿ ಜೀವನವನ್ನಾರಂಭಿಸಿದ ಐಸೆನ್‌ಹೌವರ್ ಒಂದನೆಯ ಮಹಾಯುದ್ಧ ಕಾಲದಲ್ಲಿ ಟ್ಯಾಂಕ್ ಯುದ್ಧತಂತ್ರದ ಬೋಧಕನಾಗಿ ಹೆಸರು ಗಳಿಸಿದನಾದರೂ ಯುದ್ಧರಂಗದಲ್ಲಿ ಹೋರಾಡಿದವರ ಸಾಹಸದ ಮುಂದೆ ಐಸೆನ್‌ಹೌವರ್ ಕೀರ್ತಿ ಅಷ್ಟಾಗಿ ಪ್ರಕಾಶಕ್ಕೆ ಬರಲಿಲ್ಲ. ಒಳ್ಳೆಯ ಮೈಕಟ್ಟಿದ್ದ ಐಸೆನ್‌ಹೌವರ್ ಎಲ್ಲ ಆಟಗಳಲ್ಲೂ ನಿಷ್ಣಾತನಾಗಿದ್ದ. ಸೇನೆಯ ಫುಟ್‌ಬಾಲ್ ತಂಡದಲ್ಲಿ ಈತನೂ ಇದ್ದ.

ಎರಡು ಮಹಾಯುದ್ಧಗಳ ನಡುವಣ ಕಾಲದಲ್ಲಿ ಐಸೆನ್‌ಹೌವರ್ ಅಮೆರಿಕನ್ ಮಹಾದಂಡನಾಯಕ ಮೆಕಾರ್ಥರನ ಸಿಬ್ಬಂದಿಯಲ್ಲೊಬ್ಬನಾಗಿದ್ದು ವಾಷಿಂಗ್ಟನ್ ಫಿಲಿಪೀನ್ಸ್‌ಗಳಲ್ಲಿ ದುಡಿದು ತನ್ನ ಮೇಲಧಿಕಾರಿಯ ಗಮನ ಸೆಳೆದನಾದರೂ ಮೂವತ್ತು ವರ್ಷ ಕಾಲವಾದ ಮೇಲೂ ಆತ ಲೆಫ್ಟಿನೆಂಟ್ ಕರ್ನಲ್ ದರ್ಜೆಯಿಂದ ಮೇಲೇರಿರಲಿಲ್ಲ. ಆಗ ಈತನ ವಯಸ್ಸು 50.

1941 ಬಂತು. ಆಗ ಇವನ ಶಕ್ತಿಪ್ರಕಾಶನಕ್ಕೆ ಅವಕಾಶ ದೊರಕಿತು. ಐಸೆನ್‌ಹೌವರ್ ಕರ್ನಲ್ ಆದ. ಅನಂತರ ಬ್ರಿಗೇಡಿಯರ್ ಜನರಲ್ ಹುದ್ದೆಯೂ ಬಂತು. ಪರ್ಲ್ ಹಾರ್ಬರಿನಲ್ಲಿ ಜಪಾನೀಯರು ಅಮೆರಿಕನ್ ಸೇನಾ ನೆಲೆಗಳ ಮೇಲೆ ದಾಳಿ ಮಾಡಿದಾಗ ಅಮೆರಿಕವೂ ಯುದ್ಧದಲ್ಲಿ ಧುಮುಕಿತು. ಐಸೆನ್‌ಹೌವರ್‌ನ ಯೋಗ್ಯತೆಯನ್ನು ಅಮೆರಿಕನ್ ಸೇನೆಯ ಪ್ರಧಾನ ದಂಡನಾಯಕನಾಗಿದ್ದ ಜಾರ್ಜ್ ಮಾರ್ಷಲ್ ಗುರುತಿಸಿ ಅವನನ್ನು ಮೇಲೆತ್ತಿ ಯುರೋಪಿನಲ್ಲಿದ್ದ ಅಮೆರಿಕನ್ ಸೇನೆಗಳ ನಾಯಕನಾಗಿ ನೇಮಿಸಿದ. ಮೊದಲು ಐರೋಪ್ಯ



ಯುದ್ಧರಂಗ ಕ್ಕಿಳಿದು ನಾಜಿಗಳನ್ನು ಸೋಲಿಸಿ ಅನಂತರ ಪೆಸಿಫಿಕ್ ರಂಗದಲ್ಲಿ ಯುದ್ಧ ಬಿರುಸು ಮಾಡಬೇಕೆಂಬ ಅಂಶವನ್ನು ಐಸೆನ್‌ಹೌವರ್ ಮನಗಂಡಿದ್ದ. ಯುರೋಪಿನ ಆಕ್ರಮಣಕ್ಕೆ ಹಂಚಿಕೆ ತಯಾರಿಸಿದ್ದ. ಇದರಿಂದ ಐಸೆನ್ ಹೌವರ್ ಬಗ್ಗೆ ವಿಶ್ವಾಸ ವೃದ್ಧಿ ಯಾಯಿತು. ಐಸೆನ್‌ಹೌವರ್‌ನ ಸ್ನೇಹಪರತೆ, ದೃಢಚಿತ್ತ ಇವು ಪ್ರಕಾಶಗೊಂಡದ್ದು ಆಗ. ಯುದ್ಧ ಮಿತ್ರರ ಐಕಮತ್ಯಕ್ಕಾಗಿ ಐಸೆನ್‌ಹೌವರ್ ದುಡಿದ. ಅಮೆರಿಕನ್ ಮತ್ತು ಬ್ರಿಟಿಷ್ ಸಂಯುಕ್ತ ಸೇನೆಗಳ ಅಧಿಪತಿಯಾಗಿ ಉತ್ತರ ಆಫ್ರಿಕದ ಆಕ್ರಮಣ ಕಾರ್ಯದಲ್ಲಿ ಈತ ತೋರಿದ ಎದೆಗಾರಿಕೆ ಹಾಗೂ ತಂತ್ರನೈಪುಣ್ಯ ಅಸಾಧಾರಣ. ತನ್ನ ಎರಡನೆಯ ಪ್ರಯತ್ನದಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸಿ ಟ್ಯೂನಿಸಿನಿಂದ ಮುಂದುವರಿದು ಆರೇ ವಾರಗಳಲ್ಲಿ ಸಿಸಿಲಿಯನ್ನಾಕ್ರಮಿಸಿದ. ಮಿತ್ರಪಕ್ಷದ ಸೈನ್ಯಗಳ ದಂಡನಾಯಕನಾಗಿ ಒಮ್ಮತದಿಂದ ಚುನಾಯಿತನಾದ. 1944ರಲ್ಲಿ ನಾರ್ಮಂಡಿಯಲ್ಲಿ ಮಿತ್ರಸೈನ್ಯ ಇಳಿಯಿತು. ಜರ್ಮನಿ ಸೋತು ಶರಣಾಗತವಾಗಲು ಈ ಯುದ್ಧ ತಂತ್ರವೂ ಕಾರಣ.

ಎರಡನೆಯ ಮಹಾಯುದ್ಧ ಮುಗಿದ ಮೇಲೆ, 1948ರಲ್ಲಿ ಈತ ಕೊಲಂಬಿಯ ವಿಶ್ವವಿದ್ಯಾನಿಲಯದ ಅಧ್ಯಕ್ಷನಾದ. ಈತ ಉತ್ತರ ಅಟ್ಲಾಂಟಿಕ್ ಕೌಲು ಸಂಸ್ಥೆಯ ಸಂಯುಕ್ತ ಪಡೆಗಳ ಪರಮೋನ್ನತ ದಂಡನಾಯಕನಾಗಿ ನೇಮಕವಾದದ್ದು 1951ರಲ್ಲಿ. 1952ರಲ್ಲಿ ಅಮೆರಿಕದ ಜನಪ್ರಿಯತೆಯನ್ನು ಗಳಿಸಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷತೆಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಗೆದ್ದನಲ್ಲದೆ 1956ರಲ್ಲಿ ಮತ್ತೆ ಅಧ್ಯಕ್ಷನಾದ.

ಐಸೆನ್‌ಹೌವರ್ ಯೋಧನಾಗಿದ್ದರೂ ಶಾಂತಿಪ್ರಿಯ; ಅಧ್ಯಕ್ಷನಾಗಿದ್ದರೂ ರಾಜಕೀಯ ಅವನಿಗೆ ಸೇರುತ್ತಿರಲಿಲ್ಲ. ಅಮೆರಿಕದ ರಾಜಕಾರಣದಲ್ಲಿ ಐಸೆನ್‌ಹೌವರ್ ಮುಂದುವರಿದದ್ದು ವೈಯಕ್ತಿಕ ಪ್ರಭಾವದಿಂದಲೇ. ಕೋಟ್ಯಂತರ ಡಾಲರುಗಳನ್ನು ಯುದ್ಧಕ್ಕಾಗಿ ವೆಚ್ಚಮಾಡುವುದನ್ನು ಆತ ಒಪ್ಪುತ್ತಿರಲಿಲ್ಲ.

ತನ್ನ ಅಧಿಕಾರದ ಕಾಲದಲ್ಲಿ ಮಹತ್ತ್ವದ ಕ್ರಮಗಳನ್ನೇನೂ ಕೈಗೊಳ್ಳಲಿಲ್ಲವೆಂದು ಐಸೆನ್‌ಹೌವರ್ ಬಗ್ಗೆ ಒಂದು ಟೀಕೆಯುಂಟು. ವಿಯೆಟ್ನಾಂ ಯುದ್ಧದ ಉಗಮ ಚಿಹ್ನೆಗಳು ಕಾಣಿಸಿಕೊಂಡದ್ದು ಇವನ ಕಾಲದಲ್ಲಿ. ರಾಷ್ಟ್ರಭದ್ರತೆ, ವಿದ್ಯಾಭಿವೃದ್ಧಿ, ವಸತಿನಿರ್ಮಾಣ, ನಗರ ನೈರ್ಮಲ್ಯ, ಸಾರ್ವಜನಿಕ ಆರೋಗ್ಯ ಮುಂತಾದ ವಿಷಯಗಳಿಗೆ ಹೆಚ್ಚು ಗಮನಕೊಟ್ಟು, ದಕ್ಷಿಣದ ಪ್ರಾಂತ್ಯಗಳಲ್ಲಿ ರೂಢಿಯಲ್ಲಿದ್ದ, ನೀಗ್ರೋಗಳನ್ನು ಬಿಳಿಯರಿಂದ ಪ್ರತ್ಯೇಕಿಸುವ, ವರ್ಣನೀತಿಯನ್ನು ಉಗ್ರವಾಗಿ ಖಂಡಿಸಿದ; ರಾಷ್ಟ್ರಜೀವನದಲ್ಲಿ ವರ್ಣೀಯರ ಮತ್ತು

ಬಿಳಿಯರ ಮೂಲಾಧಾರ ಹಕ್ಕುಗಳು ಒಂದೇ ಎಂದು ಸಾರಿದ. ಶಿಕ್ಷಣ ಸಂಸ್ಥೆಗಳಲ್ಲಿ ಬಿಳಿಯರು ಮತ್ತು ನೀಗ್ರೋಗಳಿಗೆ ಸಮಾನಾವಕಾಶವಿರಬೇಕು ಎಂದು ಆಜ್ಞೆ ಹೊರಡಿಸಿದ; ಇದನ್ನು ವಿರೋಧಿಸಿ ಗಲಭೆಯೆಬ್ಬಿಸಿದವರನ್ನು ದಂಡಿಸಿದ. 1938ರಲ್ಲಿ ಅಲಾಸ್ಕ ಮತ್ತು ಹವಾಯ್ ಸಂಯುಕ್ತ ಸಂಸ್ಥಾನಕ್ಕೆ ಸೇರಿದುವು. ಕಮ್ಯೂನಿಸ್ಟ್ ತತ್ತ್ವದ ವ್ಯಾಪ್ತಿಯನ್ನು ತಡೆಗಟ್ಟುವುದು ಈತನ ವಿದೇಶಾಂಗ ನೀತಿಯಾಗಿದ್ದರೂ ಆಗ್ನೇಯ ಏಷ್ಯದ ರಾಜ್ಯಗಳ ಆರ್ಥಿಕಾಭಿವೃದ್ಧಿಗಾಗಿ ಉದಾರವಾಗಿ ಸಾಲ ನೀಡಿದ್ದೂ ಕಮ್ಯೂನಿಸ್ಟ್ ರಾಷ್ಟ್ರಗಳು ಆ ರಾಜ್ಯಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಪ್ರಯತ್ನ ನಡೆಸಿದರೆ ಸೈನಿಕ ನೆರವು ನೀಡುವುದಾಗಿ ಅವುಗಳಿಗೆ ಭರವಸೆ ನೀಡಿದ್ದೂ ಅಲ್ಲದೆ 1956ರ ಸೂಯೆಜ್ ಕಾಲುವೆ ಬಿಕ್ಕಟ್ಟನ್ನು ಬಗೆಹರಿಸಲೆತ್ನಿಸಿದ್ದೂ ಚಿಯಾಂಗ್–ಕೈ–ಷೇಕನ ಸಹಾಯಕ್ಕೆ ಅಮೆರಿಕ ನುಗ್ಗುವುದೆಂದು ಘೋಷಿಸಿ ಚೀನೀ ದಾಳಿಯನ್ನು ತಪ್ಪಿಸಿದ್ದೂ ಐಸೆನ್‌ಹೌವರ್ ಕೈಕೊಂಡ ಕೆಲವು ಕ್ರಮಗಳು. ಕಮ್ಯೂನಿಸ್ಟ್ ರಾಜ್ಯವಾದ ಹಂಗರಿಯಲ್ಲಿ ಬಂಡಾಯವೆದ್ದದ್ದೂ ಈತನ ಅಧಿಕಾರದ ಕಾಲದಲ್ಲೆ. ಮುಂದಿನ ಅಧ್ಯಕ್ಷನಾದ ಕೆನೆಡಿಯ ಕಾಲದಲ್ಲಿ ಸಂಭವಿಸಿದ ಕ್ಯೂಬ ಹಗರಣವೂ ಐಸೆನ್‌ಹೌವರ್ ಅಧಿಕಾರದ ಅವಧಿಯಲ್ಲೇ ಆರಂಭವಾಯಿತು. ಆದರೆ ಸೋವಿಯತ್ ರಷ್ಯದ ಪ್ರಧಾನಿಯಾಗಿದ್ದ ಖ್ರುಶ್ಚಾಫ್ ಬರ್ಲಿನ್ ದಿಗ್ಬಂಧನದ ಬೆದರಿಕೆ ಹಾಕಿದಾಗ ಐಸೆನ್‌ಹೌವರನ ನೇರ ಪ್ರವೇಶದಿಂದ ಅದು ಪರಿಹಾರವಾಯಿತು. ಖ್ರುಶ್ಚಾಫ್ ಅಮೆರಿಕಕ್ಕೆ ಭೇಟಿ ನೀಡಿದ. ಐಸೆನ್‌ಹೌವರನೂ ರಷ್ಯದ ಸಂದರ್ಶನ ಮಾಡಲಿದ್ದು, ಈ ರಾಷ್ಟ್ರ ನಾಯಕರ ವೈಯಕ್ತಿಕ ಸ್ನೇಹದ ತಳಹದಿಯ ಮೇಲೆ ಅಂತಾರಾಷ್ಟ್ರೀಯ ಸೌಹಾರ್ದ ಬೆಳೆಯುವ ಸೂಚನೆಗಳು ಕಂಡು ಬಂದಿದ್ದುವು. ಆದರೆ ಅಷ್ಟರಲ್ಲೆ ಅಮೆರಿಕನ್ ಗೂಢಚರ್ಯೆಯ ವಿಮಾನವೊಂದು ತನ್ನ ಪ್ರದೇಶವನ್ನು ಪ್ರವೇಶಿಸಿತೆಂಬ ಕಾರಣದಿಂದ ಸೋವಿಯತ್ ದೇಶ ಅದನ್ನು ಹೊಡೆದುರುಳಿಸಿತು. ಮತ್ತೆ ವಿರಸ ಮೂಡಿತು. ಐಸೆನ್‌ಹೌವರನ ರಷ್ಯ ಭೇಟಿ ರದ್ದಾಯಿತು.

ಈತ ಅಧ್ಯಕ್ಷನಾಗಿದ್ದಾಗ ದೊಡ್ಡ ಯುದ್ಧವೇನೂ ಆಗಲಿಲ್ಲ. ಆದರೆ ಶಾಂತಿ ಭದ್ರವಾಗುವ ಭರವಸೆಯೂ ದೊರಕಲಿಲ್ಲ. ಐಸೆನ್‌ಹೌವರ್ ಒಳ್ಳೆಯ ಯೋಧನಾದರೂ ಆತನಿಗೆ ಯುದ್ಧ ಬೇಕಿರಲಿಲ್ಲ; ಯುದ್ಧವಾಗಲೇಬಾರದು–ಎಂಬುದು ಅವನ ಆಶಯ. ಯುದ್ಧವೆಂದರೆ ಏನೆಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು.

ನೇರ ನಡೆ, ನೇರ ನುಡಿ, ಸರಳಜೀವನ–ಇವುಗಳಿಂದ ಎಲ್ಲರ ಪ್ರೀತಿಗಳಿಸಿದ್ದವನು ಐಸೆನ್‌ಹೌವರ್. ಈತನ ಅಡ್ಡ ಹೆಸರು 'ಐಕ್'. (ಎಚ್.ಎಸ್.ಕೆ.; ಐ.ಆರ್.; ಎ.ಎನ್.ಎಸ್.ಎಂ.)

**ಐಸೋಎಲೆಕ್ಟ್ರಿಕ್ ಬಿಂದು:** ಅಣುವು ಋಣ ಅಥವಾ ಧನ ಅಯಾನ್ ಆಗದೆ ಝ್ವಿಟ್ಟರ್ ಅಥವಾ ತಟಸ್ಥ ಅಣುವಾಗಿ ಉಳಿಯುವ pH ಮೌಲ್ಯದ ಅಂಕ (ಐಸೊಎಲೆಕ್ಟ್ರಿಕ್ ಪಾಯಿಂಟ್). $NH_2$ ಮತ್ತು COOH ಪುಂಜಗಳೆರಡನ್ನೂ ಉಳ್ಳ ಅಮೈನೋ ಆಮ್ಲಗಳು ಪ್ರೋಟಾನಾ ನೀಡಿಕೆ–ಸ್ವೀಕಾರಗಳಿಂದ ದೊರೆಯುವ ಝ್ವಿಟ್ಟರ್ ಅಯಾನುವಿನ ರೂಪದಲ್ಲಿರುತ್ತವೆ. ಪೂರ್ಣ ಅಣುವನ್ನು ಗಮನಿಸಿದಾಗ ಅದು ಹೆಚ್ಚಿನ ಋಣ ಅಥವಾ ಧನ ವಿದ್ಯುತ್ತನ್ನು ಪಡೆದಿರದೆ ವಿದ್ಯುತ್ತಾಟಸ್ಥ್ಯವನ್ನು (ಎಲೆಕ್ಟ್ರಿಕಲ್ ನ್ಯೂಟ್ರಾಲಿಟಿ) ಪಡೆದಿರುವುದು ಕಂಡುಬರುತ್ತದೆ. ಆದರೆ ಅಮೈನೋ ಆಮ್ಲವನ್ನುಳ್ಳ ದ್ರಾವಣದ pH ಮೌಲ್ಯ ಹೆಚ್ಚಾದಾಗ ಋಣ ಅಯಾನ್ ಆಗಿ ಪರಿವರ್ತಿತವಾಗುತ್ತದೆ. ಈ ಬಗೆಯ ಋಣ, ಧನ ಮತ್ತು ಝ್ವಿಟ್ಟರ್ ಅಯಾನುಗಳ ಪರಸ್ಪರ ಪರಿವರ್ತನೆ ಮತ್ತು ಸಮತೋಲನಗಳನ್ನು ಮುಂದೆ ತೋರಿಸಿದೆ–

$$\underset{+NH_3}{R-CH-COOH} \underset{OH^-}{\overset{H^+}{\rightleftarrows}} \underset{+NH_3}{R-CH-COO^-} \underset{OH^+}{\overset{H^-}{\rightleftarrows}} \underset{NH_2}{R-CH-COO^-}$$

ಪ್ರೋಟೀನುಗಳಲ್ಲಿ ಝ್ವಿಟ್ಟರ್ ಅಯಾನುಗಳಿಗೆ ಬದಲಾಗಿ ತಟಸ್ಥ ಅಣುವಿದ್ದು pH ಮೌಲ್ಯ ವ್ಯತ್ಯಾಸಗೊಂಡಂತೆ ಋಣ, ಧನ ಅಯಾನುಗಳು ಮತ್ತು ತಟಸ್ಥ ಅಣುಗಳ ಪರಿವರ್ತನೆ ನಡೆಯುತ್ತದೆ.

ಪ್ರತಿ ಅಮೈನೋ ಆಮ್ಲ ಅಥವಾ ಪ್ರೋಟೀನು ಪ್ರತ್ಯೇಕ ಐಸೊಎಲೆಕ್ಟ್ರಿಕ್ ಬಿಂದುವನ್ನು ಪಡೆದಿರುವುದು ಅದರ ಮುಖ್ಯ ಗುಣಗಳಲ್ಲೊಂದು. ಪ್ರೋಟೀನುಗಳು ತಮ್ಮ ಐಸೋಎಲೆಕ್ಟ್ರಿಕ್ ಬಿಂದುವಿನಲ್ಲಿ ತಮ್ಮ ವಿದ್ಯುತಾಟಸ್ಥ್ಯವನ್ನು ಕಳೆದುಕೊಂಡು ಕಲಾಯ್ಡ್ ಬಗೆಯ ನೀರಿನ ದ್ರಾವಣಗಳಿಂದ ಗರಣೆಯಾಗಿ ಹೊರಬೀಳುತ್ತವೆ. ಪ್ರೋಟೀನುಗಳು ಭಿನ್ನ ಐಸೋಎಲೆಕ್ಟ್ರಿಕ್ ಬಿಂದುಗಳನ್ನು ಪಡೆದಿರುವುದರಿಂದಲೇ ವಿದ್ಯುತ್ ಕ್ಷೇತ್ರೀಯ ಚಲನೆಯಿಂದ (ಎಲೆಕ್ಟ್ರೋಫಾರಿಸ್) ಅವನ್ನು ಬೇರ್ಪಡಿಸಲು ಸಾಧ್ಯ.

**ಐಸೊಎಲೆಕ್ಟ್ರಿಕ್ ಬಿಂದುಗಳು**

| ವಸ್ತು | | ಐಸೊಎಲೆಕ್ಟ್ರಿಕ್ ಬಿಂದು (pH) |
|---|---|---|
| ಅಮೈನೋ ಆಮ್ಲಗಳು | | |
| ಅಲನೀನ್ | . . . | 6.00 |
| ಆರ್ಗಿನೈನ್ | . . . | 10.76 |
| ಅಸ್ಪಾರ್ಟಿಕ್ ಆಮ್ಲ | . . . | 2.77 |
| ಸಿಸ್ಟೈನ್ | . . . | 5.07 |
| ಸಿಸ್ಟೀನ್ | . . . | 4.60 |
| ಗ್ಲೂಟಮಿಕ್ ಆಮ್ಲ | . . . | 3.22 |
| ಗ್ಲೈಸೀನ್ | . . . | 5.65 |
| ಹಿಸ್ಟಿಡೀನ್ | . . . | 7.59 |
| ಹೈಡ್ರಾಕ್ಸಿಪೈರೊಲೀನ್ | . . . | 5.83 |
| ಐಸೊಲ್ಯೂಸಿನ್ | . . . | 6.02 |
| ಲ್ಯೂಸಿನ್ | . . . | 5.98 |
| ಲೈಸಿನ್ | . . . | 9.74 |
| ಫೆನಿಲಲನೀನ್ | . . . | 5.48 |
| ಪ್ರೊಲಿನ್ | . . . | 6.30 |
| ಸೆರೀನ್ | . . . | 5.68 |
| ಟ್ರಿಪ್ಟೋಫಾನ್ | . . . | 5.89 |
| ಟೈರೊಸಿನ್ | . . . | 5.66 |
| ವಾಲಿನ್ | . . . | 5.96 |
| ಡೈಪೆಪ್ಟೈಡುಗಳು | | |
| ಗ್ಲೈಸಿಲ್‌ಗ್ಲೈಸಿನ್ | . . . | 5.50 |
| ಅಲಾನಿಲ್‌ಗ್ಲೈಸಿನ್ | . . . | 5.50 |
| ಲ್ಯೂಸಿಲ್‌ಗ್ಲೈಸಿನ್ | . . . | 5.70 |
| ಪ್ರೋಟೀನುಗಳು | | |
| ಗ್ಲೂಟೆನಿನ್ | . . . | 4.50 |
| ಜೆಲಾಟಿನ್ | . . . | 4.70 |
| ಮೊಟ್ಟೆಯ ಆಲ್ಬುಮಿನ್ | . . . | 4.80 |
| ಸೀರಂ ಆಲ್ಬುಮಿನ್ | . . . | 5.40 |
| ಎಡೆಸ್ಟಿನ್ | . . . | 5.70 |
| ಆಕ್ಸಿಹೆಮೊಗ್ಲೋಬಿನ್ | . . . | 6.80 |
| ಗ್ಲಿಯಾಡಿನ್ | . . . | 9.20 |
| ಕ್ಲೂಪೈನ್ | . . . | 12.10 |

(ಕೆ.ಟಿ.ಎಸ್.)

**ಐಸೋಜೈಮುಗಳು:** ಒಂದೇ ಬಗೆಯ ಪ್ರಾಣಿಯಲ್ಲಿ ಒಂದೇ ಕಿಣ್ವಕ್ಕೆ ಅನೇಕ ಬಗೆಯ ರಚನೆಗಳಿದ್ದಾಗ ರಚಿತವಾಗುವ ಘಟಕಗಳು. ಪ್ರೋಟೀನುಗಳ ಚತುರ್ಥ ಮಟ್ಟದ ರಚನೆ ಐಸೊಜೈಮುಗಳ ರಚನೆಗೆ ಆಧಾರಭೂತವಾಗಿದೆ. ಇಂಥ ಕಿಣ್ವಗಳ ಬಗ್ಗೆ ತಿಳಿದುಬಂದಿರುವ ಜ್ಞಾನವನ್ನು ಲ್ಯಾಕ್ಟಿಕ್ ಡೀಹೈಡ್ರೋಜಿನೇಸ್ ಕಿಣ್ವದ ಬಗ್ಗೆ ನಡೆಸಿರುವ ಸಂಶೋಧನೆಗಳಿಂದ ಬಲುಮಟ್ಟಿಗೆ ಸಂಗ್ರಹಿಸಲಾಗಿದೆ. ಈ ಕಿಣ್ವ ಕೆಳಗೆ ಕಾಣಿಸಿರುವ ಕ್ರಿಯೆಯನ್ನು ವರ್ಧಿಸುತ್ತದೆ.

$$\underset{\text{ಪೈರೊವೇಟ್}}{CH^3.CO.COO^-} + NADH + H+ \overset{\text{ಕಿಣ್ವ}}{\rightleftarrows} \underset{\text{ಲ್ಯಾಕ್ಟೇಟ್}}{CH^3.CHOH.COO^-}$$

ಕೋಳಿಯಲ್ಲಿ ಈ ಕಿಣ್ವ ಮುಖ್ಯವಾಗಿ ಎರಡು ರೂಪದಲ್ಲಿ ದೊರೆಯುತ್ತದೆ. ಒಂದು ಹೃದಯದ ಮಾಂಸಖಂಡಕ್ಕೂ ಇನ್ನೊಂದು ಎದೆಯ ಮಾಂಸಖಂಡಕ್ಕೂ ವಿಶಿಷ್ಟವಾದದ್ದು. ಇವೆರಡು ಬಗೆಯ ಕಿಣ್ವಗಳಿಗೆ ಅಮೈನೋ ಆಮ್ಲಗಳ ರಚನೆಯಲ್ಲಿಯೂ ಭೌತ ಮತ್ತು ಇಮ್ಯೂನೊಲಾಜಿಕಲ್ ಗುಣದಲ್ಲಿಯೂ ವೇಗವರ್ಧಕ ಕ್ರಿಯೆಯಲ್ಲಿಯೂ ವ್ಯತ್ಯಾಸಗಳಿವೆ. ಕೋಳಿ ಮತ್ತು ಇತರ ಪ್ರಾಣಿಗಳಿಂದ ಐದು ಬಗೆಯ ಲ್ಯಾಕ್ಟಿಕ್ ಡೀ ಹೈಡ್ರೋಜಿನೇಸುಗಳನ್ನು (LDH) ಬೇರ್ಪಡಿಸಲಾಗಿದೆ.

ಇವುಗಳಲ್ಲೆ ಮೂರಕ್ಕೆ, ಎದೆಯ ಮಾಂಸಖಂಡ ಕಿಣ್ವಕ್ಕೂ, ಹೃದಯ ಮಾಂಸಖಂಡ ಕಿಣ್ವಕ್ಕೂ ಮಧ್ಯಂತರ ಗುಣಗಳಿವೆ. ಉದಾಹರಣೆ LDHನ್ನು ವಿದ್ಯುತ್‌ಕ್ಷೇತ್ರೀಯ ಚಲನೆಗೆ (ಎಲೆಕ್ಟ್ರೋಫಾರಿಸಿಸ್) ಗುರಿಪಡಿಸಿದರೆ ಸುಸ್ಪಷ್ಟವಾದ ಒಂದರಿಂದ ಇನ್ನೊಂದು ಸಮಾಂತರದಲ್ಲಿರುವ ಐದು ಪಟ್ಟಿಗಳು (ಬ್ರಾಂಡ್ಸ್) ಕಂಡುಬರುತ್ತವೆ. ಎದೆಯ ಮಾಂಸಖಂಡದ ಕಿಣ್ವ ಒಂದು ತುದಿಯಲ್ಲಿಯೂ ಹೃದಯ ಮಾಂಸಖಂಡದ ಕಿಣ್ವ ಇನ್ನೊಂದು ತುದಿಯಲ್ಲಿಯೂ ಇರುತ್ತವೆ. ಅಲ್ಲದೆ ಈ ಐದು ಐಸೊಜೈಮುಗಳ ಅಮೈನೋ ಆಮ್ಲ ಘಟನೆಯನ್ನು ಪರಿಶೀಲಿಸಿದರೆ ಹೃದಯದ ಕಿಣ್ವದಿಂದ ಹಿಡಿದು ಎದೆಯ ಕಿಣ್ವದವರೆಗೆ ಕ್ರಮಾನುಗತಿಕ ವ್ಯತ್ಯಾಸಗಳು ಕಂಡುಬರುತ್ತವೆ. ಇದೇ ತರಹೆಯ ವ್ಯತ್ಯಾಸಗಳನ್ನು ವೇಗವರ್ಧಕ ಕ್ರಿಯೆ ಮತ್ತು ಇಮ್ಯೂನೊಲಾಜಿಕಲ್ ಗುಣಗಳಲ್ಲಿಯೂ ಕಾಣಬಹುದು.

LDHನ್ನು ರಚನೆಯನ್ನು ಪರಿಶೀಲಿಸಿದಾಗ, ಇಂಥ ನಡತೆಗಿರುವ ಆಧಾರವನ್ನು ಕಂಡುಕೊಳ್ಳಬಹುದು. ಕಿಣ್ವವನ್ನು ಮರ್‌ಕ್ಯಾಪ್ಟೋ ಎಥನಾಲ್ ಸೇರಿರುವ ಗ್ಯಾನಿಡಿನಿಯಂ ಕ್ಲೋರೈಡ್ ದ್ರಾವಣದಿಂದ ಸಂಸ್ಕರಿಸಿ ನಾಲ್ಕು ಉಪಾಂಗಗಳನ್ನು ಪಡೆಯಬಹುದು. ಇದು ಚತುರಂಶವುಳ್ಳ ಕಿಣ್ವವಾಗಿದ್ದರೆ (ಹೌದೆನ್ನುವುದಕ್ಕೆ ಆಧಾರಗಳಿವೆ) ಇದನ್ನು ಬೇರೆ ಬೇರೆ ಎರಡು ಜೀನಿಗಳಿಂದ ನಿರ್ದೇಶಿತವಾದ ಎರಡು ಬಗೆಯ ಉಪಾಂಗವುಳ್ಳ ಪ್ರೋಟೀನೆಂದು ಭಾವಿಸಿ ಮೇಲೆ ಹೇಳಿದ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬಹುದು. ಹೃದಯದ ಮಾಂಸಖಂಡದ ಕಿಣ್ವ H ವರ್ಗದ ಮತ್ತು ಎದೆಯ ಮಾಂಸಖಂಡದ ಕ್ಣಿಣ M ವರ್ಗದ ಉಪಾಂಗಗಳಿಂದ ರಚಿತವಾಗಿದೆಯೆಂದು ಭಾವಿಸಿದರೆ ರಚನೆಯಲ್ಲಿ ಭಿನ್ನವಾಗಿರುವ ಐದು ಬಗೆಯ LDH ಗಳನ್ನು – HHHH, HHHM, HHMM, HMMM, MMMM- ಪಡೆಯಬಹುದು. ಇಂಥ ಘಟನೆಗಳನ್ನು ರೂಪಿಸುವಾಗ ಚತುರಂಶಿಯ (ಟೆಟ್ರಾಮರ್) ಪ್ರತಿಯೊಂದು ಉಪಾಂಗ ಇನ್ನೊಂದಕ್ಕೆ ಎಲ್ಲ ವಿಧದಲ್ಲಿಯೂ ಸಮಾನವೆಂದು ಭಾವಿಸಲಾಗಿದೆ. ಇಲ್ಲದಿದ್ದರೆ HHHM ರಚನೆಯುಳ್ಳ ನಾಲ್ಕು ಬಗೆಯ ಅಣುಗಳನ್ನು ಪಡೆಯಬಹುದು. LDH ಎರಡು ಬಗೆಯ ಉಪಾಂತಗಳಿಂದ ರಚಿತವಾದ ಕಿಣ್ವವೆಂದು ಭಾವಿಸಿ ಅದರ ಗುಣಗಳಲ್ಲಿ ತೋರಿಬರುವ ಕ್ರಮಾನುಗತಿಕ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬಹುದು.

ಇತರ ಐಸೊಜೈಮುಗಳ ಗುಣಗಳನ್ನು ಅವುಗಳ ರಚನೆಯ ಆಧಾರದ ಮೇಲೆ ವಿವರಿಸಬಹುದೇ ಎಂಬ ಪ್ರಶ್ನೆಗೆ ಇನ್ನೂ ಉತ್ತರ ದೊರೆತಿಲ್ಲ. ಲ್ಯಾಕ್ಟಿಕ್ ಡೀಹೈಡ್ರೋ ಜಿನೇಸಿನಂಥ ಕ್ಣಿಣಗಳನ್ನು ಸಂಕರಕಿಣ್ವಗಳೆಂದು ಕರೆಯಬಹುದೆಂಬ ಸೂಚನೆಯನ್ನೂ ಮಾಡಲಾಗಿದೆ. (ಎಚ್.ಎಸ್.ಎಸ್.)

**ಐಸೊಟೋನುಗಳು:** ಪರಮಾಣು ನ್ಯೂಕ್ಲಿಯಗಳಲ್ಲಿ ನ್ಯೂಟ್ರಾನುಗಳು ಸಮಾನ ಅಥವಾ ಸ್ಥಿರವಿರುವಂಥ ನ್ಯೂಕ್ಲೈಡುಗಳು. ಉದಾಹರಣೆಗೆ $^{36}_{16}$ಸಲ್ಫರ್ $\left(^{36}_{16}S\right)$, $^{38}_{18}$ ಆರ್ಗಾನ್ $\left(^{38}_{18}A\right)$, $^{40}_{20}$ ಕ್ಯಾಲ್ಸಿಯಂ $\left(^{40}_{20}Ca\right)$, $^{39}_{19}$ ಪೊಟ್ಯಾಸಿಯಂ $\left(^{39}_{19}K\right)$ ಇವು ಪ್ರತ್ಯೇಕ ಧಾತುಗಳ ಐಸೊಟೋಪುಗಳಿದ್ದರೂ ಇವುಗಳಲ್ಲೆಲ್ಲ 20 ನ್ಯೂಟ್ರಾನುಗಳಿರುತ್ತವೆ. ಐಸೊಟೋಪುಗಳಲ್ಲಿ ಪ್ರೋಟಾನುಗಳ ಸಂಖ್ಯೆ ಸ್ಥಿರವಾಗಿದ್ದರೆ ಐಸೊಟೋನುಗಳಲ್ಲಿ ನ್ಯೂಟ್ರಾನುಗಳ ಸಂಖ್ಯೆ ಸ್ಥಿರವಾಗಿದೆ.

ಇಂಥ ಐಸೊಟೋನುಗಳ ಧಾತುಗಳ ಐಸೊಟೋಪುಗಳ ಸಂಖ್ಯೆ ಹೆಚ್ಚುಮಟ್ಟಿಗೆ ಸಮಾನವಾಗಿದೆ. ಉದಾಹರಣೆಗೆ. $^{36}_{16}S$ –ಸಲ್ಫರ್ – 4 ಐಸೊಟೋಪುಗಳು $^{40}_{20}Ca$ – ಕ್ಯಾಲ್ಸಿಯಂ – 5 ಐಸೊಟೋಪು ಇನ್ನೂ ಇವು ಸುಮಾರಾಗಿ ಏಕಪ್ರಕಾರವಾದ ವಿಕಿರಣಗಳನ್ನು ಕಕ್ಕುತ್ತವೆ. ವಿಕಿರಣಗಳ ಶಕ್ತಿ ಸುಮಾರು ಒಂದೇ ಇರುತ್ತದೆ. (ಯು.ಎಲ್.ಎ.)

**ಐಸೋಟೋಪುಗಳು:** ಒಂದೇ ಪರಮಾಣು ಸಂಖ್ಯೆ ಇರುವ (ಆದ್ದರಿಂದ ಒಂದೇ ಧಾತು ಆಗಿರುವ) ಆದರೆ ದ್ರವ್ಯಮಾನ ಸಂಖ್ಯೆಯಲ್ಲಿ (ಮಾಸ್ ನಂಬರ್) ಭಿನ್ನವಾಗಿರುವ ಎರಡು ಅಥವಾ ಹೆಚ್ಚು ನ್ಯೂಕ್ಲೈಡುಗಳು (ಸಮಸ್ಥಾನಿಗಳು). ಒಂದೇ ಧಾತುವಿನ ವಿವಿಧ ರೂಪಗಳಾದ ಐಸೊಟೋಪುಗಳು ರಾಸಾಯನಿಕವಾಗಿ ಒಂದೇ ಧಾತುವಾದರೂ ಧಾತುವಿನ ಪರಮಾಣುವಿನ ಒಳರಚನೆಯಲ್ಲಿ ವ್ಯತ್ಯಾಸವಿರುವ ಧಾತುರೂಪಗಳಿವು. ಧಾತುಗಳ ಆವರ್ತಕೋಷ್ಟಕದಲ್ಲಿ ಇವು ಒಂದೇ ಸ್ಥಾನವನ್ನು ಪಡೆಯುತ್ತವೆ.

ಪ್ರಪಂಚದ ಸಮಸ್ತ ವಸ್ತುಗಳಲ್ಲೂ ಸು. 104 ಪ್ರತ್ಯೇಕ ಧಾತುಗಳ (ಎಂದರೆ ಪ್ರತ್ಯೇಕ ಪರಮಾಣುಗಳು) ಇವೆ; ಆದರೆ ಇಂಥ ನೈಸರ್ಗಿಕ ಮತ್ತು ಕೃತಕ ಧಾತುಗಳ ಸು. 1,300 ಐಸೊಟೋಪುಗಳನ್ನು ಗುರುತಿಸಲಾಗಿದೆ.

ಒಂದೇ ವಾಕ್ಯದಲ್ಲಿ ಹೇಳುವುದಾದರೆ ಪರಮಾಣುವೊಂದು ತನ್ನ ನ್ಯೂಕ್ಲಿಯಸಿನಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್ ಕಣಗಳನ್ನು ಒತ್ತಟ್ಟಿಗೆ ದಟ್ಟವಾಗಿ ಕೂಡಿಸಿರುವ ಮತ್ತು ಹೊರಗಡೆ ಎಲೆಕ್ಟ್ರಾನುಗಳೆಂಬ ಅತಿಸೂಕ್ಷ್ಮ ಕಣಗಳನ್ನು ಪಡೆದಿರುವ ವ್ಯವಸ್ಥೆ. ನ್ಯೂಕ್ಲಿಯಸ್ ಸು. 10:13 ಸೆಂಮೀ ವ್ಯಾಸವುಳ್ಳುದಾದರೆ ಕೇಂದ್ರದಿಂದ ಸು. 10:8 ಸೆಂಮೀ ದೂರದಲ್ಲಿ ಎಲೆಕ್ಟ್ರಾನುಗಳು ಒಂದು ಅಥವಾ ಹೆಚ್ಚು ಕಕ್ಷೆಗಳಲ್ಲಿ ನ್ಯೂಕ್ಲಿಯಸಿನ ಸುತ್ತಲೂ ವೇಗವಾಗಿ ಸುತ್ತುತ್ತಿವೆ. ಎಲೆಕ್ಟ್ರಾನಿನಲ್ಲಿ ಋಣವಿದ್ಯುತ್ $1.6021 \times 10^{19}$ ಕೂಲಾಂಬಿನಷ್ಟಿದ್ದು ಇದರ ಭಾರ $9.1091 \times 10^{31}$ ಕಿಗ್ರಾಂ ಇರುವುದು. ನ್ಯೂಟ್ರಾನಿನಲ್ಲಿ ವಿದ್ಯುದಂಶವಿಲ್ಲ. ಇದರ ಭಾರ $1.6748 \times 10^{27}$ ಕಿಗ್ರಾಂ ಪ್ರೋಟಾನಿನಲ್ಲಿ ಎಲೆಕ್ಟ್ರಾನಿನಲ್ಲಿದ್ದಷ್ಟೆ ವಿದ್ಯುತ್ತು ಇದ್ದು ಇದರ ಭಾರ $1.6725 \times 10^{27}$ ಕಿಗ್ರಾಂ ಪರಮಾಣುವೊಂದರ ಭಾರ ಪ್ರೋಟಾನ್ ನ್ಯೂಟ್ರಾನುಗಳಿಂದ ಏರ್ಪಡುತ್ತದೆ. ಕಾರಣ ಎಲೆಕ್ಟ್ರಾನುಗಳ ತೂಕ ಅತ್ಯಲ್ಪ.

ಒಂದು ಧಾತುವನ್ನು $^{A}_{Z}E$ ಸಂಕೇತದಿಂದ ಬರೆಯುತ್ತೇವೆ. ಇಲ್ಲಿ Z ಇದರಲ್ಲಿನ ಪ್ರೋಟಾನುಗಳ ಸಂಖ್ಯೆ. ಇಷ್ಟೇ ಎಲೆಕ್ಟ್ರಾನುಗಳು ಕೇಂದ್ರೇತರ ಭಾಗದಲ್ಲಿವೆ. ಈ ಸಂಖ್ಯೆಯೇ ಆವರ್ತಕೋಷ್ಟಕದಲ್ಲಿ ಈ ಧಾತುವಿನ ಸ್ಥಾನವನ್ನು ಸೂಚಿಸುತ್ತದೆ. ಇದರ ಹೆಸರು ಧಾತುವಿನ ಪರಮಾಣು ಸಂಖ್ಯೆ. ನ್ಯೂಕ್ಲಿಯಸಿನಲ್ಲಿ N ನ್ಯೂಟ್ರಾನುಗಳಿದ್ದರೆ ಆಗ Z+N ಪರಮಾಣುವಿನ ಭಾರ A ಯನ್ನು ಸೂಚಿಸುತ್ತದೆ. $^{4}_{2}$ಹೀಲಿಯಂ $\left(^{4}_{2}He\right)$ ಎಂಬುದರ ಭಾರ 4, ಸಂಖ್ಯೆ 2, ಪ್ರೋಟಾನುಗಳ ಸಂಖ್ಯೆ 2, ನ್ಯೂಟ್ರಾನುಗಳ ಸಂಖ್ಯೆ 2, $^{238}_{92}$'ಯುರೇನಿಯಮ್ $\left(^{238}_{92}U\right)$ ಎಂಬುದರ ಭಾರ 238: ಪ್ರೋಟಾನುಗಳ ಸಂಖ್ಯೆ 92, ನ್ಯೂಟ್ರಾನುಗಳ ಸಂಖ್ಯೆ 146.

**ಐಸೊಟೋಪುಗಳಿರಬಹುದೆಂಬ ಅನುಮಾನದ ಹಿನ್ನೆಲೆ:** ಪ್ರೋಟಾನ್ ಹೈಡ್ರೋಜನ್ನಿನ ನ್ಯೂಕ್ಲಿಯಸ್ ಎಂದ ಬಳಿಕ ನ್ಯೂಟ್ರಾನ್ ಕೂಡ ಭಾರದಲ್ಲಿ ಸುಮಾರು ಪ್ರೋಟಾನಿನಷ್ಟೇ ಇರುವ ಕಾರಣ ಎಲ್ಲ ಧಾತುಗಳ ಪರಮಾಣುಭಾರಗಳೂ ಪೂರ್ಣಾಂಕಗಳೇ ಆಗಬೇಕು ಎಂಬ ಪೌತನ ಭಾವನೆ ಕಳೆದ ಶತಮಾನಗಳಲ್ಲಿ ನಡೆಸಿದ ಪರಮಾಣುಭಾರನಿರ್ಣಯದ ಪ್ರಯೋಗಗಳಿಂದ ಸಿದ್ಧವಾಗಲಿಲ್ಲ. ಕ್ಲೋರಿನ್ ಪರಮಾಣುಭಾರ 35.453, ತಾಮ್ರದ ಪರಮಾಣುಭಾರ 63.54, ಸತುವಿನ ಪರಮಾಣು ಭಾರ 65.38. ಇವೇಕೆ ಹೀಗೆ ಭಿನ್ನಾಂಶಗಳನ್ನೊಳಗೊಂಡಿವೆ ಎಂಬುದು ಕುತೂಹಲದಾಯಕ ಪ್ರಶ್ನೆಯಾಗಿತ್ತು.

ಇಷ್ಟರಲ್ಲೇ ಯುರೇನಿಯಮ್, ಆಕ್ಟೀನಿಯಮ್ ಮತ್ತು ಥೋರಿಯಮ್ ಧಾತುಗಳು ನೈಸರ್ಗಿಕವಾಗಿ ವಿಕಿರಣ ಕ್ರಿಯಾಶಕ್ತಿಯನ್ನು (ರೇಡಿಯೋ ಆಕ್ಟಿವಿಟಿ ) ಪ್ರದರ್ಶಿಸುತ್ತ ತಮ್ಮ ತಮ್ಮ ಶ್ರೇಣಿಗಳ ಅಂತ್ಯದಲ್ಲಿ ರೇಡಿಯಮ್ G, ಆಕ್ಟೀನಿಯಮ್ D ಮತ್ತು ಥೋರಿಯಮ್ D ಆಗಿ ಪರಿವರ್ತನೆ ಹೊಂದುತ್ತಿರುವುದು ತಿಳಿದುಬಂದಿತು. ಇವೆಲ್ಲ ಪರಮಾಣು ಸಂಖ್ಯೆ 82 ಉಳ್ಳವು. ಇವನ್ನು ಪರಮಾಣುಸಂಖ್ಯೆ 82 ಇರುವ ಸೀಸದಿಂದ (Pb) ರಾಸಾಯನಿಕವಾಗಿ ಬೇರ್ಪಡಿಸಲಾರೆವು. ಚುಟುಕಿನಲ್ಲಿ ಇವು ಸೀಸದ ರೂಪಗಳೇ. ಇವನ್ನು

$$^{210}_{82}RaD,\ ^{206}_{82}RaB,\ ^{211}_{82}AcB,\ ^{207}_{82}AcD,\ ^{212}_{82}ThB \text{ ಮತ್ತು } ^{208}_{82}ThD$$

ಎಂದು ಬರೆದುಕೊಳ್ಳಬಹುದು. ಪ್ರೋಟಾನುಗಳ ಸಂಖ್ಯೆ ನ್ಯೂಕ್ಲಿಯಸಿನಲ್ಲಿ 82 ಮತ್ತು ಕೇಂದ್ರೇತರ ಭಾಗದಲ್ಲಿ 82 ಎಲೆಕ್ಟ್ರಾನುಗಳು ಇವೆಲ್ಲವುಗಳಲ್ಲಿಯೂ ಇವೆ; ಇವು ಸೀಸದ ಐಸೊಟೋಪುಗಳೇ ಎಂದು ಮೊತ್ತಮೊದಲು ಫ್ರೆಡರಿಕ್ ಸಾಡ್ಡಿ ಪ್ರತಿಪಾದಿಸಿದ. ಇವು

ಐಸೊಟೋಪುಗಳೆಂದು ಅವನು ನಾಮಕರಣ ಮಾಡಿದನಲ್ಲದೆ ವಿವಿಧ ಐಸೊಟೋಪುಗಳ ಮಿಶ್ರಣವಿದ್ದುದರಿಂದಲೇ ಸಾಮಾನ್ಯ ಸೀಸದ ಪರಮಾಣು ಭಾರ 207.21 ಎಂದೂ ಸಾರಿದ. ಆದ್ದರಿಂದ Z ಒಂದೇ ಇರುವ ಆದರೆ Nನ ಬೆಲೆ ಹೆಚ್ಚು ಕಡಿಮೆಯಾಗುವ ಕಾರಣ ಭಾರ A(=Z+N) ವ್ಯತ್ಯಾಸವಾಗುವ ಧಾತುವಿನ ರೂಪಗಳೇ ಅದರ ಐಸೊಟೋಪುಗಳು. ಕೆಲವೇ ನಿದರ್ಶನಗಳನ್ನು ಪರಿಶೀಲಿಸಬಹುದು.

| ಧಾತು | ಪರಮಾಣು ಸಂಖ್ಯೆ | ಐಸೊಟೋಪುಗಳು |
|---|---|---|
| ಕಬ್ಬಿಣ Fe | 26 | ${}^{54}_{26}Fe$, ${}^{56}_{26}Fe$, ${}^{57}_{26}Fe$, ${}^{58}_{26}Fe$ |
| ತವರ Sn | 50 | ${}^{112}_{50}Sn$, ${}^{114}_{50}Sn$, ${}^{115}_{50}Sn$, ${}^{116}_{50}Sn$, ${}^{117}_{50}Sn$, ${}^{118}_{50}Sn$, ${}^{119}_{50}Sn$, ${}^{120}_{50}Sn$, ${}^{122}_{50}Sn$, ${}^{124}_{50}Sn$ |
| ನಿಯಾನ್ Ne | 10 | ${}^{20}_{10}Ne$, ${}^{21}_{10}Ne$, ${}^{22}_{10}Ne$ |

**ಐಸೋಟೋಪುಗಳ ಆವಿಷ್ಕಾರ :** ಜೆ.ಜೆ. ಥಾಮ್ಸನ್ 1913ರಲ್ಲಿ ನಡೆಸಿದ ಪ್ರಯೋಗವನ್ನು ಇಲ್ಲಿ ಮೊದಲು ಸ್ಮರಿಸಬೇಕು. ಹೈಡ್ರೋಜನ್ ಧಾತುವಿನ ಧನ ಅಯಾನುಗಳನ್ನು ಪ್ರಬಲವಾದ ಹಾಗೂ ಏಕಕಾಲದಲ್ಲೂ ಏಕಸ್ಥಳದಲ್ಲೂ ವರ್ತಿಸುವ ಸ್ಥಾಯಿ ವಿದ್ಯುತ್ಕ್ಷೇತ್ರ ಮತ್ತು ಕಾಂತಕ್ಷೇತ್ರಗಳ ಮೂಲಕ ಹಾಯಿಸಿದಾಗ ಎಲ್ಲ ಅಯಾನುಗಳಲ್ಲೂ ವಿದ್ಯುದಂಶ ಸಮಾನವಿದ್ದ ನಿಮಿತ್ತ ಇವುಗಳ ಭಾರಗಳಲ್ಲಿ ವ್ಯತ್ಯಾಸವಿದ್ದರೆ ಮಾತ್ರ ಇವು ಪ್ರತ್ಯೇಕ ಪಥಗಳಲ್ಲಿ ಮುಂಬರಿದು ಇವನ್ನು ಪರೀಕ್ಷಿಸುವ ಪರದೆಯ ಮೇಲೆ ಪ್ರತ್ಯೇಕ ಪ್ಯರಾಬೊಲಗಳನ್ನು ಗುರುತಿಸುತ್ತವೆ ಎಂದು ಊಹಿಸಿದ್ದ. ಈ ಊಹೆ ಪ್ರಯೋಗದಲ್ಲಿ ಸ್ಥಿರಪಟ್ಟಿತು–ಹೈಡ್ರೋಜನ್ ಧಾತುವನ್ನು ವಿರಳವಾಗಿ ತುಂಬಿಸಿದ ನಳಿಗೆಯೊಳಗಿನ ಪ್ರಯೋಗಗಳಲ್ಲಿ ಧಾತುವಿನ ಪರಮಾಣು ಮತ್ತು ಅಣುಗಳಿಗೆ ಅನುಗುಣವಾದ ಎರಡು ಪ್ಯರಾಬೊಲಗಳು ಕಂಡುಬಂದುವು. ಮುಂದೆ ನಿಯಾನ್ ಅನಿಲವನ್ನು ನಳಿಗೆಯೊಳಗೆ ಉಪಯೋಗಿಸಿದಾಗಲೂ ಇದೇ ಪರಿಸ್ಥಿತಿ ಉಂಟಾಯಿತು. ಗುಣಿಸಿ ನೋಡಿದಾಗ ಇಲ್ಲಿ e ಸಮಾನವಿರುತ್ತ ಪರಮಾಣು ಭಾರಗಳು 20 ಮತ್ತು 22ರಂತಿರಬೇಕು ಎಂದು ನಿಶ್ಚಯಿಸಲಾಯಿತು. ಇದೇ ಐಸೊಟೋಪುಗಳ ಆವಿಷ್ಕಾರದ ಮೊತ್ತಮೊದಲಿನ ಯಶಸ್ವಿಪ್ರಯೋಗ.

ಒಂದು ಪರಮಾಣುವಿನ ಐಸೊಟೋಪುಗಳನ್ನು ಪ್ರತ್ಯೇಕಿಸುವ ಇತರ ಪರಿಷ್ಕೃತ ಪ್ರಯೋಗಗಳನ್ನು ನಡೆಸಿದವರು ಎಫ್. ಡಬ್ಲ್ಯು. ಆಸ್ಟನ್, ಡೆಂಪ್‌ಸ್ಟರ್, ಬೈನ್‌ಬ್ರಿಜ್ ಹಾಗೂ ನೀರ್. ಇವುಗಳಲ್ಲಿ ಆಯಾ ಧಾತುಗಳ ಅಯಾನುಗಳ ಚೂಪಾದ ಕಂಬಿಯೊಂದನ್ನು ಮೊದಲು ಪ್ರಬಲ ವಿದ್ಯುತ್ ಕ್ಷೇತ್ರದ ಮೂಲಕ ಹಾಯಿಸಿ ಅಲ್ಲಿ ಇವುಗಳ ವೇಗಕ್ಕೇ ಅನುಗುಣವಾಗಿ ವಿಸ್ತರಿಸಲಾಗುತ್ತದೆ; ಮುಂದೆ ಇವು ಕಾಂತಕ್ಷೇತ್ರವನ್ನು ದಾಟುವಷ್ಟರಲ್ಲಿ ಆಸ್ಟನ್ನಿನ ದ್ರವ್ಯಮಾನರೋಹಿತಲೇಖಕದಲ್ಲಿ (ಮಾಸ್ ಸ್ಪೆಕ್ಟ್ರೋಗ್ರಾಫ್) ಒಂದೇ ಭಾರದ ಕಣಗಳು (ಇವುಗಳ ವೇಗಗಳಲ್ಲಿ ಹೆಚ್ಚು ಕಡಿಮೆ ಇದ್ದರೂ) ಒಂದೆಡೆ ಬಂದು ನಿಶ್ಚಿತ ಸ್ಥಳದಲ್ಲಿ ಇಡಲಾದ ಫೋಟೋಫಲಕದ ಮೇಲೆ ಎರಗುವುವು. ಪ್ರತ್ಯೇಕಭಾರದ ಕಣಗಳು ಇನ್ನೊಂದೆಡೆ, ಮತ್ತೊಂದು ಭಾರದ ಕಣಗಳು ಮತ್ತೊಂದೆಡೆ ಎಂಬಂತೆ ಬಂದೆರಗುವ ಕಾರಣ ಮೂಲ ಕಂಬಿಯಲ್ಲಿನ ಕಣಗಳು ತಂತಮ್ಮ ದ್ರವ್ಯಮಾನಕ್ಕೆ ಅನುಗುಣವಾಗಿ ಚದರಿಹೋಗುವುವು (ಸ್ಕ್ಯಾಟರ್) ಮತ್ತು ಪ್ರತ್ಯೇಕಗೊಳ್ಳುವುವು.

ಇವುಗಳ ಭಾರಗಳನ್ನು ನಿರ್ಣಯಿಸಬಹುದು. ಆಸ್ಟನ್ ತನ್ನ ಉಪಕರಣದಲ್ಲಿ ${}^{35}_{17}$ ಕ್ಲೋರಿನ್ $\left({}^{35}_{17}Cl\right)$ ಮತ್ತು ${}^{37}_{17}$ ಕ್ಲೋರಿನ್ $\left({}^{37}_{17}Cl\right)$ ಇವನ್ನೂ ಪ್ರತ್ಯೇಕಿಸಿದ; ಮುಂದೆ ${}^{20}_{10}$ ನಿಯಾನ್ $\left({}^{20}_{10}Ne\right)$ ${}^{21}_{10}$ ನಿಯಾನ್ $\left({}^{21}_{10}Ne\right)$, ${}^{22}_{10}$ ನಿಯಾನ್ $\left({}^{22}_{10}Ne\right)$ ಇವನ್ನೂ ಹಾಗೆಯೇ ${}^{36}_{18}$ ಆರ್ಗಾನ್ $\left({}^{36}_{18}A\right)$, ${}^{38}_{18}$ ಆರ್ಗಾನ್ $\left({}^{38}_{18}A\right)$, ${}^{40}_{18}$ ಆರ್ಗಾನ್ $\left({}^{40}_{18}A\right)$ ಇವನ್ನೂ. ಬೇರೆಬೇರೆಯಾಗಿ ಗುರುತಿಸಿದೆ.

ಸ್ಥಿರ ಮತ್ತು ಅಸ್ಥಿರ ಐಸೋಟೋಪುಗಳು: ಹೆಚ್ಚೆಂದರೆ 104 ಪ್ರತ್ಯೇಕ ಧಾತುಗಳಿವೆ. ಇವುಗಳ ಪೈಕಿ ಪರಮಾಣುಸಂಖ್ಯೆ 83ರ ಅನಂತರದ ಧಾತುಗಳು ವಿಕಿರಣಶೀಲವಾಗಿರುವು ದರಿಂದ ಅಸ್ಥಿರಗಳು. ಇವು ಅನವರತವೂ ಕಣಗಳನ್ನೊ ವಿಕಿರಣಗಳನ್ನೊ (ರೇಡಿಯೇಷನ್) ಕಕ್ಕುತ್ತ ಕೊನೆಗೆ 83 ಇಲ್ಲವೇ 82 ಪರಮಾಣು ಸಂಖ್ಯೆಯ ಧಾತುಗಳ ಐಸೊಟೋಪುಗಳಾಗಿ ಪರಿವರ್ತನೆ ಹೊಂದುತ್ತವೆ ಎಂದ ಬಳಿಕ 104 ಧಾತುಗಳ ಸುಮಾರು 1,300 ಐಸೊಟೋಪುಗಳಲ್ಲಿ ಇಂಥ ಅಸ್ಥಿರ ಐಸೊಟೋಪುಗಳು ಇದ್ದೇ ಇರಬೇಕೆಂಬ ಭಾವನೆ ಮೊದಲಲ್ಲೇ ಬೆಳೆಯಲಾರಂಭಿಸಿತು. ಹೀಗೆಯೇ ಪ್ರಯೋಗಗಳನ್ನು ನಡೆಸಿದಲ್ಲಿ ಹೈಡ್ರೊಜನ್ನಿನಿಂದ ಬಿಸ್ಮತ್ ತನಕ ($_1$H ನಿಂದ 83 Be ತನಕ) 270ಕ್ಕೂ ಮಿಕ್ಕಿದ ಸ್ಥಿರ ಐಸೊಟೋಪುಗಳು ದೊರೆತವು. ಇವೇ ಅಲ್ಲದೆ ಇಂಥ ಸ್ವಯಂವಿಕಿರಣಕ್ರಿಯಾಶೀಲವಲ್ಲದ (ನಾನ್‌ರೇಡಿಯೊಆಕ್ಟಿವ್) ಧಾತುಗಳ ಕೆಲವು ಐಸೊಟೋಪುಗಳು ಸಹ ವಿಕಿರಣಕ್ರಿಯೆಯನ್ನು ತೋರುತ್ತವೆ. ಕೆಳಗಿನ ಯಾದಿಯಲ್ಲಿ ಅವನ್ನು ನಕ್ಷತ್ರ ಚಿಹ್ನೆಯಿಂದ ಗುರುತಿಸಿದೆ.

ವಿಕಿರಣಕ್ರಿಯಾಶೀಲವಲ್ಲದ ಕೆಲವು ಧಾತುಗಳ ಐಸೊಟೋಪುಗಳ ಯಾದಿ.

| ಪರಮಾಣು | | ಪರಮಾಣು ಸಂಖ್ಯೆ | | ಐಸೊಟೋಪುಗಳು |
|---|---|---|---|---|
| ಹೈಡ್ರೊಜನ್, H | ... | 1 | ... | 1,2 |
| ಹೀಲಿಯಂ, He | ... | 2 | ... | 3,4 |
| ಲಿಥಿಯಂ, Li | ... | 3 | ... | 6,7 |
| ಬೆರಿಲಿಯಂ, Be | ... | 4 | ... | 9 |
| ಬೋರಾನ್, B | ... | 5 | ... | 10,11 |
| ಕಾರ್ಬನ್, C | ... | 6 | ... | 12,13 |
| ನೈಟ್ರೊಜನ್, N | ... | 7 | ... | 14,15 |
| ಆಕ್ಸಿಜನ್, O | ... | 8 | ... | 16,17,18 |
| ಫ್ಲೋರಿನ್, F | ... | 9 | ... | 19 |
| ನಿಯಾನ್, Ne | ... | 10 | ... | 20,21,22 |
| ಸೋಡಿಯಂ, Na | ... | 11 | ... | 23 |
| ಮೆಗ್ನೀಸಿಯಂ, Mg | ... | 12 | ... | 24,25,26 |
| ಅಲ್ಯೂಮಿನಿಯಂ, Al | ... | 13 | ... | 27 |
| ಸಿಲಿಕಾನ್, Si | ... | 14 | ... | 28,29,30 |
| ಫಾಸ್ಫರಸ್, P | ... | 15 | ... | 31 |
| ಸಲ್ಫರ್, S | ... | 16 | ... | 32,33,34,36 |
| ಕ್ಲೋರಿನ್, Cl | ... | 17 | ... | 35,37 |
| ಆರ್ಗಾನ್, A | ... | 18 | ... | 36,38,40 |
| ಪೊಟ್ಯಾಸಿಯಂ, K | ... | 19 | ... | 39,40*,41 |
| ಕ್ಯಾಲ್ಸಿಯಂ, Ca | ... | 20 | ... | 40,42,43,44,46,48 |
| ಸ್ಕೇಂಡಿಯಂ, Se | ... | 21 | ... | 45 |
| ಟೈಟೇನಿಯಂ, Ti | ... | 22 | ... | 46,47,48,49,50 |
| ವೆನೇಡಿಯಂ, V | ... | 23 | ... | 50*,51 |
| ರುಬೀಡಿಯಂ, Rb | ... | 37 | ... | 85,87* |
| ಟೆಕ್ನೀಶಿಯಂ, Te | ... | 43 | ... | ... ... |
| ಟಿನ್, Sn | ... | 50 | ... | 112,114,115,116, 117,118,119,120 122,124 |
| ಪ್ರೊಥಿಮೆಯಂ, Pm | ... | 61 | ... | ... ... |
| ಥೂಲೀಯಂ, Tm | ... | 69 | ... | 169 |
| ಗೋಲ್ಡ್ (ಚಿನ್ನ), Au | ... | 79 | ... | 197 |
| ಲೆಡ್ (ಸೀಸ), Pb | ... | 82 | ... | 204,206,207,208 |

ಹೀಗೆ ಸ್ಥಿರ ಐಸೊಟೋಪುಗಳು, ಅಸ್ಥಿರ ಐಸೊಟೋಪುಗಳು ಮತ್ತು ತೀರ ಅಸ್ಥಿರ ಐಸೊಟೋಪುಗಳು (ಅಂದರೆ ಕೃತಕವಾಗಿ ನಿರ್ಮಾಣಗೊಂಡ ಸ್ವಲ್ಪ ಸಮಯದಲ್ಲೇ ತಂತಮ್ಮ ವಿಕಿರಣಗಳ ಪರಿಣಾಮವಾಗಿ ಧಾತು ಪರಿವರ್ತನೆ ಹೊಂದುವ ಐಸೊಟೋಪುಗಳು) ಸುಮಾರು 1,000ವನ್ನೂ ಮಿಕ್ಕಿವೆ. ಇಂಥ ಐಸೊಟೋಪುಗಳ ನ್ಯೂಕ್ಲಿಯಸುಗಳ ವಿವಿಧ ಕಣಗಳ ನಡುವೆ ಕಂಡುಬರುವ ವಿಷಮತೋಲದ ಕಾರಣದಿಂದ ಅಸ್ಥಿರತೆ ಇದೆ; ಇವು ಕಣಗಳನ್ನೋ ವಿಕಿರಣಗಳನ್ನೋ ಹೊರಗೆಡುಹುತ್ತ ಸ್ಥಿರತೆಯನ್ನು ಪಡೆಯುತ್ತವೆ.

ಇನ್ನು ಸ್ಥಿರ ಐಸೊಟೋಪುಗಳನ್ನು ಪರೀಕ್ಷಿಸಿದಾಗ ತಿಳಿಯಬಂದ ವಿಚಾರಗಳು ಹೀಗಿವೆ:

1. 20, 28, 50, 82 ಪರಮಾಣುಸಂಖ್ಯೆಗಳ್ಳುಳ್ಳ ಧಾತುಗಳ ಐಸೊಟೋಪುಗಳು ಬಲು ಸ್ಥಿರವಾಗಿವೆ. ಉದಾಹರಣೆಗೆ Z=20 ಇರುವ ಕ್ಯಾಲ್ಸಿಯಮ್ ಧಾತುವಿನ ಐಸೊಟೋಪುಗಳು ${}^{40}_{20}Ca, {}^{42}_{20}Ca, {}^{43}_{20}Ca, {}^{44}_{20}Ca, {}^{46}_{20}Ca$, ಮತ್ತು ${}^{48}_{20}Ca$

2. ಹೆಚ್ಚು ಭಾರವಿಲ್ಲದ ಧಾತುಗಳ ಐಸೊಟೋಪುಗಳೆಲ್ಲ ಸ್ಥಿರಗಳೇ. ಉದಾಹರಣೆಗೆ ಆವರ್ತಕೋಷ್ಟಕದಲ್ಲಿ ಪರಮಾಣುಸಂಖ್ಯೆ 18ರ ತನಕದ ಐಸೊಟೋಪುಗಳೆಲ್ಲ ಸ್ಥಿರಗಳೇ.

3. ಪರಮಾಣು ಸಂಖ್ಯೆ Z (ಪ್ರೋಟಾನುಗಳ ಸಂಖ್ಯೆ) ಮತ್ತು ನ್ಯೂಟ್ರಾನುಗಳ ಸಂಖ್ಯೆ ಪರಸ್ಪರ ಸಮಾನವಾಗಿ ಇರುವ ಕಣಗಳೆಲ್ಲವೂ ಸುಸ್ಥಿರಗಳೇ. ಇದು Z ಅಲ್ಪವಿರುವ ಎಲ್ಲ ಐಸೊಟೋಪುಗಳಿಗೆ ಅನ್ವಯಿಸುತ್ತದೆ. ಉದಾಹರಣೆಗೆ ${}^{2}_{1}H$ ಡ್ಯೂಟೀರಿಯಮ್, ಗುರುತರ ಹೈಡ್ರೊಜನ್), ${}^{4}_{2}He$ ${}^{16}_{8}O$ ಮೊದಲಾದವು ತೀರ ಸ್ಥಿರ ಐಸೊಟೋಪುಗಳು.

4

| | | ಪ್ರೋಟಾನುಗಳ ಸಂಖ್ಯೆ (Z) | |
|---|---|---|---|
| | | ಸಮ | ಬೆಸ |
| ನ್ಯೂಟ್ರಾನುಗಳ ಸಂಖ್ಯೆ (N) | ಸಮ | 164 | 50 |
| | ಬೆಸ | 54 | 4 |

N, Zಗಳೆರಡೂ ಸಮಸಂಖ್ಯೆಗಳಾದ ಐಸೊಟೋಪುಗಳ ಸಂಖ್ಯೆ ಹೆಚ್ಚು (164). ಇವೆರಡೂ ಬೆಸಸಂಖ್ಯೆಗಳಾಗಿ ಉಳ್ಳ ಐಸೊಟೋಪುಗಳು ತೀರ ವಿರಳ (ನಾಲ್ಕು ಮಾತ್ರ), N, Zಗಳಲ್ಲಿ ಯಾವುದಾದರೊಂದು ಸಮ ಇನ್ನೊಂದು ಬೆಸಸಂಖ್ಯೆ ಉಳ್ಳ ಐಸೊಟೋಪುಗಳು ಸುಮಾರು 50, 54 ರಂತಿವೆ. ಎರಡೂ ಬೆಸಸಂಖ್ಯೆ ಉಳ್ಳ ಐಸೊಟೋಪುಗಳು ಈ ಕೆಳಗಿನ ನಾಲ್ಕು ಮಾತ್ರ

$${}^{2}_{1}H, {}^{6}_{3}Li, {}^{10}_{5}B, {}^{14}_{7}N$$

5. ಸಮ ಸಮಸಂಖ್ಯೆಯ ಪ್ರೋಟಾನ್ ಮತ್ತು ನ್ಯೂಟ್ರಾನುಗಳಿರುವ ${}^{13}_{8}O, {}^{24}_{12}Mg, {}^{28}_{14}Si, {}^{40}_{20}Ca, {}^{48}_{22}Ti$, ಮತ್ತು ${}^{56}_{26}Fe$ ಬಹಳ ಹೇರಳವಾಗಿವೆ. ಈ ಐಸೊಟೋಪುಗಳಿಂದಲೇ ಭೂಮಿಯ ಪೃಷ್ಠದ ಶೇ.80 ತುಂಬಿದೆ.

6. ಸಮಸಂಖ್ಯೆಯ Z ಉಳ್ಳ ಧಾತುವಿನ ಐಸೊಟೋಪುಗಳಲ್ಲಿ ಪರಮಾಣುಭಾರ ಸಮ ಆಗಿರುವಂಥವೇ ಹೆಚ್ಚು. ಉದಾಹರಣೆಗೆ Z=54 ಇರುವ ಕ್ಸೆನಾನಿನ ಐಸೊಟೋಪುಗಳಲ್ಲಿ 129, 131 ಮಾತ್ರ ಬೆಸಸಂಖ್ಯೆಯ ಭಾರದವು. ಉಳಿದವುಗಳ ಭಾರಗಳು 124, 126, 128, 130, 132, 134 ಮತ್ತು 136. ಇದು (4)ರಲ್ಲಿ ಪ್ರಸ್ತಾಪಿಸಿದ ವಿವರಗಳನ್ನೇ ಪುಷ್ಟೀಕರಿಸುತ್ತದೆ.

7. ತವರದ ಅನಂತರ ಬಿಸ್ಮತ್ ತನಕದ ಧಾತುಗಳಿಗೆ ಅನೇಕ ಐಸೊಟೋಪುಗಳಿವೆ.

ಐಸೊಟೋಪುಗಳ ಸಾಪೇಕ್ಷ ವೈಫಲ್ಯ: ಯಾವ ಧಾತುಗಳಿಗೆ ವಿಪುಲ ಸಂಖ್ಯೆಯ ಐಸೊಟೋಪುಗಳಿವೆ? ಪರಮಾಣುಸಂಖ್ಯೆ 50 ಇರುವ ತವರದ 10 ಐಸೊಟೋಪುಗಳಿವೆ. ಇದರ ಅನಂತರದ ಎಲ್ಲ ಪರಮಾಣುಗಳಲ್ಲಿ ಇರುವ ಐಸೊಟೋಪುಗಳ ಸಂಖ್ಯೆಯೂ ಅಧಿಕವಾಗಿದೆ.

| ಧಾತು | ಪರಮಾಣುಸಂಖ್ಯೆ | ಐಸೊಟೋಪುಗಳ ಭಾರಗಳು |
|---|---|---|
| ಟಿನ್, Sn | 50 | 112, 114, 115, 116, 1174, 118, 119, 120, 122, 12, |
| ಗೆಡೊಲೀನಿಯಂ, Gd | 64 | 152, 154, 155, 156, 157, 158, 160 |
| ಟಂಗ್‌ಸ್ಟನ್, W | 74 | 180, 182, 183, 184, 186 |
| ಪ್ಲ್ಯಾಟಿನಂ, Pt | 78 | 190, 192, 194, 195, 196, 198 |
| ಮರ್ಕ್ಯುರಿ (ಪಾದರಸ), Hg | 80 | 196, 198, 199, 200, 201, 202, 204. |

ಇಲ್ಲಿ ನಾವು ಸ್ಥಿರ ಐಸೊಟೋಪುಗಳನ್ನು ಮಾತ್ರ ಪ್ರಸ್ತಾಪಿಸಿದ್ದೇವೆ. ಕೆಲವು ಧಾತುಗಳ ಸ್ಥಿರ ಐಸೊಟೋಪುಗಳನ್ನು ಮೇಲಿನ ಯಾದಿಯಲ್ಲಿ ಬರೆದಿದೆ. ಪರಮಾಣು ಸಂಖ್ಯೆ ಸುಮಾರು 50ರ ತರುವಾಯದ 90% ರಷ್ಟು ಧಾತುಗಳಲ್ಲಿ ಐಸೊಟೋಪುಗಳು ಅಧಿಕಸಂಖ್ಯಾತವಾಗಿವೆ ಎಂಬುದು ಸ್ಪಷ್ಟವಿದೆ.

**ಒಂದೇ ಧಾತುವಿನ ಐಸೊಟೋಪುಗಳ ನಿಷ್ಪತ್ತಿ:** ಒಂದೇ ಧಾತುವಿನ ವಿವಿಧ (ಸ್ಥಿರ) ಐಸೊಟೋಪುಗಳಲ್ಲಿ ಯಾವ ಐಸೊಟೋಪ್ ಅಧಿಕವಾಗಿದೆ. ಯಾವುದು ಕಡಿಮೆ ಇದೆ ಎನ್ನುವುದರ ವಿಚಾರ ಎರಡನೆಯದು. ಇದನ್ನು ಐಸೊಟೋಪುಗಳ ವೈಫಲ್ಯ ಎನ್ನುವುದಕ್ಕಿಂತಲೂ, ಇತ್ತೀಚೆಗೆ, ವಿವಿಧ ಐಸೊಟೋಪುಗಳು ಒಂದೇ ಧಾತುವಿನಲ್ಲಿರುವ ಶೇಕಡಾ (ಇಲ್ಲವೆ ನಿಷ್ಪತ್ತಿ) ಎನ್ನುತ್ತಾರೆ. ಹೈಡ್ರೊಜನ್ನಿನ ಪರಮಾಣುಭಾರ 1.008; ಪರಮಾಣುಸಂಖ್ಯೆ 1; ಇದರಲ್ಲಿ ಸ್ಥಿರವಾದ ಐಸೊಟೋಪುಗಳು ಎರಡು ${}^{1}_{1}H$ ಮತ್ತು ${}^{2}_{1}H$ ಇವು 99.98% ಮತ್ತು 0.02% ರಂತೆ ಸಾಮಾನ್ಯ ಹೈಡ್ರೊಜನ್ನಿನಲ್ಲಿ ಕಂಡುಬರುತ್ತವೆ. ಹೈಡ್ರೊಜನ್ನಿನ ಇನ್ನೊಂದು ಐಸೊಟೋಪ್ ${}^{3}_{1}H$ (ಟ್ರೈಟಿಯಮ್ 3) ಇದರಲ್ಲಿ 1 ಪ್ರೋಟಾನ್, 2 ನ್ಯೂಟ್ರಾನುಗಳಿವೆ. ಆದರೆ ಇದು ವಿಕಿರಣಶೀಲ ನ್ಯೂಕ್ಲಿಯಸ್ ಇದ್ದು $\beta$ ಕಣಗಳನ್ನು ಕಕ್ಕುತ್ತ ಕ್ಷಯಿಸುವುದು; ಸರಿಯಾಗಿ ಹೇಳುವುದಾದರೆ ಹೀಲಿಯಮ್ ಆಗಿ ಪರಿವರ್ತನೆಗೊಳ್ಳುತ್ತದೆ. ಇದರ ಅರ್ಧಾಯು (ಹಾಫ್ ಲೈಫ್) 12.1 ವರ್ಷಗಳು. ಅಂತೆಯೇ ಇನ್ನೂ ಕೆಲವು ಧಾತುಗಳ ಐಸೊಟೋಪುಗಳ ಕಕ್ಕುವ ವಿಕಿರಣಗಳನ್ನೂ ಹಾಗೆಯೇ ಅವುಗಳ ಅರ್ಧಾಯುಗಳನ್ನೂ ಮುಂದೆ ಕೊಟ್ಟಿದೆ.

| ಸಂಕೇತ | ಧಾತು | ಪರಮಾಣುಸಂಖ್ಯೆ Z | ಪರಮಾಣುಭಾರ | ಐಸೊಟೋಪುಭಾರ Z+N | ಶೇಕಡಾ |
|---|---|---|---|---|---|
| H | ಹೈಡ್ರೊಜನ್ | 1 | 1.008 | 1 | 99.98 |
| | | | | 2 | 0.02 |
| Ne | ನಿಯಾನ್ | 10 | 20.183 | 20 | 90.00 |
| | | | | 21 | 0.27 |
| | | | | 22 | 9.73 |
| P | ಫಾಸ್ಫರಸ್ | 15 | 30.974 | 31 | 100.00 |
| Zn | ಝಿಂಕ್ (ಸತು) | 30 | 65.38 | 64 | 50.90 |
| | | | | 66 | 27.30 |
| | | | | 67 | 3.90 |
| | | | | 68 | 17.40 |
| | | | | 70 | 0.50 |

ಇನ್ನು ಇವೇ ಧಾತುಗಳ ಕೆಲವು ಅಸ್ಥಿರ (ವಿಕಿರಣಶೀಲ) ಐಸೊಟೋಪುಗಳ ವಿವರ ಹೀಗಿದೆ:

| ಧಾತು | ಅಸ್ಥಿರ ಐಸೋಟೋಪ್ | ವಿಕಿರಣ | ಅರ್ಧಾಯು |
|---|---|---|---|
| $_1$ಹೈಡ್ರೋಜನ್ | ${}^{3}_{1}H$ | $\beta$–ಕಣ | 12.3 ವರ್ಷಗಳು |
| $_{10}$ನಿಯಾನ್ | ${}^{19}_{10}Ne$ | $\beta$ +ಕಣ | 18 ಸೆಕೆಂಡುಗಳು |
| | ${}^{23}_{10}Ne$ | $\beta$ –ಕಣ | 38 ಸೆಕೆಂಡುಗಳು |
| $_{15}$ಫಾಸ್ಫರಸ್ | ${}^{29}_{15}P$ | $\beta$ +ಕಣ | 4.3 ಸೆಕೆಂಡುಗಳು |
| | ${}^{30}_{15}P$ | $\beta$ +ಕಣ | 2.5 ಮಿನಿಟುಗಳು |
| | ${}^{30}_{15}P$ | $\beta$ –ಕಣ | 14.5 ದಿವಸಗಳು |
| | ${}^{34}_{15}P$ | $\beta$ –ಕಣ | 12.4 ಸೆಕೆಂಡುಗಳು |
| $_{30}$ಝಿಂಕ್ | ${}^{65}_{30}Zn$ | $\beta$ +ಕಣ ಮತ್ತು $\gamma$ | 245 ದಿವಸಗಳು |
| | ${}^{69}_{30}Zn$ | $\beta$ –ಕಣ | 55 ಮಿನಿಟುಗಳು |
| | ${}^{71}_{30}Zn$ | $\beta$ –ಕಣ | 2.2 ಮಿನಿಟುಗಳು |

**ಐಸೋಟೋಪ್ ಸಂಖ್ಯೆ (I) :** ಒಂದು ನ್ಯೂಕ್ಲಿಯಸಿನಲ್ಲಿ ಭಾರ ಹೆಚ್ಚಿದಂತೆ ನ್ಯೂಟ್ರಾನುಗಳ ಸಂಖ್ಯೆ ಪ್ರೋಟಾನುಗಳ ಸಂಖ್ಯೆಗಿಂತ ಹೆಚ್ಚುತ್ತಾ ಹೋಗುತ್ತದೆ. ಇವುಗಳ ವ್ಯತ್ಯಾಸ ಅಂದರೆ (N-Z)ನ್ನು ಐಸೋಟೋಪ್ ಸಂಖ್ಯೆ ಎಂದು (ಸುಮಾರು 1921ರಿಂದ) ಕರೆಯಲಾಗುತ್ತಿದೆ. N-Z =A-2Z. ಇದಕ್ಕೆ ಐಸೋಟೋಪ್ ಸಂಖ್ಯೆ ಎಂಬ ಹೆಸರು ಅನ್ವರ್ಥಕವಲ್ಲ. ಆದರೆ 1919–21ರ ನಡುವೆ ಐಸೋಟೋಪುಗಳ ಹೊಸತನ ಮೂಡಿದ ಸನ್ನಿವೇಶದಲ್ಲಿ ಮಾಡಿದ ನಾಮಕರಣ ಹಾಗೆಯೇ ಉಳಿದಿದೆ. ನ್ಯೂಕ್ಲಿಯಸಿನ ಒಟ್ಟು ಬಂಧಕ ಶಕ್ತಿಯನ್ನು ಎಣಿಸುವಾಗ ಇದರ ಲೆಕ್ಕಾಚಾರ ಕಂಡುಬರುತ್ತದೆ. ನ್ಯೂಟ್ರಾನುಗಳ ಆಧಿಕ್ಯದ ವರ್ಗಕ್ಕೆ ಅನುಪಾತಿತವಾದ ಶಕ್ತಿ ಒಟ್ಟು ಬಂಧಕ ಶಕ್ತಿಯಲ್ಲಿ ಕಡಿಮೆಯಾಗುತ್ತದೆ.

**ರೋಹಿತಗಳಲ್ಲಿ ಐಸೋಟೋಪುಗಳ ಪರಿಣಾಮ:** ರೋಹಿತದಲ್ಲಿ ಪ್ರತಿಯೊಂದು ಪರಮಾಣುವೂ ತನ್ನ ವಿಶಿಷ್ಟವಾದ ಬಣ್ಣದ ರೇಖೆಗಳನ್ನು ಪ್ರದರ್ಶಿಸುವುದು. ಈ ಕಾರಣದಿಂದಲೇ ಅತಿಸೂಕ್ಷ್ಮ ಪರಿಮಾಣದ ಧಾತುಗಳನ್ನು ಸಹ ಗುರುತಿಸಲು ಬರುತ್ತದೆ. ಪ್ರತಿ ಪರಮಾಣು ತೋರತಕ್ಕ ಬೆಳಕಿನ ತರಂಗಮಾನವನ್ನು ಕೊಡುವ ಸೂತ್ರವಿದೆ. ಇದರಲ್ಲಿ ರೈಡ್‌ಬರ್ಗ್‌ನ ಸ್ಥಿರಾಂಶವೆಂಬ ಸಂಖ್ಯೆ ಪರಮಾಣುವಿನ ನ್ಯೂಕ್ಲಿಯಸಿನ ಭಾರಕ್ಕೆ ಅನುಗುಣವಾಗಿ ಹೆಚ್ಚು ಕಡಿಮೆಯಾಗುತ್ತದೆ. ಉದಾಹರಣೆಗೆ

${}^{4}_{2}$ಹೀಲಿಯಂನ $\left({}^{4}_{2}He\right)$ ಸ್ಥಿರಾಂಕ $R\infty/\ (1+m/4M_H)$ ಎಂದಿದ್ದರೆ

${}^{3}_{2}$ಹೀಲೀಯಂನ $({}^{3}_{2}He)$ ಸ್ಥಿರಾಂಕ ಅವಶ್ಯವಾಗಿಯೂ $R_\infty/(1+m/3M_H)$ ಎಂದಾಗುತ್ತದೆ. ಇದರ ಫಲವಾಗಿ ಈ ಐಸೋಟೋಪ್ ತೋರುವ ಬೆಳಕಿನ ತರಂಗಮಾನ ಪ್ರತ್ಯೇಕವೇ. ಅತ್ಯಲ್ಪ ಅಂತರವನ್ನು ಇದು ತೋರುತ್ತದೆ. ಹೀಗೆ ಹೀಲಿಯಂ ಧಾತುವಿನ ಬೆಳಕಿನ ತರಂಗಗಳು ಶುದ್ಧರೇಖೆಗಳಾಗಿರುವ ಬದಲು ತುಸು ಅಗಲಕ್ಕೆ ಹರಡಿರುವಂತೆ ಕಾಣುತ್ತವೆ. ಇದನ್ನು ಐಸೋಟೋಪುಗಳ ಪರಿಣಾಮ ಇಲ್ಲವೆ ಇವುಗಳ ದೆಸೆಯಿಂದ ತರಂಗಸ್ಥಾನಾಂತರ (ವೇವ್‌ಶಿಫ್ಟ್) ಎನ್ನುತ್ತಾರೆ.

ಅಣುಗಳಲ್ಲೂ ಶುದ್ಧ ಧಾತುಗಳ ಬದಲು ಇತರ ಐಸೋಟೋಪುಗಳು ಸೇರಿದ್ದಲ್ಲಿ ವಿವಿಧ ಅಣುಗಳು ತಂತಮ್ಮ ಅಕ್ಷಗಳ ಸುತ್ತಲೂ ಆವರ್ತಿಸುವ ವೇಗ ಅಲ್ಲಿನ ಐಸೋಟೋಪುಗಳ ಭಾರಾಧಿಕ್ಯ, ಭಾರದ ಕೊರತೆಯ ಕಾರಣ ವ್ಯತ್ಯಾಸವಾಗುತ್ತದೆ. ಇದರ ಫಲವಾಗಿ ಬೆಳಕಿನ ತರಂಗಗಳು ಅಗಲವಾಗುತ್ತವೆ. ಇದು ಕೂಡ ಇಂಥದೇ ಪರಿಣಾಮ. ದ್ರವ್ಯಮಾನ ರೋಹಿತಲೇಖಕಗಳಲ್ಲಿ ಬೆಳಕಿನ ಜಾಗಗಳ ಇಂಥ ಅಗಲವಾಗುವಿಕೆಯನ್ನು ಅಳೆದು (ಮುಖ್ಯ ಅಲ್ಲಿನ ತರಂಗಗಳ ಉದ್ದಗಳನ್ನು ಅಳೆದು) ಐಸೋಟೋಪುಗಳ ಭಾರ ಹಾಗೂ ವೈಫಲ್ಯಗಳನ್ನು ಅಳೆಯುವ ಕ್ರಮ ರೂಢಿಗೆ ಬಂದಿದೆ. ಅಂತೂ ಪರಮಾಣುವಿನ ಹಾಗೂ ಅಣುವಿನ ಸ್ಫುರಣೆ, ಸ್ಪಂದನ ಮತ್ತು ಆವರ್ತನಗಳಿಂದೊದಗುವ ಬೆಳಕಿನ ತರಂಗಗಳು ಅಗಲವಾಗುವುದಕ್ಕೆ ಐಸೋಟೋಪುಗಳೂ ಕಾರಣವಾಗಿವೆ.

**ವಿಕಿರಣಶೀಲ ಐಸೋಟೋಪುಗಳು:** ಇವು ಅಸ್ಥಿರ ಐಸೋಟೋಪುಗಳು. ನ್ಯೂಟ್ರಾನುಗಳು ನ್ಯೂಕ್ಲಿಯಸಿನಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾಗ N>>Z ಆದಾಗ ನ್ಯೂಟ್ರಾನ್ ಪ್ರೋಟಾನ್ ಆಗಿ ಬೀಟಾ ಕಣವನ್ನು ತಳ್ಳುವುದು. ಹೀಗೆ ಧಾತು ಪರಿವರ್ತನೆ ಹೊಂದುತ್ತದೆ. ಇನ್ನೂ ಭಾರವಾದ ಐಸೋಟೋಪುಗಳು ಇತರ ವಿಕಿರಣಗಳನ್ನು ಕಕ್ಕುತ್ತವೆ. ಒಂದೇ ಧಾತುವಿನ ಐಸೋಟೋಪುಗಳ ನಿಷ್ಪತ್ತಿ ಎನ್ನುವ ಪರಿಚ್ಛೇದದಲ್ಲಿ ನಮೂದಿಸಿರುವ ಯಾದಿಯಲ್ಲಿ ಕೆಲವು ಸಾಮಾನ್ಯ ವಿಕಿರಣಶೀಲ ಐಸೋಟೋಪುಗಳ ವಿವರಗಳನ್ನು ಕೊಡಲಾಗಿದೆ. ಶತಮಾನಗಳ ಹಿಂದೆ ಕನಸಾಗಿದ್ದ ಧಾತುಪರಿವರ್ತನೆಯನ್ನು ಸಾಧ್ಯವೆಂದು ತೋರಿಸಿದ ರುದರ್‌ಫೋರ್ಡನ ಪ್ರಯೋಗಗಳು ಹೊಸ ಐಸೋಟೋಪುಗಳ ತಯಾರಿಕೆಗೆ ನೂತನ ಮಾರ್ಗವೊಂದನ್ನು ಕಲ್ಪಿಸಿದುವು.

ನೈಟ್ರೋಜನ್ ನ್ಯೂಕ್ಲಿಯಸನ್ನು ಆಲ್ಫಕಣದಿಂದ (ಹೀಲಿಯಂ ಬೀಜದಿಂದ) ತಾಡಿಸಿದಾಗ ಆಕ್ಸಿಜನ್ನಿನ 17 ಭಾರದ ಐಸೋಟೋಪ್ ಮತ್ತು ಒಂದು ಪ್ರೋಟಾನ್ (ಹೈಡ್ರೋಜನ್ನಿನ ನ್ಯೂಕ್ಲಿಯಸ್) ಬಿಡುಗಡೆಯಾದುವು.

$${}^{14}_{7}N+{}^{4}_{2}He\rightarrow{}^{17}_{8}O+{}^{1}_{1}H$$

${}^{17}_{8}O$ ಎಂಬುದು ಆಕ್ಸಿಜನ್ನಿನ ಸಾಕಷ್ಟು ಧಾರಾಳವಾಗಿರುವ ಸ್ಥಿರ ಐಸೋಟೋಪು. ಆದರೆ ಮುಂದೆ ಆಲ್ಫಕಣ, ಪ್ರೋಟಾನ್ ಮುಂತಾದವುಗಳೊಡನೆ ವಿದ್ಯುತ್ತಟಸ್ಥವಾದ ನ್ಯೂಟ್ರಾನುಗಳನ್ನು ಉಪಯೋಗಿಸಿ ಇಂಥ ಅಸಂಖ್ಯ ನ್ಯೂಕ್ಲಿಯರ್ ಕ್ರಿಯೆಗಳನ್ನು (ನ್ಯೂಕ್ಲಿಯರ್ ರಿಆಕ್ಷನ್ಸ್) ಸಾಧಿಸಿದರಲ್ಲದೆ ಅನೇಕ ವಿಕಿರಣಶೀಲ ಐಸೋಟೋಪುಗಳನ್ನೂ ಒದಗಿಸಿಕೊಂಡರು. ಇದೀಗ ಇಂಥ ನೂರುಗಟ್ಟಳೆ ವಿಕಿರಣಶೀಲ ಐಸೋಟೋಪುಗಳು ಇಂಥ ಕ್ರಿಯೆಗಳಲ್ಲೂ ಇಲ್ಲವೇ ನ್ಯೂಕ್ಲಿಯರ್ ರಿಯಾಕ್ಟರುಗಳಲ್ಲಿ ಹಲವು ನ್ಯೂಕ್ಲಿಯಸುಗಳನ್ನು ನ್ಯೂಕ್ಲಿಯಸ್ಸಿನ ಕಣಗಳಿಂದ (ಮುಖ್ಯ ನ್ಯೂಟ್ರಾನುಗಳಿಂದ) ತಾಡಿಸಿದುದರಿಂದಲೂ ಉತ್ಪತ್ತಿಯಾಗಿವೆ. ಇಲ್ಲಿ ಕೆಲವೇ ಉದಾಹರಣೆಗಳನ್ನು ಕೊಡಲಾಗಿದೆ:

$${}^{14}_{7}N+{}^{1}_{0}n\rightarrow{}^{14}_{6}C+{}^{1}_{1}H$$

${}^{14}_{6}C$ ವಿಕಿರಣಶೀಲಗುಣವುಳ್ಳ ಇಂಗಾಲದ ಐಸೋಟೋಪ್. ಇದರ ಅರ್ಧಾಯು 5,570 ವರ್ಷ; ಇದು $\beta$ ಕಣಗಳನ್ನು ಕಕ್ಕುತ್ತದೆ.

$${}^{23}_{11}Na+{}^{1}_{1}H\rightarrow{}^{22}_{11}Na+{}^{1}_{1}p+{}^{1}_{0}n$$

${}^{22}_{11}Na$ ವಿಕಿರಣಶೀಲ ಸೋಡಿಯಂ ಧಾತು. ಇದು $\gamma$ ವಿಕಿರಣಗಳನ್ನು ಕಕ್ಕುತ್ತದೆ. ಇದರ ಅರ್ಧಾಯು 2.6 ವರ್ಷಗಳು.

$${}^{23}_{13}Al+{}^{4}_{2}He\rightarrow{}^{30}_{15}P+{}^{1}_{0}n$$

($\alpha$ಕಣ)

ಅಲ್ಯೂಮಿನಿಯಮಿನಿಂದ ಒದಗಿದ ಫಾಸ್ಫರಸ್ 30 ವಿಕಿರಣಶೀಲವಿದ್ದು ಪಾಸಿಟ್ರಾನುಗಳನ್ನು ಕಕ್ಕುತ್ತದೆ. ಇದರ ಅರ್ಧಾಯು 3 ಮಿನಿಟುಗಳು.

$${}^{75}_{33}As+{}^{1}_{20}n\rightarrow{}^{76}_{33}As+\gamma \text{ ವಿಕಿರಣ}$$

ಆರ್ಸೆನಿಕ್ 76 ವಿಕಿರಣಶೀಲವಿದ್ದು $\beta$ ಕಣ ಮತ್ತು $\gamma$ ವಿಕಿರಣಗಳನ್ನು ಕಕ್ಕುತ್ತದೆ. ಇದರ ಅರ್ಧಾಯು 26.8 ಗಂಟೆಗಳು.

ಒಂದೇ ಧಾತುವಿನ ಐಸೊಟೋಪುಗಳ ಪ್ರತ್ಯೇಕೀಕರಣ ವಿಧಾನಗಳು: ಈ ಮೂರು ನಾಲ್ಕು ದಶಕಗಳಲ್ಲಿ ಹಲವು ವಿಧಾನಗಳು ಬಳಕೆಗೆ ಬಂದಿವೆ. ಅವುಗಳ ಸ್ಥೂಲಪರಿಚಯವನ್ನಷ್ಟೆ ಇಲ್ಲಿ ಕೊಡಲಾಗುವುದು.

**ಅನಿಲಗಳ ವಿಸರಣ (ಡಿಫ್ಯೂಷನ್) ವಿಧಾನ:** ಅನಿಲಗಳನ್ನು ಬೆರೆಸಿದಾಗ ಇವು ಪರಸ್ಪರ ವಿಸರಣೆಗೊಳ್ಳುವ ವೇಗಗಳು ಅವುಗಳ ಸಾಂದ್ರತೆಗಳ ವರ್ಗಮೂಲಗಳ ವಿಲೋಮ ನಿಷ್ಪತ್ತಿಯಲ್ಲಿವೆ. ಇಂಥವುಗಳಲ್ಲಿ ವಿವಿಧ ಐಸೊಟೋಪುಗಳಿದ್ದಾಗ ಈ ನಿಷ್ಪತ್ತಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಐಸೊಟೋಪುಗಳು ತಂತಮ್ಮ ಭಾರ ಹಾಗೂ ಸಾಂದ್ರತೆಗಳಿಗನುಗುಣವಾಗಿ ಪ್ರತ್ಯೇಕಗೊಳ್ಳುತ್ತವೆ. ಆಸ್ಟನ್ 1913ರಲ್ಲಿ $^{20}$ ನಿಯಾನ್ ಮತ್ತು $^{22}$ ನಿಯಾನುಗಳನ್ನೂ ಹಾರ್ಕಿನ್ಸ್ 1921ರಲ್ಲಿ $^{35}$ ಕ್ಲೋರಿನ್ ಮತ್ತು $^{37}$ ಕ್ಲೋರಿನುಗಳನ್ನೂ ಇಂಥದೇ ವಿಧಾನದಿಂದ ಪ್ರತ್ಯೇಕಿಸಿದರು. ಇದು ಬಹಳ ಸಾವಧಾನವಾಗಿ ಜರಗುವ ಕ್ರಿಯೆ.

ಚೂಪಾದ ನಳಿಗೆಯಿಂದ ನಿರ್ಗಮನ ವಿಧಾನ: ವಿವಿಧ ಐಸೊಟೋಪುಗಳನ್ನು ಒಳಗೊಂಡ ಅನಿಲಗಳನ್ನು ವಾತಾವರಣ ಒತ್ತಡಕ್ಕಿಂತಲೂ ಕಡಿಮೆ ಒತ್ತಡವಿರುವ ಆವರಣದೊಳಗೆ ಚೂಪಾದ ನಳಿಗೆಯ ಮೂಲಕ ಹರಿಯಗೊಟ್ಟಾಗ ಹೆಚ್ಚು ಭಾರದ ಐಸೊಟೋಪುಗಳು ಪ್ರತ್ಯೇಕಗೊಳ್ಳುತ್ತವೆ. ಪುನಃ ಮಧ್ಯಭಾಗದಲ್ಲಿ ಇನ್ನೊಂದು ನಳಿಗೆಯ ಮೂಲಕ ಹರಿಯಿಸಿ ಪುನಃ ಹೀಗೆಯೇ ಹರಿಯಗೊಟ್ಟು ಪುನಃ ಪ್ರತ್ಯೇಕೀಕರಣವನ್ನು ಹೆಜ್ಜೆಹೆಜ್ಜೆಯಾಗಿ, ಅಂದರೆ ಕ್ಯಾಸ್ಕೇಡ್ ಕ್ರಮದಲ್ಲಿ, ಸಾಧಿಸಬಹುದು.

ವಿದ್ಯುತ್ಕಾಂತಕ್ಷೇತ್ರಗಳ ನೆರವಿನಿಂದ ಪ್ರತ್ಯೇಕೀಕರಣ : ವಿದ್ಯುತ್ಕಾಂತಕ್ಷೇತ್ರಗಳನ್ನು ಐಸೊಟೋಪುಗಳ ಪಥದ ಸುತ್ತಲೂ ತಕ್ಕಂತೆ ಉಪಯೋಗಿಸಿ ವಿವಿಧ ಭಾರದ ಐಸೊಟೋಪುಗಳನ್ನು ಪ್ರತ್ಯೇಕಿಸಲಾಗಿದೆ.

ಉಷ್ಣತಾಪ್ರಮಾಣದಲ್ಲಿ (ಟೆಂಪರೇಚರ್ ಗ್ರೇಡಿಯಂಟ್) ಐಸೊಟೋಪುಗಳ ವಿಸರಣ ವಿಧಾನ: ಸೀಮಿತ ಆವರಣದಲ್ಲಿ ಉಷ್ಣತಾಪ್ರಮಾಣವನ್ನು ಒದಗಿಸಿಕೊಂಡಲ್ಲಿ ವಿವಿಧ ಭಾರವುಳ್ಳ ಐಸೊಟೋಪುಗಳಲ್ಲಿ ಕಡಿಮೆ ಭಾರದವು ಹೆಚ್ಚು ಉಷ್ಣತೆಯತ್ತ ಸರಿಯುತ್ತಲೂ ಪ್ರತ್ಯೇಕಗೊಳ್ಳುವುವು. ಕ್ಲಾಸಿಯಸ್ ಮತ್ತು ಡಿಕೆಲ್ ಎಂಬುವರು ಈ ವಿಧಾನದಿಂದ ನಿಯಾನ್ ಮತ್ತು ಕ್ಲೋರಿನುಗಳ ಐಸೊಟೋಪುಗಳನ್ನು ಪ್ರತ್ಯೇಕಿಸಿದರು.

ಕೇಂದ್ರಾಪಗಮನ (ಸೆಂಟ್ರಿಫ್ಯೂಗಲ್) ತಳ್ಳುವಿಕೆಯ ವಿಧಾನ: ವಿವಿಧ ಭಾರಗಳ ಐಸೊಟೋಪುಗಳ ಮಿಶ್ರಣವನ್ನು ಒಂದು ಸ್ತಂಭದಲ್ಲಿ ವೇಗವಾಗಿ ಆವರ್ತಿಸುವಂತೆ ಮಾಡಿದಾಗ ಭಾರತರ ಐಸೊಟೋಪುಗಳು ಅಕ್ಷದಿಂದ ದೂರಸರಿದು ಪ್ರತ್ಯೇಕಗೊಳ್ಳುವುವು, ಹಗುರವಾದವು ಅಕ್ಷದ ಹತ್ತಿರ ಕಲೆಯುವುವು. ಕ್ಲೋರಿನ್ ಮತ್ತು ಬ್ರೋಮಿನುಗಳ ಐಸೊಟೋಪುಗಳನ್ನು ಹೀಗೆ ಪ್ರತ್ಯೇಕಿಸಲಾಗಿದೆ.

**ವಿದ್ಯುದ್ವಿಶ್ಲೇಷಣ (ಎಲೆಕ್ಟ್ರೊಲಿಟಿಕ್) ವಿಧಾನ:** ಇದು ಹೈಡ್ರೊಜನ್, ಲಿಥಿಯಂ ಮೊದಲಾದ ಕಡಿಮೆ ಭಾರದ ಧಾತುಗಳ ಐಸೊಟೋಪುಗಳನ್ನು ಪ್ರತ್ಯೇಕಿಸಿದ ವಿಧಾನ. ನೀರಿನ ಮೂಲಕ ವಿದ್ಯುತ್ತನ್ನು ಹರಿಸಿದರೆ ಇದು ವಿಶ್ಲೇಷಣೆ ಹೊಂದುತ್ತದೆ. ಮೊತ್ತಮೊದಲು ಕ್ಯಾಥೋಡಿನತ್ತ ಹಗುರ ಹೈಡ್ರೊಜನ್ $\left({}^{1}_{1}H\right)$ ಹರಿದು ನೀರಿನಲ್ಲಿ ಭಾರತರ ಹೈಡ್ರೊಜನ್ $\left({}^{2}_{1}H\right.$ ಡ್ಯೂಟೇರಿಯಂ) ಉಳಿಯುವುದು. ಹೀಗೆ ಐಸೊಟೋಪುಗಳನ್ನು ಪ್ರತ್ಯೇಕಿಸಲಾಗಿದೆ. ಇದು ದೀರ್ಘಕಾಲಿಕ ಹಾಗೂ ಅಪರಿಮಿತ ವೆಚ್ಚದ ವಿಧಾನ.

**ಆಂಶಿಕ ಆಸವನ (ಫ್ರಾಕ್ಷನಲ್ ಡಿಸ್ಟಿಲೇಷನ್) ವಿಧಾನ:** ಶಿಷ್ಟ ಒತ್ತಡ ಮತ್ತು ಉಷ್ಣತೆಗಳಲ್ಲಿ $100^0$ ಸೆಂ. ನಲ್ಲಿ ಹಗುರನೀರು ($H_2O$) ಕುದ್ದರೆ ಭಾರತರ ನೀರು ($D_2O$) $101.4^0$ ಸೆಂನಲ್ಲಿ ಕುದಿಯತಕ್ಕುದು. ಹೀಗೆ $100^0$ ಸೆಂನಲ್ಲಿ ಎಲ್ಲ ಹಗುರ ಹೈಡ್ರೊಜನ್ ಐಸೊಟೋಪ್ ಪ್ರತ್ಯೇಕಗೊಳ್ಳುತ್ತದೆ. ಇದೇ ಆಂಶಿಕ ಆಸವನ ವಿಧಾನದಿಂದ ಕ್ಲೋರಿನ್, ಪೊಟಾಸಿಯಂ ಮೊದಲಾದ ಧಾತುಗಳ ಐಸೊಟೋಪುಗಳನ್ನು ಪ್ರತ್ಯೇಕಿಸಲಾಗಿದೆ.

**ರಾಸಾಯನಿಕ ವಿನಿಮಯ ವಿಧಾನ:** ಒಂದೇ ಧಾತುವಿನ ವಿವಿಧ ಐಸೊಟೋಪುಗಳು ಏಕಪ್ರಕಾರದ ರಾಸಾಯನಿಕ ಲಕ್ಷಣಗಳನ್ನು ತೋರುತ್ತವೆಯಾದರೂ ಹಗುರವಾಗಿರುವ ಐಸೊಟೋಪುಗಳು ಇಂಥ ಕ್ರಿಯೆಗಳಲ್ಲಿ ವೇಗತರವಾಗಿ ಭಾಗವಹಿಸುತ್ತವೆ. ಭಾರತರ ನೀರಿನೊಳಗೆ $\frac{1}{1}$ಹೈಡ್ರೊಜನನ್ನು $\left({}^{1}_{1}H\right)$ ಕಲುಹಿಸಿದರೆ ಇದು ಆಕ್ಸಿಜನ್ನಿನೊಡನೆ ಬೆರೆತು ಭಾರತರ ಹೈಡ್ರೊಜನನ್ನು $\left({}^{2}_{1}D\right)$ ಪ್ರತ್ಯೇಕಿಸುತ್ತದೆ. ಅಂತೂ ಇಂಥ ವಿಧಾನದಿಂದ ಗಂಧಕದ ತನಕ ಹಗುರವಾದ ಐಸೊಟೋಪುಗಳನ್ನೆಲ್ಲ ಪ್ರತ್ಯೇಕಿಸಲು ಬಂದಿದೆ.

**ಐಸೊಟೋಪುಗಳ (ಸ್ಥಿರ ಮತ್ತು ಅಸ್ಥಿರ) ಉಪಯೋಗಗಳು:** ಹಲವು ಜೀವ ಕಾರ್ಯಗಳ ಅಧ್ಯಯನದಲ್ಲಿ ಡ್ಯೂಟೇರಿಯಮ್ $\left({}^{2}_{1}D\right)$ ${}^{15}_{7}$ ನೈಟ್ರೊಜನ್ $\left({}^{15}_{7}N\right)$ ಎಂಬ ಸ್ಥಿರ ಐಸೊಟೋಪುಗಳು ಬಹಳ ಉಪಯುಕ್ತವಾಗಿವೆ. ಮೊನ್ನೆ ಮೊನ್ನೆಯ ತನಕ ನಾವು ಸೇವಿಸಿದ ಆಹಾರ ಆಗಾಗಿನ ಆವಶ್ಯಕತೆಗಳಿಗೆ ಎಂದರೆ ಶಕ್ತಿಯ ಪೂರೈಕೆಗೆ ಮಾತ್ರ ಅವಶ್ಯವೆಂದು ತಿಳಿಯಲಾಗಿತ್ತು. ಹೈಡ್ರೊಜನ್ನಿನ ಬದಲು ಡ್ಯೂಟೇರಿಯಮ್ಮನ್ನೊಳಗೊಂಡ ಕೊಬ್ಬು, ಪ್ರೋಟೀನುಗಳನ್ನು ಸೇವಿಸಿದಾಗ ಇವು ಕೂಡಲೇ ವಿವಿಧ ಜಾಗಗಳನ್ನು ಸೇರುತ್ತವೆ; ಎಷ್ಟುಮಾತ್ರಕ್ಕೂ ಮಲಮೂತ್ರಗಳಲ್ಲಿ ಕೂಡಲೇ ವಿಸರ್ಜನೆಯಾಗುವುದಿಲ್ಲ ಎಂಬ ಜೀವಕಾರ್ಯದ ಹೊಸ ಕ್ರಾಂತಿಕಾರಕ ಶೋಧಕ್ಕೆ ಡ್ಯೂಟೇರಿಯಂ ನೆರವನ್ನಿತ್ತಿದೆ.

$^{15}$ನೈಟ್ರೊಜನನ್ನು ಉಪಯೋಗಿಸಿ ಜೀವಿಯಲ್ಲಿ ಕ್ರಿಯೇಟಿನ್ ಹೇಗೆ ಕ್ರಿಯೇಟಿನಿನ್ ಆಗಿ ಪರಿವರ್ತನೆ ಹೊಂದಬಲ್ಲುದೆಂದು ತಿಳಿದುಬಂದಿದೆ. ಇದನ್ನು ಉಪಯೋಗಿಸದೆ ಹೋದರೆ ಇಂಥ ಪ್ರಯೋಗಗಳು ಅಸಾಧ್ಯವೆನಿಸುತ್ತಿದ್ದುವು. ಕೊಬ್ಬಿನ ಪಚನ ಮತ್ತು ಆಸ್ವಾದನೆಗಳ ಅಧ್ಯಯನದಲ್ಲೂ ಡ್ಯೂಟೇರಿಯಂ ಮತ್ತು $^{15}$ ನೈಟ್ರೊಜನ್ ನೆರವನ್ನಿತ್ತಿವೆ. ಸಾಮಾನ್ಯ ಕೆಂಪು ರಕ್ತಕಣವೊಂದರ ಜೀವಾವಧಿ ಎಷ್ಟು ಎಂಬ ನಿರ್ಣಯದಲ್ಲಿ ಕೂಡ ನೆರವನ್ನಿತ್ತ ಐಸೊಟೋಪುಗಳು $^{15}$ ನೈಟ್ರೊಜನ್. ರಕ್ತದಲ್ಲಿನ ಕೆಂಪುಕಣ ಸುಮಾರು 20 ದಿವಸಗಳಷ್ಟು ಕಾಲದಲ್ಲಿ ಬೆಳೆದು ಮುಂದೆ 80 ದಿವಸಗಳ ತನಕ ಉಳಿದು ಅನಂತರ ಕ್ಷಯಿಸುತ್ತದೆ. ಇಷ್ಟರಲ್ಲಿ ನಾಶವಾದ ರಕ್ತಕಣಗಳು ಪೂರೈಕೆಯಾಗಬೇಕು ಎಂದು ತಿಳಿದುಬಂದಿದೆ. $^{197}$ಚಿನ್ನ ($^{197}Au$)ದಿಂದ $^{198}$ ಪಾದರಸ ($^{198}Hg$) ಎಂಬ ಐಸೊಟೋಪನ್ನು ಪಡೆಯಬಹುದು. ಇದರ ರೋಹಿತ ಅತ್ಯಂತ ಶುದ್ಧವಾಗಿದೆ. ಇದು ಸ್ಪಷ್ಟವಾದ ಮತ್ತು ಅಗಲವಾಗಿರದ ರೋಹಿತರೇಖೆಗಳನ್ನು ಕೊಡುವುದು. ರೋಹಿತಸಂಬಂಧವಾದ ಅಧ್ಯಯನಗಳಲ್ಲಿ ಇದು ಅಪಾರ ನೆರವನ್ನೀಯುತ್ತಿದೆ. **(ಯು.ಎಲ್.ಎ.)**

ಅಪಘಾತ ತಡೆಹಿಡಿಯಲು $^{60}$Co ವನ್ನು ಉಪಯೋಗಿಸುತ್ತಾರೆ. ಮುದ್ರಣ ಯಂತ್ರಗಳಲ್ಲಿ ಮುದ್ರಿತವಾದ ಪ್ರತಿಗಳನ್ನು ಅಚ್ಚಿನೊಳಗಿಂದ ಹೊರತೆಗೆಯುವಾಗ ಅಥವಾ ಮುದ್ರಿತವಾಗಬೇಕಾದ ಪ್ರತಿಗಳನ್ನು ಅದರಲ್ಲಿಡುವಾಗ ತಡವಾದಲ್ಲಿ ಕೈಬೆರಳುಗಳು ಕತ್ತರಿಸಿಹೋಗುವ ಸಂಭವವಿರುತ್ತದೆ. ಈ ಅಪಘಾತ ತಪ್ಪಿಸಲು $^{60}$Co ನಿಂದ ತಯಾರಿಸಲ್ಪಟ್ಟ ಉಂಗುರವನ್ನು ಉಪಯೋಗಿಸುವುದರಿಂದ ಉಂಗುರದಿಂದ ಹೊರಬರುವ ಗಾಮಾ (Ó) ಕಿರಣಗಳ ಮೂಲಕ ವಿದ್ಯುನ್ಮಂಡಲ ಅಪೂರ್ಣವಾಗುವುದರಿಂದ ಯಂತ್ರದ ಕಾರ್ಯ ಸ್ಥಗಿತವಾಗಿ ಅಪಘಾತ ಸಂಭವಿಸುವುದಿಲ್ಲ.

ಏಡಿಗಂತಿಯಿಂದ (ಕ್ಯಾನ್ಸರ್) ಬಳಲುವ ರೋಗಿಯ ಗಂತಿಸ್ಥಳಕ್ಕೆ $^{60}$Co ನಿಂದ ಹೊರಟ ಗಾಮಾ (Ó) ಕಿರಣಗಳನ್ನು ನಿರ್ದಿಷ್ಟ ಅವಧಿಯವರೆಗೆ ತಾಡಿಸಿ ರೋಗಿಯನ್ನು ಗುಣಪಡಿಸುತ್ತಾರೆ. ಐಸೊಟೋಪುಗಳ ಉಪಯೋಗದಿಂದ ಒಕ್ಕಲಿಗನಿಗೆ ಲಕ್ಷಾಂತರ ರೂಪಾಯಿ ಲಾಭವಾಗುತ್ತದೆ. ಬೆಳೆಗಳನ್ನು ನಾಶಮಾಡುವ ಮಿಡಿತೆಗಳಲ್ಲಿ ಒಂದನ್ನು ಹಿಡಿದು ಅದಕ್ಕೆ $^{60}$Co ನಿಂದ ತಯಾರಿಸಲ್ಪಟ್ಟ ಬಣ್ಣವನ್ನು ಹಚ್ಚಿ ಬಿಟ್ಟುಬಿಡುತ್ತಾರೆ. ಸಂತಾನವೃದ್ಧಿ ಸಮಯದಲ್ಲಿ ಮಿಡಿತೆಗಳು ಒಟ್ಟಾಗುತ್ತವೆ. ಅಲ್ಲಿ ಈ ವರ್ಣಲೇಪಿತ ಮಿಡಿತೆಯೂ ಸೇರಿರುತ್ತದೆ. ಗುಣಕದ (ಕೌಂಟರ್) ಮೂಲಕ ಮಿಡಿತೆಗಳು ಒಟ್ಟಿಗಾದ ಸ್ಥಳವನ್ನು ಗುರುತಿಸಿ ಅಲ್ಪಕ್ರಿಮಿನಾಶಕಗಳನ್ನು ಉಪಯೋಗಿಸಿ ಅವನ್ನು ನಾಶಮಾಡುವರು.

ಬೆರಳುಗಳ ಅಗೋಚರ ಗುರುತುಗಳನ್ನು ಕಂಡುಹಿಡಿಯಲು ಐಸೊಟೋಪುಗಳನ್ನು ಉಪಯೋಗಿಸುತ್ತಾರೆ. ಆವರೆಗೆ ಪ್ರಚಲಿತವಿದ್ದ ವಿಧಾನ ಸೂಕ್ಷ್ಮವಾಗಿರಲಿಲ್ಲ. ಇಲ್ಲಿ $^{36}$Cl, $^{14}$C ಐಸೊಟೋಪುಗಳನ್ನು ಉಪಯೋಗಿಸಿ ಆಟೊರೇಡಿಯೊಗ್ರಾಫಿಕ್ ವಿಧಾನದಿಂದ ಕೈಬೆರಳುಗಳ ಅಗೋಚರ ಗುರುತುಗಳನ್ನು ಚಿತ್ರಿಸುತ್ತಾರೆ. ಪರೀಕ್ಷಿಸಬೇಕಾದ ವಸ್ತುವನ್ನು ಒಂದು ಗಾಜಿನ ಕೊಳವೆಯಲ್ಲಿಟ್ಟು ಕೊಳವೆಯನ್ನು ನಿರ್ವಾತ ಮಾಡುವರು. $^{36}$Clನ್ನು H$^{36}$Cl ರೂಪದಲ್ಲಿ ಕೊಳವೆಯಲ್ಲಿ ಬಿಡುವರು. ಒಂದು ವಾರದ ಅನಂತರ ವಸ್ತುವನ್ನು ಹೊರತೆಗೆದು ಅದರ ಛಾಯಾಚಿತ್ರ ತೆಗೆಯುವುದರಿಂದ ಅಗೋಚರವಾದ ಕೈಬೆರಳಿನ ಚಿತ್ರ ಸ್ಪಷ್ಟ ಕಾಣುತ್ತದೆ. ಈ ವಿಧಾನದಲ್ಲಿ H$^{36}$Cl ದಲ್ಲಿಯ $^{36}$Clಕೈಬೆರಳಿನ ಗುರುತಿನೊಳಗಿದ್ದ Na$^{35}$Cl ಒಳಗಿನ $^{35}$Clಒಂದಿಗೆ ವಿನಿಮಯಗೊಂಡಾಗ ಕೈ ಬೆರಳಿನ ಗುರುತಿನಲ್ಲೇ Na$^{36}$Cl ಉಂಟಾಗಿ $^{36}$Clನಿಂದ ಹೊರಬರುವ ಕಿರಣಗಳಿಂದ ಛಾಯಾಚಿತ್ರ ಪಟಲದ ಮೇಲೆ ಪರಿಣಾಮವಾಗಿ ಬೆರಳುಗಳ ಗುರುತುಗಳು ಸ್ಪಷ್ಟವಾಗಿ ಚಿತ್ರಪಟಲದ ಮೇಲೆ ಮೂಡುವುದರಿಂದ ಗುನ್ಹೆಗಾರನನ್ನು ಸುಲಭವಾಗಿ ಹಿಡಿಯಲು ಸಾಧ್ಯವಾಗುತ್ತದೆ.

${}^{10}_{5}B$ ಐಸೊಟೋಪನ್ನು ಮಿದುಳಿನ ಏಡಿಗಂತಿಯನ್ನು ಗುಣಪಡಿಸಲು ಉಪಯೋಗಿಸುತ್ತಾರೆ. ${}^{10}_{5}B$ ಇರುವ ದ್ರಾವಣವನ್ನು ಶರೀರದಲ್ಲಿ ಬಿಟ್ಟರೆ ಅದು ಮಿದುಳಿನ ಗಂತಿಸ್ಥಳದಲ್ಲಿ ಹೋಗಿ ಸಂಗ್ರಹವಾಗುತ್ತದೆ. ರೋಗಿಯನ್ನು ಪರಮಾಣು ಕುಲುಮೆಯ ಮುಂದೆ ಕರೆತಂದು ಏಡಿಗಂತಿಯ ಸ್ಥಳವನ್ನು ನ್ಯೂಟ್ರಾನುಗಳಿಂದ ನಿರ್ದಿಷ್ಟ ಸಮಯದವರೆಗೆ ತಾಡಿಸಿದಾಗ ಕೆಳಗಿನ ಕ್ರಿಯೆಯಿಂದ

$${}^{10}_{5}B+{}^{1}_{0}n\rightarrow{}^{7}_{3}Li+{}_{0}{}^{4}_{2}He$$

ಆಲ್ಫಕಣ ಉತ್ಪತ್ತಿಯಾಗಿ ಅದು ರೋಗಪೀಡಿತವಾದ ಊತಕವನ್ನು ಸುಟ್ಟುಹಾಕುತ್ತದೆ.

$^{131}$Iಯನ್ನು ಥೈರಾಯ್ಡ್ ಗ್ರಂಥಿ ಕಾರ್ಯವನ್ನು ಸರಿಪಡಿಸಲು ಉಪಯೋಗಿಸುತ್ತಾರೆ. ಗ್ರಂಥಿಗಳ ಅತಿ ಚಟುವಟಿಕೆಯಿಂದ ಹೈಪರ್ ಥೈರಾಯ್ಡಿಸಂ ಎಂಬ ರೋಗ ಉತ್ಪತ್ತಿಯಾಗುತ್ತದೆ. ಕಡಿಮೆ ಚಟುವಟಿಕೆಯಿಂದ ಹೈಪೊಥೈರಾಯ್ಡಿಸಂ ರೋಗ ಬರುತ್ತದೆ. ಈ ರೋಗಗಳಿಂದ ಮನುಷ್ಯನ ಪಚನಕ್ರಿಯೆಯ ಮೇಲೆ ಪರಿಣಾಮವಾಗುತ್ತದೆ. ಇವನ್ನು ಗುಣಪಡಿಸಲು Na$^{131}$I ಲವಣವನ್ನು ನೀರಿನಲ್ಲಿ ಕೂಡಿಸಿ ಕುಡಿಸುವುದರಿಂದ $^{131}$I ಗ್ರಂಥಿಗಳಲ್ಲಿ ಸಂಗ್ರಹವಾಗುತ್ತದೆ. $^{131}$I ನಿಂದ ಹೊರಬಂದ ಗಾಮಾ ($\delta$) ಕಿರಣದಿಂದ ಹೆಚ್ಚಿಗೆ ಬೆಳೆದಂಥ ಊತಕ ನಾಶವಾಗಿ ಗ್ರಂಥಿಗಳು ತಮ್ಮ ಕೆಲಸವನ್ನು ಎಂದಿನಂತೆ ಮಾಡಲಾರಂಭಿಸುತ್ತವೆ.

ತೈಲಶುದ್ಧೀಕರಣ ಕೇಂದ್ರಗಳಲ್ಲಿ ಒಂದೇ ನಳಿಗೆಯ ಮೂಲಕ ಬೇರೆ ಬೇರೆ ತರಹದ ಎಣ್ಣೆಗಳನ್ನು ದೂರದವರೆಗೆ ಕಳಿಸಬೇಕಾಗುತ್ತದೆ. ಇಂಥ ಮಿಶ್ರಿತ ಎಣ್ಣೆ ಬರತೊಡಗಿದೆಯೆಂಬುದನ್ನು ಈ ಮಿಶ್ರಣವನ್ನು ಬೇರ್ಪಡಿಸುವ ಸ್ಥಳದಲ್ಲಿ ಕಂಡುಹಿಡಿಯಲು ಐಸೊಟೋಪುಗಳು ಸಹಾಯಕವಾಗಿವೆ. ತೈಲ ಶುದ್ಧೀಕರಣ ಕೇಂದ್ರಗಳಲ್ಲಿ ಒಂದು ತರಹದ ಎಣ್ಣೆಯನ್ನು ಬಿಡುವಾಗ ಅದರ ಮುಂಭಾಗದಲ್ಲಿ ಐಸೊಟೋಪನ್ನು ಕೂಡಿಸುತ್ತಾರೆ. ಬೇರ್ಪಡಿಸುವ ಸ್ಥಳದಲ್ಲಿ ಗೈಗರ್ ಗುಣಕದ ನೆರವಿನಿಂದ ಬೇರೆ ತರಹದ ಪ್ರವಾಹ ಬರತೊಡಗಿದೆಯೆಂಬುದು ತಿಳಿಯುವುದು. ಬೇರ್ಪಡಿಸುವಾತ ಪ್ರತ್ಯೇಕವಾಗಿ ಬೇರೆ ಬೇರೆ ತರಹದ ಎಣ್ಣೆಗಳನ್ನು ಸಂಗ್ರಹಿಸುತ್ತಾನೆ. ಇದಕ್ಕಾಗಿ $^{81}$Br, $^{124}$Sb ಐಸೊಟೋಪುಗಳನ್ನು ಉಪಯೋಗಿಸುತ್ತಾರೆ. ಭೂಮಿಯಲ್ಲಿ ಹುಗಿದ ನಳಿಗೆಯಲ್ಲಿ ಬಿರುಕುಬಿಟ್ಟು ಸೋರುತ್ತಿದ್ದ ಇಲ್ಲವೇ ಪ್ರವಾಹಕ್ಕೆ ತಡೆಯುಂಟಾದ ಸ್ಥಳಗಳಲ್ಲಿ ಸುಲಭವಾಗಿ ಕಂಡುಹಿಡಿಯಲು ಐಸೊಟೋಪುಗಳನ್ನು ಉಪಯೋಗಿಸುತ್ತಾರೆ. ನಳಿಗೆಯಲ್ಲಿ ಐಸೊಟೋಪ್ ಅನಿಲವನ್ನಾಗಲಿ, ಪ್ರವಾಹವನ್ನಾಗಲಿ ಒಂದು ಕಡೆಯಿಂದ ರಭಸದಿಂದ ಬಿಡುತ್ತಾರೆ. ನಳಿಗೆಯ ದಾರಿಯುದ್ದಕ್ಕೂ ಗೈಗರ್ ಗುಣಕದಿಂದ ಪರೀಕ್ಷಿಸಿ ಬಿರುಕುಬಿದ್ದ ಇಲ್ಲವೇ ಪ್ರವಾಹಕ್ಕೆ ತಡೆಯುಂಟಾದ ಸ್ಥಳವನ್ನು ಕಂಡುಹಿಡಿಯುತ್ತಾರೆ. ರಕ್ತದ ಚಲನೆಯ ಪರೀಕ್ಷೆಯಲ್ಲಿ ಇದೇ ತತ್ತ್ವವನ್ನು ಅನುಸರಿಸಲಾಗಿದೆ. ಇಲ್ಲಿ ಉಪಯೋಗವಾಗುವುದು $^{24}$Na (ಅರ್ಧಾಯು 15 ಗಂಟೆಗಳು).

$^{59}$Fe ಐಸೊಟೋಪನ್ನು ಕೊಂತದ ಉಂಗುರದ (ಪಿಸ್ಟನ್ ರಿಂಗ್) ಸವಕಳಿಯನ್ನು ಕಂಡುಹಿಡಿಯಲಿಕ್ಕೆ ಎಂಜಿನಿಯರರು ಉಪಯೋಗಿಸುತ್ತಾರೆ. ಕೊಂತದ ಉಂಗುರ ಕ್ರಿಯೆ ಎಸಗುವ ಮೊದಲು ಐಸೊಟೋಪನ್ನು ಅದರಲ್ಲಿ ಕೆಲವು ಅಂತರದ ಮೇಲೆ ಉಪಯೋಗಿಸುತ್ತಾರೆ. ಯಂತ್ರದೊಳಗಿನ ಘರ್ಷಣನಿವಾರಕ ಎಣ್ಣೆಯನ್ನು ಕೆಲವು ಸಮಯದ ಮೇಲೆ ಪರೀಕ್ಷಿಸಿದರೆ ಸವಕಳಿಯೆಷ್ಟಾಯಿತೆಂಬುದು ಗೊತ್ತಾಗುತ್ತದೆ.

ಮಿಶ್ರಲೋಹ, ಧಾತುಗಳಿಂದ ತಯಾರಿಸಿದ ಯಂತ್ರೋಪಕರಣಗಳಲ್ಲಿ ಎಲ್ಲಿಯಾದರೂ ರಂಧ್ರಗಳಾಗಿದ್ದರೆ ಇಲ್ಲವೇ ಬಿರುಕು ಬಿಟ್ಟಿದ್ದರೆ ಬರಿಗಣ್ಣಿನಿಂದ ಕಂಡುಹಿಡಿಯುವುದು ಅಸಾಧ್ಯ. ಈ ದೋಷಗಳನ್ನು ಕಂಡುಹಿಡಿಯಲು ರೇಡಿಯೋಗ್ರಫಿ ತತ್ತ್ವದಿಂದ ಐಸೊಟೋಪ್ $^{60}$Co, $^{193}$Ta, $^{88}$Y ಗಳನ್ನು ಉಪಯೋಗಿಸುತ್ತಾರೆ. ಇದೇ ತತ್ತ್ವದ ಮೇಲೆ ಕಾಗದ, ಪಾಲಿಎಥಿಲೀನ್ ಮುಂತಾದುವುಗಳ ದಪ್ಪಳತೆಗಳನ್ನು ಕಂಡುಹಿಡಿಯುತ್ತಾರೆ.

ಒಂದು ಮಿಶ್ರಲೋಹದ ಗುಣಧರ್ಮಗಳು ಅದರಲ್ಲಿ ಹರಡಿರುವ ಬೇರೆ ಬೇರೆ ತರಹದ ಧಾತುಗಳ ಪರಮಾಣುಗಳ ಸ್ಥಳಗಳ ಮೇಲೆ ಅವಲಂಬಿಸಿರುತ್ತವೆ. ಸಹಜಾತಿಯ ಒಂದು ಧಾತುವಿನ ವಿಕಿರಣಕಾರಿ ಗುಣವುಳ್ಳ ಕೆಲವು ಪರಮಾಣುಗಳನ್ನು ಮಿಶ್ರಲೋಹ ತಯಾರಿಸುವಾಗ ಉಪಯೋಗಿಸಿ ಹರಡಿರುವ ಸ್ಥಳಗಳನ್ನು ಛಾಯಾಚಿತ್ರಗಳಿಂದ ಕಂಡುಹಿಡಿಯಲಿಕ್ಕೆ ಬರುತ್ತದೆ. ಇದರಿಂದಾಗಿ ಮಿಶ್ರಲೋಹಗಳ ಗುಣಧರ್ಮ, ಧಾತುಗಳ ರಚನೆ ತಿಳಿಯುತ್ತದೆ. ಈ ಅಭ್ಯಾಸದಿಂದ ಮಿಶ್ರಲೋಹಗಳಿಗೆ ಹೊಸ ಗುಣಧರ್ಮ ತರಲು ಸಾಧ್ಯವಾಗುತ್ತದೆ.

ಇತ್ತೀಚೆಗಷ್ಟೆ ಒಕ್ಕಲುತನದಲ್ಲಿ ಐಸೊಟೋಪುಗಳ ಉಪಯೋಗ ಬಹಳವಾಗಿದೆ. $^{32}$P ಐಸೊಟೋಪನ್ನು ಉಪಯೋಗಿಸಿ ಫಾಸ್ಫರಸ್ ಗೊಬ್ಬರವನ್ನು ಯಾವ ಸಮಯಕ್ಕೆ ಭೂಮಿಗೆ ಹಾಕಬೇಕೆಂಬುದನ್ನು ಕಂಡುಹಿಡಿಯಲಿಕ್ಕೆ ಬರುತ್ತದೆ. $^{32}$P ಐಸೊಟೋಪನ್ನು $(NH_4)_3PO_4$ ಲವಣರೂಪದಲ್ಲಿ ಬೀಜೋತ್ಪತ್ತಿ ಸಮಯಕ್ಕೆ ಭೂಮಿಗೆ ಹಾಕುತ್ತಾರೆ. ಬೀಜೋತ್ಪತ್ತಿಯಾದ ಮೇಲೆ ಕೆಲವು ಸಸಿಗಳನ್ನು ಕತ್ತರಿಸಿ, ಭಸ್ಮಮಾಡಿ ಅದರ ಚಟುವಟಿಕೆಯನ್ನು ಗೈಗರ್ ಗುಣಕದ ಮೂಲಕ ಅಳೆಯುತ್ತಾರೆ. ಸಸಿ ಬೆಳೆದು ದೊಡ್ಡದಾಗುವವರೆಗೂ ಈ ಪ್ರಯೋಗವನ್ನು ಬೇರೆ ಬೇರೆ ಹಂತಗಳಲ್ಲಿ ಮಾಡಿ ನೋಡಲಾಯಿತು. ಇದರಿಂದ ಒಂದು ಮುಖ್ಯ ಅಂಶ ತಿಳಿಯಿತು. ಗೊಬ್ಬರದಿಂದ ಅದು ರಂಜಕವನ್ನು ಸೇವಿಸುವುದು ಸಸಿಯಾಗಿದ್ದಾಗ ಮಾತ್ರವೇ ವಿನಾ ಬೆಳೆದ ಮೇಲಲ್ಲ. ದೊಡ್ಡದಾದ ಮೇಲೆ ಭೂಮಿಯಲ್ಲಿರುವ ಲವಣಗಳಲ್ಲಿಯ ರಂಜಕವನ್ನು ಹೀರಿಕೊಳ್ಳುತ್ತದೆ. ಇದರಿಂದಾಗಿ ಸಸಿ ಬೆಳೆದ ಮೇಲೆ ಫಾಸ್ಫರಸ್ ಗೊಬ್ಬರವನ್ನು ಹಾಕಿದರೆ ಅದರ ಉಪಯೋಗವೇನೂ ಆಗುವುದಿಲ್ಲ.

ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ಹಸಿರು ವನಸ್ಪತಿಗಳು ನೀರು ಗೊಬ್ಬರ ಉಪಯೋಗಿಸಿ ಸೂರ್ಯಪ್ರಕಾಶದ ಸಹಾಯದಿಂದ ಪಿಷ್ಟಪದಾರ್ಥಗಳನ್ನು ತಯಾರಿಸಿ ಆಕ್ಸಿಜನ್ ಅನಿಲವನ್ನು ಹೊರಬಿಡುತ್ತವೆ. ಈ ಆಕ್ಸಿಜನ್ $HO_2$ದಿಂದ ಬಂದಿದೆಯೋ ಅಥವಾ $CO_2$ ರಿಂದ ಬಂದಿದೆಯೋ ಎಂಬುದನ್ನು ಕಂಡುಹಿಡಿಯಲಿಕ್ಕೆ $^{18}$O ಐಸೊಟೋಪನ್ನು ಉಪಯೋಗಿಸುತ್ತಾರೆ.

ಕೋಳಿಗಳು ತತ್ತಿಹಾಕುವ ಬಗೆಯನ್ನು ಕಂಡುಹಿಡಿಯಲು $^{40}$Caಯ ಕೆಲವು ಪರಮಾಣುಗಳನ್ನು ಅದರ ಆಹಾರದಲ್ಲಿ ಬೆರೆಸಿ ಪ್ರಯೋಗ ಮಾಡಿದಾಗ ಕೆಳಗಿನ ಸಂಗತಿ ತಿಳಿದುಬಂದಿದೆ. ಹಾಕಿದ ಆಹಾರದಲ್ಲಿಯ Ca ಧಾತುವಿನಿಂದ ತತ್ತಿಯ ಮೇಲಿನ ಕವಚ ಉತ್ಪನ್ನವಾಗುವುದಿಲ್ಲ. ಐಸೊಟೋಪುಗಳು ಉಪಯೋಗದ ಪೂರ್ವದಲ್ಲಿ ಇದರ ತದ್ವಿರುದ್ಧ ಕಲ್ಪನೆ ಜನರಲ್ಲಿ ಇತ್ತು. ತತ್ತಿಗಳ ಮೇಲಿನ ಕವಚ ಎಲುಬುಗಳಿಂದ ತಯಾರಾಗುತ್ತದೆ. ತತ್ತಿಹಾಕುವ ಕೋಳಿಗಳ ಶರೀರದಲ್ಲಿ ಎರಡು ತಿಂಗಳು ಅನಂತರ ಸಂಪೂರ್ಣ ಹೊಸ ಅಸ್ಥಿಪಂಜರ ತಯಾರಾಗುತ್ತದೆಂಬ ಸಂಗತಿ ಕೂಡ ತಿಳಿದುಬಂದಿದೆ.

ಪೆಟ್ರೋಲಿಯಂ ಬಾವಿಗಳಿರುವಲ್ಲಿ ಮಿಥೇನ್ ($CH_4$) ಅನಿಲ ಉತ್ಪನ್ನವಾಗುತ್ತದೆ. ಇದು ಕಂಡುಬರುವ ಸ್ಥಳಗಳಲ್ಲಿ ಭೂಗರ್ಭವಿಜ್ಞಾನಿಗಳು ಪೆಟ್ರೋಲಿಯಂ ಬಾವಿಗಳಿವೆಯೆಂದು ತರ್ಕಿಸುತ್ತಾರೆ. ಹಾಗಾದರೆ ಈ ಅನಿಲ ಯಾವುದರಿಂದ ಉತ್ಪನ್ನವಾಗಿದೆಯೆಂಬುದನ್ನು ಕಂಡುಹಿಡಿಯಲು ಗಿಡಗಂಟೆಗಳಲ್ಲಿ ಸಂಗ್ರಹವಾದ $^{14}$C ಉಪಯೋಗವಾಗುತ್ತದೆ.

ಭೂಮಿ ಹುಟ್ಟಿ ಎಷ್ಟು ವರ್ಷಗಳಾಗಿವೆಯೆಂಬುದನ್ನು ಕಂಡುಹಿಡಿಯಲಿಕ್ಕೆ U ಧಾತುವಿನ ವಿಘಟನೆಯಿಂದ ಉತ್ಪತ್ತಿಗೊಂಡ ಐಸೊಟೋಪುಗಳ ಅಭ್ಯಾಸದಿಂದ ಸಾಧ್ಯವಾಗುತ್ತದೆ. ಭೂಮಿಯಲ್ಲಿ ಹುಗಿದುಹೋದ ಇಂಗಾಲಯುಕ್ತ ಅವಶೇಷಗಳ ವಯಸ್ಸು ಎಷ್ಟಾಗಿದೆಯೆಂಬುದನ್ನು $^{14}$C ಐಸೊಟೋಪಿನ ಕಾರ್ಬನ್ ಡೇಟಿಂಗ್ (ಇಂಗಾಲಕಾಲನಿಷ್ಕರ್ಷೆ) ಎಂಬ ಹೊಸ ವಿಧಾನದಿಂದ ಅತಿ ಸುಲಭದಲ್ಲಿ ಹೇಳಲಿಕ್ಕೆ ಬರುತ್ತದೆ.

ರಾಸಾಯನಿಕ ವಿಜ್ಞಾನದಲ್ಲಿ ಐಸೊಟೋಪುಗಳ ಉಪಯೋಗ ಹೇಳತೀರದಷ್ಟಾಗಿದೆ. ಯಾವುದಾದರೂ ರಾಸಾಯನಿಕ ಕ್ರಿಯೆ ಹೇಗಾಗಿದೆಯೆಂಬುದನ್ನು ತಿಳಿಯಲು ಇವುಗಳಿಂದ ಸುಲಭಸಾಧ್ಯ. ಐಸೊಟೋಪುಗಳಿಂದ ಹೊರಬಂದ ಕಿರಣಗಳು ರಾಸಾಯನಿಕ ಕ್ರಿಯೆಯ ಮೇಲೆ ಪರಿಣಾಮ ಮಾಡಿದಾಗ ವಸ್ತುಗಳಲ್ಲಿ ಹೊಸ ಗುಣಧರ್ಮಗಳು ಉತ್ಪನ್ನವಾಗುತ್ತವೆ. ಉದಾಹರಣೆಗೆ, ಪಾಲಿಥಿಲೀನಿನ ಮೇಲೆ ಈ ಕಿರಣಗಳ ಪರಿಣಾಮವಾಗಿ ತಯಾರಿಸಲ್ಪಟ್ಟ ಪ್ರಯೋಗಶಾಲೆಯ ಉಪಕರಣಗಳಿಗೆ ಬೆಂಕಿ ನೀರು ವಿದ್ಯುತ್ತಿನ ಪರಿಣಾಮಗಳೇನೂ ಆಗುವುದಿಲ್ಲ. ಇಂಥ ಹೊಸ ಪ್ರಯೋಗಗಳು ಇನ್ನೂ ಸಂಶೋಧನೆಯ ಹಂತದಲ್ಲಿವೆ. ಪ್ರಯೋಗಶಾಲೆಯಲ್ಲಿ ಯಾವುದಾದರೊಂದು ಹೊಸ ಔಷಧವನ್ನು ತಯಾರಿಸಿದರೆ ಇದರ ಕ್ರಿಯೆ ಪ್ರಾಣಿಗಳ ಮೇಲೆ ಹೇಗಾಗುವುದೆಂಬುದನ್ನು ಕಂಡುಹಿಡಿಯಲು ಐಸೊಟೋಪುಗಳನ್ನು ಉಪಯೋಗಿಸುತ್ತಾರೆ. ಐಸೊಟೋಪುಗಳು ಪರಮಾಣುಯುಗದ ಕಾಣಿಕೆಗಳು.

ಭಾರತದಲ್ಲಿ ವಿಕಿರಣಶೀಲ ಐಸೊಟೋಪುಗಳ ತಯಾರಿಕೆ: ಮುಂಬಯಿ ನಗರದ ಟ್ರಾಂಬೆಯಲ್ಲಿರುವ ಬಾಬಾ ಅಟಾಮಿಕ್ ರಿಸರ್ಚ್ ಸೆಂಟರಿನಲ್ಲಿ ವಿಕಿರಣಶೀಲ ಐಸೊಟೋಪುಗಳನ್ನು ವ್ಯಾಪಾರಪ್ರಮಾಣದಲ್ಲಿ ತಯಾರಿಸಿ ಅರ್ಹತಾಪತ್ರ ಪಡೆದಿರುವ ಸಂಸ್ಥೆಗಳಿಗೆ ಅವನ್ನು ಪೂರೈಸಲಾಗುತ್ತಿದೆ. ವೈದ್ಯಕೀಯ, ಸಂಶೋಧನೆ, ಶೈಕ್ಷಣಿಕ ಮತ್ತು ಔದ್ಯಮಿಕ ಕ್ಷೇತ್ರಗಳಲ್ಲಿ ಇವುಗಳ ಉಪಯೋಗ ಅಧಿಕವಾಗಿರುವುದೊಂದೇ ಅಲ್ಲ, ಇವುಗಳಿಗೆ ಬೇಡಿಕೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. (ಎಸ್.ಎಸ್.ಡಿ.ಎಚ್.)

**ಐಸೋನಿಯಾಜಿಡ್ ಮತ್ತು ಇಪ್ರೋನಿಯಾಜಿಡ್:** ಕ್ಷಯರೋಗಾಣುಗಳ ನಾಶಕ್ಕೆ ನಿಯೋಜಿತವಾದ ಮದ್ದುಗಳು. ಇತರ ರೋಗಾಣುಗಳ ವಿರುದ್ಧ ಅವು ಕೆಲಸ ಮಾಡುವುದಿಲ್ಲ. ಮಾನವರಲ್ಲಿ ಕ್ಷಯರೋಗ ಚಿಕಿತ್ಸೆಗೆ ಇಪ್ರೊನಿಯಾಜಿಡಿನ ಬಳಕೆ ಈಗ ಇಲ್ಲ. ಅದರ ದೀರ್ಘ ಉಪಯೋಗದಿಂದ ನಂಜುದೋಷ ಉಂಟಾಗುವುದೇ ಇದರ ಕಾರಣ. ಮಾನೊ ಅಮೀನ್ ಆಕ್ಸಿಡೇಸ್ ಎಂಬ ಕಿಣ್ವವನ್ನು ಇದು ನಿಷ್ಕ್ರಿಯಗೊಳಿಸುವುದರಿಂದ ಹೀಗಾಗಬಹುದೆಂದು ತರ್ಕಿಸಲಾಗಿದೆ. ಆದರೆ ಐಸೊನಿಯಾಜಿಡಿಗೆ ಈ ದುರ್ಗುಣವಿಲ್ಲ. ಆದ್ದರಿಂದ ಅದು ಮಾತ್ರ ಕ್ಷಯರೋಗ ಚಿಕಿತ್ಸೆಯಲ್ಲಿ ಉಪಯೋಗವಾಗುತ್ತಿದೆ. ಸಾಮಾನ್ಯವಾಗಿ ಪ್ಯಾರಾಅಮೈನೋ ಸ್ಯಾಲಿಸಿಕಾಮ್ಲ ಮತ್ತು ಸ್ಟ್ರೆಪ್ಟೊಮೈಸಿನುಗಳೊಂದಿಗೆ ಐಸೊನಿಯಾಜಿಡನ್ನು ಕೂಡಿಸಿ ಪ್ರಯೋಗಿಸುವುದು ಪದ್ಧತಿ. ಖಿನ್ನತೆ, ವಿಷಣ್ಣತೆ, ಅಕಾರಣ ಭಯ ಮೊದಲಾದ

ಮನೋವಿಕಾರಗಳಿಗೆ ತುತ್ತಾದ ರೋಗಿಗಳನ್ನು ಉಪಚರಿಸಲು, ಉತ್ತೇಜಕವಾಗಿ ಇಪ್ರೊನಿಯಾಜಿಡನ್ನು ಪ್ರಯೋಗಿಸುವುದು ಇತ್ತೀಚೆಗೆ ರೂಢಿಯಾಗಿದೆ.




ನಿಕೊಟಿನ್ ಅಮೈಡು




ಐಸೊನಿಯಾಜಿಡ್




ಇಪ್ರೊನಿಯಾಜಿಡ್

ಬಿ ವರ್ಗದ ಜೀವಾತುಗಳಲ್ಲಿ ಒಂದಾದ ನಿಕೋಟಿನ್ ಅಮೈಡು ಕ್ಷಯರೋಗಾಣುವಿನ ಉತ್ಪತ್ತಿ ಮತ್ತು ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆಯಬಲ್ಲದು ಎಂಬ ಮಹತ್ತ್ವದ ಶೋಧವಾದದ್ದು 1944ರಲ್ಲಿ. ರಚನೆಯಲ್ಲಿ ನಿಕೊಟಿನ್ ಅಮೈಡನ್ನು ಹೋಲುವ ಇತರ ಸಂಯುಕ್ತಗಳಿಗೂ ಇಂಥ ರೋಗನಿರೋಧಕ ಗುಣವಿರಬಹುದು ಎಂಬ ಭಾವನೆಯಿಂದ ಪ್ರೇರಿತರಾದ ಸಂಶೋಧಕರು ಸದೃಶ ರಾಸಾಯನಿಕಗಳ ಶೋಧದಲ್ಲಿ ತೊಡಗಿದರು. ಈ ಯತ್ನದ ಫಲವಾಗಿ ಐಸೊನಿಯಾಜಿಡ್ (ಐಸೊನಿಕೋಟಿನ್ ಆಮ್ಲದ ಹೈಡ್ರಜೈಡ್) ಮತ್ತು ಇಪ್ರೊನಿಯಾಜಿಡ್ (ಅದರ ಐಸೊಪ್ರೊಪೈಲ್ ಎಸ್ಟರ್) ರೂಪುಗೊಂಡವು. ಇವನ್ನು ಕ್ಷಯ ರೋಗಾಣುಗಳ ವಿರುದ್ಧ ಉಪಯೋಗಿಸಿದಾಗ ಫಲಿತಾಂಶ ತೃಪ್ತಿಕರವಾಗಿತ್ತು. ಈ ಸಂಯುಕ್ತಗಳ ರಚನಾ ಸೂತ್ರವನ್ನು ಮೇಲೆ ಕೊಡಲಾಗಿದೆ. (ಎಚ್.ಜಿ.ಎಸ್.)

**ಐಸೊಪೋಡ:** ಸಂಧಿಪದಿಗಳ ವಂಶದ ಕ್ರಸ್ಟೇಸಿಯ ವರ್ಗದ ಮೆಲಕೊಸ್ಟ್ರೆಕ ಉಪವರ್ಗದ ಪೆರಕ್ಯಾರಿಡ ಗಣಕ್ಕೆ ಸೇರಿದ ಒಂದು ಉಪಗಣ.

ಈ ಪ್ರಾಣಿಗಳಲ್ಲಿ ಮುಂಭಾಗದಲ್ಲಿ ಶಿರಸ್ತ್ರಾಣವಾಗಲೀ ಕಣ್ಣುಗಳಿಗೆ ತೊಟ್ಟಾಗಲೀ (ಹಿಡಿ) ಇಲ್ಲ. ಎದೆಯ ಭಾಗದ ಉಪಾಂಗಗಳಿಗೆ ಎಕ್ಸೊಪೊಡೈಟುಗಳೂ ಇಲ್ಲ. ಮೊದಲನೆಯ ಜೊತೆ ಮ್ಯಾಕ್ಸಿಲ್ಲಿಪೀಡುಗಳಾಗಿ ಮಾರ್ಪಟ್ಟಿವೆ. ಮಿಕ್ಕವೆಲ್ಲವೂ ಒಂದೇ ತೆರನಾಗಿವೆ. ಪ್ಲಿಯೊಪಾಡುಗಳು ಉಸಿರಾಟದ ಅಂಗಗಳಾಗಿ ಮಾರ್ಪಟ್ಟಿವೆ. ಯೂರೊಪಾಡುಗಳು ಬಾಲದ ಈಜುರೆಕ್ಕೆಯೊಡನೆ ಭಾಗವಹಿಸುವುದಿಲ್ಲ. *ಲಿಗಿಯ, ಆರ್ಮಡಿಲ್ಲಿಡಿಯಂ, ಎಸೆಲ್ಲಸ್* ಮತ್ತು *ಐಡೋಟಿಯ*–ಇವು ಮುಖ್ಯ ಉದಾಹರಣೆಗಳು.

**ಲಿಗಿಯ** ಎಂಬುದು ಕಡಲಜೀವಿ. ಸರ್ವಭಕ್ಷಕ ಜೀವಿಯಾದರೂ ಮುಖ್ಯವಾಗಿ ಫ್ಯೂಕಸನ್ನು ತಿನ್ನುತ್ತದೆ. ದೇಹ ಸಾಮಾನ್ಯವಾಗಿ ಚಪ್ಪಟೆಯಾಗಿ ಅಂಡಾಕಾರವಾಗಿದೆ. ತೊಟ್ಟಿಲ್ಲದ ಎರಡು ದೊಡ್ಡ ಕಣ್ಣುಗಳಿವೆ. ಎರಡು ಜೊತೆ ಕುಡಿಮೀಸೆಗಳಲ್ಲಿ ಒಂದು ಜೊತೆ ತುಂಬ ಚಿಕ್ಕದು; ಇನ್ನೊಂದು ಜೊತೆ ಉದ್ದ. ಇವು ಭಿನ್ನ ಲಿಂಗಿಗಳು. ಬೆಳವಣಿಗೆಯಲ್ಲಿ ರೂಪಪರಿವರ್ತನೆ ಇಲ್ಲ.

*ಆರ್ಮಡಿಲ್ಲಿಡಿಯಂ* ಎಂಬುದು ಸಾಮಾನ್ಯವಾದ ಮರದ ಹೇನು. ಪೂರ್ಣ ನೆಲವಾಸಿ. ಕುಡಿಮೀಸೆಗಳು ಚಿಕ್ಕವು. ಶತ್ರುಗಳಿಂದ ರಕ್ಷಿಸಿಕೊಳ್ಳಲು ಚೆಂಡಿನಂತೆ ಸುರುಳಿ ಸುತ್ತಿಕೊಳ್ಳಬಲ್ಲದು. ಈ ಲಕ್ಷಣ ಪ್ರಧಾನವಾಗಿ ಚಿಪ್ಪಿನಹಂದಿ (ಆರ್ಮಡಿಲ್ಲೊ)ಯಲ್ಲಿ ಕಾಣಬರುವುದರಿಂದಲೇ ಇದಕ್ಕೆ ಈ ಅನ್ವರ್ಥನಾಮ.

ಈ ಉಪಗಣಕ್ಕೆ ಪರತಂತ್ರ ಜೀವನ ನಡೆಸುವ ಹಲವು ಪ್ರಾಣಿಗಳೂ ಸೇರಿವೆ. ಇವುಗಳಲ್ಲಿ ಪರತಂತ್ರ ಜೀವನದ ವಿವಿಧ ಹಂತಗಳನ್ನು ಕಾಣಬಹುದು. ಅಂಗಾಂಗಗಳು ಚೆನ್ನಾಗಿ ಬೆಳೆದ ತಾತ್ಕಾಲಿಕ ಪರತಂತ್ರಜೀವಿಗಳಿಂದ ಹಿಡಿದು ಪ್ರಬುದ್ಧಾವಸ್ಥೆಯಲ್ಲಿ ಕೇವಲ ತತ್ತಿಯ ಕೋಶ ಮಾತ್ರ ಉಳಿದಿರುವ ಪೂರ್ಣ ಪರತಂತ್ರಜೀವಿಗಳವರೆಗೂ ಈ ಉಪಗಣದಲ್ಲಿ ನಿದರ್ಶನಗಳು ದೊರೆಯುತ್ತವೆ. ಉದಾ: ಮೀನಿನ ಹೇನು. (ಎಚ್.ಬಿ.ಡಿ.; ಎನ್.ಎಸ್.ಎಲ್.)

**ಐಸೊಪ್ರೀನ್:** ನೈಸರ್ಗಿಕ ಉತ್ಪನ್ನ ವಸ್ತುಗಳ ಸಂಯೋಜನೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುವ ಒಂದು ಸರಳ ಅಪರ್ಯಾಪ್ತ ಹೈಡ್ರೊಕಾರ್ಬನ್.




ನೈಸರ್ಗಿಕ ರಬ್ಬರನ್ನು ನಾಶಕ ಆಸವನಕ್ಕೆ (ಡಿಸ್ಟ್ರಕ್ಟಿವ್ ಡಿಸ್ಟಿಲ್ಲೇಶನ್) ಒಳಪಡಿಸಿದಾಗ ಉತ್ಪತ್ತಿಯಾಗುವ ಪದಾರ್ಥಗಳಲ್ಲಿ ಐಸೊಪ್ರೀನ್ ಒಂದು. ಇದನ್ನು ಹಾಗೆಯೇ ಬಿಟ್ಟರೆ ಕ್ರಮೇಣ ಪುನಃ ರಬ್ಬರಿನಂಥ ಒಂದು ಪದಾರ್ಥ ಉತ್ಪತ್ತಿಯಾಗುತ್ತದೆ. ಆದ್ದರಿಂದ ರಬ್ಬರ್ ಐಸೊಪ್ರೀನಿನ ಪಾಲಿಮೆರೀಕರಣದಿಂದ (ಪಾಲಿಮೆರೈಸೇಷನ್) ಆಗಿರುವ ಪದಾರ್ಥವೆಂಬ ಅಭಿಪ್ರಾಯಕ್ಕೆ ಆಸ್ಪದವಾಯಿತು. ರಬ್ಬರಿನ ಓಜೋನ್ ವಿಶ್ಲೇಷಣೆಯೇ (ಓಜೋನೇಲಿಸಿಸ್) ಮುಂತಾದವು ಈ ಅಭಿಪ್ರಾಯಕ್ಕೆ ಬೆಂಬಲ ನೀಡಿದುವು. ರಬ್ಬರಿನ ಈ ಕೆಳಕಂಡ ರಚನೆ ಇಂದು ಸಾರ್ವತ್ರಿಕ ಮನ್ನಣೆ ಪಡೆದಿದೆ.




ರಬ್ಬರು ಮಾತ್ರವಲ್ಲ; ಟರ್ಪೀನುಗಳು, ಕ್ಯಾರೋಟೀನ್ ವರ್ಣದ್ರವ್ಯಗಳು ಮೊದಲಾದ ವಿವಿಧ ಸಸ್ಯಮೂಲ ಪದಾರ್ಥಗಳಿಗೆಲ್ಲ ಐಸೊಪ್ರೀನ್ ಅಣುರಚನಾಘಟಕ (ಸ್ಟ್ರಕ್ಚರಲ್ ಯೂನಿಟ್) ಆಗಿರುವುದು ಈಗ ತಿಳಿದುಬಂದಿದೆ. ಅಂತೆಯೇ ಟರ್ಪೆಂಟೈನ್ ಮುಂತಾದ ಅನೇಕ ಪರಿಮಳ ತೈಲಗಳನ್ನು ಗಾಳಿಯ ಸಂಪರ್ಕವಿಲ್ಲದಂತೆ ಕಾಯಿಸಿದಾಗ ಐಸೊಪ್ರೀನ್ ಉತ್ಪತ್ತಿಯಾಗುತ್ತದೆ.




ಐಸೊಪ್ರೀನನ್ನು ಅಸಿಟೋನ್ ಮತ್ತು ಅಸಿಟಲೀನುಗಳನ್ನು ಉಪಯೋಗಿಸಿ ಸಂಶ್ಲೇಷಿಸಬಹುದು.

ಆದರೆ ಈಗ ಬಲುಮಟ್ಟಿಗೆ ಐಸೊಪ್ರೀನ್ ತಯಾರಿಕೆಗೆ ವಿಶೇಷವಾಗಿ ಬಳಸುತ್ತಿರುವ ವಿಧಾನವೆಂದರೆ ಪೆಟ್ರೋಲಿಯಂ ಉತ್ಪನ್ನಗಳ ಉಷ್ಣವಿಭಜನೆ (ಕ್ರ್ಯಾಕಿಂಗ್).

ಐಸೊಪ್ರೀನ್ ವರ್ಣರಹಿತ ದ್ರವ: ಇದರ ಕುದಿಬಿಂದು $34^0$ಸೆಂ. ಐಸೊಪ್ರೀನಿನ ಪಾಲಿಮೆರೀಕರಣದಿಂದ ಸಂಶ್ಲೇಷಿತ ರಬ್ಬರನ್ನು ತಯಾರಿಸುವ ಮೊದಲ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ನೈಸರ್ಗಿಕ ರಬ್ಬರನ್ನು ಬಲುಮಟ್ಟಿಗೆ ಹೋಲುವ ಒಂದು ಬಗೆಯ ಕೃತಕ ರಬ್ಬರನ್ನು ಐಸೊಪ್ರೀನ್ ಪಾಲಿಮೆರೀಕರಣದಿಂದ ತಯಾರಿಸುವ ಒಂದು ವಿಧಾನವನ್ನು ಕೊನೆಗೆ 1955ರಲ್ಲಿ ಪ್ರಕಟಿಸಲಾಯಿತು. ಅತ್ಯಂತ ಶುದ್ಧವಾದ ಐಸೊಪ್ರೀನನ್ನು ಲೇಶಮಾತ್ರವೂ ಆಕ್ಸಿಜನ್ ಮತ್ತು ತೇವಾಂಶವಿಲ್ಲದಿರುವಂಥ ವಾತಾವರಣದಲ್ಲಿ $35^0$ ಸೆಂ. ಉಷ್ಣತೆಯಲ್ಲಿ ಸಣ್ಣಗೆ ವಿಭಾಗಿಸಿದ ಲಿಥಿಯಮಿನಿಂದ ಸಂಸ್ಕರಿಸಿದಾಗ ಈ ಕೃತಕ ರಬ್ಬರ್ ಉತ್ಪತ್ತಿಯಾಯಿತು. (ಜಿ.ಆರ್.ಎಲ್.)

**ಐಸೊಪ್ರೀನ್ ನಿಯಮ:** ಟರ್ಪೀನುಗಳ ಅಣುರಚನೆಯಲ್ಲಿ ಕಂಡುಬರುವ ಕಾರ್ಬನ್ ಪರಮಾಣುಗಳ ಚೌಕಟ್ಟುಗಳು ಐಸೊಪ್ರೀನ್ ಅಣುವಿನಲ್ಲಿರುವ ಕಾರ್ಬನ್ ಚೌಕಟ್ಟನ್ನೇ ರಚನಾಘಟಕವಾಗಿಟ್ಟುಕೊಂಡು ರೂಪಿತವಾಗಿವೆ–ಎಂಬುದೇ ಈ ನಿಯಮ. ಇವನ್ನು ಮೊಟ್ಟಮೊದಲಿಗೆ 1887ರಲ್ಲಿ ಗಾಟಿಂಗೆನ್ ವಿಶ್ವವಿದ್ಯಾನಿಲಯದ ಪ್ರೊ. ಆಟೊ ವಲಾಖ್ ಎಂಬಾತ ಪ್ರತಿಪಾದಿಸಿದ. ಮಾನೊ ಟರ್ಪೀನುಗಳ ಅಣುಗಳು ($C_{10}$) ಎರಡೆರಡು

ಐಸೊಪ್ರೀನ್ ಅಣುಗಳಿಂದಲೂ ಸೆಸ್ಕ್ವಿಟರ್ಪೀನುಗಳು ($C_{15}$) ಮೂರು ಐಸೊಪ್ರೀನ್ ಅಣುಗಳಿಂದಲೂ ಡೈಟರ್ಪೀನುಗಳು ($C_{20}$) ನಾಲ್ಕು ಐಸೊಪ್ರೀನ್ ಅಣುಗಳಿಂದಲೂ ರೂಪಿತವಾಗಿವೆ. ಟರ್ಪೀನುಗಳಲ್ಲಿ ಕಾರ್ಬನ್ ಪರಮಾಣುಗಳ ಸಂಖ್ಯೆ ಮಾತ್ರವಲ್ಲ, ಅವುಗಳ ಜೋಡಣೆಯೂ ಐಸೊಪ್ರೀನ್ ರಚನೆಯನ್ನು ಆಧರಿಸಿವೆ.



ಐಸೊಪ್ರೀನ್ ಅಣುವಿನಲ್ಲಿ ಕಾರ್ಬನ್ ಪರಮಾಣುಸರಣಿ ಶಾಖೆಯೊಡೆದಿರುವ ತುದಿಯನ್ನು ತಲೆ ಎಂದೂ ಇನ್ನೊಂದು ತುದಿಯನ್ನು ಬಾಲ ಎಂದೂ ಕರೆಯುವುದಾದರೆ ಸಾಮಾನ್ಯವಾಗಿ ಎಲ್ಲ ಟರ್ಪೀನುಗಳ ರಚನೆಯಲ್ಲಿಯೂ ಈ ಮೂಲ ಘಟಕಗಳು ತಲೆ–ಬಾಲ–ತಲೆ–ಬಾಲ ಈ ಕ್ರಮದಲ್ಲಿ ಸೇರಿಕೊಂಡಿರುವುದನ್ನು ಗಮನಿಸಬಹುದು. ಉದಾಹರಣೆಗೆ,






ಏಬಿಯೆಟಿಕ್ ಆಮ್ಲದ ಚೌಕಟ್ಟು

ಈ ನಿಯಮಕ್ಕೆ ಹೊರತಾಗಿ ಕೆಲವು ಟರ್ಪೀನುಗಳಲ್ಲಿ ಮಾತ್ರ ಜೋಡಣೆ ಕ್ರಮ ತಲೆ–ಬಾಲ–ಬಾಲ–ತಲೆ ಇರುವುದು ಕಂಡುಬಂದಿದೆ. ಉದಾಹರಣೆಗೆ, ಆದರೆ ಇಂಥ ನಿದರ್ಶನಗಳು ವಿರಳ.

ಐಸೊಪ್ರೀನ್ ನಿಯಮದ ದೃಷ್ಟಿಯಿಂದ ಕ್ಯಾರೊಟೀನ್ ವರ್ಣದ್ರವ್ಯಗಳನ್ನು ಟೆಟ್ರಟರ್ಪೀನುಗಳೆಂದೂ ($C_{40}$) ರಬ್ಬರನ್ನು ಪಾಲಿಟರ್ಪೀನೆಂದೂ ಪರಿಗಣಿಸಬಹುದು.



ಲಿನ್ಯಾಂಡುಲಾಲ್ ಚೌಕಟ್ಟು

(ಜಿ.ಆರ್.ಎಲ್.)

**ಐಸೊಪ್ರೊಪೈಲ್ ಅಸಿಟೇಟ್:** ಸುವಾಸನೆ ಬೀರುವ ಬಣ್ಣವಿಲ್ಲದ ದ್ರವವಸ್ತು. ಅಣುಸೂತ್ರ $C_5H_{10}O_2$. ರಚನಾಸೂತ್ರ



$0^0$ ಸೆಂ. ಉಷ್ಣತೆಯಲ್ಲಿ ಸಾಂದ್ರತೆ 0.9166. ಕುದಿಯುವ ಬಿಂದು $88.2^0$ ಸೆಂ. ನೀರಿನಲ್ಲಿ ಅದ್ರಾವ್ಯ. ಅನೇಕ ಸಾವಯವ (ಆರ್ಗ್ಯಾನಿಕ್) ಲೀನಕಾರಿಗಳೊಡನೆ ಬೆರೆಯುತ್ತದೆ. ಪ್ರೊಪೈಲೀನನ್ನು ಬಿಸಿಯಾದ ಅಸಿಟಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣದ ಮೂಲಕ ಹಾಯಿಸಿದಾಗ ಅಥವಾ ಆಮ್ಲ ಮಿಶ್ರಣದೊಡನೆ ಐಸೊಪ್ರೊಪೈಲ್ ಆಲ್ಕೊಹಾಲನ್ನು ಕಾಯಿಸಿದಾಗ ಈ ಎಸ್ಟರು ಉತ್ಪತ್ತಿಯಾಗುತ್ತದೆ. ಐಸೊಪ್ರೊಪೈಲ್ ಆಲ್ಕೊಹಾಲಿನೊಡನೆ (52.5%) ನಿಯತ ಕುದಿ ಮಿಶ್ರಣ (ಕುದಿಯುವ ಬಿಂದು $80.1^0$ಸೆಂ.) ಉಂಟುಮಾಡುವುದು. ಬಿಸಿ ಮಾಡಿದ ಕ್ಷಾರಗಳ ಸಂಪರ್ಕದಲ್ಲಿ ವಿಭಜನೆ ಹೊಂದಿ ಐಸೊಪ್ರೊಪೈಲ್ ಆಲ್ಕೊಹಾಲ್ ಮತ್ತು ಅಸಿಟೇಟುಗಳನ್ನು ಕೊಡುವುದು. ಸೆಲ್ಯುಲೋಸ್ ನೈಟ್ರೇಟ್ ಮತ್ತು ಬಹು ಪಾಲು ಅಂಟುಗಳು ಇದರಲ್ಲಿ ಲೀನವಾಗುವುವು, ಆದರೆ ಸೆಲ್ಯುಲೋಸ್ ಅಸಿಟೇಟ್ ಮಾತ್ರ ಲೀನವಾಗುವುದಿಲ್ಲ. (ಎಚ್.ಜಿ.ಎಸ್.)

**ಐಸೊಪ್ರೊಪೈಲ್ ಆಲ್ಕೊಹಾಲ್:** ಸುವಾಸನೆ ಬೀರುವ ಬಣ್ಣವಿಲ್ಲದ ದ್ರವವಸ್ತು. ಅಣುಸೂತ್ರ $C_3H_8O$. ರಚನಾಸೂತ್ರ



$20^0$ ಸೆಂ. ಉಷ್ಣತೆಯಲ್ಲಿ ಸಾಂದ್ರತೆ 0.7856. ಕುದಿಯುವ ಬಿಂದು $82.4^0$ ಸೆಂ.ನೀರು ಮತ್ತು ಆರ್ಗ್ಯಾನಿಕ್ ಲೀನಕಾರಿಗಳೊಡನೆ ಬೆರೆಯುವುದು. ನೀರಿನೊಡನೆ ನಿಯತ ಕುದಿಮಿಶ್ರಣ (ಕುದಿಯುವ ಬಿಂದು 80.40 ಸೆಂ.) ಕೊಡುವುದು. ಈ ಮಿಶ್ರಣದಲ್ಲಿ ಗಾತ್ರಾನುಸಾರ 91% ಆಲ್ಕೊಹಾಲ್ ಇರುತ್ತದೆ. ಪೆಟ್ರೋಲಿಯಂ ಎಣ್ಣೆಯಲ್ಲಿ ಹಲವು ಭಾರವಾದ ಹೈಡ್ರೊಕಾರ್ಬನುಗಳಿರುತ್ತವೆ. ಇವನ್ನು ವಿಭಜನಾತಂತ್ರಕ್ಕೆ ಗುರಿಪಡಿಸಿದಾಗ ದೊರೆಯುವ ಕಿರಿಯ ಹೈಡ್ರೊಕಾರ್ಬನುಗಳಲ್ಲಿ ಪ್ರೊಪೈಲೀನ್ ಸಹ ಒಂದು. ಇದನ್ನು 90%–95% ಸಲ್ಫ್ಯೂರಿಕ್ ಆಮ್ಲದಲ್ಲಿ ವಿಲೀನಗೊಳಿಸಿ ಅನಂತರ ನೀರು ಸೇರಿಸಿ ಕುದಿಸಿದರೆ ಐಸೊಪ್ರೊಪೈಲ್ ಆಲ್ಕೊಹಾಲ್ ಬಟ್ಟಿ ಇಳಿಯುವುದು; ಸ್ವಲ್ಪ ಐಸೊಪ್ರೊಪೈಲ್ ಈಥರ್ ಉಪವಸ್ತುವಾಗಿ ದೊರೆಯುವುದು. ಈ ಕ್ರಿಯೆಗಳನ್ನು ಕೆಳಕಂಡ ಸಮೀಕರಣಗಳು ಸೂಚಿಸುತ್ತವೆ.




ಅಸಿಟೋನನ್ನು ಸೋಡಿಯಂ ಅಮಾಲ್ಗಂನಿಂದ ಅಪಕರ್ಷಿಸಿದಾಗ ಅಥವಾ $150^0$–$180^0$ ಸೆಂ. ಉಷ್ಣತೆಯಲ್ಲಿ ಒತ್ತಡ ಹೇರಿ ನಿಕ್ಕಲ್ ಅಥವಾ ತಾಮ್ರ ವೇಗವರ್ಧಕದ ಸಮ್ಮುಖದಲ್ಲಿ ಹೈಡ್ರೊಜನನ್ನು ಕೂಡಿಸಿದಾಗ ಐಸೊಪ್ರೊಪೈಲ್ ಆಲ್ಕೊಹಾಲ್ ಉಂಟಾಗುವುದು.

ಐಸೊಪ್ರೊಪೈಲ್ ಆಲ್ಕೊಹಾಲಿಗೆ ದ್ವಿತೀಯಕ ಆಲ್ಕೊಹಾಲುಗಳಿಗೆ ಇರಬೇಕಾದ ಸಮಸ್ತ ಲಕ್ಷಣಗಳೂ ಇವೆ. ಇದರ ಮುಖ್ಯ ಉಪಯೋಗ ಅಸಿಟೋನ್ ತಯಾರಿಕೆಯಲ್ಲಿ. ಸ್ಫೋಟಕಗಳು ಮತ್ತು ಪ್ಲಾಸ್ಟಿಕ್ಕುಗಳ ತಯಾರಿಕೆಯಲ್ಲಿ ಅಗಾಧ ಪ್ರಮಾಣದ ಅಸಿಟೋನ್ ಬೇಕಾಗುತ್ತದೆ. $300^0$ಸೆಂ. ಉಷ್ಣತೆಗೆ ಕಾಯಿಸಿದ ತಾಮ್ರದ ತಂತಿಬಲೆಯೊಂದರ ಮೂಲಕ

ಐಸೊಪ್ರೊಪೈಲ್ ಆಲ್ಕೊಹಾಲಿನ ಆವಿಯನ್ನು ಹಾಯಿಸಿ ಆಸಿಟೋನ್ ಪಡೆಯುತ್ತಾರೆ. ಐಸೊಪ್ರೊಪೈಲ್ ಆಲ್ಕೊಹಾಲ್ ನೀರು ಘನೀಭವಿಸುವುದನ್ನು ವಿರೋಧಿಸುತ್ತದೆ. ಆದ್ದರಿಂದ



ಮೋಟಾರ್ ವಾಹನಗಳಲ್ಲಿ ಬಳಸುವ ನೀರು ಹೆಪ್ಪುಗಟ್ಟದಿರಲು ಇದನ್ನು ನೀರಿನೊಡನೆ ಸೇರಿಸುತ್ತಾರೆ. ಉಗುರಿನ ಪಾಲಿಷ್, ಕ್ಷೌರಕ್ಕೆ ಉಪಯೋಗಿಸುವ ಲೋಷನ್, ಅಂಗರಾಗಗಳು,



ಸುಗಂಧಗಳು, ಥೈಮಾಲ್ ಇತ್ಯಾದಿಗಳ ತಯಾರಿಕೆಯಲ್ಲಿ ಐಸೊಪ್ರೊಪೈಲ್ ಆಲ್ಕೊಹಾಲಿನ ಪಾತ್ರವಿದೆ. ಇದರ ಎಸ್ಟರುಗಳು ಮೆರುಗೆಣ್ಣೆಗಳಿಗೆ (ಲಾಕ್ವರ್ಸ್) ಉತ್ತಮ ಲೀನಕಾರಿಗಳು. (ಎಚ್.ಜಿ.ಎಸ್.)

**ಐಸೊಪ್ರೊಪೈಲ್ ಈಥರ್:** ಕರ್ಪೂರದ ವಾಸನೆಯಿರುವ ಬಣ್ಣವಿಲ್ಲದ ದ್ರವವಸ್ತು. ಅಣುಸೂತ್ರ $C_6H_{14}O$. ರಚನಾಸೂತ್ರ



$20^0$ ಸೆಂ. ಉಷ್ಣತೆಯಲ್ಲಿ ಇದರ ಸಾಂದ್ರತೆ 0.725. ಕುದಿಯುವ ಬಿಂದು $67.5^0$ ಸೆಂ. ನೀರಿನಲ್ಲಿ ಅದ್ರಾವ್ಯ. ಅನೇಕ ಆರ್ಗ್ಯಾನಿಕ್ ಲೀನಕಾರಿಗಳೊಡನೆ ಬೆರೆಯುತ್ತದೆ. ಐಸೊಪ್ರೊಪೈಲ್ ಆಲ್ಕೊಹಾಲಿನ ತಯಾರಿಕೆಯಲ್ಲಿ ಉಪವಸ್ತುವಾಗಿ ದೊರೆಯುವುದು. ಈ ಆಲ್ಕೊಹಾಲನ್ನು ಪ್ರಬಲ ಸಲ್ಫ್ಯೂರಿಕ್ ಆಮ್ಲದೊಂದಿಗೆ ಕಾಯಿಸಿ ಐಸೊಪ್ರೊಪೈಲ್ ಈಥರನ್ನು ಪಡೆಯಬಹುದು. ದೀರ್ಘಾವಧಿ ಕೂಡಿಟ್ಟಾಗ ಈಥೈಲ್ ಈಥರಿನಂತೆ ಇದೂ ಪರಾಕ್ಸೈಡುಗಳನ್ನು ಕೊಡುವುದು. ಕೀಲೆಣ್ಣೆಗಳಲ್ಲಿರುವ ಮೇಣಗಳನ್ನು ಲೀನಮಾಡಿಕೊಂಡು ನಿವಾರಿಸಲು ಇದು ಸಹಾಯಕವಾಗಿದೆ. ಕೊಬ್ಬು ಮತ್ತು ತೈಲಗಳ ಶುದ್ಧೀಕರಣದಲ್ಲೂ ಇದರ ಉಪಯೋಗ ಇದೆ. (ಎಚ್.ಜಿ.ಎಸ್.)

**ಐಸೊಪ್ರೊಪೈಲ್ ಕ್ಲೋರೈಡ್:** ಮಧುರ ವಾಸನೆಯಿರುವ ಬಣ್ಣವಿಲ್ಲದ ದ್ರವವಸ್ತು. ಅಣುಸೂತ್ರ $C_3H_7Cl$. ರಚನಾಸೂತ್ರ



$20^0$ ಸೆಂ. ಉಷ್ಣತೆಯಲ್ಲಿ ಸಾಂದ್ರತೆ 0.859. ಕುದಿಯುವ ಬಿಂದು $36.5^0$ ಸೆಂ. ನೀರಿನಲ್ಲಿ ಅದ್ರಾವ್ಯ. ಅನೇಕ ಆರ್ಗ್ಯಾನಿಕ್ ಲೀನಕಾರಿಗಳೊಂದಿಗೆ ಬೆರೆಯುತ್ತದೆ. ನಿರ್ಜಲ ಸತುವಿನ ಕ್ಲೋರೈಡಿನ ಸಮ್ಮುಖದಲ್ಲಿ ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಐಸೊಪ್ರೊಪೈಲ್ ಆಲ್ಕೋಹಾಲುಗಳು ಪರಸ್ಪರ ವರ್ತಿಸಿದಾಗ ಅಥವಾ ಆಲ್ಕೋಹಾಲ್ ಮತ್ತು ಹೈಡ್ರೋಜನ್ ಕ್ಲೋರೈಡುಗಳ ಮಿಶ್ರಣವನ್ನು ಆವಿಯ ರೂಪದಲ್ಲಿ ಕಾಯಿಸಿದ ಮೆಗ್ನೀಸಿಯಂ ಕ್ಲೋರೈಡಿನ ಮೇಲೆ ಹಾಯಿಸಿದಾಗ ಐಸೊಪ್ರೊಪೈಲ್ ಕ್ಲೋರೈಡು ದೊರೆಯುವುದು. ಕೈಗಾರಿಕಾ ಪ್ರಮಾಣದಲ್ಲಿ ಇದನ್ನು ತಯಾರಿಸುವುದು ಹೀಗೆಯೇ. ಕೊಬ್ಬುಗಳಿಗೆ ಇದು ಉತ್ತಮ ಲೀನಕಾರಿ ಎನಿಸಿಕೊಂಡಿದೆ. (ಎಚ್.ಜಿ.ಎಸ್.)

**ಐಸೊಬಾರ್ (ಹವಾಮಾನವಿಜ್ಞಾನದಲ್ಲಿ):** ಸಮಾನ ಒತ್ತಡದಲ್ಲಿರುವ ಎರಡು ಸ್ಥಳಗಳನ್ನು ಸೇರಿಸುವ ರೇಖೆ. ಉದಾಹರಣೆಗೆ ಹವಾಮಾನದ ನಕ್ಷೆಗಳಲ್ಲಿ ಈ ರೇಖೆಗಳನ್ನು ಕಾಣಬಹುದು. ಇಂಥ ಒಂದು ನಕ್ಷೆಯಲ್ಲಿ ಕಾಣುವ ಒತ್ತಡಗಳು ವೀಕ್ಷಣೆ ಮಾಡಿ ದೊರೆತ ಒತ್ತಡಗಳಲ್ಲ; ಬದಲು, ಸಮುದ್ರಮಟ್ಟಕ್ಕೆ ಸಂಸ್ಕರಿಸಿದಂಥ ಬೆಲೆಗಳು.

1 ಬಾರ್=ಚದರ ಸೆಂಟಿಮೀಟರಿಗೆ $10^6$ ಡೈನುಗಳು.

1 ಮಿಲ್ಲಿಬಾರ್=ಚದರ ಸೆಂಟಿಮೀಟರಿಗೆ $10^3$ ಡೈನುಗಳು.

ಪ್ರತಿದಿವಸವೂ ಮುಖ್ಯಪಟ್ಟಣಗಳಲ್ಲಿ 01, 07, 13 ಮತ್ತು 18 ಗಂಟೆಗಳಲ್ಲಿ ವಾತಾವರಣದ ಒತ್ತಡಗಳನ್ನು ಅಳೆದು ಇವನ್ನು ಆ ಸ್ಥಳಗಳು ಸಮುದ್ರಮಟ್ಟದಲ್ಲಿದ್ದಿದ್ದರೆ ದೊರೆಯುತ್ತಿದ್ದ ಬೆಲೆಗಳಿಗೆ ಸಂಸ್ಕರಿಸಿ ಸಮಾನ ಒತ್ತಡವಿರುವ ಸ್ಥಳಗಳ ಮೇಲೆ ಒಂದೇ ಒತ್ತಡ ರೇಖೆಯನ್ನು (ಐಸೊಬಾರ್) ಎಳೆಯಲಾಗುತ್ತದೆ.




ಚಿತ್ರದಲ್ಲಿ ಕಾಣಿಸುವ ಸಂಖ್ಯೆಗಳು ಮಿಲ್ಲಿಬಾರುಗಳಲ್ಲಿವೆ

ಐಸೊಬಾರುಗಳನ್ನೆಳೆದು ಇವು ಆವರಿಸುವ ಕಡಿಮೆ ಒತ್ತಡ ಮತ್ತು ಅಧಿಕ ಒತ್ತಡದ ಜಾಗಗಳನ್ನು ಗುರುತಿಸಲಾಗುವುದು. ಕಡಿಮೆ ಇರುವ ಜಾಗಗಳ ಸುತ್ತಲೂ ಒತ್ತಡದ ಇಳಿತ ತೀವ್ರವಾಗಿರುವಲ್ಲಿ ಗಾಳಿ ವೇಗವಾಗಿ ಬೀಸುವುದು. ಭೂಮಿಯ ಆವರ್ತನೆ, ಸ್ಥಳದ ಉನ್ನತಿ ಮೊದಲಾದ ಕಾರಣಗಳಿಂದ ಈ ಗಾಳಿ ಸುಳಿಸುಳಿಯಾಗಿ ಬೀಸುತ್ತ ಚಂಡಮಾರುತವಾಗಿ ಸುಳಿಸುಳಿಯಾಗಿ ಪರಿಣಮಿಸುತ್ತದೆ. ಥಟ್ಟನೆ ಒಂದೆಡೆ ಐಸೊಬಾರುಗಳು ಚಿಕ್ಕ ಭಾಗವನ್ನು ಆವರಿಸಿದರೆ ಅಲ್ಲಿ ಅನತಿಕಾಲದಲ್ಲೇ ಸುಳಿಗಾಳಿ ಬೀಸುವುದು ಎಂದು ಮುನ್ನೆಚ್ಚರಿಕೆ ಕೊಡಬಹುದು. ಅಧಿಕ ಒತ್ತಡವಿರುವಲ್ಲಿ ಉತ್ತಮ ಹವೆ ಇರುತ್ತದೆ. ಇನ್ನು ಇಂಥ ಚಿತ್ರಗಳಿಂದ ಗಾಳಿಯ ಬೀಸುವ ದಿಕ್ಕು ಏನು, ಗಾಳಿ ಹೇಗೆ ವೇಗಪೂರಿತವಾಗುತ್ತದೆ ಎಂಬುದನ್ನೆಲ್ಲ ಊಹಿಸಿ ಮುನ್ನೆಚ್ಚರಿಕೆ ನೀಡಲು ಸಾಧ್ಯ. ಹೀಗೆ ಶುಭ್ರ ಹವೆ, ಮೋಡ, ಗಾಳಿ, ಮಳೆ ಮುಂತಾದುವುಗಳನ್ನೆಲ್ಲ ಮುಂಚಿತವಾಗಿ ಸೂಚಿಸಲು ಇಂಥ ಐಸೊಬಾರುಗಳ ಚಿತ್ರಗಳು ಸಹಕಾರಿಗಳು. ಐಸೊಬಾರುಗಳು ಒದಗಿಸುವ ಜ್ಞಾನವನ್ನು ಸಮಾನೋಷ್ಣತಾ ರೇಖೆಗಳು (ಐಸೊಥರ್ಮಲ್ ಲೈನ್ಸ್), ಗಾಳಿ ಬೀಸುವ ದಿಕ್ಕು, ಸ್ಥಳದ ಉನ್ನತಿ, ಸಮುದ್ರ ಸಾಮೀಪ್ಯ ಮೊದಲಾದವುಗಳೊಡನೆ ತುಲನೆಮಾಡಿ ಹವೆಯನ್ನು ಕುರಿತ ಎಚ್ಚರಿಕೆಗಳನ್ನು ಕೊಡುತ್ತಾರೆ. (ಯು.ಎಲ್.ಎ.)

**ಐಸೊಬಾರುಗಳು (ಪರಮಾಣು ಬೈಜಿಕ):** ಒಂದೇ ದ್ರವ್ಯಮಾನ ಸಂಖ್ಯೆ (ಮಾಸ್ ನಂಬರ್) ಇರುವ ಆದರೆ ಭಿನ್ನ ವಿದ್ಯುದಂಶ (ಚಾರ್ಜ್) ಸಂಖ್ಯೆ ಇರುವ ಪರಮಾಣು ಬೀಜಗಳಿಗೆ ಈ ಹೆಸರಿದೆ (ನ್ಯೂಕ್ಲಿಯರ್ ಐಸೊಬಾರ್ಸ್). ಎಂದರೆ ಅವುಗಳಲ್ಲಿರುವ ನ್ಯೂಕ್ಲಿಯಾನುಗಳ ಸಂಖ್ಯೆ ಒಂದೇ ಆಗಿದ್ದು ತತ್ಸಂಬಂಧ ಪ್ರೋಟಾನ್ ಮತ್ತು ನ್ಯೂಟ್ರಾನುಗಳ ಸಂಖ್ಯೆಗಳು ಭಿನ್ನವಾಗಿವೆ (**ನೋಡಿ– ಪರಮಾಣು–ಬಲಗಳು**). (ಯು.ಎಲ್.ಎ.)

**ಐಸೊಮರೇಸುಗಳು:** ಐಸೊಮರುಗಳ (ಸಮಘಟಕಗಳ) ಪರಸ್ಪರ ಪರಿವರ್ತನೆಯ ಕ್ರಿಯೆಯನ್ನು ವರ್ಧಿಸುವ ಕಿಣ್ವಗಳು. ಜೈವಿಕ ವ್ಯವಸ್ಥೆಯಲ್ಲಿ ಈ ಬಗೆಯ ಅನೇಕ ಕಿಣ್ವಗಳಿವೆ. ಅವುಗಳಲ್ಲಿ ಕೆಲವನ್ನೂ ಅವುಗಳು ವರ್ಧಿಸುವ ಕ್ರಿಯೆಗಳನ್ನೂ ಮುಂದೆ ಸೂಚಿಸಲಾಗಿದೆ.

1. ಅಮೈನೋ ಆಮ್ಲಗಳ ಮತ್ತು ಅವುಗಳ ಉತ್ಪನ್ನಗಳೊಡನೆ ವರ್ತಿಸುವ ಕಿಣ್ವಗಳು.

(a) ಅಲಾನಿನ್ ರೆಸಿಮೇಸ್

$$\text{L ಅಲಾನಿನ್} \rightleftharpoons \text{D ಅಲಾನಿನ್}$$

(b) ಲೈಸಿನ್ ರೆಸಿಮೇಸ್

L ಲೈಸಿನ = D ಲೈಸಿನ್

2. ಹೈಡ್ರಾಕ್ಸಿ ಆಮ್ಲ ಮತ್ತು ಅವುಗಳ ಉತ್ಪನ್ನಗಳೊಂದಿಗೆ ವರ್ತಿಸುವ ಕಿಣ್ವಗಳು.

(a) D ರಿಬ್ಯುಲೋಸ್–5–ಫಾಸ್ಫೇಟ್ 3 ಎಪಿಮರೇಸ್

D-ರಿಬ್ಯುಲೋಸ್–5–ಫಾಸ್ಫೇಟ್ $\rightleftarrows$ D–ಕ್ಸೈಲ್ಯುಲೋಸ್ 5 ಫಾಸ್ಫೇಟ್

(b) ಗ್ಲೂಕೋಸ್ 4–ಎಪಿಮರೇಸ್

UDP ಗ್ಲೂಕೋಸ್ $\rightleftarrows$ UDP ಗ್ಯಾಲಾಕ್ಟೋಸ್ (ಎಚ್.ಎಸ್.ಎಸ್.)

**ಐಸೊಮಾರ್ಫಿಸಂ ಮತ್ತು ಪಾಲಿಮಾರ್ಫಿಸಂ:** ಸಂಯುಕ್ತಗಳು ಒಂದೇ ಆಕೃತಿಯಲ್ಲಿ ಅಥವಾ ತತ್ಸಮೀಪ ಜ್ಯಾಮಿತೀಯ ಆಕೃತಿಗಳಲ್ಲಿ ಸ್ಫಟಿಕೀಕರಿಸುವ ಪ್ರವೃತ್ತಿ (ಸಮರೂಪತೆ). ಇಂಥ ಸಂಯುಕ್ತಗಳ ಹೆಸರು ಐಸೊಮಾರ್ಫಸ್ ಸಂಯುಕ್ತಗಳು. ಉಪ್ಪಿನ ತುಣುಕೊಂದನ್ನು ಸೂಕ್ಷ್ಮದರ್ಶಕದಿಂದ ಪರೀಕ್ಷಿಸಿದರೆ ಅದರ ಪ್ರತಿಯೊಂದು ಹರಳೂ ಘನಾಕೃತಿಯಲ್ಲಿರುವುದು ವ್ಯಕ್ತವಾಗುತ್ತದೆ. ಹರಳನ್ನು ನುಣ್ಣಗೆ ಹುಡಿಮಾಡಿ ಎಷ್ಟು ವಿಭಾಗಗಳಾಗಿ ವಿಭಾಗಿಸಿದರೂ ದೊರೆಯುವ ಒಂದೊಂದು ಕಣವೂ ಘನಾಕೃತಿಯಲ್ಲಿಯೇ ಇರುವುದು. ಆದ್ದರಿಂದ ಘನಾಕೃತಿ ಉಪ್ಪಿನ ಸ್ವಭಾವಸಿದ್ಧ ಆಕಾರ ಎಂದಾಯಿತು. ಹೀಗೆ ಹರಳುರೂಪದ ಒಂದೊಂದು ವಸ್ತುವಿಗೂ ವಿಶಿಷ್ಟ ಆಕಾರ ಇದೆ. ಸ್ಫಟಿಕದಲ್ಲಿರುವ ಪರಮಾಣುಗಳು ಭಿನ್ನರೀತಿಯಲ್ಲಿ ಜೋಡಣೆಯಾದಾಗ ವಿವಿಧ ಸ್ಫಟಿಕಾಕೃತಿಗಳು ಮೈದಳೆಯುತ್ತವೆ. ಇದರ ವಿವರವಾದ ಪರಿಶೀಲನೆಯಿಂದ ಸೋಜಿಗದ ಸಂಗತಿಗಳು ಹೊರಬಿದ್ದಿವೆ.

ಆಲಂ ಒಂದು ಲವಣವರ್ಗದ ಹೆಸರು. ಇವು ಯುಗ್ಮಲವಣಗಳು (ಡಬಲ್ ಸಾಲ್ಟ್ಸ್). ನಿರ್ಮಾಣವಾದ ಪಟಿಕಕ್ಕೆ ಪೊಟ್ಯಾಷ್ ಆಲಂ ಎಂಬುದು ರಾಸಾಯನಿಕ ಹೆಸರು. ಇದರ ಅಣುಸೂತ್ರ

$$K_2SO_4.Al_2(SO_4)_3.24H_2O$$

ನೇರಿಳೆಬಣ್ಣದ ಕ್ರೋಮ್ ಆಲಂ ಇದೇ ಗುಂಪಿನದು. ಇದರ ಅಣುಸೂತ್ರ

$$K_2SO_4.Cr_2(SO_4)_3.24H_2O$$

ಈ ಎರಡು ಲವಣಗಳಲ್ಲಿರುವ ಪರಮಾಣುಗಳ ಸಂಖ್ಯೆ ಒಂದೇ. ಸೂಕ್ಷ್ಮದರ್ಶಕದಿಂದ ಪರೀಕ್ಷಿಸಿದಾಗ ಅವುಗಳ ಸ್ಫಟಿಕಾಕೃತಿಯೂ ಒಂದೇ ಆಗಿರುವುದು ಕಂಡುಬರುತ್ತದೆ. ಅಲ್ಲದೆ ಪಟಿಕದ ಪರ್ಯಾಪ್ತದ್ರಾವಣದಲ್ಲಿಟ್ಟ ಕ್ರೋಮ್ ಆಲಂ ಹರಳು ಸರಾಗವಾಗಿ ಬೆಳೆಯುವುದು. ಕ್ರಮೇಣ ದ್ರಾಕ್ಷಿಯ ಬೀಜ ಹುದುಗಿರುವ ಕಡುಬಿನಂತೆ ಊದುವುದು. ಪಟಿಕ ಕ್ರೋಮ್ ಆಲಂ ಸುತ್ತ ಇಷ್ಟು ನಿರಾಳವಾಗಿ ಸಂಗ್ರಹಗೊಳ್ಳುವುದರಿಂದ ಅವೆರಡರ ಸ್ಫಟಿಕಾಕೃತಿಯಲ್ಲಿ ಎಷ್ಟು ನಿಕಟ ಹೋಲಿಕೆಯಿದೆ ಎಂಬುದು ವೇದ್ಯವಾಗುತ್ತವೆ. ಈ ಪ್ರವೃತ್ತಿಯೇ ಐಸೊಮಾರ್ಫಿಸಂ.

ಜರ್ಮನಿಯ ಭೂವಿಜ್ಞಾನಿಯೂ ಸ್ಫಟಿಕಶಾಸ್ತ್ರ ಪರಿಣತನೂ ಆದ ಮಿಚೆರ್ಲಿಕ್ ಇಂಥ ಅನೇಕ ಹರಳುರೂಪದ ಸಂಯುಕ್ತಗಳ ಅಧ್ಯಯನದಿಂದ ಐಸೊಮಾರ್ಫಿಸಮನ್ನು ಕುರಿತ ಒಂದು ನಿಯಮವನ್ನು ಪ್ರತಿಪಾದಿಸಿದ (1819). ಈ ನಿಯಮದ ಪ್ರಕಾರ ಸಮಾನ ಸಂಖ್ಯೆಯ ಪರಮಾಣುಗಳು ಸಮಾನರೀತಿಯಲ್ಲಿ ಜೋಡಣೆಗೊಂಡಿರುವ ವಸ್ತುಗಳ ಹರಳುಗಳ ರೂಪಗಳಲ್ಲೂ ಸಾಮ್ಯವಿದೆ. ಆದರೆ ಈ ನಿಯಮದ ಯಾಥಾರ್ಥ್ಯದ ಬಗ್ಗೆ ಸಂಶಯ ಹುಟ್ಟಿಸುವ ಕೆಲವು ಸಾಕ್ಷ್ಯಗಳು ಇತ್ತೀಚೆಗೆ ಬೆಳಕಿಗೆ ಬಂದಿವೆ. ರಾಸಾಯನಿಕ ರಚನೆ ಮತ್ತು ಸ್ಫಟಿಕಾಕೃತಿಗಳಲ್ಲಿ ಹೋಲಿಕೆಯಿರುವ ಕೆಲವು ಸಂಯುಕ್ತಗಳಿವೆ. ಈ ಹೋಲಿಕೆ ಸ್ಥೂಲವಾಗಿದ್ದು ಸ್ಫಟಿಕಕೋನದಲ್ಲಿ ಅಲ್ಪ ಅಂತರವಿರುವುದು ವ್ಯಕ್ತಪಟ್ಟಿದೆ. ಉದಾಹರಣೆಗೆ, ಮೆಗ್ನೀಸಿಯಂ ಸಲ್ಫೇಟ್ ($MgSO_47H_2O$) ಮತ್ತು ಫೆರಸ್ ಸಲ್ಫೇಟ್ ($FeSO_47H_2O$) ಲವಣಗಳನ್ನು ಹೆಸರಿಸಬಹುದು. ಇವೆರಡು ಸಂಯುಕ್ತಗಳಲ್ಲಿ ಐಸೊಮಾರ್ಫಿಸಮಿಗೆ ಆಧಾರವಾದ ಎಲ್ಲ ಗುಣಗಳೂ ಇರುವುದು ನಿಜ. ಆದರೆ ಅವುಗಳ ಸ್ಫಟಿಕಾಂಗದ (ಕ್ರಿಸ್ಟಲ್ ಯೂನಿಟ್) ಆಯಾಮಗಳಲ್ಲಿ (ಡೈಮೆನ್ಷನ್ಸ್) ಮತ್ತು ಕೋನದಲ್ಲಿ ಸೂಕ್ಷ್ಮ ವ್ಯತ್ಯಾಸಗಳಿರುವುದನ್ನು ಕೆಳಕಂಡ ಪಟ್ಟಿಯಲ್ಲಿ ಗಮನಿಸಬಹುದು.

| ಸಂಯುಕ್ತ | a | : | b | : | c | $\beta$ |
|---|---|---|---|---|---|---|
| ಮೆಗ್ನೀಸಿಯಂ ಸಲ್ಫೇಟ್ | 1.2200 | : | 1 | : | 1.5820 | $104^0$ 24’ |
| ಫೆರಸ್ ಸಲ್ಫೇಟ್ | 1.1828 | : | 1 | : | 1.5427 | $104^0$ 15’ |

ಎರಡು ವಸ್ತುಗಳ ಹರಳು ರಚನೆಯಲ್ಲಿ ಪರಿಪೂರ್ಣ ಸಾಮ್ಯವಿರಲು ಸಾಧ್ಯವಿಲ್ಲ ಎಂಬ ಹಾಯನ ನಿಯಮ ಇದರಿಂದ ಸಮರ್ಥಿತವಾಗುತ್ತದೆ. ಅಲ್ಲದೆ ಐಸೊಮಾರ್ಫಿಸಂ ನಿಯುಮವನ್ನು ಸರ್ವಸತ್ಯವೆಂದು ಅಂಗೀಕರಿಸಲಾಗದು ಎಂಬ ತೀರ್ಪು ಅನಿವಾರ್ಯವಾಗುತ್ತದೆ. ಮಿಚೆರ್ಲಿಕನ ಪ್ರಕಾರ ಐಸೊಮಾರ್ಫಸ್ ಸಂಯುಕ್ತಗಳಲ್ಲಿ ಸಮಸಂಖ್ಯೆಯ ಪರಮಾಣುಗಳಿರಬೇಕಷ್ಟೆ. ಇದಕ್ಕೂ ಅಪವಾದಗಳಿವೆ. ಅಮೋನಿಯಂ ಆಲಂನಲ್ಲಿ.

$$(NH_4)_2SO_4.Al_2(SO_4)_3.24H_2O$$

ಪೊಟ್ಯಾಷ್ ಆಲಂಗಿಂತ ಎಂಟು ಪರಮಾಣುಗಳು ಹೆಚ್ಚು ಇವೆ. ಆದರೆ ಇವೆರಡೂ ಐಸೊಮಾರ್ಫಸ್ ಸಂಯುಕ್ತಗಳು. ಇಂಥ ಅನೇಕ ನಿದರ್ಶನಗಳಿವೆ. ಈ ಪರಿಸ್ಥಿತಿಯಲ್ಲಿ ಮಿಚೆರ್ಲಿಕನ ನಿಯಮವನ್ನು ತಿದ್ದುಪಡಿಮಾಡದೆ ವಿಧಿಯಿಲ್ಲ. ಸಮಾನ ರಾಸಾಯನಿಕ ರಚನೆಯುಳ್ಳ ವಸ್ತುಗಳ ಸ್ಫಟಿಕಾಕೃತಿಯಲ್ಲೂ ಹೋಲಿಕೆ ಇರುವುದು ಸಂಭವನೀಯ ಎನ್ನುವುದು ಹೆಚ್ಚು ವಾಸ್ತವ.

ರಾಸಾಯನಿಕ ಗುಣಗಳಿಗಿಂತ ಹರಳಿನ ಒಳರಚನೆಯಲ್ಲಿರುವ ಹೋಲಿಕೆಯೇ ಐಸೊಮಾರ್ಫಿಸಮಿಗೆ ಕಾರಣವೆಂದು ಗೊತ್ತಾಗಿದೆ. ಪ್ರತಿಯೊಂದು ಹರಳುರೂಪದ ವಸ್ತುವೂ ಚಿಕ್ಕ ಘಟಕಗಳಿಂದ ಆಗಿರುತ್ತದೆ. ಈ ಘಟಕಗಳ ಜ್ಯಾಮಿತೀಯ ಆಕಾರ ಸಮನಾಗಿದ್ದರೆ ಸಾಕು. ಅಂಥ ವಸ್ತುಗಳು ಐಸೊಮಾರ್ಫಿಸಮನ್ನು ಪ್ರದರ್ಶಿಸಬಲ್ಲವು. ಇದಕ್ಕೆ ಕ್ಯಾಲ್ಸಿಯಂ ಕಾರ್ಬೋನೇಟ್ ($CaCO_3$) ಮತ್ತು ಸೋಡಿಯಂ ನೈಟ್ರೇಟ್ ($NaNO_3$) ಉದಾಹರಣೆಗಳು. ಆದ್ದರಿಂದ ಐಸೊಮಾರ್ಫಸ್ ಸಂಯುಕ್ತಗಳಲ್ಲಿರುವ ಆಯಾಮದಲ್ಲಿ ನಿಕಟ ಹೋಲಿಕೆಯಿರುವುದು ನಿಜ. ಆದರೆ ಎರಡು ಹರಳುಗಳ ಸ್ಫಟಿಕ ನಿಯತಾಂಕಗಳು (ಕ್ರಿಸ್ಟಲ್ ಕಾನ್‌ಸ್ಟೆಂಟ್ಸ್) ಒಂದಾಗಿದ್ದ ಮಾತ್ರಕ್ಕೆ ಅವು ಐಸೊಮಾರ್ಫಸ್ ಎನ್ನಲಾಗದು.

ಮಿಶ್ರಹರಳುಗಳನ್ನು ಉಂಟುಮಾಡುವ ಚೈತನ್ಯವನ್ನು ಐಸೊಮಾರ್ಫಿಸಮಿಗೆ ಪ್ರಮುಖ ಆಧಾರವಾಗಿ ಇಟ್ಟುಕೊಳ್ಳುವುದು ಸಂಪ್ರದಾಯ. ಎರಡು ವಸ್ತುಗಳು ಐಸೊಮಾರ್ಫಸ್ ಆಗಿದ್ದರೆ ಅವೆರಡನ್ನು ವಿವಿಧ ಪ್ರಮಾಣಗಳಲ್ಲಿ ಹೊಂದಿರುವ ಮಿಶ್ರಹರಳುಗಳನ್ನು ತಯಾರಿಸಬಹುದು. ಮುಂದಿನ ಉದಾಹರಣೆ ಇದನ್ನು ಸ್ಪಷ್ಟೀಕರಿಸುತ್ತದೆ. ಮೈಲುತುತ್ತ (ತಾಮ್ರದ ಸಲ್ಫೇಟ್) ಮತ್ತು ಅನ್ನಭೇದಿಗಳನ್ನು (ಫೆರಸ್ ಸಲ್ಫೇಟ್) ಒಳಗೊಂಡಿರುವ ದ್ರಾವಣವನ್ನು ಹಿಂಗಿಸುತ್ತ ನಡೆದರೆ ಸ್ಫಟಿಕೀಕರಿಸುವ ತಾಮ್ರದ ಸಲ್ಫೇಟಿನಲ್ಲಿ ಕಬ್ಬಿಣವಿರುತ್ತದೆ. ಈ ಸಂದರ್ಭದಲ್ಲಿ ಉತ್ಪತ್ತಿಯಾಗುವ $FeSO_4.5H_2O$ ಮತ್ತು ತಾಮ್ರದ ಸಲ್ಫೇಟ್ ಐಸೊಮಾರ್ಫಸ್ ಆಗಿರುವುದರಿಂದ ಹೀಗಾಗುತ್ತದೆ. ಇವುಗಳಿಂದಾದ ಮಿಶ್ರಹರಳುಗಳ ಸೂತ್ರವನ್ನು ($Cu_{1-n}Fe_n$) $SO_4.5H_2O$ ಎಂದು ಬರೆಯಬಹುದು. ಇಂಥ ದ್ರಾವಣ ಮಿಶ್ರಣದಿಂದ ಪರಿಶುದ್ಧ ತಾಮ್ರದ ಸಲ್ಫೇಟನ್ನು ಸ್ಫಟಿಕೀಕರಿಸುವುದು ಅಸಾಧ್ಯ. ದ್ರಾವಣಕ್ಕೆ ಪ್ರಬಲ ನೈಟ್ರಿಕ್ ಆಮ್ಲವನ್ನು ಹಾಕಿ ಕಾಯಿಸಿದರೆ ಫೆರಸ್ ಸಲ್ಫೇಟ್ ಫೆರಿಕ್ ಸ್ಥಿತಿಗೆ ಉತ್ಕರ್ಷಿತವಾಗುವುದು. ಇದರ ಹರಳು ರಚನೆ ತಾಮ್ರದ ಸಲ್ಫೇಟಿಗಿಂತ ಭಿನ್ನವಾಗಿರುವುದು. ಆದ್ದರಿಂದ ಈಗ ದ್ರಾವಣದಿಂದ ಕಬ್ಬಿಣವಿರುವ ಪರಿಶುದ್ಧ ತಾಮ್ರದ ಸಲ್ಫೇಟನ್ನು ಸ್ಫಟಿಕೀಕರಿಸಬಹುದು.

ಐಸೊಮಾರ್ಫಸ್ ವಸ್ತುಗಳೆಲ್ಲ ಮಿಶ್ರಹರಳುಗಳನ್ನು ಕೊಡುವುದಿಲ್ಲ. ವಸ್ತುಗಳ ಅಣುಗಾತ್ರ ಪರಸ್ಪರ ಹೊಂದಿಕೊಂಡಷ್ಟೂ ಮಿಶ್ರಹರಳುಗಳ ಜನನ ಹೆಚ್ಚು ಸಂಭವನೀಯ. ಒಂದು ಹರಳಿನ ಮೇಲೆ ಮತ್ತೊಂದು ಸಂಗ್ರಹಿಸುವ ಸಾಮರ್ಥ್ಯವಿದ್ದರೆ ಅದೂ ಸಹ ಐಸೊಮಾರ್ಫಿಸಮಿಗೆ ಆಧಾರವೆನಿಸಿಕೊಳ್ಳುತ್ತದೆ. ಕೇವಲ ಅಣುಗಾತ್ರ ಸಮನಾಗಿದ್ದರೂ ಹೀಗಾಗುವುದರಿಂದ ಇದನ್ನೂ ನೆಚ್ಚುವಂತಿಲ್ಲ. ಒಟ್ಟಾರೆ–1. ಸ್ಫಟಿಕಾಕೃತಿಯಲ್ಲಿ ಹೋಲಿಕೆ 2. ಮಿಶ್ರಹರಳುಗಳ ಉತ್ಪತ್ತಿ 3. ಒಂದರ ಮೇಲೊಂದು ಹರಳು ಬೆಳೆಯುವಿಕೆ–ಈ ಲಕ್ಷಣಗಳ ಪೈಕಿ ಯಾವುದೊಂದು ಐಸೊಮಾರ್ಫಿಸಮಿಗೆ ಮಾನದಂಡವಾಗಲಾರದು. ಈ ಗುಣಧರ್ಮಗಳಲ್ಲಿ ಒಂದಕ್ಕಿಂತ ಹೆಚ್ಚು ಲಕ್ಷಣಗಳನ್ನು ಪಡೆದಿರುವ ವಸ್ತುಗಳು ಮಾತ್ರ ಐಸೊಮಾರ್ಫಿಕ್ ವಸ್ತುಗಳು ಎನ್ನಲು ಬಾಧಕವಿಲ್ಲ.

**ಐಸೊಪಾಲಿಮಾರ್ಫಿಸಂ :** ಐಸೊಮಾರ್ಫಿಸಮಿನ ವಿಶೇಷ ಸಂದರ್ಭವಿದು. ಆರ್ಸೆನಿಯಸ್ ಆಕ್ಸೈಡಿನಲ್ಲಿ ಎರಡು ಬಗೆಯುಂಟು. ಒಂದರಲ್ಲಿ ಪ್ರತಿ ಪುಟ್ಟ ಹರಳಿಗೂ ಎಂಟು ಮುಖಗಳಿರುತ್ತವೆ. ಒಂದೊಂದು ಮುಖವೂ ಸರಳಘನಾಕೃತಿಯದು. ಇದನ್ನು ಅಷ್ಟಮುಖೀರೂಪ (ಆಕ್ಟಹೆಡ್ರಲ್) ಎನ್ನುವರು. ಇನ್ನೊಂದು ಏಕನತರೂಪಿ (ಮಾನೊಕ್ಲಿನಿಕ್). ಆಂಟಿಮೊನಿಯಸ್ ಆಕ್ಸೈಡಿಗೆ ಇಂಥವೇ ಎರಡು ರೂಪಗಳಿವೆ. ಇವೆರಡರ ಅಷ್ಟಮುಖಿ ಮತ್ತು ಏಕನತ ಹರಳುಗಳು ಐಸೊಮಾರ್ಫಿಸಮನ್ನು ಪ್ರದರ್ಶಿಸುವುವು. ಈ ಗುಣವೈಚಿತ್ರ್ಯಕ್ಕೆ ಐಸೊಪಾಲಿಮಾರ್ಫಿಸಂ ಎಂದು ಹೆಸರು. ಐಸೊಮಾರ್ಫಿಸಮಿನಲ್ಲಿ ಮತ್ತೊಂದು ವಿಧವಿದೆ. ಅಯೊಡೀನ್ ಬ್ರೋಮೈಡ್ ಎಂಬ ಸಂಯುಕ್ತ ಅಯೊಡೀನ್ ಮತ್ತು ಬ್ರೋಮಿನಿನ ಹರಳು ರೂಪಗಳೆರಡನ್ನೂ ಹೋಲುವುದು. ಇದಕ್ಕೆ ಐಸೊಡೈಮಾರ್ಫಿಸಂ ಎಂದು ಹೆಸರು.

**ಪಾಲಿಮಾರ್ಫಿಸಂ:** ಘನವಸ್ತುಗಳು ಒಂದಕ್ಕಿಂತ ಹೆಚ್ಚು ಭೌತರೂಪಗಳಲ್ಲಿ ದೊರೆಯುವ ಪ್ರವೃತ್ತಿ (ಬಹುರೂಪತೆ). ಇಂಥ ಸಂಯುಕ್ತಗಳ ಹೆಸರು ಪಾಲಿಮಾರ್ಫಸ್ ಸಂಯುಕ್ತಗಳು. ಉದಾಹರಣೆಗೆ, ಬೆಣಚುಕಲ್ಲು ಮರಳು ಇತ್ಯಾದಿಗಳು ಸಿಲಿಕದ ($SiO_2$) ಬಹುರೂಪಗಳು. ಹಾಗೆಯೇ ಅಮೃತಶಿಲೆ, ಸುಣ್ಣಕಲ್ಲು ಮತ್ತು ಸೀಮೆಸುಣ್ಣ ಕ್ಯಾಲ್ಸಿಯಂ ಕಾರ್ಬೋನೇಟಿನ ವಿವಿಧರೂಪಗಳು. ಪಾಲಿಮಾರ್ಫಿಸಮನ್ನು ಪ್ರದರ್ಶಿಸುವ ವಸ್ತುಗಳು ಮೂಲಧಾತುಗಳಾಗಿದ್ದರೆ ಆಗ ಅದು ಭಿನ್ನರೂಪತೆ (ಅಲಾಟ್ರೋಪಿ) ಎನಿಸಿಕೊಳ್ಳುತ್ತದೆ. ಕೆಂಪು ಮತ್ತು ಬಿಳಿಯ ರಂಜಕ, ಇಂಗಾಲ ರೂಪಿಗಳಾದ ವಜ್ರ ಮತ್ತು ಗ್ರಾಫೈಟ್, ಅಷ್ಟಮುಖಿ, ಏಕನತ ಮತ್ತು

ಮೆದುಗಂಧಕ ಮುಂತಾದವುಗಳ ಪರಿಚಯ ನಮಗಿದೆ. ಆದರೆ ಆಕ್ಸಿಜನ್ ಮತ್ತು ಓಜೋನ್ ($O_3$) ಆರ್ಥೋ ಮತ್ತು ಪ್ಯಾರಾ ಹೈಡ್ರೊಜನ್, ಕ್ರಿಯಾಶಾಲಿ ಮತ್ತು ಸಾಮಾನ್ಯ ನೈಟ್ರೊಜನ್ ಇತ್ಯಾದಿ ಅಸ್ಫಟಿಕ ವಸ್ತುಗಳ ಭಿನ್ನರೂಪತೆ ಪಾಲಿಮಾರ್ಫಿಸಮಿನ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಪಾಲಿಮಾರ್ಫಿಸಂ ಕೇವಲ ಸ್ಫಟಿಕರೂಪದ ವಸ್ತುಗಳಿಗೆ ಸೀಮಿತವಾದ ಗುಣ. ಸ್ಫಟಿಕರಚನೆಯಲ್ಲಿರುವ ವ್ಯತ್ಯಾಸಗಳ ಫಲವಾಗಿ, ಸಾಂದ್ರತೆ ಮುಂತಾದ ಭೌತ ಗುಣಗಳಲ್ಲಿ ವ್ಯತ್ಯಾಸಗಳಾಗಿ ಇದು ಪ್ರಾಪ್ತವಾಗುವುದು. ಅಂದರೆ ಉಪ್ಪಿನಂತೆ (NaCl) ಒಂದೇ ವಸ್ತು ಘನಾಕೃತಿಯಲ್ಲಿ ಚಿತ್ರದಲ್ಲಿ ಅಥವಾ ಅಷ್ಟಮುಖಿಯಾಗಿ ಚಿತ್ರದಲ್ಲಿ ಸ್ಫಟಿಕೀಕರಿಸಬಹುದು. ಪಾಲಿಮಾರ್ಫಿಸಮಿಗೆ ಮರ್ಕ್ಯೂರಿಕ್ ಅಯೋಡೈಡನ್ನು ಉದಾಹರಿಸುವುದು ವಾಡಿಕೆ.



ಐಸೊಮಾರ್ಫಿಸಂ ಮತ್ತು ಪಾಲಿಮಾರ್ಫಿಸಂ

ಅದು ಒತ್ತರಿಸಿದಾಗ ಹಳದಿಯಾಗಿದ್ದು ತತ್‌ಕ್ಷಣ ಕೆಂಪಾಗುತ್ತದೆ. ಕೆಂಪುರೂಪವನ್ನು $126^0$ ಸೆಂ. ಉಷ್ಣತೆಗೆ ಕಾಯಿಸಿದಾಗ ಹಳದಿಯ ರೂಪ ತಾಳಿ ತಣಿಸಿದಾಗ ಪುನಃ ಕೆಂಪಾಗುತ್ತದೆ. ಕೆಂಪುರೂಪ ಚತುಷ್ಕೋಣ ವ್ಯವಸ್ಥೆಯಲ್ಲಿ (ಟೆಟ್ರಗೊನಲ್ ಸಿಸ್ಟಂ) ಅಷ್ಟಮುಖಿಯಾಗಿರುತ್ತದೆ. ಹಳದಿರೂಪ ಚಪ್ಪಟೆಯಾಕೃತಿಹೊಂದಿದ್ದು ಆರ್ಥೋರಾಂಬಿಕ್ ವ್ಯವಸ್ಥೆಯಲ್ಲಿ ಸ್ಫಟಿಕೀಕರಿಸುತ್ತದೆ. ಕ್ಯುಪ್ರಿ ಮರ್ಕ್ಯೂರಿಕ್ ಅಯೋಡೈಡಿನಂಥ ಲವಣಗಳಲ್ಲಿ ಈ ಪರಿಣಾಮ ಎದ್ದುಕಾಣುತ್ತದೆ. $70^0$ ಸೆಂ. ಉಷ್ಣತೆಗೆ ಕಾಯಿಸಿದಾಗ, ಈ ಲವಣ ಕಪ್ಪಾಗಿ, ತಣಿಸಿದಾಗ ಪುನಃ ಕೆಂಪಾಗುವುದು.

ಪಾಲಿಮಾರ್ಫಸ್ ವಸ್ತುಗಳ ಶಕ್ತಿಪರಿಮಾಣ (ಎನರ್ಜಿ ಕಂಟೆಂಟ್): ಹರಳಿನಲ್ಲಿ ಅಣು ಘಟಕಗಳು ಇರುವುದು ಸರಿಯಷ್ಟೆ ಪ್ರತಿಯೊಂದು ಅಣುವಿನಲ್ಲಿರುವ ಪರಮಾಣುಗಳ ಸಂಖ್ಯೆ ಮತ್ತು ಜೋಡಣೆಯ ಕ್ರಮವನ್ನು ಅವಲಂಬಿಸಿ ಪಾಲಿಮಾರ್ಫಸ್ ವಸ್ತುಗಳಾಗುತ್ತವೆ. ಹರಳು ಜಾಲಕದಲ್ಲಿ (ಕ್ರಿಸ್ಟಲ್ ಲ್ಯಾಟ್ಟಿಸ್) ಅಣುಗಳ ಸ್ಥಾನ ಮತ್ತು ಸಾಪೇಕ್ಷ ಚಲನೆಗೆ ಅನುಗುಣವಾಗಿ ಆಯಾ ರೂಪದ ಶಕ್ತಿ ನಿರ್ಧಾರವಾಗುತ್ತದೆ. ಅಣುಗಳಿಗೆ ಸಾಕಷ್ಟು ಶಕ್ತಿಯಿದ್ದರೆ ಅವುಗಳ ಕಂಪನಸ್ವಾತಂತ್ರ್ಯ ಹೆಚ್ಚಿ ಅವು ಜಾಲಕದಿಂದ ಆವಿಯ ರೂಪದಲ್ಲಿ ತಪ್ಪಿಸಿಕೊಳ್ಳುತ್ತವೆ. ಆದ್ದರಿಂದ ಹರಳುವಸ್ತುವಿನ ಆವಿಯೊತ್ತಡ ಹೆಚ್ಚಾಗಿದ್ದಿದ್ದರೆ ಆ ರೂಪ ಅಸ್ಥಿರವಾಗಿರಬೇಕು. ಹಾಗೆಯೇ ಸ್ಥಿರರೂಪದ ಆವಿಯೊತ್ತಡ ಮತ್ತು ಕ್ರಿಯಾಶೀಲತೆ ಕಡಿಮೆಯಾಗಿರುತ್ತದೆ. ತಾತ್ತ್ವಿಕವಾಗಿ ವಸ್ತುಗಳಿಗೆ ಅಸ್ಥಿರ ಸ್ಥಿತಿಯಿಂದ ಸ್ಥಿತಿರೂಪಕ್ಕೆ ಜಾರಿಕೊಳ್ಳುವ ಸಹಜ ಪ್ರವೃತ್ತಿ ಇರುವುದು. ಆದರೆ ಸೂಕ್ತ ಪ್ರಚೋದನೆಯಿಲ್ಲದೆ ಹೀಗಾಗುವುದು ವಿರಳ. ಇಂಥ ಅನೇಕ ನಿದರ್ಶನಗಳಿವೆ. ಮರ್ಕ್ಯೂರಿಕ್ ಅಯೋಡೈಡ್ ಹಳದಿರೂಪದಲ್ಲಿ ಕೆಲಕಾಲ ಇರಬಲ್ಲುದು. ಅದನ್ನು ಒಂದು ಕಡ್ಡಿಯಿಂದ ಮುಟ್ಟಿದಾಗ ಅಥವಾ ಕೆರೆದಾಗ ಕೂಡಲೇ ಕೆಂಪಾಗುತ್ತದೆ. ಏಕನತ ಗಂಧಕವೂ ಹೀಗೆಯೇ ಉಜ್ಜಿದಾಗ ಅಷ್ಟಮುಖಿ ಗಂಧಕವಾಗಿ ಮಾರ್ಪಡುತ್ತದೆ. ಸ್ಥಿರರೂಪದಲ್ಲಿ ಇರಬೇಕಾದ ಸನ್ನಿವೇಶದಲ್ಲಿ ಹಾಗಿರದೆ ಸಂಧಿ ಸಮಸ್ಥಿತಿಯಲ್ಲಿರುವ (ಮೆಟಸ್ಟೇಬಲ್ ಸ್ಟೇಟ್) ವಸ್ತುಗಳಿವೆ. ಇದು ಲೋಹಗಳಿಗೆ ಬಹುತೇಕ ಅನ್ವಯಿಸುವುದು. ತವರದ ಮೂರು ರೂಪಗಳಲ್ಲಿ ಬೂದು ಮತ್ತು ಬಿಳಿಯ ತವರಗಳ ಪರಸ್ಪರ ಪರಿವರ್ತನೆ ಸ್ವಾರಸ್ಯವಾಗಿದೆ. ಉಷ್ಣತೆ $18^0$ ಸೆಂ. ಮೀರಿದರೆ ಬಿಳಿಯ ತವರವೂ, ಅದಕ್ಕಿಂತ ಕಡಿಮೆಯಾದರೆ ಬೂದು ತವರವೂ ಪ್ರಾಪ್ತವಾಗುವುವು. ಶೀತದೇಶಗಳಲ್ಲಿ ಚಳಿಗಾಲದಲ್ಲಿ ಈ ಪರಿವರ್ತನೆಯನ್ನು ಕಾಣಬಹುದು. ಉದಾಹರಣೆಗೆ, ಚಳಿಗಾಲದಲ್ಲಿ ಇಂಗ್ಲೆಂಡಿನ ವಾತಾವರಣದ ಉಷ್ಣತೆ $18^0$ ಸೆ. ಗಿಂತ ಕೆಳಗಿಳಿಯುವುದು ಸರ್ವೇಸಾಮಾನ್ಯ. ಆಗ ತಂಪಾದ ತವರ ಬೂದುಬಣ್ಣಕ್ಕೆ ತಿರುಗದೇ ಮತ್ತು ಹಾಗೆಯೇ ಕೆಲಕಾಲ ಉಳಿದಿರುತ್ತದೆ. ಅದಕ್ಕೆ ಬೂದು ತವರದ ಒಂದು ಹರಳನ್ನು ಹಾಕಿದರೆ ಸಾಕು. ಪರಿವರ್ತನೆ ತತ್‌ಕ್ಷಣ ಪ್ರಾರಂಭವಾಗುತ್ತದೆ. ಬೂದು ತವರದ ಸಾಂದ್ರತೆ (5.7) ಬಿಳಿಯ ತವರದ ಸಾಂದ್ರತೆಗಿಂತ (7.28) ಕಡಿಮೆಯಾದುದರಿಂದ ಈ ಪರಿವರ್ತನೆಯಾದಾಗ ವಸ್ತು ವಿಕಸಿತವಾಗಬೇಕು. ತತ್ಫಲವಾಗಿ ಅದು ಹುಡಿಯಾಗುತ್ತದೆ. ಈ ಪರಿವರ್ತನೆಗೆ ತವರದ ಪ್ಲೇಗ್ ಎನ್ನುತ್ತಾರೆ. ಇದರ ಬಗ್ಗೆ ಐತಿಹಾಸಿಕ ಉಲ್ಲೇಖವಿದೆ. 1812ರಲ್ಲಿ ರಷ್ಯಾದ ವಿರುದ್ಧ ದಂಡಯಾತ್ರೆಯಲ್ಲಿ ವಿಫಲನಾದ ನೆಪೋಲಿಯನ್ ಚಕ್ರವರ್ತಿಯ ಸೈನ್ಯ ಅಲ್ಲಿಯ ಅಸಾಧ್ಯ ಚಳಿಯ ದೆಸೆಯಿಂದ ಹಿಂತಿರುಗಬೇಕಾಯಿತು. ಫ್ರೆಂಚ್ ಸೈನಿಕರು ಧರಿಸಿದ್ದ ತವರದ ಪದಕಗಳು ಮತ್ತು ಸಮವಸ್ತ್ರದ ಗುಂಡಿಗಳೆಲ್ಲ ಬೂದು ಬಣ್ಣಕ್ಕೆ ತಿರುಗಿ ಹುಡಿಯಾಗಿ ಉದುರಿ ಹೋದುವಂತೆ. ಬೂದುರೂಪಕ್ಕೆ ಬಾರದೆ ಬಿಳಿಯ ತವರವಾಗಿಯೇ ಬಹುಕಾಲ ಉಳಿಯುವ ಚೈತನ್ಯ ಇರದಿದ್ದಲ್ಲಿ ಶೀತ ದೇಶಗಳಲ್ಲಿ ತವರದ ಉಪಯೋಗ ಹೇಳ ಹೆಸರಿಲ್ಲದೆ ಹೋಗುತ್ತಿತ್ತು. ಹೀಗೆ ಒಂದೇ ವಸ್ತುವಿನ ಎರಡು ರೂಪಗಳು ಸಮಸ್ಥಿರತೆಯನ್ನು ಹೊಂದಿರುವ ಉಷ್ಣತೆಗೆ ಅದರ ಪರ್ವಬಿಂದು (ಟ್ರಾನ್ಸಿಷನ್ ಟೆಂಪರೇಚರ್) ಎಂದು ಹೆಸರು. ಈ ಸ್ಥಿತಿಯಲ್ಲಿ ಎರಡು ರೂಪಗಳ ದ್ರಾವಣತೆ ಮತ್ತು ಆವಿಯೊತ್ತಡ ಸಮನಾಗಿರುತ್ತವೆ. ಆದ್ದರಿಂದ ಇವುಗಳಿಗೆ ಸಂಬಂಧಿಸಿದ ರೇಖೆಗಳು ಸಂಧಿಸುವ ಬಿಂದುವನ್ನು ಗುರುತಿಸಿಕೊಂಡು ಪರ್ವಬಿಂದುವನ್ನು ಕಂಡುಹಿಡಿಯಬಹುದು. ಪರಿಚಿತ ವಸ್ತುಗಳ ಪರ್ವಬಿಂದುಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ.

| ವಸ್ತು | ರೂಪ | ಪರ್ವತಬಿಂದು $^0$ಸೆಂ. |
|---|---|---|
| ಗಂಧಕ | ಅಷ್ಟಮುಖಿ ⇄ ಏಕನತ | 95.6 |
| ತವರ | ಬೂದು ⇄ ಬಿಳಿ | 18.0 |
| ಸತು | ಆಲ್ಫಾ ⇄ ಬೀಟಾ | 174.0 |
| | ಬೀಟಾ ⇄ ಗ್ಯಾಮಾ | 322.0 |
| ಅಮೋನಿಯಂ ಕ್ಲೋರೈಡ್ | ಆಲ್ಫಾ ⇄ ಬೀಟಾ | 184.5 |
| ಮರ್ಕ್ಯೂರಿಕ್ ಅಯೋಡೈಡ್ | ಟೆಟ್ರಾಗೊನಲ್ ⇄ ಆರ್ಥೋ ರಾಬಿಕ್ | 126.0 |
| ಸಿಲ್ವರ್ ನೈಟ್ರೇಟ್ | ರಾಂಬಿಕ್ ⇄ ರಾಂಬೊಹಿಡ್ರಲ್ | 160.0 |
| ಸಿಲ್ವರ್ ಅಯೋಡೈಡ್ | ಹೆಕ್ಸಾಗೊನಲ್ ⇄ ರೆಗ್ಯುಲರ್ | 146.5 |

ಪಾಲಿಮಾರ್ಫಿಸಮಿನ ವರ್ಗೀಕರಣ: 1 ಉಷ್ಣತೆ ಪರ್ವಬಿಂದುವಿಗಿಂತ ಹೆಚ್ಚು ಕಡಿಮೆಯಾದರೆ ವಸ್ತು ರೂಪಾಂತರ ಹೊಂದುವ ಪ್ರವೃತ್ತಿಗೆ ದ್ವಿಚರವರ್ತನೆ (ಎನಾಂಟಿಯೊಟ್ರಪಿ) ಎಂದು ಹೆಸರು. ಗಂಧಕ, ತವರ ಮತ್ತು ಮರ್ಕ್ಯೂರಿಕ್ ಅಯೋಡೈಡುಗಳು ಈ ಗುಂಪಿಗೆ ಸೇರಿದವು.

2. ಕೆಲವು ವಸ್ತುಗಳಿಗೆ ನಿರ್ದಿಷ್ಟ ಪರ್ವಬಿಂದು ಎಂಬುದಿಲ್ಲ: ಎಲ್ಲ ಉಷ್ಣತೆಯಲ್ಲೂ ಏಕಮುಖವಾಗಿ ಮಾತ್ರ ರೂಪಾಂತರವಾಗುವುವು. ಇದು ವಿಪರ್ಯಯ ಕ್ರಿಯೆಯಲ್ಲ. ಆದ್ದರಿಂದ ಏಕಚರಗಳು (ಮಾನೋಟ್ರಾಪಿಕ್) ಎನ್ನಬಹುದು. ಇದಕ್ಕೆ ಓಝೋನ್ ಉದಾಹರಣೆ. ಅದು ಎಲ್ಲ ಉಷ್ಣತೆಯಲ್ಲೂ ವಿಭಜಿಸಿ ಆಕ್ಸಿಜನ್ ಕೊಡುವುದು. ಆದರೆ ಸನ್ನಿವೇಶ ತಲೆಕೆಳಗಾದಾಗ ಆಕ್ಸಿಜನ್ ಓಝೋನ್ ಆಗುವುದಿಲ್ಲ,

3. ಗಂಧಕದ ವರ್ತನೆ ವಿಚಿತ್ರ. ಲ್ಯಾಮ್ಡಾ ಗಂಧಕ ($S\lambda$) ಮತ್ತು ಮ್ಯೂ ಗಂಧಕ ($S\mu$) ಎಂಬ ಅದರ ಎರಡು ರೂಪಗಳು ರಾಸಾಯನಿಕ ಸಮಸ್ಥಿತಿಯಲ್ಲಿರಲು ಶಕ್ತವಾಗಿವೆ. ಈ ಸ್ಥಿತಿಯಲ್ಲಿ ಪ್ರತಿಯೊಂದು ರೂಪದ ಪ್ರಮಾಣ ಎಷ್ಟಿರುತ್ತದೆ ಎಂಬುದು ಉಷ್ಣತೆಗೆ ಅನುಗುಣವಾಗುತ್ತದೆ. ಇದನ್ನು ಸಂಚಾಲಿತ ಭಿನ್ನರೂಪತೆ (ಡೈನಾಮಿಕ್ ಅಲಾಟ್ರೊಪಿ) ಎಂದು ಕರೆಯುವರು. (ಎಚ್.ಜಿ.ಎಸ್.)

**ಐಸೊಮೆಟ್ರಿಕ್ ವಿಭಾಗ :** ಸ್ಫಟಿಕಾಕ್ಷಗಳ ಗುಣಗಳನ್ನು ಅವಲಂಬಿಸಿ ಹರಳುಗಳನ್ನು ವಿಭಾಗಿಸಿರುವ ಆರು ಮುಖ್ಯ ವಿಭಾಗಗಳಲ್ಲಿ ಒಂದು. ಉಳಿದ ಐದು ವಿಭಾಗಗಳ ಹೆಸರು ಟೆಟ್ರಾಗೊನಲ್, ಹೆಕ್ಸಗೊನಲ್, ಆರ್ಥೊರಾಂಬಿಕ್, ಮಾನೊಕ್ಲಿನಿಕ್ ಮತ್ತು ಟ್ರೈಕ್ಲಿನಿಕ್. ಐಸೊಮೆಟ್ರಿಕ್ ವಿಭಾಗದ ಎಲ್ಲ ಹರಳುಗಳಲ್ಲೂ ಮೂರು ಸಮನಾದ ಅಕ್ಷಗಳಿದ್ದು ಅವು ಒಂದನ್ನೊಂದು ಕೇಂದ್ರದಲ್ಲಿ ಲಂಬಕೋನದಲ್ಲಿ ಛೇದಿಸುತ್ತವೆ. ಈ ಅಕ್ಷಗಳು ಪರಸ್ಪರಾನುವರ್ತಿಗಳಾಗಿರುವುದರಿಂದ ಇವನ್ನು $\alpha$ ಎಂಬ ಅಕ್ಷರದಿಂದ ಸೂಚಿಸುವುದು ವಾಡಿಕೆ. ಈ ಮೂರು ಅಕ್ಷಗಳಲ್ಲಿ ಒಂದು ಶೀರ್ಷ ಅಕ್ಷ, ಉಳಿದೆರಡು ಸಮತಲ ಅಕ್ಷಗಳು. ನಿಯಮದಂತೆ ಕ್ರಮವಾಗಿ ಇವನ್ನು $\alpha_1, \alpha_2, \alpha_3$ ಎಂಬುದಾಗಿ ಗುರುತಿಸಲಾಗುತ್ತದೆ. ಅಕ್ಷಗಳ ತುದಿಗಳನ್ನು + ಮತ್ತು – ಚಿಹ್ನೆಗಳಿಂದ ಸೂಚಿಸುವುದುಂಟು. ವೈಸ್ ಪದ್ಧತಿಯಂತೆ ಈ ವಿಭಾಗದ ಸಂಕೇತ $\alpha : \alpha : \alpha$.

ಸಾಮಾನ್ಯವಾಗಿ ಹರಳಿನ ಮುಖಗಳು, ಅಂಚುಗಳು ಮತ್ತು ಸಾಂದ್ರಕೋನಗಳು ತಮ್ಮ ರಚನೆಯಲ್ಲಿ ಒಂದು ನಿರ್ದಿಷ್ಟವಾದ ಕ್ರಮವನ್ನು ತೋರಿಸುತ್ತವೆ. ಪ್ರತಿಯೊಂದು ವಿಭಾಗಕ್ಕೂ ವರ್ಗಕ್ಕೂ ನಿಖರವಾದ ಸಮಸೂತ್ರ ಹಾಗೂ ಉಪಸಮಸೂತ್ರ ಸಪಾಟಗಳೂ, ದ್ವಿ, ತ್ರಿ, ಚತುರ್, ಷಟ್, ಸಮಸೂತ್ರ ಅಕ್ಷಗಳೂ ಇರುತ್ತವೆ. ಸಮಸೂತ್ರ ಕೇಂದ್ರ ಇರಬಹುದು ಅಥವಾ ಇಲ್ಲದೇ ಇರಬಹುದು. ಈ ನಿಯಮಿತ ಕ್ರಮವೇ ಸಮಸೂತ್ರತೆ. ಖಚಿತವಾದ ಸಮಸೂತ್ರತೆ ಇರುವ ಆದರ್ಶ ಸ್ಫಟಿಕಗಳು ಪ್ರತಿ ವರ್ಗದಲ್ಲೂ ಇವೆ. ಇವುಗಳ ಆಧಾರದ ಮೇಲೆ ಐಸೊಮೆಟ್ರಿಕ್ ವಿಭಾಗದ ಹರಳುಗಳನ್ನು ನಾರ್ಮಲ್, ಪೈರಿಟೋ ಹೈಡ್ರಲ್, ಟೆಟ್ರಹೆಡ್ರಲ್, ಪ್ಲೆಜಿಯೊ ಹೆಡ್ರಲ್ ಮತ್ತು ಟೆಟಾಟೊ ಹೆಡ್ರಲ್ ಎಂದು ಐದು ವರ್ಗಗಳಾಗಿ ಮಾಡಲಾಗಿದೆ.




| | ವರ್ಗಗಳು | ಸಮಸೂತ್ರ ಕೇಂದ್ರ | ಸಮಸೂತ್ರ ಸಪಾಟುಗಳು | | ಸಮಸೂತ್ರ ಅಕ್ಷ | | | | ಉದಾಹರಣೆ |
|---|---|---|---|---|---|---|---|---|---|
| | | | ಮುಖ್ಯ | ಉಪ | ದ್ವಿ | ತ್ರಿ | ಚತುರ್ | ಷಟ್ | |
| 1 | ನಾರ್ಮಲ್ | ✓ | 3 | 6 | 6 | 4 | 3 | – | ಗೆಲಿನಾ |
| 2 | ಪೈರಿಟೋ ಹೆಡ್ರಲ್ | ✓ | – | 3 | 3 | 4 | – | – | ಪೈರೈಟ್ |
| 3 | ಟೆಟ್ರ ಹೆಡ್ರಲ್ | × | – | 6 | 3 | 4 | – | – | ಟೆಟ್ರಹೆಡ್ ರೈಟ್ |
| 4 | ಪ್ಲೆಜಿಯೊ ಹೆಡ್ರಲ್ | × | – | – | 6 | 4 | 3 | – | ಕುಪ್ರೈಟ್ |
| 5 | ಟೆಟಾಟೊ ಹೆಡ್ರಲ್ | – | – | – | 3 | 4 | – | – | ಉಲ್ಮ ನೈಟ್ |

ನಾರ್ಮಲ್ ವರ್ಗದ ಹರಳುಗಳಲ್ಲಿ ಮಿಕ್ಕೆಲ್ಲ ವರ್ಗದ ಹರಳುಗಳಿಗಿಂತ ಬಹು ಹೆಚ್ಚು ಸಮಸೂತ್ರತೆ ಇದೆ. ಈ ವರ್ಗದಲ್ಲಿ ಬಹುತೇಕ ಹರಳುಗಳನ್ನು ಪ್ರಾಮುಖ್ಯವಾಗಿ ಕಾಣಬಹುದು. ಪೈರಿಟೊಹೆಡ್ರಲ್ ಮತ್ತು ಟೆಟ್ರಹೆಡ್ರಲ್ ವರ್ಗಗಳಲ್ಲೂ ಅನೇಕ ಹರಳುಗಳು ರೂಪುಗೊಂಡಿರುತ್ತವೆ. ಇವುಗಳಲ್ಲಿ ಪೈರಿಟೊ ಹೆಡ್ರನ್, ಡಿಪ್ಲಾಯಿಡ್ ಮತ್ತು ಟೆಟ್ರಹೆಡ್ರನ್ ಸ್ವರೂಪಗಳು ಮುಖ್ಯವಾದುವು.

ಸ್ಫಟಿಕಾಕ್ಷಗಳಿಗೂ ಹರಳಿನ ಮುಖಗಳಿಗೂ ಇರುವ ಸಂಬಂಧದ ಆಧಾರದ ಮೇಲೆ ಏಳು ಪೂರ್ಣಸ್ವರೂಪಗಳನ್ನು ನಾರ್ಮಲ್ ವರ್ಗದಲ್ಲಿ ಕಾಣಬಹುದು. ಇವುಗಳ ಹೆಸರು: ಕ್ಯೂಬ್, ಆಕ್ಟಹಿಡ್ರನ್, ರಾಂಬಿಕ್‌ಡೂಡಿಕಹಿಡ್ರನ್, ಟೆಟ್ರಹೆಕ್ಸ ಹಿಡ್ರನ್, ಟ್ರಿಸ್‌ಆಕ್ಟಹಿಡ್ರನ್, ಟ್ರಪಿಸೊಹಿಡ್ರನ್ ಮತ್ತು ಹೆಕ್ಸಾಕ್ಟಹಿಡ್ರನ್.

ಕ್ಯೂಬ್ ಸ್ವರೂಪದಲ್ಲಿ ಆರು ಸದೃಶ ಮುಖಗಳಿದ್ದು ಪ್ರತಿ ಮುಖವೂ ಚದರವಾಗಿದ್ದು. ಎರಡು ಸ್ಫಟಿಕಾಕ್ಷಗಳಿಗೆ ಸಮಾಂತರವಾಗಿ ಮತ್ತೊಂದನ್ನು ಮೂಲ ಮಾನದಲ್ಲಿ ಸಂಧಿಸುತ್ತದೆ (?α= α= ?α).

ಆಕ್ಟಹಿಡ್ರನ್ ಹರಳಿನಲ್ಲಿ ಒಂದೇ ಆಕಾರದ ಎಂಟು ಮುಖಗಳಿರುತ್ತವೆ. ಪ್ರತಿ ಮುಖವೂ ಸಮಬಾಹು ತ್ರಿಭುಜವಾಗಿದ್ದು ಮೂರು ಸ್ಫಟಿಕಾಕ್ಷಗಳನ್ನು ಮೂಲಮಾನದಲ್ಲಿ ಸಂಧಿಸುತ್ತದೆ (α= α= α)

ರಾಂಬಿಕ್‌ಡೋಡಿಕಹಿಡ್ರನ್ನಿನಲ್ಲಿ ಹನ್ನೆರಡು ಸಮ ವಜ್ರಾಕೃತಿ ಮುಖಗಳಿರುತ್ತವೆ. ಪ್ರತಿ ಮುಖವೂ ಎರಡು ಸ್ಫಟಿಕಾಕ್ಷಗಳನ್ನು ಮೂಲಮಾನದಲ್ಲಿ ಸಂಧಿಸಿ ಮತ್ತೊಂದಕ್ಕೆ ಸಮಾಂತರವಾಗುತ್ತದೆ.(α= α= ?α).

ಟೆಟ್ರಹೆಕ್ಸಹಿಡ್ರನ್ ಸ್ವರೂಪದಲ್ಲಿ 24 ಮುಖಗಳಿದ್ದು ಪ್ರತಿ ಮುಖವೂ ಸಮದ್ವಿಬಾಹು ತ್ರಿಭುಜವಾಗಿದ್ದು, ಒಂದು ಸ್ಫಟಿಕಾಕ್ಷವನ್ನು ಮೂಲಮಾನದಲ್ಲೂ, ಮತ್ತೊಂದನ್ನು $n$ ದೂರದಲ್ಲೂ ಸಂಧಿಸಿ ಮೂರನೆಯ ಅಕ್ಷಕ್ಕೆ ಸಮಾಂತರವಾಗಿರುತ್ತದೆ. ($n$α= α=?α).

ಟ್ರಿಸ್‌ಆಕ್ಟಹಿಡನ್ ಹರಳಿನಲ್ಲಿ 24 ಸಮದ್ವಿಬಾಹು ತ್ರಿಭುಜಗಳಿದ್ದು ಪ್ರತಿಮುಖವೂ ಎರಡು ಸ್ಫಟಿಕಾಕ್ಷಗಳನ್ನು ಮೂಲ ಮಾನದಲ್ಲೂ ಮತ್ತೊಂದನ್ನು $m$ ದೂರದಲ್ಲೂ ಸಂಧಿಸುತ್ತದೆ (α : α : $m$α)

ಟ್ರಪಿಸೊಹಿಡನ್ ಸ್ವರೂಪದಲ್ಲಿ 24 ತ್ರಾಪಿಜ್ಯ ಆಕಾರದ ಮುಖಗಳಿದ್ದು ಪ್ರತಿಮುಖವೂ ಒಂದು ಅಕ್ಷವನ್ನು ಮೂಲಮಾನದಲ್ಲೂ, ಉಳಿದೆರಡು ಅಕ್ಷಗಳನ್ನು ಮೂಲಮಾನಕ್ಕಿಂತ ಹೆಚ್ಚಿನ ಏಕದೂರದಲ್ಲೂ ಅಂದರೆ $m$ ದೂರದಲ್ಲೂ ಸಂಧಿಸುತ್ತದೆ. ($m$α : α : $m$α.)




ಹೆಕ್ಸಾಕ್ಟಹಿಡ್ರನಿನಲ್ಲಿ 48 ಸದೃಶ ಅಸಮ ತ್ರಿಭುಜಗಳಿದ್ದು ಒಂದು ಸ್ಫಟಿಕಾಕ್ಷವನ್ನು ಮೂಲಮಾನದಲ್ಲೂ, ಉಳಿದೆರಡನ್ನು ಮೂಲಮಾನಕ್ಕಿಂತ ಹೆಚ್ಚಿನ ವಿವಿಧ ದೂರಗಳಲ್ಲೂ ($n$ ಮತ್ತು $m$ ) ಸಂಧಿಸುತ್ತದೆ ($n$α :α :$m$α). (ಎಂ.ಎನ್.ವಿ.)

**ಐಸೊಮೆರಿಸಂ (ಭೌತವಿಜ್ಞಾನದಲ್ಲಿ):** ಎರಡು ಅಥವಾ ಅನೇಕ ಪರಮಾಣು ನ್ಯೂಕ್ಲಿಯಸ್ ಜಾತಿಗಳು (ನ್ಯೂಕ್ಲೈಡ್ಸ್) ಪರಮಾಣು ಸಂಖ್ಯೆಯಲ್ಲಾಗಲೀ (ಅಟಾಮಿಕ್ ನಂಬರ್) ದ್ರವ್ಯಮಾನ ಸಂಖ್ಯೆಯಲ್ಲಾಗಲೀ (ಮಾಸ್‌ನಂಬರ್) ಯಾವ ವ್ಯತ್ಯಾಸವನ್ನೂ ತೋರದೆ ತಮ್ಮ ಶಕ್ತಿಹಂತಗಳಲ್ಲಿ (ಎನರ್ಜಿಲೆವಲ್ಸ್) ಹಾಗೂ ವಿಕಿರಣತೆಯಿಂದ ಕ್ಷಯಿಸುವ ರೀತಿಗಳಲ್ಲಿ (ರೇಡಿಯೊ ಆಕ್ಟಿವ್‌ಡಿಕೇ) ಮುಖ್ಯವಾಗಿ ಅರ್ಧಾಯುಗಳಲ್ಲಿ ವ್ಯತ್ಯಾಸ ತೋರುವಿಕೆ. ಅಂಥ ನ್ಯೂಕ್ಲಿಯಸ್ ಜಾತಿಗಳಿಗೆ ನ್ಯೂಕ್ಲಿಯರ್ ಐಸೊಮರುಗಳೆಂದು ಹೆಸರು.

ಪರಮಾಣುಸಂಖ್ಯೆ ಒಂದೇ ಇದ್ದು ದ್ರವ್ಯಮಾನ ಸಂಖ್ಯೆ ಬೇರೆ ಬೇರೆ ಇದ್ದರೆ ಅವನ್ನು ಐಸೊಟೋಪುಗಳೆಂದೂ, ದ್ರವ್ಯಮಾನ ಸಂಖ್ಯೆ ಒಂದೇ ಇದ್ದು ಪರಮಾಣು ಸಂಖ್ಯೆ ಬೇರೆಬೇರೆಯಾಗಿದ್ದರೆ ಅವನ್ನು ಐಸೊಬಾರುಗಳೆಂದೂ ಕರೆಯುವುದು ಸರಿಯಷ್ಟೆ ನ್ಯೂಕ್ಲಿಯಸ್ ಐಸೊಮರುಗಳು ಐಸೊಟೋಪುಗಳೂ ಅಲ್ಲ, ಐಸೊಬಾರುಗಳೂ ಅಲ್ಲ, ಅವುಗಳಲ್ಲಿನ ಪ್ರೋಟಾನುಗಳ ಸಂಖ್ಯೆ ಒಂದೇ ಆಗಿರುವುದರಿಂದ ಪರಮಾಣುಸಂಖ್ಯೆಯಲ್ಲಿ ವ್ಯತ್ಯಾಸವಿಲ್ಲ. ನ್ಯೂಟ್ರಾನುಗಳ ಸಂಖ್ಯೆಯೂ ಒಂದೇ ಆಗಿರುವುದರಿಂದ ದ್ರವ್ಯಮಾನ ಸಂಖ್ಯೆಯಲ್ಲೂ ವ್ಯತ್ಯಾಸ ವಿಲ್ಲ. ಆದರೆ ಅವುಗಳಲ್ಲಿ ಅಡಗಿರುವ ಶಕ್ತಿಯ ಮೊತ್ತ ಬೇರೆ ಬೇರೆ. ಮೇಲಿನ ಶಕ್ತಿಹಂತ ದಲ್ಲಿರುವ ನ್ಯೂಕ್ಲಿಯರ್ ಐಸೊಮರುಗಳಲ್ಲಿ ಸಾಮಾನ್ಯವಾಗಿ ಭೂಹಂತಕ್ಕಿಂತ (ಗ್ರೌಂಡ್ ಸ್ಟೇಟ್) ಹಲವಾರು ಸಾವಿರ ಅಥವಾ ಮಿಲಿಯನ್ ಎಲೆಕ್ಟ್ರಾನ್ ವೋಲ್ಟ್ ಹೆಚ್ಚುಶಕ್ತಿ ಇರುತ್ತದೆ.

ಅಧಿಕ ಶಕ್ತಿ ಇರುವ ಉದ್ರಿಕ್ತ ಪರಮಾಣು ನ್ಯೂಕ್ಲಿಯಸ್ ಸಹಜವಾಗಿಯೇ ಶಕ್ತಿಯನ್ನು ಕಳೆದುಕೊಳ್ಳಬೇಕಷ್ಟೆ. ಅವು ಗ್ಯಾಮಾ ಕಿರಣದ ರೂಪದಲ್ಲಿ ಶಕ್ತಿಯನ್ನು ಹೊರಸೂಸುವುವು. ಕೆಲವು ವೇಳೆ ಎಲೆಕ್ಟ್ರಾನ್ ಜೋಡಿಯನ್ನು ಹೊರಸೂಸುವುದು ಉಂಟು. ಅದರ ಪರಿಣಾಮವಾಗಿ ತಲುಪಿದ ಭೂಹಂತ ಸ್ಥಿರವಾದುದಿರಬಹುದು (ಉದಾ. $^{107}Ag$)




ಇಲ್ಲವೆ. ಅದೂ ಅಸ್ಥಿರವಿರಬಹುದು (ಉದಾ. $^{69}Zn$). $10^{-6}$ ಸೆಕೆಂಡಿನಿಂದ ಹಲವಾರು ವರ್ಷಗಳವರೆಗಿನ ಅರ್ಧಾಯುಗಳಿರುವ 200ಕ್ಕೂ ಹೆಚ್ಚು ಸಂಖ್ಯೆಯ ನ್ಯೂಕ್ಲಿಯರ್ ಐಸೊಮರುಗಳು ಇದುವರೆಗೆ ಗೊತ್ತಾಗಿದೆ. (ಜೆ.ಆರ್.ಎಲ್.)

**ಐಸೊಮೆರಿಸಂ (ರಸಾಯನವಿಜ್ಞಾನದಲ್ಲಿ):** ಎರಡು ಅಥವಾ ಅನೇಕ ರಾಸಾಯನಿಕ ಸಂಯುಕ್ತಗಳ ಅಣುಸೂತ್ರ (ಮಾಲಿಕ್ಯುಲರ್ ಫಾರ್ಮುಲ) ಒಂದೇ ಇದ್ದು ಅವುಗಳ ಗುಣಲಕ್ಷಣಗಳಲ್ಲಿ ವ್ಯತ್ಯಾಸವಿರುವಿಕೆ. ಇಂಥ ಸಂಯುಕ್ತಗಳಿಗೆ ಐಸೊಮರುಗಳು ಎಂದು ಹೆಸರು. ಒಂದು ಸಂಯುಕ್ತದಲ್ಲಿರುವ ರಾಸಾಯನಿಕ ಧಾತುಗಳು ಮತ್ತು ಅವುಗಳ ಪ್ರಮಾಣ–ಅಂದರೆ ಸಂಯುಕ್ತದ ಸಂಯೋಜನೆ (ಕಾಂಪೊಸಿಷನ್) ಅದರ ಗುಣಲಕ್ಷಣಗಳನ್ನು ನಿರ್ಧರಿಸುವುದೆಂದು ಒಂದು ಕಾಲದಲ್ಲಿ ನಂಬಲಾಗಿತ್ತು. ಇದು ಸರಿಯಿಲ್ಲವೆಂದು ಮುಂದೆ ವೇದ್ಯವಾಯಿತು. ಸಂಯುಕ್ತಗಳ ಸಂಯೋಜನೆ ಒಂದೇ ಆಗಿದ್ದು ಅವುಗಳ ಅಣು ತೂಕಗಳಲ್ಲಿ ವ್ಯತ್ಯಾಸವಿರುವುದು ಸಾಧ್ಯವೆಂಬುದನ್ನು ರಸಾಯನ ವಿಜ್ಞಾನಿಗಳು ಬಲುಬೇಗ ಮನಗಂಡರು. ಅಸಿಟಿಲೀನ್ ಮತ್ತು ಬೆಂಜ಼ೀನ್ ಎರಡರಲ್ಲೂ ಅದೇ ಧಾತುಗಳು (ಕಾರ್ಬನ್ ಮತ್ತು ಹೈಡ್ರೋಜನ್) ಅದೇ ಪ್ರಮಾಣದಲ್ಲಿ (ಕಾರ್ಬನ್ನಿನ ಒಂದು ಪರಮಾಣು ಹೈಡ್ರೋಜನ್ನಿನ ಒಂದು ಪರಮಾಣು) ಇದೆ. ಎರಡಕ್ಕೂ ಮೂಲಸೂತ್ರ (ಎಂಪಿರಿಕಲ್ ಫಾರ್ಮುಲ) ಒಂದೇ, CH. ಈ ಸೂತ್ರದಂತೆ ಯಾವುದೇ ಸಂಯುಕ್ತದ ಅಣುವಿನಲ್ಲಿ ಒಂದು ಕಾರ್ಬನ್ ಪರಮಾಣು ಮತ್ತು ಒಂದು ಹೈಡ್ರೋಜನ್ ಪರಮಾಣು ಇದ್ದುದೇ ಆದರೆ ಅಣುತೂಕ 13 ಆಗಿರಬೇಕಿತ್ತು. ಆದರೆ ಅಸಿಟಿಲೀನ್ ಅಣುತೂಕ 26; ಆದ್ದರಿಂದ ಅದರ ಅಣುಸೂತ್ರ $C_2H_2$. ಬೆಂಜ಼ೀನ್ ಅಣುತೂಕ 78; ಆದ್ದರಿಂದ ಅದರ ಅಣುಸೂತ್ರ $C_6H_6$. ಅಣುವಿನಲ್ಲಿರುವ ವಿವಿಧ ಬಗೆಯ ಪರಮಾಣುಗಳ ಸಂಖ್ಯೆಯನ್ನೂ ಸೂಚಿಸುವ ಈ ಅಣುಸೂತ್ರವೇ ಸಂಯುಕ್ತದ ಗುಣಲಕ್ಷಣಗಳನ್ನು ನಿರ್ಧರಿಸುವುದೆಂಬ ಭಾವನೆ ಬಹುಕಾಲ ರೂಢಿಯಲ್ಲಿತ್ತು. ಆರ್ಗ್ಯಾನಿಕ್ ರಸಾಯನವಿಜ್ಞಾನ ಜನ್ಮತಾಳಿದ ಪ್ರಾರಂಭದಲ್ಲಿಯೇ ಈ ಭಾವನೆಯನ್ನೂ ಕೈಬಿಡಬೇಕಾಗಿ ಬಂತು. ಸಂಯುಕ್ತಗಳ ಅಣುಸೂತ್ರಗಳು ಒಂದೇ ಇದ್ದರೂ ಅಣುಗಳಲ್ಲಿರುವ ಪರಮಾಣುಗಳ ಜೋಡಣೆಯಲ್ಲಿ ವ್ಯತ್ಯಾಸವಿರಬಹುದಾದ್ದರಿಂದ ಒಂದೇ ಅಣುಸೂತ್ರವಿರುವ ಎರಡು ಅಥವಾ ಅನೇಕ ಸಂಯುಕ್ತಗಳಿರುವುದು ಸಾಧ್ಯ. ಆರ್ಗ್ಯಾನಿಕ್ ರಸಾಯನವಿಜ್ಞಾನ ಬೆಳೆದಂತೆಲ್ಲ ಐಸೊಮೆರಿಸಂ ನಿದರ್ಶನಗಳು ಹೇರಳವಾಗಿ ದೊರೆತು ಅದರ ಅಧ್ಯಯನಕ್ಕೆ ಈ ವಿಜ್ಞಾನವಿಭಾಗದಲ್ಲಿ ವಿಶೇಷ ಪ್ರಾಮುಖ್ಯ ಬಂದಿದೆ.

ಐಸೊಮರುಗಳ ಅಣುಗಳಲ್ಲಿರುವ ಬೇರೆ ಬೇರೆ ಬಗೆಯ ಪರಮಾಣುಗಳ ಸಂಖ್ಯೆ ಒಂದೇ ಆಗಿದ್ದು ಅವುಗಳ ಜೋಡಣೆಯಲ್ಲಿ ಮಾತ್ರ ವ್ಯತ್ಯಾಸವಿರುವುದಷ್ಟೆ. ಈ ವ್ಯತ್ಯಾಸ ಎದ್ದುಕಾಣಬಹುದು, ಇಲ್ಲವೆ ಬಲು ಸೂಕ್ಷ್ಮವಾಗಿರಬಹುದು. ಇವನ್ನು ಅನುಸರಿಸಿ ಬಗೆಬಗೆಯ ಐಸೊಮೆರಿಸಂಗಳನ್ನು ಗುರುತಿಸಿ ಅವುಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿದ್ದಾರೆ.

ವಿವಿಧ ಬಗೆಯ ಐಸೊಮೆರಿಸಂಗಳನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು: 1. ರಚನೀಯ ಐಸೊಮೆರಿಸಂ (ಸ್ಟ್ರಕ್ಚರಲ್ ಐಸೊಮೆರಿಸಂ), 2. ಸ್ಟೀರಿಯೊ ಐಸೊಮೆರಿಸಂ. ಐಸೊಮರುಗಳ ರಚನೆಯಲ್ಲಿಯೇ ವ್ಯತ್ಯಾಸವಿದ್ದರೆ ಅದನ್ನು ರಚನೀಯ ಐಸೊಮೆರಿಸಂ ಎನ್ನುತ್ತಾರೆ. ಇಲ್ಲಿ ರಚನೆ ಎಂಬ ಶಬ್ದವನ್ನು ಒಂದು ವಿಶಿಷ್ಟ ಪಾರಿಭಾಷಿಕ ಅರ್ಥದಲ್ಲಿ ಬಳಸಲಾಗಿದೆ. ಅಣುವಿನಲ್ಲಿರುವ ವಿವಿಧ ಪರಮಾಣುಗಳು, ಪರಮಾಣುಪುಂಜಗಳು ಮತ್ತು ವಿವಿಧ ಬಗೆಯ ಬಂಧಗಳು ಇವುಗಳ ಅನುಕ್ರಮಕ್ಕೆ ರಚನೆ ಎಂದು ಅರ್ಥ. ಉದಾಹರಣೆಗೆ, ಈಥೈಲ್ ಆಲ್ಕೊಹಾಲ್ ಮತ್ತು ಡೈಮೀಥೈಲ್ ಈಥರುಗಳ ರಚನೆಯಲ್ಲಿ ವ್ಯತ್ಯಾಸವಿದೆ.

| $CH_3$-$CH_2$-OH | $CH_3$-O-$CH_3$ |
|---|---|
| ಈಥೈಲ್ ಆಲ್ಕೊಹಾಲ್ | ಡೈಮೀಥೈಲ್ ಈಥರ್ |

ಇಲ್ಲಿ ಕಾಣಬರುವುದು ರಚನೀಯ ಐಸೊಮೆರಿಸಂ. ಅಂತೆಯೇ ಬ್ಯೂಟೀನ್ (1) ಮತ್ತು ಬ್ಯೂಟೀನ್ (2) ಗಳಲ್ಲಿ ಕಾಣಬರುವುದೂ ರಚನೀಯ ಐಸೊಮೆರಿಸಂ.

| $CH_2$=CH-$CH_2$-$CH_3$ | $CH_3$-CH=CH-$CH_3$ |
|---|---|
| ಬ್ಯೂಟೀನ್(1) | ಬ್ಯೂಟೀನ್(2) |

ಆದರೆ ಈಗ ಬ್ಯೂಟೀನ್ (2) ಸೂತ್ರವನ್ನು ಗಮನಿಸಿ. ಇದೇ ರಚನಾಸೂತ್ರವಿರುವ ಎರಡು ಸಂಯುಕ್ತಗಳಿವೆ.




ಸಿಸ್ ಬ್ಯೂಟೀನ್ (2) ಟ್ರಾನ್ಸ್ ಬ್ಯೂಟೀನ್ (2)

ಇವೆರಡರ ರಚನೆ (ಮೇಲೆ ಹೇಳಿದ ವಿಶಿಷ್ಟ ಪಾರಿಭಾಷಿಕ ಅರ್ಥದಲ್ಲಿ) ಒಂದೇ. ಆದರೆ ಇವುಗಳ ಮೂರು ಆಯಾಮಗಳ ಮಾದರಿಗಳನ್ನು (ತ್ರೀಡೈಮೆನ್ಷನಲ್ ಮಾಡೆಲ್ಸ್) ಗಣನೆಗೆ ತೆಗೆದುಕೊಂಡಾಗ ಆಕಾಶದಲ್ಲಿ ಪರಮಾಣುಗಳ ಮತ್ತು ಪರಮಾಣು ಪುಂಜಗಳ ಹಂಚಿಕೆ ಬೇರೆಬೇರೆಯಾಗಿದೆ. ಇದು ಸ್ಟೀರಿಯೊ ಐಸೊಮೆರಿಸಂಗೆ ಒಂದು ನಿದರ್ಶನ.

**ರಚನೀಯ ಐಸೊಮೆರಿಸಂ:** ವಿವಿಧ ಬಗೆಯ ರಚನೀಯ ಐಸೊಮೆರಿಸಂಗಳನ್ನು ಪುನಃ ಎರಡು ಗುಂಪುಗಳಾಗಿ ವಿಂಗಡಿಸಬಹುದು.

ಮೊದಲನೆಯದು ವರ್ತನಾ ಐಸೊಮೆರಿಸಂ (ಫಂಕ್ಷನಲ್ ಐಸೊಮೆರಿಸಂ). ಈ ಬಗೆಯ ಐಸೊಮೆರಿಸಂನಲ್ಲಿ ಐಸೊಮರುಗಳಿಗಿರುವ ವ್ಯತ್ಯಾಸ ಗಮನಾರ್ಹವಾದದ್ದು. ಅಂದರೆ ಅವುಗಳ ರಚನೆಗಳಲ್ಲಿರುವ ತೀವ್ರ ವ್ಯತ್ಯಾಸದ ಪರಿಣಾಮವಾಗಿ ಒಂದೊಂದರಲ್ಲೂ ಬೇರೆ ಬೇರೆ ಬಗೆಯ ಪರಮಾಣುಪುಂಜಗಳೋ ಬೇರೆ ಬೇರೆ ಬಗೆಯ ಬಂಧಗಳೋ ಇದ್ದು ಅವುಗಳ ರಾಸಾಯನಿಕ ವರ್ತನೆಯಲ್ಲಿ ಗಣನೀಯ ವ್ಯತ್ಯಾಸವಿರುತ್ತದೆ. ಐಸೊಮರುಗಳು ಬೇರೆ ಬೇರೆ ವರ್ಗದ ಸಂಯುಕ್ತಗಳೇ. ಈ ಹಿಂದೆ ಉದಾಹರಣೆಯಾಗಿ ಕೊಟ್ಟ ಈಥೈಲ್ ಆಲ್ಕೊಹಾಲ್–ಡೈಮೀಥೈಲ್ ಈಥರುಗಳ ಐಸೊಮೆರಿಸಂ ಈ ಬಗೆಯದೇ. ಗಮನ ಸೆಳೆವಂಥ ಇನ್ನೊಂದು ನಿದರ್ಶನವನ್ನು ಕೊಡುವುದಾದರೆ ನೈಟ್ರೊ ಟಾಲ್ವೀನ್ ಮತ್ತು ಆಂಥ್ರಸಿಲಿಕ್ ಆಮ್ಲಗಳನ್ನು ಹೆಸರಿಸಬಹುದು.




ನೈಟ್ರೊ ಟಾಲ್ವೀನ್ ಆಂಥ್ರನಿಲಿಕ್ ಆಮ್ಲ

ಎರಡರ ಅಣುಸೂತ್ರವೂ ಒಂದೇ, $C_7H_7NO_2$. ಆದರೆ ಒಂದು ನೈಟ್ರೊ ಸಂಯುಕ್ತ, ಇನ್ನೊಂದರಲ್ಲಿ ಆಮ್ಲೀಯ ಗುಣದ ಕಾರ್ಬಾಕ್ಸಿಲ್ ಪುಂಜವೂ ಪ್ರತ್ಯಾಮ್ಲೀಯ ಗುಣದ ಅಮೈನೊ ಪುಂಜವೂ ಇರುವುದರಿಂದ ಈ ಎರಡು ಸಂಯುಕ್ತಗಳ ರಾಸಾಯನಿಕ ವರ್ತನೆಯಲ್ಲಿ ಬಹಳ ವ್ಯತ್ಯಾಸವಿದೆ.

ಟಾಟೊಮೆರಿಸಂ : ಕೆಲವೊಮ್ಮೆ ಒಂದು ನಿರ್ದಿಷ್ಟ ಸಂಯುಕ್ತದ ಗುಣಲಕ್ಷಣಗಳನ್ನು ಪರಿಶೀಲಿಸಿದಾಗ ಅದರ ಕೆಲವು ರಾಸಾಯನಿಕ ಗುಣಗಳನ್ನು ಒಂದು ರಚನೆಯ ಆಧಾರದ ಮೇಲೂ ಇನ್ನೂ ಕೆಲವು ರಾಸಾಯನಿಕ ಗುಣಗಳನ್ನು ಬೇರೊಂದು ರಚನೆಯ ಆಧಾರದ ಮೇಲೂ ವಿವರಿಸುವುದು ಸಾಧ್ಯವಾಗುತ್ತದೆ. ವಾಸ್ತವವಾಗಿ ಆ ಸಂಯುಕ್ತದಲ್ಲಿ ಬೇರೆ ಬೇರೆ ರಚನೆಯಿರುವ ಎರಡು ಬಗೆಯ ಅಣುಗಳಿದ್ದು ಅವು ಸತತವಾಗಿ ಪರಸ್ಪರ ಪರಿವರ್ತನೆ ಹೊಂದುತ್ತಿರುತ್ತವೆ. ಉದಾಹರಣೆಗೆ ಅಸಿಟೊ ಅಸಿಟಿಕ್ ಆಮ್ಲದ ಈಥೈಲ್ ಎಸ್ಟರ್, ಇದರ ಕೆಲವು ಗುಣಲಕ್ಷಣಗಳನ್ನು ಗಮನಿಸಿದರೆ ಇದರಲ್ಲಿ ಕೀಟೊ ಪುಂಜವಿರುವಂತೆ ಕಂಡುಬರುತ್ತದೆ $CH_3.CO.CH_2.COOC_2H_5$ ಇನ್ನೂ ಕೆಲವು ಗುಣಲಕ್ಷಣಗಳನ್ನು ಗಮನಿಸಿದರೆ ಇದರಲ್ಲಿ ಒಂದು ದ್ವಿಬಂಧವೂ (ಡಬಲ್ ಬಾಂಡ್) ಒಂದು ಹೈಡ್ರಾಕ್ಸಿಲ್ ಪುಂಜವೂ ಇರುವಂತೆ ಕಂಡುಬರುತ್ತದೆ.

$CH_3$-C=CH-COO$C_2H_5$
|
OH

ವಾಸ್ತವವಾಗಿ ಈ ಸಂಯುಕ್ತದಲ್ಲಿ ಈ ಎರಡು ಬಗೆಯ ಅಣುಗಳೂ ಇದ್ದು ಸತತವಾಗಿ ಒಂದು ಇನ್ನೊಂದು ಪರಿವರ್ತನೆ ಹೊಂದುತ್ತ ಗತಿ ಸಮತೋಲ (ಡೈನಮಿಕ್ ಈಕ್ವಿಲಿಬ್ರಿಯಮ್) ಸ್ಥಿತಿಯಲ್ಲಿರುತ್ತವೆ.

$CH_3$-CO-$CH_2$-COO$C_2H_5$ $\rightleftarrows$ $CH_3$-C=CH-COO$C_2H_5$
|
OH

ಈ ಬಗೆಯ ಐಸೊಮೆರಿಸಂಗೆ ಟಾಟೊಮೆರಿಸಂ ಅಥವಾ ಗತಿ ಐಸೊಮೆರಿಸಂ (ಡೈನಾಮಿಕ್ ಐಸೊಮೆರಿಸಂ) ಎಂದು ಹೆಸರು.

ಎರಡನೆಯದು, ಐಸೊಮರುಗಳಲ್ಲಿ ಒಂದೇ ಬಗೆಯ ಪುಂಜಗಳೇ ಇದ್ದು ಸಂಯುಕ್ತಗಳ ರಾಸಾಯನಿಕ ವರ್ತನೆಯಲ್ಲಿ ಗಮನಾರ್ಹ ವ್ಯತ್ಯಾಸವೇನೂ ಇಲ್ಲದಿರುವ ರಚನೀಯ ಐಸೊಮೆರಿಸಂ ಸಾಧ್ಯ. ಅಂಥ ಐಸೊಮೆರಿಸಂಗಳನ್ನು ಈಗ ಪರಿಶೀಲಿಸಬಹುದು.

ಸರಣಿ (ಚೈನ್) ಐಸೊಮೆರಿಸಂ : ಆರ್ಗ್ಯಾನಿಕ್ ಸಂಯುಕ್ತಗಳ ಅಣುಗಳಲ್ಲಿ ಹೈಡ್ರೋಜನ್, ಆಕ್ಸಿಜನ್, ನೈಟ್ರೋಜನ್ ಮುಂತಾದ ಪರಮಾಣುಗಳನ್ನು ಗಣನೆಗೆ ತೆಗೆದುಕೊಳ್ಳದೆ, ಆ ಅಣುಗಳ ರಚನೆಗೆ ಆಧಾರಪ್ರಾಯವಾಗಿರುವ ಕಾರ್ಬನ್ ಪರಮಾಣುಗಳ ಸರಣಿಯ ಮೇಲೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸೋಣ. ಐಸೊಮರುಗಳು ಈ ಕಾರ್ಬನ್ ಚೌಕಟ್ಟುಗಳಲ್ಲೇ ವ್ಯತ್ಯಾಸವಿದ್ದರೆ ಅದಕ್ಕೆ ಸರಣಿ ಐಸೊಮೆರಿಸಂ ಎಂದು ಹೆಸರು. ಆಲ್ಕೇನ್ ವರ್ಗದ ಹೈಡ್ರೋಕಾರ್ಬನುಗಳಲ್ಲಿ ಈ ಬಗೆಯ ಐಸೊಮೆರಿಸಂ ಪಾತ್ರ ಹೆಚ್ಚು. ಬ್ಯೂಟೇನಿನಲ್ಲಿ ($C_4H_{10}$) ಎರಡು ಐಸೊಮರ್ ಸಾಧ್ಯ.

$CH_3$-$CH_2$-$CH_2CH_3$ — ಬ್ಯೂಟೇನ್

$CH_3$
|
$CH_3$-CH-$CH_3$ — ಐಸೊಬ್ಯೂಟೇನ್

ಈ ಅಣುಗಲ್ಲಿನ ಕಾರ್ಬನ್ ಪರಮಾಣು ಸರಣಿಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸುವುದಾದರೆ

C-C-C-C — ಬ್ಯೂಟೇನ್

C
|
C—C—C — ಐಸೊಬ್ಯೂಟೇನ್

ಪೆಂಟೇನಿನಲ್ಲೆ ಮೂರು ಐಸೊಮರುಗಳು ಸಾಧ್ಯ.

$CH_3$-$CH_2$-$CH_2$-$CH_2$-$CH_3$ — ಪೆಂಟೇನ್

$CH_3$—CH—$CH_2$—$CH_3$
|
$CH_3$ — ಐಸೊಪೆಂಟೇನ್

$CH_3$
|
$CH_3$—C—$CH_3$
|
$CH_3$ — ನಿಯೊಪೆಂಟೇನ್

ಹೀಗೆಯೇ ಹೆಕ್ಸೇನ್ $C_6H_{14}$ರಲ್ಲಿ ಐದು, $C_7H_{16}$ರಲ್ಲಿ ಒಂಬತ್ತು, $C_8H_{18}$ ರಲ್ಲಿ ಹದಿನೆಂಟು ಮತ್ತು $C_9H_{20}$ ಮೂವತ್ತೈದು ಐಸೊಮರುಗಳು ಸಾಧ್ಯ. ಇಲ್ಲಿ ಕಾರ್ಬನ್ ಪರಮಾಣುಗಳ ಸಂಖ್ಯೆ ಹೆಚ್ಚಾಗುತ್ತ ಹೋದಂತೆ ಐಸೊಮರುಗಳ ಸಂಖ್ಯೆ ಅಗಾಧವಾಗಿ ಬೆಳೆಯುತ್ತದೆ. $C_{20}H_{42}$ ಸೂತ್ರದ ಆಲ್ಕೇನಿನಲ್ಲಿ 3,66,319 ಐಸೊಮರುಗಳೂ $C_{40}H_{82}$ ಸೂತ್ರದ ಆಲ್ಕೇನಿನಲ್ಲಿ $6.25\times10^{13}$ ಐಸೊಮರುಗಳೂ ಸಾಧ್ಯವೆಂದು ಗಣಿತದ ಸಹಾಯದಿಂದ ಲೆಕ್ಕ ಹಾಕಿದ್ದಾರೆ. ಆದರೆ ಅವುಗಳಲ್ಲಿ ಕೆಲವನ್ನು ಮಾತ್ರ ತಯಾರಿಸಲಾಗಿದೆ.

ಮೆಟಮೆರಿಸಂ : ದ್ವಿವೇಲನ್ಸೀಯ (ಡೈವೆಲೆಂಟ್) ಅಥವಾ ತ್ರಿವೇಲನ್ಸೀಯ (ಟ್ರೈವೆಲೆಂಟ್) ಪರಮಾಣು ಅಥವಾ ಪರಮಾಣುಪುಂಜವೊಂದು ವಿವಿಧ ಉದ್ದಗಳ ಕಾರ್ಬನ್ ಸರಣಿಗಳಿಗೆ ಬಂಧಿತವಾಗಿ ಐಸೊಮರುಗಳನ್ನು ಉತ್ಪತ್ತಿಮಾಡಬಹುದು. ಈಥರುಗಳು, ಕೀಟೋನುಗಳು ಮತ್ತು ಅಮೀನುಗಳಲ್ಲಿ ಈ ಬಗೆಯ ಐಸೊಮೆರಿಸಂ ನಾವು ಕಾಣುತ್ತೇವೆ. ಉದಾಹರಣೆಗೆ

(i) $CH_3$-$CH_2$-O-$CH_2$-$CH_3$ — ಡೈ ಈಥೈಲ್ ಈಥರ್; $CH_3$-O-$CH_2$-$CH_2$-$CH_3$ — ಮೀಥೈಲ್ ಪ್ರೋಪೈಲ್ ಈಥರ್

(ii) $CH_3$-$CH_2$-CO-$CH_2$-$CH_2$-$CH_3$ — ಈಥೈಲ್ ಪ್ರೋಪೈಲ್ ಕೀಟೋನ್; $CH_3$-CO-$CH_2$-$CH_2$-$CH_2$-$CH_3$ — ಮೀಥೈಲ್ ಬ್ಯೂಟೈಲ್, ಕೀಟೋನ್

(iii)
$CH_3$
|
$CH_2$
|
$CH_3$-$CH_2$-N-$CH_2$-$CH_3$ — ಟ್ರೈ ಈಥೈಲ್ ಅಮೀನ್

$CH_3$
|
$CH_3$-$CH_2$-N-$CH_2$-$CH_2$-$CH_3$ — ಮೀಥೈಲ್ ಈಥೈಲ್, ಪ್ರೋಪೈಲ್, ಅಮೀನ್

$CH_3$
|
$CH_3$-N-$CH_2$-$CH_2$-$CH_2$-$CH_3$ — ಡೈ ಮೀಥೈಲ್ ಬ್ಯೂಟೈಲ್ ಅಮೀನ್

ಈ ಬಗೆಯ ಐಸೊಮೆರಿಸಂಗೆ ಮೆಟಮೆರಿಸಂ ಎಂದು ಹೆಸರು.

ಸ್ಥಾನೀಯ (ಪೊಸಿಷನ್) ಐಸೊಮೆರಿಸಂ: ಈ ಬಗೆಯ ಐಸೊಮರುಗಳಲ್ಲಿ ಒಂದು ನಿರ್ದಿಷ್ಟ ಪರಮಾಣು ಅಥವಾ ಪರಮಾಣು ಪುಂಜದ ಇಲ್ಲವೇ ಒಂದು ನಿರ್ದಿಷ್ಟ ಬಂಧದ ಸ್ಥಾನ ಬೇರೆಬೇರೆಯಾಗಿರುತ್ತದೆ. ಆದ್ದರಿಂದಲೇ ಈ ಬಗೆಯ ಐಸೊಮೆರಿಸಂಗೆ ಸ್ಥಾನೀಯ ಐಸೊಮೆರಿಸಂ ಎಂದು ಹೆಸರು. ಉದಾಹರಣೆಗೆ,

$CH_3$-$CH_2$-$CH_2$-OH — ಪ್ರೊಪೈಲ್ ಆಲ್ಕೊಹಾಲ್

$CH_3$-CH-$CH_3$
|
OH — ಐಸೊಪ್ರೋಪೈಲ್ ಆಲ್ಕೊಹಾಲ್

ಬ್ಯೂಟೀನ್ (1) ಬ್ಯೂಟೀನ (2)ಗಳ ಐಸೊಮೆರಿಸಂ ಈ ಬಗೆಯದೇ. ಇಲ್ಲಿ ದ್ವಿಬಂಧದ ಸ್ಥಾನದಲ್ಲಿ ವ್ಯತ್ಯಾಸವಿದೆ.



ಚಕ್ರೀಯ ಸಂಯುಕ್ತಗಳಲ್ಲಿ (ಸೈಕಿಕ್ ಕಾಂಪೌಂಡ್ಸ್) ಇನ್ನೊಂದು ಬಗೆಯ ಸ್ಥಾನೀಯ ಐಸೊಮೆರಿಸಮನ್ನು ಕಾಣುತ್ತೇವೆ. ಇಲ್ಲಿ ಯಾವುದೇ ಒಂದು ಆದೇಶದ (ಸಬ್‌ಸ್ಟಿಟ್ಯುಎಂಟ್) ಸ್ಥಾನ ಬೇರೆಬೇರೆಯಾಗಿರುವುದಿಲ್ಲ. ಎರಡು ಅಥವಾ ಅನೇಕ ಆದೇಶಗಳ ಸಾಪೇಕ್ಷಸ್ಥಾನ ಬೇರೆಬೇರೆಯಾಗಿರುತ್ತದೆ. ಬೆನ್‌ಜೀನ್‌ಜನ್ಯ ಸಂಯುಕ್ತಗಳಲ್ಲಿ ಈ ಬಗೆಯ ಐಸೊಮೆರಿಸಂ ಸರ್ವೇಸಾಮಾನ್ಯ. ಉದಾಹರಣೆಗೆ

**ಸ್ಟೀರಿಯೊ ಐಸೊಮೆರಿಸಂ :** ಅಣುರಚನೆ ಒಂದೇ ಇದ್ದು ಪರಮಾಣು ಮತ್ತು ಪರಮಾಣು ಪುಂಜಗಳ ಮೂರು ಆಯಾಮಗಳ ಹಂಚಿಕೆಯಲ್ಲಿ (ತ್ರಿಡೈಮೆನ್ಷನಲ್ ಡಿಸ್ಟ್ರಿಬ್ಯೂಷನ್) ವ್ಯತ್ಯಾಸವಿದ್ದರೆ ಅದಕ್ಕೆ ಸ್ಟೀರಿಯೊ ಐಸೊಮೆರಿಸಂ ಎಂದು ಕರೆಯುತ್ತಾರೆಂದು

ಈಗಾಗಲೇ ಹೇಳಿದೆಯಷ್ಟೆ. ಇದರಲ್ಲಿ ಮುಖ್ಯವಾಗಿ ಎರಡು ಬಗೆ. ದ್ಯುತಿ ಐಸೊಮೆರಿಸಂ (ಆಪ್ಟಿಕಲ್ ಐಸೊಮೆರಿಸಂ) ಮತ್ತು ಜ್ಯಾಮಿತೀಯ ಐಸೊಮೆರಿಸಂ (ಜೊಮೆಟ್ರಿಕಲ್ ಐಸೊಮೆರಿಸಂ).

ದ್ಯುತಿ ಐಸೊಮೆರಿಸಂ : ಈ ಬಗೆಯ ಐಸೊಮರುಗಳ ಗುಣಲಕ್ಷಣಗಳಲ್ಲಿ ಕಂಡುಬರುವ ಮುಖ್ಯ ವ್ಯತ್ಯಾಸಧ್ರುವೀಕೃತ ಬೆಳಕಿನೊಡನೆ (ಪೋಲರೈಸ್ಡ್ ಲೈಟ್) ಅವು ವರ್ತಿಸುವ ರೀತಿಯಲ್ಲಿ. ಸಮತಲ ಧ್ರುವೀಕೃತ ಬೆಳಕಿನ (ಪ್ಲೇನ್ ಪೋಲರೈಸ್ಡ್ ಲೈಟ್) ರಶ್ಮಿಯನ್ನು ಆ ಸಂಯುಕ್ತಗಳ ಹರಳಿನ ಮೂಲಕ ಅಥವಾ ಅವುಗಳ ದ್ರಾವಣಗಳ ಮೂಲಕ ಹಾಯಿಸಿದರೆ ಧ್ರುವೀಕರಣ ಸಮತಲ (ಪ್ಲೇನ್ ಆಫ್ ಪೋಲರೈಸೇಷನ್) ಬಲಕ್ಕಾಗಲಿ ಎಡಕ್ಕಾಗಲಿ ತಿರುಗುತ್ತದೆ. ಧ್ರುವೀಕರಣ ಸಮತಲವನ್ನು ತಿರುಗಿಸಬಲ್ಲ ಸಂಯುಕ್ತ ದ್ಯುತಿಪಟುತ್ವ (ಆಪ್ಟಿಕಲ್ ಆಕ್ಟಿವಿಟಿ) ಉಳ್ಳದ್ದು ಎನ್ನಿಸಿಕೊಳ್ಳುತ್ತದೆ. ಹಾಗೆ ತಿರುಗುವ ಕೋನ ಈ ಐಸೊಮರುಗಳಲ್ಲಿ ಬೇರೆಬೇರೆಯಾಗಿರುತ್ತದೆ. ಈ ಕಾರಣದಿಂದಲೇ ಈ ಬಗೆಯ ಐಸೊಮೆರಿಸಂಗೆ ದ್ಯುತಿ ಐಸೊಮೆರಿಸಂ ಎಂಬ ಹೆಸರು ಬಂದಿರುವುದು.

ದ್ಯುತಿ ಐಸೊಮೆರಿಸಂನ ವಿಶದವಾದ ಚರ್ಚೆಗೆ ಪ್ರವೇಶಿಸುವ ಮೊದಲು ಸಮಾಂಗತೆ (ಸಿಮೆಟ್ರಿ) ಎಂಬುದರ ಅರ್ಥವನ್ನು ವಿವರಿಸುವುದು ಅಗತ್ಯ. ಒಂದು ಕಾಯ ಸಮಾಂಗವಾಗಿದ್ದರೆ (ಸಿಮೆಟ್ರಿಕಲ್) ಅದೂ ಅದರ ಕನ್ನಡಿಯ ಬಿಂಬವೂ (ಮಿರರ್ ಇಮೇಜ್) ಅನನ್ಯ (ಐಡೆಂಟಿಕಲ್). ಅಂದರೆ ಒಂದರ ಮೇಲೊಂದನ್ನಿಟ್ಟರೆ ಅವು ಸರಿಯಾಗಿ ಹೊಂದಿಕೊಳ್ಳುತ್ತವೆ. ಆ ಕಾಯ ಅಸಮಾಂಗವಾಗಿದ್ದರೆ (ಅಸಿಮೆಟ್ರಿಕಲ್) ಅದರ ಕನ್ನಡಿಯ ಬಿಂಬ ಮೊದಲ ನೋಟಕ್ಕೆ ಅದರಂತೆಯೇ ಕಂಡರೂ ಅವು ಅನನ್ಯವಲ್ಲ. ಇದಕ್ಕೆ ನಮ್ಮ ಕೈ ಬಲು ಒಳ್ಳೆಯ ಉದಾಹರಣೆ. ಎಡಗೈ ಕನ್ನಡಿಯ ಬಿಂಬ ಬಲಗೈ. ಮೊದಲ ನೋಟಕ್ಕೆ ಎರಡೂ ಒಂದೇ ಎಂಬಂತೆ ಕಂಡರೂ ಅವೆರಡೂ ಬೇರೆಬೇರೆ. ಇದಕ್ಕೆ ಕಾರಣ ಕೈ ಅಸಮಾಂಗ ಕಾಯ.

ಕೆಲವು ವೇಳೆ ಒಂದು ಸಂಯುಕ್ತದ ಅಣು ಯಾವುದೇ ಕಾರಣದಿಂದ ಅಸಮಾಂಗವಾಗಿರಬಹುದು. ಆಗ ಅದೂ ಕನ್ನಡಿಯ ಬಿಂಬದ ರೂಪವಿರುವ ಅಣುವೂ ಅನನ್ಯವಾಗಿರದೆ ಒಂದರಿಂದೊಂದು ಭಿನ್ನವಾಗಿರುತ್ತವೆ. ಈ ರೀತಿ ಅಣು ಅಸಮಾಂಗವಾಗಿರಲು ಸಾಮಾನ್ಯವಾಗಿ ಕಾಣಬರುವ ಒಂದು ಕಾರಣ ಅದರಲ್ಲಿರುವ ಯಾವುದೊ ಒಂದು ಕಾರ್ಬನ್ ಪರಮಾಣು ನಾಲ್ಕು ಬೇರೆ ಬೇರೆ ಪರಮಾಣು ಅಥವಾ ಪರಮಾಣುಪುಂಜಗಳಿಗೆ ಬಂಧಿತವಾಗಿರುವುದು. ಉದಾಹರಣೆಗೆ, ಲ್ಯಾಕ್ಟಿಕ್ ಆಮ್ಲದ ಅಣುವನ್ನು ಪರಿಶೀಲಿಸಿ.

```
         H
         |
CH3 — C — COOH
         |
        OH
```

ಅದರಲ್ಲಿ ಒಂದು ಕಾರ್ಬನ್ ಪರಮಾಣು $CH_3$,H,OH ಮತ್ತು COOHಗಳಿಗೆ ಬಂಧಿತವಾಗಿದೆ. ಕಾರ್ಬನ್ ಪರಮಾಣು ಸಮಚತುರ್ಮುಖಿಯೊಂದರ (ರೆಗ್ಯುಲರ್ ಟೆಟ್ರಹೆಡ್ರನ್) ಜ್ಯಾಮಿತೀಯ ಕೇಂದ್ರದಲ್ಲಿದ್ದು (ಜೊಮೆಟ್ರಿಕ್ ಸೆಂಟರ್) ಅದರ ನಾಲ್ಕು




ವೇಲೆನ್ಸಿಗಳೂ ಚತುರ್ಮುಖಿಯ ನಾಲ್ಕು ಮೂಲೆಗಳ ಕಡೆ ಗುರಿ ಮಾಡಿಕೊಂಡಿವೆಯೆಂದು ನಂಬಲಾಗಿದೆ. ಇದರ ಆಧಾರದ ಮೇಲೆ ಲ್ಯಾಕ್ಟಿಕ್ ಆಮ್ಲದ ಅಣುವಿನ ಮಾದರಿಯನ್ನು ರೂಪಿಸಿಕೊಂಡರೆ ಅದು ಅಸಮಾಂಗವಾಗಿರುವುದನ್ನು ನೋಡಬಹುದು. ಒಂದಕ್ಕೊಂದು ಕನ್ನಡಿಯ ಬಿಂಬದಂತಿರುವ ಎರಡು ಲ್ಯಾಕ್ಟಿಕ್ ಆಮ್ಲದ ಅಣುಮಾದರಿಗಳು ಸಾಧ್ಯ. ನಿರೀಕ್ಷಿಸಿದಂತೆ ಲ್ಯಾಕ್ಟಿಕ್ ಆಮ್ಲದ ಎರಡು ಐಸೊಮರುಗಳು ನಮಗೆ ದೊರೆತಿವೆ. ಇವುಗಳ ಗುಣಲಕ್ಷಣಗಳಿಗಿರುವ ವ್ಯತ್ಯಾಸ ಅತ್ಯಲ್ಪ. (i) ಅವುಗಳ ಹರಳುಗಳೂ ಒಂದಕ್ಕೊಂದು ಕನ್ನಡಿಯ ಬಿಂಬದಂತಿರುತ್ತವೆ. (ii) ಜೀವಿಗಳ ಮೇಲೆ ಅವು ಕೆಲವು ವೇಳೆ ಭಿನ್ನ ಪರಿಣಾಮ ಬೀರುತ್ತವೆ. (iii) ಒಂದು ಐಸೊಮರ್ ಧ್ರುವೀಕೃತ ಬೆಳಕಿನ ಸಮತಲವನ್ನು ಬಲಕ್ಕೆ ತಿರುಗಿಸಿದರೆ, ಅಂದರೆ ದಕ್ಷಿಣಾವರ್ತವಾದರೆ (ಡೆಕ್ಸ್ಟ್ರೋರೊಟೇಟರಿ) ಇನ್ನೊಂದು ವಾಮಾವರ್ತ (ಲೇವೋ ರೋಟೇಟರಿ). ಇಂಥ ಒಂದು ಜೊತೆ ಐಸೊಮರುಗಳಿಗೆ ಎನಾನ್ಷಿಯೋಮರುಗಳು ಅಥವಾ ದ್ಯುತಿಪ್ರತೀಪಕಗಳು (ಆಪ್ಟಿಕಲ್ ಆಂಟಿಮೋಡ್ಸ್) ಎಂದು ಹೆಸರು.

ನಾಲ್ಕು ಬೇರೆ ಬೇರೆ ಪರಮಾಣು ಅಥವಾ ಪರಮಾಣುಪುಂಜಗಳಿಗೆ ಬಂಧಿತವಾಗಿರುವ ಕಾರ್ಬನ್ ಪರಮಾಣುವು, ಅಣುವನ್ನು ಅಸಮಾಂಗವಾಗಿಸುವುದರಿಂದ ಅಂಥ ಕಾರ್ಬನ್ ಪರಮಾಣುವನ್ನೇ ಸಾಮಾನ್ಯವಾಗಿ ಅಸಮಾಂಗ ಕಾರ್ಬನ್ ಪರಮಾಣು ಎನ್ನುವುದು ವಾಡಿಕೆ. ಒಂದು ಅಣು ಅಸಮಾಂಗವಾಗಲು ಅದರಲ್ಲಿ ಇಂಥ ಅಸಮಾಂಗ ಕಾರ್ಬನ್ ಪರಮಾಣು ಇರಲೇ ಬೇಕಾದುದಿಲ್ಲ. ಕೆಲವು ವೇಳೆ ಬೇರೆ ಕಾರಣಗಳಿಂದಲೂ ಅಣು ಅಸಮಾಂಗವಾಗಬಹುದು. ಅಂಥ ಒಂದು ನಿದರ್ಶನವನ್ನು ಇಲ್ಲಿ ಕೊಡಬಹುದು. ಒಂದು ಕಾರ್ಬನ್ ಪರಮಾಣು ಎರಡು ಕಡೆಯೂ ಎರಡು ಕಾರ್ಬನ್ ಪರಮಾಣುಗಳಿಗೆ




ದ್ವಿಬಂಧಗಳಿಂದ ಬಂಧಿತವಾಗಿದ್ದು ಆ ಎರಡು ಪರಮಾಣುಗಳು ಒಂದೊಂದೂ ಎರಡು ಭಿನ್ನ ಪರಮಾಣು ಪುಂಜಗಳಿಗೆ ಬಂಧಿತವಾಗಿದ್ದರೆ ಅಂಥ ಅಣು ಅಸಮಾಂಗವಾಗುತ್ತದೆ. ಪರಿಣಾಮವಾಗಿ ಅದೇ ರಚನೆ ಇರುವ ಆದರೆ ಒಂದಕ್ಕೊಂದು ಕನ್ನಡಿ ಬಿಂಬಗಳಂತಿರುವ ಎರಡು ಮಾದರಿ ಸಾಧ್ಯವಾಗುತ್ತದೆ.

ಒಂದೇ ಅಣುವಿನಲ್ಲಿ ಒಂದಕ್ಕಿಂತ ಹೆಚ್ಚು ಅಸಮಾಂಗ ಕಾರ್ಬನ್ ಪರಮಾಣುಗಳಿದ್ದರೆ ಎರಡಕ್ಕಿಂತ ಹೆಚ್ಚು ಸಂಖ್ಯೆಯ ದ್ಯುತಿ ಐಸೊಮರುಗಳು ಸಾಧ್ಯ. ಉದಾಹರಣೆಗೆ, ಎರಡು ಅಸಮಾಂಗ ಕಾರ್ಬನ್ ಪರಮಾಣುಗಳಿರುವ ಒಂದು ಅಣುವನ್ನು ತೆಗೆದುಕೊಳ್ಳೋಣ.




ಪರಮಾಣು ಮತ್ತು ಪರಮಾಣು ಪುಂಜಗಳ ಮೂರು ಆಯಾಮಗಳ ಹಂಚಿಕೆ ಬೇರೆಬೇರೆಯಾಗಿರುವ ಅದರ ಮಾದರಿಗಳನ್ನು ಸಮತಲ ಪ್ರಕ್ಷೇಪಣಗಳಿಂದ (ಪ್ಲೇನ್ ಪ್ರೊಜೆಕ್ಷನ್ಸ್) ಸೂಚಿಸಬಹುದಾದರೆ ಈ ಕೆಳಗೆ ಕಾಣುವ ನಾಲ್ಕು ಐಸೊಮರುಗಳು ಸಾಧ್ಯವಾಗುತ್ತವೆ.

| | | | |
|---|---|---|---|
| y | y | y | y |
| I | I | I | I |
| a-c-b | b-c-a | a-c-b | b-c-a |
| I | I | I | I |
| a-c-b | a-c-b | b-c-a | b-c-a |
| I | I | I | I |
| x | x | x | x |

ಇವುಗಳಲ್ಲಿ ಮೊದಲನೆಯದು ಮತ್ತು ನಾಲ್ಕನೆಯದು ಒಂದಕ್ಕೊಂದು ಕನ್ನಡಿಯ ಬಿಂಬಗಳು. ಆದ್ದರಿಂದ ಅವು ದ್ಯುತಿಪ್ರತೀಪಕಗಳು. ಒಂದು ದಕ್ಷಿಣಾವರ್ತವಾದರೆ ಇನ್ನೊಂದು ಅಷ್ಟೇ ಪ್ರಮಾಣದಲ್ಲಿ ವಾಮಾವರ್ತ. ಹಾಗೆಯೇ ಎರಡನೆಯದು ಮತ್ತು ಮೂರನೆಯದು ದ್ಯುತಿಪ್ರತೀಪಕಗಳು. ಇಲ್ಲಿ ಮೊದಲನೆಯದು ಮತ್ತು ಎರಡನೆಯದು ದ್ಯುತಿ ಐಸೊಮರುಗಳಾದರೂ (ಅಂದರೆ, ಒಂದೇ ರಚನೆಯಿದ್ದು, ದ್ಯುತಿಪಟುತ್ವ ಬೇರೆ ಬೇರೆ ಇರುವ ಐಸೊಮರುಗಳು) ಅವು ದ್ಯುತಿ ಪ್ರತೀಪಕಗಳಲ್ಲ. ಇಂಥ ಐಸೊಮರುಗಳಿಗೆ ಡಯಾಸ್ಟೀರಿಯೊ ಐಸೊಮರುಗಳೆಂದು ಹೆಸರು.

ಒಂದು ಅಣುವಿನಲ್ಲಿ $n$ ಅಸಮಾಂಗ ಕಾರ್ಬನ್ ಪರಮಾಣುಗಳಿದ್ದರೆ ಅಂಥ ಅಣುವಿನಲ್ಲಿ $2^n$ ಮೂರು ಆಯಾಮಗಳ ಮಾದರಿಗಳು ಸಾಧ್ಯ ಎಂದು ಲೆಕ್ಕಹಾಕಿ ತೋರಿಸಬಹುದು. ಅವುಗಳಲ್ಲಿ ದ್ಯುತಿಪ್ರತಿಪಕಗಳಾಗಿರುವ ಜೋಡಿಗಳನ್ನು ಲೆಕ್ಕಹಾಕಿದರೆ ಅದರ ಅರ್ಧಸಂಖ್ಯೆ ಜೋಡಿಗಳಿರುತ್ತವೆ. ಅಂದರೆ $2^{n-1}$ ಜೋಡಿ ದ್ಯುತಿ ಪ್ರತಿಪಕಗಳಿರುತ್ತವೆ.

**ಜ್ಯಾಮಿತೀಯ ಐಸೊಮೆರಿಸಂ :** ಎರಡು ಕಾರ್ಬನ್ ಪರಮಾಣುಗಳ ಮಧ್ಯೆ ಒಂದೇ ಬಂಧವಿದ್ದರೆ ಆ ಬಂಧವನ್ನೇ ಅಕ್ಷವಾಗಿ ಮಾಡಿಕೊಂಡು ಅಣು ತಿರುಗಲು ಸಾಧ್ಯ. ಅವೆರಡರ ನಡುವೆ ದ್ವಿಬಂಧ ಏರ್ಪಟ್ಟರೆ ಆ ತೆರನ ಭ್ರಮಣ ಸಾಧ್ಯವಾಗುವುದಿಲ್ಲ. ಆಗ ಕಾರ್ಬನ್ ವೇಲೆನ್ಸಿಗಳ ಚತುರ್ಮುಖೀಯ ಹಂಚಿಕೆಯ ಪರಿಣಾಮವಾಗಿ ಎರಡು ಕಾರ್ಬನ್




ಪರಮಾಣುಗಳೂ ದ್ವಿಬಂಧವೂ ಒಂದು ಸಮತಲದಲ್ಲಿದ್ದು ಆ ಪರಮಾಣುಗಳ ಉಳಿದ ಎರಡು ವೇಲೆನ್ಸಿಗಳು ಸಮತಲದ ಆ ಕಡೆ ಒಂದು, ಈ ಕಡೆ ಒಂದು ತಿರುಗಿಕೊಂಡಿರುತ್ತವೆ.




ಮೆಲೇಯಿಕ್ ಆಮ್ಲ ಫ್ಯುಮೆರಿಕ್ ಆಮ್ಲ

ಈಗ ಒಂದೊಂದು ಕಾರ್ಬನ್ ಪರಮಾಣುವೂ ಎರಡು ಬೇರೆ ಬೇರೆ ಪರಮಾಣು ಪುಂಜಗಳಿಗೆ ಬಂಧಿತವಾಗಿದ್ದರೆ ಎರಡು ಬಗೆಯ ಹಂಚಿಕೆ ಸಾಧ್ಯ. ದ್ವಿಬಂಧದ ಸಮತಲದ ಒಂದೇ ಪಕ್ಕದಲ್ಲಿ ಸಾಮ್ಯವಿರುವ ಪರಮಾಣು ಪುಂಜಗಳಿದ್ದರೆ ಅದಕ್ಕೆ ಸಿಸ್ ಐಸೊಮರ್ ಎಂದೂ ಆ ಪಕ್ಕದಲ್ಲೊಂದು ಈ ಪಕ್ಕದಲ್ಲೊಂದು ಇದ್ದರೆ ಟ್ರಾನ್ಸ್ ಐಸೊಮರ್ ಎಂದೂ ಹೆಸರು. ಮೆಲೇಯಿಕ್ ಆಮ್ಲ ಮತ್ತು ಫ್ಯುಮೆರಿಕ್ ಆಮ್ಲಗಳು ಇದಕ್ಕೆ ಒಳ್ಳೆಯ ನಿದರ್ಶನ.




R– ಸಿನ್ ಆಕ್ಸಿಮ್ R– ಆಂಟಿ ಆಕ್ಸಿಮ್

ಈ ಬಗೆಯ ಐಸೊಮೆರಿಸಂಗೆ ಜ್ಯಾಮಿತೀಯ ಐಸೊಮೆರಿಸಂ ಎಂದು ಹೆಸರು, ಕಾರ್ಬನ್–ನೈಟ್ರೊಜನ್ ದ್ವಿಬಂಧಗಳಿರುವ ಸಂಯುಕ್ತಗಳಲ್ಲೂ ಚಕ್ರೀಯ ಸಂಯುಕ್ತಗಳಲ್ಲೂ



ಸಿಸ್–1:2 ಡೈಕ್ಲೋರೋ ಸೈಕ್ಲೊಪೆಂಟೇನ್ ಟ್ರಾನ್ಸ್–1:2 ಡೈಕ್ಲೋರೋ ಸೈಕ್ಲೊಪೆಂಟೇನ್

ಈ ಬಗೆಯ ಐಸೊಮೆರಿಸಮನ್ನು ಕಾಣಬಹುದು. C=N ಬಂಧದ ಸಂಯುಕ್ತಗಳಲ್ಲಿ ಜ್ಯಾಮಿತೀಯ ಐಸೊಮರುಗಳನ್ನು ಸಿಸ್, ಟ್ರಾನ್ಸ್ ಎಂದು ಕರೆಯುವ ಬದಲು ಸಿನ್, ಆಂಟಿ ಎಂದು ಕರೆಯುವುದು ವಾಡಿಕೆ.

ಐಸೊಮೆರಿಸಂನ್ನು ಆರ್ಗ್ಯಾನಿಕ್ ಸಂಯುಕ್ತಗಳಲ್ಲಿ ವಿಶೇಷವಾಗಿ ಕಾಣಬಹುದು. ನಿಜ ಆದರೆ ಇನಾರ್ಗ್ಯಾನಿಕ್ ಸಂಯುಕ್ತಗಳಲ್ಲಿ ಐಸೊಮೆರಿಸಂ ಇಲ್ಲವೇ ಇಲ್ಲ ಎನ್ನುವಂತಿಲ್ಲ. ರಚನೀಯ ಐಸೊಮೆರಿಸಂ, ಸ್ಟೀರಿಯೊ ಐಸೊಮೆರಿಸಂ–ಎರಡರ ನಿದರ್ಶನಗಳೂ ಇನಾರ್ಗ್ಯಾನಿಕ್ ಸಂಯುಕ್ತಗಳಲ್ಲಿ ಕಂಡುಬಂದಿವೆ.

ಇನಾರ್ಗ್ಯಾನಿಕ್ ಸಂಯುಕ್ತಗಳಲ್ಲಿ ರಚನೀಯ ಐಸೊಮೆರಿಸಂ ನಿದರ್ಶನವಾಗಿ ಈ ಕೆಳಗಿನ ಸಂಯುಕ್ತಗಳನ್ನು ಕೊಡಬಹುದು.

$$\left[Co\left(NH_3\right)_5 Br\right]^{++} SO_4 = \qquad \text{ಮತ್ತು}$$

$$\left[Co\left(NH_3\right)_5 SO_4\right]^{+} Br^{-}$$

ಸ್ಟೀರಿಯೊ ಐಸೊಮೆರಿಸಮಿಗೆ ನಿದರ್ಶನವಾಗಿ ಕೆಳಗಿನ ಸಂಯುಕ್ತಗಳನ್ನು ಕೊಡಬಹುದು.




ಸಿಸ್




ಟ್ರಾನ್ಸ್

ಐಸೊಟೋಪುಗಳು ಇರುವ ಸಂಯುಕ್ತಗಳನ್ನು ಪರಿಶೀಲಿಸುವಾಗ ಯಾವುದೇ ಸಂಯುಕ್ತಗಳು ಐಸೊಮರುಗಳೇ ಅಲ್ಲವೇ ಎಂಬುದನ್ನು ನಿರ್ಧರಿಸಬೇಕಾದರೆ ಒಂದೇ ಧಾತುವಿನ ಬೇರೆ ಬೇರೆ ಐಸೊಟೋಪುಗಳನ್ನು ಬೇರೆ ಬೇರೆ ಧಾತುಗಳ ಪರಮಾಣುಗಳೆಂದೇ ಪರಿಗಣಿಸಬೇಕಾಗುವುದು. ಉದಾಹರಣೆಗೆ $CH_4$ ಮತ್ತು $CD_4$ಗಳು ಐಸೊಮರುಗಳಲ್ಲ. ಅವು ಬೇರೆ ಬೇರೆ ಸಂಯುಕ್ತಗಳೇ. ಅಂತೆಯೇ $CH_3.^{18}OH$ ಮತ್ತು $CH_3.^{16}OH$.

$$\overset{*}{}$$

$C_6H_5CHD.CH_3$ ರಲ್ಲಿ H ಮತ್ತು D ಗಳನ್ನು ಬೇರೆ ಬೇರೆ ಧಾತುಗಳ ಪರಮಾಣುಗಳೆಂದೇ ಪರಿಗಣಿಸಬೇಕಾಗುತ್ತದೆ. *ಈ ಗುರುತಿರುವ ಕಾರ್ಬನ್ ಪರಮಾಣು ಅಸಮಾಂಗ ಪರಮಾಣು. ಆದ್ದರಿಂದ ಈ ಸಂಯುಕ್ತ ದ್ಯುತಿ ಐಸೊಮೆರಿಸಮನ್ನು ಪ್ರದರ್ಶಿಸುತ್ತದೆ. ಅದರ ಎರಡು ದ್ಯುತಿ ಪ್ರತೀಕಗಳನ್ನೂ ಪ್ರತ್ಯೇಕಿಸಲಾಗಿದೆ. (ಜೆ.ಆರ್.ಎಲ್.; ಬಿ.ಸಿ.ಎಸ್.)

**ಐಸೊಯೆಟೀಸ್:** ಐಸೊಯೆಟೇಲ್ಸ್ ಗಣದ, ಅರವತ್ತು ಪ್ರಭೇದಗಳಿರುವ ಬೆಳ್ಳುಳ್ಳಿ ಗಿಡದಂತೆ ಕಾಣುವ ನೀರಿನಲ್ಲಿ ಅಥವಾ ಜವುಗು ಪ್ರದೇಶಗಳಲ್ಲಿ ಬೆಳೆಯುವ ಸಸ್ಯ. ನಮ್ಮ ದೇಶದಲ್ಲಿ ಐ. ಕೊರಮಂಡಲಿಯಾನ ಐ. ಸಹ್ಯಾದ್ರಿಯೈ, ಐ. ದೀಕ್ಷಿತಿಯೈ, ಐ. ಇಂಡಿಕ

ಐ. ಪಂಚಾನನ್ನೈ ಮತ್ತು ಐ. ಸಂಪತ್ಕುಮಾರಿನ್ನೈ ಎನ್ನುವ ಆರು ಪ್ರಭೇದಗಳು ಬೆಳೆಯುತ್ತವೆ. ಐಸೊಯೆಟೀಸ್ ಸಸ್ಯವನ್ನು ಭೂಮಿಯ ಒಳಗೆ ಬೆಳೆಯುವ ಎರಡು ಮೂರು ಹಾಲೆಗಳಂತೆ (ಲೋಬ್ಸ್) ಹರಡಿರುವ ಗೆಡ್ಡೆ, ಅದರ ಸಂದುಗಳ ಕೆಳಭಾಗಗಳಿಂದ ಬೆಳೆಯುವ ಬೇರುಗಳು ಮತ್ತು ಗೆಡ್ಡೆಯ ಮೇಲ್ಭಾಗದಲ್ಲಿ 10–50 ಸೆಂಮೀಗಳ ಉದ್ದ ಬೆಳೆಯುವ ಗರಿಕೆ ಹುಲ್ಲಿನಂತೆ ಕಾಣುವ ಅಲೈಂಗಿಕ ಸಂತಾನ ಕಣಗಳ (ಸ್ಪೋರ್ಸ್) ಉತ್ಪಾದಕ ಎಲೆಗಳು ಎಂಬ ಮೂರು ಭಾಗಗಳಾಗಿ ವಿಂಗಡಿಸಬಹುದು. ಗೆಡ್ಡೆಯ ಬೆಳವಣಿಗೆ ಬಲು ನಿಧಾನ. ಇದು ಮೇಲ್ಭಾಗದಲ್ಲಿ ಎಲೆಗಳನ್ನೂ ಕೆಳಭಾಗದಲ್ಲಿ ಬೇರುಗಳನ್ನೂ ಉತ್ಪಾದಿಸುವುದರಿಂದ ಕೆಲವು ಸಸ್ಯಶಾಸ್ತ್ರಜ್ಞರು ಇದನ್ನು ಒಂದು ರೀತಿಯ ಮಿಶ್ರಲಾಂಡವೆಂದು ಅಭಿಪ್ರಾಯಪಡುತ್ತಾರೆ. ಗೆಡ್ಡೆಯ ಮೇಲ್ಭಾಗಕ್ಕೆ ರೈಸೊಮಾರ್ಫ್ ಎಂದೂ ಕೆಳಭಾಗಕ್ಕೆ ರೈಸೊಫೋರ್ ಎಂದೂ ಹೆಸರುಗಳಿವೆ. ಅಲ್ಲದೆ ಗೆಡ್ಡೆಯ ಅಂಗರಚನೆಯನ್ನೂ (ಅನಾಟಮಿ) ಪರೀಕ್ಷಿಸಿದಾಗ ಅದು ಮೇಲ್ಭಾಗದಲ್ಲಿ ಕಾಂಡದಂತೆಯೂ ಕೆಳಭಾಗದಲ್ಲಿ ಬೇರಿನಂತೆಯೂ ಕಾಣುವುದರಿಂದ ಮಿಶ್ರಕಾಂಡದ ಅಭಿಪ್ರಾಯವನ್ನು ಒಪ್ಪಬಹುದು.

**ಬೇರಿನ ಅಂಗರಚನೆ:** ನೀರು ಮತ್ತು ಆಹಾರ ಸರಬರಾಜು ಅಂಗಾಂಶಗಳು (ವ್ಯಾಸ್ಕ್ಯುಲರ್ ಟಿಶ್ಯೂಸ್) ಮಧ್ಯಭಾಗದಲ್ಲಿರದೆ ಒಂದು ಪಕ್ಕದಲ್ಲಿ C ಆಕಾರದಲ್ಲಿರುತ್ತವೆ. ಈ ಅಂಗಾಂಶದ ಎದುರು ಭಾಗದಲ್ಲಿ ಒಂದು ದೊಡ್ಡ ಕುಹರ (ಕ್ಯಾವಿಟಿ) ಇದೆ. ಈ ಅಂಗರಚನೆ ಸ್ಟಿಗ್‌ಮೇರಿಯ ಎಂಬ ಪ್ರಾಚೀನ ಸಸ್ಯದ ಬೇರಿನ ಅಂಗರಚನೆಯನ್ನು ಹೋಲುತ್ತದೆ. ಗೆಡ್ಡೆಯ ಹಾಲೆಗಳ ತುದಿ ಮತ್ತು ಸಂದು ಪ್ರದೇಶಗಳಲ್ಲಿರುವ ವರ್ಧನ ಅಂಗಾಂಶಗಳ (ಮೆರಿಸ್ಟಮ್ಯಾಟಿಕ್ ಟಿಶ್ಯೂಸ್) ಪ್ರಸರಣೆಯಿಂದ ಬೇರುಗಳ ಉತ್ಪಾದನೆಯಾಗುತ್ತದೆ.

ಅಲೈಂಗಿಕ ಸಂತಾನಕಣ ಉತ್ಪಾದಕ ಎಲೆಗಳು (ಸ್ಪೋರೋಫಿಲ್ಲುಗಳು) ಉದ್ದವಾಗಿವೆ. ಇವುಗಳ ಕೆಳಭಾಗ ಸ್ವಲ್ಪ ಅಗಲವಾಗಿ ಹೂಜಿ ಆಕಾರದಲ್ಲಿದೆ. ಆ ಭಾಗದಲ್ಲಿ ಸಣ್ಣ ಸಂತಾನಕಣಗಳ ಚೀಲ ಮತ್ತು ದೊಡ್ಡ ಸಂತಾನಕಣ ಚೀಲಗಳು ಉತ್ಪತ್ತಿಯಾಗುವುದರಿಂದ ಅಂಥ ಎಲೆಗಳಿಗೆ ಕ್ರಮವಾಗಿ ಸಣ್ಣಸಂತಾನಕಣ ಉತ್ಪಾದಕ ಎಲೆಗಳು (ಮೈಕ್ರೋಸ್ಪೋರೋಫಿಲ್ಸ್) ಮತ್ತು ದೊಡ್ಡ ಸಂತಾನಕಣ ಉತ್ಪಾದಕ ಎಲೆಗಳು (ಮೆಗಸ್ಪೋರೋಫಿಲ್ಸ್) ಎಂದು ಹೆಸರು. ಸಂತಾನಕಣ ಚೀಲದ ಮೇಲ್ಭಾಗದಲ್ಲಿ Δ ಆಕಾರದ ಒಂದು ಸಣ್ಣ ಎಲೆಯಂಥ ಅಂಗವಿದೆ. ಇದಕ್ಕೆ ಲಿಗ್ಯೂಲ್ ಎಂದು ಹೆಸರು. ಇದರ ಕೆಳಭಾಗದಿಂದ ಬೆಳೆದ ಒಂದು ತೆಳುಪೊರೆ ಸಂತಾನಕಣ ಚೀಲವನ್ನು ಮುಚ್ಚಿಕೊಂಡಿರುತ್ತದೆ. ಈ ತೆಳುಪೊರೆಯ ಹೆಸರು ವೀಲಮ್. ಎಲೆಗಳ ಅಡ್ಡಸೀಳಿಕೆಗಳನ್ನು ಪರೀಕ್ಷಿಸಿದರೆ, ಮಧ್ಯದಲ್ಲಿ ಆಹಾರ–ನೀರು ಸರಬರಾಜು ಅಂಗಾಂಶ ಅಥವಾ ನಾಳಕೂರ್ಚ ಮತ್ತು ನಾಲ್ಕು ಮೂಲೆಗಳಲ್ಲಿ ನಾಲ್ಕು ವಾಯು ಕುಹರಗಳು ಕಾಣುತ್ತವೆ. ನೀರಿನ ಒಳಗೆ ಬೆಳೆಯುವ ಅಥವಾ ಅಂತರ್ಜಲ ಪ್ರಭೇದದ ಎಲೆಗಳಲ್ಲಿ ಹೊರಚರ್ಮ (ಎಪಿಡರ್ಮಿಸ್) ಅಂಗಾಂಶದಲ್ಲಿ ವಾಯುದ್ವಾರ ಇರುವುದಿಲ್ಲ. ಸಾಮಾನ್ಯವಾಗಿ ಅತ್ಯಂತ ಹೊರಸುತ್ತುಗಳಲ್ಲಿರುವ ಎಲೆಗಳು ಸ್ಪೊರಾಂಜಿಯಂಗಳನ್ನು ಉತ್ಪಾದಿಸುವುದಿಲ್ಲ. ಒಳಸುತ್ತುಗಳಲ್ಲಿ ಮೊದಲು ಮೆಗಸ್ಪೋರೋಫಿಲ್ಲುಗಳಿದ್ದು ಅವು ಮೈಕ್ರೋಸ್ಪೋರೋಫಿಲ್ಲುಗಳನ್ನು ಸುತ್ತುವರಿದುಕೊಂಡಿರುತ್ತವೆ. ಸ್ಪೊರಾಂಜಿಯಮುಗಳು ಹುರುಳಿ ಬೀಜದ ಆಕಾರದಲ್ಲಿರುವುವು ಮತ್ತು ವ್ಯಾಸ್ಕ್ಯುಲಾರ್ ಸಸ್ಯಗಳಲ್ಲಿ ಕಂಡುಬರುವ ಇತರ ಎಲ್ಲ ಸ್ಪೊರಾಂಜಿಯಮುಗಳಿಗಿಂತ ಅತ್ಯಂತ ದೊಡ್ಡ ಸ್ಪೋರಾಂಜಿಯಮುಗಳಾಗಿರುವುವು. ಸ್ಪೋರಾಂಜಿಯಮಿನ ಒಳಭಾಗದಲ್ಲಿ ಟ್ರೆಬ್ಯಾಕ್ಯುಲೇ ಎಂಬ ಅಡ್ಡ ಗೋಡೆಗಳಿವೆ. ಸ್ಪೋರಾಂಜಿಯಮುಗಳು ಕೆಲವು ವಿಶಿಷ್ಟ ಕೋಶಗಳ ವಿಭಜನೆಗಳಿಂದ ಉತ್ಪತ್ತಿಯಾಗಿ ಮುಂದೆ ಅಲೈಂಗಿಕ ಸಂತಾನಕಣಗಳನ್ನು ಉತ್ಪಾದಿಸುತ್ತವೆ. ಇಂಥ ಕೋಶಗಳಿಗೆ ಅಲೈಂಗಿಕ ಸಂತಾನಕಣ ಉತ್ಪಾದಕಕೋಶಗಳು (ಸ್ಪೋರಾಂಜಿಯಲ್ ಇನಿಷಿಯಲ್ಸ್) ಎಂದು ಹೆಸರು.

ಸ್ಪೋರಾಂಜಿಯಲ್ ಇನಿಷಿಯಲಿನ ವಿಭಜನೆಗಳಿಂದ ಹೊರಭಾಗದಲ್ಲಿ ಸ್ಪೋರಾಂಜಿಯಮಿನ ಗೋಡೆ ಮತ್ತು ಒಳಭಾಗದಲ್ಲಿ ಸಂತಾನಕಣ ತಾಯಿಕೋಶಗಳು (ಸ್ಪೋರ್‌ಮದರ್ ಸೆಲ್ಸ್) ಉತ್ಪತ್ತಿಯಾಗುತ್ತವೆ. ಇವುಗಳಲ್ಲಿ ಮೈಕ್ರೊಸ್ಪೋರ್ ತಾಯಿಕೋಶಗಳು ಮತ್ತು ಮೆಗಾಸ್ಪೋರ್ ತಾಯಿಕೋಶಗಳು ಎಂಬ ಎರಡು ರೀತಿಯ ಕೋಶಗಳಿವೆ. ಮೈಕ್ರೊಸ್ಪೊರಾಂಜಿಯಮಿನಲ್ಲಿ ಸುಮಾರು 1 ಲಕ್ಷದಿಂದ 10 ಲಕ್ಷ ಮೈಕ್ರೊಸ್ಪೋರುಗಳು ಮತ್ತು ಮೆಗಸ್ಪೋರಾಂಜಿಯುಮಿನಲ್ಲಿ ಕೇವಲ 30–50 ಮೆಗಸ್ಪೋರುಗಳು ಉತ್ಪತ್ತಿಯಾಗುವುವು. ಈ ಎರಡು ರೀತಿಯ ಸಂತಾನಕಣಗಳು (ಸ್ಪೋರ್ಸ್) ತಮ್ಮ ಬೆಳವಣಿಗೆಯಲ್ಲಿ 4 ರಂತೆ ಒಟ್ಟಾಗಿ ಸೇರಿ ಚತುಸ್ಸಂತಾನಕಣಗಳಾಗುತ್ತವೆ (ಟೆಟ್ರಾಡ್ಸ್ ಆಫ್ ಸ್ಪೋರ್ಸ್). ಸಂತಾನಕಣಗಳು ಗಾಳಿ ಮತ್ತು ನೀರುಗಳ ಮೂಲಕ ಪ್ರಸಾರವಾಗುತ್ತವೆ. ಮೈಕ್ರೊಸ್ಪೋರ್ ಮೊಳೆತು ಗಂಡು ಗ್ಯಾಮೀಟೊಫೈಟ್ ಸಸ್ಯವನ್ನು ಉತ್ಪಾದಿಸುತ್ತದೆ. ಈ ಸಸ್ಯ ಮೈಕ್ರೊಸ್ಪೋರಿನ ಒಳಗೆ ಬೆಳೆಯುವುದು ಮತ್ತು 256 ಗಂಡು ಗ್ಯಾಮೀಟುಗಳನ್ನು ಉತ್ಪಾದಿಸುತ್ತದೆ. ಪ್ರತಿ ಗ್ಯಾಮೀಟಿನಲ್ಲಿಯೂ ಅನೇಕ ಸ್ಪಂದನ ಲೋಮಾಂಗಗಳಿವೆ (ಸಿಲಿಯಾ). ಅವುಗಳ ಆಕಾರ ಕೊಕ್ಕೆಯಂತೆ. ಮೆಗಸ್ಪೋರ್ ಮೊಳೆತು ಹೆಣ್ಣು ಗ್ಯಾಮೀಟೊಫೈಟ್ ಸಸ್ಯವಾಗಿ ಬೆಳೆಯುತ್ತದೆ. ಈ ಸಸ್ಯ ಒಂದು ದೊಡ್ಡ ಅಂಡವನ್ನು ಉತ್ಪಾದಿಸುತ್ತದೆ. ನೀರಿನ ಮೂಲಕ ಗಂಡು ಗ್ಯಾಮೀಟು ಅಂಡದ ಜೊತೆ ಬೆರೆತಾಗ ಗರ್ಭಾಂಕುರವಾಗುತ್ತದೆ. ಈ ಭ್ರೂಣ ಬೆಳೆದು ಹೊಸ ಐಸೊಯೆಟೀಸ್ ಮೊಳಕೆಯಾಗುತ್ತದೆ. ಮೊಳಕೆ ಏಕದಳ ಸಸ್ಯದಂತೆ ಕಾಣುತ್ತದೆ.

*

**ಐಸೋಲೆಪಿಸ್ ಗ್ರಾಸಿಲಿಸ್:** ಸೈಪರೇಸಿ ಕುಟುಂಬದ ಐಸೋಲೆಪಿಸ್ ಜಾತಿಯ ಒಂದು ಪ್ರಭೇದ. ಹೆಚ್ಚು ತೇವಾಂಶವಿರುವ ಪ್ರದೇಶಗಳಲ್ಲಿ ಹುಲ್ಲಿನಂತೆ ಬೆಳೆಯುವ ಒಂದು ಅಲಂಕಾರಸಸ್ಯ. ಇದನ್ನು ಉದ್ಯಾನವನಗಳಲ್ಲೂ ಹೆಚ್ಚು ತೇವಾಂಶವಿರುವ ಇತರ ಸ್ಥಳಗಳ ಅಂಚುಗಳಲ್ಲೂ ಬೆಳೆಸುತ್ತಾರೆ. ಕೆಲವು ಸಾರಿ ಇದನ್ನು ಕುಂಡಗಳಲ್ಲೂ ಬೆಳೆಸಿ ಸಮಾರಂಭಗಳಲ್ಲಿ ಅಲಂಕಾರವಸ್ತುಗಳನ್ನಾಗಿ ಬಳಸುವುದುಂಟು.

ಇದು 1'–1½' ಎತ್ತರ ಬೆಳೆಯುವ ಬಹುವಾರ್ಷಿಕ ಪೂರ್ಣಸಸಿ. ಕಾಂಡದಲ್ಲಿ ಗಿಣ್ಣುಗಳಿವೆ. ನಡುಗಿಣ್ಣು ಟೊಳ್ಳು. ತುದಿಯಲ್ಲಿ ತುರಾಯಿ ಆಕಾರದ ಹೂಗೊಂಚಲಿದೆ. ಸಸ್ಯ ಎಳೆಯದಾಗಿದ್ದಾಗ ನೇರವಾಗಿ ನಿಂತಿದ್ದು, ವಯಸ್ಸಾದ ಅನಂತರ ಬಾಗುತ್ತದೆ. ಕೆಲವು ಸಸ್ಯಗಳಲ್ಲಿ ಎಲೆಗಳು ಇರುವುದಿಲ್ಲ, ಇದ್ದರೂ ಬಹು ಚಿಕ್ಕವಾಗಿರುತ್ತವೆ. ಸಸ್ಯದ ತುದಿಯಲ್ಲಿ ಅನೇಕ ಚೂಪು ತುದಿಯ ಸ್ಪೈಕ್ ಹೂಗೊಂಚಲುಗಳಿವೆ. ಅವುಗಳ ಮಧ್ಯೆ ಚಿಕ್ಕದಾಗಿರುವ ಉಪಎಲೆಗಳು ಇವೆ. (ಡಿ.ಎಂ.)

**ಐಸೊಲ್ಯೂಸಿನ್:** ಆರು ಇಂಗಾಲಗಳನ್ನುಳ್ಳ ಒಂದು α–ಅಮೈನೋ ಆಮ್ಲ ಮತ್ತು ಲ್ಯೂಸಿನ್ನಿನ ಐಸೋಮರ್. ಐಸೊಲ್ಯೂಸಿನ್ನಿನ ಅಣುವಿನಲ್ಲಿ ಎರಡು ಅಸಮಾಂಗ (ಅಸಿಮೆಟ್ರಿಕ್) ಇಂಗಾಲಗಳಿರುವುದರಿಂದ ನಾಲ್ಕು ಸ್ಥಾನೀಯ (ಸ್ಪೇಶಿಯಲ್) ಐಸೊಮರುಗಳು ಸಾಧ್ಯ. ಅವುಗಳಲ್ಲಿ ಎರಡು D–ಮತ್ತು L–ಐಸೊಲ್ಯೂಸಿನ್. ಉಳಿದವೆರಡು D–ಮತ್ತು L–ಅಲ್ಲೊಐಸೊಲ್ಯೂಸಿನ್ ಅಣುಗಳು.

$$\begin{array}{l} CH_3\text{-}CH_2\text{-}CH\text{-}CH\text{-}COOH \\ \qquad\qquad\ \ |\qquad | \\ \qquad\quad\ \ CH_3\ \ NH_2 \end{array}$$

1904ರಲ್ಲಿ ಏರ್‌ಲಿಕ್ ಎಂಬ ವಿಜ್ಞಾನಿ (**ನೋಡಿ– ಏರ್ಲಿಕ್,–ಪಾಲ್**) ಈ ಆಮ್ಲವನ್ನು ಮೊದಲ ಬಾರಿಗೆ ಬೇಟಿ ಕಾಕಂಬಿಯಿಂದಲೂ (ಮೊಲಾಸ್ಸಸ್) ಅನಂತರ ರಕ್ತದಲ್ಲಿನ ಪ್ರೋಟೀನಿನಿಂದಲೂ ಬೇರ್ಪಡಿಸಿದ. 1907ರಲ್ಲಿ ಅದರ ರಚನೆಯನ್ನೂ ಸಾಧಿಸಿದ. 1931ರ ವೇಳೆಗೆ ಈ ಸಂಯುಕ್ತದ ಸಂಯೋಜನೆಯೂ ನಾಲ್ಕು ಬಗೆಯ ಐಸೊಮರುಗಳ ಬೇರ್ಪಡೆಯೂ ಹಲವಾರು ವಿಜ್ಞಾನಿಗಳ ಪ್ರಯತ್ನದಿಂದ ಸಾಧ್ಯವಾಯಿತು.

ಪ್ರಕೃತಿಯಲ್ಲಿ ಲ್ಯೂಸಿನ್ ಮತ್ತು ಐಸೊಲ್ಯೂಸಿನುಗಳು ಒಟ್ಟಾಗಿ ದೊರೆಯುತ್ತವೆ. ಆದರೆ ಐಸೊಲ್ಯೂಸಿನಿನ ತಾಮ್ರಲವಣ ಲ್ಯೂಸಿನಿನ ತಾಮ್ರಲವಣಕ್ಕಿಂತ ನೀರಿನಲ್ಲಿ ಹೆಚ್ಚು ದ್ರವ್ಯವಾದ್ದರಿಂದ (ಸಾಲ್ಯುಬಲ್) ಅಂಶತಃ ಸ್ಫಟಿಕೀಕರಣ (ಫ್ರಾಕ್ಷನಲ್ ಕ್ರಿಸ್ಟಲೈಸೇಷನ್) ವಿಧಿಯಿಂದ ಬೇರ್ಪಡಿಸಬಹುದು. D– ಮತ್ತು L– ಐಸೊಮರುಗಳ ಮಿಶ್ರಣಗಳನ್ನು ಬೇರ್ಪಡಿಸಲು ನಿರ್ದಿಷ್ಟ ಏಕಾಣುಜೀವಿಗಳನ್ನೂ (ಬ್ಯಾಕ್ಟೀರಿಯ) ನಿರ್ದಿಷ್ಟ ತಳಿಗಳ ಯೀಸ್ಟನ್ನೂ ಉಪಯೋಗಿಸಲಾಗುತ್ತದೆ.

L-ಐಸೊಲ್ಯೂಸಿನಿನ ಕೊರತೆಯಿಂದ ಪ್ರಾಣಿಗಳ ರಕ್ತರಸದಲ್ಲಿನ (ಪ್ಲಾಸ್ಮಾ) ಪ್ರೋಟೀನ್ ಅಂಶದಲ್ಲಿ ವೈಪರೀತ್ಯವಾಗುತ್ತದೆಂದು ತಿಳಿದುಬಂದಿದೆ. ಐಸೊಲ್ಯೂಸಿನ್ ಅಥವಾ ಅದನ್ನುಳ್ಳ ಪ್ರೋಟೀನುಗಳ ಕೊಡುಗೆಯಿಂದ ಈ ವೈಪರೀತ್ಯ ಅಥವಾ ಕೊರತೆ ತುಂಬಿ ರಕ್ತರಸದಲ್ಲಿ ಪ್ರೋಟೀನ್ ಅಂಶ ವೃದ್ಧಿಯಾಗಿ ಸಹಜಸ್ಥಿತಿಯ ಮಟ್ಟವನ್ನು ಮುಟ್ಟುತ್ತದೆ. (ಕೆ.ಟಿ.ಎಸ್.)

**ಐಸ್ಯಾಕ್:** ಪ್ರಶ.ಪೂ. 1500. ಏಬ್ರಹಾಂ ಪ್ರವಾದಿಯ ಎರಡನೆಯ ಮಗ. ತಂದೆಯ ಅನಂತರ ಹೀಬ್ರೂ ಜನತೆಗೆ ಪ್ರವಾದಿ ನಾಯಕನಾದವ. ತಂದೆ ಏಬ್ರಹಾಂಗೆ ನೂರು ವರ್ಷ ತಾಯಿ ಸಾರಾಗೆ ತೊಂಬತ್ತು ವರ್ಷ ವಯಸ್ಸಾದಾಗ ಈತ ಜನಿಸಿದ. ಇಸ್ಲಾಮಿ ಭಾಷೆಯಲ್ಲಿ ಇಸ್‌ಹಾಕ್ ಎಂದು ಈತನ ಹೆಸರು. ಈ ಹೆಸರಿಗೆ ನಗು ಎಂದರ್ಥ. ಅಂಥ ವೃದ್ಧಾಪ್ಯದಲ್ಲಿ ತಮಗೆ ಮಕ್ಕಳಾಗುತ್ತದೆಂಬ ವಾರ್ತೆ ಬಂದಾಗ ತಂದೆ – ತಾಯಿಗಳು ದೊಡ್ಡದಾಗಿ ನಕ್ಕರೆಂದೂ ಹುಟ್ಟಿದ ಮಗುವಿಗೆ ನಗು ಎಂದೇ ಹೆಸರಿಟ್ಟರೆಂದೂ ಕಥೆ. ದೇವರು ಏಬ್ರಹಾಂನ ಸತ್ವಪರೀಕ್ಷೆ ಮಾಡಲು ಚಿಕ್ಕಮಗುವನ್ನೇ ಬಲಿಯಾಗಿ ಕೇಳಿದನೆಂದೂ ಅದಕ್ಕೆ ಸಿದ್ಧನಾದಾಗ ತಾನೇ ಅದನ್ನು ಕನಿಕರದಿಂದ ತಪ್ಪಿಸಿದನೆಂದೂ ಹಳೆಯ ಒಡಂಬಡಿಕೆಯಲ್ಲಿ ಹೇಳಲಾಗಿದೆ. ಹಾರನ್ ಪ್ರದೇಶದ ರೆಬೆಕ್ ಎಂಬುವಳನ್ನು ಐಸ್ಯಾಕ್ ಮದುವೆಯಾದ. ಅವನಿಗೆ ಇಬ್ಬರು ಮಕ್ಕಳಾದರು. ಎರಡನೆಯವನಾದ ಯಾಕೂಬನು (ಜೇಕಬ್) ಯೆಹೂದಿ ಮನೆತನದ ಮೂಲಪುರುಷನಾದ. ಮೋಸಸ್ (ಮೂಸಾ), ಸಾಲೊಮನ್ (ಸುಲೇಮಾನ್), ಡೇವಿಡ್ (ದಾವೂದ್) ಇವರೆಲ್ಲ ಈ ವಂಶದವರೇ. (ಎಸ್.ಎ.ಟಿ.ಕೆ.)

**ಐಸ್‌ಲೆಂಡ್:** ಅಟ್ಲಾಂಟಿಕ್ ಸಾಗರದ ಶೀತವಲಯದ ದಕ್ಷಿಣಕ್ಕಿರುವ ಒಂದು ಸ್ವತಂತ್ರ ದ್ವೀಪ. ಇದು ಒಂದು ದೊಡ್ಡ ದ್ವೀಪ ಮತ್ತು ನೂರಾರು ಸಣ್ಣ ಪುಟ್ಟ ದ್ವೀಪಗಳ ಸಮೂಹವಾಗಿದೆ. ಉತ್ತರ ಅಮೆರಿಕ ಖಂಡದ ಒಂದು ದೇಶವಾಗಿದ್ದು, ಗ್ರೀನ್ ಲೆಂಡ್‌ನಿಂದ 300 ಕಿಮೀ ದೂರದ ಆಗ್ನೇಯ ಭಾಗದಲ್ಲಿದೆ. ಪಶ್ಚಿಮದಲ್ಲಿ ನಾರ್ವೆಯಿಂದ 1000 ಕಿಮೀ ದೂರದಲ್ಲಿದ್ದರೆ ಉತ್ತರದಲ್ಲಿ ಸ್ಕ್ಯಾಂಡಿನೇವಿಯದಿಂದ 800 ಕಿಮೀ ದೂರದಲ್ಲಿದೆ.

ಈ ದ್ವೀಪ ಸಮೂಹ ಒಟ್ಟು 1,03,000 ಚ.ಕಿಮೀ ವಿಸ್ತೀರ್ಣವಾಗಿದ್ದು ಉ.ಅ. $63^{0}24'–66^{0}32'$ ಹಾಗೂ ಪ.ರೇ. $13^{0}30'–24^{0}30'$ ಗಳ ನಡುವೆ ಹಬ್ಬಿದೆ.

ಮೇಲ್ಮೈ ಲಕ್ಷಣ: ಶೀತವಲಯದ ದ್ವೀಪವಾಗಿದ್ದು, ಅಗ್ನಿ ಪರ್ವತದಿಂದ ಹೊರಟ ಲಾವಾ ಊಟೆಗಳಿಂದ ನಿರ್ಮಾಣವಾಗಿದ್ದು ಹಿಮದಿಂದಾವೃತವಾಗಿದೆ. ತೀರಪ್ರದೇಶಗಳು ಮಾತ್ರ ವಾಸಿಸಲು ಯೋಗ್ಯವಾಗಿವೆ. ಐಸ್ಲೆಂಡ್ ತುಂಬಾ ಕುತೂಹಲಕಾರಿಯಾದ ನಾಡು. ಇಲ್ಲಿನ ಬಂಡೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳಿರುವುದರಿಂದ ನೀರನ್ನು ಅವು ಉಳಿಸಿಕೊಳ್ಳಲಾರವು. ಹೀಗಾಗಿ ಬಂಡೆಗಳ ವಿಸ್ತಾರ ಪ್ರದೇಶದಲ್ಲಿ ಏನೂ ಬೆಳೆಯದು. 200 ಕ್ಕೂ ಹೆಚ್ಚು ಅಗ್ನಿ ಪರ್ವತಗಳಿವೆ. ಟ್ಯನಡೀಲಾ (1695 ಮೀ), ಸ್ನೂಕಾಸ್ (2119 ಮೀ) ಎತ್ತರದ ಅಗ್ನಿ ಪರ್ವತಗಳಾಗಿವೆ. ಐಸ್ಲೆಂಡ್‌ನಲ್ಲಿ ಬಿಸಿನೀರಿನ ಊಟೆಗಳು, ಖನಿಜ ಚಿಲುಮೆಗಳು, ಬಗೆ ಬಗೆಯ ಪರ್ವತಗಳು ಕಂಡು ಬರುತ್ತವೆ. ತೇಜೋರ್ಸಿ, ಜೋಲೆ, ಉಂಡಾ, ಫ್ಲಿಜೊಯಿಟ್ ಮುಂತಾದವು ಇಲ್ಲಿನ ಪ್ರಮುಖ ನದಿಗಳು.




ವಾಯುಗುಣ: ಇದು ಶೀತವಲಯದ ವಾಯುಗುಣ ಹೊಂದಿದೆ. ಆದರೆ ತೀರಪ್ರದೇಶದ ಹಿತಕರವಾಗಿದ್ದು ಬೇಸಗೆಯಲ್ಲಿ ಗಲ್ಫ್ ಸ್ಟ್ರೀಮ್ ಉಷ್ಣೋದಕ ಪ್ರವಾಹ ವಿರುವುದರಿಂದ ಬೆಚ್ಚಗಿರುತ್ತದೆ. ಆದ್ದರಿಂದ ತೀರ ಪ್ರದೇಶದಲ್ಲಿ ವಾರ್ಷಿಕ ಉಷ್ಣಾಂಶ $10^{o}$ ಸೆ, ಚಳಿಗಾಲದಲ್ಲಿ $1^{o}$ಸೆ ಕಂಡುಬರುತ್ತದೆ. ಆದರೆ ಒಳ ಪ್ರದೇಶಗಳಲ್ಲಿ $-10^{o}$ಸೆ ಗಿಂತ ಕಡಿಮೆ ಉಷ್ಣಾಂಶವಿದ್ದು ಹಿಮಭರಿತವಾಗಿವೆ.

ಸಸ್ಯವರ್ಗ: ತೀರಪ್ರದೇಶದಲ್ಲಿ ಬೇಸಗೆಯಲ್ಲಿ ಮಾತ್ರ ಲಿಲ್ಲೀ, ಪಾಚಿ, ಶಿಲಾವಲ್ಕ, ಟಚ್–ಮಿ–ನಾಟ್ ಸಸ್ಯಗಳ ಜೊತೆಗೆ ಕೆಲವು ಸಣ್ಣಪುಟ್ಟ ಪೊದೆಜಾತಿಗೆ ಸೇರಿದ ಸಸ್ಯವರ್ಗ, ಸ್ವಲ್ಪ ಹುಲ್ಲುಗಾವಲು ಕಂಡುಬರುತ್ತವೆ. ತೀರಪ್ರದೇಶದಲ್ಲಿ ಕೆಲವು ಕಡೆ ಓಕ್, ನೀಪಲ್, ಪೈನ್ ಮರಗಳು ಕಂಡುಬರುತ್ತವೆ.

ಪ್ರಾಣಿಗಳು: ಸದಾ ಹಿಮ ಬೀಳುವುದರಿಂದ ಹಿಮನದಿ, ಹಿಮಸಾರಂಗ, ಹಿಮಕರಡಿ, ಹಿಮನಾಯಿ, ಹಿಮತೋಳ, ಕಸ್ತೂರಿ ಮೃಗ ಹೆಚ್ಚಾಗಿ ಕಂಡುಬರುತ್ತವೆ.

ವ್ಯವಸಾಯ: 19ನೆಯ ಶತಮಾನದವರೆಗೆ ಯಾವುದೇ ಚಕ್ರದ ಬಂಡಿಗಳಿರುವ ವಾಹನಗಳ ಪರಿಚಯವಿರಲಿಲ್ಲ. ಆದರೆ ಇಂದು ಅಮೆರಿಕನ್, ಕೆನಡಿಯನ್, ಯುರೋಪಿಯನ್ನರಿಂದಾಗಿ ವ್ಯವಸಾಯ ಸ್ವಲ್ಪ ಅಭಿವೃದ್ಧಿ ಹೊಂದಿದೆ. ತೀರಪ್ರದೇಶಗಳು ಆಲೂಗೆಡ್ಡೆ, ಈರುಳ್ಳಿ, ಹೂವುಗಳು, ತರಕಾರಿಗಳನ್ನು ಸ್ವಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ. ಇಲ್ಲಿನ ಮಣ್ಣು ಫಲವತ್ತಾಗಿಲ್ಲದಿರುವುದರಿಂದ ವ್ಯವಸಾಯ ಕಷ್ಟ.

ಪಶುಸಂಗೋಪನೆ: ತೀರ ಪ್ರದೇಶಗಳಲ್ಲಿ, ಹುಲ್ಲುಗಾವಲುಗಳಲ್ಲಿ ಕುರಿ, ದನ, ಹಂದಿ, ಹಿಮಸಾರಂಗ, ಕುದುರೆಗಳನ್ನು ಸಾಕುತ್ತಾರೆ. ಒಳ ಪ್ರದೇಶಗಳಲ್ಲಿ ಹಿಮ ಸಾರಂಗವನ್ನು ಆಹಾರ, ವಸತಿಗಾಗಿ, ತೈಲಕ್ಕಾಗಿ, ಉಡುಪುಗಳಿಗಾಗಿಯೂ ಸಾಕುತ್ತಾರೆ.

ಮೀನುಗಾರಿಕೆ: ಇದು ಪ್ರಮುಖ ಉದ್ಯೋಗವಾಗಿದೆ. ಅಟ್ಲಾಂಟಿಕ್, ಆರ್ಕ್ಟಿಕ್ ತೀರದಲ್ಲಿ ಮೀನುಗಾರಿಕೆ ಹೆಚ್ಚಾಗಿ ಅಭಿವೃದ್ಧಿ ಹೊಂದಿದ್ದು, ರಾಷ್ಟ್ರೀಯ ಆದಾಯಕ್ಕೆ ಮೂಲವಾಗಿದೆ. ಮೀನು ಜನರ ಪ್ರಮುಖ ಆಹಾರವಾಗಿದೆ.

ಕೈಗಾರಿಕೆ: ಮೀನು ಸಂಸ್ಕರಣೆ ಇಲ್ಲಿನ ಮುಖ್ಯಕೈಗಾರಿಕೆಯಾಗಿದೆ. ತೀರ ಪ್ರದೇಶಗಳಲ್ಲಿ ಆಹಾರ ಸಂಸ್ಕರಣೆ, ಸಿಮೆಂಟ್, ಗೊಬ್ಬರ, ಬಟ್ಟೆ ಕೈಗಾರಿಕೆಗಳು ಸ್ವಲ್ಪ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿವೆ. ಮುಖ್ಯವಾಗಿ ಮೀನುಗಳನ್ನು ಡಬ್ಬಗಳಲ್ಲಿ ಹಾಗೂ ಶೈತ್ಯಾಗಾರಗಳಲ್ಲಿ ರಕ್ಷಿಸುವುದು ಮುಖ್ಯ ಕೈಗಾರಿಕೆಯಾಗಿದೆ.

ಜನ: ಐಸ್ಲೆಂಡ್ ಜನ ವಿದ್ಯಾವಂತರು. 19ನೆಯ ಶತಮಾನದವರೆಗೆ ಅಲ್ಲಿನ ಜನ ಅಧುನಿಕ ಸೌಲಭ್ಯ, ಸಂಪರ್ಕದಿಂದ ದೂರವಾಗಿದ್ದರು. ಈಗ ಐಸ್ಲೆಂಡ್ ಆಧುನಿಕ ದೇಶವಾಗಿದೆ. ಇವರ ಭಾಷೆ ಐಸ್‌ಲ್ಯಾಂಡಿಕ್. ಜನ ಪ್ರಾಟಸ್ಟೆಂಟ್ ಕ್ರಿಶ್ಚಿಯನ್ ಧರ್ಮಾವಲಂಬಿಗಳಾಗಿದ್ದಾರೆ. ಇಲ್ಲಿ ಬುಡಕಟ್ಟು ಜನಾಂಗದವರಾದ ಎಸ್ಕಿಮೋಗಳು ಇಂದು ಮಾರ್ಪಾಟನ್ನೂ ಹೊಂದಿದ್ದಾರೆ. 9ನೆಯ ಶತಮಾನದಲ್ಲಿ ನಾರ್ವೆ, ಬ್ರಿಟನ್‌ಗಳಿಂದ ಜನರು ವಲಸೆ ಬಂದು ಇಲ್ಲಿ ನೆಲೆಸಿದರು. 1242 ರಲ್ಲಿ ನಾರ್ವೆ ಅರಸರ ಅಧೀನದಲ್ಲಿದ್ದು ಅನಂತರ ಡೆನ್ಮಾರ್ಕಿನ ವಶವಾಯಿತು. 1944 ರಲ್ಲಿ ಐಸ್ಲೆಂಡ್ ಸ್ವತಂತ್ರವಾಯಿತು. ಮೊಟ್ಟ ಮೊದಲ ಬಾರಿಗೆ ವೆಂಗ್‌ವೆಲ್ಲರ್ಡ್‌ನಲ್ಲಿ ಸ್ವಾತಂತ್ರ್ಯ ಘೋಷಣೆಯ ಸಮಾರಂಭ ನಡೆಯಿತು.

ಜನಸಂಖ್ಯೆ 2,88,000 (2003). ಪ್ರತಿ ಚ.ಕಿಮೀ ಗೆ 2.70 ರಷ್ಟು ಜನರಿದ್ದಾರೆ. ರಾಷ್ಟ್ರಾಧ್ಯಕ್ಷರನ್ನು 4 ವರ್ಷದ ಅವಧಿಗೆ ಆಯ್ಕೆ ಮಾಡಲಾಗುತ್ತದೆ. 35 ವರ್ಷದ ಮೇಲ್ಪಟ್ಟವರು ಅಧ್ಯಕ್ಷರನ್ನು ಆರಿಸಲು ಯೋಗ್ಯವಾಗಿರುತ್ತಾರೆ. ದೇಶವನ್ನು ರಾಜ್ಯ, ಜಿಲ್ಲೆ ಮತ್ತು ಕಾರ್ಪೊರೇಷನ್‌ಗಳಾಗಿ ವಿಂಗಡಿಸಲಾಗಿದೆ. 8 ನಗರ ಕಾರ್ಪೊರೇಷನ್‌ಗಳಿವೆ. ಈ ದೇಶದ ರಾಜಧಾನಿ ರಿಕ್‌ಯವಿಕ್. ಜನಸಂಖ್ಯೆ 1,03,036 (2002). ನಾಣ್ಯ ಕ್ರೊನಾ.

ವ್ಯಾಪಾರ: ಮೀನು ಮತ್ತು ಸಾಗರ ಉತ್ಪನ್ನ ವಸ್ತುಗಳು ಪ್ರಮುಖ ರಫ್ತು ಸರಂಜಾಮು. ಅಲ್ಲದೆ ಹೂವುಗಳು, ಸಂಸ್ಕರಣ ವಸ್ತುಗಳನ್ನೂ ರಫ್ತುಮಾಡಲಾಗುತ್ತದೆ. ಆಹಾರ ಪದಾರ್ಥ, ಯಂತ್ರ, ಯಂತ್ರೋಪಕರಣ, ರಾಸಾಯನಿಕ ವಸ್ತುಗಳು, ಪ್ರಾಣಿಗಳ ಕೊಬ್ಬು, ಪ್ರಾಣಿಗಳ ಆಹಾರ ಮುಂತಾದವುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದು ಆಸ್ಟ್ರೇಲಿಯ, ಡೆನ್ಮಾರ್ಕ್, ಬೆಲ್ಜಿಯಂ, ಫಿನ್‌ಲೆಂಡ್, ಚೀನ, ಫ್ರಾನ್ಸ್, ಜರ್ಮನಿ, ನಾರ್ವೆ, ಸ್ವೀಡನ್ ಮುಂತಾದ ಪ್ರದೇಶಗಳೊಡನೆ ವ್ಯಾಪಾರ ನಡೆಸುತ್ತಿದೆ. (ಎಸ್.ಕೆ.)

**ಚರಿತ್ರೆ:** ಯುರೋಪಿನ ನಾವಿಕರನೇಕರಿಗೆ ಪ್ರಶ. 4ನೆಯ ಶತಮಾನದಷ್ಟು ಹಿಂದೆಯೇ ಐಸ್ಲೆಂಡಿನ ವಿಚಾರ ಗೊತ್ತಿತ್ತು. ಆದರೆ 9ನೆಯ ಶತಮಾನಕ್ಕೆ ಮುಂಚೆ ಯಾರೂ ಇಲ್ಲಿ ನೆಲೆಸಿದಂತಿಲ್ಲ. ಐರ್ಲೆಂಡಿನ ವಲಸೆಗಾರರು 9ನೆಯ ಶತಮಾನದಲ್ಲಿ ಅಲ್ಲಲ್ಲಿ ವಾಸಿಸುತ್ತಿದ್ದರು. ಆದರೆ ಇವರ ಬಗ್ಗೆ ವಿವರಗಳು ಗೊತ್ತಿಲ್ಲ. ಇತರರು ಅಲ್ಲಿಗೆ ಬಂದಾಗ ಇವರು ಅಲ್ಲಿಂದ ಹೊರಟು ಹೋದರೆಂದು ಹೇಳಲಾಗಿದೆ. ಪ್ರ.ಶ. 870ರಲ್ಲಿ ಇಂಗೋಲ್ಫ್ ಅರ್ನಾರ್‌ಸನ್ ಎಂಬ ವೈಕಿಂಗ್ ಪ್ರಥಮ ವಸಾಹತನ್ನು ಸ್ಥಾಪಿಸಿದ. ಅನಂತರ 60 ವರ್ಷಗಳಲ್ಲಿ ಇನ್ನೂ ಅನೇಕ ವಸಾಹತುಗಳು ಬೆಳೆದುವು. ಪ್ರಾರಂಭದಲ್ಲಿ ಪ್ರತಿ ವಸಾಹತಿನ ಸರ್ಕಾರವನ್ನು ಅಲ್ಲಿಯ ದೇವಾಲಯದ ಮೇಲ್ವಿಚಾರಕ ನಡೆಸುತ್ತಿದ್ದ. ಅನಂತರ ಎಲ್ಲ ವಸಾಹತುಗಳಿಗೂ ಒಂದೇ ಸರ್ಕಾರ ಏರ್ಪಟ್ಟು ಶ್ರೀಮಂತರ ಆಡಳಿತ ಪ್ರಾರಂಭವಾಯಿತು. 981ರಲ್ಲಿ ಕಾಲಿಟ್ಟ ಕ್ರೈಸ್ತಧರ್ಮ ಪ್ರ.ಶ. 1000ದ ವೇಳೆಗೆ ಶಾಸನಸಮ್ಮತ ಧರ್ಮವಾಗಿ ಶಾಲೆಗಳೂ ಚರ್ಚುಗಳೂ ಸ್ಥಾಪನೆಯಾದುವು. 19ನೆಯ ಶತಮಾನದಲ್ಲಿ ಜಾನ್ ಸಿಗುರ್ಡ್‌ಸನನ ನಾಯಕತ್ವದಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಗಿ, ಜಾರನ್ ಜಾನ್ಸನ್, ಸ್ವೇನ್ ಜಾರ್ನ್‌ಸನ್, ಹಾನೆಸ್ ಹಾಫ್‌ಸ್ಟೀನ್ ಮುಂತಾದವರ ನೇತೃತ್ವದಲ್ಲಿ ದೇಶ ಆರ್ಥಿಕಾಭಿವೃದ್ಧಿ ಸಾಧಿಸಿತು. ಎರಡನೆಯ ಮಹಾಯುದ್ಧದಲ್ಲಿ ಜರ್ಮನರು ಇದನ್ನು ಆಕ್ರಮಿಸಿಕೊಂಡಿದ್ದರು. ಅನಂತರ ತಮ್ಮ ದೇಶಗಳ ರಕ್ಷಣಾ ದೃಷ್ಟಿಯಿಂದ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಬ್ರಿಟನ್ ಇಲ್ಲಿ ಸೇನಾ ನೆಲೆಗಳನ್ನು ಸ್ಥಾಪಿಸಿ ಅಭಿವೃದ್ಧಿ ಕಾರ್ಯಗಳಿಗೆ ಬೆಂಬಲ ಕೊಟ್ಟುವು. 1380ರಿಂದ ಡೆನ್ಮಾರ್ಕಿಗೆ ಸೇರಿದ್ದ ಈ ದೇಶ 1944ರಲ್ಲಿ ಸ್ವತಂತ್ರವಾಯಿತು. ಇದೊಂದು ಗಣರಾಜ್ಯ. (ವಿ.ಎಸ್.ಎಸ್.)

**ಐಸ್ಲೆಂಡ್ ಸ್ಪಾರ್:** ಕ್ಯಾಲ್ಸೈಟಿನ ಒಂದು ರೂಪ. ನಿರ್ವರ್ಣ, ಪಾರಕ ವಸ್ತು. ಹೆಚ್ಚಾಗಿ ಐಸ್ಲೆಂಡಿನಲ್ಲಿ ಸಿಗುತ್ತದೆ. ಸಮಚತುರ್ಭುಜೀಯ ಆಕೃತಿಯ ಈ ಖನಿಜದ ಸಾಪೇಕ್ಷಸಾಂದ್ರತೆ 2.7; ಕಾಠಿಣ್ಯ 3. ಇದಕ್ಕಿರುವ ದ್ವಿವಕ್ರೀಭವನ (ಡಬಲ್ ರಿಫ್ರಾಕ್ಷನ್) ಗುಣದ ಮೇಲೆ ಇದರ ಮೌಲ್ಯವನ್ನು ನಿರ್ಧರಿಸುತ್ತಾರೆ. ಧ್ರುವವರ್ಣದರ್ಶಕ (ಪೋಲಾರಿಸ್ಕೋಪ್), ನಿಕಾಲ್–ಅಶ್ರಗ ಮತ್ತಿತರ ದೃಗುಪಕರಣಗಳಲ್ಲಿ ಇದರ ಬಳಕೆ ಹೆಚ್ಚು (**ನೋಡಿ– ಕ್ಯಾಲ್ಸೈಟ್**).

*

**ಐಸ್ಲೆಂಡಿಕ್ ಸಾಹಿತ್ಯ:** ಐಸ್ಲೆಂಡಿಕ್ ಸಾಹಿತ್ಯ ಪ್ರಾಚೀನ ಸ್ಕಾಂಡಿನೇವಿಯದ ಸಾಹಿತ್ಯ, ಸಂಸ್ಕೃತಿಗಳಿಂದ ಹುಟ್ಟಿದುದು. ಕೇವಲ ಶ್ರುತರೂಪದಲ್ಲಿದ್ದ ಪ್ರಾಚೀನ ಸ್ಕಾಂಡಿನೇವಿಯದ ಸಾಹಿತ್ಯವನ್ನು ಐಸ್ಲೆಂಡಿನ ಸಾಹಿತ್ಯ ಎಂದು ಕರೆಯಬಹುದು. ಏಕೆಂದರೆ ಅದರ ಬಹುಭಾಗ ಐಸ್ಲೆಂಡಿನಲ್ಲೇ ಉಳಿದುಕೊಂಡು ಬಂದಿತು. ಅಲ್ಲದೆ ಕೆಲವು ಕೃತಿಗಳೂ ಐಸ್ಲೆಂಡಿನಲ್ಲೇ ರಚಿತವಾದುವು. ಒಂದನೆಯ ಹೆರಾಲ್ಡ್ ಫೇರ್‌ಹೇರ್ ಎಂಬ ಸ್ಕಾಂಡಿನೇವಿಯದ ದೊರೆ ಶ್ರೀಮಂತ ವಿರೋಧವಾದ ಧೋರಣೆಯನ್ನು ತಾಳಿದನಾಗಿ ಹಲವು ಗಣ್ಯ ಶ್ರೀಮಂತ ಮನೆತನಗಳು ಐಸ್ಲೆಂಡಿಗೆ ವಲಸೆ ಹೋಗಿ ನೆಲೆಸಿದುವು. ಈ ಜನಾಂಗದ ಸಂಸ್ಕೃತಿಯ ಸಂಜಾತಗುಣ ಕಾವ್ಯಾಭಿರುಚಿ. ಈ ಪರಂಪರೆಯಲ್ಲಿ ಐಸ್ಲೆಂಡಿನ ಸಾಹಿತ್ಯ ವಿಕಾಸಗೊಂಡಿತು. ಗ್ರೀಕ್ ಕಾವ್ಯ, ಕ್ರೈಸ್ತಧರ್ಮ ಇವು ಯಾವುದರ ಪ್ರಭಾವವೂ ಬೀಳದ ಶುದ್ಧ ಜರ್ಮ್ಯಾನಿಕ್ ವೈಶಿಷ್ಟ್ಯದಲ್ಲೇ ಇದು ಆರಂಭವಾಯಿತು. ನಮಗೆ ದೊರೆಯುವ ಐಸ್ಲೆಂಡಿನ ಸಾಹಿತ್ಯದ ಕೃತಿಗಳು 9ನೆಯ ಶತಕದಿಂದೀಚಿನವು. ಇವೂ 12ನೆಯ ಶತಕದವರೆಗೂ ಕೇವಲ ಶ್ರುತ ರೂಪದಲ್ಲಿದ್ದು 13 ಮತ್ತು 16ನೆಯ ಶತಮಾನಗಳಲ್ಲಿ ಕಾವ್ಯ ಎಡ ಮತ್ತು ಗದ್ಯ ಎಡ ಎಂಬ ಎರಡು ಗ್ರಂಥಗಳ ಸಂಗ್ರಹದಲ್ಲಿ ಮೊದಲು ಪ್ರಕಟವಾದುವು. (ನೋಡಿ- ಎಡ)

ಐಸ್ಲೆಂಡಿಕ್ ಸಾಹಿತ್ಯ ಚರಿತ್ರೆಯನ್ನು ಮುಖ್ಯವಾಗಿ ಮೂರು ಕಾಲ ವಿಭಾಗಗಳಲ್ಲಿ ಅವಲೋಕಿಸಬಹುದು: ಪ್ರಾಚೀನಕಾಲ (9–14ನೆಯ ಶತಕದವರೆಗೆ) ಮಧ್ಯಕಾಲ (14–19ನೆಯ ಶತಕದವರೆಗೆ) ಆಧುನಿಕ ಕಾಲ (19ನೆಯ ಶತಕದಿಂದ ಇಂದಿನವರೆಗೆ).

ಪ್ರಾಚೀನ ಸಾಹಿತ್ಯದಲ್ಲಿ ಎಡಸಾಹಿತ್ಯ, ಸ್ಕಾಲ್ಡಿಕ್ ಕಾವ್ಯ, ಸಾಗಾ (ವಂಶಾವಳಿ ಕಥನಕಾವ್ಯ) ಎಂಬ ಮೂರು ಪ್ರಕಾರಗಳನ್ನು ಕಾಣಬಹುದು. ಪೌರಾಣಿಕ ಅಂದರೆ ದೈವೀಮಹಿಮೆಗಳ ಕಥೆಯೊ, ವೀರರ ಸಾಹಸಗಳ ಕಥೆಯೊ, ಧರ್ಮಬೋಧೆಯೊ ವಸ್ತುವಾಗಿದ್ದ ಕಾವ್ಯ ಮೊದಲನೆಯದು. ಇವುಗಳ ಸಂಕಲನವೆ ಎಡ ಸಾಹಿತ್ಯವೆನಿಸಿತು. ಸರಳವಾದ ಛಂದಸ್ಸು, ಗಂಭೀರವಾದ ಗತಿ, ಪ್ರಾಸ–ಅನುಪ್ರಾಸಗಳ ಸರಣಿ–ಇವು ಈ ಕಾವ್ಯದ ಮುಖ್ಯ ಲಕ್ಷಣ. ಇವನ್ನು ಬರೆದ ಕವಿಗಳ ಬಗ್ಗೆ ಏನೂ ತಿಳಿದಿಲ್ಲ. ಸಂಗ್ರಹಿಸಿದವರು ಯಾರು ಎಂಬ ಬಗ್ಗೆಯೂ ವಾದವಿವಾದಗಳಿವೆ. 13ನೆಯ ಶತಕದಲ್ಲಿ ಗ್ರಂಥ ರೂಪದಲ್ಲಿ ಮೊದಲಬಾರಿಗೆ ಬೆಳಕು ಕಂಡ ಗದ್ಯ ಎಡದ ಸಂಗ್ರಹಕಾರ ಸ್ನೋರಿ ಸ್ಟ್ಯುರ್ಲ್ಯೂಸನ್ ಎಂದೂ 16ನೆಯ ಶತಕದಲ್ಲಿ ಪ್ರಕಟವಾದ ಕಾವ್ಯ ಎಡದ ಸಂಗ್ರಹಕಾರ ಪಂಡಿತ ಸೀಮುಂಡ್ ಸೀಗ್‌ಫ್ಯುಸುನ್ ಎಂದೂ ತಿಳಿಯಲಾಗಿದೆ. ವಿಜಯಗೀತೆಗಳು, ಶೋಕಗೀತೆಗಳು, ಸುಭಾಷಿತಗಳು ಸಹ ಈ ಕಾವ್ಯಭಂಡಾರದಲ್ಲಿವೆ. ಪೌರಾಣಿಕ ಕಾವ್ಯಗಳಲ್ಲಿ ವಾಲ್ಯುಸ್ಪಾ, ರಾಗ್ನೋರೊಕ್ ಮೊದಲಾದ ಶ್ರೇಷ್ಠಕೃತಿಗಳಿವೆ. ಇವುಗಳ ಕವಿ, ಕಾಲ,ನಿರ್ಣಯಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಛಂದೋವೈವಿಧ್ಯ, ಪ್ರೌಢವಾದ ಭಾಷೆ, ಶೈಲಿ, ರಚನಾಪರಿಣತಿಗಳನ್ನು ಮೆಚ್ಚುವಲ್ಲಿ ಒಮ್ಮತವಿದೆ.

10ನೆಯ ಶತಕದಿಂದ 13ನೆಯ ಶತಕದವರೆಗೆ ಪ್ರಧಾನವಾಗಿ ಬೆಳೆದ ಸ್ಕಾಲ್ಡಿಕ್ ಕಾವ್ಯಮಾದರಿ ಆಸ್ಥಾನ ಕವಿಗಳ ಕಾಣಿಕೆ. ರಾಜರ ಇಲ್ಲವೆ ಶ್ರೀಮಂತರ ಕೃಪಾ ಪೋಷಿತರಾದ ಪಂಡಿತಕವಿಗಳು ತಮ್ಮ ಆಶ್ರಯದಾತರ ಸ್ತುತಿಯನ್ನೊ ಕೀರ್ತಿವಾಚನವನ್ನೊ ಸಾಹಸಗಳ ಕಥೆಯನ್ನೊ ರಂಜಕವಾಗಿ ಆಲಂಕಾರಿಕ ಭಾಷೆಯಲ್ಲಿ ಬರೆದರು. ಸಂಕೀರ್ಣ ರಚನೆಯೇ ಇವುಗಳ ವಿಶಿಷ್ಟ ಲಕ್ಷಣ. ರಚನೆಯಲ್ಲಿ ಕೇವಲ ಆಡಂಬರ, ಕಥನದಲ್ಲಿ ಒಂದೇ ಧಾಟಿ ಇದ್ದು ಅಂತಃಕರಣದ ಮಿಡಿತವೇ ಇಲ್ಲದ ಈ ಕಾವ್ಯಗಳಿಗೆ ಐತಿಹಾಸಿಕ ಮಹತ್ತ್ವವೊಂದು ಬಿಟ್ಟರೆ ಬೇರೆ ಯಾವ ಶ್ರೇಷ್ಠ ಸಾಹಿತ್ಯದ ಬೆಲೆಯೂ ಇಲ್ಲ. ಈ ಕಾವ್ಯಪರಂಪರೆಯ ಆದ್ಯಪ್ರವರ್ತಕ 9ನೆಯ ಶತಕದ ನಾರ್ವೆಯ ಬ್ರಾಗಿ ಎಂಬ ಕವಿ.

ಐಸ್ಲೆಂಡಿನಲ್ಲಿ ಈಗಿಲ್ ಸ್ಕ್ಯಾಲ್ಲಾಗ್ರಿಮ್‌ಸುನ್ (10ನೆಯ ಶತಕ) ಈ ಪರಂಪರೆಯ ಮೊದಲ ಹಾಗೂ ಶ್ರೇಷ್ಠ ಕವಿ. ಅನಂತರದ ಕವಿಗಳಲ್ಲಿ ಹಾಲ್ ಫ್ರೆಡ್ಯುಊಟ್ಟಾರ್ ಸುನ್, 11ನೆಯ ಶತಕದಲ್ಲಿ ಅಪಾರ ಮನ್ನಣೆ ಗಳಿಸಿದ ಸಿಗ್‌ಫಾತ್ಥೂರ್‌ಡಾರ್‌ಸುನ್ (ಈತ ಓಲಾಫ್ ಹಾರಾಲ್ಡ್‌ಸುನ್ ದೊರೆಯ ಆಪ್ತಮಿತ್ರ ಮತ್ತು ಆಸ್ಥಾನಕವಿ.) ಮತ್ತು ಆರ್ನ್ಯೂರ್ ಯಾರ್ಲಾಸ್ಕಾಲ್ ಮುಖ್ಯರು. 12ನೆಯ ಶತಕದ ಅನಂತರ ಈ ಬಗೆಯ ಕಾವ್ಯರಚನೆ ಕ್ರಮೇಣ ಖಿಲವಾಯಿತು. ಸ್ಕಾಲ್ಡಿಕ್ ಕಾವ್ಯಲಕ್ಷಣಗಳನ್ನೂ ವಿಶಿಷ್ಟ ಪ್ರಯೋಗವೆನಿಸಿದ ಕೇನ್ನಿಂಗ್ಸ್ ಎಂಬ ರೂಪಕ ನುಡಿಗಟ್ಟುಗಳ ಬಹು ಸೊಗಸಾದ ವಿವರಣೆಗಳನ್ನೂ ಗದ್ಯ ಎಡದಲ್ಲಿ ನೋಡಬಹುದು.

ಸಾಗಾ ಎಂಬುದು ಐಸ್ಲೆಂಡಿನ ವಿಶಿಷ್ಟ ಸೃಷ್ಟಿ. ಇಂಥ ಸಾಹಿತ್ಯರೂಪ ಬೇರೆ ಯಾವ ಸಾಹಿತ್ಯದಲ್ಲೂ ಇಲ್ಲ. ವೀರ ವಂಶಾವಳಿ ಕಥೆಯೇ ಸಾಗಾ ರೂಪ ತಾಳಿ ತಮ್ಮ ತಮ್ಮ ವಂಶದ ಬಗ್ಗೆ, ಕುಲಸ್ಥರ ಬಗ್ಗೆ ಇದ್ದ ಉತ್ಕಟವಾದ ಗೌರವ ಅಭಿಮಾನಗಳೇ ಅನೇಕ ತಲೆಮಾರುಗಳ ವಂಶಾವಳಿ ಕಥೆಗಳು ಬೆಳೆಯಲು ಕಾರಣವಾದುವು. ಐತಿಹಾಸಿಕ ಘಟನೆಗಳ ಸುತ್ತ ಹೆಣೆದ ರಮ್ಯವಾದ ಕಾಲ್ಪನಿಕ ಕಥೆ ಸಾಗಾದ ಸಾಧಾರಣ ಮಾದರಿ. 12–15ನೆಯ ಶತಕದವರೆಗೂ ಈ ಸಾಹಿತ್ಯ ಪ್ರಕಾರ ಬಹು ಜನಪ್ರಿಯವಾಗಿತ್ತು. ಕಥನ ಕೌಶಲ ಐಸ್ಲೆಂಡಿನವರಲ್ಲಿ ರಕ್ತಗತವಾಗಿ ಬಂದದ್ದು. ಐರಿಷ್ ಪ್ರಭಾವದಿಂದ ಈ ನೈಪುಣ್ಯ ಹೆಚ್ಚು ಕಲಾತ್ಮಕವಾಯಿತು. ವಂಶಾವಳಿ ಕಥೆಗಳಲ್ಲಿ ಸುಮಾರು 35 ಕೃತಿಗಳು ಅಮೋಘವಾಗಿವೆ. ಕೆಲವು ಗಣ್ಯ ಮನೆತನಗಳ ಚರಿತ್ರೆ ಇವುಗಳ ವಸ್ತು. ಕಥೆಯ ಉದ್ದಕ್ಕೂ ಒಂದು ಬಗೆಯ ವಿಷಾದದ ಛಾಯೆ ಹರಡಿದರೂ ಅಲ್ಲಲ್ಲಿ ಹಾಸ್ಯ, ಶೃಂಗಾರಗಳ ಅಂಶಗಳೂ ಸೇರಿ ಉಲ್ಲಾಸವುಂಟುಮಾಡುತ್ತವೆ. ಇವು ಉತ್ತಮ ಐತಿಹಾಸಿಕ ದಾಖಲೆಗಳಾಗದಿದ್ದರೂ ಅಂದಿನ ಜನಜೀವನ ಸಂಸ್ಕೃತಿಗಳನ್ನು ಬಹಳ ಚೆನ್ನಾಗಿ ಪ್ರತಿಬಿಂಬಿಸುತ್ತವೆ. ಸರಳವಾದ ಗದ್ಯದಲ್ಲಿರುವ ಈ ಕಥೆಗಳು ಅಚ್ಚುಕಟ್ಟಾಗಿವೆ, ಸ್ವಾರಸ್ಯವಾಗಿವೆ, ಪರಿಣಾಮಕಾರಿಯಾಗಿವೆ. ಕತೆಗಾರ ಕಥೆಯ ಪಾತ್ರಗಳ ಘಟನೆಗಳ ಬಗ್ಗೆ ಯಾವ ಟೀಕೆ, ವ್ಯಾಖ್ಯಾನವನ್ನೂ ಮಾಡದೆ, ಯಾವ ನೀತಿ ತತ್ತ್ವಗಳ ಪ್ರತಿಪಾದನೆಗೂ ಕೈಹಾಕದೆ, ಕೇವಲ ವಸ್ತುನಿಷ್ಠವಾಗಿ ಕಥೆಯನ್ನು ಹೇಳುವುದು ಸಾಗಾ ಮಾದರಿಯ ವಿಸ್ಮಯಕರ ವಿಶೇಷ ಗುಣ. ನಿರ್ವಿಕಾರವಾಗಿ ಕಥೆ ಹೇಳುವುದಷ್ಟೆ ಕಥೆಗಾರನ ಕೆಲಸ. ಉಳಿದುದು ಓದುಗರ ಆಲೋಚನೆಗೆ, ಕಲ್ಪನೆಗೆ ಬಿಟ್ಟದ್ದು. ಸಂವಿಧಾನ ಕೌಶಲದಲ್ಲಿ ಸಂಭಾಷಣೆಯ ಚುರುಕಿನಲ್ಲಿ ಪ್ರತಿಭೆಯ ಹೊಳಪು ಕಾಣುತ್ತದೆ. ಕಥೆಯ ಘಟನೆಗಳೆಲ್ಲಕ್ಕೂ ವಿಧಿಯೇ ಅವ್ಯಕ್ತ ಸೂತ್ರಧಾರಿ ಎಂಬ ಮನೋಭಾವ ಕಥೆಗೆ ಗಾಂಭೀರ್ಯವನ್ನೊದಗಿಸುತ್ತದೆ. ಜೀವಪೂರ್ಣವಾದ ಪಾತ್ರಸೃಷ್ಟಿ ಇನ್ನೊಂದು ವಿಶೇಷ ಗುಣ. ನ್ಯಾಲ್ಸ್ ಸಾಗಾ ಈ ಎಲ್ಲ ಗುಣಗಳಿಂದಲೂ ಕೂಡಿದ ಶ್ರೇಷ್ಠ ಕೃತಿ. ಈಗಿಲ್ಸ್ ಸಾಗಾ, ಲಾಕ್ಸ್ ಡ್ಯೂಲ ಸಾಗಾ, ಗ್ರೆಟ್ಟಿಸ್ ಸಾಗಾ, ದಿ ವೊಲ್ಸ್ಯುಂಗಾ ಸಾಗಾ, ಗುನ್ನ ಲೌಗ್ಸ್ ಸಾಗಾ ಮುಂತಾದುವು ಪ್ರಖ್ಯಾತವಾಗಿವೆ. 12–13ನೆಯ ಶತಕಗಳಲ್ಲಿ ರಚಿತವಾದ ಸಾಗಾಗಳಲ್ಲಿ ಐತಿಹಾಸಿಕ ಅಂಶ ಹೆಚ್ಚು. ಪೌರಾಣಿಕ ಮತ್ತು ರಮ್ಯಾದ್ಭುತ ಅಂಶ ಹೆಚ್ಚಾಗಿರುವ ಕೆಲವು ಕೃತಿಗಳೂ ಇವೆ. ಅನಂತರ 16ನೆಯ ಶತಕದವರೆಗೂ ಬಂದ ಕೃತಿಗಳಲ್ಲಿ ಅನುಕರಣೆಯೇ ಹೆಚ್ಚು. ಹಿಂದೆ ರಚಿತವಾದ ವಂಶಾವಳಿಗಳನ್ನು ಪ್ರತಿಮಾಡುವ, ಸಂಪಾದಿಸುವ ಕಾರ್ಯ ಈ ಕಾಲದಲ್ಲಾಯಿತು. ಕ್ರಮೇಣ ಕ್ರೈಸ್ತಧರ್ಮದ ಕಥೆಗಳೂ ಸಂತರ ಪವಾಡಗಳೂ ಸಾಗಾ ಬರೆವಣಿಗೆಗೆ ಸಾಮಗ್ರಿಯಾದುವು. ಪಾದ್ರಿ ಐನಾರ್ ಸ್ಕ್ಯೂಲಾಸುನ್‌ನ ಗೈಸ್ಲಿ, ಸಾಧು ಐಸ್ಟೈನ್ ಆಸ್‌ಗ್ರಿಮ್‌ಸುನ್‌ನ ಲೀಲ್ಯಾ ಅಮೋಘವಾದ ಕೃತಿಗಳು. ಲ್ಯೋಮ್ಯೂರ್ ಸಾಗಾದ ಕರ್ತೃ ಪಾದ್ರಿಯೋನ್ ಆರಾಸುನ್ 16ನೆಯ ಶತಮಾನದ ಆದಿಯಲ್ಲಿ ಒಂದು ಮುದ್ರಣಯಂತ್ರವನ್ನು ಬಳಕೆಗೆ ತಂದನಾಗಿ ಅನೇಕ ಧಾರ್ಮಿಕ ಹಾಗೂ ಸಾಹಿತ್ಯ ಗ್ರಂಥಗಳನ್ನು ಅನ್ಯಭಾಷೆಗಳಿಂದ ಐಸ್ಲೆಂಡಿಕ್ ಭಾಷೆಗೆ ಅನುವಾದ ಮಾಡಲಾಯಿತು.

**ಮಧ್ಯಕಾಲ:** 14ನೆಯ ಶತಮಾನದಲ್ಲಿ ರಿಮ್ಯೂರ್ ಎಂಬ ಹೊಸಬಗೆಯ ಕಾವ್ಯವೊಂದು ಉದಯವಾಗಿ ಸುಮಾರು 500 ವರ್ಷಕಾಲ ಜನಪ್ರಿಯ ಕಾವ್ಯಮಾರ್ಗವಾಯಿತು. ಈ ಮಾದರಿಯಲ್ಲಿ ನೃತ್ಯಗೀತೆ, ಹಾಡು, ಗಾಥೆಗಳು ಹೆಚ್ಚು. ಪ್ರಣಯವೂ ಸಾಹಸದ ಕಥನವೂ, ಹೀನವಿಡಂಬನೆಯೂ ಇವುಗಳ ವಸ್ತು. ಭಾಷೆ ಸಂಸ್ಕೃತಿಗಳ ಅಧ್ಯಯನದ ದೃಷ್ಟಿಯಿಂದ ಗಮನಾರ್ಹವಾಗಬಹುದಾದ ಈ ಕವನಗಳಲ್ಲಿ ಸಾಹಿತ್ಯಗುಣ ಕಡಿಮೆ. ಲೂಥರನ ಧರ್ಮಸುಧಾರಣೆಯ ಅನಂತರ ಈ ಕಾವ್ಯಪದ್ಧತಿ ಹೆಚ್ಚು ಬಳಕೆಗೆ ಬಂತು. 20ನೆಯ ಶತಮಾನದ ಆದಿಯವರೆಗೂ ಐಸ್ಲೆಂಡಿಕ್ ಸಾಹಿತ್ಯದ ಪ್ರಬಲ ಅಭಿವ್ಯಕ್ತಿ ಸಾಧನವಾಗಿದ್ದ ಈ ಕಾವ್ಯಶೈಲಿ ಕ್ರಮೇಣ ಸವೆದ ಜಾಡಾಗಿ ಕೃತಕವೂ ಸಾಂಪ್ರದಾಯಿಕವೂ ಆದ ಸಿದ್ಧರೂಪ ಪಡೆಯಿತು. ಈ ಸಂಪ್ರದಾಯದ ಹಾಡುಗಬ್ಬಗಳಲ್ಲಿ ಟಿಸ್ಟ್ರಾಮ್ಸ್‌ಕ್ವೈದಿ ಮನಸೆಳೆವ ಕಥೆ ಮತ್ತು ಹಾಡಿನ ಮೋಡಿಗಳು ಮೇಳವಿಸಿದ ಸುಂದರಗಾಥೆ. ಧರ್ಮಸುಧಾರಣೆಯ ಪ್ರಭಾವದಿಂದ ಸ್ತೋತ್ರಗಳ ರಚನೆ ಜನಪ್ರಿಯವಾಯಿತು. ಪಾದ್ರಿ ಗ್ಯೂಡ್ ಬ್ರಾಂಡ್ಯೂರ್ ಥೂರ್‌ಲಾಕ್‌ಸೂನ್ ಅನೇಕ ಸುಂದರ ಸ್ತೋತ್ರಗಳನ್ನು ರಚಿಸಿದ. ಐನಾರ್ ಸಿಗ್ಯೂರ್ಡ್‌ಸೂನ್ 16ನೆಯ ಶತಕದ ಬಹು ದೊಡ್ಡ ಕವಿ. ಇದೇ ಕಾಲದಲ್ಲಿ ವೀಕಿ ವಾಕರ್ ಎಂಬ ನವೀನ ಶೈಲಿಯ ಗಾಥೆಗಳು ಪ್ರಚಾರಕ್ಕೆ ಬಂದುವು. ಮುಂದೆ ಮೂರು ಶತಕಗಳ ಕಾಲ ಇವುಗಳ ಪ್ರಭಾವವಿತ್ತು. ಇತಿಹಾಸ ಪುರಾತತ್ತ್ವಗಳ ಬಗ್ಗೆ ಬೆಳೆದ ಆಸಕ್ತಿಯಿಂದ ಅನೇಕ ಇತಿಹಾಸ ವೃತ್ತಾಂತಗಳು ರಚಿತವಾದುವು. ಪ್ರಾಚ್ಯ ಗ್ರಂಥ ಸಂಪಾದನಕಾರ್ಯವೂ ಆಯಿತು. ಯೋನ್ ಎಸ್ಪೋಲಿನ್ನನ ಆನಲ್ಸ್ ಆಫ್ ಐಸ್ಲೆಂಡ್ ಸೂಕ್ಷ್ಮ ಐತಿಹಾಸಿಕ ಅವಲೋಕನವಾಗಿದೆ. ಉಜ್ಜ್ವಲ ಸಾಹಿತ್ಯಕೃತಿಯೂ ಆಗಿದೆ. ಪಾದ್ರಿ ಬ್ರಿನ್ಯೋಲ್ಫ್ ಸ್ವೀನ್ಸನ್ ಎಡ ಕಾವ್ಯವನ್ನು ಸಂಗ್ರಹಿಸಿ ಸಂಪಾದಿಸಿದ. 17ನೆಯ ಶತಕದ ಇಬ್ಬರು ಹಿರಿಯ ಕವಿಗಳಲ್ಲಿ ಹಾಲ್ ಗ್ರಿಮ್ಯೂರ್ ಪೀಟರ್‌ಸುನ್ ಸ್ತೋತ್ರಗೀತೆಗಳಲ್ಲಿ ಅಗ್ರಗಣ್ಯ. ಸ್ಟೆಫ್ಯಾನ್ ಓಲಾಫ್‌ಸುನ್ ಭಾವಗೀತೆಗಳಿಗೂ ನಿತ್ಯಜೀವನದ ವಾಸ್ತವಚಿತ್ರಣಕ್ಕೂ ಕೆಲವು ಹಾಸ್ಯ ವಿಡಂಬನ ಕೃತಿಗಳಿಗೂ ಖ್ಯಾತನಾದ. ಈ ಕಾಲ ಜ್ಞಾನಶೋಧನೆಗೆ ಹೆಸರಾದಂತೆ ವಾಮಾಚಾರಕ್ಕೂ ಪ್ರಸಿದ್ಧವಾಗಿತ್ತು. ಯೋನ್ ಗ್ಯೂಮ್ಯುಂಡ್‌ಸುನ್ನನ ವೈಜ್ಞಾನಿಕ ಗ್ರಂಥಗಳೂ ಯೋನ್ ಮಾಗ್ನೂಸುನ್‌ನ ಅಪ್ರತಿಮ ಕೃತಿ ಪೀಸ್‌ಲಾರ್ ಸಾಗಾ (ವಾಮಾಚಾರದ ವಿರುದ್ಧ ನಡೆಸಿದ ಹೋರಾಟದ ಕಥೆ), ಭಾರತಪ್ರವಾಸ ಮಾಡಿಬಂದ ಯೋನ್ ಊಲಾಫ್‌ಸುನ್ನನ ಐಫಿ ಸಾಗಾ ಎಂಬ ಆತ್ಮಕಥೆ ಈ ಯುಗದ ವಿವಿಧ ಮನೋಧರ್ಮಗಳನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆ. 18ನೆಯ ಶತಮಾನ ವೈಚಾರಿಕ ವೈಜ್ಞಾನಿಕ ಯುಗ. ಭೂವಿವರಣೆ, ಬೇಸಾಯ, ಉದ್ಯಾನಕಲೆ ಮುಂತಾದವಲ್ಲಿ ಅನೇಕ ಶಾಸ್ತ್ರಗ್ರಂಥಗಳು ರಚಿತವಾದುದು ಈಗಲೇ.

ಹಾಲ್ಫ್‌ಡ್ಯಾನ್ ಐನಾರ್ ಸುನ್ ಬರೆದ ಐಸ್ಲೆಂಡಿನ ಸಮಗ್ರ ಇತಿಹಾಸ ಪ್ರಕಟವಾದದ್ದು ಈಗಲೇ. ಅನೇಕ ಸ್ವತಂತ್ರ ಕೃತಿಗಳಿಂದಲೂ ಅದಕ್ಕೂ ಮಿಗಿಲಾಗಿ ಮಿಲ್ಟನ್ ಮತ್ತು ಪೋಪರ ಇಂಗ್ಲಿಷ್ ಕಾವ್ಯಗಳ ಅನುವಾದದಿಂದಲೂ ಯೋನ್ ಥೂರ್‌ಲಾಕ್‌ಸುನ್ ಈ ಶತಕದ ಶ್ರೇಷ್ಠ ಕವಿಯೆನಿಸಿದ. ಮುಂದಿನ ಪೀಳಿಗೆಯ ಕವಿಗಳ ಮೇಲೆಲ್ಲ ಈತನ ಪ್ರಭಾವ ಬಿತ್ತು.

**ಆಧುನಿಕ ಕಾಲ:** ರಾಷ್ಟ್ರದ ಹಾಗೂ ಸಾಹಿತ್ಯದ ನವೋದಯಕಾಲ 19ನೆಯ ಶತಮಾನದೊಂದಿಗೇ ಆರಂಭವಾದರೂ ಅದರ ಪೂರ್ವ ಸೂಚನೆಗಳು 18ನೆಯ ಶತಕದ ಅಂತ್ಯಭಾಗದಲ್ಲೇ ಕಾಣತೊಡಗಿದ್ದವು. ಕೈಗಾರಿಕಾ ಕ್ರಾಂತಿ, ವಾಣಿಜ್ಯ ಸುಧಾರಣೆಗಳಿಂದ ಐಸ್ಲೆಂಡಿನ ಜನಜೀವನದಲ್ಲಿ ನವಜಾಗೃತಿಯುಂಟಾಯಿತು. ಹೊಸ ವಿಚಾರಧಾರೆಯ ಬಗ್ಗೆ ಹುಟ್ಟಿದ ಆಸಕ್ತಿ ಪ್ರಾಚೀನ ಪರಂಪರೆಯಲ್ಲಿ ಇದ್ದ ಅಪಾರ ಶ್ರದ್ಧೆಯನ್ನು ತಗ್ಗಿಸಲಿಲ್ಲ. ಜೊತೆಗೆ ಉತ್ಕಟ ರಾಷ್ಟ್ರೀಯ ಭಾವನೆ ಬದುಕಿಗೊಂದು ಧೈರ್ಯವನ್ನು ಕಲ್ಪಿಸಿತು. ವೈವಿಧ್ಯಪೂರ್ಣವಾಗಿ ಸತ್ತ್ವಯುತವಾಗಿ ಸಾಹಿತ್ಯ, ಕಲೆ ಬೆಳೆದು ಸಮೃದ್ಧವಾದುವು. ಹೊಸ ಮುದ್ರಣಯಂತ್ರದ ಸ್ಥಾಪನೆ ಕ್ರೈಸ್ತಮಠಗಳ ಅಚ್ಚುಕೂಟದ ಏಕಸ್ವಾಮಿತ್ವವನ್ನು ಭಂಗಗೊಳಿಸಿ ಸಾಹಿತ್ಯದ ಹೊಸ ಯುಗದ ನಾಂದಿಯನ್ನು ಹಾಡಿತು. ಅನೇಕ ಸಾಹಿತ್ಯ ಸಂಸ್ಥೆಗಳು ಆರಂಭವಾಗಿ ಹಲವಾರು ಗ್ರಂಥಗಳ ಪ್ರಕಾಶನ ಕಾರ್ಯದಲ್ಲಿ ತೊಡಗಿದುವು. ರಾಸ್ಮಸ್ ಕ್ರಿಶ್ಚಿಯನ್ ರಾಸ್ಕ್ ಎಂಬ ಡೇನಿಷ್ ಭಾಷಾಪಂಡಿತ ಸ್ಥಾಪಿಸಿದ ಐಸ್ಲೆಂಡಿಕ್ ಲಿಟರರಿ ಸೊಸೈಟಿ, ಆತ ಆರಂಭಿಸಿದ ಸ್ಕಿರ್‌ನಿರ್ ಎಂಬ ಸಾಹಿತ್ಯಪತ್ರಿಕೆ, ಯೋನ್ ಸಿಗ್ಯೂರೂಸುನ್ ನಡೆಸುತ್ತಿದ್ದ ಫ್ಯೂಲ್‌ನಿರ್ ಎಂಬ ರೊಮ್ಯಾಂಟಿಕ್ ಸಾಹಿತ್ಯ ಪತ್ರಿಕೆ ಐಸ್ಲೆಂಡಿಕ್ ಸಾಹಿತ್ಯ ಸಂಪತ್ತನ್ನು ಉಳಿಸಿ ಬೆಳೆಸುವುದರಲ್ಲಿ ಮುಖ್ಯಪಾತ್ರ ವಹಿಸಿದವು. ಬ್ಯಾರ್ನಿ ಥೂರ್ ಆರೆನ್ಸುನ್ ರೊಮ್ಯಾಂಟಿಕ್ ಕಾವ್ಯದ ಆದ್ಯಪ್ರವರ್ತಕನಾದ ಶ್ರೇಷ್ಠಕವಿ. ಯೋನಾಸ್ ಹಾಲ್ ಗ್ರಿಮ್‌ಸುನ್ ಬಹು ಅಚ್ಚುಮೆಚ್ಚಿನ ಇನ್ನೊಬ್ಬ ರೊಮ್ಯಾಂಟಿಕ್ ಕವಿ. ರಿಮ್ಯೂರ್ ಶೈಲಿಯ ಕಾವ್ಯರಚನೆಯಲ್ಲಿ ಮಹತ್ತಾದ ಯಶಗಳಿಸಿದ ಸಿಗ್ಯುರ್ದುರ್ ಬ್ರೀಡ್‌ಫೋರ್ಡ್, ಗತಕಾಲದ ಚಿತ್ರ ಕಣ್ಣಿಗೆ ಕಟ್ಟುವಂಥ ಐತಿಹಾಸಿಕ ಕವನಗಳನ್ನು ರಚಿಸಿದ ಗ್ರಿಮ್ಯೂರ್ ಥಾಮ್‌ಸುನ್, ತಾತ್ತ್ವಿಕ ಕವನಗಳಿಗೆ ಹೆಸರಾದ ಬ್ಯೂರ್ನ್‌ಗುನ್ನಲಾಗ್‌ಸುನ್ ಇವರು ಕಾವ್ಯಭಂಡಾರಕ್ಕೆ ತಮ್ಮ ವಿಶಿಷ್ಟ ಕಾಣಿಕೆಗಳನ್ನು ಸಲ್ಲಿಸಿದರು. ಹಿರಿಯ ಬೆನಿಡಿಕ್ಟ್ ಗ್ರ್ಯೂಂದಾಲ್ ಹೆಚ್ಚಿನ ಮನ್ನಣೆಗಳಿಸಿದಂತೆ ಕಿರಿಯ ಬೆನಿಡಿಕ್ಟ್ ಗ್ರ್ಯೂಂದಾಲ್ ತನ್ನ ವಿಡಂಬನ ಕವಿತೆಗಳಿಂದ ಗಮನವನ್ನು ಸೆಳೆದ. ಗೈಸ್ಲಿ ಬ್ರಿನ್ಯೋಲ್ಫ್‌ಸುನ್ನನ ಪ್ರೇಮಗೀತೆಗಳು ಗಮನಾರ್ಹವಾದುವು. ಸುಂದರವೂ ಲಲಿತವೂ ಆದ ಪ್ರೇಮಗೀತೆಗಳನ್ನೂ ಪ್ರಕೃತಿಗೀತೆಗಳನ್ನೂ ರಚಿಸಿ ಹೆಸರಾದ ಸ್ಟೈನ್ ಗ್ರಿಮ್ಯೂರ್‌ಥೂರ್ ಸ್ಟೈನ್‌ಸುನ್, ಅನೇಕ ಶ್ರೇಷ್ಠ ಚಾಟೂಕ್ತಿಗಳನ್ನೂ ವಿಡಂಬನ ಕವನಗಳನ್ನೂ ಬರೆದುದಲ್ಲದೆ ಷೇಕ್ಸ್‌ಪಿಯರನ ಕಿಂಗ್‌ಲಿಯರ್ ನಾಟಕವನ್ನೂ ಅರೇಬಿಯನ್ ನೈಟ್ಸ್ ಕಥೆಗಳನ್ನೂ ಭಾಷಾಂತರ ಮಾಡಿ ಮೆಚ್ಚುಗೆ ಗಳಿಸಿದ. ಪಾದ್ರಿ ಮಾಥ್ಯಾಸ್ ಯೋಹ್ಯೂಮ್‌ಸುನ್ 19ನೆಯ ಶತಮಾನದ ಸರ್ವಶ್ರೇಷ್ಠ ಕವಿ. ಸೊಗಸಾದ ಭಾವಗೀತೆಗಳನ್ನೂ ಸ್ತೋತ್ರಗಳನ್ನೂ ನಾಟಕಗಳನ್ನೂ ಬರೆದಿದ್ದಾನೆ; ರೂಢಿಯಲ್ಲಿದ್ದ ಎಲ್ಲ ಕವನ ಮಾದರಿಗಳಲ್ಲೂ ಪ್ರಾವೀಣ್ಯವನ್ನು ಸಾಧಿಸಿದ್ದ ಈ ಕವಿ ತನ್ನದೇ ಆದ ಹೊಸ ಮಾದರಿಗಳನ್ನೂ ಸೃಷ್ಟಿಸಿದ. ಉದಾತ್ತ ಮಾನವೀಯತಾವಾದಿಯೂ ಅಸಾಧಾರಣ ಪ್ರತಿಭಾಶಾಲಿಯೂ ಆದ ವರಕವಿ ಈತ. ಕಿರಿಯ ಪ್ರಾಯದಲ್ಲೇ ಅಕಾಲ ಮೃತ್ಯುವಿಗೊಳಗಾದ ಕ್ರಿಸ್ತ್ಯಾನ್ ಯೋನ್‌ಸುನ್ನನ ವರ್ಣನಾತ್ಮಕ ಭಾವಗೀತೆಗಳು ಉತ್ತಮ ದರ್ಜೆಯವು. ರಾಜಕಾರಣಿ ಪತ್ರಿಕೋದ್ಯಮಿ ಯೋನ್ ಊಲಾಫ್‌ಸುನ್ ಸಾಹಿತಿಯಾಗಿಯೂ ಕೀರ್ತಿವಂತನಾದ. ಈತನ ಸೋದರ ಪಾಲ್ ಊಲಾಫ್‌ಸುನ್ ಶಾಲಾಶಿಕ್ಷಣ ಪಡೆಯದಿದ್ದರೂ ಬಹು ಜನಪ್ರಿಯನಾದ ಕವಿಯೆನಿಸಿದ. ಹಾಸ್ಯ, ವಿಡಂಬನೆ, ಪ್ರೇಮಗಳನ್ನು ವಸ್ತುವಾಗುಳ್ಳ ಇವನ ಕವಿತೆಗಳು ಸಹಜಸ್ಫೂರ್ತಿಯಿಂದ ಹೊಮ್ಮಿದ ಗೀತೆಗಳಾಗಿ ಜನಸಾಮಾನ್ಯರ ನಾಲಗೆಯ ಮೇಲೆ ಸದಾ ನಲಿದಾಡಿದುವು. ಪಾದ್ರಿ ವಾಲ್ಡಿಮ್ಯೂರ್ ಬ್ರೀಮನ ಸ್ತೋತ್ರಗಳೂ ಬೈಬಲಿಗೆ ಸಂಬಂಧಿಸಿದ ಹಾಡುಗಳೂ ಶ್ರೇಷ್ಠ ಪಂಕ್ತಿಯಲ್ಲಿ ನಿಲ್ಲತಕ್ಕವಾಗಿವೆ.

ಯೋನ್‌ಸ್ಟೈನ್ ಗ್ರಿಮ್‌ಸುನ್ನನ ಆತ್ಮಕಥೆ ಗದ್ಯಸಾಹಿತ್ಯದ ಒಂದು ಶ್ರೇಷ್ಠ ಕೃತಿ. ಯೋನ್ ಆರ್ನಾಸುನ್ ವಿಪುಲವಾಗಿ ಸಂಗ್ರಹಿಸಿದ ಜಾನಪದ ಕಥೆಗಳಲ್ಲಿ ಜನಸಾಮಾನ್ಯರ ನಾಡಿಯ ಮಿಡಿತವನ್ನು ಕೇಳಬಹುದು. ಉತ್ತಮ ಸಾಹಿತಿ ಎನ್ನಲಾಗದಿದ್ದರೂ ಸಿಗ್ಯುರ್ದ್ಯೂರ್ ಪೀಟರ್‌ಸುನ್ ನಾಟಕಸಾಹಿತ್ಯದ ಮೊದಲಿಗನಾಗಿ ಗಣ್ಯನಾಗಿದ್ದಾನೆ. ಸ್ವೈನ್‌ಯೋರ್ನ್ ಈಗಿಲ್‌ಸುನ್ನನ ಲೆಕ್ಸಿಕನ್ ಪೊಯೆಟಿಕಮ್ ಎಂಬ ಸ್ಕಾಲ್ಡಿಕ್ ಕಾವ್ಯದ ಅರ್ಥಕೋಶ ಒಂದು ಅಮೋಘವಾದ ಚಿರಸ್ಮರಣೀಯ ಕೃತಿ. ಈಗಿಲ್‌ಸುನ್ ಸ್ವತಃ ಕವಿ. ಆದರೆ ಸ್ವಂತ ಕವಿತೆಗಳಿಗಿಂತ ಈತ ಭಾಷಾಂತರಿಸಿದ ಹೋಮರನ ಕಾವ್ಯಗಳು ಅದ್ವಿತೀಯವಾಗಿವೆ.

19ನೆಯ ಶತಮಾನದ ಕೊನೆಯ ವೇಳೆಗೆ ಕಾವ್ಯದಿಂದ ಕಾದಂಬರಿಯ ಕಡೆಗೂ, ಕಲ್ಪನಾವಿಲಾಸದಿಂದ ವಾಸ್ತವತೆಯ ಕಡೆಗೂ ಅಭಿರುಚಿ ವಾಲಿತು. ಯೋನ್ ಊಲಾಫ್‌ಸುನ್ನನ ಬರೆಹಗಳಲ್ಲಿ ಆಗಲೆ ವಾಸ್ತವ ಪಂಥದ ಸೂಚನೆಗಳು ಕಾಣಿಸಿದ್ದವು. ಜಾರ್ಜ್ ಬ್ರ್ಯಾಂಡಿಸ್ ವಾಸ್ತವತೆಯ ಮೊದಲ ಪ್ರವರ್ತಕ. ಈತ ಕೋಪನ್‌ಹೇಗನ್ ಕಾಲೇಜಿನಲ್ಲಿ ಶಿಕ್ಷಕನಾಗಿದ್ದ. ಈತನ ಪ್ರಭಾವದಿಂದ ಸ್ಫೂರ್ತಿಗೊಂಡ ಗೆಸ್ಟ್ಯೂರ್ ಪಾಲ್‌ಸುನ್ ಈನಾರ್ ಹ್ಯೋರ್ ಲೈಫ್‌ಸುನ್ ಕ್ವಾರನ್, ಕವಿ ಹ್ಯಾನಿಸ್ ಹಾಲ್ಫ್‌ಸ್ಟೈನ್ ತಮ್ಮ ಅತ್ಯುತ್ತಮ ಕಥೆ ಕಾದಂಬರಿಗಳಲ್ಲಿ ವಾಸ್ತವತೆಯನ್ನು ಎತ್ತಿಹಿಡಿದು ಪ್ರಸಿದ್ಧರಾದರು. 1882ರಲ್ಲಿ ಇವರೆಲ್ಲರೂ ಸೇರಿ ವೆರ್ದಂಡಿ ಸಾಹಿತ್ಯಪತ್ರಿಕೆಯನ್ನು ವಾಸ್ತವತೆಯ ಪ್ರಸಾರಕ್ಕೆಂದೇ ಆರಂಭಿಸಿದರು. ಬಂದುದು ಅದರ ಒಂದೇ ಸಂಪುಟವಾದರೂ ಸಾಹಿತ್ಯವೃತ್ತಗಳಲ್ಲಿ ಅದು ಹೊಸ ವಿಚಾರದ ಕ್ರಾಂತಿಯನ್ನು ಪ್ರಚೋದಿಸಿತು. ಇಷ್ಟು ಪ್ರಗತಿಶೀಲವಾಗಿದ್ದರೂ ಸಾಂಪ್ರದಾಯಿಕ ಸಾಹಿತ್ಯದ ಬಗ್ಗೆ ಇದ್ದ ಶ್ರದ್ಧೆ ಕಡಿಮೆಯಾಗಲಿಲ್ಲ. ಹಾಲ್ಫ್‌ಸ್ಟೈನ್ ಈ ಕಾಲದ ಬಹು ಪ್ರತಿಭಾಶಾಲಿಯಾದ ಕವಿ. ಈತ ಐಸ್ಲೆಂಡ್ ರಿಪಬ್ಲಿಕ್ಕಿನ ಪ್ರಥಮ ದೇಶೀಯ ಪ್ರಧಾನಿ. ಈತನ ದೇಶಭಕ್ತಿಯ ಗೀತೆಗಳಲ್ಲೂ ಪ್ರೇಮಗೀತೆಗಳಲ್ಲೂ ಬಿಸಿರಕ್ತದ ಉತ್ಸಾಹ ಉಲ್ಲಾಸಗಳು ತುಂಬಿವೆ. ವೆರ್ದಂಡಿ ಗುಂಪಿನವನಲ್ಲವಾದರೂ ಥೊರೆಸ್ಟೈನ್ ಎರ್ಲಿಂಗ್‌ಸುನ್ ವಾಸ್ತವ ಪಂಥದ ಅನುಯಾಯಿ. ದುರಭಿಮಾನದಿಂದ ಕೂಡಿದ ಜಾತೀಯತೆಯನ್ನೂ ಸಾಮಾಜಿಕ ಅನ್ಯಾಯಗಳನ್ನೂ ಈತ ತೀವ್ರವಾಗಿ ಖಂಡಿಸಿದ. ಬಹು ಸುಂದರವಾದ ದೇಶಭಕ್ತಿ ಗೀತೆಗಳನ್ನು, ಪ್ರಕೃತಿ ಗೀತೆಗಳನ್ನೂ ರಚಿಸಿದ; ಪ್ರಯೋಗಶೀಲನಾದರೂ ಸಾಂಪ್ರದಾಯಿಕ ಚೌಪದಿ ರಚನೆಯಲ್ಲಿ ಅದ್ವಿತೀಯನೆನಿಸಿದ.

ಡಾಕ್ಟರ್ ಯೋನ್‌ಥೂರ್ ಕೆಲ್ಸನ್, ಸಿಗ್ಯುರ್‌ಯೋನ್ ಫ್ರಿಡ್‌ಯೋನ್‌ಸುನ್, ಥೂರ್ ಸ್ಟೈನ್ ಗೈಸ್ಲಾಸುನ್, ಗ್ಯೂಡ್ ಮ್ಯುಂಡ್ಯುರ್ ಫ್ರಿಡ್ ಯೋನ್‌ಸುನ್, ಗ್ಯೂಡ್‌ಮ್ಯುಂಡ್ಯುರ್ ಗ್ಯೂಡ್ ಮ್ಯುಂಡ್‌ಸುನ್, ಸಿಗ್ಯುರ್ಡ್ಯೂರ್ ಸಿಗ್ಯುರ್ಡ್‌ಸುನ್, ಯೋರ್ನಿಯೋನ್‌ಸುನ್ ಮೊದಲಾದ ಹೆಸರಾಂತ ಸಾಹಿತಿಗಳಲ್ಲದೆ ಸಣ್ಣಕಥೆ ಕಾದಂಬರಿಗಳ ಕ್ಷೇತ್ರದಲ್ಲಿ ಅಗ್ರಗಣ್ಯನೆನಿಸಿದ ಗ್ಯೂಡ್ ಮ್ಯುಂಡರ್ ಮಾಗ್ನಾಸುನ್, ರಾಷ್ಟ್ರದ ಹಿರಿಯ ಕವಿಗಳ ಸಾಲಿನಲ್ಲಿ ನಿಲ್ಲುವ ಈನಾರ್ ಬೆನಿಡಿಕ್ಟ್‌ಸುನ್ ಮತ್ತು ಸ್ಟೀಫನ್ ಜಿ.ಸ್ಟೀಫನ್‌ಸುನ್ ಆಧುನಿಕ ಐಸ್ಲೆಂಡಿಕ್ ಸಾಹಿತ್ಯದ ಪ್ರಗತಿಗೆ ಕಾರಣರಾದರು. ಸ್ಟೀಫನ್‌ಸುನ್ ಕೆನಡ ಮತ್ತು ಅಮೆರಿಕಗಳಲ್ಲಿರುವ ಐಸ್ಲೆಂಡಿಕ್ ಸಾಹಿತಿಗಳಲ್ಲಿ ಅಗ್ರಪಂಕ್ತಿಯ ಕವಿ.

**ಪ್ರಚಲಿತ ಸಾಹಿತ್ಯ:** ವಾಸ್ತವವಾದ, ಸಮಾಜವಾದ, ನವರೊಮ್ಯಾಂಟಿಕ್ ಮಾರ್ಗ, ಸಮತಾವಾದ ಮುಂತಾದ ಹಲವಾರು ಮನೋಧರ್ಮಗಳನ್ನು ಇಂದಿನ ವಿವಿಧ ಸಾಹಿತ್ಯಾಭಿವ್ಯಕ್ತಿಗಳಲ್ಲಿ ಕಾಣಬಹುದು. ಅನೇಕ ಪ್ರತಿಭಾವಂತ ಸಾಹಿತಿಗಳು ತಮ್ಮ ವಿವಿಧ ಕಾಣಿಕೆಗಳಿಂದ ಪ್ರಚಲಿತ ಸಾಹಿತ್ಯಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ. ನವ್ಯಕಾವ್ಯ ವೈವಿಧ್ಯಪೂರ್ಣವಾಗಿದೆ. ಸಮೃದ್ಧವಾಗಿದೆ. ಊರ್ನ್‌ಆರ್ನ್ನಾರ್‌ಸುನ್ (ಮಾಗ್ನುಸ್ ಸ್ಟೀಫ್ಯಾನ್‌ಸುನ್ 1884–1942) ಅವರ ಕಾವ್ಯದಲ್ಲಿ ಭಾವ ಭಾಷೆಗಳೆರಡರ ಮಧುರ ಸಂಗಮವನ್ನೂ ಗಮನ ಸೆಳೆಯುವ ತನ್ನತನವನ್ನೂ ಕಾಣಬಹುದು. ಯೇಕಬ್ ಯೋಹಾನ್ನಸುನ್ ಉತ್ಕೃಷ್ಟ ಸಾನೆಟ್ಟುಗಳನ್ನೂ ಆಧ್ಯಾತ್ಮಿಕ ಕವನಗಳನ್ನೂ ಪ್ರಬಂಧ ಹಾಗೂ ವಿಮರ್ಶಾಲೇಖನಗಳನ್ನೂ ಬರೆದಿದ್ದಾನೆ, ಯೋನ್‌ಮಾಗ್ನಾಸುನ್ (1896–1944) ಐಸ್ಲೆಂಡ್ ಹಿರಿಮೆಗೆ ಶಾಶ್ವತ ಸಾಕ್ಷಿ ಎನ್ನಬಹುದಾದ ಬ್ಯೋರ್ನ್ ಎ ರೆಯ್‌ಡಾರ್ ಫೆಲ್ಲಿ ಎಂಬ ಮಹಾಕಾವ್ಯವನ್ನು ರಚಿಸಿದ್ದರೆ ಟೋಮಸ್ ಗ್ಯೂಡ್‌ಮ್ಯುಂಡ್‌ಸುನ್ (1901– ) ರಾಜಧಾನಿ ರಿಕ್‌ಝುವಿಕ್ ನಗರ ಜೀವನದ ವಿಲಕ್ಷಣ ಚಿತ್ರಗಳನ್ನು ತನ್ನ ಕವನಗಳಲ್ಲಿ ಸೆರೆ ಹಿಡಿದಿದ್ದಾನೆ. ಗ್ರಾಮ ಜೀವನ ಕುರಿತು ಬರೆದಿರುವ ಕವಿಗಳಲ್ಲಿ ಸ್ಟೈನ್ ಸ್ಟೈನಾರ್ ಪ್ರತ್ಯೇಕವಾಗಿ ನಿಲ್ಲಬಲ್ಲ ಸಮರ್ಥ, ಡೇವಿಡ್ ಸ್ಟೀಫ್ಯಾನ್‌ಸುನ್ ಈ ತಲೆಮಾರಿನ ಅತ್ಯಂತ ಜನಪ್ರಿಯ ಕವಿ. ನಾಟಕ ಕಾದಂಬರಿ ಕ್ಷೇತ್ರಗಳಲ್ಲೂ ಈತನ ಪ್ರತಿಭೆ ಹರಿದಿದೆ.

ಸಾಗಾ ಸಾಹಿತ್ಯ ಪ್ರಕಾರದ ತೌರಾಗಿದ್ದ ಐಸ್ಲೆಂಡಿನಲ್ಲಿ ಇಂದು ಕಾದಂಬರಿ ಅತ್ಯಂತ ಜನಪ್ರಿಯ ಸಾಹಿತ್ಯವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಕಲ್ಪನಾಶೀಲ ಮನೋಭಾವಕ್ಕೂ ವಾಸ್ತವದೃಷ್ಟಿಗೂ ನಡೆವ ನಿರಂತರ ಘರ್ಷಣೆ ಈ ಕಾದಂಬರಿಗಳ ಸಾಮಾನ್ಯ ವಸ್ತು, ವಾಸ್ತವವಾದಿಗಳು ಸಣ್ಣ ಕಥೆ ಕಾದಂಬರಿಗಳಿಗೆ ಹೊಸ ಸೊಬಗನ್ನೂ ಔನ್ನತ್ಯವನ್ನೂ ತಂದು ಕೊಟ್ಟಿದ್ದಾರೆ. 19ನೆಯ ಶತಕದ ಮಧ್ಯಭಾಗದಲ್ಲೇ ಪ್ರಥಮ ಕಾದಂಬರಿಕಾರ ಯೋನ್‌ಥೂರ್ ಊಡ್‌ಸುನ್ ಸೊಗಸಾದ ಎರಡು ಕಾದಂಬರಿಗಳನ್ನು ಪ್ರಕಟಿಸಿ ದಾರಿಮಾಡಿದ್ದ. ಗ್ರಾಮಜೀವನದ ವಾಸ್ತವ ಚಿತ್ರಣ, ಜೀವಂತ ಪಾತ್ರಸೃಷ್ಟಿ, ಕಲಾತ್ಮಕವಾದ ರಚನೆ ಈತನ ಕಾದಂಬರಿಗಳನ್ನು ಶ್ರೇಷ್ಠವೆನಿಸಿದವು. 1882ರಲ್ಲಿ ಪ್ರಕಟವಾದ ಪ್ರಥಮ ಐತಿಹಾಸಿಕ ಕಾದಂಬರಿಯನ್ನು ಬರೆದದ್ದು– ಟೂರ್ಫ್‌ಹಿಲ್ ದೂರ್ ಥೂರ್‌ಸ್ಟೈನ್ಸ್ ದೂತ್ತೀರ್ ಎಂಬ ಮಹಿಳೆ. ಐನಾರ್ ಹ್ಯೋರ್‌ಲೈಫ್‌ಸುನ್ ಕ್ವಾರನ್ ವಾಸ್ತವ ಪಂಥದ ಶ್ರೇಷ್ಠ ಕಾದಂಬರಿಕಾರ. ಹಾಲ್‌ಡ್ಯೂರ್ ಕೀಲ್ಯಾನ್ ಲಾಕ್ಸ್‌ನೆಸ್ ಅಸಾಧಾರಣ ಪ್ರತಿಭಾಶಾಲಿ. ಅತ್ಯುತ್ತಮ ಕಥೆ ಕಾದಂಬರಿಗಳನ್ನು ಬರೆದದ್ದು ಮಾತ್ರವಲ್ಲದೆ ಈತ ಅನೇಕ ಕಿರಿಯ ಲೇಖಕರ ಮೇಲೆ ಪ್ರಭಾವ ಬೀರಿದ್ದಾನೆ. ಈತನ ಕಾದಂಬರಿಗಳು ಇತರ ಭಾಷೆಗಳಿಗೂ ಅನುವಾದವಾಗಿವೆ. ಊಲಾಫ್ಯೂರ್ ಯೋಹಾನ್ ಸಿಗ್ಯುರ್ಡ್‌ಸುನ್ (1918– ) ಪ್ರಖ್ಯಾತ ಕಾದಂಬರಿಕಾರ. ಕೆಲವು ಅತ್ಯುತ್ಕೃಷ್ಟ ಸಣ್ಣಕಥೆಗಳನ್ನೂ ಬರೆದಿದ್ದಾನೆ. ಗ್ಯೂಡ್ ಮುಂಡ್ಯೂರ್ ಗೀಸ್ಲಾಸುನ್ ಹಾಗಲಿಸ್ನ್ ಮತ್ತೊಬ್ಬ ಶ್ರೇಷ್ಠ ಕಥೆಗಾರ. ಆಕ್ಸೈಲ್ ಥೂರ್‌ಸ್ಟೈನ್ ಸುನ್ ಮೊದಲ ಮಹಾಯುದ್ಧಕ್ಕೆ ಸಂಬಂಧಿಸಿದ ವಸ್ತುಗಳ ಮೇಲೆ ಸಣ್ಣಕಥೆಗಳನ್ನು

ಬರೆದಿದ್ದಾನೆ. ಹಾಲ್‍ಡೋರ್ ಸ್ಟೀಫ್ಯಾನ್ ಸುನ್‍ನ ಕಥೆಗಳಲ್ಲಿ ಮಾನವೀಯ ಅನುಕಂಪ, ಮನೋವಿಶ್ಲೇಷಣೆ ಕಾಣುತ್ತವೆ. ನಾಟಕ ಸಾಹಿತ್ಯದಲ್ಲೂ ಸಾಕಷ್ಟು ಕೃಷಿ ನಡೆದಿದೆ. 19ನೆಯ ಶತಕದ ದೊಡ್ಡ ನಾಟಕಕಾರ ಇಂಡ್ರಿಡಿ ಐನಾರ್ ಸುನ್ 20ನೆಯ ಶತಮಾನದ ನಾಟಕಗಳ ಪಿತಾಮಹ ಎನ್ನಬಹುದು. ಯೋಹಾನ್ ಸಿಗ್ಯುರ್‍ಯೋನ್ ಸುನ್ ಅತ್ಯಂತ ಶ್ರೇಷ್ಠ ನಾಟಕಕಾರ. ಅಂತಾರಾಷ್ಟ್ರೀಯ ಮನ್ನಣೆಗೂ ಪಾತ್ರನಾದ ಪ್ರತಿಭಾಶಾಲಿ. ಐವಿಂಡ್ ಆಫ್ ದಿ ಹಿಲ್ಸ್ ಈತನ ಅತ್ಯಂತ ಹೃದಯಸ್ಪರ್ಶಿಯಾದ ದುರಂತನಾಟಕ. ಗ್ಯುಡ್ ಮ್ಯುಂಡುರ್ ಕಂಬಾನ್ ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದ ಇನ್ನೊಬ್ಬ ನಾಟಕಕಾರ. ಕಾದಂಬರಿಯಲ್ಲೂ ಈತನ ಕೀರ್ತಿ ದೊಡ್ಡದು. ಸಿಗ್ಯುರೆಡ್ಯುರ್ ಎಗ್ಗೆರ್ಜ್ ಅನೇಕ ಸಾಂಕೇತಿಕ ನಾಟಕಗಳನ್ನು ಬರೆದಿದ್ದಾನೆ.

ಈ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಮಹಿಳೆಯರೇನೂ ಹಿಂದೆ ಬಿದ್ದಿಲ್ಲ. ಪ್ರಥಮ ಐತಿಹಾಸಿಕ ಕಾದಂಬರಿಯನ್ನು ಬರೆದದ್ದು ಒಬ್ಬ ಮಹಿಳೆ. ಊಲೂಫ್ ಸಿಗ್ಯುರ್ ಥೂರ್ ದೊತ್ತೀರ್, ಥಿಯೊಡೋರಾ ಥೂರ್ ಊಡ್‍ಸುನ್, ಗ್ಯೂಡ್ ಫಿನ್ನಾಯೋನ್ಸ್ ದೊತ್ತೀರ್, ಥಿಯೊಡೋರಾ ಥೂರ್ ಊಡ್‍ಸುನ್, ಗ್ಯೂಡ್ ಫಿನ್ನಾಯೋನ್ಸ್ ದೊತ್ತೀರ್ ಮೊದಲಾದ ಕವಯತ್ರಿಯರಲ್ಲಿ ಊನ್ನೂರ್ ಬೆನೆಡಿಕ್ಟ್ ದೊತ್ತೀರ್ ಅಗ್ರಗಣ್ಯಳಾಗಿದ್ದಾಳೆ. ಈಕೆ ದೊಡ್ಡ ಕಾದಂಬರಿಯೊಂದನ್ನೂ, ಸಣ್ಣಕಥೆಯ, ವ್ಯಕ್ತಿಚಿತ್ರ, ಅದ್ಭುತಕಥೆಗಳನ್ನೂ (ಫೇರಿ ಟೇಲ್ಸ್) ಬರೆದಿದ್ದಾಳೆ. ಕ್ರಿಸ್ಟಿನ್ ಸಿಗ್‍ಫ್ಯೂಸ್ ದೊತ್ತೀರ್ ಬರೆದಿರುವ ಉತ್ತಮ ನಾಟಕಗಳು ರಂಗದ ಮೇಲೂ ಯಶಸ್ವಿಯಾಗಿವೆ. ಅನೇಕ ವಿದೇಶೀ ಪ್ರಭಾವಗಳಿದ್ದು, ರಾಜಕೀಯ ಒತ್ತಡಗಳ ವಿರುದ್ಧ ಹೋರಾಡುವುದರ ನಡುವೆಯೂ ಸಾಗಾ ಮತ್ತು ಕಾವ್ಯಗಳ ನೆಲೆವೀಡಾದ ಐಸ್ಲೆಂಡಿನ ಸಾಹಿತ್ಯಲೋಕದಲ್ಲಿ ಮಬ್ಬುಕವಿದಿಲ್ಲ. ಪ್ರಾಚೀನ ಸಾಹಿತ್ಯ ಈ ಪ್ರಬಲ ರಾಷ್ಟ್ರೀಯ ದೃಷ್ಟಿಗೂ ನವಸಾಹಿತ್ಯಸೃಷ್ಟಿಗೂ ನಿರಂತರ ಸ್ಫೂರ್ತಿಯ ಆಗರವಾಗಿದೆ. ಕಳೆದ ಒಂದು ಶತಕದಲ್ಲಿ ಐಸ್ಲೆಂಡ್ ಸಾಧಿಸಿರುವ ಸಾಹಿತ್ಯಸಿದ್ಧಿ ಅಪೂರ್ವವಾದುದು. ಒಂದೂಕಾಲು ಲಕ್ಷಕ್ಕೆ ಮೀರದಷ್ಟು ಮಾತ್ರ ಜನ ಇರುವ ಈ ಪುಟ್ಟ ದೇಶ ತನ್ನ ಮಿತಿಗೆ ಮೀರಿದ ಸಾಧನೆಯನ್ನು ತೋರಿದೆ. ಇಂದಿನ ಐಸ್ಲೆಂಡಿನ ಸಾಹಿತ್ಯ ಭಾಷಾಂತರ ಸೌಲಭ್ಯದಿಂದ ದೇಶವಿದೇಶಗಳಿಗೆಲ್ಲ ಪರಿಚಿತವಾಗುತ್ತಿದೆ. ಸಾಹಿತ್ಯ, ಜ್ಞಾನ, ವಿಜ್ಞಾನಗಳೆಲ್ಲದರ ಪ್ರಗತಿಯ ಕಾರ್ಯದಲ್ಲಿ 1911ರಲ್ಲಿ ಸ್ಥಾಪಿತವಾದ ಐಸ್ಲೆಂಡಿನ ವಿಶ್ವವಿದ್ಯಾಲಯ ವಹಿಸುತ್ತಿರುವ ಪಾತ್ರ ಬಹು ದೊಡ್ಡದು. (ಕೆ.ಬಿ.ಪಿ.)

**ಐಹೊಳೆ:** ಮಲಪ್ರಭಾ ನದಿಯ ದಂಡೆಯ ಮೇಲೆ, ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಆ ನಗರಕ್ಕೆ 26 ಕಿಮೀ ಪೂರ್ವಕ್ಕಿರುವ ಹಳ್ಳಿ. ಇದಕ್ಕೆ ಐಹೊಳ್ಳಿ, ಐವಳ್ಳಿ ಎಂದೂ ಹೆಸರುಗಳುಂಟು. ಇದೊಂದು ಪುರಾತನ ಗ್ರಾಮ. ಇಲ್ಲಿನ ಶಿಲ್ಪವೈಭವದಿಂದಾಗಿಯೂ ಇತಿಹಾಸೋಪಯುಕ್ತ ಶಾಸನ ಸಂದೋಹದಿಂದಾಗಿಯೂ ಇದಕ್ಕೆ ಪ್ರಾಶಸ್ತ್ಯ. ಸುಮಾರು 152 ಮೀ ಅಗಲದ ಪ್ರದೇಶವನ್ನು ಸುತ್ತುವರಿದಿರುವ ಜೀರ್ಣ ಕೋಟೆಯ ನಡುವೆಯೂ ಅದರಿಂದಾಚೆಗೂ ಗತಕಾಲದ ಮೂಕಸಾಕ್ಷಿಗಳಾಗಿ ನಿಂತಿರುವ ಸು. 70 ದೇವಾಲಯಗಳಿವೆ. ಕೋಟೆ 6ನೆಯ ಶತಮಾನದಲ್ಲಿ ಕಟ್ಟಿಸಿದ್ದು. ಆ ಕಾಲಕ್ಕೆ ಸಂಬಂಧಿಸಿದ ಕೆಲವು ಶಾಸನಗಳು ಅದರ ಮೇಲಿವೆ. ಊರಿನ ದಕ್ಷಿಣಕ್ಕಿರುವ ಗುಡ್ಡ ಇಲ್ವಲನೆಂಬ ದೈತ್ಯನ ದೇಹವೆಂದು ಪ್ರತೀತಿಯುಂಟು.

ಐವಳ್ಳಿ ಅಥವಾ ಐಯಹೊಳೆ ಎಂಬ ಹೆಸರು ಬರುವುದಕ್ಕೆ ಹೊಳೆಯ ದಂಡೆಯ

ಹುಚ್ಚುಮಲ್ಲಿ ಗುಡಿ

ಮೇಲೆ ಈ ಹಳ್ಳಿಯಲ್ಲಿ ವಾಸಿಸುತ್ತಿದ್ದ ಗುರುಗಳು, ಅಯ್ಯಗಳು ಕಾರಣವೆಂದು ಹೇಳಲಾಗಿದೆ. ಸಂಸ್ಕೃತದಲ್ಲಿ ಇದು ಆರ್ಯಪುರ. ಐಹೊಳೆಯ ಲಾಡಖಾನ ಗುಡಿಯ ಮೇಲಿನ 6–7ನೆಯ ಶತಮಾನಗಳ ಎರಡು ಶಾಸನಗಳಲ್ಲಿ ಆರ್ಯಪುರದ ಉಲ್ಲೇಖವುಂಟು. ಪುರಾಣದ ಪರಶುರಾಮ ಕ್ಷಾತ್ರವಧೆ ಪೂರೈಸಿದ ಮೇಲೆ ಮಲಪ್ರಭಾ ನದಿಗೆ ಬಂದು ಅದರ ನೀರಿನಲ್ಲಿ ತನ್ನ ಕೊಡಲಿ ತೊಳೆದನಂತೆ. ಹೊಳೆಯ ನೀರು ರಕ್ತವರ್ಣಕ್ಕೆ ತಿರುಗಿದ್ದನ್ನು ಕಂಡು 'ಐಹೊಳೆ!' ಎಂದು ಉದ್ಗರಿಸಿದನಂತೆ. ಆದ್ದರಿಂದ ಇದು ಐಹೊಳೆಯಾಯಿತೆಂದೂ ಪ್ರತೀತಿಯಿದೆ. ಇಲ್ಲಿರುವ ರಾಮಲಿಂಗ ದೇವಾಲಯ ಪುರಾತನವೂ ಸುಂದರವೂ ಆದದ್ದು ಫಾಲ್ಗುಣ ಶುಕ್ಲ ಸಪ್ತಮಿಯಂದು ಇದರ ರಥೋತ್ಸವ. ಹೊಳೆಯ ದಂಡೆಯ ಬಂಡೆಯ ಮೇಲೊಂದು ಶಾಸನವನ್ನು ಕೊರೆಯಲಾಗಿದೆ. ಇದಕ್ಕೂ ಊರಿಗೂ ನಡುವೆ ಇರುವ ಮುದಿಬೀದಿಯ ಆಚೀಚೆ ಬದಿಗಳಲ್ಲಿ ಮುರುಕು ದೇಗುಲಗಳ ಸಾಲುಗಳನ್ನು ಕಾಣಬಹುದು.

ವರಾಹಮೂರ್ತಿ, ದುರ್ಗದೇವಾಲಯ

ಗುಡ್ಡದ ಮೇಲಿರುವ ದೇವಸ್ಥಾನದ ಹೆಸರು ಮೇಗುಡಿ (ಮೇಗುಟಿ). ಇದೊಂದು ಜೈನಮಂದಿರ. ದ್ರಾವಿಡ ಶೈಲಿಯಲ್ಲಿ ಇದನ್ನು ಕಟ್ಟಲಾಗಿದೆ. ಇದು ಎರಡನೆಯ ಪುಲಿಕೇಶಿಯ ಕಾಲದ್ದು. ಈ ಗುಡಿಯ ಸುತ್ತ ಇರುವ ಕಲ್ಲಿನ ಗೋಡೆಯನ್ನು ಸ್ವಲ್ಪ ಕಾಲ ಕೋಟೆಯಂತೆ ಉಪಯೋಗಿಸುತ್ತಿದ್ದರೆಂದು ಕಾಣುತ್ತದೆ. 556ನೆಯ ಶಕವರ್ಷದ (ಪ್ರ.ಶ. 634) ಪ್ರಸಿದ್ಧ ಐಹೊಳೆ ಶಾಸನವಿರುವುದು ದೇಗುಲದ ಪ್ರಾಕಾರದ ಹೊರಗೆ–ಪೂರ್ವದ ಕಡೆಗೆ. ಚಾಳುಕ್ಯ ರಾಜ ಎರಡನೆಯ ಪುಲಿಕೇಶಿಯ ಆಸ್ಥಾನಕವಿ ರವಿಕೀರ್ತಿ ಇದನ್ನು ರಚಿಸಿದ. ಇದರಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ವಿವರಗಳಿವೆ. ಬಾದಾಮಿಯ ಚಾಳುಕ್ಯರ ಪೂರ್ವೇತಿಹಾಸಕ್ಕೆ ಆಧಾರವಾದ ಅನೇಕ ಸಂಗತಿಗಳು ಇದರಿಂದ ಗೋಚರವಾಗಿವೆ ಎನ್ನಬಹುದು. ತಿಪ್ಪೇರುದ್ರಸ್ವಾಮಿಯವರು ಹೇಳುವ ಹಾಗೆ ಪುಲಿಕೇಶಿಯ ವೀರಜೀವನಕ್ಕೆ ಇದೊಂದು ಉಜ್ಜ್ವಲಸಾಕ್ಷಿ. ಕದಂಬವಂಶಕ್ಕೆ ಕುಬ್ಜಕವಿಯ ತಾಳಗುಂದ ಶಾಸನ ಎಷ್ಟು ಪ್ರಮುಖವಾಗಿ ಪರಿಣಮಿಸಿದೆಯೋ ಚಾಳುಕ್ಯ ವಂಶಕ್ಕೆ ರವಿಕೀರ್ತಿಯ ಐಹೊಳೆ ಶಾಸನ ಅಷ್ಟು ಪ್ರಮುಖವಾದುದು. ಬಾದಾಮಿಯ ಚಾಳುಕ್ಯರ ವಂಶಪರಂಪರೆ, ಎರಡನೆಯ ಪುಲಿಕೇಶಿಯ ಯುದ್ಧವಿವರಗಳು, ಅವನ ರಾಜ್ಯ ವಿಸ್ತಾರದ ವಿವರಗಳು–ಎಲ್ಲ ಇಲ್ಲಿ ದೊರೆಯುತ್ತವೆ (**ನೋಡಿ– ಪುಲಕೇಶಿ**). ಚಾಳುಕ್ಯರು ಮೊದಲು ಸಪ್ತಮಾತೃಕೆಯರನ್ನು ಮತ್ತು ಕಾರ್ತಿಕೇಯನನ್ನು ತಮ್ಮ ಮನೆದೇವರೆಂದು ಪೂಜಿಸುತ್ತಿದ್ದು ಅನಂತರ ಅವರು ವೈಷ್ಣವ ಮತ ಸ್ವೀಕಾರ ಮಾಡಿದರಾದರೂ ಅವರು ಅನ್ಯಮತಸಹಿಷ್ಣುಗಳು; ಜೈನರಿಗಾಗಿ ಬಸದಿಗಳನ್ನೂ ಶೈವರಿಗೆ ಶಿವಾಲಯಗಳನ್ನೂ ಕಟ್ಟಿಸಿದರು (**ನೋಡಿ– ಚಾಳುಕ್ಯ**).

ಮೇಗುಡಿಯ ಬಳಿ ನಿಂತು ನೋಡಿದರೆ ಐಹೊಳೆಯ ಸಮಗ್ರ ದರ್ಶನವಾಗುತ್ತದೆ. ಊರಿನ ತುಂಬ ಚೆಲ್ಲಾಡಿದಂತಿರುವ ದೇವಾಲಯಗಳ ಪೈಕಿ ಎತ್ತರವಾದದ್ದು ದುರ್ಗಿಯ ದೇಗುಲ. ಇದರ ಗರ್ಭಗುಡಿ ಬೌದ್ಧ ಚೈತ್ಯಗಳಂತೆ ಅರ್ಧವರ್ತುಲಾಕಾರವಾಗಿದೆ. ಅದಕ್ಕೆ ಸೇರಿದಂತೆ ಆಯಾತಾಕಾರದ ಮಂಟಪವಿದೆ. ಇವೆರಡಕ್ಕೂ ಹೊಂದಿದಂತಿರುವ ಪ್ರದಕ್ಷಿಣಪಥ. ಗರ್ಭಗುಡಿಯ ಮುಂಭಾಗದಲ್ಲಿ ಮುಖಭದ್ರ (ಪೋರ್ಚ್). ಮೇಲೆ ಔತ್ತರೇಯ ಪದ್ಧತಿಯಲ್ಲಿ ಕಟ್ಟಲಾದ ಸಣ್ಣ ಶಿಖರ. ಇಲ್ಲಿ ಗಂಧರ್ವ ದಂಪತಿಗಳು. ಲಕುಳೇಶ, ಸಿಂಹ ಮುಂತಾದ ಮೂರ್ತಿಗಳು ಇವೆ. ಈ ದೇಗುಲದ ಕಾಲ ಸು. 500 ಎಂದು ಹೇಳಲಾಗಿದೆ. ಬೌದ್ಧ

ಗುಹಾದೇವಾಲಯದ ನಿರ್ಮಾಣದಿಂದ ಜೈನ ಮತ್ತು ಬ್ರಾಹ್ಮಣ ಸಂಪ್ರದಾಯಗಳಿಗೆ ನಡೆದು ಬಂದ ಹಾದಿಯ ನಾನಾ ಮಜಲುಗಳನ್ನು ಉಳಿಸಿಕೊಂಡಿರುವ ದೇವಾಲಯ ಈಗ ತಿಳಿದಿರುವ ಮಟ್ಟಿಗೆ ಇದೊಂದೇ. ಇದು ಚೈತ್ಯ ಗುಹೆಗಳನ್ನು ಬಹಳ ಮಟ್ಟಿಗೆ ಹೋಲುತ್ತದೆ. ಬೌದ್ಧ ಚೈತ್ಯ ಶೈಲಿಯನ್ನು ಬ್ರಾಹ್ಮಣ ದೇವಸ್ಥಾನಕ್ಕೆ ಅಳವಡಿಸಿಕೊಳ್ಳುವ

ದುರ್ಗಾ ಗುಡಿ

ಪ್ರಯತ್ನ ಇದಾಗಿರಬಹುದು. ಈ ದೇವಸ್ಥಾನದ ಮಹಾದ್ವಾರದ ಮೇಲಣ ಶಾಸನದಲ್ಲಿ ಪ್ರ.ಶ. 650–80ರ ವರೆಗೆ ಆಳಿದ ಚಾಳುಕ್ಯ ವಿಕ್ರಮಾದಿತ್ಯನ ಹೆಸರನ್ನು ಕಾಣಬಹುದು. ಪಶ್ಚಿಮ ಭಾರತದ ದೇಗುಲ ಶಿಲ್ಪಗಳಲ್ಲಿ ಇದೇ ಹಳೆಯದೆಂದು ಈಚಿನವರೆಗೂ ನಂಬಲಾಗಿತ್ತು. ಆದರೆ ಇದೇ ಗ್ರಾಮದಲ್ಲಿರುವ ಮೇಗುಡಿ, ಲಾಡ್‌ಖಾನ್ ಮತ್ತು ಕೊಂತಗುಡಿಗಳು ಇದಕ್ಕಿಂತ ಹಳೆಯವೆಂಬುದಾಗಿ ತಿಳಿದುಬಂದಿದೆ. ಲಾಡ್‌ಖಾನ್ ಮತ್ತು ಕೊಂತಗುಡಿ ದೇಗುಲಗಳು ಬಾದಾಮಿಯ ಮೂರನೆಯ ಗುಹೆಗಿಂತಲೂ ಪ್ರಾಚೀನವಾದುವು. ಇವುಗಳ ಕಾಲ 578, ಕಂಬಗಳ ಮೇಲೆ ನಾನಾ ಚಿತ್ರಗಳನ್ನು ಕೊರೆಯಲಾಗಿದೆ. ಗುಡಿಯ ಗೋಡೆಯ ಗೂಡುಗಳಲ್ಲಿ ವಿಷ್ಣುವಿನ ಅವತಾರಗಳ ಮೂರ್ತಿಗಳಿವೆ. ನಡುನಡುವೆ ಜಾಲಂಧ್ರಗಳು. ಕೆಳಗಡೆ ಪುರಾಣದ ಕಥೆಗಳ ಸನ್ನಿವೇಶಗಳ ಚಿತ್ರ. ಶಿಲ್ಪದೃಷ್ಟಿಯಿಂದ ಈ ಗುಡಿಯ ಮೂರ್ತಿಗಳು ಅಷ್ಟೇನೂ ನಯವಾಗಿಲ್ಲ. ಆದರೆ ಅವುಗಳ ಸ್ವತಂತ್ರ ಅಭಿವ್ಯಕ್ತಿ ಅಸಾಧಾರಣ. ಗುಡಿಯ ತಳಭಾಗದಲ್ಲಿ ಏಳನೆಯ ಶತಮಾನದ ಕೊನೆಯ ಭಾಗದ್ದೆಂದು ಹೇಳಬಹುದಾದ ಕನ್ನಡ ಲಿಪಿಯ ಶಾಸನವೊಂದಿದೆ. ಅತ್ಯಂತ ಪ್ರಾಚೀನವಾದ (450) ಲಾಡ್‌ಖಾನ್ ಗುಡಿಯಲ್ಲಿ ದೊಡ್ಡ ಮಂಟಪವೂ ಮುಖಮಂಟಪವೂ ಇವೆ. ಗರ್ಭಗುಡಿ



ಚರಂತಿ ಮಠದ ಕಂಬಗಳ ಮೇಲಿನ ಶಿಲ್ಪಗಳು

ಇರುವುದು ಮಂಟಪದೊಳಗೆ. ಮಂಟಪವನ್ನು ನಾಲ್ಕು ದಪ್ಪ ಚೌಕ ಕಂಬಗಳು ಹೊತ್ತು ನಿಂತಿವೆ. ಇದರ ಮಾಳಿಗೆಯ ಮೇಲೊಂದು ಗುಡಿಯುಂಟು. ಈ ಗುಡಿಯಲ್ಲಿ 8–9ನೆಯ ಶತಮಾನಗಳ ಎರಡು ಶಾಸನಗಳನ್ನು ಕಾಣಬಹುದು. ಐಹೊಳೆಯಲ್ಲಿ ಎರಡು ಗುಹಾದೇವಾಲಯಗಳುಂಟು. ಇವುಗಳಲ್ಲಿ ಒಂದು ಜೈನ. ಇವೆರಡಲ್ಲದೆ ಇನ್ನೊಂದರ ಒಂದು ಭಾಗ ಗುಹಾದೇವಾಲಯ; ಉಳಿದದ್ದು ನಿರ್ಮಿತ. ಜೈನ ಗುಹಾದೇವಾಲಯದ ಬೆಟ್ಟದ ಬಂಡೆಯ ಮುಖದಲ್ಲಿದೆ. ಪಡಸಾಲೆಯ ಮುಂದಿನ ಗೋಡೆ ದೊಡ್ಡ ಕಲ್ಲುಗಳಿಂದಾದದ್ದು. ಪಡಸಾಲೆಯ ತುದಿಯಲ್ಲಿ ಹಾವಿನ ಹೆಡೆಯ ಕೆಳಗೆ ಪಾರ್ಶ್ವನಾಥ–23ನೆಯ ಜೈನ ತೀರ್ಥಂಕರ; ಇದರ ಇನ್ನೊಂದು ಕೊನೆಯಲ್ಲಿ ಇಬ್ಬರು. ಸ್ತ್ರೀಮೂರ್ತಿಗಳೊಂದಿಗಿರುವ ಜಿನತೀರ್ಥಂಕರ ಮೂರ್ತಿಯ ಮಂದಿರವಿದು.

ಇನ್ನೊಂದು ಗುಹಾದೇವಾಲಯ ಬಾದಾಮಿಯ ಚಾಳುಕ್ಯರ ಕಾಲದ್ದು. ಇದರಲ್ಲಿ ಮಂಟಪ, ಎರಡು ಬದಿಯ ಮಂಟಪಗಳು, ಸುಕನಾಸಿ, ಗರ್ಭಗುಡಿ ಎಂಬ ಐದು ಭಾಗಗಳಿವೆ. ಬಲಭಾಗದ ಮಂಟಪದಲ್ಲಿ ಗಣಪತಿ. ಷಣ್ಮುಖ ಮತ್ತು ಪಾರ್ವತಿ ಇವರನ್ನು ಕೂಡಿಕೊಂಡು ನಟರಾಜ ನೃತ್ಯ ಮಾಡುತ್ತಿದ್ದಾನೆ. ಅವನ ಜೊತೆಗೆ ಸಪ್ತಮಾತೃಕೆಯರೂ ನೃತ್ಯ ಮಾಡುತ್ತಿದ್ದಾರೆ. ಮೇಲ್ಭಾಗದ ಒಂದು ಮೂಲೆಯಲ್ಲಿ ಭೃಂಗಿ ಅಸ್ಥಿಪಂಜರ ರೂಪದಲ್ಲಿ ಕುಣಿಯುತ್ತಿದ್ದಾನೆ. ಹರಿಹರ, ಪಾರ್ವತಿ ಸಮೇತನಾದ ಶಿವ, ಅರ್ಧನಾರೀಶ್ವರ, ಮಹಿಷಾಸುರಮರ್ದಿನಿ ಇತ್ಯಾದಿ ಸುಂದರಮೂರ್ತಿಗಳನ್ನು ಈ ಗುಹದೇವಾಲಯದಲ್ಲಿ ಕೆತ್ತಿದ್ದಾರೆ. ವಿಷ್ಣುವಿನ ಅವತಾರಗಳಲ್ಲೊಂದಾದ ವರಾಹಮೂರ್ತಿಯನ್ನೂ ಇಲ್ಲಿ ಕಾಣಬಹುದು.

ಕಾರ್ತಿಕೇಯ ಹುಚ್ಚುಮಲ್ಲಿ ಗುಡಿ

ಇಲ್ಲಿನ ಶಿಲ್ಪ ಬಲು ಸರಳ. ಆರನೆಯ ಶತಮಾನದ ಆದಿಯಲ್ಲಿ ಇದನ್ನು ಕಟ್ಟಿರಬಹುದು. ಗರ್ಭಗುಡಿಯಲ್ಲಿ ಪೀಠಮಾತ್ರವಿದ್ದು ಅದರ ಮೇಲೆ ಉಪಾಸ್ಯ ದೇವತೆಯಿಲ್ಲ. ಇದಕ್ಕೆ ಸ್ವಲ್ಪ ದೂರದಲ್ಲಿರುವುದು ಹುಚ್ಚುಮಲ್ಲಿ ಗುಡಿ. ಇದು ಪಶ್ಚಿಮಾಭಿಮುಖ. ಇದರಲ್ಲಿ ಕಂಡುಬಂದಿರುವ ಹೊಸ ಅಂಶವೆಂದರೆ ಅಂತರಾಳ. ಈ ಗುಡಿಯಲ್ಲಿ ಎತ್ತರವಾದ ವಿಮಾನ, ಗರ್ಭಗುಡಿ, ಸುಕನಾಸಿ ಮಂಟಪ, ಪ್ರದಕ್ಷಿಣ ಪಥ, ಮುಖಮಂಟಪ–ಎಲ್ಲವೂ ಉಂಟು. ಸುಕನಾಸಿಯನ್ನು ರಚಿಸುವ ಪ್ರಥಮ ಪ್ರಯತ್ನವನ್ನೂ ಈ ಗುಡಿಯಲ್ಲೇ ಮಾಡಿದಂತೆ ತೋರುತ್ತದೆ. ಇಲ್ಲಿ ವಿಜಯಾದಿತ್ಯನ ಕಾಲದ (708) ಶಾಸನವೊಂದುಂಟು. ಒರಿಸ್ಸಾ ರಾಜ್ಯದ ಭುವನೇಶ್ವರದಲ್ಲಿರುವ ಪರಶುರಾಮೇಶ್ವರ ದೇವಸ್ಥಾನದಂತೆಯೇ ಈ ದೇಗುಲವಿರುವುದು ಗಮನಾರ್ಹ.

ನಾರಾಯಣನ ಸುಂದರ ಪ್ರತಿಮೆ ಇರುವ ದೊಡ್ಡ ದೇವಾಲಯವೊಂದು ಸನಿಯದಲ್ಲೇ ಇದೆ. ಕೊಂತಗುಡಿ ಸಣ್ಣದಾದರೂ ಅದರಲ್ಲಿ ಅನೇಕ ಶಾಸನಗಳಿರುವುದರಿಂದ ಮುಖ್ಯವಾದದ್ದು. ಐಹೊಳೆಯ ದೇಗುಲಗಳ ಅನೇಕ ಮೂರ್ತಿಗಳನ್ನೂ ಕಂಬಗಳನ್ನೂ ನೆರೆಹೊರೆಯವರು ಸಾಗಿಸಿಕೊಂಡು ಹೋಗಿ ತಮ್ಮ ಸ್ಥಳಗಳಲ್ಲಿನ ಗುಡಿಗಳಿಗೆ ಉಪಯೋಗಿಸಿಕೊಂಡಿದ್ದಾರೆ.

ಐಹೊಳೆಯಲ್ಲಿ ಪ್ರಾಚೀನ ಕಾಲದಲ್ಲಿ ವಿದ್ಯಾಪೀಠ (ಅಧಿಷ್ಠಾನ) ಇದ್ದಂತೆ ತೋರುತ್ತದೆ. ಐಹೊಳೆ ಐದುನೂರು ಸ್ವಾಮಿಗಳ ವಣಿಕ್‌ಸಂಘದ ತವರೂರು, 8ನೆಯ ಶತಮಾನದಲ್ಲಿ ಇದು ಪುಲಿಗೆರೆ ಸಂಘದಂಥ ಘಟನೆ ಪಡೆದಿತ್ತು. ಲಾಡ್‌ಖಾನ್ ಗುಡಿಯಲ್ಲಿ 8 ಮತ್ತು 9ನೆಯ ಶತಮಾನಗಳ ಎರಡು ಶಾಸನಗಳಿದ್ದು 500 ಐಹೊಳೆ ಸ್ವಾಮಿಗಳ ಶ್ರೇಣಿಯನ್ನು (ಗಿಲ್ಡ್) ನಮೂದಿಸಲಾಗಿದೆ. ಇಲ್ಲಿಯ 2ನೆಯ ಚಾಳುಕ್ಯ ವಿಕ್ರಮಾದಿತ್ಯನ (733–44) ಶಾಸನವೊಂದರಲ್ಲಿ ಮಹಾಜನರು ಮತ್ತು ನಗರರನ್ನು ಉಲ್ಲೇಖಿಸಲಾಗಿದೆ. ಇನ್ನೊಂದು ಶಾಸನದಲ್ಲಿ 500 ಮಹಾಜನರು (ಚತುರ್ವೇದಿಗಳು), 8 ನಗರರು. 120 ಊರಳಿಗಳು ದುರ್ಗಾಭಗವತಿಗೆ ದತ್ತಿಕೊಟ್ಟ ವಿವರವಿದೆ. ಪ್ರ.ಶ. 1186ರ ಚಾಳುಕ್ಯ ತ್ರಿಭುವನಮಲ್ಲನ ಶಿರಸಂಗಿಯ ಶಾಸನದಿಂದ ಐಹೊಳೆ ದಕ್ಷಿಣ ಭಾರತದ ವಣಿಕ್ ಸಂಘದ ಕೇಂದ್ರವಾಗಿತ್ತೆಂದು ಗೊತ್ತಾಗುತ್ತದೆ. ಐದುನೂರು ಸ್ವಾಮಿಗಳು ಅದರ ಆಡಳಿತಾಧಿಕಾರಿಗಳಾಗಿದ್ದರು, ಕರ್ನಾಟಕ, ಆಂಧ್ರ ಮತ್ತು ದ್ರಾವಿಡ ದೇಶಗಳು ಅದರ ಆಡಳಿತಕ್ಕೆ ಒಳಪಟ್ಟಿದ್ದುವು. ತಮಿಳು ಶಾಸನಗಳೂ ಈ ಮಾತನ್ನು ದೃಢೀಕರಿಸಿವೆ. ಜೈನ, ಶೈವ, ವೈಷ್ಣವ ಸಂಪ್ರದಾಯಗಳೆಲ್ಲ ಐಹೊಳೆಯಲ್ಲಿ ಸಹಕರಿಸಿದ್ದವೆಂಬುದು ಅಲ್ಲಿಯ ಅವಶೇಷಗಳಿಂದ ತಿಳಿದುಬರುವ ಸಂಗತಿ. (ಎ.ಎಂ.ಎ.; ಜಿ.ಎಸ್.ಡಿ.)

**ಒ** ಕನ್ನಡ ವರ್ಣಮಾಲೆಯಲ್ಲಿ ಹನ್ನೆರಡನೆಯದು. ಹ್ರಸ್ವಸ್ವರಾಕ್ಷರ. ಅಶೋಕನ ಕಾಲದ ಬ್ರಾಹ್ಮೀ ಲಿಪಿಯಲ್ಲಿ ಈ ಅಕ್ಷರ ಒಂದು ಲಂಬರೇಖೆಯ ಮೇಲ್ತುದಿಯ ಎಡಭಾಗದಲ್ಲಿ ಮತ್ತು ಕೆಳತುದಿಯ ಬಲಭಾಗದಲ್ಲಿ ಅಡ್ಡರೇಖೆಗಳಿಂದ ಕೂಡಿದೆ. ಸಾತವಾಹನರ ಕಾಲದಲ್ಲಿ ವಿಶೇಷ ಬದಲಾವಣೆಯಿಲ್ಲದೆ ಅದರ ಮೂಲೆಗಳು ಗುಂಡಗಾಗುತ್ತವೆ. ಸ್ವತಂತ್ರವಾಗಿ ಈ ಅಕ್ಷರ ದೊರಕುವುದು ಕಷ್ಟವಾದುದರಿಂದ 12ನೆಯ ಶತಮಾನದವರೆಗಿನ ಇದರ ರೂಪ ಹೇಗಿದ್ದಿತೆಂದು ಹೇಳುವುದು ಕಷ್ಟ.. ಕಲ್ಯಾಣಿ ಚಾಳುಕ್ಯರ ಶಾಸನಗಳಲ್ಲಿ ಇದು ಈಗಿರುವ ರೂಪಕ್ಕೆ ಬಹುಸಮೀಪವಾಗಿಯೇ ಇರುವುದು ಕಂಡುಬರುತ್ತದೆ. ಇದೇ ರೂಪ ಹೊಯ್ಸಳ, ವಿಜಯನಗರ ಕಾಲಗಳಲ್ಲಿಯೂ ಮುಂದುವರಿದು ಅಕ್ಷರದ ಪ್ರಸ್ತುತ ರೂಪ ಸ್ಥಿರವಾಗುತ್ತದೆ.

ಅಶೋಕ ಪ್ರ.ಶ.ಪೂ. 3ನೆಯ ಶತಮಾನ

ಶಾತವಾಹನ ಪ್ರ.ಶ.2ನೆಯ ಶತಮಾನ

ಕಲ್ಯಾಣಿಚಾಳುಕ್ಯ ಪ್ರ.ಶ.11ನೆಯ ಶತಮಾನ

ಸೇವುಣ ಪ್ರ.ಶ.13ನೆಯ ಶತಮಾನ

ವಿಜಯನಗರ ಪ್ರ.ಶ.15ನೆಯ ಶತಮಾನ

ಮೈಸೂರು ಅರಸರು ಪ್ರ.ಶ.18ನೆಯ ಶತಮಾನ

ಈ ಅಕ್ಷರದ ಹ್ರಸ್ವ ಮತ್ತು ದೀರ್ಘ ರೂಪಗಳಿಗೆ ಅಷ್ಟಾಗಿ ವ್ಯತ್ಯಾಸಗಳು ಕಾಣಬರುವುದಿಲ್ಲ. ಮೊದಲ ರೂಪಗಳು ಸಂಸ್ಕೃತದಲ್ಲಿರುವಂತೆ ದೀರ್ಘವನ್ನೇ ಸೂಚಿಸುತ್ತವೆ. ಅನಂತರ ಕನ್ನಡ ಪದಪ್ರಯೋಗ ಹೆಚ್ಚಿದಂತೆಲ್ಲ ಹ್ರಸ್ವ ದೀರ್ಘಗಳ ರೂಪ ವ್ಯತ್ಯಾಸ ಖಚಿತವಾಗುತ್ತ ಬರುತ್ತದೆ. ಲಿಪಿಯ ದೃಷ್ಟಿಯಿಂದ ಈ ವ್ಯತ್ಯಾಸ ಯಾವಾಗ ಪ್ರಾರಂಭವಾಯಿತು ಎಂದು ಹೇಳಲು ಸಾಧ್ಯವಿಲ್ಲ. ಈ ಅಕ್ಷರ ಪಶ್ಚ ಅರ್ಧಸಂವೃತ ಗೋಲ ಸ್ವರವನ್ನು ಸೂಚಿಸುತ್ತದೆ. (ಎ.ವಿ.ಎನ್.)

**ಒಂಟೆ:** ಕಶೇರುಕ ವಂಶದ ಸ್ತನಿವರ್ಗದ ದ್ವಿಖುರಗಣದ ಕಮೆಲಿಡೀ ಕುಟುಂಬದ ಕಮೀಲಸ್ ಜಾತಿಯ ಪ್ರಾಣಿ (ಕ್ಯಾಮೆಲ್). ಲಕ್ಷಾಂತರ ವರ್ಷಗಳ ಹಿಂದೆ ಒಂಟೆಯ ಪೂರ್ವಜರ ಸಂತತಿ ಉತ್ತರ ಅಮೆರಿಕ, ಯುರೋಪ್ ಖಂಡಗಳಲ್ಲಿ ವಾಸಿಸುತ್ತಿದ್ದುವು. ಅವುಗಳ ಅವಶೇಷಗಳು ಪಳೆಯುಳಿಕೆಯ ಎಲುಬುಗಳಾಗಿ ಉಳಿದಿವೆ. ಒಂಟೆಯ ಅತ್ಯಂತ ಪೂರ್ವನಿವಾಸಿ ಗಾತ್ರದಲ್ಲಿ ಮೊಲಕ್ಕಿಂತ ದೊಡ್ಡದಾಗಿರಲಿಲ್ಲ. ಇದರಲ್ಲಿ ಎರಡು ಪ್ರಭೇದಗಳಿವೆ: ಕಮೀಲಸ್ ಡಾವಿಡೆರಿಯಸ್ (ಅರೇಬಿಯದ ಒಂಟೆ) ಮತ್ತು ಕಮೀಲಸ್ ಬ್ಯಾಕ್ಟ್ರಿಯೆನಸ್, ಬ್ಯಾಕ್ಟ್ರಿಯನ್ ಒಂಟೆಯ ಬೆನ್ನಿನ ಮೇಲೆ ಎರಡು ಡುಬ್ಬಗಳೂ ಅರೇಬಿಯದ ಒಂಟೆಯ ಬೆನ್ನಿನ ಮೇಲೆ ಒಂದು ಡುಬ್ಬವೂ ಇವೆ. ಬ್ಯಾಕ್ಟ್ರಿಯನ್ ಒಂಟೆ ಅರೇಬಿಯದ ಒಂಟೆಗಿಂತ ಕುಳ್ಳು. ಪೂರ್ವ ತುರ್ಕಿಸ್ತಾನ ಮತ್ತು ಮಂಗೋಲಿಯ ಎರಡು ಡುಬ್ಬಗಳ ಒಂಟೆಗಳ ಜನ್ಮಸ್ಥಾನಗಳು, ಅಲ್ಲಿಯ ಅಪಾರವಾದ ಚಳಿಯನ್ನು ತಡೆಯಲು ಅನುಕೂಲವಾಗುವಂತೆ ಚಳಿಗಾಲದಲ್ಲಿ ಉದ್ದವಾದ ಕೂದಲುಗಳು ಹುಟ್ಟಿ ಇವುಗಳ ಶರೀರಗಳನ್ನು ರಕ್ಷಿಸುತ್ತವೆ. ವಸಂತ ಋತು ಪ್ರಾರಂಭವಾದ ಮೇಲೆ ಈ ಕೇಶರಾಶಿ ಮುದ್ದೆಮುದ್ದೆಯಾಗಿ ಉದುರಿಹೋಗುತ್ತದೆ. ಆಗ ಒಂಟೆಗಳು ಗೋಬಿ ಮರಳುಗಾಡಿನತ್ತ ಹೊರಡುತ್ತವೆ. ಸುಮಾರು 4 ಕೋಟಿ ವರ್ಷಗಳ ಹಿಂದೆ ಒಂಟೆಗಳು ಉತ್ತರ ಅಮೆರಿಕದಲ್ಲಿ ಜನಿಸಿ ಸುಮಾರು 10 ಲಕ್ಷ ವರ್ಷಗಳಷ್ಟು ಹಿಂದೆ ದಕ್ಷಿಣ ಅಮೆರಿಕ ಹಾಗೂ ಏಷ್ಯಗಳಲ್ಲಿ ಹರಡಿದ್ದುವು. ಮುಂದೆ ಅವು ಅಮೆರಿಕ ಖಂಡದಲ್ಲಿ ನಿರ್ನಾಮಗೊಂಡವು. 1850ರಲ್ಲಿ ಅಮೆರಿಕದ ಸೈನ್ಯಬಲ ಒಂಟೆಯನ್ನು ಏಷ್ಯದಿಂದ ತಂದು ಆ ರಾಷ್ಟ್ರದಲ್ಲಿ ಉಪಯೋಗಿಸಲಾರಂಭಿಸಿತು. ಒಂಟೆ ನೋಡಲು ಕುರೂಪಿ, ಉದ್ದವಾದ ತಲೆ ಮತ್ತು ಕತ್ತು ಅದರ ವೈಶಿಷ್ಟ್ಯ. ಮರಳುಗಾಡಿನ ಜೀವನಕ್ಕೆ ಹೊಂದಿಕೊಳ್ಳುವಂತೆ ಅಂಗರಚನೆ ಮಾರ್ಪಡಾಗಿದೆ. ಮರಳು ದೂಳನ್ನು ಹೊರಗಿಡಲು ಮೂಗಿನ ರಂಧ್ರಗಳು ಮುಚ್ಚಿಕೊಳ್ಳಬಲ್ಲವು. ಕಣ್ಣುರೆಪ್ಪೆಯ ಕೂದಲುಗಳು ಬಲು ನೀಳವಾಗಿದ್ದು ಬಿಸಿಲಿನ ಧಗೆಯಿಂದ ಕಣ್ಣುಗಳನ್ನು ರಕ್ಷಿಸುತ್ತವೆ. ಮೇಲ್ತುಟಿಯ ಮಧ್ಯೆ ಆಳವಾಗಿ ಬಿರುಕುಬಿಟ್ಟಿದ್ದು ಅದು ಮೂಗನ್ನೂ ಬಾಯಿಯನ್ನೂ ಒಂದುಗೂಡಿಸುತ್ತದೆ. ಮುಂಗಾಲು ಮತ್ತು ಹಿಂಗಾಲುಗಳಲ್ಲಿ ಎರಡೆರಡು (ಮೂರನೆಯ ಮತ್ತು ನಾಲ್ಕನೆಯ) ಬೆರಳುಗಳು ಮಾತ್ರ ಇವೆ; ಅವುಗಳಿಗೆ ಗೊರಸುಗಳಿವೆ. ಮಂಡಿಯ ಹೊರ ಆವರಣದಲ್ಲಿ ಚರ್ಮದ ಮೆತ್ತೆಗಳಿವೆ. ಒಂಟೆ ನಡೆಯುವಾಗ ಅದರ ಪಾದಗಳು ಅಗಲವಾಗಿ ಹಿಗ್ಗುವುದರಿಂದ ಮರಳಿನಲ್ಲಿ ಕಾಲುಗಳು ಹೂತುಕೊಳ್ಳುವುದಿಲ್ಲ.

ಮರಳುಗಾಡಿನಲ್ಲಿ ಬೆಳೆಯುವ ಮುಳ್ಳಿನ ಗಿಡಗಂಟೆಗಳೇ ಒಂಟೆಗಳ ಆಹಾರ. ತಿನ್ನಲು ಏನೂ ಸಿಕ್ಕದೆ ಇದ್ದಾಗ ಇವು ಮೀನು, ತೊಗಲು, ಹಣ್ಣು ಮತ್ತು ಬೀಜಗಳನ್ನು ಸಹ ತಿನ್ನುವುದುಂಟು. ಇವುಗಳ ದಂತಸೂತ್ರ–ಬಾಚಿಹಲ್ಲು 1/3, ಕೋರೆಹಲ್ಲು 1/1, ಮುಂದವಡೆ ಹಲ್ಲು 3/2, ಹಿಂದುವಡೆ ಹಲ್ಲು 3/3=34 ಹಲ್ಲುಗಳು. ಮೆಲುಕುಹಾಕುವ ಸ್ತನಿಯಾದ್ದರಿಂದ ಜಠರದಲ್ಲಿ ಮೂರು ಕೋಶಗಳಿವೆ. ಒಂಟೆ ನೀರನ್ನು ಜಠರದಲ್ಲಿ ಶೇಖರಿಸುತ್ತದೆ. ಜಠರದಲ್ಲಿ ಚಿಕ್ಕ ಚಿಕ್ಕ ಕುಜಾಯಿಯಂಥ ರಚನೆಗಳಿವೆ. ಇವುಗಳ ಬಾಯ ಬುಡದಲ್ಲಿ ಸಂಕುಚಿಸುವ ಮಾಂಸಖಂಡಗಳು ಸುತ್ತುವರಿದಿವೆ. ಒಂಟೆ ಕುಡಿದ ನೀರು ಜಠರದಲ್ಲಿ ತುಂಬಿಕೊಂಡೊಡನೆ ಕುಜಾಯಿ ರಚನೆಗಳ ಬಾಯಿಗಳು ತೆರೆದುಕೊಳ್ಳುತ್ತವೆ. ನೀರು ಅವುಗಳೊಳಗೆ ಶೇಖರಗೊಳ್ಳುತ್ತದೆ. ಈ ನೀರು ಅಲ್ಲೇ ಉಳಿದಿದ್ದು ಪ್ರಾಣಿಗೆ ನೀರು ಬೇಕಾದಾಗ ಅವುಗಳಿಂದ ತೊಟ್ಟಿಕ್ಕಲು ಪ್ರಾರಂಭಿಸುತ್ತದೆ. ಇವುಗಳಲ್ಲಿರುವ ನೀರು ಮುಗಿದ ಮೇಲೆ ಮತ್ತೂ ನೀರಿನ ಆವಶ್ಯಕತೆ ಇದ್ದರೆ ಆಗ ಒಂಟೆ ತನ್ನ ಡುಬ್ಬದಲ್ಲಿರುವ ಮೇದಸ್ಸಿನಿಂದ ನೀರನ್ನು ದೇಹದಲ್ಲಿಯೇ ಉತ್ಪತ್ತಿಸಿಕೊಳ್ಳಬಲ್ಲುದು. ಹಸಿವು ಬಾಯಾರಿಕೆಗಳಿಂದ ಪೀಡಿತವಾದ ಒಂಟೆಯ ಡುಬ್ಬ ಒಂದು ಕಡೆಗೆ ಜೋತು ಬಿದ್ದಿರುತ್ತದೆ. ಮಿಕ್ಕ ಎಲ್ಲ ಸ್ತನಿಗಳ ಕೆಂಪು ರಕ್ತಕಣಗಳು ದುಂಡಗಿದ್ದರೆ ಒಂಟೆಯವು ಅಂಡಾಕಾರವಾಗಿವೆ. ನಾಲ್ಕು ಸಹಸ್ರ ವರ್ಷಗಳಿಂದಲೂ ಒಂಟೆ ಮಾನವನ ಸೇವೆಯಲ್ಲಿದೆ. ಮರಳುಗಾಡಿನ ಜನರಿಗೆ ಇದರ ನೆರವಿಲ್ಲದೆ ಜೀವನ ಸಾಗಿಸಲು ಸಾಧ್ಯವಿಲ್ಲ. ಮರಳುಗಾಡಿನ ಏಕೈಕ ಸಂಪರ್ಕಸಾಧನ ಒಂಟೆ. ಇದರ ಕೂದಲಿನಿಂದ ಹಗ್ಗ, ಬಟ್ಟೆ, ಕಂಬಳಿಗಳನ್ನು ತಯಾರಿಸುತ್ತಾರೆ. ಈ ಪ್ರಾಣಿ ಎಷ್ಟು ಕುರೂಪಿಯೋ ಅಷ್ಟೇ ಮಂದಬುದ್ಧಿಯದೂ ಹೌದು. ಗಂಡು ಒಂಟೆ ಮದವೇರಿದಾಗ ಬಹು ಕ್ರೂರಿಯಾಗಿ ವರ್ತಿಸಬಲ್ಲದು. ಹೆಣ್ಣು ಒಂಟೆ 11 ತಿಂಗಳ ತನಕ ಗರ್ಭವನ್ನು ಧರಿಸಿ ಒಂದು ಮರಿಯನ್ನು ಈಯುತ್ತದೆ. ಒಂಟೆಯ ಆಯುಷ್ಯ ಸು. 50 ವರ್ಷಗಳು.

ಒಂಟೆ 500–800 ಪೌಂಡುಗಳಷ್ಟು ಭಾರವನ್ನು ಹೊರಬಲ್ಲುದು. 200–240 ಕಿಮೀಗಳನ್ನು ಒಂದೇ ದಿವಸದಲ್ಲಿ ನಡೆಯಬಲ್ಲುದು. ಅರೇಬಿಯ ದೇಶದ ಹೈರೀ ಎಂಬ ತಳಿ ಟ್ಯುನಿಸಿನಿಂದ ಟ್ರಿಪೋಲಿಗೆ ಪ್ರಯಾಣ ಮಾಡಲು ಕೇವಲ 4 ದಿವಸಗಳನ್ನು ತೆಗೆದುಕೊಂಡಿತು. ಈ ಎರಡು ಊರುಗಳಿಗೂ ಇರುವ ಅಂತರ 960 ಕಿಮೀಗಳು. ಪ್ರಯಾಣಕಾಲದಲ್ಲಿ ಅದು ಒಬ್ಬ ಸವಾರನನ್ನೂ 250 ಪೌಂಡು ಭಾರದ ಸಾಮಾನುಗಳನ್ನೂ ಹೊತ್ತು ನಡೆಯಿತು. ತುರ್ಕಿಸ್ತಾನ ಮತ್ತು ಸ್ಪೇನ್ ದೇಶದ ಮರಳುಗಾಡುಗಳಲ್ಲಿ ಕಾಡು ಒಂಟೆಗಳಿವೆ. (ಕೆ.ಎಂ.ಕೆ.)

ಅರೇಬಿಯದ ಒಂಟೆ

**ಭಾರತದ ಒಂಟೆಗಳು:** ಭಾರತದ ಒಂಟೆಗಳು ಗಟ್ಟಿಮುಟ್ಟಾಗಿವೆ. 6.5′–7.25′ ಎತ್ತರದವರೆಗೆ ಇವು ಬೆಳೆಯುವುದುಂಟು. ಕಾಲು ಮತ್ತು ಕುತ್ತಿಗೆ ಉದ್ದವಾಗಿವೆ. ಬೆನ್ನಿನ ಮೇಲೆ ಕೇವಲ ಒಂದೇ ಒಂದು ಡುಬ್ಬವಿದೆ. ಭಾರತದಲ್ಲಿ ಇವು ಇರುವ ಸ್ಥಳಗಳು ರಾಜಸ್ತಾನ, ಪಂಜಾಬ್ ಮತ್ತು ಉತ್ತರ ಪ್ರದೇಶಗಳು. ವ್ಯವಸಾಯಕ್ಕಾಗಿ ಕಾಡುಗಳನ್ನು ಕಡಿದು ಗಿಡಗಳನ್ನು ನಾಶಮಾಡುತ್ತಿರುವ ಪರಿಣಾಮವಾಗಿ ಪಂಜಾಬಿನಲ್ಲಿ ಒಂಟೆಯ ನಾನಾ ತಳಿಗಳು ನಾಶವಾಗುತ್ತಿವೆ. ಇವುಗಳಲ್ಲಿ ಅತಿಮುಖ್ಯ ತಳಿಗಳು ರೋಜನ್ ಮತ್ತು ಕಲಾಚಿತ್ತ. ರಾಜಸ್ತಾನದಲ್ಲಿರುವ ಮುಖ್ಯ ತಳಿ ಬಿಕನೀರ್ ಒಂಟೆ. ಇದು ಸಾಮಾನ್ಯವಾಗಿ ಭಾರತದ ಎಲ್ಲೆಡೆಗಳಲ್ಲಿಯೂ ವಾಸಿಸಬಲ್ಲುದು. ಇದು ಸವಾರಿಗೆ ಬಹು ಚೆನ್ನ. ಮರುಭೂಮಿಯನ್ನು ವಾಯುಗುಣವನ್ನು ತಡೆದುಕೊಳ್ಳುವಂತೆ ಇದನ್ನು ತಳೀಕರಿಸಲಾಗಿದೆ. ಶರೀರದ ಮೇಲೆ ಉತ್ತಮ ರೋಮಗಳಿಂದ ಕೂಡಿದ ಹೊದಿಕೆಯಿದೆ. ಮೂಗು ಮೇಲ್ಮುಖವಾಗಿದ್ದು ಮೂತಿ ಉದ್ದವಾಗಿದೆ. ಕಿವಿ ಚಿಕ್ಕವು. ಇದೇ ತಳಿಯನ್ನು ಹೋಲುವ

ಮತ್ತೊಂದು ತಳಿ ಅಲ್‌ವಾರಿನಲ್ಲಿ ಕಂಡುಬರುತ್ತದೆ. ಆದರೆ ಇದರಲ್ಲಿ ಗುಡ್ಡಗಾಡಿನ ಒಂಟೆಯ ಲಕ್ಷಣಗಳೂ ಇವೆ. ಉತ್ತರ ಪ್ರದೇಶದಲ್ಲಿರುವ ತಳಿಗಳು ರೋಜನ್ ತಳಿಯನ್ನು ಹೋಲುತ್ತವೆ. 1945ರಲ್ಲಿ ಸುಮಾರು 65,000 ಒಂಟೆಗಳು ಭಾರತದಲ್ಲಿದ್ದುವೆಂದು ವರದಿಯಾಗಿದೆ.

**ಒಂಟೆಗಳಿಗೆ ಬರುವ ರೋಗಗಳು:** ಒಂಟೆಗಳಿಗೆ ಬರುವ ಕೆಲವು ವಿಶಿಷ್ಟ ರೋಗಗಳಲ್ಲಿ ಸಾಮಾನ್ಯವಾದದ್ದು ಸರ್ರಾ ರೋಗ. ಇದು ಹರಡಲು ಟ್ರಿಪನೋಸೊಮ ಇವ್ಯಾನ್ಸಿ ಎಂಬ ಏಕಕೋಶಿಕ ಜೀವಿ ಕಾರಣ. ಟಬಾನಿಡಿ ಕುಟುಂಬಕ್ಕೆ ಸೇರಿದ ರಕ್ತ ಹೀರುವ ನೊಣಗಳಲ್ಲಿ ಈ ಜೀವಿಗಳು ಇರುತ್ತವೆ. ನೊಣ ತನ್ನ ಆಹಾರಕ್ಕಾಗಿ ಒಂಟೆಯ ರಕ್ತವನ್ನು ಹೀರುವಾಗ ಅದರ ಲಾಲಾರಸದಲ್ಲಿರುವ ಟ್ರಿಪನೋಸೊಮ ಇವ್ಯಾನ್ಸಿ ಜೀವಗಳು ಒಂಟೆಯ ರಕ್ತವನ್ನು ತಲಪುತ್ತವೆ. ಒಂದು ಒಂಟೆಯಿಂದ ಮತ್ತೊಂದು ಒಂಟೆಗೆ ಈ ರೋಗವನ್ನು ಹರಡಲು ಇವೇ ನೊಣಗಳು ಸಹಾಯ ಮಾಡುತ್ತವೆ. ಈ ರೋಗದ ಮುಖ್ಯ ಲಕ್ಷಣಗಳೆಂದರೆ ಬಿಟ್ಟು ಬಿಟ್ಟು ಜ್ವರ ಬರುವುದು, ಕೂದಲು ಉದುರಿಹೋಗುವುದು, ನಿಶ್ಶಕ್ತಿ ಮತ್ತು ರಕ್ತಹೀನತೆ. ಪಂಜಾಬ್ ಪ್ರಾಂತ್ಯದಲ್ಲಿನ ಶೇಕಡ ಸು. 25 ಒಂಟೆಗಳು ಈ ರೋಗಕ್ಕೆ ತುತ್ತಾಗುತ್ತವೆ.

ಒಂಟೆಗೆ ಬರುವ ಇತರ ರೋಗಗಳು ನ್ಯುಮೋನಿಯ, ಆರ್ಟಿಕೇರಿಯ ಮಾಂಗೇ ಮುಂತಾದ ಚರ್ಮರೋಗಗಳು, ಕ್ಷಯ, ಫಿಲೇರಿಯಾಸಿಸ್, ಏಡಿಗಂತಿ, ಒಂಟೆಸಿಡುಬು ಇತ್ಯಾದಿ.

**ಒಂಟೆಯ ಉಪಯೋಗ:** ಏಷ್ಯ ಖಂಡ ಮತ್ತು ಆಫ್ರಿಕ ಖಂಡಗಳ ಮರಳುಗಾಡಿನಲ್ಲಿ ಈ ಪ್ರಾಣಿಗಳ ಬಳಕೆ ಹೆಚ್ಚು. ಒಂಟೆಯ ನಾನಾ ಜಾತಿಗಳನ್ನು ಭಾರತದಲ್ಲಿ ತಳೀಕರಿಸಿ ಸುಧಾರಿಸಿದ ತಳಿಗಳನ್ನು ಕೆಲಸಕ್ಕೆ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಒಂಟೆಗಳನ್ನು ಸಾಮಾನು ಹೊರಲು ಬಳಸುತ್ತಾರೆ. ವ್ಯವಸಾಯ ಮಾಡಲು ಮತ್ತು ಸವಾರಿಗಾಗಿ ಒಂಟೆಗಳನ್ನು ಉಪಯೋಗಿಸುವ ಪದ್ಧತಿಯೂ ಇದೆ.


ಬ್ಯಾಕ್ಟ್ರಿಯನ್ ಒಂಟೆ

**ಒಂಟೆಗಳಿಂದ ಉತ್ಪತ್ತಿಯಾಗುವ ವಸ್ತುಗಳು:** ಒಂಟೆಗಳಿಂದೊದಗುವ ಅತಿ ಮುಖ್ಯ ಉತ್ಪನ್ನಗಳೆಂದರೆ ಅದರ ರೋಮ ಮತ್ತು ಹಾಲು. ರೋಮ ಬಹಳ ಬೆಲೆ ಬಾಳುತ್ತದೆ. ಇದು ಮೃದು ಮತ್ತು ಹಗುರವಾಗಿದೆ. ಬಾಳಿಕೆ ಹೆಚ್ಚು, ದೇಹದ ಉಷ್ಣತೆಯನ್ನು ಚೆನ್ನಾಗಿ ಹಿಡಿದಿಡುತ್ತದೆ. ಭಾರತದ ಒಂಟೆಗಳ ರೋಮಗಳು ಮೇ ತಿಂಗಳಿಂದ ಜೂನ್ ತಿಂಗಳ ವರೆಗೆ ಉದುರುತ್ತವೆ. ಆಗ ಇವನ್ನು ಶೇಖರಿಸಲಾಗುತ್ತದೆ. ಅಲ್ಲದೆ ವರ್ಷಕ್ಕೊಮ್ಮೆ ಕತ್ತರಿಸಿಯೂ ಶೇಖರಿಸುತ್ತಾರೆ. ಬೆನ್ನು, ಕುತ್ತಿಗೆ ತೊಡೆ ಮತ್ತು ಕಾಲುಗಳಲ್ಲಿನ ರೋಮಗಳು ಉದ್ದವಾಗಿದ್ದು ಉಪಯೋಗಕ್ಕೆ ಬರುತ್ತವೆ. ಶೀತವಲಯದ ಒಂಟೆಗಳು ವರ್ಷಕ್ಕೆ 12 ಪೌಂಡು ರೋಮ ಕೊಡುವುದುಂಟು. ಆದರೆ ಭಾರತದಲ್ಲಿ ಕೇವಲ 2 ಪೌಂಡು ಮಾತ್ರ ರೋಮ ಸಿಕ್ಕುತ್ತದೆ. ಈ ರೋಮಗಳಿಂದ ಮೇಲುಹಾಸು, ಕಂಬಳಿ ಮತ್ತು ಕೋಟು, ಗೌನುಗಳು ಮುಂತಾದುವನ್ನು ನೇಯುತ್ತಾರೆ. ಇವು ಇತರ ಉಣ್ಣೆಯ ಪದಾರ್ಥಗಳಿಗಿಂತ ಉತ್ತಮವಾಗಿವೆ.

ಒಂಟೆಯ ಹಾಲು ಅತ್ಯುತ್ತಮ ಆಹಾರ. ಎಮ್ಮೆ ಅಥವಾ ಹಸುವಿನ ಹಾಲಿನ ಹಾಗೆ ಇದನ್ನು ಬಳಸಬಹುದು. ಆರೋಗ್ಯವಾಗಿರುವ ಒಂಟೆ ಒಂದು ದಿವಸದಲ್ಲಿ ಸು. 14 ಲೀಟರ್ ಹಾಲು ಕೊಡುತ್ತದೆ. ಇದರಲ್ಲಿ ಕೊಬ್ಬು ಬಲು ಕಡಿಮೆ. ಆದರೆ ನೈಟ್ರೊಜನ್ ಅಂಶಗಳು ಬಲು ಹೆಚ್ಚು. ಹಾಲಿಗೆ ಒಂದು ರೀತಿಯ ವಾಸನೆ ಇದೆ. ಇದರ ಸೇವನೆ ಕೆಲವರಲ್ಲಿ ವಿರೇಚವನ್ನುಂಟುಮಾಡುತ್ತದೆ. ಇದರ ಸೇವನೆಯಿಂದ ಗುಲ್ಮರೋಗಗಳ ನಿವಾರಣೆಯಾಗುತ್ತದೆಯೆಂಬ ನಂಬಿಕೆ ಇದೆ. ಒಂಟೆಯ ಹಾಲಿನ ಹಲ್ವವನ್ನು ಪರ್ಷಿಯ ದೇಶದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತದೆ. ರಾಜಸ್ಥಾನ, ಪಂಜಾಬು ಮುಂತಾದ ಕಡೆಗಳಲ್ಲಿ ಮಕ್ಕಳು ಒಂಟೆಹಾಲು ಕುಡಿದೇ ಬೆಳೆಯುತ್ತವೆ. ಒಂಟೆಯ ಚರ್ಮ ಹೆಚ್ಚಿನ ಉಪಯೋಗಕ್ಕೆ ಬರುವುದಿಲ್ಲ. ಚರ್ಮದ ಪೆಟ್ಟಿಗೆಗಳು, ಪಟ್ಟಿಗಳು ಮುಂತಾದುವನ್ನು ಇದರಿಂದ ತಯಾರಿಸುತ್ತಾರೆ. ಇದರ ಚರ್ಮದ ಚೀಲಗಳಲ್ಲಿ ಎಣ್ಣೆ, ತುಪ್ಪ ಮುಂತಾದವುಗಳನ್ನು ಶೇಖರಿಸುತ್ತಾರೆ. (ಎಲ್.ಎಸ್.ಜಿ.)

**ಒಂಟೆಪಡೆ:** ಮರಳುಗಾಡುಗಳಲ್ಲಿ ಯುದ್ಧಮಾಡುವಾಗ ಉಪಯೋಗಿಸುವ ಒಂಟೆಬಲ (ಕ್ಯಾಮೆಲ್ ಕೋರ್). ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಬಿಕನೀರಿನ ಮಹಾರಾಜ ಬಿಕನೀರ್ ಒಂಟೆಯ ದಳ ಎಂಬ ಹೆಸರಿನ ಒಂದು ಪಡೆಯನ್ನು ತಯಾರಿಸಿದ್ದ. ಅದು ಒಂದನೆಯ ಮತ್ತು ಎರಡನೆಯ ಮಹಾಸಮರಗಳಲ್ಲಿ ಈಜಿಪ್ಟ್ ಮತ್ತು ಸೂಡಾನ್ ದೇಶಗಳಲ್ಲಿ ಗಣನೀಯ ಸೇವೆ ಸಲ್ಲಿಸಿತು. ಈ ಪಡೆಯ ರಚನೆ ಸಿಲ್ಲೇದಾರಿ ಕ್ರಮದಿಂದ. ಇದರ ಪ್ರಕಾರ ಸೈನಿಕ ತನ್ನ ಒಂಟೆಯನ್ನು ತಾನೇ ಕೊಂಡು ಕಾಪಾಡಿಕೊಂಡು ಬರಬೇಕು. ಇದಕ್ಕೆ ಪ್ರತಿಯಾಗಿ ರಾಜ್ಯಸರ್ಕಾರ ಆತನಿಗೆ ನಗದು ಪರಿಹಾರ ದ್ರವ್ಯವನ್ನು ಕೊಡುತ್ತದೆ. ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಕೇವಲ ಉತ್ಸವಾದಿಗಳಲ್ಲಿ ಉಪಯೋಗಿಸುವುದಕ್ಕಾಗಿ ಮಾತ್ರ ಅಲ್ಪಪ್ರಮಾಣದ ಒಂಟೆಪಡೆಯೊಂದನ್ನು ಉಳಿಸಿಕೊಳ್ಳಲಾಗಿದೆ. ಆಧುನಿಕ ಯುದ್ಧ ಕ್ರಮದಲ್ಲಿ ಕುದುರೆ ಅಥವಾ ಒಂಟೆಯನ್ನು ಉಪಯೋಗಿಸುವ ಅವಕಾಶ ಅತ್ಯಲ್ಪ. (ಎ.ಎನ್.ಎಸ್.ಎಂ.)

**ಒಂಟೆಹುಳು:** ಡಿಕ್ಟಿಯಾಪ್ಟೆರ ಗಣದ ಮ್ಯಾಂಟಿಡೀ ಉಪಗಣಕ್ಕೆ ಸೇರಿದ ಒಂದು ಕೀಟ (ಮ್ಯಾಂಟಿಸ್; ಪ್ರೇಯಿಂಗ್ ಮ್ಯಾಂಟಿಸ್). ಮಳ್ಳಿಕೀಟವೆಂದೂ ಕರೆಯುತ್ತಾರೆ. ತಮ್ಮ ಮುಂಗಾಲುಗಳನ್ನು ಕೈ ಮುಗಿಯುವಂತೆ ಎತ್ತಿ ಹಿಡಿಯುವುದರಿಂದ ಪ್ರಾರ್ಥನೆ ಮಾಡುವಂತೆ ಕಾಣುತ್ತದೆ. ಹಾಗಾಗಿ ಇದನ್ನು 'ಪ್ರಾರ್ಥನಾ ಕೀಟ' (ಮ್ಯಾಂಟಿಸ್; ಪ್ರೇಯಿಂಗ್ ಮ್ಯಾಂಟಿಸ್) ಎಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ಬೇಲಿ, ಹಸುರು ಗಿಡಮರಗಳು, ಹುಲ್ಲುನೆಲಗಳಲ್ಲಿ ಇದರ ವಾಸ. ಇದರ ಆಹಾರ ಇತರ ಕೀಟಗಳು, ಶರೀರ ನೀಳವಾಗಿದೆ. ಉದ್ದವಾದ ಮುಂಗಾಲುಗಳು ಆಹಾರ ಕೀಟವನ್ನು ಹಿಡಿದೆಳೆದುಕೊಳ್ಳಲು ಉಪಯುಕ್ತವಾಗಿವೆ. ಹಿನ್ನೆಲೆಯ



ಬಣ್ಣಕ್ಕೆ ಹೊಂದಿಕೊಳ್ಳುವ ಗುಣ ಈ ಕೀಟಕ್ಕಿದೆ. ಸಾಮಾನ್ಯವಾಗಿ ಹಸುರು ಬಣ್ಣದವೇ ಹೆಚ್ಚು. ಈ ಕೀಟ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿಕೊಂಡು ಅಲುಗಾಡದೆ ನಿಂತಿದ್ದು ಮುಂದೆ ಸುಳಿಯುವ ಪುಟ್ಟ ಕೀಟ ಮತ್ತು ದೊಡ್ಡ ಹುಳುಗಳ ಮೇಲೆ ಫಕ್ಕನೆ ಎರಗಿ ಹಿಡಿದು ಆಹಾರವಾಗಿ ಸೇವಿಸುತ್ತದೆ. ನೊಣ, ಚಿಟ್ಟೆ, ಚಿಟ್ಟೆಯ ಮರಿಗಳು ಇತ್ಯಾದಿ ಇದರ ಆಹಾರ. ಒಂಟೆಹುಳುವಿಗೆ ಎರಡು ಸಂಯುಕ್ತ ನೇತ್ರಗಳ ಜೊತೆಗೆ ಮೂರು ಸರಳ ನೇತ್ರಗಳೂ ಇವೆ. ಈ ಹುಳು ತನ್ನ ಮೊಟ್ಟೆಗಳನ್ನು ಸ್ಪಂಜಿನಂಥ ಮೊಟ್ಟೆ ಚೀಲಗಳಲ್ಲಿಡುತ್ತದೆ. ಹೊಟ್ಟೆಬಾಕ ಹೆಣ್ಣು ಸಂಭೋಗಕ್ಕಾಗಿ ಬಂದ ಗಂಡನ್ನೂ ತಲೆ ಮುರಿದು ಕಬಳಿಸುವುದು ಸಾಮಾನ್ಯ. (ಬಿ.ಪಿ.ಸಿ.; ಎನ್.ಎಸ್.ಎಲ್.)

**ಒಂದನೆಯ ಮಹಾಯುದ್ಧ:** ನಾಗರಿಕ ಪ್ರಪಂಚದ ಬಹುಭಾಗವನ್ನೊಳಗೊಂಡ ಪ್ರಪ್ರಥಮ ಮಹಾಸಂಗ್ರಾಮ, 1914 ಜುಲೈ 28–1918 ನವೆಂಬರ್ 11ರವರೆಗೆ ನಡೆದ ಈ ಯುದ್ಧದಲ್ಲಿ ಜರ್ಮನಿ ಮತ್ತು ಆಸ್ಟ್ರಿಯ–ಹಂಗರಿಗಳು ಒಂದು ಕಡೆಯೂ ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್‌ಗಳೂ(ಮಿತ್ರ ಪಕ್ಷ) ಇನ್ನೊಂದು ಕಡೆಯೂ ಪ್ರಧಾನವಾಗಿ ಕಾದಿದುವು. 1917–18ರಲ್ಲಿ ಮಿತ್ರಪಕ್ಷದೊಂದಿಗೆ ಅಮೆರಿಕ ಸಂಯುಕ್ತಸಂಸ್ಥಾನವೂ ಸೇರಿಕೊಂಡಿತು. 19ನೆಯ ಶತಮಾನದ ದೃಷ್ಟಿ ಪ್ರವೃತ್ತಿಗಳಿಗೆ ಭರತವಾಕ್ಯ ಹಾಡಿ ಹೊಸದೊಂದು ವಿಶ್ವದ ನಿರ್ಮಾಣಕ್ಕೆ ಕಾರಣವಾಗಿ ಪರಿಣಮಿಸಿ ಇದು ವಿಶ್ವೇತಿಹಾಸದ ಒಂದು ಮಹಾಘಟ್ಟವೆನಿಸಿದೆ.

ಈ ಲೇಖನವನ್ನು ಸ್ಥೂಲವಾಗಿ ಹೀಗೆ ವಿಂಗಡಿಸಲಾಗಿದೆ; 1. ಕಾರಣಗಳು, 2. ಭೂಯುದ್ಧ, 3. ಜಲವಾಯು ಯುದ್ಧಗಳು, 4. ಅಮೆರಿಕದ ಪ್ರವೇಶ, 5. ಏಷ್ಯದಲ್ಲಿ ಜಪಾನ್ ನಡೆಸಿದ ಯುದ್ಧ, 6. ಚೀನ–ಭಾರತ, 7. ಜರ್ಮನಿಯ ವಸಾಹತುಗಳಲ್ಲಿ ಯುದ್ಧ, 8. ಯುದ್ಧದ ಅಂತಿಮ ಘಟ್ಟ, 9. ಪರಿಣಾಮಗಳು, 10. ಶಾಂತಿ ಕೌಲುಗಳು. ಲೇಖನದ ಕೊನೆಯಲ್ಲಿ ಮಹಾಯುದ್ಧದ ಮುಖ್ಯ ಘಟನೆಗಳ ಪಟ್ಟಿಯೊಂದನ್ನು ಕೊಡಲಾಗಿದೆ.

**ಕಾರಣಗಳು:** ಒಂದನೆಯ ಮಹಾಯುದ್ಧಕ್ಕೆ ಅನೇಕ ಕಾರಣಗಳನ್ನು ಕೊಡುವುದು ಸಾಧ್ಯ. ಆಸ್ಟ್ರಿಯ–ಹಂಗೆರಿಗೂ ಸರ್ಬಿಯಕ್ಕೂ ನಡುವಣ ವಿರಸದಿಂದಾಗಿ ಆರಂಭವಾದ ಈ ಯುದ್ಧಕ್ಕೆ ಇದೇ ತತ್‌ಕ್ಷಣದ ಕಾರಣವಾದರೂ ಇಷ್ಟರಿಂದಲೇ ವಿಶ್ವದ ಅನೇಕ ರಾಷ್ಟ್ರಗಳು

ಯುದ್ಧದ ಸುಳಿಯೊಳಕ್ಕೆ ಸಿಲುಕಿದುವೆನ್ನಲಾಗುವುದಿಲ್ಲ. ಇದರ ಹಿಂದೆ ಎರಡು ಮಹಾಬಣಗಳೇ ನಿರ್ಮಾಣವಾಗಿ ಬಲು ಹಿಂದಿನಿಂದಲೂ ಅವು ತಂತಮ್ಮಲ್ಲೆ ಮಸೆದಾಟಕ್ಕೆ ಆರಂಭಿಸಿದ್ದುವು. ದೀರ್ಘಕಾಲದ ಸ್ಪರ್ಧೆ, ಅಸೂಯೆ ಮತ್ತು ದ್ವೇಷಗಳ ಫಲವೇ ಒಂದನೆಯ ಮಹಾಯುದ್ಧ.

ಯುದ್ಧದ ದೀರ್ಘಕಾಲಿಕ ಕಾರಣಗಳಲ್ಲಿ ಬಹಳ ಮುಖ್ಯವಾದದ್ದೆಂದರೆ 1870ರ ಅನಂತರ ಯುರೋಪಿನಲ್ಲಿ ಬಲಿಷ್ಠವಾದ ಮಹಾರಾಷ್ಟ್ರಗಳ ಮದೋನ್ಮತ್ತತೆ ಮತ್ತು ಆಕ್ರಮಣ ಮನೋಭಾವ. 1871ರಲ್ಲಿ ಜರ್ಮನ್ ಸಾಮ್ರಾಜ್ಯದ ನಿರ್ಮಾಣವಾದಾಗಲೇ ಒಂದನೆಯ ಮಹಾಯುದ್ಧದ ಮೊದಲ ಭೇರೀನಾದವಾಯಿತೆನ್ನಬೇಕು. ಉತ್ತರ ಮಧ್ಯ ಯುರೋಪಿನಲ್ಲಿ ಈ ಮಹಾಶಕ್ತಿಯ ನಿರ್ಮಾಣವಾದೊಡನೆಯೇ ಇದರ ನೆರೆಹೊರೆಯ ರಾಷ್ಟ್ರಗಳಾದ ಫ್ರಾನ್ಸ್, ರಷ್ಯ, ಆಸ್ಟ್ರಿಯ-ಹಂಗರಿಗಳ ಗಡಿ ರೇಖೆಗಳುದ್ದಕ್ಕೂ ಬಿಸಿ ತಟ್ಟಿತು.

1871ರಲ್ಲಿ ಜರ್ಮನಿಯ ಛಾನ್ಸಲರ್ ಆದ ರಾಜಕುಮಾರ ಆಟೋ ಫಾನ್ ಬಿಸ್‌ಮಾರ್ಕ್ ಮಹಾ ಪ್ರತಿಭಾವಂತ (**ನೋಡಿ: ಬಿಸ್‌ಮಾರ್ಕ್, ಆಟೋ ಫಾನ್**). ಆತನಿಗೆ ನೆರೆರಾಷ್ಟ್ರಗಳೊಂದಿಗೆ ಯುದ್ಧಮಾಡುವ ಇಚ್ಛೆಯಿರಲಿಲ್ಲ. ರಷ್ಯ, ಆಸ್ಟ್ರಿಯ, ಬ್ರಿಟನ್ ಮತ್ತು ಇಟಲಿಗಳು ಜರ್ಮನಿಯ ವಿರುದ್ಧ ಒಂದಾಗುವಂತೆ ಮಾಡುವ ಉದ್ದೇಶದಿಂದ ಅವುಗಳ ಸ್ನೇಹ ಬಯಸಿದ. ಆದರೆ ಇಂಥ ಸ್ನೇಹದ ಒಡಂಬಡಿಕೆಗಳು ವಿಷಮ ಪರಿಸ್ಥಿತಿಯ ಸೂಚನೆಗಳೆಂದೇ ಹೇಳಬೇಕು. ಫ್ರಾನ್ಸಿಗೆ ಸೇರಿದ್ದ ಆಲ್ಸೇಸ್ ಮತ್ತು ಪೂರ್ವ ಲೊರೀನ್ ಪ್ರದೇಶಗಳನ್ನು ಜರ್ಮನಿ ವಶಪಡಿಸಿಕೊಂಡಿದ್ದರಿಂದ (1871) ಫ್ರಾನ್ಸಿಗೆ ಮುಖಭಂಗವಾಗಿತ್ತು. ಈ ಪ್ರದೇಶಗಳಲ್ಲಿರುವ ಬಹುಮಂದಿ ಜರ್ಮನ್ ಜನಾಂಗದವರೆಂಬುದೂ ಸ್ವರಕ್ಷಣೆಯ ದೃಷ್ಟಿಯಿಂದ ಇದು ಜರ್ಮನಿಗೆ ಸೇರಬೇಕೆಂಬುದೂ ಈ ಆಕ್ರಮಣಕ್ಕೆ ಕಾರಣ. ಫ್ರಾನ್ಸ್ ಒಂಟಿ ಯಾಗಿದ್ದರೂ ಸುಮ್ಮನಿರಲಿಲ್ಲ. ತನ್ನ ಭದ್ರತೆಗಾಗಿ ಅದು ಇತರ ರಾಷ್ಟ್ರಗಳ ಸ್ನೇಹಕ್ಕಾಗಿ ಕೈಚಾಚಿತು. ಬಿಸ್‌ಮಾರ್ಕ್ ನ ಅನಂತರ 1894ರಲ್ಲಿ, ಫ್ರಾನ್ಸ್-ರಷ್ಯಗಳ ನಡುವೆ ಮೈತ್ರಿ ಏರ್ಪಟ್ಟಾಗ ಜರ್ಮನ್ ವಿರುದ್ಧ ಪಕ್ಷ ಬಲಗೊಂಡಿತೆನ್ನಬಹುದು. ಬಲಿಷ್ಠ ಜರ್ಮನಿಯಿಂದ ನೆರೆಹೊರೆಯ ರಾಷ್ಟ್ರಗಳ ನೆಮ್ಮದಿ ಭಂಗವಾಗಿದ್ದದೂ ನಿಜ. ಯುರೋಪಿನ ಪ್ರತಿಯೊಂದು ರಾಷ್ಟ್ರವೂ ಶಸ್ತ್ರಾಸ್ತ್ರ ಸಂಗ್ರಹಣೆಗೆ ತೊಡಗಿತು. ಇದರಿಂದ ರಾಷ್ಟ್ರಗಳ ನಡುವೆ ಭೀತಿ ಹೆಚ್ಚಲು ಕಾರಣವಾಯಿತೇ ಹೊರತು ಭದ್ರತೆ ಬೆಳೆಯಲಿಲ್ಲ. ಪ್ರತಿಯೊಂದು ರಾಷ್ಟ್ರವೂ ತನ್ನ ತರುಣರನ್ನು ಜಮಾಯಿಸಿ ಅವರಿಗೆ ಖಾಕಿ ತೊಡಿಸಿ ಕವಾಯತು ಮಾಡಿಸುತ್ತಿತ್ತು. ಯುದ್ಧ ಈಗಲೋ ಆಗಲೋ ಎಂಬ ಭಾವನೆ 19ನೆಯ ಶತಮಾನದ ಅಂತ್ಯದ ವೇಳೆಗೆ ಉದ್ಭವವಾಗಿತ್ತು.

ಇದೇ ಕಾಲಕ್ಕೆ ಯುರೋಪಿನ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಆಗಿದ್ದ ಬದಲಾವಣೆಗಳು ಅಗಾಧ. ಸಾರ್ವತ್ರಿಕ ವಿದ್ಯಾಭ್ಯಾಸ, ಪತ್ರಿಕಾ ಪ್ರಸಾರ ಮತ್ತು ಸಂಚಾರಸೌಲಭ್ಯ ವಿಸ್ತರಣೆಗಳಿಂದ ಜನರಲ್ಲಿ ರಾಷ್ಟ್ರಾಭಿಮಾನ ಬೆಳೆದಿತ್ತು. ಕೈಗಾರಿಕಾ ಕ್ರಾಂತಿಯ (**ನೋಡಿ**) ಫಲವಾಗಿ ಸಂಪತ್ತಿನ ಹೆಚ್ಚಳವೂ ಕಾರ್ಮಿಕರ ಬಲವೂ ಹೆಚ್ಚಿದ್ದುವು. ನೂತನವಾಗಿ ನಿರ್ಮಿತವಾದ ನಗರಗಳಿಂದ ಉದ್ಭವವಾದ ಸಮಸ್ಯೆಗಳೂ ಅನೇಕ. ಇವೆಲ್ಲ ಕಾರಣಗಳಿಂದಾಗಿ ಅಲ್ಲಿನ ಜನಜೀವನದಲ್ಲೂ ಒಂದು ಬಗೆಯ ನೆಮ್ಮದಿ ಭಂಗವೂ ಅಲ್ಲೋಲಕಲ್ಲೋಲವೂ ಆಗಿದ್ದುವು.

ಆಗ ಯುರೋಪಿನ ಯಾವ ರಾಷ್ಟ್ರವೇ ಆಗಲಿ ನೆರೆ ರಾಜ್ಯಗಳನ್ನು ಗೆದ್ದು ಯುರೋಪಿನ ಸಾರ್ವಭೌಮತ್ವ ಸ್ಥಾಪಿಸಬೇಕೆಂಬ ಇಚ್ಛೆ ಹೊಂದಿತ್ತೆನ್ನಲು ಆಧಾರಗಳಿಲ್ಲ. ಆದರೆ ಅಲ್ಲಿನ ಜನರಲ್ಲಿ ರಾಷ್ಟ್ರಾಭಿಮಾನ ಬೆಳೆದಿದ್ದುದಂತೂ ನಿಜ. ಇದರಿಂದಾಗಿ ರಾಷ್ಟ್ರಗಳ ನಡುವೆ ಪರಸ್ಪರ ಕೊಡು-ಕೊಳ್ಳುವ ಮನೋಭಾವ ಬೆಳೆಯಲವಕಾಶವಾಗಲಿಲ್ಲ. ಮೈತ್ರಿಯ ಧೋರಣೆಯಿಂದ ತಮ್ಮ ಅಭಿಮಾನಕ್ಕೆ ಕುಂದಾದೀತೇನೋ-ಎಂಬುದೇ ಅವುಗಳ ಅಂಜಿಕೆ.

ಯುದ್ಧ ಪೂರ್ವದ ಐರೋಪ್ಯ ರಾಷ್ಟ್ರಗಳ ಆರ್ಥಿಕ ಸಾಮ್ರಾಜ್ಯವಾದವನ್ನು ಈ ದೃಷ್ಟಿಯಿಂದ ನೋಡುವುದು ಅವಶ್ಯ. ವಸಾಹತುಗಳಿಂದ ತಮಗೆ ಲಾಭವೆಂಬುದನ್ನರಿತ ಐರೋಪ್ಯ ರಾಷ್ಟ್ರಗಳು ಇವುಗಳ ಸಂಪಾದನೆಗಾಗಿ 1881ರಿಂದ ಮುಂದೆ ತಂತಮ್ಮಲ್ಲೇ ಸ್ಪರ್ಧಿಸಿದುವೆಂಬುದು ನಿಜವಾದರೂ ಈ ಸ್ಪರ್ಧೆಯ ಹಿಂದೆ ಅವುಗಳ ಅಭಿಮಾನವೂ ಇತ್ತು. ಅವುಗಳಿಗೆ ಯುರೋಪಿನಲ್ಲಿ ತಮ್ಮ ಪ್ರತಿಷ್ಠೆ ಉಳಿಸಿಕೊಳ್ಳಲು ವಸಾಹತುಗಳು ಸಾಧನಗಳಾದುವು. ಯುರೋಪಿನ ರಾಷ್ಟ್ರಗಳಿಗೆ ತಂತಮ್ಮ ವ್ಯಾಜ್ಯಗಳ ಪರಿಹಾರಕ್ಕೆ ಪಣವಾಗಿ ವಸಾಹತುಗಳು ಒದಗಿಬಂದುವು. ಇವಿಲ್ಲದಿದ್ದರೆ ಐರೋಪ್ಯ ರಾಷ್ಟ್ರಗಳ ನಡುವೆಯೇ ಪರಸ್ಪರ ಆಕ್ರಮಣ ಪ್ರಬಲವಾಗಿ 1914ಕ್ಕೂ ಮುಂಚೆಯೇ ಯುದ್ಧ ಸಂಭವಿಸಬಹುದಾಗಿತ್ತು. ಅಂತೂ ವಸಾಹತುಗಳ ಸ್ಪರ್ಧೆಯೂ ಐರೋಪ್ಯ ರಾಷ್ಟ್ರಗಳಲ್ಲಿ ಎರಡು ಬಣಗಳು ವೃದ್ಧಿಯಾಗಲು ಒಂದು ಮುಖ್ಯ ಕಾರಣ.

ಯುದ್ಧಪೂರ್ವ ಯುರೋಪಿನ ದ್ವೇಷ-ಭೀತಿಗಳಿಗೆ ಬಹುಮಟ್ಟಿಗೆ ಜರ್ಮನಿಯೇ ಕಾರಣ. 1866ರಲ್ಲೂ 1870ರಲ್ಲೂ ಅದು ಗಳಿಸಿದ ವಿಜಯಗಳೂ ಅದರ ಸೈನಿಕ ಶಕ್ತಿಯೂ ಯುದ್ಧದ ಬೆದರಿಕೆ ಹಾಕಿ ಅನ್ಯರಾಷ್ಟ್ರಗಳನ್ನು ತನ್ನ ಷರತ್ತಿಗೆ ಒಪ್ಪಿಸಿಕೊಳ್ಳುತ್ತಿದ್ದ ವಿಧಾನವೂ ಅದರ ನೌಕಾಬಲವೃದ್ಧಿಯೂ ಜರ್ಮನ್ ಚಕ್ರವರ್ತಿ ಕೈಸರ ಉದ್ರೇಕಪೂರಿತ ಭಾಷಣಗಳೂ ಆ ದೇಶದ ಉದ್ದೇಶಗಳ ಬಗ್ಗೆ ಇತರ ರಾಷ್ಟ್ರಗಳಲ್ಲಿ ಸಂದೇಹೋತ್ಪನ್ನ ಮಾಡಿದುವು. ಜರ್ಮನಿಯನ್ನು ತನ್ನ ಮಿತ್ರರಾಷ್ಟ್ರವೆಂದು ಪರಿಗಣಿಸಿದ್ದ ಬ್ರಿಟನ್ ಕೂಡ ಈ ಕಾರಣದಿಂದಾಗಿ 1904ರ ಅನಂತರ ಫ್ರಾನ್ಸ್-ರಷ್ಯಗಳ ಸಖ್ಯ ಬೆಳೆಸಿಕೊಂಡಿತು.

ಆರ್ಥಿಕ ದೃಷ್ಟಿಯಿಂದಲೂ ಪ್ರತಿಷ್ಠೆಯ ದೃಷ್ಟಿಯಿಂದಲೂ ಆಲ್ಸೇಸ್-ಲೋರೇನ್ ಪ್ರದೇಶಗಳನ್ನು ಮತ್ತೆ ಜರ್ಮನಿಯಿಂದ ಪಡೆದುಕೊಳ್ಳಲು ಫ್ರಾನ್ಸ್ ಹಾತೊರೆಯುತ್ತಿತ್ತು. ಈ ಪ್ರಾಂತ್ಯಗಳಲ್ಲಿ ದೊರಕುತ್ತಿದ್ದ ಖನಿಜಗಳಿಂದ ಜರ್ಮನಿಯ ಕೈಗಾರಿಕೆಗಳ ಬೆಳೆವಣಿಗೆಯಾಗುವುದು ಫ್ರಾನ್ಸಿನ ಕೈಗಾರಿಕಾ ಪ್ರಭೃತಿಗಳಿಗೆ ಹಿತವಾಗಿ ಕಾಣಲಿಲ್ಲ.

ಏಡ್ರಿಯಾಟಿಕ್ ಸಮುದ್ರಕ್ಕೆ ಪೂರ್ವದಲ್ಲಿನ ಬಾಸ್ನಿಯ ಮತ್ತು ಹರ್ಸಗೋವಿನ ಪ್ರಾಂತ್ಯಗಳು ಆಸ್ಟ್ರಿಯ-ಹಂಗರಿ ಮತ್ತು ಸರ್ಬಿಯಗಳ ನಡುವೆ ಪೈಪೋಟಿ ಮತ್ತು ವೈಮನಸ್ಯವನ್ನು ತಂದುವು. ಜರ್ಮನಿಯ ನೆರೆ ರಾಷ್ಟ್ರವಾಗಿದ್ದ ಆಸ್ಟ್ರಿಯ-ಹಂಗರಿ ಸಾಮ್ರಾಜ್ಯವೊಂದು ಕಲಸುಮೇಲೋಗರ. ನಾನಾ ಜಾತಿಗಳ ನಾನಾ ಪ್ರದೇಶಗಳ ಸಮೂಹ. ಅಲ್ಲಿಯ ರಾಜ ನಿರಂಕುಶನಾಗಿದ್ದ. ಆತನ ಪ್ರಜೆಗಳಲ್ಲಿ ಜರ್ಮನ್ನರಲ್ಲದೆ ಮಗ್ಯಾರರೂ ಸ್ಲಾವರೂ ಇದ್ದರು. ಸ್ಲಾವ್ ಜನಾಂಗದವರೆಲ್ಲ ಒಂದುಗೂಡಬೇಕೆಂಬ ಚಳವಳಿ ಆ ರಾಜನ ಪ್ರಭುತ್ವಕ್ಕೆ ತೊಂದರೆ ಕೊಡತಕ್ಕುದಾಗಿತ್ತು. ಈ ಚಳವಳಿಗೆ ಸರ್ಬಿಯ ರಾಜ್ಯವೇ ಕೇಂದ್ರ. ಈ ರಾಜ್ಯ ಸ್ವತಂತ್ರವಾಗಿದ್ದುದು ಆಸ್ಟ್ರಿಯದ ಪ್ರಭುವಿಗೆ ಸರಿಬೀಳಲಿಲ್ಲ. ಸರ್ಬಿಯ ರಾಜ್ಯಕ್ಕೆ ಸುಮುದ್ರ ತೀರ ಬೇಕೆನಿಸಿತ್ತು; ಆದರೆ ಅದನ್ನು ಆಸ್ಟ್ರಿಯ ಬಿಟ್ಟುಕೊಟ್ಟ ಹೊರತು ಸಿಕ್ಕುವಂತಿರಲಿಲ್ಲ. ಹೀಗೆ ಆಸ್ಟ್ರಿಯ-ಸರ್ಬಿಯಗಳಿಗೆ ವೈಷಮ್ಯವಿದ್ದಾಗ ಆಸ್ಟ್ರಿಯದ ಪ್ರಭುವೇ ಮೊದಲು ಜಗಳಕ್ಕೆ ಸಿದ್ಧನಾಗಿ, ಅದಕ್ಕೆ ರಷ್ಯನ್ನರು ಸಹಾಯ ನೀಡುವುದಕ್ಕೆ ಮೊದಲೇ ಸರ್ಬಿಯನ್ನರನ್ನು ಅಡಗಿಸಲು ಮನಸ್ಸು ಮಾಡಿ ಹೊಂಚುಹಾಕುತ್ತಿದ್ದ. ಇದಲ್ಲದೆ ಬಾಸ್ನಿಯ ಮತ್ತು ಹರ್ಸಗೋವಿನ ಪ್ರಾಂತ್ಯದ ಸ್ಲಾವ್ ಜನಾಂಗಕ್ಕೆ ಸೇರಿದ ಜನರೂ ಸಾಧ್ಯವಾದರೆ ಆಸ್ಟ್ರಿಯ-ಹಂಗರಿ ಸಾಮ್ರಾಜ್ಯದ ಹಿಡಿತದಿಂದ ಬಿಡಿಸಿಕೊಂಡು ಸರ್ಬಿಯದಲ್ಲಿ ನಡೆಯುತ್ತಿದ್ದ ಅಖಿಲ ಸ್ಲಾವ್ ಚಳವಳಿಗೆ ಸೇರಿಕೊಳ್ಳಬೇಕೆಂದು ಹವಣಿಸುತ್ತಿದ್ದರು. ಹೀಗೆ ಆಸ್ಟ್ರಿಯ-ಹಂಗೆರಿ ಸಾಮ್ರಾಜ್ಯದಲ್ಲಿದ್ದ ಉಗ್ರ ರಾಷ್ಟ್ರೀಯತಾ ಭಾವನೆಗಳು ಆ ಸಾಮ್ರಾಜ್ಯಕ್ಕೆ ಸೇರಿದ ವಿವಿಧ ಜನಾಂಗಗಳನ್ನು ಕೆಣಕಿದುವು.

1870ರಲ್ಲಿ ಇಟಲಿಯ ದೊರೆಯಾಗಿದ್ದ ಎರಡನೆಯ ವಿಕ್ಟರ್ ಎಮ್ಯಾನ್ಯುಯೆಲ್ ರೋಮ್ ನಗರ ಪ್ರವೇಶ ಮಾಡಿದಾಗ ಇಟಲಿಯ ಐಕ್ಯ ಸಂಪೂರ್ಣವಾಗಿ ಮುಗಿದಿರಲಿಲ್ಲ. ಆಸ್ಟ್ರಿಯ-ಹಂಗರಿ ಸಾಮ್ರಾಜ್ಯಕ್ಕೆ ಸೇರಿದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಳ್ಳಬೇಕೆಂದು ಅದು ಹವಣಿಕೆ ನಡೆಸಿತ್ತು. ಆ ಪ್ರದೇಶಗಳಲ್ಲಿ ಇಟಾಲಿಯನ್ನರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇದಲ್ಲದೆ ಇಟಲಿ ಏಡ್ರಿಯಾಟಿಕ್ ಸಮುದ್ರದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಆಸ್ಟ್ರಿಯದೊಡನೆ ಪೈಪೋಟಿ ನಡೆಸಿತ್ತು.

1908ರಲ್ಲಿ ತುರ್ಕಿಯಲ್ಲಿ ಒಂದು ಪಲ್ಲಟ ನಡೆಯಿತು. ಅಬ್ದುಲ್ ಹಮೀದ್ ಸುಲ್ತಾನನ ಆಳ್ವಿಕೆಯನ್ನು ತರುಣ ತುರ್ಕಿ ಪಕ್ಷದವರು ಕೊನೆಗಾಣಿಸಿ ಕ್ರಮಬದ್ಧ ಆಡಳಿತವನ್ನು ಕಟ್ಟಲು ಉದ್ಯಮಿಸಿದರು. ಇವರ ಸೈನ್ಯಕ್ಕೆ ತರಬೇತಿ ಕೊಡಲು ಮುಂದೆ ಬಂದವರು ಜರ್ಮನರು. ಅಲ್ಲಿ ಸ್ವಲ್ಪ ಕಾಲ ಅವ್ಯವಸ್ಥೆ ತೋರಿದಂತಿದ್ದಾಗ ಆಸ್ಟ್ರಿಯದ ಪ್ರಭು ಆತುರಪಟ್ಟು ಹಿಂದೆ ತನಗೆ ಸೇರಿದ್ದ ಬಾಸ್ನಿಯ-ಹರ್ಸಗೋವಿನ ಪ್ರಾಂತ್ಯಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇದರಿಂದ ರಷ್ಯನ್ ಚಕ್ರವರ್ತಿಗೆ ಅಸಮಾಧಾನವಾಯಿತು. ತುರ್ಕಿಯ ಮೇಲೆ ಬಿದ್ದು ಸಿಕ್ಕಿದಷ್ಟನ್ನು ದಕ್ಕಿಸಿಕೊಳ್ಳುವುದು ಜಾಣತನವೆಂದು ಐರೋಪ್ಯರಾಷ್ಟ್ರಗಳು ಭಾವಿಸಿದುವು. 1911ರಲ್ಲಿ ಇಟಲಿಯವರು ತುರ್ಕಿಯೊಡನೆ ಜಗಳ ತೆಗೆದು ಉತ್ತರ ಆಫ್ರಿಕದಲ್ಲಿ ಟ್ರಿಪೋಲಿ ಪ್ರದೇಶವನ್ನಾಕ್ರಮಿಸಿಕೊಂಡರು. ಅದೇ ಒಳ್ಳೆಯ ಸಮಯವೆಂದು ಗ್ರೀಸಿನ ನಾಯಕ ವೆನಿಜೆಲಸ್ ಬಲ್ಗೇರಿಯ, ಸರ್ಬಿಯ ಮತ್ತು ಮಾಂಟೆ ನೀಗ್ರೊಗಳೊಂದಿಗೆ ಸೇರಿ ತುರ್ಕಿಯ ವಿರುದ್ಧವಾಗಿ ಬಾಲ್ಕನ್ ಲೀಗ್ ಎಂಬ ವ್ಯೂಹ ಕಟ್ಟಿದ. 1912ರಲ್ಲಿ ಇದು ತುರ್ಕಿಯನ್ನು ಸೋಲಿಸಿತು. ಯುರೋಪಿನಲ್ಲಿ ಸೇರಿದ್ದ ಭೂಭಾಗಗಳೆಲ್ಲವನ್ನೂ ತುರ್ಕಿ ಕಳೆದುಕೊಂಡಿತು. ಆದರೆ ವಿಜಯೀ ಬಾಲ್ಕನ್ ರಾಷ್ಟ್ರಗಳು 1913ರಲ್ಲಿ ತಂತಮ್ಮಲ್ಲೇ ಕಲಹವನ್ನಾರಂಭಿಸಿದುವು. ಆಗ ಬ್ರಿಟನ್, ರಷ್ಯ, ಜರ್ಮನಿಗಳ ಮಂತ್ರಿಪ್ರಮುಖರು ಸಂಧಾನ ನಡೆಸಿ ಆ ಜಗಳಗಳನ್ನು ಒಂದು ರೀತಿ ಪರಿಹರಿಸಿದರು. ಆದರೆ ಆಸ್ಟ್ರಿಯದ ಪ್ರಭು ಮಾತ್ರ ತನ್ನ ಆಸೆ ಆಕಾಂಕ್ಷೆಗಳನ್ನು ಬೆಳೆಸಿಕೊಳ್ಳುತ್ತಲೇ ಇದ್ದ.

19ನೆಯ ಶತಮಾನದ ಯುರೋಪಿನ ಚರಿತ್ರೆಯಲ್ಲಿ ಜರ್ಮನಿ, ಇಟಲಿ ದೇಶಗಳು ಐಕ್ಯವನ್ನೂ ಸ್ವಾತಂತ್ರ್ಯವನ್ನೂ ಪಡೆದದ್ದು ದೊಡ್ಡ ಘಟನೆಗಳು. ಫ್ರಾನ್ಸಿಗೆ ಸೇರಿದ್ದ ಆಲ್ಸೇಸ್-ಲೊರೋನ್ ಪ್ರಾಂತ್ಯಗಳನ್ನು ಪಡೆದುಕೊಂಡ ಬಿಸ್‌ಮಾರ್ಕ್ ಫ್ರೆಂಚರ ವಿರುದ್ಧವಾಗಿ ಆಸ್ಟ್ರಿಯ ಮತ್ತು ಇಟಲಿಗಳೊಡನೆ ಸೇರಿ ಮಾಡಿಕೊಂಡಿದ್ದ ತ್ರಿಪಕ್ಷ ಮೈತ್ರಿಯೂ (ಟ್ರಿಪಲ್ ಅಲಯನ್ಸ್, 1882) ರಷ್ಯದೊಂದಿಗೆ ಹೊಂದಿದ್ದ ಎಚ್ಚರದ ಸ್ನೇಹಪರತೆಯೂ ಆತನ ಚಾಣಾಕ್ಷತನದ ದ್ಯೋತಕಗಳಾಗಿದ್ದುವು. ಆದರೆ ಅವನ ಅನಂತರ ಅಧಿಕಾರಕ್ಕೆ ಬಂದ ಜರ್ಮನ್ ಪ್ರಭುಗಳು ಆಸ್ಟ್ರಿಯದೊಂದಿಗೆ ಆಪ್ತತೆ ಕಾಪಾಡಿಕೊಂಡು ಬಂದರಾದರೂ

ರಷ್ಯದ ವಿಚಾರದಲ್ಲಿ ಉಪೇಕ್ಷೆ ತಳೆದರು. ಬಾಲ್ಟಿಕ್ ಮತ್ತು ಕಪ್ಪು ಸಮುದ್ರಗಳ ಪ್ರದೇಶವನ್ನೂ ಪೆಸಿಫಿಕ್ ತೀರಗಳನ್ನೂ ಒಟ್ಟುಗೂಡಿಸುವ ರೈಲುದಾರಿ ಹಾಕಿಕೊಳ್ಳುವುದು ರಷ್ಯನ್ನರ ಇಷ್ಟವಾಗಿತ್ತು. ಫ್ರೆಂಚರು ಆ ಉದ್ಯಮದಲ್ಲಿ ಸಹಕರಿಸಿ ರಷ್ಯದವರ ಮೈತ್ರಿಯನ್ನು ಕಟ್ಟಿದರು. ಜರ್ಮನಿಯ ತ್ರಿಪಕ್ಷ ಮೈತ್ರಿಗೆ ವಿರುದ್ಧವಾಗಿ ಫ್ರಾನ್ಸ್–ರಷ್ಯಗಳ ದ್ವಿಪಕ್ಷ ಮೈತ್ರಿ (ಡ್ಯೂಯಲ್ ಅಲಯನ್ಸ್) ಏರ್ಪಟ್ಟಾಗ ಯುದ್ಧ ಮನೋಭಾವ ಬೆಳೆಯಲು ಕಾರಣವಾಯಿತು. ಎರಡೂ ಕಡೆಗಳವರೂ ತಮ್ಮ ಯುದ್ಧಸನ್ನಾಹಗಳಿಗೆ ಹೆಚ್ಚು ಹೆಚ್ಚು ಗಮನ ಕೊಟ್ಟು ದೊಡ್ಡ ದೊಡ್ಡ ಸೈನ್ಯ ಕಟ್ಟಲು ತೊಡಗಿದರು.

19ನೆಯ ಶತಮಾನದ ಅಂತ್ಯದಲ್ಲಿ ಆಫ್ರಿಕ–ಏಷ್ಯಗಳಲ್ಲಿ ಸಾಮ್ರಾಜ್ಯ ಸಂಪಾದನೆಗೂ ವ್ಯಾಪಾರದ ಸವಲತ್ತುಗಳಿಗಾಗಿಯೂ ಐರೋಪ್ಯ ರಾಷ್ಟ್ರಗಳ ನಡುವೆ ತೀವ್ರ ಸ್ಪರ್ಧೆ ನಡೆದಿತ್ತು. ಇಂಗ್ಲಿಷರಿಗೂ ಫ್ರೆಂಚರಿಗೂ ನಡುವೆ ವಿರಸ ಬೆಳೆಯಿತು. ಸೂಡಾನ್ ಪ್ರದೇಶದಲ್ಲಿ ಬ್ರಿಟಿಷರು ನುಗ್ಗಿದಾಗ ಪಶ್ಚಿಮದ ಕಡೆಯಿಂದ ಫ್ರೆಂಚರು ಅಲ್ಲಿಗೆ ನುಗ್ಗಿಬಂದು ಆ ಪ್ರದೇಶ ತಮ್ಮದಾಗಬೇಕೆಂದು ಹಟಹೂಡಿದರು. ಆದರೆ ಆಫ್ರಿಕ–ಏಷ್ಯಗಳಲ್ಲಿ ಐರೋಪ್ಯರು ಪರಸ್ಪರವಾಗಿ ಹೊಡೆದಾಟ ನಡೆಸದೆ ಕೇವಲ ಸಂಧಾನಗಳಿಂದಲೇ ತಮ್ಮ ತಮ್ಮ ಸಾಮ್ರಾಜ್ಯ ವಿಸ್ತಾರಗಳನ್ನು ಗೊತ್ತುಮಾಡಿಕೊಂಡರು.

ಜರ್ಮನಿಯುನ್ನು ಒಟ್ಟುಗೂಡಿಸಿದ ತರುವಾಯ ಬಿಸ್‍ಮಾರ್ಕ್ ದೂರಾಲೋಚನೆಯಿಂದ ಶಾಂತಿ ನೆಲೆಗೊಳಿಸಿ ಜರ್ಮನಿಯ ರೈಲುದಾರಿಗಳೂ ಕೈಗಾರಿಕೆಗಳೂ ಸ್ಥಲಜಲ ಸೈನ್ಯಗಳೂ ಅಭಿವೃದ್ಧಿಯಾಗಲು ಆಸ್ಪದವನ್ನು ಕಲ್ಪಿಸಿಕೊಟ್ಟ. 1884ರ ವರೆಗೂ ಹೊರಗಿನ ಸಾಮ್ರಾಜ್ಯಕ್ಕಾಗಿ ಜರ್ಮನ್ನರು ಉದ್ಯಮಿಸಲಿಲ್ಲ. ಆಫ್ರಿಕ–ಏಷ್ಯಗಳಲ್ಲಿ ಸಾಮ್ರಾಜ್ಯ ಪ್ರಯತ್ನವನ್ನು ಜರ್ಮನ್ನರು ಕೈಗೊಂಡದ್ದು ಸಾವಕಾಶವಾಯಿತು. ಆ ವೇಳೆಗೆ ಆಫ್ರಿಕದ ಉತ್ತಮ ಭಾಗಗಳು ಇತರರ ಪಾಲಾಗಿದ್ದುವು. ಆಫ್ರಿಕದ ವಾಯವ್ಯಭಾಗವೆಲ್ಲವೂ ಫ್ರೆಂಚರದಾಗಿತ್ತು. ಆದ್ದರಿಂದ ಜರ್ಮನ್ನರಿಗೆ ಫ್ರೆಂಚರಲ್ಲಿ ಅಸಮಾಧಾನ ಬೆಳೆದದ್ದು ಅನಿರೀಕ್ಷಿತವಲ್ಲ. ಆ ಸಮಯದಲ್ಲಿ ಬ್ರಿಟನ್–ಜರ್ಮನಿಗಳು ಫ್ರೆಂಚರಿಗೆ ವಿರೋಧವಾಗಿ ಒಟ್ಟುಗೂಡಬಹುದಾಗಿತ್ತು. ಆದರೆ ವ್ಯಾಪಾರ ಪ್ರಪಂಚದಲ್ಲಿ ಬ್ರಿಟಿಷರಿಗೂ ಜರ್ಮನ್ನರಿಗೂ ಪೈಪೋಟಿ ಬೆಳೆಯುತ್ತಲೇ ಇತ್ತು. ಬ್ರಿಟಿಷರ ನೌಕಾಪ್ರಾಬಲ್ಯ ತಮ್ಮ ಅಭಿವೃದ್ಧಿಗೆ ಅಡ್ಡಿಯೆಂದು ಜರ್ಮನರು ಭಾವಿಸಿಕೊಂಡು ತಾವೂ ಹಡಗುಪಡೆಯನ್ನು ಬಲಪಡಿಸಿಕೊಳ್ಳುತ್ತಿದ್ದರು. 19ನೆಯ ಶತಮಾನದ ಕಡೆಕಡೆಗೆ ಬ್ರಿಟಿಷರೂ ಜರ್ಮನ್ನರೂ ಪೈಪೋಟಿಯ ಮೇಲೆ ಹಡಗುಗಳನ್ನು ಕಟ್ಟಿಕೊಳ್ಳುತ್ತಿದ್ದರು. 1904ರಲ್ಲಿ ಬ್ರಿಟಿಷರು ತಮ್ಮ ಪ್ರಧಾನ ನೌಕಾಬಲವನ್ನು ಭೂಮಧ್ಯಸಮುದ್ರದಿಂದ ಸಾಗಿಸಿ ಜರ್ಮನಿಗೆದುರಾಗಿ ಉತ್ತರ ಸಮುದ್ರದಲ್ಲಿಟ್ಟುಕೊಂಡರು.

ದೂರಪ್ರಾಚ್ಯದಲ್ಲಿ ಜಪಾನಿಗೂ ರಷ್ಯಕ್ಕೂ ವಿರಸ ಉಂಟಾಯಿತು. ಜಪಾನಿನೊಡನೆ ಯುದ್ಧಮಾಡುತ್ತ ರಷ್ಯದವರು ಪೂರ್ವಕ್ಕೆ ಮುಖಮಾಡಿಕೊಂಡಿದ್ದಾಗ ಜರ್ಮನ್ನರು ತಮ್ಮೊಡನೆ ಜಗಳ ತೆಗೆಯಬಹುದೆಂದು ಫ್ರೆಂಚರಿಗೆ ಭಯ. ಆದ್ದರಿಂದ ಫ್ರೆಂಚರು ಬ್ರಿಟಿಷರೊಂದಿಗೆ ಮೈತ್ರಿ ಬೆಳೆಸಿದರು. ಸಾಮ್ರಾಜ್ಯ ಸಂಪಾದನೆಯ ಪೈಪೋಟಿಯಲ್ಲಿ ಫ್ರೆಂಚರು ಬ್ರಿಟಿಷರಿಗೆ ಅನುಕೂಲರಾಗಿಯೇ ವರ್ತಿಸಿದ್ದರು. ಇವರ ನಡುವೆ ಸ್ನೇಹ ಬೆಳೆಯಿತು. ಮೊರಾಕೋ ಪ್ರಾಂತ್ಯದಲ್ಲಿ ಫ್ರೆಂಚರ ಪ್ರಾಬಲ್ಯವನ್ನೂ ಈಜಿಪ್ಟಿನಲ್ಲಿ ಬ್ರಿಟಿಷರ ಪ್ರಾಬಲ್ಯವನ್ನೂ ಆ ರಾಷ್ಟ್ರಗಳೂ ಪರಸ್ಪರವಾಗಿ ಒಪ್ಪಿದವು. 1907ರಲ್ಲಿ ರಷ್ಯದವರು ಕೂಡ ಬ್ರಿಟಿಷರೊಂದಿಗೆ ಮೈತ್ರಿ ಬೆಳೆಸಿದರು. ಹೀಗೆ ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಗಳದು ಒಂದು ವ್ಯೂಹವಾಯಿತು.

ಜರ್ಮನ್ ಚಕ್ರವರ್ತಿ 2ನೆಯ ವಿಲಿಯಂ ಮಹತ್ವಾಕಾಂಕ್ಷಿ. ಆ ರಾಷ್ಟ್ರದಲ್ಲಿ ಸೈನ್ಯಮುಖ್ಯಸ್ಥರು ಅತ್ಯಂತ ಪ್ರಬಲರಾಗಿದ್ದರು. ಆಲ್ಸೇಸ್–ಲೊರೋನ್ ವಿಷಯದಲ್ಲಿ ಮಾತ್ರವಲ್ಲದೆ ಆಫ್ರಿಕದಲ್ಲೂ ಜರ್ಮನಿಗೆ ಫ್ರಾನ್ಸಿನ ಹಗೆತನವಿತ್ತು. ಸಾಮ್ರಾಜ್ಯ ಕಟ್ಟುವ ಆಸೆ ಹೆಚ್ಚಾಗಿಯೇ ಇತ್ತು. ಜರ್ಮನಿಯ ಕೈಸರ್ ತುರ್ಕಿಯ ಸುಲ್ತಾನನ ಸ್ನೇಹ ಕಟ್ಟಿಕೊಂಡು ಬರ್ಲಿನ್ ನಗರದಿಂದ ತುರ್ಕಿಯ ಮೂಲಕ ಬಾಗ್ದಾದಿನವರೆಗೆ ರೈಲುದಾರಿ ಹಾಕಿಸುವ ಸಂಧಾನದಲ್ಲಿ ತೊಡಗಿದ್ದ. ಜರ್ಮನ್ ವಶದಲ್ಲಿರುವ ಈ ರೈಲುದಾರಿಯಿಂದ ಅದು ಸಮುದ್ರಮಾರ್ಗಗಳನ್ನು ತಪ್ಪಿಸಿಕೊಂಡು ಭೂಮಾರ್ಗಗಳ ಮೂಲಕವೆ ವ್ಯಾಪಾರ ನಡೆಸಬಹುದೆಂಬುದು ಕೈಸರನ ಆಲೋಚನೆ. ತುರ್ಕಿಯಲ್ಲಿ ಜರ್ಮನ್ನರ ಪ್ರವೇಶ ಬ್ರಿಟಿಷರಿಗೆ ಸರಿಬೀಳಲಿಲ್ಲ. ಹಿಂದೆ ರಷ್ಯದವರು ಪ್ರಬಲರಾಗಿ ತುರ್ಕಿಯನ್ನು ವಶಪಡಿಸಿಕೊಂಡಿದ್ದಿದ್ದರೆ ಯಾವ ಅಪಾಯ ತೋರಬಹುದಾಗಿತ್ತೋ ಅದೇ ಅಪಾಯ ಜರ್ಮನ್ನರಿಂದ ಸಂಭವಿಸುವಂತೆ ಆಯಿತು. ತುರ್ಕಿಯಲ್ಲಿ ಜರ್ಮನ್ನರು ಪ್ರಬಲರಾಗುವ ಅಂಶ ರಷ್ಯದವರಿಗೂ ಅನಿಷ್ಟವಾಗಿತ್ತು.

20ನೆಯ ಶತಮಾನದ ಆದಿಯಲ್ಲಿ ಈ ರೀತಿ ಐರೋಪ್ಯ ರಾಷ್ಟ್ರಗಳಲ್ಲಿ ಎರಡು ಭಾರಿ ವ್ಯೂಹಗಳಾಗಿದ್ದು ಪ್ರತಿ ರಾಷ್ಟ್ರದವರೂ ತಮ್ಮ ಯೋಗ್ಯತೆ ಮೀರಿ ಯುದ್ಧಕ್ಕೆ ಅಣಿಮಾಡಿಕೊಳ್ಳುತ್ತಿದ್ದರು. ಒಬ್ಬರ ಮೇಲೊಬ್ಬರಿಗೆ ಅತೀವ ಸಂಶಯ, ಭಯ, ಜಗಳಕ್ಕೆ ಕಾರಣ ತೋರಿದೊಡನೆ ಎಲ್ಲರೂ ಸಭೆ ಸೇರಿ ಇತ್ಯರ್ಥ ಮಾಡಿಕೊಳ್ಳುವ ಪ್ರಯತ್ನ ನಡೆದರೂ ಅದು ಫಲದಾಯಕವಾಗಿ ಮುಗಿಯುತ್ತಿರಲಿಲ್ಲ. ಬಾಲ್ಕನ್ ಕ್ಷೇತ್ರಗಳ ವಿಷಯದಲ್ಲಿ ಆಸ್ಟ್ರಿಯಕ್ಕೂ ರಷ್ಯಕ್ಕೂ ಹಗೆತನವಿತ್ತು. ಆಲ್ಸೇಸ್–ಲೋರೇನ್ ಮತ್ತು ಉತ್ತರ ಆಫ್ರಿಕಗಳ ವಿಚಾರದಲ್ಲಿ ಜರ್ಮನಿಯೂ ಫ್ರಾನ್ಸೂ ವೈರಿಗಳು, ಕೈಗಾರಿಕೆ ವ್ಯಾಪಾರಗಳಲ್ಲಿಯೂ ನೌಕಾಬಲ ರಚನೆಯಲ್ಲಿಯೂ ಜರ್ಮನಿಯೂ ಬ್ರಿಟನ್ನೂ ವಿರೋಧಿಗಳು. ಹೀಗಿರುವಲ್ಲಿ ಯಾವ ಘಟನೆಯಿಂದಲೂ ಕದನ ಉದ್ಭವಿಸುವ ಪರಿಸ್ಥಿತಿಯಿತ್ತು. 20ನೆಯ ಶತಮಾನದ ಆದಿ ಭಾಗವೆಲ್ಲವೂ ಯುದ್ಧ ಪ್ರಾರಂಭವಾಗುವ ಮೊದಲು ಪ್ರತಿಕಕ್ಷಿಗಳು ನಡೆಸಬಹುದಾದ ದೃಷ್ಟಿ ಯುದ್ಧದಂತಿತ್ತು.

1904ರಲ್ಲಿ ಬ್ರಿಟನ್ ಮತ್ತು ಫ್ರಾನ್ಸ್‌ಗಳ ನಡುವೆ ಮೈತ್ರಿ ಏರ್ಪಟ್ಟಾಗ ಫ್ರೆಂಚರಿಗೆ ಮೊರಾಕೋ ಸೇರಬಹುದೆಂದು ಬ್ರಿಟಿಷರೊಪ್ಪಿದರಷ್ಟೆ. ಆದರೆ ಆ ಪ್ರಾಂತ್ಯದಲ್ಲಿ ಸ್ಪೇನಿಗೂ ಜರ್ಮನಿಗೂ ಆಸೆಯಿತ್ತು. ಟಾಂಜಿಯಾರಿನಲ್ಲಿ ಜರ್ಮನ್ ಕೈಸರ್ ಸ್ವತಃ ಬಂದಿದ್ದು ಜರ್ಮನ್ನರಿಗೆ ಅಲ್ಲಿ ಪ್ರದೇಶ ಲಾಭವಾಗಬೇಕೆಂಬುದನ್ನು ಸ್ಪಷ್ಟಪಡಿಸಿದ. ಮೊರಾಕೋ ಪ್ರಾಂತ್ಯದ ಇತ್ಯರ್ಥಕ್ಕಾಗಿ ಐರೋಪ್ಯರ ಸಮ್ಮೇಳನ ನಡೆಯಲೆಂಬುದು ಅವನ ಸೂಚನೆ. 1906ರಲ್ಲಿ ಅಲ್ಲಿಗೆ ಫ್ರಾನ್ಸು ಸೈನ್ಯ ಕಳುಹಿಸಿತು. ಆಗ ಕೈಸರನೂ ಅಲ್ಲಿಗೆ ಜರ್ಮನ್ ಯುದ್ಧದ ಹಡಗೊಂದನ್ನು ಕಳುಹಿಸಿದ. ಇವುಗಳ ನಡುವೆ ಯುದ್ಧ ಸಂಭವಿಸುವ ಪರಿಸ್ಥಿತಿ ಏರ್ಪಟ್ಟಿತು. ಆದರೆ ಫ್ರೆಂಚರು ಕಾಂಗೋಪ್ರದೇಶದಲ್ಲಿ ಜರ್ಮನ್ನರಿಗೆ ಸ್ವಲ್ಪ ಭಾಗ ಬಿಟ್ಟುಕೊಟ್ಟದ್ದರಿಂದ ಹೊಡೆದಾಟವಾಗುವುದು ತಪ್ಪಿತು.

ಯುರೋಪಿನ ರಾಜ್ಯಗಳಲ್ಲಿ ವಸಾಹತುಗಳಿಗಾಗಿ ನಡೆದ ಈ ಪೈಪೋಟಿಗೆ ಆರ್ಥಿಕ ಕ್ಷೇತ್ರದಲ್ಲಾದ ಕ್ರಾಂತಿಯೆ ಮುಖ್ಯವಾದ ಕಾರಣ. 19ನೆಯ ಶತಮಾನದ ಕೊನೆಯ ಮತ್ತು 20ನೆಯ ಶತಮಾನದ ಆದಿಭಾಗದ ಇತಿಹಾಸವೆಲ್ಲ ಐರೋಪ್ಯ ರಾಷ್ಟ್ರಗಳು ಮಾರುಕಟ್ಟೆಗಳಿಗಾಗಿ, ಕಚ್ಚಾಪದಾರ್ಥಗಳ ಪೂರೈಕೆಗಾಗಿ, ಹೆಚ್ಚಿನ ಬಂಡವಾಳವನ್ನು ರೂಢಿಸುವ ಸಲುವಾಗಿ, ಹೆಚ್ಚಿನ ಜನಸಂಖ್ಯೆಯನ್ನು ರವಾನಿಸುವುದಕ್ಕಾಗಿ ವಸಾಹತುಗಳನ್ನು ಕಟ್ಟುವುದರಲ್ಲಿ ನಡೆಸಿದ ಪೈಪೋಟಿಗಳಿಂದ ತುಂಬಿದೆ. ಐರೋಪ್ಯ ರಾಷ್ಟ್ರಗಳು ಆಫ್ರಿಕವನ್ನು ತಮ್ಮತಮ್ಮಲ್ಲೆ ಹಂಚಿಕೊಂಡವು. ಏಷ್ಯ ಮತ್ತು ಮಧ್ಯಪೂರ್ವದ ರಾಷ್ಟ್ರಗಳಿಗೂ ಐರೋಪ್ಯರ ವಸಾಹತು ಪೈಪೋಟಿ ಹಬ್ಬಿತು. ಇಂಥ ಹತೋಟಿಯಿಂದ ರಾಷ್ಟ್ರ–ರಾಷ್ಟ್ರಗಳಲ್ಲಿ ತಿಕ್ಕಾಟ ಹೆಚ್ಚಾಯಿತು. ಇಂಗ್ಲೆಂಡ್ ಮತ್ತು ಜರ್ಮನಿಗಳ ಮಧ್ಯೆ ವೈಮನಸ್ಯ ಬೆಳೆಯಲು ಈ ಪೈಪೋಟಿಯೂ ಒಂದು ಮುಖ್ಯ ಕಾರಣ. ಆಸ್ಟ್ರಿಯ–ಹಂಗರಿ ಮತ್ತು ರಷ್ಯಗಳ ನಡುವಣ ವಾಣಿಜ್ಯ ಪೈಪೋಟಿಯೂ ರಾಜಕೀಯ ದ್ವೇಷವಾಗಿ ಪರಿವರ್ತನೆಗೊಂಡಿತು. ಇಟಲಿ ಮತ್ತು ಆಸ್ಟ್ರಿಯಗಳ ನಡುವೆ ಇದೇ ಕಾರಣದಿಂದ ಮನಸ್ತಾಪ ಬೆಳೆಯಿತು.

1980ರ ತರುವಾಯ ಪ್ರತಿವರ್ಷವೂ ಇಂಗ್ಲೆಂಡಿನಲ್ಲಿ ಜರ್ಮನಿಯ ವಿರುದ್ಧ ಭಯ ಹೆಚ್ಚಾಯಿತು. ಜರ್ಮನಿ ಪ್ರಪಂಚದ ವಾಣಿಜ್ಯ ಮತ್ತು ವ್ಯಾಪಾರಕ್ಷೇತ್ರಗಳಲ್ಲಿ ತನ್ನನ್ನು ಹಿಂದೆ ಹಾಕಬಹುದೆಂಬ ಭಯ ಇಂಗ್ಲೆಂಡಿಗೆ ಇತ್ತು. 1900 ರಿಂದ 1914ರ ವರೆಗಿನ ಕಾಲದಲ್ಲಿ ಬ್ರಿಟನಿನಲ್ಲಿ ಜರ್ಮನಿಯ ಬಗ್ಗೆ ಹೊರಡಿಸಿದ ಅನೇಕ ಹೇಳಿಕೆಗಳಲ್ಲಿ ಈ ಭಯ ಎದ್ದು ಕಾಣುತ್ತದೆ. ಬ್ರಿಟನಿನ ವ್ಯಾಪಾರಿವರ್ಗದವರೂ ಕೈಗಾರಿಕೋದ್ಯಮಿಗಳೂ ಜರ್ಮನಿಯ ಪ್ರಭಾವವನ್ನು ಕುಗ್ಗಿಸುವ ದಿಸೆಯಲ್ಲಿ ತಮ್ಮ ಸರ್ಕಾರ ಯಾವ ಕ್ರಮ ಕೈಗೊಂಡರೂ ಬೆಂಬಲ ನೀಡಲು ಸಿದ್ಧರಿದ್ದರು.

ಶಸ್ತ್ರಾಸ್ತ್ರಗಳ ಪೈಪೋಟಿಯೂ ಮಹಾಯುದ್ಧಕ್ಕೆ ಒಂದು ಪ್ರಬಲ ಕಾರಣವೆನ್ನಬಹುದು. ಯುರೋಪಿನ ರಾಷ್ಟ್ರಗಳಲ್ಲಿ ಏರ್ಪಟ್ಟಿದ್ದ ಪರಸ್ಪರ ವೈಷಮ್ಯ ಮತ್ತು ಸಂಶಯಗಳು. ಯುದ್ಧಸನ್ನಾಹಕ್ಕೆ ಎಡೆಮಾಡಿಕೊಟ್ಟು ಶಸ್ತ್ರಾಸ್ತ್ರಗಳ ಪೈಪೋಟಿಗೆ ಕಾರಣವಾಗಿದ್ದುವು. ಇದರಿಂದ ಪ್ರತಿಯೊಂದು ರಾಷ್ಟ್ರವೂ ಸೇನಾಸಿದ್ಧತೆಯಲ್ಲಿ ಮತ್ತು ವಿನಾಶಕಾರಕ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲಿ ತೊಡಗುವಂತಾಯಿತು. 1868 ರಿಂದ 1913ರವರೆಗೆ 45 ವರ್ಷಗಳ ಅವಧಿಯಲ್ಲಿ ಪ್ರಪಂಚದ ರಾಷ್ಟ್ರಗಳು ಶಸ್ತ್ರಾಸ್ತ್ರಗಳಿಗಾಗಿ ಮಾಡುತ್ತಿದ್ದ ವೆಚ್ಚ 460 ಮಿಲಿಯನ್ ಡಾಲರುಗಳಿಂದ 2,531 ಡಾಲರುಗಳಿಗೆ ಏರಿತು. 20ನೆಯ ಶತಮಾನದ ಆದಿ ಭಾಗದಲ್ಲಿ ಇಡೀ ಯುರೋಪೇ ಅಪರಿಮಿತ ಸೇನೆಯ ಬೀಡಾಗಿ ಮಾರ್ಪಟ್ಟಿತೆನ್ನಬಹುದು.

ಅಂತಾರಾಷ್ಟ್ರೀಯ ಪ್ರಶ್ನೆಗಳನ್ನು ಶಾಂತಿಯುತವಾಗಿ, ಸಂಧಾನದ ಮೂಲಕ ಬಗೆಹರಿಸಲು ಶಕ್ತವಾದ ಅಂತಾರಾಷ್ಟ್ರೀಯ ಸಂಸ್ಥೆಯೊಂದು ಇಲ್ಲದೆ ಹೋದುದು ಕೂಡ ಒಂದನೆಯ ಮಹಾಯುದ್ಧ ಪ್ರಾರಂಭವಾಗಲು ಒಂದು ಕಾರಣ. ಗುಟ್ಟಿನ ರಾಜತಾಂತ್ರಿಕ ಒಡಂಬಡಿಕೆಗಳಿಗೆ ಆಗಿನ ಅನಿಶ್ಚಿತತೆಯೆ ಮೂಲ. ಒಂದು ದೇಶಕ್ಕೂ ಇನ್ನೊಂದು ದೇಶಕ್ಕೂ ನಡುವೆ ಜಾರಿಯಲ್ಲಿದ್ದ ಒಪ್ಪಂದಗಳ ಅರಿವು ಆ ದೇಶಗಳ ಮಂತ್ರಿಗಳಲ್ಲೇ ಅನೇಕರಿಗೆ ಗೊತ್ತಿರುತ್ತಿರಲಿಲ್ಲ; ಶಾಸನ ಸಭೆಗಳಿಗೂ ಅವುಗಳ ಅರಿವಿರುತ್ತಿರಲಿಲ್ಲ. ಕಳ್ಳತನ, ಮೋಸ, ಲಂಚಗುಳಿತನ, ಕಳ್ಳಕೈಬರೆಹ ಮೊದಲಾದವೇ ಪ್ರಪಂಚದ ಪ್ರತಿಯೊಂದು ವಿದೇಶಾಂಗ ಖಾತೆಯನ್ನೂ ತುಂಬಿದ್ದುವು.

1914ರಲ್ಲಿ ಯುದ್ಧದ ಮುನ್ನಾದಿನಗಳಲ್ಲಿ ಯುರೋಪಿನಲ್ಲಿದ್ದ ಪರಿಸ್ಥಿತಿ ಇದು. ಇಡೀ ಖಂಡವೇ ಮದ್ದಿನ ಮನೆಯಾಗಿತ್ತು. ಯಾವುದೇ ಘಟನೆಯ ಒಂದು ಕಿಡಿ ಬಿದ್ದರೂ ಸಾಕು. ಅದು ಸ್ಫೋಟಿಸುವಂತಿತು.

**ಭೂ ಯುದ್ಧ:** 1914 ಜೂನ್ 28ರಂದು ಆಸ್ಟ್ರಿಯದ ರಾಜಕುಮಾರ ಫ್ರಾನ್ಸಿಸ್ ಫರ್ಡಿನೆಂಡ್ ಸರ್ಬಿಯದ ಸಾರಾಯೆವೂ ಪಟ್ಟಣದಲ್ಲಿ ಕೊಲೆಗೀಡಾದಾಗ ಆಸ್ಟ್ರಿಯ-ಹಂಗರಿ ಸರ್ಕಾರ ಸರ್ಬಿಯಕ್ಕೆ ಪ್ರತಿಭಟನೆ ಸಲ್ಲಿಸಿದ್ದಲ್ಲದೆ ಕೊಲೆಗೆ ಪರಿಹಾರವಾಗಿ ಅನೇಕ ಷರತ್ತುಗಳನ್ನು ಹಾಕಿತು. ರಷ್ಯದ ಸಲಹೆಯ ಮೇರೆಗೆ ಸರ್ಬಿಯ ಅವುಗಳಲ್ಲಿ ಎರಡನ್ನು ಬಿಟ್ಟು ಉಳಿದವನ್ನೆಲ್ಲ ಒಪ್ಪಿಕೊಂಡಿತು. ಇದರಿಂದ ಆಸ್ಟ್ರಿಯ-ಹಂಗರಿಗೆ ತೃಪ್ತಿಯಾಗಲಿಲ್ಲ. ಅದು ಸರ್ಬಿಯದ ಆಕ್ರಮಣವನ್ನಾರಂಭಿಸಿತು. ಸರ್ಬಿಯದ ಪಕ್ಷಕ್ಕೆ ರಷ್ಯವೂ ಫ್ರಾನ್ಸೂ ಆಸ್ಟ್ರಿಯದ ಕಡೆಗೆ ಜರ್ಮನಿಯೂ ಸೇರಿ ಯುದ್ಧದಲ್ಲಿ ತೊಡಗಿದುವು. ಪೂರ್ವ-ಪಶ್ಚಿಮಗಳೆರಡರಲ್ಲೂ ಯುದ್ಧ ನಡೆಸುವ ಉದ್ದೇಶದಿಂದ ಜರ್ಮನ್ ಸೈನ್ಯ ಗಡಿ ದಾಟಿತು.

ಆಸ್ಟ್ರೀಯದ ರಾಜಕುಮಾರ ಫ್ರಾನ್ಸಿಸ್ ಫರ್ಡಿನೆಂಡ್

ಫ್ರಾನ್ಸಿನೊಡನೆ ಯುದ್ಧ ಎಂದಾದರೂ ಒದಗುವುದೆಂದು ತಿಳಿದಿದ್ದ ಜರ್ಮನಿಯ ಸೇನಾ ನಾಯಕರು ಯುದ್ಧದ ಪ್ರಾರಂಭದಲ್ಲೇ ಬೆಲ್ಜಿಯಂ ಮೂಲಕ ತಮ್ಮ ಸೈನ್ಯ ಕಳಿಸಿ ಉತ್ತರದಿಂದ ಮುತ್ತುವ ಯೋಜನೆ ಮಾಡಿಕೊಂಡಿದ್ದರು. ಅದರಂತೆ ಜರ್ಮನ್ ಸೈನ್ಯಗಳು ಬೆಲ್ಜಿಯಂ ದೇಶದಲ್ಲಿ ನುಗ್ಗಿದುವು. ಫ್ರೆಂಚರ ಸಹಾಯಕ್ಕೆ ಹೊರಡುವುದು ಕರ್ತವ್ಯವಾಗಿದ್ದರೂ ಬ್ರಿಟಿಷರು ನಿಧಾನಿಸಿದ್ದರು. ಬೆಲ್ಜಿಯಂ ರಾಜ್ಯ ಜರ್ಮನಿಯ ಪಾದಾಕ್ರಾಂತವಾದಾಗ ಬೆಲ್ಜಿಯಂ ಸಮುದ್ರತೀರ ಜರ್ಮನಿಗೆ ವಶವಾಗುವ ಸಂಭವ ಕಂಡಿತು. ಹಿಂದಿನಿಂದಲೂ ಆ ತೀರಪ್ರದೇಶ ಯಾವ ಪ್ರಬಲ ಐರೋಪ್ಯ ರಾಷ್ಟ್ರಕ್ಕೂ ಸೇರದಿರಬೇಕೆಂದು ಬ್ರಿಟಿಷರ ಉದ್ದೇಶ. ಬೆಲ್ಜಿಯಂ ರಾಜ್ಯದ ತಾಟಸ್ಥ್ಯವನ್ನೆಲ್ಲರೂ ಗೌರವಿಸುವುದಾಗಿ ನಾಲ್ಕನೆಯ ವಿಲಿಯಂ ದೊರೆಯ ಕಾಲದಲ್ಲಿ ವಾಗ್ದಾನವಾಗಿತ್ತು. ಜರ್ಮನ್ನರು ಆ ವಾಗ್ದಾನವನ್ನು ಮುರಿದರೆಂದು ಬ್ರಿಟಿಷರು ಆಗಸ್ಟ್ ತಿಂಗಳಲ್ಲಿ ಯುದ್ಧಕ್ಕೆ ಸೇರಿದರು. ರಾಜಕಾರಣಿ ಸರ್ ಎಡ್ವರ್ಡ್ ಗ್ರೇ ಕಾಮನ್ಸ್ ಸಭೆಯಲ್ಲಿ ಭಾಷಣಮಾಡಿ ಆಗಿನ ಪರಿಸ್ಥಿತಿಯನ್ನು ವಿವರಿಸಿ ಯುದ್ಧಕ್ಕೆ ಪಾರ್ಲಿಮೆಂಟಿನ ಒಪ್ಪಿಗೆ ಪಡೆದ.

ಲಂಡನಿನ ಟ್ರಫಾಲ್ಗರ್ ಚೌಕದಲ್ಲಿ ಸೈನ್ಯಜಮಾವಣೆ ಕಾರ್ಯ

ಯುದ್ಧ ಮುಂದುವರಿದಂತೆ ಅನೇಕ ರಾಷ್ಟ್ರಗಳು ಇದರ ಸುಳಿಯಲ್ಲಿ ಸಿಲುಕಿದುವು. ಬ್ರಿಟನ್ ಯುದ್ಧಕ್ಕೆ ಕಾಲಿಟ್ಟ ಸ್ವಲ್ಪ ಕಾಲದಲ್ಲೇ ಜಪಾನು ಜರ್ಮನಿಗೆದುರಾಗಿ ಯುದ್ಧದಲ್ಲಿ ತೊಡಗಿತು. 1915ರಲ್ಲಿ ಇಟಲಿಯೂ ಜರ್ಮನಿಗೆ ವಿರೋಧವಾಗಿ ಯುದ್ಧವನ್ನಾರಂಭಿಸಿತು. 1916ರಲ್ಲಿ ಪೋರ್ಚುಗಲ್, ರೊಮೇನಿಯ, ಗ್ರೀಸ್‌ಗಳೂ 1917ರಲ್ಲಿ ಅಮೆರಿಕದ ಸಂಯುಕ್ತಸಂಸ್ಥಾನವೂ ಜರ್ಮನಿಗೆ ಹಗೆಗಳಾಗಿ ಯುದ್ಧದಲ್ಲಿ ಸೇರಿದುವು. ತರುವಾಯ ಮಿತ್ರರಾಷ್ಟ್ರಗಳ ಗುಂಪಿಗೆ (ಬ್ರಿಟನ್ ಮತ್ತು ಫ್ರಾನ್ಸ್) ಅಮೆರಿಕದ ಇನ್ನೂ ಹಲವಾರು ರಾಷ್ಟ್ರಗಳೂ ಸೇರಿದುವು. ಜರ್ಮನಿಯ ಪಕ್ಷವನ್ನು 1914ರಲ್ಲಿ ತುರ್ಕಿಯೂ 1915ರಲ್ಲಿ ಬಲ್ಗೇರಿಯವೂ ಸೇರಿಕೊಂಡುವು. ಕ್ಯೂಬ ಮತ್ತು ಪನಾಮಗಳು ಜರ್ಮನಿಯ ಮೇಲೆ 7 ಏಪ್ರಿಲ್ 1917ರಲ್ಲಿ ಯುದ್ಧ ಘೋಷಿಸಿದುವು. ಲ್ಯಾಟಿನ್ ಅಮೆರಿಕದಲ್ಲಿ ಮೊದಲು ಯುದ್ಧಕ್ಕೆ ಸೇರಿದ ದೇಶವೆಂದರೆ ಪನಾಮ. ಸಂಯುಕ್ತ ಸಂಸ್ಥಾನ ಯುದ್ಧ ಘೋಷಿಸಿದ ಮಾರನೆಯ ದಿವಸವೇ ಯುದ್ಧ ಘೋಷಿಸಿತು. ಗ್ರೀಸ್, ಸಯಾಂ (ಈಗಿನ ಥೈಲೆಂಡ್), ಲೈಬೀರಿಯ, ಚೀನ ಮತ್ತು ಬ್ರೆಜಿಲ್ ದೇಶಗಳು ಜರ್ಮನಿ ಮತ್ತು ಅದರ ಮಿತ್ರರಾಷ್ಟ್ರಗಳ ಮೇಲೆ 1917ರಲ್ಲಿ ಯುದ್ಧ ಘೋಷಿಸಿದುವು. 1918ರಲ್ಲಿ ಗ್ವಾಟಿಮಾಲ, ನಿಕರಾಗ್ವ, ಕಾಸ್ಟರೀಕ, ಹೇಟಿ ಮತ್ತು ಹಾಂಡುರಾಸ್ ದೇಶಗಳು ಮಿತ್ರರಾಷ್ಟ್ರಗಳ ಗುಂಪಿಗೆ ಸೇರಿದುವು. ಒಟ್ಟು ಜರ್ಮನಿ ಮತ್ತು ಅದರ ಮಿತ್ರರಾಷ್ಟ್ರಗಳ ಎದುರಿಗೆ ಮಹಾಯುದ್ಧದಲ್ಲಿ ನಿಂತ ರಾಷ್ಟ್ರಗಳ ಸಂಖ್ಯೆ 23ಕ್ಕೆ ಏರಿತು. ಇವುಗಳ ವಿರುದ್ಧವಾಗಿದ್ದವು 4 ರಾಷ್ಟ್ರಗಳು ಮಾತ್ರ. ಇಂಥ ಯುದ್ಧ ಇತಿಹಾಸದಲ್ಲಿ ಹಿಂದೆಂದೂ ಆಗಿರಲಿಲ್ಲ. ಇಷ್ಟೊಂದು ರಾಷ್ಟ್ರಗಳು ಒಂದೇ ಯುದ್ಧದಲ್ಲಿ ಭಾಗವಹಿಸಿದ್ದು ಅದೇ ಮೊದಲು. ಸಂಖ್ಯೆಯ ದೃಷ್ಟಿಯಿಂದಲೂ ಪಕ್ಷಗಳ ಬಲಾಬಲಗಳ ದೃಷ್ಟಿಯಿಂದಲೂ ಇದೊಂದು ಮಹಾಯುದ್ಧ. ಇದರ ಪರಿಣಾಮಗಳಂತೂ ಈ ಶತಮಾನದ ವಿಶ್ವದ ಇತಿಹಾಸದಲ್ಲಿ ವೈವಿಧ್ಯಪೂರ್ಣವಾಗಿವೆ; ಭೀಕರವಾಗಿವೆ. ಈ ಯುದ್ಧ ಹಲವು ವಿಧದಲ್ಲಿ ಮಾನವ ಸಂತತಿಗೆ ಪಾಠ ಕಲಿಸುವ ಉದಾಹರಣೆಯಾಗಿದೆ.

ಒಂದನೆಯ ಮಹಾಯುದ್ಧದ ರೀತಿಗೂ ಹಳೆಯ ಕಾಲದ ಯುದ್ಧಗಳ ರೀತಿಗೂ ಬಹಳ ವ್ಯತ್ಯಾಸಗಳಿದ್ದುವು. ಯುದ್ಧವೆಂಬುದು ಹಲಕೆಲವು ಸೈನ್ಯಗಳು ಎದುರು ಬದುರಾಗಿ ಹೋರಾಡುವುದಲ್ಲ; ರಾಷ್ಟ್ರ-ರಾಷ್ಟ್ರಗಳು ಸರ್ವ ವಿಧಗಳಲ್ಲೂ ಹಗೆತನ ಸಾಧಿಸುತ್ತ ಪರಸ್ಪರವಾಗಿ ನಾಶಗೊಳಿಸುವುದಾಯಿತು. ಯುದ್ಧದ ವೆಚ್ಚ ಅಪರಿಮಿತ. ಆದ್ದರಿಂದ ಯುದ್ಧಕ್ಕೆ ತೊಡಗಿದ ರಾಷ್ಟ್ರದಲ್ಲಿ ತೆರಿಗೆಗಳು ಮಾತ್ರವಲ್ಲದೆ ಅವುಗಳ ಸಾಲಗಳೂ ಏರುತ್ತ ಹೋದುವು. ಆಯುಧ ಪ್ರಯೋಗದಲ್ಲಿಯೂ ದೊಡ್ಡ ವ್ಯತ್ಯಾಸ ತೋರಿತು. ಶಾಸ್ತ್ರಜ್ಞಾನ ಹೆಚ್ಚಿದಂತೆ ಬಂದ ಯಂತ್ರಾಯುಧಗಳು ಭಯಂಕರವಾದುವು. 20ನೆಯ ಶತಮಾನದ ಆದಿಯಲ್ಲಿ ವಿರಾಡ್ರೂಪದಿಂದ ಪ್ರಜ್ವಲಿಸಿದ ಒಂದನೆಯ ಮಹಾಯುದ್ಧದಲ್ಲಿ ಭಯಂಕರವಾದ ಅಸ್ತ್ರಗಳು ಮೊಟ್ಟಮೊದಲ ಬಾರಿಗೆ ಪ್ರಯೋಗಿಸಲ್ಪಟ್ಟವು. ಈ ಯುದ್ಧದಲ್ಲಿ ಆಕಾಶಗಾಮಿಗಳೂ ಜಲಾಂತರ್ಗಾಮಿಗಳೂ ಆದ ಯಂತ್ರಗಳಲ್ಲದೆ ಬಾಂಬು, ವಿಷವಾಯು, ಕೃತ್ರಿಮಮೋಡ, ಜಲಜ್ವಾಲೆ, ಟ್ಯಾಂಕು ಮುಂತಾದ ಅನೇಕಾನೇಕ ರಾಕ್ಷಸ ವಿಧಾನಗಳು ಪ್ರಯೋಗವಾದವು. ಒಂದನೆಯ ಮಹಾಯುದ್ಧ ಪ್ರಪಂಚದ ಇತಿಹಾಸದಲ್ಲಿ ಮತ್ತೊಂದು ಯುಗವನ್ನೇ ಪ್ರಾರಂಭಿಸಿತು ಎಂದು ಹೇಳಬಹುದು. ಯುದ್ಧದ ರೀತಿನೀತಿಗಳಲ್ಲೇ ಕ್ರಾಂತಿಕಾರಕ ಬದಲಾವಣೆಗಳಾದುವು.



ಜರ್ಮನ್ ದಾಳಿಗೆ ತುತ್ತಾದ ಒಂದು ಭವ್ಯ ಮಂದಿರ

1914ರಲ್ಲಿ ಯುದ್ಧ ಪ್ರಾರಂಭವಾದಾಗ ಜರ್ಮನ್ನರು ಕೆಲವು ತಿಂಗಳುಗಳಲ್ಲಿ ಜಯ ಲಭಿಸಬಹುದೆಂದು ನಿರೀಕ್ಷಿಸಿದರು. ರಷ್ಯದ ಸೇನೆಗಳು ಒಟ್ಟುಗೂಡಿ ಓಡಾಡುವುದು ನಿಧಾನವಾದುದರಿಂದ ಜರ್ಮನ್ನರು ತಮಗೆ ಪೂರ್ವದ ಕಡೆಯಿಂದ ಆಪತ್ತು ತೋರಬಹುದೆಂದು ಚಿಂತಿಸುವ ಹಾಗಿರಲಿಲ್ಲ. ಫ್ರೆಂಚರು ರೋಷದಿಂದ ಯುದ್ಧ ನಡೆಸತಕ್ಕವರು. ಅದರೆ ಬೆಲ್ಜಿಯಂ ಮೂಲಕ ಫ್ರಾನ್ಸಿನ ವಾಯವ್ಯ ದಿಕ್ಕಿನಲ್ಲಿ ಮುತ್ತಿದರೆ ಫ್ರೆಂಚರು ಬೇಗನೆ ಸೋತರೆಂದು ಜರ್ಮನ್ನರು ಭಾವಿಸಲು ಕಾರಣವಿತ್ತು. ಜರ್ಮನ್ನರ ಯುದ್ಧ ಸನ್ನಾಹ ವಾಸ್ತವವಾಗಿ. ಅದ್ಭುತವಾಗಿತ್ತು. ರಷ್ಯದ ಸೈನ್ಯಗಳು ಒಟ್ಟುಗೂಡುವುದರೊಳಗಾಗಿ ಫ್ರಾನ್ಸಿನಲ್ಲಿ ವೇಗದಿಂದ ಮುತ್ತಿಗೆ ನಡೆಸಿ ಫ್ರೆಂಚರನ್ನು ಸೋಲಿಸಿ ತರುವಾಯ ರಷ್ಯವನ್ನು ಸೋಲಿಸುವ ಕ್ರಮವನ್ನು ಅವರು ಇಟ್ಟುಕೊಂಡರು. ಬ್ರಿಟಿಷರಿಗೆ ಐರ್ಲೆಂಡಿನಲ್ಲಿ ಅಂತರ್ಯುದ್ಧವೊದಗುವಂತಿದ್ದುದರಿಂದಲೂ ನೌಕಾಬಲವೇ ವಿಶೇಷವಾಗಿದ್ದುದರಿಂದಲೂ ಜರ್ಮನ್ನರಿಗೆ ಈ ಕಾರ್ಯಕ್ರಮವೂ ಬೇಗನೆ ಮುಗಿದೀತೆಂದು ತೋರಿತು.

ಜರ್ಮನ್ ಸೈನ್ಯಗಳು ಬೆಲ್ಜಿಯಂಗೆ ನುಗ್ಗಿ ಅಲ್ಲಿಂದ ಹೊರಟು ಲಿಯೇಷ್ ಮುಂತಾದ ಪಟ್ಟಣಗಳನ್ನು ಒಂದೊಂದಾಗಿ ಹಿಡಿದುವು. ಬೆಲ್ಜಿಯಂ ರಾಜ್ಯವನ್ನು ದಾಟಿ ಫ್ರಾನ್ಸಿನೊಳಗೆ ಜರ್ಮನ್ನರು ಪ್ರವೇಶಿಸುವ ವೇಳೆಗೆ ಫ್ರೆಂಚರು ಅತಿಕ್ಷಿಪ್ರವಾಗಿ ಸಿದ್ಧರಾಗಿ ಅವರನ್ನೆದುರಿಸಿದರು. ಬ್ರಿಟಿಷರು ಬೇಗನೆ ಯುದ್ಧಭೂಮಿಗೆ ಸೈನ್ಯ ಕಳುಹಿಸಿದರು. ಜರ್ಮನ್ನರು ನಿರೀಕ್ಷಿಸಿದಷ್ಟು ವೇಗದಲ್ಲಿ ಜಯಲಾಭವಾಗಿಲಿಲ್ಲ. ಅತ್ತ ರಷ್ಯನ್ನರೂ ಪೂರ್ವ ಪ್ರಷ್ಯವನ್ನೂ ಮುತ್ತಲು ಎರಡು ದೊಡ್ಡ ಸೈನ್ಯಗಳನ್ನು ಕಳುಹಿಸಿದರು. ಆಗ ಜರ್ಮನರು ಫ್ರಾನ್ಸಿನಲ್ಲಿದ್ದ ತಮ್ಮ ಸೈನ್ಯಗಳಲ್ಲಿ

ಕೈಸರ್ ವಿಲಿಯಂ ಮತ್ತು ಜಾರ್ಜ್ ದೊರೆ

ಎರಡು ಭಾಗಗಳನ್ನು ಅಲ್ಲಿಂದೆತ್ತಿ ಪೂರ್ವಕ್ಕೆ ಕಳುಹಿಸಬೇಕಾಯಿತು. ಈ ಕಾರಣದಿಂದ ಜರ್ಮನ್ ಸೈನ್ಯಗಳು ದುರ್ಬಲಗೊಂಡಿದ್ದಾಗ್ಯೂ ಅವು ಫ್ರಾನ್ಸಿನಲ್ಲಿ ನುಗ್ಗಿ ಪ್ಯಾರಿಸ್ ಕಡೆಗೆ ಹೊರಡುತ್ತಿದ್ದುವು. ಫ್ರೆಂಚ್ ಸರ್ಕಾರ ಪ್ಯಾರಿಸ್ ಬಿಟ್ಟು ಬಾರ್ಡೋ ಪಟ್ಟಣಕ್ಕೆ ಹೊರಟಿತು. ಮಾರ್ನ್ ನದಿಯ ಬಳಿ ಫ್ರೆಂಚರೂ ಬ್ರಿಟಿಷರೂ ಸೇರಿ ಜರ್ಮನ್ನರನ್ನು ತಡೆದು ಹಿಮ್ಮೆಟ್ಟಿಸಿದರು. ಹಿನ್ನಡೆದ ಜರ್ಮನ್ ಸೇನೆ ಏನ್ ನದಿಯ ಬಳಿ ನಿಂತು ಸಮುದ್ರತೀರದವರೆಗೂ ವ್ಯಾಪಿಸಿ, ಫ್ರಾನ್ಸಿಗೆ ಉತ್ತರದಲ್ಲಿ ಬೃಹದ್ರೂಪದ ಕೋಟೆ ಕಟ್ಟಿದಂತೆ ಕಂದಕಗಳನ್ನು ತೋಡಿ ಬೇಲಿ ಕಟ್ಟಿ



ಹಿಂಡನ್‌ಬರ್ಗ್ ರೇಖೆ ದಾಟಲು ಸಜ್ಜಾದ ಬ್ರಿಟಿಷ್ ಟ್ಯಾಂಕುಗಳು

ಬತ್ತೇರಿಗಳನ್ನಿಟ್ಟು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. ಬ್ರಿಟಿಷರೂ ಫ್ರೆಂಚರೂ ಜರ್ಮನ್ನರ ಎದುರಿಗೆ ತಾವೂ ಕಂದಕಗಳನ್ನು ತೋಡಿಕೊಂಡರು. ಎದುರುಬದುರಾಗಿ ಭಾರೀ ಸೈನ್ಯಗಳು ಈ ರೀತಿಯಾಗಿ ಹಳ್ಳಗಳನ್ನು ತೋಡಿಕೊಂಡು ದೀರ್ಘಕಾಲ ಕಳೆಯಬೇಕಾಗಿ ಬಂತು.

ಪೂರ್ವದಲ್ಲಿ ಪ್ರಷ್ಯವನ್ನು ಮುತ್ತಿದ ರಷ್ಯದ ಸೈನ್ಯವನ್ನು ಜರ್ಮನ್ ದಂಡನಾಯಕರಲ್ಲಿ ಪ್ರಸಿದ್ಧರಾದ ಹಿಂಡನ್ಬರ್ಗ್ ಮತ್ತು ಲೂಡೆನ್‌ಡಾರ್ಫ್ ಎದುರಿಸಿದರು. ಟಾನೆನ್ಬರ್ಗ್ ಕದನದಲ್ಲೂ ಮಸುರಿಯನ್ ಸರೋವರಗಳ ಬಳಿಯ ಹೋರಾಟದಲ್ಲೂ ರಷ್ಯ ಸೋತಿತು. ಇತರೆಡೆಗಳಲ್ಲಿ ರಷ್ಯನ್ನರು ಹಿಮ್ಮೆಟ್ಟಬೇಕಾಯಿತು. ಜರ್ಮನ್ನರು ಮುನ್ನಡೆದು ರಷ್ಯನ್ ಸಾಮ್ರಾಜ್ಯದೊಳಕ್ಕೆ ತಮ್ಮ ಸೈನ್ಯಗಳನ್ನು ನುಗ್ಗಿಸಿದರು. ಬಾಲ್ಟಿಕ್ ತೀರದಿಂದ ಕಾರ್ಪೇಥಿಯನ್ ಶ್ರೇಣಿಯವರೆಗಿರುವ ವಿಶಾಲ ಭೂಭಾಗದಲ್ಲಿ ಜರ್ಮನ್–ರಷ್ಯನ್ ಸೈನ್ಯಗಳು ಎದುರುಬದುರಾಗಿ ಹೊಂಚುತ್ತ ಹೋರಾಡುತ್ತಿರಬೇಕಾಯಿತು.

ಯುದ್ಧದ ಮೊದಲನೆಯ ವರ್ಷದಲ್ಲೇ ತುರ್ಕಿಯ ಸುಲ್ತಾನ ಜರ್ಮನಿಯ ಕಡೆ ಸೇರಿದ. ಆಗ ಬ್ರಿಟಿಷರು ತುರ್ಕಿಯನ್ನು ಎಲ್ಲಾದರೂ ಮುತ್ತುವ ಯೋಚನೆ ನಡೆಸಿದರು. ಡಾರ್ಡನೆಲ್ಸ್ ಮಾರ್ಗವನ್ನು ವಶಪಡಿಸಿಕೊಂಡು ರಷ್ಯದೊಡನೆ ಸೇರಿಕೊಳ್ಳುವ ಉದ್ದೇಶದಿಂದ ಸಣ್ಣ ಪರ್ಯಾಯದ್ವೀಪವಾದ ಗ್ಯಾಲಿಪೋಲಿಯನ್ನು ಮುತ್ತುವುದು ಅವರ ಯೋಚನೆಯಾಗಿತ್ತು. ಭೂ ಜಲಸೇನೆಗಳು ಒಟ್ಟುಗೂಡಿ ಆ ಪ್ರದೇಶವನ್ನು ಮುತ್ತಿದುವು. ಆದರೆ ಜಯ ಲಭಿಸಲಿಲ್ಲ. ಸಲೋನಿಕ್ ಒಂದು ಮಾತ್ರ ವಶವಾಯಿತು. ಅದೇ ವೇಳೆಗೆ ರಷ್ಯನ್ನರು ಪೋಲೆಂಡನ್ನು ಜರ್ಮನ್ನರಿಗೊಪ್ಪಿಸಿ ಹಿಮ್ಮೆಟ್ಟಿದರು. ಜರ್ಮನ್ ಪಕ್ಷ ಸೇರಿಕೊಂಡ ಬಲ್ಗೇರಿಯ ರಾಷ್ಟ್ರ ಸರ್ಬಿಯನ್ನರ ಮೇಲೆ ಯುದ್ಧ ಹೂಡಿತು. ಸರ್ಬಿಯನ್ನರು ಜರ್ಮನಿ, ಆಸ್ಟ್ರಿಯ ಮತ್ತು ಬಲ್ಗೇರಿಯಗಳನ್ನು ಎದುರಿಸಲಾರದೆ ಅಡಗಿಹೋದರು.

ಯುದ್ಧದ ಮುಂಚೂಣಿಗೆ ಸಾಗುತ್ತಿರುವ ಫ್ರೆಂಚ್ ಪಡೆ

1915ರಲ್ಲಿ ಗ್ಯಾಲಿಪೋಲಿ ಮತ್ತು ಸರ್ಬಿಯಗಳಲ್ಲಿ ಬ್ರಿಟಿಷರ ಪಕ್ಷಕ್ಕೆ ಜಯವೊದಗಲಿಲ್ಲ. ಫ್ರಾನ್ಸಿನ ಉತ್ತರ ಭಾಗದಲ್ಲಿ ಕಂದಕಗಳ ಹೋರಾಟ ನಡೆಯುತ್ತಲೇ ಇತ್ತು. ಅತ್ತಕಡೆ ವೇಗದಿಂದ ಜಯ ಪಡೆಯಬೇಕೆಂದಿದ್ದ ಜರ್ಮನ್ನರ ಕಾರ್ಯಕ್ರಮಕ್ಕೆ ಅಡ್ಡಿಯೇನೋ ಆಯಿತು. ಆಯಿನ್ ನದಿಯ ಪಕ್ಕದಲ್ಲಿ ಜರ್ಮನ್ನರು ವ್ಯೂಹರಚನೆ ಮಾಡಿಕೊಂಡ ತರುವಾಯ ಸಮುದ್ರ ತೀರವನ್ನು ವಶಪಡಿಸಿಕೊಳ್ಳಲು ಯತ್ನಿಸಿ ಇಪ್ರೆಸ್ ಬಳಿ ಬ್ರಿಟಿಷರೊಡನೆ ಹೋರಾಟ ನಡೆಸಿದರು. ಬ್ರಿಟಿಷರು ಮುಂದೆ ನುಗ್ಗಿ ನವ್‌ಷಾಪೆಲ್ ಮತ್ತು ಲೂಸ್‌ಗಳಲ್ಲಿ

ತುರ್ಕಿಯ ಒಂಟೆಪಡೆ

ಜರ್ಮನ್ನರ ಮೇಲೆರಗಿದರು. ಫ್ರೆಂಚರು ಅದೇ ಸಮಯದಲ್ಲಿ ಷ್ಯಾಂಪೇನ್ ಮತ್ತು ಅರ್ಟ್‌ವಾ ಪ್ರದೇಶಗಳಲ್ಲಿ ಮುಂದೆ ನುಗ್ಗಿ ಆಕ್ರಮಿಸಲು ಪ್ರಯತ್ನಿಸಿದರು. ಉತ್ತರ ಸಮುದ್ರದಿಂದ ಸ್ವಿಟ್ಜರ್ಲೆಂಡ್‌ವರೆಗೆ ನೂರಾರು ಮೈಲಿಗಳ ಉದ್ದದ ಎದುರುಬದುರು ಕಂದಕಗಳಲ್ಲಿದ್ದ ಸೈನ್ಯಗಳು ಲಕ್ಷಗಟ್ಟಲೆ. ಪ್ರತಿಯೊಂದು ಗಜ ಮುಂದುವರಿಯಬೇಕಾದರೂ ಅನೇಕ ಪ್ರಾಣಗಳು ನಷ್ಟವಾಗುತ್ತಿದ್ದುವು. ಇಪ್ರೆಸ್ ಬಳಿ ಎರಡನೆಯ ಹೋರಾಟವಾದಾಗ ಜರ್ಮನ್ನರು ವಿಷವಾಯು ಪ್ರಯೋಗಿಸಿದರು.

1915ರಲ್ಲಿ ಬ್ರಿಟಿಷ್–ಫ್ರೆಂಚ್ ಪಕ್ಷಕ್ಕೆ ದೊಡ್ಡ ಜಯವಾವುದೂ ಲಭಿಸಲಿಲ್ಲ. ಜರ್ಮನ್ನರಾದರೋ ಪೂರ್ವದಲ್ಲಿ ರಷ್ಯದಲ್ಲೂ ಆಗ್ನೇಯದಲ್ಲಿ ಬಾಲ್ಕನ್ ಕ್ಷೇತ್ರದಲ್ಲೂ ಜಯಶಾಲಿಗಳಾಗಿದ್ದರು. ಆದರೆ ಅದೇ ವರ್ಷ ಇಟಲಿಯವರು ಬ್ರಿಟಿಷರ ಕಡೆ ಸೇರಿ ಆಸ್ಟ್ರಿಯದ ಮೇಲೆ ಯುದ್ಧಕ್ಕೆ ಹೊರಟರು. ಬ್ರಿಟನಿನಲ್ಲಿ ಮಂತ್ರಿಮಂಡಲ ಪುನರ್ ವ್ಯವಸ್ಥೆಗೊಳಗಾಗಿ ಸರ್ವ ಪಕ್ಷಗಳ ಸರ್ಕಾರ ರಚಿತವಾಯಿತು.

ಬ್ರಿಟಿಷರೇ ತಮ್ಮ ಮುಖ್ಯ ಶತ್ರುಗಳೆಂದು ಜರ್ಮನ್ನರ ಭಾವನೆ. ಬ್ರಿಟಿಷರು ಬೆಲ್ಜಿಯಂ ಮತ್ತು ಫ್ರಾನ್ಸ್‌ಗಳಿಗೆ ಸೈನ್ಯದ ನೆರವು ನೀಡಿದ್ದಲ್ಲದೆ ಜರ್ಮನಿಯ ಶತ್ರುಗಳಿಗೆಲ್ಲರಿಗೂ ಸಾಲ ಕೊಡುತ್ತ ವ್ಯಾಪಾರ ಸರಕುಗಳನ್ನು ಸಮುದ್ರದ ಮೇಲೊಯ್ದು ಒದಗಿಸುತ್ತಲಿದ್ದರು. 1916ರಲ್ಲಿ ಜರ್ಮನ್ನರು ಮೊದಲು ಫ್ರೆಂಚರನ್ನು ರಭಸದಿಂದ ತಾಗಿ ಸೋಲಿಸಬೇಕೆಂದು ವರ್ಡನ್‌ನಲ್ಲಿ ಫ್ರಾನ್ಸನ್ನು ಆಕ್ರಮಿಸಿದರು. ಎರಡು ಕಡೆಗಳಿಗೂ ಅಪಾರ ನಷ್ಟ ಸಂಭವಿಸಿತು. ಆದರೆ ಫ್ರೆಂಚರು ಶರಣೆನ್ನಲಿಲ್ಲ. ಅ ವೇಳೆಗೆ ಬ್ರಿಟಿಷರೂ ತಮ್ಮ ಸೈನ್ಯಗಳನ್ನು ಹೆಚ್ಚಿಸಿಕೊಂಡಿದ್ದರು. ಸಾಮ್ ನದಿಯ ಬಳಿ ಬ್ರಿಟಿಷರು ಫ್ರೆಂಚರೂ ಸೇರಿ ಜರ್ಮನರನ್ನು ಆಕ್ರಮಿಸಿದರು, ಮತ್ತೆ ಅಪಾರ ಪ್ರಾಣ ನಷ್ಟವಾಯಿತು. ಜಯಾಪಜಯಗಳು ನಿರ್ಧಾರವಾಗಲಿಲ್ಲ.

ಪೋಲೆಂಡಿನಲ್ಲಿ ಪರಾಜಯ ಹೊಂದಿದ ಬಳಿಕ ರಷ್ಯನ್ನರು ಚೇತರಿಸಿಕೊಂಡು ಪುನಃ ಸನ್ನಾಹ ಮಾಡಿ ಆಸ್ಟ್ರಿಯ–ಹಂಗೆರಿ ರಾಷ್ಟ್ರವನ್ನು ಮುತ್ತಿದರು. ಇಟಲಿಯೂ ಆ ರಾಷ್ಟ್ರವನ್ನು ತೆಂಕಲಿಂದ ಮುತ್ತಿ ಇಸಾಂಟ್ಸೊ ನದಿಯ ಬಳಿ ಗೆಲವು ಪಡೆಯಿತು. ರಷ್ಯನ್ನರು ಜಯಶಾಲಿಗಳಾಗಬಹುದೆಂದು ಭಾವಿಸಿ ರೊಮೇನಿಯ ರಷ್ಯದ ಪಕ್ಷ ಸೇರಿ ಯುದ್ಧಪ್ರವೇಶ ಮಾಡಿತು. ಆಗ ಆಸ್ಟ್ರಿಯ–ಹಂಗರಿಯ ಸಹಾಯಕ್ಕಾಗಿ ಜರ್ಮನ್ನರು ಬಾಲ್ಕನ್ ಕ್ಷೇತ್ರಗಳ ಕಡೆಗೆ ತಮ್ಮ ಸೈನ್ಯ ಕಳಿಸಬೇಕಾಯಿತು. ವೇಗದಿಂದ ನುಗ್ಗಿಬಂದ ಜರ್ಮನ್ನರು ರಷ್ಯದವರನ್ನೋಡಿಸಿದ್ದಲ್ಲದೆ ರೊಮೇನಿಯವನ್ನು ಮುತ್ತಿ ಆ ರಾಷ್ಟ್ರದ ಅರ್ಧಭಾಗವನ್ನು ವಶಪಡಿಸಿಕೊಂಡರು.

ಪ್ಯಾರಿಸಿನಿಂದ ಬರ್ಲಿನಿಗೆ: ಫ್ರೆಂಚ್ ಸೇನೆಯ ಪಾದಯಾತ್ರೆ

ದೂರ ಪ್ರಾಚ್ಯದಲ್ಲಿ ಜಪಾನ್ 1914 ಆಗಸ್ಟ್ ತಿಂಗಳಲ್ಲೇ ಬ್ರಿಟಿಷರ ಪಕ್ಷ ಸೇರಿ ಚೀನ ತೀರದಲ್ಲಿ ಜರ್ಮನ್ನರು ಸಂಪಾದಿಸಿಕೊಂಡಿದ್ದ ರೆಯಾಟಾವನ್ನಾಕ್ರಮಿಸಿ ಕೊಂಡಿದ್ದರು. ಪೆಸಿಫಿಕ್ ಸಾಗರದಲ್ಲಿ ಜರ್ಮನ್ನರಿಗೆ ನೆಲೆಯೇ ಇಲ್ಲವಾಗಿತ್ತು. ಜರ್ಮನ್ನರು ದೊಡ್ಡ ಹಡಗುಪಡೆ ಕಟ್ಟಿಕೊಂಡಿದ್ದಾಗ್ಯೂ ಬ್ರಿಟಿಷರ ಬಲಕ್ಕೆ ಸಮನಾದ ಬಲ ಪಡೆದಿರಲಿಲ್ಲ. ಯುದ್ಧದ ಪ್ರಾರಂಭದಲ್ಲೇ ಯುದ್ಧ ನೌಕೆಗಳು ಜರ್ಮನ್ ಬಂದರುಗಳನ್ನು ಬಿಟ್ಟು ಹೊರಡದಂತೆ ಬ್ರಿಟಿಷ್ ನೌಕಾಬಲ ಅತಿಜಾಗ್ರತಿಯಿಂದ ದಿಗ್ಬಂಧನ ಹಾಕಿತ್ತು. ಅದು ಶತ್ರುಬಲವನ್ನು ಬಂಧನದಲ್ಲಿಡುವುದಲ್ಲದೆ ಬೇರೆ ಕಾರ್ಯಗಳನ್ನೂ ನಿರ್ವಹಿಸುತ್ತಿತ್ತು. ಬ್ರಿಟಿಷ್ ದ್ವೀಪಗಳ ಸುತ್ತಲೂ ಕೋಟೆ ಕಟ್ಟಿಕೊಂಡಂತೆ ಇದ್ದು ಸ್ವದೇಶ ರಕ್ಷಣೆಯನ್ನು ನಿರ್ವಹಿಸಿತು. ಬ್ರಿಟನಿನಿಂದ ಫ್ರಾನ್ಸಿಗೆ ಹಡಗುಗಳಲ್ಲಿ ಲಕ್ಷಾಂತರ ಸೈನಿಕರನ್ನು ಸಾಗಿಸಿಕೊಡುತ್ತಿತ್ತು. ಶತ್ರುಗಳ ವ್ಯಾಪಾರದ ಹಡಗುಗಳು ಯಾವ ಸಮುದ್ರದಲ್ಲೇ ಸಾಗುತ್ತಿರಲಿ ಅವನ್ನು ಬ್ರಿಟಿಷ್ ನೌಕಾಪಡೆ ತಡೆಯುತ್ತಿದ್ದುದರಿಂದ ಜರ್ಮನರ ಸಾಗರೋತ್ತರ ವ್ಯಾಪಾರವೇ ಸ್ಥಗಿತವಾಗಿತ್ತು. ಬ್ರಿಟನಿನ ಮಿತ್ರ ರಾಷ್ಟ್ರಗಳ ವ್ಯಾಪಾರ ಹಡಗುಗಳಿಗೆ ರಕ್ಷಣೆ ದೊರಕಿತ್ತು. ಎಲ್ಲಕ್ಕೂ ಮೇಲಾಗಿ ಸಮುದ್ರಮಾರ್ಗಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಬ್ರಿಟನಿಗೆ ಆತ್ಯಾವಶ್ಯಕವಾಗಿ ಹೊರಗಿನಿಂದಲೇ ಬರಬೇಕಾಗಿದ್ದ ಆಹಾರಪದಾರ್ಥ ಸರಬರಾಯಿಗೆ ಅನನುಕೂಲ ಉಂಟಾಗಲಿಲ್ಲ.

**ಜಲ, ವಾಯು ಯುದ್ಧಗಳು:** ಜಗದ್ವ್ಯಾಪಿಯಾಗಿ ಬಲವತ್ತಮವಾಗಿದ್ದ ಬ್ರಿಟಿಷ್ ನೌಕಾಬಲಕ್ಕೆದುರಾಗಿ ಮೊದಮೊದಲು ಜರ್ಮನ್ ಯುದ್ಧದ ಹಡಗುಗಳು ಸೋಲಲಿಲ್ಲ. 1914ರಲ್ಲಿ ಭೂಮಧ್ಯಸುಮುದ್ರದಲ್ಲಿ ಕಾಣಿಸಿದ ಎರಡೂ ಜರ್ಮನ್ ಹಡಗುಗಳು ಹೇಗೋ ತಪ್ಪಿಸಿಕೊಂಡು ಸುಳಿದಾಡುತ್ತಿದ್ದು ಕಡೆಗೆ ದಕ್ಷಿಣ ಅಮೆರಿಕದ ಬಳಿ ಫಾಕ್ಲೆಂಡ್ ದ್ವೀಪಗಳ ಒತ್ತಿನಲ್ಲಿ ಬ್ರಿಟಿಷರಿಗೆ ಸಿಕ್ಕಿ ಧ್ವಂಸವಾದುವು. 1905ರಲ್ಲಿ ಜರ್ಮನ್ ಹಡಗುಗಳು ಬ್ರಿಟನಿಗೆ

ಆಸ್ಟ್ರಿಯದ ಗಡಿಯಲ್ಲಿ ಹೋರಾಡುತ್ತಿರುವ ಇಟಾಲಿಯನ್ ಸೈನಿಕರು

ಉತ್ತರದಲ್ಲಿ ಅಲ್ಲಲ್ಲಿ ಗುಪ್ತವಾಗಿ ಸಂಚರಿಸುತ್ತಿದ್ದುವು. 1916ರಲ್ಲಿ ಡೆನ್ಮಾರ್ಕಿನ ಉತ್ತರದಲ್ಲಿ ಜಟ್ಲೆಂಡ್ ಬಳಿ ನೌಕಬಲಗಳ ಎದುರುಬದುರು ಹೋರಾಟ ನಡೆಯಿತು. ಎರಡೂ ಪಕ್ಷಗಳು ತಮಗೆ ಜಯವಾಯಿತೆಂದು ಭಾವಿಸಿದರೂ ಆ ಬಳಿಕ ಜರ್ಮನ್ ಹಡಗುಗಳು ಹೊರಗೆ ಕಾಣಿಸಿಕೊಳ್ಳದೇ ಇರಬೇಕಾಯಿತು.

ಸಮುದ್ರದ ಮೇಲೆ ಬ್ರಿಟಿಷರೊಂದಿಗೆ ಹೋರಾಡಲು ಜರ್ಮನಿಗಾಗಲಿಲ್ಲ. ಆದರೆ ಜರ್ಮನ್ನರು ಜಲಾಂತರ್ಗಾಮಿಗಳನ್ನು ನಿರ್ಮಿಸಿಕೊಂಡಿದ್ದುದಲ್ಲದೆ ಟಾರ್ಪಿಡೊ, ಮೈನ್ ಮುಂತಾದ ಅನೇಕ ಪ್ರಯೋಗಸಾಧನಗಳನ್ನು ಪಡೆದಿದ್ದರು. 1917ರಲ್ಲಿ ಜರ್ಮನ್ನರು ಬ್ರಿಟಿಷರ ವ್ಯಾಪಾರವನ್ನು ನಾಶಗೊಳಿಸಬೇಕೆಂದು ಉದ್ದೇಶಿಸಿದರು. ಬ್ರಿಟನಿಗೆ ಸರಕು ಹೊತ್ತು ತರುತ್ತಿದ್ದ ಹಡಗುಗಳನ್ನು ಸಮುದ್ರದಲ್ಲಿ ತಮ್ಮ ಜಲಾಂತರ್ಗಾಮಿಗಳಿಂದ ಮುಳುಗಿಸಲು ತೊಡಗಿದರು. ಬ್ರಿಟಿಷರ ಹಡಗುಗಳನ್ನಲ್ಲದೆ ಬ್ರಿಟನಿನೊಂದಿಗೆ ಮೈತ್ರಿಯಿಂದಿದ್ದ ದೇಶಗಳ ಹಡಗುಗಳಿಗೂ ಈ ಅಪಾಯ ತಟ್ಟಿತು. ಬ್ರಿಟನಿಗೆ ಸಾಮಾನು ಹೊರುತ್ತಿದ್ದ ಯಾವ ಹಡಗನ್ನಾದರೂ ಎಚ್ಚರಿಕೆ ಕೊಡದೆ ಧ್ವಂಸಗೊಳಿಸುವುದಾಗಿ ಜರ್ಮನ್ನರು ಪ್ರಕಟಿಸಿದರು. ಆ ಪ್ರಕಟನೆಯಿಂದ ಅಮೆರಿಕದವರಿಗೆ ಮೊದಲೇ ಇದ್ದ ಅಸಮಾಧಾನ ಹೆಚ್ಚಿತು. 1915ರಲ್ಲಿ ಲೂಸಿಟಾನಿಯ ಎಂಬ ಬ್ರಿಟಿಷ್ ಹಡಗು ಮುಳುಗಿದಾಗ ಅದರಲ್ಲಿದ್ದ ಅಮೆರಿಕನ್ನರು ಪ್ರಾಣ ಕಳೆದುಕೊಂಡಿದ್ದರು. ತಮ್ಮ ಜಲಾಂತರ್ಗಾಮಿಗಳನ್ನು ಸರ್ವತ್ರ

ಸೋತು ಬಳಲಿದ ಸರ್ಬಿಯನ್ ಸೈನಿಕರು

ಉಪಯೋಗಿಸುವುದಾಗಿ ಜರ್ಮನಿ ಘೋಷಿಸಿದ್ದರಿಂದ ಆಗಿನ ಅಮೆರಿಕದ ಅಧ್ಯಕ್ಷ ವಿಲ್ಸನ್ ಜರ್ಮನಿಯ ಮೇಲೆ ಯುದ್ಧ ಹೂಡಿದ. ಅಮೆರಿಕನ್ ಸೈನ್ಯ ಅಟ್ಲಾಂಟಿಕ್ ದಾಟಿಬರುವುದರೊಳಗಾಗಿ ಬ್ರಿಟನಿನಲ್ಲಿ ಜನರಿಗೆ ಆಹಾರವಿಲ್ಲದಂತೆ ಮಾಡಬಹುದೆಂಬುದಾಗಿ ಜರ್ಮನಿ ಭಾವಿಸಿತ್ತು. ವಾಸ್ತವವಾಗಿ ಜರ್ಮನಿಯ ವ್ಯಾಪಾರವೂ ಬಂಧಿತವಾಗಿತ್ತು. ಜಲಾಂತರ್ಗಾಮಿಗಳ ಹಾವಳಿಯಿಂದ ಬ್ರಿಟನಿಗೂ ಕಷ್ಟಕಾಲವೊದಗಿತು. 1917ರಲ್ಲಿ ಬ್ರಿಟನಿನಿಂದ ಹೊರಟ ಪ್ರತಿ ನಾಲ್ಕು ಹಡಗುಗಳಲ್ಲಿ ಒಂದು ಧ್ವಂಸವಾಗುತ್ತಿತ್ತು. ಆಹಾರಾಭಾವ

ದಿಂದಾಗಿ ಪಡಿತರ ವ್ಯವಸ್ಥೆ ಏರ್ಪಡಿಸಿ ಬ್ರಿಟನ್ ಕಾಲಯಾಪನೆ ಮಾಡಬೇಕಾಯಿತು. ಆದರೆ ಅಮೆರಿಕನ್ನರು ಯುದ್ಧದಲ್ಲಿ ಸೇರಿಕೊಂಡು ತಮ್ಮ ಸಮಸ್ತ ಹಡಗುಗಳನ್ನು ಮಿತ್ರರಾಷ್ಟ್ರಗಳ ಉಪಯೋಗಕ್ಕೆ ಬಿಟ್ಟುಕೊಡಲು ಸಿದ್ಧರಾದರು. ಬ್ರಿಟಿಷರೂ ಅಮೆರಿಕನ್ನರೂ ಜಲಾಂತರ್ಗಾಮಿಗಳನ್ನು ಅಡಗಿಸುವ ಉಪಾಯ ಸಾಧಿಸಿದ್ದಲ್ಲದೆ ಬೇಗ ಬೇಗ ಹೊಸ ಹಡಗುಗಳನ್ನು ಕಟ್ಟಿಕೊಂಡು ತಮ್ಮ ವ್ಯಾಪಾರ ರಕ್ಷಣೆಗೆ ಹೊಸ ಏರ್ಪಾಟು ಮಾಡಿಕೊಂಡಿದ್ದರಿಂದ ಜರ್ಮನಿಯ ಆಸೆ ಸಂಪೂರ್ಣ ಫಲಿಸಲಿಲ್ಲ.

ತಮ್ಮ ಜಲಾಂತರ್ಗಾಮಿಗಳಲ್ಲಿ ಹೆಚ್ಚಿನ ಭರವಸೆ ಇಟ್ಟಿದ್ದ ಜರ್ಮನ್ನರು 1917ರಲ್ಲಿ ಪಶ್ಚಿಮ ರಣರಂಗದಲ್ಲಿ ಹೊಸ ಆಕ್ರಮಣ ಪ್ರಯತ್ನವನ್ನು ನಡೆಸದೆ ಹಿಂಡನ್‌ಬರ್ಗ್ ಮೇರೆಯನ್ನು ಭದ್ರಪಡಿಸಿಕೊಂಡು ಕಾಲನಿರೀಕ್ಷೆಯಲ್ಲಿದ್ದರು. ಬ್ರಿಟಿಷರೂ ಫ್ರೆಂಚರೂ ಆಗ ಜರ್ಮನ್ನರು ಬಿಟ್ಟ ಪಾಳುನೆಲವನ್ನು ವಶಪಡಿಸಿಕೊಂಡಿದ್ದಲ್ಲದೆ ಆಗಾಗ್ಗೆ ಜರ್ಮನ್ನರ ಸೇನಾ ನೆಲೆಗಳನ್ನು ಮುತ್ತುವುದಕ್ಕೂ ತೊಡಗಿದರು.

1916 ಮೇ 31– ಜೂನ್ 1ರ ವರೆಗೆ ನಡೆದ ಜಟ್ಲೆಂಡ್ ನೌಕಾಯುದ್ಧವೇ ಒಂದನೆಯ ಮಹಾಯುದ್ಧದ ದೊಡ್ಡ ಜಲಯುದ್ಧವೆಂದು ಹೇಳಬಹುದು. ಇದರಲ್ಲಿ ಬ್ರಿಟನ್ ಮತ್ತು ಜರ್ಮನಿಗಳು ಭಾಗವಹಿಸಿದುವು. ಒಟ್ಟು ನೌಕಾಬಲಗಳ ಸಂಖ್ಯೆ, ತೂಕ ಮತ್ತು ಅಸ್ತ್ರಗಳ ಮೌಲ್ಯದಿಂದ ಇದು ಅಂದಿನ ವರೆಗಿನ ಇತಿಹಾಸದಲ್ಲೇ ಹೊಸ ದಾಖಲೆ ಸ್ಥಾಪಿಸಿತು. ಬ್ರಿಟಿಷರು ಈ ಕದನದಲ್ಲಿ 151 ಹಡಗುಗಳನ್ನು ತೊಡಗಿಸಿದ್ದರು. ಇದರಲ್ಲಿ 37 ವಾಣಿಜ್ಯ ಹಡಗುಗಳಿದ್ದವು. ಶತ್ರುಗಳ ಬಳಿ ಇದ್ದ ನೌಕೆಗಳ ಸಂಖ್ಯೆ 101. ಅವುಗಳಲ್ಲಿ 27 ವಾಣಿಜ್ಯ ಹಡಗುಗಳು. ಜರ್ಮನ್ ನೌಕಾಬಲಕ್ಕೆ ಶೀರ್ ನಾಯಕ. ಈ ಕದನದಲ್ಲಿ ಜರ್ಮನ್ನರ ಕಡೆ 11 ಹಡಗುಗಳು ನಷ್ಟವಾದುವು; ಮಡಿದವರ ಸಂಖ್ಯೆ 2545, ಬ್ರಿಟಿಷರು 14 ಹಡಗುಗಳನ್ನೂ 6097 ಜನರನ್ನೂ ಕಳೆದುಕೊಂಡರು. ಆದರೂ ಕೊನೆಯವರೆಗೂ ಬ್ರಿಟನ್ ಸಮುದ್ರದ ಮೇಲೆ ತನ್ನ ಹತೋಟಿ ಬಿಟ್ಟುಕೊಡಲಿಲ್ಲ. ಈ ಕದನದಲ್ಲಿ ಜಲಾಂತರ್ಗಾಮಿಗಳನ್ನು ಧಾರಾಳವಾಗಿ ಬಳಸಲಾಯಿತು. ಜರ್ಮನ್ನರು ಸೈನಿಕರೆನ್ನದೆ, ನಾಗರಿಕರೆನ್ನದೆ ನಿರ್ದಾಕ್ಷಿಣ್ಯವಾಗಿ ಶತ್ರುಹಡಗುಗಳ ಮೇಲೆ ಇವುಗಳಿಂದ ಧಾಳಿ ನಡೆಸುತ್ತಿದ್ದರು. 1917ರ ವರೆಗೆ ತಟಸ್ಥ ನೀತಿಯನ್ನು ಅನುಸರಿಸುತ್ತಿದ್ದ ಅಮೆರಿಕ ಈ ಧಾಳಿಗಳಿಂದ ಕೋಪಗೊಂಡು ಯುದ್ಧದಲ್ಲಿ ಭಾಗವಹಿಸಲು ನಿರ್ಧರಿಸಿತು. ಒಟ್ಟಿನಲ್ಲಿ ನೌಕಾಬಲದಲ್ಲಿ ಬ್ರಿಟನ್ ಜರ್ಮನಿಗಿಂತ ಮುಂದಿತ್ತು. ಜರ್ಮನ್ನರ ನೌಕಾಪಡೆ ಶಸ್ತ್ರಾಸ್ತ್ರಸಜ್ಜಿತವಾಗಿ, ಒಳ್ಳೆಯ ಗುರಿ ಹೊಂದಿದ್ದರೂ ಬ್ರಿಟಿಷ್ ಪಡೆಗಳ ಮುಂದೆ ಅಂಥ ಶ್ರೇಷ್ಠ ಮಟ್ಟದ ಕಾರ್ಯಾಚರಣೆ ತೋರಿಸಲಾಗಲಿಲ್ಲ. ಒಂದನೆಯ ಮಹಾಯುದ್ಧದ ಸಮಯದಲ್ಲಿ ಮೊತ್ತಮೊದಲ ಬಾರಿಗೆ ವಿಮಾನಗಳನ್ನು ಬಳಸಲಾಯಿತು. ಅನೇಕ ಕಾಳಗಗಳು ನಡೆದುವು. ಜರ್ಮನ್ನರು ಮೊದಲು ಶತ್ರುಸೇನೆಗಳ ವಿರುದ್ಧ ಇಂಥ ವಿಮಾನಪಡೆಗಳನ್ನು ಬಳಸಿದರು. 1915ರ ಮೊದಲ ಭಾಗದಲ್ಲಿ ಅವರು ಬೆಲೂನುಗಳ (ಜ಼ೆಪ್‌ಲಿನ್‌ಗಳು) ಮೂಲಕ ಇಂಗ್ಲೆಂಡಿನ ತೀರಪ್ರದೇಶಗಳ ಮೇಲೆ ಬಾಂಬುಗಳನ್ನು ಸುರಿಸಲಾರಂಭಿಸಿದರು. 1916ರ ಕೊನೆಯವರೆಗೆ ಇಂಥ ಧಾಳಿಗಳು ನಡೆದುವು. ಅನಂತರ ಇವು ಕಡಿಮೆಯಾದುವು. ಏಕೆಂದರೆ ಬೆಲೂನುಗಳು ತಮ್ಮ ಬೃಹದ್ ಗಾತ್ರದಿಂದಾಗಿ ಸುಲಭವಾಗಿ ಶತ್ರುಗಳ ಬಂದೂಕುಗಳಿಗೆ ತುತ್ತಾಗುತ್ತಿದ್ದುವು. ಅನಂತರ ಕಂಡುಹಿಡಿದ ಸಿಡಿಗುಂಡುಗಳು ಇಂಥ ಬೆಲೂನುಗಳ ವಿರುದ್ಧ ದಾಳಿ ನಡೆಸಲು ಸಹಾಯಮಾಡಿದುವು.



ಒಂದನೆಯ ಮಹಾಯುದ್ಧದಲ್ಲಿ ಬಳಸಲಾದ ಬಾಂಬರ್

ಜ಼ೆಪ್‌ಲಿನ್‌ಗಳ ಉಪಯೋಗ ತಗ್ಗಿದ ಮೇಲೆ ಚಿಕ್ಕದಾದ, ಸುಲಭ ಬೆಲೆಯ, ವೇಗವಾಗಿ ಚಲಿಸಬಲ್ಲ. ಗಾಳಿಗಿಂತ ಭಾರವಾದ ವಿಮಾನಗಳು ಬಳಕೆಗೆ ಬಂದುವು. 1917ರ ಮೊದಲ ಭಾಗದಿಂದ ಇಂಥ ವಿಮಾನಗಳನ್ನು ಜರ್ಮನ್ನರು ಬಳಸಿಕೊಂಡು ಇಂಗ್ಲೆಂಡಿನ ಮೇಲೆ, ಅದರಲ್ಲೂ ಲಂಡನ್ನಿನ ಮೇಲೆ ದಾಳಿ ನಡೆಸಲು ಆರಂಭಿಸಿದರು. ಇವುಗಳ ರಚನೆಯ ವಿಧಾನವನ್ನು ಮಿತ್ರರಾಷ್ಟ್ರಗಳು ಕಂಡುಹಿಡಿದುಕೊಂಡ ಮೇಲೆ ಎರಡು ಪಕ್ಷಗಳ ಸೇನಾಬಲಗಳಿಗೂ ಇವು ಕಣ್ಣುಗಳೆಂದೆನಿಸಿದುವು. ಶತ್ರುಬಲದ ಮೇಲೆ ಹಾರಾಟ ನಡೆಸಿ ಸೈನ್ಯದ ಚಟುವಟಿಕೆಗಳನ್ನು ವೀಕ್ಷಿಸಲೂ ಷೆಲ್ ದಾಳಿಯನ್ನು ಮುಂದಾಗಿ ತಿಳಿಸಲೂ ಶತ್ರುಸೈನ್ಯದ ಚಟುವಟಿಕೆಗಳ ಬಗ್ಗೆ ಚಿತ್ರ ತೆಗೆಯಲೂ ಶತ್ರುಗಳ ಮೇಲೆ ಮತ್ತು ನಗರಗಳ ಮೇಲೆ ಪ್ರಚಾರ ಚೀಟಿಗಳನ್ನು ಎರಚಲೂ ಇಂಥ ವಿಮಾನಗಳನ್ನು ಬಳಸುತ್ತಿದ್ದರು. ಮೊದಮೊದಲು ವಿಮಾನಗಳಿಗೆ ಚಿಕ್ಕ ಕೋವಿಯನ್ನೂ ಚಿಕ್ಕ ಬಂದೂಕಗಳನ್ನೂ ಅಳವಡಿಸುತ್ತಿದ್ದರು. ಆದರೆ ಶೀಘ್ರದಲ್ಲೇ ಹಗುರವಾದ ಮೆಷಿನ್‌ಗನ್ನುಗಳನ್ನು ಅಳವಡಿಸಿದರು. ಮೇ 1915ರಲ್ಲಿ 25 ವರ್ಷದ ನೆದರ್ಲೆಂಡಿನ ಯುವಕ ಆಂಥೋನಿ ಫೊಕರ್ ಅವರೋಧಕಗಿಯರ್ (ಇಂಟರಪ್ಟರ್ ಗಿಯರ್) ಕಂಡುಹಿಡಿದ. ವಿಮಾನದ ಗಿಯರುಗಳಿಗೆ ಅಪಾಯವಾಗದಂತೆ ಮೆಷಿನ್‌ಗನ್ನುಗಳನ್ನು ಉಪಯೋಗಿಸಲು

ರಾತ್ರಿ ಯುದ್ಧ

ಇದರಿಂದ ಸಹಾಯ ವಾಯಿತು. ಇಂಥ ಸಾಧನದಿಂದ ಕೆಲವು ಕಾಲ ಜರ್ಮನ್ನರಿಗೆ ಮಿತ್ರರಾಷ್ಟ್ರಗಳ ಮೇಲೆ ಹೆಚ್ಚಿನ ಬಲ ಸಿಕ್ಕಂತಿತ್ತು. ಮೊದಮೊದಲು ವಿಮಾನಕಾಳಗಗಳು ಆಕಾಶದಲ್ಲಿ ಇಬ್ಬರು ಚಾಲಕರ ನಡುವೆ ನಡೆಯುತ್ತಿದ್ದವು. ವ್ಯಕ್ತಿಕಾಳಗಗಳು ಗುಂಪುಕಾಳಗಗಳಿಗೆ ಎಡೆಕೊಟ್ಟುವು. 10 ರಿಂದ 50 ವಿಮಾನಗಳ ದಳಗಳು ವಾಯುಕಾಳಗಗಳಲ್ಲಿ ಭಾಗವಹಿಸುತ್ತಿದ್ದುವು. ಪ್ರತಿಯೊಂದು ವಿಮಾನ ತಂಡಕ್ಕೂ ಒಬ್ಬ ನಾಯಕನಿರುತ್ತಿದ್ದ. ಅವನು ತನಗೆ ಸೂಕ್ತವೆನಿಸಿದ ವಿಮಾನ ಚಾಲಕರನ್ನು ಆರಿಸಿಕೊಳ್ಳುತ್ತಿದ್ದ. ಅದಲ್ಲದೆ ತಾನೇ ಮುಂದಾಗಿ ಹೋಗಿ ಹೋರಾಡಿ ತನ್ನ ಹಿಂಬಾಲಕರಿಗೆ ಮಾದರಿಯಾಗಿರುತ್ತಿದ್ದ. ಶತ್ರುಗಳು ಹಿಮ್ಮೆಟ್ಟಿ ಓಡಿಹೋಗುತ್ತಿದ್ದಾಗ ಹಿಂಸಿಸಲೂ ತಮ್ಮ ಭೂಸೈನ್ಯಗಳು ಮುಂದಾಗಿ ಹೋಗಿ ಆಕ್ರಮಿಸಿಕೊಳ್ಳಲೂ ಈ ವಿಮಾನಗಳು ಸಹಾಯ ಮಾಡುತ್ತಿದ್ದುವು.



ವಿಮಾನ ಯುದ್ಧ

ಒಂದನೆಯ ಮಹಾಯುದ್ಧದಲ್ಲಿ ಜರ್ಮನ್ನರು ಮೊದಲು ವಿಷ ವಾಯುವನ್ನು ಒಂದು ಮಾರಕಾಸ್ತ್ರದಂತೆ ಬಳಸಿದರು. ಅನಂತರ ಎಲ್ಲ ಪಕ್ಷಗಳವರೂ ಇದನ್ನು ಪ್ರಯೋಗಿಸಿದರು. ಇವನ್ನು ಬಂದೂಕುಗಳ ಮೂಲಕವೋ ಕೈಬಾಂಬಿನ ಮೂಲಕವೋ ವಿಷಜ್ವಾಲೆ ಅಥವಾ ಹೊಗೆಕಾರುವ ಕಂದೀಲುಗಳ ಮೂಲಕವೋ ಶೆಲ್ಲುಗಳ ಮೂಲಕವೋ

ವಿಮಾನದಿಂದ ಬಾಂಬಿನ ಮುಖಾಂತರವೋ ಬಳಸಲಾಗುತ್ತಿತ್ತು. ಇದರಿಂದ ಮರಣ ಹೊಂದಿದವರ ಸಂಖ್ಯೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಅನೇಕರು ಇದರಿಂದ ತತ್‌ಕ್ಷಣ ಮಡಿಯದೆ ಇದ್ದರೂ ಅನಂತರ ಇದರ ಪ್ರಭಾವದಿಂದ ತೊಂದರೆಗೀಡಾದರು. ಅಮೆರಿಕನ್ನರೇ ಹೆಚ್ಚಾಗಿ ಈ ಬಾಧೆಗೆ ತುತ್ತಾದರು.

ಪ್ರತಿಯೊಂದು ದೇಶದಲ್ಲೂ ಸರ್ಕಾರದ ಪ್ರಚಾರ ಸಮಿತಿಯೊಂದು ಸ್ಥಾಪಿತವಾಯಿತು. ಶತ್ರುಕಾರ್ಯದ ಬಗ್ಗೆ ಉತ್ಪ್ರೇಕ್ಷೆಯಿಂದ ಕೂಡಿದ ಕಥೆಗಳೂ ಚಿತ್ರಗಳೂ ಪ್ರಚಾರವಾದುವು. ಇವು ಜನರನ್ನು ರೊಚ್ಚಿಗೆಬ್ಬಿಸಿದುವಲ್ಲದೆ ಅವರಲ್ಲಿ ದೇಶಪ್ರೇಮವನ್ನು ಕುದುರಿಸಿದುವು. ಇಂಥ ಪ್ರಚಾರ ಅನೇಕ ವೇಳೆ ಹಿಂಸಾಕೃತ್ಯಗಳನ್ನು ಪ್ರಚೋದಿಸುತ್ತಿದ್ದುದೂ ಉಂಟು. ಶತ್ರುವಿನ ಪಕ್ಷದವನೆಂದು ಸಂದೇಹಪಟ್ಟು, ಹಿಡಿದುಕೊಂಡು ಹೋಗಿ ತಪ್ಪಿತಸ್ಥರಲ್ಲದವರನ್ನು ಅನೇಕ ವೇಳೆ ಕ್ರೂರವಾಗಿ ದಂಡಿಸುತ್ತಿದ್ದುದುಂಟು.

ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ ಅಮೆರಿಕ ಸಂಯುಕ್ತಸಂಸ್ಥಾನ ಐರೋಪ್ಯರ ಗೋಜೇ ಬೇಡ ಎಂಬ ತನ್ನ ನೀತಿಗೆ ಅನುಗುಣವಾಗಿ ತಾಟಸ್ಥ್ಯವನ್ನು ಸಾರಿಕೊಂಡಿತ್ತು. ಪ್ರಾರಂಭದಲ್ಲಿ ಜರ್ಮನ್ನರ ಕೈಯೇ ಮೇಲಾಗಿತ್ತು. ಅಸಹಾಯಕವಾದ ಸಣ್ಣ ಬೆಲ್ಜಿಯಂ ದೇಶವನ್ನು ನಿಪಾತಮಾಡಿ ಪ್ಯಾರಿಸಿನ ಬಾಗಿಲ ವರೆಗೆ ಬರುವ ತನಕ ಜರ್ಮನ್ನರು ಪ್ರಬಲರಾಗೇ ಇದ್ದರೂ ಜರ್ಮನ್ನರ ಮುನ್ನಡೆಗೆ ತಡೆ ಒದಗಿದ್ದು ಅಲ್ಲಿ. ಕೈಸರ್ ವಿಲಿಯಂ ನಿರ್ಮಿಸಿದ್ದ ಪ್ರಚಂಡ ಸೇನಾಯಂತ್ರದ ವಿರುದ್ಧ ವೀರ ಹೋರಾಟ ಹೂಡಿದ್ದುದರ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದುತ್ತ ಬಹುಮಂದಿ ಅಮೆರಿಕನರು ಫ್ರೆಂಚ್ ಮತ್ತು ಬ್ರಿಟಿಷ್ ರಾಷ್ಟ್ರಗಳಿಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದರು. ಮುಂಚಿನಿಂದ ಈ ದೇಶಗಳವರೊಡನೆ ಅಮೆರಿಕನರಿಗೆ ಋಣಾನುಬಂಧ ದ ವಾಂಛೆಯಿತ್ತು.

ಅಮೆರಿಕನ್ ಸೇನಾನಿ ಜನರಲ್ ಪರ್ಷಿಂಗ್

ನೆಪೋಲಿಯನನ ಯುದ್ಧಗಳ ಕಾಲದಲ್ಲಿ ಆದಂತೆ, ಯುದ್ಧ ನಿಂತರೂ ಪರಸ್ಪರವಾಗಿ ಇತರರ ಬಂದರುಗಳ ಮೇಲೆ ಬಹಿಷ್ಕಾರ ಹೂಡಿ, ಯುದ್ಧಕ್ಷೇತ್ರಗಳಿಗೆ ಆಹಾರವನ್ನೂ ಶಸ್ತ್ರಾಸ್ತ್ರಗಳನ್ನೂ ಹೊತ್ತು ತರುತ್ತಿದ್ದ ನೌಕೆಗಳನ್ನು ತಡೆಯುತ್ತಿದ್ದರು. ಬ್ರಿಟಿಷ್ ನಾವೆ ಸಮುದ್ರದ ಹತೋಟಿ ಹೊಂದಿ ತನ್ನ ಶತ್ರುವಿಗಾಗಿ ಉದ್ದಿಷ್ಟವಾದ ನೌಕೆಗಳನ್ನು ನಾಶಪಡಿಸದೆ ವಶಪಡಿಸಿಕೊಂಡರೆ, ಜರ್ಮನಿಯ ಜಲಾಂತರ್ಗಾಮಿಗಳು ನಿಶ್ಶಬ್ದವಾಗಿ ಸಾಗರದಾಳದಿಂದ ಮೇಲೆದ್ದು ನೌಕೆಗಳಿಗೆ ಟಾರ್ಪಿಡೊ ಬಾರಿಸಿ ನಾವಿಕರನ್ನೂ ಪ್ರಯಾಣಿಕರನ್ನೂ ಸಾಯಗೊಡುತ್ತಿದ್ದುವು.

ಇಂಗ್ಲೆಂಡಿನ ಲೂಸಿಟಾನಿಯ ಪ್ರಯಾಣಿಕ ಹಡಗಿನ ಮುಳುಗಡೆಯಲ್ಲಿ ಅಮೆರಿಕನ್ನರ ಪ್ರಾಣ ನಷ್ಟವಾದಾಗ ಆ ಪ್ರಸಂಗವೇ ಅಮೆರಿಕನ್ನರು ಯುದ್ಧಪ್ರವೇಶ ಮಾಡಲು ತತ್‌ಕ್ಷಣದ ಕಾರಣವಾಯಿತು. ಜಲಸಮಾಧಿಯಾದ 250 ಪ್ರಯಾಣಿಕರ ಪೈಕಿ 144 ಮಂದಿ ಅಮೆರಿಕನ್ನರು. ಈ ಮುಳಗಡೆಗಾಗಿ ಜರ್ಮನ್ನರು ವಿಷಾದವನ್ನೇನೋ ವ್ಯಕ್ತಪಡಿಸಿದರು. ಆದರೆ ಆ ಹಡಗಿನಲ್ಲಿ ಪ್ರಯಾಣಿಕರ ಜೊತೆಗೆ ಮದ್ದುಗುಂಡುಗಳೂ ಇದ್ದುವೆಂದು ಜರ್ಮನಿಯ ವಾದ.

ಜಲಾಂತರ್ಗಾಮಿ ಸಮರದ ವಿರುದ್ಧ ಜರ್ಮನಿಗೆ ಅಮೆರಿಕನ್ ಅಧ್ಯಕ್ಷ ವಿಲ್ಸನ್ ಪ್ರತಿಭಟನೆ ಕಳಿಸಿದರೂ ಜರ್ಮನಿಯಿಂದ ಅಸ್ಪಷ್ಟವಾದ ಕ್ಷಮಾಪಣೆಗಳೋ ಇನ್ನಷ್ಟು ಕೆಣಕುತ್ತರಗಳೋ ಲಭ್ಯವಾಗುತ್ತಿದ್ದುವು. ಅಮೆರಿಕನ್ನರು ಮಿತ್ರರಾಷ್ಟ್ರಗಳಿಗೆ ಸಾಲ ಸೋಲ ಕೊಟ್ಟು ಆಹಾರ ವಸ್ತುಗಳನ್ನೂ ಶಸ್ತ್ರಾಸ್ತ್ರಗಳನ್ನೂ ಕೊಳ್ಳಲು ನೆರವು ನೀಡುತ್ತಿದ್ದಾರೆಂಬುದೇ ಜರ್ಮನಿಗೆ ಅಮೆರಿಕದ ಮೇಲಿದ್ದ ಆಗ್ರಹ. ಜರ್ಮನಿಯ ಪ್ರಹಾರಗಳಿಂದಾಗಿ ಅದರ ವಿರುದ್ಧ ಅಮೆರಿಕದಲ್ಲಿ ಸಾರ್ವಜನಿಕಾಭಿಪ್ರಾಯ ಉದ್ರೇಕಗೊಂಡಿತು. ಎಂಥ ಉದ್ರಿಕ್ತ ಪರಿಸ್ಥಿತಿಯಲ್ಲೂ ನಮ್ಮನ್ನು ಯುದ್ಧದಿಂದ ದೂರವಿಟ್ಟಿದ್ದಾನೆ–ಎಂಬ ಕಾರಣದಿಂದಾಗಿ ವಿಲ್ಸನ್ ಮತ್ತೆ 1916ರಲ್ಲಿ ಅಧ್ಯಕ್ಷನಾಗಿ ಆಯ್ಕೆಯಾದ.

**ಅಮೆರಿಕ ಪ್ರವೇಶ:** ಆದರೆ ಹೆಚ್ಚು ಕಾಲ ಅಮೆರಿಕ ಯುದ್ಧದಿಂದ ಹೊರನಿಲ್ಲು ವಂತಿರಲಿಲ್ಲ. ಅಮೆರಿಕ ಯುದ್ಧಪ್ರವೇಶ ಮಾಡಿದರೆ ಮೆಕ್ಸಿಕೋ ಜಪಾನುಗಳು ಅದನ್ನು ಘಾತಿಸಬೇಕು ಎಂದು ಜರ್ಮನಿ ಚಿತಾವಣೆ ಮಾಡುತ್ತಿದ್ದುದೂ ಅಮೆರಿಕದ ಯುದ್ಧಕೈಗಾರಿಕೆಗಳನ್ನು ನಿಪಾತಮಾಡಲು ಪಿತೂರಿ ನಡೆಸುತ್ತಿದ್ದುದೂ ಗೂಢಚಾರರಿಂದ ಬಯಲಾದುವು. ಜರ್ಮನ್ನರು ತಮ್ಮ ಜಲಾಂತರ್ಗಾಮಿ ಯುದ್ಧವನ್ನು ಹೆಚ್ಚು ಮಾಡಿ ಇಂಗ್ಲೆಂಡನ್ನು ಸೋಲಿಸುವ ನಿಶ್ಚಯವನ್ನು ಘೋಷಿಸುತ್ತಲೇ ಅಧ್ಯಕ್ಷ ವಿಲ್ಸನ್ ಕಾಂಗ್ರೆಸಿಗೆ ಸಂದೇಶ ಕಳಿಸಿದ. 1917 ಏಪ್ರಿಲ್ 6ರಂದು ಅಮೆರಿಕದ ಕಾಂಗ್ರೆಸ್ ಯುದ್ಧ ಘೋಷಿಸಿತು.

ಅಮೆರಿಕ ಯುದ್ಧಪ್ರವೇಶ ಮಾಡಲು ಇದು ತತ್‌ಕ್ಷಣದ ಕಾರಣವಾದರೂ ಈ ಯುದ್ಧ ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳ ಉಳಿವು–ಅಳಿವಿನ ಹೋರಾಟವೆಂಬ ನಂಬಿಕೆ ಅಧ್ಯಕ್ಷ ವಿಲ್ಸನ್‌ನಲ್ಲಿ ಬಲಗೊಳ್ಳತೊಡಗಿತ್ತು. ಪ್ರಜಾಪ್ರಭುತ್ವಗಳ ವಿರುದ್ಧವಾಗಿ ನಿರಂಕುಶ ಪ್ರಭುತ್ವಗಳು ಸಂಘಟಿಸಿ ಹೋರಾಡುತ್ತಿದ್ದುವು. ವಿಶ್ವವ್ಯವಹಾರಗಳಲ್ಲಿ ಅಮೆರಿಕದ ಪಾತ್ರ ಈ ಪ್ರಜಾಪ್ರಭುತ್ವಗಳನ್ನು ಜಯಗೊಳ್ಳುವಂತೆ ಪುಷ್ಟೀಕರಿಸುವುದೇ ಎಂದೂ ಈ ಕಾರ್ಯವನ್ನು ಯಾರ ಮೇಲೂ ದ್ವೇಷ ಸಾಧಿಸದೆ ನೆರವೇರಿಸಿ, ವಿಜೇತ ಪರಾಜಿತ ರಾಷ್ಟ್ರಗಳನ್ನೆಲ್ಲ ರಾಷ್ಟ್ರಗಳ ಕೂಟದಲ್ಲಿ (ಲೀಗ್ ಆಫ್ ನೇಷನ್ಸ್) ಪ್ರಜಾಸತ್ತಾತ್ಮಕ ಲೋಕಸೌಭ್ರಾತೃತ್ವವನ್ನಾಗಿ ಒಟ್ಟುಗೂಡಿಸಬೇಕೆಂದೂ ವಿಲ್ಸನ್ ನಿಶ್ಚಯಿಸಿದ. ಇಂಥದೊಂದು ಕೂಟದಲ್ಲಿ ಎಲ್ಲ ಯುದ್ಧಗಳ ಮೂಲಕಾರಣಗಳಾದ ರಾಷ್ಟ್ರೀಯವಾದ, ಸಾಮ್ರಾಜ್ಯವಾದ, ಕರಾರುಗಳ ಮೂಲಕ ಸ್ಥಾಪಿತವಾದ ರಾಷ್ಟ್ರವ್ಯೂಹಗಳ ಸಮತೂಕ–ಮುಂತಾದ ಪ್ರವೃತ್ತಿಗಳನ್ನು ನಿವಾರಿಸಬೇಕು. ಈ ರೀತಿ ವಿಲ್ಸನ್ ಸೂಚಿಸಿದ ಹದಿನಾಲ್ಕು ಅಂಶಗಳ ಆಧಾರದ ಮೇಲೆ ಯುದ್ಧಾನಂತರದಲ್ಲಿ ಶಾಂತಿ ಕೌಲನ್ನು ಮಾಡಿಕೊಳ್ಳಲು ಸಾಧ್ಯ ಎಂದು ಆತ ಪ್ರತಿಪಾದಿಸಿದ.

ಈ ಉನ್ನತ ಧ್ಯೇಯಗಳಿಂದ ಪ್ರೇರಿತವಾಗಿ ಸಂಯುಕ್ತಸಂಸ್ಥಾನ ಮಹಾಯುದ್ಧವನ್ನು ಪ್ರವೇಶಿಸಿತು. ರಷ್ಯ ಸೋತು ಹಿಮ್ಮೆಟ್ಟಿದ್ದ ಕಾರಣ ಮಿತ್ರರಾಷ್ಟ್ರಗಳು ಕಷ್ಟಕ್ಕೆ ಸಿಕ್ಕಿಬಿದ್ದಿದ್ದುವು. ಸರ್ವಪ್ರಕಾರಗಳಲ್ಲೂ ಉತ್ಪಾದನೆ ಹೆಚ್ಚಿಸಲು, ಕೈಗಾರಿಕೆಗಳನ್ನು ಸ್ಥಾಪಿಸಲು ಅಧ್ಯಕ್ಷ ವಿಲ್ಸನ್‌ನಿಗೆ ಅಧಿಕಾರ ಕೊಡಲಾಯಿತು, ಕಾರ್ಮಿಕ, ಬಂಡವಾಳಿಗ–ಹೀಗೆ ಉಭಯತ್ರರೂ ಸಹಕರಿಸಿದರು, ತಯಾರಕರು ಬೆಲೆ ನಿಯಂತ್ರಣಕ್ಕೆ ಒಪ್ಪಿದರು. ಕಾರ್ಮಿಕ ಸಂಸ್ಥೆಗಳು ಮುಷ್ಕರ ಹೂಡುವ ಅಧಿಕಾರವನ್ನು ತ್ಯಜಿಸಿದುವು.

ಅಮೆರಿಕ ತನ್ನ ಮಿತ್ರರಾಷ್ಟ್ರಗಳಿಗೆ ಕೋಟ್ಯಂತರ ಡಾಲರುಗಳಷ್ಟು ಸಾಲಗಳನ್ನೂ ಹಲವು ಹಡಗುಗಳ ತುಂಬ ಸರಬರಾಜನ್ನೂ ಮುಖ್ಯವಾಗಿ ಆಹಾರ ವಸ್ತುಗಳನ್ನೂ ನೀಡಬಹುದಾಗಿದ್ದರೂ ಸೈನಿಕರನ್ನು ಕಳಿಸುವುದೇ ದೊಡ್ಡ ಸಮಸ್ಯೆಯಾಗಿ ಕುಳಿತಿತ್ತು. ಇದ್ದ ಸೈನ್ಯ ಚಿಕ್ಕದು. ಸಾಕಷ್ಟು ಸೇನೆಯನ್ನು ಜಮಾಯಿಸಿ, ತರಬೇತು ಮಾಡಿ 4828 ಕಿಮೀಗಳಾಚೆಯ ರಣರಂಗಗಳಿಗೆ ರವಾನಿಸುವ ಕಾರ್ಯವನ್ನು ಚಕಿತಗೊಳಿಸುವಷ್ಟು ತ್ವರೆಯಿಂದ ನಿರ್ವಹಿಸಲಾಯಿತು. ಇತರ ಪೌರರಂತೆ ಜರ್ಮನ್ ಮತ್ತು ಆಸ್ಟ್ರಿಯ–ಹಂಗರಿಯ ಮೂಲಕ್ಕೆ ಸೇರಿದ ಅಮೆರಿಕನ್ ಪೌರರೂ ಸೇನಾ ಜಮಾವಣೆಗೆ ನಮ್ರತೆಯಿಂದ ಬದ್ಧರಾದರು. ಒಂದೇ ವರ್ಷದ ಅವಧಿಯೊಳಗೆ ಫ್ರಾನ್ಸಿನಲ್ಲಿ ಜನರಲ್ ಜಾನ್ ಜೆ. ಪರ್ಷಿಂಗ್ ಕೈಕೆಳಗೆ 7 ಲಕ್ಷ ಸೈನಿಕರು ಸಿದ್ಧವಾಗಿದ್ದರು. ಮುಂದಿನ ಆರು ತಿಂಗಳೊಳಗೆ ಸೈನಿಕರ ಸಂಖ್ಯೆ 20 ಲಕ್ಷಕ್ಕೆ ಏರಿತು.

ಅಮೆರಿಕನ್ ಸೈನಿಕರಿಂದ ಯುದ್ಧ ಪ್ರವೇಶ

ಅಮೆರಿಕ ರಣಕ್ಕೆ ಸಿದ್ಧತೆಗೊಳ್ಳುತ್ತಿದ್ದ ವೇಗವನ್ನು ಕಂಡು ದಂಗುಬಡಿದ ಮಧ್ಯೈರೋಪ್ಯ ರಾಷ್ಟ್ರಗಳು 1918ರ ವಸಂತದಲ್ಲಿ ದೊಡ್ಡ ಆಘಾತ ಹೂಡಿ ಯುದ್ಧವನ್ನು ಮುಕ್ತಾಯಪಡಿಸಲು ಯತ್ನಿಸಿದುವು. ಮಿತ್ರಸೇನೆಗಳ ಉಚ್ಚಸೇನಾನಿ ಫ್ರಾನ್ಸಿನ ಮಾರ್ಷಲ್ ಫಾಕ್ ಅಗತ್ಯವಾದ ಕಡೆಯೆಲ್ಲ ಅಮೆರಿಕನ್ ಸೈನಿಕರನ್ನು ರಕ್ಷಣಾ ವ್ಯವಸ್ಥೆಗೆ ಬಳಸಿಕೊಂಡ. ಅಮೆರಿಕನ್ ಸೇನೆಗಳು ಶೌರ್ಯದಿಂದ ಹೋರಾಡಿ ಎಲ್ಲರ ಮೆಚ್ಚುಗೆಗೆ ಗಳಿಸಿದುವು.

ಜರ್ಮನ್ನರ ಆಘಾತವನ್ನು ತಡೆಗಟ್ಟಿದ ಕೂಡಲೆ ಅಮೆರಿಕನರು ಒಂದು ಪ್ರತ್ಯೇಕ ಸೇನೆಯಾಗಿ ಸಂಗ್ರಹಗೊಂಡು ತಮ್ಮ ಪಾಲಿಗೊಂದು ರಣರಂಗವನ್ನು ವಹಿಸಿಕೊಂಡರು. ಅಮೆರಿಕನ್ನರು ಸೇಂಟ್ ಮಿಹೀಲ್ ವಿಭಾಗದಲ್ಲಿ ಜರ್ಮನ್ ರಕ್ಷಣಾ ವ್ಯವಸ್ಥೆಯೊಳಕ್ಕೆ ನುಗ್ಗಿ ಮೆಷಿನ್‌ಗನ್ ನಿಬಿಡವಾದ ಮ್ಯೂಕ್ ಆರ್ಗನ್ ವಿಭಾಗದ ಮೂಲಕ 12 ಲಕ್ಷ ಸೇನೆಯೊಡನೆ ಮುನ್ನುಗ್ಗಿದರು. ಜರ್ಮನ್ನರು ಹಿಮ್ಮೆಟ್ಟಿ ಇಡೀ ರಂಗದ ಉದ್ದಕ್ಕೂ ಪರಾಜಿತರಾದರು. 1918ನೆಯ ನವೆಂಬರ್ 11ರಂದು ಯುದ್ಧಸ್ತಂಭನ ಏರ್ಪಟ್ಟಿತು. ಸಂಯುಕ್ತಸಂಸ್ಥಾನ ಯುದ್ಧಕ್ಕೆ ತಡವಾಗಿ ಬಂದು ಇತರರಿಗಿಂತ ಕಡಿಮೆ ಕಷ್ಟನಷ್ಟಗಳಿಗೆ ಒಳಗಾದರೂ ಅದು ಇಡೀ ಯುದ್ಧದ ತಕ್ಕಡಿಯನ್ನೇ ಏರುಪೇರು ಮಾಡಿತು. ಆಗಿನ ಕಾಲದ ಜನರು ನಂಬಿಕೊಂಡಂತೆ, ಪ್ರಜಾಪ್ರಭುತ್ವ ಲೋಕದಲ್ಲಿ ಕ್ಷೇಮವಾಗಿ ಉಳಿಯುವಂತೆ ಮಾಡಿದ ಕೀರ್ತಿ ಅಮೆರಿಕಕ್ಕೆ ಸಲ್ಲಬೇಕು.

**ಏಷ್ಯದಲ್ಲಿ ಜಪಾನ್ ನಡೆಸಿದ ಯುದ್ಧ:** ಆಗಸ್ಟ್ 1914ರಲ್ಲಿ ಜಪಾನ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿತು. ಚೀನದಲ್ಲಿ ಜರ್ಮನ್ನರಿಗೆ ಸೇರಿದ್ದ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಇದನ್ನು 1898ರಲ್ಲಿ ಚೀನ ಜರ್ಮನಿಗೆ ಗುತ್ತಿಗೆಯ ಮೇಲೆ ಕೊಟ್ಟಿತ್ತು. ಮೊದಲನೆಯ ಮಹಾಯುದ್ಧ ಪ್ರಾರಂಭವಾದದ್ದು ಜಪಾನಿಗೆ ಅನುಕೂಲವೇ ಆಯಿತೆನ್ನಬಹುದು. ಅದು ಮಿತ್ರರಾಷ್ಟ್ರಗಳ ಪರ ಸೇರಿ ಪೂರ್ವ ಪ್ರಾಚ್ಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. ಜರ್ಮನ್ ಸೈನ್ಯ ಈ ಭಾಗದಲ್ಲಿ ಸ್ವಲ್ಪ ಸಂಖ್ಯೆಯಲ್ಲಿದ್ದುದರಿಂದ ಅಂಥ ದೊಡ್ಡ ಕಾಳಗವೇನೂ ನಡೆಯಲಿಲ್ಲ. ಜರ್ಮನ್ನರು ಬೇಗ ಜಪಾನಿಗೆ ಶರಣಾಗತರಾದರು. ಜಪಾನು ಪಡೆದುಕೊಂಡ ಪ್ರದೇಶಗಳನ್ನು ಚೀನಕ್ಕೆ ವಾಪಸು ಮಾಡದೆ ತನ್ನ ಅಧೀನದಲ್ಲೇ ಉಳಿಸಿಕೊಂಡಿತು. ಅದಲ್ಲದೆ, ಐರೋಪ್ಯ ರಾಷ್ಟ್ರಗಳು ತಂತಮ್ಮ ಬದುಕಿಗಾಗಿ ಹೋರಾಟ ನಡೆಸುತ್ತಿದ್ದ ಇಂಥ ಕಠಿಣ ಸಂದರ್ಭಗಳನ್ನು ಉಪಯೋಗಿಸಿಕೊಂಡ, ಜಪಾನ್ ಚೀನದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. ಫೆಬ್ರುವರಿ 1917ರಲ್ಲಿ ಜಪಾನ್ ಮತ್ತು ಬ್ರಿಟನ್ ಒಂದು ರಹಸ್ಯ ಒಪ್ಪಂದ ಮಾಡಿಕೊಂಡುವು. ಇದರ ಪ್ರಕಾರ ಜಪಾನ್ ಮೆಡಿಟರೇನಿಯನ್ ಸಮುದ್ರಕ್ಕೆ ಕೆಲವು ಯುದ್ಧದ ಹಡಗುಗಳನ್ನು ಕಳುಹಿಸಬೇಕೆಂದೂ ಇದಕ್ಕೆ ಪ್ರತಿಯಾಗಿ ಬ್ರಿಟನ್ ಜರ್ಮನ್ನರಿಂದ ವಶಪಡಿಸಿಕೊಂಡಿದ್ದ ಷಾಂಟುಂಗಿನ ಮತ್ತು ಪೆಸಿಫಿಕ್ ಸಾಗರದಲ್ಲಿ ಜರ್ಮನರಿಗೆ ಸೇರಿದ್ದ ಕೆಲವು ದ್ವೀಪಗಳ ಮೇಲೆ ಅಧಿಕಾರ ಬಿಟ್ಟುಕೊಡಬೇಕೆಂಬ ಸೂಚನೆಗೆ ಶಾಂತಿ ಕೌಲಿನ ಸಮಯದಲ್ಲಿ ಬೆಂಬಲ ಸೂಚಿಸುವುದಾಗಿಯೂ ಬ್ರಿಟನ್ ಒಪ್ಪಿತು. ಫ್ರಾನ್ಸ್ ಮಾರ್ಚ್ 1917ರಲ್ಲಿ ಇಂಥದೇ ಕರಾರುಗಳಿಗೆ ಒಪ್ಪಿಗೆ ಕೊಟ್ಟಿತು. ಇದಕ್ಕೆ ಬದಲು ಜಪಾನು ಚೀನವನ್ನು ಮಹಾಯುದ್ಧದಲ್ಲಿ ತೊಡಗುವಂತೆ ಮಾಡಬೇಕೆಂದು ಒಡಂಬಡಿಕೆಯಾಯಿತು. ಕೆಲವು ದಿನಗಳ ತರುವಾಯ ರಷ್ಯವೂ ಅನಂತರ ಇಟಲಿಯೂ ಇದಕ್ಕೆ ತಮ್ಮ ಒಪ್ಪಿಗೆ ನೀಡಿದುವು.

ಈ ರೀತಿಯ ಲಾಭಗಳನ್ನು ಐರೋಪ್ಯ ರಾಷ್ಟ್ರಗಳಿಂದ ಪಡೆದ ಮೇಲೆ ಜಪಾನ್ ಚೀನವನ್ನು ಜರ್ಮನಿಯಿಂದ ಎಲ್ಲ ಸಂಪರ್ಕಗಳನ್ನೂ ಕಡಿದುಕೊಳ್ಳುವಂತೆ ಪ್ರೇರೇಪಿಸಿತು. ಅಮೆರಿಕ ಯುದ್ಧ ಪ್ರವೇಶಿಸಿದ ಮೇಲೆ ಏಪ್ರಿಲ್ ತಿಂಗಳಿನಲ್ಲಿ ಚೀನಕ್ಕೆ ಇಂಥದೇ ಸಲಹೆಯನ್ನು ನೀಡಿತು. ಒಟ್ಟಿನಲ್ಲಿ ಜಪಾನ್ ಯುದ್ಧದಿಂದ ಲಾಭ ಗಳಿಸಿತು. 1917ರಲ್ಲಿ ಯುದ್ಧ ಮಾಡುತ್ತಿದ್ದ ಮಿತ್ರರಾಷ್ಟ್ರಗಳ ಪರಿಸ್ಥಿತಿ ಹದಗೆಟ್ಟಿತ್ತು. ಆದ್ದರಿಂದ ಅವು ಅಮೆರಿಕದಿಂದ ಮಾತ್ರವಲ್ಲದೆ, ಏಷ್ಯದ ದೇಶಗಳಿಂದಲೂ ಸಹಾಯ ನಿರೀಕ್ಷಿಸುತ್ತಿದ್ದುವು. ಪೂರ್ವದ ರಾಷ್ಟ್ರಗಳು ಅಲ್ಲಿಯವರೆಗೆ ಅಂಥ ಹೆಚ್ಚಿನ ಸಹಾಯವನ್ನೇನೂ ಮಾಡಿರಲಿಲ್ಲ. ಚೀನ ತಟಸ್ಥ ನೀತಿ ಅನುಸರಿಸಿತ್ತು. ಜಪಾನು ಜರ್ಮನ್ನರಿಗೆ ಸೇರಿದ ಪ್ರದೇಶಗಳನ್ನು ವಶಪಡಿಸಿಕೊಂಡು, ಮಿತ್ರರಾಷ್ಟ್ರಗಳಿಗೆ ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ಮಾರುವುದರಲ್ಲಿ ಮಾತ್ರ ಸಹಾಯ ನೀಡಿತ್ತು. ಇಂಥ ಕಠಿಣ ಪರಿಸ್ಥಿತಿಯಲ್ಲಿ ಜಪಾನಿನ ಕೋರಿಕೆಗಳನ್ನೊಪ್ಪಿ ಅದರಿಂದ ಯುದ್ಧಕ್ಕೆ ಹೆಚ್ಚಿನ ಸಹಾಯ ಪಡೆಯಲು ಮಿತ್ರರಾಷ್ಟ್ರಗಳು ನಿರ್ಧರಿಸಿದುವು. ಆದ್ದರಿಂದ ಈ ಯುದ್ಧ, ಜಪಾನಿಗೆ ಒಂದು ಸುಯೋಗವೆಂದೇ ಹೇಳಬಹುದು.

**ಚೀನ, ಭಾರತ:** ಯುದ್ಧ ಪ್ರಾರಂಭವಾಗುವ ಮೊದಲು, ಚೀನ ಯುದ್ಧದಲ್ಲಿ ಭಾಗವಹಿಸುವ ನಿಶ್ಚಯ ಹೊಂದಿತ್ತು. ಜಪಾನು ಯುದ್ಧವನ್ನು ನೆವವಾಗಿ ಉಪಯೋಗಿಸಿಕೊಂಡು ಚೀನದಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳಬಹುದೆಂಬ ಭೀತಿ ಅದಕ್ಕಿತ್ತು. 1914 ಮತ್ತು 1915ರಲ್ಲಿ ಚೀನ ಮಿತ್ರರಾಷ್ಟ್ರಗಳ ಪರವಾಗಿ ಯುದ್ಧದಲ್ಲಿ ಭಾಗವಹಿಸುವುದು ಬೇಕಾಗಿರಲಿಲ್ಲ. ಇದಕ್ಕೆ ಕಾರಣವೇನೆಂದರೆ ಯುದ್ಧಕ್ಕೆ ಚೀನ ಇಳಿದು, ತನ್ನ ಸೈನ್ಯವನ್ನು ಬಲಪಡಿಸಿಕೊಂಡು ಸಂಪತ್ತನ್ನು ವೃದ್ಧಿಸಿಕೊಂಡು, ಶಾಂತಿ ಸಂಧಾನಗಳಲ್ಲಿ ಭಾಗವಹಿಸುವುದು ಜಪಾನಿಗೆ ಇಷ್ಟವಾಗಿರಲಿಲ್ಲ. ಆದ್ದರಿಂದ 1917ರ ತನಕ ಜಪಾನ್ ಚೀನವನ್ನು ಯುದ್ಧ ಪ್ರವೇಶಿಸದಂತೆ ತಡಿಹಿಡಿದಿತ್ತು. ಆದರೆ 1917ರಲ್ಲಿ ಜಪಾನ್ ತನ್ನ ನೀತಿಯನ್ನು ಬದಲಾಯಿಸಿ, ಮೇಲೆ ತಿಳಿಸಿದ ಕಾರಣಗಳಿಂದಾಗಿ ಚೀನವನ್ನು ಯುದ್ಧದಲ್ಲಿ ಭಾಗವಹಿಸಲು ಪ್ರೇರೇಪಿಸಿತು. 1917ರ ಆಗಸ್ಟ್ 14ರಂದು ಜರ್ಮನಿ ಮತ್ತು ಆಸ್ಟ್ರಿಯ–ಹಂಗರಿಗಳ ಮೇಲೆ ಚೀನ ಯುದ್ಧ ಘೋಷಿಸಿತು. ಆಗ ಚೀನದಲ್ಲಿ ಎರಡು ಸರ್ಕಾರಗಳಿದ್ದುವು. ಒಂದು ಉತ್ತರದ ಪೀಕಿಂಗ್‌ನಲ್ಲಿ, ಮತ್ತೊಂದು ದಕ್ಷಿಣದ ಕ್ಯಾಂಟನ್‌ನಲ್ಲಿ. ಎರಡೂ ಸರ್ಕಾರಗಳು ಪ್ರತ್ಯೇಕವಾಗಿ ಯುದ್ಧ ಘೋಷಿಸಿದುವು.

ಚೀನ ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿದ್ದರಿಂದ ಒಟ್ಟಿನಲ್ಲಿ ಅಂಥ ಹೆಚ್ಚಿನ ಪರಿಣಾಮ ಕಂಡುಬರಲಿಲ್ಲ. ಜರ್ಮನಿಗೆ ಸೇರಿದ್ದ ಯುದ್ಧನೌಕೆಗಳನ್ನು ಚೀನ ತನ್ನ ಬಂದರುಗಳಲ್ಲಿ ತಡೆಹಿಡಿದಿತ್ತು. ಅನಂತರ ಅವುಗಳನ್ನು ಮಿತ್ರರಾಷ್ಟ್ರಗಳಿಗೆ ಒಪ್ಪಿಸಿತು. ಚೀನದಿಂದ ಕೂಲಿಗಳೂ ಹೋಗಿ ಯುದ್ಧದ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ದುಡಿದರು. ಯುದ್ಧದಿಂದ ಜಪಾನಿಗೆ ತನ್ನ ದೇಶದಲ್ಲಿ ಹೆಚ್ಚಿನ ಪ್ರದೇಶಗಳನ್ನು ಬಿಟ್ಟುಕೊಡಬೇಕಾಯಿತು. ಯುದ್ಧ ಮುಗಿದ ಅನಂತರ ಚೀನಕ್ಕೆ ಪ್ಯಾರಿಸ್ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ದೊರೆಯಿತು. ಅಲ್ಲಿ ಚೀನ ಜಪಾನ್‌ಗಳ ಚಕಮಕಿ ನಡೆಯಿತು. ಜಪಾನು ಜರ್ಮನಿಗೆ ಸೇರಿದ್ದ ಷಾಂಟುಂಗ್ ಪ್ರದೇಶಗಳು ತನಗೆ ಸೇರಬೇಕೆಂದು ಕೇಳಿತು. ಚೀನ ಇದನ್ನು ವಿರೋಧಿಸಿತು. ಯುದ್ಧದ ಸಮಯದಲ್ಲಿ ನಡೆದ ಗುಟ್ಟಾದ ಒಪ್ಪಂದಗಳ ಪ್ರಕಾರ, ಫ್ರಾನ್ಸ್ ಮತ್ತು ಇಂಗ್ಲೆಂಡ್ ಜಪಾನಿಗೆ ಬೆಂಬಲ ಕೊಡಬೇಕಾಯಿತು. ಕೊನೆಗೆ ಜಪಾನ್ ಷಾಂಟುಂಗ್ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಉಳಿದ ಜರ್ಮನ್ ವಸಾಹತುಗಳ ಮೇಲೆ ಹತೋಟಿ ಪಡೆದುಕೊಂಡಿತು. ಆದುದರಿಂದ ಚೀನ ನಿರಾಶೆಗೊಂಡು ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಲಿಲ್ಲ. ಅನಂತರ ಜರ್ಮನಿಯೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಂಡಿತು. ಚೀನ ರಾಷ್ಟ್ರಗಳ ಕೂಟದ ಸದಸ್ಯರಾಷ್ಟ್ರವಾಯಿತು.

ಒಂದನೆಯ ಮಹಾಯುದ್ಧ ಆರಂಭವಾದ ಮೂರು ತಿಂಗಳಲ್ಲೇ ಭಾರತೀಯ ಸೈನಿಕರು ಪಶ್ಚಿಮ ರಣಕ್ಷೇತ್ರದಲ್ಲಿ ಕಾದಾಡುತ್ತಿದ್ದರು. ಭಾರತ ಉಳಿದ ಬ್ರಿಟಿಷ್ ವಸಾಹತುಗಳಂತೆ, ಯುದ್ಧದ ಸಮಯದಲ್ಲಿ ಇಂಗ್ಲೆಂಡಿಗೆ ಅಧೀನವಾಗಿ ನಡೆದುಕೊಂಡಿತು. ಯುದ್ಧಕ್ಕಾಗಿ ಭಾರತ ಒದಗಿಸಿದ ಸೈನಿಕರ ಮತ್ತು ಭಾರತೀಯ ಕಾರ್ಮಿಕರ ಸಂಖ್ಯೆ 13,00,000, ಈಜಿಪ್ಟ್, ಚೀನ, ಆಫ್ರಿಕ, ಅರೇಬಿಯ, ಬಾಲ್ಕನ್ ಪ್ರದೇಶ ಮತ್ತು ಫ್ರಾನ್ಸಿನಲ್ಲಿ ಭಾರತೀಯರು ಸೇವೆ ಸಲ್ಲಿಸಿದರು. ಭಾರತ ಸರ್ಕಾರ ಇದಲ್ಲದೆ ಬ್ರಿಟನಿಗೆ 50,00,00,000 ಡಾಲರ್‌ಗಳನ್ನು ಒಪ್ಪಿಸಿತು. ಯುದ್ಧನಿಧಿಗಾಗಿ ನೂರಾರು ರಾಜಮಹಾರಾಜರು ನೀಡಿದ ಕಾಣಿಕೆ 2,50,00,000 ಡಾಲರ್‌ಗಳು, ಯುದ್ಧ ಮುಗಿದ ಅನಂತರ ಬ್ರಿಟನ್ ಮಾಂಟೆಗು–ಚೆಮ್ಸ್‌ಫರ್ಡ್ ಸುಧಾರಣೆಗಳ ಮೂಲಕ ಭಾರತೀಯರಿಗೆ ಕೆಲವು ರಾಜಕೀಯ ಹಕ್ಕುಗಳನ್ನು ನೀಡಿತು.

**ಜರ್ಮನಿಯ ವಸಾಹತುಗಳಲ್ಲಿ ಯುದ್ಧ:** ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳಂತೆ ಜರ್ಮನಿಗೂ ಏಷ್ಯ–ಆಫ್ರಿಕಗಳಲ್ಲಿ ಅನೇಕ ವಸಾಹತುಗಳಿದ್ದುವು. ಇವು ಜರ್ಮನಿಯ ಕೈಗಾರಿಕಾಭಿವೃದ್ಧಿಗೆ ಸಹಾಯಕವಾಗಿದ್ದುವು. ಜರ್ಮನಿಯ ಕೈಗಾರಿಕೆಗಳಿಗೆ ಬೇಕಾದ ಕಚ್ಚಾಮಾಲುಗಳನ್ನು ಪೂರೈಸುತ್ತಿದ್ದುದು ಈ ವಸಾಹತುಗಳೇ, ಅಷ್ಟೇ ಅಲ್ಲದೆ ಇವು ಜರ್ಮನಿಯಲ್ಲಿ ತಯಾರಾದ ಸಿದ್ಧವಸ್ತುಗಳಿಗೆ ಮಾರುಕಟ್ಟೆಗಳು ಕೂಡ, ಮಹಾಯುದ್ಧ

ತಾಯಿನಾಡಿನಿಂದ ಹೊರಗೆ : ಗಾಯಗೊಂಡ ಭಾರತೀಯ ಯೋಧರು

ಪ್ರಾರಂಭವಾದಾಗ ಮಿತ್ರರಾಷ್ಟ್ರಗಳು ಇವನ್ನು ವಶಪಡಿಸಿಕೊಳ್ಳಲು ಸಂಚು ಹೂಡಿದವು. ಇವುಗಳಿಂದ ದೊರಕುತ್ತಿದ್ದ ಅಮೂಲ್ಯವಾದ ಕಚ್ಚಾ ಸಾಮಗ್ರಿ ಜರ್ಮನಿಗೆ ರವಾನೆಯಾಗುವುದು ತಪ್ಪಿದರೆ ಆ ದೇಶದ ಆರ್ಥಿಕ ಸ್ಥಿತಿ ಕುಂಠಿತಗೊಂಡು ತಾವು ಯುದ್ಧದಲ್ಲಿ ಗೆಲ್ಲಲು ಸಹಾಯವಾಗುವುದೆಂಬುದು ಮಿತ್ರ ರಾಷ್ಟ್ರಗಳ ಆಲೋಚನೆ. ಈ ಯೋಚನೆಯ ಫಲವೇ ಜರ್ಮನಿಯ ವಸಾಹತುಗಳಲ್ಲಿ ನಡೆದ ಯುದ್ಧದ ರೂಪ ತಳೆಯಿತು.

ಪೂರ್ವ ಆಫ್ರಿಕದಲ್ಲಿ ಜರ್ಮನಿಗೆ ಸೇರಿದ ಅನೇಕ ವಸಾಹತುಗಳಿದ್ದುವು. ಇಲ್ಲಿ ನಡೆದ ಯುದ್ಧ ಸ್ವಲ್ಪ ದೀರ್ಘಕಾಲದ್ದಾಗಿದೆ. ಉಳಿದ ಜರ್ಮನ್ ವಸಾಹತುಗಳಲ್ಲಿ ಯುದ್ಧ ಬಹು ಶೀಘ್ರವೇ ಕೊನೆಗೊಂಡಿತು. ಚೀನದಲ್ಲಿ ಜರ್ಮನಿಗೆ ಸೇರಿದ ಪ್ರದೇಶಗಳನ್ನು ಜಪಾನ್ ಯುದ್ಧ ಘೋಷಿಸಿದ ತತ್ಕ್ಷಣ ಆಕ್ರಮಿಸಿಕೊಂಡಿತು. ಇಲ್ಲಿ ಜರ್ಮನ್ನರ ಸೇನಾಬಲ ಸ್ವಲ್ಪವೇ ಇದ್ದುದರಿಂದ ಜಪಾನೀಯರು ಬಹು ಸುಲಭವಾಗಿ ಜರ್ಮನ್ನರನ್ನು ಸೋಲಿಸಿದರು. ಅದಲ್ಲದೆ ದೂರದ ಯುರೋಪಿನಿಂದ ಚೀನಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ಸಾಗಿಸುವುದು ಅಸಾಧ್ಯವಾಗಿತ್ತು. ಜಪಾನೀಯರಾದರೂ ಹತ್ತಿರವೇ ಇದ್ದ ತಮ್ಮ ದೇಶದಿಂದ ಬೇಕಾದ ಶಸ್ತ್ರಾಸ್ತ್ರಗಳನ್ನು ಸುಲಭವಾಗಿ ಸಾಗಿಸಬಹುದಾಗಿತ್ತು.

ಜರ್ಮನಿಗೆ ಸೇರಿದ ಅನೇಕ ದ್ವೀಪಗಳು ಪೆಸಿಫಿಕ್ ಮಹಾಸಾಗರದಲ್ಲಿದ್ದುವು 1914ರಲ್ಲಿ ಜಪಾನ್, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ಗಳ ಸಹಾಯದಿಂದ ಬ್ರಿಟಿಷ್ ಯುದ್ಧನೌಕೆಗಳು ಜರ್ಮನಿಗೆ ಸೇರಿದ ಎಲ್ಲ ದ್ವೀಪಗಳನ್ನೂ ಆಕ್ರಮಿಸಿಕೊಳ್ಳುವುದೇನೂ ಕಷ್ಟವಾಗಲಿಲ್ಲ.

ಆಫ್ರಿಕದಲ್ಲಿ ಜರ್ಮನ್ನರಿಗೆ ಸೇರಿದ್ದ ವಸಾಹತುಗಳು ಮಿತ್ರರಾಷ್ಟ್ರಗಳ ವಶವಾದುವು. 1914ರಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ವಸಾಹತು ಸೈನ್ಯಗಳಿಗೂ ಜರ್ಮನ್ ಸೈನ್ಯಗಳಿಗೂ ಆಫ್ರಿಕದ ಟೋಗೋಲ್ಯಾಂಡಿನಲ್ಲಿ ಯುದ್ಧ ನಡೆಯಿತು. ಯುದ್ಧದಲ್ಲಿ ಸೋತ ಜರ್ಮನಿ ಟೋಗೋಲ್ಯಾಂಡನ್ನು ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಗಳಿಗೆ ಬಿಟ್ಟುಕೊಟ್ಟಿತು. ಇದೇ ರೀತಿ ಕ್ಯಾಮರೂನ್ಸ್ ಬ್ರಿಟಿಷ್ ಮತ್ತು ಫ್ರೆಂಚರ ವಶವಾದದ್ದು 1916ರಲ್ಲಿ, ಜರ್ಮನ್ ಪೂರ್ವ ಆಫ್ರಿಕದಲ್ಲಿ 1915ರಲ್ಲಿ ಯುದ್ಧ ನಡೆಸಿತು. ಜನರಲ್ ಜಾನ್ ಸಿ.ಸ್ಮಟ್ಸ್ ಬ್ರಿಟಿಷರ ಸೇನಾಧಿಪತಿಯಾಗಿ ಜರ್ಮನ್ನರ ವಿರುದ್ಧ ಧೈರ್ಯ ಸಾಹಸಗಳಿಂದ ಹೋರಾಡಿದ. ದಕ್ಷಿಣ ಆಫ್ರಿಕ, ಬೆಲ್ಜಿಯಂ ಕಾಂಗೋ, ಬ್ರಿಟಿಷ್ ಪೂರ್ವ ಆಫ್ರಿಕ, ರೊಡೀಷಿಯ ಮತ್ತು ಪೋರ್ಚುಗೀಸ್ ಪೂರ್ವ ಆಫ್ರಿಕದ ಸೈನ್ಯಗಳಿಗೂ ಜರ್ಮನ್ನರಿಗೂ ನಡುವೆ 1918ರ ನವೆಂಬರ್ 14ರ ವರೆಗೆ ಎಂದರೆ (ಮಹಾಯುದ್ಧ ಕೊನೆಗೊಂಡ ಮೇಲೂ ಮೂರು ದಿನ) ಯುದ್ಧ ನಡೆಯಿತು.

**ಯುದ್ಧದ ಅಂತಿಮ ಘಟ್ಟ:** 1917ರಲ್ಲಿ ಯುದ್ಧ ಅಂತಿಮ ಘಟ್ಟ ಮುಟ್ಟಿತು. ರಷ್ಯದಲ್ಲಿನ ಮಹಾಕ್ರಾಂತಿ ಒಂದು ಮಹಾಘಟನೆಯಾಗಿ ಪರಿಣಮಿಸಿ ಅಲ್ಲಿ ಬಾಲ್ಷೆವಿಕ್ ರಾಷ್ಟ್ರ ಸ್ಥಾಪನೆಯಾಯಿತು. ಅದನ್ನು ಕಟ್ಟಿದ ಲೆನಿನ್ ಜರ್ಮನಿಯೊಡನೆ ಯುದ್ಧ ನಿಲ್ಲಿಸಿದ. 1918ರಲ್ಲಿ ರಷ್ಯನ್ನರು ಜರ್ಮನಿಯೊಡನೆ ಬ್ರೆಸ್ಟ್‌ಲಿಟಾಫ್ಸ್‌ನಲ್ಲಿ ಒಪ್ಪಂದ ಮಾಡಿಕೊಂಡು ಹೋರಾಟದಿಂದ ದೂರವಾದರು. ಈ ಕಾರಣದಿಂದ ಜರ್ಮನ್ನರು ತಮ್ಮ ಸರ್ವಚೈತನ್ಯವನ್ನೂ ಪಶ್ಚಿಮದಲ್ಲಿ ಒಡ್ಡಲು ಸಾಧ್ಯವಾಯಿತು. ಕಾಪೊರೆಟ್ಟೊದಲ್ಲಿ ಜರ್ಮನ್ ಸೈನ್ಯಗಳು ಇಟಲಿಯನ್ನು ಸೋಲಿಸಿದುವು. ಬಾಲ್ಕನ್ ಕ್ಷೇತ್ರಕ್ಕೂ ಮೂಡಲಲ್ಲಿ ಟರ್ಕಿ ಆ ವೇಳೆಗೆ ಸೋತಿತ್ತು. ಬ್ರಿಟಿಷರು ಮೆಸೊಪೊಟೇಮಿಯದಲ್ಲೂ ಪ್ಯಾಲೆಸ್ಟೈನಿನಲ್ಲೂ ಜಯಗಳಿಸಿದರು. ಆದರೆ ಜರ್ಮನ್ ದಳಪತಿ ಲೂಡೆನ್‌ಡಾರ್ಫ್ ಪಶ್ಚಿಮ ರಣರಂಗದಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಯಾಚರಣೆ ನಡೆಸಿದ. ಇದರಿಂದ ಮಿತ್ರರಾಷ್ಟ್ರಗಳಿಗೆ ಕಷ್ಟವಾಗಿದ್ದರೂ ಆಹಾರಾಭಾವದಿಂದ ಜರ್ಮನಿಯ ಸ್ಥಿತಿ ಹೆಚ್ಚು ಕಠಿಣವಾಗಿತ್ತು. ಆದ್ದರಿಂದ ಹೇಗಾದರೂ ಸಾಹಸಮಾಡದಿದ್ದರೆ ಅನಾಹುತ ಸಿದ್ಧವೆಂದು ತಿಳಿದು ಆ ದಳಪತಿ ಸರ್ವಶಕ್ತಿಯನ್ನೂ ವಿನಿಯೋಗಿಸಿ ಪಶ್ಚಿಮ ರಣರಂಗದಲ್ಲಿ ಬ್ರಿಟಿಷರನ್ನೂ ಫ್ರೆಂಚರನ್ನೂ ಗೆಲ್ಲಲು ಹವಣಿಸಿದ.

ಫ್ರೆಂಚ್ ಸೇನಾನಿ ಜನರಲ್ ನಿವೆಲ್

ಸಾಮ್ ನದಿಯ ಬಳಿಯಿದ್ದ ಬ್ರಿಟಿಷರ ಮೇಲೆ ಜರ್ಮನ್ನರು ಮೊದಲು ಬಿದ್ದು ಅವರನ್ನು ಹಿಮ್ಮೆಟ್ಟಿಸಿದರು. 1914ರಲ್ಲಿ ಜರ್ಮನ್ನರು ಆಕ್ರಮಿಸಿಕೊಂಡಿದ್ದ ಮಾರ್ನ್‌ನದೀ ದಡದವರೆಗೆ ಈ ಸಾರಿಯೂ ವೇಗದಿಂದಲೂ ರಭಸದಿಂದಲೂ ನುಗ್ಗಿದರು. ಜರ್ಮನ್ನರನ್ನು ಕುರಿತು ಸಾಕಷ್ಟು ಅನುಭವ ಪಡೆದಿದ್ದ ಬ್ರಿಟಿಷರೂ ಫ್ರೆಂಚರೂ ರಣಭೂಮಿಯಲ್ಲಿ ತಮಗೆ ಏಕದಂಡನಾಯಕನಿರಬೇಕೆಂದು ನಿಶ್ಚಯ ಮಾಡಿ ಮಾರ್ಷಲ್ ಫಾಕನನ್ನು ಅಧಿಪತಿಯಾಗಿ ಗೊತ್ತುಮಾಡಿಕೊಂಡರು. ಅಮೆರಿಕದ ಸೈನ್ಯಗಳೂ ಬಂದಿಳಿದುವು. ಜುಲೈ ತಿಂಗಳ ವೇಳೆಗೆ ಫಾಕ್ ಎಲ್ಲ ಬಲವನ್ನೂ ಒಟ್ಟುಗೂಡಿಸಿಕೊಂಡು ಆಕ್ರಮಣದಲ್ಲಿ ತೊಡಗಿ ಜರ್ಮನ್ನರನ್ನು ಪುನಃ ಹಿಂಡನ್‌ಬರ್ಗ್ ರೇಖೆಗೆ ಅಟ್ಟಿದ.

ಆ ವೇಳೆಗೆ ಮೂಡಲಲ್ಲಿ ಬಲ್ಗೇರಿಯ ಸೋತಿತ್ತು. ಆಸ್ಟ್ರಿಯವೂ ಇಟಲಿಯಿಂದ ವಿಟ್ಟಾರಿಯೊ ವೆನೆಟೊದಲ್ಲಿ ಸೋತಿತ್ತು. ಆಸ್ಟ್ರಿಯ-ಹಂಗರಿ ರಾಷ್ಟ್ರ ಧ್ವಂಸವೇ ಆಗಿತ್ತು. ಇನ್ನು ಮೂಡಲಿಗೆ ಪ್ಯಾಲೆಸ್ಟೈನಿನಲ್ಲಿ ದಳಪತಿ ಆಲೆನ್ಬಿ ಟರ್ಕಿ ಸೈನ್ಯಗಳನ್ನು ನಾಶಗೊಳಿಸಿ ಸಿರಿಯವನ್ನು ಮುತ್ತಿ ದಮಾಸ್ಕಸ್ ನಗರವನ್ನು ಹಿಡಿದುಕೊಂಡಿದ್ದ. ಈ ರೀತಿ ಎಲ್ಲೆಲ್ಲೂ ಪರಾಜಯಗಳೇ ಸಂಭವಿಸಿದ್ದರಿಂದ ಜರ್ಮನ್ ಸೈನ್ಯಮುಖ್ಯರಲ್ಲಿ ನಿರಾಶೆ ಮೂಡಿತು. ಲೂಡೆನ್ ಡಾರ್ಫ್ ರಾಜೀನಾಮೆ ಕೊಟ್ಟ. ಜರ್ಮನಿಯ ಒಳನಾಡಿನಲ್ಲಿ ಅಲ್ಲೋಲಕಲ್ಲೋಲವಾಯಿತು. ಚಕ್ರವರ್ತಿ ರಾಜಧಾನಿ ಬಿಟ್ಟು ಓಡಿದ. ಕೀಲ್ ಕಾಲುವೆಯಲ್ಲಿದ್ದ ಜರ್ಮನ್ ಹಡಗುಗಳ ನೌಕರರು ದಂಗೆಯೆದ್ದರು. ಮಿತ್ರರಾಷ್ಟ್ರಗಳು ತಾತ್ಕಾಲಿಕವಾಗಿ ಸ್ಥಾಪಿತವಾಗಿದ್ದ ಹೊಸ ಜರ್ಮನ್ ರಾಷ್ಟ್ರದೊಡನೆ ಹೋರಾಟ ನಿಲ್ಲಿಸಲೊಪ್ಪಿದುವು.

ಯುದ್ಧ ಚಿಂತಾನಿರತ ಜರ್ಮನ್ ಸೇನಾನಿ ಲೂಡೆನ್ ಡಾರ್ಫ್

1918 ನವೆಂಬರ್ 11 ರಂದು ಯುದ್ಧ ಮುಕ್ತಾಯವಾಡಲು ಗೊತ್ತುಮಾಡಿಕೊಂಡಾಗಲೇ ಜರ್ಮನ್ನರು ತಮ್ಮ ಯುದ್ಧದ ಹಡಗುಗಳನ್ನೂ ವಿಮಾನಗಳನ್ನೂ ಫಿರಂಗಿಗಳನ್ನೂ ಒಪ್ಪಿಸಬೇಕೆಂದು ನಿಶ್ಚಯವಾಗಿತ್ತು. ತಮ್ಮ ಯುದ್ಧದ ಹಡಗುಗಳನ್ನು ಜರ್ಮನ್ನರು ತಾವಾಗಿಯೇ ನಾಶಮಾಡಿಬಿಟ್ಟರು. ಆದ್ದರಿಂದ ಆ ಹಡಗುಗಳ ಹಂಚಿಕೆ ಹೇಗೆಂಬ ವ್ಯಾಜ್ಯಗಳಿಗೆ ಆಸ್ಪದವಿಲ್ಲವಾಯಿತು. ತಾವು ಯುದ್ಧ ಮಾಡಿದ್ದು ಮಹಾಪರಾಧ; ಇನ್ನುಮೇಲೆ ಯುದ್ಧಸನ್ನಾಹ ಮಾಡುವುದಿಲ್ಲ-ಎಂದು ಜರ್ಮನಿಯ ತಾತ್ಕಾಲಿಕ ಸರ್ಕಾರ ಪ್ರಮಾಣ ಮಾಡಿತಲ್ಲದೆ ಯುದ್ಧದಲ್ಲಿ ಗೆದ್ದಿದ್ದ ರಾಷ್ಟ್ರಗಳಿಗೆ ಪರಿಹಾರ ಕೊಡುವುದಕ್ಕೂ ಒಪ್ಪಿಕೊಂಡಿತು. ಮಿತ್ರರಾಷ್ಟ್ರಗಳಿಗೆ ಆಗಿದ್ದ ವ್ಯಾಪಾರನಷ್ಟಕ್ಕಾಗಿ ತನ್ನ ವ್ಯಾಪಾರ ಹಡಗುಗಳನ್ನೂ ಒಪ್ಪಿಸಬೇಕಾಯಿತು.

**ಪರಿಣಾಮಗಳು:** ಒಂದನೆಯ ಮಹಾಯುದ್ಧ 1565 ದಿನಗಳ ಕಾಲ ನಡೆಯಿತು. ಈ ಯುದ್ಧ ನಡೆಸಲು ಆದ ವೆಚ್ಚ ಅಗಾಧ. ಇದನ್ನು ನಡೆಸಲು ನಿಯೋಜಿತರಾದ ಜನರ ಸಂಖ್ಯೆ 6.5 ಕೋಟಿ 1.3 ಕೋಟಿ ಜನ ಯುದ್ಧದಲ್ಲೋ ಯುದ್ಧದಿಂದ ಗಾಯಗೊಂಡೋ ಮರಣಕ್ಕೀಡಾದರು. ಸುಮಾರು 2,20,00,000 ಜನ (ಮೂವರಲ್ಲಿ ಒಬ್ಬರಂತೆ) ಗಾಯಗೊಂಡರು. ಇವರ ಪೈಕಿ 70,00,000 ಜನ ಸಂಪೂರ್ಣವಾಗಿ ದೇಹದ ಸ್ವಾಸ್ಥ್ಯ ಕಳೆದುಕೊಂಡರು. ಗಾಯಗೊಂಡ ಅನೇಕರು ಕೆಲವೇ ವರ್ಷಗಳಲ್ಲಿ, ದೇಹದ ಗಾಯಗಳಿಂದಾಗಿ ಮಡಿದರು. ಷೆಲ್ ದಾಳಿಗೆ ಒಳಗಾದ ಮತ್ತು ವಿಷವಾಯು ಪ್ರಯೋಗಕ್ಕೆ ತುತ್ತಾದ ಅನೇಕರು ಹೇಗೋ ಜೀವಚ್ಛವಗಳಾಗಿ ಬದುಕಿದರು.



ಕಪ್ಪು ಸಮುದ್ರದಲ್ಲಿ ರಷ್ಯನ್ ನೌಕೆಗಳು

1790 – 1913ರ ವರೆಗೆ ನಡೆದ ನೆಪೋಲಿಯನಿಕ್ ಯುದ್ಧಗಳೂ, ಕ್ರಿಮಿಯನ್ ಯುದ್ಧ, ಡೇನಿಷ್ ಯುದ್ಧ, ಆಸ್ಟ್ರೋ-ಪ್ರಷ್ಯನ್ ಯುದ್ಧ, ಅಮೆರಿಕನ್ ಅಂತರ್ಯುದ್ಧ, ಫ್ರಾಂಕೊ-ಪ್ರಷ್ಯನ್ ಯುದ್ಧ, ಬೋಯರ್ ಯುದ್ಧ, ರಷ್ಯ ಜಪಾನ್ ಯುದ್ಧ ಮತ್ತು ಬಾಲ್ಕನ್ ಯುದ್ಧಗಳೇ ಮೊದಲಾದ ಎಲ್ಲ ಯುದ್ಧಗಳಲ್ಲೂ ಮಡಿದವರ ಸಂಖ್ಯೆಯ

ಎರಡರಷ್ಟು ಮಂದಿ ಈ ಯುದ್ಧದಲ್ಲಿ ಮಡಿದರು. ಅಲ್ಲದೆ ಅವೆಲ್ಲಕ್ಕಿಂತ ಇದು ಹೆಚ್ಚು ಉಗ್ರ, ಯುದ್ಧದಲ್ಲಿ ಮಡಿದ ನಾಗರಿಕರ ಸಂಖ್ಯೆ ಸೈನಿಕರ ಸಂಖ್ಯೆಗಿಂತ ಹೆಚ್ಚು. ಯುದ್ಧದಲ್ಲಿ ನೇರವಾಗಿ ಭಾಗವಹಿಸದೆ ಇದ್ದವರನೇಕರು ಹಸಿವು, ರೋಗರುಜಿನ ಸಾಮೂಹಿಕ ಕೊಲೆ, ಸಾಂಕ್ರಾಮಿಕ ರೋಗ ಮತ್ತು ಧಾಳಿಗಳಿಗೆ ತುತ್ತಾಗಿ ಮರಣಹೊಂದಿದರು. ಅನೇಕ ದೇಶಗಳಲ್ಲಿ ಜನಸಂಖ್ಯೆಯ ಏರಿಕೆಯ ವೇಗ ಕಡಿಮೆಯಾಯಿತು.

ಪ್ರಾಣಹಾನಿಗಳು ಇಷ್ಟು ಅಪಾರವಾಗಿದ್ದರೆ, ಯುದ್ಧಕ್ಕೆ ಮಾಡಿದ ವೆಚ್ಚದ ಮೊತ್ತ ಭಾರಿಯ ಗಾತ್ರದ್ದು. ಸಮುದ್ರದ ಮೇಲೂ ಭೂಮಿಯ ಮೇಲೂ ಅಪಾರ ಐಶ್ವರ್ಯ ನಷ್ಟವಾಯಿತು. ಯುದ್ಧದ ಮೊದಲ ಮೂರು ವರ್ಷಗಳಲ್ಲಿ ಯುದ್ಧದಲ್ಲಿ ಭಾಗವಹಿಸಿದ ಎಲ್ಲ ಪಕ್ಷ–ವಿಪಕ್ಷಗಳ ದೈನಂದಿನ ವೆಚ್ಚ 12,30,00,000 ಡಾಲರ್‌ಗಳು, 1918ರ ವೇಳೆಗೆ ಇದು 24,40,00,000 ಡಾಲರ್‌ಗಳಿಗೆ ಏರಿತು. ಅಂದರೆ ಒಂದು ಗಂಟೆಗೆ ಸು.1,00,00,000 ಡಾಲರ್. ಯುದ್ಧ ನಡೆಸಲು ಖರ್ಚು ಮಾಡಿದ ಒಟ್ಟು ಹಣ 18,600,00,00,000 ಡಾಲರ್‌ಗಳು. ಇದರಲ್ಲಿ ಮಿತ್ರರಾಷ್ಟ್ರಗಳು 12,600,00,00,000 ಡಾಲರ್‌ಗಳನ್ನೂ ಮಧ್ಯರಾಷ್ಟ್ರಗಳು 600,00,00,000 ಡಾಲರ್‌ಗಳನ್ನೂ ಖರ್ಚು ಮಾಡಿದುವು. ಭೂಮಿಯ ಮತ್ತು ಸಮುದ್ರದ ಮೇಲೆ ಕ್ರಮವಾಗಿ 3,000,00,00,000 ಡಾಲರ್ ಮತ್ತು 700,00,00,000 ಡಾಲರ್ ಮೌಲ್ಯದ ಆಸ್ತಿಗಳ ನಷ್ಟ ಸಂಭವಿಸಿತು. ಉತ್ಪತ್ತಿಯಲ್ಲಿ ಆದ ನಷ್ಟ ಸುಮಾರು 4,500,00,00,000 ಡಾಲರ್. ಯುದ್ಧದಲ್ಲಿ ನೀಡಿದ ನೆರವೂ ತಟಸ್ಥ ರಾಷ್ಟ್ರಗಳಿಗೆ ಸಂಭವಿಸಿದ ನಷ್ಟಕ್ಕೆ ನೀಡಿದ ಪರಿಹಾರವೂ 200,00,00,000 ಡಾಲರ್‌ಗಳಿಗಿಂತ ಹೆಚ್ಚಾಗಿದ್ದಿತು. ಒಟ್ಟು ಆರ್ಥಿಕ ನಾಶ 270,00,00,000 ಡಾಲರ್‌ಗಳು.

ಈ ಮೊತ್ತಕ್ಕೆ ಯುದ್ಧದಲ್ಲಿ ಸತ್ತವರ 67,00,00,000 ಡಾಲರ್‌ಗಳನ್ನು ಸೇರಿಸಿದರೆ, ಒಟ್ಟು 3,370,00,00,000 ಡಾಲರ್‌ಗಳಷ್ಟಾಗುತ್ತದೆ. ಈ ಎಣಿಕೆಯಲ್ಲಿ ಅಂಗವಿಕಲರಾದ ಸೈನಿಕರು ಮತ್ತು ನಾಗರಿಕರ ಲೆಕ್ಕ ಸೇರಿಲ್ಲ. ಯುದ್ಧಭಾಗಿ ರಾಷ್ಟ್ರಗಳು ಕೋಟ್ಯಂತರ ಡಾಲರ್‌ಗಳಷ್ಟು ಬಡ್ಡಿ ಹಣ ಕೊಡಬೇಕಾಗಿತ್ತು. ಇದೂ ಈ ಎಣಿಕೆಯಲ್ಲಿ ಸೇರಿಲ್ಲ. ಅನೇಕ ತಲೆಮಾರುಗಳವರೆಗೆ ಈ ಹಣ ತೆರಬೇಕಾಯಿತು. ಯುದ್ಧ ಮುಗಿದ ತರುವಾಯ ನಡೆದ ಶಾಂತಿಸಂಧಾನಗಳಲ್ಲಿ. ವಿವಿಧ ದೇಶಗಳ ನಾಯಕರ ಮೇಲೆ ಅಮಿತವಾದ ಜವಾಬ್ದಾರಿ ಬಿದ್ದಿತ್ತು. ಲಕ್ಷಾಂತರ ಜನಗಳನ್ನು ಬಲಿಕೊಟ್ಟು, ಕೋಟ್ಯಂತರ ಡಾಲರ್‌ಗಳಷ್ಟು ಹಣದ ವೆಚ್ಚದಲ್ಲಿ ಇಂಥ ಘೋರ ಯುದ್ಧ ನಡೆಸಿದ್ದಕ್ಕೆ ಪ್ರತಿಯಾಗಿ ಸರಿಯಾದ ಶಾಂತಿ ಒಪ್ಪಂದವನ್ನು ನಡೆಸುವುದೇ ನಾನಾ ದೇಶಗಳ ನಾಯಕರ ಮೇಲೆ ಆಗ ಬಿದ್ದ ಜವಾಬ್ದಾರಿ. ಅಪಾರ ನಷ್ಟ ಅನುಭವಿಸಿದ ರಾಷ್ಟ್ರಗಳೂ ಶಾಂತಿಯನ್ನು ಲಘುವಾಗಿ ಸ್ಥಾಪಿಸಲು ಇಷ್ಟಪಡಲಿಲ್ಲ. ಆದರೂ ತಮ್ಮ ತಮ್ಮ ದೇಶದ ಸ್ವಾರ್ಥಗಳನ್ನು ಮುಂದು ಮಾಡಿಕೊಂಡ ಶಾಂತಿ ಸಮ್ಮೇಳನದ ನಾಯಕರು ಅನೇಕ ವೇಳೆ ಆದರ್ಶವನ್ನೇ ಬಲಿಗೊಟ್ಟರು.

**ಶಾಂತಿ ಕೌಲುಗಳು:** ಹೋರಾಟ ನಿಲ್ಲಿಸಿದ ತರುವಾಯ ಮಿತ್ರರಾಷ್ಟ್ರಗಳ ಪ್ರತಿನಿಧಿಗಳು ಪ್ಯಾರಿಸ್ ನಗರದಲ್ಲಿ ಸೇರಿ ಶಾಂತಿಯ ಕೌಲುಗಳ ವಿಚಾರ ಪರ್ಯಾಲೋಚಿಸಲು ಮೊದಲಿಟ್ಟರು. ಮಿತ್ರರಾಷ್ಟ್ರಗಳಲ್ಲಿ ಸೇರಿದ್ದ ಪ್ರತಿರಾಷ್ಟ್ರದ ಪ್ರತಿನಿಧಿಯೂ ಅಲ್ಲಿಗೆ ಬಂದಿದ್ದ.

ರಷ್ಯನ್ ಕ್ರಾಂತಿ

ಅಮೆರಿಕನ್ ಅಧ್ಯಕ್ಷ ವಿಲ್ಸನ್, ಬ್ರಿಟಿಷ್ ಪ್ರಧಾನಿ ಲಾಯ್ಡ್ ಜಾರ್ಜ್, ಫ್ರೆಂಚ್ ಪ್ರಧಾನಿ ಕ್ಲೆಮೊನ್ಸೊ, ಇಟಲಿಯ ಪ್ರಧಾನ ಮಂತ್ರಿ ಆರ್ಲಾಂಡೋ ಇವರು ಈ ಮಾತುಕತೆಗಳಲ್ಲಿ ಭಾಗವಹಿಸಿದವರಲ್ಲಿ ಪ್ರಧಾನರು. ಪ್ಯಾರಿಸ್ ನಗರದಲ್ಲಿ ಸೇರಿದ ಮಿತ್ರಮಂಡಲಿಯ ಪ್ರಮುಖರು ಜಗತ್ತನ್ನೇ ಪುನಃ ಕಟ್ಟುವ ಕೆಲಸ ನಿರ್ವಹಿಸಬೇಕಾಗಿತ್ತು. ಅಧ್ಯಕ್ಷ ವಿಲ್ಸನ್ ಅಮೆರಿಕವನ್ನು ಯುದ್ಧದಲ್ಲಿ ಸೇರಿಸುವ ಮೊದಲು ತನ್ನ ಉದ್ದೇಶಗಳನ್ನು ಎಲ್ಲರಿಗೂ ತಿಳಿಯಪಡಿಸಿದ್ದ. ಇಷ್ಟು ಪ್ರಳಯಕಾರಕ ಯುದ್ಧ ಪುನಃ ಸಂಭವಿಸದಂಥ ವ್ಯವಸ್ಥೆ ಏರ್ಪಡಬೇಕೆಂಬುದು ಎಲ್ಲರ ಮನಸ್ಸಿನಲ್ಲೂ ಇತ್ತು. ವಿಲ್ಸನ್ ದೂರದೃಷ್ಟಿಯುಳ್ಳವ, ರಾಷ್ಟ್ರಗಳು ಜಾತಿ ಬಂಧುಗಳಂತಿದ್ದು ಅನ್ಯೋನ್ಯತೆಯಿಂದಿರಬೇಕು. ಮನಸ್ತಾಪಗಳು ತೋರಿದಾಗ ಅವು ನ್ಯಾಯ ರೀತಿಯಲ್ಲಿ ಪರಿಹಾರವಾಗಬೇಕು. ಮತ್ತು ಯುದ್ಧವೇ ಆಗಬಾರದು. ಇದು ಆತನ ಆಶಯ. ನಾನಾ ರಾಷ್ಟ್ರಗಳ ಮಧ್ಯೆ ಪಂಚಾಯಿತಿ ನಡೆಸಿ, ಜಗತ್ತಿನಲ್ಲಿ ನ್ಯಾಯ, ಶಾಂತಿಗಳನ್ನು ಕಾಪಾಡಬಲ್ಲ ಸಮಸ್ತ ರಾಷ್ಟ್ರಗಳ ಕೂಟವೊಂದು ಸ್ಥಾಪನೆಯಾಗಬೇಕೆಂಬುದಾಗಿ ಆತ ಹೇಳುತ್ತಿದ್ದ.

ಜರ್ಮನನೊಬ್ಬನ ಕೊಳೆತ ಹೆಣ

ಅಲ್ಲೋಲಕಲ್ಲೋಲವಾಗಿದ್ದ ಯುರೋಪಿನಲ್ಲಿ ಒಂದೊಂದು ಕುಲವೂ ಜಾತಿಯೂ ಪ್ರತ್ಯೇಕವಾಗಿ ಸ್ವತಂತ್ರ ರಾಷ್ಟ್ರನಿರ್ಮಾಣ ಮಾಡಿಕೊಳ್ಳುವುದಾದರೆ ಸ್ವಾತಂತ್ರ್ಯ ಸಾಧನೆಯ ಯುದ್ಧಗಳಿಗೆ ಅವಕಾಶವಿಲ್ಲದಂತಾದೀತೆಂದು ವಿಲ್ಸನ್ ಭಾವಿಸಿದ್ದ. ಆದ್ದರಿಂದ ಆತ ಮಧ್ಯ ಯುರೋಪಿನಲ್ಲಿ ಒಂದೊಂದು ಪಂಗಡವೂ ಪ್ರತ್ಯೇಕವಾಗಿ ಒಂದು ರಾಷ್ಟ್ರ ಕಟ್ಟಿಕೊಳ್ಳಲೆಂದು ವಾದಿಸಿದ. ಫ್ರೆಂಚರಿಗೆ ಆಲ್ಸೇಸ್–ಲೊರೇನ್ ಹಿಂತಿರುಗಿ ಬರಬೇಕಾಗಿತ್ತಲ್ಲದೆ ತಮಗಾದ ಅಪಾರ ನಷ್ಟವನ್ನು ಶತ್ರುಗಳಿಂದ ಕಟ್ಟಿಸಿಕೊಳ್ಳುವ ಉದ್ದೇಶವಿತ್ತು. ಬ್ರಿಟಿಷರಿಗೆ ಯುರೋಪಿನಲ್ಲಿ ಭೂಮಿಯ ಆಸೆಯಿರಲಿಲ್ಲ. ಆದರೆ ಜಲಾಂತರ್ಗಾಮಿಗಳ ಹಾವಳಿ ಅನುಭವಿಸಿದ್ದುದರಿಂದ ಶತ್ರುಗಳು ನಡೆಸಿದ ದೌಷ್ಟ್ಯವನ್ನೆಲ್ಲ ಕ್ಷಮಿಸಿ ಮರೆಯುವುದು ಸಾಧ್ಯವಿರಲಿಲ್ಲ. ಜರ್ಮನ್ನರನ್ನು ದಂಡಿಸಿ ಅವರಿಂದ ತಮ್ಮ ನಷ್ಟಕ್ಕೆ ತಕ್ಕ ಪರಿಹಾರದ್ರವ್ಯ ಪಡೆಯಬೇಕೆಂದು ಫ್ರೆಂಚರಂತೆ ಬ್ರಿಟಿಷರೂ ಭಾವಿಸಿದರು. ಇತರ ಗಣ್ಯ ರಾಷ್ಟ್ರಗಳೂ ಜಯದಿಂದ ಲಾಭಗಿಟ್ಟಿಸುವ ಆಸೆ ಹೊಂದಿದ್ದುವು. ಯುದ್ಧದ ವೇಳೆಯಲ್ಲಿ ಪರಸ್ಪರವಾಗಿ ನೀಡಿದ ರಹಸ್ಯ ವಾಗ್ದಾನಗಳ ವಿಚಾರವನ್ನು ಬೇರೆ ಪರಿಶೀಲಿಸಬೇಕಾಗಿತ್ತು. ಸರ್ವರಿಗೂ ನ್ಯಾಯವೂ ಕ್ಷೇಮವೂ ಆಗಿರುವಂತೆ ಸಂಧಾನ ನೆರವೇರಿಸಬೇಕೆಂದಿದ್ದ ವಿಲ್ಸನ್‌ನ ಬಳಿಗೆ ಪ್ರತಿಯೊಂದು ದೇಶವೂ ನಿಯೋಗಗಳನ್ನು ಕಳುಹಿಸಿಕೊಟ್ಟಿತು. ಆತನಿಗೂ ಇತರರಿಗೂ ಬರಬರುತ್ತಾ ಹೊಂದಿಕೆ ಕಡಿಮೆಯಾಯಿತು. ಆದರೆ ಯಾರೂ ತಮ್ಮ ಆಸೆಗಳನ್ನೆಲ್ಲ ಸಾಧಿಸಿಕೊಳ್ಳುವ ಹಾಗಾಗಲಿಲ್ಲ. ಎಷ್ಟೋ ಗೋಷ್ಠಿಗಳೂ ಚರ್ಚೆಗಳೂ ನಡೆದ ಬಳಿಕ ಪ್ಯಾರಿಸಿನಲ್ಲೇ ಈ ಬಗ್ಗೆ ಕೌಲುಗಳಾದುವು. ಈ ಎಲ್ಲ ಕರಾರುಗಳನ್ನೂ ವರ್ಸೇಲ್ಸ್ ಕೌಲುಗಳೆಂದು ಕರೆಯುವುದು ವಾಡಿಕೆಯಾದರೂ

ಯುದ್ಧ ಮುಗಿದ ಸಂಭ್ರಮ : ಕೋಳಿಯ ಊಟದ ನಿರೀಕ್ಷೆ

ಜರ್ಮನಿಯೊಂದಿಗೆ ಮಾಡಿಕೊಂಡ ಕೌಲಿಗೆ ಮಾತ್ರ ಈ ಹೆಸರು ಅನ್ವರ್ಥವಾದದ್ದು. ಅದು ಆದದ್ದು ಪ್ಯಾರಿಸಿನ ಬಳಿಯ ವರ್ಸೇಲ್ಸ್ ನಗರದಲ್ಲಿ, ಆಸ್ಟ್ರಿಯ, ಬಲ್ಗೇರಿಯ, ತುರ್ಕಿ, ಹಂಗರಿಗಳೊಡನೆ ಬೇರೆಬೇರೆಯಾದ ಕೌಲುಗಳೇ ಆದವು.

ವರ್ಸೇಲ್ಸ್ ಕೌಲು: 1919 ಜೂನ್ 28ರಂದು ಮಿತ್ರರಾಷ್ಟ್ರಗಳು ಜರ್ಮನಿಯೊಡನೆ ವರ್ಸೇಲ್ಸ್‌ನಲ್ಲಿ ಕೌಲು ಮಾಡಿಕೊಂಡುವು. ಇದರ ಉದ್ದೇಶ ಅದರ ಪೀಠಿಕೆಯಲ್ಲಿ ಹೇಳಿರುವಂತೆ ಯುದ್ಧವಾತಾವರಣವನ್ನು ಕೊನೆಗಾಣಿಸಿ ಶಾಶ್ವತವಾದ ಶಾಂತಿ ಸ್ಥಾಪಿಸುವುದು. ಈ ಒಪ್ಪಂದ 15 ಭಾಗಗಳನ್ನು ಒಳಗೊಂಡಿದ್ದಿತು. ಇವಲ್ಲದೆ 140ರಷ್ಟು ಬೇರೆ ಬೇರೆ ಷರತ್ತುಗಳೂ ಅನೇಕ ಅನುಬಂಧಗಳೂ ಸೇರಿದ್ದುವು.

ಹಸಿವಿನ ಬಾಧೆ; ಹಸುವಿಗೆ ಬಾಧೆ

ಆಲ್ಸೇಸ್-ಲೊರೇನ್ ಪ್ರದೇಶವನ್ನು ಫ್ರಾನ್ಸಿಗೆ ಹಿಂದಿರುಗಿಸಲಾಯಿತು. ಬೆಲ್ಜಿಯಂ ಸರಕಾರ ನಡಿಸಿದ ಜನಮತಗಣನೆಯ ಆಧಾರದ ಮೇಲೆ ಆ ದೇಶಕ್ಕೆ 70,000 ಜನಸಂಖ್ಯೆಯುಳ್ಳ ಯೂಪೇನ್, ಮಾಲ್ಮೇಡೀ ಮತ್ತು ಮಾರ್ಸೆನೆಟ್‌ಗಳನ್ನು ಕೊಡಲಾಯಿತು. ಮತ್ತೊಂದು ಜನಮತಗಣನೆಯ ಆಧಾರದ ಮೇಲೆ ಡೆನ್ಮಾರ್ಕಿಗೆ ಉತ್ತರ ಷೆಲ್ಸ್‌ವಿಗೆ ಪ್ರಾಂತ್ಯ ಕೊಡಲಾಯಿತು. ಪ್ರಷ್ಯ ಮತ್ತು ಆಸ್ಟ್ರಿಯ ಈ ಪ್ರಾಂತ್ಯವನ್ನು 1864ರಲ್ಲಿ ಡೆನ್ಮಾರ್ಕಿನಿಂದ ಕಸಿದುಕೊಂಡಿದ್ದುವು. ದಕ್ಷಿಣ ಷೆಲ್ಸ್‌ವಿಗ್ ಮಾತ್ರ ಜರ್ಮನಿಯಲ್ಲೇ ಉಳಿಯಿತು. ಉತ್ತರ ಸೈಲೀಷಿಯ ಪ್ರಾಂತ್ಯದ ಒಂದು ಸಣ್ಣ ಭಾಗ ಹೋದದ್ದು ಚೆಕೊಸ್ಲೊವಾಕಿಯಕ್ಕೆ. ಹೊಸದಾಗಿ ಸ್ವಾತಂತ್ರ್ಯ ಪಡೆದ ಪೋಲೆಂಡಿಗೆ ಜರ್ಮನಿಯ ಪೋಸೆನ್ ಪ್ರಾಂತ್ಯದ ಹಲವು ಭಾಗಗಳು ಮತ್ತು ಪೋಲಿಷ್ ಜನಾಂಗದವರು ವಾಸಿಸುತ್ತಿದ್ದ 4038 ಕಿಮೀಗಳಷ್ಟು ಉದ್ದ 194ಕಿಮೀ. ಅಗಲವಿದ್ದ ಪಶ್ಚಿಮ ಪ್ರಷ್ಯವನ್ನು ಕೊಡಲಾಯಿತು. ಜರ್ಮನ್ ಜನಾಂಗದವರೇ ಹೆಚ್ಚಾಗಿದ್ದ ಡ್ಯಾನ್‌ಸಿಗ್ ಪಟ್ಟಣವನ್ನು ರಾಷ್ಟ್ರಗಳ ಕೂಟದ ಕೈಕೆಳಗೆ ಸ್ವತಂತ್ರ ಪಟ್ಟಣವೆಂದು ಘೋಷಿಸಲಾಯಿತು. ಆದರೆ ಪೋಲೆಂಡಿಗೆ ಈ ನಗರದ ಮೇಲೆ ಹಲವು ತಾಂತ್ರಿಕ ಹಾಗೂ ಆರ್ಥಿಕ ಹಕ್ಕುಗಳು ದೊರಕಿದುವು.

ಯುದ್ಧ ವಿರಾಮಕ್ಕೆ ಸಹಿ ಬಿದ್ದದ್ದು ಈ ರೈಲುಗಾಡಿಯಲ್ಲಿ

ಜರ್ಮನ್ನರು ಯುದ್ಧಪೂರ್ವದಲ್ಲಿ ತಮಗೆ ಸೇರಿದ್ದ ವಸಾಹತುಗಳನ್ನು ಮಿತ್ರ ರಾಷ್ಟ್ರಗಳ ಸ್ವಾಧೀನಕ್ಕೆ ಒಪ್ಪಿಸಿದರು. ಇವು ರಾಷ್ಟ್ರಗಳ ಕೂಟದ ನಿಯುಕ್ತ ಪ್ರದೇಶಗಳಾಗಿ ಗ್ರೇಟ್‌ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಜಪಾನ್, ದಕ್ಷಿಣ ಆಫ್ರಿಕ ಒಕ್ಕೂಟ, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ಗಳ ವಶಕ್ಕೆ ಬಂದುವು. ಜರ್ಮನಿ ಚೀನದ ಕ್ವೆಚಾವ್ ಪ್ರಾಂತ್ಯದಲ್ಲಿ ಅನುಭವಿಸುತ್ತಿದ್ದ ವಿಶೇಷ ಹಕ್ಕು ಸೌಲಭ್ಯಗಳನ್ನು ಜಪಾನಿಗೆ ಬಿಟ್ಟುಕೊಡ ಬೇಕಾಯಿತು. ಚೀನ, ಥೈಲೆಂಡ್, ಲೈಬೀರಿಯ, ಮೊರಾಕೋ ಮತ್ತು ಈಜಿಪ್ಟ್‌ಗಳಲ್ಲಿ ಜರ್ಮನಿ ಹೊಂದಿದ್ದ ಎಲ್ಲ ವಿಶೇಷ ಹಕ್ಕುಗಳನ್ನೂ ಕಿತ್ತುಕೊಳ್ಳಲಾಯಿತು. ಜರ್ಮನ್ನರಿಗೆ ತುರ್ಕಿ ಮತ್ತು ಬಲ್ಗೇರಿಯಗಳಲ್ಲಿ ಸೇರಿದ್ದ ಆಸ್ತಿಪಾಸ್ತಿಗಳೂ ಮುಟ್ಟುಗೋಲಾದುವು.

ಲಕ್ಸೆಂಬರ್ಗನ್ನು ಜರ್ಮನ್ ಒಕ್ಕೂಟದಿಂದ ಬೇರ್ಪಡಿಸಲಾಯಿತು. ಅಲ್ಲಿಯ ರೈಲ್ವೆಗಳನ್ನು ಬಳಸಿಕೊಳ್ಳುವ ಹಕ್ಕೂ ಮೊಟಕುಗೊಂಡಿತು. ಜರ್ಮನಿ ರೈನ್ ನದಿಯ ಎಡದಂಡೆಯಲ್ಲಾಗಲಿ ಬಲದಂಡೆಯಲ್ಲಾಗಲಿ ಯಾವುದೇ ವಿಧವಾದ ರಕ್ಷಣೆಗೆ, ಸೈನ್ಯಕಾರ್ಯಾಚರಣೆಗೆ ಸಂಬಂಧ ಪಟ್ಟಂಥ ಕಟ್ಟಡಗಳನ್ನು ಕೋಟೆ ಕೊತ್ತಲಗಳನ್ನು ಕಟ್ಟಕೂಡದೆಂದು ತೀರ್ಮಾನಿಸಲಾಯಿತು.

ಜರ್ಮನಿಯಿಂದ ಫ್ರಾನ್ಸಿಗೆ ಸ್ಹಾರ್ ಕಲ್ಲಿದ್ದಲು ಗಣಿ ಪ್ರದೇಶ ವರ್ಗವಾಯಿತು. ಒಂದನೆಯ ಮಹಾಯುದ್ಧ ಕಾಲದಲ್ಲಿ ಅದು ಫ್ರಾನ್ಸಿನ ಉತ್ತರ ಭಾಗದ ಅನೇಕ ಕಲ್ಲಿದ್ದಲು ಗಣಿಗಳನ್ನು ನಾಶಮಾಡಿದ್ದಕ್ಕೆ ಇದು ಪರಿಹಾರ; ಅಲ್ಲದೆ ಯುದ್ಧ ವೆಚ್ಚದ, ಒಂದು ಭಾಗಕ್ಕೆ ಇದು ಉತ್ತರ. ಇದಲ್ಲದೆ 15 ವರ್ಷಗಳ ಕಾಲ ಸ್ಹಾರ್ ಆಡಳಿತವನ್ನು ರಾಷ್ಟ್ರಗಳ ಕೂಟದ ಒಂದು ಸಮಿತಿಯ ಕೈಗೆ ಒಪ್ಪಿಸಬೇಕೆಂದು ತೀರ್ಮಾನವಾಯಿತು. ಜರ್ಮನಿ ಆಸ್ಟ್ರಿಯದ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕಾಯಿತು.

ವರ್ಸೇಲ್ಸ್ ಒಪ್ಪಂದದ 5ನೆಯ ಭಾಗದಲ್ಲಿ ಸೈನ್ಯ, ಜಲನೌಕೆ ಮತ್ತು ವಿಮಾನ ದಳಗಳಿಗೆ ಸಂಬಂಧಪಟ್ಟಂಥ ಕಾನೂನುಗಳಿವೆ. ಜರ್ಮನ್ ಸೈನ್ಯಬಲ 400 ಸೇನಾನಾಯಕರೂ ಸೇರಿ 1,00,000ಕ್ಕಿಂತ ಮೀರಬಾರದೆಂದಾಯಿತು. ಒಳನಾಡಿನ ಶಾಂತಿಸ್ಥಾಪನೆಯಲ್ಲಿ ನೆರವು ನೀಡುವುದೂ ದೇಶದ ಮೇರೆಗಳನ್ನು ಕಾಪಾಡಿಕೊಂಡು ಬರುವುದೂ ಮಾತ್ರವೇ ಇದರ ಕರ್ತವ್ಯ.

ವರ್ಸೇಲ್ಸ್ ಕೌಲು

ಸೈನ್ಯಕ್ಕೆ ಬೇಕಾದ ಶಸ್ತ್ರಾಸ್ತ್ರ, ಮದ್ದು ಗುಂಡುಗಳ ತಯಾರಿಕೆಯನ್ನೂ ಒಂದು ಮಿತಿಗಿಂತ ಹೆಚ್ಚಿಸುವಂತಿರಲಿಲ್ಲ. ಇವನ್ನು ಮಿತ್ರ ರಾಷ್ಟ್ರಗಳು ಸೂಚಿಸಿದ ಸ್ಥಳಗಳಲ್ಲಿ ಮಾತ್ರ ದಾಸ್ತಾನು ಮಾಡಬೇಕೆಂಬುದೂ ಒಂದು ಷರತ್ತು. ಯುದ್ಧಕ್ಕೆ ಸಂಬಂಧಪಟ್ಟ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವುದೂ, ವಿಷವಾಯುಗಳು ಶಸ್ತ್ರಾಸ್ತ್ರ ಸಜ್ಜಿತವಾದ ವಾಹನಗಳು ಮತ್ತು ಟ್ಯಾಂಕುಗಳನ್ನು ತಯಾರಿಸುವುದೂ ಕೊಳ್ಳುವುದೂ ನಿಷಿದ್ಧವೆನಿಸಿದುವು. ಬಲವಂತದಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವ ಕಾನೂನನ್ನು ತೆಗೆದುಹಾಕಿ ಸ್ವಂತ ಇಚ್ಛೆಯಿಂದ ಬರುವವರಿಗೆ ಮಾತ್ರ ಅವಕಾಶ ಕಲ್ಪಿಸಲಾಯಿತು. ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ನಿವೃತ್ತರಾದ ಸೈನಿಕರ ಸಂಘಗಳು, ಷೂಟಿಂಗ್ ಕ್ಲಬ್‌ಗಳು ಪ್ರವಾಸಿ ಸಂಘಗಳೇ ಮೊದಲಾದ ಎಲ್ಲ ಬಗೆಯ ಸಂಘ ಸಂಸ್ಥೆಗಳು ಸೈನ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುವುದನ್ನಾಗಲಿ, ಆ ವಿಷಯಗಳ ಬಗ್ಗೆ ಗಮನ ಹರಿಸುವುದನ್ನಾಗಲಿ ನಿಷೇಧಿಸಲಾಯಿತು.

ನೌಕಾದಳಕ್ಕೆ ಸಂಬಂಧಪಟ್ಟ ಷರತ್ತುಗಳು ಅಷ್ಟೇ ಕಠಿಣ. ಆರು ಯುದ್ಧ ನೌಕೆಗಳನ್ನು ಮಾತ್ರ ಅದು ಇಟ್ಟುಕೊಳ್ಳಬಹುದಾಗಿತ್ತು; ಜಲಾಂತರ್ಗಾಮಿಗಳನ್ನಿಟ್ಟುಕೊಳ್ಳುವಂತಿರಲಿಲ್ಲ. ಹೊಸದಾಗಿ ಯುದ್ಧನೌಕೆಗಳನ್ನು ಕಟ್ಟಬಾರದೆಂಬುದೂ ಒಂದು ವಿಧಿ. ನೌಕಾಬಲದ ಗಾತ್ರವನ್ನು 15,000ಕ್ಕೆ ಮಿತಿಗೊಳಿಸಲಾಯಿತು. ಈ ಸಂಖ್ಯೆಯಲ್ಲಿ 1500 ಜನ ಅಧಿಕಾರಿಗಳು. ವಾಣಿಜ್ಯನೌಕೆಯಲ್ಲಿ ಕೆಲಸ ಮಾಡುವ ಯಾವ ಜರ್ಮನನೂ ಯುದ್ಧನೌಕಾದಳದ ತರಬೇತಿ ತೆಗೆದುಕೊಳ್ಳುವಂತಿರಲಿಲ್ಲ. ಅನುಮತಿ ನೀಡಲಾದ ಸಂಖ್ಯೆಗಿಂತ ಹೆಚ್ಚಿಗೆ ಇದ್ದ ಎಲ್ಲ ನೌಕೆಗಳನ್ನೂ ಜರ್ಮನಿ ನಾಶಮಾಡಬೇಕಾಯಿತು. ಅದು ವಿಮಾನದಳ ಹೊಂದುವುದಕ್ಕೂ ಅವಕಾಶವಿರಲಿಲ್ಲ. ವಾಯುದಳಕ್ಕೆ ಸಂಬಂಧಪಟ್ಟ ಎಲ್ಲ ವಸ್ತುಗಳನ್ನೂ ಮಿತ್ರರಾಷ್ಟ್ರಗಳಿಗೆ ಹಿಂತಿರುಗಿಸಬೇಕಾಯಿತು.

ಜರ್ಮನಿ ಮತ್ತು ಅದರ ಮಿತ್ರರು ಮಹಾಯುದ್ಧಕ್ಕೆ ಕಾರಣರೆಂದು, ಆಕ್ರಮಣಕಾರರೆಂದು ಮತ್ತು ವಿನಾಶಕಾರಣರಾದವರೆಂದು ಘೋಷಿಸಲಾಯಿತು. ಯುದ್ಧದ ಸಾಮಾನ್ಯ ಕಾನೂನುಗಳನ್ನು ಮೀರಿ ಕ್ರೂರವಾಗಿ ವರ್ತಿಸಿದ ಎಲ್ಲರನ್ನೂ ಲೈಪ್‍ಜಿಗ್‍ನಲ್ಲಿ ವಿಚಾರಿಸಿ ಶಿಕ್ಷಿಸಬೇಕೆಂಬುದೂ ಈ ಒಪ್ಪಂದದ ಒಂದು ಅಂಶ. ಜರ್ಮನ್ ಚಕ್ರವರ್ತಿ ಎರಡನೆಯ ವಿಲಿಯಂನನ್ನು ಸಾರ್ವಜನಿಕವಾಗಿ ವಿಮರ್ಶಿಸಿ, ಅವನು ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ನೈತಿಕ ಪತನವನ್ನುಂಟುಮಾಡಿದ ವ್ಯಕ್ತಿ ಎಂದು ಪರಿಗಣಿಸಲಾಯಿತು. ವಿಶೇಷ ಸಮಿತಿಯೊಂದನ್ನು ಸ್ಥಾಪಿಸಿ ಅವನನ್ನು ವಿಚಾರಣೆಗೆ ಗುರಿಮಾಡಬೇಕೆಂಬುದೂ ಇಲ್ಲಿ ಆದ ಒಂದು ನಿರ್ಣಯ.

ಜರ್ಮನಿಯ ಸೈನ್ಯ ಬೆಲ್ಜಿಯಂ ದೇಶದ ಸೈನ್ಯಕ್ಕಿಂತ ಸ್ವಲ್ಪ ಹೆಚ್ಚಾಗಿತ್ತಷ್ಟೆ. ಕೌಲಿನ ಪ್ರಕಾರ ಅದು ಐರೋಪ್ಯ ರಾಷ್ಟ್ರಗಳಿಗೆ ಪೊಟಾಷ್, ಕಬ್ಬಿಣ, ಕಲ್ಲಿದ್ದಲು, ಸತು, ಸೀಸ ಮುಂತಾದವನ್ನು ಕೊಡಬೇಕಾಗಿ ಬಂದದ್ದರಿಂದ ಅದು ಕೈಗಾರಿಕಾ ರಾಷ್ಟ್ರವಾಗಿ ತಲೆ ಎತ್ತುವುದು ಕಷ್ಟವಾಯಿತು. ವಸಾಹತುಗಳನ್ನು ಕಳೆದುಕೊಂಡಿದ್ದರಿಂದ ರಬ್ಬರ್, ಎಣ್ಣೆ ಮತ್ತು ಹತ್ತಿಗಳ ಪೂರೈಕೆಯೂ ತಪ್ಪಿತು. ಕೊನೆಯದಾಗಿ ಜರ್ಮನಿ ಖಾಲಿ ಚೆಕ್ಕನ್ನು ಕೊಟ್ಟು ಮಿತ್ರರಾಷ್ಟ್ರಗಳು, ನಿರ್ಧರಿಸಿದಷ್ಟು ಪರಿಹಾರವನ್ನು ಕೊಡುವುದಕ್ಕೆ ಒಪ್ಪಿಕೊಳ್ಳಬೇಕಾದ್ದೊಂದು ದೊಡ್ಡ ನಷ್ಟ.

ಆಸ್ಟ್ರಿಯದೊಡನೆ ಸೆಂಟ್-ಜರ್ಮೇನ್ ಕೌಲು: ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ಇಟಲಿಗಳು ಆಸ್ಟ್ರಿಯದೊಡನೆ ಸೆಂಟ್-ಜರ್ಮೇನ್ ಒಪ್ಪಂದ ಮಾಡಿಕೊಂಡುವು. ಇದು




1. ಬ್ರಿಟನ್ ಮತ್ತು ಅದರ ಮಿತ್ರರಾಷ್ಟ್ರಗಳು, 2. ಶತ್ರುರಾಷ್ಟ್ರಗಳು, 3. ತಟಸ್ಥ ರಾಷ್ಟ್ರಗಳು

ಜರ್ಮನಿ ಮಿತ್ರರಾಷ್ಟ್ರಗಳಿಗೆ ಚಿನ್ನ, ಹಡಗುಗಳು, ಸೆಕ್ಯೂರಿಟಿಗಳು ಮತ್ತು ಪದಾರ್ಥಗಳ ಮೂಲಕ ಸುಮಾರು 500,00,000 ಡಾಲರ್‍ಗಳಷ್ಟು ಪರಿಹಾರ ಕೊಡಬೇಕೆಂದು ತೀರ್ಮಾನಿಸಲಾಯಿತು.

ಇಷ್ಟು ಪರಿಹಾರಧನವನ್ನು ಪೂರ್ಣ ಹಣದ ರೂಪದಲ್ಲಿ ಕೊಡಲು ಜರ್ಮನಿ ಅಶಕ್ತವಾಗಿದ್ದುದರಿಂದ, ಅದು ಒಂದು ಭಾಗವನ್ನು ಮಿತ್ರರಾಷ್ಟ್ರಗಳು ಸೂಚಿಸುವ ಪದಾರ್ಥ ರೂಪದಲ್ಲಿ ಕೊಡಬಹುದಾಗಿತ್ತು. ಮಿತ್ರರಾಷ್ಟ್ರಗಳು ಕಳೆದುಕೊಂಡಿದ್ದ ನೌಕೆಗಳ ಬದಲಾಗಿ ಜರ್ಮನಿ ಕೊಡಬೇಕಾಗಿಬಂದ ವಾಣಿಜ್ಯನೌಕೆಗಳ ಸಂಖ್ಯೆ 1600.

ಜರ್ಮನಿ ಪ್ರತಿವರ್ಷ ಈ ಕೆಳಕಂಡಂತೆ ಕಲ್ಲಿದ್ದಲನ್ನು 10 ವರ್ಷಗಳ ಕಾಲ ಕೊಡಬೇಕು: ಫ್ರಾನ್ಸಿಗೆ 70,00,000 ಟನ್ನುಗಳು; ಬೆಲ್ಜಿಯಂಗೆ 80,00,000 ಟನ್ನುಗಳು; ಇಟಲಿಗೆ 77,00,000 ಟನ್ನುಗಳು. ಇದಲ್ಲದೆ ಫ್ರಾನ್ಸಿಗೆ ಜರ್ಮನಿ ಮೂರು ವರ್ಷಗಳ ಕಾಲ 35,000 ಟನ್ ಬೆಂಜ಼ಾಲ್, 50,000 ಟನ್ ಕೋಲ್ ಟಾರ್ ಮತ್ತು 30,000 ಟನ್ ಅಮೋನಿಯಂ ಸಲ್ಫೇಟನ್ನೂ ಕೊಡಬೇಕೆಂದು ವಿಧಿಸಲಾಯಿತು.

ಒಟ್ಟಿನಲ್ಲಿ ವರ್ಸೇಲ್ಸ್ ಕೌಲಿನಿಂದ ಜರ್ಮನಿಯ ವಿಸ್ತೀರ್ಣ ಯುರೋಪಿನಲ್ಲಿ ಮೊಟಕಾಯಿತು. ಕಡಿಮೆಯಾದ ಜನಸಂಖ್ಯೆ 6,00,000. ಜರ್ಮನಿಯ ಎಲ್ಲ ವಸಾಹತುಗಳೂ ನಷ್ಟವಾದುವಲ್ಲದೆ ಹೊರದೇಶಗಳಲ್ಲಿ ತೊಡಗಿಸಿದ್ದ ಬಂಡವಾಳ, ಆಸ್ತಿಪಾಸ್ತಿಗಳಿಗೆ ಮುಟ್ಟುಗೋಲು ಹಾಕಲಾಯಿತು. ಶೇ. 15.5 ವ್ಯವಸಾಯದ ಭೂಮಿಯನ್ನು, ಶೇ. 12 ಜಾನುವಾರುಗಳನ್ನು ಮತ್ತು ಶೇ. 10 ಕಾರ್ಖಾನೆಗಳನ್ನು ಜರ್ಮನಿ ಕಳೆದುಕೊಂಡಿತು. ಜರ್ಮನಿಯ ವಾಣಿಜ್ಯ ಹಡಗುಗಳನ್ನು 57,00,000 ಟನ್ನುಗಳಿಂದ 5,00,000 ಟನ್ನುಗಳಿಗೆ ಇಳಿಸಲಾಯಿತು. ಹಡಗುಬಲದಲ್ಲಿ ಅದು ಪಡೆದಿದ್ದ ಎರಡನೆಯ ಸ್ಥಾನ ನಷ್ಟವಾಯಿತು.

ಮೂಲತಃ ವರ್ಸೇಲ್ಸ್ ಒಪ್ಪಂದವನ್ನೇ ಹೋಲುತ್ತಿತ್ತು. ಆಸ್ಟ್ರಿಯ ಇಟಲಿಗೆ ದಕ್ಷಿಣ ಟಿರೋಲುಟ್ರೆಂಟೀನೋ, ಟ್ರೀಯಸ್ಟ್, ಇಸ್ಟ್ರಿಯ ಮತ್ತು ಡಾಲ್ಮೇಷಿಯಕ್ಕೆ ಆಚೆ ಇದ್ದ ಕೆಲವು ದ್ವೀಪಗಳನ್ನು ಬಿಟ್ಟುಕೊಟ್ಟಿತು. ಯುದ್ಧಕ್ಕೆ ಪೂರ್ವದಲ್ಲಿ ಆಸ್ಟ್ರಿಯಕ್ಕೆ ಸೇರಿದ್ದ ಬೊಹಿಮಿಯ, ಮೊರಾವಿಯ, ದಕ್ಷಿಣ ಆಸ್ಟ್ರಿಯದ ಕೆಲವು ಭಾಗಗಳು ಆಸ್ಟ್ರಿಯನ್ ಸೈಲೀಷಿಯದ ಮುಕ್ಕಾಲು ಭಾಗ ಈ ಪ್ರದೇಶಗಳನ್ನು ಸೇರಿಸಿ ಚೆಕೊಸ್ಲೊವಾಕಿಯದ ಒಂದು ಭಾಗವನ್ನಾಗಿ ಮಾಡಲಾಯಿತು. ಹೆಚ್ಚಾಗಿ ಕೈಗಾರಿಕೆಗಳಿಂದ ಆವೃತವಾಗಿದ್ದ ಟಿಷೇನ್ ಡಿಸ್ಟ್ರಿಕ್ಟನ್ನು ಪೋಲೆಂಡ್ ಮತ್ತು, ಚೆಕೊಸ್ಲೊವಾಕಿಯಗಳಿಗೆ ಹಂಚಿಕೊಡಲಾಯಿತು. ಬುಕೋವಿನವನ್ನು ರೊಮೇನಿಯಕ್ಕೆ ಕೊಡಲಾಯಿತು. ಬಾಸ್ನಿಯ, ಹರ್ಸಗೋವಿನ ಮತ್ತು ಡಾಲ್ಮೇಷಿಯನ್ ತೀರಪ್ರದೇಶ ಮತ್ತು ದ್ವೀಪಗಳು ಯುಗೊಸ್ಲಾವಿಯಕ್ಕೆ ದೊರಕಿದುವು. ಒಟ್ಟಿನಲ್ಲಿ ಮೊದಲಿದ್ದುದಕ್ಕಿಂತ ಜನಸಂಖ್ಯೆಯಲ್ಲಿ ಮತ್ತು ವಿಸ್ತೀರ್ಣದಲ್ಲಿ ¾ರಷ್ಟು ಕಡಿಮೆಯಾಯಿತು. ಆಸ್ಟ್ರಿಯ ಸಂಪೂರ್ಣವಾಗಿ ತನ್ನ ನೌಕಾಬಲವನ್ನು ಕಳೆದುಕೊಂಡಿತು. ಉಳಿದದ್ದೆಂದರೆ ಡ್ಯಾನ್ಯೂಬ್ ನದಿಯ ಮೇಲೆ 3 ಪೊಲೀಸ್ ದೋಣಿಗಳು ಮಾತ್ರ. ಅದು ಇಟ್ಟುಕೊಳ್ಳಬಹುದಾಗಿದ್ದ ಸೈನ್ಯ 30,000.

ಬಲ್ಗೇರಿಯದೊಡನೆ ನ್ಯೂಯಿಲಿ ಕೌಲು: ಬಲ್ಗೇರಿಯದೊಡನೆ ನ್ಯೂಯಿಲಿ ಒಪ್ಪಂದವಾದದ್ದು 1919ರ ನವೆಂಬರ್ 27ರಂದು. ರಕ್ಷಣೆ, ರೈಲ್ವೆ ಮೊದಲಾದ ಕಾರಣಗಳಿಂದ ಪಶ್ಚಿಮ ಬಲ್ಗೇರಿಯದ ನಾಲ್ಕು ಚಿಕ್ಕಪ್ರದೇಶಗಳು ಯುಗೊಸ್ಲಾವಿಯಕ್ಕೂ ಪಶ್ಚಿಮ ಥ್ರೇಸ್ ಗ್ರೀಸಿಗೂ ಸೇರಿದುವು. ಗ್ರೀಸ್-ಬಲ್ಗೇರಿಯ ಮೇರೆಗಳಲ್ಲಿ ಸೂಕ್ತವಾದ ಬದಲಾವಣೆಗಳೂ ಆದುವು. ಇದರಿಂದ ಬಲ್ಗೇರಿಯಕ್ಕೆ ಈಜಿಯನ್ ಸಮುದ್ರತೀರ ನಷ್ಟವಾಯಿತು. ಆರ್ಥಿಕ ಪ್ರಗತಿಗಾಗಿ ಮಾತ್ರ ಬಲ್ಗೇರಿಯಕ್ಕೆ ತೀರಪ್ರದೇಶಕ್ಕೆ ಪ್ರವೇಶ ದೊರಕಿಸಿಕೊಡಲು ಮಿತ್ರರಾಷ್ಟ್ರಗಳು ಒಪ್ಪಿಗೆ ಇತ್ತುವು.

ಬಲ್ಗೇರಿಯದ ಸೈನ್ಯದ ಸಂಖ್ಯೆಯನ್ನು 20,000ಕ್ಕೆ ಇಳಿಸಲಾಯಿತು. ಇದರ ಜೊತೆಗೆ ಅದು 13,000 ದಷ್ಟು ಸೈನ್ಯಾಧಿಕಾರಿಗಳನ್ನು ಇಟ್ಟುಕೊಳ್ಳಬಹುದಾಗಿತ್ತು. 33,000ಕ್ಕಿಂತ ಹೆಚ್ಚಿನ ಬಂದೂಕಗಳನ್ನು ಬಲ್ಗೇರಿಯ ಇಟ್ಟುಕೊಳ್ಳುವಂತಿರಲಿಲ್ಲ. ವಿಸ್ತೀರ್ಣ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಬಲ್ಗೇರಿಯಕ್ಕೆ ಆದ ನಷ್ಟ ಅಂಥ ಹೆಚ್ಚಿನದೇನಲ್ಲ. ಆದರೆ ಬಲ್ಗೇರಿಯ ಸಮುದ್ರತೀರವನ್ನು ಹೊಂದದ ರಾಷ್ಟ್ರವಾಗಿ ಬದಲಾವಣೆಗೊಂಡದ್ದರಿಂದ, ಆ ದೇಶ ಬಾಲ್ಕನ್ ರಾಷ್ಟ್ರಗಳಲ್ಲೆಲ್ಲ ಬಹು ಅಶಕ್ತ ರಾಷ್ಟ್ರವಾಗಿ ಪರಿಣಮಿಸಿತು.

ಹಂಗರಿಯೊಂದಿಗೆ ಟ್ರಿಯಾನಾನ್ ಕೌಲು: ವರ್ಸೇಲ್ಸಿನ ಟ್ರಿಯಾನಾನ್ ಅರಮನೆಯಲ್ಲಿ 1920ರ ಜೂನ್ 4ರಂದು ಹಂಗರಿಯೊಡನೆ ಮಿತ್ರರಾಷ್ಟ್ರಗಳು ಒಪ್ಪಂದ ಮಾಡಿಕೊಂಡುವು. ಹಂಗರಿಯ ಸುತ್ತಮುತ್ತ ಇದ್ದ ರಾಜ್ಯಗಳಿಗೆ ಕೆಲವು ಸಣ್ಣಪುಟ್ಟ ಪ್ರದೇಶಗಳನ್ನು ಹಂಚಿಕೊಡಲಾಯಿತು. ಟ್ರಾನ್ಸಿಲ್‌ವೇನಿಯ ಮತ್ತು ಸುಮಾರು 15ಲಕ್ಷ ಮಗ್ಯಾರರನ್ನು ರೊಮೇನಿಯಕ್ಕೂ ಕ್ರೋಷಿಯ–ಸ್ಲವೋನಿಯ ಪ್ರದೇಶಗಳನ್ನೂ 5ಲಕ್ಷ ಮಗ್ಯಾರರನ್ನೂ ಯುಗೋಸ್ಲಾವಿಯಕ್ಕೂ ಸೇರಿಸಲಾಯಿತು. ಸ್ಲೊವಾಕಿಯ ಹೊಸದಾಗಿ ಸ್ಥಾಪಿಸಲ್ಪಟ್ಟ ಚೆಕೊಸ್ಲಾವಾಕಿಯ ಗಣರಾಜ್ಯದ ಭಾಗವಾಯಿತು. ಕಾರ್ಪೇಥಿಯನ್ ಪರ್ವತಗಳ ಪೂರ್ವ ಮತ್ತು ದಕ್ಷಿಣಕ್ಕಿದ್ದ ಕೆಲವು ಪ್ರದೇಶಗಳು ಸೇರಿದ್ದೂ ಚೆಕೊಸ್ಲಾವಾಕಿಯಕ್ಕೆ. ಸುಮಾರು 5ಲಕ್ಷ ಮಗ್ಯಾರರೂ 5ಲಕ್ಷ ರೂಥೇನಿಯನ್ ಜನರೂ ಈ ರೀತಿಯಾಗಿ ಚೆಕೊಸ್ಲಾವಾಕಿಯ ಗಣರಾಜ್ಯಕ್ಕೆ ಸೇರಿಹೋದರು. ಆಸ್ಟ್ರಿಯ ಪಶ್ಚಿಮ ಹಂಗರಿಯನ್ನು ಪಡೆಯಿತು. ಉಳಿದ ವಿಚಾರಗಳಲ್ಲಿ ಇದೂ ಆಸ್ಟ್ರಿಯ ಮತ್ತು ಬಲ್ಗೇರಿಯಗಳೊಡನೆ ಮಾಡಿಕೊಂಡ ಕೌಲುಗಳಂತೆಯೇ ಇದೆ. ಹಂಗರಿಯ ಸೈನ್ಯ ನಿಗದಿಯಾದದ್ದು 35,000ಕ್ಕೆ. ಹಂಗೇರಿಯ ನೌಕಾಬಲವನ್ನು ಕೆಲವು ದೋಣಿಗಳಿಗೆ ಮಾತ್ರ ಸೀಮಿತಗೊಳಿಸಲಾಯಿತು. ಹಂಗರಿಯೂ ಪರಿಹಾರಧನ ಕೊಡಬೇಕಾಯಿತು.

ಒಂದನೆಯ ಮಹಾಯುದ್ಧ ಮತ್ತು ಪ್ಯಾರಿಸ್ ಶಾಂತಿಕೌಲುಗಳ ಪರಿಣಾಮಗಳಿವು:

1. ಜರ್ಮನಿ, ಆಸ್ಟ್ರಿಯ–ಹಂಗರಿ, ರಷ್ಯ ಮತ್ತು ಟರ್ಕಿಯ ಸಾಮ್ರಾಜ್ಯಗಳು ನಾಶವಾದುವು.

2. ರಾಜ–ಮಹಾರಾಜರುಗಳ ಆಡಳಿತ ಅಳಿಸಿಹೋಗಿ ಗಣರಾಜ್ಯಗಳ ಅಲೆಯೊಂದು ಯುರೋಪಿನ ಮೇಲೆ ಹಾದುಹೋಯಿತು. 1914ರಲ್ಲಿ ಯುರೋಪಿನಲ್ಲಿ, ಐದು ಗಣರಾಜ್ಯಗಳಿದ್ದುವು. ಆದರೆ ಯುದ್ಧದ ತರುವಾಯ 16 ಗಣರಾಜ್ಯಗಳು ಯುರೋಪ್ ಖಂಡದಲ್ಲಿ ಜನ್ಮತಳೆದುವು.

3. ಇದರ ಜೊತೆಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೂ ಸಡಿಲಗೊಂಡಿತು. ಇದಕ್ಕೆ ಕಾರಣ ಯುದ್ಧಾನಂತರ ಹೊಸ ಸರ್ಕಾರಗಳಲ್ಲಿ ಉದ್ಭವಿಸಿದ ಕಠಿಣ ಸಮಸ್ಯೆಗಳು. ಇದರಿಂದ ಯುರೋಪಿನಲ್ಲಿ ಮುಂದೆ ಅನೇಕ ಸರ್ವಾಧಿಕಾರಿಗಳು ನಿರಂಕುಶ ಆಡಳಿತ ನಡೆಸಿ ತಮ್ಮ ಜನರನ್ನು ಕಾಪಾಡುವ ಯತ್ನದಲ್ಲಿ ವಿನಾಶಕಾರಣರಾದರು.

4. ಬಾಲ್ಶೆವಿಸಂ, ಫ್ಯಾಸಿಸಂ, ನಾಟ್ಸಿಸಂ ಇವು ಆ ಕಾಲದಲ್ಲಿ ನಡೆದ ಮೂರು ದೊಡ್ಡ ರಾಜಕೀಯ–ಆರ್ಥಿಕ ಪ್ರಯೋಗಗಳು.

5. ಐರೋಪ್ಯ ರಾಷ್ಟ್ರಗಳಲ್ಲಿ ಪರಸ್ಪರ ಅಂತರವೇರ್ಪಟ್ಟು ಹೊಸ ರಾಷ್ಟ್ರಗಳು ಉದ್ಭವಿಸಿದವು. ಆಸ್ಟ್ರಿಯ–ಹಂಗೇರಿ ಸಾಮ್ರಾಜ್ಯ ನಾಶವಾಯಿತು. ಜರ್ಮನಿ ಮತ್ತು ರಷ್ಯಗಳ ಮೇರೆಗಳಲ್ಲಿ ಬದಲಾವಣೆಗಳಾದುವು. ಹೊಸ ಹೊಸ ದೇಶಗಳು ಉದ್ಭವವಾದವು. ಹೊಸ ರಾಷ್ಟ್ರಗಳಾದ ಪೋಲೆಂಡು. ಚೆಕೊಸ್ಲಾವಾಕಿಯ ಮತ್ತು ಯುಗೊಸ್ಲಾವಿಯಗಳು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಹೆಚ್ಚಿನ ಪಾತ್ರ ಪಡೆದುವು. ಒಂದನೆಯ ಮಹಾಯುದ್ಧಕ್ಕೆ ಮುಂಚೆ ಆರು ದೊಡ್ಡ ರಾಷ್ಟ್ರಗಳು ಯುರೋಪಿನ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಪ್ರಾಮುಖ್ಯ ಪಡೆದಿದ್ದುವು. ಜರ್ಮನಿಯ ತಾತ್ಕಾಲಿಕ ಗ್ರಹಣದಿಂದಾಗಿ ಮತ್ತು ರಷ್ಯ ಮತ್ತು ಆಸ್ಟ್ರಿಯ–ಹಂಗೆರಿಗಳ ಅವನತಿಯಿಂದಾಗಿ ಯುರೋಪಿನ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಹೆಚ್ಚಿನ ಸಂಖ್ಯೆಯ (ಹೊಸ ರಾಷ್ಟ್ರಗಳು ಸೇರಿದಂತೆ) ರಾಷ್ಟ್ರಗಳು ಭಾಗವಹಿಸಲು ಸಾಧ್ಯವಾಯಿತು. ಇದರಿಂದ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಗಡಸುತ್ ಹೆಚ್ಚಿತು. ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವುದು ಒಂದು ಕಷ್ಟದ ಕೆಲಸವಾಯಿತು. ಜರ್ಮನಿಯ ಸುತ್ತಮುತ್ತ ಉದ್ಭವಿಸಿದ್ದ ಚಿಕ್ಕಪುಟ್ಟ ರಾಷ್ಟ್ರಗಳು ಆಕ್ರಮಣಕಾರಿ ನಾಟ್ಸಿಗಳ ಬಲೆಗೆ ಬಿದ್ದುವು.

6. ಒಂದನೆಯ ಮಹಾಯುದ್ಧ ರಾಷ್ಟ್ರೀಯತೆಯ ಭಾವನೆಗಳನ್ನು ಕೆರಳಿಸಿತೆನ್ನಬಹುದು. ವಿವಿಧ ಜನಾಂಗದವರು ಪ್ರತ್ಯೇಕವಾಗಿ ತಾವೊಂದು ರಾಷ್ಟ್ರವಾಗಿ ಸೇರಲು ಹಕ್ಕಿದೆ ಎಂದು ತಿಳಿದು ಹೊಸ ರಾಷ್ಟ್ರಗಳನ್ನು ಕಟ್ಟಿದರು. ಈ ಉಗ್ರರೀತಿಯ, ಸ್ವಾರ್ಥಮನೋಭಾವದ ರಾಷ್ಟ್ರೀಯ ಭಾವನೆಗಳಿಂದ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ, ಹೆಚ್ಚಾಗಿ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಉದ್ಭವಿಸಿದ ಸಮಸ್ಯೆಗಳು ಅನೇಕ, ಆರ್ಥಿಕ ಪೈಪೋಟಿ, ದ್ವೇಷ, ಅಸೂಯೆಗಳಿಂದಾಗಿ ಯುರೋಪಿನಲ್ಲಿ ಒಂದು ಹೊಸ ರೀತಿಯ ಮಾನಸಿಕ




1. ರಷ್ಯ ಕಳೆದುಕೊಂಡ ಪ್ರದೇಶ, 2. ಜನಮತಗಣನೆಯ ಆಧಾರದ ಮೇಲೆ ವರ್ಗಾಯಿಸಿದ ಅಥವಾ ರಾಷ್ಟ್ರಕೂಟ ಉಳಿಸಿಕೊಂಡ ಪ್ರದೇಶ, 3. ಮಿತ್ರರಾಷ್ಟ್ರಗಳಿಂದ ಆಕ್ರಮಿತವಾದ ರೈನ್‌ಲೆಂಡ್ ಪ್ರದೇಶ, 4. ಜರ್ಮನ್ ನಿಸ್ಸೇನೀಕೃತ ಪ್ರದೇಶ, 5. ಆಸ್ಟ್ರಿಯ–ಹಂಗೇರಿ ಕಳೆದುಕೊಂಡ ಪ್ರದೇಶ, 6. ಬಲ್ಗೇರಿಯ ಕಳೆದುಕೊಂಡ ಪ್ರದೇಶ, 7. ಜರ್ಮನಿ ಕಳೆದುಕೊಂಡ ಪ್ರದೇಶ.

ಕಾಯಿಲೆ ಉಂಟಾಯಿತು.

7. ಒಂದನೆಯ ಮಹಾಯುದ್ಧ ಬಿತ್ತರಿಸಿದ ರಾಷ್ಟ್ರೀಯತೆಯ ಭಾವನೆಗಳು ಮತ್ತು ಒಂದು ಜನಾಂಗದವರು ಸರ್ಕಾರವನ್ನು ತಾವೇ ರಚಿಸಿಕೊಳ್ಳುವ ಹಕ್ಕು ಇದೆಯೆಂಬ ತತ್ತ್ವ ವಸಾಹತುಗಳಿಗೂ ಹಬ್ಬಿತು.

8. ಅನೇಕರು ಮುಂದೆ ಯುದ್ಧ ಸಂಭವಿಸುವುದಿಲ್ಲವೆಂದು ನಂಬಿದ್ದರೂ ಶಾಂತಿ ಒಪ್ಪಂದಗಳು ಹಳೆಯ ಗಾಯಗಳನ್ನು ವಾಸಿಮಾಡುವ ಬದಲು ಹೊಸ ಗಾಯಗಳನ್ನು ಸೃಷ್ಟಿಸಿದುವು. ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಸಂದೇಹ ಮತ್ತು ಭಯಗಳು ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲ.

9. ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಲು ಮತ್ತು ರಾಷ್ಟ್ರ-ರಾಷ್ಟ್ರಗಳ ನಡುವೆ ಸಹಕಾರ ಮನೋಭಾವವನ್ನು ಹೆಚ್ಚಿಸಲು ರಾಷ್ಟ್ರಗಳಕೂಟ ಮತ್ತು ವಿಶ್ವನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಆದರೆ ಇಂಥ ಸಂಸ್ಥೆಗಳು ಅನೇಕ ವೇಳೆ ಅವುಗಳಿಗೆ ಅಗತ್ಯವಾದ ಬೆಂಬಲವನ್ನು ಪಡೆಯಲು ಆಗಲಿಲ್ಲ.

10. ಮಹಾಯುದ್ಧದ ಸಮಯದಲ್ಲಿ ಹೆಚ್ಚಿನ ತೊಂದರೆಗೆ ಒಳಗಾದದ್ದೆಂದರೆ ಶಿಕ್ಷಣ ವ್ಯವಸ್ಥೆ. ಈ ಪರಿಸ್ಥಿತಿ ಯುದ್ಧ ಮುಗಿದ ಅನಂತರವೂ ಮುಂದುವರಿಯಿತು. ಆದರೆ ಯುವಕರಿಗೆ ಸರಿಯಾದ ಶಿಕ್ಷಣ ಕೊಟ್ಟಲ್ಲಿ ಮುಂದಾಗಬಹುದಾದ ಅನಾಹುತವನ್ನು ತಪ್ಪಿಸಬಹುದೆಂಬ ಸಾಮಾನ್ಯ ಅಭಿಪ್ರಾಯ ಮೂಡಿತ್ತು. ಆದುದರಿಂದ ಮಕ್ಕಳ ಮತ್ತು ಯುವಕರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಕೊಡಲಾಯಿತು, ವಿದ್ಯಾಭ್ಯಾಸಕ್ಕೆ ಹೆಚ್ಚಿನ ಧನಸಹಾಯ ನೀಡಲಾಯಿತು.

11. ಚೀನ, ಜರ್ಮನಿ, ಇಟಲಿ ಮತ್ತು ಸೋವಿಯತ್ ರಷ್ಯಗಳಲ್ಲಿ ಯುವಕರ ಚಳವಳಿಗಳಿಗೆ ಹೆಚ್ಚಿನ ಪ್ರಾಧಾನ್ಯ ದೊರೆಯಿತು. ಮಹಾಯುದ್ಧದಿಂದ ಹದಗೆಟ್ಟಿದ್ದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳಿಂದ ಪ್ರಭಾವಿತರಾಗಿ, ಪ್ರಪಂಚದ ಯುವಕ-ಯುವತಿಯರು ಸಮಸ್ಯೆಗಳ ಅಧ್ಯಯನಕ್ಕೆ ಹೆಚ್ಚಿನ ಗಮನ ಕೊಡಲು ಪ್ರಾರಂಭಿಸಿದರಲ್ಲದೆ ತಮ್ಮ ತಮ್ಮ ಜನಾಂಗಗಳಿಗೆ ಪ್ರತ್ಯೇಕ ರಾಷ್ಟ್ರಗಳನ್ನು ಕಟ್ಟಬೇಕೆಂದು ಆಶಿಸಿದರು.

12. ಒಂದನೆಯ ಮಹಾಯುದ್ಧ ರಾಷ್ಟ್ರಗಳಿಗೆ ಸಹಕಾರ ಮನೋಭಾವ ಮತ್ತು ಒಟ್ಟಾಗಿ ಕೆಲಸಮಾಡುವ ಗುಣಗಳನ್ನು ಕಲಿಸಿಕೊಟ್ಟಿತೆನ್ನಬಹುದು. ಈ ಮೌಲ್ಯಗಳು ಯುದ್ಧ ಮುಗಿದು ಶಾಂತಿ ಬಂದ ಮೇಲೂ ನಾಶವಾಗಲಿಲ್ಲ. ಅನೇಕ ಅಂತಾರಾಷ್ಟ್ರೀಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಯುದ್ಧಕಾಲದಲ್ಲಿ ಒಡಮೂಡಿದ್ದ ಸಹಕಾರ ಮನೋಭಾವವನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಲಾಯಿತು. ವಿಶ್ವ ಸಮ್ಮೇಳನಗಳೂ ಸಾಮಾನ್ಯವಾದುವು. ಆದರೆ ಇಂಥ ವಿಶ್ವಸಮ್ಮೇಳನಗಳು ಯಾವಾಗಲೂ ಜಯಪ್ರದವಾಗುತ್ತಿದ್ದುವೆಂದು ಹೇಳಲಾಗದು.

13. ಒಂದನೆಯ ಮಹಾಯುದ್ಧದಿಂದ ವೈಜ್ಞಾನಿಕ ಹಾಗೂ ವಾಣಿಜ್ಯ ಬೆಳವಣಿಗೆಗಳಿಗೆ ದೊರಕಿದ ಉತ್ತೇಜನ ಅಗಾಧ. ಹೊಸ ಹೊಸ ಯಂತ್ರಗಳ ಬಳಕೆ, ಮಾರಕಾಸ್ತ್ರಗಳ ಪ್ರಯೋಗ. ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಪರಿಶೋಧನೆ. ಹಡಗು ನಿರ್ಮಾಣ, ವಿಮಾನಗಳ ರಚನೆ ಮತ್ತು ವಿನ್ಯಾಸಗಳಲ್ಲಿ ಬದಲಾವಣೆ, ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆ-ಇವು ಇನ್ನು ಕೆಲವು ಪರಿಣಾಮಗಳು, ಯುದ್ಧದ ದೆಸೆಯಿಂದಾಗಿ ಹೊರದೇಶಗಳಿಂದ ಬರುತ್ತಿದ್ದ ಪದಾರ್ಥಗಳು ನಿಂತುಹೋದದ್ದರಿಂದ ಅನೇಕ ದೇಶಗಳು ತಾವೇ ತಮಗೆ ಬೇಕಾದ ಪದಾರ್ಥಗಳನ್ನು ತಯಾರಿಸಿಕೊಳ್ಳಲಾರಂಭಿಸಿದುವು.

14. ಮಹಾಯುದ್ಧ ತಟಸ್ಥರಾಷ್ಟ್ರಗಳನ್ನು ಒಳಗೊಂಡಂತೆ ಎಲ್ಲ ದೇಶಗಳ ಆರ್ಥಿಕ ಪರಿಸ್ಥಿತಿಗಳನ್ನು ಹದಗೆಡಿಸಿತ್ತು. ಇದರಿಂದಾಗಿ ಪ್ರಪಂಚದಾದ್ಯಂತ ಆರ್ಥಿಕ ಪುನಾರಚನೆಯ ಆವಶ್ಯಕತೆ ಕಂಡುಬಂತು. ಒಂದನೆಯ ಮಹಾಯುದ್ಧದ ಪ್ರಭಾವದಿಂದ 1929ರ ಕೊನೆಯ ಭಾಗದಲ್ಲಿ ಒಂದು ದೊಡ್ಡ ಆರ್ಥಿಕ ಕುಸಿತ ಉಂಟಾಯಿತು.

1939ರ ಹೊತ್ತಿಗೆ ಮತ್ತೆ ಇನ್ನೊಂದು ದೊಡ್ಡ ಮಹಾಯುದ್ಧಕ್ಕೆ ಸನ್ನಾಹ ನಡೆದಿತ್ತು. ಇಂಥ ಭೀಕರ ಯುದ್ಧದಲ್ಲಿ ಉಂಟಾದ ಅಪಾರ ಸಾವುನೋವುಗಳನ್ನು ಮನಗಂಡ ರಾಷ್ಟ್ರಗಳು ಮತ್ತೊಂದು ಅಂಥ ಯುದ್ಧವಾಗದಂತೆ ಮಾಡಿ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನ ನಡೆಸಿದುವು. ಯುರೋಪಿನ ನಾಯಕರು, ರಾಜಕಾರಣಿಗಳು ಮತ್ತು ದಾರ್ಶನಿಕರು ಒಂದುಗೂಡಿ ಶಾಂತಿಸೌಹಾರ್ದಗಳ ಆಧಾರದ ಮೇಲೆ ಒಂದು ನೂತನ ಸಮಾಜವನ್ನು ರೂಪಿಸಲು ಯತ್ನಿಸಿದರು. ಒಂದನೆಯ ಮಹಾಯುದ್ಧವಾದ ಸ್ವಲ್ಪ ಕಾಲ ಈ ಕಾರ್ಯದಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳೂ ಮಗ್ನವಾಗಿದ್ದುವು. ಆದರೆ ಈ ಧ್ಯೇಯಸಾಧನೆಯಲ್ಲಿ ಏಕಮುಖತೆ ಕಂಡು ಬರಲಿಲ್ಲ. ಯುರೋಪಿನ ರಾಷ್ಟ್ರಗಳ ಮುಖಂಡರು ಸಂಕುಚಿತ ಮನೋಭಾವ ತಳೆದರು. ತಮ್ಮ ತಮ್ಮ ದೇಶದ ಹಿತವೇ ಅವರಿಗೆ ಹೆಚ್ಚಾಯಿತು. ತಮ್ಮ ತಮ್ಮ ರಾಷ್ಟ್ರಗಳ ಪ್ರತಿಷ್ಠೆಯನ್ನು ಯಾವ ರೀತಿಯಲ್ಲಿ ಹೆಚ್ಚಿಸಬೇಕೆಂಬುದರ ಕಡೆ ಅವರ ಗಮನ ಹರಿದಿತ್ತೇ ವಿನಃ ಸುಭದ್ರ ಶಾಂತಿಯುತ ಸಮಾಜರಚನೆಯಲ್ಲಿ ಯಾವ ಬಗೆಯ ಆಸಕ್ತಿಯನ್ನೂ ಉತ್ಸಾಹವನ್ನೂ ಅವರು ತೋರಿಸಲಿಲ್ಲ. ಈ ಸಂಕುಚಿತ ಮನೋಭಾವ ಪ್ರದರ್ಶನದಿಂದಲೇ ಇವರು ಕೈಗೊಂಡ ಕಾರ್ಯಕ್ರಮಗಳು ಫಲ ಕೊಡದೆ ಮತ್ತೊಂದು ಮಹಾಯುದ್ಧ ಅನಿವಾರ್ಯವಾಯಿತೆನ್ನಬಹುದು.

**ಒಂದನೆಯ ಮಹಾಯುದ್ಧದ ಘಟನೆಗಳು:**

28-6-1914 : ಸರ್ಬಿಯದ ಸಾರಾಯೆವೊದಲ್ಲಿ ಆಸ್ಟ್ರಿಯದ ರಾಜಕುಮಾರ ಫ್ರಾನ್ಸಿಸ್ ಫರ್ಡಿನೆಂಡನ ಕೊಲೆ. ಇದೇ ಒಂದನೆಯ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣ.

5-7-1914 : ಆಸ್ಟ್ರಿಯ-ಹಂಗರಿಗೆ ಸಹಾಯ ಮಾಡುವುದಾಗಿ ಜರ್ಮನಿಯ ಭರವಸೆ.

23-7-1914 : ಸರ್ಬಿಯದಿಂದ ಆಸ್ಟ್ರಿಯದ 48 ಗಂಟೆಗಳ ಕಾಲದ ಕೊನೆ ಎಚ್ಚರಿಕೆಯ ಸ್ವೀಕಾರ.

28-7-1914 : ಸರ್ಬಿಯದ ಮೇಲೆ ಆಸ್ಟ್ರಿಯ-ಹಂಗರಿ ಯುದ್ಧಘೋಷಣೆ.

30-7-1914 : ಯುದ್ಧಸಿದ್ಧತೆ ನಡೆಸಲು ರಷ್ಯದ ಆಜ್ಞೆ.

1-8-1914 : ಜರ್ಮನಿಯಿಂದ ಯುದ್ಧಘೋಷಣೆ.

4-8-1914 : ಜರ್ಮನಿಯಿಂದ ಬೆಲ್ಜಿಯಂ ಪ್ರವೇಶ. ಜರ್ಮನಿಯ ವಿರುದ್ಧ ಗ್ರೇಟ್‌ಬ್ರಿಟನ್ ಮತ್ತು ಫ್ರಾನ್ಸುಗಳಿಂದ ಯುದ್ಧ ಘೋಷಣೆ.

7-8-1914 : ಯುದ್ಧದಲ್ಲಿ ಸರ್ಬಿಯದೊಂದಿಗೆ ಮಾಂಟೆನಿಗ್ರೊ ಜೊತೆಗೂಡಿಕೆ.

23-8-1914 : ಜರ್ಮನಿಯ ವಿರುದ್ಧ ಜಪಾನಿನ ಯುದ್ಧ ಘೋಷಣೆ.

26 ರಿಂದ : ಟ್ಯಾನೆನ್‌ಬರ್ಗಿನಲ್ಲಿ ರಷ್ಯದ ವಿರುದ್ಧ ಜರ್ಮನ್ ಪ್ರಥಮ

31-8-1914 : ವಿಜಯ

6 ರಿಂದ : ಜರ್ಮನಿಯ ಮತ್ತು ಫ್ರಾನ್ಸುಗಳ ನಡುವೆ ಒಂದನೆಯ ಮಾರ್ನ್

10-9-1914 : ಯುದ್ಧ, ಜರ್ಮನಿಯನ್ನು ತಡೆಯಲು ಮಿತ್ರರಾಷ್ಟ್ರಗಳು ಮಾಡಿದ ಮೊದಲನೆಯ ಮಹಾ ಪ್ರಯತ್ನ, ಯುದ್ಧದ ಒಂದು ಮುಖ್ಯ ತಿರುಗುಬಿಂದು.

3-11-1914 : ತುರ್ಕಿಯ ವಿರುದ್ಧ ರಷ್ಯದ ಯುದ್ಧಘೋಷಣೆ. ಎರಡು ದಿವಸಗಳ ಅನಂತರ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸುಗಳೂ ತುರ್ಕಿಯ ವಿರುದ್ಧ ಯುದ್ಧ ಘೋಷಿಸಿದುವು.

22-4-1915 : ಎರಡನೆಯ ಈಪ್ರ ಕದನ, ಇದರಲ್ಲಿ ಜರ್ಮನ್ನರಿಂದ ವಿಷವಾಯು ಪ್ರಯೋಗ.

7-5-1915 : ಜರ್ಮನಿಯಿಂದ ಲ್ಯೂಸಿಟ್ಯಾನಿಯ ಹಡಗಿನ ಮುಳುಗಡೆ. ಹನ್ನೆರಡು ಸಾವಿರ ಜನ ಮುಳುಗಿದರು. ನೂರಕ್ಕಿಂತ ಹೆಚ್ಚು ಅಮೆರಿಕನ್ನರ ಮರಣ.

9-3-1916 : ಪೋರ್ಚುಗಲ್‌ನ ವಿರುದ್ಧ ಜರ್ಮನಿಯ ಯುದ್ಧಘೋಷಣೆ.

ಜೂನ್ 1916 : ವರ್ದನ್ ಕದನ: ಫ್ರಾನ್ಸ್ ಮತ್ತು ಜರ್ಮನಿಗಳು ಸೇಡಿನಿಂದ ಕಾದಿದ್ದುವು. ಪೇಟ್ಯಾನನ ನೇತೃತ್ವದಲ್ಲಿ ಫ್ರೆಂಚರು ವೀರಾವೇಶದಿಂದ ಹೋರಾಡಿ ಕೊನೆಗೂ ವರ್ದನ್ ನಗರವನ್ನು ರಕ್ಷಿಸಿದರು. ಎರಡು ಪಕ್ಷಗಳಲ್ಲೂ ಸತ್ತವರ ಸಂಖ್ಯೆ 10 ಲಕ್ಷ.

6-4-1917 : ಜರ್ಮನಿಯ ಮೇಲೆ ಅಮೆರಿಕನ್ ಯುದ್ಧ ಘೋಷಣೆ. ಮರುದಿವಸ ಕ್ಯೂಬ ಮತ್ತು ಪನಾಮಗಳೂ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿದುವು.

8-1-1918 : ಅಮೆರಿಕನ್ ಕಾಂಗ್ರೆಸಿನ ಮುಂದೆ ಅಧ್ಯಕ್ಷ ವುಡ್ರೊವಿಲ್ಸನ್‌ನಿಂದ ಶಾಂತಿಕೌಲಿನ ಚತುರ್ದಶ ಸೂತ್ರ ಮಂಡನೆ.

ಮಾರ್ಚ್ 1918: ಎರಡನೆಯ ಮಾರ್ನ್ ಕದನ. ಹಿಂಡನ್‌ಬರ್ಗ್ ಸಾಲು ಎಂದು ಪ್ರಖ್ಯಾತವಾಗಿದ್ದ ಕುಂದಕಗಳ ಸಾಲನ್ನು ಮಿತ್ರರಾಷ್ಟ್ರಗಳು ಮುರಿದುವು. 1914ರಿಂದ ಜರ್ಮನ್ನರು ಇವನ್ನು ಹಿಡಿದಿದ್ದರು.

29-9-1918 : 1915ರಿಂದ ಗ್ರೀಸಿನಲ್ಲಿದ್ದ ಮಿತ್ರರಾಷ್ಟ್ರಗಳ ಸೈನ್ಯದಿಂದ ಬಲ್ಗೇರಿಯದ ಮುತ್ತಿಗೆ; ಜರ್ಮನ್ನರ ಸೋಲು. ಜರ್ಮನ್ ಸೇನಾನಿ ಲೂಡೆನ್‌ಡಾರ್ಫನ ನಿರಾಶೆ. ವಿಲ್ಸನನ ಸೂತ್ರಗಳ ಆಧಾರದ ಮೇಲೆ ಶಾಂತಿಸಂಧಾನಕ್ಕೆ ಒಡಂಬಡಬೇಕೆಂದು ಬರ್ಲಿನಿಗೆ ಸೂಚನೆ.

2-10-1918 : ಶಾಂತಿ ಬಯಸಿ ಜರ್ಮನಿಯಿಂದ ಅಧ್ಯಕ್ಷ ವಿಲ್ಸನನಿಗೆ ಕೋರಿಕೆ.

3-10-1918 : ತುರ್ಕಿ, ಬಲ್ಗೇರಿಯ, ಆಸ್ಟ್ರಿಯ-ಹಂಗರಿಗಳ ಶರಣಾಗತಿ.

11–11–1918 : ಜರ್ಮನಿಯಿಂದ ನೆದರ್ಲೆಂಡ್ಸಿಗೆ ಕೈಸರನ ಪಲಾಯನ. ಮಿತ್ರ ರಾಷ್ಟ್ರಗಳೊಡನೆ ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಜರ್ಮನ್ನರ ಸಹಿ.
29–6–1919 : ವರ್ಸೇಲ್ಸ್ ಕೌಲಿಗೆ ಜರ್ಮನಿಯ ಸಹಿ.
10–9–1919 : ಆಸ್ಟ್ರಿಯದೊಡನೆ ಸೆಂಟ್–ಜರ್ಮನಿ ಕೌಲು.
27–11–1919 : ಬಲ್ಗೇರಿಯದೊಡನೆ ನ್ಯೂಯಿಲಿ ಕೌಲು.
4–6–1919 : ಹಂಗೆರಿಯೊಡನೆ ಟ್ರಿಯನಾನ್ ಕೌಲು.
10–8–1920 : ತುರ್ಕಿಯೊಡನೆ ಸೇವ್ರ್ ಕೌಲು. (ಎಸ್.ಕೆ.ಎಸ್.)

**ಒಂದೆಲಗ:** ಅಂಬೆಲಿಫೆರೆ ಕುಟುಂಬದ ಸೆಂಟೆಲ ಜಾತಿಗೆ ಸೇರಿದ ಮೂವತ್ತುಮೂರು ಪ್ರಭೇದಗಳನ್ನುಳ್ಳ ಒಂದು ಸಸ್ಯಜಾತಿ. ಬ್ರಾಹ್ಮೀ, ತಿಮರೆ, ಇಲಿಕಿವಿಸೊಪ್ಪು ಪರ್ಯಾಯಪದಗಳು. ಉಷ್ಣವಲಯದ ತೇವವಾದ ಪ್ರದೇಶಗಳಲ್ಲಿ ಕಳೆಯ ರೂಪದಲ್ಲಿ ಬೆಳೆಯುವ ಈ ಜಾತಿಯ ಕೆಲವು ಪ್ರಭೇದಗಳು ಆಯುರ್ವೇದ ಔಷಧ ಪದ್ಧತಿಯಲ್ಲಿ ಪ್ರಾಮುಖ್ಯ ಗಳಿಸಿವೆ. ಅವುಗಳಲ್ಲಿ ಸೆಂಟೆಲ ಏಷಿಯಾಟಿಕ ಎಂಬ ಪ್ರಭೇದ ಭಾರತದ ಅದ್ಯಂತವೂ ಸ್ವಾಭಾವಿಕವಾಗಿ ಬೆಳೆಯುವ ಔಷಧಿ ಸಸ್ಯ. ನೆಲದ ಮೇಲೆ ಹಬ್ಬಿಕೊಂಡು ಬೆಳೆಯುತ್ತದೆ. ನವುರಾದ ವಾಸನೆಯುಂಟು. ಕಾಂಡ ನೆಲದ ಮೇಲೆಯೇ ಹಬ್ಬುವುದರಿಂದ ರೆಂಬೆಗಳು ಎಲೆಯ ಕಂಕುಳಲ್ಲಿ ಬರುತ್ತವೆ. ಉದ್ದವಾದ ತೊಟ್ಟಿರುವ, ಮೂತ್ರಪಿಂಡದಾಕಾರದ ಎಲೆಗಳು ಕಾಂಡ ಮತ್ತು ರೆಂಬೆಗಳ ಮೇಲೆ ಬೆಳೆಯುತ್ತವೆ. ಈ ಎಲೆಗಳ ಅಂಚು ಹಲ್ಲುಗಳಂತೆ ಒಡೆದಿದ್ದು ನಾಳರಚನೆ ಹಸ್ತಾಕಾರದಲ್ಲಿರುತ್ತದೆ. ಹೂಗೊಂಚಲು ಛತ್ರಿ (ಅಂಬೆಲ್) ಮಾದರಿಯದು; ಹೂಗಳಲ್ಲಿ 5 ಪುಷ್ಪಪತ್ರಗಳು, 5 ದಳಗಳು, 5 ಕೇಸರಗಳು ಇರುತ್ತವೆ; ದಳಗಳ ಮೇಲೆ ಕೇಸರಗಳು ಪರ್ಯಾಯವಾಗಿರುತ್ತವೆ; ಪರಾಗ ಕೋಶದಲ್ಲಿ ಎರಡು ಕೋಣೆಗಳಿರುತ್ತವೆ; ಅಂಡಾಶಯ ಅಧಮಸ್ಥಿತಿಯದು; ಫಲ ಸ್ಕೈಜೊಕಾರ್ಪ್ ಮಾದರಿಯದು. ಭಾರತೀಯ ಔಷಧ ಪದ್ಧತಿಯಲ್ಲಿ ಇದನ್ನು ಉತ್ತೇಜನಕಾರಿಯಾಗಿಯಲ್ಲದೆ ಶಕ್ತಿವರ್ಧಕವಾಗಿಯೂ ಉಪಯೋಗಿಸುವುದುಂಟು. ಕಾಯಕಲ್ಪ ಚಿಕಿತ್ಸೆಯಲ್ಲಿ ಇದರ ಪಾತ್ರ ಪ್ರಮುಖವಾದುದು. ಭಾರತದಲ್ಲೂ ಮಡಗಾಸ್ಕರದಲ್ಲೂ ಇದರ ಕಷಾಯವನ್ನು ಕುಷ್ಠರೋಗ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ.



ಈ ಸಸ್ಯದ ರಸದಲ್ಲಿ ಹಸುರು ಬಣ್ಣದ ಒಂದು ಬಗೆಯ ಸುಗಂಧದ ಎಣ್ಣೆ, ಟ್ಯಾನಿನ್, ಆಸ್ಕಾರ್ಬಿಕ್ ಆಮ್ಲ, ಪೆಕ್ಟಿಕ್ ಆಮ್ಲ, ರಾಳದಂತಿರುವ ವಸ್ತು–ಇವು ಇರುವುವೆಂದು ಕಂಡುಬಂದಿದೆ. ಇವುಗಳಲ್ಲೆಲ್ಲ ಏಷ್ಯಾಟಿಕೊಸೈಡ್ ಎಂಬ ವಸ್ತುವೇ ಕುಷ್ಠರೋಗ ಚಿಕಿತ್ಸೆಯಲ್ಲಿ ಪರಿಣಾಮಕಾರಿಯೆಂದು ಗೊತ್ತಾಗಿದೆ.

ಒಂದೆಲಗ ಔಷಧಿಗಳಲ್ಲಿ ಉಪಯುಕ್ತವೆನಿಸಿರುವಂತೆ ಮಾನವನ ಮತ್ತು ಪಶುಪ್ರಾಣಿಗಳ ಆಹಾರವಾಗಿಯೂ ಉಪಯೋಗವಾಗುತ್ತಿದೆ; ಇದರ ಎಲೆಯನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ತಂಬುಳಿ, ರಾಯತಗಳಿಗಿದು ಪ್ರಸಿದ್ಧ. ಈ ಸಸ್ಯದ ಹೂ ಮತ್ತು ಎಲೆಗಳು ಆಕರ್ಷಣೀಯವಾಗಿ ಕಾಣುವುದರಿಂದ ಒಂದೆಲಗವನ್ನು ಅಲಂಕಾರಸಸ್ಯವನ್ನಾಗಿಯೂ ಬೆಳೆಸುತ್ತಾರೆ. ಮಲಯದಲ್ಲಿ ಇದನ್ನು ತೋಟಗಳಲ್ಲಿ ಮಣ್ಣುಸವಕಲನ್ನು ತಡೆಗಟ್ಟಲು ಬೆಳೆಸುವರು. (ಕೆ.ಬಿ.ಎಸ್.; ಡಿ.ಎಂ.)

**ಒ'ಕಾನಲ್, ಡೇನಿಯೆಲ್:** 1775–1847. ಐರ್ಲೆಂಡಿನ ರಾಜಕೀಯ ನಾಯಕ, ವಿಮೋಚಕ. 19ನೆಯ ಶತಮಾನದ ಐರಿಷ್ ಸಂಸದೀಯ ಮುಖ್ಯರಲ್ಲಿ ಪ್ರಥಮ. 1775ರ ಆಗಸ್ಟ್ 6ರಂದು ಕೆರಿ ಕೌಂಟಿಯ ಕಹಿರ್ಸಿವೀನಿನಲ್ಲಿ ಇವನ ಜನನ. ಚಿಕ್ಕಪ್ಪನಿಗೆ ಈತ ದತ್ತುವಾದ. ಆತ ಫ್ರಾನ್ಸಿನೊಂದಿಗೆ ಕಳ್ಳವ್ಯಾಪಾರ ನಡೆಸಿ ಪ್ರವರ್ಧಮಾನಕ್ಕೆ ಬಂದಿದ್ದ. ಫ್ರಾನ್ಸಿನ ರೋಮನ್ ಕೆಥೊಲಿಕ್ ಕಾಲೇಜುಗಳಲ್ಲಿ ಒ'ಕಾನಲ್ ಶಿಕ್ಷಣ ಪಡೆಯುತ್ತಿದ್ದ ಸಮಯದಲ್ಲಿ ಫ್ರೆಂಚ್ ಕ್ರಾಂತಿಸೇನೆಗಳು ಆಸ್ಟ್ರಿಯನ್ ನೆದರ್ಲೆಂಡ್ಸನ್ನಾಕ್ರಮಿಸಿದುವು. ಒ'ಕಾನಲ್ ಆಗ ಇಂಗ್ಲೆಂಡಿಗೆ ಓಡಿಬಂದ. ಈ ಅನುಭವ ಈತನ ಮೇಲೆ ಪರಿಣಾಮ ಬೀರಿತು. ಜನತೆಯ ಸಾರ್ವಭೌಮಾಧಿಕಾರದಲ್ಲಿ ಇವನಿಗೆ ಸಂಪೂರ್ಣ ನಂಬಿಕೆಯಿತ್ತಾದರೂ ಹಿಂಸಾತ್ಮಕ ಅತಿರೇಕಗಳು ಇವನಿಗೆ ಹಿಡಿಸುತ್ತಿರಲಿಲ್ಲ. ಲಂಡನಿನಲ್ಲಿ ಈತ ನ್ಯಾಯಶಾಸ್ತ್ರವನ್ನೋದಿ 1798ರಲ್ಲಿ ಐರ್ಲೆಂಡಿನಲ್ಲಿ ವಕೀಲಿ ಹಿಡಿದ. ಐರಿಷ್ ಸಂಸತ್ತನ್ನು ವಿಸರ್ಜಿಸಿ ಐರ್ಲೆಂಡನ್ನು ಇಂಗ್ಲೆಂಡಿನೊಂದಿಗೆ ವಿಲೀನಗೊಳಿಸುವ ಕಾಯಿದೆಯನ್ನು ವಿರೋಧಿಸಿದಾಗಲೇ ಒ'ಕಾನಲ್ ಪ್ರಸಿದ್ಧನಾದದ್ದು. ಇಂಗ್ಲೆಂಡ್ ಜಾರಿಗೆ ತಂದಿದ್ದ ಕೆಥೊಲಿಕ್ ವಿರುದ್ಧವಾದ ಕಾಯಿದೆಗಳನ್ನೆಲ್ಲ ರದ್ದು ಮಾಡಬೇಕೆಂದು ಈತ ಚಳವಳಿ ಹೂಡಿದ. ಐರಿಷರ ಸಮಾನ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಒ'ಕಾನಲನ ಧೈರ್ಯಸಾಹಸಗಳು ಹಲವಾರು ಮೆಚ್ಚುಗೆ ಅಭಿಮಾನಗಳನ್ನು ಗಳಿಸಿದುವು.

ಸರ್ಕಾರದ ದಬ್ಬಾಳಿಕೆಯ ವಿರುದ್ಧವಾಗಿ ದೇಶಾದ್ಯಂತ ಸಭೆ ನಡೆಸಿ, ಕೆಥೋಲಿಕರ ನ್ಯಾಯಬದ್ಧ ಬೇಡಿಕೆಗಳಿಗಾಗಿ ಈತ ಸಲ್ಲಿಸಿದ ಮನವಿಗೆ ಪ್ರಾಟೆಸ್ಟಂಟರೂ ಬೆಂಬಲ ನೀಡಿದರು. 1814ರಲ್ಲಿ ಜಾನ್ ಮ್ಯಾಗೀ ಎಂಬ ಪ್ರಾಟೆಸ್ಟಂಟ್ ಪತ್ರಿಕೋದ್ಯಮಿಗೆ ಸರ್ಕಾರ ಶಿಕ್ಷೆ ವಿಧಿಸಿದಾಗ ಆಗಿನ ವೈಸ್‌ರಾಯಿಯನ್ನು ಒ'ಕಾನಲ್ ಕಟುವಾಗಿ ಟೀಕಿಸಿ ಇಡೀ ಸರ್ಕಾರಿ ವ್ಯವಸ್ಥೆಯ ವಿರುದ್ಧವಾಗಿ ಪ್ರತಿಭಟನೆ ಸಲ್ಲಿಸಿದ. ಜಾನ್ ಮ್ಯಾಗೀ ಕೊನೆಗೂ ದಂಡ ತೆರಬೇಕಾಯಿತು. ಆಗ ಒ'ಕಾನಲನ ಶ್ರೀಮಂತ ಬೆಂಬಲಿಗರು ದೂರವಾದರೂ ಒ'ಕಾನಲ್ ಎದೆಗುಂದಲಿಲ್ಲ. ಲಾರ್ಡ್ ವೆಲೆಸ್ಲಿ ವೈಸರಾಯಿಯಾಗಿ ನೇಮಕಗೊಂಡಾಗ (1821) ಒ'ಕಾನಲನ ಹೋರಾಟದ ಉತ್ಸಾಹ ಮತ್ತೆ ಹೊಮ್ಮಿತು. ಕೆಥೊಲಿಕ್ ಜನರಿಂದ ತಲಾ 1 ಪೆನಿಯಂತೆ ಮಾಸಿಕ ಚಂದಾ ವಸೂಲಿ ಮಾಡಿ ಚಳವಳಿ ಮುಂದುವರಿಸಿದ. ಕೆಥೊಲಿಕರ ಹಕ್ಕನ್ನು ಪುರಸ್ಕರಿಸುವ ಅನೇಕ ಮಸೂದೆಗಳು ಪಾರ್ಲಿಮೆಂಟಿನ ಮುಂದೆ ಬಂದು ಪರಾಜಿತವಾದುವು. ಆದರೆ ಐರ್ಲೆಂಡಿನಲ್ಲಿ ಸ್ವಾತಂತ್ರ್ಯ ಪ್ರಜ್ಞೆ ತಳೆದ ಹೊಸ ತಲೆಮಾರೊಂದರ ನಿರ್ಮಾಣವಾಯಿತು. 1828ರಲ್ಲಿ ಪಾರ್ಲಿಮೆಂಟಿಗೆ ನಡೆದ ಉಪಚುನಾವಣೆಯೊಂದರಲ್ಲಿ ಒ'ಕಾನಲ್ ಅದ್ಭುತ ಜಯಗಳಿಸಿದನಾದರೂ ಈತ ಸದಸ್ಯನಾಗಿ ಆಸನ ಸ್ವೀಕರಿಸುವುದು ಸಾಧ್ಯವಾಗಲಿಲ್ಲ. ಆದರೆ ಐರಿಷ್ ಜನಾಭಿಪ್ರಾಯ ಎತ್ತ ಸಾಗುತ್ತಿದೆಯೆಂಬುದು ಆಗ ಇಂಗ್ಲೆಂಡಿನ ಪ್ರಧಾನಿಯಾಗಿದ್ದ ಡ್ಯೂಕ್ ಆಫ್ ವೆಲಿಂಗ್ಟನನಿಗೆ ಅರಿವಾಗಿ, ಆತ 1829ರಲ್ಲಿ ಸುಧಾರಣೆಗಳನ್ನು ಜಾರಿಗೆ ತಂದ. ಒ'ಕಾನಲ್ ಕಾಮನ್ಸ್ ಸಭೆಯ ಸದಸ್ಯನಾಗಿ ಪ್ರತಿಷ್ಠಾಪಿತನಾದಾಗ ಆತನ ಪ್ರತಿಭೆಯೂ ವ್ಯಕ್ತಿತ್ವವೂ ಸಂಪೂರ್ಣವಾಗಿ ಪ್ರಕಟವಾದುವು. ಈತನ ಹಿಂಬಾಲಕರಾದ ಐರಿಷ್ ಸದಸ್ಯರು ಒ'ಕಾನಲನ ಬಾಲ ಎಂದೇ ಹೆಸರು ಗಳಿಸಿದರು. 1800ರ ವಿಲೀನವನ್ನು ರದ್ದುಗೊಳಿಸಬೇಕೆಂದು ಒ'ಕಾನಲ್ ಚಳವಳಿ ಹೂಡಿದ. ಈತ ವ್ಹಿಗ್ ಪಕ್ಷದೊಂದಿಗೆ ಸಹಕರಿಸಿದರೂ ಅದರಿಂದ ಹೆಚ್ಚಿನ ಪ್ರಯೋಜನವೇನೂ ಆಗಲಿಲ್ಲ. ಏತನ್ಮಧ್ಯೆ ಇಂಗ್ಲೆಂಡಿನ ಸರ್ಕಾರ ಇವನಿಗೆ ಸಾರ್ವಜನಿಕ ಹುದ್ದೆಗಳ ಆಸೆ ತೋರಿಸಿತು. ಆದರೆ ಒ'ಕಾನಲ್ ಆ ಆಮಿಷಕ್ಕೆ ಬಲಿ ಬೀಳಲಿಲ್ಲ. ಈತ ವಕೀಲಿವೃತ್ತಿಯನ್ನೂ ತ್ಯಜಿಸಿದ್ದರಿಂದ ಇವನ ಜೀವನೋಪಾಯಕ್ಕಾಗಿಯೂ ಚಳವಳಿಗಾಗಿಯೂ ಮಿತ್ರರು ಉದಾರವಾಗಿ ಹಣ ನೀಡಿದರು. ವಿದೇಶೀ ಸರ್ಕಾರದೊಂದಿಗೆ ಸಹಕರಿಸುವುದರಿಂದ ಫಲವಿಲ್ಲವೆಂಬುದು ಒ'ಕಾನಲ್‌ಗೆ ಮನವರಿಕೆಯಾದಾಗ ಪಾರ್ಲಿಮೆಂಟ್ ಸಭೆಗೆ ಹೋಗುವುದನ್ನೇ ನಿಲ್ಲಿಸಿದ. ಆಗ ಡಬ್ಲಿನಿನಲ್ಲಿ ಸೇರಲಿದ್ದ ಬೃಹತ್ ಸಭೆಯೊಂದನ್ನು ಸರ್ಕಾರ ನಿಷೇಧಿಸಿದ್ದಲ್ಲದೆ ಜನರನ್ನಡಗಿಸಲು ದಂಡನ್ನೇ ಸಜ್ಜಾಗಿ ನಿಲ್ಲಿಸಿತು. ಒ'ಕಾನಲ್ ಮತ್ತು ಆತನ ಸಹಚರರುಗಳು ಬಂಧನಕ್ಕೊಳಗಾದರು. ಲಾರ್ಡ್ಸ್ ಸಭೆಗೆ ಅಪೀಲು ಹೋದಾಗ ಶಿಕ್ಷೆ ರದ್ದಾಗಿ ಅವರು ಬಿಡುಗಡೆಗೊಂಡರು.

ಒ'ಕಾನಲ್‌ಗೆ ಅರಿವಿಲ್ಲದೆ ಮುಪ್ಪು ಬಂತು, ಶಕ್ತಿ ಕುಂದಿತು. ತರುಣ ಐರ್ಲೆಂಡಿಗರು ಒ'ಕಾನಲನ ಸಾವಧಾನದ ನಾಯಕತ್ವವನ್ನೊಪ್ಪಲಿಲ್ಲ. ಬಿರುಗಾಳಿಯ ಜೀವವೊಂದು ಅವರಿಗೆ ತಲೆಯಾಳಾಗಬೇಕಾಗಿತ್ತು. ಐರ್ಲೆಂಡಿನಲ್ಲಿ ಆಲೂಗೆಡ್ಡೆಯ ಕ್ಷಾಮ ಹಬ್ಬಿದಾಗ ಸರ್ಕಾರದ ಪರಿಹಾರಕ್ಕಾಗಿ ಈತ ತನ್ನ ಮುಪ್ಪಿನಲ್ಲೂ ಶ್ರಮಿಸಿದ. ಹವಾ ಬದಲಾವಣೆಗಾಗಿ ರೋಮಿಗೆ ಹೋಗುತ್ತಿದ್ದಾಗ ಹಾದಿಯಲ್ಲೆ ಒ'ಕಾನಲ್ ತೀರಿಕೊಂಡ. ಆಗ ಐರ್ಲೆಂಡಿನಲ್ಲಿ ಏರ್ಪಟ್ಟ ಬೃಹತ್ ಸಭೆಗಳೂ ಪ್ರದರ್ಶನಗಳೂ ಈತನೆಷ್ಟು ಜನಪ್ರಿಯನಾಗಿದ್ದನೆಂಬುದರ ಸಂಕೇತಗಳಾಗಿದ್ದುವು. (ಎಸ್.ವಿ.ಡಿ.)

**ಒಕಾಪಿ:** ಆಫ್ರಿಕದ ಉಷ್ಣವಲಯದ ಕಾಡುಗಳಲ್ಲಿ ಜೀವಿಸುವ ಜಿರಾಫೆಗಳ ಕುಲಕ್ಕೆ ಸೇರಿದ ಒಂದು ಅಪೂರ್ವವಾದ ಪ್ರಾಣಿ. ಕಾಂಗೋವಿನ ಸೆಮ್ಲಿಕಿ ಅರಣ್ಯದಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಒಕಾಪಿಯ ಜಾನ್‌ಸ್ಟೋನಿ ಎಂಬುದು ಇದರ ವೈಜ್ಞಾನಿಕ ಹೆಸರು. ಇದರ ಗಾತ್ರ ದೊಡ್ಡದು; ಮೈಮೇಲೆ ದೊಡ್ಡದಾಗಿ ಎದ್ದು ಕಾಣುವ ಗೆರೆಗಳಿವೆ. ಆದರೂ ಇಂಥ ಪ್ರಾಣಿ ಒಂದಿದೆಯೆಂಬ ತಿಳಿವಳಿಕೆ ವಿಜ್ಞಾನ ಪ್ರಪಂಚಕ್ಕೆ 1900ರ ವರೆಗೂ ಇರಲಿಲ್ಲ. ಇದನ್ನು ಲೋಕಕ್ಕೆ ತಿಳಿಯ ಹೇಳಿದಾತ ಹ್ಯಾರಿ ಎಚ್. ಜಾನ್‌ಸನ್. ಪ್ರಾಯಶಃ ಕೆಲವು ಧೀರ ಪರಿಶೋಧಕರನ್ನು ಬಿಟ್ಟರೆ ಇಟೂರಿ ಕಾಡಿನ ಗುಜ್ಜಾರಿಗಳೇ ಇವನ್ನು ನಿಜವಾಗಿ ಕಂಡರಿತಿದ್ದವರು. ಇವರು ಈ ಪ್ರಾಣಿಗಳ ಜಾಡುಗಳನ್ನು ಪತ್ತೆಹಚ್ಚುವುದರಲ್ಲಿ ತುಂಬ ಗಟ್ಟಿಗರು.

ಇದು ಜಿರಾಫೆಗಿಂತ ಸಣ್ಣದು. ಎರಡಕ್ಕೂ ಕೂದಲು ಮತ್ತು ಚರ್ಮ ಮುಚ್ಚಿರುವ ಕೊಂಬುಗಳಿವೆ. ಎರಡಕ್ಕೂ ಉದ್ದವೂ ಹಿಡಿತವುಳ್ಳವೂ ಆದ ನಾಲಗೆಗಳೂ ಸೀಳು ಗೊರಸುಗಳೂ ಉಂಟು. ಸದ್ದು ಮಾಡದಿರುವುದೇ ಇವಕ್ಕೆ ರೂಢಿ. ಒಕಾಪಿಯ ಮೈ ಸಣ್ಣದು; ಎತ್ತರ 5′–5.5′ ವರೆಗೆ. ತಲೆ ಜಿರಾಫೆಯದಂತೆಯೇ ಇದೆ. ತೆಳುವಾದ ಚಪ್ಪಿನಂಥ ದೊಡ್ಡ ಕಿವಿಗಳಿವೆ. ಮೈಬಣ್ಣ ಚಾಕೋಲೇಟ್ ಅಥವಾ ನೀಲಿಗೆಂಪು. ಹಿಂಭಾಗದಲ್ಲಿ ಬಿಳಿಗೀರುಗಳೂ ಮುಖ ಕಾಲುಗಳ ಮೇಲೆ ಬಿಳಿ ಪಟ್ಟೆಗಳೂ ಇವೆ. ಹೆಣ್ಣುಗಳಿಗೆ ಕೊಂಬಿಲ್ಲ; ಆದರೆ ಗಾತ್ರ ದೊಡ್ಡದು; ಗೊರಸಿನ ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಹೀಗಿರುವುದಿಲ್ಲ.

ಮರದೆಲೆಗಳನ್ನು ಚಿವುಟಿಕೊಳ್ಳಲು ತನ್ನ ತುಂಬ ಉದ್ದವಾದ ತಿರುಚಿ ನಾಲಗೆಯನ್ನು ಇದು ಜಿರಾಫೆಯಂತೆಯೇ ಉಪಯೋಗಿಸುತ್ತದೆ. ಹಗಲಿನಲ್ಲಿ ಈ ಪ್ರಾಣಿ ಕಾಡಿನ ನೀರಿರುವ ಗಹ್ವರಗಳಲ್ಲಿರುತ್ತದೆ. ಮೇಯುವಾಗ ಶತ್ರುಗಳು ಹಠಾತ್ತನೆ ಮೇಲೆರಗದಂತೆ ಸದ್ದಿನ ಸುಳಿವು ಸಿಗುವ ದೊಡ್ಡ ಒಂಟಿಮರಗಳನ್ನಿದು ಆಶ್ರಯಿಸುತ್ತದೆ. ಇದಕ್ಕೆ ಜಿರಾಫೆಯಷ್ಟು ತೀಕ್ಷ್ಣ ದೃಷ್ಟಿಯಿಲ್ಲ; ಆದರೆ ಶಬ್ದಗ್ರಹಣಶಕ್ತಿ ಚುರುಕಾಗಿದೆ; ತುತ್ತೂರಿ ಆಕಾರದ ಕಿವಿಗಳೇ ಇದನ್ನು ಸೂಚಿಸುತ್ತವೆ. ಹೀಗೆ ತನ್ನ ಶ್ರವಣಬಲದಿಂದ ವೈರಿಯಿಂದ ಪಾರಾಗುತ್ತದೆ. ಇದರ ಆಹಾರ ಮರದ ಕೆಳಗಣ ಎಳೆಬಳ್ಳಿಗಳ ಎಲೆಗಳು. ಇದು ಹುಲ್ಲನ್ನು ಮುಟ್ಟುವುದಿಲ್ಲ.

ಒಕಾಪಿಗಳು ಒಂಟಿಯಾಗಿಯೋ, ಜೋಡಿಯಾಗಿಯೋ ಇರುತ್ತವೆ. ಪುಕ್ಕಲು ಮತ್ತು ಸಾಧುಸ್ವಭಾವದ ಈ ಪ್ರಾಣಿಗಳ ಸಂಚಾರ ರಾತ್ರಿಯಲ್ಲಿ. ಇವು ಏಕಾಂತವನ್ನು ಪ್ರೀತಿಸುತ್ತವೆ. ಕಾಂಗೋ ಕಾಡಿನ ದುರ್ಗಮವೂ ದುರ್ಭೇದ್ಯವೂ ಆದ ಪ್ರದೇಶಗಳಲ್ಲಿ ಇವು ವಾಸಮಾಡುತ್ತವೆ. ಕಾಡಿನ ಅಂಚಿನಲ್ಲಿ ನೆಲೆಸಿರುವ ಗುಜ್ಜಾರಿಗಳೂ ಕೆಲವು ಬಾಂಟು ಕುಲದವರೂ ಇವುಗಳ ನೆಲೆಯನ್ನು ಪತ್ತೆಹಚ್ಚಿ, ಬೇಟೆಯಾಡಿ, ಇವುಗಳ ಮಾಂಸ ತುಂಬ ರುಚಿ ಎಂದು ಕಂಡುಕೊಂಡಿದ್ದರು. ಬಹು ಹಿಂದೆಯೇ ಬೆಲ್ಜಿಯಂ ಸರ್ಕಾರ ಈ ಅಪೂರ್ವ ಪ್ರಾಣಿ ನಾಶವಾಗದಂತೆ ಕಾಪಾಡುವುದಕ್ಕಾಗಿ ಕಾನೂನುಗಳನ್ನು ಮಾಡಿತ್ತು. ಇಟೂರಿ ಕಾಡಿನ ಮಧ್ಯದಲ್ಲಿ ಎಪುಲು ಎಂಬೆಡೆಯಲ್ಲಿರುವ ಒಕಾಪಿ ಕ್ಷೇತ್ರದಲ್ಲಿ ಬೇಟೆಯ ಇಲಾಖೆಯವರು ಇವುಗಳ ವಿಷಯದಲ್ಲಿ ವಿಸ್ತಾರವಾದ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಪ್ರಪಂಚದ ಅನೇಕ ಪ್ರಾಣಿಸಂಗ್ರಹಾಲಯಗಳಲ್ಲಿ ಇವನ್ನು ಯಶಸ್ವಿಯಾಗಿ ಸಾಕುತ್ತಿದ್ದಾರೆ. ಅಲ್ಲಿ ಇವು ಮರಿಗಳನ್ನೂ ಹಾಕುತ್ತಿವೆ. ಹೆಣ್ಣು ಒಕಾಪಿ ಪ್ರತಿ 40 ದಿವಸಗಳಿಗೊಮ್ಮೆ ಬೆದೆಗೆ ಬರುತ್ತದೆ. 425 ದಿನಗಳ ಗರ್ಭವಾಸದ ಅನಂತರ ಮರಿ ಹುಟ್ಟುತ್ತದೆ. ತಾಯಿ ಅದನ್ನು 3–4 ತಿಂಗಳ ತನಕ ಹಾಲೂಡಿ ಸಾಕುತ್ತದೆ. (ಎ.)

**ಒಕ್ಕಲಿಗರ ಪತ್ರಿಕೆ:** 1906ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಒಕ್ಕಲಿಗರ ಸಂಘದ ಮುಖಪತ್ರ. ಸಂಘದ ಧ್ಯೇಯೋದ್ದೇಶಗಳನ್ನು ಸಾಧಿಸಲು ಸಹಾಯಕವಾಗುವಂತೆ ಅದರ ಆಶ್ರಯದಲ್ಲಿ 1907 ಮಾರ್ಚ್ 15ರಂದು ಶುಕ್ರವಾರ ಈ ಪತ್ರಿಕೆಯ ಪ್ರಕಟನೆ ಆರಂಭವಾಯಿತು. ಆಗ ಬೆಂಗಳೂರಿನಲ್ಲಿ ಗಣ್ಯ ಅಡ್ವೊಕೇಟರಾಗಿದ್ದ ಸಿ. ಲಕ್ಷ್ಮಣಗೌಡ ಈ ಪತ್ರಿಕೆಯ ಪ್ರಥಮ ಸಂಪಾದಕರು. ಮೊದಲನೆಯ ಸಂಚಿಕೆಯ ಸಂಪಾದಕೀಯದಲ್ಲಿ ಈ ಪತ್ರಿಕೆಯ ಧ್ಯೇಯಧೋರಣೆಗಳನ್ನು ಕುರಿತು ಪ್ರಸ್ತಾಪಿಸುತ್ತ, ವರ್ತಮಾನ ಪತ್ರಿಕೆಗಳು ಯಾವ ದೇಶದಲ್ಲಿ ಹೆಚ್ಚುತ್ತ ಬರುತ್ತವೋ ಆ ದೇಶ ನವನಾಗರಿಕತೆಯಲ್ಲಿ ಉನ್ನತಸ್ಥಿತಿಗೆ ಬರುತ್ತಿರುವುದು ಎಂಬ ಅಭಿಪ್ರಾಯ ಸೂಚಿಸಿ, ಜಪಾನ್ ದೇಶದಲ್ಲಿ ವೃತ್ತಪತ್ರಿಕೆಗಳು ದಿನದಿನಕ್ಕೆ ಹೆಚ್ಚಾದ ಕಾರಣ ಕೇವಲ 50 ವರ್ಷಗಳೊಳಗಾಗಿ ಜಪಾನ್ ದೇಶೀಯರು ಪ್ರಪಂಚದ ಪ್ರಮುಖ ದೇಶೀಯರೊಳಗೆ ತಾವೂ ಪ್ರಮುಖರಾಗಿ ಪ್ರಖ್ಯಾತಿ ಪಡೆದಿರುತ್ತಾರೆ ಎಂದು ಅವರು ವಾದಿಸಿದ್ದಾರೆ. ಮುಂದುವರಿಯುತ್ತ ಅವರು ಯಾವ ಜನರ ಕ್ಷೇಮವನ್ನು ಈ ಪತ್ರಿಕೆ ಮುಖ್ಯವಾಗಿ ಉದ್ದೇಶಿಸಿರುವುದೋ ಅವರ ಪುರೋಭಿವೃದ್ಧಿಯಿಂದ ದೇಶಕ್ಕೆ ಔನ್ನತ್ಯವುಂಟಾಗುವುದರಲ್ಲಿ ಸಂದೇಹವಿಲ್ಲ ಎಂದು ಹೇಳಿ, ಪಂಡಿತ–ಪಾಮರರು, ಹಳ್ಳಿಗರು–ಪಟ್ಟಣಿಗರ ಮಧ್ಯೆ ಅನ್ಯೋನ್ಯತೆ ಬೆಳೆಯುವುದು ದೇಶದ ಅಭಿವೃದ್ಧಿಗೆ ಅತ್ಯಂತ ಸಹಕಾರಿಯಾಗುವುದೆಂಬ ವಿಷಯ ಪ್ರಸ್ತಾಪಿಸಿ, ದೇಶೋನ್ನತಿ ಕಾರಣ ಭೂತವಾದ ಏರ್ಪಾಡುಗಳನ್ನು ಮಾಡಿಕೊಳ್ಳಬೇಕಾದರೆ ಇಂಥ ಅನ್ಯೋನ್ಯತೆ ಅತ್ಯಾವಶ್ಯಕವಾಗಿರುತ್ತದೆಂದು ಹೇಳಿ, ಐಕಮತ್ಯಕ್ಕೆ ನ್ಯೂನತೆ ಉಂಟಾಗದಂತೆ ಪ್ರಯತ್ನಪಡಬೇಕೆಂಬುವುದು ತಮ್ಮ ಉದ್ದೇಶವಾಗಿರುತ್ತದೆಂದು ಘೋಷಿಸಿ ಈ ತಮ್ಮ ಪ್ರಯತ್ನದಲ್ಲಿ "ಸರ್ವರೂ ಚೈತನ್ಯ ಕೊಟ್ಟು ಇದನ್ನು ಅಭಿವೃದ್ಧಿಪಡಿಸತಕ್ಕ ರೀತಿಗಳನ್ನು ತೋರಿಸಿಕೊಡುತ್ತ ಬರುವರೆಂದು ದೃಢವಾಗಿ ನಂಬಿದ್ದೇವೆ" ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.



ಒಕ್ಕಲಿಗರ ಪತ್ರಿಕೆ.

ಈ ಪತ್ರಿಕೆಯಲ್ಲಿ ಅನೇಕ ವಿಷಯಗಳನ್ನು ಕುರಿತು ಬಗೆಬಗೆಯ ಉತ್ತಮ ಲೇಖನಗಳಲ್ಲದೆ ಒಳದೇಶದ ವೃತ್ತಾಂತ, ವರ್ತಮಾನ ಸಂಗ್ರಹ, ಮೈಸೂರು ಗೆಜೆಟ್, ಇಂಡಿಯ ದೇಶದ ವೃತ್ತಾಂತ, ಸರ್ಕಾರಿ ಹುಕುಂಗಳು–ಎಂಬ ಶಿರೋನಾಮೆಗಳಲ್ಲಿ ಎಲ್ಲ ಕಡೆಗಳ ಮುಖ್ಯ ವಾರ್ತೆಗಳು ಪ್ರಕಟವಾಗುತ್ತಿದ್ದುವು. ಮೊದಲನೆಯ ಸಂಚಿಕೆಯಲ್ಲಿ ಪ್ರಕಟವಾದ ದವಸದ ಬ್ಯಾಂಕುಗಳು ಎಂಬ ಲೇಖನದ ಒಂದು ವಾಕ್ಯ ಹೀಗಿದೆ: ಗ್ರಾಮಸ್ಥರಿಗೆ ಸಾಧ್ಯವಾದ ಮಟ್ಟಿಗೂ ಬ್ಯಾಂಕುಗಳಿಂದಾಗುವ ಪ್ರಯೋಜನಗಳನ್ನು ಹೇಳಿ, ಅವರನ್ನು ಪರಸ್ಪರ ಸಹಾಯಕರನ್ನಾಗಿ ಮಾಡಿ, ಹಣಕ್ಕೆ ಬದಲಾಗಿ ದವಸವನ್ನು ಬಂಡವಾಳಕ್ಕೆ ಕೊಡುವಂತೆ ಬೋಧಿಸಿದರೆ ಸಾರ್ಥಕವಾಗುತ್ತದೆಂದು ತಿಳಿದು ನಮ್ಮ ಘನ ಸರ್ಕಾರದವರು ಗ್ರಾಮಗಳಲ್ಲಿ ದವಸದ ಬ್ಯಾಂಕುಗಳನ್ನು ಏರ್ಪಡಿಸುತ್ತಿದ್ದಾರೆ.

ಸರಳ ನೇರ ನಿರೂಪಣೆ, ವಸ್ತುನಿಷ್ಠಾತ್ಮಕ ವಿವೇಚನೆ, ಸಾಮಾನ್ಯನ ಹಿತದೃಷ್ಟಿಯ ಪ್ರತಿಪಾದನೆ–ಇವುಗಳಿಗೆ ಈ ಪತ್ರಿಕೆಯ ಲೇಖನಗಳು ಹೆಸರಾಗಿದ್ದವು. ಕೆ.ಎಂ. ತಿಮ್ಮೇಶಪ್ರಭು, ಕೆ.ಎಚ್. ರಾಮಯ್ಯ, ಬಿ.ಹನುಮಂತೇಗೌಡ, ಬಿ.ಪುಟ್ಟಸ್ವಾಮಯ್ಯ, ಟಿ.ಆರ್.ನರಸಿಂಹಯ್ಯ, ಬಿ.ಪುಟ್ಟಯ್ಯ, ಎಚ್.ಕೆ.ವೀರಣ್ಣಗೌಡ, ಡಿ.ಆರ್. ರಾಮಯ್ಯ ಅವರು ಈ ಪತ್ರಿಕೆಯ ಸಂಪಾದಕರಾಗಿದ್ದರು. 1928ರಲ್ಲಿ ವೀರಣ್ಣಗೌಡರ ನೇತೃತ್ವದಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ಮೊದಲ ಬಾರಿಗೆ ವಿಶೇಷ ಸಂಚಿಕೆ ಪ್ರಕಟಿಸಿದ ಹೆಗ್ಗಳಿಕೆ ಒಕ್ಕಲಿಗರ ಪತ್ರಿಕೆಯದು. ಸು. 66 ವರ್ಷ ಕಾಲ ಜೀವಂತವಾಗಿದ್ದ ಪತ್ರಿಕೆ 1972 ಫೆಬ್ರವರಿ 6ರಂದು ಪ್ರಕಟಣೆ ನಿಲ್ಲಿಸಿತು.

(ಎಚ್.ಕೆ.ವಿ.; ಎಂ.ಬಿ.ಎಸ್.)

**ಒಕ್ಕಲುತನ:** ಭೂಮಾಲೀಕರಿಗೂ ಅವರ ಭೂಮಿಯನ್ನು ಸಾಗುವಳಿ ಮಾಡುವ ಭೂರಹಿತ ರೈತರಿಗೂ ನಡುವಣ ಸಂಬಂಧವನ್ನು ಸೂಚಿಸುವ ಶಬ್ದ (ಟೆನನ್ಸಿ). ಭೂ ಹಿಡುವಳಿ, ಕೃಷಿ ಎಂಬ ಅರ್ಥಗಳಲ್ಲೂ ಈ ಶಬ್ದವನ್ನು ಪರ್ಯಾಯವಾಗಿ ಬಳಸಲಾಗುತ್ತಿದೆ. ಪ್ರಪಂಚದ ಸುಮಾರು ಐದನೆಯ ಮೂರರಷ್ಟು ಜನಕ್ಕೆ ವ್ಯವಸಾಯವೇ ಜೀವನಾಧಾರ. ಇವರಲ್ಲಿ ಬಹುಸಂಖ್ಯಾತರು ಜಮೀನಿನ ಒಡೆಯರಲ್ಲ. ಇವರು ಭೂಮಾಲೀಕರಿಂದ ಸಾಗುವಳಿ ಮಾಡುವ ಹಕ್ಕು ಪಡೆದಂಥವರು. ಇದನ್ನು ಪಡೆಯಲು ಇವರು ಭೂಮಾಲೀಕರಿಗೊ ಅವರ ಮಧ್ಯವರ್ತಿಗಳಿಗೊ ಉತ್ಪನ್ನದ ಒಂದು ಭಾಗವನ್ನೊ ಒಂದು ನಿರ್ದಿಷ್ಟ ಪ್ರಮಾಣದ ಹಣವನ್ನೊ ಸೇವೆಯನ್ನೊ ಸಲ್ಲಿಸುತ್ತಾರೆ. ಈ ಕಟ್ಟುಪಾಡಿನಂತೆ ಸಾಗುವಳಿ ಮಾಡುವುದೇ ಒಕ್ಕಲು ಪದ್ಧತಿ. ಜಮೀನುದಾರನಿಂದ ಸಾಗುವಳಿ ಹಕ್ಕನ್ನು ಪ್ರತಿಫಲ ಕೊಟ್ಟು ಪಡೆಯುವಾತನೆ ಒಕ್ಕಲು.

ಎಲ್ಲಿಯವರೆಗೆ ಜಮೀನಿನ ಹಂಚಿಕೆಯಲ್ಲಿ ಅಸಮಾನತೆ ಇರುತ್ತದೆಯೊ ಅಲ್ಲಿಯವರೆಗೆ ಒಕ್ಕಲುತನ ಇದ್ದೇ ಇರುತ್ತದೆ. ಹೀಗಾಗಿ ಒಕ್ಕಲುತನದಿಂದ ಜೀವಿಸುವವರ ಪ್ರಮಾಣ ಅನೇಕ ದೇಶಗಳಲ್ಲಿ ಸಾಕಷ್ಟು ಇದೆ. ಉದಾಹರಣೆಗೆ, ವ್ಯವಸಾಯವನ್ನೇ ಜೀವನಾಧಾರವಾಗಿಟ್ಟು ಕೊಂಡಿರುವವರಲ್ಲಿ ಒಕ್ಕಲುಗಳ ಶೇಕಡಾ ಪ್ರಮಾಣ ಇಂಗ್ಲೆಂಡಿನಲ್ಲಿ 65, ಸ್ಕಾಟ್ಲೆಂಡಿನಲ್ಲಿ 77 ಮತ್ತು ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ 20ಕ್ಕಿಂತ ಅಧಿಕ. ಭಾರತದಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯ ಆರಂಭದ ಹೊತ್ತಿಗೆ ಶೇ. 40 ರಷ್ಟು ಸಾಗುವಳಿ ಜಮೀನು ಮಧ್ಯವರ್ತಿ ಹಿಡುವಳಿ ಪದ್ಧತಿಯಲ್ಲೂ ಉಳಿದ ಜಮೀನು ರೈತವಾರಿ ಹಿಡುವಳಿ ಪದ್ಧತಿಯಲ್ಲೂ ಇತ್ತು. ಇದರ ಬಹುಪಾಲು ಜಮೀನನ್ನು ಒಕ್ಕಲು ಪದ್ಧತಿಯಲ್ಲಿ ಸಾಗುವಳಿ ಮಾಡಲಾಗುತ್ತಿತ್ತು.

ಒಕ್ಕಲುತನದಿಂದ ಭೂಮಾಲೀಕ ಮತ್ತು ಒಕ್ಕಲು ಒಬ್ಬರಿಗೊಬ್ಬರು ಪೂರಕವಾಗಿ ಕೆಲಸ ಮಾಡಿ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಅವಕಾಶ ಏರ್ಪಡುತ್ತವೆ. ಹೇಗೆಂದರೆ, ಬಂಡವಾಳ ಮತ್ತು ಕಾರ್ಯನಿರ್ವಾಹಕ ಸಾಮರ್ಥ್ಯವನ್ನು ಜಮೀನಿನ ಒಡೆಯ ಒದಗಿಸಬಹುದು. ಶ್ರಮವನ್ನೂ, ನಿಷ್ಠೆಯನ್ನೂ ತನ್ನ ಕೈಲಾದ ಬಂಡವಾಳವನ್ನೂ ಒಕ್ಕಲು ಒದಗಿಸಬಹುದು. ಹೀಗಾಗಿ, ಇಬ್ಬರ ಸಹಕಾರದಿಂದ ವ್ಯವಸಾಯದ ಕಾರ್ಯನಿರ್ವಹಣೆ ಅತಿ ದಕ್ಷತೆಯಿಂದ ನಡೆಯುವ ಸಾಧ್ಯತೆಯಿರುತ್ತದೆ. ಆದರೆ ವಾಸ್ತವದಲ್ಲಿ ಈ ಪದ್ಧತಿಯಲ್ಲಿ ಕೆಲ ಅನಿಷ್ಟ ಅಂಶಗಳಿವೆ.

1. ಈ ಪದ್ಧತಿಯಲ್ಲಿ ಜಮೀನಿನ ಒಡೆತನವೂ ಸಾಗುವಳಿ ಕಾರ್ಯವೂ ಬೇರ್ಪಟ್ಟಿರುವ ಕಾರಣ ಸಾಗುವಳಿ ದಕ್ಷತೆಯಿಂದ ನಡೆಯುವುದು ಸಂದೇಹಾಸ್ಪದ. ಜಮೀನಿನ ಒಡೆತನ ತನ್ನದಲ್ಲದ ಕಾರಣ ಒಕ್ಕಲಿಗೆ ಸಾಗುವಳಿಯ ವಿಷಯದಲ್ಲಿ ಅಧಿಕ ಪ್ರಮಾಣದ ಆಸ್ಥೆ ಇರುವುದಿಲ್ಲ.

2. ಒಕ್ಕಲುತನದ ಅಭದ್ರತೆ: ಭೂಮಾಲೀಕ ಯಾವಾಗ ಬೇಕಾದರೂ ಒಕ್ಕಲನ್ನು ಜಮೀನಿನಿಂದ ಹೊರಹಾಕಬಹುದು. ಈ ಭಯದ ಪರಿಣಾಮವಾಗಿ ಒಕ್ಕಲು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

3.ನೆಲ ತನ್ನದಲ್ಲವಾದ್ದರಿಂದ ಒಕ್ಕಲಿಗೆ ತನ್ನಲ್ಲಿರುವ ಬಂಡವಾಳವನ್ನು ಜಮೀನಿನ ಅಭಿವೃದ್ಧಿಗಾಗಿ ಹೂಡಲು ಪ್ರೇರಣೆ ಇರುವುದಿಲ್ಲ. ಆತ ಒಂದು ವೇಳೆ ಬಂಡವಾಳವನ್ನು ಹೂಡಿದರೂ ನೆಲದೊಡೆಯನಿಂದ ಇದಕ್ಕೆ ತಕ್ಕ ಪರಿಹಾರ ಸಿಗದಿರಬಹುದು.

4. ಆರ್ಥಿಕ ದೃಷ್ಟಿಯಿಂದ ಜಮೀನಿನ ಒಡೆಯ ಅನುಕೂಲಸ್ಥನಾಗಿರುವ ಕಾರಣ ಒಕ್ಕಲಿನಿಂದ ಅಧಿಕ ಪ್ರಮಾಣದ ಗೇಣಿಯನ್ನು ಕಸಿದುಕೊಳ್ಳುತ್ತಾನೆ. ಈ ಕಾರಣದಿಂದ ಒಕ್ಕಲಿನಲ್ಲಿ ಹೆಚ್ಚಾಗಿ ಶ್ರಮವಹಿಸುವ ಪ್ರೇರಣೆ ಇಲ್ಲದಾಗುತ್ತದೆ.

5. ಒಕ್ಕಲಿನ ಬಂಡವಾಳ ಕೊರತೆಯ ಕಾರಣ ಸಾಗುವಳಿ ವಿಧಾನ ಉತ್ತಮಗೊಳ್ಳುವ ಸಾಧ್ಯತೆ ಇಲ್ಲ. ತಾನು ಸಾಗುವಳಿ ಮಾಡುವ ಜಮೀನನ್ನು ಕೊಂಡುಕೊಳ್ಳಲು ಅಶಕ್ತನಾದ್ದರಿಂದ ಆತ ಎಂದೆಂದಿಗೂ ಒಕ್ಕಲಾಗಿಯೇ ಉಳಿಯುವ ಸಂಭವ ಹೆಚ್ಚು.

ಒಕ್ಕಲುತನದ ಸ್ಥಿತಿಯನ್ನು ಸುಧಾರಿಸುವ ಯಾವುದೇ ಕ್ರಮ ಒಕ್ಕಲಿನಲ್ಲಿ ಅಧಿಕ ಉತ್ಪನ್ನವನ್ನು ಪ್ರೇರೇಪಿಸುವಂತಿರಬೇಕು. ಈ ಧ್ಯೇಯ ಸಾಧನೆಯ ಎರಡು ಬಗೆಯ ಸುಧಾರಣೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು ಜಪಾನ್, ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಡೆನ್ಮಾರ್ಕ್‌ಗಳಂತೆ ಕಾಲಕ್ರಮದಲ್ಲಿ ಒಕ್ಕಲೇ ತಾನು ಸಾಗುವಳಿ ಮಾಡುವ ಜಮೀನಿನ ಮಾಲೀಕ ಆಗುವಂಥ ಧೋರಣೆಗಳನ್ನು ಜಾರಿಗೆ ತರತಕ್ಕದ್ದು ಒಂದು ಬಗೆ. ಇಂಗ್ಲೆಂಡ್ ಹಾಗೂ ಭಾರತದಲ್ಲಿ ಕೈಗೊಂಡಿರುವಂತೆ ಒಕ್ಕಲು ಪದ್ಧತಿಯನ್ನೇ ಉತ್ತಮಪಡಿಸುವಂಥ ಸುಧಾರಣೆ ಇನ್ನೊಂದು ಬಗೆ. ಇಲ್ಲಿ ಒಕ್ಕಲಿಗೆ ಕಾಯಿದೆಯ ಮೂಲಕ ಒಡೆತನದ ಹಕ್ಕನ್ನೂ ಒಕ್ಕಲುತನದ ಭದ್ರತೆಯನ್ನೂ ಗೇಣಿಯ ಕಡಿತಗಳನ್ನೂ ಮಂಜೂರು ಮಾಡುವ ಪ್ರಯತ್ನ ಸಾಗಿದೆ.

**ಭಾರತದಲ್ಲಿ:** ಭಾರತದಲ್ಲಿ ಒಕ್ಕಲುತನ ಸುಧಾರಣೆಯ ಎರಡು ಧ್ಯೇಯಗಳಿವೆ:

1. ಭೂಸ್ವಾಮ್ಯ ವ್ಯವಸ್ಥೆಯಲ್ಲಿನ ಅಡಚಣೆಗಳ ನಿರ್ಮೂಲನೆ. 2. ಭೂಸ್ವಾಮ್ಯ ಸಂಬಂಧ ಅರ್ಥವ್ಯವಸ್ಥೆಯಲ್ಲಿ ಆಗುವ ಅನ್ಯಾಯಗಳ ಪರಿಹಾರ. ಇವನ್ನು ಸಾಧಿಸಲು ಗೇಣಿ ಪಡೆಯುವ ಮಧ್ಯವರ್ತಿಗಳನ್ನು ನಿವಾರಿಸುವ ಮತ್ತು ಒಕ್ಕಲುತನವನ್ನು ಸುಧಾರಿಸುವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಪ್ರಥಮ ಪಂಚವಾರ್ಷಿಕ ಯೋಜನೆಯ ಉದ್ಘಾಟನೆಯಾದಾಗಿನಿಂದ ರಾಜ್ಯಸರ್ಕಾರಗಳು ಕಾನೂನಿನ ಮೂಲಕ ಜಮೀನ್ದಾರರು, ಜಹಗೀರುದಾರರು ಹಾಗೂ ಇನಾಂದಾರರು–ಇಂಥ ಮಧ್ಯವರ್ತಿಗಳ ನಿವಾರಣೆಯ ಕಾರ್ಯಕ್ರಮದಲ್ಲಿ ತೊಡಗಿದ್ದು ಈ ಕಾರ್ಯ ಈಗ ಪೂರ್ಣವಾಗಿದೆ. ಇವರು ಸರ್ಕಾರಕ್ಕೆ ಒಂದು ನಿರ್ದಿಷ್ಟವಾದ ಸಲಿಕೆಯನ್ನು ಕೊಟ್ಟು ಜಮೀನಿನ ಒಡೆತನದ ಹಕ್ಕನ್ನು ಪಡೆದವರು. ಇವರು ಅಧಿಕ ಪ್ರಮಾಣದ ಗೇಣಿ ರೂಪದ ಪ್ರತಿಫಲಕ್ಕೆ ಜಮೀನಿನ ಸಾಗುವಳಿಯ ಹಕ್ಕನ್ನು ಒಕ್ಕಲಿಗೆ ಕೊಟ್ಟಿದ್ದರು. ಹೀಗಾಗಿ ರೈತರು ಮಧ್ಯವರ್ತಿಗಳೊಡನೆ ಸಂಬಂಧವನ್ನಿಟ್ಟುಕೊಂಡಿದ್ದರು. ಈ ಸುಧಾರಣೆಯಿಂದ ಸುಮಾರು ಎರಡು ಕೋಟಿ ರೈತರು ಈಗ ಸರ್ಕಾರದೊಡನೆ ನೇರ ಸಂಬಂಧವನ್ನು ಕಲ್ಪಿಸಿಕೊಂಡಿದ್ದಾರೆ. ಎಂದರೆ ಇವರು ನ್ಯಾಯಸಮ್ಮತವಾದ ಗೇಣಿಯನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ.

ಮಧ್ಯವರ್ತಿಗಳ ನಿವಾರಣೆಯಿಂದ ರೈತರ ಸಮಸ್ಯೆಗಳು ಪರಿಹಾರವಾದಂತಾಗಲಿಲ್ಲ. ರೈತವಾರಿ ಪ್ರದೇಶದಲ್ಲಿ ಸ್ವತಃ ವ್ಯವಸಾಯ ಮಾಡದ ಸಣ್ಣಪುಟ್ಟ ಭೂಮಾಲೀಕರೊಡನೆ ನೇರ ಸಂಬಂಧವಿರುವ ರೈತರು ಗೇಣಿ, ಒಕ್ಕಲುತನ ಭದ್ರತೆ ಹಾಗೂ ಒಡೆತನದ ಹಕ್ಕಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಎದುರಿಸಲೇಬೇಕಿತ್ತು. ಇವನ್ನು ಪರಿಹರಿಸುವ ದೃಷ್ಟಿಯಿಂದ ಪ್ರತಿ ರಾಜ್ಯ ಸರ್ಕಾರವೂ ಒಕ್ಕಲು ಪದ್ಧತಿಯನ್ನು ಉತ್ತಮಗೊಳಿಸುವ ಕಾಯಿದೆ ಮಾಡಿದೆ.

ರಾಜ್ಯಸರ್ಕಾರಗಳ ಕಾಯಿದೆಗಳಿಗಿಂತ ಮೊದಲು ಒಕ್ಕಲುಗಳು ಉತ್ಪನ್ನದ ಅರ್ಧಕ್ಕಿಂತ ಅಧಿಕ ಪ್ರಮಾಣವನ್ನು ಗೇಣಿಯಾಗಿ ಕೊಡುತ್ತಿದ್ದರು. ಜೊತೆಗೆ, ಅನೇಕ ಸಲಿಕೆಗಳನ್ನು ಕೊಡುತ್ತಿದ್ದರು. ಈ ಪ್ರಮಾಣದ ಗೇಣಿ ನ್ಯಾಯಸಮ್ಮತವಾದುದಲ್ಲವೆಂದೂ ಗೇಣಿ ಉತ್ಪನ್ನದ 1/4 ಇಲ್ಲವೆ 1/5 ಭಾಗದಷ್ಟಿರಬೇಕೆಂದೂ ಪ್ರಥಮ ಯೋಜನೆ ಅಭಿಪ್ರಾಯಪಟ್ಟಿತು. ಅಲ್ಲಿಂದೀಚೆಗೆ ರಾಜ್ಯಸರ್ಕಾರಗಳು ಕಾಯಿದೆಯ ಮೂಲಕ ಗೇಣಿಯ ಪ್ರಮಾಣವನ್ನು ನಿರ್ಧರಿಸಿವೆ. ಗುಜರಾತ್, ಮಹಾರಾಷ್ಟ್ರ ಮತ್ತು ರಾಜಾಸ್ಥಾನಗಳಲ್ಲಿ ಗೇಣಿಯ ಪ್ರಮಾಣ ಗರಿಷ್ಟವಾಗಿ ಉತ್ಪನ್ನದ 1/6 ರಷ್ಟಿರಬೇಕೆಂದೂ ಅಸ್ಸಾಂ, ಕೇರಳ, ಒರಿಸ್ಸ ಮತ್ತು ಕೇಂದ್ರದ ಆಡಳಿತಕ್ಕೊಳಪಟ್ಟ ಪ್ರದೇಶಗಳಲ್ಲಿ 1/4 ಭಾಗ ಇಲ್ಲವೆ ಕಡಿಮೆಯಾಗಿರಬೇಕೆಂದೂ ಇನ್ನು ಕೆಲವು ರಾಜ್ಯಗಳಲ್ಲಿ 1/3 ರಷ್ಟು ಎಂದೂ ನಿರ್ಧಾರ ಮಾಡಲಾಗಿದೆ.

ಉಚ್ಚಾಟನೆಯನ್ನು ತಡೆಗಟ್ಟಲು ಒಕ್ಕಲುತನದ ಭದ್ರತೆಯನ್ನು ನಿಶ್ಚಿತಪಡಿಸುವ ಧ್ಯೇಯದ ಕಾಯಿದೆಗಳನ್ನು ಜಾರಿಗೊಳಿಸಲಾಯ್ತು. ಈ ಎಲ್ಲ ಕಾಯಿದೆಗಳಲ್ಲೂ ಮೂರು ಮುಖ್ಯ ಕಟ್ಟುಪಾಡುಗಳಿವೆ: 1. ಉಚ್ಚಾಟನೆ ಕಾನೂನಿನ ರೀತಿಯಲ್ಲಿ ಮಾತ್ರ ನಡೆಯತಕ್ಕದ್ದು. 2. ಸ್ವತಃ ಸಾಗುವಳಿ ಮಾಡುವ ಕಾರಣದಿಂದ ಮಾತ್ರ ಜಮೀನಿನ ಮಾಲೀಕ ಭೂಮಿಯನ್ನು ಒಕ್ಕಲಿನಿಂದ ವಾಪಸ್ಸು ಪಡೆಯಬಹುದು. 3. ಅಂಥ ಸಂದರ್ಭಗಳಲ್ಲಿ ಒಕ್ಕಲಿಗೆ ಕನಿಷ್ಠ ಪ್ರಮಾಣದ ನೆಲವನ್ನು ಗೇಣಿಯ ಆಧಾರದ ಮೇಲೆ ಸಾಗುವಳಿಗೆ ಬಿಟ್ಟುಕೊಡಬೇಕು. ಉತ್ತರಪ್ರದೇಶ, ದೆಹಲಿ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಒಕ್ಕಲಿನಿಂದ ಜಮೀನನ್ನು ಹಿಂದಕ್ಕೆ ಪಡೆಯುವ ಅವಕಾಶವಿಲ್ಲ. ಬಿಹಾರ, ಗುಜರಾತ್, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಒರಿಸ್ಸ, ರಾಜಾಸ್ಥಾನ ಮತ್ತು ಮಣಿಪುರ ರಾಜ್ಯಗಳಲ್ಲಿ ಜಮೀನನ್ನು ಹಿಂದಕ್ಕೆ ಪಡೆಯಬೇಕಾದ ಸಂದರ್ಭದಲ್ಲಿ ಒಕ್ಕಲಿಗೆ ಜಮೀನಿನ ಒಂದು ಭಾಗವನ್ನು ಸಾಗುವಳಿಗಾಗಿ ಬಿಟ್ಟುಕೊಡಬೇಕು ಎನ್ನುವ ಕರಾರಿನ ಮೇಲೆ ಈ ಅವಕಾಶವಿದೆ.

ಒಕ್ಕಲುತನದ ಭದ್ರತೆ ಹಾಗೂ ಗೇಣಿ ಕಡಿತ ಒಕ್ಕಲುತನದ ಸುಧಾರಣೆಯ ಮೊದಲ ಹಂತ. ಇದರ ಮುಖ್ಯ ಧ್ಯೇಯ ಭೂಮಿಯ ಒಡೆತನದ ಹಕ್ಕನ್ನು ಆದಷ್ಟು ಮಂದಿ ಒಕ್ಕಲುಗಳಿಗೆ ಕೊಡಿಸುವಂಥದು. ಮಾಲೀಕರೆ ಹಿಂದಕ್ಕೆ ಪಡೆದು ಸಾಗುವಳಿ ಮಾಡುವ ಸಾಧ್ಯತೆ ಇಲ್ಲದಿರುವ ಜಮೀನನ್ನು ಸಾಗುವಳಿದಾರನೇ ಕೊಂಡುಕೊಳ್ಳಬಹುದಾಗಿದ್ದೂ ಆತ ಈ ಅವಕಾಶವನ್ನು ಬಳಸಿಕೊಳ್ಳದಿರುವುದರ ಕಾರಣ, ಸರ್ಕಾರವೇ ಇಂಥ ಜಮೀನನ್ನು ವಶಪಡಿಸಿಕೊಂಡು ಅನಂತರ ಒಕ್ಕಲುಗಳೊಡನೆ ನೇರ ಸಂಬಂಧ ಕಲ್ಪಿಸಬೇಕೆಂದು ಎರಡನೆಯ ಯೋಜನೆ ಸಲಹೆ ನೀಡಿತು. ಆ ನಿಟ್ಟಿನಲ್ಲಿ ಕೆಲ ಮಟ್ಟಿನ ಪ್ರಗತಿಯಾಯ್ತು. ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ರಾಜಾಸ್ಥಾನಗಳಲ್ಲಿ ಅಂಥ ಜಮೀನಿನ ಸಾಗುವಳಿದಾರನೇ ಒಡೆಯನೆಂದೇ ಘೋಷಿಸಿ ಅವನೇ ಹಳೆಯ ಮಾಲೀಕನಿಗೆ ಪರಿಹಾರಧನ ಕೊಡುವಂತೆ ಕಾಯಿದೆ ಮಾಡಲಾಯಿತು. ದೆಹಲಿ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಸರ್ಕಾರವೇ ಪರಿಹಾರ ಕೊಟ್ಟು ಭೂಮಿಯ ಮಾಲೀಕರಿಂದ ಒಡೆತನದ ಹಕ್ಕನ್ನು ಪಡೆದುಕೊಂಡು ಸಾಗುವಳಿದಾರರಿಗೆ ಭೂಮಿಯನ್ನು ವಹಿಸಿಕೊಡುವಂತೆಯೂ ಅವರಿಂದ ಪರಿಹಾರಧನವನ್ನು ತಾನೇ ಕಂತುಗಳಲ್ಲಿ ವಸೂಲಿ ಮಾಡಿಕೊಳ್ಳುವಂತೆಯೂ ಕಾಯಿದೆ ಮಾಡಲಾಗಿದೆ. ಕೇರಳ ಮತ್ತು ಉತ್ತರ ಪ್ರದೇಶಗಳಲ್ಲಿ ಸರ್ಕಾರ ಮಾಲೀಕರಿಂದ ಜಮೀನಿನ ಒಡೆತನದ ಹಕ್ಕನ್ನು ಪಡೆದುಕೊಂಡಿದೆ. ಇಲ್ಲಿ ರೈತರು ನ್ಯಾಯಸಮ್ಮತವಾದ ಗೇಣಿಯನ್ನು ಸರ್ಕಾರಕ್ಕೆ ಕೊಟ್ಟು ಜಮೀನನ್ನು ಸರ್ಕಾರಿ ಒಕ್ಕಲಿನಂತೆ ಸಾಗುವಳಿ ಮಾಡಬಹುದು.

ಇಲ್ಲವೆ ಇವರು ಪರಿಹಾರ "ಧನವನ್ನು ಕೊಟ್ಟು ಸರ್ಕಾರದಿಂದ ಜಮೀನಿನ ಒಡೆತನವನ್ನು ಪಡೆಯಬಹುದು. ಉಳಿದ ರಾಜ್ಯಗಳಲ್ಲಿ ಒಕ್ಕಲುಗಳೇ ಪರಿಹಾರಧನವನ್ನು ನೇರವಾಗಿ ಜಮೀನಿನ ಮಾಲೀಕರಿಗೆ ಕೊಟ್ಟು ಒಡೆತನದ ಹಕ್ಕನ್ನು ಪಡೆದುಕೊಳ್ಳುವಂತೆ ಅನುಕೂಲ ಕಾಯಿದೆಗಳನ್ನು ಮಾಡಲಾಗಿದೆ.

ಕಾಯಿದೆಯ ಮೂಲಕ ಸರ್ಕಾರ ಇಷ್ಟೆಲ್ಲ ಅನುಕೂಲಗಳನ್ನು ಮಾಡಿಕೊಟ್ಟಿದ್ದರೂ ನಿಜಾರ್ಥದಲ್ಲಿ ಒಕ್ಕಲಿನ ಪರಿಸ್ಥಿತಿ ಅಷ್ಟೇನೂ ಸುಧಾರಿಸಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ, ರೈತನಿಗೆ ಕಾಯಿದೆಯ ನಿಯಮಗಳ ಅರಿವಿಲ್ಲದ ಕಾರಣ ಆತ ಕಾಯಿದೆಯಿಂದ ಪ್ರಯೋಜನ ಪಡೆಯಲು ಪ್ರಯತ್ನಿಸುತ್ತಿಲ್ಲ ಅರಿವಿದ್ದರೂ ಕಾಯಿದೆಯಿಂದ ಪ್ರಯೋಜನ ಹೊಂದಲು ಅಧಿಕ ವೆಚ್ಚ ತಗಲುತ್ತದೆ. ಕೋರ್ಟು ಕಛೇರಿಗಳಿಗೆ ಓಡಾಡುವ ಖರ್ಚು ಅವನ ಶಕ್ತಿ ಮೀರಿದ್ದು. ಅಲ್ಲದೇ ಎಲ್ಲಿಯವರೆಗೆ ಜಮೀನಿನ ಮೇಲೆ ಒತ್ತಡವಿರುತ್ತದೆಯೊ ಅಲ್ಲಿಯ ವರೆಗೆ ಯಾವ ರೀತಿಯ ಕಾಯಿದೆಯೂ ಪರಿಣಾಮಕಾರಿಯಾಗುವುದಿಲ್ಲ. ಕಾನೂನು ನಿಯಮಗಳಿಂದ ತಪ್ಪಿಸಿಕೊಳ್ಳಲು ಅನೇಕ ಜಮೀನು ಮಾಲೀಕರು ತಮ್ಮ ಸಾಗುವಳಿದಾರರೊಂದಿಗೆ ಸುಳ್ಳು ಒಪ್ಪಂದಗಳನ್ನು ಮಾಡಿಸಿಕೊಂಡಿರುತ್ತಾರೆ. ತಮ್ಮ ಜೀವನಕ್ಕೆ ಜಮೀನೇ ಆಧಾರವಾದ್ದರಿಂದ ಸಾಗುವಳಿದಾರರು ಇಂಥ ಒಪ್ಪಂದಗಳಿಗೆ ಬದ್ಧರಾಗುವುದು ಅನಿವಾರ್ಯ. ಉದಾಹರಣೆಗೆ, ಅನೇಕ ಜಮೀನು ಮಾಲೀಕರು ತಮ್ಮ ಸಾಗುವಳಿದಾರರಿಂದ ಅವರು ಕೇವಲ ಕೂಲಿಯಾಳುಗಳು ಎಂದು ಬರೆಸಿಕೊಳ್ಳುವುದುಂಟು. ಹಾಗೆಯೇ ಒಕ್ಕಲುತನದ ಭದ್ರತೆಯ ನಿಯಮದಿಂದ ತಪ್ಪಿಸಿಕೊಳ್ಳಲು ಜಮೀನು ಮಾಲೀಕರು ಸಾಗುವಳಿದಾರರೊಂದಿಗೆ ಒಪ್ಪಂದಕ್ಕೆ ಬಂದು ಅವರೇ ಸ್ವಪ್ರೇರಣೆಯಿಂದ ಜಮೀನನ್ನು ಬಿಟ್ಟುಕೊಟ್ಟಂತೆ ಮಾಡಿ ಅಧಿಕ ಪ್ರಮಾಣದ ಉಚ್ಚಾಟನೆ ನಡೆದಿವೆ. ಇದನ್ನು ತಪ್ಪಿಸಲು ಎರಡನೆಯ ಯೋಜನೆ ಎರಡು ಸಲಹೆಗಳನ್ನು ನೀಡಿತು: 1. ಸ್ವಪ್ರೇರಣೆಯಿಂದ ಜಮೀನನ್ನು ಬಿಟ್ಟುಕೊಡುವ ಹಾಗಿದ್ದರೆ ರೆವೆನ್ಯೂ ಅಧಿಕಾರಿಯ ಮುಂದೆ ರಿಜಿಸ್ಟರ್ ಆಗದ ಹೊರತು ಅಂತ ವ್ಯವಸ್ಥೆಯನ್ನು ಒಪ್ಪಕೂಡದು. 2. ಸ್ವಪ್ರೇರಣೆಯಿಂದ ಬಿಡಲಾದ ಜಮೀನಿನ ಬಗ್ಗೆ, ಮಾಲೀಕ ತಾನು ಹಿಂದಕ್ಕೆ ಪಡೆದುಕೊಳ್ಳಬಹುದಾದ ಹಕ್ಕು ಎಷ್ಟಿದೆಯೊ ಅಷ್ಟು ಮಾತ್ರ ಜಮೀನನ್ನು ಸ್ವಯಂ ಸಾಗುವಳಿಗೆ ಪಡೆದುಕೊಳ್ಳಬೇಕು. ಆದರೆ ಕಾಯಿದೆಗಳು ಈ ಸಲಹೆಗಳನ್ನು ಗಮನಕ್ಕೆ ತೆಗೆದುಕೊಂಡ ಹಾಗೆ ಕಾಣಲಿಲ್ಲ.

ಹೀಗಾಗಿ ಕಾನೂನಿನ ಪ್ರಯೋಜನಗಳು ಅನೇಕ ಸಾಗುವಳಿದಾರರಿಗೆ ಸಿಗುತ್ತಿಲ್ಲ. ಪ್ರಾಯಶಃ ಕಾಯಿದೆಗಳ ನಿಯಮಗಳನ್ನು ಸರ್ಕಾರ ದಕ್ಷತೆಯಿಂದ ಕಾರ್ಯರೂಪಕ್ಕೆ ತಂದರೆ ಒಕ್ಕಲುಗಳ ಸ್ಥಿತಿಗತಿ ಉತ್ತಮಗೊಳ್ಳಬಹುದು. ಒಕ್ಕಲುತನ ಸುಧಾರಣೆಯ ನಿಯಮಗಳನ್ನು ಕಾರ್ಯರೂಪಕ್ಕೆ ತಂದ ಪಕ್ಷದಲ್ಲಿ ರೈತರು ಅಧಿಕ ಉತ್ಪನ್ನ ಬೆಳೆಯಲು ಉತ್ತೇಜನ ನೀಡಬಹುದು. ಆದರೆ ಉತ್ಪಾದನೆ ಹೆಚ್ಚಿಸಲು ಒಕ್ಕಲುತನದ ಸಮಸ್ಯೆಗಳ ಪರಿಹಾರ ಒಂದು ಕ್ರಮ ಮಾತ್ರ. ಸಣ್ಣ ಪ್ರಮಾಣದ ಹಿಡುವಳಿಗಳು, ಸಾಗುವಳಿಗೆ ಅಗತ್ಯ ಹಣಕಾಸಿನ ಕೊರತೆ, ಸಾಂಪ್ರದಾಯಿಕ ಬೇಸಾಯ ವಿಧಾನಗಳು-ಇವು ಇತರ ಸಮಸ್ಯೆಗಳು. ಈ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸಿದರೆ ಮಾತ್ರ ಉತ್ಪನ್ನದ ಪ್ರಮಾಣವನ್ನು ಹೆಚ್ಚಿಸುವ ಸಾಧ್ಯತೆಯಿದೆ. ಇದಕ್ಕಾಗಿ ಸಹಕಾರಿ ಬೇಸಾಯ ಮುಂತಾದ ಕ್ರಮಗಳನ್ನು ಸರ್ಕಾರ ಪ್ರಯೋಗಿಸಬಹುದು.

(ಎ.ಬಿ.ಎ.)

**ಒಕ್ಕುವ ಯಂತ್ರ:** ಪೈರಿನಿಂದ ಕಾಳುಗಳನ್ನು ಬೇರ್ಪಡಿಸುವ ಸಲಕರಣೆ. ಆದಿಮಾನವ ಕೃಷಿಯನ್ನು ಎಂದು ಆರಂಭಿಸಿದನೋ ತಿಳಿಯದು. ಆದರೆ ಅಂದೇ ಎರಡು ಮುಖ್ಯ ಸಮಸ್ಯೆಗಳನ್ನು ಎದುರಿಸಬೇಕಾಯಿತು-ಪೈರಿನ ಕೊಯ್ಲು ಹಾಗೂ (ಕೊಯ್ಲು ಮಾಡಿದ ಪೈರಿನಿಂದ) ಕಾಳುಗಳ ಒಕ್ಕಣೆ. ಈ ದಿಶೆಯಲ್ಲಿ ಅವನು ರಚಿಸಿದ ಮೊದಲ ಸಲಕರಣೆ ತೆನೆಗೋಲು. ಕೊಯ್ಲಿನ ಕೆಲಸದಲ್ಲಿ ಮಾತ್ರ ಉಪಯೋಗಿಸುವ ಕುಡುಗೋಲಿನ ಬಳಕೆ ಬಂದದ್ದು ಪ್ರ.ಶ.ಪೂ. ಸು.3000 ವರ್ಷಗಳಿಂದೀಚೆಗೆ. ಕೋಲ್ಗತ್ತಿಯ ಬಳಕೆ ಇನ್ನೂ ಈಚಿನದು. ಈಗಲೂ ಭಾರತದಲ್ಲಿ ಪರಿಸ್ಥಿತಿ ಹೆಚ್ಚು ಸುಧಾರಿಸಿಲ್ಲ. ರೈತರಿಗೆ ಕಟಾವಿಗೆ ಕುಡುಗೋಲೇ ಸಾಧನ. ಕೊಯ್ದ ಪೈರನ್ನು ಬಡಿದೋ ರೋಣಗಲ್ಲು ಹಾಯಿಸಿಯೋ ದನಗಳಿಂದ ತುಳಿಸಿಯೋ ಕಾಳನ್ನು ಬೇರೆ ಮಾಡುತ್ತಾರೆ. ಅದನ್ನು ಗಾಳಿಗೆ ತೂರಿ ಕಾಳನ್ನೂ ಹೊಟ್ಟನ್ನೂ ಬೇರ್ಪಡಿಸಿ ಕಾಳು ಒಕ್ಕಣೆ ಮಾಡುತ್ತಾರೆ. ರೈತರ ದೇಹಶ್ರಮ ಮುಖ್ಯವಾಗಿ ಈ ಎಲ್ಲ ಕೆಲಸಗಳಿಗೂ ಆಧಾರ.

ಪಾಶ್ಚಾತ್ಯ ದೇಶಗಳಲ್ಲಿ ಕಳೆದ ಒಂದೂವರೆ ಶತಮಾನದಲ್ಲಿ ಬೇಸಾಯದ ಅನೇಕ ಕೆಲಸಗಳಿಗೆ ಯಂತ್ರಗಳ ಬಳಕೆ ಜಾರಿಗೆ ಬಂದಿದೆ. ಅಲ್ಲಿ ಬೇಸಾಯದ ಎಲ್ಲ ವಿಧಿಗಳಲ್ಲೂ ಟ್ರ್ಯಾಕ್ಟರ್ ಬಳಕೆಗೆ ಬಂದು ಎತ್ತಿನ ಸ್ಥಾನವನ್ನು ಆಕ್ರಮಿಸಿದೆ. ಹಸಿಹುಲ್ಲಿನ ಕೊಯ್ಲಿಗೆ, ವಿವಿಧ ಕಾಳುಬೆಳೆಗಳು, ಆಲೂಗೆಡ್ಡೆ, ಕಡಲೆಕಾಯಿ, ಸಕ್ಕರೆ ಬೀಟು, ಕಬ್ಬು ಮುಂತಾದ ಬೆಳೆಗಳ ಒಕ್ಕಣೆಗೆ ಯಂತ್ರಗಳು ಸಜ್ಜಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಿದೆ.

ಹುಲ್ಲು ಕೊಯ್ಲಿನ ಯಂತ್ರ (ಮೋವರ್): ಪಟ್ಟಣಗಳಲ್ಲಿನ ಉದ್ಯಾನಗಳಲ್ಲಿ ಹುಲ್ಲುಮೈದಾನ ಅಥವಾ ಹಸಲೆಯನ್ನು ಕತ್ತರಿಸಲು ಬಳಸುವ ಹಸಲೆ ಕತ್ತರಿಯ (ಲಾನ್ ಮೋವರ್) ಕತ್ತರಿಸುವ ಸಜ್ಜಿನಲ್ಲಿ ಒಂದು ಭದ್ರವಾದ ಉಕ್ಕಿನ ಅಗುಳಿ ಇದೆ. ಇದಕ್ಕೆ ಗುಳಿ ಹೊಡೆದ, ಮುಂದಕ್ಕೆ ಚಾಚಿರುವ ಬೆರಳಿನಾಕಾರದ ಪಟ್ಟಿಗಳನ್ನು ಹೊಂದಿಸಿದೆ. ಬೆರಳುಗಳಿಗೆ ತ್ರಿಕೋಣಾಕಾರದ ಉಕ್ಕಿನ ಅಲಗುಗಳನ್ನು ರಿವೆಟ್ ಮಾಡಲಾಗಿದೆ. ಉಕ್ಕಿನ ಅಗುಳಿ ನೆಲಕ್ಕೆ ಸಮೀಪದಲ್ಲಿ ಹಾದು ಅದರ ಬೆರಳುಗಳು ಹುಲ್ಲನ್ನು ಬಾಚುತ್ತವೆ. ಅಲಗುಗಳು ಹುಲ್ಲನ್ನು ಕಟಾಯಿಸುತ್ತವೆ. ಚೌಕಟ್ಟಿಗೆ ಜೋಡಿಸಿದ ಈ ಉಕ್ಕಿನ ಅಗುಳಿಯನ್ನು ಟ್ರ್ಯಾಕ್ಟರಿಗಾಗಲೀ ಕುದುರೆ ಅಥವಾ ಎತ್ತು ಎಳೆಯುವ ಯಾವುದೇ ಸಾಧನಕ್ಕಾಗಲೀ ಜೋಡಿಸುವುದು ಸಾಧ್ಯ. ಹೀಗೆ ಕಟಾವಾದ ಹುಲ್ಲನ್ನು ಉಪಕರಣಗಳಿಂದ ಕೂಡಿಸಿ, ಕತ್ತರಿಸಿ ಪಿಂಡಿ ಕಟ್ಟಿ ದಾಸ್ತಾನು ಮಾಡುತ್ತಾರೆ.

ಮೇವು ಕಟಾವು ಯಂತ್ರ: ಹುಲ್ಲು, ದ್ವಿದಳದ ಪೈರು, ಮೆಕ್ಕೆಜೋಳ ಮತ್ತಿತರ ಬೆಳೆಗಳನ್ನು ಕಟಾಯಿಸಿ, ಒಣಗಿಸದೆ ಹಸಿಯಾಗಿ ರಕ್ಷಿಸಿ ಕಳಿತ ಸ್ಥಿತಿಯಲ್ಲಿ ದನಗಳಿಗೆ ತಿನ್ನಿಸುವುದು ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯ ಪದ್ಧತಿ. ಹಗೇವಿನಲ್ಲಿ ತುಂಬ ಬೇಕಾದರೆ ಮೇವನ್ನು ಸಣ್ಣಸಣ್ಣದಾಗಿ ಕತ್ತರಿಸುವುದು ಆವಶ್ಯಕ. ಆ ಯಂತ್ರಗಳಲ್ಲಿ ತುಂಡರಿಸುವ ಸಲಕರಣೆ, ಉಕ್ಕಿನ ಅಗುಳಿ ಮತ್ತು ತಿರುಗುವ ಕತ್ತರಿ ಅಥವಾ ಅಲಗುಗಳಿರುತ್ತವೆ. ತಮ್ಮ ಮಧ್ಯೆ ಸಿಕ್ಕಿದ ಪೈರನ್ನು ಇವು ತರಿಯುವುವು. ಕತ್ತರಿ ತಿರುಗುವ ವೇಗ ಇಲ್ಲವೇ ಅವುಗಳ ಸಂಖ್ಯೆಯ ಸೂಕ್ತ ಅಳವಡಿಕೆಯಿಂದ ಮೇವಿನ ತುಂಡನ್ನು ಬೇಕಾದಷ್ಟು ಉದ್ದಕ್ಕೆ ಕತ್ತರಿಸಬಹುದು. ಹೀಗೆ ತುಂಡರಿಸಿದ ಹುಲ್ಲು, ಕತ್ತರಿ ವ್ಯವಸ್ಥೆಯ ಅಂಗವಾದ ನಿಯಂತ್ರಣ ಚಕ್ರದ ಮೂಲಕವಾಗಿ ಹಾದು ಯಂತ್ರದ ಹಿಂಬದಿಯಲ್ಲಿ ಶೇಖರಣೆಯಾಗುತ್ತದೆ. ಯಂತ್ರದ ಕೆಲಸಕ್ಕೆ ಟ್ರ್ಯಾಕ್ಟರ್ ಇಲ್ಲವೇ ಡೀಸಲ್ ಎಣ್ಣೆ ಎಂಜಿನುಗಳನ್ನು ಬಳಸಬಹುದು. ಕಟಾವಾಗುವ ಮೇವಿಗೆ ಅನುಗುಣವಾಗಿ ವಿವಿಧ ಸಜ್ಜುಗಳನ್ನು ಯಂತ್ರಕ್ಕೆ ಅಳವಡಿಸುವುದು ಸಾಧ್ಯ.

ಧಾನ್ಯ ಕೊಯ್ಲು ಒಕ್ಕಣೆ ಯಂತ್ರ (ಗ್ರೇಯ್ನ್ ಕಂಬೈನ್): ಧಾನ್ಯ ಅಥವಾ ಏಕದಳ ಪೈರುಗಳನ್ನು ಕಾಳು ಬಲಿತು ತಕ್ಕಮಟ್ಟಿಗೆ ಒಣಗಿದ ಮೇಲೆ ತೆಗೆಯುತ್ತಾರೆ. ಕೊಯ್ಲು ಮತ್ತು ಒಕ್ಕುವ ಕಾರ್ಯವನ್ನು ಒಂದೇ ಸಾರಿ ಮಾಡಬಲ್ಲ ಯಂತ್ರದ ಸಹಾಯದಿಂದ ಕಾಳನ್ನು ಬೇರ್ಪಡಿಸುತ್ತಾರೆ. ಕಾರ್ಯಾನುಕೂಲಕ್ಕೆ ಅನುಗುಣವಾಗಿ ಹೊರೆ ಕಟ್ಟುವುದಕ್ಕೆ, ತೆನೆ ಕೊಯ್ಯುವುದಕ್ಕೆ ಅಗತ್ಯವಾದ ಯಂತ್ರಸಾಧನಗಳು ಅಳವಟ್ಟಿವೆ. ಜಮೀನಿನಲ್ಲಿ ಯಂತ್ರ ಸಾಗುತ್ತಿದ್ದಂತೆಯೇ ಪೈರು ಕೊಯ್ಲು, ಕಾಳು, ಹುಲ್ಲು ಬೇರ್ಪಡೆ, ಹೊಟ್ಟನ್ನು ಕಾಳಿನಿಂದ ತೂರುವುದು-ಈ ಎಲ್ಲ ಕೆಲಸ ಆಗುತ್ತದೆ. ಈ ಯಂತ್ರದಲ್ಲಿ ಪೈರು ಕಟಾಯಿಸಿ ಹೊರೆ ಕಟ್ಟುವ ಸಾಧನವೂ ಅಳವಡಿಕೆಯಾಗಿರುತ್ತದೆ. ಹೀಗೆ ಕಟ್ಟಿದ ಹೊರೆ ಸಾಗಣಿ ಪಟ್ಟಿಯ (ಕನ್ವೇಯರ್ ಬೆಲ್ಟ್) ಮೂಲಕ ಯಂತ್ರದಲ್ಲೇ ಜೋಡಿಸಿರುವ ಒಕ್ಕಣೆ ಸಲಕರಣೆಗೆ ಹೋಗುವ ಏರ್ಪಾಡು ಇದೆ. ಚಲಿಸುತ್ತಿರುವಾಗಲೇ ಸಮರ್ಪಕವಾಗಿ ಕೆಲಸಮಾಡುವಂತೆ ಒಕ್ಕಣೆ ಸಲಕರಣೆ ಸಜ್ಜಾಗಿರುತ್ತದೆ. ಹೀಗೆ ಬೇರೆ ಮಾಡಿದ ಕಾಳನ್ನು ಜರಡಿ ಮತ್ತು ಬಿರುಸು ಗಾಳಿ ಮೂಲಕ ಹಾಯಿಸಿ ಒಪ್ಪಮಾಡುವ ಸಾಧನವೂ ಯಂತ್ರದಲ್ಲಿ ಹೊಂದಿಕೆಯಾಗಿದೆ. ಇಂದು ಎಲ್ಲ ಕೊಯ್ಲು ಒಕ್ಕಣೆಯಂತ್ರಗಳನ್ನೂ ಸ್ವಯಂಚಾಲಿತಗೊಳಿಸಲಾಗಿದೆ. ಇಳಿಮೇಡು ಭೂಮಿಗಳಲ್ಲಿ ಕೆಲಸಮಾಡುವಾಗ ಇವುಗಳಿಗೆ ನೀರಿನ ಒತ್ತಡ ನಾಳಿಗಳನ್ನು (ಹೈಡ್ರಾಲಿಕ್ ಸಿಲಿಂಡರುಗಳು) ಸಜ್ಜಿಸಿರುತ್ತಾರೆ. ಇದರಿಂದ ಯಂತ್ರದ ಭಾರ ಒಂದೇ ದಿಕ್ಕಿನಲ್ಲಾಗದೆ ಸಮತೋಲ ಉಳಿಯುವುದು ಸಾಧ್ಯ.

ಅರಳೆ ಒಕ್ಕುವ ಸಾಧನ: ಅರಳಿದ ಹತ್ತಿಕಾಯನ್ನು ಕೈನಿಂದ ಬಿಡಿಸುವುದೇ ಎಲ್ಲೆಡೆ ಇದ್ದ ವಾಡಿಕೆ. ಈ ಶತಮಾನದ ದ್ವಿತೀಯಾರ್ಧದಲ್ಲಿ ಇದಕ್ಕೂ ಯಂತ್ರ ಬಳಕೆ ಪ್ರಾರಂಭವಾಗಿದೆ. ಈ ಸಲಕರಣೆಯ ಮುಖ್ಯ ಅಂಶ ಒದ್ದೆಯಾಗಿರುವ ತಿರುಗಚ್ಚಿಗೆ ಹೊಂದಿಕೊಂಡು ಸುತ್ತುತ್ತಿರುವ ಪಿಪಾಯಿಗಳು. ಹತ್ತಿಗಿಡ ಇವುಗಳ ಮಧ್ಯೆ ಸೆಳೆಯಲ್ಪಡುವುದು. ತಿರುಗಚ್ಚಿಗೆ ಮೊಳೆಗಳಿವೆ. ಹತ್ತಿಕಾಯಿಲ್ಲಿನ ಅರಳೆ ತಿರುಗಚ್ಚಿನ ಸುತ್ತಲೂ ಅಂಟಿಕೊಳ್ಳುವುದು. ಅನಂತರ ತಿರುಗಚ್ಚಿನಿಂದ ಹತ್ತಿಯನ್ನು ಬೇರೆ ಮಾಡುವುದು ಸಾಧ್ಯ.

ಆಲೂಗೆಡ್ಡೆ ಅಗೆಯುವ ಯಂತ್ರ: ಈ ದಿಕ್ಕಿನಲ್ಲಿ ಮೊದಲು ಉಪಯೋಗಕ್ಕೆ ಬಂದದ್ದು ಗೆಡ್ಡೆಗಳನ್ನು ನೆಲದಿಂದ ಎತ್ತಲು ಅನುಕೂಲವಾಗುವಂತೆ ಗುಳಕ್ಕೆ ಕಬ್ಬಿಣದ ಕಂಬಿಗಳನ್ನು ಸಜ್ಜಿಸಿರುವ ನೇಗಿಲು. ನೇಗಿಲು ಸಾಗಿದಂತೆಲ್ಲ ಮಣ್ಣು ಸಡಿಲವಾಗಿ ಗೆಡ್ಡೆ ಮೇಲಕ್ಕೆ ಎಸೆಯಲ್ಪಡುತ್ತದೆ. ಇಂಥ ನೇಗಿಲಿನ ಜೊತೆಗೆ ಕುಲುಕುವ ಕಂಬಿಯ ಚೌಕಟ್ಟು ಇದೆ. ಗೆಡ್ಡೆ ಇದರಲ್ಲಿ ಕುಲುಕಿ ಮಣ್ಣು ಬೇರೆಯಾಗಿ ಚೀಲಕ್ಕೆ ತುಂಬಲು ಅನುಕೂಲಿಸುವಂತೆ ಸಾಲಿನಲ್ಲಿ ಗೆಡ್ಡೆ ಬೀಳುತ್ತದೆ.

ಗೆಡ್ಡೆ ಪೈರು ಕೊಯ್ಲು ಯಂತ್ರ: ಇದು ಒಂದೇ ಸಲ ಅಗೆದು, ಕಿತ್ತು, ಟ್ರಕ್ಕುಗಳಲ್ಲಿ ತುಂಬುವ ಕೆಲಸವನ್ನೆಲ್ಲ ಮಾಡಬಲ್ಲುದು. ಕೆಂಪು ಮೂಲಂಗಿ, ಬೀಟ್‌ರೂಟ್ ಮುಂತಾದ ಗೆಡ್ಡೆಗಳ ಸುತ್ತ ಇರುವ ಮಣ್ಣನ್ನು ಒಂದು ವಿಶಿಷ್ಟ ರೀತಿಯ ಗುಳ ಸಡಿಲ ಮಾಡುವುದು.

ಅನಂತರ ಅದನ್ನು ಆಸರೆ ಕಡ್ಡಿಯ ಸಹಾಯದಿಂದ ಮೇಲೆತ್ತಲಾಗುವುದು. ಬಂದ ಗಿಡದ ಕಾಂಡ ಎರಡು ರಬ್ಬರ್ ಪಟ್ಟಿಗಳ ಮಧ್ಯೆ ಭದ್ರವಾಗಿ ಹಿಂಡಲ್ಪಡುತ್ತದೆ. ಆಗ ಕಾಂಡ ಮತ್ತು ಗೆಡ್ಡೆ ಸೂಕ್ತ ಸಜ್ಜಿನ ಸಹಾಯದಿಂದ ಬೇರ್ಪಟ್ಟು ಕಾಂಡ ನೆಲಕ್ಕೆ ಬೀಳುತ್ತದೆ. ಗೆಡ್ಡೆ ಪಕ್ಕದಲ್ಲಿರುವ ಚಲಿಸುತ್ತಿರುವ ತೊಟ್ಟಿಯಂಥ ಸಾಧನಕ್ಕೆ ಎಸೆಯಲ್ಪಟ್ಟು ಮುಂದೆ ಟ್ರಕ್ಕಿಗೆ ರವಾನೆಯಾಗುತ್ತದೆ. ಇಂಥ ಯಂತ್ರಗಳು ದಿನ ಒಂದಕ್ಕೆ ಸುಮಾರು 4½ ಹೆಕ್ಟೇರು ಪ್ರದೇಶದ ಮೂಲಂಗಿ ಕೊಯ್ಲನ್ನು ಮಾಡಬಲ್ಲವು.

ಈರುಳ್ಳಿ ಅಗೆಯುವ ಯಂತ್ರದಲ್ಲಿ, ಗೆಡ್ಡೆ ತಳದಲ್ಲಿ ಮಣ್ಣು ಕತ್ತರಿಸಲು ಅಲಗು ಸಜ್ಜಾಗಿರುತ್ತದೆ. ಕತ್ತರಿಸಿದ ಬಳಿಕ ಮೇಲಿನ ಗಿಡ ಒಣಗುತ್ತದೆ. ಅನಂತರ ಯಂತ್ರ ಗೆಡ್ಡೆಯನ್ನು ಮೇಲಕ್ಕೆ ಎತ್ತಿಕೊಳ್ಳುತ್ತದೆ. ಕತ್ತರಿ-ಅಲಗು ಗೆಡ್ಡೆಯನ್ನು ಮೇಲ್ಭಾಗದಿಂದ ಬೇರ್ಪಡಿಸುತ್ತದೆ. ಬಿರುಸು ಗಾಳಿ ಈರುಳ್ಳಿ ಹುಲ್ಲನ್ನು ಹೊರ ಒಗೆಯುತ್ತದೆ. ಸಾಗಣೆಪಟ್ಟಿಯ ಮೂಲಕ ಸಾಗಿದ ಗೆಡ್ಡೆ ಒಂದು ಕಡೆ ಗುಡ್ಡೆಯಾಗುತ್ತದೆ.

ಹಣ್ಣುಗಳ ಕೊಯ್ಲು ಸಜ್ಜುಗಳು: ಭಾರತದಲ್ಲಿ ಸಾಮಾನ್ಯವಾಗಿ ಕಿತ್ತಳೆ, ಮಾವು ಮತ್ತಿತರ ಎಲ್ಲ ಹಣ್ಣುಗಳ ಕೊಯ್ಲು ಕೈಗಳಿಂದಲೇ ನಡೆಯುತ್ತದೆ. ಇತ್ತೀಚಿನ ದಿನಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಈ ಕೊಯ್ಲಿಗೂ ಯಂತ್ರಗಳು ಬಳಕೆಗೆ ಬರುತ್ತಿವೆ. ಯಂತ್ರಗಳ ಸಹಾಯದಿಂದ ಗಿಡಗಳನ್ನು ಅಲ್ಲಾಡಿಸಿ ನೆಲದ ಮೇಲೆ ಬಿದ್ದ ಹಣ್ಣುಗಳನ್ನು ಯಂತ್ರಗಳಿಂದ ಎತ್ತಿಕೊಳ್ಳುವ ಕ್ರಮ ಒಂದು. ಗಿಡಗಳನ್ನು ಅಲ್ಲಾಡಿಸಿ ಹಣ್ಣುಗಳನ್ನು ಜಾಲಗಳಲ್ಲಿ ಬೀಳಿಸಿ ಅವನ್ನು ಸಾಗಿಸಿ ಒಟ್ಟುಮಾಡುವುದು ಇನ್ನೊಂದು. ವಿವಿಧ ಜಾತಿಯ ಹಣ್ಣುಗಳ ಕೊಯ್ಲಿಗೆ ಸರಿಹೋಗುವಂತೆ ಸಜ್ಜುಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನ ನಡೆದಿದೆ.

ತೋಟಗಳಲ್ಲಿ ಕೊಯ್ಲಿಗೆ ಯಂತ್ರಗಳನ್ನು ಬಳಸುವುದಾದರೆ, ಗಿಡಗಳನ್ನು ಸಾಕಷ್ಟು ಅಂತರದಲ್ಲಿ ನೆಡುವುದು ಅಗತ್ಯ. ಮಧ್ಯದ ನೆಲ ಮಟ್ಟಸವಾಗಿರಬೇಕು. ಗಿಡಗಳ ಮಧ್ಯೆ ಯಂತ್ರಗಳನ್ನು ಸರಿಸುವಾಗ ಅವು ರೆಂಬೆಗಳಿಗೆ ತಗುಲಿ ನಷ್ಟವಾಗದಂತೆ ನೋಡಿಕೊಳ್ಳುವುದು ಆವಶ್ಯಕ. ಎತ್ತರದ ಗಿಡಗಳಿಂದ ಹಣ್ಣು ಕೊಯ್ಯಲು ಯಂತ್ರಗಳ ಸಹಾಯದಿಂದ ಚಲಿಸುವ ಅಟ್ಟಣೆಗಳು ಬಳಕೆಯಲ್ಲಿವೆ. ಇದರಿಂದ ಮನುಷ್ಯ ಮರ ಹತ್ತಿ ಇಳಿಯುವುದು ತಪ್ಪುತ್ತದೆ. ಅಟ್ಟಣೆಗಳನ್ನು ವಿವಿಧ ಮಟ್ಟಕ್ಕೆ ಏರಿಸಿ, ಇಲ್ಲವೇ ಇಳಿಸಿ ಹಣ್ಣುಗಳನ್ನು ಹೆಚ್ಚು ಪ್ರಯಾಸವಿಲ್ಲದೆ ಕೀಳಬಹುದು.

ತರಕಾರಿ ಕೊಯ್ಲು ಯಂತ್ರಗಳು: ತರಕಾರಿ ಬಿಡಿಸುವುದು ಶ್ರಮದ ಕೆಲಸ. ಹೆಚ್ಚು ಆಳುಗಳು ಬೇಕಾಗುತ್ತಾರೆ. ಕೂಲಿ ಹೆಚ್ಚಾದೆಡೆ ವೆಚ್ಚ ಹೆಚ್ಚಾಗುವುದು ಸ್ವಾಭಾವಿಕ. ಕಾಯಿಗಳೆಲ್ಲ ಒಂದೇ ಸಮಕ್ಕೆ ಬಲಿತರೆ ಯಂತ್ರಗಳಿಂದ ಅವನ್ನು ಕೊಯ್ಯುವುದು ಸುಲಭ. ಈ ದಿಕ್ಕಿನಲ್ಲಿ ಬಂದಿರುವ ಮೊದಲ ಯಂತ್ರ ತಿಂಗಳ ಹುರುಳಿ ಕೊಯ್ಲಿನದು. ಸಸ್ಯವಿಜ್ಞಾನಿಗಳು ಇಂಥ ಜಾತಿಯ ಬೆಳೆಯನ್ನು ಶೋಧಿಸಿ ಬೆಳೆಸಬೇಕಾಯಿತು. ಇದರ ಎರಡು ಸಾಲು ಬೆಳೆಯನ್ನು ಒಟ್ಟಿಗೆ ಕೊಯ್ಯಬಲ್ಲ ಈ ಯಂತ್ರಗಳಲ್ಲಿ ಸುತ್ತುತ್ತಿರುವ ಎರಡು ರೋಣುಗಳಿವೆ. ಎಲೆ, ಗಿಡ ಇವುಗಳ ಮಧ್ಯೆ ಸಿಕ್ಕಿಕೊಂಡು ಕಾಯಿ ಗಿಡದಿಂದ ಬೇರೆಯಾಗುವುದು. ಸೊಪ್ಪು ನೆಲದ ಮೇಲೆ ಬೀಳುತ್ತದೆ. ಹಾಗೆಯೇ ಎಲೆಕೋಸು, ಸೌತೆಕಾಯಿ, ಇತರ ಬೆಳೆಗಳ ಕೊಯ್ಲಿಗೆ ಅನುಕೂಲವಾದ ಸಜ್ಜುಗಳನ್ನು ಅಳವಡಿಸಿದ್ದಾರೆ.

ಬಳಕೆಯಲ್ಲಿರುವ ಇತರ ಯಂತ್ರಗಳೆಂದರೆ ಕಬ್ಬುಕೊಯ್ಲಿನ ಯಂತ್ರ, ಮೆಕ್ಕೆಜೋಳ ಒಕ್ಕಣೆ ಯಂತ್ರ ಮುಂತಾದುವು. (ಬಿ.ವಿ.ವಿ.)

**ಒಗಟು:** ಜನಪದ ಸಾಹಿತ್ಯದಲ್ಲಿ ಒಂದು ಮುಖ್ಯವಾದ ಪ್ರಕಾರ (ರಿಡ್ಲ್). ಕನ್ನಡದಲ್ಲಿ ಒಡಪು, ಮುಂಡಿಗೆ ಎಂಬ ಬೇರೆ ಹೆಸರಗಳೂ ಉಂಟು. ಒಗಟು ಎಂದರೆ ಒಬ್ಬರು ಮತ್ತೊಬ್ಬರಿಗೆ ಒಡ್ಡಿದ ಸವಾಲು, ಸಮಸ್ಯೆ ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ಮೂಲಕ ಚಮತ್ಕಾರವಾಗಿ ವರ್ಣಿಸಿ ಆ ಅವ್ಯಕ್ತ ವಸ್ತುವನ್ನು ಕಂಡುಹಿಡಿಯುವಂತೆ ಹೇಳುವುದು ಇದರ ಕ್ರಮ. ಒಗಟಿನಲ್ಲಿ ಎರಡು ಸದೃಶವಸ್ತುಗಳಿರಬೇಕು ಒಂದು ಉಪಮಾನ, ಮತ್ತೊಂದು ಉಪಮೇಯ. ಇಲ್ಲಿ ಉಪಮಾನ ವಾಚ್ಯವಾಗಿರುತ್ತದೆ; ಉಪಮೇಯ ಅಸ್ಪಷ್ಟವಾಗಿ ರಹಸ್ಯವಾಗಿರುತ್ತದೆ. ಅದನ್ನು ಒಗಟೆಯ ಕರ್ತೃ ಬಹಳ ಜಾಣ್ಮೆಯಿಂದ ಬಚ್ಚಿಟ್ಟಿರುತ್ತಾನೆ. ಉಪಮಾನದ ಆಧಾರದಿಂದ ಉಪಮೇಯವನ್ನು ಪತ್ತೆಮಾಡಬೇಕಾಗುತ್ತದೆ. ಇದು ಬುದ್ಧಿಶಕ್ತಿಯ ಪರೀಕ್ಷೆಗೊಂದು ಒಳ್ಳೆಯ ಒರೆಗಲ್ಲು.

ಮಾನವಕುಲದ ಬಾಲ್ಯದಲ್ಲೆ ಒಗಟು ಹುಟ್ಟಿತೆಂದು ಹೇಳಬಹುದು. ಮಾತಿನ ಸಂಪ್ರದಾಯದಲ್ಲಿ ಒಗಟೆಯೇ ಎಲ್ಲಕಿಂತ ಮೊದಲಿನದೆಂಬ ಅಭಿಪ್ರಾಯವೂ ಉಂಟು. ಆದಿಮಾನವ ಪ್ರಕೃತಿಯ ವಸ್ತುಗಳಲ್ಲಿ ಗುರುತಿಸಿದ ಸಾದೃಶ್ಯವೆ ಒಗಟುಗಳ ನಿರ್ಮಾಣಕ್ಕೆ ತಳಹದಿ. ಅವನು ಸಾದೃಶ್ಯಜ್ಞಾನದಿಂದುಂಟಾದ ವಿಸ್ಮಯದಲ್ಲೆ ನಿಲ್ಲದೆ, ಅದನ್ನು ಹಾಸ್ಯ ಮತ್ತು ಮನೋರಂಜನೆಗಾಗಿ ಬಳಸಿಕೊಳ್ಳಲು ಮಾಡಿದ ಪ್ರಯತ್ನವೆ ಒಗಟಿನ ರೂಪ ತಳೆಯಿತು. ಈಗ ನಮಗೆ ಗೊತ್ತಿರುವ ಹಾಸ್ಯದ ಪ್ರಕಾರಗಳಲ್ಲಿ ಒಗಟೇ ಅತ್ಯಂತ ಪ್ರಾಚೀನವೆಂದೂ ಸಾದೃಶ್ಯಪ್ರಜ್ಞೆಯೆ ಇದಕ್ಕೆ ಮೂಲಕಾರಣವೆಂದೂ ವಿದ್ವಾಂಸರ ಅಭಿಪ್ರಾಯ. ಒಗಟುಗಳು ಬಹುಮಟ್ಟಿಗೆ ಬುದ್ಧಿಪೂರ್ವಕವಾದವು; ಬುದ್ಧಿಯ ವಿಕಾಸಕ್ಕೆ ನೆರವಾಗುತ್ತವಾದರೂ ಕೇವಲ ಸಂತೋಷವೆ ಅವುಗಳ ಮುಖ್ಯವಾದ ಗುರಿ. ಒಗಟುಗಳಲ್ಲಿ ಎರಡು ವಸ್ತುಗಳ ತರ್ಕಬದ್ಧ ಸಮೀಕರಣವಿರುತ್ತದೆ. ಆದ್ದರಿಂದ ಒಗಟುಗಳೆಂದರೆ ರೂಪಕಗಳು ಅಥವಾ ಪ್ರತಿಮೆಗಳು ಎನ್ನಬಹುದು. ಇವುಗಳಲ್ಲಿ ಕೆಲವಂತೂ ಸುಂದರವಾದ ಕಾವ್ಯಗಳೇ. ಲೋಕಾನುಭವ, ಸೂಕ್ಷ್ಮ ಸಂವೇದನೆ, ಕಲ್ಪನಾಶಕ್ತಿಗಳು ಉತ್ತಮವಾದ ಒಗಟುಗಳಲ್ಲಿ ಕಂಡುಬರುತ್ತವೆ. ವಸ್ತುಗಳ ಯಥಾರ್ಥ ಚಿತ್ರಗಳನ್ನು ಸಂಕ್ಷಿಪ್ತವಾಗಿ ಕೊರೆದು ನಿಲ್ಲಿಸುವ ಶಕ್ತಿ ಒಗಟುಗಳಲ್ಲುಂಟು. ಇವುಗಳಿಗೆ ವಿಷಯವಾಗದ ಪದಾರ್ಥವೇ ಜಗತ್ತಿನಲ್ಲಿಲ್ಲ.

ಎಷ್ಟೋ ವೇಳೆ, ಒಗಟುಗಳ ಅಂತರಾರ್ಥ ಸುಲಭವಾಗಿ ಹೊಳೆಯದಿದ್ದರೂ ಅವುಗಳ ಬಾಹ್ಯರೂಪ ಮಾತ್ರ ಆಕರ್ಷಕವಾಗಿ ಕುತೂಹಲ ಕೆರಳಿಸುವಂತಿರುತ್ತದೆ. ಒಗಟುಗಳಲ್ಲಿ ಹಲವು ಬಗೆಗಳಿವೆ. ಕೆಲವು ಪದ್ಯರೂಪದಲ್ಲಿದ್ದರೆ ಮತ್ತೆ ಕೆಲವು ಲಯಬದ್ಧ ಗದ್ಯದಲ್ಲಿರುತ್ತವೆ.

ಒಗಟುಗಳ ಇತಿಹಾಸ ಜಾಗತಿಕವಾದುದು. ಪ್ರಪಂಚದ ಅತ್ಯಂತ ಪ್ರಾಚೀನ ಜನಾಂಗಗಳಲ್ಲೆಲ್ಲ ಅವು ಬಳಕೆಯಲ್ಲಿದ್ದುವು. ಭರತಖಂಡದಲ್ಲಿ ಮಾತ್ರವಲ್ಲದೆ ಗ್ರೀಕ್, ರೋಮನ್, ಈಜಿಪ್ಷಿಯನ್ ಜನಾಂಗಗಳಲ್ಲಿ ಕೂಡ ಒಗಟುಗಳ ಸಾಹಿತ್ಯ ವಿಪುಲವಾಗಿತ್ತು. ಭಾರತದಲ್ಲಿ ವೈದಿಕ ವಾಙ್ಮಯದಲ್ಲೆ ಒಗಟುಗಳು ಸುಳಿಯುತ್ತವೆ. ಕುರಾನ್, ಬೈಬಲ್‌ಗಳಲ್ಲೂ ಅವು ಬಂದಿವೆಯೆಂದು ಹೇಳುತ್ತಾರೆ.

ಒಗಟುಗಳು ಜನಸಾಮಾನ್ಯರಲ್ಲಿ ಮನರಂಜನೆಗಾಗಿ ಬಳಕೆಗೊಳ್ಳುತ್ತಿದ್ದುವಾದರೂ ರಾಜಾಸ್ಥಾನಗಳಲ್ಲಿ ಪಂಡಿತಕವಿಗಳ ಕೈಯಲ್ಲಿ ಅವು ವಿದ್ವತ್ತಿನ ಸ್ಪರ್ಧೆಯ ಉದ್ದೇಶಕ್ಕೂ ಒದಗುತ್ತಿದ್ದುವು. ಪಾಂಡಿತ್ಯಪ್ರದರ್ಶನ, ಕೀರ್ತಿಸಂಪಾದನೆ, ಧನಲಾಭ, ಪ್ರಣಯಸಾಫಲ್ಯ ಮುಂತಾದ ಪ್ರಯೋಜನಗಳೂ ಇವುಗಳಿಂದ ಸಿದ್ಧಿಸುತ್ತಿದ್ದಂತೆ ತೋರುತ್ತದೆ. ಒಗಟುಗಳ ಮೇಲೆ ಪಣ ಕಟ್ಟಿ ಜೂಜಾಡುವ ಪದ್ಧತಿಯೂ ಕೆಲವೆಡೆ ಇದ್ದಂತೆ ತಿಳಿದುಬರುತ್ತದೆ. ಒಗಟಿಗೆ ಸಂಬಂಧಿಸಿದ ದ್ಯೂತ ಸ್ಪರ್ಧೆ, ಮೇಳ, ಸಮಾರಂಭಗಳು ಗ್ರೀಕರಲ್ಲಿ ವಿಪರೀತವಾಗಿದ್ದುವು. ಅನೇಕ ಗ್ರೀಕ್ ರುದ್ರನಾಟಕಗಳಲ್ಲಿ ಒಗಟುಗಳೆ ಕ್ರಿಯೆಗೆ ಚಾಲಕಶಕ್ತಿಯಾಗಿ ಕೆಲಸ ಮಾಡಿರುವುದುಂಟು. ಸ್ಫಿಂಕ್ಸ್‌ಭೂತ ಈಡಿಪಸನಿಗೆ ಒಡ್ಡಿದ ಸಮಸ್ಯೆ ಬಹಳ ವಿಖ್ಯಾತವಾದದ್ದು; ಅದು ಜಗತ್ತಿನ ಪುರಾತನ ಒಗಟುಗಳಲ್ಲೊಂದು, ಅದು ಹೀಗಿದೆ; ಬೆಳಗ್ಗೆ ನಾಲ್ಕು ಕಾಲು, ಮಧ್ಯಾಹ್ನ ಎರಡು ಕಾಲು, ಸಂಜೆ ಮೂರು ಕಾಲುಗಳಲ್ಲಿ ನಡೆಯುವ ಪ್ರಾಣಿ ಯಾವುದು? ಉತ್ತರ-ಮನುಷ್ಯ! (ನೋಡಿ- ಈಡಿಪಸ್)

ಒಗಟುಗಳು ಪ್ರಾಚೀನಕಾಲದಿಂದಲೂ ಧಾರ್ಮಿಕ ವಿಧಿ ಉತ್ಸವಗಳಿಗೆ ಸಂಬಂಧಿಸಿದಂತೆ, ಅಲೌಕಿಕ ಉದ್ದೇಶಗಳಿಗೆ ಮಾಧ್ಯಮವಾಗಿ ಬಳಕೆಯಾಗುತ್ತ ಬಂದಿರುವುದು ಆಶ್ಚರ್ಯದ ಸಂಗತಿ. ಅವು ಆಧ್ಯಾತ್ಮಿಕ ಸತ್ಯಗಳಿಗೆ, ವೇದಾಂತ ರಹಸ್ಯಗಳಿಗೆ ಅಭಿವ್ಯಕ್ತಿ ನೀಡಿವೆ. ಗ್ರೀಕರಲ್ಲಿ ಡೆಲ್ಫಿಯ ಭವಿಷ್ಯವಾಣಿ ಪುರೋಹಿತರ ಮೂಲಕ ಒಗಟುಗಳ ರೂಪದಲ್ಲೆ ಹೊರಹೊಮ್ಮುತ್ತಿತ್ತು. ಭರತಖಂಡದ ವೈದಿಕ ಯಜ್ಞಯಾಗಾದಿಗಳಲ್ಲಿ ಒಗಟುಗಳ ಸಂಪ್ರದಾಯವಿದ್ದುದು ತಿಳಿದುಬರುತ್ತದೆ. ಕನ್ನಡದಲ್ಲಿ ಅಲ್ಲಮಪ್ರಭುವಿನ ಎಷ್ಟೋ ವಚನಗಳು ಬಹಳ ಗಹನವಾಗಿದ್ದು ಬೆಡಗಿನ ವಚನಗಳೆನಿಸಿಕೊಂಡು, ಅನುಭಾವಗಳಿಗೆ ಪ್ರತೀಕಗಳಾಗಿವೆ; ಇವೂ ಒಗಟುಗಳೇ.

ಕನ್ನಡ ಜನಪದದಲ್ಲಿ ಪ್ರಚಲಿತವಾಗಿರುವ ಕೆಲವು ಒಗಟುಗಳನ್ನಿಲ್ಲಿ ಉದಾಹರಿಸಲಾಗಿದೆ; ಅಂಗೈ ಅಗಲದ ಗದ್ದೆ, ಗದ್ದೆಗೆ ನೀರು, ನೀರಿಗೆ ಬೇರು, ಬೇರಿಗೆ ಬೆಂಕಿ (ದೀಪ); ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ (ಹಲಸಿನ ತೊಳೆ); ಹಸುರು ಗಿಡದ ಮೇಲೆ ಮೊಸರು ಚೆಲ್ಲಿದೆ (ಮಲ್ಲಿಗೆ ಹೂ); ಗಿಡ್ಡಿ ಗುದ್ದಿದರೆ ಮನೆಯೆಲ್ಲ ಮಕ್ಕಳು (ಬೆಳ್ಳುಳ್ಳಿ); ಹಗ್ಗ ಹಾಸಿದೆ, ಕೋಣ ಮಲಗಿದೆ (ಕುಂಬಳಕಾಯಿ); ಸುತ್ತ ನೋಡಿದರೆ ಸುಣ್ಣದ ಗೋಡೆ, ಎತ್ತ ನೋಡಿದ್ರೂ ಬಾಗಿಲೇ ಇಲ್ಲ (ಕೋಳಿಮೊಟ್ಟೆ); ಕೆರೆಯೆಲ್ಲ ಕುರಿಹೆಜ್ಜೆ (ನಕ್ಷತ್ರ). (ಸಿ.ಪಿ.ಕೆ.)

ಒಗಟು ಕೇಳುಗರನ್ನು ಕುತೂಹಲಕ್ಕೆ ತಳ್ಳಿ, ಆಸಕ್ತಿಯನ್ನು ಅರಳಿಸಿ, ಅವರ ಬುದ್ಧಿಯನ್ನು ಕೆಣಕುತ್ತದೆ. ಕಂಬದ ಮೇಲೆ ನಿಂಬೆಹಣ್ಣು-ಎಂದಾಗ ಲವಂಗವೆಂಬ ಅರ್ಥ ಹೊಳೆಯುವುದು ಕಷ್ಟವಾಗಬಹುದು. ಹಾಗೆಯೇ ಮುದ್ದು ಮಗುವಿನ ಕೆನ್ನೆಯನ್ನು ತಿನ್ನಬಾರದ ಹಣ್ಣು ಬಲುರುಚಿ, ಬಲುರುಚಿ ಎಂದು ಬಣ್ಣಿಸಿ ಚಪ್ಪರಿಸುವುದೂ ಒಗಟಿನ ರೀತಿ, ಒಂದು ಪದಗಳ ಗುಂಪು, ಒಂದು ವಾಕ್ಯ ಅಥವಾ ಒಂದು ಇಡೀ ಪದ್ಯವೇ ಒಗಟಾಗಿರಬಹುದು. ಕೆಲವು ಕವಿಗಳಂತೂ ತಮ್ಮ ಕೃತಿಗಳಲ್ಲಿ ಇಂಥ ಚಾತುರ್ಯದ ಉಕ್ತಿಗಳನ್ನು ಸೊಗಸಾಗಿ ಬಳಸಿಕೊಂಡಿದ್ದಾರೆ. ಲಕ್ಷ್ಮೀಶನ ಈ ಸಾಲುಗಳನ್ನು ನೋಡಿ; ಹರಿಯೆನ್ನ ಭಾವ; ವಿಧಿಯೆನಗೆ ಅಳಿಯ; ಜಲಧಿಯೆನಗೆ ಮಾತೆ; ಲಕ್ಷ್ಮಿಯೆನಗೆ ಸೋದರಿ; ಸುಧಾಕರ ನನಗೆ ಹಿರಿಯಣ್ಣ- ಈ ಐವರಿದ್ದೂ ನಾನೀ ತಿರುಕನ ಕೈಗೆ ಸಿಕ್ಕಿ ನರಳುವಂತಾಯ್ತೆ ಎಂಬಲ್ಲಿ ಹುದುಗಿದ ಹೂರಣದ ರುಚಿ ಎರಡು ವಿಧ. ಚತುರತೆಯ ಮಾತಿನ ಹಿಂದಿನ ಅರ್ಥಗ್ರಹಿಸಿದ ಆನಂದ ಒಂದು ಕಡೆ; ಅದರ ಹಿಂದಿರುವ ನೀತಿಯ ಸೂಚನೆ ಮತ್ತೊಂದು ಕಡೆ.

ಎರಡರಿಂದಲೂ ಸಂತೋಷ ಉಕ್ಕುತ್ತದೆ. ವಿಷ್ಣು ನನಗೆ ಭಾವ. ಬ್ರಹ್ಮ ಅಳಿಯ, ಸಮುದ್ರವೇ ತಾಯಿ, ಲಕ್ಷ್ಮಿ ಸೋದರಿ, ಚಂದ್ರನು ಅಣ್ಣ-ಇಂಥ ದೊಡ್ಡ ದೊಡ್ಡ ನಂಟರಿದ್ದರೂ ನನ್ನ ಹಣೆಯಬರೆಹ-ತಿರುಕನ ಕೈಯಲ್ಲಿ ಸಿಕ್ಕಿಕೊಂಡು ಅವನ ಬಾಯ ಉಸಿರಿಗೆ ಪಕ್ಕಾಗಿ ನರಳಬೇಕಾಯಿತಲ್ಲ ಎಂದು ಶಂಖ ತನ್ನ ಗೋಳನ್ನು ತೋಡಿಕೊಳ್ಳುವ ಈ ಭಾಗ ತುಂಬ ರಸವತ್ತಾಗಿದೆ, ನೀತಿಯುತವಾಗಿದೆ. ಹೀಗೆಯೇ ಎಷ್ಟೋ ಒಗಟುಗಳು ನಾಣ್ಣುಡಿಗಳಾಗಿವೆ. ಮಾತಿನ ಚಕಮಕಿಯಿಂದಲೂ ಒಗಟುಗಳು ಸೃಷ್ಟಿಯಾಗುತ್ತವೆ. ಪೂರಸೀ, ಹೊರಸೀ, ಒಳಸೀ ಎಂಬ ಮೂರು ವಸ್ತುಗಳನ್ನು ತನ್ನಿರೆಂದು ಗುರು ಹೇಳಿದಾಗ ಶಿಷ್ಯರು ಒದ್ದಾಡಿದರಂತೆ, ಜಾಣನಾದ ಶಿಷ್ಯ ಮಾತ್ರ ಕಲ್ಲುಸಕ್ಕರೆ, ಖರ್ಜೂರ, ಬಾದಾಮಿಗಳನ್ನು ತಂದನಂತೆ. ಕಲ್ಲು ಸಕ್ಕರೆ ಪೂರ ಸಿಹಿ, ಖರ್ಜೂರ ಹೊರಗೆ ಮಾತ್ರ ಸಿಹಿ, ಬಾದಾಮಿ ಒಳಗೆ ಮಾತ್ರ ಸಿಹಿ. ಇಂಥ ಒಗಟಿನ ಅನೇಕ ಕಥೆಗಳು ಪ್ರಚಾರದಲ್ಲಿವೆ. ಇಡೀ ಪದ್ಯದಲ್ಲಿ ಈ ರೀತಿಯ ಒಗಟನ್ನು ತುಂಬಿರುವ ಒಂದು ಉದಾಹರಣೆಯಾಗಿ ಕನಕದಾಸರ ಕೀರ್ತನೆಯ ಒಂದು ಭಾಗವನ್ನು ನೋಡಬಹುದು: ಅಂಧಕನನುಜನ ಕಂದನ ತಂದೆಯ, ಕೊಂದನ ಶಿರದಲ್ಲಿ ನಿಂದವನ । ಚಂದದಿ ಪಡೆದನ ನಂದನೆಯಳ ನಲ । ವಿಂದ ಧರಿಸಿದ ಮುಕುಂದನಿಗೆ ॥ ಧೃತರಾಷ್ಟ್ರನ ತಮ್ಮನಾದ ಪಾಂಡುವಿನ ಮಗ ಧರ್ಮರಾಯನ ತಂದೆಯಾದ ಯಮ ಧರ್ಮರಾಯನನ್ನು ನಿಗ್ರಹಿಸಿದ (ಮಾರ್ಕಂಡೇಯನ ಕಥೆಯಲ್ಲಿ) ಈಶ್ವರನ ತಲೆಯ ಮೇಲೆ ನಿಂದ ಚಂದ್ರನನ್ನು ಪಡೆದ ತಂದೆಯಾದ ಸಮುದ್ರರಾಜನ ಮಗಳಾದ ಲಕ್ಷ್ಮಿಯನ್ನು ಆನಂದದಿಂದ ಹೃದಯದಲ್ಲಿ ಧರಿಸಿದ ಮುಕುಂದನಿಗೆ ಮಂಗಳಂ-ಎಂದು ಕನಕದಾಸರು ಇಲ್ಲಿ ಒಗಟುಗಂಟನ್ನೇ ಸೃಜಿಸಿದ್ದಾರೆ, ಈಗಲೂ ಒಗಟುಗಳೆಂದರೆ ಮಕ್ಕಳಿಗೆ ಪ್ರಾಣ, ದೊಡ್ಡವರಿಗೆ ಆಸಕ್ತಿ, ಸಂಸ್ಕೃತ ಸಾಹಿತ್ಯದಲ್ಲಿನ ವಿಚಿತ್ರ ಪದಬಂಧಗಳು, ಸಮಸ್ಯಾಪೂರ್ಣ, ತೆಲುಗರಲ್ಲಿ ಹೆಚ್ಚು ಪ್ರಚಾರವಿರುವ ದಶಾವಧಾನ, ಶತಾವಧಾನ-ಇವುಗಳೆಲ್ಲ ಒಗಟಿನ ಬೃಹದ್ರೂಪಗಳು, ಮಹಾಕವಿಗಳು ಕೂಡ ಒಗಟುಗಳಿಂದ ಆಕರ್ಷಿತರಾಗಿರುವರು. ಭಾಸನ ನಾಟಕಗಳ ಮೊದಲ ಶ್ಲೋಕದಲ್ಲಿ ಶ್ಲೇಷೆಯ ಬಳಕೆಯಿಂದ ಒಗಟು ಸೃಷ್ಟಿಯಾಗಿದೆ. ಕಾಳಿದಾಸನಲ್ಲಿಯೂ ಇದನ್ನು ಕಾಣುತ್ತೇವೆ. ಪಂಪ, ಕುಮಾರವ್ಯಾಸ ಮುಂತಾದವರಲ್ಲಿಯೂ ಒಗಟುಗಳ ಬಳಕೆ ಸ್ಪಷ್ಟವಾಗಿದೆ. ಮಾತಿನ ಚಾಣಕ್ಯತನ ಇದ್ದಲ್ಲಿ ಯಕ್ಷಪ್ರಶ್ನೆಯಾಗಿ ಒಗಟು ಆವಿರ್ಭವಿಸುತ್ತದೆನ್ನಬಹುದು.

ಪ್ರಾಚೀನ ಗ್ರೀಕರಿಗೆ ಒಗಟು ನೀತಿಯ ನೆಲೆಗಟ್ಟಾಗಿತ್ತು. ಅನಂತರ ಗ್ರೀಕ್ ಮತ್ತು ರೋಮನ್ನರ ಭೋಜನ ಕೂಟಗಳಲ್ಲಿ ತಮಾಷೆ ಮಾಡಲೆಂದು ಒಗಟುಗಳನ್ನು ಬಿಡಿಸುವ ಪಂದ್ಯಗಳನ್ನಿಟ್ಟುಕೊಳ್ಳುತ್ತಿದ್ದರು. ಸಾಲೋಮನ್ ರಾಜನ ನಾಣ್ಣುಡಿಗಳು ನಿಜವಾಗಿ ಒಗಟುಗಳೇ. ಷೀಬದ ರಾಣಿ ಮುಂದೊಡ್ಡುವ ಸಮಸ್ಯೆಗಳು ಒಗಟಿನ ದೊಡ್ಡ ರೂಪದಲ್ಲಿವೆ. ಈಜಿಪ್ಟಿನ ದೈವವಾಣಿಗಳಂತೂ ಒಗಟಿನ ರೂಪದಲ್ಲಿಯೇ ಇವೆ. ಅಪುಲ್ಲಿಯಸ್ ಎಂಬಾತ ಒಗಟುಗಳ ಗ್ರಂಥವೊಂದನ್ನೇ ಬರೆದನೆಂದು ಪ್ರತೀತಿಯಿದೆ. ಆದರೆ ಈ ಗ್ರಂಥ ದೊರಕಿಲ್ಲ. ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ಮುಂತಾದೆಡೆಗಳಲ್ಲಿ ಒಗಟು ತುಂಬ ಪ್ರಚಾರದಲ್ಲಿದೆ. 16ನೆಯ ಶತಮಾನದವರೆಗೆ ಬಹಳ ಉಚ್ಛ್ರಾಯ ಸ್ಥಿತಿಯಲಿದ್ದು ಒಂದು ಶತಮಾನ ಮರೆಯಾಗಿದ್ದ ಒಗಟು 17ನೆಯ ಶತಮಾನದ ಅನಂತರ ಮತ್ತೆ ಜನಪ್ರಿಯ ಮನರಂಜನೆಯಾಯಿತು. ಅಬ್ಬೆ ಕೋಟಿನ್ ಎಂಬ ಪಾದ್ರಿ ಹತ್ತು ಸಾವಿರಕ್ಕೂ ಹೆಚ್ಚು ಒಗಟುಗಳನ್ನು ಹೊಸೆದಿದ್ದನೆಂದು ಹೆಸರಾಗಿದ್ದಾನೆ. ಫ್ರಾನ್ಸಿನಲ್ಲಿ ಕವಿಗಳೆಲ್ಲರೂ ಒಗಟುಗಳನ್ನು ಬೆಳೆಸಿದರು. ಜರ್ಮನಿಯಲ್ಲಿ ಷಿಲ್ಲರ್ ಕವಿ ಇದಕ್ಕೆ ವಿಸ್ತಾರವಾದ ಹರಹು, ಗಾಂಭೀರ್ಯಗಳನ್ನು ಕೊಟ್ಟು ಗೌರವಸ್ಥಾನ ಕಲ್ಪಿಸಿದನೆನ್ನಲಾಗಿದೆ.

ಚೆರೇಡ್ ಎಂಬುದು ಇಂಗ್ಲೆಂಡಿನಲ್ಲಿ ಒಗಟು ಬೆಳೆದಿರುವ ಒಂದು ವಿಶಿಷ್ಟ ರೀತಿ. ಭೋಜನಕೂಟ ನಡೆಯುವಾಗ ಅಲ್ಲಿಯೇ ಒಂದು ತಂಡದವರು ಉಳಿದವರಿಗೆ ಒಗಟನ್ನು ನಾಟಕದ ದೃಶ್ಯಗಳ ರೂಪದಲ್ಲಿ ಒಡ್ಡುತ್ತಾರೆ. ಒಂದೊಂದು ದೃಶ್ಯಕ್ಕೆ ಒಂದೊಂದು ಪದ ಕೇಂದ್ರಬಿಂದುವಾಗಿರುತ್ತದೆ. ಉದಾಹರಣೆಗೆ, ಮಕ್ಕಳು ಎಂಬ ಪದಕ್ಕಾಗಿಯೇ ಒಂದು ದೃಶ್ಯದಲ್ಲಿ ಮಕ್ಕಳ ಮನೋಧರ್ಮ, ಮಕ್ಕಳ ಆಟ, ಮಕ್ಕಳ ಮಾತು ಮುಂತಾದುವನ್ನೇ ಒತ್ತಿ ಒತ್ತಿ ಹೇಳುವುದು. ನೋಟಕರು ದೃಶ್ಯದಿಂದ ಆ ಪದವನ್ನು ಊಹಿಸಬೇಕು. ಹಲವಾರು ದೃಶ್ಯಗಳ ಪದವನ್ನು ಗ್ರಹಿಸಿದಾಗ ಒಂದು ಪೂರ್ಣ ವಾಕ್ಯ ಸಿಗುತ್ತದೆ. ಅದೇ ಒಗಟು, ಇದು 18-19ನೆಯ ಶತಮಾನದಲ್ಲಿ ಬಹಳ ಜನಪ್ರಿಯವಾಗಿತ್ತು. ಯಾವುದು ಸುಲಭವಾಗಿ ಅರ್ಥವಾಗುವುದಿಲ್ಲವೋ ಅದು ಒಗಟು ಎಂಬ ಅರ್ಥದಲ್ಲಿಯೂ ಈ ಪದ ಎಲ್ಲ ದೇಶಗಳಲ್ಲಿಯೂ ಬಳಕೆಯಾಗುತ್ತಿರುವುದು ಅದರ ಗಟ್ಟಿತನವನ್ನು, ಬುದ್ಧಿಗೆ ಅದು ಎಸೆಯುವ ಸವಾಲನ್ನು ಒತ್ತಿ ತೋರಿಸುತ್ತದೆ. (ಎಸ್.ಎ.ಎನ್.)

ಮತ ಮತ್ತು ತತ್ತ್ವಶಾಸ್ತ್ರಗಳಲ್ಲಿ ಒಗಟುಗಳ ಪಾತ್ರ ದೊಡ್ಡದು. ಪ್ರಾಕ್ತನರ ಮತಗಳಲ್ಲೂ ನಾಗರಿಕ ಮತಗಳಲ್ಲೂ ಅವನ್ನು ಕಾಣಬಹುದು. ತತ್ತ್ವಕ್ಕೆ ಸಂಬಂಧಪಟ್ಟ ಒಗಟುಗಳು ಇರುತ್ತವೆಯಾದರೂ ಅವು ವಿಶೇಷವಾಗಿ ಕಾಣಿಸಿಕೊಳ್ಳುವುದು ಮತದ ಸಂಪ್ರದಾಯಗಳಲ್ಲಿ ಮತ್ತು ಸಂಸ್ಕಾರಗಳಲ್ಲಿ. ಪ್ರಾಕ್ತನರು ಒಂದು ಶವದ ಮುಂದೆ ಅಥವಾ ಕಣದ ರಾಶಿಗಳ ಮುಂದೆ ಗೂಢ ಪ್ರಶ್ನೆಗಳನ್ನು ಒಡ್ಡುವುದುಂಟು. ಆರು ದ್ವೀಪಸ್ತೋಮದಲ್ಲಿ ಶವವನ್ನು ಶವದ ಪೆಟ್ಟಿಗೆಯೊಳಗೆ ಇಡುವುದಕ್ಕೆ ಮುನ್ನ ಶವವನ್ನು ಕಾಯುವವರಲ್ಲಿ ಒಬ್ಬ ಇನ್ನೊಬ್ಬನಿಗೆ ಗೂಢ ಪ್ರಶ್ನೆಯನ್ನು ಹಾಕುತ್ತಾನೆ. ಹೀಗೆ ಗೂಢ ಪ್ರಶ್ನೆ ಕೇಳುವುದು ಆ ಶವದ ಪ್ರೇತಕ್ಕೆ ದಿಗ್ಭ್ರಮೆ ಹುಟ್ಟಿಸುವ ಸಲುವಾಗಿ, ಇಂಥ ಪದ್ಧತಿಯನ್ನು ಬ್ರಿಟನಿನಲ್ಲಿ ಈಗಲೂ ಕಾಣಬಹುದು. ಪೂರ್ವ ಆಫ್ರಿಕದ ಅಕಂಬ ಗುಂಪಿನ ಹುಡುಗ ಹುಡುಗಿಯರು ಪರಿವರ್ತನ ಕಾಲದಲ್ಲಿ ಗೂಢ ಸಮಸ್ಯೆಗಳನ್ನು ಒಡ್ಡುವುದು ವಾಡಿಕೆ. ಫಸಲನ್ನು ಬೆಳೆಸುವ ಕಾಲದಲ್ಲಿ ಮಧ್ಯ ಸಿಲಬಿಸಿನ ಪ್ರಾಕ್ತನರು ಒಗಟುಗಳನ್ನು ಮಂಡಿಸುತ್ತಾರೆ. ಬೇಳೆ ಚೆನ್ನಾಗಿ ಆಗುವುದಕ್ಕೆ ಅಥವಾ ಕೆಟ್ಟು ಹೋಗುವುದಕ್ಕೆ ಒಗಟುಗಳನ್ನು ಬಿಡಿಸುವುದರಲ್ಲಿ ಗೆಲ್ಲುವುದು ಅಥವಾ ಸೋಲುವುದು ಕಾರಣವಾಗುತ್ತದೆಂದು ಅವರ ನಂಬಿಕೆ. ಡೆಲ್ಫಿಯಲ್ಲಿ ಕಣಿ ಹೇಳುವವರು ಒಗಟುಗಳ ಮೂಲಕ ಭವಿಷ್ಯ ನುಡಿಯುತ್ತಿದ್ದರು. ಡಯೋನೀಸಿಯಸ್ ದೇವರಿಗೆ ಪ್ರಿಯವಾದ ಅಗ್ರಿಯೋನಿಯ ಜಾತ್ರೆಯ ಕಾಲದಲ್ಲಿ ಜನರು ಸಾಮೂಹಿಕವಾಗಿ ಸಾಲುಸಾಲಾಗಿ ಕುಳಿತು ಊಟ ಮಾಡುವಾಗ ಒಂದು ಸಾಲಿನವರು ತಮ್ಮ ಎದುರು ಸಾಲಿನವರಿಗೆ ಗೂಢಪ್ರಶ್ನೆಗಳನ್ನೂ ಹಾಕುತ್ತಿದ್ದರು. ಎದುರು ಸಾಲಿನವರು ಉತ್ತರ ಹೇಳುತ್ತಿದ್ದರು. ಭಾರತದಲ್ಲೂ ಮತ ಸಂಸ್ಕಾರಗಳಿಗೆ ಸಂಬಂಧಪಟ್ಟಂತೆ ಒಗಟುಗಳು ಪ್ರಚಾರದಲ್ಲಿದ್ದುವು. ಶ್ರಾದ್ಧ ಸಂದರ್ಭದ ಊಟದ ಕಾಲದಲ್ಲಿ ಊಟ ಮಾಡುವ ಬ್ರಾಹ್ಮಣರಿಗೆ ಗೂಢ ಪ್ರಶ್ನೆಗಳನ್ನು ಹಾಕಬೇಕೆಂದು ಮನು ವಿಧಾಯಕ ಮಾಡಿರುತ್ತಾನೆ. ಏಕೆಂದರೆ ಹಾಗೆ ವೇದೋಕ್ತವಾದ ಗೂಢಪ್ರಶ್ನೆಗಳನ್ನು ಕೇಳುವುದು ಪಿತೃಗಳಿಗೆ ಇಷ್ಟಕರವಾದದ್ದು.

ವೇದಮಂತ್ರಗಳಲ್ಲಿ ಕಾಣಬರುವ ಒಗಟುಗಳಿಗೆ ಬ್ರಹ್ಮೋದ್ಯ ಅಥವಾ ಬ್ರಹ್ಮವದ್ಯ ಎಂದು ಹೆಸರು. ಒಂದು ಮಂತ್ರದಲ್ಲಿ ಅಗ್ನಿಯ ವರ್ಣನೆ ಒಂದು ಒಗಟಿನ ರೂಪದಲ್ಲಿ ಹೀಗೆ ಬಂದಿದೆ: ನಿಮ್ಮಲ್ಲಿ ಯಾರು ಆ ಗೂಢದೇವತೆಯನ್ನು ತಿಳಿದಿರುತ್ತೀರಿ? ಆ ಕರು ತನ್ನ ತಾಯಿಯರನ್ನು ಈದಿದೆ. ತಾಯಿಯರಿಗೆ ಕಾರಣವಾದ ಗರ್ಭಾಣು ಎಲ್ಲವನ್ನು ನೋಡುವ ಆ ಮಹಿಮನು ಯಾರು? ತನ್ನ ಸ್ವಶಕ್ತಿಯಿಂದಲೇ ಚಲಿಸುವ ಅವನು, ಚೇತನಯುತವಾದ ಅಣುಗಳಿಂದ ಮೇಲಕ್ಕೆ ಏಳುತ್ತಾನೆ. (ಇಲ್ಲಿ ಕರು ಅಗ್ನಿ, ತಾಯಂದಿರು ಆಪಗಳು), ದೀರ್ಘತಮಸ್ಸೆಂಬ ಋಷಿಯ ಒಂದು ಮಂತ್ರ ತತ್ತ್ವಕ್ಕೆ ಸಂಬಂಧಪಟ್ಟ ಒಗಟುಗಳಿಂದ ತುಂಬಿದೆ. ಆ ಮಂತ್ರ ಅಶ್ವಮೇಧ ಯಜ್ಞದ ಕಾಲದಲ್ಲಿ ಉಪಯೋಗಿಸುವಂಥದು. ಅದು ಪ್ರಶ್ನೋತ್ತರ ರೂಪದಲ್ಲಿದೆ. ಯಾಜಕರಲ್ಲಿ ಹೋತೃ ಪ್ರಶ್ನೆ ಕೇಳುತ್ತಾನೆ; ಅಧ್ವರ್ಯು ಉತ್ತರ ಹೇಳುತ್ತಾನೆ.

ಹೋತೃ ಈ ಪ್ರಶ್ನೆ ಕೇಳುತ್ತಾನೆ; ಏಕಾಕಿಯಾಗಿ ಸಂಚರಿಸುವವನು ಯಾವನು? ಯಾವನು ಮರಳಿ ಹುಟ್ಟುತ್ತಾನೆ? ನೆಗಡಿಗೆ ಸಿದ್ಧೌಷಧ ಯಾವುದು? ಮಹಾರಾಶಿ ಯಾವುದು?

ಅಧ್ವರ್ಯು ಹೀಗೆ ಉತ್ತರ ಕೊಡುತ್ತಾನೆ; ಏಕಾಕಿಯಾಗಿ ಸಂಚರಿಸುವವನು ಸೂರ್ಯ, ಪುನಃ ಪುನಃ ಹುಟ್ಟುವವನು ಚಂದ್ರ, ನೆಗಡಿಗೆ ಬೆಂಕಿ ಔಷಧ. ದೊಡ್ಡ ರಾಶಿ ಭೂಮಿ.

ಹೋತೃ ಕೇಳುವ ಇನ್ನೊಂದು ಪ್ರಶ್ನೆ : ಸೂರ್ಯನಿಗೆ ಸದೃಶವಾದ ಬೆಳಕು ಯಾವುದು? ಸಾಗರಕ್ಕೆ ಸದೃಶವಾದ ಸಾಗರ ಯಾವುದು? ಪೃಥ್ವಿಗಿಂತ ಮಹತ್ತರವಾದುದು ಯಾವುದು? ಯಾವುದರ ಬೆಲೆ ಅಳತೆಗೆ ಮೀರಿದ್ದು?

ಅದಕ್ಕೆ ಉತ್ತರ ಇದು : ಸೂರ್ಯನಿಗೆ ಸದೃಶವಾದ ಬೆಳಕು ಬ್ರಹ್ಮ, ಸಾಗರಕ್ಕೆ ಸದೃಶವಾದ್ದು ಸ್ವರ್ಗ. ಇಂದ್ರ ಪೃಥ್ವಿಗಿಂತ ದೊಡ್ಡವನು. ಕಾಮಧೇನುವಿನ ಪ್ರಭಾವ ಅಳತೆಗೆ ಮೀರಿದ್ದು.

ಇನ್ನೊಂದು ಪ್ರಶ್ನೆ: ಪ್ರಥ್ವಿಯ ತುತ್ತತುದಿ ಯಾವುದು? ವಿಶ್ವದ ಗುಂಬ ಯಾವುದು? ವೀರ್ಯವತ್ತಾದ ಆ ಅಶ್ವದ ಬೀಜ ಯಾವುದು? ವಾಕ್ಕಿನ ಮಹತ್ತರ ಸ್ವರ್ಗ ಯಾವುದು?

ಅದಕ್ಕೆ ಉತ್ತರ: ಬಲಿಪೀಠ ಪೃಥ್ವಿಯ ತುತ್ತತುದಿ. ಯಜ್ಞ ವಿಶ್ವದ ಗುಂಬ, ಸೋಮ ಆ ವೀರ್ಯವತ್ತಾದ ಅಶ್ವದ (ಇಂದ್ರ) ಬೀಜ. ಬ್ರಹ್ಮ ವಾಕ್ಕಿನ ಮಹತ್ತರ ಸ್ವರ್ಗ.

ದೀರ್ಘತಮಸ್ ಋಷಿಯ ಸೂಕ್ತದಲ್ಲಿ ತತ್ತ್ವಕ್ಕೆ ಸಂಬಂಧಪಟ್ಟ ಒಗಟು ಇದು: ಸಹಚಾರಿಗಳಾದ, ಪರಸ್ಪರ ಸ್ನೇಹಿತರಾದ ಎರಡು ಹಕ್ಕಿಗಳು ಒಂದೇ ಮರದ ಮೇಲೆ ವಾಸಿಸುತ್ತವೆ. ಅವುಗಳಲ್ಲಿ ಒಂದು ಸಿಹಿಯಾದ ಅಂಜೂರದ ಹಣ್ಣನ್ನು ತಿನ್ನುತ್ತದೆ. ಇನ್ನೊಂದು ತಿನ್ನದೆ ಸುಮ್ಮನೆ ನೋಡುತ್ತದೆ. ಇಲ್ಲಿ ತಿನ್ನುವ ಹಕ್ಕಿ ಸಂಸಾರದಲ್ಲಿ ತೊಡಗಿರುವ ಜೀವ. ತಿನ್ನದ ಹಕ್ಕಿ ಪರಮಾತ್ಮ. ಇದೇ ಒಗಟು ಉಪನಿಷತ್ತುಗಳಲ್ಲೂ ಸಾಂಖ್ಯಕಾರಿಕದಲ್ಲೂ ಪುನರುಕ್ತವಾಗಿದೆ. (ಜಿ.ಎಚ್.)

**ಒಗೆಯುವ ಯಂತ್ರ:** ಬಟ್ಟೆಗಳನ್ನು ಒಗೆದು ಶುಚಿಗೊಳಿಸಿ ತಕ್ಕ ಮಟ್ಟಿಗೆ ಒಣಗಿಸಿ ಪೂರೈಸುವ ಸಲಕರಣೆ (ವಾಷಿಂಗ್ ಮೆಷೀನ್). ಸ್ವಯಂಚಾಲಿತ, ಅರೆಸ್ವಯಂಚಾಲಿತ, ಮನುಷ್ಯಶಕ್ತಿಯಿಂದ ಕೆಲಸಮಾಡುವ-ಹೀಗೆ ಭಿನ್ನವರ್ಗಗಳ ಯಂತ್ರಗಳು ಇಂದು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಒಗೆಯುವ ಯಂತ್ರವನ್ನು ರಚಿಸಿ ಅದರ ಏಕಸ್ವವನ್ನು ಪಡೆದವ ಅಮೆರಿಕ ದೇಶದ ಹ್ಯಾಮಿಲ್ಟನ್ ಇ.ಸ್ಮಿತ್ (1858).

ಒಗೆಯುವ ಯಂತ್ರಗಳ ಉಪಗೋಗದಿಂದ ಬಟ್ಟೆಗಳು ಬಾಳಿಕೆ ಬರುವುವು. ಕಲ್ಲಿಗೆ ಒಗೆದು ಅಥವಾ ಕೋಲಿನಿಂದ ಬಡಿದು ಒಗೆಯುವಾಗ ಬಟ್ಟೆಯ ನೂಲೆಳೆಗಳು ಶಿಥಿಲಗೊಂಡು ಬಾಳಿಕೆ ಕಡಿಮೆಯಾಗುತ್ತದೆ. ಚಿಕ್ಕ ಯಂತ್ರಗಳಲ್ಲಿ ಸುಮಾರು ಕಾಲು ಅಶ್ವಸಾಮರ್ಥ್ಯದ ಮೋಟಾರಿನಿಂದ ತಿರುಗಿಸಲಾಗುವ ತಿರುಚಿದ ಪ್ಲಾಸ್ಟಿಕ್ ಅಲಗುಗಳುಳ್ಳ ದಂಡವಿದೆ. ಇದರಿಂದ ಸಾಬೂನಿನ ನೀರು ಚಿಮ್ಮಲ್ಪಟ್ಟು ಬಟ್ಟೆಗಳ ಸಂದಿ ಗೊಂದಿಗೂ

ಒಗೆಯುವ ಯಂತ್ರ

ಪ್ರವೇಶಿಸಿ ಕೊಳೆಯನ್ನು ಹೊರತೆಗೆದು ಹಾಕಲು ಅನುಕೂಲವಾಗುತ್ತದೆ. ಕೆಲವು ಯಂತ್ರಗಳಲ್ಲಿ ಬಟ್ಟೆಯ ಪಾತ್ರೆಯನ್ನೇ ಸಾಬೂನಿನ ನೀರಿನಲ್ಲಿ ಪಕ್ಕದಿಂದ ಪಕ್ಕಕ್ಕೆ ಆಂದೋಲನ ಮಾಡುವ ಸಂವಿಧಾನವಿರುತ್ತದೆ. ನಿರ್ದಿಷ್ಟಕಾಲ ಸುಮಾರು $70^0$ ಸೆಂ. ಉಷ್ಣತೆ ನೀರಿನಲ್ಲಿ ಆಡಿಸಿ,

ಒಣಗಿಸುವ ಯಂತ್ರ

ಬಿಸಿನೀರಿನಲ್ಲಿ ಜಾಲಿಸಿ ಅನಂತರ ತಣ್ಣೀರಿನಲ್ಲಿ ಜಾಲಿಸಿ, ಬಟ್ಟೆಗಳನ್ನು ಹೊರತೆಗೆದು ಯಂತ್ರದ ಮೇಲ್ಭಾಗದಲ್ಲಿರುವ ಲಟ್ಟಣಿಗೆಗಳ (ರೋಲರ್ಸ್) ನಡುವೆ ಹಾಯಿಸಿ ಹಿಂಡಿ ತೆಗೆದು ಒಣಗಿಸಬಹುದು. ಒಮ್ಮೆಗೆ ಒಂದೇ ತರಹದ ಬಟ್ಟೆಗಳನ್ನು ಮಾತ್ರ (ದಪ್ಪವಾದ ಬಟ್ಟೆಗಳನ್ನಾಗಲಿ ತೆಳ್ಳಗಿನ ಬಟ್ಟೆಗಳನ್ನಾಗಲಿ) ಒಗೆಯಬೇಕು. ಬಣ್ಣ ಬಿಡುವ ಬಟ್ಟೆಗಳನ್ನು ಬಿಳಿಯ ಅಥವಾ ಗಟ್ಟಿಬಣ್ಣದ ಬಟ್ಟೆಗಳೊಡನೆ ಒಗೆಯಬಾರದು.

ನವೀನ ಸಮಾಜದ ಬಿರುಸಿನ ಜೀವನದಲ್ಲಿ ದೈನಂದಿನಾವಶ್ಯಕತೆಗಳನ್ನು ಪೂರೈಸುವದರಲ್ಲಿ ಬಟ್ಟೆ ಒಗೆಯುವ ಯಂತ್ರದ ಪಾತ್ರ ಮಹತ್ತ್ವದ್ದೆನಿಸಿದೆ. (ಬಿ.ಬಿ.ಎಸ್.)

**ಒಗ್ಗದಿಕೆ, ಮರೆಹಾರಿಕೆ:** ಒಂದು ಪ್ರಭೇದದ ವ್ಯಕ್ತಿಗಳ ಮೇಲೆ ಪರಕೀಯ ವಸ್ತುವಿನ ಪ್ರಭಾವ ಸಾಮಾನ್ಯವಾಗಿ ನಿರೀಕ್ಷಿಸಿದಂತೆ ಒಂದೇ ಬಗೆಯದಾಗಿರಬೇಕು. ಹಾಗಲ್ಲದೇ ಆ ಪ್ರಭೇಧದ ಕೆಲವರ ದೇಹಗಳ ಊತಕಗಳು ಅಥವಾ ಅಂಗಾಂಶಗಳು ತೀರ ಭಿನ್ನವಾದ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರೆ ಅವರು ಆ ಪರಕೀಯ ವಸ್ತುವನ್ನು ಕುರಿತು ಒಗ್ಗದಿಕೆ (ಅಲರ್ಜಿ) ಹೊಂದಿರುವರು ಎನ್ನುತ್ತಾರೆ. ಆದ್ದರಿಂದ ಒಗ್ಗದಿಕೆ ಎನ್ನುವುದು ವ್ಯಕ್ತಿವಿಶಿಷ್ಟವಾದ ಒಂದು ಲಕ್ಷಣ. ಊತಕಗಳ ಒಗ್ಗದಿಕೆಗೆ ಉದಾಹರಣೆಯಾಗಿ ಪರಾಗಜನಿತಜ್ವರ (ಹೇ ಫೀವರ್), ಆಸ್ತಮಾ, ಪಿತ್ತೀ (ಅರ್ಟಿಕೇರಿಯ), ಇಸಬು (ಎಕ್ಸೀಮ), ಸಂಪರ್ಕದಿಂದ ಒದಗುವ ಚರ್ಮಪ್ರತಿಕ್ರಿಯೆ (ಕಾಂಟ್ಯಾಕ್ಟ್ ಡರ್ಮಟೈಟಿಸ್), ಔಷಧಿಗಳಿಗೆ ಪ್ರತಿಕ್ರಿಯೆಗಳು–ಮುಂತಾದುವುನ್ನು ಹೆಸರಿಸಬಹುದು. ವಿಶೇಷ ಪ್ರಭಾವಗಳಿಂದ ಆಗುವ ಪ್ರತಿಕ್ರಿಯೆಗಳಿಗೆ ಅಲರ್ಜಿ ಎಂಬ ಪದವನ್ನು ಉಪಯೋಗಿಸಲು ಕ್ಲೆಮೆನ್ಸ್ ಫಾನ್ ಪಿರ್ಕೆ ಸೂಚಿಸಿದ (1906) ವಂಶಪಾರಂಪರ್ಯವಾಗಿ ಬಂದ ಅಥವಾ ವ್ಯಕ್ತಿಯ ಜೀವನದಲ್ಲಿ ಗಳಿಸಿದ, ಪರಕೀಯ ವಸ್ತುಗಳಿಗೆ ತೋರುವ ಮಿತಿ ಮೀರಿದ ಪ್ರತಿಕ್ರಿಯೆ ಎಂಬುದು ಅಲರ್ಜಿ ಎಂಬುದರ ಈಗಿನ ಅರ್ಥ. ಈಗ ವೈದ್ಯರಲ್ಲದವರಲ್ಲಿ ಕೆಲವರು ಗೂರಲು ಮುಂತಾದ ಬೇನೆಗಳಿಗೆ ಅಲರ್ಜಿ ಎಂದು ಹೇಳುವುದುಂಟು.

ಹಾವುಮೀನಿನ ಲಸಿಕೆಯನ್ನು ಎರಡನೆಯ ಬಾರಿ ಚುಚ್ಚಿದಾಗ ಕೆಲವು ವೇಳೆ ಪ್ರಾಣಿಯಲ್ಲಿ ಆಗುವ ಮರಣ ಪ್ರತಿಕ್ರಿಯೆಗೆ ಅನಾಫಿಲಾಕ್ಸಿಸ್ (ಮರೆಹಾರಿಕೆ) ಎಂಬ ಪದವನ್ನು ಚಾರ್ಲ್ಸ್ ರಿಚೆಟ್ ಬಳಕೆಗೆ ತಂದ (1898). ಲಸಿಕೆಯನ್ನು ಮೊದಲ ಸಲ ಚುಚ್ಚಿದಾಗ ಏನೂ ಕೆಟ್ಟದ್ದಾಗದುದರಿಂದ ಪ್ರೊಫೈಲಾಕ್ಸಿಸ್ (ಮರೆನೀಡುವೆ) ಎಂಬುದಕ್ಕೆ ವಿರುದ್ಧ ಅರ್ಥ ಕೊಡುವ ಅನಾಫಿಲಾಕ್ಸಿಸ್ ಪದವನ್ನು ಬಳಸಿದ. ಸಾಯಿಸಿದ ಕ್ರಿಮಿಗಳ ಅಥವಾ ಅವುಗಳ ವಿಷಗಳನ್ನು ಚುಚ್ಚುವುದರಿಂದ ಏಳುವ ರೋಗವನ್ನು ಪಡೆವುದೇ ಮರೆನೀಡುವೆ. ಉದಾಹರಣೆಗೆ, ಸಿಡುಬು ಹಾಕುವುದು ಮತ್ತು ಕಾಲರ ಲಸಿಕೆ. ಈ ಲಸಿಕೆಗಳನ್ನು ಹಾಕಿಸಿಕೊಂಡರೆ ಆಯಾ ರೋಗಗಳು ಬಂದು ಯಾರೂ ಸಾಯುವುದಿಲ್ಲ. ಪರಕೀಯ ಪ್ರೋಟೀನನ್ನು ಎರಡನೆಯ ಸಲ ಚುಚ್ಚಿದಾಗ ಪ್ರಾಣಿಗಳಲ್ಲಾಗುವ ಕೆಟ್ಟ ಪ್ರತಿಕ್ರಿಯೆಗೆ ಮರೆಹಾರಿಕೆ ಎಂಬುದು ಈಗಿನ ವೈಜ್ಞಾನಿಕ ಪದ.

ಒಗ್ಗದಿಕೆ ಮತ್ತು ಮರೆಹಾರಿಕೆ ಪ್ರತಿಕ್ರಿಯೆಗಳು ಪ್ರಾಣಿಗಳಲ್ಲೂ ಮನುಷ್ಯನಲ್ಲೂ ವಿವಿಧ ಪರಿಸ್ಥಿತಿಗಳಲ್ಲಿ ವಿವಿಧ ರೀತಿಯಲ್ಲಿ ವಿವಿಧ ಪರಿಣಾಮಗಳನ್ನೂ ಚಿಹ್ನೆಗಳನ್ನೂ ಉಂಟುಮಾಡುತ್ತವೆ. ಇವೆಲ್ಲವನ್ನೂ ಪ್ರಾಣಿ ತನ್ನ ಸುತ್ತಲಿನ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವ ಯುಕ್ತ ವ್ಯಾಪಾರಗಳೆಂದು ತಿಳಿಯಬಹುದು.

ಮರೆಹಾರಿಕೆ ಪ್ರತಿಕ್ರಿಯೆ: ಒಂದೊಂದು ಪ್ರಾಣಿಜಾತಿಗೂ ಇದು ವಿಶಿಷ್ಟ, ಪ್ರತಿಕ್ರಿಯೆಯನ್ನು ಕೆರಳಿಸುವ ಪರಕೀಯ ಪ್ರೋಟೀನಿನಿಂದ ಇದು ನಿಶ್ಚಿತವಾದುದಲ್ಲ. ಉದಾಹರಣೆಗೆ, ಗಿನಿ ಇಲಿಗೆ (ಗಿನಿ ಪಿಗ್) ಕುದುರೆಯ ರಕ್ತದ ರಸಿಕೆ (ಸೀರಂ) ಮೊಟ್ಟೆಯ ಬಿಳಿಲೋಳೆ ಅಥವಾ ಇತರ ಪ್ರೋಟೀನ್ ವಸ್ತುವನ್ನು ಮೇಲಿಂದ ಮೇಲೆ ಚುಚ್ಚುತ್ತಿದ್ದರೆ, ಅದು ಬರುಬರುತ್ತ ಮೈಗೆ ಒಗ್ಗದಂತಾಗಿ ಆ ಪ್ರೋಟೀನಿಗೆ ಬಲವಾಗಿ ಎದುರುಬೀಳುತ್ತದೆ. ಹೀಗಾಗಿ 10–12 ದಿವಸಗಳ (ಒಗ್ಗದಿಕೆ ಉಂಟಾಗುವ ಕಾಲ) ಮೇಲೆ ಮತ್ತೆ ಅದೇ ಪ್ರೋಟೀನಿನ ಚುಚ್ಚಿಕೆ ಮೈಗಾಗದೆ ಕೆಲವು ಮಿನಿಟುಗಳಲ್ಲಿ ಆ ಪ್ರಾಣಿ ಸೀನುತ್ತದೆ, ಮೂಗನ್ನು ಕೆರೆದುಕೊಳ್ಳುತ್ತದೆ, ಪರದಾಡುತ್ತದೆ, ಸಾಧಾರಣವಾಗಿ ಉಚ್ಚೆ ಹೊಯ್ದುಕೊಂಡು, ಉಸಿರಾಡಲು ಬಲು ಕಷ್ಟಪಡುತ್ತದೆ. ಕಷ್ಟಪಟ್ಟರೂ ಆಕ್ಸಿಜನ್ ಸಾಕಷ್ಟು ಮೈಗೂಡದೆ, ಸಾಯುವ ತನಕ ಅದರ ಕಷ್ಟ ಹೆಚ್ಚಬಹುದು. ಫುಪ್ಪುಸಗಳಲ್ಲಿರುವ ಗಾಳಿಕೊಳವೆಗಳು ಕುಗ್ಗಿ ಮುಚ್ಚಿಕೊಳ್ಳುವುದರಿಂದ ಗಾಳಿ ಒಳಕ್ಕೆ ಹೋಗದೆ ಉಸಿರಾಟ ಕಷ್ಟವಾಗುತ್ತದೆ. ಅದೇ ನಾಯಿಯಲ್ಲಾದರೆ ಮುಖ್ಯ ಚಿಹ್ನೆಗಳು–ವಾಂತಿ, ಮಲವಿಸರ್ಜನೆ, ರಕ್ತದ ಒತ್ತಡ ತಗ್ಗುವಿಕೆ, ಜ್ಞಾನ ತಪ್ಪುವುದು ಮತ್ತು ರಕ್ತ ಗಡ್ಡೆಕಟ್ಟಿದಂತಾಗುವುದು. ಮೊಲದಲ್ಲಿ ಮುಖ್ಯ ಚಿಹ್ನೆಗಳು–ಕಿವಿಗಳು ಒಂದು ಸಲ ಕೆಂಪಗಾದರೆ ಒಂದು ಸಲ ಬಿಳಿಚಿಕೊಳ್ಳುವುದು, ಮಲಮೂತ್ರ ವಿಸರ್ಜನೆ, ಗುಂಡಿಗೆಯ ಅಕ್ರಮ ಬಡಿತ, ಸೆಳವು. ಇನ್ನೂ ಹಲವು ಚಿಹ್ನೆಗಳೂ ಈ ಪ್ರಾಣಿಗಳಲ್ಲಿ ಕಾಣುತ್ತವೆ; ಉದಾಹರಣೆಗೆ, ಬಿಳಿ ರಕ್ತಕಣಗಳ ಸಂಖ್ಯೆ ಕುಸಿತ, ಹಾಲುರಸದ (ಲಿಂಫ್) ಹೆಚ್ಚಳಿಕೆ. ಪ್ರಾಣಿ ಇದರಿಂದ ಚೇತರಿಸಿಕೊಂಡು ಬದುಕಿದಲ್ಲಿ, 1–2 ದಿವಸಗಳು ಇನ್ನೊಂದು ಚುಚ್ಚುಗೆಗೆ ಕಷ್ಟಪಡದು. ಆಗ ಸುಲಭವಾಗಿ ಈಡಾಗದಿರುವುದರಿಂದ, ಅದು ಒಗ್ಗುವ ಸ್ಥಿತಿಯಲ್ಲಿರುತ್ತದೆ.

ಹೀಗೆ ಒಗ್ಗದಿಕೆ ತೋರುವ ಪ್ರಾಣಿಗಳಿಂದ ತೆಗೆದ ಮಾಂಸ ವಿಶೇಷಗಳೂ ಒಗ್ಗದಿಕೆಯ ಪ್ರತಿಕ್ರಿಯೆಗಳನ್ನು ತೋರುತ್ತವೆ. ಉದಾಹರಣೆಗೆ, ಗಿನಿ ಇಲಿಯ ಗರ್ಭಕೋಶ ಅಥವಾ ಕರುಳಿನ ತುಂಡನ್ನು ಬೆಚ್ಚಗೆ ಆಕ್ಸಿಜನ್ ಇರುವ ಮೈರಸದಂತಿರುವ ಲವಣ ದ್ರಾವಣದಲ್ಲಿ ತೂಗಹಾಕಿ, ಒಗ್ಗದಿಕೆ ಉಂಟುಮಾಡಿದ ಪರಕೀಯ ಪ್ರೋಟೀನನ್ನು ತೀರ ಸಣ್ಣ ಪ್ರಮಾಣದಲ್ಲಿ ತಾಕಿಸಿದರೂ ಆ ಭಾಗ ಬಲವಾಗಿ ಸೆಟೆದು ಮುದುಡಿಕೊಳ್ಳುತ್ತದೆ. ಇದಕ್ಕೆ ಷೂಲ್ಟ್ಜ್–ಡೇಲ್ ಪರೀಕ್ಷೆ ಎಂದು ಹೆಸರು. ಇದು ಎಷ್ಟು ಸೂಕ್ಷ್ಮ ಮತ್ತು ವಿಶಿಷ್ಟವೆಂದರೆ ಆ ಪರಕೀಯ ಪ್ರೋಟೀನಿನ ಒಂದು ಮಿಲಿಗ್ರಾಮಿನ ಭಾಗಾಂಶವಿರುವುದನ್ನೂ ಈ ಪರೀಕ್ಷೆಯಿಂದ ಕಂಡುಹಿಡಿಯಬಹುದು. ಇತರ ಪ್ರೋಟೀನಿನಿಂದ ಈ ಪ್ರತಿಕ್ರಿಯೆ ಕಾಣದು.

ಕೆಲವು ಪ್ರಾಣಿಗಳಲ್ಲಿ ಮೈಯಲ್ಲಿ ಎಲ್ಲಾದರೂ ಒಂದೆಡೆ ಒಗ್ಗದಿಕೆಯ ವಿಚಿತ್ರಗಳನ್ನು ನೋಡಬಹುದು. ಚುಚ್ಚಿ ಒಗ್ಗದಂತೆ ಮಾಡಿದ ಮೊಲದ ಚರ್ಮದ ಕೆಳಗೆ ಅದೇ ವಿಶಿಷ್ಟ ಪ್ರೋಟೀನನ್ನು ಚುಚ್ಚಿದರೆ 48 ಗಂಟೆಗಳೊಳಗೆ ಆ ಭಾಗ ಊದಿ, ಗಡುಸಾಗಿ ಕೊಳೆಯಬಹುದು. ಮೊದಲು ಇದನ್ನು ಮಾರೀಸ್ ಆರ್ಥಸ್ ವರ್ಣಿಸಿದುದರಿಂದ ಈ ತಾವಿನ ಪ್ರತಿಕ್ರಿಯೆಗೆ ಆರ್ಥಸ್ ವಿಚಿತ್ರ ಎನ್ನುತ್ತಾರೆ.

ಒಗ್ಗದಿಕೆಯ ತೋರಿಕೆಗಳು : ಒಂದು ಪ್ರಾಣಿಜಾತಿಯಲ್ಲಿ ಕಾಣುವ ಒಂದೇ ತೆರನ ಮರೆಹಾರಿಕೆ ಪ್ರತಿಕ್ರಿಯೆಗೆ ಎದುರಾಗಿ ಮನುಷ್ಯನಲ್ಲಿ ಪ್ರತಿಕ್ರಿಯೆಗಳು ಬಗೆಬಗೆಯಾಗಿವೆ. ಕರಡಜ್ವರ **(ನೋಡಿ– ಕರಡಜ್ವರ)**, ಗೂರಲು, ಇಸಬುಗಳು ತೀರ ಸಾಧಾರಣ ಪ್ರತಿಕ್ರಿಯೆಗಳು. ಆದರೆ ಜ್ವರ, ತಿಮಿರ, ನವೆ, ದದ್ದುಗಳು, ತಲೆನೋವು, ಹೊಟ್ಟೆನುಲಿತ, ಭೇದಿ ಮತ್ತು ಇನ್ನೂ ಹಲವು ರೋಗಾಲಕ್ಷಣಗಳಿಗೆ ಒಗ್ಗದಿಕೆ ಮೂಲವಾಗಿರಬಹುದು; ಮೂತ್ರಪಿಂಡದ ಉರಿತ (ನೆಫ್ರೈಟಿಸ್), ಕೀಲುವಾತದ ಜ್ವರ ಮುಂತಾದ ರೋಗಗಳು ಸರಕಾಯ್ಜೀವಿಗಳ (ಸ್ಟ್ರೆಪ್ಟೊಕಾಕೈ) ವಿಷಗಳ ಎದುರು ಒಗ್ಗದಿಕೆಯ ಪ್ರತಿಕ್ರಿಯೆಗಳೆಂದು ತಿಳಿಯಬಹುದು. ಯಾವುದಾದರೂ ಒಂದು ನಿರ್ದಿಷ್ಟ ರೋಗ ವಿಚಾರಕ್ಕೆ ಕನಿಷ್ಠವಾಗಿ ಮೂರು ಸಂಗತಿಗಳಿವೆ: 1 ಪರಕೀಯ ವಸ್ತು ಸೋಂಕುವ ಅಥವಾ ದೇಹದ ಒಳಹೋಗುವ ರೀತಿ, 2 ಒಗ್ಗದಿಕೆ ಜನಕವಾದ (ಅಲರ್ಜೆನ್) ಪರಕೀಯ ವಸ್ತುವಿನ ತಾವಿಗಂಟುವ ಗುಣ, 3 ಹೊರವಸ್ತುವಿನ ಹುಟ್ಟುಗುಣ. ಉದಾಹರಣೆಗೆ, ರ್‍ಯಾಗ್‌ವೀಡ್ ಗಿಡದ ಪರಾಗ ಸಾಧಾರಣವಾಗಿ ಮೊದಲು ಕಣ್ಣು ಮೂಗುಗಳಲ್ಲಿ ಹೊಕ್ಕು ಅಲ್ಲಿಯ ಮೈರಸಗಳೊಡನೆ ಬೆರೆತು ಅದೇ ತಾವಿನಲ್ಲಿ ಬೇನೆಯನ್ನುಂಟು ಮಾಡುತ್ತದೆ. ಆದರೆ ಕೆಲವರಲ್ಲಿ ರ್‍ಯಾಗ್‌ವೀಡಿನಿಂದ ಕರಡಜ್ವರವಲ್ಲದೆ ಗೂರಲೂ ಬರುವುದು; ಅಪೂರ್ವವಾಗಿ ತಲೆನೋವು ಅಥವಾ ತುರುಚೆದದ್ದುಗಳು (ಆರ್ಟಿಕೇರಿಯ) ಕಾಣಬಹುದು. ಸೇವಿಸಿದ ಆಹಾರವಸ್ತುಗಳಿಂದ ಸಾಧಾರಣವಾಗಿ ಆಗುವ ಒಗ್ಗದಿಕೆ ಪ್ರತಿಕ್ರಿಯೆಗಳು–ಪೈತ್ಯಗಂದೆ ಅಥವಾ ದದ್ದುಗಳು ಚರ್ಮದಲ್ಲೇ ತೋರುತ್ತವೆ. ರ್‍ಯಾಗ್‌ವೀಡ್ ಪರಾಗದಿಂದ ಕರಡ ಜ್ವರವೂ ಮೀನು ತಿಂದರೆ ಪೈತ್ಯವೂ ಒಬ್ಬನಲ್ಲೇ ಕಾಣಬಹುದು. ಕೆಲವು ಮದ್ದುಗಳ ಸೇವನೆಯಿಂದಲೂ ಹೀಗೆ ದದ್ದುಗಳೇಳಬಹುದು. ಈ ಎಲ್ಲ ಪ್ರತಿಕ್ರಿಯೆಗಳ ಒಂದು ಸಾಮಾನ್ಯಗುಣವೆಂದರೆ ಒಂದು ವಸ್ತುವಿಗಾಗುವ ಒಗ್ಗದಿಕೆ ತೋರಿಕೆಗಳು ಅದೇ ಜಾತಿಯ ಹೆಚ್ಚು ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಆಗುವ ವಿಪರೀತ ಅಥವಾ ಔಷಧ ಶಾಸ್ತ್ರದಲ್ಲಿರುವ ಪ್ರತಿಕ್ರಿಯೆಗಿಂತ ಬೇರೆಯಾಗಿರುತ್ತವೆ. ಉದಾಹರಣೆಗೆ, ಔಷಧ ಶಾಸ್ತ್ರದ ಪ್ರಕಾರ ಬಹುಜನರಲ್ಲಿ ಫೀನೋಬಾರ್ಬಿಟೋನಿಗೆ ಪ್ರತಿಕ್ರಿಯೆ ಮಂಪರು; ಆದರೆ ಒಗ್ಗದಿಕೆಯಿಂದ ದದ್ದುಗಳೇಳಬಹುದು.

ಒಗ್ಗದಿಕೆ ರೋಗ ನಿರ್ಣಯ: ಮೊತ್ತಮೊದಲಾಗಿ, ಈ ಪ್ರತಿಕ್ರಿಯೆ ಒಗ್ಗದಿಕೆಯೇ ಅಲ್ಲವೇ ಎಂದು ನಿರ್ಧರಿಸಬೇಕು. ಒಗ್ಗದ ಕಾರಣವಸ್ತುವನ್ನು ಕಂಡುಹಿಡಿಯಬೇಕು. ಎರಡನೆಯದಕ್ಕೆ ಉತ್ತರ ಸಿಗದೆ ಮೊದಲಿನ ಪ್ರಶ್ನೆಗೆ ಉತ್ತರ ಕಾಣುವುದು ಅಸಂಭವ. ಪ್ರತಿಕ್ರಿಯೆಯ ಸ್ವಭಾವದಿಂದ (ಉದಾ–ಪೈತ್ಯ) ಅಥವಾ ರೋಗವಿಲ್ಲದಿರುವ ಕಾಲಗಳ ನಡುವೆ ರೋಗ ಮತ್ತೆ ಕಾಣಿಸಿಕೊಳ್ಳುವುದರಿಂದ ಒಗ್ಗದಿಕೆಯನ್ನು ಶಂಕಿಸಬಹುದು. ಆದರೂ ಕಾರಕವನ್ನು ಕಂಡುಹಿಡಿಯದೆ ಒಗ್ಗದಿಕೆ ಖಚಿತವಿಲ್ಲ. ಜೀವಿಯಲ್ಲಿ ಪ್ರತಿಕ್ರಿಯಾ ಮಾರ್ಗಗಳು ಕೆಲವೇ ಇರುವುದೇ ಕಾರಣ, ಚೆಂಡನ್ನು ಆಡಿಸುವ ಶಕ್ತಿ ಪುಟಿದೇಳುವುದು ಅಥವಾ ಉರುಳುವುದು ಮಾತ್ರವೇ, ಹಾಗೇ, ಗಾಸಿಗೊಳಿಸುವ, ಅಪಾಯಕರ ಚೋದನೆಗಳಿಗೆ ಮೈಯ ಉತ್ತರ ಒಂದೇ ಇರಬಹುದು. ಉದಾಹರಣೆಗೆ, ರ್‍ಯಾಗ್‌ವೀಡ್ ಒಗ್ಗದಿದ್ದರೆ, ತಂಗಾಳಿಸೇವನೆ, ಕೆಮ್ಮು, ಪುಪ್ಪುಸನಾಳುರಿತ, ಹೃದ್ರೋಗ, ವ್ಯಾಕುಲಚಿತ್ತ, ಅಥವಾ ಉಸಿರ್ನಾಳವನ್ನು ಒತ್ತುವ ಗೆಡ್ಡೆ ಇವೆಲ್ಲಕ್ಕೂ ಒಂದೇ ಉತ್ತರವಾಗಿ ಸಾಮಾನ್ಯ ಗೂರಲು ಏಳಬಹುದು. ವಾಸ್ತವಿಕವಾಗಿ ಈ ಕಾರಣಗಳಲ್ಲಿ ಹಲವಾರು ಒಬ್ಬನಲ್ಲೇ ಆಗಾಗ ಒಟ್ಟಿಗೇ ತೋರುತ್ತವೆ.

ಒಗ್ಗದಿಕೆ ನಿರ್ಧಾರದಲ್ಲಿ ಕಾರಕವನ್ನು ತಿಳಿಯುವುದು ಮುಖ್ಯವಾದುದರಿಂದ ಒಗ್ಗದ ವಸ್ತುಗಳ ಹಲ ಬಗೆಗಳ ಸ್ವಲ್ಪ ಪರಿಚಯ ಅಗತ್ಯ, ಮದ್ದುಗಳು, ಹೂ ಪರಾಗ, ಬೂಷ್ಟು, ಗಾಯದ ಬಟ್ಟೆಗಳು, ಪ್ರಾಣಿ ಚರ್ಮಗಳ ಹೊಟ್ಟು, ತಲೆಹೊಟ್ಟು, ಕುಂಕುಮ, ಮುಖಪುಡಿ ಇತ್ಯಾದಿ ಅಲಂಕಾರದ್ರವ್ಯಗಳು, ಕೈಗಾರಿಕೆ ರಾಸಾಯನಿಕಗಳು, ಕ್ರಿಮಿಗಳು, ಆಹಾರದ್ರವ್ಯಗಳು ಮುಖ್ಯ ಕಾರಕಗಳು. ಈ ಪಟ್ಟಿಯಲ್ಲಿ ಒಬ್ಬನಿಗೆ ತಾಕಬಹುದಾದ ಎಲ್ಲ ವಸ್ತುಗಳಿದ್ದರೂ ಒಗ್ಗದಿಕೆ ಪ್ರತಿಕ್ರಿಯೆಯ ಸ್ವಭಾವ. ಕ್ರಮವನ್ನು ಗಮನಿಸುವುದರಿಂದ ಹೆಚ್ಚು ಸಂಗತಿಗಳು ತಿಳಿಯುತ್ತವೆ. ನಿಖರವಾದ ನಿರ್ಣಯಕ್ಕೆ ಬೇಕಾದುದು, ರೋಗಿಯ ಸರಿಯಾದ ಪೂರ್ಣ ಚರಿತ್ರೆ. ಹೂ ಪರಾಗ, ಬೂಜಲು ಮತ್ತಿತರ ಇಂಥ ಉಸಿರಲ್ಲಿ ಒಳಸೇರುವ ಪದಾರ್ಥಗಳಿಗೆ ಪ್ರತಿಕ್ರಿಯೆ ಕಣ್ಣು, ಮೂಗು ಉಸಿರ್ನಾಳಗಳಲ್ಲಿ ಚಿಹ್ನೆಗಳನ್ನು ತೋರುತ್ತದೆ. ಅಂಗರಾಗವಸ್ತುಗಳನ್ನು ಹಚ್ಚಿರುವ ಮುಖ ಕೈಗಳ ಮೇಲೆ ಪ್ರತಿಕ್ರಿಯೆಗಳಾಗುತ್ತವೆ. ಹೂವಿನ ಪರಾಗದ ಒಗ್ಗದಿಕೆಗೆ ಋತು ಪ್ರಭಾವವಿದೆ, ವಸಂತ ಋತುವಿನಲ್ಲಿ ಮರಗಳೂ ಸೆಕೆಗಾಲದ ಮೊದಲಲ್ಲಿ ಹುಲ್ಲೂ ಆಮೇಲೆ ಕಳೆಗಳೂ ಪರಿಣಾಮಕಾರಿ ಕಾರಕಗಳು.

ಶೋಧನೆಯ ಕ್ರಮಗಳು: ಎಷ್ಟೋ ವಸ್ತುಗಳು ಒಗ್ಗದೆನ್ನುವವರ ವಿಚಾರಗಳನ್ನು ವಿವರವಾಗಿ ತಿಳಿಯುವುದೂ ನಿಸರ್ಗದಲ್ಲಿನ ವಸ್ತುಗಳಿಂದಾಗುವ ಪ್ರತಿಕ್ರಿಯೆಗಳನ್ನು ಚಾಚೂ ತಪ್ಪದೆ ಅವನ್ನೇ ಮತ್ತೆ ಚೋದಿಸುವಂತಿರುವುದೂ ಮುಖ್ಯ, ಒಗ್ಗದೆನ್ನುವ ವಸ್ತು ತುಟಿರಂಗಿನಂಥ ಚರ್ಮಸ್ಪರ್ಶಿಯಾದರೆ ಅದನ್ನೇ ಚೆನ್ನಾಗಿರುವ ಬೇರೆ ಚರ್ಮಭಾಗಕ್ಕೆ ಹಚ್ಚಿದಾಗ ಪ್ರತಿಕ್ರಿಯೆಯಾದರೆ ತುಟಿರಂಗು ಆ ವ್ಯಕ್ತಿಗೆ ಒಗ್ಗದೆಂದೂ ಪ್ರತಿಕ್ರಿಯೆ ಇಲ್ಲದಿದ್ದರೆ ಒಗ್ಗುವುದೆಂದೂ ಅರಿಯಬಹುದು. ಒಂದು ಆಹಾರದ್ರವ್ಯವನ್ನು ಊಟದಲ್ಲೋ ತಿಂಡಿಯಲ್ಲೋ ಕೊಡಬಹುದು ಅಥವಾ ಕೊಡದಿರಬಹುದು. ಇದರಿಂದ ಒಗ್ಗದ ವಸ್ತು ಯಾವುದೆಂದು ಕಂಡುಹಿಡಿಯಬಹುದು. ಇದಕ್ಕೋಸ್ಕರ ವಿವರವಾಗಿ ತಿಂಡಿತಿನಿಸುಗಳ ದಿನಚರಿ ಪುಸ್ತಕಗಳನ್ನು ಎಚ್ಚರಿಕೆಯಿಂದ ಇಡಬೇಕು. ಕೆಲವು ರೋಗಿಗಳ ವಿಚಾರದಲ್ಲಿ ಕೆಲವೇ ಮಾತ್ರವಿರುವ ಅಪೂರ್ವ ಒಗ್ಗದಿಕೆ ಆಹಾರವಸ್ತುಗಳನ್ನು ಕಟ್ಟುನಿಟ್ಟಾಗಿ ಒಂದೊಂದನ್ನೇ ಬಿಟ್ಟು ಬಿಡುವಂತಿರುವ ಊಟತಿಂಡಿಗಳಿರಬೇಕು. ಆಗ ಶಂಕಿಸಲಾದವನ್ನು ಒಂದೊಂದಾಗಿ ಸೇರಿಸಿ ಹೌದೋ ಅಲ್ಲವೋ ಎಂದು ನಿರ್ಧರಿಸಬಹುದು. ಕೆಲವೇಳೆ ಒಗ್ಗದ ವಸ್ತು ತಾಕುವುದಕ್ಕೂ ಒಗ್ಗದಿಕೆಯ ಪ್ರತಿಕ್ರಿಯೆಗೂ ನಡುವೆ ಕೆಲವು ದಿವಸಗಳು ಕಳೆಯಬಹುದು. ಈ ನಿಧಾನ ಪ್ರತಿಕ್ರಿಯೆಯಿಂದ ತೊಂದರೆಗಳಿವೆ. ಆಹಾರವಸ್ತುಗಳ ಒಗ್ಗದಿಕೆ ಕಂಡುಹಿಡಿಯಲು ಬಹಳ ಕಾಲ ಹಿಡಿಯಬಹುದು. ಚರ್ಮತಾಕಣೆ ಒಗ್ಗದಿಕೆ ವಿಚಾರದಲ್ಲಿ ಚೋದಕವಸ್ತುವನ್ನು ಒಂದು ಅಂಟು ತೇಪೆಗೆ ಬಳಿದು ಚರ್ಮಕ್ಕೆ ಮೆತ್ತಿ ಹಲವು ದಿನಗಳು ಬಿಡಬಹುದು. ಉಸಿರಲ್ಲಿ ನುಗ್ಗುವ ಪ್ರಚೋದಕಗಳಿಗೆ ಈ ವಿಧಾನ ಅಸಾಧ್ಯ. ಅಲ್ಲದೆ ಶಂಕಿಸಲಾದ ವಸ್ತುವನ್ನು ಮೂಸಿಸುವುದು ಹಲವು ವೇಳೆ ಅಪಾಯಕರ. ಈ ಸಂದರ್ಭದಲ್ಲಿ ಪ್ರಚೋದಕಗಳ ಕಷಾಯಗಳನ್ನೋ ದ್ರಾವಣವನ್ನೋ ಸಣ್ಣ ಕೆರೆದ ಗೀರಿನ ಮೂಲಕ ಚರ್ಮಕ್ಕೆ ಬಳಿಯಬಹುದು, ಸೂಜಿ ಜೀಕಳಿಯಿಂದ ಚರ್ಮದ ಮೇಲ್ಪದರಗಳಿಗೆ ಚುಚ್ಚಿ ಹೊಗಿಸಬಹುದು. ಈ ವಿಧಾನಗಳು ಅಷ್ಟು ನಂಬಲರ್ಹವಲ್ಲ.

ಒಗ್ಗದಿಕೆ ಪ್ರತಿಕ್ರಿಯೆಯ ತಂತ್ರ : ಇದನ್ನು ವಿವರಿಸುವುದರಲ್ಲಿ ಹಲವು ಅಭಿಪ್ರಾಯಸೂತ್ರಗಳಿವೆ. ಆದರೆ ಇವುಗಳಲ್ಲಿ ಯಾವುದರಿಂದಲೂ ಕಂಡ ವಿಚಿತ್ರಗಳಿಗೆ ತೃಪ್ತಿಕರ ಕಾರಣಗಳಾಗಲಿ ಉತ್ತರಗಳಾಗಲಿ ಸಿಗುವುದಿಲ್ಲ. ಇವಕ್ಕೀಡಾಗುವವನಲ್ಲಿ ಒಗ್ಗದ ವಸ್ತು ಸೇರುವುದರಿಂದ ಬಗೆಬಗೆಯ ವಿಚಾರಗಳು ನಡೆವಂತಿರುವುವು. ರಾಸಾಯನಿಕ ವಸ್ತುವಾದ ಹಿಸ್ಟಮೀನ್ ಕೆಲವೇಳೆ ಮೈಯಲ್ಲಿ ಏಳುತ್ತದೆ. ಇದು ಕರುಳಿನಂಥ ಅಂಗಗಳಲ್ಲಿರುವ ಮನಸ್ಸಿನ ಹತೋಟಿಯಲ್ಲಿಲ್ಲದ ನಯಸ್ನಾಯುವಿನ ಕುಗ್ಗು, ಲೋಮನಾಳಗಳ ಹಿಗ್ಗು ರಕ್ತದ ಒತ್ತಡದ ತಗ್ಗಿಸುವ ಬಹುಪ್ರಭಾವ ತೋರುವ ವಸ್ತು. ಅಡ್ರಿನಲಿನ್ ಚುಚ್ಚುಮದ್ದಿನ ಪ್ರಭಾವ ಇದಕ್ಕೆ ವಿರುದ್ಧ. ಇದರೊಂದಿಗೆ ಉತ್ಪತ್ತಿಯಾಗುವ ಇತರ ವಸ್ತುಗಳಲ್ಲಿ ಅಸಿಟೈಲ್ ಕೋಲೀನ್, ಹೆಪರಿನ್ ಸಿರೋಟೋನಿನುಗಳೂ ಇರಬಹುದು. ಜೀವಕೋಶಗಳು ಹಾಳಾದಾಗ ಅವುಗಳಲ್ಲಿ ಈ ತೆರನ ಇನ್ನೂ ಹೆಚ್ಚಿನ ವಸ್ತುಗಳು ಹುಟ್ಟಬಹುದು. ಜೀವಕೋಶಗಳು ಹೇಗೆ ಹಾಳಾಗುತ್ತವೆಂದು ಅರಿವಿಗೆ ಎಟಕುವುದಿಲ್ಲ. ಆದರೂ ಒಗ್ಗದಿಕೆ ಚೋದಕಕ್ಕೂ ರೋಧವಸ್ತುವೆಂಬ (ಆಂಟಿಬಾಡಿ) ಮೈಯಲ್ಲಿನ ಒಂದು ಪ್ರೋಟೀನಿಗೂ ಆಗುವ ಪ್ರತಿಕ್ರಿಯೆಯೇ ಒಗ್ಗದಿಕೆಯ ಮೂಲ ತಂತ್ರ ಎಂದು ಹಲವು ವಿಜ್ಞಾನಿಗಳು ನಂಬಿದ್ದಾರೆ.

ಒಗ್ಗದಿಕೆ, ರೋಗತಡೆ (ಇಮ್ಯೂನಿಟಿ) : ರೋಗಾಣುಗಳಿಂದೇಳುವ ರೋಗಕ್ಕೆ ಒಬ್ಬನ ಸಾಮಾನ್ಯ ಪ್ರತಿಕ್ರಿಯೆ ಮೈಯಲ್ಲಿ ರೋಧಕವಸ್ತುಗಳ ಉತ್ಪತ್ತಿ. ಇವು ಒಳಹೋಗುವ ರೋಗಾಣುಗಳನ್ನು ತಡೆಗಟ್ಟುವ, ನಾಶಪಡಿಸುವ, ಕಾಪಿಡುವ ವಸ್ತುಗಳು. ಈ ರೋಧವಸ್ತುಗಳನ್ನು ಮೈಯಲ್ಲಿ ಹುಟ್ಟುವಂತೆ ಚೋದಿಸಿದ ರೋಗ ಮತ್ತೊಮ್ಮೆ ತಗಲಿದಲ್ಲಿ ಮೈಯಲ್ಲಿ ಮೊದಲೇ ಹುಟ್ಟಿಕೊಂಡ ರೋಧವಸ್ತುಗಳ ಮೈಗೆ ಮರೆ ಕೊಡುಗೆ (ಇಮ್ಯೂನಿಟಿ) ನೀಡುತ್ತವೆ. ರೋಧವಸ್ತುಗಳು ಬಹು ವಿಶಿಷ್ಟ ರೀತಿಯವು. ದಡಾರದ ರೋಧವಸ್ತು ಸೀತಾಳಸಿಡುಬಿನ ಎದುರು ಮರೆ ನೀಡುವುದಿಲ್ಲ. ವೈರಸುಗಳನ್ನೂ ರೋಗಾಣುಗಳನ್ನೂ ಮೈಯ ಇತರ ವಸ್ತುಗಳಿಂದಲೋ ಜೀವಕಣಗಳಿಂದಲೋ ನಾಶಿಸುವುದು ರೋಧವಸ್ತುವಿನ ಮುಖ್ಯ ಕೆಲಸ. ಸತ್ತ ವೈರಸ್ ಮತ್ತು ರೋಗಾಣುಗಳ ವಿಷಗಳಿಂದ ರೋಧವಸ್ತು ಹುಟ್ಟಬಹುದು. ಈ ವಿಷಯವೇ ಮರೆಕೊಡುಗೆಯ ಚೋದನಾ ವಿಧಾನಗಳ ಬುನಾದಿ. ದೇಹದ ಮಾಂಸ ವಿಶೇಷಗಳಲ್ಲಿ ಸೇರುವ ಅಪಾಯವಿಲ್ಲದ ವಸ್ತುಗಳಿಂದಲೂ ರೋಧವಸ್ತುಗಳು ಏಳುತ್ತವೆ. ಬದುಕಿ ಬಾಳಲು ಬೇಕೇಬೇಕಾಗಿ ಹೊಂದಿಕೊಳ್ಳುವ ತಂತ್ರವಾದ ರೋಧವಸ್ತು ಪ್ರತಿಕ್ರಿಯೆ ಕೆಲವು ವೇಳೆ ಮರೆಕೊಡುವುದರ ಜೊತೆಗೆ ಒಗ್ಗದಿಕೆಯ ಕೆಟ್ಟ ಪರಿಣಾಮವನ್ನೂ ತೋರುತ್ತದೆ. ಅಪಾಯಕರ ಮತ್ತು ಅಪಾಯವಿಲ್ಲದ ವಸ್ತುಗಳನ್ನು ವಿವೇಚಿಸಲು ಮೈಗೆ ಶಕ್ತಿ ಇಲ್ಲದ್ದೂ ಒಗ್ಗದಿಕೆಗೆ ಒಂದು ಕಾರಣ. ಒಬ್ಬನನ್ನು ಎಚ್ಚರಿಸಿ ಅವನ ಮೈಕಾಪಿಡುವ ವ್ಯವಸ್ಥೆಗಳನ್ನು ಚೋದಿಸುವುದು ಕೆಟ್ಟ ರೋಗಾಣುಗಳು ವಿಷಪದಾರ್ಥಗಳಿಗಾಗುವ ಒಗ್ಗದಿಕೆ ಚಿಹ್ನೆಗಳ ಬಹುಮುಖ್ಯ ಕೆಲಸವೆಂಬುದು ಇನ್ನೊಂದು ಕಾರಣ.

ಚಿಕಿತ್ಸೆ: ವೈದ್ಯಶಾಸ್ತ್ರದಲ್ಲಿ, ಗೊತ್ತಿರುವ ಕಾರಣ ನಿವಾರಣೆಯೇ ಎಲ್ಲ ಚಿಕಿತ್ಸಾ ತಂತ್ರಗಳ ಮೂಲಸೂತ್ರ. ಒಗ್ಗದ ವಸ್ತು ಯಾವುದೆಂದು ತಿಳಿದ ಮೇಲೆ ರೋಗಿ ಅದನ್ನು ಹತ್ತಿರ ಸೇರಿಸಬಾರದು; ಹಕ್ಕಿ, ಬೆಕ್ಕು, ನಾಯಿ, ಮತ್ತಿತರ ಪ್ರಾಣಿಗಳನ್ನು ಮನೆಯಲ್ಲಿಲ್ಲದಂತೆ ಮಾಡುವುದು, ತಲೆದಿಂಬಿನ ರೇಷ್ಮೆ ಗವುಸನ್ನು ಬದಲಾಯಿಸುವುದು, ಮನೆಯನ್ನು ಚೊಕ್ಕಟಮಾಡುವುದು, ದೂಳಿನ ಕಂಬಳಿ, ಜಮಖಾನೆ, ಹಳೆಯ ಮೆತ್ತೆ, ಸೋಫಾಗಳನ್ನು ಮನೆಯಿಂದ ತೆಗೆವುದು–ಈ ಕಾರ್ಯಕ್ರಮವೇ ಸಾಕಾಗಬಹುದು. ತನ್ನ ಹೆಂಡತಿ ಅವಳ ಮುಖಕ್ಕೆ ಪೂಸುವ ಅಂಗರಾಗದ ಸುವಾಸನೆ ಹುಡಿಯೇ ಗಂಡನಿಗೆ ಒಗ್ಗದಿರಬಹುದು; ಆಗ ಅದನ್ನು ಪೂರ್ತಿಯಾಗಿ ಬಿಡಬೇಕು. ಚೋದಕವಸ್ತುವಿನ ಸುಳಿವು ರೋಗಿಯ ಚರಿತ್ರೆಯಲ್ಲಿರುವುದನ್ನು ಎಚ್ಚರದಿಂದ ಕಂಡುಕೊಳ್ಳಬೇಕು. ಈ ರೀತಿಯ ಕಾರಣ ಹೋಗಲಾಡಿಸಲಾಗದಿದ್ದಲ್ಲಿ, ವಿಶಿಷ್ಟ ಚೋದಕ ವಸ್ತುವನ್ನು ತೀರ ಸಣ್ಣ ಪ್ರಮಾಣಗಳಲ್ಲಿ ಒಂದು ವರಸೆಯಾಗಿ ಚುಚ್ಚುತ್ತ ಒಗ್ಗುವಂತೆ ಮಾಡಲು ಯತ್ನಿಸಬಹುದು. ಆದರೆ ಈ ಕೆಲಸ ಬಲು ಕಷ್ಟ. ಇದಕ್ಕೆ ತಾಳ್ಮೆ ಬೇಕು. ಹೆಚ್ಚು ರೋಗಿಗಳಲ್ಲಿ ಒಬ್ಬರೊಡನೊಬ್ಬರನ್ನು ಹೋಲಿಸಲು ಸುಲಭವಾದ್ದರಿಂದ ಕರಡಜ್ವರದಲ್ಲಂತೂ ಇದು ಹೆಚ್ಚು ಫಲಕಾರಿ. ಹೆಚ್ಚೇನೆಂದರೆ ಒಂದೇ ರೋಗಿಯನ್ನು ವರ್ಷವರ್ಷವೂ ನೋಡುತ್ತಿರುವುದರಿಂದ ಚುಚ್ಚುಗೆಗಳನ್ನು ತೀರ ಕಡಿಮೆ ಮಾಡಲು ಸಾಧ್ಯ. ಕೊನೆಗೆ ಚುಚ್ಚಬೇಕಿಲ್ಲದಂತೆ ಮಾಡಲೂ ಕೆಲವು ವೇಳೆ ಸಾಧ್ಯ.

1945ರಲ್ಲಿ ಮೊದಲಾಗಿ, ಒಂದೇ ಸಮನಾಗಿ ಬಳಕೆಯಲ್ಲಿರುವ ಹಿಸ್ಟಮೀನ್‌ರೋಧಕ ಮದ್ದುಗಳನ್ನು ಕಂಡು ಹಿಡಿಯಲಾಗಿ ಆ ದಿಸೆಯಲ್ಲಿ ಎಷ್ಟೊ ಮುನ್ನಡೆಯಾಗಿದೆ. ಅಷ್ಟೇ ಅಲ್ಲದೆ, 1949ರ ಮೇ ತಿಂಗಳಲ್ಲಿ ಅಮೆರಿಕದ ಮೇಯೋ ಚಿಕಿತ್ಸಾಲಯದಲ್ಲಿ ಫಿಲಿಪ್ ಎಸ್. ಹೆಂಚ್, ಎಡ್ವರ್ಡ್ ಸಿ. ಕೆಂಡಲ್ ಮತ್ತು ಅವರ ಸಂಗಡಿಗರು ಅಡ್ರಿನಲ್ ಗ್ರಂಥಿಯಿಂದ ತೆಗೆದ ಕಾರ್ಟಿಸೋನನ್ನೂ ಪಿಟುಯಿಟರಿ ಗ್ರಂಥಿಯಿಂದ ತೆಗೆದ ಒಂದು ಚೋದನಿಕವನ್ನೂ (ಅಡ್ರಿನೊಕಾರ್ಟಿಕೋಟ್ರೋಪಿಕ್ ಹಾರ್ಮೋನ್) ಕಂಡುಹಿಡಿದು ಪ್ರಕಟಿಸಿದರು. ಈ ಅದ್ಭುತ ಪ್ರಭಾವಯುತ ಮದ್ದುಗಳು ದೇಹದಲ್ಲಿ ಕಷ್ಟ ಪ್ರಯಾಸಗಳಿಂದಾಗುವ ಗಾಸಿಗಳ ವಿರುದ್ಧ ಏರ್ಪಡುವ ರಕ್ಷಣಾವ್ಯವಸ್ಥೆಯಲ್ಲಿ ನೈಸರ್ಗಿಕ ಮುಖ್ಯಪಾತ್ರಧಾರಿಗಳು. ಸಾಕಷ್ಟು ಪ್ರಮಾಣಗಳಲ್ಲಿ ರೋಗಿಗೆ ಕೊಟ್ಟಾಗ ಒಗ್ಗದಿಕೆ ರೋಗಗಳೇ ಅಲ್ಲದೆ ಇನ್ನೂ ಹಲವಾರು ತೊಂದರೆಗಳಿಗೆ ಶಾಮಕವಾಗಿವೆ. ಇವು ಒಗ್ಗದಿಕೆಯ ಪ್ರತಿಕ್ರಿಯೆಗಳನ್ನು ತಡೆಯದಿದ್ದರೂ ಅವುಗಳ ಪರಿಣಾಮ ಗಳನ್ನುಯಾವುದೋ ರೀತಿಯಲ್ಲಿ ಸರಿಪಡಿಸುತ್ತವೆ. ಆದರೆ ಬಹುಕಾಲ ಕೊಡುತ್ತಲೇ ಇದ್ದರೆ ಈ ಮದ್ದುಗಳಿಂದ ಬಲು ಕೆಡುಕು. ಒಗ್ಗದಿಕೆಯ ಸಮಸ್ಯೆಗೆ ಅವೇನೂ ಕಡೆಯ ಉತ್ತರವಲ್ಲ.

ಈಚೆಗೆ ಇನ್ನೂ ಕೆಲವು ಮದ್ದುಗಳ ಸೃಷ್ಟಿಯಾಗಿದೆ. ಇವುಗಳಲ್ಲಿ ಮೂರು ವಿಧಗಳು: ಹಿಸ್ಟಮೀನ್ ಮುಂತಾದವನ್ನು ನಾಶಪಡಿಸುವವು; ಅವು ಕೆಲಸ ಮಾಡುವ ದಾರಿಗೆ ಅಡ್ಡಿ ಬರುವವು; ಅವುಗಳ ಕೆಲಸಕ್ಕೆ ಎದುರಾಗುವಂಥವು. (ಎಂ.ಡಿ.; ವಿ.ಆರ್.ವಿ.ಎಚ್.)

**ಒಗ್ಗೂಡಿಕೆ:** ಒಂದು ಪದಾರ್ಥದ ಮಾರುಕಟ್ಟೆಯಲ್ಲಿ ಒಂದು ನಿರ್ದಿಷ್ಟ ಸಮಯದಲ್ಲಿರುವ ಬಹುತೇಕ ಎಲ್ಲ ಸರಕಿನ ಸರಬರಾಯಿಯನ್ನು ಒಬ್ಬ ವರ್ತಕ ಅಥವಾ ಕೆಲವು ವರ್ತಕರು ಕೂಡಿ ವಶಪಡಿಸಿಕೊಳ್ಳುವ ಕ್ರಮ (ಕಾರ್ನರಿಂಗ್). ಭಾವೀ ಮಾರುಕಟ್ಟೆಯಲ್ಲಿ ಅಲ್ಪಾವಧಿಯ ಮಾರಾಟಕ್ಕಿರುವ ಸರಕನ್ನೆಲ್ಲ ಕೊಂಡು, ಆ ವಾಯಿದೆ ತುಂಬಿದ ದಿನದಂದು ಅಥವಾ ಲೆಕ್ಕ ಚುಕ್ತ ಮಾಡುವ ದಿನದಂದು ಕೃತಕವಾಗಿ ಬೆಲೆ ಏರಿದಾಗ ಲಾಭಗಳಿಸುವ ಉದ್ದೇಶದಿಂದ ನಡೆಸುವ ಅಕ್ರಮ ಹಾಗೂ ಅನೀತಿಯುತ ವ್ಯವಹಾರವೂ ಇದರಲ್ಲಿ ಸೇರುತ್ತದೆ. ಒಗ್ಗೂಡಿಕೆ ಈಚೆಗೆ ಜಾರಿಗೆ ಬಂದ ವ್ಯವಹಾರವಲ್ಲ. ಪ್ರಾಚೀನಕಾಲದಿಂದಲೂ ಇದು ಪರಿಚಿತವಾದದ್ದೆ. ಕೆಲವರಾಗಲಿ, ಒಬ್ಬನೇ ಆಗಲಿ ಈ ಬಗೆಯ ವ್ಯವಹಾರದಲ್ಲಿ ತೊಡಗುತ್ತಿದ್ದುದನ್ನು ಕಾಣಬಹುದಿತ್ತು.

ಒಗ್ಗೂಡಿಕೆಯ ವ್ಯವಹಾರದಿಂದ ಸರಕುಗಳ ಕೃತಕ ಅಭಾವವೇರ್ಪಟ್ಟು ಬೆಲೆಗಳು ಕೃತಕವಾಗಿ ಏರುವುದರ ಫಲವಾಗಿ ಕೈಗಾರಿಕೆ ವಾಣಿಜ್ಯಗಳ ಬೆಳೆವಣಿಗೆ ಕುಂಠಿತವಾಗುವುದ ರಿಂದ ಇದನ್ನು ತಪ್ಪಿಸುವ ಉದ್ದೇಶದಿಂದ ಭಾರತದಲ್ಲಿ 1956ರ ಬಂಡವಾಳಪತ್ರ ಕರಾರು ನಿಯಂತ್ರಣ ಕಾಯಿದೆಯೂ (ಸೆಕ್ಯೂರಿಟೀಸ್ ಕಾಂಟ್ರಾಕ್ಟ್ ರೆಗ್ಯುಲೇಷನ್ ಆಕ್ಟ್) ವಾಯಿದೆ ಕರಾರು ನಿಯಂತ್ರಣ ಕಾಯಿದೆಯೂ ಜಾರಿಗೆ ಬಂದಿವೆ. ಮಾರುಕಟ್ಟೆಯ ಸದಸ್ಯರು ತಮ್ಮ ಕೊಳ್ಳಿಕೆ ಹಾಗೂ ಮಾರಾಟಗಳನ್ನು ಕುರಿತ ದೈನಿಕ ವರದಿ ನೀಡಬೇಕು. ಷೇರುಕಟ್ಟೆಯ ನಿರ್ದೇಶಕ ಮಂಡಲಿಯೂ ಷೇರುಕಟ್ಟೆಯಲ್ಲಿನ ಇಂಥ ಅನೀತಿ ಪದ್ಧತಿಗಳನ್ನು ತಡೆಗಟ್ಟಲು ಎಚ್ಚರಿಕೆಯಿಂದ ನಿರೀಕ್ಷಣಕಾರ್ಯ ನಡೆಸುತ್ತದೆ. (ಸಿ.ಸಿ.ಪಿ.; ಎ.ಕೆ.ಎಸ್.ಎಚ್.)

**ಒಚಾವಾ, ಸೆವಿರೋ:** 1905– .ಸ್ಪ್ಯಾನಿಷ್ ಅಮೆರಿಕನ್ ಜೈವಿಕಶಾಸ್ತ್ರ ವಿಜ್ಞಾನಿ. ವೈದ್ಯಕೀಯ ವಿಜ್ಞಾನ ವಿಭಾಗದ ನೊಬೆಲ್ ಪ್ರಶಸ್ತಿ ವಿಜೇತ (1959).

ಸ್ಪೇನ್ ದೇಶದ ಉತ್ತರ ತೀರದ ಅಸ್ಟುರಿಯಾ ಜಿಲ್ಲೆಯ ಲಾರ್ಕಾ ಎಂಬ ಹಳ್ಳಿಯಲ್ಲಿ ಮೂರು ಜನ ಸಹೋದರರು ಮತ್ತು ಮೂರು ಜನ ಸಹೋದರಿಯರನ್ನೊಳಗೊಂಡ ತುಂಬು ಸಂಸಾರದಲ್ಲಿ ಇವನೇ ಕಡೆಯವನಾಗಿ ಹುಟ್ಟಿದ. ತಂದೆ ವಕೀಲ. ಒಚಾವಾ ಏಳು ವರ್ಷದ ಬಾಲಕನಾಗಿದ್ದಾಗಲೇ ಆತನ ತಂದೆ ತೀರಿಕೊಂಡ. ಮುಂದೆ ಈ ಕುಟುಂಬ ಸ್ಪೇನಿನ ದಕ್ಷಿಣ ತೀರದಲ್ಲಿರುವ ಮಲಾಗ ಎಂಬ ಊರಿಗೆ ಹೋಯಿತು. ಇಲ್ಲಿಯೇ ಒಚಾವಾನ ವಿದ್ಯಾಭ್ಯಾಸದ ಮೊದಲನೆಯ ಘಟ್ಟ ಮುಗಿದದ್ದು. 1921ರಲ್ಲಿ ಈತ ಬ್ಯಾಚುಲರ್ ಆಫ್ ಆರ್ಟ್ಸ್ ಪದವಿ ಪಡೆದು ಮರುವರ್ಷ ಮ್ಯಾಡ್ರಿಡ್ ವಿಶ್ವವಿದ್ಯಾಲಯದ ಮೆಡಿಕಲ್ ಸ್ಕೂಲನ್ನು ಸೇರಿ 1929ರಲ್ಲಿ ಡಾಕ್ಟರ್ ಆಫ್ ಮೆಡಿಸನ್ ಪದವಿಯನ್ನು ಗಳಿಸಿದ.

ಒಚಾವಾ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಲೇ ದೇಹವಿಜ್ಞಾನ (ಫಿಸಿಯಾಲಜಿ) ಪ್ರಯೋಗ ಶಾಲೆಯಲ್ಲಿ ಬೋಧಕನಾಗಿಯೂ ನೇಮಕಗೊಂಡಿದ್ದ. 1931ರಲ್ಲಿ ವೈದ್ಯಶಾಲೆಯಲ್ಲಿ ದೇಹವಿಜ್ಞಾನ ಮತ್ತು ಜೈವಿಕ ರಸಾಯನ ವಿಜ್ಞಾನದ ಅಧ್ಯಾಪಕನಾಗಿಯೂ 1935ರಲ್ಲಿ ಮ್ಯಾಡ್ರಿಡ್ ವಿಶ್ವವಿದ್ಯಾಲಯದ ನೂತನ ವೈದ್ಯಕೀಯ ಸಂಶೋಧನ ಸಂಸ್ಥೆಯ ಪ್ರಥಮ ಮುಖ್ಯಾಧಿಕಾರಿಯಾಗಿಯೂ ಆಗಿ ನೇಮಿತನಾದ. ಆದರೆ ಇದರಿಂದ ಇವನ ಜ್ಞಾನತೃಷೆ



ಹಿಂಗಲಿಲ್ಲ. 1936ರಲ್ಲಿ ಒಚಾವಾ ಜರ್ಮನಿಯ ಹೀಡಲ್ ಬರ್ಗಿನ ಕೈಸರ್ ವಿಲ್‌ಹೆಲ್ಮ್ ಸಂಸ್ಥೆಯನ್ನು ಸೇರಿದ. ಅಲ್ಲಿನ ಪ್ರಸಿದ್ಧ ವಿಜ್ಞಾನಿ ಮೇಯರ್ ಹಾಫ್‌ನ ಹಿರಿತನದಲ್ಲಿ ಸಂಶೋಧನೆ ಕೈಗೊಂಡ. 1937ರಲ್ಲಿ ಇಂಗ್ಲೆಂಡಿಗೆ ಹೋಗಿ ಕೊಂಚ ಕಾಲ ಪ್ಲಿಮತ್‌ನಲ್ಲಿ ಇದ್ದ. ಅನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಆರ್. ಪೀಟರ್ಸ್ ಒಂದಿಗೆ ಸಹಾಯಕ ಸಂಶೋಧಕನಾಗಿ ಕೆಲಸಮಾಡಿದ (1938–41). ಈ ವೇಳೆಗೆ (1941) ಮಿಸ್ಸೂರಿಯ ಸೇಂಟ್ ಲೂಯಿಸ್ ನಲ್ಲಿರುವ ವಾಷಿಂಗ್‌ಟನ್ ವಿಶ್ವವಿದ್ಯಾಲ ಯದ ಸ್ಕೂಲ್ ಆಫ್ ಮೆಡಿಸನ್‌ನಲ್ಲಿ ಕೋರಿ ದಂಪತಿಗಳೊಂದಿಗೆ ಕೆಲಸ ಮಾಡುವ ಅವಕಾಶ ಒಚಾವಾನಿಗೆ ಲಭಿಸಿತು. ಅಮೆರಿಕ ದೇಶಕ್ಕೆ ವಲಸೆ ಹೋದ ಇವನಿಗೆ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮೆಡಿಸನ್ ಸಂಸ್ಥೆಯಲ್ಲಿ ಸಹ–ಸಂಶೋಧಕನ ಕೆಲಸ ದೊರೆಯಿತು (1942). ಅಲ್ಲಿಯೇ 1945ರಲ್ಲಿ ಜೈವಿಕ ರಸಾಯನವಿಜ್ಞಾನ ಅಸಿಸ್ಟೆಂಟ್ ಪ್ರೊಫೆಸರ್ ಆಗಿಯೂ 1946ರಲ್ಲಿ ಫಾರ್ಮಕಾಲಜಿಯ ಪ್ರೊಫೆಸರ್ ಆಗಿಯೂ ನೇಮಿತನಾದ (1946–54).

ಸಂಶೋಧನಕ್ಷೇತ್ರ ಮತ್ತು ಜೈವಿಕವಿಜ್ಞಾನದ ಬೆಳೆವಣಿಗೆಗೆ ಈತನ ಕೊಡುಗೆ ಅಪಾರ. ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ಜೈವಿಕ ರಸಾಯನವಿಜ್ಞಾನದ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ತನ್ನ ಜೀವನವನ್ನು ಮುಡುಪಾಗಿಡುವ ನಿರ್ಧಾರವನ್ನು ಈತ ಕೈಗೊಂಡ. ಎಡರುತೊಡರುಗಳನ್ನು ಲೆಕ್ಕಿಸದೆ ಗುರಿಯೆಡೆಗೆ ನಿಶ್ಚಲಧ್ಯೇಯದಿಂದ ಮುನ್ನಡೆದ ವಿಜ್ಞಾನಿ ಒಚಾವಾ.

ಈತ ಪ್ರಾರಂಭದಲ್ಲಿ ಆರಿಸಿಕೊಂಡ ಕ್ಷೇತ್ರ ಮಾಂಸಖಂಡಗಳ ಸಂಕೋಚನದ ಅಧ್ಯಯನ. ಮೇಯರ್ ಹಾಫ್‌ನ ಪ್ರಯೋಗಶಾಲೆಯಲ್ಲಿ ಮಾಂಸಖಂಡಗಳ ಸಂಕುಚನ ಕ್ರಿಯೆಯ ಶಕ್ತಿ ಮೂಲಗಳನ್ನು ಕುರಿತು ಸಂಶೋಧನೆ ನಡೆಸಿದ. ಫಾಸ್ಫಾಜನ್ ವಸ್ತುವನ್ನು ಆಗತಾನೇ ಕಂಡುಹಿಡಿಯಲಾಗಿತ್ತು. ಇದೇ ವೇಳೆಗೆ ಲುಂಡ್ಸ್‌ಗಾರ್ಡ್ ಎಂಬಾತ ಮಾನೋಐಯೋಡೋ ಅಸಿಟಿಕ್ ಆಮ್ಲದಿಂದ ನಂಜುಗೊಳಿಸಿದ ಮಾಂಸಖಂಡಗಳು ಲ್ಯಾಕ್ಟಿಕ್ ಆಮ್ಲವನ್ನು ಉತ್ಪಾದಿಸದಂತೆಯೇ ಕೊಂಚ ಕಾಲ ಕೆಲಸ ಮಾಡಬಲ್ಲವು ಎಂದು ತೋರಿಸಿದ್ದ. ಇನ್ಸುಲಿನ್ ಪರಿಷ್ಕೃತವಾದ ಮತ್ತು ಗ್ಲೈಕೋಜನನ್ನು ಕಳೆದುಕೊಂಡಿದ್ದ ಕಪ್ಪೆಯ ಮಾಂಸಖಂಡಗಳು ಅದುವರೆಗೆ ಪರಿಚಿತವಾಗಿದ್ದವಕ್ಕಿಂತ ಭಿನ್ನವಾದ ಮೂಲಗಳಿಂದ ಶಕ್ತಿಯನ್ನು ದೊರಕಿಸಿಕೊಳ್ಳುತ್ತವೆಂದು ಒಚಾವಾ ತೋರಿಸಿದ.

ಇಂಗ್ಲೆಂಡಿಗೆ ಬಂದ ಮೇಲೆಯೂ ಮಾಂಸಖಂಡಗಳ ಸಂಕುಚನ ಕ್ರಿಯೆಯಲ್ಲಿ ಒಚಾವಾನ ಆಸಕ್ತಿ ಉಳಿದಿತ್ತು. ಜೊತೆಗೆ ಪೀಟರ್ಸ್ ಮತ್ತು ಆತನ ಸಹೋದ್ಯೋಗಿಗಳು ಅಭ್ಯಸಿಸುತ್ತಿದ್ದ ಪೈರೂವಿಕ್ ಆಮ್ಲದ ಚಯಾಪಚಯ ವಿಧಾನ ಕ್ರಮದಲ್ಲಿಯೂ ಆಸಕ್ತಿ ತಳೆದ. ಈತನ ಸಂಶೋಧನೆಗಳ ಫಲವಾಗಿ ಮಿದುಳಿನಿಂದ ಪೈರೂವಿಕ್ ಆಮ್ಲ ಉತ್ಕರ್ಷಿತವಾಗುವ ಕ್ರಿಯಾವೇಗವನ್ನು $C_4$ ಡೈ ಕಾರ್ಬಾಕ್ಸಿಲಿಕ್ ಆಮ್ಲಗಳು ತ್ವರಿತಗೊಳಿಸುತ್ತವೆಯೆಂದೂ ಈ ಕ್ರಿಯೆಯಲ್ಲಿ ವಿಟಮಿನ್ $B_1$ ಭಾಗವಹಿಸುತ್ತದೆಯೆಂದೂ ಕೋಕಾರ್ಬಾಕ್ಸಿಲೇಸ್ (ಥಯಾಮಿನ್ ಪೈರೋಫಾಸ್ಫೇಟ್) ವಿಟಮಿನ್ $B_1$ರ ಸಕ್ರಿಯಾ ರೂಪವೆಂದೂ ಗೊತ್ತಾಯಿತು. ಅಲ್ಲದೆ ಪೈರೂವಿಕ್ ಆಮ್ಲದ ಉತ್ಕರ್ಷಣ ಕ್ರಿಯೆಗೂ ಎಟಿಪಿಯ ಸಂಶ್ಲೇಷಣೆಗೂ ಇರುವ ನಿಕಟ ಸಂಬಂಧದ ಪರಿಚಯವೂ ಆಯಿತು.

1942ರಿಂದೀಚೆಗೆ ಒಚಾವಾ ನಡೆಸಿರುವ ಸಂಶೋಧನೆಗಳನ್ನು ಮುಖ್ಯವಾಗಿ ಮೂರು ವರ್ಗಗಳಾಗಿ ವಿಭಾಗಿಸಬಹುದು

1. ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಕಾರ್ಬಾಕ್ಸಿಲೇಷನ್ (ಇಂಗಾಲದ ಡೈ ಆಕ್ಸೈಡನ್ನು ಸ್ವೀಕರಿಸುವ) ಮತ್ತು ಡೀಕಾರ್ಬಾಕ್ಸಿಲೇಷನ್ (ಇಂಗಾಲದ ಡೈ ಆಕ್ಸೈಡನ್ನು ವಿಮೋಚನೆಗೊಳಿಸುವ) ಕ್ರಿಯಾವಿಧಾನಗಳ ಅಧ್ಯಯನ ಮತ್ತು ಮ್ಯಾಲಿಕ್ ಕಿಣ್ವದ ಪರಿಶೋಧನೆ.

2. ಸಿಟ್ರಿಕ್ ಆಮ್ಲ ವರ್ತುಲಕ್ಕೆ ಸೇರಿದ ಕಿಣ್ವಗಳ ಕ್ರಿಯಾವಿಧಿಗಳ ಅಧ್ಯಯನ ಮತ್ತು ಘನಿಸುವ ಕಿಣ್ವದ ಪರಿಶೀಲನೆ.

3. ಪಾಲಿನ್ಯೂಕ್ಲಿಯೋಟೈಡುಗಳ ಕಿಣ್ವವರ್ಧಿತ ಸಂಶ್ಲೇಷಣೆ ಮತ್ತು ಪಾಲಿನ್ಯೂಕ್ಲಿಯೋಟೈಡ್ ಫಾಸ್ಫಾರಿಲೇಸ್ ಕಿಣ್ವದ ಪರಿಶೋಧನೆ.

ಒಚಾವಾ ತನ್ನ ಸಹೋದ್ಯೋಗಿಗಳೊಂದಿಗೆ ಆನುವಂಶಿಕ ಸಂಕೇತದ ಸಮಸ್ಯೆಯನ್ನು ಬಿಡಿಸುವುದರಲ್ಲಿ ಶ್ರಮವಹಿಸಿ, ಈ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾನೆ. ಡಿಎನ್‌ಎ ಅಣುವಿನ 4 ಭಿನ್ನ ನ್ಯೂಕ್ಲಿಯೋಟೈಡುಗಳ ಅನುಕ್ರಮ ಪಾಲಿಪೆಪ್ಟೈಡಿನ (ಪ್ರೋಟೀನಿನ) 20 ಅಮೈನೋ ಆಮ್ಲಗಳ ಅನುಕ್ರಮವನ್ನು ಹೇಗೆ ನಿರ್ಧರಿಸುವುದೆಂಬುದೇ ಜೀವವಿಜ್ಞಾನಿಯ ಮುಂದಿರುವ ಸಮಸ್ಯೆ. ಡಿಎನ್‌ಎಯಲ್ಲಿ ಅಡಗಿರುವ ಆನುವಂಶಿಕ ಸಂದೇಶವನ್ನು ಅಮೈನೋ ಆಮ್ಲಗಳ ಭಾಷೆಗೆ ಕರಾರುವಾಕ್ಕಾಗಿ ತರ್ಜುಮೆ ಮಾಡುವ ಮತ್ತು ಸಂದೇಶದ ಪ್ರಕಾರ ಅಮೈನೋ ಆಮ್ಲಗಳನ್ನು ಜೋಡಿಸಿ ವಿಶಿಷ್ಟ ಪ್ರೋಟೀನನ್ನು ಸಿದ್ಧಗೊಳಿಸುವ ವಸ್ತುವೊಂದಿರಲೇಬೇಕು. ಆರ್‌ಎನ್‌ಎ ಸಂದೇಶವಾಹಕವಾಗಿಯೂ ಪ್ರೋಟೀನನ್ನು ಸಿದ್ಧಗೊಳಿಸುವ ಯಂತ್ರದಂತೆಯೂ ವರ್ತಿಸುತ್ತದೆಯೆಂದು ಪ್ರಯೋಗಗಳ ಮೂಲಕ ತಿಳಿದುಬಂದಿದೆ. ಜಟಿಲವಾದ ಕೋಶದಲ್ಲಿ ನಡೆಯುವ ಈ ಕ್ರಿಯೆಯನ್ನು ಪ್ರನಾಳದಲ್ಲಿ ನಡೆಸಬೇಕಾದರೆ, ನೈಸರ್ಗಿಕ ಆರ್‌ಎನ್‌ಎಯ ಕಾರ್ಯವನ್ನು ಅನುಕರಣೆ ಮಾಡಬಲ್ಲ ಕೃತಕ ಆರ್‌ಎನ್‌ಎ ಆವಶ್ಯಕವಾಗಿ ಬೇಕು. 1961ರಲ್ಲಿ ಒಚಾವಾ ಪ್ರಯೋಗಶಾಲೆಯಲ್ಲಿ ತಮ್ಮ ಪಾಲಿನ್ಯೂಕ್ಲಿಯೋಟೈಡ್ ಫಾಸ್ಫಾರಿಲೇಸ್ ಕಿಣ್ವದ ಸಹಾಯದಿಂದ ಎರಡು ಅಥವಾ ಹೆಚ್ಚಿನ ನ್ಯೂಕ್ಲಿಯೋಟೈಡುಗಳನ್ನೊಳಗೊಂಡ ಕೃತಕ ಕೋಪಾಲಿನ್ಯೂಕ್ಲಿಯೋಟೈಡುಗಳನ್ನು ಸಂಶ್ಲೇಷಿಸಿ ಕೋಶರಹಿತ ವ್ಯವಸ್ಥೆಯಲ್ಲಿ ಇವನ್ನು ಸಂದೇಶವಾಹಕಗಳಂತೆ ಉಪಯೋಗಿಸಿ ಅಮೈನೋ ಆಮ್ಲಗಳನ್ನೊಳಗೊಂಡ ಪ್ರೋಟೀನಿನಂಥ ವಸ್ತುವನ್ನು ತಯಾರಿಸುವುದರಲ್ಲಿ ಜಯಶೀಲನಾದ. ಪ್ರೋಟೀನಿನ ಯಾವುದೊಂದು ಸ್ಥಳದಲ್ಲಿ ಪ್ರವೇಶಿಸುವ ಅಮೈನೋ ಆಮ್ಲದ ಪ್ರಕೃತಿ ಕೃತಕ ಬಹ್ವಂಶಿಯ (ಪಾಲಿಮರ್) ಪ್ರತ್ಯಾಮ್ಲ ಅನುಕ್ರಮವನ್ನು ಅವಲಂಬಿಸುತ್ತದೆಂದು ಸಿದ್ಧಾಂತ ಮಾಡಿದ.

ವ್ಯಕ್ತಿತ್ವ : ವೈಜ್ಞಾನಿಕ ಸಂಶೋಧನೆಗೆ ತನ್ನ ಜೀವನವನ್ನೇ ಧಾರೆಯೆರೆದ ವ್ಯಕ್ತಿ ಒಚಾವಾ. ವಿಜ್ಞಾನದಲ್ಲಿರುವ ಈತನ ಉತ್ಸಾಹ, ಆಸಕ್ತಿಗಳಿಗೆ ಮೇರೆಯೇ ಇಲ್ಲ. ತನ್ನ ಸಹೋದ್ಯೋಗಿಗಳಿಗೆ ಸತತವಾಗಿ ಪ್ರೋತ್ಸಾಹವನ್ನು ನೀಡುವ ವೇಗವರ್ಧಕ ಈ ಉತ್ಸಾಹ. ಒಚಾವಾನ ದೃಷ್ಟಿಯಲ್ಲಿ ವಿಜ್ಞಾನ ಒಂದು ಬೌದ್ಧಿಕ ಸಾಹಸ. ಪ್ರಕೃತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕೆಂಬ ಕುತೂಹಲವುಳ್ಳ ಆತನಿಗೆ ಸತ್ಯಕ್ಕೋಸ್ಕರವಾಗಿಯೇ ಅನ್ವೇಷಣೆ ಮಾಡಬೇಕೆಂಬುದು ಪರಮ ಗುರಿ, ಅನ್ವೇಷಣೆಯಿಂದ ವ್ಯಾವಹಾರಿಕ ಪ್ರಯೋಜನವಾಗುತ್ತದೆಯೇ ಇಲ್ಲವೇ ಎಂಬುದರ ಕಡೆಗೆ ಆತನದು ದಿವ್ಯ ನಿರ್ಲಕ್ಷ್ಯ. ವ್ಯಾವಹಾರಿಕ ಪ್ರಯೋಜನಗಳಾಗುತ್ತವೆಂಬ ಕಾರಣವನ್ನು ಮುಂದೊಡ್ಡಿ ವೈಜ್ಞಾನಿಕ ಸಂಶೋಧನೆಯನ್ನು ಸಮರ್ಥಿಸಿಕೊಂಡು ತಮ್ಮ ಬೌದ್ಧಿಕ ಪ್ರಾಮಾಣಿಕತೆಯನ್ನು ನೀಗಿಕೊಳ್ಳಲು ಅವನು ಸರ್ವಥಾ ಸಿದ್ಧನಲ್ಲ. 35 ವರ್ಷಗಳ ಸಾರ್ಥಕ ಸಂಶೋಧನೆಗಳ ಫಲವಾಗಿ ಇಂದು ಅವನು ಗೌರವದ ಉನ್ನತ ಶೃಂಗವನ್ನು ಮುಟ್ಟಿದ್ದರೂ ಒಚಾವಾ ಸ್ವಭಾವತಃ ನಿರಹಂಕಾರಿ ಹಾಗೂ ವಿನಯಶೀಲ. ಆತನ ಸೌಜನ್ಯ, ಮಾರ್ದವ ಮತ್ತು ನೈಜ ಕಾರುಣ್ಯಗಳು ಸಹೋದ್ಯೋಗಿಗಳ ಪ್ರೀತಿಯನ್ನೂ ವಿದ್ಯಾರ್ಥಿಗಳ ಗೌರವವನ್ನೂ ಒಚಾವಾನಿಗೆ ಸಂಪಾದಿಸಿಕೊಟ್ಟಿವೆ.

ಸ್ಪೇನಿನಲ್ಲಿ ಜನಿಸಿ, ಜರ್ಮನಿ ಮತ್ತು ಇಂಗ್ಲೆಂಡಿನಲ್ಲಿ ತರಬೇತಿ ಹೊಂದಿ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಕೆಲಸ ಮಾಡಿದ ಈ ವಿಜ್ಞಾನಿ ವಿಜ್ಞಾನದ ಅಂತಾರಾಷ್ಟ್ರೀಯತೆಯ ನೈಜಪ್ರತೀಕ. ಪ್ರಪಂಚದ ಎಲ್ಲ ದೇಶಗಳ ಶಿಷ್ಯರೂ ಇವನ ತಂಡದಲ್ಲಿ ಇದ್ದಾರೆ, ಪ್ರಪಂಚದ ನಾನಾ ವಿಶ್ವವಿದ್ಯಾನಿಲಯಗಳು ಈತನಿಗೆ ಗೌರವ ಪದವಿಗಳನ್ನು ಕೊಟ್ಟು ಪುರಸ್ಕರಿಸಿವೆ. ಒಚಾವಾ ಅನೇಕ ವೈಜ್ಞಾನಿಕ ಸಂಘಗಳ ಸದಸ್ಯನೂ ಹೌದು. 1961ರಲ್ಲಿ ಜೈವಿಕ ರಸಾಯನವಿಜ್ಞಾನ ಅಂತಾರಾಷ್ಟ್ರೀಯ ಸಂಘದ ಅಧ್ಯಕ್ಷನಾಗಿ ಈತ ಚುನಾಯಿತನಾದ. ಸಂಗೀತ, ಸಾಹಿತ್ಯ ಮತ್ತು ಕುಶಲಕಲೆಗಳಲ್ಲಿ ಈತನಿಗೆ ಅಭಿರುಚಿ **(ನೋಡಿ- ಕಿಣ್ವಗಳು)**.

(ಎಚ್.ಎಸ್.ಎಸ್.)

**ಒಟ್ಟು ವ್ಯಾಪಾರಿ:** ಸರಕು ತಯಾರಕನಿಗೂ ಚಿಲ್ಲರೆ ವ್ಯಾಪಾರಿಗೂ ನಡುವಣ ಮಧ್ಯಸ್ಥಗಾರ (ಹೋಲ್‌ಸೇಲರ್). ಠೋಕುವ್ಯಾಪಾರಿ, ಸಟ್ಟಾವ್ಯಾಪಾರಿ-ಎಂಬುವು ಪರ್ಯಾಯ ಶಬ್ದಗಳು. ಕೊಂಡ ಸರಕಿನ ಅಂತಿಮ ಅನುಭೋಗಕ್ಕೆ ಎಡೆಕೊಡದೆ ಅದನ್ನು ಮತ್ತೆ ಮಾರಾಟ ಮಾಡುವ ಅಥವಾ ತನ್ನ ಉದ್ಯಮದಲ್ಲಿ ಬಳಸುವ ಮತ್ತು ತತ್ಸಂಬಂಧವಾದ ಎಲ್ಲ ಕ್ರಿಯೆಗಳನ್ನೂ ಸ್ಥೂಲವಾಗಿ ಒಟ್ಟು ವ್ಯಾಪಾರವೆನ್ನಬಹುದು. ಉತ್ಪಾದಕರಿಂದ ಬೃಹದ್ಗಾತ್ರದಲ್ಲಿ ಪದಾರ್ಥಗಳನ್ನು ಕೊಂಡು, ಅವನ್ನು ಚಿಲ್ಲರೆ ವ್ಯಾಪಾರಿಗಳಿಗೆ **(ನೋಡಿ- ಚಿಲ್ಲರೆ-ವ್ಯಾಪಾರಿ)** ಕಡಿಮೆ ಮೊತ್ತಗಳಲ್ಲಿ ಮಾರಾಟ ಮಾಡುವ, ಹೀಗೆ ಉತ್ಪಾದಕ ಮತ್ತು ಅನುಭೋಗಿಗಳ ನಡುವೆ ಕೊಂಡಿಯಾಗಿ ವರ್ತಿಸುವ, ವರ್ತಕನನ್ನು ಮಾತ್ರವೇ ಒಟ್ಟುವ್ಯಾಪಾರಿಯೆಂದು ವ್ಯಾಖ್ಯಾನಿಸಲಾಗಿದೆ. ಮುತಾಲಿಕ, ಮಧ್ಯವರ್ತಿಗಳನ್ನು (ಏಜೆಂಟ್, ಮಿಡ್ಲ್‌ಮೆನ್) ಈ ವ್ಯಾಖ್ಯೆಯ ಪ್ರಕಾರ ಒಟ್ಟು ವ್ಯಾಪಾರಿಗಳೆನ್ನಲಾಗುವುದಿಲ್ಲ.

ಠೋಕುವ್ಯಾಪಾರಿಯ ಮುಖ್ಯ ಕಾರ್ಯಭಾಗಗಳು ಇವು: 1. ಗಾತ್ರವಿಭಜನೆ: ಉತ್ಪಾದಕರಿಂದ ಈತ ಹೆಚ್ಚು ಮೊತ್ತಗಳಲ್ಲಿ ಪದಾರ್ಥಗಳನ್ನು ಕೊಂಡು ಅಥವಾ ಸಂಗ್ರಹಿಸಿ ಅವನ್ನು ಕಡಿಮೆ ಗಾತ್ರಗಳಲ್ಲಿ ಚಿಲ್ಲರೆ (ಕಿರುಕುಳ) ವ್ಯಾಪಾರಿಗಳಿಗೆ ಮಾರುತ್ತಾನೆ. 2. ಸರಕು ದಾಸ್ತಾನು: ಬೇಡಿಕೆಯಲ್ಲಿ ಸಂಭವಿಸುವ ಏರಿಳಿತಗಳಿಗೆ ಅಣುಗುಣವಾಗಿ ಸರಕಿನ ಪ್ರವಾಹವನ್ನು ನಿಯಂತ್ರಿಸಲು ಇದರಿಂದ ಸಾಧ್ಯವಾಗುತ್ತದೆ. 3. ಸರಕು ವಿತರಣೆಗೆ (ಡಿಸ್ಟ್ರಿಬ್ಯೂಷನ್) ಧನ ಪೋಷಣೆ (ಫಿನಾನ್ಸಿಂಗ್): ಚಿಲ್ಲರೆ ವ್ಯಾಪಾರಿಗಳಿಗೆ ಈತ ಉದ್ದರಿ ನೀಡುತ್ತಾನೆ ; ಆದರೆ ಅವರಿಂದ ಹಣ ವಸೂಲಾಗುವವರೆಗೂ ಉತ್ಪಾದಕರಿಗೆ ತಾನು ಕೊಡಬೇಕಾದ ಹಣವನ್ನು ಕೊಡದೆ ನಿಲ್ಲಿಸಿಕೊಳ್ಳುವುದಿಲ್ಲ. 4. ಅಗತ್ಯವಾದಾಗಲೆಲ್ಲ ಈತ ಪದಾರ್ಥಗಳ ವರ್ಗೀಕರಣ (ಗ್ರೇಡಿಂಗ್), ಸಂವೇಷ್ಟನ (ಪ್ಯಾಕಿಂಗ್) ಮತ್ತು ಅಂಕನ (ಬ್ರ್ಯಾಂಡಿಂಗ್) ಕಾರ್ಯವನ್ನೂ ನಿರ್ವಹಿಸುತ್ತಾನೆ. (ಎ.ಕೆ.ಎಸ್.ಎಚ್.)

ಒಟ್ಟು ವ್ಯಾಪಾರಿಯ ಈ ಕಾರ್ಯ ಭಾರಗಳಿಂದಾಗಿ ಪದಾರ್ಥಗಳ ಉತ್ಪಾದಕರಿಗೂ ಚಿಲ್ಲರೆ ವ್ಯಾಪಾರಿಗಳಿಗೂ ಅನುಭೋಗಿಗಳಿಗೂ ಆಗುವ ಅನುಕೂಲಗಳು ಅನೇಕ. ಒಟ್ಟುವ್ಯಾಪಾರಿ ಪದಾರ್ಥಗಳನ್ನು ಹೆಚ್ಚಿನ ಮೊತ್ತಗಳಲ್ಲಿ ಕೊಳ್ಳುವುದರಿಂದ, ಅವಕ್ಕಾಗಿ ಆದೇಶ ನೀಡುವುದರಿಂದ, ಬೃಹದ್ಗಾತ್ರದ ಉತ್ಪಾದನೆ ಸಾಧ್ಯವಾಗುತ್ತದೆ. ಯಾರು ಯಾರು ಎಷ್ಟೆಷ್ಟು ಪದಾರ್ಥ ಕೊಳ್ಳುವರೆಂಬ ಬಗ್ಗೆ ಉತ್ಪಾದಕ ತಲೆಕೆಡಿಸಿಕೊಳ್ಳಬೇಕಾದ್ದಿಲ್ಲ. ಕೊಳ್ಳುವವರಿಂದ ಬೇಡಿಕೆ ಬರುವುದನ್ನೇ ನಿರೀಕ್ಷಿಸಿ ಆತ ಸರಕು ದಾಸ್ತಾನು ಮಾಡಿ ಇಟ್ಟುಕೊಂಡಿರಬೇಕಾದ ಚಿಂತೆಯಿಲ್ಲ. ಅವನು ಉತ್ಪಾದನೆಯತ್ತ ಹೆಚ್ಚು ಗಮನ ಹರಿಸಿ ಅದರಲ್ಲೇ ವಿಶಿಷ್ಟ ಪ್ರಾವೀಣ್ಯ ಗಳಿಸಿಕೊಳ್ಳುವಂತೆ ಒಟ್ಟುವ್ಯಾಪಾರಿ ನೆರವಾಗುತ್ತಾನೆ. ಅನುಭೋಗಿಗಳ ರುಚಿಗಳನ್ನು ತಿದ್ದುವುದೂ ಅವನ್ನು ಅರಿತು ಉತ್ಪಾದಕನಿಗೆ ನಿವೇದಿಸುವುದೂ ಮಾರುಕಟ್ಟೆಯ ಪ್ರವೃತ್ತಿಗಳನ್ನು ಅಭ್ಯಸಿಸಿ ಮುನ್ನೆಚ್ಚರಿಸುವುದೂ ಸರಕುಗಳನ್ನು ದಾಸ್ತಾನು ಮಾಡಿ ಬೆಲೆಗಳಲ್ಲಿ ಸ್ಥಿರತೆಯನ್ನು ಕಾಪಾಡುವುದೂ ಒಟ್ಟುವ್ಯಾಪಾರಿಯ ಕೆಲಸ. ಒಟ್ಟು ವ್ಯಾಪಾರಿಯಲ್ಲಿ ವಿವಿಧ ಸರಕುಗಳ ದಾಸ್ತಾನುಗಳಿರುವುದರಿಂದ ಚಿಲ್ಲರೆ ವ್ಯಾಪಾರಿಗೆ ಆಯ್ಕೆಯ ಸೌಲಭ್ಯವಿರುತ್ತದೆ. ಅವನಿಗೆ ಬೇಕಾದ ಸರಕು ಒಟ್ಟುವ್ಯಾಪಾರಿಯಲ್ಲಿ ಸರ್ವದಾಸಿದ್ಧ. ಈ ಸೌಲಭ್ಯದ ಜೊತೆಗೆ ಚಿಲ್ಲರೆ ವ್ಯಾಪಾರಿಗೆ ಉದ್ದರಿಯ ಸೌಲಭ್ಯವೂ ಉಂಟು. ಯಾವ ಸರಕಿನ ಗುಣವೇನು, ಯಾವುದನ್ನು ಸುಲಭವಾಗಿ ಮಾರಾಟ ಮಾಡಬಹುದು-ಎಂಬ ವಿಚಾರವಾಗಿ ಮುಫತ್ತಾದ ಸಲಹೆಯನ್ನೂ ಚಿಲ್ಲರೆ ವ್ಯಾಪಾರಿಗೆ ಈತ ನೀಡುತ್ತಾನೆ.

ಒಳವ್ಯಾಪಾರದಲ್ಲಿ ನಿರತರಾದ ಒಟ್ಟುವ್ಯಾಪಾರಿಗಳಲ್ಲಿ ನಾಲ್ಕು ಬಗೆಯುಂಟು: 1. ಪದಾರ್ಥವನ್ನು ಕೊಂಡು ದಾಸ್ತಾನು ಮಾಡಿಟ್ಟದ್ದು, ಅವನ್ನು ಅದೇ ರೂಪದಲ್ಲಿ ಮಾರುವವರು; 2. ಪದಾರ್ಥವನ್ನು ಕೊಂಡು ದಾಸ್ತಾನು ಮಾಡುವುದೇ ಅಲ್ಲದೆ ಅದನ್ನು ಮಾರಾಟಕ್ಕಾಗಿ ಪರಿಷ್ಕರಿಸುವವರು; 3. ಒಂದು ಪದಾರ್ಥದ ಹಂಚಿಕೆಯ ವ್ಯವಸ್ಥೆ ಮಾಡಿದರೂ ವಾಸ್ತವವಾಗಿ ಅದನ್ನು ನೇರವಾಗಿ ಕೊಂಡು ಮಾರದವರು; ಉದಾ: ಮೋಟಾರ್ ಕಾರು ವ್ಯವಹಾರಸ್ಥರು; 4. ಇತರ ಒಟ್ಟು ವ್ಯಾಪಾರಿಗಳ ಪರವಾಗಿ ಸರಕುಗಳನ್ನು ಕೊಳ್ಳುವ ಮಾರುವ ಕಾರ್ಯನಿರ್ವಹಿಸುವ ಮುತಾಲಿಕರು (ಏಜೆಂಟ್ಸ್), ದಳ್ಳಾಳಿಗಳು (ಬ್ರೋಕರ್ಸ್) ಮುಂತಾದ ಮಧ್ಯವರ್ತಿಗಳನ್ನೂ ಸ್ಥೂಲವಾಗಿ ಒಟ್ಟುವ್ಯಾಪಾರಿಗಳೆನ್ನಬಹುದು **(ನೋಡಿ- ದಲ್ಲಾಳಿ)**.

ಹೊಲದಲ್ಲಿ ಬೆಳೆದ ಫಸಲೋ ಕಾರ್ಖಾನೆಯಲ್ಲಿ ಉತ್ಪಾದನೆಯಾದ ಸರಕೋ ಅಂತಿಮವಾಗಿ ಅನುಭೋಗಿಯ ಕೈಸೇರುವಾಗ ನಡುವೆ ಬರುವವರಲ್ಲಿ ಒಬ್ಬನಾದ ಒಟ್ಟುವ್ಯಾಪಾರಿಯನ್ನು ಸಂಪೂರ್ಣವಾಗಿ ನಿವಾರಿಸುವುದು ಸಾಧ್ಯವೆ ಎಂಬ ವಿಚಾರವಾಗಿ ವಿಪುಲವಾಗಿ ಜಿಜ್ಞಾಸೆ ಬೆಳೆದಿದೆ. ಸರಕಿನ ಹಂಚಿಕೆಯಲ್ಲಿ ಒಟ್ಟುವ್ಯಾಪಾರ ಒಂದು ಅವಶ್ಯ ಅಂಗ. ಒಟ್ಟುವ್ಯಾಪಾರಿಯನ್ನು ನಿವಾರಿಸಿಕೊಂಡರೂ ಆತನ ಕಾರ್ಯಭಾರವನ್ನು ಬೇರೆ ಯಾರಾದರೂ-ಎಂದರೆ ತಯಾರಕನೋ ಚಿಲ್ಲರೆ ವ್ಯಾಪಾರಿಯೋ-ವಹಿಸಿಕೊಳ್ಳುವುದು ಅವಶ್ಯವಾಗುತ್ತದೆ. ಚಿಲ್ಲರೆ ವ್ಯಾಪಾರಿಗಳೇ ಬೃಹದ್ಗಾತ್ರದಲ್ಲಿ ಉತ್ಪಾದಕರಿಂದ ಸರಕು ಕೊಳ್ಳಬಹುದು. ಕೊಂಡ ಸರಕಿನ ದಾಸ್ತಾನು, ತಮ್ಮ ಶಾಖೆಗಳಲ್ಲಿ ಹಂಚಿಕೆ ಮುಂತಾದ ಎಲ್ಲ ಕಾರ್ಯಗಳನ್ನೂ ನಿರ್ವಹಿಸುವ ಸಂಸ್ಥೆಗಳುಂಟು. ಅಂಕಿತ (ಬ್ರಾಂಡೆಡ್) ಸರಕುಗಳನ್ನು ತಯಾರಿಸುವ ಅನೇಕ ಉತ್ಪಾದಕರು ತಮ್ಮ ಪದಾರ್ಥಗಳು ಎಲ್ಲೆಡೆಗಳಲ್ಲೂ ಪ್ರಸಾರವಾಗಬೇಕೆಂಬ ಉದ್ದೇಶದಿಂದ ತಾವೇ ಅವನ್ನು ಕಿರುಕುಳ ವ್ಯಾಪಾರಿಗಳಿಗೆ ನೇರವಾಗಿ

ಹಂಚುವ ವ್ಯವಸ್ಥೆ ಇಟ್ಟುಕೊಂಡಿರುತ್ತಾರೆ. ಉತ್ಪಾದಕನಿಗೂ ಕಿರುಕುಳ ವ್ಯಾಪಾರಿಗೂ ನಡುವೆ ಒಬ್ಬನಿಗಿಂತ ಹೆಚ್ಚು ಒಟ್ಟುವ್ಯಾಪಾರಿಗಳಿರುವ ಸಂದರ್ಭಗಳೂ ಉಂಟು; ವಿತರಣ ವ್ಯವಸ್ಥೆ ಸಂಕೀರ್ಣವಾಗಿದ್ದಾಗ ಇವರ ಅಸ್ತಿತ್ವ ಅಗತ್ಯವಾಗಬಹುದು. *

**ಒಡಂಬಡಿಕೆ:** ಕೇವಲ ಲೌಕಿಕ ವ್ಯವಹಾರಗಳಲ್ಲಿ ಇಬ್ಬರು ಅಥವಾ ಎರಡು ಗುಂಪಿನವರು ತಮ್ಮೊಳಗೆ ಮಾಡಿಕೊಂಡ ಒಪ್ಪಂದವನ್ನಲ್ಲದೆ ಮತವಿಚಾರಗಳಲ್ಲಿ ಮಾಡಿಕೊಂಡ ಒಪ್ಪಂದವನ್ನೂ ಒಳಗೊಳ್ಳುತ್ತದೆ. ಎರಡನೆಯ ಬಗೆಯ ಒಪ್ಪಂದ ಪ್ರಧಾನವಾಗಿ ಕಾಣುವುದು ಹೀಬ್ರೂ ಮತದಲ್ಲಿ. ಹೀಬ್ರೂ ಭಾಷೆಯಲ್ಲಿ ಒಡಂಬಡಿಕೆಗೆ ಸಮಾನಾಂತರವಾದ ಪದ ಬೆರಿತ್. ಹೀಬ್ರೂ ಮತದಲ್ಲಿ ಈ ಪದ ದೇವರಿಗೂ ಮತ್ತು ಮಾನವರಿಗೂ ಅಥವಾ ದೇವರಿಗೂ ಮತ್ತು ಸೃಷ್ಟಿಯಾದ ಜಗತ್ತಿಗೂ ಏರ್ಪಟ್ಟ ಸಂಬಂಧವನ್ನು ನಿರ್ದೇಶಿಸುತ್ತದೆ. ಈ ಸಂಬಂಧ ಶಾಂತಿಜೀವನ, ವಿಧಿವತ್ತಾದ ಜೀವನ, ಪರಸ್ಪರ ಅಥವಾ ಏಕಪಕ್ಷೀಯ ಸಂರಕ್ಷಣೆ, ಭರವಸೆ ಮುಂತಾದುವನ್ನು ಒಳಗೊಳ್ಳುತ್ತದೆ. ಯೆಹೂದಿ ಮತದಲ್ಲಿ ಯಾಹವೆ ತಾನು ವಿಧಿಸಿದ ಹತ್ತು ಆಜ್ಞೆಗಳಿಗೆ ವಿಧೇಯರಾದ ಜನರನ್ನು ತನ್ನ ಜನವೆಂದು ಭಾವಿಸಿ ಅವರಲ್ಲಿ ಒಗ್ಗಟ್ಟನ್ನು ಏರ್ಪಡಿಸಿ ಅವರನ್ನು ಸಂರಕ್ಷಿಸಲು ಬದ್ಧನಾಗಿರುತ್ತಾನೆ. ಈ ಒಪ್ಪಂದ ಏಕಪಕ್ಷೀಯ; ಜನರನ್ನು ತನ್ನವರನ್ನಾಗಿ ಆಯ್ದುಕೊಂಡವನೂ ಜನರಿಗೆ ಕಾನೂನನ್ನು ವಿಧಿಸಿದವನೂ ಪ್ರಭುವಾದ ಯಾಹವೆಯೇ. ರಕ್ಷಣೆಯ ಆಶ್ವಾಸನೆ ನೀಡಿದವನೂ ಅವನೇ. ಈ ಒಡಂಬಡಿಕೆಗೆ ಸಂಬಂಧಪಟ್ಟ ಮತಾಚರಣೆಯುಂಟು. ಅದರಲ್ಲಿ ಪುರೋಹಿತ ಪ್ರಭುವಿನ ಪ್ರತಿನಿಧಿಯಾಗಿ ಯಾಹವೆಯ ಕೃಪಾಪೂರ್ಣತೆಯನ್ನು ಹೊಗಳಿ ಅವನ ಆಜ್ಞಾನುಸಾರ ಬಾಳಬೇಕೆಂದು ಘೋಷಿಸುತ್ತಾನೆ. ಭಕ್ತರು ತಮ್ಮ ವಿಧೇಯತೆಯನ್ನು ಪ್ರಕಟಿಸಿದ ಅನಂತರ ಆ ಒಡಂಬಡಿಕೆಯ ಸಂಕೇತವಾಗಿ ಒಡಂಬಡಿಕೆಯ ರಕ್ತವನ್ನು ಪ್ರೋಕ್ಷಿಸುತ್ತಾನೆ. ಅನಂತರದಲ್ಲಿ ಪವಿತ್ರಭೋಜನ ನಡೆಯುತ್ತದೆ. (ಜಿ.ಎಚ್.)

**ಒಡಂಬಡಿಕೆಗಳು, ಹಳೆಯ ಮತ್ತು ಹೊಸ:** ಕ್ರಿಸ್ತವೇದವಾದ ಬೈಬಲಿನ ಮುಖ್ಯ ಭಾಗಗಳು (ಟೆಸ್ಟಮೆಂಟ್ಸ್–ಓಲ್ಡ್ ಅಂಡ್ ನ್ಯೂ). ಮೊದಲನೆಯದು ಹಳೆಯ ಒಡಂಬಡಿಕೆ, ಎರಡನೆಯದು ಹೊಸ ಒಡಂಬಡಿಕೆ. ಇವು ಕಾಲದಿಂದ ಕಾಲಕ್ಕೆ ದೇವರು ಅಪ್ಪಣೆ ಕೊಟ್ಟ ವಿಧಾಯಕ ವಾಕ್ಯ ರೂಪದಲ್ಲಿವೆ. ಕ್ರೈಸ್ತ ಧರ್ಮದ ತಾರುಣ್ಯದಲ್ಲಿ ಹೊಸ ಒಡಂಬಡಿಕೆಗೆ ಮಾತ್ರ ಪವಿತ್ರವಾದುದೆಂಬ ಭಾವನೆ ಇತ್ತು. ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎರಡೂ ಪವಿತ್ರವಾದುವೇ ಎಂಬುದು ಈಗ ಕ್ರೈಸ್ತರಿಗೆ ಸಾಮಾನ್ಯವಾಗಿ ಒಪ್ಪಿಗೆಯಾಗಿರುವ ಅಭಿಪ್ರಾಯ. ಈ ಎರಡರಲ್ಲೂ ಪ್ರಕಟವಾಗಿರುವ ವಿಧಾಯಕ ವಾಕ್ಯಗಳು ಒಂದೇ ದೇವರ ವಾಕ್ಯಗಳು. ಆದರೂ ಈ ವಿಧಾಯಕ ವಾಕ್ಯಗಳಿಗೆ ಕೊಟ್ಟಿರುವ ಸ್ಥಾನಮಾನಗಳಲ್ಲಿ ವ್ಯತ್ಯಾಸವಿದೆ. ಹಳೆಯ ಒಡಂಬಡಿಕೆಯಲ್ಲಿರುವವು ಆಖೈರು ವಾಕ್ಯಗಳಲ್ಲ. ಹೊಸ ಒಡಂಬಡಿಕೆಯವು ಪೂರ್ಣವಾದುವು, ಅಂತಿಮವಾದುವು. ಮುಂದೆ ಉದ್ಧಾರಕನ ಅವತಾರವಾಗುವುದೆಂಬ ಭರವಸೆಯ ಮಾತುಗಳು ಹಳೆಯ ಒಡಂಬಡಿಕೆಯ ಉದ್ದಕ್ಕೂ ಬಂದಿವೆ. ಆ ಉದ್ಧಾರಕನೇ ಯೇಸು ಕ್ರಿಸ್ತ. ಅವನದು ಹಳೆಯ ಒಡಂಬಡಿಕೆಯ ಪ್ರವಾದಿಗಳ ದರ್ಜೆಗಿಂತ ಮೇಲಿನದು. ಪ್ರವಾದಿಗಳು ದೇವಪುತ್ರರಲ್ಲ. ಯೇಸುವಾದರೋ ಸಾಕ್ಷಾತ್ ದೇವಪುತ್ರ, ದೇವರೇ ಸಾಕ್ಷಾತ್ತಾಗಿ ಕ್ರೈಸ್ತನ ರೂಪದಲ್ಲಿ ಬಂದು ಜನತೆ ದೇವರಾಜ್ಯವನ್ನು ಸೇರುವ ಮಾರ್ಗವನ್ನು ತೋರಿಸಿರುತ್ತಾನೆ. ಯೇಸು ಕ್ರಿಸ್ತನ ಮುಖದಿಂದ ಹೊರಬಿದ್ದ ವಿಧಾಯಕ ವಾಕ್ಯಗಳು ಅಂತಿಮ ಸಂದೇಶದ ವಾಕ್ಯಗಳು. ಇವು ಹೊಸ ಒಡಂಬಡಿಕೆಯಲ್ಲಿವೆ.

ಮೊಟ್ಟ ಮೊದಲಿಗೆ ಒಪ್ಪಂದದ ಮಾತು ಕಾಣಿಸಿಕೊಳ್ಳುವುದು ಹಳೆಯ ಒಡಂಬಡಿಕೆಯ ಮೊದಲ ಭಾಗವಾದ ಜೆನಿಸಿಸ್ಸಿನಲ್ಲಿ. ಅಲ್ಲಿ ದೇವರು ನೋವಾ ಮತ್ತು ಅವನ ಮಕ್ಕಳಿಗೆ ಹೇಳಿದ ವಾಕ್ಯಗಳು ಇವು; ಇಗೋ, ನಾನು ನನ್ನ ಮತ್ತು ನಿನ್ನ ಮಕ್ಕಳೊಡನೆ ಮತ್ತು ನಿನ್ನ ಸಂತತಿಯೊಡನೆ, ನಿನ್ನ ಜೊತೆಯಲ್ಲಿರುವ ಎಲ್ಲ ಪ್ರಾಣಿಗಳು ಅಂದರೆ ಪಕ್ಷಿಗಳು, ದನಗಳು ಮತ್ತು ಭೂಮಿಯ ಮೇಲಿನ ಎಲ್ಲ ಪ್ರಾಣಿಗಳು ಈ ಎಲ್ಲರೊಡನೆ ನನ್ನ ಒಪ್ಪಂದವನ್ನು ಸ್ಥಾಪಿಸುತ್ತೇನೆ. ನನಗೂ ಮತ್ತು ಈ ಭೂಮಿಯ ಮೇಲಿರುವ ಎಲ್ಲದಕ್ಕೂ ಆದ ಈ ಒಪ್ಪಂದದ ಕುರುಹಾಗಿ ನಾನು ಮೋಡದಲ್ಲಿ ನನ್ನ ಬಿಲ್ಲನ್ನು ನೆಟ್ಟಿರುತ್ತೇನೆ.

ದೇವರು ಏಬ್ರಹಾಮನೊಡನೆ ಮಾಡಿಕೊಂಡ ಒಪ್ಪಂದ ಎರಡನೆಯದು. ಇದು ಜೆನಿಸಿಸ್ಸಿನ ಹದಿನೇಳನೆಯ ಅಧ್ಯಾಯದಲ್ಲಿ ಉಲ್ಲೇಖಿತವಾಗಿದೆ. ಏಬ್ರಮ್‌ಗೆ ತೊಂಬತ್ತೊಂಬತ್ತು ವಯಸ್ಸಾದಾಗ ಅವನಿಗೆ ದೇವರು ಕಾಣಿಸಿಕೊಂಡ. ದೇವರ ಮುಂದೆ ಅಡ್ಡಬಿದ್ದಾಗ ದೇವರು ತನ್ನ ಒಪ್ಪಂದವನ್ನು ಅವನಿಗೆ ಹೇಳಿದ: ನೀನು ಅನೇಕ ಜನಾಂಗಗಳ ತಂದೆಯಾಗುವೆ. ಇನ್ನೂ ಮುಂದೆ ನಿನ್ನ ಹೆಸರು ಏಬ್ರಹಾಮ್–ಏಬ್ರಮ್ ಅಲ್ಲ. ಕ್ಯಾನನ್ ಪ್ರದೇಶವನ್ನು ನಿನ್ನ ಮತ್ತು ನಿನ್ನ ಪೀಳಿಗೆಯವರು ಸರ್ವಕಾಲಕ್ಕೂ ಅನುಭವಿಸುವಂತೆ ಒಪ್ಪಿಸಿರುತ್ತೇನೆ. ಈ ಒಡಂಬಡಿಕೆಯ ಗುರುತಾಗಿ ಹುಟ್ಟಿದ ಮಕ್ಕಳಿಗೆಲ್ಲರಿಗೂ ನೀನು ಹಣ ಕೊಟ್ಟು ಕೊಂಡವರಿಗೂ ನೀನು ಪರಿವರ್ತನವೇರ್ಪಡಿಸಬೇಕು.

ಎಕ್ಸೋಡಸ್ಸಿನ ಹತ್ತೊಂಬತ್ತರಿಂದ ಇಪ್ಪತ್ತನಾಲ್ಕನೆಯ ಅಧ್ಯಾಯದವರೆಗಿನವುಗಳಲ್ಲಿ ಹೇಳಿರುವಂತೆ ಪ್ರಭು ಮೋಸೆಯೊಡನೆ ಮಾಡಿಕೊಂಡ ಒಪ್ಪಂದ ಮೂರನೆಯದು. ಇದರ ಇಪ್ಪತ್ತನೆಯ ಅಧ್ಯಾಯದಲ್ಲಿ ಪ್ರಭುವಿನ ಹತ್ತು ಆಜ್ಞೆಗಳು ವರ್ಣಿತವಾಗಿವೆ. ಈ ಒಪ್ಪಂದ ಹಿಂದಿನ ಒಪ್ಪಂದಗಳಿಗಿಂತ ಹೆಚ್ಚು ವಿಸ್ತಾರವಾಗಿದೆ.

ಜೆರೇಮಿಯಾದ ಮೂವತ್ತೊಂದರಿಂದ ಮೂವತ್ತನಾಲ್ಕನೆಯ ಅಧ್ಯಾಯಗಳಲ್ಲಿ ಹಳೆಯ ಒಡಂಬಡಿಕೆಗೆ ಹೊಸ ವಿವರಣೆಯನ್ನು ಕೊಟ್ಟು ಅದನ್ನು ಮುಂದೆ ಬರಲಿರುವ ಹೊಸ ಒಡಂಬಡಿಕೆ ಎಂದು ಕರೆದಿದೆ. ಈ ಹೊಸ ಒಡಂಬಡಿಕೆಯನ್ನು ಇಸ್ರೇಲ್ ಮನೆತನದವರೊಡನೆ ಮುಂದಿನ ಕಾಲದಲ್ಲಿ ಏರ್ಪಡಿಸುವುದಾಗಿಯೂ ಆಗ ತನ್ನ ನಿಯಮವನ್ನು ಅವರ ಹೃದಯದೊಳಗೆ ಬರೆಯುವುದಾಗಿಯೂ ಪ್ರಭು ಹೇಳಿರುತ್ತಾನೆ.

ಯೇಸು ಕ್ರಿಸ್ತ ಏರ್ಪಡಿಸಿದ ಹೊಸ ಒಡಂಬಡಿಕೆ ಹಳೆಯ ಒಡಂಬಡಿಕೆಯ ಪುನಃಸ್ಥಾಪನೆ. ಅದು ಪ್ರಭುವಿಗೂ ಭಕ್ತನಿಗೂ ಆಂತರಿಕ ಸಂಬಂಧವನ್ನು ಏರ್ಪಡಿಸುತ್ತದೆ. ಕ್ರಿಸ್ತನ ಜೀವನ ಮತ್ತು ಮರಣವನ್ನು ಈ ಹೊಸ ಒಡಂಬಡಿಕೆಯ ಬೆಳಕಿನಲ್ಲಿ ಅರ್ಥಮಾಡಿಕೊಳ್ಳಬೇಕು. ಮಾನವ ದೇವರಾಜ್ಯವನ್ನು ತನ್ನ ಅಂತರಂಗದಲ್ಲೇ ಕಾಣಬಹುದು ಎಂಬುದೂ ಮಾನವನಿಗೂ ದೇವರಿಗೂ ಇರುವ ಸಂಬಂಧ ಪ್ರೀತಿಯದು ಎಂಬುದೂ ಅದರ ತಳಹದಿಯ ಭಾವನೆಗಳು. ನಿಬಂಧನೆ (ಹತ್ತು ಆಜ್ಞೆಗಳು) ಮೋಸೆಸ್ ಮೂಲಕ ಬಂದುದಾದರೆ, ಕಾರುಣ್ಯ ಮತ್ತು ಸತ್ಯ ಕ್ರೈಸ್ತನಿಂದ ಬಂದುವು (ಸೇಂಟ್ ಜಾನ್). ಹಿಂದೆ ಯೋಹಾನ ನೀರಿನಿಂದ ದೀಕ್ಷೆ ಕೊಟ್ಟರೆ ಈಗ ಕ್ರಿಸ್ತ ಪವಿತ್ರಾತ್ಮದಿಂದ ದೀಕ್ಷೆ ಕೊಡುತ್ತಾನೆ (ಸೇಂಟ್ ಜಾನ್). ಹಿಂದೆ ಪ್ರಭು ಪ್ರವಾದಿಗಳ ಮೂಲಕ ತನ್ನ ಸಂದೇಶವನ್ನು ಕೊಟ್ಟ. ಈಗ ಪ್ರಭು ದೇವಪುತ್ರನಾಗಿ ಅವತರಿಸಿ ಜನರ ಮಧ್ಯೆ ಬಾಳಿ ಅವರಿಗೆ ತನ್ನ ಸಂದೇಶವನ್ನು ತಿಳಿಸಿರುತ್ತಾನೆ. ಅನೇಕ ಕಾಲದಿಂದ ಯೆಹೂದ್ಯರು ನಿರೀಕ್ಷಿಸಿದ್ದ ಉದ್ಧಾರಕ ಯೇಸು ಕ್ರಿಸ್ತನೇ ಎಂದು ಯೇಹಾನ ಸಾರುತ್ತಾನೆ. ಯೇಸು ಪರ್ವತ ಶಿಖರದಿಂದ ಮಾಡಿದ ಉಪದೇಶ ಹೊಸ ಒಡಂಬಡಿಕೆಯ ಸಾರ. ಪ್ರಭುಭೋಜನ ಹೊಸ ಒಪ್ಪಂದದ ಸಂಸ್ಕಾರ. ಈ ಸಂಸ್ಕಾರದಲ್ಲಿ ದ್ರಾಕ್ಷಾರಸ ಯೇಸುವಿನ ಪರಿತಾಪ ಮತ್ತು ಅವನ ರಕ್ತ ಹೊಸ ಒಪ್ಪಂದದ ಸಂಕೇತ. ಅನೇಕರಿಗಾಗಿ ಬಸಿದ ರಕ್ತ ನನ್ನ ಹೊಸ ಒಡಂಬಡಿಕೆಯ ಸಂಕೇತ–ಎಂಬ ಯೇಸುವಿನ ಹೇಳಿಕೆ ಸೇಂಟ್ ಮಾರ್ಕ್ ಮತ್ತು ಕೊರಿಂಥಿಯನ್ಸ್ ಎಂಬ ಹೊಸ ಒಡಂಬಡಿಕೆಯ ಪುಸ್ತಕಗಳಲ್ಲಿ ಉಲ್ಲೇಖಿತವಾಗಿದೆ (**ನೋಡಿ– ಬೈಬಲ್**). (ಜಿ.ಎಚ್.)

**ಒಡಂಬಡಿಕೆ, ನ್ಯಾಯಶಾಸ್ತ್ರದಲ್ಲಿ:** ಒಡಂಬಡಿಕೆ, ಒಪ್ಪಂದ ಮತ್ತು ಕರಾರು ಎಂಬ ಪದಗಳನ್ನು ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಬಳಸಲಾಗುತ್ತಿದೆ. ಆದರೆ ನ್ಯಾಯಶಾಸ್ತ್ರದಲ್ಲಿ ಇವಕ್ಕೆ ವಿಶಿಷ್ಟ ಅರ್ಥಗಳಿವೆ. ಆಧುನಿಕ ಭಾರತದ ನ್ಯಾಯಸೂತ್ರಗಳು ಇಂಗ್ಲಿಷ್ ನ್ಯಾಯಸೂತ್ರಗಳ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದು ಇಂಗ್ಲಿಷ್ ಭಾಷೆಯಲ್ಲಿರುವ ಕಾರಣ ಒಡಂಬಡಿಕೆ, ಒಪ್ಪಂದ ಮತ್ತು ಕರಾರು ಶಬ್ದಗಳನ್ನು ಕ್ರಮವಾಗಿ ಇಂಗ್ಲಿಷಿನ ಕವಿನಂಟ್, ಅಗ್ರಿಮೆಂಟ್ ಮತ್ತು ಕರಾರು ಎಂಬ ಅರ್ಥಗಳಲ್ಲಿ ಇಲ್ಲಿ ಬಳಸಲಾಗಿದೆ. ಒಪ್ಪಂದ ಮತ್ತು ಕರಾರು–ಈ ಎರಡೂ ಪದಗಳನ್ನು ಭಾರತದ ಕರಾರುಗಳ ಕಾಯಿದೆಯಲ್ಲಿ ವಿವರಿಸಲಾಗಿದೆ (**ನೋಡಿ– ಒಪ್ಪಂದ; ಕರಾರು**).

ಇಬ್ಬರು ಅಥವಾ ಹೆಚ್ಚು ಜನರು ಗುಂಪುಗಳು ಪರಸ್ಪರವಾಗಿ ಒಪ್ಪಿರುವುದೇ ಒಡಂಬಡಿಕೆ (ಕವಿನಂಟ್). ಒಡಂಬಡಿಕೆಯೂ ಒಪ್ಪಂದವೇ ಆದರೂ ಒಡಂಬಡಿಕೆ ಮಾಡಿಕೊಂಡ ಉಭಯ ಪಕ್ಷದವರಿಗೂ ತನ್ಮೂಲಕ ಪರಸ್ಪರ ಲಾಭ ಅಥವಾ ಪ್ರತಿಫಲ ದೊರೆಯಲೇಬೇಕಾಗಿಲ್ಲ. ಉಭಯ ಪಕ್ಷಗಳ ಒಪ್ಪಂದ ವಿವರಣಾತ್ಮಕವಾಗಿರುವುದು ಒಡಂಬಡಿಕೆಯ ಲಕ್ಷಣ. ಇವು ಒಂದು ಅಥವಾ ಹಲವು ವಿಷಯಗಳ ಸತ್ಯತೆಯ ಬಗ್ಗೆ ಒಪ್ಪಿರುವುದನ್ನು ಅಥವಾ ಏನನ್ನಾದರೂ ಮಾಡಲು ಇಲ್ಲವೆ ಮಾಡದಿರಲು ಒಪ್ಪಿರುವುದನ್ನು ಒಡಂಬಡಿಕೆ ಸ್ಪಷ್ಟೀಕರಿಸುತ್ತದೆ. ಒಡಂಬಡಿಕೆಗೆ ನಿರ್ದಿಷ್ಟ ಸ್ವರೂಪ–ನಮೂನೆ (ಫಾರ್ಮ್)– ಅಥವಾ ಶಬ್ದಗಳ ಆವಶ್ಯಕತೆ ಇಲ್ಲ. ನಿರೂಪಣೆ ಸ್ಪಷ್ಟವಾಗಿದ್ದರೆ ಸಾಕು. ಯಾವೊಂದು ದೇಶದ ನ್ಯಾಯ ವ್ಯವಸ್ಥೆಯನ್ವಯ ಮಾಡಿಕೊಳ್ಳುವ ಒಡಂಬಡಿಕೆಗಳು, ಸಾಧಾರಣವಾಗಿ ವ್ಯಕ್ತಿಗೂ ಚರ ಮತ್ತು ಸ್ಥಿರ ಸ್ವತ್ತುಗಳಿಗೂ ಸಂಬಂಧಿಸಿರುತ್ತವೆ.

ಯಾವೊಬ್ಬ ವಿಶಿಷ್ಟ ವ್ಯಕ್ತಿಗೆ ಲಾಭದಾಯಕವಾಗುವ ಅಥವಾ ನಿರ್ದಿಷ್ಟ ವ್ಯಕ್ತಿಯೇ ಒಪ್ಪಂದದ ನಿರ್ವಹಣೆಗೆ ಹೊಣೆ ಎಂದು ಸೂಚಿಸುವ ಒಡಂಬಡಿಕೆಗಳು ವ್ಯಕ್ತಿಗತ ಒಡಂಬಡಿಕೆಗಳು. ಚರಾಸ್ತಿಗೆ ಸಂಬಂಧಿಸಿಯೂ ಒಡಂಬಡಿಕೆಗಳು ಇರುತ್ತವೆ. ಆದರೆ ನಿತ್ಯ ಜೀವನದಲ್ಲಿ ನಾವು ಕಾಣುವ ಅನೇಕ ಒಡಂಬಡಿಕೆಗಳು ಭೂಮಿಗೆ ಸಂಬಂಧಿಸಿರುತ್ತವೆ. ಇವುಗಳಲ್ಲಿ ಸಾಮಾನ್ಯವಾಗಿ ಮೂರು ರೀತಿಯವು ಇರುತ್ತವೆ. ಭೂಮಿಯ ವಿಕ್ರಯ ವಿಲೇಖದಲ್ಲಿ (ಕ್ರಯಪತ್ರ) ಹೇಳಿದ ಒಡೆತನದ ಹಕ್ಕುಬಾಧ್ಯತೆಗಳ ಬಗೆಗಿನ ಲೋಪದೋಷಗಳಿಗೆ ಪ್ರತಿಯಾಗಿ ಭದ್ರತೆ ಸೂಚಿಸುವ ಒಡಂಬಡಿಕೆಗಳು. ಗೇಣಿದಾರಿ ಮತ್ತು ಕೌಲು ಇವುಗಳ ಬಗೆಗಿನ ಒಡಂಬಡಿಕೆಗಳು. ಮೂರನೆಯದಾಗಿ ನಿರ್ಬಂಧಕ

(ರಿಸ್ಟ್ರಿಕ್ಟಿವ್) ಒಡಂಬಡಿಕೆಗಳು. ಈ ನಿರ್ಬಂಧಕ ಒಡಂಬಡಿಕೆಗಳು ಭೂಮಿಗಳ ಸಂಬಂಧದಲ್ಲಿನ ಷರತ್ತುಗಳು ಮತ್ತು ಅವುಗಳ ಅನುಭೋಗದ ಹಕ್ಕುಗಳಿಗೆ ಸಂಬಂಧಿಸಿರುತ್ತವೆ. ಇಂಥ ಒಡಂಬಡಿಕೆಗಳು ಸಾಮಾನ್ಯವಾಗಿ ಭೂಮಿಗಳೊಂದಿಗೆ ಸಹಗಾಮಿ ಎಂದು ಹೇಳಬಹುದು.

ಹಾನಿಪೂರ್ತಿ ವಸೂಲಿಯ ದೃಷ್ಟಿಯಿಂದ ಒಡಂಬಡಿಕೆಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು. ಸ್ವತಂತ್ರ ಒಡಂಬಡಿಕೆ ಎಂದರೆ ಉಭಯ ಪಕ್ಷಗಳಲ್ಲಿ ಯಾರೊಬ್ಬರೂ ಇನ್ನೊಬ್ಬರು ಒಡಂಬಡಿಕೆಯನ್ನು ಮುರಿದಿರುವ ಕಾರಣದ ಮೇಲೆ, ಇನ್ನೊಬ್ಬರ ತತ್ಸಂಬಂಧದ ಹಕ್ಕುಗಳನ್ನು ಅವಲಂಬಿಸದೆ ಹಾನಿಪೂರ್ತಿಯನ್ನು ಪಡೆಯಲು ಸಾಧ್ಯವಾಗಿರುವಂಥ ಒಡಂಬಡಿಕೆ. ಒಂದು ಒಡಂಬಡಿಕೆ ತತ್ಪೂರ್ವದ ಒಡಂಬಡಿಕೆಯನ್ನು ಕಾರ್ಯಗತಗೊಳಿಸುವುದನ್ನು ಅವಲಂಬಿಸಿದ್ದರೆ ಅಂಥದನ್ನು ಆಶ್ರಿತ ಅಥವಾ ಅವಲಂಬಿ (ಡಿಪೆಂಡೆಂಟ್) ಒಡಂಬಡಿಕೆ ಎನ್ನುತ್ತಾರೆ. ಉಭಯ ಪಕ್ಷಗಳು ಏಕಕಾಲದಲ್ಲಿ ನಿರ್ವಹಿಸುವಂತೆ ಒಪ್ಪಿಕೊಂಡದ್ದು ಇನ್ನೊಂದು ಬಗೆಯ ಒಡಂಬಡಿಕೆ. ಇಂಥ ಒಡಂಬಡಿಕೆಯನ್ನು ಸಹಗಾಮಿ ಒಡಂಬಡಿಕೆ ಎನ್ನಲಾಗುತ್ತಿದೆ. (ಎಲ್.ಎಸ್.ಜಿ.)

**ಒಡಂಬಡಿಕೆ, ರಾಜಕೀಯ:** ಎರಡು ಅಥವಾ ಎರಡಕ್ಕೂ ಹೆಚ್ಚು ಪಕ್ಷಗಳು ಅಥವಾ ರಾಷ್ಟ್ರಗಳು ಯಾರ ಒತ್ತಾಯಕ್ಕೂ ಒಳಪಡದೆ, ಕೆಲ ಕಾರ್ಯಗಳನ್ನು ಮಾಡಲು ಅಥವಾ ಮಾಡದೆ ಇರಲು ಮಾಡಿಕೊಂಡ ಒಡಂಬಡಿಕೆಯ ಉದಾಹರಣೆಗಳನ್ನು ನಾವು ಇತಿಹಾಸ ಗ್ರಂಥಗಳಲ್ಲಿ ಕಾಣಬಹುದು. ಚಂದ್ರಗುಪ್ತನ ಮಂತ್ರಿಯಾಗಿದ್ದ ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಮನು ಹಾಗೂ ಪ್ರಜೆಗಳ ನಡುವೆ ಆದ ಒಡಂಬಡಿಕೆಯನ್ನು ಚರ್ಚಿಸುತ್ತಾನೆ. ಪ್ರಜೆಗಳು ಅರಾಜಕ ಸ್ಥಿತಿಯಲ್ಲಿದ್ದಾಗ, ಮತ್ಸ್ಯ ನ್ಯಾಯದಿಂದಾಗಿ ತೊಂದರೆಗೊಳಪಡುತ್ತಿದ್ದ ಅವರು ಮನುವನ್ನು ತಮ್ಮ ದೊರೆಯನ್ನಾಗಿ ಚುನಾಯಿಸಿಕೊಂಡು, ತಾವು ಬೆಳೆದದ್ದರಲ್ಲಿ 1/6 ಭಾಗವನ್ನು ಆತನಿಗೆ ಒಪ್ಪಿಸುವುದಾಗಿಯೂ ದೊರೆ ಪ್ರಜೆಗಳ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗಿಯೂ ಒಡಂಬಡಿಕೆಯಾಗಿತ್ತೆಂದು ಆತ ತಿಳಿಸುತ್ತಾನೆ. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳಲ್ಲಿ ಕ್ರೈಸ್ತ ಪ್ರೆಸ್ಬಿಟಿಯರಿಯನ್ ಮತಸ್ಥಾಪನೆ ಮಾಡಿದ ವಿಧಿ ವಿಹಿತವಾದ ಸಂಧಿ ಮತ್ತು ಒಡಂಬಡಿಕೆಗಳು ಪ್ರಸಿದ್ಧವಾಗಿವೆ.

ಭಾರತದ ಆಧುನಿಕ ಇತಿಹಾಸದಲ್ಲಿ ಇದಕ್ಕೆ ಒಂದು ನಿದರ್ಶನ ಕೊಡಬಹುದು. ಭಾರತದಲ್ಲಿ ಈಸ್ಟ್ ಇಂಡಿಯ ಕಂಪನಿ ಅಧಿಕಾರ ನಡೆಸುತ್ತಿದ್ದ ಕಾಲದಲ್ಲಿ ಅಧಿಕಾರಿ ವರ್ಗವನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ಲಾಸಿ ಯುದ್ಧದ ಅನಂತರ ಅದು ತನ್ನ ನೌಕರರೊಂದಿಗೆ ಒಡಂಬಡಿಕೆ ಮಾಡಿಕೊಂಡಿತು. ಅದರ ಪ್ರಕಾರ ನೌಕರರು ತಾವು ಕಂಪನಿಯೊಂದಿಗೆ ನಿಷ್ಠೆಯಿಂದ ನಡೆದುಕೊಳ್ಳುವುದಾಗಿ ವಚನ ನೀಡಿದರು.

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ರಾಷ್ಟ್ರಗಳಕೂಟದ ಸ್ಥಾಪನೆಯ ಒಡಂಬಡಿಕೆ ಪ್ರಸಿದ್ಧವಾದದ್ದು. ಪ್ರಥಮ ಮಹಾಯುದ್ಧದ ಅಂತ್ಯದಲ್ಲಿ ಮುಂದೆ ಯುದ್ಧಗಳಾಗದಂತೆ ನೋಡಿಕೊಳ್ಳುವ ಪ್ರಯತ್ನದ ಅಂಗವಾಗಿ ರಾಷ್ಟ್ರಗಳ ಕೂಟದ ಒಡಂಬಡಿಕೆಗೆ ಹಲವು ರಾಷ್ಟ್ರಗಳು ಸಹಿ ಹಾಕಿದ್ದುವು. ಈ ಒಡಂಬಡಿಕೆಯಲ್ಲಿ 26 ನಿಬಂಧನೆಗಳಿದ್ದುವು. ವಿಶ್ವಶಾಂತಿ ಸೌಹಾರ್ದ ಸ್ಥಾಪನೆಯೇ ಅದರ ಉದ್ದೇಶ. ವಿಶ್ವಸಂಸ್ಥೆಯ ಸನ್ನದೂ ಪ್ರಪಂಚದ ರಾಷ್ಟ್ರಗಳ ನಡುವೆ ಆದ ಒಡಂಬಡಿಕೆಯೇ ಆಗಿದೆ. ಇವೇ ಅಲ್ಲದೆ ಅಂತಾರಾಷ್ಟ್ರೀಯ ಸ್ವರೂಪದ ಅನೇಕ ಒಡಂಬಡಿಕೆಗಳನ್ನು ನಾವು ಕಾಣಬಹುದು. (ಎ.ಎಂ.ಆರ್.)

**ಒಡಿಸ್ಸಿ:** ಪ್ರ.ಶ.ಪೂ. 9 ಅಥವಾ 8ನೆಯ ಶತಮಾನದ ಸುಮಾರಿನಲ್ಲಿ ಪ್ರಾಚೀನ ಗ್ರೀಕ್ ಕವಿ ಹೋಮರ್ ರಚಿಸಿದನೆಂದು (ಅಥವಾ ಸಂಕಲನ ಮಾಡಿದನೆಂದು) ಪ್ರಖ್ಯಾತವಾಗಿರುವ ಎರಡು ಮಹಾಕಾವ್ಯಗಳಲ್ಲಿ ಒಂದು. ಅವನ ಮೊದಲನೆಯ ಮಹಾಕಾವ್ಯ ಇಲಿಯಡ್ **(ನೋಡಿ)**. ಅದರಲ್ಲಿ ಗ್ರೀಕರು ಟ್ರಾಯ್ ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದು, ಅಕಿಲೀಸನ ಉಗ್ರಕೋಪ, ಅದು ಗ್ರೀಕರಿಗೂ ಟ್ರೋಜನರಿಗೂ ತಂದ ವಿಪತ್ಪರಂಪರೆಗಳು–ಮುಂತಾದವುಗಳ ವಿಸ್ತಾರವಾದ ವರ್ಣನೆ ಇದೆ. ಅದರ ಕಥೆ ಒಡಿಸಿಯಲ್ಲಿ ಮುಂದುವರಿದಿದೆ. ಹತ್ತು ವರ್ಷಗಳ ಭಯಂಕರ ಯುದ್ಧದ ಅನಂತರ ಒಡಿಸಿಯಸ್ ಮನೆಗೆ ಹೊರಟವನು ದಾರಿಯಲ್ಲಿ ಅಕಸ್ಮಾತಾಗಿ ಒದಗಿದ ವಿಘ್ನಗಳನ್ನೆದುರಿಸಬೇಕಾಗಿ ಬಂದು ಅನೇಕ ಸಾಹಸ ಕಾರ್ಯಗಳಲ್ಲಿ ತೊಡಗುತ್ತಾನೆ. ಪರಿಣಾಮವಾಗಿ ತನ್ನೊಡನೆ ತಾಯ್ನಾಡಿನಿಂದ ಬಂದು, ಯುದ್ಧದಲ್ಲಿ ಹೋರಾಡಿ, ಸುಖವಾಗಿ ಹಿಂತಿರುಗುತ್ತಿದ್ದ ಎಲ್ಲ ಗೆಳೆಯರನ್ನೂ ಕಳೆದುಕೊಳ್ಳುತ್ತಾನೆ. ಒಡಿಸಿಯಸನ ಹತ್ತು ವರ್ಷಗಳ ಬಗೆಬಗೆಯ ಅನುಭವಗಳನ್ನು 24 ಕಾಂಡಗಳ ತನ್ನ ಒಡಿಸಿ ಮಹಾಕಾವ್ಯದಲ್ಲಿ ಹೋಮರ್ ವರ್ಣರಂಜಿತವಾಗಿ ಚಿತ್ರಿಸಿದ್ದಾನೆ. ಹರಹು ಹತ್ತು ವರ್ಷದ್ದಾದರೂ ಇಲಿಯಡ್‌ನಂತೆ ಇಲ್ಲಿಯೂ ವರ್ಣಿತವಾಗಿರುವುದು ಕೇವಲ ನಲವತ್ತು ದಿನಗಳ ಕ್ರಿಯೆ, ಅದರಲ್ಲೂ ವಿವರವಾಗಿ ವರ್ಣಿತವಾಗಿರುವುದು ಕೆಲವೇ ದಿನಗಳದ್ದು.

ದೇವತೆಗಳ ಸಭೆಯೊಂದಿಗೆ ಕಾವ್ಯ ಪ್ರಾರಂಭವಾಗುತ್ತದೆ. ಒಡಿಸಿಯಸನ ವಿಷಯದಲ್ಲಿ ಮೊದಲಿನಿಂದಲೂ ವಿಶೇಷವಾದ ವಾತ್ಸಲ್ಯವನ್ನು ತಳೆದ ಅಥೀನಾ ದೇವತೆ (ಈ ವಿಷಯ ನಮಗೆ ತಿಳಿಯುವುದು ಇಲಿಯಡ್ ಕಾವ್ಯದಿಂದ) ಜ್ಯೂಸ್ ದೇವತೆಗೆ ದೂರು ಕೊಡುತ್ತಾಳೆ. ಅದರ ಸಾರಾಂಶ ಇಷ್ಟು: ಟ್ರಾಯ್ ಪಟ್ಟಣ ಧೂಳೀಪಟವಾಗಿ ಹತ್ತು ವರ್ಷಗಳಾದುವು. ಆದರೂ ವೀರನಾದ ಒಡಿಸಿಯಸಿಗೆ ಮನೆ ಸೇರಲು ಸಾಧ್ಯವಾಗಿಲ್ಲ. ಅದಕ್ಕೆ ಕಾರಣ ಕಲಿಪ್ಸೋ (ಬಚ್ಚಿಡುವವಳು) ಎಂಬ ಉಪದೇವತೆಯೊಬ್ಬಳು ಅವನನ್ನು ತಡೆ ಹಾಕಿದ್ದಾಳೆ, ಇತ್ತ ಇಥಾಕದಲ್ಲಿ ಅವನ ಹೆಂಡತಿ ಪೆನೆಲೊಪೆ ಮತ್ತು ಅವನ ಮಗ ಟೆಲಿಮಾಕಸ್ ರಾಜ್ಯವನ್ನು ಉಳಿಸಿಕೊಳ್ಳಲು ಕಷ್ಟಪಡುತ್ತಿದ್ದಾರೆ. ಪೆನೆಲೊಪೆಯನ್ನು ವರಿಸಿ ರಾಜ್ಯವನ್ನು ದಕ್ಕಿಸಿಕೊಳ್ಳಲು ಶ್ರೀಮಂತ ವರ್ಗದವರು ನಾನು ಮುಂದು ತಾನು ಮುಂದು ಎಂದು ಹೋರಾಡುತ್ತಿದ್ದಾರೆ. ಇದನ್ನೆಲ್ಲ ಕೇಳಿದ ಜ್ಯೂಸ್ ದೇವತೆ ಅಥೀನಾ ದೇವತೆಗೆ ಪೂರ್ಣ ಸ್ವಾತಂತ್ರ್ಯ ನೀಡುತ್ತಾನೆ. ಆಕೆ ವೇಷ ಮರೆಸಿಕೊಂಡು ಟೆಲಿಮಾಕಸನ ಮನೆಗೆ ಅತಿಥಿಯಾಗಿ ಬರುತ್ತಾಳೆ. ಅವಳ ಸಲಹೆಯಂತೆ ಆತ ಪುರಜನರ ಸಭೆ ಕರೆದು ತಾನು ತನ್ನ ತಂದೆಯನ್ನು ಹುಡುಕಿಕೊಂಡು ಬರಲು ಹೋಗುವುದಾಗಿ ತಿಳಿಸುತ್ತಾನೆ. ಸಭೆಯಲ್ಲಿ ಕವಿ ಫೀಮಿಯಸ್ ಟ್ರಾಯ್ ಯುದ್ಧದ ಘಟನೆಯ ಭಾಗಗಳನ್ನು ಹಾಡುತ್ತಾನೆ. ಪತಿಯ ಬಗ್ಗೆ ನಿಷ್ಠೆಯಿದ್ದರೂ ಕಿಂಚಿತ್ ಚಂಚಲಳಾದ ಪೆನೆಲೊಪೆ ಕಂಬನಿಗರೆಯುತ್ತಾಳೆ. ಅವಳನ್ನು ಟೆಲಿಮಾಕಸ್ ಗದರಿಸಿ, ತನ್ನ ತಾಯಿಯ ಕೈ ಹಿಡಿಯಲು ತವಕಪಡುತ್ತಿರುವ ಯಾವನೊಬ್ಬನೂ ತಾನು ಹಿಂತಿರುಗುವವರೆಗೂ ತನ್ನ ಮನೆಗೆ ಕಾಲಿಡಕೂಡದೆಂದು ಕಟ್ಟಪ್ಪಣೆ ಮಾಡುತ್ತಾನೆ.

ಒಂದರಿಂದ ನಾಲ್ಕರವರೆಗಿನ ಕಾಂಡಗಳಲ್ಲಿ ಟೆಲಿಮಾಕಸ್ ನಡೆಸಿದ ಕಾರ್ಯಗಳ ವರ್ಣನೆಯಿದೆ. ಆತನಿಗೆ ತಂದೆಯ ವಿಷಯ ತಿಳಿಯಬಹುದಾದದ್ದು ಇಬ್ಬರಿಂದ ಮಾತ್ರ. ಒಬ್ಬ ಪೈಲಾಸಿನ ನೆಸ್ಟರ್. ಮತ್ತೊಬ್ಬ ಇತ್ತೀಚೆಗೆ ಸ್ಪಾರ್ಟಾಕ್ಕೆ ಹಿಂತಿರುಗಿದ್ದ ಮೆನೆಲಾಸ್, ಟೆಲಿಮಾಕಸ್ ಮೊದಲು ನೆಸ್ಟರನ್ನು ಕಂಡ. ಆತ ಊರಿಗೆ ಹಿಂತಿರುಗಿ ಬಹಳ ದಿನಗಳಾಗಿವೆ. ಒಡಿಸಿಯಸನಿಗೆ ಏನಾಯಿತು ಎಂಬುದು ಅವನಿಗೆ ತಿಳಿಯದು. ಬದಲಿಗೆ ಟ್ರಾಯ್ ಯುದ್ಧದ ವಿವರವಾದ ವರ್ಣನೆಯನ್ನೂ ಅಲ್ಲಿಂದ ಹಿಂತಿರುಗುತ್ತಿದ್ದ ವೀರರಿಗೆ ಒದಗಿದ್ದ ಅನಾಹುತಗಳ ವಿವರಗಳನ್ನೂ ಆತ ನೀಡುತ್ತಾನೆ. ಅದನ್ನೆಲ್ಲ ಕೇಳಿ ಟೆಲಿಮಾಕಸ್ ಲೆಸೆಡಮಾನಿನಲ್ಲಿದ್ದ ಮೆನೆಲಾಸನ ಭವ್ಯವಾದ ಅರಮನೆಗೆ ಬರುತ್ತಾನೆ. ಮೆನೆಲಾಸ್ ಆತನಿಗೆ ತಾನು ಈಜಿಪ್ಟಿನಲ್ಲಿ ನಡೆಸಿದ ಸಾಹಸಗಳನ್ನು ವರ್ಣಿಸುತ್ತಾನೆ. ಟ್ರಾಯ್ ಯುದ್ಧಕ್ಕೆ ಕಾರಣಳಾಗಿ ಅನೇಕ ಸಹಸ್ರ ಜನರ ಪ್ರಾಣವನ್ನು ಆಹುತಿಯಾಗಿ ಪಡೆದ ಹೆಲೆನಳ ಮೃತ್ಯುಸೌಂದರ್ಯವನ್ನು ಟೆಲಿಮಾಕಸ್ ಕಣ್ಣಾರೆ ಕಾಣುತ್ತಾನೆ. ಒಡಿಸಿಯಸ್ ಬದುಕಿದ್ದಾನೆಂದೂ ಶೀಘ್ರದಲ್ಲೇ ಮನೆಗೆ ಹಿಂತಿರುಗುವುದು ಖಂಡಿತವೆಂದೂ ಮೆನೆಲಾಸ್ ಟೆಲಿಮಾಕಸನಿಗೆ ಭರವಸೆ ನೀಡುತ್ತಾನೆ. ಈ ಎರಡು ಸ್ಥಳಗಳಿಗೆ ಬಂದದ್ದರಿಂದ ತಂದೆಯ ವಿಷಯ ತಿಳಿಯದಿದ್ದರೂ ಟೆಲಿಮಾಕಸನಿಗೆ ಜನರ ಸಂಪರ್ಕದಿಂದಾಗಿ ಹೆಚ್ಚಿನ ಲೋಕಾನುಭವ ದೊರೆತು ಮನಸ್ಸು ಪಕ್ವವಾಗುತ್ತದೆ.

ಇದ್ದಕ್ಕಿದ್ದಂತೆ ದೃಶ್ಯ ಬದಲಾಗಿ ನಾವು ಟೆಲಿಮಾಕಸನ ಅರಮನೆಯನ್ನು ಕಾಣುತ್ತೇವೆ. ಅಲ್ಲಿ ಮಗನೂ ಇಲ್ಲದೆ ಪೆನೆಲೊಪೆ ದುಃಖತಪ್ತಳಾಗಿದ್ದಾಳೆ. ಅವಳನ್ನು ಸಂತೈಸಲು ಅಥೀನೆ ಒಂದು ಸುಂದರವಾದ ಸ್ವಪ್ನವನ್ನು ಕರುಣಿಸುತ್ತಾಳೆ. ಪೆನೆಲೊಪೆಯನ್ನು ವರಿಸಲು ತವಕಿಸುತ್ತಿದ್ದವರು ಟೆಲಿಮಾಕಸ್ ಹಿಂತಿರುಗಿದಾಗ ಅವನಿಗೆ ಕೇಡುಮಾಡಲು ಹಡಗಿನಲ್ಲಿ ಕಾಯುತ್ತಿರುತ್ತಾರೆ. ಮುಂದೇನಾಗುತ್ತದೆ ಎಂಬುದನ್ನೂ ಹೇಳದೆ ಹದಿನೈದನೆಯ ಕಾಂಡದವರೆಗೆ ಕಲಾತ್ಮಕ ಕುತೂಹಲದಲ್ಲಿ ಕವಿ ನಮ್ಮನ್ನು ಕರೆದೊಯ್ಯುತ್ತಾನೆ.

ಒಡಿಸಿಯಸನಿಗೆ ಒದಗಿದ ವಿಧವಿಧವಾದ ಅನುಭವಗಳನ್ನು ಕವಿ ಅವನ ಬಾಯಿಯಿಂದಲೇ ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿಸಿದ್ದಾನೆ. ಸಹಜವಾದ ಮಾನವ ಲೋಕದಿಂದ ಆತ ನಂಬಲು ಕಷ್ಟವಾದ ಅನೇಕ ಪೌರಾಣಿಕ, ಅತಿ ಪ್ರಾಕೃತಿಕ ಪ್ರದೇಶಗಳಿಗೆಲ್ಲ ಹೋಗಬೇಕಾಗಿ ಬರುತ್ತದೆ. ಟ್ರಾಯ್ ಪಟ್ಟಣವನ್ನು ಬಿಟ್ಟಕೂಡಲೇ ಆತ ಸಿಸೋನಿಯರ ಪಟ್ಟಣವಾದ ಇಸ್ಮೇರಸಿಗೆ ಒಯ್ಯಲ್ಪಡುತ್ತಾನೆ. ಇವನೇನೋ ಆ ಪಟ್ಟಣವನ್ನು ಕೊಳ್ಳೆಹೊಡೆಯುತ್ತಾನೆ. ಆದರೆ ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ಎಪ್ಪತ್ತೆರಡು ಜನ ಸಂಗಡಿಗರನ್ನು ಕಳೆದುಕೊಳ್ಳುತ್ತಾನೆ. ಮೇಲಿಯೊ ಭೂಶಿರವನ್ನು ಸುತ್ತುಹಾಕಬೇಕು ಎಂದು ಆತ ಯೋಚಿಸುತ್ತಿದ್ದಾಗ ಬಿರುಗಾಳಿ ಅವನನ್ನು 'ಲೋಟಸ್' ಗಿಡಗಳ (ನಮ್ಮ 'ತಾವರೆ' ಹೂ) ದೇಶಕ್ಕೆ ಒಯ್ಯುತ್ತದೆ. ಅದರ ಆಹಾರದ ಆಸೆಗೆ ತಮ್ಮ ಊರನ್ನು ಮರೆಯಲಿದ್ದ ತನ್ನ ಸಂಗಡಿಗರನ್ನು ಆತ ಬಲಾತ್ಕಾರವಾಗಿ ಎಳೆದುಕೊಂಡು ಅಲ್ಲಿಂದ ಹೊರಡುತ್ತಾನೆ. ಅಲ್ಲಿಂದ ಅವನ ಹಡಗು ಆ ಕಾಲದ ಗ್ರೀಕರಿಗೆ ತಿಳಿಯದಿದ್ದ ಪೌರಾಣಿಕ ಪ್ರದೇಶಗಳಿಗೆ ತೇಲುತ್ತದೆ. ಮೊದಲು ಅವನು ಹೋದದ್ದು ಸೈಕ್ಲೋಪರು ಇದ್ದ ಊರಿಗೆ. ಪಾಲಿಫೀಮಸ್ ಎಂಬ ಸೈಕ್ಲೊಪ್ ರಾಕ್ಷಸ ಇವನನ್ನೂ ಇವನ ಹನ್ನೆರಡು ಜನ ಸಂಗಾತಿಗಳನ್ನೂ ತನ್ನ ಗುಹೆಯಲ್ಲಿ ಕೂಡಿಹಾಕುತ್ತಾನೆ. ಒಡಿಸಿಯಸ್ ಕೆಲವು ಸಂಗಡಿಗರನ್ನು ಕಳೆದುಕೊಂಡರೂ ರಾಕ್ಷಸನ ಕಣ್ಣನ್ನು ಕುರುಡಾಗಿಸಿ ಉಪಾಯದಿಂದ ತಪ್ಪಿಸಿಕೊಳ್ಳುತ್ತಾನೆ. ಆದರೆ ಇದರ ಪರಿಣಾಮ ಭೀಕರವಾಗುತ್ತದೆ. ಏಕೆಂದರೆ ಪಾಲಿಫೀಮಸನ ತಂದೆ ಸಮುದ್ರದೇವತೆಯಾದ ಪೊಸೈಡನ್ ಇವನ ಹಡಗು ಊರು ಸೇರದಂತೆ ಸರ್ವಪ್ರಯತ್ನವನ್ನೂ ಮಾಡುತ್ತಾನೆ. ವಾಯುವಿನ ಹತೋಟಿಗೆ ಕಾರಣನಾದ ಈಯೊಲಸನ ಆತಿಥ್ಯ ಒಡಿಸಿಯಸನಿಗೆ ದೊರಕುತ್ತದೆ. ಅಲ್ಲಿಂದ ಹೊರಡುವಾಗ ಪಶ್ಚಿಮ ಮಾರುತವೊಂದನ್ನುಳಿದು

ಉಳಿದೆಲ್ಲ ಗಾಳಿಗಳನ್ನೂ ಈಯೊಲಸ್ ಒಂದು ಚರ್ಮದ ಚೀಲದಲ್ಲಿ ಹಾಕಿ ಒಡಿಸಿಯಸನಿಗೆ ಕೊಡುತ್ತಾನೆ. ಇದರಿಂದ ಆತ ಒಂಬತ್ತೇ ದಿನಗಳಲ್ಲಿ ಇಥಾಕವನ್ನು ಸೇರಬಹುದಿತ್ತು. ನಾಯಕ ವಿಶ್ರಾಂತಿ ಪಡೆಯುತ್ತಿದ್ದಾಗ ಅವನ ಮಿತ್ರರು, ಆ ಚೀಲದಲ್ಲಿ ಐಶ್ವರ್ಯ ತುಂಬಿದೆ ಎಂದು ಭಾವಿಸಿ ಅದನ್ನು ತೆರೆದುಬಿಡುತ್ತಾರೆ. ಕೂಡಲೆ ಆ ಗಾಳಿಗಳು ಅವರನ್ನೆಲ್ಲ ಹೊರಟಲ್ಲಿಗೇ ತಂದುಬಿಡುತ್ತವೆ. ಮುಂದೆ ಅವರು ರಾಕ್ಷಸಾಗಾರದ ನರಭಕ್ಷಕರ ಕೈಗೆ ಸಿಕ್ಕಿಕೊಳ್ಳುತ್ತಾರೆ. ಅವರು ಒಡಿಸಿಯಸನ ಹನ್ನೊಂದು ಹಡಗುಗಳನ್ನು ಒಡೆದು ಪುಡಿ ಪುಡಿ ಮಾಡುತ್ತಾರೆ. ಹನ್ನೆರಡನೆಯದು ಹೇಗೋ ಉಳಿಯುತ್ತದೆ. ಮುಂದೆ ಇವರು ಹೋದದ್ದು ಏಂಖಿಯಾ ದ್ವೀಪಕ್ಕೆ. ಅಲ್ಲಿದ್ದ ಮಾಟಗಾತಿ ಸರ್ಸಿ ಇವರ ಗುಂಪಿನಲ್ಲಿ ಕೆಲವರನ್ನು ಹಂದಿಗಳಾಗಿ ಮಾಡುತ್ತಾಳೆ. ಆಗ ಹರ್ಮಿಸ್ ದೇವತೆಯ ಕೃಪೆಯಿಂದ ಒಡಿಸಿಯಸ್ ಅವರನ್ನೆಲ್ಲ ಮತ್ತೆ ಮನುಷ್ಯರನ್ನಾಗಿ ಮಾಡಿ ಒಂದು ವರ್ಷ ಕಾಲ ಅವಳೊಡನೆ ಸುಖಸಂತೋಷಗಳಲ್ಲಿ ಇದ್ದುಬಿಡುತ್ತಾನೆ. ಊರಿಗೆ ಹೊರಟಾಗ ಸರ್ಸಿ ನಡುವೆ ಬಾಯಿಹಾಕಿ ಒಡಿಸಿಯಸ್ ಪಶ್ಚಿಮದ ತುತ್ತತುದಿಗೆ ಹೋಗಿ ಅಲ್ಲಿ ಕೆಳಜಗತ್ತಿನ ಪ್ರದೇಶದ ಬಳಿ ದಾರ್ಶನಿಕ ಟಿಕೀಷಿಯಸನಿಂದ ತನ್ನ ಭವಿಷ್ಯವನ್ನು ತಿಳಿದುಕೊಳ್ಳಬೇಕೆಂದು ಸೂಚಿಸುತ್ತಾಳೆ. ಒಡಿಸಿಯಸ್ ಅದರಂತೆ ಮಾಡುತ್ತಾನೆ. ಅಲ್ಲದೆ ಅವನ ಭವಿಷ್ಯವಾಣಿ ನಿಜವಾಗುವ ಘಟನೆಗಳೂ ಮುಂದೆ ನಡೆಯುತ್ತವೆ.

ಒಡಿಸಿಯಸ್ ಮತ್ತೆ ಸರ್ಸಿಯ ದ್ವೀಪಕ್ಕೆ ಹಿಂತಿರುಗಿದಾಗ ಆಕೆ ಅವನಿಗೆ ಉಪಯುಕ್ತವಾದ ಸಲಹೆಗಳನ್ನೂ ಅನುಕೂಲ ಮಾರುತವನ್ನೂ ಮತ್ತೆ ಕರುಣಿಸುತ್ತಾಳೆ. ಮುಂದೆ ಹೊರಟಾಗ ಸೈರೆನರ ದ್ವೀಪಗಳಿಂದ ಮಧುರವಾದ ಸಂಗೀತ ಇವನ ಮತ್ತು ಇವನ ಗುಂಪಿನ ಜನರನ್ನು ಮೋಹಿಸುತ್ತದೆ. ಸೈರೆನರ ಉದ್ದೇಶ ಇವರನ್ನೆಲ್ಲ ಆಕರ್ಷಿಸಿ ನಾಶಮಾಡಬೇಕು ಎಂಬುದು. ಆದರೆ ಒಡಿಸಿಯಸ್ ಕ್ಷಣಮಾತ್ರದಲ್ಲಿ ವಿಷಯವನ್ನು ಗ್ರಹಿಸಿ ತನ್ನ ಸಂಗಾತಿಗಳ ಕಿವಿಗೆ ಮೇಣವನ್ನು ತುಂಬಿ ಅವರ ಕಿವಿಗೆ ಸಂಗೀತ ಬೀಳದಂತೆ ನೋಡಿಕೊಳ್ಳುತ್ತಾನಲ್ಲದೆ ತಾನು ಹಡಗಿನ ಧ್ವಜಸ್ತಂಭಕ್ಕೆ ನೇತುಬೀಳುತ್ತಾನೆ. ಹೀಗಾಗಿ ಅವರ ಹಡಗು ಸುಖವಾಗಿ ಮುಂದುಮುಂದಕ್ಕೆ ತೇಲುತ್ತದೆ. ಸಿಲ್ಲಾ ಮತ್ತ ಚಾರಿಬ್ಡಿಸ್‌ಗಳನ್ನು ದಾಟಿ ಅವರು ಥಿನೇಷಿಯಾ ದ್ವೀಪವನ್ನು ಸೇರುತ್ತಾರೆ. ಸಂಗಡಿಗರು ತುಂಬ ಬಲವಂತ ಮಾಡಿದ್ದರಿಂದ ಒಡಿಸಿಯಸ್ ಅವರ ಜೊತೆ ಆ ದ್ವೀಪದೊಳಗೆ ಹೋಗುತ್ತಾನೆ. ತಮ್ಮ ಪ್ರಯಾಣಕ್ಕೆ ವಿರೋಧವಾದ ಗಾಳಿ ಬೀಸತೊಡಗಿದ್ದರಿಂದ ಅವರೆಲ್ಲ ಅಲ್ಲೇ ಒಂದು ತಿಂಗಳವರೆಗೆ ಉಳಿಯುವುದು ಅನಿವಾರ್ಯವಾಗುತ್ತದೆ. ಹಸಿವು ಹೆಚ್ಚಿದಾಗ ಸಂಗಡಿಗರು ನಾಯಕನಿಗೆ ಕೊಟ್ಟಿದ್ದ ವಚನವನ್ನು ಮುರಿದು, ಅವನಿಲ್ಲದಾಗ ಹೆಲಿಯಸನ ಅತ್ಯುತ್ತಮ ದನಗಳನ್ನು ಕೊಂದು ತಿನ್ನುತ್ತಾರೆ. ಈ ಅಪರಾಧಕ್ಕೆ ಶಿಕ್ಷೆಯಾಗಿ ಜ್ಯೂಸ್ ದೇವತೆ ಕೋಪದಿಂದ ಮಳೆ ಬಿರುಗಾಳಿಗಳನ್ನು ಕರೆಯಲಾಗಿ ಹೊರಟಿದ್ದ ಇವರ ಹಡಗು ಎರಡು ಹೋಳಾಗುತ್ತದೆ. ಒಡಿಸಿಯಸನ ಸಂಗಡಿಗರೆಲ್ಲ ನೀರು ಪಾಲಾಗುತ್ತಾರೆ. ಅವನೊಬ್ಬ ಮಾತ್ರ ಉಳಿದುಕೊಳ್ಳುತ್ತಾನೆ. ಹಾಯಿಕಂಬಕ್ಕೆ ಜೋತುಬಿದ್ದಿದ್ದ ಆತ ಒಂಬತ್ತು ದಿನಗಳ ಬಳಿಕ ಒಗೀಜಿಯಾ ದ್ವೀಪವನ್ನು ಸೇರುತ್ತಾನೆ. ಅಟ್ಲಾಸನ ಮಗಳು ಕಲಿಪ್ಸೋವಿನ ಸ್ಥಳ ಅದು. ಏಳು ವರ್ಷಗಳಕಾಲ ಒಡಿಸಿಯಸ್ ಆಕೆಯ ಜೊತೆ ಇರುತ್ತಾನೆ. ತನ್ನ ಪತಿಯಾಗಿ ತನ್ನ ಜೊತೆಯಲ್ಲೇ ಇರಲು ಒಪ್ಪಿದರೆ ಅವನಿಗೆ ಅಮರತ್ವವನ್ನೂ ನಿರಂತರ ಯೌವನವನ್ನೂ ಕರುಣಿಸುವುದಾಗಿ ಆಕೆ ಪ್ರಲೋಭನೆ ಒಡ್ಡುತ್ತಾಳೆ. ಆದರೆ ಮನೆಯ ಕರೆ, ಸತಿಯ ನೆನಪು ತೀವ್ರವಾಗಿದ್ದುದರಿಂದ ಆಕೆ ತೋರಿಸಿದ ಆಸೆ ಅವನನ್ನು ಚಂಚಲಗೊಳಿಸುವುದಿಲ್ಲ. ಅದೇ ದಿನ ಆತ ಕಡಲ ತಡಿಯಲ್ಲಿ ಕುಳಿತು ಕಂಬನಿದುಂಬಿದ ಕಣ್ಣುಗಳಿಂದ ದಿಗಂತದತ್ತ ದೃಷ್ಟಿ ಹಾಯಿಸುತ್ತಾನೆ. ಸಾಯುವುದಕ್ಕೆ ಮೊದಲು ತನ್ನ ಮನೆಯಿಂದ ಮೇಲೆದ್ದ ಹೊಗೆಯನ್ನಾದರೂ ಒಮ್ಮೆ ನೋಡಬೇಕೆಂಬುದೇ ಆತನ ಉತ್ಕಟ ಬಯಕೆಯಾಗಿತ್ತು. ಅವನನ್ನು ಉದ್ದಕ್ಕೂ ರಕ್ಷಿಸುತ್ತ ಬಂದ ಅಥೀನ, ಪೋಸೈಡನ್ ಇಲ್ಲದಾಗ ದೇವತೆಗಳ ಸಭೆಯಲ್ಲಿದ್ದ ಜ್ಯೂಸ್ ದೇವನನ್ನು ಒಡಿಸಿಯಸ್ ಮನೆಗೆ ಹಿಂತಿರುಗುವಂತೆ ಕರುಣಿಸಬೇಕೆಂದು ಬೇಡುತ್ತಾಳೆ. ಇಷ್ಟರಲ್ಲಿ ಒಡಿಸಿಯಸ್ ತಾನೇ ಕಟ್ಟಿಕೊಂಡ ಒಂದು ಹಡಗಿನಲ್ಲಿ ಮತ್ತೆ ಪ್ರಯಾಣ ಹೊರಟು ಹದಿನೆಂಟು ದಿನಗಳ ಯಾನಮಾಡಿ ಫೀಯೇಷಿಯನರ ದ್ವೀಪದ ಹತ್ತಿರಕ್ಕೆ ಬಂದು ಪೋಸೈಡನನ ಕಣ್ಣಿಗೆ ಬೀಳುತ್ತಾನೆ. ಕೂಡಲೇ ಪೋಸೈಡನ್ ಅವನ ಹಡಗನ್ನು ಚೂರು ಚೂರು ಮಾಡುತ್ತಾನೆ. ಆದರೂ ಆತ ಸುಖವಾಗಿ ನೆಲವನ್ನು ಕಾಣುತ್ತಾನೆ. ಅಲ್ಲಿ ಅವನಿಗೆ ರಾಜಕುಮಾರಿ ನೌಸಿಕಾಳ ಪರಿಚಯವಾಗುತ್ತದೆ. ಅವಳು ಅವನನ್ನು ಥೀಷಿಯಸ್ ನಗರಕ್ಕೆ ಒಯ್ದು ತನ್ನ ತಂದೆತಾಯಿಗಳ ಬಳಿ ನಿಲ್ಲಿಸುತ್ತಾಳೆ. ಅಲ್ಲಿ ಆತನಿಗೆ ಸೊಗಸಾದ ಆತಿಥ್ಯ ದೊರಕುತ್ತದಲ್ಲದೆ ಅಲ್ಲಿನ ಅತ್ಯುತ್ತಮ ಹಡಗಿನಲ್ಲಿ ಅವನಿಗೆ ಪ್ರಯಾಣದ ಯೋಗವೂ ದೊರಕಿ ಆತ ಸುಖವಾಗಿ ಊರು ಸೇರುತ್ತಾನೆ.

ಆತ ಸಕಾಲದಲ್ಲಿ ಊರಿಗೆ ಹಿಂತಿರುಗಿ ಬಂದದ್ದರಿಂದ ಅನೇಕ ವಿಪತ್‌ಪರಂಪರೆಗಳೇ ತಪ್ಪುತ್ತವೆ. ಆತ ಬರುವ ವೇಳೆ ಅವನ ತಾಯಿ ಆಂಟಿಕ್ಲಿಯ ಪುತ್ರಶೋಕದಿಂದ ತೀರಿಕೊಂಡಿದ್ದಳು. ನೂರಕ್ಕೂ ಹೆಚ್ಚಿನ ಯುವಕರು ಪೆನೆಲೊಪೆಯ ಕೈಹಿಡಿಯಲು ಸ್ಪರ್ಧಿಸುತ್ತಿದ್ದರು. ಸುಂದರಿಯಾದ ಪೆನೆಲೊಪೆ ಪತಿಯ ಆಗಮನಕ್ಕಾಗಿ ತವಕಪಡುತ್ತಿದ್ದಳು. ಯುವಕನಾದ ಮಗ ಟೆಲಿಮಾಕಸನನ್ನು ನೂರಕ್ಕೂ ಹೆಚ್ಚಿನ ಯುವಕರು ಹಿಂಸಿಸುತ್ತಿದ್ದುದನ್ನೂ ಅವಳು ಕಂಡು ಸಹಿಸಬೇಕಾಗಿತ್ತು. ತನ್ನ ಮಾವನಿಗೆ ಒಂದು ವಸ್ತ್ರವನ್ನು ಹೆಣೆದು ಮುಗಿಸುವವರೆಗೆ ತನಗೆ ಕಾಲಾವಕಾಶ ಕೊಡಬೇಕೆಂದು ತನ್ನನ್ನು ವರಿಸಲು ನಾ ಮುಂದು ತಾ ಮುಂದೆಂದು ಬರುತ್ತಿದ್ದ ಯುವಕರನ್ನು ಆಕೆ ಕೇಳಿಕೊಂಡಿದ್ದಳು. ಕಾಲ ತಳ್ಳುವ ಉದ್ದೇಶದಿಂದ ಹಗಲೆಲ್ಲ ಹೆಣೆದ ಹೆಣಿಗೆಯನ್ನು ಅವಳು ರಾತ್ರಿ ಬಿಚ್ಚಿಬಿಡುತ್ತಿದ್ದಳು. ನಾಲ್ಕನೆಯ ವರ್ಷದಲ್ಲಿ ಅವಳ ರಹಸ್ಯ ಬಯಲಾಗಿ ಹೋಗಿ ಅವಳು ವಸ್ತ್ರವನ್ನು ಮುಗಿಸಲೇಬೇಕಾಗಿಬಂತು. ಯಾರನ್ನಾದರೂ ವರಿಸದೆ ಗತ್ಯಂತರವೇ ಇಲ್ಲ ಎಂದಾಗ ಅವಳು ಒಂದು ಷರತ್ತು ಹಾಕಿದಳು: ತನ್ನ ಪತಿ ಒಡಿಸಿಯಸನ ಬಿಲ್ಲನ್ನು ಹೆದೆಯೇರಿಸಿ ಬಾಣ ಹೂಡಿದವನನ್ನು ತಾನು ಮದುವೆಯಾಗುವುದಾಗಿ ಆಕೆ ಹೇಳಿದಳು. ಅದನ್ನು ಹೆದೆಯೇರಿಸುವಂಥ ವೀರರು ಯಾರೂ ಇಲ್ಲವೆಂದೇ ಅವಳ ನಂಬಿಕೆ. ಆ ಪರೀಕ್ಷೆ ನಡೆಯಬೇಕಾಗಿದ್ದ ದಿನದ ಹಿಂದಿನ ದಿನವೇ ಒಡಿಸಿಯಸ್ ಇಥಾಕಕ್ಕೆ ಬಂದದ್ದು. ಅಥೀನೆಯ ಮಾತಿನಂತೆ ಆತ ಭಿಕ್ಷುಕನ ವೇಷದಲ್ಲಿ ಬಂದು ತನ್ನ ಹಳೆಯ ನಂಬಿಕಸ್ತ ಹಂದಿವಳ ಯುಮೇಯಸನಲ್ಲಿ ಆಶ್ರಯ ಪಡೆದ. ಭಿಕ್ಷುಕನ ವೇಷದಲ್ಲಿದ್ದವನನ್ನು ಅವನು ಗುರುತಿಸದಿದ್ದರೂ ಒಳ್ಳೆಯ ಆತಿಥ್ಯ ನೀಡಿದ. ಅಥೀನ ಅಲ್ಲಿಗೆ ಟೆಲಿಮಾಕಸನನ್ನು ಕರೆದುತಂದಳು. ಇಪ್ಪತ್ತು ವರ್ಷಗಳ ಹಿಂದೆ ಒಡಿಸಿಯಸ್ ಊರು ಬಿಟ್ಟು ಯುದ್ಧಕ್ಕೆ ಹೊರಟಿದ್ದಾಗ ಈತ ಇನ್ನೂ ಮಗು. ಇಪ್ಪತ್ತರ ಹರೆಯದ ತನ್ನ ಮಗನನ್ನು ಒಡಿಸಿಯಸ್ ಹಿಗ್ಗುಹೆಮ್ಮೆಗಳಿಂದ ನೋಡಿದ. ಶತ್ರುಗಳು ಟೆಲಿಮಾಕಸನನ್ನು ತೀರಿಸಿಹಾಕಲು ಬೇಕಾದಷ್ಟು ಸಲ, ಅನೇಕ ರೀತಿಗಳಲ್ಲಿ ಪ್ರಯತ್ನಿಸಿದ್ದರು. ಆದರೆ ಅವೆಲ್ಲ ವಿಫಲವಾಗಿ ಆತ ಸುಖವಾಗಿದ್ದ. ಅದೇ ತಾನೆ ಊರಿಗೆ ಬಂದ ಒಡಿಸಿಯಸ್ ಯಾರು ಎಂಬುದು ಯುಮೇರಿಯಸನಿಗೂ ಟೆಲಿಮಾಕಸನಿಗೂ ಗೊತ್ತಾಯಿತು. ಇಲ್ಲಿ ಪ್ರತಿಯೊಂದು ಕ್ರಿಯೆಯಲ್ಲೂ ನಾಟಕೀಯತೆ ಉಂಟು. ಅನಂತರ ಮೂರು ಜನವೂ ಸೇರಿ ಪೆನೆಲೊಪೆಯನ್ನು ವರಿಸಲು ಒತ್ತಾಯ ಮಾಡುತ್ತಿದ್ದವರನ್ನು ಹೇಗೆ ನಾಶಗೊಳಿಸಬೇಕು ಎಂಬ ಹಂಚಿಕೆ ಹಾಕಿದರು.

ಇಲ್ಲಿಗೆ 16 ಕಾಂಡಗಳು ಮುಗಿಯುತ್ತವೆ. ಹದಿನೇಳು ಮತ್ತು ಹದಿನೆಂಟನೆಯ ಕಾಂಡಗಳಲ್ಲಿ ಮೊದಲು ಟೆಲಿಮಾಕಸ್ ಅರಮನೆಯನ್ನು ಪ್ರವೇಶಿಸುವುದರ ವರ್ಣನೆಯಿದೆ. ಅನಂತರ ಭಿಕ್ಷುಕನ ವೇಷದಲ್ಲಿ ಒಡಿಸಿಯಸ್ ಅರಮನೆಯನ್ನು ಸೇರುತ್ತಾನೆ. ಈ ಸಂದರ್ಭದಲ್ಲಿ ಅನೇಕ ಭಾವತುಮುಲಗಳ ಸಚಿತ್ರವರ್ಣನೆಯಿದೆ. ಒಡಿಸಿಯಸನ ಹಳೆಯ ನಾಯಿ ಇಪ್ಪತ್ತು ವರ್ಷಗಳ ಅನಂತರ ಬಂದ ತನ್ನ ಸ್ವಾಮಿಯನ್ನು ಕಂಡು, ಹೃದಯ ತುಂಬಿ ಬಂದು, ಉದ್ರೇಕವನ್ನು ತಾಳಲಾರದೆ ಪ್ರಾಣಬಿಡುತ್ತದೆ. ಪೆನೆಲೊಪೆಯ ಭಾವೀ ಪತಿಗಳ ಔದ್ಧತ್ಯ, ದುರಹಂಕಾರಗಳನ್ನು ಹೋಮರ್ ಎತ್ತಿತೋರಿಸಿ ಅವರಿಗೆ ಮುಂದೆ ದೊರೆತ ಶಿಕ್ಷೆಗೆ ಅವರು ಸರ್ವದಾ ಅರ್ಹರು ಎಂಬುದನ್ನು ಇಲ್ಲಿ ಪ್ರತಿಪಾದಿಸಿದ್ದಾನೆ. ಒಡಿಸಿಯಸ್ ಪೆನೆಲೊಪೆಯನ್ನು ಕಾಣುತ್ತಾನೆ. ಎಷ್ಟರಮಟ್ಟಿಗೆ ಅವನು ಪೆನೆಲೊಪೆಯ ಬಗೆಗೆ ಪ್ರೀತಿ, ಶತ್ರುಗಳ ಬಗೆಗೆ ದ್ವೇಷ–ಎರಡನ್ನೂ ದಮನಗೊಳಿಸಿಡಬಲ್ಲ ಎಂಬುದಕ್ಕೆ, ಅವನ ಪ್ರಚಂಡ ಇಂದ್ರಿಯನಿಗ್ರಹಕ್ಕೆ, ಈ ಕಾಂಡ ಒಳ್ಳೆಯ ಉದಾಹರಣೆಯಾಗಿದೆ.

19ನೆಯ ಕಾಂಡದಲ್ಲಿ ಎರಡು ದಶಕಗಳ ಅನಂತರ ಮೊಟ್ಟಮೊದಲ ಸಲ ಒಡಿಸಿಯಸ್ ಪೆನೆಲೊಪೆಯನ್ನು ಮಾತನಾಡಿಸುತ್ತಾನೆ. ಅವಳಿಗಿನ್ನೂ ಇವನು ಯಾರು ಎಂಬುದು ತಿಳಿಯದು. ಆದರೆ ವೃದ್ಧ ದಾದಿ ಯೂರಿಕ್ಲಿಯ ಇವನ ಕಾಲು ತೊಳೆಯುವಾಗ, ಯುವಕನಾಗಿದ್ದಾಗ ಈತನಿಗೆ ಆಗಿದ್ದ ಗಾಯದ ಗುರುತಿನಿಂದ ಇವನಾರೆಂಬುದನ್ನು ಕಂಡುಹಿಡಿಯುತ್ತಾಳೆ.

ಒಡಿಸಿಯಸ್ ನಿದ್ರೆಯಿಲ್ಲದೆ ಕೋಪದಲ್ಲಿ ಕುದಿಯುತ್ತ ಕಳೆದ ರಾತ್ರಿಯ ವರ್ಣನೆಯಿದೆ, ಇಪ್ಪತ್ತನೆಯ ಕಾಂಡದಲ್ಲಿ. ಭಾವೀ ಪತಿಗಳಿಗೆ ಕಾದಿರುವ ಘೋರ ಶಿಕ್ಷೆಯನ್ನು ಒಬ್ಬ ಕಣಿ ಹೇಳುವವ ಸೂಚಿಸುತ್ತಾನೆ. ಆದರೂ ಅವರು ಅದನ್ನು ಗಮನಿಸದೆ ಉನ್ಮತ್ತರಾಗಿಯೇ ಇರುತ್ತಾರೆ. ಓದುಗರ ಕುತೂಹಲವನ್ನು ತುತ್ತತುದಿಗೇರಿಸುವುದು ಇಪ್ಪತ್ತೊಂದನೆಯ ಕಾಂಡ. ಅಥೀನೆಯ ಸಲಹೆಯಂತೆ ಧನುಸ್ಸನ್ನು ಹೆದೆಯೇರಿಸಿ ಬಾಣಪ್ರಯೋಗ ಮಾಡುವ ಪರೀಕ್ಷೆಗೆ ಎಲ್ಲ ಸಿದ್ಧತೆಗಳನ್ನೂ ಮಾಡುತ್ತಾರೆ. ಒಡಿಸಿಯಸ್ಸ್ ಚಿಕ್ಕವನಿದ್ದಾಗ ಇಫಿಟಸ್ ತನ್ನ ತಂದೆ ಯೂರಿಟಸನ ಧನಸ್ಸನ್ನು ಅವನಿಗೆ ಬಹುಮಾನವಾಗಿ ಕೊಟ್ಟಿದ್ದ. ಅದೇ ಬಿಲ್ಲನ್ನು ಹೆದೆಯೇರಿಸಿ ಹನ್ನೆರಡು ಕೊಡಲಿಗಳ ಹಿಡಿಗಳ ಮೂಲಕ ಬಾಣವನ್ನು ತೂರಿಸಬೇಕಾಗಿತ್ತು. ಒಬ್ಬನಾದ ಮೇಲೊಬ್ಬನಂತೆ ಆ ಭಾವೀ ಪತಿಗಳೆಲ್ಲ ಪ್ರಯತ್ನಿಸಿದರು. ಬಾಣಪ್ರಯೋಗ ಮಾಡುವುದಿರಲಿ, ಒಬ್ಬನಿಗಾದರೂ ಬಿಲ್ಲಿಗೆ ಹೆದೆಯೇರಿಸುವುದು ಕೂಡ ಸಾಧ್ಯವಾಗಲಿಲ್ಲ. ಭಿಕ್ಷುಕನ ವೇಷದಲ್ಲಿದ್ದ ಒಡಿಸಿಯಸ್ ಪ್ರಯತ್ನಿಸಲು ಮುಂದೆ ಬಂದ. ಈಗಾಗಲೇ ಅವಮಾನಿತರಾಗಿದ್ದ ತರುಣರೆಲ್ಲ ಕೂಡದು ಎಂದು ಕೂಗು ಹಾಕಿದರು. ಅದನ್ನು ಲೆಕ್ಕಿಸದೆ ಒಡಿಸಿಯಸ್ ತನ್ನ ವಿಶ್ವಾಸದ ಸೇವಕರ ನೆರವಿನಿಂದ ಎಲ್ಲ ಬಾಗಿಲುಗಳನ್ನೂ

ಭದ್ರಪಡಿಸಿದ. ಅನಂತರ ಲೀಲಾಜಾಲವಾಗಿ ಬಿಲ್ಲಿಗೆ ಹೆದೆಯೇರಿಸಿ ಬಾಣ ಪ್ರಯೋಗ ಮಾಡಿದ. ಮರುಕ್ಷಣವೇ ಜ್ಯೂಸ್ ದೇವತೆಯ ಗುಡುಗಿನ ಶಬ್ದ ಕೇಳಿಸಿತು. ತತ್‌ಕ್ಷಣ ಒಡಿಸಿಯಸ್ ಮೊದಲು ಉದ್ಧತನಾದ ಆಂಟಿನೋವಸನನ್ನು ಬಳಿಕ ಉಳಿದ ಭಾವೀ ಪತಿಗಳನ್ನು ಕೊಂದುಹಾಕಿದ. ಇಲ್ಲಿಗೆ ಇಪ್ಪತ್ತೆರಡು ಕಾಂಡಗಳು ಮುಗಿದುವು. ಅನೇಕರು ಕಾವ್ಯವೂ ಇಲ್ಲಿಗೆ ಮುಗಿಯಿತು ಎಂದು ತೀರ್ಮಾನ ಮಾಡಿದ್ದಾರೆ. ಆದರೆ ಮುಂದಿನ ಎರಡು ಕಾಂಡಗಳಲ್ಲಿ ಕಾವ್ಯರಂಜನೆಯೂ ಕಥಾಸ್ವಾರಸ್ಯವೂ ಇಲಿಯಡ್ ಮತ್ತು ಒಡಿಸಿ ಎರಡೂ ಗ್ರಂಥಗಳ ದೃಷ್ಟಿಯಿಂದ ಮುಖ್ಯವಾದ ಅನೇಕ ಘಟನೆಗಳ ವರ್ಣನೆಯೂ ಉಂಟು. ಇಪ್ಪತ್ತಮೂರನೆಯ ಕಾಂಡದಲ್ಲಿ ಒಡಿಸಿಯಸ್ ಮತ್ತು ಪೆನೆಲೊಪೆಯರ ನಿಜವಾದ ಪುನಸ್ಸಮಾಗಮ ನಡೆಯುತ್ತದೆ. ಟೆಲಿಮಾಕಸ್ ತನ್ನ ತಾಯಿ ಪೆನೆಲೊಪೆಯನ್ನು ಅತ್ಯಂತ ಕಠಿಣಹೃದಯಿ ಎಂದು ಕರೆಯುತ್ತಾನೆ. ಕೊನೆಗೆ ಅವಳು ಒಡಿಸಿಯಸನನ್ನು ಗುರುತಿಸುತ್ತಾಳೆ. ಅತ್ಯಂತ ಮಧುರವಾದ, ನಿಜವಾದ, ಆತ್ಮೀಯವಾದ ಸುಖಸಮಾಗಮ ಅದು.

ಕೊನೆಯ ಕಾಂಡದಲ್ಲಿ–ಅನೇಕ ವಿಮರ್ಶಕರು ಅದನ್ನು ಪ್ರಕ್ಷಿಪ್ತ ಎಂದಿದ್ದಾರೆ–ಸತ್ತ ಭಾವೀ ಪತಿಗಳ ಆತ್ಮಗಳು, ಹೇಡೀಗೆ (ಅಧೋಲೋಕ) ಹೋಗುವುದು, ಒಡಿಸಿಯಸ್ ತನ್ನ ವೃದ್ಧ ತಂದೆಯನ್ನು ಊರ ಹೊರಗಿನ ಅವನ ಜಮೀನಿನ ಮನೆಯಲ್ಲಿ ಸಂದರ್ಶಿಸುವುದು–ಮುಂತಾದವುಗಳ ವರ್ಣನೆಯಿದೆ. ಸತ್ತ ಭಾವೀ ಪತಿಗಳ ಬಂಧುಗಳು ಆಯುಧಗಳನ್ನು ಹಿಡಿದು ಒಡಿಸಿಯಸನ ಮೇಲೆ ಸೇಡು ತೀರಿಸಿಕೊಳ್ಳಲು ಸನ್ನದ್ಧರಾಗುತ್ತಾರೆ. ಆದರೆ ಮೆಂಟರ್ ರೂಪ ಧರಿಸಿದ್ದ ಅಥೀನೆ ಅವರನ್ನೆಲ್ಲ ಸಮಾಧಾನಗೊಳಿಸಿ ಶಾಂತಿಯನ್ನು ಸ್ಥಾಪಿಸುತ್ತಾಳೆ.

ಗ್ರೀಕ್ ಸಾಹಿತ್ಯದಲ್ಲಿ ಆಚಾರ್ಯಸ್ಥಾನದಲ್ಲಿ ನಿಂತ ಮಹಾಕಾವ್ಯಗಳು ಇಲಿಯಡ್ ಮತ್ತು ಒಡಿಸಿ. ಇಡೀ ಜಗತ್ತಿನ ಅನೇಕಾನೇಕ ಕವಿಗಳು, ನಾಟಕಕಾರರು, ಶಿಲ್ಪಿಗಳು, ಚಿತ್ರಕಾರರು ಈ ಕೃತಿಗಳಿಂದ ಪ್ರಭಾವಿತರಾಗಿದ್ದಾರೆ. ಕೆಲವು ವಿಮರ್ಶಕರ ದೃಷ್ಟಿಯಲ್ಲಿ ಒಡಿಸಿಯೇ ಕಲಾದೃಷ್ಟಿಯಿಂದ ಹೆಚ್ಚು ಉತ್ಕೃಷ್ಟವಾದದ್ದು. ಇಲ್ಲಿನ ಕಥೆಯ ಹರಹು ದೊಡ್ಡದು. ಇದರಲ್ಲಿ ಜಾನಪದ ಮತ್ತು ಪೌರಾಣಿಕ ಕಥೆಗಳು ಕಲಾತ್ಮಕವಾಗಿ ಬೆರೆತಿವೆ. ನಾಟಕೀಯತೆಯಂತೂ ಪದೇ ಪದೇ ತಲೆದೋರಿ ಓದುಗರನ್ನು ಹರ್ಷಗೊಳಿಸುತ್ತದೆ. ಇಡೀ ಕಾವ್ಯವನ್ನು ಆಕ್ರಮಿಸಿ ಆಳುತ್ತಿರುವ ಮುಖ್ಯ ನೀತಿ ಯಾವುದು ಎಂಬುದು ಮಾತ್ರ ಹೇಳುವುದು ಕಷ್ಟ. ಕೆಲವರು ಇದರಲ್ಲಿ ವ್ಯಕ್ತವಾಗುವುದು ಮನೆಯ ಹಿರಿಮೆ ಎಂದಿದ್ದಾರೆ. ಮತ್ತೆ ಕೆಲವರು ಇಲಿಯಡ್ ಶೌರ್ಯದ ಕಾವ್ಯವಾದರೆ ಇದು ಜಾಣ್ಮೆಯ ಕಾವ್ಯ ಎನ್ನುತ್ತಾರೆ. ಹೊರೆಸನಿಗಾದರೋ ಇಲ್ಲಿ ಮುಖ್ಯವಾಗಿ ಕಾಣುವುದು ಒಡಿಸಿಯಸನ ಚಾರಿತ್ರ್ಯ–ಅದರಲ್ಲಿಯೂ ಜಾಣ್ಮೆ, ವಿಶ್ವಾಸಾರ್ಹತೆ, ವಿಧವಿಧವಾಗಿ ಪೆಟ್ಟುಗಳನ್ನು ವಿಧಿ ನೀಡುತ್ತಿದ್ದರೂ ಅವುಗಳನ್ನೆಲ್ಲ ಸಹಿಸುವ ಧೃತಿ. ತಡವಾಗಿಯಾದರೂ ಕೊನೆಗೊಮ್ಮೆ ಧರ್ಮ ಗೆಲ್ಲುತ್ತದೆ ಎಂಬ ಗ್ರೀಕರ ನಂಬಿಕೆ ಆಧುನಿಕರಿಗೆ ಇದರಲ್ಲಿ ಪ್ರತಿಧ್ವನಿಸುತ್ತದೆ. (ಪಿ.)

'ಇಲಿಯಡ್'ನಲ್ಲಿ ಮನುಷ್ಯನ ಸಾಹಸಕ್ಕೆ ಪ್ರಾಧಾನ್ಯ, ಸಂಯಮದ ಅಗತ್ಯವನ್ನು ಕವಿ ಪರೋಕ್ಷವಾಗಿ ಸೂಚಿಸುತ್ತಾನೆ. 'ಒಡಿಸ್ಸಿ' ಯಲ್ಲಿ ಮನುಷ್ಯನ ವಿವೇಕಕ್ಕೆ ಪ್ರಾಧಾನ್ಯ. ಒಡಿಸ್ಯೂಸ್ ಶೂರನೇ ಹೌದು. ಆದರೆ ಅವನು ಎಲ್ಲ ಆಪತ್ತುಗಳನ್ನು ಗೆದ್ದು ಸುರಕ್ಷಿತವಾಗಿ ಹಿಂದಿರುಗಿ, ಅರಮನೆಯನ್ನಾಕ್ರಮಿಸಿದ್ದ ದುರುಳರನ್ನು ಗೆಲ್ಲುವುದು ತನ್ನ ಬುದ್ಧಿಶಕ್ತಿಯಿಂದ, ತಾಳ್ಮೆಯಿಂದ, ವಿವೇಚನೆಯಿಂದ, ದೇವತೆಗಳಿಗೆ ತಲೆಬಾಗುವುದರಿಂದ. ಈ ಮಹಾಕಾವ್ಯದ ನಾಯಕ ಸಂವೇದನಾಶೀಲ. ಅಸಮಾನ ಬುದ್ಧಿವಂತ. ಮಾನವೀಯ ಸಂಬಂಧಗಳಿಗೆ ಬೆಲೆ ಕೊಡುವವನು. ಯಾವಾಗ ಶೌರ್ಯವು ಪರಿಣಾಮಕಾರಿಯಾಗಬಲ್ಲದು, ಯಾವಾಗ ತಾಳ್ಮೆ ಅಗತ್ಯ, ಯಾವಾಗ ಬುದ್ಧಿಶಕ್ತಿಯನ್ನು ಬಳಸಬೇಕು ಎಂದು ಬಲ್ಲವನು. ಈ ಮಹಾಕಾವ್ಯದಲ್ಲಿಯೂ ಮನುಷ್ಯನ ಜಗತ್ತಿನ ಮೇಲೆ ದೇವತೆಗಳ ಲೋಕ ಬಾಗಿದೆ, ದೇವತೆಗಳು ಮನುಷ್ಯನ ಬದುಕಿನಲ್ಲಿ ಪ್ರವೇಶಿಸುತ್ತಾರೆ, ಅವರಲ್ಲಿ ಹಲವರು ನೈತಿಕವಾಗಿ ಪೂಜಾರ್ಹರೇನೂ ಅಲ್ಲ. ಆದರೆ ಒಡಿಸ್ಯೂಸ್ ದೇವತೆಗಳಿಗೆ ತಲೆಬಾಗಿ ನಡೆದುಕೊಳ್ಳುತ್ತಾನೆ. ಅಥೀನೆ ಅವನನ್ನು ಕಾಪಾಡುತ್ತಾಳೆ. ಹೋಮರ್ ಕಂಡ ಪರಿಪೂರ್ಣತೆಯ ಎರಡು ರೂಪಗಳಲ್ಲಿ ಒಡಿಸ್ಯೂಸ್ ಒಂದು ರೂಪ. * (ಎಲ್.ಎಸ್.ಎಸ್.)

**ಒಡೆತನ:** ನೋಡಿ– ಆಸ್ತಿ

**ಒಡೆಯರ ಕಾಲದ ಕನ್ನಡ ಸಾಹಿತ್ಯ:** ಒಂದನೆಯ ರಾಜ ಒಡೆಯರು ವಿಜಯನಗರದ ರಾಜ್ಯದ ಪರಮಾಧಿಕಾರವನ್ನು ಅಲ್ಲಗಳೆದು ಸ್ವತಂತ್ರವಾದಾಗಿನಿಂದ ಮೈಸೂರು ಒಡೆಯರ ಕಾಲ ಆರಂಭವಾಯಿತೆಂದು ತಿಳಿಯಬೇಕು. ಅಲ್ಲಿಂದ ಮೊದಲುಗೊಂಡು ಜಯಚಾಮರಾಜ ಒಡೆಯರ ಕಾಲದವರೆಗೂ ಕನ್ನಡ ಸಾಹಿತ್ಯದ ಸರ್ವತೋಮುಖವಾದ ಅಭಿವೃದ್ಧಿಗೆ ರಾಜಮಹಾರಾಜರಿಂದ ದೊರೆತ ಪ್ರೋತ್ಸಾಹದ ವಿಷಯವನ್ನಿಲ್ಲಿ ಸಂಗ್ರಹವಾಗಿ ನಿರೂಪಿಸಿದೆ. ಚಿಕ್ಕದೇವರಾಯನ ವಂಶಾವಳಿಯೂ ರಾಜನೃಪಚರಿತ್ರೆಯಿಂದಲೇ ಆರಂಭವಾಗಿದೆ. ಈ ದೊರೆ ಶ್ರೀವೈಷ್ಣವ ಧರ್ಮವನ್ನು ಸ್ವೀಕರಿಸಿದ. ಈತನ ಪ್ರಧಾನಮಂತ್ರಿಯಾಗಿದ್ದ ತಿರುಮಲಾರ್ಯನೆಂಬ ಶ್ರೀವೈಷ್ಣವ ಕವಿ ಕರ್ಣವೃತ್ತಾಂತಕಥೆ ಎಂಬ ಸಾಂಗತ್ಯಕಾವ್ಯವನ್ನು ರಚಿಸಿದ್ದಾನೆ. ಇದು ಅಪೂರ್ವವಾದ ಕಾವ್ಯ. ಈಗ ದೊರೆತಿರುವ ಗ್ರಂಥದಲ್ಲಿ ಹನ್ನೊಂದು ಸಂಧಿಗಳೂ ಹನ್ನೆರಡನೆಯದರಲ್ಲಿ ಕೆಲವು ಪದ್ಯಗಳೂ ಇವೆ. ಮಹಾಭಾರತದ ಶಾಂತಿಪರ್ವದಲ್ಲಿ ಬಂದಿರುವ ಕರ್ಣನ ಚರಿತ್ರೆಯೇ ಈ ಗ್ರಂಥದ ವಸ್ತು.

ರಾಜ ಒಡೆಯನ ತರುವಾಯ ಪಟ್ಟಕ್ಕೆ ಬಂದ ಆರನೆ ಚಾಮರಾಜ ಒಡೆಯ ಚಾಮರಾಜೋಕ್ತಿವಿಲಾಸ ಎಂಬ ಹೆಸರಿನಲ್ಲಿ ವಾಲ್ಮೀಕಿ ರಾಮಾಯಣವನ್ನು ಸರಳಗನ್ನಡ ಗದ್ಯಕಾವ್ಯವಾಗಿ ಬರೆದಿದ್ದಾನೆ. ಇದು ಮೂಲ ಗ್ರಂಥಕ್ಕೆ ಅನುಸಾರವಾದ ಗದ್ಯಾನುವಾದ. ಈ ಗ್ರಂಥವನ್ನು ಲೋಕೋಪಕಾರಕ್ಕಾಗಿ ಧೀಮಂತ ವಿದ್ವಾಂಸನಾದ ವಿರೂಪಾಕ್ಷನಿಂದ ಅರಸ ಬರೆಯಿಸಿದನೆಂಬ ಅರ್ಥಬರುವ ಒಂದು ಸಂಸ್ಕೃತ ಶ್ಲೋಕ ಗ್ರಂಥದ ಆರಂಭದಲ್ಲಿಯೇ ಬಂದಿದೆ. ಆದ್ದರಿಂದ ಇದು ಅರಸನ ಹೆಸರಿನಲ್ಲಿ ಅವನ ಆಶ್ರಿತನಾದ ವಿದ್ವಾಂಸನೊಬ್ಬ ಬರೆದದ್ದಾಗಿರಬಹುದೆಂದು ತೋರುತ್ತದೆ. ಚಾಮರಾಜ ಮಗೆಪ್ರಕಾಶವೆಂಬ ಇನ್ನೊಂದು ಗ್ರಂಥವನ್ನೂ ರಚಿಸಿರುವನೆಂಬ ಪ್ರತೀತಿ ಇದೆ. ಆದರೆ ಅದು ಬ್ರಹ್ಮೋತ್ತರಖಂಡದ ಕನ್ನಡ ಟೀಕೆಯೇ ಹೊರತು ಕಾವ್ಯವಲ್ಲ. ಈ ಎರಡು ಕೃತಿಗಳೂ ಆ ಕಾಲಕ್ಕೆ ರಾಜ ಮತ್ತು ಪ್ರಜೆಗಳಿಬ್ಬರಿಗೂ ಸಂಸ್ಕೃತದಲ್ಲಿದ್ದ ವೈದಿಕ ಸಾಹಿತ್ಯವನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಬರೆಯುವ, ಬರೆಯಿಸುವ ಶ್ರದ್ಧೆ ಹೆಚ್ಚಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತವೆ. ಈ ರಾಜನ ಆಶ್ರಯದಲ್ಲಿದ್ದ ರಾಮಚಂದ್ರನೆಂಬ ವಿದ್ವಾಂಸ ಒಂದು ಅಶ್ವಶಾಸ್ತ್ರವನ್ನು ರಚಿಸಿದ್ದಾನೆ. ಶಾಲಿಹೋತ್ರಕೃತವಾದ ಸಂಸ್ಕೃತ ಗ್ರಂಥವನ್ನು ಬಾಲಕರಿರುವಂತೆ ಸಾಮಗೋಪಾಂಗವಾಗಿ ಕನ್ನಡಿಸಿ ಬರೆದ ಅನುವಾದವಿದು. ಪದ್ಮಣಪಂಡಿತ ಈ ರಾಜನ ಆಣತಿಯಂತೆ ಹಯಸಾರಸಮುಚ್ಚಯ ಎಂಬ ಪದ್ಯಗ್ರಂಥವನ್ನು ರಚಿಸಿದ್ದಾನೆ. ತಾನು ವಿದ್ವಜ್ಜನಮಂಡನನೆಂದೂ ವೈದ್ಯಸುವಂಶಾಂಬರ ಸೂರ್ಯನೆಂದೂ ಕವಿ ಹೊಗಳಿಕೊಂಡಿದ್ದಾನೆ.

ಚಾಮರಾಜನ ಅನಂತರ ಪ್ರಭುಪಟ್ಟಕ್ಕೆ ಬಂದ ಕಂಠೀರವ ನರಸರಾಜ ಒಡೆಯ ಮೈಸೂರಿನ ರಾಜ್ಯವನ್ನು ವಿಸ್ತರಿಸಿ ಅಂತ್ಯಶತ್ರುಗಳನ್ನೂ ಅಡಗಿಸಿ ಮೈಸೂರು ರಾಜ್ಯದ ಅಭ್ಯುದಯವನ್ನು ಸಾಧಿಸಿದ. ಈತನ ಆಸ್ಥಾನಕವಿಯಾದ ಗೋವಿಂದ ವೈದ್ಯ ಕಂಠೀರವನರಸರಾಜವಿಜಯಂ ಎಂಬ ವಿಸ್ತಾರವಾದ ಒಂದು ಸಾಂಗತ್ಯಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ತನ್ನ ಅರಸನ ಯುದ್ಧವಿಜಯಗಳನ್ನು ಹೊಗಳಿದ್ದಾನೆ. ರಣದುಲ್ಲಾಖಾನನೆಂಬ ಬಿಜಾಪುರದ ಮುಸಲ್ಮಾನ ಸರದಾರನ ಮೇಲೆ ಕಂಠೀರವ ನರಸರಾಜ ಗಳಿಸಿದ ಯುದ್ಧವಿಜಯ ಇಲ್ಲಿ ಪ್ರಧಾನವಾಗಿದೆ. ಇಪ್ಪತ್ತಾರು ಸಂಧಿಗಳುಳ್ಳ ಈ ಗ್ರಂಥದಲ್ಲಿ ರಾಜನ ವಂಶವರ್ಣನೆಯಿಂದ ತೊಡಗಿ ಅವನು ನಡೆಸಿದ ದಿಗ್ವಿಜಯ ಕಥೆಗಳನ್ನೆಲ್ಲ ವಿವರವಾಗಿ ನಿರೂಪಿಸಲಾಗಿದೆ. ಅನುಷಂಗಿಕವಾಗಿ ಶ್ರೀರಂಗಪಟ್ಟಣದ ವರ್ಣನೆ, ರಂಗನಾಥಸ್ವಾಮಿಯ ಮಹಿಮಾ ವರ್ಣನೆ, ಸ್ವಾಮಿಯ ರಥೋತ್ಸವ ವರ್ಣನೆ, ರಾಜಸಭೆಯ ವರ್ಣನೆ, ಜಂಬೂ ಸವಾರಿಯ ವರ್ಣನೆ–ಮೊದಲಾದ ಹಲವು ಸ್ವಾರಸ್ಯವಾದ ವರ್ಣನಾಭಾಗಗಳು ಈ ಕಾವ್ಯಕ್ಕೆ ಮೆರುಗನ್ನು ಕೊಟ್ಟಿವೆ. ಮುಖ್ಯಕಥೆಗೆ ಸಂಬಂಧಿಸಿದ ಮದನಮೋಹಿನಿಯ ಕಥೆ ಶೃಂಗಾರಭರಿತವಾಗಿದ್ದು ಓದುಗರಿಗೆ ಆಕರ್ಷಕವೆನಿಸಿದರೂ ಗ್ರಂಥದ ಮೂಲ ವಸ್ತುವಿನ ಏಕತೆಗೆ ಭಂಗ ತಂದಿದೆ. ಆದರೆ ತನ್ನ ಕಾವ್ಯದಲ್ಲಿ ಶೃಂಗಾರರಸ ನಿರೂಪಣೆಗೆ ಒಂದು ಅವಕಾಶ ಕಲ್ಪಿಸಿಕೊಳ್ಳುವ ಹವಣಿಕೆ ಕವಿಯದು.

ದೇವತಾಸ್ತುತಿಯಲ್ಲ ಕೇಳ್ವೊಡೆ, ನರಸ್ತುತಿ
ಯಾವ ವೆಗ್ಗಳವೆನಬೇಡ
ನಾವಿಷ್ಣುಃ ಪೃಥಿವೀಪತಿಯೆಂದು ವೇ
ದಾವಳಿಗಳು ಸಾರುತಿವೆ ಕೊ

ಎಂದು ಹೇಳಿ ಮಾನವ ಚರಿತ್ರೆಯನ್ನು ಬರೆಯಹೊರಟುದರ ಔಚಿತ್ಯವನ್ನು ಕವಿ ಸಮರ್ಥಿಸಿಕೊಂಡಿದ್ದಾನೆ. ಅಷ್ಟೇ ಅಲ್ಲದೆ ಇದು ಅಂದಿನ ನರಸಿಂಹಸ್ವಾಮಿ ಕಲಿಯುಗದ ಮನುಜರನ್ನು ಸಂಹರಿಸುವ ಸಲುವಾಗಿ ನರಜನ್ಮದಲ್ಲಿ ಬಂದು ಕಂಠೀರವ ನರಸರಾಜನಾದನಂತೆ. ನರಸಿಂಹಸ್ವಾಮಿ ಅವತರಿಸಿದ ತಿಂಗಳು, ತಿಥಿವಾರ ಮುಹೂರ್ತಗಳಲ್ಲಿಯೇ ಈ ದೊರೆ ಹುಟ್ಟಿದನೆಂದು ಹೇಳಿ ತನ್ನ ಅರಸ ನರಸಿಂಹನ ಅವತಾರವೇ ಆಗಿರಬೇಕೆಂದು ಕವಿ ಸ್ವಾರಸ್ಯವಾಗಿ ತರ್ಕಿಸುತ್ತಾನೆ.

ಈ ಕೃತಿಯನ್ನು ರಚಿಸಿದ ಗೋವಿಂದವೈದ್ಯ ಶ್ರೀನಿವಾಸಪಂಡಿತನ ಮಗ. ವೇದಾಧ್ಯಯನಸಂಪನ್ನನೂ ಮಂತ್ರಶಾಸ್ತ್ರವೇತ್ತನೂ ಆದ ಗೋವಿಂದವೈದ್ಯ ಕಾವ್ಯ ನಾಟಕಾಲಂಕಾರಗಳನ್ನೂ ಚೆನ್ನಾಗಿ ಅಭ್ಯಾಸಮಾಡಿದ್ದ. ಇವನ ಹೆಸರಿನಲ್ಲಿಯೇ ವೈದ್ಯಶಬ್ದ ಸೇರಿಕೊಂಡಿದೆ. ಈತನ ತಂದೆಯೂ ಪಂಡಿತ. ಬಹುಶಃ ಇವರು ವೈದ್ಯವೃತ್ತಿಯವರೂ ಆಗಿರಬಹುದು. ಅರಸನ ದಳವಾಯಿಯಾದ ನಂಜರಾಜೇಂದ್ರನ ಪ್ರೇರಣೆಯಂತೆ ಈ ಕಾವ್ಯವನ್ನು ರಚಿಸಿದುದಾಗಿ ಕವಿ ಪೀಠಿಕಾಸಂಧಿಯ ಕೊನೆಯಲ್ಲಿ ಹೇಳಿಕೊಂಡಿದ್ದಾನೆ.

ಗೋವಿಂದವೈದ್ಯ ತನ್ನ ಅರಸನ ಈ ಪುಣ್ಯಚರಿತ್ರೆಯನ್ನು ಬರೆದು ಭಾರತಿನಂಜ ಎಂಬ ಗಮಕಿಯಿಂದ ರಾಜಸಭೆಯಲ್ಲಿ ಓದಿಸಿದ. ಪೀಠಿಕಾಸಂಧಿಯಲ್ಲಿ

ದೊರೆರಾಯ ನರಸರಾಜೇಂದ್ರನ ಚರಿತೆಯ
ನೊರೆದ ಭಾರತಿ ನಂಜನೊಲಿದು

–ಎಂಬ ಹೇಳಿಕೆ ಇರುವುದರಿಂದ ಈ ಕೃತಿಯನ್ನು ಭಾರತಿನಂಜನೇ ರಚಿಸಿದನೆಂಬ ಭಾವನೆ ಬರಲು ಕಾರಣವಾಯಿತು. ಆದರೆ ಗ್ರಂಥಾಂತ್ಯದ ಗದ್ಯದಲ್ಲಿ ಗೋವಿಂದವೈದ್ಯ ಕಂಠೀರವನರಸರಾಜವಿಜಯವನ್ನು ವಿರಚಿಸಿ ಆಚಂದ್ರಾರ್ಕವಾಗಿ ಭೂಮಿಯೊಳಿರಲಿಯೆಂದು ಭಾರತಿನಂಜನ ಮುಖದಿಂದ ವಾಚಿಸಿ ರಾಜಾಸ್ಥಾನದಲ್ಲಿ ವಿಸ್ತಾರ ಪಡಿಸಿದುದು ಎಂಬ ಸ್ಪಷ್ಟವಾದ ಹೇಳಿಕೆಯಿದೆ.

ಪಂಪರನ್ನರು ಪೌರಾಣಿಕ ಕಥೆ ಹೇಳುತ್ತ ಹಿಂದಿನ ವೀರರೊಡನೆ ತಮ್ಮ ಅರಸರನ್ನು ಹೋಲಿಸಿ ಕವಿತೆ ಕಟ್ಟಿದರೆ ಈ ಕವಿ ಅಂಥ ತೊಡಕು ಏನೂ ಇಲ್ಲದೆ ನೇರವಾಗಿ ತನ್ನ ದೊರೆಯ ಕಥೆಯನ್ನೇ ವಸ್ತುವನ್ನಾಗಿ ಆರಿಸಿಕೊಂಡು ಸಮಕಾಲೀನ ಇತಿಹಾಸವನ್ನು ಬರೆದು ಕೃತಕೃತ್ಯನಾಗಿದ್ದಾನೆ. ಕವಿಯ ಕಾಲದ ಜನಜೀವನದ ಒಂದು ನೈಜ ಚಿತ್ರ ಇಲ್ಲಿ ಕಾಣಸಿಕ್ಕುತ್ತದೆ. ಕಾವ್ಯದ ಭಾಷೆಯೂ ಆಡುಮಾತಿಗೆ ಹೆಚ್ಚು ಹತ್ತಿರವಾಗಿದೆ. ಅಂದಿನ ಕಾಲಕ್ಕೆ ಕನ್ನಡದಲ್ಲಿ ಬಳಕೆಗೆ ಬಂದಿದ್ದ ಹಲವು ಉರ್ದು ಪದಗಳನ್ನು ಕವಿ ಬಳಸಲು ಹಿಂತೆಗೆದಿಲ್ಲ, ಪಾತ್ಸ್ಯಾವು, ದರವೇಸಿ, ಸಲಾಮು ಮೊದಲಾದ ಹಲವು ಶಬ್ದಗಳು ಅಲ್ಲಲ್ಲಿ ಕಾಣಿಸುತ್ತವೆ. ಇಡೀ ಪದ್ಯಗಳನ್ನೇ ಉರ್ದು ಪದಗಳಿಂದಲೇ ನಿರ್ವಹಿಸಿರುವ ನಿದರ್ಶನಗಳೂ ಇವೆ.

ಕಂಠೀರವ ನರಸರಾಜರ ತರುವಾಯ ಪಟ್ಟಕ್ಕೆ ಬಂದ ಶ್ರೀ ಚಿಕ್ಕದೇವರಾಜ ಒಡೆಯ ಈ ಕಾಲದ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ಪ್ರಧಾನನೆಂದು ಹೇಳಬಹುದು. ಈ ರಾಜ ಮೈಸೂರಿನ ಸರಹದ್ದುಗಳನ್ನು ವಿಸ್ತರಿಸಿ ರಾಜ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ. ಹಲವಾರು ಶತ್ರುಗಳನ್ನು ನಿಗ್ರಹಿಸಿ ತನ್ನ ಯುದ್ಧ ಪರಾಕ್ರಮವನ್ನು ಮೆರೆದ. ಅದಕ್ಕಿಂತ ಹೆಚ್ಚಾಗಿ ಈ ದೊರೆ ಸ್ವಹಸ್ತ–ಪರಹಸ್ತಗಳಿಂದ ಸಾಹಿತ್ಯ ಕೈಂಕರ್ಯವನ್ನು ನಡೆಯಿಸಿ ಕೀರ್ತಿವಂತನಾದ. ಈತ ಸ್ವಯಂ ಕವಿ. ಚಿಕದೇವರಾಜಬಿನ್ನಪಂ, ಗೀತಗೋಪಾಲ, ಭಾಗವತ, ಶೇಷಧರ್ಮ, ಭಾರತ–ಎಂಬ ಗ್ರಂಥಗಳನ್ನು ರಚಿಸಿದನೆಂದು ತಿಳಿದುಬಂದಿದೆ. ಗೀತಗೋಪಾಲದಲ್ಲಿ ತಿರುಮಲಾರ್ಯನೆಂಬ ಆಸ್ಥಾನಕವಿಯಿಂದ ರಚಿತವಾದ ಕೆಲವು ಪದ್ಯಗಳೂ ಸೇರಿವೆಯಾದ್ದರಿಂದ ಅದನ್ನು ಅರಸನೇ ಬರೆದನೆ, ಎಂಬ ವಿಷಯದಲ್ಲಿ ಸಂಶಯ ಮೂಡಿದೆ.

ಗೀತಗೋಪಾಲ ಜಯದೇವನ ಗೀತಗೋವಿಂದವೆಂಬ ಸಂಸ್ಕೃತ ಗ್ರಂಥದ ಮಾದರಿಯಲ್ಲಿ ರಚಿತವಾದ ಉತ್ತಮ ಹಾಡುಗಳ ಸಂಕಲನ. ಮೋಕ್ಷೋಪಾಯವನ್ನು ಸಾಧಿಸುವುದಕ್ಕೆ ಉಪಾಯವಾದ ಪ್ರಪತ್ತಿಸ್ವರೂಪವನ್ನು ಕೀರ್ತನೆಗಳ ಮುಖಾಂತರ ಪ್ರಚಾರ ಮಾಡುವುದೇ ಇಲ್ಲಿ ಕವಿಯ ಧ್ಯೇಯ. ಗೋಪಿಕಾವೃತ್ತಾಂತವನ್ನು ವರ್ಣಿಸುವ ವ್ಯಾಜದಲ್ಲಿ ಕವಿ ಭಗವಂತನ ಗುಣಾತಿಶಯಗಳನ್ನು ಕೊಂಡಾಡಿದ್ದಾನೆ. ಈ ಕೀರ್ತನೆಗಳು ಸಂಗೀತಕ್ಕೆ ಬಹಳ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಚಿಕ್ಕದೇವರಾಯ ಸಂಗೀತ ರಸಿಕನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಸಾಹಿತ್ಯ, ಸಂಗೀತ, ಸಮರಾಂಗಣಗಳಲ್ಲಿ ಈ ದೊರೆಗೆ ಸಮಾನವಾದ ಪ್ರಭುತ್ವ ಸಿದ್ಧಿಸಿತ್ತು. ಭಾಗವತವೇ ಮೊದಲಾದ ಪುರಾಣಗಳಲ್ಲಿನ ಭಕ್ತ ಭಾಗವತೋತ್ತಮರು ಉಪದೇಶಿಸಿದ ತತ್ತ್ವಗಳನ್ನೂ ತಮಿಳುನಾಡಿನ ಆಳ್ವಾರರ ತತ್ತ್ವಗಳನ್ನೂ ಆಳವಾಗಿ ಅಭ್ಯಾಸಮಾಡಿ ಅವುಗಳ ಸಾರವತ್ತಾದ ಅಂಶವನ್ನು ಈ ಕೀರ್ತನೆಗಳಲ್ಲಿ ಬಹಳ ಸರಳವಾದ ರೀತಿಯಲ್ಲಿ ದೊರೆ ನಿರೂಪಿಸಿದ್ದಾನೆ. ಕವಿ ಮೊದಲು ತಾನು ಹೇಳಬೇಕಾದ ತತ್ತ್ವವನ್ನು ವಚನದಲ್ಲಿ ಹೇಳಿ ಆಮೇಲೆ ಅದಕ್ಕೆ ಹೊಂದಿಕೆಯಾಗುವ ಕೀರ್ತನೆಯನ್ನು ಹೇಳಿದ್ದಾನೆ. ಮಹತ್ತ್ವದ ಸಂಗತಿಗಳನ್ನು ಸುಲಭ ಭಾಷೆಯಲ್ಲಿ, ಲಯಬದ್ಧವಾದ ಸಂಗೀತದ ಭಾಷೆಯಲ್ಲಿ ಹೇಳಿರುವುದು ಈ ರಾಜಕವಿಯ ಹಿರಿಮೆ.

ಚಿಕದೇವರಾಜಬಿನ್ನಪ ಒಂದು ಗದ್ಯಕಾವ್ಯ. ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿಯ ತಿರುವಡಿಗಳಲ್ಲಿ ಅರಸ ಮಾಡಿಕೊಂಡ ಮೂವತ್ತು ಭಕ್ತಿಯ ಬಿನ್ನಪಗಳು ಇಲ್ಲಿ ಇವೆ. ಶ್ರೀವಿಶಿಷ್ಟಾದ್ವೈತ ತತ್ತ್ವಗಳ ನಿರೂಪಣೆ ಇಲ್ಲಿ ಕಾವ್ಯ ಶೈಲಿಯಲ್ಲಿ ರೂಪುಗೊಂಡಿದೆ. ಅರಸನಿಗೆ ವೈಷ್ಣವಧರ್ಮದಲ್ಲಿದ್ದ ವಿಶೇಷವಾದ ನಿಷ್ಠೆ ಯದುಗಿರಿ ನಾರಾಯಣಸ್ವಾಮಿಯಲ್ಲಿದ್ದ ದೃಢಭಕ್ತಿ ಇಲ್ಲಿ ಸುವ್ಯಕ್ತವಾಗಿವೆ.

ಈತನ ಹೆಸರಿನಲ್ಲಿ ಪ್ರಸಿದ್ಧವಾಗಿರುವ ಭಾಗವತಕ್ಕೆ ಚಿಕ್ಕದೇವರಾಜ ಸೂಕ್ತಿವಿಲಾಸ ಎಂಬ ಹೆಸರೂ ಇದೆ. ಸಂಸ್ಕೃತ ಭಾಗವತಕ್ಕೆ ಇದು ಒಂದು ಕನ್ನಡ ಟೀಕೆ. ಇವನ ಭಾರತವೂ ಅಷ್ಟೇ. ಶಾಂತಿ

ಪರ್ವದಿಂದ ಮುಂದಿನ ಪರ್ವಗಳಿಗೆ ಮಾತ್ರ ಇದರಲ್ಲಿ ಕನ್ನಡ ಟೀಕೆಯಿದೆ. ಶೇಷಧರ್ಮ ಅದೇ ಹೆಸರಿನ ಸಂಸ್ಕೃತ ಗ್ರಂಥಕ್ಕೆ ಕನ್ನಡ ಟೀಕೆ. ಈ ಕಾಲದಲ್ಲಿ ಶ್ರೀವೈಷ್ಣವರೂ ಇತರ ಬ್ರಾಹ್ಮಣಕವಿಗಳೂ ಸಂಸ್ಕೃತದ ಗ್ರಂಥಗಳನೇಕಕ್ಕೆ ಕನ್ನಡದಲ್ಲಿ ವ್ಯಾಖ್ಯಾನ ಬರೆಯುವ ಕೆಲಸದಲ್ಲಿ ತೊಡಗಿದರು. ಶ್ರೀವೈಷ್ಣವಧರ್ಮ ಪ್ರಚಾರ ಅವರ ಗುರಿಯಾಗಿತ್ತು.

ಚಿಕ್ಕದೇವರಾಯನಿಗೆ ಸಾಹಿತ್ಯವಿದ್ಯಾನಿಕಷಪ್ರಸ್ತರಂ, ರಸಿಕಜನಕರ್ಣರಸಾಯನೀಕೃತ ಸಂಗೀತವಿಸ್ತರಂ ಎಂಬ ಸಾರ್ಥಕವಾದ ಬಿರುದುಗಳಿದ್ದುವು. ಈತನ ವಿಷಯವಾಗಿ ಚಿಕದೇವರಾಜವಿಜಯಂ, ಚಿಕದೇವರಾಯವಂಶಾವಳಿ, ಚಿಕದೇವರಾಜಯಶೋ ಭೂಷಣಂ, ಚಿಕದೇವರಾಜವಂಶಪ್ರಭಾವ–ಮೊದಲಾದ ಹಲವು ಗ್ರಂಥಗಳು ಹುಟ್ಟಿವೆ. ಚಿಕದೇವರಾಯನ ಪರಾಕ್ರಮ, ಶರಣಾಗತ ರಕ್ಷಣೆ, ಔದಾರ್ಯ ಮೊದಲಾದ ಗುಣಗಳನ್ನು ಹೊಗಳುವ ಕೆಲವು ತೆಲುಗು ಚಾಟುಪದ್ಯಗಳೂ ಪ್ರಸಿದ್ಧವಾಗಿವೆ.

ಸ್ವಯಂ ಕವಿಯೂ ಸಂಗೀತಜ್ಞನೂ ಆದ ಚಿಕ್ಕದೇವರಾಜ ಅನೇಕ ಕವಿಗಳನ್ನು ತನ್ನ ಆಸ್ಥಾನದಲ್ಲಿ ಆದರಿಸಿ ಅವರಿಂದ ಕಾವ್ಯರಚನೆ ಮಾಡಿಸಿದ. ತಿರುಮಲಾರ್ಯ ಚಿಕುಪಾಧ್ಯಾಯ, ಶಿಂಗರಾರ್ಯ, ತಿಮ್ಮಕವಿ, ಮಲ್ಲರಸ, ಚಿದಾನಂದ, ವೇಣುಗೋಪಾಲ ವರಪ್ರಸಾದ–ಮೊದಲಾದ ಅನೇಕರು ಇವನ ಆಶ್ರಿತರಾಗಿದ್ದರು. ಶೃಂಗಾರಮ್ಮ, ಹೊನ್ನಮ್ಮ ಎಂಬ ಇಬ್ಬರು ಕವಯಿತ್ರಿಯರೂ ರಾಜಾಶ್ರಯದಲ್ಲಿ ಇದ್ದು ಕೃತಿರಚನೆ ಮಾಡಿದರು. ಲೋಕಪ್ರಸಿದ್ಧನಾದ ವಿಜಯನಗರದ ಶ್ರೀಕೃಷ್ಣದೇವರಾಯನ ಹಾಗೆಯೇ ಚಿಕ್ಕದೇವರಾಯ ಒಡೆಯನೂ ಸಾಹಿತ್ಯಸಂಗೀತ ಸಮರಾಂಗಣ ಸಾರ್ವಭೌಮನೆನಿಸಿಕೊಂಡು; ಕವಿಜನರಿಗೆ ಆಶ್ರಯದಾತನಾಗಿ ಮೈಸೂರು ಒಡೆಯರ ಪರಂಪರೆಯಲ್ಲಿ ಅತ್ಯಂತ ಮಹಿಮಾನ್ವಿತನಾಗಿ ರಾರಾಜಿಸಿದ.

ತಿರುಮಲಾರ್ಯ ಚಿಕ್ಕದೇವರಾಯನ ಮಂತ್ರಿ. ಈತ ಅಪ್ರತಿಮವೀರ ಚರಿತ್ರೆ ಎಂಬ ಅಲಂಕಾರಗ್ರಂಥವನ್ನೂ ಚಿಕ್ಕದೇವರಾಯ ವಂಶಾವಳಿ ಎಂಬ ಗದ್ಯಕಾವ್ಯವನ್ನೂ ಚಿಕದೇವರಾಜವಿಜಯಂ ಎಂಬ ಒಂದು ಚಂಪೂಕಾವ್ಯವನ್ನೂ ಚಿಕದೇವರಾಜ ಶತಕವನ್ನೂ ರಚಿಸಿದ್ದಾನೆ. ಇವುಗಳಲ್ಲಿ ಶತಕ ಇನ್ನೂ ಸಿಕ್ಕಿಲ್ಲ. ಚಿಕದೇವರಾಯ ವಂಶಾವಳಿ ಅಪೂರ್ಣವಾಗಿದೆ. ಇದರಲ್ಲಿ ರಾಜನೃಪನಿಂದ ಹಿಡಿದು ದೊಡ್ಡದೇವರಾಜನವರೆಗಿನ ಮೈಸೂರು ಅರಸರ ಚರಿತ್ರೆಯನ್ನು ಕವಿ ಹೇಳಿದ್ದಾನೆ. ಯುವರಾಜ ಚಿಕ್ಕದೇವರಾಯನ ವಿಜಯಯಾತ್ರೆಯ ಕಥೆಯ ನಡುವೆ ಗ್ರಂಥ ನಿಂತುಹೋಗಿದೆ. ತಿರುಮಲಾರ್ಯ ಬರೆದುದೇ ಇಷ್ಟುಮಾತ್ರವೊ ಅಥವಾ ಉಳಿದ ಗ್ರಂಥಭಾಗ ನಷ್ಟವಾಗಿ ಹೋಯಿತೋ ತಿಳಿಯದು. ಇದು ಹಳಗನ್ನಡದಲ್ಲಿ ರಚಿತವಾದ ಗದ್ಯಗ್ರಂಥ. ತಿರುಮಲಾರ್ಯನಿಗೆ ಇದ್ದ ಹಳಗನ್ನಡ ಪಾಂಡಿತ್ಯ ಇದರಲ್ಲಿ ಎದ್ದು ತೋರುತ್ತದೆ. ಅಲ್ಲಲ್ಲಿ ಶ್ರೀವೈಷ್ಣವಸಿದ್ಧಾಂತ ನಿರೂಪಣೆ ಬಂದಿದೆ. ಅಳಹಿಯ ಸಿಂಗರಾರ್ಯ ದೊಡ್ಡ ದೇವರಾಜನಿಗೆ ಉಪದೇಶಿಸಿದ ಗೀತಾರ್ಥವಿಚಾರ ಈ ಗ್ರಂಥಗಳಲ್ಲಿ ಅಡಕವಾಗಿದೆ. ಕನ್ನಡದಲ್ಲಿ ವಿರಳವಾದ ಗದ್ಯಗ್ರಂಥಗಳಲ್ಲಿ ಇದೂ ಒಂದು. ಕಥೆಗಿಂತ ವರ್ಣನೆಯೇ ಹೆಚ್ಚಾಗಿರುವುದರಿಂದ ಈ ಗದ್ಯಶೈಲಿ ಅಷ್ಟೇನೂ ರಮಣೀಯವೆನಿಸುವುದಿಲ್ಲ.

ತಿರುಮಲಾರ್ಯ ಚಿಕ್ಕದೇವರಾಯನ ಬಾಲ್ಯಸ್ನೇಹಿತನಾಗಿದ್ದು ಸಹಾಧ್ಯಾಯಿಯಾಗಿ ಕೊನೆಗೆ ಮಂತ್ರಿಯಾದವ. ಇವನಿಗೆ ತನ್ನ ಸ್ನೇಹಿತನಾದ ಅರಸನ ಮೇಲೆ ಅತ್ಯಂತ ಪ್ರೀತಿ. ಅವನ ಪರಾಕ್ರಮ, ಆಡಳಿತವಿಚಕ್ಷಣೆ, ನ್ಯಾಯನಿಷ್ಠೆ, ಧರ್ಮಶ್ರದ್ಧೆ ಮತ್ತು ಔದಾರ್ಯಗಳನ್ನು ಹತ್ತಿರದಿಂದ ನೋಡಿ ಬಲ್ಲ ಈ ಕವಿ ಅರಸನನ್ನು ಮೆಚ್ಚಿ ಮನಃಪೂರ್ವಕವಾಗಿ ಹೊಗಳಿ ಕಾವ್ಯ ಕಟ್ಟಿರುವುದು ಆಶ್ಚರ್ಯವಲ್ಲ. ಕನ್ನಡದ ಮೊದಲ ಕವಿಯೆನಿಸಿದ ಪಂಪ ತನ್ನ ಅರಸ ಅರಿಕೇಸರಿಯನ್ನು ಹಾರ್ದಿಕವಾಗಿ ಮೆಚ್ಚಿದಂತೆ ತಿರುಮಲಾರ್ಯ ಚಿಕ್ಕದೇವರಾಯನನ್ನು ಮೆಚ್ಚಿಕೊಂಡು ಚಿಕದೇವರಾಯವಿಜಯಂ ಎಂಬ ಚಂಪೂಕಾವ್ಯವನ್ನೇ ರಚಿಸಿದ್ದಾನೆ. ಈ ಕವಿಯ ಕಾಲಕ್ಕೆ ಚಂಪೂ ಸಂಪ್ರದಾಯ ಖಿಲವಾಗಿ ಷಟ್ಪದೀ ಸಾಂಗತ್ಯಗಳ ರಚನೆ ಹೆಚ್ಚು ಜನಪ್ರಿಯವಾಗಿತ್ತು. ಆದರೂ ಈ ಪಂಡಿತಕವಿ ಚಂಪೂ ಪುನರುಜ್ಜೀವನಕ್ಕೆ ಹವಣಿಸಿದಂತೆ ತೋರುತ್ತದೆ. ಬಹುಶಃ ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಕೃಷಿಮಾಡಿದವ ಷಡಕ್ಷರದೇವ. ಆತ ತನ್ನ ಮೂರು ಕೃತಿಗಳನ್ನೂ ಚಂಪೂಕಾವ್ಯಗಳಾಗಿಯೇ ರಚಿಸಿದ. ಚಿಕದೇವರಾಜ ವಿಜಯಂ ಅಸಮಗ್ರವಾದ ಚಂಪೂಕಾವ್ಯ. ಆರು ಆಶ್ವಾಸಗಳು ಮಾತ್ರ ಸಿಕ್ಕಿವೆ. ಅಲ್ಲಲ್ಲಿ ತ್ರಿಪದಿ, ಸಾಂಗತ್ಯ ಮತ್ತು ಹಾಡುಗಳೂ ಬಂದಿವೆ. ಕವಿ ಅರಸನ ಬಾಲ್ಯದ ವಿದ್ಯಾಭ್ಯಾಸ ವೃತ್ತಾಂತವನ್ನೂ ಪರಾಕ್ರಮವನ್ನೂ ಈ ಕಾವ್ಯದಲ್ಲಿ ಹೊಗಳಿದ್ದಾನೆ. ಚಿಕ್ಕದೇವರಾಯನ ವೀಣಾವಾದಕನಕೌಶಲವನ್ನು ಅನೇಕ ಕಡೆ ಚೆನ್ನಾಗಿ ಬಣ್ಣಿಸಿದ್ದಾನೆ. ಈ ಕಾವ್ಯದಲ್ಲಿ ಕವಿಯ ವರ್ಣನಾವಿಲಾಸ ಮೆರುಗು ಕಂಡಿದೆ. ಇವನ ಚಂದ್ರವರ್ಣನೆ ಮೋಹಕವಾಗಿದೆ. ಚಂದ್ರನನ್ನು ಫಿರಂಗಿ ಗುಂಡಿಗೆ ಹೋಲಿಸುವುದಕ್ಕೂ ಕವಿ ಹಿಂತೆಗೆದಿಲ್ಲ! ಬಲಿ ಚಕ್ರವರ್ತಿಯನ್ನು ತುಳಿಯಲು ತ್ರಿವಿಕ್ರಮಸ್ವಾಮಿ ಎತ್ತಿದ ಪಾದದ ಉಂಗುಷ್ಠದ ವೃತ್ತಾಕಾರದ ಉಗುರೇ ಚಂದ್ರನೆಂದು ಕವಿಯ ಇನ್ನೊಂದು ಕಲ್ಪನೆ.

ಅಪ್ರತಿಮವೀರ ಎಂಬುದು ಚಿಕ್ಕದೇವರಾಯನ ಬಿರುದಾವಳಿಯಲ್ಲಿ ಒಂದು. ತಿರುಮಲಾರ್ಯ ರಚಿಸಿದ ಅಲಂಕಾರ ಗ್ರಂಥವಾದ ಅಪ್ರತಿಮವೀರಚರಿತೆಯಲ್ಲಿ ಕೊಟ್ಟಿರುವ ದೃಷ್ಟಾಂತ ಪದ್ಯಗಳೆಲ್ಲ ಚಿಕ್ಕದೇವರಾಯನ ಸ್ತೋತ್ರರೂಪವಾದುವು. ಹೀಗೆ ಆ ಗ್ರಂಥಕ್ಕೆ ಅದು ಸಾರ್ಥಕ ನಾಮಧೇಯವಾಗಿದೆ. ಇದರಲ್ಲಿ ಕವಿ ಪ್ರಸಿದ್ಧವಾದ ಸಂಸ್ಕೃತ ಸೂತ್ರಗಳನ್ನು ಹೇಳಿ ಕನ್ನಡದಲ್ಲಿ ಸಂಗ್ರಹವಾಗಿ ಅರ್ಥಬರೆದು ಕನ್ನಡ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಶಬ್ದಾಲಂಕಾರ ಅರ್ಥಾಲಂಕಾರಗಳನ್ನೂ ರಸಾಲಂಕಾರಗಳನ್ನೂ ಹೇಳಿ ಧ್ವನಿಮೀಮಾಂಸೆ

ಯನ್ನು ಕೈಬಿಟ್ಟಿದ್ದಾನೆ, ಚಿಕ್ಕದೇವರಾಯನ ಹೊಗಳಿಕೆಯೊಂದರ ಹೊರತು ಇದರಲ್ಲಿ ಹೊಸದೇನೂ ಇಲ್ಲವೆಂದೇ ಹೇಳಬೇಕು. ಅದುವರೆಗೆ ಪ್ರಸಿದ್ಧರಾಗಿದ್ದ ಸಂಸ್ಕೃತ ಲಾಕ್ಷಣಿಕರಲ್ಲಿ ಕೆಲವರ ಅಭಿಪ್ರಾಯಗಳೇ ಇಲ್ಲಿ ಬಂದಿವೆ.

ತಿರುಮಲಾರ್ಯನ ಕೃತಿಗಳು ಸಮಕಾಲೀನ ಚರಿತ್ರೆಯನ್ನು ತಿಳಿಯಲು ಸ್ವಲ್ಪ ಮಟ್ಟಿಗೆ ಸಹಾಯ ಮಾಡುತ್ತವೆ. ಆತ ಬರೆದ ಗದ್ಯಕಾವ್ಯ, ಅಲಂಕಾರಶಾಸ್ತ್ರ, ಚಂಪೂ, ಶತಕ–ಇವಿಷ್ಟರಲ್ಲಿಯೂ ಅರಸನ ಗುಣಕಥನವಿದ್ದು ಅವನ ಶೌರ್ಯ, ಔದಾರ್ಯ ಮತ್ತು ವೈದುಷ್ಯಗಳ ಪ್ರಶಂಸೆಯಿದೆ. ಈತ ಸ್ವತಃ ಕೃತಿರಚನೆ ಮಾಡಿದುದೇ ಅಲ್ಲದೆ ತನ್ನ ಅರಸನ ಕಾವ್ಯಸೃಷ್ಟಿಗೂ ನೆರವಾಗಿದ್ದಾನೆ. ಅರಸನ ಅತ್ಯಂತ ಸ್ನೇಹಾಭಿಮಾನಗಳಿಗೆ ಪಾತ್ರನಾದ ಈತ 'ಅವನೊಲ್ಮೆ ಪುಮಾ ಕೃತಿವೆತ್ತ ಪೊಲೆಸೆವ ಸುಕೃತಿ' ಎಂಬ ಪ್ರಶಂಸೆಯನ್ನು ಹೊಂದಿದ್ದಾನೆ.

ಚಿಕ್ಕದೇವರಾಯನ ಆಸ್ಥಾನದ ಇನ್ನೊಬ್ಬ ಮುಖ್ಯ ಕವಿ ಚಿಕುಪಾಧ್ಯಾಯ, ಇವನ ನಿಜವಾದ ಹೆಸರು ಲಕ್ಷ್ಮೀಪತಿ. ಈತ ಇಪ್ಪಂತ್ತೆಂಟಕ್ಕೂ ಹೆಚ್ಚಿನ ಕೃತಿಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಅನೇಕ ಮಾಹಾತ್ಮ್ಯಗ್ರಂಥಗಳು. ಯದುಗಿರಿ ಮಾಹಾತ್ಮ್ಯೆ, ವೆಂಕಟಗಿರಿ ಮಾಹಾತ್ಮ್ಯೆ, ಶ್ರೀರಂಗ ಮಹಾತ್ಮ್ಯೆ, ಹಸ್ತಿಗಿರಿ ಮಾಹಾತ್ಮ್ಯೆ, ಕಮಲಾಚಲ ಮಾಹಾತ್ಮ್ಯೆ–ಹೀಗೆ ಇವುಗಳಲ್ಲಿ ಕೆಲವು ಚಂಪೂಕಾವ್ಯಗಳು, ಇನ್ನು ಕೆಲವು ಸಾಂಗತ್ಯಗಳು. ಉಳಿದುವು ಗದ್ಯ ಗ್ರಂಥಗಳು. ಇವು ಸ್ಥಳಪುರಾಣಗಳಾಗಿದ್ದು ಶ್ರೀವೈಷ್ಣವಮತ ಸಿದ್ಧಾಂತ ನಿರೂಪಣೆಗೆ ಅನುಕೂಲವಾಗಿವೆ. ನೀತಿಪ್ರಚಾರ ಮತ್ತು ಭಗವದ್ಗುಣ ಗಾನಗಳೇ ಕಾವ್ಯೋದ್ದೇಶ. ಆ ಉದ್ದೇಶವನ್ನು ಚಿಕುಪಾಧ್ಯಾಯ ಸಾಧಿಸಿಕೊಂಡಿದ್ದಾನೆ.

ವಿಷ್ಣು ಪುರಾಣವನ್ನು ಈ ಕವಿ ಚಂಪೂರೂಪದಲ್ಲಿಯೂ ಗದ್ಯರೂಪದಲ್ಲಿಯೂ ಬರೆದಿದ್ದಾನೆ. ರುಕ್ಮಾಂಗದ ಚರಿತ್ರೆ, ಸಾತ್ತ್ವಿಕ ಬ್ರಹ್ಮವಿದ್ಯಾವಿಲಾಸ ಮತ್ತು ದಿವ್ಯಸೂರಿಚರಿತೆ ಎಂಬ ಚಂಪೂಕೃತಿಗಳೂ ಇವನವೇ. ಕೊನೆಯ ಎರಡು ಗ್ರಂಥಗಳೂ ಶ್ರೀವೈಷ್ಣವ ಸಿದ್ಧಾಂತವನ್ನು ನಿರೂಪಿಸುತ್ತವೆ. ತಮಿಳುನಾಡಿನ ವೈಷ್ಣವ ಆಳ್ವಾರುಗಳ ಕಥೆಗಳನ್ನೇ ದಿವ್ಯ ಸೂರಿಚರಿತೆಯಲ್ಲಿ ಕವಿ ಹೇಳಿದ್ದಾನೆ. ಕಥೆ, ತತ್ತ್ವಗಳ ದೃಷ್ಟಿಯಿಂದ ಇವಕ್ಕೆ ಪ್ರಾಶಸ್ತ್ಯ ಸಲ್ಲಬಹುದು. ಆದರೆ ಇವುಗಳಲ್ಲಿ ಕಾವ್ಯಕ್ಕೆ ಜೀವಸ್ವರೂಪವಾದ ರಸಾನುಭವದ ದೃಷ್ಟಿಯಿಂದ ಮೆಚ್ಚುಗೆ ಸಲ್ಲಲಾರದು. ತಮಿಳಿನಿಂದ ಶ್ರೀವೈಷ್ಣವ ಗುರುಗಳ ಕಥೆಗಳನ್ನು ಕನ್ನಡಕ್ಕೆ ತಂದ ಉಪಕಾರ ಚಿಕುಪಾಧ್ಯಾಯನದು. ಕವಿ ತನ್ನ ಗ್ರಂಥಗಳಲ್ಲಿ ಕನ್ನಡನಾಡನ್ನು ಬಹಳ ಹೃದ್ಯವಾಗಿ ವರ್ಣಿಸಿದ್ದಾನೆ.

ಆ ಕಾಲದ ಗದ್ಯಶೈಲಿಯನ್ನು ತಿಳಿಯಲು ಚಿಕುಪಾಧ್ಯಾಯನ ಕೃತಿಗಳು ಉಪಯುಕ್ತವಾಗಿವೆ.

ಚಿಕ್ಕುಪಾಧ್ಯಾಯನಷ್ಟು ಕೃತಿಗಳನ್ನು ಅದುವರೆಗಿನ ಕನ್ನಡಕವಿಗಳು ಯಾರೂ ರಚಿಸಿಲ್ಲ. ಈತ ಪುರಾಣ ಪುಣ್ಯಕಥೆಗಳನ್ನೇ ಅಲ್ಲದೆ ವರ್ಣನಾಪ್ರಧಾನವಾದ ಕೆಲವು ಕೃತಿಗಳನ್ನೂ ಕಟ್ಟಿದ್ದಾನೆ. ರಂಗಧಾಮಸ್ತುತಿ ಸಾಂಗತ್ಯ ಶ್ರೀರಂಗನಾಥಸ್ವಾಮಿಯನ್ನು ಅಡಿಯಿಂದ ಮುಡಿಯವರೆಗೆ ವರ್ಣಿಸುತ್ತದೆ. ಶ್ರೀಕೃಷ್ಣ ರೂಪವನ್ನು ಈಕ್ಷಿಸಿದ ಸ್ತ್ರೀಯರ ಸರಸಸಲ್ಲಾಪದ ಇರವನ್ನು ವಿವರಿಸಿ ಬರೆಯುವುದೇ ಶೃಂಗಾರಶತಕ ಸಾಂಗತ್ಯದ ಧ್ಯೇಯ. ಈ ಕವಿ ಚಿತ್ರಕವಿತೆಯ ಕ್ಷೇತ್ರವನ್ನೂ ಬಿಟ್ಟಿಲ್ಲ. ಅಕ್ಷರ ಮಾಲಿಕಾಸಾಂಗತ್ಯ ಎಂಬ ಕಾವ್ಯ ರಂಗನಾಥ ದೇವರ ಮೇಲೆ ಕಕಾರದಿಂದ ಕ್ಷಕಾರ ಪರ್ಯಂತ ಅಕ್ಷರ ಮೊದಲಾಗಿಯೂ ಗುಣಿತದಿಂದಲೂ ಕಲ್ಪಿಸಿ ಹೇಳಿದ ಸಾಂಗತ್ಯ. ಚಿತ್ರಶತಕ ಸಾಂಗತ್ಯ ಎಂಬ ಹೆಸರಿನಿಂದಲೇ ಚಿಕುಪಾಧ್ಯಾಯ ಒಂದು ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ಕನ್ನಡ ಭಾಷೆಯನ್ನು ಕುರಿತು ಹೇಳಿರುವ ಕೆಲವು ಮಾತುಗಳು ಚಮತ್ಕಾರವಾಗಿವೆ.

ಈತನ ಕಾಮಂದಕನೀತಿ ಎಂಬುದು ಸಂಸ್ಕೃತದ ಕೃತಿಗೆ ಕನ್ನಡ ಟೀಕೆ. ಕವಿ ಇದಕ್ಕೆ ಉಪಾಧ್ಯಾಯನಿರಪೇಕ್ಷಾ ಎಂಬ ಹೆಸರು ಕೊಟ್ಟಿದ್ದಾನೆ. ಇದು ಆಧುನಿಕ ಯುಗದ ಅನೇಕ ಸ್ವಯಂಬೋಧಿನಿಗಳ ಮುನ್ಸೂಚನೆಯಂತೆ ತೋರುತ್ತದೆ.

ಚಿಕ್ಕುಪಾಧ್ಯಾಯ ಗ್ರಂಥಕರ್ತನಷ್ಟೇ ಅಲ್ಲ; ಅರಸನ ಕರಣಿಕಾಗ್ರೇಸರನಾಗಿಯೂ ಆಮೇಲೆ ಮಂತ್ರಿಯಾಗಿಯೂ ಇದ್ದು ಆಶ್ರಿತಕಲ್ಪತರುವಾಗಿ ಉನ್ನತ ಧ್ಯೇಯ ಜೀವನವನ್ನು ನಡೆಸಿದ ಶ್ರೀವೈಷ್ಣವ ಬ್ರಾಹ್ಮಣಕವಿ, ಪಂಡಿತ. ಈತ ತನ್ನ ಕೃತಿಗಳ ಆರಂಭದಲ್ಲಿ ತನ್ನ ಅರಸನನ್ನು ಕುರಿತು ಹೇಳಿರುವ ಸಂಗತಿಗಳನ್ನೆಲ್ಲ ಒಟ್ಟುಗೂಡಿಸಿದರೆ ಚಿಕ್ಕದೇವರಾಯನ ವ್ಯಕ್ತಿತ್ವ ಚಿತ್ರ ಲಭಿಸುತ್ತದೆ.

ಈ ಕಾಲದ ಇನ್ನೊಬ್ಬ ಮುಖ್ಯ ಕವಿ ಸಿಂಗರಾರ್ಯ, ಈತ ತಿರುಮಾಲರ್ಯನ ತಮ್ಮ. ಮಿತ್ರವಿಂದಾಗೋವಿಂದ ಎಂಬ ಕನ್ನಡದ ಮೊದಲ ನಾಟಕವನ್ನು ರಚಿಸಿದ ಕೀರ್ತಿ ಇವನಿಗೆ ಸಂದಿದೆ. ಶ್ರೀಹರ್ಷನ ರತ್ನಾವಳಿ ನಾಟಕದ ಭಾಷಾಂತರವಿದು. ಆದರೆ ವತ್ಸರಾಜನಿಗೆ ಪ್ರತಿಯಾಗಿ ಶ್ರೀಕೃಷ್ಣನೇ ಇಲ್ಲಿ ಕಥಾನಾಯಕ; ರತ್ನಾವಳಿಯ ಪ್ರತಿಯಾಗಿ ಕೃಷ್ಣನ ಅಷ್ಟಮಹಿಷಿಯರಲ್ಲೊಬ್ಬಳಾದ ಮಿತ್ರವಿಂದೆಯೇ ಕಥಾನಾಯಿಕೆ. ಇವರ ಪ್ರಣಯಕಥೆ ಈ ನಾಟಕದ ವಸ್ತು. ಇದು ಸಂಸ್ಕೃತ ನಾಟಕವನ್ನೇ ಬಹಳ ಮಟ್ಟಿಗೆ ಅನುಸರಿಸಿದ್ದರೂ ಮಕ್ಕೀಕಾಮಕ್ಕಿ ಎನ್ನುವಂಥ ಅನುವಾದವಲ್ಲ. ಕವಿ ಕೆಲವು ವ್ಯತ್ಯಾಸಗಳನ್ನು ಮಾಡಿದ್ದಾನೆ. ನಾಯಕ ನಾಯಿಕೆಯರಿಗಷ್ಟೇ ಅಲ್ಲದೆ ಉಳಿದ ಪಾತ್ರಗಳಿಗೂ ಸೂಕ್ತವಾದ ನಾಮಾಂತರಗಳನ್ನು ಕಲ್ಪಿಸಿದ್ದಾನೆ.

ಚಿಕ್ಕದೇವರಾಯನ ಆಸ್ಥಾನಕವಿಗಳೇ ಅಲ್ಲದೆ ಅವನ ಪರಿವಾರಕ್ಕೆ ಸೇರಿದವರೂ ಕನ್ನಡದಲ್ಲಿ ಕೃತಿರಚನೆ ಮಾಡಿದ್ದಾರೆ. ಅವರಲ್ಲಿ ಹೊನ್ನಮ್ಮನೆಂಬ ಕಬ್ಬಿಗಿತಿ ಪ್ರಧಾನಳು, ಇವಳು ಚಿಕ್ಕದೇವರಾಯನ ಅಂತಃಪುರದ ಊಳಿಗಕ್ಕೆ ಸೇರಿದವಳು, ಸಂಚಿಯ ಹೊನ್ನಿ ಎಂದೇ ಇವಳ ಹೆಸರು. ಇವಳ ಗ್ರಂಥ ಹದಿಬದೆಯ ಧರ್ಮ ಎಂಬ ಸಾಂಗತ್ಯಕಾವ್ಯ. ಅಕ್ಕಮಹಾದೇವಿಯಾದ ಮೇಲೆ ಕನ್ನಡದಲ್ಲಿ ಶ್ರೇಷ್ಠ ಕಬ್ಬಿಗಿತಿ ಈಕೆಯೇ. ಹೊನ್ನಮ್ಮ ಆರಿಸಿಕೊಂಡಿರುವ ವಿಷಯ ಸ್ತ್ರೀಯರಿಗೆ ನೇರವಾಗಿ ಸಂಬಂಧಿಸಿದ್ದು. ಅದನ್ನು ಬರೆದಿರುವ ಛಂದಸ್ಸು ಕೂಡ ಸ್ತ್ರೀಯರಿಗೆ ಹಿತವಾದ ಸಾಂಗತ್ಯ. ಒಂಬತ್ತು ಸಂಧಿಗಳುಳ್ಳ ಈ ಗ್ರಂಥದಲ್ಲಿ ಹೊನ್ನಮ್ಮ ಮನ್ವಾದಿ ಧರ್ಮಶಾಸ್ತ್ರಗಳಲ್ಲಿಯೂ ರಾಮಾಯಣ ಮಹಾಭಾರತಗಳಲ್ಲಿಯೂ ಹೇಳಿರುವ ಅಂಶಗಳನ್ನೇ ಸಂಗ್ರಹಿಸಿ ಹೇಳಿರುವೆನೆಂದು ತಿಳಿಸಿದ್ದಾಳೆ. ಇಲ್ಲಿ ವರ್ಣಿತವಾಗಿರುವ ಸತೀಧರ್ಮ ಸಂಪ್ರದಾಯಾನುಸಾರವಾದುದು. ಆದರೆ ಅದನ್ನು ಹೊನ್ನಮ್ಮ ಹೇಳಿರುವ ರೀತಿ ಮನಮೋಹಕವಾಗಿದೆ. ಆಕೆ ಕೊಡುವ ಉಪಮೆಗಳು ಅವಳ ರಸಜ್ಞತೆ ಔಚಿತ್ಯಜ್ಞಾನಗಳಿಗೆ ಸಾಕ್ಷಿಯಾಗಿವೆ.

ಊಳಿಗದ ಹೆಣ್ಣೊಬ್ಬಳ ಕವಿತಾಪ್ರತಿಭೆಯನ್ನು ಕಂಡುಕೊಂಡು ಅವಳನ್ನು ಪ್ರೋತ್ಸಾಹಿಸಿ ಕಾವ್ಯರಚನೆಗೆ ಹುರಿದುಂಬಿಸಿದ ರಾಣಿ ದೇವಾಜಮ್ಮಣ್ಣಿ, ರಾಜ ಚಿಕ್ಕದೇವರಾಯ ಪ್ರಶಂಸೆಗೆ ಪಾತ್ರರು. ಅರಸ ಅವಳನ್ನು ಸರಸಸಾಹಿತ್ಯದ ವರದೇವತೆಯೆಂದು ಹೊಗಳಿದನಂತೆ. ಈ ಹೊಗಳಿಕೆ ಅಭಿಮಾನಪ್ರೇರಿತವಾಗಿದ್ದರೂ ತೀರ ನಿರರ್ಥಕವಲ್ಲ. ಹೊನ್ನಮ್ಮನ ಕವಿತಾರಚನೆ ಮಧುರವಾಗಿದೆ. ಹೆಣ್ಣಿನ ಸ್ಥಾನಮಾನಗಳನ್ನು ಸ್ಪಷ್ಟೋಕ್ತಿಯಿಂದ ವಿವರಿಸಿ 'ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು, ಕಣ್ಣುಕಾಣದ ಗಾವಿಲರು' ಎಂದು ಕಟುವಾಗಿ ಟೀಕಿಸುವ ಧೀರೆಯಾಗಿದ್ದಾಳೆ, ಹೊನ್ನಮ್ಮ.

ಪದ್ಮಿನೀಕಲ್ಯಾಣದಲ್ಲಿ ತಿರುಪತಿ ಶ್ರೀನಿವಾಸನಿಗೂ ಪದ್ಮಾವತಿಗೂ ನಡೆದ ವಿವಾಹ ವೈಭವವನ್ನು ಬಣ್ಣಿಸಿದ ಕಬ್ಬಿಗಿತಿ ಶೃಂಗಾರಮ್ಮನೂ ಚಿಕ್ಕದೇವರಾಯನ ಪೋಷ್ಯವರ್ಗಕ್ಕೆ ಸೇರಿದವಳೇ. ಇವಳ ಕೃತಿ ನೂರತೊಂಬತ್ತು ಪದ್ಯಗಳುಳ್ಳ ಪುಟ್ಟ ಸಾಂಗತ್ಯಕಾವ್ಯ.

ತಿಮ್ಮಕವಿ ಚಿಕ್ಕದೇವರಾಯನ ಆಶ್ರಿತನಾಗಿದ್ದು ಅವನ ಸೂಚನೆ ಹಾಗೂ ಚಿಕುಪಾಧ್ಯಾಯನ ಪ್ರೋತ್ಸಾಹಗಳಿಂದ ಯಾದವಗಿರಿ ಮಾಹಾತ್ಮ್ಯ, ವೆಂಕಟಗಿರಿ ಮಾಹಾತ್ಮ್ಯ, ಪಶ್ಚಿಮರಂಗ ಮಾಹಾತ್ಮ್ಯ ಎಂಬ ಮೂರು ಚಂಪೂಕಾವ್ಯಗಳನ್ನು ರಚಿಸಿದ್ದಾನೆ. ಈ ಕಾವ್ಯಗಳ ವಸ್ತುವನ್ನು ಚಿಕುಪಾಧ್ಯಾಯನೇ ಸಾಂಗತ್ಯರೂಪದಲ್ಲಿಯೂ ಗದ್ಯರೂಪದಲ್ಲಿಯೂ ಹೇಳಿದ್ದನಾದರೂ ಅದನ್ನೇ ಚಂಪೂಕಾವ್ಯವಾಗಿ ಹೇಳುವ ಉತ್ಸಾಹ, ಈ ಕವಿಗೆ. ಇದು ಚಂಪೂರೂಪದ ಪುನರುಜ್ಜೀವನದಂತೆ ತೋರಬಹುದು. ಅದಕ್ಕಿಂತ ಮಿಗಿಲಾಗಿ ಆ ಕಾಲದಲ್ಲಿ ಶ್ರೀವೈಷ್ಣವಧರ್ಮ ರಾಜಮನ್ನಣೆಯನ್ನೂ ಜನಾದರಣೆಯನ್ನೂ ಗಳಿಸಿದ್ದುದರಿಂದ ಅದಕ್ಕೆ ಸಂಬಂಧಿಸಿದ ಕೃತಿಗಳನ್ನು ಮತ್ತೆ ಮತ್ತೆ ರಚಿಸುವ ಉತ್ಸಾಹ ಶ್ರದ್ಧೆಗಳೂ ವಿಶೇಷವಾಗಿದ್ದುದು ವ್ಯಕ್ತವಾಗುತ್ತದೆ. ಮಲ್ಲಿಕಾರ್ಜುನನೆಂಬ ಇನ್ನೊಬ್ಬ ಕವಿ ಹನ್ನೆರಡು ಆಶ್ವಾಸನೆಗಳುಳ್ಳ ಶ್ರೀರಂಗಮಹಾತ್ಮ್ಯವೆಂಬ ಇನ್ನೊಂದು ಚಂಪೂಕಾವ್ಯವನ್ನು ಕಟ್ಟಿದ್ದಾನೆ. ಅದರಲ್ಲಿ ಬ್ರಹ್ಮಾಂಡ ಪುರಾಣೋಕ್ತವಾದ ಶ್ರೀರಂಗಕ್ಷೇತ್ರದ ಮಹಿಮೆಯ ವರ್ಣನೆಯಿದೆ. ವೇಣುಗೋಪಾಲ ವರಪ್ರಸಾದನೆಂಬ ಹೆಸರಿನ ಕವಿಯೊಬ್ಬ ಚಿಕದೇವ ರಾಜವಂಶಾವಳಿ ಎಂಬ ಒಂದು ಪುಟ್ಟ ಚಂಪೂ ಕಾವ್ಯವನ್ನು ಕಟ್ಟಿ ಚಿಕ್ಕದೇವರಾಜನ ಪೂರ್ವಿಕರ ಕಥೆಯನ್ನು ಸಂಗ್ರಹವಾಗಿ ಹೇಳಿದ್ದಾನೆ. ನೂರಮೂವತ್ತೆಂಟು ಪದ್ಯಗಳು ಮಾತ್ರವಿರುವ ಈ ಚಿಕ್ಕ ಕಾವ್ಯದಲ್ಲಿ ಕಥೆಗಿಂತ ವರ್ಣನೆಯೇ ಹೆಚ್ಚಾಗಿದ್ದು ಸಂಸ್ಕೃತ ಸಮಾಸವಿಲಸಿತವಾದ ಪ್ರೌಢಶೈಲಿ ಎದ್ದುಕಾಣುತ್ತದೆ. ದಶಾವತಾರಚರಿತೆಯೆಂಬ ಚಂಪೂಕಾವ್ಯವೂ ಈ ಕಾಲದ್ದೇ. ಅದು ಕವಿಗಳ ಕರ್ಣ ರಸಾಯನ, ನವರಸಿಕರ ಜಿಹ್ವಾಮೃತ. ಇದರ ಕರ್ತೃ ಮಲ್ಲರಸನೂ ಚಿಕುಪಾಧ್ಯಾಯನ ಶಿಷ್ಯವರ್ಗಕ್ಕೆ ಸೇರಿದ್ದು ಅವನ ಆಜ್ಞಾನುಸಾರವಾಗಿ ಕೃತಿರಚನೆ ಮಾಡಿದ್ದಾನೆ.

ಈ ಕಾಲದ ಚಂಪೂಕವಿಗಳಲ್ಲೆಲ್ಲ ಶ್ರೇಷ್ಠನಾದವ ಷಡಕ್ಷರದೇವ. ಈತ ಅರಸನ ಆಸ್ಥಾನಕವಿಯಾಗಿರದಿದ್ದರೂ ಅರಸನ ತಾಯಿ ಅಮೃತಾಂಬೆಯ ಆಶ್ರಯ ಹೊಂದಿದ್ದನೆಂದು ತೋರುತ್ತದೆ. ರಾಜಶೇಖರವಿಲಾಸ, ಶಬರಶಂಕರವಿಲಾಸ, ವೃಷಭೇಂದ್ರವಿಜಯ ಎಂಬ ಮೂರು ಪ್ರೌಢ ಚಂಪೂಕಾವ್ಯಗಳನ್ನು ರಚಿಸಿ ಈತ ಕೀರ್ತಿವಂತನಾಗಿದ್ದಾನೆ. ರಾಜಶೇಖರವಿಲಾಸ ಚೋಳದೇಶದ ಅರಸನಾದ ಸತ್ಯೇಂದ್ರನ ಮಗ ಮಂತ್ರಲಕ್ಷ ಅಥವಾ ರಾಜಶೇಖರನ ಭಕ್ತಿಪರೀಕ್ಷೆಯ ಕಥೆ. ಇದನ್ನು ತಮಿಳಿನಿಂದ ಕನ್ನಡಕ್ಕೆ ಮೊದಲು ತಂದವ ಗುಬ್ಬಿಯ ಮಲ್ಲಣಾರ್ಯನೆಂಬ ಷಟ್ಪದಿ ಕವಿ. ಭಾವಚಿಂತಾರತ್ನವೇ ಮಲ್ಲಣಾರ್ಯನ

ಕೃತಿ. ಆ ಕಥೆಯನ್ನೇ ಷಡಕ್ಷರಿ ಚಂಪೂ ರೂಪದಲ್ಲಿ ರಚಿಸಿದ್ದಾನೆ. ಹದಿನಾಲ್ಕು ಆಶ್ವಾಸಗಳಿಂದ ಕೂಡಿದ ಈ ದೊಡ್ಡ ಕಾವ್ಯ ಷಡಕ್ಷರಿಯ ಪ್ರೌಢಭಾಷೆ, ಕವಿತಾಚಾತುರ್ಯ ಮತ್ತು ವರ್ಣನಾಸಕ್ತಿಗಳಿಗೆ ಸಾಕ್ಷಿಯಾಗಿದೆ. ಕಥೆ ಸ್ವಲ್ಪ, ವರ್ಣನೆ ಬಹಳ. ಬಸವರಾಜವಿಜಯ ಅಥವಾ ವೃಷಭೇಂದ್ರವಿಜಯ ಶಿವಶರಣ ಬಸವಣ್ಣನ ಅವತಾರಕಥೆಯನ್ನು ಹೇಳುವ ಕಾವ್ಯ. ಕೊನೆಯಲ್ಲಿ ಆತ ಬರೆದದ್ದು ಶಬರಶಂಕರವಿಲಾಸ. ಇಂದ್ರಕೀಲದಲ್ಲಿ ತನ್ನನ್ನು ಕುರಿತು ತಪಸ್ಸು ಮಾಡಿದ ಅರ್ಜುನನಿಗೆ ವರ ಕೊಡಲು ಕಿರಾತ ವೇಷ ಧರಿಸಿ ಬಂದ ಶಂಕರನ ಲೀಲೆಯ ಕಥನವೇ ಇಲ್ಲಿನ ವಸ್ತು. ಶಿವನ ಪಂಚವಿಂಶತಿ ಲೀಲೆಗಳಲ್ಲಿ ಒಂದಾದ ಶಬರಿಲೀಲೆ ಕವಿಯ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿದೆ. ಷಡಕ್ಷರಿ ಮಹಾ ಶಿವಭಕ್ತ, ಪ್ರೌಢಪಂಡಿತ ಕವಿ. ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಇವನಿಗೆ ಸಮಾನವಾದ ಪಾಂಡಿತ್ಯವಿದೆ. ಇವನ ವಾಗ್ವೈಭವ ಮೆಚ್ಚತಕ್ಕದ್ದು. ಹಂಪೆಯ ಹರಿಹರನಂತೆ ಶಿವ, ಶಿವಭಕ್ತರನ್ನಲ್ಲದೆ ಅನ್ಯರನ್ನು ಹೊಗಳಬಾರದೆಂಬ ವ್ರತ ಷಡಕ್ಷರದೇವನಿಗೆ. ಚಮತ್ಕಾರವಾದ ವರ್ಣನೆಗಳು, ನಿರರ್ಗಳವಾದ ಶೈಲಿ ಈ ಕವಿಯ ವಿಶಿಷ್ಟ ಲಕ್ಷಣಗಳು.

ಚಿಕ್ಕದೇವರಾಯನ ಕಾಲದ ಕವಿಗಳು ಹೆಚ್ಚಾಗಿ ಸಾಂಗತ್ಯ, ಗದ್ಯ ಮತ್ತು ಚಂಪೂಕ್ಷೇತ್ರಗಳಲ್ಲಿ ಕೃಷಿಮಾಡಿದವರು. ಹೊನ್ನಮ್ಮ ಶೃಂಗಾರಮ್ಮರನ್ನು ಉಳಿದ ಮಿಕ್ಕೆಲ್ಲ ಕವಿಗಳೂ ಸಂಸ್ಕೃತ ಭಾಷಾ ಸಾಹಿತ್ಯಗಳ ಪರಿಚಯವಿದ್ದವರು. ಹಲವರು ದೊಡ್ಡ ಪಂಡಿತರೇ ಆಗಿದ್ದರು. ಶ್ರೀವೈಷ್ಣವ ಧರ್ಮಪ್ರಚಾರ ಪ್ರಬಲವಾಗಿ ನಡೆದಿದ್ದರೂ ಬೇರೆ ಮತಪಂಥಗಳಿಗೆ ಸೇರಿದವರೂ ಕೃತಿರಚನೆ ಮಾಡಿದ್ದಾರೆ. ಒಡೆಯರ ಕಾಲದ ಸಾಹಿತ್ಯೇತಿಹಾಸದಲ್ಲಿ ಚಿಕ್ಕದೇವರಾಯನ ಕಾಲ ವೈಭವೋಪೇತವಾದ ಅವಧಿ. ರಾಜ್ಯ, ಮಂತ್ರಿ, ಊಳಿಗದವರು, ವಿದ್ವಾಂಸರು, ಸನ್ಯಾಸಿಗಳು, ಸ್ತ್ರೀಯರು–ಎಲ್ಲ ಬಗೆಯ ಜನರೂ ಕನ್ನಡ ಕಾವ್ಯದೇವಿಯ ಕೈಂಕರ್ಯವನ್ನು ಕೈಕೊಂಡು ಕೃತಿರಚನೆ ಮಾಡಿದ ಸುವರ್ಣಯುಗವೆಂದು ಅದನ್ನು ಹೇಳಬೇಕು. ಕನ್ನಡ ಈ ಕಾಲದಲ್ಲಿ ರಾಜಪೂಜ್ಯವೂ ಆಗಿತ್ತು, ಲೋಕಮಾನ್ಯವೂ ಆಗಿತ್ತು. ಈ ಕಾಲದ ಕನ್ನಡ ಸಾಹಿತ್ಯ ಪಂಡಿತ ಪಾಮರರಿಬ್ಬರಿಗೂ ರಂಜನೆಯನ್ನು ಕೊಡಬಲ್ಲ ಉತ್ತಮ ಸಾಹಿತ್ಯ.

ರಂಗಾವಧೂತ ಅಥವಾ ಮಹಲಿಂಗರಂಗನೆಂಬ ಈ ಕಾಲದ ಷಟ್ಪದಿ ಕವಿಯೊಬ್ಬ ಸ್ಮರಣಾರ್ಹನಾಗಿದ್ದಾನೆ. ಅವನ ಕೃತಿ ಅನುಭವಾಮೃತ. ಹನ್ನೊಂದು ಅಧ್ಯಾಯಗಳುಳ್ಳ ಈ ಭಾಮಿನೀಷಟ್ಪದಿಯ ಕಾವ್ಯದಲ್ಲಿ ಕವಿ 'ಅಖಿಳವೇದಾಂತಾರ್ಥವನ್ನು ಸಂಗ್ರಹಿಸಿ ಪೇಳುವೆ ಸಕಲರಿಗೆ ತಿಳಿವಂತೆ' ಎಂದು ಪ್ರತಿಜ್ಞೆ ಮಾಡಿದ್ದಾನೆ. ತಿಳಿಯ ಬೇಕಾದ ಧರ್ಮರಹಸ್ಯವನ್ನು ಕನ್ನಡದಿಂದಲೇ ತಿಳಿದುಕೊಳ್ಳುವುದು ಶಕ್ಯವಾದರೆ ಸಂಸ್ಕೃತದ ಅಗತ್ಯವೇನು? ಎಂದು ಮಹಲಿಂಗರಂಗನು ಪ್ರಶ್ನಿಸುವ ಸಾಹಸಮಾಡಿರುವುದು ಮೆಚ್ಚತಕ್ಕ ವಿಚಾರ. ಕನ್ನಡದ ಉಪಯುಕ್ತತೆ ಮತ್ತು ಪ್ರಾಶಸ್ತ್ಯಗಳನ್ನು ನಿರೂಪಿಸಿ ಈ ಕವಿ ಹೇಳುವ ಮಾತುಗಳನ್ನು ಸಂಸ್ಕೃತದ ದೂಷಣೆಯೆಂದು ತಿಳಿಯುವುದು ಅನುಚಿತ. ಇವನು ಅದ್ವೈತತತ್ತ್ವವನ್ನು ಬಹಳ ಸುಲಭಶೈಲಿಯ ತಿಳಿಗನ್ನಡದಲ್ಲಿ ವಿವರಿಸಿದ್ದಾನೆ. ಈ ಕೃತಿ ಸಂಸ್ಕೃತಕ್ಕೆ ಅನುವಾದವಾಗಿರುವಂತೆ ತಿಳಿದು ಬಂದಿದೆ. ವಿಷಯ, ಭಾಷೆ ಎರಡೂ ರಂಗನಾಥನಿಗೆ ಕರಗತವಾಗಿವೆ. ಆದ್ದರಿಂದಲೇ ಇವನ ಈ ತತ್ತ್ವಗ್ರಂಥ ಲೋಕಪ್ರಿಯವಾಗಿದೆ. ಕನ್ನಡ ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ಕಳೆದ ಕಬ್ಬಿನಂತೆ, ಕಾದು ಆರಿದ ಹಾಲಿನಂತೆ, ಸುಲಭವಾಗಿರುವುದೆಂದು ಹೇಳಿದ ಕವಿ ಇವನೇ.

ಸು. 1680ರಲ್ಲಿದ್ದ ಚಿದಾನಂದನೆಂಬ ಜೈನಕವಿ ಮುನಿವಂಶಾಭ್ಯುದಯವನ್ನು ರಚಿಸಿ ಜೈನಯತಿ ಪರಂಪರೆಯನ್ನು ವರ್ಣಿಸಿದ್ದಾನೆ. ಶ್ರುತಕೇವಲಿಯಾದ ಬಾಹುಬಲಿ ಮತ್ತು ಚಂದ್ರಗುಪ್ತರ ವೃತ್ತಾಂತ ಇಲ್ಲಿ ವರ್ಣಿತವಾಗಿದೆ. ಅದಕ್ಕಿಂತ ಹೆಚ್ಚಾಗಿ ಈ ಸಾಂಗತ್ಯಕಾವ್ಯ ಚಿಕ್ಕದೇವರಾಯನ ವಂಶಾವಳಿಯನ್ನು ಹೊಗಳಿದೆ. ಮೈಸೂರಿನ ಅರಸರು ಶ್ರವಣಬೆಳಗೊಳದ ಜೈನಯತಿಗಳಿಗೆ ಮಾಡಿದ ಸಹಾಯದ ವರ್ಣನೆ ಈ ಕಾವ್ಯದಲ್ಲಿ ಬಂದಿದೆ. ಈ ಕಾವ್ಯ ಚಿಕ್ಕದೇವರಾಜನಿಗೆ ಸಂಬೋಧಿಸಿದಂತೆ ತೋರುತ್ತದೆ.

ಚಿಕ್ಕದೇವರಾಯನ ಕಾಲದಲ್ಲಿ ವಿಶೇಷವಾಗಿ ನಡೆದ ಸಾಂಗತ್ಯಕಾವ್ಯ ಮತ್ತು ಮಾಹಾತ್ಮ್ಯ ಗ್ರಂಥಗಳ ರಚನೆ ಮುಂದಿನ ಅರಸರ ಕಾಲಕ್ಕೂ ಮುಂದುವರಿಯಿತು. ದೊಡ್ಡ ಕೃಷ್ಣರಾಜನ ಧರ್ಮಪತ್ನಿಯಾದ ಚೆಲುವಾಂಬೆ ಎಂಬ ಕಬ್ಬಿಗಿತಿ ವರನಂದೀ ಕಲ್ಯಾಣ, ವೆಂಕಟಾಚಲಮಹಾತ್ಮೆ ಎಂಬ ಕಾವ್ಯಗಳನ್ನೂ ಕೆಲವು ಲಾಲಿ ಹಾಡುಗಳನ್ನೂ ರಚಿಸಿದ್ದಾಳೆ. ಕಳಲೆ ನಂಜರಾಜನೆಂಬ ಒಬ್ಬ ದಳವಾಯಿ (1740) ಅನೇಕ ಕನ್ನಡ ಕೃತಿಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಹಲವು ಸ್ಥಳಪುರಾಣಗಳಂತಿರುವ ಮಹಾತ್ಮೆಗಳು. ಗರಳಪುರಿ, ಕಾಶಿ, ಭದ್ರಗಿರಿ, ಕಕ್ಕುದ್ಗಿರಿ ಮೊದಲಾದ ಪುಣ್ಯಸ್ಥಳಗಳ ಮಹಿಮೆಯನ್ನು ಪ್ರಶಂಸಿಸುವ ಕಾವ್ಯಗಳು ಈ ಸೇನಾನಿಯ ಹೆಸರಿನಲ್ಲಿ ಪ್ರಸಿದ್ಧವಾಗಿವೆ. ಈತ ರಚಿಸಿರುವ ಹಾಲಾಸ್ಯಮಹಾತ್ಮೆ ಎಪ್ಪತ್ತೊಂದು ಅಧ್ಯಾಯಗಳನ್ನೊಳಗೊಂಡ ವಿಸ್ತಾರವಾದ ಗ್ರಂಥ. ಇದಕ್ಕೆ ನಂಜರಾಜವಾಣೀವಿಲಾಸ ಎಂಬ ಇನ್ನೊಂದು ಹೆಸರೂ ಇದೆ. ಇದರಲ್ಲಿ ಮಧುರೆಯ ಸುಂದರೇಶ್ವರಸ್ವಾಮಿಯ ಲೀಲಾಕಥನ ವಿಸ್ತಾರವಾಗಿ ಮೂಡಿಬಂದಿದೆ.

ನಂಜರಾಜ ಅನೇಕ ಕವಿಗಳಿಗೆ ಆಶ್ರಯ ಕೊಟ್ಟಿದ್ದನೆಂದು ದೇವಚಂದ್ರ ತನ್ನ ರಾಜಾವಳೀಕಥೆಯಲ್ಲಿ ನಿರೂಪಿಸಿದ್ದಾನೆ. ಈತ ಇಮ್ಮಡಿ ಕೃಷ್ಣರಾಜನಲ್ಲಿ ಸಂಧಿವಿಗ್ರಹಿಯಾಗಿದ್ದು ಸೇನಾಪತಿತ್ವವನ್ನೂ ನಿರ್ವಹಿಸಿದ. ಚಿಕುಪಾಧ್ಯಾಯನಂತೆಯೇ ಇವನೂ ಅನೇಕ ಗ್ರಂಥಗಳನ್ನು ಬರೆದಿದ್ದಾನೆ, ಅನ್ಯರ ಕೈಲಿ ಬರೆಯಿಸಿದ್ದಾನೆ.

ಶಾಲ್ಯದ ಕೃಷ್ಣರಾಜನೆಂಬ ಇನ್ನೊಬ್ಬ ಕವಿ ಸಂಸ್ಕೃತ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪಂಡಿತ. ಈತ ಚಿಕುಪಾಧ್ಯಾಯನಂತೆಯೇ ಹಲವು ಕಾವ್ಯಗಳನ್ನು ರಚಿಸಿದ್ದಾನೆ. ವಿವೇಕಾಭರಣ, ಯಯಾತಿ ಕಾವ್ಯ, ಸದಾಶಿವ ಶತಕ, ಅಪ್ರಸ್ತುತ ಪ್ರಶಂಸಾಶತಕ, ಅನುಭವರಸಾಯನ–ಮೊದಲಾದುವು ಇವನ ಮುಖ್ಯ ಕೃತಿಗಳು. ವಿವೇಕಾಭರಣ ಭಾಮಿನೀಷಟ್ಪದಿಯಲ್ಲಿದೆ. ಶತಕಗಳೆಲ್ಲ ವೃತ್ತಗಳನ್ನು ಒಳಗೊಂಡಿವೆ. ಅನುಭವರಸಾಯನ ಗದ್ಯಗ್ರಂಥ. ವೇದಾಂತಬೋಧನೆಯೇ ಪ್ರಧಾನ ಉದ್ದೇಶವಾದ ನಿಜದೀಪಿಕಾರತ್ನ, ಟೀಕಿನ ಕೀರ್ತನೆ ಎಂಬ ಗ್ರಂಥಗಳಲ್ಲಿ ಪದಗಳೂ ಅವಕ್ಕೆ ಟೀಕೆಯೂ ಇದ್ದು ಹಾಡು ವಚನ, ಸಾಂಗತ್ಯಗಳ ಬಳಕೆ ಕಂಡುಬರುತ್ತದೆ.

ಈ ಕಾಲದ ಸ್ಮರಣಾರ್ಹನಾದ ಇನ್ನೊಬ್ಬ ಕವಿ ವೆಂಕಾಮಾತ್ಯ. ಈತ ಹೈದರಲ್ಲಿಖಾನನಲ್ಲಿ ಮಂತ್ರಿಯಾಗಿದ್ದ. ಇಂದಿರಾಭ್ಯುದಯ, ಹನುಮಾದ್ವಿಲಾಸ ಮತ್ತು ರಾಮಾಯಣಗಳನ್ನು ಈತ ರಚಿಸಿದ್ದಾನೆ. ಆಂಜನೇಯನ ಅನುಗ್ರಹ ವಿಶೇಷದಿಂದ ಸರಸಸಾಹಿತ್ಯ ರಚನಸಾಮರ್ಥ್ಯವನ್ನು ಪಡೆದೆನೆಂದು ಹೇಳಿಕೊಂಡಿದ್ದಾನೆ. ಪೂರ್ವಕವಿ ಸ್ಮರಣೆ ಮಾಡುತ್ತ ಭಾಸನ ಹೆಸರನ್ನು ಹೇಳಿದ್ದಾನೆ. ಬೇರೆ ಯಾವ ಕನ್ನಡ ಕವಿಯೂ ಭಾಸನನ್ನು ಸ್ಮರಿಸಿಲ್ಲವೆನ್ನಬೇಕು. ಈತನ ರಾಮಾಯಣ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದ್ದು ಪ್ರೌಢ ಶೈಲಿಯಿಂದ ಕೂಡಿದೆ. ಇಂದಿರಾಭ್ಯುದಯ ಚಂಪೂ ಕಾವ್ಯ.

ಮುಮ್ಮಡಿ ಕೃಷ್ಣರಾಜ ಒಡೆಯ ಪ್ರಭುತ್ವವನ್ನು ಪಡೆದಮೇಲೆ ಕನ್ನಡಕ್ಕೆ ಹೆಚ್ಚಿನ ಪೋಷಣೆ ಲಭಿಸಿತು. ರಾಜಾಶ್ರಯದಲ್ಲಿ ಅನೇಕ ವಿದ್ವಜ್ಜನ ಕೃತಿರಚನೆ ಮಾಡಿದರು. ಆಡಳಿತ ಕೈತಪ್ಪಿದಾಗಲೂ ಕವಿ, ವಿದ್ವಾಂಸರನ್ನು ರಾಜ ಅನಾದರಣೆ ಮಾಡಲಿಲ್ಲ. ಕೃಷ್ಣರಾಜ ಒಡೆಯನೇ ಸ್ವಯಂ ಪಂಡಿತನೂ ಗ್ರಂಥಕರ್ತನೂ ಆಗಿದ್ದ. ಅವನ ಹೆಸರಿನಲ್ಲಿ ಸುಮಾರು ಐವತ್ತು ಗ್ರಂಥಗಳು ಪ್ರಸಿದ್ಧವಾಗಿವೆ. ಸಂಸ್ಕೃತದಲ್ಲಿನ ಪುರಾಣೇತಿಹಾಸ ನಾಟಕಾದಿಗಳನ್ನು ಕನ್ನಡದಲ್ಲಿ ಬರೆಯಿಸಿದ ಯಶಸ್ಸು ಮುಮ್ಮಡಿ ಕೃಷ್ಣರಾಜನದು. ಶ್ರೀ ಕೃಷ್ಣರಾಜ ವಾಣೀವಿಲಾಸ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಭಾರತ ಟೀಕೆಯನ್ನು ಈತ ಬರೆಯಿಸಿದುದಲ್ಲದೆ ಸೌಗಂಧಿಕಾಪರಿಣಯ ಎಂಬ ವಿಸ್ತಾರವಾದ ಕಾವ್ಯವನ್ನು ಗದ್ಯಪದ್ಯಾತ್ಮಕವಾಗಿ ತಾನೇ ರಚಿಸಿದ್ದಾನೆ. ದೂರ್ವಾಸಮುನಿಯ ಶಾಪದ ದೆಸೆಯಿಂದ ತನ್ನ ಪದವಿಯನ್ನು ಕಳೆದುಕೊಂಡ ದೇವೇಂದ್ರ ಸುಗಂಧರಾಯನೆಂಬ ಹೆಸರಿನಿಂದ ಹುಟ್ಟಿ ಸೌಗಂಧಿಕೆ ಎಂಬ ಹೆಸರಿನಿಂದ ಭೂಲೋಕದಲ್ಲಿ ಅವತರಿಸಿದ ಶಚೀದೇವಿಯನ್ನು ಮದುವೆಯಾದನೆಂಬುದೇ ಈ ಗ್ರಂಥದ ಕಥಾಸಾರ. ಇದನ್ನೇ ಕವಿ ಮೂವತ್ತಾರು ಆಶ್ವಾಸಗಳಾಗಿ ಬೆಳೆಸಿ ಆರು ಸಾವಿರಕ್ಕೂ ಹೆಚ್ಚಿನ ಪದ್ಯಗಳಿಂದ ಕೂಡಿದ ಮಹಾಕಾವ್ಯವನ್ನಾಗಿ ಮಾಡಿದ್ದಾನೆ.

ಅಧ್ಯಾತ್ಮ ರಾಮಾಯಣದ ಕನ್ನಡ ಟೀಕೆಯಲ್ಲಿ ಮೊದಲಿಗೆ ಮೈಸೂರು ಅರಸರ ಚರಿತ್ರೆಯನ್ನು ಸಂಗ್ರಹವಾಗಿ ಹೇಳಿದೆ. ಇದಲ್ಲದೆ ನಂಜುಂಡ ಶತಕ, ದೇವೀ ಮಹಾತ್ಮ್ಯ, ಶಂಕರಸಂಹಿತೆ, ಸಂಖ್ಯಾರತ್ನ ಮಾಲಾಟೀಕೆ ಎಂಬ ಗ್ರಂಥಗಳು ಜನಪ್ರಿಯವಾಗಿವೆ. ಶ್ರೀಧರೀಯ ವ್ಯಾಖ್ಯಾನವನ್ನು ಅನುಸರಿಸಿ ಭಾಗವತಕ್ಕೆ ಯಥಾತಥದಿಂದ ಕನ್ನಡ ಟೀಕೆಯನ್ನು ಕೃಷ್ಣದೇವರಾಯ ಬರೆದಿದ್ದಾನೆ. ಶಾಕುಂತಲ ನಾಟಕನವೀನಟೀಕೆ ಈತನ ಕೃತಿಗಳಲ್ಲಿ ಮುಖ್ಯವಾದದ್ದು. ಪುರಾಣ ಪುಣ್ಯಕಥೆಗಳಷ್ಟಕ್ಕೇ ಗಮನವನ್ನು ಮೀಸಲಾಗಿಡದೆ ನಾಟಕಗಳನ್ನೂ ಓದಿ ಸ್ವಾರಸ್ಯಾನುಭವ ಮಾಡಿ ಅವುಗಳ ಸಾರವನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಈ ರಾಜನ ಕಾಲದಲ್ಲಿನ ಇಬ್ಬರು ಗದ್ಯಕವಿಗಳು ಬಹಳ ಮುಖ್ಯರಾದವರು; ಒಬ್ಬ ರಾಜಾವಳೀ ಕಥೆಯನ್ನು ರಚಿಸಿದ ದೇವಚಂದ್ರ. ಇನ್ನೊಬ್ಬ ಮುದ್ರಾಮಂಜೂಷವನ್ನು ರಚಿಸಿದ ಕೆಂಪುನಾರಾಯಣ. ದೇವಚಂದ್ರ ಜೈನಕವಿ; ರಾಮ ಕಥಾವತಾರ ಮತ್ತು ರಾಜಾವಳೀ ಕಥೆ ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ರಾಮಕಥಾವತಾರ ಜೈನ ಸಂಪ್ರದಾಯಾನುಸಾರವಾದ ರಾಮಾಯಣ. ವಿಶೇಷವಾಗಿ ನಾಗಚಂದ್ರ ವಿರಚಿತವಾದ ರಾಮಚಂದ್ರ ಚರಿತ ಪುರಾಣದ ಅನುಸರಣೆಯಾಗಿದೆ. ಅದರಲ್ಲಿನ ಹಲವು ಪದ್ಯಗಳನ್ನು ದೇವಚಂದ್ರ ಅನುವಾದ ಮಾಡಿದ್ದಾನೆ. ಇದಕ್ಕಿಂತ ಇವನ ರಾಜಾವಳೀ ಕಥೆ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮುಖ್ಯವಾಗಿದೆ. ಇದು ಬಹಳ ಮಟ್ಟಿಗೆ ಗದ್ಯದಲ್ಲಿದೆ. ಕೆಲವು ಶ್ಲೋಕಗಳೂ ಪದ್ಯಗಳೂ ಮಧ್ಯೆ ಮಧ್ಯೆ ಬಂದಿವೆ. ಇದರಲ್ಲಿ ದೇವಚಂದ್ರ ಜೈನಮತಕ್ಕೆ ಸಂಬಂಧಿಸಿದ ಹಲವು ಕಥೆಗಳನ್ನೂ ಅನೇಕ ರಾಜರ ಚರಿತ್ರೆಯನ್ನೂ ಹೇಳಿದ್ದಾನೆ. ಮೈಸೂರು ಒಡೆಯರ ವಂಶಾವಳಿಯ ಕಥೆಯೂ ಇದರಲ್ಲಿ ಸಂಕ್ಷೇಪವಾಗಿ ಬಂದಿದೆ. ಈ ಕವಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾದ ವೈದ್ಯಸೂರಿಪಂಡಿತನ ಪ್ರೋತ್ಸಾಹದಿಂದ ಸು. 1838ರಲ್ಲಿ ಗ್ರಂಥರಚನೆ ಮಾಡಿದಂತೆ ತಿಳಿಸಿದ್ದಾನೆ.

ಕೆಂಪುನಾರಾಯಣ ಹೊಯಿಸಣಿಗೆ ಕುಲದ ಬ್ರಾಹ್ಮಣ ಕವಿ (1823). ಇವನ ಗ್ರಂಥ ಮುದ್ರಾಮಂಜೂಷ. ಈ ಗದ್ಯಗ್ರಂಥ ಹಲವು ದೃಷ್ಟಿಗಳಿಂದ ಮುಖ್ಯವಾಗಿದೆ. ಆಧುನಿಕ ಗದ್ಯಶೈಲಿ ಈ ಗ್ರಂಥದಿಂದ ಆರಂಭವಾಯಿತೆಂದು ಹೇಳಿದರೆ ತಪ್ಪಲ್ಲ. ಸುಲಲಿತವಾದ ಸರಳಗನ್ನಡದ ವಚನರಚನೆಯನ್ನು ಇಲ್ಲಿ ಕಾಣಬಹುದು. ಚಾಣಕ್ಯ ಚಂದ್ರಗುಪ್ತರು ನಂದರ ವಿನಾಶವನ್ನು ಸಾಧಿಸಿ ಪಾಟಲೀಪುರದ ಸಿಂಹಾಸನವನ್ನು ವಶಪಡಿಸಿಕೊಂಡ ಕಥೆ ಈ ಗ್ರಂಥದ ಕಥಾವಸ್ತು. ಇದರ ಉತ್ತರಾರ್ಧಕ್ಕೆ ಸಂಸ್ಕೃತದ ಮುದ್ರಾರಾಕ್ಷಸವೆಂಬ ವಿಶಾಖದತ್ತನ ನಾಟಕ ಸ್ಫೂರ್ತಿಯನ್ನು ಒದಗಿಸಿದೆ. ಪೂರ್ವಾರ್ಧದ ಕಥೆಯನ್ನು ಕವಿ ಬೇರೆ ಆಧಾರಗಳಿಂದ ಪಡೆದುಕೊಂಡಿದ್ದಾನೆ. ಈ ಕೃತಿ ಓದುಗರ ಮನಸ್ಸನ್ನು ಒಲಿಸಿ ನಲಿಸುವಂಥ ಕಥಾಸ್ವಾರಸ್ಯ, ಸನ್ನಿವೇಶ ರಚನಚಾತುರ್ಯ ಮತ್ತು ಪದಲಾಲಿತ್ಯಗಳಿಂದ ಕೂಡಿ ಅತ್ಯಂತ ಜನಪ್ರಿಯವಾಗಿದೆ.

ಮುಮ್ಮಡಿ ಕೃಷ್ಣರಾಜನ ಪೋಷಣೆಯಲ್ಲಿದ್ದು ಕೃತಿರಚನೆ ಮಾಡಿದ ಇನ್ನೊಬ್ಬ ಕವಿ ಅಳಿಯ ಲಿಂಗರಾಜ (1823–74) ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಚಂಪೂ ರೂಪದಲ್ಲಿರುವ ನರಪತಿಚರಿತವೆಂಬ ಅಲಂಕಾರಗ್ರಂಥ ಮುಖ್ಯವಾದದ್ದು. ಇದರ ಉದಾಹರಣಪದ್ಯಗಳೆಲ್ಲ ಮುಮ್ಮಡಿ ಕೃಷ್ಣರಾಜನ ಸ್ತುತಿರೂಪವಾಗಿವೆ. ತಿರುಮಲಾರ್ಯ ತನ್ನ ಅಲಂಕಾರ ಗ್ರಂಥದಲ್ಲಿ ಚಿಕ್ಕದೇವರಾಯನನ್ನು ಹೊಗಳಿದ ಮಾದರಿಯನ್ನು ಈ ಕವಿ ಅನುಕರಿಸಿದಂತೆ ತೋರುತ್ತದೆ. ಈತ ಚಂಪೂ, ಷಟ್ಪದಿ, ಸಾಂಗತ್ಯಗಳಲ್ಲಿ ಕೃತಿರಚನೆಮಾಡಿ ತನ್ನ ಕವಿತಾ ಪ್ರೌಢಿಮೆಯನ್ನು ಮೆರೆದಿದ್ದಾನೆ. ಪುತ್ರಕಾಮೇಷ್ಟಿಯೆಂಬ ಒಂದು ಯಕ್ಷಗಾನವನ್ನು ಮಹಲಿಂಗಶತಕ ಮತ್ತು ವೀರಭದ್ರಶತಕಗಳೆಂಬ ಎರಡು ಶತಕ ಗ್ರಂಥಗಳನ್ನು ಈತ ರಚಿಸಿದ್ದಾನೆ.

ಮುಮ್ಮಡಿ ಕೃಷ್ಣಭೂಪಾಲನ ತರುವಾಯ ರಾಜಪಟ್ಟವನ್ನೇರಿದ ಶ್ರೀ ಚಾಮರಾಜ ಒಡೆಯರು ಹಿರಿಯರ ಸಂಪ್ರದಾಯವನ್ನು ಅನುಸರಿಸಿ ವಿದ್ವತ್ಕವಿಪೋಷಕರಾಗಿ ಕೀರ್ತಿಗಳಿಸಿದರು. ಇವರ ಆಸ್ಥಾನ ಕವಿ ಬಸವಪ್ಪಶಾಸ್ತ್ರಿಗಳು ರಚಿಸಿದ ಕರ್ಣಾಟಕ ಅಭಿಜ್ಞಾನಶಾಕುಂತಲ ನಾಟಕ ಇಂದಿಗೂ ಪ್ರಸಿದ್ಧವಾಗಿದೆ. ಚಂಡಕೌಶಿಕ ಮತ್ತು ಉತ್ತರ ರಾಮಚರಿತೆ ಎಂಬ ಬೇರೆ ಎರಡು ಸಂಸ್ಕೃತನಾಟಕಗಳನ್ನೂ ಈ ಕವಿ ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಇವಲ್ಲದೆ ದಮಯಂತೀ ಸ್ವಯಂವರ, ಸಾವಿತ್ರೀ ಚರಿತ್ರೆ ಎಂಬ ಎರಡು ಕಾವ್ಯಗಳನ್ನೂ ರಚಿಸಿದ್ದಾನೆ. ಮೊದಲನೆಯದು ಚಂಪೂ ಎರಡನೆಯದು ಷಟ್ಪದಿ. ಒಥೆಲೋ ಎಂಬ ಇಂಗ್ಲಿಷ್ ನಾಟಕವನ್ನು ಪರಿವರ್ತಿಸಿ ಶೂರಸೇನಚರಿತ್ರೆ ಎಂಬ ನಾಟಕವನ್ನು ರಚಿಸಿದುದಲ್ಲದೆ ಬಸವಪ್ಪ ಶಾಸ್ತ್ರಿಗಳು ಭರ್ತೃಹರಿ ಸುಭಾಷಿತವನ್ನೂ ಕನ್ನಡಿಸಿದ್ದಾರೆ.

ಶತಮಾನದಲ್ಲಿ ಕನ್ನಡಕ್ಕೆ ಒಡೆಯರ ವಂಶಜರು ನೀಡಿದ ದೊಡ್ಡ ಕಾಣಿಕೆ ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆ. ಶ್ರೀ ಜಯಚಾಮರಾಜ ಒಡೆಯರು ಋಗ್ವೇದವನ್ನೂ ಅನೇಕ ಪುರಾಣಗಳನ್ನೂ ಕನ್ನಡದಲ್ಲಿ ಅರ್ಥಸಮೇತವಾಗಿ ಪ್ರಕಟಣೆ ಮಾಡಿಸಿ ಕನ್ನಡ ಜನಕ್ಕೆ ಮಹೋಪಕಾರ ಮಾಡಿದ್ದಾರೆ. ವೈದಿಕ ಧರ್ಮದ ಮೂಲಾಧಾರಗಳಿಂದ ಈ ಪವಿತ್ರ ಗ್ರಂಥಗಳನ್ನು ಕನ್ನಡ ಲಿಪಿಯಲ್ಲಿ ಅಚ್ಚುಮಾಡಿಸಿ ಯಥಾರ್ಥವಾದ ಕನ್ನಡ ಅನುವಾದವನ್ನೂ ಕೊಟ್ಟಿರುವುದು ಸಂಸ್ಕೃತ ಪಾಂಡಿತ್ಯವಿಲ್ಲದ ಕನ್ನಡಿಗರಿಗೂ ಜ್ಞಾನಭಂಡಾರದ ಬಾಗಿಲುಗಳನ್ನು ತೆರೆದಂತಾಗಿದೆ. ಹೀಗೆ ರಾಜ ಒಡೆಯನ ಕಾಲದಿಂದಲೂ ಒಡೆಯರ ಅರಸುಮನೆತನ ಸಾಹಿತ್ಯ, ಸಂಗೀತಾದಿ ಲಲಿತಕಲೆಗಳಿಗೆ ಅಪಾರ ಪ್ರೋತ್ಸಾಹವನ್ನು ಕೊಡುತ್ತ ಬಂದಿದೆ. (ಕೆ.ವಿ.ಇ.)

**ಒಡೆಸ್ಸ[1]:** ಸೋವಿಯತ್ ಒಕ್ಕೂಟದ ಉಕ್ರೇನಿಯನ್ ಗಣರಾಜ್ಯದ ಬಂದರು. ಕಪ್ಪು ಸಮುದ್ರದ ಮೇಲಿದೆ. ಪ್ರಾದೇಶಿಕ ಆಡಳಿತ ಕೇಂದ್ರ.

ಉತ್ತರ ಅಕ್ಷಾಂಶ 46$^0$29' ಮತ್ತು ಪೂರ್ವ ರೇಖಾಂಶ 30$^0$44'ಗಳ ಮೇಲೆ ಈ ನಗರವಿದೆ. ಜನಸಂಖ್ಯೆ 1,003,705 (2011). ಇಲ್ಲಿರುವ ಹಡಗುನಿಲ್ದಾಣಗಳು ಒಟ್ಟು ಐದು.

ಇಲ್ಲಿಯದು ಖಂಡಾಂತರ ಮಾದರಿಯ ವಾಯುಗುಣ. ಜನವರಿ ತಿಂಗಳ ಸರಾಸರಿ ಉಷ್ಣತೆ 23.2$^0$ ಫ್ಯಾ. ಜುಲೈ ತಿಂಗಳ ಸರಾಸರಿ ಉಷ್ಣತೆ 72.8$^0$ ಫ್ಯಾ. ವಾರ್ಷಿಕ ಸರಾಸರಿ ಮಳೆ 14". ವರ್ಷದ ಕೆಲವು ದಿನಗಳಲ್ಲಿ ಹಿಮದಿಂದ ಹೆಪ್ಪುಗಟ್ಟುವುದರಿಂದ ಆ ಕಾಲದಲ್ಲಿ ಸಮುದ್ರಯಾನಕ್ಕೆ ಅಡಚಣೆಯಾಗುತ್ತದೆ.

1803ರಲ್ಲಿ ಈ ಪಟ್ಟಣವನ್ನು ಮುಖ್ಯ ಬಂದರನ್ನಾಗಿ ಅಭಿವೃದ್ಧಿಗೊಳಿಸಲಾಯಿತು. 1926ರ ಹೊತ್ತಿಗೆ ಇದು ಕಪ್ಪು ಸಮುದ್ರದ ಮುಖ್ಯ ವಾಣಿಜ್ಯ ರೇವುಪಟ್ಟಣವಾಯಿತು.

ಈಚೆಗೆ ಸಾಪೇಕ್ಷವಾಗಿ ಒಡೆಸ್ಸದ ಪ್ರಾಮುಖ್ಯ ಕಡಿಮೆಯಾಗಿರುವುದಾದರೂ ಇದು ಮುಖ್ಯ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ. ಉಪ್ಪು, ಗಾಜು, ಹೆಂಚು, ವ್ಯವಸಾಯದ ಉಪಕರಣಗಳು, ತವರ, ಬಿರಡೆ ಇವು ಮುಖ್ಯ ತಯಾರಿಕೆಗಳು. ಇತ್ತೀಚೆಗೆ ಚಲನಚಿತ್ರ ಯಂತ್ರ, ವಿಮಾನ, ಹಡಗು, ಎಣ್ಣೆಶುದ್ಧೀಕರಣ ಮುಂತಾದ ಕೈಗಾರಿಕೆಗಳು ಸ್ಥಾಪಿತವಾಗಿವೆ.

ಒಡೆಸ್ಸ ನಗರಕ್ಕೂ ರಷ್ಯದ ಮುಖ್ಯ ಪಟ್ಟಣಗಳಿಗೂ ನಡುವೆ ವಿಮಾನ ಮತ್ತು ರೈಲ್ವೆ ಸಂಪರ್ಕವಿದೆ. ಈ ಪಟ್ಟಣಕ್ಕೆ ನೀರು ಸರಬರಾಯಿಯಾಗುವುದು ನೀಪರ್ ನದಿಯಿಂದ. ರಷ್ಯನ್, ಉಕ್ರೇನಿಯನ್, ಯಹೂದಿ, ಪೋಲ್, ಜರ್ಮನ್, ಗ್ರೀಕ್, ಅಮೆರಿಕನ್, ಟಾರ್‌ಟರ್ ಮತ್ತು ತುರ್ಕಿಜನ ಇಲ್ಲಿದ್ದಾರೆ. ಹಿಂದಿನ ದಕ್ಷಿಣ ರಷ್ಯದ ವಿಶ್ವವಿದ್ಯಾನಿಲಯವನ್ನು ಈಗ ತಾಂತ್ರಿಕ ಶಿಕ್ಷಣ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. ಆರೋಗ್ಯಧಾಮಗಳು, ಆಹಾರ ಸಂಶೋಧನಾಲಯ ಕೇಂದ್ರಗಳು, ವ್ಯವಸಾಯ ಕಾಲೇಜುಗಳು, ಸಾರ್ವಜನಿಕ ಪುಸ್ತಕ ಭಂಡಾರಗಳು ಇಲ್ಲಿವೆ.

ಒಡೆಸ್ಸ ಬಂದರಿನ ಮುಖಾಂತರ ರಫ್ತಾಗುವ ಪದಾರ್ಥಗಳಲ್ಲಿ ಎಣ್ಣೆಕಾಳು, ಉಣ್ಣೆ, ದನಕರು, ಸಕ್ಕರೆ, ಮರದ ದಿಮ್ಮಿ ಮುಖ್ಯ. ಕಲ್ಲಿದ್ದಲು, ಕಬ್ಬಿಣ, ಯಂತ್ರೋಪಕರಣ, ವ್ಯವಸಾಯದ ಉಪಕರಣಗಳು, ಕಚ್ಚಾಹತ್ತಿ, ಹೊಗೆಸೊಪ್ಪು, ಚಹಾ, ಕಾಫಿ ಮುಖ್ಯ ಆಮದುಗಳು. (ಪಿ.ಎಚ್.)

**ಒಡೆಸ್ಸ[2]:** ಅಮೆರಿಕ ಸಂಯುಕ್ತಸಂಸ್ಥಾನದ ಪಶ್ಚಿಮ ಟೆಕ್ಸಾಸಿನಲ್ಲಿರುವ ಒಂದು ನಗರ. ಎಕ್ಟರ್ ಕೌಂಟಿಯ ಆಡಳಿತ ಕೇಂದ್ರ. 1884ರಲ್ಲಿ ಟೆಕ್ಸಾಸ್ ಮತ್ತು ಪೆಸಿಫಿಕ್ ರೈಲ್ವೆಯಿಂದ ಇದು ಸ್ಥಾಪಿತವಾಯಿತು. ಈ ನಗರದ ನಿವೇಶನಕ್ಕೆ ಒಡೆಸ್ಸ ಎಂದು ನಾಮಕರಣ ಮಾಡಿದವರು (1881) ರಷ್ಯನ್ನರು. ರೈಲು ರಸ್ತೆ ನಿರ್ಮಾಣಕ್ಕಾಗಿ ಅವರು ಇಲ್ಲಿಗೆ ಬಂದಿದ್ದಾಗ ಈ ಪ್ರದೇಶ ರಷ್ಯದಲ್ಲಿ ತಮ್ಮ ಸ್ಥಳವಾದ ಒಡೆಸ್ಸವನ್ನೇ ಹೋಲುತ್ತಿದ್ದುದರಿಂದ ಇದಕ್ಕೆ ಆ ಹೆಸರನ್ನೇ ಇಟ್ಟರು. ಅಮೆರಿಕ ಸಂಯುಕ್ತಸಂಸ್ಥಾನದ ಅತ್ಯಂತ ದೊಡ್ಡ ಉಲ್ಕಾಪಾತದ ಕುಳಿಗಳಲ್ಲೊಂದು ಈ ನಗರದ ಬಳಿ ಇದೆ. ಅದರ ವ್ಯಾಸ 600 ಅಡಿ, ಆಳ 150 ಅಡಿ.

ಇದು ಮುಖ್ಯ ವ್ಯಾಪಾರಕೇಂದ್ರ, ಉಣ್ಣೆ, ಪೆಟ್ರೋಲಿಯಂ ಮತ್ತು ದನಕರುಗಳನ್ನು ಹೆಚ್ಚಾಗಿ ನಿರ್ಯಾತ ಮಾಡಲಾಗುತ್ತದೆ. ರಾಸಾಯನಿಕ ವಸ್ತು, ಹಬೆಪಾತ್ರೆ, ಉಪಕರಣ ಪೆಟ್ಟಿಗೆ, ಅಣೆಕಟ್ಟು, ಸೀಸ, ಹಂಚು–ಇವು ಇಲ್ಲಿ ತಯಾರಾಗುವ ಮುಖ್ಯ ವಸ್ತುಗಳು. ಕಬ್ಬಿಣದ ಕಾರ್ಖಾನೆಯೂ ತೈಲಶುದ್ಧೀಕರಣ ಕೇಂದ್ರವೂ ಇವೆ. 1944ರಲ್ಲಿ ಒಂದು ದೊಡ್ಡ ತೈಲಶುದ್ಧೀಕರಣ ಕೇಂದ್ರವನ್ನು ಇಲ್ಲಿ ಸ್ಥಾಪಿಸಲಾಯಿತು.

ಸಭಾ–ವ್ಯವಸ್ಥಾಪಕ ಪದ್ಧತಿಯಲ್ಲಿ (ಕೌನ್ಸಿಲ್ ಮ್ಯಾನೇಜರ್) ಈ ನಗರದ ಆಡಳಿತ ನಡೆಯುತ್ತದೆ. ಸಭಾಸದಸ್ಯರನ್ನು ಎರಡು ವರ್ಷಗಳಿಗೊಂದು ಸಾರಿ ಆಯ್ಕೆ ಮಾಡಲಾಗುತ್ತದೆ. ನೀರು ಸರಬರಾಯಿ ಮತ್ತು ನಗರ ನೈರ್ಮಲ್ಯದ ಹೊಣೆ ಪುರಸಭೆಯದು. ಇಲ್ಲಿ ಎರಡು ದೊಡ್ಡ ಆರೋಗ್ಯಕೇಂದ್ರಗಳಿವೆ.

1920ರ ದಶಕದ ಉತ್ತರಾರ್ಧದಲ್ಲಿ ಇಲ್ಲಿ ತೈಲನಿಕ್ಷೇಪ ಪತ್ತೆಯಾದ ಮೇಲೆ ಒಡಸ್ಸ ಶೀಘ್ರವಾಗಿ ಬೆಳೆಯುತ್ತಿದೆ. 1930ರಲ್ಲಿ ಕೇವಲ 3,000 ಇದ್ದ ಜನಸಂಖ್ಯೆ ಮೂವತ್ತು ವರ್ಷಗಳಲ್ಲಿ (1960) 80,338 ಕ್ಕೆ ಏರಿದೆ. ಅತ್ಯಧಿಕ ತೈಲನಿಕ್ಷೇಪ ವಿರುವ ಪರ್ಮಿಯನ್ ಕೊಳ್ಳದ ಭೌಗೋಳಿಕ ಕೇಂದ್ರದಲ್ಲಿ ಇರುವುದರಿಂದ ಇದು ಪೆಟ್ರೋಲಿಯಂ ಕೈಗಾರಿಕೆಯ ಮುಖ್ಯ ವಿತರಣ ಮತ್ತು ಸೇವಾ ಸ್ಥಳವಾಗಿದೆ. (ಪಿ.ಎಚ್.)

**ಒಡ್ಡುದಾರಿ:** ಎತ್ತರಿಸಿರುವ ಕಟ್ಟೆಯ ಮೇಲಿನ ರಸ್ತೆ; ಅಥವಾ ಜೌಗು ಅಥವಾ ತಗ್ಗಿನಲ್ಲಿರುವ ಜಾಗಕ್ಕೆ ಅಡ್ಡಲಾಗಿರುವ ಒಡ್ಡು; ಎಂದರೆ ಪಾದಗಳಿಂದ ಭದ್ರವಾಗಿ ತುಳಿದಿರುವ ಒಂದು ರಸ್ತೆ; ಅಥವಾ ಕಲ್ಲು ಹಾಕಿಸಿರುವ ಅಥವಾ ಮೇಲ್ಮೈ ಇರುವ ಕಾಲುದಾರಿ (ಕಾಸ್‌ವೇ). ಹರಿಯುವ ಪ್ರವಾಹಕ್ಕೆ ಅಡ್ಡಿಯಾಗದಂತೆ ನೀರನ್ನು ಹರಿಯಬಿಟ್ಟು ಪ್ರವಾಹ



ಚಿತ್ರ 1 ಮೇಲ್ಮಟ್ಟದ ಒಡ್ಡುದಾರಿ

ಅಥವಾ ಪಾತ್ರದ ಚಲನವಲನಗಳಿಂದ ರಸ್ತೆಗೆ ಅಪಾಯವಾಗದಂತೆ ನಿರ್ಮಿಸಲಾಗುವ ಅರ್ಥದಲ್ಲಿ ಎಂಜಿನಿಯರಿಂಗ್ ಶಾಸ್ತ್ರದಲ್ಲಿ ಈ ಪದವನ್ನು ಬಳಸಲಾಗುತ್ತದೆ. ಒಡ್ಡುದಾರಿಯನ್ನು ಸಾಮಾನ್ಯವಾಗಿ ನದಿಯ ಪಾತ್ರಮಟ್ಟದಲ್ಲೇ ಆ ಪಾತ್ರ ಸಂಕುಚಿಸದಂತೆ ಅಳವಡಿಸಲಾಗುತ್ತದೆ. ಇದೇ ಮಾದರಿಯ ರಸ್ತೆಯನ್ನು ನಿರ್ಮಿಸಿ ಅದನ್ನು ಸುವ್ಯವಸ್ಥೆಯಲ್ಲಿಟ್ಟುಕೊಳ್ಳುವ ಅರ್ಥದಲ್ಲಿಯೂ ಈ ಪದವನ್ನು ಬಳಸಲಾಗುತ್ತದೆ. (ಎಚ್.ಸಿ.)

ವ್ಯಾಪಕವಾಗಿ ಒಡ್ಡುದಾರಿಯೆಂದರೆ ಸಂಚಾರದ ರಸ್ತೆಯನ್ನು ಹಳ್ಳದ ಅಥವಾ ಹೊಳೆಯ ಮೇಲೆ ಮಳೆಗಾಲದಲ್ಲಿ ಸಾಗಿಸುವ ಕಟ್ಟಡ. ಇದು ಭಾರತದ ರಸ್ತೆಗಳ ಮೇಲೆ ತಯಾರಾದದ್ದು 19ನೆಯ ಶತಮಾನದಲ್ಲಿ. ಇದಕ್ಕೆ ಮುಂಚೆ ಹೊಳೆಗಳನ್ನು ಬೇಸಿಗೆಯಲ್ಲಿ ಕಾಲುನಡಿಗೆಯಿಂದಲೂ ಕೆಲವು ನಿರ್ದಿಷ್ಟವಾದ ಸ್ಥಳಗಳಲ್ಲಿ ಗಾಡಿಗಳ ಮೇಲೂ ದಾಟಬಹುದಾಗಿತ್ತು. ಆದರೆ ಸಾಮಾನ್ಯವಾಗಿ ದೋಣಿಗಳ ಮೇಲೆ ದಾಟುವುದೇ ರೂಢಿ. ಎರಡು ದೋಣಿಗಳನ್ನು ಪಕ್ಕದಲ್ಲಿ ಸೇರಿಸಿ ಕಟ್ಟಿದ ಹರಿಗೋಲಿನ (ಇದಕ್ಕೆ ಜಂಗಾಲ್, ತೆಪ್ಪ ಎಂಬ ಹೆಸರುಗಳಿವೆ) ಮೇಲೆ ಸಾಗಿಸಬೇಕಾಗಿತ್ತು. ಈಗಲೂ ಪಶ್ಚಿಮದ ಕರಾವಳಿಯಲ್ಲಿ ನದಿಗಳು ಸಮುದ್ರವನ್ನು ಸೇರುವ ಕೆಲವು ಕಡೆಗಳಲ್ಲಿ ಹೀಗೆಯೇ ದಾಟಬೇಕು. ಒಡ್ಡುದಾರಿಯ ಮುಂದಿನ ಹೆಜ್ಜೆಯೇ ಗಾಡಿಯ ಸೇತುವೆ. ಸ್ಕಾಟ್ಲೆಂಡಿನ ಮ್ಯಾಕಡಮ್ (1756–1836)

ತನ್ನ ಹೆಸರಿನಲ್ಲಿ ಈಗ ಪ್ರಖ್ಯಾತವಾಗಿರುವ ರಸ್ತೆಯನ್ನು 1815–29ರ ಅವಧಿಯಲ್ಲಿ ಲಂಡನ್ನಿನಿಂದ ಹಾಲಿಹೆಡ್ಡಿಗೆ ತಯಾರಿಸಿದ. ಇದೇ ರಸ್ತೆಯ ಮೇಲೆ ಟೆಲ್ಫರ್ಡ್ (1757–1834) 1826ರಲ್ಲಿ ಮಿನೈ ಜಲಸಂಧಿಯ ಮೇಲೆ ಕಬ್ಬಿಣದ ತೂಗು ಸೇತುವೆಯನ್ನು ಕಟ್ಟಿದ, ಆಮೇಲೆ ಎಲ್ಲೆಲ್ಲಿಯೂ ಭದ್ರವಾದ ರಸ್ತೆಗಳನ್ನೂ ಹೊಳೆಗಳಿಗೆ ಅಡ್ಡಲಾಗಿ ಸೇತುವೆಗಳನ್ನೂ ಕಟ್ಟುವುದು ಪ್ರಾರಂಭವಾಯಿತು.

ಸೇತುವೆಯನ್ನು ಕಟ್ಟಲು ಬೇಕಾಗುವ ಹಣ ದೊರಕದೆ ಇರುವ ಕಡೆಗಳಲ್ಲಿ ಒಡ್ಡುದಾರಿಗಳನ್ನು ಕಟ್ಟಿದ್ದಾರೆ. ಭಾರತದಲ್ಲಿ ಮೊದಲು ಪಕ್ಕ ರಸ್ತೆಗಳು ತಯಾರಾದದ್ದು ಬ್ರಿಟಿಷ್ ಸೇನೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವೇಗವಾಗಿ ಸಾಗಿಸುವುದಕ್ಕಾಗಿ. ಪೂರ್ವ ದಿಕ್ಕಿನಲ್ಲಿ ಕೋಲ್ಕತ್ತದಿಂದ ಪಶ್ಚಿಮದಲ್ಲಿ ಪೆಷಾವರಿನವರೆಗೆ 2415 ಕಿಮೀ ಉದ್ದದ ಗ್ರ್ಯಾಂಡ್ ಟ್ರಂಕ್ ರಸ್ತೆಯನ್ನು 1830–35ರ ಅವಧಿಯಲ್ಲಿ ತಯಾರಿಸಿದರು. ಈ ರಸ್ತೆ ಗಂಗಾನದಿಯನ್ನು ಕಾಶಿಯ ಬಳಿಯಲ್ಲಿ ದಾಟಿ ಮುಂದೆ ಸಿಂಧು ನದಿಯನ್ನು ತಾತ್ಕಾಲಿಕವಾದ ದೋಣಿಯ ಸೇತುವೆಯ ಮೇಲೆ ಹಾಯುತ್ತಿತ್ತು. ಇದೇ ರಸ್ತೆಯ ಮೇಲೆ ಶೋಣಾ ನದಿಯ ಮೇಲೆ ಒಂದು ಒಡ್ಡುದಾರಿಯನ್ನು ಕಟ್ಟಿದ್ದಾರೆ. ಇದರ ಉದ್ದ 3473.17 ಮೀ, ಅಗಲ 5 ಮೀ. ಮೊದಲು ನದಿಯ ದಡಗಳನ್ನು 20ಕ್ಕೆ ಒಂದರ ಇಳಿಜಾರಿನಲ್ಲಿ ಕತ್ತರಿಸಿ ನದಿಯ ತಳದಲ್ಲಿ ಎರಡು ಸಾಲು ದಸಿಗಳ (ಪೈಲ್ಸ್) ಮಧ್ಯೆ ಮರಳನ್ನು ಅಗೆಯುವಾಗ ಅದು ಜಾರದ ಹಾಗೆ ಬಿದಿರಿನ ಚೌಕಟ್ಟುಗಳು ಮತ್ತು ಚಾಪೆಗಳನ್ನು ನಿಲ್ಲಿಸಿ ಚೌಕಟ್ಟುಗಳನ್ನು ಭದ್ರವಾಗಿ ಹಿಡಿದು ನಿಲ್ಲಿಸುವುದಕ್ಕಾಗಿ ಒಡ್ಡುದಾರಿಯ ತಳಪಾಯದಲ್ಲಿ ಕಾಡುಮರದ ಕಂಬಗಳನ್ನು ಸಮಾಂತರವಾದ ಎರಡು ಸಾಲುಗಳಲ್ಲಿ 4.55ಮೀ ಆಳಕ್ಕೆ ಹೊಡೆದು ಇಳಿಸಿದ್ದಾರೆ. ತಳಪಾಯದ ಮೇಲೆ ಹೊಳೆಯ ಕಲ್ಲಿನ ಜೊತೆಗೆ ಸುಣ್ಣವನ್ನು ಬೆರೆಸಿ ತಯಾರಿಸಿದ ಕಾಂಕ್ರಿಟನ್ನು ಗೋಣಿ ಚೀಲಗಳಲ್ಲಿ ತುಂಬಿ ಹರಡಿದ್ದಾರೆ. ಅದರ ಮೇಲೆ 2½′ ಮಂದವಾದ ಕಲ್ಲುಗಾರೆಯಿದೆ. ಇದು ನದಿಯ ಮಹಾ ಪ್ರವಾಹದಲ್ಲಿಯೂ ಕೊಚ್ಚಿ ಹೋಗದಷ್ಟು ಗಟ್ಟಿಯಾಗಿದೆ. ಈ ಕಲ್ಲುಗಾರೆಯ ಮೇಲೆ ಒಡ್ಡುದಾರಿಯ ಅಗಲದಲ್ಲಿ ಒಂದು 2.73 ಮೀ ಉದ್ದ, ಇನ್ನೊಂದು 2.12 ಮೀ. ಉದ್ದದ ಚಪ್ಪಡಿಗಳನ್ನು ಎಸೆಯನ್ನು ತಪ್ಪಿಸಿ ಭದ್ರವಾಗಿ ಕೂರಿಸಿದ್ದಾರೆ. ಚಪ್ಪಡಿಗಳ ಅಗಲ 0.45 ಮೀ, ದಪ್ಪ 0.30 ಮೀ. ಈ ಒಡ್ಡುದಾರಿಗಳನ್ನು ಹೊಳೆ ಪ್ರವಾಹದಲ್ಲಿರುವಾಗ ಉಪಯೋಗಿಸುವುಕ್ಕಾಗುವುದಿಲ್ಲ.



ಚಿತ್ರ 2 ತಳಮಟ್ಟದ ಒಡ್ಡುದಾರಿ : ಮೇಲು ಭಾಗದಲ್ಲಿ ಅದರ ಸಾಮಾನ್ಯ ನೋಟವನ್ನೂ ಕೆಳಭಾಗದಲ್ಲಿ ಅದರ ಲಾಕ್ಷಣಿಕ ನಕಾಸೆಯನ್ನೂ ಕೊಟ್ಟಿದೆ.

ವಾಯವ್ಯ ಪ್ರಾಂತ್ಯ ಮತ್ತು ಸಿಂಧು ಪ್ರಾಂತ್ಯದಲ್ಲಿ ಬ್ರಿಟಿಷರು ಮೊದಲು ರಸ್ತೆಗಳನ್ನೂ ಒಡ್ಡುದಾರಿಗಳನ್ನೂ ಕೆಲವು ಕಡೆ ಮರದ ಇಲ್ಲವೆ ಕಲ್ಲುಗಾರೆಯ ಸೇತುವೆಗಳನ್ನೂ ನಿರ್ಮಿಸಿದರು. 1840ರಲ್ಲಿ ಆಗ್ರದಿಂದ ಮುಂಬಯಿಗೆ ಇಂದೂರ್, ಗ್ವಾಲಿಯರ್ ಮತ್ತು ನಾಸಿಕದ ಮಾರ್ಗವಾಗಿ ರಸ್ತೆಯ ನಿರ್ಮಾಣ ಪ್ರಾರಂಭವಾಯಿತು. ಗ್ರೇಟ್ ಡೆಕ್ಕನ್ ರಸ್ತೆ 1956ರಲ್ಲಿ ಪ್ರಾರಂಭವಾಯಿತು. ಈ ರಸ್ತೆಗಳ ಮೇಲೆ ಅನೇಕ ಒಡ್ಡುದಾರಿಗಳಿದ್ದುವು.

1870ರಲ್ಲಿ ಮೈಸೂರು ಸೀಮೆಯಲ್ಲಿ 2898 ಕಿಮೀ ರಸ್ತೆಗಳಿದ್ದುವು. ಇವುಗಳಲ್ಲಿ 805 ಕಿಮೀ ರಸ್ತೆಗೆ ಜಲ್ಲಿಯನ್ನು ಹಾಕಿ ಹೊಳೆಗಳ ಮೇಲೆ ಸೇತುವೆಗಳನ್ನು ಕಟ್ಟಿದ್ದರು. ಬಯಲು ಸೀಮೆಯಲ್ಲಿ ಮಣ್ಣಿನ ರಸ್ತೆಗಳ ಮೇಲೆ ಒಡ್ಡುದಾರಿಗಳಿದ್ದುವು. ಮಲೆನಾಡಿನಲ್ಲಿ ಅವೂ ಇರಲಿಲ್ಲ. ದೋಣಿಗಳ ನೆರವಿನಿಂದ ಹೊಳೆಗಳನ್ನು ದಾಟಬೇಕಾಗಿತ್ತು. ಇಂದಿಗೂ ಬಯಲು ಸೀಮೆಯಲ್ಲಿ ಸಣ್ಣ ಹೊಳೆಗಳ ಮೇಲೆ ಒಡ್ಡುದಾರಿಗಳಿವೆ. ಇವುಗಳಲ್ಲಿ ಎತ್ತಿನ ಗಾಡಿಗಳ ಮತ್ತು ಮೋಟಾರಿನ ಚಕ್ರಗಳು ಉರುಳುವ ಕಡೆ ಎರಡು ಸಾಲುಗಳಲ್ಲಿ 0.45ಮೀ ಅಗಲವಾದ ಕಲ್ಲಿನ ಚಪ್ಪಡಿಗಳನ್ನು ಕಾಂಕ್ರಿಟಿನ ಅಡಿಪಾಯದ ಮೇಲಿನ ಕಲ್ಲುಗಾರೆಯ ಮೇಲೆ ಉದ್ದವಾಗಿ ಹಾಸಿದ್ದಾರೆ. ಕೆಲವು ಕಡೆ ಚಪ್ಪಡಿಗಳ ಕೆಳಗಡೆ ಕಲ್ಲುಗಾರೆಯ ಕಂಬಗಳ ನಡುವೆ ಸುಮಾರಾದ ಪ್ರವಾಹ ಹರಿದು ಹೋಗುವ ಹಾಗೆ ಹಲವು ಕಿರಿದಾದ ಉದ್ದವಾದ ಕಣ್ಣುಗಳನ್ನು ಬಿಟ್ಟಿರುತ್ತಾರೆ. ಆದರೂ ನವೆಂಬರ್ ತಿಂಗಳಿನಲ್ಲಿ ಈಶಾನ್ಯ ಮಾರುತದ ಮಳೆ ಅನಿರೀಕ್ಷಿತವಾಗಿ ಬಲವಾಗಿ ಸುರಿದಾಗ ಕೋಲಾರ ಜಿಲ್ಲೆ ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಹಳ್ಳ ತಾನಾಗಿ ಇಳಿಯುವವರೆಗೂ ಯಾವ ವಾಹನವೂ ಅದನ್ನು ದಾಟಲಾಗುವುದಿಲ್ಲ.

1853ರಲ್ಲಿ ಮುಂಬೈಯಿಂದ ಥಾಣಾದವರೆಗೆ 32 ಕಿಮೀ ರೈಲ್ವೆ ಮಾರ್ಗವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆದರು. ಸೈನ್ಯಗಳನ್ನು ಸಾಗಿಸುವುದಕ್ಕೂ ಜನಗಳು, ಸಾಮಾನು ಇವನ್ನು ಒಯ್ಯುವುದಕ್ಕೂ ರೈಲ್ವೆಯ ಉಪಯೋಗ ಹೆಚ್ಚೆಂದು ಕಾಣಿಸಿದ್ದರಿಂದ ಬ್ರಿಟಿಷ್ ಸರ್ಕಾರದ ಗಮನ ರೈಲ್ವೆಗಳ ಕಡೆಗೆ ತಿರುಗಿತು. 1893ರ ವೇಳೆಗೆ 27370 ಕಿಮೀ ಉದ್ದದ ರೈಲ್ವೆ ಮಾರ್ಗಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲಾಯಿತು. ಈ ಸಂದರ್ಭದಲ್ಲಿ ಗಂಗಾ, ಯಮುನಾ, ಸಿಂಧು, ಗೋದಾವರಿ, ಕೃಷ್ಣ, ಕಾವೇರಿ ಮೊದಲಾದ ನದಿಗಳ ಮೇಲೆ ರೈಲ್ವೆ ಗರ್ಡರಿನ ಸೇತುವೆಗಳಿಗಾಗಿ ವಿಶೇಷ ಹಣ ವೆಚ್ಚವಾಯಿತು. ಆಮೇಲೆ ರೈಲ್ವೆಗೂ ರಸ್ತೆಗೂ ಪೈಪೋಟಿಯಾಗಿ ನದಿಗಳ ಮೇಲೆ ರಸ್ತೆಯ ಸೇತುವೆಗಳನ್ನು ಕಟ್ಟುವ ಕೆಲಸ ಸಾವಕಾಶವಾಯಿತು. ಆಗ ಹಳೆಯ ಒಡ್ಡುದಾರಿಗಳಿಂದ ಬಹಳ ಉಪಕಾರವಾಯಿತು. ಮತ್ತೆ ರಸ್ತೆಗೆ ಪ್ರಾಮುಖ್ಯ ಬಂದದ್ದು ಈ ಶತಮಾನದಲ್ಲಿ ಮೋಟಾರು ಕಾರು ಸಾರ್ವತ್ರಿಕವಾಗಿ ಉಪಯೋಗಕ್ಕೆ ಬಂದಮೇಲೆ, ಆಗ ನದಿಗಳ ಮೇಲೆ ಆಧುನಿಕ ಸೇತುವೆಗಳ ನಿರ್ಮಾಣ ಅನಿವಾರ್ಯವಾಯಿತು. ಆದರೂ ಈಗಲೂ ಹಳೆಯ ಒಡ್ಡುದಾರಿಗಳು ಕೆಲವು ಕಡೆ ಇನ್ನೂ ಬಳಕೆಯಲ್ಲಿವೆ. (ಎಚ್.ಸಿ.ಕೆ.;ಎಂ.ಜಿ.ಎಸ್.)

**ಒಡ್ಡೋಲಗ:** ರಾಜನಾದವನು ಸಿಂಹಾಸನವನ್ನೇರಿ ಸಮಸ್ತ ಪ್ರಜಾ ಸಮೂಹಕ್ಕೆ ದರ್ಶನ ಕೊಡುವ ಮಹಾಸಭೆಗೆ ಈ ಹೆಸರಿದೆ. ಓಲಗವೆಂದರೆ ರಾಜಸಭೆ. ಒಡ್ಡು ಎಂಬ ಮಾತಿಗೆ ವಿಶಾಲವಾದದ್ದು, ಬಾಹುಳ್ಯವುಳ್ಳದ್ದು ಎಂಬ ಅರ್ಥ ಕನ್ನಡದಲ್ಲಿಯೂ ತೆಲುಗಿನಲ್ಲಿಯೂ ಇದೆ. ಪೇರೋಲಗಮು, ಒಡ್ಡೋಲಗಮು ಎಂಬ ಮಾತುಗಳನ್ನು ತೆಲುಗಿನ ಆದಿಕವಿಯಾದ ನನ್ನಯನೇ ಉಪಯೋಗಿಸಿದ್ದಾನೆ. ಸಭಾ ಮಂಟಪದೊಳೊಡ್ಡೋಲಗಂಗೊಟ್ಟು–ಎಂದು ಪಂಪ ಒಂದೆಡೆ ಹೇಳುತ್ತಾನೆ. ಸಭೆ ಸೇರುವುದಕ್ಕೆಂದೇ ಏರ್ಪಟ್ಟಿರುವ ವಿಶಾಲವಾದ ಭವನದಲ್ಲಿ ದೊರೆ ಪರಿವಾರ ಸಮೇತನಾಗಿ ಸೇರುವ ಸನ್ನಿವೇಶವೇ ಒಡ್ಡೋಲಗ. ಕನ್ನಡ ಕಾವ್ಯ ಹಾಗೂ ಚರಿತ್ರೆಗಳಲ್ಲಿ ನಿರೂಪಣೆಗೊಂಡಿರುವ ಒಡ್ಡೋಲಗಗಳ ಪ್ರಧಾನಾಂಶಗಳ ಆಧಾರದ ಮೇಲೆ ಅದರ ಸಾಮಾನ್ಯ ವರ್ಣನೆಯನ್ನಿಲ್ಲಿ ಕೊಡಲಾಗಿದೆ.

ಒಡ್ಡೋಲಗದಲ್ಲಿ ಮಂತ್ರಿಗಳು ದಂಡನಾಯಕರು ಎಲ್ಲ ಬಂದಿರುತ್ತಾರಾದರೂ ಅಲ್ಲಿ ಮಂತ್ರಾಲೋಚನೆಯೇನೂ ನಡೆಯುವುದಿಲ್ಲ. ಮಂತಣಸಾಲೆ ಬೇರೆ. ಅದು ಹೆಚ್ಚು ರಹಸ್ಯವಾದ ಮಂದಿರ. ಅಲ್ಲಿ ರಾಜ ಬಯಸಿದವರಿಗೆ ಮಾತ್ರ ಪ್ರವೇಶ. ಓಲಗದಲ್ಲಿದ್ದು ರಾಜಸೇವೆ ಮಾಡುವವನನ್ನು ಓಲಗಕಾಱನೆಂದು ಕರೆಯುವುದುಂಟು. ಓಲಗಿಸು, ಓಲಯಿಸು ಎಂಬ ಮಾತುಗಳು ರಾಜನನ್ನು ಆಶ್ರಯಿಸಿಕೊಂಡಿರುವವರು ಅವನ ಒಲವನ್ನು ಗಳಿಸಿಕೊಳ್ಳಲು ಅವನ ಸಾಮೀಪ್ಯದಲ್ಲಿದ್ದುಕೊಂಡು ಸೇವಿಸುವುದು ಎಂಬ ಅರ್ಥವನ್ನು ಕೊಡುತ್ತವೆ.

ಒಡ್ಡೋಲಗದಲ್ಲಿ ರಾಜಪರಿವಾರವೆಲ್ಲ ಕಲೆತಿರುತ್ತಾರೆ. ರಾಜನ ಸಾಮಂತರು, ದಂಡನಾಯಕರು, ಮಂತ್ರಿಗಳು, ಆಶ್ರಿತರು, ಬಂಧುಗಳು, ಆಹ್ವಾನಿತರು ಎಲ್ಲರೂ ಅವರವರ ಅಂತಸ್ತಿಗೆ ಅನುಗುಣವಾದ ಸ್ಥಾನಗಳಲ್ಲಿ ಮಂಡಿಸಿರುತ್ತಾರೆ. ದೇಶ ವಿದೇಶಗಳಿಂದ ಬಂದಿರಬಹುದಾದ ರಾಯಭಾರಿಗಳು, ನಿಯೋಗಿಗಳು ಮೊದಲಾದವರು ಅರಸನ ಸಂದರ್ಶನ ಪಡೆಯಲು ಒಡ್ಡೋಲಗದಲ್ಲಿ ಅವಕಾಶವುಂಟು. ಕೌರವನ ಮಹಾಸಭೆಯನ್ನು ವರ್ಣಿಸಲು ಹೊರಟ ಕುಮಾರವ್ಯಾಸ ನಾನಾ ದಿಗಂತದ ಧರಣಿಪರು ಸಚಿವರು ಪಸಾಯ್ತರು ನೆರೆದುದನ್ನು ವರ್ಣಿಸಿದ್ದಾನೆ.

ರಾಜದರ್ಶನಾಕಾಂಕ್ಷಿಗಳಾದ ಜನರೆಲ್ಲ ಬಂದು ಆಸ್ಥಾನಮಂಟಪದಲ್ಲಿ ಸಮುಚಿತಾಸನಗಳಲ್ಲಿ ಕುಳಿತ ಮೇಲೆ ಅರಸ ಪರಮಾಪ್ತರಾದವರ ಜೊತೆಯಲ್ಲಿ ಒಡ್ಡೋಲಗಕ್ಕೆ ಬಿಜಯ ಮಾಡಿಸುತ್ತಾನೆ. ಆ ಸಮಯಕ್ಕೆ ಸರಿಯಾಗಿ ನಾನಾ ಮಂಗಳ ವಾದ್ಯಗಳ ಧ್ವನಿ ಹೊಮ್ಮುತ್ತದೆ. ಅದು ಅರಸನ ಬರವಿನ ಸೂಚನೆ. ಆ ಶಬ್ದ ಕೇಳುತ್ತಲೆ ಓಲಗಾರ್ತರೆಲ್ಲ ಎದ್ದು ನಿಂತು ಜಯ ಘೋಷಮಾಡುತ್ತಾರೆ. ಹೊಗಳುಭಟ್ಟರು ಅರಸನ ಬಿರುದಾವಳಿಯನ್ನು ಉದ್ಘೋಷಿಸುತ್ತಾರೆ. 'ಅರಿರಾಜಗಿರಿವಜ್ರದಂಡ! ಸ್ನೇಹಿತನೃಪಸರಸಿಜವನಮಾರ್ತಾಂಡ! ಕನ್ನಡ ರಾಜ್ಯರಮಾರಮಣ! ಜಯ ಜಯ ಜಯತು!' ಈ ಬಗೆಯ ಹೆಗ್ಗಳಿಕೆಯ ಹೆಸರುಗಳನ್ನು ವಂದಿಮಾಗಧರು ಗಟ್ಟಿಯಾಗಿ ಹೇಳುತ್ತಿರುವಾಗಲೆ ಪ್ರಭು ಮೆಲ್ಲನೆ ನಡೆದು

ಬಂದು ಸಿಂಹಾಸನಕ್ಕೆ ಪ್ರದಕ್ಷಿಣೆಮಾಡಿ ಆಪ್ತರ ಹಸ್ತಲಾಘವವನ್ನು ಸ್ವೀಕರಿಸಿ ಸಿಂಹಾಸನವನ್ನು ಏರುತ್ತಾನೆ. ಒಡನೆಯೇ ಮಂಗಳಾಷ್ಟಕವನ್ನು ಹೇಳುವ ವಿಪ್ರರ ಧ್ವನಿ ಕೇಳಿಸುತ್ತದೆ. ಸಿಂಹಾಸನದ ಇಕ್ಕೆಲಗಳಲ್ಲಿ ನಿಂತ ಸೇವಕರು ಚಾಮರಗಳನ್ನು ಡಾಳಿಸುತ್ತಿರುತ್ತಾರೆ. ಆಮೇಲೆ ಗಾಯಕರು ತಕ್ಕ ಸಿದ್ಧತೆಯೊಡನೆ ಹಾಡತೊಡಗುತ್ತಾರೆ. ಅರಸನ ಸಮ್ಮುಖದಲ್ಲಿ ವೇದಜ್ಞರಾದ ಬ್ರಾಹ್ಮಣರು, ಶಾಸ್ತ್ರಜ್ಞರು ಮಂತ್ರೋದಯಾಧ್ಯರು ನಿಂತು ಆಶೀರ್ವಾದ ಮಾಡುತ್ತಾರೆ. ತಾರ್ಕಿಕರು, ವಾಚಕರು, ಭಾರತಿಗಳು (ಗಮಕಿಗಳು)–ಮೊದಲಾದ ವಿದ್ಯಾವಂತರು ಸಭೆಯಲ್ಲಿ ಮಂಡಿಸಿರುತ್ತಾರೆ. ಆಗ ದಳಪತಿ, ಮನ್ನೆಯರು, ಮಾಂಡಳಿಕರು, ರಾಯರಾವುತರು–ಮೊದಲಾದವರು ಅರಸನಿಗೆ ಇದಿರಾಗಿ ಬಂದು ಬಾಗಿ ಕೈಮುಗಿದು ತಮ್ಮ ಗೌರವ ಸಲ್ಲಿಸುತ್ತಾರೆ. ಒಡ್ಡೋಲಗದ ಒಂದೆಡೆಯಲ್ಲಿ ಗಾಯಕರು ತಂಬೂರಿ ಹಿಡಿದು ಗಾನಾಮೃತವನ್ನು ಸೂಚಿಸುತ್ತಿದ್ದರೆ ಇನ್ನೊಂದು ಕಡೆ ವೈಣಿಕರು ತಮ್ಮ ಕಲೆಯ ವೈಭವವನ್ನು ಮೆರೆಯಿಸುತ್ತಾರೆ. ಭಾರತ ರಾಮಾಯಣಾದಿ ಪುಣ್ಯ ಕಥೆಗಳನ್ನು ಭಾರತಿಗಳು ರಾಗವಾಗಿ ಹಿತವಾಗಿ ವಾಚನ ಮಾಡುತ್ತಾರೆ. ಇನ್ನೊಂದು ಕಡೆ ಭರತನಾಟ್ಯ ಬೆಳೆಯುತ್ತದೆ.

ಅರಸನ ಎಡಬಲಗಳಲ್ಲಿ ಸಾಲುಗಟ್ಟಿ ಕುಳಿತಿರುವ ಮಂತ್ರಿಗಳು ದಳಪತಿಗಳು ಪ್ರಭುವಿಗೆ ತಮ್ಮ ರಾಜಭಕ್ತಿ ಗೌರವಗಳನ್ನು ನಿವೇದಿಸಿ ವಂದನೆ ಸಮರ್ಪಿಸಿದ ಮೇಲೆ ರಾಜನ ಸಂದರ್ಶನಾಕಾಂಕ್ಷಿಗಳಾಗಿ ಬಂದ ಅನ್ಯರಾಜ್ಯಗಳ ನಿಯೋಗಿಗಳು ಎದ್ದು ವಂದಿಸಿ ಕಾಣಿಕೆಗಳನ್ನು ಒಪ್ಪಿಸಿ ತಮ್ಮ ಪ್ರಭುಗಳ ಸಂದೇಶಗಳನ್ನು ವರದಿಮಾಡಿ ಉಚಿತಾಸನಗಳಲ್ಲಿ ಕೂಡುತ್ತಾರೆ. ಎರಡನೆಯ ಪುಲಿಕೇಶಿಯ ಆಸ್ಥಾನದಲ್ಲಿ ಪರ್ಷಿಯದ ರಾಜ ನಿಯೋಗಿಗಳು ನಜರು ಒಪ್ಪಿಸುತ್ತಿರುವ ಶಿಲ್ಪವೊಂದು ದೊರೆತಿದೆ.

ಇದೇ ಸಮಯದಲ್ಲಿ ಸಭಾಮಂಟಪದ ಮುಂದೆ ಬಯಲಿನಲ್ಲಿ ತುರಗಾರೋಹಕರು ಗಜಾರೋಹಕರು ತಮ್ಮ ನಿಪುಣತೆಯ ಪ್ರದರ್ಶನ ನೀಡುತ್ತಿರುವರು. ಮಲ್ಲಯುದ್ಧಗಳು ನಡೆದು ವಿಜಯಿಗಳಿಗೆ ಪಾರಿತೋಷಕಗಳನ್ನು ಹಂಚುವ ಸಮಾರಂಭ ನಡೆಯುವುದು.

ಓಲಗದ ಕಾರ್ಯಕ್ರಮ ಮುಗಿಯುವ ಮುನ್ನ ಸಮಸ್ತ ಓಲಗಕಾರರಿಗೂ ವೀಳೆಯ, ಉಡುಗೊರೆಗಳನ್ನು ಪ್ರಭುವಿನ ಅಪ್ಪಣೆಯಂತೆ ಅಧಿಕಾರಿಗಳು ಸಲ್ಲಿಸುವರು. ಅನಂತರ ಪ್ರಭುಗಳು ಎದ್ದು ನಿಂತು ಎಲ್ಲರ ಜಯಘೋಷಣೆ ಕೇಳುತ್ತ ಸಿಂಹಾಸನದಿಂದ ಇಳಿದು ಆಪ್ತಪರಿವಾರದೊಡನೆ ಅಂತಃಪುರಕ್ಕೆ ದಯಮಾಡಿಸುವರು. ಆಮೇಲೆ ಓಲಗಕಾರರು ಚದರುವರು. (ಕೆ.ವಿ.ಇ.)

**ಒ'ಡ್ವೈಯರ್, ಸರ್ ಮೈಕೇಲ್:** ಒಂದನೆಯ ಮಹಾಯುದ್ಧದಲ್ಲಿ ಬ್ರಿಟನಿನ ಹಿಂದೆ ನಿಂತು ಅದರ ವಿಜಯಕ್ಕೆ ಎಲ್ಲ ಬಗೆಯ ನೆರವನ್ನೂ ನೀಡಿದ, ಭಾರತೀಯರ ಆಶೋತ್ತರಗಳನ್ನು ಪೂರೈಸುವ ಬದಲು ಕ್ರಿಮಿನಲ್ ನ್ಯಾಯ ತಿದ್ದುಪಡಿ ಕಾಯಿದೆಯನ್ನು (ರೌಲತ್ ಕಾಯಿದೆ) ಜಾರಿಗೆ ತಂದ, ಬ್ರಿಟಿಷ್ ಸರ್ಕಾರದ ವಿರುದ್ಧವಾಗಿ ಮಹಾತ್ಮಾ ಗಾಂಧಿಯವರು ಹೂಡಿದ ಸತ್ಯಾಗ್ರಹ ಸಮರವನ್ನು ಹತ್ತಿಕ್ಕುವ ಉದ್ದೇಶದಿಂದ ಪಂಜಾಬ್ ಪ್ರಾಂತ್ಯದ ಜಲಿಯನ್‌ವಾಲಾಬಾಗಿನಲ್ಲಿ ನಿರಸ್ತ್ರವೂ ಶಾಂತಿಯುತವೂ ಆದ ಗುಂಪಿನ ಮೇಲೆ 1913 ಏಪ್ರಿಲ್ 13ರಂದು ಗುಂಡುಹಾರಿಸಿ ಭೀಕರ ಕೊಲೆ ನಡೆಸಿದ ಬ್ರಿಗೇಡಿಯರ್–ಜನರಲ್ ಡೈಯರಿಗೆ ಬೆಂಬಲವಾಗಿ ಪಂಜಾಬಿನ ಲೆಫ್ಟಿನೆಂಟ್–ಗವರ್ನರ್ ಆಗಿದ್ದಾತ. ಯುದ್ಧಕ್ಕಾಗಿ ಸುಮಾರು ಐದು ಲಕ್ಷ ಮಂದಿಯನ್ನೂ ಅಗಾಧ ಹಣವನ್ನೂ ಸಲ್ಲಿಸಿದ್ದ ಪಂಜಾಬಿನ ಜನರೂ ಬ್ರಿಟಿಷರ ದಮನನೀತಿಯನ್ನು ಪ್ರತಿಭಟಿಸಿದಾಗ, ತಮ್ಮ ಶಕ್ತಿಯೆಷ್ಟೆಂಬುದನ್ನು ತೋರಿಸುವ ಉದ್ದೇಶದಿಂದ ಒಡ್ವೈಯರ್ ಈ ಮಾರ್ಗ ಅನುಸರಿಸಿದ. ಗಾಂಧಿಯವರ ಆತ್ಮಶಕ್ತಿಗಿಂತ ಮಿಗಿಲಾದ ಇನ್ನೊಂದು ಶಕ್ತಿಯುಂಟೆಂಬುದು ಈತನ ಅಹಂಕಾರ. ಜನರು ಹಿಂಸೆ ಎಸಗುವುದನ್ನೇ ಈತ ಸ್ವಾಗತಿಸಿದನೆಂದೂ ಹಾಗಾದಲ್ಲಿ ಅವರನ್ನು ಪುಡಿಪುಡಿ ಮಾಡಲು ತನಗೆ ಅವಕಾಶ ಸಿಗುವುದೆಂದು ಭಾವಿಸಿದ್ದನೆಂದೂ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಪಂಜಾಬ್ ಉಪಸಮಿತಿಯ ಕಮಿಷನರ ವರದಿ ತಿಳಿಸುತ್ತದೆ. ಅಮೃತಸರ ಮತ್ತು ಲಾಹೋರ್‌ಗಳಲ್ಲಿ ಲಷ್ಕರಿ ಕಾಯಿದೆ ಜಾರಿಗೆ ಬರಬೇಕೆಂದು ಒಡ್ವೈಯರನಿಗೆ ಜನರಲ್ ಡೈಯರ್ ಬರೆದಿದ್ದನೆಂದೂ ಜಲಿಯನ್‌ವಾಲಾಬಾಗಿನ ಹತ್ಯಾಕಾಂಡಕ್ಕೆ ಒಡ್ವೈಯರನ ಒಪ್ಪಿಗೆಯಿತ್ತೆಂದೂ ಜನರಲ್ ಡೈಯರ್ ಸಾಕ್ಷ್ಯ ನುಡಿದಿದ್ದಾನೆ.

ಒಡ್ವೈಯರ್ ಸಾಮ್ರಾಜ್ಯವಾದದ ಉಗ್ರಭಕ್ತ. ಪ್ರತಿಗಾಮಿಶಕ್ತಿಗಳ ಆದರ್ಶ ಮೂರ್ತಿಯಾಗಿ ಮೆರೆಯಬೇಕೆಂಬುದು ಇವನ ಅಭಿಲಾಷೆಯಾಗಿತ್ತು. ಭಾರತದ ಸ್ವಾಯತ್ತೆಯ ಹಕ್ಕಿನ ಬಗ್ಗೆ ಇವನಿಗೆ ಬಲು ತಿರಸ್ಕಾರವಿತ್ತು. ಸರ್ಕಾರದ ಸ್ವರೂಪಗಳಿಗಾಗಿ ಮುತ್ಸದ್ದಿಗಳು ಸ್ಪರ್ಧಿಸಿ ಕೊಳ್ಳಲಿ–ಎಂದು ಅಭಿನವ ವಿದ್ವಾಂಸನಂತೆ ಈತ ಉದ್ಗಾರ ತೆಗೆದನೆಂದು ವಿ.ಬಿ.ಕುಲ್ಕರ್ಣಿ ತಮ್ಮ ಬ್ರಿಟಿಷ್ ಸ್ಟೇಟ್ಸ್‌ಮನ್ ಇನ್ ಇಂಡಿಯ ಪುಸ್ತಕದಲ್ಲಿ ಬರೆದಿದ್ದಾರೆ. ತನ್ನ ಅಭಿಪ್ರಾಯಗಳನ್ನು ಸಮರ್ಥವಾಗಿ ಪ್ರತಿಪಾದಿಸಬಲ್ಲ ಚಿಕ್ಕ ಒರಟು ಐರಿಷ್ ಮನುಷ್ಯನೀತ–ಎಂದು ಮಾಂಟೆಗೊ ಇವನನ್ನು ಬಣ್ಣಿಸಿದ್ದಾನೆ. ಪ್ರತಿಯೊಂದನ್ನೂ ವಿರೋಧಿಸುವ ಇವನ ಸ್ವಭಾವ ಮಾಂಟೆಗೊಗೂ ಹಿಡಿಸುತ್ತಿರಲಿಲ್ಲ. ಪಂಜಾಬಿಗಳು ನಿಷ್ಠಾವಂತರು, ಶೂರರು, ಉತ್ಸಾಹಿಗಳು, ಪ್ರಗತಿಪರರು–ಎಂದು ಒಮ್ಮೆ ಬಣ್ಣಿಸಿದ ಒಡ್ವೈಯರನೇ ತನ್ನ ಪ್ರಾಂತ್ಯದಲ್ಲಿ ಲಷ್ಕರಿ ನಿಯಮವನ್ನು ಜಾರಿಗೆ ತರಲು ಸರ್ಕಾರದ ಒಪ್ಪಿಗೆ ಬೇಡಿ ಪಡೆದುಕೊಂಡದ್ದು ಇತಿಹಾಸದ ಒಂದು ವಿಪರ್ಯಾಸ. (ಬಿ.ಎಸ್.ಕೆ.)

**ಒಣಕಟ್ಟೆ:** ಹಡಗು ಕಟ್ಟುವ ಮತ್ತು ದುರಸ್ತಿಪಡಿಸುವ ಕೇಂದ್ರಗಳಲ್ಲಿರುವ ಬೋಗುಣಿಯೆಂಥ ಪ್ರದೇಶ (ಗ್ರೇವಿಂಗ್ ಡಾಕ್). ಇದರಲ್ಲಿ ನೀರನ್ನು ಒಳಕ್ಕೆ ಬಿಡಲು ಮತ್ತು ಹೊರಕ್ಕೆ ತಳ್ಳಲು ತಕ್ಕ ಬಾಗಿಲುಗಳ ಏರ್ಪಾಡುಗಳಿವೆ. ಹಡಗು ಇದರೊಳಗೆ ಪ್ರವೇಶಿಸಿದ ತರುವಾಯ ನೀರನ್ನು ಹೊರತಳ್ಳಲಾಗುವುದು. ಆಗ ಹಡಗು ತಳದಲ್ಲಿನ ದಿಮ್ಮಿಗಳ ಮೇಲೆ ನಿಲ್ಲುತ್ತದೆ. ಮುಂದೆ ದುರಸ್ತಿ ಮುಂತಾದ ಕ್ರಿಯೆಗಳನ್ನು ನೆರವೇರಿಸುವುದು ಸುಲಭ. ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಒಣಕಟ್ಟೆಯನ್ನು 1831ರಲ್ಲಿ ಇಂಗ್ಲೆಂಡಿನ ಸೌಥಾಂಪ್ಟನಿನಲ್ಲಿ ಕಟ್ಟಿದರು. ಈ ಕಟ್ಟೆಯಲ್ಲಿ 364 ಮೀ ಉದ್ದವೂ 1,00,000 ಟನ್ನುಗಳ ತೂಕವೂ ಇರುವ ಹಡಗುಗಳನ್ನು ನಿಲ್ಲಿಸಬಹುದು.

ಹಡಗು ಕಟ್ಟೆಗಳಲ್ಲಿ ಬೇರೆ ಎರಡು ಮಾದರಿಯವು ಇವೆ. ಮೊದಲನೆಯದು ತುಂಬು ಕಟ್ಟೆ (ವೆಟ್ ಡಾಕ್). ಇದರಲ್ಲಿ ಹೆಚ್ಚು ಉಬ್ಬರದ ಮಟ್ಟಕ್ಕೆ ನೀರನ್ನು ಯಾವಾಗಲೂ ಇಟ್ಟಿರುತ್ತಾರೆ. ಎರಡನೆಯದು ತೇಲು ಕಟ್ಟೆ (ಫ್ಲೋಟಿಂಗ್ ಡಾಕ್). ಗೋಡೆಗಳೂ ಒಳಗಿನಿಂದ ನೀರನ್ನು ಪಂಪುಗಳಿಂದ ಎತ್ತಲು ಅನುಕೂಲತೆಗಳೂ ಇರುವ ತೇಲು ಕಟ್ಟಡವಿದು. ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ತೇಲು ಕಟ್ಟೆಗಳು ಇಂಗ್ಲೆಂಡಿನ ಥೇಮ್ಸ್ ನದಿಯ ಮೇಲೆ ಇವೆ. (ಎಚ್.ಸಿ.ಕೆ.; ಎಂ.ಜಿ.ಎಸ್.)

**ಒಣಗಣ್ಣು:** ಕಣ್ಣುಗುಡ್ಡೆ ಮುಂಭಾಗವನ್ನು ಯಾವಾಗಲೂ ತೇವದಲ್ಲಿಡುವ ತೆಳುವಾದ ಮೇಲ್ಪೊರೆ ಈ ಬೇನೆಯಲ್ಲಿ ಒಣಗಿದಂತಿರುತ್ತದೆ (ಕ್ಸಿರಾಫ್ತಾಲ್ಮಿಯ). ಇದಕ್ಕೆ ಮುಖ್ಯಕಾರಣ ಮೈಯಲ್ಲಿ ಎ ಜೀವಸತ್ವದ ಕೊರತೆ. ಇದರಿಂದ ಮೊಟ್ಟ ಮೊದಲಾಗಿ ಮೈಯಲ್ಲಿ ಎಲ್ಲೆಲ್ಲೂ ಮೇಲ್ಪೊರೆಗಳಲ್ಲಿ ಆಗುವಂತೆ, ಚರ್ಮದಲ್ಲೂ ಕಣ್ಣುಗುಡ್ಡೆಯಲ್ಲೂ ಬದಲಾವಣೆಗಳಾಗುವುವು. ಕಣ್ಣುಗುಡ್ಡೆ ಒಣಗುವ ಮುನ್ನ ಮಬ್ಬು, ನಸುಕಿನ ಬೆಳಕು, ಇರುಳುಗಳಲ್ಲಿ ಕಣ್ಣಿನ ನೋಟ ಮಸಕಾಗುತ್ತ, ಕೊನೆಗೆ ಇರುಳು ಗುರುಡು (ನೈಟ್ ಬ್ಲೈಂಡ್‌ನೆಸ್) ಆಗುತ್ತದೆ. ಇದು ಹೆಚ್ಚಿದಂತೆಲ್ಲ, ಕಣ್ಣಿನ ಕೂಡುಪೊರೆಯೂ (ಕಂಜಂಕ್ಟೈವ) ಅದರೊಂದಿಗೆ ಕಣ್ಣುಗುಡ್ಡೆಯ ಮುಂದಿರುವ ಪಾರದರ್ಶಕ ಪಟಲ (ಕಾರ್ನಿಯ) ಕೂಡ ಹೊಳಪು ಕಳೆದುಕೊಂಡು ಒಣಗುತ್ತದೆ. ಬಹುಮಟ್ಟಿಗೆ ಕಣ್ಣೀರು ಸುರಿತ ಇಂಗುವುದರಿಂದ ಹೀಗಾಗುವುದು. ಆ ಮೇಲೆ ಬಿಳಿಯ ಕಣ್ಣುಗುಡ್ಡೆಯ ಮೇಲೆ ಪಕ್ಕಗಳಲ್ಲಿ ಸಾಬೂನು ನೊರೆ ಅಂಟಿಸಿದ ಹಾಗೆ ಹುರುಪೆ ಏಳುತ್ತದೆ. ಇದಕ್ಕೆ ಬೀಟಟನ ಮಟ್ಟೆಗಳು ಎಂದು ಹೆಸರಿದೆ. ಇದರೊಂದಿಗೆ ಸೋಂಕೂ ಹತ್ತಿದರೆ, ಕೋಡುಪೊರೆ ಹುಣ್ಣಾಗಿ ಮೆತ್ತಗಾಗಿ ಕೊಳೆತು ಕರಗಿ ಕಣ್ಣುಗುಡ್ಡೆಯೊಳಗಿನ ವಸ್ತುಗಳೆಲ್ಲ ಹೊರಬೀಳುತ್ತವೆ. ಹೀಗೆ ತೀರ ಹಾಳಾದ ಸ್ಥಿತಿಗೆ 'ಕೆರಾಟೊಮಲೇಸಿಯ' ಎಂದು ಹೆಸರು. ರೋಗ ಕೈಮೀರುವ ಮುಂಚೆ ಸಾಕಷ್ಟು ಪ್ರಮಾಣಗಳಲ್ಲಿ ಎ ಜೀವಸತ್ವವನ್ನು ಕೊಡುವುದೇ ಇದರ ಪರಿಣಾಮಕರ ಚಿಕಿತ್ಸೆ.

ಸುಮಾರು 25–30 ವರ್ಷಗಳಷ್ಟು ಹಿಂದೆ ಹೆಚ್ಚಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಈ ಕಾಯಿಲೆ ಜನರ ಶೈಕ್ಷಣಿಕ ಮಟ್ಟ ಹೆಚ್ಚಿದ ಪರಿಣಾಮವಾಗಿ ಮತ್ತು ಅದಕ್ಕಿಂತ ಮುಖ್ಯವಾಗಿ ಭಾರತ ಸರ್ಕಾರದ ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದ ಯಶಸ್ಸಿನ ದ್ಯೋತಕವಾಗಿ ಈಗ ಬಹಳ ಕಡಿಮೆಯಾಗಿದೆ ಎಂಬುದು ಸಮಾಧಾನ ತರುವ ವಿಷಯ.

ಇತ್ತೀಚಿನ ಆಧುನಿಕ ಕಾಲದಲ್ಲಿ ಒಣಗಿದ ಕಣ್ಣು ಇನ್ನೊಂದು ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಅದನ್ನು ನಾವು 'ಡ್ರೈ ಐ ಸಿಂಡ್ರೋಮ್' ಎಂದು ಹೇಳುತ್ತೇವೆ.

ಕಣ್ಣು ಉರಿಯುತ್ತದೆ, ಚುಚ್ಚಿದ ಹಾಗೆ ಆಗುತ್ತದೆ ಎಂಬ ಲಕ್ಷಣಗಳೊಂದಿಗೆ ಆರಂಭವಾಗುತ್ತದೆ. ಈ ಕಾಯಿಲೆ ಕಣ್ಣಿನ ಹೊರಗಿನ ಕಪ್ಪಾಗಿ ಕಾಣುವ ಪಾರದರ್ಶಕ ಪಟಲ ಕಾರ್ನಿಯಾದಲ್ಲಿ ರಕ್ತನಾಳಗಳಿಲ್ಲ. ಹಾಗಾಗಿ ಅದರ ಆಹಾರ ಪೂರೈಕೆ–ಎಂದರೆ ಕಣ್ಣೀರಿನಿಂದ. ಈ ಕಣ್ಣೀರಿನ ಅಂಶ ವಿವಿಧ ಕಾರಣಗಳಿಂದ ಕಡಿಮೆ ಆದಾಗ ಕಣ್ಣು ಒಣಗಲಾರಂಭಿಸುತ್ತದೆ. ಆಗ ಕಾರ್ನಿಯಾಕ್ಕೆ ಆಹಾರ ಪೂರೈಕೆ ಕಡಿಮೆ ಆಗಿ ಒಣಗಿದ ಕಣ್ಣಿನ ಲಕ್ಷಣಗಳು ಅದರಲ್ಲಿ ಕಾಣಿಸಲಾರಂಭವಾಗುತ್ತದೆ. ಹತ್ತಿರ ವಸ್ತುಗಳನ್ನು ದಿಟ್ಟಿಸಿ ಕೆಲಸ ಮಾಡುವ ಅದರಲ್ಲೂ ಕಂಪ್ಯೂಟರ್‌ನೊಂದಿಗೆ ಬಹಳ ಕಾಲ ಕೆಲಸ ಮಾಡುವವರಲ್ಲಿ ಇದು ಹೆಚ್ಚು.

ಈ ಶುಷ್ಕ ಕಣ್ಣಿನ ಕಾರಣಗಳು ಸರಿಯಾಗಿ ಗೊತ್ತಾದಾಗ ಚಿಕಿತ್ಸೆ ಸುಲಭ ಗೊತ್ತಾಗದಿದ್ದಾಗ ಕಣ್ಣೀರನ್ನು ಹೆಚ್ಚಿಸುವ ಔಷಧಿಗಳನ್ನು ಬಹಳ ಕಾಲದವರೆಗೆ ಕೊಡಬೇಕು. ಇದರ ಚಿಕಿತ್ಸೆ ತುಂಬಾ ತ್ರಾಸದಾಯಕ ಮತ್ತು ಪರಿಣಾಮಕಾರಿಯಲ್ಲ. (ಎಚ್.ಎಸ್.ಎಂ.)

**ಒಣಗಿಸಿರುವ ಮೇವು:** ಸಸ್ಯ ಬಿಡುವ ಸಮಯದಲ್ಲಿ ಕಟಾವು ಮಾಡಿ ಒಣಗಿಸಿ ಅದರ ಆಹಾರಾಂಶಗಳು ಹಾಳಾಗದಂತೆ, ದೀರ್ಘಕಾಲ ಕೆಡದಂತೆ ಸಂಗ್ರಹಿಸಿಡಿರುವ ದನಗಳ ಮೇವನ್ನು 'ಹೇ' ಎನ್ನುತ್ತಾರೆ. 'ಹೇ' ತಯಾರಿಕೆಯ ಕ್ರಮದಿಂದ 'ಮೇವಿನ'

ಉಪಯುಕ್ತತೆ ಹೆಚ್ಚುವುದರ ಜೊತೆಗೆ ಅದರ ಸಾಗಣೆಯೂ ಸುಲಭ ಸಸ್ಯದಲ್ಲಿ ಕಾಳು ದೊರೆತ ಮೇಲೆ ಕಟಾವುಮಾಡಿ ಶೇಖರಿಸಿದ ಮೇವಿನಲ್ಲಿ ಆಹಾರಾಂಶಗಳು ನಷ್ಟವಾಗಿರುತ್ತವೆ. ಒಣಗಿದ್ದರೂ ಇಂಥ ಮೇವನ್ನು ಒಣಗಿಸಿದ ಮೇವು ಎನ್ನಲಾಗದು. ಸೂಡಾನ್ ಹುಲ್ಲು, ಜಾನ್‌ಸನ್ ಹುಲ್ಲು, ಗರಿಕೆ, ಓಟ್ಸ್, ರೈ, ಸಿಹಿ ಅಥವಾ ಒಗರು ಜೋಳ, ತಿಮೋತಿ, ಆಲ್ಫಾಲ್ಫ, ಸೋಯಾಬೀನ್ಸ್, ಕೆಂಪು ಕ್ಲೋವರ್, ಅಲಸಂದೆ, ಕುದ್ಲು, ನೆಲಗಡಲೆ, ಹೆಸರು, ಉದ್ದು ಮುಂತಾದುವುಗಳಿಂದ ಹೇ ಅಥವಾ ಒಣಗಿಸಿದ ಮೇವನ್ನು ತಯಾರಿಸಬಹುದು.

ಒಣಮೇವನ್ನು ಸಿದ್ಧಪಡಿಸುವಾಗ ಹಸಿ ಮೇವಿನ ನೀರಿನ ಅಂಶವನ್ನು ತಗ್ಗಿಸುವುದು ಮುಖ್ಯ. ಸಾಮಾನ್ಯವಾಗಿ ಹಸಿಮೇವನ್ನು ಬಿಸಿಲಿನಲ್ಲಿ ಅಥವಾ ಯಂತ್ರಗಳ ನೆರವಿನಿಂದ ಒಣಗಿಸುತ್ತಾರೆ. ಹೀಗೆ ಮಾಡುವಾಗ ಮೇವಿನ ಆಹಾರಾಂಶಗಳು ನಷ್ಟವಾಗದಂತೆ ಎಚ್ಚರವಹಿಸಬೇಕು.

ಒಣಮೇವಿನ ತಯಾರಿಕೆಯಲ್ಲಿ ಹಸಿಮೇವಿನ ಬೆಳವಣಿಗೆ, ಹಾಗೂ ಕಟಾವಿನ ಕಾಲಾವಧಿ ಮುಖ್ಯಪಾತ್ರ ವಹಿಸುತ್ತವೆ. ಹುಲ್ಲು ಹೆಚ್ಚು ಬಲಿತರೆ ಅದರಲ್ಲಿನ ಪ್ರೋಟೀನ್ ಅಂಶ ತಗ್ಗುತ್ತದೆ. ಅಲ್ಲದೇ ಕಾಂಡದಲ್ಲಿ ನಾರಿನ ಪ್ರಮಾಣ ಹೆಚ್ಚುತ್ತದೆ. ಕಾಳಾಗುವ ಕಾಲ ಸಮೀಪಿಸಿದಂತೆಲ್ಲ ಸಸ್ಯದಲ್ಲಿನ ಆಹಾರಾಂಶಗಳನ್ನು ಜಾನುವಾರುಗಳು ಜೀರ್ಣಿಸಿಕೊಳ್ಳುವುದು ಕಠಿಣವಾಗುತ್ತದೆ. ಆದ್ದರಿಂದ ಸಸ್ಯಗಳು ಸಾಕಷ್ಟು ಎಳೆಯವಿದ್ದಾಗ, ಹೆಚ್ಚಿನ ಇಳುವರಿ ಸಿಗುವ ತೆರದಲ್ಲಿ, ಒಣಗಿಸುವುದಕ್ಕೆ ಅನುಕೂಲವಾದ ಹವೆಯಿದ್ದಾಗ, ಕಟಾವು ಮಾಡುವುದು ಉಚಿತ.

ಹೊಲದಲ್ಲಿ ಕೊಯ್ಲಿನ ಹುಲ್ಲು ಮಳೆಗೆ ಸಿಕ್ಕಿದರೆ ಮೇವಿನ ಗುಣ ಮತ್ತು ಉಪಯುಕ್ತತೆ ಕಡಿಮೆ ಆಗುತ್ತವೆ. ಹೊಲಗಳಲ್ಲಿ ಕೊಯ್ದು ಒಟ್ಟಿದ ಹಸಿಮೇವು ಸರಿಯಾಗಿ ಒಣಗಲು ಅದನ್ನು ಆಗಾಗ್ಗೆ ತಿರುವಿ ಹಾಕಬೇಕು. ಅನಂತರ ರಾಶಿ ಮಾಡಬೇಕು. ಏನೇ ಆದರೂ ಬಿಸಿಲಲ್ಲಿ ಒಣಗಿಸಿದ ಮೇವಿನಲ್ಲಿ ಪೌಷ್ಟಿಕಾಂಶ ಗಣನೀಯವಾಗಿ ಕಡಿಮೆಯಾಗುತ್ತದೆ.

ಯಂತ್ರಗಳ ಸಹಾಯದಿಂದ ಬಿಸಿಗಾಳಿಯನ್ನು ಉತ್ಪತ್ತಿ ಮಾಡಿ ಹಸಿಮೇವನ್ನು ಒಣಗಿಸಬಹುದು. ಈ ವಿಧಾನದಿಂದ ಮೇವು ಬೇಗ ಒಣಗುತ್ತದೆ. ಆದ್ದರಿಂದ ಮೇವಿನಲ್ಲಿ ಹೆಚ್ಚು ಬದಲಾವಣೆಗಳಾಗುವುದಿಲ್ಲ. ಹೀಗೆ ಒಣಗಿಸಿದ ಮೇವು ಹಸಿರಾಗಿಯೇ ಇರುತ್ತದೆ; ಮತ್ತು ಅದರ ರಚನೆ ಹಾಗೂ ಆಹಾರಾಂಶ ಪೂರೈಕೆಯ ಶಕ್ತಿ ಎಲ್ಲವೂ ಹಸಿರು ಮೇವಿಗೆ ಸಮನಾಗಿರುತ್ತವೆ. ಹೀಗೆ ಕೃತಕ ರೀತಿಯಿಂದ ಒಣಗಿಸಿ ತಯಾರಿಸಿದ ಮೇವಿನ ಆಹಾರಾಂಶ ಸಾಮಾನ್ಯವಾಗಿ ಬಿಸಿಲಿನಲ್ಲಿ ಒಣಗಿಸಿದ ಮೇವಿನ ಆಹಾರಾಂಶಕ್ಕಿಂತ ಉತ್ತಮ. ಕೃತಕ ರೀತಿಯಲ್ಲಿ ತಯಾರಾದ ಒಣ ಮೇವಿನಲ್ಲಿ ಕೆರೋಟೀನ್ ಆಹಾರಾಂಶ ನಾಶವಾಗುವುದಿಲ್ಲ; ಬಿ ಮತ್ತು ಡಿ ಜೀವಸತ್ವಗಳೂ ಕುಂದುವುದಿಲ್ಲ. ಒಣಗಿಸಿದ ಮೇವಿನ ಮೆದೆಗಳನ್ನು ಮಳೆ ನೀರಿನಿಂದ ತೋಯದಂತೆ ಕಾಪಾಡಬೇಕು ಮತ್ತು ಕ್ರಮವರಿತು ಮೆದೆ ಹಾಕಬೇಕು. ಕ್ರಮವಿಲ್ಲದ ಮೆದೆ ಹಾಕಿದರೆ ಸುಲಭವಾಗಿ ಗಾಳಿ ಮಳೆಗಳ ಹೊಡೆತಕ್ಕೆ ಸಿಕ್ಕಿ ಮೇವು ಕೆಡುತ್ತದೆ.

ಹಸಿ ಮೇವಿನಲ್ಲಿ 70 ಪ್ರತಿಶತ ನೀರಿರುತ್ತದೆ. ಒಣಗಿಸಿದ ಮೇವಿನಲ್ಲಿ ತೇವಾಂಶ ಸು.ಶೇ.15 ಮಾತ್ರ ಇರುತ್ತದೆ; ಆದ್ದರಿಂದ ಹಸಿ ಮೇವಿನಲ್ಲಿರುವುದಕ್ಕಿಂತ ಹೆಚ್ಚಿನ ಆಹಾರಾಂಶ ದೊರಕುತ್ತದೆ. ಕೆಲವು ಸಮಯದಲ್ಲಿ ಮಾತ್ರ ಯಥೇಚ್ಛವಾಗಿ ಸಿಕ್ಕುವ ಹಸಿ ಮೇವನ್ನು ಕೊಯ್ದು ಒಣಗಿಸಿ 'ಹೇ' ಮಾಡಿದರೆ ದನಕರುಗಳಿಗೆ ಹೆಚ್ಚಿನ ಪರಿಮಾಣದಲ್ಲಿ ಒಳ್ಳೆಯ ಮೇವು ಸಿಗುವಂತಾಗುತ್ತದೆ. ಹಸಿ ಮೇವನ್ನು ಒಣಗಿಸಿದಾಗ ದೊರೆಯುವ ಪ್ರಮಾಣ ಮೂಲ ಪ್ರಮಾಣದ ಶೇ.20–25 ಮಾತ್ರ. (ಕೆ.ಕೆ.ಆರ್.)

**ಒಣಫಲಗಳು:** ಅಂಡಾಶಯದ ಆವರಣ ರಸಭರಿತವಾಗಿರದೆ ಒಣಗಿ ಕಾಗದದಂತೆ ಆವರಿಸಿಕೊಂಡಿರುವ ಒಂದು ಫಲಪ್ರಭೇದ. ದೀರ್ಘಕಾಲ ಸುಲಭವಾಗಿ ಸಂಗ್ರಹಿಸಬಹುದಾದ ಈ ಫಲಗಳು ಪ್ರಾಣಿಗಳ ಮತ್ತು ಮಾನವರ ಆಹಾರದ ಪೂರೈಕೆಯಲ್ಲಿ ಪ್ರಮುಖವೆನಿಸಿವೆ. ಆದ್ದರಿಂದ ಇವುಗಳಿಗೆ ವಿಶೇಷ ಆರ್ಥಿಕ ಪ್ರಾಮುಖ್ಯವಿದೆ.

ಪರಾಗಾರ್ಪಣೆ ಇಲ್ಲವೆ ಗರ್ಭಾಂಕುರವಾದ ತರುವಾಯ ಅಂಡಾಶಯ ಬೆಳೆದು ಒಳಗಡೆ ಬೀಜಗಳು ರೂಪುಗೊಳ್ಳುತ್ತವಷ್ಟೆ. ಹೀಗೆ ಬೆಳೆದು ಪಕ್ವವಾದ ಅಂಡಾಶಯವೇ ಫಲ. ಕೆಲವು ಫಲಗಳಲ್ಲಿ ಅಂಡಾಶಯದ ಜೊತೆ ಹೂವಿನ ಇತರ ಭಾಗಗಳೂ ಬೆಳೆದು ಫಲದ ಭಾಗವಾಗುತ್ತವೆ. ಅಂಡಾಶಯದಿಂದ ಮಾತ್ರವೇ ರೂಪಗೊಂಡದ್ದು ನಿಜವಾದ ಫಲ. ಉಳಿದವು ಮಿಥ್ಯ ಫಲಗಳು. ಫಲಗಳಲ್ಲಿ ಒಂದೇ ಒಂದು ಬೀಜವಿರಬಹುದು. ಇಲ್ಲವೇ ಹೆಚ್ಚು ಬೀಜಗಳಿರಬಹುದು. ಫಲದಲ್ಲಿ ಬೀಜ ವಿನಾ ಉಳಿದ ಭಾಗ ಅಂಡಾಶಯದ ಗೋಡೆಯಂತಿರುವ ಆವರಣ. ಈ ಭಾಗಕ್ಕೆ ಪೆರಿಕಾರ್ಪ್ ಎಂದು ಹೆಸರು. ಕೆಲವು ಫಲಗಳಲ್ಲಿ ಪೆರಿಕಾರ್ಪ್ ಒಣಗಿ ಕಾಗದದಂತೆ ತೆಳುವಾಗಿರುತ್ತದೆ. ಇಲ್ಲವೇ ಮಂದವಾಗಿ ಗಡುಸಾಗಿರುತ್ತದೆ. ಇಂಥ ಪೆರಿಕಾರ್ಪ್‌ನ್ನುಳ್ಳ ಫಲಗಳೇ ಒಣಫಲಗಳು. ಪೆರಿಕಾರ್ಪ್ ರಸದಿಂದ ತುಂಬಿ ಕೊಂಡಿರುವವುಗಳಿಗೆ ರಸಭರಿತ ಫಲಗಳೆಂದು ಹೆಸರು.

ಹೂವಿನಲ್ಲಿ ರೂಪುಗೊಳ್ಳುವ ಫಲದ ಸಂಖ್ಯೆಯ ಆಧಾರದ ಮೇಲೆ ಫಲವನ್ನು ಸರಳ ಫಲ, ಸಾಮೂಹಿಕ ಫಲ ಮತ್ತು ಸಂಯುಕ್ತ ಫಲಗಳೆಂದು ವಿಂಗಡಿಸಬಹುದು. ಒಂದು ಹೂವಿನಲ್ಲಿ ಒಂದೇ ಒಂದು ಫಲ ರೂಪುಗೊಂಡರೆ ಅದು ಸರಳ ಫಲ. ಉದಾಹರಣೆಗೆ ಮಾವಿನಹಣ್ಣು. ಅನೇಕ ಫಲಗಳು ರೂಪುಗೊಂಡರೆ ಅದು ಸಾಮೂಹಿಕ ಫಲ. ಉದಾಹರಣೆಗೆ ಸೀತಾಫಲ. ಈ ರೀತಿ ಸಾಮೂಹಿಕ ಫಲವಾಗಬೇಕಾದರೆ ಹೂವಿನ ಹಣ್ಣು ಭಾಗ ಅನೇಕ ಕಾರ್ಪೆಲ್ಲುಗಳಿಂದ ಕೂಡಿ ಅವು ಬಿಡಿ ಬಿಡಿಯಾಗಿರುತ್ತವೆ. ಇಡೀ ಹೂಗೊಂಚಲೇ ಒಂದು ಹಣ್ಣಾಗಿ ರೂಪುಗೊಂಡರೆ ಅದು ಸಂಯುಕ್ತಫಲ. ಉದಾಹರಣೆಗೆ ಹಲಸಿನ ಹಣ್ಣು, ಅನಾನಸ್.

ಒಣಫಲಗಳಲ್ಲಿ ಮೇಲೆ ತಿಳಿಸಿದ ಮೂರು ಬಗೆಯ ಫಲಗಳೂ ಉಂಟು. ಕೆಲವು ಒಣಫಲಗಳಲ್ಲಿ ಒಂದೇ ಒಂದು ಕಾಳಿರುತ್ತದೆ. ಇಂಥ ಫಲಗಳಲ್ಲಿ ಪೆರಿಕಾರ್ಪ್ ಬಿರಿಯುವುದಿಲ್ಲ. ಕಾಳನ್ನು ಸಿಪ್ಪೆ ಆವರಿಸಿರುತ್ತದೆ. ಇವಕ್ಕೆ ಒಡೆಯದ ಒಣಫಲಗಳೆಂದು ಹೆಸರು. ಹಲವು ಕಾಳುಗಳಿರುವ ಫಲಗಳಲ್ಲಿ, ಪೆರಿಕಾರ್ಪ್ ಒಡೆದು ಕಾಳುಹೊರಬರುತ್ತದೆ. ಇವು ಒಡೆಯುವ ಒಣಫಲಗಳು.



ಒಣಫಲಗಳು : ಮೇಲಿನ ಸಾಲು (ಎಡದಿಂದ ಬಲಕ್ಕೆ) : ಮೊದಲ ಎರಡು ಸಮಾರ; ಕ್ಯಾರಿಯಾಪ್ಸಿಸ್. ಕೆಳಗಿನ ಸಾಲು (ಎಡದಿಂದ ಬಲಕ್ಕೆ) : ಕ್ರೀಮೊಕಾರ್ಪ್; ಸಿಲಿಕ್ವ.

ಒಂದೇ ಬೀಜವಿರುವ ಒಣಫಲಗಳಲ್ಲಿ ಐದು ವಿಧವುಂಟು: ಎಖೀನ್, ಕ್ಯಾರಿಯಾಪ್ಸಿಸ್, ಸಿಪ್ಸೆಲ, ಸಮಾರ ಮತ್ತು ನಟ್. ಎಖೀನ್ ಹಣ್ಣು ಉಚ್ಚಸ್ಥಾನದ ಒಂದೇ ಕಾರ್ಪೆಲ್ಲಿನ ಅಂಡಾಶಯದಿಂದ ರೂಪಿತವಾಗಿದೆ. ಪೆರಿಕಾರ್ಪ್ ಮತ್ತು ಬೀಜದ ಹೊರ ಸಿಪ್ಪೆ ಪ್ರತ್ಯೇಕವಾಗಿರುತ್ತವೆ. ಸಾಮಾನ್ಯವಾಗಿ ಸಾಮೂಹಿಕ ಫಲಗಳಲ್ಲಿ ಈ ರೀತಿಯ ಹಣ್ಣುಗಳಿವೆ. ರೆನನ್‌ಕುಲಸ್, ಕ್ಲಿಮಾಟಿಸ್ ಗಿಡಗಳಲ್ಲಿ ಇವನ್ನು ನೋಡಬಹುದು.



ಒಣಫಲಗಳು : ಮೇಲಿನ ಸಾಲು (ಎಡದಿಂದ ಬಲಕ್ಕೆ) : ಕ್ಯಾಪ್ಸ್ಯೂಲ್, ಫಾಲಿಕಲ್ ಕ್ಯಾಪ್ಸ್ಯೂಲ್ ಮತ್ತು ನೆಟ್. ಕೆಳಗಿನ ಸಾಲು (ಎಡದಿಂದ ಬಲಕ್ಕೆ) : ಲೆಗ್ಯೂಮ್, ಮಧ್ಯದವೆರಡು ಕ್ಯಾಪ್ಸ್ಯೂಲುಗಳು, ಲೊಮೆಂಟಮ್

ಜೋಳ, ಗೋದಿ, ಅಕ್ಕಿ ಮತ್ತಿತ್ತರ ಆಹಾರ ಧಾನ್ಯಗಳ ಫಲಗಳಿಗೆ ಕ್ಯಾರಿಯಾಪ್ಸಿಸ್ ಎಂದು ಹೆಸರು. ಇದು ಎಖೀನ್ ಫಲದ ರಚನೆಯನ್ನೇ ಹೋಲಿದರೂ ಪೆರಿಕಾರ್ಪ್ ಬೀಜದ ಹೊರಸಿಪ್ಪೆಗೆ ಒಂದನ್ನೊಂದು ಪ್ರತ್ಯೇಕಿಸಲಾರದಷ್ಟು ಬಲವಾಗಿ ಅಂಟಿಕೊಂಡಿರುತ್ತದೆ. ಸೂರ್ಯಕಾಂತಿ, ಹುಚ್ಚೆಳ್ಳು, ಕುಸುಬೆ ಜಾತಿಯ ಗಿಡದ ಫಲಗಳಿಗೆ ಸಿಪ್ಸೆಲ ಎಂದು ಹೆಸರು. ಇದು ಒಂದೇ ಕೋಣೆಯುಳ್ಳ ಎರಡು ಕಾರ್ಪೆಲ್ಲುಗಳ ಸಂಯುಕ್ತ

ಅಂಡಾಶಯದಿಂದ ರೂಪಗೊಂಡ ಏಕಬೀಜದ ಫಲ. ಪೆರಿಕಾರ್ಪ್ ಮತ್ತು ಬೀಜದ ಹೊರೆ ಸಿಪ್ಪೆ ಅಂಟಿಕೊಂಡಂತಿದ್ದರೂ ಇವನ್ನು ಪ್ರತ್ಯೇಕಿಸಬಹುದು. ಈ ಫಲಗಳಲ್ಲಿ ಕೇಲಿಕ್ಸ್ ವಿವಿಧವಾಗಿ ರೂಪಭೇದ ಹೊಂದಿ ಅವುಗಳ ಪ್ರಸಾರಕ್ಕೆ ಸಹಾಯಕವಾಗಿದೆ.

ಮತ್ತಿಮರ, ಮಾಧವೀಲತೆ, ಟಿರೋಲೋಬಿಯಂ ಮೊದಲಾದ ಫಲಗಳಲ್ಲಿ ಒಂದೇ ಬೀಜವಿದ್ದರೂ ಅವು ಒಂದು ಕಾರ್ಪೆಲ್ಲಿನ ಅಥವಾ ಸಂಯುಕ್ತ ಕಾರ್ಪೆಲ್ಲಿನ, ಉಚ್ಚಸ್ಥಾನದ ಇಲ್ಲವೇ ನೀಚಸ್ಥಾನದ ಅಂಡಾಶಯದಿಂದ ರೂಪುಗೊಂಡಿವೆ, ಅದಕ್ಕೆ ಸಮಾರ ಎಂದು ಹೆಸರು. ಫಲದ ಪೆರಿಕಾರ್ಪ್ ಅಗಲವಾಗಿ ರೆಕ್ಕೆಯಂತಿದ್ದು ಬೀಜ ಪ್ರಸಾರಕ್ಕೆ ಅನುಕೂಲವಾಗಿದೆ.

ಚೆಸ್ಟ್‌ನಟ್, ಅಕ್ರೋಟ (ವಾಲ್‌ನಟ್), ಗೇರು ಈ ಸಸ್ಯಗಳ ಫಲಗಳಿಗೆ ನಟ್ ಎಂದು ಹೆಸರು. ಈ ಫಲಗಳಲ್ಲಿ ಪೆರಿಕಾರ್ಪ್ ಗಡುಸಾಗಿ ಬೀಜವನ್ನಾವರಿಸಿ. ಕೊಂಡಿದೆ. ಕೆಲವು ಫಲಗಳಲ್ಲಿ ಪುಷ್ಪಪಾತ್ರೆ (ಕೇಲಿಕ್ಸ್) ಉಳಿದುಕೊಂಡು ಗಟ್ಟಿಯಾಗಿ ಬೀಜವನ್ನು ಮುಚ್ಚಿಕೊಂಡಿರುತ್ತದೆ.

ಅನೇಕ ಬೀಜಗಳನ್ನುಳ್ಳ ಒಡೆಯುವ ಒಣಫಲಗಳನ್ನು ವಿವಿಧ ರೀತಿಯಾಗಿ ವಿಂಗಡಿಸಿದ್ದಾರೆ. ಹಣ್ಣು ರೂಪಿತವಾಗುವ ಅಂಡಾಶಯದ ರಚನೆ, ಒಡೆಯುವ ರೀತಿಗಳಿಗೆ ಅನುಗುಣವಾಗಿ ಅವುಗಳ ವರ್ಗೀಕರಣವನ್ನು ಮಾಡಲಾಗಿದೆ.

ಎಕ್ಕದ ಗಿಡದ ಫಲವನ್ನು ಫಾಲಿಕಲ್ ಎನ್ನುತ್ತಾರೆ. ಉಚ್ಚಸ್ಥಾನದ ಒಂದು ಕಾರ್ಪೆಲ್ಲಿನಿಂದ ರೂಪುಗೊಂಡ ಇದರ ಅಂಡಾಶಯದ ಒಳಗಡೆ ಅನೇಕ ಬೀಜಗಳಿರುತ್ತವೆ. ಈ ಫಲ ಕಾರ್ಪೆಲ್ಲಿನ ಅಂಚುಗಳು ಸೇರಿಕೊಂಡಿರುವ ಭಾಗದಲ್ಲಿ ಒಡೆಯುತ್ತದೆ. ಬೀಜಗಳು ಒಂದೊಂದಾಗಿ ಗಾಳಿಯಲ್ಲಿ ತೂರಿ ಹೋಗುತ್ತವೆ. ಸಂಪಿಗೆ ಮರದ ಫಲ ಸಾಮೂಹಿಕ ಫಾಲಿಕಲ್.

ಅವರೆ, ಉದ್ದು, ಹುರುಳಿ ಈ ಜಾತಿಯ ಗಿಡದ ಫಲಗಳು ರಚನೆಯಲ್ಲಿ ಫಾಲಿಕಲ್‌ಗಳಂತಿದ್ದರೂ ಅವುಗಳ ತಳ ಮತ್ತು ಮೇಲಿನ ಸೇರುವಿಕೆಯೆರಡರಲ್ಲೂ ಒಡೆದು ಬೀಜಗಳು ಸಿಡಿಯುತ್ತವೆ. ಇಂಥ ಫಲಗಳಿಗೆ ಲೆಗ್ಯೂಮ್ ಎಂದು ಹೆಸರು.

ಸಾಸುವೆ, ಕ್ಲಿಯೋಮ್, ಗೈನಾಂಡ್ರಾಪ್ಸಿಸ್ ಈ ಸಸ್ಯಗಳ ಫಲಕ್ಕೆ ಸಿಲಿಕ್ವ ಎಂದು ಹೆಸರು. ಈ ಫಲಗಳು ಉಚ್ಚಸ್ಥಾನದ ಎರಡು ಸಂಯುಕ್ತ ಕಾರ್ಪೆಲ್ಲುಗಳ ಅಂಡಾಶಯದಿಂದ ರಚಿತವಾಗಿರುತ್ತವೆ. ಪ್ರಾರಂಭದಲ್ಲಿ ಒಂದು ಕೋಣೆ ಇದ್ದು ಬೀಜಮೂಲಗಳು ಕಾರ್ಪೆಲ್ಲುಗಳು ಸಂಧಿಸದ ಎಡೆಯಲ್ಲಿರುತ್ತವೆ. ಅನಂತರ ಮಧ್ಯೆ ಒಂದು ಭಿತ್ತಿ ಬೆಳೆದು ಎರಡು ಕೋಣೆಗಳಾಗುತ್ತವೆ. ಈ ಭಿತ್ತಿಗೆ ರೆಪ್ಲಂ ಎಂದು ಹೆಸರು. ಕಾರ್ಪೆಲ್ಲುಗಳು ಅವು ಸೇರುವೆಡೆಯಲ್ಲಿ ತಳಭಾಗದಿಂದ ಒಡೆಯುತ್ತವೆ. ಬೀಜಗಳು ರೆಪ್ಲಂಗೆ ಅಂಟಿಕೊಂಡಿರುತ್ತವೆ. ಸಿಲಿಕ್ವ ಮೊಟ್ಟದಾಗಿ ಚಪ್ಪಟೆಯಾಗಿದ್ದರೆ ಅದಕ್ಕೆ ಸಿಲಿಕುಲ ಎಂದು ಹೆಸರು.

ಬೆಂಡೆ, ಹತ್ತಿ, ಏಲಕ್ಕಿ ಈ ತರದ ಫಲಗಳಿಗೆ ಕ್ಯಾಪ್ಸ್ಯೂಲ್ ಎಂದು ಹೆಸರು. ಈ ಫಲ ಉಚ್ಚ ಅಥವಾ ಕೆಳಗಿನ ಸ್ಥಾನದ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಂಯುಕ್ತ ಕಾರ್ಪೆಲ್ಲುಗಳ ಅಂಡಾಶಯದಿಂದ ರೂಪುಗೊಂಡು ಅನೇಕ ಬೀಜಗಳುಳ್ಳದ್ದಾಗಿರುತ್ತದೆ. ಫಲ ಒಡೆದ ಬೀಜಗಳು ಹೊರಬರುತ್ತವೆ. ಒಡೆಯುವ ರೀತಿ ಬೇರೆ ಬೇರೆ. ಗಸಗಸೆ ಫಲದ ಅಗ್ರಭಾಗದಲ್ಲಿ ರಂಧ್ರಗಳುಂಟಾಗಿ ಆ ಮೂಲಕ ಬೀಜಗಳು ಹೊರಬರುತ್ತವೆ. ಹತ್ತಿ ಮತ್ತು ಬೆಂಡೆ ಫಲಗಳಲ್ಲಿ ಕಾರ್ಪೆಲ್ಲಿನ ಮಧ್ಯಭಾಗ ಒಡೆದು ಸೀಳುತ್ತದೆ. ಏಲಕ್ಕಿಯಲ್ಲಿ ಕೋಣೆಗಳನ್ನು ವಿಭಾಗಿಸುವ ಭಿತ್ತಿ ಸೀಳುತ್ತದೆ.

ಸಂಯುಕ್ತ ಕಾರ್ಪೆಲ್ಲುಗಳಿಂದ ರೂಪುಗೊಂಡ ಕೆಲವು ಸರಳ ಫಲಗಳಲ್ಲಿ ಕಾರ್ಪೆಲ್ಲು ಒಂದೊಂದು ಬೀಜವನ್ನೊಳಗೊಂಡು ಪ್ರತ್ಯೇಕವಾಗುತ್ತದೆ. ಹೀಗೆ ಪ್ರತ್ಯೇಕವಾದ ಕಾರ್ಪೆಲ್ಲು ಎಖೀನ್ ಫಲವನ್ನು ಹೋಲುತ್ತದೆ. ಇಂಥ ಒಣ ಫಲಗಳಿಗೆ ಸ್ಕಿಜ಼ೊಕಾರ್ಪಿಕ್ ಫಲಗಳೆಂದು ಹೆಸರು. ವಿವಿಧ ರೀತಿಯ ಸ್ಕಿಜ಼ೊಕಾರ್ಪಿಕ್ ಫಲಗಳು ಈ ರೀತಿ ಇವೆ: ಕರಿಜಾಲಿ, ಸೀಗೆ ಈ ಸಸ್ಯಗಳ ಫಲಗಳಲ್ಲಿ ಬೀಜದ ಮಧ್ಯೆ ತಗ್ಗಿರುತ್ತದೆ. ಈ ತಗ್ಗಿರುವೆಡೆ ಫಲ ಒಡೆದು ಒಂದೊಂದು ಬೀಜವಿರುವ ಪ್ರತ್ಯೇಕ ಭಾಗಗಳಾಗುತ್ತವೆ. ಇಂಥ ಫಲವೇ ಲೊಮೆಂಟಮ್. ಇದು ಲೆಗ್ಯೂಮಿನ ರೂಪಭೇದವೆನ್ನಲೂಬಹುದು.

ಪುಳ್ಳಂಪಚ್ಚೆ, ಕೊತ್ತಂಬರಿ, ಈ ಜಾತಿಯ ಫಲಗಳು ಸಂಯುಕ್ತ ಕಾರ್ಪೆಲ್ಲುಗಳಿಂದ ರೂಪುಗೊಂಡು, ಒಂದೊಂದು ಕಾರ್ಪೆಲ್ಲಿನ ಕೋಣೆಯಲ್ಲೂ ಒಂದೊಂದು ಬೀಜವನ್ನು ತಳೆದಿರುತ್ತವೆ. ಇದು ಒಡೆಯುವಾಗ ಪ್ರತಿಯೊಂದು ಕಾರ್ಪೆಲ್ಲೂ ಹಾಗೆಯೇ ಪ್ರತ್ಯೇಕವಾಗುತ್ತದೆ. ಇಂಥ ಪೂರ್ಣಫಲಕ್ಕೆ ಕ್ರೆಮೋಕಾರ್ಪ್ ಎಂದೂ ಪ್ರತ್ಯೇಕವಾದ ಬಿಡಿ ಭಾಗಕ್ಕೆ ಮೆರಿಕಾರ್ಪ್ ಎಂದೂ ಹೆಸರು.

ಮೇಲೆ ನಮೂದಿಸಿರುವುವಲ್ಲದೆ ಕೆಲವು ರೀತಿಯ ರಸಭರಿತ ಒಣಫಲಗಳೂ ಉಂಟು–ಅವು ಸಕ್ಕರೆ ಬಾದಾಮಿ, ಬಾದಾಮಿ, ಅಂಜೂರ, ಉಪ್ಪುನೇರಳೆ, ಒಣದ್ರಾಕ್ಷಿ ಇತ್ಯಾದಿ. ಇವು ಮೇಲೆ ವರ್ಗೀಕರಿಸಿದ ಫಲಗಳಲ್ಲಿ ಸೇರುವುದಿಲ್ಲ. ಏಕೆಂದರೆ ಇವು ತಾವಾಗಿಯೆ ಒಣಗುವ ಫಲದ ಜಾತಿಯವಲ್ಲ. ಜನ ತಮ್ಮ ಅನುಕೂಲಕ್ಕಾಗಿ ಇವನ್ನು ಒಣಗಿಸಿ ಶೇಖರಿಸುತ್ತಾರೆ. ಆದರೂ ಸಾಮಾನ್ಯವಾಗಿ ಇವನ್ನೂ ಒಣಫಲಗಳೆಂದೇ ಕರೆಯುತ್ತಾರೆ. ಇವುಗಳ ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ. (ಎಚ್.ಎನ್.ಸಿ.)

**ಒಣಹಿಮ:** ಇಂಗಾಲಾಮ್ಲ ($CO_2$) ಅನಿಲದ ಘನರೂಪ (ಡ್ರೈ ಐಸ್). ಇದೊಂದು ಶೈತ್ಯಕಾರಕ. ಇದು ವಿಷವಲ್ಲ ಮತ್ತು ಇತರ ಪದಾರ್ಥಗಳನ್ನು ಜೀರ್ಣಿಸುವುದಿಲ್ಲ (ನಾನ್‌ಕರೋಸಿವ್). ಘನರೂಪದಿಂದ ನೇರವಾಗಿ ಅನಿಲವಾಗುವುದರಿಂದ ಶೇಷ (ರೆಸಿಡ್ಯೂ) ಏನೂ ಇರುವುದಿಲ್ಲ. ಇದರ ಉಷ್ಣತೆ ಬಲುಕಡಿಮೆ. ಈ ಗುಣಗಳು ಇದರ ಉಪಯುಕ್ತತೆಗೆ ಕಾರಣ. ಮಂಜುಗಡ್ಡೆಗಿಂತಲೂ ಇದು ಹೆಚ್ಚು ಪರಿಣಾಮಕಾರಿಯಾದ ಶೈತ್ಯಕಾರಕ. ಕೆಡುವ ಪದಾರ್ಥಗಳನ್ನು ಸಾಗಾಣಿಕೆಯಲ್ಲಿ ಕೆಡದಂತೆ ಸಂರಕ್ಷಿಸುವುದು, ಯಂತ್ರೋಪಕರಣಗಳ ಜೋಡಣೆ, ಪ್ರಯೋಗಶಾಲೆಯಲ್ಲಿ ಶೈತ್ಯ ವಾತಾವರಣದ ಕಲ್ಪನೆ, ಸೀರಂ ಮತ್ತು ರಕ್ತದ ಸಂರಕ್ಷಣೆ, ಮಳೆ ಕರೆಸಲು ಮೋಡಗಳ ಮೇಲೆ ಸೇಚನೆ (ಕೃತಕ ಮಳೆ) ಇತ್ಯಾದಿ ಅನೇಕ ಉಪಯೋಗಗಳುಂಟು. (ಎನ್.ಎಸ್.ಕೆ.)

**ಒತ್ತಡ:** ಬಲ ಮತ್ತು ವಿಸ್ತೀರ್ಣದ ಪ್ರಮಾಣ (ಪ್ರೆಷರ್). ಸಂಮರ್ದ ಪರ್ಯಾಯ ಪದ. F ಬಲ A ವಿಸ್ತೀರ್ಣದಲ್ಲಿ ಪ್ರಯುಕ್ತವಾಗಿದ್ದರೆ ಆ ಬಲದ ಒತ್ತಡ Pಯ ಬೆಲೆಯನ್ನು $P=\frac{F}{A}$ ಸಮೀಕರಣ ಕೊಡುತ್ತದೆ. ಒತ್ತಡದ ಒಂದು ಮುಖ್ಯ ಗುಣವೆಂದರೆ ಯಾವುದಾದರೂ ಒಂದು ಬಿಂದುವಿನಲ್ಲಿ ಅದರ ಪ್ರಭಾವ ಎಲ್ಲ ದಿಕ್ಕುಗಳಲ್ಲಿಯೂ ಸಮಾನವಾಗಿದೆ. ಸೀಸೆಯಲ್ಲಿ ತುಂಬಿರುವ ನೀರಿನ ಒತ್ತಡ, ಬೆಲೂನಿನಲ್ಲಿ ತುಂಬಿರುವ ಅನಿಲದ ಒತ್ತಡ ಇದಕ್ಕೆ ಉದಾಹರಣೆಗಳು. ಸಮುದ್ರ ಮಟ್ಟದಲ್ಲಿ ವಾಯುಮಂಡಲದ ಒತ್ತಡ ಚದರ ಇಂಚಿಗೆ ಸುಮಾರು 14.7 ಪೌಂಡುಗಳು. ಒತ್ತಾಯ (ಸ್ಟ್ರೆಸ್) ಎನ್ನುವ ಇನ್ನೊಂದು ಪರಿಕಲ್ಪನೆಯನ್ನು ಇಲ್ಲಿ ಪ್ರತ್ಯೇಕಿಸಿ ತಿಳಿಯಬೇಕು. ಒಂದು ಕಂಬ ಒಂದು ಭಾರವನ್ನು ಎತ್ತಿ ಹಿಡಿದಿದ್ದರೆ ಆ ಭಾರವು ಕಂಬದ ಮೇಲೆ ಪ್ರಯುಕ್ತಿಸುವ ಬಲ ಒತ್ತಾಯ; ಇದು ಏಕಮುಖಿಯಾಗಿದೆ; ಎಲ್ಲ ದಿಕ್ಕುಗಳಲ್ಲಿಯೂ ಸಮಾನವಾಗಿಲ್ಲ.

ಒಂದು ಅನಿಲದ ಒತ್ತಡವೂ (P) ಘನ ಗಾತ್ರವೂ (V ,ವಾಲ್ಯೂಂ) ಪರಸ್ಪರ ವಿಲೋಮಾನುಪಾತದಲ್ಲಿವೆ. ಎಂದರೆ,

$$P \propto \frac{1}{V}$$ ಅಥವಾ

PV = ಸ್ಥಿರಾಂಕ

ಬಾಯಿಲನ ಸೂತ್ರವೆಂದು ಹೆಸರಿರುವ ಈ ಹೇಳಿಕೆಯಲ್ಲಿ ವಸ್ತುವಿನ ಉಷ್ಣತೆ ಸ್ಥಿರವಾಗಿದೆ ಎಂದು ಭಾವಿಸಲಾಗಿದೆ. ಉಷ್ಣತೆಯು ಒತ್ತಡದ ಮೇಲೆ ಗಮನಾರ್ಹ ಪ್ರಭಾವವನ್ನೇ ಬೀರುವುದು (**ನೋಡಿ– ಅಧಿಕಸಂಮರ್ದ; ಅಲ್ಪಸಂಮರ್ದ**). *

**ಒತ್ತಡ ಗುಂಪು:** ಸರ್ಕಾರದ ಮೂಲಕವೇ ಬೇರಾವ ವಿಧಾನಗಳಿಂದಲೋ ರಾಜಕೀಯ ಬದಲಾವಣೆ ತರಲು ಯತ್ನಿಸುವ, ಆದರೆ ವಿಧಾನ ಮಂಡಲದಲ್ಲಿ ಒಂದು ರಾಜಕೀಯ ಪಕ್ಷವೆಂದು ಕರೆಯಿಸಿಕೊಳ್ಳುವಂಥ ರೀತಿಯಲ್ಲಿ ಪ್ರಾತಿನಿಧಿಕವಾಗಿಲ್ಲದ ಒಂದು ಗುಂಪು (ಪ್ರೆಷರ್ ಗ್ರೂಪ್). ರಾಜಕೀಯ ಬದಲಾವಣೆಗಳಿಗಾಗಿ ಒತ್ತಡ ಹೇರುವ ಪ್ರವೃತ್ತಿ ಸಾರ್ವಕಾಲಿಕ, ಸಾರ್ವತ್ರಿಕ. ಸಂಬಂಧಪಟ್ಟ ವ್ಯಕ್ತಿಗಳ ಅಥವಾ ಅಧಿಕಾರಿಗಳ ಮೇಲೆ ಒತ್ತಡ ಹೇರಿ, ತಮ್ಮ ಗುರಿಯನ್ನು ಅಥವಾ ಅಭಿಲಾಷೆಯನ್ನು ಈಡೇರಿಸಿಕೊಳ್ಳುವುದು ಅಥವಾ ತಮ್ಮ ಹಿತ ರಕ್ಷಿಸಿಕೊಳ್ಳುವುದು ಒತ್ತಡ ಗುಂಪುಗಳ ವಿಧಾನ. ಆದರೂ ಇವು ರಾಜಕೀಯ ಪಕ್ಷಗಳಲ್ಲ. ಇವಕ್ಕೆ ಚುನಾಯಿತ ಪ್ರತಿನಿಧಿಗಳಿರುವುದಿಲ್ಲ. ಯಾವ ವ್ಯಕ್ತಿಯನ್ನೂ ತಮ್ಮ ಪ್ರತಿನಿಧಿಯೆಂದು ಇವು ಹೆಸರಿಸುವುದಿಲ್ಲ. ಯಾವ ಪತ್ರಿಕೆಗಳಲ್ಲೇ ಆಗಲಿ ಇವುಗಳ ಬಗ್ಗೆ ಜಾಹೀರಾತು ಇರುವುದಿಲ್ಲ. ಜೊತೆಗೆ ರಾಜಕೀಯ ಪಕ್ಷಗಳಲ್ಲಿರುವಂತೆ ಯಾವ ರೀತಿಯ ಒಡಂಬಡಿಕೆಯೇ ಆಗಲಿ ನೀತಿ ನಡೆವಳಿಕೆಗಳಾಗಲಿ ಇವಕ್ಕಿಲ್ಲ. ರಾಜಕೀಯ ಪಕ್ಷಗಳು ಜನರನ್ನು ಸಂಘಟಿಸಿ ಚಂದಾ ವಸೂಲು ಮಾಡಿ ಅವರನ್ನು ತಮ್ಮ ನಿಬಂಧನೆಗನುಸಾರವಾಗಿ ನಡೆಯುವಂತೆ ಒತ್ತಾಯಮಾಡುತ್ತವೆ. ಆದರೆ ಒತ್ತಡದ ಗುಂಪಿನಲ್ಲಿ ಇದು ಯಾವುದೂ ಇಲ್ಲ. ಇದು ಸದಸ್ಯರಿಲ್ಲದ ಗುಂಪು. ರಾಜಕೀಯ ಪಕ್ಷಕ್ಕಾದರೋ ತನ್ನದೇ ಆದ ಕಾರ್ಯಕ್ರಮವೊಂದುಂಟು; ಅದನ್ನು ನಿರ್ದೇಶಿಸುವ ತತ್ತ್ವವುಂಟು. ಒತ್ತಡದ ಗುಂಪುಗಳು ಎರಡು ತೆರ: 1 ಹಿತ ಗುಂಪು (ಇಂಟರೆಸ್ಟ್ ಗ್ರೂಪ್)–ಒಂದು ಪಂಗಡದ ಜನಕ್ಕೆ ಸಾಮಾನ್ಯವಾಗಿರುವ ಹಿತಗಳ ರಕ್ಷಣೆಗಾಗಿ ರಚಿತವಾದದ್ದು. 2 ಮನೋಭಾವ ಗುಂಪು (ಆಟಿಟ್ಯೂಡ್ ಗ್ರೂಪ್)–ಖಚಿತವಾಗಿ ನಿರ್ದೇಶಿಸಲಾದ ಯಾವುದೋ ಒಂದು ಉದ್ದೇಶ ಅಥವಾ ಧ್ಯೇಯ ಸಾಧನೆಗಾಗಿ ರಚಿತವಾದದ್ದು. ಇದರ ಸದಸ್ಯರಿಗೆಲ್ಲ ಸಾಮಾನ್ಯವಾದ ಹಿತಗಳಿರಬೇಕೆಂಬ ನಿಯಮವಿಲ್ಲ. ಅವರಿಗೆ ಸಮಾನವಾದ ಮನೋಭಾವ ಅಥವಾ ಗುರಿಗಳಿರಬೇಕು.

ಒಂದೇ ಬಗೆಯ ಹಿತಗಳನ್ನು ಹೊಂದಿರುವವರು ಯಾರೆಂಬುದನ್ನು ನಿರ್ಣಯಿಸುವುದು ಹಲವು ವೇಳೆ ಸುಲಭ ಸಾಧ್ಯ. ಉದಾಹರಣೆಗೆ, ಮೋಟಾರು ವಾಹನಗಳ ಮಾಲೀಕರೆಲ್ಲ ಒಂದೇ ಬಗೆಯ ಹಿತಗಳನ್ನು ಹೊಂದಿದವರೆನ್ನಬಹುದು. ಆದರೆ ಒಂದೇ ಬಗೆಯ ಮನೋಭಾವ ಅಥವಾ ಗುರಿ ಹೊಂದಿದವರು ಯಾರೆಂಬುದನ್ನು ನಿರ್ಧರಿಸುವುದು ಕಷ್ಟ. ಇದು ಮಾನಸಿಕ. ಹಿತಗುಂಪು ಸಾಮಾನ್ಯವಾಗಿ ಶಾಶ್ವತ. ಆ ಹಿತಗಳನ್ನುಳ್ಳ ಪಂಗಡ ಇರುವವರೆಗೂ ಹಿತಗುಂಪು ಉಳಿಯುತ್ತದೆ. ಆದರೆ ಮನೋಭಾವ ಗುಂಪು ಅಷ್ಟು ಸ್ಥಿರವಲ್ಲ. ಧ್ಯೇಯ ಅಥವಾ ಉದ್ದೇಶ ಪೂರೈಸುವವರೆಗೂ ಅದು ಮುಂದುವರಿಯಬಹುದು.

ಇಂದಿನ ಪ್ರಜಾಪ್ರಭುತ್ವಗಳಲ್ಲಿ ಸಂಘಗಳಿಗೆ ಅಥವಾ ಕೂಟಗಳಿಗೆ ಪ್ರಬಲವಾದ ಸಾಧನಗಳಿವೆ. ಒಂದೇ ಭಾವನೆಯುಳ್ಳ ಒಂದೇ ಬಗೆಯ ಹಿತಾಸಕ್ತಿಯುಳ್ಳ ಜನರನ್ನು ಒಂದುಗೂಡಿಸುವಂಥ ಪ್ರಚಾರ ಮತ್ತು ಸಂಪರ್ಕಸಾಧನಗಳೂ ಸಂಚಾರ ಸೌಲಭ್ಯಗಳೂ ಉಂಟು. ಈ ಗುಂಪುಗಳು ರಾಜ್ಯಮಟ್ಟದಿಂದ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟಗಳನ್ನೇ ಮುಟ್ಟಬಹುದು. ಒತ್ತಡ ಗುಂಪುಗಳ ಪ್ರಭಾವ, ಅವುಗಳಲ್ಲಿರುವ ವ್ಯಕ್ತಿಗಳ ಮತ್ತು ಅವು ಸಾಧಿಸಬೇಕೆಂದಿರುವ ಗುರಿಯನ್ನೇ ಅವಲಂಬಿಸಿರುತ್ತದೆ. ಅದು ಜನರನ್ನು ಒಲಿಸಿಕೊಂಡು, ಸರ್ಕಾರ ಅದರ ಒತ್ತಡಕ್ಕೆ ಮಣಿಯುವಂತೆ ಮಾಡಿ ತನ್ನ ಗುರಿಯನ್ನು ಸಾಧಿಸಿಕೊಳ್ಳುತ್ತದೆ. ಗುಂಪಿನ ಗುರಿ ಸಾಧನೆಗಾಗಿ, ಜನರ ಮನ ಒಲಿಸಿಕೊಳ್ಳಲು ಬಾನುಲಿ, ಪತ್ರಿಕೆಗಳು, ಟೆಲಿವಿಷನ್ ಮತ್ತು ಜನಸಂಪರ್ಕ ಸಾಧನಗಳನ್ನು ಬಳಸಿಕೊಳ್ಳುವುದುಂಟು.

ಭಿನ್ನ ಹಿತ, ಭಿನ್ನ ರುಚಿ, ಭಿನ್ನ ದೃಷ್ಟಿ ಇರುವ ಜನಗಳನ್ನು ಹೊಂದಿರುವುದು ಈಗಿನ ಸಮಾಜದ ಲಕ್ಷಣ. ಅಭಿಪ್ರಾಯ ಸ್ವಾತಂತ್ರ್ಯವಿರುವ ರಾಜಕೀಯ ವ್ಯವಸ್ಥೆಗಳಿರಲಿ, ಇದಕ್ಕೆ ಮನ್ನಣೆ ನೀಡದ ಸರ್ವಾಧಿಕಾರಿ ಪ್ರಭುತ್ವಗಳಲ್ಲೂ ಒತ್ತಡದ ಗುಂಪುಗಳು ರಹಸ್ಯವಾಗಿಯಾದರೂ ಕೆಲಸ ಮಾಡುತ್ತಿರುತ್ತವೆ. ಇವು ರಾಜಕೀಯ ಮುಖಂಡರ ಮೇಲೆ, ಸರ್ಕಾರದ ಮತ್ತು ಸರ್ಕಾರಿ ಅಧಿಕಾರಿಗಳ ಮೇಲೆ, ಚುನಾಯಿತ ಪ್ರತಿನಿಧಿಗಳ ಮೇಲೆ ತಮ್ಮ ಹಿಡಿತ ಇಟ್ಟುಕೊಳ್ಳುತ್ತವೆ.

ಒಂದು ಪ್ರಜಾಪ್ರಭುತ್ವದಲ್ಲಿ ನಾನಾ ಕ್ಷೇತ್ರಗಳಿಂದ ಆಯ್ಕೆ ಹೊಂದಿದ ಶಾಸಕರು ದೇಶದ ಎಲ್ಲ ಪ್ರಜೆಗಳನ್ನೂ ಪ್ರತಿನಿಧಿಸಲಾರರು. ಎಲ್ಲರ ಬೇಕು ಬೇಡಗಳಿಗೆ ಗಮನವೀಯಲಾರರು. ಅವರ ದೃಷ್ಟಿ ಅನೇಕ ವೇಳೆ ತಂತಮ್ಮ ಚುನಾವಣಾಕ್ಷೇತ್ರಗಳಿಗೇ ಸೀಮಿತವಾಗಿರುತ್ತದೆ; ಅಲ್ಲದೆ ತಮ್ಮ ಪಕ್ಷದ ರೀತಿ ನೀತಿಗಳ ಚೌಕಟ್ಟಿಗೆ ಬದ್ಧವಾಗಿರುತ್ತದೆ.

ಆಗ ಒತ್ತಡ ಗುಂಪು ಜನರ ಬೇಕು ಬೇಡಗಳ ಬಗ್ಗೆ ಸರ್ಕಾರದ ಮತ್ತು ಶಾಸಕರ ಗಮನ ಸೆಳೆದು ಅವರ ಕಲ್ಯಾಣದ ಕಡೆಗೆ ಗಮನವೀಯುವಂತೆ ಒತ್ತಡ ಹಾಕುತ್ತದೆ. ಇದರ ಒತ್ತಡಕ್ಕೆ ಅನೇಕ ವೇಳೆ ಸರ್ಕಾರ ಮಣಿಯ ಬೇಕಾಗುವುದು. ಇದು ಕಾರ್ಮಿಕರ ಮತ್ತು ಉದ್ಯೋಗಸ್ಥರ ಪ್ರತಿನಿಧಿಯಂತೆ ವರ್ತಿಸಿ ಅವರ ಕ್ಷೇಮ ಸಾಧಿಸಬಹುದು. ಶಾಸನಸಭೆಯ ಅಧಿವೇಶನಗಳ ಅದರ ಸಮಿತಿ-ಉಪಸಮಿತಿಗಳ ಕಲಾಪಗಳಿಗೆ ಇದು ಸಾಮಗ್ರಿ ಒದಗಿಸಿ, ಸದಸ್ಯರಿಗೆ ಸಾಕಷ್ಟು ಕೆಲಸ ಕೊಟ್ಟು, ಸರ್ಕಾರ ಮತ್ತು ಜನತೆಯ ನಡುವೆ ಸಂಪರ್ಕವನ್ನುಂಟುಮಾಡುತ್ತದೆ. ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಯವರೆಗಿನ ಕಾಲದಲ್ಲಿ ಒತ್ತಡ ಗುಂಪು ಜನರಲ್ಲಿ ಜಾಗೃತಿಯನ್ನುಂಟು ಮಾಡಿ, ಕೆಲವು ವಾಸ್ತವಿಕ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯುವ ಒಂದು ಸಾಧನವಾಗಿದೆ.

ಒಬ್ಬ ಪ್ರಭಾವಿತ ವ್ಯಕ್ತಿ ಕೆಲವು ವೇಳೆ ಹಣ ಮತ್ತು ಜನಬಲವನ್ನು ದುರುಪಯೋಗಪಡಿಸಿಕೊಂಡು ಒತ್ತಡ ಗುಂಪಿನ ಪ್ರಭಾವವನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಲೂಬಹುದು. ಒಂದು ಗುಂಪಿಗೆ ಬೇಕು ಮತ್ತೊಂದು ಗುಂಪಿಗೆ ಬೇಡವಾದಾಗ ಈ ಎರಡು ಗುಂಪುಗಳ ನಡುವೆ ಘರ್ಷಣೆಗೆ ಅವಕಾಶವಿದೆ. ಅಲ್ಪಸಂಖ್ಯಾತರ ಹಿತ ಅಥವಾ ಗುರಿ ಸಾಧನೆಯಲ್ಲಿ ನಿರತವಾದ ಒತ್ತಡ ಗುಂಪು ಅನೇಕ ವೇಳೆ ಬಹುಜನರ ಕಲ್ಯಾಣಕ್ಕೆ ಧಕ್ಕೆ ತರಬಹುದು. ಇಂಥ ಒತ್ತಡ ಗುಂಪುಗಳು ರಾಜ್ಯವ್ಯವಸ್ಥೆಗಾಗಲಿ ಸಮಾಜ ವ್ಯವಸ್ಥೆಗಾಗಲಿ ಹಿತಕರವಲ್ಲ. ಮಾನವ ಶರೀರದಲ್ಲಿನ ರಕ್ತದ ಒತ್ತಡ ಯಾವುದೋ ಒಂದು ಮಟ್ಟವನ್ನು ಮೀರಿದಾಗ ದೇಹಕ್ಕೆ ಅಪಾಯ ಸಂಭವಿಸುವಂತೆ ಒತ್ತಡ ಗುಂಪುಗಳಿಂದಲೂ ದೇಶಕ್ಕೆ ಅಪಾಯ ಸಂಭವಿಸಬಹುದು. ಒಂದು ರಾಷ್ಟ್ರದ ಆಡಳಿತ ವ್ಯವಸ್ಥೆ ತುಂಬ ದುರ್ಬಲವಾಗಿದ್ದು ನಾನಾಬಗೆಯ ಒತ್ತಡಗಳಿಗೆ ಮಣಿಯುವಂತಿರುವುದು ಒಳ್ಳೆಯದಲ್ಲ. ಉಷ್ಣತೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಡಿಮೆ ಒತ್ತಡವಿರುವ ಕೇಂದ್ರದೆಡೆಗೆ ಎಲ್ಲ ಕಡೆಗಳಿಂದಲೂ ನುಗ್ಗಿದ ಗಾಳಿಯಿಂದ ಅನಾಹುತವಾಗುವಂತೆ ರಾಜಕೀಯ ಕ್ಷೇತ್ರದಲ್ಲೂ ಆಗುವುದು ಸಾಧ್ಯ. ಆದರೆ ಹೆಚ್ಚು ಒತ್ತಡಕ್ಕೆ ಮಣಿಯದ, ಆದರೆ ಅದರ ಪ್ರಭಾವಕ್ಕೆ ಒಳಗಾಗಿಯೂ ಇರುವ ವ್ಯವಸ್ಥೆಯೇ ಸುವ್ಯವಸ್ಥೆ. ಇಂಥ ವ್ಯವಸ್ಥೆಯಲ್ಲಿರುವ ನಾನಾ ಹಿತಗಳ, ಉದ್ದೇಶಗಳ ಮತ್ತು ಗುರಿಗಳ ಒತ್ತಡ ಗುಂಪುಗಳ ಪರಸ್ಪರ ಕ್ರಿಯೆ-ಪ್ರತಿಕ್ರಿಯೆಗಳ ಫಲವಾಗಿ ಒಂದು ಬಗೆಯ ಸಮತೋಲ ಏರ್ಪಡುವುದು ಸಾಧ್ಯ. ಆಗ ಈ ಗುಂಪುಗಳಿಂದ ಸಾರ್ವತ್ರಿಕ ಹಿತ ಸಾಧಿಸುತ್ತದೆ. ಈ ಬಗೆಯ ವೈಜ್ಞಾನಿಕ ಬೆಳವಣಿಗೆಗಳು ಹೆಚ್ಚು ಪ್ರಾಮುಖ್ಯಗಳಿಸುತ್ತವೆ. ಬ್ರಿಟನ್, ಅಮೆರಿಕ, ಫ್ರಾನ್ಸ್‌ಗಳಲ್ಲಿ ಒತ್ತಡ ಗುಂಪುಗಳು ಬಹು ಶಕ್ತಿಯುತವಾಗಿ ಕೆಲಸ ಮಾಡುತ್ತಿವೆ. ಭಾರತ, ಜಪಾನ್ ಮತ್ತು ಮಧ್ಯ ಐರೋಪ್ಯ ರಾಜ್ಯಗಳಲ್ಲಿ ಇವು ಈಚೆಗೆ ಹೆಚ್ಚು ಪ್ರಭಾವ ಬೀರಲಾರಂಭಿಸಿವೆ. (ಬಿ.ಎಸ್.ಎಚ್.)

**ಒತ್ತಡ ಸಂವೇದಿ ಪೇಂಟ್‌ಗಳು:** ರಂಗುರಂಗಿನ ಹೂವುಗಳು, ನೀಲಿ ಬಣ್ಣದ ಆಗಸ, ಹಚ್ಚಹಸುರಿನ ಎಲೆಗಳು, ಸುಂದರವಾದ ಕಾಮನಬಿಲ್ಲು, ಕೆಂಪು ಬಣ್ಣದ ಕಾರ್ಮೋಡಗಳು - ಇವೆಲ್ಲಾ ನಮ್ಮ ಕಣ್ಣುಗಳಿಗೆ ಹಬ್ಬವನ್ನು ಉಂಟುಮಾಡುವ ಪ್ರಕೃತಿಯ ವರ್ಣ ವೈವಿಧ್ಯ ಕೊಡುಗೆಗಳು. ಬಣ್ಣಗಳು ನಮ್ಮ ಜೀವನದಲ್ಲಿ ಎಷ್ಟು ಹೊಂದಿಕೊಂಡಿವೆ ಎಂದರೆ ಬಣ್ಣಗಳಿಲ್ಲದ ವಾತಾವರಣವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಹೀಗೆ ಕಣ್ಣಿಗೆ ಇಂಪು, ಮನಸ್ಸಿಗೆ ಆಹ್ಲಾದ ನೀಡುವ ವರ್ಣ ಪ್ರಪಂಚದ ವೈಜ್ಞಾನಿಕ ರಹಸ್ಯ ಎಂದೋ ಬಯಲಾಗಿದೆ. ಅಂತೆಯೇ ಹಿಂದೆಂದಿಗಿಂತಲೂ ಇಂದು ವೈವಿಧ್ಯಮಯ ಬಣ್ಣಗಳು ಅಭಿವೃದ್ಧಿಗೊಂಡು ಬಳಕೆಯಾಗುತ್ತಿವೆ; ವರ್ಣಚಿತ್ರಕಾರರ, ವರ್ಣಕರ್ಮಿಗಳ ಕಲ್ಪನೆ, ಕೌಶಲ್ಯಗಳೆಲ್ಲಾ ಸಾಕಾರಗೊಳ್ಳುತ್ತಿವೆ. ಹೀಗೆ, ಬೇಕಾದ ಬಣ್ಣಗಳನ್ನು ನೀಡಬಲ್ಲ ವಿಧವಿಧವಾದ ಪೇಂಟ್‌ಗಳು (ವರ್ಣದ್ರವ್ಯಗಳು) ತಯಾರಾಗುತ್ತಿವೆ.

ವೈಜ್ಞಾನಿಕ ಕ್ಷೇತ್ರಗಳಲ್ಲೂ ಪೇಂಟ್‌ಗಳ ಬಳಕೆ ಬಹಳವಾಗಿದೆ. ಇಲ್ಲೆಲ್ಲಾ ಉತ್ಕೃಷ್ಟ ಗುಣಮಟ್ಟದ, ಬಹುಕಾಲ ಬಾಳಿಕೆಯ ಪೇಂಟ್‌ಗಳು ಬೇಕಾಗುತ್ತವೆ. ಈ ಎಲ್ಲಾ ಸಂದರ್ಭಗಳಲ್ಲೂ ಬಣ್ಣಗಳ ಉಪಯುಕ್ತತೆ ಎಲ್ಲರಿಗೂ ತಿಳಿದಿರುವುದೇ ಆಗಿದೆ.

ಇತ್ತೀಚೆಗೆ ವಿದ್ಯುನ್ಮಾನ ಹಾಗೂ ಗಣಕ ಕ್ಷೇತ್ರದಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ವೈಮಾಂತರಿಕ್ಷ ಕ್ಷೇತ್ರದಲ್ಲಿ ಬಣ್ಣಗಳ ಬಳಕೆಯ ಹೊಸ ಆಯಾಮವೇ ಸೃಷ್ಟಿಯಾಗಿದೆ. ವೈಮಾನಿಕೀಯ ಹಾಗೂ ಅಂತರಿಕ್ಷ ವಸ್ತುಗಳ ಮೇಲ್ಮೈಗಳಿಗೆ ಪೇಂಟ್ ಮಾಡುವ ಉದ್ದೇಶ ಅವುಗಳ ರಕ್ಷಣೆಗಾಗಿ ಮಾತ್ರವೇ ಎಂಬುದು ಈಗ ನಿಜವಲ್ಲ. ಆಗಸದಲ್ಲಿ ವಿಮಾನದ ಹಾರಾಟವನ್ನು ಸೂಕ್ತವಾಗಿ ನಿಯಂತ್ರಿಸುತ್ತಾ ಅದನ್ನು ಸುರಕ್ಷಿತವಾಗಿ ಚಾಲಿಸಲು ಜವಾಬ್ದಾರನಾದ ವಿಮಾನ ಚಾಲಕನಿಗೆ ಪ್ರತಿಕ್ಷಣವೂ ಹಲವಾರು ಬಗೆಯ ಮಾಹಿತಿಗಳ ಅಗತ್ಯವಿರುತ್ತದೆ. ಇಂತಹ ಮಾಹಿತಿಗಳನ್ನು ನೀಡುತ್ತಿರುವ ವಿದ್ಯುನ್ಮಾನ / ಯಾಂತ್ರಿಕ ಉಪಕರಣಗಳಿಗೆ ಬದಲಾಗಿ ಪೇಂಟ್‌ಗಳು ಕೆಲಸಮಾಡುವ ಹಂತಕ್ಕೆ ತಲುಪುತ್ತಿವೆ ಎಂದರೆ ಅಚ್ಚರಿ ಆಗಬಹುದಲ್ಲವೆ! ಇದನ್ನು ಕೆಳಕಂಡಂತೆ ತಿಳಿದುಕೊಳ್ಳಬಹುದು.

ಸತತವಾಗಿ ಗಾಳಿಯನ್ನು ಎದುರಿಸುವ ಅಂತರಿಕ್ಷ ವಾಹನಗಳ ಮೇಲೇರುವಿಕೆ, ಹಾರಾಟ ನಿಯಂತ್ರಣ - ಹೀಗೆ ಎಲ್ಲವೂ ವಾಹನಗಳ ದೇಹ, ರೆಕ್ಕೆ, ಮುಕ್ಕ ಮುಂತಾದ ವಿವಿಧ ಭಾಗಗಳ ಮೇಲೆ ಗಾಳಿಯಿಂದ ಉಂಟಾಗುವ ಒತ್ತಡಗಳ ಪ್ರಮಾಣವನ್ನು ಅವಲಂಬಿಸಿರುತ್ತವೆ. ವಿಮಾನದ ಎರಡೂ ಬದಿಯ ರೆಕ್ಕೆಗಳ ಮೇಲ್ಭಾಗದಲ್ಲಿನ ಗಾಳಿಯ ಒತ್ತಡ ಕಡಮೆಯಾಗಿದ್ದು ಕೆಳಭಾಗದ ಒತ್ತಡ ಜಾಸ್ತಿಯಾಗಿರುವುದರಿಂದಲೇ ಅದು ಮೇಲೇರಲು ಸಾಧ್ಯ. ವಿಮಾನವು ಚಲಿಸುವಾಗ ಎದುರಿನಿಂದ ಹರಿಯುವ ಗಾಳಿಯ ಒತ್ತಡಗಳಲ್ಲಿ ಈ ರೀತಿಯ ವ್ಯತ್ಯಾಸಗಳುಂಟಾಗುವಂತೆ ರೆಕ್ಕೆಗಳನ್ನು ವಿನ್ಯಾಸ ಮಾಡಿರುತ್ತಾರೆ. ವಿಮಾನ ನಿಲ್ದಾಣದ ಓಡುದಾರಿಯ ಮೇಲೆ ಚಲನೆಯನ್ನು ಆರಂಭಿಸಿದಾಗ ಭೂಮಿಗೆ ಸಮಾನಾಂತರವಾಗಿರುವ ವಿಮಾನವು ಕ್ರಮೇಣ ಕೆಲವು ಡಿಗ್ರಿ ಕೋನದಲ್ಲಿ ತಲೆ ಎತ್ತಿ ಮೇಲೇರುವುದನ್ನು ನಾವು ನೋಡಿದ್ದೇವೆ. ಅಂತೆಯೇ ಹಾರಾಟದಲ್ಲಿರುವಾಗ ಹಾರಾಟದ ದಿಕ್ಕಿಗೆ ಎಡ ಅಥವಾ ಬಲ ಪಕ್ಕಗಳಿಗೆ ತಿರುಗುವ ಕೋನಗಳೂ ವಿವಿಧ ಚಲನೆಗಳಿಗೆ ಅಗತ್ಯವಾಗುತ್ತವೆ. ವಿಮಾನದ ಹಾರಾಟ ವೇಗ, ಈ ಕೋನಗಳು, ಇಂತಹ ಹಲವಾರು ಅಂಕಿ ಅಂಶಗಳು ಅತಿ ಪ್ರಮುಖವಾಗಿದ್ದು ಇವೇ ವಿಮಾನ ನಿಯಂತ್ರಣಕ್ಕೆ ಅತಿ ಅಗತ್ಯವಾದ ಮಾಹಿತಿಗಳಾಗುತ್ತವೆ. ಹಾಗಾಗಿ, ಪ್ರತಿಕ್ಷಣದಲ್ಲೂ ಈ ಮಾಹಿತಿಗಳನ್ನು ಪಡೆಯುವುದು ಹೇಗೆ? ಇದಕ್ಕಾಗಿಯೇ ಅನೇಕ ಅತ್ಯಾಧುನಿಕ, ಸಂಕೀರ್ಣ, ವಿದ್ಯುನ್ಮಾನ ಮಾಪಕಗಳನ್ನು ಅಭಿವೃದ್ಧಿಪಡಿಸಿ ವಿಮಾನದಲ್ಲಿ ಅಳವಡಿಸಿರುತ್ತಾರೆ. ವಿಮಾನದ ವೇಗ, ಹಾರುತ್ತಿರುವ ವಿವಿಧ ಕೋನಗಳು ಮುಂತಾದ ಅತಿ ಅಗತ್ಯವಾದ ಮಾಹಿತಿಗಳನ್ನು ಸತತವಾಗಿ ಲೆಕ್ಕಾಚಾರ ಮಾಡಲು ಅವುಗಳಲ್ಲಿ ಇರುವ ಆಧಾರ ಅಂಶಗಳೇನು? ಅದೇ ವಿಮಾನದ ವಿವಿಧ ಭಾಗಗಳ ಮೇಲೆ ಉಂಟಾಗುತ್ತಿರುವ ಒತ್ತಡ, ಒತ್ತಡ ವ್ಯತ್ಯಾಸಗಳು. ಈ ಒತ್ತಡ ಪ್ರಮಾಣಗಳನ್ನು ಅಳೆದು ಅವುಗಳಿಂದ ವಿಮಾನದ ವೇಗ, ವಿವಿಧ ಕೋನಗಳು ಮುಂತಾದವನ್ನು ಲೆಕ್ಕಿಸಲಾಗುತ್ತದೆ. ಅಂದರೆ ವಿಮಾನವು ಹಾರುವಾಗ ಅದರ ವಿವಿಧ ಭಾಗಗಳ ವಿವಿಧ ಬಿಂದುಗಳ ಮೇಲೆ ಉಂಟಾಗುವ ಒತ್ತಡಗಳ ಪ್ರಮಾಣವನ್ನು ಅಳೆದು ತಿಳಿದುಕೊಳ್ಳುವುದು ಬಹುಮುಖ್ಯ ಕ್ರಿಯೆಯಾಗಿರುತ್ತದೆ. ಈ ಒತ್ತಡಗಳ ಗ್ರಹಿಕೆಗಾಗಿ ವಿಮಾನದ ದೇಹದ ಮೇಲೆ, ಹಲವಾರು ಕಡೆಗಳಲ್ಲಿ ಒತ್ತಡವನ್ನು ಅಳೆಯುವ ಅನೇಕ ಪರಿಚೋದಕ (transducers) ಉಪಕರಣಗಳಿರುತ್ತವೆ. ವಿಮಾನ ಹಾಗೂ ಗಾಳಿಯ ಪರಸ್ಪರ ವಿರುದ್ಧ ದಿಕ್ಕಿನ ಚಲನೆಗಳ ಪರಿಣಾಮವಾದ ಒತ್ತಡಗಳ ಪ್ರಮಾಣಗಳನ್ನು ಈ ಪರಿಚೋದಕಗಳು ವಿದ್ಯುನ್ಮಾನ ಸಂಕೇತಗಳನ್ನಾಗಿ (electronic signals) ಪರಿವರ್ತಿಸಿ ಅಳತೆಯ ಉಪಕರಣಗಳಿಗೆ ರವಾನಿಸುತ್ತವೆ. ಈ ಸಂಕೇತಗಳನ್ನು ಸಂಸ್ಕರಿಸಿ ಅಗತ್ಯ ಮಾಹಿತಿಗಳನ್ನು ಪಡೆಯಲಾಗುತ್ತದೆ.

ಈಗ ವಿಮಾನದ ಮೇಲ್ಮೈನಲ್ಲಿ ಯಾಂತ್ರಿಕ / ವಿದ್ಯುನ್ಮಾನ ಉಪಕರಣಗಳಾದ ಪರಿಶೋಧಕಗಳೇ ಇಲ್ಲದಂತಹ ಪರಿಸ್ಥಿತಿಯನ್ನು ಊಹಿಸಿಕೊಳ್ಳಿ, ಆಗ ವಿಮಾನದ ಮೇಲ್ಮೈ ಮೇಲೆ ಹರಿದು ಬರುವ ಗಾಳಿಗೆ ಯಾವ ಅಡೆತಡೆಗಳೂ ಇರುವುದಿಲ್ಲ. ಅಡೆತಡೆಗಳಿಲ್ಲದ ಚಲನೆಯಿಂದ ತೊಂದರೆ ನೀಡುವ ಗಾಳಿಯ ಸುಳಿಗಳಾಗುವುದಿಲ್ಲ. ಇದರ ಪರಿಣಾಮವಾಗಿ ಇಂಧನದ ಉಳಿತಾಯ, ವಿಮಾನದ ಸರಾಗವಾದ ಚಲನೆ ಮುಂತಾದ ಲಾಭಗಳಿವೆ. ಹಾಗಾದರೆ ಮೇಲ್ಮೈನ ವಿವಿಧ ಭಾಗಗಳಲ್ಲಿ ಉಂಟಾಗುವ ಒತ್ತಡಗಳ ಅಳತೆ ಹೇಗೆ? ಈ ರೀತಿಯಾಗಿ ವೇಗ, ಏರುಕೋನ, ತಿರುಗುಕೋನ ಮುಂತಾದವುಗಳು ವ್ಯತ್ಯಾಸಗೊಂಡಾಗ ಗಾಳಿಯ ಒತ್ತಡದಲ್ಲಾಗುವ ವ್ಯತ್ಯಾಸಗಳಿಗೆ ಯಾವುದು ಸ್ಪಂದಿಸುತ್ತದೆ ಎಂದು ಪ್ರಶ್ನಿಸಿದರೆ ವಿಮಾನದ ಮೇಲ್ಮೈಗೆ ಹಚ್ಚಿದ ಪೇಂಟ್ ಎಂದು ಉತ್ತರಿಸುವ ಮಟ್ಟವನ್ನು ನಾವು ಮುಟ್ಟಿದ್ದೇವೆ. ಅಂದರೆ ವಿಮಾನದ ಮೇಲ್ಮೈಗೆ ಹಚ್ಚಿದ ಪೇಂಟು ತನ್ನ ಮೇಲೆ ಉಂಟಾಗುವ ಒತ್ತಡದ ಬದಲಾವಣೆಗಳನ್ನು ಗ್ರಹಿಸಬಲ್ಲುದು ಎಂದರೆ ಅಚ್ಚರಿಯಾಗಬಹುದಲ್ಲವೆ? ಪರಿಣಾಮವಾಗಿ, ಯಾಂತ್ರಿಕ ಅಥವಾ ವಿದ್ಯುನ್ಮಾನ ಉಪಕರಣಗಳ ಬದಲು ಮೇಲ್ಮೈ ಮೇಲೆ ಇರುವ ಪೇಂಟ್, ಒತ್ತಡದ ಅಳತೆಯ ಮಾಹಿತಿಗಳನ್ನು ನೀಡುವಂತಾಗುತ್ತದೆ. ಇದೊಂದು ನಿಜವಾಗಿಯೂ ಅದ್ಭುತ ತಾಂತ್ರಿಕ ಕುಶಲತೆಯಲ್ಲವೆ? ವಿಜ್ಞಾನಿಗಳು ಈ ಸಾಧನೆಯ ಹಾದಿಯಲ್ಲಿ ದಾಪುಗಾಲಿಡುತ್ತಿದ್ದಾರೆ. ಈಗಾಗಲೇ ತಿಳಿಸಿದಂತೆ ವಿದ್ಯುನ್ಮಾನ ಮತ್ತು ಗಣಕ ಕ್ಷೇತ್ರದಲ್ಲಿನ ಅಗಾಧವಾದ ಬೆಳವಣಿಗೆಗಳಿಂದ ಇಂತಹ ಸಾಧನೆಗಳು ಸಾಧ್ಯವಾಗಿವೆ. ಪೇಂಟ್‌ಗಳು ಒತ್ತಡವನ್ನು ಅಳತೆ ಮಾಡುವುದು ಹೇಗೆ? ಇಂತಹ ಪೇಂಟ್‌ಗಳು ಬಹಳ ದುಬಾರಿ. ಇವುಗಳನ್ನು ವಿಶೇಷವಾಗಿ ತಯಾರಿಸುತ್ತಾರೆ. ಇವನ್ನು **'ಒತ್ತಡ ಸಂವೇದಿ ಪೇಂಟ್**ಗಳು **(PSP - Pressure Sensitive Paints)'** ಎಂದು ಕರೆಯುತ್ತಾರೆ. ಈ ಪೇಂಟ್‌ಗಳನ್ನು ವಿಮಾನದ ಮಾದರಿಗಳಿಗೆ ಲೇಪಿಸಿ ವಾಯುಸುರಂಗಗಳಲ್ಲಿ ಒತ್ತಡಗಳ ಪರೀಕ್ಷೆಯ ಪ್ರಯೋಗಗಳು ಈಗ ಆಗುತ್ತಿವೆ.

ವಿಮಾನ, ವಿಮಾನ ಭಾಗಗಳ ಅಥವಾ ಇನ್ನಾವುದೇ ಅಂತರಿಕ್ಷ ವಾಹನಗಳ ವಿವಿಧ ವಿನ್ಯಾಸಗಳನ್ನು ಸಿದ್ಧಪಡಿಸಿ ಅವುಗಳನ್ನು ಆಗಸದಲ್ಲಿ ಹಾರಿಸಿ ಪರೀಕ್ಷಿಸಲು ಅಸಾಧ್ಯವಾದ್ದರಿಂದ ಇವುಗಳ ಪುಟ್ಟ ಮಾದರಿಗಳನ್ನು ತಯಾರಿಸಿ, ವಾಯುಸುರಂಗದಲ್ಲಿಟ್ಟು ಗಾಳಿಯನ್ನು ಅತಿ ರಭಸದಿಂದ ಹಾಯಿಸುತ್ತಾರೆ. ಆಗ ಆಗಸದಲ್ಲಿ ವಿಮಾನವು ಹಾರಿದಾಗ ಉಂಟಾಗುವ ಒತ್ತಡ, ಬಲಗಳು ಮುಂತಾದ ಪರಿಣಾಮಗಳೇ ಅದೇ ಪ್ರಮಾಣಗಳಲ್ಲಿ ವಾಯು ಸುರಂಗದಲ್ಲಿಟ್ಟ ಪುಟ್ಟ ಮಾದರಿಗಳ ಮೇಲೆ ಉಂಟಾಗುತ್ತವೆ. ಈ ಪ್ರಯೋಗಗಳ ಪರಿಣಾಮಗಳನ್ನು ವಿಶ್ಲೇಷಿಸಿದಾಗ ಮಾತ್ರ ವಿಮಾನ, ವಿಮಾನ ಭಾಗಗಳ ವಿನ್ಯಾಸಗಳನ್ನು ಅಂತಿಮಗೊಳಿಸಲು ಸಾಧ್ಯ. ಹೀಗೆ ಪರೀಕ್ಷೆಗಳನ್ನು ಮಾಡುವಾಗ ಮಾದರಿಯ ಮೇಲೆಲ್ಲಾ ಪುಟ್ಟ ಪುಟ್ಟ ಪರಿಶೋಧಕಗಳನ್ನು ಅಳವಡಿಸಬೇಕು. ಗಾಳಿಯ ಹರಿವಿದ್ದಾಗ ಪರಿಶೋಧಕಗಳು ವಿಮಾನ ಮಾದರಿಯ ವಿವಿಧ ಭಾಗಗಳ ಮೇಲಿನ ಒತ್ತಡಗಳ ಪ್ರಮಾಣಗಳಿಗೆ ಸ್ಪಂದಿಸಿ ಅವುಗಳಿಗೆ ಅನುಗುಣವಾದ ಒತ್ತಡಗಳ ದತ್ತಾಂಶಗಳನ್ನು ನೀಡುತ್ತವೆ. ಆದರೆ ಈ ಪರೀಕ್ಷಾ ಸಂದರ್ಭಗಳಲ್ಲಿ ಮಾದರಿಯ ಮೇಲೆ ಅಳವಡಿಸಬಹುದಾದ ಒತ್ತಡ ಮಾಪಕಗಳ ಸಂಖ್ಯೆಗೆ ಮಿತಿ ಇದ್ದೇ ಇರುತ್ತದೆ. ಈ ಮಿತಿಯಿಂದಾಗಿ ಮಾದರಿಯ ಕೆಲವು ಭಾಗಗಳ ಮೇಲೆ ಉಂಟಾಗುವ ಒತ್ತಡಗಳನ್ನು ಅಳೆಯಲು ಸಾಧ್ಯವಾಗದಿರಬಹುದು.

ಇಂತಹ ಒತ್ತಡಮಾಪಕಗಳ ಬದಲು ಒತ್ತಡ ಸಂವೇದಿ ಪೇಂಟ್‌ಗಳನ್ನು ಅವಲಂಬಿಸಿದರೆ ಹಲವಾರು ಮಿತಿಗಳಿಂದ ಹೊರಬರಬಹುದು. ಪೇಂಟಿನ ಮೇಲೆ ಗಾಳಿಯು ರಭಸದಿಂದ ಹಾಯ್ದಾಗ ಮೇಲ್ಮೈಯ ವಿವಿಧ ಜಾಗಗಳಲ್ಲಿ ಉಂಟಾಗುವ ವಿವಿಧ ಪ್ರಮಾಣದ ಒತ್ತಡಗಳ ಪರಿಣಾಮವಾಗಿ ಈ ವಿಶೇಷ ಪೇಂಟ್‌ಗಳಲ್ಲಿ ಉಬ್ಬು, ತಗ್ಗುಗಳುಂಟಾಗುತ್ತವೆ; ಬಿರುಕುಗಳಾಗುತ್ತವೆ; ಪೇಂಟಿನ ಮೇಲ್ಪದರಗಳಲ್ಲಿ ವರ್ಣವ್ಯತ್ಯಾಸಗಳುಂಟಾಗುತ್ತವೆ. ಇವೆಲ್ಲ ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮ. ಆದರೆ ಆಧುನಿಕ ಉಪಕರಣಗಳಿಗೆ ಇದಾವ ಲೆಕ್ಕ. ಅಂತೆಯೇ ಶಕ್ತಿಯುತ ಅಂಕಿಕ (ಡಿಜಿಟಲ್) ಕ್ಯಾಮೆರಾಗಳ ಮೂಲಕ ಈ ವ್ಯತ್ಯಾಸಗಳ ಚಿತ್ರಣ ಮಾಡಿ ಗಣಕಕ್ಕೆ ರವಾನಿಸಬಹುದು.

ಆಮ್ಲಜನಕದ ಅಣುಗಳ ಸಂಪರ್ಕ ಬಂದಾಗ ಕೆಲವು ಸಂಯುಕ್ತವಸ್ತುಗಳು ಬೆಳಕನ್ನು ಸೂಸುವ ಸಾಮಾನ್ಯ ಗುಣವು ಸುಪರಿಚಿತವಾಗಿದೆ. 1980 ನೇ ಇಸವಿಯವರೆಗೆ ವಾಯುಚಲನಾ ಪರೀಕ್ಷೆಗಳಲ್ಲಿ ಈ ವಸ್ತು ವಿಶೇಷ ಗುಣವನ್ನು ಬಳಸುವ ಪ್ರಯತ್ನಗಳಾಗಿರಲಿಲ್ಲ. ಅದೇ ವರ್ಷ ಪೀಟರ್‌ಸನ್ ಮತ್ತು ಫ್ಲಿಟ್ಜೆರಾಲ್ಡ್ ಎಂಬ ವಿಜ್ಞಾನಿಗಳು ಸಂಯುಕ್ತವಸ್ತುಗಳ ಈ ಗುಣವನ್ನು ಮೇಲ್ಮೈ ಪ್ರವಾಹ ವೀಕ್ಷಣೆಗೆ ಬಳಸಿಕೊಳ್ಳಲು ಉದ್ದೇಶಿಸಿ ವಸ್ತುವೊಂದರ ಮೇಲ್ಮೈಗೆ ಇದಕ್ಕಾಗಿಯೇ ತಯಾರಿಸಲಾಗಿದ್ದ ಪೇಂಟನ್ನು ಲೇಪಿಸಿದರು. ಇದರ ಮೇಲೆ ನೈಟ್ರೋಜನ್ ಅನಿಲವನ್ನು ಹರಿಸಿದಾಗ ಹರಿವಿನ ದಿಕ್ಕಿನಲ್ಲಿ ಮಿಂಚು ಹೊಡೆದಂತೆ ಬೆಳಕಿನ ಅಲೆಗಳು ಹರಿದುದನ್ನು ಗುರುತಿಸಿದರು. ನೈಟ್ರೋಜನ್ ಬದಲು ಆಮ್ಲಜನಕವನ್ನು ಹರಿಸಿದಾಗ ಕಪ್ಪು ಬಣ್ಣದ ಕಿರಣಗಳನ್ನು ಹರಿಸಿದಂತೆ ಕಂಡುಬಂತು. ಈ ಪ್ರಯೋಗಗಳಿಂದ ಉತ್ತೇಜಿತರಾಗಿ ವಾಯು ಸುರಂಗದಲ್ಲಿ ಪೇಂಟ್ ಮಾಡಿದ ಮಾದರಿಗಳ ಮೇಲೆ ಪ್ರವಾಹವನ್ನುಂಟುಮಾಡಿ ಮಾದರಿಯ ವಿವಿಧ ಭಾಗಗಳ ಮೇಲೆ ಉಂಟಾದ ಒತ್ತಡದ ಪರಿಣಾಮ ಗಳನ್ನು ತಿಳಿಯುವ ಪ್ರಥಮ ಪ್ರಯತ್ನವನ್ನು 1982ರಲ್ಲಿ ಕೈಗೊಳ್ಳಲಾಯಿತು. ಮುಂದೆ, ಜೈವಿಕ–ವೈದ್ಯಕೀಯ ಕ್ಷೇತ್ರದಲ್ಲಿನ ಅನ್ವಯವಾಗಿ ರಕ್ತದೊಳಗಿನ ಆಮ್ಲಜನಕದ ಸಾಂದ್ರತೆಯನ್ನು ಅಳೆಯಲು ವರ್ಣಪ್ರಭೆಯನ್ನು ಉಂಟುಮಾಡುವ ತಂತ್ರವನ್ನು ಬಳಸಲಾಯಿತು. ವೈದ್ಯಕೀಯ ವಿಜ್ಞಾನದ ಬೆಳವಣಿಗೆಯಲ್ಲಿ ಇದೊಂದು ಮಹತ್ತ್ವದ ಮೈಲಿಗಲ್ಲಾಯಿತು. ರಕ್ತದೊಳಗೆ ತೂರಿಸಲಾದ ದ್ಯುತಿ ತಂತುವಿನ ಮೂಲಕ ವರ್ಣಪ್ರಭೆಯನ್ನುಂಟುಮಾಡುವ ವರ್ಣಪ್ರಭೆಯ ತೀಕ್ಷ್ಣತಾ ವ್ಯತ್ಯಾಸಗಳನ್ನು ಗಮನಿಸಿ ರಕ್ತದಲ್ಲಿನ ಆಮ್ಲಜನಕದ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ.

ಹೀಗೆ, ವಸ್ತುವಿನ ಮೇಲ್ಮೈಯಲ್ಲಿ ಉಂಟಾಗುವ ವಾಯು ಚಲನ ಅಂಶಗಳ ಅಳತೆಯ ಉಪಕರಣವಾಗಿ ಪೇಂಟ್ ಅನ್ನು ಬಳಸುವ ವಿಧಾನವು ಭದ್ರವಾಗಿ ತಳಊರಲು ಪೇಂಟ್ ರಸಾಯನವಿಜ್ಞಾನ ಮತ್ತು ದ್ಯುತಿ ಸಂವೇದನಾ ವಿಧಾನಗಳಲ್ಲಿ ನಡೆದ ಸಂಶೋಧನೆ, ಅಭಿವೃದ್ಧಿ ತರಬೇತಿ ಮುಂತಾದ ಕಾರ್ಯಕ್ರಮಗಳು ಕಾರಣವಾದವು.

ಒತ್ತಡ ಸಂವೇದಿ ಪೇಂಟ್‌ಗಳಿಂದ ಒತ್ತಡ ಮಾಪನ ವಿಧಾನವು ಅನೇಕ ಅನುಕೂಲತೆಗಳನ್ನು ಒದಗಿಸುತ್ತದೆ.

1. ಇದೊಂದು ವಿಶಿಷ್ಟ ಒತ್ತಡ ಸಂವೇದನಾ ವ್ಯವಸ್ಥೆ. ಸಾಂಪ್ರದಾಯಕ ಒತ್ತಡ ಮಾಪಕಗಳಿಂದ ವಸ್ತುವೊಂದರ ಮೇಲ್ಮೈಯಲ್ಲಿರುವ ಕೆಲವೊಂದು ಬಿಂದುಗಳಲ್ಲಿ ಉಂಟಾಗುವ ಒತ್ತಡಗಳನ್ನು ಮಾತ್ರ ಕಂಡುಹಿಡಿಯಬಹುದಾಗಿದೆ. ಆದರೆ ಈ ವಿಧಾನವು ಕ್ಷೇತ್ರ ಮಾಪನವಾಗಿದ್ದು, ಮೇಲ್ಮೈನ ಎಲ್ಲ ಭಾಗದ ಎಲ್ಲ ಬಿಂದುಗಳಲ್ಲೂ ಉಂಟಾಗುತ್ತಿರುವ ಒತ್ತಡದ ಪ್ರಮಾಣವನ್ನು ತಿಳಿಯಬಹುದಾಗಿದೆ.

2. ಮೇಲ್ಮೈನ ಯಾವುದೇ ಬಿಂದುವಿನಲ್ಲಿನ ಒತ್ತಡದ ಅಂಕಿಕ ಮಾಹಿತಿಗಳು ದೊರಕುವುದಲ್ಲದೆ ವಿಮಾನದ ಹೊರಮೈ ಮೇಲಿನ ಪ್ರವಾಹದ ಹರಿವಿನ ಪೂರ್ಣ ಚಿತ್ರಣ ದೊರೆಯುತ್ತದೆ.

3. ಅತ್ಯಂತ ಸಂಕೀರ್ಣವಾದ ಒತ್ತಡದ ಪರಿಪೂರ್ಣ ಮಾದರಿಗಳನ್ನು ಪೇಂಟ್ ಸಂವೇದನೆ ಯಿಂದ ಪಡೆಯಬಹುದಾಗಿದೆ. ಇದರಿಂದಾಗಿ ವಾಹನದ/ವಾಹನದ ಹಲವಾರು ಮಾದರಿಗಳನ್ನು ತಯಾರಿಸಿ ಪ್ರಯೋಗಗಳನ್ನು ಮಾಡುವ ಅಗತ್ಯವಿರುವುದಿಲ್ಲ. ಆದ್ದರಿಂದ ನಿರೀಕ್ಷಣೆಗೆ ತಕ್ಕ ಕಾರ್ಯ ನಿರ್ವಹಿ ಸುವ ಮಾದರಿಯನ್ನು ಅಂತಿಮಗೊಳಿಸುವ ಕ್ರಿಯೆಗಳನ್ನು ತ್ವರಿತಗೊಳಿಸಬಹುದು.

4. ವಿಮಾನದ ಮಾದರಿಗಳ ಮೇಲೆ ಒತ್ತಡ ಮಾಪಕಗಳು ಇಲ್ಲದಿರುವುದರಿಂದ ವಾಯುಸುರಂಗ ಪರೀಕ್ಷಾ ಕಾಲದಲ್ಲಿ ಮಾದರಿಯನ್ನು ಹೆಚ್ಚಿನ ಗಾಳಿಯ ಒತ್ತಡಕ್ಕೆ ಒಳಪಡಿಸಿ ಹೆಚ್ಚು ಉಪಯುಕ್ತ ಮಾಹಿತಿಗಳನ್ನು ಪಡೆಯಬಹುದು.

ಒತ್ತಡ ಸಂವೇದಿ ಪೇಂಟ್‌ಗಳ ಬಳಕೆಯ ಹಾದಿಯಲ್ಲಿ ವಿಶ್ವಾದ್ಯಂತ ಹತ್ತು ಹನ್ನೆರಡು ಸಂಶೋಧನಾ ಸಂಸ್ಥೆಗಳಲ್ಲಿ ವಿವಿಧ ರೀತಿಯ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಈ ನೂತನ ತಾಂತ್ರಿಕತೆಯು ಉಪಯುಕ್ತವೆಂದು ಸಿದ್ಧವಾಗಿರುವುದರಿಂದ ವಾಯುಸುರಂಗ ಪರೀಕ್ಷೆಗಳಿಗಾಗಿ ಇದನ್ನು ಉಪಕರಣವಾಗಿ ಬಳಸುವ ಪ್ರಕ್ರಿಯೆಗಳು ಹೆಚ್ಚಾಗುತ್ತಿವೆ. ಆರಂಭದ ಫಲಿತಾಂಶಗಳು ಅತ್ಯಂತ ಮಹತ್ವಪೂರ್ಣವಾಗಿ ಕಂಡುಬಂದುದರಿಂದ ಸಂಶೋಧನಾ ವಿಧಾನ, ಫಲಿತಾಂಶಗಳನ್ನು ಪ್ರಕಟಿಸದೆ ಎಲ್ಲವೂ ಗುಟ್ಟಾಗಿ ಆಗುತ್ತಿತ್ತು. ಈ ಪ್ರವೃತ್ತಿಯು ಇತರ ಆಸಕ್ತ ಸಂಶೋಧಕರಿಗೆ ಒಂದು ಸವಾಲಾಗಿ ಪರಿಣಮಿಸಿತು. ಇದರಿಂದ ವೈಜ್ಞಾನಿಕ ಕ್ಷೇತ್ರದಲ್ಲಿ ಬಳಸಲು ಮೀಸಲಾದ ಅತಿಸೂಕ್ಷ್ಮ ಪದಾರ್ಥಗಳ ಚಿತ್ರಣಸಾಧ್ಯ ಕ್ಯಾಮರಾಗಳ, ಅಂಕಿಕ ಕ್ಯಾಮರಾಗಳ, ಅತಿವೇಗಕ್ರಿಯಾಶೀಲವೂ ಅತಿ ಹೆಚ್ಚಿನ ನೆನಪಿನ ಕೋಶಗಳನ್ನೂ ಹೊಂದಿರುವ ಗಣಕಗಳ ಹಾಗೂ ಚಿತ್ರಗಳ ಅತ್ಯುತ್ತಮ ಸಂಸ್ಕರಣೆಯ ಕ್ರಾಂತಿಕಾರಿ ವಿಧಾನಗಳು ವಿವಿಧೆಡೆಗಳಲ್ಲಿ ಅಭಿವೃದ್ಧಿಯಾಗತೊಡಗಿದವು. ಇದರ ಪರಿಣಾಮವಾಗಿ ವಸ್ತುವಿನ ಮೇಲ್ಮೈನ ಲಕ್ಷಾಂತರ ಬಿಂದುಗಳಲ್ಲಿ ನಿಖರವಾದ ಒತ್ತಡಮಾಪನಕ್ಕೆ ಪೇಂಟುಗಳನ್ನು ಬಳಸುವ ದಾರಿ ಸುಗಮವಾಯಿತು.

ವೈಮಾಂತರಿಕ್ಷ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಅತಿ ಉಷ್ಣತಾ ವ್ಯತ್ಯಾಸಗಳ ನಡುವೆಯೂ ವಿಮಾನಗಳ ಮತ್ತು ಆಕಾಶಕಾಯಗಳ ವಿವಿಧ ಭಾಗಗಳ ಮೇಲೆ ಉಂಟಾಗುವ ಒತ್ತಡದ ಅತಿ ಕನಿಷ್ಠ ಹಾಗೂ ಅತಿ ಹೆಚ್ಚಿನ ಒತ್ತಡ ಪರಿಮಾಣಗಳನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಯಾವುದೇ ಉಷ್ಣತೆಯಲ್ಲೂ ತನ್ನ ಗುಣಗಳನ್ನು ಕಳೆದುಕೊಳ್ಳದೆ ಅತಿಸೂಕ್ಷ್ಮ ಬದಲಾವಣೆಗಳನ್ನೂ ಗುರುತಿಸಿ ಅಳತೆಮಾಡಬಲ್ಲ ಸಂವೇದಕ ಗಳಂತೆಯೇ ಒತ್ತಡ ಸಂವೇದಿ ಪೇಂಟ್‌ಗಳೂ ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಹೊಂದಿರಬೇಕಾಗುತ್ತದೆ. ಈ ಅವಶ್ಯಕತೆಗಳನ್ನು ಗುರುತಿಸಿ ಒತ್ತಡ ಮತ್ತು ಉಷ್ಣಾಂಶಗಳ ವ್ಯಾಪಕತೆ ಅತಿ ಹೆಚ್ಚಾಗಿರುವಾಗಲೂ ತನ್ನ ಗುಣಗಳನ್ನು ಕಳೆದುಕೊಳ್ಳದ ಪೇಂಟುಗಳ ಅನ್ವೇಷಣೆ ಹಾಗೂ ಅಭಿವೃದ್ಧಿಯತ್ತ ವಿಜ್ಞಾನಿಗಳ ಗಮನ ಕೇಂದ್ರೀಕೃತವಾಯಿತು.

1990ರ ದಶಕದಲ್ಲಿ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ಅನೇಕ ಪೇಂಟ್ ಸಂಯುಕ್ತಗಳನ್ನು ಅಭಿವೃದ್ಧಿಗೊಳಿಸಲಾಯಿತು. ಹಲವಾರು ವಸ್ತುಗಳ ಮೇಲ್ಮೈಗೆ ಈ ಪೇಂಟ್‌ಗಳನ್ನು ಲೇಪಿಸಿ ವಾಯುಸುರಂಗಗಳಲ್ಲಿ ವಿವಿಧ ಒತ್ತಡ, ಉಷ್ಣತೆಗಳಿಗೆ ಒಳಪಡಿಸಿ, ಪೇಂಟ್‌ಗಳು ನಾಶವಾಗದಂತಹ ಆದರೆ ಈ ಬದಲಾವಣೆಗಳಿಗೆ ಸ್ಪಂದಿಸುವಂತಹ ಗುಣಗಳನ್ನು ಹೊಂದಿರುವ

ಬಗ್ಗೆ ಪ್ರಯೋಗಗಳನ್ನು ನಡೆಸಲಾಯಿತು. ವಸ್ತುಗಳ ಸಮತಟ್ಟಾದ ಭಾಗಗಳಲ್ಲಿ ಒತ್ತಡಗಳ ಅಳತೆ ಸಮರ್ಪಕವಾಗಿದ್ದರೂ ಅದರ ಬಾಗು ಪ್ರದೇಶಗಳಲ್ಲಿ ಹಲವಾರು ಸಮಸ್ಯೆಗಳು ಕಂಡು ಬಂದವು. ಈ ರೀತಿಯ ಅಭಿವೃದ್ಧಿ ಮತ್ತು ಪರೀಕ್ಷಾ ಕ್ರಿಯೆಗಳು ಸತತವಾಗಿ ನಡೆದು ಬಂದು ಅತ್ಯಲ್ಪ ಒತ್ತಡಗಳಿಗೂ ಶೀಘ್ರವಾಗಿ ಸ್ಪಂದಿಸಬಲ್ಲ ಆದರೆ ತೀವ್ರತರ ಉಷ್ಣತೆಯ ಬದಲಾವಣೆಗಳನ್ನು ತಡೆದುಕೊಳ್ಳಬಲ್ಲ ಪೇಂಟ್‌ಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಪೇಂಟನ್ನು ಲೇಪಿಸಿದ ಅನಂತರವೂ ವಸ್ತುವಿನ ಮೇಲ್ಮೈ ನುಣುಪಾಗಿ ರುವುದೂ ಅತಿಮುಖ್ಯ. ಇದೇ ವಾಯುಚಲನ ಸಹವರ್ತ ನಾಂಕಗಳ (Aerodynamic coefficients) ಬೆಲೆಗಳನ್ನು ನಿರ್ಧರಿಸುತ್ತದೆ. ಅತಿ ಹೆಚ್ಚು ಎತ್ತರದಲ್ಲಿ ಅತಿಹೆಚ್ಚುವೇಗ ಅಂದರೆ ಶಬ್ದಾತೀತ ವೇಗದಲ್ಲಿ ಚಲಿಸುವ ಕದನ ವಿಮಾನಗಳ ಮೇಲೆ ಲೇಪಿಸಿದ ಪೇಂಟ್‌ಗಳು ದೃಢವಾಗಿದ್ದು ಸರಿಯಾದ ಮಾಹಿತಿಗಳನ್ನು ನೀಡಬೇಕಾಗುತ್ತದೆ.

ಪೇಂಟ್ ಲೇಪಿತ ಪರೀಕ್ಷಾ ಮಾದರಿಯ ಮೇಲೆ ಪ್ರವಾಹವಿರುವಾಗ ಅದರ ಬಿಂದುವೊಂದರ ಮೇಲೆ ಲೇಸರ್ ಕಿರಣವನ್ನು ಹಾಯಿಸಿದಾಗ ಆ ಸ್ಥಳದಲ್ಲಿನ ಪೇಂಟ್‌ನಲ್ಲಿ ವರ್ಣವ್ಯತ್ಯಾಸಗಳಾಗುತ್ತವೆ ಎಂದು ಈಗಾಗಲೇ ಅರಿತಿದ್ದೇವೆ. ಇದನ್ನು ಗ್ರಹಿಸಲು ಗಣಕ ನಿಯಂತ್ರಿತ ಮಸೂರವನ್ನು ಮೇಲ್ಮೈ ಮೇಲೆ ಸತತವಾಗಿ ಪರಿಶೀಲಿಸಲಾಗುತ್ತದೆ. ಹೀಗೆ ದಾಖಲಾಗುವ ಸಾದೃಶ್ಯ (analog) ಸಂಕೇತಗಳನ್ನು ಪರಿವರ್ತಕಗಳ ಮೂಲಕ ಆಂಕಿಕ (digital) ಸಂಕೇತಗಳನ್ನಾಗಿಸಲಾಗುವುದು.

ಪೇಂಟ್‌ಗಳೇ **'ಒತ್ತಡ ಸಂವೇದಿ ಪೇಂಟ್ ವ್ಯವಸ್ಥೆ'**ಯ ಕೇಂದ್ರಬಿಂದುಗಳು. ಒತ್ತಡಗಳಿಗೆ ಸ್ಪಂದಿಸಿದಾಗ ಪೇಂಟ್‌ನ ವರ್ಣ ಬದಲಾವಣೆಯಾಗುವುದರಿಂದ ಇದಕ್ಕೆ ಅಗತ್ಯವಾದ ರಾಸಾಯನಿಕ ವಸ್ತುಗಳ ಆಯ್ಕೆ, ಅವುಗಳ ಬೆರಕೆಯ ಪ್ರಮಾಣ ಮುಂತಾದವುಗಳು ಬಹುಮುಖ್ಯ ನಿರ್ಧಾರಕ ಅಂಶಗಳಾಗುತ್ತವೆ. ಗಾಳಿಯ ಹರಿವಿನ ಪರಿಣಾಮವಾಗಿ ಪೇಂಟ್ ಹೊರಸೂಸುವ ವರ್ಣದ್ರವ್ಯಗಳ ವಿವಿಧ ಸಾಂದ್ರತೆಗಳನ್ನು ವೀಡಿಯೋ ಕ್ಯಾಮೆರಗಳ ಮೂಲಕ ಗ್ರಹಿಸಿ ಸೂಕ್ತವಾಗಿ ಶೋಧಿಸಬೇಕು; ಸಂವೇದಕ ಮುಂತಾದ ಮಾಹಿತಿ ಸಂಗ್ರಹಣಾ ವ್ಯವಸ್ಥೆಗಳು ಸೂಕ್ಷ್ಮ ಪರಿಸರಕ್ಕೆ ಸ್ಪಂದಿಸಬೇಕು. ಸಾದೃಶ್ಯ ಸಂಕೇತಗಳನ್ನು ಆಂಕಿಕ ಸಂಕೇತಗಳನ್ನಾಗಿ ಪರಿವರ್ತಿಸಬಲ್ಲ ಪರಿವರ್ತಕಗಳು ಹೆಚ್ಚು ನಿಖರತೆಯನ್ನು ಹೊಂದಿರಬೇಕು. ಆರಂಭದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು, ಪೇಂಟ್‌ಗಳು ಹೆಚ್ಚಿನ ಉಷ್ಣತಾ ವ್ಯತ್ಯಾಸಗಳ ನಡುವೆಯೂ ದೃಢವಾಗಿರುವಂತೆ ಮತ್ತು ಒತ್ತಡಗಳಿಗೆ ಗರಿಷ್ಠ ಸಂವೇದನಾಶೀಲವಾಗಿರುವಂತೆ ಅವುಗಳ ಗುಣಗಳನ್ನು ಹೆಚ್ಚಿಸುವತ್ತ ದೃಷ್ಟಿಯನ್ನು ಹರಿಸಿದ್ದವು. ಆನಂತರದಲ್ಲಿ, ಆಂಕಿಕ ಕ್ಯಾಮೆರಗಳ ಅಭಿವೃದ್ಧಿ, ಅಳತೆಯ ನಿಖರತೆ, ವಿವಿಧ ಆಕಾರದ ಮಾದರಿಗಳ ಮೇಲೆ ನಡೆಸುವ ಪ್ರಯೋಗಗಳಿಂದ ಬರುವ ಮಾಹಿತಿಗಳನ್ನು ಸರಿಯಾಗಿ ಆಂಕಿಕಗೊಳಿಸುವುದು, ಅವುಗಳನ್ನು ಗಣಕಗಳಲ್ಲಿ ಸೂಕ್ತವಾಗಿ ಸಂಸ್ಕರಿಸುವುದು, ಈ ಕ್ರಿಯೆಗಳಿಗೆ ಅಗತ್ಯವಾದ ಗಣಕ ಕಾರ್ಯವಿಧಿಗಳ ಅಭಿವೃದ್ಧಿ ಮುಂತಾದ ಅಂಶಗಳತ್ತ ತೀವ್ರವಾದ ಗಮನವನ್ನು ಹರಿಸಲಾಗುತ್ತಿದೆ.

ಈ ಒತ್ತಡ ಸಂವೇದಿ ವಿಧಾನದಲ್ಲಿ, ಒತ್ತಡದ ಬೆಲೆಯು ಪೇಂಟ್‌ನ ಅಣುಗಳಿಗಿರುವ ಆಮ್ಲಜನಕ ಸಂವೇದನಾ ಶೀಲತೆ ಎಷ್ಟು ಎಂಬುದರ ಮೇಲೆ ನಿರ್ಧರಿತವಾಗುತ್ತದೆ. ಪೇಂಟ್‌ಗಳು ತಮ್ಮ ಮೇಲೆ ಹಾದುಬರುವ ಗಾಳಿಯಲ್ಲಿನ ಆಮ್ಲಜನಕದೊಡನೆ ವರ್ತಿಸಿದಾಗ ಹೊರಸೂಸುವ ವರ್ಣಪ್ರಭೆಯ ವ್ಯತ್ಯಾಸದ ಅಂಶಗಳನ್ನು ಸಂಗ್ರ ಹಿಸಿ, ಗಣಕಕ್ಕೆ ಉಣಿಸಿ ಅಂತಿಮವಾಗಿ ಒತ್ತಡದ ಪ್ರಮಾಣವನ್ನು ಲೆಕ್ಕಿಸಲಾಗುವುದು. ಅಲ್ಲದೆ ಗಣಕದಲ್ಲಿ ಚಿತ್ರದ ಪ್ರತಿಯೊಂದು ಅತ್ಯಲ್ಪ ಭಾಗವನ್ನೂ ಸಹಸ್ರಾಂಶಗಳಷ್ಟು ವಿಭಾಗಿಸಿ ವ್ಯತ್ಯಾಸಗಳನ್ನು ವಿವಿಧ ಬಣ್ಣಗಳಿಂದ ಗುರುತಿಸಿ ತೆರೆಯ ಮೇಲೆ ಮೂಡಿಸಲಾಗುವುದು. ಗಣಕಯಂತ್ರಗಳು ತಮ್ಮಲ್ಲಿರುವ ಚಿತ್ರ ಸಂಸ್ಕರಣೆಯ ವಿಧಾನಗಳಿಂದ, ವಿವಿಧ ಸಾಂದ್ರತೆಯ ಮತ್ತು ವಿವಿಧ ಬಣ್ಣಗಳ ಚಿತ್ರಗಳ ಮೂಲಕ ಒತ್ತಡ ವ್ಯತ್ಯಾಸಗಳ ನಿಖರ ಚಿತ್ರಣವನ್ನು ನೀಡುತ್ತವೆ. ಇವುಗಳನ್ನು ಸಂಖ್ಯೆಗಳಿಂದ ಗುರುತಿಸಲು ಸಾಧ್ಯವಾಗುವುದರಿಂದ ಒತ್ತಡಗಳ ಮಾಹಿತಿಗಳೂ ಕೂಡಲೇ ಸಿದ್ಧವಾಗುತ್ತವೆ. ಈ ರೀತಿ ಹಲವು ಮಾರ್ಗಗಳಿಂದ ಸಿದ್ಧವಾಗುವ ಸಂಖ್ಯಾ ಮಾಹಿತಿಗಳಿಂದ ವಿಮಾನ ವಿನ್ಯಾಸ, ಚಲನೆ, ನಿಯಂತ್ರಣಗಳಿಗೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬಹುದು.

ವಾಯುಸುರಂಗದ ಪರೀಕ್ಷೆಗೆ ಒಳಪಟ್ಟ ವಿಮಾನ ಹಾಗೂ ವಿಮಾನದ ಅಥವಾ ಇನ್ನಾವುದೇ ವಸ್ತುವಿನ ವಿವಿಧ ಭಾಗಗಳ ಮೇಲಿನ ಒತ್ತಡದ ಸಮಗ್ರ ಚಿತ್ರಣ ಈ ವಿಧಾನದ ಬಹು ಮುಖ್ಯ ಅಂಶ; ವಸ್ತುವಿನ ಯಾವುದೇ ಎಲೆಕ್ಟ್ರಾನಿಕ್ ಉಪಕರಣವನ್ನು ಅಳವಡಿಸುವ ಅಗತ್ಯವಿಲ್ಲದಿರುವುದೂ ಒತ್ತಡ ಸಂವೇದಿ ಪೇಂಟ್‌ಗಳ ಬಳಕೆಯ ಗಮನಾರ್ಹ ಸಂಗತಿ. ಈ ರೀತಿಯ ಒತ್ತಡ ಸಂವೇದಿ ಪೇಂಟುಗಳ ಬಳಕೆ ವೈಮಾಂತರಿಕ್ಷ ಕ್ಷೇತ್ರದಲ್ಲಂತೂ ಗುಣಾತ್ಮಕ ಸುಧಾರಣೆಗಳನ್ನು ಉಂಟುಮಾಡುತ್ತದೆ. ಆದರೆ ಇದರ ಪರಿಪೂರ್ಣ ಬಳಕೆಗೆ ಇನ್ನೂ ಕೆಲವು ವರ್ಷಗಳ ಕಾಲ ಕಾಯಬೇಕು. ಈಗ ಜರ್ಮನಿ, ಅಮೆರಿಕಾಗಳಲ್ಲಿ ಹಲವಾರು ಹಂತಗಳಲ್ಲಿ ಕೆಲಸ ನಡೆಯುತ್ತಿದೆ. ಇದರಿಂದ ಉತ್ತೇಜನಕರ ಫಲಿತಾಂಶಗಳು ಕಂಡುಬಂದಿವೆ. ಭಾರತದಲ್ಲಿ ಪ್ರಪ್ರಥಮವಾಗಿ ಬೆಂಗಳೂರಿನ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳಲ್ಲಿ ಕಳೆದ ನಾಲ್ಕು ವರ್ಷಗಳಿಂದ ನಡೆದಿರುವ ಸಂಶೋಧನಾ ಕಾರ್ಯಗಳಿಂದಾಗಿ ಪೇಂಟ್‌ಗಳ ತಯಾರಿಕೆಯ ತಾಂತ್ರಿಕತೆಯಲ್ಲಿ ಪ್ರಾವೀಣ್ಯತೆಯನ್ನು ಗಳಿಸಲಾಗಿದೆ. ಇಲ್ಲಿ ತಯಾರಿಸಲಾದ ಪೇಂಟ್‌ಗಳನ್ನು ವಿಮಾನದ ವಿವಿಧ ಭಾಗಗಳ ಮಾದರಿಗಳ ಮೇಲೆ ಲೇಪಿಸಿ ಇಲ್ಲಿಯದೇ ಆದ ವಾಯುಸುರಂಗಗಳಲ್ಲಿ ಯಶಸ್ವೀ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಈ ಪ್ರಯೋಗಗಳಿಗೆ ಅಗತ್ಯವಾದ ಅನೇಕ ವ್ಯವಸ್ಥೆಗಳನ್ನು ಇಲ್ಲಿ ಅನುಸ್ಥಾಪಿಸಲಾಗಿದೆ. (ಸಿಎಚ್; ಸಿ.ವಿ.ಎಸ್.ಎಸ್.)

**ಒತ್ತಡದ ಬೀಸಣಿಗೆ:** ಭೂತಳ ಗಣಿಗಳಿಗೆ ಮೇಲಿನಿಂದ ಗಾಳಿಯನ್ನು ತಳ್ಳುವ ಸಲುವಾಗಿ ಉಪಯೋಗಿಸುವ ಸಾಧನ (ಫೋರ್ಸಿಂಗ್ ಫ್ಯಾನ್). ಇದನ್ನು ಇಳಿದುರಿ ಕೂಪಗಳ ಮೇಲಾಗಲಿ ಅಥವಾ ತಳದಲ್ಲಾಗಲಿ ಬೀಸಣಿಗೆಯ ಕೋಣೆಯಲ್ಲಿ ಅಳವಡಿಸಿರುತ್ತಾರೆ. ಭೂತಳ ಗಣಿಗಳಲ್ಲಿ ಗಾಳಿಯ ಚಲನೆ ಸಾಧ್ಯವಾಗಲು ಇಳಿದುರಿ ಕೂಪದಲ್ಲಿ (ಡೌನ್ ಕ್ಯಾಸ್ಟ್ ಷಾಫ್ಟ್) ಗಾಳಿಯನ್ನು ಒಳಗೆ ತಳ್ಳಬೇಕು. ಒತ್ತಡ ಬೀಸಣಿಗೆ ಯಾವಾಗಲೂ ವಾತಾವರಣದಿಂದ ಗಾಳಿಯನ್ನು ಗಣಿಯೊಳಕ್ಕೆ ತಳ್ಳುವುದರಿಂದ ಅಪಾಯಕಾರಿಯಾದ ಗಣಿ ಅನಿಲಗಳೊಡನಾಗಲಿ ಅಥವಾ ತೇವವಾದ ಗಾಳಿಯೊಡನಾಗಲಿ ಸಂಪರ್ಕವಿರುವುದಿಲ್ಲ. ಆದ್ದರಿಂದ ಇದರ ಜೀವಿತಕಾಲ ಹೆಚ್ಚಾಗಿದೆ. (ಟಿ.ಟಿ.)

**ಒತ್ತಡ ಮಾಪಕ:** ಒತ್ತಡವನ್ನು ಅಳೆಯುವ ಸಾಧನ (ಪ್ರೆಷರ್‌ಗೇಜ್). ವಾಯು ಮಂಡಲದ ಒತ್ತಡವನ್ನು ವಾಯು ಭಾರಮಾಪಕದಿಂದ ಅಳೆಯುತ್ತಾರೆ. ಭೂಮಿಯ ಮೇಲ್ಭಾಗದ ಪ್ರತಿ ಚದರ ಅಂಗುಲದ ಮೇಲೂ ಸುಮಾರು 15 ಪೌಂಡ್ ತೂಕದಷ್ಟು

**ಒತ್ತಡಗಳ ಸಮಾನಾಂಕಗಳು**

| | ವಾಯು ಮಂಡಲ (atm) | Kg/cm$^2$ | psi | ಪಾದರಸದಲ್ಲಿ (Hg) ಇಂಚುಗಳು* | ನೀರಿನಲ್ಲಿ ($H_2O$) ಇಂಚುಗಳು† | ಪಾದರಸದಲ್ಲಿ ಮಿ.ಮೀ.* | mb | ì Hg* |
|---|---|---|---|---|---|---|---|---|
| ವಾಯುಮಂಡಲಗಳು | 1.00000 | 1.03300 | 14.7000 | 29.9200 | 406.800 | 760.000 | 1013.00000 | |
| ಚಚರ ಸೆಂ.ಮೀ.ಗೆ ಕಿಲೋಗ್ರಾಂಗಳು | 0.96780 | 1.00000 | 14.2200 | 28.9600 | 393.700 | 735.600 | 980.70000 | |
| ಚದರ ಇಂಚಿಗೆ ಪೌಂಡುಗಳು | 0.06800 | 0.07030 | 1.0000 | 2.0360 | 27.680 | 51.710 | 68.95000 | |
| ಪಾದರಸದ ಇಂಚುಗಳು* | 0.03340 | 0.03450 | 0.4910 | 1.0000 | 13.600 | 25.400 | 33.86000 | |
| ನೀರಿನ ಇಂಚುಗಳು† | 0.00246 | 0.00254 | 0.0361 | 0.0736 | 1.0000 | 1.868 | 2.48600 | |
| ಪಾದರಸದ ಮಿಲಿಮೀಟರುಗಳು | 0.00132 | 0.00136 | 0.0193 | 0.0394 | 0.53 | 1.000 | 1.33300 | 1000.0 |
| ಮಿಲಿ ಬಾರುಗಳು | | 0.00102 | 0.0145 | 0.0295 | 0.401 | 0.750 | 1.00000 | 750.1 |
| ಪಾದರಸದ ಮೈಕ್ರಾನುಗಳು* | | | | | | 0.001 | 0.00133 | 1.0 |

*32° ಫ್ಯಾ. (0° ಸೆಂ.)ನಲ್ಲಿ ; 60° ಫ್ಯಾ.ನಲ್ಲಿರುವ ಪಾದರಸಕ್ಕೆ ಪರಿವರ್ತಿಸಲು 1.00283 ರಿಂದ ಗುಣಿಸಿ.

†39.2° ಫ್ಯಾ. (4° ಸೆಂ.)ನಲ್ಲಿ ; 60° ಫ್ಯಾ.ನಲ್ಲಿರುವ ನೀರಿಗೆ ಪರಿವರ್ತಿಸಲು 1.00096 ರಿಂದ ಗುಣಿಸಿ.

ಒತ್ತಡವನ್ನು ವಾಯುಮಂಡಲ ಹೇರುತ್ತದೆ. ವಾಯುಭಾರಮಾಪಕವನ್ನು ಒಂದು ಸ್ಥಳ ಸಮುದ್ರಮಟ್ಟದಿಂದ ಎಷ್ಟು ಎತ್ತರದಲ್ಲಿದೆಯೆಂದು ಕಂಡುಹಿಡಿಯುವುದಕ್ಕೂ ಉಪಯೋಗಿಸುತ್ತಾರೆ. (ಎಚ್.ಸಿ.ಕೆ.)

**ಒತ್ತಡ ವರ್ಧಕ:** ಹೆಚ್ಚು ಪ್ರಮಾಣದ, ಆದರೆ ಕಡಿಮೆ ಒತ್ತಡದ ನೀರಿನಲ್ಲಿರುವ ಶಕ್ತಿಯನ್ನು ಉಪಯೋಗಿಸಿಕೊಂಡು, ನೀರಿನ ಒತ್ತಡವನ್ನು ವರ್ಧಿಸಲು ಬಳಸುವ ಸಾಧನ (ಇನ್‌ಟೆನ್ಸಿಫೈಯರ್). ಜಲಶಕ್ತಿಯಿಂದ ಚಲಿಸುವ ಯಂತ್ರಗಳಿಗೆ ಒದಗಿಸಲಾಗುವ ನೀರಿನ ಒತ್ತಡ ಕಡಿಮೆ ಇದ್ದರೆ, ಇಂಥ ಸಾಧನಗಳಿಂದ ಒತ್ತಡವನ್ನು ಹೆಚ್ಚಿಸಿಕೊಳ್ಳಬಹುದು. ಒತ್ತಡ ವರ್ಧಕದ ಜೋಡಣೆಯನ್ನು ಚಿತ್ರದಲ್ಲಿ ಕಾಣಿಸಿದೆ. ಸ್ಥಾಯೀ ಬೆಣೆಯ ಮಧ್ಯದಲ್ಲಿರುವ ರಂಧ್ರದ ಮೂಲಕ ಹೆಚ್ಚು ಒತ್ತಡದ ನೀರು ಹೊರಭಾಗದಲ್ಲಿ ಮೇಲಕ್ಕೂ ಕೆಳಕ್ಕೂ ಓಡಾಡಬಲ್ಲ ಒಂದು ಆಡಬೆಣೆ ಇದೆ. ಇದರ ಒಳಭಾಗ ಪೊಳ್ಳು. ಇದರೊಳಗೆ ಒತ್ತಡದ ನೀರು ತುಂಬಿದೆ. ಕಡಿಮೆ ಒತ್ತಡದ ನೀರು ತುಂಬಿರುವ ಇನ್ನೊಂದು ಸ್ಥಿರ ಸಿಲಿಂಡರು ಆಡುಬೆಣೆಯ ಹೊರಗಡೆ ನಿಲ್ಲುವ ಹಾಗೆ ಏರ್ಪಡಿಸಿದೆ; ಕಡಿಮೆ ಒತ್ತಡದ ನೀರು ಆಡುಬೆಣೆಯ ಮೇಲ್ಭಾಗವನ್ನು ಒತ್ತುತ್ತದೆ. ಇದರಿಂದ ಆಡುಬೆಣೆ ಕೆಳಗೆ ಇಳಿಯುತ್ತದೆ. ಆಗ ಹೆಚ್ಚು ಒತ್ತಡದ ನೀರು ಸ್ಥಾಯೀ ಬೆಣೆಯ ರಂಧ್ರದ ಮೂಲಕ ಹೊರಬರುತ್ತದೆ.




ಒತ್ತಡ ವರ್ಧಕದ ಜೋಡಣೆ:
1. ಕಡಿಮೆ ಒತ್ತಡದ ನೀರಿನ ಪ್ರವೇಶ, 2. ಸ್ಥಿರ ಸಿಲಿಂಡರ್, 3. ಆಡುಬೆಣೆ, 4. ಸ್ಥಾಯೀ ಬೆಣೆ, 5. ಅಧಿಕ ಒತ್ತಡದ ನೀರು ಹೊರಬರುವ ಮಾರ್ಗ

ಆಡುಬೆಣೆ ತೀರ ಕೆಳಗೆ ಇಳಿದು ತನ್ನ ಹೊಡೆತದ ಕೊನೆಯಲ್ಲಿರುವಾಗ ಹೆಚ್ಚು ಒತ್ತಡದ ನೀರನ್ನು ಒಳಗೆ ಬಿಡುವ ಕವಾಟ ಮುಚ್ಚಿಕೊಳ್ಳುತ್ತದೆ. ಅನಂತರ ಕಡಿಮೆ ಒತ್ತಡದ ನೀರು ಆಡುಬೆಣೆಯ ಒಳಗೆ

$$[\text{ಹೆಚ್ಚು ಒತ್ತಡದ ತೀವ್ರತೆ}] = [\text{ಕಡಿಮೆ ಒತ್ತಡದ ತೀವ್ರತೆ}] \times \frac{[\text{ಆಡುಬೆಣೆಯ ಹೊರಭಾಗದ ವಿಸ್ತೀರ್ಣ}]}{[\text{ಸ್ಥಾಯೀ ಬೆಣೆಯ ವಿಸ್ತೀರ್ಣ}]}$$

ನುಗ್ಗುತ್ತದೆ. ಆಗ ಸ್ಥಿರ ಸಿಲಿಂಡರಿನ ರಂಧ್ರ ಹೊರಗಡೆಗೆ ತೆರೆದಿರುವುದರಿಂದ ಆಡುಬೆಣೆ ಮೇಲೆ ಏಳುವುದು; ಮತ್ತು ತನ್ನ ಹೊಡೆತದ ಮೇಲ್ಭಾಗವನ್ನು ತಲಪಿದಾಗ ಹೆಚ್ಚು ಒತ್ತಡದ ನೀರನ್ನು ಯಂತ್ರದೊಳಗೆ ಬಿಡುವ ಕವಾಟ ತೆರೆಯುತ್ತದೆ. ಅಲ್ಲದೆ ಕಡಿಮೆ ಒತ್ತಡದ ನೀರನ್ನು ಆಡುಬೆಣೆಯ ಒಳಗಡೆ ಬಿಡುವ ಕವಾಟ ಮುಚ್ಚಿಕೊಳ್ಳುತ್ತದೆ. ಅದೇ ಸಮಯದಲ್ಲಿ ಸ್ಥಿರ ಸಿಲಿಂಡರಿಗೂ ಹೊರಗಡೆಗೂ ಇರುವ ಸಂಬಂಧ ತಪ್ಪಿ ಹೋಗುತ್ತದೆ; ಮತ್ತು ಜಲಯಂತ್ರಗಳಿಗೆ ನೀರು ಪೂರೈಸುವ ಪ್ರಧಾನ ನಳಿಗೆಯೊಳಗಿನ ನೀರು ಸ್ಥಿರ ಸಿಲಿಂಡರಿನೊಳಗೆ ತುಂಬಿಕೊಳ್ಳುತ್ತದೆ. ಆಗ ನೀರಿನ ಒತ್ತಡದಿಂದ ಆಡುಬೆಣೆ ಕೆಳಗೆ ಇಳಿದು ವರ್ಧಿಸಿದ ಒತ್ತಡದ ನೀರನ್ನು ಯಂತ್ರಗಳೊಳಗೆ ನೂಕುತ್ತದೆ. ಹೀಗೆ ಏಕಮುಖವಾದ ಚಲನೆಯುಳ್ಳ ಈ ವರ್ಧಕಗಳು ತಮ್ಮ ಕೆಳಗಿನ ಹೊಡೆತದಲ್ಲಿ ಮಾತ್ರ ಹೆಚ್ಚು ಒತ್ತಡದ ನೀರನ್ನು ಒದಗಿಸಬಲ್ಲವು. ಈ ವರ್ಧಕಗಳಿಂದ ನೀರಿನ ಒತ್ತಡದ ತೀವ್ರತೆಯನ್ನು ಪ್ರತಿ ಚದರಂಗುಲಕ್ಕೆ 10 ಟನ್ನುಗಳಷ್ಟು ಹೆಚ್ಚು ಮಾಡಬಹುದು. ದ್ವಿಮುಖ ಚಲನೆಯುಳ್ಳ ವರ್ಧಕಗಳು ನಿರಂತರವಾಗಿ ಹೆಚ್ಚು ಒತ್ತಡದ ನೀರನ್ನು ಒದಗಿಸಬಲ್ಲವು. (ಬಿ.ಪಿ.ಜಿ.)

**ಒತ್ತಾಯ:** ಯಾವನಾದರೊಬ್ಬ ಒಂದು ಒಪ್ಪಂದಕ್ಕೆ ತೊಡಗುವಂತೆ ಮಾಡುವ ಉದ್ದೇಶದಿಂದ, ಯಾವನೇ ಒಬ್ಬ ವ್ಯಕ್ತಿಗೆ ಹಾನಿಯಾಗುವ ರೀತಿಯಲ್ಲಿ, ಭಾರತೀಯ ದಂಡಸಂಹಿತೆಯಲ್ಲಿ (ಇಂಡಿಯನ್ ಪೀನಲ್ ಕೋಡ್) ನಿಷೇಧಿಸಲಾದ ಯಾವುದಾದರೂ ಕೃತ್ಯವನ್ನು ಮಾಡುವುದು ಅಥವಾ ಮಾಡುವುದಾಗಿ ಬೆದರಿಸುವುದು ಅಥವಾ ನ್ಯಾಯಬಾಹಿರವಾಗಿ ಯಾವುದಾದರೂ ಸ್ವತ್ತನ್ನು ನಿಲ್ಲಿಸಿಕೊಳ್ಳುವುದು ಅಥವಾ ನಿಲ್ಲಿಸಿಕೊಳ್ಳುವುದಾಗಿ ಬೆದರಿಸುವುದು–ಎಂದು ಇದನ್ನು (ಕೊಯರ್ಷನ್) ಭಾರತೀಯ ಕರಾರು ಕಾಯಿದೆಯ (ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್) 15ನೆಯ ಕಲಂನಲ್ಲಿ ವ್ಯಾಖ್ಯಾನಿಸಲಾಗಿದೆ. ಒಂದು ಒಪ್ಪಂದವನ್ನು ಕರಾರು ಎಂದು ಪರಿಗಣಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ಪಕ್ಷಗಳ ನಿರುಪಾಧಿಕ ಸಮ್ಮತಿ (ಖುದ್ದು ರಾಜಿ) ಇರಬೇಕಾದ್ದು ಒಂದು ಷರತ್ತು (ಕಲಂ 10). ಸಮ್ಮತಿಯ ನಿರುಪಾಧಿಕತೆಯನ್ನು ನಷ್ಟಗೊಳಿಸುವ ಕಾರಣಗಳಲ್ಲಿ ಒತ್ತಾಯವೂ ಒಂದು (ಕಲಂ 14).

ಒತ್ತಾಯವನ್ನು ಬಳಸಲಾದ ಸ್ಥಳದಲ್ಲಿ ಭಾರತೀಯ ದಂಡಸಂಹಿತೆ ಜಾರಿಯಲ್ಲಿರುವುದಾಗಲಿ ಇಲ್ಲದಿರುವುದಾಗಲಿ ಗಣನೀಯವಲ್ಲವೆಂದು ಈ ಕಾಯಿದೆಯಲ್ಲಿ ವಿವರಿಸಲಾಗಿದೆ. ಉದಾಹರಣೆ: ಭಾರತೀಯ ದಂಡಸಂಹಿತೆಯ ಪ್ರಕಾರದ ತಕ್ಸೀರಿನ ಬೆದರಿಕೆಯನ್ನು ಸಮುದ್ರದ ಮೇಲೆ ಸಾಗುತ್ತಿರುವ ಹಡಗಿನಲ್ಲಿ ಒಬ್ಬ ಇನ್ನೊಬ್ಬನ ಮೇಲೆ ಪ್ರಯೋಗಿಸಿ, ತನ್ಮೂಲಕ ಆ ಎರಡನೆಯಾತ ಒಪ್ಪಂದಕ್ಕೆ ಬರುವಂತೆ ಮಾಡುತ್ತಾನೆ. ಆದರೆ ಆತ ಒಪ್ಪಂದದಂತೆ ನಡೆಯಲಿಲ್ಲವೆಂದು, ಕರಾರು ಮುರಿದನೆಂದು, ಮೊದಲನೆಯವನು ಆತನ ಮೇಲೆ ಕೋಲ್ಕತ್ತದಲ್ಲಿ ದಾವೆ ಹೂಡುತ್ತಾನೆ. ಇಂಗ್ಲೆಂಡಿನ ನ್ಯಾಯದ ಪ್ರಕಾರ ಮೊದಲನೆಯವನ ಕೃತ್ಯ ಒತ್ತಾಯವಾಗದಿದ್ದರೂ ಭಾರತೀಯ ದಂಡಸಂಹಿತೆಯ ತತ್ಸಂಬಂಧಿ ಕಲಮು (506) ಆ ಕೃತ್ಯ ನಡೆದಾಗ, ನಡೆದಲ್ಲಿ ಜಾರಿಯಲ್ಲಿಲ್ಲದಿದ್ದರೂ ಮೊದಲನೆಯವ ಎರಡನೆಯವನ ಒಪ್ಪಿಗೆ ಪಡೆಯುವ ಸಲುವಾಗಿ ಒತ್ತಾಯ ಮಾಡಿದ್ದಾನೆಂದೇ ಹೇಳಬೇಕು. ಹೀಗೆಂದು ಭಾರತೀಯ ಕರಾರು ಕಾಯಿದೆಯ 15ನೆಯ ಕಲಮಿನಲ್ಲಿ ವಿವರಿಸಲಾಗಿದೆ.

ಭಾರತೀಯ ಕರಾರು ಕಾಯಿದೆಯ 15ನೆಯ ಕಲಮಿನಲ್ಲಿ ಒತ್ತಾಯದ ಬಗ್ಗೆ ಕೊಟ್ಟಿರುವ ವ್ಯಾಖ್ಯೆಯ ವಾಕ್ಯಾಂಗಭಾಗಗಳನ್ನೂ ಅದೇ ಕರಾರಿನ 72ನೆಯ ಕಲಮಿನ ವಿಚಾರಗಳನ್ನೂ ವಿವೇಚಿಸಿದಾಗ ವ್ಯಕ್ತವಾಗುವ ಮುಖ್ಯ ಅಂಶಗಳು ಇವು:

1 ಭಾರತೀಯ ದಂಡಸಂಹಿತೆಯಲ್ಲಿ ನಿಷೇಧಿಸಲಾದ ಕೃತ್ಯಗಳನ್ನು ಮಾಡಿಯೋ ಅಥವಾ ಮಾಡುವುದಾಗಿ ಬೆದರಿಸಿಯೋ ಸ್ವತ್ತನ್ನು ಬಿಡದೆಯೋ ಬಿಡುವುದಿಲ್ಲವಾಗಿ ಬೆದರಿಸಿಯೋ ಒಪ್ಪಂದಕ್ಕೆ ಬರುವಂತೆ ಮಾಡಿರಬೇಕು. ಒಪ್ಪಂದವಲ್ಲದೆ ಬೇರೆಯಾವುದಾದರೂ ಉದ್ದೇಶದಿಂದ ಹಾಗೆ ಮಾಡಿದರೆ ಅದು ಒಪ್ಪಂದದ ವಿಚಾರದಲ್ಲಿ ಗಮನಿಸತಕ್ಕ ವಿಷಯವಲ್ಲ.

2 ಆ ಕೃತ್ಯ ಯಾವನೊಬ್ಬನಿಗೆ ಯಾವ ರೀತಿಯಿಂದಲಾದರೂ ಹಾನಿಕಾರಕವಾಗಿರಬೇಕು. ಭಾವನಾತ್ಮಕ (ಸೆಂಟಿಮೆಂಟಲ್) ಹಾನಿಯನ್ನು ನ್ಯಾಯಾಲಯ ಗಮನಿಸುವುದಿಲ್ಲ. ಹಾನಿ ಕಾನೂನು ಪ್ರಕಾರದ್ದಾಗಿರಬೇಕು. ಒತ್ತಾಯಕ್ಕೊಳಗಾದವನಿಗೆ ಅಥವಾ ಬೇರೆ ಯಾರಿಗಾದರೂ ಅದರಿಂದಾಗಿ ನಷ್ಟ ತೋರಿದರೆ ಅಥವಾ ದೋಷವಾಗಿದ್ದು, ಒತ್ತಾಯ ಪಡಿಸಿದವನಿಗೆ ತನ್ಮೂಲಕ ಅನ್ಯಾಯದ ಲಾಭ ಗಿಟ್ಟಿರಬೇಕು.

3 ಅದು ಭಾರತೀಯ ದಂಡಸಂಹಿತೆಯಲ್ಲಿ ನಿಷೇಧಿಸಲಾದ ಕೃತ್ಯವಾಗಿದ್ದರೆ ಸಾಕು. ಭಾರತೀಯ ದಂಡಸಂಹಿತೆಯ ಪ್ರಕಾರ ಶಿಕ್ಷಾರ್ಹವಾದ–ಎಂಬುದಕ್ಕಿಂತ ಇದು ವಿಶಾಲವಾಗಿದೆ. ಒಬ್ಬ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಿ ಅದರ ಕಾರಣದಿಂದ ಬೇರೆಯವರು ಒಪ್ಪಂದಕ್ಕೆ ಬರುವಂತೆ ಮಾಡಿದರೆ ಅಂಥ ಒಪ್ಪಂದ ಒತ್ತಾಯದ ಒಪ್ಪಂದವಾಗುತ್ತದೆ. ಒಂದು ಕ್ರಿಮಿನಲ್ ಮೊಕದ್ದಮೆ ಇರುವಾಗ ಅಥವಾ ಕ್ರಿಮಿನಲ್ ಮೊಕದ್ದಮೆಯ ಹೆದರಿಕೆಯಿಂದ ಒಪ್ಪಂದವಾದ ಪಕ್ಷದಲ್ಲಿ ಅದು ಒತ್ತಾಯದ ಪರಿಧಿಯಲ್ಲಿ ಬರಲಾರದು. ಫಿರ್ಯಾದಿ (ಕಂಪ್ಲೇನೆಂಟ್) ಅಥವಾ ಅವನಿಗಾಗಿ ಮತ್ತೆ ಯಾರಾದರೂ ಆರೋಪಿಯ (ಅಕ್ಯೂಸ್ಡ್) ಮನಃಸ್ಥಿತಿಯ ಉಪಯೋಗಪಡೆದುಕೊಂಡು ಆತ ಒಪ್ಪಂದಕ್ಕೆ ಬರುವಂತೆ ಅವನ ಮೇಲೆ ಒತ್ತಡ (ಪ್ರೆಷರ್) ತಂದಿರಬೇಕು. ನ್ಯಾಯಸ್ಥಾನದಲ್ಲಿ ತನಿಖೆಗಾಗಿ ಇರುವ ಕ್ರಿಮಿನಲ್ ಮೊಕದ್ದಮೆಯೊಂದನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿದ ಪ್ರಯುಕ್ತ ಒಂದು ಒಪ್ಪಂದ ಉಂಟಾಗಿದ್ದರೆ ಅದು ಒತ್ತಾಯದ ಒಪ್ಪಂದ ಎನಿಸದು.

4 ದಂಡಸಂಹಿತೆ ನಿಷೇಧಿಸಿದ ಕೃತ್ಯವನ್ನು ಮಾಡಬೇಕೆಂದೇ ಇಲ್ಲ. ಮಾಡುವುದಾಗಿ ಬೆದರಿಸಿದರೂ ಸಾಕು. ಉದಾಹರಣೆಗಾಗಿ–ಒಪ್ಪಂದಕ್ಕೆ ಬರುವ ಬಗ್ಗೆ ಒಬ್ಬ ಇನ್ನೊಬ್ಬನ ಕಾಲು ಕಡಿದು ಹಾಕುವುದಾಗಿ ಹೇಳುತ್ತಾನೆ. ಕಾಲು ಕಡಿದು ಹಾಕದಿದ್ದರೂ ಹಾಕುವ ಬೆದರಿಕೆಯಿಂದ ಒಪ್ಪಂದವಾಗಿದ್ದರೆ ಅದು ಒತ್ತಾಯದ ಒಪ್ಪಂದವಾಗುತ್ತದೆ.

5 ಯಾವುದಾದರೂ ಸ್ವತ್ತನ್ನು ಬಿಡದೆ ಅಥವಾ ಬಿಡುವುದಿಲ್ಲವಾಗಿ ಹೆದರಿಸಿ, ಯಾವನೊಬ್ಬನಿಗೆ ಹಾನಿ ಬರುವಂತೆ ಮಾಡಿ, ಒಪ್ಪಂದಕ್ಕೆ ಒಪ್ಪಿಸಿದರೆ ಅದು ಒತ್ತಾಯದ ಒಪ್ಪಂದವಾಗುತ್ತದೆ. ಇದರಿಂದ ಒಪ್ಪುವವನ ಮನಸ್ಸಿನ ಮೇಲೆ ಬಲಪ್ರಯೋಗವಾಗುತ್ತದೆ. ಮಗನ ಮೇಲೆ ವಿಧಿಸಲಾದ ಜುಲ್ಮಾನೆಯ ಹಣದ ವಸೂಲಿಯ ಬಗ್ಗೆ ತಂದೆ ಮತ್ತು ಮಕ್ಕಳ ಸಂಯುಕ್ತ ಹಕ್ಕಿನ ಸ್ವತ್ತನ್ನು ಜಪ್ತಿಪಡಿಸಿದ್ದು, ಆ ಸ್ವತ್ತನ್ನು ಮಾರಾಟದಿಂದ ಉಳಿಸಿಕೊಳ್ಳಲು ತಂದೆ ಹಣವನ್ನು ತೆತ್ತ ಪಕ್ಷದಲ್ಲಿ ಅದು ಒತ್ತಾಯದಿಂದ ತೆತ್ತ ಹಣ. ಅನ್ಯಾಯವಾಗಿ ತೆರಿಗೆಯನ್ನು ಹೊರಿಸಿದ್ದು, ಆಸ್ತಿಯನ್ನು ಮಾರಾಟ ಮಾಡುವ ಪ್ರಸಂಗವನ್ನು ತಪ್ಪಿಸುವ ಸಲುವಾಗಿ

ತೆರಿಗೆಯನ್ನು ಕೊಟ್ಟಲ್ಲಿ ಅದನ್ನು ತಿರುಗಿ ನ್ಯಾಯಾಲಯಗಳ ಮುಖಾಂತರ ಪಡೆಯಬಹುದು. ಆದರೆ ಪ್ರತಿಯೊಂದು ಬೆದರಿಕೆಯೂ ಒತ್ತಾಯವೆನಿಸದು; ಆ ಕಾರಣದಿಂದ ಒಪ್ಪಂದ ಒತ್ತಾಯದ್ದೆಂದು ತಳ್ಳಿಹಾಕಲಾಗುವುದು. ಹೆದರಿಸಿದ ಕಾರ್ಯ ಅನ್ಯಾಯದ್ದಿದ್ದರೆ ಮಾತ್ರ ಅದು ಒತ್ತಾಯವೆನಿಸುತ್ತದೆ. ಆದರೆ ವಿರಳವಾಗಿ ಇದಕ್ಕೆ ಅಪವಾದ (ಎಕ್ಸೆಪ್ಷನ್) ಇಲ್ಲದಿಲ್ಲ. ಉದಾಹರಣೆಗಾಗಿ, ಒಂದು ಕರಾರನ್ನು ಮುರಿಯುವ ಬೆದರಿಕೆ ಸ್ವತಃ ಯಾವ ಒತ್ತಾಯವಾಗ ಲಾರದಾದರೂ ಒಪ್ಪಿಕೊಂಡಂತೆ ನಡೆಯದಿದ್ದರೆ, ತುಂಬಲಾರದ ನಷ್ಟವಾಗುವಂತಿದ್ದರೆ, ಕರಾರಿನ ಮುರಿಯುವಿಕೆಯ ಹೆದರಿಕೆ ಹಾಕುವುದೂ ಒತ್ತಾಯದ ಸ್ವರೂಪ ತಾಳುತ್ತದೆ.

ಒಪ್ಪಂದಕ್ಕೆ ಸೇರಿದವರಲ್ಲಿ ಯಾರಾದರೂ ಅನ್ಯಾಯವಾಗಿ ಹೇರಿದ ಒತ್ತಾಯವನ್ನು ತಡೆಯಲು ಅಸಾಧ್ಯವಾಗುವ ಮಾನಸಿಕ ಅವಸ್ಥೆಯವರಾಗಿದ್ದೆ ಒಪ್ಪಂದಕ್ಕೆ ಅವರ ಅನುಮತಿ ಇಲ್ಲವೆಂದು ತಿಳಿಯಬೇಕು. ಹಾಕಿದ ಬೆದರಿಕೆ, ಸಾಮಾನ್ಯ ಎದೆಗಾರಿಕೆ ಮತ್ತು ದೃಢತೆ ಇರುವ ಮನುಷ್ಯನನ್ನು ಒಪ್ಪುವಂತೆ ಮಾಡುವಷ್ಟು ಪರಿಣಾಮಕಾರಿಯಾಗಿರಬೇಕೆಂದು ನಿಯಮವಿಲ್ಲ.

ಇಂಗ್ಲಿಷ್ ನ್ಯಾಯದಲ್ಲಿ ಒತ್ತಾಯದಿಂದ ಸಂಭವಿಸಿದ ಒಪ್ಪಂದಗಳಿಗೆ ಬಲಾತ್ಕಾರದಿಂದ (ಡ್ಯೂರೆಸ್) ಆದ ಒಪ್ಪಂದಗಳೆಂದು ಹೇಳಲಾಗುತ್ತದೆ. ಭಾರತದ ಒತ್ತಾಯಕ್ಕೂ ಇಂಗ್ಲಿಷ್ ಕಾನೂನಿನ ಬಲಾತ್ಕಾರಕ್ಕೂ ಮುಖ್ಯವಾಗಿ ಎರಡು ವ್ಯತ್ಯಾಸಗಳಿವೆ:

1 ಒತ್ತಾಯವನ್ನು ಮನುಷ್ಯನ ಮೇಲಾಗಲಿ ಸ್ವತ್ತಿನ ಮೇಲಾಗಲಿ ಹೇರಬಹುದು. ಮನುಷ್ಯನ ಮೇಲೆ ಮಾಡಲಾದ ಒತ್ತಾಯವನ್ನು ಮಾತ್ರ ಬಲಾತ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ.

2 ಕರಾರಿನ ಪಕ್ಷವಾದ ವ್ಯಕ್ತಿಯಿಂದ ಅಥವಾ ಅವನ ಪ್ರತಿನಿಧಿಯಿಂದ ಅಥವಾ ಆತನ ತಿಳಿವಳಿಕೆ ಮತ್ತು ಒಪ್ಪಿಗೆಯಿಂದ ಕಾರ್ಯಪ್ರವೃತ್ತನಾದವನಿಂದ ಬಲಾತ್ಕಾರ ಸಂಭವಿಸಿರಬೇಕು; ಕರಾರಿನ ಇನ್ನೊಂದು ಪಕ್ಷಕ್ಕೆ ಅಥವಾ ಆತನ ಸತೀಸುತರಿಗೆ ಮಾತ್ರವೇ ಹಾನಿಯೊದಗಿರಬೇಕು ಎಂಬುದಾಗಿ ಭಾರತದ ಕಾಯಿದೆಯಲ್ಲಿ ಹೇಳಿಲ್ಲ. ಈ ದೃಷ್ಟಿಯಲ್ಲಿ ಭಾರತದ ಕಾಯಿದೆ ಹೆಚ್ಚು ವ್ಯಾಪಕವಾದದ್ದು.

ಒತ್ತಾಯದ ಒಪ್ಪಂದಗಳು ಎಂದೂ ಆರಂಭತಃ ಶೂನ್ಯವಾದ (ವಾಯ್ಡ್ ಅಬ್ ಇನಿಷಿಯೋ) ಒಪ್ಪಂದಗಳಾಗುವುದಿಲ್ಲ. ಯಾವಾತ ಅನ್ಯಾಯ ಹೊಂದುತ್ತಾನೋ ಅವನಿಗೆ ಕರಾರನ್ನು ಶೂನ್ಯಗೊಳಿಸುವ (ವಾಯ್ಡ್ ಬಲ್) ಹಕ್ಕು ಇರುತ್ತದೆ. ಒತ್ತಾಯಕ್ಕೆ ಒಳಗಾದವನು ಅವನ ಇಚ್ಛೆ ಇದ್ದಲ್ಲಿ ನ್ಯಾಯಸ್ಥಾನದಲ್ಲಿ ಒಪ್ಪಂದದಿಂದ ನಿವೃತ್ತಿ ಪಡೆಯಬಹುದು. ಒತ್ತಾಯದಿಂದ ಒಪ್ಪಂದವನ್ನು ತನ್ನ ಅನುಕೂಲಕ್ಕೆ ಪಡೆದವನು ಒಪ್ಪಂದಕ್ಕೆ ಚ್ಯುತಿ ಬಂದರೆ ನಿವೃತ್ತಿ ಪಡೆಯಲಾರ.

ಒತ್ತಾಯದ ಒಪ್ಪಂದವೆಂದು ದೃಢಪಡಿಸುವುದು (ಪ್ರೂವ್) ಹಾಗೆಂದು ವಾದ ಹೂಡಿದವನ ಹೊಣೆಗಾರಿಕೆ ಯಾಗುತ್ತದೆ. ಆತ ಒತ್ತಾಯಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನೂ ವಿವರಿಸಿ ಹೇಳಬೇಕಲ್ಲದೆ ಅದಕ್ಕೆ ರುಜುವಾತು ದೊರಕಿಸಿಕೊಡಬೇಕು. ಆದ್ದರಿಂದ ಒತ್ತಾಯಕ್ಕೆ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ತೀರ್ಪು ಆಯಾಯಾ ಮೊಕದ್ದಮೆಗಳ ವಿಶಿಷ್ಟ ಸಂಗತಿಗೆ ಅನುಗುಣವಾಗಿರುತ್ತದೆ. ಒತ್ತಾಯವನ್ನು ರುಜುವಾತು ಮಾಡಬೇಕಾದಲ್ಲಿ ಖಚಿತವಾದ ಪುರಾವೆ ಇರಬೇಕು.

ಒಂದು ಒಪ್ಪಂದ ಒತ್ತಾಯವನ್ನು ಹೇರಿದ್ದರ ಪರಿಣಾಮವೇ ಅಲ್ಲವೇ ಎಂಬ ವಿಚಾರ ಕಾನೂನು ಮತ್ತು ವಸ್ತುಸ್ಥಿತಿಗಳ ಸಮ್ಮಿಶ್ರ ಪ್ರಶ್ನೆ. ಒತ್ತಾಯದ ವ್ಯಾಖ್ಯೆಯಲ್ಲಿ ಹೇಳಿದ ಭಾಗಗಳು ಅಥವಾ ಅಂಶಗಳು ಇವೆಯೆ ಎಂಬುದು ವಸ್ತುಸ್ಥಿತಿಯ ಪ್ರಶ್ನೆ. ಹೇಳಿದ ಮತ್ತು ರುಜುವಾತು ಪಡೆದ ವಿಚಾರಗಳು ಒತ್ತಾಯವನ್ನು ದೃಢೀಕರಿಸುವುವೋ ಎಂಬುದು ಕಾನೂನಿನ ಪ್ರಶ್ನೆ. ಒತ್ತಾಯದ ವಿಚಾರ ಕುರಿತ ತೀರ್ಪು ನೀಡುವಾಗ ನ್ಯಾಯಾಲಯ ಇವೆರಡನ್ನೂ ಗಮನಿಸುತ್ತದೆ. (ಕೆ.ಜಿ.ಬಿ.)

**ಒತ್ತಾಯ ಕೇಂದ್ರೀಕರಣ:** ಕೆಲವು ರಚನೆಗಳಲ್ಲಿ ಜೋಡಣೆಯ ಅಥವಾ ರಚನೆಯ ಅನುಕೂಲತೆಗೋಸ್ಕರ ರಂಧ್ರ, ಕೋನ ಮತ್ತು ಗಾತ್ರ ವ್ಯತ್ಯಾಸಗಳು ಇರುತ್ತವೆ. ಇವುಗಳ ಒಟ್ಟು ಹೆಸರು ನ್ಯೂನತೆಗಳು (ಡಿಫೆಕ್ಟ್ಸ್). ಇಂಥ ವಸ್ತುಗಳ ಮೇಲೆ ಬಾಹ್ಯ ಬಲಗಳು




ಪ್ರಯುಕ್ತವಾದಾಗ ನ್ಯೂನತೆಗಳ ಹತ್ತಿರ ಒತ್ತಾಯ ಸಮನ್ವಯಗೊಂಡಿರುವುದಿಲ್ಲ. ಸಾಮಾನ್ಯವಾಗಿ ಇರಬೇಕಾದುದಕ್ಕಿಂತ ಅನೇಕ ಬಾರಿ ಹೆಚ್ಚು ಒತ್ತಾಯ ಅಲ್ಲಿ ಕೇಂದ್ರೀಕೃತವಾಗಿರುವುದು. ಇದೇ ಒತ್ತಾಯ ಕೇಂದ್ರೀಕರಣ (ಸ್ಟ್ರೆಸ್ ಕಾನ್‌ಸೆಂಟ್ರೇಷನ್). ನ್ಯೂನತೆಗಳು ಒತ್ತಾಯವನ್ನು ಹೆಚ್ಚಿಸುವುದರಿಂದ ಅವುಗಳಿಗೆ ಒತ್ತಾಯ ವರ್ಧಕಗಳೆಂದು (ಸ್ಟ್ರೆಸ್ ರೇಸರ್ಸ್) ಹೆಸರು.

ಉದಾಹರಣೆಗೆ ಒಂದು ಸಣ್ಣ ರಂಧ್ರವಿರುವ ಬಿಗಿಸರಳನ್ನು Đ ಎಂಬ ಬಾಹ್ಯ ಬಲ ಎಳೆದಾಗ ರಂಧ್ರದ ಮೂಲಕ ಹಾಯುವ ಸರಳಿನ ಅಡ್ಡ ಕೊಯ್ತದಲ್ಲಿನ ಒತ್ತಾಯವು ಸಾಮಾನ್ಯವಾಗಿರುವುದಕ್ಕಿಂತ ರಂಧ್ರದ ಪಕ್ಕದಲ್ಲಿ 2–3ರಷ್ಟು ಕೇಂದ್ರೀಕರಣಗೊಂಡಿರುತ್ತದೆ. (ವಿ.ಡಿ.ಪಿ.)

**ಒತ್ತಾಯ ಮತಾಂತರ:** ಸ್ವಪ್ರೇರಣೆಯಿಂದಲ್ಲದೆ ಬಲಾತ್ಕಾರವಾಗಿ ನಡೆಯುವ ಮತಪರಿವರ್ತನೆಗೆ ಈ ಹೆಸರಿದೆ. ಹಿಂದೂ ಧರ್ಮ ಮೊದಲಿನಿಂದಲೂ ಇತರ ಧರ್ಮದವರನ್ನು ಮತಾಂತರಗೊಳಿಸುವುದನ್ನು ನಿಷೇಧಿಸುತ್ತದೆ. ಆದರೆ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಮತಪರಿವರ್ತನೆಯನ್ನು ಒಪ್ಪಿ ಮೊದಲಿನಿಂದಲೂ ಆ ಕೆಲಸವನ್ನು ಮಾಡುತ್ತ ಬಂದಿವೆ. ಕೊಲಂಬಸನ ಕಾಲದಿಂದಲೂ ಕ್ರೈಸ್ತ ಪಾದ್ರಿಗಳು ಅಮೆರಿಕ, ಆಫ್ರಿಕ, ಏಷ್ಯ ಮೊದಲಾದ ದೂರದೇಶಗಳಿಗೆ ಹೋಗಿ ನೆಲಸಿ ಧರ್ಮ ಪ್ರಚಾರ ಮಾಡುತ್ತ ಅಲ್ಲಿನ ಜನರಿಗೆ ಆರ್ಥಿಕ, ಸಾಮಾಜಿಕ ಪ್ರಲೋಭನಗಳನ್ನೊಡ್ಡಿ ಕ್ರಮೇಣ ಅವರನ್ನು ಮತಾಂತರಗೊಳಿಸಿ ಕ್ರೈಸ್ತರನ್ನಾಗಿ ಮಾಡುತ್ತ ಬಂದಿದ್ದಾರೆ. ಇಸ್ಲಾಂ ರಾಜ್ಯಗಳವರು ತಾವು ದಾಳಿ ನಡೆಸಿ ಗೆದ್ದ ರಾಷ್ಟ್ರಗಳಲ್ಲಿ ಒತ್ತಾಯದಿಂದ ತಮ್ಮ ಧರ್ಮವನ್ನು ಹೇರಿ ಸೋತ ರಾಷ್ಟ್ರಗಳವರನ್ನು ಇಸ್ಲಾಂ ಧರ್ಮಕ್ಕೆ ಸೇರಿಸುತ್ತ ಬಂದಿದ್ದಾರೆ. ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಮತಧರ್ಮಗಳಿಗೇ ಪ್ರಾಶಸ್ತ್ಯವಿದ್ದ ಮಧ್ಯಯುಗದ ಯುರೋಪಿನಲ್ಲಿ ಕ್ರೈಸ್ತರಿಗೂ ಮುಸ್ಲಿಮರಿಗೂ ಘೋರ ಯುದ್ಧಗಳಾಗಿವೆ. ಭಾರತದಲ್ಲಿ ಔರಂಗಜೇಬನಿಗೂ ಶಿವಾಜಿಗೂ ನಡೆದ ಸಂಗ್ರಾಮಕ್ಕೆ ಮತಪರಿವರ್ತನೆಯೂ ಒಂದು ಕಾರಣವಾಗಿದೆ.

ಒತ್ತಾಯ ಮತಾಂತರ ಸಾಧುವಲ್ಲ. ವ್ಯಕ್ತಿ ತನ್ನ ಅಂತಃಕರಣ ಒಪ್ಪಿದಲ್ಲಿ ಯಾವ ಧರ್ಮಕ್ಕಾದರೂ ಪರಿವರ್ತನೆ ಹೊಂದಬಹುದು. ಅಷ್ಟಲ್ಲದೆ ಯಾರೂ ಆತನ ಮೇಲೆ ರಾಜಕೀಯ ಹಾಗೂ ಸಾಮಾಜಿಕ ಒತ್ತಾಯಗಳನ್ನು ಹೇರಿ ಬಲಾತ್ಕಾರದಿಂದಾಗಲಿ, ಬೆದರಿಕೆಯಿಂದಾಗಲಿ ಮತಾಂತರಗೊಳಿಸಬಾರದು. ಪ್ರಜಾಸತ್ತಾತ್ಮಕವಾದ ಸರ್ಕಾರಗಳು ಏರ್ಪಟ್ಟು ಜಾತ್ಯಾತೀತ ಭಾವನೆಗಳು ಬೆಳೆದಂತೆಲ್ಲ ಜಾತೀಯತೆ, ಮತೀಯತೆ, ಮತಾಂಧತೆಗಳು ಕಡಿಮೆಯಾಗುತ್ತಿವೆ; ಧರ್ಮಸಹಿಷ್ಣುತೆ ಮತಸಮಾನತೆಗಳು ಬೆಳೆಯುತ್ತಿವೆ. ಹರಿಜನರ ಸ್ಥಾನಮಾನಗಳು ಮತ್ತು ಮತಾಂತರದ ಬಗ್ಗೆ ಗಾಂಧೀಜಿಯವರೂ ಹಿಂದೂ ಮುಸಲ್ಮಾನ ಸೌಹಾರ್ದದ ಬಗ್ಗೆ ಅವರು ಮತ್ತು ಖಾನ ಅಬ್ದುಲ್ ಗಫಾರ್ ಖಾನರೂ ತಳೆದ ಧೋರಣೆ ಸ್ತುತ್ಯರ್ಹವಾಗಿದೆ. (ಜಿ.ಎಚ್.)

**ಒತ್ತಾಯ ಮತ್ತು ವಿಕೃತಿ:** ಶಿಲ್ಪ ಮತ್ತು ಯಂತ್ರ ರಚನೆಗಳೆಂದರೆ ವಿವಿಧ ಬಲಗಳ ನಿರೋಧ, ಸಮತೋಲನ ಇತ್ಯಾದಿ. ರಚನೆಯ ಪ್ರತಿಯೊಂದು ಭಾಗವೂ ಈ ಬಲಗಳ ವ್ಯಾಪ್ತಿಗೆ ಒಳಪಡುತ್ತದೆ. ಭಾಗದ ಪ್ರತಿ ಬಿಂದುವಿನಲ್ಲಿಯೂ ಬಲಗಳ ಕ್ರಿಯೆಯಿಂದ ಉಂಟಾಗುವ ಪ್ರತಿಬಲವೇ ಒತ್ತಾಯ (ಸ್ಟ್ರೆಸ್). ಪರಿಣಾಮವಾಗಿ ಇದರ ಜೊತೆಯಲ್ಲೇ ಆ ಭಾಗದ ರೂಪದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಇದು ವಿಕೃತಿ (ಸ್ಟ್ರೇನ್) ಸ್ಥಿತಿಸ್ಥಾಪಕ ವಸ್ತುಗಳಲ್ಲಿ ಒತ್ತಾಯಕ್ಕೂ ವಿಕೃತಿಗೂ ನೇರ ಸಂಬಂಧವಿದೆ. ಈ ಸಂಬಂಧವನ್ನು ಒತ್ತಾಯ–ವಿಕೃತಿ ಚಿತ್ರದಲ್ಲಿ ತೋರಿಸಬಹುದು.




ಒತ್ತಾಯ ಹಾಗೂ ವಿಕೃತಿಗಳ ಪ್ರಮಾಣವೇ ಸ್ಥಿತಿಸ್ಥಾಪಕತ್ವದ ನಿಯತಾಂಕ (ಮಾಡ್ಯುಲಸ್ ಆಫ್ ಎಲಾಸ್ಟಿಸಿಟಿ) ಅಥವಾ ಯಂಗನ ನಿಯತಾಂಕ. ಇದರ ಸಂಕೇತ $E$. ಚಿತ್ರದಲ್ಲಿ ಈ ನಿಯತಾಂಕವನ್ನು ಒತ್ತಾಯ–ವಿಕೃತಿ ವ್ಯತ್ಯಾಸರೇಖೆಯ ಓಟ (ಸ್ಲೋಪ್) ನಿರ್ಣಯಿಸುತ್ತದೆ. ಇಲ್ಲಿ $\tan E =$ ಒತ್ತಾಯ ವಿಕೃತಿ ಸ್ಥಿತಿಸ್ಥಾಪಕತ್ವದ ನಿಯತಾಂಕ $E$ಯು ರಚನಾವಸ್ತುಗಳ ಸಾಮರ್ಥ್ಯವನ್ನು ಅರಿಯಲು ಸಹಾಯವಾಗುತ್ತದೆ. (ವಿ.ಡಿ.ಪಿ.)

**ಒತ್ತಿದ ಲೋಹಗಳು:** ಕಾಯಿಸದೆ ಒತ್ತುಯಂತ್ರಗಳ ನೆರವಿನಿಂದ ಬೇಕಾದ ಆಕಾರ ನೀಡಿದ ಲೋಹವಸ್ತುಗಳು (ಪ್ರೆಸ್ಡ್‌ಮೆಟಲ್ಸ್). ಇಂಥ ಲೋಹಗಳಿಗೆ ಸಹ ಈ ಹೆಸರಿದೆ. ಲೋಹದ ತಗಡು ಅಥವಾ ತುಂಡನ್ನು ಒತ್ತುಯಂತ್ರಗಳಲ್ಲಿ ನಿರ್ದಿಷ್ಟ ಆಕಾರಕ್ಕೆ ಬಗ್ಗಿಸಬೇಕಾದರೆ ಅದರಲ್ಲಿ ಇಂಗಾಲಾಂಶ ಕಡಿಮೆ ಇರಬೇಕು. ಒತ್ತಿದ ಲೋಹವಸ್ತುಗಳ

ತಯಾರಿಕೆಯಲ್ಲಿ ಬಳಸುವ ಲೋಹಗಳೆಂದರೆ ಅಲ್ಯೂಮಿನಿಯಂ ಮತ್ತು ಅದರ ಮಿಶ್ರಲೋಹಗಳು, ಇಂಗಾಲಾಂಶ ಕಡಿಮೆ ಇರುವ ಉಕ್ಕು, ತುಕ್ಕುಹಿಡಿಯದ ಉಕ್ಕು (ಸ್ಟೇನ್‌ಲೆಸ್ ಸ್ಟೀಲ್), ತವರ, ತಾಮ್ರ, ಹಿತ್ತಾಳೆ, ಕಂದುಬಣ್ಣದ ಕಂಚು, ಸತು, ಮೆಗ್ನೀಸಿಯಂ, ನಿಕಲ್, ಸರ್ಕೋನಿಯಂ–ಇತ್ಯಾದಿ. ಒತ್ತಿದ ಈ ಲೋಹಗಳಿಗೆ ಕೈಗಾರಿಕೆಗಳಲ್ಲಿ ವಿಶೇಷ ಪ್ರಾಮುಖ್ಯವಿದೆ. ವಾತಾವರಣದ ಉಷ್ಣತೆಯಲ್ಲಿಯೇ ಒತ್ತುಲೋಹಗಳ ತಯಾರಿಕೆ ಸಾಮಾನ್ಯವಾದರೂ ಕೆಲವು ಲೋಹಗಳು ಮತ್ತು ಮಿಶ್ರಲೋಹಗಳು ಏರಿದ ಉಷ್ಣತೆಯಲ್ಲಲ್ಲದೆ ವಾತಾವರಣದ ಉಷ್ಣತೆಯಲ್ಲಿ ಸಾಕಷ್ಟು ಮೆತುವಾಗಿರುವುದಿಲ್ಲ. ಆದ್ದರಿಂದ ಕೆಲವೊಮ್ಮೆ ಲೋಹದ ತಗಡು ಮತ್ತು ಛಾಪ (ಡೈ) ಇವೆರಡನ್ನೂ ಸುಮಾರು $255^0$–$815^0$ ಸೆಂ. ವರೆಗೆ ಕಾಯಿಸುವುದು ಅನಿವಾರ್ಯ. ಆಮೇಲೆ ಅದಕ್ಕೆ ಬೇಕಾದ ರೂಪ ನೀಡುವುದು ಸುಲಭ.

ಒತ್ತಿದ ಲೋಹಗಳಿಗೂ ಬೆಂಕಿಯಲ್ಲಿ ಕಾಯಿಸಿ ಬಡಿದ ಅಥವಾ ಎರಕಹೊಯ್ದ ಲೋಹಗಳಿಗೂ ಸ್ಪಷ್ಟವ್ಯತ್ಯಾಸವಿದೆ. ಎರಡನೆಯ ತರದ ಲೋಹದ ಘನಾಕೃತಿಯಲ್ಲಿ ವಿವಿಧ ಮಂದಗಳು ಇರಬಹುದು. ಒತ್ತಿದ ಲೋಹಕ್ಕೆ ಚಪ್ಪಟೆ ಅಥವಾ ಶಂಖರೀತಿಯ ಟೊಳ್ಳು ಆಕಾರ ಇರಬಹುದಾದರೂ ಅದರ ಗೋಡೆಗಳ ಮಂದ ಒಂದೇ ಇರುತ್ತದೆ. ಕೆಲವು ವಿಶಿಷ್ಟ ಉಪಕರಣಗಳನ್ನು ಬಳಸಿ ವಿವಿಧ ಮಂದದ ಗೋಡೆಗಳನ್ನು ಪಡೆಯಬಹುದು, ನಿಜ. ಆದರೂ ಸಾಮಾನ್ಯವಾಗಿ ಕಚ್ಚಾವಸ್ತುವಾಗಿ ಉಪಯೋಗಿಸಿದ ತಗಡಿನ ಮಂದ $1/8$" ಇದ್ದರೆ ರೂಪುಗೊಂಡ ಒತ್ತಿದ ಲೋಹದ ಗೋಡೆಯ ಮಂದವೂ ಅಷ್ಟೇ ಇರುವುದು.

ಲೋಹದ ಎರಕ ಹೊಯ್ಯುವಿಕೆ ಬಹಳ ಕಾಲದಿಂದಲೂ ಬಳಕೆಯಲ್ಲಿತ್ತು. ಆದರೆ ಅದು ಕೈಗಾರಿಕಾ ಪ್ರಪಂಚದಲ್ಲಿ ಲೋಹಗಳ ಪ್ರಮುಖ ಪಾತ್ರ ಗಳಿಸಿದ್ದು ಬೈಸಿಕಲ್ ಉತ್ಪಾದಕರಿಂದ. ಎರಕ ಹೊಯ್ದ ಲೋಹಗಳ ತೂಕ ಹೆಚ್ಚು ಮತ್ತು ಉತ್ಪಾದನೆಯ ವೆಚ್ಚ ಅಧಿಕ. ಬೈಸಿಕಲ್ಲುಗಳು ಜನಪ್ರಿಯವಾದಂತೆ ಅವುಗಳ ತೂಕ ಮತ್ತು ಉತ್ಪಾದನೆಯ ವೆಚ್ಚದ ನಿಯಂತ್ರಣ ಅನಿವಾರ್ಯವಾಯಿತು. ಆಗ ಒತ್ತಿದ ಲೋಹದ ಬಳಕೆ ಲಾಭದಾಯಕವೆನ್ನಿಸಿತು. ಇದು ಎರಕ ಹೊಯ್ದ ಮತ್ತು ಕಾಯಿಸಿ ಬಡಿದ ಲೋಹಗಳ ಸ್ಥಾನವನ್ನು ಸಂಪೂರ್ಣವಾಗಿ ಆಕ್ರಮಿಸಿತು. ಈ ಕ್ಷೇತ್ರದಲ್ಲಿ ಮಾತ್ರ ಅಲ್ಲ, ತಾಂಡವಾಳದ ಪಾತ್ರೆಪರಟೆಗಳ ಸ್ಥಾನವನ್ನು ಸಹ ಒತ್ತಿದ ಉಕ್ಕು ಬಲುಬೇಗ ಕಸಿದುಕೊಂಡಿತು. ಇಂದು ಅಲ್ಯೂಮಿನಿಯಂ ಮತ್ತು ತುಕ್ಕುಹಿಡಿಯದ ಉಕ್ಕು ಆ ಸ್ಥಾನದಲ್ಲಿವೆ. ಒತ್ತಿದ ಲೋಹದ ಉಪಯೋಗವನ್ನು ಬಹಳಷ್ಟು ಹೆಚ್ಚಿಸಿದ ಕೀರ್ತಿ ಆಟೊಮೊಬೈಲುಗಳ ಉತ್ಪಾದಕರಿಗೆ ಸಲ್ಲಬೇಕು. 1930ರ ಸುಮಾರಿಗೆ ಎಂಜಿನ್ ಮತ್ತು ಮುಂದಿನ ಆಕ್ಸಲ್ ಗೇರುಗಳ ಹೊರತು ಮಿಕ್ಕೆಲ್ಲ ಮೋಟಾರಿನ ಭಾಗಗಳೂ ಒತ್ತಿದ ಲೋಹಗಳಿಂದಲೇ ತಯಾರಾದುವು. ಅದೇ ಸಮಯಕ್ಕೆ ಉಕ್ಕಿನ ತಗಡನ್ನು ಉರುಳಿಸುವ ವಿಧಾನ ಬಹಳವಾಗಿ ಸುಧಾರಿಸಿತು. ಇದರಿಂದಾಗಿ ಸಾಲುಯಂತ್ರಗಳಲ್ಲಿ 4"–5" ಮಂದವಿರುವ ಲೋಹದ ಚಪ್ಪಡಿಗಳನ್ನು $3/32$" ಕಡಿಮೆ ಮಂದಕ್ಕೆ, ಒಂದೇ ಸಾರಿಗೆ ಇಳಿಸಲು ಸಾಧ್ಯವಾಯಿತು. ಇನ್ನೂ ಮುಂದುವರಿದು $3/32$" ಮಂದದ ತಗಡುಗಳನ್ನು ಜನಪ್ರಿಯ $1/10$" ಮುಂದಕ್ಕೆ ಪರಿವರ್ತಿಸುವುದು ಶಕ್ತಿಯುತ ಯಂತ್ರಗಳ ನಿರ್ಮಾಣದಿಂದಾಗಿ ಸಾಧ್ಯವಾಯಿತು. ಈ ರೀತಿ ಸಾಲುಯಂತ್ರಗಳಿಂದ ಹೊರಬಿದ್ದ ತಗಡುಗಳ ಉತ್ಪಾದನೆಯ ವೆಚ್ಚ ಕಡಿಮೆ; ಗುಣ ಹಿರಿಯಮಟ್ಟದ್ದು. ಈಗ ಅಲ್ಯೂಮಿನಿಯಂ, ಹಿತ್ತಾಳೆ ಮತ್ತು ತಾಮ್ರದ ಕೈಗಾರಿಕೆಗಳಲ್ಲಿ ಸಾಲುಯಂತ್ರಗಳನ್ನು ಅಧಿಕವಾಗಿ ಬಳಸುತ್ತಾರೆ.

ಬೇರೆ ಉತ್ಪಾದಕರು ಒತ್ತಿದ ಲೋಹಗಳನ್ನು ಕಾಯಿಸಿ ಬಡಿದ ಮತ್ತು ಎರಕಹೊಯ್ದ ಲೋಹಗಳೊಂದಿಗೆ ಹೋಲಿಸಿದರು. ಒತ್ತಿದ ಲೋಹದ ಶ್ರೇಷ್ಠತೆ ಎದ್ದು ನಿಂತಿತು. ಕ್ಷೇತ್ರದಲ್ಲೂ ಅದನ್ನು ಬಳಸಲು ಪ್ರಯತ್ನಿಸಿದರು. ಪರಿಣಾಮವಾಗಿ ಇಂದು ಪಾತ್ರಪರಟೆಗಳು, ಕುರ್ಚಿ ಮೇಜುಗಳು, ಮೊಳೆ, ತಾಪಾಳು, ಒಳತಿರುಪು, ರೈಲ್ವೆ ಬೋಗಿಗಳು, ಜೆಟ್ ಎಂಜಿನುಗಳು, ವಿಮಾನಗಳ ರಚನೆ ಮುಂತಾದವನೆಲ್ಲ ಒತ್ತಿದ ಲೋಹಗಳಿಂದ ತಯಾರಿಸಲಾಗುತ್ತದೆ. (ಎಚ್.ಎಲ್.ಕೆ.)

**ಒತ್ತೆ:** ಕರಾರು ನೆರವೇರಿಕೆ, ಸಾಲ ಸಲುವಳಿ ಮೊದಲಾದವಕ್ಕೆ ಹೊಣೆಯಾಗಿ, ಕರಾರು ತಪ್ಪಿದ್ದರೆ ದಂಡವಾಗಿ ತೆಗೆದುಕೊಳ್ಳಬಹುದೆಂದು ಒಪ್ಪಿ, ಒಬ್ಬ ಇನ್ನೊಬ್ಬನಲ್ಲಿ ವಸ್ತುವನ್ನಿಡುವ ವ್ಯವಹಾರ (ಪ್ಲೆಜ್). ಹೀಗೆ ಇಟ್ಟ ವಸ್ತುವನ್ನೂ ಈ ಹೆಸರಿನಿಂದ ಕರೆಯುವ ವಾಡಿಕೆಯುಂಟು. ಅಡವು, ಈಡು, ಗಿರವಿ, ನ್ಯಾಸ, ಓಲು ಇವೂ ಪರ್ಯಾಯ ಪದಗಳಾಗಿ ಬಳಕೆಯಲ್ಲಿವೆ. ಈಚೆಗೆ ಒತ್ತೆ ಮತ್ತು ಗಿರವಿ ಎಂಬ ಶಬ್ದಗಳನ್ನು ಇಂಗ್ಲಿಷಿನ ಮಾರ್ಗೇಜ್ ಶಬ್ದದ ಅರ್ಥದಲ್ಲೂ ಬಳಸಲಾಗುತ್ತಿದೆ. ಈ ಶಬ್ದಗಳ ಪರಿಮಿತಾರ್ಥಕ್ಕೆ ಬ್ರಿಟಿಷರ ಆಳ್ವಿಕೆಯ ಕಾಲದ ಇಂಗ್ಲಿಷ್ ನ್ಯಾಯದ ಪ್ರಭಾವ ಕಾರಣ.

ಪುರಾತನ ಕಾಲದಿಂದಲೂ ಭಾರತದಲ್ಲಿ ಒತ್ತೆ ಇಡುವ ಪದ್ಧತಿ ಇತ್ತು ಎಂಬುದಕ್ಕೆ ಭಾರತೀಯ ಪ್ರಾಚೀನ ಸಾಹಿತ್ಯ ಮತ್ತು ಕೌಟಿಲ್ಯನ ಅರ್ಥಶಾಸ್ತ್ರಗಳಲ್ಲಿ ನಿದರ್ಶನಗಳಿವೆ. ಆಗ ಚರ–ಸ್ಥಿರ ಆಸ್ತಿಗಳನ್ನೂ ದನಕರುಗಳನ್ನೂ ಅಲ್ಲದೆ ಮನುಷ್ಯರನ್ನು ಕೂಡ ಒತ್ತೆ ಇಡಲಾಗುತ್ತಿತ್ತು. ಮನುಷ್ಯರನ್ನು ಅಡವಿಟ್ಟಾಗ, ಹಾಗೆ ಅಡಿವಿನ ವಸ್ತುಗಳಾದ ಮನುಷ್ಯರನ್ನು, ಅದರಲ್ಲೂ ಸ್ತ್ರೀಯರನ್ನು ಮತ್ತು ಕನ್ಯೆಯರನ್ನು ಅಡವು ಇಟ್ಟುಕೊಂಡವನು ಹೇಗೆ ನಡೆಯಿಸಿಕೊಳ್ಳಬೇಕು ಎಂಬ ಬಗ್ಗೆ ನಿಯಮಗಳು ಇದ್ದುವು. ಇತರ ವಸ್ತುಗಳ ಒತ್ತೆಯ ಬಗ್ಗೆಯೂ ನಿಯಮಗಳು ಇದ್ದುವು. ಅಂಥ ನಿಯಮಗಳನ್ನು ಅತಿಕ್ರಮಿಸಿದರೆ ದಂಡನೆಗಳು ಇದ್ದುವು. ಅಡವಾಗಿದ್ದ ವ್ಯಕ್ತಿ ಓಡಿಹೋದರೆ, ಕರಾರಿನ ಪ್ರಕಾರ ನಡೆದುಕೊಳ್ಳದಿದ್ದರೆ, ಆ ಸಂಬಂಧದ ಹಣವನ್ನು ಕೂಡಲೇ ವಾಪಸು ಕೊಡಬೇಕಾಗುತ್ತಿತ್ತು. ಮನುಷ್ಯರನ್ನು ಒತ್ತೆ ಇಡುವ ಪರಿಪಾಟಿ ಕಾಲಕ್ರಮೇಣದಲ್ಲಿ ನಿಂತುಹೋಯಿತು.

ಸ್ಥಿರಾಸ್ತಿಯ ಪರಭಾರೆ ಅಥವಾ ಹಸ್ತಾಂತರ, ಕರಾರುಗಳು, ಹಣದ ಲೇವಾದೇವಿ, ಒತ್ತೆ ಇಟ್ಟುಕೊಂಡು ಕೊಡುವ ಸಾಲ–ಈ ಕುರಿತ ಕಾಯಿದೆಗಳು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಜಾರಿಗೆ ಬಂದುವು. ಇವುಗಳಲ್ಲಿ ಒತ್ತೆಯ ವಿವರಣೆಯಿದೆ.

ಒತ್ತೆಯನ್ನು ಕುರಿತ ನಿಯಮಗಳನ್ನು ಕರಾರುಗಳ ಬಗೆಗಿನ ಕಾಯಿದೆಯಲ್ಲಿ ಹೇಳಲಾಗಿದೆ. ಯಾವೊಬ್ಬ ವ್ಯಕ್ತಿಯ ಹತ್ತಿರ ಆತನಿಂದ ಪಡೆದ ಸಾಲದ ಹಣಕ್ಕೆ ಇಲ್ಲವೆ ಕೊಟ್ಟ ವಚನ ಪರಿಪಾಲನೆಯ ನಿಮಿತ್ತ ಈಡು ಅಥವಾ ಜಾಮೀನಿನಂತೆ ಚರಸ್ವತ್ತನ್ನು ವಹಿಸಿಕೊಡುವುದಕ್ಕೆ ಒತ್ತೆ ಎನ್ನಲಾಗುತ್ತದೆ. ಮಾರಾಟಕ್ಕೆ ವಸ್ತುವಾಗಬಲ್ಲ ಯಾವ ಚರಸ್ವತ್ತನ್ನೂ ಸಾಮಾನ್ಯವಾಗಿ ಒತ್ತೆ ಇಡಬಹುದು. ಹುಂಡಿ, ಷೇರು ಮುಂತಾದವನ್ನೂ ಒತ್ತೆ ಇಡಲು ಸಾಧ್ಯ. ನಗದು ಹಣ ಮಾತ್ರ ಒತ್ತೆಗೆ ಆಧಾರವಾಗಲಾರದು. ಈಡು ಇಟ್ಟ ವಸ್ತುವನ್ನು ಒತ್ತೆ ಇಟ್ಟುಕೊಳ್ಳುವವನ ಸ್ವಾಧೀನಕ್ಕೆ ವಹಿಸಿ ಕೊಡುವುದು ಒತ್ತೆಯ ಮುಖ್ಯ ಲಕ್ಷಣಗಳಲ್ಲಿ ಒಂದು. ಅದನ್ನು ವಾಸ್ತವವಾಗಿಯಲ್ಲದೆ ವಿಧಿಪೂರ್ವಕವಾಗಿಯೂ ಕೊಡಬೇಕು. ಆದರೆ ಕೇವಲ ಸ್ವಾಧೀನದಲ್ಲಿರುವ ಕಾರಣಕ್ಕಾಗಿ, ಯಾವೊಂದು ಸ್ವತ್ತನ್ನೂ ಒತ್ತೆಯ ಮಾಲು ಎಂದು ಹೇಳಲು ಬರುವುದಿಲ್ಲ. ಅನೇಕ ಕಾರಣಗಳಿಗಾಗಿ ಒಬ್ಬರ ಸ್ವತ್ತು ಇನ್ನೊಬ್ಬರ ಸ್ವಾಧೀನದಲ್ಲಿರಬಹುದು. ಸಾಲದ ಹಣವನ್ನು ಪಡೆಯುವಾಗ, ಇಲ್ಲವೆ ಕರಾರಿನ ಮೇರೆಗೆ ಪರಿಮಿತಕಾಲದಲ್ಲಿ ಒತ್ತೆಯ ಮಾಲಿನ ಸ್ವಾಧೀನವನ್ನು ಒತ್ತೆ ಇಟ್ಟುಕೊಳ್ಳುವವನಿಗೆ ವಹಿಸಿಕೊಡಬೇಕು. ಸ್ವತ್ತನ್ನೇ ವಹಿಸಿಕೊಡುವ ಆವಶ್ಯಕತೆ ಇಲ್ಲ. ಸ್ವತ್ತಿನ ಆಧಾರ ಪತ್ರಗಳನ್ನು, ಇಲ್ಲವೆ ರೈಲ್ವೆ ರಸೀದಿ ಮುಂತಾದವುಗಳನ್ನು ಸ್ವಾಧೀನಕ್ಕೊಪ್ಪಿಸುವುದರ ಮೂಲಕ ಸ್ವತ್ತನ್ನು ಒತ್ತೆ ಇಡಬಹುದು.

ಒತ್ತೆ ಇಟ್ಟ ಸ್ವತ್ತಿನ ಸಾಮಾನ್ಯ ಒಡೆತನ ಒತ್ತೆದಾರನಲ್ಲಿ (ಒತ್ತೆ ಇಟ್ಟವ) ಇದ್ದರೂ ಒತ್ತೆಧಾರಿಗೆ (ಒತ್ತೆ ಇಟ್ಟುಕೊಂಡವ) ವಿಶೇಷ ಒಡೆತನ ಬರುತ್ತದೆ.

ಕರಾರುಗಳ ಬಗೆಗಿನ ಕಾಯಿದೆ ಮತ್ತು ಸ್ಥಿರಾಸ್ತಿಯ ಹಸ್ತಾಂತರದ ಬಗೆಗಿನ ಕಾಯಿದೆ, ಇವೆರಡರಲ್ಲೂ ಚರಾಸ್ತಿಯ ಅಡವುಗಳಿಗೆ ಸಂಬಂಧಪಟ್ಟಂತೆ ಏನೂ ಹೇಳಿಲ್ಲವಾದ ಕಾರಣ, ಇಂಥ ಚರಾಸ್ತಿಯ ಅಡವುಗಳನ್ನು ಭಾರತದ ನ್ಯಾಯಾಲಯಗಳು ಕ್ರಮಬದ್ಧ ಅಡವುಗಳು ಎಂದು ಪರಿಗಣಿಸಿವೆ. ಇಂಥ ಅಡವು ಮತ್ತು ಒತ್ತೆ ಇವುಗಳಲ್ಲಿರುವ ಮುಖ್ಯ ವ್ಯತ್ಯಾಸಗಳು ಎರಡು. ಅಡವು ಇಟ್ಟಾಗ, ಒತ್ತೆಯ ಸಂದರ್ಭದಲ್ಲಿದ್ದ ಹಾಗೆ, ಅಡವಿನ ಸ್ವತ್ತನ್ನು ಅಡವು ಇಟ್ಟುಕೊಳ್ಳುವವನ ಸ್ವಾಧೀನಕ್ಕೆ ವಹಿಸಿಕೊಡಲೇ ಬೇಕಾಗಿಲ್ಲ. ಅಡವು ಇಟ್ಟ ವಸ್ತುಗಳ ಬಗೆಗಿನ ಹಲವು ಹಕ್ಕುಗಳು ಕೆಲವು ಷರತ್ತುಗಳಿಗಧೀನವಾಗಿ, ಅಡವಿಟ್ಟುಕೊಂಡವನಿಗೆ ಹಸ್ತಾಂತರವಾಗುತ್ತವೆ. ಒತ್ತೆ ಇಟ್ಟಾಗ, ಒತ್ತೆಯ ಮಾಲನ್ನು ಮಾರುವ ಅಧಿಕಾರದ ಹೊರತು ಬೇರೆ ಹಕ್ಕುಗಳ ಹಸ್ತಾಂತರವಾಗುವುದಿಲ್ಲ.

ಒತ್ತೆ ಇಡುವುದಕ್ಕೆ ಎಲ್ಲರೂ ಅರ್ಹರಿರುವುದಿಲ್ಲ. ಕರಾರುಗಳನ್ನು ಮಾಡಿಕೊಳ್ಳಲು ಶಕ್ತರಾಗಿರುವವರು, ಒತ್ತೆ ಇಡಲ್ಪಡುವ ವಸ್ತುವಿನ ಒಡೆತನವಿರುವವರು ಅಥವಾ ಹಾಗೆ ಒಡೆತನವಿರುವವರ ವ್ಯವಹಾರಗಳನ್ನು ನೋಡಿಕೊಳ್ಳುವ ಕಾರಭಾರಿಗಳು ಮತ್ತು ವರ್ತಕ ಮಂಡಳಿಯ ಪಾಲುಗಾರರು ಒತ್ತೆ ಇಡಬಹುದು. ಗಂಡಂದಿರ ಸ್ವತ್ತನ್ನು ಪತ್ನಿಯರೂ, ಅಧಿಕಾರವಿಲ್ಲದ ಪಕ್ಷದಲ್ಲಿ ಮಾಲೀಕನ ಸ್ವತ್ತನ್ನು ಸೇವಕರೂ, ಒತ್ತೆಯಿಡಲಾಗುವುದಿಲ್ಲ. ಹಲವು ಸಂದರ್ಭಗಳಲ್ಲಿ ವಾಣಿಜ್ಯ ಮುತಾಲಿಕರು (ಪ್ರತಿನಿಧಿಗಳು) ಒತ್ತೆ ಇಡಬಹುದು. ಕಮಿಷನ್ನಿನ ಮೇಲೆ ಮಾರಾಟಮಾಡುವವರಿಂದ ಸದುದ್ದೇಶದಿಂದ ಒತ್ತೆ ಇಟ್ಟುಕೊಂಡಿದ್ದರೆ ತಪ್ಪೇನಿಲ್ಲ. ದಳ್ಳಾಳಿಗಳು ಇಡುವ ಒತ್ತೆಗಳಿಗೂ ಈ ತತ್ತ್ವ ಅನ್ವಯವಾಗುತ್ತದೆ. ಒತ್ತೆ ಇಡುವವನ ಸ್ವಾಧೀನಕ್ಕೆ ಒತ್ತೆಯ ಮಾಲು ಹೇಗೆ ಬಂತು ಎಂಬುದರ ಸರಿಯಾದ ಮಾಹಿತಿ ಇಲ್ಲದಾಗ ಮತ್ತು ಸದುದ್ದೇಶ ಪೂರಿತನಾಗಿ ಒತ್ತೆ ಇಟ್ಟುಕೊಂಡಿದ್ದರೆ, ಅಂಥ ಒತ್ತೆಯ ಕರಾರಿಗೆ ಒತ್ತೆಯ ಮಾಲಿನ ಒಡೆಯನೂ ಬಾಧ್ಯನಾಗುತ್ತಾನೆ. ಯಾವೊಬ್ಬ ವ್ಯಕ್ತಿಗೆ ಒತ್ತೆಯ ಮಾಲಿನಲ್ಲಿ ಪರಿಮಿತಿ ಹಿತವಿದ್ದರೂ ಆತ ಅದನ್ನು ಒತ್ತೆ ಇಟ್ಟಾಗ, ಅಂಥ ವ್ಯಕ್ತಿಯ ಹಿತದ ಮಟ್ಟಿಗೆ ಒತ್ತೆ ಸಿಂಧುವಾಗಿರುತ್ತದೆ.

ಒತ್ತೆದಾರ ಸಾಲದ ಹಣವನ್ನು ಮತ್ತು ತತ್ಸಂಬಂಧದ ಬಡ್ಡಿಯನ್ನು ಕೊಡುವವರೆಗೆ ಅಥವಾ ಕೊಟ್ಟ ವಚನವನ್ನು ಪೂರೈಸುವವರೆಗೆ ಮತ್ತು ಒತ್ತೆಯ ಮಾಲನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ ಆ ಸಂಬಂಧವಾಗಿ ಅಥವಾ ಅಂಥ ಸ್ವತ್ತಿನ ರಕ್ಷಣೆಯ

ಸಂಬಂಧವಾಗಿ ತಗಲಿದ ಖರ್ಚುವೆಚ್ಚಗಳನ್ನು ಕೊಡುವವರೆಗೆ, ಒತ್ತೆಧಾರಿ ಒತ್ತೆಯ ಸ್ವತ್ತಿನ ಸ್ವಾಧೀನಕ್ಕೆ ಬಾಧ್ಯನಾಗಿರುತ್ತಾನೆ. ಸ್ವತ್ತಿನ ರಕ್ಷಣೆಯ ಸಮಬಂಧದಲ್ಲಿ ತಗಲಿದ ವಿಶೇಷ ವೆಚ್ಚಗಳನ್ನು ಕೂಡ ಒತ್ತೆದಾರ ಕೊಡಬೇಕು. ಒತ್ತೇದಾರ ವಚನ ಪರಿಪಾಲಿಸಿದರೆ ಇಲ್ಲವೆ ಸಾಲ ತೆಗೆದುಕೊಂಡಿದ್ದರೆ ಸಂದಾಯ ಮಾಡಬೇಕಾದುದನ್ನು ಸಲ್ಲಿಸಿದರೆ, ಒತ್ತೆ ಇಟ್ಟ ವಸ್ತುಗಳನ್ನು ವಾಪಸು ಪಡೆಯಲು ಬಾಧ್ಯನಾಗುತ್ತಾನೆ; ಒಂದು ವೇಳೆ ಬರಬೇಕಾದ ಒತ್ತೆಯ ಮಾಲು ವಾಪಸು ಬಾರದಿದ್ದರೆ, ಅವನು ಅದರ ವಾಪಸಾತಿಗಾಗಿ ದಾವೆ ಹಾಕಬಹುದು.

ಸಾಧಾರಣವಾಗಿ ಕರಾರುಗಳು ಇಲ್ಲದಿದ್ದಲ್ಲಿ ಒಂದು ಕಾರಣಕ್ಕೆ ಅಥವಾ ಮೊತ್ತಕ್ಕೆ ಒತ್ತೆ ಇಡಲಾದ ಸ್ವತ್ತನ್ನು ಬೇರೊಂದು ಕಾರಣಕ್ಕೆ ಅಥವಾ ಆಮೇಲೆ ತೆಗೆದುಕೊಂಡ ಸಾಲಕ್ಕೆ ಒತ್ತೆಯ ಮಾಲೆಂದು ಪರಿಗಣಿಸಲಾಗುವುದಿಲ್ಲ. ಆದರೆ ಅಂಥ ಸಂದರ್ಭಗಳಲ್ಲಿ ಆಮೇಲೆ ತೆಗೆದುಕೊಂಡ ಸಾಲಗಳಿಗೂ ಮೊದಲಿನ ಸಾಲದ ಒತ್ತೆಯ ಮಾಲಿಗೂ ಸಂಬಂಧವಿದೆ ಎಂದು ಊಹಿಸಬಹುದು.

ಒತ್ತೆ ಇಟ್ಟವನು ವಚನಭ್ರಷ್ಟನಾದರೆ, ಸಾಲದ ಹಣವನ್ನು ಸಲ್ಲಿಸದಿದ್ದರೆ, ಒತ್ತೆ ಇಟ್ಟುಕೊಂಡವನನ್ನು ಒತ್ತೆಯ ಕರಾರು ಪೂರೈಕೆಗಾಗಿ ದಾವೆ ಹಾಕಬಹುದು. ಇಲ್ಲವೆ ಅವನಿಗೆ ಅವಕಾಶಕೊಟ್ಟು ಆಮೇಲೆ ಒತ್ತೆಯ ಮಾಲನ್ನು ಮಾರಬಹುದು. ಕರಾರು ಏನೇ ಇದ್ದರೂ ಅವಕಾಶ ಮಾತ್ರ ಕೊಡಲೇಬೇಕು. ಒತ್ತೆ ಇಟ್ಟವನ ಒಪ್ಪಿಗೆಯ ಮೇರೆಗೆ ಮಾರಾಟ ಮಾಡುವುದಾದರೆ, ಅವಕಾಶ ಕೊಡುವ ಪ್ರಶ್ನೆ ಬರುವುದಿಲ್ಲ. ಕೊಡಬೇಕಾದ ಸಮಯಕ್ಕೆ ಸಾಲವನ್ನು ಹಿಂತಿರುಗಿಸಲಿಲ್ಲ ಅಥವಾ ಕೊಟ್ಟ ವಚನ ಪಾಲಿಸಲಿಲ್ಲ–ಎಂಬ ಕಾರಣದಿಂದ ಒತ್ತೆಯ ಮಾಲನ್ನು ಬಿಡಿಸಿಕೊಳ್ಳುವ ಹಕ್ಕನ್ನು ಒತ್ತೆದಾರ ಕಳೆದುಕೊಳ್ಳುವುದಿಲ್ಲ. ಗಡು ತೀರಿದ್ದರೂ ಒತ್ತೆದಾರನ ಕರ್ತವ್ಯದಲ್ಲಿ ಲೋಪ ಉಂಟಾಗಿದ್ದರೂ ಸ್ವತ್ತಿನ ಮಾರಾಟದ ಬಗ್ಗೆ ಸೂಚನೆ ಕಳಿಸಿದ್ದರೂ ಕಡೆಯ ಗಳಿಗೆಯಲ್ಲಿ, ಆದರೆ ಸ್ವತ್ತಿನ ಮಾರಾಟಕ್ಕೆ ಮುಂಚೆ, ಒತ್ತೆದಾರ ತಾನು ನ್ಯಾಯಬದ್ಧವಾಗಿ ಕೊಡಬೇಕಾದ ಎಲ್ಲ ಬಾಕಿಯನ್ನೂ ಕೊಟ್ಟು ಒತ್ತೆಯ ಮಾಲನ್ನು ಬಿಡಿಸಿಕೊಳ್ಳಬಹುದು.

ಮಾರಾಟ ಮಾಡಿದ ಮೇಲೆ ಬಂದ ಹಣ ತನಗೆ ಸಲ್ಲಬೇಕಾದ ಹಣಕ್ಕಿಂತ ಕಡಿಮೆ ಇದ್ದರೆ ಬರಬೇಕಾದ ಉಳಿದ ಹಣವನ್ನು ಪಡೆಯಲು ಕ್ರಮ ಜರುಗಿಸಬಹುದು. ಬಂದ ಹಣ ಹೆಚ್ಚಿದರೆ, ಒತ್ತೆದಾರನಿಗೆ ಮಿಕ್ಕ ಹಣವನ್ನು ಸಂದಾಯ ಮಾಡಬೇಕು. ಒತ್ತೆಧಾರಿ ಒತ್ತೆಯ ಮಾಲನ್ನು ನ್ಯಾಯಾಲಯದ ಮೂಲಕ ಮಾರಾಟ ಮಾಡಿಸಿದರೆ ಅದರಲ್ಲಿ ಆತನೂ ಖರೀದಿದಾರನಾಗಬಹುದು. ಒತ್ತೆ ಇಟ್ಟ ಸರಕನ್ನು ಬೇರೆ ಬಗೆಯಲ್ಲಿ ಮಾರಾಟ ಮಾಡಿದರೆ ಆಗ ಆತ ಖರೀದಿ ದಾರನಾಗುವಂತಿಲ್ಲ.

ಅಮೃತಸರದಲ್ಲಿ ಒಂದು ಪದ್ಧತಿ ರೂಢಿಯಲ್ಲಿದೆ: ಒಬ್ಬ ವ್ಯಕ್ತಿ ಇನ್ನೊಬ್ಬನ ಬಳಿ ತನ್ನ ಸರಕನ್ನು ಇಡಗೊಟ್ಟು ಅವನಿಂದ ಹಣವನ್ನು ಸಾಲವಾಗಿ ಪಡೆದರೆ ಈ ಸಾಲವನ್ನು ಅವನಲ್ಲಿ ಬಿಟ್ಟಿರುವ ಸರಕಿನ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆಯೆಂದು ಭಾವಿಸಲಾಗುತ್ತದೆ. ಸಾಲ ಕೊಟ್ಟವನಿಗೆ ಒತ್ತೆಧಾರಿಯ ಎಲ್ಲ ಹಕ್ಕುಗಳೂ ಬರುತ್ತವೆ.

ಒತ್ತೆಯ ಕರಾರು ಸಾಲಸಲುವಳಿ ಇಲ್ಲವೆ ವಚನಪಾಲನೆ ಆದೊಡನೆಯೇ ಕೊನೆಗೊಳ್ಳುತ್ತದೆ. ಸಾಲವನ್ನು ಬೇರಾವುದೇ ಬಗೆಯಲ್ಲಿ ವಾಸ್ತವವಾಗಿಯಾಗಲಿ ನ್ಯಾಯ ಪ್ರವರ್ತನೆಯಿಂದಾಗಲಿ ತೀರಿಸಿದಾಗಲೂ ಕೊನೆಗೊಳ್ಳುತ್ತದೆ. ಒತ್ತೆ ಇಟ್ಟ ಸ್ವತ್ತಿಗೆ ಬದಲಾಗಿ ಬೇರೆ ಸ್ವತ್ತನ್ನು ಒತ್ತೆ ಇಟ್ಟಾಗಲೂ ಮೊದಲಿನದಕ್ಕಿಂತ ಹೆಚ್ಚಿನ ಈಡು ಒದಗಿಸಿದಾಗಲೂ ಕೊನೆಗೊಳ್ಳುತ್ತದೆ.

ಒತ್ತೆ ಇಟ್ಟುಕೊಂಡವನು ಒತ್ತೆ ಇಟ್ಟ ಸ್ವತ್ತನ್ನು ಜೋಪಾನವಾಗಿ ಇಟ್ಟುಕೊಳ್ಳುವುದು ಅಗತ್ಯ. ಅವನು ಅದನ್ನು ಬಳಸುವಂತಿಲ್ಲ. ಹಾಗೇನಾದರೂ ಬಳಸಿದರೆ ಅದರಿಂದಾದ ನಷ್ಟವನ್ನವನು ಕಟ್ಟಿಕೊಡಲು ಬಾಧ್ಯನಾಗುತ್ತಾನೆ. ಒತ್ತೆ ಇಟ್ಟ ಸ್ವತ್ತುಗಳಿಸಿದ ಆದಾಯ, ಅದರಿಂದ ಬಂದ ಉತ್ಪನ್ನಗಳೇನಾದರೂ ಇದ್ದರೆ ಅವನ್ನು ಸಾಲ ತೀರಿದ ಮೇಲೆ ಒತ್ತೆ ಇಟ್ಟವನಿಗೆ ಕೊಡಬೇಕು. (ಎಲ್.ಎಸ್.ಜೆ.; ಡಿ.ಎನ್.ಎಸ್.ಎಂ.)

**ಒತ್ತೆಕೋಲ:** ಭೂತಾರಾಧನೆಯ ಭಾಗವಾಗಿ ಬರುವ ಒಂದು ವಿಶಿಷ್ಟ ಜನಪದ ಆಚರಣೆ; ವಿಷ್ಣು ದೈವಾರಾಧನೆ. ಕೇರಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಪ್ರದೇಶಗಳಲ್ಲಿ ಹರಕೆಯ ರೂಪದಲ್ಲಿ ವಿಷ್ಣುವಿನ ಒತ್ತೆ ಕೋಲವನ್ನು ನಡೆಸುವ ಪದ್ಧತಿ ರೂಢಿಯಲ್ಲಿದೆ. ಇದು ಕೇರಳ ಮೂಲದಿಂದ ಬಂದದ್ದು. ಇದರ ವೇಷ ಕಟ್ಟುವವರು ಕೂಡ ಮಲಯಾಳಿಗಳು. ಈ ಆಚರಣೆಯಲ್ಲಿ ಭೂತದ ಪಾತ್ರಿ ಉರಿಯುವ ಕೊಂಡ ಹಾಯುವನು.

ವಿಷ್ಣುವಿನ, ನರಸಿಂಹನ ಅವತಾರವನ್ನು ಸೂಚಿಸುವ, ತೆಂಗಿನ ಗರಿಗಳಿಂದ ತಯಾರಿಸಲ್ಪಟ್ಟ ಭೂತದ ವೇಷ ಭೂಷಣ ವಿಚಿತ್ರ ವಿನ್ಯಾಸಗಳಿಂದ ಕಂಗೊಳಿಸುತ್ತದೆ. ಒಂದು ಗಮನಾರ್ಹ ಸಂಗತಿ ಎಂದರೆ ಮಲವ ಜನಾಂಗದವರಿಗೆ ಇದು ಪರಂಪರಾಗತವಾಗಿ ಬಂದ ಕುಲಕಸುಬು. ಒತ್ತೆಕೋಲದ ಆಚರಣೆಯ ವಿಧಿ ವಿಧಾನಗಳು ಹೀಗಿವೆ: ಸಾಮಾನ್ಯವಾಗಿ ಮುಸ್ಸಂಜೆಯಿಂದ ಮುಂಜಾನೆಯವರೆಗೆ ಕೋಲ ನಡೆಯುತ್ತದೆ. ಕಾರ್ಯಕ್ರಮ ಮೂರು ಘಟ್ಟಗಳಲ್ಲಿ ನಡೆಯುತ್ತದೆ. ಮಲೇರಿಗೆ ಅಗ್ನಿ ಸ್ಪರ್ಶ ನೀಡುವುದು, ಕುಳಿಚ್ಚಾಟ್, ಕೆಂಡದ ರಾಶಿಗೆ ಭೂತ ಬೀಳುವುದು – ಇವೇ ಆ ಮೂರು ಘಟ್ಟಗಳು.

ಒತ್ತೆಕೋಲ ನಡೆಸುವ ದಿನ ನಿರ್ಧರಿತವಾದ ಮೇಲೆ ಹಲಸು ಅಥವಾ ಹಾಲು ಒಸರುವ ಮರದ ಬಳಿ ಹೋಗಿ ಪೂಜಿಸಿ ಒಂದು ಕೊಂಬೆಯನ್ನು ಕಡಿದುಕೊಂಡು ಬಂದು ಕೋಲ ನಡೆಸುವ ಸ್ಥಳದಲ್ಲಿ ಹಾಕುವರು. ಹೀಗೆ ಒಂದು ತಿಂಗಳ ಕಾಲ ಸೌದೆ ಶೇಖರಣೆಯಾಗಿ ಕೋಲದ ಆರಂಭದ ದಿನ ಈ ಸೌದೆಯನ್ನು ಚೌಕಾಕಾರವಾಗಿ ಅಳೆತ್ತರಕ್ಕೆ ಜೋಡಿಸುವರು. ಇದೇ ಮಲೇರಿ. ಇದರ ಎದುರಿಗೇ 16 ಮೀಗಳ ಅಂತರದಲ್ಲಿ ಪೂರ್ವಾಭಿಮುಖವಾಗಿ ತೆಂಗಿನ ಗರಿಗಳಿಂದ ಮಂಟಪ ರೂಪಿಸಿ ಅಲ್ಲಿ ತೆಂಗಿನಕಾಯಿ, ಹೊಂಬಾಳೆಯನ್ನು ಸೇರಿಸಿ ನೇತು ಹಾಕುವರು. ಬೆಳ್ಚಪಾಡರು ವಿಷ್ಣುಮೂರ್ತಿ ದೇವಾಲಯದಿಂದ ಭಂಡಾರವನ್ನು ತಂದು ಮಂಟಪದಲ್ಲಿಡುವರು. ಹದಿನಾರು ಬಾಳೆಎಲೆಗಳನ್ನು ಹಾಕಿ ಪ್ರತಿಯೊಂದರಲ್ಲಿ ಎರಡೆರಡು ಬಾಳೆಹಣ್ಣು, ತೆಂಗಿನಕಾಯಿ, ಅಡಕೆ ಹಾಗೂ ಹೊಂಬಾಳೆಗಳನ್ನು ನೈವೇದ್ಯಕ್ಕಿಟ್ಟು ಪೂಜೆ ಮಾಡುವರು. ಅನಂತರ ಮಲೇರಿಗೆ ಬೆಂಕಿ ಕೊಡುವರು.

ನರಸಿಂಹನ ಅವತಾರ

ಮಧ್ಯರಾತ್ರಿ ವೇಳೆ ಕುಳಿಚ್ಚಾಟ್ ಆರಂಭವಾಗುತ್ತದೆ. ಇಲ್ಲಿ ದೈವವನ್ನು ಕಟ್ಟುವವ ಮಲಯ ಜಾತಿಯ ಪಾತ್ರಿ. ಮಡಿಯುಟ್ಟು ಕೆಂಪು ವಸ್ತ್ರ ಅಂಗೈಯಲ್ಲಿ ಹಿಡಿದು ಮಲೇರಿಗೆ ಮೂರು ಬಾರಿ ಪ್ರದಕ್ಷಿಣೆ ಮಾಡುವನು. ಇವನ ವೇಷ ಭೂಷಣಗಳು ವಿಶೇಷತೆಯಿಂದ ಕೂಡಿರುತ್ತವೆ. ಬಳಿಕ ಈತ ಮಂಟಪದಲ್ಲಿ ನಿಲ್ಲುವನು. ಈತನ ಸಹಾಯಕರು ಚಂಡೆಯನ್ನು ಬಾರಿಸುವರು. ಒಡನೆ ಪಾತ್ರಿಗೆ ದೈವದ ಆವಾಹನೆಯಾಗುವುದು. ವಿಷ್ಣು ನರಸಿಂಹಾವತಾರ ತಾಳಿ ಹಿರಣ್ಯಕಶಿಪುವನ್ನು ವಧಿಸಿ ಪ್ರಹ್ಲಾದನನ್ನು ರಕ್ಷಿಸಿದ ಕಥೆಯನ್ನು ಇಬ್ಬರು ಮಲಯಾಳಂ ಭಾಷೆಯಲ್ಲಿ ಪಾಡ್ದನವನ್ನು ಹಾಡುವರು. ಆಗ ಪಾತ್ರಿ ಹಾಡಿಗೆ ತಕ್ಕಂತೆ ಭಾವಾಭಿನಯ ನೀಡುವನು. ಇದೇ ಕುಳಿಚ್ಚಾಟ್.

ಈ ಕಾರ್ಯಕ್ರಮ ಮುಂಜಾನೆವರೆಗೂ ನಡೆಯುತ್ತದೆ. ಅನಂತರ ಪಾತ್ರಿ ಕುಳಿಚ್ಚಾಟ್ ವೇಷ ಕಳಚಿ ಬೇರೆ ವೇಷ ಹಾಕುವನು. ವಿಷ್ಣುಮೂರ್ತಿಯ ಕೊಂಡ ಹಾಯುವ ಮೊದಲಹಂತ ಆರಂಭವಾಗುವುದು. ಪಾತ್ರಿಯು ಮೈ ತುಂಬ ಬಾಳೆ ನಾರನ್ನು ಸುತ್ತಿ, ಸೊಂಟದ ಸುತ್ತ ತೆಂಗಿನಗರಿ ಬಿಗಿದು ಕೊಂಡ ಹಾಯಲು ಸಿದ್ಧನಾಗುವನು. ಇವನಿಗೂ ಮೊದಲು ಬೆಳ್ಚಪ್ಪಾಡರು ಕೆಂಡದ ರಾಶಿ ಮೇಲೆ ಮೂರು ಬಾರಿ ಓಡಾಡುವರು. ಅನಂತರ

ವಿಷ್ಣುವೇಷದ ಪಾತ್ರಿ ಕೆಂಡದ ಮೇಲೆ ಪದೇ ಪದೇ ಬೀಳುವನು. ಈತ ಹೀಗೆ ಬೀಳುತ್ತಿದ್ದಂತೆ ಸಹಾಯಕರಿಬ್ಬರು ಸೊಂಟಕ್ಕೆ ಕಟ್ಟಿರುವ ತೆಂಗಿನ ಗರಿಗಳನ್ನು ಹಿಡಿದು ಎಳೆಯುವರು. ಈ ಕ್ರಿಯೆ ನಿರಂತರವಾಗಿ ಬೆಳಗಿನವರೆಗೂ ನಡೆಯುತ್ತದೆ. ಅನಂತರ ಒತ್ತೆಕೋಲಕ್ಕೆ ಹರಕೆಯಾಗಿ ತಂದ ಕೋಳಿಗಳನ್ನು ಬಲಿ ಕೊಡುವರು. ಈ ಸಂದರ್ಭದಲ್ಲಿ ಭಕ್ತಾದಿಗಳು ಪಾತ್ರಿಯೊಡನೆ ಭವಿಷ್ಯ ಅಥವಾ ಕಣಿ ಕೇಳುವುದೂ ಉಂಟು. ಅನಂತರ ವೇಷಧಾರಿ ಭೂತದ ಕಲ್ಲು ಇರುವಲ್ಲಿಗೆ ಹೋಗಿ ದೈವಕ್ಕೆ ಪ್ರಾರ್ಥನೆ ಸಲ್ಲಿಸುವಲ್ಲಿಗೆ ಕೋಲದ ಆಚರಣೆ ಮುಗಿಯುತ್ತದೆ. (ಎಂ.ಆರ್‌ಇ.)

**ಒತ್ತೆಯಾಳು:** ಎರಡು ವೈರಿರಾಷ್ಟ್ರಗಳು ಯುದ್ಧನಿರತರಾಗಿರುವಾಗ ಒಂದು ಒಪ್ಪಂದವನ್ನು ಕಾರ್ಯಗತಗೊಳಿಸಲೋಸ್ಕರ ಅಥವಾ ಒಂದರಿಂದ ಯುದ್ಧ ನಿಯಮದ ಅತಿಕ್ರಮವನ್ನು ತಡೆಹಿಡಿಯಲೋಸ್ಕರ ಒಂದು ರಾಷ್ಟ್ರ ಇನ್ನೊಂದಕ್ಕೆ ಒಪ್ಪಿಸಿದ ಅಥವಾ ಒಂದು ಇನ್ನೊಂದರಿಂದ ಸೆರೆಹಿಡಿದ ವ್ಯಕ್ತಿ (ಹಾಸ್ಟೇಜ್). ಈ ಪದ್ಧತಿ ಪುರಾತನ ರೋಮನ್ ಚಕ್ರಾಧಿಪತ್ಯ ಕಾಲದಿಂದ ನಡೆದುಬಂದಿದೆ. ಆಗ ಸಾಮಂತ ರಾಜ್ಯಗಳ ರಾಜಕುಮಾರರನ್ನು ಅವರಿಗೆ ವಿದ್ಯೆ ಕಲಿಸುವುದಕ್ಕೂ ಸಾಮಂತ ರಾಜರನ್ನು ವಿಧೇಯರನ್ನಾಗಿ ಇರಿಸಿಕೊಳ್ಳುವುದಕ್ಕೂ ರೋಮ್ ನಗರಕ್ಕೆ ಒಯ್ಯುತ್ತಿದ್ದರು. ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡಿದ್ದಾಗ ಈ ಪದ್ಧತಿ ಬಳಕೆಯಲ್ಲಿತ್ತು.

ಆಧುನಿಕ ಕಾಲದಲ್ಲಿ ಶತ್ರುಗಳ ಕೈಯಲ್ಲಿ ಸೆರೆಸಿಕ್ಕಿರುವ ಗಾಯಗೊಂಡವರನ್ನೂ ಅಸ್ವಸ್ಥರನ್ನೂ ಅವರು ಚೆನ್ನಾಗಿ ನಡೆಸಿಕೊಳ್ಳುವುದನ್ನು ಖಾತರಿ ಮಾಡಿಕೊಳ್ಳಲು ಒತ್ತೆಯಾಳುಗಳನ್ನು ಇರಿಸಿಕೊಳ್ಳುವುದು ವಾಡಿಕೆ. ಯುದ್ಧದ ಒತ್ತೆಯಾಳುಗಳ ಮೇಲೆ ಸೇಡು ತೀರಿಸಿಕೊಳ್ಳಬಾರದೆಂದು ಜಿನೀವ ಸಮ್ಮೇಳನ ಕಟ್ಟುಪಾಡು ಮಾಡಿದೆ(1949). ಒತ್ತೆಯಾಳುಗಳನ್ನು ಇಟ್ಟುಕೊಳ್ಳುವ ಪದ್ಧತಿ ಈಗ ಪ್ರಾಯಶಃ ಕಡಿಮೆಯಾಗುತ್ತಿದೆ. (ಎ.ಎನ್.ಎಸ್.ಎಂ.)

**ಒನಕೆವಾಡು:** ಸ್ತ್ರೀಯರು ಧಾನ್ಯವನ್ನು ಒರಳಿಗೆ ಹಾಕಿ ಒನಕೆಯಿಂದ ಕುಟ್ಟುವಾಗ ಹಾಡುತ್ತಿದ್ದ ಹಾಡಿಗೆ ಈ ಹೆಸರಿದೆ. ಇದು ಬಹಳ ಜನಪ್ರಿಯವೂ ಪ್ರಚುರವೂ ಆದ ಜನಪದಸಾಹಿತ್ಯದ ಒಂದು ಪ್ರಕಾರವಾಗಿದ್ದಂತೆ ತೋರುತ್ತದೆ. ಮನೆಮಾತಾದ ಯಾವುದೇ ವಿಷಯವನ್ನು ಕುರಿತು ಹೇಳುವಾಗ ಒನಕೆವಾಡಿನಂತೆ ಎಂದು ಹಿಂದೆ ಹೇಳುತ್ತಿದ್ದರೆಂದು ಊಹಿಸಬಹುದು. ಸಮಸ್ತಾವನಿಯ ಜನಂ ಒನಕೆವಾಡಪ್ಪಿನೆಗಂ ಸಲೆನುಡಿದ ನುಡಿ ಯಥಾರ್ಥಂ ನಿನ್ನೊಳ್–ಎಂಬ ದುರ್ಗಸಿಂಹನ (1031) ಪಂಚತಂತ್ರದ ಉಕ್ತಿ ಇದಕ್ಕೆ ಆಧಾರ. 8ನೆಯ ಶತಮಾನದ ಗಂಗದೊರೆ ಸೈಗೊಟ್ಟ ಶಿವಮಾರನ ಗಜಾಷ್ಟಕ ತನ್ನ ಸುಭಗಕವಿತಾಗುಣದಿಂದ ಓವನಿಗೆಯೂ ಒನಕೆವಾಡೂ ಆಯಿತೆಂದು 11ನೆಯ ಶತಮಾನದ ಶಾಸನವೊಂದರಲ್ಲಿ ಹೇಳಿದೆ. ಗಜಾಷ್ಟಕ ಸಿಕ್ಕಿಲ್ಲವಾದ್ದರಿಂದ ಅದರ ಸ್ವರೂಪ ತಿಳಿಯದು. ಆದರೆ ಒನಕೆವಾಡು ಸಾಮಾನ್ಯವಾಗಿ ತ್ರಿಪದಿಯ ರೂಪದಲ್ಲಿರುತ್ತಿತ್ತೆಂದು ಅನುಮಾನಿಸಲು ಅವಕಾಶವಿದೆ. ಏಕೆಂದರೆ ನೇಮಿಚಂದ್ರ (ಸು.1170) ಲೀಲಾವತಿ ಕಾವ್ಯದಲ್ಲಿ ವೇಶ್ಯಾಸ್ತ್ರೀಯರು ಸೂಳೆ ಸಿದ್ಧಾಂತವನ್ನು ಒನಕೆವಾಡಾಗಿ ಮಾಡಿ ಹಾಡುತ್ತಿದ್ದರೆಂದು ಹೇಳಿ, ಆ ಸಂದರ್ಭದಲ್ಲಿ ಕೆಲವು ತ್ರಿಪದಿಗಳನ್ನು ಕೊಟ್ಟಿದ್ದಾನೆ. ಅಲ್ಲದೆ, ಧಾನ್ಯವನ್ನು ಒರಳಲ್ಲಿ ಹಾಕಿ ಕುಟ್ಟುವಾಗಲೂ (ಕಂಡನ) ಶೃಂಗಾರ ವಿಪ್ರಲಂಭಗಳನ್ನು ವರ್ಣಿಸುವಾಗಲೂ ಹಾಡಬೇಕು ಎಂದು ಸೋಮೇಶ್ವರನ (1130) ಮಾನಸೋಲ್ಲಾಸದಲ್ಲಿ ಹೇಳಲಾಗಿದೆ. ಒನಕೆವಾಡಿಗೂ ತ್ರಿಪದಿಗೂ ಸಂಬಂಧವಿತ್ತೆಂಬುದಕ್ಕೆ ಸುರಂಗಕವಿ, ಸೋಮರಾಜ ಮುಂತಾದ ಕವಿಗಳಲ್ಲೂ ಸಮರ್ಥನೆ ಸಿಕ್ಕುತ್ತದೆ. ಸಿರಿಯಾಳನ ಕಥೆಯನ್ನು ಸ್ತ್ರೀಯರು ಒನಕೆವಾಡಿನ ರೂಪದಲ್ಲಿ ಹಾಡುತ್ತಿದ್ದರೆಂದು ಭೀಮಕವಿಯ ಹೇಳಿಕೆ.

ಒಟ್ಟಿನಲ್ಲಿ ಒನಕೆವಾಡೆಂಬುದು ತ್ರಿಪದಿಯ ಛಂದಸ್ಸಿನಲ್ಲಿದ್ದ ಹಾಡೆಂದೂ ಯಾವುದೇ ವಿಷಯ ಅಥವಾ ಕಥೆ ಒನಕೆವಾಡಾಗಿ ಪರಿಣಮಿಸುವುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿತ್ತೆಂದೂ ನಿರ್ಧರಿಸಬಹುದು. (ಸಿ.ಪಿ.ಕೆ.)

**ಒನಿಕೊಫೊರ:** ಸಂಧಿಪದಿಗಳ ವಂಶದ ಒಂದು ವರ್ಗ. ಇದರಲ್ಲಿ ಸು.7 ಜಾತಿಗಳಿದ್ದರೂ ಅವೆಲ್ಲವೂ ಒಂದನ್ನೊಂದು ಬಹಳಮಟ್ಟಿಗೆ ಹೋಲುವುದರಿಂದ ಎಲ್ಲವನ್ನೂ ಒಂದೇ ಜಾತಿಯೆಂದು ಭಾವಿಸುವುದು ಉಂಟು. ಅದೇ ಪೆರಿಪೇಟಸ್ ಜಾತಿ. ಇದರಲ್ಲಿ ಹಲವಾರು ಪ್ರಭೇದಗಳಿವೆ. ಈ ಜಾತಿಗೆ ಸಕ್ರಮ (ಸಿಸ್ಟಮ್ಯಾಟಿಕ್) ಪ್ರಾಣಿವಿಜ್ಞಾನದಲ್ಲಿ ಒಂದು ಮುಖ್ಯಸ್ಥಾನ ಇದೆ.

1826ರಲ್ಲಿ ಇವನ್ನು **ಗಿಲ್ಡಿಂಗ್** ಎಂಬಾತ ಮೊದಲಬಾರಿಗೆ ಸಂಗ್ರಹಿಸಿದ. ಇತರ ಸಂಧಿಪದಿಗಳಿಗಿಂತ ಹೆಚ್ಚಾಗಿ ಇವು ಶಂಖವಿಲ್ಲದ ಬಸವನ ಹುಳುವನ್ನು (ಸ್ಲಗ್) ಹೋಲುವುದರಿಂದ ಇವನ್ನು ಮೃದ್ವಂಗಿಗಳಿರಬಹುದೆಂದು ಊಹಿಸಿದ. ಇವುಗಳಲ್ಲಿ ಸಂಧಿಪದಿ ವಂಶದ ಗುಣಲಕ್ಷಣಗಳನ್ನು ಕಂಡುಹಿಡಿದ ಕೀರ್ತಿ **ಮೋಸ್ಲೆಗೆ** ಸಲ್ಲುತ್ತದೆ. ಸೀಮಿತ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತವೆ.

1 ನಿಯೊ ಪೆರಿಪೇಟಿಸ್–ವೆಸ್ಟ್ ಇಂಡೀಸ್ ಮತ್ತು ಅಮೆರಿಕ, ಮೆಕ್ಸಿಕೋದಿಂದ ಹಿಡಿದು ರಯೋ ಡಿ ಜನಿರೋ ದವರೆಗೆ ಹರಡಿರುವ 29 ಪ್ರಭೇದಗಳು. 2 ಕಾಂಗೊ ಪೆರಿಪೇಟಸ್–ಪಶ್ಚಿಮ ಆಫ್ರಿಕದ ಕಾಂಗೋದ ಒಂದು ಪ್ರಭೇದ. 3 ಇಯೋ ಪೆರಿಪೇಟಸ್–ಮಲಯದಲ್ಲಿರುವ ಪ್ರಭೇದಗಳು. 4 ಕೇಪೋಪೆರಿಪೇಟಸ್–ನೇಟಾಲಿನಿಂದ ಕೇಪ್‌ಟೌನಿನವರೆಗಿನ 7 ಪ್ರಭೇದಗಳು. 5 ಮೆಲಾನೋ ಪೆರಿಪೇಟಸ್–ಮೆಲನೇಷ್ಯದಲ್ಲಿನ ಒಂದು ಪ್ರಭೇದ. 6 ಆಸ್ಟ್ರೋ ಪೆರಿಪೇಟಸ್–ಆಸ್ಟ್ರೇಲಿಯ, ನ್ಯೂಜಿಲೆಂಡ್ ಮತ್ತು ಟಾಸ್ಮೇನಿಯಗಳಲ್ಲಿರುವಂಥದು. 7 ಚಿಲಿಯೋ ಪೆರಿಪೇಟಸ್–ಚಿಲಿಯಲ್ಲಿನ ಒಂದು ಪ್ರಭೇದ. 8 ಟಿಫ್ಲೋಪೆರಿಪೇಟಸ್–ಭಾರತದ ಹಿಮಾಲಯದ ತಪ್ಪಲಲ್ಲಿರುವ ಒಂದು ಪ್ರಭೇದ.



ಪೆರಿಪೇಟಸ್ ಕೆಪೆನ್ಸಿಸ್

ಇವು ಬಂಡೆ, ಎಲೆ ಅಥವಾ ತೊಗಟೆಗಳ ಕೆಳಗೆ ವಾಸಿಸುತ್ತವೆ. ಇವು ಬೆಳಕನ್ನು ಇಚ್ಚಿಸುವುದಿಲ್ಲವೆಂದು ತೋರುತ್ತದೆ. ಇವು ನಿಶಾಚರಿಗಳು. ಆದ್ದರಿಂದ ಇವು ಆಹಾರಕ್ಕೂ ರಾತ್ರಿಯಲ್ಲೇ ಹೊರಬರುತ್ತವೆ.

ಒನಿಕೊಫೊರ ಒಂದು ವಿಶಿಷ್ಟವರ್ಗ. ಕಾರಣ, ಇದು ವಲಯವಂತಗಳಿಗೂ ಸಂಧಿಪದಿಗಳಿಗೂ ನಡುವೆ ಬೆಸೆಯುವ ಕೊಂಡಿಯಂತಿದೆ. ಸರಳವಾದ ಒಂದು ಜೊತೆ ದವಡೆಗಳು, ಪಸರಿಸಿದ ಶ್ವಾಸದ್ವಾರಗಳು, ಜನನೇಂದ್ರಿಯಗಳ ಸ್ಥಾನ, ಮೃದುವಾದ ಚರ್ಮದ ರಚನೆ ಮತ್ತು ಖಂಡಗಳ ಸಾಮರಸ್ಯ–ಇವು ಒನಿಕೊಫೊರ ವರ್ಗದ ಹಲವು ವಿಶಿಷ್ಟ ಲಕ್ಷಣಗಳು. ಮೇಲ್ಭಾಗದಲ್ಲಿರುವ ಕೊಳವೆಯಂಥ, ಪೆರಿಕಾರ್ಡಿಯಮಿನೊಂದಿಗೆ ಸಂಪರ್ಕವುಳ್ಳ ಹೃದಯವೂ ಜೀರ್ಣಾಂಗಗಳ ಸುತ್ತಲಿರುವ ಹಿಮೋಸೀಲಿಕ್ ದೇಹಾವಕಾಶವೂ ಶ್ವಾಸಾಂಗಗಳಾಗಿ ವರ್ತಿಸುವ ಟ್ರೇಕಿಯಲ್ ನಾಳಗಳೂ ಉಪಾಂಗಗಳಾಗಿ ಮಾರ್ಪಟ್ಟಿರುವ ದವಡೆಗಳೂ ಸಂಧಿಪದಿಗಳ ಗುಣಲಕ್ಷಣಗಳನ್ನು ಪ್ರತಿನಿಧಿಸುತ್ತವೆ. ಸ್ನಾಯುಭರಿತ ಮೈಚರ್ಮ, ಟೊಳ್ಳಾದ ಕಾಲುಗಳು, ಎರಡನೆಯ ಖಂಡದ ಹಿಂದೆ ಇರುವ ಜೊತೆ ಮೂತ್ರಜನಕಾಂಗಗಳು ಮತ್ತು ಜನನೇಂದ್ರಿಯದಲ್ಲಿ ಕಾಣುವ ಶಿಲಕೆಗಳು ಇವು ಒನಿಕೊಫೊರದ ವಲಯವಂತಗಳ ಗುಣವಿಶೇಷಗಳನ್ನು ಸೂಚಿಸುತ್ತವೆ.




**A** ಪೆರಿಪೇಟಿಸ್ ಪ್ರಾಣಿಯ ಹಿಂತುದಿ : 1. ಜನನೇಂದ್ರಿಯ, 2. ಮಲದ್ವಾರ; **B** ಇದೇ ಪ್ರಾಣಿಯ ಮುಂತುದಿ : 1. ಬಾಯಿ, 2. ಸ್ಪರ್ಶಾಂಗ, 3. ಓರಲ್ ಪ್ಯಾಪಿಲೆ, 4. ಕಾಲು

ಪೆರಿಪೇಟಸ್ ಸುಂದರವಾದ ಬಣ್ಣಗಳುಳ್ಳ ಪ್ರಾಣಿ. ನೋಡುವುದಕ್ಕೆ ಕಂಬಳಿ ಹುಳುವಿನಂತೆ ಕಾಣುತ್ತದೆ. ಆದರೆ ಇದಕ್ಕೆ ಅನೇಕ ಪಾದ ಹಾಗೂ ಉಪಾಂಗಗಳಿವೆ. ಚರ್ಮದಲ್ಲಿ ಅನೇಕ ಮಡಿಕೆಗಳಿರುವುದರಿಂದ ಇದರ ಖಂಡಗಳು ಎಣಿಕೆಗೆ ಸಿಗುವುದಿಲ್ಲ. ಚರ್ಮ ಮೃದುವಾಗಿ ಮೇಲ್ಭಾಗದಲ್ಲಿ ಸುಂದರವಾದ ಬಣ್ಣಗಳಿವೆ. ಪ್ರಾಣಿಯ ಉದ್ದಕ್ಕೂ ಬೆನ್ನಿನ ಮಧ್ಯದಲ್ಲಿ ಒಂದು ಹೊಳಪಾದ ರೇಖೆ ಇದೆ. ತಲೆಯೇ ದೇಹದ ಮೊದಲನೆಯ ಖಂಡ. ಇದು ದೇಹದ ಉಳಿದ ಖಂಡಗಳಂತೆಯೇ ಮೇಲ್ನೋಟಕ್ಕೆ ಕಂಡರೂ ಮೂರು ಜೊತೆ ಉಪಾಂಗಗಳಿರುವುದರಿಂದ ಇದನ್ನು ಇತರ ಖಂಡಗಳಿಂದ ಸುಲಭವಾಗಿ ಗುರುತಿಸಬಹುದು. ಇದರಲ್ಲಿ ಒಂದು ಜೊತೆ ಸ್ಪರ್ಶಾಂಗಗಳೂ ಸ್ಲೈಂ ಗ್ರಂಥಿಗಳೊಡನೆ ಸಂಪರ್ಕವಿರುವ ಒಂದು ಜೊತೆ ಓರಲ್ ಪ್ಯಾಪಿಲೆಗಳೂ ಎರಡು ದವಡೆಗಳಿರುವ ಅಧೋಮುಖವಾಗಿ ತಿರುಗಿರುವ ಬಾಯೂ ಇವೆ. ಪಕ್ಕಗಳಲ್ಲಿ ಹೊಳೆಯುವ ಹರಳಿನಂಥ ಎರಡು ಕಣ್ಣುಗಳಿವೆ. ದವಡೆಗಳು ಬೇಟೆಯನ್ನು ಅರಿಯುವುದರಲ್ಲಿ ಸಹಾಯ ಮಾಡುತ್ತವೆ.

ಗ್ರಹಣಾ ಶಕ್ತಿಯುಳ್ಳ ಸಣ್ಣ ಕೋಡುಗಳಂಥ ಸ್ಪರ್ಶಾಂಗಗಳು ಬೇಟೆಯನ್ನು ಗುರುತಿಸುವ ಅಂಗಗಳು. ಅಲ್ಲದೆ ಈ ಜೀವಿಯ ಚಲನೆಯನ್ನು ಅವು ನಿಯಂತ್ರಿಸುವಂತೆ ತೋರುತ್ತದೆ. ಈ ಅಂಗಗಳು ವಸ್ತುವನ್ನು ಸ್ಪರ್ಶಿಸದೆಯೇ ಅದನ್ನು ಗುರುತಿಸಬಲ್ಲಷ್ಟು ಚುರುಕಾಗಿರುತ್ತವೆ. ಪೆರಿಪೇಟಸ್ಸನ್ನು ಸ್ವಲ್ಪ ಕೆಣಕಿದರೆ ಸಾಕು, ತನ್ನ ಓರಲ್ ಪ್ಯಾಪಿಲೆಗಳ ಮುಖಾಂತರ ಸ್ಲೈಂ ಗ್ರಂಥಿಗಳಲ್ಲಿ ತಯಾರಾದ ಒಂದು ಬಗೆಯ ಅಂಟುದ್ರವವನ್ನು ಸ್ರವಿಸುತ್ತದೆ. ದೇಹದುದ್ದಕ್ಕೂ ಹಲವಾರು ಜೊತೆ ಕಾಲುಗಳಿವೆ. ಕಾಲುಗಳ ಸಂಖ್ಯೆಯಲ್ಲಿ ಒಂದು ಪ್ರಭೇದದಿಂದ ಇನ್ನೊಂದು ಪ್ರಭೇದಕ್ಕೆ ವ್ಯತ್ಯಾಸವಿದೆ. *ಪೆರಿಪೇಟಸ್ ಕೆಪೆನ್ಸಿಸಿನಲ್ಲಿ* 17 ಜೊತೆ ಕಾಲುಗಳೂ ಇವೆ. ಇನ್ನು ಕೆಲವು ಪ್ರಭೇದಗಳಲ್ಲಿ 29–43 ಜೊತೆಗಳವರೆಗೂ ಇರುವುದುಂಟು. ಕಾಲುಗಳು ದೇಹಕ್ಕೆ ಅಂಟಿರುವ ಭಾಗದಲ್ಲಿ, ಪ್ರತಿಯೊಂದು ಖಂಡದಲ್ಲೂ ಒಂದೊಂದು ಜೊತೆ ವಿಸರ್ಜನಾಂಗಗಳಾದ ನೆಫ್ರೀಡಿಯಾಗಳೂ ಇವೆ. ಕೆಲವು ಪ್ರಭೇದಗಳಲ್ಲಿ ಗಂಡುಗಳಲ್ಲಿ ಕ್ರೂರಲ್ ಗ್ರಂಥಿಗಳೆಂಬ ವಿಶಿಷ್ಟ ಬಗೆಯ ಗ್ರಂಥಿಗಳಿವೆ. ಇವು ಮಾರ್ಪಾಟಾದ ವಿಸರ್ಜನಾಂಗಗಳು. ದೇಹದ ಕೊನೆಯಲ್ಲಿ ಮಲದ್ವಾರವೂ ಕೊನೆಯ ಜೊತೆ ಕಾಲುಗಳ ಮಧ್ಯೆ ಜನನೇಂದ್ರಿಯವೂ ಇವೆ.

ಪೆರಿಪೇಟಸ್ ಮಾಂಸಾಹಾರಿ. ಕೀಟಗಳು, ಗೆದ್ದಲು ಹುಳುಗಳು ಇದರ ಆಹಾರ. ಇದರ ಬೇಟೆಯ ಕ್ರಮ ವಿಚಿತ್ರವಾಗಿದೆ. ಬಾಯಿಯಿಂದ ಅಂಟುದ್ರವ ಹೊರಬರುತ್ತದಷ್ಟೆ ಹೀಗೆ ಹೊರಬಂದ ದ್ರವ ಕ್ಷಣಮಾತ್ರದಲ್ಲಿ ದಾರದ ಎಳೆಯಂತಾಗುತ್ತದೆ. ಇಂಥ ಎಳೆಗಳ ಜಾಲವೊಂದು ಏರ್ಪಟ್ಟು ಬೇಟೆ ಈ ಜಾಲದಲ್ಲಿ ಸೆರೆಯಾಗುತ್ತದೆ.

ದೇಹದುದ್ದಕ್ಕೂ ಹೀಮೋಸೀಲ್ ಎಂಬ ದೇಹಾವಕಾಶವಿದೆ. ಅದು ಸ್ನಾಯುಗಳಿಂದ ಮಧ್ಯದಲ್ಲಿ ಒಂದು ಅಕ್ಕಪಕ್ಕದಲ್ಲಿ ಎರಡು ಹೀಗೆ 3 ಕೋಣೆಗಳಾಗಿ ವಿಭಾಗವಾಗಿದೆ. ಮಧ್ಯದ ಕೋಣೆಯಲ್ಲಿ ಜೀರ್ಣಾಂಗವೂ ಜನನಾಂಗಗಳೂ ಸ್ಲೈಂ ಗ್ರಂಥಿಗಳೂ ಇವೆ. ಪಾರ್ಶ್ವದಲ್ಲಿನ ಕೋಣೆಗಳಲ್ಲಿ ನರವ್ಯೂಹವೂ ನೆಫ್ರೀಡಿಯಾಗಳೂ ಇವೆ.

ಜೀರ್ಣಾಂಗವು ಬಾಯಿಯಿಂದ ಮಲದ್ವಾರದವರೆಗೂ ಒಂದು ಸರಳ ಕೊಳವೆಯಂತಿದ್ದರೂ ಬಾಯಂಗಳ, ಫ್ಯಾರಿಂಕ್ಸ್, ಜಠರ ಮತ್ತು ಕರುಳುಗಳೆಂದು ವಿಭಾಗಿಸಬಹುದಾಗಿದೆ. ಬಾಯಂಗಳದಲ್ಲಿ ಒಂದು ಜೊತೆ ಲಾಲಾ ಗ್ರಂಥಿಗಳಿವೆ.

ರಕ್ತಚಲನಾಂಗದ ರಚನೆ ಸಂಧಿಪದಿಗಳಲ್ಲಿರುವಂತೆಯೇ ಇದೆ. ಕೊಳವೆಯಂತಿರುವ ಹೃದಯವನ್ನು ಪೆರಿಕಾರ್ಡಿಯಮ್ ಆವರಿಸಿಕೊಂಡಿದೆ. ಖಚಿತವಾದ ರಕ್ತನಾಳಗಳಿಲ್ಲ. ಒಂದೊಂದು ಖಂಡದಲ್ಲೂ ಎರಡೆರಡು ರಂಧ್ರಗಳಿರುವ ಹೃದಯವೇ ರಕ್ತಪರಿಚಲನೆಯ ಏಕೈಕ ನಿರ್ದಿಷ್ಟ ಅವಕಾಶವಾಗಿದೆ.

ಇತರ ಸಂಧಿಪದಿಗಳಲ್ಲಿರುವಂತೆ ಪೆರಿಪೇಟಸ್ಸಿನಲ್ಲೂ ಶ್ವಾಸನಾಳಗಳು ಉಸಿರಾಡುವ ಅಂಗಗಳಾಗಿದ್ದರೂ ಅವುಗಳ ರಚನೆಯಲ್ಲಿ ಕೆಲವು ವೈಚಿತ್ರ್ಯಗಳು ಕಂಡುಬರುತ್ತವೆ. ಚರ್ಮದ ಮೇಲೆ ಇರುವ ಕೆಲವು ಕುಳಿಗಳಿಂದ ಗುಂಪಾಗಿ ಶ್ವಾಸನಾಳಗಳು ಹೊರಟು ಒಳಕ್ಕೆ ಸಾಗಿ ವಿವಿಧ ಅಂಗಗಳಿಗೆ ಸಂಬಂಧವನ್ನು ಕಲ್ಪಿಸುತ್ತವೆ. ಕುಳಿಗಳ ಮಧ್ಯೆ ಒಂದೊಂದು ಶ್ವಾಸದ್ವಾರವಿದ್ದು ಅದರ ಮುಖಾಂತರ ಉಸಿರಾಟ ಸಾಗುತ್ತದೆ.

ಪೆರಿಪೇಟಸ್ಸಿನ ಮಿದುಳು ಬಲು ಸರಳವಾಗಿದೆ. ಕೇವಲ ಅನ್ನನಾಳದ ಮೇಲಿನ ಎರಡು ನರಗ್ರಂಥಿಗಳೇ ಈ ಮಿದುಳು. ಇದರಿಂದ ಒಂದು ಜೊತೆ ಉದರ ಭಾಗದ ನರಹುರಿಗಳು ಹೊರಡುತ್ತವೆ. ಇವು ದೇಹದುದ್ದಕ್ಕೂ ಹರಡಿದ್ದು ಹೀಮೋಸೀಲಿಕ್ ದೇಹಾವಕಾಶದ ಪಾರ್ಶ್ವ ಕೋಣೆಗಳಲ್ಲಿ ಇರುತ್ತವೆ. ಮಿದುಳಿನಿಂದ ಚರ್ಮಕ್ಕೂ ಕಣ್ಣುಗಳಿಗೂ ಮತ್ತು ನರಹುರಿಗಳಿಂದ ದೇಹದ ಇತರ ಭಾಗಗಳಿಗೂ ನರಗಳು ಹೊರಡುತ್ತವೆ.

ಪೆರಿಪೇಟಸ್ಸಿನಲ್ಲಿ ಲಿಂಗಭೇದವಿದೆ. ಗಂಡಿನಲ್ಲಿ ಒಂದು ಜೊತೆ ಕೊಳವೆಯಂತಿರುವ ವೃಷಣಗಳಿವೆ. ಅವುಗಳಿಂದ ಹೊರಡುವ ಎರಡು ನಾಳಗಳು ಕೊಂಚ ದೂರ ದೇಹಾವಕಾಶದಲ್ಲೇ ಸಾಗಿ ಒಂದುಗೂಡಿ ಕೊನೆಯ ಜೊತೆ ಕಾಲುಗಳ ಮಧ್ಯೆ ಇರುವ ಜನನೇಂದ್ರಿಯದ ಮೂಲಕ ಹೊರಕ್ಕೆ ತೆರೆಯುತ್ತವೆ. ಹೆಣ್ಣುಹುಳುವಿನಲ್ಲಿ ಒಂದು ಜೊತೆ ಅಂಡಾಶಯಗಳಿವೆ. ಅವೂ ಕೂಡ ಕೊಳವೆಯಂತಿದ್ದು ಎರಡು ಗರ್ಭಾಶಯಗಳನ್ನು ಹೊಂದಿವೆ. ಗರ್ಭಾಶಯಗಳೆರಡೂ ಒಂದುಗೂಡಿ ಒಂದೇ ಕೊಳವೆಯಾಗಿ ಕೊನೆಯ ಜೊತೆ ಕಾಲುಗಳ ಮಧ್ಯದಲ್ಲಿನ ಜನನೇಂದ್ರಿಯದ ಮುಖಾಂತರ ಹೊರದೆರೆಯುತ್ತವೆ. ಗರ್ಭಾಂಕುರತೆ ದೇಹದ ಒಳಗೇ ನಡೆಯುವುದೆಂದು ತಿಳಿದಿದ್ದರೂ ವೀರ್ಯಾಣುಗಳು ಅಂಡಾಶಯವನ್ನು ಹೇಗೆ ತಲಪುತ್ತವೆ ಎಂಬುದೇ ತಿಳಿದುಬಂದಿಲ್ಲ. ಆಸ್ಟ್ರೇಲಿಯದಲ್ಲಿನ ಕೆಲವು ಪ್ರಭೇದಗಳು ಮೊಟ್ಟೆಗಳ ಮೂಲಕ ಮರಿ ಮಾಡಿದರೂ ಎಲ್ಲವೂ ನೇರವಾಗಿ ಮರಿಗಳಿಗೇ ಜನ್ಮವೀಯುತ್ತವೆ.

ಹೀಗೆ ಸಂಧಿಪದಿಗಳ ಮತ್ತು ವಲಯವಂತಗಳ ಹಲವಾರು ಗುಣಗಳನ್ನು ಹೊಂದಿರುವ ಪೆರಿಪೇಟಸ್ ತನ್ನ ದೇಹದ ಹೊರರಚನೆ ಹಾಗೂ ಒಳರಚನೆಗಳಲ್ಲಿ ಅನೇಕ ವೈಶಿಷ್ಟ್ಯಗಳನ್ನು ತೋರಿಸುತ್ತದೆ.

ವೆಲ್ವೆಟ್ಟಿನಂತೆ ಮೃದುವಾದ ಚರ್ಮ, ರಂಗುರಂಗಿನ ಮೇಲ್ಮೈ, ಎರಡು ರತ್ನಗಳನ್ನು ತಲೆಯ ಎರಡು ಕಡೆಯಲ್ಲೂ ನಿಸರ್ಗವೇ ಹುದುಗಿಸಿಟ್ಟಂತೆ ಕಾಣುವ ಕಣ್ಣುಗಳು–ಇವು ಈ ಪ್ರಾಣಿಯನ್ನು ಸಾಟಿಯಿಲ್ಲದ ಸೌಂದರ್ಯದ ಖನಿಯಂತೆ ಮಾಡಿವೆ ಎಂದು ಪ್ರೊ. ಸೆಜ್ವಿಕ್ ಇದನ್ನು ಮುಕ್ತಕಂಠದಿಂದ ಹೊಗಳಿದ್ದಾನೆ. (ಎಂ.ಎಸ್.ಎಚ್.)

**ಒ'ನೀಲ್:** ಐರ್ಲೆಂಡಿನ ಪ್ರಥಮ ದೊರೆಯಾಗಿದ್ದ ನಿಯಲನ ವಂಶನಾಮ. ಪ್ರ.ಶ. 405ರಲ್ಲಿ ಮರಣ ಹೊಂದಿದ ನಿಯಲನ ಕಾಲದಿಂದ ಹಿಡಿದು ಪ್ರ.ಶ. 1003ರ ವರೆಗೆ ಈ ವಂಶದವರು ಹೆಚ್ಚುಕಡಿಮೆ ಅವ್ಯಾಹತವಾಗಿ ಐರ್ಲೆಂಡಿನ್ನಾಳಿದರು. ಉಯಿ ನೀಲ್ ಎಂದು ಕರೆಯಲ್ಪಡುತ್ತಿದ್ದ ಇವರ ವಂಶ ಎರಡು ಕವಲುಗಳಾಗಿ, ಒಂದು ಕವಲು ಉತ್ತರ ಐರ್ಲೆಂಡಿನಲ್ಲೂ ಇನ್ನೊಂದು ದಕ್ಷಿಣ ಐರ್ಲೆಂಡಿನಲ್ಲೂ ಆಡಳಿತ ನಡೆಸಿದುವು. ಈ ವಂಶಕ್ಕೆ ಒ'ನೀಲ್ ಎಂಬ ಹೆಸರು ಬಂದದ್ದು ಪ್ರ.ಶ. 919ರಲ್ಲಿ ಕಾಲವಾದ ನಿಯಲ್ ಗ್ಲುಂಡಬನಿಂದ. ಈತನ ಮೊಮ್ಮಗ ಡಾನೆಲ್ ಒ'ನೀಲ್.

ಪ್ರಾಚೀನ ಒ'ನೀಲರ ಸಾಹಸಗಳು ಬುಕ್ ಆಫ್ ಲಿನ್ಸ್ಟರ್, ಆನಲ್ಸ್ ಆಫ್ ದಿ ಫೋರ್ ಮಾಸ್ಟರ್ಸ್ ಮುಂತಾದ ಕೃತಿಗಳಲ್ಲಿ ವಿಶದವಾಗಿ ಬಂದಿವೆ. 16ನೆಯ ಶತಮಾನಕ್ಕೆ ಹಿಂದೆ ಒ'ನೀಲರ ಅಲ್ಸ್ಟರ್ ರಾಜ್ಯದ ಮೇಲೆ ನಾರ್ಮನ್ನರ ಮತ್ತು ಇಂಗ್ಲಿಷರ ಪ್ರಭಾವ ಅಷ್ಟೇನೂ ಇರಲಿಲ್ಲ. ನಾಮಮಾತ್ರಕ್ಕೆ ಈ ದೊರೆಗಳು ಇಂಗ್ಲೆಂಡಿನ ದೊರೆಗಳಿಗೆ ಅಧೀನರೆಂದುಕೊಳ್ಳುತ್ತಿದ್ದರು. ಅಲ್ಸ್ಟರಿನ ಬಹುಭಾಗದ ಮೇಲೆ ಒಡೆತನ ಹೊಂದಿದ್ದ ಇವರು ಇತರ ಭಾಗಗಳ ಒಡೆಯರೊಂದಿಗೆ ಆಗಾಗ್ಗೆ ಕದನ ಮಾಡುತ್ತಿದ್ದರು. 16ನೆಯ ಶತಮಾನದಲ್ಲಿ ಕಾನ್ ಒ'ನೀಲ್ (1484–1559) ಇಂಗ್ಲಿಷರ ವಿರುದ್ಧವಾಗಿ ತಲೆಯೆತ್ತಲೆತ್ನಿಸಿ ವಿಫಲನಾಗಿ ಎಂಟನೆಯ ಹೆನ್ರಿಯ ಒಡೆತನವನ್ನೊಪ್ಪಿಕೊಂಡು ಟೈರೋನಿನ ಅರ್ಲ್ ಎನಿಸಿಕೊಂಡ. ಆತನ ಮಗ ಷೇನ್ ಮತ್ತು ಇತರರು ಈ ಅವಮಾನದ ವಿರುದ್ಧ ಸಿಡಿದೆದ್ದರು. ಕಾನನ ಅನೈತಿಕ ಪುತ್ರ ಮಾಥ್ಯೂನನ್ನು ಆತನ ಉತ್ತರಾಧಿಕಾರಿಯಾಗಿ ಇಂಗ್ಲೆಂಡ್ ದೊರೆ ನೇಮಿಸಿದ. ಇದು ಐರ್ಲೆಂಡಿನ ಕಟ್ಟಳೆಗೆ ವಿರುದ್ಧವಾದದ್ದೆಂಬ ಅಸಮಾಧಾನ ಹುಟ್ಟಿತು. ಷೇನನ ಕಡೆಯವರು ಮ್ಯಾಥ್ಯೂನನ್ನು ಕೊಂದರು. ಜಗಳಗಳೂ ಸಂಧಾನಗಳೂ ನಡೆದ ಅನಂತರ ಕೊನೆಗೆ ಇಂಗ್ಲೆಂಡಿನ ಒಂದನೆಯ ಎಲಿಜಬೆತ್ ರಾಣಿ ಷೇನ್ ಒ'ನೀಲನನ್ನು ಐರ್ಲೆಂಡಿನ ಮುಖ್ಯಸ್ಥನೆಂದು ಒಪ್ಪಿಕೊಂಡಳು.

ಈ ಕಾಲದಲ್ಲಿ ಐರ್ಲೆಂಡಿನಲ್ಲಿ ಒ'ನೀಲ್ ಮನೆತನದ ಮೂರು ಮಂದಿ ಪ್ರಮುಖರಿದ್ದರು. ಅವರು ಷೇನ್, ಟರ್ಲೊ ಮತ್ತು ಹ್ಯೂ. ಷೇನ್ ಲಂಡನಿನಲ್ಲಿದ್ದಾಗ ಅವನನ್ನು ಎತ್ತಿಹಾಕಿ ತಾನು ಐರಿಷ್ ಪಂಗಡದ ಮುಖ್ಯನಾಗಬೇಕೆಂದು ಟರ್ಲೊ ಸಂಚುಹೂಡಿದ. ಷೇನ್ ಐರ್ಲೆಂಡಿಗೆ ವಾಪಸು ಬಂದು ತನ್ನ ಅಧಿಕಾರವನ್ನು ಪುನಃ ಸ್ಥಾಪಿಸಿ, ತನ್ನ ವಿರುದ್ಧ ಸಂಚುಹೂಡಿದ್ದವರ ಮೇಲೆ ಸೇಡು ತೀರಿಸಿಕೊಳ್ಳುವ ಕಾರ್ಯದಲ್ಲಿ ಉದ್ಯುಕ್ತನಾದ. ಇಂಗ್ಲೆಂಡಿನ ರಾಣಿ ಕೊನೆಗೂ ಷೇನನ ಬೇಡಿಕೆಗಳನ್ನೆಲ್ಲ ಒಪ್ಪಿದಳು.

ಆದರೆ ಚಕ್ರ ಬದಲಾಯಿತು. ಷೇನನ ವಿರುದ್ಧಶಕ್ತಿಗಳು ಪ್ರಬಲವಾದುವು. ಕೊನೆಗೆ ಷೇನ್ ಸೋತು ಕೊಲೆಗೆ ಈಡಾದ.

ಷೇನನ ಅನಂತರ ಮುಖ್ಯಸ್ಥನಾದಾತ ಟರ್ಲೊ ಒ'ನೀಲ್ (ಸು. 1530–95). ಟರ್ಲೊ ತನ್ನ ದಾಯಾದಿ ಬ್ರಿಯಾನ್ ಒ'ನೀಲನನ್ನು ಕೊಲ್ಲಿಸಿ ಅಧಿಕಾರಕ್ಕೆ ಬಂದು ಹದಿನೆಂಟು ವರ್ಷ ಕಾಲ ಹೆಣಗಾಡಿ ಕೊನೆಗೆ ಪಂಗಡ ಮುಖ್ಯಸ್ಥನ (ಒ'ನೀಲ್) ಸ್ಥಾನವನ್ನು ಬ್ರಿಯಾನನ ಮಗ ಹ್ಯೂಗೆ ಒಪ್ಪಿಸಿದ.

ಹ್ಯೂ ಒ'ನೀಲ್ (ಸು. 1540–1616) ಟೈರೋನಿನ ಎರಡನೆಯ ಅರ್ಲ್. ಮಹಾ ಅರ್ಲ್ ಎಂದು ಈತನ ಖ್ಯಾತಿ. ಷೇನನ ಮರಣಾನಂತರ ಈತ ಟರ್ಲೊ ವಿರುದ್ಧ ಕಾದಾಡುತ್ತಿದ್ದು ಕೊನೆಗೂ ಒ'ನೀಲ್ ಸ್ಥಾನ ಗಳಿಸಿದ. ಹ್ಯೂಗೂ ಟರ್ಲೊವಿಗೂ ಪದೇ ಪದೇ ಬಡಿದಾಟಗಳಾಗುತ್ತಿದ್ದು ಇಂಗ್ಲಿಷರು ಟರ್ಲೊವಿಗೆ ಬೆಂಬಲ ನೀಡಿ ಇವರಿಬ್ಬರ ದ್ವೇಷವನ್ನು ಬಿಸಿಯಾಗಿಟ್ಟಿದ್ದರು. ಈ ಅಂತಃಕಲಹಗಳಿಂದ ಐರ್ಲೆಂಡಿನ ಶಕ್ತಿ ಕುಂದಿ ತಮ್ಮ ಪ್ರಭಾವ ಉಳಿಯುವುದೆಂದು ಅವರು ಬಗೆದಿದ್ದರು. ಆದರೆ ಹ್ಯೂ ಅಧಿಕಾರಕ್ಕೆ ಬಂದ ಮೇಲೆ ಅವರ ಮೇಲೆಯೇ ತಿರುಗಿಬಿದ್ದ. ಇಂಗ್ಲಿಷ್ ಅಧಿಕಾರಿ ಸರ್ ಜಾನ್ ನಾರಿಸನ ಸೋದರಿಯೊಂದಿಗೆ ಪ್ರಣಯಕಲಾಪ ನಡೆಸಿ ಅವಳೊಂದಿಗೆ ಓಡಿಹೋಗಿ, ಅನಂತರ ಸರ್ ಜಾನನ ಕಾದಾಟಗಳಲ್ಲಿ ಆತನಿಗೆ ನೆರವು ನೀಡಿ, ಮತ್ತೆ ತಿರುಗಿ ಬಿದ್ದು, ಸ್ಪೇನ್ ಸ್ಕಾಟ್ಲೆಂಡುಗಳ ನೆರವು ಬಯಸಿ ಇಂಗ್ಲಿಷರ ವಿರುದ್ಧ ಅವನ್ನು ಎತ್ತಿಕಟ್ಟಿದ. ಇವನನ್ನಡಗಿಸಲು ಇಂಗ್ಲಿಷರು ಸರ್ ಜಾನ್ ನಾರಿಸನನ್ನೇ ಕಳಿಸಿದರು. ಹ್ಯೂ ಮಣಿಯಲಿಲ್ಲ. ಅನಂತರ ಈತ ಇಂಗ್ಲಿಷರನ್ನು ಎದುರು ಹಾಕಿಕೊಳ್ಳದೆ ಎಚ್ಚರ ವಹಿಸಿ, ಸ್ಪೇನಿನ ಸಹಾಯಕ್ಕಾಗಿ ಕಾಯುತ್ತ ಕುಳಿತ. 1598ರಲ್ಲಿ ಇಂಗ್ಲೆಂಡಿನ ರಾಣಿಯಿಂದ ಕ್ಷಮಾದಾನ ದೊರಕಿತು. ಆದರೆ ಮತ್ತೆ ಇವನಿಗೂ ಇಂಗ್ಲಿಷರಿಗೂ ವಿರಸ ಬೆಳೆಯಿತು. ಕೊನೆಗೆ ಸೋತು ದೇಶತ್ಯಾಗ

ಮಾಡಿ, ಸ್ಪೇನಿಗೆ ಹೋಗಬೇಕೆಂದು ಸಮುದ್ರಯಾನ ಮಾಡುತ್ತಿದ್ದಾಗ ಗಾಳಿ ನೆದರ್ಲೆಂಡ್ಸಿನತ್ತ ಹಡಗನ್ನು ಕೊಂಡೊಯ್ದಿತು. ಅಲ್ಲಿಂದ ಸಂಸಾರಸಮೇತ ರೋಮಿಗೆ ಹೋದ. ಈತ ಮರಣಹೊಂದಿದ್ದು ಅಲ್ಲೇ.

ಸರ್ ಫೆಲಿಮ್ ಒ'ನೀಲ್ (ಸು. 1604–53), ಓವೆನ್ ರೋ ಒನೀಲ್ (ಸು. 1590–1649), ಡೇನಿಯಲ್ ಒನೀಲ್ (ಸು. 1612–64) ಮತ್ತು ಹ್ಯೂ ಒ'ನೀಲ್ ಈ ವಂಶದ ಇತರ ಕೆಲವು ಪ್ರಮುಖರು. ಮುಂದಿನ ತಲೆಮಾರಿನ ಒ'ನೀಲರು ಯೋಧರಾಗಿ ಪ್ರಾಮುಖ್ಯ ಗಳಿಸಿದ್ದರು. (ಎಚ್.ಕೆ.; ಎ.ಎಂ.)

**ಒ'ನೀಲ್, ಯುಜೀನ್ ಗ್ಲ್ಯಾಡ್‌ಸ್ಟನ್:** 1888–1953. ಅಮೆರಿಕದ ಪ್ರಸಿದ್ಧ ನಾಟಕಕಾರ. 1936ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನ ಪಡೆದ ಸಾಹಿತಿ. ನ್ಯೂಯಾರ್ಕ್ ಪಟ್ಟಣದಲ್ಲಿ ಹುಟ್ಟಿದ. ಪ್ರಸಿದ್ಧ ನಟ ಜೇಮ್ಸ್ ಒನೀಲನ ಮಗ. ಹಾಂಡುರಾಸ್‌ನಲ್ಲಿ ಚಿನ್ನ ದೊರೆಯಬಹುದೆಂದು ಶ್ರಮಿಸಿದ. ಕ್ಷಯ ರೋಗ ಬಂದು ಚಿಕಿತ್ಸೆ ಪಡೆದ. ಪ್ರಿನ್ಸ್‌ಟನ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿ ಕೆಲಕಾಲ ಕಲಾಸಿಯಾಗಿಯೂ ಪತ್ರಿಕೆಯ ಬಾತ್ಮೀದಾರನಾಗಿಯೂ ನಟನಾಗಿಯೂ ಕೆಲಸಮಾಡಿದ. ಈ ಅನುಭವದ ಶ್ರೀಮಂತ ಹಿನ್ನೆಲೆಯಲ್ಲಿ ನಾಟಕಗಳ ರಚನೆಗೆ ಕೈಹಾಕಿದ. ಪ್ರಾರಂಭದ ನಾಟಕಗಳು ನಾವಿಕ ಜೀವನವನ್ನು ನಿರೂಪಿಸುವ ಏಕಪಾತ್ರಾಭಿನಯಗಳು. 1920ರಲ್ಲಿ ಪ್ರದರ್ಶನಗೊಂಡ ಬಿಯಾಂಡ್ ದಿ ಹೊರೈಜ಼ನ್ ಎಂಬ ನಾಟಕದಿಂದ ಪ್ರಸಿದ್ಧನಾದ. ನಾಟಕತಂತ್ರದಲ್ಲಿ ಪ್ರಯೋಗಶೀಲನಾದ ಈತನ ಶ್ರೇಷ್ಠ ನಾಟಕಗಳೆಂದರೆ ಅಭಿವ್ಯಕ್ತಿವಿಧಾನದಿಂದ ಕೂಡಿದ ವಿಲಕ್ಷಣ ಕಲ್ಪನೆಗಳೆನಿಸಿದ (ಫ್ಯಾಂಟಸೀಸ್) ದಿ ಎಂಪರರ್ ಜೋನ್ಸ್ ಮತ್ತು ದಿ ಹೇರಿ ಏಪ್. ಇವನ ಇನ್ನೊಂದು ಶ್ರೇಷ್ಠ ನಾಟಕಕೃತಿಯೆಂದರೆ ಈಸ್ಕಿಲಸನ ಪುರಾಣಕಥೆಯನ್ನು ಅವಲಂಬಿಸಿ ಆಧುನಿಕ ಮನೋವಿಜ್ಞಾನದ ಪರಿಭಾಷೆಯಲ್ಲಿ ನಿರೂಪಣೆಗೊಂಡ ಡಿಸೈರ್ ಅಂಡರ್ ದಿ ಎಲ್ಮ್ಸ್ (1924). ಸ್ಟ್ರೇಂಜ್ ಇಂಟರ್‌ಲ್ಯೂಡ್ (1928), ಮೌರ್ನಿಂಗ್ ಬಿಕಮ್ಸ್ ಎಲೆಕ್ಟ್ರ (1931) ಮತ್ತು ಲಾಂಗ್ ಡೇಸ್ ಜರ್ನಿ ಇಂಟು ನೈಟ್–ಇವು ಈತನ ನಾಟಕಗಳ ದೃಶ್ಯವೈವಿಧ್ಯ, ಪಾತ್ರವೈವಿಧ್ಯ, ತಂತ್ರವೈವಿಧ್ಯಗಳಿಗೆ ಹೆಸರಿಸಬೇಕಾದವು. ಮಾನವನ ಬೆನ್ನಟ್ಟಿಬರುವ ವಿಧಿಯ ವಿಲಕ್ಷಣ ಸ್ವಭಾವಗಳೇ ಈತನ ನಾಟಕಗಳ ವಸ್ತು. ಮನುಷ್ಯನ ಸ್ವಭಾವವನ್ನು ಕೆಣಕಿ ರಾಗೋದ್ದೀಪನಕ್ಕೆ ಒಳಗಾಗುವಂತೆ ಮಾಡುವ ಅಗ್ಗದ ನಾಟಕಗಳು ಇವನವೆಂಬ ಆಕ್ಷೇಪಣೆಯಿದ್ದರೂ ಈತ ಜೀವನದ ವಾಸ್ತವಿಕತೆಯನ್ನು ಸೂಕ್ಷ್ಮವಾಗಿ ನೋಡಿರುವ ಪ್ರಾಮಾಣಿಕ ನಾಟಕಕಾರ ಎಂಬ ಮಾತನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈತ ಜೀವನವನ್ನು ನಿಷ್ಠುರವಾಗಿ ನೋಡಿದ್ದರೂ ಅಲ್ಲಿ ಅನುಕಂಪವಿಲ್ಲದಿಲ್ಲ. ಇದ್ದಾಗ ಈತ ಮೂರು ಬಾರಿ ಪುಲಿಟ್ಜರ್ ಬಹುಮಾನ ಪಡೆದನಲ್ಲದೆ ಇವನ ಮರಣಾನಂತರ ಪ್ರದರ್ಶಿತವಾದ ಇವನ ಲಾಂಗ್ ಡೇಸ್ ಜರ್ನಿ ಇಂಟು ನೈಟ್ ಎಂಬ ನಾಟಕಕ್ಕೆ ನಾಲ್ಕನೆಯ ಬಾರಿಯೂ ಅದೇ ಬಹುಮಾನ ಬಂತು.

ಜೀವನದಲ್ಲಿ ಮೂರು ಸಾರಿ ಈತ ಮದುವೆಯಾದ. ಈತನ ಮಗಳು ಓನಾ ಚಲನ ಚಿತ್ರ ಜಗತ್ತಿನ ಹಾಸ್ಯಚಕ್ರವರ್ತಿ ಚಾರ್ಲಿ ಚಾಪ್ಲಿನನನ್ನು ಮದುವೆಯಾದಳು. (ಎಂ.ಕೆ.ಎನ್.)

'ದಿ ಎಂಪರರ್ ಜೋನ್ಸ್' ನಾಟಕದಲ್ಲಿ ಓನೀಲ್ ಭಯದಿಂದ ಸರ್ವಾಧಿಕಾರಿಯೊಬ್ಬನ ವ್ಯಕ್ತಿತ್ವ ಚೂರುಚೂರಾಗುವುದನ್ನು ನಿರೂಪಿಸುತ್ತಾನೆ. 'ಸ್ಟೇಜ್ ಇಂಟರ್‌ಲ್ಯೂಡ್'ನಲ್ಲಿ ಮನಸ್ಸಿನ ವ್ಯಾಪಾರಗಳು ಹೊರಗಿನ ಕ್ರಿಯೆಗಳ ಮೇಲೆ ಹೇಗೆ ಒತ್ತಡ ತರುತ್ತವೆ ಎಂದು ಚಿತ್ರಿಸುತ್ತಾನೆ. 'ಮೌರ್ನಿಂಗ್ ಬಿಕಮ್ಸ್ ಎಲೆಕ್ಟ್ರ' ದಲ್ಲಿ ಪ್ರಾಚೀನ ಗ್ರೀಕ್ ನಾಟಕಕಾರ ಈಸ್ಕಿಲಸನ ವಸ್ತುಗಳನ್ನು ಕಥಾವಸ್ತುಗಳನ್ನು 19ನೆಯ ಶತಮಾನದ ಅಮೆರಿಕದಲ್ಲಿಟ್ಟು ಪ್ರಾಚೀನ ಗ್ರೀಕ್ ಟ್ರ್ಯಾಜಿಡಿಯ ಶಕ್ತಿ ಮತ್ತು ಗಹನತೆಗಳನ್ನು ಪುನರ್‌ಸೃಷ್ಟಿ ಮಾಡಲು ಪ್ರಯತ್ನಿಸಿದ.

ಆಧುನಿಕ ಮಾನವ ದೇವರನ್ನು ನಂಬಲಾರ, ಮನುಷ್ಯನ ಸ್ವಾತಂತ್ರ್ಯದಲ್ಲಿಯೂ ನಂಬಿಕೆ ಇಡಲಾರ. ಆಧುನಿಕ ಮಾನವರು ತಮ್ಮನ್ನು ನಿಯಂತ್ರಣ ಮಾಡಿದ ಸನ್ನಿವೇಶಗಳಲ್ಲಿ ಸಿಕ್ಕಿಕೊಂಡು ನರಳುತ್ತಾರೆ. ಇದನ್ನು ಒ'ನೀಲ್ ಚಿತ್ರಿಸುತ್ತಾನೆ. ಹೊಸ ಪ್ರತೀಕಗಳನ್ನು ಸೃಷ್ಟಿಸಿದ, ಹೊಸ ತಂತ್ರಗಳನ್ನು ಬಳಸಿದ. ಆದರೆ ಅವನ ಪ್ರತೀಕಗಳು ಹಲವೊಮ್ಮೆ ಅಸ್ಪಷ್ಟವಾಗಿ ಉಳಿದವು. ಆದರೆ ಅಮೆರಿಕನ್ ನಾಟಕಕ್ಕೆ ಮಾನಸಿಕ ವಾಸ್ತವಿಕತೆ, ಚಿಂತನೆಯ ಸಹನತೆ ಮತ್ತು ಕಾವ್ಯಾತ್ಮಕ ಪ್ರತೀಕಗಳನ್ನು ತಂದ ಸಾಧನೆ ಇವನದು. (ಎಲ್.ಎಸ್.ಎಸ್.)

**ಒಪಾಸಂ:** ಗರ್ಭದಲ್ಲಿನ ಮರಿ ಪೂರ್ಣ ಬಲಿಯುವ ಮುನ್ನವೇ ಈಯುವ ಸಂಚಿ ಸ್ತನಿ. ಆಕಾರ ಹೆಗ್ಗಣದಂತೆ. ಬಲುಚುರುಕಾದ ಪ್ರಾಣಿ. ಮಾರ್ಸೂಪಿಯಾಲಿಯ ವರ್ಗ, ಪಾಲಿಪ್ರೋಟೊಡಾಂಟಿಯ ಗಣ, ಡೈಡೆಲ್ಫಿಡೇ ಕುಟುಂಬ. ತಲೆಯಿಂದ ಬಾಲದವರೆಗೆ ಇದರ ಉದ್ದ ಸು. 15". ಬಾಲ ಬೆಳ್ಳಗೆ ಅನಾವೃತವಾಗಿದೆ; ಉದ್ದ 12". ಕೋತಿಯ ಬಾಲಕ್ಕೆ ಇರುವಂತೆ ಇದರ ಬಾಲಕ್ಕೂ ಗ್ರಾಹಕ ಶಕ್ತಿಯುಂಟು; ಮರವನ್ನು ಹತ್ತುವಾಗ ಇದು ತುಂಬ ಉಪಯೋಗಕ್ಕೆ ಬರುತ್ತದೆ. ರೆಂಬೆಗೆ ಇದನ್ನು ಸುತ್ತು ಹಾಕಿಕೊಂಡು ಜೋತು ಬೀಳಬಹುದು. ಕಾಲುಗಳಿಗೂ ಹಿಡಿದುಕೊಳ್ಳುವ ಶಕ್ತಿಯಿದೆ. ಇವು ನೆಲವನ್ನು ತೋಡಲು ಬಲ್ಲವು; ಮರಗಳನ್ನು ಹತ್ತಲೂ ಬಲ್ಲವು.

ದಕ್ಷಿಣ ಅಮೆರಿಕ, ಮಧ್ಯೆ ಮತ್ತು ಉತ್ತರ ಅಮೆರಿಕಗಳಲ್ಲಿ ಅನೇಕ ತರದ ಒಪಾಸಂಗಳಿವೆ. ಅವುಗಳಲ್ಲಿ ವರ್ಜೀನಿಯ ಒಪಾಸಂ, ನೀರಿನ ಒಪಾಸಂ, ತುಪ್ಪಟವುಳ್ಳ ಒಪಾಸಂ, ಇಲಿಯಂಥ ಒಪಾಸಂ ಇತ್ಯಾದಿ ಭೇದಗಳುಂಟು. ಸಾಮಾನ್ಯ ತರದ ಒಪಾಸಂಗಳು ಅಮೆರಿಕ ದೇಶದ ಉತ್ತರ ಭಾಗದಿಂದ ಹಿಡಿದು ಅರ್ಜಂಟೈನದವರೆಗೂ ಹರಡಿವೆ. ಆದರೆ ಗಾತ್ರ, ರೂಪ ಮತ್ತು ಬಣ್ಣಗಳಲ್ಲಿ ಅವು ಬೇರೆ ಬೇರೆಯಾಗಿವೆ. ಬೆಕ್ಕಿನ ಗಾತ್ರದಿಂದ ಹಿಡಿದು ಇಲಿಯ ಗಾತ್ರದವರೆಗೂ ಇರುವುವು. ಇವು ನಿಶಾಚರಿಗಳು. ಹಗಲಲ್ಲಿ ಮರದೆಲೆಗಳ ಮರೆಯಲ್ಲಿಯೂ ಪೊಟರೆಗಳಲ್ಲೊ ಅಡಗಿಕೊಂಡು ಕಾಲ ಕಳೆಯುತ್ತವೆ. ಯಾರಾದರೂ ತಮ್ಮನ್ನು ಹಿಡಿದುಕೊಂಡಾಗ ಅಥವಾ ಶತ್ರುಗಳು ಸಮೀಪ ಬಂದಾಗ ಸತ್ತಹಾಗೆ ನಟಿಸುತ್ತವೆ. ಅಂತೆಯೇ ಒಪಾಸಂ ನಟನೆ, ಎಂಬೊಂದು ಗಾದೆ ಜನರ ಬಾಯಲ್ಲಿ ಹುಟ್ಟಿಕೊಂಡಿದೆ.

ಇದು ತಿನ್ನದ ವಸ್ತುವೇ ಇಲ್ಲ; ಹುಳು ಹುಪ್ಪಟೆಗಳನ್ನು ಹೆಚ್ಚಾಗಿ ಮೆಲ್ಲುತ್ತದೆ. ರುಚಿಯ ವಿಷಯದಲ್ಲಿ ತುಂಬ ಭೋಗಿಯಿದು. ಹಣ್ಣು ಅಥವಾ ಗೆಡ್ಡೆ, ಕರಟಕಾಯಿ, ಹಸಿರುಕಾಳು, ಮರಿಹುಳುಗಳು, ಪುಟ್ಟ ಹಕ್ಕಿಗಳ ಮೊಟ್ಟೆಗಳು–ಇವು ಇದಕ್ಕೆ ಬಹು ಹಿತಕರವಾದ ಆಹಾರ.

ಆಸ್ಟ್ರೇಲಿಯ ಖಂಡದಲ್ಲಿ ಅನೇಕ ಜಾತಿಯ ಸಂಚಿ ಪ್ರಾಣಿಗಳಿವೆ (ಮಾರ್ಸೂಪಿಯಲ್ಸ್). ಇವನ್ನು ಹಲವು ವೇಳೆ ಒಪಾಸಂಗಳೆಂದು ಕರೆಯುವುದುಂಟು. ಆದರೆ ಇವಕ್ಕೆ ಸಾಮಾನ್ಯವಾಗಿ ಫಲಾನ್‌ಜರ್ಸ್ ಎಂದು ಹೆಸರು. ಅಮೆರಿಕದ ಒಪಾಸಂಗಳಿಗಿಂತ ಇವು ತೀರ ಭಿನ್ನವಾಗಿವೆ; ಇವುಗಳಿಗೆ ಚಟುವಟಿಕೆ ಹೆಚ್ಚು. ಕೂದಲು ಹೇರಳವಾಗಿದೆ. ಬಾಲ ಬಲು ಉದ್ದವಾಗಿ, ಹೊರಲಾರದಷ್ಟು ಕೂದಲಿನಿಂದ ಆವೃತವಾಗಿದೆ.

ಗರ್ಭಧಾರಣೆಯ ಅವಧಿ ಬಲು ಕಡಿಮೆ; ಗರ್ಭದಿಂದ ಹೊರ ಬರುವಾಗ ಮರಿಗಳು ಅರ್ಧಮಾತ್ರ ಬೆಳೆದಿರುತ್ತವೆ. ತಾಯಿ ಒಂದು ಸೂಲಿಗೆ ಹತ್ತರಿಂದ ಹದಿನೆಂಟರವರೆಗೆ ಮರಿ ಹಾಕುತ್ತದೆ. ಆದರೆ ಅದಕ್ಕೆ ಹದಿಮೂರೇ ಮೊಲೆತೊಟ್ಟುಗಳಿರುವುದರಿಂದ ಕೆಲವು ಮರಿಗಳನ್ನು ಅದು ಸಾಮಾನ್ಯವಾಗಿ ತ್ಯಜಿಸುತ್ತದೆ. ಬಲಿಯುವ ಮುನ್ನವೇ ಜನ್ಮತಾಳುವ ಮರಿಗಳನ್ನು ಬಹುತೇಕ ಒಪಾಸಂಗಳು. ಹೊಟ್ಟೆಯ ಹಿಂಬದಿಯಲ್ಲಿರುವ ಸಂಚಿ ಅಥವಾ ಚೀಲಗಳಲ್ಲಿ ಇಟ್ಟುಕೊಂಡು ಬಲಿಯುವವರೆಗೂ ರಕ್ಷಿಸುತ್ತವೆ. ಹೊಟ್ಟೆಯ ಮೇಲೆ ಚೀಲ ಇಲ್ಲದಿರುವ ಜಾತಿಗಳಲ್ಲಿ ಮರಿಗಳು ತಾಯ ಮೊಲೆ ಕಚ್ಚಿಕೊಂಡೋ ತಾಯ ಮೈಯನ್ನು ತಬ್ಬಿಕೊಂಡೋ ಆಶ್ರಯ ಪಡೆಯುತ್ತವೆ. (ಎ.)

**ಒಪ್ಪಂದ:** ಏನನ್ನಾದರೂ ಮಾಡುವುದಾಗಿ ಅಥವಾ ಮಾಡದೆ ಬಿಡುವುದಾಗಿ ಒಂದು ಗೊತ್ತುಪಾಡಿನ ವ್ಯಕ್ತಿಗಳ ಅಥವಾ ಪಕ್ಷಗಳ ನಡುವೆ ಏರ್ಪಟ್ಟ ಏಕಾಭಿಪ್ರಾಯ; ಪರಸ್ಪರ ತಿಳಿವಳಿಕೆ, ನಿರ್ಣಯ, ಷರತ್ತು; ಮನಸ್ಸುಗಳ ಕೂಡಿಕೆ (ಅಗ್ರೀಮೆಂಟ್), ಒಬ್ಬ ಅಥವಾ ಒಂದು ಪಕ್ಷ ಏನನ್ನಾದರೂ ಮಾಡಲು ಇಲ್ಲವೇ ಮಾಡದಿರಲು ಪ್ರಸ್ತಾಪ (ಪ್ರೊಪೋಸಲ್) ಮಾಡಲಾಗಿ, ಇನ್ನೊಬ್ಬ ಅಥವಾ ಇನ್ನೊಂದು ಪಕ್ಷ ಅದನ್ನು ಸವೀಕರಿಸಿರುವುದನ್ನು ಅಥವಾ ಅದಕ್ಕೆ ಸಮ್ಮತಿಸಿರುವುದನ್ನು ಮತ್ತು ಆ ಬಗ್ಗೆ ಬರೆಯಲಾದ ಪತ್ರವನ್ನು ಒಪ್ಪಂದ ಎನ್ನಲಾಗುತ್ತದೆ. ಈ ಪದವನ್ನು ನ್ಯಾಯಶಾಸ್ತ್ರದಲ್ಲಿ ತಾತ್ಕಾಲಿಕ ವ್ಯವಸ್ಥೆ ಮತ್ತು ವ್ಯವಹಾರದ ಮುಕ್ತಾಯ ಎಂಬ ಎರಡರ್ಥದಲ್ಲಿ ಉಪಯೋಗಿಸಲಾಗುತ್ತದೆ. ಅದನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ ಎಂಬುದನ್ನು ಒಪ್ಪಂದದ ಪತ್ರದ ಸಂದರ್ಭದಿಂದ ತಿಳಿಯಬಹುದು.

ಭಾರತದ ಕರಾರು ಕಾಯಿದೆಯಲ್ಲಿ ಒಪ್ಪಂದ ಪದದ ವಿವರಣೆಯುಂಟು. ಒಂದು ವಾಗ್ದಾನವನ್ನು ಅಥವಾ ಪರಸ್ಪರವಾಗಿ ಉಭಯಪಕ್ಷದವರಿಗೂ ಪ್ರತಿಫಲವಾಗಿ (ಕನ್ಸಿಡರೇಷನ್) ಪರಿಣಮಿಸುವ ವಾಗ್ದಾನಗಳ ಸಮೂಹವನ್ನು ಒಪ್ಪಂದವೆನ್ನಲಾಗಿದೆ. ಇದೇ ಕಾಯಿದೆಯಲ್ಲಿ ಪ್ರಸ್ತಾಪ, ಸ್ವೀಕಾರ (ಆಕ್ಸೆಪ್ಟೆನ್ಸ್), ವಚನ (ಪ್ರಾಮಿಸ್) ಪ್ರತಿಫಲ ಇತ್ಯಾದಿ ಶಬ್ದಗಳನ್ನೂ ವಿವರಿಸುವುದರ ಮೂಲಕ ಅವುಗಳಿಗೆ ಒಂದು ನಿರ್ದಿಷ್ಟ ಅರ್ಥವ್ಯಾಪ್ತಿಯನ್ನು ನೀಡಲಾಗಿದೆ.

ದಿವಾಣೀ ಸಂಹಿತೆಯ ಆದೇಶ 23ರ ನಿಯಮ 3ರಲ್ಲಿ ಹೇಳಿದ, ನ್ಯಾಯಸಮ್ಮತ ಒಪ್ಪಂದ, ಕರಾರು ಕಾಯಿದೆಯ ಕಲಂ 2() ದಲ್ಲಿ ಹೇಳಿದ, ನ್ಯಾಯದ ಮೂಲಕ ಜಾರಿಗೆ ತರಬಹುದಾದ ಒಪ್ಪಂದ–ಈ ಉಭಯ ಪದಗುಂಫನಗಳ ಅರ್ಥ ಒಂದೇ ಆಗಿದೆ ಎಂದು ನ್ಯಾಯಾಲಯಗಳು ತೀರ್ಪು ಕೊಟ್ಟಿವೆ. ನ್ಯಾಯಿಕವಾಗಿ ಜಾರಿಗೆ ತರಲು ಸಾಧ್ಯವಿಲ್ಲದ್ದು ಶೂನ್ಯ ಒಪ್ಪಂದ (ವಾಯ್ಡ್ ಅಗ್ರೀಮೆಂಟ್). ನ್ಯಾಯದ ಬೆಂಬಲದ ಮೇಲೆ ಜಾರಿಗೆ ತರಬಹುದಾದ ಒಪ್ಪಂದವೇ ಕರಾರು (ಕಂಟ್ರಾಕ್ಟ್). ಒಪ್ಪಂದ ಹೀಗೆ ಕರಾರಿನಲ್ಲಿ ಪರ್ಯವಸಾನವಾಗುತ್ತದೆ. ಭಾರತದ ಕರಾರು ಕಾಯಿದೆಯಲ್ಲಿ ಒಪ್ಪಂದ ಮತ್ತು ಕರಾರು ಶಬ್ದಗಳ ವ್ಯತ್ಯಾಸಗಳನ್ನು ವಿವರಿಸಲಾಗಿದೆ (**ನೋಡಿ–ಕರಾರು**). (ಎಲ್.ಎಸ್.ಜಿ.)

**ಒಪ್ಪಂದಗಳು, ಅನೌಪಚಾರಿಕ:** ವ್ಯವಹಾರದಲ್ಲಿ ಪೈಪೋಟಿ ನಡೆಸುತ್ತಿರುವ ವ್ಯಕ್ತಿಗಳು ಇಲ್ಲವೆ ಘಟಕಗಳು ಖಾಸಗಿಯಾಗಿ ಕಲೆತು ತಾವು ಯಾವ ಬೆಲೆಯನ್ನು ನಿಗದಿ ಮಾಡಬೇಕು, ಯಾವ ಪ್ರದೇಶದಲ್ಲಿ ವ್ಯವಹಾರ ನಡೆಸಬೇಕು, ಯಾವ ಸರಕನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಅಥವಾ ಬಾರದು ಎಂಬ ಬಗ್ಗೆ ಮಾಡಿಕೊಂಡ ಒಪ್ಪಂದ. ಅನೌಪಚಾರಿಕ ಒಪ್ಪಂದ ಸಾಮಾನ್ಯವಾಗಿ ಸ್ಥಳೀಯ ಹಾಗೂ ತಾತ್ಕಾಲಿಕವಾಗಿರುತ್ತದೆ. ಇದಕ್ಕೆ ಯಾವ ಬಗೆಯ ಕಾಗದ, ಕರಾರಿನ ಅವಶ್ಯಕತೆಯೂ ಇರುವುದಿಲ್ಲ. ಪರಸ್ಪರ ವಿಶ್ವಾಸವೇ ಇದಕ್ಕೆ ಆಧಾರ. ಗೋಣು ಕುಯ್ಯುವ ಪೈಪೋಟಿ ತಡೆಯಲು, ಒಂದೇ ಬಗೆಯ ಸೇವೆ ನೀಡುವುದರಲ್ಲಿ ಅನೇಕರು ತೊಡಗುವುದನ್ನು ತಡೆಯಲು, ಇಂಥ ಒಪ್ಪಂದ ನೆರವಾಗುತ್ತದೆ.

ಅನೌಪಚಾರಿಕ ಒಪ್ಪಂದಕ್ಕೆ ಸಂಭಾವಿತರ ಒಪ್ಪಂದ, ಕ್ರಯ ಒಡಂಬಡಿಕೆ, ವ್ಯಾಪಾರಿ ಒಡಂಬಡಿಕೆ ಎಂಬ ಹೆಸರುಗಳೂ ಉಂಟು.

ಒಪ್ಪಂದದಲ್ಲಿ ಸೇರುವ ಘಟಕಗಳು ಸ್ವಲ್ಪಮಟ್ಟಿಗೆ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಆದರೆ ಅವುಗಳ ಒಡೆತನ ಮತ್ತು ನಿಯಂತ್ರಣ ಯಾವ ಬಗೆಯಲ್ಲೂ ಬಾಧಿತವಾಗುವುದಿಲ್ಲ. ಅನೌಪಚಾರಿಕ ಒಪ್ಪಂದ ಸರಳವಾಗಿ ಹಾಗೂ ಖರ್ಚಿಲ್ಲದೆ ಸಂಯೋಗದ ಫಲವನ್ನನುಭವಿಸುವ ಮಾರ್ಗವಾಗಿದೆ. ಸದಸ್ಯರು ಒಪ್ಪಂದಕ್ಕೆ ತಾವಾಗಿಯೇ ಮುಂದಾಗುತ್ತಾರೆ. ಸನ್ನಿವೇಶಕ್ಕೆ ತಕ್ಕಂತೆ ಒಪ್ಪಂದದಲ್ಲಿ ಬದಲಾವಣೆಮಾಡಿಕೊಳ್ಳುವುದು ಸುಲಭ. ಒಪ್ಪಂದ ಸದಸ್ಯರ ನಡುವೆ ಗುಟ್ಟಾಗಿ ಇರುತ್ತದೆ.

ಆದರೆ ಸಾಮಾನ್ಯ ಜನ ಇಂಥ ಒಪ್ಪಂದಗಳ ಸುಳಿವನ್ನರಿತು ಅವುಗಳ ಬಗ್ಗೆ ಸಂದೇಹ ತಾಳಬಹುದು. ಅವನ್ನು ಖಂಡಿಸಲೂಬಹುದು. ಇದಕ್ಕೆ ಕಾರಣವಿಲ್ಲದೆ ಇಲ್ಲ. ಅನೌಪಚಾರಿಕ ಒಪ್ಪಂದಗಳು ಕೆಲವು ವೇಳೆ ಗ್ರಾಹಕರ ಒಳಿತನ್ನು ಕಡೆಗಣಿಸಿ, ಅವರನ್ನು ಶೋಷಿಸಲು ನೆರವಾಗುತ್ತವೆ.

ಪರಸ್ಪರ ನಂಬಿಕೆ, ಕೊಟ್ಟ ಮಾತಿನಂತೆ ನಡೆಯುವಿಕೆ–ಇವೇ ಅನೌಪಚಾರಿಕ ಒಪ್ಪಂದಗಳಿಗೆ ಆಧಾರವಾದ್ದರಿಂದ ಅವುಗಳ ಯಶಸ್ಸು ಖಚಿತವಲ್ಲ. ಎಲ್ಲ ಸದಸ್ಯರೂ ಒಪ್ಪಂದದ ನಿಯಮಗಳನ್ನು ಪಾಲಿಸುತ್ತಾರೆಂಬ ಭರವಸೆಯಿಲ್ಲ. ಕೆಲವರು ಗುಟ್ಟಾಗಿ ನಿಯಮ ಮೀರಿ ನಡೆಯಬಹುದು. ಮೇಲಾಗಿ ಸದಸ್ಯರ ಇತರ ಚಟುವಟಿಕೆಗಳ ಮೇಲೆ ಹತೋಟಿಯಿಲ್ಲದಿರುವುದರಿಂದ ಒಪ್ಪಂದದ ಉದ್ದೇಶ ನೆರವೇರದೆ ಇರಬಹುದು. ಉದಾಹರಣೆಗೆ ಒಪ್ಪಂದದಲ್ಲಿ ಕನಿಷ್ಠ ಮಾರುವ ಬೆಲೆ ಮಾತ್ರ ನಿಗದಿಯಾಗಿದ್ದು ಉತ್ಪಾದನೆ ಅನಿರ್ದಿಷ್ಟವಾಗಿ ಮುಂದುವರಿದರೆ ಮಾರುಕಟ್ಟೆಯಲ್ಲಿ ನೀಡಿಕೆ ಬೇಡಿಕೆಗಿಂತ ಅಧಿಕವಾಗಿ ಬೆಲೆ ಕುಸಿಯಬಹುದು.

ಅನೌಪಚಾರಿಕ ಒಪ್ಪಂದಗಳು ಸ್ವಾರ್ಥಸಾಧನೆಗೆ, ಗ್ರಾಹಕರ ಶೋಷಣೆಗೆ ಕೈಹಾಕಬಹುದಾದರೂ ಸೂಕ್ತ ವ್ಯಕ್ತಿಗಳ ನಡುವೆ ಆದ ಒಪ್ಪಂದಗಳು ಸಮಾಜದ ಹಿತದೃಷ್ಟಿಯಿಂದಲೂ ಸದಸ್ಯರಿಗೆ ಅನುಕೂಲ ಮತ್ತು ಮಿತವ್ಯಯಗಳನ್ನು ದೊರಕಿಸುವ ದೃಷ್ಟಿಯಿಂದಲೂ ಮುಖ್ಯವಾಗಿವೆ. (ಡಿ.ಎಸ್.ಎಸ್.ಎಂ.)

**ಒಪ್ಪಿಗೆ:** ತೀರ್ಮಾನಿಸಬೇಕಾಗಿರುವ ಅಥವಾ ವಿಚಾರಣೆಗೆ ಸಂಬಂಧಿಸಿದ, ಸಂಗತಿಯ ಬಗ್ಗೆ ಒಂದು ಅನುಮಾನ (ಇನ್‌ಫರೆನ್ಸ್) ಸೂಚಿಸುವಂತೆ ಬಾಯಿಮಾತಿನಿಂದಾಗಲಿ ಬರೆಹದ ಮೂಲಕವಾಗಲಿ ಒಬ್ಬಾತ ಮಾಡುವ ಹೇಳಿಕೆ (ಅಡ್ಮಿಷನ್). ಇದು ಭಾರತೀಯ ಸಾಕ್ಷ್ಯ ಕಾಯಿದೆಯ (ಇಂಡಿಯನ್ ಎವಿಡೆನ್ಸ್ ಆಕ್ಟ್) 17ನೆಯ ಕಲಮಿನಲ್ಲಿ ಒಪ್ಪಿಗೆ ಶಬ್ದಕ್ಕೆ ಕೊಟ್ಟಿರುವ ವ್ಯಾಖ್ಯೆ.

B ಯಿಂದ ತನಗೆ 500 ರೂ. ಸಾಲ ಬರಬೇಕೆಂದು ಆತನ ಮೇಲೆ A ಹೂಡಿದ ಒಂದು ದಾವೆಯಲ್ಲಿ, ತಾನು ಆ ಸಾಲ ತೆಗೆದುಕೊಂಡಿಲ್ಲವೆಂದು B ವಾದ ಹೂಡಬಹುದು. B ಗೆ A ಸಾಲ ಕೊಟ್ಟಿದ್ದನೆ ಎಂಬುದು ಈ ದಾವೆಯಲ್ಲಿ ತೀರ್ಮಾನವಾಗಬೇಕಾದ ಅಂಶ. ಇಲ್ಲಿ ತೀರ್ಮಾನಿಸಬೇಕಾದ ಅಂಶವನ್ನು ರುಜುವಾತು ಮಾಡುವ ಹೊಣೆ, Aಯ ಮೇಲಿದೆ. ಈ ಅಂಶವನ್ನು ರುಜುವಾತು ಮಾಡಲು A ಸಾಕ್ಷ್ಯ ಒದಗಿಸಬೇಕು. B ಯಾವಾಗಲಾದರೂ ಬಾಯಿಮಾತಿನ ಮೂಲಕ ಅಥವಾ ಬರೆವಣಿಗೆಯ ಮೂಲಕ ಸಾಲ ಪಡೆದಿದ್ದುದಾಗಿ ಒಪ್ಪಿಕೊಂಡಿದ್ದರೆ, ಅಂಥ ಹೇಳಿಕೆ ಒಪ್ಪಿಗೆಯೆನಿಸಿಕೊಳ್ಳುತ್ತದೆ. ಈ ದಾವೆಯಲ್ಲಿ B ತಾನು ಸಾಲ ಪಡೆದೇ ಇಲ್ಲ ಎಂದು ತಕರಾರು ಹೂಡಿದ ಪಕ್ಷದಲ್ಲಿ, Bಯಿಂದ ತನಗೇನೂ ಸಾಲ ಬರಬೇಕಾಗಿಲ್ಲವೆಂದು A ಎಂದಾದರೂ ಹೇಳಿದ್ದರೆ, ಆ ಹೇಳಿಕೆಯನ್ನು Aಯ ವಿರುದ್ಧವಾದ ರುಜುವಾತಾಗಿ ಉಪಯೋಗಿಸಬಹುದು. ಅದು Aಯ ಒಪ್ಪಿಗೆ ಎನಿಸುತ್ತದೆ. ಆದರೆ, ತನಗೆ B ಐದು ನೂರು ರೂಪಾಯಿ ಸಾಲ ಕೊಡಬೇಕು ಎಂದು A ಹೇಳಿದ್ದರೆ ಅಥವಾ Aಗೆ ತಾನೇನೂ ಸಾಲ ಕೊಡಬೇಕಾಗಿಲ್ಲ ಎಂದು B ಹೇಳಿದ್ದರೆ ಅದು ಒಪ್ಪಿಗೆಯೆನಿಸುವುದಿಲ್ಲ. ಅಂಥ ಹೇಳಿಕೆಯಿಂದ ಯಾವ ಪ್ರಯೋಜನವೂ ಇಲ್ಲ. ಯಾರು ಹೇಳಿಕೆ ನೀಡಿದ್ದಾನೋ ಅವನ ವಾದಕ್ಕೆ ಅವನ ಹೇಳಿಕೆಯೇ ವಿರುದ್ಧವಾಗಿದ್ದರೆ ಅದು ಒಪ್ಪಿಗೆಯಾಗುತ್ತದೆ.

ಈ ಬಗೆಯ ಹೇಳಿಕೆಗಳು ಸಿವಿಲ್ ಮೊಕದ್ದಮೆಯಲ್ಲಿ ಒಪ್ಪಿಗೆ (ಅಡ್ಮಿಷನ್) ಎನಿಸಿಕೊಳ್ಳುತ್ತವೆ. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಆರೋಪಿಯಾದವನು ನ್ಯಾಯಾಲಯದಲ್ಲೇ ಆಗಲಿ, ಹೊರಗೇ ಆಗಲಿ (ಪೋಲಿಸರ ಸಮ್ಮುಖದಲ್ಲಿ ಮಾಡಿದ ಹೇಳಿಕೆಗಳ ಹೊರತಾಗಿ), ಬರೆವಣಿಗೆಯಲ್ಲಿ ಅಥವಾ ಬಾಯಿಮಾತಿನಲ್ಲಿ ಆರೋಪಿಸಿದ ಕೃತ್ಯ ತನ್ನಿಂದ ಆಯಿತೆಂಬ ಅನುಮಾನವನ್ನು ಸೂಚಿಸುವಂಥ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದರೆ ಅದು ತಪ್ಪೊಪ್ಪಿಗೆ (ಕನ್‌ಫೆಷನ್) ಎನಿಸುತ್ತದೆ.

ಒಪ್ಪಿಗೆ ಎರಡು ಬಗೆ. ಒಂದು, ಸಂದರ್ಭಕ್ಕೆ ಅನುಗುಣವಾಗಿ ಮಾಡಿದ ವಿಧ್ಯುಕ್ತ (ಫಾರ್ಮಲ್) ಒಪ್ಪಿಗೆ. ಇನ್ನೊಂದು, ಅವಿಧೀಯ ಅಥವಾ ಅನಿರ್ಬಂಧ (ಇನ್‌ಫಾರ್ಮಲ್) ಒಪ್ಪಿಗೆ. ಮೊದಲನೆಯದನ್ನು ಸಾಧಾರಣವಾಗಿ ನ್ಯಾಯಾಲಯದಲ್ಲಿ ಮಾಡಲಾಗುತ್ತದೆ. ತನಗೆ ಜೀವನಾಂಶ ಕೊಡಬೇಕೆಂದು Bಯ ಮೇಲೆ A ದಾವ ಹೂಡಿದರೆ, A ತನ್ನ ಹೆಂಡತಿ ಎಂಬುದಾಗಿ B ಒಪ್ಪಿಕೊಂಡರೆ, ಅದು ಆ ಸಂದರ್ಭಕ್ಕಾಗಿ ಒಪ್ಪಿಕೊಂಡ ಸಂಗತಿ. A ತನ್ನ ಹೆಂಡತಿಯೇ ಅಲ್ಲವೆಂದೂ ತಾನು ಜೀವನಾಂಶ ಕೊಡಲು ಬಾಧ್ಯನಲ್ಲವೆಂದೂ ಒಂದು ವೇಳೆ B ತಕರಾರು ಹೂಡಿದರೆ, ಆಕೆ Bಯ ಹೆಂಡತಿಯೆ–ಎಂಬುದು ತೀರ್ಮಾನಿಸಬೇಕಾದ ಅಂಶವಾಗುತ್ತದೆ. B ಯಾವಾಗಲೋ Aಗೆ ಪತ್ರ ಬರೆದು ಆಕೆಯನ್ನು ಪತ್ನಿಯೆಂದು ಕರೆದಿದ್ದರೆ ಅಥವಾ ಆಕೆಯ ಪ್ರೀತಿಯ ಪತಿಯೆಂದು ತನ್ನ ಬಗ್ಗೆ ಬರೆದುಕೊಂಡಿದ್ದರೆ Aಗೆ B ಬರೆದ ಈ ಪತ್ರವನ್ನು Bಯ ಒಪ್ಪಿಗೆ ಎಂದು ಕೋರ್ಟಿನಲ್ಲಿ ಹಾಜರುಪಡಿಸಬಹುದು. ಈ ಪತ್ರ ಬರೆದಾಗ A ಮತ್ತು Bಗಳ ಮಧ್ಯೆ ಯಾವ ವಿವಾದವೂ ಉಂಟಾಗಿರಲಿಲ್ಲ. ಅದು ಅನ್ಯ ಸಂದರ್ಭದಲ್ಲಿ ಮಾಡಿದ ಹೇಳಿಕೆ. ನ್ಯಾಯಾಧೀಶರ ಸಮ್ಮುಖದಲ್ಲಿ ಮಾಡಿದ ತಪ್ಪೊಪ್ಪಿಗೆ ಹೇಳಿಕೆಗಳು ನ್ಯಾಯಾಲಯದ ಹೊರಗೆ ಮಾಡಿದ ಹೇಳಿಕೆಗಳಿಗಿಂತ ಹೆಚ್ಚು ನಂಬಲರ್ಹವಾದವು.

ಯಾವುದೇ ಹೇಳಿಕೆಯನ್ನು ಇನ್ನೊಬ್ಬರ ವಿರುದ್ಧವಾಗಿ ಉಪಯೋಗಿಸಿಕೊಂಡು ಅದನ್ನು ಸಾಕ್ಷ್ಯವೆಂದು ಅಂಗೀಕರಿಸಬೇಕಾದರೆ ಅಂಥ ಹೇಳಿಕೆಯನ್ನು ಯಾರ ವಿರುದ್ಧ ಉಪಯೋಗಿಸಬೇಕಾಗಿದೆಯೋ ಅವರ ಸಮ್ಮುಖದಲ್ಲೇ ನ್ಯಾಯಾಲಯದಲ್ಲಿ ಮಾಡಿರಬೇಕು; ಹಾಗೂ ಆ ಹೇಳಿಕೆಯ ಸತ್ಯಾಸತ್ಯತೆಗಳನ್ನು ಪಾಟಿ ಸವಾಲಿನ (ಕ್ರಾಸ್ ಎಕ್ಸಾಮಿನೇಷನ್) ಒರೆಗಲ್ಲಿಗೆ ಹಚ್ಚಿನೋಡಿಯೇ ತೀರಬೇಕು–ಎಂಬುದು ಸಾಕ್ಷ್ಯದ ಮೂಲಭೂತ ಸೂತ್ರ. ಬೆನ್ನ ಹಿಂದೆ, ನ್ಯಾಯಾಲಯದ ಹೊರಗೆ ಮಾಡಿದ, ಪಾಟಿ ಸವಾಲು ಮಾಡಿ ಪರೀಕ್ಷೆಗೆ ಗುರಿಪಡಿಸಿದ, ಹೇಳಿಕೆಗಳನ್ನು ಸಾಕ್ಷ್ಯದಲ್ಲಿ ಅಂಗೀಕರಿಸಕೂಡದು. ಆದರೆ ಒಪ್ಪಿಗೆಗಳನ್ನು, ಯಾವಾಗಲೋ ಯಾವುದೋ ಅನ್ಯ ಸಂದರ್ಭದಲ್ಲಿ ಮಾಡಿದ ಹೇಳಿಕೆಯನ್ನು ಪಾಟಿ ಸವಾಲು ಇಲ್ಲದೆಯೇ ಸಾಕ್ಷ್ಯದಲ್ಲಿ ಅಂಗೀಕರಿಸಬಹುದೆಂದು ನ್ಯಾಯಶಾಸ್ತ್ರ ಒಪ್ಪಿಕೊಂಡಿದೆ. ಒಪ್ಪಿಕೊಂಡ ಮಾತಿಗೆ ರುಜುವಾತು ಬೇಕಾಗುವುದಿಲ್ಲ. ತಾನು 500 ರೂ. ಕೊಡಬೇಕಾದುದುಂಟೆಂದು B ಒಪ್ಪಿಕೊಂಡರೆ Aಗೆ ಸಾಲ ಸಲ್ಲಬೇಕೇ ಸಲ್ಲಬಾರದೇ ಎಂಬ ಮುಂದಿನ ಮಾತೇ ಏಳಲಾರದು. ಹಾಗೆಯೇ B ತನಗೆ ಏನೂ ಕೊಡಬೇಕಾದುದಿಲ್ಲವೆಂದು A ಹೇಳಿದರೆ ಮುಂದಿನ ಮಾತೇ ಉಳಿಯುವುದಿಲ್ಲ. ಇಂಥ ಹೇಳಿಕೆಗಳನ್ನು ಪಾಟಿ ಸವಾಲು ಮಾಡಿ ಪರೀಕ್ಷಿಸಬೇಕಾದ ಅಗತ್ಯವಿಲ್ಲ. ಏಕೆಂದರೆ ನಿಜವಲ್ಲದ ಮಾತನ್ನು A ಆಗಲಿ B ಆಗಲಿ ಹೇಳುವುದಿಲ್ಲ. ಅಲ್ಲದೆ, ತನ್ನ ಹಿತಕ್ಕೆ ವಿರುದ್ಧವಾದ ಮಾತನ್ನು ಒಬ್ಬಾತ ಹೇಳಲಾರ. ಮನುಷ್ಯನ ಸ್ವಭಾವ ತನ್ನ ಸ್ವಾರ್ಥಕ್ಕೆ ಧಕ್ಕೆ ತಂದುಕೊಳ್ಳುವುದಲ್ಲ. ಹಾಗೆ ಧಕ್ಕೆ ಬರುವಂಥ ಮಾತನ್ನು ಆಡಿದರೆ ಅಂಥ ಕೃತಿ ಮಾಡಿದರೆ, ನಡತೆಯಲ್ಲಿ ತೋರಿಸಿಕೊಂಡರೆ, ಅದರಿಂದ ಆ ಮಾತು ಅಥವಾ ಕೃತಿ ನಿಜವಿರಬೇಕೆಂದೇ ಸ್ವಾಭಾವಿಕವಾಗಿ ತೀರ್ಮಾನಿಸಬೇಕಾಗುತ್ತದೆ. ಆ ಹೇಳಿಕೆಯನ್ನು ಪಾಟಿ ಸವಾಲು ಮಾಡುವವರೂ ಇರುವುದಿಲ್ಲ. ಪಾಟಿ ಸವಾಲಿನ ಹಕ್ಕು ವಿರುದ್ಧ ಪಕ್ಷದವರಿಗೆ ಸೇರಿದ್ದು. ತನ್ನ ಮಾತನ್ನು ತಾನೇ ಪಾಟಿ ಸವಾಲು ಮಾಡುವುದರ ಅಗತ್ಯವೇನೂ ಇಲ್ಲ.

ಒಪ್ಪಿಗೆಗಳು ಬಾಯಿಮಾತಿನಲ್ಲಿ ಇರಬಹುದು, ಬರೆವಣಿಗೆಯಲ್ಲಿರಬಹುದು. ಇವೆರಡೂ ಅಲ್ಲದೆ ಸಂಜ್ಞೆಗಳ ರೂಪದಲ್ಲಿಯೂ ಇರಬಹುದು. ಬರೆವಣಿಗೆಯ ಮೂಲಕ ವ್ಯಕ್ತಪಡಿಸಿದ ಹೇಳಿಕೆಗಳು ಅತ್ಯಂತ ಉತ್ತಮ ಒಪ್ಪಿಗೆಗಳು. ಬಾಯಿಮಾತಿನ ಮೂಲಕ ಮಾಡಿದ

ಹೇಳಿಕೆಗಳನ್ನು ತುಂಬ ಪರೀಕ್ಷೆ ಮಾಡಿ, ಜಾಗರೂಕತೆಯಿಂದ ಅಂಗೀಕರಿಸಬೇಕಾಗುತ್ತದೆ. ಏಕೆಂದರೆ ಬಾಯಿಮಾತು ಒಬ್ಬರಿಂದ ಇನ್ನೊಬ್ಬರಿಗೆ ಮುಟ್ಟುವ ಹೊತ್ತಿಗೆ ಏನೇನು ರೂಪಾಂತರ ಹೊಂದುತ್ತದೆಯೋ ಹೇಳಲಿಕ್ಕೆ ಬಾರದು. ಮೂಕರು ಮಾಡಿದ ಸಂಜ್ಞೆಗಳು ಸರಿಯಾಗಿ ಅರ್ಥವಾಗುವಂತಿದ್ದರೆ ಒಪ್ಪಿಗೆಗಳಾಗಬಹುದು. ಮೌನವೂ ಒಪ್ಪಿಗೆಯಾಗಬಹುದು. ನ್ಯಾಯಾಲಯದಲ್ಲಿ ಕೇಳಿದ ಪ್ರಶ್ನೆಗೆ ಆರೋಪಿ ಅಥವಾ ಕಕ್ಷಿ ಉತ್ತರ ಕೊಡದೆ ಸುಮ್ಮನಿದ್ದರೆ ಸೂಚಿಸಿದ ಸಂಗತಿ ಸತ್ಯವಾದ್ದೆಂದು ಅನುಮಾನಿಸಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಸಾಕ್ಷಿಯ ಅಥವಾ ಕಕ್ಷಿಯ ಅಥವಾ ಆರೋಪಿಯ ಮುಖಚರ್ಯೆ, ಇಲ್ಲವೆ ಅಂಗಭಂಗಿಯೂ ಒಪ್ಪಿಗೆಯನ್ನು ಸೂಚಿಸಬಹುದು. ಒಮ್ಮೊಮ್ಮೆ ಮಾತಿನಿಂದಲೂ ವ್ಯಕ್ತಪಡಿಸಲಾರದ ಸಂಗತಿಯನ್ನು ಒಬ್ಬನ ಮುಖ ಚರ್ಯೆ, ಅಂಗಭಂಗಿ ವ್ಯಕ್ತಪಡಿಸಬಹುದು. ಘೋರ ಅಪರಾಧ ಮಾಡಿದವನ ಮುಂದೆ ಯಾವುದೋ ಒಂದು ಮಾತನಾಡಿದರೆ, ಅವನ ಮನಸ್ಸಿಗೆ ಅದು ಚುಚ್ಚಿ ಅವನ ಮುಖಚರ್ಯೆಯಲ್ಲಿ ಅವನ ಮನಸ್ಸಿನ ಭಾವ ಸ್ಫುಟವಾಗಿ ವ್ಯಕ್ತವಾಗಬಹುದು. ಆಗ ಮಾತಿಗಿಂತ ಅವನ ಮುಖಚರ್ಯೆಯೇ ಬಹು ಪರಿಣಾಮಕಾರಿಯಾದ ಸಾಕ್ಷ್ಯವಾಗಬಹುದು. ಅದು ಒಂದು ಅರ್ಥದಲ್ಲಿ ಅವನ ಒಪ್ಪಿಗೆಯನ್ನು ಸೂಚಿಸುತ್ತದೆ. ಆದರೆ ಒಪ್ಪಿಗೆಗಳು ಗುಂಪಿಗೆ ಅವನ ನಡತೆಯನ್ನು ಸೇರಿಸಲಾಗದು. ಒಪ್ಪಿಗೆಗಳು ಹೇಳಿಕೆಗಳಾಗಿರಬೇಕು. ಆದರೆ ಬಾಯಿ ಬಿಡದೆ ಸಮ್ಮತಿ ಸೂಚಿಸುವುದೂ ಒಂದು ಬಗೆಯ ಹೇಳಿಕೆ; ಅಥವಾ ತಲೆ ಆಡಿಸಿ ಸಮ್ಮತಿ ಸೂಚಿಸಬಹುದು. ಈ ಅರ್ಥದಲ್ಲಿ ಮೌನವೂ ಸಂಜ್ಞೆಯೂ ಒಪ್ಪಿಗೆಗಳಾಗಬಹುದು.

ಒಪ್ಪಿಗೆಗಳನ್ನು ಇಡಿಯಾಗಿ ನೋಡಬೇಕು. ಒಪ್ಪಿಕೊಂಡ ಮಾತಿಗೆ ರುಜುವಾತೇಕೆ–ಎಂಬ ಸೂತ್ರ ಇರುವುದರಿಂದ, ಒಂದು ಮಾತು. ಕೃತಿ, ನಡತೆ ಒಪ್ಪಿಗೆಯೋ ಅಲ್ಲವೋ ಎಂಬುದನ್ನು ಕೂಲಂಕಷವಾಗಿ ವಿಮರ್ಶಿಸಬೇಕಾಗುತ್ತದೆ. ಮೇಲೆ ಮೇಲೆ ನೋಡಿದರೆ ಒಪ್ಪಿಗೆ ಎಂಬಂತೆ ಕಾಣುವ ಎಷ್ಟೋ ಮಾತುಗಳು ಒಪ್ಪಿಗೆಯಾಗಿಲ್ಲದಿರಬಹುದು. ಒಂದು ಹೇಳಿಕೆಯನ್ನು ಒಪ್ಪಿಗೆ ಎಂದು ಅಂಗೀಕರಿಸುವುದರಿಂದ ಕಟು ಪರಿಣಾಮಗಳಿಗೆ ಎಡೆಕೊಡುವುದರಿಂದ ಆ ಒಪ್ಪಿಗೆಗಳನ್ನು ಇಡಿಯಾಗಿ ಪರಿಶೀಲನೆ ಮಾಡಿ ಅದರ ಅರ್ಥವನ್ನು, ಅದರಿಂದ ತೇಲುವ ಅಂಶವನ್ನು, ಸಮಗ್ರದೃಷ್ಟಿಯಿಂದ ನೋಡಬೇಕು. ಇಲ್ಲದೆ ಹೋದರೆ ಆ ಹೇಳಿಕೆ ನೀಡಿದವನ ಅಭಿಪ್ರಾಯವೇನು ಎಂಬುದು ಸರಿಯಾಗಿ ವ್ಯಕ್ತವಾಗಲಾರದು. ಒಬ್ಬ ಆರೋಪಿಯ ಮೇಲೆ ಖೂನಿ ಕೇಸಿನ ಆರೋಪಣೆ ಮಾಡಲಾಗಿದ್ದಾಗ, ಆತ ವಿಚಾರಕ ದಂಡಾಧಿಕಾರಿಯ (ಕಮಿಟಲ್ ಮ್ಯಾಜಿಸ್ಟ್ರೇಟ್) ಮುಂದೆ ಈ ಕೆಳಗಿನ ಹೇಳಿಕೆಯನ್ನು ಕೊಟ್ಟಿರಬಹುದು: ನಾನು ಹೊಲದಿಂದ ಮನೆಗೆ ಬಂದೆ. ಮನೆಯ ಬಾಗಿಲು ಮುಚ್ಚಿತ್ತು. ಬಾಗಿಲು ತಟ್ಟಿದೆ. ಕೂಡಲೇ ಬಾಗಿಲು ತೆರೆಯಲಿಲ್ಲ. ಒಂದೆರಡು ಬಾರಿ ಕೂಗಿದೆ. ಆಗಲೂ ತೆರೆಯಲಿಲ್ಲ. ಬಲವಾಗಿ ಬಾಗಿಲನ್ನು ಒದ್ದೆ. ಒಳಗಿನ ಅಗಳಿ ಮುರಿದು ಬಾಗಿಲು ತೆರೆಯಿತು. ಒಳಗೆ ಹೋದೆ. ನನ್ನ ಹೆಂಡತಿ ತನ್ನ ಸೀರೆಕುಪ್ಪುಸ ಸರಿಪಡಿಸಿಕೊಳ್ಳುತ್ತಿದ್ದಳು. ಒಬ್ಬ ಗಂಡಸು ಒಂದು ಮೂಲೆಯಲ್ಲಿ ಪಂಚೆ ಉಟ್ಟುಕೊಳ್ಳುತ್ತ ನಿಂತಿದ್ದ. ಹಾಸಿಗೆ ಅಸ್ತವ್ಯಸ್ತವಾಗಿತ್ತು. ಸಂಶಯ ಬಂತು. ಅಲ್ಲಿಯೇ ನಾಗಂದಿಗೆಯ ಮೇಲೆ ಇಟ್ಟಿದ್ದ ಕುಡುಗೋಲು ತೆಗೆದುಕೊಂಡು ಒಮ್ಮೆ ಬೀಸಿದೆ. ಮೂಲೆಯಲ್ಲಿ ನಿಂತಿದ್ದವನ ಕುತ್ತಿಗೆ ಕತ್ತರಿಸಿಹೋಯಿತು. ಈ ಹೇಳಿಕೆಯ ಕೊನೆಯ ಎರಡು ವಾಕ್ಯಗಳನ್ನೇ ಬಿಡಿಯಾಗಿ ತೆಗೆದುಕೊಂಡರೆ ಆ ಆರೋಪಿ ಖೂನಿ ಮಾಡಿದನೆಂದೇ ಅನುಮಾನ ಮಾಡಬೇಕಾಗುತ್ತದೆ. ಆದರೆ, ಆ ಹೇಳಿಕೆಯನ್ನು ಇಡಿಯಾಗಿ ತೆಗೆದುಕೊಂಡರೆ ಅದು ಖೂನಿ ಆಗುವುದಿಲ್ಲ ಎಂದು ಗೊತ್ತಾಗುತ್ತದೆ. ಆದ ಕಾರಣ ಒಪ್ಪಿಗೆಗಳನ್ನು ಇಡಿಯಾಗಿ ಪರಿಶೀಲಿಸಿದ ಮೇಲೆಯೇ ಬಳಸಿಕೊಳ್ಳಬೇಕು. ಅವುಗಳನ್ನು ಅಂಶತಃ ಹೆಕ್ಕಿ ತೆಗೆದು ಬಳಸಿಕೊಳ್ಳಬಾರದು.

ಒಪ್ಪಿಗೆಗಳನ್ನು ಇಡಿಯಾಗಿ ಪರಶೀಲಿಸಬೇಕಾಗಿರುವಂತೆಯೇ ಅವನ್ನು ಅತ್ಯಂತ ಸೂಕ್ಷ್ಮವಾಗಿ, ಜಾಗರೂಕತೆಯಿಂದ ಪರಿಶೀಲಿಸಬೇಕು. ಅದರಲ್ಲೂ ಬಾಯಿಮಾತಿನ ಒಪ್ಪಿಗೆಯಾದರೆ, ನ್ಯಾಯಾಲಯದ ಹೊರಗೆ ಮಾಡಿದಂಥ ಹೇಳಿಕೆಗಳಾದರೆ, ಇನ್ನೂ ಎಚ್ಚರಿಕೆಯಿಂದ ಪರಾಂಬರಿಸಬೇಕಾಗುತ್ತದೆ. ಒಬ್ಬ ಹೇಳಿದ ಮಾತನ್ನು ಇನ್ನೊಬ್ಬ ಇದ್ದಕ್ಕಿದ್ದಹಾಗೆ, ಒಂದಕ್ಷರವೂ ಬಿಡದೆ ಕೇಳಿ ನೆನಪಿಟ್ಟುಕೊಂಡರೂ ಆಡಿದ ಮಾತಿನ ಸಂದರ್ಭ, ಸನ್ನಿವೇಶ, ಉದ್ದೇಶ, ಭಾವ–ಇವನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ, ಆಡಿದವನ ಮಾತಿನ ಧ್ವನಿಯೂ ಆಡಿದ ಮಾತಿನ ಮೂಲಾರ್ಥವನ್ನು ಭಾವವನ್ನು ಗ್ರಹಿಸದೆ ಹೋಗಬಹುದು. ಆಡಿದವನ ಧ್ವನಿಯು ಆಡಿದ ಮಾತಿನ ಅರ್ಥ ಮತ್ತು ಉದ್ದೇಶಗಳನ್ನು ವ್ಯಕ್ತಪಡಿಸುತ್ತದೆ. ಹೀಗಿರುವಾಗ ಬಾಯಿಮಾತಿನ ಒಪ್ಪಿಗೆಗಳನ್ನು ನಂಬಿ, ಅದರಿಂದ ತೇಲುವ ಅನುಮಾನವನ್ನು ನಿರ್ಧರಿಸುವುದು ಕಷ್ಟದ ಕೆಲಸ. ತೃಪ್ತಿಕರವಾಗಿ ನಿಸ್ಸಂಶಯವಾಗಿ ರುಜುವಾತು ಆದ ಒಪ್ಪಿಗೆಗಳಿಗೆ ಸಾಕ್ಷ್ಯದಲ್ಲಿ ದೊಡ್ಡ ಸ್ಥಾನವಿದೆ. ಅವುಗಳ ತೂಕ ಹೆಚ್ಚು. ಅವು ಬಹಳ ಮಟ್ಟಿಗೆ ಸತ್ಯವೇ ಎಂದು ನಿರ್ಧರಿಸಲಾಗುತ್ತದೆ. ಒಪ್ಪಿಕೊಂಡವನು ಅದರಿಂದ ಉದ್ಭವಿಸುವ ಎಲ್ಲ ಪರಿಣಾಮಗಳಿಗೂ ಬದ್ಧನಾಗುತ್ತಾನೆ.

ಹೇಗೆಂದರೆ ಒಪ್ಪಿಕೊಂಡವನು ತನ್ನ ಒಪ್ಪಿಗೆಯಿಂದ ತಪ್ಪಿಸಿಕೊಳ್ಳಲಾರನೇ ಎಂಬ ಪ್ರಶ್ನೆ ಏಳುತ್ತದೆ. ಒಪ್ಪಿಕೊಂಡವನು ತೃಪ್ತಿಕರವಾಗಿ ತನ್ನ ಒಪ್ಪಿಗೆಯನ್ನು ವಿವರಿಸಿ, ಅದರಿಂದ ತಾನು ಬದ್ಧನಲ್ಲ ಎಂದು ತೋರಿಸಿಕೊಟ್ಟರೆ ಆಗ ಮಾತ್ರ ಆತ ಬದ್ಧನಲ್ಲ. ಒತ್ತಾಯ, ವಂಚನೆ, ಮೋಸ, ಆಸೆ, ವಸೂಲಿ ಮುಂತಾದವುಗಳಿಗೆ ಒಳಗಾಗಿ ಮಾಡಿದ ಒಪ್ಪಿಗೆಗಳಿಂದ ಒಪ್ಪಿಕೊಂಡವನು ಬದ್ಧನಾಗಲಾರ. ಆದರೆ, ಹಾಗೆ ಅನುಚಿತ ಒತ್ತಾಯ, ವಂಚನೆ, ಮೋಸ, ಆಸೆ, ವಸೂಲಿಗಳಿಗೆ ಒಳಗಾದ ಸಂಗತಿಯನ್ನು ರುಜುವಾತು ಮಾಡುವ ಭಾರ, ಒಪ್ಪಿಕೊಂಡವನ ಮೇಲಿರುತ್ತದೆ.

ಒಂದು ವೇಳೆ ಒಪ್ಪಿಗೆ ಈ ಎಲ್ಲ ಕಟುಪರೀಕ್ಷೆಗಳಿಗೂ ಗುರಿಯಾಗಿ ಪಾರಾದರೂ ಅದನ್ನೊಂದೇ ನಂಬಿ ಸತ್ಯಾಸತ್ಯ, ನ್ಯಾಯಾನ್ಯಾಯಗಳನ್ನು ಖಂಡಿತವಾಗಿ ನಿರ್ಧರಿಸಲು ಬಾರದಿರಬಹುದು. ಒಪ್ಪಿಗೆಯೂ ಒಂದು ಸಾಕ್ಷ್ಯ ಎನಿಸಬಹುದು. ದತ್ತಕ ತೆಗೆದುಕೊಂಡಿದ್ದು ನಿಜವೇ ಅಲ್ಲವೆ ಎಂಬುದು ತೀರ್ಮಾನಿಸಬೇಕಾದ ಅಂಶವಾಗಿದ್ದಾಗ ದತ್ತು ತಂದೆ ಅಥವಾ ತಾಯಿ ದತ್ತು ಸ್ವೀಕಾರ ಸಮಾರಂಭದ ಅಚ್ಚಾದ ಆಹ್ವಾನ ಪತ್ರಿಕೆಯನ್ನು ಕಳುಹಿಸಿದ್ದುದಾಗಿ ಒಪ್ಪಿಕೊಳ್ಳಬಹುದು. ಆದರೆ ಅದೊಂದೇ ಒಪ್ಪಿಗೆಯಿಂದ ದತ್ತುಸ್ವೀಕಾರ ನಿಜ ಎಂದು ತೀರ್ಪುಹೇಳಲು ಬರುವುದಿಲ್ಲ. ವಾಸ್ತವವಾಗಿ ಹಡೆದ ತಂದೆ ಅಥವಾ (ತಂದೆ ಇಲ್ಲದಿದ್ದರೆ) ತಾಯಿ, ಮಗುವನ್ನು ದತ್ತು ತಂದೆ ಅಥವಾ ತಾಯಿಗೆ ವಾಸ್ತವವಾಗಿ ಕೊಟ್ಟುದನ್ನು ರುಜುವಾತು ಮಾಡಲೇಬೇಕು. ಅಚ್ಚಾದ ಆಹ್ವಾನ ಕೊಟ್ಟದ್ದು ನಿಜವೆಂದು ಹೇಳಿದ ಮಾತು ಒಂದು ಪ್ರಬಲವಾದ ಸಾಕ್ಷ್ಯವಾಗುತ್ತದೆ ಮಾತ್ರ .

ಒಂದು ವ್ಯಾಜಕ್ಕೆ ಕಕ್ಷಿಗಳಾದವರು ಅಥವಾ ಅವರ ಅಧಿಕೃತ ಪ್ರತಿನಿಧಿಗಳು ಕೊಟ್ಟ ಹೇಳಿಕೆಗಳು ಒಪ್ಪಿಗೆಗಳು ಎನಿಸಿಕೊಳ್ಳುತ್ತವೆ. ಪ್ರಾತಿನಿಧಿಕವಾಗಿ ದಾವೆಯನ್ನು ಹೂಡಿದವರಾಗಲಿ, ಪ್ರಾತಿನಿಧಿಕವಾಗಿ ಪ್ರತಿಕಕ್ಷಿಯಾಗಿ ಆ ದಾವೆಯನ್ನು ಎದುರಿಸಿದವರಾಗಲಿ ಹೇಳಿಕೆ ಕೊಡುವಾಗ ಆಯಾ ಪ್ರಾತಿನಿಧಿಕ ಸ್ಥಾನ ಅವಲಂಬಿಸಿರಬೇಕು. ಅಲ್ಲದಿದ್ದರೆ ಅವು ಒಪ್ಪಿಗೆಗಳಾಗಲಾರವು. ಹಾಗೂ ವ್ಯಾಜಕ್ಕೆ ಸಂಬಂಧಿಸಿದ ಸ್ವತ್ತಿನಲ್ಲಿ ಸ್ವಾಮ್ಯದ (ಪ್ರೊಪ್ರೈಟರಿ) ಅಥವಾ ಧನ ಸಂಬಂಧವಾದ (ಪೆಕ್ಯೂನಿಯರಿ) ಆಸಕ್ತಿ ಇರುವವರು ಕೊಟ್ಟ ಹೇಳಿಕೆಗಳು ಒಪ್ಪಿಗೆಗಳಾಗುತ್ತವೆ; ಅಥವಾ ವ್ಯಾಜ್ಯಕ್ಕೆ ಸಂಬಂಧಿಸಿದ ಆಸ್ತಿಯಲ್ಲಿ ಯಾರಿಗೆ ಸ್ವಾಮ್ಯ ಅಥವಾ ಧನಸಂಬಂಧಿ ಆಸಕ್ತಿ ಹಿಂದೆ ಇತ್ತೋ ಅಂಥವರು ಮಾಡಿದ ಒಪ್ಪಿಗೆಗೆ ಅದರಿಂದ ಆ ಸ್ವಾಮ್ಯದ ಅಥವಾ ಧನ ಸಂಬಂಧಿ ಆಸಕ್ತಿ ಪಡೆದವರು ಬದ್ಧರಾಗುತ್ತಾರೆ. (ಭಾರತೀಯ ಸಾಕ್ಷ್ಯಕಾಯಿದೆ: ಕಲಂ 18). ಭಾರತೀಯ ಸಾಕ್ಷ್ಯ ಕಾಯಿದೆಯ ಪ್ರಕಾರ ಯಾವುದು ಒಪ್ಪಿಗೆಯೆನಿಸಿಕೊಳ್ಳುತ್ತದೆ, ಯಾವುದು ಎನಿಸಿಕೊಳ್ಳುವುದಿಲ್ಲ, ಒಪ್ಪಿಗೆಯೆಂದು ಪರಿಗಣಿಸಬೇಕಾದ ಹೇಳಿಕೆಯಲ್ಲಿ ಎಷ್ಟು ಗ್ರಾಹ್ಯ–ಎಂಬ ವಿಚಾರಗಳನ್ನು ಸ್ಪಷ್ಟ ಪಡಿಸಲು ಕೆಲವು ಉದಾಹರಣೆಗಳನ್ನು ಮುಂದೆ ಕೊಟ್ಟಿದೆ.

ಒಂದು ಮನೆಯ ವಿಚಾರವಾಗಿ A ಮತ್ತು Bಗಳ ನಡುವೆ ವ್ಯಾಜ್ಯ ನಡೆಯುತ್ತದೆ. A ಮತ್ತು B ಇಬ್ಬರೂ ಕ್ರಮವಾಗಿ ಅ ಮತ್ತು ಆ ಎಂಬ ಇಬ್ಬರು ವಕೀಲರನ್ನು ಗೊತ್ತುಮಾಡಿ ಅವರ ಮೂಲಕ ಒಪ್ಪಿಗೆಗಳನ್ನು ಮಾಡಬಹುದು ಅಥವಾ ಅವರು ತಮ್ಮ ಮಕ್ಕಳಿಗೊ ಗುಮಾಸ್ತರಿಗೊ ಒಪ್ಪಿಗೆ ಕೊಡಲೆಂದೇ ಅಧಿಕಾರ ಕೊಡಬಹುದು. ಆ ಅಧಿಕಾರ ವ್ಯಕ್ತವಾಗಿರಬಹುದು ಅಥವಾ ಸೂಚ್ಯವಿರಬಹುದು.

ಒಂದು ಮಠದ ಮಠಾಧಿಕಾರಿಯಾಗಿ ಬಂದ ಒಬ್ಬ ಸ್ವಾಮಿ ಆ ಪೀಠಕ್ಕೆ ಕ್ರಮಬದ್ಧವಾಗಿ ಬಂದಿಲ್ಲವೆನಿಸಿದಾಗ ಆ ಮಠದ ಅಸಂಖ್ಯಾತ ಭಕ್ತರೂ ಶಿಷ್ಯರೂ ವಾದಿಗಳಾಗಿ ದಾವಾ ಹೂಡುವುದು ಸಾಧ್ಯವಿಲ್ಲ. ಮಠದ ಶಿಷ್ಯರಲ್ಲಿ ಯಾರಾದರೂ ಐವರು ಪ್ರಾತಿನಿಧಿಕವಾಗಿ ದಾವಾ ಹೂಡಬಹುದು. ಹಾಗೆ ದಾವಾ ಹೂಡಿದ ಅವರಿಗೆ ನ್ಯಾಯಾಲಯ ಅಪ್ಪಣೆ ಕೊಡಬೇಕು. ವಿಚಾರಣೆಯ ಕಾಲದಲ್ಲಿ ಅವರು ಕೊಟ್ಟ ಹೇಳಿಕೆಗಳು ಒಪ್ಪಿಗೆಗಳೆನಿಸಿಕೊಳ್ಳುತ್ತವೆ.

A ಒಂದು ಮನೆಯನ್ನು ಅದರ ಮಾಲೀಕನಾದ O ಯಿಂದ ಕೊಳ್ಳುತ್ತಾನೆ. ತರುವಾಯ B ತನ್ನ ಮನೆಯ ಮಾಳಿಗೆಯ ನೀರನ್ನು Oಯ ಮನೆಯ ಆವರಣದೊಳಗೆ ಹರಿಸಕೂಡದು ಎಂದು ದಾವಾ ಹೂಡುತ್ತಾನೆ. ಆಗ O ತನಗೆ ಬರೆದುಕೊಟ್ಟ ಕರಾರನ್ನು ತೋರಿಸಿ, ನೀರು ಹರಿಸುವ ಹಕ್ಕು ತನಗಿದೆಯೆಂದು B ಸಾಧಿಸಬಹುದು. ಆಗ Bಯೊಂದಿಗೆ O ಮಾಡಿಕೊಂಡ ಒಪ್ಪಿಗೆ Oಯ ಮೇಲೆ ಬದ್ಧವಾಗುತ್ತದೆ. ಒಂದುವೇಳೆ O ತನ್ನ ಮನೆಯನ್ನು Aಗೆ ಮಾರಿದ ಮೇಲೆ Bಗೆ ಒಪ್ಪಿಗೆ ಬರೆದುಕೊಟ್ಟರೆ ಅದು Aಯನ್ನು ಬದ್ಧಗೊಳಿಸಲಾರದು.

ವ್ಯಾಜ್ಯಕ್ಕೆ ಕಕ್ಷಿಗಳಾದವರು, ವ್ಯಾಜ್ಯದ ಸ್ವತ್ತಿನಲ್ಲಿ ಒಡೆತನದ ಆಸಕ್ತಿಯಿದ್ದವರು ಅಥವಾ ಅವರ ಪ್ರತಿನಿಧಿಗಳು ಕೊಟ್ಟ ಹೇಳಿಕೆಗಳು ಒಪ್ಪಿಗೆಗಳಾಗುವುದು ಸಹಜ. ಆದರೆ ಸದ್ಯದಲ್ಲಿ ಸ್ವತ್ತಿನಲ್ಲಿ ಆಸಕ್ತಿ ಇಲ್ಲದವರೂ ವ್ಯಾಜ್ಯಕ್ಕೆ ಕಕ್ಷಿಗಳಾಗಿಲ್ಲದವರೂ ಕೊಟ್ಟ ಹೇಳಿಕೆಗಳೂ ಕೆಲವು ಸಂದರ್ಭಗಳಲ್ಲಿ ಒಪ್ಪಿಗೆಗಳಾಗುತ್ತವೆ. ಉದಾಹರಣೆ: Bಯ ಮಗ A .ಅ ಒಬ್ಬ ಸಾಹುಕಾರ. A ಯಿಂದ 1,000 ರೂ. ಬರಬೇಕೆಂದು ಅ ದಾವಾ ಹೂಡುತ್ತಾನೆ. A ಸಾಲ ಪಡೆದೂ

ಇಲ್ಲ, ಪತ್ರ ಬರೆದುಕೊಟ್ಟೂ ಇಲ್ಲ. Aಯ ತಂದೆ (B) ವಚನಪತ್ರ (ಪ್ರೋನೋಟು) ಬರೆದುಕೊಟ್ಟಿರುವುದರಿಂದ ಅ ದಾವಾ ಹೂಡುತ್ತಾನೆ. ಆಗ ಬರೆದುಕೊಟ್ಟ ವಚನಪತ್ರ Aಗೆ ವಿರುದ್ಧವಾಗಿ ಒಪ್ಪಿಗೆಯಾಗುತ್ತದೆ. ಇದು ಸ್ವೀಕಾರಾರ್ಹ ಒಪ್ಪಿಗೆ (ಕಲಂ 19).

ಕ್ರಿಮಿನಲ್ ಮೊಕದ್ದಮೆಗಳಲ್ಲಿ ತಪ್ಪೊಪ್ಪಿಗೆಗಳ ಪ್ರಸ್ತಾಪ ಬರುತ್ತದೆ. ನ್ಯಾಯಾಲಯದ ಹೊರಗೆ ಜುಲುಮೆ, ಒತ್ತಾಯ, ಹೆದರಿಕೆ, ಅಕ್ರಮ ವಸೂಲಿ, ಆಸೆ ಅಥವಾ ಆಮಿಷಕ್ಕೆ ಒಳಗಾಗಿ ಮಾಡಿದ ಯಾವ ತಪ್ಪೊಪ್ಪಿಗೆಯೂ ಸ್ವೀಕಾರಾರ್ಹವಲ್ಲ. ಅಧಿಕಾರ ಸ್ಥಾನದಲ್ಲಿರುವವರು ಕೊಡುವ ಬೆದರಿಕೆ, ಒತ್ತಾಯ, ಜುಲುಮೆ, ತೋರಿಸುವ ಆಸೆ–ಇಂಥವುಗಳಿಗೆ ಒಳಪಟ್ಟು ಮಾಡಿದ ಯಾವ ಹೇಳಿಕೆಯೂ ಒಪ್ಪಿಗೆ ಎನಿಸುವುದಿಲ್ಲ. ಯಾವನೇ ಆರೋಪಿ ಯಾವುದೋ ಪ್ರಾಪಂಚಿಕ ಪೀಡೆಯನ್ನು ತಪ್ಪಿಸಿಕೊಳ್ಳುವ, ಇಲ್ಲವೇ ಪ್ರಯೋಜನ ಪಡೆಯುವ ನಿರೀಕ್ಷೆಯಿಂದ ಮಾಡಿದ ತಪ್ಪೊಪ್ಪಿಗೆಗಳೂ ಸ್ವೀಕಾರಾರ್ಹವಲ್ಲ (ಕಲಂ 24).

ಪೋಲಿಸರ ಸಮ್ಮುಖದಲ್ಲಿ ಆರೋಪಿ ಮಾಡಿದ ಯಾವ ಹೇಳಿಕೆಯೂ ಸ್ವೀಕಾರಾರ್ಹವಲ್ಲ. ಹಾಗೆಯೇ ಪೋಲೀಸ್ ಅಧಿಕಾರಿಯ ಸ್ವಾಧೀನದಲ್ಲಿದ್ದಾಗ ಆರೋಪಿ ಮಾಡುವ ಹೇಳಿಕೆಯೂ ಆ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಮಾಡಿದ ಹೇಳಿಕೆಯ ಹೊರತು ಯಾವ ಹೇಳಿಕೆಯೂ ಸ್ವೀಕಾರಾರ್ಹವಲ್ಲ. (ಕಲಂ 25 ಮತ್ತು 26). ಆದರೆ ಈ ನಿಯಮಕ್ಕೆ ಒಂದು ವಿನಾಯತಿ ಇದೆ. ಪೋಲೀಸ್ ಅಧಿಕಾರಿಯ ಸ್ವಾಧೀನದಲ್ಲಿದ್ದಾಗ ಕೊಟ್ಟ ವರ್ತಮಾನದ ಆಧಾರದ ಮೇಲೆ ಏನಾದರೂ ನಿರ್ದಿಷ್ಟ ವಸ್ತು ಅಥವಾ ಸಂಗತಿ ಪತ್ತೆಯಾದರೆ ಆ ಪತ್ತೆಗೆ ಕಾರಣವಾದ ವರ್ತಮಾನವಷ್ಟೇ ಕೋರ್ಟಿನಲ್ಲಿ ಸ್ವೀಕಾರಾರ್ಹವಾಗುತ್ತದೆ. ಉದಾಹರಣೆಗೆ: ಒಂದು ಖೂನಿ ಮೊಕದ್ದಮೆಯಲ್ಲಿ ಪೋಲೀಸರ ಕೈಗೆ ಸಿಕ್ಕಿ ಬಿದ್ದವನು ಹೇಳಿಕೆ ಕೊಟ್ಟು, ತಾನು ಅಡವಿಯಲ್ಲಿ ಒಬ್ಬನೇ ಹೋಗುತ್ತಿದ್ದಾಗ ಅಲ್ಲಿ ಒಬ್ಬ ಹುಡುಗಿ ದನ ಕಾಯುತ್ತ ಕುಳಿತಿದ್ದಳೆಂದೂ ಆಕೆಯ ಕಿವಿಯಲ್ಲಿ ಒಂದು ಜೊತೆ ಬೆಂಡೋಲೆ ಇದ್ದುವೆಂದೂ ತಾನು ಆಕೆಯ ಕತ್ತು ಹಿಸುಕಿ ಅವಳನ್ನು ಕೊಂದು ಕಿವಿಯಲ್ಲಿದ್ದ ಬೆಂಡೋಲೆ ಕಿತ್ತುಕೊಂಡು, ಆಕೆಯ ಹೆಣವನ್ನು ಹಳ್ಳದಲ್ಲಿ ಹೂತು ಮರಳು ಮುಚ್ಚಿ, ತರುವಾಯ ಬೆಂಡೋಲೆಯನ್ನು ತನ್ನೂರ ಅಕ್ಕಸಾಲಿಗನಲ್ಲಿ ಒತ್ತೆಯಿಟ್ಟುದಾಗಿಯೂ ತನ್ನನ್ನು ಕರೆದುಕೊಂಡು ಹೋದರೆ ಹೆಣವನ್ನೂ ಒತ್ತೆಯಿಟ್ಟುಕೊಂಡ ಅಕ್ಕಸಾಲಿಗನನ್ನೂ ತೋರಿಸುವುದಾಗಿಯೂ ತಿಳಿಸುತ್ತಾನೆ. ಈ ಹೇಳಿಕೆಯಲ್ಲಿ ಕೊನೆಯ ಎರಡು ವಾಕ್ಯಗಳ ಹೊರತು ಮತ್ತೇನನ್ನೂ ನ್ಯಾಯಾಲಯ ಸ್ವೀಕರಿಸುವುದಿಲ್ಲ. ಆರೋಪಿಯ ಈ ಹೇಳಿಕೆಯ ಆಧಾರದಿಂದ ಹಳ್ಳದಲ್ಲಿ ಹೆಣ ಇದ್ದದ್ದೇ ಆದರೆ, ಅಕ್ಕಸಾಲಿಗನಲ್ಲಿ ಬೆಂಡೋಲೆ ಇದ್ದುದ್ದೇ ಆದರೆ, ಆಗ ಅಷ್ಟು ವರ್ತಮಾನ ಮಾತ್ರ ಸ್ವೀಕಾರಾರ್ಹವಾಗುತ್ತದೆ. ಇನ್ನುಳಿದ ಹೇಳಿಕೆಯನ್ನು ಸ್ವೀಕರಿಸುವುದಿಲ್ಲ. ಏಕೆಂದರೆ ಹಳ್ಳದಲ್ಲಿ ದೊರೆತ ಹೆಣ ಅಕ್ಕಸಾಲಿಗನಲ್ಲಿ ಸಿಕ್ಕ ಬೆಂಡೋಲೆ ಅಲ್ಲಿವೆ ಎಂಬುದು ಅವನಿಗೆ ಗೊತ್ತಿತ್ತು–ಎಂಬುದಷ್ಟೇ ಅವು ಸಿಕ್ಕದ್ದರಿಂದ ರುಜುವಾತಾಯಿತು. ಅವನೇ ಖೂನಿ ಮಾಡಿದನೋ ಅಥವಾ ಇನ್ನು ಯಾರಾದರೂ ಖೂನಿ ಮಾಡಿದ ಸಂಗತಿ ಅವನಿಗೆ ಗೊತ್ತಿದ್ದೂ ಆ ರೀತಿ ವರ್ತಮಾನ ಕೊಟ್ಟನೋ ಹೇಳಲು ಬಾರದು. ಆದ ಕಾರಣ ಅವನ ಮಾತನ್ನು ಪೂರ್ಣ ನಂಬಿ ಅವನನ್ನು ತಪಿತಸ್ಥ ಎಂದು ಹೇಳಲುಬಾರದು (ಕಲಂ 27).

ಇಬ್ಬರು ಕೂಡಿ ಮಾಡಿದ ಅಪರಾಧದಲ್ಲಿ ಒಬ್ಬ ತನ್ನ ಸಹಾಪರಾಧಿಯ ವಿರುದ್ಧವಾಗಿ ಕೊಟ್ಟ ಹೇಳಿಕೆಯನ್ನು ಹೇಳಿಕೆ ಕೊಡದ ಅಪರಾಧಿಯ ವಿರುದ್ಧವಾಗಿಯೂ ಉಪಯೋಗಿಸಬಹುದು (ಕಲಂ 30).

ಆದರೆ ಯಾವ ಒಪ್ಪಿಗೆಯೂ ಸಂಪೂರ್ಣವೂ ನಿರ್ಣಾಯಕವೂ ನಿಸ್ಸಂಶಯವೂ ಆದ ಪುರಾವೆಯಲ್ಲ (ಕಲಂ–31). (ಕೆ.ಪಿ.)

**ಒಪ್ಪಿಸಿದ ಲೆಕ್ಕ:** ಸಲ್ಲಿಸಿದ ಸರಕುಗಳ ಬಿಕರಿ ಪಟ್ಟಿಯನ್ನು ಹಿಂದೆಯೇ ಕಳುಹಿಸಲಾಗಿದ್ದು ಅದರಲ್ಲಿ ಸೂಚಿಸಲಾಗಿರುವ ಹಣವನ್ನು ಗ್ರಾಹಕ ಪಾವತಿ ಮಾಡದಿದ್ದಾಗ ಅದರ ವಸೂಲಿಗಾಗಿ ಗ್ರಾಹಕನಿಗೆ ವರ್ತಕ ಬರೆಯುವ ನೆನಪು ಪತ್ರದಲ್ಲಿ ಮತ್ತೊಮ್ಮೆ ಮಾರಾಟದ ವಿವರಗಳನ್ನೆಲ್ಲ ಬರೆಯುವ ಬದಲು ಈ ಒಕ್ಕಣೆಯನ್ನು (ಅಕೌಂಟ್ ರೆಂಡರ್ಡ್) ಬಳಸುವುದು ರೂಢಿಯಲ್ಲಿದೆ. ಹಿಂದೆಯೇ ಒಪ್ಪಿಸಿದ ಲೆಕ್ಕಕ್ಕಾಗಿ ನಿಮ್ಮಿಂದ ಬರಬೇಕಾದ ಇಂತಿಷ್ಟು ಹಣ ಇನ್ನೂ ಬಂದಿಲ್ಲ–ಎಂಬುದಾಗಿ ಆತ ಗ್ರಾಹಕನಿಗೆ ಬರೆಯುತ್ತಾನೆ; ಅಥವಾ ಒಪ್ಪಿಸಿದ ಲೆಕ್ಕಕ್ಕಾಗಿ ಬರಬೇಕಾದ ಬಾಕಿ ಇಷ್ಟು ಎಂದು ಯಾದಿಯಲ್ಲಿ ಸೂಚಿಸುತ್ತಾನೆ.

ಯಾವುದೋ ಒಂದು ಕರ್ತವ್ಯ ನಿರ್ವಹಣೆಯ ಸಂಬಂಧವಾಗಿ ತನಗೆ ನೀಡಲಾದ ಹಣ, ವಸೂಲಾದ ಮೊಬಲಗು, ಮಾಡಿದ ಪಾವತಿಗಳು ಮುಂತಾದ ವಿವರಗಳನ್ನೂ ಉಳಿದಿರಬಹುದಾದ ಹಣದ ವಿಲೆ ಹೇಗಾಯಿತೆಂಬುದನ್ನೂ ಸೂಚಿಸಿ ಒಬ್ಬಾತ ತನ್ನನ್ನು ನೇಮಿಸಿದವರಿಗೆ ಅಥವಾ ಸಂಬಂಧಪಟ್ಟವರಿಗೆ ನೀಡಿದ್ದೂ ಒಪ್ಪಿಸಿದ ಲೆಕ್ಕವೇ. (ಎ.ಕೆ.ಎಸ್.ಎಚ್.)

**ಒಫಿಯೂಚಸ್:** ಹರ್ಕ್ಯುಲೀಸ್ ಮತ್ತು ಸ್ಕಾರ್ಪಿಯಸ್ (ವೃಶ್ಚಿಕ) ನಕ್ಷತ್ರ ಪುಂಜಗಳ ನಡುವೆ ವಿಷುವದ್ವೃತ್ತವನ್ನು ಹಾಯ್ದು ವ್ಯಾಪಿಸಿರುವ ಉತ್ತರದ ಒಂದು ನಕ್ಷತ್ರಪುಂಜ. ನಮಗೆ ಅತ್ಯಂತ ಸಮೀಪವಿರುವ ನಕ್ಷತ್ರಗಳಲ್ಲಿ ಮೂರನೆಯದಾದ (ಸೂರ್ಯ ಮತ್ತು ಪ್ರಾಕ್ಸಿಮಾ ಸೆಂಟಾರಿ ಮೊದಲಿನ ಎರಡು) ಬಾರ್ನಾರ್ಡನ ನಕ್ಷತ್ರ ಈ ಪುಂಜದಲ್ಲಿದೆ. ಹಲವಾರು ನೋವ ನಕ್ಷತ್ರಗಳನ್ನು ಒಫಿಯೂಕಸಿನಲ್ಲಿ ನೋಡಲಾಗಿದೆ. ಕೆಪ್ಲರನ ನಕ್ಷತ್ರ ಎಂಬ ಮಹಾನೋವ (1604) ಇವುಗಳಲ್ಲಿ ಪ್ರಸಿದ್ಧವಾದದ್ದು. *

**ಒಬೆಲಿಸ್ಕ್:** ಚಪ್ಪಟೆಯಾದ ನಾಲ್ಕು ಪಕ್ಕಗಳಿದ್ದು, ಮೇಲಕ್ಕೆ ಹೋದಂತೆಲ್ಲ ಸಪುರವಾಗಿ ತುತ್ತು ತುದಿಯಲ್ಲಿ ಪಿರಮಿಡ್ಡಿನಂತಿರುವ ಸ್ತಂಭ. ಈಜಿಪ್ಟಿನ ಹಳೆಯ ಪ್ರಭುತ್ವದಲ್ಲಿ ಗೋರಿಯ ಸ್ಮಾರಕವಾಗಿ ಇದನ್ನು ನೆಡುತ್ತಿದ್ದರು. ದೊರೆಗಳ ಜೈತ್ರಯಾತ್ರೆಯೇ ಮುಂತಾದ ಸಾಹಸ ಕೃತಿಗಳನ್ನು ಬಣ್ಣಿಸುವ ಚಿತ್ರಲಿಪಿಗಳನ್ನು ಇವುಗಳ ಮೇಲೆ ಕೆತ್ತಲಾಗುತ್ತಿತ್ತು. ಎಲಿಫೆಂಟೈನಿಯಲ್ಲಿ ಸಾಬುಯಿಯ ಗೋರಿಯ ಮುಂದೆ ಎರಡು ಸ್ತಂಭಗಳನ್ನು ನೆಡಲಾಗಿತ್ತು. ಥೀಬ್ಸಿನಲ್ಲಿ ದೊರೆಗಳ ಗೋರಿಗಳ ಮುಂದೆ ಒಂದೊಂದೇ ಸ್ತಂಭ ನೆಡುವ ಪದ್ಧತಿ ಬಂತು. ಉದ್ಯಾನಗಳಲ್ಲೂ ಅರಮನೆಗಳ ಮುಂದೂ ಇವನ್ನು ಸ್ಥಾಪಿಸುತ್ತಿದ್ದರು. ಇವು ಸಾಮಾನ್ಯವಾಗಿ ಅಷ್ಟೇನೂ ಎತ್ತರವಾಗಿರುತ್ತಿರಲಿಲ್ಲ. ಮೊದಲು ನೆಟ್ಟಿದ್ದ ಸ್ಥಳದಲ್ಲೇ ಈಗಲೂ ನಿಂತಿರುವ ಅತ್ಯಂತ ಪುರಾತನ ಸ್ತಂಭವೆಂದರೆ ಪುರಾತನ ಹೀಲಿಯಾಪೊಲಿಸ್‌ನ ಅಲ್‌ಮಟಾರಿಯದಲ್ಲಿರುವ ಒಂದನೆಯ ಸೆನಸ್ರೆಟನ ಸ್ತಂಭ. ಇದರ ಎತ್ತರ 21 ಮೀ. ಅನಂತರದ ಸ್ತಂಭಗಳಂತೆ ಇದು ಮೇಲೆ ಬಲು ಹೆಚ್ಚಾಗಿ ಸಪೂರವಾಗಿಲ್ಲ.

ಪ್ಯಾರಿಸಿನ ದ ಲಾ ಕಾನ್‌ಕಾರ್ಡ್ ಸ್ಥಳದಲ್ಲಿ ಇಡಲಾಗಿರುವ ಒಂದು ಒಬೆಲಿಸ್ಕ್

ಹೊಸ ಪ್ರಭುತ್ವ ಕಾಲದಲ್ಲಿ ಒಬೆಲಿಸ್ಕ್‌ಗಳಿಗೆ ದೇವಸ್ಥಾನದಲ್ಲಿ ಪ್ರಮುಖಸ್ಥಾನ ಲಭ್ಯವಾಯಿತು. 18ನೆಯ ಮನೆತನದ ಕಾಲದ ದೇವಸ್ಥಾನದಲ್ಲಿದ್ದ ಭಾಗಗಳು ಮುಖ್ಯವಾಗಿ ಮೂರು: ಮಹಾದ್ವಾರ, ಮುಖ ಮಂಟಪ ಮತ್ತು ಆರಾಧನ ಮಂದಿರ. ಕಾರ್ನಾಕಿನ ಅಮಾನ್ ದೇವಸ್ಥಾನದ ರಚನೆ ಈ ಬಗೆಯದು. ಈ ಸ್ತಂಭಗಳನ್ನು ಕಡೆದು ನಿಲ್ಲಿಸಲು ಏಳು ತಿಂಗಳುಗಳ ಕಾಲ ಬೇಕಾಯಿತೆಂದು ಅಲ್ಲಿನ ಒಂದು ಶಾಸನ ತಿಳಿಸುತ್ತದೆ. ಇಲ್ಲೂ

ಒಂದೇ ಜೊತೆ ಸ್ತಂಭಗಳನ್ನು ನಿಲ್ಲಿಸುವ ಪದ್ಧತಿಯಿತ್ತು. ಈ ಪೈಕಿ ಒಂದನೆಯ ಥಟ್ಮೋಸ್ ನಿರ್ಮಿಸಿದ ಮಹಾದ್ವಾರದ ಮುಂದೆ ನಿಲ್ಲಿಸಿದ ಸ್ತಂಭಗಳೇ ಅತ್ಯಂತ ಪುರಾತನ. ಇವುಗಳ ಪೈಕಿ ಒಂದು ಇನ್ನೂ ಹಾಗೆಯೇ ನಿಂತಿದೆ. ಅದು 80 ಅಡಿಗಳಿಗಿಂತಲೂ ಮಿಗಿಲಾಗಿ ಎತ್ತರವಾಗಿದೆ; ಇದರ ಬುಡ ಆರು ಅಡಿಗಳ ಚಚ್ಚೌಕ; ತೂಕ 325 ಟನ್.

ಹಳೆಯ ಒಬೆಲಿಸ್ಕ್‌ಗಳನ್ನು ಸಾಮಾನ್ಯವಾಗಿ ನಿರ್ಮಿಸುತ್ತಿದ್ದದ್ದು ಸ್ಮರಣಾರ್ಥವಾಗಿ. ಆದರೆ ಸೂರ್ಯಪೂಜೆಗೂ ಇವಕ್ಕೂ ಸಂಬಂಧವಿದೆಯೆಂದು ತೋರುತ್ತದೆ. ಗೀಜ಼ದ ಬಳಿಯ ಅಬೋಸಿರ್‌ನಲ್ಲಿನ ಒಂದು ದೇಗುಲದಲ್ಲಿ ಮಧ್ಯದ ಪೂಜಾಸ್ಥಾನದಲ್ಲಿ ತಲೆ ಕೊಚ್ಚಿದ ಪಿರಮಿಡ್ ಮಾದರಿಯ ವೇದಿಕೆಯ ಮೇಲೆ ಒಂದು ಒಬೆಲಿಸ್ಕ್ ಇದೆ. ಅದರ ಮುಂದೆ ಬಲಿಪೀಠ. ಇಂಥ ಸ್ತಂಭಗಳ ಪಿರಮಿಡಾಕಾರದ ತುದಿಯ ಮೇಲೆ ಬಿಸಿಲನ್ನು ಪ್ರತಿಫಲಿಸುವ ಗುಣವುಳ್ಳ ಬೆಳ್ಳಿ–ಚಿನ್ನ ಮಿಶ್ರಿತ ಲೋಹದ ಕವಚ ತೊಡಿಸಲಾಗುತ್ತಿತ್ತು. ಎಲಿಫೆಂಟೈನಿಯಲ್ಲಿ ಸಿಕ್ಕಿರುವ ಅನೇಕ ಸಣ್ಣ ಒಬೆಲಿಸ್ಕ್‌ಗಳು ಸೂರ್ಯಮತಸಂಬಂಧವಾದ ದೇವಮಂದಿರಗಳಲ್ಲಿದ್ದಂಥವು. ದೊಡ್ಡ ಒಬೆಲಿಸ್ಕ್‌ಗಳನ್ನು ನಿರ್ಮಿಸಲು ಈಜಿಪ್ಟಿನ ಆಸ್ವಾನಿನ ಗ್ರ್ಯಾನೈಟನ್ನು ಬಳಸಲಾಗುತ್ತಿತ್ತು. ಅಲ್ಲಿ ನಿರ್ಮಿಸಿದ ಸ್ತಂಭಗಳನ್ನು ನೈಲ್ ನದಿಯ ಮೇಲೆ ನಿಯೋಜಿತ ಸ್ಥಳಕ್ಕೆ ಸಾಗಿಸುವುದಕ್ಕೆಂದೇ ವಿಶಿಷ್ಟವಾದ ದೋಣಿಗಳನ್ನು ತಯಾರಿಸುತ್ತಿದ್ದರು.

ಈಜಿಪ್ಟಿಗೂ ಕೆನಾನ್‌ಗೂ ಏರ್ಪಟ್ಟ ನಿಕಟ ಸಂಬಂಧದ ಫಲವಾಗಿ ಕೆನಾನೈಟರೂ ಫಿನಿಷಿಯನ್ನರೂ ಒಬೆಲಿಸ್ಕ್‌ಗಳನ್ನು ನಿರ್ಮಿಸಲಾರಂಭಿಸಿದರು. ಲೆಬನಾನಿನ ಬಿಬ್ಲಾಸಿನ ದೇವಸ್ಥಾನದಲ್ಲಿ ಇವುಗಳ ಒಂದು ಸಾಲೇ ಇತ್ತು. (2ನೆಯ ಸಹಸ್ರಮಾನ) ಅಸ್ಸಿರಿಯನ್ನರು ನಿರ್ಮಿಸುತ್ತಿದ್ದ ಒಬೆಲಿಸ್ಕ್‌ಗಳು ಕುಳ್ಳು; ಅವುಗಳ ಶಿರೋಭಾಗ ಮೆಟ್ಟಿಲಿನಂತಿತ್ತು. ಈ ಭಾಗದಲ್ಲಿ ಇತಿಹಾಸದ ಒಂದು ಸನ್ನಿವೇಶವನ್ನೊ ಘಟನೆಯನ್ನೊ ನಿರೂಪಿಸಲಾಗುತ್ತಿತ್ತು. ಇನ್ನೊಂದು ಬಗೆಯ ಒಬೆಲಿಸ್ಕ್ ಸಹ ಇತ್ತು. ಅದರ ಎರಡು ಪಕ್ಕಗಳು ಕಿರಿದಾಗಿದ್ದು ತುದಿ ಬೋಳಾಕಾರ. ಒಂದನೆಯ ಸೆನ್‌ವೋಸ್ರಿಗೆ ಸಂಬಂಧಿಸಿದ ಅಂಥ ಒಂದು ಒಬೆಲಿಸ್ಕ್ ಕೆತ್ತನೆಯ ಕೆಲಸದಿಂದಲೂ ಶಾಸನದಿಂದಲೂ ಕೂಡಿದ್ದು ಫಾಯೂಮಿನ ಎಬ್‌ಜೀಗಿನಲ್ಲಿ ಇದೆ. ಅಬಿಸೀನಿಯದಲ್ಲಿ ಅದ್ಭುತ ರೀತಿಯ, ಕಲಾತ್ಮಕವಾದ ಒಬೆಲಿಸ್ಕ್ ಮಾದರಿಯ ಸ್ಮಾರಕಗಳ ಶ್ರೇಣಿಯೇ ಇದೆ. ಇಸ್ರೇಲಿನ ಜೆಹು ದೊರೆಯ ಶರಣಾಗತಿಯನ್ನು ಚಿತ್ರಿಸುವ, ಪ್ರ.ಶ.ಪೂ, 9ನೆಯ ಶತಮಾನದ ಸ್ತಂಭ ಒಂದು ಉದಾಹರಣೆ. ಇದು ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ.

ಗ್ರೀಕ್–ರೋಮನ್ ಪದ್ಧತಿಯಲ್ಲಿ ಈಜಿಪ್ಟಿನ ಒಬೆಲಿಸ್ಕ್‌ಗಳ ನಿರ್ಮಾಣ ಮುಂದುವರಿಯಿತು. ರೋಮ್ ಚಕ್ರಾಧಿಪತ್ಯದ ಕಾಲದಲ್ಲಿ ಅನೇಕ ಒಬೆಲಿಸ್ಕ್‌ಗಳನ್ನು ಇಟಲಿಗೆ ಸಾಗಿಸಲಾಯಿತು. ಒಂದನ್ನು ಮೊದಲನೆಯ ಥೀಯೊಡೋಷಿಯಸ್ ಕಾನ್‌ಸ್ಟಾಂಟಿನೋಪಲಿಗೆ ಸಾಗಿಸಿದ. ಅತಿಶಯ ರೀತಿಯಲ್ಲಿ ಉಳಿಸಿಕೊಂಡು ಬಂದಿರುವ ಒಬೆಲಿಸ್ಕೊಂದರ ಮುಂಭಾಗದಲ್ಲಿ ಎತ್ತರವಾದ ಬಲಿಪೀಠವಿದ್ದು ಅದರಲ್ಲಿ ಗುಂಡಿಗಳು ತೋಡಲ್ಪಟ್ಟಿವೆ. ಪಿತೃಗಳಿಗೆ ಬಲಿಗೊಟ್ಟ ಪ್ರಾಣಿಗಳ ರಕ್ತವನ್ನು ಸಂಗ್ರಹಿಸುವುದಕ್ಕೆಂದೇ ಆ ಗುಂಡಿಗಳಿದ್ದುದು. ಪ್ರಸಿದ್ಧವಾದ ಪುರಾತನ ಒಬೆಲಿಸ್ಕ್‌ಗಳಲ್ಲಿ ಸು. 30 ಉಳಿದಿವೆ. ಅವುಗಳಲ್ಲಿ 12 ರೋಮ್‌ನಲ್ಲಿವೆ. ವಾಸ್ತುವಿನ್ಯಾಸದಲ್ಲಿ ಒಬೆಲಿಸ್ಕ್‌ಗಳನ್ನು ಹೊಂದಿಸುವ ಪದ್ಧತಿ 18ನೆಯ ಶತಮಾನದ ವೇಳೆಗೆ ಫ್ರಾನ್ಸ್ ಬ್ರಿಟನ್‌ಗಳಲ್ಲಿ ಪ್ರಚಾರದಲ್ಲಿತ್ತು. 19ನೆಯ ಶತಮಾನದಲ್ಲಿ ಕ್ಲಿಯೋಪಾತ್ರಗಳ ಸೂಜಿಗಳೆಂದು ಪ್ರಸಿದ್ಧವಾದ ಎರಡು ಒಬೆಲಿಸ್ಕ್‌ಗಳನ್ನು ಲಂಡನ್ ಮತ್ತು ನ್ಯೂಯಾರ್ಕ್‌ಗಳಿಗೆ ಒಪ್ಪಿಸಲಾಯಿತು. ಪ್ರ.ಶ.ಪೂ, 13ನೆಯ ಶತಮಾನದ ಒಂದು ಒಬೆಲಿಸ್ಕ್ ಪ್ಯಾರಿಸಿನ ದ ಲಾ ಕಾನ್‌ಕಾರ್ಡ್ ಸ್ಥಳದಲ್ಲಿದೆ. ಇದು ಈಜಿಪ್ಟಿನ ದೊರೆ ಮೆಹೆಮತ್ ಆಲಿಯ ಕೊಡುಗೆ (1831). ಪ್ರ.ಶ.ಪೂ, 1500ರಲ್ಲಿ ಹೆಲಿಯೊಪೊಲಿಸ್‌ನಲ್ಲಿ ಮೂರನೆಯ ಥಟ್ಮೋಸ್ ಇವನ್ನು ನಿರ್ಮಿಸಿದ. ಇವು ಈಗ ಲಂಡನಿನಲ್ಲಿ ಥೇಮ್ಸ್ ದಂಡೆಯ ಮೇಲೂ ನ್ಯೂಯಾರ್ಕಿನ ಸೆಂಟ್ರಲ್ ಪಾರ್ಕಿನಲ್ಲೂ ನಿಂತಿವೆ. ಇವನ್ನು ತಮ್ಮ ಮೊದಲಿನ ಸ್ಥಾನದಿಂದ ಪ್ರ.ಶ.ಪೂ, 14ರ ಸುಮಾರಿನಲ್ಲಿ ಆಗಸ್ಟಸ್ ಸೀಸರ್ ಕದಲಿಸಿ ಅಲೆಗ್ಸಾಂಡ್ರಿಯಕ್ಕೆ ಒಯ್ದಿದ್ದ. ಪ್ರ.ಶ.ಪೂ, 1250ರ ಸುಮಾರಿನಲ್ಲಿದ್ದ ಎರಡನೆಯ ರ‍್ಯಾಮ್ಸೆಸನ ಶಾಸನವನ್ನು ಇದರ ಮೇಲೆ ಕೆತ್ತಲಾಗಿದೆ. ಥೀಬ್ಸ್‌ನಗರದ ರಾಣಿ ಹಟ್‌ಷೆಪ್‌ಸಟಳ ದೇವಾಲಯದಲ್ಲಿರುವ ಕೆಲವು ಚಿತ್ರಗಳು ಒಬೆಲಿಸ್ಕ್‌ಗಳನ್ನು ಜಲಮಾರ್ಗವಾಗಿ ಸಾಗಿಸುತ್ತಿರುವುದನ್ನು ರೂಪಿಸುತ್ತವೆ. ಅಮೆರಿಕದ ವಾಷಿಂಗ್ಟನಿನಲ್ಲಿರುವ ವಾಷಿಂಗ್ಟನ್ ಸ್ಮಾರಕ ಆಧುನಿಕ ಒಬೆಲಿಸ್ಕಿನ ಉದಾಹರಣೆ. 555 ಅಡಿಗಳಿಗಿಂತಲೂ ಎತ್ತರವಿರುವ ಇದರ 500ನೆಯ ಅಡಿಯಲ್ಲಿ ಒಂದು ವೀಕ್ಷಣಾಲಯವಿದೆ. ಇಲ್ಲಿಗೆ ಹೋಗಲು ಕಟ್ಟಡದ ಒಳಗೇ ಮೇಲೆತ್ತಿಗೆಯೂ (ಎಲಿವೇಟರ್) ಮೆಟ್ಟಲುಗಳೂ ಉಂಟು (**ನೋಡಿ– ಗರುಡಗಂಬ**).

ಪಕ್ಕ ಟಿಪ್ಪಣಿ ಮುಂತಾದವುಗಳ ಕಡೆಗೆ ಗಮನ ಸೆಳೆಯಲು ಬಳಸುವ ಕಠಾರಿಯ ಗುರುತಿಗೂ (†) ಒಬೆಲಿಸ್ಕ್ ಎಂಬ ಹೆಸರಿದೆ. (ಎಂ.ವಿ.ಕೆ.; ಬಿ.ಕೆ.ಜಿ.)

**ಒಬ್ರಿಯೆನ್, ವಿಲಿಯಂ:** 1852–1928. ಐರ್ಲೆಂಡಿನ ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರ, ಪತ್ರಿಕೋದ್ಯಮಿ, ಸಂಯುಕ್ತ ಐರಿಷ್ ಲೀಗಿನ ಸ್ಥಾಪಕ. ಕೌರ್ಕ್ ಕೌಂಟಿಯಲ್ಲಿನ ಮಾಲೋ ಎಂಬಲ್ಲಿ ಜನಿಸಿದ. ಕಾರ್ಕಿನಲ್ಲಿ ಉನ್ನತ ಶಿಕ್ಷಣ ಪಡೆದು 1869ರಲ್ಲಿ ಪತ್ರಿಕೋದ್ಯಮವನ್ನವಲಂಬಿಸಿದ. ಯುನೈಟೆಡ್ ಐರ್ಲೆಂಡ್ ಪತ್ರಿಕೆಯ ಸಂಪಾದಕನಾದದ್ದು 1881ರಲ್ಲಿ. ಕೆಲವೇ ತಿಂಗಳುಗಳಲ್ಲಿ ಆ ಪತ್ರಿಕೆಯನ್ನು ಸರ್ಕಾರ ನಿಷೇಧಿಸಿತು. ಒಬ್ರಿಯೆನನಿಗೆ ಜೈಲುವಾಸ ಲಭ್ಯವಾಯಿತು. ಗುತ್ತಿಗೆ ನಿಷೇಧ ಪ್ರಣಾಳಿಕೆಯನ್ನು ಈತ ಹೊರಡಿಸಿದ್ದು ಆಗಲೇ. ಅನಂತರ 1883ರ ಚುನಾವಣೆಯಲ್ಲಿ ಮಾಲೋ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಆಯ್ಕೆ ಹೊಂದಿ, 1895ರ ವರೆಗೂ ಅದರ ಸದಸ್ಯನಾಗಿದ್ದ. ಬಡರೈತರ ಉಳಿವಿಗಾಗಿ ಜಮೀನುದಾರರ ವಿರುದ್ಧ ಹೋರಾಟ ನಡೆಸಿ, ಸಮನ್ವಯ ಮತ್ತು ಸಹಿಷ್ಣುತೆಯ ತತ್ತ್ವವನ್ನು ಜನತೆಯ ಮುಂದಿಟ್ಟು, ಎಲ್ಲವೂ ಐರ್ಲೆಂಡಿಗಾಗಿ ಎಂಬ ಸಂಘವನ್ನು (ಆಲ್ ಫಾರ್ ಐರ್ಲೆಂಡ್ ಯೂನಿಯನ್) ಸ್ಥಾಪಿಸಿದ. 1910ರಲ್ಲಿ ಕಾರ್ಕ್ ಕೌಂಟಿಯಿಂದ ಪಾರ್ಲಿಮೆಂಟಿಗೆ ಮತ್ತೆ ಚುನಾಯಿತನಾದರೂ ಆ ವೇಳೆಗೆ ಐರ್ಲೆಂಡಿನ ತರುಣ ಪೀಳಿಗೆಗೆ ಸೌಮ್ಯ ಮಾರ್ಗದಲ್ಲಿ ನಂಬಿಕೆ ಕಡಿಮೆಯಾಗಿತ್ತು. ಒಬ್ರಿಯೆನನ ಹಿಂಬಾಲಕರ ಸಂಖ್ಯೆ ಕಡಿಮೆಯಾಯಿತು. ಒಂದನೆಯ ಮಹಾಯುದ್ಧದಲ್ಲಿ ಐರ್ಲೆಂಡೂ ಭಾಗವಹಿಸಬೇಕೆಂದು ವಾದಿಸಿದ ಈತ ಆ ಯುದ್ಧಾನಂತರ ಸಾರ್ವಜನಿಕ ಜೀವನದಿಂದ ನಿವೃತ್ತನಾದ. ಈತ 1928 ಫೆಬ್ರವರಿ 25ರಲ್ಲಿ, ಲಂಡನ್ನಿನಲ್ಲಿ ನಿಧನಹೊಂದಿದನು. (ಬಿ.ಎಸ್.ಎ.)

**ಒರಗುವಿಕೆ (ಪೈರುಗಳ):** ಕೆಲವು ಬಗೆಯ ಪೈರುಗಳು ಬೆಳೆದು ವೃದ್ಧಿಯಾಗಿ ತೆನೆಗಳ ಭಾರದಿಂದ ಕಾಂಡ ನೆಲಕ್ಕೆ ಬೀಳುವ ಒಂದು ಪರಿಸ್ಥಿತಿ (ಲಾಡ್ಜಿಂಗ್). ಇದರಿಂದ ಕಾಳುಗಳ ನಾಶವೂ ಪೈರಿನಿಂದ ಕಾಳು ತೆಗೆದ ತರುವಾಯ ದೊರೆಯುವ ಮೇವಿನ ನಾಶವೂ ಸಾಕಷ್ಟು ಪ್ರಮಾಣದಲ್ಲಿ ಆಗಿ ರೈತನಿಗೆ ಉಭಯ ನಷ್ಟವಾಗುತ್ತದೆ. ಒರಗುವಿಕೆಯ ನಿವಾರಣೆ ಮಾಡುವ ದಾರಿಯಲ್ಲಿ ಎದುರಿಸಬೇಕಾದ ಪ್ರಶ್ನೆಗಳು–ಉತ್ತಮ ಫಸಲು ಮತ್ತು ಅದನ್ನು ಸಮರ್ಥವಾಗಿ ಧರಿಸಬಲ್ಲ ಪೈರಿನ ಕಾಂಡ.

ಒರಗುವ ಗುಣ ಅನುವಂಶಿಕವಾಗಿದ್ದರೂ ಅದನ್ನು ವೈಜ್ಞಾನಿಕ ವಿಧಾನಗಳಿಂದ ಸರಿಪಡಿಸಿಕೊಳ್ಳಬಹುದು. ಗಿಡ್ಡ ನಿಲುವಿನ ಜಾತಿಗಳು ಆಳವಾಗಿ ಬೇರೂರಿ ವಿಸ್ತಾರವಾದ ಕ್ಷೇತ್ರದಲ್ಲಿ ಬೇರುಗಳನ್ನು ಪಸರಿಸಿ ಭಾರವಾದ ತೆನೆಗಳನ್ನು ಹೊತ್ತು ಸೆಟೆದು ನಿಲ್ಲುವುವು. ಮಿಶ್ರತಳಿ ಜೋಳ ಹಾಗೂ ಸಜ್ಜೆಯ ಜಾತಿಗಳು, ಮೆಕ್ಸಿಕನ್ ಗೋದಿಯ ಹಾಗೂ ತೈವಾನ್ ಬತ್ತದ ಜಾತಿಗಳು ಒರಗದೆ ನೆಟ್ಟಗೆ ನಿಲ್ಲಬಲ್ಲವು. ಅವು ಅದ್ಭುತವಾದ ಇಳುವರಿಯನ್ನು ಕೊಡವಲ್ಲಿ ಹೆಸರಾಗಿವೆ. ಆದ್ದರಿಂದ ಅಧಿಕೋತ್ಪಾದನೆಯ ಒಂದು ಪ್ರಧಾನ ಅಂಶ ಒರಗುವ ಗುಣದ ನಿವಾರಣೆ. (ಸಿ.ವಿ.ಡಿ.)

**ಒರಟುಕಾಲು ಡೇಗೆ:** ಪಕ್ಷಿವಂಶದ ಫಾಲ್ಕನಿಫಾರ್ಮಿಸ್ ಗಣದ ಆಕ್ಸಿ ಪಿಟ್ರಿಡಿ ಕುಟುಂಬಕ್ಕೆ ಸೇರಿದ ಬ್ಯೂಟಿಯೊ ಜಾತಿಯ ಒಂದು ಪ್ರಭೇದ. ಇದನ್ನು ಬಸರ್ಡ್‌ಹಾಕ್ ಎಂಬ ಜನಪ್ರಿಯ ಹೆಸರಿನಿಂದ ಕರೆಯುವುದುಂಟು. ಇದರ ಶಾಸ್ತ್ರೀಯ ನಾಮ ಬ್ಯೂಟಿಯೊ ಲಗೋಪಸ್. ಈ ಪಕ್ಷಿಯ ಪಾದದ ಮೇಲಕ್ಕೆ ಮಂಡಿಯ ಕೆಳಗೆ ಅಂದರೆ ಮೊಳಕಾಲಿನಲ್ಲಿ ಪುಕ್ಕಗಳು ಇರುವುದರಿಂದ ಇದಕ್ಕೆ ಒರಟು ಕಾಲು ಡೇಗೆ ಎಂದು ಹೆಸರು. ಇದರ ಹೊರಮೈ ಬಣ್ಣ ಗಾಢ ಕಂದು; ರೆಕ್ಕೆಗಳ ಕೆಳಗೆ ತಿಳಿಕಂದು; ಬಾಲದ ರೆಕ್ಕೆಗಳು ಬಿಳುಪು. ಋತುಮಾಸದಲ್ಲಿ ಇವು ಎತ್ತರದ ಮರಗಳ ಮೇಲೆ ಅಥವಾ ಗುಡ್ಡಗಳ ಬಂಡೆಗಲ್ಲು ತುದಿಯಲ್ಲಿ ಗೂಡುಗಳನ್ನು ಮಾಡಿ 2–5 ಮೊಟ್ಟೆಗಳನ್ನಿಟ್ಟು ಮರಿ ಮಾಡುವುವು. ಈ ಡೇಗೆ ಉತ್ತರ ಯುರೋಪಿನಿಂದ ಬ್ರಿಟನ್ ದೇಶಕ್ಕೆ ಬಂದು ಚಳಿಗಾಲವನ್ನು ಕಳೆಯುತ್ತದೆ. ಮಿಕ್ಕ ಕಾಲಗಳಲ್ಲಿ ಸೈಬೀರಿಯ ಮತ್ತು ಉತ್ತರ ಕೆನಡ ಪ್ರದೇಶಗಳಲ್ಲಿ ವಾಸಿಸುವುದು. ಬ್ರಿಟನ್ ದೇಶದಲ್ಲಿ ಇನ್ನೊಂದು ಪ್ರಭೇದವಾದ ಬ್ಯೂಟಿಯೊ ಬ್ಯೂಟಿಯೊವನ್ನು ಸಾಮಾನ್ಯವಾಗಿ ಬಸರ್ಡ್ ಎನ್ನುವರು. ಈ ಪ್ರಭೇದವೂ ಒರಟುಕಾಲು ಡೇಗೆಯೂ ಯುರೋಪಿನಿಂದ ಜಪಾನಿನವರೆಗೂ ಹರಡಿವೆ. ಈ ಡೇಗೆಗಳು ಸಾಧಾರಣವಾಗಿ ಸಣ್ಣ ಸ್ತನಿಗಳನ್ನೂ ಕೆಲವು ಸಾರಿ ದುಂಬಿಗಳನ್ನೂ ಪಕ್ಷಿಗಳನ್ನೂ ಬೇಟೆಯಾಡುವುವು. ಇವುಗಳ ಮಿಕ್ಕೆಲ್ಲ ವ್ಯವಹಾರಗಳೂ ಇತರ ಡೇಗೆಗಳಂತೆಯೆ. (ಎನ್.ವಿ.ಎ.; ಕೆ.ಎಸ್.ಎನ್.)

**ಒರಟು ಜಮಖಾನೆ:** ಹತ್ತಿ, ರೇಷ್ಮೆ, ನಾರು, ಸೆಣಬು ಇವುಗಳಲ್ಲಿ ಯಾವುದಾದರೊಂದನ್ನು ಉಣ್ಣೆಯೊಡನೆ ಮಿಶ್ರಿಸಿ ತಯಾರಿಸಿರುವ ಒರಟು ಉಣ್ಣೆಯ ಬಟ್ಟೆ (ಡ್ರಗೆಟ್). ಫೆಲ್ಟ್ ಜಮಖಾನೆಗೆ ಬದಲಾಗಿ ಇದನ್ನು ಉಪಯೋಗಿಸುತ್ತಾರೆ. ಹಾಸುಗಂಬಳಿ ಎಂದೂ ಕರೆಯುವುದಿದೆ. ಉಣ್ಣೆಯನ್ನು ಹದ ಮಾಡಿದಾಗ ಉಳಿಯುವ ಅನುಪಯುಕ್ತ ಅಂಶವನ್ನು ಹಾಸುಗಂಬಳಿಯಾಗಿ ತಯಾರಿಸುವ ಕೈಗಾರಿಕೆ ಈಗ 90 ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಪ್ರಚಾರಕ್ಕೆ ಬಂದಿತು. ಬಡವರ ರತ್ನಗಂಬಳಿ ಅಥವಾ ಜಮಖಾನೆ ಎಂದು ಈ ಬಟ್ಟೆ ವಿದೇಶೀ ಮಾರುಕಟ್ಟೆಗಳಲ್ಲಿ ವಿಖ್ಯಾತವಾಯಿತು. ಅಲ್ಲಿ ಇವುಗಳಿಗೆ ಇಂಡಿಯ ಡ್ರಗೆಟ್ ಎಂದೇ ಹೆಸರು.

ಒರಟು ಜಮಖಾನೆಯನ್ನು ಒರಟಾದ ಉಣ್ಣೆಯಿಂದ ತಯಾರಿಸುತ್ತಾರೆ. ನೇಯ್ಗೆಯಲ್ಲಿ ಹತ್ತಿಯ ಹಾಸನ್ನೂ ಉಣ್ಣೆಯ ಹೊಕ್ಕನ್ನೂ ಉಪಯೋಗಿಸಿ ವೈವಿಧ್ಯ ಪೂರ್ಣವಾಗಿ ನೇಯುತ್ತಾರೆ. ಬಣ್ಣದ ದೃಷ್ಟಿಯಿಂದ ಇವನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಅತ್ಯುತ್ತಮ ತರಗತಿಯವುಗಳ ಬಣ್ಣ ಕೆನೆಬಿಳಿ (ಕ್ರೀಂ ವೈಟ್). ಉತ್ತಮ ತರಗತಿಯವುಗಳ ಬಣ್ಣ ಕಂದುಬಿಳುಪು. ಮಧ್ಯಮ ತರಗತಿಯವುಗಳಿಗೆ ಬೂದು ಸಾರಂಗವರ್ಣ ಇದೆ.

ಈ ಬಗೆಯ ಜಮಖಾನೆಗಳನ್ನು ತಯಾರಿಸುವಾಗ ಹಾಳವಾದ ಬಣ್ಣ ಮಿಶ್ರಣಕ್ಕೂ ಅಂತಿಮವಾಗಿ ಅದು ತೋರಬೇಕಾದ ನೆರಳು ಬೆಳಕಿನ ಛಾಯಾ ವಿನ್ಯಾಸಕ್ಕೂ ಆದ್ಯಗಮನ ಕೊಡುತ್ತಾರೆ. ಈ ಕೈಗಾರಿಕೆ ನಿಯತಕಾಲಿಕವಾದದ್ದು. ಪ್ರಾರಂಭ ಪ್ರತಿವರ್ಷದ ಮೇ ಅಥವಾ ಜೂನ್ ತಿಂಗಳಲ್ಲಿ; ಅಂತ್ಯ ಜನವರಿಯಲ್ಲಿ, ಇದೊಂದು ಗುಡಿಕೈಗಾರಿಕೆ. ಇದನ್ನು ಪ್ರತಿ ನೇಕಾರನೂ ಇಬ್ಬರು ಅಥವಾ ಮೂವರು ಬಾಲಕರ ಸಹಾಯದಿಂದ ಕೈಮಗ್ಗದಲ್ಲಿ ನೇಯುತ್ತಾನೆ. ಈ ಬಾಲಕರೇ ಮುಂದೆ ನೇಕಾರರಾಗುತ್ತಾರೆ. ಒರಟು ಜಮಖಾನೆಯ ಕೈಗಾರಿಕೆ ಮೈಸೂರು ಮತ್ತು ತಮಿಳುನಾಡಿನ ಕೆಲವು ವಿಭಾಗಗಳಿಗೆ ವಿಶೇಷವಾಗಿ ಸೀಮಿತಗೊಂಡಿದೆ. (ವಿ.ಎಸ್.ವಿ.)

**ಒರಾಂಗೂಟಾನ್:** ಕಪಿ ಜಾತಿಗೆ ಸೇರಿದ ಒಂದು ದೊಡ್ಡ ವಾನರ. ಮಲಯ ಭಾಷೆಯಲ್ಲಿ ಕಾಡುಮನುಷ್ಯ ಎಂದರ್ಥ. ಪ್ರಾಣಿವಿಜ್ಞಾನದಲ್ಲಿ ಇದರ ಹೆಸರು ಪಾಂಗೊ ಪಿಗ್ಮೆಯಿಸ್. ಹಲವು ಸಹಸ್ರ ವರ್ಷಗಳ ಹಿಂದೆ ಆಗ್ನೇಯ ಏಷ್ಯದ ಕಾಡುಗಳಲ್ಲೆಲ್ಲ ಹರಡಿಕೊಂಡಿದ್ದರೂ ವಾತಾವರಣದಲ್ಲಾದ ಬದಲಾವಣೆಗಳಿಂದಲೋ ಮಾನವಶಕ್ತಿಗೆ ಮಣಿದೋ ಇವುಗಳ ಸಂಖ್ಯೆ ಈಗ ಬಹುವಾಗಿ ಇಳಿದಿದೆ. ಇಂದು ಬೋರ್ನಿಯೊ ಮತ್ತು ಸುಮಾತ್ರಗಳ ಜೌಗು ಕಾಡುಗಳಲ್ಲಿ ಮಾತ್ರ ಕಾಣಬಹುದಾದ ಇವುಗಳ ಸಂಖ್ಯೆ 5,000ಕ್ಕಿಂತ ಕಡಿಮೆ. ವಾಸ ಮರಗಳ ಮೇಲೆ. ಸಾಮಾನ್ಯವಾಗಿ ಗಂಡು ಹೆಣ್ಣುಗಳು ಜೊತೆಜೊತೆಯಾಗಿ ಬಾಳುತ್ತವೆ; ಕೆಲವೊಮ್ಮೆ ಒಂಟಿಯಾಗಿಯೂ ಗುಂಪಿನಲ್ಲಿಯೂ ಇರಬಹುದು. ಮರಗಳ ಮೇಲೆ ರೆಂಬೆಗಳನ್ನು ಹೆಣೆದು ಗೂಡು ಕಟ್ಟಿಕೊಂಡು ಅಲ್ಲಿ ಮಲಗುತ್ತವೆ. ವಿಶ್ರಮಿಸುವಾಗ ಎಲೆಗಳಿಂದ ಮೈಯನ್ನು ಮುಚ್ಚಿಕೊಳ್ಳುವ ಅಭ್ಯಾಸ ಉಂಟು.

ಬಲಯುತವಾದ ದೇಹ, ಸಣ್ಣ ಕಿವಿಗಳು, ಗಿಡ್ಡ ಕಾಲುಗಳು, ಎದ್ದು ನಿಂತಾಗ ನೆಲ ಮುಟ್ಟುವಷ್ಟು ಉದ್ದವಾದ ಕೈಗಳು ಇದರ ವಿಶಿಷ್ಟ ಲಕ್ಷಣಗಳು. ಹೆಚ್ಚು ಕಡಿಮೆ ಗೋರಿಲ್ಲದಂತೆ ಕಾಣುತ್ತದೆ. ಇದರ ಚಿಕ್ಕ ಕಿವಿಗಳು, ಕಂದು ಚರ್ಮ, ಉದ್ದನೆಯ ವಿರಳ ಕೆಂಗೂದಲುಗಳಿಂದಾಗಿ ಇದು ಗೋರಿಲ್ಲಕ್ಕಿಂತ ಭಿನ್ನವೆನಿಸಿದೆ. ಗಂಡು ಸುಮಾರು 5½ ಅಡಿ ಎತ್ತರ ಬೆಳೆಯುವುದುಂಟು; 165 ಪೌಂ. ತೂಗುತ್ತದೆ. ಪ್ರಾಣಿಸಂಗ್ರಹಾಲಯಗಳಲ್ಲಿ ಸಾಕಿದ ಒರಾಂಗೂಟಾನುಗಳು ವಿಪರೀತ ದಪ್ಪವಾಗಿ ಬೆಳೆದು 400ಕ್ಕೂ ಹೆಚ್ಚು ಪೌಂಡು ತೂಗುವುದುಂಟು. ಪ್ರಬುದ್ಧ ಗಂಡಿನಲ್ಲಿ ಗಡ್ಡ ಬೆಳೆಯುತ್ತದೆ. ಧ್ವನಿಪೆಟ್ಟಿಗೆಯಿಂದ ಉದ್ಭವಿಸಿದ ಗಾಳಿಯ ಚೀಲವೊಂದು ಕುತ್ತಿಗೆಯ ಭಾಗದಲ್ಲಿ ನೇತುಬಿದ್ದಿದೆ. ಅಲ್ಲದೆ ಎರಡು ಕೆನ್ನೆಗಳ ಬಳಿಯೂ ಕಪಿ ಸಾಮಾನ್ಯಕ್ಕಿರುವಂತೆ ಒಂದೊಂದು ಚೀಲವಿದೆ. ನೆಲದ ಮೇಲೆ ಇದರ ನಡಿಗೆ ನಿಧಾನ ಅಲ್ಲದೆ ಇದು ನೆಲದ ಮೇಲೆ ನಡೆಯಲು ಇಚ್ಛಿಸುವುದೂ ಇಲ್ಲ. ಮರಗಳ ಮೇಲೆ, ರೆಂಬೆಯಿಂದ ರೆಂಬೆಗೆ ನೆಗೆದು ಸಾಗುವುದೇ ಸಾಮಾನ್ಯ. ಸರಾಗವಾಗಿ ಗಂಟೆಗೆ 8–9 ಕಿಮೀ ದೂರ ಕ್ರಮಿಸುತ್ತದೆ.

ಒರಾಂಗೂಟಾನ್ ಸ್ವಾಭಾವಿಕವಾಗಿ (ಚಿಂಪಾಂಜಿಯಷ್ಟಲ್ಲದಿದ್ದರೂ) ಬಹು ಚುರುಕಾದ ಪ್ರಾಣಿ. ಸಾಕಿ ಶಿಕ್ಷಣವಿತ್ತಾಗ ಹೆಚ್ಚಿನ ಚುರುಕುತನ ಪ್ರದರ್ಶಿಸುತ್ತದೆ. ಮನುಷ್ಯರೊಂದಿಗೆ ಇದು ಸ್ನೇಹಪರ. ತನ್ನ ಆವರಣದ ಬಗ್ಗೆ ಕುತೂಹಲವನ್ನು ಪ್ರದರ್ಶಿಸುತ್ತದೆ.

ಈ ಪ್ರಾಣಿ ಸಂಪೂರ್ಣವಾಗಿ ಸಸ್ಯಹಾರಿ. ಮುಖ್ಯವಾಗಿ ಹಣ್ಣುಗಳು ಇದರ ಆಹಾರ. ಕೆಲವೊಮ್ಮೆ ಎಲೆ, ದಂಟುಗಳನ್ನೂ ತಿನ್ನುತ್ತದೆ.

ಗಂಡು 10 ವರ್ಷಗಳಲ್ಲಿಯೂ ಹೆಣ್ಣು 8 ವರ್ಷಗಳಲ್ಲಿಯೂ ಪ್ರೌಢಾವಸ್ಥೆ ತಲುಪುತ್ತವೆ. ಗರ್ಭಾವಧಿ 270 ದಿನಗಳು. ಒಮ್ಮೆಗೆ ಒಂದು ಮರಿಯನ್ನು ಮಾತ್ರ ಹೆರುತ್ತದೆ. (ಎಚ್.ಬಿ.ಡಿ.)

**ಒರಾಟಿಕ್ ಆಮ್ಲ:** ಇದೊಂದು ಸಾವಯವ ಆಮ್ಲ. ಇದರ ಅಣುಸೂತ್ರ $C_5H_4N_2O_4$. ರಚನಾಸೂತ್ರ ಚಿತ್ರದಲ್ಲಿ ತೋರಿಸಿದೆ.

ಹಸುವಿನ ಹಾಲಿನಲ್ಲಿ ಇದನ್ನು ಮೊದಲು ಗುರುತಿಸಿದ್ದು ಮತ್ತು ಅದರಿಂದ ಬೇರ್ಪಡಿಸಿದ್ದು 1905ರಲ್ಲಿ. ಮೇಲ್ಮಟ್ಟದ ಜೀವಿಗಳಲ್ಲಿಯೂ ಕೆಳಮಟ್ಟದ ಜೀವಿಗಳಲ್ಲಿಯೂ ಇದು ಆರ್‌ಎನ್‌ಎ ಮತ್ತು ಡಿಎನ್‌ಎ ಪಿರಿಮಿಡೀನುಗಳ ಪೂರ್ವಗಾಮಿಯಾಗಿರುವುದೆಂದು



1958ರಲ್ಲಿ ಗೊತ್ತಾಯಿತು. ಆಹಾರದಲ್ಲಿ ಒರಾಟಿಕ್ ಆಮ್ಲ ಶೇಕಡ ಒಂದರಷ್ಟಿದ್ದರೆ ಬಿಳಿ ಇಲಿಗಳಲ್ಲಿ ಮೇದೋಭರಿತ ಯಕೃತ್ತನ್ನುಂಟುಮಾಡುವುದು; ಆದರೆ ಸಾದಾ ಇಲಿಗಳಲ್ಲಿ, ಕೋತಿಗಳಲ್ಲಿ ಮತ್ತು ಕೋಳಿಗಳಲ್ಲಿ ಉಂಟುಮಾಡುವುದಿಲ್ಲ. ಈ ಮೇದೋಭರಿತ ಯಕೃತ್ತು ಅನೇಕ ರೀತಿಯಲ್ಲಿ ವಿಶಿಷ್ಟತೆಯುಳ್ಳದ್ದು. (1) ಅಧಿಕ ಪ್ರೋಟೀನು, ಕಡಿಮೆ ಮೇದಸ್ಸು ಮತ್ತು ಸಾಕಷ್ಟು ಕೋಲೀನ್ ಉಳ್ಳ ಆಹಾರವಿದ್ದಾಗ ಇದು ಕಂಡುಬಂದಿದೆ. (2) ಸಂಗ್ರಹವಾದ ಲಿಪಿಡ್ಡಿನಲ್ಲಿ ಹೆಚ್ಚಿನ ಪ್ರಮಾಣ ಕೊಲೆಸ್ಟೆರಾಲ್ ಇರುತ್ತದೆ. ಸೀರಮ್ಮಿನಲ್ಲಿ ಕೊಲೆಸ್ಟೆರಾಲ್ ಪ್ರಮಾಣ ಕಡಿಮೆ. (3) ಲಿಪಿಡ್ಡು ಯಕೃತ್ತಿನ ಬಾಯ ಸುತ್ತಲೂ ಹಂಚಿಕೊಂಡಿರುತ್ತದೆ. (4) ಅಡನೀನ್ ನ್ಯೂಕ್ಲಿಯೊಟೈಡುಗಳು ಕಡಿಮೆಯಾದಷ್ಟೂ ದ್ರಾವ್ಯ ಯುರಿಡೀನ್ ನ್ಯೂಕ್ಲಿಯೊಟೈಡು ಯಕೃತ್ತಿನಲ್ಲಿ ಹೆಚ್ಚಾಗುತ್ತದೆ. (5) ಅಡೀನೀನ್, ಆಕ್ಟಿನೊಮೈಸಿನ್ ಡಿ, ಗ್ಲೂಕೋಸಮೀನ್ 6–ಅಸಾಯೊರಸಿಲ್, ಲ್ಯಾಕ್ಟೋಸ್, ಕ್ಯಾಲ್ಸಿಯಂ ಲ್ಯಾಕ್ಟೇಟುಗಳೂ ಅಡ್ರಿನಲ್ ಗ್ರಂಥಿಛೇದನೆಯೂ ಮೇದೋಭರಿತ ಯಕೃತ್ತನ್ನು ಪೂರ್ವಸ್ಥಿತಿಗೆ ತರುತ್ತವೆ. (ಪಿ.ಎಸ್.ಎಸ್.ಎಚ್.)

**ಒರಿಯ ಭಾಷೆ:** ಒರಿಸ್ಸ ರಾಜ್ಯದ ಜನರ ಭಾಷೆ. ಭಾರತ ಸಂವಿಧಾನದಿಂದ ಮಾನ್ಯತೆ ಪಡೆದಿರುವ 22 ಭಾಷೆಗಳಲ್ಲಿ ಒಂದು. ಆರ್ಯಭಾಷಾ ಪರಿವಾರದ ಮುಖ್ಯ ಭಾಷೆಗಳಲ್ಲೊಂದಾಗಿದ್ದು ಮಾಗಧ ಅಪಭ್ರಂಶದಿಂದ ಬೆಳೆದು ಬಂದ ಬಂಗಾಳಿ, ಅಸ್ಸಾಮೀ ಭಾಷೆಗಳೊಂದಿಗೆ ನಿಕಟ ಸಂಬಂಧ ಪಡೆದಿದೆ. ಮೂವತ್ತೆರಡು ಸಾವಿರ ಚದರ ಮೈಲಿ ಪ್ರದೇಶವನ್ನು ಹೊಂದಿದೆ. ಇಲಲಿ ಶೇ. 81.4ರಷ್ಟು (2002) ಜನ ಈ ಭಾಷೆಯನ್ನಾಡುತ್ತಾರೆ. ಭಾರತದ ಬಂಗಾಲ ಕೊಲ್ಲಿಯ ತೀರದಲ್ಲಿ ಪ್ರಚಾರದಲ್ಲಿರುವ ಈ ಭಾಷೆ ಉತ್ತರದಲ್ಲಿ ಬಂಗಾಳಿ, ವಾಯವ್ಯದಲ್ಲಿ ಬಿಹಾರ, ದಕ್ಷಿಣದಲ್ಲಿ ತೆಲುಗು ಭಾಷೆಗಳಿಂದಲೂ ನೈಋತ್ಯದಲ್ಲಿ ಮರಾಠಿಯ ಹಾಲ್ವಿ ಮತ್ತು ಭತ್ರಿ ಉಪಭಾಷೆಗಳು ಮತ್ತು ಪೂರ್ವೀ ಹಿಂದಿಯ ಛತ್ತೀಸ್‌ಗಡಿ ಉಪಭಾಷೆಗಳಿಂದಲೂ ಆವರಿಸಲ್ಪಟ್ಟಿದೆ.

**ಭಾಷೆಯ ಹೆಸರು:** ಆಂಗ್ಲಭಾಷೆಯಲ್ಲಿ ಕ್ಯಾನರೀಸ್ ಎಂದು ಕರೆಯುವ ಭಾಷೆಯ ನಿಜವಾದ ಹೆಸರು ಕನ್ನಡವಾಗಿರುವಂತೆಯೇ ಆಂಗ್ಲಭಾಷೆಯಲ್ಲಿ ಒರಿಯ ಎನ್ನಿಸಿಕೊಂಡ ಭಾಷೆಯ ಸರಿಯಾದ ಹೆಸರು ಒಡಿಯ. ಶಬ್ದದ ಉತ್ಪತ್ತಿಯನ್ನು ನೋಡಿದರೆ ಒರಿಸ್ಸ ಶಬ್ದ ಒರಿಸು ಎನ್ನುವ (ಒಕ್ಕಲಿಗ, ರೈತ) ಶಬ್ದದಿಂದಲೂ ಒಡಿಯ ಜನ ಎಂಬ ಶಬ್ದ ಓಡ್ರ ಎಂಬ ಒರಿಸ್ಸದ ಪ್ರಾಚೀನ ನಿವಾಸಿಗಳ ಹೆಸರಿನಿಂದಲೂ ಬಂದಿವೆಯೆಂದು ಊಹಿಸಬಹುದು. ಈಗಲೂ ಎಷ್ಟೋ ಜನ ಈ ಶಬ್ದವನ್ನು ಉರಿಯ ಎಂದು ತಪ್ಪಾಗಿ ಉಚ್ಚರಿಸುತ್ತಾರೆ. ಕಳೆದ ಶತಮಾನದ ಇಂಡಿಯನ್ ಸಿವಿಲ್ ಸರ್ವಿಸಿಗೆ ಸೇರಿದ ಕೆಲವು ಭಾಷಾವಿಜ್ಞಾನಿ ಒರಿಯ ಶಬ್ದವನ್ನು ಉಪಯೋಗಿಸುತ್ತಿದ್ದುದರಿಂದ ಅದೇ ಹೆಸರು ಬಳಕೆಗೆ ಬಂದಿರಬೇಕು.

**ಲಿಪಿ:** ಒರಿಯ ಭಾಷೆಗೆ ತನ್ನದೇ ಆದ ವಿಶಿಷ್ಟವಾದ ಲಿಪಿಯಿದೆ. ಈ ಲಿಪಿ ಬ್ರಾಹ್ಮೀಲಿಪಿ ಯಿಂದಲೇ ಬೆಳೆದುಬಂದುದಾಗಿದ್ದು, ದೇವನಾಗರಿಯ ಸೋದರ ಲಿಪಿಯೆನಿಸಿಕೊಂಡಿದೆ ಯಾದರೂ ದೇವನಾಗರಿಯಿಂದ ತೀರ ಭಿನ್ನವಾಗಿದೆ. ಉತ್ತರ ಭಾರತದ ಮತ್ತು ದಕ್ಷಿಣ ಭಾರತದ ಲಿಪಿಗಳನ್ನು ಹೋಲುವ ಈ ಲಿಪಿ ಎರಡೂ ವರ್ಗದ ಲಿಪಿಗಳಿಗೆ ಮಧ್ಯವರ್ತಿ

ಯಾಗಿದೆಯೆನ್ನಬಹುದು. ದಕ್ಷಿಣ ಲಿಪಿಗಳೊಡನೆ ಇದರ ಸಾಮ್ಯ ಹೆಚ್ಚೆಂದು ಹೇಳಬಹುದು. ಒರಿಯ ಅಕ್ಷರಗಳ ಈಗಿನ ರೂಪ ತೆಲುಗು, ಮಲಯಾಳ, ತಮಿಳು, ಸಿಂಹಳಿ ಮತ್ತು ಬರ್ಮೀ ಭಾಷೆಯ ಅಕ್ಷರಗಳನ್ನು ಬಹುಮಟ್ಟಿಗೆ ಹೋಲುತ್ತದೆ. ಒರಿಯದ ಪ್ರತಿ ಅಕ್ಷರದ ಮೇಲ್ಭಾಗದಲ್ಲಿ ಒಂದೇ ರೀತಿಯ ಅರ್ಧವೃತ್ತಾಕಾರವಿರುವುದರಿಂದ ಎಲ್ಲ ಅಕ್ಷರಗಳೂ ಒಂದೇ ಬಗೆಯಾಗಿರುವಂತೆ ಭಾಸವಾಗುತ್ತದೆ. ಕೆಲವು ವಿದೇಶೀಯರಂತೂ ನೋಡಿದೊಡನೆ ಎಲ್ಲ ಅಕ್ಷರಗಳೂ ಒಂದೇ ರೀತಿಯ ವೃತ್ತಾಕಾರಗಳಾಗಿವೆಯೆಂದು ಭಾವಿಸುತ್ತಾರೆ. ಆ ವೃತ್ತಾಕಾರಗಳ ಒಳಗೆ ಇನ್ನು ಕೆಲವು ಆಕಾರಗಳಿವೆಯೆಂಬುದನ್ನು ಕಾಣಲು ಅವರು ಇನ್ನಷ್ಟು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಬೇಕಾಗುತ್ತದೆ. ಪ್ರಾಯಶಃ ತಾಳ ಪತ್ರದಲ್ಲಿ ಕಬ್ಬಿಣದ ಕಂಠದಿಂದ ಬರೆಯುತ್ತಿದ್ದುದರಿಂದ ಈ ರೀತಿ ಗುಂಡುಗುಂಡಾದ ಅಕ್ಷರಗಳು ಪ್ರಚಾರಕ್ಕೆ ಬಂದಿರಬೇಕು. ಇತ್ತೀಚೆಗೆ ಒಬ್ಬಿಬ್ಬರು ನೀಳವಾದ ತಲೆ ಕಟ್ಟುಗಳನ್ನು ಕೊಟ್ಟು ದೇವನಾಗರಿಯ ರೀತಿಯಲ್ಲಿ ಇದನ್ನು ಬರೆಯುವ ಪ್ರಯತ್ನ ಮಾಡಿದ್ದಾರಾದರೂ ಅದು ಫಲಕಾರಿಯಾಗಲಿಲ್ಲ. ಈಗ ಒರಿಸ್ಸ ಸರ್ಕಾರ ಲಿಪಿ ಸುಧಾರಣೆಯ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ.

**ಲಿಖಿತ ರೂಪಗಳು:** ಕಳಿಂಗ ರಾಜನಾದ ಅನಂತವರ್ಮ ವಜ್ರಹಸ್ತದೇವನ ಶಿಲಾಶಾಸನವೇ (1051) ಒರಿಯದಲ್ಲಿ ಈವರೆಗೆ ದೊರೆತ ಅತಿ ಪ್ರಾಚೀನ ಶಾಸನ. ಇದಲ್ಲದೆ ಪ್ರ.ಶ.ಪೂ. 3ನೆಯ ಶತಮಾನದ ಅಶೋಕನ ಮತ್ತು ಪ್ರ.ಶ.ಪೂ. ಮೊದಲ ಶತಮಾನದ ಖಾರವೇಲನ ಶಿಲಾಶಾಸನಗಳು ಕೂಡ ಒರಿಸ್ಸದಲ್ಲಿ ಸಿಕ್ಕಿವೆ. ಈ ಶಾಸನಗಳಿಂದ ಆ ಕಾಲದಲ್ಲಿ ಪಾಲಿ ಭಾಷೆ ಪ್ರಚಾರದಲ್ಲಿದ್ದುದು ಕಂಡುಬರುತ್ತದೆ. ಈ ಶಾಸನಗಳ ಮತ್ತು

ಅಕ್ಷರ ಮಾಲೆ

ನಮಗೆ ದೊರೆತ ಅತಿ ಪ್ರಾಚೀನ ಸಾಹಿತ್ಯಕೃತಿಗಳ ನಡುವಣ ಯುಗದಲ್ಲಿ ಓಡ್ರ ಎನ್ನುವ ಉಪಭಾಷೆಯ ಹೆಸರೂ ಕೇಳಿಬರುತ್ತದೆ. ಪಾಲಿ, ಪ್ರಾಕೃತಗಳ ಪ್ರಭಾವದಿಂದ ಬೆಳೆದುಬಂದ ಈ ಭಾಷೆಯನ್ನು ಬೌದ್ಧರು ಉಪಯೋಗಿಸುತ್ತಿದ್ದರು. ಎರಡನೆಯ ಶತಮಾನದ ಭರತನ ನಾಟ್ಯಶಾಸ್ತ್ರದಲ್ಲಿಯೂ 7ನೆಯ ಶತಮಾನದ ಹೂಯೆನ್‍ತ್ಸಾಂಗನ ಬರೆಹಗಳಲ್ಲಿಯೂ ಇದರ ಉಲ್ಲೇಖವಿದೆ. ಒರಿಯ ರಾಜ್ಯದ ಗಡಿಯೊಳಗೆ ಪ್ರಚಾರದಲ್ಲಿದ್ದ ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳಲ್ಲಿ ಬರುವ ಒರಿಯ ಶಬ್ದ ಮತ್ತು ನುಡಿಗಟ್ಟುಗಳಿಂದಲೂ ಏಳನೆಯ ಮತ್ತು 9ನೆಯ ಶತಮಾನದ ಶಿಲಾಶಾಸನಗಳಿಂದಲೂ ಒರಿಯ ಭಾಷೆಯ ಚಾರಿತ್ರಿಕ ಪ್ರಗತಿಯನ್ನು ಊಹಿಸಬಹುದು. 13ನೆಯ ಶತಮಾನದ ಭುವನೇಶ್ವರ ದೇವಸ್ಥಾನದ ಶಾಸನದಿಂದ ಒರಿಯ ಭಾಷೆ ಆ ವೇಳೆಗಾಗಲೆ ಕೆಲವು ಶತಮಾನಗಳಿಂದ ಅಭಿವೃದ್ಧಿಗೊಳ್ಳುತ್ತಿತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. 10–12ನೆಯ ಶತಮಾನಗಳ ಮಧ್ಯದಲ್ಲಿ ರಚಿಸಲಾಗಿದೆಯೆಂದು ಊಹಿಸಬಹುದಾದ ಸಾರಳಾದಾಸ ಕವಿಯ ಮಹಾಭಾರತವೇ ಉಪಲಬ್ಧ ಒರಿಯ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುದು. ಈ ಗ್ರಂಥದ ನಿಜವಾದ ಕಾಲನಿಷ್ಕರ್ಷೆಯ ಬಗ್ಗೆ ವಾದವಿವಾದಗಳಿದ್ದು ಕೆಲವರು ಇದನ್ನು 15ನೆಯ ಶತಮಾನದ ಕೃತಿಯೆಂದು ಊಹಿಸುತ್ತಾರೆ.

**ಭಾಷಾ ಪ್ರಭೇದಗಳು:** ಕಟಕ್ ಮತ್ತು ಪುರಿ ಪ್ರದೇಶಗಳಲ್ಲಿನ ಆಡುನುಡಿ ಈ ಭಾಷೆಯ ಮುಖ್ಯ ಪ್ರಭೇದವೆಂದೂ ಒರಿಯ ಮಾತಾಡುವ ಎಲ್ಲ ಜನರೂ ಈ ಪ್ರಭೇದವನ್ನು ಅರ್ಥಮಾಡಿಕೊಳ್ಳಬಲ್ಲರೆಂದೂ ಹೇಳಬಹುದು. ಒರಿಯದ ಉಪಭಾಷಾಪರಿವೀಕ್ಷಣೆ ಈ ವರೆಗೆ ನಡೆದಿಲ್ಲ. ಹೀಗಾಗಿ ಉಪಭಾಷೆಗಳ ವಿತರಣೆಗೆ ಸಂಬಂಧಿಸಿದಂತೆ ಯಾವ ಸಾಹಿತ್ಯವೂ ನಮಗೆ ದೊರೆಯುವುದಿಲ್ಲ. ಆದರೂ ಸ್ಥೂಲವಾಗಿ ಕೆಲವು ಪ್ರಧಾನ ಪ್ರಭೇದಗಳನ್ನು ಗುರುತಿಸಬಹುದು. ಸಂಬಲ್‍ಪುರ ಮತ್ತು ಅದರ ಆಸುಪಾಸಿನ ಜಿಲ್ಲೆಗಳ ಜನರ ಆಡುನುಡಿಯಾದ ಸಂಬಲ್‍ಪುರಿ ಈ ಭಾಷೆಯ ಪ್ರಧಾನ ಪ್ರಭೇದಗಳಲ್ಲಿ ಒಂದು. ಇದು ಛತ್ತೀಸ್‍ಗಢಿ ಮತ್ತು ಹಿಂದಿಯಿಂದ ಪ್ರಭಾವಿತವಾಗಿದೆ. ಇನ್ನೊಂದು ಪ್ರಭೇದ ಉತ್ತರ ಭಾಗದಲ್ಲಿ ಬಂಗಾಳದ ಗಡಿ ಪ್ರದೇಶದಲ್ಲಿ ಪ್ರಚಾರದಲ್ಲಿದೆ. ಇದು ಬಂಗಾಳಿಯಿಂದ ಎಷ್ಟು ಪ್ರಭಾವಿತವಾಗಿದೆಯೆಂದರೆ ಗ್ರಿಯರ್‍ಸನ್ನನ ಮಾತಿನಲ್ಲಿ ಹೇಳುವುದಾದರೆ ಈ ಭಾಗದ ಜನರ ಆಡುಮಾತಿನಲ್ಲಿ ಒರಿಯದಲ್ಲಿ ಪ್ರಾರಂಭವಾದ ವಾಕ್ಯ ಬಂಗಾಳಿಯಲ್ಲಿ ಕೊನೆಗೊಳ್ಳುತ್ತದೆ. ರಾಜ್ಯದ ಉತ್ತರ ಭಾಗದಲ್ಲಿ ಕೆಲವೆಡೆಯಂತೂ ಒರಿಯ ಪುಸ್ತಕಗಳು ಬಂಗಾಳಿ ಲಿಪಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಮುದ್ರಿತವಾಗಿ ಸಾಮಾನ್ಯ ಜನತೆಯಲ್ಲಿ ಪ್ರಚಾರದಲ್ಲಿವೆ. ದಕ್ಷಿಣದ ಗಂಜಾಂ ಮತ್ತು ಕೋರಾಪುಟ್ ಜಿಲ್ಲೆಗಳಲ್ಲಿನ ಆಡುಮಾತು ತೆಲುಗು ಭಾಷೆಯಿಂದ ಪ್ರಭಾವಿತವಾಗಿದೆ. ಈ ಪ್ರಭೇದವನ್ನು ದಕ್ಷಿಣೀ ಎಂದು ಕರೆಯುತ್ತಾರೆ. ಕೋರಾಪುಟ್ ಜಿಲ್ಲೆಯ ಗಿರಿಜನರಲ್ಲಿ ಪ್ರಚಾರದಲ್ಲಿರುವ ಆಡುನುಡಿ ದಕ್ಷಿಣೀ ಭಾಷೆಯಿಂದ ಭಿನ್ನವಾಗಿದ್ದು ದೇಶೀಯ ಎನ್ನಿಸಿಕೊಳ್ಳುತ್ತದೆ.

**ಶಬ್ದಸಂಪತ್ತು:** ಹಲವು ಶತಮಾನಗಳವರೆಗೆ ಒರಿಸ್ಸ ರಾಜ್ಯ ತೆಲಿಂಗ ರಾಜರ ಅಧೀನದಲ್ಲಿತ್ತು. 20ನೆಯ ಶತಮಾನದಲ್ಲೂ ಹಲವು ಕಾಲ ಅದರ ಒಂದು ಭಾಗ ಮದ್ರಾಸ್ ಸರಕಾರದ ಆಳ್ವಿಕೆಗೊಳಗಾಗಿತ್ತು. ಹೀಗಾಗಿ ಅನೇಕ ತಮಿಳು ಮತ್ತು ತೆಲುಗು ಶಬ್ದಗಳು ಒರಿಯ ಭಾಷೆಯಲ್ಲಿ ಸೇರಿಕೊಂಡಿವೆ. ಸು. ಐವತ್ತು ವರ್ಷಗಳ ಕಾಲ ಒರಿಸ್ಸ ರಾಜ್ಯ ನಾಗಪುರದ ಭೋನ್ಸ್ಲೆ ರಾಜರ ವಶದಲ್ಲಿತ್ತು. ಹೀಗಾಗಿ ಒರಿಯ ಮರಾಠಿ ಶಬ್ದಗಳನ್ನೂ ಸ್ವೀಕರಿಸಿದೆ. ಒರಿಸ್ಸ ರಾಜ್ಯದ ಐದನೆಯ ಒಂದು ಪಾಲು ಜನಸಂಖ್ಯೆ ಗಿರಿಜನರಿಂದ ಕೂಡಿರುವುದರಿಂದ ಕೋಂಡ್, ಕೋಲ್ಹ, ಕುಯಿ, ಹೊ, ಸವರ, ಜುವಂಗ್ ಮುಂತಾದ ಭಾಷೆಗಳ ಶಬ್ದಗಳೂ ಒರಿಯದ ಭಂಡಾರಕ್ಕೆ ಸೇರಿಕೊಂಡಿವೆ. ಇವುಗಳ ಜೊತೆ ಸಂಸ್ಕೃತದ ತತ್ಸಮ ಮತ್ತು ತದ್ಭವ ಶಬ್ದಗಳು, ಅರೇಬಿಕ್ ಮತ್ತು ಪರ್ಷಿಯನ್ ಶಬ್ದಗಳೂ ಗಣನೀಯ ಪ್ರಮಾಣದಲ್ಲಿ ಸೇರಿಕೊಂಡಿವೆ. ಪೋರ್ಚುಗೀಸ್ ಮತ್ತು ಇತರ ವಿದೇಶೀ ಶಬ್ದಗಳು ನೇರವಾಗಿ ಅಥವಾ ಇತರ ಭಾರತೀಯ ಭಾಷೆಗಳ ಮೂಲಕ ಒರಿಯ ಶಬ್ದಭಂಡಾರಕ್ಕೆ ಬಂದು ಸೇರಿವೆ. ಇಂಗ್ಲಿಷ್ ಶಬ್ದಗಳಂತೂ ಆಬಾಲವೃದ್ಧರ ಆಡುನುಡಿಯಲ್ಲಿ ದಿನದಿನಕ್ಕೂ ಅಧಿಕ ಸಂಖ್ಯೆಯಲ್ಲಿ ಬಂದು ನೆಲೆಯೂರುತ್ತಿವೆ.

**ಧ್ವನಿ ವ್ಯವಸ್ಥೆ:** ಆನುವಂಶಿಕವಾಗಿ ಒರಿಯ ಭಾಷೆ ಬಂಗಾಳಿ ಮತ್ತು ಅಸ್ಸಾಮೀಗಳಿಗೆ ಸಮೀಪವಾಗಿದ್ದರೂ ಲಿಪಿ ಮತ್ತು ಧ್ವನಿವ್ಯವಸ್ಥೆಯಲ್ಲಿ ಈ ಭಾಷೆ ಅವಕ್ಕಿಂತ ಭಿನ್ನವಾಗಿದೆ. ಇದರ ಒಂದು ಪ್ರಧಾನವಾದ ಮತ್ತು ಮೂಲಭೂತವಾದ ವೈಶಿಷ್ಟ್ಯವೆಂದರೆ ಅಕ್ಷರಗಳು ಸ್ವರಾಂಗತವಾಗಿರುವುದು. ಒರಿಯದ ಶಬ್ದಗಳೂ ಸ್ವರದಲ್ಲಿ ಕೊನೆಗೊಳ್ಳುತ್ತವೆ (ಅಜಂತಗಳಾಗಿವೆ). ಸೋದರಭಾಷೆಗಳಲ್ಲಿ ಅಜಂತಗಳಲ್ಲದ ಶಬ್ದಗಳು ಒರಿಯದಲ್ಲಿ ಓ ಎಂಬ ವಿಶಿಷ್ಟವಾದ ವಿವೃತ ಒ ಕಾರದಲ್ಲಿ (ಎ) ಕೊನೆಗೊಳ್ಳುತ್ತವೆ. ಹಿಂದಿ ಮತ್ತು ಬಂಗಾಳಿಯ ಘರ್ ಎನ್ನುವ ಹಲಂತ ಶಬ್ದ ಒರಿಯದಲ್ಲಿ ಘೊರೊ (ghoro) ಎಂದು ಅಜಂತವಾಗುತ್ತದೆ. ಇದರಿಂದಾಗಿಯೆ ಗ್ರಿಯರ್‍ಸನ್ ಒರಿಯ ಭಾಷೆಯಲ್ಲಿ, ಬರವಣಿಗೆ ಮತ್ತು ಉಚ್ಚಾರಣೆ ಒಂದೇ ರೀತಿಯಾಗಿವೆಯೆಂದು ಹೇಳಿದ್ದಾನೆ. ಸ್ವರಗಳ ಹ್ರಸ್ವ ದೀರ್ಘ ರೂಪಗಳು ಪ್ರತ್ಯೇಕ ಸ್ವನಿಮಯಗಳಾಗಿಲ್ಲ. ಸಂಸ್ಕೃತ ಶಬ್ದಗಳಲ್ಲಿನ ದೀರ್ಘಸ್ವರಗಳು ಹ್ರಸ್ವ ಸ್ವರಗಳಾಗಿ ಉಚ್ಚರಿಸಲ್ಪಡುತ್ತವೆ. ಇನ್ನೆರಡು ವಿಚಾರಗಳಲ್ಲಿಯೂ ಒರಿಯ ಹಿಂದಿ ಮತ್ತು ಬಂಗಾಳಿಯಿಂದ ಭಿನ್ನವಾಗಿದೆ. ಹಿಂದಿ ಮತ್ತು ಬಂಗಾಳಿಯಲ್ಲಿಲ್ಲದ ಣ ಮತ್ತು ಳ ಒರಿಯದಲ್ಲಿದೆ. ಸ, ಶ, ಷ ಗಳೆಂಬ ಮೂರು ಊಷ್ಮಧ್ವನಿಗಳ ಸ್ಥಾನದಲ್ಲಿ ಬಂಗಾಳಿ ಭಾಷೆ ಶಕಾರವನ್ನು ಮಾತ್ರ ಬಳಸಿದರೆ ಒರಿಯ ಸಕಾರವನ್ನು ಮಾತ್ರ ಬಳಸುತ್ತದೆ. ಬರೆಹದಲ್ಲಿ

ಬಕಾರ ಮತ್ತು ವಕಾರ ಪ್ರತ್ಯೇಕವಾಗಿ ಕಂಡುಬಂದರೂ ಉಚ್ಚಾರಣೆಯಲ್ಲಿ ಈ ಎರಡರ ಸ್ಥಾನದಲ್ಲಿ ಓಷ್ಠ್ಯ, ಬಕಾರ ಮಾತ್ರ ಬಳಕೆಯಲ್ಲಿದೆ. ಪದಾಘಾತ ಮತ್ತು ಸ್ವರವನ್ನು ಈ ತನಕ ಯಾರೂ ಅಧ್ಯಯನ ಮಾಡದಿದ್ದರೂ ಅವುಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಹುದು. ಶಬ್ದದ ಪ್ರಥಮಾಕ್ಷರಕ್ಕೆ ಆಘಾತವಿರುತ್ತದೆ. ಬಹ್ವಕ್ಷರೀ ಶಬ್ದಗಳಲ್ಲಿ ಪ್ರಥಮಾಕ್ಷರಕ್ಕೆ ಆಘಾತವಿಲ್ಲ. ವಾಕ್ಯದ ಕೊನೆಯಲ್ಲಿ ವಾಕ್ಯಸ್ವರ ಇಳಿಮುಖವಾಗುತ್ತದೆ.

**ವ್ಯಾಕರಣ:** ಒರಿಯದಲ್ಲಿ ಏಕ, ಬಹು ಎಂಬ ಎರಡು ವಚನಗಳಿವೆ. ಬಹುತ್ವವನ್ನು ದ್ಯೋತಿಸುವ ಶಬ್ದಗಳನ್ನು ಏಕವಚನ ರೂಪಕ್ಕೆ ಸೇರಿಸಿ ಬಹುವಚನ ರೂಪಗಳನ್ನು ಪಡೆಯಬಹುದು. ಸಂಸ್ಕೃತದ ಗುಣ, ಕುಳ ಮತ್ತು ದ್ರಾವಿಡ ಭಾಷೆಗಳ ಗಳ್ ಇವುಗಳಿಂದ ಸಿದ್ಧಿಸಿದ ಗುಡಿ, ಗುಡಿಕ ಅಥವಾ ಗುಡಕ ಶಬ್ದಗಳು ಬಹುವಚನ ಸಾಧಕಗಳು. ಉದಾ. ಲೋಕ=ಮನುಷ್ಯ; ಲೋಕಗುಡಿಕ, ಲೋಕಗುಡಕ=ಮನುಷ್ಯರು. ಹಾಗೆಯೇ ಮನೆ, ಎ ಮುಂತಾದ ಪ್ರತ್ಯಯಗಳನ್ನು ಸೇರಿಸಿಯೂ ಲೋಕಮನೆ, ಲೋಕೆ ಮುಂತಾದ ಬಹುವಚನ ರೂಪಗಳನ್ನು ಪಡೆಯಬಹುದು. ಒರಿಯ ವ್ಯಾಕರಣದಲ್ಲಿ ಲಿಂಗ ವಿವಕ್ಷೆಯಿಲ್ಲ. ನೈಸರ್ಗಿಕ ಲಿಂಗ ವ್ಯವಸ್ಥೆಯ ಆಧಾರದ ಮೇಲೆ ಪುಲ್ಲಿಂಗ ಶಬ್ದಗಳಿಂದ ಸ್ತ್ರೀಲಿಂಗ ರೂಪಗಳನ್ನು ಸುಲಭವಾಗಿ ಸಾಧಿಸಬಹುದು. ನೈಸರ್ಗಿಕ ಲಿಂಗಭೇದಕ್ಕನುಸಾರವಾಗಿ ಸಜೀವ ವಾಚಕ ಶಬ್ದಗಳು ಸ್ತ್ರೀಲಿಂಗ ಪುಲ್ಲಿಂಗಗಳೆಂದು ವಿಭಾಗಿಸಲ್ಪಟ್ಟಿವೆ. ಪುಲ್ಲಿಂಗ ಶಬ್ದದಿಂದ ಸ್ತ್ರೀಲಿಂಗ ರೂಪ ಪಡೆಯಲು ಹಲವು ವಿಧಾನಗಳಿವೆ. ಗಂಡು ಮತ್ತು ಹೆಣ್ಣು ಶಬ್ದಗಳನ್ನು ಆ ಶಬ್ದದ ಮುಂದೆ ಜೋಡಿಸುವುದು: ಒಂಡಿರಾ ಛೇಟಿ=ಹೋತ, ಮಾಯಿ ಛೇಟಿ=ಆಡು; ಅಥವಾ ಸ್ತ್ರೀಲಿಂಗ ವಾಚಕವಾದ ಪ್ರತ್ಯೇಕ ಶಬ್ದವೊಂದನ್ನು ಬಳಸುವುದುಂಟು. ಕಾಕ=ಚಿಕ್ಕಪ್ಪ, ಖುಡಿ=ಚಿಕ್ಕಮ್ಮ ಇತ್ಯಾದಿ. ಸಾಮಾನ್ಯವಾಗಿ ಬರುವ ಸ್ತ್ರೀಲಿಂಗ ಪ್ರತ್ಯಯಗಳೆಂದರೆ ಇ, ಅಣಿ ಮತ್ತು ಉಣಿ. ಬುಢಾ=ಮುದುಕ, ಬುಢೀ=ಮುದುಕಿ, ಬಾಯ=ಹುಚ್ಚ, ಬಾಯಾಣಿ=ಹುಚ್ಚಿ, ಬಾಘೊ=ಹುಲಿ, ಬಾಘುಣಿ=ಹೆಣ್ಣು ಹುಲಿ–ಇತ್ಯಾದಿ. ಒರಿಯದಲ್ಲಿ ಐದು ವಿಭಕ್ತಿಗಳಿವೆ. ಈ ವಿಭಕ್ತಿಗಳು ಪ್ರತ್ಯಯರೂಪದಲ್ಲಿರದೆ ಪರಸರ್ಗ ರೂಪದಲ್ಲಿವೆ. ದ್ವಿತೀಯ ಮತ್ತು ಚತುರ್ಥೀ ವಿಭಕ್ತಿಗಳಿಗೆ ಕು ಎನ್ನುವ ಒಂದೇ ರೂಪವಿದೆ. ಕ್ರಿಯಾಪದಗಳಲ್ಲಿ ಮೂರು ಕಾಲಭೇದಗಳಿವೆ. ವರ್ತಮಾನ, ಭೂತ, ಭವಿಷ್ಯದ್ ರೂಪಗಳು ಒಚ್, ಲ ಮತ್ತು ಬ ಎನ್ನುವ ಪ್ರತ್ಯಯಗಳಿಂದ ಸಿದ್ಧಿಸುತ್ತವೆ. ಖಾವುಚ್ಚಿ=ತಿನ್ನುತ್ತಾನೆ, ಖಾಯಿಲಾ=ತಿಂದನು, ಖಾಯಿಬೊ=ತಿನ್ನುವನು–ಇತ್ಯಾದಿ. ಗ್ರಿಯರ್‌ಸನ್ನನ ಅಭಿಪ್ರಾಯದಂತೆ ಒರಿಯದ ಕ್ರಿಯಾಪದ ರೂಪಗಳು ತುಂಬ ಸರಳವಾಗಿಯೂ ವ್ಯವಸ್ಥಿತವಾಗಿಯೂ ಇವೆ. ಕಾಲಭೇದಗಳು ಬಹಳ ಇದ್ದರೂ ಅವು ತರ್ಕಬದ್ಧವಾಗಿದ್ದು ಅವುಗಳಲ್ಲಿ ಅಡಗಿರುವ ವ್ಯವಸ್ಥೆ ಬೇರೆ ಬೇರೆ ಕೃದಂತ ನಾಮಗಳಲ್ಲಿಯೂ ಕಂಡುಬರುತ್ತದೆ.

**ಸಾಹಿತ್ಯ:** ಸಾಹಿತ್ಯಭಾಷೆಯಾಗಿ ಒರಿಯ ಎಷ್ಟು ಸಮೃದ್ಧವಾಗಿ ಬೆಳೆದಿದೆಯೆನ್ನುವುದನ್ನು ಸೂಕ್ಷ್ಮವಾಗಿ ತೋರಿಸುವ ಸಲುವಾಗಿ ಮಾತ್ರ ಇಲ್ಲಿ ಸಾಹಿತ್ಯ ಭಾಗವನ್ನು ಸಂಗ್ರಹವಾಗಿ ಕೊಟ್ಟಿದೆ. ವಿವರಗಳಿಗೆ **(ನೋಡಿ– ಒರಿಯ–ಸಾಹಿತ್ಯ)**.

ಒರಿಯ ಭಾಷೆಯ ಸಾಹಿತ್ಯ ತುಂಬ ಸಮೃದ್ಧವಾಗಿದೆ. ಅದು ಸಾಮಾನ್ಯ ಜನತೆಯ ಸಾಹಿತ್ಯ. ಈ ರಾಜ್ಯದಲ್ಲಿ ನೆಲೆನಿಂತ ಆಂಧ್ರರು, ಮರಾಠರು, ಬಂಗಾಳಿಗಳು, ಮುಸ್ಲಿಮರು, ಆದಿವಾಸಿಗಳು–ಎಲ್ಲರೂ ಇದಕ್ಕೆ ತಮ್ಮ ಕಾಣಿಕೆಗಳನ್ನರ್ಪಿಸಿದ್ದಾರೆ. ಜಗನ್ನಾಥ ದೇವರನ್ನು ವರ್ಣಿಸಿದ ಸಾಲಬೆಗ ಎನ್ನುವ ಮುಸ್ಲಿಂ ಕವಿ, ಮಧ್ಯಕಾಲೀನ ವೈಷ್ಣವ ಸಾಹಿತ್ಯವನ್ನು ಬೆಳೆಸಿದ ಚೈತನ್ಯ ಮಹರ್ಷಿಯ ಶಿಷ್ಯರಾದ ಬಂಗಾಳಿ ವೈಷ್ಣವರು ಜನತೆಯ ನಾಲಗೆಯಲ್ಲಿ ನಲಿದಾಡುವಂಥ ಸಂಗೀತ ರೂಪಕಗಳನ್ನು ರಚಿಸಿದ ಕುರುಡನಾದ ಖೊಂಡಕವಿ–ಇವರೆಲ್ಲ ಈ ಸಾಹಿತ್ಯಕ್ಕೆ ಅಪೂರ್ವವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ರಾಧಾನಾಥ ರೇ, ಆನಂದಶಂಕರ ರೇ ಮುಂತಾದ ಪ್ರತಿಭಾವಂತ ಬಂಗಾಳಿ ಕವಿಗಳು ಒರಿಯದಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಶತಮಾನಗಳುರುಳಿದಂತೆ, ರಾಜವಂಶಗಳು ಬದಲಾದಾಗ ಧಾರ್ಮಿಕ ವಿಶ್ವಾಸಗಳು ಬದಲಾದಂತೆ, ಸಾಹಿತ್ಯ ಸ್ವರೂಪವೂ ಮಾರ್ಪಾಟಾದುದು ಕಂಡುಬರುತ್ತದೆ. ಮೊದಲು ಜೈನ್, ಆಮೇಲೆ ಬೌದ್ಧ, ತರುವಾಯ ಶೈವ ಮತ್ತು ಶಾಕ್ತಮತಗಳು ಪ್ರಭಾವಶಾಲಿಯಾಗಿದ್ದುವು. ಆಮೇಲೆ ಜನತೆಯ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿ ಅವರ ಮನಸ್ಸಿನಲ್ಲಿ ಬೇರೂರಿನಿಂತ ಧಾರ್ಮಿಕ ಸಂಪ್ರದಾಯವೆಂದರೆ ರಾಮಭಕ್ತಿ ಮತ್ತು ಕೃಷ್ಣಭಕ್ತಿ ಸಂಪ್ರದಾಯ. ಒರಿಯ ಸಾಹಿತ್ಯ ಇದರಿಂದ ತುಂಬ ಸಮೃದ್ಧವಾಗಿದೆ. ಒರಿಯದಲ್ಲಿ ಕಡಿಮೆಯೆಂದರೆ ಮೂವತ್ತು ರಾಮಾಯಣಗಳೂ ನಾಲ್ಕೈದು ಮಹಾಭಾರತಗಳೂ ಇವೆ. ಎಲ್ಲ ಪುರಾಣಗಳೂ ಇವೆ. ಮಧ್ಯಕಾಲದ ಅಲಂಕಾರಶಾಸ್ತ್ರಸಾಹಿತ್ಯವೂ ಸಾಕಷ್ಟು ಸಮೃದ್ಧವಾಗಿದೆ. ಪುರಾಣಗ್ರಂಥಗಳು ತಮ್ಮ ಕಥಾಪ್ರೌಢಿಮೆಯಿಂದಲೂ ಅಲಂಕಾರಗ್ರಂಥಗಳು ತಮ್ಮ ಭಾಷೆ, ಭಾವ ಮತ್ತು ಶಬ್ದಾರ್ಥಸೌಂದರ್ಯದಿಂದಲೂ ಜನರ ಮನಸ್ಸನ್ನು ಸೂರೆಗೊಂಡಿವೆ. ಜನತೆಯ ಹೃದಯವನ್ನು ಆಕರ್ಷಿಸುವುದರಲ್ಲಿ ಪ್ರಾಚೀನ ಸಾಹಿತ್ಯದಷ್ಟು ಆಧುನಿಕ ಸಾಹಿತ್ಯ ಸಫಲವಾಗಿಲ್ಲ ಎಂದು ಹೇಳಬಹುದು. ಆದರೂ ಭಾಷೆ ಮತ್ತು ಕಲ್ಪನೆಗಳಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಿರುವ ಒರಿಯ ಸಾಹಿತ್ಯ ತನ್ನ ಆಧುನಿಕ ಬರೆವಣಿಗೆಗಳಲ್ಲಿ ಪರಿಪಕ್ವತೆಯನ್ನು ಹೊಂದಿದೆ. ಇದರ ಕೆಲವು ಅತ್ಯುತ್ತಮ ಗ್ರಂಥಗಳು ಭಾರತದ ಇತರ ಭಾಷೆಗಳಲ್ಲಿನ ಅತ್ಯುತ್ತಮ ಗ್ರಂಥಗಳ ಸಾಲಿನಲ್ಲಿ ನಿಲ್ಲಬಲ್ಲವಾಗಿವೆ. (ಜಿ.ಬಿ.ಡಿ.)

**ಒರಿಯ ಸಾಹಿತ್ಯ:** ವಿಪುಲವಾಗಿ ಬೆಳೆದಿರುವ ಒರಿಯ ಸಾಹಿತ್ಯಚರಿತ್ರೆಯನ್ನು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಸಂಗ್ರಹವಾಗಿ ನಿರೂಪಿಸಿ ಅದರಲ್ಲಿನ ಪ್ರಧಾನ ಘಟ್ಟಗಳನ್ನು ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ. 15ನೆಯ ಶತಮಾನಕ್ಕೂ ಹಿಂದೆ ಅಂದರೆ ಸಾರಳಾದಾಸನಿಗಿಂತ ಹಿಂದೆ ಒರಿಯ ಸಾಹಿತ್ಯದ ಸ್ವರೂಪ ಹೇಗಿತ್ತೆಂಬುದನ್ನು ಸ್ವಲ್ಪಮಟ್ಟಿಗಾದರೂ ಅರಿತುಕೊಳ್ಳಲು ಯಾವ ಐತಿಹಾಸಿಕ ಆಧಾರಗಳೂ ದೊರೆತಿಲ್ಲ. ಆದರೂ ಸಾರಳಾದಾಸನ ಕವಿತ್ವದಲ್ಲಿ ವ್ಯಕ್ತವಾಗುವ ಪರಿಣತಿಯನ್ನು ನೋಡಿದರೆ ಆತನಿಗಿಂತ ಹಿಂದೆಯೂ ಸಾಹಿತ್ಯ ಬಹಳ ಚೆನ್ನಾಗಿ ಬೆಳೆದಿರಬೇಕೆಂಬುದನ್ನು ಸಯುಕ್ತಿಕವಾಗಿ ಊಹಿಸಬಹುದು. ಚೌತಿಸಾಢಗ. ಢಮಾಳಿ, ದಾಕವಚನ ಮತ್ತು ಇತರ ಜಾನಪದ ಸಾಹಿತ್ಯ ಪ್ರಕಾರಗಳು ಅವನ ಕಾಲಕ್ಕೆ ಬಹು ಹಿಂದೆಯೇ ರೂಪುಗೊಂಡು ವಿಕಾಸವಾಗಿದ್ದವೆನ್ನಬಹುದು. ಒರಿಯ ಕವಿತೆಯ ಹಳೆಯ ರೂಪವೊಂದನ್ನು ಪ್ರದರ್ಶಿಸುವ ಒಂದೇ ಒಂದು ಪ್ರಾಚೀನ ಗ್ರಂಥವೆಂದರೆ ಬೌದ್ಧಗಾನ ಓ ದೋಹ. ಎಂಬತ್ತನಾಲ್ಕು ಕವಿಗಳಿಂದ ರಚಿತವಾಗಿದ್ದು ಬೌದ್ಧಧರ್ಮಕ್ಕೆ ಸಂಬಂಧಿಸಿದ ಭಾವಗೀತೆಗಳು ಇಲ್ಲಿ ಸಂಕಲಿತವಾಗಿವೆ. ಇವರು ಬೌದ್ಧತಾಂತ್ರಿಕ ಪಂಥಕ್ಕೆ ಸೇರಿದವರು. ಈ ಭಾವಗೀತೆಗಳ ಕಾಲ 7–12ನೆಯ ಶತಮಾನದವರೆಗೆ ಹರಡಿದೆ. ಇಲ್ಲಿನ ಭಾಷೆ ಅಪಭ್ರಂಶದ ಒಂದು ಮೃದುರೂಪ. ಮಧ್ಯಯುಗದ ಮತ್ತು ಆಧುನಿಕ ಕಾಲದ ಭಾಷೆಗಿಂತ ತೀರ ಭಿನ್ನವಾದದ್ದು. ಇಲ್ಲಿನ ಗೀತೆಗಳನ್ನು ಹಳೆಯ ಬಂಗಾಳಿ ಮತ್ತು ಮೈಥಿಲೀ ಭಾಷೆಗಳ ಭಾವಗೀತೆಗಳೆಂದು ಪಂಡಿತರು ಹೇಳುವುದುಂಟು. ಇವು ಪ್ರಾಚೀನ ಒರಿಯ ಭಾವಗೀತೆಗಳೇ ಎಂದು ಡಾ. ಕಾರ್ ಗುರುತಿಸಿದ್ದಾರೆ (1950). ಈ ಗ್ರಂಥದಷ್ಟೆ ಪ್ರಾಚೀನ ಭಾಷೆಯಲ್ಲಿ ರಚಿತವಾದ ಶಿಶುವೇದವೆಂಬ ಮತ್ತೊಂದು ಗ್ರಂಥ ಬೆಳಕಿಗೆ ಬಂದಿದೆ. ಐತಿಹಾಸಿಕ ಸಾಕ್ಷ್ಯಗಳ ಕೊರತೆಯಿಂದ ಇದರ ಕಾಲವನ್ನು ನಿಷ್ಕೃಷ್ಟವಾಗಿ ತಿಳಿಯಲಾಗಿಲ್ಲ. ಆದರೂ ಇದು ಬೌದ್ಧಗಾನ ಓ ದೋಹಕ್ಕಿಂತ ಈಚಿನದೆಂದೂ ಸಾರಳಾದಾಸನಿಗೆ ಪೂರ್ವದ್ದೆಂದೂ ಸಾಮಾನ್ಯವಾಗಿ ಪರಿಗಣಿತವಾಗಿದೆ.

ಕೆಲವು ಗ್ರಂಥಗಳನ್ನು ಸಾರಳಾದಾಸನಿಗಿಂತ ಪೂರ್ವದವೆಂದು ಹೇಳಲು ಸರಿಯಾದ ಐತಿಹಾಸಿಕ ಆಧಾರಗಳು ಇಲ್ಲವಾದ್ದರಿಂದ ಸದ್ಯಕ್ಕೆ ಇಷ್ಟು ಹೇಳಬಹುದು. ಆ ಕಾಲದಲ್ಲಿ ಸಂಸ್ಕೃತ ಸಾಹಿತ್ಯದ ಪ್ರಭಾವ ಒರಿಯದಲ್ಲಿ ಪ್ರಬಲವಾಗಿತ್ತಲ್ಲದೆ ಪ್ರಾಂತೀಯ ಸಾಹಿತ್ಯ ಜಾಗರೂಕತೆಯಿಂದ ತನ್ನ ಸ್ವರೂಪವನ್ನು ಪಡೆಯುತ್ತಿತ್ತು. ಮೇಲೆ ಹೇಳಿದ ಗ್ರಂಥಗಳು ಅಪಭ್ರಂಶದ ಕಾಲ ಮುಗಿಯುತ್ತಿದ್ದಂತೆ ಹುಟ್ಟಿದವೆನ್ನಬಹುದು.

**ಸಾರಳಾ ಯುಗ:** ಒರಿಯ ಸಾಹಿತ್ಯದ ಜನಕನೆಂದು ಪ್ರಖ್ಯಾತನಾದ ಸಾರಳಾದಾಸ 15ನೆಯ ಶತಮಾನದಲ್ಲಿ, ಒರಿಸ್ಸದ ಗಜಪತಿಯಾದ ಕಪಿಳೇಂದ್ರ ದೇವನ ಆಳ್ವಿಕೆಯಲ್ಲಿದ್ದವ. ಮಹಾಭಾರತ, ಬಿಲಂಕಾ ರಾಮಾಯಣ ಮತ್ತು ಚಂಡೀ ಪುರಾಣಗಳು ಇವನ ಕೃತಿಗಳು. ಮಹಾಭಾರತದಲ್ಲಿ 18 ಭಾಗಗಳಿವೆ. ಅದು ಮೂಲ ಸಂಸ್ಕೃತ ಭಾರತಕ್ಕಿಂತ ವರ್ಣನೆಯಲ್ಲೂ ಉದ್ದೇಶದಲ್ಲೂ ಭಿನ್ನವಾಗಿದೆ. ದೇಶದ ದೈನಂದಿನ ಮತ್ತು ಸಾಮಾಜಿಕ, ಸಾಂಸ್ಕೃತಿಕ ಜೀವನವನ್ನು ಆಧರಿಸಿ ಕವಿ ಅದರಲ್ಲಿ ಅನೇಕ ತನ್ನದೇ ಆದ ಹೊಸ ಕಥೆಗಳನ್ನು ಅಳವಡಿಸಿದ್ದಾನೆ. ಅವು ಹೇರಳವಾಗಿ ಜನಪ್ರೀತಿಯನ್ನು ಗಳಿಸಿವೆ. ಪಾತ್ರಚಿತ್ರಣದಲ್ಲೂ ಪ್ರಕೃತಿವರ್ಣನೆಯಲ್ಲೂ ಕವಿ ತನ್ನ ಸಾಮರ್ಥ್ಯವನ್ನು ಪ್ರಕಟಿಸಿದ್ದಾನೆ. ಜೊತೆಗೆ ಈತನ ವೈಷ್ಣವ ತತ್ತ್ವಗಳು ಮಹಾಭಾರತದ ವಸ್ತುವಿನೊಂದಿಗೆ ಚೆನ್ನಾಗಿ ಮಿಳಿತವಾಗಿರುವುದು ಕಂಡುಬರುತ್ತದೆ. ಈತನ ವರ್ಣನೆಗಳಲ್ಲಿ ದೇಸೀಯತೆ ಕಂಪಿಟ್ಟಿದೆ. ಬಿಲಂಕಾ ರಾಮಾಯಣ ಸಂಸ್ಕೃತದ ಅದ್ಭುತರಾಮಾಯಣದ ಪ್ರಭಾವವನ್ನು ತೋರುವ ಗ್ರಂಥವೆಂದು ಕೆಲವು ಪಂಡಿತರ ಅಭಿಪ್ರಾಯ. ಮಹಾತಾಯಿ ಚಂಡಿಯ ಶಕ್ತಿಯನ್ನು ಪ್ರದರ್ಶಿಸಲು ರಚಿತವಾದ ಪೌರಾಣಿಕ ಕೃತಿ ಚಂಡೀಪುರಾಣ. ಯಮದೇವತೆ ತನ್ನನ್ನು ಕೊಲ್ಲಲಾಗದ ಮಟ್ಟಿಗೆ ಶಕ್ತಿವಂತನಾಗಿ ಬೆಳೆದ ಮಹಿಷಾಸುರನನ್ನು ದೇವತೆಗಳೆಲ್ಲರ ಪ್ರಾರ್ಥನಾಫಲವಾಗಿ ಎದ್ದ ಕಿಚ್ಚಿನಿಂದ ಮೂಡಿಬಂದ ಮಹಿಷಾಸುರ ಮರ್ದಿನಿ ನಿರ್ನಾಮ ಮಾಡಿದ ವಿಷಯ ಇಲ್ಲಿ ವರ್ಣಿತವಾಗಿದೆ.

ಸಾರಳಾದಾಸನ ಎಲ್ಲ ಕೃತಿಗಳಲ್ಲೂ ಯುದ್ಧದ ವರ್ಣನೆಗಳು ವಿಪುಲವಾಗಿವೆ. ಈ ವರ್ಣನೆಗಳು ಜೀವಕಳೆಯಿಂದ ತುಂಬಿದ್ದು ಓದುಗರ ಮನಸ್ಸಿನ ಮುಂದೆ ಆಯಾ ದೃಶ್ಯಗಳನ್ನು ಪರಿಣಾಮಕಾರಿಯಾಗಿ ತಂದು ನಿಲ್ಲಿಸಿಬಿಡುತ್ತವೆ. ತನ್ನ ರಾಜ್ಯವನ್ನು ವಿಸ್ತರಿಸುವುದಕ್ಕಾಗಿ ದೀರ್ಘಕಾಲದವರೆಗೂ ಹೋರಾಟದಲ್ಲೇ ತೊಡಗಿದ್ದ ಒರಿಸ್ಸದ ಪ್ರಭು ಕಪಿಳೇಂದ್ರನ ಕಾಲದಲ್ಲಿ ಈ ಕವಿ ಚಿತ್ರಿಸಿರುವ ಯುದ್ಧಗಳು ಐತಿಹಾಸಿಕ ದೃಷ್ಟಿಯಿಂದ ಗಮನಾರ್ಹವಾಗಿವೆ.

ಸಾರಳಾದಾಸ ತೀರಿಕೊಂಡ ತರುಣದಲ್ಲೇ ಕಲಸ ಚೌತಿಸಾ ಎಂಬುದನ್ನು ರಚಿಸಿದ ಬಚ್ಛದಾಸನೆಂಬ ಮತ್ತೊಬ್ಬ ಕವಿ ಪ್ರವರ್ಧಮಾನಕ್ಕೆ ಬಂದ. ಈ ಕೃತಿಯ ವಸ್ತು ಪಾರ್ವತೀಪರಮೇಶ್ವರರ ವಿವಾಹ. ಹಾಸ್ಯರಸ ನಿರೂಪಣೆಯಲ್ಲಿ ಈ ಕವಿ ತನ್ನ

ಚಾತುರ್ಯವನ್ನು ಪ್ರಕಟಿಸಿದ್ದಾನೆ. ಹಾಗೂ ಕಥಾನಾಯಕಿಯ ವರ್ಣನೆಯಲ್ಲಿ, ವಿವಾಹಪ್ರಸಂಗದಲ್ಲಿ ಒರಿಸ್ಸದ ರೂಪವತಿಯರ, ವಿವಾಹ ಪದ್ಧತಿಯ ವಿವರಗಳನ್ನು ತಂದಿದ್ದಾನೆ. ಹೆಸರೆತ್ತಿ ಹೇಳಬಹುದಾದ ಆ ಕಾಲದ ಮತ್ತೊಂದು ಚೌತಿಸಾ ಯಾವುದೆಂದರೆ ದಾಮೋದರ ಕವಿ ಪ್ರಣೀತವಾದ ರಾಸಕುಲ್ಯಾ. ಈ ಕೃತಿಯ ವಸ್ತು ರಾಧಾಕೃಷ್ಣರ ಪ್ರಣಯ. ರಾಧಾಕೃಷ್ಣರ ವಿರಹದ ವರ್ಣನೆಯನ್ನು ಓದುತ್ತಿರುವಾಗ ಓದುಗರ ಮನಸ್ಸು ಕರಗಿಹೋಗುತ್ತದೆ. ಅರ್ಜುನದಾಸನ ರಾಮ ಬಿಭಾ ಎಂಬ ಕೃತಿಯಲ್ಲಿ (1480–1510) ರಾಮಚಂದ್ರ ಪರಶುರಾಮನನ್ನು ಕಾಣುವ ಸಂದರ್ಭದವರೆಗಿನ ಕಥೆ ವರ್ಣಿತವಾಗಿದೆ. ಈ ಕೃತಿಯ ಮುಖ್ಯವಸ್ತು ರಾಮಾಯಣದಿಂದ ತೆಗೆದುಕೊಂಡದ್ದು. ಈ ಕಾಲದ ಇನ್ನೂ ಕೆಲವು ಕೃತಿಗಳಿರಬೇಕು. ಆದರೆ ಖಚಿತವಾದ ಸಾಕ್ಷ್ಯಗಳಿಲ್ಲದ್ದರಿಂದ ಒರಿಯ ಭಾಷೆ ಮತ್ತು ಸಾಹಿತ್ಯ ವಿಮರ್ಶಕರು ಅಂಥವನ್ನು ಹೆಸರಿಸುವ ವಿಚಾರದಲ್ಲಿ ಮೌನ ತಾಳಿದ್ದಾರೆ.

**ವೈಷ್ಣವ ಅಥವಾ ಪಂಚಸಖಾಯುಗ:** 16ನೆಯ ಶತಮಾನದ ಆದಿ ಭಾಗದಲ್ಲಿ ವೈಷ್ಣವ ಕವಿಗಳ ಕೈಯಲ್ಲಿ ಸಾಹಿತ್ಯ ಹೊಸ ರೂಪವನ್ನು ಪಡೆಯಿತು. ಸಾರಳಾದಾಸನ ಕಾಲದಲ್ಲೂ ವೈಷ್ಣವ ಸಂಪ್ರದಾಯವಿತ್ತಾದರೂ ಪ್ರಖ್ಯಾತ ವಿಷ್ಣು ಭಕ್ತನಾದ ಶ್ರೀಚೈತನ್ಯ ಬಂಗಾಳದಿಂದ ಪುರಿಗೆ ಬಂದಾಗ (1510) ಅದಕ್ಕೆ ಹೊಸ ರಂಗು ಬಂತು. ಒರಿಸ್ಸದ ವೈಷ್ಣವ ಪಂಥಕ್ಕಿಂತ ಭಿನ್ನವಾದ ಚೈತನ್ಯನ ಪಂಥ ಅಲ್ಲಿನ ವೈಷ್ಣವ ಕವಿಗಳ ಮೇಲೆ ಪ್ರಭಾವ ಬೀರಿತು. ಆದುದರಿಂದ ಆ ಎರಡು ಪಂಥಗಳೂ ಎಂದರೆ ಗೌಡೀಯ ಪಂಥ ಮತ್ತು ಒರಿಯ ಪಂಥಗಳು ಒರಿಸ್ಸದಲ್ಲಿ ಆ ಕಾಲದಿಂದಲೂ ಸ್ವೀಕೃತವಾದುವು. ಪುರಿಯ ಅಧಿದೈವ ಜಗನ್ನಾಥ ಒರಿಸ್ಸದ ಹೊರಗಣ್ಣಿಂದ ಅನೇಕ ಉಪದೇಶಕರನ್ನು ತನ್ನತ್ತ ಸೆಳೆದನಲ್ಲದೆ ಎಲ್ಲ ವೈಷ್ಣವ ಪಂಥಗಳ ಭಕ್ತಿಮಾರ್ಗಗಳಿಗೂ ತಾನೇ ಆಕರನಾದ.

ಆ ಕಾಲದಲ್ಲಿ ಪಂಚಸಖರೆಂದು ಹೆಸರಾಂತ ಬಳರಾಮದಾಸ, ಜಗನ್ನಾಥದಾಸ, ಅಚ್ಯುತಾನಂದದಾಸ, ಜಸೋವಂತ ದಾಸ ಮತ್ತು ಅನಂತದಾಸ ಎಂಬ ಐವರಿದ್ದರು. ಜನರಿಗೆ ಉಪದೇಶಮಾಡಲು ಇವರು ಒಂದುಗೂಡಿದ್ದರ ಫಲವಾಗಿ ಒರಿಯ ಸಾಹಿತ್ಯ ಶ್ರೀಮಂತವಾಯಿತು. ಬಳರಾಮದಾಸನ ದಾಂಡಿ ರಾಮಾಯಣ, ಜಗನ್ನಾಥದಾಸನ ಒರಿಯ ಭಾಗವತ, ಅಚ್ಯುತಾನಂದದಾಸನ ಹರಿವಂಶ–ಎಂಬುವು ಈ ಕಾಲದ ಮೂರು ರತ್ನಗಳು. ಇವುಗಳ ಜೊತೆಗೆ, ಈ ಸಾಧುಗಳು ತಮ್ಮ ಮತಪ್ರಚಾರಕ್ಕಾಗಿ ಧಾರ್ಮಿಕ ಕಾವ್ಯಗಳನ್ನು ವಿಪುಲವಾಗಿ ರಚಿಸಿದರು. ಈ ಸಾಧುಗಳ ಅನೇಕ ಕೃತಿಗಳಲ್ಲಿ ಜಗನ್ನಾಥ ಪ್ರಭುವೂ ಕೃಷ್ಣನೂ ವರ್ಣಿತರಾಗಿದ್ದಾರೆ. ಕೃತಿಗಳಲ್ಲಿ ಈ ಸಂತರ ದಿವ್ಯಶಕ್ತಿ ನೆಲೆಸಿದೆ. ಜಗನ್ನಾಥದಾಸನ ಒರಿಯ ಭಾಗವತ ದೇಶದಲ್ಲೆಲ್ಲ ತನ್ನ ಪ್ರಭಾವವನ್ನು ಬೀರಿದೆ. ಧರ್ಮದ ಕಠಿಣ ಸಮಸ್ಯೆಗಳೆಲ್ಲವನ್ನೂ ಸರಳವೂ ವಿಶದವೂ ಆದ ರೀತಿಯಲ್ಲಿ ದೈನಂದಿನ ಜನಜೀವನದ ಉದಾಹರಣೆಗಳಿಂದ ಈ ಕವಿ ಬಿಡಿಸಿದ್ದಾನೆ. ಭಾಗವತ ಎಷ್ಟು ಪವಿತ್ರ ಗ್ರಂಥವೆನಿಸಿತ್ತೆಂದರೆ ಅದನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದು ಗುಡಿಯಲ್ಲೋ ಮಂದಿರದಲ್ಲೋ ಇಟ್ಟು ಜನ ಪೂಜಿಸುತ್ತಿದ್ದರು. ಗ್ರಾಮಗಳ ಪ್ರಾಥಮಿಕ ಶಾಲೆಗಳಲ್ಲಿ ಹುಡುಗರಿಗೆ ಒರಿಯ ಸಾಹಿತ್ಯವನ್ನು ಕಲಿಸಲು ಇದೇ ಪ್ರಧಾನ ಪಠ್ಯಪುಸ್ತಕವಾಗಿತ್ತು.

ದಾಂಡಿ ರಾಮಾಯಣ ಮತ್ತು ಹರಿವಂಶಗಳು ಒರಿಸ್ಸದಲ್ಲಿ, ಅದರಲ್ಲೂ ವೃದ್ಧ ಜನರ ಶಾಸ್ತ್ರಾಚರಣೆಗಳಲ್ಲಿ, ತುಂಬ ಪ್ರಾಶಸ್ತ್ಯಗಳಿಸಿದುವು. ಆದರೆ ಈ ಎರಡು ಗ್ರಂಥಗಳಿಗಿಂತ ಭಾಗವತ ನಿಸ್ಸಂದೇಹವಾಗಿ ಹೆಚ್ಚು ಜನಪ್ರಿಯವಾಗಿದ್ದ ಕೃತಿ.

ಆ ಕಾಲದ ಒರಿಯ ಸಾಹಿತ್ಯದಲ್ಲಿ ಗೀತಾ, ಸಂಹಿತಾ, ಮಳಿಕಾ, ಕೊಯಿಲೆ. ಮಾಹಾತ್ಮ್ಯ, ಸಂಬಾದ–ಮುಂತಾದ ಅನೇಕ ಸಾಹಿತ್ಯಪ್ರಕಾರಗಳು ಉದಿಸಿದುವು. ಅನೇಕ ಗ್ರಂಥಗಳ ರಚನೆಯಾಗಿ ತನ್ಮೂಲಕ ಜಾತಿಮತ ಭೇದವಿಲ್ಲದೆ ಅನೇಕ ಮಂದಿ ಓದು ಕಲಿತು ಅವನ್ನು ಓದುವಂತಾದುದು ಆ ಕಾಲದ ಮುಖ್ಯ ಧೋರಣೆ. ಆಗಿನ ಅರಸನಾದ ಪ್ರತಾಪರುದ್ರದೇವ ವೈಷ್ಣವಭಾವನೆಯಿಂದ ತುಂಬ ಪ್ರಭಾವಿತನಾಗಿದ್ದ. ಆಗಿನಿಂದ ಒರಿಸ್ಸದಲ್ಲಿ ವೈಷ್ಣವ ಮತ ಹರಡಿದ್ದರ ಫಲವಾಗಿ ಒರಿಸ್ಸದ ಸೈನಿಕರು ಕಾದುವುದರಲ್ಲಿ ಅನಾಸ್ಥೆಯನ್ನು ತಾಳಿ ಶತ್ರುಗಳ ಆಕ್ರಮಣಕ್ಕೆ ಅವಕಾಶ ಕೊಡುವಂತಾದರೆಂದು ಒಂದು ಅಪವಾದವಿದೆ.

ಕೇಶವ ಕೊಯಿಲಿ ಎಂಬುದು ಕೃಷ್ಣನ ಅಗಲಿಕೆಯನ್ನು ತಾಳದೆ ಯಶೋದೆ ಪಟ್ಟ ಪರಿತಾಪವನ್ನು ವರ್ಣಿಸುವ ಕೃತಿ. ಈ ಕಾರಣಕ್ಕಾಗಿಯೇ ಇದು ತುಂಬ ಜನಪ್ರಿಯವಾಗಿದೆ. ಪಂಚಸಖರಿದ್ದ ಕಾಲದಲ್ಲೋ ಅವರ ತರುವಾಯವೋ ಇದು ರಚಿತವಾದುದೆಂದು ಭಾವಿಸಲಾಗಿದೆ. ಈ ಕೃತಿಯ ಕವಿಯಾದ ಮಾರ್ಕಂಡದಾಸನ ವಿಚಾರವಾಗಿ ಯಾವ ಸಂಗತಿಯೂ ತಿಳಿದುಬಂದಿಲ್ಲ. ಗಜಪತಿ ಪ್ರತಾಪರುದ್ರನ ಕಾಲದಲ್ಲಿದ್ದ ರಾಯ ರಮಾನಂದ ಎಂಬ ವೈಷ್ಣವ ಕವಿ ಬ್ರಜಬೋಲಿಯಲ್ಲಿ ಅನೇಕ ಭಾವಗೀತೆಗಳನ್ನು ಬರೆದ. ಇದು ಚೈತನ್ಯದೇವನ ಜನಪ್ರಿಯ ತತ್ತ್ವವನ್ನು ಅನಕ್ಷರಸ್ಥರಾದ ಹಳ್ಳಿಯ ಜನರಲ್ಲಿ ಹರಡಲು ಮೊದಲ ಹೆಜ್ಜೆಯೆನಿಸಿತು. ರಾಮಾನಂದನ ಸಮಕಾಲೀನಳಾದ ಮಾಧಬಿ ದಾಸಿ ಕೂಡ ಬ್ರಜಬೋಲಿಯಲ್ಲಿ ಅನೇಕ ಗೀತೆಗಳನ್ನು ರಚಿಸಿದಳೆಂದು ಹೇಳಲಾಗಿದೆ. ಒರಿಸ್ಸದ ವೈಷ್ಣವ ಪಂಥದ ದಿವಾಕರದಾಸನೆಂಬಾತ ಜಗನ್ನಾಥದಾಸನೆಂಬ ಮಹಾ ವೈಷ್ಣವ ಭಕ್ತನ ಜೀವನಚರಿತ್ರೆಯಾದ ಜಗನ್ನಾಥಚರಿತಾಮೃತವನ್ನು ರಚಿಸಿದ. 16ನೆಯ ಶತಮಾನದ ಆದಿಭಾಗದಲ್ಲಿದ್ದ ಶಿಶು ಶಂಕರದಾಸ ಉಷಾಬಿಲಾಸ ಎಂಬ ಕೃತಿಯನ್ನು ರಚಿಸಿದ. ಇದು ಬಾಣಾಸುರನ ಮಗಳಾದ ಉಷೆ ಮತ್ತು ಅನಿರುದ್ಧರ ವಿಚಾರವನ್ನು ಕುರಿತುದಾಗಿದೆ. ಇದರ ಕಥಾವಸ್ತುವನ್ನು ಕವಿ ಸಂಸ್ಕೃತ ಭಾಗವತ, ಸಾರಳಾ ಮಹಾಭಾರತ ಮತ್ತು ಹರಿವಂಶಗಳಿಂದ ತೆಗೆದುಕೊಂಡಿದ್ದಾನೆ. ಹರಿಹರದಾಸನ ಚಂದ್ರಾವತಿಬಿಲಾಸ ಎಂಬುದು ದುರ್ಯೋಧನನ ಮಗಳಾದ ಚಂದ್ರಾವತಿ ಶ್ರೀಕೃಷ್ಣನ ಮಗನೊಡನೆ ವಿವಾಹವಾದ ಪ್ರಸಂಗವನ್ನು ಅವಲಂಬಿಸಿ ರಚಿತವಾಗಿದೆ. ಇದರ ಸಂವಿಧಾನ ಮತ್ತು ಶೈಲಿ ಉಷಾಬಿಲಾಸದ ಹಾಗಿವೆ. ಕಾರ್ತಿಕ್‌ದಾಸನ ರುಕ್ಮಣೀಬಿಭಾ ಎಂಬುದು ಶ್ರೀಕೃಷ್ಣರುಕ್ಮಿಣಿಯರ ವಿವಾಹವನ್ನು ನಿರೂಪಿಸುತ್ತದೆ. ಶಿಶುಪಾಲನೊಡನೆಯೂ ಜರಾಸಂಧನೊಡನೆಯೂ ಶ್ರೀಕೃಷ್ಣ ಹೋರಾಡಿದುದರ ವರ್ಣನೆ ತುಂಬ ಮನೋಹರವಾಗಿದೆ. ಪ್ರಕೃತಿ ಮತ್ತು ಸಾಮಾಜಿಕ ಸಂಪ್ರದಾಯಗಳ ವರ್ಣನೆಗಳಲ್ಲಿ ಕವಿ ತನ್ನ ಶಕ್ತಿಯನ್ನು ಪ್ರಕಟಿಸಿದ್ದಾನೆ.

ಕೃಷ್ಣಲೀಲಾ, ರಾಸಲೀಲಾ, ಗುಪ್ತಗೀತಾ ಎಂಬುವನ್ನು ರಚಿಸಿದ ಎರಡನೆಯ ಬಳರಾಮದಾಸ, ರಾಧಾಕೃಷ್ಣ ಲೀಲಾಮೃತವನ್ನು ಬರೆದ ದೀನಬಂಧುದಾಸ, ಮಧುಪಚೌತಿಹಾಸವನ್ನು ರಚಿಸಿದ ಗೋಪೇಂದ್ರದಾಸ, ಶ್ರೀಕೃಷ್ಣನ ಮೇಲೆ ಅನೇಕ ಭಾವಗೀತೆಗಳನ್ನು ಬರೆದ ಸಾಲಬೆಗ, ಬನ್ನಿ ಚೋರಿಯನ್ನು ಬರೆದ ಚಾಂದಕವಿ ಮುಂತಾದ ಕೆಲವು ಗೌಣಕವಿಗಳು ತಮ್ಮ ಕೃತಿಗಳನ್ನು ಈ ಕಾಲದ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ.

ಹೀಗೆ 15 ಮತ್ತು 16ನೆಯ ಶತಮಾನಗಳ ಸು. ಇನ್ನೂರು ವರ್ಷಗಳಿಗಿಂತಲೂ ಹೆಚ್ಚಿನ ಸಾಹಿತ್ಯಾವಧಿಯಲ್ಲಿ ರಾಧಾಕೃಷ್ಣರ ಪರವಾದ ಕಾವ್ಯವೇ ಬೆಳೆದು ಆ ಯುಗಕ್ಕೆ ವೈಷ್ಣವಯುಗವೆಂಬ ಹೆಸರನ್ನು ತಂದಿದೆ. ಈ ಪ್ರಸಂಗಗಳನ್ನೇ ಕವಿಗಳು ಏಕೆ ಆರಿಸಿಕೊಂಡರೆಂದರೆ ಅವರೆಲ್ಲರೂ ಪ್ರಧಾನವಾಗಿ ವೈಷ್ಣವರು. ಆದ್ದರಿಂದ ಅವರು ಸಹಜವಾಗಿಯೇ ದೇವರನ್ನು ಪ್ರಣಯಿಯೆಂದು ಭಾವಿಸಿ ಅವನೊಡನೆ ಒಡಗೂಡುವ ಅತೀಂದ್ರಿಯಾನುಭೂತಿಯನ್ನೇ ತಮ್ಮ ಪರಮ ಧ್ಯೇಯವಾಗಿಟ್ಟುಕೊಂಡಿದ್ದರು. ಈ ಉದ್ದೇಶಕ್ಕೆ ರಾಧಾಕೃಷ್ಣರ ಪ್ರಸಂಗಗಳು ಬಹು ಸಮೀಚೀನವಾಗಿ ಒದಗಿದ್ದವು.

ಒರಿಯ ಸಾಹಿತ್ಯದಲ್ಲಿ 17ನೆಯ ಶತಮಾನ ಎರಡು ಯುಗಗಳ ಸಂಧಿಕಾಲವಾಗಿತ್ತು. ಪಂಚಸಖಾ ಅಥವಾ ವೈಷ್ಣವಯುಗ ಕಳೆದ ತರುವಾಯದ ಮತ್ತು ಉಪೇಂದ್ರ ಭಂಜಯುಗ ಅಥವಾ ಕಾವ್ಯಸಾಹಿತ್ಯದ ಯುಗಕ್ಕೆ ಮುಂಚಿನ ಒಂದು ನೂರು ವರ್ಷಗಳ ಅವಧಿ ಸಾಹಿತ್ಯ ವಿಷಯಕವಾದ ಚರ್ಚೆಗೆ ತುಂಬ ಪ್ರಧಾನವಾಗಿದೆ. ಈ ಅವಧಿಯಲ್ಲಿ ಪ್ರಾಚೀನ ಒರಿಯ ಸಾಹಿತ್ಯದ ಮೇಲ್ಪಂಕ್ತಿಯನ್ನು ಅನುಸರಿಸಿ ಕೆಲವು ಕೃತಿಗಳು ರಚಿತವಾದುವು. ಕವಿಗಳಲ್ಲಿ ಅನೇಕರು ಸಂಸ್ಕೃತ ಕಾವ್ಯಸಾಹಿತ್ಯದಿಂದ ಪ್ರಭಾವಿತರಾಗಿದ್ದರು. ಈ ಶತಮಾನದಲ್ಲಿ ಕವಿಗಳು ಈ ರೀತಿಯಾಗಲು ದೇಶದ ಐತಿಹಾಸಿಕ ಪರಿಸ್ಥಿತಿ ಸಹಾಯಕವಾಗಿತ್ತು. ಇದು ಹೇಗಾದರೂ ಇರಲಿ, ಈ ಶತಮಾನದಲ್ಲಿ ಒರಿಯ ಕಾವ್ಯಸಾಹಿತ್ಯಕ್ಕೆ ಒಳ್ಳೆ ತಳಪಾಯ ಬಿದ್ದಿತು. ಇದು ಹದಿನೆಂಟನೆಯ ಶತಮಾನದಲ್ಲಿ ಉಪೇಂದ್ರಭಂಜನ ಕೈಯಲ್ಲಿ ಬೇರೆ ರೂಪ ಪಡೆಯಿತು. ಈ ಪ್ರಕಾರವಾಗಿ ಉಪೇಂದ್ರಭಂಜ ಹಾಕಿಕೊಟ್ಟ ಕಾವ್ಯಸಂಪ್ರದಾಯ ಸುಮಾರು ನೂರೈವತ್ತು ವರ್ಷಗಳ ಕಾಲ ನಡೆಯಿತು.

17ನೆಯ ಶತಮಾನದ ಸಾಹಿತ್ಯವನ್ನು ಸರಳ ಮತ್ತು ಸುಂದರ ಶೈಲಿಗಳ ಸಮ್ಮಿಶ್ರಣವೆಂದು ಹೇಳಬಹುದು. ಕಾವ್ಯದ ಸಾಲುಗಳು ಕೆಲವು ವೇಳೆ ಯಾವ ಗೋಜುಗಳೂ ಇಲ್ಲದೆ ವಿಶದವಾಗಿದ್ದು ಪ್ರಾಚೀನ ಒರಿಯ ಸಾಹಿತ್ಯದ ಸುಂದರ ರತ್ನಗಳನ್ನು ನೆನಪಿಗೆ ತರುತ್ತವೆ. ಮತ್ತೆ ಕೆಲವು ಸಮಯ ಶ್ರೀಮಂತವೂ ವರ್ಣರಂಜಿತವೂ ಆಗಿದ್ದು ಅದು ಕಾವ್ಯಸಾಹಿತ್ಯದ ಒಂದು ಮಹಾಸುದಿನದ ಉಷಃಕಾಲವೋ ಎಂದು ಅಚ್ಚರಿಪಡುವಂತೆ ಮಾಡುತ್ತವೆ.

17ನೆಯ ಶತಮಾನದ ಆದಿಭಾಗದಲ್ಲಿ ಇದ್ದ ರಾಮಚಂದ್ರ ಪಟ್ಟನಾಯಕನ ಸ್ವೋಪಜ್ಞಕೃತಿ ಹಾರಾವತಿ ಎಂಬುದು ಸಾಮಾನ್ಯ ಜನವರ್ಗದಿಂದ ಆಯ್ದುಕೊಂಡ ನಾಯಕನಾಯಕಿಯರಿಬ್ಬರ ಪ್ರಣಯ ಪ್ರಸಂಗವನ್ನು ಅವಲಂಬಿಸಿದೆ. ಹಾರಾವತಿ ಎಂಬ ಕಥಾನಾಯಕಿಯ ಹೆಸರನ್ನೇ ಕೃತಿಗೂ ಕೊಟ್ಟಿದೆ. 17ನೆಯ ಶತಮಾನದ ಆದಿಭಾಗದಲ್ಲಿದ್ದ ಪ್ರತಾಪರಾಯ್ ಎಂಬಾತನಿಂದ ವಿರಚಿತವಾದ ಶಶಿಸೇಣಾ ಎಂಬುದೂ ಶೃಂಗಾರರಸಭೂಯಿಷ್ಠವಾದ ಕಲ್ಪಿತ ಕಥೆ. ಒರಿಸ್ಸದಲ್ಲಿ ಜನಪ್ರಿಯವಾಗಿರುವ ಹಳಾಹಳ ಕುಮಾರನ ಕಥೆಯನ್ನು ಅವಲಂಬಿಸಿ ಇದು ರಚಿತವಾಗಿರುವಂತಿದೆ. ನಳದಮಯಂತಿಯ ಚರಿತೆಯನ್ನು ಹೇಳುವ ನಳಚರಿತ ಎಂಬ ಮತ್ತೊಂದು ಕೃತಿಯನ್ನು 17ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಮಧುಸೂದನದಾಸ ರಚಿಸಿದ. ಅದೇ ಸುಮಾರಿನಲ್ಲಿದ್ದ ಕವಿ ಕಂಠದಾಸ ನಪಾಯ್, ಛಪಾಯ್ ಮುಂತಾದ ಅನೇಕ ಸಣ್ಣ ಸಣ್ಣ ಪದ್ಯಗಳನ್ನು ಬರೆದ. 17ನೆಯ ಶತಮಾನದ ಕವಿ ಈಶ್ವರದಾಸ ಒರಿಸ್ಸದಲ್ಲಿ ಚೈತನ್ಯನ ಜೀವನವನ್ನು ಕುರಿತ ಚೈತನ್ಯ ಭಾಗವತವೆಂಬ ಗ್ರಂಥವನ್ನು ಬರೆದಿದ್ದಾನೆ.

17ನೆಯ ಶತಮಾನದ ಉತ್ತರಾರ್ಧದಲ್ಲಿ ದ್ವಾರಕದಾಸ ಒಬ್ಬ ಮುಖ್ಯ ವೈಷ್ಣವ ಕವಿ. ಗುಪ್ತಗೀತೆ, ಪರಭೆಗೀತ ಮತ್ತು ರಾಮರಸಚಂದ್ರಿಕಾ ಎಂಬವು ಈತನ ಮೂರು ಪ್ರಧಾನ ಕೃತಿಗಳು. ಈ ಕೃತಿಗಳ ತಳದಲ್ಲೆಲ್ಲ ಕಣ್ಣಿಗೆ ಕಾಣದಿರುವ ತನ್ನ ಹೃದಯಾಧಿದೈವದೊಡನೆ ಕೂಡಿಕೊಳ್ಳಬೇಕೆಂಬ ಉತ್ಕಟಭಕ್ತಿಯಿದ್ದು ಒರಿಸ್ಸದ ವೈಷ್ಣವಧರ್ಮದ ತತ್ತ್ವಗಳೆಲ್ಲ ಉದ್ದಕ್ಕೂ ಪ್ರಕಟಗೊಂಡಿವೆ.

17ನೆಯ ಶತಮಾನದ ಅಂತ್ಯಭಾಗದಲ್ಲಿದ್ದ ಮಹಾದೇವದಾಸ ಎಂಬ ಕವಿ ಕಾರ್ತಿಕ ಮಹಾತ್ಮ್ಯ, ಬೈಶಾಖ ಮಹಾತ್ಮ್ಯ, ಮಾಘ ಮಹಾತ್ಮ್ಯ ಮತ್ತು ಮಾರ್ಕಂಡೇಯ ಪುರಾಣಗಳನ್ನು ರಚಿಸಿದ. ಈ ಕಾಲದ ಭೀಮಾ ಧಿಬರ್ ಎಂಬ ಕವಿ ಮಹಾಭಾರತದ ಕಥೆಯೊಂದನ್ನು ಅವಲಂಬಿಸಿ ಕಪಟ ಪಸಾ ಎಂಬ ಕೃತಿಯನ್ನು ರಚಿಸಿದ.

17ನೆಯ ಶತಮಾನದ ಅಂತ್ಯಭಾಗದಲ್ಲಿ ಒರಿಸ್ಸದ ಬಾನ್‌ಪುರದ ಅರಸನಾಗಿದ್ದ ರಘುನಾಥ ಹರಿಚಂದನ್ ಲೀಲಾವತಿಯನ್ನು ಬರೆದ. ಈ ಕೃತಿಯಲ್ಲಿ ಕಾವ್ಯಸಾಹಿತ್ಯದ ಒಂದು ಲಕ್ಷಣವೂ ಕಠಿಣವೂ ಆದ ರೂಪವೆಂದು ಪ್ರಕಟವಾಗಿದೆ. ಈ ರೂಪ ಮುಂದಿನ ಶತಮಾನದಲ್ಲಿ ಪ್ರಾಮುಖ್ಯ ಪಡೆಯಿತು.

**ಕಾವ್ಯಸಾಹಿತ್ಯ ಯುಗ (ಉಪೇಂದ್ರ ಭಂಜನ ಯುಗ):** 18ನೆಯ ಶತಮಾನದಲ್ಲಿ ಸಾಹಿತ್ಯದಲ್ಲುಂಟಾದ ಒಂದು ದೊಡ್ಡ ವ್ಯತ್ಯಾಸಕ್ಕೆ ಅಂದಿನ ಸಾಹಿತ್ಯ ಮತ್ತು ಸಂಸ್ಕೃತಿಗಳ ಪರಿಸ್ಥಿತಿಗಳು ಮುಖ್ಯ ಕಾರಣವಾಗಿವೆ. 16–18ನೆಯ ಶತಮಾನದ ಅಂತ್ಯಭಾಗದವರೆಗೆ, ಒರಿಸ್ಸ ಮುಸ್ಲಿಂ ಪ್ರಭುತ್ವಕ್ಕೆ ಒಳಗಾಗಬೇಕಾಯಿತು. ದೇಶದ ಅರಸರೂ ಅರಸುಕುಮಾರರೂ ಸಾಹಿತ್ಯ ವಿಷಯಕವಾದ ಜಿಜ್ಞಾಸೆಗಳಲ್ಲಿ ಆಸಕ್ತರಾಗಿದ್ದರು. ಅನೇಕ ಸಂಸ್ಕೃತ ವಿದ್ವಾಂಸರು ರಾಜರ ಆಸ್ಥಾನಗಳಲ್ಲಿದ್ದು ಈ ಚರ್ಚೆಗಳನ್ನು ಸಂಸ್ಕೃತದತ್ತ ಒಯ್ಯಲು ಸಹಾಯಕರಾದರು. ಅಲ್ಲದೆ ಸಾಮಾನ್ಯ ಓದುಗರಿಗೆ ಧರ್ಮಶ್ರವಣ ಮಾಡಿಸುವುದರಲ್ಲೇ ನಿರತವಾಗಿದ್ದ ಏಕಪ್ರಕಾರದ ಸಾಹಿತ್ಯ ಬೇಸರ ತಂದುದರಿಂದ ಅವರು ಬೇರೊಂದು ಬಗೆಯ ಕೃತಿಗಳಿಗಾಗಿ ಹಾತೊರೆಯುತ್ತಿದ್ದರು. ಆದುದರಿಂದ ಈ ಕಾಲದ ಕವಿಗಳು ಕಾಳಿದಾಸ, ಮಾಘ, ಶ್ರೀಹರ್ಷ ಮತ್ತು ಇತರ ಸಂಸ್ಕೃತ ಕವಿಗಳ ಕಾವ್ಯತಂತ್ರವನ್ನು ಅನುಸರಿಸಿದರು. ಕಾವ್ಯಸಂಪ್ರದಾಯವನ್ನು ಸಂಸ್ಥಾಪಿಸುವುದರಲ್ಲಿ ಉಪೇಂದ್ರಭಂಜನೊಬ್ಬನೇ ಮೂಲಕಾರಣನಾಗಿದ್ದವ. ಅವನ ಹಿಂದಿನವರು ಈ ಹೊಸ ದಾರಿಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದ್ದರು. ಅದೇ ದಾರಿಯಲ್ಲಿ ಉಪೇಂದ್ರಭಂಜ ನಡೆದು ಈ ಸಂಪ್ರದಾಯವನ್ನು ರೂಢಿಸಿದ. ಬಿಷ್ಣುದಾಸ ಮತ್ತು ಶ್ರೀಧರದಾಸ ಎಂಬಿಬ್ಬರು ಉಪೇಂದ್ರಭಂಜನಿಗೆ ಹಿಂದಿನವರಲ್ಲಿ ಪ್ರಸಿದ್ಧರಾದ ಕವಿಗಳು. ಬಿಷ್ಣುದಾಸ ಪ್ರೇಮಾಲೋಚನಾ ಎಂಬುದನ್ನೂ ಶ್ರೀಧರದಾಸ ಕಾಂಚನಲತಾ ಎಂಬುದನ್ನೂ ರಚಿಸಿದರು.

ಉಪೇಂದ್ರಭಂಜನ ತಾತನಾದ ಧನಂಜಯಭಂಜ ಒಬ್ಬ ಪ್ರಖ್ಯಾತ ಕವಿ. ಆತ ಬರೆದ ಕಾವ್ಯ ರಘುನಾಥವಿಳಾಸ; ರಾಮಾಯಣದಿಂದ ಆಯ್ದುಕೊಂಡ ರಾಮಚಂದ್ರನ ಚರಿತ್ರೆ ಈ ಗ್ರಂಥದ ವಸ್ತು. ಈ ಕೃತಿಯಲ್ಲಿ ಧನಂಜಯ ಸಂಸ್ಕೃತ ಕಾವ್ಯತಂತ್ರವನ್ನು ಅನುಸರಿಸಿದ. ತನ್ನ ಮೊಮ್ಮಗನಾದ ಉಪೇಂದ್ರಭಂಜನನ್ನು ಕವಿಯಾಗಲು ಪ್ರೋತ್ಸಾಹಿಸಿದ. ತಾತನ ಪ್ರೋತ್ಸಾಹ ಮತ್ತು ಪ್ರೇರಣೆಗಳಿಂದ ಉಪೇಂದ್ರಭಂಜ ಬೈದೇಹಿಸ ವಿಲಾಸವನ್ನು ಬರೆದನೆಂಬುದು ನಿಜ. ಇದು ಪ್ರಖ್ಯಾತವಾದ ಗ್ರಂಥ. ಧನಂಜಯ ಭಂಜ ಈ ಕೃತಿಯನ್ನು ನೋಡಿದಾಗ ಇದರ ಅಸಾಧಾರಣವಾದ ಕಾವ್ಯಗುಣಕ್ಕೆ ಮೆಚ್ಚಿ ತನ್ನ ಮೊಮ್ಮಗನನ್ನು ಅಭಿನಂದಿಸಿದನಂತೆ.

ಉಪೇಂದ್ರಭಂಜ ರಚಿಸಿದ ಕೃತಿಗಳ ಸಂಖ್ಯೆ ಇನ್ನೂ ಅನಿರ್ದಿಷ್ಟವಾಗಿದೆ. ಅವನ ಕಾಲ್ಪನಿಕ ಶೃಂಗಾರಕಾವ್ಯಗಳ ಪೈಕಿ ಲಾವಣ್ಯವತಿ, ಕೋಟಿಬ್ರಹ್ಮಾನಂದ ಸುಂದರಿ, ರಸಿಕ ಹಾರಾವಳಿ ಮತ್ತು ರಸಲೇಖಾ ಎಂಬವು ಗಮನಾರ್ಹವಾಗಿವೆ. ಆತನ ಪೌರಾಣಿಕ ಕೃತಿಗಳಲ್ಲಿ ಸುಭದ್ರಾಪರಿಣಯ, ಕಲಾಕೌತುಕ ಮತ್ತು ಬೈದೇಹಿಸ ವಿಲಾಸ ಎಂಬುವು ಗಣ್ಯವಾಗಿವೆ. ಪೌರಾಣಿಕ ವಸ್ತುಗಳನ್ನು ಈತ ರಾಮಾಯಣ ಮಹಾಭಾರತಗಳಿಂದ ತೆಗೆದುಕೊಂಡಿದ್ದಾನೆ. ಛಾಂದಭೂಷಣ ಮತ್ತು ಚಿತ್ರಕಾವ್ಯ ಬೌಧೋದಯ ಮುಂತಾದ ಕೃತಿಗಳಲ್ಲಿ ಪ್ರತಿಭೆಗಿಂತ ಹೆಚ್ಚಾಗಿ ಶೈಲಿ ಮತ್ತು ರಚನಾ ಕೌಶಲಗಳನ್ನು ಕಾಣಬಹುದಾಗಿದೆ.

ಉಪೇಂದ್ರಭಂಜ ತನ್ನ ಸಣ್ಣ ಪದ್ಯಗಳಲ್ಲಿಯೂ ಜಯಶಾಲಿಯಾಗಿದ್ದಾನೆ. ಆತ ಅನೇಕ ಚೌತಿಸಾ, ಚೌಪದಿ, ಛಾಂದ ಮುಂತಾದವನ್ನು ಬರೆದಿದ್ದಾನೆ. ಇವೆಲ್ಲ ತುಂಬ ಜನಪ್ರಿಯವಾಗಿವೆ. ಸಂಸ್ಕೃತ ಅಲಂಕಾರಶಾಸ್ತ್ರವನ್ನು ಅಭ್ಯಾಸಮಾಡಿದವರಿಗೆ ಭಂಜನ ಕಾವ್ಯದ ರುಚಿ ನಿಲುಕುತ್ತದೆ. ಒರಿಯ ಸಾಹಿತ್ಯದಲ್ಲಿ ಉಪೇಂದ್ರಭಂಜ ಕವಿಸಮ್ರಾಟ್ ಎಂದು ಸಂಭಾವಿತನಾಗಿದ್ದಾನೆ.

ಉಪೇಂದ್ರಭಂಜನಿಂದ ಪ್ರತಿಷ್ಠಿತವಾದ ಕಾವ್ಯಸಾಹಿತ್ಯಕ್ಕೆ ಇತರ ಕೆಲವು ಕವಿಗಳೂ ಅನೇಕ ಗಣ್ಯಕೃತಿಗಳನ್ನು ನೀಡಿದ್ದಾರೆ. ಧನಂಜಯಭಂಜನ ಕಿರಿಯ ತಮ್ಮನಾದ ಘನಭಂಜ ಹಾಡುಗಳನ್ನೂ ಪದ್ಯಗಳನ್ನೂ ರಚಿಸಿ ಖ್ಯಾತನಾಗಿದ್ದಾನೆ; ಗೋವಿಂದವಿಳಾಸವೆಂಬ ಪೌರಾಣಿಕ ಕಾವ್ಯವನ್ನು ಸಹ ಬರೆದಿದ್ದಾನೆ. ರಸನಿಧಿ ಎಂಬ ಶೃಂಗಾರಕಾವ್ಯ ಅವನ ಕೃತಿಗಳ ಪೈಕಿ ವಿಶೇಷ ಉಲ್ಲೇಖಕ್ಕೆ ತಕ್ಕುದಾಗಿದೆ. ತ್ರೈಲೋಕ್ಯಮೋಹಿನಿ ಎಂಬ ಅವನ ಮತ್ತೊಂದು ಶೃಂಗಾರ ಕೃತಿ ಆ ಕಾಲದ ಸಾಮಾನ್ಯ ಪ್ರವೃತ್ತಿಗಿಂತ ಸ್ವಲ್ಪ ಭಿನ್ನವಾಗಿದೆ. ಆ ಕಾಲದ ಪ್ರಖ್ಯಾತ ಕವಿಯಾದ ದೀನಕೃಷ್ಣದಾಸ ಅನೇಕ ಕಾವ್ಯಗಳನ್ನು ಬರೆದಿದ್ದಾನೆ. ರಸಕಲ್ಲೋಲ, ರಸವಿನೋದ, ನಾಮರತ್ನಗೀತಾ, ಜಗಮೋಹನ್ ಛಾಂದ–ಎಂಬವು ಆತನ ಗಣ್ಯಕೃತಿಗಳು. ಅತ್ಯುತ್ತಮ ಕೃತಿ ರಸಕಲ್ಲೋಲ, ಕವಿ ವೈಷ್ಣವ. ಹೀಗಾಗಿ ವೈಷ್ಣವ ಭಾವನೆಗಳು ಆತನ ಕೃತಿಗಳಲ್ಲಿ ಎದ್ದುಕಾಣುತ್ತವೆ. ಬಾಲ್ಯದಿಂದ ತೊಡಗಿ ಗೋಕುಲ ನಿರ್ಗಮನದವರೆಗಿನ ಕೃಷ್ಣ ಕಥೆಯನ್ನು ರಸಕಲ್ಲೋಲ ನಿರೂಪಿಸುತ್ತದೆ. ಕೃಷ್ಣ ಗೋಪಿಕೆಯರನ್ನು ತ್ಯಜಿಸಿ ಹೊರಟ ಬಳಿಕ ಗೋಪಿಕೆಯರ ಶೋಕವನ್ನು ಕುರಿತ ಕವಿಯ ವರ್ಣನೆ ಓದುಗರ ಹೃದಯವನ್ನು ಕರಗಿಸುತ್ತದೆ. ರಸವಿನೋದದಲ್ಲಿನ ಬಸಿಷ್ಠ ಭುಸಂಡರ ಸಂವಾದದಲ್ಲಿ ರಾಧಾ ಮತ್ತು ಕೃಷ್ಣರ ಪ್ರಣಯಪ್ರಸಂಗ ನಿರೂಪಿತವಾಗಿದೆ. ನಾಮರತ್ನಗೀತದಲ್ಲಿ ವೈಷ್ಣವದರ್ಶನದ ವರ್ಣನೆಯಿದೆ. ಪ್ರಭು ಜಗನ್ನಾಥನ ನಿತ್ಯಪೂಜಾವಿಧಿಗಳನ್ನೂ ವಿಶೇಷೋತ್ಸವಗಳನ್ನೂ ಸಂಗೀತ ಮಯವಾದ ಜಗಮೋಹನ ಛಾಂದ ಎಂಬ ಕೃತಿ ವರ್ಣಿಸುತ್ತದೆ.

ಲೋಕನಾಥ ಬಿದ್ಯಾಧರ ಎಂಬ ಆ ಕಾಲದ ಪ್ರಖ್ಯಾತ ಕವಿ ಮಕರಧ್ವಜ ಮತ್ತು ಪದ್ಮಾವತಿಯರನ್ನು ಕುರಿತ ಪದ್ಮಾವತೀ ಪ್ರಣಯವನ್ನು ಬರೆದ. ಆತನ ಚಿತ್ರಲೇಖಾ ಎಂಬುದು ಕಥಾನಾಯಕಿ ಚಿತ್ರಲೇಖೆ ತನ್ನ ಪ್ರಿಯನಾದ ರಾಜಪುತ್ರ ಸುದರ್ಶನನನ್ನು ಒಡಗೂಡಿದ ಸುಖಸನ್ನಿವೇಶವನ್ನೂ ಸರ್ವಾಂಗಸುಂದರಿ ಎಂಬ ಮತ್ತೊಂದು ಶೃಂಗಾರಕಾವ್ಯ ಅವನೀತಿಲಕನೆಂಬ ಕಥಾನಾಯಕನ ಪ್ರಣಯ ಪ್ರಸಂಗವನ್ನೂ ವರ್ಣಿಸುತ್ತದೆ. ಬೃಂದಾವನ ವಿಹಾರವೆಂಬುದು ಆತನ ಶೃಂಗಾರಕಾವ್ಯಗಳಿಂದ ಸ್ವಲ್ಪ ಭಿನ್ನವಾಗಿದೆ. ಅದು ವೈಷ್ಣವ ಕವಿತೆಯ ರಾಧಾಕೃಷ್ಣ ಪ್ರಸಂಗದ ಪ್ರತಿಧ್ವನಿ. ಈ ಕವಿ ತನ್ನ ಎಲ್ಲ ಕೃತಿಗಳನ್ನೂ ಕಲಾತ್ಮಕವಾದ, ಅಲಂಕಾರಿಕ ಶೈಲಿಯಲ್ಲಿ ರಚಿಸಿದ್ದಾನೆ.

ಆ ಕಾಲದ ಬೃಂದಾವತಿದಾಸಿ ಎಂಬ ಕವಯಿತ್ರಿ ಗೋಕುಲದಲ್ಲಿ ಕೃಷ್ಣನ ಜೀವಿತವನ್ನು ಕುರಿತ ಪೂರ್ಣತಮ ಚಂದ್ರೋದಯ ಎಂಬ ಕಾವ್ಯವನ್ನು ಬರೆದಿದ್ದಾಳೆ.

ಉಪೇಂದ್ರಭಂಜನ ಕಾಲದಲ್ಲಿ ಏಕಪ್ರಕಾರವಾಗಿರುವ ಕಾವ್ಯಶೈಲಿ ಸಾಹಿತ್ಯದಲ್ಲೆಲ್ಲ ವ್ಯಾಪಿಸಿತ್ತು ಎಂಬುದು ಸ್ಪಷ್ಟ. ಕವಿಗಳು ಅಂಥ ಶೈಲಿಯಲ್ಲೇ ಬರೆದು ತಮ್ಮ ಕವಿತಾಪ್ರೌಢಿಮೆಯನ್ನು ಮೆರೆಸಲು ಕಾತರರಾಗಿದ್ದರು. ಉಪೇಂದ್ರಭಂಜನ ತರುವಾಯ ಕೆಲವು ಕವಿಗಳು ಒರಿಯ ಸಾಹಿತ್ಯಕ್ಕೆ ಗಮನಾರ್ಹವಾದ ಕಾಣಿಕೆಯನ್ನು ಸಲ್ಲಿಸಿ ಖ್ಯಾತರಾಗಿದ್ದಾರೆ.

18ನೆಯ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದ ಸದಾನಂದ ಕವಿ ಸೂರ್ಯಬ್ರಹ್ಮ ವೈಷ್ಣವಧರ್ಮವನ್ನು ಸ್ವೀಕರಿಸಿದ ಮೇಲೆ ತನ್ನ ಹೆಸರನ್ನು ಸಾಧು ಚರಣದಾಸನೆಂದು ಮಾರ್ಪಡಿಸಿಕೊಂಡ. ಆತ ಪ್ರೇಮತರಂಗಿಣಿಯನ್ನೂ ಪ್ರೇಮ ಲಹರಿ, ಲಳಿತಲೋಚನಾ ಚೌರಚಿಂತಾಮಣಿ ಮತ್ತು ಜುಗಳರಸಾಮೃತಲಹರಿ ಎಂಬ ಮಧುರ ಮಂಜುಳ ಕೃತಿಗಳನ್ನೂ ಬರೆದಿದ್ದಾನೆ. ಅವಕ್ಕೆಲ್ಲ ಉಪೇಂದ್ರಭಂಜನೇ ಮೇಲುಪಂಕ್ತಿ.

18ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಜನಾರ್ಧನದಾಸನಿಗೆ ದನಾಯಿದಾಸನೆಂದೂ ಹೆಸರಿತ್ತು. ಆತ ಗೋಪೀಭಾಸವನ್ನು ಬರೆದ. ಇದರಲ್ಲಿ ಗೋಪ ಗ್ರಾಮದಲ್ಲಿನ ಸ್ತ್ರೀಯರು ಕೃಷ್ಣ ತಮ್ಮನ್ನು ಬಿಟ್ಟು ಮಧುರೆಗೆ ಹೊರಟಾಗ ಗೋಳಾಡಿದ ಬಗೆ ವರ್ಣಿತವಾಗಿದೆ.

ಆ ಕಾಲದ ರಾಮದಾಸ ಎಂಬ ಕವಿ ರಾಮರಸಾಮೃತ ಮತ್ತು ದಾರ್ಢ್ಯತಾ ಭಕ್ತಿ ಎಂಬವನ್ನು ಬರೆದಿದ್ದಾನೆ. ಮೊದಲನೆಯದು ರಾಮಚಂದ್ರನ ಚರಿತ್ರೆಯನ್ನೂ ಎರಡನೆಯದು ಒರಿಸ್ಸ ದೇಶದ ಸಾಧುಸಂತರ ಚರಿತ್ರೆಯನ್ನೂ ವರ್ಣಿಸುತ್ತವೆ.

ಬಿಸ್ವನಾಥ್ ಕುಂಟಿಯಾ ಎಂಬ ಕವಿ 18ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದು ರಾಮಚಂದ್ರನ ಮಾಹಾತ್ಮ್ಯವನ್ನು ವರ್ಣಿಸುವ ವಿಚಿತ್ರ ರಾಮಾಯಣ ಎಂಬ ಗ್ರಂಥವನ್ನು ಬರೆದಿದ್ದಾನೆ.

ಬ್ರಜನಾಥ ಬಡಜೆನಾ ಎಂಬಾತ 18ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದು ದೇಶಾಭಿಮಾನವನ್ನು ಉಕ್ಕಿಸುವಂಥ ಸಾಹಿತ್ಯ ನಿರ್ಮಿತಿಗಾಗಿ ಖ್ಯಾತನಾಗಿದ್ದಾನೆ. ಧೆಂಕನಾಳ್ ರಾಜ ಮರಾಠಿಗರೊಂದಿಗೆ ಯುದ್ಧಮಾಡಿದ ಪ್ರಸಂಗ ಈತನ ಸಮರತರಂಗದಲ್ಲಿ ವರ್ಣಿತವಾಗಿದೆ. ಈತನ ಶ್ಯಾಮರಾಸೋತ್ಸವ ಮತ್ತು ಅಂಬಿಕಾವಿಲಾಸ ಎಂಬುವು ಪೌರಾಣಿಕ ವಸ್ತುವನ್ನು ಅವಲಂಬಿಸಿ ಬರೆದ ಕೃತಿಗಳು; ಗುಂಡಿಛಾಬಿಜೆ ಎಂಬ ಹಿಂದೀ ಕೃತಿಯಲ್ಲಿ ಈತ ಪ್ರಭುಜಗನ್ನಾಥನ ರಥೋತ್ಸವವನ್ನು ವರ್ಣಿಸಿದ್ದಾನೆ.

12ನೆಯ ಶತಮಾನದ ಅಂತ್ಯಭಾಗದಲ್ಲಿ ಜೀವಿಸಿದ್ದ ಭಕ್ತಚರಣದಾಸನೆಂಬ ಕವಿ ಶ್ರೀಕೃಷ್ಣಚರಿತ್ರವನ್ನೂ ಆತನ ಪ್ರೇಮಪ್ರಸಂಗಗಳನ್ನೂ ವರ್ಣಿಸುವ ಮಥುರಾ ಮಂಗಳ ಎಂಬ ಕಾವ್ಯವನ್ನು ರಚಿಸಿದ್ದಾನೆ. ಮನಬೋಧ ಚೌತಿಸಾ ಎಂಬ ಇನ್ನೊಂದು ಕೃತಿ ಒರಿಸ್ಸದಲ್ಲೆಲ್ಲ ಬಹಳವಾಗಿ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಕಳಾಕಳೆವರ ಚೌತಿಸಾ ಮತ್ತು ಮನಸಿಖ್ಯಾ ಎಂಬುವೂ ಮತ್ತೆರಡು ಜನಪ್ರಿಯ ಕೃತಿಗಳು.

ಕಾವ್ಯಸಾಹಿತ್ಯವನ್ನು ಬೆಳೆಸಿದ ಇನ್ನೂ ಅನೇಕ ಸಣ್ಣಪುಟ್ಟ ಕವಿಗಳಿದ್ದಾರಾದರೂ ಅವರ ಉಲ್ಲೇಖ ಇಲ್ಲಿ ಅಪ್ರಕೃತ. ಆ ಅವಧಿಯಲ್ಲಿ ಧಾರ್ಮಿಕ ಸಂಪ್ರದಾಯವನ್ನು ಒತ್ತಟ್ಟಿಗಿರಿಸಿ ಕಾವ್ಯಸಂಪ್ರದಾಯವೇ ತುಂಬ ಪ್ರಸಿದ್ಧಿಗೆ ಬಂದಿತೆನ್ನಬಹುದು. ಇವುಗಳ ಜನಪ್ರಿಯತೆಗಿದ್ದ ಅತಿ ದೊಡ್ಡ ಕಾರಣ ಇವುಗಳ ಗೇಯಗುಣವೇ ಆಗಿದೆ.

**ಸಂಕೀರ್ಣ ಸಾಹಿತ್ಯದ ಯುಗ (1800–50):** ಉಪೇಂದ್ರಭಂಜನ ತರುವಾಯ ಕಾವ್ಯಸಂಪ್ರದಾಯ ಮಾರ್ಪಾಡುಹೊಂದಿತು. ಭಂಜನ ಪ್ರಭಾವವನ್ನು ತೋರುತ್ತ ಜೊತೆಗೆ ಆಧುನಿಕ ಒರಿಯ ಸಾಹಿತ್ಯೋದಯದ ಗುರಿಯನ್ನೂ ದ್ಯೋತಿಸುವ ಪ್ರವೃತ್ತಿಯೊಂದು ಆಗ ಗೋಚರಿಸಿತು.

ಆ ಕಾಲದ ಅಭಿಮನ್ಯು ಸಮಂತಸಿಂಘಾರ್ ಎಂಬ ಪ್ರಖ್ಯಾತ ಕವಿ ರಾಧಾಕೃಷ್ಣರ ಪ್ರಣಯವನ್ನು ಕುರಿತ ವಿದಗ್ದ ಚಿಂತಾಮಣಿ ಎಂಬುದನ್ನು ಬರೆದ. ಇದರಲ್ಲಿನ ದಾರ್ಶನಿಕ ಭಾವವನ್ನೂ ವರ್ಣಿಸುವಾಗ ಕವಿ ಸದಾನಂದ ಕವಿ ಸೂರ್ಯಬ್ರಹ್ಮನ ಪ್ರಭಾವಕ್ಕೆ ಒಳಗಾಗಿದ್ದಾನೆ. ಈತ ಉಪೇಂದ್ರಭಂಜನ ಲಲಿತ ಶೈಲಿಯನ್ನೇ ಅನುಸರಿಸಿದ್ದಾನೆ. ಗೋಪಾಲಕೃಷ್ಣ ಪಟ್ಟನಾಯಕ ಶ್ರೀಕೃಷ್ಣಲೀಲಾಪ್ರಸಂಗಗಳನ್ನು ಕುರಿತು ಅನೇಕ ಪದ್ಯಗಳನ್ನು ಬರೆದಿದ್ದಾನೆ. ಈತನ ಕೃತಿಗಳು ಸಾಹಿತ್ಯಕ್ಕಿಂತ ಹೆಚ್ಚಾಗಿ ಹಾಡುಗಳೆನಿಸಿ ಜನರೊಲವನ್ನುಗಳಿಸಿವೆ.

ಜದುಮಣಿ ಮಹಾಪಾತ್ರ ಕವಿ ಮತ್ತು ವಿಡಂಬನಕಾರ. ಶ್ರೀಕೃಷ್ಣನ ಪ್ರಣಯ ಪ್ರಸಂಗವನ್ನು ಕುರಿತು ಪ್ರಬಂಧ ಪೂರ್ಣಚಂದ್ರ ಎಂಬ ಕಾವ್ಯವನ್ನು ರಚಿಸಿದ್ದಾನೆ. ಈತನೂ ಉಪೇಂದ್ರ ಭಂಜನ ಶೈಲಿಯನ್ನೇ ಅನುಸರಿಸಿದ್ದಾನೆ.

ಕಿಶೋರಚಂದ್ರಾನಂದ ಚಂಪು ಎಂಬುದನ್ನು ರಚಿಸಿದ ಕವಿ ಸೂರ್ಯ ಬಳದೇವ ರಥ ಒಬ್ಬ ಖ್ಯಾತ ಕವಿ. ಚೌತಿಸಾ ಮಾದರಿಯ ಮೂರು ನಾಲ್ಕು ಹಾಡುಗಳಿಂದ ಕೂಡಿದ ಈ ಕೃತಿ ಶ್ಲೇಷೆ ಮತ್ತು ಯಮಕಾಲಂಕಾರ ಭೂಯಿಷ್ಟವಾಗಿದೆಯಲ್ಲದೆ ಇಲ್ಲಿನ ಒಂದೊಂದು ಹಾಡಿಗೂ ಒಂದೊಂದು ಮಟ್ಟಿದೆ. ರಾಧಾಕೃಷ್ಣರ ಪ್ರಣಯ ಇದರ ವಸ್ತು.

ಮಹಿಮಾ ಪಂಥದ ಪ್ರಚಾರಕ್ಕಾಗಿ ಭೀಮಾ ಭೋಯ್ ಎಂಬ ಕವಿ ಅನೇಕ ಭಜನೆಗಳನ್ನು ರಚಿಸಿದ್ದಾನೆ.

ಈ ಐವತ್ತು ವರ್ಷಗಳಲ್ಲಿನ (1800–50) ಒರಿಸ್ಸ ಸಾಹಿತ್ಯದ ಮುನ್ನಡೆ ಮಿಕ್ಕ ಅವಧಿಗಳಿಗಿಂತ ಯಾವ ವಿಧದಲ್ಲೂ ಕಡಿಮೆಯದಲ್ಲ. ಈ ಕಾಲದಲ್ಲಿ ಮಹಾಕಾವ್ಯ, ಭಾವಗೀತ, ದೀರ್ಘಕಾವ್ಯಗಳು, ಲಘುಕಾವ್ಯಗಳು–ಇವನ್ನೆಲ್ಲ ರಚಿಸಲು ಪ್ರಯತ್ನಗಳು ನಡೆದಿವೆ. ರಾಜ್ಯ ಒಂದು ವಿದೇಶೀ ಆಳ್ವಿಕೆಗೆ ಒಳಗಾಗುವ ಮಹಾ ದುರವಸ್ಥೆಯ ಈ ಅವಧಿಯಲ್ಲಿ ಸಹ ಸಾಹಿತ್ಯಕ್ಷೇತ್ರ ಬಂಜರಾಗಿರಲಿಲ್ಲವೆಂಬುದೂ ಮಂಕಾಗಿ ಮಲಗದೆ ಚಟುವಟಿಕೆಯಿಂದ ಕೂಡಿತ್ತೆಂಬುದೂ ಇದರಿಂದ ಸಿದ್ಧವಾಗುತ್ತದೆ. ಈ ಕಾಲದವರೆಗೆ ಪ್ರಾಚೀನ ಮತ್ತು ಮಧ್ಯಯುಗದ ಸಾಹಿತ್ಯ ಪ್ರಕಾರಗಳು ನಡೆದುಕೊಂಡು ಬಂದುವು. ಇದರ ತರುವಾಯ ಸಾಹಿತ್ಯಕ್ಷೇತ್ರದಲ್ಲಿ ಒಂದು ಕ್ರಾಂತಿಯುಂಟಾಗಿ ಹೊಸ ದೃಷ್ಟಿಯೊಂದು ಮೂಡಿತು.

**ಆಧುನಿಕ ಒರಿಯ ಸಾಹಿತ್ಯ:** 1870ರಲ್ಲಿ ಅದು ಪಡೆದುಕೊಂಡ ಹೊಸ ದೃಷ್ಟಿಯೇ ಆಧುನಿಕ ಒರಿಯ ಸಾಹಿತ್ಯದಲ್ಲಿ ಗಮನಿಸಬೇಕಾದ ಪ್ರಧಾನ ಅಂಶ. ಬ್ರಿಟಿಷರ ಆಳ್ವಿಕೆಯಲ್ಲಿ ಜಾರಿಗೆ ಬಂದ ನವೀನ ವಿದ್ಯಾಭ್ಯಾಸ ಪದ್ಧತಿ ಇದಕ್ಕೆ ಕಾರಣವಾಯಿತು. ಒರಿಯ ಕವಿತೆಯ ಪ್ರಾಚೀನ ಸಂಪ್ರದಾಯವನ್ನು ಬದಿಗೊತ್ತಿ ರಾಧಾನಾಥ ರಾಯ್ ಹೊಸ ಸಂಪ್ರದಾಯವನ್ನು ಸ್ಥಾಪಿಸಿದ. ಈತನೊಬ್ಬ ಉಪಾಧ್ಯಾಯ. ವಿದ್ಯಾ ಇಲಾಖೆಯ ಅಧಿಕಾರಿಯಾದ ಮೇಲೆ ಈತ ತನ್ನ ಹೊಸ ಅಭಿರುಚಿಯನ್ನೂ ಕಾವ್ಯರಚನಾ ವಿಧಾನವನ್ನೂ ಸಾಮಾನ್ಯ ಓದುಗನ ಮೇಲೆ ಹೇರಲು ಸಮರ್ಥನಾದ.

ಈ ಕಾಲದ ಮುಖ್ಯ ಪ್ರವೃತ್ತಿಗಳನ್ನು ಕೆಲವು ದೃಷ್ಟಿಕೋನಗಳಿಂದ ನೋಡಿ ಗುರುತಿಸಬಹುದು. ರಾಧಾಕೃಷ್ಣ ಪ್ರಣಯ ಕಥೆಗಳು ಹಿಂದಾಗಿ ಸಾಮಾಜಿಕ ವಿಷಯಗಳು ಇಲ್ಲಿ ಕಾವ್ಯವಸ್ತುಗಳಾಗಿವೆ. ವಸ್ತುಗಳನ್ನು ಆರಿಸುವುದರಲ್ಲಿ ಕವಿಗಳ ವಿಶಾಲ ದೃಷ್ಟಿ ಗೋಚರಿಸುತ್ತದೆ. ಹಿಂದಿನ ವರ್ಷಗಳ ನಾಯಕ ನಾಯಕಿಯರ ಯಾಂತ್ರಿಕ ಪಡಿಯಚ್ಚಿನ ಚಿತ್ರಗಳ ಜಾಗವನ್ನು ಧೈರ್ಯ, ಪ್ರೇಮ ಮತ್ತು ಇತರ ಜೀವನ ಧ್ಯೇಯಗಳುಳ್ಳ ಪಾತ್ರಗಳು ಆಕ್ರಮಿಸಿಕೊಂಡಿವೆ. ದೇವತೆಗಳ ಮತ್ತು ಪ್ರಣಯಿಗಳ ಜೀವಿತಚಿತ್ರಣಕ್ಕೆ ಬದಲಾಗಿ ಸಾಮಾನ್ಯ ಮನುಷ್ಯನ ಬಾಳುವೆ ಕಾವ್ಯವಸ್ತುವಾಗಿದೆ.

ಪ್ರಕೃತಿ ವರ್ಣನೆಯೇ ಈ ಕಾಲದ ಸಾಹಿತಿಗಳ ಮುಖ್ಯ ಕಾಣಿಕೆ. ಸಮಯ ಸಂದರ್ಭಗಳಿಗೆ ತಕ್ಕಂತೆ ಅಲ್ಲಿ ಇಲ್ಲಿ ಪ್ರಕೃತಿಯನ್ನು ವರ್ಣಿಸುವ ರೂಢಿ ಹಿಂದಿನ ಕಾವ್ಯಗಳಲ್ಲಿ ಕಂಡುಬರುತ್ತಾದರೂ ಈ ಕಾಲದಿಂದೀಚೆಗೆ ಪ್ರಕೃತಿಯೇ ಒಂದು ಪಾತ್ರದಂತೆ ವರ್ಣಿತವಾಗಿ ಕಣ್ಣಿಗೆ ಎದ್ದುಕಾಣುತ್ತದೆ. ಛಂದಸ್ಸಿನಲ್ಲಿ ಕೂಡ ಹೆಚ್ಚಿನ ಬದಲಾವಣೆಯಾಗಿರುವುದು ಕಂಡುಬರುತ್ತದೆ.

ವಿಡಂಬನ, ಹಾಸ್ಯ, ಗದ್ಯಸಾಹಿತ್ಯ, ನಾಟಕ, ಸಾಹಿತ್ಯಪತ್ರಿಕೆಗಳು, ವಿಮರ್ಶೆ–ಇತ್ಯಾದಿಗಳಲ್ಲಿ ಆಗಿರುವ ವಿಕಾಸವೂ ಈ ಕಾಲದ ಲಕ್ಷಣವಾಗಿದೆ.

ಆಧುನಿಕ ಒರಿಯ ಸಾಹಿತ್ಯದ ಅಭಿವೃದ್ಧಿಗೆ ಮುಖ್ಯವಾಗಿ ಸಾಹಿತ್ಯಪತ್ರಿಕೆಗಳು ಕಾರಣವಾಗಿವೆ. ರಾಧಾನಾಥರಾಯ್, ಮಧುಸೂದನ ರಾವ್, ಗಂಗಾಧರ ಮೆಹರ್, ನಂದಕಿಶೋರ್ ಬಳ್, ಚಿಂತಾಮೊನಿ ಮೊಹಾಂತಿ, ರಾಮಶಂಕರ ರಾಯ್ ಮತ್ತು ಇತರರ ಲೇಖನಗಳು ಮೊದಲು ಪತ್ರಿಕೆಗಳಲ್ಲಿ ಅಚ್ಚಾಗಿ ಬಳಿಕ ಪುಸ್ತಕ ರೂಪದಲ್ಲಿ ಪ್ರಕಟವಾದವು.

ಈ ಕಾಲದ ಪ್ರಖ್ಯಾತ ಕವಿ ರಾಧಾನಾಥ ರಾಯ್ ಕಾವ್ಯಗಳನ್ನು ರಚಿಸಿದ್ದಾನೆ. ಕೇದಾರಗೌರಿ, ಚಂದ್ರಭಾಗಾ ಮತ್ತು ಪಾರ್ವತಿಗಳ ಕಥಾವಸ್ತು ಗ್ರೀಕ್ ಮೂಲಗಳಿಂದ ಆಯ್ದುಕೊಂಡಂಥವು. ಒರಿಸ್ಸ ಜನ ಇವನ್ನು ಈತನ ಸ್ವಂತ ಕೃತಿಗಳೆಂದೇ ಪರಿಭಾವಿಸುವ ರೀತಿಯಲ್ಲಿ ಈತ ಇವನ್ನು ನಿರ್ವಹಿಸಿದ್ದಾನೆ. ಈತನ ಚಿಲಿಕಾ ಎಂಬ ಪ್ರಖ್ಯಾತ ಕಾವ್ಯ ಅದೇ ಹೆಸರಿನ ಸರೋವರದ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತದೆ. ಈತನ ಅಪೂರ್ಣ ಕೃತಿ ಮಹಾಯಾತ್ರಾ ಎಂಬುದು ಸರಳ ರಗಳೆಯಲ್ಲಿದೆ. ಕಾಳಿದಾಸನ ಸಂಸ್ಕೃತ ಕಾವ್ಯದ ಅನುವಾದವಾದ ಮೇಘಸಂದೇಶದ ವಿಶದ ಶೈಲಿ ಮತ್ತು ಮಧುರ ಪದಬಂಧಗಳು ಓದುಗನನ್ನು ಬೆರಗುಗೊಳಿಸುತ್ತವೆ. ರಾಧಾನಾಥ ಸಂಸ್ಥಾಪಿಸಿದ ಹೊಸ ಸಂಪ್ರದಾಯವನ್ನು ಈತನ ಸಮಕಾಲೀನರೂ ಮುಂದಿನ ಪೀಳಿಗೆಯವರೂ ಅನುಸರಿಸಿದರು. ಆದುದರಿಂದ ಈ ಕಾಲಾವಧಿಯನ್ನು ರಾಧಾನಾಥನ ಹೆಸರಿನಿಂದಲೇ ಕರೆಯಲಾಗಿದೆ.

ಭಕ್ತ ಕವಿ ಮಧುಸೂದನ್ ಬ್ರಾಹ್ಮಪಂಥದ ತತ್ತ್ವವನ್ನು ಹರಡುವ ಉದ್ದೇಶದಿಂದ ಹಲವು ಕಾವ್ಯಗಳನ್ನು ಬರೆದಂತೆ ಕಂಡುಬರುತ್ತದೆ. ಈತನ ಪದ್ಯಗಳು ಧ್ಯೇಯವಾದಿಗಳಾಗಿವೆ. ಈತನ ಜೀವನ ಚಿಂತ್, ರುಷಿಪ್ರಾಣಿ, ದೇವಾವತರಣಗಳು ಈತನ ತಪಸ್ವೀಭಾವನೆಗಳನ್ನು ಪ್ರಕಟಿಸುತ್ತವೆ. ಈತನ ಉತ್ತರರಾಮಚರಿತವೆಂಬುದು ಸಂಸ್ಕೃತ ಮಹಾನಾಟಕವೆಂಬ ಕೃತಿಯ ಒಂದು ಭಾಗದ ಅನುವಾದವಾಗಿದೆ.

ಗಂಗಾಧರ ಮೆಹರ್ ಕಾವ್ಯರಚನೆಯಲ್ಲಿ ಸಂಸ್ಕೃತ ಕಾವ್ಯಗಳ ಧ್ಯೇಯಗಳನ್ನೇ ಅನುಸರಿಸಿದ್ದಾನೆ. ಈತನ ಉತ್ಕಳಲಕ್ಷ್ಮಿ ಎಂಬುದರಲ್ಲಿ ಒರಿಸ್ಸ ದೇಶದ ಪ್ರಕೃತಿ ವರ್ಣನೆಯಿದೆ. ಕೀಚಕಬಧ, ಪ್ರಣಯಬಲ್ಲರಿ, ತಪಸ್ವಿನಿ, ಪದ್ಮಿನಿಗಳು ಈತನ ಇತರ ಕಾವ್ಯಗಳು. ಇವುಗಳ ವಸ್ತುಗಳನ್ನು ಕವಿ ಮಹಾಭಾರತ ರಾಮಾಯಣ ಮತ್ತು ಇತರ ಅಂಥ ಮೂಲಗಳಿಂದ ತೆಗೆದುಕೊಂಡಿದ್ದಾನೆ.

ಗ್ರಾಮ ಸೌಂದರ್ಯವನ್ನು ವರ್ಣಿಸುವ ಪ್ರಖ್ಯಾತವಾದ ಭಾವಗೀತೆಗಳನ್ನು ರಚಿಸಿ ನಂದಕಿಶೋರ್‌ಬಳ್ ಕೀರ್ತಿವಂತನಾಗಿದ್ದಾನೆ. ಹಳ್ಳಿಗಳಲ್ಲಿನ ಪ್ರಕೃತಿಯ ಚೆಲುವನ್ನು ಈತ ರಸವತ್ತಾಗಿ ಚಿತ್ರಿಸಿದ್ದಾನೆ. ಜಜಾತಿ ಮತ್ತು ದೇವಜಾನಿಯರ ಪ್ರಣಯದ ಕಥೆಯನ್ನು ಅವಲಂಬಿಸಿ ಈತ ಶರ್ಮಿಷ್ಠಾ ಎಂಬ ದೊಡ್ಡ ಕಾವ್ಯವೊಂದನ್ನು ರಚಿಸಿದ್ದಾನೆ.

ಚಿಂತಾಮಣಿ ಮೊಹಾಂತಿಯೂ ಅನೇಕ ಬೃಹದ್ಗ್ರಂಥಗಳನ್ನು ಅರ್ಪಿಸಿದ್ದಾನೆ. ರಾಧಾನಾಥನ ಶೈಲಿಯ ಪ್ರಭಾವವನ್ನು ಈತನ ಕವಿತೆಗಳಲ್ಲಿ ಕಾಣಬಹುದು.

ಪದ್ಮಚರಣ್ ಪಟ್ಟನಾಯಕ ಹಲವಾರು ಭಾವಗೀತೆಗಳನ್ನೂ ಅಷ್ಟಪದಿಗಳನ್ನೂ ರಚಿಸಿದ್ದಾನೆ. ಕಲಾತ್ಮಕವಾದ ಒಳನೋಟ ಈತನ ವೈಶಿಷ್ಟ್ಯ. ಪದ್ಮಪಾಖುಡಾ, ಸೂರ್ಯಮುಖಿ, ಗೊಲಾಪಗುಚ್ಛ ಮತ್ತು ಆಸಾಮಂಜರಿ ಎಂಬುವು ಈತ ಆಗಾಗ ಬರೆದ ಕವನಗಳ ಸಂಗ್ರಹಗಳು.

ಫಕೀರ್ ಮೋಹನ್ ಸೇನಾಪತಿ ಅನೇಕ ಕವನಗಳನ್ನು ಬರೆದನಲ್ಲದೆ ಹರಿವಂಶ, ರಾಮಾಯಣಗಳನ್ನು ಭಾಷಾಂತರಿಸಿದ. ಈತನ ಉತ್ಕಳ ಭ್ರಮನಂಗ್ ಎಂಬುದು ಕಾವ್ಯವಾಗಿದ್ದರೂ ಆ ಕಾಲದ ಒರಿಸ್ಸ ದೇಶದ ಅನೇಕ ಮಹಾಪುರುಷರನ್ನು ಇದು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸುತ್ತದೆ.

**ಸತ್ಯವಾದೀ ಯುಗ:** ರಾಧಾನಾಥ ರಾಯ್ (1908) ದಿವಂಗತನಾದ ಬಳಿಕ, ಒರಿಯ ಸಾಹಿತ್ಯದಲ್ಲಿ ಹೊಸ ಲೇಖಕರ ಒಂದು ತಂಡ ಉದಿಸಿತು. ಇವರು ಮೂಲತಃ ದೇಶಭಕ್ತರು. ಗೋಪಬಂಧು ದಾಸ್, ನೀಳಕಂಠ ದಾಸ್, ಗೋದಾವರೀಶ್ ಮಿಶ್ರ, ಕೃಪಾಸಿಂಧು ಮಿಶ್ರ ಮತ್ತು ಬಸುದೇವ ಮಿಶ್ರ ಎಂಬ ಐವರು ಈ ತಂಡಕ್ಕೆ ಸೇರಿದವರು. ಗೋಪಬಂಧು ಈ ತಂಡದ ನಾಯಕ. ದೇಶಭಕ್ತರಾದುದರಿಂದ ಈ ಐವರೂ ರಾಧಾನಾಥನ ಸಾಹಿತ್ಯಕ್ಕೆ ಎದುರುಬಿದ್ದರು. ಏಕೆಂದರೆ ರಾಧಾನಾಥ್ ತನ್ನ ಸಾಹಿತ್ಯರಚನೆಗೆ ಹೊರಗಿನ ವಸ್ತುಗಳನ್ನೂ ತೆಗೆದುಕೊಂಡು ಒರಿಯ ಜನರ ಸಂಸ್ಕೃತಿಗೂ ಪ್ರತಿಷ್ಠೆಗೂ ಭಂಗತಂದನೆಂದು ಇವರು ಭಾವಿಸಿದರು. ರಾಧಾನಾಥನ ಕೃತಿಗಳನ್ನು ಇವರು ತೀವ್ರವಾಗಿ ಖಂಡಿಸಿ ಒರಿಸ್ಸದ ಪ್ರಾಚೀನ ವೈಭವವನ್ನು ತಮ್ಮ ಕೃತಿಗಳಲ್ಲಿ ಎತ್ತಿಹಿಡಿದರು.

ಪಂಡಿತ, ಗೋಪಬಂಧು ಎಂಬ ಲೇಖಕ ಕಾರಾ ಕವಿತಾ, ಬಂದಿರ ಆತ್ಮಕಥಾ, ಧರ್ಮಪದ, ನಚಿಕೇತ, ಗೋ ಮಾಹಾತ್ಮ್ಯ ಮತ್ತು ಅವಕ್ಷಚಿಂತಾ ಮುಂತಾದ ಕವಿತೆಗಳನ್ನು ರಚಿಸಿದ. ಈ ಕೃತಿಗಳೆಲ್ಲವೂ ಒರಿಸ್ಸ ಮತ್ತು ಅದರ ಜನರ ಹೆಮ್ಮೆಯನ್ನೂ ಠೇಂಕಾರವನ್ನೂ

ತೋರಿಸುತ್ತವೆ. ಪಂಡಿತ ನೀಲಕಂಠ ದಾಸ ಕವಿ ಖಾರವೇಲ, ಕೊನಾರ್ಕ್, ದಾಸನಾಯಿಕ ಮುಂತಾದ ಕವಿತೆಗಳನ್ನು ರಚಿಸಿದ. ಇವುಗಳಲ್ಲಿ ಸಹ ಇದೇ ಭಾವನೆಗಳು ವ್ಯಕ್ತವಾಗಿವೆ. ಪಂಡಿತ ಗೋದಾವರೀಶ್ ಮಿಶ್ರ ಕಥನ ಕವಿತೆಗಳಿಗೂ ಭಾವಗೀತೆಗಳಿಗೂ ಪ್ರಸಿದ್ಧನಾದವ. ಈತನ ಕಿಸಳಯ, ಅಲೇಖಿಕಾ, ಕವಿತಾಯನ ಮತ್ತು ಭಯನಿಕಾ ಎಂಬವು ಕಥನಕವನ ಮತ್ತು ಭಾವಗೀತೆಗಳ ಸಂಗ್ರಹಗಳು. ಕೃಪಾಸಿಂಧು ಮಿಶ್ರ ಇತಿಹಾಸಕಾರ. ಬಸುದೇವ ಮಿಶ್ರ ಪ್ರಬಂಧಲೇಖಕ. ಇಬ್ಬರೂ ಸಮಾನಭಾವದಿಂದ ಇತಿಹಾಸವನ್ನೂ ಪ್ರಬಂಧಗಳನ್ನೂ ರಚಿಸಿದರು.

**ಸವುಜ ಯುಗ:** ದೇಶಭಕ್ತಿ ಸಾಹಿತ್ಯದ ತರುವಾಯ ಲೇಖಕರ ಮತ್ತೊಂದು ತಂಡ ಒರಿಸ್ಸದಲ್ಲಿ ಅಂಕುರಿಸಿತು. ಈ ತಂಡದವರು ಸವುಜ (ಹಸಿಯ) ಸಾಹಿತ್ಯವನ್ನು ನಿರ್ಮಿಸಿದರು. ಸವುಜವೆಂಬುದು ಬಂಗಾಳಿಯಿಂದ ತೆಗೆದುಕೊಂಡ ಶಬ್ದ. ಆ ಕಾಲದಲ್ಲಿ ಬಂಗಾಳದಲ್ಲೂ ತರುಣರ ಒಂದು ತಂಡ ಸವುಜದಳವೆಂಬ ಹೆಸರನ್ನಿಟ್ಟುಕೊಂಡು ಬರೆಯತೊಡಗಿತ್ತು. ಅದರ ಪ್ರಭಾವ ಒರಿಯ ಸಾಹಿತ್ಯದ ಮೇಲೂ ಸಾಕಷ್ಟು ಆಯಿತು. ಕಾಳಿಂದೀಚರಣ ಪಾಣಿಗ್ರಾಹಿ, ಹರಿಹರ್ ಮಹಾಪಾತ್ರ, ಅನ್ನದಾ ಶಂಕರ ರಾಯ್, ಶರತ್‌ಚಂದ್ರ ಮುಖರ್ಜಿ ಮತ್ತು ಬೈಕುಂಠನಾಥ ಪಟ್ಟನಾಯಕ ಎಂಬ ಐದು ಮಂದಿ 1913ರಲ್ಲಿ ಕಾಲೇಜು ವಿದ್ಯಾರ್ಥಿಗಳಾಗಿದ್ದರು. ಈ ಐವರೂ ಒಂದು ಸಂಘವನ್ನು ಕಟ್ಟಿಕೊಂಡು ಅದಕ್ಕೆ ನಾನ್‌ಸೆನ್ಸ್ ಕ್ಲಬ್ ಎಂದು ನಾಮಕರಣ ಮಾಡಿ ಅದರ ವತಿಯಲ್ಲಿ ಪ್ರಣಯವನ್ನೇ ಮುಖ್ಯ ವಸ್ತುವಾಗುಳ್ಳ ಕವಿತೆಗಳನ್ನು ಬರೆಯಲು ತೊಡಗಿದರು. 1921ರಲ್ಲಿ ಈ ಸಂಘ ಸವುಜಸಾಹಿತ್ಯ ಸಮಿತಿಯಾಗಿ ಮಾರ್ಪಾಡು ಹೊಂದಿತು. ಆಗ ಇದಕ್ಕೆ ಇನ್ನೂ ಕೆಲವು ಮಂದಿ ಸದಸ್ಯರಾಗಿ ಸೇರಿದರು. ಐವರು ಲೇಖಕರ ಕವನಗಳನ್ನೊಳಗೊಂಡ ಸವುಜಕವಿತಾ ಎಂಬ ಕವನ ಸಂಗ್ರಹವೊಂದು ಪ್ರಕಟವಾಯಿತು. ಈ ಸಂಘದ ಹದಿಮೂರು ಮಂದಿ ಒಟ್ಟು ಸೇರಿ ಬಾಸಂತಿ ಎಂಬ ಕಾದಂಬರಿಯನ್ನು ರಚಿಸಿದರು. ಇದರಲ್ಲಿ ಸಮಾಜಪರಿಷ್ಕರಣ ಭಾವನೆಗಳಿದ್ದವು. ಈ ಕಾದಂಬರಿಯ ವೈಶಿಷ್ಟ್ಯವೇನೆಂದರೆ ಹದಿಮೂರು ಮಂದಿ ಲೇಖಕರು ಒಬ್ಬೊಬ್ಬರೂ ಎರಡು ಮೂರು ಅಧ್ಯಾಯಗಳನ್ನು ಬರೆದು ಈ ಕಥೆಯನ್ನು ಪೂರೈಸಿದುದು.

ಈ ಅವಧಿಯ (1913–31) ವರೆಗಿನ ಕವಿಗಳು ತೊರೆದೋಡುವವರು (ಎಸ್‌ಕೇಪಿಸ್ಟ್) ಎಂಬ ನಿಂದೆಗೆ ಪಾತ್ರರಾದರು. ಈ ಭೂಮಿ ಪ್ರೇಮಕ್ಕೆ ಯೋಗ್ಯವಾದ ಸ್ಥಾನವಲ್ಲವೆಂದು ಇವರು ಭಾವಿಸಿದ್ದರಲ್ಲದೆ ಈ ಲೋಕವನ್ನು ತ್ಯಜಿಸಿ ಪ್ರಣಯಕ್ಕಾಗಿ ಸ್ವರ್ಗಕ್ಕೇರಬಯಸಿದ್ದರು. ಹುರುಳಿಲ್ಲದ್ದರಿಂದ ಇಂಥ ಕಾವ್ಯ ಬಹಳ ಕಾಲ ಜೀವಿಸಲಾರದೆ ಹೋಯಿತು.

**ಸಮಕಾಲೀನ ಯುಗ:** ಈ ಯುಗದ ಕವಿತಾ ಕ್ಷೇತ್ರವನ್ನು ಮೊದಲು ಪರಿಶೀಲಿಸಬಹುದು. ಸವುಜ ಕಾಲದಲ್ಲಿ ಮೇಲಕ್ಕೆ ಬಂದವರಾದರೂ ಸವುಜ ಸಮಿತಿಗೆ ಸೇರದೆ ಇದ್ದ ಮಾಯಾಧರ್ ಮಾನಸಿಂಘ, ಸಚ್ಚಿ ರಾತ್ರೆ, ಕುಂತಲ ಕುಮಾರಿ ಸಾಬತ್ ಮುಂತಾದ ಕೆಲವು ಕವಿಗಳು ಸಣ್ಣ ದೊಡ್ಡ ಸ್ವತಂತ್ರ ಕವಿತೆಗಳನ್ನು ಬರೆದಿದ್ದಾರೆ.

ಒರಿಸ್ಸ ಸಾಹಿತ್ಯದಲ್ಲಿ ಪ್ರಣಯ ಕವಿತೆಗೆ ಮಾಯಾಧರ್ ಮಾನಸಿಂಘ ಪ್ರಖ್ಯಾತನಾಗಿದ್ದಾನೆ. ಪ್ರಣಯದ ವಿಷಯದಲ್ಲಿ ಆತನ ಭಾವನೆಗಳನ್ನೂ ಅನುಭವಗಳನ್ನೂ ನಿಶ್ಶಂಕೆಯಿಂದ ರೂಪಿಸುವ ಪ್ರಣಯಪದ್ಯಗಳ ಸಂಕಲನವೆಂದರೆ ಆತನ ಧೂಪ ಎಂಬ ಗ್ರಂಥ. ಹೇಮಪುಷ್ಪ ಮತ್ತು ಹೇಮಸಸ್ಯ ಎಂಬುವು ಇದೇ ತರದ ಪದ್ಯಗಳನ್ನೊಳಗೊಂಡ ಮತ್ತೆರಡು ಪುಸ್ತಕಗಳು. ಈಚೆಗೆ ಅಂದರೆ 1948ರ ತರುವಾಯ ಮಾನಸಿಂಘ ಕವಿತೆಯ ವಿಷಯದಲ್ಲಿ ತನ್ನ ದೃಷ್ಟಿಯನ್ನು ಬದಲಾಯಿಸಿದ್ದಾನೆ. ತಪಸ ಧ್ಯೇಯಗಳು ಈಗ ಆತನ ಕವಿತಾಮನೋಭಾವಕ್ಕೆ ವಿಷಯಗಳಾಗಿವೆ. ಈ ಪರಿವರ್ತಿತ ಮನೋಭಾವಕ್ಕೆ ಕಮಳಾಯನ ಎಂಬ ಗ್ರಂಥ ಅತ್ಯುತ್ತಮ ನಿದರ್ಶನವಾಗಿದೆ. ಪ್ರಣಯದ ಶಾರೀರಿಕ ಪ್ರಶಂಸೆಗೆ ಈತನ ಪೂರ್ವದ ಕವಿತೆಗಳು ಮೀಸಲಾಗಿದ್ದರೆ, ಇತ್ತೀಚಿನ ಕವಿತೆಗಳು ಪ್ರೇಮದ ಆಧ್ಯಾತ್ಮ ಸ್ವರೂಪವನ್ನು ಪ್ರಕಟಿಸುತ್ತವೆ.

ಕುಂತಳಕುಮಾರಿ ಸಾವತಳು ಬಗೆಬಗೆಯ ಭಾವಗಳನ್ನು ಕುರಿತು ಅನೇಕ ಪದ್ಯಗಳನ್ನು ಬರೆದಿದ್ದಾಳೆ. ಎಲ್ಲ ಧರ್ಮಗಳಲ್ಲೂ ಮಾನವತೆಯಲ್ಲೂ ವಿಶ್ವಾಸವಿಟ್ಟ ದೇಶಾಭಿಮಾನಿ ಈಕೆ ಸ್ಫುಲಿಂಗ ಎಂಬ ಕವನಸಂಗ್ರಹದಲ್ಲಿ ಈಕೆಯ ದೇಶಾಭಿಮಾನ ಮತ್ತು ಕ್ರಾಂತಿಕಾರಕ ಭಾವನೆಗಳು ಸಮರ್ಥಕವಾಗಿ ವ್ಯಕ್ತವಾಗಿವೆ. ಈಕೆಯ ಪ್ರೇಮಚಿಂತಾಮಣಿಯಲ್ಲಿ ರಾಧಾಕೃಷ್ಣರ ಆಧ್ಯಾತ್ಮಿಕ ಪ್ರೇಮ ವರ್ಣಿತವಾಗಿದೆ.

ಶ್ರೀ ಸಚ್ಚಿದಾನಂದ ರೌತ್ರೆ ಈ ಕಾಲದ ಅತ್ಯಂತ ಶಕ್ತನಾದ ಕವಿ. 1925ರಲ್ಲಿ ಈತ ಕವಿತೆಯನ್ನು ಬರೆಯಲು ತೊಡಗಿದ. ಎಳೆತನದಲ್ಲಿ ಪ್ರಣಯ ಕವಿತೆಗಳನ್ನು ಬರೆದ. 1931 ರಿಂದೀಚೆಗೆ ಈತ ಕ್ರಾಂತಿಕಾರಕ ಕವಿತೆಗಳನ್ನು ಬರೆದಾಗ ಈತನ ಭಾವನೆ ಬದಲಾಯಿಸಿರುವುದು ಬೆಳಕಿಗೆ ಬಂದಿತು. ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳಿಗೂ ಇರುವ ಅಸಮಾನತೆಯನ್ನು ಈತ ಖಂಡಿಸಿದ. ಮಾನವಪ್ರಕೃತಿಯ ವಿಷಯದಲ್ಲಿ ಈತನ ಭಾವನೆಗಳೆಂಥವೆಂಬುದನ್ನು ಪಾಂಡುಲಿಪಿ ಎಂಬ ಗ್ರಂಥ ತೋರಿಸುತ್ತದೆ. ಈತನ ಭಾನುಮತಿರ ದೇಶ ಎಂಬ ಕವಿತೆ ಸರಳ ರಗಳೆಯಲ್ಲಿ ರಚಿತವಾಗಿರುವ ಬಹುಶ್ರೇಷ್ಠ ಕವಿತೆ. ಇದು ಈತನಿಗೆ ಒರಿಸ್ಸ ಸಾಹಿತ್ಯದಲ್ಲಿ ಉನ್ನತ ಸ್ಥಾನಗಳಿಸಿಕೊಟ್ಟಿದೆ. ಬಾಜಿ ರೌತ್ ಎಂಬುದು ಒಂದು ಶ್ರೇಷ್ಠ ಪದ್ಯ. ಧೆಂಕನಾಳ್ ರಾಜ್ಯದಲ್ಲಿ ನಡೆದ ಉತ್ಕ್ರಾಂತಿಯಲ್ಲಿ ಬಾಜಿ ರೌತನ ಮರಣವೇ ಇದರ ವಸ್ತು. ಬಾಜಿ ರೌತ ಧೆಂಕನಾಳಿನ ಒಬ್ಬ ಚಿಕ್ಕ ಹುಡುಗ. ತಮ್ಮನ್ನು ದೋಣಿಯಲ್ಲಿ ಕೂರಿಸಿಕೊಂಡು ಹೋಗದಿದ್ದುದಕ್ಕಾಗಿ ಪೊಲೀಸಿನವರು ಇವನನ್ನು ಗುಂಡಿಕ್ಕಿ ಕೊಂದರು. ಇದನ್ನು ಕುರಿತ ಮೂಲ ಕವಿತೆ ಇಂಗ್ಲಿಷ್ ಮತ್ತು ಇತರ ಯುರೋಪಿಯನ್ ಭಾಷೆಗಳಿಗೆ ಅನುವಾದಗೊಂಡಿದೆ (ದಿ ಬೋಟ್‌ಮನ್ ಬಾಯ್ ಅಂಡ್ ಫಾರ್ಟಿ ಅದರ್ ಪೊಯೆಮ್ಸ್).

ರಾಧಾಮೋಹನ್ ಗರ್‌ನಾಯಕ್ ಸಂಪನ್ನ ಶೈಲಿಯ ಒಬ್ಬ ಜನಪ್ರಿಯ ಕವಿ. ಜಾನಪದ ಕಥನಕವನಗಳಿಗಾಗಿ ಈತ ಪ್ರಖ್ಯಾತನಾಗಿದ್ದಾನೆ. ಇವು ಉತ್ಕಳಿಕಾ ಎಂಬ ಪುಸ್ತಕದಲ್ಲಿ ಪ್ರಕಟವಾಗಿವೆ. ಈತನ ಪಸುಪಖಿರ ಕಾವ್ಯ ಎಂಬುದು ಪ್ರಖ್ಯಾತ ಮೃಗಪಕ್ಷಿಗಳ ಮೇಲೆ– ಎಂದರೆ ವಾಲ್ಮೀಕಿ ಮಹರ್ಷಿಯ ಮುಂದೆಯೇ ಹತವಾದ ಕ್ರೌಂಚ ಪಕ್ಷಿ, ರಷ್ಯದ ರಾಕೆಟ್ಟಿನಲ್ಲಿ ಗಗನಯಾತ್ರೆ ಮಾಡಿದ ಲೈಕಾ ಎಂಬ ನಾಯಿ–ಮುಂತಾದವುಗಳ ಮೇಲೆ ಬರೆದ ಪದ್ಯಗಳನ್ನು ಒಳಗೊಂಡಿದೆ.

ಅನಂತರದವರಲ್ಲಿ ಪಟ್ಟನಾಯಕ ಮತ್ತೊಬ್ಬ ಜನಪ್ರಿಯ ಕವಿ. ಈತನ ಕವಿತೆಗಳು ಅನೇಕ ಪತ್ರಿಕೆಗಳಲ್ಲಿ ಅಚ್ಚಾಗುತ್ತಿವೆ. ಈತನ ಶೈಲಿ ಗಡುಸು. ಈತನದು ಕ್ರಾಂತಿಯ ಮನೋಭಾವ. ಈಗಿನ ಸಾಮಾಜಿಕ ರೂಢಿಯನ್ನು ಪ್ರತಿಭಟಿಸುವುದೇ ಈತನ ಧ್ಯೇಯ. ಬಿನೋದ್ ಚಂದ್ರ ನಾಯಕನೂ ಅನೇಕ ಪದ್ಯಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಶೃಂಗಾರ ಕಲ್ಪನೆಯ ಪದ್ಯಗಳು ಅನೇಕವಾಗಿವೆ. ಈತನ ನೀಲಚಂದ್ರರ ಉಪತ್ಯಕಾ ಎಂಬುದು ಅಂಥದೊಂದು ಸಂಗ್ರಹ. ಕುಂಜ ಬಿಹಾರಿಯ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಚಾರಣಿಕಾ ಎಂಬುದು ಆತನ ಅನೇಕ ಪದ್ಯಗಳ ಸಂಗ್ರಹ.

ಈ ಕಾಲದ ಪ್ರಖ್ಯಾತ ಕವಿಯಾದ ಗೋದಾವರೀಶ್ ಮಹಾಪಾತ್ರ ಸ್ವೋಪಜ್ಞ ಶೈಲಿಯನ್ನು ಪ್ರಬಲವಾದ ಪ್ರತಿಭೆಯನ್ನೂ ಪಡೆದಿದ್ದಾನೆ. ವಿಡಂಬನ ಕವಿತೆಗಳಿಗೂ ಈತ ಪ್ರಸಿದ್ಧ. ಈತನ ಕಂಟಾ ಓ ಫೂಲ ಮತ್ತು ಉಠ ಕಂಕಾಳ ಎಂಬವು ಕ್ರಾಂತಿಕಾರಕ ಭಾವನೆಯ ವಿಡಂಬನ ಕವಿತೆಗಳ ಸಂಗ್ರಹಗಳು. ಕಿರಿಯ ತಲೆಮಾರಿನವರ ಪೈಕಿ ಚಿಂತಾಮಣಿ ಬೆಹೆರಾ ಮತ್ತು ಜಾನಕಿ ಮೊಹಾಂತಿ ಎಂಬುವರು ಗಣನೀಯರಾಗಿದ್ದಾರೆ. ಬೆಹೆರಾನ ನೂತನ ಸ್ವಾಕ್ಷರ ಮತ್ತು ಮೊಹಾಂತಿಯ ತಿರ್ಜ್ಯಕ್ ಎಂಬ ಗ್ರಂಥಗಳು ಆಧುನಿಕ ಲೇಖಕರ ಶಕ್ತಿಸಾಮರ್ಥ್ಯಗಳಿಗೆ ನಿದರ್ಶನಗಳಾಗಿವೆ. ಕೇವಲ ಪತ್ರಿಕೆಗಳಿಗೆ ಮತ್ತು ಕಾಲಿಕಗಳಿಗೆ ಬರೆಯುವ ಅನೇಕ ಕವಿಗಳಿದ್ದಾರೆ. ಇವರ ಕಾಣಿಕೆಗಳೂ ಬೆಲೆಯುಳ್ಳವು.

**ಕಾದಂಬರಿಗಳು:** ಉಮೇಶಚಂದ್ರ ವಿರಚಿತ ಪದ್ಮಮಾಳಿ ಎಂಬುದೇ ಒರಿಯ ಭಾಷೆಯ ಪ್ರಥಮ ಕಾದಂಬರಿಯೆಂದು ಪರಿಗಣಿತವಾಗಿದೆ. ಇದು ಪದ್ಮಮಾಳಿ ಮತ್ತು ಪರಿಖಿತರ ಪ್ರಣಯ ಪ್ರಸಂಗವನ್ನು ವರ್ಣಿಸುತ್ತದೆ. ಗೋಪಾಲವಲ್ಲಭದಾಸ ಬರೆದ ಭೀಮಾ ಭುಯಾನ್ ಎಂಬ ಮತ್ತೊಂದು ಕಾದಂಬರಿ ಕಥಾನಾಯಕ ಭೀಮನ ಕಥೆಯನ್ನು ಕುರಿತುದಾಗಿದೆ. ಒರಿಸ್ಸ ಆದಿವಾಸಿ ಕುಲಗಳ ಸಾಮಾಜಿಕ ರೂಢಿಗಳು ಇಲ್ಲಿ ವರ್ಣಿತವಾಗಿವೆ. ರಾಮಶಂಕರ್ ರಾಯ್ ಬರೆದ ಬಿಬಾಸಿನಿ ಎಂಬುದು ಒಂದು ಐತಿಹಾಸಿಕ ಕಾದಂಬರಿ.

ಈ ಮೂರು ಕಾದಂಬರಿಗಳ ತರುವಾಯ, ಫಕೀರ್ ಮೋಹನ್ ಸೇನಾಪತಿಯ ಛ ಮಾಣ ಅಠಗುಂಠ ರಚಿತವಾಗುವವರೆಗೆ (1897) ಮತ್ತಾವ ಕಾದಂಬರಿಯೂ ಗೋಚರಿಸುವುದಿಲ್ಲ. ಈ ಕಾದಂಬರಿ ಒರಿಸ್ಸ ಸಾಹಿತ್ಯದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ತಂದಿತು. ಭಗಿಯಾ ಎಂಬ ಒಬ್ಬ ಭೂಮಾಲೀಕ ಮತ್ತು ಸಾರಿಯಾ ಎಂಬ ಆತನ ಮಡದಿ ತಮ್ಮ ಭೂಮಿಯ ಸಲುವಾಗಿ ರಾಮಚಂದ್ರ ಮಂಗರಾಜನೆಂಬಾತನ ಕುಹಕ ತಂತ್ರಕ್ಕೆ ಸಿಕ್ಕಿ ಅನೇಕ ಕಷ್ಟಗಳನ್ನು ಅನುಭವಿಸಿದ ಪರಿಯನ್ನು ಈ ಕಾದಂಬರಿ ವರ್ಣಿಸುತ್ತದೆ. ಶೈಲಿ ಹಾಸ್ಯಮಯವಾಗಿದ್ದರೂ ಘಟನೆ ವಿಷಾದಾಂತವಾಗಿದೆ. ಲಛ್ಛಮಾ, ಮಾಮು ಮತ್ತು ಪ್ರಾಯಶ್ಚಿತ್ತ ಎಂಬ ಮೂರು ಇತರ ಕಾದಂಬರಿಗಳನ್ನೂ ಫಕೀರಮೋಹನ ಬರೆದ. ಎರಡು ಶತಮಾನಗಳವರೆಗಿನ, ಎಂದರೆ 18 ಮತ್ತು 19ನೆಯ ಶತಮಾನಗಳ ಒರಿಸ್ಸ ದೇಶದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸ ಈ ನಾಲ್ಕು ಕಾದಂಬರಿಗಳಲ್ಲಿ ಸಿಕ್ಕುತ್ತದೆ. ಈತನ ಸಮಕಾಲೀನರಾದ ಚಿಂತಾಮಣಿ ಮೊಹಾಂತಿ ಸನಿಸಪ್ತಾ ಮತ್ತು ಟಂಕಾಗಛ್ಛ ಎಂಬುವನ್ನು ಬರೆದ. ಕನಕಲತೆ ಧನಂಜಯರಾಯನನ್ನು ಪ್ರೀತಿಸಿ ಮದುವೆಯಾದ ಪ್ರಸಂಗವನ್ನು ಕುರಿತ ಕನಕಲತಾ ಎಂಬ ಕಾದಂಬರಿಯನ್ನು ನಂದಕಿಶೋರ ಬಳ್ ರಚಿಸಿದ.

ಗೋದಾವರೀಶ್ ಮಿಶ್ರ ಹಲವಾರು ಕಾದಂಬರಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಕೆಲವು ಮೂಲ ಇಂಗ್ಲಿಷ್ ಕೃತಿಗಳ ಭಾಷಾಂತರಗಳು. ಆತನ ಅಭಾಗಿನಿ ಎಂಬುದು ವಿಕ್ಟರ್ ಹ್ಯೂಗೊನ್ ಲೇ ಮಿಸರಬ್ಲೇ ಕೃತಿಯ ಭಾಷಾಂತರ. ಕಮಲಾಕಾಂತ ದಾಸ ಅನೇಕ ಕಾಲ್ಪನಿಕ ಕಾದಂಬರಿಗಳನ್ನು ರಚಿಸಿದ. ಅವುಗಳಲ್ಲಿ ಚೌ ಎಂಬುದು ಅತ್ಯುತ್ತಮವಾಗಿದೆ. ಲಕ್ಷ್ಮೀಕಾಂತ ಮಹಾಪಾತ್ರ ಕಣಾಮಾಮು ಎಂಬ ಹಾಸ್ಯರಸಪ್ರಧಾನವಾದ ಕಾದಂಬರಿಯನ್ನು ಬರೆದ. ಬೈಷ್ಣಬ್ ಚರನ್ ದಾಸ ಮನೆ ಮನೆ ಎಂಬ ಕಾಲ್ಪನಿಕ ಕಾದಂಬರಿಯನ್ನು ರಚಿಸಿದ.

ರಾಜಕಿಶೋರ್ ಪಟ್ಟನಾಯಕ, ನಿತ್ಯಾನಂದ ಮಹಾಪಾತ್ರ, ಕಾನ್ಹುಚರಣ ಮೊಹಾಂತಿ, ಗೋಪಿನಾಥ್ ಮೊಹಾಂತಿ ಎಂಬುವರು ಆದ್ಯಕಾಲೀನ ಪ್ರಖ್ಯಾತ ಕಾದಂಬರಿಕಾರರು. ರಾಜಕಿಶೋರ್ ಪಟ್ಟನಾಯಕನ ಅನೇಕ ಕಾದಂಬರಿಗಳಲ್ಲಿ ಸಿಂದುರಗಾರ, ಕಜ್ಜಲಗಾರ, ಪಂಜುರಿ ಪಕ್ಷಿ, ಭಲಾ ಬಾಟ ಎಂಬುವು ಗಮನಾರ್ಹವಾದ ಕೆಲವು. ಕಾನ್ಹು ಚರಣ ಮೊಹಾಂತಿ ಈ ಕಾಲದ ಪ್ರಖ್ಯಾತ ಕಾದಂಬರಿಕಾರ. ಈತ ಇಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಕೀರ್ತಿವಂತನಾಗಿದ್ದಾನೆ. ಹಾ ಅನ್ನ, ಸಾಸ್ತಿ, ಝುಡರ ಶೇಷ, ಝಂಜಾ, ಕಾ ಮತ್ತು ಬಜ್ರಬಾಹು ಎಂಬುವು ಈತನ ಪ್ರಸಿದ್ಧ ಕಾದಂಬರಿಗಳು. ಆಧುನಿಕ ಒರಿಯ ಸಾಹಿತ್ಯದಲ್ಲಿ ಈತನ ಶೈಲಿ ವಿಲಕ್ಷಣವಾಗಿದೆ. ಫಕೀರ ಮೋಹನನ ತರುವಾಯ ಒರಿಯ ಲೇಖಕರ ಮೇಲೆ ತುಂಬ ಪ್ರಭಾವ ಬೀರಿರುವವ ಈತನೊಬ್ಬನೇ. ಪರಜಾ, ದಾಡಿ ಬುಢಾ, ಅಮೃತಸರ ಸಂತಾನ್, ಹರಿಜನ, ರಾಹುರ ಚ್ಛಾಯಾ ಮುಂತಾದುವು ಗೋಪೀನಾಥ ಮೊಹಾಂತಿಯ ಕೆಲವು ಕಾದಂಬರಿಗಳು. ಅವುಗಳ ಪೈಕಿ ಪರಜಾ ಎಂಬುದು ಅತ್ಯುತ್ತಮವಾಗಿದೆ. ಈತನ ಶೈಲಿ ಸರಳವೂ ವಿಶದವೂ ಸ್ವೋಪಜ್ಞವೂ ಆಗಿ ಒಳ್ಳೆಯ ಮಾದರಿಯಾಗಿದೆ.

ಕಾಳಿಂದೀಚರಣ ಪಾಣಿಗ್ರಾಹಿ ಎಂಬಾತ ಮಾಟಿರ ಮನಿಸ, ಲುಹಾರ ಮನಿಸ, ಮುಕ್ತಾ ಗದರ ಕ್ಷುಧಾ ಮತ್ತು ಅಮರ ಚಿತಾ ಎಂಬವನ್ನು ಬರೆದಿದ್ದಾನೆ. ಆತನ ಮಾಟಿರ ಮನಿಸ ಎಂಬುದು ವಾಸ್ತವ ಕಥೆಯೊಂದನ್ನು ಅವಲಂಬಿಸಿ ರಚಿತವಾಗಿದ್ದು ಜನಪ್ರಿಯವೆನಿಸಿದೆ. ಹರೇಕೃಷ್ಣ ಮಹತಾಬ್ ಬರೆದಿರುವ ಕಾದಂಬರಿಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸುಧಾರಣೆಗಳ ಬಗೆಗೆ ಆತನಿಗಿದ್ದ ಒಲವು ಎದ್ದು ಕಾಣುತ್ತದೆ. ಪ್ರತಿಭಾ ಮತ್ತು ಟಾರ್ಟರ್ ಎಂಬ ಆತನ ಕೃತಿಗಳು ಜನಪ್ರಿಯವಾಗಿವೆ.

**ಸಣ್ಣ ಕಥೆಗಳು:** ಫಕೀರ್ ಮೋಹನ್ ಸೇನಾಪತಿ ಬರೆದ ರೇಬತಿ ಎಂಬುದು ಒರಿಯ ಭಾಷೆಯ ಮೊದಲ ಸಣ್ಣ ಕಥೆ. ಈ ಕಥೆಯಲ್ಲಿ ಲೇಖಕ ಒರಿಸ್ಸ ದೇಶದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕಿದ್ದ ಕಷ್ಟಗಳನ್ನು ಎತ್ತಿ ತೋರಿಸಿದ್ದಾನೆ. ಕವಿಯ ಇಲ್ಲಿನ ಉದ್ದೇಶ ಸಮಾಜಸುಧಾರಣೆ. ಪೇಟೆಂಟ್ ಮೆಡಿಸನ್, ರಾಂಡೀಪುರ, ಅನಂತಾ, ಡಾಕ್ ಮುನ್ಷಿ, ಗಾರುಡಿಮಂತ್ರ, ಧುಳಿಯಾ ಬಾಬಾ ಮುಂತಾದುವೂ ಸುಧಾರಣಾದೃಷ್ಟಿಯಿಂದಲೇ ಬರೆದವಾಗಿವೆ. ಫಕೀರ ಮೋಹನನಿಗೆ ಮಾನವಸ್ವಭಾವದ ಸೂಕ್ಷ್ಮಜ್ಞಾನವಿತ್ತು. ಆತನ ಸಣ್ಣ ಕಥೆಗಳು ಜನರಿಗೆ ಮೆಚ್ಚಿಗೆಯಾಗಿವೆ.

ಗೋಪಾಲ ಚಂದ್ರಪ್ರಹರಾಜ ಕೆಲವು ಸಣ್ಣ ಕಥೆಗಳನ್ನು ಬರೆದಿದ್ದಾನೆ. ಆದರೆ ಅವು ಮುಖ್ಯವಾಗಿ ಜಾನಪದ ಕಥೆಗಳ ವರ್ಗಕ್ಕೆ ಸೇರುತ್ತವೆ. ಆದುದರಿಂದ ಅವುಗಳಲ್ಲಿ ಆಧುನಿಕ ಸಣ್ಣ ಕಥೆಗಳ ಲಕ್ಷಣ ಕಂಡುಬರುವುದಿಲ್ಲ. ರಾಜಕಿಶೋರ ರೇ ಎಂಬಾತ ಈ ಕಾಲದ ಪ್ರಖ್ಯಾತ ಕಥೆಗಾರ. ಈತ ತನ್ನ ಸ್ವಂತ ಅನುಭವಗಳನ್ನೇ ಕಥಾರೂಪದಲ್ಲಿ ಹಿಡಿದಿಟ್ಟಿದ್ದಾನೆ. ಮನರ ಮೃಣಾಳ ಮತ್ತು ನೀಳ ಲಹರಿ ಎಂಬವು ಆತನ ಕಥಾಸಂಗ್ರಹಗಳು. ಸುರೇಂದ್ರ ಮೊಹಾಂತಿ ಮತ್ತೊಬ್ಬ ಪ್ರಸಿದ್ಧ ಕಥೆಗಾರ. ಕೃಷ್ಣ ಚೂಡಾ, ಸವುಜ ಪತ್ರ ಓ ಧುಸರ ಗೋಪಾಲ ಎಂಬುವು ಆತನ ಬೇರೆ ಬೇರೆ ಸಂಗ್ರಹಗಳು. ಬಸಂತ ಕುಮಾರಿ ಪಟ್ಟನಾಯಕಳು ವಿವಿಧ ಪತ್ರಿಕೆಗಳಿಗೆ ಕಥೆಗಳನ್ನು ಬರೆಯುತ್ತಾಳೆ. ಪಾಲಟಾ ಧೆಯು ಮತ್ತು ಸಭ್ಯತಾರ ಸಾಜ ಎಂಬುವು ಆಕೆಯ ಎರಡು ಕಥಾಸಂಗ್ರಹಗಳು. ರಾಜಕಿಶೋರ್ ಪಟ್ಟನಾಯಕ, ನಿತ್ಯಾನಂದ ಮಹಾಪಾತ್ರ, ದೇವೇಂದ್ರ ಮೊಹಾಂತಿ, ಮನೋಜ್ ದಾಸ್, ಬಾಮಾ ಚರಣ್ ಮಿತ್ರ, ಸದಾನಂದ ದಾಸ್ ಮತ್ತು ಇತರ ಅನೇಕ ತರುಣ ಬರಹಗಾರರು ಅನೇಕ ಪತ್ರಿಕೆಗಳಲ್ಲಿ ಕಥೆಗಳನ್ನು ಪ್ರಕಟಿಸುತ್ತಿದ್ದಾರಲ್ಲದೆ ಅನೇಕರು ತಮ್ಮ ಕಥಾ ಸಂಗ್ರಹಗಳನ್ನು ಗ್ರಂಥರೂಪವಾಗಿ ಬೆಳಕಿಗೆ ತಂದಿದ್ದಾರೆ.

ಆಧುನಿಕ ಒರಿಯ ಸಾಹಿತ್ಯದಲ್ಲಿ ಸಣ್ಣ ಕಥೆಗಳು ತಕ್ಕಷ್ಟು ಉದಿಸಿವೆ. ಅವುಗಳಲ್ಲಿ ಹಲವಾರು ಮೇಲುಮಟ್ಟವನ್ನು ಮುಟ್ಟಿವೆ.

**ನಾಟಕ:** ಕಾಂಚಿ ಕಾವೇರಿ ಎಂಬ ಮೊಟ್ಟಮೊದಲಿನ ಒರಿಯ ನಾಟಕವನ್ನು ರಾಮ ಶಂಕರ ರಾಯ್ 1880ರಲ್ಲಿ ಬರೆದ. ಆತ ಬನಮಾಳಾ, ರಾಮ ಬನಬಾಸ್, ಜುಗಧರ್ಮ, ಲೀಳಾವತಿ ಮುಂತಾದ ಇತರ ಅನೇಕ ನಾಟಕಗಳನ್ನೂ ಬರೆದಿದ್ದಾನೆ. ಸಂಸ್ಕೃತ ಮತ್ತು ಇಂಗ್ಲಿಷ್ ಪ್ರಭಾವವನ್ನು ಸ್ಪಷ್ಟವಾಗಿ ಆತನಲ್ಲಿ ಕಾಣಬಹುದು. ಸೀತಾ ಬಿಬಾಹ ಎಂಬ ಮತ್ತೊಂದು ನಾಟಕ ಕಾಮಪಾಳ ಮಿಶ್ರನ ಕೃತಿ. ಕಟಕ ಬಿಜೊಯ ಎಂಬುದು ಭಿಕಾರಿಚರಣ ಪಟ್ಟನಾಯಕ ರಚಿಸಿದ ಐತಿಹಾಸಿಕ ನಾಟಕ. ಮೂವತ್ತಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನಾಟಕಗಳನ್ನು ಬರೆದಿರುವ ಗಣ್ಯನಾಟಕಕಾರ ಅಶ್ವಿನಿಕುಮಾರ್ ಘೋಷ್. ಆತನ ಕಳಾಪಾಹಡ, ಸಿಯೋಜಿ, ಗೌಡ ಬಿಜೇತಾ ಎಂಬುವು ಖ್ಯಾತವಾಗಿವೆ. ಗೋದಾವರೀಶ್ ಮಿಶ್ರ ಐತಿಹಾಸಿಕ ಪ್ರಸಂಗಗಳನ್ನು ತೆಗೆದುಕೊಂಡು ಪುರುಷೋತ್ತಮದೇವ ಮತ್ತು ಕಪಿಲೇಂದ್ರದೇವ ಎಂಬೆರಡು ನಾಟಕಗಳನ್ನು ಬರೆದಿದ್ದಾನೆ. ಆಧುನಿಕ ಕಾಲದ ಅತ್ಯುತ್ತಮ ನಾಟಕಕಾರನೆಂದು ಪರಿಗಣಿತನಾದವನೆಂದರೆ ಕಾಳಿಚರಣ್ ಪಟ್ಟನಾಯಕ. ಒರಿಸ್ಸದಲ್ಲಿ ಸ್ಥಿರವಾದ ರಂಗಮಂಟಪವನ್ನು ನಿರ್ಮಿಸಿದವ ಈತನೇ. ಸುಮಾರು ಹದಿನೈದು ನಾಟಕಗಳನ್ನು ಈತ ಬರೆದಿದ್ದಾನೆ. ಅವುಗಳಲ್ಲಿ ಅಭಿಜಾನ, ರಕ್ತಮಾಟಿ, ಭಾಟ, ಗರ್ಲ್ಸ್ ಸ್ಕೂಲ್– ಎಂಬುವು ಪ್ರಖ್ಯಾತವಾಗಿವೆ. ಭಂಜಕಿಶೋರ್ ಪಟ್ಟನಾಯಕ ಮೂವತ್ತು ನಾಟಕಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಬೆನಮಿ, ಮಾಣಿಕ ಜೋಡಿ ಮತ್ತು ಜೀವನ ಜುಅ ಎಂಬುವು ಜನಪ್ರಿಯವಾಗಿವೆ. ಭರಸಾ, ಪರಕಲಮ ಮತ್ತು ಅರ್ಧಾಂಗಿನಿ ಎಂಬುವನ್ನು ರಚಿಸಿ ಒಳ್ಳೆಯ ನಾಟಕಕಾರನೆಂದೆನಿಸಿಕೊಂಡವ ಗೋಪಾಲ್ ಛೋಟ್ರಾಯ್. ಆಧುನಿಕ ನಾಟಕಕಾರರ ಪೈಕಿ ಮನೋರಂಜನ್ ದಾಸ್, ರಾಮಚಂದ್ರ ಮಿಶ್ರ, ಅದ್ವೈತ ಚರಣ ಮೊಹಾಂತಿ ಎಂಬವರು ಗಣನೀಯರು. ಪ್ರಾಣಬಂಧು ಕರ್ ಮತ್ತು ಜಾನಕೀ ಬಲ್ಲಭ ಮೊಹಾಂತಿ ಎಂಬುವರು ಫಕೀರ್ ಮೋಹನ್, ಕನ್ಹುಚರಣ ಮೊಹಾಂತಿ ಮತ್ತು ಗೋಪೀನಾಥ ಮೊಹಾಂತಿಗಳ ಕೆಲವು ಕಾದಂಬರಿಗಳನ್ನು ನಾಟಕಗಳಾಗಿ ಪರಿವರ್ತಿಸಿದ್ದಾರೆ. ಪ್ರಾಣಬಂಧುಕರ್ ತನ್ನ ಏಕಾಂಕ ನಾಟಕಗಳಿಗಾಗಿ ಕೀರ್ತಿವೆತ್ತಿದ್ದಾನೆ.

**ವಿಮರ್ಶೆ:** ಆಧುನಿಕ ಒರಿಯ ಸಾಹಿತ್ಯದಲ್ಲಿ ವಿಮರ್ಶೆ ಅತ್ಯುನ್ನತ ಸ್ಥಾನವನ್ನು ಪಡೆದಿದೆ. ಆರ್ತಬಲ್ಲಭ ಮೊಹಾಂತಿ ಮತ್ತು ಗಿರಿಜಾಶಂಕರ ರೇ ಎಂಬುವರು ಅನೇಕ ಮುಖ್ಯ ಸಮಸ್ಯೆಗಳನ್ನು ಕುರಿತು ಹಲವಾರು ಸಾಹಿತ್ಯ ವಿಮರ್ಶೆಗಳನ್ನು ಬರೆದಿದ್ದಾರೆ. ಪಂಡಿತ ನೀಲಕಂಠ ದಾಸ್ ಎಂಬ ವಿದ್ವಾಂಸ ಧಾರ್ಮಿಕ ಮತ್ತು ದಾರ್ಶನಿಕ ಜಿಜ್ಞಾಸೆಗಳಲ್ಲಿ ಪ್ರವೀಣನಾಗಿದ್ದಾನೆ. ನಟಬರ್ ಸಾಮಂತ ರಾಯ, ಗೌರೀಕುಮಾರ ಬ್ರಹ್ಮಾ, ಪ್ರಹ್ಲಾದ್, ಪ್ರಧಾನ್, ಬನ್ಸೀಧರ್ ಮೊಹಾಂತಿ, ಪಠಾನಿ ಪಟ್ಟನಾಯಕ್, ದೇವೇಂದ್ರ ಮೊಹಾಂತಿ ಮುಂತಾದವರು ಆಧುನಿಕ ಒರಿಯ ಸಾಹಿತ್ಯದ ವಿಮರ್ಶಕರೆಂದು ಪರಿಗಣಿತರಾಗಿದ್ದಾರೆ. ಸಾಮಂತ ರಾಯನ ವ್ಯಾಸ ಕವಿ ಫಕೀರ್ ಮೋಹನ್ ಎಂಬುದೂ ಜುಗ ಪ್ರಬರ್ತಕ ಸ್ರಸ್ತಾ ರಾಧಾನಾಥ್ ಎಂಬುದೂ ಆಧುನಿಕ ಒರಿಯ ಸಾಹಿತ್ಯದ ಮೇಲಣ ಎರಡು ಗಣ್ಯ ಗ್ರಂಥಗಳು. ಬ್ರಹ್ಮಾನ ಕೃತಿಗಳಾದ ಸಮಸ್ಯಾ ಓ ಸಮಾಧಾನ ಮತ್ತು ಚಿಲಿಕಾ ಓ ರಾಧಾನಾಥ್ ಎಂಬುವು ಸಹ ಗಣನೀಯವಾಗಿವೆ. ಬನ್ಸೀಧರ್ ಮೊಹಾಂತಿ ಸಾರಳಾ ದಾಸನ ಸಾಹಿತ್ಯದಲ್ಲಿ ಪಂಡಿತನಾಗಿದ್ದಾನೆ. ಅನೇಕ ತರುಣ ವಿಮರ್ಶಕರ ಲೇಖನಗಳು ಪತ್ರಿಕೆಗಳಲ್ಲೂ ಕಾಲಿಕಗಳಲ್ಲೂ ಪ್ರಕಟವಾಗುತ್ತಿವೆ.

ಸಂಕೀರ್ಣ ವಿಷಯಗಳು: ಕುಲಮಣಿ ದಾಷ್ ಬರೆದ ಹಿಮಾಲಯ ಪಥ, ಜಿ.ಬಿ. ಧಾಲ್ ಬರೆದ ಅಮೆರಿಕ ಅನುಭೂತಿ, ಶ್ರೀಹರ್ಷ ಮಿಶ್ರನ ಪಶ್ಚಿಮ ಪಥಿಕ ಎಂಬುವು ಗಣ್ಯವಾದ ಪ್ರವಾಸವರ್ಣನೆಗಳು. ಗೋಕುಲಾನಂದ ಮಹಾಪಾತ್ರ ವಿರಚಿತ ಸುನರ ಒಡಿಸಾ ಎಂಬುದು ಒಂದು ವೈಜ್ಞಾನಿಕ ಕಲ್ಪನೆಯ ಕಥೆ. ಫಕೀರ ಮೋಹನ್ ಸೇನಾಪತಿಯ ಫಕೀರ ಮೋಹನ್ ಆತ್ಮಚರಿತ ಮತ್ತು ಗೋದಾವರೀಶ್ ಮಿಶ್ರನ ಅರ್ಧ ಶತಾಬ್ದಿರ ಒಡಿಸ್ಸಾ ಓ ತಹಿನ್ರೆ ಮೊ ಸ್ಥಾನ ಎಂಬುವು ಗಮನಾರ್ಹವಾದ ಆತ್ಮಚರಿತೆಗಳು.

ಶ್ರೀರಾಮಚಂದ್ರ ದಾಷ್, ಸದಾಶಿವ ಮಿಶ್ರ ಮತ್ತು ಬೈದ್ಯನಾಥ ಮಿಶ್ರರು ಅರ್ಥಶಾಸ್ತ್ರದ ಮೇಲೂ ಬಸಂತಕುಮಾರ್ ಬೆಹೂರಾ, ಕೇಶವಚಂದ್ರ ಸಾಹು ಮತ್ತು ಇತರರು ವಿಜ್ಞಾನವಿಷಯಗಳ ಮೇಲೂ ಅನೇಕ ಪತ್ರಿಕೆಗಳಲ್ಲಿ ಬರೆದಿದ್ದಾರೆ.

ಬಿನೋದೆ ಕನೂಂಗೊ ಎಂಬಾತನ ಜ್ಞಾನಮಂಡಲ ಎಂಬ ಜನಪ್ರಿಯ ಒರಿಯ ವಿಶ್ವಕೋಶದ ಸಂಪುಟಗಳು ಪ್ರಕಟನೆಗೆ ಸಿದ್ಧವಾಗುತ್ತಲಿವೆ. ಇದರ ಮೊದಲ ಸಂಪುಟ 1960ರಲ್ಲಿ ಪ್ರಕಟಗೊಂಡಿತು. ಉತ್ಕಲ ವಿಶ್ವವಿದ್ಯಾನಿಲಯ ಇಷ್ಟರಲ್ಲಿಯೇ ತನ್ನ ಒರಿಯ ಜ್ಞಾನಕೋಶವನ್ನು ಪ್ರಕಟಿಸುವುದರಲ್ಲಿದೆ. ಒರಿಯ ಪತ್ರಿಕೆಗಳೂ ಕಾಲಿಕಗಳೂ ಒರಿಯ ಸಾಹಿತ್ಯದ ಅಭಿವೃದ್ಧಿಗೆ ನೆರವಾಗುತ್ತಿರುವುದು ಒಂದು ಗಮನಾರ್ಹವಾದ ಸಂಗತಿ. ಇವುಗಳಿಂದ ಅನೇಕ ಬರೆಹಗಾರರು ಬೆಳಕಿಗೆ ಬಂದರಲ್ಲದೆ ಇವುಗಳಿಂದ ಅನೇಕ ಓದುಗರು ಜ್ಞಾನದ ವಿವಿಧ ಶಾಖೆಗಳ ತಿಳಿವಳಿಕೆಯನ್ನು ಪಡೆದುಕೊಳ್ಳುತ್ತಿದ್ದಾರೆ. (ಡಿ.ಎನ್.ಎಂ.)

**ಒರಿಯೊಸಿರಿಯಸ್:** ಕಳ್ಳಿಗಳ ಕುಟುಂಬ. ಶಾಸ್ತ್ರನಾಮ ಕ್ಯಾಕ್ಟೇಸಿ. ಐದು ಪ್ರಭೇದಗಳಿವೆ. ಸಸ್ಯಗಳು ಬಲು ಆಕರ್ಷಕವಾಗಿರುವುದರಿಂದ ಇವನ್ನು ಕುಂಡಗಳಲ್ಲಿ ಬೆಳೆಸಿ ಮನೆಗಳಲ್ಲಿ ಅಲಂಕಾರಕ್ಕೋಸ್ಕರ ಇಡುವುದುಂಟು. ಕಾಂಡದಲ್ಲಿ ಏಣುಗಳು ಮತ್ತು ಮುಳ್ಳುಗಳುವೆ. ಏಣುಗಳ ಮೇಲಿರುವ ಗಂಟುಗಳಿಂದ ಉದ್ದವಾದ ಬಿಳಿಯ ಬಣ್ಣದ ಕೂದಲುಗಳು ಹೊರಬರುತ್ತವೆ. ಹೂಗಳ ಆಕಾರ ಕೊಳವೆಯಂತೆ. ಇವು ಪ್ರತಿದಿನವೂ ಅರಳುವುವು. ಅಂಡಾಶಯದ ಸುತ್ತಲೂ ಬಿಲ್ಲೆಗಳಂತಿರುವ ಅಸಂಖ್ಯಾತ ಉಪದಳಗಳಿವೆ. ಉಣ್ಣೆಯಂತೆ ಹೆಣೆದುಕೊಂಡಿರುವ ಕೂದಲುಗಳು ಕಂಕುಳಲ್ಲಿ ಇರುವುದರಿಂದ ಹೂ ನೋಡಲು ಆಕರ್ಷಣೀಯವಾಗಿದೆ. ಅಸಂಖ್ಯಾತ ಕೇಸರಗಳು ಹೂದಳಗಳಷ್ಟು ಅಥವಾ ಅವುಗಳಿಗಿಂತ ಉದ್ದವಾಗಿರುತ್ತವೆ.

ಈ ಸಸ್ಯದ ಎರಡು ಮುಖ್ಯ ಪ್ರಭೇದಗಳು ಒ. ಸೆಲ್ಸಿಯಾನಸ್ ಮತ್ತು ಒ. ಫಾಸುಲೇಟಸ್. ಇವು ಬೊಲಿವಿಯ, ಪೆರು ಮತ್ತು ಚಿಲಿ ದೇಶಗಳ ಮೂಲವಾಸಿಗಳು. (ಬಿ.ಎ.ಸಿ.)

**ಒರಿಸ್ಸ:** ಭಾರತದ ಒಂದು ರಾಜ್ಯ, $17^0$ 49' ಉತ್ತರ ಅಕ್ಷಾಂಶದಿಂದ $22^0$ 34' ಉತ್ತರ ಅಕ್ಷಾಂಶದವರೆಗೂ $81^0$ 27' ಪೂರ್ವ ರೇಖಾಂಶದಿಂದ $87^0$ 29' ಪೂರ್ವ ರೇಖಾಂಶದವರೆಗೂ ಹಬ್ಬಿದೆ. ಭಾರತದ ಪೂರ್ವ ತೀರದಲ್ಲಿ ಹಬ್ಬಿರುವ ಈ ರಾಜ್ಯದ ಈಶಾನ್ಯದಲ್ಲಿ ಪಶ್ಚಿಮ ಬಂಗಾಲ, ಉತ್ತರದಲ್ಲಿ ಬಿಹಾರ, ಪಶ್ಚಿಮದಲ್ಲಿ ಮಧ್ಯಪ್ರದೇಶ, ದಕ್ಷಿಣದಲ್ಲಿ ಆಂಧ್ರಪ್ರದೇಶ ಮತ್ತು ಪೂರ್ವದಲ್ಲಿ ಬಂಗಾಲ ಕೊಲ್ಲಿ ಇವೆ. ವಿಸ್ತೀರ್ಣ 1,55,707 ಚ.ಕಿಮೀ ಜನಸಂಖ್ಯೆ 4,19,47,358 (2011). ರಾಜಧಾನಿ ಭುವನೇಶ್ವರ.




ಭೂರಚನೆಯ ದೃಷ್ಟಿಯಿಂದ ಒರಿಸ್ಸವನ್ನು 1 ಕರಾವಳಿ ಮೈದಾನ, 2 ಮಧ್ಯದ ಬೆಟ್ಟಪ್ರದೇಶ, 3 ಏರುನೆಲ, 4 ನದೀಕಣಿವೆ, 5 ತಗ್ಗಿನ ಪ್ರಸ್ಥಭೂಮಿ–ಎಂದು ವಿಂಗಡಿಸಬಹುದು.

ಮಹಾನದಿ, ವೈತರಣಿ, ಬ್ರಾಹ್ಮಣಿ, ಸ್ವರ್ಣರೇಖಾ, ಋಷಿಕುಲ್ಯ ಮತ್ತು ಬೂರಾ ಬಲಾಂಗ್–ಎಂಬ ಆರು ಮುಖ್ಯ ನದಿಗಳು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ಈ ರಾಜ್ಯದ ಕರಾವಳಿಯ ಮೈದಾನಗಳು ರಚಿತವಾಗಿವೆ. ಇವನ್ನು ಆರು ನದೀ ಮುಖಜಭೂಮಿಗಳ ಪ್ರದೇಶ ಎನ್ನಬಹುದು. ಆದರೂ ಅನೇಕ ನದಿಗಳು ನಿಜಾರ್ಥದಲ್ಲಿ ನದೀಮುಖಜಭೂಮಿಯ ವಿಶಿಷ್ಟತೆಯನ್ನು ಬೆಳೆಸುವುದರಲ್ಲಿ ನಿಷ್ಪ್ರಯೋಜಕವಾಗಿವೆ. ಸಮುದ್ರದಿಂದ ನುಗ್ಗಿಬರುವ ಪ್ರವಾಹಗಳು ಇದಕ್ಕೆ ಕಾರಣ.

ಒರಿಸ್ಸದ ಮುಕ್ಕಾಲು ಭಾಗ ಪರ್ವತ ಪ್ರದೇಶ. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿ ನಡೆದು ಅನಂತರ ಇದ್ದಕ್ಕಿದ್ದಂತೆ ಉತ್ಕರ್ಷಗೊಂಡು ಪೂರ್ವಘಟ್ಟಗಳಲ್ಲಿ ಲೀನವಾಗುತ್ತದೆ. ಜಲಪ್ರವಾಹ ವೈವಿಧ್ಯ ಮೇಲ್ಮೈಯ ನಿರ್ದಿಷ್ಟ ವಿನ್ಯಾಸಕ್ಕೆ ಅನುಗುಣವಾಗಿ ಅದರ ಜಲೋತ್ಸಾರಣ (ಡ್ರೇನೇಜ್) ಏರ್ಪಟ್ಟಿದೆ. 300, 600 ಮತ್ತು 900 ಮೀಗಳಲ್ಲಿ ಒರಿಸ್ಸದ ಪೂರ್ವಘಟ್ಟಗಳು ಮೂರು ಉತ್ಕರ್ಷತೆಗಳನ್ನು ಕಂಡಿವೆಯೆಂದು ನಂಬಲಾಗಿದೆ. ಇವು ಜಲೋತ್ಸಾರಣದ ಪ್ರಾಚೀನ ರೇಖೆಗಳ ಕುರುಹುಗಳನ್ನೆಲ್ಲ ಅಳಿಸಿಬಿಟ್ಟಿವೆಯೆನ್ನಬಹುದಾದರೂ ಈ ಬಗ್ಗೆ ವೈಜ್ಞಾನಿಕವಾಗಿ ಇನ್ನೂ ನಿರ್ಣಯವಾಗಿಲ್ಲ. ಪರ್ವತ ಪ್ರದೇಶವನ್ನು ಹೀಗೆ ವಿಭಾಗಿಸಬಹುದು: (1) ಸಿಮುಲಿಯ ಮತ್ತು ಮೇಘಾಸನಿ ಪರ್ವತಗಳು, (2) ಮಂಕರ್ನದ ಮಲಯಗಿರಿ ಮತ್ತು ಗಂಧಮಾರ್ದನ ಪರ್ವತಗಳು, (3) ಬ್ರಾಹ್ಮಣಿ ಮತ್ತು ಮಹಾನದಿ ಜಲಾನಯನ ಭೂಮಿ, (4) ಮಹಾನದಿ, ಋಷಿಕುಲ್ಯ ಮತ್ತು ವಂಶಧಾರಾ ನದಿಗಳ ಪ್ರದೇಶ, (5) ಪೊಟ್ಟಂಗಿ ಮತ್ತು ಚಂದ್ರಗಿರಿ ಪರ್ವತ ಸಾಲುಗಳು.

ಎತ್ತರದ ಪ್ರದೇಶಗಳು ಪ್ರಸ್ಥಭೂಮಿಗಿಂತ ಕಡಿಮೆ ಎತ್ತರದವು. ಅವು 148–296 ಮೀ ವರೆಗೆ ಎತ್ತರವಾಗಿವೆ. ನದೀಕೊಳ್ಳಗಳಿಗೆ ಇವು ಆಶ್ರಯ ನೀಡಿವೆ. ಇವೆಲ್ಲವೂ ಪೂರ್ವಘಟ್ಟಗಳ ಪಶ್ಚಿಮದಲ್ಲಿ ವಿಸ್ತಾರವಾಗಿ ಬೆಳೆದಿವೆ. ಬ್ರಾಹ್ಮಣಿ, ಮಹಾನದಿ ಮತ್ತು ವಂಶಧಾರಾ ನದೀಕಣಿವೆಗಳು ಮುಖ್ಯವಾದುವು. ವೈತರಣಿಯ ತಲೆಯೆಡೆಯ ಜಲಾನಯನ ಪ್ರದೇಶಗಳಾದ ಪಾಂಪೋಷ್–ಕಿಯೋಝಾರ್–ಪಲ್ಲಹರ ಪ್ರಸ್ಥಭೂಮಿಗಳೂ ಸಾಬರಿ ನದೀ ಪಾತ್ರದ ತಲೆಯೆಡೆಯ ಜಲಾನಯನ ಭೂಮಿಯಾದ ನವರಂಗಪುರ–ಜಯಪುರ ಪ್ರಸ್ಥಭೂಮಿಯೂ 296–592 ಮೀ ಗಳವರೆಗೆ ಪ್ರಸ್ಥಭೂಮಿಗಳ ಪೈಕಿ ಮುಖ್ಯವಾದುವು.

**ಸ್ವಾಭಾವಿಕ ಪ್ರದೇಶಗಳು:** ಒರಿಸ್ಸವನ್ನು 1 ತೀರದ ಮೈದಾನಗಳು, 2 ನದೀಕಣಿವೆ ಮತ್ತು ಪ್ರವಾಹಗಳ ಬಯಲು, 3 ಇಳಿಜಾರಾದ ಎತ್ತರದ ಪ್ರದೇಶಗಳು, 4 ಪ್ರಸ್ಥಭೂಮಿಗಳು ಮತ್ತು 5 ಪರ್ವತಗಳು ಎಂದು ವಿಭಾಗಿಸಬಹುದು. ತೀರದ ಮೈದಾನಗಳನ್ನು ಉತ್ತರ, ಮಧ್ಯ ಮತ್ತು ದಕ್ಷಿಣ ತೀರಗಳ ಬಯಲುಗಳೆಂದು ವಿಂಗಡಿಸಬಹುದಾಗಿದೆ. ನದೀ ಕಣಿವೆಗಳೂ ಪ್ರವಾಹದ ಬಯಲುಗಳೂ ಮುಖ್ಯನದಿಗಳ 76 ರಿಂದ 152 ಮೀಗಳವರೆಗಿನ ಮಟ್ಟರೇಖೆಗಳ ಎತ್ತರದಲ್ಲಿ ಕಂಡುಬರುತ್ತವೆ. 152 ರಿಂದ 304 ಮೀಗಳ ಮಧ್ಯದಲ್ಲಿ ಇಳಿಜಾರಾದ ಎತ್ತರದ ಪ್ರದೇಶಗಳು ಕಂಡುಬರುತ್ತವೆ. ರಾಯ್‌ರಂಗ್‌ಪುರ್ ಮತ್ತು ವೈತರಣಿ, ಬ್ರಾಹ್ಮಣಿ ಮತ್ತು ಮಹಾನದಿ ಕೊಳ್ಳಗಳು ಇಳಿಜಾರದ ಎತ್ತರದ ಪ್ರದೇಶಗಳು. ಪ್ರಸ್ಥಭೂಮಿಗಳಲ್ಲಿ ಕಿಯೋಂಝಾರ್–ಪಂಪೋಷ್ ಪ್ರಸ್ಥಭೂಮಿ, ನವರಂಗ್‌ಪುರ–ಜಯಪುರ ಪ್ರಸ್ಥಭೂಮಿ ಮತ್ತು ವಂಶಧಾರಾ ಮೇಲ್ದಂಡೆಯ ಪ್ರಸ್ಥಭೂಮಿಗಳು ಮುಖ್ಯವಾದವು.

ಒರಿಸ್ಸದ ಬೆಟ್ಟಗಳು ಪೂರ್ವಘಟ್ಟಗಳಿಗೆ ಸೇರಿವೆ. ಮಹಾನದಿ ಮತ್ತು ಬ್ರಾಹ್ಮಣಿ ಮುಂತಾದ ನದಿಗಳು ಈ ಬೆಟ್ಟಗಳನ್ನು ಛೇದಿಸುತ್ತವೆ. ಈಶಾನ್ಯ ದಿಕ್ಕಿನಲ್ಲಿನ ಸಿಮುಲಿಪಲ್ ಮತ್ತು ಮೇಘಾಸನಿ ಎರಡು ಮುಖ್ಯ ಪರ್ವತ ಶಿಖರಗಳು. ಇವುಗಳ ಎತ್ತರ 1,165 ಮೀಟರುಗಳು. ವೈತರಣಿ–ಬ್ರಾಹ್ಮಣಿ ನದೀಪ್ರವಾಹಗಳ ತೆಕ್ಕೆನೆಲದಲ್ಲಿ ಪಲ್ಲಹರದ ಮಲಯ ಗಿರಿ ಅತ್ಯಂತ ಎತ್ತರ ಶಿಖರ. ಇದರ ಎತ್ತರ 1,186 ಮೀ ಕೋರಾಪುಟ್ ಮತ್ತು ಕಾಲಾಹಂದಿ ಜಿಲ್ಲೆಗಳಲ್ಲಿನ ಪರ್ವತಗಳು ತುಂಬ ಎತ್ತರವಾದವು. ಆಂಧ್ರದ ಕರಾವಳಿಯ ಬಯಲಿನಿಂದ ಇವು ಇದ್ದಕ್ಕಿದ್ದಂತೆ ಮೇಲೆದ್ದಿವೆ. ಪೊಟ್ಟಂಗಿಯ ದೇವಮಾಲಿ ಬೆಟ್ಟಗಳಲ್ಲೂ ಎತ್ತರ ಶಿಖರಗಳಿವೆ (1667 ಮೀ).

**ಭೂವಿಜ್ಞಾನ:** ತೀರದ ಮೈದಾನಗಳು ಮುಖ್ಯವಾಗಿ ಪ್ಲಿಸ್ಟೊಸೀನ್ ಮತ್ತು ಇತ್ತೀಚಿನ ಸಂಚಯನಗಳಿಂದಾಗಿವೆ. ಆಲಿಗೋಸೀನ್ ಮತ್ತು ಕೆಳ ಮಯೋಸೀನ್ ಕಾಲದ ಅವಶೇಷಗಳು ಪುರಿ ಜಿಲ್ಲೆಯಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ಮೇಲ್ಭಾಗದ ಗೊಂಡ್ವಾನ ಶಿಲಾಸ್ತೋಮವನ್ನೊಳಗೊಂಡ ಜುರಾಸಿಕ್ ಶಿಲೆಗಳು ಮಹಾನದಿ ಮುಖಜಭೂಮಿಯ ಅಗ್ರದ ಉತ್ತರದಲ್ಲಿ ಕಂಡುಬರುತ್ತವೆ. ಅಂತ್ಯ ಕಾರ್ಬಾನಿಫರಸ್ (ಗೊಂಡ್ವಾನ ಶಿಲಾಸ್ತೋಮದ ಅಡಿಭಾಗಗಳು) ಸಂಚಯನಗಳು ಮಹಾನದಿ ಮತ್ತು ಬ್ರಾಹ್ಮಣಿ ನದಿಗಳ ಮಧ್ಯಂತರ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವೇ ತಾಲ್‌ಚೆರ್ ಶಿಲಾಪದರಗಳು. ಇವುಗಳಲ್ಲಿ ಕಲ್ಲಿದ್ದಲಿನ ಭಾರಿಯ ಸಂಚಯನಗಳನ್ನು ಇತ್ತೀಚೆಗೆ ಕಂಡುಹಿಡಿಯಲಾಗಿದೆ. ಪಶ್ಚಿಮ ಒರಿಸ್ಸದ ಸಾಬರಿ ಮೇಲ್‌ಕಣಿವೆಯಲ್ಲಿ ಪ್ರಿ–ಕೇಂಬ್ರಿಯನ್ ಕಾಲದ ಕಡಪಶಿಲೆಗಳು ಕಂಡುಬರುತ್ತವೆ. ಧಾರ್ವಾಡೀಯ ಬಂಡೆಗಳು ಉತ್ತರ ಒರಿಸ್ಸದಲ್ಲಿ, ಮಯೂರ್‌ಭಂಜ್, ಕಿಯೋಂಝಾರ್ ಮತ್ತು ಸುಂದರಘರ್ ಜಿಲ್ಲೆಗಳಲ್ಲಿವೆ. ಇಲ್ಲಿನ ಕಬ್ಬಿಣದ ಅದಿರಿನ ನಿಕ್ಷೇಪಗಳು ಜಂಷೆಡ್‌ಪುರ, ದುರ್ಗಾಪುರ ಮತ್ತು ರೂರ್ಕೆಲಗಳಲ್ಲಿನ ಉಕ್ಕಿನ ಕಾರ್ಖಾನೆಗಳಲ್ಲಿ ಅಧಿಕ ಬೇಡಿಕೆಗಳನ್ನು ಪೂರೈಸುತ್ತಿವೆ. ಇವು ರಫ್ತೂ ಆಗುತ್ತಿವೆ. ಘುಲ್ ಬಾನಿ ಮತ್ತು ಉತ್ತರ ಗಂಜಾಂ ಜಿಲ್ಲೆಗಳಲ್ಲಿ ಖೊಂಡಲೈಟ್ ಸಿಗುತ್ತದೆ. ಕೋರಾಪುಟ್ ಜಿಲ್ಲೆಯ ಪೂರ್ವಘಟ್ಟಗಳ ಎತ್ತರದ ಪ್ರದೇಶ ಇವುಗಳಿಂದ ಉಂಟಾಗಿದೆ. ಇದೇ ಪ್ರದೇಶದ ಬಂಡೆಗಲ್ಲುಗಳ ಕೋಡುಭಾಗಗಳು ಮುಖ್ಯವಾಗಿ ಚಾರ್‌ನೋಕೈಟ್ ಶಿಲಾರೀತಿಗಳಿಂದ ಸಂಭವಿಸಿವೆ. ರಾಜ್ಯದ ಹೆಚ್ಚು ಭಾಗ ಗ್ರಾನೈಟ್ ಮತ್ತು ನೈಸ್ ಶಿಲೆಗಳಿಂದಾದದ್ದು. ಇಡೀ ಶ್ರೇಣಿಯಲ್ಲೇ ಇವು ಅತ್ಯಂತ ಪುರಾತನ ಶಿಲೆಗಳು.

**ಮಣ್ಣಿನ ಸ್ವರೂಪ:** ಒರಿಸ್ಸದಲ್ಲಿ ಸುಮಾರು ಹನ್ನೆರಡು ಬಗೆಯ ಮಣ್ಣುಗಳಿವೆ. ಸಮುದ್ರತೀರಕ್ಕೆ ಹೊಂದಿಕೊಂಡಿರುವಂಥ ಕಿರಿವಲಯದ ಮರಳು ಮಣ್ಣುಗಳಿವೆ. ಹೊಸ ಮತ್ತು ಹಳೆಯ ಮೆಕ್ಕಲುಮಣ್ಣುಗಳೆರಡೂ ಇಲ್ಲುಂಟು. ತೀರದ ಬಳಿ ನೂತನ ಮೆಕ್ಕಲು ಕಂಡುಬಂದರೆ, ಪುರಾತನ ಮೆಕ್ಕಲು ಒಳನಾಡಿನಲ್ಲಿ ಕಂಡುಬರುತ್ತದೆ. ಬ್ರಾಹ್ಮಣಿಯ ಅಗ್ರಭಾಗದ ಕಣಿವೆಯಲ್ಲೂ ಮಹಾನದಿ ಮತ್ತು ಬ್ರಾಹ್ಮಣಿಗಳ ತೆಕ್ಕನೆಲದಲ್ಲೂ ಭಾವನಿಪಟ್ಟದ ಎತ್ತರ ಪ್ರದೇಶಗಳಲ್ಲೂ ಪ್ಲೇನೋಸಾಲ್ ಕಂಡುಬರುತ್ತದೆ. ಮಯೂರ್‍ಭಂಜ್, ಸುಂದರಘರ ಮತ್ತು ಕಿಯೋಂಝಾರ್ ಜಿಲ್ಲೆಗಳನ್ನೊಳಗೊಂಡ ಉತ್ತರ ಒರಿಸ್ಸದಲ್ಲಿ ಮುಖ್ಯವಾಗಿ ಕೆಂಪು ಮಣ್ಣಿದೆ. ಸಂಬಲ್‍ಪುರದ ಪೂರ್ವದಲ್ಲಿ, ಮಹಾನದಿಯ ದಂಡೆಯುದ್ದಕ್ಕೂ ಅದರ ಪ್ರವಾಹದ ದಿಕ್ಕಿನಲ್ಲಿ ಹಬ್ಬಿದ ಹಳದಿ ಮಣ್ಣಿನ ಪಟ್ಟೆ ತೇಪೆಯೊಂದು ಕಾಣಬರುತ್ತದೆ. ಮುರಕಲ್ಲು ಮರಳಿನಲ್ಲಿ ಉನ್ನತ ಅವನತ ಮಟ್ಟದವೆಂದು ಎರಡು ವಿಧ. ಪುರಿ, ಕಟಕ್ ಮತ್ತು ಬಾಲಸೂರ್ ಜಿಲ್ಲೆಗಳಲ್ಲಿನ ಮೆಕ್ಕಲು ಮೈದಾನಗಳ ಪಶ್ಚಿಮದ ಅಂಚಿನಲ್ಲಿ ಕೆಳಮಟ್ಟದ ಮುರಕಲ್ಲು ಕಾಣುತ್ತದೆ, ಗಂಜಾಮಿನ ಪೂರ್ವಘಟ್ಟಗಳಲ್ಲಿ ಉನ್ನತ ಮಟ್ಟದ ಮುರ ಕಲ್ಲುಗಳು ಸಾಮಾನ್ಯವಾಗಿವೆ. ಕೆಂಪು ಮತ್ತು ಕಪ್ಪುಮಣ್ಣು ಪದ್ಮಪುರ್ ಮತ್ತು ಸಂಬಲ್‍ಪುರ್ ಜಿಲ್ಲೆಗಳಲ್ಲಿ ಝಾರ್ ಸುಗಡ ಪ್ರದೇಶದಲ್ಲಿ ಕಂಡುಬರುತ್ತದೆ. ಪೂರ್ವಘಟ್ಟಗಳ ಪಶ್ಚಿಮದ ಇಳಿಜಾರಿನಲ್ಲಿನ ಕೋರಾಪುಟ್ ಜಿಲ್ಲೆಯ ರಾಯಗಡ ಮತ್ತು ನವರಂಗಪುರ ಸಬ್‍ಡಿವಿಜನ್‍ಗಳಲ್ಲಿ ಬಾಕ್ಸೈಟ್ ಕಂಡುಬರುತ್ತದೆ. ಕಂದುಬಣ್ಣದ ಕಾಡು ಮರಳು ಫುಲ್‍ಬಾನಿ ಜಿಲ್ಲೆಯ ಬಲಿಗುಡ ಪ್ರದೇಶದಲ್ಲಿನ ವನಪ್ರದೇಶಗಳಲ್ಲಿದೆ. ಕಪ್ಪು ಮಣ್ಣು ಬೌಧ್–ಅತ್‍ಮಲ್ಲಿಕ್ ಪ್ರದೇಶದ ಮಹಾನದಿ ಕಣಿವೆಯಲ್ಲೂ ಬೋಲಾಂಗಿರ್ ಪ್ರದೇಶದಲ್ಲೂ ಖರಿಯಾರ್‌ನಲ್ಲಿ ತೆಲ್ ನದಿಯ ತಲೆಯೆಡೆಯ ಜಲಾನಯನ ಪ್ರದೇಶದಲ್ಲೂ ಉತ್ತರ ನವರಂಗಪುರದಲ್ಲೂ ಕಂಡುಬರುತ್ತದೆ.

**ಜಲೋತ್ಸಾರಣ ವಿನ್ಯಾಸ:** ಮಹಾನದಿ, ಬ್ರಾಹ್ಮಣಿ, ವೈತರಣಿ, ಸುವರ್ಣ ರೇಖಾ, ಬೂರಾಬಲಾಂಗ್, ವಂಶಧಾರಾ, ನಾಗವಲ್ಲಿ, ಸಲೇರು ಮತ್ತು ಸಾಬರಿ–ಇವು ಒರಿಸ್ಸದ ಮುಖ್ಯ ನದಿಗಳು. ಎಲ್ಲ ನದಿಗಳೂ ಬಂಗಾಳ ಕೊಲ್ಲಿ ಸೇರುತ್ತವೆ. ಮಹಾನದಿಯನ್ನುಳಿದು ಎಲ್ಲ ನದಿಗಳೂ ಮಾನ್‍ಸೂನ್ ಕಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಉಳಿದ ಕಾಲದಲ್ಲಿ ಬತ್ತಿಹೋಗುತ್ತವೆ. ಆಗ ನಾವೆಗಳ ಸಂಚಾರ ಅಸಾಧ್ಯ. ಮಾನ್‍ಸೂನ್ ಕಾಲದಲ್ಲಿ ನದಿಗಳಲ್ಲಿನ ನೀರು ಹೆಚ್ಚು ವೇಗವಾಗಿ ಹರಿಯುವುದರಿಂದ ಕಚ್ಚಾ ದೋಣಿಗಳು ಅವುಗಳಲ್ಲಿ ಹೋಗಲಾಗುವುದಿಲ್ಲ. ಆದ್ದರಿಂದ ಸಾರಿಗೆಯ ದೃಷ್ಟಿಯಿಂದ ಈ ನದಿಗಳು ಅಷ್ಟು ಉಪಯುಕ್ತವಲ್ಲ. ಮಹಾನದಿಯಲ್ಲಿ ಮಾತ್ರ ಸಂಬಲ್‍ಪುರದವರೆಗೆ ನಾವೆಯ ಸಂಚಾರ ಸಾಧ್ಯ.



ಮಹಾನದಿಗೆ ಅಡ್ಡಲಾಗಿರುವ ಹಿರಾಕುಡ್ ಕಟ್ಟೆ

**ಭೂಬಳಕೆ:** ಒರಿಸ್ಸ ಪ್ರಧಾನವಾಗಿ ಏಕ ಬೆಳೆಯ ಪ್ರದೇಶ. ಬತ್ತ ಮುಖ್ಯ ಆಹಾರ ಬೆಳೆ. ಬತ್ತದ ಬಯಲುಗಳು ಮುಖ್ಯವಾಗಿ ನದೀಕಣಿವೆಗಳು ಮತ್ತು ತೀರದ ಮೈದಾನಗಳಲ್ಲಿ–ಅಲ್ಲಿ ಅನುಕೂಲ ಪರಿಸ್ಥಿತಿಗಳು ಇರುವುದರಿಂದ–ಹರಡಿವೆ. 1961–62ರಲ್ಲಿ ಆಹಾರ ಧಾನ್ಯ ಬೆಳೆಯುತ್ತಿದ್ದ 1.048 ಕೋಟಿ ಎಕರೆಗಳ ಪೈಕಿ ಸು. 1.007 ಕೋಟಿ ಎಕರೆಗಳಲ್ಲಿ ಬತ್ತದ ಬೆಳೆ ಇತ್ತು. ಬತ್ತಕ್ಕೆ ಎರಡನೆಯದಾಗಿರುವ ಮುಖ್ಯ ಆಹಾರ ಬೆಳೆ ರಾಗಿ (1.8 ಲಕ್ಷ ಎಕರೆ). ದ್ವಿದಳ ಧಾನ್ಯಗಳಲ್ಲಿ ತೊಗರಿ, ಕಡಲೆ ಮುಖ್ಯ. ಎಳ್ಳು ಬೆಳೆಯುವ ನೆಲದ ವಿಸ್ತಾರ 2.3 ಲಕ್ಷ ಎಕರೆ. ಇವನ್ನು ನೀರಾವರಿ ಪ್ರದೇಶಗಳಲ್ಲೂ ನದೀಕಣಿವೆಗಳಲ್ಲೂ ಬೆಳೆಸುತ್ತಾರೆ. ನಾರಿನ ಬೆಳೆಗಳಲ್ಲಿ ಸಣಬು ಸು. 1.1 ಲಕ್ಷ ಎಕರೆಗಳನ್ನು ಆವರಿಸಿಕೊಂಡಿದೆ. ಇದು ಮುಖ್ಯವಾಗಿ ಮಹಾನದಿ ಮುಖಜಭೂಮಿ ಮತ್ತು ಬಾಲಸೂರ್ ತೀರದ ಮೈದಾನಗಳಿಗೆ ಸೀಮಿತವಾಗಿದೆ. ಮುಖಜಭೂಮಿಯ ತರಿ ಪ್ರದೇಶದಲ್ಲೂ ಹಿರಾಕುಡ್ ಜಲವಸತಿ ಪ್ರದೇಶದಲ್ಲೂ (6.6 ಲಕ್ಷ ಎಕರೆ) ಕಬ್ಬನ್ನು ಬೆಳೆಸುತ್ತಾರೆ. ಪ್ರತಿ ವರ್ಷವೂ ಒರಿಸ್ಸ ಸು. 37ಲಕ್ಷ ಮೆಟ್ರಿಕ್ ಟನ್ ಅಕ್ಕಿ ಬೆಳೆಯುತ್ತದೆ. ಈ ವಿಚಾರದಲ್ಲಿ ಇದು ಸ್ವಯಂಪೂರ್ಣ ರಾಜ್ಯ. ಒಮ್ಮೊಮ್ಮೆ ಹೆಚ್ಚುವರಿ ರಾಜ್ಯವೂ ಹೌದು. ಆದರೆ ಬತ್ತದ ಬೆಳೆ ಪ್ರವಾಹವನ್ನೇ ಅವಲಂಬಿಸಿರುವುದರಿಂದ ಅನಾವೃಷ್ಟಿಯ ಕಾಲದಲ್ಲಿ ಅಥವಾ ಅತಿ ಪ್ರವಾಹದಿಂದ ಅಲ್ಲಿ ಅಕ್ಕಿಯ ಕೊರತೆ ಏರ್ಪಡುವುದೂ ಉಂಟು.

ಸಂಸ್ಥಾನದ ಅರಣ್ಯ ಸಂಪನ್ಮೂಲಗಳು ಅಗತ್ಯಕ್ಕಿಂತ ಹೆಚ್ಚಾಗಿವೆ. ಆದರೆ ಅವುಗಳ ನ್ಯೂನ ಹಂಚಿಕೆ ಒಂದು ದೊಡ್ಡ ಸಮಸ್ಯೆ. ಅಸಮರ್ಪಕ ರಸ್ತೆ ವ್ಯವಸ್ಥೆ, ವಿಪರೀತ ಏರುತಗ್ಗುಗಳಿಗೆ ಒಳಗಾಗುವ ಪ್ರವಾಹ, ಸರದಿಯ ಬೆಳೆಯ ಕೃಷಿಪದ್ಧತಿ ಅನುಸರಿಸುವ ಗಿರಿಜನ ಸಮೂಹ–ಈ ನಾನಾ ಕಾರಣಗಳಿಂದಾಗಿ ಅರಣ್ಯಪದಾರ್ಥಗಳ ಸಮರ್ಪಕ ಬಳಕೆ ಸಾಧ್ಯವಾಗಿಲ್ಲ. 1960–61ರಲ್ಲಿದ್ದ 66,800 ಚ.ಕಿಮೀ. ಕಾಡುಗಳಲ್ಲಿ 22,400 ಚ.ಕಿಮೀ. ಕಾದಿರಿಸಿದ ಕಾಡು; 16,800 ಚ.ಕಿಮೀ ರಕ್ಷಿತ ಅರಣ್ಯ. ಒರಿಸ್ಸದ ಕಾಡುಗಳನ್ನು ಉತ್ತರೋಷ್ಣವಲಯದ ಅರ್ಧ ನಿತ್ಯಹಸುರು ಕಾಡು ಮತ್ತು ಉತ್ತರೋಷ್ಣ ವಲಯದ ತೇವಪೂರಿತ ವಾಯುಗುಣದ ಎಲೆ ಉದುರುವ ಮರಗಳ ಕಾಡು (ಸಾಲ, ಬಿದಿರು ಮುಂತಾದವು) ಎಂದು ವಿಂಗಡಿಸಬಹುದು. ಮಿಶ್ರಿತ ಅರಣ್ಯಗಳೂ ಅಲ್ಲುಂಟು. ಉತ್ತರೋಷ್ಣವಲಯದ ಒಣ ವಾಯುಗುಣದ ಎಲೆ ಉದುರುವ ಕಾಡೂ ಉಷ್ಣವಲಯದ ಹುಲ್ಲುಗಾವಲೂ ಭಾರತದ ಕಾಡುಗಳೂ ಇವೆ. ಉತ್ತರ ಒರಿಸ್ಸದಲ್ಲಿ ಉತ್ತರ ಉಷ್ಣವಲಯದ ಅರ್ಧ ನಿತ್ಯಹಸುರು ಮತ್ತು ಸಾಲುಮರಗಳ ಕಾಡುಗಳೂ ಮಹಾನದಿ ಮತ್ತು ಬ್ರಾಹ್ಮಣಿ ನದಿಗಳ ನಡುನೆಲ ಮತ್ತು ಋಷಿಕುಲ್ಯದ ಮೇಲ್ಭಾಗದ ಪ್ರದೇಶದಲ್ಲಿ ಬಿದಿರು ಕಾಡುಗಳೂ ಇವೆ. ಉತ್ತರೋಷ್ಣವಲಯದ ಒಣ ವಾಯುಗುಣದ ಎಲೆ ಉದುರುವ ಮರಗಳು ಪಶ್ಚಿಮ ಒರಿಸ್ಸದ ಬೊಲಾಂಗಿರ್ ಮತ್ತು ಸಂಬಲ್‍ಪುರ್ ಜಿಲ್ಲೆಗಳಲ್ಲಿವೆ. ಭರತದ ಕಾಡುಗಳು ಮಹಾನದಿ ಮುಖಜಭೂಮಿ ಮತ್ತು ಚಿಲ್ಕಾ ಸರೋವರದ ದ್ವೀಪಗಳಿಗೆ ಸೀಮಿತವಾಗಿವೆ. ಅರಣ್ಯದ ಉತ್ಪನ್ನಗಳ ಒಟ್ಟು ವಾರ್ಷಿಕ ಮೌಲ್ಯ 286 ಲಕ್ಷ ರೂ. ಇದರಲ್ಲಿ ಮರದ ದಿಮ್ಮಿಗಳ ಮೌಲ್ಯ 175 ಲಕ್ಷ ರೂ. ಬಿದಿರು, ಸೌದೆ ಮತ್ತು ಕಾಂಡು ಎಲೆಗಳು ಇತರ ಮುಖ್ಯ ವಸ್ತುಗಳು.

ಮರಗೆಲಸ, ಮರ ಕೊಯ್ತ, ಬೀಡಿ, ಕಾಗದ, ಅರಗು, ಚರ್ಮ ಹದಗಾರಿಕೆ, ಕತ್ತಾಳೆ ನಾರು ಮುಂತಾದ ಅರಣ್ಯಮೂಲದ ಕೈಗಾರಿಕೆಗಳಿವೆ.

**ನೀರಾವರಿ:** 1960–61ರಲ್ಲಿದ್ದ ಒಟ್ಟು ಬೇಸಾಯದ ಭೂಮಿ 117.1 ಲಕ್ಷ ಎಕರೆಗಳ ಪೈಕಿ 25.7 ಲಕ್ಷ ಎಕರೆಗಳಲ್ಲಿ (ಒಟ್ಟು ಬೇಸಾಯದ ನೆಲದ ಶೇ. 21.95). ನೀರಾವರಿ ಅನುಕೂಲವಿತ್ತು. ಹಿರಾಕುಡ್ ಯೋಜನೆ (ವಾರ್ಷಿಕ ನೀರಾವರಿ ಸಾಮರ್ಥ್ಯ 2.2 ಲಕ್ಷ ಎಕರೆ), ಋಷಿಕುಲ್ಯ ಕಾಲುವೆ ಅಚ್ಚುಕಟ್ಟು (1.40 ಲಕ್ಷ ಎಕರೆ), ಸಾಲಂದಿ ಯೋಜನೆ (0.3 ಲಕ್ಷ ಎಕರೆ) ಇವು ರಾಜ್ಯದ ಮುಖ್ಯ ನೀರಾವರಿ ಯೋಜನೆಗಳು.

**ಸಾರಿಗೆ ವ್ಯವಸ್ಥೆ:** ಒರಿಸ್ಸದಲ್ಲಿ 31,300 ಕಿಮೀ ರಸ್ತೆಗಳಿವೆ. ಇದರಲ್ಲಿ ಕೇವಲ 8,200 ಕಿಮೀ ರಸ್ತೆಗಳು 1,55,800 ಚ.ಕಿಮೀ. ಪ್ರದೇಶದಲ್ಲಿದೆ. ಇವು ಏನೇನೂ ಸಾಲವು. ಕಚ್ಚಾ ರಸ್ತೆಗಳು ಮಳೆಗಾಲದಲ್ಲಿ ಗಾಡಿಗಳ ಸಂಚಾರಕ್ಕೆ ಪ್ರಯೋಜನಕ್ಕೆ ಬರುವುದಿಲ್ಲ. ಇವಲ್ಲದೆ 1,400 ಕಿಮೀನಷ್ಟು ರಾಷ್ಟ್ರೀಯ ಹೆದ್ದಾರಿ ಇದೆ. ಇದರಲ್ಲಿ 1,200 ಕಿಮೀ ಜಲ್ಲಿ ರಸ್ತೆ. ಒರಿಸ್ಸದ ರಸ್ತೆಗಳ ಮುಖ್ಯ ಸಮಸ್ಯೆ ಎಂದರೆ ಕರಾವಳಿಯ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗಳ ಅಧಿಕ ವೆಚ್ಚ. ವಾರ್ಷಿಕ ನೆರೆಹಾವಳಿಯೇ ಇದಕ್ಕೆ ಮುಖ್ಯ ಕಾರಣ. ಅನೇಕ ನದಿ ಹಾಗೂ ಕಾಲುವೆಗಳಿಗೆ ಸೇತುವೆಗಳನ್ನು ನಿರ್ಮಿಸಬೇಕಾಗಿದೆ. ಪರ್ವತ ಹಾಗೂ ಬೆಟ್ಟಪ್ರದೇಶಗಳಲ್ಲೂ ರಸ್ತೆಗಳ ಅಭಿವೃದ್ಧಿಯಾಗಿಲ್ಲ. ಒರಿಸ್ಸದ ಕರಾವಳಿಯಲ್ಲಿರುವ ಹೌರಾ–ಮದ್ರಾಸ್ ರೈಲುಮಾರ್ಗ ಮುಖ್ಯವಾದದ್ದು.

ವರ್ಷದ ಹೆಚ್ಚು ದಿನಗಳಲ್ಲಿ ನದಿಗಳಲ್ಲಿ ನಾವೆಯ ಸಂಚಾರ ಅಸಾಧ್ಯ. ತೀರದ ಬಳಿ ಕಡಲು ಆಳವಾಗಿಲ್ಲದೆ, ಮೇಲೆತ್ತಲ್ಪಟ್ಟದ್ದಾಗಿರುವುದರಿಂದ ಸ್ವಾಭಾವಿಕ ಬಂದರಿಗೆ ವಿಶಾಲ ಸ್ಥಳವಾವುದೂ ಇಲ್ಲ. ಮಹಾನದಿಯ ಅಳಿವೆಯಲ್ಲಿನ ಪರದೀಪ್ ಬಂದರನ್ನು ಸುಕಂದ ಗಣಿಗಳಿಂದ ಜಪಾನಿಗೆ ಕಬ್ಬಿಣದ ಅದುರನ್ನು ರವಾನಿಸಲು ಅನುಕೂಲವಾಗುವಂತೆ ಒಂದು ಮುಖ್ಯ ಬಂದರನ್ನಾಗಿ ಅಭಿವೃದ್ಧಿಗೊಳಿಸಲಾಗಿದೆ. ಮಹಾನದೀ ಮುಖಜಭೂಮಿಯ ಅಗ್ರದಲ್ಲಿರುವ ಕಟಕ್ ಬಳಿಯ ಜೋಬ್ರಾ ಅಣೆಕಟ್ಟೆಯ ಮೂಲದಿಂದ ಹೊರಡುವ ಕೆಲವು ಕಾಲುವೆಗಳಲ್ಲಿ ನಾವೆ ಸಂಚಾರವಿದೆ. ಚಾಂದ್‍ಬಾಲಿ ಮತ್ತು ಗೋಪಾಲ್‍ಪುರ ಇವುಗಳ ಮೇಲಣ ಸಣ್ಣ ಬಂದರುಗಳು. ಸಮುದ್ರದಲ್ಲಿ ಪ್ರಯಾಣ ಮಾಡುವ ಹಡುಗುಗಳು ತೀರಕ್ಕೆ ಬರುವುದಿಲ್ಲ. ಭರ್ತಿ ಮತ್ತು ಖಾಲಿಮಾಡುವ ಕಾರ್ಯ ಚಟುವಟಿಕೆಗಳನ್ನು ಸಣ್ಣ ದೋಣಿಗಳಿಂದ ಕೊಲ್ಲಿಯ ಮಧ್ಯದಲ್ಲಿ ನಡೆಸಲಾಗುತ್ತದೆ.

**ಜನಸಂಖ್ಯೆ:** 1901ರಲ್ಲಿ ಒರಿಸ್ಸದ ಜನಸಂಖ್ಯೆ 62 ಲಕ್ಷವಿತ್ತು. 1961ರಲ್ಲಿ ಇದು 1.75ಕ್ಕೆ ಏರಿತು. ಆದರೆ ಇದು ರಾಜ್ಯದಾದ್ಯಂತ ಏಕರೀತಿಯಾಗಿ ಏರಿಲ್ಲ. ಇತ್ತೀಚಿನ ದಶಕಗಳಲ್ಲಿ ಒಳನಾಡಿನ ಪ್ರದೇಶವಾದ ಪಶ್ಚಿಮ ಒರಿಸ್ಸದಲ್ಲಿನ ಸಂಪನ್ಮೂಲಗಳು ವಿವಿಧ ರೀತಿಗಳಲ್ಲಿ ಉಪಯೋಗಿಸಲ್ಪಟ್ಟಿರುವುದರಿಂದ ಜನಸಂಖ್ಯೆ ಅತ್ಯಂತ ಹೆಚ್ಚಳವಾಗಿ ಬೆಳೆದಿದೆ. ಕೋರಾಪುಟ್ ಮತ್ತು ಕಾಲಾಹಂಡಿ ಜಿಲ್ಲೆಗಳ ದಂಡಕಾರಣ್ಯಪ್ರದೇಶ ಮತ್ತು ವೈತರಣಿಯ ತಲೆಭಾಗದಲ್ಲಿರುವ ಕಿಯೋಂಝಾರ್ ಮತ್ತು ಪನ್‌ಪೋಷ್ ಪ್ರದೇಶಗಳಲ್ಲೂ ಶೇ. 100 ರಷ್ಟು ಜನಸಂಖ್ಯೆಯ ಹೆಚ್ಚಳವನ್ನು ಕಾಣಬಹುದು. ಬಾರೀಪದಾ ಮತ್ತು ಬೊಲಾಂಗಿರ್‌ಗಳ ಎತ್ತರದ ಪ್ರದೇಶಗಳಲ್ಲೂ ಸಾಕಷ್ಟು ಹೆಚ್ಚಾಗಿದೆ. ಮತ್ತೊಂದು ದೃಷ್ಟಿಯಿಂದ ನೋಡಿದರೆ ಅನೇಕ ವರ್ಷಗಳಿಂದ ಅಭಿವೃದ್ಧಿಯಾಗುತ್ತ ಬಂದಿರುವ ತೀರ ಪ್ರದೇಶಗಳ ಜನಸಂಖ್ಯೆ ಇಳಿದಿದೆ. ಬಾಲಾಸೂರ್, ಭದ್ರಕ್, ಕಟಕ್–ಕೇಂದ್ರಾಪಾರ, ಭುವನೇಶ್ವರ ಮತ್ತು ಬೆರ್‌ಹಾಂಪರ್ ತೀರಪ್ರದೇಶಗಳು ಇಂಥವು. ಅತ್ಯಂತ ಹೆಚ್ಚಿನ ಜನಸಾಂದ್ರತೆ ಇರುವುದು ಮಹಾನದಿಯ ಮುಖಜಭೂಮಿಯಲ್ಲಿ. ಇಲ್ಲಿನ ಕೆಲವು ಕಡೆಗಳಲ್ಲಿ ಚ.ಕಿಮೀಗೆ 1,000 ಜನರಿದ್ದಾರೆ.

ಹೆಚ್ಚಿನ ಜನಕ್ಕೆ ವ್ಯವಸಾಯವೇ ಆಧಾರ. ಇಂಥವರು ಒಟ್ಟು ಜನಸಂಖ್ಯೆಯ ಶೇ. 79.3 ಇದ್ದಾರೆ. 1881ರಲ್ಲಿ ಶೇ. 61.6 ಮಂದಿ ಬೇಸಾಯವನ್ನವಲಂಬಿಸಿದ್ದರು. 1961ರಲ್ಲಿ ಇವರ ಪ್ರಮಾಣ ಶೇ. 79.3ಕ್ಕೆ ಏರಿತ್ತು.

ಒರಿಸ್ಸ ಸರ್ಕಾರದ ಆಡಳಿತ ಕಚೇರಿ, ಭುವನೇಶ್ವರ

**ಕೈಗಾರಿಕೆಗಳು ಮತ್ತು ಖನಿಜಗಳು:** ಎರಡನೆಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಮಾತ್ರವೇ ಒರಿಸ್ಸದ ಕೈಗಾರಿಕಾ ಯುಗದ ಆವಿರ್ಭಾವವಾಯಿತು. ಜವಳಿ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು, ಕಾಗದ ಮತ್ತು ಕಾಗದದ ರಟ್ಟಿನ ಕಾರ್ಖಾನೆಗಳು ಮತ್ತು ಸತುಲೇಪಿತ ಕೊಳವೆ (ಗ್ಯಾಲ್ವನೈಸ್ಡ್ ಪೈಪ್) ಕಾರ್ಖಾನೆಗಳು ಸ್ಥಾಪಿತವಾದುವು. ರೂರ್ಕೆಲದಲ್ಲಿ ಉಕ್ಕಿನ ಕಾರ್ಖಾನೆ, ಸುಣ್ಣಕಲ್ಲು, ಅಲ್ಯೂಮಿನಿಯಂ ಮತ್ತು ವಿದ್ಯುತ್ ರಾಸಾಯನಿಕ ಕಾರ್ಖಾನೆಗಳಿವೆ. ಹಿರಾಕುಡ್ ಮತ್ತು ಮುಚಕುಂಡ್ ಯೋಜನೆಗಳಿಂದ ಈ ಕೈಗಾರಿಕೆಗಳಿಗೆ ವಿದ್ಯುತ್ತನ್ನು ಒದಗಿಸಲಾಗುತ್ತದೆ. ತಾಲ್‌ಚೆರ್‌ನಲ್ಲಿ ಕೆಳಮಟ್ಟದ ಕಲ್ಲಿದ್ದಲನ್ನು ಉಪಯೋಗಿಸಿಕೊಂಡು, ಬೃಹತ್ ಪ್ರಮಾಣದ ಉಷ್ಣ–ವಿದ್ಯುತ್ ಶಕ್ತಿಯನ್ನು ತಯಾರಿಸಲು ನಿಯೋಜಿಸಲಾಗಿದೆ. ಶೇ. 60ಕ್ಕಿಂತ ಹೆಚ್ಚು ಪ್ರಮಾಣದ ಲೋಹ ಹೊಂದಿರುವ ಉತ್ತಮ ಮಟ್ಟದ ಕಬ್ಬಿಣದ ಅದಿರನ್ನು ಉತ್ತರ ಒರಿಸ್ಸ ಹೆಚ್ಚಿನ ಪ್ರಮಾಣದಲ್ಲಿ ಜಮ್‌ಷೆಡ್‌ಪುರ, ದುರ್ಗಾಪುರ ಮತ್ತು ರೂರ್ಕೆಲ ಉಕ್ಕಿನ ಕಾರ್ಖಾನೆಗಳಿಗೆ ಒದಗಿಸುತ್ತದೆ. ಸುಂದರ್‌ಘರ್ ಪ್ರದೇಶದಲ್ಲಿ ಸುಣ್ಣಕಲ್ಲು ಹೇರಳವಾಗಿ ದೊರೆಯುತ್ತದೆ. ಇದನ್ನು ಉಕ್ಕಿನ ಕಾರ್ಖಾನೆಗಳಲ್ಲಿ ಕಬ್ಬಿಣ ಕರಗಿಸುವ ಮೂಸೆಗಳಲ್ಲಿ ಸ್ರಾವಕವಸ್ತುವನ್ನಾಗಿ (ಫ್ಲಕ್ಸ್) ಉಪಯೋಗಿಸುತ್ತಾರೆ. ಪಶ್ಚಿಮ ಒರಿಸ್ಸದಲ್ಲಿ ಬಾಕ್ಸೈಟ್ ಬೇಕಾದಷ್ಟು ದೊರೆಯುತ್ತದೆ. ಆದ್ದರಿಂದ ಹಿರಾಕುಡ್‌ನಲ್ಲಿ ಅಲ್ಯೂಮಿನಿಯಂ ಕಾರ್ಖಾನೆಯೊಂದನ್ನು ಪ್ರಾರಂಭಿಸಲಾಗಿದೆ. ಕಡಿಮೆ ಬೆಲೆಯಲ್ಲಿ ವಿದ್ಯುತ್ ದೊರೆಯುವುದರಿಂದ ಚೌದ್‌ವಾರ್ ಮತ್ತು ಬ್ರಜ್ ರಾಜ್‌ನಗರಗಳಲ್ಲಿ ಕಾಗದದ ಕಾರ್ಖಾನೆಗಳನ್ನು ಸ್ಥಾಪಿಸಲು ಸಾಧ್ಯವಾಯಿತು. ಅಂತೆಯೇ ಕೋರಾಪುಟ್‌ನ ದಂಡ ಕಾರಣ್ಯ ಪ್ರದೇಶಗಳಲ್ಲಿ ಕಾಗದದ ತಯಾರಿಕೆಗೆ ಅನುಕೂಲಗಳುಂಟು. ಕೈಮಗ್ಗ, ನಕ್ಕಿ, ಕೊಂಬಿನ ಸಾಮಾನು, ಒಡವೆ–ಮುಂತಾದ ಗೃಹಕೈಗಾರಿಕೆಗಳು ವ್ಯಾಪಕವಾಗಿವೆ. ವಿದೇಶೀ ವಿನಿಮಯವನ್ನು ಸಂಪಾದಿಸಲು ಕಬ್ಬಿಣದ ಅದುರನ್ನು ಪರದೀಪ್ ಮತ್ತು ವಿಶಾಖಪಟ್ಟಣಗಳ ಮುಖಾಂತರ ಜಪಾನಿಗೆ ರಫ್ತು ಮಾಡಲಾಗುತ್ತಿದೆ. ಒರಿಸ್ಸದ ಸ್ವಾಭಾವಿಕ ಸಂಪನ್ಮೂಲಗಳೊಂದಿಗೆ ಹೋಲಿಸಿದರೆ ಕೈಗಾರಿಕೆಗಳ ಬೆಳವಣಿಗೆಯ ವೇಗ ಮತ್ತು ತಲಾ ಆದಾಯ ತುಂಬಾ ಸೀಮಿತ. ಇನ್ನೂ ಹೆಚ್ಚಿನ ಮಟ್ಟದ ಕೈಗಾರಿಕೆಯ ಕಾರ್ಯಚಟುವಟಿಕೆಗಳಿಗಾಗಿ ಸಂಚಾರ ಮಾರ್ಗಗಳ ಅಭಿವೃದ್ಧಿ ಅತ್ಯಂತ ಆವಶ್ಯಕ. ಈ ದೃಷ್ಟಿಯಿಂದ ಒರಿಸ್ಸಕ್ಕೆ ಉತ್ತಮ ಭವಿಷ್ಯವಿದೆ.

**ಆಡಳಿತ:** ಒರಿಸ್ಸ ರಾಜ್ಯವನ್ನು 30 ಜಿಲ್ಲೆಗಳಾಗಿ ವಿಂಗಡಿಸಿದೆ. ಅವುಗಳ ವಿವರ ಈ ರೀತಿ ಇದೆ:

| ಕ್ರಸಂ. | ಜಿಲ್ಲೆ | ಆಡಳಿತ ಕೇಂದ್ರ | ಜನಸಂಖ್ಯೆ |
|---|---|---|---|
| 1 | ಅಂಗುಲ್ | ಅಂಗುಲ್ | 1,271,703 |
| 2 | ಬಲಂಗಿರ್ | ಬಲಂಗಿರ್ | 1,648,574 |
| 3 | ಬಾಲಾಸೊರ್ | ಬಾಲಾಸೊರ್ | 2,317,419 |
| 4 | ಬಾರ್ಗರ್ | ಬಾರ್ಗರ್ | 1,478,833 |
| 5 | ಭದ್ರಕ್ | ಭದ್ರಕ್ | 1,506,522 |
| 6 | ಬೌದ್ | ಬೌದ್ | 439,917 |
| 7 | ಕಟಕ್ | ಕಟಕ್ | 2,618,708 |
| 8 | ದೇಬ್‌ಗರ್ | ದೇಬ್‌ಗರ್ | 312,164 |
| 9 | ದೇನ್‌ಕನಾಲ್ | ದೇನ್‌ಕಲಾಲ್ | 1,192,948 |
| 10 | ಗಜಪತಿ | ಪರಲೇಖ್‌ಮುಂಡಿ | 575,880 |
| 11 | ಗಂಜಾಮ್ | ಛತ್ರಪುರ್ | 3,520,151 |
| 12 | ಜಗತ್‌ಸಿಂಗ್‌ಪುರ್ | ಜಗತ್‌ಸಿಂಗ್‌ಪುರ್ | 1,136,604 |
| 13 | ಜೈಪುರ್ | ಜೈಪುರ್ | 1,826,275 |
| 14 | ಚಾರ್‌ಸುಗುದ | ಚಾರ್‌ಸುಗುದ | 579,499 |
| 15 | ಕಾಲಹಂಡಿ | ಭವಾನಿಪಟ್ನ | 1,573,054 |
| 16 | ಕಂದಮಲ್ | ಪುಲ್ಬಾನಿ | 731,952 |
| 17 | ಕೇಂದ್ರಪಾರ | ಕೇಂದ್ರಪಾರ | 1,439,891 |
| 18 | ಕೇಂದ್ರಝಾರ್ | ಕೇಂದುಝಾರ್ | 1,802,777 |
| 19 | ಕೋರ್ಧ | ಕೋರ್ಧ | 2,246,341 |
| 20 | ಕೊರಾಪುಟ್ | ಕೊರಾಪುಟ್ | 1,376,93 |
| 21 | ಮುಲ್ಕಾನ್‌ಗಿರಿ | ಮುಲ್ಕಾನ್‌ಗಿರಿ | 4612,727 |
| 22 | ಯೂರ್‌ಭಂಜ್ | ಬಾರಿಪದ | 2,513,895 |
| 23 | ನಬರಂಗ್‌ಪುರ್ | ನಬರಂಗ್‌ಪುರ್ | 1,218,762 |
| 24 | ನಯಾಗರ್ | ನಯಾಗರ್ | 962,215 |
| 25 | ನೌಪದ | ನೌಪದ | 606,490 |
| 26 | ಪುರಿ | ಪುರಿ | 1,697,983 |
| 27 | ರಾಯ್‌ಗಡ | ರಾಯ್‌ಗಡ | 961,959 |
| 28 | ಸಂಬಲ್‌ಪುರ್ | ಸಂಬಲ್‌ಪುರ್ | 1,044,410 |
| 29 | ಸುಬರ್ನ್‌ಪುರ್ | ಸೋನೆಪುರ್ | 652,107 |
| 30 | ಸುಂದರ್‌ಗರ್ | ಸುಂದರ್‌ಗರ್ | 2,080,664 |

ರಾಜ್ಯದಲ್ಲಿ ಏಕಸದನವಿರುವ ವಿಧಾನಮಂಡಲವಿದೆ. ಪರದೀಪ್ ಮುಖ್ಯ ಬಂದರು; ಭಾರತದ ಏಳು ದೊಡ್ಡ ಬಂದರುಗಳ ಪೈಕಿ ಒಂದು. ಭುವನೇಶ್ವರ್ ರಾಜಧಾನಿ (ಜನಸಂಖ್ಯೆ 38,211). ಇತರ ನಗರಗಳು ಮತ್ತು ಪಟ್ಟಣಗಳು: ಕಟಕ್ (ನೋಡಿ) (1,46,590), ರೂರ್ಕೆಲ (90,287), ಬೆರ್ಹಾಂಪುರ್ (76,931), ಪುರಿ (60,815), ಸಂಬಲ್‌ಪುರ್ (38,915), ಬಲಸೂರ್ (33,931), ಪರ್ಲಾಕಿಮಿಡಿ (22,708) ಮತ್ತು ಜಯ್‌ಪುರ್ (25,291).

1961 ಜನಗಣತಿಯ ಪ್ರಕಾರ ರಾಜ್ಯದ ಗಂಡಸರ ಪೈಕಿ ಶೇ. 35 ಮತ್ತು ಹೆಂಗಸರಲ್ಲಿ ಶೇ. 9 ಮಂದಿ ಅಕ್ಷರಸ್ಥರು. ರಾಜ್ಯದಲ್ಲಿದ್ದ ಶಿಕ್ಷಣ ಸಂಸ್ಥೆಗಳ ಸಂಖ್ಯೆ 22,597. ಇವುಗಳಲ್ಲಿ 42 ಕಾಲೇಜುಗಳು, 20,000 ಪ್ರಾಥಮಿಕ ಮತ್ತು ದ್ವಿತೀಯ (ಸೆಕೆಂಡರಿ) ಶಾಲೆಗಳು.

ಕಟಕ್ ಉತ್ಕಲವಿಶ್ವವಿದ್ಯಾಲಯದ ಕೇಂದ್ರ. ಪುರಿ ಒಂದು ಮುಖ್ಯ ಯಾತ್ರಾಸ್ಥಳ. ಇಲ್ಲಿ ಜಗನ್ನಾಥನ ದೇವಾಲಯವಿದೆ. ಬ್ರಿಟಿಷ್ ಆಡಳಿತದ ಪ್ರಾರಂಭ ಕಾಲದಲ್ಲಿ ಮಹಾನದೀ ಮುಖಜಭೂಮಿಯನ್ನೂ ಹೂಗ್ಲಿ ನದಿಯನ್ನೂ ಸೇರಿಸುವ ಕಾಲುವೆಯೊಂದನ್ನು ಕಡಲಿಗೆ ಸಮಾನಾಂತರವಾಗಿ ನಿರ್ಮಿಸಲಾಗಿತ್ತು. ಬಾಲಾಸರ್ ರೇವು ನಿರ್ಮಾಣವಾಗಿದ್ದು ಇದರ ದಡದ ಮೇಲೆ. ಭುವನೇಶ್ವರ್ ಮತ್ತು ಕಟಕ್‍ಗಳು ಮುಖ್ಯ ವಿಮಾನಕೇಂದ್ರಗಳು. ಭಾರತದ ಎಂಟು ದೊಡ್ಡ ಬಂದರುಗಳ ಪೈಕಿ ಪರದೀಪ್ ಒಂದು. (ಬಿ.ಎನ್.ಎಸ್.)

**ಒರಿಸ್ಸದ ಇತಿಹಾಸ:** ಒರಿಸ್ಸದ ಇತಿಹಾಸ ಪುರಾತನವಾದದ್ದು, ಪ್ರಾಚೀನ ಕಾಲದಲ್ಲಿ ಇದಕ್ಕೆ ಕಳಿಂಗ ಎಂಬ ಹೆಸರಿತ್ತು. ಗಂಗೆಯಿಂದ ಗೋದಾವರಿಯವರೆಗೆ ಪೂರ್ವಭಾರತದ ಕಡಲತಡಿಯ ನೆಲವೂ ಅದಕ್ಕೆ ಒಡಲಿನಂತಿರುವ ಪಶ್ಚಿಮದ ಪ್ರಸ್ಥಭೂಮಿಯೂ ಇದರಲ್ಲಿ ಸೇರಿದ್ದುವು. ಇಲ್ಲಿಯ ಪ್ರಾಚೀನ ನಿವಾಸಿಗಳು ಆದಿಕಾಲದ ಗಿರಿಜನರು. ಅನಂತರ ಇಲ್ಲಿಗೆ ದ್ರಾವಿಡರು ಬಂದು ನೆಲಸಿದರು. ವೇದ ಮತ್ತು ಬ್ರಾಹ್ಮಣಗಳು ಕಾಲದಲ್ಲಿ ಆರ್ಯರ ದಾಳಿ ಪ್ರಾರಂಭವಾಯಿತು. ಮಹಾಭಾರತ ಕಾಲಕ್ಕೆ ಕಳಿಂಗ, ಉತ್ಕಲ ಮತ್ತು ಓಡ್ರಗಳು ಶಕ್ತಿಯುತ ರಾಜ್ಯಗಳಾಗಿ ಆರ್ಯರ ರಾಜಕೀಯ ಸಾಮಾಜಿಕ ವ್ಯವಸ್ಥೆಗಳೊಂದಿಗೆ ಹೊಂದಿಕೊಂಡಿದ್ದುವು. ಮಹಾಭಾರತದಲ್ಲಿ ಕಳಿಂಗ, ಓಡ್ರ ಮತ್ತು ಉತ್ಕಲಗಳ ಬಗ್ಗೆ ಉಲ್ಲೇಖವಿದೆ. ಮಹಾಭಾರತದ ಕಾಲದಲ್ಲಿ ಶ್ರುತಯು ದೊರೆ ಕಳಿಂಗದ ಒಡೆಯನಾಗಿದ್ದ. ಈತ ಕೌರವರ ಪಕ್ಷ ಸೇರಿದ್ದನೆಂದು ಹೇಳಲಾಗಿದೆ. ಈತನ ಅನಂತರ ಮಹಾಪದ್ಮ ನಂದನವರೆಗೆ (ಪ್ರ.ಶ.ಪೂ.ಸು. 350) 32 ಅರಸರು ಕ್ರಮವಾಗಿ ಈ ನಾಡನ್ನಾಳಿದರು. ಮಹಾವೀರ ಮತ್ತು ಬುದ್ಧರ ಕಾಲಕ್ಕೆ ಕಳಿಂಗ, ಉತ್ಕಲ ಪ್ರದೇಶಗಳು ಭಾರತದ ಪೂರ್ವತೀರದುದ್ದಕ್ಕೂ ಪ್ರಸಿದ್ಧಿ ಪಡೆದಿದ್ದುದೇ ಅಲ್ಲದೆ ಮಾನ್ಯತೆಯನ್ನೂ ಪಡೆದಿದ್ದುವು.

ಒರಿಸ್ಸದ ರಾಜಕೀಯ ಇತಿಹಾಸ ಮಗಧದ ನಂದ ಚಕ್ರವರ್ತಿಗಳ ಆಳ್ವಿಕೆಯಿಂದ ಪ್ರಾರಂಭವಾಗುತ್ತದೆ. ಉದಯಗಿರಿಯ ಬಳಿ ದೊರೆತಿರುವ ಖಾರವೇಲ ಚಕ್ರವರ್ತಿಯ ಹಾಥಿಗುಂಫ ಶಿಲಾಶಾಸನದಲ್ಲಿ ಒಬ್ಬ ನಂದ ದೊರೆಯನ್ನು ಎರಡುಸಲ ಹೆಸರಿಸಲಾಗಿದೆ. ನಂದರನ್ನು ಸೋಲಿಸಿ ಚಂದ್ರಗುಪ್ತ ಮೌರ್ಯ ಸಿಂಹಾಸನವನ್ನು ಏರಿದಾಗ ಕಳಿಂಗ ಅವನ ಚಕ್ರಾಧಿಪತ್ಯದ ಒಂದು ಭಾಗವಾಗಿರಲಿಲ್ಲ. ಅಶೋಕನ ಕಳಿಂಗದ ದಾಳಿ ಪ್ರಾಚೀನ ಕಾಲದಲ್ಲಿನ ನೂತನ ಯುಗಾರಂಭದ ಘಟನೆಯಾಯಿತಲ್ಲದೆ, ಜಗತ್ತಿನ ಇತಿಹಾಸದಲ್ಲಿ ಅನೇಕ ಶತಮಾನಗಳವರೆಗೆ ಪರಿಣಾಮ ಬೀರಬಲ್ಲದಾಗಿತ್ತು. 13ನೆಯ ಶಿಲಾಸ್ತಂಭದ ಶಾಸನದಲ್ಲಿ ಸ್ವತಃ ಅಶೋಕನೇ ಹೀಗೆಂದು ವಿವರಿಸಿದ್ದಾನೆ. ಆ (ಕಳಿಂಗ) ದೇಶದಿಂದ 1½ ಲಕ್ಷ ಜನ ಕೊಲ್ಲಲ್ಪಟ್ಟರು ಮತ್ತು ಅದಕ್ಕಿಂತಲೂ ಹೆಚ್ಚು ಜನ ನಾಶವಾದರು. ಕಳಿಂಗವನ್ನು ಅಶೋಕ ಗೆದ್ದನಾದರೂ ಅಲ್ಲಿನ ಸಾವುನೋವುಗಳಿಂದ ಅವನ ಹೃದಯ ಪರಿವರ್ತನೆಗೊಂಡಿತು. ಇದರಿಂದ ವಿಶ್ವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಪಥವೇ ಬದಲಾಯಿಸಿತೆನ್ನಬಹುದು.

ಅನಂತರ ಮುಖ್ಯ ಘಟ್ಟವೆಂದರೆ ಪ್ರ.ಶ.ಪೂ. 2ನೆಯ ಶತಮಾನದ ಮೊದಲರ್ಧದಲ್ಲಿದ್ದ ಖಾರವೇಲನ ಆಡಳಿತ. ಈತ ಸುತ್ತುಮುತ್ತಣ ಪ್ರದೇಶಗಳನ್ನೆಲ್ಲ ಗೆದ್ದ. ತನ್ನ ಆಳ್ವಿಕೆಯ 13ನೆಯ ವರ್ಷದಲ್ಲಿ ರಾಜ್ಯಾಡಳಿತದಿಂದ ನಿವೃತ್ತಿಹೊಂದಿ ಭುವನೇಶ್ವರದ ಬಳಿಯ ಖಂಡಗಿರಿಗೆ ನಿಷ್ಕ್ರಮಿಸಿದ. ಆತ, ಜೈನಮತಸ್ಥ.

ಖಾರವೇಲನ ಅನಂತರ ಒರಿಸ್ಸದ ಇತಿಹಾಸ ಅನೇಕ ಶತಮಾನಗಳವರೆಗೆ ಅಂಧಕಾರಮಯವಾಗಿತ್ತು. ಹ್ಯುಯೆನ್‌ತ್ಸಾಂಗ್ ನೀಡಿರುವ ವಿವರಣೆಯಿಂದ ಶಿಲಾದಿತ್ಯನ ರಾಜಕೀಯ ಪ್ರಭುತ್ವ ಒರಿಸ್ಸದವರೆಗೂ ಹರಡಿತ್ತೆಂದು ತಿಳಿದುಬರುತ್ತದೆ. ಒರಿಸ್ಸದ ತೀರದಲ್ಲಿ ವ್ಯಾಪಾರದ ಕೋಠಿಗಳು ಬಲು ಪ್ರವರ್ಧಮಾನ ಸ್ಥಿತಿಯಲ್ಲಿದ್ದುವೆಂದು ಗ್ರೀಕ್ ಭೂಗೋಳಶಾಸ್ತ್ರಜ್ಞ ಟಾಲೆಮಿ (ಪ್ರ.ಶ.ಪೂ. 2ನೆಯ ಶತಮಾನ) ಬರೆದಿದ್ದಾನೆ. 8ನೆಯ ಶತಮಾನದಲ್ಲಿ ಒರಿಸ್ಸದ ಸಮುದ್ರಾಂತರ ವ್ಯಾಪಾರ ಚಟುವಟಿಕೆಗಳೂ ತುಟ್ಟತುದಿ ಮುಟ್ಟಿದ್ದುವು. ಆಗ ಮಲೇಷ್ಯದಲ್ಲಿ ಶೈಲೇಂದ್ರ ಚಕ್ರಾಧಿಪತ್ಯ ಸ್ಥಾಪಿತವಾಗಿತ್ತು. ಆಗಿನ ಆಳ್ವಿಕೆಯಲ್ಲಿ ವಿದೇಶೀಯರು ಮಲೇಷ್ಯವನ್ನು ಕಳಿಂಗವೆಂದೇ ಕರೆಯುತ್ತಿದ್ದರು. ಈ ಚಕ್ರಾಧಿಪತ್ಯದ ಎಲ್ಲೆಗಳು ಕಾಂಬೋಡಿಯ ಮತ್ತು ಅಸ್ಸಾಂಗಳಿಗೂ ವಿಸ್ತರಿಸಿದ್ದುವೆಂದು ಅರಬ್ಬೀ ಮೂಲಗಳು ತಿಳಿಸುತ್ತವೆ. ಶೈಲೇಂದ್ರ ಚಕ್ರಾಧಿಪತ್ಯದ ವೈಭವೋಪೇತ ಉಚ್ಛ್ರಾಯಸ್ಥಿತಿ ಪ್ರ.ಶ. 10ನೆಯ ಶತಮಾನದಲ್ಲೂ ಮುಂದುವರಿದಿತ್ತು. 8–10ನೆಯ ಶತಮಾನದವರೆಗೆ ಇದನ್ನು ಭೌಮಕಾರ ರಾಜವಂಶ ಆಳಿತು. ಅದರ ರಾಜಧಾನಿ ಇಂದಿನ ಜಾಜ್‍ಪುರ. ಇದರ ಅನಂತರ ಸೋಮ ಮತ್ತು ಕೇಸರಿ ವಂಶಗಳು ಆಳಿದುವು. ಭುವನೇಶ್ವರದಲ್ಲಿನ ಲಿಂಗರಾಜ ದೇವಾಲಯವನ್ನು ಕಟ್ಟಲು ಆರಂಭಿಸಿದವನು ಯಯಾತಿ ಕೇಸರಿ. ಅವನ ಮುಂದಿನ ದೊರೆಗಳು ಅದನ್ನು ಪೂರ್ಣಗೊಳಿಸಿದರು.

ಮೆಗಾಸ್ತನೀಸ್ ವಿವರಿಸಿರುವಂತೆ ಗಂಗಾ ನದೀತೀರದಲ್ಲಿದ್ದ ಗಂಗರು ಕ್ರಮೇಣ ಒರಿಸ್ಸದಲ್ಲಿ ನೆಲಸಿದರು. ಅನಂತವರ್ಮ ಚೋಳಗಂಗದೇವನಿಗೆ (1078–1191) ಗಂಗಾ ನದಿಯಿಂದ ಗೋದಾವರಿಯವರೆಗೆ ಆಳಿದ ಗೌರವ ಸಲ್ಲುತ್ತದೆ. ಪರ್ಲಾಕಿಮಿಡಿಯಲ್ಲಿನ ಕಳಿಂಗನಗರದಿಂದ ಕಟಕ್‍ಗೆ ತನ್ನ ರಾಜಧಾನಿಯನ್ನು ಈತ ಬದಲಾಯಿಸಿದ. ವೈಷ್ಣವ ಧರ್ಮಕ್ಕೆ ರಾಜಾಶ್ರಯ ದೊರಕಿತು. ವೈಷ್ಣವ ದೇವಾಲಯಗಳು ಮುಖಲಿಂಗಂ, ಶ್ರೀಕೂರ್ಮಂ, ಸಿಂಹಾಚಲಂ ಮತ್ತು ಪುರಿಗಳಲ್ಲಿ ನಿರ್ಮಿತವಾದುವು. ಪುರಿ ದೇವಾಲಯವನ್ನು ಪೂರ್ಣಗೊಳಿಸಿದವನು ಅನಂಗಭೀಮ–13ನೆಯ ಶತಮಾನದಲ್ಲಿ. ಗಂಗಸಾಮ್ರಾಜ್ಯ ಮಹಮ್ಮದೀಯರ ದಾಳಿಯನ್ನು ಎದುರಿಸಿ ಅವರನ್ನು ಸೋಲಿಸಿತು.

13ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಹಿಂದೂ ವಾಸ್ತುಶಿಲ್ಪ ಕ್ಷೀಣಸ್ಥಿತಿಗೆ ಬರುತ್ತಿದ್ದಾಗ ಒರಿಸ್ಸದ ವಾಸ್ತುಶಿಲ್ಪ ಕೋಣಾರ್ಕದಲ್ಲಿ ಅರಳುತ್ತಿತ್ತು. ಅಲ್ಲಿಯ ಸುಪ್ರಸಿದ್ಧ ಸೂರ್ಯದೇವಾಲಯ ಆಗ ನಿರ್ಮಾಣವಾಯಿತು. ಒಂದನೆಯ ನರಸಿಂಹದೇವ (1238–64) ಈ ದೇವಾಲಯವನ್ನು ನಿರ್ಮಿಸಿದ. ಗಂಗವಂಶದ ಆಡಳಿತ ಕೊನೆಗೊಂಡದ್ದು 1435ರಲ್ಲಿ. ಅನಂತರ ಆಡಳಿತಕ್ಕೆ ಬಂದ ಸೂರ್ಯವಂಶದ ಮೊಟ್ಟಮೊದಲ ದೊರೆಯಾದ ಗಜಪತಿ ಕಪಿಲೇಂದ್ರದೇವ (1435–66) ದಕ್ಷ ಉತ್ಸಾಹಿ. ಗಂಗರಸರ ಕೊನೆಗಾಲದಲ್ಲಿ ಹೋಗಿದ್ದ ಕೀರ್ತಿಯನ್ನು ಒರಿಸ್ಸಕ್ಕೆ ಮತ್ತೆ ಸಂಪಾದಿಸಿಕೊಟ್ಟ, ಪ್ರಬಲರಾದ ವಿರೋಧಿಗಳನ್ನು ಅಡಗಿಸಿದ. ಬಿದರೆಯ ಬಹಮನಿ ಸುಲ್ತಾನರೊಡನೆ ಯುದ್ಧ ಮಾಡಿ ಗೆದ್ದ. ಇವನ ರಾಜ್ಯ ಗಂಗೆಯಿಂದ ಕಾವೇರಿಯವರೆಗೆ ವಿಸ್ತರಿಸಿತು. ಗೋಪೀನಾಥಪುರದ ಶಿಲಾಶಾಸನದಂತೆ ಈತ ವಿಜಯನಗರಕ್ಕೆ ಸೇರಿದ್ದ ಉದಯಗಿರಿಯನ್ನೂ ಕಂಚಿಯನ್ನೂ ವಶಪಡಿಸಿಕೊಂಡ.

ಈತನ ತರುವಾಯ ಪಟ್ಟಕ್ಕೆ ಬಂದ ಪುರುಷೋತ್ತಮನ ಆಳ್ವಿಕೆಯಲ್ಲಿ (1467–97) ರಾಜ್ಯದಲ್ಲಿ ಒಡಕು ಹುಟ್ಟಿತು. ಗೋದಾವರಿಯ ದಕ್ಷಿಣದ ಭಾಗಗಳು ಕೈಬಿಟ್ಟುವು. ಕೃಷ್ಣಾನದಿಯ ದಕ್ಷಿಣಕ್ಕಿದ್ದ ಪ್ರದೇಶವನ್ನು ಸಾಳುವ ನರಸಿಂಹ ಗೆದ್ದುಕೊಂಡ. ಗೋದಾವರಿಯಿಂದ ಕೃಷ್ಣಾನದಿಯವರೆಗಿನ ಸೀಮೆ ಬಹಮನಿ ಸುಲ್ತಾನರ ವಶವಾಯಿತು. ಆದರೆ ಪುರುಷೋತ್ತಮ ತನ್ನ ಆಳ್ವಿಕೆಯ ಕಡೆಯ ಭಾಗದಲ್ಲಿ ಇವನ್ನು ಮತ್ತೆ ಗೆದ್ದು ರಾಜ್ಯವನ್ನು ಗುಂಟೂರಿನವರೆಗೂ ವಿಸ್ತರಿಸಿದ. ಆದರೂ ಆತನ ರಾಜ್ಯ ಕಪಿಲೇಂದ್ರನ ಕಾಲದಲ್ಲಿದ್ದಷ್ಟು ವಿಶಾಲವಾಗಿರಲಿಲ್ಲ.

ಪುರುಷೋತ್ತಮನ ಮಗನಾದ ಪ್ರತಾಪರುದ್ರ 1497 – 1540ರ ವರೆಗೆ ಆಳಿದ. ಈತ ಭಕ್ತ ಚೈತನ್ಯನ ಶಿಷ್ಯ. ವಿಜಯನಗರದ ಕೃಷ್ಣದೇವರಾಯನ ದಿಗ್ವಿಜಯಗಳಿಂದಲೂ ಗೋಲ್ಕೊಂಡ ಅರಸರ ಪ್ರಾಬಲ್ಯದಿಂದಲೂ ಒರಿಸ್ಸ ಮುಂದುವರಿಯಲು ಅಸಾಧ್ಯವಾಯಿತು.

ಕೃಷ್ಣದೇವರಾಯ ತನ್ನ ರಾಜ್ಯದ ಒಳಗಿನ ವಿರೋಧಿಗಳನ್ನಡಗಿಸಿ ಅಸಂಖ್ಯಾತ ಸೈನ್ಯವೊಂದನ್ನು ಸಜ್ಜುಗೊಳಿಸಿ ಪ್ರಬಲ ಶತ್ರುಗಳನ್ನಡಗಿಸಲು ಉತ್ತರದ ಕಡೆಹೊರಟ. ಕೃಷ್ಣಾನದಿಯ ದಂಡೆಯಲ್ಲಿ ಷಾಹಿ ಸುಲ್ತಾನರು ಸೋತು ಓಡಿಹೋದರು. ಆಗ ಕೃಷ್ಣದೇವರಾಯ ಕೃಷ್ಣಾನದಿಯನ್ನು ದಾಟಿ ಮುಸಲ್ಮಾನ್ ರಾಜ್ಯಕ್ಕೆ ನುಗ್ಗದೆ, ಅವುಗಳಿಗೆ ಸಹಾಯ ಮಾಡುತ್ತಿದ್ದ ಗಜಪತಿ ರಾಜನ ರಾಜ್ಯದ ಕಡೆಗೆ ಹೊರಟ. ಉದಯಗಿರಿ ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕೆ 1½ ವರ್ಷಗಳು ಬೇಕಾದುವು. ಅಭೇದ್ಯವೆಂದು ಹೆಸರುಪಡೆದ ಕೋಟೆಯನ್ನೇ ಅಲ್ಲದೆ ಇತರ ಕೋಟೆಗಳಿಗೂ ಆತ ಮುತ್ತಿಗೆ ಹಾಕಿದ. ಕೊಂಡವೀಡು ಮುತ್ತಿಗೆ ಮುಂದುವರಿಯುತ್ತಿದ್ದಾಗ ಪ್ರತಾಪರುದ್ರ ಗಜಪತಿ ದೊಡ್ಡ ಸೈನ್ಯದೊಂದಿಗೆ ಬಂದು ಕೃಷ್ಣದೇವರಾಯನ ಸೈನ್ಯವನ್ನೆದುರಿಸಿದ. ಆದರೆ ಪೂರ್ಣವಾಗಿ ಸೋತುಹೋದ. ಗಜಪತಿಗೆ ಸೇರಿದ್ದ ಕೋಟೆಗಳು ಕೃಷ್ಣದೇವರಾಯನ ವಶವಾದುವು. ಪ್ರತಾಪರುದ್ರನ ಮಗ ವೀರಭದ್ರನೂ ದಳಪತಿಗಳಿಗೂ ಅವರಿಗೆ ಸಹಾಯ ಮಾಡುತ್ತಿದ್ದ ಮುಸಲ್ಮಾನ್ ಸೈನಿಕರೂ ಸೆರೆ ಸಿಕ್ಕಿದರು. ಕೃಷ್ಣದೇವರಾಯ ಇವರೆಲ್ಲರನ್ನೂ ವಿಜಯನಗರಕ್ಕೆ ಕಳುಹಿಸಿ ಗಜಪತಿಗೆ ನೆರವು ಕೊಡುತ್ತಿದ್ದ ಬಿದರೆ ಸುಲ್ತಾನನನ್ನು ಸೋಲಿಸಿ ಪುನಃ ಒರಿಸ್ಸಕ್ಕೆ ಬಂದು, ವಿಶಾಖಪಟ್ಟಣಕ್ಕೆ ಹತ್ತಿರವಿದ್ದ ಪೋತನೂರು ಮತ್ತು ಸಿಂಹಾದ್ರಿಗಳನ್ನು ವಶಪಡಿಸಿಕೊಂಡ. ಪ್ರತಾಪರುದ್ರ ಯುದ್ಧ ಮಾಡಲಿಲ್ಲ. ಆತ ವಿಜಯನಗರದ ಮಿತ್ರನಾಗಿ ಉಳಿಯುವುದಾದರೆ ಅವನ ರಾಜ್ಯವನ್ನು ಹಿಂತಿರುಗಿ ಪಡೆಯಬಹುದೆಂದು ಕೃಷ್ಣದೇವರಾಯ ಹೇಳಿ ಕಳುಹಿಸಿದ. ಗಜಪತಿ ಮಿತ್ರನಾಗಿರಲು ಒಪ್ಪಿಕೊಂಡು ತನ್ನ ಮಗಳಾದ ಜಗನ್ಮೋಹಿನಿಯನ್ನು ಕೃಷ್ಣದೇವರಾಯನಿಗೆ ಕೊಟ್ಟು ವಿವಾಹಮಾಡಿ ಮಗಳಿಗೆ ಬಳುವಳಿಯಾಗಿ ಕೃಷ್ಣಾನದಿಯ ದಕ್ಷಿಣಕ್ಕಿದ್ದ ಪ್ರದೇಶಗಳನ್ನೆಲ್ಲ ಕೊಟ್ಟ. ಕೃಷ್ಣದೇವರಾಯ ತಿರುಪತಿಯನ್ನು ಸಂದರ್ಶಿಸಿ ತನ್ನ ರಾಜ್ಯಕ್ಕೆ ಹಿಂತಿರುಗಿದ.

1522ರಲ್ಲಿ ಗೋಲ್ಕೊಂಡ ರಾಜ್ಯದ ಸುಲ್ತಾನ ಒರಿಸ್ಸಕ್ಕೆ ಮುತ್ತಿಗೆ ಹಾಕಿದ. ಒರಿಸ್ಸ ಆಗ ಕ್ಷೀಣದೆಸೆಗೆ ಬರುತ್ತಿತ್ತು.

16ನೆಯ ಶತಮಾನದಿಂದೀಚೆಗೆ ಒರಿಸ್ಸ ರಾಜ್ಯ ತನ್ನ ಪ್ರಾಬಲ್ಯವನ್ನೂ ಕೀರ್ತಿಯನ್ನೂ ಕಳೆದುಕೊಂಡಿತು. 1541–42ರಲ್ಲಿ ಕಪಿಲೇಂದ್ರ ವಂಶವನ್ನು ಭೋಮ್ ಸಂತತಿಯವರು ಸೋಲಿಸಿದರು. ಈ ವಂಶದ ಸ್ಥಾಪಕ ಗೋವಿಂದ. ಈತ ಹಿಂದೆ ಪ್ರತಾಪರುದ್ರನ ಮಂತ್ರಿಯಾಗಿದ್ದ. ಈತ ಭೋಮ್ ಅಥವಾ ಕಾರಕೂನ ಉದ್ಯೋಗಕ್ಕೆ ಸೇರಿದ್ದ. ಗೋವಿಂದನ ಮಕ್ಕಳೂ ಮೊಮ್ಮಕ್ಕಳೂ ಕೆಲವು ವರ್ಷಗಳ ಕಾಲ ಆಳಿದರು. ಒರಿಸ್ಸದ ಕೊನೆಯ ಹಿಂದೂ ದೊರೆಯಾದ ಮುಕುಂದದೇವನನ್ನು ಬಂಗಾಳದ ಸುಲ್ತಾನ 1568ರಲ್ಲಿ ಸೋಲಿಸಿ ಆತನ ರಾಜ್ಯವನ್ನು ವಶಪಡಿಸಿಕೊಂಡ. 1576ರಲ್ಲಿ ಇದನ್ನು ಮೊಗಲರು ಜಯಿಸಿಕೊಂಡರು.

ಒರಿಸ್ಸದಲ್ಲಿ ಮೊಗಲರ ಆಳ್ವಿಕೆ ಹೆಚ್ಚುಕಡಿಮೆ ಒಂದು ಶತಮಾನ ಕಾಲ ನಡೆಯಿತು. ಔರಂಗಜ಼ೇಬನ ಆಳ್ವಿಕೆಯ ಕಾಲದಲ್ಲಿ ಮಯೂರ್‌ಭಂಜ್‌ನ ರಾಜ ಕೃಷ್ಣಚಂದ್ರಭಾಂಗನ ನೇತೃತ್ವದಲ್ಲಿ ಎದ್ದ ದಂಗೆಯನ್ನು ಕಷ್ಟದಿಂದ ಅಡಗಿಸಲಾಯಿತು. ಔರಂಗಜ಼ೇಬನ ನಿಧನದ ಅನಂತರ ಮೊಗಲ್ ಸಾಮ್ರಾಜ್ಯ ಅವನತಿ ಹೊಂದಿದಾಗ ಒರಿಸ್ಸ ಬಂಗಾಲದ ಸ್ವತಂತ್ರ್ಯ ನವಾಬರ ಆಳ್ವಿಕೆಯ ಅಡಿಗೆ ಬಂತು. ಬಂಗಾಲದ ನವಾಬ ಅಲಿವರ್ದಿಖಾನ್ ಇದನ್ನು ಮರಾಠರಿಗೆ 1751ರಲ್ಲಿ ಒಪ್ಪಿಸಿದ. ಇವರ ಆಳ್ವಿಕೆ ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲವಿತ್ತು.

1803ರಲ್ಲಿ ನಡೆದ ಎರಡನೆಯ ಮರಾಠ ಯುದ್ಧದಲ್ಲಿ ಇದು ಬ್ರಿಟಿಷರ ಕೈಸೇರಿತು. ಇವರ ಆಡಳಿತ ಸಮರ್ಪಕವಾಗಿರಲಿಲ್ಲ. ಖುರ್ದದ ರಾಜನ ಮುಖ್ಯ ಸೇನಾಧಿಪತಿಯಾಗಿದ್ದ ಬಕ್ಷಿ ಜಗಬಂಧು ವಿದ್ಯಾಧರನ ನೇತೃತ್ವದಲ್ಲಿ ಒಂದು ಬಂಡಾಯ ನಡೆಯಿತು. 1817ರ ಏಪ್ರಿಲ್‌ನಲ್ಲಿ ಪುರಿ ಅವನ ವಶವಾಯಿತು. ಬ್ರಿಟಿಷರು ಕಟಕ್‌ಗೆ ಹಿನ್ನಡೆದರು. ಆದರೆ ಕೊನೆಯಲ್ಲಿ ಈ ದಂಗೆಯನ್ನು ತುಳಿದುಹಾಕಲಾಯಿತು. 1823ರಲ್ಲಿ ಬ್ರಿಟಿಷರು ಈ ರಾಜ್ಯವನ್ನು ಕಟಕ್, ಬಾಲಸೂರ್ ಮತ್ತು ಪುರಿ ಎಂಬ ಮೂರು ಜಿಲ್ಲೆಗಳಾಗಿ ವಿಂಗಡಿಸಿದರು. ಇವು ಬಂಗಾಳ ಆಧಿಪತ್ಯದ ಭಾಗಗಳಾದುವು. 1857ರ ಸಂಗ್ರಾಮದಲ್ಲಿ ಒರಿಸ್ಸದ ಸಂಬಲ್‌ಪುರ್ ವಹಿಸಿದ ಪಾತ್ರ ಪ್ರಮುಖವಾದದ್ದು. ಬ್ರಿಟಿಷ್ ಆಡಳಿತಕಾಲದ ಭೀಕರ ದುರಂತವೆಂದರೆ 1865–66ರಲ್ಲಿ ಸಂಭವಿಸಿದ ಕ್ಷಾಮ. ಅದರ ಫಲವಾಗಿ ಒರಿಸ್ಸದ ಜನಸಂಖ್ಯೆಯ ಕಾಲುಭಾಗ (10 ಲಕ್ಷ) ಜನ ಸಾವಿಗೆ ತುತ್ತಾದರು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಇಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಯಿತು. ಒರಿಯ ಭಾಷೆಯನ್ನಾಡುವ ಜನರಿರುವ ಪ್ರದೇಶಗಳನ್ನು ಒಂದುಗೂಡಿಸಿ ಒಂದು ಪ್ರತ್ಯೇಕ ಪ್ರಾಂತ್ಯ ನಿರ್ಮಾಣವಾಗಬೇಕೆಂಬ ಚಳವಳಿ 20ನೆಯ ಶತಮಾನದಲ್ಲಿ ಆರಂಭವಾಯಿತು. 1912ರಲ್ಲಿ ಒರಿಸ್ಸ ಪ್ರಾಂತ್ಯವನ್ನು ಬಂಗಾಳದಿಂದ ಪ್ರತ್ಯೇಕಿಸಿ ಬಿಹಾರದೊಂದಿಗೆ ಸೇರಿಸಿ, ಅದನ್ನು ಬಿಹಾರ ಮತ್ತು ಒರಿಸ್ಸ ಪ್ರಾಂತ್ಯವೆಂದು ಹೆಸರಿಸಲಾಯಿತು. ಆದರೂ ಚಳವಳಿ ನಿಲ್ಲಲಿಲ್ಲ. 1936 ಏಪ್ರಿಲ್‌ನಲ್ಲಿ ಬ್ರಿಟಿಷರು ಒರಿಸ್ಸವನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಿದರು. 1950ರಲ್ಲಿ ಭಾರತ ಗಣರಾಜ್ಯದ ಸಂವಿಧಾನ ಜಾರಿಗೆ ಬಂದಾಗ ಒರಿಸ್ಸ ಅದರ ಒಂದು ರಾಜ್ಯವಾಯಿತು. ರಾಜ್ಯ ಪುನರ್ವಿಂಗಡಣೆಯ ಫಲವಾಗಿ ಒರಿಸ್ಸದ ಎಲ್ಲೆಯಲ್ಲೂ ಬದಲಾವಣೆಗಳಾದುವು.

(ಸಿ.ವಿ.ಆರ್.; ಬಿ.ಎನ್.ಎಸ್.)

**ಒರಿಸ್ಸದ ಪ್ರಾಗಿತಿಹಾಸ:** ಮಹಾನದಿ, ಬ್ರಾಹ್ಮಣಿ ಮತ್ತು ವೈತರಣಿ ನದಿಗಳ ಮುಖಜಭೂಮಿಗಳ ಅತ್ಯಂತ ಫಲವತ್ತಾದ ಪ್ರದೇಶವನ್ನೊಳಗೊಂಡಿರುವ ಒರಿಸ್ಸ ರಾಜ್ಯದಲ್ಲಿ ಇತಿಹಾಸಪೂರ್ವ ಕಾಲದಲ್ಲೂ ಜನ ವಾಸವಾಗಿದ್ದರೆಂಬುದಕ್ಕೆ ಅನೇಕ ಆಧಾರಗಳು ದೊರೆತಿವೆ.

ರಾಜ್ಯದ ಅನೇಕ ಪ್ರದೇಶಗಳಲ್ಲಿ ಪೂರ್ವಶಿಲಾಯುಗದ ಅವಶೇಷಗಳು ಕಂಡುಬಂದಿವೆ. ಭೂಶಾಸ್ತ್ರರೀತ್ಯ ಬಹಳ ಪುರಾತನವೆಂದು ಹೇಳಲಾದ ಇಲ್ಲಿಯ ಶಿಲಾಮಟ್ಟಗಳಲ್ಲಿ ಪೂರ್ವಶಿಲಾಯುಗಕ್ಕೆ ಸೇರುವ ಉಂಡೆಕಲ್ಲುಗಳಿಂದ ಮಾಡಿದ ಚಕ್ಕೆಕಲ್ಲಿನ ಆಯುಧಗಳು ಒರಟಾದ ಅಬ್ಬೆವಿಲ್ಲಿಯನ್ ಹಂತದ ಮತ್ತು ಸುಧಾರಿತ ಅಷ್ಯೂಲಿಯನ್ ಹಂತದ ಕೈಗೊಡಲಿಗಳು ದೊರಕಿವೆ. ಆದರೆ ಈ ಎಲ್ಲ ರೀತಿಯ ಆಯುಧಗಳ ತಯಾರಿಕೆಯಲ್ಲಿ ಯಾವುದೇ ರೀತಿಯ ಕ್ರಮಾಗತ ಸುಧಾರಣೆಗಳನ್ನೂ ಕಾಣುವಂತಿಲ್ಲ. ಆಕಾರ, ತಯಾರಿಕೆಯ, ವಿಧಾನಗಳಿಂದ ಆಯುಧಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಗುಂಪಿನಲ್ಲಿ ಕೈಗೊಡಲಿಗಳು ಹೆಚ್ಚಿದ್ದು ಒರಟಾಗಿ ಮಾಡಲ್ಪಟ್ಟಿವೆ. ಎರಡನೆಯ ಗುಂಪಿನ ಆಯುಧಗಳು ಸುಧಾರಿತ ರೀತಿಯವಾಗಿದ್ದು ತೆಳ್ಳಗೂ ಚಪ್ಪಟೆಯಾಗಿಯೂ ಇರುವುದರಿಂದ ಅಷ್ಯೂಲಿಯನ್ ಹಂತಕ್ಕೆ ಸೇರುತ್ತವೆ. ಮೂರನೆಯ ಗುಂಪಿನ ಆಯುಧಗಳು ಕುಶಲತೆಯಿಂದ ಮಾಡಲ್ಪಟ್ಟ ಸುಂದರ ವಸ್ತುಗಳಾಗಿವೆ. ಕೆಲವು ಉಂಡೆಕಲ್ಲಿನ ಆಯುಧಗಳು ದೊರೆತಿದ್ದರೂ ಅವನ್ನು ಪಂಜಾಬಿನ ಸೋಹನ್ ಸಂಸ್ಕೃತಿಗೆ ಸೇರಿಸಲಾಗುವುದಿಲ್ಲ. ಪೂರ್ವಶಿಲಾಯುಗದ ಕೊನೆಗಾಲದಲ್ಲಿ ಕೈಗೊಡಲಿಗಳು ಸಣ್ಣವಾಗುವುವಲ್ಲದೆ ಚಕ್ಕೆ ಕಲ್ಲಿನ ಆಯುಧಗಳು ಪ್ರಬಲವಾಗಿ ಮಧ್ಯಶಿಲಾಯುಗದ ಆರಂಭವನ್ನು ಸೂಚಿಸುತ್ತವೆ. ಪೂರ್ವಶಿಲಾಯುಗದ ಅವಶೇಷಗಳು ಧೇನ್‌ಕಾನಾಲ್, ಸುಂದರ್ ಘರ್, ಸಂಬಲ್‌ಪುರ, ಕಿಯೋಂಝರ್ ಮತ್ತು ಮಯೂರ್‌ಭಂಜ್‌ಗಳಲ್ಲಿ ಹೆಚ್ಚಿಗೆ ದೊರೆಯುತ್ತವೆ.

ಮಧ್ಯಶಿಲಾಯುಗ ಕಾಲದಲ್ಲಿ ಒರಿಸ್ಸದ ಬಹುಭಾಗಗಳಲ್ಲಿ ಶಿಲಾಯುಗ ಮಾನವ ವಾಸಿಸುತ್ತಿದ್ದನೆಂಬುದಕ್ಕೆ ಸಾಕಷ್ಟು ಮಾಹಿತಿಗಳು ದೊರೆತಿವೆ. ಹೆಚ್ಚು ಸಂಖ್ಯೆಯ ಚಕ್ಕೆಕಲ್ಲಿನ ಆಯುಧಗಳೂ ಕೆಲಮಟ್ಟಿಗೆ ಆಯುಧಗಳಿಗೆ ಬಳಸುತ್ತಿದ್ದ ಉಂಡೆಕಲ್ಲುಗಳೂ ಮಯೂರ್‌ಭಂಜ್, ಕಿಯೋಂಝರ್, ಸುಂದರ್‌ಘರ್ ಮತ್ತು ಧೇನ್‌ಕಾನಾಲ್ ಪ್ರದೇಶಗಳಲ್ಲಿ ನದೀಮಟ್ಟ ಮತ್ತು ನದೀಪಾತ್ರಗಳಲ್ಲೂ ದೊರೆಯುತ್ತವೆ. ಆಯುಧಗಳಲ್ಲಿ ಶೇ. 71ರಷ್ಟು ಒರೆಯುವ ಆಯುಧಗಳೂ 21ರಷ್ಟು ಮೊನೆಗಳೂ ಉಳಿದವು ಕೊರೆಯುವ ಮತ್ತಿತರ ಆಯುಧಗಳೂ ಆಗಿವೆ. ಸಾಧಾರಣವಾಗಿ ಚಕ್ಕೆಕಲ್ಲುಗಳೇ ಹೆಚ್ಚಾಗಿರುವ ಆಯುಧಗಳಲ್ಲಿ ಕ್ಲಾಕ್ಟೋನಿಯನ್ ರೀತಿಯ ಚಕ್ಕೆಗಳು ಹೆಚ್ಚಾಗಿದ್ದು, ಲೆವಾಲ್ವಾಷಿಯನ್ ಪದ್ಧತಿ ಹೆಚ್ಚು ಬಳಕೆಗೆ ಬಂದಂತೆ ಕಾಣುವುದಿಲ್ಲ. ಆಯುಧಗಳ ಅಂಚುಗಳಿಂದ ಪುಟ್ಟ ಚಕ್ಕೆಗಳನ್ನು ತೆಗೆದು ಅವನ್ನು ಪರಿಣಾಮಕಾರಿಯಾಗಿ ಮಾಡುತ್ತಿದ್ದರು.

ಅಂತ್ಯ ಅಥವಾ ಸೂಕ್ಷ್ಮಶಿಲಾಯುಧಕಾಲದಲ್ಲಿ ಈ ಪ್ರದೇಶದಲ್ಲಿ ಮಾನವನ ಚಟುವಟಿಕೆ ಸೀಮಿತವಾಗಿದ್ದಂತೆ ಕಾಣುತ್ತದೆ. ಮಯೂರ್‌ಭಂಜ್, ಕಿಯೋಂಝರ್ ಮತ್ತು ಸುಂದರಘರ್ ಜಿಲ್ಲೆಗಳ ಹಲವು ಪ್ರದೇಶಗಳಲ್ಲಿ ಮಾತ್ರ ಸೂಕ್ಷ್ಮಶಿಲಾಯುಧಗಳನ್ನು ಸಂಗ್ರಹಿಸಲಾಗಿದೆ. ಇವು ಸಾಧಾರಣವಾಗಿ ನದೀದಂಡೆಗಳಲ್ಲೂ ಬೆಟ್ಟಗುಡ್ಡಗಳ ತಪ್ಪಲು ಅಥವಾ ಮೈದಾನ ಪ್ರದೇಶಗಳಲ್ಲೂ ದೊರೆತಿವೆ. ಈವರೆವಿಗೂ ಈ ನೆಲಗಳನ್ನು ವಿಧ್ಯುಕ್ತವಾಗಿ ಸಂಶೋಧಿಸದಿರುವುದರಿಂದ ಒರಿಸ್ಸದಲ್ಲಿನ ಸೂಕ್ಷ್ಮಶಿಲಾಯುಧ ಸಂಸ್ಕೃತಿಯ ವಿಷಯವಾಗಿ ಹೆಚ್ಚೇನೂ ಹೇಳಬರುವುದಿಲ್ಲ. ಇತ್ತೀಚೆಗೆ ಕೇಂದ್ರ ಪ್ರಾಕ್ತನಶಾಸ್ತ್ರ ಇಲಾಖೆಯವರು ಮಯೂರ್‌ಭಂಜ್ ಜಿಲ್ಲೆಯ ಬಾರಿಪದಾ ಬಳಿ ನಡೆಸಿದ ಪ್ರಾಯೋಗಿಕ ಸಂಶೋಧನೆಗಳಲ್ಲಿ ನವಶಿಲಾಯುಗದ ಅವಶೇಷಗಳನ್ನುಳ್ಳ ಪದರಗಳ ಕೆಳಭಾಗದಲ್ಲಿ ಈ ಸಂಸ್ಕೃತಿಗಳ ಅವಶೇಷಗಳು ದೊರೆತಿರುವುದರಿಂದಲೂ ಮತ್ತು ಆ ಕಾಲದಲ್ಲಿ ಮಡಕೆಗಳ ಉಪಯೋಗ ಗೊತ್ತಿಲ್ಲದಿದ್ದು, ಸೂಕ್ಷ್ಮಶಿಲಾಯುಧಗಳು ಬಹಳ ಪುರಾತನ ರೀತಿಯವುಗಳಾಗಿದ್ದುದರಿಂದಲೂ ಸಾಕಷ್ಟು ಹಿಂದಿನ ಕಾಲದಲ್ಲೇ ಇಲ್ಲಿ ಈ ಸಂಸ್ಕೃತಿ ರೂಢಿಯಲ್ಲಿತ್ತೆಂದು ಹೇಳಬಹುದಾಗಿದೆ.

ಒರಿಸ್ಸದ, ಏಕೆ ಇಡೀ ಭಾರತದ, ಪ್ರಾಕ್ತನಶಾಸ್ತ್ರದಲ್ಲಿ ಬಗೆಹರಿಸಲಾಗದೇ ಉಳಿದಿರುವ ಒಂದು ಸಮಸ್ಯೆಯೆಂದರೆ ಗಂಗಾನದಿಯ ಬಯಲು, ಮಧ್ಯಪ್ರದೇಶ ಮತ್ತು ಒರಿಸ್ಸ ಪ್ರದೇಶಗಳಲ್ಲಿ ಆಕಸ್ಮಿಕವಾಗಿ ದೊರೆತಿರುವ ತಾಮ್ರದ ಉಪಕರಣಗಳ ಸಂಗ್ರಹಣೆಗಳದು. ಒರಿಸ್ಸದ ಗುಂಜೆರಿಯಾ, ದ್ರುನಿಯಾ, ಝುಷ್‌ಪುರ್, ಬಾಣಸುರಿಯ, ಬಸ್ಸಿಯಾ, ತಾಮಜೂರಿ, ಸಿತಾಭಂಜಿ, ದಶ್‌ಪಲ್ಲಾ–ಮುಂತಾದೆಡೆಗಳಲ್ಲದೆ ಬಿಹಾರ ಮತ್ತು ಮಧ್ಯಪ್ರದೇಶದ ಹಲವೆಡೆಗಳಲ್ಲೂ ಈ ರೀತಿಯ ಸಂಗ್ರಹಣೆಗಳು ಕಂಡುಬಂದಿವೆ. ಚಪ್ಪಟೆಯಾದ ಉಳಿ, ಭುಜಗಳುಳ್ಳ ಉಳಿ, ಉದ್ದನಾದ ಉಳಿ, ಪರಶು, ಇಬ್ಬದಿಯಲ್ಲೂ ಚೂಪಾಗಿರುವ ಕೊಡಲಿ, ಈಟಿಗಾಳ, ಮೋಟು ಕತ್ತಿ, ಗುರಾಣಿಯ ಮೊನೆ, ದೊಡ್ಡ ಉಂಗುರ, ಮಾನವಾಕಾರದ ಉಪಕರಣಗಳು–ಮುಂತಾದವು ಈ ಸಂಗ್ರಹಣೆಗಳಲ್ಲಿರುತ್ತಿದ್ದು ಭಾರತ ಅಥವಾ ಪ್ರಪಂಚದ ಮತ್ತಾವ ಭಾಗದಲ್ಲೂ ಇವನ್ನು ಹೋಲುವ ಆಯುಧೋಪಕರಣಗಳು ಈವರೆಗೆ ಕಂಡುಬಂದಿಲ್ಲ. ಮೇಲಿನ ಉಪಕರಣಗಳಲ್ಲಿ ಕೆಲವು ಇತರ ಪ್ರಾಕ್ತನಸಂಸ್ಕೃತಿಯ ಅವಶೇಷಗಳೊಡನೆ ದೊರೆತಿವೆ. ನವ್ದತೋಲಿ (ಮಧ್ಯ ಪ್ರದೇಶ), ಚಾರಿದೋಲಿ (ಮಹಾರಾಷ್ಟ್ರ) ಮತ್ತು ಖುರ್ಡಿ (ರಾಜಸ್ತಾನ) ಮುಂತಾದೆಡೆಗಳಲ್ಲಿ ಚಪ್ಪಟೆಯಾದ ಉಳಿ ದೊರೆತಿವೆ, ಭುಜಗಳುಳ್ಳ ಕಲ್ಲಿನ ಉಳಿ ಪೂರ್ವ ಭಾರತದ ನವಶಿಲಾಯುಗ ಸಂಸ್ಕೃತಿಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿತ್ತು. ಮೋಟುಕತ್ತಿಗಳು ಪಶ್ಚಿಮ ಏಷ್ಯ ಮತ್ತು ಆಫ್ಘಾನಿಸ್ತಾನ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದುವು. ಆದರೆ ಈ ಸಂಗ್ರಹಣೆಯಲ್ಲಿರುವ ಎಲ್ಲ ರೀತಿಯ ಆಯಧಗಳು ಎಲ್ಲೂ ಒಟ್ಟಿಗೆ ದೊರೆತಿಲ್ಲ. ದುರದೃಷ್ಟವಶಾತ್ ಆ ಉಪಕರಣಗಳು ಯಾವ ಸಂಸ್ಕೃತಿಗೆ ಸೇರಿದುವೆಂದು ನಿರ್ದೇಶಿಸಲು ಬೇಕಾದ ಪ್ರಾಕ್ತನ ಆಧಾರಗಳು ಈವರೆಗೂ ಕಂಡುಬಂದಿಲ್ಲ. ಈ ಸಂಗ್ರಹಣೆಗಳು ದೊರೆತ ಎರಡು ನೆಲೆಗಳು–ಬಿಸೌಲಿ ಮತ್ತು ರಾಜ್‌ಪುರ್ ಪಾರ್ಸು. ಇಲ್ಲಿ ನಡೆದ ಭೂಶೋಧನೆಗಳಲ್ಲಿ ಈ ಉಪಕರಣಗಳೊಂದಿಗೆ ಯಾವ ಸಂಬಂಧವಿಲ್ಲದಿದ್ದರೂ ತೆಳಗಿನ ಪದರಗಳಲ್ಲಿ ದೊರೆತಿರುವ ಕೆಮ್ಮಣ್ಣು ಲೇಪಿತವಾಗಿರುವ ಮಡಕೆ ಚೂರುಗಳು ಹಸ್ತಿನಾಪುರ ನೆಲೆಯಲ್ಲಿ ಬೂದುಬಣ್ಣದ ವರ್ಣಲೇಪಿತ ಮಡಕೆಗಳು ದೊರೆತಿರುವುದಕ್ಕಿಂತಲೂ ಹಳೆಯ ಪದರಗಳಲ್ಲಿ ದೊರೆತಿರುವುದರಿಂದಲೂ ಬೂದುಬಣ್ಣದ ವರ್ಣಲೇಪಿತ ಮಡಕೆಗಳಿಗೆ ಸಂಬಂಧಿಸಿದ ಸಂಸ್ಕೃತಿ ಪ್ರ.ಶ.ಪೂ. 2ನೆಯ ಸಹಸ್ರಮಾನದ ಉತ್ತರಾರ್ಧಕ್ಕೆ ನಿರ್ದೇಶಿತವಾಗಿರುವುದರಿಂದಲೂ ಈ ತಾಮ್ರದ ಉಪಕರಣಗಳನ್ನು ಪ್ರ.ಶ.ಪೂ.2ನೆಯ ಸಹಸ್ರಮಾನದ ಪೂರ್ವಾರ್ಧಕ್ಕೆ ತಾತ್ಕಾಲಿಕವಾಗಿ ನಿರ್ದೇಶಿಸಲಾಗಿದೆ. ಬಹುಶಃ ಹರಪ್ಪ ಸಂಸ್ಕೃತಿ ಅಳಿದ ಅನಂತರ ಸಿಂಧೂ ಬಯಲಿನಿಂದ ಪಲಾಯನ ಗೈಯುತ್ತಿದ್ದವರೋ ಭಾರತಕ್ಕೆ ವಲಸೆಬಂದ ಆರ್ಯಜನರ ಮೊದಲ ಪಂಗಡದವರೋ ಈ ಉಪಕರಣಗಳ ಕರ್ತೃಗಳಾಗಿರಬೇಕೆಂದು ಊಹಿಸಲಾಗಿದೆ.

ಒರಿಸ್ಸದಲ್ಲಿ ನವಶಿಲಾಯುಗ ಸಂಸ್ಕೃತಿಯ ಅವಶೇಷಗಳು ವಿಪುಲವಾಗಿ ದೊರೆತಿರುವದೇನೋ ನಿಜ. ಆದರೆ ಇತ್ತೀಚಿನ ವರೆಗೂ ಈ ಅವಶೇಷಗಳನ್ನು ಭೂಮಿಯ ಮೇಲ್ಭಾಗದಿಂದ ಮಾತ್ರ ಸಂಗ್ರಹಿಸಿರುವುದರಿಂದ ಅವುಗಳ ಸಾಂಸ್ಕೃತಿಕ ಹಂತ ಮತ್ತು ಐತಿಹಾಸಿಕ ಮಹತ್ತ್ವಗಳೇನೆಂಬುದನ್ನು ನಿರ್ಧರಿಸಲಾಗಿಲ್ಲ. ಈ ಅವಶೇಷಗಳು ಸಾಧಾರಣವಾಗಿ ಪೂರ್ವಭಾರತ ನವಶಿಲಾಯುಗದ ಅವಶೇಷಗಳನ್ನೇ ಹೋಲುವುದರಿಂದ ಈ ಸಂಸ್ಕೃತಿಯನ್ನು ಆ ಗುಂಪಿಗೆ ಸೇರಿಸಲಾಗಿದೆ. ಇತ್ತೀಚೆಗೆ ಮಯೂರ್‌ಭಂಜ್ ಜಿಲ್ಲೆಯಲ್ಲೂ ಸಂಜಯ್ ಮತ್ತು ಬರ್ಹಾಬಲಂಗ ನದೀಬಯಲುಗಳಲ್ಲೂ ಹೆಚ್ಚು ಸಂಖ್ಯೆಯಲ್ಲಿ ಈ ಆಯುಧಗಳನ್ನು ಸಂಗ್ರಹಿಸಿರುವುದಲ್ಲದೆ ಗಂಜಾಮ್ ಜಿಲ್ಲೆಯ ಜೌಗಡ ಎಂಬಲ್ಲಿ ನಡೆದ ಭೂಶೋಧನೆಗಳಲ್ಲಿ

ಪ್ರ.ಶ.ಪೂ. 300 ವರ್ಷಗಳ ಸುಮಾರಿನಲ್ಲಿ ರೂಢಿಯಲ್ಲಿದ್ದ ಕಬ್ಬಿಣಯುಗದ ಸಂಸ್ಕೃತಿ ಪದರಗಳಿಗಿಂತಲೂ ಹಳೆಯ ಪದರಗಳಲ್ಲಿ ಈ ಆಯಧಗಳು ದೊರೆತಿವೆ. ಕೇಂದ್ರ ಪ್ರಾಕ್ತನ ಶಾಸ್ತ್ರ ಇಲಾಖೆಯವರು ಮಯೂರ್‌ಭಂಜ್ ಜಿಲ್ಲೆಯ ಬಾರಿಪದಾ ಬಳಿ ನಡೆಸಿದ ಭೂಶೋಧನೆಗಳಲ್ಲಿ ಪುರಾತನವಾದ ಸೂಕ್ಷ್ಮಶಿಲಾಯುಗದ ಸಂಸ್ಕೃತಿಯ ಅವಶೇಷಗಳು ದೊರೆತ ಪದರಗಳ ಅನಂತರದ ಮಟ್ಟದಲ್ಲಿ ನಯಗೊಳಿಸಿದ ಕಲ್ಲಿನ ಆಯುಧಗಳೂ ಒರಟಾದ ಮಡಕೆ ಚೂರುಗಳೂ ಚಕ್ಕೆಕಲ್ಲಿನ ಆಯುಧಗಳೂ ದೊರೆತು ಒರಿಸ್ಸದ ನವಶಿಲಾಯುಗದ ಸಂಸ್ಕೃತಿಗೆ ಸಾಕಷ್ಟು ಪುರಾತನತೆಯನ್ನು ದೊರಕಿಸಿಕೊಟ್ಟಿವೆ.

ಅನಂತರ ಕಬ್ಬಿಣಯುಗಕ್ಕೆ ಸೇರಿದ ಐತಿಹಾಸಿಕ ಆರಂಭಯುಗದ ಸಂಸ್ಕೃತಿಯ ಕುರುಹುಗಳು ಈ ಪ್ರಾಂತ್ಯದ ಹಲವಾರೆಡೆಗಳಲ್ಲಿ ದೊರೆತಿವೆ. ಭೂಶೋಧನೆ ನಡೆದಿರುವ ಎರಡು ನೆಲೆಗಳ ಮಾಹಿತಿಗಳನ್ನು ಇಲ್ಲಿ ಪರಿಶೀಲಿಸಬಹುದು. ನೆರೆಯ ಗಂಗಾನದೀ ಬಯಲಿನಲ್ಲಿ ಈ ವೇಳೆಗಾಗಲೇ ಚಾರಿತ್ರಿಕ ನಗರೀಕರಣ ರೂಢಿಗೆ ಬಂದಿದ್ದು ಸುವ್ಯವಸ್ಥಿತ ರಾಜ್ಯಾಡಳಿತ ಪದ್ಧತಿ ಜಾರಿಯಲ್ಲಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದು. ಭುವನೇಶ್ವರದ ಬಳಿಯಿರುವ ಶಿಶುಪಾಲಘರ್ ನೆಲೆಯಲ್ಲಿ ನಡೆದ ಭೂಶೋಧನೆಗಳಿಂದ ತಿಳಿದುಬಂದಿರುವಂತೆ ಇಲ್ಲಿ ಒಂದು ಬಲವಾದ ಮಣ್ಣಿನ ಕೋಟೆಯನ್ನು ಚಚ್ಚೌಕ ತಳಹದಿಯ ಮೇಲೆ ಕಟ್ಟಲಾಗಿತ್ತು. ಅದರ ಇಬ್ಬದಿಯ ಗೋಡೆಗಳೂ ಮುಕ್ಕಾಲು ಮೈಲಿ ಉದ್ದವಾಗಿದ್ದು ಅಲ್ಲಿ ನಯಮಾಡಿದ ಚಚ್ಚೌಕವಾದ ಕಲ್ಲಿನ ಕಂಬಗಳಿಂದ ಕೂಡಿದ್ದ ಮುನ್‌ಚಾಚಿದ ಎರಡು ಮಹಾದ್ವಾರಗಳಿದ್ದುವು. ಸುವ್ಯವಸ್ಥಿತ ಮತ್ತು ಸುಭದ್ರವಾಗಿರುವ ಈ ಕೋಟೆ ಪ್ರಭಾವಶಾಲಿ ಕೇಂದ್ರೀಕೃತ ಆಡಳಿತವಿದ್ದುದನ್ನು ಸೂಚಿಸುತ್ತದೆ. ಸುಮಾರು ಇದೇ ಕಾಲಕ್ಕೆ ನಿರ್ದೇಶಿಸಬಹುದಾದ ದಕ್ಷಿಣ ಒರಿಸ್ಸದ ಗಂಜಾಮ್ ಜಿಲ್ಲೆಯಲ್ಲಿ ಋಷಿಕುಲ್ಯ ನದೀದಂಡೆಯಲ್ಲಿರುವ ಜೌಗಡದಲ್ಲಿ 25 ಅಡಿಗಳೆತ್ತರದ ಮಣ್ಣಿನ ಕೋಟೆ ಮತ್ತು ಮುಂದುವರಿದ ಜನಜೀವನವನ್ನು ರೂಪಿಸುವ ಕಬ್ಬಿಣಯುಗದ ಸಂಸ್ಕೃತಿಯ ಅವಶೇಷಗಳು ಭೂಶೋಧನೆಗಳಲ್ಲಿ ಕಂಡುಬಂದಿವೆ. ಈ ನೆಲೆಯ ಬಳಿಯಲ್ಲಿ ಅಶೋಕ ಚಕ್ರವರ್ತಿಯ ಹದಿನಾಲ್ಕು ಶಿಲಾಶಾಸನಗಳ ಪ್ರತಿಗಳೂ ಇರುವುದರಿಂದ ಈ ವೇಳೆಗಾಗಲೇ ಐತಿಹಾಸಿಕ ಯುಗದ ಉದಯವಾಗಿತ್ತೆನ್ನಬಹುದು. (ಬಿ.ಕೆ.ಜಿ.)

**ಒರಿಸ್ಸದ ವಾಸ್ತುಶಿಲ್ಪ:** ಅತ್ಯಂತ ಪ್ರಾಚೀನ (750–900) ದೇವಾಲಯಗಳಾದ ಪರಶುರಾಮೇಶ್ವರ ಮತ್ತು ವೈತಾಲ್ ದೇವಾಲಯಗಳು ಒರಿಸ್ಸ ಶೈಲಿಯ ಉಗಮವನ್ನು ತಿಳಿಯಲು ಬಹು ಸಹಾಯಕವಾಗಿವೆ. ಪರಶುರಾಮೇಶ್ವರ ದೇವಾಲಯ 48 ಅಡಿ

ಭುವನೇಶ್ವರದಲ್ಲಿನ ಲಿಂಗರಾಜ ದೇವಾಲಯದಲ್ಲಿ ಸಣ್ಣ ಗುಡಿಯೊಂದರೊಳಗಿನ ಮೂರ್ತಿ

ಉದ್ದವಾಗಿದ್ದು, 44 ಅಡಿ ಎತ್ತರದ ಶಿಖರವನ್ನು ಹೊಂದಿದೆ. ಶಿಖರ ನಾಜೂಕಾಗಿಲ್ಲ. ಕೆಲವು ವಿಷಯಗಳಲ್ಲಿ ಇದು ಐಹೊಳೆಯ ದೇವಾಲಯಗಳನ್ನು ಹೋಲಿದರೆ, ಮತ್ತೆ ಕೆಲವು ಅಂಶಗಳಲ್ಲಿ ಗುಪ್ತರ ಶೈಲಿಯ ಪ್ರಭಾವವನ್ನು ವ್ಯಕ್ತಪಡಿಸುತ್ತದೆ. ವೈತಾಲ್ ದೇವಾಲಯ ಸಣ್ಣದಾಗಿದ್ದರೂ ಪರಶುರಾಮೇಶ್ವರ ದೇವಾಲಯಕ್ಕಿಂತ ಅಂದವಾಗಿದ್ದು ಉತ್ತರ ಮತ್ತು ದಕ್ಷಿಣ ವಾಸ್ತುಶೈಲಿಗಳ ಸಮ್ಮಿಳನದಂತಿದೆ. ಭುವನೇಶ್ವರ ನಗರದ ಹೊರಗಿರುವ ಮುಕ್ತೇಶ್ವರ (975). ಭುವನೇಶ್ವರದ ಲಿಂಗರಾಜ (1000) ಮತ್ತು ಪುರಿಯ ಜಗನ್ನಾಥ (1100) ದೇವಾಲಯಗಳು ಒರಿಸ್ಸ ವಾಸ್ತುಶಿಲ್ಪದ ಎರಡನೆಯ ಹಂತಕ್ಕೆ ಉತ್ತಮ ಉದಾಹರಣೆಗಳು. ಮುಕ್ತೇಶ್ವರ ದೇವಾಲಯದಲ್ಲಿ ಒಳಗಿನ ಗೋಡೆಗಳು ಶಿಲ್ಪಗಳಿಂದ ಅಲಂಕೃತವಾಗಿರುವುದನ್ನು ಗಮನಿಸಬೇಕು. 159 ಮೀ ಉದ್ದ ಮತ್ತು 142 ಮೀ ಅಗಲ ಪ್ರದೇಶದಲ್ಲಿರುವ ಲಿಂಗರಾಜ

ಕೆತ್ತನೆಯ ಕೆಲಸ (ಗೋಪಾಲಕೃಷ್ಣ)

ದೇವಾಲಯ ಎತ್ತರವಾದ ಗೋಡೆಯಿಂದ ಆವೃತವಾಗಿದೆ. ಇದರಲ್ಲಿ ಮೂಲ ದೇವಾಲಯದ ಮಾದರಿಯಲ್ಲಿಯೇ ಇರುವ ಸಣ್ಣ ದೇವಾಲಯಗಳು ಅನೇಕವಿವೆ. ಲಿಂಗರಾಜ ದೇವಾಲಯದ ನಾಟ್ಯಮಂದಿರ ಮತ್ತು ಭೋಗಮಂದಿರಗಳು ಮುಂದೆ ದೇವಾಲಯಕ್ಕೆ ಸೇರಿಸಲ್ಪಟ್ಟವು. ಇಲ್ಲಿನ ಮುಖ್ಯ ಆಕರ್ಷಣೆಯೆಂದರೆ ದೇವಾಲಯದ ಮೇಲಿರುವ 125 ಅಡಿ ಎತ್ತರದ ಶಿಖರ. ಒಳಬಾಗುಳ್ಳ ಅಲಂಕೃತವಾದ ಈ ಶಿಖರ ಅತ್ಯಂತ ಮನಮೋಹಕವಾಗಿದೆ.

ಕೋಣಾರ್ಕದ ಸೂರ್ಯದೇವಾಲಯದ ಚಕ್ರವೊಂದರ ಅರದ ಮೇಲಿರುವ ಶಿಲ್ಪ

ದೇವಾಲಯದ ಹೊರ ಮತ್ತು ಒಳಗೋಡೆಗಳು ಸುಂದರ ಶಿಲ್ಪಗಳಿಂದ ತುಂಬಿವೆ. 1100ರಲ್ಲಿ ಅನಂತವರ್ಮ ಚೋಡಗಂಗ ರಾಜ ಪುರಿಯ ಜಗನ್ನಾಥ ದೇವಾಲಯದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ. ಇದು ಎಲ್ಲ ವಿಧಗಳಲ್ಲಿಯೂ ಲಿಂಗರಾಜ ದೇವಾಲಯವನ್ನೇ ಹೋಲುತ್ತದೆ. 310 ಅಡಿ ಉದ್ದ, 80 ಅಡಿ ಅಗಲವಿರುವ ಜಗನ್ನಾಥ ದೇವಾಲಯದ ಶಿಖರ 200 ಅಡಿ ಎತ್ತರವಿದೆ. ಇದು ಸಣ್ಣ ದಿಣ್ಣೆಯ ಮೇಲೆ ನಿರ್ಮಿತವಾಗಿರುವುದರಿಂದ, ಎತ್ತರದ ಈ ಶಿಖರ ಐದಾರು ಮೈಲಿಗಳ ದೂರದಿಂದಲೂ

ಬೃಹದಾಕಾರವಾಗಿ ಎದ್ದು ಕಾಣುತ್ತದೆ. ಸಮುದ್ರದ ಗಾಳಿಯ ಹೊಡೆತಕ್ಕೆ ಸಿಕ್ಕಿರುವ ಈ ದೇವಾಲಯ ಲಿಂಗರಾಜ ದೇವಾಲಯದಷ್ಟು ಸುಂದರವಾಗಿ ಕಾಣುವುದಿಲ್ಲ. ಇಲ್ಲಿಯ ನಾಟ್ಯಮಂದಿರ 25 ಮೀ ಪಾರ್ಶ್ವದ ಚೌಕಾಕಾರದಲ್ಲಿದ್ದು, ಇದರ ಛಾವಣಿ ಹದಿನಾರು ಕಂಬಗಳ ಮೇಲೆ ನಿಂತಿದೆ. ಒರಿಸ್ಸದಲ್ಲಿರುವ ಕೆಲವೇ ಸ್ತಂಭಮಂಟಪಗಳಲ್ಲಿ ಇದು ಮುಖ್ಯವಾದುದು. ಜಗನ್ನಾಥ ದೇವಾಲಯದ ಸುತ್ತಲೂ ಅನೇಕ ಸಣ್ಣ ದೇವಾಲಯಗಳಿವೆ. ಇವೆಲ್ಲವೂ ಸವಾನ ಕೇಂದ್ರಗಳಾದ ಮೂರು ಗೋಡೆಗಳೊಳಗೆ ಇವೆ. ಈ ಗೋಡೆಗಳ ಮಧ್ಯದಲ್ಲಿ ಗೋಪುರಗಳಿವೆ.

ಭುವನೇಶ್ವರದ ಲಿಂಗರಾಜ ದೇವಾಲಯದಲ್ಲಿರುವ ಸೂರ್ಯಮೂರ್ತಿ

ಒರಿಸ್ಸ ಶೈಲಿಯ ಮೂರನೆಯ ಹಂತ 1100–1250ರ ಅವಧಿಯಲ್ಲಿ ಬೆಳೆಯಿತು. ಈ ಹಂತದ ದೇವಾಲಯಗಳು ಸಾಮಾನ್ಯವಾಗಿ ಗಾತ್ರದಲ್ಲಿ ಮಧ್ಯಮವರ್ಗಕ್ಕೆ ಸೇರಿದವು. ಅಂದರೆ ಮುಕ್ತೇಶ್ವರದಷ್ಟು ಸಣ್ಣವೂ ಅಲ್ಲ. ಲಿಂಗರಾಜದಷ್ಟು ದೊಡ್ಡವೂ ಅಲ್ಲ, ಭುವನೇಶ್ವರದಲ್ಲಿಯೇ ಈ ರೀತಿಯ ಸು. ಹನ್ನೆರಡು ದೇವಾಲಯಗಳಿವೆ. ಸಾಮಾನ್ಯವಾಗಿ ಅವುಗಳಲ್ಲಿ ಬಹು ಮುಖ್ಯವಾದ ದೇವುಲ್ ಮತ್ತು ಜಗಮೋಹನ್ ಎಂಬ ಭಾಗಗಳು ಮಾತ್ರ ಇರುತ್ತವೆ. ನಾಟ್ಯಮಂದಿರಗಳು ಸಾಮಾನ್ಯವಾಗಿ ಇರುವುದಿಲ್ಲ. ಭುವನೇಶ್ವರದ ಅನಂತವಾಸುದೇವ ದೇವಾಲಯ 125 ಅಡಿ ಉದ್ದ 40 ಅಡಿ ಅಗಲವಿದ್ದು ಅದರ ಶಿಖರ 68 ಅಡಿ ಇದೆ. ಇದೇ ಹಂತದ ಮತ್ತೊಂದು ದೇವಾಲಯ, ಭುವನೇಶ್ವರದ ರಾಜರಾಣಿ ದೇವಾಲಯ. ಇದರಲ್ಲಿ ದೇವುಲ್ ಮಾತ್ರ ಪೂರ್ಣವಾಗಿದ್ದು, ಜಗಮೋಹನ್ ಪೂರ್ಣವಾಗಿ ನಿರ್ಮಾಣವಾಗಿಲ್ಲ. ಈ ಹಂತದ ಅತ್ಯಂತ ಮುಖ್ಯ ಉದಾಹರಣೆ ಕೋಣಾರ್ಕದ ಸೂರ್ಯ ದೇವಾಲಯ. ಸಮುದ್ರ ತೀರದಲ್ಲಿದ್ದು ಪುರಿಯಿಂದ ಇಪ್ಪತ್ತು ಮೈಲಿ ದೂರದಲ್ಲಿರುವ ಈ ದೇವಾಲಯ ನರಸಿಂಹದೇವನಿಂದ (1238–63) ನಿರ್ಮಾಣ ಮಾಡಲ್ಪಟ್ಟಿತು. ಇದರ ಬಹುಭಾಗ ಈಗ ಹಾಳುಬಿದ್ದಿದೆ. ಇದು ಪೂರ್ಣವಾಗಿ ನಿರ್ಮಾಣವಾಗುವುದಕ್ಕೆ ಮೊದಲೇ ಇದರ ಅಸ್ತಿಭಾರ ಬಿರುಕುಬಿಟ್ಟಿತೆಂದೂ ಅದರಿಂದ ಇದರ ಮೇಲ್ಭಾಗಗಳು ನಿರ್ಮಾಣವಾಗಲಿಲ್ಲವೆಂದೂ ಕೆಲವರ ಅಭಿಪ್ರಾಯ, ದೇವಾಲಯ ಏಳು ಕುದುರೆಗಳನ್ನು ಹೂಡಿದ ರಥದಂತೆ ನಿರ್ಮಾಣವಾಗಿದೆ. ಎತ್ತರದ ಜಗಲಿಯ ಎರಡು ಕಡೆಗಳಲ್ಲಿಯೂ 10 ಅಡಿ ಎತ್ತರದ ಹನ್ನೆರಡು ಚಕ್ರಗಳಿವೆ. ನಾಟ್ಯಮಂದಿರ ಮತ್ತು ಜಗಮೋಹನಗಳೆರಡೂ ಇವೆ. ಅಕ್ಕಪಕ್ಕದಲ್ಲಿ ಸಣ್ಣಸಣ್ಣ ಇತರ ದೇವಾಲಯಗಳಿವೆ. ಇವೆಲ್ಲವೂ 875 ಅಡಿ ಉದ್ದ ಮತ್ತು 540 ಅಡಿ ಅಗಲದ ಅಂಗಳದಲ್ಲಿ ನಿರ್ಮಿತವಾಗಿವೆ. ಅಲ್ಲಲ್ಲಿ ಶಿಲ್ಪಗಳೂ ಶಿಲ್ಪಫಲಕಗಳೂ ಬಿದ್ದಿವೆ. ಇವೆಲ್ಲವನ್ನೂ ದೇವಾಲಯ ಪೂರ್ಣವಾದ ಮೇಲೆ ಉಪಯೋಗಿಸಲು ಮಾಡಿರಬೇಕೆಂದು ಕೆಲವರ ಅಭಿಪ್ರಾಯ. 'ಇದು ಅಸಾಧಾರಣ ಪ್ರತಿಭೆಯ ಕುರುಹು, ಈ ಘನ ಕಾರ್ಯ ಕಾರ್ಯಗತವಾಗದೇ ಇದ್ದುದರಿಂದ ಇದೊಂದು ದೊಡ್ಡ ಅಪಜಯ' ಎಂದು ಘನವಿದ್ವಾಂಸ ಪರ್ಸಿ ಬ್ರೌನ್ ಹೇಳಿದ್ದಾನಲ್ಲದೆ ಇದು ಭಾರತೀಯ ಶಿಲ್ಪಿಯ ಅತ್ಯಂತ ಸಾಹಸಮಯ ಕೆಲಸವೆಂದು ಹೊಗಳಿದ್ದಾನೆ. ಮತ್ತೆ ಒರಿಸ್ಸದ ವಾಸ್ತುಶಿಲ್ಪ ಈ ಸ್ಥಿತಿಯನ್ನು ಮುಟ್ಟಲೇ ಇಲ್ಲ. (ಎಸ್.ಯು.ಕೆ.; ಎ.ವಿ.ಎನ್.)



ಕೆತ್ತನೆಯ ಕೆಲಸ (ಆಮೆ)

ಭುವನೇಶ್ವರ ಬಳಿಯಲ್ಲಿರುವ ಉದಯಗಿರಿಯ ರಾಣಿಗುಂಫದಲ್ಲಿನ ಶಿಲ್ಪಪಟ್ಟಿಕೆ (ಕಾಲ: ಪ್ರ.ಶ.ಪೂ.ಸು. 1ನೆಯ ಶತಮಾನ)

**ಒರಿಸ್ಸದ ಶಾಸನಗಳು ಮತ್ತು ನಾಣ್ಯಗಳು:** ಒರಿಸ್ಸದ ಪ್ರಾಚೀನ ಹಾಗೂ ಮಧ್ಯಕಾಲೀನ ಚರಿತ್ರೆಯನ್ನು ತಿಳಿಯಲು ಅಲ್ಲಿನ ನಾಣ್ಯಗಳಿಗಿಂತ ಶಿಲಾ ಮತ್ತು ತಾಮ್ರಶಾಸನಗಳು ಹೆಚ್ಚಿನ ಮಾಹಿತಿಯನ್ನೊದಗಿಸುತ್ತವೆ. ಒರಿಸ್ಸದ ಅತ್ಯಂತ ಪ್ರಾಚೀನ ಶಾಸನಗಳೆಂದರೆ ಮೌರ್ಯರಾಜನಾದ ಅಶೋಕನ ಕಾಲದವು. ಭುವನೇಶ್ವರದ ಸಮೀಪದಲ್ಲಿರುವ ಧೌಲಿ ಎಂಬಲ್ಲಿಯೂ ಮತ್ತು ಗಂಜಾಂ ಜಿಲ್ಲೆಯ ಜೌಗಡ ಎಂಬಲ್ಲಿಯೂ ಇವು ದೊರೆತಿವೆ. ಇವುಗಳಿಂದ ಈ ಭಾಗ ಮೌರ್ಯಚಕ್ರಾಧಿಪತ್ಯಕ್ಕೆ ಸೇರಿದ್ದಿತೆಂದೂ ಧೌಲಿ ಮತ್ತು ಜೌಗಡಗಳಿಂದ ಇದನ್ನು ಇಬ್ಬರು ಪ್ರಾಂತಾಧಿಕಾರಿಗಳು ಆಳುತ್ತಿದ್ದರೆಂದೂ ಗೊತ್ತಾಗುತ್ತದೆ. ಚೇದಿವಂಶದ ರಾಜನಾದ ಖಾರವೇಲನ ಹಾಥಿ ಗುಂಫ ಶಾಸನವೇ (ಪ್ರ.ಶ.ಪೂ. 2ನೆಯ ಶತಮಾನ) ಒರಿಸ್ಸದ ಶಾಸನಗಳಲ್ಲಿ ಮುಂದಿನದು. ಈ ಶಾಸನ ಪುರಿ ಜಿಲ್ಲೆಯ ಉದಯಗಿರಿಗೆ ಸಮೀಪದಲ್ಲಿರುವ ಗುಹೆಯೊಂದರಲ್ಲಿ ದೊರೆಯಿತು. ಖಾರವೇಲನ ದಿಗ್ವಿಜಯಗಳನ್ನು ಇದು ಕಾಲಕ್ರಮವಾಗಿ ವರ್ಣಿಸುತ್ತದೆ. ಒರಿಸ್ಸ ದೇಶದ ಅಂದಿನ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ಈ ಶಾಸನ ಬಹು ಉಪಯುಕ್ತವಾಗಿದೆ.

ಶಿಲಾಶಾಸನಗಳು ಒರಿಸ್ಸದ ಪ್ರಾಚೀನ ಚರಿತ್ರೆಯನ್ನು ತಿಳಿಯಲು ಸಹಾಯಕವಾದರೆ, ತಾಮ್ರಶಾಸನಗಳು ಪ್ರ.ಶ. 4ನೆಯ ಶತಮಾನದಿಂದ ಈಚಿನ ಚರಿತ್ರೆಯನ್ನು ತಿಳಿಯಲು ಉಪಯುಕ್ತವಾಗಿವೆ. ಆಂಧ್ರದ ಶ್ರೀಕಾಕುಳಂ ಮತ್ತು ಗಂಜಾಂ ಜಿಲ್ಲೆಗಳಲ್ಲಿ ದೊರೆತಿರುವ ಶಿಲಾಶಾಸನಗಳು ದಕ್ಷಿಣ ಒರಿಸ್ಸದಲ್ಲಿ ಆಳಿದ ಮಥರರು, ವಸಿಷ್ಠರು ಮುಂತಾದ ರಾಜವಂಶಗಳ ಚರಿತ್ರೆಯನ್ನು ತಿಳಿಸುತ್ತವೆ. ಪುರಿ, ಕಟಕ್ ಮತ್ತು ಗಂಜಾಂ ಜಿಲ್ಲೆಗಳಲ್ಲಿ ದೊರಕಿರುವ ಶಿಲಾಶಾಸನಗಳು ಪ್ರಶ. 5–7ರವರೆಗೆ ಒರಿಸ್ಸದಲ್ಲಿ ಆಳಿದ ಶೈಲೋದ್ಭವ ರಾಜರ ಕಾಲದಲ್ಲಿದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗಳನ್ನು ವಿವರಿಸುತ್ತವೆ.

7ನೆಯ ಶತಮಾನದ ಅನಂತರದ ಚರಿತ್ರೆಯನ್ನು ತಿಳಿಸುವ ತಾಮ್ರ ಶಾಸನಗಳು ಒರಿಸ್ಸದ ಎಲ್ಲೆಡೆಯಲ್ಲಿಯೂ ಬಹುಸಂಖ್ಯೆಯಲ್ಲಿ ದೊರೆತಿವೆ. ಒರಿಸ್ಸದಲ್ಲಿ ಬ್ರಿಟಿಷರು ಆಳ್ವಿಕೆಯನ್ನು ಸ್ಥಾಪನೆ ಮಾಡುವವರೆಗೂ ಆಗಿಹೋದ ರಾಜವಂಶಗಳ ಚರಿತ್ರೆಯನ್ನು ಈ ಶಾಸನಗಳಿಂದ ತಿಳಿಯಬಹುದು. ಈ ಶಾಸನಗಳಲ್ಲಿ ಬಹುಪಾಲು ಭುವನೇಶ್ವರ, ಪುರಿ, ಮುಖಲಿಂಗಂ, ಶ್ರೀಕೂರ್ಮಂ ಮತ್ತು ಸಿಂಹಾಚಲಂ ದೇವಾಲಯಗಳಲ್ಲಿ ದೊರೆತಿವೆ. ಇವು ಪ್ರಮುಖ ರಾಜಮನೆತನಗಳಾದ ಗಂಗರು, ಗಜಪತಿಗಳು ಮುಂತಾದವರ ಚರಿತ್ರೆಯನ್ನು ತಿಳಿಸುವುದಲ್ಲದೆ, ಇತರ ರಾಜಮನೆತನಗಳಾದ ಭೌಮಕರರು, ಭಾಂಜರು ಮತ್ತು ಕೇಸರಿಗಳ ಸಾಧನೆಗಳನ್ನೂ ತಿಳಿಸುತ್ತವೆ.

ಒರಿಸ್ಸದಲ್ಲಿ ದೊರೆತಿರುವ ಪ್ರಾಚೀನತಮ ನಾಣ್ಯ ಕುಶಾನ ರಾಜವಂಶಕ್ಕೆ ಸೇರಿದುದು. ಪುರಿ ಮತ್ತು ಗಂಜಾಂ ಜಿಲ್ಲೆಗಳಲ್ಲಿ ಕಾನಿಷ್ಕ ಮತ್ತು ಹುವಿಷ್ಕರ ತಾಮ್ರದ ನಾಣ್ಯಗಳು ದೊರೆತಿವೆ. ಭುವನೇಶ್ವರಕ್ಕೆ ಸಮೀಪದಲ್ಲಿರುವ ಶಿಶುಪಾಲಘರ್ ಎಂಬಲ್ಲಿ ಆದ ಅಗೆತದಲ್ಲಿ ಒಂದು ಕಡೆ ಕುಶಾನ ಚಿಹ್ನೆಯೂ ಮತ್ತೊಂದು ಕಡೆ ರೋಮನ್ನರದೆಂದು ಹೇಳಬಹುದಾದ

ಚಿಹ್ನೆಯೂ ಉಳ್ಳ ಚಿನ್ನದ ನಾಣ್ಯವೊಂದು ಸಿಕ್ಕಿದೆ. ಈ ನಾಣ್ಯ ಕುಶಾನ ರಾಜವಂಶದ ವಾಸುದೇವನ ನಾಣ್ಯವೆಂದು ಆಲ್ತೇಕರರು ನಿರ್ಧರಿಸಿದ್ದಾರೆ. ಈ ಕುಶಾನರ ನಾಣ್ಯಗಳಿಂದ ಒರಿಸ್ಸ ಪ್ರಸಕ್ತಶಕೆಯ ಮೊದಲ ಶತಮಾನಗಳಲ್ಲಿ ಕುಶಾನರ ಆಳ್ವಿಕೆಗೆ ಒಳಪಟ್ಟಿದ್ದಿತೆಂದು ಗೊತ್ತಾಗುತ್ತದೆ.

ಮಯೂರ್ ಭಂಜ್‌ನಲ್ಲಿ ದೊರೆತಿರುವ ಚಿನ್ನದ ನಾಣ್ಯಗಳು ಗುಪ್ತರಾಜವಂಶಕ್ಕೆ ಸೇರಿದವು. ಇವುಗಳಿಂದ ಒರಿಸ್ಸದಲ್ಲಿ ಗುಪ್ತರ ಪ್ರಭಾವವಿದ್ದುದು ಗೊತ್ತಾಗುತ್ತದೆ. ಟಂಕೆಗಳೆಂದು ಕರೆಯಲಾಗುವ ನಾಣ್ಯಗಳು ಒರಿಸ್ಸದ ಅನೇಕ ಕಡೆಗಳಲ್ಲಿ ದೊರೆತಿವೆ. ಇವನ್ನು ವಿದ್ವಾಂಸರು ಪುರಿ-ಕುಶಾನ ನಾಣ್ಯವೆಂದು ಕರೆಯುತ್ತಾರೆ. ಏಕೆಂದರೆ ಇವಕ್ಕೂ ಕುಶಾನರ ನಾಣ್ಯಗಳಿಗೂ ಬಹು ಹೋಲಿಕೆಗಳಿವೆ. ಈ ನಾಣ್ಯಗಳು ಒರಿಸ್ಸದಲ್ಲಿ ಪ್ರ.ಶ. 4-7ನೆಯ ಶತಮಾನದವರೆಗೆ ಆಳಿದ ಸ್ಥಳೀಯ ರಾಜರುಗಳ ನಾಣ್ಯಗಳೆಂದು ಹೇಳಬಹುದು.

ಗಂಗರ ಚಿನ್ನದ ನಾಣ್ಯಗಳನ್ನು ಫನಂ ಎಂದು ಕರೆಯುತ್ತಾರೆ. ಇವುಗಳ ಮೇಲೆ ಗಂಗರ ರಾಜಚಿಹ್ನೆಯಾದ ವೃಷಭದ ಚಿತ್ರವಿದೆ. ಗಂಗರಾಜರ ಕಾಲದಲ್ಲಿ ಒರಿಸ್ಸದ ಆರ್ಥಿಕ ಸ್ಥಿತಿ ಎಷ್ಟೊಂದು ಚೆನ್ನಾಗಿದ್ದಿತೆಂದು ಈ ಚಿನ್ನದ ನಾಣ್ಯಗಳಿಂದ ತಿಳಿಯುತ್ತದೆ. ಇವಲ್ಲದೆ ದೆಹಲಿಯ ಸುಲ್ತಾನರ ಅನೇಕ ನಾಣ್ಯಗಳೂ ಮತ್ತು ಮೊಗಲರ ಅನೇಕ ನಾಣ್ಯಗಳೂ ಒರಿಸ್ಸದ ವಿವಿಧ ಭಾಗಗಳಲ್ಲಿ ದೊರೆತಿವೆ. (ಎಸ್.ಯು.ಕೆ.)

**ಒರಿಸ್ಸ ನೃತ್ಯ ಸಂಪ್ರದಾಯ:** ಭರತನಾಟ್ಯ, ಕಥಕ್, ಕಥಕಳಿ, ಮಣಿಪುರಿಗಳಂತೆ ಇದು ಒಂದು ಸ್ವತಂತ್ರ್ಯ ನೃತ್ಯಕಲಾ ಪ್ರಕಾರ ಎಂಬ ವಾದವನ್ನು ಒಪ್ಪುವುದು ಕಷ್ಟವಾದರೂ ನೃತ್ಯಕಲೆ ಒರಿಸ್ಸದಲ್ಲಿ ಬಹುಪ್ರಾಚೀನ ಕಾಲದಿಂದಲೂ ಪುಷ್ಟವಾಗಿ ಬೆಳೆದಿದೆಯೆಂಬುದನ್ನೂ ಸ್ವಲ್ಪ ಮಟ್ಟಿಗೆ ಅದರ ಶಾಸ್ತ್ರ, ಕಲೆಗಳಲ್ಲಿನ ಪ್ರಾದೇಶಿಕ ವೈಶಿಷ್ಟ್ಯಗಳ ಮೂಲಕ ಇತರ ಸಂಪ್ರದಾಯಕಗಳಿಗಿಂತ ಸ್ವಲ್ಪ ಭಿನ್ನತೆಯನ್ನು ಪಡೆದುಕೊಂಡಿದೆಯೆಂಬುದನ್ನೂ ಒಪ್ಪಿಕೊಳ್ಳಬಹುದು. ಭರತಮುನಿ ತನ್ನ ನಾಟ್ಯಶಾಸ್ತ್ರದಲ್ಲಿ ಆವಂತಿ, ದಾಕ್ಷಿಣಾತ್ಯ, ಪಾಂಚಾಲೀ ಮತ್ತು ಓಡ್ರಮಾಗಧೀ ಎಂಬ 4 ನಾಟ್ಯರೀತಿಗಳನ್ನು ಹೇಳಿದ್ದಾನೆ. ಪ್ರಸಿದ್ಧವಾದ ಹಾಥಿಗುಂಫ ಶಾಸನದಲ್ಲಿ ಗಾಂಧರ್ವ ವಿದ್ಯೆಯ ಉಲ್ಲೇಖವಿದೆ. ಕೇಸರಿ ಸಂತತಿಯಲ್ಲಿ ಗಾಂಧರ್ವ ಕೇಸರಿ 851-68ರಲ್ಲಿಯೂ ಶೈವತಂತ್ರ ನೃತ್ಯಕೇಸರಿ 949-65ರಲ್ಲಿಯೂ ಓಡ್ರದೇಶವನ್ನಾಳಿದರು. ನೃತ್ಯಕಲೆಯನ್ನು ಶೈವತಂತ್ರ ರಾಜರ ವಿದ್ಯಾಭ್ಯಾಸದ ಅವಿಭಾಜ್ಯ ಅಂಗವಾಗಿ ವಿಧಿಸುತ್ತದೆ. ಕೇಸರಿ ಸಂತತಿಯವರೂ ಜೋಡ ಗಂಗದೇವನ ಸಂತತಿಯವರೂ ದೇವಾಲಯಗಳಲ್ಲಿ ನೂರಾರು ನಾಟ್ಯ ಮಂದಿರಗಳನ್ನು ಕಟ್ಟಿಸಿದುದಲ್ಲದೆ ಸ್ವತಃ ನಾಟ್ಯಕಲೆಯ ಪ್ರೇಮಿಗಳೂ ಪೋಷಕರೂ ಆಗಿದ್ದರು. ಪುರಿಯ ಜಗನ್ನಾಥ ದೇವಾಲಯ ಇಂದಿಗೂ ರಂಗಪೂಜೆಯ ಅಂಗವಾಗಿ ಶುದ್ಧವಾದ ನಾಟ್ಯಸಂಪ್ರದಾಯವನ್ನು ಉಳಿಸಿಕೊಂಡು ಬಂದಿದೆ.

ಒರಿಸ್ಸದ ಶಿಲ್ಪದಲ್ಲಿ ನಾಟ್ಯಕಲೆಯನ್ನು ವಿಪುಲವಾಗಿ ಉಳಿಸಿಕೊಂಡು ಬರಲಾಗಿದೆ. ಹೀಗೆ ಖಾಂದಗಿರಿ ಉದಯಗಿರಿಗಳ ಜೈನ ಮಹಾದೇವಾಲಯಗಳು, ಭರತೇಶ್ವರದ ಶಿವದೇವಾಲಯ, ಪರಶುರಾಮೇಶ್ವರ ದೇವಾಲಯ, ಭುವನೇಶ್ವರದ ಮುಕ್ತೇಶ್ವರ ದೇವಾಲಯ, ರಾಜಾರಾಣಿ ದೇವಾಲಯ, ಪುರಿಯ ಜಗನ್ನಾಥ ದೇವಾಲಯ, ಕೋಣಾರ್ಕದ ಪ್ರಸಿದ್ಧ ಸೂರ್ಯದೇವಾಲಯ ಮುಂತಾದುವುಗಳಲ್ಲಿ ನೃತ್ಯಮಗ್ನವಾದ ಹಲವು ಸುಂದರ ಶಿಲ್ಪಗಳು ದೊರೆಯುತ್ತವೆ. 16ನೆಯ ಶತಮಾನದಲ್ಲಿ ಪ್ರತಾಪರುದ್ರದೇವನ ಮಂತ್ರಿಯಾಗಿದ್ದ ರಾಯರಮಾನಂದ ಸಂಸ್ಕೃತ ನಾಟಕಕಾರನಾಗಿದ್ದುದಲ್ಲದೆ ಸ್ವತಃ ನರ್ತಕನಾಗಿದ್ದು ಜವಲು ದೇವದಾಸಿಯರಿಗೆ ನಾಟ್ಯಾಚಾರ್ಯನಾಗಿದ್ದ. ಒರಿಸ್ಸ ನೃತ್ತದಲ್ಲಿ ಅಭಿನಯವನ್ನು ಸೇರಿಸಿ ನೃತ್ಯವನ್ನಾಗಿಸಿದಾತ ಇವನೇ ಎಂದು ನಂಬಲಾಗಿದೆ. 13ನೆಯ ಶತಮಾನದಲ್ಲಿ ಕೋಣಾರ್ಕದ ದೇವಾಲಯವನ್ನು ಕಟ್ಟಿಸಿದ ನರಸಿಂಗದೇವನ ಮಗಳು ಚಂದ್ರಾದೇವಿ ಪ್ರಸಿದ್ಧ ನರ್ತಕಿಯಾಗಿದ್ದಳು. ಗಜಪತಿ ಕಪಿಲೇಂದ್ರ ಸಂಗೀತ ನೃತ್ಯ ಕಲೆಗಳ ಪೋಷಕನಾಗಿದ್ದು ಪರಶುರಾಮ ವಿಜಯವೆಂಬ ನೃತ್ತನಾಟಕವನ್ನು ಬರೆದು ಪುರಿಯ ಜಗನ್ನಾಥ ಮಂದಿರದಲ್ಲಿ ಅನೂಚಾನವಾಗಿ ಅಭಿನೀತವಾಗಲು ಏರ್ಪಾಡು ಮಾಡಿದ. 17, 18ನೆಯ ಶತಮಾನಗಳಲ್ಲಿ ವೈಷ್ಣವ ಸಂತರು ರಾಧಾಕೃಷ್ಣಪ್ರೇಮವನ್ನು ಅಮರವಾಗಿಸಿ ರಚಿಸಿದ ಹಾಡುಗಳಿಗೆ ಅಭಿನಯವನ್ನು ಅಳವಡಿಸಿ ಗೊತಿಪುವ ನಟರು ಲಾಸ್ಯತಾಂಡವ ಸಂಪ್ರದಾಯಗಳಲ್ಲಿ ಬೆಳೆಸಿಕೊಂಡು ಬಂದರು.

ಒರಿಸ್ಸದಲ್ಲಿ ನೃತ್ಯಸಂಪ್ರದಾಯ ಶೈವ ವೈಷ್ಣವ ಮತ್ತು ಬೌದ್ಧ ಧರ್ಮಗಳ ಪ್ರಭಾವದಿಂದ ಬೆಳೆಯಿತು. ವೈಷ್ಣವ ಮತದಲ್ಲಿ ಮುಖ್ಯ ಚೈತನ್ಯಪಂಥದ ರಾಧಾಕೃಷ್ಣರ ಪ್ರೇಮ ವಿಷಯಕವಾದ ಅಭಿನಯಪೂರ್ಣ ಲಾಸ್ಯಪ್ರಕಾರಗಳು ನೃತ್ಯಕಲೆಯನ್ನು ಬೆಳೆಸಿದರೆ ಶೈವ ಬೌದ್ಧ ಧರ್ಮಗಳಲ್ಲಿ ತಂತ್ರಶಾಸ್ತ್ರದಿಂದ ಪ್ರಭಾವಿತವಾದ ನೃತ್ಯಸಂಪ್ರದಾಯ ಬೆಳೆಯಿತು. ಬೌದ್ಧಮತೀಯ ನೃತ್ಯಶೈಲಿ ಮುಖ್ಯವಾಗಿ ಥೇರಗಾಥಾ ಮತ್ತು ಥೇರಿಗಾಥಾಗಳಿಂದ ಸ್ಫೂರ್ತಿ ಪಡೆದು ವಜ್ರಯಾನ ಪದ್ಧತಿಯಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿತು. ಇದೇ ಅನಂತರದ ಟಿಬೆಟ್ ದೇಶದ ಪ್ರೇತನೃತ್ಯವಾಗಿ ಪರಿಣಮಿಸಿತೆನ್ನುತ್ತಾರೆ. ಹೀಗೆ ನೃತ್ಯವಿಷಯವುಳ್ಳ ಕಾಲಚಕ್ರ, ಹೇರುಕ, ಅಚಲ, ವಜ್ರಭೈರವ, ಸಂಭಾರ, ಮಹಾಕಾಲ ಮೊದಲಾದ ಬುದ್ಧ ಶಿಲ್ಪಗಳು ಒರಿಸ್ಸದಲ್ಲಿ ವಜ್ರಯಾನ, ಕಾಲಚಕ್ರಯಾನ, ಸಹಜಯಾನಗಳ ಪ್ರಭಾವವನ್ನು ಸೂಚಿಸುತ್ತವೆ. ಇವು ಶೈವರ ನಟರಾಜ ಕಲ್ಪನೆಯಿಂದ ಸ್ಫೂರ್ತಿ ಪಡೆದು ಜನ್ಮತಾಳಿದುವೆಂದು ಸ್ಥೂಲವಾಗಿ ಹೇಳಬಹುದು. ಶೈವರ ಕಾಪಾಲಿಕ, ಮತ್ತಮಯೂರ, ಪಾಶುಪತ, ತಾಂತ್ರಿಕ ಪಂಥಗಳು ನೃತ್ಯಕಲೆಯ ಶಿಲ್ಪಗಳಲ್ಲಿ ಪ್ರಭಾವ ಬೀರಿರುವುದನ್ನು ಅಲ್ಲಲ್ಲಿ ಕಾಣಬಹುದು. ಇದಲ್ಲದೆ ಜಯದೇವನ ಗೀತಗೋವಿಂದದ ಅಷ್ಟಪದಿ ಆಟ ಒರಿಸ್ಸ ನೃತ್ಯಕಲೆಯ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ.

ಒರಿಸ್ಸ ನೃತ್ಯಕಲೆಗೆ ಮಹಾದೇವ ಮಹಾಪಾತ್ರನ ಅಭಿನಯಚಂದ್ರಿಕಾ, ಯದುನಾಥರಾಜಸಿಂಹನ ಸಂಗೀತಾಭಿನಯ ದರ್ಪಣಗಳೇ ಮೂಲ ಆಕರಗಳೆಂದು ಹೇಳಬೇಕು. ನಾರಾಯಣ ಮಿಶ್ರನ ದೇವದಾಸೀ ನೃತ್ಯಪದ್ಧತಿ, ಮಧು ಪಟ್ನಾಯಕನ ನಾಚುನಿವಿಧಿ, ಮುಕ್ತಾಮಹರಿಯ ನೀಲಾದ್ರಿನಾಚ ಎಂಬ ಅಪ್ರಕಟಿತ ಗ್ರಂಥಗಳು ದೇವದಾಸಿಯರ ನೃತ್ಯಕಲೆಯ ಮೇಲೆ ಸಾಕಷ್ಟು ಪ್ರಭಾವವನ್ನು ಮೂಡಿಸಿವೆ.

ಒರಿಸ್ಸ ನೃತ್ಯ ತನ್ನದೇ ಆದ ಕೆಲವು ಹಸ್ತಮುದ್ರೆಗಳು, ಭಂಗಿಗಳು, ಸ್ಥಾನಕಗಳು, ಭ್ರಮರಿಗಳು ಮತ್ತು ಚಾಲನಿಕಗಳನ್ನು ಸೃಷ್ಟಿಸಿಕೊಂಡು ಅಲ್ಪಸ್ವಲ್ಪ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಒರಿಸ್ಸ ನೃತ್ಯಸಂಪ್ರದಾಯದಲ್ಲಿ ನರ್ತಕಿ ಮೊದಲು ಭೂಮಿ ಮತ್ತು ನಾಟ್ಯಾಚಾರ್ಯರನ್ನು ವಂದಿಸಿ ರಂಗಾಧಿಪತಿಗಳಿಗೆ ನಮಿಸುತ್ತಾಳೆ. ಸಂಗೀತ ವಾದ್ಯಗಳಿಗೆ ನಮಿಸಿ ಅನಂತರ ವಿಘ್ನನಿವಾರಣಕ್ಕಾಗಿ ಗಣೇಶವಂದನೆಯನ್ನು ಕೈಗೊಳ್ಳುತ್ತಾಳೆ. ಇದಾದ ಅನಂತರ ಕಚೇರಿ ವಟುಕಭೈರವ ಪೂಜಾ ಸಂಕೇತವಾದ ವಟುನೃತ್ಯದಿಂದ ಪ್ರಾರಂಭವಾಗುತ್ತದೆ; ಇದರಲ್ಲಿ ಕ್ಲಿಷ್ಟವಾದ ತಾಂಡವನೃತ್ಯ ವಿನ್ಯಾಸಗಳೂ ಕ್ಲಿಷ್ಟ ಭಂಗಿಗಳೂ ಇರುತ್ತವೆ. ಇದರ ಅನಂತರ ಪಲ್ಲವಿಯ ನೃತ್ತಲಾಸ್ಯಭಂಗಿಗಳಿಂದ ಜರುಗುತ್ತದೆ. ಇದು ಕಚೇರಿಯ ಮುಖ್ಯ ರಸಕ್ಕೆ ಕರೆದೊಯ್ಯಲು ಪೋಷಕವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಮದ್ದಳೆಯ ಪಾಟಾಕ್ಷರಗಳಿಗೆ ಕುಣಿಯುವಂಥದು ವಾದ್ಯಪಲ್ಲವಿ; ಹಾಡಿಕೆಗೆ ಕುಣಿಯುವಂಥದು ಸ್ವರಪಲ್ಲವಿ; ಎರಡರಲ್ಲಿಯೂ ಪಾಟಾಕ್ಷರಗಳೇ ಪ್ರಧಾನ. ಇದರ ಅನಂತರ ರಸನೃತ್ಯ ನಡೆಯುತ್ತದೆ. ಇದರಲ್ಲಿ ವನಮಾಲೀದಾಸ, ಉಪೇಂದ್ರಭಂಜ್, ಬಲದೇವ ರಥ ಮೊದಲಾದವರ ರಚನೆಗಳನ್ನು ಮತ್ತು ಜಯದೇವನ ಗೀತಗೋವಿಂದದ ಅಷ್ಟಪದಿಗಳನ್ನು ಆರಿಸಿಕೊಂಡು ಕಾವ್ಯರಸವನ್ನು ನೃತ್ತರಸ ಗೀತರಸಗಳಿಂದ ಬೆಳೆಸಲಾಗುತ್ತದೆ. ಇವುಗಳಲ್ಲಿ ಪ್ರತಿ ನುಡಿಯ ಅನಂತರವೂ ನರ್ತಕಿ ದ್ರುತಗತಿಯ ನೃತ್ತವನ್ನು ಮಾಡುತ್ತಾಳೆ. ಕಚೇರಿಯ ಅಂತ್ಯ ಭಾವನೃತ್ತದಿಂದಾಗುತ್ತದೆ. ಇದನ್ನು ಸಾಮಾನ್ಯವಾಗಿ ಝೂಲ, ಪಹಪಟತಾಳಗಳ ದ್ರುತಗತಿಯಲ್ಲಿ ಪಾಟಪ್ರಧಾನವಾಗಿ ನೃತ್ತದಿಂದ ಮಾಡಲಾಗುತ್ತದೆ. ಶಾಸ್ತ್ರೀಯ ಒರಿಸ್ಸ ನೃತ್ತದಲ್ಲಿ ಸ್ಥಾಯಿ, ನಟವರ, ಚೌಕ, ಚೀರ, ಲಕ್ಷ್ಮೀ, ಬೈಠಿ, ಚೌರಸ್ ಮುಂತಾದ ಭಂಗಿಗಳನ್ನು ಪ್ರಧಾನವಾಗಿ ಬಳಸಲಾಗುತ್ತದೆ. ಗ್ರಂಥಪರಂಪರೆಯ ಇಪ್ಪತ್ತಾರು ಅಸಂಯುತ ಹಸ್ತಗಳೂ ಗುರು ಪರಂಪರೆಯಿಂದ ಬಂದ ಎಂಟು ಅಸಂಯುತ ಹಸ್ತಗಳೂ ಸೇರಿ ಒಟ್ಟು ಮೂವತ್ತುನಾಲ್ಕು ಅಸಂಯುತ ಹಸ್ತಗಳೂ ಅನೇಕ ನಾನಾರ್ಥ ಹಸ್ತಗಳೂ ಈ ನೃತ್ತಪರಂಪರೆಯಲ್ಲಿ ಸೇರಿವೆ. ಇವುಗಳಲ್ಲಿ ಬೇರೆ ಬೇರೆ ಲಕ್ಷಣಗಳಿರುವ ಹಲವಕ್ಕೆ ಒಂದೇ ಹೆಸರುಗಳೂ ಒಂದೇ ಲಕ್ಷಣಗಳಿರುವ ಹಲವಕ್ಕೆ ಬೇರೆ ಬೇರೆ ಹೆಸರುಗಳೂ ನಾಟ್ಯಶಾಸ್ತ್ರ, ಅಭಿನಯದರ್ಪಣ, ಸಂಗೀತರತ್ನಾಕರ, ಭರತಾರ್ಣವ, ಸಂಗೀತಸುಧಾಕರ ಮುಂತಾದ ಗ್ರಂಥಗಳಲ್ಲಿ ದೊರೆಯುತ್ತವೆ. ಕಥಕಳಿಯಲ್ಲಿ ಬಳಸಲಾಗುವ ಕೆಲವು ಹಸ್ತಮುದ್ರೆಗಳೂ ಇಲ್ಲಿ ನಾಮಾಂತರದಿಂದ ಸೇರಿಹೋಗಿವೆ. ಹಸ್ತಮುದ್ರೆಗಳಿಗೆ ವಿನಿಯೋಗಗಳೂ ಅಲ್ಲಲ್ಲಿ ಬೇರೆಯಾಗಿವೆ. ಹೀಗೆ ಒರಿಸ್ಸ ನಾಟ್ಯಕಲೆ ನೃತ್ತಕ್ಕಿಂತ ನೃತ್ಯ ಪ್ರಧಾನವಾಗಿದೆ.

ಭರತನಾಟ್ಯದ ದೇವದಾಸಿ ಪದ್ಧತಿ ಒರಿಸ್ಸದಲ್ಲಿ ಮಹರಿಗಳಿಂದ ಮುಂದುವರಿದಿದೆಯೆನ್ನಬಹುದು. ಮಹರಿಗಳ ಕಲ್ಪನೆ ಮುಖ್ಯವಾಗಿ ಕರ್ನಾಟಕದಿಂದಲೂ ಸ್ವಲ್ಪಮಟ್ಟಿಗೆ ತಮಿಳುನಾಡಿನಿಂದಲೂ ಬಂದುದು. ಈ ಪ್ರಾಂತ್ಯದಲ್ಲಿ ನೃತ್ತಸಂಪ್ರದಾಯ ಕಳೆದ ಸುಮಾರು ಸಾವಿರ ವರ್ಷಗಳಿಂದಲೂ ಉಳಿದು ಬೆಳೆದುಕೊಂಡು ಬರಲು ಮಹರಿಗಳು ಬಹುಮಟ್ಟಿಗೆ ಕಾರಣರಾಗಿದ್ದಾರೆ. ದೇವಾಲಯಗಳಲ್ಲಿ ನೃತ್ಯ ಸೇವೆಗೆಂದೇ ಮೀಸಲಾದ ಇವರಲ್ಲಿ ಬಾಹರ್ ಗನೀ (ಗಣಿಕಾ), ಭೀತರ್ ಗನೀ ಎಂಬ ಎರಡು ಬಗೆಯಿದೆ. ಇದರಲ್ಲಿ ಬಾಹರ್‌ಗನಿಗಳಿಗೆ ಗರ್ಭಗುಡಿಯ ಒಳಗೆ ಪ್ರವೇಶವಿಲ್ಲ ಹಾಗೂ ಅವರು ರಾಜದಾಸಿ, ಅಲಂಕಾರದಾಸಿಯರೂ ಆಗಿರಬಹುದು; ಆದರೆ ಭೀತರ್‌ಗನಿಗಳು ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸಿ ಪವಿತ್ರಾತ್ಮರಾಗಿರಬೇಕು. ಇವರಿಗೆ ಪರಮಾತ್ಮನಲ್ಲದೆ ಅನ್ಯಪುರುಷ ಸಂಪರ್ಕವಿಲ್ಲ. ಇವರು ಗಾಯಕಿಯರೊಡನೆ ರಾಜಗುರುವಿನ ಮಾರ್ಗದರ್ಶನದಲ್ಲಿ ದೇವಾಲಯದ ಗರುಡಸ್ತಂಭದ

ಬಳಿಗೆ ಬಂದು ಅಲ್ಲಿ ಅವನ ನೇತೃತ್ವದಲ್ಲಿ ದೈವವಂದನೆ, ರಾಜಗುರುವಂದನೆಯಾದ ಅನಂತರ ನರ್ತಿಸುತ್ತಾರೆ. ಸಾಮಾನ್ಯವಾಗಿ ಚೌಕ, ಮೀನದಂಡಿ, ವರ್ತುಲ, ಫೇರ ಮತ್ತು ದ್ವಿಮುಖ ಎಂಬ ಐದಂಕದ ವಿನ್ಯಾಸಗಳಲ್ಲಿಯೂ ಗೋಯ್‌ಥಿ, ಚಪುವನಿ ಕಡಾಫೋಸರ, ಥಿಯಾಪುಚಿ ಮತ್ತು ಪುಹಾನಿಯ ಎಂಬ ಆರು ಚಾರೀಕ್ರಮಗಳಲ್ಲಿಯೂ ಮಹರಿಯ ನೃತ್ಯ ನಡೆಯುತ್ತದೆ; ಇತರ ದೇವಸ್ಥಾನಗಳಲ್ಲಿ ಅಲ್ಲಲ್ಲಿ ರೂಢಿಯಲ್ಲಿದ್ದರೂ ಶೈವ ಹಾಗೂ ವೈಷ್ಣವ ದೇವಾಲಯಗಳಲ್ಲಿಯೇ ಮಹರೀ ಪದ್ಧತಿ ಹೆಚ್ಚು ಬಳಕೆಯಲ್ಲಿದ್ದು ಪುರಿಯ ಜಗನ್ನಾಥ ದೇವಾಲಯದಲ್ಲಿ ಅತ್ಯಂತ ಪ್ರಸಿದ್ಧವಾಗಿತ್ತು. ಭರತನಾಟ್ಯದಲ್ಲಿ ಆದಂತೆ ಇಲ್ಲಿಯೂ ಮಹರಿಗಳು ವೇಶ್ಯಾವೃತ್ತಿಗೆ ಇಳಿದುದರಿಂದ ಕಲೆಗೆ ಅಪಾರ ಹಾನಿತಟ್ಟಿತು.

ಒರಿಸ್ಸ ದೇಶದಲ್ಲಿ ಹಲವು ಸುಂದರವಾದ ಜಾನಪದ ನೃತ್ತಪ್ರಕಾರಗಳಿವೆ. ಇವುಗಳಲ್ಲಿ ಸಂಭಾಲಪುರದ ಕರಮಾ ಮತ್ತು ದಲಖಾಯ್‌ಗಳು ಬಹುಸುಂದರವೂ ಪ್ರಸಿದ್ಧವೂ ಆಗಿವೆ. ಕೇಲಿಕಡ, ದಸರ, ಭಾಯಿಜಾಂತಿಯಾ, ಫಾಗುನ್ ಪುನಿ ಮುಂತಾದ ಸಂದರ್ಭಗಳಲ್ಲಿ ಮಯೂರಭಂಜ್, ಸುಂದರಘಡ, ಬೋಲಂಗೀರ್ ಮುಂತಾದ ಗುಡ್ಡಗಾಡುಗಳಲ್ಲಿ ಕರಮಾ ನೃತ್ತವನ್ನು ಖರಿಯಾ, ಕಿಸಾನ್ ಮತ್ತು ಓರಾನ್ ಬುಡಕಟ್ಟಿನವರೂ ಇತರರೂ ಮಾಡುತ್ತಾರೆ. ದಲಖಾಯಿ ನೃತ್ತವನ್ನು ಇದೇ ಸಂದರ್ಭಗಳಲ್ಲಿ ಬಿಂಝಾಲ್, ಸೌರ, ಕುಡನಿರ್ಧ ಪ್ರದೇಶಗಳಲ್ಲಿಯೂ ಕುಣಿಯಲಾಗುತ್ತದೆ. ಒರಿಸ್ಸ ದೇಶದಲ್ಲಿ ರಾಸ್ ಮತ್ತು ಗರಬಾ ನೃತ್ತಗಳು ಸುಂದರವೂ ಪ್ರಸಿದ್ಧವೂ ಆಗಿವೆ. (ಆರ್.ಎಸ್.ಎನ್.)

**ಒರೆ:** ಖನಿಜದ ಪುಡಿಯನ್ನು ನಯವಿಲ್ಲದ ಪಿಂಗಾಣಿ ತಟ್ಟೆಯ ಮೇಲೆ ಉಜ್ಜಿದಾಗ ಕಾಣುವ ಬಣ್ಣ (ಸ್ಟ್ರೀಕ್). ಈ ತಟ್ಟೆಯ ಹೆಸರು ಒರೆಗಲ್ಲು (ಸ್ಟ್ರೀಕ್ ಪ್ಲೇಟ್). ಹಾಲುಕಾಗದದ ಮೇಲೆ ಖನಿಜವನ್ನು ಇಟ್ಟು ಪುಡಿಮಾಡುವುದರಿಂದಲೂ ಇದರ ಪರೀಕ್ಷೆ ಸಾಧ್ಯವಿದೆ. ಎಲ್ಲ ಲೋಹಗಳೂ ಲೋಹಕಾಂತಿ ಇರುವ ಬಹುತೇಕ ಖನಿಜಗಳೂ ಇಡಿಯಾಗಿರಲಿ ಪುಡಿಯಾಗಿರಲಿ ಒಂದೇ ಬಣ್ಣವನ್ನು ಪ್ರದರ್ಶಿಸುತ್ತವೆ. ಆದರೆ ಸಿಲಿಕೇಟುಗಳು ಮತ್ತು ಲೋಹಕಾಂತಿ ಇರದ ಬಹುತೇಕ ಖನಿಜಗಳು ಈ ಸನ್ನಿವೇಶಗಳಲ್ಲಿ ಪ್ರದರ್ಶಿಸುವ ಬಣ್ಣಗಳು ಬೇರೆ ಬೇರೆ.

ಲೋಹಖನಿಜಗಳ ಅಧ್ಯಯನದಲ್ಲಿ ಒರೆ ಬಲುಮುಖ್ಯ ಭೌತಲಕ್ಷಣ. ಅದು ಇತರ ಲಕ್ಷಣಗಳನ್ನೆಲ್ಲ ಮೆಟ್ಟಿ ಎದ್ದುನಿಲ್ಲುತ್ತದೆ. ಇದರ ಪರಿಶೀಲನೆಯಿಂದ ಲೋಹದ ಪರಿಶುದ್ಧತೆಯನ್ನು ಗ್ರಹಿಸಬಹುದು. ಒರೆಗಲ್ಲಿಗೆ ಉಜ್ಜಿ ಚಿನ್ನದ ಪರಿಶುದ್ಧತೆಯನ್ನು ಪರೀಕ್ಷಿಸುವುದು ಇದಕ್ಕೊಂದು ನಿದರ್ಶನ.

ಕೆಲವು ಖನಿಜಗಳಲ್ಲಿ ಒರೆಗೂ ಖನಿಜದ ಬಣ್ಣಕ್ಕೂ ನಿರ್ದಿಷ್ಟ ವ್ಯತ್ಯಾಸ ತೋರಿ ಬರುವುದುಂಟು. ಇಂಥವುಗಳಲ್ಲಿ ಮುಖ್ಯವಾದುವನ್ನು ಇಲ್ಲಿ ಹೆಸರಿಸಿದೆ.

| ಖನಿಜ | ಬಣ್ಣ | ಒರೆ |
|---|---|---|
| ಹಿಮಟೈಟ್ | ಕಪ್ಪು | ಚೆರಿಕೆಂಪು |
| ಚಾಲ್ಕೊಪೈರೈಟ್ | ಹಳದಿ | ಹಸಿರುಮಿಶ್ರಿತ ಕಪ್ಪು |
| ಸ್ಫಾಲರೈಟ್ | ಹಳದಿ, ಕಂದು | ಕಂದು ಛಾಯೆಯಿಂದ ತೆಳುಹಳದಿ |
| ಸಿನ್ನಬಾರ್ | ಕಾರ್ಕ್‌ನಿಯಲ್ ಕೆಂಪು | ಸ್ಕಾರ್ಲೆಟ್ |
| ರಿಯಾಲ್ಗರ್ | ಅರೋರ ಕೆಂಪು ಕಿತ್ತಳೆ | ಅದೇ ತೆಳು ಛಾಯೆ |
| ಆರ್ಪಿಮೆಂಟ್ | ನಿಂಬೆ ಹಳದಿ | ಅದೇ ತೆಳು ಛಾಯೆ |

(ಎಂ.ಎಸ್.ಎಸ್.)

**ಒರೆಸ್ಟೀಸ್:** ಗ್ರೀಕ್ ಮಹಾಪುರಾಣಗಳ ಪ್ರಕಾರ ಆಗಮೆಮ್ನಾನ್ ಮತ್ತು ಕ್ಲೈಟಮ್‌ನೆಸ್ಟ್ರರ ಮಗ. ಇಫಿಜೀನಿಯ ಮತ್ತು ಎಲೆಕ್ಟ್ರರ ಸಹೋದರ. ತಾಯಿ ಕ್ಲೈಟಮ್‌ನೆಸ್ಟ್ರ ತನ್ನ ಪ್ರಿಯ ಈಜಿಸ್ತಸನೊಡಗೂಡಿ ಗಂಡ ಆಗಮೆಮ್ನಾನ್‌ನನ್ನು ಕೊಲೆ ಮಾಡಿದಾಗ ಈತ ಸಹೋದರಿ ಎಲೆಕ್ಟ್ರಳ ಸಹಾಯದಿಂದ ಜೀವಸಹಿತ ಪಾರಾಗಿ ಹೋಗಿ ಸ್ಟ್ರೋಫಿಯಸ್ ದೊರೆಯ ಆಶ್ರಯ ಪಡೆದು ಅಲ್ಲೇ ಬೆಳೆಯುತ್ತಾನಲ್ಲದೆ ಆ ದೊರೆಯ ಮಗನಾದ ಪೈಲಾಡ್ಸನ ಆಪ್ತಮಿತ್ರನಾಗುತ್ತಾನೆ. ಕೊನೆಗೊಮ್ಮೆ ಆರ್ಗಾಸಿಗೆ ಬಂದು ತಂದೆಯನ್ನು ಕೊಂದ ತನ್ನ ತಾಯಿ ಮತ್ತು ಆಕೆಯ ಪ್ರಿಯನನ್ನು ಕೊಲೆಮಾಡುತ್ತಾನೆ. ತಾಯಿಯನ್ನು ಹತಮಾಡಿದ ಪಾಪ ತಟ್ಟಲಾಗಿ ಹುಚ್ಚನಂತಾಗಿ ಉಗ್ರದೇವತೆಗಳ ಪೀಡನೆಗೊಳಗಾಗಿ ದೇಶ ದೇಶ ತೊಳಲುತ್ತಾನೆ. ಕೊನೆಗೊಮ್ಮೆ ಅಥೆನ್ಸಿಗೆ ಬಂದಾಗ ಅವನಿಗೆ ಪಾಪವಿಮೋಚನೆಯಾಗುತ್ತದೆ. ಪ್ರಾಯಶ್ಚಿತ್ತಕ್ಕಾಗಿ ಟಾರಿಸ್‌ನಲ್ಲಿದ್ದ ಆರ್ಟೆಮಿಸಳ ಪ್ರತಿಮೆಯನ್ನು ತರಲು ಹೋದಾಗ ಅಲ್ಲಿ ತನ್ನ ಸಹೋದರಿ ಇಫಿಜೀನಿಯಳನ್ನು ಗುರುತಿಸುತ್ತಾನೆ. ಇಬ್ಬರೂ ಆರ್ಟೆಮಿಸಳ ಪ್ರತಿಮೆಯೊಂದಿಗೆ ಗ್ರೀಸಿಗೆ ಓಡಿಬರುತ್ತಾರೆ. ಅನಂತರ ಮೈಸೀನೀ ಮತ್ತು ಆರ್ಗಾಸಿನ ದೊರೆಯಾಗಿ ಮೆನೆಲಾಸನ ಮಗಳಾದ ಹರ್ಮಿಯೊನೆಯನ್ನು ಮದುವೆಯಾಗುತ್ತಾನೆ. *

**ಒರ್ರೈಯನ್:** ಆಕಾಶದ 88 ನಕ್ಷತ್ರಪುಂಜಗಳಲ್ಲಿ (ಕಾನ್‌ಸ್ಟೆಲೇಷನ್ಸ್) ಸುಲಭಗ್ರಾಹ್ಯವೂ ಸುಪ್ರಸಿದ್ಧವೂ ಆಗಿರುವ ಪುಂಜ (ಮಹಾವ್ಯಾಧ). ಇದರ ವ್ಯಾಪ್ತಿ ವಿಷುವದ್ವೃತ್ತದ ಇಕ್ಕೆಲಗಳಲ್ಲಿಯೂ ಇದೆ. ವಿಷುವದಂಶ (ರೈಟ್ ಅಸೆನ್ಷನ್) 4 ಗಂ. 40 ಮಿ.–6 ಗಂ. 20 ಮೀ; ಘಂಟಾವೃತ್ತಾಂಶ (ಡೆಕ್ಲಿನೇಷನ್) $11^0$ದ.–$23^0$ ಉ. ಡಿಸೆಂಬರ್ ಜನವರಿ ತಿಂಗಳುಗಳ ಸಂಜೆಯ ಪೂರ್ವಾಕಾಶದಲ್ಲಿ ಕಾಣಿಸಿಕೊಳ್ಳುವ ಈ ಪುಂಜದ ಆಕಾರ, ಇದನ್ನು ರಚಿಸುವ ಬಿಡಿ ನಕ್ಷತ್ರಗಳ ಪ್ರಕಾಶ, ಇದರ ಹಿಂದೆ ಹಬ್ಬಿರುವ ಪೌರಾಣಿಕ ಕಥೆಗಳು ಎಲ್ಲವೂ ಇದನ್ನು ವಿಜ್ಞಾನಿಗಳಿಗೂ ಸಾಹಿತಿಗಳಿಗೂ ರಸಿಕರಿಗೂ ಅತ್ಯಂತ ಆತ್ಮೀಯವನ್ನಾಗಿಸಿವೆ. ಇದರ ಆಕಾರ ತ್ರಾಪಿಜ್ಯದಂತೆ–ಪಶ್ಚಿಮ ಹಾಗೂ ಪೂರ್ವಭುಜಗಳು



ಸಮಾಂತರವಾಗಿವೆ; ಉತ್ತರ ಹಾಗೂ ದಕ್ಷಿಣ ಭುಜಗಳು ಮೇಲುನೋಟಕ್ಕೆ ಮೊದಲಿನವುಗಳಿಗೆ ಲಂಬವಾಗಿಯೇ ಇವೆ ಎಂದೆನ್ನಿಸುವುದು. ಆದ್ದರಿಂದ ಥಕ್ಕನೆ ನೋಡುವಾಗ ಒರ್ರೈಯನ್ ಒಂದು ಆಯತದಂತೆಯೂ ತೋರುವುದುಂಟು. ತ್ರಾಪಿಜ್ಯಾಕಾರವನ್ನು ರಚಿಸುವ ನಾಲ್ಕು ನಕ್ಷತ್ರಗಳ ವಿವರ ಹೀಗಿದೆ: ಪೂರ್ವ–ಉತ್ತರ ಮೂಲೆಯ ನಕ್ಷತ್ರ ಆರ್ದ್ರಾ (ಬೀಟ್ಲ್ ಜೂಸ್), ಪೂರ್ವ–ದಕ್ಷಿಣ ಮೂಲೆಯ ನಕ್ಷತ್ರ ಸೈಫ್. ಇವೆರಡರ ಜೋಡಣೆ ತ್ರಾಪಿಜ್ಯದ ಪೂರ್ವಭುಜ. ಪಶ್ಚಿಮ–ದಕ್ಷಿಣ ಮೂಲೆಯ ನಕ್ಷತ್ರ ರೈಗೆಲ್. ಪಶ್ಚಿಮ–ಉತ್ತರ ಮೂಲೆಯ ನಕ್ಷತ್ರ ಬೆಲ್ಲಾಟ್ರಿಕ್ಸ್. ಇವೆರಡರ ಜೋಡಣೆ ತ್ರಾಪಿಜ್ಯದ ಪಶ್ಚಿಮ ಭುಜ. ತ್ರಾಪಿಜ್ಯದ ಒಳಗೆ ಮೂರು ಉಜ್ಜ್ವಲ ನಕ್ಷತ್ರಗಳು ಒಂದೇ ಗೆರೆಯ ಮೇಲಿವೆ. ನಡುವಿನದು ಈ ಗೆರೆಯ ಮಧ್ಯಬಿಂದುವೂ ಹೌದು. ಇವುಗಳ ಒಟ್ಟು ಹೆಸರು ಮಹಾವ್ಯಾಧನ ನಡುಪಟ್ಟಿ (ಬೆಲ್ಟ್ ಆಫ್ ದಿ ಒರ್ರೈಯನ್). ಇದರಿಂದ ದಕ್ಷಿಣದ ಒತ್ತಿಗೆ (ತ್ರಾಪಿಜ್ಯದ ಒಳಗೆ) ಇರುವ ಬೆಳಕಿನ ತುಣುಕುಗಳ ಒಟ್ಟು ಹೆಸರು ಮಹಾವ್ಯಾಧನ ಖಡ್ಗ (ಡ್ಯಾಗರ್ ಆಫ್ ದಿ ಒರ್ರೈಯನ್). ಈ ವಲಯದಲ್ಲಿ ಬರಿಗಣ್ಣಿಗೆ ಕಾಣುವ ಒಂದು ನೆಬ್ಯುಲವಿದೆ. ಇದರ ಹೆಸರು ಒರ್ರೈಯನ್ ನೆಬ್ಯುಲ. ಶಾಸ್ತ್ರನಾಮ M42. ಆಕಾಶಗಂಗೆಯಲ್ಲಿ ಅತ್ಯಂತ ವಿಸ್ತೃತವಾದ ಈ ನೆಬ್ಯುಲದ ಗಾತ್ರ ಸುಮಾರು 10,000 ಜ್ಯೋತಿರ್ವರ್ಷಗಳು.

ಇದರ ದೂರ ಸು. 1,600 ಜ್ಯೋತಿರ್ವರ್ಷಗಳು. ನಕ್ಷತ್ರಾಂತರ ಅನಿಲವಿರುವ ಒಂದು ಬೃಹತ್ ಪ್ರದೇಶದ ಅತಿಸಾಂದ್ರ ಭಾಗವೇ ಒರ್ರೈಯನ್ ನೆಬ್ಯುಲವೆಂದು ಊಹೆ. ಈ ನೆಬ್ಯುಲದಿಂದ ರೇಡಿಯೊ ತರಂಗಗಳು ವಿಸ್ತರಣೆಯಾಗುತ್ತಿರುವುದನ್ನು ಗುರುತಿಸಲಾಗಿದೆ.

ಆರ್ದ್ರಾ ಒಂದು ರಕ್ತದೈತ್ಯನಕ್ಷತ್ರ. ದೃಗ್ಗೋಚರ ನಕ್ಷತ್ರಗಳನ್ನು ಪ್ರಕಾಶರೀತ್ಯಾ ಪಂಕ್ತಿಸಿದರೆ ಇದಕ್ಕೆ 13ನೆಯ ಸ್ಥಾನ ಲಭಿಸುವುದು (ಸೂರ್ಯನಿಗೆ ಪ್ರಥಮಸ್ಥಾನ). ಕಾಂತಿವರ್ಗ 0.4–1.3ರ ವರೆಗೆ ವ್ಯತ್ಯಾಸಗೊಳ್ಳುವುದು. ವ್ಯತಿಕರಣಮಾಪಕ ವಿಧಾನದಿಂದ ಮೊತ್ತಮೊದಲು

ಈ ನಕ್ಷತ್ರದ ತೋರ್ಕೆ ವ್ಯಾಸವನ್ನು ಅಳೆದಿದ್ದಾರೆ (1920) ಮೇಲೆ ಹೇಳಿರುವ ಪಂಕ್ತಿಯಲ್ಲಿ ರೈಗೆಲ್ ನಕ್ಷತ್ರದ ಸ್ಥಾನ 8. ಇದರ ಕಾಂತಿವರ್ಗ 0.3 ದೂರ ಸು. 545 ಜ್ಯೋತಿರ್ವರ್ಷಗಳು. ಇದೊಂದು ನೀಲ ಮಹಾದೈತ್ಯನಕ್ಷತ್ರ. ಸೂರ್ಯನಿಗಿಂತ 20,000 ಪಾಲು ಅಧಿಕ ಪ್ರಕಾಶಯುತವಾಗಿದೆ.

ಮಹಾವ್ಯಾಧನ ಖಡ್ಗದ ರೇಖೆಯನ್ನು ದಕ್ಷಿಣ–ಪೂರ್ವದೆಡೆಗೆ ಹಿಂದುವರಿಸಿದರೆ ಸ್ವಲ್ಪ ದೂರದಲ್ಲಿ ಆ ರೇಖೆಯ ಒತ್ತಿಗೆ ದಕ್ಷಿಣಕ್ಕೆ ಇರುವ ನೀಲಕಾಂತಿಯ ಮಹೋಜ್ಜ್ವಲ ನಕ್ಷತ್ರ ಲುಬ್ಧಕ(ಸಿರಿಯಸ್). ಸೂರ್ಯನಿಗೆ ಪ್ರಥಮಸ್ಥಾನವಿರುವ ನಕ್ಷತ್ರಪಂಕ್ತಿಯಲ್ಲಿ ಲುಬ್ಧಕದ ಸ್ಥಾನ ಎರಡನೆಯದು. ಲುಬ್ಧಕವಿರುವುದು ಮಹಾಶ್ವಾನ ನಕ್ಷತ್ರಪುಂಜದಲ್ಲಿ **(ನೋಡಿ– ಮಹಾಶ್ವಾನ)**.

ಆರ್ದ್ರಾ–ಬೆಲ್ಲಾಟ್ರಿಕ್ಸ್ ನಕ್ಷತ್ರಗಳ ಜೋಡಣೆ ಮಹಾವ್ಯಾಧ ಪುಂಜದ ಉತ್ತರಬಾಹು. ಇದರ ಒತ್ತಿಗೆ ತ್ರಾಪಿಜ್ಯದ ಹೊರಗೆ (ಎಂದರೆ ಉತ್ತರಕ್ಕೆ) ಇರುವ ಬೆಳಕಿನ ತುಣುಕುಗಳ (ಸುಮಾರು ಮೂರನ್ನು ಬಿಡಿಯಾಗಿ ಎಣಿಸಬಹುದು) ಒಟ್ಟು ಹೆಸರು ಮೃಗಶಿರಾ. ಆರ್ದ್ರಾ–ಮೃಗಶಿರಾ ರೇಖೆಯನ್ನು ಮುಂದುವರಿಸಿದರೆ (ಪಶ್ಚಿಮ) ಸಮೀಪದಲ್ಲಿಯೇ ಎದುರಾಗುವ ಕೆಂಪು ನಕ್ಷತ್ರ ರೋಹಿಣಿ (ಆಲ್ಡೆಬರಾನ್). ಇದು ಸಹ ಆರ್ದ್ರಾದಂತೆ ಒಂದು ಕೆಂಪು ನಕ್ಷತ್ರ. ಬೆಲ್ಲಾಟ್ರಿಕ್ಸ್–ರೋಹಿಣಿ ಜೋಡಣೆಯನ್ನು ಮುಂದುವರಿಸಿದರೆ (ಪಶ್ಚಿಮ) ಸುಮಾರು ಅಷ್ಟೇ ದೂರದಲ್ಲಿ ಎದುರಾಗುವ ಹಲವಾರು ನಕ್ಷತ್ರಗಳ ನಿಬಿಡ ಸಮೂಹ ಕೃತ್ತಿಕಾನಕ್ಷತ್ರ ಗುಚ್ಛ. ರೋಹಿಣಿ, ಕೃತ್ತಿಕಾ ನಕ್ಷತ್ರಗಳಿರುವ ವಲಯದ ಹೆಸರು ವೃಷಭರಾಶಿ.

ಹೀಗೆ ಒರೈಯನ್ ಅಥವಾ ಮಹಾವ್ಯಾಧ ನಕ್ಷತ್ರಪುಂಜದ ಪೂರ್ವ–ದಕ್ಷಿಣ ಭಾಗದಲ್ಲಿ (ಅಂದರೆ ಹಿಂದೆ) ಮಹಾಶ್ವಾನ ಪುಂಜವೂ ಪಶ್ಚಿಮ–ಉತ್ತರ ಭಾಗದಲ್ಲಿ (ಅಂದರೆ ಮುಂದೆ) ವೃಷಭರಾಶಿಯೂ ಇವೆ. ಚಂದ್ರ ತಿಂಗಳಿಗೊಂದು ಸಲ ಮಹಾವ್ಯಾಧ ಪುಂಜದ ಉತ್ತರಪಾರ್ಶ್ವದಲ್ಲಿ ಸಮೀಪವಾಗಿ ಹಾಯುವ ಆಕಾಶಚಿತ್ರ ಆಕರ್ಷಣೀಯವಾಗಿದೆ.

ಈ ದೃಶ್ಯದ ಹಿನ್ನೆಲೆಯಲ್ಲಿ ಹೆಣೆದಿರುವ ಕಥೆಗಳು ಅಸಂಖ್ಯಾತ. ಒಂದೊಂದು ದೇಶದ ಒಂದೊಂದು ಕಾಲದ ಪುರಾಣಗಳು ಇದನ್ನು ಬಣ್ಣಿಸಿರುವ ಬಗೆ ಒಂದೊಂದು.




ಹಿಂದೂ ಪುರಾಣದ ಪ್ರಕಾರ ಚತುರ್ಮುಖ ಬ್ರಹ್ಮ ತಾನೇ ಸೃಷ್ಟಿಸಿದ ವಾಗ್ದೇವಿಯ ಸೌಂದರ್ಯದಿಂದ ಕಾಮವಶನಾಗಿ ಆಕೆಯ ಬೆನ್ನಟ್ಟಿದ. ವಾಗ್ದೇವಿ ಹೆಣ್ಣುಜಿಂಕೆಯಾಗಿ ಓಡಲಾರಂಭಿಸಿದಾಗ ಬ್ರಹ್ಮ ಗಂಡು ಜಿಂಕೆ ರೂಪ ತಳೆದು ಅವಳನ್ನು ಹಿಂಬಾಲಿಸಿದ. ದೇವಲೋಕ ಬ್ರಹ್ಮನನ್ನು ಅತಿಯಾಗಿ ನಿಂದಿಸಿತು. ಆಗ ಶಂಕರ ಪಿನಾಕಪಾಣಿಯಾಗಿ ಮಹಾವ್ಯಾಧರೂಪದಿಂದ ಬಂದು ಮೃಗರೂಪಿಯಾಗಿದ್ದ ನಾಲ್ಮೊಗನ ಶಿರವನ್ನು ಕತ್ತರಿಸಿದ. ಜಿಂಕೆ ನೆಲಕ್ಕೆ ಕೆಡೆಯಿತು. ಅದರ ದೇಹದಿಂದ ನಿರ್ಗಮಿಸಿದ ತೇಜೋರಾಶಿ ಆಕಾಶದಲ್ಲಿ ಮೃಗಶಿರಾ (ಅಥವಾ ಮೃಗಶೀರ್ಷ) ನಕ್ಷತ್ರವೆಂದು ಪ್ರಖ್ಯಾತವಾಯಿತು. ಶಂಕರ ಆರ್ದ್ರಾನಕ್ಷತ್ರರೂಪಿಯಾಗಿ ಅದರ ಹಿಂದೆಯೇ (ಪೂರ್ವ) ನೆಲೆಸಿದ. ಸರಸ್ವತಿ ರೋಹಿಣಿ ನಕ್ಷತ್ರರೂಪ ಪಡೆದಳೆಂದು ಒಂದು ಹೇಳಿಕೆ; ಕೃತ್ತಿಕಾನಕ್ಷತ್ರರೂಪ ಪಡೆದಳೆಂದು ಇನ್ನೊಂದು ಹೇಳಿಕೆ. ಇವೆರಡೂ ಮೃಗಶಿರಾನಕ್ಷತ್ರದ ಪಶ್ಚಿಮಕ್ಕೆ(ಮೊದಲು ರೋಹಿಣಿ ಮತ್ತೆ ಕೃತ್ತಿಕಾ) ಇವೆ. ಇಲ್ಲಿ ಆರ್ದ್ರಾ ನಕ್ಷತ್ರವನ್ನು ಮಹಾವ್ಯಾಧನ ರೂಪವೆಂದು ಪರಿಗಣಿಸಿರುವುದು ತೋರುತ್ತದೆ.



ಒರೈಯನ್ ನಕ್ಷತ್ರಪುಂಜದ ಮಹಾನೆಬ್ಯುಲ

ಇನ್ನೊಂದು ಕಲ್ಪನೆಯ ಪ್ರಕಾರ ಆರ್ದ್ರಾ ನಕ್ಷತ್ರವನ್ನು ಒಳಗೊಂಡಂತೆ ನಾಲ್ಕು ಸ್ಪಷ್ಟ ನಕ್ಷತ್ರಗಳು ರಚಿಸುವ ತ್ರಾಪಿಜ್ಯಾಕಾರ ಮತ್ತು ಅದರೊಳಗಿರುವ ಮೂರು ಉಜ್ಜ್ವಲಪ್ರಕಾಶದ ಏಕರೇಖಸ್ಥ ನಕ್ಷತ್ರಗಳು–ಇವಿಷ್ಟರ ಒಟ್ಟು ಹೆಸರು ಮಹಾವ್ಯಾಧ (ಒರೈಯನ್). ಈತ ಎದುರಿಗೆ (ಪಶ್ಚಿಮ) ಇರುವ ವೃಷಭವನ್ನು ಅಟ್ಟುತ್ತಿದ್ದಾನೆ. ವೃಷಭದ ಮುಖ ಮಹಾವ್ಯಾಧನ ಕಡೆಗೆ ಇರುವಂತೆ ಚಿತ್ರಿಸಿದ್ದಾರೆ. ಆಕಾಶದ ದೈನಂದಿನ ಆವರ್ತನೆಯಲ್ಲಿ ಮಹಾವ್ಯಾಧ ಮುಂದೆ ಮುಂದೆ ಸಾಗಿದಂತೆ ವೃಷಭ ಹಿಂದೆ ಹಿಂದೆ ಸರಿಯುವುದು.

ಮೂರನೆಯ ಕಲ್ಪನೆಯ ಪ್ರಕಾರ ಶಂಕರನ ಸ್ಥಾನ ಲುಬ್ಧಕ (ಬೇಟೆಗಾರ ಎಂದು ಅರ್ಥ) ನಕ್ಷತ್ರದಲ್ಲಿದೆ. ಮಗಳಾದ ರೋಹಿಣಿಯ ಬೆನ್ನಟ್ಟುತ್ತಿದ್ದ ಬ್ರಹ್ಮನಿಗೆ ಶಂಕರ ಬಾಣ ಎಸೆದ. ಆ ಬಾಣಗಳೇ ತ್ರಾಪಿಜ್ಯದ ಒಳಗಿರುವ ಮೂರು ಏಕರೇಖಸ್ಥ ನಕ್ಷತ್ರಗಳು (ನಡುಪಟ್ಟಿ).

ಪ್ರಾಚೀನ ಈಜಿಪ್ಟ್ ಹಾಗೂ ಗ್ರೀಕ್ ಪುರಾಣಗಳಲ್ಲಿ ಒರೈಯನ್ ಕಥೆಗಳು ಹಲವಾರು ಇವೆ. ಮೂರು ಪ್ರಸಿದ್ಧವಾದವನ್ನು ಇಲ್ಲಿ ಕೊಟ್ಟಿದೆ.

ಚಂದ್ರನ ಸೌಂದರ್ಯದ ಸ್ತ್ರೀರೂಪ ಡಯಾನ. ಇವಳು ಷೋಡಶಿ, ಸುಂದರಿ, ಸಾಹಸಪ್ರಿಯೆ, ದೊಡ್ಡ ಬಿಲ್ಲುಗಾರ್ತಿ. ಡಯಾನ ಭೂಮ್ಯಾಕಾಶಗಳಲ್ಲಿ ಸ್ವತಂತ್ರವಾಗಿ ವಿಹರಿಸಬಲ್ಲವಳಾಗಿದ್ದಳು. ಆದರೆ ಈಕೆ ಒಂದು ಕರ್ತವ್ಯವನ್ನು ನಿರ್ವಹಿಸಬೇಕಾಗಿತ್ತು–ಚಂದ್ರನನ್ನು ಆಕಾಶದಲ್ಲಿ ಕ್ರಮಬದ್ಧವಾಗಿ ಸಾಗಿಸುವ, ಹೀಗೆ ಸಾಗಿಸುವಾಗ ಭೂಮಿಗೆ ಈ ಚಂದ್ರಪ್ರಭೆಯನ್ನು ಪಸರಿಸುವ ಹೊಣೆಗಾರಿಕೆ ಇವಳದು. ಇದು ಇವಳಿಗೆ ಬಲು ಸುಲಭದ ಕೆಲಸ. ಆದರೆ ಒಂದು ದಿನ ಅಕಸ್ಮಾತ್ತಾಗಿ ಒರೈಯನನ್ನು (ಮಹಾವ್ಯಾಧ) ನೋಡಿದಳು. ಅವನ ಪರಾಕ್ರಮ, ಸೌಂದರ್ಯ, ಸಾಹಸಪ್ರವೃತ್ತಿ ಇವೆಲ್ಲವುಗಳಿಂದ ಅವಳು ಆತನಿಗೆ ಸಂಪೂರ್ಣವಾಗಿ ಮಾರುಹೋದಳು. ಈ ಪ್ರೇಮಿಗಳ ಮಧುರ ಸಂಗಮದ ಪರಿಣಾಮವಾಗಿ ಡಯಾನ ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸಲಿಲ್ಲ. ಚಂದ್ರನ ಚಲನೆಯಲ್ಲಿ ಏರುಪೇರುಂಟಾಯಿತು. ಇದರಿಂದ ಜನರಲ್ಲಿ ಉಂಟಾದ ಕ್ಷೋಭೆಯನ್ನು ನಿವಾರಿಸಲು ಅಪೊಲೊ ಒಂದು ಹಂಚಿಕೆ ಹೂಡಿದ. ಈತ ಸೂರ್ಯತೇಜಸ್ಸಿನ ಪುರುಷರೂಪ. ಡಯಾನಳ ಅಣ್ಣ, ತಂಗಿಯನ್ನು ಗುರಿಹೊಡೆಯುವುದರ ಸ್ಪರ್ಧೆಗೆ ಆಹ್ವಾನಿಸಿದ. ಅವರು ನಿಂತಿದ್ದುದು ಸಮುದ್ರದಂಡೆಯಲ್ಲಿ. ಆಗ ಸಂಜೆ ಬೆಳಕು ಮಾಸುತ್ತಿತ್ತು. ಸಮುದ್ರವಿಡೀ ಕುದಿಯುತ್ತಿರುವ ಚಿನ್ನದ ರಸದಂತೆ ಕ್ಷೋಭೆಯಿಂದ ಕೂಡಿತ್ತು. ಅತಿದೂರದಲ್ಲಿ ತೆರೆಗಳ ಮೇಲೆ ತೇಲುತ್ತಿದ್ದ ದೊಡ್ಡ ಬಿಳಿ ವಸ್ತುವಿನೆಡೆಗೆ ಗುರಿಹೊಡೆಯುವ ಸ್ಪರ್ಧೆ. ಮೊದಲ ಎಸೆತ ಡಯಾನಳದ್ದು. ಅವಳು ಹೊಡೆದ ಬಾಣ ವ್ಯರ್ಥವಾಗಲಿಲ್ಲ. ಆದರೆ ಅದರ ಹತಿಯಿಂದ ಮೃತನಾದವ ಆಕೆಯ ಪ್ರಿಯಕರ ಒರೈಯನ್. ಡಯಾನ ಜೂಪಿಟರನ (ಬೃಹಸ್ಪತಿ) ಮರೆಹೊಕ್ಕಳು. ಅವನು ಒರೈಯನನಿಗೆ ಸ್ಥಿರನಕ್ಷತ್ರ ಪದವಿ ಅನುಗ್ರಹಿಸಿ ಡಯಾನಳಿಗೆ (ಚಂದ್ರನಿಗೆ) ಈತನನ್ನು ತಿಂಗಳಿಗೊಂದು ಸಲ ಸಮಾಗಮಿಸುವ ಭಾಗ್ಯವನ್ನು ಕರುಣಿಸಿದ. ಚಂದ್ರಬಿಂಬ ಮಹಾವ್ಯಾಧನ ಒತ್ತಿಗೆ ಉತ್ತರಕ್ಕಾಗಿ ತಿಂಗಳಿಗೊಂದು ಸಲ ಚಲಿಸುವುದೆಂಬುದನ್ನು ಇಲ್ಲಿ ಸ್ಮರಿಸಬಹುದು.

ಇನ್ನೊಂದು ಕಥೆಯ ಪ್ರಕಾರ ಒರೈಯನನ ಮರಣ ಸಂಭವಿಸಿದ್ದು ಚೇಳು ಕುಟುಕಿದುದರಿಂದ. ಮುಂದೆ ಚೇಳಿಗೂ ಸ್ಥಿರನಕ್ಷತ್ರ ಪದವಿ ಪ್ರಾಪ್ತವಾಯಿತು. ಇದೇ ವೃಶ್ಚಿಕ ರಾಶಿ (ವಿಷುವದಂಶ 15 ಗಂ. 45 ಮಿ.–17 ಗಂ. 55 ಮಿ.). ಆಕಾಶಗೋಳದಲ್ಲಿ ಮಹಾವ್ಯಾಧ ಮತ್ತು ವೃಶ್ಚಿಕ ಸರಿಸುಮಾರಾಗಿ ವ್ಯಾಸೀಯ ವಿರುದ್ಧ ಪುಂಜಗಳು. ಆದ್ದರಿಂದ ಒಂದು ಆಕಾಶದಲ್ಲಿ ಇರುವಾಗ ಇನ್ನೊಂದು ಮುಳುಗಿರುವುದು. ಈ ವೈರಿಗಳು ಒಬ್ಬರನ್ನೊಬ್ಬರು ನಿರಂತರವಾಗಿ ಅಟ್ಟುತ್ತಿರುವಂತೆ ಬಗೆಗಣ್ಣು ಕಂಡಿದೆ.

ಗ್ರೀಕ್ ಪುರಾಣದಲ್ಲಿನ ಇನ್ನೊಂದು ಕಲ್ಪನೆ ಹೀಗಿದೆ: ಒರೈಯನ್ ಒನೊಪಿಯಾನನ ಮಗಳಾದ ಮೆರೊಪಳನ್ನು ಪ್ರೀತಿಸಿದ್ದ. ಮೆರೊಪಳ ತಂದೆ ಈ ಮದುವೆಗೆ ಒಪ್ಪಲಿಲ್ಲ. ಆಕೆಯನ್ನು ಬಲಾತ್ಕಾರವಾಗಿ ಕೊಂಡೊಯ್ಯಲು ಉದ್ಯುಕ್ತನಾದಾಗ ಒನೊಪಿಯನ್ ಈತನ ಕಣ್ಣುಗಳನ್ನು ಕಿತ್ತುಹಾಕಿದ. ಆಗ ಒಂದು ದಿವ್ಯವಾಣಿ ಕೇಳಿಸಿತು. ಅದರ ಪ್ರಕಾರ ಸೂರ್ಯೋದಯ ಸಮಯದಲ್ಲಿ ಸೂರ್ಯಕಿರಣಗಳು ಒರೈಯನನ ಕಣ್ಣುಗುಳಿಗಳಿಗೆ ತಾಗಿದರೆ ಮತ್ತೆ ಆತನಿಗೆ ದೃಷ್ಟಿ ಬರುತ್ತದೆಂದು ತಿಳಿಯಿತು. ಒರೈಯನ್ ಅಲ್ಲಿಂದ ಲೆನ್ನೂಸ್ ಕಡೆಗೆ ಹೊರಟು ಅಲ್ಲಿ ಹೆಫೆಸ್ಟಸನಿಂದ ಸೆಡಲಿಯಾನನನ್ನು ಮಾರ್ಗದರ್ಶಕನಾಗಿ ಪಡೆದು ಪೂರ್ವದ ಕಡೆಗೆ ಹೊರಡುತ್ತಾನೆ. ದಿವ್ಯವಾಣಿಯಂತೆ ಅವನ ಕಣ್ಣುಗಳನ್ನು ಮತ್ತೆ ಪಡೆದು ಆರ್ಟೆಮಿಸಳೊಂದಿಗೆ ಬೇಟೆಗಾರನಾಗಿ ಜೀವಿಸುತ್ತಾನೆ. ಅವನ ಮೃತ್ಯುವಿನ ಬಗ್ಗೆ ನಾನಾ ಪಾಠಾಂತರಗಳಿವೆ. ಅವನು ಚೇಳು ಕಡಿದು ಸತ್ತನೆಂದೂ ಇಯೊಸಳು ಈತನನ್ನು ಪ್ರೇಮಿಸಿದುದರಿಂದ ಆರ್ಟೆಮಿಸಳು ಈತನನ್ನು ಕೊಂದಳೆಂದೂ ಒರೈಯನ್ ಆರ್ಟೆಮಿಸಳನ್ನು ಘಾಸಿಪಡಿಸಲು ಹೋದಾಗ ಆಕೆಯೇ ಈತನನ್ನು ಕೊಂದಳೆಂದೂ ಕಲ್ಪನೆಗಳಿವೆ.

ಆಕಾಶದ ದಿವ್ಯಸೌಂದರ್ಯ ಹಾಗೂ ಕ್ರಮಬದ್ಧತೆಗಳಿಗೆ ಮಾನವನ ಕಲ್ಪನೆ ಕೊಟ್ಟಿರುವ ರೂಪಗಳನ್ನಿಲ್ಲಿ ಕಾಣಬಹುದು. *

**ಒರ್‌ವ್ಯೇಟೊ:** ಮಧ್ಯ ಇಟಲಿಯ ಟೆರ್ನಿ ಪ್ರಾಂತ್ಯದ ಅಂಬ್ರಿಯ ಪ್ರದೇಶದಲ್ಲಿರುವ ಐತಿಹಾಸಿಕ ನಗರ. ರೋಮಿನಿಂದ 126 ಕಿಮೀ ದೂರದಲ್ಲಿದೆ. ಇದು ಟುಫಾ ಜ್ವಾಲಾಮುಖಿ ಪ್ರದೇಶದಲ್ಲಿ, ಸಮತಟ್ಟಾದ ಎತ್ತರವಾದ ಬೆಟ್ಟದ ಕಿರೀಟದಂತೆ, ಟೈಬರ್‌ನದಿಯ ಉಪನದಿಯಾದ ಪಾಗ್ಲಿಯದ ದಂಡೆಯ ಮೇಲಿದೆ. 12–13ನೆಯ ಶತಮಾನದಲ್ಲಿ ಕಟ್ಟಿದ ಮಧ್ಯಯುಗೀನ ಕಟ್ಟಡಗಳಿಗೂ ಇಕ್ಕಟ್ಟಾದ ಅಂಕುಡೊಂಕಾದ ರಸ್ತೆಗಳಿಗೂ ಇದು ಪ್ರಸಿದ್ಧ. ಈ ನಗರದ ಸುತ್ತಮುತ್ತ ಅತ್ಯುತ್ತಮ ಬೇಸಾಯ ನಡೆಯುವುದರಿಂದ ಇದು ಮುಖ್ಯವಾದ ಸ್ಥಳೀಯ ವ್ಯಾಪಾರಕೇಂದ್ರ. ರುಚಿಮಧುರ ವೈನ್ ಇಲ್ಲಿ ತಯಾರಾಗುತ್ತದೆ. ಕಲಾತ್ಮಕ ಹಂಚು, ಕಬ್ಬಿಣದ ಸಾಮಾನು, ಅಲಂಕಾರಯುಕ್ತವಾದ ಕಲಾಬತ್ತಿನ ದಾರ–ಇವನ್ನೂ ಇಲ್ಲಿ ತಯಾರಿಸಲಾಗುತ್ತದೆ. ರೋಮಿನಿಂದ ಫ್ಲಾರೆನ್ಸಿಗೆ ಹೋಗುವ ರೈಲುಮಾರ್ಗ ಈ ಕಣಿವೆ ಪ್ರದೇಶವನ್ನು ಹಾದುಹೋಗುತ್ತದೆ. ಇಲ್ಲಿರುವ ಪ್ರಸಿದ್ಧ ಕೆಥೆಡ್ರಲನ್ನು ಕಟ್ಟಲಾರಂಭಿಸಿದ್ದು 1290ರಲ್ಲಿ. ಮಧ್ಯಯುಗದ ಅನೇಕ ಚಿತ್ರಕಲಾವಿದರು ಇದನ್ನಲಂಕರಿಸಿದ್ದಾರೆ. ಉಳಿದ ಪ್ರೇಕ್ಷಣೀಯ ಮಂದಿರಗಳೆಂದರೆ ಸಾನ್ ಅಂಡ್ರ್ಯೊ ಚರ್ಚ್, ಪ್ಲಾಜೋ ಕಮ್ಯೂನೇಲ್ ಮತ್ತು ಪ್ಲಾಜೊ ಡೆಲ್ ಪೊಪೊಲೊ. ಆರನೆಯ ಕ್ಲೆಮೆಂಟನ ಕಾಲದಲ್ಲಿ ಕಟ್ಟಿದ ಸಾನ್ ಪ್ರೆಟ್ರಿಜಿಯೊ ಕೂಡ ಪ್ರೇಕ್ಷಣೀಯ. ಈ ನಗರ ಹಿಂದೆ ಎಟ್ರುಸ್ಕನರದಾಗಿದ್ದು ಅನಂತರ ರೋಮನರ ಕೈಸೇರಿತು. ಇಲ್ಲಿ ಗಾಥಿಕರೂ ಬೈಜಾಂಟಿಯನ್ನರೂ ಲೊಂಬಾರ್ಡರೂ ಆಳಿದರು. *

**ಒಲವಿನ ಹಕ್ಕಿ:** ಗಿಳಿಯಂತೆ ತೋರುವ ಒಂದು ಬಗೆಯ ಹಕ್ಕಿ. ಸಾಧಾರಣವಾಗಿ ಆಫ್ರಿಕದ ಅಗಪೋರ್ನಿಸ್ ಜಾತಿಯವನ್ನು ಈ ಹೆಸರಿಂದ ಕರೆಯುತ್ತಾರೆ (ಲವ್ ಬರ್ಡ್).



ಪ್ರಪಂಚದ ನಾನಾ ಭಾಗಗಳಲ್ಲಿ ಇವು ಹರಡಿವೆ. ಆಕಾರದಲ್ಲಿ ಚಿಕ್ಕದಾದರೂ ಉದ್ದ ಪುಕ್ಕಗಳಿಂದಾಗಿ ಹಕ್ಕಿ ದೊಡ್ಡದಾಗಿ ಕಾಣುತ್ತದೆ. ಗರಿ ಮೃದು ನೀಲಿ ಬಣ್ಣದ್ದಾಗಿದ್ದು ಮೇಲೆ ಹಸಿರು, ಕೆಂಪು ಮತ್ತು ಬಿಳಿ ಮಚ್ಚೆಗಳಿವೆಯಾಗಿ ಹಕ್ಕಿ ನೋಡಲು ಬಲು ಚೆನ್ನ. ಗಂಡು ಹೆಣ್ಣು ಹಕ್ಕಿಗಳು ಯಾವಾಗಲೂ ಜೊತೆ ಜೊತೆಯಾಗಿದ್ದು ಒಂದನ್ನೊಂದು ಹಿಂಬಾಲಿಸುತ್ತ, ಒಂದರ ಸಾಮೀಪ್ಯವನ್ನು ಮತ್ತೊಂದು ಬಯಸಿ, ಸದಾ ಸರಸ ಸಲ್ಲಾಪದಲ್ಲಿರುತ್ತವಾದ ಕಾರಣ ಇವನ್ನು ಒಲವಿನ ಹಕ್ಕಿಗಳು ಎಂದು ಕರೆದಿರಬೇಕು. ಇವನ್ನು ಹಿಡಿದು ಮಾರುವುದುಂಟು. ಕೊಂಡು ಸಾಕುವವರೂ ಇದ್ದಾರೆ. (ಜಿ.ಎಂ.ಬಿ.; ಕೆ.ಎಸ್.ಎನ್.)

**ಒಲಿಂಪಿಕ್–ಕ್ರೀಡೆಗಳು:** 'ಇಂದು ವಿಶ್ವದ ಜನರೆಲ್ಲ ಒಂದೆಡೆ ಸೇರುವ ಎರಡು ಸ್ಥಳಗಳಿವೆ. ಒಂದು–ವಿಶ್ವ ಸಂಸ್ಥೆ (United Nations); ಇನ್ನೊಂದು–ಒಲಿಂಪಿಕ್ಸ್. ಆದರೆ ಇಂದು ವಿಶ್ವ ಸಂಸ್ಥೆ ರಾಜಕೀಯ ಕ್ಷೇತ್ರವಾಗಿರುವುದರಿಂದ, ಬಹುಶಃ ಒಲಿಂಪಿಕ್ಸ್ ಒಂದೇ ವಿಶ್ವದ ಎಲ್ಲ ಜನಾಂಗದ, ಭಾಷೆಯ, ವರ್ಗದ ಜನ ಸೇರುವ ಸ್ಥಳ ಎಂದು ಹೇಳಬಹುದು' ಎಂದು ಒಲಿಂಪಿಕ್ ಕ್ರೀಡೆಗಳ ಇತಿಹಾಸ ಬರೆದಿರುವ ಲೇಖಕರೊಬ್ಬರು ಬರೆದಿದ್ದಾರೆ.

ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬ ಕ್ರೀಡಾಪಟುವೂ ತನ್ನ ರಾಷ್ಟ್ರವನ್ನು ಪ್ರತಿನಿಧಿಸುತ್ತಾನೆ. ಒಲಿಂಪಿಕ್ ಕ್ರೀಡೆಗಳ ಸ್ವರೂಪ ಇಂದು ಬದಲಾಗಿದ್ದರೂ ಇಲ್ಲಿ ಜಾತಿ, ಧರ್ಮ, ವರ್ಣಭೇದಕ್ಕೆ ಅವಕಾಶ ಇಲ್ಲ.

ಗ್ರೀಕರು ಮನುಕುಲಕ್ಕೆ ಕೊಟ್ಟ ಅಪೂರ್ವ ಸಾಂಸ್ಕೃತಿಕ ಕಾಣಿಕೆ ಎಂದರೆ ಒಲಿಂಪಿಕ್ ಕ್ರೀಡೆಗಳು. ಪುರಾತನ ಗ್ರೀಸಿನ ಒಲಿಂಪಿಯದಲ್ಲಿ ಅಖಿಲ ಹೆಲನಿಕ್ ಜನಪ್ರಿಯ ಉತ್ಸವಗಳಾಗಿ ಹಲವು ಶತಮಾನಗಳ ಕಾಲ ವಿಜೃಂಭಿಸಿದವು. ಆಧುನಿಕ ಯುಗದಲ್ಲಿ ವಿಶ್ವದ ಸಮಸ್ತ ರಾಷ್ಟ್ರಗಳ ಸ್ನೇಹವರ್ಧನೆಯ ಸಾಧನವಾಗಿ ದೊಡ್ಡ ಪ್ರಮಾಣದಲ್ಲಿ ಪುನರವತರಿಸಿರುವ ಅಂತಾರಾಷ್ಟ್ರೀಯ ಸ್ಪರ್ಧೆಗಳು (ಒಲಿಂಪಿಕ್ ಗೇಮ್ಸ್) ಪ್ರ.ಶ.ಪೂ. 776ರಲ್ಲಿ ಆರಂಭವಾದವೆಂದು ನಂಬಿಕೆ. ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತಿದ್ದ ಈ ಉತ್ಸವದಿಂದ ಇನ್ನೊಂದು ಉತ್ಸವದವರೆಗಿನ ಅವಧಿಯನ್ನು ಒಲಿಂಪಿಕ್ ಶಕವೆಂದೇ (ಒಲಿಂಪಿಯಾಡ್) ಕರೆಯುವ ವಾಡಿಕೆಯಿತ್ತು. ಪ್ರತಿಯೊಂದು ಒಲಿಂಪಿಕ್ ಶಕದ ಉದಯದ ಆಚರಣೆಯಾಗಿ ಒಲಿಂಪಿಕ್ ಕ್ರೀಡೋತ್ಸವವನ್ನು ಆಚರಿಸಲಾಗುತ್ತಿತ್ತು. ಒಲಿಂಪಿಯದ ದೇವಸ್ಥಾನದ ಧಾರ್ಮಿಕ ವಿಧಿಗೂ ಒಲಿಂಪಿಕ್ ಕ್ರೀಡೆಗೂ ಹತ್ತಿರದ ಸಂಬಂಧವಿದ್ದರೂ ಇದು ಕೇವಲ ವಿಧಿಯಾಗಿಯೇ ಕೊನೆಗೊಳ್ಳುತ್ತಿರಲಿಲ್ಲ. ಕ್ರೀಡಾ ಸ್ಪರ್ಧೆಗಳ ಜೊತೆಗೆ ಅಲ್ಲಿ ಭಾಷಣ, ಸಂಗೀತ, ಕಾವ್ಯ ಸ್ಪರ್ಧೆಗಳನ್ನೂ ಏರ್ಪಡಿಸಲಾಗುತ್ತಿತ್ತು.

ಪ್ರಾರಂಭದಲ್ಲಿ ಒಲಿಂಪಿಕ್ ಉತ್ಸವ ಕೇವಲ ಒಂದು ದಿನದ ಕಾರ್ಯಕ್ರಮವಾಗಿತ್ತು. ಆಗ ನಡೆಯುತ್ತಿದ್ದುದಾದರೂ ಒಂದೇ ಸ್ಪರ್ಧೆ; ಕ್ರೀಡಾಂಗಣದ (ಸ್ಟೇಡಿಯಂ) ಉದ್ದಕ್ಕೆ (181.8 ಮೀ) ಓಟ. ಕ್ರಮೇಣ ಸ್ಪರ್ಧೆಗಳ ಸಂಖ್ಯೆ ಹೆಚ್ಚಿತು. ಚಕ್ರದ (ಡಿಸ್ಕಸ್) ಎಸೆತ, ಈಟಿಯ (ಜಾವೆಲಿನ್)ಎಸೆತ, ಅಗಲನೆಗೆತ (ಬ್ರಾಡ್‌ಜಂಪ್), ಮುಷ್ಟಿ ಕಾಳಗ (ಬಾಕ್ಸಿಂಗ್), ಕುಸ್ತಿ, ಪೆಂಟಾಥ್ಲಾನ್, ರಥಗಳ ಸ್ಪರ್ಧೆ ಮುಂತಾದವು ಸೇರಿಕೊಂಡುವು. ಧಾರ್ಮಿಕ ವಿಧಿಗಳನ್ನೂ ಒಳಗೊಂಡು ಏಳು ದಿನಗಳ ಉತ್ಸವವಾಗಿ ಇದು ಬೆಳೆಯಿತು. ಮೊದಮೊದಲು ಗ್ರೀಕರಿಗೆ ಮಾತ್ರ ಸ್ಪರ್ಧೆಗೆ ಪ್ರವೇಶವಿತ್ತು. ಆದರೆ ಎಲ್ಲ ಗ್ರೀಕ್ ವಸಾಹತುಗಳಿಂದಲೂ ಸ್ಪರ್ಧಿಗಳು ಬರುತ್ತಿದ್ದರು. ಉತ್ಸವ ಕಾಲದಲ್ಲಿ ಸ್ಪರ್ಧಿಗಳು ನಿರ್ಭಯವಾಗಿ ಸಂಚರಿಸಲು ಸಾಧ್ಯವಾಗುವಂತೆ ಶಾಂತ ವಾತಾವರಣವನ್ನು ಏರ್ಪಡಿಸಲಾಗುತ್ತಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಲೂ ಅದನ್ನು ವೀಕ್ಷಿಸಲೂ ಸ್ತ್ರೀಯರಿಗೆ ಅವಕಾಶವಿರಲಿಲ್ಲ. ಡೆಮೆಟರಿನ ಪೂಜಾರಿಣಿಗಳು ಮಾತ್ರ ಈ ನಿಯಮಕ್ಕೆ ಅಪವಾದ; ಅವರು ಕ್ರೀಡೆಗಳನ್ನವಲೋಕಿಸಬಹುದಿತ್ತು. ಈ ನಿಯಮವನ್ನುಲ್ಲಂಘಿಸಿದ ಮಹಿಳೆಗೆ ಮರಣ ದಂಡನೆ ವಿಧಿಸುತ್ತಿದ್ದರು. ಸ್ಪರ್ಧೆಯ ಪಾವಿತ್ರ್ಯವನ್ನು ಕಾಪಾಡುತ್ತೇವೆ; ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತೇವೆ; ನ್ಯಾಯವಾದ ತೀರ್ಪು ನೀಡುತ್ತೇವೆ–ಎಂದು ಸ್ಪರ್ಧೆ ಪ್ರಾರಂಭವಾಗುವ ಮುನ್ನ ಎಲ್ಲ ಸ್ಪರ್ಧಿಗಳೂ ಅವರ ಕುಟುಂಬದವರೂ ಶಿಕ್ಷಕರೂ ತೀರ್ಪುಗಾರರೂ ಪ್ರತಿಜ್ಞಾವಿಧಿ ಸ್ವೀಕರಿಸಬೇಕಿತ್ತು.

ಆಗಿನ ಕಾಲದಲ್ಲಿ ಒಲಿಂಪಿಕ್ ಕ್ರೀಡೆಗಳು ಬಹಳ ಗೌರವದ ಸ್ಥಾನ ಪಡೆದಿದ್ದುವು. ತಂತಮ್ಮಲ್ಲೇ ಬಡಿದಾಡುತ್ತಿದ್ದ ಗ್ರೀಕ್ ರಾಷ್ಟ್ರಗಳು ಉತ್ಸವ ಕಾಲದಲ್ಲಿ ಪರಸ್ಪರ ಸಹಕರಿಸುತ್ತಿದ್ದುದೂ ಅವು ಚತುರ್ವರ್ಷೀಯ ಕಾಲಚಕ್ರವನ್ನು ಪುರಸ್ಕರಿಸಿದ್ದೂ ಇದಕ್ಕೆ ಸಾಕ್ಷಿ. ಒಲಿಂಪಿಕ್ ಸ್ಪರ್ಧೆಯಲ್ಲಿ ಗೆದ್ದವರಿಗೆ ಲಭಿಸುತ್ತಿದ್ದುದಾದರೂ ಏನು? ಕಾಡು ಆಲಿವ್ ಮರದ ಎಲೆಗಳ ರೆಂಬೆಯ ಕಿರೀಟ. ಆದರೆ ಈ ಗೌರವಕ್ಕಾಗಿಯೇ ದೊರೆಗಳೂ ಸಾಮಾನ್ಯರೂ ಸಮಾನರಾಗಿ ಸ್ಪರ್ಧಿಸುತ್ತಿದ್ದರು. ರೋಮನ್ ಚಕ್ರವರ್ತಿ ನೀರೋ ಕೂಡ ಈ ಮರ್ಯಾದೆಗಾಗಿ ಹಾತೊರೆದನಂತೆ. ಸ್ಪರ್ಧೆಗಳಲ್ಲಿ ವಿಜಯಗಳಿಸಿದವರನ್ನು ರಾಷ್ಟ್ರವೀರರೆಂದು ಗೌರವಿಸಲಾಗುತ್ತಿತ್ತು. ಅವರ ಸಾಹಸಗಳು ಕಾವ್ಯಕ್ಕೆ ವಸ್ತುವಾಗುತ್ತಿದ್ದುವು; ಸಂಗೀತಕ್ಕೆ ಸ್ಫೂರ್ತಿ ನೀಡುತ್ತಿದ್ದುವು, ವಿಜಯಿಯ ಮೈಕಟ್ಟನ್ನೂ ಗಾಡಿಯನ್ನೂ ಶಿಲ್ಪಿಗಳು

ಅಮೃತಶಿಲೆಯಲ್ಲಿ ಶಾಶ್ವತವಾಗಿ ಸೆರೆ ಹಿಡಿದಿಡುತ್ತಿದ್ದರು. ಸ್ಪರ್ಧೆಯಲ್ಲಿ ಭಾಗವಹಿಸುವುದು ಗೆಲ್ಲುವುದಕ್ಕಾಗಿ ಮಾತ್ರವಲ್ಲ, ಆಡುವುದಕ್ಕಾಗಿ–ಎಂಬುದು ಇಲ್ಲಿಯ ಧ್ಯೇಯ. ಕ್ರೀಡಾಪಟುವಿನ ನಿಜಮನೋಧರ್ಮ, ಆಟವಾಡುವ ಶೈಲಿಯ ಸೊಬಗು–ಇವಕ್ಕೆ ಇಲ್ಲಿ ಪ್ರಾಧಾನ್ಯ.

**ಉಗಮ:** ಪ್ರ.ಶ.ಪೂ. 776ರಲ್ಲಿ ಒಲಿಂಪಿಕ್ ಶಕೆ ಆರಂಭವಾಯಿತೆಂಬುದು ಐತಿಹ್ಯವಾದರೂ ಅದಕ್ಕೂ ಹಿಂದೆಯೇ ಒಲಿಂಪಿಕ್ ಕ್ರೀಡೆಗಳು ಪ್ರಾರಂಭವಾದುವೆಂದು ಭಾವಿಸುವುದು ತಪ್ಪಾಗಲಾರದು, ಕ್ರೀಡಾಸ್ಪರ್ಧೆಗಳು ಹುಟ್ಟಿದ್ದೇ ಪುರಾತನ ಗ್ರೀಸಿನಲ್ಲಿ. ದೇವರ ಅಥವಾ ಸತ್ತ ವೀರನ ಗೌರವಾರ್ಥವಾಗಿ ಅಂಗಸಾಧನೆಯ ಸ್ಪರ್ಧೆಗಳನ್ನೇರ್ಪಡಿಸುವ ಪದ್ಧತಿಯಿಂದ ಒಲಿಂಪಿಯನ್ ಹಬ್ಬ ಬೆಳೆದು ಬಂದಿರಬಹುದು. ಆರಂಭದಲ್ಲಿ ಮೃತನ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ಕ್ರೀಡೆಗಳನ್ನೇರ್ಪಡಿಸುವ ಪದ್ಧತಿಯಿದ್ದಿರಬಹುದು. (ಹೋಮರ್ ಕವಿಯ ಈಲಿಯಡಿನಲ್ಲಿ ಇಂಥ ಒಂದು ಪ್ರಸಂಗದ ವರ್ಣನೆಯಿದೆ) ಅನಂತರ ಇದು ಸಾಮೂಹಿಕವಾಗಿ ಪರಿಣಮಿಸಿ, ಒಂದು ಅವಧಿಯಲ್ಲಿ ಸತ್ತ ಎಲ್ಲ ವೀರರ ಗೌರವಾರ್ಥವಾಗಿ ಏರ್ಪಡಿಸುವ ಪದ್ಧತಿ ಬೆಳೆದು ಬಂದಿರಬಹುದು. ಇದರಿಂದ ಸ್ಪರ್ಧಿಗಳಲ್ಲಿ ನವಚೈತನ್ಯ ತುಂಬಿ ಅವರ ಯೌವ್ವನ ಪುನರ್ನವಗೊಳ್ಳುವುದೆಂದೂ ದೇವರುಗಳ ಶಕ್ತಿಗೆ ಚಾಲನೆ ದೊರಕುವುದೆಂದೂ ಸತ್ತವರಿಗೆ ನಷ್ಟವಾದ ಶಕ್ತಿ ಲಭಿಸುವುದೆಂದೂ ಭಾವಿಸಲಾಗಿತ್ತು. ಅಂಗಸಾಧನೆಯಿಂದ ಆರೋಗ್ಯ ಪ್ರಾಪ್ತಿ, ಹೋರಾಟಕ್ಕೆ ಸಿದ್ಧತೆ, ತತ್ತ್ವದರ್ಶನ ಮತ್ತು ಶೌರ್ಯಪರಾಕ್ರಮಗಳೆರಡನ್ನೂ ಏಕಪ್ರಕಾರವಾಗಿ ಪ್ರೀತಿಸುತ್ತಿದ್ದ ಗ್ರೀಕರ ಜೀವನದ ಆದರ್ಶಗಳಿಗೆ ಕ್ರೀಡೆಗಳೇ ತಳಹದಿ. ಆಯಾ ಸ್ಥಳದೇವತೆಗಳ ಗೌರವಾರ್ಥ ನಡೆಯುತ್ತಿದ್ದ ಧಾರ್ಮಿಕ ಉತ್ಸವಗಳೂ ಕ್ರೀಡಾಸ್ಪರ್ಧೆಗಳೊಂದಿಗೆ ಬೆರೆತುಕೊಂಡು ಕ್ರಮೇಣ ಒಲಿಂಪಿಯನ್ ಹಬ್ಬಕ್ಕೊಂದು ಸಾರ್ವತ್ರಿಕ ರೂಪ ಬಂದಿರಬೇಕು.

ಈಲಿಸಿನ ಜನದ ಪುರಾತನ ದಾಖಲೆಗಳು ಸಾರುತ್ತವೆಯೆಂದೂ ಪಾಸೇನಿಯಸ್ ಹೇಳುತ್ತಾನೆ. ಝ್ಯೂಸ್ ದೇವತೆ ಸ್ವರ್ಗದ ಒಡೆತನಕ್ಕಾಗಿ ಕ್ರೋನಸನೊಂದಿಗೆ ಒಲಿಂಪಿಯದಲ್ಲಿ ಸೆಣಸಿ ಗೆದ್ದನೆಂದೂ ಇದರ ಸ್ಮರಣಾರ್ಥವಾಗಿ ಒಲಿಂಪಿಕ್ ಕ್ರೀಡೆಗಳು ಆರಂಭವಾದುವೆಂದೂ ಪಾಸೇನಿಯಸನಿಂದ ತಿಳಿದು ಬರುತ್ತದೆ.

**ಬೆಳವಣಿಗೆ:** ಒಲಿಂಪಿಕ್ ಕ್ರೀಡೆಗಳ ಉಗಮ ಹೇಗಾಯಿತೆಂಬುದು ಸ್ಪಷ್ಟವಿಲ್ಲವಾದರೂ ಪ್ರ.ಶ.ಪೂ. 776ರ ಹೊತ್ತಿಗೆ ಇವು ಸ್ಥಾಪಿತವಾಗಿದ್ದುವೆಂಬುದಂತೂ ನಿಜ. ಇವುಗಳ ಸ್ಥಳ ಒಲಿಂಪಿಯ–ಪೆಲೊಪೊನೀಸಸಿನ ವಾಯವ್ಯಭಾಗ. ಆಲ್ಫಿಯಾಸ್ ಮತ್ತು ಕ್ಲೇಡಿಯಸ್ ನದಿಗಳ ಪೂರ್ವ ಮತ್ತು ಉತ್ತರ ದಡಗಳ ಮೇಲೆ ಕ್ರೀಡಾಂಗಣವೂ ಝ್ಯೂಸ್ ದೇವಸ್ಥಾನವೂ ನಿರ್ಮಿತವಾಗಿದ್ದುವು. ಹೆಲನಿಕ್ ಯುಗದಲ್ಲಿ ಈ ಕ್ಷೇತ್ರ ಪ್ರಸಿದ್ಧವಾಯಿತು, ಗ್ರೀಕರ ದೈಹಿಕ ಸೌಂದರ್ಯಾರಾಧನೆಯ ಮತ್ತು ದೇಹ ಬುದ್ಧಿಗಳೆರಡರ ಸಮನ್ವಯದ ಸಂಕೇತವಾಯಿತು.

ಒಲಿಂಪಿಕ್ ಕ್ರೀಡೆಗಳು ಬಹಳ ಪ್ರಸಿದ್ಧವೂ ಪ್ರಮುಖವೂ ಆದದ್ದು ಪ್ರ.ಶ.ಪೂ. 6ನೆಯ ಶತಮಾನದಿಂದೀಚೆಗೆ, ನಗರರಾಜ್ಯವಾದ ಪೀಸಾವೇ ಮೊದಲು ಇವನ್ನು ನಿಯಂತ್ರಿಸುತ್ತಿತ್ತು. ಆದರೆ ಪ್ರ.ಶ.ಪೂ. 572ರ ವೇಳೆಗೆ ನೆರೆಯ ನಗರ ರಾಜ್ಯ ಈಲಿಸ್ ಇವುಗಳ ಹಿಡಿತ ಪಡೆದುಕೊಂಡಿತು. ಕ್ರಮೇಣ ಒಲಿಂಪಿಯ ಒಂದು ಒಕ್ಕೂಟದ ಕೇಂದ್ರವಾಯಿತು. ಈ ಕ್ರೀಡೆಗಳು ಸ್ಥಳೀಯ ಪ್ರಾಮುಖ್ಯದ ವ್ಯಾಪ್ತಿಯನ್ನು ಮೀರಿ ಅಂತಾರಾಷ್ಟ್ರೀಯವೆನಿಸಿಕೊಂಡುವು. ಆಗ ಸ್ಪಾರ್ಟ ಪ್ರಬಲ ರಾಜ್ಯ. ಇದು ಈಲಿಸಿನೊಂದಿಗೆ ಸಖ್ಯ ಗಳಿಸಿಕೊಂಡಿತು. ಒಲಿಂಪಿಕ್ ಉತ್ಸವದ ಧಾರ್ಮಿಕ ವಿಧಿಗಳ ನಿಯೋಜನೆ ಈಲಿಸಿನದಾದರೆ, ಕ್ರೀಡೆಗಳ ಅಧಿಕೃತ ರಕ್ಷಣೆ ಸ್ಪಾರ್ಟದ್ದು. ಹೀಗೆ ಸ್ಪಾರ್ಟದ ಕೀರ್ತಿ ಪ್ರತಿಷ್ಠೆಗಳು ಬೆಳೆದುವು. ಯುದ್ಧಕಾಲದಲ್ಲಿ ಕೂಡ ಗ್ರೀಕ್ ಜನರು ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಲು ಮತ್ತು ಅವನ್ನು ಪ್ರೇಕ್ಷಿಸಲು ನಾನಾ




ಚಕ್ರದ (ಡಿಸ್ಕಸ್) ಎಸೆತ : ಎರಡು ಕೈಗಳಿಂದಲೂ ಚಕ್ರವನ್ನು ಮೇಲೆತ್ತಿ (1,2), ಅನಂತರ ಇಳಿಸಿ ಬಲಮುಂದೋಳಿನ ಮೇಲಿರಿಸಿ, ಬಲಗಾಲು ಮುಂದಿಟ್ಟು ಅಥವಾ ಎಡಗಾಲು ಹಿಂದೆಳೆದು (3), ಚಕ್ರವನ್ನು ಬಲಗೈಯಿಂದ ಮೇಲೆತ್ತಿ (4), ಬೀಸಿ (5), ಮೈಯನ್ನು ಹಗ್ಗದಂತೆ ಎಡಕ್ಕೆ ತಿರಿವಿ ಚಕ್ರದ ಎಸೆತ (6)

ಗ್ರೀಕರ ಜೀವನ ಧೋರಣೆ ಮತ್ತು ಅವರು ಕ್ರೀಡಾಸ್ಪರ್ಧೆಗಳನ್ನು ನಡೆಸುತ್ತಿದ್ದ ವಿಧಾನಗಳು ಹೋಮರನ ಈಲಿಯಡಿನಲ್ಲಿ ವರ್ಣಿತವಾಗಿವೆ. ಯುದ್ಧದಲ್ಲಿ ವೀರಮರಣ ಪಡೆದ ಪೆಟ್ರೋಕ್ಲಸನ ಅಂತಿಮಗೌರವವಾಗಿ ಟ್ರಾಯ್‌ನ ಹೊರವಲಯದಲ್ಲಿ ಕೆಲವು ಕ್ರೀಡಾಸ್ಪರ್ಧೆಗಳನ್ನು ಅಕಿಲೀಸ್ ಏರ್ಪಡಿಸಿದ. ಅದರಲ್ಲಿ ಭಾಗಿಗಳು ಪ್ರೇಕ್ಷಕರು ಸೈನಿಕರು. ರಥಸ್ಪರ್ಧೆಯೇ ಮುಖ್ಯ ಘಟನೆ (ಇವೆಂಟ್). ಕುಶಲಕಲೆಗಳನ್ನರಿತ ಸುಂದರ ಹೆಣ್ಣು ಮತ್ತು 22 ಪಿಂಟ್ ಹಿಡಿಸುವ, ಕಿವಿಯಂಥ ಹಿಡಿಗಳಿರುವ ಪಾತ್ರೆ–ಇದು ಅಕಿಲೀಸ್ ಇಟ್ಟಿದ್ದ ಪ್ರಥಮ ಬಹುಮಾನ. ದೇವತೆಗಳೇ ತೀರ್ಪುದಾರರು. ಅವರಲ್ಲೂ ಪೂರ್ವಾಗ್ರಹ, ಪಕ್ಷಪಾತ. ರಥಸ್ಪರ್ಧೆಯೇ ಅಲ್ಲದೆ ಮುಷ್ಟಿಕಾಳಗ, ಕುಸ್ತಿ, ಓಟ, ಬಾಣವಿದ್ಯೆ, ದ್ವಂದ್ವ ಯುದ್ಧ ಮುಂತಾದ ಇತರ ಕ್ರೀಡೆಗಳನ್ನೂ ಹೋಮರ್ ಬಣ್ಣಿಸಿದ್ದಾನೆ.

ಕವಿ ಪಿಂಡರನ ಪ್ರಕಾರ ಒಲಿಂಪಿಕ್ ಕ್ರೀಡೆಗಳನ್ನು ಸ್ಥಾಪಿಸಿದವನು ವೀರ ಹರ್ಕ್ಯುಲಿಸ್. ಆಜಿಯಸ್ ದೊರೆಯನ್ನು ಕೊಂದು ಈಲಿಸ್ ರಾಜ್ಯವನ್ನು ಗೆದ್ದ ಜ್ಞಾಪಕಾರ್ಥವಾಗಿ ಆತ ಇದನ್ನು ಆರಂಭಿಸಿದನಂತೆ, ರೋಗರುಜಿನಾದಿ ಉಪದ್ರವಗಳೂ ಪರಸ್ಪರ ವೈಷಮ್ಯವೂ ಕಚ್ಚಾಟವೂ ನಾಡಿನಲ್ಲೆಲ್ಲ ಹಬ್ಬಿದ್ದಾಗ, ದಿವ್ಯವಾಣಿಯ ಆಜ್ಞೆಯಂತೆ ಇಫಿಟಸ್ ಇವನ್ನು ಪ್ರಾರಂಭಿಸಿದನೆಂಬುದು ಇನ್ನೊಂದು ಐತಿಹ್ಯ. ಈ ಕಥೆಗೆ ಆಧಾರವಾಗಿ ಒಲಿಂಪಿಯದ ಹೇರಿಯಂನಲ್ಲಿರುವ ಕಂಚಿನ ಚಕ್ರವೊಂದನ್ನು ಗ್ರೀಕ್ ಪ್ರವಾಸಿ ಪಾಸೇನಿಯಸ್ ಉಲ್ಲೇಖಿಸಿದ್ದಾನೆ, ನಾನಾ ಆಟಗಳ ನಿಯಮಾವಳಿಗಳನ್ನೆ ಅಲ್ಲದೆ ಲಿಕರ್ಗಸ್ ಮತ್ತು ಇಫಿಟಸರ ಹೆಸರುಗಳನ್ನೂ ಇದರಲ್ಲಿ ಕೆತ್ತಿದೆ. ಇಯಾನ್ ಹರ್ಕ್ಯುಲಿಸ್ ಒಲಿಂಪಿಕ್ ಕ್ರೀಡೆಗಳ ಜನಕನೆಂದೂ ಅವನೇ ಇವಕ್ಕೆ ಈ ನಾಮಕರಣ ಮಾಡಿದವನೆಂದೂ ಒಲಿಂಪಿಯದಲ್ಲಿ ಓಟದ ಸ್ಪರ್ಧೆಗೆ ಬರಬೇಕೆಂದು ತನ್ನ ಸೋದರರನಿಗೇ ಆತ ಸವಾಲು ಒಡ್ಡಿದನೆಂದೂ ಕಡೆಗಳಿಂದ ಬರುವುದು ಸಾಧ್ಯವಾಗುವಂತೆ ಶಾಂತ ವಾತಾವರಣ ರಚಿಸಿ ಪಾಲಿಸುವ, ಸುವ್ಯವಸ್ಥೆ ಏರ್ಪಡಿಸುವ ಹೊಣೆ ಸ್ಪಾರ್ಟದ್ದಾಯಿತು, ಹೀಗೆ ಈ ಕ್ರೀಡೆಗಳು ಎಲ್ಲ ಯುದ್ಧಗಳನ್ನೂ ಭಿನ್ನತೆ ವೈಷಮ್ಯಗಳನ್ನೂ ಮೀರಿದ ಅಂತಾರಾಷ್ಟ್ರೀಯ ಸ್ನೇಹ ಸಂವರ್ಧನೆಯ ಏಕೈಕ ಸೂತ್ರವಾಗಿ ಪರಿಣಮಿಸಿದುವು. ಪ್ರ.ಶ.ಪೂ. 776–21ರವರೆಗೆ ವಿಜಯಿಗಳ ಪಟ್ಟಿಯಲ್ಲಿದ್ದವರು ಈಲಿಯನರು ಮತ್ತು ಅವರ ನೆರೆಹೊರೆಯವರು ಮಾತ್ರ. ಆದರೆ ಅನಂತರ ಅಥೀನಿಯನ್ನರೂ ಇತರರೂ ಪ್ರವೇಶಿಸಿದರು.

ಹೀಗೆ ಹೆಲನಿಕ್ ಏಕತೆಯ ಸಂಕೇತವಾಗಿ, ದೇಹ–ಮನಸ್ಸುಗಳ ಸುಮಧುರ ಹೊಂದಾಣಿಕೆಯ ಸಾಧನವಾಗಿ, ಝ್ಯೂಸ್ ದೇವತೆಯ ಆರಾಧನೋತ್ಸವವಾಗಿ ಇದು ಮುಂದುವರಿಯಿತು. ಗ್ರೀಕ್ ರಾಜ್ಯಗಳ ಸ್ವಾತಂತ್ರ್ಯಹರಣವಾದ ಮೇಲೂ–ಮೆಸಿಡೋನಿಯನ್ ಮತ್ತು ರೋಮನ್ ಚಕ್ರಾಧಿಪತ್ಯಗಳ ಕಾಲದಲ್ಲಿ ಕೂಡ–ಅನಸ್ಯೂತವಾಗಿ ನಡೆದುಕೊಂಡು ಬಂದುವು. 393ರ ಅನಂತರ ಇವು ನಿಂತುಹೋದವೆಂದು 11ನೆಯ ಶತಮಾನದ ಗ್ರೀಕ್ ಲೇಖಕ ಸಿಡ್ರಿನಸ್ ಬರೆಯುತ್ತಾನೆ. ರೋಮನ್ ಚಕ್ರವರ್ತಿ ಥಿಯೊಸೋಸಿಯಸನ ಆಳ್ವಿಕೆಯ ಕಾಲದಲ್ಲಿ ಅವನ ಆಜ್ಞೆಯಂತೆ ಕ್ರೈಸ್ತರು ಅಥವಾ ಗಾಥರು ಝ್ಯೂಸ್ ದೇಗುಲವನ್ನು ನಾಶ ಮಾಡಿದರು. ಝ್ಯೂಸ್ ದೇವತೆಯ ವಿಗ್ರಹವನ್ನು ಕಾನ್‌ಸ್ಟಾಂಟಿನೋಪಲಿಗೆ ಸಾಗಿಸಲಾಯಿತು. ಅಲ್ಲಿ ಅದು 47ರಲ್ಲಿ ಅಗ್ನಿಗೆ ಆಹುತಿಯಾಯಿತು. ಅಂತೂ ಇಷ್ಟು ದೀರ್ಘಕಾಲ ಇಂಥ ಪ್ರಮಾಣದಲ್ಲಿ ಜನರ ಮೇಲೆ ಪ್ರಭಾವ ಬೀರಿದ ಮಾನವ ನಿರ್ಮಿತ ವ್ಯವಸ್ಥೆ ಇನ್ನೊಂದಿಲ್ಲ.

ಒಲಿಂಪಿಕ್ ಕ್ರೀಡೆಯನ್ನು ಐದು ದಿನಗಳ ಅವಧಿಗೆ ವಿಸ್ತರಿಸಿದ್ದು 77ನೆಯ ಉತ್ಸವದಲ್ಲಿ. ಏಕದಿನದ ಸ್ಪರ್ಧೆಗಳಲ್ಲಿ ಅಭ್ಯರ್ಥಿಗಳು ಉಷಃಕಾಲದಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಮೇಲೆ ಅವರ ಬರಿ ಮೈಗಳಿಗೆ ತೈಲ ಹಚ್ಚಲಾಗುತ್ತಿತ್ತು. ಮಟ್ಟ ನೆಲದ ಓಟದ ಪಂದ್ಯಗಳಲ್ಲಿ

ಪೂರ್ವಭಾವಿಯಾಗಿ (ಹೀಟ್ಸ್) ತಲಾ ನಾಲ್ವರನ್ನೋಡಿಸಿ, ಸೋತವರನ್ನು ಬಿಡುತ್ತಾ ಅಂತಿಮ (ಫೈನಲ್) ಹಂತಕ್ಕೆ ಸ್ಪರ್ಧಿಗಳನ್ನು ಆರಿಸಿಕೊಳ್ಳಲಾಗುತ್ತಿತ್ತು. ಮೊದಮೊದಲು ಇರುತ್ತಿದ್ದದ್ದು ಒಂದೇ ಓಟದ ಸ್ಪರ್ಧೆ (5.25 ಮೀ) 14ನೆಯ ಒಲಿಂಪಿಯಾಡಿನಿಂದ 5.5 ಮೀ ಓಟದ ಸ್ಪರ್ಧೆ ಸೇರಿಸಲಾಯಿತು. ದೂರದ (ಡಿಲೋಕಾಸ್) ಓಟ ಸ್ಪರ್ಧೆಯನ್ನು ಸೇರಿಸಿದ್ದು 15ನೆಯ ಕ್ರೀಡೆಗಳಿಂದ. ಇದರ ದೂರ 387.5 ಮೀ, 630 ಮೀ, 1235 ಮೀ.

ಕುಸ್ತಿ ಮತ್ತು ಪೆಂಟಾಥ್ಲಾನ್ ಸ್ಪರ್ಧೆಗಳನ್ನಾರಂಭಿಸಿದ್ದು 18ನೆಯ ಉತ್ಸವದಲ್ಲಿ, ಅಗಲ ನೆಗೆತ, ಈಟಿಯ ಎಸೆತ, ಚಕ್ರದ ಎಸೆತ, ಮಟ್ಟನೆಲದ ಓಟ, ಕುಸ್ತಿ–ಈ ಐದೂ ಸೇರಿ ಪೆಂಟಾಥ್ಲಾನ್ ಎನಿಸಿಕೊಳ್ಳುತ್ತಿತ್ತು. ಮುಷ್ಟಿಕಾಳಗ ಸ್ಪರ್ಧೆಯನ್ನು ಏರ್ಪಡಿಸಲಾರಂಭಿಸಿದ್ದು ಪ್ರ.ಶ.ಪೂ. 688ರಲ್ಲಿ (23ನೆಯ ಉತ್ಸವ). ರಥ ಸ್ಪರ್ಧೆ ಬಂದದ್ದೂ ಆ ವರ್ಷವೇ. ಕುದುರೆಸವಾರಿ ಪಂದ್ಯವನ್ನು 33ನೆಯ ಉತ್ಸವದಲ್ಲಿ (ಪ್ರ.ಶ.ಪೂ.648) ಏರ್ಪಡಿಸಲಾಯಿತು. ಮುಷ್ಟಿಕಾಳಗ ಮತ್ತು ಕುಸ್ತಿಗಳ ಮಿಶ್ರಣವಾದ ಪ್ಯಾನ್‌ಕ್ರಿಯೇಷಿಯಮನ್ನು ಪ್ರಾರಂಭಿಸಿದ್ದೂ ಆ ವರ್ಷವೇ. ಬಾಲಕರಿಗೆ ಕ್ರೀಡಾಸ್ಪರ್ಧೆಗಳನ್ನೇರ್ಪಡಿಸಿದ್ದು ಪ್ರ.ಶ.ಪೂ. 632ರಲ್ಲಿ, ಕಹಳೆ ಸ್ಪರ್ಧೆಗಳನ್ನು ಪ್ರ.ಶ.ಪೂ. 416ರಲ್ಲಿ (93ನೆಯ ಉತ್ಸವ) ಪಟ್ಟಿಯಲ್ಲಿ ಸೇರಿಸಲಾಯಿತು. ಯುದ್ಧಕವಚಧಾರಿಗಳ ಓಟದಪಂದ್ಯ ಆರಂಭಗೊಂಡಿದ್ದು ಪ್ರ.ಶ.ಪೂ.396ರಲ್ಲಿ. ಪ್ರ.ಶ.ಪೂ.490ರಲ್ಲಿ ಮ್ಯಾರಥಾನ್ ಯುದ್ಧದ ವಿಜಯದ ವಾರ್ತೆಯನ್ನು ಹೊತ್ತು ಅಲ್ಲಿಂದ ಅಥೆನ್ಸ್ ಪಟ್ಟಣಕ್ಕೆ ಓಡಿದ ಗ್ರೀಕ್ ಸಾಹಸವನ್ನು ನೆನಪಿಗೆ ತಂದುಕೊಡುವ ದೂರದ ಓಟದ ಪಂದ್ಯವನ್ನು (ಮ್ಯಾರತಾನ್ ರೇಸ್) ಪುರಾತನ ಕ್ರೀಡಾಸ್ಪರ್ಧೆಗಳಲ್ಲಿ ಸೇರಿಸಿಯೇ ಇರಲಿಲ್ಲವೆಂಬುದು ಸ್ವಾರಸ್ಯದ ಸಂಗತಿ.

**ವಿವಿಧ ಪಂದ್ಯಗಳು:** ಪಂದ್ಯಗಳು ನಡೆಯುವುದಕ್ಕೆ ಒಂದು ತಿಂಗಳ ಹಿಂದಿನಿಂದಲೇ ಸ್ಪರ್ಧಿಗಳು ತೀವ್ರ ತರಬೇತಿ ಪಡೆಯುತ್ತಿದ್ದರು. ಚಕ್ರ ಮತ್ತು ಈಟಿಗಳು ಬಹಳ ಜನಪ್ರಿಯತೆ ಗಳಿಸಿದ್ದುವು. ಆಗಿನ ಚಕ್ರದ್ದು ಈಗಿನದಕ್ಕಿಂತ (2 ಕಿಲೊ ಗ್ರಾಂ) ಹೆಚ್ಚು ತೂಕ. ಅದನ್ನು ಎಸೆಯುತ್ತಿದ್ದದ್ದು ಒಂದು ವೃತ್ತದಿಂದಲ್ಲ; ಒಂದು ಸರಳರೇಖೆಯ ಹಿಂಬದಿಯಿಂದ. ಚಕ್ರವನ್ನೆಸೆಯುವ ಮುನ್ನ ಒಮ್ಮೆ ಪೂರ್ತಿಯಾಗಿ ಸುತ್ತುವ ಬದಲು ಗ್ರೀಕ್ ಎಸೆಗಾರ ಅದನ್ನು ಎರಡೂ ಕೈಗಳಿಂದ ತಲೆಯ ಮೇಲೆತ್ತಿ, ಬಲಗೈಯಲ್ಲಿ ಅದನ್ನು ಹಿಡಿದು ಥಟ್ಟನೆ ಬಲಕ್ಕೆ ಬಾಗಿ, ಅನಂತರ ಮತ್ತೆ ಮುಂದೆ ನಡೆದು ಎಸೆಯುತ್ತಿದ್ದ. ತತ್ಫಲವಾಗಿ ಚಕ್ರ ಎಸೆಯುವವರಿಗೆ ನಡುವಿನ ಮೇಲ್ಭಾಗದಲ್ಲಿ ಹೊಟ್ಟೆಯ ಬಳಿ ಮಾಂಸಖಂಡ ಬೆಳೆಯುತ್ತಿತ್ತು. ಆ ಕಾಲದ ಪ್ರತಿಮೆಗಳಲ್ಲಿ ಇದನ್ನು ಗಮನಿಸಬಹುದು.




ಈಟಿಯ (ಜ್ಯಾವಲಿನ್) ಎಸೆತ, ಅದರ ಹಿಡಿಗೆ ಬುಗರಿಯ ಹುರಿಯಂತೆ ಚರ್ಮದ ದಾರ ಸುತ್ತಲಾಗುತ್ತಿತ್ತು. ಸ್ಪರ್ಧಿ ತನ್ನ ಬೆರಳುಗಳನ್ನು ದಾರದ ವಂಕಿಯೊಳಗೆ ಹೊಗಿಸಿ (1), ಈಟಿ ಗಿರ್ರನೆ ತಿರುಗುತ್ತ ತೀವ್ರಗತಿಯಲ್ಲಿ ಗುರಿಯತ್ತ ಸಾಗುವಂತೆ ಅದನ್ನು ಚಕ್ಕನೆ ಎಸೆಯುತ್ತಿದ್ದ (2).

ಈಟಿ ಎಸೆತದಲ್ಲಿ ಶಕ್ತಿಗಿಂತ ಯುಕ್ತಿಗೂ ನಿಷ್ಕೃಷ್ಟತೆಗೂ ಪ್ರಾಧಾನ್ಯ. ಇತರರಿಗಿಂತ ಹೆಚ್ಚು ದೂರ ಎಸೆಯುವುದು ಸ್ಪರ್ಧಿಯ ಉದ್ದೇಶವಲ್ಲ. ನೆಲದ ಮೇಲಿನ ಒಂದು ನಿರ್ದಿಷ್ಟ ಗುರಿಗೆ ಹೊಡೆಯಬೇಕಿತ್ತು. ಈಟಿ ಒಂದಾಳಿನಷ್ಟು ಎತ್ತರ ಬೆರಳಿನಷ್ಟು ಸಣ್ಣಗೂ ಇದ್ದು ಬಹಳ ಹಗುರವಾಗಿತ್ತು. ಅದರ ಹಿಡಿಗೆ ಸುಮಾರು 0.6069 ಮೀ ಉದ್ದದ ಚರ್ಮದ ದಾರ ಸುತ್ತಲಾಗುತ್ತಿತ್ತು. ಪಂದ್ಯಗಾರ ಆ ದಾರದ ತುದಿಯ ವಂಕಿಯೊಳಗೆ ಬೆರಳುಗಳನ್ನು ತೂರಿಸಿ, ಈಟಿ ಬುಗರಿಯಂತೆ ಗಿರುಗಿರನೆ ತಿರುಗುತ್ತ ಧಾವಿಸುವಂತೆ ಅದನ್ನು ಎಸೆಯುತ್ತಿದ್ದ.

ಒಲಿಂಪಿಕ್ ಕ್ರೀಡೆಗಳ ಏಕೈಕ ನೆಗೆತದ ಸ್ಪರ್ಧೆಯೆಂದರೆ ಪೆಂಟಾಥ್ಲಾನಿನ ಉದ್ದನೆಗೆತ (ಲಾಂಗ್‌ಜಂಪ್). ಇದನ್ನು ಮಾಡುತ್ತಿದ್ದುದು ಹೇಗೆಂಬುದು ಸ್ಪಷ್ಟವಾಗಿ ಗೊತ್ತಿಲ್ಲ. ಸು. 2–11 ಪೌಂಡುಗಳವರೆಗೆ ತೂಗುವ ಕಲ್ಲು ಅಥವಾ ಕಂಚಿನ ಎರಡು ಡಂಬ್‌ಬೆಲ್‌ಗಳನ್ನು ಸ್ಪರ್ಧಿ ತನ್ನೆರಡು ಕೈಗಳಲ್ಲೂ ಹಿಡಿದುಕೊಳ್ಳುತ್ತಿದ್ದನೆಂಬುದು ನಮಗೆ ಗೊತ್ತು. ಡಂಬ್‌ಬೆಲ್‌ಗಳನ್ನು ಮುಂದಕ್ಕೂ ಹಿಂದಕ್ಕೂ ಜೋಕಾಲೆಯಾಡಿಸಿ, ಅನಂತರ ನೆಗೆಯುತ್ತಿದ್ದುದು ರೂಢಿ. ನೆಗೆಯುವ ಮುನ್ನ ಓಡುತ್ತಿದ್ದುದೂ ಉಂಟು. ಓಡದೆ ನೇರವಾಗಿ ನೆಗೆಯುತ್ತಿದ್ದುದೂ ಉಂಟು. ಸ್ಪರ್ಧಿಗಳು 16 ಮೀಗಳಿಗೂ ಹೆಚ್ಚು ದೂರ ನೆಗೆದರೆಂದು ವರದಿಗಳುಂಟು. ಆದರೆ ಇದು ಹೇಗೆ ಸಾಧ್ಯವಾಯಿತೆಂಬುದೇ ಬಿಡಿಸಲಾಗದ ಒಗಟು. ಬಹುಶಃ ಇದು ಕೇವಲ ಒಂದೇ ನೆಗೆತದ ದೂರವಾಗಿರಲಾರದು. ಐದು ನೆಗೆತಗಳ ಒಂದು ಸರಣಿ ಇದ್ದಿರಬೇಕು.

ಮುಷ್ಟಿಕಾಳಗ ಮತ್ತು ಕುಸ್ತಿಗಳ ಮಿಶ್ರಣವಾದ ಪ್ಯಾನ್‌ಕ್ರೇಷಿಯಂ ಎಂಬುದು ಈ ಎರಡೂ ಪಂದ್ಯಗಳ ಒರಟು ಅಂಶಗಳನ್ನೆಲ್ಲ ಒಳಗೊಂಡಿತ್ತು. ಗುದ್ದುವುದೂ ಒದೆಯುವುದೂ ನಿಷಿದ್ಧವಾಗಿರಲಿಲ್ಲ. ಆದರೆ ಎದುರಾಳಿಯ ಕಣ್ಣನ್ನು ಬೆರಳಿನಿಂದ ತಿವಿಯುವುದು ಕ್ರಮಬದ್ಧವಲ್ಲ. ಸ್ಪರ್ಧಿಗಳಲ್ಲೊಬ್ಬ ಸಂಪೂರ್ಣ ಅಸಹಾಯಕನಾಗಿ ಶರಣಾಗುವ ಘಟ್ಟ ಮುಟ್ಟುವವರೆಗೂ ಪಂದ್ಯ ನಡೆಯುತ್ತಿತ್ತು. ಸ್ಪರ್ಧಿಯ ತೂಕದ ಬಗ್ಗೆ ಯಾವ ನಿಬಂಧನೆಯೂ ಇಲ್ಲದ್ದರಿಂದ ಹಗುರ ದೇಹಿಯಾದವ ಗೆಲ್ಲುವ ಸಂಭವ ಇರಲಿಲ್ಲ.

400 ಮೀ. ಹರ್ಡಲ್ಸ್ ಬಂಗಾರಪದಕ ವಿಜೇತ ಡೇವಿಡ್ ಹೆಮರಿ (1968)

**ಕಾರ್ಯಕ್ರಮ ಬಹುಮಾನ:** ಸ್ಪರ್ಧೆಗಳನ್ನು ಇದೇ ಕ್ರಮದಲ್ಲಿ ನಡೆಸಬೇಕೆಂಬ ಪದ್ಧತಿಯೇನೂ ಇರಲಿಲ್ಲ. ಎಲ್ಲ ಸ್ಪರ್ಧೆಗಳನ್ನೂ ಯಾವಾಗಲೂ ನಡೆಸುತ್ತಿರಲಿಲ್ಲ. ಹೊಸಹೊಸ ಸ್ಪರ್ಧೆಗಳನ್ನು ಸೇರಿಸಲಾಗುತ್ತಿತ್ತು. ಗ್ರೀಕ್ ಒಲಿಂಪಿಕ್ ಕ್ರೀಡೆಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಸಾಮಾನ್ಯವಾಗಿ ಕಾರ್ಯಕ್ರಮ ಹೀಗಿರುತ್ತಿತ್ತು: ಮೊದಲನೆಯ ದಿನದಂದು ಬಲಿಗಳ ಅರ್ಪಣೆ. ಒಲಿಂಪಿಕ್ ಪ್ರತಿಜ್ಞಾವಿಧಿ ಸ್ವೀಕಾರ, ನಾನಾ ಸ್ಪರ್ಧೆಗಳಿಗೆ ಬಂದಿರುವ ಅಭ್ಯರ್ಥಿಗಳ ವಿಂಗಡಣೆ. ಎರಡನೆಯ ದಿನ ಓಟ. ಕುಸ್ತಿ, ಮುಷ್ಟಿ ಕಾಳಗ, ಪ್ಯಾನ್‌ಕ್ರೇಷಿಯಂ. ಪೆಂಟಾಥ್ಲಾನ್ ಮತ್ತು ಕುದುರೆ ಪಂದ್ಯಗಳಲ್ಲಿ ಹುಡುಗರ ಸ್ಪರ್ಧೆ. ಮೂರನೆಯ ದಿನ ವಯಸ್ಕರಿಗೆ ಮೀಸಲು: ಓಟ ಕುಸ್ತಿ, ಮುಷ್ಟಿಕಾಳಗ, ಪ್ಯಾನ್‌ಕ್ರೇಷಿಯಂ ಮತ್ತು ಸ್ಪರ್ಧೆ. ನಾಲ್ಕನೆಯ ದಿನ ಪೆಂಟಾಥ್ಲಾನ್, ರಥ ಮತ್ತು ಕುದುರೆ ಜೂಜು, ಘೋಷಣೆ ಸ್ಪರ್ಧೆ. ಐದನೆಯ ದಿನ ಮೆರವಣಿಗೆ, ಬಲಿಗಳು, ವಿಜಯಿಗಳಿಗೆ ಔತಣ, ಆಲ್ಟಿಸಿನಲ್ಲಿನ ಕಾಡು ಆಲಿವ್ ಮರದ ಎಲೆಗಳಿಂದ ಕಿರೀಟಧಾರಣೆ, ಜನಸ್ತೋಮಕ್ಕೆ ವಿಜಯಿಗಳ ದರ್ಶನ.

ವಿಜಯಿಗಳನ್ನು ರಾಷ್ಟ್ರವೀರರೆಂದು ಗೌರವಿಸಿ ಅವರ ಪ್ರತಿಮೆಗಳನ್ನು ರಚಿಸುತ್ತಿದ್ದುದು ಮಾತ್ರವೇ ಅಲ್ಲ, ಅವರಿಗೆ ತೆರಿಗೆ ವಿನಾಯಿತಿಯಿತ್ತು. ಒಲಿಂಪಿಕ್ ಕ್ರೀಡೆಗಳನ್ನು ವೃತ್ತಿಬಾಧೆಯಿಂದ ದೂರ ಇರಿಸಲಾಗಿತ್ತು. ಪ್ರೇಕ್ಷಕರಿಗಿಂತ ಸ್ಪರ್ಧಿಗಳಿಗಾಗಿಯೇ ಇವನ್ನು ಏರ್ಪಡಿಸುತ್ತಿದ್ದರು.

**ಆಧುನಿಕ ಒಲಿಂಪಿಕ್ ಕ್ರೀಡೆಗಳು:** ಪುರಾತನ ಒಲಿಂಪಿಕ್ ಕ್ರೀಡೆಗಳನ್ನು ಪುನರಾರಂಭಿಸಲು ಸಾಕಷ್ಟು ಪ್ರಯತ್ನಗಳು ಹಿಂದೆ ನಡೆದಿದ್ದವಾದರೂ ಆ ಕನಸು ಸಾಕಾರಗೊಂಡಿದ್ದು ಫ್ರಾನ್ಸಿನ ಬೇರನ್ ಪಿಯರಿ ಡಿ ಕೊಬರ್ತಿ ಅವರಿಂದ. 1889ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ವಸ್ತು ಪ್ರದರ್ಶನವೊಂದರಲ್ಲಿ ಪುರಾತನ ಒಲಿಂಪಿಕ್ ಕ್ರೀಡೆಗಳ ರೂಪಕಗಳನ್ನು ನೋಡಿದ ಆತ 1892ರಲ್ಲಿ ನಡೆದ ಅಂತಾರಾಷ್ಟ್ರೀಯ ಕ್ರೀಡಾ ಸಮ್ಮೇಳನದಲ್ಲಿ ಒಲಿಂಪಿಕ್ ಕ್ರೀಡೆಗಳ ಪುನರುತ್ಥಾನದ ಸೂಚನೆ ಮಂಡಿಸಿದ. ಅದು ತಿರಸ್ಕೃತವಾಯಿತು. ಆದರೆ ನಿರಾಶನಾಗದ ಆತ, ಎರಡು ವರ್ಷಗಳ ನಂತರ, ತಾನೇ ಫ್ರಾನ್ಸಿನ ಸಾರಬಾನಿನಲ್ಲಿ ಕರೆದ ಅಂತಾರಾಷ್ಟ್ರೀಯ ಕ್ರೀಡಾ ಅಧಿವೇಶನದಲ್ಲಿ ಮತ್ತೆ ತನ್ನ ಯೋಜನೆ ಮಂಡಿಸಿದ. ಆತನ ವಿಚಾರಕ್ಕೆ ಒಪ್ಪಿಗೆ ದೊರೆಯಿತು.

ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದ ಅಮೆರಿಕ, 1906 ಮತ್ತು 1908ರಲ್ಲಿ ಎರಡನೇ ಸ್ಥಾನಕ್ಕೆ ಇಳಿದಿತ್ತಾದರೂ, ಅದಕ್ಕೆ ಪೂರ್ಣ ಪ್ರಮಾಣದ ಪೈಪೋಟಿ ಎದುರಾಗಿದ್ದು 1936ರಲ್ಲಿ. ಬರ್ಲಿನ್‌ನಲ್ಲಿ ನಡೆದ ಆ ಒಲಿಂಪಿಕ್ ಕ್ರೀಡೆಗಳಲ್ಲಿ ಆತಿಥೇಯ ಜರ್ಮನಿ 33 ಚಿನ್ನದ ಪದಕಗಳೊಡನೆ ಮೊದಲ ಸ್ಥಾನ ಗಳಿಸಿದರೆ, ಅಮೆರಿಕ 24 ಚಿನ್ನದ ಪದಕಗಳೊಡನೆ ಎರಡನೆಯ ಸ್ಥಾನ ಗಳಿಸಿತ್ತು.

1952ರಲ್ಲಿ ಮೊದಲಬಾರಿಗೆ ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಿದ ಸೋವಿಯತ್ ಒಕ್ಕೂಟ, 22 ಚಿನ್ನದ ಪದಕಗಳನ್ನು ಗೆಲ್ಲುವುದರೊಂದಿಗೆ ಅಮೆರಿಕಕ್ಕೆ(40 ಚಿನ್ನ) ತೀವ್ರ ಪೈಪೋಟಿ ನೀಡಿತು. 1956ರಲ್ಲಿ ಅಗ್ರಸ್ಥಾನಕ್ಕೇರಿದ ಸೋವಿಯತ್ ಒಕ್ಕೂಟ (37 ಚಿನ್ನ), 1960ರಲ್ಲೂ (43 ಚಿನ್ನ) ಮೊದಲ ಸ್ಥಾನ ಕಾಯ್ದುಕೊಂಡಿತು.



ಗ್ರೀಕ್ ಒಲಂಪಿಕ್ಸ್ ಕಾಲದ ಉದ್ದ ನೆಗೆತ (ಲಾಂಗ್‌ಜಂಪ್). ಓಡಿ ಬಂದುನೆಗೆಯುವುದು, ಓಡದೆ ನೆಗೆಯುವುದು–ಎರಡೂ ಆಗ ವಾಡಿಕೆಯಲ್ಲಿದ್ದುವು. ಈ ಚಿತ್ರದಲ್ಲಿ ಓಟದಿಂದ ನೆಗೆತದ ಆರಂಭ. ಸ್ಪರ್ಧಿಯ ಕೈಗಳಲ್ಲಿ ತೂಕಗಳಿರುವುದನ್ನು ಗಮನಿಸಿ. ನೆಗೆತದ ನಾನಾ ಘಟ್ಟಗಳು ಈ ರೀತಿ ಇವೆ: 1. ಗೆರೆಯ ಬಳಿಗೆ ಸ್ಪರ್ಧಿಯ ಆಗಮನ; 2. ತೂಕಗಳನ್ನು ಮುಂದಕ್ಕೆ ಆಂದೋಲಿಸಿ ನೆಗೆತದ ಆರಂಭ; 3. ನೆಗೆತದ ಶಿಖರ; 4. ಹಿಂಗಡೆಗೆ ತೋಕಗಳ ಆಂದೋಲನ, ದೇಹದ ಅಂತಿಮ ತಳ್ಳುವಿಕೆ; 5. ನೆಲದ ಮೇಲೆ ಕಾಲೂರಿದಾಗ ಹಾಳತ ತಪ್ಪಿ ಹಿಂದಕ್ಕೆ ಬೀಳದಂತೆ ತೂಕಗಳ ಬಳಕೆ

ಕೊಬರ್ತಿ ಮೊದಲ ಆಧುನಿಕ ಒಲಿಂಪಿಕ್ ಕ್ರೀಡೆಗಳನ್ನು 1900ರಲ್ಲಿ, ಪ್ಯಾರಿಸ್‌ನಲ್ಲೇ ನಡೆಸಬೇಕೆಂದು ಯೋಚಿಸಿದ್ದ. ಆದರೆ, ಗ್ರೀಕ್ ಜನರ ಒತ್ತಾಸೆಯ ಮೇರೆಗೆ 1896ರಲ್ಲಿ, ಗ್ರೀಸ್‌ನಲ್ಲಿ ಮೊದಲ ಒಲಿಂಪಿಕ್ ಕ್ರೀಡೆಗಳು ನಡೆದವು. ಒಲಿಂಪಿಯ ಗ್ರಾಮ ತೀರ ಹಿಂದುಳಿದ ಪ್ರದೇಶವಾಗಿದ್ದರಿಂದ, ಕ್ರೀಡೆಗಳನ್ನು ಅಥೆನ್ಸ್‌ನಲ್ಲಿ ನಡೆಸಲಾಯಿತು. 14 ರಾಷ್ಟ್ರಗಳ 241 ಮಂದಿ ಕ್ರೀಡಾಪಟುಗಳು ಭಾಗವಹಿಸಿದ್ದರು. ಮಹಿಳಾ ಕ್ರೀಡಾಪಟುಗಳು ಇರಲಿಲ್ಲ.

ಹೀಗೆ ಆರಂಭವಾದ ಆಧುನಿಕ ಒಲಿಂಪಿಕ್ ಕ್ರೀಡಾ ಆಂದೋಲನ ಇಂದು ವಿಶ್ವದ ಅತ್ಯುನ್ನತ ಕ್ರೀಡಾಕೂಟವಾಗಿ ಬೆಳೆದಿದೆ. ಎರಡು ಮಹಾಯುದ್ಧಗಳಿಂದಾಗಿ 1916, 1940, 1944ರಲ್ಲಿ ಮಾತ್ರ ಈ ಕ್ರೀಡೆಗಳು ನಡೆಯಲಿಲ್ಲ.

ಕೊಬರ್ತಿ 1894ರಲ್ಲಿ ಒಲಿಂಪಿಕ್ ಸಮಿತಿಯ ಮೊದಲ ಸಮಾಚಾರ ಪತ್ರ ಹೊರಡಿಸಿದ. ಇಂದಿಗೂ ಅದು ಪ್ರಕಟವಾಗುತ್ತಿದೆ. ಕೊಬರ್ತಿಯ ಮಿತ್ರ ಡೈಡನ್ ಎಂಬಾತ ರೂಪಿಸಿದ ಒಲಿಂಪಿಕ್ ಧ್ಯೇಯವಾಕ್ಯ “CITIUS, FORTIUS, ALTIUS (Faster, Stronger, Higher)ವನ್ನು ಈ ಸಮಾಚಾರ ಪತ್ರದಲ್ಲಿ ಪ್ರಕಟಿಸಲಾಗಿತ್ತು. ‘ವೇಗಯುತ, ಶಕ್ತಿಯುತ, ಉನ್ನತ’ ಎಂಬುದೇ ಇದರ ಅರ್ಥ. ಅದರಂತೆಯೇ ಒಲಿಂಪಿಕ್ ಕ್ರೀಡೆಗಳ ಗುಣಮಟ್ಟ ಏರುತ್ತಲೇ, ಹಲವಾರು ದಾಖಲೆಗಳು ಹೊರಹೊಮ್ಮಿವೆ. ಒಲಿಂಪಿಕ್ ಚಿನ್ನದ ಪದಕ. ಯಾವುದೇ ಕ್ರೀಡಾಪಟುವಿಗೂ ಜೀವನದ ಪರಮೋಚ್ಚ ಗುರಿ. ಇದು ರಾಷ್ಟ್ರದ ಪ್ರತಿಷ್ಠೆಯೂ ಹೌದು.

ಒಲಿಂಪಿಕ್ ಕ್ರೀಡಾ ಧ್ವಜ ಶುಭ್ರ ಶ್ವೇತ ವರ್ಣದ್ದು. ಅದರಲ್ಲಿ ನೀಲಿ, ಹಳದಿ, ಕಪ್ಪು, ಹಸಿರು ಮತ್ತು ಕೆಂಪು ಬಣ್ಣದ ಐದು ವರ್ತುಳಗಳ ಸರಪಳಿ. ಇವು ಏಷ್ಯ, ಆಫ್ರಿಕ, ಆಸ್ಟ್ರೇಲಿಯ, ಅಮೆರಿಕ ಮತ್ತು ಯುರೋಪ್ ಖಂಡಗಳ ಪ್ರತೀಕಗಳು.

1920ರಲ್ಲಿ ಆಂಟ್‌ವರ್ಪಿನಲ್ಲಿ ಒಳಾಂಗಣದ ಸ್ಕೇಟಿಂಗ್ ರಿಂಕ್ ಒಂದರಲ್ಲಿ ಕೆಲವು ಚಳಿಗಾಲದ ಸ್ಪರ್ಧೆಗಳನ್ನೇರ್ಪಡಿಸಲಾಯಿತು. 1924ರಿಂದ ಮೊದಲ್ಗೊಂಡು ಪ್ರತಿಯೊಂದು ಚತುರ್ವಾರ್ಷಿಕ ಕ್ರೀಡಾಧಿವೇಶನಕ್ಕೂ ಹಿಂದಿನ ಫೆಬ್ರುವರಿಯಲ್ಲಿ ಯಾವುದಾದರೊಂದು ಚಳಿದಾಣದಲ್ಲಿ ಸ್ಕೇಟಿಂಗ್, ಸ್ಕೀಯಿಂಗ್, ಐಸ್ ಹಾಕಿ, ಬಾಬ್ ಸ್ಲೈಡಿಂಗ್ ಮುಂತಾದ ಪಂದ್ಯಗಳನ್ನೇರ್ಪಡಿಸುವ ಕ್ರಮ ಜಾರಿಗೆ ಬಂತು. ಒಲಿಂಪಿಕ್ ಚಳಿಗಾಲದ ಕ್ರೀಡೆಗಳು ನಡೆದ ಸ್ಥಳಗಳು ಇವು; ಸ್ವಿಟ್ಸರ್ಲೆಂಡಿನ ಸೇಂಟ್ ಮಾರಿಟ್ಸ್ (1928), ನ್ಯೂಯಾರ್ಕಿನ ಲೇಕ್ ಪ್ಲೇಸಿಡ್ (1932), ಜರ್ಮನಿಯ ಗಾರ್ಮಿಷ್–ಪಾರ್ಟೆನ್ ಕರ್ಚೆನ್ (1936), ಮತ್ತೆ ಸೇಂಟ್ ಮಾರಿಟ್ಸ್ (1948), ನಾರ್ವೆಯ ಆಸ್ಲೊ (1952), ಇಟಲಿಯ ಕಾರ್ಟಿನ ಡಿ ಅಂಪೆಟ್ಸೊ (1956), ಕ್ಯಾಲಿಫೋರ್ನಿಯದ ಸ್ಕ್ವಾವ್ಯಾಲಿ (1960) ಆಸ್ಟ್ರಿಯದ ಇನ್ಸ್‌ಬ್ರುಕ್ (1964) ಮತ್ತು ಫ್ರಾನ್ಸಿನ ಗ್ರಿನೋಬಲ್ (1968).

**ಅಮೆರಿಕದ ಹಿರಿಮೆ:** ಆಧುನಿಕ ಒಲಿಂಪಿಕ್ ಕ್ರೀಡೆಗಳಲ್ಲಿ ಅಮೆರಿಕದ್ದು ಅತಿ ದೊಡ್ಡ ಸಾಧನೆ. ಮೊಟ್ಟಮೊದಲ ಒಲಿಂಪಿಕ್ಸ್‌ನಲ್ಲಿ ಅಂದರೆ, 1896ರಲ್ಲಿ 11 ಚಿನ್ನದ ಪದಕಗಳೊಡನೆ

1964ರಲ್ಲಿ ಮರಳಿ ಅಗ್ರಸ್ಥಾನ ಪಡೆದ ಅಮೆರಿಕ (36 ಚಿನ್ನ) 1968ರಲ್ಲೂ ಮೊದಲ ಸ್ಥಾನ (45 ಚಿನ್ನ) ಕಾಯ್ದುಕೊಂಡಿತು. ಆದರೆ 1972, 1976 ಮತ್ತು 1980ರ ಒಲಿಂಪಿಕ್ ಕ್ರೀಡೆಗಳಲ್ಲಿ ಸೋವಿಯತ್ ಒಕ್ಕೂಟ ತನ್ನ ಹಿರಿಮೆ ಮೆರೆಯಿತು. 1980ರಲ್ಲಿ ಮಾಸ್ಕೊದಲ್ಲಿ ನಡೆದ ಕ್ರೀಡೆಗಳನ್ನು ಅಮೆರಿಕ ಬಹಿಷ್ಕರಿಸಿದರೆ, 1984ರ ಲಾಸ್ ಏಂಜಲೀಸ್ ಕ್ರೀಡೆಗಳನ್ನು ಸೋವಿಯತ್ ಒಕ್ಕೂಟ ಬಹಿಷ್ಕರಿಸಿತು. 1988ರಲ್ಲಿ ಸೋಲ್ ಕ್ರೀಡೆಗಳಲ್ಲಿ ಮತ್ತೆ ಸೋವಿಯತ್–ಅಮೆರಿಕ ಎದುರಾಳಿಗಳಾದವು. ಸೋವಿಯತ್ ಜೊತೆ ಪೂರ್ವ ಜರ್ಮನಿಯ ಕ್ರೀಡಾಪಟುಗಳೂ ಉತ್ತಮ ಸಾಧನೆ ತೋರಿ, ಅಮೆರಿಕವನ್ನು ಮೂರನೇ ಸ್ಥಾನಕ್ಕೆ ದೂಡಿದವು. 1992ರ ಬಾರ್ಸಿಲೊನಾ ಕ್ರೀಡೆಗಳಲ್ಲೂ ಸೋವಿಯತ್‌ಗೆ ಮೊದಲ ಸ್ಥಾನ. ಅಮೆರಿಕ ಎರಡನೇ ಸ್ಥಾನ ಗಳಿಸಿತು.

ಆದರೆ, 1996ರಲ್ಲಿ ಮತ್ತೆ ಅಗ್ರಪಟ್ಟಕ್ಕೇರಿದ ಅಮೆರಿಕ, 2000 ಮತ್ತು 2004ರಲ್ಲೂ ಮೊದಲ ಸ್ಥಾನ ಕಾಯ್ದುಕೊಂಡಿತು. ಸೋವಿಯತ್ ಒಕ್ಕೂಟ ಛಿದ್ರಗೊಂಡಿದ್ದೇ ಇದಕ್ಕೆ ಕಾರಣವಾಯಿತು. ರಷ್ಯದ ಸ್ಪರ್ಧಿಗಳು ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

1884ರಲ್ಲಿ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ಚೀನ, ಸಿಡ್ನಿ (2000) ಒಲಿಂಪಿಕ್ಸ್‌ನಲ್ಲಿ 28 ಚಿನ್ನದ ಪದಕಗಳೊಡನೆ ಮೂರನೆಯ ಹಾಗೂ ಅಥೆನ್ಸ್ (2004) ಒಲಿಂಪಿಕ್ಸ್‌ನಲ್ಲಿ 32 ಚಿನ್ನದ ಪದಕಗಳೊಡನೆ ಎರಡನೆಯ ಸ್ಥಾನಕ್ಕೇರಿತು. 2008ರ ಒಲಿಂಪಿಕ್ ಕ್ರೀಡೆಗಳನ್ನು ನಡೆಸಲಿರುವ ಚೀನ, ಪದಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೆ ಆಶ್ಚರ್ಯಪಡಬೇಕಾಗಿಲ್ಲ.

ಅಥೆನ್ಸ್ (2004) ಒಲಿಂಪಿಕ್ಸ್ ಪದಕಪಟ್ಟಿಯಲ್ಲಿ ಮೊದಲ ಸ್ಥಾನದ ವಿವರಗಳು ಈ ರೀತಿ ಇವೆ.

| ರಾಷ್ಟ್ರ | ಚಿನ್ನ | ಬೆಳ್ಳಿ | ಕಂಚು |
|---|---|---|---|
| ಅಮೆರಿಕ | 35 | 39 | 29 |
| ಚೀನ | 32 | 17 | 14 |
| ರಷ್ಯ | 27 | 27 | 38 |

**ನಿರ್ವಹಣೆ:** ಒಲಿಂಪಿಕ್ ಚಳವಳಿಯನ್ನು ನಿರ್ದೇಶಿಸುವ ಮತ್ತು ಕ್ರೀಡೆಗಳನ್ನು ನಿಯಂತ್ರಿಸುವ ಹೊಣೆ ಇರುವುದು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯಲ್ಲಿ (ಐ.ಓ.ಸಿ.). ಇದರ ಮುಖ್ಯ ಕಚೇರಿ ಸ್ವಿಟ್ಸರ್ಲೆಂಡಿನ ಲಾಸೇನಿನ ಮಾನ್‌ರೆಪಾಸ್‌ನಲ್ಲಿದೆ. ಸಮಿತಿ ಕೂಲಂಕಷ ವಿಚಾರಣೆ ನಡೆಸಿ ಆಜೀವ ಸದಸ್ಯರನ್ನು ಆಯ್ಕೆ ಮಾಡುತ್ತದೆ. ಈ ಸಮಿತಿಯ ಒಂದು ವೈಶಿಷ್ಟ್ಯವೇನೆಂದರೆ, ಇದರ ಸದಸ್ಯರು ತಂತಮ್ಮ ರಾಷ್ಟ್ರಗಳನ್ನು ಪ್ರತಿನಿಧಿಸುವುದಿಲ್ಲ. ಪ್ರತಿಯಾಗಿ ಅವರು ಈ ಸಮಿತಿಯಿಂದ ತಂತಮ್ಮ ರಾಷ್ಟ್ರಗಳಿಗೆ ನಿಯೋಗಿಗಳಾಗಿರುತ್ತಾರೆ. ಯಾವ ರಾಷ್ಟ್ರದಿಂದಲೂ ಮೂರಕ್ಕಿಂತ ಹೆಚ್ಚು ಸದಸ್ಯರಿರತಕ್ಕದ್ದಲ್ಲ. ಸದಸ್ಯರ ಮತ ಸ್ವಾತಂತ್ರ್ಯಕ್ಕೆ

ಧಕ್ಕೆ ತರುವಂಥ ಯಾವ ಸೂಚನೆಯನ್ನೂ ತಮ್ಮ ರಾಷ್ಟ್ರಗಳಿಂದಾಗಲಿ ಬೇರೆ ಯಾವ ಸಂಸ್ಥೆಯಿಂದಾಗಲಿ ಪುರಸ್ಕರಿಸಬಾರದು. ಈ ಸಮಿತಿಯ ಪ್ರಥಮ ಅಧ್ಯಕ್ಷ ಗ್ರೀಸ್‌ನ ಡಿಮಿಟ್ರಿಯಸ್ ವಿಕೆಲಾಸ್(1896–2000). ಇವರ ನಂತರ ಬ್ಯಾರೆನ್ ಪಿಯರ್ ಡಿ ಕೂಬರ್ತಿ (1925ರ ವರೆಗೆ). ಅನಂತರ ಬೆಲ್ಜಿಯಂನ ಹೆನ್ರಿ ಡಿ ಬೇಲೆಟ್ ಲ್ಯಾಟರ್ ಅಧ್ಯಕ್ಷನಾದ. 1942ರಲ್ಲಿ ಈತ ತೀರಿಕೊಂಡಾಗ ಈ ಸ್ಥಾನ ಸ್ವೀಡನಿನ ಜೆ. ಸಿಗ್‌ಫ್ರಿಡ್ ಎಡ್‌ಸ್ಟ್ರಾಂಗ್‌ಗೆ ಬಂತು. 1952ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಆವರಿ ಬ್ರಂಡೇಜ್ ಆಯ್ಕೆಯಾದ. ಇವರ ನಂತರ ಲಾರ್ಡ್ ಕಿಲಾನಿನ್, ಆ್ಯಂಟನಿ ಸಮರಾಂಜ್ ಅಧ್ಯಕ್ಷರಾದರು. ಈಗ ಜಾಕ್ಸ್ ರೋಗೆ ಅಧ್ಯಕ್ಷರು.

ಒಲಿಂಪಿಕ್ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಆ ಕ್ರೀಡೆಯನ್ನೇ ವೃತ್ತಿಯಾಗಿ ಮಾಡಿಕೊಂಡಿರಬಾರದು; ಅದು ಅವರ ಹವ್ಯಾಸವಾಗಿರಬೇಕು–ಎಂಬುದು 1988ರವರೆಗೆ ನಿಯಮವಾಗಿತ್ತು. ಅನಂತರ ವೃತ್ತಿಪರ ಕ್ರೀಡಾಪಟುಗಳಿಗೂ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಅವಕಾಶ ನೀಡಲಾಯಿತು.

ಕಾಡು ಮೇಡು ನಡಿಗೆ (ಸ್ಟೀಪಲ್ ಚೇಸ್)

1932ರಲ್ಲಿ ಲಾಸ್ ಏಂಜೆಲ್ಸ್‌ನಲ್ಲಿ ನಡೆದ ಒಲಿಂಪಿಕ್ ಕ್ರೀಡೆಗಳಿಂದೀಚೆಗೆ ಬೆಳೆದುಕೊಂಡು ಬಂದಿರುವ ಒಂದು ಪದ್ಧತಿಯೆಂದರೆ ಈ ಕ್ರೀಡೆಗಳಿಗಾಗಿಯೇ ನಿರ್ಮಿಸಲಾಗುವ ಒಲಿಂಪಿಕ್ ಗ್ರಾಮ. ನಾನಾ ರಾಷ್ಟ್ರಗಳಿಂದ ಬಂದ ಎಲ್ಲ ಸ್ಪರ್ಧಿಗಳೂ ಒಂದೇ ಕ್ಷೇತ್ರದಲ್ಲಿ ವಾಸಿಸುವುದು ಇದರಿಂದ ಸಾಧ್ಯ. ಪ್ರಾಚೀನ ಗ್ರೀಸಿನಲ್ಲಿ ಕ್ರೀಡೆಗಳು ನಡೆಯುತ್ತಿದ್ದ ಸ್ಥಳವಾದ ಒಲಿಂಪಿಯದಿಂದ ತಂದ ಪಂಜಿನಿಂದ ಕ್ರೀಡಾಕೂಟದ ಸ್ಥಳದಲ್ಲಿ ಪವಿತ್ರ ಒಲಿಂಪಿಕ್ ಜ್ಯೋತಿಯನ್ನು ಹೊತ್ತಿಸಿ, ಕ್ರೀಡಾಧಿವೇಶನದ ಕಾಲದಲ್ಲಿ ಅದನ್ನು ನಂದಾದೀಪದಂತೆ ಉರಿಸುವುದು 1936ರ ಬರ್ಲಿನ್ ಕೂಟದಲ್ಲಿ ಆರಂಭವಾದ ಸಂಪ್ರದಾಯ.

ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸುವವರನ್ನು ಆಯ್ಕೆಮಾಡುವ ಹೊಣೆ ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳಿಗೆ ಸೇರಿದ್ದು. ಒಲಿಂಪಿಕ್ ಸ್ಪರ್ಧೆಗಳಲ್ಲಿ ಸೇರಿಸಲಾಗಿರುವ ಎಲ್ಲ ಕ್ರೀಡೆಗಳ ರಾಷ್ಟ್ರೀಯ ಸಂಸ್ಥೆಗಳಿಗೂ ರಾಷ್ಟ್ರೀಯ ಒಲಿಂಪಿಕ್ ಸಮಿತಿಯಲ್ಲಿ ಪ್ರಾತಿನಿಧ್ಯ ಇರತಕ್ಕದ್ದು. ಈ ಸಮಿತಿಗಳು ಸ್ವತಂತ್ರ್ಯವಾಗಿ ಸ್ವಯಂ ಆಡಳಿತಾಧಿಕಾರ ಹೊಂದಿರಬೇಕು. ರಾಜಕೀಯ ವಾಣಿಜ್ಯಕ ಅಥವಾ ಮತೀಯ ಒಲವುಗಳಿಗೆ ಮಣಿಯಬಾರದು. ಪ್ರತಿಯೊಂದು ಕ್ರೀಡೆಗೂ ರಾಷ್ಟ್ರೀಯ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಅಂತಾರಾಷ್ಟ್ರೀಯ ಮಹಾಸಂಘವೊಂದಿರುತ್ತದೆ. ಈ ಮಹಾಸಂಘಗಳ ನಿಯಂತ್ರಣಕ್ಕೆ ಅನುಸಾರವಾಗಿ ಆಯಾ ಕ್ರೀಡೆಗಳ ಸ್ಪರ್ಧೆಗಳನ್ನೇರ್ಪಡಿಸಲಾಗುತ್ತದೆ. ಅವಕ್ಕೆ ಸಂಬಂಧಪಟ್ಟ ನಿಯಮಗಳನ್ನು ರಚಿಸುವುದೂ ಮಹಾಸಂಘಗಳ ಹೊಣೆ.

**ಉತ್ಸವ ವರ್ಣನೆ:** ಒಲಿಂಪಿಕ್ ಕ್ರೀಡೆಗಳ ಪ್ರಾರಂಭೋತ್ಸವವೊಂದು ವೈಭವಯುತ ಸಮಾರಂಭ. ಕ್ರೀಡೆಗಳು ನಡೆಯುತ್ತಿರುವ ದೇಶದ ಅಧಿಪತಿಯ ಆಗಮನದೊಂದಿಗೆ ಉತ್ಸವ ಆರಂಭ. ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷ ಆತನನ್ನು ಸ್ವಾಗತಿಸಿ, ವಿಶೇಷವಾಗಿ ನಿರ್ಮಿಸಿದ ವೇದಿಕೆಯ ಮೇಲಕ್ಕೆ ಕರೆದೊಯ್ಯುತ್ತಾನೆ. ಅಲ್ಲಿಯ ರಾಷ್ಟ್ರಗೀತೆಯಾದೊಡನೆಯೇ ನಾನಾ ರಾಷ್ಟ್ರಗಳ ಸ್ಪರ್ಧಿಗಳ ಪ್ರದರ್ಶನ, ಉತ್ಸವ, ನಡಿಗೆ; ಅವರವರ ರಾಷ್ಟ್ರಗಳ ಸಮವಸ್ತ್ರದುಡಿಗೆ ತೊಡಿಗೆ; ಪ್ರತಿರಾಷ್ಟ್ರದ ತಂಡದ ಮುಂದುಗಡೆ ಆ ರಾಷ್ಟ್ರದ ಧ್ವಜ, ದೊಡ್ಡ ಫಲಕವೊಂದರ ಮೇಲೆ ಆ ರಾಷ್ಟ್ರದ ಹೆಸರು, ಮೊಟ್ಟಮೊದಲು ಗ್ರೀಸ್ ತಂಡ, ಅನಂತರ ಅಕ್ಷರಾನುಕ್ರಮಣಿಕೆಯಲ್ಲಿ ಇತರ ರಾಷ್ಟ್ರಗಳ ತಂಡಗಳ ಪ್ರವೇಶ. ಪ್ರತಿ ತಂಡವೂ ಕ್ರೀಡಾಂಗಣದ ಮಾರ್ಗವನ್ನೊಮ್ಮೆ ಸುತ್ತಿದ ಮೇಲೆ ನಡುಗಡೆಯಲ್ಲಿ ನಿಲ್ಲುತ್ತದೆ. ಅದರ ಮುಂದೆ ತನ್ನ ರಾಷ್ಟ್ರಧ್ವಜ ಮತ್ತು ಹೆಸರು ಬರೆದ ಫಲಕ. ಅನಂತರ ಸಮಿತಿಯ ಅಧ್ಯಕ್ಷನಿಂದ ಸಂಗ್ರಹವಾದ ಸ್ವಾಗತ ಭಾಷಣ. ಕ್ರೀಡೆಗಳನ್ನು ಉದ್ಘಾಟಿಸಬೇಕೆಂದು ರಾಷ್ಟ್ರಮುಖ್ಯನಿಗೆ ಪ್ರಾರ್ಥನೆ. ತತ್‌ಕ್ಷಣವೇ ತುತ್ತೂರಿಗಳ ನಿನಾದ, ಒಲಿಂಪಿಕ್ ಧ್ವಜಾರೋಹಣ, ಬಿಡುಗಡೆಗೊಂಡ ಪಾರಿವಾಳಗಳ ಸ್ವಚ್ಛಂದ ಹಾರಾಟ. ಕುಶಾಲು ತೋಪಿನ ಸಲಾಮೀ ಅಬ್ಬರ. ಆ ಕ್ಷಣಕ್ಕೆ ಸರಿಯಾಗಿ ಕ್ರೀಡಾಂಗಣದೊಳಕ್ಕೆ ಒಲಿಂಪಿಕ್ ಜ್ಯೋತಿಯ ಆಗಮನ. ಪವಿತ್ರವಾದ ನಂದಾಜ್ಯೋತಿಪುಂಜದ ಬೆಳಗುವಿಕೆ, ಸ್ವಸ್ತಿವಾಚನ. ಒಲಿಂಪಿಕ್ ಗೀತಗಾಯನ.

ಅದು ಮುಗಿಯುವ ವೇಳೆಗೆ ಸರಿಯಾಗಿ ಆತಿಥೇಯ ರಾಷ್ಟ್ರದ ಸ್ಪರ್ಧಿಗಳಲ್ಲೊಬ್ಬ ವೇದಿಕೆಯನ್ನೇರಿ ನಿಂತು, 'ಈ ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸುವ ನಾವು ನಿಜವಾದ ಕ್ರೀಡಾಮನೋಭಾವದಿಂದ ವರ್ತಿಸುತ್ತೇವೆ. ಕ್ರೀಡೆಯ ಕೀರ್ತಿ ಬೆಳಗುತ್ತೇವೆ, ನಮ್ಮ ತಂಡಗಳ ಗೌರವ ರಕ್ಷಿಸುತ್ತೇವೆ, ಒಲಿಂಪಿಕ್ ಕ್ರೀಡೆಗಳಿಗೆ ಸಂಬಂಧಿಸಿದ ಎಲ್ಲ ನಿಯಮಗಳನ್ನೂ ಗೌರವಿಸಿ ಅದಕ್ಕೆ ಬದ್ಧರಾಗಿರುತ್ತೇವೆ–ಎಂದು ಎಲ್ಲ ಸ್ಪರ್ಧಿಗಳ ಪರವಾಗಿ ನಾನು ಪ್ರತಿಜ್ಞೆ ಮಾಡುತ್ತೇನೆ' ಎಂಬುದಾಗಿ ಅಲ್ಲಿ ಸೇರಿರುವ ಎಲ್ಲ ಸ್ಪರ್ಧಿಗಳ ಪರವಾಗಿ ಪ್ರತಿಜ್ಞಾವಚನವನ್ನೋದುತ್ತಾನೆ. ಆಗ ರಾಷ್ಟ್ರಗೀತೆಯ ಮೇಳಗಾನವಾಗುತ್ತದೆ.


ಕೀನ್ಯದ ಓಟಗಾರ–ಕಿಪ್‌ಚೋಗ್ ಕೇನೊ (1968)

ಸ್ಪರ್ಧಿಗಳು ಕ್ರೀಡಾಂಗಣದಿಂದ ನಿರ್ಗಮಿಸುತ್ತಾರೆ, ಆಗ ಸ್ಪರ್ಧೆಯ ಆರಂಭ. ಮುಕ್ತಾಯ ಸಮಾರಂಭ ಅಷ್ಟೇ ಆಕರ್ಷಕ. "ನಾಲ್ಕು ವರ್ಷಗಳ ಅನಂತರ ಮುಂದಿನ ಒಲಿಂಪಿಕ್ಸ್‌ನಲ್ಲಿ ಮತ್ತೆ ಸೇರೋಣ" ಎಂದು ಐಓಸಿ ಅಧ್ಯಕ್ಷರು ಕ್ರೀಡಾಪಟುಗಳಿಗೆ ಕರೆಕೊಡುತ್ತಾನೆ. 'ಒಲಿಂಪಿಕ್ ಜ್ಯೋತಿ ಮುಂದೆ ಸಾಗಲು ಹಾಗೂ ಮಾನವಕುಲದ ಒಳಿತಿಗಾಗಿ ನಿಮ್ಮ

400ಮೀ. ಸ್ಪರ್ಧೆಯಲ್ಲಿ (1964) ಬ್ರಿಟನ್ನಿನ ಕೆನ್‌ಮ್ಯಾಥ್ಯೂಸ್

ಮನೋಲ್ಲಾಸ ಸರ್ವತ್ರ ಪಸರಿಸಲಿ' ಎನ್ನುವ ಸಂದೇಶ ನೀಡುತ್ತಾನೆ. ತುತ್ತೂರಿ ಮೊಳಗುತ್ತದೆ. ಒಲಿಂಪಿಕ್ ಜ್ಯೋತಿಯನ್ನು ನಂದಿಸುತ್ತಾರೆ. ಒಲಿಂಪಿಕ್ ಧ್ವಜ ಕೆಳಗಿಳಿಯುತ್ತದೆ. ಐದು ತೋಪುಗಳ ಸಲಾಮ್ ಅನಂತರ ಒಲಿಂಪಿಕ್ ಗೀತೆ ಹಾಡಲಾಗುತ್ತದೆ.

**ಸ್ಪರ್ಧೆಗಳು:** ಅಂಗಸಾಧನೆ ಸ್ಪರ್ಧೆ; ಮಾರ್ಗ ಮತ್ತು ಕ್ಷೇತ್ರ (ಟ್ರ್ಯಾಕ್ ಅಂಡ್ ಫೀಲ್ಡ್), ಗರಡಿ ವಿದ್ಯೆ (ಜಿಮ್ನಾಸ್ಟಿಕ್ಸ್), ಮುಷ್ಟಿಕಾಳಗ, ಕತ್ತಿವರಸೆ, ಗುಂಡುಗಾರಿಕೆ (ಷೂಟಿಂಗ್), ಕುಸ್ತಿ, ಹುಟ್ಟುಹಾಕುವ ಸ್ಪರ್ಧೆ, ಈಜು, ಕುದುರೆ ಸವಾರಿ, ಆಧುನಿಕ ಪೆಂಟಾಥ್ಲಾನ್, ಸೈಕ್ಲಿಂಗ್, ಭಾರ ಎತ್ತುವಿಕೆ, ನೌಕಾಪಂದ್ಯ (ಯಾಚಿಂಗ್) ಇವು ಕಡ್ಡಾಯ ಸ್ಪರ್ಧೆಗಳು, ಕಾಲ್ಚೆಂಡಾಟ, ವಾಟರ್ ಪೋಲೊ, ಬಯಲು ಹಾಕಿ, ಬ್ಯಾಸ್ಕೆಟ್ ಬಾಲ್, ತೋಡುದೋಣಿ ಸ್ಪರ್ಧೆ–ಇವು ಐಚ್ಛಿಕ, ಕೆಲವು ಕಡೆಗಳಲ್ಲಿ ಕಲೆಗಳಲ್ಲೂ ಸ್ಪರ್ಧೆ ಏರ್ಪಡಿಸಿರುವುದುಂಟು.

400 ಮೀ. ವಿಕ್ರಮಿ (1968) ಲೀ ಇವಾನ್ಸ್ (ಅಮೆರಿಕ)

ಸ್ಕೀಯಿಂಗ್, ಸ್ಕೇಟಿಂಗ್, ಐಸ್ ಹಾಕಿ, ಬಾಬ್‌ಸ್ಲೆಡ್ ಇವು ಕೆಲವು ಚಳಿಗಾಲದ ಕ್ರೀಡೆಗಳು, ಮಾರ್ಗ ಮತ್ತು ಕ್ಷೇತ್ರ, ಕತ್ತಿವರಸೆ, ಗರಡಿ ವಿದ್ಯೆ, ತೋಡುದೋಣಿ ಸ್ಪರ್ಧೆ, ನೌಕಾಪಂದ್ಯ, ಈಜು ಮತ್ತು ಲಲಿತ ಕಲೆಗಳಲ್ಲಿ ಸ್ತ್ರೀಯರು ಸ್ಪರ್ಧಿಸುತ್ತಾರೆ.

ಉದ್ದನೆಗೆತದಲ್ಲಿ (1964) ಬ್ರಿಟನಿಗೆ ಬಂಗಾರ ಪದಕ ಗಳಿಸಿಕೊಟ್ಟ ಸುಂದರ ಗೃಹಿಣಿ–ಮೇರಿರ್‍ಯಾಂಡ್

ನಾನಾರಾಷ್ಟ್ರಗಳು ನಾನಾ ಕ್ರೀಡೆಗಳಲ್ಲಿ ವಿಶೇಷ ಪ್ರಾವೀಣ್ಯಗಳಿಸಿರುವುದು ಇನ್ನೊಂದು ಗಮನಾರ್ಹ ಅಂಶ. ಈ ಕ್ರೀಡೆಗಳಲ್ಲಿ ಉನ್ನತ ಸ್ಥಾನಗಳನ್ನುಳಿಸಿಕೊಳ್ಳಲು ಅವು ಬಹಳವಾಗಿ ಹೆಣಗುತ್ತವೆ. ಅವುಗಳೊಂದಿಗೆ ಸ್ಪರ್ಧಿಸಿ, ಅವನ್ನು ಆ ಸ್ಥಾನಗಳಿಂದ ಕೆಳಗಿಳಿಸಲು ಇತರ ರಾಷ್ಟ್ರಗಳು ಶ್ರಮಿಸುತ್ತವೆ. ಯಾವ ರಾಷ್ಟ್ರಕ್ಕೇ ಆಗಲಿ, ವರ್ಣಕ್ಕೇ ಆಗಲಿ, ಯಾವ ಸ್ಥಾನವೂ ಶಾಶ್ವತವಲ್ಲ.

ಒಂದೊಂದು ಕ್ರೀಡೆಯಲ್ಲಿ ಒಬ್ಬೊಬ್ಬ ವೀರ ತನ್ನ ಶೌರ್ಯ ಮೆರೆದು ತನ್ನ ಹೆಸರನ್ನು ಜ್ಯೋತಿರ್ರೇಖೆಯಲ್ಲಿ ಬರೆದಿಟ್ಟು ಹೋಗಿರುವುದು ಗಮನಾರ್ಹ, ಆಯಾ ಅಧಿವೇಶನಗಳೇ ಆಯಾ ವೀರರ ಹೆಸರುಗಳಿಂದ ಚಿರಸ್ಥಾಯಿಗಳಾಗಿವೆ. 1936ರ ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಹಿಟ್ಲರನ ಆರ್ಯಪ್ರತಿಷ್ಠೆಯ ಗುಳ್ಳೆಯನ್ನೊಡೆದವನು ಅಮೆರಿಕನ್ ನೀಗ್ರೊ ಜೆಸ್ಸಿ ಓವೆನ್ಸ್. ಈತ 100 ಮತ್ತು 200 ಮೀಟರ್ ಓಟ ಸ್ಪರ್ಧೆಯಲ್ಲಿ, ಅಗಲ ನೆಗೆತ ಮತ್ತು ರಿಲೇ ಸ್ಪರ್ಧೆಗಳಲ್ಲಿ ವಿಕ್ರಮ ಸ್ಥಾಪಿಸಿ ನಾಲ್ಕು ಚಿನ್ನದ ಪದಕಗಳನ್ನು ಪಡೆದ. ಅವನಿಗಿಂತ ಮುಂಚೆ, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ವಿಶ್ವವಿಕ್ರಮಗಳನ್ನು (24) ಮುರಿದು 'ಹಾರುವ ಫಿನ್ನ' ನೆಂದು ಹೆಸರು ಗಳಿಸಿದವನು ಪ್ಯಾವ್ಹೊ ನುರ್ಮಿ, 1952ರ ಹೆಲ್ಸಿಂಕಿಯ ಒಲಿಂಪಿಕ್ಸ್‌ನಲ್ಲಿ ಎಮಿಲ್ ಝಟೊಪೆಕ್ ಸಾಹಸದಿಂದಾಗಿ ಅವಕ್ಕೆ ಜಟೋಪೆಕ್ ಕ್ರೀಡೆಗಳೆಂದೇ ಅಡ್ಡಹೆಸರು ಬಂದಿದೆ. 5,000 ಮತ್ತು 10,000 ಮೀಟರುಗಳಲ್ಲಿ ಆಗ ಹೊಸ ವಿಕ್ರಮ ಸ್ಥಾಪಿಸಿದ ಈತನಿಗೆ 'ಮಾನವ ರೈಲು' (ಹ್ಯೂಮನ್ ಲೋಕೊಮೋಟಿವ್) ಎಂಬುದೇ ಅನ್ವರ್ಥನಾಮವಾಯಿತು. ಬಾಸ್ಟನಿನ ಜೇಮ್ಸ್ ಕಾನಲಿ ಆಧುನಿಕ ಒಲಿಂಪಿಕ್ಸ್‌ನ ಪ್ರಥಮ ಚಾಂಪಿಯನ್ (1896), ದೂರದ ಓಟದ ಸ್ಪರ್ಧೆಯಲ್ಲಿ (ಮ್ಯಾರತಾನ್) ಪ್ರಥಮನಾದವನು ಸ್ಪೈರಾಸ್ ಲೂಯಿಸ್ ಎಂಬ ಗ್ರೀಕ್ ಪ್ರಜೆ.

ಜಿಮ್ಮಿ ಹೈನ್ಸ್ (ಅಮೆರಿಕ)

1964ರಲ್ಲಿ ಟೋಕಿಯೋದಲ್ಲಿ ನಡೆದ ಒಲಿಂಪಿಕ್ ಕ್ರೀಡೆಗಳು ಏಷ್ಯದಲ್ಲೇ ಪ್ರಥಮ. ಈ ಸ್ಪರ್ಧೆಗಳಿಗಾಗಿ ವಿನಿಯೋಗವಾದ ಹಣವೂ ದುಡಿಮೆಯೂ ಸಂಘಟನೆಯೂ ಎಷ್ಟೊಂದು ಅಗಾಧವೆಂಬುದನ್ನು ಕೂಬರ್ತಿ ಕನಸಿನಲ್ಲೂ ಊಹಿಸಿದ್ದಿರಲಾರ, ವಿಶ್ವದ ಸ್ಪರ್ಧಿಗಳನ್ನು ಸ್ವಾಗತಿಸಲು ಇಡೀ ಟೋಕಿಯೋ ನಗರವೇ ಹೊಸ ಉಡುಪು ಧರಿಸಿ ಸಿದ್ಧವಾಯಿತೆನ್ನಬಹುದು. ಇವಕ್ಕಾಗಿ ಹೊಸ ಮೋಟಾರು ರಸ್ತೆಗಳೂ ಸೇತುವೆಗಳೂ ನಿರ್ಮಾಣವಾದುವು. ಕ್ರೀಡಾಂಗಣವೂ ಕ್ರೀಡೋಪವನವೂ ಉದಯವಾದುವು. ಅನೇಕ ಹೊಸ ಭವನಗಳನ್ನೇ ಕಟ್ಟಲಾಯಿತು. ಇವಕ್ಕೆಲ್ಲ ವೆಚ್ಚವಾದ ಹಣ ಇಪ್ಪತ್ತು ಕೋಟಿ ಡಾಲರ್. ಹಿಂದಿನ ಕ್ರೀಡೆಗಳಂತೆ ಟೋಕಿಯೋದಲ್ಲೂ ಅಮೆರಿಕ ಸಂಯುಕ್ತಸಂಸ್ಥಾನವೇ ಮಾರ್ಗ ಮತ್ತು ಕ್ಷೇತ್ರ ಸ್ಪರ್ಧೆಗಳಲ್ಲಿ ಮೇಲುಗೈ ಸ್ಥಾಪಿಸಿತು. ನ್ಯೂಜ಼ೀಲೆಂಡಿನ ಪೀಟರ್ ಸ್ನೆಲ್ ಮಾತ್ರ 800 ಮತ್ತು 1500 ಮೀಟರುಗಳಲ್ಲೂ ಬ್ರಿಟನಿನ ಲಿನ್ ಡೇವಿಸ್ ಉದ್ದನೆಗೆತದಲ್ಲೂ ಪ್ರಥಮರಾದರು.

1968ರ ಒಲಿಂಪಿಕ್ ಕ್ರೀಡೆಗಳನ್ನು ಮೆಕ್ಸಿಕೋ ನಗರದಲ್ಲಿ ಸಮುದ್ರಮಟ್ಟದಿಂದ ಸು.2134 ಮೀಗಳ ಎತ್ತರದಲ್ಲಿ–ಏರ್ಪಡಿಸಲಾಗಿತ್ತು. ಈ ಎತ್ತರದಲ್ಲಿ ಸ್ಪರ್ಧೆಗಳನ್ನು ನಡೆಸುವುದರ ಸಾಧ್ಯತೆಬಾಧ್ಯತೆಗಳನ್ನು ಕುರಿತು ವಿಪುಲವಾಗಿ ವಾದವೇ ನಡೆಯಿತು, ಆಮ್ಲಜನಕದ ವಿರಳತೆಯಿಂದಾಗಿ ಅಪಾಯ ಸಂಭವಿಸಬಹುದೆಂಬುದೇ ಭಯ, ಸ್ಪರ್ಧಿಗಳಿಗೆ ಆಮ್ಲಜನಕ ಒದಗಿಸಲಾಗಿತ್ತು. ಇದೇ ಬಗೆಯ ನಾಡುಗಳಿಂದ ಬಂದವರಿಗೆ ಈ ಎತ್ತರವೊಂದು

ಅನುಕೂಲವಾಗಿಯೇ ಪರಿಣಮಿಸಿತೆನ್ನಬೇಕು. 800 ಮೀಟರ್ ಮತ್ತು ಹೆಚ್ಚಿನ ನಡುದೂರಗಳ ಓಟಗಳ ಸ್ಪರ್ಧೆಯಲ್ಲಿ ಕೀನ್ಯದವರು ಗೆದ್ದರು. ಅನೇಕ ಸ್ಪರ್ಧೆಗಳಲ್ಲಿ ಹಳೆಯ ವಿಶ್ವವಿಕ್ರಮಗಳು ಮುರಿದು ಬಿದ್ದುವು. ಅಮೆರಿಕದ ಬಾಬ್ ಬೀಮನ್ 29' 2½" ಉದ್ದ ನೆಗೆದು ಅದ್ಭುತವಾದ ವಿಕ್ರಮ ಸ್ಥಾಪಿಸಿದ. ಇದು ಹಿಂದಿನ ವಿಕ್ರಮಕ್ಕಿಂತ 1' 9¾" ಹೆಚ್ಚು. ಪೂರ್ಣ ವೇಗದ ಓಟದಲ್ಲಿ (ಸ್ಪ್ರಿಂಟ್ಸ್) ಅಮೆರಿಕನ್ ನೀಗ್ರೊ ಸ್ಪರ್ಧಿಗಳದೇ ಮೇಲುಗೈ. ಇತರ ವಿಕ್ರಮಗಳು ಈ ರೀತಿ ಇವೆ: ಆಲ್ ಓರ್ಟರ್ (ಅಮೆರಿಕ); ಚಕ್ರ ಎಸೆತ; ವ್ಯೋಮಿಯ ಟೈಯಸ್ (ಅಮೆರಿಕ); 100 ಮೀ. ಓಟ; ಡೇವಿಡ್ ಹೆಮರಿ (ಗ್ರೇಟ್ ಬ್ರಿಟನ್); 400 ಮೀ. ಪ್ರತಿಬಂಧಕ ಓಟ (ಹರ್ಡಲ್ಸ್); ರಾಲ್ಫ್ ಡೌಬೆಲ್ (ಆಸ್ಟ್ರೇಲಿಯ); 800 ಮೀ; ಎತ್ತರ ನೆಗೆತದ ಪರಾಕ್ರಮಿ ಡಿಕ್ ಫಾಸ್‌ಬೆರಿ (ಅಮೆರಿಕ) ಹಿಮ್ಮೊಗನಾಗಿ ನೆಗೆದದ್ದೊಂದು ವೈಶಿಷ್ಟ್ಯ.

ಓಟದ ಒಂದು ಭಂಗಿ–ಅಮೆರಿಕದ ಆರ್. ಸ್ಮಿತ್

**ಒಲಿಂಪಿಕ್ಸ್‌ನಲ್ಲಿ ಭಾರತ:** ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸದ ಒಲಿಂಪಿಕ್ ಕ್ರೀಡೆಗಳಲ್ಲಿ ಭಾರತದ ಸಾಧನೆ ಏನು ಎಂದು ಕೇಳಿದರೆ, ಹಾಕಿಯ ಗತವೈಭವ ನೆನಪಾಗುತ್ತದೆ. ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಗುರುತಿಸುತ್ತಿದ್ದುದೇ ಹಾಕಿ ತಂಡದ ಸುವರ್ಣ ಸಾಧನೆಯಿಂದ. ಜರ್ಮನಿಯ ಸರ್ವಾಧಿಕಾರಿ ಅಡಾಲ್ಫ್ ಹಿಟ್ಲರ್ ಕೂಡ ಧ್ಯಾನ್‌ಚಂದರ ಮಾಂತ್ರಿಕ ಆಟಕ್ಕೆ ತಲೆಬಾಗಿದ್ದ. ಆದರೆ ಕ್ರಮೇಣ ಭಾರತದ ಹಾಕಿ ಮಾನ ಚಿನ್ನದಿಂದ ಕಂಚಿಗಿಳಿಯಿತು. ಕಂಚಿನಿಂದ ಹಂಚಿಗಿಳಿಯಿತು.

ಗೆಲವಿಗೆ ಇನ್ನೆಷ್ಟು ದೂರ ?

1952ರ ಹೆಲ್ಸಿಂಕಿ ಒಲಿಂಪಿಕ್ಸ್‌ನಲ್ಲಿ ಭಾರತದ ಪೈಲ್ವಾನ ಖಾಶಾಬಾ ಜಾಧವ ಬಾಂಟಮ್ ವೇಟ್ (58 ಕಿಗ್ರಾಂ)ನಲ್ಲಿ ಕಂಚಿನ ಪದಕ ಗೆದ್ದಿದ್ದನ್ನು ಬಿಟ್ಟರೆ, ಭಾರತದ ಕ್ರೀಡಾಪಟುಗಳು ವೈಯಕ್ತಿಕ ಪದಕವೊಂದನ್ನು ಗೆಲ್ಲಲು 2000 ದ ವರೆಗೆ ಕಾಯಬೇಕಾಯಿತು. ಸಿಡ್ನಿಯಲ್ಲಿ ನಡೆದ ಆ ಒಲಿಂಪಿಕ್ಸ್‌ನಲ್ಲಿ ಲಿಯಾಂಡರ್ ಪೇಸ್ ಟೆನಿಸ್‌ನಲ್ಲಿ ಹಾಗೂ ಕರ್ಣಂ ಮಲ್ಲೇಶ್ವರಿ ವೇಟ್‌ಲಿಫ್ಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದರು. 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಹರ್ಷವರ್ಧನ ರಾಥೋಡ್ ಷೂಟಿಂಗ್‌ನಲ್ಲಿ ಬೆಳ್ಳಿ ಪದಕ ಗೆದ್ದದ್ದು ಇದುವರೆಗಿನ ಅತ್ಯುತ್ತಮ ಸಾಧನೆ. ಅದರರ್ಥ ವೈಯುಕ್ತಿಕ ಸ್ಪರ್ಧೆಗಳಲ್ಲಿ ಇದುವರೆಗೆ ಯಾರೂ ಚಿನ್ನದ ಪದಕ ಗೆದ್ದೇ ಇಲ್ಲ.

ಭಾರತದ ಮಿಲ್ಖಾಸಿಂಗ್ ಹಾಗೂ ಪಿ.ಟಿ. ಉಷಾ ಓಟದ ಸ್ಪರ್ಧೆಗಳಲ್ಲಿ ಕಂಚಿನ ಪದಕದ ಹತ್ತಿರ ಬಂದಿದ್ದರು. 1960ರ ರೋಮ್ ಒಲಿಂಪಿಕ್ಸ್‌ನ 400 ಮೀಟರ್ಸ್ ಓಟದಲ್ಲಿ ಮಿಲ್ಖಾಸಿಂಗ್ ನಾಲ್ಕನೇ ಸ್ಥಾನ ಪಡೆದರು. ಅವರು ಮೊದಲ ಮೂವರ ಜೊತೆ ವಿಶ್ವ ದಾಖಲೆಯ ಪಾಲುದಾರರಾದರೂ ಪದಕ ಮಾತ್ರ ಸಿಗಲಿಲ್ಲ. ಅದೇ ಪಿ.ಟಿ. ಉಷಾ 1984ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ನ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ಕೂದಲೆಳೆಯ ಅಂತರದಿಂದ ಅಂದರೆ ಸೆಕೆಂಡಿನ ನೂರನೇ ಒಂದು ಭಾಗದಷ್ಟು ಅಂತರದಿಂದ ಕಂಚಿನ ಪದಕ ತಪ್ಪಿಸಿಕೊಂಡರು.

ಭಾರತ ಹಾಕಿ ತಂಡ 1928ರ ಆ್ಯಮ್‌ಸ್ಟರ್‌ಡ್ಯಾಮ್ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಆಡಿತು. ಅಲ್ಲಿಂದಲೇ ಅದರ ಸ್ವರ್ಣಯುಗ ಆರಂಭವಾಯಿತು. 1932, 1936, 1948, 1952, 1956ರ ಒಲಿಂಪಿಕ್ಸ್‌ಗಳಲ್ಲಿ ಸತತವಾಗಿ ಚಿನ್ನದ ಪದಕ ಗೆದ್ದ ಭಾರತ, 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಪಾಕಿಸ್ತಾನಕ್ಕೆ ಸೋತು ರಜತ ಪದಕ ಗಳಿಸಿತು. 1964ರಲ್ಲಿ ಮತ್ತೆ ಭಾರತ ಚಿನ್ನದ ಪದಕ ಗಳಿಸಿತಾದರೂ 1968ರಲ್ಲಿ ಮೂರನೆಯ ಸ್ಥಾನಕ್ಕಿಳಿಯಿತು. 1972ರಲ್ಲೂ ಮೂರನೆಯ ಸ್ಥಾನ. 1976ರಲ್ಲಿ ಏಳನೆಯ ಸ್ಥಾನಕ್ಕಿಳಿದ ಭಾರತ 1980ರಲ್ಲಿ ಮರಳಿ ಚಿನ್ನದ ಪದಕ ಗಳಿಸಿತು. ಆದರೆ ಬಹಳಷ್ಟು ರಾಷ್ಟ್ರಗಳು ಮಾಸ್ಕೊದಲ್ಲಿ ನಡೆದ 1980ರ ಒಲಿಂಪಿಕ್ಸ್ ಕ್ರೀಡೆಗಳನ್ನು ಬಹಿಷ್ಕರಿಸಿದ್ದವು. 1984ರಲ್ಲಿ ಭಾರತಕ್ಕೆ ಐದನೆಯ ಸ್ಥಾನ, 1988ರಲ್ಲಿ ಆರನೆಯ ಸ್ಥಾನ, 1992ರಲ್ಲಿ ಎಂಟನೆಯ ಸ್ಥಾನ, 2000ರಲ್ಲಿ ಏಳನೇಯ ಹಾಗೂ 2004ರಲ್ಲಿ ಏಳನೆಯ ಸ್ಥಾನ.

ಒಲಿಂಪಿಕ್ ಕ್ರೀಡೆಗಳಲ್ಲಿ ಭಾರತದ ಸ್ಪರ್ಧಿಗಳು ಪ್ರಥಮ ಬಾರಿಗೆ ಭಾಗವಹಿಸಿದ್ದು 1920ರಲ್ಲಿ (ಆಂಟ್‌ವರ್ಪ್). ಆಗ ಸರ್ ದೊರಾಬ್ ತಾತಾ ಸ್ವಂತ ಖರ್ಚಿನಲ್ಲಿ ಮೂವರ ತಂಡವೊಂದನ್ನು ಕಳಿಸಿದರು. 1900ರಷ್ಟು ಹಿಂದೆಯೇ ನಾರ್ಮನ್ ಪ್ರಿಚರ್ಡ್ ಎಂಬಾತ ಭಾರತದ ಪರವಾಗಿ ಭಾಗವಹಿಸಿ 200 ಮೀಟರ್ ನೇರ ಓಟ (ಡ್ಯಾಷ್) ಮತ್ತು 200 ಮೀಟರ್ ಪ್ರತಿಬಂಧಕ ಓಟಗಳಲ್ಲಿ ತಲಾ ಒಂದೊಂದು ರಜತಪದಕ ಪಡೆದನೆಂದು ಉಲ್ಲೇಖವಿದೆ. ಇದುವರೆಗೂ ಬೇರೆ ಯಾವ ಭಾರತೀಯನೂ ಈ ಸಾಧನೆ ಮಾಡಿಲ್ಲ.

ಆಂಟ್‌ವರ್ಪಿನಲ್ಲಿದ್ದ ಭಾರತೀಯ ತಂಡದಲ್ಲಿದ್ದವರು ಪಿ. ಬ್ಯಾನರ್ಜಿ (200 ಮತ್ತು 800 ಮೀ.) ಪಿ. ಎಫ್. ಚೌಗುಲೆ (10,000 ಮೀ.), ಮತ್ತು ಕೈಜಾಲಿ (ಕಾಡುಮೇಡು–ಕ್ರಾಸ್ ಕಂಟ್ರಿ). ಚೌಗುಲೆಗೆ 19ನೆಯ ಸ್ಥಾನ ಲಭಿಸಿತು, 1924ರ ಪ್ಯಾರಿಸ್ ಸ್ಪರ್ಧೆಗಳಲ್ಲಿ ಭಾಗವಹಿಸಿದ ತಂಡದಲ್ಲಿ ಆರು ಮಂದಿ ಇದ್ದರು, ಇವರ ಪೈಕಿ ನಾಲ್ವರು ಮೊದಲನೆಯ ಸುತ್ತಿನಲ್ಲೇ ಮುಕ್ತರಾದರು.

ಲಾಸ್‌ಏಂಜೆಲೆಸ್ (1932) ಮತ್ತು ಬರ್ಲಿನ್ (1936) ಕ್ರೀಡೆಗಳಲ್ಲೂ ಭಾರತೀಯ ಕ್ರೀಡಾಪಟುಗಳಿದ್ದರು. ಆದರೆ ಭಾರತ ಪ್ರಥಮವಾಗಿ ಸಂಪೂರ್ಣ ಪ್ರಾತಿನಿಧ್ಯ ಗಳಿಸಿದ್ದು 1948ರ ಲಂಡನ್ ಕ್ರೀಡೆಗಳಲ್ಲಿ. ಆಗ ಇದು ಹಾಕಿ, ಫುಟ್‌ಬಾಲ್, ಅಥ್ಲೆಟಿಕ್ಸ್, ಸೈಕ್ಲಿಂಗ್, ಮುಷ್ಟಿಕಾಳಗ, ಕುಸ್ತಿ, ಈಜು, ವಾಟರ್ ಪೋಲೊ, ಭಾರ ಎತ್ತುಗೆಗಳಲ್ಲಿ ಭಾಗವಹಿಸಿತು. ಆದರೆ ಹಾಕಿ ಒಂದು ಬಿಟ್ಟು ಉಳಿದ ಸ್ಪರ್ಧೆಗಳಲ್ಲಿ ಭಾರತ ಬಹು ಬೇಗ ನಿರ್ಗಮಿಸಿತು.

ಒಲಿಂಪಿಕ್ ಕ್ರೀಡೆಗಳಲ್ಲಿ ಮೊಟ್ಟಮೊದಲಿಗೆ ಭಾಗವಹಿಸಿದ ಮಹಿಳೆಯರೆಂದರೆ (1952) ಮೇರಿ ಡಿ'ಸೋಜ಼ (100 ಮೀ. ಮತ್ತು 200 ಮೀ.), ನೀಲಿಮಾ ಘೋಷ್ (100 ಮೀ, ಮತ್ತು 80 ಮೀ, ಪ್ರತಿಬಂಧಕ), ಡಾಲಿ ನಜೀರ್ ಮತ್ತು ಆರತಿ ಸಹಾ (ಈಜು), ಆ ವರ್ಷ ಭಾರತೀಯ ಪುರುಷರೂ ಭಾಗವಹಿಸಿ ಹಿಂದಿನಬಾರಿಗಿಂತ ಹೆಚ್ಚು ಸಮರ್ಪಕ ಸ್ಥಾನಗಳಿಸಿದರೆನ್ನಬಹುದು.

1964ರ ಕ್ರೀಡೆಗಳಲ್ಲಿ ಭಾರತದ ಪ್ರದರ್ಶನ ಇನ್ನೂ ಉತ್ತಮವಾಗಿತ್ತು ಭಾರತದ ಸ್ಪರ್ಧಿಗಳು 110 ಮೀ. ಪ್ರತಿಬಂಧಕ, 400 ಮೀ. ಪ್ರತಿಬಂಧಕ ಮುಮ್ಮಡಿ ನೆಗೆತ (ಟ್ರಿಪಲ್ ಜಂಪ್), ಅಗಲ ನೆಗೆತ, ದೂರದ ಓಟ (ಮ್ಯಾರತಾನ್) ಮುಂತಾದವಲ್ಲಿ ಒಳ್ಳೆಯ ಮಟ್ಟ ಸ್ಥಾಪಿಸಿದರು. ಕುಸ್ತಿಯಲ್ಲಿ ಬ್ಯಾಂಟಮ್ ತೂಕದ ವರ್ಗದಲ್ಲಿ ಬಿಷಂಬರ್ ಸಿಂಗನದು ಆರನೆಯ ಸ್ಥಾನ, ರೋಮಿನಲ್ಲಿ ಮಿಲ್ಖಾಸಿಂಗನಂತೆ ಟೋಕಿಯೋದಲ್ಲಿ ಗುರ್‌ಬಚನ್ ಸಾಹಸ ಮೆರೆದ.

**ಒಲಿಂಪಿಕ್ ಕ್ರೀಡೆಗಳ ಕೆಲವು ದಾಖಲೆಗಳು:**

**ಅತಿ ಹೆಚ್ಚಿನ ಪದಕಗಳು:** ಸೋವಿಯತ್–ಉಕ್ರೇನಿನ ಲ್ಯಾರಿಸಾ ಲ್ಯಾಜಿನಿನಾ 1956 ರಿಂದ 1964ರ ವರೆಗೆ, ಜಿಮ್ನ್ಯಾಸ್ಟಿಕ್ಸ್ ಸ್ಪರ್ಧೆಗಳಲ್ಲಿ ಒಟ್ಟು 18 ಪದಕಗಳನ್ನು ಗೆದ್ದಿದ್ದಾರೆ. ಸೋವಿಯತ್–ರಷ್ಯಾದ ನಿಕೊಲಾಯ್ ಆ್ಯಂಡ್ರಿಯಾನೊವ್, 1972 ರಿಂದ 1980ರ ವರೆಗೆ ಜಿಮ್ನ್ಯಾಸ್ಟಿಕ್ಸ್‌ನಲ್ಲಿ 15 ಪದಕಗಳನ್ನು ಗೆದ್ದಿದ್ದಾರೆ.

**ಒಲಿಂಪಿಕ್ಸ್ ಕ್ರೀಡೆಗಳ ವಿವರ**

| ಕ್ರಸಂ. | ವರ್ಷ | ಸ್ಥಳ | ದಿನಾಂಕ | ಒಟ್ಟು ಸ್ಪರ್ಧಿಗಳು | ಮಹಿಳೆಯರು | ಭಾಗವಹಿಸಿದ್ದ ರಾಷ್ಟ್ರಗಳು | ಒಟ್ಟು ಸ್ಪರ್ಧೆಗಳು |
|---|---|---|---|---|---|---|---|
| 1 | 1896 | ಅಥೆನ್ಸ್, ಗ್ರೀಸ್ | ಏಪ್ರಿಲ್ 6–15 | 245 | 0 (0%) | 14 | 43 |
| 2 | 1900 | ಪ್ಯಾರಿಸ್, ಫ್ರಾನ್ಸ್ | ಮೇ 14–ಅಕ್ಟೋಬರ್ 28 | 1118 | 21 (1.9%) | 28 | 75 |
| 3 | 1904 | ಸೇಂಟ್ ಲೂಯಿಸ್, ಯುಎಸ್‌ಎ | ಜುಲೈ 1–ನವೆಂಬರ್ 23 | 627 | 6 (1.0%) | 12 | 84 |
| 4 | 1906 | ಅಥೆನ್ಸ್, ಗ್ರೀಸ್ | ಏಪ್ರಿಲ್ 22–ಮೇ 2 | 847 | 6 (0.7%) | 20 | 74 |
| 5 | 1908 | ಲಂಡನ್, ಗ್ರೇಟ್ ಬ್ರಿಟನ್ | ಏಪ್ರಿಲ್ 27–ಅಕ್ಟೋಬರ್ 31 | 2023 | 44 (2.2%) | 22 | 109 |
| 6 | 1912 | ಸ್ಟಾಕ್‌ಹೋಮ್, ಸ್ವೀಡನ್ | ಮೇ 5–ಜುಲೈ 22 | 2490 | 55 (2.2%) | 28 | 102 |
| 7 | 1916 | ಬರ್ಲಿನ್, ಜರ್ಮನಿ | ಯುದ್ಧದಿಂದ ನಡೆಯಲಿಲ್ಲ | – | – | – | – |
| 8 | 1920 | ಆಂಟ್‌ವರ್ಪ್, ಬೆಲ್ಜಿಯಂ | ಏಪ್ರಿಲ್ 20–ಸೆಪ್ಟೆಂಬರ್ 12 | 2668 | 77 (2.9%) | 29 | 154 |
| 9 | 1924 | ಪ್ಯಾರಿಸ್, ಫ್ರಾನ್ಸ್ | ಮೇ 4–ಜುಲೈ 27 | 3070 | 125 (4.0%) | 44 | 126 |
| 10 | 1928 | ಆ್ಯಂಸ್ಟರ್‌ಡ್ಯಾಂ, ಹಾಲೆಂಡ್ | ಮೇ 17–ಆಗಸ್ಟ್ 12 | 3014 | 290 (9.6%) | 46 | 109 |
| 11 | 1932 | ಲಾಸ್ ಏಂಜಲಿಸ್, ಯುಎಸ್‌ಎ | ಜುಲೈ 30–ಆಗಸ್ಟ್ 14 | 1328 | 127 (906%) | 37 | 116 |
| 12 | 1936 | ಬರ್ಲಿನ್, ಜರ್ಮನಿ | ಆಗಸ್ಟ್ 1–16 | 3956 | 328 (8.3%) | 49 | 129 |
| 13 | 1940 | ಟೋಕಿಯೊ–ಜಪಾನ್ | ಯುದ್ಧದಿಂದ ನಡೆಯಲಿಲ್ಲ | – | – | – | – |
| 14 | 1944 | ಹೆಲ್ಸಿಂಕಿ–ಫಿನ್ಲ್ಯಾಂಡ್ ಲಂಡನ್, ಗ್ರೇಟ್ ಬ್ರಿಟನ್ | ಯುದ್ಧದಿಂದ ನಡೆಯಲಿಲ್ಲ | – | – | – | – |
| 15 | 1948 | ಲಂಡನ್, ಗ್ರೇಟ್ ಬ್ರಿಟನ್ | ಜುಲೈ 29–ಆಗಸ್ಟ್ 14 | 4064 | 355 (8.7%) | 59 | 136 |
| 16 | 1952 | ಹೆಲ್ಸಿಂಕಿ, ಫಿನ್ಲ್ಯಾಂಡ್ | ಜುಲೈ 19–ಆಗಸ್ಟ್ 03 | 4879 | 518 (10.6%) | 69 | 149 |
| 17 | 1956 | ಮೇಲ್ಬರ್ನ್, ಆಸ್ಟ್ರೇಲಿಯ | ನವೆಂಬರ್ 22–ಡಿಸೆಂಬರ್ 08 | 3258 | 384 (11.8%) | 72 | 151 |
| 18 | 1960 | ರೋಮ್, ಇಟಲಿ | ಆಗಸ್ಟ್ 25–ಸೆಪ್ಟೆಂಬರ್ 11 | 5348 | 610 (11.4%) | 83 | 150 |
| 19 | 1964 | ಟೋಕಿಯೊ, ಜಪಾನ್ | ಅಕ್ಟೋಬರ್ 10–24 | 5081 | 683 (13.4%) | 93 | 163 |
| 20 | 1968 | ಮೆಕ್ಸಿಕೊ ನಗರ, ಮೆಕ್ಸಿಕೊ | ಅಕ್ಟೋಬರ್ 12–27 | 5423 | 768 (14.2%) | 112 | 172 |
| 21 | 1972 | ಮ್ಯೂನಿಚ್, ಜರ್ಮನಿ | ಆಗಸ್ಟ್ 26–ಸೆಪ್ಟೆಂಬರ್ 10 | 7173 | 1058 (14.8%) | 121 | 195 |
| 22 | 1976 | ಮಾಂಟ್ರಿಯಲ್, ಕೆನಡ | ಜುಲೈ 17–ಆಗಸ್ಟ್ 01 | 6024 | 1246 (20.7%) | 92 | 198 |
| 23 | 1980 | ಮಾಸ್ಕೋ, ಯುಎಸ್‌ಎಸ್‌ಆರ್ | ಜುಲೈ 19–ಆಗಸ್ಟ್ 03 | 5217 | 1124 (21.5%) | 80 | 203 |
| 24 | 1984 | ಲಾಸ್ ಏಂಜಲಿಸ್, ಯುಎಸ್‌ಎ | ಜುಲೈ 28–ಆಗಸ್ಟ್ 12 | 6797 | 1567 (23.1%) | 140 | 221 |
| 25 | 1988 | ಸೋಲ್, ದಕ್ಷಿಣ ಕೊರಿಯ | ಸೆಪ್ಟೆಂಬರ್ 17–ಅಕ್ಟೋಬರ್ 12 | 8465 | 2189 (25.9%) | 159 | 237 |
| 26 | 1992 | ಬಾರ್ಸಿಲೋನ, ಸ್ಪೇನ್ | ಜುಲೈ 24–ಆಗಸ್ಟ್ 09 | 9370 | 2708 (28.9%) | 169 | 257 |
| 27 | 1996 | ಅಟ್ಲಾಂಟ, ಯುಎಸ್‌ಎ | ಜುಲೈ 19–ಆಗಸ್ಟ್ 04 | 10,310 | 3513 (34.1%) | 197 | 271 |
| 28 | 2000 | ಸಿಡ್ನಿ, ಆಸ್ಟ್ರೇಲಿಯ | ಸೆಪ್ಟೆಂಬರ್ 13–ಅಕ್ಟೋಬರ್ 01 | 10,651 | – | 199 | 300 |
| 29 | 2004 | ಅಥೆನ್ಸ್, ಗ್ರೀಸ್ | ಆಗಸ್ಟ್ 13–29 | 11,099 | – | 202 | – |
| 30 | 2008 | ಬೀಜಿಂಗ್, ಚೀನ | – | – | – | – | – |

**ಅತಿ ಹೆಚ್ಚು ಚಿನ್ನದ ಪದಕ ಗೆದ್ದವರು:** ಫಿನ್‌ಲೆಂಡಿನ ಪಾವೊ ನುರ್ಮಿ (1920–1928) ಅಥ್ಲೆಟಿಕ್ಸ್‌ನಲ್ಲಿ; ಸೋವಿಯತ್–ಉಕ್ರೇನಿನ ಲ್ಯಾರಿಸಾ ಲ್ಯಾಜಿನಿನಾ (1956–1964) ಜಿಮ್ನಾಸ್ಟಿಕ್ಸ್‌ನಲ್ಲಿ; ಅಮೆರಿಕದ ಮಾರ್ಕ್ ಸ್ಪಿಟ್ಸ್ (1968–1972) ಈಜಿನಲ್ಲಿ ಹಾಗೂ ಅಮೆರಿಕದ ಕಾರ್ಲ್ ಲೂಯಿಸ್ (1984–1996) ಅಥ್ಲೆಟಿಕ್ಸ್‌ನಲ್ಲಿ, ಈ ನಾಲ್ವರೂ ತಲಾ 9 ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. (ಜಿ.ಹೆಚ್)

**ಒಲಂಪಿಯ[1]:** ಪಶ್ಚಿಮ ವಾಷಿಂಗ್ಟನ್‌ನ ರೇವುಪಟ್ಟಣ, ರಾಜಧಾನಿ, ಸಿಯಾಟಲಿನಿಂದ 96 ಕಿಮೀ ದೂರದಲ್ಲಿದೆ.

ಈ ಪಟ್ಟಣದ ವಿಸ್ತೀರ್ಣ 7.9 ಚ.ಮೈ. ನಗರವನ್ನು ತಗ್ಗಾದ ಹಸಿರು ಬೆಟ್ಟಗಳು ಸುತ್ತುವರಿದಿವೆ. ಉತ್ತರದಲ್ಲಿ ಹಿಮಾಚ್ಛಾದಿತ ಒಲಂಪಿಕ್ ಶಿಖರಗಳಿವೆ. ಇವರ ಜನಸಂಖ್ಯೆ 18,273 (1960).

ಪ್ರತಿವರ್ಷವೂ ಸುಮಾರು 5,00,000 ಟನ್‌ಗಳಷ್ಟು ಸರಕು ಒಲಿಂಪಿಯ ಬಂದರಿನ ಮೂಲಕ ಸಾಗುತ್ತದೆ. ಮರದ ದಿಮ್ಮಿ, ಪ್ಲೈವುಡ್, ಅರಣ್ಯಸಾಮಗ್ರಿ, ಅದುರುಗಳು, ಪೆಟ್ರೋಲಿಯಂ ಪದಾರ್ಥಗಳು, ಪಾನೀಯಗಳು, ಶಸ್ತ್ರಾಸ್ತ್ರ ಮತ್ತು ಸಂಸ್ಕರಿಸಿದ ಆಹಾರಗಳು ಇಲ್ಲಿಂದ ರಫ್ತಾಗುತ್ತವೆ.

ಒಲಿಂಪಿಕ್ ರಾಷ್ಟ್ರೀಯ ಅರಣ್ಯ ವ್ಯವಸ್ಥೆಯ ಕೇಂದ್ರ ಕಚೇರಿ ಇಲ್ಲೇ ಇದೆ. ಸೇಂಟ್ ಮಾರ್ಟಿನ್ಸ್ ಕಾಲೇಜು ಇದಕ್ಕೆ 5 ಕಿಮೀಗಳ ದೂರದಲ್ಲಿದೆ.

ಒಲಿಂಪಿಯದ ಬಳಿಯ ಟಮ್‌ವಾಟರ್ ಎಂಬಲ್ಲಿಗೆ ಅಮೆರಿಕನರು 1845ರಲ್ಲಿ ವಲಸೆ ಬಂದರು. ಆದರೆ 1849ರಲ್ಲಿ ಎಲ್ಲ ಜನರೂ ಕ್ಯಾಲಿಫೋರ್ನಿಯದ ಚಿನ್ನದ ಗಣಿಗಳಿಗೆ ನಡೆದು ಬಿಟ್ಟರು. 1850ರಲ್ಲಿ ಈಗಿನ ಒಲಿಂಪಿಯ ಪ್ರದೇಶದಲ್ಲಿ ನಗರವೊಂದು ಸ್ಥಾಪಿತವಾಯಿತು. ವಾಷಿಂಗ್‌ಟನ್ ಪ್ರದೇಶ ರಚನೆಯಾದಾಗ ಅದಕ್ಕೆ ಒಲಿಂಪಿಯ ರಾಜಧಾನಿಯಾಯಿತು (1853). ಇದಕ್ಕೆ ನಗರದ ಸನ್ನದು ದೊರೆತದ್ದು 1859ರಲ್ಲಿ. (ಪಿ.ಎಚ್.)

**ಒಲಂಪಿಯ²:** ಗ್ರೀಸಿನ ಪಶ್ಚಿಮ ಪೆಲಿಪೊನೀಸ್‌ನ ಒಂದು ಸ್ಥಳ, ಪುರಾತನ ಗ್ರೀಕರ ಜ್ಯೂಸ್ ದೇವತಾಕ್ಷೇತ್ರ. ಸಮುದ್ರದಿಂದ ಸುಮಾರು 16 ಕಿಮೀ ದೂರದಲ್ಲಿ, ಆಲ್‌ಫೀಯಸ್ ಮತ್ತು ಕ್ಲೇಡಿಯಸ್ ನದಿಗಳ ಸಂಗಮದ ಬಳಿ, ಕ್ರೋನಿಯಸ್ ಬೆಟ್ಟದ ತಪ್ಪಲಿನ ವಿಶಾಲ ಕಣಿವೆಯ ಹಸಿರು ನೆಲದ ಮೇಲೆ, ಪ್ರಾಚೀನ ವೈಭವದ ಮೂಕಸಾಕ್ಷಿಯಾಗಿ ಪವಡಿಸಿದೆ. ಅನೇಕ ದೃಷ್ಟಿಗಳಲ್ಲಿ ಇದು ಅಧಿಕೃತ ಗ್ರೀಕ್ ಧರ್ಮದ ಕೇಂದ್ರವಾಗಿತ್ತು. ಅಖಿಲ ಗ್ರೀಕರ ಮಾನ್ಯಧರ್ಮವೆನಿಸಬೇಕೆಂದು ಸೆಣಸಾಡುತ್ತಿದ್ದ ಕೆಲವು ಪಂಗಡಗಳ ಪೈಕಿ ಇಲ್ಲಿಯದೂ ಒಂದು. ಅಷ್ಟೇ ಅಲ್ಲ, ಇದೇ ಪ್ರಧಾನವಾಗಿತ್ತು; ನಾಲ್ಕು ವರ್ಷಗಳಿಗೊಮ್ಮೆ ಇಲ್ಲಿ ನಡೆಯುತ್ತಿದ್ದ ಕ್ರೀಡೆಗಳಲ್ಲಿ ಪಾಲ್ಗೊಳ್ಳಲೂ ಅವನ್ನು ವೀಕ್ಷಿಸಲೂ ಇಡೀ ಗ್ರೀಕ್ ಪ್ರಪಂಚದಿಂದಲೇ ಅಲ್ಲದೆ ಹೊರಗಿನಿಂದಲೂ ಜನ ಬರುತ್ತಿದ್ದರು. ಪರಸ್ಪರವಾಗಿ ಕಾದಾಡುತ್ತಿದ್ದ ಗ್ರೀಕ್ ರಾಜ್ಯಗಳ ನಡುವೆ ಆಗ್ಗೆ ತಾತ್ಕಾಲಿಕವಾಗಿ ಶಾಂತಿ ಏರ್ಪಾಡಾಗುತ್ತಿತ್ತು.

ಒಲಿಂಪಿಯದ ದೇವಾಲಯದ ಐತಿಹ್ಯ ಅಷ್ಟೇನೂ ಸ್ಫುಟವಾಗಿಲ್ಲ. ಇದು ಆಶ್ಚರ್ಯಕರ, ಪ್ರ.ಶ.ಪೂ.ಸು. 11ನೆಯ ಶತಮಾನದಲ್ಲಿ, ಡೋರಿಯನ್ ಆಕ್ರಮಣ ಕಾಲದಲ್ಲಿ ಇಲ್ಲಿಯ ಪಂಥ ಆರಂಭವಾಗಿರಬೇಕು. ಚತುರ್ವಾರ್ಷಿಕ ಕ್ರೀಡಾ ವ್ಯವಸ್ಥೆ ಪ್ರ.ಶ.ಪೂ. 776ರಲ್ಲಿ ಸ್ಥಾಪಿತವಾದಾಗ ಗ್ರೀಕ್ ಪ್ರಪಂಚ ಈ ಚತುರ್ವಾರ್ಷಿಕ ಎಣಿಕೆ ಕ್ರಮವನ್ನು ಒಪ್ಪಿಕೊಂಡಿತು; ಸ್ಥಳೀಯ ಪಂಚಾಂಗ ಯಾವುದೇ ಇರಲಿ, ಪ್ರತಿಯೊಬ್ಬರೂ ಒಲಿಂಪಿಕ್ ಹಬ್ಬಗಳಿಗೆ ಅನುಗುಣವಾದ ಕಾಲಗಣನೆಯನ್ನು ಸ್ವೀಕರಿಸಿದರು. ಅಲ್ಲಿಂದ ಮುಂದೆ ಧಾರ್ಮಿಕವಾಗಿಯೂ ಶಿಲ್ಪದೃಷ್ಟಿಯಿಂದಲೂ ಇಲ್ಲಿಯ ದೇವಾಲಯ ಪರಿಪರಿಯಾಗಿ ಶೋಭಿಸಿತು. ಮ್ಲೇಂಛರ ಪವಿತ್ರ ಮಂದಿರಗಳನ್ನೆಲ್ಲ ನೆಲಸಮ ಮಾಡಬೇಕೆಂಬ ಥಿಯೋಡೋಷಿಯಸನ ಆಜ್ಞೆಗೆ ಅನುಸಾರವಾಗಿ ಇಲ್ಲಿಯ ದೇವಾಲಯಗಳು ಪ್ರ.ಶ. 426ರಲ್ಲಿ ನಾಶವಾದವು. ಪ್ರ.ಶ. 393ರಲ್ಲಿ ನಡೆದದ್ದೇ ಪುರಾತನ ಒಲಿಂಪಿಯದ ಕೊಟ್ಟಕೊನೆಯ ಕ್ರೀಡೋತ್ಸವ (**ನೋಡಿ– ಒಲಿಂಪಿಕ್–ಕ್ರೀಡೆಗಳು**).

ಒಲಿಂಪಿಯವಿದ್ದ ನಿವೇಶನವನ್ನು ಪತ್ತೆಹಚ್ಚಿದವನು (1723) ಫ್ರೆಂಚ್ ಪರಿಶೋಧಕ ಮಾಂಟ್‌ಫಾಕನ್, ಅನಂತರ ಅನೇಕ ಐರೋಪ್ಯ ಕುತೂಹಲಿಗಳು ಇಲ್ಲಿಗೆ ಬಂದು ಸ್ಥಳದಲ್ಲೆಲ್ಲಾ ಅಡ್ಡಾಡಿ ಪರಿಶೀಲನೆ ನಡೆಸಿದರು. ಇಲ್ಲಿ ಭಾರೀ ಪ್ರಮಾಣದಲ್ಲಿ ಉತ್ಖನನ ನಡೆದದ್ದು 1875–1881ರಲ್ಲಿ–ಜರ್ಮನ್ ಪುರಾತತ್ತ್ವ ಸಂಸ್ಥೆಯ ಅರ್ನೆಸ್ಟ್ ಕುರ್ಟ್ಸಿಯಸ್ ನೇತೃತ್ವದಲ್ಲಿ, ಮತ್ತೆ ಜರ್ಮನರು 1936–38ರಲ್ಲಿ ಸುದೀರ್ಘ ಉತ್ಖನನ ನಡೆಸಿ ಅನೇಕ ರಹಸ್ಯಗಳನ್ನು ಹೊರಗೆಡವಿದರು.

ಬೆಟ್ಟದ ಬುಡದಲ್ಲಿ, 750' × 570' ವಿಸ್ತೀರ್ಣದ ವಿಷಮ ಚತುರಸ್ರಾಕಾರದ ಆವೃತ ಪ್ರದೇಶದಲ್ಲೇ ದೇವಮಂದಿರವಿದ್ದದ್ದು. ಈ ಇಡೀ ಭಾಗದ ಹೆಸರು ಆಲ್ಟಿಸ್, ಜ್ಯೂಸ್ ದೇವಾಲಯವೂ ಇತರ ಅನೇಕ ಪವಿತ್ರ ಮಂದಿರಗಳೂ ಧಾರ್ಮಿಕ ಶಾಸನಗಳೂ ಇಲ್ಲಿದ್ದವು. ಆಲ್ಟಿಸಿನ ಹೊರಗೂ ಅನೇಕ ಕಟ್ಟಡಗಳಿದ್ದವು. ದೇವಮಂದಿರಗಳ ಮತ್ತು ಚತುರ್ವಾರ್ಷಿಕ ಕ್ರೀಡೆಗಳ ಆಡಳಿತ ಕಚೇರಿಗಳು ಇಲ್ಲಿದ್ದವು. ಯಾತ್ರಿಕರ ವಸತಿಗಾಗಿಯೂ ಸಾಕಷ್ಟು ಸೌಲಭ್ಯ ಕಲ್ಪಿಸಲಾಗಿತ್ತು. (ಪಿ.ಎಚ್.)

**ಒಲ್ಲಾರಿ:** ಮಧ್ಯದ್ರಾವಿಡ ಗುಂಪಿನ ಐದು ಉಪಭಾಷೆಗಳಲ್ಲೊಂದು. ಪರ್ಜಿ, ಗ ದ ಬ, ಕೋಲಾಮೀ, ನಾಯಕಿ ಇವು ಉಳಿದ ನಾಲ್ಕು, ಇವೆಲ್ಲ ಒಂದು ಪ್ರಧಾನ ಶಾಖೆಗೆ ಸೇರಿವೆ, ಒಲ್ಲಾರಿ ಮಾತನಾಡುವವರ ಸಂಖ್ಯೆ 2002ನೆಯ ಜನಗಣತಿಯಂತೆ 15,000 ಮಾತ್ರ. ಇದು ಒರಿಸ್ಸದ ಕೋರಾಪುಟ್ ಜಿಲ್ಲೆಯ ಸುತ್ತಮುತ್ತ ಬಳಕೆಯಲ್ಲಿದೆ. 1951ರಲ್ಲಿ ಸುಧೀಭೂಷಣ ಭಟ್ಟಾಚಾರ್ಯ ಆ ಜಿಲ್ಲೆಯನ್ನು ಸಂದರ್ಶಿಸಿ ಈ ಉಪಭಾಷೆಯ ಪರಿಶೀಲನೆ ನಡೆಸಿದರು. ಭಾರತ ದೇಶದ ಪ್ರಕಟನ ವಿಭಾಗದಿಂದ ಪ್ರಚುರವಾದ (1956–57) ಇವರ ಗ್ರಂಥ 'ಒಲ್ಲಾರಿ, ಎ ಡ್ರವಿಡಿಯನ್ ಸ್ಪೀಚ್' ಎಂಬುದು ಈ ಭಾಷೆಯ ಬಗ್ಗೆ ಸಾಕಷ್ಟು ವಿವರಗಳನ್ನು ಕೊಡುತ್ತದೆ. ಒಲ್ಲಾರಿಯ ವ್ಯಾಕರಣ ಮತ್ತು ಶಬ್ದಭಂಡಾರ ದ್ರಾವಿಡ ಭಾಷೆಗಳ ಕಡೆ ವಾಲುವುದನ್ನು ಸ್ಪಷ್ಟವಾಗಿ ಕಾಣಬಹುದು. ಅಂಬ್(ಬಾಣ), ಕಿಸ್(ಕಿಚ್ಚು), ಪಾಲ್ (ಹಾಲು), ಮರ್ದಿಲ್(ಮದ್ದು), ಸುಪ್(ಉಪ್ಪು), ಕಣ್(ಕಣ್ಣು), ಕಿ(ಕೈ), ತಲ್(ತಲೆ), ಪಲ್(ಹಲ್ಲು)–ಇವು ದಿನಬಳಕೆಯ ಕೆಲವು ಶಬ್ದಗಳೂ, ಆನ್(ನಾನು), ಆಮ್(ನಾವು), ಈನ್(ನೀನು), ಈಮ್(ನೀವು), ಓಣ್ಡ್ (ಅವನು), ಓರ್(ಅವರು–ಪುರುಷರು ಮಾತ್ರ), ಅದ್(ಅವಳು)–ಇವು ಸರ್ವನಾಮಗಳು. ಇಂಡಿ(ಎರಡು), ಇರಲ್(ಇಬ್ಬರು–ಸ್ತ್ರೀಯರು), ಇರುಲ್(ಇಬ್ಬರು–ಪುರುಷರು), ಮೂಣ್ಡ್(ಮೂರು)– ಇವು ಸಂಖ್ಯಾವಾಚಿಗಳು. ಅಟ್(ಹೊಡಿ), ಅಡ್(ಅಳು), ಇಡ್‌ಗೆ(ಇಳಿ), ಉನ್(ಕುಡಿ), ಕಟ್(ಕಟ್ಟು), ಕೂಯ್(ಕರೆ, ಕೂಗು), ಮನ್ (ಇರು), ನಿಲ್(ನಿಲ್ಲು), ವರ್(ಬರು), ಸೀ(ಕೊಡು)– ಇವು ಕೆಲವು ಧಾತುಗಳು.

ಈ ಭಾಷೆಯ ವರ್ಣಗಳು ಹೀಗಿವೆ:

ಸ್ವರಗಳು : ಅ ಆ ಇ ಈ ಉ ಊ ಎ ಏ ಒ ಓ

ವ್ಯಂಜನಗಳು : ಕ್ ಗ್ ಜ್ ಚ್ ಜ್ ಇ್ ಟ್ ಡ್ ಣ್ ಪ್ ಬ್ ಮ್ ಯ್ ರ್ .ಡ್ ಲ್ ವ್ .ಚ್ .ಜ್ .ಸ್

ಈ ಭಾಷೆಯಲ್ಲಿ ಭೂತಕಾಲಿಕ ಪ್ರಯತ್ನಗಳು ಎ, ಒ, ಸೂಡ್ ಎನ್(ನಾನು ನೋಡಿದೆ), ಸೂಡ್ ಎಮ್ (ನಾವು ನೋಡಿದೆವು), ಈಲ್ ಎನ್ (ಬಿದ್ದೆ), ಈಲ್ ಎಮ್ (ಬಿದ್ದೆವು), ಸೀನ್ ಒನ್ (ಕೊಟ್ಟೆ), ಸೀನ್ ಒಮ್ (ಕೊಟ್ಟೆವು), ಸಕರ್ಮಕ ಮತ್ತು ಪ್ರೇರಣಾರ್ಥಕ ಕ್ರಿಯಾಪದಗಳಲ್ಲಿ ಧಾತುವಿಗೆ ಭೂತಕಾಲದಲ್ಲಿ ತ್ ಪ್ರತ್ಯಯ ಸೇರುತ್ತದೆ. ಕಾತ್ ಒನ್ (ಕಾದಿದೆ), ಕಾತ್ ಒಮ್ (ಕಾದಿದೆವು), ವರ್ತಮಾನ ಮತ್ತು ಭವಿಷ್ಯತ್ತಿನಲ್ಲಿ ಧಾತುಗಳಿಗೆ ದ್ ಪ್ರತ್ಯಯ ಸೇರುತ್ತದೆ, ಸೀದ್ ಅನ್ (ಕೊಡುತ್ತೇನೆ) ಸೀದ್ ಅಮ್ (ಕೊಡುತ್ತೇವೆ). (ಬಿ.ಎಚ್.ಕೆ.)

**ಒಸಡಿನ ರೋಗಗಳು:** ನಡುವಯಸ್ಸು ದಾಟಿದ ಮೇಲೆ ಹಲ್ಲು ಬೀಳಲು ಬಹುಮುಖ್ಯ ಕಾರಣ ಒಸಡಿನ ರೋಗಗಳು (ಪೆರಿಡಾಂಟಲ್ ಡಿಸೀಸಸ್). ಈ ರೋಗಗಳು ಮೊದಲು ಒಸಡಿನಲ್ಲಿ ಆರಂಭವಾಗಿ ಕ್ರಮೇಣ ಹಲ್ಲುಗಳಿಗೆ ಆಧಾರ ನೀಡುವ ಸುತ್ತಲಿನ ಅಂಗಭಾಗಗಳಿಗೆ ಅಂದರೆ ಹಲ್ಲು ಮತ್ತು ದವಡೆಯೊಳಗೆ ಸಂಬಂಧ ಕಲ್ಪಿಸುವ ದಂತಕೋಶದ ಎಳೆಗಳು, ಹಲ್ಲುಗಳನ್ನು ಹಿಡಿದಿಡುವ ಬಾಯಿ ಮೂಳೆಗಳು ಮತ್ತು ಹಲ್ಲಿನ ಬೇರನ್ನು ಮುಚ್ಚುವ ಸಿಮೆಂಟಿನಂಥ ವಸ್ತುಗಳಿಗೆ ಹರಡುತ್ತವೆ.

ಒಸಡಿನ ರೋಗಗಳು ಅತಿ ಪ್ರಾಚೀನವೆನ್ನಲು ನಿದರ್ಶನಗಳಿವೆ. ಇವುಗಳ ಬೆಳವಣಿಗೆ ಸಾಮಾನ್ಯವಾಗಿ ಎರಡು ಹಂತಗಳಲ್ಲಿ ಇದೆ. ಒಸಡಿನ ಉರಿತ ಮೊದಲು ಪ್ರಾರಂಭವಾಗಿ ಅದು ಉಬ್ಬಿ ಕೀವುಗಟ್ಟುತ್ತದೆ. ಅನಂತರ ಹಲ್ಲಿಗೆ ಆಧಾರ ನೀಡುವ ಅಂಗ ಭಾಗಗಳಿಗೆ ರೋಗ ಹರಡುತ್ತದೆ. ಒಸಡಿನ ಉರಿತಕ್ಕೆ ಬಾಯಿಯ ಸ್ಥಿತಿಗತಿಗಳೇ ಕಾರಣ, ಯಾಂತ್ರಿಕ ನ್ಯೂನತೆ, ಉಷ್ಣತೆಯ ಪ್ರಭಾವ, ರಾಸಾಯನಿಕ ಪದಾರ್ಥಗಳು, ಜೀವಾಣುಗಳು ಮತ್ತು ಶಿಲೀಂಧ್ರಗಳ ಕಾರ್ಯಚಟುವಟಿಕೆ ಮತ್ತು ಒಗ್ಗದಿರುವಿಕೆಯ ವಸ್ತುಗಳ ಸೇವನೆಯ ಫಲವಾಗಿ ರೋಗ ಬರಬಹುದು. ಜೊಲ್ಲಿನಲ್ಲಿನ ಖನಿಜಪದಾರ್ಥಗಳು ಮತ್ತು ಬಾಯಲ್ಲಿನ ಅಣುಜೀವಿಗಳು ಸೇರ್ಪಡೆಗೊಂಡು ದಪ್ಪನಾಗಿ, ಒರಟಾಗಿ ಪಕಳೆಯಂತೆ ಹಲ್ಲಿನ ಮೇಲೆ ಭದ್ರವಾಗಿ ನೆಲೆಯೂರಬಲ್ಲುವು. ಈ ಪಕಳೆ ಅಥವಾ ಹಲ್ಲುಗಾರೆ ಒಸಡಿನಿಂದ ಆವೃತವಾದ ಹಲ್ಲಿನ ಬೇರಿನವರೆಗೂ ಹರಡುತ್ತದೆ. ಇದು ಒಸಡಿನ ಉರಿತವನ್ನುಂಟುಮಾಡುತ್ತದೆ. ಒಮ್ಮೆ ಪ್ರಾರಂಭವಾಗಿ ಹಲ್ಲಿನ ಮೇಲೆ ನೆಲೆಯೂರಿದ ಹಲ್ಲುಗಾರೆಯನ್ನು ದಂತಮಂಜನದಿಂದ ತೆಗೆಯಲು ಸಾಧ್ಯವಿಲ್ಲ. ದಂತ ಶಸ್ತ್ರದ ಉಪಯೋಗದಿಂದ ಮಾತ್ರ ಅದನ್ನು ತೆಗೆಯಬಹುದು. ಸವಕಳಿಗೊಂಡ ಹಲ್ಲುಗಳು, ತುಂಬಿದ ಹಲ್ಲುಗಳು, ಕೊಳೆತ ಹಲ್ಲಿನೊಳಗಿನ ಪೊಳ್ಳಿನ ಚೂಪಾದ ಭಾಗಗಳು, ಬಾಯಿ ಮುಚ್ಚಿದಾಗ ಒಂದಕ್ಕೊಂದು ಸೇರಿಕೊಳ್ಳದ ಹಲ್ಲುಗಳು, ಜಗಿಯುವಾಗ ಹಲ್ಲು ಮತ್ತು ಒಸಡಿನ ಸಂದಿನಲ್ಲಿ ಸಿಕ್ಕಿಹಾಕಿಕೊಳ್ಳುವ ಆಹಾರ, ಮತ್ತು ಆಗಾಗ್ಗೆ ಹಲ್ಲಿನ ಮೇಲೆ ಬೀಳುವ ಪೆಟ್ಟಿನ ಪ್ರಭಾವ–ಇವೆಲ್ಲ ಒತ್ತಡಗಳಿಗೆ ಒಳಗಾಗುವ ಒಸಡಿನ ಮೃದುಭಾಗಗಳ ಉರಿತಕ್ಕೆ ಕಾರಣವಾಗಿ ಕ್ರಮೇಣ ಒಸಡಿನ ರೋಗವನ್ನುಂಟುಮಾಡುತ್ತವೆ. ನ್ಯೂನ ಆಹಾರ ಸೇವನೆ, ತನ್ಮೂಲಕ ಉಂಟಾದ ರೋಗನಿರೋಧ ಶಕ್ತಿಯ ಕುಂದುವಿಕೆಗಳು ರೋಗದ ಬೆಳವಣಿಗೆಗೆ ಚಾಲನೆಯನ್ನುಂಟುಮಾಡುತ್ತವೆ. ಈ ರೋಗಗಳಿಂದ ನರಳುವವರು ಸಹಜವಾಗಿ ಮೆತ್ತನೆಯ ಆಹಾರವನ್ನು ಆಯ್ದುಕೊಳ್ಳುತ್ತಾರೆ. ಅದು ಸವಕಳಿಗೆ ಮತ್ತಷ್ಟು ಉತ್ತೇಜನ ಕೊಡುತ್ತದೆ. ಬಾಯಿಯಿಂದ ಉಸಿರಾಟ ಮಾಡುವವರಲ್ಲಿ ಒಸಡು ಒಣಗುತ್ತದೆ. ಗರ್ಭಿಣಿಯರಲ್ಲಿ, ಆಹಾರದಲ್ಲಿನ ಸಿ ಜೀವಾತುವಿನ ಕೊರತೆಯಿಂದಾಗಿ, ರಕ್ತಗಂತಿಯಾದಾಗ ಮತ್ತು ಡೈಲಾಂಟಿನ್ ಔಷಧಿಯ ಸೇವನೆಯ ಫಲವಾಗಿ ಒಸಡಿನ ಉರಿತ ತೋರಿಬರಬಹುದಾಗಿದೆ.

ಒಸಡುಗಳು ಕೆಂಪಗೆ ಸ್ಪಂಜಿನಂತೆ ಉಬ್ಬಿ ಹಲ್ಲುಗಳನ್ನು ಮುಚ್ಚುವಷ್ಟು ಜೋರಾಗಿ ಬೆಳೆಯುತ್ತವೆ. ಹಲ್ಲುಜ್ಜಿದಾಗ ರಕ್ತ ಸುರಿಯುತ್ತದಲ್ಲದೆ, ಅನೇಕ ಬಾರಿ ಅವನ್ನು ಮುಟ್ಟಿದರೇ ರಕ್ತ ಒಸರುತ್ತದೆ. ಆದರೂ ಪ್ರಾರಂಭದಲ್ಲಿ ಅದು ಅಷ್ಟೊಂದು ತೊಂದರೆ ಕೊಡದು. ಆದ್ದರಿಂದ ಅನೇಕರು ಅದನ್ನು ಉಪೇಕ್ಷಿಸಿಬಿಡುತ್ತಾರೆ. ಆಗಾಗ್ಗೆ ಒಸಡು ದಪ್ಪನಾಗಿ, ರೋಗಾಣುಜೀವಿಗಳ ಬೆಳವಣಿಗೆಯ ಫಲವಾಗಿ ನೋವು ತೋರಿಬರಬಹುದು. ಇನ್ನು

ಕೆಲವು ವೇಳೆ ಅಷ್ಟೊಂದು ತೀವ್ರತರವಲ್ಲದ ನೋವು ಆಹಾರವನ್ನು ಜಗಿಯುವಾಗ ಮತ್ತು ಅನಂತರ ತೋರಿಬರಬಹುದು. ರೋಗ ಒಳಗೇ ಬೆಳೆದು ಮುಂದೆ ಚಿಕಿತ್ಸೆಗೇ ಆತಂಕವನ್ನುಂಟುಮಾಡಬಹುದು. ದಿನೇ ದಿನೇ ಒಸಡಿನ ಉರಿತ ಹಲ್ಲಿನ ಬೇರಿನತ್ತ ಸಾಗಿಹೋಗುತ್ತದೆ. ಹಲ್ಲುಗಳು ಒಸಡಿನಿಂದ ಬೇರ್ಪಡೆಗೊಳ್ಳುತ್ತ ಅಲ್ಲಿ ಚಿಕ್ಕ ಚಿಕ್ಕ ಕೋಶಗಳು ರೂಪುಗೊಳ್ಳುತ್ತವೆ. ಆಹಾರದ ಚೂರುಗಳು, ಅಣುಜೀವಿಗಳು, ರೋಗಾಣುಜೀವಿಗಳು ಮತ್ತು ಕೆಲವು ಬಾರಿ ಕೀವು ಆ ಪ್ರದೇಶವನ್ನು ತುಂಬಿಕೊಳ್ಳುತ್ತವೆ. ರೋಗ ಬಲಿತಂತೆ, ದಂತಕೋಶದ ಎಳೆಗಳು ಸವಕಳಿಗೊಳ್ಳುವುದಲ್ಲದೆ, ಹಲ್ಲುಗಳಿಗೆ ಆಧಾರವನ್ನೊದಗಿಸಿದ ಮೂಳೆಗಳ ಅನುವಳಿಕೆಯುಂಟಾಗುತ್ತದೆ. ಹಲ್ಲುಬೇರಿನ ಕುಳಿಗಳು ಸವೆದು ಹೋಗುತ್ತವೆ; ಸಿಮೆಂಟು ಬೇರ್ಪಡೆಗೊಂಡು ಆಧಾರ ಸಡಿಲಗೊಳ್ಳುತ್ತದೆ. ರೋಗಿಷ್ಟ ಹಲ್ಲುಗಳು ಅಲುಗಾಡುತ್ತ ಕ್ರಮೇಣ ಬಿದ್ದುಹೋಗುತ್ತವೆ. ಈ ರೋಗ ಒಂದೇ ಹಲ್ಲಿನ ಇಲ್ಲವೇ ಅನೇಕ ಅಥವಾ ಎಲ್ಲ ಹಲ್ಲುಗಳ ಒಸಡಿನ ಪ್ರದೇಶವನ್ನು ಒಳಗೊಳ್ಳಬಹುದು.

ಚಿಕ್ಕ ವಯಸ್ಸಿನಲ್ಲಿ ಹಲ್ಲಿನ ಬಗ್ಗೆ ಯಾವ ಕಾಳಜಿಯನ್ನೂ ವಹಿಸದೆ, ಉಪೇಕ್ಷೆ ಮಾಡುವವರಲ್ಲಿ ಈ ರೋಗಗಳು ಹೆಚ್ಚಾಗಿ ತೋರಿಬರುತ್ತವೆ. ಒಸಡಿನ ಉರಿತಕ್ಕೆ ಚಿಕಿತ್ಸೆ ನೀಡದಿದ್ದರೆ ಅದು ಬೆಳೆದು ರೋಗವಾಗಿ ಪರಿಣಮಿಸುವುದು. ಹಲ್ಲುಗಳನ್ನು ಉಜ್ಜಿ ಚೊಕ್ಕಟವಾಗಿಟ್ಟುಕೊಳ್ಳುವಲ್ಲಿ ಶ್ರದ್ಧೆ ವಹಿಸಬೇಕು. ಆಹಾರಾಂಶಗಳು ಹಲ್ಲಿನ ಸಂದುಗೊಂದುಗಳಲ್ಲಿ ಸೇರ್ಪಡೆಗೊಳ್ಳದಂತೆ ಊಟ ಆದ ಮೇಲೆ ನೀರಿನಿಂದ ಬಾಯನ್ನು ಚೆನ್ನಾಗಿ ಮುಕ್ಕಳಿಸಿ ತೊಳೆಯಬೇಕು, ಇಲ್ಲವೆ ಹಲ್ಲುಜ್ಜಬೇಕು. ಹಲ್ಲುಗಾರೆ ಸೇರ್ಪಡೆಗೊಳ್ಳದಂತೆ ಅದನ್ನು ತೆಗೆಸಿಕೊಳ್ಳಬೇಕು. ಸಮತೋಲ ಆಹಾರ ಮತ್ತು ಬಿರುಸಾದ ಆಹಾರ ಸೇವನೆಯಿಂದ ಒಸಡುಗಳ ಭದ್ರತೆ ಹೆಚ್ಚುತ್ತದೆ. ಒಸಡಿನಿಂದ ರಕ್ತ ಸೋರಿಕೆ, ಬಾಯ ದುರ್ವಾಸನೆ, ಒಸಡಿನಿಂದ ಹಲ್ಲುಗಳ ಬೇರ್ಪಡಿಕೆ ಮತ್ತು ಅವುಗಳ ಅಲುಗಾಟ ತೋರಿಬಂದಾಗ ದಂತವೈದ್ಯರಿಂದ ಯೋಗ್ಯ ಚಿಕಿತ್ಸೆ ಪಡೆಯಬೇಕು. (ಪಿ.ಎಸ್.ಎಸ್.)

**ಒಹಾಯೊ:** ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ರಾಜ್ಯ. ಉ.ಅ. $38^0$ 27' ನಿಂದ $41^0$ 57' ವರೆಗೂ ಪ.ರೇ. $80^0$ 34' ನಿಂದ $84^0$ 49' ವರೆಗೂ ಇರುವ ಇದರ ಉತ್ತರದಲ್ಲಿ ಮಿಷಿಗನ್ ಮತ್ತು ಈರಿ ಸರೋವರವೂ ಪೂರ್ವದಲ್ಲಿ ಪೆನ್ಸಿಲ್‌ವೇನಿಯ ಮತ್ತು ಒಹಾಯೊ ನದಿಯೂ ಪಶ್ಚಿಮದಲ್ಲಿ ಇಂಡಿಯಾನವೂ ಇವೆ. ಇದರ ದಕ್ಷಿಣದ ಅಂಚಿನ ಉದ್ದಕ್ಕೂ ಒಹಾಯೊ ನದಿಯೇ ಗಡಿರೇಖೆಯಂತೆ ಹರಿಯುತ್ತದೆ. ಈ ನದಿಯಿಂದಾಚೆಗೆ ಹಬ್ಬಿರುವ ರಾಜ್ಯಗಳು ಪಶ್ಚಿಮ ವರ್ಜಿನಿಯ ಮತ್ತು ಕೆಂಟಕಿ. ಇದು ಹೆಚ್ಚು ಕಡಿಮೆ ಚೌಕಾಕಾರ, ವಿಸ್ತೀರ್ಣದಲ್ಲಿ ಇದು ಸಂಯುಕ್ತಸಂಸ್ಥಾನದಲ್ಲಿ 35ನೆಯ ರಾಜ್ಯ. (1.15998 ಚಕಿಮೀ) ಆದರೆ ಜನಸಂಖ್ಯೆಯಲ್ಲಿ ಇದಕ್ಕೆ ಐದನೆಯ ಸ್ಥಾನ (11,570,808 [2013]) ರಾಜಧಾನಿ ಕೊಲಂಬಸ್. (ಸಿ.ಎಂ.)

**ಮೇಲ್ಮೈಲಕ್ಷಣ:** ಭೌಗೋಳಿಕವಾಗಿ ಒಹಾಯೊ ರಾಜ್ಯವನ್ನು ಮೂರು ಮುಖ್ಯ ಪ್ರದೇಶಗಳಾಗಿ ವಿಂಗಡಿಸಬಹುದು; 1 ಸರೋವರ ಸಮೀಪದ ಬಯಲು; 2 ಮಧ್ಯದ ತಗ್ಗು ನೆಲ; ಮತ್ತು 3 ಅಲೆಘನಿ ಪ್ರಸ್ಥಭೂಮಿ. ಈ ಮೂರು ಪ್ರದೇಶಗಳೂ ಕೀವ್‌ಲೆಂಡ್ ಬಳಿಯಲ್ಲಿ ಕೂಡುತ್ತವೆ. ಇಡೀ ರಾಜ್ಯದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 850′. (ಅತ್ಯಂತ ಎತ್ತರದ ನೆಲ 1550″ ಅತಿ ತಗ್ಗಿನ ಪ್ರದೇಶ 433′) ಒಹಾಯೊವಿನ ನೀರ ನೆತ್ತಿ (ವಾಟರ್‌ಷೆಡ್) ಈ ರಾಜ್ಯದ ಪಶ್ಚಿಮದ ಅಂಚಿನ ನಡುವಿನಿಂದ ಆರಂಭವಾಗಿ ಈಶಾನ್ಯದ ಮೂಲೆಯವರೆಗೆ ಹೆಂಗಸಿನ ಬೈತಲೆಯಂತೆ ಸಾಗಿದೆ. ನೆತ್ತಿಯ ಉತ್ತರಪಾರ್ಶ್ವದ ನದಿಗಳು ಹರಿಯುವುದು ಉತ್ತರಾಭಿಮುಖವಾಗಿ. ಅವು ಸಣ್ಣ; ಅಂಕುಡೊಂಕು. ದಕ್ಷಿಣಕ್ಕೆ ಹರಿಯುವ ನದಿಗಳು ಹೆಚ್ಚು ಉದ್ದ. ರಾಜ್ಯದ ಶೇ. 70ರಷ್ಟು ನೆಲದ ನೀರನ್ನು ಈ ನದಿಗಳು ಸಾಗಿಸುತ್ತವೆ. ಒಹಾಯೊ ನದಿ ಈ ರಾಜ್ಯಕ್ಕೆ ಸೇರಿದ್ದಲ್ಲ. ಒಹಾಯೊ ಮತ್ತು ಇತರ ನದಿಗಳು ಕೆಲವೇಳೆ ದಡಮೀರಿ ಹರಿದು ಅನಾಹುತ ಮಾಡುವುದುಂಟು. 1913ರಲ್ಲಿ ಸಂಭವಿಸಿದ ಪ್ರವಾಹ ಭೀಕರವಾದದ್ದು. ಪ್ರವಾಹಗಳನ್ನು ನಿಯಂತ್ರಿಸುವ ಉದ್ದೇಶದಿಂದ ನದಿಗಳ ಮೇಲ್ಭಾಗಗಳಲ್ಲಿ ಕಟ್ಟೆಗಳನ್ನು ಕಟ್ಟಲು 1914ರಲ್ಲಿ ಸೂಕ್ತ ಕಾಯಿದೆ ಮಾಡಲಾಯಿತು. ಸಂಯುಕ್ತಸಂಸ್ಥಾನದಲ್ಲಿ ಈ ಬಗೆಯ ಕ್ರಮ ಇದೇ ಪ್ರಥಮ, ಒಹಾಯೊ ನದಿಗೆ ಅಡ್ಡಲಾಗಿ ಸಂಯುಕ್ತ ಸಂಸ್ಥಾನ ಸರ್ಕಾರ ನಿರ್ಮಿಸಿರುವ 19 ಕಟ್ಟೆಗಳಿಂದಾಗಿ ಈ ನದಿಯ ಹಾವಳಿ ಬಹಳ ಮಟ್ಟಿಗೆ ಕಡಿಮೆಯಾಗಿದೆ.

**ವಾಯುಗುಣ:** ಒಹಾಯೊವಿನ ಸರಾಸರಿ ವಾರ್ಷಿಕ ಉಷ್ಣತೆ $51.2^0$ ಫ್ಯಾ. (ಉತ್ತರದಲ್ಲಿ $49^0$ ಫ್ಯಾ. ಮತ್ತು ದಕ್ಷಿಣದಲ್ಲಿ $54^0$ ಫ್ಯಾ) ಬೇಸಗೆಯ ಸರಾಸರಿ ಉಷ್ಣತೆ $71.6^0$ ಫ್ಯಾ.; ಚಳಿಗಾಲದಲ್ಲಿ $29.8^0$ ಫ್ಯಾ. ವರ್ಷವೆಲ್ಲ ಮಳೆಯುಂಟು. ಆದರೆ ಏಪ್ರಿಲ್ ಆದಿಯಿಂದ ಸೆಪ್ಟೆಂಬರ್ ಅಂತ್ಯದ ವರೆಗಿನ ಆರು ತಿಂಗಳುಗಳಲ್ಲಿ (ಸರಾಸರಿ 21') ಉಳಿದ ಆರು ತಿಂಗಳುಗಳಲ್ಲಿ ಆಗುವುದಕ್ಕಿಂತ ಸ್ವಲ್ಪ (4") ಹೆಚ್ಚು. ಕೊರೆಯುವ ಮಂಜು ಬೀಳದ ದಿವಸಗಳ ಸಂಖ್ಯೆಯ ಸರಾಸರಿ: ಉತ್ತರದ ತುದಿಯಲ್ಲಿ 140, ಆದರೆ ದಕ್ಷಿಣದ ಅಂಚಿನಲ್ಲಿ 180.

**ಸ್ವಾಭಾವಿಕ ಸಸ್ಯ, ಕೃಷಿ, ಖನಿಜ, ಕೈಗಾರಿಕೆ :** ಒಹಾಯೊವಿನ ಪೂರ್ವದಲ್ಲಿ ಚೆಸ್‌ನಟ್, ಚೆಸ್‌ನಟ್ ಓಕ್ ಮತ್ತು ಎಲ್ಲೊ ಪಾಪ್ಲರ್‌ಗಳಿಂದ ಕೂಡಿದ ಕಾಡುಗಳೂ ಪಶ್ಚಿಮಾರ್ಧದಲ್ಲಿ ಓಕ್ ಮತ್ತು ಹಿಕರಿಗಳ ಕಾಡುಗಳೂ ಇದ್ದುವು. ಬೆಟ್ಟಗುಡ್ಡಗಳಿಲ್ಲದ ಫಲವತ್ತಾದ ನೆಲದ ಕಾಡು ಕಡಿದು ಬೇಸಾಯ ಮಾಡಲಾಗುತ್ತಿದೆ. ಪೂರ್ವದ ಬೆಟ್ಟಗಾಡುಗಳ ಬೆಲೆಬಾಳುವ ಮರಗಳನ್ನು ಕಡಿದಿರುವುದರಿಂದ ಕಡಿಮೆ ಫಲವತ್ತಿನ ಈ ನೆಲಗಳು ಹಾಗೆಯೇ ಉಳಿದಿವೆ. ಇವುಗಳಲ್ಲಿ ಸ್ವಲ್ಪ ಭಾಗ ಮೇವು ನೆಲ. ಇಲ್ಲಿಯ ಮುಖ್ಯ ಬೆಳೆಗಳು. ಮುಸುಕಿನ ಜೋಳ ಮತ್ತು ಗೋದಿ, ಒಹಾಯೊವಿನ ಕೆಲವು ಭಾಗಗಳು ಆಲೂಗೆಡ್ಡೆಯನ್ನೂ ಇನ್ನು ಕೆಲವು ಸಕ್ಕರೆ ಬೀಟನ್ನೂ ಮತ್ತೆ ಕೆಲವು ಹಣ್ಣುಗಳನ್ನೂ ವಿಶೇಷವಾಗಿ ಬೆಳೆಯುತ್ತವೆ, ಹೈನು ಇನ್ನೊಂದು ಮುಖ್ಯ ಉತ್ಪನ್ನ, ಭೂಸವೆತ ಇಲ್ಲಿಯ ಒಂದು ಸಮಸ್ಯೆ.




ರಾಜ್ಯದಲ್ಲಿ ಖನಿಜಸಂಪತ್ತು ಹೇರಳವಾಗಿದೆ. ಇದರಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನಿಸರ್ಗ ಅನಿಲ ಮುಖ್ಯವಾದವು. ಸುಣ್ಣಕಲ್ಲು ಮತ್ತು ಉಪ್ಪೂ ದೊರಕುತ್ತವೆ.

ಒಹಾಯೊ ಅಮೆರಿಕದ ಮುಖ್ಯ ಕೈಗಾರಿಕಾ ರಾಜ್ಯಗಳಲ್ಲೊಂದು. ಇದಕ್ಕೆ ರಾಜ್ಯದಲ್ಲಿ ದೊರಕುವ ಕಲ್ಲಿದ್ದಲು, ಎಣ್ಣೆ ಮತ್ತು ಅನಿಲ ಮುಖ್ಯ ಕಾರಣ. ಸುಪೀರಿಯರ್ ಸರೋವರಪ್ರದೇಶದಿಂದ ಕಬ್ಬಿಣದ ಅದುರನ್ನು ಇಲ್ಲಿಗೆ ಸುಲಭವಾಗಿ ತರಿಸಿಕೊಳ್ಳಬಹುದಾಗಿದೆ. ಕಲ್ಲಿದ್ದಲ ಕಿಟ್ಟ, ಬೀಡುಕಬ್ಬಿಣ ಮತ್ತು ಉಕ್ಕು ವಸ್ತುಗಳು ಹೆಚ್ಚಾಗಿ ತಯಾರಾಗುತ್ತವೆ. ನಿಸರ್ಗ ಅನಿಲ ಧಾರಾಳವಾಗಿ ಸಿಗುವುದರಿಂದ ಹಲವಾರು ಕಡೆಗಳಲ್ಲಿ (ಉದಾ: ಜ್ಯಾನ್‌ಸ್‌ವಿಲ್) ಗಾಜು ಮತ್ತು ಮೃತ್ಪಾತ್ರ ಕೈಗಾರಿಕೆಗಳು ಬೆಳೆದಿವೆ, ತೈಲ ಪರಿಷ್ಕರಣ ಇನ್ನೊಂದು ಮುಖ್ಯ ಕೈಗಾರಿಕೆ.

**ಸಂಚಾರಮಾರ್ಗ, ಜನಸಂಖ್ಯೆ, ಶಿಕ್ಷಣ:** ರಾಜ್ಯದ ಸಂಚಾರ ಸೌಲಭ್ಯ ಚೆನ್ನಾಗಿದೆ. ನಿಸರ್ಗದತ್ತವಾದ ಜಲಮಾರ್ಗಗಳೊಂದಿಗೆ (ಉದಾ: ಒಹಾಯೊ ನದಿ: 688 ಕಿಮೀ, ಸರೋವರ 368 ಕಿಮೀ) ರಸ್ತೆ ಮತ್ತು ರೈಲುಮಾರ್ಗಗಳನ್ನು ಸಮರ್ಪಕವಾಗಿ ಹೊಂದಿಸಲಾಗಿದೆ. ಅಮೆರಿಕ ಸಂಯುಕ್ತಸಂಸ್ಥಾನದ ಜನಭರಿತ ಈಶಾನ್ಯಭಾಗಕ್ಕೆ ಈ ರಾಜ್ಯ ಹತ್ತಿರದಲ್ಲಿರುವುದು ಇನ್ನೊಂದು ಅನುಕೂಲ. ಈ ರಾಜ್ಯದ ವ್ಯಾಪಾರ ವರ್ಧಿಸಲು ಇವೆಲ್ಲ ಕಾರಣಗಳು.

ರಾಜ್ಯದಲ್ಲಿಯ ಜನರ ಸಂಖ್ಯೆಯಲ್ಲಿ 70% ನಗರವಾಸಿಗಳು. ನೀಗ್ರೋಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ.

ರಾಜ್ಯದಲ್ಲಿ ಕಾಲೇಜುಗಳೂ ವಿಶ್ವವಿದ್ಯಾನಿಲಯಗಳೂ ಹೇರಳವಾಗಿದೆ. ವಿಶ್ವವಿದ್ಯಾನಿಲಯಗಳೇ ಐವತ್ತಕ್ಕೂ ಹೆಚ್ಚಾಗಿವೆ.

ಒಹಾಯೊ ರಾಜ್ಯ ವಿಶ್ವವಿದ್ಯಾನಿಲಯ (ಕೊಲಂಬಸ್) ಇಲ್ಲಿಯ ಮುಖ್ಯ ವಿಶ್ವವಿದ್ಯಾನಿಲಯಗಳಲ್ಲೊಂದು, ಒಹಾಯೊ ವಿಶ್ವವಿದ್ಯಾನಿಲಯ (ಅಥೆನ್ಸ್), ಮಿಯಾಮಿ ವಿಶ್ವವಿದ್ಯಾನಿಲಯ (ಆಕ್ಸ್‌ಫರ್ಡ್), ಕೆಂಟ್ ರಾಜ್ಯ ವಿಶ್ವವಿದ್ಯಾನಿಲಯ, ಬೌಲಿಂಗ್ ಗ್ರೀನ್ ಸ್ಟೇಟ್ ವಿಶ್ವವಿದ್ಯಾನಿಲಯ–ಇವು ಇತರ ಕೆಲವು ಪ್ರಸಿದ್ಧ ಹೆಸರುಗಳು.

ಒಹಾಯೊ ರಾಜ್ಯದ ಮುಖ್ಯ ನಗರಗಳು ಇವು (2010ರಲ್ಲಿದ್ದಂತೆ ಇವುಗಳ ಜನಸಂಖ್ಯೆಗಳನ್ನು ಆವರಣಗಳೊಳಗೆ ಕೊಟ್ಟಿದೆ); ಕ್ಲೀವ್‌ಲೆಂಡ್ (396,815), ಸಿನ್‌ಸಿನ್ನಾಟಿ (296,943), ಕೊಲಂಬಸ್ (787,033), ಟೊಲೀಡೋ (287,208), ಆಕ್ರನ್ (199,110). ಡೇಟನ್ (141,527), ಯಂಗ್‌ಸ್ಟೌನ್ (66,982), ಕ್ಯಾಂಟನ್ (73,007), ಸ್ಪ್ರಿಂಗ್‌ಫೀಲ್ಡ್ (60,608), ಲೇಕ್‌ವುಡ್ (52,131). ಹ್ಯಾಮಿಲ್ಟನ್ (62,477), ರಾಜಧಾನಿ ಕೊಲಂಬಸ್.

**ಚರಿತ್ರೆ:** ಈಗ ಒಹಾಯೊ ಎನಿಸಿಕೊಂಡಿರುವ ಪ್ರದೇಶದಲ್ಲಿ ಇತಿಹಾಸಪೂರ್ವ ಕಾಲದಲ್ಲೇ ಜನ ಇದ್ದರೆಂಬುದರ ಕುರುಹುಗಳು ಸೈಯೋಟೋ ಮತ್ತು ಮೈಯಾಮಿ ಕಣಿವೆಗಳಲ್ಲಿರುವ ಅನೇಕ ಮಣ್ಣುಗುಪ್ಪೆಗಳಡಿಯಲ್ಲಿ ದೊರಕಿವೆ. ಈ ಗುಪ್ಪೆಗಳಲ್ಲಿ ಸಮಾಧಿಗಳೇ ಹೆಚ್ಚು. ಇಲ್ಲಿ ಮೂರು ಸಂಸ್ಕೃತಿಗಳನ್ನು ಗುರುತಿಸಬಹುದಾಗಿದೆ (ಹೋಪ್‌ನೆಲ್, ಪೋರ್ಟ್ ಏನ್ಷೆಂಟ್ ಮತ್ತು ಅಡೀನ). ಈ ಜನಕ್ಕೆ ಏನಾಯಿತೆಂಬುದು ಗೊತ್ತಿಲ್ಲ. ಬಹುಶಃ ಇವರು ನಾಶವಾಗಿರಬೇಕು; ಅಥವಾ ಹೆಚ್ಚು ಬಲಿಷ್ಠವೂ ಅಲೆಮಾರಿಯೂ ಆದ ಇಂಡಿಯನ್ ಪಂಗಡಗಳಲ್ಲಿ ಲೀನವಾಗಿರಬೇಕು. ಅಂತೂ ಬಿಳಿಯರನ್ನೆದುರಿಸಿದ ಇಂಡಿಯನರು ಈ ಪ್ರದೇಶಕ್ಕೆ ಬರಲು ಬಹಳ ಹಿಂದೆಯೇ ಹಿಂದಿನ ಜನ ಕಣ್ಮರೆಯಾಗಿದ್ದರು.

18ನೆಯ ಶತಮಾನದ ಮಧ್ಯಭಾಗದಲ್ಲಿ ಫ್ರೆಂಚರೂ ಇಂಗ್ಲಿಷರೂ ಒಹಾಯೊವಿನ ಒಡೆತನಕ್ಕಾಗಿ ಬಡಿದಾಡಲಾರಂಭಿಸಿದಾಗ ಇಲ್ಲಿ ಹಲವಾರು ಇಂಡಿಯನ್ ಪಂಗಡಗಳಿದ್ದುವು. ಅವುಗಳ ಪೈಕಿ ಕೆಲವು ಈಚೆಗೆ ಬಂದಿದ್ದವು. ಅಂತೂ ಇಲ್ಲಿ ಇಂಡಿಯನರ ಒಟ್ಟು ಸಂಖ್ಯೆ ಬಹುಶಃ 15,000ಕ್ಕೂ ಹೆಚ್ಚಾಗಿರಲಿಲ್ಲ.

18ನೆಯ ಶತಮಾನದಲ್ಲಿ ಇಲ್ಲಿಗೆ ಬಂದ ಫ್ರೆಂಚರೂ ಬ್ರಿಟಿಷರೂ ಒಂದು ಕೈಯಿಂದ ಇಂಡಿಯನರೊಂದಿಗೆ ಹೋರಾಡುತ್ತ ಇನ್ನೊಂದು ಕೈಯಿಂದ ತಂತಮ್ಮಲ್ಲೆ ಯುದ್ಧ ಮಾಡುತ್ತಿದ್ದರು. ಆ ಶತಮಾನದ ಅಂತ್ಯದ ವೇಳೆಗೆ ಹೊಸದಾಗಿ ರಚಿತವಾದ ಸಂಯುಕ್ತಸಂಸ್ಥಾನದ ಜನಸಂಖ್ಯೆ ಅಲೆಘನಿಯನ್ನು ದಾಟಿ ಹರಿಯಲಾರಂಭಿಸಿತು. ಒಹಾಯೊ ನದಿಯ ವಾಯವ್ಯಕ್ಕಿದ್ದ ಪ್ರದೇಶ ಎಲ್ಲ ರಾಜ್ಯಗಳಿಗೂ ಸೇರಿತ್ತು. ಅಮೆರಿಕದ ಕಾಂಗ್ರೆಸ್ 1785ರಲ್ಲಿ ಈ ಪ್ರದೇಶದ ಸಮೀಕ್ಷೆ ನಡೆಸಿ, ಕೆಲವು ಭಾಗಗಳನ್ನು ಕಂಪನಿಗಳಿಗೆ ಮಾರಿತು. ಜನ ಇಲ್ಲಿಗೆ ಹೆಚ್ಚಾಗಿ ವಲಸೆ ಬಂದರು. 1795ರಲ್ಲಿ ಇಂಡಿಯನರೊಂದಿಗೆ ಮಾಡಿಕೊಂಡ ಒಂದು ಕೌಲಿನಿಂದಾಗಿ ಶಾಂತಿ ಭದ್ರವಾಯಿತು. ಹೊಸ ನಗರಗಳು ಎದ್ದುವು.

1787ರಲ್ಲಿ ಅಮೆರಿಕದ ಕಾಂಗ್ರೆಸ್ ಈ ಪ್ರದೇಶದ ಆಡಳಿತಕ್ಕೆ ಸೂಕ್ತ ಆದೇಶವೊಂದನ್ನು ತಂದಿತು. ಕಾಂಗ್ರೆಸಿನ ಅಧ್ಯಕ್ಷ, ಜನರಲ್ ಆರ್ಥರ್ ಸೇಂಟ್ ಕ್ಲೇರನನ್ನು ಗವರ್ನರಾಗಿ ನಿಯೋಜಿಸಲಾಯಿತು. ಮೇರಿಯೆಟ್ಟವೇ ಆಗಿನ ಸರ್ಕಾರದ ಪೀಠ, ಮೂರು ಹಂತಗಳಲ್ಲಿ ಈ ಪ್ರದೇಶ ರಾಜ್ಯತ್ವ ಪಡೆಯಬೇಕೆಂಬುದು ಕಾಂಗ್ರೆಸ್ ಆದೇಶದ ಉದ್ದೇಶವಾಗಿತ್ತು. 1802ರ ನವೆಂಬರ್ 29ರಂದು ಸ್ವೀಕೃತವಾದ ಸಂವಿಧಾನಕ್ಕೆ ಅನುಗುಣವಾಗಿ ಮರುವರ್ಷದ ಮಾರ್ಚ್ 1ರಂದು ಒಹಾಯೊವೂ ಸಂಯುಕ್ತ ಸಂಸ್ಥಾನದ ಒಂದು ರಾಜ್ಯವಾಗಿ ಪರಿವರ್ತನೆ ಹೊಂದಿತು.

*

**ಒಹಾಯೊ ನದಿ:** ಅಮೆರಿಕ ಸಂಯುಕ್ತಸಂಸ್ಥಾನದ ಒಂದು ನದಿ. ಒಹಾಯೊ ರಾಜ್ಯದ ದಕ್ಷಿಣ ಪೂರ್ವಗಳಲ್ಲಿ ಗಡಿರೇಖೆಯಂತೆ ಹರಿಯುತ್ತದೆ. ಮಿಸಿಸಿಪಿಯ ಏಕೈಕ ಮುಖ್ಯ ಉಪನದಿ. ಅಲೆಘನಿ ಮತ್ತು ಮನೊಗೆಹಲ ನದಿಗಳು ಪಿಟ್ಸ್‌ಬರ್ಗ್‌ನಲ್ಲಿ ಕೂಡಿ ಸಂಭವಿಸಿರುವ ಈ ನದಿಗೆ ಸುಮಾರು 554258 ಚಕಿಮೀ ಜಲಾನಯನ ಪ್ರದೇಶವಿದೆ. ಉತ್ತರಾಭಿಮುಖವಾಗಿ ಹರಿಯುತ್ತಿದ್ದ ಅಪಲೇಷಿಯನ್ ತೊರೆಗಳಿಗೆ ಮಂಜುಗೆಡ್ಡೆಯಿಂದ ತಡೆಯುಂಟಾಗಿ, ತುಂಬಿದ ನೀರು ಒಂದು ಕಣಿವೆಯಿಂದ ಇನ್ನೊಂದು ಕಣಿವೆಗೆ ಬಿರುಕುಗಳ ಮೂಲಕ ಹರಿದಿದ್ದರಿಂದ ಸಂಭವಿಸಿದ ಕಣಿವೆಯಲ್ಲಿ ಈ ನದಿ ಹರಿಯುತ್ತದೆ. ತತ್ಫಲವಾಗಿ ಕೆಲವು ಕಡೆಗಳಲ್ಲಿ ಕಮರಿಗಳೇ ನದಿಯ ಪಾತ್ರ. ಒಮ್ಮೊಮ್ಮೆ ಇದು ಥಟ್ಟನೆ ತನ್ನ ದಿಕ್ಕನ್ನು ಬದಲಿಸುತ್ತದೆ. ಎತ್ತರದ ನೆಲದಿಂದ ಅತಿ ಹಳ್ಳದ ಪ್ರದೇಶಕ್ಕೆ ಅಂಬಿನಂತೆ ಜಾರುತ್ತದೆ. ಹೀಗಾಗಿ ಜಲಪಾತಗಳು ಸಂಭವಿಸಿವೆ.

ಒಹಾಯೊ ಒಳ್ಳೆಯ ಜಲಮಾರ್ಗ. ಪ್ರವಾಹ ಕಾಲದಲ್ಲಿ ಜಲಪಾತದ ಮೇಲೂ ಹಡಗುಗಳು ಸಾಗುತ್ತವೆ. ಇಂಥೆಡೆಗಳಲ್ಲಿ ಕಾಲುವೆ ತೋಡಿರುವುದರಿಂದ 1828ರಿಂದ ಜಲಪಾತಗಳ ಅಡಚಣೆಯೂ ಇಲ್ಲ. ಕೆಳ ಮಿಸಿಸಿಪಿಗೆ ಬರುವ ನೀರಿನ ಮುಕ್ಕಾಲು ಭಾಗ ಒಹಾಯೊವಿನಿಂದ ಲಭಿಸುತ್ತದೆ. ಒಹಾಯೊ ಕಣಿವೆಯಲ್ಲಿ ವಾರ್ಷಿಕ ಮಳೆಯ ಸರಾಸರಿ 44.7". ನದೀಪ್ರವಾಹ ಸು. 0.6096 ಮೀಗಳಿಂದ 13–16 ಮೀಗಳವರೆಗೆ ವ್ಯತ್ಯಾಸವಾಗುವುದುಂಟು. ಚಳಿಗಾಲದ ಕೊನೆಯಲ್ಲಿ ಅಥವಾ ವಸಂತದ ಆದಿಯಲ್ಲಿ ಪ್ರವಾಹದ ಹೆಚ್ಚಳ ಕಂಡುಬರುತ್ತದೆ. ಬೇಸಗೆಯಲ್ಲಿ ನೀರು ಆವಿಯಾಗುವುದರಿಂದ ಆ ಋತುವಿನ ಕೊನೆಯಲ್ಲಿ ಪ್ರವಾಹ ಬಹಳ ಇಳಿಯುತ್ತದೆ. ಪರಮಾವಧಿ ಪ್ರವಾಹ ಬಂದಿದ್ದದು 1927ರಲ್ಲಿ.

ಒಹಾಯೊ ನದಿಯ ಮೇಲೆ 1782ರಷ್ಟು ಹಿಂದಿನಿಂದಲೂ ದೋಣಿಗಳು ಸಂಚರಿಸುತ್ತಿವೆ. ಪ್ರಯಾಣಿಕ ನೌಕೆ ಮೊಟ್ಟಮೊದಲು ಸಿನ್ಸಿನ್ನಾಟಿಯಿಂದ ಪಿಟ್ಸ್‌ಬರ್ಗಿಗೆ 1794ರಲ್ಲಿ ಸಂಚಾರ ಮಾಡಿತು. 1880ರಲ್ಲಿ ಪಿಟ್ಸ್‌ಬರ್ಗ್ ಪ್ರದೇಶ ಕೈಗಾರಿಕೆಯಲ್ಲಿ ಮುಂದುವರಿದಂತೆ ಈ ಜಲಮಾರ್ಗವನ್ನು ಕಲ್ಲಿದ್ದಲು, ಮರದ ದಿಮ್ಮಿ ಮುಂತಾದವುಗಳನ್ನು ಸಾಗಿಸುವುದಕ್ಕೆ ಹೆಚ್ಚಾಗಿ ಬಳಸಿಕೊಳ್ಳಲಾಯಿತು. 1910ರಲ್ಲಿ ಅಮೆರಿಕ ಕಾಂಗ್ರೆಸ್ ಈ ಜಲಮಾರ್ಗವನ್ನು ಅಭಿವೃದ್ಧಿಪಡಿಸಲು ಯೋಜಿಸಿ ಅದಕ್ಕಾಗಿ ಒಂದು ಯೋಜನೆ ತಯಾರಿಸಿತು. ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟಿ ಸದಾಕಾಲವೂ 3 ಮೀ ನೀರುಳ್ಳ ಕಾಲುವೆಯನ್ನು ಜಲಮಾರ್ಗಕ್ಕೆ ಒದಗಿಸಲಾಯಿತು. (ಬಿ.ಎಸ್.ಎಚ್.)

**ಒ'ಹಾರಾ, ಜೆ ಎಚ್:** 1905–70. ಅಮೆರಿಕದ ಕಾದಂಬರಿಕಾರ, ಪತ್ರಿಕೋದ್ಯಮಿ, ನಾಟಕಕಾರ, ಚಲನಚಿತ್ರ ಲೇಖಕ, ಸಣ್ಣಕಥೆಗಾರ ಮತ್ತು ವಿಮರ್ಶಕ, ಕೂಲಿಗಾರನಾಗಿ, ಉಕ್ಕಿನ ಕಾರ್ಖಾನೆಯಲ್ಲಿ ಕಾವಲುಗಾರನಾಗಿ, ಸೋಡಾ ಮಾರುವವನಾಗಿ, ವಿಹಾರಕೇಂದ್ರವೊಂದರ ರಕ್ಷಕನಾಗಿ, ಸುದ್ದಿಗಾರನಾಗಿ, ಸಹಸಂಪಾದಕನಾಗಿ–ಹೀಗೆ ಬೇರೆ ಬೇರೆ ವೃತ್ತಿಗಳಲ್ಲಿ ಪಳಗಿದ. ಅಪಾಯಿಂಟ್‌ಮೆಂಟ್ ಇನ್ ಸಮಾರಾ ಕಾದಂಬರಿ ಪ್ರಕಟವಾದೊಡನೆ (1934) ಅಮೆರಿಕದಲ್ಲಿ ಈತನ ಕೀರ್ತಿ ಹರಡಿತು. ಅನಂತರ ಬಂದ ಡಾಕ್ಟರ್ಸ್‌ಸನ್ ಅಂಡ್ ಅದರ್ ಸ್ಟೋರೀಸ್ (1935) ಎಂಬ ಕಥಾಸಂಗ್ರಹ, ಬಟರ್‌ಫೀಲ್ಡ್ 8 ಎಂಬ ಕಾದಂಬರಿಗಳು ಸಾಹಿತ್ಯಕ್ಷೇತ್ರದಲ್ಲಿ ಇವನ ಸ್ಥಾನವನ್ನು ಭದ್ರಪಡಿಸಿದುವು. ಆಮೇಲೆ ಈತ ಪ್ರಮುಖ ಪತ್ರಿಕೆಯೊಂದಕ್ಕೆ ಫುಟ್‌ಬಾಲ್ ಪಂದ್ಯಗಳ ವಿವರಣೆ ಬರೆಯುವ ಕ್ರೀಡಾ ವಿಮರ್ಶಕನಾದ. ಗಟ್ಟಿಗಡಸು ಮೈಯುಳ್ಳ ಈತ ಕುಸ್ತಿಯ ಅಂಗಣಕ್ಕೂ ಇಳಿದುದುಂಟು. ಹಾಲಿವುಡ್ಡಿನಲ್ಲಿ ಈತ ಚಿತ್ರಕಥೆ ಬರೆದು ಪ್ರಸಿದ್ಧನಾದ. ತನ್ನ ಕಾಲದ ಜನರ ಸಮಾಜದ ಬಗ್ಗೆ ಈತನಿಗಿದ್ದ ಅಪಾರ ಅರಿವು, ಅನುಕಂಪ, ತೀವ್ರ ಸಂವೇದನೆಗಳ ಜೊತೆಗೆ ಇವನ ಚಾಟಿಯಂಥ ಮಾತು, ಚುಚ್ಚುನುಡಿ, ಕಟು ವಿಮರ್ಶೆಗಳಿಂದಾಗಿ ಈತನ ಕೃತಿಗಳು ಜನಪ್ರಿಯವಾಗಿವೆ. ಪಾಲ್ ಜೋಯಿ (1940) ಟೆನ್ ನಾರ್ತ್ ಫ್ರೆಡರಿಕ್ (1955), ಸ್ವೀಟ್ ಅಂಡ್ ಸವರ್ (1954), ಸರ್ಮನ್ಸ್ ಎಂಡ್ ಸೋಡಾವಾಟರ್ (1961)–ಇವು ಈತನ ಪ್ರಮುಖ ಕೃತಿಗಳು.

ಈತನಿಗೆ ಬಣ್ಣಗುರುಡುತನ ಇದ್ದುದರಿಂದ ಈತನ ಕೃತಿಗಳಲ್ಲಿ ಬಿಳಿ ಮತ್ತು ಕಪ್ಪು ಬಣ್ಣಗಳನ್ನುಳಿದು ಬೇರೆ ಯಾವ ಬಣ್ಣಗಳ ವರ್ಣನೆಯೂ ಇಲ್ಲದಿರುವುದು ಒಂದು ವಿಚಿತ್ರ, ವೈಶಿಷ್ಟ್ಯ. ಹೂಗಳು, ಹಕ್ಕಿಗಳು ನಿಸರ್ಗ–ಇವುಗಳ ವರ್ಣನೆಗಳು ಇವನಲ್ಲಿ ಅಪೂರ್ವ. (ಎಸ್.ಎ.ಎನ್.)

**ಒಳಕೀವು:** ಮೈಯಲ್ಲಿ ಯಾವದಾದರೂ ಒಂದು ಪೊಳ್ಳಿನೊಳಗೆ ಕೀವಿನ ತೆರನ ದ್ರವ ಸೇರಿರುವುದಕ್ಕೆ ವೈದ್ಯದಲ್ಲಿ ಈ ಹೆಸರಿದೆ (ಎಂಪಯೀಮ). ಮುಖ್ಯವಾಗಿ ಎದೆಗೂಡಿನ ಒಳಗೀವಿಗೆ ಮಾತ್ರ ಹೀಗೆ ಹೇಳುವುದು ಸಾಮಾನ್ಯ. **(ನೋಡಿ– ಅಳ್ಳೆಪರೆಯ–ರೋಗಗಳು)**

*

**ಒಳಕೂಟ:** ಒಂದು ಮಾರುಕಟ್ಟೆಯಲ್ಲಿರುವ ಸರಕನ್ನೆಲ್ಲ ಕೊಂಡು ಅದರ ಏಕಸ್ವಾಮ್ಯ ಪಡೆದು ಕೃತಕ ಅಭಾವ ಏರ್ಪಡಿಸಿ ಬೆಲೆ ಏರುವಂತೆ ಮಾಡಿ ಅಧಿಕ ಬೆಲೆಯಲ್ಲಿ ಸರಕನ್ನು ಮಾರಿ ಲಾಭ ಪಡೆಯುವ ಉದ್ದೇಶದಿಂದ ಹಲವು ಸಟ್ಟಾ ವ್ಯಾಪಾರಿಗಳೂ ತಂತಮ್ಮಲ್ಲೆ ರಚಿಸಿಕೊಂಡ ಕೂಟ (ರಿಂಗ್). ವ್ಯವಹಾರ ಕೂಟ ಅಥವಾ ಮಾರಾಟಕೂಟವು (ಕಾರ್ಟೆಲ್) ಒಳಕೂಟವು ಒಂದೇ ಎಂಬುದು ಸಾಮಾನ್ಯವಾಗಿರುವ ಭಾವನೆ. ಆದರೆ ಒಳಕೂಟದ ಸದಸ್ಯರು ಸ್ವತಂತ್ರ ಉದ್ಯಮಿಗಳಲ್ಲ. ಅವರದೊಂದು ಸಂಯುಕ್ತ ಸಾಹಸ. ಬೆಲೆಯನ್ನಾಗಲಿ, ಉತ್ಪಾದನೆಯನ್ನಾಗಲಿ, ಸರಬರಾಯಿಯನ್ನಾಗಲಿ ನಿಯಂತ್ರಣಗೊಳಿಸುವ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಎಲ್ಲ ಸರಕನ್ನೂ ಒಟ್ಟೈಸಿಕೊಂಡು, ಮಾರುಕಟ್ಟೆಯಿಂದ ಅದನ್ನು ಹಿಂತೆಗೆದುಕೊಂಡು ಕೃತಕಾಭಾವವನ್ನೇರ್ಪಡಿಸುವುದು ಸಹಜವಾದ ವ್ಯಾಪಾರಧರ್ಮವಲ್ಲ. ಸರಕನ್ನು ಕೊಳ್ಳಲು ಬಂದ ಇತರ ಎಲ್ಲರಿಗಿಂತಲೂ ಹೆಚ್ಚಿನ ಸವಾಲು ಹಾಕಿ, ಉತ್ಪಾದಕರಿಗೆ ಅತ್ಯಧಿಕ ಬೆಲೆ ಕೊಟ್ಟು, ನಷ್ಟಸಂಭವವನ್ನೂ ಎದುರಿಸಿ ನಿಂತು, ಲಾಭದ ರಾಶಿಯನ್ನೇ

ದೋಚಿಕೊಳ್ಳುವುದು ಇದರ ಉದ್ದೇಶ. ಇದರ ಕಲಾಪಗಳಿಂದ ಬಳಕೆದಾರ ಹೆಚ್ಚು ಬೆಲೆ ತೆರಬೇಕಾಗಿ ಬರುವುದು ಅನಿವಾರ್ಯ, ಆದ್ದರಿಂದ ಇದು ನೀತಿಬಾಹಿರವಾದ ವ್ಯವಹಾರಕೂಟ. (ಸಿ.ಸಿ.ಪಿ.; ಎ.ಕೆ.ಎಸ್.ಎಚ್.)

**ಒಳಗಿವಿಗೂಡು:** ಕಿವಿಯ ಒಳಗಿನ ನಾಳದಲ್ಲಿರುವ, ನಾಳಕೋಶ (ವೆಸ್ಟಿಬ್ಯೂಲ್), ಅರೆಸುತ್ತಿನ ಸಾಗಾಲುವೆಗಳು (ಸೆಮಿಸರ್ಕುಲಾರ್ ಕೆನಾಲ್ಸ್), ಕಿವಿ ಸಂಕದ ಸಾಗುನಾಳ (ಕಾಕ್ಲಿಯಾರ್ ಡಕ್ಟ್), ಒಳಗಿವಿಕೋಶ (ಯೂಟ್ರಿಕಲ್), ಕಿರು ಚೀಲಗಳಲ್ಲಿ (ಸ್ಯಾಕ್ಯೂಲ್) ಒಳ ಹಾಲುರಸವಿರುವ (ಎಂಡೊಲಿಂಫ್) ಮೂಳೆಯ ಭಾಗ (**ನೋಡಿ– ಕಿವಿ; ಕೇಳುವಿಕೆ**). *

**ಒಳತಳಿಸಂತಾನೋತ್ಪಾದನೆ:** ಬಹಳ ಹತ್ತಿರದ ಬಂಧುಗಳ ನಡುವೆ ಸಂಭೋಗ ನಡೆಸಿ ಸಂತಾನೋತ್ಪಾದನೆ ಮಾಡುವ ಒಂದು ಕ್ರಮ. ಸೋದರಿಕೆಯ ಸಂಬಂಧಗಳೂ, ಅಕ್ಕನ ಮಗಳನ್ನು ವಿವಾಹವಾಗುವಿಕೆ ಮುಂತಾದವು ಈ ಗುಂಪಿಗೆ ಸೇರುತ್ತವೆ.

ಅನೇಕ ಸಸ್ಯಗಳಲ್ಲಿ ಸ್ವಕೀಯ ಪರಾಗಸ್ಪರ್ಶ ನಡೆಯುತ್ತದೆ. (ಉದಾ: ಗೋದಿ, ಬಾರ್ಲಿ, ಓಟ್ಸ್, ಜೋಳ, ಹತ್ತಿ ಮುಂತಾದವು). ಇಂಥ ಸಸ್ಯಗಳಲ್ಲಿ ಒಳತಳಿ ಸಂತಾನೋತ್ಪಾದನೆ ಸ್ವಾಭಾವಿಕವಾಗಿಯೇ ನಡೆಯುತ್ತದೆ. ಆದರೆ ಇನ್ನು ಕೆಲವು ಸಸ್ಯಗಳಲ್ಲಿ ಇದನ್ನು ತಡೆಯಲೆಂದೇ ಕೆಲವು ವಿಶಿಷ್ಟ ಮಾರ್ಪಾಟುಗಳು ಪುಷ್ಪಗಳಲ್ಲಿರುತ್ತವೆ. ಕೆಲವು ಕೆಳವರ್ಗದ ಪ್ರಾಣಿಗಳನ್ನು ಬಿಟ್ಟರೆ ಮೇಲ್ಮಟ್ಟದ ಪ್ರಾಣಿಗಳೆಲ್ಲ ಏಕಲಿಂಗಿಗಳಾದ್ದರಿಂದ ಅವುಗಳಲ್ಲಿ ಸ್ವಕೀಯ ಗರ್ಭಾಂಕುರತೆ ಅಸಾಧ್ಯ. ಅಂತೆಯೇ ಒಳತಳಿಸಂತಾನೋತ್ಪಾದನೆ ತೀರ ವಿರಳ. ಕೆಳವರ್ಗದ ಪ್ರಾಣಿಗಳಾದ ಲಾಡಿ ಹುಳುಗಳಂಥ ಕೆಲವು ಪ್ರಾಣಿಗಳಲ್ಲಿ ಸ್ವಕೀಯ ಗರ್ಭಾಂಕುರವೇ ನಿಯಮವಾಗಿರುತ್ತವೆ. ತೀರ ಹತ್ತಿರದ ಸಂಬಂಧಿಗಳ ನಡುವೆ ಅನೇಕ ಪೀಳಿಗೆಗಳವರೆಗೆ ಒಳತಳಿ ಸಂತಾನೋತ್ಪಾದನೆಯೇ ನಡೆಯುತ್ತಿದ್ದರೆ ಅದರ ಪರಿಣಾಮ ಅಪಾರ.

ಒಳತಳಿಸಂತಾನೋತ್ಪಾದನೆಯಿಂದ ಹಲವಾರು ಉಪಯೋಗಗಳುಂಟು. ಮುಖ್ಯವಾಗಿ, ಸಾಕುಪ್ರಾಣಿಗಳಲ್ಲಿ ನಮಗೆ ಬೇಕಾಗುವ ಗುಣಲಕ್ಷಣಗಳು ಸಹಜ ಸ್ಥಿತಿಯಲ್ಲಿ ಉಳಿಯುವಂತಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವುದು. ಈ ಮೂಲಕ ಮಾನವ ತನಗೆ ಬೇಕಾದ ಗುಣಗಳುಳ್ಳ ಪ್ರಾಣಿಗಳನ್ನು ಪಡೆಯಬಹುದಾಗಿದೆ. ಹೊರಗಡೆಯಿಂದ ಬರಬಹುದಾದ ಬೇಡವೆನಿಸುವ ಜೀನ್‌ಗಳ ಸಂಕರವನ್ನು ತಡೆಯಬಹುದು. ಈ ರೀತಿ ಹಲವಾರು ವರ್ಷಗಳ ಒಳತಳಿಸಂತಾನೋತ್ಪಾದನೆ ಕ್ರಮದಿಂದ ಪಡೆದ ಪ್ರಾಣಿಗಳ ಉತ್ತಮ ಉದಾಹರಣೆಯೆಂದರೆ ಆಸ್ಟ್ರೇಲಿಯದ ಮೆರಿನೊ ಕುರಿ, ಪಾಶ್ಚಿಮಾತ್ಯ ದೇಶಗಳ ಹರ್‌ಫೋರ್ಡ್ ಜಾತಿಯ ದನಗಳು ಹಾಗೂ ಪಂದ್ಯದ ಕುದುರೆಗಳು.

ಒಳತಳಿಸಂತಾನೋತ್ಪಾದನೆ ಅನೇಕ ರೀತಿಗಳಲ್ಲಿ ಅನುವಂಶೀಯತೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಇದರ ಪ್ರಪ್ರಥಮ ಪರಿಣಾಮ ಅನುವಂಶೀಯ ಶುದ್ಧತೆಯ ಹೆಚ್ಚಿಗೆ. ಪ್ರತಿ ಒಳತಳೀಕರಣದಿಂದಲೂ ಸಮಜಂಪತಿಗಳ ಮಿಳಿತದಿಂದಾಗಿ ಒಂದೇ ತೆರನ ಗುಣಗಳಿರುವ ಹೆಚ್ಚು ಹೆಚ್ಚು ಜೀನ್ ಜೋಡಿಗಳು ಉತ್ಪತ್ತಿಯಾಗುತ್ತವೆ. ಆದರೆ ಈ ವಿಷಯದಲ್ಲಿ ಒಂದನ್ನು ಮಾತ್ರ ನಾವು ಅಲ್ಲಗಳೆಯಲಾಗುವುದಿಲ್ಲ. ಅನುವಂಶೀಯ ಶುದ್ಧತೆ ಹೆಚ್ಚಿದಂತೆಲ್ಲ ಅನೇಕ ದುರ್ಬಲ ಜೀನ್‌ಗಳು ತಮ್ಮ ಪ್ರಭಾವವನ್ನು ತೋರಿಸಲು ಪ್ರಾರಂಭಿಸುತ್ತವೆ. ಸಾಮಾನ್ಯವಾಗಿ ಇವುಗಳ ಪೈಕಿ ಅನೇಕವು ಪ್ರಬಲ ಜೀನ್‌ಗಳ ಪ್ರಭಾವಗಳಂತೆ ಜೀವಿಗೆ ಅವಶ್ಯಕವಾಗಿರುವುದಿಲ್ಲ. ಆದ್ದರಿಂದ ಒಳತಳಿಸಂತಾನೋತ್ಪಾದನೆಯಿಂದ ನಿಧಾನವಾಗಿ ಬೆಳೆಯುವ, ದುರ್ಬಲತೆಗಳುಳ್ಳ, ನಿರಾಶಾದಾಯಕ ಮತ್ತು ನ್ಯೂನ ಸಂತಾನ ವರ್ಧಿಸುವ ಸಂಭವನೀಯತೆಯೇ ಹೆಚ್ಚು. ಈ ಕಾರಣಕ್ಕಾಗಿ ತಳಿಶಾಸ್ತ್ರಜ್ಞರು ಈ ಕ್ರಮವನ್ನು ತಳೀಕರಣದ ಒಂದು ಅಪಾಯಕರ ಪ್ರಯೋಗವೆನ್ನುವುದೂ ಉಂಟು. ಆದರೆ ಈ ವಿಧಾನದ ಪ್ರಯೋಗಗಳಿಂದ ತಮ್ಮವೇ ಆದ ಕೆಲವು ವಿಶಿಷ್ಟ ಗುಣಗಳಿರುವ ಪ್ರಾಣಿಗಳನ್ನು ಆಯ್ಕೆ ಮಾಡಿಕೊಂಡು ಅವನ್ನು ಪದೇ ಪದೇ ಒಳತಳಿಸಂತಾನೋತ್ಪಾದನೆಗೆ ಒಳಪಡಿಸಿ ಆ ಗುಣಗಳು ಅವಕ್ಕೇ ಮೀಸಲಾಗಿರುವಂತೆಯೂ ಮಾಡಬಹುದಾಗಿದೆ.

ಒಳತಳಿಸಂತಾನೋತ್ಪಾದನೆಯಿಂದ ಜೀನ್‌ಗಳು ಬದಲಾವಣೆ ಹೊಂದುತ್ತವೆ ಎಂಬುದಾಗಲೀ ಅವುಗಳ ಆವರ್ತನ ವ್ಯತ್ಯಾಸವಾಗುವುದು ಎಂಬುದಾಗಲೀ ಸುಳ್ಳು. ಅಡ್ಡತಳಿಯೆಬ್ಬಿಕೆಯಲ್ಲಿ ಬರಲಾಗದ ಅವು ಸಾಮೀಪ್ಯ ಸಾಧಿಸಿ ಜೊತೆಗೂಡಲು ಇಲ್ಲಿ ಅನುಕೂಲವಿರುತ್ತದೆ ಅಷ್ಟೆ ಆದ್ದರಿಂದಲೇ ಒಳತಳೀಕರಣ ಮುಂದುವರೆದಂತೆಲ್ಲ ಕುಟುಂಬಗಳು ಹೆಚ್ಚು ಹೆಚ್ಚು ವಿಶಿಷ್ಟಗೊಳ್ಳುತ್ತ, ಪ್ರತ್ಯೇಕಗೊಳ್ಳುತ್ತ ಹೋಗುತ್ತವೆ. ಅನುವಂಶೀಯ ಮತ್ತು ಬಾಹ್ಯ ಗುಣಲಕ್ಷಣಗಳಲ್ಲಿ ಪರಸ್ಪರ ಸಾಮ್ಯ ಈ ರೀತಿಯ ಸಂತಾನೋತ್ಪಾದನೆಯಿಂದ ಉದ್ಭವವಾದ ಕುಟುಂಬದ ಸಂತಾನಕ್ಕೆ ಒಂದು ಸಾಮಾನ್ಯ ಕುಟುಂಬದ ಸಂತಾನಕ್ಕಿಂತ ಹೆಚ್ಚು ಇರುತ್ತದೆ.

ಒಳತಳಿಸಂತಾನೋತ್ಪಾದನೆಯಿಂದ ಇನ್ನೂ ಕೆಲವು ಮುಖ್ಯ ಉಪಯೋಗಗಳುಂಟು. ಒಂದು ಗುಂಪಿನ ಇಲ್ಲವೆ ಒಂದು ಸಂತತಿಯ ಅಪ್ರಧಾನ ನ್ಯೂನತೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳಕಿಗೆ ತರುವ ಮೂಲಕ ಇದು ಸಂತತಿಯನ್ನು ಅನುವಂಶೀಯವಾಗಿ ಶುದ್ಧಗೊಳಿಸುತ್ತದೆ. ಅನುವಂಶೀಯ ಶುದ್ಧತೆಯ ಸಾಧನೆಗೆ ಇದೊಂದೇ ಮಾರ್ಗ. ನ್ಯೂನತೆಗಳಿರುವ ಜೀನ್‌ಗಳನ್ನು ಬೇರ್ಪಡಿಸಿದರೆ ಇಡೀ ಗುಂಪೇ ಈ ಅನಾವಶ್ಯಕ ದುರ್ಬಲತೆಗಳಿಂದ ವಿಮುಕ್ತವಾಗುತ್ತದೆ. ಅಲ್ಲದೆ ಕುಟುಂಬದ ಎಲ್ಲ ಸದಸ್ಯರುಗಳೂ ಪರಸ್ಪರ ಅನುವಂಶೀಯ ಗುಣಗಳಲ್ಲಿ ಸಾಮ್ಯ ಸಾಧಿಸಿಕೊಳ್ಳಬೇಕಾದಲ್ಲಿ ಒಳತಳಿಸಂತಾನೋತ್ಪಾದನೆಯಲ್ಲದೆ ಬೇರೆ ದಾರಿ ಇಲ್ಲ. ಈ ಮಾರ್ಗದಿಂದ ಒಂದು ಕುಟುಂಬ ತನ್ನದೇ ಆದ ಕೆಲವು ವಿಶಿಷ್ಟ ಉತ್ಕೃಷ್ಟ ಅರ್ಹತೆಗಳನ್ನು ಅನುವಂಶೀಯವಾಗಿ ಮುಂದುವರಿಸಿಕೊಂಡು ಹೋಗಬಹುದು. ಮಿಶ್ರತಳಿಯ ಮುಸುಕಿನ ಜೋಳ ಮತ್ತಿತರ ಹೆಚ್ಚು ಫಸಲು ಕೊಡುವ ತಳಿಗಳನ್ನು ಬೆಳಕಿಗೆ ತರಬೇಕಾದರೆ ಒಳತಳಿಸಂತಾನೋತ್ಪಾದನೆಯ ಮೂಲಕ ವಿಕಾಸಗೊಳಿಸಿದ ಶುದ್ಧ ತಳಿಗಳಿಂದ ಆಗಿರುವ ಸೇವೆ ಅತ್ಯಪೂರ್ವ.

ಪ್ರಕೃತಿಯಲ್ಲೂ ಸ್ವಲ್ಪಮಟ್ಟಿಗೆ ಒಳತಳಿಸಂತಾನೋತ್ಪಾದನೆಯಾಗುವ ಅವಕಾಶಗಳಿವೆ. ಒಂದೇ ಪ್ರಭೇದದ ಅನೇಕ ವನ್ಯಜೀವಿಗಳು ಸಣ್ಣ ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. ಈ ಗುಂಪುಗಳ ನಡುವೆ ತಳೀಕರಣ ನಡೆಯುವುದು ಬಹು ಅಪೂರ್ವ. ಗುಂಪಿನೊಳಗೇ ಒಳತಳಿ ಸಂತಾನೋತ್ಪಾದನೆ ಮುಂದುವರಿದಂತೆಲ್ಲ ಗುಂಪಿನ ಎಲ್ಲ ಪ್ರಾಣಿಗಳಿಗೂ ಪರಸ್ಪರ ಸಂಬಂಧವೇರ್ಪಡುತ್ತದೆ. ಬೇರೊಂದು ಗುಂಪಿನ ಪ್ರಾಣಿಗಳು ಈ ಗುಂಪಿಗೆ ಬಂದು ಸೇರದಿದ್ದಲ್ಲಿ ಈ ಸಂಬಂಧ ನಿರಂತರವಾಗಿ ಮುಂದುವರಿಯುತ್ತಲೇ ಇರುತ್ತದೆ ಮತ್ತು ತಳಿ ಶುದ್ಧೀಕರಣ ನಡೆಯುತ್ತಿರುತ್ತದೆ. ಗುಂಪುಗಳು ಭೌಗೋಳಿಕವಾಗಿ ಬೇರ್ಪಟ್ಟಿದ್ದರಂತೂ ಒಳತಳಿ ಸಂತಾನೋತ್ಪಾದನಕ್ರಮವೇ ಇವುಗಳ ಸಂತಾನ ನಿಯಮವಾಗಿರುತ್ತದೆ. ಈ ತರಹ ಅನೇಕ ಘಟನೆಗಳು ಪ್ರಕೃತಿಯಲ್ಲಿ ನಡೆದಿವೆ; ನಡೆಯುತ್ತಿವೆ. ಆದರೆ ಅವಕ್ಕೆ ವಿಕಾಸದಲ್ಲಿ ಎಷ್ಟು ಪ್ರಾಮುಖ್ಯ ಕೊಡಬೇಕು? ಪ್ರಕೃತಿಯ ಆಯ್ಕೆಯ ಕೈವಾಡ ಈ ಗುಂಪುಗಳ ಮೇಲೆ ಯಾವ ರೀತಿಯಲ್ಲಿರುತ್ತದೆ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯಗಳು ಮೂಡಲು ಇನ್ನೂ ಸಂಶೋಧನೆಗಳು ನಡೆಯಬೇಕಾಗಿವೆ.

ಒಳತಳಿಸಂತಾನೋತ್ಪಾದನೆಯ ಬಗ್ಗೆ ವಾದಗಳು ಪ್ರತಿವಾದಗಳು ಪ್ರಾಣಿಗಳ ವಿಷಯಕ್ಕಿಂತಲೂ ಮಾನವನಲ್ಲಿ ಹೆಚ್ಚು ಪ್ರಾಮುಖ್ಯ ಪಡೆದಿವೆ. ಪುರಾತನ ಈಜಿಪ್ಟಿನ ರಾಜಕುಟುಂಬಗಳನ್ನು ಬಿಟ್ಟರೆ ಇತರ ಎಲ್ಲ ನಾಗರಿಕ ಜನಾಂಗಗಳೂ ಈ ಕ್ರಮವನ್ನು ನಿಷೇಧಿಸಿವೆ. ಸೋದರ ಸಂಬಂಧಿ ವಿವಾಹಗಳನ್ನು ಕೆಲವರು ಸಂಪೂರ್ಣವಾಗಿ ಕೈಬಿಟ್ಟಿದ್ದರೆ ಇನ್ನು ಕೆಲವು ವಿಶೇಷ ಮತ ವ್ಯವಸ್ಥೆಗಳು ಇವಕ್ಕೆ ವಿನಾಯಿತಿ ಕೊಟ್ಟಿವೆ. ಪೂರ್ವಜರು ಎಲ್ಲ ರೀತಿಯಲ್ಲೂ ಉತ್ಕೃಷ್ಟ ಅನುವಂಶೀಯ ಗುಣಗಳನ್ನು ಪಡೆದಿದ್ದಲ್ಲಿ ಈ ವ್ಯವಸ್ಥೆ ಜೀವಶಾಸ್ತ್ರದ ಪ್ರಕಾರ ಬಹು ಒಳ್ಳೆಯದು (**ನೋಡಿ– ಅಡ್ಡತಳಿಯೆಬ್ಬಿಕೆ; ಏಕತಳಿ–ಸಂತಾನೋತ್ಪಾದನೆ**). (ಎಸ್.ಎನ್.ಆರ್.)

**ಒಳತೋಟಿ:** ವಿರೋಧವಾದ ಪ್ರೇರಣೆಗಳ ಅಥವಾ ಅಸಮಂಜಸವಾದ ಕ್ರಿಯೆಗಳ ಆಕರ್ಷಕ್ಕೆ ಅಥವಾ ಅಪಕರ್ಷಕ್ಕೆ ಸಿಕ್ಕಿಬಿದ್ದು ಯಾವ ಒಂದನ್ನು ಮಾಡಬೇಕು ಅಥವಾ ಬಗೆಹರಿಸಬೇಕು ಎಂದು ತೀರ್ಮಾನಿಸಲು ತೊಳಲಾಡುತ್ತಿರುವ ವ್ಯಕ್ತಿಯ ಮಾನಸಿಕ ಪರಿಸ್ಥಿತಿ (ಕಾನ್‌ಫ್ಲಿಕ್ಟ್). ಮನುಷ್ಯನಿಗೆ ಅನೇಕ ಆಸೆಗಳಿರುವುದರ ಜೊತೆಗೆ ಭೀತಿಯೂ ಇರುತ್ತದೆ. ಇವನ ಈ ಆಸೆಗಳಲ್ಲಿ ಕೆಲವು ಅಸಮಂಜಸವಾದವು. ಮತ್ತೆ ಕೆಲವುಗಳ ಮಧ್ಯೆ ಘರ್ಷಣೆ ಇರುತ್ತದೆ. ಈತ ಯಾವ ಗುರಿ ಮುಟ್ಟಲು ಇಚ್ಛಿಸುವನೋ ಅದೇ ಗುರಿಗೆ ಭಯಪಡುವ ಸಂಭವವೂ ಉಂಟು. ಉದಾಹರಣೆಗೆ ನಾಯಿಯನ್ನು ಮುಟ್ಟಲು ಇಚ್ಛಿಸುವ ಮಗು ಅದಕ್ಕೆ ಭಯಪಟ್ಟು ಹಿಂದೆ ಮುಂದೆ ಓಡಾಡುತ್ತದೆ. ಸಾಧಾರಣವಾಗಿ ಒಳತೋಟಿಯುಳ್ಳ ವ್ಯಕ್ತಿಯ ಮಾನಸಿಕಪರಿಸ್ಥಿತಿ ವ್ಯಸನ, ಅನಿಶ್ಚಯ ಮತ್ತು ಉದ್ವೇಗಗಳಿಂದ ತುಂಬಿರುತ್ತದೆ. ಒಳತೋಟಿ ಮನೋವಿಕೃತಿಯ–ತಂತ್ರಿಕಾತಾಪದ (ನ್ಯೂರಾಸಿಸ್)–ಮುಖ್ಯ ಕಾರಣವೆಂದು ಹೆಡ್ರಸನ್ ಮತ್ತು ಗೆಲೆಸ್ಪಿ ಹೇಳುತ್ತಾರೆ. ಭಗ್ನಮನೋರಥ ಮತ್ತು ಭೀತಿಗಳ ಹಾಗೆ ಒಳತೋಟಿಯೂ ಜೀವಿಗೆ ಒಂದು ಸಮಸ್ಯೆ. ಆದಕಾರಣ ಇವೆಲ್ಲವನ್ನೂ ಒಂದೇ ರೀತಿಯ ಸಮಸ್ಯೆಗಳೆಂದು ಹೇಳಬಹುದು. ಇದನ್ನು ಬಗೆಹರಿಸುವ ಮಾರ್ಗಗಳು ಸಾಮಾನ್ಯವಾಗಿ ವ್ಯಕ್ತಿಯ ಬುದ್ಧಿಶಕ್ತಿ, ಅನುಭವ ಮತ್ತು ತಲೆದೋರಿರುವ ಒಳತೋಟಿಯ ಜಟಿಲತೆಗಳನ್ನು ಅವಲಂಬಿಸುತ್ತವೆ.

ಆಕರ್ಷಣೆಗೆ (ವೇಲೆನ್ಸ್) ಅಥವಾ ಗುರಿಗೆ ಆಕರ್ಷಕ ಮತ್ತು ಅಪಕರ್ಷಕ ಗುಣಗಳೆರಡುಂಟು. ಒಂದು ಗುರಿ ಒಬ್ಬ ವ್ಯಕ್ತಿಗೆ ಹಿತವಾಗಿರಬಹುದು ಅಥವಾ ಅಹಿತವಾಗಿರಬಹುದು. ಕರ್ಷಣೆಯ ಈ ಎರಡು ಗುಣಗಳಿಂದ ಒಳತೋಟಿಯನ್ನು ಮೂಲತಃ ಮೂರು ಬಗೆಯಾಗಿ ವಿಂಗಡಿಸಬಹುದು; ವ್ಯಕ್ತಿ ಎರಡು ಸರಿಸಮನಾದ ಆಕರ್ಷಕ ಗುಣವುಳ್ಳ ಗುರಿಗಳ ಮಧ್ಯೆ ಸಿಕ್ಕಿಬಿದ್ದು, ಯಾವುದು ಉತ್ತಮ, ಯಾವುದು ಅಲ್ಲವೆಂದು ಚಿಂತಿಸಿ ತೀರ್ಮಾನಿಸಲು ಕಷ್ಟಪಡುತ್ತಿರುವ ಪರಿಸ್ಥಿತಿ ಒಂದು. ಇದನ್ನು ಆಕರ್ಷಕ–ಆಕರ್ಷಕ ಒಳತೋಟಿ (ಅಪ್ರೋಚ್–ಅಪ್ರೋಚ್ ಕಾನ್‌ಫ್ಲಿಕ್ಟ್) ಎಂದು ಕರೆಯಲಾಗಿದೆ (ಚಿತ್ರ 1). ಕಾರಣ, ಎರಡು ಗುರಿಗಳೂ ಹಿತವಾದವು. ಅವುಗಳಲ್ಲಿ

ಯಾವುದು ಹೆಚ್ಚು, ಯಾವುದು ಕಡಿಮೆ, ಎಂದು ತೀರ್ಮಾನಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ತೀರ್ಮಾನಿಸಿದರೆ ಸಮಸ್ಯೆ ಪರಿಹಾರವಾದಂತೆಯೆ. ಉದಾಹರಣೆಗೆ ಭೂರಿಯನನ ಕತ್ತೆ ಎರಡು ಹುಲ್ಲುಮೆದೆಗಳ ಮಧ್ಯೆ ನಿಂತು ಯಾವುದು ಹೆಚ್ಚು, ಯಾವುದು ಕಡಿಮೆ ಎಂದು ತೀರ್ಮಾನಿಸಲಾಗದೆ ಪ್ರಾಣಬಿಟ್ಟಿತು ಎಂದು ಒಂದು ಕಟ್ಟುಕಥೆ ತಿಳಿಸುತ್ತದೆ. ಇದು ಜೀವನದಲ್ಲಿ ಸಾಧ್ಯವಿಲ್ಲ. ಏಕೆಂದರೆ ಯಾವ ವ್ಯಕ್ತಿಯೂ ಅಷ್ಟು ಮೂರ್ಖನಾಗಲಾರ.

**ಚಿತ್ರ 1 ಆಕರ್ಷಕ – ಆಕರ್ಷಕ ಒಳತೋಟಿ , P : ವ್ಯಕ್ತಿ; +; ಆಕರ್ಷಕ ಗುರಿ**

ಆದರೂ ಒಂದು ತೀರ್ಮಾನಕ್ಕೆ ಬರುವ ಮೊದಲೇ ಗುರಿಗಳೆರಡೂ ಇಲ್ಲದ ಹಾಗೆ ಆಗುವ ಸಂಭವ ನಿಜಜೀವನದಲ್ಲುಂಟು. ಅಲ್ಲದೆ ಯಾವುದಾದರೂ ಒಂದು ಕಾರಣದಿಂದ ಒಂದು ಗುರಿಯ ಕಡೆ ತಿರುಗಿದರೆ, ಆ ಗುರಿ ದೊಡ್ಡದಾಗಿಯೂ ಹೆಚ್ಚು ಆಕರ್ಷಕವಾಗಿಯೂ ಕಾಣಬಹುದು. ಆಗ ಆ ಗುರಿಯನ್ನು ಸಾಧಿಸಲಾಗುವುದು. ಸಾಧಾರಣವಾಗಿ ಈ ತರಹದ ಒಳತೋಟಿಯನ್ನು ಬೇಗನೆ ಮತ್ತು ಸುಲಭವಾಗಿ ಬಗೆಹರಿಸಬಹುದು.

**ಚಿತ್ರ 2 ಅಪಕರ್ಷಕ – ಅಪಕರ್ಷಕ ಒಳತೋಟಿ . –; ಅಪಾಯ**

ಎರಡನೆಯದನ್ನು ಅಪಕರ್ಷಕ–ಅಪಕರ್ಷಕ ಒಳತೋಟಿ (ಅವಾಯ್ಡೆನ್ಸ್–ಅವಾಯ್ಡೆನ್ಸ್ ಕಾನ್‌ಫ್ಲಿಕ್ಟ್) ಎಂದು ಕರೆಯಲಾಗಿದೆ (ಚಿತ್ರ 2). ಇದರಲ್ಲಿ ವ್ಯಕ್ತಿ ಎರಡು ಅಹಿತಕರವಾದ ಅಥವಾ ಭಯಂಕರವಾದ ಸನ್ನಿವೇಶಗಳ ಮಧ್ಯೆ ಸಿಕ್ಕಿಕೊಂಡಿದ್ದಾನೆ. ಇವನಿಗೆ ಇರುವ ಎರಡು ಮಾರ್ಗಗಳಲ್ಲಿ ಯಾವ ಒಂದನ್ನು ಹಿಡಿದು ಹೋದರೂ ಅಪಾಯ ತಪ್ಪದು. ಬೇರೆ ಮಾರ್ಗವಿಲ್ಲದಿದ್ದರೆ, ವ್ಯಕ್ತಿ ಈ ಸಂದಿಗ್ಧ ಪರಿಸ್ಥಿತಿಯನ್ನು ಬಿಡಿಸುವ ಬಗ್ಗೆ ಚಿಂತಿಸಲು ಪ್ರಾರಂಭಿಸುತ್ತಾನೆ. ಒಂದನ್ನು ಎದುರಿಸಲು ಪ್ರಯತ್ನಿಸಿದರೆ, ಅದು ಅತಿ ದೊಡ್ಡದಾಗಿ ಮತ್ತು ಅತಿ ಭಯಾನಕವಾಗಿ ಕಾಣಿಸುತ್ತದೆ. ಮತ್ತೊಂದು ಕಡೆ ತಿರುಗಿದಾಗ ಅದೂ ಹಾಗೆಯೇ ಕಾಣುತ್ತದೆ. ಆದಕಾರಣ ಇಂಥ ಪರಿಸ್ಥಿತಿಗಳಿಗೆ ಒಳಪಟ್ಟ ವ್ಯಕ್ತಿ ಅತಿ ವ್ಯಸನ, ತ್ರಾಸ ಮತ್ತು ಒತ್ತಡಗಳಿಗೆ ತುತ್ತಾಗುತ್ತಾನೆ. ಇದನ್ನು ಬಗೆಹರಿಸಲು ಹೆಚ್ಚು ಕಾಲ ಸಹ ಬೇಕಾಗಿ ಮನಸ್ಸು ಡೋಲಾಯಮಾನವಾಗುತ್ತದೆ. ಅನಿಶ್ಚಯ, ಅಹಿತ ಮತ್ತು ಒತ್ತಡಗಳಿಂದ ವ್ಯಕ್ತಿತ್ವಕ್ಕೆ ಕೆಲವು ವೇಳೆ ತೊಂದರೆ ಬರಬಹುದು. ಇಂಥ ಸಂದಿಗ್ಧ ಪರಿಸ್ಥಿತಿಯಿಂದ ತಪ್ಪಿಸಿಕೊಂಡು ಹೋಗಲು ವ್ಯಕ್ತಿ ಕೆಲವು ವೇಳೆ ಯಾವ ಮಾರ್ಗವನ್ನಾದರೂ ಹುಡುಕಲು ಹೊರಡುತ್ತಾನೆ. ಕೆಲವು ವೇಳೆ ಇದರ ಫಲಿತಾಂಶವೇ ವಿಲೋಪನ ಮತ್ತು ಅಪರಾಧವೆಂದು ಗಮನಿಸಲಾಗಿದೆ.

**ಚಿತ್ರ 3 ಅಪಕರ್ಷಕ – ಅಪಕರ್ಷಕ ಒಳತೋಟಿ**

ಮೂರನೆಯದನ್ನು ಆಕರ್ಷಕ–ಅಪಕರ್ಷಕ ಒಳತೋಟಿ ಎಂದು ಕರೆಯಲಾಗಿದೆ (ಚಿತ್ರ–3). ಇಲ್ಲಿ ಸಾಧಿಸಬೇಕಾದ ಗುರಿ ಒಂದೇ. ಆದರೆ ಅದು ಹಿತ ಮತ್ತು ಅಪಾಯಗಳೆರಡರಿಂದಲೂ ಕೂಡಿದೆ. ಉದಾಹರಣೆಗೆ ಒಬ್ಬ ಯುವಕ ಒಬ್ಬ ತರುಣಿಯನ್ನು ಪ್ರೇಮಿಸಲಿಚ್ಛಿಸುತ್ತಾನೆ. ಆದರೆ ಸಮಾಜದ ಬಹಿಷ್ಕಾರ ಮತ್ತು ಆಕೆ ತನ್ನನ್ನು ನಿರಾಕರಿಸಬಹುದೆಂಬ ಭಯದಿಂದ ಆಕೆಯನ್ನು ಕೇಳಲು ಭೀತಿಪಡುತ್ತಾನೆ. ಇದು ಫ್ರಾಯ್ಡನ ಪ್ರಕಾರ ಇಡ್ (ಸಾಹಸ ಪ್ರವೃತ್ತಿ) ಮತ್ತು ಅತಿ ಅಹಂಗಳ (ಸೂಪರ್ ಈಗೊ) ಮಧ್ಯೆ ಇರುವ ಘರ್ಷಣೆ. ಇದು ಸಹ ವ್ಯಕ್ತಿಯ ಮನಸ್ಸಿನ ಮೇಲೆ ತ್ರಾಸವನ್ನುಂಟುಮಾಡುತ್ತದೆ. ಹಿಂದೆ ಹೇಳಿದ ಸಂದಿಗ್ಧ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಬಹುದು. ಆದರೆ ಇಂಥ ಒಳತೋಟಿಯಿಂದ ಪಾರಾಗುವುದು ಅತಿ ಕಷ್ಟ. ವ್ಯಕ್ತಿ ಎಲ್ಲಿಗೆ ಹೋದರೂ ಅಲ್ಲಿಗೆ ಅದನ್ನು ಜೊತೆಯಲ್ಲಿಯೆ ಕೊಂಡು ಹೋಗುತ್ತಾನೆ. ಇದರಿಂದ ತಪ್ಪಿಸಿಕೊಂಡು ಓಡಿಹೋಗಲು ಸಾಧ್ಯವಿಲ್ಲ. ಸಮಸ್ಯೆ ಪರಿಹರಿಸಲೇಬೇಕು. ಇಲ್ಲವಾದರೆ, ವ್ಯಕ್ತಿತ್ವದ ಶಾಂತಿಗೆ ಇದು ಒಂದು ದೊಡ್ಡ ಹೊರೆಯಾಗುತ್ತದೆ.

ಆಕರ್ಷಕ–ಆಕರ್ಷಕ ಒಳತೋಟಿ ಕೆಲವು ವೇಳೆ ದ್ವಿ ಆಕರ್ಷಕ–ಅಪಕರ್ಷಕ ಒಳತೋಟಿ (ಡಬಲ್ ಅಪ್ರೋಚ್–ಅವಾಯ್ಡೆನ್ಸ್ ಕಾನ್‌ಫ್ಲಿಕ್ಟ್) ಆಗುವ ಸಂಭವವುಂಟು. ಈ ಆಕರ್ಷಕ ಗುರಿಗಳನ್ನು ಸಾಧಿಸಲಾಗದಿರುವುದು ಅಪಾಯಕರವೆಂದು ಭಾವಿಸಿದಾಗ ಹೀಗಾಗುತ್ತದೆ. ಉದಾಹರಣೆಗೆ ಒಬ್ಬ ವಿದ್ಯಾರ್ಥಿ ತರಗತಿ ಮತ್ತು ಆಟಗಳೆರಡರಲ್ಲಿಯೂ ಉನ್ನತ ಪದವಿ ಪಡೆಯಲು ಇಚ್ಛಿಸಿದಾಗ, ಒಂದನ್ನು ಗಳಿಸಲು ಮಾಡಿದ ಕಾಲವಿನಿಯೋಗದಿಂದ ಮತ್ತೊಂದನ್ನು ಗಳಿಸಲು ಅಡ್ಡಿಯಾಗುತ್ತದೆ. ಆಗ ಆತ ಎರಡರಲ್ಲಿ ಯಾವುದನ್ನೂ ಬಿಡಲು ಇಚ್ಛಿಸುವುದಿಲ್ಲ. ಹಾಗೆ ಬಿಡುವುದು ಅಪಾಯಕರವೆಂದು ಭಾವಿಸುತ್ತಾನೆ.

ಈ ಎಲ್ಲ ವಿಧದ ಒಳತೋಟಿಗಳಲ್ಲಿ ಒಂದು ಸಾಮಾನ್ಯ ಗುಣವನ್ನು ಕಾಣಬಹುದು. ಅದು ಭಾವತೀವ್ರತೆ, ಉದ್ವೇಗ, ಈ ಭಾವತೀವ್ರತೆ ಅಥವಾ ಉದ್ವೇಗವನ್ನು ಕಡಿಮೆ ಮಾಡುವುದು ವ್ಯಕ್ತಿಗೆ ಅವಶ್ಯಕ. ಇಂಥ ಸಂದರ್ಭಗಳಲ್ಲಿ ಪ್ರತ್ಯಕ್ಷಾನುಭವ (ಪರ್ಸೆಪ್ಷನ್), ಸಾಹಚರ್ಯ (ಅಸೋಸಿಯೇಷನ್), ಸ್ಮೃತಿ (ರಿಮೆಂಬರಿಂಗ್), ಸಮಸ್ಯಾಪರಿಹಾರ (ಪ್ರಾಬ್ಲೆಮ್ ಸಾಲ್ವಿಂಗ್), ಯೋಚನೆ (ಥಿಂಕಿಂಗ್) ಇವು ಸಹಾಯಕವಾಗುತ್ತವೆ. ಒಳತೋಟಿ ಭಗ್ನಮನೋರಥಕ್ಕೆ ಮಾರ್ಗವಾದಾಗ ಅನಂತರದ ಪರಿಹಾರದ ವಿಧಾನಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದನೆಯದು ಪ್ರಚೋದನೆಯನ್ನು ಮಾರ್ಪಾಡು ಮಾಡುವ ವಿಸ್ಥಾಪನೆ ಅಥವಾ ಸ್ಥಾನಪಲ್ಲಟ (ಡಿಸ್‌ಪ್ಲೇಸ್‌ಮೆಂಟ್), ದಮನ (ರಿಪ್ರೆಷನ್), ಪ್ರತ್ಯಕ್ಷಾನುಭವ ಜಾಗರೂಕತೆ ಮತ್ತು ಪ್ರತ್ಯಕ್ಷಾನುಭವದ ರಕ್ಷಣೆ (ಪರ್ಸೆಪ್ಚುಯಲ್ ವಿಜಿಲೆನ್ಸ್) ಮತ್ತು ವಿವೇಚನಾ ಪರತೆ (ರ್‍ಯಾಷನಲೈಸೇಷನ್)ಅಂತಃಕ್ಷೇಪಣೆ (ಇನ್ಟ್ರೊಜೆಕ್ಷನ್) ಮತ್ತು ಪ್ರಕ್ಷೇಪಣೆಗಳನ್ನು (ಪ್ರೊಜೆಕ್ಷನ್) ಒಳಗೊಂಡಿದೆ. ಎರಡನೆಯದು ಪ್ರತಿಕ್ರಿಯೆಯನ್ನು ಮಾರ್ಪಾಡು ಮಾಡುವ ಪರಿಹಾರ (ಕಾಂಪೆನ್ಸೇಷನ್) ಅತಿ ಪರಿಹಾರ (ಓವರ್–ಕಾಂಪೆನ್ಸೇಷನ್) ಉದಾತ್ತೀಕರಣ (ಸಬ್ಲಿಮೇಷನ್) ಪ್ರತಿಕ್ರಿಯಾರೂಪಣ (ರಿಯಾಕ್ಷನ್ ಫಾರ್ಮೇಷನ್) ಪ್ರತಿಗಮನ (ರಿಗ್ರೆಷನ್) ಮತ್ತು ಇಚ್ಛಾಕಲ್ಪಿತ ಯೋಚನೆಗಳನ್ನು (ಆಸ್ಟಿಸ್ಟಿಕ್ ಥಿಂಕಿಂಗ್) ಒಳಗೊಂಡಿದೆ. ಇವೆಲ್ಲವೂ ಭಗ್ನಮನೋರಥವನ್ನು ಸ್ವಲ್ಪಮಟ್ಟಿಗೆ ಹಗುರಮಾಡುತ್ತವೆ. ಇದರಿಂದ ಸಮಸ್ಯೆ ಪೂರ್ಣವಾಗಿ ಬಗೆಹರಿಯಲಾರದು. ಭಗ್ನಮನೋರಥದಿಂದ ತಂತ್ರಿಕಾತಾಪ ಪ್ರಾರಂಭವಾಗಬಹುದು. ಈ ರೋಗದ ಲಕ್ಷಣವೂ (ಸಿಮ್ಟಂ) ಭಗ್ನ ಮನೋರಥದ ಭಾರವನ್ನು ಕಡಿಮೆ ಮಾಡಲು ಸಹಾಯ ಮಾಡುವುದು. ಕೊನೆಯದಾಗಿ, ಇಂಥ ವಿಷಮಸ್ಥಿತಿಗಳನ್ನು ಚಿಕಿತ್ಸೆ ಮಾಡುವ ಕಾಲದಲ್ಲಿ ಮನೋವಿಜ್ಞಾನಿ ಒಳತೋಟಿಯನ್ನು ಪಾರು ಮಾಡುವ ಅಥವಾ ಹೆಚ್ಚು ಮಾಡುವ ಈ ಕೆಳಗಿನ 4 ನಿಯಮಗಳನ್ನು ತಿಳಿದಿರಬೇಕು: 1 ಗುರಿ ಹತ್ತಿರವಿದ್ದಷ್ಟೂ ಅದನ್ನು ತಲುಪುವ ಅಕಾಂಕ್ಷೆ ಹೆಚ್ಚು. ಇದನ್ನು ಆಕರ್ಷಕ ಪ್ರವಣತೆ (ಅಪ್ರೋಚ್ ಗ್ರೇಡಿಯೆಂಟ್) ಎಂದು ಕರೆಯುತ್ತಾರೆ. 2 ಭೀತಿಯ ಸ್ಥಳ ಹತ್ತಿರವಿದ್ದಷ್ಟೂ ಅದರಿಂದ ತಪ್ಪಿಸಿಕೊಳ್ಳುವ ಆಕಾಂಕ್ಷೆ ಹೆಚ್ಚು. ಇದನ್ನು ಅಪಕರ್ಷಕ ಪ್ರವಣತೆ (ಅವಾಯ್ಡೆನ್ಸ್ ಗ್ರೇಡಿಯೆಂಟ್) ಎಂದು ಕರೆಯುತ್ತಾರೆ. 3 ಆಕರ್ಷಣ ಪ್ರವಣತೆಗಿಂತ ಅಪಕರ್ಷಣ ಪ್ರವಣತೆ ಜಾಸ್ತಿಯಾಗಿರುತ್ತದೆ. 4 ಆಕರ್ಷಕದ ಅಥವಾ ಅಪಕರ್ಷಕದ ಶಕ್ತಿ, ಅದಕ್ಕೆ ಆಧಾರವಾಗಿರುವ ಪ್ರೇರಣೆಗಳ ಶಕ್ತಿಯನ್ನು ಅವಲಂಬಿಸಿರುತ್ತದೆ. ಅಂದರೆ, ಪ್ರೇರಣೆಗಳ ಶಕ್ತಿ ಪ್ರಬಲವಾಗಿದ್ದಂತೆ ಆಕರ್ಷಕ–ಅಪಕರ್ಷಕ ಶಕ್ತಿಯೂ ಪ್ರಬಲವಾಗಿರುತ್ತದೆ. (ಎಚ್.ಎಚ್.)

**ಒಳದರ್ಶನ:** ಮೈ ಒಳಗಡೆ ಆಳದಲ್ಲಿರುವ, ಜಠರದಂಥ ಯಾವುದಾದರೂ ಒಂದು ಅಂಗವನ್ನು, ಬಾಯಿಯಂತೆ ಸಹಜವಾಗಿರುವ ಒಂದು ಕಂಡಿಯ ಮೂಲಕ ಕೊಳವೆ ತೂರಿಸಿ ಬೆಳಗಿಸಿ ನೋಡಿ ನಡೆಸುವ ಪರೀಕ್ಷೆ (ಎಂಡೊಸ್ಕೊಪಿ). ಕೊಳವೆ ತೂರಿಸಲು ಹಿಗ್ಗಿಸುವ ಭಾಗಗಳಲ್ಲಿ ನೋವಾಗದಂತೆ ಮದ್ದು ಹಾಕಿ ಅರಿವಿರದಂತೆ ಮಾಡಿರಬೇಕು. ಕೊಳವೆ ಲೋಹದ್ದೋ ಗಟ್ಟಿ ತಂತುವಿನದೋ ಆಗಿದ್ದು, ಆಯಾ ಅಂಗಗಳ ಸಹಜ ಅಂಕುಡೊಂಕುಗಳಿಗೆ ತಕ್ಕಂತೆ ಸುಲಭವಾಗಿ ಬಾಗುವಂತಿರುವುದು. ಕೆಲವೇಳೆ, ಕೇವಲ ಒಳಗಡೆ ನೋಡುವುದೇ ಅಲ್ಲದೆ, ಪರೀಕ್ಷೆಗಾಗಿ ರೋಗ ಹತ್ತಿರಬಹುದಾದ ಒಳಭಾಗದ ಒಂದು ಚೂರನ್ನೋ ರೋಗಿ ಅಕಸ್ಮಾತ್ ನುಂಗಿದ ಸೂಜಿ, ಮೊಳೆ, ಗೋಲಿ ಮುಂತಾದ ಹೊರವಸ್ತುವನ್ನೋ ಹೊರದೆಗೆಯಬಹುದು. ಒಳದರ್ಶಕಗಳಲ್ಲಿ (ಎಂಡೊಸ್ಕೋಪ್ಸ್) ಹಲವಾರು ಬಗೆಗಳಿವೆ. ದನಿನಾಳ, ಉಸಿರ್ನಾಳ, ಅನ್ನನಾಳ, ಜಠರಗಳನ್ನು ಪರೀಕ್ಷಿಸುವವನನ್ನು ಬಾಯಿ ಮೂಲಕ ಒಳದರ್ಶಕವನ್ನು ಒಳ ತೂರಿಸಬೇಕಾಗುತ್ತದೆ. ಇವುಗಳ ಆಚೆ ತುದಿಯಲ್ಲಿ ವಿದ್ಯುತ್ತಿನ ಬೆಳಕು ಚೆಲ್ಲುತ್ತದೆ. ಸಾಮಾನ್ಯವಾಗಿ ಈ ಪರೀಕ್ಷೆಗಳನ್ನು ಆಸ್ಪತ್ರೆಗಳಲ್ಲಿ ಮಾತ್ರ ಮಾಡುವುದಾದರೂ ರೋಗಿ ಅಲ್ಲಿ ತಂಗಬೇಕಿಲ್ಲ. ಗುದ, ನೆಟ್ಟಗರುಳು, ಹೆಗ್ಗರುಳಿನ ಕೆಳಭಾಗಗಳ ಒಳಗಡೆ ನೋಡುವ ಒಳದರ್ಶಕ ತೂರಿಸಲು ಅರಿವಳಿಸಬೇಕಾಗಿಲ್ಲ. ಆದರೆ ಕಂಕೋಶದೊಳಕ್ಕೆ (ಮೂತ್ರಕೋಶ) ಮೂತ್ರನಾಳದ ಮೂಲಕ ತೂರಿಸಿ ನೋಡಲು ಅರಿವಳಿ ಬಳಸಲೇಬೇಕು. ಸಹಜ ಕಂಡಿಗಳು ಇಲ್ಲವಾದರೂ ಎದೆ, ಹೊಟ್ಟೆಗಳಲ್ಲಿನ ಜೀವಾಳದ ಒಳಾಂಗಗಳನ್ನು ಹೀಗೇ ಇಣಿಕಿ ನೋಡಲೂ ಸಾಧ್ಯ. ಆದರೆ ಇದಕ್ಕಾಗಿ ಶಸ್ತ್ರಕ್ರಿಯೆಯಿಂದ ಇರಿದು ಕಂಡಿ ಮಾಡಬೇಕಾಗುತ್ತದೆ. ಬೆಳಗುವ ಕೊಳವೆಯನ್ನು ಒಳತೂರಿಸಿ ಪರೀಕ್ಷಿಸಿದ ಮೇಲೆ ಆ ಕಂಡಿಯನ್ನು ಹೊಲಿಗೆ ಹಾಕಿ ಮುಚ್ಚಬೇಕು. ಕ್ಷಯರೋಗಿಗಳಲ್ಲಿ ಎದೆಗೂಡಿನ ಒಳಗೆ ಪುಪ್ಪುಸ ಗೋಡೆಗೆ ಬಲವಾಗಿ ಅಂಟಿಕೊಂಡಿದ್ದರೆ, ಅದನ್ನು ಬರೆಗುಣದಿಂದ (ಕಾಟರಿ) ಸುಟ್ಟು ಬಿಡಿಸಬಹುದು. ಇದಕ್ಕಾಗಿ ಒಳದರ್ಶಕವನ್ನು ಪಕ್ಕೆಲುಬುಗಳ ನಡುವೆ ತೂರಿಸಬೇಕು. ಹೊಕ್ಕುಳ ಕೆಳಗೆ ಹೊಟ್ಟೆಯ ಗೋಡೆಯಲ್ಲಿ

ಕಂಡಿ ಇರಿದರೆ ಕೆಳಹೊಟ್ಟೆಯಲ್ಲಿರುವ ಹೆಂಗಸರ ಜನನಾಂಗಗಳ ಪರೀಕ್ಷೆಗೆ ಅನುಕೂಲ. ಅಲ್ಲದೆ, ಕೆಳಗಿನಿಂದ ಯೋನಿಯ ಮೇಲಿನ ಗೋಡೆಯ ಮೂಲಕವೂ ಒಳದರ್ಶಕವನ್ನು ತೂರಿಸಿದರೆ ಹೆಣ್ಣಿನ ಕಿಳ್ಗುಳಿಯ (ಪೆಲ್ವಿಸ್) ಜನನಾಂಗವನ್ನು ಸುಲಭವಾಗಿ ಪರೀಕ್ಷಿಸಬಹುದು. ಹಾಗೇ ಹೊಟ್ಟೆಕುಳಿಯಲ್ಲಿ (ಎಪಿಗ್ಯಾಸ್ಟ್ರಿಯಂ) ಸಣ್ಣದಾಗಿ ಕೊಯ್ದು ತೂರಿಸಿ, ಜಠರ, ಈಲಿ, ಪಿತ್ತಕೋಶ, ಮಾಂಸಲಿ, ತೊರಳೆ, ಸಣ್ಣ ಕರುಳು, ಹೆಗ್ಗರುಳೇ ಮುಂತಾದುವನ್ನು ಪರೀಕ್ಷಿಸಬಹುದು. ಕಣ್ಣೊಳಕ್ಕೆ ಬೆಳಕನ್ನು ಬಿಂಬಿಸಿ ಒಳಗಿರುವ ಕಣ್ಣಾಲವನ್ನು (ರೆಟೀನ) ನೋಡುವುದು ಕಣ್ಣು ವೈದ್ಯರ ಮುಖ್ಯ ಕೆಲಸ. ಒಳಾಂಗದ ಕೆಲಸ ಕೆಟ್ಟಿರುವ ಅನುಮಾನ ಬಂದು, ಹೊರಗಿಂದ ನಡೆಸಿದ ಯಾವ ಪರೀಕ್ಷೆಗಳಿಂದಲೂ ಬೇನೆಯ ರೂಪ ನಿರ್ಧಾರವಾಗದೆ, ಶಸ್ತ್ರಕ್ರಿಯೆ ಮಾಡಿ ಕಣ್ಣಾರೆ ಕಾಣುವುದನ್ನು ತಪ್ಪಿಸುವುದೇ ಒಳದರ್ಶನದಿಂದ ದೊರೆವ ಮಹಾ ಅನುಕೂಲ. ಕೆಲವೇ ಮಿಲಿಮೀಟರುಗಳ ಗಾತ್ರದ ಭಾವಚಿತ್ರಕವನ್ನು (ಕ್ಯಾಮೆರ) ಒಳತೂರಿಸಿ, ಒಳಗೆಲ್ಲ ಚಿತ್ರಗಳನ್ನು ಹಿಡಿದು ಹೊರತರುವ ಹೊಸವಿಧಾನ ಇತ್ತೀಚೆಗೆ ಗೊತ್ತಾಗಿದೆ. ಹಾಗೆ ಒಳಗಿವಿಯಲ್ಲಿ ಶಸ್ತ್ರಕ್ರಿಯೆ ನಡೆಸಲು ಮೈಕ್ರೊಸ್ಕೋಪಿನ ಬಳಕೆ ಕಿವಿ ಮೂಗು ಗಂಟಲುವೈದ್ಯಪಟುವಿಗೆ ಒಂದು ಮಹಾ ವರ. (ಡಿ.ಎಸ್.ಎಸ್.)

**ಒಳದೂಡಿಕೆ:** ಮೊದಲೇ ಕೊರೆದ ರಂಧ್ರವನ್ನು ಮತ್ತಷ್ಟು ವಿಸ್ತರಿಸುವ ಕ್ರಿಯೆ (ರೀಮಿಂಗ್). ಕೊರೆವ ಆಯುಧವಾದ ಬೈರಿಗೆಯ ಅಲಗು ಸವೆದು ಹೋಗಿದ್ದರೆ ಅಥವಾ ಬೇರೆ ಯಾಂತ್ರಿಕ ದೋಷಗಳಿದ್ದರೆ ಆಗ ಕೊರೆದ ತೂತು ಅಳತೆಯ ಅನುಸಾರ ಇರುವುದಿಲ್ಲ. ಇಂಥ ರಂಧ್ರದೊಳಗೆ ಬೆಣೆಯನ್ನು ತೂರಲಾಗುವುದಿಲ್ಲ.

ಈ ಸನ್ನಿವೇಶದಲ್ಲಿ ರಂಧ್ರವನ್ನು ಉಚಿತ ಪ್ರಮಾಣದಲ್ಲಿ ಹಿಗ್ಗಿಸಿ ತೂರುಬೆಣೆಗೆ ಸರಿಯಾದ ಅವಕಾಶ ಒದಗಿಸುವುದೇ ಒಳದೂಡುವ ಆಯುಧದ ಕೆಲಸ. ಇದೊಂದು ಸಂವಾಟವಿರುವ (ಟೇಪರಿಂಗ್) ಆಯುಧ. ಸಾಮಾನ್ಯವಾಗಿ ಒಳದೂಡುವ ಆಯುಧವನ್ನು ಹೊಸ ತೂತುಗಳನ್ನು ಕೊರೆಯಲು ಬಳಸುವುದಿಲ್ಲ.



ಒಳದೂಡುವ ಸಲಕರಣೆಯ ವಿವಿಧ ಬಗೆಗಳು

ಒಳದೂಡುವ ಕ್ರಿಯೆಯ ವೇಗ ಸಾಮಾನ್ಯವಾಗಿ ಬೈರಿಗೆಯ ವೇಗದ 2/3 ರಷ್ಟು. ಈ ಕ್ರಿಯೆಯನ್ನು ಎಸಗುವಾಗ ವಹಿಸಬೇಕಾದ ಮುನ್ನೆಚ್ಚರಿಕೆಗಳು ಹೀಗಿವೆ: 1 ರಂಧ್ರವಿರುವ ವಸ್ತುವನ್ನು ಅಲುಗಾಡದಂತೆ ಬಿಗಿಹಿಡಿದಿರಬೇಕು. 2 ಮಾರ್ಗದರ್ಶಿಯ (ಗೈಡ್) ಅವಶ್ಯಕತೆಯಿದೆಯೇ ಎಂದು ಪರಿಶೀಲಿಸಬೇಕು. 3 ಕೈ ಆಯುಧಗಳನ್ನು ಉಪಯೋಗಿಸುವಾಗ ಸಮಾನ (ಯೂನಿಫಾರಂ) ಬಲ ಆಘೂರ್ಣ (ಟಾರ್ಕ್) ಹಾಗೂ ಅಕ್ಷೀಕ ಒತ್ತಡ (ಆಕ್ಷಿಯಲ್ ಪ್ರೆಶರ್) ಇರಬೇಕು. 4 ಒಳದೂಡುವ ಆಯುಧದಲ್ಲಿ ಕಂಪನ (ಚಾಟರಿಂಗ್) ಇಲ್ಲದಿರುವಂತೆ ಏರ್ಪಾಡಿರಬೇಕು. ಆವಶ್ಯಕವಾಗಿರುವ ಸ್ನೇಹಕಗಳನ್ನು (ಲ್ಯೂಬ್ರಿಕೆಂಟ್ಸ್) ಉಪಯೋಗಿಸಬೇಕು.

ಒಳದೂಡಬೇಕಾದ ಬೆಣೆಗಳು ಮತ್ತು ರಂಧ್ರಗಳ ಸ್ವಭಾವವನ್ನು ಅನುಸರಿಸಿ ಸಂದರ್ಭಾನುಸಾರ ನೇರನಾಳಾಯುಧ (ಸ್ಟ್ರೇಟ್ ಫ್ಲೂಟ್ ರೀಮರ್), ಕುಂಡಲೀನಾಳಾಯುಧ (ಹೆಲಿಕಲ್ ಫ್ಲೂಟ್ ರೀಮರ್), ಸಂವಾಟಾಯುಧ (ಟೇಪರ್ ರೀಮರ್), ವಿಸ್ತರಣಸಾಧ್ಯ ಆಯುಧ ಮುಂತಾದುವನ್ನು ಉಪಯೋಗಿಸಬಹುದು. ಈ ಆಯುಧಗಳನ್ನು ಯಂತ್ರಗಳೊಂದಿಗೆ ಅಥವಾ ಕೈಯಿಂದ ಉಪಯೋಗಿಸುವರು. ಉತ್ತಮ ಫಲ ಪಡೆಯಲು ಆಯುಧಗಳ ಕರ್ತನಧಾರಗಳು (ಕಟ್ಟಿಂಗ್ ಎಡ್ಜಸ್) ಬಹಳ ಹರಿತವಾಗಿರಬೇಕು. ಇವನ್ನು ಬಹಳ ಗಡುಸಾದ (ಹಾರ್ಡ್) ಉಕ್ಕಿನಿಂದ ತಯಾರಿಸುತ್ತಾರೆ. ಆಯುಧ ರಂಧ್ರದೊಳಗೆ ಸುಲಭವಾಗಿ ಪ್ರವೇಶಿಸಲು ಅನುಕೂಲವಾಗುವಂತೆ ಹೆಚ್ಚಿನ ಆಯುಧಗಳ ತುದಿಗಳನ್ನು ಸಂವಾಟಗೊಳಿಸಿರುತ್ತಾರೆ. ಆಯುಧದ ಕರ್ತನಧಾರಗಳೂ ಸ್ವಲ್ಪ ಬಾಗಿರುವುದರಿಂದ ಚಲನೆ ಸಲೀಸಾಗುವುದು. ಕತ್ತರಿಸುವ ಅಲಗುಗಳ ನಡುವೆ ಇರುವ ನಾಳಗಳ ಮೂಲಕ ಕತ್ತರಿಸಲ್ಪಟ್ಟ ಲೋಹದ ಚೂರುಗಳು ಸರಿದುಹೋಗುತ್ತವೆ.

ಒಳದೂಡುವ ಆಯುಧಗಳು ಸತತ ಕಾರ್ಯದಿಂದ ಸವೆದಿದ್ದರೆ ಕರಾರುವಾಕ್ಕಾದ ಕೆಲಸಗಳಿಗೆ ಅವನ್ನು ಬಳಸಬಾರದು. ಸಾಣೆ ಹಿಡಿದು ಕಡಿಮೆ ಅಳತೆಯ ಆಯುಧಗಳಾಗಿ ಮಾರ್ಪಡಿಸಿ ಆ ಅಳತೆಗೆ ತಕ್ಕ ಕೆಲಸಗಳಿಗೆ ಬೇಕಾದರೆ ಅವನ್ನು ಉಪಯೋಗಿಸಬಹುದು.

(ಕೆ.ಆರ್.ಎಂ.ಬಿ.)

**ಒಳನಾಡಿನ ಜಲಸಾರಿಗೆ:** ಸ್ವಾಭಾವಿಕವಾದ ನದಿಗಳು, ಸರೋವರಗಳು ಅಥವಾ ಕೃತಕವಾದ ಕಾಲುವೆಗಳ ಮೂಲಕ ಆಂತರಿಕವಾಗಿ ಹಡಗು ಅಥವಾ ದೋಣಿಗಳಲ್ಲಿ ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುವ ವ್ಯವಸ್ಥೆಯನ್ನು ಒಳನಾಡಿನ ಜಲಸಾರಿಗೆ ಎಂದು ಕರೆಯುತ್ತಾರೆ. ಜಲಸಾರಿಗೆಯು ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. 18ನೆಯ ಶತಮಾನದಲ್ಲಿ ಜಲಸಾರಿಗೆಯಿಂದ ಪ್ರಯಾಣಿಕರನ್ನು ಮತ್ತು ಸರಕನ್ನು ಒಳನಾಡಿನಲ್ಲಿ ಸಾಗಿಸಲಾಗುತ್ತಿತ್ತು. ಅಂದಿನ ದಿನಗಳಲ್ಲಿ ಆಮದು ಮತ್ತು ರಫ್ತಿನ ಪ್ರಮಾಣ, ಗಾತ್ರ ಮತ್ತು ವೇಗದ ಪ್ರಯಾಣಕ್ಕೆ ಹೆಚ್ಚಿನ ಆದ್ಯತೆಗಳಿರಲಿಲ್ಲ. ಕ್ರಮೇಣ ಹಡಗಿನ ಗಾತ್ರ, ಸರಕಿನ ಪ್ರಮಾಣ ಮತ್ತು ವೇಗವಾಗಿ ಚಲಿಸುವ ಹಡಗುಗಳು ರೂಪುಗೊಂಡವು. ಇದರಿಂದಾಗಿ ಬೃಹತ್‌ಗಾತ್ರದ ಸರಕು ಸಕಾಲದಲ್ಲಿ ತಲಪುವ ವ್ಯವಸ್ಥೆ ಅಭಿವೃದ್ಧಿ ಹೊಂದಿತು. 19ನೆಯ ಶತಮಾನದಲ್ಲಿ ಭೂಸಾರಿಗೆ ಪ್ರಾಮುಖ್ಯತೆಯನ್ನು ಪಡೆಯಿತು, ಪರಿಣಾಮವಾಗಿ ರಸ್ತೆಗಳು, ರಹದಾರಿಗಳು ಸಂಪರ್ಕ ಜಾಲಗಳು ವೇಗವಾಗಿ ವಿಸ್ತರಿಸಿದವು. ಪ್ರಮುಖ ನಗರಗಳಿಗೆ, ಬಂದರುಗಳಿಗೆ ಬಂದರು ನಗರಗಳಿಗೆ, ಕೈಗಾರಿಕಾ ಪ್ರದೇಶಗಳಿಗೆ ರಸ್ತೆಗಳ ಜಾಲ ಸಂಪರ್ಕಗಳು ವಿಸ್ತರಿಸಲ್ಪಟ್ಟಿತು. ರೈಲು ಸಾರಿಗೆ ವ್ಯವಸ್ಥೆಯು ಹಲವು ರಾಷ್ಟ್ರಗಳಲ್ಲಿ ಬೆಳಕಿಗೆ ಬಂದಿತು. ಇದರಿಂದ ಒಳನಾಡಿನ ಜಲ ಸಾರಿಗೆಯು ರಸ್ತೆ, ರೈಲು ಸಾರಿಗೆಗಳ ಜೊತೆ ಪೈಪೋಟಿಯಿಂದ ನಡೆಯಬೇಕಾಯಿತು. ಸರಕು ಮತ್ತು ಪ್ರಯಾಣಿಕರ ರವಾನೆಯಲ್ಲಿ ಒಳಸಾರಿಗೆಯ ಅನುಕೂಲಗಳ ಅರಿವು ಹೆಚ್ಚಾಯಿತು. 20ನೆಯ ಶತಮಾನದ ವೇಳೆಗೆ ಪ್ರಪಂಚದ ಹಲವಾರು ರಾಷ್ಟ್ರಗಳಲ್ಲಿ ಒಳನಾಡಿನ ಜಲಸಾರಿಗೆ ವೇಗವಾಗಿ ಅಭಿವೃದ್ಧಿಯತ್ತ ಸಾಗಿತ್ತು. ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಹಾಗೂ ಕೈಗಾರಿಕೆಗಳನ್ನು ಆಧಾರವಾಗಿ ಹೊಂದಿರುವ ರಾಷ್ಟ್ರಗಳಲ್ಲಿ ಕಚ್ಚಾವಸ್ತುಗಳನ್ನು ಹಾಗೂ ಸಿದ್ಧಪಡಿಸಿದ ಪದಾರ್ಥಗಳನ್ನು ರವಾನಿಸಲು ಜಲಸಾರಿಗೆ ಬಹುವಾಗಿ ಬಳಕೆಗೆ ಬಂದಿತು.

ಪ್ರಸ್ತುತ ಒಳನಾಡಿನ ಜಲಸಾರಿಗೆಯನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿರುವುದು ಈ ಕೆಳಗಿನ ಕಾರಣಗಳಿಂದಾಗಿ. ಈ ವಿಧಾನವು ದೊಡ್ಡ ಪ್ರಮಾಣದ ಸರಕನ್ನು ಕಡಿಮೆ ಖರ್ಚಿನಲ್ಲಿ ರವಾನಿಸಲು ಅನುಕೂಲವಾಗಿದೆ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು, ಅತಿ ಭಾರವಾದ ಪದಾರ್ಥಗಳನ್ನು, ಖನಿಜ, ದ್ರವರೂಪದ ತೈಲ, ಕಲ್ಲಿದ್ದಲು, ಕೆಡದಂತಹ ಆಹಾರ ಪದಾರ್ಥಗಳು, ರಬ್ಬರ್, ಚರ್ಮ, ಕಾಫಿ, ಚಹ, ತಂಬಾಕು, ಕೃಷಿ ಉಪಕರಣಗಳು ಮೊದಲಾದವನ್ನು ಸಾಗಿಸಲು ಜಲಮಾರ್ಗವು ಅತ್ಯಂತ ಸೂಕ್ತ ಹಾಗೂ ಸುರಕ್ಷಿತ. ಜಲಸಾರಿಗೆಯ ಸಾಗಾಣಿಕೆಯಲ್ಲಿ ಪೂರ್ವಬಾವಿಯಾಗಿ ಯಾವುದೇ ಖರ್ಚು ವೆಚ್ಚ ತಗಲುವುದಿಲ್ಲ. ರೈಲು ಮತ್ತು ರಸ್ತೆ ಸಾರಿಗೆ ವ್ಯವಸ್ಥೆ ಇಲ್ಲದ ಪ್ರದೇಶಗಳಲ್ಲಿ ಜಲಸಾರಿಗೆಯ ಪ್ರಾಮುಖ್ಯತೆ ಹೆಚ್ಚಾಗಿದೆ. ಈ ಸಾರಿಗೆಯು ಕೆಲವು ಅನುಕೂಲ – ಅನಾನುಕೂಲ, ಇತಿಮಿತಿಗಳನ್ನು ಒಳಗೊಂಡಿದೆ.

ಜಲಸಾರಿಗೆಯು ಮಂದಗತಿಯಿಂದ ಕೂಡಿದ್ದು, ಜಲಮಾರ್ಗಗಳು ಆಳವಾಗಿ ಮತ್ತು ಸಾರ್ವಕಾಲಿಕವಾಗಿರಬೇಕು. ಜಲವು ಸಮೃದ್ಧಿಯಾಗಿರಬೇಕು, ಜಲಮಾರ್ಗವು ಮಳೆಗಾಲದಲ್ಲಿ ಪ್ರವಾಹರಹಿತವಾಗಿ ಮತ್ತು ಬೇಸಗೆಯಲ್ಲಿ ನೀರಿನ ಮಟ್ಟ ಇಳಿಮುಖವಾಗದಂತಿರಬೇಕು.

ಧ್ರುವ ಪ್ರದೇಶದಲ್ಲಿ ಚಳಿಗಾಲದಲ್ಲಿ ನದಿಗಳು ಮತ್ತು ಸರೋವರಗಳು ಹೆಪ್ಪುಗಟ್ಟುವುದರಿಂದ ಜಲಮಾರ್ಗಗಳು ಮುಚ್ಚಿಹೋಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಉಬ್ಬರ–ವಿಳಿತ, ನೀರಿನ ಸೆಳೆತಗಳು ಜಲಸಾರಿಗೆಗೆ ಮಾರಕಗಳು. ಕಟ್ಟೆಗಳ ನಿರ್ಮಾಣ, ನದಿ–ಕಾಲುವೆಗಳ ಉಸ್ತುವಾರಿ ಮತ್ತು ದುರಸ್ತಿಕಾರ್ಯಗಳಿಗೆ ಹೆಚ್ಚಿನ ಹಣ ವ್ಯಯವಾಗುತ್ತದೆ. ಒಳನಾಡಿನ ಜಲಸಾರಿಗೆಯು ನದಿ, ಸರೋವರ ಮತ್ತು ಕಾಲುವೆಗಳ ದಂಡೆಯಲ್ಲಿರುವ ಪ್ರದೇಶಗಳಿಗೆ ಮಾತ್ರ ಸೀಮಿತ. ಇಕ್ಕಟ್ಟಾದ ನದಿ ಪಾತ್ರ, ಕಡಿಮೆ ಆಳ, ತೀವ್ರಗತಿಯಲ್ಲಿ ಹರಿಯುವ ನೀರು ಮತ್ತು ಜಲಪಾತವುಳ್ಳ ನದಿಗಳು ಜಲಸಂಚಾರಕ್ಕೆ

ಯೋಗ್ಯವಾಗಿರುವುದಿಲ್ಲ. ಒಳನಾಡಿನ ಜಲಸಾರಿಗೆ ಹಂಚಿಕೆ ಪ್ರಪಂಚದ ಕೆಲವು ಭಾಗಗಳಲ್ಲಿ ಮಾತ್ರ ಒಳನಾಡಿನ ಜಲಸಾರಿಗೆ ಹಂಚಿಕೆಯಾಗಿದೆ. ಹೆಚ್ಚಾಗಿ ಯುರೋಪ್, ರಷ್ಯ ಮತ್ತು ಉತ್ತರ ಅಮೆರಿಕದಲ್ಲಿ ಕಂಡುಬರುತ್ತದೆ.

ಒಳನಾಡಿನ ಜಲಸಂಚಾರ ಮಾರ್ಗಗಳನ್ನು ಹೊಂದಿರುವ ಪ್ರಪಂಚದ ಪ್ರಮುಖ ರಾಷ್ಟ್ರಗಳೆಂದರೆ ಚೀನ (110,300 ಕಿಮೀ), ರಷ್ಯ (89,089 ಕಿಮೀ), ಬ್ರೆಜಿಲ್ (50,000 ಕಿಮೀ), ಅಮೆರಿಕ ಸ.ಸ. (41,485 ಕಿಮೀ), ಇಂಡೋನೇಷ್ಯ (21,579 ಕಿಮೀ), ಕೊಲಂಬಿಯ (18,140 ಕಿಮೀ), ವಿಯಟ್ನಾಂ (17,702 ಕಿಮೀ), ಭಾರತ (16,180 ಕಿಮೀ), ಕಾಂಗೊ : (15000 ಕಿಮೀ), ಮಯನ್ಮಾರ್ (12,800 ಕಿಮೀ), ಅರ್ಜೆಂಟಿನ (10.950 ಕಿಮೀ), ಬೊಲಿವಿಯಾ (10,000 ಕಿಮೀ), ಪೆರು (8,600 ಕಿಮೀ), ನೈಜೀರಿಯ (8575 ಕಿಮೀ), ಆಸ್ಟ್ರೇಲಿಯ (8,368 ಕಿಮೀ), ಬಾಂಗ್ಲಾದೇಶ (8,046 ಕಿಮೀ), ಮಲೇಷ್ಯ (7,296 ಕಿಮೀ), ಜರ್ಮನಿ (6,740 ಕಿಮೀ), ಫಿನ್ಲೆಂಡ್ (6,245 ಕಿಮೀ) ಮತ್ತು ಫ್ರಾನ್ಸ್ (5,625 ಕಿಮೀ).

ಯುರೋಪ್ : ಈ ಖಂಡದಲ್ಲಿ ಪ್ರಮುಖ ನದಿಗಳು ಮತ್ತು ಕಾಲುವೆಗಳು ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲಿ, ಜನಭರಿತ ನಗರಗಳ ಮೂಲಕ ಹಾದು ಹೋಗುವುದು ಒಂದು ವಿಶೇಷವಾದ ಅಂಶ. ಸರಕು ರವಾನೆ, ಆಮದು ಮತ್ತು ರಫ್ತಿಗೆ ಜಲಮಾರ್ಗಗಳು ಪೂರಕವಾಗಿವೆ. ಪಶ್ಚಿಮ ಯುರೋಪಿನ ರಾಷ್ಟ್ರಗಳಾದ ಜರ್ಮನಿ, ಬೆಲ್ಜಿಯಂ, ನೆದರ್ಲೆಂಡ್ಸ್ ಮತ್ತು ರುಮೇನಿಯಗಳು ಒಳನಾಡಿನ ಜಲಸಾರಿಗೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿವೆ. ಈ ರಾಷ್ಟ್ರಗಳಲ್ಲಿ ರಸ್ತೆ, ರೈಲು ಮತ್ತು ಜಲಸಾರಿಗೆಯ ನಡುವೆ ಪೈಪೋಟಿಗಳಿವೆ.

ಯುರೋಪಿನ ಮಧ್ಯ, ಉತ್ತರ ಮತ್ತು ಪಶ್ಚಿಮ ಭಾಗಗಳು ಅನೇಕ ನದಿಗಳನ್ನೊಳಗೊಂಡಿದೆ. ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ನೌಕಾಯಾನಕ್ಕೆ ಯೋಗ್ಯವಾದ ರೈನ್, ಎಂಸ್, ಓಡರ್ ಹರಿಯುತ್ತವೆ (ಜರ್ಮನಿ). ಸೀನ್ ಮತ್ತು ಲೋರಿ ನದಿಗಳು ಫ್ರಾನ್ಸ್ ದೇಶದಲ್ಲಿ ಹರಿಯುತ್ತವೆ.

ರೈನ್, ರ್ಹೋನ್ ಮತ್ತು ಡ್ಯಾನ್ಯೂಬ್ ವರ್ಷವೆಲ್ಲ ಹರಿಯುವ ನದಿಗಳು. ಇಲ್ಲಿನ ನದಿ ಬಯಲುಗಳಲ್ಲಿ ಅಧಿಕ ಜನಸಾಂದ್ರತೆ, ಕೈಗಾರಿಕೀಕರಣ, ನಗರೀಕರಣ, ಹಿತವಾದ ವಾಯುಗುಣದಿಂದಾಗಿ ಜಲಸಾರಿಗೆಯು ಪೂರಕವಾಗಿ ಅಭಿವೃದ್ಧಿಯಾಗಿದೆ. ರೈನ್ ಪ್ರಮುಖವಾದ ನದಿ, ಈ ನದಿಯು ಮಧ್ಯ ಯುರೋಪಿನ ಸ್ವಿಟ್ಜರ್‌ಲೆಂಡ್, ಜರ್ಮನಿ, ನೆದರ್‌ಲೆಂಡ್ ಮತ್ತು ಫ್ರಾನ್ಸ್ ಭಾಗಗಳಿಗೆ ಜಲಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತಿದೆ. ರ್ಹೋನ್ ಮತ್ತು ರೈನ್ ನದಿಗಳಿಂದ ಸು. 800 ಕಿಮೀ ಉದ್ದವಾದ ಜಲಮಾರ್ಗವನ್ನು ಕಲ್ಪಿಸಿದೆ. ಇದು ಮೆಡಿಟರೇನಿಯನ್ ಸಮುದ್ರದ ರಾಟರ್‌ಡ್ಯಾಂ ಬಂದರಿನಿಂದ ಸ್ವಿಟ್ಜರ್‌ಲೆಂಡಿನ ಬಾಸ್ಲೆವರಿಗೂ ಕಾಲುವೆ ಮಾರ್ಗವನ್ನು ಹೊಂದಿದೆ. ರೈನ್ ಪ್ರವಾಹ ರಹಿತ ನದಿ, ಇದು ರ್‍ಹೂರ್ ಕೈಗಾರಿಕಾ ಪ್ರದೇಶದ ಪ್ರಮುಖ ಜಲಮಾರ್ಗ, ಶೇ. $^1/_2$ದಷ್ಟು ಕೈಗಾರಿಕಾ ವಸ್ತುಗಳು ರೈನ್ ಮಾರ್ಗದಲ್ಲಿ ಸಾಗಿಸಲ್ಪಡುತ್ತದೆ. ಪೆಟ್ರೋಲ್ ಮತ್ತು ಅದರ ಉತ್ಪನ್ನಗಳು, ಆಹಾರ ಪದಾರ್ಥಗಳು, ಮರದ ದಿಮ್ಮಿ, ನ್ಯೂಸ್ ಪ್ರಿಂಟ್, ರಾಸಾಯನಿಕ, ಗಡಿಯಾರಗಳು, ಮರದ ತಿರುಳು ಮತ್ತು ಸಿದ್ಧ ವಸ್ತುಗಳು ಹೊರರಾಷ್ಟ್ರಗಳಿಗೆ ರಫ್ತಾಗುತ್ತವೆ. ಆಮದಾಗುವ ಪದಾರ್ಥಗಳೆಂದರೆ ಕಬ್ಬಿಣದ ಅದಿರು, ಕಲ್ಲಿದ್ದಲು, ರಾಸಾಯನಿಕಗಳು, ಗೊಬ್ಬರ, ಉಕ್ಕಿನ ಪದಾರ್ಥಗಳು ಮತ್ತು ಯಂತ್ರಗಳು.

ಡ್ಯಾನ್ಯೂಬ್, ಮಧ್ಯ ಯುರೋಪಿನ ಪ್ರಮುಖ ನದಿ, ಇದು ಎಂಟು ರಾಷ್ಟ್ರಗಳಿಗೆ ಸಂಪರ್ಕವನ್ನು ಕಲ್ಪಿಸಿದೆ. ಜರ್ಮನಿ, ಆಸ್ಟ್ರಿಯ, ಹಂಗರಿ, ಜೆಕ್, ಸ್ಲಾವಾಕೀಯ, ಯುಗೊಸ್ಲಾವಿಯ, ಬಲ್ಗೇರಿಯ, ರೊಮೇನಿಯ ಮತ್ತು ರಷ್ಯ, ಈ ನದಿಯು 2400 ಕಿಮೀ ಉದ್ದವಿದೆ. ಆದರೆ ಕೇವಲ ಶೇ. 15 ರಷ್ಟು ಸರಕನ್ನು ಮಾತ್ರ ಸಾಗಿಸಲು ಶಕ್ತವಾಗಿದೆ. ಹೆಚ್ಚಿನ ಆಮದು ರಫ್ತುಗಳು ರೊಮೋನಿಯ ಮತ್ತು ಜರ್ಮನಿಗಳ ನಡುವೆ.

ಇತರೆ ಜಲಮಾರ್ಗಗಳೆಂದರೆ, ಮ್ಯಾಂಚೆಸ್ಟರ್ ಹಡಗು ಕಾಲುವೆ. ಇದು ಮ್ಯಾಂಚೆಸ್ಟರ್ ನಿಂದ ಲಿವರ್‌ಪೂಲ್‌ಗೆ, ಅಮ್‌ಸ್ಟರ್ ಡ್ಯಾಂ–ರೈನ್ ಕಾಲುವೆ ಮತ್ತು ಗೋಟ ಕಾಲುವೆ, ಲಂಕಾಷೈರ್ ಹತ್ತಿಗಿರಣಿಗಳ ಅಭಿವೃದ್ಧಿಯಲ್ಲಿ ಮ್ಯಾಂಚೆಸ್ಟರ್ ಜಲಮಾರ್ಗವು ಪ್ರಮುಖ ಪಾತ್ರವಹಿಸಿದೆ. ಗೋಟ ಕಾಲುವೆ ಸ್ಟಾಕ್‌ಹೂಂ ಮತ್ತು ಗೊಟನ್‌ಬರ್ಗ್ ನಡುವೆ ಜಲಸಾರಿಗೆಯನ್ನು ಕಲ್ಪಿಸಿದೆ.

ಉತ್ತರ ಅಮೆರಿಕ: ಈ ಖಂಡದಲ್ಲಿ ಎರಡು ಪ್ರಮುಖ ಒಳನಾಡ ಜಲಸಾರಿಗೆ ವ್ಯವಸ್ಥೆಗಳಿವೆ. 1. ಪಂಚಮಹಾ ಸರೋವರಗಳು (ಸುಪೀರಿಯರ್, ಮಿಷಿಗನ್, ಹುರಾನ್, ಆಂಟೇರಿಯ ಮತ್ತು ಈರಿ). ಇದನ್ನು ಸೈಂಟ್ ಲಾರೆನ್ಸ್ ಮಾರ್ಗ ಎಂದು ಕರೆಯುತ್ತಾರೆ. 2. ಮಿಸಿಸಿಪಿ ಜಲಮಾರ್ಗ.

ಪಂಚಮಹಾ ಸರೋವರ – ಸೇಂಟ್ ಲಾರೆನ್ಸ್ ಮಾರ್ಗ : ಈ ಜಲಮಾರ್ಗ ಪ್ರಪಂಚದ ಪ್ರಸಿದ್ಧ ಜಲಮಾರ್ಗ. ಪಂಚಮಹಾ ಸರೋವರಗಳು 2,46,490 ಚ.ಕಿಮೀ ಜಲಭಾಗವನ್ನು ಹೊಂದಿದೆ. ಸು. 1,57,886 ಚ.ಕಿಮೀ ಜಲ ಸರೋವರ ಭಾಗವು ಅ.ಸಂ.ಸಂಸ್ಥಾನಕ್ಕೆ ಸೇರಿದೆ. ಉಳಿದ 88,604 ಚ.ಕಿಮೀ ಕೆನಡಕ್ಕೆ ಸೇರಿದೆ. ಜಲಮಾರ್ಗವನ್ನು ಎರಡೂ ದೇಶಗಳ ಸಮನ್ವಯ ಒಪ್ಪಂದವೊಂದರ ಪ್ರಕಾರ ವಿವಿಧೋದ್ದೇಶ ಯೋಜನೆಯ ಪ್ರಕಾರ ಅತ್ಯಾಧುನಿಕವಾಗಿ ಸುಧಾರಿಸಲಾಗಿದೆ. ಪಂಚಮಹಾ ಸರೋವರಗಳು, ಸೇಂಟ್ ಲಾರೆನ್ಸ್ ಕಾಲುವೆ ಮಾರ್ಗವನ್ನು ಅಭಿವೃದ್ಧಿಪಡಿಸಿದ ಅನಂತರ ಈ ಮಾರ್ಗದ ಪ್ರಾಮುಖ್ಯತೆ ಹೆಚ್ಚಾಯಿತು.

ಈ ಮಾರ್ಗ ದೊಡ್ಡ ಪ್ರಮಾಣದ ಹಡಗು ಸಂಚಾರಕ್ಕೆ ಅನುಕೂಲವಾಗಿದೆ. ಅಧಿಕ ಪ್ರಮಾಣದ ಸರಕನ್ನು ಕಡಿಮೆ ದರದಲ್ಲಿ ಸಾಗಿಸಲು ಪ್ರಯೋಜನವಾಗಿದೆ. ಕಬ್ಬಿಣ ಗಣಿಗಾರಿಕೆ ಪ್ರದೇಶಗಳಾದ ವಿಸ್ಕಾಂಸಿನ್, ಮಿಷಿಗನ್ ಮೇಲ್ದಂಡೆ, ಕ್ಯೂಬೆಕ್ ಮತ್ತು ಲ್ಯಾಬ್ರಡಾರ್‌ಗಳಿಂದ, ಸರಕು, ಕಬ್ಬಿಣ ಮತ್ತು ಉಕ್ಕಿನ ಉತ್ಪನ್ನಗಳನ್ನು ಅಲ್ಲಿಂದ ಮುಂದೆ ಡೆಟ್ರಾಯಿಟ್‌ಗೆ ರವಾನಿಸುತ್ತದೆ. ಕಲ್ಲಿದ್ದಲು ಅಪಲೇಷಿಯನ್‌ನಿಂದ ಈರಿ ಸರೋವರದ ಮೂಲಕ ಸಾಗಿಸಲ್ಪಡುತ್ತದೆ. ಗೋದಿ, ಸಂಸ್ಕರಿಸಿದ ಆಹಾರ ಪದಾರ್ಥಗಳು ಅ.ಸಂ.ಸಂಸ್ಥಾನ ಮತ್ತು ಕೆನಡದಿಂದ ಸರೋವರ ಮಾರ್ಗವಾಗಿ ಪಶ್ಚಿಮ ಕರಾವಳಿಗೆ ರವಾನೆಯಾಗಿ ಅಲ್ಲಿಂದ ಹೊರರಾಷ್ಟ್ರಗಳಿಗೆ ರಫ್ತಾಗುತ್ತದೆ, ಸುಣ್ಣದ ಕಲ್ಲು, ಕಟ್ಟಡದ ಕಲ್ಲು, ಪೆಟ್ರೋಲ್ ಮತ್ತು ಖನಿಜಗಳು ಕೈಗಾರಿಕಾ ನಗರಗಳಿಗೆ ಸಾಗಿಸಲ್ಪಡುತ್ತವೆ.

ಮಿಸಿಸಿಪಿಯ ಉಪನದಿಗಳಾದ ಒಹಾಯೊ, ಇಲ್ಲಿನಾಯ್ಸ್, ಮಿಸ್ಸೋರಿ ಮತ್ತು ರೆಡ್‌ನದಿಗಳು ಅ.ಸಂ.ಸಂಸ್ಥಾನದ ಪ್ರಮುಖ ಒಳನಾಡಿನ ಜಲಸಾರಿಗೆಯನ್ನು ರೂಪಿಸಿವೆ. ಮಿಸಿಸಿಪಿ ಮತ್ತು ಒಹಾಯೊ ಪಂಚಮಹಾ ಸರೋವರಗಳ ಜೊತೆ ಸಂಪರ್ಕವನ್ನು ಕಲ್ಪಿಸಿವೆ. ಇದು ಸು. 4000 ಕಿಮೀ ಉದ್ದದ ಜಲಮಾರ್ಗದ ಸೌಲಭ್ಯವನ್ನು ಹೊಂದಿದೆ. ಈ ಮಾರ್ಗದಲ್ಲಿ ಸಂಸ್ಕರಿಸಿದ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು, ಕಲ್ಲಿದ್ದಲು, ಕೈಗಾರಿಕಾ ಸಿದ್ಧವಸ್ತುಗಳು ರವಾನೆಯಾಗುತ್ತವೆ.

ದಕ್ಷಿಣ ಅಮೆರಿಕ – ಒಳನಾಡಿನ ಜಲಸಾರಿಗೆಯು ಈ ಖಂಡದಲ್ಲಿ ಭೂಸಾರಿಗೆ ರಹಿತ ಭಾಗಗಳಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ. ಪರ್ವತ ಪ್ರದೇಶ ಹಾಗೂ ದಟ್ಟ ಅರಣ್ಯಗಳನ್ನು ಹೊರತುಪಡಿಸಿ ಒಳನಾಡಿನಲ್ಲಿ ನದಿ ವ್ಯವಸ್ಥೆಯನ್ನು ಹೊಂದಿದೆ. ವಿರಳ ಜನಸಾಂದ್ರತೆ ಹಾಗೂ ಕನಿಷ್ಠ ಸರಕು ಉತ್ಪಾದನೆಗಳಿಂದ ಈ ಖಂಡದಲ್ಲಿ ಒಳನಾಡಿನ ಜಲಸಾರಿಗೆ ಹೆಚ್ಚು ಅಭಿವೃದ್ಧಿ ಹೊಂದಿಲ್ಲ. ಕೆಲವು ಪ್ರಮುಖ ನದಿ ಜಾಲಗಳೆಂದರೆ ಅಮೇಜ಼ಾನ್ ಪ್ಲಾಟ–ಪರಾನ–ಪರಗ್ವೆ ಒರಿನೋಕೋ, ಮ್ಯಾಗ್ಡಲೀನಾ. ಅಮೆಜ಼ಾನ್ ಪ್ರಪಂಚದ ಅತಿ ಉದ್ದವಾದ ನದಿ ಹಾಗು ಅದರ ಮಾರ್ಗದ 6,400 ಕಿಮೀ ಅಮೆಜ಼ಾನ್ ಮತ್ತು ಪ್ಲಾಟಾ – ಪರಾನಾ – ಪರಗ್ವೆ ಜಲಮಾರ್ಗ 1,600 ಕಿಮೀ ನೌಕಾಯಾನಕ್ಕೆ ಯೋಗ್ಯವಾಗಿದೆ. ಬ್ರೆಜಿಲ್, ಬೊಲಿವಿಯ, ಪೆರು ಮತ್ತು ಕೊಲಂಬಿಯ ದೇಶಗಳು ಒಳನಾಡಿನ ಜಲಸಾರಿಗೆಗೆ ಅಮೆಜಾನ್ ನದಿಯನ್ನು ಆಶ್ರಯಿಸಿವೆ. ದಕ್ಷಿಣ ಅಮೆರಿಕ ಖಂಡದಲ್ಲಿ ಪ್ಲಾಟಾ–ಪರಾನ–ಪರಗ್ವೆ ಜಲಮಾರ್ಗ ಸದಾ ಕಾರ್ಯ ನಿರತವಾಗಿರುವಂತಹದು. ಲಾಪ್ಲಾಟ ನದಿವ್ಯವಸ್ಥೆಯು ಬ್ಯೂನಸ್ ಐರೀಸ್ ನಿಂದ ಕೊರುಂಬ–ಬ್ರೆಜಿಲ್‌ವರಿಗೆ ಜಲಮಾರ್ಗವನ್ನು ಹೊಂದಿದೆ. ಪರಗ್ವೆ ನದಿಯು ಪಶ್ಚಿಮ ಬ್ರೆಜಿಲ್ ಮತ್ತು ಪರಗ್ವೆಗಳಿಗೆ ಪ್ರಮುಖ ಜಲಸಾರಿಗೆ ಮಾರ್ಗವಾಗಿದೆ. ಈ ಮಾರ್ಗದ ಮೂಲಕ ರಬ್ಬರ್, ಆಹಾರ ಪದಾರ್ಥಗಳು, ಮರದದಿಮ್ಮಿ, ಮಾಂಸ, ಚರ್ಮ, ಕಾಫಿ, ಪೆಟ್ರೋಲ್, ಸಕ್ಕರೆ ಮತ್ತು ಸಿದ್ಧಪದಾರ್ಥಗಳು ರವಾನೆಯಾಗುತ್ತವೆ.

ಏಷ್ಯ ಖಂಡದ ಒಳನಾಡ ಜಲಸಾರಿಗೆ – ಈ ಖಂಡದಲ್ಲಿ ಜಲಸಾರಿಗೆಯ ಸೌಲಭ್ಯ ಅತ್ಯಲ್ಪ. ಚೀನದ ಯಾಂಗ್–ಟ್ಜೆ–ಸಿಕಿಯಾಂಗ್, ಪಾಕಿಸ್ತಾನದ ಸಿಂಧು ಮತ್ತು ಭಾರತದಲ್ಲಿ ಗಂಗ ಮತ್ತು ಬ್ರಹ್ಮಪುತ್ರ, ಥೈಲೆಂಡ್ ಭಾಗದಲ್ಲಿ ಮಿಕಾಂಗ್ ಮತ್ತು ಮಿನಾಮ್ – ಮಯನ್ಮಾರ್‌ನಲ್ಲಿ ಇರವಾಡಿ, ಒಳನಾಡಿನ ಜಲ ಸಾರಿಗೆಯ ಮಾರ್ಗಗಳನ್ನು ಹೊಂದಿವೆ.

ಯಾಂಗ್–ಟ್ಜೆ–ಸಿಕಿಯಾಂಗ್ ಮತ್ತು ಅದರ ಉಪನದಿಗಳು ಚೀನದ ಮುಕ್ಕಾಲು ಭಾಗದಷ್ಟು ಒಳನಾಡಿನ ಜಲಸಾರಿಗೆಯನ್ನು ಪೂರೈಸುತ್ತಿವೆ. ಯಾಂಗ್–ಟ್ಜೆ–ಸಿಕಿಯಾಂಗ್‌ನ ಪ್ರಮುಖ ಉಪನದಿಗಳು ಹಾನ್, ಹಸಿಯಾಂಗ್ ಮತ್ತು ಟಾನ್. ಈ ಮಾರ್ಗಗಳಲ್ಲಿ ಆಹಾರ ಧಾನ್ಯಗಳು, ಖನಿಜ, ಅರಣ್ಯ ಕಚ್ಚಾ ವಸ್ತುಗಳು ಮತ್ತು ಸಿದ್ಧ ಪದಾರ್ಥಗಳನ್ನು ರವಾನಿಸಲಾಗುತ್ತದೆ. ಚೀನ ದೇಶ 11,030 ಕಿಮೀ ಉದ್ದವಾದ ಜಲಮಾರ್ಗವನ್ನು ಹೊಂದಿದೆ. ಯಾಂಗ್–ಟ್ಜೆ–ಸಿಕಿಯಾಂಗ್ ಚೀನದ ಅತ್ಯಂತ ಮಹತ್ತ್ವವುಳ್ಳ ನದಿ. ಈ ನದಿಯು ಪಶ್ಚಿಮದಿಂದ ಪೂರ್ವಕ್ಕೆ ದೇಶದ ಹೃದಯ ಭಾಗ ಮಾರ್ಗವಾಗಿ ಹರಿಯುತ್ತದೆ. ಈ ನದಿ ಸು. 1,800 ಕಿಮೀ ಉದ್ದವಾದ ಒಳನಾಡಿನ ಜಲಸಾರಿಗೆಯನ್ನು ಒದಗಿಸಿದೆ.

ಏಷ್ಯ ವಾಯವ್ಯ ಭಾಗದ ಒಳನಾಡಿನ ಜಲಸಾರಿಗೆಯನ್ನು ಕಲ್ಪಿಸಿರುವ ನದಿಗಳೆಂದರೆ ಮಿಕಾಂಗ್, ಮೀನಾಂ, ಇರಾವಾಡಿ, ಗಂಗ ಮತ್ತು ಬ್ರಹ್ಮಪುತ್ರ. ನದಿ ಕಣಿವೆ ಪ್ರದೇಶಗಳಲ್ಲಿ ಅಧಿಕ ಜನಸಾಂದ್ರತೆ, ಕೈಗಾರಿಕೆಗಳ ಸ್ಥಾನೀಕರಣ, ಇತರೆ ಸಾರಿಗೆಗಳ ಕೊರತೆ ಹೆಚ್ಚಾಗಿ ಕಂಡುಬರುತ್ತದೆ. ಈ ಭಾಗದಲ್ಲಿ ಸಣ್ಣ ಪ್ರಮಾಣದಲ್ಲಿ ಜಲಸಾರಿಗೆ ಒದಗಿಸುವುದರ ಮೂಲಕ ಸಮುದ್ರ ಮತ್ತು ಒಳನಾಡಿಗೆ ಸಂಪರ್ಕ ಕಲ್ಪಿಸುವುವು. ಪ್ರಮುಖವಾಗಿ ಆಹಾರ ಪದಾರ್ಥಗಳು, ಪೆಟ್ರೋಲಿಯಂ, ಮರದ ದಿಮ್ಮಿ, ಕೈಗಾರಿಕಾ ಸಿದ್ಧ ವಸ್ತುಗಳು ರವಾನೆಯಾಗುತ್ತವೆ.

ಭಾರತದ ನದಿ ವ್ಯವಸ್ಥೆಯ ಜಾಲ ಹಲವಾರು ಪ್ರಾಕೃತಿಕ ನಿಯಮಗಳಿಗೆ ಒಳಪಟ್ಟಿದೆ. ಮಾನ್‌ಸೂನ್ ವಾಯುಗುಣ, ಋತು ಕಾಲಿಕ ವ್ಯತ್ಯಾಸ, ಸಂಚಾರಕ್ಕೆ ಅನಾನುಕೂಲವಾದ ನದಿಮಾರ್ಗಗಳು ಇತ್ಯಾದಿ.

ಜಲಸಂಚಾರಕ್ಕೆ ಅನುಕೂಲವಾದ ನದಿಗಳೆಂದರೆ ಗಂಗ, ಬಹ್ಮಪುತ್ರ, ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ತಪತಿ, ನರ್ಮದ, ಪೆನ್ನಾರ್, ಗೋದಾವರಿ, ಕಾವೇರಿ ನದಿ ಕಾಲುವೆಗಳು ಮತ್ತು ಕೇರಳದ ಪಶ್ಚಿಮ ಕರಾವಳಿ ಕಾಲುವೆಗಳು. ದೇಶದ ಒಳನಾಡಿನ ಜಲಸಾರಿಗೆಯ ಮಾರ್ಗದ ಉದ್ದ ಸು. 16,180 ಕಿಮೀ. ಇದರಲ್ಲಿ 1/5 ರಷ್ಟು ಹಡಗು ಮಾರ್ಗಕ್ಕೆ ಯೋಗ್ಯವಾಗಿದೆ (2495 ಕಿಮೀ).

ಒಳನಾಡಿನ ಜಲಸಾರಿಗೆಯಲ್ಲಿ ನದಿಕಾಲುವೆಗಳು ಪ್ರಾಮುಖ್ಯತೆಯನ್ನು ಹೊಂದಿವೆ. ತಮಿಳುನಾಡು ಮತ್ತು ಆಂಧ್ರಪ್ರದೇಶದ ಬಕ್ಕಿಂಗ್‌ಹ್ಯಾಮ್ ಕಾಲುವೆ, ಒರಿಸ್ಸದ ಡೆಲ್ಟಾಕಾಲುವೆ, ಗೋವದ ಮಾಂಡವಿ ಮತ್ತು ಝುವಾರಿ ಕಾಲುವೆಗಳು ಈ ಸಾಲಿನಲ್ಲಿ ಸೇರುತ್ತವೆ.

ಭಾರತದಲ್ಲಿ ಜಲಸಾರಿಗೆಯನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿಗಳು ಮತ್ತು ವ್ಯಾಪಕವಾದ ರೈಲು ವ್ಯವಸ್ಥೆಯಿಂದ ಜಲಸಾರಿಗೆಯನ್ನು ಕಡೆಗಣಿಸಲಾಗಿದೆ. ಬಕ್ಕಿಂಗ್‌ಹ್ಯಾಮ್ ಕಾಲುವೆಯನ್ನು ಸರಕು ಸಾಗಣಿಕೆಯ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾಯಿತು. ಆದರೆ ರೈಲ್ವೇ ಮಂಡಲಿ ಕಲ್ಲಿದ್ದಲು ಸಂಗ್ರಹಾಗಾರ, ವೇಗವಾಗಿ ಚಲಿಸುವ ರೈಲುಗಳ ಪರಿಚಯ ಹಾಗೂ ದಾಸ್ತಾನು ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸಿದ್ದ ಪರಿಣಾಮವಾಗಿ ಈ ವಲಯದಲ್ಲಿ ಜಲಸಾರಿಗೆ ಹಿಂದುಳಿಯಬೇಕಾಯಿತು. ಬಕ್ಕಿಂಗ್‌ಹ್ಯಾಮ್ ಕಾಲುವೆಯನ್ನು ತಮಿಳುನಾಡಿನ ದಕ್ಷಿಣ ಆರ್ಕಾಟ್‌ನ ಹಿನ್ನೀರು ಕಲ್ಪಿಸುತ್ತದೆ. ಇದು ಪ್ರಪಂಚದ ಕೆಲವೇ ಉದ್ದವಾದ ಜಲಸಂಚಾರ ಮಾರ್ಗಗಳಲ್ಲಿ ಒಂದು. ಇದನ್ನು 1806 ರಲ್ಲಿ ನಿರ್ಮಿಸಲಾಯಿತು. ಈ ಮೇಲೆ ವಿವರಿಸಿರುವ ಕಾರಣಗಳಿಂದ ಪ್ರಸ್ತುತ ಉಪಯೋಗದಲ್ಲಿಲ್ಲ. ಈ ಕಾಲುವೆಯು 425 ಕಿಮೀ ಉದ್ದವಾಗಿದೆ. 256 ಕಿಮೀಗಳು ಆಂಧ್ರ ಪ್ರದೇಶದಲ್ಲಿಯೂ ಮತ್ತು 164 ಕಿಮೀ ತಮಿಳುನಾಡಿನಲ್ಲಿಯೂ ಹಂಚಿಕೆಯಾಗಿದೆ.

ಕೇರಳದಲ್ಲಿ ಸು. 34 ಸಣ್ಣ ಪ್ರಮಾಣದ ನದಿಗಳು ಹರಿಯುತ್ತವೆ. ಅವು ದೇಶಿಯ ದೋಣಿ ಸಂಚಾರಕ್ಕೆ ಯೋಗ್ಯವಾಗಿವೆ. ಕೃಷಿ, ಕೈಗಾರಿಕೆ ಮತ್ತು ಕಚ್ಚಾ ಪದಾರ್ಥಗಳನ್ನು ಹಾಗೂ ಪ್ರಯಾಣಿಕರನ್ನು ಸಾಗಿಸಲು ಅನುಕೂಲವಾಗಿದೆ.

ಕರ್ನಾಟಕದಲ್ಲಿ ಮಂಗಳೂರು ಮತ್ತು ಕಾರವಾರಗಳ ನಡುವೆ ಕೆಲವು ನದಿಗಳಾದ ಕಾಳಿ, ಗಂಗಾವತಿ, ಅಘನಾಶಿನಿ, ಕೊಲ್ಲೂರು, ಸೀತಾ, ಗುರ್ಪುರ ನೇತ್ರಾವತಿಗಳು ಜಲಸಾರಿಗೆಗೆ ಬಳಕೆಯಾಗುತ್ತಿವೆ.

ಒಳನಾಡಿನ ಜಲಸಾರಿಗೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಗಂಗ, ಬಹ್ಮಪುತ್ರ ಮತ್ತು ಉಪನದಿಗಳ ಸಮಿತಿಯನ್ನು 1952 ರಲ್ಲಿ ಸ್ಥಾಪಿಸಲಾಯಿತು. ಈ ಸಮಿತಿಯು 1965 ರಲ್ಲಿ ಒಳನಾಡ ಜಲಸಾರಿಗೆ ಮಂಡಲಿಯ ಜೊತೆ ವಿಲೀನವಾಯಿತು. 1986ರಲ್ಲಿ ಒಳನಾಡಿನ ಜಲಸಾರಿಗೆ ಸಂಸ್ಥೆ ಎಂದು ಸ್ಥಾಪನೆಯಾಯಿತು. ಈ ಸಂಸ್ಥೆಯು ಕೇಂದ್ರ ಸರ್ಕಾರದ ಅಧೀನಕ್ಕೊಳಪಟ್ಟಿರುತ್ತದೆ.

ದೇಶದ ಒಳನಾಡಿನ ಜಲಸಾರಿಗೆಯು ಹಲವು ಹತ್ತು ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದೆ. ನದಿಗಳ ನೀರಿನ ಮಟ್ಟವು ಋತುಕಾಲಿಕವಾಗಿ ವ್ಯತ್ಯಾಸಗೊಳ್ಳುವುದು. ಅಂತರ ರಾಜ್ಯ ನದಿನೀರಿನ ಹಂಚಿಕೆಯ ವಿವಾದಗಳು, ನದಿಕಾಲುವೆಗಳ ಬಿರುಕು ಮತ್ತು ಹೂಳಿನ ಸಮಸ್ಯೆಗಳು ಹಾಗೂ ಉಸ್ತುವಾರಿ ಸಮಸ್ಯೆಗಳು ಪ್ರಮುಖವಾಗಿವೆ.

ಆಫ್ರಿಕ ಖಂಡವು ಉತ್ತಮ ನದಿಜಾಲ ವ್ಯವಸ್ಥೆಯನ್ನು ಹೊಂದಿದೆ. ಆದರೆ ಅವುಗಳ ಉಪಯೋಗವು ತೀರ ಕಡಿಮೆ. ಪ್ರಮುಖ ನದಿಗಳು ಕಾಂಗೋ ನೈಲ್, ನೈಜರ್, ಝಾಂಬೆಸಿ, ಸೆನೆಗಲ್, ಆರೆಂಜ್ ಹಾಗೂ ಲಿಂಪೋಪೋ ನದಿಗಳು. ಈ ನದಿಗಳು ದಟ್ಟವಾದ ಅರಣ್ಯಗಳು, ದುರ್ಗಮ ಬೆಟ್ಟಗುಡ್ಡ ಕಣಿವೆಗಳು ಮತ್ತು ಜನವಿರಳ ವಲಯಗಳಲ್ಲಿ ಹರಿಯುತ್ತವೆ. ಆದುದರಿಂದ ಜಲ ಸಾರಿಗೆಗೆ ಯೋಗ್ಯವಾಗಿಲ್ಲ. ನೈಲ್ ನದಿ ಒಳನಾಡಿನ ಸಂಚಾರಕ್ಕೆ ಯೋಗ್ಯವಾಗಿದೆ. ಈ ನದಿಯು ಮೆಡಿಟರೇನಿಯನ್ ಸಮುದ್ರಕ್ಕೆ ಸಂಪರ್ಕವನ್ನು ಕಲ್ಪಿಸಿದೆ, ಹೀಗಾಗಿ ಸೂಯಜ್ ಕಾಲುವೆಗೆ ನೈಲ್ ನದಿ ಸಂಪರ್ಕ ಹೆಚ್ಚಾಗಿದೆ ಈ ಮಾರ್ಗದಲ್ಲಿ ಕೈಗಾರಿಕಾ ಸಿದ್ಧ ವಸ್ತುಗಳು, ಪೆಟ್ರೋಲ್, ಪೆಟ್ರೋಲಿಯಂ ಉತ್ಪನ್ನಗಳು, ಹತ್ತಿ, ಚರ್ಮ, ಉಣ್ಣೆ, ಖರ್ಜೂರ ಮುಂತಾದ ಪದಾರ್ಥಗಳು ಸಾಗಿಸಲ್ಪಡುತ್ತದೆ.

ರಷ್ಯ–ದೇಶವು ಸು. 4 ಲಕ್ಷ ಕಿಮೀ.ಗಳಷ್ಟು ಒಳನಾಡಿನ ಜಲಸಾರಿಗೆಯನ್ನು ಹೊಂದಿದೆ. ಆದರೆ ಇದರಲ್ಲಿ ನಾಲ್ಕನೆಯ ಒಂದು ಭಾಗವನ್ನು ಮಾತ್ರ ಬಳಸಿಕೊಳ್ಳಲಾಗಿದೆ. ರಷ್ಯದ ಯುರೋಪ್ ಮತ್ತು ಏಷ್ಯಭಾಗದ ನದಿಗಳೆಂದರೆ, ಓಲ್ಗಾ, ಡಾನ್, ನೀಪರ್ ಡ್ವಿನಾ ಮತ್ತು ನಿವಾ ಇವು ಯುರೋಪಿನ ಭಾಗಗಳಾಗಿವೆ. ಏನಿಸಿ ಮತ್ತು ಲಿನಾ ಏಷ್ಯ ಭಾಗದ ನದಿಗಳು. ಈ ನದಿಗಳು ಆರ್ಕ್‌ಟಿಕ್, ಕ್ಯಾಸ್ಪಿಯನ್, ಕಪ್ಪು ಮತ್ತು ಬಾಲ್ಟಿಕ್ ಸಮುದ್ರಗಳನ್ನು ಸೇರುತ್ತವೆ. ರಷ್ಯದ ಶೇ. 78 ರಷ್ಟು ಸರಕು ಸಾಗಾಣಿಕೆ ಭೂ ಸಾರಿಗೆಯನ್ನು ಅವಲಂಬಿಸಿದೆ. ಒಳನಾಡಿನ ಜಲಸಾರಿಗೆಯು ರಷ್ಯದ ಜ಼ಾರ್ ಕ್ರಾಂತಿಗೆ ಮೊದಲು ಪ್ರಾಮುಖ್ಯತೆಯನ್ನು ಪಡೆದಿತ್ತು. ಆನಂತರ ಇದರ ಪ್ರಾಮುಖ್ಯತೆಯು ಇಳಿಮುಖವಾಯಿತು. 1913 ರಲ್ಲಿ ಜಲಸಾರಿಗೆಯು ಕೇವಲ ಶೇ. 25 ರಷ್ಟು ಸರಕನ್ನು ಸಾಗಿಸುವಲ್ಲಿ ಸಫಲವಾಗಿತ್ತು. 1953 ರಲ್ಲಿ ಓಲ್ಗ–ಡಾನ್ ಕಾಲುವೆಯನ್ನು ಪೂರ್ಣಗೊಳಿಸಲಾಯಿತು. ಈ ಕಾಲುವೆಯು ಓಲ್ಗಾ ಮತ್ತು ಕಪ್ಪುಸಮುದ್ರಕ್ಕೆ ಸಂಪರ್ಕವನ್ನು ಕಲ್ಪಿಸಿದೆ. ಓಲ್ಗಾ –ಯೋಜನೆಯಿಂದ ಹರಿದು ಬರುವ ಹೆಚ್ಚಿನ ಪ್ರಮಾಣದ ನೀರು ಮಾಸ್ಕೊ ಹತ್ತಿರವಿರುವ ಮಾಸ್ಕೊವಾ – ಓಲ್ಗಾ ಕಾಲುವೆಗೆ ಸರಬರಾಜಾಗುತ್ತದೆ. ಓಲ್ಗಾ ನದಿಯು ಯೂರಲ್ ಪರ್ವತಗಳ ಪೂರ್ವಕ್ಕೆ ಹರಿಯುತ್ತದೆ. ಇದರ ಉಪನದಿಗಳೂ ಸೇರಿ ಶೇ. 50 ರಷ್ಟು ಸರಕನ್ನು ಈ ಮಾರ್ಗದಲ್ಲಿ ರವಾನಿಸಲಾಗುತ್ತದೆ. ಈ ರಾಷ್ಟ್ರದಲ್ಲಿ ಒಳನಾಡಿನ ಜಲಸಾರಿಗೆಗೆ ಯೋಗ್ಯವಾದ ಕಾಲುವೆಗಳೆಂದರೆ, ಮಾಸ್ಕೊ–ಓಲ್ಗಾ, ಬಾಲ್ಟಿಕ್–ವೈಟ್‌ಸೀ, ಬಾಲ್ಟಿಕ್–ಓಲ್ಗಾ ಕಾಲುವೆಗಳು. ಈ ಮಾರ್ಗದಲ್ಲಿ ಮರದ ದಿಮ್ಮಿ, ಮರದ ತಿರುಳು, ಆಹಾರ ಪದಾರ್ಥಗಳು ಮೀನು, ಕಚ್ಚಾ ಹತ್ತಿ, ಕಲ್ಲಿದ್ದಲು, ಕಬ್ಬಿಣದ ಅದಿರು, ಖನಿಜಗಳು, ಕಟ್ಟಡ ಸಾಮಗ್ರಿ, ಉಕ್ಕಿನ ಪದಾರ್ಥಗಳು ಪೆಟ್ರೋಲ್ ಇತ್ಯಾದಿಗಳು ರವಾನೆಯಾಗುತ್ತವೆ.

ಆಸ್ಟ್ರೇಲಿಯ– ಈ ಖಂಡದಲ್ಲಿ ಹರಿಯುವ ಪ್ರಮುಖ ನದಿಗಳೆಂದರೆ ಮರ್ರೆ ಮತ್ತು ಡಾರ್ಲಿಂಗ್ ಈ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುವವು, ಬೇಸಗೆಯಲ್ಲಿ ನೀರಿನ ಹರಿವು ಕಡಿಮೆಯಾಗುತ್ತದೆ. ಈ ಎರಡು ನದಿಗಳನ್ನು ಹೊರತು ಪಡಿಸಿ ಇನ್ನುಳಿದಂತೆ ಯಾವುದೇ ಜಲಸಂಚಾರಕ್ಕೆ ಯೋಗ್ಯವಾದ ನದಿಗಳು ಈ ಖಂಡದಲ್ಲಿ ಕಂಡುಬರುವುದಿಲ್ಲ. ಆಸ್ಟ್ರೇಲಿಯ ಖಂಡ ಸು. 8368 ಕಿಮೀ ಉದ್ದವಾದ ಜಲಸಂಚಾರ ಮಾರ್ಗಗಳನ್ನು ಹೊಂದಿದೆ.

(ವಿ.ಎಸ್.ಎ.)

**ಒಳನಾಡಿನ ವ್ಯಾಪಾರ:** ಒಂದು ದೇಶದ ಎಲ್ಲೆಯೊಳಗೆ ನಡೆಯುವ ವ್ಯಾಪಾರ (ಇನ್‌ಲೆಂಡ್ ಟ್ರೇಡ್; ಹೋಂ ಟ್ರೇಡ್), ಮಾರುವವ ಕೊಳ್ಳುವವರಿಬ್ಬರೂ ಒಂದೇ ದೇಶದಲ್ಲಿದ್ದು ತಂತಮ್ಮಲ್ಲಿ ನಡೆಸುವ ಈ ವ್ಯಾಪಾರ ಭಾರತದಂಥ ರಾಷ್ಟ್ರದಲ್ಲಿ ಅದರ ವಿದೇಶೀ ವ್ಯಾಪಾರಕ್ಕಿಂತ ಬಹುಪಾಲು ಹೆಚ್ಚಾಗಿರುತ್ತದೆ; ಅಧಿಕ ಪ್ರಾಮುಖ್ಯ ಪಡೆದಿರುತ್ತದೆ.

ಒಳದೇಶದ ವ್ಯಾಪಾರವನ್ನು ಸ್ಥೂಲವಾಗಿ ಒಟ್ಟುವ್ಯಾಪಾರ ಅಥವಾ ಸೋಕು ವ್ಯಾಪಾರ ಮತ್ತು ಚಿಲ್ಲರೆ ವ್ಯಾಪಾರ ಅಥವಾ ಕಿರುಕುಳ ವ್ಯಾಪಾರ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಉತ್ಪಾದಕನಿಂದ ಹೆಚ್ಚು ಮೊತ್ತಗಳಲ್ಲಿ ಪದಾರ್ಥಗಳನ್ನು ಕೊಂಡು ಅಥವಾ ಸಂಗ್ರಹಿಸಿ ಅವನ್ನು ಚಿಲ್ಲರೆ ವ್ಯಾಪಾರಿಗಳಿಗೆ ಮಾರುವುದು ಒಟ್ಟುವ್ಯಾಪಾರಿಯ ಮುಖ್ಯ ಕಾರ್ಯಭಾರ (**ನೋಡಿ– ಒಟ್ಟು–ವ್ಯಾಪಾರಿ**). ಅನುಭೋಗಿಯ ಬಯಕೆಗಳನ್ನು ಪೂರೈಸಲು ನಿರತವಾದ ಅರ್ಥವ್ಯವಸ್ಥೆಯ ಸರಪಳಿಯಲ್ಲಿ ಚಿಲ್ಲರೆ ವ್ಯಾಪಾರಿಯೇ ಕೊನೆಯ ಕೊಂಡಿ. ಅನುಭೋಗಿಯ ಅಗತ್ಯಗಳನ್ನು ನಿರೀಕ್ಷಿಸಿ ಅವುಗಳ ಪೂರೈಕೆಗಾಗಿ ಸರಕುಸೇವೆಗಳನ್ನು ಸಿದ್ಧವಾಗಿಟ್ಟುಕೊಂಡಿದ್ದು ಸರಬರಾಜು ಮಾಡುವುದು ಇವನ ಕಾರ್ಯಭಾರ. ಸರಕನ್ನು ಹೊತ್ತು ತರುವವನ ಸಣ್ಣ ವ್ಯಾಪಾರದಿಂದ ಹಿಡಿದು ಬಗೆಬಗೆಯ ಪದಾರ್ಥಗಳನ್ನು ಸಂಗ್ರಹಿಸಿ ಮಾರಾಟ ಮಾಡುವ ಸಕಲಸರಕಿನ ಅಂಗಡಿಯವರೆಗೆ ಚಿಲ್ಲರೆ ವ್ಯಾಪಾರ ವೈವಿಧ್ಯಮಯವಾದದ್ದು, (**ನೋಡಿ– ಚಿಲ್ಲರೆ–ವ್ಯಾಪಾರಿ**) ಉತ್ಪಾದಕನಿಗೂ ಅನುಭೋಗಿಗೂ ನಡುವೆ ನಾನಾ ಬಗೆಯ ಮಧ್ಯವರ್ತಿಗಳೂ (ಮಿಡಲ್ ಮೆನ್) ವ್ಯವಹಾರ ನಡೆಸುತ್ತಾರೆ.

(ಪಿ.ವಿ.ಎನ್.)

**ಒಳಪಟ್ಟು ಕಟ್ಟಡ:** ಕಟ್ಟಡದ ಉದ್ದದಲ್ಲೂ ಅಡ್ಡದಲ್ಲೂ ನಿರ್ದಿಷ್ಟ ಅಂತರಗಳಲ್ಲಿ ಕಂಬಗಳನ್ನು ನಿಲ್ಲಿಸಿ ಅವನ್ನು ತೊಲೆಗಳಿಂದ ಸೇರಿಸಿ ಮಾಡುವ ರಚನೆ (ಫ್ರೇಮ್ಡ್ ಸ್ಟ್ರಕ್ಚರ್). ಕಂಬಗಳನ್ನು ಮತ್ತು ತೊಲೆಗಳನ್ನು ಒಂದು ಅಂತಸ್ತಿನಿಂದ ಮತ್ತೊಂದು ಅಂತಸ್ತಿಗೆ ಏರಿಸಿ ಅನೇಕ ಅಂತಸ್ತುಗಳಿರುವ ಕಟ್ಟಡಗಳನ್ನು ಕಟ್ಟಬಹುದು. ಇಂಥ ಅಂತಸ್ತುಗಳು 6–120ರ ವರೆಗೂ ಇರುವುದುಂಟು. ಆಳತೆಯ ದೃಷ್ಟಿಯಿಂದ ಆರು ಅಂತಸ್ತುಗಳಿಗಿಂತ ಕಡಿಮೆ ಇರುವ ಕಟ್ಟಡಗಳು ಲಾಭದಾಯಕವಲ್ಲ.

ಕಂಬಗಳನ್ನು ಪ್ರಬಲಿತ ಕಾಂಕ್ರೀಟಿನಿಂದ ಕಟ್ಟುತ್ತಾರೆ. ತೊಲೆಗಳನ್ನು ಈ ಕಂಬಗಳ ಮೇಲೆ ಅಳವಡಿಸಿದಾಗ ಕಟ್ಟಡದ ಹಂದರದ ನಿರ್ಮಾಣ ಪೂರ್ಣವಾಗುತ್ತದೆ. ಅಂತಸ್ತುಗಳ ಮತ್ತು ಗೋಡೆಗಳ ಭಾರವನ್ನು ತೊಲೆಗಳು ಈ ಕಂಬಗಳಿಗೆ ಸಾಗಿಸಿ ಅವುಗಳ ಮೂಲಕ ಭೂಮಿಗೆ ವರ್ಗಾಯಿಸುತ್ತವೆ. ಇಂಥ ಕಟ್ಟಡದ ಒಂದು ವೈಶಿಷ್ಟ್ಯ ಕಂಬ ಹಾಗೂ ತೊಲೆಗಳಲ್ಲಿಯೇ ಇದರ ಪೂರ್ಣ ಭಾರ ವಿತರಣೆಗೊಂಡಿರುವುದು. ಈ ಕಾರಣದಿಂದ

ಬೆಂಗಳೂರಿನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ನೂತನ ಕಟ್ಟಡ. ಬಹು ಸೌಧಗಳನ್ನುಳ್ಳ ಇದು ಒಳಪಟ್ಟು ಕಟ್ಟಡಕ್ಕೆ ಯುಕ್ತ ನಿದರ್ಶನ

ಗೋಡೆಗಳ ದಪ್ಪ ಸಾಂಪ್ರದಾಯಿಕ ಕಟ್ಟಡಗಳ ಗೋಡೆಗಳಿಗಿಂತ (ಇಲ್ಲಿ ಇವೇ ಭಾರವನ್ನು ಹೊರಬೇಕಾದುವು) ಕಡಿಮೆ ಇರುತ್ತದೆ. ಹೀಗಾಗಿ ಕಟ್ಟಡದ ಒಳಗಿನ ಜಾಗ ಹೆಚ್ಚು ದೊರೆತು ಲಾಭವಾಗುವುದು. ಅಲ್ಲದೆ ಬೇಕೆಂದಾಗ ಯಾವ ಗೋಡೆಯನ್ನಾಗಲಿ ತೆಗೆದುಬಿಟ್ಟರೂ ಕಟ್ಟಡಕ್ಕೆ ಯಾವ ತೊಂದರೆಯೂ ಆಗದು.

ಒಳಪಟ್ಟು ಕಟ್ಟಡದ ಭಾರ ಎಲ್ಲ ಕಂಬಗಳ ಮೂಲಕ ಭೂಮಿಗೆ ಸರಿಸಮಾನವಾಗಿ ಹಂಚಿಹೋಗುವುದರಿಂದ ಈ ಕಟ್ಟಡಕ್ಕೆ ವಿಶೇಷ ಭದ್ರತೆ ಒದಗುತ್ತದೆ. ಬಿರುಗಾಳಿ ಮುಂತಾದ ಬಾಹ್ಯ ಬಲಗಳ ಪ್ರಹಾರ, ಭೂಕಂಪನ ಮುಂತಾದವುಗಳಿಂದ ಉಂಟಾಗುವ ನೆಲದ ಅದಿರುವಿಕೆ–ಇವುಗಳಿಂದ ಕಟ್ಟಡಕ್ಕೆ ಸಂಭವಿಸುವ ಅಪಾಯ ಅತ್ಯಲ್ಪ. ಆದ್ದರಿಂದ ಭೂಕಂಪನದ ಸಾಧ್ಯತೆಯಿರುವ ಸ್ಥಳಗಳಲ್ಲಿ, ನಿವೇಶನದ ಬೆಲೆ ಹೆಚ್ಚು ಇರುವ ಮಹಾನಗರಗಳಲ್ಲಿ, ಒಳಪಟ್ಟು ಕಟ್ಟಡಗಳ ನಿರ್ಮಾಣ ಪ್ರಯೋಜನಕಾರಿ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ಅದರಲ್ಲೂ ಅಮೆರಿಕದಲ್ಲಿ ಬಹಳ ಹಿಂದಿನಿಂದಲೂ ಇಂಥ ಕಟ್ಟಡಗಳನ್ನು ಕಟ್ಟುತ್ತ ಬಂದಿದ್ದಾರೆ. ಈಚೆಗೆ ಬೆಂಗಳೂರು, ಚೆನ್ನೈ, ಮುಂಬೈ, ಕೋಲ್ಕತ್ತ, ಚಂಡೀಘರ್, ದೆಹಲಿ ಮುಂತಾದ ಮಹಾನಗರಗಳಲ್ಲಿ ಇವುಗಳ ಬಳಕೆ ಸಾಧಾರಣವಾಗುತ್ತಿದೆ, ಬೆಂಗಳೂರಿನಲ್ಲಿ ಕೆಂಪೇಗೌಡ ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಕಟ್ಟಡ, ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯಲ್ಲಿರುವ 106ಮೀ ಎತ್ತರದ 24 ಅಂತಸ್ತಿನ ಯುಟಿಲಿಟಿ ಬಿಲ್ಡಿಂಗ್ ಈ ಮಾದರಿಯ ಕಟ್ಟಡಕ್ಕೆ ಒಳ್ಳೆಯ ನಿದರ್ಶನ
**ನೋಡಿ: ಗಗನಚುಂಬಿ ಕಟ್ಟಡಗಳು.** (ಜಿ.ಟಿ.ಜಿ.; ಎಂ.ಜಿ.ಎಸ್.)

**ಒಳಪೊರೆ:** ಅಂಗರಚನಾವಿಜ್ಞಾನದಲ್ಲಿ, ಗುಂಡಿಗೆ, ರಕ್ತನಾಳಗಳು, ಹಾಲು ರಸನಾಳಗಳ ಒಳಗಿನ, ಚಪ್ಪಟೆಯಾದ ಸರಳ ಜೀವಕಣಗಳಿಂದಾದ ಪದರ (ಎಂಡೊತೀಲಿಯಂ)ಕ್ಕೆ ಒಳಪೊರೆ ಎನ್ನುತ್ತಾರೆ. ಆದರೆ ಕಣ್ಣಿನ ಮುಂಗೋಣೆ, ಎದೆಗೂಡು, ಗುಂಡಿಗೆಸುತ್ತು ಪೊರೆ, ಒಡಲುಗಳ ಒಳಗಿನ ಪೊಳ್ಳುಗಳ ಒಳಗಿನ ಪೊರೆಗೂ ಒಳಪೊರೆ ಎನ್ನುವುದು ವಾಡಿಕೆ. ಸಾಮಾನ್ಯವಾಗಿ ಇದು ಹಗುರಿನ ಮೇಲುಪೊರೆಯನ್ನು (ಸ್ಕ್ವೇಮಸ್ ಎಪಿತೀಲಿಯಂ) ಹೋಲುವುದಾದರೂ ಪಿಂಡದ ವಿಕಾಸದಲ್ಲಿ ಇವೆರಡೂ ಬೇರೆ ಮೂಲಗಳ ಪೊರೆಗಳಿಂದ ಏಳುತ್ತವೆ. *

**ಒಳಮಾಳಿಗೆ:** ಮಾಳಿಗೆಯ ಒಳಭಾಗಕ್ಕೆ ಈ ಹೆಸರಿದೆ (ಸೀಲಿಂಗ್), ಒಳ ಎಂದರೆ ಮನೆಯ ಒಂದು ಕೊಠಡಿಯಲ್ಲಿ ನಿಂತು ಮೇಲೆ ನೋಡಿದರೆ ಕಾಣುವ ಸೂರಿನ ಒಳಭಾಗ ಎಂದರ್ಥ. ಎಂದರೆ ಪೂರ್ವಕಾಲದಲ್ಲಿ ಮರದ ತೀರುಗಳನ್ನೆಳೆದು ಅವುಗಳ ಮೇಲೆ ಮರದ ಮಾಡನ್ನು ಕಟ್ಟುತ್ತಿದ್ದಾಗ ತೀರುಗಳು ಒಳಗಿನಿಂದ ಕಾಣದ ಹಾಗೆ ಮುಚ್ಚುವುದಕ್ಕಾಗಿ ಒಳಮಾಳಿಗೆಗಳನ್ನು ಮಟ್ಟವಾಗಿ ಮರದ ಹಲಗೆಗಳಿಂದ ಮಾಡುತ್ತಿದ್ದರು. ಈಚೆಗೆ ಉಕ್ಕಿನ ಸರಕಟ್ಟುಗಳಿಂದ ಮಾಡಿದ ಮಾಡಿನ ಕೆಳಗೂ ಇಂಥ ಒಳಮಾಳಿಗೆಗಳು ಅವಶ್ಯವಾಗುತ್ತಿವೆ. ಇವು ಕೇವಲ ಉಪಯೋಗಕ್ಕಾಗಿ ಮಾಡಿದ ಸರಳವಾದ ಒಳಮಾಳಿಗೆಗಳು. ಪುರಾತನ ಕಾಲದಿಂದಲೂ ದೇವಾಲಯಗಳಲ್ಲಿಯೂ ಅರಮನೆಗಳಲ್ಲಿಯೂ ಒಳಮಾಳಿಗೆಗೆ ಬಣ್ಣ ಬಳಿದೋ ಇಲ್ಲವೆ ನಯವಾದ ಶಿಲ್ಪದ ಆಕೃತಿಗಳನ್ನು ಕಲ್ಲಿನಿಂದ ಕೊರೆದು ನಿಲ್ಲಿಸಿಯೋ ಬಗೆಬಗೆಯಾಗಿ ಅಲಂಕಾರ ಮಾಡುವ ವಾಡಿಕೆ ಇದೆ. ಈಜಿಪ್ಟಿನಲ್ಲಿ ಥೀಬ್ಸ್ ಮೊದಲಾದ ಕಡೆಗಳಲ್ಲಿ ಐಗುಪ್ತ ದೇವಾಲಯಗಳಲ್ಲಿಯೂ



ತೇಜಪಾಲ ದೇವಾಲಯದ ಒಳಮಾಳಿಗೆಯ ಅಲಂಕರಣ. ಪ್ರ.ಶ. 13ನೆಯ ಶತಮಾನ. ಅಬು ಪರ್ವತ ರಾಜಸ್ಥಾನ

ಗೋರಿಗಳಲ್ಲಿಯೂ ಆಕಾಶದ ಪ್ರತೀಕವಾಗಿ (ಸಿಂಬಲ್) ಒಳಮಾಳಿಗೆಯನ್ನು ನಿರ್ಮಿಸಿದ್ದಾರೆ. ಯವನರು ಅಥೆನ್ಸಿನಲ್ಲಿ ದೇವಸ್ಥಾನಗಳ ಮುಖಮಂಟಪಗಳ ಮೇಲೆ ಅಮೃತಶಿಲೆಯ ಒಳಮಾಳಿಗೆಗಳಲ್ಲಿ ಗೋಡೆಗಳ ಅಂಚಿನಲ್ಲಿ ಗೋಲು ಕೆಲಸವನ್ನು ಮಾಡಿ, ನಡುವಿನಲ್ಲಿ ಎತ್ತರಿಸಿದ ಪುಟೀಪುಗಳಿಂದ ಅಲಂಕರಿಸುತ್ತಿದ್ದರು. ರೋಮನರ ಕಾಲದಲ್ಲಿ ಮನೆಗಳಲ್ಲಿಯೂ ಒಳಮಾಳಿಗೆಗಳಿಗೆ ಲಕ್ಷಣವಾಗಿ ಬಣ್ಣ ಹಾಕುತ್ತಿದ್ದರು.

ಮೌಂಟ್ ಅಬು (ರಾಜಸ್ತಾನ): ಒಳಮಾಳಿಗೆಯ ಅಲಂಕರಣ, ಜೈನ ದೇವಾಲಯ

ಭಾರತದ ಪುರಾತನ ದೇವಾಲಯಗಳಲ್ಲಿ ಎಲ್ಲೆಲ್ಲಿಯೂ ಕಾಣಬರುವ ಒಳಮಾಳಿಗೆಗಳು ಮೂರ್ತಿ ಹಾಗೂ ಚಿತ್ರ ಶಿಲ್ಪದಿಂದ ತುಂಬಿ ವಿಶಿಷ್ಟವಾದ ಕಲಾಕೃತಿಗಳಾಗಿವೆ. ಇಲ್ಲಿ ಯಾವ ಬಣ್ಣವನ್ನೂ ಉಪಯೋಗಿಸಿಲ್ಲ. ಹೊಯ್ಸಳ ಶೈಲಿಯ ದೇವಾಲಯಗಳಲ್ಲಿ ಹೊರಗೋಡೆಗಳ ಮೇಲೂ ಕಂಬಗಳ ಮೇಲೂ ಕಾಣಬರುವ ಅನ್ಯಾದೃಶವಾದ ಶಿಲ್ಪಕೌಶಲವೇ ಈ ಒಳಮಾಳಿಗೆಗಳ ಮೇಲೂ ಕಾಣಬರುತ್ತದೆ. ಚಿತ್ರವಿಚಿತ್ರವಾದ ಕಂಬಗಳ ಮೇಲೆ ಕೆತ್ತನೆಯ ಕೆಲಸ ಮಾಡಿದ ತೊಲೆಗಳು, ನಾಲ್ಕು ತೊಲೆಗಳ ನಡುವಣ ಅಂಕಣಗಳಲ್ಲಿ ಬಗೆಬಗೆಯ ಸಂವಿಧಾನಗಳು–ಹೀಗೆ ಒಳಮಾಡುಗಳ ಕೆಳಭಾಗದಲ್ಲಿ ಕಾಣುವ ಕಲೆಯ ವೈವಿಧ್ಯ ಆಶ್ಚರ್ಯಕರವಾಗಿದೆ. ಬೇಲೂರಿನ ಚನ್ನಕೇಶವ ದೇವಾಲಯದ ಹಜಾರದ ಒಳಮಾಳಿಗೆಗಳಲ್ಲಿ ಒಂದೊಂದು ಅಂಕಣದಲ್ಲಿ ಒಂದೊಂದು ಬಗೆಯ ಶಿಲ್ಪಕಲೆಯ ವಿನ್ಯಾಸವನ್ನು ಕಾಣಬಹುದು. ಗರ್ಭಗುಡಿಯ ಮುಂದಿನ ನಡುವಣ ಅಂಕಣದ

ಒಳಮಾಳಿಗೆಯಿಂದ ಕೆಳಕ್ಕೆ ಮಧ್ಯದಲ್ಲಿ ಕಲ್ಲಿನ ದಿಂಡನ್ನು ಇಳಿಯಬಿಟ್ಟು ಅದರ ಸುತ್ತಲೂ ಅಲ್ಲದೆ ನಡುವೆಯೂ ವಿಗ್ರಹಗಳನ್ನು ಕೊರೆದಿದ್ದಾರೆ. ಈ ಲಂಬಕದ ಕೆಳಮುಖದಲ್ಲಿ ನಯವಾಗಿ ದೇವತಾ ವಿಗ್ರಹಗಳನ್ನು ಬಿಡಿಸಿದ್ದಾರೆ. ಇದೇ ರೀತಿಯ ಅಲಂಕಾರವನ್ನು ಹಳೇಬೀಡು, ಸೋಮನಾಥಪುರ ಮೊದಲಾದ ಕಡೆಗಳಲ್ಲಿ ಇರುವ ದೇವಾಲಯಗಳ ಒಳಮಾಡುಗಳಲ್ಲೂ ಕಾಣಬಹುದು.

ಯುರೋಪಿನ ಗಾಥಿಕ್ ಚರ್ಚುಗಳಲ್ಲಿ ಅಡ್ಡತೊಲೆಗಳ ಕೆಳಗಡೆ ವರ್ಣರಂಜಿತವಾದ ನಯಗೆಲಸವನ್ನು ಮಾಡುತ್ತಿದ್ದರು. ಇಟಲಿಯ ಕಲೆಯ ಪುನರುಜ್ಜೀವನದ ಕಾಲದ ಶಿಲ್ಪಿಗಳು ನಯಗಾರೆಯಿಂದ ರಮಣೀಯವಾದ ಮಾದರಿಗಳಲ್ಲಿ ಒಳಮಾಳಿಗೆಗಳನ್ನು ಮಾಡಿ ಮನೋಹರವಾದ ಬಣ್ಣಗಳಿಂದ ಅಲಂಕರಿಸುತ್ತಿದ್ದರು. ಈ ಒಳಮಾಳಿಗೆಗಳಲ್ಲಿ ಮೂರು ನಮೂನೆಗಳನ್ನು ಕಾಣಬಹುದು. ಒಂದು ನಮೂನೆಯಲ್ಲಿ ಚೌಕವಾದ, ಎಂಟು ಮೂಲೆಗಳ, ಇಲ್ಲವೆ ಗುಂಡಾದ ಉಬ್ಬಾದ ಪುಟೀಪುಗಳನ್ನು ಮಾಡಿ ಅಂಚುಗಳಲ್ಲಿ ವಿಶೇಷವಾಗಿ ಅಲಂಕಾರ ಮಾಡುತ್ತಿದ್ದರು. ಎರಡನೆಯ ನಮೂನೆಯಲ್ಲಿ ಕಮಾನು ಚಾವಣಿಯನ್ನು (ವಾಲ್ಟ್) ಕಟ್ಟಿ ನಡುವೆ ಚಿತ್ರಗಳಿಂದ ತುಂಬುತ್ತಿದ್ದರು. ಮೂರನೆಯ ನಮೂನೆ ವೆನಿಸ್ ನಗರದ ವಿಶೇಷ ರಚನೆ. ಅಲ್ಲಿ ಒಳಮಾಳಿಗೆ ಒಂದು ಚೌಕಟ್ಟನ್ನು ಹಾಕಿದ ಚಿತ್ರದ ಹಾಗಿತ್ತು. ರ್‍ಯಾಫೆಲ್, ವೆರೋನೀಸ್ ಮೊದಲಾದ ಪ್ರಖ್ಯಾತ ಚಿತ್ರಗಾರರು ಅರಮನೆಗಳ ಒಳಮಾಳಿಗೆಗಳಲ್ಲಿ ಚಿತ್ರಗಳನ್ನು ಬರೆಯುತ್ತಿದ್ದರು. ಇಂಗ್ಲೆಂಡಿನಲ್ಲಿ ವೈಟ್‌ಹಾಲಿನ ಭೋಜನ ಶಾಲೆಯ ಮಾಳಿಗೆಗೆ ರ್‍ಯೂಬಿನ್ಸ್ ಈ ಬಗೆಯ ಅಲಂಕಾರವನ್ನು ಮಾಡಿದ. ಬಣ್ಣಬಣ್ಣದ ಎಲೆಗಳು ಮತ್ತು ಹೂಗಳಿಂದ ಅಲಂಕೃತವಾದ ನಯಗಾರೆಯ ಒಳಮಾಳಿಗೆಗಳು ಇಂಗ್ಲೆಂಡಿನಲ್ಲಿ ಸಾಮಾನ್ಯವಾಗಿದ್ದವು. ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ನೆಬ್ರಾಸ್ಕ ಸಂಸ್ಥಾನದ ರಾಜಧಾನಿಯಲ್ಲಿ ಒಳಮಾಳಿಗೆಗಳಿಗೆ ಬಣ್ಣಗಳನ್ನು ಹಾಕಿ ಅಲಂಕಾರ ಮಾಡಿದ್ದಾರೆ.

ಆಧುನಿಕ ನಿರ್ಮಾಣ ಕಲೆಯಲ್ಲಿ ಒಳಮಾಳಿಗೆಗಳು ಬಹಳ ಸರಳವಾಗುತ್ತವೆ. ಪ್ರಚಲಿತ ಕಾಂಕ್ರೀಟಿನ ಮಟ್ಟವಾದ ಮಾಡು ಬಂದ ಮೇಲಂತೂ ಪ್ರತ್ಯೇಕವಾದ ಒಳಮಾಡೇ ಇಲ್ಲವಾಗಿದೆ. ಮಾಳಿಗೆಯ ಅಂಚಿನಲ್ಲಿ ತೆಳುವಾದ ಕಾರ್ನೀಸ್, ನಡುವೆ ಕೊಂಚ ಬಣ್ಣದ ವಿನ್ಯಾಸ ಇಷ್ಟರಲ್ಲಿ ಒಳಮಾಳಿಗೆಯ ಅಲಂಕಾರ ಮುಕ್ತಾಯವಾಗುತ್ತಿದೆ. ಇದಕ್ಕೆ ಬದಲಾಗಿ ಕೊಠಡಿಗಳ ಒಳಗೋಡೆಗಳ ಮೇಲೂ ಮನೆಯ ಹೊರಭಾಗದ ಗೋಡೆಯ ಮೇಲೂ ಬಣ್ಣಗಳಿಂದ ಮಾಡುವ ಅಲಂಕಾರ ರೂಢಿಗೆ ಬರುತ್ತಿದೆ. (ಎಚ್.ಸಿ.ಕೆ.; ಎಂ.ಜಿ.ಎಸ್.)

**ಒಳವಕ್ಕೋಡು:** ಕೇರಳ ರಾಜ್ಯದ ಪಾಲ್‌ಘಾಟ್ ಜಿಲ್ಲೆಯಲ್ಲಿ ಪಾಲ್‌ಘಾಟಿನ ಉತ್ತರಕ್ಕೆ 4.8 ಕಿಮೀ ದೂರದಲ್ಲಿ ಕಣಿವೆಯಲ್ಲಿರುವ ಒಂದು ಸಣ್ಣ ಪಟ್ಟಣ. ದಕ್ಷಿಣ ರೈಲ್ವೆಯ ಒಳವಕ್ಕೋಡು ವಿಭಾಗದ ಕೇಂದ್ರ ಕಾರ್ಯಸ್ಥಾನ. ಮದ್ರಾಸು–ಮಂಗಳೂರು ಮಾರ್ಗವೂ ಪಾಲ್‌ಘಾಟ್ ಕವಲು ಮಾರ್ಗವೂ ಇಲ್ಲಿ ಸಂಧಿಸುತ್ತವೆ. ನೀರಾವರಿಯ ಉದ್ದೇಶದಿಂದ ನಿರ್ಮಿಸಲಾಗಿರುವ ಮಲಮ್‌ಪುಷಾ ಕಟ್ಟೆ ಇರುವುದು ಇದರ ಬಳಿಯಲ್ಲೆ. ಒಳವಕ್ಕೋಡಿನಿಂದ ರೈಲಿನ ಮೂಲಕ ಹೆಂಚು, ಮರದ ದಿಮ್ಮಿ ಮುಂತಾದವು ಹೊರಕ್ಕೆ ಸಾಗುತ್ತವೆ. (ಎಸ್.ಎ.)

**ಒಳಸಂಚು:** ನ್ಯಾಯಬಾಹಿರವಾದ ಕಾರ್ಯವೊಂದನ್ನು ಮಾಡಲೋ ನ್ಯಾಯಬಾಹಿರ ಮಾರ್ಗದಿಂದ ನ್ಯಾಯವಾದ ಉದ್ದೇಶವೊಂದನ್ನು ಸಾಧಿಸಲೋ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ತಮ್ಮಲ್ಲೇ ಮಾಡಿಕೊಂಡ ಒಪ್ಪಂದ (ಕನ್ಸ್‌ಪಿರಸಿ). ನ್ಯಾಯಾಲಯಗಳಾಗಲಿ ವಿಧಾನ ಮಂಡಲಗಳಾಗಲಿ ಅಪರಾಧದ ಒಳಸಂಚನ್ನು (ಕ್ರಿಮಿನಲ್ ಕನ್ಸ್‌ಪಿರಸಿ) ಕುರಿತ ನಿಷ್ಕೃಷ್ಟ ವ್ಯಾಖ್ಯೆ ನೀಡಿಲ್ಲ. ತಕ್ಸೀರು ಅಥವಾ ಅಪರಾಧ (ಕ್ರಿಮಿನಲ್) ಕಾಯಿದೆಯ ಕ್ಷೇತ್ರದಲ್ಲಿ ಇದು ಸ್ಫುಟವಾಗಿ ಮೂಡಿಲ್ಲ.

ಒಳಸಂಚಿಗೆ ಸಂಬಂಧಿಸಿದ ಕಾನೂನು ಭಾರತೀಯ ದಂಡ ಸಂಹಿತೆಯ 34 ಮತ್ತು 121ಎ ಪ್ರಕರಣಗಳಲ್ಲಿ ಅಂತರ್ಗತವಾಗಿದೆ. ಪ್ರಮುಖವಾಗಿ ಐದನೆಯ ಭಾಗದಲ್ಲಿರುವ 107ನೆಯ ಪ್ರಕರಣದಲ್ಲಿ ದುಷ್ಪ್ರೇರಣೆಯ (ಅಬೆಟ್‌ಮೆಂಟ್) ಎರಡನೆಯ ರೂಪವನ್ನು ವಿವರಿಸುವ ಸಂದರ್ಭದಲ್ಲಿ ಒಳಸಂಚಿನ ವಿಚಾರ ಬಂದಿದೆ. 107ನೆಯ ಪ್ರಕರಣದ ಪ್ರಕಾರ ಅಪರಾಧಿಗೂ (ಕ್ರಿಮಿನಲ್) ಅಪರಾಧಕ್ಕೂ ಬಹಳ ಹತ್ತಿರದ ಸಂಬಂಧ ಇರಬೇಕಾಗುವುದರಿಂದ 1913ರ ಅಪರಾಧನ್ಯಾಯದ ತಿದ್ದುಪಡಿ ಕಾಯಿದೆ ಭಾರತೀಯ ದಂಡಸಂಹಿತೆಗೆ 5ಎ ಎಂಬ ಪ್ರಕರಣವನ್ನು ಸೇರಿಸಿ 120ಎ ಮತ್ತು 120ಬಿ ಪ್ರಕರಣಗಳನ್ನು ಜಾರಿಗೆ ತಂದಿತು. 120ಎ ಪ್ರಕರಣ ಅಪರಾಧದ (ತಕ್ಸೀರು) ಒಳಸಂಚು ಎಂಬ ವಿಶಿಷ್ಟ ಅಪರಾಧವನ್ನು ಸೃಷ್ಟಿಸಿದೆ. 120ಬಿ ಅದನ್ನು ಮಾಡಿದವರಿಗೆ ವಿಧಿಸಬೇಕಾದ ಶಿಕ್ಷೆಯನ್ನು ಹೇಳಿದೆ. ಈ ಪ್ರಕರಣಗಳಿಂದ ಇಂಗ್ಲಿಷ್ ಮತ್ತು ಭಾರತೀಯ ಕಾನೂನುಗಳನ್ನು ಈ ವಿಚಾರದಲ್ಲಿ ಸರಿಸಮಾನಗೊಳಿಸಲು ಪ್ರಯತ್ನಿಸಲಾಗಿದೆ. ಆದರೂ ಭಾರತದಲ್ಲಿಯ ಒಳಸಂಚಿನ ಕಾನೂನಿಗೂ ಇಂಗ್ಲಿಷ್ ಕಾನೂನಿಗೂ ಇನ್ನೂ ಭೇದವಿದೆ.

ಇಬ್ಬರು ಅಥವಾ ಹೆಚ್ಚು ಜನ ಯಾವುದಾದರೂ ಒಂದು ಕಾನೂನುಬಾಹಿರವಾದ ಕಾರ್ಯವನ್ನು, ಅಥವಾ ಕಾನೂನುಬಾಹಿರ ಮಾರ್ಗದ ಮೂಲಕ ಕಾನೂನುಬಾಹಿರವಲ್ಲದ ಕಾರ್ಯವನ್ನು, ಮಾಡಲು ಅಥವಾ ಮಾಡಿಸಲು ಒಪ್ಪಂದ ಮಾಡಿಕೊಂಡರೆ ಅದು ಒಳಸಂಚೆಂದು ಭಾರತೀಯ ದಂಡಸಂಹಿತೆಯ 120ನೆಯ ಪ್ರಕರಣದಲ್ಲಿ ಹೇಳಿದೆ. ಆದರೆ ಇದರ ಪರಂತುಕದಲ್ಲಿ (ಪ್ರೊವೈಸೊ) ಹೇಳಿರುವಂತೆ ಕಾನೂನಿನ ಪ್ರಕಾರ ಅಪಕೃತ್ಯವೆಂದು (ಅಫೆನ್ಸ್) ಗಣಿಸಲಾಗುವ ಕಾರ್ಯಗಳ ಹೊರತಾಗಿ ಬೇರೆ ಕಾರ್ಯಗಳಲ್ಲಿ ಒಪ್ಪಂದ ಮಾತ್ರವೇ ಅಲ್ಲದೆ ಆ ಒಪ್ಪಂದವನ್ನು ಅನುಷ್ಠಾನಕ್ಕೆ ತರಲು ಅದಕ್ಕೆ ಸೇರಿದವರಲ್ಲಿ ಒಬ್ಬ ಅಥವಾ ಹೆಚ್ಚು ಮಂದಿ ಏನಾದರೂ ಒಂದು ಸ್ಪಷ್ಟ ಕೃತ್ಯ (ಓವರ್ಟ್ ಆಕ್ಟ್) ಮಾಡಿರಬೇಕು. ಕಾನೂನುಬಾಹಿರವಾದ ಗುರಿ, ಗುರಿಯನ್ನು ಮುಟ್ಟಲು ಪೂರಕವಾದ ಮಾರ್ಗ–ಇವೆರಡರಲ್ಲಿ ಭೇದವನ್ನು ಕಲ್ಪಿಸದೆ ಅವುಗಳನ್ನು ಸರಿಸಮಾನವೆಂದೇ ಕಾಯಿದೆಯ ವಿವರಣೆ ಪರಿಗಣಿಸುತ್ತದೆ.

**ತಕ್ಸೀರಿನ ಒಳಸಂಚಿನ ಮುಖ್ಯ ಘಟಕಗಳು:** ಭಾರತೀಯ ದಂಡಸಂಹಿತೆಯ 120ಎ ಪ್ರಕರಣದ ಪ್ರಕಾರ ತಕ್ಸೀರಿನ ಒಳಸಂಚಿಗೆ ನಾಲ್ಕು ಮುಖ್ಯ ಘಟಕಗಳಿವೆ.

ಮೊದಲನೆಯದಾಗಿ, ಇಬ್ಬರು ಅಥವಾ ಹೆಚ್ಚು ಮಂದಿಗಳೊಳಗೆ ಒಪ್ಪಂದ: ಒಬ್ಬನ ಮೇಲೆ ಮಾತ್ರ ತಕ್ಸೀರಿನ ಒಳಸಂಚಿನ ತಪ್ಪು ಸ್ಥಾಪನೆಯಾಗಲು ಸಾಧ್ಯವಿಲ್ಲ. ಇಬ್ಬರು ಅಥವಾ ಹೆಚ್ಚು ಮಂದಿಯೊಳಗೆ ಒಪ್ಪಂದ ಅಗತ್ಯ. ಮನಸ್ಸಿನಲ್ಲಿ ಗುಪ್ತವಾಗಿದ್ದ ಇಚ್ಛೆ ಆಪಾದಿತರೊಳಗೆ (ಅಕ್ಯೂಸ್ಡ್) ಪರಸ್ಪರ ವಿಚಾರ ವಿನಿಮಯಕ್ಕೆ ಒಳಗಾಗಿ, ಆ ಇಚ್ಛೆ ಅವರೆಲ್ಲರದೂ ಆಗಬೇಕು. ಆಪಾದಿತರ ಮೇಲೆ ಹೊರಿಸಿದ ತಪ್ಪನ್ನು ಮಾಡಲು ಅಥವಾ ಮಾಡಿಸಲು ಒಪ್ಪಂದವಾಗಿರಬೇಕು. ಇಂಗ್ಲಿಷ್ ನ್ಯಾಯದಲ್ಲಿ ಇಂಥ ಒಪ್ಪಂದವನ್ನೇ ಸ್ಪಷ್ಟ ಕೃತ್ಯವೆಂದು ಭಾವಿಸಲಾಗಿದ್ದು ಒಳಸಂಚಿನ ತಪ್ಪು ಸ್ಥಾಪನೆಯಾಗುತ್ತದೆ. ಒಂದು ರೀತಿಯಲ್ಲಿ ಭಾರತದಲ್ಲಿ ಈ ಮಟ್ಟಿಗೆ ಒಳಸಂಚಿನ ವಿಚಾರದ ಕಾನೂನು ಇಂಗ್ಲಿಷ್ ಕಾನೂನಿನಿಂದ ಸಂಕುಚಿತವಾಗಿದೆ. ಆದರೆ ಇನ್ನು ಕೆಲವು ವಿಚಾರಗಳಲ್ಲಿ ಭಾರತದ ಕಾನೂನು ಇಂಗ್ಲಿಷ್ ಕಾನೂನಿಗಿಂತ ವಿಸ್ತಾರವಾದದ್ದು. ಇಲ್ಲಿ ತಕ್ಸೀರಿನ ಒಳಸಂಚು ಒಂದು ವಿಶಿಷ್ಟ ಅಪಕೃತ್ಯವಾಗಿ ಎಣಿಸಲ್ಪಟ್ಟು ಶಿಕ್ಷಾರ್ಹವಾಗಿದೆ. ಇಂಗ್ಲಿಷ್ ನ್ಯಾಯದಲ್ಲಿ ಗಂಡ ಮತ್ತು ಹೆಂಡತಿ ಒಬ್ಬರೆ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ ಹಾಗಲ್ಲ. ಇಂಗ್ಲಿಷ್ ನ್ಯಾಯದಲ್ಲಾಗಲಿ ಭಾರತದ ದಂಡಸಂಹಿತೆಯಲ್ಲಾಗಲಿ ಒಪ್ಪಂದ ಅತಿ ಮುಖ್ಯ ಘಟಕ.

ಎರಡನೆಯದಾಗಿ, ಕಾನೂನುಬಾಹಿರವಾದ ಅಥವಾ ಕಾನೂನು ನಿಷೇಧಿಸುವ ಕೆಲಸಕ್ಕಾಗಿ ಒಪ್ಪಂದ ಆಗಿರತಕ್ಕದ್ದು. ಭಾರತೀಯ ದಂಡಸಂಹಿತೆಯ 43ನೆಯ ಪ್ರಕರಣದಲ್ಲಿ ಕಾನೂನುಬಾಹಿರ ಕೃತ್ಯದ ವಿವರವಿದೆ. ಅದರ ಪ್ರಕಾರ ಕಾನೂನು ನಿಷೇಧಿಸಿದ ಅಥವಾ ಕಾನೂನು ತಪ್ಪೆಂದು ನಿರ್ದೇಶಿಸಿದ, ಅಥವಾ ಸಿವಿಲ್ ಮೊಕದ್ದಮೆಗೆ ಬುನಾದಿಯ ರೂಪದ ಕೆಲಸಗಳು ಕಾನೂನುಬಾಹಿರ ಕೆಲಸಗಳು. ಒಂದು ಕೆಲಸವನ್ನು ಮಾಡದೆ ಬಿಡುವುದು ನ್ಯಾಯಬಾಹಿರವಾಗಿದ್ದಲ್ಲಿ ಅದು ಪ್ರತಿಯೊಬ್ಬನೂ ಮಾಡಲೇಬೇಕಾದ ಕೆಲಸವೆಂದು ತಿಳಿಯತಕ್ಕದ್ದು ಎಂದು ಅದೇ ಪ್ರಕರಣ ಹೇಳುತ್ತದೆ. ಆದ್ದರಿಂದ ನ್ಯಾಯಬಾಹಿರ ಕ್ರಿಯೆ ನ್ಯಾಯಬಾಹಿರ ನಿಷ್ಕ್ರಿಯೆಯನ್ನೂ (ಇಲ್ಲೀಗಲ್ ಓಮಿಷನ್) ಒಳಗೊಂಡಿದೆ. ಅಪರಾಧಿಯ ಒಳಸಂಚಿನ ಮೊಕದ್ದಮೆ ತಾಂತ್ರಿಕ (ಟೆಕ್ನಿಕಲ್) ತಪ್ಪಾದುದರಿಂದ ಈ ಘಟಕವನ್ನು ಸರಿಯಾಗಿ ರುಜುವಾತುಪಡಿಸಬೇಕು. ಧರ್ಮಕ್ಕೆ ವಿರೋಧವಾದ, ಸಾರ್ವಜನಿಕ ಧೋರಣೆಗೆ (ಪಬ್ಲಿಕ್ ಪಾಲಿಸಿ) ವ್ಯತಿರಿಕ್ತವಾದ–ಹೀಗೆ ಮುಂತಾಗಿ ನ್ಯಾಯಾಲಯಗಳು ಜಾರಿ ಮಾಡದಿರುವ–ಒಪ್ಪಂದಗಳು ಕಾನೂನುಬಾಹಿರವೆಂದು ಗಣಿಸಲು ಸಾಧ್ಯವಿಲ್ಲ. ನ್ಯಾಯಬಾಹಿರ ಕೆಲಸ ಕಟ್ಟಕಡೆಯ ಗುರಿಯಾಗಿದ್ದರೂ ಸರಿ, ಅಥವಾ ಗುರಿಗೆ ಪ್ರಾಸಂಗಿಕವಾಗಿದ್ದರೂ (ಇನ್ಸಿಡೆಂಟಲ್) ಸರಿ, ಅಪಕೃತ್ಯ ಸ್ಥಾಪನೆಯಾಗುತ್ತದೆ. ಒಬ್ಬನಿಗೆ ಅಸಾಧ್ಯವಾದ ಅಪಕೃತ್ಯವಾಗಿದ್ದರೂ ಆ ವಿಚಾರ ಗಣನೀಯವಲ್ಲ. ಕೃತ್ಯ ತಕ್ಸೀರಿನದಾಗದಿದ್ದರೂ ಕಾನೂನುಬಾಹಿರವಾಗಿರಬಹುದು ಎಂಬುದನ್ನು ನೆನಪಿನಲ್ಲಿಡಬೇಕು. ತಪ್ಪು ತಿಳಿವಳಿಕೆ (ಮಿಸ್ಟೇಕ್), ಆಕಸ್ಮಿಕ ಘಟನೆ ಇತ್ಯಾದಿ ಕಾರಣಗಳನ್ನು ಮುಂದಿಟ್ಟು ನ್ಯಾಯಬಾಹಿರ ಕೃತಿಯನ್ನು ಸರಿಯೆಂದು ವಾದಿಸಲು ಅಸಾಧ್ಯವೆಂದು ಕಾಯಿದೆಯ ವಿವರಣೆ ಸ್ಪಷ್ಟಪಡಿಸುತ್ತದೆ.

ಮೂರನೆಯದಾಗಿ, ಅದು ಕಾನೂನುಬಾಹಿರ ಕೃತ್ಯವಲ್ಲದಿದ್ದರೂ ಅದನ್ನು ಮಾಡುವ ವಿಧಾನ ಕಾನೂನುಬಾಹಿರವಾಗಿದ್ದರೆ ಸಹ ತಕ್ಸೀರಿನ ಒಳಸಂಚಿನ ಅಪಕೃತ್ಯ ಸ್ಥಾಪಿತವಾಗುತ್ತದೆ. ಗುರಿ ಒಳ್ಳೆಯದಿದ್ದರೆ ಸಾಲದು, ಅದನ್ನು ಸಾಧಿಸುವ ರೀತಿಯೂ ಸಮಂಜಸವಾಗಿರಬೇಕು.

ನಾಲ್ಕನೆಯದಾಗಿ, ಸ್ಪಷ್ಟಕೃತ್ಯದ ಅವಶ್ಯಕತೆ : ಇಂಗ್ಲಿಷ್ ನ್ಯಾಯಕ್ಕೂ ಭಾರತದ ದಂಡಸಂಹಿತೆಗೂ ಈ ವಿಚಾರದಲ್ಲಿರುವ ಭೇದವನ್ನು ಹಿಂದೆಯೇ ಹೇಳಿದೆ. ಇಂಗ್ಲಿಷ್ ನ್ಯಾಯದ ಪ್ರಕಾರ ಒಳಸಂಚಿನ ಅಪಕೃತ್ಯದ ಸ್ಥಾಪನೆಗೆ ಮೇಲೆ ಹೇಳಿದ ಮೂರು ಘಟಕಗಳು

ಸಾಕು. ಭಾರತದಲ್ಲಿ ಒಪ್ಪಂದ ಮಾತ್ರವಲ್ಲದೆ ಅದನ್ನು ಸರಿಯಾಗಿ ಬೇರ್ಪಡಿಸುವ ಸ್ಪಷ್ಟಕೃತ್ಯವೂ ಅಗತ್ಯ. ಯಾವುದು ಸ್ಪಷ್ಟಕೃತ್ಯ ಎಂಬುದು ಪ್ರತಿಯೊಂದು ಮೊಕದ್ದಮೆಯ ಸಂಗತಿಯಿಂದ ನಿರ್ಧಾರವಾಗತಕ್ಕ ವಿಚಾರ.

ಭಾರತದ ಕಾಯಿದೆಯಲ್ಲಿ ಎರಡು ಬಗೆಯ ಒಳಸಂಚುಗಳು ಸೇರಿವೆ. ಒಂದನೆಯದು, ಅಪಕೃತ್ಯ ಮಾಡಲು ಹೂಡಿದ ಒಳಸಂಚು. ಇದರಲ್ಲಿ ಸ್ಪಷ್ಟಕೃತ್ಯ ಮಾಡದಿದ್ದರೂ ಒಪ್ಪಂದವೇ ಒಳಸಂಚಿನ ತಪ್ಪಿಗೆ ಕಾರಣವಾಗುತ್ತದೆ. ಎರಡನೆಯದು, ಕಾನೂನುಬಾಹಿರ ಕೃತ್ಯವನ್ನು ಮಾಡಲು ಅಥವಾ ಕಾನೂನುಬಾಹಿರವಲ್ಲದ ಕೆಲಸವನ್ನು ಕಾನೂನುಬಾಹಿರ ರೀತಿಯಿಂದ ಮಾಡಲು ಮಾಡಿಕೊಂಡ ಒಪ್ಪಂದ. ಇದರಲ್ಲಿ ಒಪ್ಪಂದದ ಹೊರತಾಗಿ ಸ್ಪಷ್ಟಕೃತ್ಯವಾದರೆ ಮಾತ್ರ ಒಳಸಂಚಿನ ಅಪರಾಧಕ್ಕೆ ವ್ಯಕ್ತಿ ಗುರಿಯಾಗುತ್ತಾನೆ.

ಒಳಸಂಚಿಗೂ ಬೇರೆ ಅಪಕೃತ್ಯಗಳಿಗೂ ಇರುವ ಭೇದ : ಮಿಕ್ಕ ಅಪರಾಧಗಳಲ್ಲಿ ಉದ್ದೇಶವೇ (ಇನ್‌ಟೆನ್‌ಷನ್) ಅಪಕೃತ್ಯವಾಗುವುದಿಲ್ಲ. ಉದ್ದೇಶವನ್ನು ಕಾರ್ಯಗತ ಮಾಡಲು ಏನಾದರೂ ಕೆಲಸ ಮಾಡದೆ ಅಥವಾ ಕೆಲಸ ಮಾಡಲು ಪ್ರಯತ್ನಿಸದೆ ತಪ್ಪು ಸ್ಥಾಪನೆಯಾಗುವುದಿಲ್ಲ. ಆದರೆ ಒಳಸಂಚಿನ ಅಪಕೃತ್ಯ ಉದ್ದೇಶವನ್ನು ಮುಂದುವರಿಸುತ್ತದೆ. ಕಾರ್ಯವನ್ನು ಮಾಡಲಿ ಮಾಡದಿರಲಿ, ಒಳಸಂಚಿನ ಒಪ್ಪಂದವಾದೊಡನೆ ಅಪಕೃತ್ಯ ಸ್ಥಾಪಿತವಾಗುತ್ತದೆ.

ಭಾರತೀಯ ದಂಡಸಂಹಿತೆಯ 34ನೆಯ ಪ್ರಕರಣದಲ್ಲಿ ಸಮಾನ ಉದ್ದೇಶದಿಂದ (ಕಾಮನ್ ಇನ್‌ಟೆನ್‌ಷನ್) ಅಪಕೃತ್ಯ ಮಾಡಿದವರ ವಿಚಾರ ಹೇಳಲಾಗಿದೆ. ಅದರ ಪ್ರಕಾರ ಅನೇಕರು ಒಂದು ಅಪರಾಧದ ಕೃತ್ಯವನ್ನು ಸಾಮಾನ್ಯ ಉದ್ದೇಶದಿಂದ ಮಾಡಿದ್ದರೆ ಪ್ರತಿಯೊಬ್ಬನೂ ತಾನೊಬ್ಬನೇ ಅದನ್ನು ಮಾಡಿದನೆಂಬಂತೆಯೇ ಆ ಕೃತ್ಯಕ್ಕೆ ಜವಾಬ್ದಾರಿಯಾಗಿರುತ್ತಾನೆ. 120ಎ ಪ್ರಕರಣದ ಪ್ರಕಾರ ಕಾನೂನನ್ನು ಮುರಿಯುವ ಬಗ್ಗೆ ಸಂಭವಿಸಿದ ಕೂಡುವಿಕೆಗೆ ಪ್ರಾಮುಖ್ಯವುಂಟು; ಕೃತ್ಯ ಮಾಡುವುದು ಗೌಣ. 34ನೆಯ ಪ್ರಕರಣದ ಪ್ರಕಾರ ಸಾಮಾನ್ಯ ಉದ್ದೇಶವನ್ನು ಪೂರೈಸುವ ಆಶಯದಿಂದ ಕೃತ್ಯ ಮಾಡುವುದು ಮುಖ್ಯ.

ಒಳಸಂಚಿಗೆ ಸೇರಿದ ಒಬ್ಬನೊಡನೆ ಅಥವಾ ಹಲವರೊಡನೆ ಒಬ್ಬಾತ ಕೂಡಿಕೊಂಡಿದ್ದು. ಒಂದು ಕ್ರಿಯೆ ಅಥವಾ ನಿಷ್ಕ್ರಿಯೆ ಆ ಒಳಸಂಚಿನ ಅನುಸಾರ ನಡೆದಲ್ಲಿ ಆ ಮನುಷ್ಯ ದುಷ್ಪ್ರೇರಣೆ (ಅಬೆಟ್‌ಮೆಂಟ್) ಮಾಡುತ್ತಾನೆಂದು ಭಾರತೀಯ ದಂಡಸಂಹಿತೆಯ 107ನೆಯ ಪ್ರಕರಣದ ಎರಡನೆಯ ಕಲಮು ಹೇಳುತ್ತದೆ. ಕೇವಲ ಒಪ್ಪಂದವೇ ದುಷ್ಪ್ರೇರಣೆಯನ್ನು ಸ್ಥಾಪಿಸಲು ಸಾಕಾಗುವುದಿಲ್ಲ. ಒಂದು ಕ್ರಿಯೆ ಅಥವಾ ನಿಷ್ಕ್ರಿಯೆ ಒಳಸಂಚಿನ ಪ್ರಕಾರ ನಡೆಯಬೇಕು. ತಕ್ಸೀರಿನ ಒಳಸಂಚಿನಲ್ಲಿ ಒಪ್ಪಂದವೇ ಮುಖ್ಯ. 107ನೆಯ ಪ್ರಕರಣದ ಪ್ರಕಾರ ಜನರ ಸಂಘಟನೆ ಅಥವಾ ಅವರೊಳಗೆ ಒಪ್ಪಂದ ಇದ್ದರೆ ಮಾತ್ರ ಸಾಲದು. 120ಎ ಪ್ರಕರಣದ ಒಪ್ಪಂದ ಅಪಕೃತ್ಯದ ಇರಾದೆಯಿಂದ ಕೂಡಿದ್ದರೆ ಸಾಕು.

ಭಾರತೀಯ ದಂಡಸಂಹಿತೆ ಕೆಲವು ಒಳಸಂಚುಗಳಿಗೆ ಪ್ರತ್ಯೇಕವಾದ ಶಿಕ್ಷೆ ವಿಧಿಸಿದೆ. ಈ ಕೆಳಗಿನ ಒಳಸಂಚುಗಳನ್ನು ಅದು ಹೇಳುತ್ತದೆ : 1 ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮೇಲೆ ಯುದ್ಧದ ಒಳಸಂಚು (121ಎ), 2 ಅಪಕೃತ್ಯ ಮಾಡಲು ನಡೆಸಿದ ಒಳಸಂಚು, 3 ಕಾನೂನುಬಾಹಿರ ಕಾರ್ಯ ನಡೆಸಲು ಒಳಸಂಚು, 4 ಒಳಸಂಚಿನ ದುಷ್ಪ್ರೇರಣೆ (107), 5 ಡಕಾಯಿತರ ಗುಂಪಿನ ಸದಸ್ಯತ್ವ (402), 6 ಕಳ್ಳರ ತಂಡದ ಸದಸ್ಯತ್ವ (401) ಮತ್ತು 7 ಠಕ್ಕತನ (311). ಈ ಒಳಸಂಚುಗಳಿಗೆ ಭಾರತೀಯ ದಂಡಸಂಹಿತೆಯಲ್ಲಿ ಪ್ರತ್ಯೇಕವಾದ ಶಿಕ್ಷೆಗಳನ್ನು ಹೇಳಲಾಗಿದೆ. **(ಕೆ.ಜಿ.ಬಿ.)**

**ಒಳಸುರಿಕ ಗ್ರಂಥಿಗಳು:** ಪ್ರಾಣಿಗಳಲ್ಲಿ, ಪ್ರೋಟೀನು ತೆರನ ವಿಶೇಷ ಬಗೆಯ ರಸಗಳನ್ನು ತಯಾರಿಸಿ, ನಾಳಗಳ ನೆರವಿಲ್ಲದೆ ನೇರವಾಗಿ ರಕ್ತಕ್ಕೇ ಸುರಿವ ಗ್ರಂಥಿಗಳಿವು; ಇವನ್ನು ನಿರ್ನಾಳಗ್ರಂಥಿಗಳು ಎಂದೂ ಕರೆಯುತ್ತಾರೆ. (ಎಂಡೋಕ್ರಿನ್ ಗ್ಲ್ಯಾಂಡ್ಸ್). ಈ ಸುರಿಕೆಗಳಲ್ಲಿ ಬಲು ವಿಶಿಷ್ಟವಾದ, ಒಂದೋ ಹಲವೋ ಚೋದನಿಕಗಳೆಂಬ (ಹಾರ್ಮೋನ್ಸ್) ರಸಾಯನ ವಸ್ತುಗಳಿರುತ್ತವೆ. ಇವು ಬೇರೆ ಊತಕಗಳ, ಅಂಗಗಳ ಅಂಗಕ್ರಿಯೆಯ ಗತಿಗಳ ಮೇಲೆ ತೀರ ಕಿರಿಯ ಪ್ರಮಾಣಗಳಲ್ಲೇ ವಿಪರೀತ ಪ್ರಭಾವ ತೋರಿ ಚೋದಿಸುತ್ತವೆ. ಶಸ್ತ್ರಕ್ರಿಯೆಯಿಂದ ಒಂದು ಒಳಸುರಿಕ ಗ್ರಂಥಿಯನ್ನು ಪ್ರಾಣಿಯಲ್ಲಿ ಕೊಯ್ದು ತೆಗೆದುಹಾಕಿದರೆ ಗೊತ್ತಾದ ಕೊರೆಯ ಸ್ಥಿತಿ ತಲೆದೋರುವುದು. ಆಮೇಲೆ ಆ ಗ್ರಂಥಿಯ ಚೋದನಿಕವನ್ನು ಕೊಟ್ಟರೆ ಎಂದಿನ ಸ್ಥಿತಿ ಉಂಟಾಗುತ್ತದೆ. **(ನೋಡಿ– ಗ್ರಂಥಿ)**

ಈಗ ಗೊತ್ತಿರುವಂತೆ, ಸಸ್ತನಿಗಳಲ್ಲಿ ತೆಮಡಿಕ (ಪಿಟ್ಯುಟರಿ) ಗ್ರಂಥಿಯ ಮುಂದಣ, ಹಿಂದಣ ಹಾಲೆಗಳು (ಲೋಬ್ಸ್), ಗುರಾಣಿಕ (ತೈರಾಯ್ಡ್), ಬದಿ ಗುರಾಣಿಕಗಳು (ಪ್ಯಾರತೈರಾಯ್ಡ್ಸ್), ಮಾಂಸಲಿಯ ದೀವುಗಳು (ಪ್ಯಾಂಕ್ರಿಯಾಟಿಕ್ ಐಲೆಟ್ಸ್), ಅಡ್ರಿನಲ್ ರಗಟೆ (ಕಾರ್ಟೆಕ್ಸ್), ಅಡ್ರಿನಲ್ ಕುಸುರಿ (ಮೆಡುಲ್ಲ), ಅಂಡಾಶಯ (ಓವರಿ), ತರಡು (ಟೆಸ್ಟಿಸ್) ಗ್ರಂಥಿಗಳಿವೆ. ಬೆನ್ನೆಲುಬಿರದ ಜೀವಿಗಳಲ್ಲಿ ಮಾತ್ರ ಬೆಳವಣಿಗೆ, ರೂಪಬದಲಿಕೆಗಳಿಗಾಗಿ ಚೋದನಿಕಗಳನ್ನು ಸುರಿಸುವ ಒಳಸುರಿಕ ನರರಚನೆಗಳು ಇರುತ್ತವೆ. ಅಲ್ಲದೆ ರಚನೆಯಲ್ಲಿ ವಿಶೇಷ ಗ್ರಂಥಿಗಳಂತೆ ತೋರಿದ ಕೆಲವು ಊತಕಗಳು ಕೂಡ ಚೋದನಿಕ ವಸ್ತುಗಳನ್ನು ಸುರಿಸಬಹುದು. ರಸ ಸುರಿಸುವಂತೆ, ಚಲಿಸುವಂತೆ ಆಹಾರ ನಾಳಿಯನ್ನು ಚೋದಿಸುವ ರಸಗಳನ್ನು ಸುರಿಸುವ, ಕರುಳಿನಲ್ಲೇ ಇರುವ




ಒಳಸುರಿಕೆ ಗ್ರಂಥಿಗಳು : 1. ಗುರಾಣಿಕ, 2. ಬದಿಗುರಾಣಿಕೆಗಳು, 3. ಓಮಗ್ರಂಥಿ, 4. ತೆಮಡಿಕ, 5. ಅಡ್ರಿನಲ್, 6. ಮಾಂಸಲಿ, 7. ಅಂಡಾಶಯಗಳು, 8. ಹಳದಿಂಡು, 9. ತರಡುಗಳು, 10. ಗ್ರಾಫನ ಕೋಶಿಕಗಳು

ಕೆಲವು ಜೀವಕಣ ತಂಡಗಳು ಇಂಥವೇ. ಕೇಂದ್ರದ ನರದ ಮಂಡಲದಲ್ಲಿ ಕೆಲವು ಜೀವಕಣ ತಂಡಗಳು ನರಕಣಗಳಾಗೂ ಚೋದನಿಕ ತಯಾರಕಗಳಾಗೂ ವರ್ತಿಸುತ್ತವೆ. **(ನೋಡಿ– ಚೋದನಿಕಗಳು)**

**ತೆಮಡಿಕ:** ಇಳಿಬೆಳವಿ (ಹೈಪೊತ್ಯಾಲಮಸ್) ಎಂದೂ ಹೆಸರಿರುವ, ಮಾನವನಲ್ಲಿ ಬಟಾಣಿಕಾಳಿನ ಗಾತ್ರದ ಕೇವಲ ಆರೇ ಗ್ರಾಂ ತೂಕವಿರುವ ಈ ಗ್ರಂಥಿ ಮಿದುಳಿನ ತಳದಲ್ಲಿ ನಟ್ಟನಡುವೆ ಒಂದು ಸಣ್ಣ ಗುಳಿಯಲ್ಲಿದೆ. ಅಂಗರಚನೆ, ಬೆಳೆವಣಿಗೆ, ನಿಜಗೆಲಸಗಳಲ್ಲಿ ಕೊನೆಯ ಪಕ್ಷ ಏಳು ಕ್ರಿಯಾಂಶಗಳನ್ನಾದರೂ ಸುರಿಸುವ ಮುಂದಣ ಹಾಲೆ ಇಲ್ಲವೇ ಗ್ರಂಥಿಭಾಗವೂ ಎರಡು ಚೋದನಿಕಗಳನ್ನು ಸುರಿಸುವ ಹಿಂದಣ ಹಾಲೆ ಇಲ್ಲವೇ ನರಭಾಗವೂ ಈ ಗ್ರಂಥಿಯಲ್ಲಿವೆ. ಬಣ್ಣವಸ್ತುಗಳಿಂದ ರಂಗೇರುವ ಗುಣದಿಂದ ಬೇರೆಬೇರೆಯಾಗಿ ವಿಂಗಡಿಸಬಹುದಾದ ಕೊನೆಯ ಪಕ್ಷ ಮೂರು ಬಗೆಯ ಜೀವಕಣಗಳನ್ನು ಮುಂದಣ ಹಾಲೆಯಲ್ಲಿ ಗುರುತಿಸಬಹುದು: ಕೆನ್ನೇಸರನುರಾಗಿಗಳು (ಇಯೋಸಿನೋಫಿಲ್ಸ್) ಇಲ್ಲವೇ ಆಮ್ಲಾನುರಾಗಿಗಳು (ಅಸಿಡೋಫಿಲ್ಸ್), ಮಾರಾಮ್ಲಾನುರಾಗಿಗಳು (ಬೇಸೋಫಿಲ್ಸ್), ಕ್ರೋಮಂಜುಕುಳಿಗಳು (ಕ್ರೋಮೋಫೋಬ್ಸ್). ಒಂದೊಂದು ಬಗೆಯ ಜೀವಕಣದಿಂದಲೂ ಇಂಥವೇ ಚೋದನಿಕಗಳು ಹುಟ್ಟುವುವೆಂದು ಹೇಳಲೂಬಹುದು.

**ಕೆಳತಲೆಯರೆ:** ಮಿದುಳಿನ ನಡುವಿನಲ್ಲಿ ಸಣ್ಣ ಅಂಕಣದಂತಿರುವ ಕೆಳತಲೆಯರೆ (ಹೈಪೊತ್ಯಾಲಮಸ್). ತೆಮಡಿಕ ಗ್ರಂಥಿಯ ಹಿಂದಣ ಹಾಲೆಗೆ ಹೋಗುವ ನರಗಳು ಆ ಹಾಲೆಯ ಚಟುವಟಿಕೆಗಳನ್ನು ಅಂಕೆಗೊಳಿಸುತ್ತವೆ. ಹಾಗೇ ಕೆಳತಲೆಯರೆಯಿಂದ ಮುಂದಣ ಹಾಲೆಗೆ ಚೋದನಿಕ ರಸಗಳು ರಕ್ತದ ಮೂಲಕ ಸಾಗಿ ಅದರ ಕೆಲವು ರಸ ಸುರಿಕೆಗಳನ್ನೂ ನಿಯಂತ್ರಿಸುವುವು (**ನೋಡಿ– ಕೆಳತಲೆಯರೆ–(ಕೆಳಶಿರಗುಳಿ)**).

**ಗುರಾಣಿಕ:** ಕೊರಳಲ್ಲಿ ಗೋಮಾಳೆಯ ಕೆಳಗಡೆ ನಡುವೆಯೂ ಉಸಿರ್ನಾಳದ ಇಪ್ಪಕ್ಕಗಳಲ್ಲೂ ಈ ಗ್ರಂಥಿ ಇದೆ. ಇದಕ್ಕೆ ರಕ್ತದ ಸರಬರಾಜು ಹೆಚ್ಚು. ಇದರ ನಡುಭಾಗ ಸಣ್ಣಗಿದ್ದು ಪಕ್ಕಗಳು ರೆಕ್ಕೆಯಾಕಾರದಲ್ಲಿರುವುವು (**ನೋಡಿ– ಗುರಾಣಿಕ–ಗ್ರಂಥಿ**).

**ಬದಿಗುರಾಣಿಕೆಗಳು:** ಸಾಮಾನ್ಯವಾಗಿರುವ ಇದರ ನಾಲ್ಕೂ ಗ್ರಂಥಿಗಳೂ ಗುರಾಣಿಕ ಗ್ರಂಥಿಯ ಹಿಂಬದಿಯಲ್ಲೊ ಬದಿಯಲ್ಲೊ ಹುದುಗಿರುತ್ತವೆ. ಕೆಲವೇಳೆ ವಿರಳವಾಗಿ 2–6 ಗ್ರಂಥಿಗಳಿರಲೂಬಹುದು. ಇವು ಗುಲಗಂಜಿ ಗಾತ್ರಕ್ಕಿರುತ್ತವೆ. ಹೆಚ್ಚಾಗಿರುವವಲ್ಲಿ ಕೆಲವು ಎದೆಯೊಳಗಿರಬಹುದು.

**ಮಾಂಸಲಿ:** ಹೊಟ್ಟೆಯಲ್ಲಿ, ಹಿಂದಣ ಗೋಡೆಯ ಮೇಲೆ ಸಣ್ಣ ಕರುಳಿನ ಮೊದಲನೆಯ ಭಾಗವಾದ ದುರ್ಗಾರುಳಿನ (ಡುಯೋಡಿನಂ) ತಿರುವಿನಲ್ಲಿ ಈ ಗ್ರಂಥಿಯಿದೆ. ಆಹಾರವನ್ನು ಅರಗಿಸುವ ಈ ಗ್ರಂಥಿಯ ರಸಗಳನ್ನು ನಾಳಗಳ ಮೂಲಕ ಸಣ್ಣ ಕರುಳಿಗೊಯ್ದರೂ ಉಳಿದ ಭಾಗದಲ್ಲಿ ತಯಾರಾಗುವ ಇನ್ಸುಲಿನ್ ಒಂದು ಚೋದನಿಕ. ಮೊದಲಿನದು ಹೊರಸುರಿಕ (ಎಕ್ಸೊಕ್ರಿನ್) ಎರಡನೆಯದು ಒಳಸುರಿಕ (ಎಂಡೊಕ್ರಿನ್) ರಸ. ಒಳಸುರಿಕ ಭಾಗ ಒಟ್ಟಾಗಿ ಒಂದೆಡೆಯಲ್ಲಿರದೆ ಅಲ್ಲಲ್ಲಿ ಜೀವಕಣ ತಂಡಗಳಾಗಿ ದ್ವೀಪಗಳಂತಿದೆ. ಇವಕ್ಕೆ ಲ್ಯಾಂಗರ್‌ಹ್ಯಾನ್ಸನ ದ್ವೀಪುಗಳು ಎಂದು ಹೆಸರಿಸಿದೆ. ಈ ಜೀವಕಣಗಳಲ್ಲಿ ಆಲ್ಫ, ಬೀಟಗಳೆಂಬ ಎರಡು ಬಗೆಗಳಿರುವುವು.

**ಅಡ್ರಿನಲುಗಳು:** ಒಂದೊಂದು ಮೂತ್ರಪಿಂಡದ ಮೇಲ್ಗಡೆಯ ತ್ರಿಭುಜಾಕಾರಿ ಟೋಪಿಯಂತೆ ಅಂಟಿಕೊಂಡಿರುವ ಈ ಸಣ್ಣಗ್ರಂಥಿಗಳು ನಿಜವಾಗಿ ಒಂದೊಂದರಲ್ಲೂ ಎರಡು ಬೇರೆ ಬೇರೆ ಗ್ರಂಥಿಗಳಿವೆ : ಒಳಗಿನ ಭಾಗವಾದ ಕುಸುರಿ (ಮೆಡುಲ) ಹೊರಗಿನ ಭಾಗವಾದ ರಗಟೆ (ಕಾರ್ಟೆಕ್ಸ್). ಅನುವೇದನಾ ನರಮಂಡಲದ (ಸಿಂಪತಟಿಕ್ ನರ್ವಸ್ ಸಿಸ್ಟಂ) ನರಗಂಟುಗಳ (ಗ್ಯಾಂಗ್ಲಿಯ) ಬಳಿ ಹರಡಿ ಬಿದ್ದಿರುವ ತೆರನ ಕ್ರೋಮ್‌ನೆಂಟಿನ (ಕ್ರೋಮಫಿನ್) ಜೀವಕಗಳು ಅಡ್ರಿನನಿನಲ್ಲಿ ಕುಸುರಿಯಲ್ಲಿ ಇರುವುವು (**ನೋಡಿ– ಅಡ್ರಿನಲ್–ಗ್ರಂಥಿಗಳು**).

**ತರಡುಗಳು:** ಸಸ್ತನಿಗಳಲ್ಲಿ, ತೊಡೆಗಳ ನಡುವಣ ಸಂದಲ್ಲಿ ಇಳಿಬಿದ್ದಿರುವ ಚೀಲದಂತಿರುವ ಬೀಜಚೀಲದಲ್ಲಿ (ಸ್ಕ್ರೋಟಂ) ಪಕ್ಕಪಕ್ಕದಲ್ಲಿ ಬೇರೆಬೇರೆಯಾಗಿ ಎರಡಿರುತ್ತವೆ. ಮೈಕಾವಿಗಿಂತಲೂ ಇವು ತಣ್ಣಗಿರುವುವು. ರೇತು ಕಣಗಳು ವಿಕಾಸವಾಗಲು ಹೀಗೆ ತಣ್ಣಗಿರಲೇಬೇಕು. ರೇತುಸಾಗಿನ ಕಿರುನಾಳಗಳಲ್ಲಿ (ಸೆಮನಿಫೆರಸ್ ಟ್ಯುಬ್ಯೂಲ್ಸ್) ರೇತು ಕಣಗಳು ವಿಕಾಸವಾಗುತ್ತವೆ. ಈ ಕಿರುನಾಳಗಳ ನಡುವೆ ಇರುವ ಊತಕಾಂತರ (ಇಂಟರ್‌ಸ್ಟಿಷಿಯಲ್) ಜೀವಕಣ ತಂಡಗಳು ಪುಲ್ಲಿಂಗಿಕಾರಿ (ಟೆಸ್ಟೊಸ್ಟಿರೋನ್) ಚೋದನಿಕವನ್ನು ಸುರಿಸುತ್ತವೆ.

**ಅಂಡಾಶಯಗಳು:** ಕೆಳಹೊಟ್ಟೆಯ ಕಿಳ್ಗುಳಿಯಲ್ಲಿ (ಪೆಲ್ವಿಸ್) ಗರ್ಭಕೋಶದ ಎರಡು ಪಕ್ಕಗಳಲ್ಲೂ ಒಂದೊಂದು ಅಂಡಾಶಯ ಗ್ರಂಥಿ ಇರುವುದು.

**ಮಾಸು:** ಬಸುರಿಯ ಗರ್ಭಕೋಶದಲ್ಲಿ ಪಿಂಡಗೂಸು (ಫೀಟಸ್) ಬೆಳೆದಂತೆಲ್ಲ ಅಂಡಾಶಯದ ಒಳಸುರಿಕ ಕೆಲಸವನ್ನು ಇದು ವಹಿಸಿಕೊಳ್ಳುವುದರಿಂದ ಇದೂ ಒಂದು ಒಳಸುರಿಕ ಗ್ರಂಥಿ ಎನ್ನಬಹುದು (**ನೋಡಿ– ಒಳಸುರಿಕೆ–ಶಾಸ್ತ್ರ**). (ಎಂ.ಬಿ.)

**ಒಳಸುರಿಕೆ ವಿಜ್ಞಾನ:** ಒಳಸುರಿಕ ಗ್ರಂಥಿಗಳ ರಚನೆ, ನಿಜಗೆಲಸ, ಆರೋಗ್ಯ ಮತ್ತು ರೋಗಗಳನ್ನು ತಿಳಿಸಿಕೊಡುವ ವಿಜ್ಞಾನ (ಎಂಡೊಕ್ರಿನಾಲಜಿ). ತೆಮಡಿಕ (ಪಿಟ್ಯುಟರಿ), ಗುರಾಣಿಕ (ತೈರಾಯ್ಡ್), ಮಾಂಸಲಿ (ಪ್ಯಾಂಕ್ರಿಯಾಸ್), ಅಡ್ರಿನಲುಗಳೂ, ಬದಿಗುರಾಣಿಕಗಳು (ಪ್ಯಾರತೈರಾಯ್ಡ್ಸ್), ಅಂಡಾಶಯಗಳು (ಓವರೀಸ್). ತರಡುಗಳು (ಟೆಸ್ಟೀಸ್). ಮಾಸು (ಪ್ಲೆಸೆಂಟ) ಇವಿಷ್ಟು ಈಗ ಗೊತ್ತಿರುವ ಮುಖ್ಯವಾದ ಒಳಸುರಿಕ ಗ್ರಂಥಿಗಳು. ಜೊಲ್ಲು, ಕಣ್ಣೀರು ಗ್ರಂಥಿಗಳು ರಸಗಳನ್ನು ನಾಳಗಳ ಮೂಲಕ ಸುರಿಸುತ್ತವೆ. ಆದರೆ ಮೇಲೆ ಹೇಳಿದ ಒಳಸುರಿಕ ಗ್ರಂಥಿಗಳು ರಸಗಳನ್ನು ನೇರವಾಗಿ ರಕ್ತದೊಳಕ್ಕೇ ಸುರಿದುಬಿಡುತ್ತವೆ. ಇವು ತಯಾರಿಸಿದ ರಸಗಳಿಗೆ ಚೋದನಿಕಗಳು (ಹಾರ್ಮೋನ್ಸ್) ಎಂದು ಹೆಸರು. ಇನ್ನೆಲ್ಲೊ ದೂರದ ಅಂಗಗಳ ಊತಕಗಳಲ್ಲಿ ಪ್ರಭಾವ ತೋರುವುದರಿಂದ ಇವನ್ನು ರಸದೂತಗಳು ಎನ್ನುವುದೂ ಉಂಟು. ರಕ್ತದಲ್ಲಿನ ಬಲು ಕಿರಿಯ ಪ್ರಮಾಣಗಳಲ್ಲಿ ಹಲವಾರು ಅಂಗಗಳ ಇಲ್ಲವೇ ಇಡೀ ಮೈಮೇಲೆ ಪ್ರಭಾವ ತೋರುವುದು ಹೆಚ್ಚಳಿಕೆ. (**ನೋಡಿ– ಚೋದನಿಕಗಳು**).

ಚೋದನಿಕಗಳ ನಿಜಗೆಲಸಗಳು ಹಲವಾರಿವೆ. ಮೈ ಬೆಳೆವಣಿಗೆಯ ಹತೋಟಿ, ಜನನಾಂಗಗಳ ಲಿಂಗದ ಸುರಿಕೆಗಳಿಂದ ಗಂಡು ಹೆಣ್ಣುಗಳ ಮರುಚಲನ ಲಿಂಗ ಗುಣಗಳನ್ನು (ಸೆಕೆಂಡರಿ ಸೆಕ್ಸ್ ಕ್ಯಾರೆಕ್ಟರ್ಸ್) ಬೆಳೆಸಿ ನೆರೆವಂತೆ ಮಾಡುವುದೂ ಮುಖ್ಯ. ಇಡೀ ಜೀವಿಯ ಮೈಯೊಳಗಿನ ಆವರಣದಲ್ಲಿ ಏರುಪೇರಿಲ್ಲದಂತೆ ಒಂದೇ ಸಮನಾಗಿ ಇರಿಸುವುದೂ ಒಂದು ಮುಖ್ಯ ನಿಜಗೆಲಸ. ಇದಕ್ಕೆ ಸಮನಿಲುವೆ (ಹೋಮಿಯೊ ಸ್ಟೇಸಿಸ್) ಎಂದಿದೆ. ಒಳಸುರಿಕೆ ಗ್ರಂಥಿಗಳು ಈ ನಿಜಗೆಲಸಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ನೆರವಾಗುತ್ತವೆ. ಗಂಡಿನ ಚೋದನಿಕ ಗಂಡಿನ ಗುಣವನ್ನು ಹೊರದೋರುವಂತೆ ಮಾಡುವುದೇ ಅಲ್ಲದೆ, ಮೈಬೆಳೆತಕ್ಕೂ ಕಾರಣವಾಗಿರುತ್ತದೆ. ಇವು ಯಾವುವೂ ತಾವಾಗಿ ಯಾವ ಕೆಲಸವನ್ನೂ ಮೊದಲಿಡದಿದ್ದರೂ ಬೇರೆ ಅಂಗಗಳ ಕೆಲಸಗಳನ್ನು ನಿಯಂತ್ರಿಸುವುವು. ಈ ಅಂಕೆಯ ಗುಟ್ಟು ಏನೆಂದು ಚೆನ್ನಾಗಿ ಗೊತ್ತಿಲ್ಲವಾದರೂ ಜೀವಕಣಗಳಲ್ಲಿನ ಜೀವವೈಜ್ಞಾನಿಕ ಪ್ರತಿಕ್ರಿಯೆಗಳನ್ನು ಚೋದಿಸಿ ಇಲ್ಲವೇ ಕುಂದಿಸಿ ಕೆಲಸ ಮಾಡುತ್ತವೆ ಎನ್ನಬಹುದು.

ರಕ್ತದಲ್ಲಿನ ಸುತ್ತಿಡುವ ಚೋದನಿಕಗಳ ಪ್ರಮಾಣ ಅವುಗಳ ಹುಟ್ಟು, ಹೊರದೂಡಿಕೆ ಇಲ್ಲವೇ ಚುರುಕಿಳಿತಗಳಿಗೆ ತಕ್ಕಂತೆ ಇರುವುದು. ಇದೇ ಅಲ್ಲದೆ, ಚೋದನಿಕದ ಬೇಡಿಕೆಯೂ ಊತಕಗಳ ಈಡುವಳಿಯೂ ಆಗಾಗ್ಗೆ ಹೆಚ್ಚು ಕಡಿಮೆ ಆಗುತ್ತಿರುವುದರಿಂದ ಸುರಿಕೆಯ ಹತೋಟಿ ಬಲು ಚೆನ್ನಾಗಿರುವುದು. ಅಡ್ರಿನಲ್ ಗ್ರಂಥಿಸುರಿಕೆ ಹಗಲೂ ರಾತ್ರಿ ಬದಲಾಗುತ್ತಿರುವುದು. ಬೆಳಗಿನಲ್ಲಿ ಕಡಿಮೆ ಇದ್ದದು ಸಂಜೆ ಹೊತ್ತಿಗೆ ತೀರ ಹೆಚ್ಚಾಗುತ್ತದೆ. ಮಾಂಸಲಿಯ ಒಳಸುರಿತ ಆಹಾರದಲ್ಲಿನ ಹಿಟ್ಟು ಸಕ್ಕರೆಗಳ ಪ್ರಮಾಣಕ್ಕೆ ತಕ್ಕಂತಿರುವುದು. ಬಸಿರು ಇಲ್ಲವೇ ಮುಟ್ಟಿನ ಚಕ್ರವನ್ನು ಅಂಡಾಶಯ ಸುರಿತಗಳು ಅನುಸರಿಸುತ್ತವೆ. ಚೋದನಿಕಗಳ ಸುರಿಕೆಯ ಹತೋಟಿಯಲ್ಲಿ ಎರಡು ಬಗೆಗಳಿವೆ. ಮೊದಲಿನದಾಗಿ, ಹಿಂದುಂಬುವ ಯಾಂತ್ರಿಕ (ಫೀಡ್ ಬ್ಯಾಕ್ ಮೆಕ್ಯಾನಿಸಂ) ವಿಧಾನವಿದೆ. ರಕ್ತದಲ್ಲಿ ಸುತ್ತಾಡುತ್ತಿರುವ ಚೋದನಿಕದ ಪ್ರಮಾಣ, ಅದೇ ಚೋದನಿಕದ ಉತ್ಪತ್ತಿಯನ್ನು ಅಂಕೆಯಲ್ಲಿಡುತ್ತದೆ. ತೆಮಡಿಕ ಗ್ರಂಥಿಯ ಗುರಾಣಿಕ ಚೋದಕ (ತೈರಾಯ್ಡ್ ಸ್ಟಿಮ್ಯುಲೇಟಿಂಗ್) ರಸ ಗುರಾಣಿಕ ಗ್ರಂಥಿಯ ಸುರಿತವನ್ನು ಚೋದಿಸುವುದು. ಆದರೆ ಗುರಾಣಿಕ ಗ್ರಂಥಿಯ ರಸವಾದ ತೈರಾಕ್ಸಿನ್ ರಕ್ತದಲ್ಲಿ ಸುತ್ತಾಡುತ್ತಿರುವ ತನಕ ಗುರಾಣಿಕ ಚೋದಕ ರಸಸುರಿತವನ್ನೇ ತಗ್ಗಿಸಿಡುತ್ತದೆ. ಇದೇ ಹಿಂದುಂಬುವ ಯಾಂತ್ರಿಕತೆ. ಕೆಲವೇಳೆ ರಕ್ತದಲ್ಲಿನ ಹಲವು ರಾಸಾಯನಿಕಗಳೂ ಚೋದನಿಕದ ಸುರಿತವನ್ನು ನಿಯಂತ್ರಿಸುವುದುಂಟು. ರಕ್ತದ ಸಕ್ಕರೆಯ ಪ್ರಮಾಣ ಹೆಚ್ಚಿದ ಹಾಗೆಲ್ಲ ಇನ್ಸುಲಿನ್ನಿನ ಸುರಿತವೂ ಏರುತ್ತ ಹೋಗುವುದು ಇದರ ಒಂದು ಉದಾಹರಣೆ.

ಚೋದನಿಕಗಳ ಸುರಿಕೆಯ ಹತೋಟಿ ವಿಧಾನಗಳಲ್ಲಿ ಎರಡನೆಯದಾಗಿ, ನರಧಮನಿಗಳ ಮೂಲಕ ಹತೋಟಿಗೊಳಿಸುವುದಿದೆ. ತೆಮಡಿಕ ಗ್ರಂಥಿಯ ಹಿಂದಣ ಹಾಲೆಯನ್ನು ನರಗಳ ಮೂಲಕವೂ ಮುಂದಣ ಹಾಲೆಯನ್ನು ಅದರ ತೂರುಗೊಂದಿ ಮಂಡಲದ (ಪೋರ್ಟಲ್ ಸಿಸ್ಟಂ) ಧಮನಿಗಳ ಮೂಲಕವೂ ಚಟುವಟಿಕೆಯನ್ನು ಕೆಳತಲೆಯರೆ (ಹೈಪೊತ್ಯಾಲಮಸ್) ಅಂಕೆಗೊಳಿಸುವುದು. ಕೆಳತಲೆಯರೆಯಲ್ಲಿನ ನಡು ಬೀಜಗಳ (ನ್ಯೂಕ್ಲಿಯೈ) ತಂಡಗಳಿಂದ ಹೊರಟ ನರಗಳು ಈ ಧಮನಿಗಳ ಸುತ್ತ ಕೊನೆಗೊಳ್ಳುವುವು. ಇವುಗಳ ಕೊನೆಗಳಲ್ಲಿ ಕೆಲವು ರಸಾಂಶಗಳು ಸುರಿಯುತ್ತವೆ. ಇವಕ್ಕೆ ವಿಮೋಚಕ (ರಿಲೀಸಿಂಗ್) ಅಂಶಗಳು ಎಂದಿದೆ. ಈ ರಸಾಂಶಗಳು ರಕ್ತದ ಮೂಲಕ ತೆಮಡಿಕ ಗ್ರಂಥಿಯನ್ನು ಸೇರಿ ಅದರ ಚಟುವಟಿಕೆಯನ್ನು ಹೆಚ್ಚು ಕಡಿಮೆ ಮಾಡುತ್ತವೆ. ತೆಮಡಿಕ ಗ್ರಂಥಿಯ ಮುಂದಣ ಹಾಲೆಯಲ್ಲಿನ ಚೋದನಿಕಗಳು ಮೈಯಲ್ಲಿನ ಬಹುಪಾಲು ಎಲ್ಲ ಒಳಸುರಿಕ ಗ್ರಂಥಿಗಳ ಚಟುವಟಿಕೆಗಳನ್ನೂ ನಿಯಂತ್ರಿಸುವುದರಿಂದ ಇವೆಲ್ಲಕ್ಕೂ ಕೆಳತಲೆಯರೆಯದೇ ಮೇಲುಗೈ ಎನ್ನಬಹುದು.

ಅಡ್ರಿನಲ್ ಗ್ರಂಥಿಯ ಕುಸುರಿಯ (ಮೆಡುಲ) ಚಟುವಟಿಕೆ ಮುಖ್ಯವಾಗಿ ತನ್ನಂಕೆಯ ನರಮಂಡಲದ ಅಂಕೆಯಲ್ಲಿರುತ್ತದೆ.

ಒಳಸುರಿಕ ಗ್ರಂಥಿಗಳ ನಿಜಗೆಲಸಗಳಲ್ಲಿ ಏರುಪೇರಾದರೆ ಆಗಾಗ್ಗೆ ರೋಗಗಳು ತಲೆದೋರುತ್ತವೆ. ಹೀಗಾಗುವ ಕಾರಣಗಳೂ ಹಲಬಗೆಯವು, ಅಲ್ಲದೆ ವಿಚಿತ್ರವಾದುವು. ಮಿತಿಗೆಟ್ಟು ಬೆಳೆದರೆ, ಗಂತಿಗಳು ಒಳಗಿದ್ದರೆ, ಈ ಗ್ರಂಥಿಗಳ ಚಟುವಟಿಕೆ ಹೆಚ್ಚಿ ಚೋದನಿಕಗಳ ರಸ ಸುರಿವುದೂ ಏರುವುದು. ಹಾಳಿಡುವ ಗಂತಿಗಳಿಂದಲೂ ಗ್ರಂಥಿಗಳ ರಕ್ತನಾಳಗಳಿಗೆ ತಾಕುವ ರೋಗಗಳಿಂದಲೂ ಗೊತ್ತಿರದ ಕಾರಣಗಳಿಂದಾಗುವ ನಮೆತದಿಂದಲೂ (ಆಟ್ರೊಫಿ) ಗ್ರಂಥಿಗಳು ಜಡವಾಗಿ ಕೆಲಸಗೆಡಬಹುದು. ಆಗ ಒಳಸುರಿಕ ರಸಗಳ ಕೊರತೆಯಾಗುವುದು, ಇಲ್ಲವೇ ಸುರಿತ ನಿಂತೇ ಹೋಗಬಹುದು.

ಒಳಸುರಿಕ ಗ್ರಂಥಿಗಳ ನಿಜಗೆಲಸಗಳನ್ನು ಕಂಡುಕೊಳ್ಳಲು ಕೆಲವು ಉಪಾಯಗಳಿವೆ; ಮೊದಲಾಗಿ, ಪ್ರಯೋಗದ ಪ್ರಾಣಿಗಳಲ್ಲಿ, ಗೊತ್ತಾದ ಗ್ರಂಥಿಯನ್ನು ಮೈಯಿಂದ ಕಿತ್ತೊಗೆದಾಗ ಆಗುವ ಬದಲಾವಣೆಗಳನ್ನು ಗುರುತಿಸುವುದು. ಆರೋಗ್ಯದ ಪ್ರಾಣಿಗೆ ಒಂದು ಗ್ರಂಥಿಯ ಸಾರಕವನ್ನು ಕೊಟ್ಟಾಗ ಏನೇನಾಗುವುದೆಂದು ತಿಳಿಯುವುದು. ಕೊನೆಯದಾಗಿ, ಗ್ರಂಥಿಗೆ ಹತ್ತುವ ರೋಗಗಳಲ್ಲಿನ ಅನಾರೋಗ್ಯದ ಶೋಧನೆ. ಇದಕ್ಕಾಗಿ ಹಲವಾರು ಶಾಸ್ತ್ರಪರಿಣತರ ನೆರವು ಬೇಕಾಗುವುದು.

**ತೆಮಡಿಕ:** ಈ ಗ್ರಂಥಿಯ ಮುಂದಣ ಹಾಲೆಯಲ್ಲಿ, ಆರು ಚೋದನಿಕಗಳು ತಯಾರಾಗುತ್ತವೆ : ಬೆಳೆತದ ಚೋದನಿಕ (ಗ್ರೋತ್ ಹಾರ್ಮೋನ್), ಗುರಾಣಿಕ ಚೋದಕ (ತೈರೊಟ್ರೋಪಿಕ್), ಅಡ್ರಿನಲ್ ರಗಟೆ ಚೋದಕ (ಅಡ್ರಿನೊಕಾರ್ಟಿಕೊಟ್ರೋಪಿಕ್), ಹಾಲೂರಿಗ (ಪ್ರೋಲ್ಯಾಕ್ಟಿನ್), ಜನನಗ್ರಂಥಿ ಚೋದಕ (ಗೊನಾಡೊಟ್ರೋಪಿಕ್), ಮೆಲಿನೊಸೈಟ್ ಚೋದಕ ಚೋದನಿಕಗಳು. ಇವೆಲ್ಲ ಬಹುಮಟ್ಟಿಗೆ ಬೇರೆ ಒಳಸುರಿಕ ಗ್ರಂಥಿಗಳನ್ನು ಹತೋಟಿಯಲ್ಲಿಡುತ್ತವೆ.

ಬೆಳೆತದ ಚೋದನಿಕ : ಮೈ ಬೆಳೆವಣಿಗೆಗೆ ಕಾರಣವಾದ ಈ ಚೋದನಿಕ ಇಯೋಸಿನೊಫಿಲ್ ಜೀವಕಣಗಳಲ್ಲಿ ತಯಾರಾಗಿ ಒಳಸುರಿವುದು. ಬಹುಮಟ್ಟಿಗೆ ಮೈಯಲ್ಲಿನ ಎಲ್ಲ ಊತಕಗಳ ಬೆಳೆವಣಿಗೆಗೂ ಇದೇ ಕಾರಣ. ಇದರ ಸುರಿತ ಕುಂದಿದರೆ ಬೆಳೆವಣಿಗೆಯೂ ಕುಗ್ಗುತ್ತದೆ. ಸುರಿತ ಏರಿದರೆ ಬೆಳೆವಣಿಗೆ ಕೂಡ ಜೋರಾಗುವುದು ಇಲ್ಲವೇ ಹದಗೆಡುವುದು. ಅಲ್ಲದೆ, ಹಿಟ್ಟು ಸಕ್ಕರೆ ಪ್ರೋಟೀನು ಕೊಬ್ಬುಗಳ ಜೀವವಸ್ತುಕರಣದ (ಮೆಟಬಾಲಿಸಂ) ಮೇಲೂ ಇದರ ಪ್ರಭಾವವಿದೆ.

ಅನೇಕ ಪ್ರಾಣಿಗಳಲ್ಲಿ ಈ ಚೋದನಿಕ ಚೊಕ್ಕ ರೂಪದಲ್ಲಿ ದೊರೆತಿದೆ. ಇದರ ರಾಸಾಯನಿಕ ರಚನೆಯೂ ಗೊತ್ತಿದೆ. ಮಾನವನ ಈ ಚೋದನಿಕದಲ್ಲಿ 188 ಅಮೈನೋ ಆಮ್ಲಗಳಿವೆ. ಇದನ್ನು ಚುಚ್ಚಿ ಹೊಗಿಸಿದರೆ, ಪ್ರಾಣಿಗಳು ಬೇಗನೆ ಬೆಳೆಯುತ್ತವೆ. ಮಾನವನ ಇಲ್ಲವೇ ಕೋತಿಗಳ ಚೋದನಿಕ ಮಾತ್ರ ಮಾನವನಲ್ಲಿ ಪ್ರಭಾವ ತೋರುವುದೇ ಹೊರತು ಬೇರೆ ಪ್ರಾಣಿಗಳವಲ್ಲ. ಬೇರೆ ಪ್ರಾಣಿಗಳಲ್ಲೂ ಇದು ಪ್ರಭಾವಿ.

ಇಯೋಸಿನೊಫಿಲ್ ಜೀವಕಣ ಭಾಗದಲ್ಲಿ ಗಂತಿ ಎದ್ದಿದ್ದರೆ, ಎಳೆಯದಲ್ಲಿ ತೋರ ಕಾಯವೂ (ಜೈಗ್ಯಾಂಟಿಸಂ), ಬೆಳೆದವರಲ್ಲಿ ತೋರ ಅವಯವತನವೂ (ಅಕ್ರೋಮೆಗಲಿ) ಕಂಡುಬರುವುದು. ತೋರ ಅವಯವತನದಲ್ಲಿ ಅಂಗೈ ಅಂಗಾಲು ಬೆರಳುಗಳೇ ಮುಂತಾದ ಅಂಗಗಳು ಮಿತಿಮೀರಿ ಬೆಳೆದು ವಿಕಾರರೂಪ ತಾಳುವುವು. ಯಾವ ಕಾರಣದಿಂದಲಾದರೂ ಈ ಜೀವಕಣ ಭಾಗದ ನಿಜಗೆಲಸ ಕೆಟ್ಟರೆ ರೋಗಿ ಗುಜ್ಜಾರಿಯಾಗುವನು. ರಕ್ತದಲ್ಲಿ ಎಂದಿಗೂ ಇರುವ ಸಕ್ಕರೆ ಪ್ರಮಾಣವನ್ನು ಈ ಚೋದನಿಕ ಏರಿಸುತ್ತದೆ. ರಕ್ತದಲ್ಲಿಂದ ಅಮೈನೋ ಆಮ್ಲಗಳು ಜೀವಕಣಗಳ ಒಳಸಾಗುವುದನ್ನು ಸರಳಗೊಳಿಸಿ ಅಲ್ಲಿ ಪ್ರೋಟೀನು ತಯಾರಿಕೆಯನ್ನು ಹೆಚ್ಚಿಸುವುದು. ಪುಷ್ಟಿ ನೀಡಿ ಬೆಳೆಸುವ ಈ ನಿಜಗೆಲಸಕ್ಕೆ ಜೀವವಸ್ತುಚಯ (ಅನಬಾಲಿಸಂ) ಎಂದಿದೆ. ಮೈಯಲ್ಲಿ ಕೂಡಿಟ್ಟಿರುವ ಕೊಬ್ಬನ್ನು ಕೊಬ್ಬಿನ ಆಮ್ಲಗಳಾಗಿ ಇದು ಒಡೆಸುತ್ತದೆ.

ಕೆಳತಲೆಯರೆಯಲ್ಲಿ ಹುಟ್ಟುವ ಬೆಳೆತದ ಚೋದನಿಕದ ವಿಮೋಚಕ ಅಂಶ ಈ ಚೋದನಿಕ ಸುರಿವುದನ್ನು ಅಂಕೆಗೊಳಿಸುವುದು.

ಗುರಾಣಿಕ ಚೋದಕ ಚೋದನಿಕ : ಬೇಸೊಫಿಲ್ ಜೀವಕಣಗಳಲ್ಲಿ ಹುಟ್ಟಿ ಗುರಾಣಿಕ ಗ್ರಂಥಿಯ ರಚನೆ ಬೆಳೆತ ಸುರಿತಗಳನ್ನು ಚೋದಿಸುತ್ತದೆ. ಈ ಚೋದನಿಕದ ಚಟುವಟಿಕೆ ಹೆಚ್ಚಿದರೆ ಗ್ರೇವ್ಸನ ರೋಗವೇಳುವುದು. ಬಿರುಗಣ್ಣು (ಎಕ್ಸಾಫ್ತಾಲ್ಮಸ್) ಇದರ ಒಂದು ಲಕ್ಷಣವಾಗಿದ್ದರೂ ಹಾಗಾಗಲು ಕಾರಣವಾಗಿ ಬಿರುಗಣ್ಣಾಗಿಸುವ ಅಂಶವೇ ಬೇರೊಂದು ಇರುವಂತೆ ತೋರುವುದು, ಮುಖ್ಯವಾಗಿ, ಗ್ರೇವ್ಸನ ರೋಗಕ್ಕೆ ತೆಮಡಿಕ ಗ್ರಂಥಿ ಸರಿಯಾಗಿ ಕೆಲಸ ಮಾಡದ್ದೇ ಕಾರಣ, ತೆಮಡಿಕ ಗ್ರಂಥಿಯಿಂದ ಗುರಾಣಿಕ ಚೋದಕ ರಸ ಸುರಿತದ ಹತೋಟಿ ಕೆಳತಲೆಯರಲ್ಲಿನ ಗುರಾಣಿಕ ಚೋದಕ ವಿಮೋಚ ಕಾಂಶದಿಂದ ಆಗುವುದು.

ಅಡ್ರಿನಲ್ ರಗಟೆ ಚೋದಕ ಚೋದನಿಕ (ಎಸಿಟಿಎಚ್): ಬೇಸೊಫಿಲ್ ಜೀವಕಣ ಗಳಲ್ಲಿ ಇದು ತಯಾರಾಗುತ್ತದೆಂಬ ನಂಬಿಕೆಯಿತ್ತು. ಆದರೀಗ, ಕ್ರೋಮೋಫೋಬುಗಳೇ ತಯಾರಿಸುವಂತೆ ತೋರುವುದು. ಈ ಚೋದನಿಕವೂ ಚೊಕ್ಕರೂಪದಲ್ಲಿ ದೊರೆತು ರೋಗಚಿಕಿತ್ಸೆಯಲ್ಲಿ ಮದ್ದಾಗಿ ಬಳಕೆಯಲ್ಲಿದೆ. ಇದು ಅಡ್ರಿನಲ್ ಗ್ರಂಥಿಗಳ ರಗಟೆಯ (ಕಾರ್ಟೆಕ್ಸ್) ಬೆಳೆತ ನಿಜಗೆಲಸಗಳನ್ನು ಹೆಚ್ಚಿಸುತ್ತದೆ. ಆಲ್ಡೊಸ್ಟಿರೋನ್ ಸುರಿತವನ್ನು ಹೆಚ್ಚು ಕಡಿಮೆ ಮಾಡದು. ಈ ಚೋದನಿಕದ ಸುರಿತ ಮಿತಿಮೀರಿದರೆ, ಕಷಿಂಗನ ಲಕ್ಷಣಕೂಟ (ಕಷಿಂಗ್ಸ್ ಸಿಂಡ್ರೋಂ) ಕಾಣಿಸಿಕೊಳ್ಳುತ್ತದೆ. ಈ ಚೋದನಿಕ ರಸದ ಸುರಿತವನ್ನು ಕೂಡ, ಕೆಳತಲೆಯರೆಯಲ್ಲಿ ಹುಟ್ಟುವ ಅಡ್ರಿನಲ್ ರಗಟೆಚೋದಕ ವಿಮೋಚಕಾಂಶ ನಿಯಂತ್ರಿಸುವುದು.

ಹಾಲೂರಿಗ ಚೋದನಿಕ : ಇಯೋಸಿನೊಫಿಲ್ ಜೀವಕಣಗಳಲ್ಲಿ ಇದು ಹುಟ್ಟುವುದು. ಬೆಳೆದಿರುವ ಮೊಲೆಯಲ್ಲಿ ಇದು ಹಾಲೂರಿಸುತ್ತದೆ. ಹಾಲೂರಲು ಇದು ಬೇಕೇಬೇಕು. ಕೆಲವು ಪ್ರಾಣಿಗಳ ಅಂಡಾಶಯಗಳಲ್ಲಿ ಹಳದಿಂಡು (ಕಾರ್ಪಸ್‌ಲೂಟಿಯಂ) ರೂಪುಗೊಳ್ಳಲೂ ಇದೇ ಕಾರಣವೆನಿಸಿದೆ. ಇದರಿಂದಲೇ ಇದಕ್ಕೆ ಹಳದಿಂಡುಚೋದಕ (ಲೂಟಿಯೊ ಟ್ರೋಪಿಕ್) ಚೋದನಿಕವೆಂದು ಹೆಸರಿದೆ. ಇದು ಹೆಣ್ಣಲ್ಲೇ ಅಲ್ಲದೆ, ಗಂಡಲ್ಲೂ ಇರುವುದಾದರೂ ಗಂಡಿನಲ್ಲಿ ಇದರ ಪಾತ್ರ ಏನೆಂದು ಗೊತ್ತಿಲ್ಲ. ಕೆಳತಲೆಯರೆಯಲ್ಲಿ ಇದನ್ನು ಕುಂದಿಸುವ ಅಂಶವೊಂದು ತಯಾರಾಗುವುದು.

ಜನನಗ್ರಂಥಿ ಚೋದನಿಕಗಳು : ಕೋಶಿಕ ಚೋದಕ (ಫಾಲಿಕಲ್ ಸ್ಟಿಮುಲೇಟಿಂಗ್), ಹಳದಿಂಡುಗೊಳಿಕ (ಲೂಟಿನೈಸಿಂಗ್) ಎಂದು ಎರಡು ಚೋದನಿಕಗಳಿವೆ. ಇವೆರಡೂ ಬೇಸೊಫಿಲ್ ಜೀವಕಣಗಳಲ್ಲಿ ಹುಟ್ಟುವುವು. ಇವು ಒಂದಕ್ಕೊಂದು ನೆರವಾಗುತ್ತವೆ.

ಹೆಂಗಸರ ಅಂಡಾಶಯಗಳಲ್ಲಿ ಕೋಶಿಕ ಚೋದಕ ಚೋದನಿಕ ಗ್ರಾಫನ ಕೋಶಿಕಗಳನ್ನು (ಗ್ರಾಫಿಯನ್ ಫಾಲಿಕಲ್ಸ್) ಬೆಳೆಸುವುದು. ಹೆಣ್ಣುಲಿಂಗರಸವಾದ ಬೆದೆಜನಕವನ್ನು (ಈಸ್ಟ್ರೊಜನ್) ಈ ಕೋಶಿಕ ತಯಾರಿಸಿಬಿಡುತ್ತದೆ. ಅಲ್ಲದೆ, ಕೋಶಿಕ ಚೋದಕ ಚೋದನಿಕ ಸುರಿತದ ನಿಯಂತ್ರಣವೂ ಕೆಳತಲೆಯರೆಯ ಕೈಯಲ್ಲೇ ಇದೆ. ರಕ್ತದಲ್ಲಿ ಬೆದೆಜನಕದ ಪ್ರಮಾಣ ಹೆಚ್ಚಾದರೆ, ಕೋಶಿಕ ಚೋದಕ ಚೋದನಿಕದ ಸುರಿತವೂ ಇಳಿದು, ಹಳದಿಂಡುಚೋದಕ ಚೋದನಿಕದ ಸುರಿವು ಏರುವುದು. ಪೂರ್ತಿಯಾಗಿ ಬೆಳೆದ ಗ್ರಾಫನ ಕೋಶಿಕ ಒಡೆದು ಒಳಗಿರುವ ಅಂಡಾಣುವನ್ನು ಅಂಡಾಶಯದಿಂದ ಬಿಡುಗಡೆ ಮಾಡಿ ಕೋಶಿಕವಿದ್ದೆಡೆ ಹಳದಿಂಡು ಬೆಳೆವಂತೆ ಹಳದಿಂಡುಚೋದಕ ಚೋದನಿಕ ಚೋದಿಸುತ್ತದೆ. ಹೆಣ್ಣಿನ ಮತ್ತೊಂದು ಚೋದನಿಕವಾದ ಪ್ರೊಜೆಸ್ಟಿರೋನು ಹಳದಿಂಡು ಸುರಿಬಿಡುತ್ತದೆ. ಈ ಸುರಿತ ಕೂಡ ಹಳದಿಂಡುಚೋದಕ ಚೋದನಿಕದ ಹತೋಟಿಯಲ್ಲಿದೆ. ಮತ್ತೆ ಈ ಚೋದನಿಕದ ಸುರಿತ ಕೆಳತಲೆಯರೆಯ ಅಂಕೆಯಲ್ಲಿದೆ. ಅಂಡಾಶಯದಿಂದ ಹೊರಬಿದ್ದು ಗರ್ಭನಾಳದ ಮೂಲಕ ಗರ್ಭಕೋಶವನ್ನು ಹೋಗುವ ಅಂಡಾಣು ಫಲವಂತವಾಗದಿದ್ದಲ್ಲಿ ಹಳದಿಂಡು ಮುರುಟಿಕೊಳ್ಳುತ್ತದೆ. ಆಗಲೇ ಹೆಂಗಸು ಮುಟ್ಟಾಗುವುದು **(ನೋಡಿ– ಮುಟ್ಟು)**.

ಗಂಡಿನಲ್ಲಿ ಕೋಶಿಕ ಚೋದಕ ಚೋದನಿಕ ಮುಖ್ಯ ಪಾತ್ರ ತರಡುಗಳಲ್ಲಿ ರೇತು ಕಣಗಳನ್ನು (ಸ್ಪರ್ಮಟೊಝೋವ) ಬೆಳೆಸುವುದರಲ್ಲಿದೆ, ಆದರೆ ಹಳದಿಂಡು ಚೋದಕ ಚೋದನಿಕ ಮಾತ್ರ ತರಡುಗಳಲ್ಲಿರುವ ಊತಕಾಂತರದ(ಇಂಟರ್‌ಸ್ಟಿಷಿಯಲ್) ಜೀವಕಣಗಳ ಬೆಳೆವಣಿಗೆ ಹೆಚ್ಚಿಸಿ ಅವು ಪುಲ್ಲಿಂಗಕಾರಿ (ಟೆಸ್ಟೊಸ್ಟಿರೋನ್) ಎಂಬ ಚೋದನಿಕ ಸುರಿವಂತೆ ಮಾಡುವುದು, ಆದ್ದರಿಂದಲೇ ಇದನ್ನು ಊತಕಾಂತರ ಜೀವಕಣಚೋದಕ ಚೋದನಿಕ ಎನ್ನುವುದೂ ಉಂಟು.

ಮೆಲಿನೊಸೈಟ್ ಚೋದಕ ಚೋದನಿಕ : ತೆಮಡಿಕ ಗ್ರಂಥಿಯ ನಡು ಹಾಲೆಯಲ್ಲಿ ಹುಟ್ಟುವುದು. ಇದರಿಂದ ಇದಕ್ಕೆ ಇಂಟರ್ಮೀಡಿನ್ ಎಂಬ ಹೆಸರೂ ಇದೆ. ಮುಖ್ಯವಾಗಿ ಇದರ ಪ್ರಭಾವ ಕಪ್ಪೆ ಮೀನುಗಳ ಚರ್ಮದಲ್ಲಿರುವ ಮೆಲನೊಫೋರುಗಳ ಮೇಲೆ ಕಾಣುವುದು. ಈ ಕರಿಯ ಜೀವಕಗಳು ಅಗಲವಾಗಿ ಹಿಗ್ಗಿದಾಗ ಚರ್ಮವೆಲ್ಲ ಕಪ್ಪೇರಿದಂತೆ ತೋರುತ್ತದೆ. ಮಾನವನಲ್ಲಿ ಇದರ ನಿಜಗೆಲಸವೇನೆಂದು ತಿಳಿದಿಲ್ಲ. ಆದರೂ ಮಾನವನಿಗೆ ಕೊಟ್ಟರೂ ಇದೇ ಪ್ರಭಾವವನ್ನು ಕಾಣಬಹುದು. ಈ ತೆರನ ಪ್ರಭಾವ ಅಡ್ರಿನಲ್ ರಗಟೆ ಚೋದಕ ಚೋದನಿಕದಿಂದಲೂ ತೋರುತ್ತದೆ.

ತೆಮಡಿಕ ಗ್ರಂಥಿಯ ಮುಂದಣ ಹಾಲೆ ಪೂರ್ತಿ ಹಾಳಾದರೆ ಸಿಮ್ಮಂಡ್ಸನ ರೋಗವೇಳುವುದು. ಈ ರೋಗದಲ್ಲಿ ಅಂಡಾಶಯಗಳು ನವೆದುಹೋಗಿ ಗುರಾಣಿಕ, ಅಡ್ರಿನಲ್ ರಗಟೆ ಗ್ರಂಥಿಗಳ ನಿಜಗೆಲಸಗಳೂ ಕುಗ್ಗುತ್ತವೆ. ರೋಗಿ ಬಡಕಲಾಗಿ ನಿತ್ರಾಣಿಯಾಗುವನು. ರಕ್ತದಲ್ಲಿನ ಸಕ್ಕರೆ ಪ್ರಮಾಣ ಕುಗ್ಗಲೂಬಹುದು.

ತೆಮಡಿಕದ ಹಿಂದಣ ಹಾಲೆ ಚೋದನಿಕಗಳು : ಈ ಹಿಂದಣ ಹಾಲೆಯನ್ನು ಕೆಳತಲೆಯರೆಯಿಂದ ಇಳಿದು ಬೆಳೆದ ಭಾಗವೆಂದೂ ಗಣಿಸಬಹುದು. ಕೆಳತಲೆಯರೆಯಲ್ಲಿ ರುವ ಕಣ್ಣುಮೇಲಿನ (ಸುಪ್ರ ಆಪ್ಟಿಕ್) ಅಲ್ಲದೆ ಮಿದುಳ್ಗುಳಿ ಬದಿಯ (ಪ್ಯಾರಾವೆಂಟ್ರಿಕ್ಯುಲಾರ್) ನಡುಬೀಜಗಳಿಂದ ಹೊರಡುವ ನರಗಳು ತೆಮಡಿಕದ ಹಿಂದಣ ಹಾಲೆಯಲ್ಲಿ ಕೊನೆಗೊಳ್ಳುತ್ತವೆ. ಹಿಂದಣ ಹಾಲೆಯ ರಚನೆಯೂ ಮಿದುಳಿನದರ ಹಾಗೆಯೇ ಇರುವುದು. ನರಂಟು (ನ್ಯೂರೋಗ್ಲಿಯ) ಜೀವಕಣಗಳ ರೂಪ ಬದಲಾಗಿ ತೆಮಡಿಕ ಕಣಗಳಾಗುವುವು (ಪಿಟ್ಯೂಸೈಟ್). ಈ ಹಿಂದಣ ಹಾಲೆಯಲ್ಲಿ ಎರಡು ಚೋದನಿಕಗಳು ಸುರಿಯುತ್ತವೆ : ರಕ್ತನಾಳೊತ್ತುಕ (ವೇಸೊಪ್ರೆಸ್ಸಿನ್) ಇಲ್ಲವೇ ಮೂತ್ರಸುರಿಕ ರೋಧಕ (ಆಂಟಿ ಡೈಯೂರೆಟಿಕ್) ಚೋದನಿಕ ಒಂದು; ಇನ್ನೊಂದು ಆಕ್ಸಿಟೋಸಿನ್. ಇವೆರಡು ಕೆಳತಲೆಯರೆಯ ನರಕಣಗಳಲ್ಲಿ ತಯಾರಾಗಿ ನರಗಳ ಮೂಲಕ ಸಾಗಿಳಿದು ಬಂದು ಹಿಂದಣ ಹಾಲೆ ಸೇರಿಕೊಂಡು ತೆಮಡಿಕ ಕಣಗಳಲ್ಲಿ ಕೂಡಿದ್ದು ಬೇಕೆಂದಾಗ ಬಿಡುಗಡೆಯಾಗುವುವು.

ಹಿಂದಣ ಹಾಲೆಯ ಸಾರಕವನ್ನು ಪ್ರಾಣಿಗಳಿಗೆ ಚುಚ್ಚಿ ಹೋಗಿಸಿದರೆ ರಕ್ತನಾಳಗಳ ಸ್ನಾಯುಗಳು ಕುಗ್ಗಿ, ರಕ್ತದ ಒತ್ತಡವೇರುವುದು, ಅಷ್ಟೊಂದು ಚೋದಕ ಸುರಿಯದ್ದರಿಂದ ಸಾಮಾನ್ಯವಾಗಿ ಈ ಪ್ರಭಾವ ಆರೋಗ್ಯದಲ್ಲಿ ಕಾಣಬರದು, ಆದರೆ ಮೂತ್ರಸುರಿಕರೋಧಕ ಪ್ರಭಾವ ಮಾತ್ರ ಕೊಂಚ ಕೊಟ್ಟರೂ ತೋರುತ್ತದೆ. ಮೈಯಲ್ಲಿರುವ ಲವಣಗಳ ಸಾಂದ್ರತೆಮಟ್ಟಕ್ಕೆ ತಕ್ಕಂತೆ ಇದು ಸುರಿವುದು, ಮೈಯಲ್ಲಿನ ರಸಗಳಲ್ಲಿ ಉಪ್ಪು (ಸೋಡಿಯಂ ಕ್ಲೋರೈಡು) ಹೆಚ್ಚಿದಾಗ ರಸಗಳ ಆಸ್ಮೋಟಿಕ್ ಒತ್ತಡ ಏರುತ್ತದೆ. ಆಗ ಕೆಳತಲೆಯರೆಯಲ್ಲಿರುವ ಆಸ್ಮೊರಿಸೆಪ್ಟಾರ್ಸ್ ಚೋದನೆಯಾಗಿ ಈ ಚೋದನಿಕವನ್ನು ಹಿಂದಣ ಹಾಲೆಯಲ್ಲಿ ಸುರಿವಂತೆ ಮಾಡುವುದು. ಮುಖ್ಯವಾಗಿ ಇದು ಮೂತ್ರಪಿಂಡದ ಕಿರ್ನಾಳಗಳು (ಟ್ಯೂಬ್ಯೂಲ್ಸ್) ನೀರನ್ನು ರಕ್ತಕ್ಕೆ ಮತ್ತೆ ಹೇರಿಕೊಳ್ಳುವಂತೆ ಮಾಡಿ ಮೂತ್ರ ಸುರಿವುದನ್ನು ತಗ್ಗಿಸುತ್ತದೆ. ಆಗ ನೀರು ಮೈಯಲ್ಲೇ ಉಳಿವುದು.

ಹಿಂದಣ ಹಾಲೆಯನ್ನು ಹಾಳುಮಾಡಿದರೆ, ಕಿತ್ತೊಗೆದರೆ, ರೋಗ ಹತ್ತಿದರೆ, ಸಪ್ಪನೆ ಬಹುಮೂತ್ರ (ಡಯಬೆಟಿಸ್ ಇನ್ಸಿಪಿಡಸ್) ಕಾಣಿಸಿಕೊಳ್ಳುತ್ತದೆ. ಈ ರೋಗದಲ್ಲಿ ಮೂತ್ರ ಬರೀ ನೀರುನೀರಾಗಿ ಹೆಚ್ಚೆಚ್ಚಾಗಿ ಹೋಗುತ್ತಿರುವುದು. ಮೂತ್ರದ ವಿಶಿಷ್ಟ ಗುರುತ್ವ ಇಳಿದಿರುವುದು. ಸಿಹಿಮೂತ್ರದಲ್ಲಿ (ಡಯಬೆಟಿಸ್ ಮೆಲ್ಲಿಟಸ್) ಇದ್ದಂತೆ ಮೂತ್ರದಲ್ಲಿ ಸಕ್ಕರೆ ಹೋಗದು, ಹಿಂದಣ ಹಾಲೆಯ ಮೂತ್ರ ಸುರಿಕರೋಧಕ ಚೋದನಿಕವನ್ನು ಚುಚ್ಚಿ ಹೊಗಿಸಿದರೆ ಇಲ್ಲವೇ ನಶ್ಯದ ಹಾಗೆ ಕೊಡುವುದರಿಂದ ರೋಗವನ್ನು ಅಂಕೆಯಲ್ಲಿಡಬಹುದು.

ಆಕ್ಸಿಟೋಸಿನ್ ಮುಖ್ಯವಾಗಿ ಹೆರಿಗೆಯಲ್ಲಿ ಗರ್ಭಕೋಶದ ಸ್ನಾಯುಗಳನ್ನು ಬಲುಚುರುಕಾಗಿ ಕುಗ್ಗಿಸುತ್ತದೆ. ಹೆರಿಗೆಯಲ್ಲಿ ಇದು ಒಳ್ಳೆಯ ನೆರವು ಎನಿಸಿದರೂ ಇದು ಆಗಬೇಕೇ ಬೇಡವೇ ಎನ್ನುವುದು ಗೊತ್ತಿಲ್ಲ. ತುಂಬಿರುವ ಮೊಲೆಗಳಿಂದ ಹಾಲನ್ನು ಹೊರಡಿಸುವುದು ಈ ಚೋದನಿಕದ ಇನ್ನೊಂದು ನಿಜಗೆಲಸ. ಆದರೆ ಹಾಲನ್ನು ತಯಾರಿಸುವ ಹಾಗೆ ಚೋದಿಸದು. ಇದೊಂದು ಹಿಮ್ಮರಿವ ವರ್ತನೆ (ರಿಫ್ಲೆಕ್ಸ್ ಆಕ್ಷನ್), ಮೊಲೆ ಚೂಚುಕವನ್ನು ಕೂಸು ಚೀಪಿದಾಗ ಈ ಆಕ್ಸಿಟೋಸಿನ್ ಸುರಿದು ಮೊಲೆಯ ಸಾಗುನಾಳಗಳ ಸುತ್ತಲೂ ಇರುವ ಸ್ನಾಯು ಮೇಲ್ಪೊರೆಯ (ಮಯೋ ಎಪಿತೀಲಿಯಲ್) ಜೀವಕಣಗಳನ್ನು ಕುಗ್ಗಿಸುವುದರಿಂದ ಹಾಲು ಹೊರಬರುವಂತೆ ಹಿಂಡುವುದು.

ಗಂಡಿನ ಬೀಜವಾದ ರೇತುಕಣ (ಸ್ಪರ್ಮಟಜೂನ್) ಗರ್ಭಕೋಶದೊಳಗೆ ಮುಂದೆ ಸಾಗಲೂ ಇದು ನೆರವಾಗುವುದೆಂಬ ನಂಬಿಕೆಯಿದೆ.

**ಗುರಾಣಿಕ:** ಈ ಗ್ರಂಥಿ ತೈರಾಕ್ಸಿನ್, ಟ್ರೈಅಯೊಡೊತೈರೊನೀನ್ ಚೋದನಿಕಗಳನ್ನು ಸುರಿಸುವುದು. ಇವಲ್ಲಿ ಅಯೊಡೀನ್ ಧಾತು ಇರುತ್ತದೆ. ಸುತ್ತಲೂ ಇರುವ ಗೋಳಾಕಾರದ ಕೋಶಿಕಗಳ ಒಂಟಿ ಪದರದ ಒಳಗಡೆ ಗ್ಲ್ಯಾಬ್ಯುಲಿನ್ ಪ್ರೋಟೀನಿನೊಂದಿಗೆ ಚೋದನಿಕ ಕೂಡಿ ತೈರೊಗ್ಲಾಬ್ಯುಲಿನ್ ಆಗಿ ಕೂಡಿರುವುದು. ಗುರಾಣಿಕ ಚೋದನಿಕ ಸುರಿವಾಗ ಗ್ಲಾಬ್ಯುಲಿನಿನಿಂದ ಬೇರ್ಪಟ್ಟು ರಕ್ತ ಸೇರುತ್ತದೆ.

ಈ ಗ್ರಂಥಿಯ ಚೋದನಿಕಗಳು ಮೈಯಲ್ಲಿನ ಎಲ್ಲ ಊತಕಗಳ ಜೀವವಸ್ತುಕರಣ ವೇಗವನ್ನು ಹೆಚ್ಚಿಸಿ ಚಟುವಟಿಕೆ ಏರುವಂತೆ ಮಾಡುವುವು. ಹಾಗಾದಾಗ ಆಮ್ಲಜನಕದ ಸೇವನೆ ಹೆಚ್ಚಿ ಬೇಡಿಕೆ ಬಹಳವಾಗಿ ಮೈಯಲ್ಲಿ ಕಾವೇರುತ್ತದೆ. ಮೈ ಮನಸ್ಸುಗಳ ಬೆಳವಣಿಗೆಗೂ ಈ ಚೋದನಿಕಗಳು ಬೇಕೇ ಬೇಕು. ಇವು ಸುರಿವುದರ ಹತೋಟಿ ತೆಮಡಿಕದ ಮುಂದಣ ಹಾಲೆಯ ಗುರಾಣಿಕ ಚೋದಕ ಚೋದನಿಕದ ಕೈಲಿದೆ.

ಗುರಾಣಿಕದ ಚಟುವಟಿಕೆ ಕುಂದಿದರೆ ಲೋಳುಬ್ಬರದ (ಮಿಕ್ಸಿಡೀಮ) ರೋಗವೇಳುವುದು. ಜೀವವಸ್ತುಕರಣವೇಗ ಕುಂದಿರುವುದರಿಂದ ರೋಗಿ ನಿತ್ರಾಣಿಯಾಗಿ ಮಂಕನಾಗಿ ಜಡವಾಗಿ ಬಿದ್ದಿರುವನು. ಚರ್ಮ ಒಣಕಲಾಗಿ ಕೂದಲುದುರುವುದು. ರೋಗಿ ಚಳಿಯನ್ನು ತಡೆಯಲಾರ. ಗುರಾಣಿಕ ಗ್ರಂಥಿ ಎಳೆತನದಲ್ಲಿ ಸರಿಯಾಗಿ ಬೆಳೆಯದಿದ್ದಲ್ಲಿ ಮಗು ಬೆಳೆಯದೆ ಗುಜ್ಜಾರಿಯಾಗಿ ಮಂಕಾಗುವುದು. ಇದಕ್ಕೆ ಹೆಡ್ಡ ಗುಜ್ಜು (ಕ್ರೆಟಿನಿಸಂ) ಎಂದು ಹೆಸರು, ಜನನಾಂಗಗಳು ಬೆಳೆಯದೆ, ವಯಸ್ಸಾದರೂ ಎಳೆಯದಾಗೇ ಇರವುವು. ಈ ರೋಗ ತಲೆದೋರಿದ 2–3 ತಿಂಗಳೊಳಗಾಗೇ ಕಂಡು ಗುರುತಿಸಿ ತೈರಾಕ್ಸಿನನ್ನು ಕೊಡುತ್ತಬಂದರೆ ಮಗುವಿನ ಬೆಳವಣಿಗೆ ಉತ್ತಮವಾಗುತ್ತದೆ.

ಗುರಾಣಿಕದ ಚಟುವಟಿಕೆ ಮಿತಿಮೀರಿದರೆ, ಜೀವವಸ್ತುಕರಣ ಏರುತ್ತದೆ. ಹಸಿವು ವಿಪರೀತವಾಗಿ, ಬಹಳ ತಿನ್ನುವಂತಾಗುತ್ತದೆ. ಇಷ್ಟಾದರೂ ಮೈತೂಕವಿಳಿದು ಎದೆ ಗುಂಡಿಗೆ ಜೋರಾಗಿ ಬಡಿದುಕೊಳ್ಳುವುದು. ಮೈಕಾವೇರುವುದರಿಂದ ಯಾವಾಗಲೂ ಬೆವರುತ್ತಿರುವುದು. ರೋಗಿ ಬೇಸಗೆಯ ಬೇಗೆಯನ್ನು ತಡೆಯದಾಗುವನು. ಈ ಗ್ರಂಥಿ ಚುರುಕಿದ್ದಾಗಿನ ಗ್ರೇವ್ಸನ ರೋಗದಲ್ಲಿ ಬಿರುಗಣ್ಣು ಇರುವುದು.

ಚಟುವಟಿಕೆಯಿಂದ ಚೆನ್ನಾಗಿರಲು ಗುರಾಣಿಕಕ್ಕೆ ಅಯೊಡೀನಿನ ಸರಬರಾಜು ಸಾಕಷ್ಟಿರಬೇಕು. ಅಡುಗೆ ಉಪ್ಪಿನಲ್ಲಿ ಇದು ಮುಖ್ಯವಾಗಿ ಒದಗುತ್ತದೆ. ಮೈಗೆ ಅಯೊಡೀನಿನ ಕೊರತೆಯಾದರೆ, ಗುರಾಣಿಕ ಗ್ರಂಥಿ ದೊಡ್ಡದಾಗುತ್ತದೆ. ಇದಕ್ಕೆ ಸರಳ ಗಳಗಂಡ (ಸಿಂಪಲ್ ಗಾಯ್ಟರ್) ಎಂದಿದೆ. ಅಯೊಡೀನ್ ಸಾಕಷ್ಟು ದೊರೆಯದಾದಾಗ ಗುರಾಣಿಕದ ಸುರಿಕೆಯು ತಗ್ಗುವುದು. ಹೀಗೆ ರಕ್ತದಲ್ಲೂ ಇದರ ಚೋದನಿಕಗಳು ಕಡಿಮೆಯಾದಾಗ, ತೆಮಡಿಕದ ಮುಂದಣ ಹಾಲೆಯ ಗುರಾಣಿಕ ಚೋದಕ ಚೋದನಿಕದ ಸುರಿತ ಹೆಚ್ಚುವುದರಿಂದ ಗುರಾಣಿಕ ದಪ್ಪನಾಗುತ್ತದೆ. ಇದರಿಂದಲೇ ಗುರಾಣಿಕದ ಚೋದನಿಕಗಳ ಸುರಿತ ಕುಂದಿಸುವ ಮದ್ದುಗಳ ಸೇವನೆಯಿಂದಲೂ ಗಳಗಂಡವಾಗುವುದು. ಬಲು ಚುರುಕಾಗಿರುವ ಗುರಾಣಿಕದ ಚೋದನಿಕಗಳ ಸುರಿತ ಕುಂದಿಸುವ ಮದ್ದುಗಳ ಸೇವನೆಯಿಂದಲೂ ಗಳಗಂಡವಾಗುವುದು. ಬಲು ಚುರುಕಾಗಿರುವ ಗುರಾಣಿಕದ ಚಟುವಟಿಕೆಯನ್ನು ಕುಂದಿಸುವ ಕಾರ್ಬಿಮ ಜೋಲ್, ತಯೊಯುರಸಿಲ್ ಈ ಬಗೆಯ ಮದ್ದುಗಳು.

ಗುರಾಣಿಕದಿಂದ ಸುಣ್ಣವೇರಿಕ (ಕ್ಯಾಲ್ಸಿಟೊನಿನ್) ಚೋದನಿಕವೊಂದು ಸುರಿವುದೆಂದು ಇತ್ತೀಚೆಗೆ ಗೊತ್ತಾಗಿದೆ. ಮೂಳೆಗಳಲ್ಲಿನ ಸುಣ್ಣ ಕರಗಿ ಕಳೆವುದನ್ನು ತಪ್ಪಿಸಿ, ರಕ್ತದ ಸುಣ್ಣಧಾತು ಪ್ರಮಾಣವನ್ನು ಇದು ತಗ್ಗಿಸುವುದು.

**ಬದಿಗುರಾಣಿಕಗಳು:** ಇವು ಪ್ಯಾರಾತಾರ್ಮೋನ್ ಚೋದನಿಕವನ್ನು ಸುರಿಸುತ್ತವೆ. ಮೈಯಲ್ಲಿನ ಸುಣ್ಣಧಾತು, ರಂಜಕಗಳು ಜೀವವಸ್ತುಕರಣವನ್ನು ಈ ಚೋದನಿಕ ನಿಯಂತ್ರಿಸುವುದು. ಇದೊಂದು ಪ್ರೋಟೀನು. ಮೂಳೆಗಳಲ್ಲಿ ಕೂಡಿರುವ ಸುಣ್ಣಧಾತುವನ್ನು ತೆಗೆದು ರಕ್ತಕ್ಕೆ ಸೇರಿಸುವುದು. ಅಂತೆಯೇ ತೆಗೆದ ರಂಜಕವನ್ನು ಮೂತ್ರದಲ್ಲಿ ಹೊರದೂಡುತ್ತದೆ. ಬದಿಗುರಾಣಿಕ ಗ್ರಂಥಿಗಳು ತೆಮಡಿಕದ ಹತೋಟಿಯಲ್ಲಿಲ್ಲ. ರಕ್ತದಲ್ಲಿನ ಸುಣ್ಣಧಾತುವಿನ ಪ್ರಮಾಣಕ್ಕೆ ತಕ್ಕಹಾಗೆ ಇದರ ಚೋದನಿಕದ ಸುರಿತವೂ ಇರುವುದು. ರಕ್ತದಲ್ಲಿ ಸುಣ್ಣಧಾತು ಹೆಚ್ಚಾಗಿದ್ದರೆ ಇದರ ಸುರಿತ ಕುಗ್ಗುವುದು, ಕಡಿಮೆಯಾದರೆ ಸುರಿತ ಹೆಚ್ಚುತ್ತದೆ.

ಈ ಗ್ರಂಥಿಗಳ ಚಟುವಟಿಕೆ ಏರುವುದು, ಇವು ದೊಡ್ಡದಾಗಿ ಬೆಳೆದಾಗ ಇಲ್ಲವೇ ಒಳಗೆ ಗಂತಿ ಎದ್ದಾಗ ರಕ್ತದಲ್ಲಿನ ಸುಣ್ಣಧಾತು ಹೆಚ್ಚಿ, ರಂಜಕ ಪ್ರಮಾಣ ಇಳಿವುದು, ಇದರಿಂದ ಮೂಳೆಗಳಲ್ಲಿ ಸುಣ್ಣಧಾತು ಇಲ್ಲದಂತಾಗಿ ನಾರುಗೂಡಿ ಟೊಳ್ಳಾಗಿ ಸುಲಭವಾಗಿ ಮುರಿಯಬಹುದು. ಇಲ್ಲವೆ ಸೊಟ್ಟನಾಗಬಹುದು. ಇದಕ್ಕೆ ರೆಕ್ಲಿಂಗ್ ಹೌಸೆನ್ನನ ರೋಗ ಎಂದಿದೆ. ಸುಣ್ಣದ ಲವಣಗಳು ಬಹಳವಾಗಿ ಮೂತ್ರಪಿಂಡಗಳ ಮೂಲಕ ಸಾಗುವುದರಿಂದ ಆ ಅಂಗದಲ್ಲೇ ಸುಣ್ಣಗೂಡಬಹುದು (ಕ್ಯಾಲ್ಸಿಫಿಕೇಷನ್), ಇದೇ ಸುಣ್ಣಕಲ್ಲುಗಳಂತಾ ಗಿರಲೂಬಹುದು.

ಬದಿಗುರಾಣಿಕಗಳ ಚಟುವಟಿಕೆ ಕುಂದಿದ್ದಾಗ, ರಕ್ತದಲ್ಲಿನ ಸುಣ್ಣಧಾತುವಿನ ಪ್ರಮಾಣವಿಳಿದು, ರಂಜಕದ ಪ್ರಮಾಣವೇರುತ್ತದೆ. ರಕ್ತದಲ್ಲಿ ಸುಣ್ಣಧಾತು ಸಾಕಷ್ಟಿರದೆ ಕೊರೆಯಾದಾಗ, ಮೈಯಲ್ಲಿ ಕೆಲವೆಡೆಗಳಲ್ಲಿ (ಮುಖ್ಯವಾಗಿ ಕೈಕಾಲುಗಳಲ್ಲಿ) ಸ್ನಾಯುಗಳು ಯಾವ ಚೋದನೆಯೂ ಇಲ್ಲದೆ ಕುಗ್ಗುತ್ತ ಸೆಡೆದುಕೊಳ್ಳುವುವು. ಇದಕ್ಕೆ ಎಡೆ ಸೆಡೆತ (ಟೆಟನಿ) ಎಂದಿದೆ. ಈ ರೋಗಿಗಳಿಗೆ ಕಣ್ಣಪೊರೆಯೂ (ಕ್ಯಾಟರಾಕ್ಟ್) ಬರಬಹುದು. ಸುಣ್ಣಾಂಶವಿರುವ ಆಹಾರಸೇವನೆ, ಡಿ ಜೀವಾತುಗಳಿಂದ ಇದನ್ನು ಗುಣಪಡಿಸಬಹುದು. ಪ್ಯಾರಥಾರ್ಮೋನ್ ಕೊಟ್ಟರೂ ಗುಣಕಾರಿಯೇ, ಆದರೆ ಇದರ ಪ್ರಭಾವ ಕಾಣುವುದು ಬಲು ನಿಧಾನ. ಕೊಡುತ್ತಲೇ ಇದ್ದರೆ ಕೆಲಸಕ್ಕೆ ಬಾರದಾಗುತ್ತದೆ.

**ಮಾಂಸಲಿ:** ಈ ಗ್ರಂಥಿಯ ಒಳಸುರಿಕ ಭಾಗಗಳಾದ ಲ್ಯಾಂಗರ್ ಹ್ಯಾನ್ಸನ ದೀವುಗಳಲ್ಲಿರುವ ಅಲ್ಫ ಜೀವಕಣಗಳಲ್ಲಿ ಗ್ಲೂಕಗಾನ್, ಬೀಟ ಜೀವಕಣಗಳಲ್ಲಿ ಇನ್ಸುಲಿನ್ ತಯಾರಾಗುತ್ತದೆ. ಹಿಟ್ಟು ಸಕ್ಕರೆಗಳ ಜೀವವಸ್ತುಕರಣದ ಮೇಲೆ ಇವುಗಳ ಪ್ರಭಾವ ಮುಖ್ಯ.

ರಕ್ತದಲ್ಲಿನ ದ್ರಾಕ್ಷಿಸಕ್ಕರೆಯ (ಗ್ಲೂಕೋಸ್) ಪ್ರಮಾಣವನ್ನು ಇನ್ಸುಲಿನ್ ತಗ್ಗಿಸುವುದು. ಅಲ್ಲದೆ, ಈಲಿಯಲ್ಲೂ ಸ್ನಾಯುಗಳಲ್ಲೂ ದ್ರಾಕ್ಷಿಸಕ್ಕರೆಯನ್ನು ಮಿಗದಿಟ್ಟಾಗಿ (ಗ್ಲೈಕೊಜನ್) ಬದಲಿಸಿ ಕೊಡುತ್ತದೆ. ಕೆಲವು ಅಮೈನೊ ಆಮ್ಲಗಳೂ ಕೊಬ್ಬುಗಳಿಂದ ಬರುವ ಗ್ಲಿಸರಾಲೂ ಈಲಿಯಲ್ಲಿ ದ್ರಾಕ್ಷಿಸಕ್ಕರೆಯಾಗಿ ಬದಲಾಗುವ ಚಟುವಟಿಕೆಗೆ ನವಸಕ್ಕರೆಜನನ (ನಿಯೊಗ್ಲುಕೋಜೆನಿಸಿಸ್) ಎಂದು ಹೆಸರು, ಈ ಚಟುವಟಿಕೆಯನ್ನು ಗ್ಲೂಕಾನ್ ಏರಿಸುತ್ತದೆ. ಇನ್ಸುಲಿನ್ ಕುಂದಿಸುತ್ತದೆ. ಆಗ ರಕ್ತದ ಸಕ್ಕರೆ ಪ್ರಮಾಣ ಇಳಿಯುತ್ತದೆ. ದ್ರಾಕ್ಷಿಸಕ್ಕರೆ ಜೀವಕಣಗಳ ಪೊರೆಗಳ ಮೂಲಕ ಒಳಸಾಗಲು ಅನುಗೊಳಿಸುವುದೇ ಇನ್ಸುಲಿನ್ನಿನ ಬಹುಮುಖ್ಯ ಪಾತ್ರ. ರಕ್ತದಲ್ಲಿ ಸಕ್ಕರೆಯ ಪ್ರಮಾಣ ಏರಿದರೆ, ಇನ್ಸುಲಿನ್ ಸುರಿಕೆ ಏರುವುದು, ಅದು ಇಳಿದರೆ ಇದೂ ಇಳಿವುದು.

ಇನ್ಸುಲಿನ್ನಿನ ಎದುರುವರ್ತನೆ ಗ್ಲೂಕಗಾನಿನದು. ರಕ್ತದಲ್ಲಿನ ದ್ರಾಕ್ಷಿಸಕ್ಕರೆ ಪ್ರಮಾಣವನ್ನು ಏರಿಸುತ್ತದೆ. ಈಲಿಯಲ್ಲಿ ಕೂಡಿಟ್ಟಿರುವ ಮಿಗದಿಟ್ಟನ್ನು ದ್ರಾಕ್ಷಿಸಕ್ಕರೆಗಿಳಿಸುತ್ತದೆ. ಇನ್ಸುಲಿನ್ ಎದುರಾಗಿ, ಗ್ಲಾಕಾನ್ ಒಂದೇ ಅಲ್ಲದೆ, ತೆಮಡಿಕದ ಮುಂದಣ ಹಾಲೆಯ ಬೆಳೆತ ಚೋದನಿಕ, ಅಡ್ರಿನಲ್ ರಗಟೆಯ ಸಕ್ಕರೆ ಕಾರ್ಟಿಕಾಯ್ದುಗಳು, ಅಡ್ರಿನಲೀನ್ ಇವು ಕೂಡ ನವಸಕ್ಕರೆ ಜನನವನ್ನು ಹೆಚ್ಚಿಸುವುವು.

ಇನ್ಸುಲಿನ್ ಕೊರತೆಯಿಂದ ಸಿಹಿಮೂತ್ರ ರೋಗವಾಗುವುದು, ಇದರಲ್ಲಿ ರಕ್ತದಲ್ಲಿನ ದ್ರಾಕ್ಷಿಸಕ್ಕರೆ ಪ್ರಮಾಣ ಎಂದಿನ ಶೇಕಡಾ 180 ಮಿಲಿ ಗ್ರಾಂಗಿಂತಲೂ ಹೆಚ್ಚಿದ್ದು, ಮೂತ್ರದಲ್ಲೂ ಹೊರಬೀಳುತ್ತಿರುವುದು, ಆಹಾರಸೇವನೆ ಆದಮೇಲೆ ಇನ್ನೂ ಹೆಚ್ಚು. ಮೈಯಲ್ಲಿ ಬಳಕೆಯಾಗದೆ ಮೂತ್ರದಲ್ಲಿ ಕಳೆದುಹೋಗುವುದರಿಂದಲೂ ಊತಕಗಳ ಜೀವವಸ್ತುಲಯ (ಕೆಟಬಾಲಿಸಂ) ಹೆಚ್ಚಾಗುವುದರಿಂದಲೂ ರೋಗಿ ಬಡಕಲನಾಗಿ ನಿತ್ರಾಣಿಯಾಗುವನು, ಮೂತ್ರದಲ್ಲಿ ಸಕ್ಕರೆ ಹೆಚ್ಚಾಗಿ ಹೊರಕಳೆಯಲು ಅದರೊಂದಿಗೆ ಬಹಳ ನೀರೂ ಹೊರಬೀಳಬೇಕಾಗುತ್ತದೆ. ಬಾಯಾರಿಕೆ ಹೆಚ್ಚುತ್ತದೆ. ಬರುಬರುತ್ತ ರೋಗಿಯ ಧಮನಿಗಳಲ್ಲಿ ಧಮನಿಪೆಡಸಣಿ (ಆರ್ಟಿರಿಯೊ ಸ್ಕ್ಲೀರೋಸಿಸ್) ತೋರುವುದು, ಕಣ್ಣು ಪೊರೆಯೂ ಬರಬಹುದು.

ಇನ್ಸುಲಿನನ್ನು ಮಿತಿಮೀರಿ ಕೊಟ್ಟರೆ, ರೋಗಿಯ ರಕ್ತದಲ್ಲಿನ ಸಕ್ಕರೆ ಪ್ರಮಾಣ ತೀರ ಕುಸಿದು ನಿತ್ರಾಣ, ನಡುಕ, ಕಬ್ಬೆವರಿಕೆ, ಸೆಳವೂ ಆಗಿ ಕೊನೆಗೆ ಮಯಕ (ಕೋಮ) ಕಾಣಿಸಿಕೊಂಡು, ಚಿಕಿತ್ಸೆ ದೊರೆಯದಿದ್ದರೆ ಸಾಯಬಹುದು. ಕೆಲವು ಮನೋರೋಗಿಗಳಿಗೆ ಚಿಕಿತ್ಸಾಕ್ರಮವಾಗಿ ಸೆಳವುಕಾರಕವಾಗೂ ಇನ್ಸುಲಿನನ್ನು ರಕ್ತನಾಳಾಂತರ ಚುಚ್ಚಿ ಹೊಗಿಸುವುದುಂಟು. ಮಾಂಸಲಿಯಲ್ಲಿ ಇನ್ಸುಲಿನ್ ಹುಟ್ಟಿಸುವ ದೀವುಗಳಲ್ಲಿ ಗಂತಿ ಎದ್ದರೂ ಹೀಗಾಗುವುದು, ಈ ಲಕ್ಷಣಗಳ ಸೂಚನೆ ಕಂಡಕೂಡಲೇ ಒಂದಿಷ್ಟು ಸಕ್ಕರೆ ತಿಂದರೆ ಕೂಡಲೇ ಗುಣವಾಗುತ್ತದೆ (**ನೋಡಿ– ಇನ್ಸುಲಿನ್**).

**ಅಡ್ರಿನಲುಗಳು:** ಈ ಗ್ರಂಥಿಗಳಲ್ಲಿ ಒಂದೆಡೆಯಲ್ಲೇ ಇರುವ ಕುಸುರಿಯೂ (ಮೆಡುಲ), ರಗಟೆಯೂ (ಕಾರ್ಟೆಕ್ಸ್) ರಚನೆ, ನಿಜಗೆಲಸ, ಬಣ್ಣವೇರಿಕೆಗಳಲ್ಲಿ ತೀರ ಬೇರೆಬೇರೆಯಾದ್ದರಿಂದ ಇವೆರಡು ಭಾಗಗಳನ್ನೂ ಬೇರೆ ಬೇರೆ ಗ್ರಂಥಿಗಳಂತೆ ಗಣಿಸಬೇಕು. ಕುಸುರಿಯನ್ನು ಪ್ರಾಣಿಗಳಲ್ಲಿ ತೆಗೆದುಹಾಕಿದರೆ ಪ್ರಾಣಾಪಾಯವಿಲ್ಲ. ಆದರೆ, ರಗಟೆಯನ್ನು ತೆಗೆದುಹಾಕಿದರೆ ಮಾತ್ರ ಕೆಲವೇ ದಿನಗಳಲ್ಲಿ ಸಾಯುವುವು (**ನೋಡಿ– ಅಡ್ರಿನಲ್–ಗ್ರಂಥಿಗಳು**).

**ಅಡ್ರಿನಲ್ ಕುಸುರಿ:** ಅನುವೇದನಾ ನರಮಂಡಲದಲ್ಲಿನ (ಸಿಂಪತೆಟಿಕ್ ನರ್ವಸ್ ಸಿಸ್ಟಂ) ನರಗಂಟುಗಳಲ್ಲಿ (ಗಾಂಗ್ಲಿಯಾನ್ಸ್) ಇರುವ ಹಾಗೇ ಅಡ್ರಿನಲ್ ಗ್ರಂಥಿಯ ಕುಸುರಿಯಲ್ಲೂ ಕ್ರೋನಂಟಿನ ಜೀವಕಣಗಳಿವೆ. ಅಲ್ಲದೆ, ಆ ನರದ ಮಂಡಲದ ನರಗಳು ಈ ಕುಸುರಿಗೆ ಸಂಬಂಧಿಸಿವೆ. ಈ ಮಂಡಲದ ನರಗಳ ಚೋದನೆಯಾದಾಗ ಕುಸುರಿಯಿಂದ ಚೋದನಿಕ ರಸ ಸುರಿವುದು. ಈ ರಸದಲ್ಲಿ ಅಡ್ರಿನಲಿನ್ ಇರುವುವು. ಮೊದಲಿನದು ಶೇ.70–90 ರಷ್ಟೂ ಎರಡನೆಯದು ಶೇ.10–30ರಷ್ಟೂ ಇರುತ್ತವೆ. ಇವು ಮುಖ್ಯವಾಗಿ ಧಮನಿಗಳನ್ನು ಕುಗ್ಗಿಸುವುದರಿಂದ ರಕ್ತದ ಒತ್ತಡವೇರಿಸಿ, ಗುಂಡಿಗೆಯ ಚೋದನೆಯಿಂದ ಬಡಿತದ ವೇಗವೇರಿಸುತ್ತವೆ. ಆಗ ಗುಂಡಿಗೆಯಿಂದ ರಕ್ತದ ಹೊರಹೊಮ್ಮಿಕೆ (ಔಟ್‌ಪುಟ್) ಏರುತ್ತದೆ. ಮೈಯಲ್ಲಿನ ಉಳಿದೆಲ್ಲ ಧಮನಿಗಳನ್ನು ಕುಗ್ಗಿಸಿದರೂ ಗುಂಡಿಗೆಯ ಕಿರೀಟಿಕ (ಕಾರೊನೆರಿ) ಧಮನಿಗಳನ್ನು ಮಾತ್ರ ಹಿಗ್ಗಿಸುತ್ತವೆ. ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ಅಡ್ರಿನಲಿನ್ ಹೆಚ್ಚಿಸುತ್ತದೆ. ಅಲ್ಲದೆ, ಗೂರಲಿನಲ್ಲಿ ಪಂಗುಸಿರ್ನಾಳದ ಕಿರ್ನಾಳಗಳನ್ನು ಹಿಗ್ಗಲಿಸಿ ಉಬ್ಬಸವನ್ನು ತಗ್ಗಿಸುತ್ತದೆ. ಮೈಗೆ ಬಹಳ ಪೆಟ್ಟು ಗಾಯಗಳಾದಾಗ, ದಿಗಿಲು ಗಾಬರಿಗೊಂಡಾಗ, ಯಾವುದೇ ಒತ್ತಡದಲ್ಲೂ (ಸ್ಟ್ರೆಸ್) ಅಡ್ರಿನಿನ್, ನೋರಡ್ರಿನಲಿನುಗಳ ಸುರಿಕೆ ಹೆಚ್ಚುತ್ತದೆ.

ಒಗ್ಗದಿಕೆಯ (ಅಲರ್ಜಿ) ಪ್ರತಿಕ್ರಿಯೆಗಳನ್ನು ಕೂಡಲೇ ಹೋಗಲಾಡಿಸುವುದರಲ್ಲಿ ಅಡ್ರಿನಲಿನ್ ಹೆಸರಾಗಿದೆ.

ಅಡ್ರಿನಲ್ ಗ್ರಂಥಿಯ ಕುಸುರಿಯಲ್ಲಿ ಫಿಯೊಕ್ರೋಮೊ ಸೈಟೋಮ ಎಂಬ ಗಂತಿ ಎದ್ದಿದ್ದರೆ, ರಕ್ತ ಒತ್ತಡವೇರಿ, ಸಿಹಿಮೂತ್ರ, ಎದೆಬಡಿತ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಗಂತಿಯನ್ನು ಶಸ್ತ್ರಕ್ರಿಯೆಯಿಂದ ಕೊಯ್ದು ತೆಗೆವುದೇ ತಕ್ಕ ಚಿಕಿತ್ಸೆ.

ಅಡ್ರಿನಲ್ ರಗಟೆ: ಇದರಲ್ಲಿ ಹುಟ್ಟುವ ಚೋದನಿಕಗಳನ್ನು ಮುಖ್ಯ ನಿಜಗೆಲಸಗಳಿಗೆ ತಕ್ಕಂತೆ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಖನಿಜ (ಮಿನರಲೋ) ಕಾರ್ಟಿಕಾಯ್ದುಗಳು, ಸಕ್ಕರೆ (ಗ್ಲೂಕೊ) ಕಾರ್ಟಿಕಾಯ್ದುಗಳು, ಲೈಂಗಿಕ ಚೋದನಿಕಗಳು. ಖನಿಜ ಕಾರ್ಟಿಕಾಯ್ದುಗಳಲ್ಲಿ ಅಲ್ಡೊಸ್ಟಿರೋನೇ ಮುಖ್ಯವಾದದ್ದು, ಪೊಟ್ಯಾಸಿಯಂ ಅಯಾನುಗಳ ಪ್ರಮಾಣವನ್ನು ಮೈಯಲ್ಲಿರುವ ಸೋಡಿಯಂ ಎಂದಿನ ಸಮಮಟ್ಟದಲ್ಲಿ ಇರಿಸುವುದರಲ್ಲಿ ನೆರವಾಗುತ್ತದೆ. ಮುಖ್ಯವಾಗಿ ಮೂತ್ರ ಪಿಂಡದೊಳಗಿನ ಕಿರ್ನಾಳಗಳು ಸೋಡಿಯಮ್ಮನ್ನು ಹಿಡಿದಿಟ್ಟುಕೊಳ್ಳುವುದನ್ನೂ ಪೊಟ್ಯಾಸಿಯಮ್ಮನ್ನು ಬಿಟ್ಟುಬಿಡುವುದನ್ನೂ ಚೋದಿಸುತ್ತದೆ. ಮೈಯಲ್ಲಿ ಸೋಡಿಯಂ ಮಿತಿಮೀರಿ ಸೇರಿದರೆ ಮೈಯಲ್ಲಿ ಮತ್ತಷ್ಟು ನೀರು ಸೇರಿಕೊಳ್ಳುವುದು.

ಅಡ್ರಿನಲ್ ರಗಟೆ ಸುರಿಸುವ ಸಕ್ಕರೆ ಕಾರ್ಟಿಕಾಯ್ದುಗಳಲ್ಲಿ ಕಾರ್ಟಿಸಾಲ್, ಕಾರ್ಟಿಕೊಸ್ಟಿರೋನ್ ಮುಖ್ಯವಾದುವು. ಈ ಗುಂಪಿನ ಚೋದನಿಕಗಳು ಹಿಟ್ಟು ಸಕ್ಕರೆ, ಪ್ರೋಟೀನು, ಕೊಬ್ಬುಗಳ ಜೀವವಸ್ತುಕರಣದ ಮೇಲೆ ಪ್ರಭಾವಿಗಳು. ಹಿಟ್ಟು ಸಕ್ಕರೆಗಳ ಜೀವ ವಸ್ತುಲಯವನ್ನು ತಗ್ಗಿಸಿ, ಪ್ರೋಟೀನುಗಳನ್ನು ಏರಿಸುತ್ತವೆ. ನವಸಕ್ಕರೆ ಜನನವನ್ನು ಹೆಚ್ಚಿಸುತ್ತವೆ. ಇದರಿಂದಾಗಿ, ರಕ್ತದಲ್ಲಿನ ಪ್ರಮಾಣವೇರುತ್ತದೆ. ಮೊಗ, ಹೊಟ್ಟೆ, ಬೆನ್ನಿನ ಮೇಲುಗಡೆ ಕೊಬ್ಬುಗೂಡುತ್ತದೆ. ಈ ಭಾಗಗಳ ಹೊರತಾಗಿ ಬೇರೆಡೆಗಳಲ್ಲಿ ಕೂಡಿರುವ ಕೊಬ್ಬೆಲ್ಲ ಕೊಬ್ಬಿನಾಮ್ಲಗಳಾಗಿ ಕರಗುತ್ತದೆ. ಇವು ಮತ್ತೆ ವಿಷಕಾರಕಗಳಾದ ಕೀಟೋನು ವಸ್ತುಗಳಾಗಿ (ಕೀಟೋನ್ ಬಾಡೀಸ್) ಬದಲಾಗುವುವು. ಅಲ್ಲದೆ, ರಕ್ತದಲ್ಲಿ ಬಿಳಿ ರಕ್ತಕಣಗಳಾದ ಇಯೋಸಿನೊಫಿಲುಗಳನ್ನೂ ಹಾಲುರಸಕಣಗಳನ್ನೂ (ಲಿಂಪೊಸೈಟ್ಸ್) ತಗ್ಗಿಸುತ್ತವೆ. ಈ ಚೋದನಿಕಗಳನ್ನು ಚಿಕಿತ್ಸೆಯಲ್ಲಿ ಬಹುವಾಗಿ ಎಲ್ಲೆಲ್ಲೂ ಬಳಸುತ್ತಿರುವುದು ಮುಖ್ಯವಾಗಿ ಇವು ಗಾಯ, ಪೆಟ್ಟು, ಸೋಂಕು, ರೋಗಗಳಿಂದೇಳುವ ಉರಿತವನ್ನು (ಇನ್‌ಫ್ಲಮೇಷನ್) ತಗ್ಗಿಸಲು. ಅಲ್ಲದೆ ಇವನ್ನು ಕೊಡುತ್ತಿರುವಾಗ ಒಗ್ಗದಿಕೆಯ ಪ್ರತಿಕ್ರಿಯೆಗಳನ್ನೂ ಚೆನ್ನಾಗಿ ಅಡಗಿಸುತ್ತದೆ.

ಶಸ್ತ್ರಕ್ರಿಯೆಯೇ ಮುಂತಾದ ಯಾವುದಾದರೂ ಒತ್ತಡಕ್ಕೆ ಮೈ ಸಿಲುಕಿದಾಗ ಖನಿಜ ಅಲ್ಲದೆ ಸಕ್ಕರೆ ಕಾರ್ಟಿಕಾಯ್ದುಗಳು ಹೆಚ್ಚಾಗಿ ಸುರಿದು ಆ ಕಷ್ಟಸ್ಥಿತಿಯನ್ನು ಎದುರಿಸಲು ನೆರವಾಗುತ್ತವೆ.

ತೆಮಡಿಕದಲ್ಲಿ ಗಂತಿಯೆದ್ದಾಗ ಆಗುವಂತೆ, ಅಡ್ರಿನಲ್ ರಗಟೆಯಲ್ಲಿ ಎದ್ದಾಗಲೂ ಈ ಗ್ರಂಥಿಭಾಗ ಚುರುಕೇರಿದಾಗ ಕಷಿಂಗನ ರೋಗ ತಲೆದೋರುವುದು. ಆಗ ಪ್ರೋಟೀನುಗಳು ಬಹಳವಾಗಿ ಹಾಳಾಗಿ ಮೈತೂಕವಿಳಿದು, ಚರ್ಮ ಚರ್ಮದಡಿಯ ಊತಕಗಳು ಸವೆದು ತೆಳುವಾಗುತ್ತವೆ. ಕೊಬ್ಬುಗೂಡುವುದರಿಂದ ರೋಗಿ ಚಂದ್ರಮುಖಿನಾಗುವನು (ಮೂನ್ ಫೇಸ್). ಸಿಹಿಮೂತ್ರದ ಲಕ್ಷಣಗಳು ತೋರುವುವು. ರಕ್ತದ ಒತ್ತಡವೇರುವುದು. ಉರಿತದ ಪ್ರತಿಕ್ರಿಯೆಯನ್ನು ಅಡಗಿಸುವುದರಿಂದ ಗಾಯ, ಪೆಟ್ಟುಗಳು ವಾಸಿಯಾಗುವುದೂ ಇಲ್ಲ. ಕಲೆಗಟ್ಟಾಗುವುದೂ ಇಲ್ಲ.

ರೋಗ ಹತ್ತಿ ಈ ಗ್ರಂಥಿಭಾಗ ಹಾಳಾದರೆ, ಚೋದನಿಕಗಳ ಕೊರೆಯಾಗಿ ಅಡಿಸನ್ನನ ರೋಗ (**ನೋಡಿ– ಅಡಿಸನ್ನನ–ರೋಗ**) ಬರುತ್ತದೆ. ಮೂತ್ರದಲ್ಲಿ ಸೋಡಿಯಂ ಉಪ್ಪಾಗಿ ಹೆಚ್ಚಾಗಿ ಹೊರಬೀಳುವುದು. ರಕ್ತದ ಒತ್ತಡ ಕುಸಿದು, ರಕ್ತಸಕ್ಕರೆಯ ಮಟ್ಟವೂ ಇಳಿಯಬಹುದು. ರೋಗಿ ನಿತ್ರಾಣಿಯಾಗುತ್ತಾನೆ. ಬಾಯಿ ಒಳಭಾಗ ಕಪ್ಪಿಡುತ್ತದೆ.

ಕಾನ್‌ನ ಲಕ್ಷಣಕೂಟದ ರೋಗದಲ್ಲಿ ಖನಿಜಕಾರ್ಟಿಕಾಯ್ದುಗಳ ಸುರಿಕೆ ಹೆಚ್ಚಿರುವುದು. ಮೈಯಲ್ಲಿ ಊತಕಗಳ ರಸಗಳಲ್ಲಿ ಸೋಡಿಯಂ ಪ್ರಮಾಣವೇರಿ, ಪೊಟ್ಯಾಸಿಯಂ ಮಟ್ಟ ಇಳಿಯುತ್ತದೆ, ರಕ್ತದ ಒತ್ತಡವೇರುವುದು. ಮೂತ್ರಶಂಕೆ (ಪಾಲಿಯೂರಿಯ), ಎಡೆಸೆಡೆತಗಳು ಆಗುತ್ತವೆ.

ಸಕ್ಕರೆಕಾರ್ಟಿಕಾಯ್ದುಗಳ ಸುರಿತ ಬಹುಮಟ್ಟಿಗೆ ತೆಮಡಿಕದ ಮುಂದಣ ಹಾಲೆಯಲ್ಲಿ ಸುರಿವ ಅಡ್ರಿನಲ್ ರಗಟೆ ಚೋದಕ ಚೋದನಿಕದ (ಎಸಿಟಿಎಚ್) ಹತೋಟಿಯಲ್ಲಿರುವುದು. ಆದರೆ ಖನಿಜಕಾರ್ಟಿಕಾಯ್ದುಗಳ ಮೇಲೆ ಅಷ್ಟಾಗಿಲ್ಲ. ಈ ಚೋದನಿಕಗಳ ಸುರಿತ ಮುಖ್ಯವಾಗಿ ಜೀವಕಣ ಹೊರದ್ರವದ (ಎಕ್ಸ್‌ಟ್ರ ಸೆಲ್ಲುಲಾರ್) ಘನ ಗಾತ್ರಕ್ಕೆ ತಕ್ಕಂತಿರುವುದು. ಈ ದ್ರವದ ಪ್ರಮಾಣ ಇಳಿದಾಗ ಮೂತ್ರಪಿಂಡದಲ್ಲಿ ರೆನಿನ್ ಸುರಿಯುತ್ತದೆ. ರಕ್ತದಲ್ಲಿರುವ ರಕ್ತನಾಳ ಬಿಳಪಿಕ ಜನಕವನ್ನು (ಆಂಜಿಯೊಟೆನ್ಸಿನೋಜನ್) ರಕ್ತನಾಳಬಿಗುಪಿಗ 1 (ಆಂಜಿಯೊಟೆನ್ಸಿನ್ 1) ಆಗಿ ಬದಲಿಸುವುದು. ರಕ್ತದಲ್ಲಿ ಕೆಲವು ದೊಳೆಗಳು ಇದನ್ನು ರಕ್ತನಾಳ ಬಿಳುಪಿಗೆ 2 ಆಗಿಸುತ್ತದೆ. ಈ ವಸ್ತು ಅಡ್ರಿನಲ್ ರಗಟೆಯನ್ನು ಚೋದಿಸಿ ಅಲ್ಡೊಸ್ಟಿರೋನನ್ನು ಸುರಿವಂತೆ ಮಾಡುವುದು. ಇದರಿಂದ ಮೈಯಲ್ಲಿನ ಸೋಡಿಯಂ ಪ್ರಮಾಣ ಏರುವುದರಿಂದ ಜೀವಕಣ ಹೊರದ್ರವವೂ ಹೆಚ್ಚಿ ಮೈಯೆಲ್ಲ ಉಬ್ಬರಿಸಿಕೊಳ್ಳುತ್ತದೆ.

ಡೈಹೈಡ್ರೊ ಎಪಿ ಆಂಡ್ರೊಸ್ಟಿರೋನ್ : ಬೆದೆಜನಕಗಳನ್ನು ಈ ಗ್ರಂಥಿಭಾಗ ಕೊಂಚವಾಗಿ ಸುರಿಸುತ್ತದೆ. ಆದ್ದರಿಂದ ಜನನಾಂಗಗಳ ಮೇಲೆ ಇವುಗಳ ಪ್ರಭಾವ ಎದ್ದುತೋರದು. ಆದರೂ ಕೆಲವು ರೋಗಗಳಲ್ಲಿ ಇವು ಮಿತಿಮೀರಿ ಸುರಿಯುತ್ತಿದ್ದರೆ. ಜನನಾಂಗಗಳಲ್ಲಿ ಬದಲಾವಣೆಗಳು ತೋರುವುವು. ಇಂಥದಕ್ಕೆ ಅಡ್ರಿನಲ್ ಜನನಾಂಗ ಲಕ್ಷಣಕೂಟ (ಅಡ್ರಿನೊಜನೈಟಲ್ ಸಿಂಡ್ರೋಂ) ಎಂದು ಹೆಸರಿದೆ. ಈ ತೆರನ ಒಂದು ರೋಗದಲ್ಲಿ ಹುಡುಗನಲ್ಲೂ ಜನನಾಂಗಗಳು ದೊಡ್ಡವರಲ್ಲಿರುವ ಪರಿಮಾಣದಲ್ಲಿ ಬೆಳೆಯುತ್ತವೆ. ಇನ್ನೊಂದು ರೋಗವಾದ ಅಡ್ರಿನಲ್ ಗಂಡುತನದಲ್ಲಿ (ವಿರಿಲಿಸಂ) ಹೆಂಗಸು ಗಂಡಸಿನ ರೂಪಕ್ಕೆ ಬದಲಾಗುತ್ತಾಳೆ.

**ತರಡುಗಳು:** ಇವುಗಳಲ್ಲಿ ರೇತುಕಣಗಳು ವಿಕಸಿಸುವವಲ್ಲದೆ, ಗಂಡಿನ ಚೋದನಿಕವಾದ ಪುಲ್ಲಿಂಗಕಾರಿಯೂ ಹುಟ್ಟುವುದು. ಗಂಡುಲಿಂಗದ ಚೋದನಿಕಗಳಿಗೆ ಪುಂಜನಿಕಗಳೆಂದೂ (ಆಂಡ್ರೊಜನ್ಸ್) ಹೆಸರಿದೆ. ಹುಡುಗ ಬೆಳೆಯುತ್ತ ವಯಸ್ಸಿಗೆ ಬಂದ ಹಾಗೆಲ್ಲ ಪುಲ್ಲಿಂಗಕಾರಿಯಿಂದ ಮರುಚಲದ ಲಿಂಗ ಗುಣಗಳು ಚೆನ್ನಾಗಿ ಹೊರದೋರುತ್ತವೆ. ಅಂದರೆ ಹೊರಗಾಣುವ ಜನನಾಂಗಗಳು ಚೆನ್ನಾಗಿ ಬೆಳೆದು, ಮುನ್ನಿಲುಗ (ಪ್ರಾಸ್ಟೇಟ್), ರೇತು ಕಿಗ್ಗೋಶಗಳ (ಸೆಮಿನಲ್ ವೆಸಿಕಲ್ಸ್) ಗ್ರಂಥಿಗಳು ಬೆಳೆದು ಕಂಕುಳು, ಗಜ್ಜುಲು, ತೊಡೆಸಂದುಗಳಲ್ಲಿ ಕೂದಲೂ ಗಡ್ಡ ಮೀಸೆಗಳೂ ಬೆಳೆವುವು. ಗಂಟಲೊಡೆದು ದನಿ ಗಡುಸಾಗುವುದು. ಈ ಚೋದನಿಕದಿಂದ ಜೀವವಸ್ತುಚಯದ ಪರಿಣಾಮ ತೋರುತ್ತದೆ. ಸ್ನಾಯುಗಳು, ಒಳಾಂಗಗಳು, ಮೂಳೆಗಳೇ ಮುಂತಾದವು ಚೆನ್ನಾಗಿ ಬೆಳೆದು ಮೈ ತುಂಬಿಕೊಳ್ಳುವುದು. ಇದರಿಂದಲೇ ಹೆಂಗಸರಿಗಿಂತಲೂ ಗಂಡಸಿನ ಮೈ ಬೆಳವಣಿಗೆ ಜೋರಾಗಿದ್ದು ಮೈಕಟ್ಟು ಗಟ್ಟಿಮುಟ್ಟಾಗುತ್ತದೆ. ಈ ಚೋದನಿಕದ ಸುರಿತ ಕೂಡ ತೆಮಡಿಕದ ಮುಂದಣ ಹಾಲೆ ಸುರಿಸುವ ಹಳದಿಂಡುಗೊಳಿಕ ಚೋದನಿಕದ ಅಂಕೆಯಲ್ಲಿರುವುದು. ಆದ್ದರಿಂದ ಅಂಕೆಗೊಳಿಸುವ ಈ ಚೋದನಿಕಕ್ಕೆ ಊತಕಾಂತರ ಕಣಚೋದಕ ಚೋದನಿಕ ಎನ್ನುವುದೂ ಉಂಟು.

ರೇತುಕಣಗಳ ಹುಟ್ಟು ತೆಮಡಿಕದ ಕೋಶಿಕ ಚೋದಕ ಚೋದನಿಕದ ಅಂಕೆಯಲ್ಲಿದ್ದರೂ ಇದರೊಂದಿಗೆ ಪುಲ್ಲಿಂಗಕಾರಿಯೂ ಬೇಕು.

ಪುಲ್ಲಿಂಗಕಾರಿಯ ಕೊರೆಯ ಮುಖ್ಯ ಕಾರಣಗಳು, ತೆಮಡಿಕದ ರೋಗ, ಇಲ್ಲವೇ ಊತಕಾಂತರ ಜೀವಕಣಗಳು ಕೆಲವು ಕೆಡುವುದು. ಎಳೆತನದಲ್ಲೇ ಕೊರೆಯಾದರೆ, ಆಮೇಲಿನ ಗಂಡಸಿನ ಗುಣಗಳು ಬೆಳೆದು ತೋರವು. ಬೆಳೆದವರಲ್ಲಿ ಹೀಗಾದರೆ, ಜನನಾಂಗಗಳು ಕೊಂಚಮಟ್ಟಿಗೆ ಕುಂದಬಹುದು. ಆಗ ಪುಲ್ಲಿಂಗಕಾರಿಯನ್ನು ಕೊಟ್ಟರೆ ಗುಣಕಾರಿ.

ಅಂಡಾಶಯಗಳು : ಮುಟ್ಟಿನ ಮಾಸಕ್ಕೊಂದು ಬಾರಿ ಸಾಮಾನ್ಯವಾಗಿ ಒಂದೊಂದು ಅಂಡಾಣು ವಿಕಾಸವಾಗಿ ನೆರೆದು ಇವುಗಳಿಂದ ಹೊರಬೀಳುವುದು. ಅಂಡಾಶಯದಲ್ಲಿ ಹುಟ್ಟುವ ಚೋದನಿಕಗಳು ಎರಡು; ಬೆದೆಜನಕ, ಬಸಿರಣಿಕ (ಪ್ರೊಜೆಸ್ಟಿರಾನ್). ಬೆದೆಜನಕದ ಹಾಗೇ ವರ್ತಿಸುವ ಹಲವಾರು ವಸ್ತುಗಳು ಮೈಯಲ್ಲಿನ ರಸಗಳಲ್ಲಿವೆ. ಅಂಡಾಶಯದಲ್ಲಿ ಹುಟ್ಟುವ ಬೆದೆಜನಕಕ್ಕೆ ಈಸ್ಟ್ರಾಡಿಯೋಲ್ ಎಂದಿದೆ. ಇದರಿಂದ ತಯಾರಾಗುವುವು ಈಸ್ಟ್ರಿಯೋಲ್, ಈಸ್ಟ್ರೋನುಗಳು, ಗರ್ಭಕೋಶ, ಗರ್ಭನಾಳಗಳು, ಯೋನಿ, ಮೊಲೆಗಳ ಬೆಳವಣಿಗೆಗೆ ಬೆದೆಜನಕ ಇದ್ದೇ ಇರಬೇಕು. ಹೆಣ್ಣಿನ ಜನನಾಂಗಗಳು ಚೆನ್ನಾಗಿ ಬೆಳೆಯಲು ಬಸಿರಣಿಕವೂ ಬೇಕು.

ಮುಟ್ಟಿನ ಚಕ್ರಕ್ಕೆ ತಕ್ಕಹಾಗೆ ಇವೆರಡು ಚೋದನಿಕಗಳ ಸುರಿತದಲ್ಲೂ ಏರಿಳಿತಗಳಾ ಗುತ್ತವೆ. ಮುಟ್ಟಿನ ತಿಂಗಳಲ್ಲಿ ಸರಾಸರಿಯಾಗಿ 28 ದಿನಗಳಿರುತ್ತವೆ. ಮುಟ್ಟು ಸುರಿಯಲಿಟ್ಟ ಮೇಲಿನ ಮೊದಲಿನ 4–5 ದಿನಗಳಲ್ಲಿ ಗರ್ಭದೊಳಪೊರೆ (ಎಂಡೊಮೆಟ್ರಿಯಂ) ಕಿತ್ತು ಹರಿದುಕೊಂಡು ರಕ್ತದೊಂದಿಗೆ ಹೊರಬೀಳುತ್ತದೆ. ಅದೇ ಮುಟ್ಟು ಎನಿಸಿಕೊಳ್ಳುವುದು. ಆ ಹೊತ್ತಿಗೆ ಕೋಶಿಕಚೋದಕ ಚೋದನಿಕವನ್ನು ತೆಮಡಿಕ ಸುರಿಸಲು ಮೊದಲಿಡುವುದು. ಇದರ ಪ್ರಭಾವದಿಂದ ಗ್ರಾಫನ ಕೋಶಿಕವೊಂದು ಬೆಳೆದು ವಿಕಾಸವಾಗಿ ಬೆದೆಜನಕವನ್ನು ಸುರಿಸುತ್ತದೆ. ಕಿತ್ತುಹೋದ ಗರ್ಭದೊಳಪೊರೆಯನ್ನು ಮುಟ್ಟಿನ ಮಾಸದ ಮೊದಲ 14 ದಿನಗಳ ತನಕ ಮತ್ತೆ ಬೆಳೆಸುವುದು ಈ ಬೆದೆಜನಕವೇ. ಸರಾಸರಿ 14ನೆಯ ದಿನದ ಹೊತ್ತಿಗೆ ಗ್ರಾಫನ ಕೋಶಿಕ ಒಡೆದು ಅದರೊಳಗಿದ್ದ ನೆರೆದ ಅಂಡಾಣು ಹೊರಬೀಳುವುದು ಒಡೆದುಹೋದ ಈ ಕೋಶಿಕದ ಜಾಗದಲ್ಲಿ ಹಳದಿಂಡು ಕಟ್ಟಿಕೊಂಡು ಬೆಳೆಯುತ್ತ ಬಸಿರಣಿಕವನ್ನು ಸುರಿಬಿಡುತ್ತದೆ. ಅಂಡಾಣು ಬಿಡುಗಡೆ, ಹಳದಿಂಡಿನ ರಚನೆಯೂ ನಿಜಗೆಲಸಗಳೂ ತೆಮಡಿಕದ ಹಳದಿಂಡುಗೊಳಿಕ ಚೋದನಿಕದ ಅಂಕೆಯಲ್ಲಿರುವುವು. ಗರ್ಭದೊಳಪೊರೆಯಲ್ಲಿ ಗ್ರಂಥಿಗಳು ಹುಲುಸಾಗಿ ಬೆಳೆದು ರಸದುಂಬಲು ಮುಖ್ಯಕಾರಣ ಬಸಿರಣಿಕ. ಅಂದರೆ, ಇದು ಗರ್ಭಕೋಶವನ್ನು ಬಸಿರಿಗಾಗಿ ಅಣಿ ಮಾಡುವುದು. ಹೆಂಗಸು ಆಗ ಬಸಿರಾದರೆ, ಹಳದಿಂಡು ಬಸಿರಣಿಕವನ್ನು ಸುರಿಸುತ್ತಲೇ ಇರುವುದು. ಬಸಿರಾಗದಿದ್ದಲ್ಲಿ 28 ದಿನಗಳಾದ ಮೇಲೆ ಹಳದಿಂಡು ಒಣಗಿ ಸವೆಯುತ್ತದೆ. ಹೀಗೆ ಒಣಗಿದಾಗ ಬಸಿರಣಿಕ ಇಲ್ಲದಂತಾಗಿ, ಗರ್ಭದೊಳಪೊರೆ ಕಿತ್ತುಬಂದು ಮುಟ್ಟು ಹೊರಗಾಣಿಸುವುದು. ಹೀಗೆ ಮುಟ್ಟಿನ ಚಕ್ರ ನಡೆಯುತ್ತಿರುವುದು.

ಹೆಣ್ಣಿನಲ್ಲಿ ಅಂಡಾಂಶಯಗಳ ಕೆಲಸಗೆಟ್ಟರೆ ಹೆಣ್ಣಿನ ಹೆಚ್ಚಿನ ಗುಣಗಳು ಹೊರಗಾಣದೆ, ಜನನಾಂಗಗಳೂ ಬೆಳೆಯದೆ ಎಳಸಾಗೇ ಉಳಿವುವು. ಅಂಡಾಶಯಕ್ಕೆ ತಾಕುವ ರೋಗಗಳು, ತೆಮಡಿಕದ ಚೋದನಿಕಗಳ ಕೊರೆಯಿಂದ ಹೀಗಾಗಬಹುದು. 45 ವಯಸ್ಸಿನ ಸುಮಾರಿನಲ್ಲಿ ಅಂಡಾಶಯಗಳು ಅಂಡಾಣುಗಳ ತಯಾರಿಕೆಯನ್ನು ನಿಲ್ಲಿಸಿಬಿಡುತ್ತವೆ. ಹೀಗಾದಾಗ, ಗರ್ಭಕೋಶ, ಯೋನಿ ಬರುಬರುತ್ತ ಸವೆಯುತ್ತವೆ. ಹೆರಿಗೆ ಹೊತ್ತಿನಲ್ಲಿ ಕಿಳ್ಗುಳಿ (ಪೆಲ್ವಿಸ್) ಮೂಳೆಗಳನ್ನು ಕಟ್ಟಿಡುವ, ತಂತುಗಟ್ಟುಗಳನ್ನು ಸಡಿಲಗೊಳಿಸುವ, ರಿಲ್ಯಾಕ್ಸಿನ್ ಎಂಬ ಚೋದನಿಕವನ್ನು ಅಂಡಾಶಯಗಳು ಸುರಿಬಿಡುವುವೆಂಬ ನಂಬಿಕೆಯಿದೆ. ಹೆರಿಗೆಯಲ್ಲಿ ಪಿಂಡಗೂಸು ಅಪಾಯವಿಲ್ಲದಂತೆ ಹೊರಬರುವಂತೆ ಗರ್ಭಕೋಶವನ್ನು ಹಿಗ್ಗಲಿಸುವುದೂ ಗರ್ಭಕೊರಳನ್ನು (ಸರ್ವಿಕ್ಸ್) ಮೆತುಗೊಳಿಸುವುದೂ ರಿಲ್ಯಾಕ್ಸಿನ್ನಿನ ಕೆಲಸವೇ.

**ಮಾಸು:** ಪಿಂಡಗೂಸನ್ನು ಕಾಪಿಡಲು ಬೆಳೆಯುತ್ತಿರುವ ಗರ್ಭಕೋಶದ ಮಾಸುವಿನ ಜನನಗ್ರಂಥಿಚೋದಕ (ಗೊನಾಡೊಟ್ರೋಪಿಕ್) ಚೋದನಿಕಗಳೂ ಲಿಂಗಚೋದಕ ಚೋದನಿಕಗಳೂ ಹುಟ್ಟುತ್ತವೆ. ಇದರ ಚೋದನಿಕಗಳಿಗೆ ಜರಾಯುವಿನ (ಕೋರಿಯಾನಿಕ್) ಜನನಗ್ರಂಥಿ ಚೋದಕಗಳೆಂದು ಹೆಸರಿದೆ. ಗಂಡಸಲ್ಲಿ ಇದು ಹಳದಿಂಡುಗೊಳಿಕ ಚೋದನಿಕವನ್ನು ಹೋಲುವುದು. ಮಾಸುವಿನಿಂದಾಗಿ, ಬಸಿರಿನ ಮೊದಲಲ್ಲಿ ಹಳದಿಂಡು ಸವೆಯದೆ ಹಾಗೇ ಉಳಿವುದು. ಮಾಸು ಸುರಿಸುವ ಬಸಿರಣಿಕ ಬೆದೆಜನಕ ಚೋದನಿಕಗಳ ಸುರಿಕೆಗಳಿಂದ ಗರ್ಭಕೋಶ, ಮೊಲೆಗಳು ಚೆನ್ನಾಗಿ ಬೆಳೆಯುತ್ತವೆ, ಆದ್ದರಿಂದಲೇ, ಮಾಸು ಸಾಕಷ್ಟು ಬೆಳೆದ ಮೇಲೆ, ಅಂದರೆ 4–5 ತಿಂಗಳ ಬಸುರಿನಲ್ಲಿ, ಅಂಡಾಶಯಗಳನ್ನು ತೆಗೆದು ಹಾಕಿದರೂ ಗರ್ಭದಲ್ಲಿರುವ ಪಿಂಡಗೂಸಿಗೆ ಅಪಾಯ ತಾಕದು.

**ಉಳಿದವು:** ಮೇಲೆ ಹೇಳಿದವಲ್ಲದೆ, ಬೇರೆ ಕೆಲವು ಗ್ರಂಥಿಗಳೂ ಒಳಸುರಿಕೆ ಗ್ರಂಥಿಗಳ ಹಾಗೇ ವರ್ತಿಸುತ್ತವೆ. ಮಿದುಳಲ್ಲಿರುವ ಕೆಳತಲೆಯರೆ ಇಂಥದೊಂದು. ವಿಮೋಚಕ ಅಂಶಗಳನ್ನು ರಕ್ತದೊಳಕ್ಕೆ ಸುರಿಸಿ ತೆಮಡಿಕದ ಮುಂದಣ ಹಾಲೆಯನ್ನು ನಿಯಂತ್ರಿಸುವುದು ಅಲ್ಲದೆ ಹಿಂದಣ ಹಾಲೆಯ ಚೋದನಿಕಗಳು ಈ ಅಂಗಭಾಗದ ನಡುಬೀಜ ತಂಡದಲ್ಲೇ ಹುಟ್ಟಿ ಕೆಳಗಿಳಿದು ಸಾಗುತ್ತವೆ.

ಮೂತ್ರಪಿಂಡಗಳಲ್ಲಿ ಗೊಂಡೆಬದಿಯ ರಚನೆಯಲ್ಲಿ (ಜಕ್ಸ್ಟಗ್ಲೊಮೆರುಲಾರ್ ಆಪರೇಟಸ್) ರೆನಿನ್ ಎಂಬ ವಸ್ತು ತಯಾರಾಗುವುದು. ಮೇಲೆ ತಿಳಿಸಿರುವಂತೆ, ಇದು ಆಲ್ಡೋಸ್ಟಿರೋನ್ ಚೋದನಿಕದ ಸುರಿತವನ್ನು ಅಂಕೆಗೊಳಿಸುತ್ತದೆ. ಆಮ್ಲಜನಕಿಳಿತದಲ್ಲಿ (ಹೈಪಾಕ್ಸಿಯ) ಮೂತ್ರಪಿಂಡಗಳು ರಕ್ತವಿಕಾಸವೆಂಬ (ಹೀಮೊಪಾಯಿಟಿನ್) ವಸ್ತುವನ್ನು ಸುರಿಸುವುವು. ಇದರಿಂದ ಕೆಂಪು ರಕ್ತಕಣಗಳ ಹುಟ್ಟು ಹೆಚ್ಚುತ್ತದೆ.

ದಾರುಸಂಕದ (ಪೈನಿಯಲ್) ಗ್ರಂಥಿ ಕರ್ವಣ್ಣಬಿಗುಪ (ಮೆಲಟೋನಿನ್) ಚೋದನಿಕವನ್ನು ಸುರಿಸಬಹುದು. ಇದು ಕಪ್ಪೆಗಳ ಚರ್ಮವನ್ನು ಬಿಳಿಚಿಸುತ್ತದೆ.

ಓಮೊಗ್ಗು (ತೈಮಸ್) ಗ್ರಂಥಿಯೂ ತೊರಳೆಯೂ (ಪ್ಲೀಹ) ಕೆಲವು ಸುರಿಕೆಗಳನ್ನು ಸುರಿಸಬಹುದು **(ನೋಡಿ– ಒಳಸುರಿಕ–ಗ್ರಂಥಿಗಳು)**. (ಎಂ.ಬಿ.)

ಓ ಕನ್ನಡ ವರ್ಣಮಾಲೆಯಲ್ಲಿ ಹದಿಮೂರನೆಯದು, ದೀರ್ಘಸ್ವರಾಕ್ಷರ, ಲಿಪಿಯ ದೃಷ್ಟಿಯಿಂದ ಒ ಮತ್ತು ಓಕಾರಗಳಲ್ಲಿ ಪ್ರಾಚೀನಕಾಲದ ಶಾಸನಗಳಲ್ಲಿ ಅಷ್ಟಾಗಿ ವ್ಯತ್ಯಾಸಗಳು ಕಾಣಬರುವುದಿಲ್ಲ. **(ನೋಡಿ– ಒ)** ಬಹುಶಃ ಇವೆರಡಕ್ಕೂ ವ್ಯತ್ಯಾಸ ತೋರಿಸುವ ಪ್ರವೃತ್ತಿ ವಿಜಯನಗರ ಕಾಲಾಂತರ ಬೆಳೆದುಬಂದಿರಬೇಕು. ಆದರೆ ಬರವಣಿಗೆಯಲ್ಲಿನ ಈ ವ್ಯತ್ಯಾಸ ಖಚಿತವಾಗಿ ಯಾವಾಗ ಪ್ರಾರಂಭವಾಯಿತು ಎಂದು ಹೇಳುವುದು ಕಷ್ಟ. ಪ್ರ.ಶ. 18ನೆಯ ಶತಮಾನದ ಶಾಸನಗಳಲ್ಲಿ ಈ ಅಕ್ಷರದ ಹ್ರಸ್ವ ಮತ್ತು ದೀರ್ಘಗಳಿಗೆ ಪ್ರತ್ಯೇಕ ರೂಪಗಳಿರುವುದು ಕಂಡುಬರುತ್ತದೆ.

ಅಶೋಕನ ಕಾಲದಲ್ಲಿ ಅಕ್ಷರದ ಮೇಲ್ಭಾಗದಲ್ಲಿ ಎಡಬಲಗಳಲ್ಲಿ ಅಡ್ಡ ಗೀಟುಗಳಿದ್ದುವು. ಕದಂಬರ ಕಾಲದಲ್ಲಿ ಮೇಲಿನ ಅಡ್ಡಗೀಟುಗಳು ಡೊಂಕಾದುವು. ಗಂಗರ ಕಾಲಕ್ಕೆ ಬಲಭಾಗದ ರೇಖೆ ಇನ್ನೂ ಕೆಳಕ್ಕೆ ಬಾಗಿತು. ಇದು ರಾಷ್ಟ್ರಕೂಟ ಕಾಲದಲ್ಲಿ ಇನ್ನೂ ಸ್ಪಷ್ಟ. ಚಾಲುಕ್ಯರ ಕಾಲಕ್ಕೆ ಎಡದ ರೇಖೆಯ ಪ್ರಾಮುಖ್ಯ ಹೋಗಿ ಬಲಗಡೆಯ ರೇಖೆ ಇನ್ನೂ ಖಚಿತವಾಯಿತು. ಮದಕರಿನಾಯಕನ ಕಾಲಕ್ಕಾಗಲೆ ಅಕ್ಷರದಲ್ಲಿ ಓತ್ವ ಮತ್ತು ದೀರ್ಘಗಳು ಈಗಿನಂತೆ ಸ್ಪಷ್ಟವಾಗಿ ಗೋಚರಿಸಿದುವು.




ಈ ಅಕ್ಷರ ಪಶ್ಚ ಅರ್ಧ ಸಂವೃತ ಗೋಲ ದೀರ್ಘ ಸ್ವರವನ್ನು ಸೂಚಿಸುತ್ತದೆ.

(ಎ.ಎ.ಎನ್.)

**ಓಂ:** ಒಂದು ಬೀಜಾಕ್ಷರ. ಓಂಕಾರವೆಂದೂ ಪ್ರಣವವೆಂದೂ ಇದನ್ನು ವ್ಯವಹರಿಸುವುದುಂಟು. ವೇದಾದಿ ಪವಿತ್ರ ಗ್ರಂಥಗಳ ಪಠನದ ಪ್ರಾರಂಭದಲ್ಲಿ ಇದನ್ನು ಉಚ್ಚರಿಸಬೇಕೆಂಬ ನಿಯಮವಿದೆ. ಮೊದಲು ಉಪನಿಷತ್ತುಗಳಲ್ಲಿ ಬೀಜಾಕ್ಷರವಾಗಿ ಕಂಡುಬರುವ ಇದರ ಅ, ಉ, ಮ ಎಂಬ ಧ್ವನಿಗಳೂ, ಒಟ್ಟಾಗಿ ಈ ಅಕ್ಷರವೂ ಆಧ್ಯಾತ್ಮಿಕ ಪ್ರಭಾವವುಳ್ಳವೆಂದೂ ಇದು ಪರಬ್ರಹ್ಮಸ್ವರೂಪವೆಂದೂ ಅಲ್ಲಿ ಪ್ರತಿಪಾದಿತವಾಗಿದೆ. ಮಾಂಡೂಕ್ಯೋಪನಿಷತ್ತಿನ ಓಮಿತ್ಯೇಕಾಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಂ ಭೂತಂ ಭವದ್ ಭವಿಷ್ಯದಿತಿ ಸರ್ವಮೋಂಕಾರ ಏವ । ಯಚ್ಚಾನ್ಯತ್ತ್ರಿಕಾಲಾತೀತಂ ತದಪ್ಯೋಂಕಾರ ಏವ ॥ (ಎಲ್ಲವೂ ಓಂ ಎಂಬ ಅಕ್ಷರವೇಯೆ : ಭೂತ ವರ್ತಮಾನ ಭವಿಷ್ಯತ್ತುಗಳು ಅದರ ವಿಸ್ಪಷ್ಟ ಪ್ರಕಥನಗಳು; ತ್ರಿಕಾಲಾತೀತವಾದುದೂ ಓಂಕಾರವೇಯೆ) ಎಂಬ ವಾಕ್ಯಗಳು ಅಂಥ ಪ್ರತಿಪಾದನೆಗೆ ನಿದರ್ಶನಗಳಾಗಿವೆ. ಬರಬರುತ್ತ ಇದರ ಅ, ಉ, ಮ ಇವು ಕ್ರಮವಾಗಿ ವಿಷ್ಣು, ಶಿವ, ಬ್ರಹ್ಮ ಇವರನ್ನು ಪ್ರತಿನಿಧಿಸುವಂತಾಗಿ ಇದು ಹಿಂದೂಮತದಲ್ಲಿ ತ್ರಿಮೂರ್ತಿಗಳ ಐಕ್ಯದ ಕಲ್ಪನೆಯನ್ನೂ ಸೂಚಿಸುತ್ತದೆ. ಹಾಗೆಯೇ ಇದನ್ನು ಮೂರು ವೇದಗಳಿಗೂ ಅನ್ವಯಿಸಿದ್ದಾರೆ. ಇದರ ಮತ್ತೊಂದು ಹೆಸರಾದ ಪ್ರಣವವೆಂಬುದುನು (ಸ್ತುತಿಸು, ಶಬ್ದಮಾಡು) ಎಂಬ ಧಾತುವಿನಿಂದ ನಿಷ್ಪನ್ನವಾಗಿ, ಇದರಿಂದ ಆತ್ಮವೋ ಇಷ್ಟದೇವತೆಯೋ ಸ್ತುತಿಸಲ್ಪಡುವುದರಿಂದ ಪ್ರಣವವಾಗಿದೆಯೆಂದು ಅದಕ್ಕೆ ವಿವರಣೆ ಕಂಡುಬರುತ್ತದೆ. ಅಲ್ಲದೆ ನಮಸ್ಕರಿಸು ಎಂಬ ಅರ್ಥವುಳ್ಳ ನಮ್ ಧಾತುವಿನಿಂದ ಬಂದು, ತ್ರಿಮೂರ್ತಿಗಳ ವಿಚಾರದಲ್ಲಿ ನಮಸ್ಕಾರಾತ್ಮಕವಾಗಿರುವ ಇದು ಪ್ರಣವವಾಗಿದೆಯೆಂಬ ಮತ್ತೊಂದು ವಿವರಣೆಯನ್ನೂ ಗಮನಿಸಬಹುದು. (ಬಿ.ಕೆ.ಎಸ್.)

**ಓಕ್:** ಫೇಗೇಸಿ ಕುಟುಂಬದ ಕ್ವರ್ಕಸ್ ಜಾತಿಗೆ ಸೇರಿದ ಸುಮಾರು ಮುನ್ನೂರಕ್ಕೂ ಹೆಚ್ಚು ಸಂಖ್ಯೆಯ ಪ್ರಭೇದಗಳನ್ನುಳ್ಳ ಮರಗಳು ಮತ್ತು ಪೊದರುಗಳು. ಈ ಜಾತಿ ಪ್ರಪಂಚದ ಉತ್ತರಾರ್ಧಗೋಳದ ಸಮಶೀತೋಷ್ಣ ವಲಯದಲ್ಲಿ ಪ್ರಮುಖವಾಗಿ ಬೆಳೆಯುತ್ತಿದ್ದರೂ ಏಷ್ಯ ಹಾಗೂ ಅಮೆರಿಕ ಖಂಡಗಳ ಉಷ್ಣವಲಯದ ಪ್ರದೇಶಗಳಲ್ಲೂ ಎತ್ತರವಾದ ಮತ್ತು ತಂಪಾದ ಹವೆಯುಳ್ಳ ಸ್ಥಳಗಳಲ್ಲಿ ಮುಖ್ಯವಾಗಿ, ಉತ್ತರ ಅಮೆರಿಕ, ಮೆಕ್ಸಿಕೋ, ಯುರೋಪ್, ರಷ್ಯದ ಕಾಕಸಸ್ ಪರ್ವತಗಳು, ಮೆಡಿಟರೇನಿಯನ್ ಪ್ರದೇಶ ಮುಂತಾದುವುಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ. ಭಾರತದಲ್ಲಿ ಮುಖ್ಯವಾಗಿ ಹಿಮಾಲಯ ಪ್ರದೇಶದಲ್ಲಿ ಸುಮಾರು 23 ಪ್ರಭೇದಗಳು ಬೆಳೆಯುತ್ತವೆ. ಇದರಿಂದ ದೊರೆಯುವ ನಾಟ ಮತ್ತು ಚರ್ಮ ಹದ ಮಾಡುವುದಕ್ಕೆ ಉಪಯೋಗಿಸುವ ಟ್ಯಾನಿನುಗಳಿಗಾಗಿ ಇದನ್ನು ಅಮೆರಿಕ ಮತ್ತು ಇಂಗ್ಲೆಂಡುಗಳಲ್ಲಿ ವಿಶೇಷವಾಗಿ ಕಾಡುಗಳಲ್ಲಿ ಬೆಳೆಸುತ್ತಾರೆ.

ದೊಡ್ಡ ಮರವಾಗಿ ಬೆಳೆಯುವ ಓಕ್ ಸಾಮಾನ್ಯವಾಗಿ 60–80 ಅಡಿಗಳ ಎತ್ತರಕ್ಕೆ ಬೆಳೆಯುತ್ತದೆ. ಪರಿಸ್ಥಿತಿ ಅನುಕೂಲವಾಗಿದ್ದಲ್ಲಿ 100–150 ಅಡಿಗಳವರೆಗೂ ಬೆಳೆಯುವುದುಂಟು. ಕೆಲವು ಪ್ರಭೇದಗಳು ಮಾತ್ರ ದೊಡ್ಡ ಪೊದೆಯಂತೆ ಬೆಳೆಯುತ್ತವೆ. ಎತ್ತರದಲ್ಲಿ ಅದ್ವಿತೀಯವೆನಿಸದಿದ್ದರೂ ಒರಟೊರಟಾದ, ಭಾರಿ ಸುತ್ತಳತೆಯ, ಬುಡವನ್ನೂ ಅಂಕುಡೊಂಕಾದ ರೆಂಬೆಗಳನ್ನೂ ಉಳ್ಳ ಈ ಮರಗಳು ನಿಜಕ್ಕೂ ಭವ್ಯವಾಗಿರುತ್ತವೆ. ಸಾಧಾರಣವಾಗಿ ಮೆಕ್ಕಲುಮಣ್ಣಿನ ನೆಲದಲ್ಲಿ ಅಥವಾ ಜೇಡಿಮಣ್ಣಿನ ನೆಲದಲ್ಲಿ ಇವು ಸಮೃದ್ಧವಾಗಿ ಬೆಳೆಯುತ್ತವೆ. ಆದರೆ ಕೆಲವು ಬಗೆಯವು ಮರಳು ಅಥವಾ ಕಲ್ಲುನೆಲಗಳಿಗೇ ಸೀಮಿತಗೊಂಡಿದ್ದು ಸಣ್ಣ ಪೊದೆ ಅಥವಾ ಕುರುಚಲು ಗಿಡಗಳಂತೆ ಬೆಳೆಯುವುದುಂಟು. ಓಕ್ ಜಾತಿಯ ಕೆಲವು ಪ್ರಭೇದಗಳು ಚಳಿಗಾಲದಲ್ಲಿ ಎಲೆಗಳುದುರುವ ಮತ್ತೆ ಕೆಲವು ನಿತ್ಯಹರಿದ್ವರ್ಣದ ಮರಗಳ ಗುಂಪಿಗೆ ಸೇರಿವೆ. ಭಾರತದ ಪ್ರಭೇದಗಳಲ್ಲಿ ಬಹುಪಾಲು ಸಸ್ಯಗಳು ನಿತ್ಯಹರಿದ್ವರ್ಣದ ಗುಂಪಿಗೆ ಸೇರಿವೆ.

**ಕ್ವರ್ಕಸ್ ಸೆರ್ರಿಸ್ ಪ್ರಭೇದದ ಕಾಯಿಲೆಗಳು**

ಈ ಮರದ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು, ಸಾಮಾನ್ಯ ಪತ್ರಗಳಾಗಿರುತ್ತವೆ. ಅವುಗಳ ಅಂಚು ನಯವಾಗಿರಬಹುದು, ಹಲ್ಲಿನಂಥ ಏಣುಗಳನ್ನು ಹೊಂದಿರಬಹುದು ಅಥವಾ ಹಾಲೆಗಳಾಗಿ ಸೀಳಾಗಿರಬಹುದು. ಕಾಂಡದ ತೊಗಟೆಯ ಮೇಲ್ಮೈವಿನ್ಯಾಸವೂ ಒಂದೊಂದು ಪ್ರಭೇದದಲ್ಲೂ ಬೇರೆ ಬೇರೆಯಾಗಿರುತ್ತದೆ. ಅದು ನಯವಾಗಿರಬಹುದು, ಶಲ್ಕಗಳಿಂದ ಕೂಡಿರಬಹುದು, ಸಣ್ಣ ಫಲಕಗಳಿಂದ ಕೂಡಿರಬಹುದು ಅಥವಾ ಅಸಮರೂಪದ ಏಣುಗಳನ್ನು ಹೊಂದಿರಬಹುದು. ಈ ಮರದ ಹೂಗಳು ಏಕಲಿಂಗಿಗಳು. ಒಂದೇ ಮರದಲ್ಲಿ ಬೇರೆ ಬೇರೆ ಹೂಗೊಂಚಲುಗಳಲ್ಲಿ ಬಿಡುತ್ತವೆ. ಗಂಡು ಹೂಗೊಂಚಲುಗಳು ರೆಂಬೆಗಳಿಂದ ಕೆಳಮುಖವಾಗಿ ತೂಗಾಡುತ್ತಿದ್ದು ಪ್ರತಿಯೊಂದರಲ್ಲಿಯೂ ಅನೇಕ ಹೂವುಗಳಿರುತ್ತವೆ. ಒಂದೊಂದು ಹೂವಿನಲ್ಲಿಯೂ 4–7 ಹಾಲೆಗಳುಳ್ಳ ಪುಷ್ಪಪತ್ರಗಳು, 4–12 ಕೇಸರಗಳು ಇರುತ್ತವೆ. ಹೆಣ್ಣುಹೂ ಗೊಂಚಲು ಕದಿರುಗೊಂಚಲು (ಸ್ಪೈಕ್) ಮಾದರಿಯದು. ಒಂದೊಂದು ಹೂವಿನಲ್ಲಿಯೂ 6 ಹಾಲೆಗಳ ಪುಷ್ಪಪತ್ರವೂ 3–5 ಕೋಶಗಳುಳ್ಳ ಅಂಡಾಶಯವೂ ಇರುತ್ತವೆ. ಪ್ರತಿ ಕೋಶದಲ್ಲಿರುವ ಅಂಡಕಗಳ ಸಂಖ್ಯೆ ಎರಡು, ಅಂಡಾಶಯವನ್ನು ಸುತ್ತುವರಿದಂತೆ ಅನೇಕ ಉಪಪತ್ರಗಳ (ಬ್ರ್ಯಾಕ್ಟ್ಸ್) ಇನ್‌ವಲ್ಯೂಕರ್ ಇರುತ್ತವೆ. ಕಾಯಿ ವಿಶಿಷ್ಟ ಬಗೆಯದಾಗಿದ್ದು ಒಂದೇ ಬೀಜವನ್ನು ಹೊಂದಿರುತ್ತದೆ. ಅದನ್ನು ಏಕಾರ್ನ್ ಎನ್ನುತ್ತಾರೆ.

ಕೆಲವು ಶಾಸ್ತ್ರೀಯ ಗುಣಗಳ ಆಧಾರದ ಮೇಲೆ ಓಕ್ ಜಾತಿಯನ್ನು ಸೈಕ್ಲೊಬಲಾನಸ್, ಲ್ಯೂಕೊಬಲಾನಸ್ ಮತ್ತು ಎರಿತ್ರೊಬಲಾನಸ್ ಎಂಬ ಮೂರು ಉಪಜಾತಿಗಳನ್ನಾಗಿ ವಿಂಗಡಿಸಿದ್ದಾರೆ.

ಸೈಕ್ಲೊಬಲಾನಸ್ ಗುಂಪಿನ ಓಕ್‌ಗಳಲ್ಲಿ ಅಂಡಾಶಯವನ್ನು ಸುತ್ತುವರಿದಿರುವ ಉಪಪತ್ರಗಳು ಪರಸ್ಪರ ಕೂಡಿಕೊಂಡು ಉಂಗುರಗಳಂಥ ಇನ್‌ವಲ್ಯೂಕರ್‌ಗಳಾಗಿರುತ್ತವೆ.

ಲ್ಯೂಕೊಬಾಲಾನಸ್ ಗುಂಪಿನ ಓಕುಗಳಲ್ಲಿ ಅಂಡಾಶಯದ ಸುತ್ತ ಇರುವ ಉಪಪತ್ರಗಳು ಬಿಡಿಬಿಡಿಯಾಗಿದ್ದು, ಸುರುಳಿಯಾಕಾರದಲ್ಲಿ ಜೋಡಿಸಿಕೊಂಡಿರುತ್ತವೆ. ಕಾಯಿಗಳು ಒಂದೇ ಬೆಳೆವಣಿಗೆಯ ಕಾಲದಲ್ಲಿ (ಗ್ರೋಯಿಂಗ್ ಸೀಸನ್) ಪಕ್ವವಾಗುತ್ತವಲ್ಲದೆ, ಮರದಿಂದ ಉದುರಿದ ಕೆಲವೇ ದಿನಗಳಲ್ಲಿ ಮೊಳಕೆಯೊಡೆಯುತ್ತವೆ. ಈ ಉಪಜಾತಿಯ ಓಕ್‌ಗಳಿಗೆ ಬಿಳಿಯ ಓಕ್‌ಗಳೆಂದು ಹೆಸರು.

ಎರಿತ್ರೊಬಲಾನಸ್ ಉಪಜಾತಿಯ ಓಕ್‌ಗಳನ್ನು ಕೆಂಪು ಅಥವಾ ಕಪ್ಪು ಓಕ್‌ಗಳೆನ್ನುತ್ತಾರೆ. ಇವುಗಳಲ್ಲಿಯೂ ಅಂಡಾಶಯದ ಸುತ್ತ ಇರುವ ಉಪಪತ್ರಗಳು ಬಿಡಿಬಿಡಿಯಾಗಿದ್ದು ಸುರುಳಿಯಕಾರದಲ್ಲೇ ಜೋಡಿಸಲ್ಪಟ್ಟಿರುತ್ತವೆ. ಕಾಯಿಗಳು ಪಕ್ವವಾಗುವುದಕ್ಕೆ ಎರಡು ಬೆಳೆವಣಿಗೆಯ ಕಾಲವನ್ನು ತೆಗೆದುಕೊಳ್ಳುತ್ತವೆ. ಮೊಳಕೆಯೊಡೆಯುವುದು ಚಳಿಗಾಲ ಕಳೆದು, ಮತ್ತೆ ವಸಂತಕಾಲ ಬಂದಾಗ ಮಾತ್ರ.

ಓಕ್ ಮರಗಳು ದೀರ್ಘಕಾಲ ಬದುಕುವುವೆಂದು ಹೇಳುತ್ತಾರೆ. ಇಂಗ್ಲೆಂಡಿನಲ್ಲಿರುವ ಕೆಲವು ಓಕ್ ವೃಕ್ಷಗಳು 1,500ಕ್ಕೂ ಹೆಚ್ಚು ವಯಸ್ಸಿನವೆಂದು ತಿಳಿದಿದೆ. ಯಾರ್ಕ್‌ಶೈರಿನ ಹಳ್ಳಿಯೊಂದರಲ್ಲಿರುವ ಓಕ್‌ಮರ ಕ್ರೈಸ್ತಮತದ ಉದಯಕ್ಕೂ ಮುಂಚಿನದೆಂದು ಹೇಳುತ್ತಾರೆ. ಎಪಿರಸ್ ಬೆಟ್ಟಗಳಲ್ಲಿರುವ ಡೋಡೋನಾದ ಓಕ್ ಮರದಡಿ ಗ್ರೀಕರ ಮುಖ್ಯದೇವತೆಯಾದ ಝ್ಯೂಸ್ ತನ್ನ ಆರಾಧಕರಿಗೆ ಬೋಧನೆ ಮಾಡಿದನೆಂದು ಪ್ರತೀತಿಯಿದೆ.

ಕ್ವರ್ಕಸ್ ಪೆಟ್ರಿಯ ಪ್ರಭೇದದ ಕಾಯಿಲೆಗಳು

ಉಪಯುಕ್ತತೆಯ ದೃಷ್ಟಿಯಿಂದ ಓಕ್ ಮರದ ಪ್ರಭೇದಗಳು ಬಹಳ ಮುಖ್ಯವಾದವು. ಹಲವಾರು ಬಗೆಯ ಕೆಲಸಗಳಿಗೆ ಈ ಮರ ಉಪಯೋಗವಾಗುತ್ತದೆ. ಇದು ಅತ್ಯಂತ ಗಟ್ಟಿಮರಗಳಲ್ಲೊಂದಾಗಿ ದೃಢತೆಗೂ ಬಾಳಿಕೆಗೂ ಹೆಸರಾಗಿದೆ. ಇದರಲ್ಲಿನ ಎಳೆಗಳ ವಿನ್ಯಾಸ ತುಂಬ ಸೊಗಸಾಗಿರುವುದರಿಂದ ಉತ್ತಮ ತರದ, ಸುಂದರವಾದ ಮರದ ಸಾಮಾನುಗಳನ್ನು ಮಾಡಬಹುದು. ಒಂದು ಕಾಲದಲ್ಲಿ, ಉಕ್ಕು ಮತ್ತಿತರ ಲೋಹಗಳ ಬಳಕೆ ಬರುವುದಕ್ಕೆ ಮುನ್ನ, ಹಡಗು, ದೋಣಿಗಳ ನಿರ್ಮಾಣದಲ್ಲಿ ಈ ಮರ ಬಹುವಾಗಿ ಉಪಯೋಗವಾಗುತ್ತಿತ್ತು. ಅಲ್ಲದೆ ಪೀಪಾಯಿಗಳು, ಪೀಠೋಪಕರಣಗಳು, ವ್ಯವಸಾಯದ ಉಪಕರಣಗಳು, ಪೆಟ್ಟಿಗೆ, ಬೀರು, ಸಂಪುಟಗಳು, ಹಿಡಿಗಳು, ಗಣಿಗಳಲ್ಲಿ ಉಪಯೋಗಿಸುವ ಆಸರೆಗಂಬಗಳು, ಬೇಲಿಯ ಕಂಬಗಳು, ಮನೆ ಕಟ್ಟಲು ಉಪಯೋಗಿಸುವ ಹಲಗೆಗಳು, ತೊಲೆಗಳು, ರೈಲೆ ಸ್ಲೀಪರುಗಳು, ಕೊಡೆಗಳ ಹಿಡಿಗಳು, ಮರದ ಸೇತುವೆಗಳು ಇವೆಲ್ಲಕ್ಕೂ ಓಕ್ ಮರ ಬಳಕೆಯಾಗುತ್ತದೆ. ಮೇಲೆ ಹೇಳಿದ ಕೆಲಸಗಳಿಗೆ ಕೆಂಪು ಮತ್ತು ಬಿಳಿಯ ಬಗೆಯ ಓಕುಗಳೆರಡೂ ಬಳಕೆಯಾಗುತ್ತಿದ್ದರೂ ಬಿಳಿಯ ಓಕ್ ಉತ್ತಮ ದರ್ಜೆಯದೆಂದು ಹೆಸರಾಗಿದ್ದು ಅದರ ಉಪಯೋಗ ಹೆಚ್ಚಾಗಿದೆ. ಮುಖ್ಯವಾಗಿ ಬಿಳಿಯ ಓಕುಗಳಾದ ಕ್ವ.ಆಲ್ಬ, ಕ್ವ.ಸ್ಟೆಲ್ಲೇಟ, ಕ್ವ.ವರ್ಜಿನಿಯಾನ, ಕ್ವ.ಮ್ಯಾಕ್ರೊಕಾರ್ಪ, ಕ್ವ.ಮಾಂಟಾನ ಹಾಗೂ ಕೆಂಪು ಓಕ್‌ಗಳಾದ ಕ್ವ.ವೆಲುಟಿನ, ಕ್ವ.ಬೋರಿಯಾಲಿಸ್, ಕ್ವ.ಶುಮಾರ್ಡಿಯೈ, ಕ್ವ.ನೈಗ್ರ, ಕ್ವ.ಕಾಕ್ಸಿನಿಯ ಮತ್ತು ಭಾರತದ ಕ್ವ. ಡೈಲೆಟೇಟ ಪ್ರಭೇದಗಳನ್ನು ಈ ಕೆಲಸಗಳಿಗೆ ಉಪಯೋಗಿಸುತ್ತಾರೆ. ಇಂಗ್ಲೆಂಡಿನಲ್ಲಿ ಬೆಳೆಯುವ ಕ್ವ.ರೋಬರ್ ಮತ್ತು ಕ್ವ.ಪೆಟ್ರಿಯ ಇವನ್ನೂ ಬಳಸುತ್ತಾರೆ.

ಆರ್ಥಿಕವಾಗಿ ಅತಿಮುಖ್ಯವಾದ ಇನ್ನೊಂದು ಪ್ರಭೇದವೆಂದರೆ ಕ್ವ.ಸೂಬರ್ ಎಂಬುದು, ಕಾರ್ಕ್ ಓಕ್ ಎಂಬ ಸಾಮಾನ್ಯ ಹೆಸರುಳ್ಳ ಈ ಮರದಿಂದ ಕಾರ್ಕನ್ನು ತೆಗೆಯುತ್ತಾರೆ. ಸೀಸೆಗಳಿಗೆ ಬಿರಡೆಗಳು, ಪಾದರಕ್ಷೆಗಳ ತಳಗಳು, ಕೃತಕ ಕೈಕಾಲುಗಳು ಮತ್ತು ಲಿನೋಲಿಯಂ ಮುಂತಾದವುಗಳ ತಯಾರಿಕೆಯಲ್ಲಿ ಇದನ್ನು ಬಹಳವಾಗಿ ಉಪಯೋಗಿಸುತ್ತಾರೆ. ಈ ಮರವನ್ನು ಯುರೋಪಿನ ಪೋರ್ಚುಗಲ್, ಸ್ಪೇನ್, ಫ್ರಾನ್ಸ್, ಇಟಲಿಗಳಲ್ಲಿ ಮತ್ತು ಉತ್ತರ ಆಫ್ರಿಕ ದೇಶಗಳಾದ ಆಲ್ಜೀರಿಯ ಮೊರಕೊ ಮತ್ತು ಟ್ಯೂನಿಸಿಯಗಳಲ್ಲಿ ವಿಸ್ತಾರವಾಗಿ ಬೆಳೆಸುತ್ತಾರೆ. ಈ ದೇಶಗಳಲ್ಲಿನ ಕಾರ್ಕ್ ಮರಗಳ ಕಾಡುಗಳು ವಿಸ್ತೀರ್ಣ ಸುಮಾರು 2 ದಶಲಕ್ಷ ಹೆಕ್ಟೇರುಗಳು ಮತ್ತು ಕಾರ್ಕಿನ ವಾರ್ಷಿಕ ಉತ್ಪನ್ನ ಸುಮಾರು 3,40,000 ಮೆಟ್ರಿಕ್ ಟನ್ನುಗಳು. ಇದರಲ್ಲಿನ ಸುಮಾರು ಅರ್ಧಪಾಲು ಪೋರ್ಚುಗಲ್ಲಿನಿಂದ ಬರುತ್ತವೆ. ಭಾರತ ವರ್ಷಕ್ಕೆ ಸುಮಾರು 2–3 ಮಿಲಿಯನ್ ರೂಪಾಯಿಗಳ ಬೆಲೆಬಾಳುವ 3,000 ಟನ್ ಕಾರ್ಕನ್ನು ಆಮದು ಮಾಡಿಕೊಳ್ಳುತ್ತದೆ. ಇಷ್ಟು ಮುಖ್ಯವಾದ ಕಾರ್ಕ್ ಓಕ್ ಮರವನ್ನು ಭಾರತದ ನೀಲಗಿರಿಯಲ್ಲಿ ಬೆಳೆಸುವ ಪ್ರಯತ್ನ ನಡೆಸಿದ್ದಾರೆ **(ನೋಡಿ– ಕಾರ್ಕ್)**.

ಇನ್ನು ಕೆಲವು ಪ್ರಭೇದಗಳಾದ ಕ್ವ.ಏಜಿಲೋಪ್ಸ್, ಕ್ವ.ಮಾಂಟಾನ, ಕ್ವ.ವೆಲುಟಿನ ಹಾಗೂ ಭಾರತದಲ್ಲಿ ಬೆಳೆಯುವ ಕ್ವ.ಇನ್‌ಕಾನ, ಕ್ವ.ಇನ್‌ಫೆಕ್ಟೋರಿಯ ಹಾಗೂ ಕ್ವ.ಲ್ಯಾಮೆಲ್ಲೋಸ ಇವುಗಳ ತೊಗಟೆಯಿಂದ ಚರ್ಮ ಹದ ಮಾಡುವುದಕ್ಕೆ ಉಪಯೋಗಿಸುವ ಟ್ಯಾನಿನ್ ಎಂಬ ವಸ್ತುವನ್ನು ತೆಗೆಯುತ್ತಾರೆ.

ಓಕ್ ಮರದ ಕಾಯಿಗಳು ಕಾಡಿನ ಸಣ್ಣಪುಟ್ಟ ಮೃಗಗಳ ಪ್ರಧಾನವಾದ ಆಹಾರ; ಅಲ್ಲದೆ ಅವುಗಳಲ್ಲಿನ ಅಧಿಕ ಪೌಷ್ಟಿಕಾಂಶದಿಂದಾಗಿ ಹಂದಿಗಳಿಗೆ ಆಹಾರವಾಗಿಯೂ ಉಪಯೋಗಿಸುತ್ತಾರೆ.

ಹಲವಾರು ಪ್ರಭೇದಗಳನ್ನು ನೆರಳಿಗಾಗಿ ಮತ್ತು ಶೋಭೆಗೆಂದು ಇಂಗ್ಲೆಂಡು, ಅಮೆರಿಕಗಳಲ್ಲಿ ಉದ್ಯಾನಗಳಲ್ಲೂ ರಸ್ತೆಗಳ ಅಂಚಿನಲ್ಲೂ ಬೆಳಸುತ್ತಾರೆ. ಈ ರೀತಿ ಬೆಳೆಸುವ ಓಕ್ ಮರಗಳಲ್ಲಿ ಕ್ವ.ಇಲೆಕ್ಸ್, ಕ್ವ.ಸೆರ್ರಿಸ್, ಕೆವ.ಬೋರಿಯಾಲಿಸ್, ಕ್ವ.ಅಗ್ರಫೋಲಿಯ, ಕ್ವ.ಕಾಕ್ಸಿನಿಯ, ಕ್ವ.ಪಾಲುಸ್ಟ್ರಿಸ್, ಕ್ವ.ಕೈಸೋಲೆಪಿಸ್, ಕ್ವ.ಮ್ಯಾಕ್ರೊಕಾರ್ಪ, ಕ್ವ.ನೈಗ್ರ ಮತ್ತು ಕ್ವ.ವೆಲುಟಿನ ಇವು ಮುಖ್ಯ ಪ್ರಭೇದಗಳು.

ಭಾರತದಲ್ಲಿ ಬೆಳೆಯುವ ಕ್ವರ್ಕ್ಸ್ ಇನ್‌ಫೆಕ್ಟೋರಿಯ ಎಂಬ ಓಕ್ ಪ್ರಭೇದದ ರೆಂಬೆಗಳಲ್ಲಿ ಒಂದು ಜಾತಿಯ ಕೀಟ ಮೊಟ್ಟೆಗಳನ್ನಿಟ್ಟು, ಆ ರೆಂಬೆಗಳಲ್ಲಿ ಒಂದು ಬಗೆಯ ಸಣ್ಣ ಚೆಂಡಿನಂಥ ಗಂಟುಗಳು ಏಳುವಂತೆ ಮಾಡುತ್ತದೆ. ಈ ಗಂಟುಗಳಿಂದ ಟ್ಯಾನಿನ್ ಮತ್ತು ಹಳದಿ ಬಣ್ಣವನ್ನು ತೆಗೆಯುತ್ತಾರೆ. ಈ ಗಂಟುಗಳನ್ನು ಮೂಲವ್ಯಾಧಿ ರೋಗಕ್ಕೆ ಮುಲಾಮಿನ ತಯಾರಿಕೆಯಲ್ಲೂ ಅಜೀರ್ಣರೋಗಗಳ ಔಷಧಗಳಿಗೂ ಉಪಯೋಗಿಸುತ್ತಾರೆ.

ಓಕ್ ಮರದ ಹಲವಾರು ಕಳಪೆ ಭಾಗಗಳನ್ನು ಉರುವಲಾಗಿಯೂ ಇದ್ದಲಿನ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಕೆಲವು ಬಗೆಯ ಓಕ್ ಎಲೆಗಳನ್ನು ದನಗಳಿಗೆ ಮೇವಾಗಿ ಉಪಯೋಗಿಸುತ್ತಾರೆ. ಕ್ವರ್ಕಸ್ ಇನ್‌ಕಾನ ಪ್ರಭೇದದ ಕಾಯಿಗಳನ್ನು ಔಷಧಿಯಾಗಿ, ಗುಹ್ಯರೋಗ ಚಿಕಿತ್ಸೆಯಲ್ಲಿಯೂ ಅಜೀರ್ಣರೋಗಗಳ ಚಿಕಿತ್ಸೆಯಲ್ಲಿಯೂ ಮೂತ್ರೋತ್ತೇಜಕವಾಗಿಯೂ ಉಪಯೋಗಿಸುತ್ತಾರೆ.

ಗ್ರೀಷ್ಮ ಋತುವಿನಲ್ಲಿ ಬಹುಪಾಲು ಬಗೆಯ ಓಕುಗಳು ತಮ್ಮ ಎಲೆಗಳ ಬಣ್ಣವನ್ನು ಬದಲಿಸುತ್ತವೆ. ಅಲ್ಲಿಯವರೆಗೂ ಹಸಿರು ಬಣ್ಣದಿಂದ ಕೂಡಿದ್ದ ಎಲೆಗಳು ಕಿತ್ತಳೆ, ಕಡುಗೆಂಪು, ಹಳದಿ, ನೇರಿಳೆ, ಕಂದು ಹೀಗೆ ಹಲವಾರು ಬಣ್ಣಗಳನ್ನು ತಾಳುತ್ತ ಹೋಗುತ್ತವೆ. ಈ ನೋಟವಂತೂ ಅತಿರಮ್ಯವಾಗಿರತ್ತದೆ.

ಬೀಜಗಳನ್ನು ಅಥವಾ ತುಂಡುಗಳನ್ನು ನೆಟ್ಟು ಓಕ್ ಮರಗಳನ್ನು ಅಭಿವೃದ್ಧಿಗೊಳಿಸುತ್ತಾರೆ. ಅಲ್ಲದೆ ತೋಟಗಳಲ್ಲಿ ಬೆಳೆಸುವುದಕ್ಕೆ ಬೇಕಾದ ಕೆಲವು ತಳಿಗಳನ್ನು ಗ್ರಾಫ್ಟ್ ಮಾಡಿಯೊ ಲೇಯರುಗಳ ಮೂಲಕವೂ ಪಡೆದು ಬೆಳೆಸುತ್ತಾರೆ.

ಓಕ್ ಮರಗಳಿಗೆ ಹಲವಾರು ಬಗೆಯ ರೋಗಗಳು, ಪೀಡೆಗಳು ಅಂಟುತ್ತವೆ, ಮೈಕ್ರೊಸ್ಪೀರ ಕ್ವರ್ಸಿನ ಎಂಬ ಬೂಷ್ಟು ರೋಗ ತಗುಲಿ ಎಲೆಗಳ ಮೇಲೆ ಬಿಳಿಯ ಚುಕ್ಕಿಗಳನ್ನು, ಮಚ್ಚೆಗಳನ್ನು ಉಂಟುಮಾಡುತ್ತವೆ. ಕೆಲವು ಬಾರಿ ರೋಗ ಉಲ್ಬಣಗೊಂಡು ಓಕ್ ಮರಗಳು ಸಾಯುವುದೂ ಉಂಟು, ಈ ರೋಗವನ್ನು ಬೋರ್ಡೊ ಮಿಶ್ರಣವನ್ನು ಸಿಂಪಡಿಸುವುದರಿಂದ ತಡೆಯಬಹುದು. ಕೆಲವು ಓಕ್ ಮರಗಳ ಬೇರಿಗೆ ರೊಸೆಲಿನ ಕ್ವರ್ಸಿನ ಎಂಬ ಇನ್ನೊಂದು ಬಗೆಯ ಬೂಷ್ಟು ರೋಗವೂ ಅಂಟುತ್ತದೆ.

ಕೆಲವು ಜಾತಿಯ ಪತಂಗಗಳ ಕಂಬಳಿಹುಳುಗಳು, ಡಿಂಭಗಳು ಎಲೆಗಳನ್ನು ಸಂಪೂರ್ಣವಾಗಿ ತಿಂದುಹಾಕಿ ಮರಗಳಿಗೆ ವಿಶೇಷ ಹಾನಿಯನ್ನುಂಟುಮಾಡುತ್ತವೆ. ಟಾರ್ಟ್ರಿಕ್ಸ್ ವಿರಿಡಾನ ಎಂಬ ಪತಂಗ ಬ್ರಿಟನ್‌ನಲ್ಲಿ ಓಕ್ ಮರಗಳಿಗೆ ತಗುಲಿ ಅವುಗಳ ಎಲೆಗಳು ಸುರುಟಿಕೊಳ್ಳುವಂತೆ ಮಾಡಿ ನಷ್ಟವನ್ನುಂಟುಮಾಡುತ್ತದೆ. ಇವೆಲ್ಲವನ್ನೂ ವಿಮಾನಗಳ ಮೂಲಕ ಕೀಟರೋಧಕಗಳನ್ನು ಸಿಂಪಡಿಸುವುದರಿಂದ ತಡೆಗಟ್ಟಬಹುದು. (ಕೆ.ಬಿ.ಎಸ್.)

**ಓಕಿನಾವ:** ಜಪಾನಿನ ದಕ್ಷಿಣಕೊನೆಯಲ್ಲಿರುವ ರ್ಯುಕ್ಯುರೆಟ್ಟೊ ದ್ವೀಪ ಸಮುದಾಯದ ಅತಿ ದೊಡ್ಡ ದ್ವೀಪ. ಹಳೆಯ ಶಿಲೆಗಳ ಮೇಲೆ ಜ್ವಾಲಾಮುಖಿಯ ಭಸ್ಮಸಂಚಯನದಿಂದಾಗಿ ಈ ದ್ವೀಪ ಮೈತಳೆದಿದೆ. ಇದರ ಸುತ್ತಣ ದ್ವೀಪಗಳಲ್ಲಿ ಕೆಲವು ಹವಳದಿಂದಾದವು. ಕೆಲವಕ್ಕೆ ಹವಳದ ಅಂಚುಗಳಿವೆ. ಈ ದ್ವೀಪ ಸಾಮಾನ್ಯವಾಗಿ ಸಮಮಟ್ಟದ ಇಳಿಜಾರುಗಳಿಂದ ಕೂಡಿದೆ. ಆದರೆ ಇದರ ಉತ್ತರ ಭಾಗದಲ್ಲಿ ಏರುಪೇರುಗಳಿವೆ. ದಕ್ಷಿಣಭಾಗ ಮೈದಾನ. ದ್ವೀಪದ ಜನಸಂಖ್ಯೆಯ ಬಹುಪಾಲು ವಾಸಿಸುವುದು ಈ ಪ್ರದೇಶದಲ್ಲೇ. ಉಪೋಷ್ಣವಲಯದ ವಾಯುಗುಣ ಇದೆ. ಮಳೆ ವಿಪರೀತ, ಆಗಾಗ ಚೀನ ಸಮುದ್ರದಲ್ಲಿ ತಲೆದೋರುವ ಚಂಡಮಾರುತಕ್ಕೂ ಈ ದ್ವೀಪ ಬಲಿಯಾಗುವುದುಂಟು, ಬತ್ತ, ಕಪ್ಪುಸಕ್ಕರೆ, ಬಾಳೆಹಣ್ಣು, ಸಿಹಿಗೆಣಸು ಇವು ಇಲ್ಲಿಯ ಪ್ರಮುಖ ಕೃಷಿ ಉತ್ಪನ್ನಗಳು, ಪೈನಾಪಲ್ ಇನ್ನೊಂದು ಮುಖ್ಯ ಉತ್ಪನ್ನ. ಇದನ್ನು ಡಬ್ಬಿಗಳಲ್ಲಿ ತುಂಬಿ ರಫ್ತು ಮಾಡುತ್ತಾರೆ. ಮೀನುಗಾರಿಕೆ ಹಳೆಯ ಪ್ರಮುಖ ಉದ್ಯಮ. ಅರಗಿನ ಹಾಗೂ ಮಣ್ಣಿನ ವಸ್ತುಗಳನ್ನು ಮಾಡುವ ಕೈಗಾರಿಕೆ ಹಿಂದಿನಿಂದಲೂ ಬಂದದ್ದು. ತಿಮಿಂಗಿಲದ ವಸ್ತು ಹಾಗೂ ಗಂಧಕದ ಶುದ್ಧೀಕರಣ ಉದ್ಯಮಗಳು ಈಚೆಗೆ ಬೆಳೆಯುತ್ತಿವೆ.

ಎರಡನೆಯ ಮಹಾಯುದ್ಧಕ್ಕೆ ಮುಂಚೆ ಈ ದ್ವೀಪಸಮುದಾಯ ಜಪಾನಿನ ಒಂದು ಪ್ರಾಂತ್ಯವಾಗಿತ್ತು. ಎರಡನೆಯ ಮಹಾಯುದ್ಧದ ಸಮಯದಲ್ಲಿ ನಡೆದ ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಜಪಾನ್‌ಗಳ ನಡುವಣ ಉಗ್ರಕದನದ ರುದ್ರಭೂಮಿಯಾಗಿತ್ತು. ಜಪಾನನ್ನು ಗೆಲ್ಲುವ ಯೋಜನೆಯ ಮೊದಲ ಹೆಜ್ಜೆಯಾಗಿ ಅಮೆರಿಕನ್ನರು ಇದನ್ನು 1945ರಲ್ಲಿ ಆಕ್ರಮಿಸಿದರು. ಯುದ್ಧದ ಅನಂತರ ಅಮೆರಿಕದ ಆಡಳಿತಕ್ಕೆ ಇದು ಒಳಪಟ್ಟಿತ್ತು. ಸೈನ್ಯಾಡಳಿತವಿದ್ದರೂ 29 ಸದಸ್ಯರ ವಿಧಾನಸಭೆಯಿದ್ದು, ಕಾರ್ಯಾಂಗದ ಮುಖ್ಯಸ್ಥನನ್ನು ಅದೇ ನೇಮಿಸುತ್ತಿತ್ತು. 1966ರಲ್ಲಿ ಕಾರ್ಯಾಂಗದ ಮುಖ್ಯಸ್ಥನನ್ನೂ ಆ ಸಭೆಯೇ ನೇಮಿಸುವಂತಾಯಿತು. ಈ ರೀತಿ ಸ್ವತಂತ್ರ್ಯಕ್ಕು ಸರ್ಕಾರ ಸ್ಥಾಪಿತವಾಯಿತು. ನಾಹಾ ಇದರ ರಾಜಧಾನಿ, ಶುರಿ ಇನ್ನೊಂದು ಪ್ರಮುಖ ಪಟ್ಟಣ. (ಕೆ.ಆರ್.ಆರ್.)

**ಓಕ್ಟನ್ಸ್:** ಆಕಾಶದ 88 ನಕ್ಷತ್ರಪುಂಜಗಳಲ್ಲಿ ಒಂದು. ಬಲು ಕ್ಷೀಣ ನಕ್ಷತ್ರಗಳ ಸಮುದಾಯವಾಗಿರುವುದರಿಂದ ಈ ವಲಯವನ್ನು ಗುರುತಿಸುವುದು ಕಷ್ಟ. ದಕ್ಷಿಣ ಧ್ರುವಬಿಂದು ಇದೇ ಪುಂಜದಲ್ಲಿದೆ. ಘಂಟಾವೃತ್ತಾಂಶ $75^0$ದ. ದಿಂದ $90^0$ದ, (ದಕ್ಷಿಣಧ್ರುವ ಬಿಂದು) ವರೆಗೆ ಈ ಪುಂಜದ ವ್ಯಾಪ್ತಿ ಇದೆ. ಅಷ್ಟಕ ಎಂಬುದು ಇದರ ಹೆಸರು. ಕರ್ನಾಟಕದಿಂದ ಇದು ಕಾಣುವುದಿಲ್ಲ. *

**ಓಕ್ಲಹೋಮ:** ಅಮೆರಿಕ ಸಂಯುಕ್ತಸಂಸ್ಥಾನದ ನೈಋತ್ಯ ಭಾಗದಲ್ಲಿರುವ ಒಂದು ರಾಜ್ಯ. ಪೂರ್ವದಲ್ಲಿ ಮಿಸ್ಸೂರಿ ಮತ್ತು ಆರ್ಕನ್ಸಾಸ್, ದಕ್ಷಿಣದಲ್ಲಿ ಟೆಕ್ಸಸ್, ಪಶ್ಚಿಮದಲ್ಲಿ ಟೆಕ್ಸಸ್ ಮತ್ತು ನ್ಯೂ ಮೆಕ್ಸಿಕೊ ಮತ್ತು ಉತ್ತರದಲ್ಲಿ ಕ್ಯಾನ್ಸಸ್ ಮತ್ತು ಕಾಲರಾಡೋ ರಾಜ್ಯಗಳು ಸುತ್ತುವರಿದಿವೆ. ವೈಶಾಲ್ಯದಲ್ಲಿ ಇದು ಸಂಯುಕ್ತಸಂಸ್ಥಾನದ ರಾಜ್ಯಗಳಲ್ಲಿ 18ನೆಯದು. ವಿಸ್ತೀರ್ಣ 1,81.049 ಚಕಿಮೀ; ಜನಸಂಖ್ಯೆ 3,850,568 (2013).

ರಾಜಧಾನಿ ಓಕ್ಲಹೋಮ ಈ ಪ್ರದೇಶದ ಇಂಡಿಯನರ ಭಾಷೆಯಲ್ಲಿ ಓಕ್ಲಹೋಮ ಎಂದರೆ ಕೆಂಪುಜನ. ಇಂಡಿಯನರು ವಾಸವಾಗಿದ್ದ ಭಾಗಕ್ಕೆ ಈ ಹೆಸರು 1866ರಲ್ಲಿ ಪ್ರಥಮವಾಗಿ ಅನ್ವಯವಾಯಿತು. 1889ರಲ್ಲಿ ಅಮೆರಿಕನ್ ಜನವಸತಿಗೆ ಈ ಪ್ರದೇಶದ ದ್ವಾರವನ್ನು ಅಧಿಕೃತವಾಗಿ ತೆರೆದಾಗ, ಕಾನೂನಿನ ಪ್ರಕಾರ ವಿಧಿಸಲಾಗಿದ್ದ ದಿನಕ್ಕೂ ಮುಂಚೆಯೇ ಒಬ್ಬ ವ್ಯಕ್ತಿ ಈ ಸ್ಥಳಕ್ಕೆ ಧಾವಿಸಿ ತನ್ನ ಹಕ್ಕನ್ನು ಸ್ಥಾಪಿಸಲು ಯತ್ನಿಸಿದನಂತೆ. ಆದ್ದರಿಂದ ಶೀಘ್ರ ರಾಜ್ಯ (ಸೂನರ್ ಸ್ಟೇಟ್) ಎಂಬುದು ಇದರ ಜನಪ್ರಿಯ ನಾಮ.

**ಮೇಲ್ಮೈ ಲಕ್ಷಣಗಳು:** ಆಗ್ನೇಯ ದಿಕ್ಕಿನ ಕಡೆಗೆ ಇಳಿಜಾರಾದ ಈ ಪ್ರದೇಶದ ವಾಯವ್ಯಮೂಲೆ ಸಮುದ್ರಮಟ್ಟದಿಂದ 515 ಮೀ ಗಳಷ್ಟು ಎತ್ತರವಾಗಿದ್ದರೆ, ರೆಡ್ ನದಿಯ ಪ್ರದೇಶದಲ್ಲಿ ಕೇವಲ 90 ಮೀ ಎತ್ತರವಿದೆ. ಪಶ್ಚಿಮ ಭಾಗಗಳಲ್ಲಿ ಮರಗಿಡಗಳಿಲ್ಲದ ಮೈದಾನಗಳಿದ್ದರೆ, ಪೂರ್ವಭಾಗದಲ್ಲಿ ಏರುತಗ್ಗುಗಳಿಂದಲೂ ದಟ್ಟವಾದ ಕಾಡುಗಳಿಂದಲೂ ಕೂಡಿರುವ ಪರ್ವತಗಳಿವೆ. ಪೂರ್ವ ದಕ್ಷಿಣ ಭಾಗಗಳಲ್ಲಿ ನಾಲ್ಕು ಪ್ರಮುಖ ಪರ್ವತಸ್ತೋಮಗಳುಂಟು. ಪಶ್ಚಿಮಕ್ಕೆ ಸಾಗಿದಂತೆ ಓಜ಼ಾರ್ಕ್ ಪರ್ವತದ ಎತ್ತರ ಕ್ರಮೇಣ ಕಡಿಮೆಯಾಗುತ್ತದೆ. ಆಗ್ನೇಯ ಭಾಗದಲ್ಲಿರುವುದು ವಾಷಿಟಾ ಪರ್ವತ. ದಕ್ಷಿಣ ಮಧ್ಯಪ್ರದೇಶದಲ್ಲಿ ಆರ್ಬಕಲ್ ಪರ್ವತಶ್ರೇಣಿಯೂ ಕೆಂಪು ಮತ್ತು ವಾಷಿಟಾ ನದೀಕಣಿವೆಗಳ ಮಧ್ಯಭಾಗದಲ್ಲಿ ವಿಂಟಾ ಪರ್ವತಗಳೂ ಇವೆ. ಪಶ್ಚಿಮದ ಮೈದಾನಗಳಲ್ಲಿ ಜಿಪ್ಸಮ್ ನಿಕ್ಷೇಪಗಳು ಹೇರಳ. ವಾಯವ್ಯಭಾಗದಲ್ಲಿ ಪ್ರಮುಖವಾಗಿರುವ ಚೌಳುಮಣ್ಣಿನ ಮೈದಾನಗಳು ಸಮತಲ ಪ್ರದೇಶಗಳು. ಒಂದೊಂದೂ 3ರಿಂದ 5 ಕಿಮೀ ಗಳಷ್ಟು ಅಗಲವಾಗಿಯೂ 13 ಕಿಮೀ ಗಳಷ್ಟು ಉದ್ದವಾಗಿಯೂ ಇವೆ.

ಇಲ್ಲಿನ ಪ್ರಮುಖ ನದಿಗಳು ವಾಯವ್ಯದಿಂದ ಆಗ್ನೇಯಕ್ಕೆ ಹರಿಯುತ್ತವೆ. ಆರ್ಕನ್ಸಾಸ್ ಮುಖ್ಯ ನದಿ. ಇದು ಉತ್ತರದಲ್ಲಿ ಪಶ್ಚಿಮ ರೇಖಾಂಶ $97^0$ಯ ಬಳಿ ರಾಜ್ಯವನ್ನು ಪ್ರವೇಶಿಸಿ ಪೂರ್ವದ ಎಲ್ಲೆಯ ಮಧ್ಯಭಾಗದಲ್ಲಿ ರಾಜ್ಯವನ್ನು ದಾಟಿ ಆರ್ಕನ್ಸಾಸ್ ರಾಜ್ಯದಲ್ಲಿ ಮುಂದುವರಿಯುತ್ತದೆ. ಬಹಳಮಟ್ಟಿಗೆ ಈ ರಾಜ್ಯದ ದಕ್ಷಿಣದ ಅಂಚಿನಲ್ಲೇ ಹರಿಯುವುದು ರೆಡ್ ನದಿ. ನಾರ್ತ್ ಫೋರ್ಕ್, ವಾಷಿಟಾ, ಬ್ಲೂ, ಬಾಗಿ, ಕಿಯಾಮಿಚಿ ಇವು ರೆಡ್ ನದಿಯ ಉಪನದಿಗಳು. ಆಗ್ನೇಯ ಭಾಗದಲ್ಲಿ ಲಿಟಲ್ ಇನ್ನೊಂದು ಮುಖ್ಯನದಿ. ಮೌಂಟನ್ ಫೋರ್ಕ್ ಇದರ ಒಂದು ಮುಖ್ಯ ಉಪನದಿ. ಲಿಟಲ್ ನದಿ ಓಕ್ಲಹೋಮದ ಗಡಿ ದಾಟಿ ಹರಿದು, ಆರ್ಕನ್ಸಾಸ್ ರಾಜ್ಯದಲ್ಲಿ ರೆಡ್ ನದಿಯಲ್ಲಿ ಸಂಗಮಿಸುತ್ತದೆ.

**ವಾಯುಗುಣ:** ಇಲ್ಲಿಯದು ಖಂಡಾಂತರ ವಾಯುಗುಣ, ಉಷ್ಣತೆ ಮತ್ತು ತೇವಗುಣಗಳಲ್ಲಿ ಬಹಳ ತಾರತಮ್ಯಗಳುಂಟು. ಪಶ್ಚಿಮ ಮತ್ತು ಮಧ್ಯಭಾಗಗಳು ಸಾಮಾನ್ಯವಾಗಿ ಪೂರ್ವಭಾಗಕ್ಕಿಂತ ಹೆಚ್ಚು ತಂಪು, ಶುಷ್ಕ, ವಾಯವ್ಯದಲ್ಲಿ ವರ್ಷದ ಸರಾಸರಿ ದೈನಿಕ ಉಷ್ಣತೆ $55^0$ ಫ್ಯಾ. (ಸು. $13^0$ ಸೆಂ.). ವಾರ್ಷಿಕ ಸರಾಸರಿ ಮಳೆ 16.51". ಆಗ್ನೇಯದಲ್ಲಿ ಇವು ಕ್ರಮವಾಗಿ $63^0$ ಫ್ಯಾ. ಮತ್ತು 46.53". ರಾಜ್ಯದ ಮಧ್ಯದಲ್ಲಿರುವ ಓಕ್ಲಹೋಮ ನಗರದಲ್ಲಿ ವರ್ಷದ ಸರಾಸರಿ ದೈನಿಕ ಉಷ್ಣತೆ $60^0$. ಫ್ಯಾ., ಸರಾಸರಿ ಮಳೆ 30.22".

**ಸಸ್ಯ ಮತ್ತು ಪ್ರಾಣಿವರ್ಗ:** ಓಕ್ಲಹೋಮದ ಪೂರ್ವ ಭಾಗವನ್ನು ಬಹುತೇಕ ಕಾಡು ಆವರಿಸಿತ್ತು. ಅಲ್ಲಲ್ಲಿ ಹುಲ್ಲುಗಾವಲುಗಳಿದ್ದುವು. ಪೈನ್, ಜ್ಯೂನಿಫರ್, ಶಾಲ್ಮಲೀ, ಓಕ್, ವಿಲ್ಲೊ ಮುಂತಾದ ವೃಕ್ಷಜಾತಿಗಳು ಪ್ರಮುಖ. ಮಧ್ಯಭಾಗದಲ್ಲಿ ನದಿಗಳ ಆಚೀಚೆ ದಂಡೆಗಳಲ್ಲಿ ಮಾತ್ರ ಮರಗಳು ಬೆಳೆದಿವೆ. ಪಶ್ಚಿಮಭಾಗದಲ್ಲಿ ತೇವ ಇನ್ನೂ ಕಡಿಮೆ. ಅಲ್ಲಿ ಕೆಲವು ಕುಬ್ಜ ವೃಕ್ಷಗಳು ಮಾತ್ರ ಬೆಳೆಯುತ್ತವೆ. ಪ್ಲಂ, ನಳ್ಳಿಸೇಬು, ಚೆರಿ, ಬ್ಲ್ಯಾಕ್ ಬೆರಿ, ದ್ರಾಕ್ಷಿ, ಸ್ಟ್ರಾಬೆರಿ ಮುಂತಾದ ವನ್ಯಫಲಗಳು ಈ ರಾಜ್ಯದಲ್ಲಿ ಬೆಳೆಯುತ್ತವೆ. ವಿಚಿಟಾ ಕಾಡುಗಳಲ್ಲಿ ವನ್ಯಪ್ರಾಣಿಗಳ ನೆಲೆಯನ್ನು ಸರ್ಕಾರ ರಕ್ಷಿಸುತ್ತದೆ. ಜಿಂಕೆ, ತೋಳ, ಚಿರತೆ, ಕರಡಿ, ಮಿಂಕ್, ಒಪಾಸಂ, ಮೊಲ, ಅಳಿಲು, ಪಾರಿವಾಳ, ಬಾತುಕೋಳಿ ಇವು ಕಾಡುಗಳಲ್ಲಿ ಹೇರಳ, ಆದಿಕಾಲದಲ್ಲಿ ಕಾಡೆಮ್ಮೆಗಳು ಹೆಚ್ಚಾಗಿದ್ದುವು. ಸ್ವಚ್ಛಂದ ಮೃಗಯಾ ವಿಹಾರದ ಹಾವಳಿಯಿಂದ ಇವು ಈಗ ಕಡಿಮೆಯಾಗಿವೆ. ಅನೇಕ ಬಗೆಯ ಪಕ್ಷಿಗಳು ಇಲ್ಲಿವೆ. ಋತುಮಾನಕ್ಕೆ ಅನುಗುಣವಾಗಿ ಇವು ವಲಸೆ ಹೋಗುತ್ತವೆ.

**ಉದ್ಯಾನ ಮತ್ತು ಪ್ರೇಕ್ಷಣೀಯ ಸ್ಥಳಗಳು:** ಇಲ್ಲಿಯ ನದೀಪ್ರವಾಹಗಳನ್ನು ತಡೆಗಟ್ಟುವ ಸಲುವಾಗಿ ಹಲವಾರು ಜಲಾಶಯಗಳನ್ನು ನಿರ್ಮಿಸಲಾಗಿದೆ. ಅವುಗಳ ಪೈಕಿ ಯುಫಾಲ ಬಲು ದೊಡ್ಡದು. ಇದರ ನೀರು ಕೆನೆಡಿಯನ್ ನದಿ ಮತ್ತು ಉಪನದಿಗಳಲ್ಲಿ ಸುಮಾರು 208 ಕಿಮೀ ಉದ್ದದವರೆಗೂ ಚಾಚಿದೆ. ಟೆಕ್ಲೋಮ ಇನ್ನೊಂದು, ರೆಡ್ ಮತ್ತು ವಾಷಿಟಾ ನದಿಗಳಲ್ಲಿ 160 ಕಿಮೀಗಳವರೆಗೆ ಇದರ ನೀರು ಹರಡಿದೆ. ಚೆರೊಕೀಸ್ ಸರೋವರದ ನೀರು ನಿಯೋಷೋ ನದಿಯಲ್ಲಿ 104 ಕಿಮೀಗಳವರೆಗೂ ಪೋರ್ಟ್ ಗಿಬ್ಸನ್ ನೀರು ಆರ್ಕನ್ಸಾ ಮತ್ತು ಸಿಮರಾನ್ ನದಿಗಳಲ್ಲಿ 64 ಕಿಮೀಗಳವರೆಗೂ ಟೆನ್ ಕಿಲರ್ ಸರೋವರದ ನೀರು ಇಲಿನಾಯ್ ನದಿಯಲ್ಲಿ 40 ಕಿಮೀಗಳವರೆಗೂ ಚಾಚಿವೆ. ಮೀನುಗಾರಿಕೆ ಮತ್ತು ದೋಣಿವಿಹಾರಗಳಿಗೆ ಅನುಕೂಲಕರವಾದ ಇಂಥ ಸರೋವರಗಳು ಲಕ್ಷಾಂತರ ಪ್ರವಾಸಿಗಳನ್ನು ಆಕರ್ಷಿಸುತ್ತವೆ. ಓಕ್ಲಹೋಮದ ಪ್ರಕೃತಿಸೌಂದರ್ಯದ ಬೀಡಾದ ಅನೇಕ ಉದ್ಯಾನಗಳಲ್ಲಿ ಅಲಬಾಸ್ಟರ್ ಗುಹೆಗಳು, ಕುದಿಯುವ ನೀರಿನ ಬುಗ್ಗೆಗಳು, ಬೀವರ್ಸ್ ಬೆಂಡ್ ಉದ್ಯಾನ, ಗ್ರೀನ್ ಲೀಫ್ ಉದ್ಯಾನ, ಲೇಕ್ ಮುರ್ರೆ ಉದ್ಯಾನ, ಒಸೇಜ್ ಬೆಟ್ಟಗಳ ಉದ್ಯಾನ, ರಾಬರ್ಸ್ ಕೇವ್ (ದರೋಡೆಗಾರರ ಗುಹೆ) ಉದ್ಯಾನ, ರೋಮನ್ ನೋಸ್ ಉದ್ಯಾನ, ಬಾಗಿ ಡಿಪೋ ಸ್ಮಾರಕ ಉದ್ಯಾನ, ಪ್ಲಾಟ್ ರಾಷ್ಟ್ರೀಯ ಉದ್ಯಾನ ಮುಂತಾದವು ಸುಪ್ರಸಿದ್ಧವಾದವು. ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯಗಳನ್ನು ಓಕ್ಲಹೋಮ ಇತಿಹಾಸ ಸಂಘ ನಡೆಸಿಕೊಂಡು ಬರುತ್ತಿದೆ. ಟಲ್ಸದಲ್ಲಿರುವ ಗಿಲ್‌ಕ್ರೀಸ್ ಕಲಾ ಮತ್ತು ಇತಿಹಾಸ ಸಂಸ್ಥೆ, ನಾರ್ಮನ್‌ನಲ್ಲಿರುವ ವಸ್ತುಸಂಗ್ರಹಾಲಯ, ಸ್ಟೂವಾಲ್ ವಸ್ತುಸಂಗ್ರಹಾಲಯ, ಬಾರ್ಟ್ಲೆಸ್‌ವಿಲ್ಲೆಯ ವುಲರಾಕ್ ವಸ್ತುಸಂಗ್ರಹಾಲಯ ಇವು ಇತರ ಕೆಲವು ಮುಖ್ಯ ಸಂಸ್ಥೆಗಳು.

**ಜನಸಂಖ್ಯೆ:** ಬಿಳಿಯರು ಇಲ್ಲಿಗೆ ಬಂದಾಗ ಈ ಪ್ರದೇಶ ಅಮೆರಿಕನ್ ಇಂಡಿಯನರ ಆವಾಸಸ್ಥಾನವಾಗಿತ್ತು. ಅಮೆರಿಕ ಸಂಯುಕ್ತಸಂಸ್ಥಾನ 1820ರ ಅನಂತರ ಇತರ ಗಿರಿಜನರನ್ನು ಈ ಪ್ರದೇಶದಲ್ಲಿ ನೆಲೆಸಲು ಪ್ರೇರೇಪಿಸಿತು. ಈ ವಲಸೆಗಾರರು ತಮ್ಮ ಸರ್ಕಾರ, ಶಾಲಾಪದ್ಧತಿ ಮತ್ತು ಇತರ ಪದ್ಧತಿಗಳನ್ನು ಇಲ್ಲಿ ಸ್ಥಾಪಿಸಿದರು. ಅನಂತರವೂ ಕೇಂದ್ರ ಸರ್ಕಾರದ ಉತ್ತೇಜನದಿಂದ ಇತರ ಜನರೂ ವಲಸೆ ಬಂದರು. 20ನೆಯ ಶತಮಾನದ ಮಧ್ಯಭಾಗದ ವೇಳೆಗೆ ಸಂಯುಕ್ತ ಸಂಸ್ಥಾನದ ಇಂಡಿಯನರಲ್ಲಿ 1/2 ಭಾಗದಷ್ಟು ಜನ ಇಲ್ಲಿ ವಾಸಿಸುತ್ತಿದ್ದರು. ಕ್ರಮೇಣ ಅಂತರ್ಜನಾಂಗ ವಿವಾಹಗಳು ರೂಢಿಗೆ ಬಂದು ಜನಾಂಗಗಳ ಬೆರಕೆಯಾಯಿತು. ಇಂಡಿಯನರಿಗೆ ಕೊಟ್ಟು ಉಳಿದ ನೆಲವನ್ನು ಸರ್ಕಾರ ಇತರರಿಗೆ ಹಂಚಿತು. 1889ರಿಂದ 1910ರ ವರೆಗೆ ವಿಭಿನ್ನ ಐರೋಪ್ಯ ರಾಷ್ಟ್ರೀಯ ಮೂಲಗಳ ಜನ ಇಲ್ಲಿಗೆ ಬಂದು ನೆಲೆಸಿದರು. ಇದರಿಂದ ರಾಜ್ಯದ ಜನಸಂಖ್ಯೆ ಶೀಘ್ರಗತಿಯಲ್ಲಿ ಬೆಳೆಯಲಾರಂಭಿಸಿತು. 1907ರಲ್ಲಿ 14,14,177 ಇದ್ದ ಜನಸಂಖ್ಯೆ 1930ರ ವೇಳೆಗೆ 23,96,040ಕ್ಕೆ ಏರಿತು. 1950ರಲ್ಲಿ ಇದು 22,33,351ಕ್ಕೆ ಇಳಿಯಿತು. ವ್ಯವಸಾಯವನ್ನು ಯಾಂತ್ರೀಕರಣ

ಗೊಳಿಸಿದ್ದರಿಂದ ಅನೇಕರು ಕೈಗಾರಿಕೆಯಲ್ಲಿ ಉದ್ಯೋಗ ದೊರಕಿಸಿಕೊಳ್ಳಲು ಇತರ ಪ್ರದೇಶಗಳಿಗೆ ವಲಸೆ ಹೋದುದೇ ಈ ಇಳಿತಕ್ಕೆ ಕಾರಣ. ಪುನಃ 1960ರ ವೇಳೆಗೆ ಜನಸಂಖ್ಯೆ 23,28,284ಕ್ಕೆ ಏರಿತು. ಎರಡನೆಯ ಮಹಾಯುದ್ಧದ ಅನಂತರ ನೀಗ್ರೊಗಳ ಜನಸಂಖ್ಯೆ ಬೆಳೆದಿದೆ. ಅಂತರ್ಯುದ್ಧಕ್ಕೆ ಮುನ್ನ ಗುಲಾಮರಾಗಿದ್ದು ಅನಂತರ ವಿಮೋಚನೆ ಪಡೆದ ನೀಗ್ರೊ ಜನರ ಸಂತತಿಯವರು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.




**ಇತಿಹಾಸ:** 10,000 ವರ್ಷಗಳಿಗೂ ಮುನ್ನ ಮಾನವರು ಈ ರಾಜ್ಯದ ಪ್ರದೇಶದಲ್ಲಿ ಕಾಣಿಸಿಕೊಂಡು, ಓಜ಼ಾರ್ಕ್ ಬೆಟ್ಟಗಳ ಬಳಿಯ ನದೀದಂಡೆಗಳಲ್ಲೂ ಪಾನ್‍ಹ್ಯಾಂಡಲ್‍ನ ವಾಯವ್ಯ ಪ್ರದೇಶದಲ್ಲಿರುವ ಗುಹೆಗಳಲ್ಲೂ ವಾಸಿಸುತ್ತಿದ್ದರೆಂಬುದು ಪ್ರಾಕ್ತನ ಸಂಶೋಧನೆಗಳಿಂದ ತಿಳಿದುಬಂದಿದೆ. ಕ್ಲೋವಿಸ್ ಸಂಸ್ಕೃತಿಗೆ ಸೇರುವ ಕಲ್ಲಿನ ಆಯುಧಗಳು ಆನೆಯೊಂದರ ಅವಶೇಷಗಳೊಂದಿಗೆ ಕ್ಯಾಡೋ ಜಿಲ್ಲೆಯಲ್ಲಿ ದೊರಕಿವೆ. 4,000 ವರ್ಷಗಳಷ್ಟು ಹಳೆಯದಾದ ವ್ಯವಸಾಯಜೀವಿ ಜನರ ಅವಶೇಷಗಳು ಪಾನ್‍ಹ್ಯಾಂಡಲ್ ಪ್ರದೇಶದಲ್ಲಿ ಬೆಳಕಿಗೆ ಬಂದಿವೆ. ಬುಟ್ಟಿಗಳು, ಚರ್ಮದ ಚೀಲಗಳು, ಕಲ್ಲಿನ ಹೆರೆಯುವ ಆಯುಧಗಳು ಮತ್ತು ಚಾಕು ಇವರ ಉಪಕರಣಗಳಾಗಿದ್ದುವು. ಒರಟು ಮಡಕೆಗಳೂ ಧಾನ್ಯಗಳೂ ಮೂಳೆಯ ಮೀನುಗಳೂ ಮೂಳೆ ಮತ್ತು ಕೊಂಬಿನ ಇತರ ಆಯುಧಗಳೂ ಇವರಲ್ಲಿ ಬಳಕೆಯಲ್ಲಿದ್ದುವು. ಪ್ರ.ಶ. 850ರ ಸುಮಾರಿಗೆ ಸೇರಿದ ಮಹತ್ತರ ದೇವಾಲಯದ ಅವಶೇಷಗಳನ್ನು ಲೇಫ್ಲೋರ್ ಜಿಲ್ಲೆಯ ಸ್ಪೈರೋನಗರದ ಬಳಿ ಕಾಣಬಹುದು. ಉನ್ನತ ನಾಗರಿಕತೆಯ ಕುರುಹುಗಳಿರುವ ಈ ಜನ ತಾಮ್ರ ಮತ್ತು ಶಿಲೋಪಕರಣಗಳನ್ನು ಬಳಸುತ್ತಿದ್ದರು.

1541ರಲ್ಲಿ ಸ್ಪ್ಯಾನಿಷರು ಇಲ್ಲಿ ಆಕ್ರಮಣಕಾರ್ಯ ನಡೆಸಿದರು. ಆಗ ಇದು ಐರೋಪ್ಯಸಂಪರ್ಕ ಪಡೆಯಿತು. 18ನೆಯ ಶತಮಾನದಲ್ಲಿ ಈ ಪ್ರದೇಶ ಫ್ರೆಂಚರ ಆಡಳಿತಕ್ಕೆ ಸೇರಿತ್ತು. ಈಗಲೂ ಫ್ರೆಂಚ್ ಹೆಸರುಗಳುಳ್ಳ ಪರ್ವತ ಮತ್ತು ನದಿಗಳನ್ನು ಇಲ್ಲಿ ಕಾಣಬಹುದು. 1830ರ ಶಾಸನದ ಪ್ರಕಾರ ಮಿಸಿಸಿಪಿ ನದಿಯ ಪೂರ್ವ ಪ್ರದೇಶಗಳಲ್ಲಿದ್ದ ಇಂಡಿಯನರನ್ನು ಅದರ ಪಶ್ಚಿಮಕ್ಕೆ ಕಳುಹಿಸಲಾಯಿತು. ನಾಗರಿಕ ಬುಡಕಟ್ಟುಗಳೆಂದು ಹೆಸರಾದ ಚೋಕ್ಟಾ, ಕ್ರೀಕ್ (ಮುಸ್ಕೋಗಿಯನ್), ಸೆಮಿನೋಲ್, ಚೆರೋಕೀ ಮತ್ತು ಚಿಕ್ಕಸಾ ಪಂಗಡಗಳನ್ನು ಇಂಡಿಯನರ ವಸಾಹತುಗಳಿಗೆ 1830–42ರಲ್ಲಿ ಸಾಗಿಸಲಾಯಿತು. ಇವರು ತಮ್ಮವೇ ಆದ ಆಡಳಿತಗಳನ್ನು ಏರ್ಪಡಿಸಿಕೊಂಡು ಕ್ರಮೇಣ ಅಭಿವೃದ್ಧಿ ಹೊಂದುತ್ತಿದ್ದರು. ಸಾಮಾನ್ಯವಾಗಿ ದಕ್ಷಿಣದ ಸಂಸ್ಥಾನಗಳೊಂದಿಗೆ ಸಾಮ್ಯ ಪಡೆದಿದ್ದ ಈ ಜನ ಗುಲಾಮ ಪದ್ಧತಿಯ ನಿವಾರಣೆಗಾಗಿ ನಡೆದ ಅಮೆರಿಕದ ಅಂತರ್ಯುದ್ಧದಲ್ಲಿ ತಾಟಸ್ಥ್ಯ ವಹಿಸಬೇಕೆಂದು ಬಯಸಿದರೂ ಕ್ರಮೇಣ ಇಲ್ಲಿ ದಕ್ಷಿಣದ ಒಕ್ಕೂಟ ರಾಜ್ಯಗಳ ಪರವಾದ ನೀತಿ ಬೆಳೆಯುತ್ತಿತ್ತು. 1861 ಅಕ್ಟೋಬರ್‍ನಲ್ಲಿ ಈ ರಾಜ್ಯಗಳೊಂದಿಗೆ ಆಲ್ಬರ್ಟ್ ಪೈಕನ ನೇತೃತ್ವದಲ್ಲಿ ಒಪ್ಪಂದ ಮಾಡಿಕೊಳ್ಳಲಾಯಿತು. ಆದರೆ ಅದರ ವಿರೋಧಿಗಳು ಒಪೊತ್ಲೆಯ ಹೋಲನ ನೇತೃತ್ವದಲ್ಲಿ ಈ ಒಕ್ಕೂಟದ ಸೈನ್ಯಗಳನ್ನು ಎದುರಿಸಿದರು. ಇವರು ಸೋತು ಕ್ಯಾನ್ಸಸ್ ಪ್ರದೇಶಕ್ಕೆ ಓಡಿಹೋದರು. 1862ರ ಅಂತ್ಯಭಾಗದಲ್ಲಿ ಸಂಯುಕ್ತಸಂಸ್ಥಾನದ ಏಕತಾ ಸೈನ್ಯ ಈ ಪ್ರದೇಶವನ್ನು ಪ್ರವೇಶಿಸಿ ಫೋರ್ಟ್ ಗಿಬ್ಸನ್ ಪ್ರದೇಶವನ್ನು ವಶಪಡಿಸಿಕೊಂಡಿತು. ಈ ಯುದ್ಧದ ಪರಿಣಾಮವಾಗಿ ರಾಜ್ಯಕ್ಕೆ ಹೆಚ್ಚು ನಷ್ಟವಾಯಿತಾದರೂ 1865 ಜೂನ್ 23ರಂದು ಅಂತಿಮವಾಗಿ ವಿಜಯ ಗಳಿಸಿದ ಏಕತಾ ಪಕ್ಷ ಸಹಾಯದಿಂದ ಗುಲಾಮ ಪದ್ಧತಿ ನಿರ್ನಾಮವಾಯಿತು. ಪಶ್ಚಿಮದ ಕೆಲಪ್ರದೇಶಗಳು ಈ ರಾಜ್ಯದ ಕೈಬಿಟ್ಟುವು. ಈ ಪ್ರದೇಶಗಳಲ್ಲಿ ಬೇರೆ ಇಂಡಿಯನರನ್ನು ಸ್ಥಾಪಿಸಲಾಯಿತು. ಆಗಾಗ್ಗೆ ದಂಗೆಯೇಳುತ್ತಿದ್ದ ಈ ಜನರನ್ನು ಬಲಾತ್ಕಾರವಾಗಿ ಹದ್ದಿನಲ್ಲಿಡಬೇಕಾಗಿತ್ತು. 1875 ಜೂನ್ ತಿಂಗಳ ಪೋರ್ಟ್‍ಸಿಲ್ ದಂಗೆಯೇ ಕೊನೆಯದು. ಅನಂತರ ಇಲ್ಲಿ ಶಾಶ್ವತ ಶಾಂತಿಯೇರ್ಪಟ್ಟಿತು. ಕ್ರಮೇಣ ಇಲ್ಲಿ ಬಿಳಿಯರ ಪ್ರಭಾವ ಬೆಳೆಯಲಾರಂಭಿಸಿತು. 1872ರಲ್ಲಿ ಈ ಪ್ರದೇಶದ ಮೂಲಕ ರೈಲುಮಾರ್ಗ ರಚಿಸಲಾಯಿತು. ಐದು ನಾಗರಿಕ ಪಂಗಡಗಳ ಮತ್ತು ವಸತಿಕಾರರ ಮಧ್ಯೆ ವೈಮನಸ್ಯವುಂಟಾಗುತ್ತಿದ್ದುದರಿಂದ ಸರ್ಕಾರ ಆಗಾಗ್ಗೆ ತಲೆಹಾಕುತ್ತಿರಬೇಕಾಗಿತ್ತು. 1889 ಏಪ್ರಿಲ್‍ನಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳಲು ಸಾವಿರಾರು ಮಂದಿ ಧಾವಿಸಿ ಬಂದರು. ಗುತ್ರೀ ಮತ್ತು ಓಕ್ಲಹೋಮ ನಗರಗಳು ಹುಟ್ಟಿಕೊಂಡದ್ದು ಆಗ. 1890 ಮೇ 20ರಂದು ಪಶ್ಚಿಮದ ಪ್ರದೇಶಗಳನ್ನು ಓಕ್ಲಹೋಮ ರಾಜ್ಯವೆಂದು ಘೋಷಿಸಲಾಯಿತು, 1907 ನವೆಂಬರಿನಲ್ಲಿ ಇಂಡಿಯನರ ಪ್ರದೇಶಗಳನ್ನೂ ಓಕ್ಲಹೋಮವನ್ನೂ ಒಟ್ಟುಗೂಡಿಸಿ ಅದನ್ನು 46ನೆಯ ರಾಜ್ಯವನ್ನಾಗಿ ಸಂಯುಕ್ತಸಂಸ್ಥಾನಕ್ಕೆ ಸೇರಿಸಿಕೊಳ್ಳಲಾಯಿತು. ಈ ರಾಜ್ಯ ಸಂಯುಕ್ತಸಂಸ್ಥಾನದ ಅಂಗವಾಗಿ ಸರ್ವತೋಮುಖ ಅಭಿವೃದ್ಧಿ ಹೊಂದುತ್ತಿದೆ.

ಆಡಳಿತ: ಓಕ್ಲಹೋಮ ರಾಜ್ಯವನ್ನು 77 ಜಿಲ್ಲೆಗಳಾಗಿ ವಿಭಾಗಿಸಲಾಗಿದ್ದು, ಅಲ್ಲಿ 506 ಪಟ್ಟಣಗಳೂ ನಗರಗಳೂ 105 ವಿಶೇಷ ಪ್ರಾಂತ್ಯಗಳೂ ಇವೆ. ಜಿಲ್ಲೆಗಳು ವಿಸ್ತಾರದಲ್ಲಿ ವಿಭಿನ್ನವಾಗಿವೆ. ಅಂತೆಯೇ ಇಲ್ಲಿ ವಿರಳ ಜನಸಂಖ್ಯೆಯ ಜಿಲ್ಲೆಗಳೂ ತೀವ್ರ ಜನಸಾಂದ್ರತೆ ಜಿಲ್ಲೆಗಳೂ ಇವೆ.

1907 ಸೆಪ್ಟೆಂಬರ್ 17ರಂದು ಅಸ್ತಿತ್ವಕ್ಕೆ ಬಂದ ಈ ರಾಜ್ಯದ ಸಂವಿಧಾನ 1959ರ ಹೊತ್ತಿಗೆ 42 ಬಾರಿ ತಿದ್ದುಪಡಿಗಳಿಗೊಳಗಾಯಿತು. ಮತದಾರರು ಸಂಯುಕ್ತಸಂಸ್ಥಾನದ ಪ್ರಜೆಗಳಾಗಿರಬೇಕು. 21 ವರ್ಷಕ್ಕೆ ಮೇಲ್ಪಟ್ಟವರು, ಆ ರಾಜ್ಯದಲ್ಲಿ ಕನಿಷ್ಠಪಕ್ಷ ಒಂದು ವರ್ಷ, ಜಿಲ್ಲೆಯಲ್ಲಿ ಆರು ತಿಂಗಳು ಮತ್ತು ಕ್ಷೇತ್ರದಲ್ಲಿ 30 ದಿನಗಳಾದರೂ ವಾಸಿಸಿರಬೇಕು. ಎಲ್ಲ ಮುಖ್ಯ ಅಧಿಕಾರಿಗಳನ್ನೂ ಚುನಾಯಿಸಲಾಗುತ್ತದೆ. ಓಕ್ಲಹೋಮದಿಂದ ಇಬ್ಬರು ಸೆನೆಟರ್ ಮತ್ತು ಆರು ಪ್ರತಿನಿಧಿಗಳನ್ನು ಚುನಾಯಿಸಲಾಗುತ್ತದೆ.

ಗವರ್ನರ್ ಮುಖ್ಯ ಕಾರ್ಯನಿರ್ವಾಹಕ. ಈತನನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಆರಿಸಲಾಗುತ್ತದೆ. ಎರಡನೆಯ ಬಾರಿ ಚುನಾವಣೆಗೆ ಸ್ಪರ್ಧಿಸುವ ಅವಕಾಶವನ್ನು 1966ರ ತಿದ್ದುಪಡಿಯ ಪ್ರಕಾರ ಆತನಿಗೆ ನೀಡಲಾಗಿದೆ. ಆತನಲ್ಲದೆ ಲೆಫ್ಟಿನೆಂಟ್–ಗವರ್ನರ್, ರಾಜ್ಯಸಚಿವ, ಕೋಶಾಧಿಕಾರಿ, ನ್ಯಾಯಾಂಗ ಸಚಿವ, ವಿದ್ಯಾನಿರ್ವಾಹಕ, ಗಣಿಗಳ ನಿರ್ದೇಶಕ ಮುಂತಾದ ಹನ್ನೆರಡು ಅಧಿಕಾರಿಗಳನ್ನು ನಾಲ್ಕು ವರ್ಷಗಳಿಗೊಮ್ಮೆ ಆರಿಸಲಾಗುತ್ತದೆ. ಆಡಳಿತ ಕಾರ್ಯನಿರ್ವಹಣೆಗೆ ಇವರಲ್ಲದೆ 60ಕ್ಕೂ ಮೇಲ್ಪಟ್ಟ ಅಧಿಕಾರಿಗಳು, ಸಮಿತಿಗಳು, ಇಲಾಖೆಗಳು ಮತ್ತು ಮಂಡಳಿಗಳು ನೇಮಕವಾಗುತ್ತವೆ. ರಾಜ್ಯದ ಶಾಸಕಾಂಗದಲ್ಲಿ 48 ಸೆನೆಟರುಗಳೂ 99 ಪ್ರತಿನಿಧಿಗಳೂ ಇರುತ್ತಾರೆ. ಸಂಯುಕ್ತಸಂಸ್ಥಾನದ ಕಾಂಗ್ರೆಸ್ಸಿಗೆ ಅರ್ಧಭಾಗ ಸೆನೆಟರುಗಳನ್ನೂ ಎಲ್ಲ ಪ್ರತಿನಿಧಿಗಳನ್ನೂ ಎರಡು ವರ್ಷಕ್ಕೊಮ್ಮೆ ಚುನಾಯಿಸಲಾಗುತ್ತದೆ. ನ್ಯಾಯನಿರ್ವಹಣೆ ಶ್ರೇಷ್ಠ ನ್ಯಾಯಾಲಯದ ಹೊಣೆ. ಆರು ವರ್ಷಗಳ ಅವಧಿಯಿರುವ 9 ಮಂದಿ ನ್ಯಾಯಾಧೀಶರನ್ನು ಈ ಸಂಸ್ಥೆಗೆ ಆಯ್ಕೆ ಮಾಡಲಾಗುತ್ತದೆ. ಇದರ ಸಹಾಯಕ್ಕೆ ಅಪರಾಧ ನ್ಯಾಯಾಲಯವೂ ಜಿಲ್ಲಾ ನ್ಯಾಯಾಲಯಗಳೂ ಇವೆ. ಇವಲ್ಲದೆ ಕೆಲವು ಜನನಿಬಿಡ ಜಿಲ್ಲೆಗಳಲ್ಲಿ ಉನ್ನತ ನ್ಯಾಯಾಲಯಗಳೂ ಇವೆ. 1965ರ ಮಸೂದೆಯ ಪ್ರಕಾರ ಜಿಲ್ಲಾ ನ್ಯಾಯಾಧಿಕಾರಿಗಳನ್ನು ಚುನಾಯಿಸಬಹುದಾಗಿದೆ.

ಜಿಲ್ಲೆಯ ಆಡಳಿತ ನಿರ್ವಹಣೆಗೆ ಕಮಿಷನರುಗಳನ್ನು ಆಯ್ಕೆ ಮಾಡಲಾಗುತ್ತದೆ. ಇವರಲ್ಲದೆ ಷರೀಫ್, ಅಟಾರ್ನಿ, ನ್ಯಾಯಾಧೀಶ, ಗುಮಾಸ್ತ, ನ್ಯಾಯಾಲಯದ ಗುಮಾಸ್ತ ಮುಂತಾದ ಹಲವಾರು ಜಿಲ್ಲಾಮಟ್ಟದ ಅಧಿಕಾರಿಗಳಿರುತ್ತಾರೆ. ಇವರನ್ನು ಎರಡು ವರ್ಷಗಳಿಗೊಮ್ಮೆ ಚುನಾಯಿಸಲಾಗುತ್ತದೆ. ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ಆದಾಯಮೂಲಗಳು ಬೇರೆ ಬೇರೆ. ಖನಿಜೋತ್ಪನ್ನಗಳ ಮೇಲಿನ ತೆರಿಗೆಗಳು ರಾಜ್ಯಾದಾಯದ ಮುಖ್ಯ ಮೂಲ. ಸಾರಿಗೆ ವಾಹನಗಳ ಮೇಲಣ ಸುಂಕ ಮತ್ತು ವಿವಿಧ ಇಲಾಖೆಗಳ ಆದಾಯ ಇದಕ್ಕೆ ಪೂರಕ. ಸ್ಥಳೀಯ ಸಂಸ್ಥೆಗಳ ಆದಾಯ ಮುಖ್ಯವಾಗಿ ಆಸ್ತಿಯ ಮೇಲಣ ತೆರಿಗೆಗಳಿಂದ ಬರುತ್ತದೆ. 1965ರ ಕಾಯಿದೆಯಲ್ಲಿ ಮಾರಾಟ ತೆರಿಗೆಯನ್ನು ವಿಧಿಸಲು ಅವಕಾಶ ಮಾಡಿದೆ. ಈ ಆದಾಯ ಸ್ಥಳೀಯ ಸಂಸ್ಥೆಗಳಿಗೆ ಮೀಸಲು. ಸಾರಿಗೆ ಮಾರ್ಗ, ವಿದ್ಯಾಭ್ಯಾಸ, ಸಾಲದ ಬಿಡುಗಡೆ ಮತ್ತು ಜನೋಪಯೋಗಿ ಕಾರ್ಯ ಇವು ಮುಖ್ಯ ವ್ಯಯದ ಬಾಬುಗಳು.

**ವಿದ್ಯಾಭ್ಯಾಸ:** ಸಾರ್ವಜನಿಕ ವಿದ್ಯಾಸಂಸ್ಥೆಗಳು ರಾಜ್ಯ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳ ಆಡಳಿತಕ್ಕೊಳಪಟ್ಟಿವೆ. ಸುಮಾರು 5,00,000 ವಿದ್ಯಾರ್ಥಿಗಳಿಗಾಗಿ 20,00,00,000 ಡಾಲರುಗಳ ಖರ್ಚು ಮಾಡಲಾಗುತ್ತದೆ. 1965ರಲ್ಲಿ ಶೇಕಡ 25ರಷ್ಟು ಹೆಚ್ಚುವರಿ ಖರ್ಚಿಗೆ ಒಪ್ಪಿಗೆ ನೀಡಲಾಯಿತು. ರಾಜ್ಯಘಟಕ ಜಿಲ್ಲೆಗಳಿಗೆ ಹೊಸ ವಿದ್ಯಾತೆರಿಗೆಗಳನ್ನು ವಿಧಿಸಲು ಸಹ ಸಮ್ಮತಿ ನೀಡಲಾಯಿತು. ಪ್ರೌಢ ವಿದ್ಯಾಭ್ಯಾಸ ಎಲ್ಲ ವಿದ್ಯಾಸಂಸ್ಥೆಗಳ ಅಧಿಕಾರಿಗಳನ್ನೊಳಗೊಂಡ ಮಂಡಲಿಯೊಂದರ ನೇತೃತ್ವದಲ್ಲಿ ನಡೆಯುತ್ತದೆ. ಓಕ್ಲಹೋಮ ವಿಶ್ವವಿದ್ಯಾಲಯ 1892ರಲ್ಲಿ ಪ್ರಾರಂಭವಾಯಿತು. ಇದು ಕಲೆ, ವಿಜ್ಞಾನ, ಫಾರ್ಮಸಿ, ಎಂಜಿನಿಯರಿಂಗ್, ನ್ಯಾಯಾಂಗ, ವಾಣಿಜ್ಯ, ವೈದ್ಯ ಮತ್ತು ದಾದಿವಿದ್ಯೆಗಳಿಗೆ ಸಂಬಂಧಿಸಿದ ಶಾಲಾಕಾಲೇಜುಗಳನ್ನು ನಡೆಸುತ್ತದಲ್ಲದೆ, 1928ರಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ ಅಚ್ಚುಕೂಟ ತನ್ನ ಉತ್ತಮ ಪ್ರಕಟನೆಗಳಿಂದ ಅಪಾರ ಸೇವೆ ಸಲ್ಲಿಸುತ್ತಿದೆ. ಈ ಸಂಸ್ಥೆಗೆ ಸೇರಿದ ಬಾನುಲಿ ಸಂಸ್ಥೆಯೂ ಒಂದಿದೆ. ಓಕ್ಲಹೋಮ ಕೃಷಿ ಮತ್ತು ಅನ್ವಯ ವಿಜ್ಞಾನ ವಿಶ್ವವಿದ್ಯಾಲಯ 1890ರಲ್ಲಿ ಸ್ಥಾಪಿತವಾದ ಕೃಷಿ ಮತ್ತು ತಾಂತ್ರಿಕ ಕಾಲೇಜಿನಿಂದ ಬೆಳೆದು ಬಂದಿದೆ. ಇವಲ್ಲದೆ ಇನ್ನೂ ಹಲವಾರು ಉನ್ನತ ವ್ಯಾಸಂಗ ಸಂಸ್ಥೆಗಳು ಇಲ್ಲಿವೆ.

**ಆರೋಗ್ಯ ಮತ್ತು ಸಾರ್ವಜನಿಕ ಉಪಯೋಗ ಕಾರ್ಯಗಳು:** ರಾಜ್ಯ ಸರ್ಕಾರ ತಪ್ಪಿತಸ್ಥರ ಸುಧಾರಣಾ ಕೇಂದ್ರಗಳ ಮತ್ತು ಜನೋಪಯೋಗಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ನಿರ್ದೇಶನಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸಿದೆ. ಮನೋವ್ಯಾಧಿಗಳ ವೈದ್ಯಶಾಲೆ, ಕ್ಷಯರೋಗ ವೈದ್ಯಶಾಲೆ, ಮಕ್ಕಳ ಮಾನಸಿಕ ಸುಧಾರಣಾ ಶಾಲೆ ಮತ್ತು ಕಿವುಡ, ಕುರುಡ ಮತ್ತು ಅನಾಥ ಕೇಂದ್ರಗಳನ್ನು ಹಲವಾರು ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಇವಲ್ಲದೆ ಅಪರಾಧಿಗಳ ಸುಧಾರಣೆ ಮತ್ತು ಪುನರ್ವಸತಿ ಕಾರ್ಯದಲ್ಲೂ ಆಸಕ್ತಿ ವಹಿಸಿ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿ ಉತ್ತಮ ಕಾರ್ಯಗಳನ್ನು ಕೈಗೊಂಡಿದೆ. ರಾಜ್ಯದ 77 ಜಿಲ್ಲೆಗಳ ಪೈಕಿ ಐವತ್ತರಲ್ಲಿ ಆರೋಗ್ಯ ಇಲಾಖೆಗಳಿದ್ದು ಶೇಕಡ 80 ಜನರ ಆರೋಗ್ಯ ರಕ್ಷಣೆಯನ್ನು ನಿರ್ವಹಿಸುತ್ತವೆ. ಓಕ್ಲಹೋಮ ಸಾರ್ವಜನಿಕ ಕ್ಷೇಮಾಭ್ಯುದಯ ಇಲಾಖೆ ಆಶ್ರಿತ ಮಕ್ಕಳ, ವೃದ್ಧರ, ಅಂಗಹೀನರ, ಕುರುಡರ ಒಳಿತನ್ನು ಸಾಧಿಸಲು ಶ್ರಮಿಸುತ್ತಿದೆ.

**ಅರ್ಥವ್ಯವಸ್ಥೆ:** 1889ರಲ್ಲಿ ಬಿಳಿಯರ ಪ್ರವೇಶವಾಗುವುದಕ್ಕೆ ಮೊದಲು ಪಶುಪಾಲನೆ ಈ ಪ್ರದೇಶದ ಮುಖ್ಯ ಕಸಬಾಗಿತ್ತು, ಅನಂತರ ವ್ಯವಸಾಯ ಪ್ರಧಾನವಾಗಿ ಬೆಳೆಯಿತು. 1960ರ ವೇಳೆಗೆ 84,000 ಜಮೀನುಗಳೂ ಪಶುಪಾಲನ ಕ್ಷೇತ್ರಗಳೂ ಇದ್ದುವು. ಸಾಗುವಳಿಯಲ್ಲಿದ್ದ ನೆಲ 4,00,00,000 ಎಕರೆ. ಇದರಲ್ಲಿ 2/3 ಭಾಗದಲ್ಲಿ ಮಾಲೀಕರೇ ಸ್ವಂತ ಬೇಸಾಯ ನಡೆಸುತ್ತಿದ್ದರು. 1960ರ ಸುಮಾರಿನಲ್ಲಿ ವ್ಯವಸಾಯ ಕಾರ್ಯಗಳಲ್ಲಿ ಯಂತ್ರದ ಬಳಕೆ ಹೆಚ್ಚಿತು. ಇದರಿಂದ ಪ್ರಗತಿಯ ವೇಗ ಅಧಿಕವಾಗಿದೆ. ಭೂಸಾರ ರಕ್ಷಣೆ, ನೀರಾವರಿ ಪೂರೈಕೆ, ಪ್ರವಾಹಗಳ ಹಾವಳಿಯ ತಡೆ ಮುಂತಾದ ಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಲಾಗಿದೆ.

ವ್ಯವಸಾಯೋತ್ಪನ್ನಗಳಲ್ಲಿ ಅಗ್ರಸ್ಥಾನ ಗೋದಿಯದು. ಹತ್ತಿಯೂ ಮುಖ್ಯ. ಓಟ್ಸ್, ಬಟಾಣಿ, ಧಾನ್ಯಗಳು, ಬಗೆ ಬಗೆಯ ಹಣ್ಣುಗಳು ಇತರ ಮುಖ್ಯ ಬೆಳೆಗಳು. ದನದ ಮಾಂಸದ ಕೈಗಾರಿಕೆ ಬಹಳ ಲಾಭದಾಯಕ, ಮಾಂಸಕ್ಕಾಗಿ ಸು. 40,00,000 ದನಗಳನ್ನು ಸಾಕಲಾಗುತ್ತಿದೆ. ಹಂದಿ, ಕುರಿ, ಕುದುರೆ ಮತ್ತು ಹೇಸರ ಕತ್ತೆಗಳು ಇತರ ಸಾಕುಪ್ರಾಣಿಗಳು, ಮರದ ದಿಮ್ಮಿ ಆಗ್ನೇಯ ಭಾಗದ ಮುಖ್ಯ ಸಾಧನ. ಮರದ ಉತ್ಪನ್ನ ಕೈಗಾರಿಕೆ ಇಲ್ಲಿ ಬೆಳೆದಿದೆ. ವಾರ್ಷಿಕ ಮೌಲ್ಯ ಸುಮಾರು 80,00,000 ಡಾಲರುಗಳು.

ತೈಲೋತ್ಪಾದನೆಯೂ ಒಂದು ಮುಖ್ಯ ಉದ್ಯೋಗ. ಇದರ ವಾರ್ಷಿಕ ಉತ್ಪನ್ನದ ಮೌಲ್ಯ 70,00,00,000 ಡಾಲರುಗಳು. ಸಂಯುಕ್ತಸಂಸ್ಥಾನದ ತೈಲೋತ್ಪಾದನೆಯಲ್ಲಿ ಈ ರಾಜ್ಯದ್ದು ತೃತೀಯ ಸ್ಥಾನ. ತವರ, ಸೀಸ, ಲವಣ, ಡಾಲೊಮೈಟ್, ಗ್ರ್ಯಾನೈಟ್, ಮರಳು ಮತ್ತು ಜಲ್ಲಿಕಲ್ಲು, ಸುಣ್ಣಕಲ್ಲು, ವಿವಿಧ ರೀತಿಯ ಜೇಡಿಮಣ್ಣುಗಳು, ಜಿಪ್ಸಮ್, ಆಸ್ಫಾಲ್ಟ್, ಸಿಲಿಕ ಮುಂತಾದ ಖನಿಜಗಳು ರಾಜ್ಯದಲ್ಲಿ ದೊರಕುತ್ತವೆ. ಹೀಲಿಯಂ ಕೂಡ ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತಿದ್ದು, ಸಂಯುಕ್ತಸಂಸ್ಥಾನದಲ್ಲಿ ಎರಡನೆಯ ಹೀಲಿಯಂ ಕಾರ್ಖಾನೆ 1959ರಲ್ಲಿ ಕೀಯೆಸ್‍ನಲ್ಲಿ ಸ್ಥಾಪಿತವಾಯಿತು.

ವ್ಯವಸಾಯ ಮತ್ತು ಖನಿಜ ಸಂಪತ್ತುಗಳ ಮೇಲೆ ಆಧಾರಿತವಾಗಿರುವ ಅನೇಕ ಕಾರ್ಖಾನೆಗಳು ರಾಜ್ಯದಲ್ಲಿವೆ. ಮಾಂಸಾಹಾರ ತಯಾರಿಕೆ. ಶೇಖರಣೆ, ಧಾನ್ಯಗಳಿಂದ ಹಿಟ್ಟು ತಯಾರಿಕೆ, ದನಗಳ ಆಹಾರ ತಯಾರಿಕೆ, ಬಟ್ಟೆ ತಯಾರಿಕೆ, ಗಾಜಿನ ತಯಾರಿಕೆ, ಲೋಹಗಾರಿಕೆ ಮುಂತಾದವು 95,000ಕ್ಕೂ ಹೆಚ್ಚು ಜನರಿಗೆ ಉದ್ಯೋಗ ಒದಗಿಸುತ್ತವೆ.

**ಸಾರಿಗೆ ವ್ಯವಸ್ಥೆ:** ಇಲ್ಲಿ ಸುಮಾರು 8,000 ಕಿಮೀಗಳಷ್ಟು ಉದ್ದದ ರೈಲು ರಸ್ತೆಗಳಿದ್ದು ರಾಜ್ಯದ ಎಲ್ಲ ಮೂಲೆಗಳಿಗೂ ಸಂಪರ್ಕ ಏರ್ಪಟ್ಟಿದೆ. ಮುಖ್ಯ ಸಾರ್ವಜನಿಕ ರಸ್ತೆಗಳ ಉದ್ದ 16,000 ಕಿಮೀಗಳು. ಪ್ರಮುಖ ನಗರಗಳಿಗೆ ವಿಮಾನಸಾರಿಗೆ ಸೌಕರ್ಯವಿದೆ. ಆರ್ಕನ್ಸಾ ನದಿಯ ಮುಖಾಂತರ ಸಾರಿಗೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಹೊಣೆ ಸಂಯುಕ್ತಸಂಸ್ಥಾನದ ಆಂತರಿಕ ಜಲಮಾರ್ಗ ಅಭಿವೃದ್ಧಿ ಸಂಸ್ಥೆಯ ಹೊಣೆ.

ಓಕ್ಲಹೋಮ ನಗರ ಇಲ್ಲಿಯ ರಾಜಧಾನಿ. ಜನಸಂಖ್ಯೆ 5,06,132. ಇತರ ಮುಖ್ಯ ನಗರಗಳು ಇವು (2013ರಲ್ಲಿದ್ದಂತೆ ಇವುಗಳ ಜನಸಂಖ್ಯೆಗಳನ್ನು ಆವರಣಗಳೊಳಗೆ ಕೊಟ್ಟಿದೆ): ಟಲ್ಸ (393,987); ಇದು ತೈಲಶುದ್ಧೀಕರಣ ಕೇಂದ್ರ. ಈನಿಡ್ (49,854) ತೈಲಶುದ್ಧೀಕರಣ ಮತ್ತು ಆಹಾರ ತಯಾರಿಕೆಗೆ ಪ್ರಸಿದ್ಧ, ಲಾಟನ್ (98,376) ಪಶುಪಾಲನೆ, ಗೋದಿ ಮತ್ತು ಹತ್ತಿ ಬೆಳೆಗಳ ಕೇಂದ್ರ. ಮಸ್ಕೋಗಿಯಲ್ಲಿ (38,981) ಅಮೆರಿಕನ್ ಇಂಡಿಯನರು ಹೆಚ್ಚಾಗಿದ್ದಾರೆ. ಓಕ್ಲಹೋಮ ವಿಶ್ವವಿದ್ಯಾಲಯ ಪೀಠವಿರುವುದು ನಾರ್ಮನಿನಲ್ಲಿ (115,562). (ಬಿ.ಕೆ.ಜಿ.; ಎನ್.ಎ.)

**ಓಕ್ಲಿ, ಕೆನೆತ್ ಪೇಜ್:** ಬ್ರಿಟಿಷ್ ಪ್ರಾಕ್ತನಶಾಸ್ತ್ರಜ್ಞ. ಜನನ ಇಂಗ್ಲೆಂಡಿನ ಆಮರ್‍ಷಾಮ್ ಎಂಬಲ್ಲಿ (1911). ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಮಾನವ ಮತ್ತು ಭೂವಿಜ್ಞಾನಗಳನ್ನು ಅಭ್ಯಸಿಸಿದ ಅನಂತರ ಬ್ರಿಟಿಷ್ ಮ್ಯೂಸಿಯಂನ ಪ್ರಕೃತಿಶಾಸ್ತ್ರ ಶಾಖೆಯಲ್ಲಿ ಕೆಲಸಕ್ಕೆ ಸೇರಿದ. ಭೂಮಿಯ ನೀರಿನಲ್ಲಿ ಕರಗಿರುವ ಫ್ಲೂರಿನನ್ನು ಭೂಮಿಯಲ್ಲಿ ಹೂತ ಎಲುಬು ಹೀರಿಕೊಳ್ಳುತ್ತದೆ. ಹೀರಿಕೆಯ ಪ್ರಮಾಣ ಮೂಳೆ ನೆಲದಲ್ಲಿ ಉಳಿದಿರುವ ಕಾಲಕ್ಕೆ ಅನುಗುಣವಾಗಿರುತ್ತದೆ. ಹಾಗಾಗಿ ಒಂದೇ ಸ್ಥಳದಲ್ಲಿ ಬೇರೆ ಬೇರೆ ಕಾಲದಲ್ಲಿ ಮೂಳೆಗಳು ಹೂಳಲ್ಪಟ್ಟಿದ್ದರೆ ಅವುಗಳಲ್ಲಿಯ ಫ್ಲೂರಿನ್ ಪ್ರಮಾಣ ಬೇರೆ ಬೇರೆ ಆಗಿರುತ್ತದೆ. ಈ ಪ್ರಮಾಣವನ್ನನುಸರಿಸಿ ಆ ಮೂಳೆಗಳಲ್ಲಿ ಯಾವುದು ಅತ್ಯಂತ ಪುರಾತನವಾದುದು ಎಂಬುದನ್ನು ನಿರ್ಣಯಿಸಬಹುದು, ಇದೇ ಫ್ಲೂರಿನ್ ಒರೆ (ಫ್ಲೂರಿನ್ ಟೆಸ್ಟ್). ಪ್ರಾಕ್ತನಶಾಸ್ತ್ರಕ್ಕೆ ಇದೇ ಈತನ ಮುಖ್ಯ ಕೊಡುಗೆ. 1888ರಲ್ಲಿ ಗುರುತಿಸಲಾದ ಗ್ಯಾಲಿ ಹಿಲ್ ತಲೆಬುರುಡೆ ಅದೆಷ್ಟು ಪುರಾತನವಾದುದೆಂಬುದನ್ನು ಓಕ್ಲಿ ಪರಿಶೀಲಿಸಿದ. ಅದರಲ್ಲಿ ಫ್ಲೂರಿನ್ 0.5% ಮಾತ್ರ ಇದ್ದುದರಿಂದ ಅದು ಅಷ್ಟೊಂದು ಪುರಾತನವಾದುದಲ್ಲವೆಂದು ತೀರ್ಮಾನಿಸಿದ (1948). ಇದೇ ರೀತಿ 1935–36ರಲ್ಲಿ ದೊರೆತ ಸ್ವಾನ್ಸ್‍ಕೊಂಬ್ ತಲೆಬುರುಡೆ 100,000 ವರ್ಷಗಳಿಗಿಂತಲೂ ಪುರಾತನವಾದುದೆಂದು ತೀರ್ಮಾನಿಸಿದ (1948). ಈ ಮೂಳೆಯಲ್ಲಿ 1.7% ಫ್ಲೂರಿನ್ ಇದ್ದುದನ್ನು ತೋರಿಸಿದ. ಇದೆ ಸಮಯದಲ್ಲಿ ಪಿಲ್ಟ್ ಡೌನ್ ತಲೆಬುರುಡೆಯ ಪ್ರಾಚೀನತೆಯ ವಿಚಾರವಾಗಿ ಚರ್ಚೆ ಸಾಗುತ್ತಿತ್ತು. ಮಾನವನಂತೆ ಇರುವ ತಲೆಬುರುಡೆಯಲ್ಲಿ ಮಂಗನಂತೆ ಇರುವ ದವಡೆ ಇದ್ದುದು ವಿಜ್ಞಾನಿಗಳಿಗೆ ಉತ್ತರಿಸಲಾಗದ ಪ್ರಶ್ನೆಯಾಗಿತ್ತು. ಇದನ್ನು ಪರಿಶೀಲಿಸಲು ಓಕ್ಲಿಯನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಸಮಿತಿ ದವಡೆ ನಕಲಿಯದೆಂದು ತೀರ್ಮಾನಿಸಿತು. ಇದನ್ನು ನಿರ್ಣಯಿಸಿದ್ದೂ ಫ್ಲೂರಿನ್ ಒರೆಯಿಂದಲೇ, ಈಗ ಯಾವ ತಲೆಬುರುಡೆ ದೊರಕಿದರೂ ಅದಕ್ಕೆ ಫ್ಲೂರಿನ್ ಒರೆ ಹಾಕಿ ಅನಂತರವೇ ಅದರ ಪುರಾತನತೆಯನ್ನು ಒಪ್ಪಿಕೊಳ್ಳುತ್ತಾರೆ.

ಓಕ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಈತನ ಸಂಶೋಧನಾತ್ಮಕ ಗ್ರಂಥಗಳಾದ ಮ್ಯಾನ್, ದಿ ಟೂಲ್ ಮೇಕರ್ ಮತ್ತು ಡೇಟಿಂಗ್ ಫಾಸಿಲ್ ಮ್ಯಾನ್ ಬಹಳ ಜನಪ್ರಿಯವಾಗಿವೆ. (ಎಸ್.ಎಂ.)

**ಓಜಿಯಾನ:** ರಾಜಸ್ತಾನ ಜಿಲ್ಲೆಯ ಭಿಲವಾಡ ರಾಜ್ಯದಲ್ಲಿರುವ ತಾಮ್ರ–ಶಿಲಾಯುಗದ ವಸತಿ ನೆಲೆ. ಅಹಾರ್‍ನಿಂದ ಏರಣ್‍ವರೆಗೆ, ಅಜ್ಮೀರ್‍ನಿಂದ ನವ್ವತೋಲಿಯವರೆಗೆ ಹರಡಿದ್ದ ಅಹಾರ್ ಸಂಸ್ಕೃತಿಯ ಪ್ರಮುಖ ವಸತಿ ನೆಲೆಗಳಲ್ಲೊಂದು. ನದಿ ಬಯಲಿನ ಸಂಸ್ಕೃತಿಯಾದ ಅಹಾರ್‌ಗೆ ಬೆಟ್ಟದ ಇಳಿಜಾರಿನಲ್ಲಿರುವ ಓಜಿಯಾನ ಒಂದು ಅಪವಾದ. ಅಹಾರ್ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಶದಿಂದ 2000ದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬಿ.ಆರ್. ಮೀನಾ ಮತ್ತು ಅಲೋಕ್ ತ್ರಿಪಾಠಿಯವರ ನಿರ್ದೇಶನದಲ್ಲಿ ಇಲ್ಲಿ ಉತ್ಖನನವನ್ನು ನಡೆಸಿತು. ಅಹಾರ್ ಸಂಸ್ಕೃತಿಯ ಸು.7.5 ಮೀ ದಪ್ಪದ ವಸತಿ ಪದರ ಇಲ್ಲಿ ಕಂಡುಬಂತು. ಈ ಸಂಸ್ಕೃತಿಯ ಇಷ್ಟು ದಪ್ಪದ ವಸತಿ ಪದರ ಈವರೆಗೆ ಕಂಡುಬಂದಿರುವುದು ಓಜಿಯಾನದಲ್ಲಿ ಮಾತ್ರ. ಕಟ್ಟಡಾವಶೇಷ ಮತ್ತು ಮಣ್ಣಾತ್ರೆಯ

ಆಧಾರದ ಮೇಲೆ 3 ಉಪಹಂತಗಳನ್ನು ಗುರುತಿಸಲಾಯಿತು. ಮೊಟ್ಟಮೊದಲು (1ನೆಯ ಉಪಹಂತ) ಇಲ್ಲಿ ವಾಸ್ತವ್ಯ ಹೂಡಿದವರು ಕೃಷಿಕ ಜನರು. ಬಿಳಿ ರೇಖಾ ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಮಣ್ಪಾತ್ರೆಯನ್ನು ಉಪಯೋಗಿಸುತ್ತಿದ್ದ ಇವರು ಒಣ ಇಟ್ಟಿಗೆಯ ಮನೆಗಳನ್ನು ಕಟ್ಟಿಕೊಂಡರು. 2ನೆಯ ಉಪಹಂತದಲ್ಲಿ ಗೃಹನಿರ್ಮಾಣಕ್ಕೆ ಇಟ್ಟಿಗೆಗಿಂತ ಹೆಚ್ಚಾಗಿ ಸ್ಥಳೀಯ ಕಲ್ಲುಗಳನ್ನು ಬಳಸಿಕೊಳ್ಳಲಾಯಿತು. ಸದೃಢವಾಗಿ ಕಟ್ಟಿದ ಉಗ್ರಾಣ ಮತ್ತು ಬಹು ಕೊಠಡಿಯ ಮನೆಯ ಭಾಗಗಳು ಈ ಹಂತದ ಕಟ್ಟಡಾವಶೇಷಗಳು. ಬೆಂಕಿಯ ಆಕಸ್ಮಿಕಕ್ಕೆ ಒಳಗಾದ ಮೇಲೆ ಗೋದಿಯನ್ನು ಸಂಗ್ರಹಿಸಿದ್ದ ಉಗ್ರಾಣದ ಬಳಕೆ ನಿಂತುಹೋಯಿತು. 3ನೆಯ ಉಪಹಂತದಲ್ಲಿ ಜನಜೀವನ ದಲ್ಲಾದ ಬದಲಾವಣೆಯನ್ನು ತಡಿಕೆ ಮನೆಯ ಅವಶೇಷಗಳು ಸೂಚಿಸುತ್ತವೆ. ಈ ವಸತಿ ಪೂರ್ಣವಾಗಿ ಬೆಂಕಿಗೆ ಆಹುತಿಯಾಯಿತು.

3 ಉಪಹಂತಗಳಲ್ಲಿಯೂ ಬಿಳಿ ಚಿತ್ರಿತ ಕಪ್ಪು–ಕೆಂಪು ದ್ವಿವರ್ಣ ಪಾತ್ರೆ ಬಳಕೆಯಲ್ಲಿತ್ತು. ಆದರೆ ಇದರ ಆಕಾರ ಹಾಗೂ ಇದನ್ನು ಸುಡುವ ತಂತ್ರವಿಧಾನ ಕಾಲದಿಂದ ಕಾಲಕ್ಕೆ ಬದಲಾಯಿತು. ಕೆಂಪುಪಾತ್ರೆ, ಕಪ್ಪು ಪಾತ್ರೆ, ಬೂದುಪಾತ್ರೆ ಹಾಗೂ ಕಂದುಬಣ್ಣದ ಪಾತ್ರೆಗಳನ್ನೂ ಈ ಜನ ಉಪಯೋಗಿಸುತ್ತಿದ್ದರು. ಇಲ್ಲಿನ ಮತ್ತೊಂದು ವೈಶಿಷ್ಟ್ಯ ಬಿಳಿಬಣ್ಣದಿಂದ ಅಲಂಕರಿಸಿದ ಪುಟ್ಟಪುಟ್ಟ ಸುಡಾವೆ ಮಣ್ಣಿನ ಗೂಳಿಗಳು. ಇಂತಹ ಗೂಳಿಗೊಂಬೆಗಳು ಯಾವ ಸಮಕಾಲೀನ ಸಂಸ್ಕೃತಿಯಲ್ಲಿಯೂ ಈವರೆಗೆ ಕಂಡುಬಂದಿಲ್ಲ. ಇವನ್ನು ಸಮಾಜದ ಪರಂಪರಿಕಾ ಚರಣೆಯಲ್ಲಿ ಬಳಸುತ್ತಿದ್ದಂತೆ ತೋರುತ್ತದೆ. ಇಲ್ಲಿನ ಜನರು ಸುಡಾವೆ ಮಣ್ಣಿನಲ್ಲಿ ದನದ ಆಕೃತಿಗಳನ್ನೂ ತಯಾರಿಸುತ್ತಿದ್ದುದು ಮತ್ತೊಂದು ವಿಶೇಷ. ಈ ಜನರ ಇತರ ಅವಶೇಷಗಳೆಂದರೆ ತಾಮ್ರದ ತೆಳು ಹಾಳೆಯಿಂದ ಮಾಡಿದ ಸಣ್ಣ ಕೊಡಲಿ, ತಾಮ್ರದ ಬಳೆ ಮತ್ತು ಉಂಗುರ, ಹರಪ್ಪ ಮಾದರಿಯ ಫಯನ್ಸ್ ಗಾಜಿನ ಮಣಿ, ಸುಡಾವೆ ಮಣ್ಣಿನ ತಕಲಿ, ಬಿಲ್ಲೆ, ಆಟಿಕೆಯ ಗಾಡಿಯ ಚಕ್ರಗಳು, ಅರೆಯುವ ಕಲ್ಲು ಇತ್ಯಾದಿ. ಈ ನೆಲೆಯ ಕಾಲಮಾನ ಪ್ರ.ಶ.ಪೂ.ಸು.3–2ನೆಯ ಸಹಸ್ರಮಾನ. (ವಿ.ಎಸ್.)

**ಓಝೋನ್:** ದ್ವಿಪರಮಾಣಿಕ (ಡೈಅಟಾಮಿಕ್) ಆಕ್ಸಿಜನ್ ಅಣುವಿಗೆ ಶಕ್ತಿಯನ್ನು ಸೇರಿಸಿದಾಗ ದೊರೆಯುವ ಆಕ್ಸಿಜನ್ನಿನ ಅಪರರೂಪ (ಅಲ್ಲಾಟ್ರಾಪಿಕ್ ಫಾರ್ಮ್) ತ್ರಿಪರಮಾಣಿಕ ಅಣು, $o_3$. ಈ ಕ್ರಿಯೆಯನ್ನು ಸೂಚಿಸುವ ಸಮೀಕರಣ

$$\underset{(g)}{3o_2} + 68\ \text{K cal.} \rightarrow \underset{(g)}{2o_3}$$

ಆಕ್ಸಿಜನ್ನಿನ ಅಪರರೂಪಗಳ ಗುಣಗಳನ್ನು ಮುಂದೆ ಬರೆದಿರುವ ಪಟ್ಟಿ ತೋರಿಸುತ್ತದೆ.

| ಗುಣ | | $o_2$ | | $o_3$ |
|---|---|---|---|---|
| ಅಣುಭಾರ (ಮಾಲೆಕ್ಯುಲರ್ ವೇಟ್), amu | ... | 32.00 | ... | 47.998 |
| ಬಂಧದೂರ, Å | ... | 1.20 | ... | 1.260 |
| ಮಾನಕ ಕರಗುವ ಬಿಂದು (ನಾರ್ಮಲ್ ಮೆಲ್ಟಿಂಗ್ ಪಾಯಿಂಟ್), °K | ... | 54.30 | ... | 23.600 |
| ಮಾನಕ ಕುದಿಯುವ ಬಿಂದು °K | ... | 90.20 | ... | 161.700 |
| ಅವಧಿಕ (ಕ್ರಿಟಿಕಲ್) ಉಷ್ಣತೆ, °K | ... | 154.00 | ... | 268.000 |
| ದ್ರವಸಾಂದ್ರತೆ ( 90°K ) ಗ್ರಾಂ/ಮಿ.ಲೀ. | ... | 1.14 | ... | 1.710 |

ಅತಿಯಾದ ವೋಲ್ಟೇಜಿನ ವಿದ್ಯುತ್ ಯಂತ್ರಗಳ ಬಳಿ ಒಂದು ವಿಧವಾದ ಮೀನಿನ ವಾಸನೆಯುಳ್ಳ ಒಂದು ಅನಿಲದ ಉತ್ಪತ್ತಿಯನ್ನು ಕೆಲವು ವಿಜ್ಞಾನಿಗಳು ಅರಿತಿದ್ದರು.



ಸೀಮನ್ಸನ ಉಪಕರಣ

ಷೊನ್‌ಬೆನ್ ಎಂಬಾತ ಇದಕ್ಕೆ ಗ್ರೀಕ್ ಭಾಷೆಯ ಓಝೋನ್ (ಎಂದರೆ ವಾಸನಾಯುತ) ಎಂದು ನಾಮಕರಣ ಮಾಡಿದ. ಈ ಅನಿಲ ಸಮುದ್ರತೀರದ ಗಾಳಿಯಲ್ಲಿ ಹೆಚ್ಚಾಗಿ ಇರುತ್ತದೆ. ಅತಿನೇರಳೆ ಕಿರಣಗಳು ಮತ್ತು ಮಿಂಚು ಸಿಡಿಲುಗಳಿಂದ ಇದು ಗಾಳಿಯಲ್ಲಿ ಉತ್ಪತ್ತಿಯಾಗುತ್ತದೆ. ಗಾಳಿಯಲ್ಲಿ ರಂಜಕದ ಸಾವಕಾಶದ ಉತ್ಕರ್ಷಣದಿಂದಲೂ ಇದು ತಯಾರಾಗುತ್ತದೆ. ಬ್ರಾಡಿ ಅಥವಾ ಸೀಮನ್ಸ್ ಓಝೋನೈಸರ್ ಎಂಬ ಉಪಕರಣಗಳನ್ನು ಉಪಯೋಗಿಸಿ ಇದನ್ನು ತಯಾರಿಸಬಹುದು. ನಿಶ್ಶಬ್ದ ವಿದ್ಯುತ್ ವಿಸರ್ಜನೆಯನ್ನು (ಡಿಸ್‌ಚಾರ್ಜ್) ಶುದ್ಧವಾದ ಗಾಳಿ ಅಥವಾ ಆಕ್ಸಿಜನ್ನುಗಳ ಮೂಲಕ ಹಾಯಿಸುವುದರಿಂದ ಓಝೋನ್ ಉತ್ಪತ್ತಿಯಾಗುತ್ತದೆ. ಸೀಮನ್ಸನ ಉಪಕರಣದಲ್ಲಿ ಎರಡು ಏಕಕೇಂದ್ರೀಯ ಕೊಳವೆಗಳಿವೆ. ಹೊರಕೊಳವೆಯ ಹೊರಮೈಯನ್ನೂ ಒಳಕೊಳವೆಯ ಒಳಮೈಯನ್ನೂ ತವರದ ತೆಳುವಾದ ತಗಡಿನಿಂದ ಮುಚ್ಚಲಾಗಿದೆ. ಈ ಲೋಹಗಳನ್ನು ಹೆಚ್ಚು ವೋಲ್ಟೇಜಿನ ಪ್ರೇರಕ ಸುರುಳಿಗಳಿಗೆ (ಇಂಡಕ್ಷನ್ ಕಾಯಿಲ್) ಜೋಡಿಸಿದೆ. ವಿದ್ಯುತ್ ಸಂಬಂಧವನ್ನು ಕಲ್ಪಿಸಿ ಎರಡು ಕೊಳವೆಗಳ ಮಧ್ಯೆ ಶುದ್ಧವಾದ ಗಾಳಿ ಅಥವಾ ಆಕ್ಸಿಜನ್ನನ್ನು ಹಾಯಿಸಿದಾಗ ಸ್ವಲ್ಪ ಪ್ರಮಾಣದಲ್ಲಿ ಓಝೋನ್ ಬರುತ್ತದೆ.

ಬ್ರಾಡಿ ಓಝೋನೈಸರಿನಲ್ಲಿ ತವರದ ಬದಲು ಸಲ್ಫ್ಯೂರಿಕ್ ಆಮ್ಲವಿದೆ. ವಿದ್ಯುಚ್ಛಕ್ತಿ ಅಥವಾ 209 $m_\mu$, ಅತಿನೇರಳೆ ತರಂಗಗಳಲ್ಲಡಗಿರುವ ಶಕ್ತಿಯನ್ನು ಹೀರಿದಾಗ ಆಕ್ಸಿಜನ್ನಿನ ಅಣುಗಳು ಪರಮಾಣುಗಳಾಗಿ ಅನಂತರ ಓಝೋನ್ ಅಣುಗಳಾಗುತ್ತವೆ.

$$o_2 \rightarrow o + o$$
$$o + o + o \rightarrow o_3$$

1.1 ಸಾಂದ್ರತೆಯ ಸಲ್ಫ್ಯೂರಿಕ್ ಆಮ್ಲದ ಒಂದ ವಿಶೇಷ ರೀತಿಯ ವಿದ್ಯುದ್ವಿಭಜನೆಯಿಂದಲೂ ಈ ಅನಿಲವನ್ನು ಪಡೆಯಬಹುದು.

ಓಝೋನ್ ಉತ್ಪತ್ತಿಯಾಗುವಾಗ ಶಕ್ತಿಯನ್ನು ಹೀರುವುದರಿಂದ (ಎಂಡೋಥರ್ಮಿಕ್) ಇದಕ್ಕೆ ಸ್ಫೋಟಕ ಗುಣ ಉಂಟು. ಇದನ್ನು ಕಾಯಿಸಿದಾಗ ($300^0$ ಸಂ.) ಪೂರ್ಣವಿಭಜನೆಗೊಂಡು ಆಕ್ಸಿಜನ್ನನ್ನು ಕೊಡುತ್ತದೆ. ಗಾಜು, ಪ್ಲಾಟಿನಂ, ಬೆಳ್ಳಿ, ಮ್ಯಾಂಗನೀಸ್ ಡೈಆಕ್ಸೈಡ್ ಮುಂತಾದ ಪುಡಿಗಳು ವೇಗವರ್ಧಕಗಳಾಗಿ ಇದನ್ನು ವಿಭಜಿಸಿ ಆಕ್ಸಿಜನ್ನನ್ನು ಕೊಡುತ್ತವೆ. ಈ ಗುಣಗಳಲ್ಲಿ ಇದು ಹೈಡ್ರೊಜನ್ ಪೆರಾಕ್ಸೈಡನ್ನು ಹೋಲುತ್ತದೆ. ಶುದ್ಧ ಓಝೋನ್ ಸ್ಫೋಟಕವಸ್ತುವಾದ್ದರಿಂದ ಇದನ್ನು ಯಾವಾಗಲೂ ಆಕ್ಸಿಜನ್ ಮಿಶ್ರಣದೊಂದಿಗೆ ತಯಾರಿಸುತ್ತಾರೆ. ಇದನ್ನು ತಣ್ಣಗೆ ಮಾಡಿದಾಗ ಆಕ್ಸಿಜನ್ ದ್ರವವಾಗಿ ಅದರಲ್ಲಿ ಓಝೋನ್ ಕರಗಿ ನೀಲಿ ಬಣ್ಣದ ದ್ರಾವಣವಾಗುತ್ತದೆ. ಇನ್ನೂ ತಣ್ಣಗೆ ಮಾಡಿದಾಗ ಓಝೋನ್ ಕರಿಯ ಹರಳುಗಳಾಗಿ ಬೇರ್ಪಡುತ್ತದೆ. ಇದು ನೀರಿನಲ್ಲಿ ಆಕ್ಸಿಜನ್ನಿಗಿಂತಲೂ ಹೆಚ್ಚು ಕರಗುತ್ತದೆ. ಟರ್ಪೆಂಟೈನ್ ಮತ್ತು ಇತರ ಸುಗಂಧ ತೈಲಗಳಲ್ಲಿ (ಎಸೆನ್ಶಿಯಲ್ ಆಯಿಲ್ಸ್) ದ್ರಾವಣವಾಗುತ್ತದೆ. ಪಾದರಸವನ್ನು ಗಾಜಿಗೆ ಅಂಟುವಂತೆ ಮಾಡುವುದು ಇದರ ವಿಶೇಷ ಗುಣ. ನೀರಿನ ಇರವಿನಲ್ಲಿ ಈ ಮೇಲಿನ ಗುಣ ಇರುವುದಿಲ್ಲ. 1,20,000ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಇದು ಗಾಳಿಯಲ್ಲಿದ್ದರೆ ಆಗ ಗಂಟಲು ಮೂಗು ಉರಿಯುವ ಒಂದು ವಿಧವಾದ ವಾಸನೆಯ ಅನುಭವ ಆಗುವುದು. ಈ ಪ್ರಮಾಣದಲ್ಲಿ ಇದು ವಿಷ. ಇದು ಒಳ್ಳೆಯ ಉತ್ಕರ್ಷಣಕಾರಿ. ಪೊಟಾಸಿಯಂ ಅಯೊಡೈಡಿನಿಂದ ಅಯೊಡೀನನ್ನು ಬೇರ್ಪಡಿಸುತ್ತದೆ. ಗಂಧಕ, ರಂಜಕಗಳನ್ನು ಉತ್ಕೃಷ್ಟ ಆಮ್ಲಗಳಾಗಿ ಪರಿವರ್ತಿಸುತ್ತದೆ. ಸಸ್ಯಮೂಲವಾದ ಬಣ್ಣಗಳನ್ನು ಬಿಳಿಚುಮಾಡುತ್ತದೆ. ಇದು ರಬ್ಬರಿನಂಥ ಅಪರ್ಯಾಪ್ತ ಸಾವಯವ ರಸಾಯನ ಪದಾರ್ಥಗಳೊಡನೆ ಬೆರೆತು ಓಝೋನೈಡುಗಳೆಂಬ ಸಂಯುಕ್ತಗಳಾಗುತ್ತದೆ.

ಓಝೋನಿನ ಅಣುಭಾರ ಮತ್ತು ರಚನೆಗಳನ್ನು ಸೊರೆಟ್, ನ್ಯೂತ್ ಮತ್ತಿತರರು ಇದರ ವಿಭಜನೆಯಿಂದಲೂ ಮತ್ತು ವಿಸರಣ (ಡಿಫ್ಯೂಶನ್) ಶಕ್ತಿಯಿಂದಲೂ ಕಂಡು ಹಿಡಿದಿದ್ದಾರೆ. 20 ಸಿ.ಸಿ. ಓಝೋನ್ ವಿಭಜಿಸಿದಾಗ 30 ಸಿ.ಸಿ. ಆಕ್ಸಿಜನ್ನನ್ನು ಕೊಡುತ್ತದೆ. ಇದರ ವಿಸರಣಶಕ್ತಿ ಆಕ್ಸಿಜನ್ನಿಗಿಂತಲೂ ಕಡಿಮೆ. ಈ ಗುಣಗಳಿಂದ ಇದರ ಅಣು $o_3$ ಎಂದು ನಿರ್ಧರಿಸಲಾಗಿದೆ. ಇದರ ಅವಶೋಷಣರೋಹಿತದ (ಅಬ್‌ಸಾರ್ಪ್‌ಷನ್ ಸ್ಪೆಕ್ಟ್ರಂ) ತರಂಗಮಾನದ ಪ್ರಕಾರ ಇದರ ಅಣುರಚನೆ ಹೀಗಿದೆ.



ಈ ಅಣು ತ್ರಿಕೋನಾಕೃತಿಯಲ್ಲಿದೆ. ಇದರ ಕೋನ ಸುಮಾರು $117^0$. ದೊಡ್ಡ ಪ್ರದರ್ಶನಶಾಲೆಗಳಲ್ಲಿಯೂ ನೆಲದಡಿಯ ರೈಲ್ವೆ ಸಂಚಾರದಲ್ಲಿಯೂ ಗಾಳಿಯ ಶುದ್ಧೀಕರಣಕ್ಕೆ ಓಝೋನನ್ನು ಉಪಯೋಗಿಸುತ್ತಾರೆ. ಆಹಾರವಸ್ತುಗಳಲ್ಲಿ ಬಳಸುವ ವ್ಯಾನಿಲ ಎಂಬ ವಸ್ತುವಿನ ತಯಾರಿಕೆಯಲ್ಲಿಯೂ ಇದನ್ನು ಬಳಸಬಹುದು. (ಬಿ.ಎಸ್.ಯು.)

ಭೂಮಟ್ಟದಿಂದ ಸರಾಸರಿ 4 ಕಿಮೀಗಳ ವರೆಗೆ ವಾಯುಮಂಡಲ ಕ್ರಮೇಣ ವಿರಳವಾಗುತ್ತ ವ್ಯಾಪಿಸಿದೆ. ಅಲ್ಲಿಂದ ಮೇಲೆ ವಾಯುಕಣಗಳು ತೀರ ವಿರಳವಾಗುತ್ತ ಹೋಗಿ 17–49 ಕಿಮೀಗಳ ವಲಯದಲ್ಲಿ ಒಂದು ಓಝೋನ್ ಗೋಳ ಏರ್ಪಡುವುದು. ವಾಯುಮಂಡಲದ ಆಕ್ಸಿಜನ್ನಿಗೂ ($o_2$) ಸೂರ್ಯನಿಂದ ಪ್ರವಹಿಸುವ ಅತಿನೇರಳೆ

ಕಿರಣಗಳಿಗೂ ನಡೆಯುವ ರಾಸಾಯನಿಕ ಕ್ರಿಯೆಯ ಪರಿಣಾಮ ಈ ಗೋಳ. ಓಝೋನಿನ ಗರಿಷ್ಠ ಸಾಂದ್ರತೆ ಇರುವುದು 15 ಮೈಲಿಗಳ ಎತ್ತರದಲ್ಲಿ. ಓಝೋನ್ ಗೋಳದ ಇರವನ್ನು ಮೊದಲು ಕಂಡುಹಿಡಿದವ ಫ್ರಾನ್ಸಿನ ಭೌತವಿಜ್ಞಾನಿ ಚಾರ್ಲ್ಸ್ ಫಾಬ್ರಿ (1913). ಈ ಗೋಳದ ಭದ್ರ ಕವಚ ಸೌರವಿಸರಣೆಯನ್ನು ತಡೆದು ಸೋಸಿ ಬೆಳಕು ಉಷ್ಣ ಮುಂತಾದ ತರಂಗಗಳನ್ನು ಮಾತ್ರ ಒಳಗೆ ಬಿಡುವುದು. ಎಂದರೆ, ಈ ಗೋಳ ಅತಿನೇರಳೆ ತರಂಗಗಳಿಗೆ ಅಪಾರದರ್ಶಕ, ಓಝೋನ್ ಗೋಳದಿಂದ ಮೇಲೆ ಇರುವ ಅಯಾನ್ ಗೋಳದಲ್ಲಿ ಗಾಳಿಯ ಅಣುಗಳು ಅಯಾನೀಕೃತ ಸ್ಥಿತಿಯಲ್ಲಿರುವುವು. ಈ ಪರಿಸ್ಥಿತಿ 49 ಕಿಮೀಗಳಿಗಿಂತಲೂ ಎತ್ತರದಲ್ಲಿ. ಅಯಾನ್ ಮತ್ತು ಓಝೋನ್ ಗೋಳಗಳು ಒಟ್ಟಾಗಿ ಭೂಮಿಗೆ ತೊಡಿಸಿರುವ ಭದ್ರಕವಚದಂತಿದೆ. ಜೀವಿಗಳಿಗೆ ಅತ್ಯಪಾಯಕಾರಿಗಳಾದ ಅತಿನೇರಳೆ ತರಂಗಗಳನ್ನು ಈ ಕವಚ ತಡೆಹಿಡಿದು. ನೀಡುವ ರಕ್ಷಣೆಗೆ ನಾವು ತೆರಬೇಕಾದ ದಂಡ ಆಕಾಶದ ಹಲವಾರು ವಿದ್ಯಮಾನಗಳನ್ನು ಕುರಿತ ನಮ್ಮ ಕುರುಡುತನ. ಈ ಕವಚ ವಿಶ್ವದ ಹಲವಾರು ಭಾಗಗಳನ್ನು ನಮ್ಮಿಂದ ಮುಚ್ಚಿಟ್ಟಿರುವ ಬಾಗಿಲು, ಇದರ ದೆಸೆಯಿಂದ ಸೂರ್ಯನಿಂದ ಅದರಂತೆಯೇ ಇತರ ಆಕಾಶಕಾಯಗಳಿಂದ ಭೂಮಿಗೆ ವಿಸರಿತವಾಗುವ ಅತಿನೇರಳೆ ತರಂಗಗಳು ನೆಲವನ್ನು ತಲುಪುವುದೇ ಇಲ್ಲ (**ನೋಡಿ– ಎಕ್ಸ್‌ಕಿರಣ–ಖಗೋಳಶಾಸ್ತ್ರ**). *

**ಓಝೋನಾಲಿಸಿಸ್:** ಅಪರ್ಯಾಪ್ತ ಸಂಯುಕ್ತಗಳಲ್ಲಿ C-C ದ್ವಿಬಂಧಸ್ಥಾನ ಪತ್ತೆಮಾಡಲು ಆರ್ಗ್ಯಾನಿಕ್ ರಸಾಯನವಿಜ್ಞಾನದಲ್ಲಿ ಉಪಯೋಗಿಸುವ ಕ್ರಿಯೆ. ಇದರಲ್ಲಿ ಒಂದು ಅಪರ್ಯಾಪ್ತ ಸಂಯುಕ್ತವನ್ನು ಓಝೋನಿನೊಡನೆ ವರ್ತಿಸಿ ಅದರ ಓಝೋನೈಡನ್ನು ಪಡೆಯಲಾಗುವುದು. ಈ ಓಝೋನೈಡನ್ನು ಜಲಜನಕೀಕರ್ಷಿಸಿದಾಗ (ಹೈಡ್ರೊಲೈಸ್) ಅಥವಾ ಆಮ್ಲದೊಂದಿಗೆ ವರ್ತಿಸಿದಾಗ ಆಲ್ಡಿಹೈಡ್, ಕೀಟೋನ್ ಅಥವಾ ಕಾರ್ಬಾಕ್ಸಿಲಿಕ್ ಆಮ್ಲಗಳ ಮಿಶ್ರಣವಾಗುತ್ತದೆ. ಹಾಗೆ ಉತ್ಪತ್ತಿಯಾದ ಆಲ್ಡಿಹೈಡುಗಳ ಮತ್ತು ಕೀಟೋನುಗಳ ರಚನೆ ಕಂಡುಹಿಡಿಯುವುದರಿಂದ ಮೂಲ ಅಪರ್ಯಾಪ್ತ ಸಂಯುಕ್ತದಲ್ಲಿನ C-C ದ್ವಿಬಂಧನ ಸ್ಥಾನವನ್ನು ನಿರ್ಧರಿಸಬಹುದು. ಉದಾಹರಣೆಗೆ $C_6H_{12}$ ಅಣುಸೂತ್ರವಿರುವ ಒಂದು ಓಲಿಫಿನ್ ಓಝೋನಾಲಿಸಿನಲ್ಲಿ ಅಸಿಟೋನ್ ಮತ್ತು ಪ್ರೊಪಿಯೊನಾಲ್ಡಿಹೈಡನ್ನು ಕೊಡುತ್ತದೆಂದಿಟ್ಟುಕೊಂಡರೆ ಆ ಓಲಿಫಿನ್ ರಚನೆ 1 ಯನ್ನು ಪಡೆದಿದೆ ಎಂಬುದಾಗಿ ಕೆಳಗಡೆ ತೋರಿಸಿರುವ ಯೋಜನೆಯ ಪ್ರಕಾರ ತೀರ್ಮಾನಿಸಬಹುದು.




I

ಓಲಿಫಿನ್

ಸ್ವಾಭಾವಿಕ ವಸ್ತುಗಳ ಅದರಲ್ಲೂ ಟರ್ಪಿನುಗಳ ರಚನೆಯನ್ನು ಕಂಡುಹಿಡಿಯುವಲ್ಲಿ ಓಝೋನಾಲಿಸಿಸನ್ನು ಬಹಳವಾಗಿ ಉಪಯೋಗಿಸಲಾಗಿದೆ. ಆರೋಮ್ಯಾಟಿಕ್ ಸಂಯುಕ್ತಗಳ ರಚನೆಯನ್ನು ಕುರಿತಾದ ಅಭ್ಯಾಸಗಳಲ್ಲೂ ಅಪೂರ್ವ ಆಲ್ಡಿಹೈಡುಗಳ ಮತ್ತು ಕೀಟೋನುಗಳ ಸಂಶ್ಲೇಷಣೆಯಲ್ಲೂ ಓಝೋನಾಲಿಸಿಸನ್ನು ಅಳವಡಿಸಿಕೊಳ್ಳಲಾಗಿದೆ. ಉದಾಹರಣೆಗೆ ಓಲಿಯಿಕ್ ಆಮ್ಲವನ್ನು ಓಝೋನಾಲಿಸಿಸ್ ಮಾಡಿದಾಗ n- ನೋನಾನಾಲ್ (ಪೇಲಾರ್ಗಾನಿಕ್ ಆಲ್ಡಿಹೈಡ್ ಮತ್ತು ಅಸಿಲಾಯಿಕ್ ಸೆಮಿಆಲ್ಡಿಹೈಡ್) ಕೊಡುತ್ತದೆ.

$$CH_3(CH_2)_7CH{=}H(CH_2)_7COOH \rightarrow CH_3(CH_2)_7CHO + OCH(CH_2)_7COOH$$

ಈ ಕ್ರಿಯೆಯನ್ನು ಉಪಯೋಗಿಸಿಕೊಂಡು ಗ್ಲೈಕಾಲ್ ಅಲ್ಡಿಹೈಡ್, ಸಕ್ಸಿನಾಲ್ಡಿಹೈಡ್, ಅನಿಸಾಲ್ಡಿಹೈಡ್, ಫ್ಥಾಲಾಲಿಹೈಡುಗಳನ್ನು ತಯಾರಿಸುತ್ತಾರೆ. ಓಝೋಕಿನಾಲಿಸಿಸಿನಿಂದ



ಓಲಿಫಿನುಗಳನ್ನು ಆಲ್ಡಿಹೈಡುಗಳಾಗಿ ಪರಿವರ್ತಿಸುವ ಸಾಮಾನ್ಯ ವಿಧಾನ ಹೀಗಿದೆ.

ಓಝೋನಾಲಿಸಿಸ್ ಮೂಲಕ ಕೀಟೋನುಗಳನ್ನು ಓಲಿಫಿನುಗಳಿಂದ ತಯಾರಿಸುವ ಸಾಮಾನ್ಯ ವಿಧಾನ ಹೀಗಿದೆ :



ಒಂದು ಸಂಯುಕ್ತಕ್ಕೆ ಎರಡು ಅಥವಾ ಹೆಚ್ಚು ಈನಾಲ್ ರೂಪಗಳು ವಿವರಣೆಯ ದೃಷ್ಟಿಯಿಂದ ಸಾಧ್ಯವಾಗಿದ್ದರೆ ಓಝೋನಾಲಿಸಿಸ್ ಉಪಯೋಗಿಸಿಕೊಂಡು ಅದಕ್ಕೆ ಯಾವ ರೂಪದ ರಚನೆ ಇದೆ ಎಂಬುದನ್ನು ತೀರ್ಮಾನಿಸಬಹುದು, ಉದಾಹರಣೆಗೆ ಹೆಕ್ಸೆನ್ 2:4 ಡೈಯೊನ್, $CH_3COCH_2COCH_2CH_3$ಕ್ಕೆ ಎರಡು ಈನಾಲ್ ರೂಪಗಳು ಸಾಧ್ಯ.

II III

II ಓಝೋನಾಲಿಸಿಸ್ ಮಾಡಿದಾಗ $CH_3COOH$ ಮತ್ತು $CH_3CH_2COCHO$ ಸಂಯುಕ್ತಗಳನ್ನೂ III $CH_3COCHO$ ಮತ್ತು $CH_3CH_2COOH$ ಸಂಯುಕ್ತಗಳನ್ನೂ ಕೊಡುತ್ತವೆ. ಈಗ ಈ ಸಂಯುಕ್ತಗಳನ್ನು ಗುರುತಿಸುವುದರಿಂದ II ಮತ್ತು III ರಲ್ಲಿ ಯಾವುದಾದರೊಂದು ಅಥವಾ ಎರಡೂ ಈನಾಲ್ ರೂಪಗಳೇ ಎಂದು ನಿರ್ಧರಿಸಬಹುದು.

ಓಝೋನಾಲಿಸಿಸನ್ನು ಸ್ಟೀರಾಯಿಡ್ ರಸಾಯನವಿಜ್ಞಾನದಲ್ಲೂ ಮತ್ತು ಸಿವಿಟೋನ್ ರಚನೆ ಸ್ಥಾಪನೆಯಲ್ಲೂ ವಿಶೇಷವಾಗಿ ಬಳಸಲಾಗಿದೆ. 1955ರಲ್ಲಿ ಸ್ಕಿಟ್ ಎಂಬಾತ ಫಿನಾನ್‌ಥ್ರೀನಿನ ಸ್ಥಿರ ಓಝೋನೈಡನ್ನು ಈ ಕ್ರಿಯೆಯಿಂದಲೇ ತಯಾರಿಸಿದ. ಈ ಓಝೋನೈಡುಗಳ ವಿವರವಾದ ರಚನೆ ಇನ್ನೂ ಪರೀಕ್ಷಾಮಟ್ಟದಲ್ಲಿದೆ. ಖ್ಯಾತ ಅಭ್ಯಾಸಗಳನ್ನು ಮಾಡಿದ ಎಚ್. ಸ್ಟೌಡಿಂಗರ್ ಕೊಟ್ಟಿರುವ ರಚನೆಗಿಂತ ಅತಿ ವಿಶಾಲ ವೈವಿಧ್ಯ ರಚನೆಗಳು ಓಝೋನೈಡುಗಳಿಗೆ ಇರುವುದು ಸಾಧ್ಯವೆಂಬುದಾಗಿ ಇತ್ತೀಚಿನ ಸಂಶೋಧನೆಗಳು ಸೂಚಿಸುತ್ತದೆ. (ಪಿ.ಜಿ.ಆರ್.)

**ಓಝೋನೀಕರಣ :** ಓಲಿಫಿನ್ ಹೈಡ್ರೊಕಾರ್ಬನ್ನುಗಳನ್ನು ಛೇದಿಸಲು ನಿರ್ವಹಿಸುವ ಕ್ರಿಯೆ (ಓಝೋನೈಸೇಷನ್). ಸಿ.ಹ್ಯಾರೀಸ್ ಎಂಬಾತ ಮೊದಲು ಈ ಕ್ರಿಯೆಯನ್ನು ಸಂಶೋಧಿಸಿದವ (1903). ಹಲವಾರು ಅಪರ್ಯಾಪ್ತ ಆರ್ಗ್ಯಾನಿಕ್ ಸಂಯುಕ್ತಗಳ ತಯಾರಿಕೆಯಲ್ಲೂ ರಚನೆಯ ಶೋಧನೆಯಲ್ಲೂ ಇದರ ಉಪಯೋಗ ಉಂಟು. ಅಪರ್ಯಾಪ್ತ ಸಂಯುಕ್ತದ ಆರ್ಗ್ಯಾನಿಕ್ ದ್ರಾವಣದ ಮೂಲಕ ಓಝೋನನ್ನು ಹಾಯಿಸಿದಾಗ ಓಝೋನೈಡ್ ದೊರೆಯುವುದು. ಇದನ್ನು ಹೈಡ್ರೋಜನ್ನಿನಿಂದ ಉತ್ಕರ್ಷಿಸಿದಾಗ ಅಥವಾ ಜಲವಿಶ್ಲೇಷಿಸಿದಾಗ (ಹೈಡ್ರೊಲಿಸಿಸ್) ಆಲ್ಡಿಹೈಡ್ ಅಥವಾ ಕೀಟೋನ್ ಸಿಕ್ಕುತ್ತದೆ. ಈ ವಸ್ತುಗಳ ಲಕ್ಷಣಗಳಿಂದ ಅಪರ್ಯಾಪ್ತ ಸಂಯುಕ್ತಗಳಲ್ಲಿರುವ ದ್ವಿಬಂಧ (ಡಬಲ್ ಬಾಂಡ್) ಸ್ಥಾನವನ್ನು ಪತ್ತೆಮಾಡಬಹುದು.




ಉದಾಹರಣೆಗೆ $C_6H_{12}$ ಅಣುಸೂತ್ರ ಪಡೆದಿರುವ ಒಂದು ಅಪರ್ಯಾಪ್ತ ಸಂಯುಕ್ತವನ್ನು ಓಝೋನೀಕರಿಸಿ ಜಲವಿಶ್ಲೇಷಿಸಿದಾಗ $C_2H_4O$ ಅಣುಸೂತ್ರವಿರುವ ಆಲ್ಡಿಹೈಡೂ $C_4H_8O$ ಅಣುಸೂತ್ರವಿರುವ ಕೀಟೋನೂ ಉತ್ಪತ್ತಿಯಾಗುತ್ತವೆಂದು ಭಾವಿಸೋಣ. ಆಗ $C_2H_4O$ ಆಲ್ಡಿಹೈಡಾಗಿರುವುದರಿಂದ ಅದರಲ್ಲಿ ಒಂದಾದರೂ –CHO ಗುಂಪು ಇರಲೇಬೇಕು. ಅಂದರೆ ಅದರ ಅಣುಸೂತ್ರ $CH_3CHO$ (ಅಸಿಟಾಲ್ಡಿಹೈಡ್) ಎಂದಾಯಿತು. ಸಂಯುಕ್ತ ಕೀಟೋನಾಗಿರುವುದರಿಂದ ಅದರಲ್ಲಿ ಒಂದಾದರೂ –CO- ಗುಂಪು ಇರಲೇಬೇಕು. ಅಂದರೆ ಅದರ ರಚನಾಸೂತ್ರ $CH_3$-CO- $C_2H_5$ (ಈಥೈಲ್ ಮಿಥೈಲ್ ಕೀಟೋನು) ಎಂದಾಯಿತು. $C_6H_{12}$ ಅಣುಸೂತ್ರ ಆಲ್ಕೀನಿನ

ಸಾಮಾನ್ಯ ಸೂತ್ರ $C_nH_{2n}$ ನ್ನು ಹೋಲುವುದರಿಂದ ಅದು ಒಂದು ಆಲ್ಕೀನ್. ಇದನ್ನು ಓಝೋನೀಕರಿಸಿ ಜಲವಿಶ್ಲೇಷಿಸಿದಾಗ ದ್ವಿಬಂಧಸ್ಥಾನದಲ್ಲಿ ಅಣು ಸೀಳಿ ಆಲ್ಡಿಹೈಡ್ ಮತ್ತು ಕೀಟೋನ್ ಕೊಡುತ್ತದೆ. ಇವುಗಳ ಅಣುಸೂತ್ರಗಳ ಪ್ರಕಾರ ದ್ವಿಬಂಧದ ಒಂದು ಪಾರ್ಶ್ವದಲ್ಲಿ ಎರಡು ಇಂಗಾಲ ಪರಮಾಣುಗಳು ಅಸಿಟಾಲ್ಡಿಹೈಡಿನಲ್ಲಿರುವಂತೆಯೂ ಮತ್ತೊಂದು ಪಾರ್ಶ್ವದಲ್ಲಿ ಇಂಗಾಲದ ನಾಲ್ಕು ಪರಮಾಣುಗಳು ಈಥೈಲ್ ಕೀಟೋನಿನಲ್ಲಿರುವಂತೆಯೂ ಇವೆ. ಅಂದರೆ ಸೂಕ್ಷ್ಮರಚನೆ ಹೀಗಿರಬೇಕು:



ಈಗ ಈ ಸೂತ್ರಕ್ಕೆ ಹೈಡ್ರೊಜನ್ ಪರಮಾಣುಗಳನ್ನು ಪ್ರತಿ ಇಂಗಾಲದ ನಾಲ್ಕು ವೇಲೆನ್ಸಿಯನ್ನು ಭರ್ತಿಮಾಡುವಂತೆ ಸೇರಿಸಿ ರಚನೆ ಬರೆದಾಗ $C_6H_{12}$ ಸಂಯುಕ್ತದಲ್ಲಿನ ದ್ವಿಬಂಧ ಸ್ಥಾನ ವೇದ್ಯವಾಗಿರುತ್ತದೆ.

ಓಝೋನೀಕರಣ ಯುಗ್ಮಬಂಧವನ್ನು ಛೇದಿಸುವುದಕ್ಕೆ ಅಳವಡಿಸುವ ಬೇರೆ ಉತ್ಕರ್ಷಣ ವಿಧಾನಗಳಿಗಿಂತ ಉತ್ತಮವಾದುದು. ಕಾರಣ ಓಝೋನೈಡುಗಳನ್ನು ವಿಭಜಿಸುವ ಮೊದಲೇ ಓಝೋನನ್ನು ಪ್ರತಿಕ್ರಿಯೆಯ ಪರಿಮಿತಿಯಿಂದ ಹೊರತೆಗೆಯಬಹುದು. ಪ್ರಯೋಗಶಾಲೆಯಲ್ಲಿ ರಚನಾ ವಿಶ್ಲೇಷಣೆಗಾಗಿ



ಓಝೋನೀಕರಣವನ್ನು ಹೇರಳವಾಗಿ ಅಳವಡಿಸುತ್ತಾರೆ. ಆಲ್ಡಿಹೈಡುಗಳು ಮತ್ತು ಆಮ್ಲಗಳ ಸಂಶ್ಲೇಷಣೆಯಲ್ಲಿ ವಾಣಿಜ್ಯದೃಷ್ಟಿಯಿಂದ ಹೆಚ್ಚು ಉಪಯೋಗವಿದೆ. ಆದರೆ ಕೆಲವು ಓಝೋನೈಡುಗಳು ಸ್ಫೋಟಕ ವಸ್ತುಗಳಾಗಿರುವುದು ಈ ಕ್ರಿಯೆಯ ಪ್ರಯೋಜನವನ್ನು ಮೊಟಕುಗೊಳಿಸಿದೆ. ಓಝೋನೈಡನ್ನು ಬೇರ್ಪಡಿಸದೆಯೂ ಅಥವಾ ಕಡಿಮೆ ಉಷ್ಣತೆಯಲ್ಲಿ ಓಝೋನೀಕರಿಸುವುದರಿಂದಲೂ ದ್ರಾವಣರೂಪದಲ್ಲಿ ವಿಭಜಿಸುವುದರಿಂದಲೂ ಓಝೋನೈಡುಗಳ ಸ್ಫೋಟನೆಯನ್ನು ನಿವಾರಿಸಬಹುದು. ಉತ್ಪನ್ನ ವಸ್ತುಗಳು ಉತ್ಕರ್ಷಣೆಗೆ ಒಳಗಾಗದಂತೆ ಮತ್ತು ಪಾಲಿಮರುಗಳಾಗದಂತೆ ತಡೆಯಲು ಓಝೋನೀಕರಣ ಕ್ರಿಯಾವಿನ್ಯಾಸ (ಮೆಕಾನಿಸಂ) ಮತ್ತು ಓಝೋನೈಡುಗಳ ವಿಭಜನೆಯ ಸಮರ್ಪಕ ತಾಂತ್ರಿಕ ಜ್ಞಾನ ಅತ್ಯವಶ್ಯ.

**ಕ್ರಿಯಾವಿನ್ಯಾಸ:** ಓಲಿಫಿನ್ನಿನೊಡನೆ ಓಝೋನಿನ ವರ್ತನೆ ಕೆಳಗೆ ತೋರಿಸಿರುವ ಪ್ರಕಾರದಲ್ಲಿರಬಹುದೆಂದು 1950ರ ವರೆಗೂ ಭಾವಿಸಲಾಗಿತ್ತು.



I II

ಹೀಗೆ ಉತ್ಪತ್ತಿಯಾಗುವ ಅಂತ್ಯದ ನೈಜ ಓಝೋನೈಡು (II) ಅಪಕರ್ಷಣಕಾರಿ ಅಥವಾ ಉತ್ಕರ್ಷಣಕಾರಿಯ ಸಂಪರ್ಕದಲ್ಲಿ ಜಲವಿಶ್ಲೇಷಿಸಿ ಆಲ್ಡಿಹೈಡ್, ಕೀಟೋನ್ ಅಥವಾ ಆಮ್ಲವನ್ನು ಕೊಡುವುದು. ಓಝೋನು ಎಲಕ್ಟ್ರೋಫಿಲಿಕ್‌ಕಾರಕವೆಂದೂ ಅದು ಕೆಳಗೆ ತೋರಿಸಿರುವ ರೀತಿಯಲ್ಲಿ ಧ್ರುವೀಕೃತ (ಪೋಲರೈಜ್ಡ್) ದ್ವಿಬಂಧನವನ್ನು ಛೇದಿಸುವುದೆಂದೂ 1950 ರಿಂದೀಚೆಗೆ ಊಹಿಸಿದ್ದಾರೆ.



III

ರಚನೆ (III) ರಿಂದ ಆಕ್ಸಿಜನ್ ಅಣು ವಿಮೋಚನೆಯಾಗುವುದರಿಂದ ಎಪಾಕ್ಸೈಡುಗಳು ಉತ್ಪತ್ತಿಯಾಗುವುದನ್ನು ಸಮರ್ಥಿಸಬಹುದು. ಅಂದರೆ ಮೊದಲ ಓಝೋನೈಡು (I) ಹೀಗಿರಬಹುದು.



ಅಥವಾ



ಇದು ಆಲ್ಡಿಹೈಡ್ ಅಥವಾ ಕೀಟೋನ್ ಮತ್ತು ಕೆಳಗೆ ತೋರಿಸಿರುವ ಅನುರಣ (ರೆಸೊನೆನ್ಸ್) ರಚನೆ ಪಡೆದಿರುವ ಜ್ವಿಟ್ಟರೈಯಾನುಗಳಾಗಿ ವಿಭಜಿಸುತ್ತದೆ.

ನೀರು ಆಲ್ಕೊಹಾಲ್ ಅಥವಾ ಆಮ್ಲಗಳಂಥ ಅಯಾನುಕಾರಕ ದ್ರಾವಕಗಳೊಡನೆ (ಅಯಾನಿಕ್ ಸಾಲ್ವೆಂಟ್ಸ್) ಜ್ವಿಟ್ಟರೈಯಾನು ವರ್ತಿಸಿ ಆಕ್ಸಿಪೆರಾಕ್ಸೈಡ್ (IV) ಆಗಬಹುದು. ಇದರಲ್ಲಿ R ಇದೆ; ಅದು ಆಲ್ಕೈಲ್ ಗುಂಪು ಅಥವಾ ಅಸೈಲ್ ಗುಂಪು ಅಥವಾ H



ಆಗಿರಬಹುದು. ಅಲ್ಲದೆ ಸ್ವಯಂವರ್ತಿಸಿ ಪೆರಾಕ್ಸೈಡ್ ಡೈಮರ್ (V) ಅಥವಾ ಪಾಲಿಮರಿಕ್ ಪೆರಾಕ್ಸೈಡನ್ನು (VI) ಕೊಡಬಹುದು. ಕಾರ್ಬನ್ ಟೆಟ್ರಕ್ಲೋರೈಡಿನಂಥ ಅಯಾನುಕಾರಕವಲ್ಲದ ದ್ರಾವಕಗಳ ಸಂಪರ್ಕದಲ್ಲಿ ಜ್ವಿಟ್ಟರೈಯಾನ್ ಆಲ್ಡಿಹೈಡ್ ಅಥವಾ ಕೀಟೋನಿನೊಡನೆ ಪರಿವರ್ತಿಸಿ ಪ್ರಥಮ ವರ್ಗದ ಓಝೋನೈಡನ್ನು(II) ಅಥವಾ ಪಾಲಿಮರಿಕ್ ಓಝೋನೈಡನ್ನು(III) ಕೊಡಬಹುದು.

ಆರೋಮ್ಯಾಟಿಕ್ ಸಂಯುಕ್ತಗಳಲ್ಲಿರುವ ದ್ವಿಬಂಧಕ್ಕಿಂತ ತೆರೆದ ಶ್ರೇಣಿಗಳ ಎಥಿಲೀನ್ ಬಂಧ ವಸ್ತುಗಳ ಮೇಲೆ ಓಝೋನೀಕರಣ ಸರಾಗವಾಗಿರುವುದು. ಒಂದು ಯುಗ್ಮಸ್ಥಿತಿಯಲ್ಲಿನ ಮೊದಲ ದ್ವಿಬಂಧದ ಮೇಲೆ ಓಝೋನ್ ನಿರಾಯಾಸವಾಗಿ ವರ್ತಿಸುವುದು; ಎರಡನೆಯ ದ್ವಿಬಂಧದ ಮೇಲೆ ಇನ್ನೂ ನಿಧಾನವಾಗಿ ವರ್ತಿಸುವುದು.





(IV) (V)



VI



VII

ಇಂಗಾಲ–ಇಂಗಾಲ ಪರಮಾಣುಗಳ ಮಧ್ಯದಲ್ಲಿರುವ ದ್ವಿಬಂಧದ ಮೇಲೆ ಇಂಗಾಲ–ಸಾರಜನಕ ದ್ವಿಬಂಧನಕ್ಕಿಂತ ಬೇಗನೆ ಓಝೋನೀಕರಣವಾಗುವುದು. ಹೆಚ್ಚಾಗಿ ಆದೇಶಿತ ಇಂಗಾಲ ಪರಮಾಣುಗಳಲ್ಲಿ ಅಥವಾ ಸ್ಟೀರಿಕ್ ತೊಡಕು ಇರುವ ಉಂಗುರ ಸಂಯುಕ್ತಗಳಲ್ಲಿ ಓಝೋನೀಕರಣ ಎಥಿಲೀನ್ ದ್ವಿಬಂಧದ ಮೇಲೆ ಆಗುವಷ್ಟು ಆಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಪಾಲಿಮರ್ ಓಝೋನೈಡುಗಳಾಗುವುದುಂಟು. ದ್ರಾವಕಗಳ ಪ್ರಭಾವ ಸಾಕಷ್ಟು ಇದೆ. ಉದಾಹರಣೆಗೆ ಅಸಿಟಿಕ್ ಆಮ್ಲ ಒಂದು ಅಯಾನುಕಾರಕ ದ್ರಾವಕ. ಇದರಲ್ಲಿ ಮಾನೋಮರಿಕ್ ಓಝೋನೈಡುಗಳಾಗುವುವು. ಅಯಾನುಕಾರಕವಲ್ಲದ ದ್ರಾವಕಗಳಾದ ಕಾರ್ಬನ್ ಟೆಟ್ರಕ್ಲೋರೈಡಿನಲ್ಲಿ ಪಾಲಿಮರಿಕ್ ಓಝೋನೈಡುಗಳಾಗುವುದು ಸಾಮಾನ್ಯ. ಓಝೋನಿನ ಪ್ರಬಲತೆ ಅತಿ ಹೆಚ್ಚಾಗಿದ್ದರೆ ಅಥವಾ ಓಝೋನೀಕರಣವನ್ನು ಹೆಚ್ಚು ಕಾಲ ಮುಂದುವರಿಸಿದರೆ ಓಝೋನೈಡುಗಳು ವಿಭಜಿಸುವುವಲ್ಲದೆ ಉತ್ಪನ್ನ ವಸ್ತುಗಳ ಉತ್ಕರ್ಷಣೆ ಸುಲಭವಾಗಿ ನಡೆದಿರುತ್ತದೆ. ಓಝೋನೀಕರಣದಿಂದ ಓಝೋನೈಡನ್ನು ಪಡೆಯುವುದಕ್ಕಿಂತಲೂ ಅವುಗಳ ವಿಭಜನೆಯಿಂದ ಬೇಕಾದ ಅಂತ್ಯ ಪದಾರ್ಥ ಪಡೆಯುವುದು ಕಷ್ಟಸಾಧ್ಯವಾದುದು. ನೀರು ಅಥವಾ ಉತ್ಕರ್ಷಣಕಾರಿಗಳ ಸಂಪರ್ಕದಲ್ಲಿ ವಿಭಜಿಸಿದಾಗ ಆಮ್ಲಗಳನ್ನು ಪಡೆಯುವುದು ಸುಲಭ. ಆಲ್ಡಿಹೈಡುಗಳು ಬೇಕಾದರೆ ಅಪಕರ್ಷಣಕಾರಿಯನ್ನು ಉಪಯೋಗಿಸಲೇಬೇಕಾಗುವುದು.

**ಕೈಗಾರಿಕಾ ಬಳಕೆ:** ಈ ಶತಮಾನದ ಮೊದಲಿನಿಂದಲೂ ಓಝೋನೀಕರಣ ಉಪಯುಕ್ತ ವಿಶ್ಲೇಷಣ ಉಪಕರಣವಾಗಿ (ಅನಲಿಟಿಕಲ್ ಟೂಲ್) ಪ್ರಯೋಗಾಲಯಗಳಲ್ಲಿ ಬಳಕೆಯಲ್ಲಿದ್ದರೂ ಇತ್ತೀಚಿನವರೆಗೂ ಈ ಕ್ರಿಯೆ ಕೈಗಾರಿಕಾ ಕ್ಷೇತ್ರದಲ್ಲಿ ಅಷ್ಟಾಗಿ

ಉಪಯೋಗವಾಗದಿರಲು ಕೆಲವು ಕಾರಣಗಳುಂಟು. ಓಜ಼ೋನನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುವ ಸಮರ್ಥ ಸಲಕರಣೆಗಳ ಅಭಾವ ಒಂದು ಕಾರಣ. ಈಚಿನ ವರ್ಷಗಳಲ್ಲಿ ಇಂಥ ದಕ್ಷ ಉಪಕರಣವನ್ನು ನಿರ್ಮಿಸಿದ್ದಾರೆ ಮತ್ತು ಇಂದು ಓಜ಼ೋನನ್ನು ಎಷ್ಟು ಬೇಕಾದರೂ ಕಡಿಮೆ ಖರ್ಚಿನಲ್ಲಿ ಉತ್ಪಾದಿಸಲು ಸಾಧ್ಯವಿದೆ.

ವ್ಯಾನಿಲಿನನ್ನು ಐಸೋಯುಜಿನಾಲಿನಿಂದ ತಯಾರಿಸಿದ್ದೇ ಬಹುಶಃ ಓಜ಼ೋನೀಕರಣದ ಕೈಗಾರಿಕಾ ರಂಗದ ಪ್ರವೇಶವೆನ್ನಬಹುದು. ಒಂದನೆಯ ಮಹಾಯುದ್ಧಕ್ಕಿಂತ ಮೊದಲು ಈ ವಿಧಾನವನ್ನು ಯೂರೋಪ್ ಮತು ಸಂಯುಕ್ತಸಂಸ್ಥಾನಗಳಲ್ಲಿ ಅಲ್ಪಸ್ವಲ್ಪ ಯಶಸ್ಸಿನಿಂದ ನಡೆಸಿಕೊಂಡು ಬರಲಾಯಿತು. ಓಲಿಕ್ ಆಮ್ಲದ ಓಜ಼ೋನೀಕರಣದಿಂದ ಅಜ಼ಿಲೈಕ್ ಮತ್ತು ಪೆಲಾರ್ಗೋನಿಕ್ ಆಮ್ಲಗಳನ್ನು ವಾಣಿಜ್ಯ ಮಟ್ಟದಲ್ಲಿ ಉತ್ಪಾದಿಸುತ್ತಾರೆ. ಓಲಿಕ್ ಆಮ್ಲವನ್ನು ಅದರ ಅರ್ಧದಷ್ಟು ತೂಕ ಪೆಲಾರ್ಗೋನಿಕ್ ಆಮ್ಲದಲ್ಲಿ ಕರಗಿಸಿ 2% ರಷ್ಟು ಓಜ಼ೋನ್ ಇರುವ ಆಕ್ಸಿಜನ್ನಿನಿಂದ ಪ್ರತಿಪ್ರವಾಹವರ್ತಕ ಕೋಶದಲ್ಲಿ ಓಜ಼ೋನೀಕರಿಸುವುದು; ಹೀಗೆ ಓಜ಼ೋನೀಕರಿಸಿದ ಮಿಶ್ರಣವನ್ನು ಆಕ್ಸಿಜನ್ ಪ್ರವಾಹದಲ್ಲಿ ಸತತವಾಗಿ ಕೆಲವು ಗಂಟೆಗಳ ಅವಧಿಯಲ್ಲಿ ಪಟು ಆಕ್ಸಿಜನ್ ಬಲು ಕಡಿಮೆಯಾಗುವವರೆಗೂ ಉತ್ಕರ್ಷಿಸುವುದು; ಮತ್ತೆ ನಿರ್ವಾತದಲ್ಲಿ ಬಟ್ಟಿ ಇಳಿಸುವುದರಿಂದ ಪೆಲಾರ್ಗೋನಿಕ್ ಮತ್ತು ಅಜ಼ಿಲೈಕ್ ಆಮ್ಲಗಳನ್ನು ಉತ್ಪಾದಿಸಬಹುದು.

ಇಂಗ್ಲೆಂಡ್ ಮತ್ತು ಜಪಾನಿನಲ್ಲಿ ಓಲಾಯಿಲ್ ನೈಟ್ರೈಲ್ ಮತ್ತು ಓಲಾಯಿಲುಗಳ ಓಜ಼ೋನೀಕರಣದಿಂದ ವಿ–ಅಮೈನೋಪೆಲಾರ್ಗೋನಿಕ್ ಆಮ್ಲ ಸಂಶ್ಲೇಷಿಸುವುದನ್ನು ವಿಶೇಷವಾಗಿ ಸಂಶೋಧಿಸುತ್ತಿದ್ದಾರೆ. ನೈಲಾನ್–9 ನೂಲನ್ನು ಲ್ಯಾಕ್ಟಮಿನಿಂದ ಉತ್ಪಾದಿಸುವುದನ್ನು ಜಪಾನೀಯರು ಕಂಡುಹಿಡಿದಿರುವುದಾಗಿ ತಿಳಿದುಬಂದಿದೆ. ಕಾರ್ಟಿಸೋನು ಮತ್ತು ಹಾರ್ಮೋನುಗಳ ಸಂಶ್ಲೇಷಣೆಯಲ್ಲಿ ಓಜ಼ೋನೀಕರಣವನ್ನು ವಾಣಿಜ್ಯಮಟ್ಟದಲ್ಲಿ ಈಚೆಗೆ ಅಳವಡಿಸಿದ್ದಾರೆ. (ಪಿ.ಜಿ.ಆರ್.)

**ಓಟ್:** ಗ್ರಾಮಿನಿ ಅಥವಾ ಪೋಯೇಸಿ ಕುಟುಂಬದ ಒಂದು ಧಾನ್ಯಸಸ್ಯ; ಶಾಸ್ತ್ರೀಯ ನಾಮ ಅವಿನ. ಓಟ್ಸ್ ಎಂದೂ ಕರೆಯುವುದುಂಟು. ಮುಖ್ಯವಾಗಿ ದನಕರುಗಳ ಮತ್ತು ಕುದುರೆಗಳ ಆಹಾರ. ಇದರ ಕಾಳುಗಳನ್ನು ಮಾನವನ ಕೆಲವು ಆಹಾರವಸ್ತುಗಳ ತಯಾರಿಕೆಯಲ್ಲೂ ಬಳಸಲಾಗುತ್ತಿದೆ. ಪ್ರಪಂಚದ ಪ್ರಧಾನ ಧಾನ್ಯಸಸ್ಯಗಳಲ್ಲಿ ಓಟ್ಸ್‌ಗೆ ನಾಲ್ಕನೆಯ ಸ್ಥಾನ. (ಗೋದಿ, ಬತ್ತ, ಮುಸುಕಿನ ಜೋಳ ಮೊದಲಿನ ಮೂರು). ಓಟ್ ಸಸ್ಯ ಪಶ್ಚಿಮ ಯುರೋಪಿನ ಮೂಲನಿವಾಸಿಯಾಗಿದ್ದು ಕ್ರಮೇಣ ಸಮಶೀತೋಷ್ಣವಲಯದ ಅನೇಕ ದೇಶಗಳಿಗೆ ಹರಡಿಕೊಂಡಿದೆ. ಇಂದು ಭಾರತ, ದಕ್ಷಿಣ ಆಫ್ರಿಕ, ಮೆಕ್ಸಿಕೋ ಮುಂತಾದ ಉಷ್ಣದೇಶಗಳಲ್ಲೂ ಬೆಳೆಯುತ್ತಿದೆ. ಓಟ್ಸಿನ ವ್ಯವಸಾಯ ಬಹು ಪುರಾತನವಾದುದೆಂದು ಹೇಳುತ್ತಾರೆ. ಒಂದಾನೊಂದು ಕಾಲದಲ್ಲಿ ಹೊಲಗಳಲ್ಲಿ ಕಳೆಯ ರೂಪದಲ್ಲಿ ಓಟ್ ಸಸ್ಯ ಬೆಳೆಯುತ್ತಿತ್ತೆಂದೂ ಕ್ರಮೇಣ ಇದರ ಕಾಳುಗಳ ಉಪಯುಕ್ತತೆಯನ್ನು ಕಂಡುಕೊಂಡ ಮಾನವ ಇದರ ಕೃಷಿಯನ್ನು ಕೈಗೊಂಡನೆಂದೂ ಭಾವಿಸಲಾಗಿದೆ.

ಕಂಚಿನ ಯುಗದಲ್ಲಿ (ಪ್ರ.ಶ.ಪೂ. 1500–500) ಇದರ ಕೃಷಿ ರೂಢಿಯಲ್ಲಿತ್ತೆಂದು ತಿಳಿದುಬಂದಿದೆ.

ಓಟ್ ಜಾತಿಯಲ್ಲಿ ಸು. 70 ಪ್ರಭೇದಗಳಿವೆ–ಅವಿನ ಸೇಟಿವ (ಸಾಮಾನ್ಯ ಓಟ್), ಅ.ಬಿಜ಼ಾಂಟಿನ (ಕೆಂಪು ಓಟ್), ಅ.ಓರಿಯಂಟ್ಯಾಲಿಸ್, ಅ.ನ್ಯಡ, ಅ.ಬಾರ್ಬೇಟ, ಅ.ಫ್ಯಾಟ್ಯುವ, ಅ.ಸ್ಟೆರಿಲಿಸ್, ಅ.ಪ್ರೆಟೆನ್ಸಿಸ್ ಮತ್ತು ಅ.ಬ್ರೆವಿಸ್ ಪ್ರಭೇದಗಳು ಮುಖ್ಯವಾದುವು. ಇವುಗಳಲ್ಲಿ ಕೆಲವು ಚಳಿದೇಶಗಳಲ್ಲಿ ಚೆನ್ನಾಗಿ ಬೆಳೆದರೆ ಇನ್ನು ಕೆಲವು ಉಷ್ಣದೇಶಗಳಿಗೆ ಹೊಂದಿಕೊಂಡಿವೆ. ಕಾಳುಗಳಿಗಾಗಿ ಕೃಷಿಯಲ್ಲಿರುವವು ಸಾಮಾನ್ಯ ಓಟ್ ಮತ್ತು ಕೆಂಪು ಓಟ್. ಉಳಿದವನ್ನು ದನಕರುಗಳ ಮೇವಿಗಾಗಿ ಮಾತ್ರ ಬೆಳೆಸಲಾಗುತ್ತದೆ. ಇವಲ್ಲದೆ ಪ್ರಪಂಚದ ಬೇರೆ ಬೇರೆ ಪ್ರದೇಶಗಳ ವಾತಾವರಣಕ್ಕೆ ಹಾಗೂ ತನ್ನ ಬಳಕೆಗೆ ಹೊಂದಿಕೊಳ್ಳುವಂತೆ ತಳೀಕರಣ ಪ್ರಯೋಗಗಳಿಂದ ಮಾನವ ಬೆಳಕಿಗೆ ತಂದಿರುವ ಹಲವಾರು ಹೊಸ ತಳಿಗಳೂ ಇವೆ.

ಒಂದು ಕಾಲದಲ್ಲಿ ಪ್ರಪಂಚದ ಕೆಲವೇ ಪ್ರದೇಶಗಳಿಗೆ ಸೀಮಿತವಾಗಿದ್ದ ಓಟ್ ಸಸ್ಯ ತನ್ನ ಉಪಯುಕ್ತತೆ ಹಾಗೂ ತ್ರಾಣದಿಂದಾಗಿ ಬಹು ಜನಪ್ರಿಯವಾಗಿದೆ. ಆದ್ದರಿಂದ ಇಂದು ವಿಶ್ವದ ಎಲ್ಲ ಭಾಗಗಳಲ್ಲಿಯೂ ಇದರ ಕೃಷಿಯನ್ನ ಕಾಣಬಹುದು. ಅಮೆರಿಕ ಸಂಯುಕ್ತಸಂಸ್ಥಾನದ ದಕ್ಷಿಣಭಾಗ, ಮೆಡಿಟರೇನಿಯನ್ ಪ್ರದೇಶ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಮತ್ತು ಭಾರತಗಳಲ್ಲಿ ಕೆಂಪು ಓಟನ್ನು ಪ್ರಧಾನವಾಗಿ ಬೆಳೆಸುತ್ತಾರೆ. ಹಳದಿ ಓಟ್ಸ್ ಎಂಬ ತಳಿಯ ಕೃಷಿ ರಷ್ಯದ ನೈಋತ್ಯ ಪ್ರದೇಶಗಳಲ್ಲಿ, ಕೊಂಚಮಟ್ಟಿಗೆ ಅಮೆರಿಕದ ಸಂಯುಕ್ತಸಂಸ್ಥಾನದಲ್ಲಿ ವ್ಯಾಪಿಸಿದೆ. ಸಾಮಾನ್ಯ ಓಟ್ಸ (ಅ.ಸೇಟಿವ) ಯುರೋಪಿಗೆ ವಿಶಿಷ್ಟವಾದ ಬಗೆ. ಭಾರತದಲ್ಲಿ ಈ ಪ್ರಭೇದವನ್ನು ಮೇವಿಗಾಗಿ ಮಾತ್ರ ಬೆಳೆಸುತ್ತಾರೆ. ಟಿಬೆಟ್, ತುರ್ಕಿ ಮತ್ತು ಚೀನದೇಶಗಳಲ್ಲಿ ಅ.ನ್ಯೂಡ ಎಂಬ ನಗ್ನಕಾಳುಗಳ ಪ್ರಭೇದ ಬೆಳೆಯುತ್ತದೆ. ಭಾರತದಲ್ಲಿ ತಂಪು ಹವೆಯುಳ್ಳ ಬೆಟ್ಟದ ಪ್ರದೇಶಗಳಾದ ಪಶ್ಚಿಮ ಹಿಮಾಲಯ, ಕುಮಾಂವ್, ಪಂಜಾಬ್, ಸಿಮ್ಲ ಮತ್ತು ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಓಟ್ಸನ್ನು ಬೆಳೆಸುತ್ತಾರೆ.

ಓಟ್ ಸಸ್ಯದ ಜುಟ್ಟಿನ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಸಾಮಾನ್ಯ ಬಗೆಯ ಅ.ಸೇಟಿವ ಪ್ರಭೇದ ಕಾಡು ಬಗೆಯ ಅ.ಫ್ಯಾಟ್ಯುವದಿಂದ ಜನ್ಮತಾಳಿತೆಂದೂ ಕೆಂಪು ಓಟ್ಸ್ (ಅ.ಬಿಜ಼ಾಂಟಿನ) ಅ.ಸ್ಟೆರಿಲಿಸ್ ಪ್ರಭೇದದಿಂದ ಬಂದುದೆಂದೂ ಕೆಲವರ ಅಭಿಮತ. ಆದರೆ ಅ.ಸೆರಿಲಿಸ್ ಪ್ರಭೇದ ಇಂದಿನ ಎಲ್ಲ ಮುಖ್ಯವಾದ ಓಟ್ ಸಸ್ಯಗಳಿಗೆ ಮೂಲವೆಂದು ಕಾಫ್‌ಮನ್ ಎಂಬ ವಿಜ್ಞಾನಿ ತಳಿವಿಜ್ಞಾನ ಮತ್ತು ಸಸ್ಯರೋಗವಿಜ್ಞಾನಗಳ ಆಧಾರದ ಮೇಲೆ ಹೇಳುತ್ತಾನೆ.

**ಸಸ್ಯ ವಿವರಣೆ:** ಓಟ್ ಸಸ್ಯ ಒಂದು ವಾರ್ಷಿಕ ಹುಲ್ಲು. 2'–5' ಎತ್ತರಕ್ಕೆ ಬೆಳೆಯುತ್ತದೆ. ಬೇರುಗಳು ಇತರ ಏಕದಳ ಸಸ್ಯಗಳಲ್ಲಿರುವಂತೆ ತೊಡುಕು ಬೇರಿನ ರೂಪದಲ್ಲಿವೆ. ಕಿರಿ, ತೆಳು ಮತ್ತು ಉದ್ದ ಎಲೆಗಳು. ಕಾಂಡದಲ್ಲಿ ಗಿಣ್ಣಗಳೂ ಟೊಳ್ಳಾದ ಅಂತರ ಗಿಣ್ಣಗಳೂ ಇವೆ. ಹೂಗೊಂಚಲು ಸಂಕೀರ್ಣ ಪುಷ್ಪಗುಚ್ಛದ (ಪ್ಯಾನಿಕಲ್) ಮಾದರಿಯದು. ಕೆಲವು ಪ್ರಭೇದಗಳಲ್ಲಿ ಕದಿರುಗೊಂಚಲಿನ (ಸ್ಪೈಕ್) ಅಥವಾ ಚೆಂಡಿನ ರೀತಿಯದಾಗಿರಬಹುದು. ಹೂಗೊಂಚಲುಗಳು ಎಲ್ಲ ಕಡೆಗೂ ಒಂದೇ ಸಮನಾಗಿ ಕವಲೊಡೆದು ಹರಡಿಕೊಂಡು ಸಮರೂಪವನ್ನು ಹೊಂದಿರಬಹುದು ಅಥವಾ ಒಂದೇ ಕಡೆ ಕವಲೊಡೆದು ಬಾಗಿಕೊಂಡು ಅಸಮರೂಪವನ್ನು ಹೊಂದಿರಬಹುದು. ಹೂಗೊಂಚಲಿನಲ್ಲಿ ಅನೇಕ ಕವಲುಗಳು ಮತ್ತು ಎರಡೆರಡು ಪುಟ್ಟ ಹೂಗಳನ್ನೊಳಗೊಂಡ ಹಲವಾರು ಅನುಶೂಕಿಗಳು (ಸ್ಪೈಕ್‌ಲೆಟ್ಸ್) ಇವೆ. ಹೂವಿನಲ್ಲಿ ಮೂರು ಕೇಸರಗಳ ಒಂದು ಅಂಡಕೋಶವೂ ಇವೆ. ಅವನ್ನು ಲೆಮ್ಮ ಮತ್ತು ಪೇಲಿಯ ಎಂಬ ಆವರಣಗಳು ಮುಚ್ಚಿಕೊಂಡಿವೆ. ಗರ್ಭಕಟ್ಟಿದ ಅಂಡಕೋಶ ಒಂದೇ ಒಂದು ಬೀಜವನ್ನುಳ್ಳ ಕ್ಯಾರಿಯೋಪ್ಸಿಸ್ ಎಂಬ ಧಾನ್ಯವಾಗುತ್ತದೆ. ಧಾನ್ಯಕ್ಕೆ ಗ್ರೋಟ್ ಎಂಬ ಹೆಸರೂ ಇದೆ. ಇದನ್ನು ಹುಸುಕು ಮುಚ್ಚಿಕೊಂಡಿರುತ್ತದೆ. ಹುಸುಕು ಬೇರೆಬೇರೆ ಪ್ರಭೇದಗಳಲ್ಲಿ ಬೇರೆಬೇರೆ ಬಣ್ಣದ್ದು. ಇದರ ಕಾರಣದಿಂದ ಅವುಗಳಿಗೆ ಹಳದಿ ಓಟ್ಸ್, ಬಿಳಿ ಓಟ್ಸ್, ಕೆಂಪು ಓಟ್ಸ್, ಕಪ್ಪು ಓಟ್ಸ್ ಮುಂತಾದ ಹೆಸರುಗಳು ಬಂದಿವೆ. ಕೆಲವು ಪ್ರಭೇದಗಳಲ್ಲಿ ಧಾನ್ಯ ಹುಸುಕಿಲ್ಲದೆ ನಗ್ನಫಲದ ರೂಪದಲ್ಲಿರುವುದೂ ಉಂಟು. ಉದಾಹರಣೆಗೆ ಅ.ನ್ಯೂಡ ಪ್ರಭೇದ.

ಓಟ್ ಸಸ್ಯದ ಹೂಗೊಂಚಲು

ಓಟ್ ಸಸ್ಯದಲ್ಲಿ ಸ್ವಾಭಾವಿಕವಾಗಿ ಸ್ವಪರಾಗಸ್ಪರ್ಶಕ್ರಿಯೆಯೇ ನಡೆಯುತ್ತದೆ. ಅನ್ಯಪರಾಗಸ್ಪರ್ಶಕ್ರಿಯೆ ಬಹಳ ವಿರಳ.

**ವರ್ಗೀಕರಣ:** ಗೋದಿಯಲ್ಲಿರುವಂತೆ ಅವಿನ ಜಾತಿಯಲ್ಲಿ ಬಹುಗುಣಿತ ಸಂಖ್ಯೆಯ ಕ್ರೋಮೊಸೋಮುಗಳನ್ನುಳ್ಳ ಪ್ರಭೇದಗಳು ಇವೆ. ಜನನ ಕಣಗಳಲ್ಲಿ ಏಕಗುಣಿತ (*ಟಿ*) ಕ್ರೋಮೊಸೋಮುಗಳ ಸಂಖ್ಯೆ 7, 14 ಮತ್ತು 21 ಹಾಗೂ ಸಸ್ಯಾಂಗ ಕಣಗಳಲ್ಲಿ ದ್ವಿಗುಣಿತ (*2ಟಿ*) ಕ್ರೋಮೊಸೋಮುಗಳ ಸಂಖ್ಯೆ 14, 28 ಮತ್ತು 42 ಇರುತ್ತವೆ. ಈ ಮೂರು ಪ್ರಭೇದಗಳು ಅನುಗುಣವಾಗಿ ದ್ವಿಗುಣಿತ (ಡಿಪ್ಲಾಯ್ಡ್), ಚತುರ್ಗುಣಿತ (ಟೆಟ್ರಾಪ್ಲಾಯ್ಡ್) ಮತ್ತು ಷಡ್ಗುಣಿತ (ಹೆಕ್ಸಾಪ್ಲಾಯ್ಡ್) ಪ್ರಭೇದಗಳೆನಿಸಿವೆ. ವ್ಯವಸಾಯದಲ್ಲಿರುವ ಓಟ್ ಸಸ್ಯಗಳು ಷಡ್ಗುಣಿತ ಪ್ರಭೇದಕ್ಕೆ ಸೇರಿವೆ.

**ವ್ಯವಸಾಯ:** ಓಟ್ ಸಸ್ಯ ಇತರ ಧಾನ್ಯ ಸಸ್ಯಗಳಂತಲ್ಲದೆ ಎಂಥ ಮಣ್ಣಿನಲ್ಲಿಯಾದರೂ ಚೆನ್ನಾಗಿ ಬೆಳೆಯಬಲ್ಲುದು. ಭೂಮಿ ಕೊಂಚ ಫಲವತ್ತಾಗಿದ್ದು ಬೆಳವಣಿಗೆಯ ಕಾಲದಲ್ಲಿ ಸಾಕಷ್ಟು ತೇವವಿದ್ದರೆ ಒಳ್ಳೆಯ ಫಸಲು ಕೊಡುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ

ಓಟ್ಸಿನ ತಳಿಗೆ ಅನುಗುಣವಾಗಿ ವಸಂತ ಋತುವಿನಲ್ಲೋ ಚಳಿಗಾಲದಲ್ಲೋ ಬಿತ್ತನೆ ಮಾಡುತ್ತಾರೆ. ಭಾರತದಲ್ಲಿ ಬಿತ್ತನೆಯ ಕಾಲ ಅಕ್ಟೋಬರ್–ನವೆಂಬರ್ ತಿಂಗಳುಗಳು. ಎಕರೆಗೆ ಸುಮಾರು 30–45 ಕಿಗ್ರಾಂ ಬೀಜ ಬೇಕು. ಸ್ವಾಭಾವಿಕ ಗೊಬ್ಬರವನ್ನಾಗಲಿ, ರಾಸಾಯನಿಕ ಗೊಬ್ಬರವನ್ನಾಗಲಿ ಹಾಕಿದರೆ ಒಳ್ಳೆಯ ಫಸಲು ಪಡೆಯಬಹುದು. ನೆಲದ ಗುಣದ ಮೇಲೆ ಗೊಬ್ಬರದ ಆವಶ್ಯಕತೆ, ಪ್ರಮಾಣವನ್ನು ನಿರ್ಧರಿಸಬೇಕು. ಬೇಕಾದ ಪ್ರಮಾಣಕ್ಕಿಂತ ಹೆಚ್ಚು ಗೊಬ್ಬರ ಹಾಕಿದರೆ ಗಿಡಗಳು ಹೆಚ್ಚು ಎತ್ತರ ಬೆಳೆದು ನೆಟ್ಟಗೆ ನಿಲ್ಲಲಾಗದೆ ಒರಗಿಬಿಡಬಹುದು. ಆದರೂ ಹಸಿರು ಗೊಬ್ಬರದೊಂದಿಗೆ ಕೊಂಚ ಸೂಪರ್ ಫಾಸ್ಫೇಟನ್ನು ಮಿಶ್ರಮಾಡಿ ಉಪಯೋಗಿಸುವುದು ಒಳ್ಳೆಯದು. ಬಿತ್ತಿದ 3–4 ತಿಂಗಳುಗಳಲ್ಲಿ ಪೈರು ಕೊಯ್ಲಿಗೆ ಸಿದ್ಧವಾಗುತ್ತದೆ. ಧಾನ್ಯದ ಸರಾಸರಿ ಇಳುವರಿ ಅಮೆರಿಕದಲ್ಲಿ ಎಕರೆಗೆ 31 ಬುಷೆಲುಗಳು. ಪರಿಸ್ಥಿತಿ ಅನುಕೂಲವಿರುವ ಡೆನ್ಮಾರ್ಕ್, ಸ್ವೀಡನ್ ಮುಂತಾದೆಡೆಗಳಲ್ಲಿ ಎಕರೆಗೆ 71 ಬುಷೆಲ್‌ಗಳವರೆಗೂ ಇಳುವರಿಯಿದೆ. ಭಾರತದಲ್ಲಿ ಎಕರೆಗೆ 130–230 ಕಿಗ್ರಾಂ ಹುಲ್ಲಿನ ಉತ್ಪನ್ನವಿದೆ. ಭಾರತದಲ್ಲಿ ಕೆಲವು ಕಡೆ ಬರಿ ಮೇವಿಗಾಗಿ ಓಟನ್ನು ಬೆಳೆಸುತ್ತಾರೆ. ಅಂಥಲ್ಲಿ ಮೇವನ್ನು ಎರಡು ಮೂರು ಬಾರಿ ಕಟಾವು ಮಾಡುವುದುಂಟು. ಆಗ ಮೊದಲನೆಯ ಕಟಾವಿನಲ್ಲಿ ಸು. 3800 ಕಿಗ್ರಾಂ ಮತ್ತು 2ನೆಯ ಕಟಾವಿನಲ್ಲಿ ಸು.1300 ಕಿಗ್ರಾಂ ಹುಲ್ಲನ್ನು ಪಡೆಯಬಹುದು.

ಸಾಮಾನ್ಯವಾಗಿ ಓಟ್ಸನ್ನು ಪರ್ಯಾಯ ಬೆಳೆಯಾಗಿ ವ್ಯವಸಾಯ ಮಾಡುವುದೇ ವಾಡಿಕೆ. ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಮುಸುಕಿನಜೋಳ, ಹತ್ತಿ, ಸೋಯಾ ಬೀನ್ಸ್ ಅಥವಾ ಯಾವುದಾದರೂ ದ್ವಿದಳ ಸಸ್ಯದೊಂದಿಗೆ ಪರ್ಯಾಯ ಬೆಳೆಯನ್ನಾಗಿ ಬೆಳೆಸುತ್ತಾರೆ.

**ರಾಸಾಯನಿಕ ಸಂಯೋಜನೆ ಮತ್ತು ಉಪಯೋಗ:** ಓಟ್ಸ್ ತುಂಬ ಪುಷ್ಟಿದಾಯಕ ಅಹಾರವೆಂದು ಹೆಸರಾಗಿದೆ. ಇದರಲ್ಲಿ ಪ್ರೋಟೀನು, ಕೊಬ್ಬು ಹಾಗೂ ಬಿ ಮತ್ತು ಇ ಜೀವಾತುಗಳು ಹೆಚ್ಚಿನ ಪ್ರಮಾಣದಲ್ಲಿವೆ. ಓಟ್ ಹಿಟ್ಟಿನ ರಾಸಾಯನಿಕ ಸಂಯೋಜನೆ ಹೀಗಿದೆ : ಪ್ರತಿ 100 ಗ್ರಾಮಿಗೆ ತೇವಾಂಶ 8, ಪ್ರೋಟೀನು 14, ಕೊಬ್ಬು 7, ಕಾರ್ಬೊಹೈಡ್ರೇಟುಗಳು 68, ನಾರಿನ ಅಂಶ 1, ಬೂದಿಯ ಅಂಶ 1.7. ಬಿ ಜೀವಾತು 285–975 ಗ್ರಾಂ. ಬಿ ಜೀವಾತುಗಳಲ್ಲಿ $ಬಿ_1$ ರಿಬೊಫ್ಲೇವಿನ್, ನಯಾಸಿನ್, ಕೋಲಿನ್ ಮತ್ತು ಪ್ಯಾಟೊಥಿನಿಕ್ ಆಮ್ಲ ಮುಖ್ಯವಾದುವು. ಸಿ ಮತ್ತು ಡಿ ಜೀವಾತುಗಳಿಲ್ಲ. ಇದ್ದರೂ ಅತ್ಯಂತ ಕಡಿಮೆ ಪ್ರಮಾಣದಲ್ಲಿವೆ.

ಓಟ್ಸನ್ನು ಹಸಿ ಹುಲ್ಲಿನ ರೂಪದಲ್ಲಾಗಲಿ ಒಣಗಿಸಿದ ಹುಲ್ಲಿನ ರೂಪದಲ್ಲಾಗಲಿ ದನಕರುಗಳ ಮೇವಾಗಿ ಉಪಯೋಗಿಸುತ್ತಾರೆ. ಅತ್ಯಂತ ಶ್ರೇಷ್ಠ ದರ್ಜೆಯದೆಂದು ಹೆಸರಾಗಿರುವ ಇದರ ಉತ್ಪನ್ನದ ಬಹುಭಾಗ ಮೇವಾಗಿಯೇ ವಿನಿಯೋಗವಾಗುವುದು. ಕಾಳುಗಳಂತೂ ಕುದುರೆಗಳಿಗೆ ಬಹಳ ಒಳ್ಳೆಯ ಮತ್ತು ಪ್ರಿಯವಾದ ತಿನಿಸು. ಕಾಳು ಮತ್ತು ಹುಸುಕು ಎರಡನ್ನೂ ಸಾಕುಪ್ರಾಣಿಗಳ ಮಿಶ್ರ ಆಹಾರವಾಗಿ (ಭೂಸ) ಬಳಸುತ್ತಾರೆ. ಕಾಳಿನಲ್ಲಿ ಅಧಿಕವಾಗಿ ಪೌಷ್ಟಿಕಾಂಶಗಳಿರುವುದರಿಂದ ಇದು ಮಾನವನ ಆಹಾರವಾಗಿಯೂ ಉಪಯೋಗವಾಗುವುದುಂಟು. ಬೆಳಗಿನ ಉಪಾಹಾರಕ್ಕಂತೂ ಇದು ಬಹಳ ಒಳ್ಳೆಯದು. ಓಟ್ ಹಿಟ್ಟಿನಿಂದ ಗಂಜಿ (ಪಾರಿಜ್), ಕುಕಿಸ್ (ಒಂದು ಬಗೆಯ ಸಣ್ಣ ರೊಟ್ಟಿ) ಮತ್ತು ಕಡುಬು (ಪುಡ್ಡಿಂಗ್) ಮಾಡುತ್ತಾರೆ. ಆದರೆ ಬ್ರೆಡ್ ಮಾಡುವುದಕ್ಕೆ ಆಗುವುದಿಲ್ಲ. ಬ್ರೆಡ್ ತಯಾರಿಸಲು ಸಹಕಾರಿಯಾಗುವಂಥ ಗ್ಲೂಟೆನ್ ಎಂಬ ಪ್ರೋಟೀನು ಅದರಲ್ಲಿ ಇಲ್ಲದಿರುವುದೇ ಇದರ ಕಾರಣ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ವರ್ಷಕ್ಕೆ ಸುಮಾರು 42 ದಶಲಕ್ಷ ಬುಷೆಲ್ ಓಟ್ಸನ್ನು ಉಪಾಹಾರ ತಯಾರಿಕೆಯಲ್ಲಿ ಬಳಸುತ್ತಾರೆಂದು ಅಂದಾಜು. ಓಟ್ ಹುಸುಕಿನಲ್ಲಿ ಸೆಲ್ಯೂಲೋಸ್, ಲಿಗ್ನಿನ್, ಪೆಂಟೋಸನ್ ಮುಂತಾದ ಕಾರ್ಬೊಹೈಡ್ರೇಟುಗಳು ಹೆಚ್ಚಾಗಿವೆ. ಇವನ್ನು ಸಲ್ಫ್ಯೂರಿಕ್ ಆಮ್ಲದೊಂದಿಗೆ ಸೇರಿಸಿ ಆವಿಯ ಒತ್ತಡದಲ್ಲಿ ಕುದಿಸಿ ಬಟ್ಟಿಯಿಳಿಸಿ ಫರ್‌ಫರಾಲ್ ಎಂಬ ಸಂಯುಕ್ತವನ್ನು ತಯಾರಿಸುತ್ತಾರೆ. ಕೃತಕ ರಾಳ (ರೆಸಿನ್), ಕೈಗಾರಿಕೆಗಳಲ್ಲಿ ಬಳಸಲಾಗುವ ವಿಲಯಕಗಳು, ನೈಲಾನ್ ತಯಾರಿಕೆಗೆ ಬೇಕಾಗುವ ಅಡಿಪೊನೈಟ್ರಿಲ್ ಸಂಯುಕ್ತ ಇವುಗಳ ತಯಾರಿಕೆಯಲ್ಲಿ ಫರ್‌ಫರಾಲಿನ ಉಪಯೋಗ ಉಂಟು. ಆಸ್ಫಾಲ್ಟಿನೊಂದಿಗೆ ಫರಫರಾಲನ್ನು ಸೇರಿಸಿ ಅದರ ಅಂಟುವಿಕೆ ಹೆಚ್ಚಾಗುವಂತೆ ಮಾಡುತ್ತಾರೆ.

**ರೋಗಗಳು:** ಓಟ್ ಸಸ್ಯಕ್ಕೆ ಹಲವಾರು ಬಗೆಯ ಬೂಷ್ಟು ರೋಗಗಳೂ ತಗಲುತ್ತವೆ. ಇವುಗಳಲ್ಲಿ ಯುಸ್ಟಿಲಾಗೋ ಜಾತಿಯ ಬೂಷ್ಟಿನಿಂದ ಬರುವ ಕಾಡಿಗೆ (ಸ್ಮಟ್) ರೋಗ ಮತ್ತು ಪಕ್ಸೀನಿಯಾ ಜಾತಿಯ ಬೂಷ್ಟಿನಿಂದ ಬರುವ ಅರಿಸಿನ (ರಸ್ಟ್) ರೋಗ ಮುಖ್ಯವಾದುವು. ಕಾಡಿಗೆ ರೋಗಗಳಲ್ಲಿ ಲೂಸ್ ಸ್ಮಟ್ ಮತ್ತು ಕವರ್ಡ್ ಸ್ಮಟ್ ಮುಂತಾದ ಬಗೆಗಳಿವೆ. ಈ ರೋಗ ಬಂದ ಓಟ್ಸಿನಲ್ಲಿ ಕಾಳುಗಳೆಲ್ಲ ಪೌಷ್ಟಿಕಾಹಾರವಿಲ್ಲದೆ ಬೂಷ್ಟಿನ ಬೀಜಕಣಗಳಿಂದ ತುಂಬಿ ಕಪ್ಪಾಗುತ್ತವೆ. ಇವನ್ನು ನಿವಾರಿಸಲು ಸೆರೆಸಾನ್–ಎಂ, ಅಗ್ರಾಕ್ಸ್, ಪ್ಯಾನೊಜೆನ್ ಮುಂತಾದ ಔಷಧಿಗಳನ್ನು ಚಿಮುಕಿಸುತ್ತಾರೆ. ಅಲ್ಲದೆ ಕಾಡಿಗೆ ರೋಗನಿರೋಧಕ ಓಟ್ ತಳಿಗಳನ್ನು ಅಭಿವೃದ್ಧಿಪಡಿಸಿ ಬೆಳಯುವುದರಿಂದಲೂ ತಡೆಗಟ್ಟಬಹುದು. ಅರಿಸಿನ ರೋಗದಲ್ಲಿಯ ಕ್ರೌನ್ ರಸ್ಟ್, ಸ್ಟೆಮ್ ರಸ್ಟ್ ಮುಂತಾದ ವಿವಿಧ ಬಗೆಗಳಿವೆ. ಎಲೆ, ಕಾಂಡ ಮತ್ತು ಹೂಗೊಂಚಲುಗಳ ಮೇಲೆಲ್ಲ ಕಗ್ಗೆಂಪು ಅಥವಾ ಕಿತ್ತಳೆ ಬಣ್ಣದ ಬೊಕ್ಕೆಗಳೇಳುವುದು ಅರಿಸಿನ ರೋಗದ ಮುಖ್ಯ ಚಿಹ್ನೆಗಳು. ಈ ರೋಗ ನಿವಾರಣೆಗೆ ಯಾವ ರಾಸಾಯನಿಕವೂ ಇಲ್ಲ. ತಳೀಕರಣ ಪ್ರಯೋಗಗಳಿಂದ ಅಭಿವೃದ್ಧಿ ಪಡಿಸಿದ ಹೊಸ ರೋಗನಿರೋಧಕ ತಳಿಗಳನ್ನು ವ್ಯವಸಾಯ ಮಾಡುವುದೊಂದೇ ಅರಿಸಿನ ರೋಗವನ್ನು ತಡೆಗಟ್ಟಲು ಇರುವ ಮಾರ್ಗ. ಇವೆರಡು ರೋಗಗಳಲ್ಲದೆ ಇನ್ನೂ ಕೆಲವು ಬೂಷ್ಟು ರೋಗಗಳು ಓಟ್ಸಿಗೆ ಅಂಟುವುದುಂಟು. ಹೆಲ್ಮಿಂಥೋ ಸ್ಪೋರಿಯಮ್ ವಿಕ್ಟೋರಿಯಿ ಮತ್ತು ಹೆ.ಅವಿನಿ ಎಂಬ ಬೂಷ್ಟಿನಿಂದ ಬರುವ ವಿಕ್ಟೋರಿ ಬ್ಲೈಟ್ ರೋಗ ಮತ್ತು ಲೀಫ್‌ಬ್ಲಾಚ್ ರೋಗಗಳು ಇವುಗಳಲ್ಲಿ ಮುಖ್ಯವಾದುವು. ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಕ್ರಮಕ್ರಮವಾಗಿ ಕೊಳೆಯುತ್ತ ಹೋಗುವುದು, ಅವುಗಳ ಮೇಲೆ ಕಂದು ಮಚ್ಚೆಗಳು ಕಾಣಿಸಿಕೊಳ್ಳುವುದು ಕಾಳುಗಳು ಚಿರಟೆ ಹೋಗುವುದು, ಎಳೆಗಳುದುರುವಿಕೆ ಮುಂತಾದುವು ಈ ರೋಗಗಳ ಮುಖ್ಯ ಲಕ್ಷಣಗಳು. ಸಣ್ಣ ಸಸಿಗಳಲ್ಲೇ ಕಾಣಿಸಿಕೊಳ್ಳುವ ಈ ರೋಗಗಳು ಬೀಜದ ಮೂಲಕ ಹರಡುತ್ತವೆ. ಆದ್ದರಿಂದ ಬೀಜ ಬಿತ್ತುವುದಕ್ಕೆ ಮುನ್ನ ಜೈವಿಕ–ಪಾದರಸ ಸಂಯುಕ್ತಗಳಿಂದ ಬೀಜಗಳನ್ನು ತೊಳೆಯುವುದರಿಂದ ಇವನ್ನು ತಡೆಗಟ್ಟಬಹುದು.

ಕೆಲವು ಬಾರಿ ಓಟ್ ಸಸ್ಯಕ್ಕೆ ಕೀಟಗಳೂ ಅಂಟುತ್ತವೆ. ಆಸಿನೆಲ್ಲ ಫ್ರಿಟ್ ಎಂಬ ಒಂದು ಬಗೆಯ ಫಲಮಕ್ಷಿಕ ಮತ್ತು ಟಾಕ್ಸಾಪ್ಟೆರ ಗ್ರಾಮಿನಮ್ ಎಂಬ ಹಸಿರು ತಿಗಣೆ ಮುಖ್ಯವಾದುವು. ಪ್ಯಾರಾಥಿಯಾನ್, ಟೆಟ್ರ ಈಥೈಲ್ ಪೈರೊಫಾಸ್ಫೇಟ್, ಆಲ್ಡ್ರಿನ್, ಟಾಕ್ಸಾಫೀನ್ ಮುಂತಾದ ಕೀಟನಿವಾರಕ ಔಷಧಿಗಳನ್ನು ಚಿಮುಕಿಸುವುದರಿಂದ ಇವನ್ನು ಹತೋಟಿಯಲ್ಲಿಡಬಹುದು. ಓಟ್ಸನ್ನು ಸಾಮಾನ್ಯವಾಗಿ ಬಿತ್ತುವುದಕ್ಕಿಂತ ಸ್ವಲ್ಪ ಮುಂಚಿತವಾಗಿಯೇ ಬಿತ್ತುವುದರಿಂದಲೂ ಇವನ್ನು ತಡೆಗಟ್ಟಬಹುದು. (ಎ.ಎಮ್.ಎಸ್.)

**ಓಟ (ಗಣಿತವಿಜ್ಞಾನದಲ್ಲಿ):** $x$–ಅಕ್ಷದ ಧನ ದಿಶೆಯೊಡನೆ ಒಂದು ಸರಳ ರೇಖೆ ರಚಿಸುವ ಧನದಿಶಾತ್ಮಕ ಕೋನದ ಟ್ಯಾಂಜೆಂಟ್ (ಸ್ಲೋಪ್;ಗ್ರೇಡಿಯೆಂಟ್). ಪ್ರವಣತೆ ಪರ್ಯಾಯ ಪದ, ಚಿತ್ರದಲ್ಲಿ $l$ ಸರಳರೇಖೆಯು $Ox$ ನೊಡನೆ ರಚಿಸುವ ಈ ಕೋನ $a$ ಇದರ ಹೆಸರು ರೇಖೆಯ ಬಾಗು ಅಥವಾ ಇಳಿಕಲು (ಇನ್‌ಕ್ಲಿನೇಷನ್). ಈಗ $tana$ ಸರಳರೇಖೆಯ ಓಟ.




ಸರಳ ರೇಖೆಯ ವಿವಿಧ ವಿನ್ಯಾಸಗಳನ್ನು ಅನುಸರಿಸಿ αದ ಬೆಲೆ $0^0$ಯಿಂದ $180^0$ ವರೆಗೆ ಎಲ್ಲ ಬೆಲೆಗಳನ್ನು ಪಡೆಯಬಹುದು. ಆಗ $tana$ದ ಬೆಲೆ –-8ಯಿಂದ +8 ವರೆಗೆ ಸಕಲ ಬೆಲೆಗಳನ್ನೂ ಪಡೆಯುವುದು. α ಕೋನವು $0^0$ ಅಥವಾ $180^0$ಗೆ ಉಪಸಮವಾಗಿರುವಾಗ ಸರಳರೇಖೆಯ ಓಟ 0ಗೆ ಉಪಸಮವಾಗಿರುತ್ತದೆ; $90^0$ಗೆ ಉಪಸಮವಾಗಿರುವಾಗ ಓಟ–8 ಅಥವಾ +8ಗೆ ಉಪಸಮವಾಗಿರುತ್ತದೆ; αದ ಬೆಲೆಗಳು $0^0<\alpha<90^0$ ಅಂತರದಲ್ಲಿರುವಾಗ ಓಟ ಧನಾತ್ಮಕವಾಗಿಯೂ $90^0<\alpha<180^0$ ಅಂತರದಲ್ಲಿರುವಾಗ ಓಟ ಋಣಾತ್ಮಕವಾಗಿಯೂ ಇರುವುದು. ಬೀಜರೇಖಾಗಣಿತದಲ್ಲಿ ಓಟವನ್ನು m ಅಕ್ಷರದಿಂದ ಸೂಚಿಸುತ್ತಾರೆ. tana=m, P(x1,y1) ಮತ್ತು Q(x2,y2) ಎಂಬ ಎರಡು ದತ್ತ ಬಿಂದುಗಳ ಜೋಡಣೆಯಾದ $l$ ಸರಳರೇಖೆಯ ಓಟ mನ ಬೆಲೆಯನ್ನು ಮುಂದಿನ ಸಮೀಕರಣ ಕೊಡುತ್ತದೆ–

$$m = \frac{y_1 - y_2}{x_1 - x_2}$$ ಎಂದರೆ

$$\text{ಓಟ} = \frac{[\text{y–ನಿರ್ದೇಶಕಗಳ ವ್ಯತ್ಯಾಸ}]}{[\text{x–ನಿರ್ದೇಶಕಗಳ ವ್ಯತ್ಯಾಸ}]}$$

ಈಗ *l* ಸರಳರೇಖೆಯ ಸಮೀಕರಣ $y-y_1=m(x-x1)$ ಎಂದಾಗುತ್ತದೆ.

ವಕ್ರರೇಖೆಗಳಲ್ಲಿ (ಕರ್ವ್ಸ್) ಓಟದ ಪರಿಕಲ್ಪನೆ : ವಕ್ರರೇಖೆಯ ಮೇಲಣ ಒಂದು ಬಿಂದುವಿನಲ್ಲಿ ಅದಕ್ಕೆ ಎಳೆದ ಸ್ಪರ್ಶಕದ (ಟ್ಯಾಂಜೆಂಟ್) ಓಟವೇ ಆ ಬಿಂದುವಿನಲ್ಲಿ ವಕ್ರರೇಖೆಯ ಓಟ. $P(x_1-y_1)$ಬಿಂದುವಿನಲ್ಲಿ $y=f(x)$ ವಕ್ರರೇಖೆಯ ಓಟ PTಯ ಓಟವಾದ tana ಆಗಿದೆ. ಇಲ್ಲಿ PTಯನ್ನು PQ ವಿನಂಥ ಅಸಂಖ್ಯಾತ ಜ್ಯಾಗಳ ಪರಮಾ ಸ್ಥಿತಿ, ಈ ಸ್ಥಿತಿಯಲ್ಲಿ Q ಬಿಂದು ವಕ್ರರೇಖೆಯ ಮೇಲೆ ಕ್ರಮೇಣ P ಎಡೆಗೆ




ಸರಿದು ಅಂತಿಮವಾಗಿ Pಯಲ್ಲಿ ಐಕ್ಯವಾಗುವುದು ಎಂದು ಭಾವಿಸಿ ಕಲನಶಾಸ್ತ್ರದ ಪರಿಕಲ್ಪನೆಗಳನ್ನು ಬಳಸಿಕೊಳ್ಳುತ್ತೇವೆ. ಆಗ

$$tana=\left(\frac{dy}{dx}\right)_P=[f'(x)]P=f'(x_1)$$ ಎಂಬ ಸಂಬಂಧ ದೊರೆಯುತ್ತದೆ.

ಆದ್ದರಿಂದ $y=f(x)$ ವಕ್ರರೇಖೆಗೆ $(x_1-y_1)$ಬಿಂದುವಿನಲ್ಲಿ ಎಳೆದ ಸ್ಪರ್ಶಕದ ಸಮೀಕರಣ

$$y-y_1=f^1(x_1)(x-x_1)$$

ಆಗುವುದು. ವಕ್ರರೇಖೆಯ ಸಮೀಕರಣ $f(x,y)=0$ ಅಥವಾ $(x, y)=0$ ಇರುವಾಗ

$$\frac{dy}{dx}=-\left(\frac{\partial f}{\partial x}\right)\Big/\left(\frac{\partial f}{\partial y}\right)$$

ಓಟವೆಂಬ ಪರಿಕಲ್ಪನೆ ಸಮತಳ (ಎಂದರೆ ಎರಡು ಆಯಾಮಗಳು) ಜ್ಯಾಮಿತಿಗೆ ಸೀಮಿತವಾಗಿದೆ. ಮೂರು ಆಯಾಮಗಳ ಜ್ಯಾಮಿತಿಯಲ್ಲಿ ದಿಕ್ಕೋಟಿಜ್ಯಾಗಳು (ನೋಡಿ–ದಿಕ್ಕೋಟಿಜ್ಯಾಗಳು) ಎಂಬ ಹೊಸ ಪರಿಕಲ್ಪನೆಯ ಪರಿಚಯ ಅನಿವಾರ್ಯವಾಗುವುದು.

ಭೂಪಟ ರಚನೆ ಮತ್ತು ಪಠನದಲ್ಲಿ ಓಟದ ಅವಶ್ಯಕತೆ ಬೇರೆ ಒಂದು ಕಾರಣದಿಂದ ಅಗತ್ಯ ಎನ್ನಿಸುತ್ತದೆ. ನೆಲದ ಮೇಲೆ ಒಂದು ನಿರ್ದಿಷ್ಟ ಎತ್ತರದಲ್ಲಿ – ಉದಾಹರಣೆಗೆ ಸಮುದ್ರಮಟ್ಟದಿಂದ 1,000 ಅಡಿಗಳ ಎತ್ತರದಲ್ಲಿ –ಇರುವ ಎಲ್ಲ ಬಿಂದುಗಳನ್ನು ಗುರುತಿಸಬೇಕು. ಒಂದು ಬೆಟ್ಟದ ಬುಡದಲ್ಲಿ ಅಥವಾ ಪೀಠ ಭೂಮಿಯಲ್ಲಿ ಈ ಕ್ರಿಯೆಯನ್ನು ನೆರವೇರಿಸಿದರೆ ಇವೆಲ್ಲ ಬಿಂದುಗಳೂ ಒಂದು ಸಂವೃತ ವಕ್ರರೇಖೆಯನ್ನು ರಚಿಸುವುದನ್ನು ಕಾಣಬಹುದು. $C_1$ ಇಂಥ ಒಂದು ವಕ್ರರೇಖೆ. ಸಾಮಾನ್ಯವಾಗಿ ಎತ್ತರವನ್ನು 50ರ ಅಪವರ್ತ್ಯಗಳಾಗಿ ವಿಭಾಗಿಸಿ ಪ್ರತಿ 50ರ ಏರಿಕೆಯಲ್ಲಿಯೂ ಇರುವ ಬಿಂದುಗಳನ್ನು ಹೀಗೆ ಜೋಡಿಸುವುದು ವಾಡಿಕೆ. ಎತ್ತರ ಏರಿದಂತೆ ವಕ್ರರೇಖೆಗಳು ಒಂದರೊಳಗೊಂದು ಸೇರಿಕೊಂಡು ಗಿರಿಶೃಂಗದಲ್ಲಿ ಒಂದು ಬಿಂದುವೋ ಒಂದು ಬಲು ಕಿರಿಯ ಸಂವೃತ ವಕ್ರರೇಖೆಯಯೋ ದೊರೆಯಬಹುದು. ಈ ವಕ್ರರೇಖೆಗಳ ಒಟ್ಟು ಹೆಸರು ಸಮೋನ್ನತಿ ರೇಖೆಗಳು (ಕಾಟೂರ್ ಲೈನ್ಸ್).




ಭೂಪಟದಲ್ಲಿ P ಬಿಂದು 1000 ಅಡಿಗಳ ಸಮೋನ್ನತಿ ರೇಖೆಯ $(C_1)$ ಮೇಲಿದೆಯೆಂದೂ *Q* ಬಿಂದು 1400 ಅಡಿಗಳ ಸಮೋನ್ನತಿ ರೇಖೆಯ $(C_2)$ ಮೇಲಿದೆಯೆಂದೂ ಭಾವಿಸೋಣ. P*Q* ಸರಳರೇಖೆಯ ಓಟ ಎಷ್ಟು ಎಂಬುದೊಂದು ಭೌಗೋಳಿಕದ ಪ್ರಶ್ನೆ – ಸೈನ್ಯಶಿಕ್ಷಣದಲ್ಲಿ, ಶಿಲ್ಪಶಾಸ್ತ್ರದಲ್ಲಿ ಈ ಪ್ರಶ್ನೆ ಪ್ರಧಾನಪಾತ್ರ ವಹಿಸುತ್ತದೆ. ಆಗ ನಡೆಸಬೇಕಾದ ಗಣನೆಗಳಿಷ್ಟು, *Q* ಬಿಂದು ಬಿಂದುವಿನಿಂದ 400 ಅಡಿಗಳಷ್ಟು ಎತ್ತರದಲ್ಲಿದೆ. ಇದು ಅವುಗಳ ಊರ್ಧ್ವಾಂತರ (ವರ್ಟಿಕಲ್ ಇಂಟರ್ವಲ್ VI). ಇದು ಗಣನೆಯಿಂದ ತಿಳಿಯುವುದು. ಭೂಪಟದಲ್ಲಿ P*Q* ದೂರವನ್ನು ಅಳತೆಮಾಡಿ ಆ ಪಟದ ಮಾನಕದ (ಸ್ಕೇಲ್) ಅನುಸಾರ ಇದನ್ನು ವಾಸ್ತವಿಕ ದೂರಕ್ಕೆ ಪರಿವರ್ತಿಸಿ ಅದನ್ನು ಅಡಿಗಳಲ್ಲಿ ಬರೆಯಬೇಕು. 1 ಇಂಚ್ =1 ಮೈಲಿ ಮಾನಕವಿರುವ ಭೂಪಟದಲ್ಲಿ P*Q* ಅಂತರ 0.25" ಇದ್ದರೆ ವಾಸ್ತವಿಕವಾಗಿ P*Q* ಅಂತರ 1320 ಅಡಿಗಳಾಗುತ್ತವೆ. P*Q* ಅಂತರದ ಹೆಸರು ಕ್ಷಿತಿಜೀಯ ಸಮಾನಕ (ಹಾರಿಝಾಂಟಲ್ ಈಕ್ವಿವಲೆಂಟ್, HE) ಚಿತ್ರದಲ್ಲಿ PR ಈ ಬೆಲೆ ಆಗುತ್ತದೆ. ಈಗ P*Q*ವಿನ ಓಟ

$$=\frac{[VI]}{[HE]}=\frac{QR}{RP}=\frac{400}{1320}=\frac{10}{33}$$

ಈ ಬೆಲೆ ತಿಳಿದೊಡನೆಯೇ ಮುಂದಿನ ಎಂಜಿನಿಯರಿಂಗ್ ಅಥವಾ ಮಿಲಿಟರಿ ಅಥವಾ ಬೇರಾವುದೋ ಯೋಜನೆಗಳನ್ನು ಮುಂದುವರಿಸಲು ಸುಲಭವಾಗುತ್ತದೆ. *

**ಓಟ (ಭೂ ವಿಜ್ಞಾನದಲ್ಲಿ):** ಶಿಲಾ ಬಂಡೆಗಳು ಅಥವಾ ಪ್ರಸ್ತರಗಳು ನೆಲದ ಮೇಲೆ ಹರಡಿರುವ ಉದ್ದ (ಸ್ಟ್ರೈಕ್). ಜಾಡು ಪರ್ಯಾಯ ಪದ. ಇದನ್ನು ಶಿಲಾಪ್ರಸ್ತರ ಅಥವಾ ಶಿಲೆಯ ಹೊರಜಾಡು ಸಮತಲವಾದ ನೆಲಮಟ್ಟವನ್ನು ಛೇದಿಸುವ ರೇಖೆ




**ಜಾಡು ಇಳಿವೋರೆಗಳ ಚಿಹ್ನೆಗಳು: 1. ಶಿಲಾಪ್ರಸ್ತರದ ಜಾಡು ಉತ್ತರ–ದಕ್ಷಿಣವಾಗಿದ್ದು ಪಶ್ಚಿಮದತ್ತ 60° ಇಳಿವೋರೆ. 2. ಶಿಲಾಪ್ರಸ್ತರ ಮಟ್ಟಸವಾಗಿದೆ. 3. ಶಿಲಾಪ್ರಸ್ತರ ಲಂಬವಾಗಿದೆ.**

ಎಂದು ವಿವರಿಸಬಹುದು. ಪ್ರಸ್ತರಗಳು ಸಮತಟ್ಟಾಗಿರದೆ ನೆಲಮಟ್ಟದಿಂದ ಓರೆಯಾಗಿದ್ದಲ್ಲಿ ಓಟವನ್ನು ಸುಲಭವಾಗಿ ಗುರುತಿಸಬಹುದು. ಶಿಲೆಯ ಓಟ ಮತ್ತು ಓಲಿಕೆ ಪರಸ್ಪರ ಲಂಬವಾಗಿರುತ್ತವೆ. ಓಟವನ್ನು ಉತ್ತರ ದಿಕ್ಕಿಗೆ ಅನುಗುಣವಾಗಿ ಗುರುತಿಸಬೇಕು.

ಓಲಿರುವ ಶಿಲಾಪ್ರಸ್ತರಗಳನ್ನು $+60^0$ ಚಿಹ್ನೆಯಿಂದಲೂ (ಅಂದರೆ ಶಿಲೆಯ ಓಟ ಉತ್ತರ–ದಕ್ಷಿಣ ಓಲಿಕೆ $60^0$ ಎಂದರ್ಥ). ಮಟ್ಟಸವಾಗಿರುವ ಪ್ರಸ್ತರಗಳನ್ನು ⊕ ಚಿಹ್ನೆಯ ಮೂಲಕವೂ ಮತ್ತು ಊರ್ಧ್ವವಾಗಿರುವ (ವರ್ಟಿಕಲ್) ಪ್ರಸ್ತರಗಳನ್ನು † ಚಿಹ್ನೆಯಿಂದಲೂ ಗುರುತಿಸುತ್ತಾರೆ.

ಶಿಲೆಯ ಓಟವನ್ನು ಅಳೆಯಲು ಪ್ರವಣಮಾಪಕ (ಕಂಪಾಸ್ ಕ್ಲೈನೊಮೀಟರ್) ಎಂಬ ಉಪಕರಣವನ್ನು ಬಳಸಬೇಕು. ಉತ್ತರ–ದಕ್ಷಿಣ ರೇಖೆಗೆ ಅನುಗುಣವಾಗಿ ಇದನ್ನು ಅಳೆದು ನಿರ್ಧರಿಸಬೇಕು. ಉತ್ತರ–ದಕ್ಷಿಣ ಅಕ್ಷರೇಖೆಯಿಂದ ಪೂರ್ವ ಅಥವಾ ಪಶ್ಚಿಮದ ಕಡೆಗೆ ಎಷ್ಟು ಡಿಗ್ರಿ ವ್ಯತ್ಯಾಸವಿದೆ ಎಂಬ ಮೂಲಕ ಜಾಡನ್ನು ಗುರುತಿಸಬೇಕು. ಉದಾಹರಣೆಗೆ ಉ$60^0$ಪ ಅಂದರೆ ಉತ್ತರ ದಿಕ್ಕಿನಿಂದ ಪಶ್ಚಿಮದತ್ತ $60^0$ ಗಳಷ್ಟು ಸರಿದಲ್ಲಿ ಶಿಲೆಯ ಜಾಡು ಪ್ರಾರಂಭವಾಗುತ್ತದೆ ಎಂದರ್ಥ. ಇದನ್ನು ಭೂವಿಜ್ಞಾನಿಗಳು ಉ$60^0$ ಪ–ದ $60^0$ಪೂ ಎಂದು ವಿವರಿಸುತ್ತಾರೆ. ಇದನ್ನು ನಿರ್ಧರಿಸುವ ರೀತಿಯನ್ನು ಚಿತ್ರದಲ್ಲಿ ತೋರಿಸಿದೆ.



ಪ್ರಮಾಣಮಾಪಕದ ಸಹಾಯದೊಡನೆ ಶಿಲೆಯ ಜಾಡನ್ನು ನಿರ್ಧರಿಸುವ ರೀತಿ

ಪ್ರವಣಮಾಪಕದಲ್ಲಿ ಗುರುತಿಸುವ *N-S* (ಉತ್ತರ–ದಕ್ಷಿಣ) ರೇಖೆಯನ್ನು ಶಿಲಾಪ್ರಸ್ತರದ ಉದ್ದಕ್ಕೆ (ಅಗಲಕ್ಕಲ್ಲ ಎಂಬುದನ್ನು ನೆನಪಿನಲ್ಲಿಡುವುದು ಬಹು ಮುಖ್ಯ) ಸಮಾಂತರವಾಗಿಟ್ಟು ಉಪಕರಣಗಳನ್ನು ಮಟ್ಟಸವಾಗಿ ಹಿಡಿಯಬೇಕು. ಆಗ ಪ್ರವಣಮಾಪಕದ ದಿಕ್ಸೂಚಿಯ ಉತ್ತರದ ತುದಿಯಿಂದ ಮುದ್ರಿಸಿರುವ *N-S* ರೇಖೆಗೆ ಇರುವ ಅಂತರವನ್ನೂ (ಡಿಗ್ರಿಗಳಲ್ಲಿ) ದಿಕ್ಕನ್ನೂ ನಿರ್ಧರಿಸಬೇಕು. ಇದೇ ಶಿಲೆಯ ಓಟ ಅಥವಾ ಜಾಡು. (ಬಿ.ವಿ.ಜಿ.)

**ಓಟಗಳು:** ನಿಯತ ದೂರವನ್ನು ಆದಷ್ಟು ಕಡಿಮೆ ಕಾಲದಲ್ಲಿ ಕ್ರಮಿಸುವ ಒಂದು ಪಂದ್ಯಮಾದರಿ (ಟ್ರ್ಯಾಕ್ ಇವೆಂಟ್ಸ್). ಎಳೆಯುವರ ಆಟಗಳಲ್ಲಿ ಓಟವೂ ಸಹಜವಾಗಿ ಸೇರುತ್ತದೆ. ಲಗ್ಗೆ, ಕಣ್ಣಾಮುಚ್ಚಾಲೆ, ಹುಡದಿ, ಖೊಖೊ, ಗುರಿ ಚೆಂಡು ಮೊದಲಾದ ಆಟಗಳಲ್ಲಿ ಚುರುಕಿನ ಓಟ ಅಗತ್ಯ. ಹಿಂದೆ ಮಾನವ ತನ್ನ ಆತ್ಮರಕ್ಷಣೆಗಾಗಿಯೂ ಬೇಟೆಯನ್ನು ವಶಪಡಿಸಿಕೊಳ್ಳಲೂ

ಜಯಶಾಲಿ ಓಟಗಾರ ಗುರಿಯನ್ನು ಮುಟ್ಟಿದಾಗ

ವೇಗವಾಗಿ ಓಡಬೇಕಿತ್ತು. ಈಚೆಗೆ ಓಟಗಳೂ ಲೋಕವಿಖ್ಯಾತ ಪಂದ್ಯಾಟಗಳಲ್ಲಿ ಬಹು ಮುಖ್ಯಭಾಗವೆನಿಸಿವೆ. ಪ್ರಾಣಿಗಳ ಮತ್ತು ವಾಹನಗಳ ನಡುವಿನ ಪಂದ್ಯಗಳನ್ನುಳಿದು ಕೇವಲ ಮನುಷ್ಯ ಮನುಷ್ಯರ ನಡುವಣ ಓಟದ ವಿಷಯವನ್ನು ಮಾತ್ರ ಇಲ್ಲಿ ಪರಿಶೀಲಿಸಿದೆ.

ಓಟಗಳಲ್ಲಿ ಅಂತರ ಕಡಿಮೆ ಇರುವ ಓಟ, ಹೆಚ್ಚು ದೂರದ ಓಟಗಳು, ಮಜಲು ಓಟ (ರಿಲೆ ರೇಸ್) ಮತ್ತು ಮ್ಯಾರಥಾನ್ ಓಟ ಎಂಬ ಭಾಗಗಳಿವೆ. ಕಡಿಮೆ ದೂರದ ಓಟಗಳಲ್ಲಿ ಅಂದರೆ 50, 75, 100, 200, 400 ಮೀಟರ್ ದೂರದಲ್ಲಿ ಅತಿ ಹೆಚ್ಚಿನ ವೇಗದಿಂದ ಓಡಬೇಕಾಗುವುದು. ಹೆಚ್ಚು ದೂರದ ಓಟದಲ್ಲಿ ಅಂದರೆ 800, 1500, 3000, 5000, 10,000 ಮೀಟರ್ ದೂರದಲ್ಲಿ ತುಂಬ ಸಹನೆ ಅಗತ್ಯ. ಓಟ ಸಿದ್ಧಿಸಬೇಕಾದರೆ ಅದರ ಪ್ರಾರಂಭ, ನಿರ್ವಹಣೆ ಮತ್ತು ಮುಕ್ತಾಯಗಳು ಯುಕ್ತವಾಗಿರಬೇಕಾಗುತ್ತದೆ.

ಓಟಗಾರ ಜಯಶೀಲನಾಗಲು ತ್ವರಿತದ ಆರಂಭ ಅವಶ್ಯ. ಈ ಆರಂಭದಲ್ಲಿ ಎರಡು ಮುಖ್ಯ ವಿಧಾನಗಳಿವೆ; 1 ಬಂಚ, 2 ಮಧ್ಯಮ, ಸಮಾನ್ಯವಾಗಿ ಓಟದಲ್ಲಿ ಎದ್ದುನಿಂತ ಸ್ಥಿತಿಯಿಂದ ಆರಂಭ ಮಾಡುವುದಕ್ಕಿಂತ ನೆಲಕ್ಕೆ ಸಮವಾಗಿ ಬಾಗಿದ ಸ್ಥಿತಿಯಿಂದ ಆರಂಭಿಸುವುದು ಹೆಚ್ಚು ಒಳ್ಳೆಯದು.

ಓಡುವ ಮುನ್ನ ಪ್ರಾರಂಭದ ಗೆರೆಯ ಹಿಂದೆ, ಎದೆಯ ಅಂತರದಷ್ಟು ಅಗಲವಾಗಿ ನೆಲದ ಮೇಲೆ ಕೈಗಳನ್ನಿಟ್ಟು ಮೊಣಕಾಲುಗಳನ್ನೂರಿ ಬೆನ್ನನ್ನು ನೆಲಕ್ಕೆ ಸಮಾನಾಂತರವಾಗಿರಿಸಿ ಅಂಬೆಗಾಲಿಕ್ಕಬೇಕು. ತುದಿಗಾಲು ಗೆರೆಯ ಅಂಚಿನಲ್ಲಿರಬೇಕು.

ಆರಂಭದ ರೇಖೆಯ ಹಿಂದೆ ಎರಡೂ ಬದಿಗಳಲ್ಲಿ ಸಾಕಷ್ಟು ಅಂತರ ಬಿಟ್ಟು ಹೆಬ್ಬೆಟ್ಟು ಒಳಗೆ ಮತ್ತು ಉಳಿದ ಬೆರಳುಗಳು ತ್ರಿಕೋನ ಆಕಾರದ ರೀತಿಯಲ್ಲಿ ಬೆರಳುಗಳ ಆಧಾರದ ಮೇಲೆ ಕೈಗಳನ್ನೂರಬೇಕು.

ಬಂದೂಕದ ಶಬ್ದ ಅಥವಾ ಸೀಟಿಯ ಶಬ್ದ ಕೇಳಿದ ಕೂಡಲೆ ಓಡುವಾತ ಮುಂದಿನ ಕಾಲನ್ನು ಸರಳಮಾಡಿ, ಎರಡು ಪಾದಗಳ ತುದಿಯಿಂದ ನೆಲವನ್ನು ಬಲವಾಗಿ ದೂಡಿ ಕೈಗಳನ್ನು ಬೀಸುತ್ತ ಮೊಣಕೈಗಳನ್ನು ಮಡಿಸಿ ಓಡಬೇಕು. ಕೈ ಮತ್ತು ಕಾಲುಗಳ ಚಲನೆಗೆ ಅತಿ ಹೆಚ್ಚು ಶಕ್ತಿಯನ್ನು ಉಪಯೋಗಿಸಬೇಕು.

ಅತಿ ವೇಗದಿಂದ ಓಡುವಾಗ ಓಟಗಾರ ಆರಂಭ ರೇಖೆಯಿಂದ 15–20 ಮೀಟರ್ ಅಂತರದಲ್ಲಿ ತನ್ನ ಪರಮಾವಧಿ ವೇಗವನ್ನು ಮುಟ್ಟುತ್ತಾನೆ. ಈ ಅಂತರದಲ್ಲಿ ಹೆಜ್ಜೆಗಳು ಕ್ರಮವಾಗಿ ಉದ್ದವಾಗುತ್ತವೆ. ಓಡುವಾಗ ದೇಹದ ಬಾಗು $25^0$ ಇರಬೇಕು; ತೊಡೆಗಳನ್ನು ನೆಲಕ್ಕೆ ಸಮಾನಾಂತರವಾಗುವಷ್ಟು ಎತ್ತಬೇಕು. ಬೀಸಿದ ಪಾದ ಹಿಂದೆ ಕುಂಡೆಗಳಿಗೆ ತಗಲಬೇಕು.

ಜಯಶಾಲಿ ಓಟಗಾರ ಗುರಿಯನ್ನು ಮುಟ್ಟುವ ಕೆಲವೇ ಸೆಕೆಂಡುಗಳ ಮೊದಲು

ಮುಕ್ತಾಯದ ಘಟ್ಟ ಬಂದಾಗ ಹಿಂದಿನಂತೆ ಓಟವನ್ನು ಮುಂದುವರಿಸುತ್ತ ಮುಕ್ತಾಯದ ಗೆರೆಯ ಮೇಲೆ ಹಿಡಿದಿರುವ ದಾರವನ್ನು ಓಟಗಾರ ತನ್ನ ಎದೆಯಿಂದ ಮುಟ್ಟಬೇಕು.

ಓಡುವಾಗ ಯಾರೇ ಆಗಲಿ ತಮ್ಮ ಭುಜಗಳನ್ನು ಬಿಗಿ ಹಿಡಿಯಬಾರದು. ಬೆನ್ನನ್ನು ಡೊಗ (ಗೂನು) ಮಾಡಬಾರದು. ಓಡುವಾಗ ಎಡಬಲಕ್ಕಾಗಲಿ ಹಿಂದಕ್ಕಾಗಲಿ ನೋಡಬಾರದು. ನೇರ ಗುರಿಯಕಡೆಗೆ ಮುಖಮಾಡಿ ಓಡಬೇಕು.

ದೂರದ ಓಟಗಳಲ್ಲಿ ಭಾಗವಹಿಸುವಾಗ ಮಧ್ಯ ಅಂತರಗಳಲ್ಲಿ ಓಟದ ವೇಗವನ್ನು ಸಮಯಕ್ಕೆ ತಕ್ಕಂತೆ ಕಡಿಮೆ, ಹೆಚ್ಚು ಮಾಡಿಕೊಂಡು ಕೊನೆಯ ವೇಳೆಯಲ್ಲಿ 100 ಅಥವಾ 200 ಮೀಟರ್ ಇರುವಾಗ ವೇಗ ಓಟಗಳ ನಿಯಮದಂತೆ ಮುಕ್ತಾಯ ಮಾಡಬೇಕು.

**ಮಜಲು ಓಟ:** ಇವು 4 X 50 ಮೀ. 4 X 100 ಮೀ. 4 X 400 ಮೀ.ಗಳಲ್ಲಿರುತ್ತದೆ. ಈ ಓಟದ ಸ್ಪರ್ಧೆಯಲ್ಲಿ ವೇಗವಾಗಿ ಓಡುವ 4 ಓಟಗಾರರಿರಬೇಕು. ಜೊತೆಗೆ ದಂಡವನ್ನು (ಬ್ಯಾಟನ್) ಬದಲಿಸುವ ರೂಢಿ ಇರಬೇಕು. ಬದಲಾಯಿಸುವದರಲ್ಲಿ ಎರಡು ರೀತಿಗಳಿವೆ. 1. ನೋಡುತ್ತ ಬದಲಿಸುವುದು, 2. ನೋಡದೆ ಬದಲಿಸುವುದು. ಈ ದಂಡ ಬದಲಾವಣೆ ಗೊತ್ತಾದ ಅಂತರದೊಳಗೇ ಆಗಬೇಕಾದುದರಿಂದ ಆ ಗುಂಪಿನವರು ತಮ್ಮ ಪಕ್ಷ ಪಟು ಗೊತ್ತಾದ ಗುರುತನ್ನು ದಾಟಿದ ತತ್‌ಕ್ಷಣವೇ ಮುಂದೆ ಮುಖ ಹೊರಳಿಸಿ, ಸಾಧ್ಯವಾದಷ್ಟು ವೇಗದಿಂದ ಓಡಬೇಕು. ತನ್ನ ಬಲಗೈಯನ್ನು ಮೇಲೆ ಮಾಡಿ ಅಂಗೈಯನ್ನು ಚಾಚಿ ಓಡಬೇಕು. ಆಗ್ಗೆ ತನ್ನ ಪಕ್ಷದ ಓಟಗಾರ ತಂದ ದಂಡವನ್ನು ಚಾಚಿ ಬಲಗೈಯಲ್ಲಿ ಇಡುವನು. ಅನಂತರ ಆ ದಂಡವನ್ನು ಹಿಡಿದು ಓಡಬೇಕು.

ಮಜಲುಗಳ ಉದ್ದಳತೆಯನ್ನು ತೋರಿಸಲು ಮತ್ತು ಪ್ರಾರಂಭದ ರೇಖೆಯನ್ನು ತೋರಿಸಲು, ಸುಣ್ಣದ ಗೆರೆಗಳನ್ನು ಹಾಕಬೇಕು. ಮತ್ತು ಮಜಲಿನ ಪ್ರಾರಂಭರೇಖೆಯ ಹಿಂದೆ ಅಥವಾ ಮುಂದೆ 10 ಮೀ ಅಂತರದ ಮೇಲೆ ಬದಲಿಸುವ ಪ್ರದೇಶವನ್ನು ಬಣ್ಣದ ರಂಗೋಲಿಯಿಂದ ಗುರ್ತಿಸಬಹುದು. ಅಲ್ಲದೆ ಓಡುವ ಹಾದಿ 24 ಅಡಿ (7,32 ಮೀ) ಇರಬೇಕು; ಓಣಿಗಳು 4 ಅಡಿ ಅಗಲವಿರಬೇಕು.

**ಮ್ಯಾರಥಾನ್ ಓಟ:** ಓಡುವ ದೂರ 42,195 ಮೀ. ಅಥವಾ 26 ಮೈಲಿ 385 ಗಜವಿರುತ್ತದೆ. ಸಾಮಾನ್ಯವಾಗಿ ಈ ಪಂದ್ಯ ಕಠಿಣವಾದ ದೊಡ್ಡ ರಸ್ತೆಗಳಲ್ಲಿ ನಡೆಯುತ್ತದೆ. ಬಹುದೂರ ಓಡಬೇಕಾದ್ದರಿಂದ ಓಡುವಾತ ವೈದ್ಯರ ಸಲಹೆಯನ್ನು ಪಡೆದಿರಬೇಕಲ್ಲದೆ ಅರ್ಹತಾ ಪತ್ರವನ್ನೂ ಹೊಂದಿರಬೇಕು. ಈತನಿಗೆ ಮಧ್ಯದಲ್ಲಿ 11 ಕಿಮೀ ಅಥವಾ 7 ಮೈಲಿ ಆದ ಅನಂತರ ಕುಡಿಯಲು ನಿಯಮಕ್ಕನುಸಾರವಾಗಿ ಪಾನೀಯಗಳನ್ನು ಕೊಡಬಹುದು.

ಓಟಪಂದ್ಯದ ವಿಕ್ರಮಗಳು

ಪುರುಷರಿಗೆ

| ಪಂದ್ಯದ ವಿವರಗಳು | ಮೈಸೂರು | ಭಾರತ | ಏಷ್ಯ | ವಿಶ್ವ |
|---|---|---|---|---|
| 100 ಮೀ. ಓಟ ... | 10.5 ಸೆ. | 10.4 ಸೆ. | 10.4 ಸೆ. | 9.9 ಸೆ. |
| 200 ಮೀ. ಓಟ ... | 21.1 ಸೆ. | 20.8 ಸೆ. | 21.3 ಸೆ. | 19.8 ಸೆ. |
| 400 ಮೀ. ಓಟ ... | 48.4 ಸೆ. | 45.6 ಸೆ. | 46.6 ಸೆ. | 43.8 ಸೆ. |
| 800 ಮೀ. ಓಟ ... | 1 ಮಿ. 57.4 ಸೆ. | 1 ಮಿ. 49.4 ಸೆ. | 1 ಮಿ. 49.4 ಸೆ. | 1 ಮಿ. 44.3 ಸೆ. |
| 1,500 ಮೀ. ಓಟ ... | 3 ಮಿ. 59.3 ಸೆ. | 3 ಮಿ. 43.7 ಸೆ. | 3 ಮಿ. 47.3 ಸೆ. | 3 ಮಿ. 33.1 ಸೆ. |
| 5,000 ಮೀ. ಓಟ ... | 15 ಮಿ. 6.0 ಸೆ. | 14 ಮಿ. 24.6 ಸೆ. | 14 ಮಿ.22.0 ಸೆ. | 13 ಮಿ.16.6 ಸೆ. |
| 10,000 ಮೀ. ಓಟ ... | 32 ಮಿ. 1.2 ಸೆ. | 29 ಮಿ. 34.0 ಸೆ. | 30 ಮಿ.21.4 ಸೆ. | 27ಮಿ. 39.4 ಸೆ. |
| 3,000 ಮೀ. ಸ್ಟೀಪಲ್ ಓಟ ... | 10 ಮಿ. 0.3 ಸೆ. | 8 ಮಿ. 53.4 ಸೆ. | 8 ಮಿ. 53.6 ಸೆ. | 8 ಮಿ. 24.6 ಸೆ. |
| ಮ್ಯಾರಥಾನ್ ಓಟ ... | 2 ಗಂ.31 ಮಿ.4.8 ಸೆ. | 2 ಗಂ. 20 ಮಿ. 26.4 ಸೆ. | 2 ಗಂ. 32 ಮಿ. 55.0 ಸೆ. | 2 ಗಂ. 12 ಮಿ. 11.2 ಸೆ. |
| 110 ಮೀ. ತಡಕೆ ಓಟ ... | 15.5 ಸೆ. | 14.0 ಸೆ. | 14.3 ಸೆ. | 13.2 ಸೆ. |
| 400 ಮೀ. ತಡಕೆ ಓಟ ... | 55.9 ಸೆ. | 52.2 ಸೆ. | 51.7 ಸೆ. | 48.1 ಸೆ. |
| 4 x 100 ಮೀ. ಮಜಲು ಓಟ ... | 42.3 ಸೆ. | 40.5 ಸೆ. | 40.6 ಸೆ. | 38.2 ಸೆ. |
| 4 x 400 ಮೀ. ಮಜಲು ಓಟ ... | 3 ಮಿ. 27.5 ಸೆ. | 3 ಮಿ. 8.8 ಸೆ. | 3 ಮಿ. 9.1 ಸೆ. | 2 ಮಿ. 56.1 ಸೆ. |

ಸ್ತ್ರೀಯರಿಗೆ

| ಪಂದ್ಯದ ವಿವರಗಳು | ಮೈಸೂರು | ಭಾರತ | ಏಷ್ಯ | ವಿಶ್ವ |
|---|---|---|---|---|
| 100 ಮೀ. ಓಟ ... | 12.4 ಸೆ. | 12.2 ಸೆ. | 11.8 ಸೆ. | 11.0 ಸೆ. |
| 200 ಮೀ. ಓಟ ... | 26.3 ಸೆ. | 25.3 ಸೆ. | 24.4 ಸೆ. | 22.5 ಸೆ. |
| 400 ಮೀ. ಓಟ ... | 61.1 ಸೆ. | 58.1 ಸೆ. | 56.3 ಸೆ. | 51.9 ಸೆ. |
| 800 ಮೀ. ಓಟ ... | 2 ಮಿ. 29.5 ಸೆ. | 2 ಮಿ. 17.4 ಸೆ. | 2 ಮಿ. 10.5 ಸೆ. | 2 ಮಿ. 0.5 ಸೆ. |
| 80 ಮೀ. ತಡಕೆ ಓಟ ... | 12.0 ಸೆ. | 11.2 ಸೆ. | 11.2 ಸೆ. | 10.3 ಸೆ. |
| 4x400ಮೀ.ಮಜಲು ಓಟ ... | 52.0 ಸೆ. | 49.4 ಸೆ. | 47.1 ಸೆ. | 42.8 ಸೆ. |

**ತಡಕೆ ಓಟ:** ಈ ಓಟದಲ್ಲಿ ಮಹಿಳೆಯರಿಗೆ 80 ಮೀ ಅಥವಾ 100 ಮೀ ಪುರುಷರಿಗೆ 100 ಮೀ ಅಥವಾ 400 ಮೀಗಳಲ್ಲಿ ಓಟವಿದೆ. ನಿಯತ ಸ್ಥಳಗಳಲ್ಲಿ ಎತ್ತರದ ತಡೆಗಳನ್ನು ಅಂದರೆ ಆತಂಕಗಳನ್ನು ದಾರಿಯುದ್ದಕ್ಕೂ ಇಟ್ಟಿರುತ್ತಾರೆ. ಓಡುವವ ಅವನ್ನು ದಾಟಿ ಹೋಗಬೇಕು. ಅಕ್ಕಪಕ್ಕದಿಂದಾಗಲಿ, ಕೆಳಗೆ ನುಸಿದಾಗಲೀ ಹೋಗುವಂತಿಲ್ಲ.

(ಬಿ.ಎಲ್.ಆರ್)

**ಒಟ್ಟೋ ಆವರ್ತ:** ಉಷ್ಣಚಲನಾವಿಜ್ಞಾನದ ಸೈದ್ಧಾಂತಿಕ ಆವರ್ತ (ಒಟ್ಟೋ ಸೈಕಲ್). ಕಿಡಿ ಪ್ರಜ್ವಲಿತ (ಸ್ಪಾರ್ಕ್ ಇಗ್ನಿಷನ್) ಪೆಟ್ರೋಲ್ ಎಂಜಿನುಗಳ ಕ್ರಿಯೆ ಇದರ ಮೇಲೆ ಅವಲಂಬಿಸಿದೆ; ಮತ್ತು ಆ ಎಂಜಿನುಗಳನ್ನು ತುಲನೆ ಮಾಡಲು ಆವರ್ತದ ದಕ್ಷತೆಯನ್ನು (ಎಫಿಶಿಯನ್ಸಿ) ಒಂದು ಮಾನಕವಾಗಿ ಆರಿಸಲಾಗಿದೆ. ಆವರ್ತದ ಕ್ರಿಯಾವಿಧಿ ಹೀಗಿದೆ–ಉಷ್ಣಾಪಾರಕ ಸಂಪೀಡನ (ಏಡಿಯಾಬೆಟಿಕ್ ಕಂಪ್ರೆಶನ್), ಸ್ಥಿರಘನಗಾತ್ರ ಉಷ್ಣವಿಸರ್ಜನೆ. ಈ ಆವರ್ತದ ಯಶಸ್ವೀ ಪ್ರಥಮ ಪ್ರಯೋಗ ಮಾಡಿದವ ಒಟ್ಟೋ (1876).

ಲ್ಯೂನ್ವಾರ್ ಎಂಜಿನಿನ ಪರಿಶೋಧನೆಯ (1859) ತರುವಾಯ ಅದರ ದಕ್ಷತೆಯನ್ನು ವರ್ಧಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಯಿತು. ಈ ದಿಶೆಯಲ್ಲಿ ನಡೆಸಿದ ಸೈದ್ಧಾಂತಿಕ ಪರೀಕ್ಷೆಗಳ ಫಲಿತಾಂಶಗಳನ್ನು 1862ರಲ್ಲಿ ಪ್ರಕಟಿಸಿದರು. ಇವುಗಳ ಪ್ರಕಾರ ಉರುಳೆಯೊಳಗೆ (ಸಿಲಿಂಡರ್) ಆಸ್ಫೋಟನೆಗಳು ಹಾಗೂ ಕೊಂತದ (ಪಿಸ್ಟನ್) ನಾಲ್ಕು ಚಲನೆಗಳು–ಇವುಗಳ ಸಮಗ್ರ ಪರಿಣಾಮ ಯಶಸ್ವಿಯಾಗಬಲ್ಲುದೆಂದು ವೇದ್ಯವಾಯಿತು. ಕೊಂತ ಹೊರಮುಖವಾಗಿ ಚಲಿಸಿದಂತೆ (ಮೊದಲನೆ ಚಲನೆ) ಅನಿಲ ಮತ್ತು ಗಾಳಿಯ ಒಂದು ಮಿಶ್ರಣ ಉರುಳೆಯೊಳಗೆ ಸೆಳೆಯಲ್ಪಡುವುದು. ಕೊಂತ ಒಳಕ್ಕೆ ಚಲಿಸಿದಂತೆ (ಎರಡನೆ ಚಲನೆ) ಮಿಶ್ರಣ ಸಂಪೀಡನಗೊಳ್ಳುತ್ತದೆ. ಸಂಪೀಡನ ಗರಿಷ್ಠಮಿತಿ ತಲಪಿದಾಗ ಒಂದು ಕಿಡಿ ಆಸ್ಫೋಟನೆಯನ್ನು ಪ್ರಜ್ವಲಿಸುವುದು. ಇದರಿಂದ ಕೊಂತ ಹೊರತಳ್ಳಲ್ಪಡುತ್ತದೆ. (ಮೂರನೆಯ ಚಲನೆ ಮತ್ತು ಸಾಮರ್ಥ್ಯಘಾತ). ಮತ್ತೆ ಕೊಂತ ಒಳಚಲಿಸಿದಾಗ (ನಾಲ್ಕನೆಯ ಚಲನೆ) ನಿಷ್ಕಾಸಾನಿಲಗಳು ವಿಸರ್ಜಿತವಾಗುತ್ತವೆ. ಈ ಆವರ್ತ ಮುಂದೆ ಪುನರಾವರ್ತನೆಗೊಳ್ಳುತ್ತದೆ. ಇಂಥ ಒಂದು ಅಂತರ್ದಹನ ಎಂಜಿನನ್ನು ಮೊದಲು ಆವಿಷ್ಕರಿಸಿದವ ಒಟ್ಟೋ (1876). ಈ ಕಾರಣದಿಂದ ಒಟ್ಟೋ ಆವರ್ತವೆಂದೇ ಕ್ರಿಯೆಗೆ ಹೆಸರು ಬಂದಿದೆ.

ಉಷ್ಣ ಮತ್ತು ಕಾರ್ಯ ಶಕ್ತಿಯ ರೂಪಗಳು. ಉಷ್ಣವನ್ನು ಕಾರ್ಯವಾಗಿ ಮಾರ್ಪಡಿಸುವ ಸಾಧನಗಳಿಗೆ ಉಷ್ಣ ಎಂಜಿನುಗಳೆಂದು ಹೆಸರು. ಅಂತರ್ದಹನ ಎಂಜಿನುಗಳು ಈ ಜಾತಿಯವು. ಇವುಗಳಲ್ಲಿ ಇಂಧನ ಮತ್ತು ಗಾಳಿಯ ಮಿಶ್ರಣದ ದಹನದಿಂದ ಉಷ್ಣ ಅನಿಲಗಳು ಉತ್ಪತ್ತಿಯಾಗುತ್ತವೆ. ಇವು ಕೊಂತದ ಮೇಲೆ ಬಲ ಹೇರುವುದರಿಂದ ಕೊಂತ ಚಲಿಸಿ ಸಾಮರ್ಥ್ಯ (ಪವರ್) ಉತ್ಪತ್ತಿಯಾಗುತ್ತದೆ. ಎಂಜಿನುಗಳಲ್ಲಿ ಉಷ್ಣವು ಸಾಮರ್ಥ್ಯವಾಗಿ ಮಾರ್ಪಡಲು ನಿರ್ದಿಷ್ಟ ಕ್ರಿಯೆಗಳಾಗಬೇಕು. ಸತತವಾಗಿ ಸಾಮರ್ಥ್ಯ ಉತ್ಪಾದನೆಯಾಗಲು ಇವು ಮತ್ತೆ ಮತ್ತೆ ನಡೆಯಬೇಕು. ಹೀಗೆ ಒಮ್ಮೆ ನಡೆದ ಕ್ರಿಯೆಗಳೇ ಮತ್ತೆ ಮತ್ತೆ ಅದೇ ಕ್ರಮದಲ್ಲಿ ನಡೆದರೆ ಅದು ಆವರ್ತ ಎನಿಸಿಕೊಳ್ಳುತ್ತದೆ.

**ಓಟೋ ಆವರ್ತವನ್ನು ಉಪಯೋಗಿಸುವ ಎಂಜಿನುಗಳು:** ಎಂಜಿನಿನ ಮುಖ್ಯಭಾಗ ಉರುಳೆ, ಇದರೊಳಗೆ ಕೊಂತ ಪ್ರತ್ಯಾಗಮನಿಯಾಗಿ (ರೆಸಿಪ್ರೋಕಲ್) ಚಲಿಸುತ್ತದೆ. ವಕ್ರದಂಡಕ್ಕೆ (ಕ್ರ್ಯಾಂಕ್ ಷಾಫ್ಟ್) ಕೂಡು ಸರಳಿನ (ಕನೆಕ್ಟಿಂಗ್ ರಾಡ್) ಮೂಲಕ ಇದನ್ನು ಜೋಡಿಸಲಾಗಿದೆ. ಈ ಜೋಡಣೆಯಿಂದ ಕೊಂತದ ಪ್ರತ್ಯಾಗಮನ ಚಲನೆ ವಕ್ರದಂಡದ ಆವರ್ತನ ಚಲನೆಯಾಗಿ (ರೊಟೇಟರಿ ಮೋಷನ್) ಮಾರ್ಪಡುತ್ತದೆ. ಕೊಂತದ ಚಲನೆಯಲ್ಲಿ ಅದು ಎರಡೂ ದಿಕ್ಕುಗಳಲ್ಲಿ ಮುಟ್ಟುವ ತುತ್ತತುದಿಗಳಿಗೆ ನಿಶ್ಚಲ ಬಿಂದುಗಳೆಂದು (ಡೆಡ್‌ಸೆಂಟರ್ಸ್) ಹೆಸರು. ಒಂದು ನಿಶ್ಚಲ ಬಿಂದುವಿನಿಂದ ಇನ್ನೊಂದಕ್ಕೆ ಕೊಂತ ಚಲಿಸುವುದಕ್ಕೆ ಘಾತ (ಸ್ಟ್ರೋಕ್) ಎನ್ನುತ್ತಾರೆ. ಉರುಳೆಯ ಶೀರ್ಷ ಭಾಗದಲ್ಲಿ (ಕವರ್) ಎರಡು ಕವಾಟಗಳುಂಟು (ವಾಲ್ವ್ಸ್). ಕೊಂತದ ಚಲನೆಯನ್ನನುಸರಿಸಿ ಅವು ಮುಚ್ಚಿ ತೆರೆಯುತ್ತವೆ. ಉರುಳೆಯಲ್ಲಿ ಇಂಧನ ಮತ್ತು ಗಾಳಿಯ ಮಿಶ್ರಣವನ್ನು ಹೊತ್ತಿಸಲು ಬೇಕಾಗುವ ಕಿಡಿಯನ್ನು ಕಿಡಿಬೆಣೆ (ಸ್ಪಾರ್ಕ್‌ಪ್ಲಗ್) ಉತ್ಪಾದಿಸುತ್ತದೆ. ಇಂಧನ ಮತ್ತು ಗಾಳಿಯನ್ನು ಸರಿಯಾದ ಪ್ರಮಾಣದಲ್ಲಿ ಸೇರಿಸಿ ಕಾರ್ಬುರೇಟರ್ ಎಂಬ ಭಾಗ ಉರುಳೆಗೆ ಸರಬರಾಜು ಮಾಡುತ್ತದೆ. ಸಾಮರ್ಥ್ಯವನ್ನು ಉತ್ಪಾದಿಸಲು ಎಂಜಿನು ಆವರ್ತಗಳಲ್ಲಿ ಕ್ರಿಯೆ ನಡೆಸುತ್ತದೆ ಎಂದು ಈಗಾಗಲೇ ಹೇಳಿದೆ. ಒಂದು ಆವರ್ತವನ್ನು ಪೂರ್ಣಗೊಳಿಸಲು ಕೊಂತ ನಾಲ್ಕು ಘಾತಗಳನ್ನು ಮಾಡಿದರೆ ಅಥವಾ ವಕ್ರದಂಡ ಎರಡು ಪರಿಭ್ರಮಣೆ (ರಿವೊಲ್ಯೂಷನ್) ಮಾಡಿದರೆ ಅದಕ್ಕೆ ನಾಲ್ಕು ಘಾತಗಳ ಆವರ್ತ ಎಂಜಿನು ಎಂದು ಹೆಸರು. ಕೊಂತದ ಎರಡು ಘಾತುಗಳಿಂದಲೇ ಅಥವಾ ವಕ್ರದಂಡದ ಒಂದು ಪರಿಭ್ರಮಣೆಯಿಂದಲೇ ಆವರ್ತ ಪೂರ್ಣಗೊಂಡರೆ ಅದಕ್ಕೆ ಎರಡು ಘಾತಕಗಳ ಆವರ್ತ ಎಂಜಿನೆಂದು ಹೆಸರು. **(ನೋಡಿ– ಎಂಜಿನ್)** (ಕೆ.ಆರ್.ಎಂ.ಬಿ.)

**ಒಡೊಂಟಾರ್ನಿಥಿಸ್:** ಆರ್ಕಿಯಾಪ್ಟೆರಿಕ್ಸ್, ಹೆಸ್ಪೆರಾರ್ನಿಸ್ ಮತ್ತು ಇಕ್ಥಿಯಾರ್ನಿಸ್ ಎಂಬ ಮೂರು ಲುಪ್ತವಂಶಿ ಪಕ್ಷಿಗಳ ಗಣಕ್ಕೆ ಮಾರ್ಷ್ ಎಂಬುವನು 1880ರಲ್ಲಿ ಮೊದಲು ಬಳಸಿದ ಹೆಸರು. ಈತ ಕೊನೆಯ ಎರಡು ಪಕ್ಷಿಗಳ ಪಳೆಯುಳಿಕೆಗಳನ್ನು ಕಂಡುಹಿಡಿದು ಇವು ಮೂರೂ ಬೇರೆ ಬೇರೆ ಉಪಗಣಗಳಿಗೆ ಸೇರಿದವೆಂದು ಸೂಚಿಸಿದ. ಆದರೆ ಈ ವರ್ಗೀಕರಣವನ್ನು ಈಗ ಕೈಬಿಡಲಾಗಿದೆ. ಬದಲು ಜುರಾಸಿಕ್ ಯುಗದ ಆರ್ಕಿಯಾಪ್ಟೆರಿಕ್ಸ್ ಪಕ್ಷಿ ಆರ್ಕಿಯಾರ್ನಿಥಿಸ್ ಉಪವರ್ಗಕ್ಕೂ ಕ್ರಿಟೇಷಸ್ ಯುಗದ ಉಳಿದವೆರಡು ನಿಯಾರ್ನಿಥಿಸ್ ಉಪವರ್ಗಕ್ಕೂ ಸೇರಿದವೆಂದು ಭಾವಿಸಲಾಗಿದೆ. ಪಳೆಯುಳಿಕೆಗಳನ್ನು ಮಾತ್ರ ಬಿಟ್ಟಿರುವ ಈ ಮೂರು ವಿವಿಧ ಪಕ್ಷಿಗಳು ನಿಸರ್ಗದ ಒಂದು ಅಪೂರ್ವ ಕಾಣಿಕೆಯೆಂದು ಪಕ್ಷಿವಿಜ್ಞಾನಿಗಳು ತಿಳಿದಿದ್ದಾರೆ. ಇವುಗಳಿಗೆ ಕೊಕ್ಕು ಇದೆ; ಆದರೆ ಬಾಯಲ್ಲಿ ಹಲ್ಲಿರುವುದು ಒಂದು ವಿಶೇಷ; ಮುಂಗೈ ಮಾರ್ಪಾಟಾಗಿ ರೆಕ್ಕೆಯಾಗಿರುವುದಲ್ಲದೆ ರೆಕ್ಕೆಯಲ್ಲಿ ಕೈಬೆರಳುಗಳೂ ಉಗುರೂ ಇರುವುದು ಒಂದು ಕೌತುಕದ ವಿಷಯ. ಬಾಲದ ಭಾಗ ಉದ್ದವಾಗಿದ್ದು ಅದರ ಎರಡೂ ಕಡೆ ಗರಿಗಳಿವೆ. ಈ ವೈಚಿತ್ರ್ಯವನ್ನು ಊಹಿಸಿದಾಗ ನಮಗೆ ಅರಿವಾಗುವುದು ಇವು ಅರ್ಧ ಉರಗ ಅರ್ಧ ಪಕ್ಷಿಗಳೆಂದು. ಇದರಿಂದಾಗಿ ಯಾವುದೊ ಒಂದು ಜಾತಿಯ ಉರಗ ಕಾಲಕ್ರಮದಲ್ಲಿ ಪಕ್ಷಿಯಾಗಿ ವಿಕಾಸ ಹೊಂದಿತು ಎಂಬ ಸಿದ್ಧಾಂತಕ್ಕೆ ಜೀವ ವಿಕಾಸ ವಿಜ್ಞಾನಿಗಳು ಬಂದಿರುತ್ತಾರೆ. (ನೋಡಿ– ಆರ್ಕಿಯಾಪ್ಟೆರಿಕ್ಸ್) (ಜಿ.ಎಂ.ಬಿ.)

**ಒಡೊನೇಟ:** ಕೊಡತಿಕೀಟ (ಡ್ರೇಗನ್ ಫ್ಲೈ), ಕನ್ಯಾಕೀಟ (ಡ್ಯಾಮ್ಸೆಲ್ ಫ್ಲೈ) ಮುಂತಾದ ಕೀಟಗಳನ್ನೊಳಗೊಂಡ ಒಂದು ಗಣ. ಇದರಲ್ಲಿ ಮೂರು ಉಪಗಣಗಳಿವೆ; 1 ಅನ್ಯೆಸಾಪ್ಟಿರ, 2 ಜೈಗಾಪ್ಟಿರ, 3 ಅನ್ಯೆಸೊಜೈಗಾಪ್ಟಿರ.

ಅನ್ಯೆಸಾಪ್ಟೆರ ಉಪಗಣಕ್ಕೆ ಸೇರಿದ ಸುಮಾರು 1000 ಬೇರೆ ಬೇರೆ ಜಾತಿಯ ಕೀಟಗಳಿಗೆ ಸಾಮಾನ್ಯವಾಗಿ ಕೊಡತಿಹುಳು ಎಂಬ ಹೆಸರನ್ನು ಬಳಸುವುದುಂಟು. ಇನ್ನೊಂದು ಉಪಗಣವಾದ ಜೈಗಾಪ್ಟೆರಕ್ಕೆ ಸೇರಿದ ಕೀಟಗಳನ್ನು ಕನ್ಯಾಕೀಟಗಳೆಂದು ಕರೆಯುತ್ತಾರೆ. ಎರಡು ಗುಂಪಿನವು ಕೊಳ, ಕೆರೆ, ಹಳ್ಳಗಳ ಅಂಚಿನಲ್ಲಿ ಹಾರಾಡುವ ಸುಂದರ ಕೀಟಗಳು. ತಲೆ ದಪ್ಪ; ಅದರ ಇಕ್ಕೆಲಗಳಲ್ಲೂ ದೊಡ್ಡ ಹೊಳೆಯುವ ಕಣ್ಣುಗಳಿವೆ. ಎದೆ ದಪ್ಪ ಮತ್ತು ದೃಢವಾಗಿದೆ. ಹೊಟ್ಟೆ ನೀಳವಾಗಿದೆ. ಇದು 10 ಖಂಡಗಳಾಗಿ ವಿಭಾಗವಾಗಿದೆ. ಕಾಲುಗಳು ಆರು, ಸಮರೂಪದ ನಾಲ್ಕು ತೆಳುವಾದ ರೆಕ್ಕೆಗಳಿವೆ. ವಿಶ್ರಾಂತ ಸ್ಥಿತಿಯಲ್ಲಿ ಕೊಡತಿ ಕೀಟಗಳಲ್ಲಿ ರೆಕ್ಕೆಗಳು ಅಗಲವಾಗಿ ಹರಡಿಕೊಂಡಿರುತ್ತವೆ. ಆದರೆ ಕನ್ಯಾಕೀಟಗಳಲ್ಲಿ ಅವು ಜೊತೆಗೂಡಿರುತ್ತವೆ.

ಕೊಡತಿ ಮತ್ತು ಕನ್ಯಾಕೀಟಗಳ ಆಹಾರ ಸೊಳ್ಳೆಮರಿಗಳು ಹಾಗೂ ನೀರಿನಲ್ಲಿ ವಾಸಿಸುವ ಇತರ ಸಣ್ಣಪುಟ್ಟ ಕೀಟಗಳು. ಆದ್ದರಿಂದ ಸೊಳ್ಳೆಗಳ ನಿಯಂತ್ರಣದಲ್ಲಿ ಇವು ಬಹಳ ಸಹಕಾರಿಯಾಗಿವೆ.

ಮೊಟ್ಟೆಗಳ ಮೂಲಕ ಸಂತಾನಾಭಿವೃದ್ಧಿ, ಹೆಣ್ಣುಕೀಟ ಮೊಟ್ಟೆಗಳನ್ನು ನೀರಿನಲ್ಲಿ ಅಥವಾ ಅದರ ಬಳಿ ಇಡುತ್ತದೆ. ಮೊಟ್ಟೆಯೊಡೆದು ಹೊರಬರುವ ಡಿಂಬ ಸಂಪೂರ್ಣ ಜಲವಾಸಿ, ಪ್ರೋಟೋಜೋವ ಗುಂಪಿನ ಜೀವಿಗಳೂ ಸಣ್ಣ ಸಣ್ಣ ಕೀಟಗಳೂ ಸೊಳ್ಳೆಮರಿಗಳೂ ಇದಕ್ಕೆ ಆಹಾರ. ಡಿಂಬದಿಂದ ರೂಪಾಂತರಣಗೊಳ್ಳಲು ಸುಮಾರು ಒಂದರಿಂದ ನಾಲ್ಕು ವರ್ಷಗಳು ತೆಗೆದುಕೊಳ್ಳುವುದು.

ಮೂರನೆಯ ಉಪಗಣವಾದ ಅನ್ಯೆಸೊಜೈಗಾಪ್ಟೆರದಲ್ಲಿ ಕೇವಲ ಎರಡು ಪ್ರಭೇದಗಳಿವೆ **(ನೋಡಿ– ಕನ್ಯಾಕೀಟ; ಕೊಡತಿಕೀಟ).** (ಜಿ.ಪಿ.ಸಿ.)

**ಒಡೋವೇಸರ್:** 433–93 ಇಟಲಿಯ ಮೊದಲನೆಯ ಗ್ರೀಕ್ ರೋಮನ್ನೇತರ (ಬರ್ಬರ) ದೊರೆ; ಇಡಿಕೊವಿನ ಮಗ, ಡ್ಯಾನ್ಯೂಬ್ ನದಿಯ ಸಮೀಪದಲ್ಲಿ ಹುಟ್ಟಿದ. ಅಂತೂ ಈತ ಜರ್ಮನ್, ಈತ ಸ್ಕಿರಿಗಳ ಜೊತೆಯಲ್ಲಿ ಇಟಲಿಗೆ ಬಂದು ಚಕ್ರವರ್ತಿ ಅಮತಿಮಿಯಸನ ಸೇವೆಗೆ ಸೇರಿ ಬೇಗ ಮುಂದೆ ಬಂದ. ಇವನ ಜೊತೆಗಾರರು ಅಂತಿಮಿಯಸನನ್ನು ಗಾಡಿಯಿಂದಿಳಿಸಲು ರಿಸಿಮರ್‌ಗೆ ನೆರವು ನೀಡಿದರು. ಚಕ್ರವರ್ತಿ ಜ್ಯೂಲಿಯಸ್ ನೀಪಾಸನನ್ನು ಪದಚ್ಯುತಿಗೊಳಿಸುವುದಕ್ಕೂ ಅವರು ಒರಿಸ್ಟಿಸ್‌ಗೆ ಬೆಂಬಲವಾಗಿ ನಿಂತರು. ಇದಕ್ಕೆ ಬಹುಮಾನವಾಗಿ ಆತ ರೋಮನ್ ಪ್ರಭುತ್ವದ ಜಮೀನಿನಲ್ಲಿ ಒಂದು ಭಾಗವನ್ನು ಅವರಿಗೆ ಕೊಡುವುದಾಗಿ ವಾಗ್ದಾನ ಮಾಡಿದ. ಆದರೆ ಕೊಟ್ಟ ಮಾತಿಗೆ ಒರಿಸ್ಟಿಸ್ ತಪ್ಪಿ ನಡೆದಾಗ ಅವರು ಒಡೋವೇಸರನ ನಾಯಕತ್ವದಲ್ಲಿ ದಂಗೆಯೆದ್ದರು. ಒರಿಸ್ಟಿಸ್ ಪಾವಿಯ ಪ್ರದೇಶದ ಟೆಸಿನಂನಲ್ಲಿ ತಲೆಮರೆಸಿಕೊಂಡ. ಒಡೋವೇಸರ್ ಅದರ ಮೇಲೆ ದಾಳಿಯಿಟ್ಟು ಒರಿಸಿಸನನ್ನು ಹಿಡಿದು ಕೊಂದ (476); ಒರಿಸ್ಟಿಸನ ಮಗನೂ ಪಶ್ಚಿಮದ ಕೊಟ್ಟಕೊನೆಯ ರೋಮನ್ ಚಕ್ರವರ್ತಿಯೂ ಆದ ರಾಮ್ಯುಲಸ್ ಆಗಸ್ಟ್ಯುಲಸನನ್ನು ಪದಚ್ಯುತಿಗೊಳಿಸಿ ಆತ ಕ್ಯಾಂಪಾನಿಯದಲ್ಲಿ ಬದುಕಿಕೊಳ್ಳಲು ಅವಕಾಶಕೊಟ್ಟ. ನಾನಾ ರಾಷ್ಟ್ರೀಯರಿಂದ ಕೂಡಿದ ಒಡೋವೇಸರನ ಸೇನೆ ಇವನನ್ನು ದೊರೆಯೆಂದು 476 ಆಗಸ್ಟ್ 23ರಂದು ಘೋಷಿಸಿತು. ಕಾನ್‌ಸ್ಟ್ಯಾಂಟಿನೋಪಲಿನಲ್ಲಿದ್ದ ಚಕ್ರವರ್ತಿಗೆ ಇಟಲಿ ಅಧೀನವಾಗಿದೆಯೆಂದು ನೆಪಮಾತ್ರಕ್ಕೆ ಒಪ್ಪಿಕೊಂಡು, ಅದನ್ನು ತನ್ನ ಆಡಳಿತದ ಮುಷ್ಟಿಯೊಳಗಿಟ್ಟುಕೊಳ್ಳಬೇಕೆಂಬುದು ಈತನ ಇಚ್ಛೆಯಾಗಿತ್ತು. ತನ್ನನ್ನು ಇಟಲಿಯಲ್ಲಿ ರೋಮನ್ ಚಕ್ರವರ್ತಿಯ ಶ್ರೀಮಂತ ಪ್ರತಿನಿಧಿಯೆಂದು (ಪಟ್ರಿಷನ್) ಪರಿಗಣಿಸಬೇಕೆಂದೂ ಇಟಲಿಯ ಆಡಳಿತವನ್ನು ತನಗೆ ಒಪ್ಪಿಸಬೇಕೆಂದೂ ಕೋರಿ ಕಾನ್‌ಸ್ಟ್ಯಾಂಟಿನೋಪಲಿನ ಜೀನೋಗೆ ನಿಯೋಗವೊಂದನ್ನು ಕಳಿಸಿದ. ಒಡೋವೇಸರನ ಮೊದಲನೆಯ ಬೇಡಿಕೆಗೆ ಒಪ್ಪಿಗೆ ದೊರಕಿತು. ಆದರೆ ಡ್ಯಾಲ್ಮೇಷಿಯದಲ್ಲಿದ್ದ ಜ್ಯೂಲಿಯಸನನ್ನು ಚಕ್ರವರ್ತಿಯೆಂದು ಸ್ವೀಕರಿಸಬೇಕೆಂದು ಜೀನೋ ಸೂಚಿಸಿದ. ಒಡೋವೇಸರ್ ಇದಕ್ಕೊಪ್ಪಲಿಲ್ಲ. ಅಷ್ಟರಲ್ಲೇ (480) ನೀಪಾಸ್ ಕೊಲೆಗೀಡಾದ. ರೋಮಿನ ಸೆನೆಟ್ ಒಡೋವೇಸರನಿಗೆ ಬೆಂಬಲ ನೀಡಿತು. ತನಗೆ ನೆರವಾದ ಜರ್ಮನಿಗರಿಗೆ ಡೋವೇಸರ್ ಜಮೀನು ಹಂಚಿಕೊಟ್ಟ. ಆದರೂ ಅವರಲ್ಲಿ ಅಶಾಂತಿಯಿತ್ತು. ಕೊನೆಗೂ ಒಡೋವೇಸರ್ ಅದನ್ನಡಗಿಸಿದ. ಜೀನೋ ವಿರುದ್ಧವಾಗಿ ತನಗೆ ನೆರವು ನೀಡಬೇಕೆಂದು ಒಡೋವೇಸರನ್ನು ಇಲಸ್ ಪ್ರಾರ್ಥಿಸಿದ. ಒಡೋವೇಸರ್ ಒಪ್ಪಲಿಲ್ಲ. ಇಲಸರನ ಅಧೀನದಲ್ಲಿದ್ದ ಪ್ರಾಂತ್ಯಗಳನ್ನೇ ಮುತ್ತಿದ. ಒಡೋವೇಸರ್ ಪ್ರಬಲನಾಗುತ್ತಿದ್ದುದನ್ನು ಜೀನೋವೂ ಸಹಿಸಲಿಲ್ಲ, ಇವನ ಬಲಗುಂದಿಸಲು ಲೆನ್ನಿಜಿಗೂ ವಿಯೆನ್ನವಿಗೂ ನಡುವೆ ಇದ್ದ ರೂಗಿಯನ್ನು ಎತ್ತಿಕಟ್ಟಿದ. ಒಡೋವೇಸರ್ ಡ್ಯಾನ್ಯೂಬ್ ನದಿ ದಾಟಿ ರೂಗಿಯನ್ನು ಅವನ ನೆಲದಲ್ಲೇ ಸೋಲಿಸಿ ಅವನನ್ನೂ ಅವನ ಹೆಂಡತಿಯನ್ನೂ ಸೆರೆ ಹಿಡಿದು ಕೊಂದು ಸ್ವಲ್ಪ ಕಾಲಾನಂತರ ಅವನ ಮಗನನ್ನೂ ಸೋಲಿಸಿ ಅಡಗಿಸಿದ. ಡ್ಯಾನ್ಯೂಬ್ ಪ್ರದೇಶದಲ್ಲಿ ತನಗೆ ನೆಮ್ಮದಿಯಿಲ್ಲವೆಂದು ಒಡೋವೇಸರನಿಗೆ ಮನವರಿಕೆಯಾಯಿತು. ಆದ್ದರಿಂದ ಅಲ್ಲಿದ್ದ ರೋಮನ್ನರನ್ನು ಇಟಲಿಗೆ ಕರೆತರಿಸಿದ.

ಆ ವೇಳೆಗೆ ಯೂರಿಕ್ ದೊರೆ ಸ್ಪೇನ್ ಮತ್ತು ಪಾವಾನ್ಸ್‌ಗಳ ಬಹುಭಾಗವನ್ನಾಕ್ರಮಿಸಿ ಕೊಂಡು ಒಡೋವೇಸರನಿಗೆ ತಲೆನೋವಾದ. ಅವನ ಆಕ್ರಮಣವನ್ನು ಒಡೋವೇಸರ್ ಹಿಂತಳ್ಳಿದನಾದರೂ ಆಕ್ರಮಣಕ್ಕೊಳಗಾದ ಪ್ರದೇಶದಲ್ಲಿ ಕೆಲಭಾಗ ಅವನ ಕೈಯಲ್ಲೇ ಉಳಿಯಿತು.

489–439ರ ವರೆಗಿನ ಕಾಲದಲ್ಲಿ ಆಸ್ಟ್ರೊಗಾತ್‌ಗಳ ತಿಯೊಡೊರಿಕ್ ಮಾಡಿದ ದಾಳಿಗಳ ಫಲವಾಗಿ ಕ್ರಮೇಣ ಓಡೋವೇಸರನ ಶಕ್ತಿ ಕುಂದಿತು. ಈತನ ಅಧೀನದಲ್ಲಿದ್ದ ಪ್ರದೇಶಗಳು ಒಂದೊಂದಾಗಿ ಕೈಬಿಟ್ಟುವು. ಕೊನೆಗೆ 493ರಲ್ಲಿ ತಿಯೊಡೊರಿಕ್ ತನ್ನ ಕೈಯಿಂದಲೇ ಓಡೋವೇಸರನನ್ನು ಕೊಂದ. ಈತನ ಪರಿವಾರದವರೂ ಹಿಂಬಾಲಕರೂ ಸಾವಿಗೆ ಈಡಾದರು. ಇವನ ವಂಶವೇ ಅಳಿಸಿಹೋಯಿತು. (ಎಚ್.ಆರ್.ಆರ್.ಐ.)

**ಓಡೋಮೀಟರ್:** ದೂರಮಾಪನ ಸಾಧನವು ಕ್ರಮಿಸಿದ ದೂರವನ್ನು ನಿರ್ದಿಷ್ಟ ಸಂಖ್ಯೆಗಳಲ್ಲಿ ಸೂಚಿಸುವ ಉಪಕರಣ. ಕಾರ್, ಮೋಟಾರ್ ಮುಂತಾದ ಸಂಚಾರ ವಾಹನಗಳಲ್ಲಿಯೂ ಇದರ ಉಪಯೋಗವಿದೆ. ಅವುಗಳಲ್ಲಿ ವೇಗಮಾಪಕಕ್ಕೆ (ಸ್ಪೀಡೋಮೀಟರ್) ಇದನ್ನು ಲಗತ್ತಿಸಿರುತ್ತಾರೆ. ಭೂಮಿಯನ್ನು ಅಳತೆ ಮಾಡುವುದು ಭೂವಿಜ್ಞಾನದಲ್ಲಿಯೂ ಮೋಜಣಿಯಲ್ಲಿಯೂ ಒಂದು ಪ್ರಮುಖ ಕ್ರಿಯೆ. ಅಲ್ಲಿ ಟೇಪ್, ಚೈನ್ ಮುಂತಾದ ನೇರ ಸಾಧನಗಳೂ ಪಾಸೋಮೀಟರ್, ಪೆಡೋಮೀಟರ್, ಸ್ಪೀಡೋಮೀಟರ್ ಎಂಬ ಪರೋಕ್ಷವಾಗಿ ದೂರ ತಿಳಿಯಲಾಗುವ ಉಪಕರಣಗಳೂ ಬಳಕೆಯಲ್ಲಿವೆ. ಓಡೋಮೀಟರ್ ಇಂಥ ಒಂದು ಉಪಕರಣ.

ಓಡೋಮೀಟರನ್ನು ಚಲಿಸುವ ವಾಹನಕ್ಕೆ ಜೋಡಿಸುತ್ತಾರೆ. ವಾಹನ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿರುವಾಗ ಅದರ ಚಕ್ರಗಳು ಎಷ್ಟು ಪೂರ್ಣ ಪರಿಭ್ರಮಣೆಗಳನ್ನು ಮಾಡಿವೆ ಎಂಬುದನ್ನು ಓಡೋಮೀಟರ್ ಸೂಚಿಸುವುದು. ಈ ಸಂಖ್ಯೆ $n$ ಮತ್ತು ಚಕ್ರದ ವ್ಯಾಸ $d$ (ಅಳೆಯಬಹುದು) ಆಗಿದ್ದರೆ ವಾಹನ ಸಂಚರಿಸಿದ ದೂರ $\pi dn$ ಎಂದು ಸುಲಭವಾಗಿ ತಿಳಿಯುತ್ತದೆ. ಮಟ್ಟಸ ನೆಲದ ಮೇಲೆ ಮಾತ್ರ ಈ ಉಪಕರಣ ಫಲಿತಾಂಶವನ್ನು ನೀಡಬಲ್ಲುದು. ಹಳ್ಳ ತಿಟ್ಟುಗಳಿಂದ ಕೂಡಿದ ನೆಲದ ಮೇಲೆ, ಗಾಲಿಗಳು ಉರುಳದೆ ಸರಿಯುವ ಅಥವಾ ಜಾರುವ ಎಡೆಗಳಲ್ಲಿ ಓಡೋಮೀಟರಿನಿಂದ ದೊರೆಯುವ ಫಲಿತಾಂಶ ಸಮರ್ಪಕ ಫಲಿತಾಂಶಕ್ಕಿಂತ ಸಹಜವಾಗಿ ಕಡಿಮೆ ಇರುತ್ತದೆ. (ಜಿ.ಟಿ.ಜಿ.)

**ಓಣಂ:** ಕೇರಳೀಯರ ಅತ್ಯಂತ ಪ್ರಮುಖ ಹಾಗೂ ಸಾಮೂಹಿಕ ಹಬ್ಬ. ಕೇರಳ ರಾಜ್ಯದಿಂದ ಹೊರಗಿರುವ ಮಲಯಾಳಿಗಳೂ ರಾಜ್ಯದ ಒಳಗೇ ಇರತಕ್ಕ ಮಲಯಾಳಿಗಳಲ್ಲದ ಇತರರೂ ಈ ಹಬ್ಬವನ್ನು ಕೇರಳದ ರಾಷ್ಟ್ರೀಯ ಹಬ್ಬವೆಂದು ಪರಿಗಣಿಸಿ, ಹಬ್ಬದ ಸಡಗರದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪಾಲುದಾರರಾಗುತ್ತಾರೆ.

ಈ ಹಬ್ಬ ಮಲಯಾಳಿ ಶಕೆಯ ಕೊಲ್ಲ ವರ್ಷದ ಮೊದಲ ತಿಂಗಳಾದ ಚಿಂಜಮ್ (ಸಿಂಹ)ನಲ್ಲಿ ಬರುತ್ತದೆ. ರೋಮನ್ ಕ್ಯಾಲೆಂಡರ್ ಪ್ರಕಾರ ಇದು ಆಗಸ್ಟ್–ಸೆಪ್ಟೆಂಬರ್‌ನಲ್ಲೂ ಶಕವರ್ಷದ ಪ್ರಕಾರ ಶ್ರಾವಣಮಾಸದಲ್ಲೂ ಬೀಳುತ್ತದೆ.

ವಾಮನಾವತಾರದಂದು ಅವನ ಪದಘಾತದಿಂದಾಗಿ ಪಾತಾಳಗತನಾದ ಬಲಿಚಕ್ರವರ್ತಿ ವರ್ಷಕ್ಕೊಮ್ಮೆ ಈ ಹಬ್ಬದಂದು ಮತ್ತೆ ಭೂಲೋಕಕ್ಕೆ ಬರುವನೆಂದೂ ಪ್ರಜಾವತ್ಸಲನೂ ಧರ್ಮಿಷ್ಠನೂ ಆದ ಅವನ ಹೆಸರಿನಲ್ಲಿ ಜನ ಹಬ್ಬ ಆಚರಿಸಬೇಕೆಂದೂ ಐತಿಹ್ಯವಿದೆ.

ತಿರುಓಣಂ ದಿನವನ್ನು ಕೇರಳೀಯರು ಅತ್ಯಂತ ಆಸಕ್ತಿಯಿಂದಲೂ ಕುತೂಹಲದಿಂದಲೂ ನಿರೀಕ್ಷಿಸುವರು. ಹೀಗೆ ಸ್ವಾಭಾವಿಕವಾಗಿಯೇ ಓಣಂ ಕೇರಳದ ಅತ್ಯಂತ ಶ್ರೇಷ್ಠ ನಾಡಹಬ್ಬವಾಗಿ ಪರಿಣಮಿಸಿದೆ. ದಾನದಯಾಸಂಪನ್ನನಾಗಿದ್ದ ತಮ್ಮ ಚಕ್ರವರ್ತಿಯ ಆಳ್ವಿಕೆಯಲ್ಲಿ ತಾವು ಅನುಭವಿಸಿದ ಸುಖಸಂತೃಪ್ತಿಗಳನ್ನು ಕೊಂಡಾಡುವ ಸಲುವಾಗಿ ಓಣಂ ಅನ್ನು ಆಚರಿಸುತ್ತಾರೆ, ಕೇರಳದ ಜನ, ಅಲ್ಲದೆ, ಹೆಚ್ಚು ಸಮೃದ್ಧವೂ ಸುಖಶಾಂತಿದಾಯಕವೂ ಆದ ಭವಿಷ್ಯವನ್ನು ತರುವ ಹರಿಕಾರನೆಂಬ ದೃಷ್ಟಿಯಿಂದಲೂ ಓಣಂ ಅವರಿಗೆ ಅರ್ಥಪೂರ್ಣವಾಗಿದೆ.

ಅತ್ತಂ (ಹಸ್ತಾ ನಕ್ಷತ್ರದ ದಿನ) ದಿನದಿಂದ, ಎಂದರೆ ತಿರುಓಣಂಗಿಂತ ಹತ್ತು ದಿನಗಳಿಗಿಂತ ಮೊದಲೇ ಓಣಂ ಹಬ್ಬಕ್ಕೆ ಏರ್ಪಾಟುಗಳನ್ನು ಮಾಡತೊಡಗುತ್ತಾರೆ. ಹಳ್ಳಿ, ದೊಡ್ಡಪಟ್ಟಣ ಎಂಬ ಭೇದವಿರದೆ ಎಲ್ಲೆಡೆಯೂ ಎಲ್ಲರೂ ಆ ದಿನಗಳಲ್ಲಿ ಬಗೆಬಗೆಯ ಹೂಗಳನ್ನಾಯ್ದು ವಿಧವಿಧವಾದ ಅಲಂಕಾರಗಳನ್ನು ಮಾಡುತ್ತಾರೆ. ಹೀಗೆ ಅಲಂಕಾರಗೊಳಿಸುವುದನ್ನು ಅತ್ತಪ್ಪೊವಿಡಲ್ ಎಂದೂ ಅಲಂಕೃತ ಭಾಗವನ್ನು ಅತ್ತಪ್ಪೊಕ್ಕಳಂ ಎಂದೂ ಹೇಳುವರು. ಈ ಪುಷ್ಪಾಲಂಕಾರಕ್ಕೆ ಸಾಮಾನ್ಯವಾಗಿ ಕೆಂಪುದಾಸವಾಳ, ತುಂಬೆ, ತುಳಸಿ, ಮುಟ್ಟಿದರೆಮುನಿ ಗಿಡದ ಹೂ, ನೀಲಿ ಹೂ, ತಂಗಡಿ ಜಾತಿಯ ಹೂ, ಸೇವಂತಿಗೆ ಇತ್ಯಾದಿಗಳನ್ನು ಬಳಸುವುದು ರೂಢಿ. ಹಳ್ಳಿಗಳಲ್ಲಿ ಮಕ್ಕಳು ಓಣಂ ಹಬ್ಬದ ಮಹತ್ತ್ವವನ್ನೂ ಮಹಾಬಲಿಯ ಕೀರ್ತಿಯನ್ನೂ ವಿವರಿಸುವ ಜನಪದಗೀತೆಗಳನ್ನು ಹಾಡುತ್ತ ಮನೆಯಿಂದ ಮನೆಗೆ ಸಾಗುವುದನ್ನು ಗಮನಿಸಬಹುದು. ಉತ್ತರ ಕೇರಳದಲ್ಲಿ ಕೆಲವೆಡೆ, ಹೂವಿನ ಅಲಂಕಾರದ ಮಧ್ಯಭಾಗದಲ್ಲಿ ಮಣ್ಣಿನಿಂದ ರಚಿತವಾದ ಓಣತ್ತಪ್ಪನ (ಮಹಾಬಲಿಚಕ್ರವರ್ತಿ) ಮೂರ್ತಿಯನ್ನಿಡುವ ಪರಿಪಾಠವೂ ಉಂಟು, ದಕ್ಷಿಣ ಕೇರಳದಲ್ಲಿ (ಹಳೆಯ ದಕ್ಷಿಣ ತಿರುವಾಂಕೂರು ಪ್ರದೇಶ), ಮಣ್ಣಿನ ಪಾವಟಿಗೆಗಳ ಮೇಲೆ ದಿನದಿನವೂ ಹೂವಿನ ಅಲಂಕಾರ ಮಾಡಿ ತುತ್ತ ತುದಿಯ ಪಾವಟಿಗೆಯ ಮೇಲೆ ಸಗಣಿಯಿಂದ ಮಾಡಿದ ಎರಡೂವರೆ ಅಂಗುಲ ಎತ್ತರದ ಗಣಪನನ್ನೂ ಇಡಲಾಗುವುದು.

ಪುಷ್ಪಾಲಂಕಾರ ಹತ್ತು ದಿನಗಳ ತನಕ ನಡೆಯುತ್ತದೆ. ತಿರುಓಣಂ ದಿನದ ಸಂಜೆಗೆ ಸಮಾರಂಭ ಕೊನೆಗೊಳ್ಳುತ್ತದೆ. ಪ್ರತಿದಿನವೂ ನಿರ್ಮಾಲ್ಯವನ್ನು ಹಸೆಯ ಮೇಲಿನಿಂದ ತೆಗೆದು ಮನೆಯ ಮಾಡದ ಮೇಲೆ ಎಸೆಯುವರು, ಇಲ್ಲವೇ ನೀರಿನಲ್ಲಿ ತೇಲಿಬಿಡುವರು. ಕೇರಳದಲ್ಲಿರುವ ಬಹುತೇಕ ಹಿಂದೂ ಧರ್ಮೀಯರು ಸ್ವ ಇಚ್ಛೆಯಿಂದ ಈ ಹಬ್ಬವನ್ನು ಆಚರಿಸುವರು. ಈ ಸಂದರ್ಭದಲ್ಲಿ ಅನ್ನ, ಬತ್ತ, ಬಾಳೆಹಣ್ಣು, ಎಳನೀರು, ಪಾಯಸ, ಪೂವಡ (ಅಕ್ಕಿ ಮತ್ತು ತಾಳೆಬೆಲ್ಲದಿಂದ ಮಾಡಿದ ಒಂದು ಬಗೆಯ ಕಡುಬು)– ಇವುಗಳನ್ನು ನೈವೇದ್ಯವಾಗಿ ಅರ್ಪಿಸುವ ರೂಢಿಯಿದೆ. ನಂದಾದೀವಿಗೆಯೊಂದು ಉರಿಯುತ್ತಲೇ ಇರುತ್ತದೆ. ಕೆಲವೊಂದು ಪ್ರದೇಶಗಳಲ್ಲಿ ಬಿಲ್ಲುಬಾಣಗಳ ಪ್ರತಿರೂಪವನ್ನು ಇಟ್ಟು ಅದರಿಂದ ಪೂವಡ ಮತ್ತು ಗಣಪತಿಗಳನ್ನು ಹೊಡೆಯಲಾಗುತ್ತದೆ. ಬಳಿಕ, ನೆರೆದಿರುವ ಜನರಿಗೆ ಪ್ರಸಾದ ವಿನಿಯೋಗವಾಗುವುದು.

ಹೆಂಗಸರು ಮಕ್ಕಳು ಉಯ್ಯಾಲೆ ಆಡುವುದು ಓಣಂ ಹಬ್ಬದ ಒಂದು ವಿಶೇಷ ಆಕರ್ಷಣೆ

ಹಬ್ಬಕ್ಕೆ ಮೊದಲು ಮನೆಗಳಲ್ಲಿ ಸಾರಣೆಕಾರಣೆಗಳ ಏರ್ಪಾಟುಗಳು ನಡೆಯುತ್ತವೆ. ಮನೆಯಂಗಳ ಶುಚಿಯಾಗುತ್ತದೆ. ಸಗಣಿ ಸಾರಿಸಿ, ಮಹಾಬಲಿಯ ಆಗಮನಕ್ಕೆ ಚೊಕ್ಕಟವಾದ ಪರಿಸರ ನಿರ್ಮಿತವಾಗುತ್ತದೆ. ಗಂಡಸರು, ಹೆಂಗಸರು, ಮಕ್ಕಳು–ಎಲ್ಲರೂ ತಮ್ಮ ನೆಚ್ಚಿನ ಮಾವೇಲಿ ಮನ್ನನನ (ಮಹಾಬಲಿ ರಾಜ) ಸ್ವಾಗತಕ್ಕೋಸ್ಕರ ಸಡಗರದಿಂದ ಸನ್ನದ್ಧರಾಗುತ್ತಾರೆ. ತಿರುವೋಣಂ ದಿನ ಮಹಾಬಲಿ ಪ್ರತಿಯೊಬ್ಬರ ಮನೆಯನ್ನೂ ಸಂದರ್ಶಿಸುವನೆಂಬ ನಂಬಿಕೆಯಿಂದ ಎಲ್ಲರೂ ಉತ್ರಾಡಂ (ಉತ್ತರಾಷಾಢ) ದಿನದ (ತಿರುಓಣಂನ ಹಿಂದಿನ ದಿನ) ಹೊತ್ತಿಗೆ ಎಲ್ಲವನ್ನೂ ಅಣಿಗೊಳಿಸುತ್ತಾರೆ. ಅಂದು ಜನ ಎಷ್ಟು ಸಡಗರದಲ್ಲಿರುತ್ತಾರೆಂದರೆ ಅದರ ಬಗೆಗೆ ಮಲಯಾಳಂನಲ್ಲಿ ಒಂದು ನುಡಿಗಟ್ಟೇ ಬೆಳೆದು ಬಂದಿದೆ: ಉತ್ರಾಡಪ್ಪಾಚ್ಚಿಲ್ (ಉತ್ತರಷಾಢದ ಧಾವಂತ) ಎಂದರೆ ಆ ಹಬ್ಬದ ಸಡಗರ ಎಂದರ್ಥ.

ಉಳಿದೆಲ್ಲಕ್ಕಿಂತ ಹೆಚ್ಚಾಗಿ ತಿರುವೋಣಂ ದಿನದ ಮಧ್ಯಾಹ್ನದ ಊಟಕ್ಕೂ ವಿಶೇಷತೆ ಇದೆ. ಶ್ರೀಮಂತರಾಗಲಿ ಬಡವರಾಗಲಿ ತಮ್ಮಿಂದಾದಷ್ಟು ಅದ್ದೂರಿಯಾಗಿ ಅಂದು ಔತಣವನ್ನು ಮಾಡುತ್ತಾರೆ. ಮಲಯಾಳಂನಲ್ಲಿ ಈ ಬಗೆಗೆ ಒಂದು ಹೇಳಿಕೆಯೇ ಇದೆ: ಕಾಣಂ ವಿಟ್ಟಂ ಓಣಂ ಉಣ್ಣಣಂ (ಮನೆಯಲ್ಲಿರುವ ಯಾವುದೇ ಧಾನ್ಯವನ್ನು ಮಾರಿಯಾದರೂ ಓಣಂ ಹಬ್ಬದೂಟವನ್ನು ಮಾಡಬೇಕು). ಔತಣಕ್ಕೆ ಬೇರೆ ಬೇರೆ ಬಗೆಯ ಭಕ್ಷ್ಯ ಭೋಜ್ಯಗಳನ್ನೂ ಪಾಯಸವನ್ನೂ ಮಾಡುವರು. ಬಡಿಸುವವರ ವಿನಾ ಕುಟುಂಬದ ಎಲ್ಲ ಸದಸ್ಯರೂ ಒಟ್ಟಿಗೆ ಕುಳಿತು ಊಟಮಾಡುತ್ತಾರೆ. ಬಾಳೆಯೆಲೆಗಳಲ್ಲಿ, ಪುಳಿಶ್ಶೇರಿ, ಎರಿಶ್ಶೇರಿ, ಅವಿಯಲ್, ತೋರನ್, ಪಚ್ಚಡಿ, ಕಿಚ್ಚಡಿ ಮತ್ತು ಮಾವಿನಕಾಯಿ, ನಿಂಬೆಹಣ್ಣು, ಶುಂಠಿ, ನೆಲ್ಲಿಕಾಯಿ ಇವುಗಳಿಂದ ಮಾಡಿದ ಉಪ್ಪಿನಕಾಯಿಗಳನ್ನು ಬಡಿಸುವರು. ಅಗಲವಾದ ಹಪ್ಪಳಗಳು,

ಉಪ್ಪೇರಿಗಳು (ಹಲಸು, ಬಾಳೆಗಳಿಂದಾದುವು), ನೇಂದ್ರಬಾಳೆಹಣ್ಣುಗಳು–ಇವೆಲ್ಲ ತಿರುಓಣಂ ಹಬ್ಬದೂಟದಲ್ಲಿ ಕಾಣಸಿಗುವ ಪದಾರ್ಥಗಳು. ಬಹುಮಾನ ವಿನಿಯೋಗ ಕೂಡ ಓಣಂ ಹಬ್ಬದ ಪ್ರಧಾನ ಅಂಗವಾಗಿದೆ. ಗುಡಿಸಲು ನಿವಾಸಿಗಳಾದ ಗೇಣಿದಾರರು (ಕುಡಿಯಾನ್) ಮತ್ತು ಸೇವಕರು ತಮ್ಮ ಧಣಿಗಳಿಗೆ (ಜನ್ಮಿ, ತಂಬುರಾನ್) ಬಹುಮಾನಗಳನ್ನು ತರುವರು. ಆಗ ಜಮೀನುದಾರ ಅವರಿಗೆ ಬತ್ತ, ತರಕಾರಿ, ಹೊಸ ಬಟ್ಟೆ–ಹೀಗೆ ಮರುಕಾಣಿಕೆಯನ್ನೂ ಸಲ್ಲಿಸುವನು. ಈ ಬಹುಮಾನ ವಿನಿಯೋಗ ಅವರವರ ಅಂತಸ್ತಿಗೆ ಅನುಗುಣವಾಗಿಯೇ ನಡೆಯುತ್ತದೆ. ಗೇಣಿದಾರರು ತಾವು ಬೆಳೆಸಿದ ಕುಂಬಳಕಾಯಿ, ಬಾಳೆಹಣ್ಣುಗಳನ್ನೂ ಕಮ್ಮಾರರೇ ಮೊದಲಾದವರು ತಾವು ನಿರ್ಮಿಸಿದ ಹತ್ಯಾರುಗಳನ್ನೂ ಯಜಮಾನನಿಗೆ ಕಾಣಿಕೆಯಾಗಿ ಅರ್ಪಿಸುವರು. ಈ ಬಹುಮಾನಗಳನ್ನು ಓಣಕ್ಕಾಚ್ಚ (ಓಣಂ ಕಾಣಿಕೆ) ಎಂದು ಕರೆಯುವರು. ಮಲಯಾಳಂ ಸಾಹಿತ್ಯದಲ್ಲಿ, ಹೇಗೆ ಗೇಣಿದಾರರು ತಮ್ಮ ಯಜಮಾನನಿಗೆ ಕಾಣಿಕೆಯೀಯುವ ಸಲುವಾಗಿ ಪ್ರೀತಿಯಿಂದ ಬಾಳೆಹಣ್ಣು, ಸೌತೆಕಾಯಿಗಳನ್ನು ಬೆಳೆಯುವರೆಂಬುದು ನಾನಾ ಕಡೆಗಳಲ್ಲಿ ವರ್ಣಿತವಾಗಿದೆ.

**ಕೈಚಪ್ಪಾಳೆ ಆಟ–ಕೈಕೊಟ್ಟಿಕಳ್**

ಓಣಂ ಹಬ್ಬದ ಕಾಲದಲ್ಲಿ ಕುಟುಂಬದ ಸಕಲರೂ ಮನೆ ಸೇರುವುದು ಪದ್ಧತಿ. ಕಾರಣಾಂತರದಿಂದ ಮನೆಯಿಂದ ದೂರ ವಾಸಮಾಡಬೇಕಾಗಿ ಬಂದ ಮಕ್ಕಳು ಸಹಿತ ಆ ಹೊತ್ತಿಗೆ ಹೇಗೋ ಮನೆ ಸೇರಲು ಪ್ರಯತ್ನಿಸುವರು. ಅವರಿಗೆ ಬರಲಾಗದಿದ್ದರೆ ಅವರು ತಮ್ಮ ತಂದೆತಾಯಿಯರಿಗೆ, ಹಿರಿಯರಿಗೆ, ಸೋದರ ಸೋದರಿಯರಿಗೆ ಬಹುಮಾನಗಳನ್ನು ಕಳುಹಿಸಿಕೊಡುತ್ತಾರೆ. ತಂದೆತಾಯಿಯರು, ಮದುವೆಯಾದ ತಮ್ಮ ಮಗಂದಿರಿಗೆ ತರಕಾರಿ ಇತ್ಯಾದಿಗಳನ್ನು ಕಳುಹಿಸಿಕೊಡುವರು. ಸಾಮಾನ್ಯವಾಗಿ ತಂದೆತಾಯಿಯರಿಗೆ ಕಳುಹಿಸುವ ಬಹುಮಾನಗಳೆಂದರೆ ವೀಳೆಯದೆಲೆ, ತಂಬಾಕು, ಹೊಸ ಬಟ್ಟೆಗಳು, ಹೊಸದಾಗಿ ಮದುವೆಯಾದ ದಂಪತಿಗಳು ತಮ್ಮ ತಂದೆ ತಾಯಿಯರಿಗೆ ಬಹುಮಾನ ಕಳುಹಿಸುವ ರೂಢಿಯೂ ಇದೆ. ಇದಕ್ಕೆ ಪ್ರತಿಯಾಗಿ ಆಭರಣಗಳನ್ನೂ ಹಣವನ್ನೂ ಹೊಸ ಬಟ್ಟೆಗಳನ್ನೂ ಮದುಮಕ್ಕಳಿಗೆ ಓದಿಸುವರು. ಓಣಂ ಕಾಲದಲ್ಲಿ ಕೊಡಲಾಗುವ ಹೊಸ ಬಟ್ಟೆಗಳನ್ನು ಓಣಕ್ಕೋಡಿ ಇಲ್ಲವೇ ಓಣಪ್ಪೊಡವ ಎಂದು ಕರೆಯುವುದಿದೆ. ತಂದೆತಾಯಿಯರನ್ನೂ ಹಿರಿಯರನ್ನೂ ಓಣಂ ಸಂದರ್ಭದಲ್ಲಿ ಸಂದರ್ಶಿಸಿ ಬಹುಮಾನ ಕೊಡುವ ಪದ್ಧತಿಯನ್ನು ಓಣಂ ಕಾಣಲ್ ಎಂದು ಕೆಲವೆಡೆ ಕರೆಯುತ್ತಾರೆ.

ಮನೋರಂಜನೆಯ ವಿಭಾಗದಲ್ಲೂ ಓಣಂ ಹಬ್ಬಕ್ಕೆ ತನ್ನದೇ ಆದ ಸ್ಥಾನವಿದೆ. ಗಂಡಸರು, ಹೆಂಗಸರು, ಮಕ್ಕಳು–ಇವರೆಲ್ಲ ಭಾಗವಹಿಸುವುದಕ್ಕೆ ಅನುಕೂಲವಾದ ಅನೇಕ ಆಟೋಟಗಳ ಸ್ಪರ್ಧೆಗಳೂ ಸಾಂಸ್ಕೃತಿಕ ಚಟುವಟಿಕೆಗಳೂ ವಿಜೃಂಭಣೆಯಿಂದ ಜರುಗುತ್ತವೆ. ಉಯ್ಯಾಲೆಯಲ್ಲಿ ತೂಗುವುದು, ತಿರುವಾದಿರಕ್ಕಳಿ, ಕೋಲಾಟ, ತುಂಬಿತ್ತುಳ್ಳಲ್–ಇವೆಲ್ಲ ಹೆಂಗಸರ ಆಟಗಳು. ವರ್ತುಲಾಕಾರದಲ್ಲಿ ಮುತ್ತೈದೆಯ ಅವಿವಾಹಿತ ತರುಣಿಯರೂ ನಿಂತು ಚಪ್ಪಾಳೆ ತಟ್ಟುತ್ತ ತಾಳಕ್ಕೆ ತಕ್ಕಂತೆ ಹಾಡು ಹೇಳಿಕೊಳ್ಳುತ್ತ ನೃತ್ಯವಾಡುತ್ತಾರೆ. ಗಂಡಸರಿಗೆ ಕುಟ್ಟಿಯುಂ ಕೋಲುಂ, ತಲಪ್ಪಂಡು, ಕಿಳಿಕಳಿ ಮೊದಲಾದ ಆಟಗಳಿವೆ. ಹಾಗೆಯೇ ಕಯ್ಯಾಂಗಳಿ, ಓಣತ್ತಲ್ ಮೊದಲಾದ ಸ್ಪರ್ಧೆಗಳೂ ಬಿರುಸಿನಿಂದ ಜರುಗುತ್ತವೆ. ಕುಮ್ಮಿ, ಪಞಕಳಿ, ವಟ್ಟುಕಳಿ, ಅಮ್ಮಾನ, ತಲಯಾಟ್ಟಂ ಕಳಿ, ಪಶುವುಂ ಪುಲಿಯುಂ–ಇತ್ಯಾದಿ ಆಟಗಳನ್ನು ಹುಡುಗಿಯರೂ ಹೆಂಗಸರೂ ಆಡುತ್ತಾರೆ.

ಹೀಗೆ ಹಬ್ಬದೂಟವುಂಡು, ಸಂತೋಷದಿಂದ ನಲಿದಾಡಿ, ಕುಣಿದಾಡಿ ಜನ ತಮ್ಮ ಹಳೆಯ ಧರ್ಮಿಷ್ಠ ರಾಜನ ಆಗಮನದ ಸಂಭ್ರಮವನ್ನು ಸ್ನೇಹಾರ್ದ್ರಹೃದಯದಿಂದ ಆಚರಿಸುತ್ತಾರೆ. ಉತ್ತರಾಡದಿಂದ ಹಿಡಿದು ನಾಲ್ಕು ದಿನಗಳವರೆಗೆ ಹಬ್ಬದ ವೈಭವೋಪೇತ ವಾತಾವರಣವಿರುತ್ತದೆ. ಒನ್ನಾಂ ಓಣಂ (ಒಂದನೆಯ ಓಣಂ), ತಿರುವೋಣಂ, ಮುನ್ನಾಂ ಓಣಂ, ನಾಲಾಂ ಓಣಂ–ಎಂಬುದಾಗಿ ಈ ದಿನಗಳನ್ನು ಹೆಸರಿಸುವರು, ನಾಲ್ಕು ದಿನಗಳ ಹಬ್ಬದ ಸಂಭ್ರಮ ಮುಗಿದ ತರುವಾಯ ಐದನೆಯ ದಿನ ಎಂದಿನಂತೆ ಕೇರಳದ ಜನ ತಮ್ಮ ದೈನಂದಿನ ಕೆಲಸಕಾರ್ಯಗಳಲ್ಲಿ ನಿರತರಾಗುತ್ತಾರೆ. ಅವರಲ್ಲಿ ರಜಾದಿನಗಳನ್ನು ಸುಖವಾಗಿ ಅನುಭವಿಸಿದ ಸಂತೃಪ್ತಿ ಹೊಂದಿರುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲು, ಕೇರಳ ಅನೇಕ ರಾಜಾಡಳಿತ ಪ್ರದೇಶಗಳಾಗಿ ವಿಭಜನೆಗೊಂಡಿತ್ತಷ್ಟೆ, ಆಗ ಓಣಂ ಹಬ್ಬವನ್ನು ದೇವಸ್ಥಾನಗಳಲ್ಲೂ ರಾಜಾಸ್ಥಾನಗಳಲ್ಲೂ ಆಚರಿಸುವ ರೂಢಿಯಿತ್ತು. ಕಥಕಳಿ, ಓಟ್ಟಂ ತುಳ್ಳಲ್, ಕುಮ್ಮಿ, ಕೊರತ್ತಿ ಯಾಟ್ಟಂ, ನಾದಸ್ವರ ಕಚ್ಚೇರಿ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳೊಡನೆ ಓಣಂ ಸಂಭ್ರಮದಿಂದ ಅಂದು ನೆರವೇರುತ್ತಿತ್ತು. ರಾಜರು ತಮ್ಮ ಸಾಮಂತರಿಗೂ ಸೇವಕರಿಗೂ ಓಣಪ್ಪೊಡವೆಗಳನ್ನು ಕೊಟ್ಟು ಸನ್ಮಾನಿಸುತ್ತಿದ್ದರು.

ಈಗಲೂ ಓಣಂ ಸಾರ್ವಜನಿಕವಾಗಿ ಆಚರಣೆಯಲ್ಲಿರುವ ಸ್ಥಳವೆಂದರೆ ಎರ್ನಾಕುಲಂ ನಗರದಿಂದ ಆರು ಮೈಲಿ ದೂರದಲ್ಲಿರುವ ತ್ರಿಕ್ಕಕ್ಕರ. ಇದು ಮಹಾಬಲಿಯ ಆವಾಸಸ್ಥಾನವೆಂಬ ನಂಬುಗೆಯುಂಟು. ತ್ರಿಕ್ಕಕ್ಕರ ಎಂಬ ಹೆಸರು ತ್ರಿಕ್ಕಾಲ್+ಕರ=ಮೂರು ಕಾಲಿನ ಸ್ಥಳ–ಎಂಬುದರಿಂದ ಬಂದಿದೆಯೆನ್ನುತ್ತಾರೆ. ವಾಮನ ತನ್ನ ಕಾಲಿನಿಂದ ಮೂರು ಹೆಜ್ಜೆ ಅಳೆದು ಬಲಿಯನ್ನು ಪಾತಾಳ ಲೋಕಕ್ಕೆ ಕಳುಹಿಸಿದ ಸ್ಥಳವಿದಂತೆ. ಇಲ್ಲಿನ ದೇವಸ್ಥಾನದಲ್ಲಿ ಅನೇಕ ದೇವರುಗಳ ಮೂರ್ತಿಗಳಿವೆ. ಪ್ರಧಾನ ದೇವರುಗಳೆಂದರೆ ಶಿವ ಮತ್ತು ವಾಮನ. ರಾಜರು ಆಳುತ್ತಿದ್ದ ಕಾಲದಲ್ಲಿ ಓಣಂ ಹಬ್ಬ 28 ದಿನಗಳಷ್ಟು ದೀರ್ಘಕಾಲ ನಡೆಯುತ್ತಿತ್ತು; ಮಲೆಯಾಳ ಶಕೆಯಂತೆ ಕರ್ಕಾಟಕ ತಿಂಗಳಿನ ತಿರುವೋಣಂ ದಿನದಿಂದ ಆರಂಭಿಸಿ ಚಿಂಙಮ್ ತಿಂಗಳಿನ ತಿರುವೋಣಂ ದಿನಕ್ಕೆ ಅದು ಮುಕ್ತಾಯಗೊಳ್ಳುತ್ತಿತ್ತು. ಹಬ್ಬದ ಆಚರಣೆಯ ಸಮಸ್ತ ಜವಾಬ್ದಾರಿಗಳನ್ನೂ ರಾಜರೇ ಹೊತ್ತುಕೊಳ್ಳುತ್ತಿದ್ದರು.

ಪ್ರಸ್ತುತ, ತ್ರಿಕ್ಕಕ್ಕರ ದೇವಸ್ಥಾನದಲ್ಲೂ ಓಣಂ ಹಬ್ಬವನ್ನು ಹತ್ತುದಿನ ಆಚರಿಸಲಾಗುತ್ತದೆ–ಚಿಂಙಮ್ ತಿಂಗಳ ಅತ್ತಂದಿಂದ ಹಿಡಿದು ತಿರುವೋಣಂ ತನಕ, ಅತ್ತಂ ದಿನ ದೇವಸ್ಥಾನದ ಬಾವುಟವನ್ನೇರಿಸುವುದರಿಂದ ಹಬ್ಬ ಪ್ರಾರಂಭವಾಗುತ್ತದೆ. ಹಸೆಯ ಮೇಲೆ ಪುಷ್ಪಾಲಂಕಾರಗಳನ್ನು ಮಾಡಲಾಗುತ್ತದೆ. ಪ್ರತಿದಿನ ಮೂರು ಪೂಜೆಗಳನ್ನು ನೆರವೇರಿಸುತ್ತಾರೆ. ಸ್ಥಳೀಕರ ಸಹಕಾರದೊಂದಿಗೆ ದೇವಸ್ಥಾನದ ಅಧಿಕಾರಿಗಳು ಹಬ್ಬದ ಆಚರಣೆಯಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಿರುತ್ತಾರೆ. ಸಂಜೆ ಪೂಜೆಯ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತವೆ.

**ಓಣಂ ಹೂವಿನ ಹಬ್ಬ, ಇಲ್ಲಿ ಹೆಣ್ಣು ಮಕ್ಕಳು ಹೂಗಳಿಂದ ಸೊಗಸಾದ ಅಲಂಕರಣವನ್ನು ಜೋಡಿಸುತ್ತಿದ್ದಾರೆ**

ಆಲೆಪ್ಪಿ ತಾಲೂಕಿನ ಆರನ್ಮುಳ ಎಂಬ ಗ್ರಾಮದಲ್ಲಿ ನಡೆಯತಕ್ಕ ದೋಣಿಯ ಪಂದ್ಯ ಮತ್ತೊಂದು ವಿಶಿಷ್ಟ ಸಾರ್ವಜನಿಕ ಆಕರ್ಷಣೆಯಾಗಿದೆ. ದೋಣಿಗಳನ್ನು ಚುಂಡನ್ ವಳ್ಳಂ (ಹಾವು ದೋಣಿ) ಎಂದು ಕರೆಯುತ್ತಾರೆ. ಪ್ರತಿಯೊಂದು ದೋಣಿಯೂ ಆರನ್ಮುಳ ಹಳ್ಳಿಯ ಒಂದೊಂದು ವಿಭಾಗ ಇಲ್ಲವೇ ಕರೆಯನ್ನು ಪ್ರತಿನಿಧಿಸುತ್ತದೆ. ಈ ದೋಣಿಯ ಸ್ಪರ್ಧೆಗೆ ಹಿನ್ನಲೆಯಾಗಿ ಒಂದು ದಂತ ಕಥೆಯಿದೆ : ಆರನ್ಮುಳ ಗ್ರಾಮದಲ್ಲಿ ಒಂದು ಶಿವದೇವಾಲಯ ಅಸ್ತಿತ್ವದಲ್ಲಿದೆ. ಒಂದಾನೊಂದು ಕಾಲದಲ್ಲಿ ಉತ್ತರಾಡಂ ದಿನದಂದು, ದೇವಸ್ಥಾನಕ್ಕೆ ಬೇಕಾದ ಪರಿಕರಗಳನ್ನೊಳಗೊಂಡ ಮಾನವರಹಿತ ದೋಣಿಯೊಂದು ದೇವಸ್ಥಾನದ ಬಳಿ ಬಂದು ನಿಂತಿತಂತೆ. ಈಗಲೂ ಈ ಸನ್ನಿವೇಶವನ್ನು ಪುನರಭಿನಯ ಮಾಡುವಂತೆ, ತಿರುವಲ್ಲ ಎಂಬ ಗ್ರಾಮದಿಂದ (ಈ ಗ್ರಾಮ ಆರನ್ಮುಳದ ಪೂರ್ವಭಾಗದಲ್ಲಿದೆ) ನಂಬೂದಿರಿ ಬ್ರಾಹ್ಮಣನೊಬ್ಬ ದೇವಸ್ಥಾನಕ್ಕೆ ಬೇಕಾದ ಸಾಧನಸಾಮಗ್ರಿಗಳನ್ನು ಮನುಷ್ಯರಹಿತ ದೋಣಿಯೊಂದರಲ್ಲಿ ಕಳುಹಿಸುತ್ತಾನೆ. ದೋಣಿಯ ಜೊತೆಗೇ ಬಂದ ಕಾವಲುಗಾರ ದೇವಸ್ಥಾನದ ಸಮೀಪ ಇಳಿದುಬಿಟ್ಟು ದೋಣಿಯನ್ನು ದೇವಸ್ಥಾನದ ಕಡೆಗೆ ಹಾಗೆಯೇ

ತೇಲಿಬಿಡುತ್ತಾನೆ. ಅನೇಕಾನೇಕ ಹಾವು ದೋಣಿಗಳು ಈ ದೋಣಿಯನ್ನು ವಂಜಿಪಾಟ್ ಹಾಡಿಕೊಂಡು ಸ್ವಾಗತಿಸಲು ಮುನ್ನುಗ್ಗುತ್ತವೆ. ಇದೇ ದೋಣಿ ಪಂದ್ಯ. ಇತ್ತೀಚಿನ ಕಾಲದಲ್ಲಿ ಈ ದೋಣಿ ಪಂದ್ಯ ಎಷ್ಟು ಪ್ರಾಧಾನ್ಯ ಪಡೆದಿದೆಯೆಂದರೆ, ದೋಣಿ ನಡೆಸಿ ಪ್ರಥಮ ಸ್ಥಾನಪಡೆದು ಜಯಶೀಲರಾದವರಿಗಾಗಿ ಪ್ರಧಾನಮಂತ್ರಿಯವರ ಒಂದು ಪಾರಿತೋಷಕವನ್ನು ಬಹುಮಾನವಾಗಿ ಇಡಲಾಗಿದೆ.

ಹಾವಿನಾಕಾರದ ದೋಣಿ ಓಟ–ಚುಂಡನ್ ವಳ್ಳಮ್

ಓಣಂ ಹಬ್ಬದ ಪ್ರಾಧಾನ್ಯವನ್ನು ಗುರುತಿಸಿ, ಕೇರಳ ಸರಕಾರದವರು ಅದನ್ನೊಂದು ರಾಷ್ಟ್ರೀಯ ಹಬ್ಬವನ್ನಾಗಿ ಪರಿಗಣಿಸಿದ್ದಾರೆ. 1961ರಲ್ಲಿ ಓಣಂ ಹಬ್ಬ ಸರಕಾರದ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು. ತ್ರಿಕ್ಕಕ್ಕರ ದೇವಸ್ಥಾನದಲ್ಲಿ ದೀಪಹಚ್ಚಿ, ಬಾವುಟವೇರಿಸುವುದ ರಿಂದ ಹಬ್ಬದ ಕಾರ್ಯಕ್ರಮಗಳು ಪ್ರಾರಂಭವಾದವು. ಸಾಮೂಹಿಕ ಔತಣಗಳು, ಮಕ್ಕಳ ಕೂಟಗಳು, ಆಟೋಟ ಸ್ಪರ್ಧೆಗಳು ಕೇರಳದಾದ್ಯಂತ ಜರುಗಿದುವು.

ಓಣಂ ಹಬ್ಬ ಪ್ರತಿಯೊಬ್ಬ ಮಲಯಾಳಿಗೂ ತನ್ನ ತಾಯ್ನಾಡಿನೊಂದಿಗೆ ತನಗಿರುವ ಬಾಂಧವ್ಯವನ್ನು ಎತ್ತಿತೋರಿಸುತ್ತದೆ; ಆತನ ಮನಸ್ಸಿನಲ್ಲಿ ಆನಂದದ ಅಲೆಗಳನ್ನು ಎಬ್ಬಿಸುತ್ತದೆ. ಈ ಹಬ್ಬ ಎಷ್ಟು ಜನಪ್ರಿಯವಾಗಿದೆಯೆಂದರೆ ಅದನ್ನು ಕುರಿತು ಒಂದು ಪಡೆನುಡಿಯೇ ಮಲಯಾಳದಲ್ಲಿ ತಲೆದೋರಿದೆ. ಓಣಂ ಕೇರಾ ಮೂಲ–ಓಣಂ ಇರದ ಮೂಲೆ– ಎಂದರೆ ಯಾವ ದೈವತ್ವ ನಾಗರಿಕತೆಗಳೂ ಇಲ್ಲದ ಸ್ಥಳ ಎಂದು ಅರ್ಥ, ಓಣಂ ಇಲ್ಲದ ಮೂಲೆ ಇಲ್ಲ ಎಂಬುದು ತಾತ್ಪರ್ಯ.

ಮಹಾಬಲಿಯ ಮಹತ್ತ್ವವನ್ನು ಕುರಿತು ಜನಪದ ಗೀತೆಯೊಂದರಲ್ಲಿ (ಓಣಪಾಟಿಟ್) ಬರುವ ಈ ಕೆಳಗಿನ ಹಾಡನ್ನು ಸಾಮಾನ್ಯವಾಗಿ ಹೆಂಗಸರು ಉಯ್ಯಾಲೆ ಆಡುವಾಗಲೂ, ಮಕ್ಕಳು ಹೂ ಕೊಯ್ಯುವಾಗಲೂ(ಅತ್ತಪ್ಪೂ) ಹಾಡುವ ಬಳಕೆಯಿದೆ;

ಮಾವೇಲಿ ನಾಡ್ ವಾಣೀಡುಂ ಕಾಲಂ
ಮಾನುಷರೆಲ್ಲಾರು ಮೊನ್ನುಪೋಲೆ
ಕಳ್ಳವುಂ ಇಲ್ಲ, ಚದಿಯುಂ ಇಲ್ಲ
ಎಳ್ಳೋಳಮಿಲ್ಲ ಒಟಿವಚನಂ.

ಕನ್ನಡದಲ್ಲಿ ಇದರ ಅನುವಾದ ಹೀಗಾಗುತ್ತದೆ :

ಮಾಬಾಲಿ ನಾಡಾನು ಆಳೂವ ಕಾಲಾದಿ
ಮನುಷ್ಯರೆಲ್ಲಾರೂ ಒಂದೆ ರೀತಿ;
ಕಳವೂ ಇಲ್ಲಾವು, ಮೋಸಾನೂ ಇಲ್ಲಾವು
ಸುಳ್ಳಂತೂ ಎಳ್ಳಷ್ಟೂ ಇರನಿಲ್ಲ. (ಎಸ್.ಎಸ್.ಆರ್.ಐ.)

**ಓತಿ (ಕ್ಯಾಲೋಟಿಸ್):** ಸರೀಸೃಪ ವರ್ಗದ ಸ್ಕ್ವಮೇಟ ಗಣದ ಲ್ಯಾಸರ್ತಿಲಿಯ ಉಪಗಣಕ್ಕೆ ಸೇರಿದ ಪ್ರಾಣಿ. ತೋಟದ ಹಲ್ಲಿ (ಗಾರ್ಡನ್ ಲಿಸರ್ಡ್) ಎಂದೂ ಕರೆಯುತ್ತಾರೆ. ಮನೆಯ ಹಿತ್ತಲು, ತೋಟ ಗದ್ದೆಗಳ ಬೇಲಿಗಳಲ್ಲಿ ಲಂಟಾನದ ಮೆಳೆಗಳಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಇರುವ ಓತಿ ಕೆಲೋಟಿಸ್ ವರ್ಸಿಕಲ್ಲಾರ್ ಎಂಬ ಪ್ರಭೇದಕ್ಕೆ ಸೇರುತ್ತದೆ. ಇದು ಕೀಟಾಹಾರಿ, ಇದರ ದೇಹವನ್ನು ಶಿರ, ಎದೆ ಮತ್ತು ಬಾಲ ಎಂದು ವಿಂಗಡಿಸಬಹುದು. ತಲೆ ಮತ್ತು ಎದೆಯ ನಡುವೆ ನಿರ್ದಿಷ್ಟವಾದ ಕುತ್ತಿಗೆಯಿದೆ. ದೇಹದಮೇಲೆ ಹುರುಪೆಗಳ ಹೊದಿಕೆಯುಂಟು. ಹುರಪೆಗಳು ಒಂದರ ತುದಿ ಇನ್ನೊಂದರ ಬುಡವನ್ನು ಮುಚ್ಚುವಂತೆ (ಮನೆಯ ಹಂಚುಗಳಂತೆ) ಜೋಡಿಸಲ್ಪಟ್ಟಿವೆ. ಕುತ್ತಿಗೆ ಮತ್ತು ಮುಂಡದ ನಡು ಬೆನ್ನಿನ ಭಾಗದಲ್ಲಿರುವ ಹುರುಪೆಗಳ ಉದ್ದವಾದ ಮುಳ್ಳು ಶಿಖೆಗಳ ಸಾಲಿನಂತೆ ಬೆಳೆದಿವೆ. ಋತುವಾಸದಲ್ಲಿ ಕತ್ತಿನ ತಳಭಾಗ ಗಂಡುಗಳಲ್ಲಿ ರಾಗರಂಜಿತವಾಗುತ್ತದೆ. ಈ ಬಣ್ಣದಿಂದಾಗಿ ಅವು ರಕ್ತಪಿಪಾಸುಗಳು ಎಂಬ ತಪ್ಪು ಭಾವನೆ ಬೆಳೆದುಬಂದಿದೆ.

ತಲೆಯ ಅಗ್ರಭಾಗದಲ್ಲಿ ಬಾಯಿ ಅಡ್ಡ ಸೀಳಿಕೆಯಂತಿದೆ. ಬಾಯಿಯ ಮೇಲ್ಗಡೆ ಒಂದು ಜೊತೆ ಹೊರನಾಸಿಕ ರಂಧ್ರಗಳೂ ತಲೆಯ ಪಕ್ಕಗಳಲ್ಲಿ ಒಂದು ಜೊತೆ ಕಣ್ಣುಗಳೂ ಇವೆ. ಒಂದೊಂದು ಕಣ್ಣಿಗೂ ದಪ್ಪವಾದ ಮೇಲು ರೆಪ್ಪೆ, ತೆಳುವಾದ ಕೆಳರೆಪ್ಪೆ ಮತ್ತು ಪಾರದರ್ಶಕವಾದ ಮೂರನೇ ಪಟಲಗಳಿವೆ. ಕಣ್ಣುಗಳ ಹಿಂಭಾಗದಲ್ಲಿ ಕಿವಿಯ ತಮಟೆಯುಂಟು. ಇದು ಕಪ್ಪೆಯಂತೆ ದೇಹದ ಚರ್ಮದ ಮಟ್ಟದಲ್ಲಿಯೇ ಇಲ್ಲದೆ ಸ್ವಲ್ಪ ತಗ್ಗಾದ ಕುಳಿಯಲ್ಲಿದೆ. ಈ ಕುಳಿಗೆ ಕರ್ಣರಂಧ್ರ ಎಂದು ಹೆಸರು.

ಮುಂಡದ ತಳಭಾಗಕ್ಕೆ ಅಂಟಿದಂತೆ ಎರಡು ಜೊತೆ ಕಾಲುಗಳಿವೆ. ಮುಂಗಾಲುಗಳಲ್ಲಿ ತೋಳು, ಮುಂಗೈ, ಹಸ್ತ ಮತ್ತು ನಖಗಳುಳ್ಳ ಐದೈದು ಕೈಬೆರಳುಗಳಿವೆ. ಹಿಂಗಾಲುಗಳಲ್ಲಿ ತೊಡೆ, ಮುಂಗಾಲು, ಪಾದ ಮತ್ತು ಉಗುರಿರುವ ಐದು ಬೆರಳುಗಳಿವೆ. ಬುಡದ ಬಳಿ ಬಾಲ ದಪ್ಪನಾಗಿದ್ದು ಕ್ರಮೇಣ ಚೂಪಾಗುತ್ತ ಹೋಗುವುದು. ರುಂಡ ಮುಂಡಗಳ ಒಟ್ಟು ಉದ್ದದಷ್ಟೇ ಸುಮಾರಾಗಿ ಬಾಲದ ಉದ್ದವೂ ಇದೆ. ಬಾಲದ ಬುಡದ ಬಳಿ ಕ್ಲೋಯಕ ರಂಧ್ರವುಂಟು. ಇದು ಅಡ್ಡನಾಗಿ ಹರಡಿದ ಸೀಳಿಕೆಯಂತೆ ಕಾಣಬರುತ್ತದೆ. ಇದರ ಮೂಲಕ ಮಲಾಶಯ ಮತ್ತು ಮೂತ್ರ ಜನನೇಂದ್ರೀಯಗಳು ಹೊರಕ್ಕೆ ತೆರೆಯುತ್ತವೆ.

ಓತಿಗಳು ಭಿನ್ನಲಿಂಗಿಗಳು, ಗಂಡುಗಳಲ್ಲಿ ಕ್ಲೋಯಕದಿಂದ ಹಿಂದಕ್ಕೆ ಹರಡಿದಂತೆ, ಬಾಲದ ಅಧೋ ಭಾಗದಲ್ಲೆ, ಚರ್ಮದ ಒಳಗೆ ಒಂದು ಜೊತೆ ಆಲಿಂಗನಾಂಗಗಳಿವೆ, ಓತಿ ಅಂಡಜ, ಹೆಚ್ಚು ಭಂಡಾರವಿರುವ, ಬಿಳಿಯ ಸುಣ್ಣ ಚಿಪ್ಪಿನಿಂದಾವೃತವಾದ ಹತ್ತಾರು ಮೊಟ್ಟೆಗಳನ್ನಿಡುತ್ತದೆ. (ಎಚ್.ಬಿ.ಡಿ.)

**ಓದುಗಾರಿಕೆ:** ಲಿಖಿತ ಅಥವಾ ಮುದ್ರಿತ ಸಂಕೇತಗಳ ಮೂಲಕ ವ್ಯಕ್ತವಾಗುವ ಕೃತಿಕಾರನ ಅಭಿಪ್ರಾಯವನ್ನು ಗ್ರಹಿಸುವ ಮತ್ತು ಅದಕ್ಕೆ ಅನುಗುಣವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಮನೋವ್ಯಾಪಾರ. ಮಾನವನ ಅನುಭವ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಇರುವ ಬಹುಮುಖ್ಯ ಸಾಧನೆ. ಪ್ರತಿ ವ್ಯಕ್ತಿಯೂ ಶಿಕ್ಷಣದಿಂದ ತನ್ನ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ವಿಕಸಿಸುವಂತೆ ಮಾಡಿಕೊಳ್ಳುವುದು ಅಗತ್ಯವೆಂಬ ಅಭಿಪ್ರಾಯವಿರುವ ಈ ಕಾಲದಲ್ಲಿ ಓದುವುದಕ್ಕೆ ವ್ಯಾಸಂಗ ಕ್ರಮದಲ್ಲಿ ಪ್ರಧಾನ ಸ್ಥಾನವನ್ನು ಕೊಟ್ಟಿದೆ.

ಶಾಲಾ ಜೀವನದಲ್ಲಿ ವಿದ್ಯಾರ್ಥಿ ಈ ಕಲೆಯನ್ನು ಬೆಳೆಸಿಕೊಳ್ಳಲು ಸಾಕಷ್ಟು ಅವಕಾಶವಿರಬೇಕು. ವಿವಿಧ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪಠ್ಯಪುಸ್ತಕಗಳ ಮೂಲಕ, ಆಟಪಾಠಗಳ ಮೂಲಕ, ವಿಚಾರಗೋಷ್ಠಿಗಳ ಮೂಲಕ, ಅರಿಯಲು ಅನುಕೂಲವಿರಬೇಕು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಅತ್ಯಗತ್ಯವಾಗಿ ಬೇಕಾದುದು ಓದಿನ ನೈಪುಣ್ಯ. ಹೀಗಾಗಿ ಶಾಲೆಯಲ್ಲಿ ಕಲಿಯುವ ಚರಿತ್ರೆ, ಭೂಗೋಳ, ಸಾಹಿತ್ಯ, ವಿಜ್ಞಾನ, ಲೆಕ್ಕ ಮುಂತಾದ ವಿಷಯಗಳಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಬೇಕಾದರೆ, ಒಳ್ಳೆಯ ಓದುಗಾರಿಕೆಯನ್ನು ಸಾಧಿಸಬೇಕು. ಅಂದರೆ ಓದುಗಾರಿಕೆಯ ಅನೇಕ ಉತ್ತಮ ಲಕ್ಷಣಗಳನ್ನು ಪರಿಚಯ ಮಾಡಿಕೊಟ್ಟು ಓದುವುದರಲ್ಲಿ ಅಭಿರುಚಿಯನ್ನು ಮಕ್ಕಳಲ್ಲಿ ಬೆಳೆಸಬೇಕು; ಅದಕ್ಕಾಗಿ ವ್ಯಾಸಂಗ ಪದ್ಧತಿಯಲ್ಲಿ ಪರಿಣಾಮಕಾರಿಯಾಗಿ ಬೋಧಿಸುವ ಕ್ರಮವನ್ನು ರೂಢಿಸಿಕೊಳ್ಳುವುದು ಅಗತ್ಯ.

ಓದುಗಾರಿಕೆ ವ್ಯಕ್ತಿಯಲ್ಲಿ ಶಿಕ್ಷಣದಿಂದ ಮೂಡಬೇಕಾದ ಉಪಯುಕ್ತ ಕೌಶಲ್ಯವಾದರೂ ಅದನ್ನು ಬೋಧಿಸುವುದು ಸುಲಭದ ಕೆಲಸವೇನಲ್ಲ. ಏಕೆಂದರೆ ಅದು ಅನೇಕ ಸೂಕ್ಷ್ಮವೂ ಕ್ಲಿಷ್ಟಕರವೂ ಆದ ಅಂಶಗಳನ್ನು ಒಳಗೊಂಡಿದೆ. ವಿದ್ಯಾರ್ಥಿಯಲ್ಲಿ ಕಂಡುಬರುವ ಓದುಗಾರಿಕೆಯ ದೋಷಗಳನ್ನೂ ನ್ಯೂನತೆಗಳನ್ನು ನಿವಾರಿಸುವಂತೆ ಅದನ್ನು ಬೋಧಿಸುವುದು ಶಾಸ್ತ್ರೀಯವೂ ಕೌಶಲ್ಯಪೂರ್ಣವೂ ಆದ ಕಾರ್ಯ, ಹಾಗೂ ಸಾಮೂಹಿಕವಾಗಿ ತೃಪ್ತಿಕರವಾದ ರೀತಿಯಲ್ಲಿ ಬೋಧಿಸುವುದು ಇನ್ನೂ ಕಷ್ಟದ ಕೆಲಸ. ಆದರೆ, ಅನೇಕ ಸಂಶೋಧನೆಗಳಿಂದ, ಹಲವಾರು ಬೋಧನ ತಂತ್ರಗಳು ಬೆಳಕಿಗೆ ಬಂದು ಓದುಗಾರಿಕೆಯನ್ನು ಪರಿಣಾಮಕರಿಯಾಗಿ ಬೋಧಿಸಬಲ್ಲ ವಿಧಾನಗಳು ಈಗ ರೂಪುಗೊಂಡಿವೆ. ಹಾಗೂ ಓದುಗಾರಿಕೆಯಲ್ಲಿ ಕಂಡುಬರುವ ಲೋಪದೋಷಗಳಿಗೆ ಕಾರಣವೆನಿಸುವ ವಿಶಿಷ್ಟ ದೌರ್ಬಲ್ಯಗಳನ್ನು ನಿವಾರಿಸುವ ವಿಧಾನಗಳೂ ಬಳಕೆಗೆ ಬರುತ್ತಿವೆ. (ಎ.ಎಂ.ಎಸ್.)

**ಓದುಗಾರಿಕೆಯ ಬೋಧನಕ್ರಮ:** ಪ್ರತಿ ಅಕ್ಷರಕ್ಕೂ ಪ್ರತ್ಯೇಕವೂ ವಿಶಿಷ್ಟವೂ ಆದ ಧ್ವನಿ ಕನ್ನಡದಂಥ ಕೆಲವು ಭಾಷೆಗಳಲ್ಲಿ ಹಿಂದಿನಿಂದಲೂ ಇದೆ; ಮತ್ತೆ ಕೆಲವು ಭಾಷೆಗಳು ತಮ್ಮ ಈ ಕೊರತೆಯನ್ನು ತುಂಬಿಕೊಳ್ಳಲು ಉಚ್ಚಾರ ಚಿಹ್ನೆಗಳನ್ನು ಬಳಸಿಕೊಳ್ಳುವುದಲ್ಲದೆ ಹೊಸ ಕೆಲವು ಅಕ್ಷರಗಳನ್ನು ಸೇರಿಸಿಕೊಳ್ಳುವುದರ ಮೂಲಕ ತಮ್ಮ ವರ್ಣಮಾಲೆಯನ್ನೇ ಮಾರ್ಪಡಿಸಿಕೊಳ್ಳುತ್ತಿವೆ. ಇದರಿಂದ ಓದುಗಾರಿಕೆಯಲ್ಲಿ ನಿಷ್ಕೃಷ್ಟತೆ ಮೂಡುವುದರ ಜೊತೆಗೆ ಅದನ್ನು ಕಲಿಯುವುದೂ ಬೋಧಿಸುವುದೂ ಸರಳವಾಗುತ್ತದೆ. ಅಕ್ಷರ ಧ್ವನಿಯಿರುವ ಭಾಷೆಗಳಲ್ಲಿ ಓದುಗಾರಿಕೆಯನ್ನು ಅಕ್ಷರಾಭ್ಯಾಸದಿಂದ ಆರಂಭಿಸುವುದು ವಾಡಿಕೆ. ಭಾರತದಲ್ಲಿ ಪುರಾತನ ಕಾಲದಿಂದಲೂ ಈ ಕ್ರಮ ಬಳಕೆಯಲ್ಲಿದೆ. ಮಕ್ಕಳಿಗೆ ವರ್ಣಮಾಲೆಯ ಅಕ್ಷರಗಳನ್ನೂ ಅವುಗಳ ಹೆಸರುಗಳನ್ನೂ ಕಲಿಸಿ ಅನಂತರ ಕಾಗುಣಿತವನ್ನು ಹೇಳಿಕೊಟ್ಟು

ಅಕ್ಷರಗಳನ್ನು ಜೋಡಿಸಿ ಅರ್ಥಪೂರ್ಣ ಪದಗಳನ್ನು ಓದುವುದನ್ನು ಕಲಿಸುತ್ತಿದ್ದರು. ಅಕ್ಷರಗಳನ್ನು ಗುರುತಿಸಿ ಪದಗಳ ಶಬ್ದೋಚ್ಚಾರಣೆಯ ಮೇಲೆ ಒಡೆತನ ಸಿದ್ಧಿಸಿದಂತೆ ಕ್ರಮವಾದ ಓದುಗಾರಿಕೆಯನ್ನು ಆರಂಭಿಸುವುದೇ ಅಕ್ಷರ ಮೂಲ ಬೋಧನಕ್ರಮ (ಎ.ಬಿ.ಸಿ. ಬೋಧನಕ್ರಮ). ಈ ಕ್ರಮದಲ್ಲಿ ಓದುಗಾರಿಕೆಯನ್ನು ಬೋಧಿಸುವುದು (ಧ್ವನ್ಯಾತ್ಮಕ) ಅಕ್ಷರವುಳ್ಳ ಭಾಷೆಗಳಲ್ಲೇನೋ ಸರಳವಾಗಿ ತೋರುತ್ತದೆ; ಆದರೆ ಮಿಕ್ಕ ಭಾಷೆಗಳಲ್ಲಿ ಇದು ತೊಡಕಿನದೇ ಆಗುತ್ತದೆ. ಆದರೆ ಅಕ್ಷರಮೂಲ ಬೋಧನಕ್ರಮ ಮನೋವಿಜ್ಞಾನ ಸಮ್ಮತವಲ್ಲವೆಂಬ ವಿಷಯ ಪ್ರಚಾರವಾದಂತೆ ನೂತನ ಬೋಧನ ವಿಧಾನಗಳು ಬಳಕೆಗೆ ಬರುತ್ತಿವೆ. ಒಂದೊಂದು ಅಕ್ಷರದ ಧ್ವನಿಯನ್ನೂ ಪ್ರತ್ಯೇಕವಾಗಿ ಗುರುತಿಸುವ ಬದಲು ಮಕ್ಕಳು ಇಡೀ ಪದದ ಧ್ವನಿಯನ್ನೇ ಗುರುತಿಸುವರೆಂದೂ ಆದ್ದರಿಂದ ಧ್ವನಿಕವಲ್ಲದ ಭಾಷೆಗಳಾದರೆ ಪ್ರತಿ ಅಕ್ಷರವನ್ನೂ ಪ್ರತ್ಯೇಕವಾಗಿ ಓದುವುದನ್ನು ಕಲಿಸುವ ಬದಲು ಅವು ಪದದ ಸಮಗ್ರ ಧ್ವನಿನಿರೂಪಣೆಗೆ ಸಲ್ಲಿಸುವ ಪ್ರತ್ಯೇಕ ಧ್ವನಿಕೊಡುಗೆಯ ಸಂಯೋಜಿತ ರೂಪದಲ್ಲಿ ಇಡೀ ಪದದ ಧ್ವನಿಯನ್ನು ಗುರುತಿಸಿ ಓದುವುದನ್ನು ಕಲಿಸಬೇಕೆಂಬ ಪ್ರಚಾರ ನಡೆಯಿತು. ಅದಕ್ಕಾಗಿ ಒಂದೊಂದು ಪದದಲ್ಲೂ ಇರತಕ್ಕ ಅಕ್ಷರಗಳ ಧ್ವನಿಯನ್ನು ಗುರುತಿಸುವಾಗ ವಿಧವಿಧವಾದ ಸೂಚನೆಗಳನ್ನು ಮುದ್ರಣ ಪ್ರತಿಗಳಲ್ಲಿ ಕೊಡುವುದೂ ಆರಂಭವಾಯಿತು. ಒಂದೇ ಅಕ್ಷರ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರತಿನಿಧಿಸುವ ಬೇರೆ ಬೇರೆ ಧ್ವನಿಗಳನ್ನು ಗುರುತಿಸುವುದನ್ನು ಕಲಿಸುವುದು ಈ ಕಾರ್ಯದ ಉದ್ದೇಶವಾಗಿತ್ತು. ಧ್ವನಿಯ ಸಂಯೋಜನೆಗೆ ಪ್ರಾಧಾನ್ಯವುಳ್ಳ ಈ ಪದಮೂಲ ಬೋಧನಕ್ರಮ ಕಳೆದ ಶತಮಾನದ ಮಧ್ಯದವರೆಗೂ ಪ್ರಚಾರದಲ್ಲಿದ್ದರೂ ಅಕ್ಷರಮೂಲ ಕ್ರಮವನ್ನೂ ಅದರಲ್ಲಿ ಸೇರಿಸಿಕೊಳ್ಳುವುದು ಅಗತ್ಯವೆಂಬ ಅನುಭವ ಬೆಳೆಯಿತು. ಇದನ್ನು ಸಂಯೋಜನ (ಸಿಂತೆಟಿಕ್) ಕ್ರಮ ಎನ್ನುವುದುಂಟು.

ಅನಂತರ ನಡೆದ ಸಂಶೋಧನೆಗಳು ಮಕ್ಕಳು ಅಕ್ಷರವನ್ನು ಗುರುತಿಸಿ ಓದುವಷ್ಟೇ ಜಾಗ್ರತೆ ಪದಗಳನ್ನೂ ಗುರುತಿಸಿ ಓದುವರೆಂಬುದನ್ನು ತೋರಿಸಿಕೊಟ್ಟುವು; ಆದ್ದರಿಂದ ಪದಗಳನ್ನು ದೃಷ್ಟಿಯಿಂದ ಗುರುತಿಸಿ ಓದುವುದನ್ನು ಅಕ್ಷರ ಧ್ವನಿಗಳನ್ನು ಗುರುತಿಸುವುದನ್ನು ಕಲಿಯುವ ಮುನ್ನವೆ, ಕಲಿಸುವುದು ಅಗತ್ಯವೆಂದು ಸಲಹೆ ಬಂತು. ಅನೇಕ ಶಾಲೆಗಳು ಈ ಕ್ರಮವನ್ನು ವಿಶ್ಲೇಷಣಕ್ರಮ ಎಂಬ ಹೆಸರಿನಿಂದ ಪ್ರಚಾರಕ್ಕೆ ತಂದುವು. ಇದನ್ನು ದೃಷ್ಟಿಪಠನಕ್ರಮ ಎಂದೂ ಕರೆಯುವರು. ಅನಂತರ ಇಡೀ ವಾಕ್ಯವನ್ನೇ ಗುರುತಿಸುವುದನ್ನು ಕಲಿಸುವ ಬೋಧನಕ್ರಮವೂ ಆರಂಭವಾಯಿತು. ಆಮೇಲೆ ಅದರ ಒಂದೊಂದು ಪದವನ್ನೂ ಗುರುತಿಸುವುದನ್ನು ಕಲಿಸುತ್ತಿದ್ದರು. ಈ ಎರಡು ಕ್ರಮಗಳಲ್ಲೂ ಸೌಲಭ್ಯಗಳಂತೆ ತೊಡಕುಗಳೂ ಇವೆ. ಆದ್ದರಿಂದ ಈಚೆಗೆ ಕಾರ್ಯನಿರತ ಅಧ್ಯಾಪಕರು ಇವೆರಡರ ಉತ್ತಮಾಂಶಗಳನ್ನೂ ಬಳಸಿಕೊಂಡು ಒಂದು ಸಮ್ಮಿಶ್ರ ವಿಧಾನವನ್ನು ಅನುಸರಿಸುತ್ತಿರುವರು.

**ಓದುಗಾರಿಕೆಯ ಕಲಿವಿನಲ್ಲಿ ನೇತ್ರಚಲನೆಯ ಪಾತ್ರ:** ಓದುಗಾರಿಕೆಯಲ್ಲಿ ನೇತ್ರ ಚಲನೆಯದೊಂದು ಬಹುಮುಖ್ಯ ಪಾತ್ರ; ಕಳೆದ ಶತಮಾನದ ಕೊನೆ ಕೊನೆಯವರೆಗೂ ಕಣ್ಣುಗಳು ಎಡದಿಂದ ಬಲಕ್ಕೆ ಪಂಕ್ತಿಯ ಮೇಲೆ ಒಂದೇ ಸಮನೆ ಚಲಿಸುವುವು ಎಂದು ನಂಬಲಾಗಿತ್ತು. ಈಚಿನ ಸಂಶೋಧನೆಗಳು ಕಣ್ಣಿನ ನೋಟ ಎಡದಿಂದ ಬಲಕ್ಕೆ ನಿಂತು ನಿಂತು ಸಾಗುವುದೆಂದು ತೋರಿಸಿವೆ. ಈ ಒಂದೊಂದು ನಿಲುವೂ ಹಿಂದಿನ ಪದಗಳ ಅರ್ಥವನ್ನು ಕ್ರೋಡೀಕರಿಸಿಕೊಳ್ಳುವುದಕ್ಕೂ ಮುಂದಿನ ಪದಗಳ ಅರ್ಥವನ್ನು ಅದರೊಡನೆ ಸಮೀಕರಿಸಿ ಹೊಂದಿಸಿಕೊಳ್ಳುವುದಕ್ಕೂ ನೆರವಾಗುತ್ತದೆ. ಪಂಕ್ತಿ ಮುಗಿದೊಡನೆ ಕಣ್ಣು ವೇಗವಾಗಿ ಹಿಂಚಲನೆ ನಡೆಸುತ್ತದೆ. ಕಣ್ಣಿನ ಚಲನೆಯನ್ನೂ ಉಚ್ಚರಿಸುವ ಧ್ವನಿಯನ್ನೂ ಏಕಕಾಲದಲ್ಲಿ ಚಿತ್ರಿಸಿಕೊಂಡು ಪರಿಶೀಲಿಸುವ 'ದೃಶ್ಯ-ಶಬ್ದ' ಚಿತ್ರಣದ ತಂತ್ರ ಆರಂಭವಾದ ಮೇಲೆ ನಡೆಸಿದ ಪ್ರಯೋಗಗಳಿಂದ ಧ್ವನಿಗಿಂತ ಮುಂದೆ ಕಣ್ಣನೋಟ ಸಾಗುವುದೆಂಬುದು ವ್ಯಕ್ತಪಟ್ಟಿದೆ. ಮೌನವಾಚನವಾದರೆ ಕಣ್ಣಿನ ನೋಟದ ಚಲನೆ ಭಿನ್ನ ರೀತಿಯದಾಗುವುದೆಂಬುದೂ ಗೊತ್ತಾಗಿದೆ. ಅಂತೆಯೇ ಗಟ್ಟಿಯಾಗಿ ಓದುವ ಮತ್ತು ಮೌನವಾಗಿ ಓದುವ ಕ್ರಿಯೆಗಳಿಗಿರುವ ವ್ಯತ್ಯಾಸವೂ ಗೋಚರವಾಗಿದೆ. ಅದರ ಫಲವಾಗಿ ಅದುವರೆಗಾಗಿ ಕಡೆಗಣಿಸಿದ್ದ ಮೌನವಾಚನ ತಂತ್ರದ ಕಡೆ ಹೆಚ್ಚಿನ ಗಮನ ಹರಿಯಿತು; ಹಾಗೆಯೆ, ಕೇವಲ ಧ್ವನಿಯನ್ನು ಉಚ್ಚರಿಸಿ ಅಕ್ಷರಶಃ ಓದುವುದೊಂದೇ ಓದುಗಾರಿಕೆಯ ಪೂರ್ಣ ಉದ್ದೇಶವಲ್ಲವೆಂಬುದೂ ಓದಿದ ಅಂಶದ ಭಾವನೆಗಳನ್ನು ಅರ್ಥಮಾಡಿಕೊಂಡು ಸೂಕ್ತಮನೋಭಾವ ತಾಳುವುದೂ ಅಗತ್ಯ ಎಂಬ ಅಂಶವೂ ಸ್ಪಷ್ಟಪಟ್ಟಿರುವುದು.

**ಓದುಗಾರಿಕೆಯ ಕಲಿವಿನ ಹಂತಗಳು:** ಇದರಲ್ಲಿ ನಾಲ್ಕು ಮುಖ್ಯ ಅಂತಸ್ತುಗಳನ್ನು ಗುರುತಿಸಬಹುದು. 1. ಸಿದ್ಧತೆಯ ಹಂತ: ಜನನದಿಂದಲೇ ಈ ಸಿದ್ಧತೆ ಆರಂಭವಾಗುತ್ತದೆ; ಅನುಭವಾರ್ಜನೆ, ಭಾಷೆಯ ಬೆಳವಣಿಗೆ, ಇತರರ ಮಾತನ್ನೂ ಓದನ್ನೂ ಕೇಳುವುದು, ಇತರರೊಡನೆ ಸಹಕರಿಸಿ ಕೆಲಸ ಮಾಡುವುದು, ಹೇಳಿದಂತೆ ಮಾಡುವುದು-ಇವೆಲ್ಲ ಓದುಗಾರಿಕೆಗೆ ಸಿದ್ಧತಾರೂಪದ ತರಬೇತು. ಜೊತೆಗೆ ಮನೆಯಲ್ಲಿ ಹಿರಿಯರ ಜೀವನದಲ್ಲಿ ಓದುಗಾರಿಕೆ ವಹಿಸುವ ಪಾತ್ರದ ಪ್ರಭಾವವೂ ಅದರ ಮೇಲೆ ಬಿದ್ದು, ಆ ಮುಖವಾಗಿ ಅವರ ಆಸಕ್ತಿಯೂ ತದಂಗವಾಗಿ ಅವರಲ್ಲಿ ಆ ಕಾರ್ಯಕ್ಕೆ ಸಿದ್ಧತೆಯೂ ಮೂಡುತ್ತವೆ; ಶಿಶುವಿಹಾರದ ಕಾರ್ಯಕ್ರಮಗಳು ಮಕ್ಕಳಲ್ಲಿ ಮಾತುಗಾರಿಕೆ ಮತ್ತು ಅನುಭವಗಳನ್ನು ರೂಢಿಸಿ ಆ ಸಿದ್ಧತೆಯನ್ನು ಬೆಳೆಸುತ್ತವೆ. ಸು. ಆರು ವರ್ಷದ ಮಗುವಿನ ಸರಾಸರಿ ದೈಹಿಕ, ಭಾವಾತ್ಮಕ, ಸಾಮಾಜಿಕ ಮತ್ತು ಭಾಷಾರೂಪದ ಸಿದ್ಧತೆ ಓದುಗಾರಿಕೆಯ ಆರಂಭಕ್ಕೆ ಸೂಕ್ತಕಾಲವೆಂದು ಪರಿಗಣಿತವಾಗಿದೆ. 2. ಓದುವ ಅಂತಸ್ತು; ಸುಲಭ ಪದಗಳನ್ನು ಗುರುತಿಸುವುದೇ ಎರಡನೆಯ ಹಂತ. ಈ ಹಂತದ ಕೊನೆಯಲ್ಲಿ 300 ಪದಗಳನ್ನು ಓದುವವರು. ಕಠಿಣವೂ ನೂತನವೂ ಆದ ಪದಗಳನ್ನು ಓದುವುದು ಕಷ್ಟವಾದರೂ ಕ್ರಮಕ್ರಮವಾಗಿ ಆ ಮುಖವಾಗಿ ಅಭಿವೃದ್ಧಿ ಸಾಧಿಸಬಲ್ಲರು. ಪ್ರಾಥಮಿಕ ಅಂತಸ್ತಿನ ಕೊನೆಗೆ ಸುಲಭ ಪಾಠಗಳನ್ನು ಸ್ವತಂತ್ರವಾಗಿ ಓದಬಲ್ಲರು. 3. ಶಬ್ದಾವಳಿಯ ಬೆಳವಣಿಗೆಯ ಹಂತ; ಕಠಿಣಪದಗಳನ್ನು ಓದುವ ಕೌಶಲ್ಯ ಬೆಳೆದಂತೆ ಶಬ್ದಾವಳಿ ಹೆಚ್ಚಿ ಅರ್ಥಜ್ಞಾನ ವಿಸ್ತರಿಸುತ್ತದೆ. ಮುಂದಿನ ಓದುಗಾರಿಕೆಗೆ ಇವೆರಡೂ ಸಹಾಯಮಾಡುತ್ತವೆ. ಜೊತೆಗೆ ವಿಜ್ಞಾನ, ಪ್ರವಾಸ, ಸಮಾಜಪಾಠ ಇತ್ಯಾದಿ ವಿಷಯಗಳ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿಯೂ ಮೂಡುತ್ತದೆ. ವೈಯಕ್ತಿಕ ಆಸಕ್ತಿಗಳನ್ನು ಈಡೇರಿಸಿಕೊಂಡು ಆನಂದಪಡಲು ಓದನ್ನು ಬಳಸುವುದು ಪ್ರೌಢಶಾಲೆಗಳಲ್ಲಿ ಆರಂಭವಾಗುತ್ತದೆ. 4.ಅಭಿರುಚಿಯನ್ನು ಬೆಳೆಸುವ ಓದುಗಾರಿಕೆ ಹಿಂದೆ ಸಾಧಿಸಿರುವ ಓದುಗಾರಿಕೆಯ ಕೌಶಲ್ಯ ಈಗ ಹೆಚ್ಚು ಪರಿಣಾಮಕಾರಿಯೂ ಪ್ರಭಾವಕಾರಿಯೂ ಆಗುತ್ತದೆ. ಪದಗಳ ಅರ್ಥವ್ಯಾಪ್ತಿ ವಿಸ್ತರಿಸುವುದಲ್ಲದೆ ಸ್ಪಷ್ಟತೆಯನ್ನೂ ಸಾಧಿಸುತ್ತದೆ. ಓದಿದ ವಿಷಯದಲ್ಲಿ ಜ್ಞಾನವನ್ನು ವಿವೇಚಿಸಿ ತನ್ನ ಜೀವನದಲ್ಲಿ ಬಳಸಿಕೊಳ್ಳುವ ಶಕ್ತಿಯೂ ಮೂಡುತ್ತದೆ. ಆಗ ಓದುಗಾರಿಕೆಯನ್ನು ವ್ಯಕ್ತಿಯ ಆಸಕ್ತಿಯ ವಿಶಿಷ್ಟ ಕ್ಷೇತ್ರದಲ್ಲಿ ಬಳಸುವುದು ಆರಂಭವಾಗುತ್ತದೆ.

**ಓದುಗಾರಿಕೆಯ ಬೋಧನೆಗೆ ಸಿದ್ಧತೆ:** ಕೆಲವು ಕುಟುಂಬಗಳಿಂದ ಶಾಲೆಗೆ ಬರುವ ಮಕ್ಕಳು ಓದುಗಾರಿಕೆಗೆ ಆಗಲೆ ಸಿದ್ಧತೆ ಪಡೆದಿರಬಹುದಾದರೂ ಮಿಕ್ಕ ಬಹುಮಂದಿ ಮಕ್ಕಳಿಗೆ ಅದು ಶಾಲೆಯಲ್ಲೇ ಆಗಬೇಕು. ಈಚಿನ ಕೆಲವು ಸಂಶೋಧನೆಗಳು ಸೂಚಿಸಿರುವಂತೆ, ಓದುಗಾರಿಕೆಗೆ ಪೂರ್ವಭಾವಿಯೆನ್ನಬಹುದಾದ ಕೆಲವು ಅಂಶಗಳನ್ನು ಅಧ್ಯಾಪಕರು ಗಮನದಲ್ಲಿರಿಸಿಕೊಂಡು ಕೆಲವು ಪೂರ್ವಭಾವಿ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡರೆ ಮಕ್ಕಳು ಮುಂದೆ ಓದುಗಾರಿಕೆಯನ್ನು ಸುಲಭವಾಗಿಯೂ ವೇಗವಾಗಿಯೂ ಕಲಿಯಬಲ್ಲರೆಂದು ಸ್ಪಷ್ಟಪಟ್ಟಿದೆ. ಆದ್ದರಿಂದ ಓದುಗಾರಿಕೆಯನ್ನು ಕಲಿಸುವ ಮುನ್ನ ಗಮನಿಸಬೇಕಾದ ಅಂಶಗಳನ್ನು ಇಲ್ಲಿ ಪರಿಶೀಲಿಸಬಹುದು.

ದೃಷ್ಟಿ ಮತ್ತು ಕೇಳುವಿಕೆ ಇವೆರಡೂ ಮಕ್ಕಳಲ್ಲಿ ತಮ್ಮ ಪಟುತ್ವವನ್ನು ಹೆಚ್ಚಿಸಿಕೊಳ್ಳುವಂತೆ ಸೂಕ್ತ ಚಟುವಟಿಕೆಗಳನ್ನು ಒದಗಿಸಬೇಕು. ಕಣ್ಣು ಮತ್ತು ಕಿವಿಗಳಲ್ಲೇನಾದರೂ ದೋಷವಿದ್ದರೆ ಅಗತ್ಯ ಚಿಕಿತ್ಸೆಯನ್ನೊದಗಿಸುವಂತೆ ಪೋಷಕರಿಗೆ ಸೂಚಿಸಬೇಕು; ಓದುಗಾರಿಕೆಯಲ್ಲಿ ಚಲನಕೌಶಲದ ಸಮಾಯೋಜನೆ ಪ್ರಮುಖ ಪಾತ್ರವಹಿಸುತ್ತದೆ. ಕೈಯನ್ನೂ ಕಣ್ಣನ್ನೂ ಎಡದಿಂದ ಬಲಕ್ಕೆ ಜೊತೆಗೂಡಿಸಿ ಓಡಿಸುವುದು ಅಭ್ಯಾಸವಾಗಬೇಕು. ಚಿತ್ರಗಳಿಗೆ ಬಣ್ಣ ತುಂಬಿಸುವುದು. ಚಿತ್ರಗಳ ಭಾಗಗಳನ್ನು ಕತ್ತರಿಸಿ ಬೇರ್ಪಡಿಸುವುದು, ಚಿತ್ರ ಬರೆದು ಬಣ್ಣ ತುಂಬುವುದು, ಮಣ್ಣಿನಿಂದ, ಮಣಿಗಳಿಂದ, ಕಡ್ಡಿಗಳಿಂದ ಚಿತ್ರ ರಚಿಸುವುದು-ಇಂಥ ಚಟುವಟಿಕೆಗಳಿಂದ ಕಣ್ಣು ಮತ್ತು ಕೈಗಳಿಗೆ ಆ ಬಗೆಯ ಸಿದ್ಧತೆ ಸಿದ್ಧಿಸುತ್ತದೆ. ಅಧ್ಯಾಪಕರು ಪ್ರಾಥಮಿಕ ಮೊದಲನೆಯ ತರಗತಿಯ ಆರಂಭದಲ್ಲಿ ಅಂಥ ಚಟುವಟಿಕೆಗಳನ್ನು ಒದಗಿಸಬೇಕು.

ಕೆಲವು ದೃಶ್ಯ ಮತ್ತು ಶ್ರವ್ಯಾನುಭವಗಳೂ ಸಿದ್ಧತೆಯ ಕಾಲದಲ್ಲಿ ದೊರಕಬೇಕು. ಸಮಾನ ಆಕೃತಿಯ ಗೆರೆ, ರೂಪ ಮುಂತಾದವನ್ನು ಗುರುತಿಸುವ ಮತ್ತು ಭಿನ್ನ ಆಕೃತಿಯವನ್ನು ಪ್ರತ್ಯೇಕಿಸುವ ಚಟುವಟಿಕೆಗಳನ್ನೂ ಒದಗಿಸಬೇಕು. ಧ್ವನಿಭೇದಗಳನ್ನು ಗುರುತಿಸಲಾರದ ಮಕ್ಕಳು ಓದುಗಾರಿಕೆಯನ್ನು ಕಲಿಯುವುದರಲ್ಲಿ ಹಿಂದುಳಿಯುವರು. ಆದ್ದರಿಂದ ಪದಗಳಲ್ಲಿ ಪಾತ್ರವಹಿಸುವ ಅಕ್ಷರಗಳ ಧ್ವನಿಗಳನ್ನು ಆಸಕ್ತಿಯಿಂದ ಮಕ್ಕಳು ಕೇಳುವಂತೆ ಮಾಡಿ ಆ ಮುಖವಾದ ಸಿದ್ಧತೆಯನ್ನೂ ರೂಢಿಸಿಕೊಳ್ಳಬೇಕು.

ಮಾತೃಭಾಷೆಯಲ್ಲಿ ಚೆನ್ನಾಗಿ ಮಾತಾಡುವುದೂ ಸರಿಯಾಗಿ ಪದಪ್ರಯೋಗ ಮಾಡುವುದೂ ಓದುಗಾರಿಕೆಯ ಕಲಿವಿಗೆ ತುಂಬ ನೆರವಾಗುತ್ತದೆ. ಆದ್ದರಿಂದ ಅಧ್ಯಾಪಕರು ಮಕ್ಕಳಿಗೆ ಕಥೆ ಹೇಳಿಸುವುದು, ಸಂವಾದ ನಡೆಸುವುದು, ತಮ್ಮ ಅನುಭವಗಳನ್ನು ಬಣ್ಣಿಸುವಂತೆ ಕೇಳುವುದು – ಇತ್ಯಾದಿ ಪೂರ್ವಭಾವಿ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಬಹುದು.

ಇತರ ಮಕ್ಕಳೊಡನೆ ಸಹಕರಿಸಿ ಕೆಲಸಮಾಡುವುದು, ಹಿಡಿದ ಕಾರ್ಯವನ್ನು ಗಮನ ಕೊಟ್ಟು ಮಾಡುವುದು, ತಮ್ಮ ನಿತ್ಯಜೀವನದ ಆಸಕ್ತಿಗಳಿಗೆ ಓದುಗಾರಿಕೆ ಮುಖ್ಯ ಎಂದು ಅರಿಯುವುದು-ಇವು ಓದುಗಾರಿಕೆಗೆ ಮುನ್ನ ನಡೆಯಬೇಕಾದ ಇತರ ಕೆಲವು ಸಿದ್ಧತೆಗಳು.

**ಬೋಧನಕ್ರಮ:** ಓದುಗಾರಿಕೆಗೆ ಅಗತ್ಯವೆನಿಸುವ ಪೂರ್ವಸಿದ್ಧತೆ ನಡೆದಿದ್ದರೆ ಮಕ್ಕಳು ತಮ್ಮ ಅನುಭವಕ್ಕೆ ಬಂದಿರುವ ಪದಗಳನ್ನು ಚಿತ್ರ, ಕ್ರಿಯೆ, ವಿವರಣೆ ಇತ್ಯಾದಿ ನಿದರ್ಶನಗಳ ಜೊತೆಯಲ್ಲಾದರೆ ಸುಲಭವಾಗಿ ಗುರುತಿಸಬಲ್ಲರು; ಬಾಲಬೋಧೆಯಲ್ಲಿ ಚಿತ್ರವನ್ನು ಮೇಲೆ

ಕೊಟ್ಟು ಕೆಳಗೆ ಪದಗಳನ್ನು ಮುದ್ರಿಸಿರುವಾಗ ಮಕ್ಕಳು ಪದಗಳನ್ನು ಗುರುತಿಸುವರು; ಹೊಸ ಹೊಸ ಪಾಠಗಳಲ್ಲಿ ಪದಗಳನ್ನು ಈ ರೀತಿ ಗುರುತಿಸಿದಂತೆ ಆಗಲೆ ಬಂದಿರುವ ಪದಗಳ ಪುನರಾವರ್ತನೆಯಾಗಿ ಅವನ್ನು ಗುರುತಿಸುವುದು ಸುಲಭವಾಗುತ್ತದೆ. ಬಾಲಬೋಧೆ ಮುಗಿಯುವ ವೇಳೆಗೆ ಅನೇಕ ಪದಗಳನ್ನು ಗುರುತಿಸುವುದು ಸಾಧ್ಯವಾಗುವುದು. ಪ್ರತಿ ಅಕ್ಷರಕ್ಕೂ ಸನ್ನಿವೇಶಕ್ಕೆ ತಕ್ಕಂತೆ ಧ್ವನಿ ವ್ಯತ್ಯಾಸವಾಗುವ ಇಂಗ್ಲಿಷಿನಂಥ ಭಾಷೆಯಲ್ಲಿ ಓದುಗಾರಿಕೆಯ ಬೋಧನೆಗೆ ಇದು ನಿಜವಾಗಿಯೂ ಅನುಕೂಲ. ಆದರೆ ಕನ್ನಡದಂಥ ಭಾಷೆಯಲ್ಲಿ ಪ್ರತಿ ಅಕ್ಷರಕ್ಕೂ ನಿರ್ದಿಷ್ಟ ಧ್ವನಿಯುಂಟು. ವರ್ಣಮಾಲೆಯ ಎಲ್ಲ ಅಕ್ಷರಗಳನ್ನೂ ಮೊದಲು ತಿದ್ದಿ ಹಾಕಿ ಕಲಿಸಿದರೆ ಒತ್ತಕ್ಷರ, ಕಾಗುಣಿತ ಇಲ್ಲದ ಎಲ್ಲ ಪದಗಳನ್ನೂ ಮಕ್ಕಳು ಓದಬಹುದಲ್ಲವೆ ? ಅಕ್ಷರಜ್ಞಾನವೇ ಇಲ್ಲದೆ ಪದಗಳನ್ನು ಓದಿಸಲು ನಡೆಸುವ ಯತ್ನ ಕಠಿಣವಲ್ಲವೆ? ಎಂಬ ಪ್ರಶ್ನೆಗಳು ಏಳುತ್ತವೆ. ನಿಜ, ಕನ್ನಡದ ಬಗ್ಗೆ ಹೇಳುವುದಾದರೆ ಇಂಥ ಅಕ್ಷರಮೂಲ ಬೋಧನಕ್ರಮ ಲಾಭದಾಯಕವೆ. ಆದರೆ ಅಕ್ಷರವನ್ನು ಮಕ್ಕಳಿಗೆ ಕಲಿಸುವುದೂ ಅವರಿಗೆ ಅರ್ಥವಾಗದ ಸಂಕೇತಗಳಿಗೆ ಧ್ವನಿಯನ್ನು ಪರಿಚಯ ಮಾಡಿಕೊಡುವುದೂ ಅಷ್ಟೇ ಕಷ್ಟವಾಗುವುದಿಲ್ಲವೆ ? ಆದ್ದರಿಂದ ಈಚೆಗೆ ಅಕ್ಷರಮೂಲ ಮತ್ತು ಪದಮೂಲ ಬೋಧನ ಕ್ರಮಗಳೆರಡನ್ನೂ ಒಟ್ಟುಗೂಡಿಸುವ ಯತ್ನ ನಡೆಯುತ್ತಿದೆ. ಇದೇ ಕ್ರಮವನ್ನು ಬಾಲಬೋಧೆಯನ್ನು ರಚಿಸುವಾಗಲೂ ಅನುಸರಿಸಲಾಗುತ್ತದೆ. ಮಕ್ಕಳ ಆಸಕ್ತಿಗೆ ನಿಲುಕುವ ಪದಗಳನ್ನು ಓದುವುದರಿಂದಲೇ ಪಾಠವನ್ನು ಆರಂಭಿಸಿದರೂ ಆ ಪದಗಳಲ್ಲಿರುವ ಅಕ್ಷರಗಳ ಪರಿಚಯವನ್ನು ಅಂದಿಗಂದಿಗೆ ಮಾಡಿಕೊಡುವುದರಿಂದ ಕ್ರಮೇಣ ಎಲ್ಲ ಅಕ್ಷರಗಳನ್ನೂ ಗುರುತಿಸುವುದನ್ನು ಕಲಿಯುವರು. ಹಾಗೂ ಮೊದಲು ಕಾಗುಣಿತರಹಿತವೂ ಒತ್ತಕ್ಷರಗಳಿಲ್ಲದವೂ ಆದ ಪದಗಳನ್ನು ಹಲವಾರು ಪಾಠಗಳಲ್ಲಿ ಕಲಿಸಿ ವರ್ಣಮಾಲೆಯ ಮುಖ್ಯ ಬಳಕೆಯ ಅಕ್ಷರಗಳನ್ನೆಲ್ಲ ಗುರುತಿಸುವಂತಾದ ಮೇಲೆ ಕ್ರಮಕ್ರಮವಾಗಿ ಕಾಗುಣಿತಾಕ್ಷರಗಳನ್ನೂ ಒತ್ತಕ್ಷರಗಳನ್ನೂ ಒಳಗೊಂಡ ಪದಗಳನ್ನು ತರುವುದು ಸೂಕ್ತವೆನಿಸುತ್ತದೆ. ಇದರಿಂದ ಮಕ್ಕಳ ಆಸಕ್ತಿಯನ್ನೂ ಬಳಸಿಕೊಂಡಂತಾಗುತ್ತದೆ–ಇದು ಮನೋವಿಜ್ಞಾನಕ್ಕೆ ಸಮ್ಮತವೆನಿಸುವ ಕ್ರಮ; ಜೊತೆಗೆ, ವರ್ಣಮಾಲೆಯ ಅಕ್ಷರಗಳ ಧ್ವನಿ ನಿರ್ದಿಷ್ಟತೆಯ ಸೌಲಭ್ಯವನ್ನೂ ಬಳಸಿಕೊಂಡಂತಾಗುತ್ತದೆ. ಮೊದಲ ಪುಸ್ತಕ ಮುಗಿಯುವ ವೇಳೆಗೆ ಅಕ್ಷರಗಳನ್ನು ಗುರುತಿಸಿ ಕೂಡಿಸಿ ಪದಗಳನ್ನು ಉಚ್ಚರಿಸುವುದು ತಕ್ಕಮಟ್ಟಿಗೆ ಸಿದ್ಧಿಸುತ್ತದೆ. ಪುಸ್ತಕದ ಕೊನೆಯಲ್ಲಿ ಬರುವ ಕಥೆ, ಪ್ರವಾಸ, ವಿವರಣೆ ಇತ್ಯಾದಿ ಪಾಠಗಳು ಓದುಗಾರಿಕೆಗೆ ಪ್ರೇರಕವಾಗುವಂಥ ವಸ್ತುವಿನಿಂದ ರಚನೆಯಾಗಿದ್ದರೆ ಓದುವುದರಲ್ಲಿ ಅವರಿಗೇ ವಿಶೇಷ ಆಸಕ್ತಿ ಮೂಡುತ್ತದೆ. ಅಂದಿಗಂದಿಗೆ ಮಕ್ಕಳಿಗೆ ಅಭ್ಯಾಸ ರೂಪದಲ್ಲಿ ಹಾಕುವ ಪ್ರಶ್ನೆಗಳಿಂದಲೂ ಮುದ್ರಿತ ಪಾಠದಿಂದ ಉತ್ತರ ಹುಡುಕಿಸುವಾಗಲೂ ಈ ಆಸಕ್ತಿ ಹೆಚ್ಚುವುದಲ್ಲದೆ ಪದಗಳನ್ನು ಗುರುತಿಸುವ ಶಕ್ತಿಯೂ ಬಲಗೊಳ್ಳುತ್ತದೆ.

**ಡೇನಿಯಲ್ ಕ್ರಮ:** ಈಚೆಗೆ ಡೇನಿಯಲ್ ಎಂಬ ತಜ್ಞ ಇಂಗ್ಲಿಷನ್ನು ಕಲಿಸಲು ಇಡೀ ಪದದ ಧ್ವನಿಯನ್ನು ಒಂದು ಘಟಕವನ್ನಾಗಿ ಮಾಡಿಕೊಂಡು ಬೋಧಿಸುವ ಹೊಸ ಕ್ರಮವನ್ನು ರೂಪಿಸಿದ್ದಾನೆ. ಪರಿಚಿತ ಪದವೊಂದನ್ನು ಚಿತ್ರ, ಸಂಭಾಷಣೆ ಇತ್ಯಾದಿ ಸಾಧನಗಳಿಂದ ಕಲಿಸಿ ಆ ಪದದ ಸಮಗ್ರ ಧ್ವನಿ ನಿರೂಪಣೆಯಲ್ಲಿ ಪ್ರತಿ ಅಕ್ಷರದ ಧ್ವನಿಯನ್ನೂ ಪ್ರಯೋಗ ಕ್ಷೇತ್ರವನ್ನೂ ಪರಿಚಯ ಮಾಡಿಕೊಡಬೇಕು. ಆದರೆ ಮತ್ತೊಂದು ಪದವನ್ನು ಕಲಿಸುವಾಗ ಅನೇಕ ವೇಳೆ ಆ ಅಕ್ಷರಗಳು ಧ್ವನಿ ರೂಪಣೆಯಲ್ಲಿ ಅದೇ ಪಾತ್ರವನ್ನು ವಹಿಸದಿರಬಹುದು. ಆದ್ದರಿಂದ ನಿತ್ಯಜೀವನದಲ್ಲಿ ಬಳಸುವ ಅನೇಕ ಪದಗಳನ್ನು ಕಲಿಸಿ ಆಯಾ ಪದದಲ್ಲಿ ಪ್ರತಿ ಅಕ್ಷರವೂ ವಹಿಸುವ ಧ್ವನಿಪಾತ್ರವನ್ನು ಗುರುತಿಸುವುದನ್ನು ಕಲಿಸಬೇಕು. ಇದರಿಂದ ಸಾಮಾನ್ಯ ಪದಗಳನ್ನೂ ಪದಪುಂಜಗಳನ್ನೂ ಓದುವುದು ಸರಾಗವಾಗುತ್ತದೆ. ಈ ಸಂಯೋಜಿತ ಕ್ರಮದಲ್ಲಿ ಅಕ್ಷರಮೂಲ ಪದ್ಧತಿಯಂತೆ ಪದಮೂಲ ಪದ್ಧತಿಯನ್ನೂ ಬಳಸಿಕೊಂಡಿರುವುದು ಸ್ಪಷ್ಟಪಡುತ್ತದೆ.

**ಪಿಟ್‍ಮನ್ನನ ಕ್ರಮ:** ಈಚೆಗೆ ಎಂದರೆ ಕಳೆದ ದಶಮಾನದಿಂದ ಇಂಗ್ಲೆಂಡಿನಲ್ಲೂ ಅಮೆರಿಕದಲ್ಲೂ ಹೊಸದೊಂದು ಯತ್ನ ನಡೆಯುತ್ತಿದೆ. ಪಿಟ್‍ಮನ್ ಎಂಬಾತ ಓದುಗಾರಿಕೆಯ ಪ್ರಥಮ ಬೋಧನೆಯ ವರ್ಣಮಾಲೆ ಐಟಿಎ (ಇನಿಷಿಯಲ್ ಟೀಚಿಂಗ್ ಆಲ್ಫಬೆಟ್) ಎಂಬ ಒಂದು ಪಟವನ್ನು ತಯಾರಿಸಿದ. ಅದರಲ್ಲಿ ಅಕ್ಷರಗಳು ರೋಮನ್ ಲಿಪಿಯಲ್ಲಿವೆ ($q$ ಮತ್ತು $x$ ಇಲ್ಲ), ಜೊತೆಗೆ $x,EE$ ಇತ್ಯಾದಿ ಅಕ್ಷರಗಳ ಸಂಯೋಗದಿಂದ 14 ವಿಶಿಷ್ಟ ಧ್ವನಿಘಟಕಗಳ ಸಂಕೇತಗಳನ್ನೂ ರೂಪಿಸಿದ. ಇಂಗ್ಲೆಂಡ್ ಮತ್ತು ಕೆನಡ ದೇಶಗಳಲ್ಲಿ ಐಟಿಎ ವರ್ಣಮಾಲೆಯ ಕ್ರಮದಿಂದ ಬೋಧಿಸಲು ಯತ್ನಿಸಿ ಉತ್ತಮ ಫಲಿತಾಂಶ ಪಡೆಯಲಾಗಿದೆ. ಆದರೆ ಐಟಿಎ ಕೇವಲ ಒಂದು ಉಪಕರಣ, ಕೆಲವು ಅಕ್ಷರಗಳನ್ನೂ ಕೆಲವು ಪದಗಳನ್ನೂ ಗುರುತಿಸಲು ಮಾತ್ರ ಅದು ಅನುಕೂಲಿಸುವುದು ಎಂಬುದರ ಅರಿವಾದಂತೆ ಅದಕ್ಕಿದ್ದ ಪ್ರಾಮುಖ್ಯ ಕಡಿಮೆಯಾಗುತ್ತಿದೆ.

ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ತಮ್ಮ ಅನುಭವಕ್ಕೆ ಬಂದಿರುವ ಪದಗಳನ್ನು ಗುರುತಿಸುವುದನ್ನು ಕಲಿಯುವರು; ಮಾಧ್ಯಮಿಕ ಅಂತಸ್ತಿನಲ್ಲಿ ಅನೇಕ ಹೊಸ ಪದಗಳು ಅವರ ಗಮನಕ್ಕೆ ಬರುತ್ತವೆ. ಅವನ್ನು ಓದಿ ಅರ್ಥ ಗ್ರಹಿಸಲು ನಿಘಂಟಿನ ಬಳಕೆ ಅಗತ್ಯವಾಗುತ್ತದೆ. ಅಂಥ ನೂತನ ಪದಗಳನ್ನು ವಿವರಣೆ, ಚಿತ್ರ ಮಾದರಿ ಇತ್ಯಾದಿಗಳ ಹಿನ್ನೆಲೆಯಲ್ಲಿ ಪರಿಚಯ ಮಾಡಿಕೊಡುವುದು ಸುಲಭ. ಆ ವೇಳೆಗೆ ಇತರ ವಿಷಯಗಳ ವ್ಯಾಸಂಗದಲ್ಲೂ ಓದುಗಾರಿಕೆಯ ಬಳಕೆಯಾಗಿ ಪದಸಂಪತ್ತು ವೃದ್ಧಿಯಾಗಿರುತ್ತದೆ. ಆ ಬಗ್ಗೆಯೂ ನಿರ್ದಿಷ್ಟ ಬೋಧನಕಾರ್ಯಕ್ರಮ ಅಗತ್ಯ. ಅಧ್ಯಾಪಕರು ನೂತನ ಪದಗಳನ್ನು ಅವರ ಗಮನಕ್ಕೆ ತರುವುದರ ಜೊತೆಗೆ ಅವುಗಳ ಅರ್ಥವನ್ನು ಪರಿಚಯ ಮಾಡಿಕೊಳ್ಳುವುದಕ್ಕೂ ಅವನ್ನು ಬಳಸುವುದಕ್ಕೂ ಅವಕಾಶ ಕಲ್ಪಿಸಬೇಕು.

ಅರ್ಥಗ್ರಹಣ ಮತ್ತು ಗುರುತಿಸಿ ಓದುವ ಕಾರ್ಯ ಪ್ರಾಥಮಿಕ ಶಾಲೆಯ ಕೊನೆಯ ದಿನಗಳಿಂದ ಹಿಡಿದು ಪ್ರೌಢಶಾಲೆಗಳಲ್ಲೂ ಕಾಲೇಜುಗಳಲ್ಲೂ ಮುಂದುವರಿಯುತ್ತದೆ. ಮೊದಮೊದಲ ಪದಗಳ ಅರ್ಥ ಅವರ ಅನುಭವಕ್ಕೆ ಬಂದವೇ ಆದರೂ ಕ್ರಮಕ್ರಮವಾಗಿ ನೂತನ ಪದಗಳ ಮೂಲಕ ಹೊಸ ಅನುಭವ ಅವರಿಗಾಗುತ್ತದೆ. ಮೇಲ್ಮಟ್ಟಕ್ಕೆ ಹೋದಂತೆ ಪಠ್ಯಗ್ರಂಥಗಳ ವಸ್ತುವೂ ಕಷ್ಟವಾಗುತ್ತ ಹೋಗುತ್ತದೆ. ಪರಿಚಯವಿಲ್ಲದ್ದೂ ಆಗುತ್ತದೆ; ಅಮೂರ್ತ ಸ್ವರೂಪದ್ದೂ ಆಗುವುದುಂಟು. ಸಾಹಿತ್ಯದ ಒಂದು ಕೃತಿಯನ್ನು ಓದಿದಾಗ ಅದರ ಪೂರ್ಣಾನುಭವ ಆಗದಿರಬಹುದು. ಅದರ ಅಭಿಪ್ರಾಯ, ಭಾವನೆ, ಕಥಾಕೌಶಲ್ಯ ಇವೆಲ್ಲ ಪರಿಚಯವಾಗಲು ಬೇರೆ ಬೇರೆ ವಿಷಯಕ್ಕೆ ಸಂಬಂಧಿಸಿದ ಪಾಠಗಳನ್ನು ಓದಬೇಕಾಗಬಹುದು. ಹೀಗೆ ಮೇಲ್ಮಟ್ಟದಲ್ಲಿ ಓದುಗಾರಿಕೆ ಹೆಚ್ಚಿದಂತೆ ಅರ್ಥಗ್ರಹಣ, ಪದಗಳನ್ನು ಗುರುತಿಸುವಿಕೆ, ಮುಖ್ಯಾಂಶಗಳ ಗ್ರಹಣ, ವಿವರಗಳ ಗ್ರಹಣ, ತೀರ್ಮಾನ ಕೈಗೊಳ್ಳುವುದು, ಅನುಕರಿಸುವುದು, ವಿಮರ್ಶೆ ಇತ್ಯಾದಿಯೆಲ್ಲವೂ ಸೇರಿಕೊಂಡು ಭಾಷೆಯ ಪ್ರಯೋಗದ ವಿವಿಧ ಮುಖಗಳಲ್ಲಿ ಅನುಭವ ಹೆಚ್ಚುತ್ತದೆ.

**ಓದುಗಾರಿಕೆಯ ವೇಗ:** ಪದಗಳನ್ನು ಗುರುತಿಸುವಿಕೆ, ಅರ್ಥಗ್ರಹಣ ಇವು ಉತ್ತಮಗೊಂಡಂತೆ ಓದುಗಾರಿಕೆಯ ವೇಗ ಹೆಚ್ಚುತ್ತ ಹೋಗುತ್ತದೆ. ಪ್ರಾಥಮಿಕ ಶಾಲೆಯ ಮಕ್ಕಳು ಮೌನವಾಗಿ ಓದುವಾಗ ಮಾಧ್ಯಮಿಕ ಶಾಲೆಯ ಮಕ್ಕಳಿಗಿಂತ ನಿಧಾನವಾಗಿ ಓದುತ್ತಾರೆ. ಏಕೆಂದರೆ ಅವರಿಗೆ ಓದುಗಾರಿಕೆಯ ಮೂಲ ಕೌಶಲ್ಯ ಆಗತಾನೇ ಸಿದ್ಧಿಸಿರುತ್ತದೆ. ವಯಸ್ಕರ ಓದುಗಾರಿಕೆಯ ವೇಗದಲ್ಲೂ ಇದೇ ರೀತಿಯ ವ್ಯತ್ಯಾಸ ಕಂಡುಬರುತ್ತದೆ. ಅಲ್ಲದೆ ಕೃತಿಯ ಕ್ಲಿಷ್ಟತೆಯನ್ನನುಸರಿಸಿ ಒಬ್ಬನೇ ಒಂದನ್ನು ವೇಗವಾಗಿಯೂ ಇನ್ನೊಂದನ್ನು ನಿಧಾನವಾಗಿಯೂ ಓದಬಹುದು. ಕಾದಂಬರಿಯಾದರೆ ನಿಮಿಷಕ್ಕೆ ಮುನ್ನೂರು ಪದ ಓದುವವರು ಅರ್ಥಶಾಸ್ತ್ರದಲ್ಲಿ ಇನ್ನೂರರಂತೆ ಓದಬಹುದು; ತಾಂತ್ರಿಕ ವಿಷಯವಾದರೆ ನಿಮಿಷಕ್ಕೆ ನೂರು ಪದಗಳನ್ನು ಮಾತ್ರ ಓದಬಹುದು.

ತರಗತಿಯಲ್ಲಿ ಸೂಕ್ತ ಬೋಧನಕ್ರಮವನ್ನು ಅನುಸರಿಸಿ ಸರಾಗವಾಗಿ ಓದುವುದನ್ನು ಕಲಿಸುವುದರ ಜೊತೆಗೆ ಆ ಮುಖ್ಯವಾಗಿ ಒಳ್ಳೆಯ ಅಭ್ಯಾಸಗಳನ್ನೂ ಮಕ್ಕಳಲ್ಲಿ ಬೆಳೆಸಬೇಕು. ವಿರಾಮ ಕಾಲದಲ್ಲಿ ಆಸಕ್ತಿಯ ವಿಷಯಗಳನ್ನು ಕುರಿತ ತಮ್ಮ ಯೋಗ್ಯತೆಗೆ ನಿಲುಕುವಂಥ ಗ್ರಂಥಗಳನ್ನು ಓದಲು ಪ್ರೋತ್ಸಾಹಿಸಬೇಕು. ವಾಚನ ಗೋಷ್ಠಿಗಳನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು. ಗ್ರಂಥಾಲಯವೂ ಅವರ ಆಸಕ್ತಿಯ ವಿಷಯಗಳನ್ನು ಒದಗಿಸಬಲ್ಲ ಪುಸ್ತಕಗಳನ್ನು ಸಂಗ್ರಹಿಸಬೇಕು. ಶಾಲಾಕಾಲೇಜುಗಳು ಕ್ರಮಕ್ರಮವಾಗಿ ವಿದ್ಯಾರ್ಥಿಗಳಲ್ಲಿ ಓದುಗಾರಿಕೆಯ ಆಸಕ್ತಿಯನ್ನು ಗ್ರಂಥಾಭ್ಯಾಸದ ಮಟ್ಟದ ಆಸಕ್ತಿಯಾಗಿ ರೂಢಿಸಿಕೊಡಬೇಕು.

**ಓದುಗಾರಿಕೆಗೆ ಸೂಕ್ತ ಸನ್ನಿವೇಶಗಳು:** ಬೆಳಕು ಕಡಿಮೆಯಾದರೆ ಓದಲು ತೊಂದರೆಯಾಗುವುದು; ತರಗತಿಯಲ್ಲಿ 10 ಫುಟ್ ಕ್ಯಾಂಡಲ್ ಬೆಳಕಿಗಿಂತ ಕಡಿಮೆಯಿರಬಾರದು. ಮುದ್ರಣವಾಗಿರುವ ಕಾಗದ ಹೊಳೆಯದಂತೆ ಸ್ವಲ್ಪ ಮಾಸಲು ಬಿಳುಪಾಗಿರುವುದು ಉತ್ತಮ. ವಿವಿಧ ಬಣ್ಣಗಳ ಬೆರಕೆಗಿಂತ ಬಿಳಿಯ ಕಾಗದದ ಮೇಲೆ ಕಪ್ಪು ಮುದ್ರಣವಿದ್ದಲ್ಲಿ ಓದುಗಾರಿಕೆಗೆ ತೀರ ಪರಿಣಾಮಕಾರಿಯಾದ ಹಿನ್ನೆಲೆ ದೊರೆತಂತಾಗುತ್ತದೆ.

**ಮುದ್ರಣಾಕ್ಷರಗಳ ಆಕಾರ:** ಸಿರಿಲ್ ಬರ್ಟ್ ಎಂಬ ಇಂಗ್ಲಿಷ್ ಶಿಕ್ಷಣ ಸಂಶೋಧಕ ಸೂಚಿಸುವಂತೆ 7 ವರ್ಷಕ್ಕೂ ಕಡಿಮೆ ಮಕ್ಕಳ ಪುಸ್ತಕ 24 ಪಾಯಿಂಟ್‍ನಲ್ಲೂ 7–8 ವರ್ಷದವರಿಗೆ 18 ಪಾಯಿಂಟ್‍ನಲ್ಲೂ 8–9 ವರ್ಷದವರಿಗೆ 16 ಪಾಯಿಂಟ್‍ನಲ್ಲೂ 9–10 ವರ್ಷದವರಿಗೆ 14 ಪಾಯಿಂಟ್‍ನಲ್ಲೂ 10–12 ವರ್ಷದವರಿಗೆ 12 ಪಾಯಿಂಟ್‍ನಲ್ಲೂ 12 ವರ್ಷಗಳಿಗಿಂತ ಮೇಲ್ಪಟ್ಟವರಿಗೆ 11 ಪಾಯಿಂಟ್‍ನಲ್ಲೂ ಇರುವುದು. ಒಳ್ಳೆಯದೆಂದು ಸೂಚಿಸಿದ್ದಾನೆ. ಚಿಕ್ಕವರಿಗೆ ಪದಗಳ ನಡುವೆ ಹೆಚ್ಚು ಅಂತರ ಇರುವುದು ಅಗತ್ಯ. ಪಂಕ್ತಿ 3 ಅಂಗುಲಕ್ಕಿಂತ ಹೆಚ್ಚು ಉದ್ದವಾಗಿರಬಾರದು.

**ಓದುಗಾರಿಕೆಯಲ್ಲಿ ಅಭಿರುಚಿ:** ಹೆಣ್ಣು ಮತ್ತು ಗಂಡುಮಕ್ಕಳ ಓದುಗಾರಿಕೆಯ ಅಭಿರುಚಿಗಳಲ್ಲಿ ವ್ಯತ್ಯಾಸವಿದೆ. ಬಾಲಕರು ಸಾಹಸ, ರಚನೆ, ಹವ್ಯಾಸ, ವಿಜ್ಞಾನ ಇಂಥ ಪುಸ್ತಕಗಳನ್ನೋದುವರು. ಬಾಲಕಿಯರು ಮನೆಗೆಲಸ, ಕಲ್ಪನೆ, ಸಾಹಸ, ಮನೋರಂಜನೆ

ಇತ್ಯಾದಿ ಕೃತಿಗಳನ್ನು ಓದುವರು. ಯುವತಿಯರು ಪ್ರಣಯದ ಕಥೆ, ಕಾದಂಬರಿ ಮತ್ತು ಯುವಜನರ ಕಥೆಗಳನ್ನು ಓದುವರು. ಅಂತಾರಾಷ್ಟ್ರೀಯ ತಿಳಿವಳಿಕೆ, ವೈಯಕ್ತಿಕ ಆರೋಗ್ಯ-ಇವೆರಡನ್ನು ಕುರಿತ ಗ್ರಂಥಗಳ ವಾಚನ ಯುವಕ ಯುವತಿಯರಿಗೆ ಉಭಯಸಾಮಾನ್ಯ. ವಯಸ್ಕರ ಓದುವ ಅಭಿರುಚಿ ಅವರು ಪಡೆದಿರುವ ಶಿಕ್ಷಣ, ಮಾಡುತ್ತಿರುವ ಉದ್ಯೋಗ, ಲಿಂಗ ಮತ್ತು ವಾಸಿಸುವ ಸನ್ನಿವೇಶ-ಇವುಗಳನ್ನು ಅನುಸರಿಸಿ ಭಿನ್ನವಾಗಿರುತ್ತದೆ. ಅಧ್ಯಾಪಕರು ಈ ಅಂಶಗಳನ್ನೂ ಮನದಟ್ಟು ಮಾಡಿಕೊಂಡು ಅವರಿಗೆ ಓದುಗಾರಿಕೆಯಲ್ಲಿ ಸಲಹೆ ನೀಡಬೇಕು.

ಓದುಗಾರಿಕೆ ಮಾತಿಗೆ ಪ್ರಾಧಾನ್ಯವುಳ್ಳ ಕೌಶಲ. ಆದ್ದರಿಂದ ಅದನ್ನು ಬೋಧಿಸುವಾಗ ಯಾವ ಕ್ರಮವನ್ನೇ ಅನುಸರಿಸಲಿ ಸ್ಪಷ್ಟವಾಗಿ ಅಕ್ಷರಗಳನ್ನೂ ಪದಗಳನ್ನೂ ವಾಕ್ಯಗಳನ್ನು ಉಚ್ಚರಿಸುವ ಕಾರ್ಯಕ್ಕೆ ಅಧ್ಯಾಪಕರು ಮೊದಲಿಂದಲೂ ಗಮನ ಕೊಡುವುದು ಅಗತ್ಯ. ಓದುಗಾರಿಕೆಯ ಕಲಿವು ನೈಜ ಸನ್ನಿವೇಶದಲ್ಲಿ ಬರವಣಿಗೆಯೊಡನೆ ಜೊತೆಜೊತೆಯಾಗಿಯೇ ಸಾಗುತ್ತದೆ. ಆದ್ದರಿಂದ ಬರೆಯುವಾಗಲೂ ಸ್ಪಷ್ಟವಾಗಿ ಉಚ್ಚರಿಸುವುದನ್ನೇ ಕಲಿಸುತ್ತ ಹೋಗಬೇಕು. ನೂತನ ಪದಗಳನ್ನು ಅಧ್ಯಾಪಕರು ಆದರ್ಶವಾಗಿ ಉಚ್ಚರಿಸಿ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು. ಒಮ್ಮೆ ಹಾಗೆ ಕೇಳಿದ ಪದ, ಪದಪುಂಜ, ನುಡಿಗಟ್ಟು ಇತ್ಯಾದಿಗಳು ಮಕ್ಕಳ ಮನಸ್ಸಿನಲ್ಲಿ ಸ್ಫುಟಗೊಳ್ಳಬೇಕು. ಈಚೆಗೆ ಪದ್ಯ, ಗದ್ಯ, ಇತ್ಯಾದಿ ಕೃತಿಗಳನ್ನು ಆದರ್ಶವಾಗಿ ವಾಚಿಸಿರುವ ಧ್ವನಿಮುದ್ರಿಕೆಗಳನ್ನು ಈ ಕಾರ್ಯದಲ್ಲಿ ಬೋಧನೋಪಕರಣಗಳನ್ನಾಗಿ ಬಳಸಿಕೊಳ್ಳುತ್ತಿರುವರು, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಅಂತಸ್ತಿನಲ್ಲಿ ಭಾಷೆಯ ಬಳಕೆಯನ್ನೊಳಗೊಂಡ ವಿಧವಿಧವಾದ ಸಾಮೂಹಿಕ ಕಾರ್ಯಗಳಿಗೂ ಅವಕಾಶ ಕಲ್ಪಿಸಬಹುದು. (ಎನ್.ಎಸ್.ವಿ.)

**ಓದುಗಾರಿಕೆಯಲ್ಲಿ ನಿವಾರಕ ಬೋಧನೆ:** ವಿದ್ಯಾರ್ಥಿಗಳ ಓದುಗಾರಿಕೆಯಲ್ಲಿ ಕಂಡುಬರುವ ವಿಶಿಷ್ಟ ದೋಷಗಳನ್ನು ನಿವಾರಿಸಲು ಯತ್ನಿಸುವಾಗ ಈ ತತ್ತ್ವಗಳನ್ನು ಅನುಸರಿಸಬೇಕು. (ಅ) ಪ್ರತಿ ವಿದ್ಯಾರ್ಥಿಯ ಓದಿನಲ್ಲಿ ಕಂಡುಬರುವ ದೋಷಗಳನ್ನೂ ಅವುಗಳ ಸ್ವಭಾವ ಮತ್ತು ಕಾರಣಗಳನ್ನೂ ಶಾಸ್ತ್ರೀಯವಾಗಿ ಪರಿಶೀಲಿಸಬೇಕು; (ಆ) ಪ್ರತಿ ವಿದ್ಯಾರ್ಥಿಯ ಎಲ್ಲ ವಿವರಗಳನ್ನೂ ಅಂದರೆ, ಅವನ ಸ್ವಭಾವ, ಬುದ್ಧಿಶಕ್ತಿ, ಅಭಿರುಚಿಗಳು, ಕೌಟುಂಬಿಕ ಹಿನ್ನೆಲೆ, ಶಾಲಾಪ್ರಗತಿ-ಮುಂತಾದವುಗಳನ್ನು ಸಂಗ್ರಹಿಸಬೇಕು; (ಇ) ಪ್ರತಿ ವಿದ್ಯಾರ್ಥಿಯ ದೋಷ ಮತ್ತು ಮಟ್ಟಕ್ಕನುಗುಣವಾಗಿ ಬೋಧನ ಕ್ರಮವನ್ನು ರೂಪಿಸಬೇಕು; (ಈ) ನಿವಾರಕ ಪಾಠಕ್ರಮಗಳಲ್ಲಿ ಪ್ರತಿ ವಿದ್ಯಾರ್ಥಿ ಒಳ್ಳೆಯ ಮನೋಭಾವನೆಯನ್ನು ಬೆಳೆಸಿಕೊಳ್ಳುವಂತೆ, ಅವನಿಗೆ ಆಗಾಗ್ಗೆ ಈ ಕ್ರಮಗಳ ಉದ್ದೇಶ ಮತ್ತು ಅವನು ಸಾಧಿಸುತ್ತಿರುವ ಪ್ರಗತಿಯನ್ನು ತಿಳಿಸುತ್ತಿರಬೇಕು.

ಮೇಲೆ ತಿಳಿಸಿದ ಕೆಲವು ತತ್ತ್ವಗಳ ಆಧಾರದ ಮೇಲೆ ವೈಯಕ್ತಿಕ ಅಥವಾ ಸಾಮೂಹಿಕ ಸಂದರ್ಭಗಳಲ್ಲಿ ಕೈಗೊಳ್ಳುವ ನಿವಾರಕ ಕ್ರಮಗಳನ್ನು 3 ಹಂತಗಳನ್ನಾಗಿ ವಿಭಾಗಿಸಬಹುದು; 1 ದೋಷಗಳ ಸ್ವರೂಪ ನಿರ್ಣಯ; 2 ಕೆಲವು ಶಾರೀರಕ ಮತ್ತು ಮಾನಸಿಕ ದೋಷಗಳ ನಿವಾರಣೆ; 3 ನಿವಾರಕ ಬೋಧನಕ್ರಮದ ವ್ಯವಸ್ಥೆ.

**1 ದೋಷಗಳ ಸ್ವರೂಪ ನಿರ್ಣಯ:** ತಜ್ಞರು ವಿದ್ಯಾರ್ಥಿಗಳನ್ನು ವಿವರವಾಗಿ ಪರೀಕ್ಷಿಸಿ, ಓದಿನ ನ್ಯೂನತೆಗಳ ನಿರ್ದಿಷ್ಟ ಸ್ವರೂಪವನ್ನು ನಿರ್ಧರಿಸುವರು. ಮನೋವಿಜ್ಞಾನಿಗಳು, ವೈದ್ಯರು, ಸಮಾಜಸೇವಾ ಕಾರ್ಯಕರ್ತರು, ವಿಶೇಷ ತರಬೇತು ಪಡೆದ ಉಪಾಧ್ಯಾಯರು, ವಾಕ್‌ಚಿಕಿತ್ಸೆ ನಡೆಸಬಲ್ಲವರು ಈ ಕಾರ್ಯದಲ್ಲಿ ನೆರವಾಗಬೇಕು, ಹಲವು ಪ್ರಯೋಗಗಳ ಸಹಾಯದಿಂದ ಓದಿನ ದೋಷಗಳನ್ನೂ ಅವುಗಳ ಕಾರಣಗಳನ್ನೂ ಆರು ಮುಖ್ಯ ವಿಧಗಳನ್ನಾಗಿ ವಿಂಗಡಿಸಿದ್ದಾರೆ. ಆ ವಿಧಗಳಲ್ಲಿ ಮುಖ್ಯವಾದವನ್ನು ಮಾತ್ರ ಇಲ್ಲಿ ವಿವರಿಸಿದೆ. (ಅ) ಓದುವಾಗ ತೊಡರುವುದು, ಪದಗಳನ್ನು ಬಿಡುವುದು, ತಪ್ಪಾದ ಉಚ್ಚಾರಣೆ, ಒಂದು ಪದಕ್ಕೆ ಬದಲಾಗಿ ಮತ್ತೊಂದು ಪದವನ್ನು ಹೇಳುವುದು, ಹೊಸದಾಗಿ ಪದಗಳನ್ನು ಸೇರಿಸಿಕೊಂಡು ಓದುವುದು, ಪದಗಳ ಅನಾವಶ್ಯಕ ಪುನರುಚ್ಚಾರಣೆ-ಇವು ಪೂರ್ತಿಯಾಗಿ ಅರ್ಥಕೊಡುವ ಪದಪುಂಜಗಳನ್ನು ಓದದೆ, ಬಿಡಿಬಿಡಿಯಾಗಿ, ಅಕ್ಷರ ಅಥವಾ ಪದಗಳನ್ನು ಸೇರಿಸಿ ಓದುವ ಅಭ್ಯಾಸದಿಂದ, ಪದಸಂಪತ್ತಿನ ಅಭಾವದಿಂದ, ಅಜಾಗರೂಕತೆಯಿಂದ, ಕೇವಲ ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಊಹಿಸುವುದರಿಂದ, ಗಡಿಬಿಡಿಯಾಗಿ ಓದುವುದರಿಂದ ಮೂಡಿಕೊಳ್ಳುತ್ತವೆ. (ಆ) ಓದುವಾಗ ಬಹುಬೇಗ ಆಯಾಸಗೊಳ್ಳುವುದು, ಚಂಚಲತೆ, ಕಣ್ಣುಗಳಿಗೆ ಬಹು ಸಮೀಪದಲ್ಲಿ ವಸ್ತುಗಳನ್ನು ಹಿಡಿದುಕೊಳ್ಳುವುದು-ಇವು ಕಣ್ಣು ಅಥವಾ ಕಿವಿಗಳ ದೋಷಗಳಿಂದ, ಸಾಕಷ್ಟು ವಿಶ್ರಾಂತಿ, ನಿದ್ರೆಗಳ ಅಭಾವದಿಂದ, ಮೂಡಿಕೊಳ್ಳುತ್ತವೆ. (ಇ) ಪದಗಳನ್ನು ಉಚ್ಚರಿಸುವಾಗ ಅತಿ ಪ್ರಯಾಸಪಡುವುದು, ತೊದಲುವುದು, ಕೆಲವು ಶಬ್ದಗಳನ್ನು ಉಚ್ಚರಿಸಲು ಅಸಮರ್ಥನಾಗಿರುವುದು, ಕೆಲವು ಶಬ್ದಗಳನ್ನೇ ನುಂಗುವುದು-ಈ ರೀತಿಯ ತೊಂದರೆಗಳು ಮಾನಸಿಕ ಅಥವಾ ಶಾರೀರಿಕ ಕಾರಣಗಳಿಂದ ಬರುತ್ತವೆ. ಕಿವುಡು, ಗಂಟಲು ರೋಗಗಳು, ನಾಲಿಗೆ ಮತ್ತು ಹಲ್ಲುಗಳ ದೋಷ-ಇವು ಶಾರೀರಿಕ ಕಾರಣಗಳಲ್ಲಿ ಮುಖ್ಯವಾದುವು; ಮಂದಬುದ್ಧಿ ಭಾವೋದ್ರೇಕ-ಅಂದರೆ ಅತಿಯಾಗಿ, ಅತಿಜಾಗ್ರತೆಯಾಗಿ ಉದ್ರೇಕಗೊಳ್ಳುವ ಅಥವಾ ಗಾಬರಿಪಡುವ ಸ್ವಭಾವ-ಇವು ಮಾನಸಿಕ ಕಾರಣಗಳು. (ಈ) ಓದಿದ ಅಂಶಗಳನ್ನು ಗ್ರಹಿಸುವುದರಲ್ಲಿ ಸಾವಕಾಶ ಅಥವಾ ತೊಂದರೆ, ಓದಿನಲ್ಲಿ ವಿಚಾರಶೀಲತೆಯ ಅಭಾವ, ಅಂಶಗಳ ಔಚಿತ್ಯವನ್ನು ನಿರ್ಧರಿಸಲು ಅಸಮರ್ಥನಾಗಿರುವುದು, ಉದ್ದೇಶಕ್ಕನುಸಾರವಾಗಿ ಓದಿನಲ್ಲಿ ಯಾವ ಮಾರ್ಪಾಟನ್ನೂ ತಾಳದಿರುವುದು-ಇವು ವಿದ್ಯಾರ್ಥಿಯ ಕೆಲವು ಅಹಿತ ಮನೋಭಾವಗಳಿಂದ ಬರುತ್ತವೆ. ಅಲ್ಲದೆ, ಓದುವಾಗ ಯಾವ ಉದ್ದೇಶವನ್ನೂ ಇಟ್ಟುಕೊಳ್ಳದೆ, ನಿರ್ಲಕ್ಷ್ಯದಿಂದ, ಅರ್ಥದ ಕಡೆಗೆ ಗಮನ ಕೊಡದೆ ಕೇವಲ ಅಕ್ಷರಗಳನ್ನು ಅಥವಾ ಪದಗಳನ್ನು ಗುರುತಿಸುವುದರಿಂದಲೂ ಈ ದೋಷಗಳು ಬೆಳೆಯುತ್ತವೆ. (ಉ) ಓದುವಾಗ ಸ್ಥಿರಮನಸ್ಕನಾಗಿರದಿರುವುದು, ಓದುವ ಮುನ್ನವೇ ವೃಥಾ ಕಾಲವ್ಯಯ ಮಾಡುವುದು, ಉದಾಸೀನ ಭಾವದಿಂದ ಕೂಡಿರುವುದು-ಇವು ವಿದ್ಯಾರ್ಥಿಯ ಆಸಕ್ತಿ ಮತ್ತು ಅಭಿರುಚಿಗಳಿಗೆ ತಕ್ಕಂತೆ ಪಠ್ಯಪುಸ್ತಕಗಳು ಹಾಗೂ ಓದುವ ಸಾಧನಗಳಿಲ್ಲದಿರುವುದು, ಏಕಾಗ್ರತೆಯನ್ನು ಕದಡುವ ಅಶಾಂತ ವಾತಾವರಣ, ಉತ್ತೇಜನದ ಅಭಾವ, ಶಾಲೆ ಮತ್ತು ಸ್ಥಳಗಳನ್ನು ಪದೇ ಪದೇ ಬದಲಾಯಿಸುವುದು. ವ್ಯಾಸಂಗ ಕ್ರಮದಲ್ಲಿನ ಅನೇಕ ದೋಷಗಳು, ಮಾನಸಿಕ ವ್ಯಾಕುಲತೆಗಳು-ಇವುಗಳಿಂದ ಬೆಳೆಯುತ್ತವೆ. (ಊ) ತನ್ನ ಓದಿಗೆ ಬೇಕಾದ ಆವಶ್ಯಕ ಆಧಾರ ಪುಸ್ತಕಗಳನ್ನು, ಶಬ್ದಸೂಚಿ, ನಿಘಂಟು ಮುಂತಾದ ಉಪಯುಕ್ತ ಸಹಾಯಕ ವಸ್ತುಗಳನ್ನು ಉಪಯೋಗಿಸಲು ಅಸಮರ್ಥನಾಗಿರುವುದು, ಇಂಥ ಸಾಮಾನ್ಯ ದೋಷಗಳು ವಿದ್ಯಾರ್ಥಿಯ ಅಲ್ಪ ಅನುಭವ, ಅಜ್ಞಾನ, ಓದುವ ಅಭ್ಯಾಸವನ್ನು ಸಾಕಷ್ಟು ಚೆನ್ನಾಗಿ ರೂಢಿಸಿಕೊಳ್ಳದೆ ಇರುವುದು-ಇವುಗಳಿಂದ ಬರುತ್ತವೆ.

**ಓದುಗಾರಿಕೆಯ ದೋಷಗಳನ್ನು ಕಂಡುಹಿಡಿಯುವ ಮಾರ್ಗಗಳು:** ಪಾಶ್ಚಾತ್ಯ ಮತ್ತು ಇತರ ಪ್ರಗತಿಪರ ದೇಶಗಳಲ್ಲಿ ಓದಿಗೆ ಸಂಬಂಧಪಟ್ಟ ಹಲವಾರು ಸಂಶೋಧನೆಗಳು ನಡೆದಿವೆ. ಇತ್ತೀಚೆಗೆ ಭಾರತದಲ್ಲೂ ಕೆಲವು ಪ್ರಯೋಗಗಳು ನಡೆಯುತ್ತಿವೆ. ಇವುಗಳ ಫಲವಾಗಿ, ಓದಿನ ಅಂಶಗಳನ್ನು-ಅಂದರೆ ಓದಿನ ವೇಗ, ವಿಷಯಗ್ರಹಣ, ಪದಪರಿಚಯ, ಕಣ್ಣುಗಳ ಚಲನೆ ಮುಂತಾದುವುಗಳನ್ನು-ಅಳೆಯುವ ಪರೀಕ್ಷೆಗಳು ಮತ್ತು ಉಪಕರಣಗಳೂ ಸಿದ್ಧವಾಗಿವೆ. ಇವುಗಳ ಸಹಾಯದಿಂದ ವಿದ್ಯಾರ್ಥಿಯ ಓದಿನ ಮಟ್ಟವನ್ನು ನಿರ್ದಿಷ್ಟವಾಗಿ ಅರಿಯಬಹುದು. ಇವುಗಳ ಜೊತೆಗೆ ವಿದ್ಯಾರ್ಥಿಯನ್ನು ಸಂದರ್ಶಿಸುವುದು, ಅವನು ಓದುವಾಗ ದೋಷಗಳನ್ನು ನೇರವಾಗಿ ಗಮನಿಸುವುದು-ಇವು ಸಾಮಾನ್ಯವಾಗಿ ಅನುಸರಿಸುವ ಇತರ ಮಾರ್ಗಗಳು.

**ಮಾನಸಿಕ ಮತ್ತು ಶಾರೀರಕ ದೋಷಗಳ ನಿವಾರಣೆ ಇವು:** ವಿದ್ಯಾರ್ಥಿಯನ್ನು ಪೂರ್ಣವಾಗಿ ಪರೀಕ್ಷಿಸಿದ ಅನಂತರ ನಿವಾರಕ ಬೋಧನ ಕ್ರಮಕ್ಕೆ ಮೊದಲು, ಕೆಲವು ಶಾರೀರಿಕ ಮತ್ತು ಮಾನಸಿಕ ದೋಷಗಳನ್ನು ನಿವಾರಿಸುವುದು ಅಗತ್ಯ. ಕಿವುಡುತನಕ್ಕೆ ಶ್ರವಣಗ್ರಾಹಕ ಸಾಧನಗಳನ್ನೂ ದೃಷ್ಟಿದೋಷಗಳಿಗೆ ಕನ್ನಡಕಗಳನ್ನೂ ಒದಗಿಸಬೇಕು. ಒಳ್ಳೆಯ ಆಹಾರ, ವಿಶ್ರಾಂತಿ, ಚಿಕಿತ್ಸೆಗಳ ಮೂಲಕ ಅವನ ಆರೋಗ್ಯವನ್ನು ಉತ್ತಮಪಡಿಸಬೇಕು. ವಿದ್ಯಾರ್ಥಿಯಲ್ಲಿ ಆತ್ಮವಿಶ್ವಾಸ, ಸಹಬಾಳ್ವೆ, ಸಂವೇಗಗಳ ಸಾಮರಸ್ಯವನ್ನು ಬೆಳೆಸಬೇಕು. ಈ ರೀತಿಯ ಕಾರ್ಯಕ್ರಮಗಳು ವಿದ್ಯಾರ್ಥಿಯನ್ನು ನಿವಾರಕ ಬೋಧನೆಗೆ ಸಿದ್ಧಗೊಳಿಸುವುವು.

**ನಿವಾರಕ ಬೋಧನಕ್ರಮ:** ನಿವಾರಣೆಯ ಯೋಜನೆಯ ಮೂರನೆ ಹಂತವಾಗಿ, ರಚನಾತ್ಮಕವೂ ಪರಿಣಾಮಕಾರಿಯೂ ಆದ ಬೋಧನಕ್ರಮದ ವ್ಯವಸ್ಥೆಯನ್ನು ರೂಪಿಸುವುದು ಅಗತ್ಯ. ಈ ವ್ಯವಸ್ಥೆಯನ್ನು ರಚಿಸುವಾಗ ಎರಡು ಬಗೆಯ ವಿದ್ಯಾರ್ಥಿಗಳನ್ನು ಗಮನದಲ್ಲಿಡುವುದು ಒಳ್ಳೆಯದು.

1 ಕೆಲವು ವಿದ್ಯಾರ್ಥಿಗಳ ಓದಿನ ಮಟ್ಟ ಅವರ ವಯಸ್ಸು ಅಥವಾ ತರಗತಿಗಳ ಮಟ್ಟಕ್ಕೆ ಕಡಿಮೆಯಾಗಿರುತ್ತದೆ. ಆದರೂ ಅವರ ಬುದ್ಧಿಶಕ್ತಿ, ಶಾರೀರಿಕ ಬೆಳವಣಿಗೆ, ವ್ಯಕ್ತಿತ್ವ ಸಾಧಾರಣವಾಗಿರುತ್ತವೆ. ಇಂಥವರು ಸಾಮೂಹಿಕ ಕ್ರಮಗಳಿಗೆ ಹೊಂದಿಕೊಳ್ಳಬಲ್ಲರು.

2 ಇನ್ನು ಕೆಲವು ವಿದ್ಯಾರ್ಥಿಗಳ ಓದಿನ ಮಟ್ಟ ತೀವ್ರವಾಗಿ ಹಿಂದುಳಿದಿರುತ್ತದೆ. ಬುದ್ಧಿಶಕ್ತಿ ಮತ್ತು ವ್ಯಕ್ತಿತ್ವದಲ್ಲಿ ಅಸಾಧಾರಣ ದೋಷಗಳಿರುತ್ತವೆ. ಇವರಲ್ಲಿ ಅಂಗದೋಷಗಳೂ ಇರಬಹುದು. ಇಂಥವರು, ಸಾಮೂಹಿಕ ಕ್ರಮಗಳಿಗೆ ಹೊಂದಿಕೊಳ್ಳಲು ಸಾಧ್ಯವಿಲ್ಲ. ಇವರಿಗೆ ಪ್ರತ್ಯೇಕ ಚಿಕಿತ್ಸೆ ಅಗತ್ಯ.

ನಿವಾರಕ ಬೋಧನೆ ಶಾಲಾ ಕಾರ್ಯಕ್ರಮದ ಅತಿಮುಖ್ಯ ಅಂಗವಾಗಿರಬೇಕಲ್ಲದೆ, ಉಪಾಧ್ಯಾಯರ, ಪಠ್ಯಪುಸ್ತಕಗಳ, ಬೋಧನ ಕ್ರಮಗಳ ಮತ್ತು ಪರೀಕ್ಷಾವಿಧಾನಗಳ ಆಯ್ಕೆಯಲ್ಲಿ ಅನುಸರಿಸಬೇಕಾದ ತತ್ತ್ವಗಳಲ್ಲೂ ಸೂಕ್ತ ಬದಲಾವಣೆ ಆವಶ್ಯಕ. ಮನೋವಿಜ್ಞಾನ ಶರೀರವಿಜ್ಞಾನಗಳಲ್ಲಿ ತರಬೇತು ಪಡೆದ ಉಪಾಧ್ಯಾಯರು, ವಿದ್ಯಾರ್ಥಿಗಳ ಅಭಿರುಚಿ ಮತ್ತು ಸಾಮರ್ಥ್ಯಗಳಿಗೆ ತಕ್ಕಂತೆ ರಚಿಸಿದ ಪುಸ್ತಕಗಳು ಮತ್ತು ವಿದ್ಯಾರ್ಥಿಯ ಪ್ರಗತಿಯನ್ನು ಅಳೆಯಬಲ್ಲ ಉತ್ತಮ ಪರೀಕ್ಷೆಗಳು ಅಗತ್ಯ.

ತರಗತಿಗಳಲ್ಲಿ ಇಲ್ಲಿ ಸೂಚಿಸಿದ ಕೆಲವು ಪ್ರಧಾನವಾದ ಅಂಶಗಳನ್ನು ಉಪನ್ಯಾಸ, ಸಂಘ, ಗೋಷ್ಠಿ ಮತ್ತು ವಿವಿಧ ವಿಷಯಗಳ ಅಭ್ಯಾಸ ಪಾಠ ಇವುಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಬಹುದು.

1 ಉತ್ತಮ ಓದಿನ ಆವಶ್ಯಕತೆ

2 ಉತ್ತಮ ಓದಿನ ಲಕ್ಷಣಗಳು

3 ಉದ್ದೇಶಪೂರ್ಣವಾದ ಓದು : ವಿವರಣಾತ್ಮಕ ಓದು, ಪರಿಚಯಾತ್ಮಕ ಓದು, ವಿಮರ್ಶಾತ್ಮಕ ಓದು

4 ವಿಷಯಗ್ರಹಣ ಮತ್ತು ಏಕಾಗ್ರತೆ

5 ಶಬ್ದಪರಿಚಯ ಮತ್ತು ಬೆಳವಣಿಗೆ

6 ಓದಿನ ಅಭಿರುಚಿಗಳು ಮತ್ತು ಅಭ್ಯಾಸಗಳು

7 ಸಹಾಯಕ ಪಠ್ಯ ವಸ್ತುಗಳು ಎಂದರೆ, ಶಬ್ದಕೋಶ, ವಿಶ್ವಕೋಶ, ಆಧಾರ ಪುಸ್ತಕಗಳು ಮುಂತಾದವುಗಳ ಬಳಕೆ

8 ಆರೋಗ್ಯ ರಕ್ಷಣೆ ಮತ್ತು ಓದು

9 ಮಾನವನ ಪರಸ್ಪರ ಅರಿವು ಮತ್ತು ಹೊಂದಾಣಿಕೆಯಲ್ಲಿ ಓದಿನ ಪಾತ್ರ.

**ಕೆಲವು ಗಮನಾರ್ಹವಾದ ಎಚ್ಚರಿಕೆಗಳು:** 1 ನಿವಾರಕ ಬೋಧನ ವ್ಯವಸ್ಥೆ ವಿದ್ಯಾರ್ಥಿಯ ಮನೋರಂಜನೆ ಅಥವಾ ವಿರಾಮ ಕಾಲಕ್ಕೆ ಬದಲಾಗಿ ಇರಬಾರದು. 2 ಇವು ವಿದ್ಯಾರ್ಥಿಗಳ ದೋಷಗಳನ್ನೂ ನ್ಯೂನತೆಗಳನ್ನೂ ಎತ್ತಿಹಿಡಿಯುವ ಅಥವಾ ಅವುಗಳಿಗಾಗಿ ವಿಧಿಸುವ ದಂಡನೆಯ ಕ್ರಮವಾಗಿರಬಾರದು. 3. ತರಗತಿಗಳಿಗಾಗಿ ವಿನಿಯೋಗಿಸಲ್ಪಡುವ ಸಮಯ ಸಾಕಷ್ಟಿದ್ದು ಉತ್ತಮ ವಾತಾವರಣದಲ್ಲಿ ನಡೆಯಬೇಕು. 4. ಈ ಕಾರ್ಯಕ್ಕಾಗಿ ನಿಯಮಿಸಲ್ಪಟ್ಟ ಉಪಾಧ್ಯಾಯರು ಉತ್ತಮ ತರಬೇತು ಹೊಂದಿದವರೂ ಉತ್ಸಾಹಿಗಳು ಸಂದರ್ಭಗಳಿಗೆ ಬಹು ಸುಲಭವಾಗಿ ಹೊಂದಿಕೊಳ್ಳಬಲ್ಲ ಜಾಣ್ಮೆಯುಳ್ಳವರೂ ಆಗಿರಬೇಕು. 5. ಕಾರ್ಯಕ್ರಮಗಳು ಅತಿ ನಿಷ್ಠೆಯವಾಗಿರದೆ ಉಪಯುಕ್ತ ಬದಲಾವಣೆಗಳಿಗೆ ಅವಕಾಶವಿರಬೇಕು. ಕೆಲವು ಮಾರ್ಗಗಳು ವ್ಯರ್ಥವೆಂದು ತೋರಿಬಂದಲ್ಲಿ ಕೂಡಲೆ ಅವುಗಳನ್ನು ಬದಲಾಯಿಸಬೇಕು. 6 ವಿದ್ಯಾರ್ಥಿಯಲ್ಲಿ ಶ್ರದ್ಧೆ ಮೂಡಿಸಬಲ್ಲ ಹಾಗೂ ಓದಿನ ಅಭಿರುಚಿಗಳನ್ನು ಉಳಿಸಿ ಬೆಳೆಸಬಲ್ಲ ನಾನಾರೀತಿಯ ಅಭ್ಯಾಸ ಪಾಠಗಳಿರಬೇಕು. 7 ವ್ಯಾಸಂಗಕ್ಕೆ ಸಂಬಂಧಪಟ್ಟ ವಿಧಾನಗಳು ವಿದ್ಯಾರ್ಥಿಯಲ್ಲಿ ಸಾಕಷ್ಟು ಮೂಡುವವರೆಗೂ ನಿವಾರಕ ಕ್ರಮಗಳನ್ನು ಮುಂದುವರಿಸಬೇಕು.

**4. ಪ್ರತಿಬಂಧಕ ಕಾರ್ಯ:** ಓದಿನ ದೋಷಗಳನ್ನು ನಿವಾರಿಸಬಲ್ಲ ಪರಿಹಾರ ಕಾರ್ಯಗಳ ಜೊತೆಗೆ, ಅವುಗಳನ್ನು ತಡೆಗಟ್ಟಬಲ್ಲ ಪ್ರತಿಬಂಧಕ ಕಾರ್ಯಗಳೂ ಅಗತ್ಯ. ದೋಷಗಳ ಸೋಂಕು ಉತ್ತಮ ವಿದ್ಯಾರ್ಥಿಗಳಿಗೂ ಅಂಟದಂತೆ ಎಚ್ಚರಿಕೆ ವಹಿಸುವುದು ಅವಶ್ಯಕ. ಆದ್ದರಿಂದ ಶಾಲೆಯ ವಿವಿಧ ತರಗತಿಗಳಲ್ಲಿ ಓದನ್ನು ವಿಶೇಷ ವಿಷಯವನ್ನಾಗಿಟ್ಟುಕೊಳ್ಳಬೇಕು. ಮತ್ತು ಅದಕ್ಕೆ ತಕ್ಕಂತೆ ಅನುಭವಗಳನ್ನೂ ವಸ್ತುಗಳನ್ನೂ ಸಮಯವನ್ನೂ ಕಲ್ಪಿಸಬೇಕು. ಬೋಧನೆಯ ವ್ಯವಸ್ಥೆಯ ಉಪಯೋಗವನ್ನು ಎಲ್ಲ ವಿದ್ಯಾರ್ಥಿಗಳೂ ಪಡೆಯಬೇಕು.

ಓದುಗಾರಿಕೆಯನ್ನು ಪರಿಣಾಮಕಾರಿ ಉಪಕರಣವಾಗುವಂತೆ, ಪ್ರೌಢಕಲೆಯಾಗುವಂತೆ ಬೋಧಿಸುವುದು ಒಂದು ಶಾಲೆಯಲ್ಲೆ ಸಾಧ್ಯವಾಗುವ ಕಾರ್ಯವಲ್ಲ. ಅದು ಹಂತಹಂತವಾಗಿ ಸಾಗಬೇಕು. ಅಂಥ ಬೇರೆ ಬೇರೆ ಹಂತಗಳನ್ನೂ ಅಲ್ಲಿ ಸಾಧನೆಯಾಗಬೇಕಾದ ಓದುಗಾರಿಕೆಯ ಅಂಶಗಳನ್ನೂ ಇಲ್ಲಿ ಸೂಚಿಸಬಹುದು;

1 ಶಿಶುವಿಹಾರ, ಕಿಂಡರ್‌ಗಾರ್ಟನ್ ತರಗತಿಗಳಲ್ಲಿ ಓದು ಕಲಿಯಲು ಮಕ್ಕಳನ್ನು ಪ್ರೇರಿಸುವ ಅನುಭವಗಳನ್ನೂ ಶಿಕ್ಷಣವನ್ನೂ ಒದಗಿಸುವುದು. 2 ಪ್ರಾಥಮಿಕ ಶಾಲೆಯ ಮೊದಲನೆಯ ಮತ್ತು ಎರಡನೆಯ ತರಗತಿಗಳಲ್ಲಿ : ಈ ಮಟ್ಟದ ವಿದ್ಯಾರ್ಥಿಗಳಿಗಾಗಿ ನಿರ್ಮಿಸಿರುವ ಸುಲಭ ಪಾಠಗಳನ್ನು ಸ್ವತಂತ್ರವಾಗಿ ಓದುವ ಸಾಮರ್ಥ್ಯದ ಬೆಳವಣಿಗೆ ಮತ್ತು ವಿಚಾರವಿನಿಮಯಕ್ಕೆ ಓದು ಒಂದು ಪ್ರಬಲ ಸಾಧನವೆಂದು ತೋರಿಸಿಕೊಡುವುದು. 3 ಪ್ರಾಥಮಿಕ ಶಾಲೆಯ 3,4,5ನೆಯ ತರಗತಿಗಳಲ್ಲಿ ಓದಿಗೆ ಸಂಬಂಧಪಟ್ಟ ಮೂಲ ಅಭ್ಯಾಸಗಳನ್ನೂ ವಿಧಾನಗಳನ್ನೂ ಮನೋಭಾವಗಳನ್ನೂ ಬೆಳೆಸುವುದು. ಇವುಗಳ ಆಧಾರದ ಮೇಲೆ, ಓದಿದ ವಿಷಯಗಳ ಅರ್ಥವಿವರಣೆ ಮಾಡುವುದು. ಸ್ಪಷ್ಟವಾಗಿ ಹಾಗೂ ತಪ್ಪಿಲ್ಲದೆ ಓದುವುದು. ಗಟ್ಟಿಯಾಗಿಯೂ ಮತ್ತು ಮೌನವಾಗಿಯೂ ಚೆನ್ನಾಗಿ ಓದುವುದು–ಇವೆಲ್ಲ ಬೆಳೆಯುತ್ತವೆ. ಪ್ರಾಥಮಿಕ ಶಾಲೆಯ 6 ಮತ್ತು 7ನೆಯ ತರಗತಿಗಳಲ್ಲಿ ವಿದ್ಯಾರ್ಥಿಯ ಅನುಭವ ವಿಶೇಷಗಳನ್ನು ವಿಸ್ತರಿಸುವುದು, ಅವನ ಅಭಿರುಚಿಗಳಲ್ಲಿ ವಿವೇಚನೆಯನ್ನು ಮೂಡಿಸುವುದು 5 ಪ್ರೌಢಶಾಲೆಯ 8,9ನೆಯ ಹಂತಗಳಲ್ಲಿ ಬೆಳೆಸಿ ಅಭ್ಯಾಸ ಮತ್ತು ಅಭಿರುಚಿಗಳಲ್ಲಿ ನಯ ಮತ್ತು ಕುಶಲತೆಗಳನ್ನು ತುಂಬುವುದು. 6 ಪ್ರೌಢಶಾಲೆಯ 10 ಮತ್ತು 11ನೆಯ ಹಂತಗಳಲ್ಲಿ ಶ್ರೇಷ್ಠ ಸಾಹಿತ್ಯದಲ್ಲಿ ಅಭಿರುಚಿ ಮತ್ತು ವಿಚಾರಸಂಪತ್ತನ್ನು ಬೆಳೆಸುವುದರಲ್ಲಿ ಆಸಕ್ತಿ ಮೂಡುವಂತೆ ಮಾಡುವುದು. ಪತ್ರಿಕೆಗಳ, ಲೇಖನಗಳ, ಕಥೆಕಾದಂಬರಿಗಳ ಆಯ್ಕೆಯಲ್ಲಿ ವಿವೇಚನೆಯನ್ನು ಬೆಳೆಸುವುದು. ಮಾನವ ಇಂದಿನ ವೈಜ್ಞಾನಿಕ ಹಾಗೂ ತಾಂತ್ರಿಕ ಯುಗದಲ್ಲಿ ಸಾರ್ಥಕ್ಯವನ್ನು ಸಾಧಿಸಬೇಕಾದರೆ ಓದು ಒಂದು ಅನಿವಾರ್ಯ ಸಾಧನ. ಇದರ ಬೆಳವಣಿಗೆಯಲ್ಲಿ ಶಾಲೆಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಮಾರ್ಗದಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳ ವ್ಯವಸ್ಥೆ ಉತ್ತಮವಾಗಿರಬೇಕು. ವಿದ್ಯಾರ್ಥಿಯ ಓದಿನಲ್ಲಿ ಹೆಚ್ಚಿನ ದಕ್ಷತೆ ಮತ್ತು ಕುಶಲತೆಗಳನ್ನು ಬೆಳೆಸುವುದರ ಜೊತೆಗೆ, ಶಾಶ್ವತವಾದ ಅಭಿರುಚಿಗಳನ್ನು ಮೂಡಿಸುವುದು ಎಲ್ಲ ಬೋಧನ ಕ್ರಮಗಳ ಮುಖ್ಯ ಧೋರಣೆಯಾಗಿರಬೇಕು.

**ಓದುಗಾರಿಕೆಯ ಪ್ರಕಾರಗಳು:** ಓದುವ ಉದ್ದೇಶದ ಆಧಾರದ ಮೇಲೆ ಓದುಗಾರಿಕೆಯನ್ನು ಹಲವು ಬಗೆಗಳನ್ನಾಗಿ ಗುರುತಿಸಬಹುದು. ಕೇವಲ ಮನೋರಂಜನೆಯೇ ಪ್ರಧಾನ ಉದ್ದೇಶವಾಗಿರುವ ಓದುಗಾರಿಕೆಯನ್ನು ಮನೋರಂಜಕ ಓದುಗಾರಿಕೆಯೆಂದು ಕರೆಯುವರು. ಕಥೆ, ಕಾದಂಬರಿ, ನಿಸರ್ಗಚಿತ್ರ, ನಾಟಕ ಇತ್ಯಾದಿ ಸಾಹಿತ್ಯ ಕೃತಿಗಳ ವಾಚನ ಈ ಬಗೆಗೆ ಸೇರುತ್ತವೆ. ಸುದ್ದಿಗಳನ್ನು ತಿಳಿಯುವುದೇ ಮುಖ್ಯ ಉದ್ದೇಶದಿಂದ ಓದುವುದು ಸಮಾಚಾರ ಸಂಗ್ರಹ ವಾಚನ; ವೃತ್ತಪತ್ರಿಕೆ, ಜಾಹೀರಾತು, ತಿಳಿವಳಿಕೆ ಪತ್ರ ಇವುಗಳ ವಾಚನ ಈ ಬಗೆಗೆ ಸೇರಿದ್ದು. ವಿಜ್ಞಾನ, ತಂತ್ರಶಾಸ್ತ್ರ, ಮಾನವಿಕ ವಿಷಯ ಇತ್ಯಾದಿಗಳಿಗೆ ಸಂಬಂಧಿಸಿದ ಜ್ಞಾನವನ್ನು ತಿಳಿದುಕೊಳ್ಳುವುದಕ್ಕಾಗಿ ಕೈಗೊಳ್ಳುವ ಓದುಗಾರಿಕೆಗೆ ಜ್ಞಾನಾರ್ಜನೆಯ ಓದುಗಾರಿಕೆ ಎನ್ನಬಹುದು. ಮನೋರೋಗದಿಂದ ನರಳುವ ಕೆಲವು ರೋಗಿಗಳಿಗೆ ವಿಶಿಷ್ಟ ರೀತಿಯಲ್ಲಿ ಬರೆದು ಮುದ್ರಿಸಿದ ವಾಚನ ವಸ್ತುಗಳನ್ನು ಕೊಟ್ಟು ಓದಿಸಿ, ಆ ಮೂಲಕ ಅವರ ರೋಗ ನಿವಾರಣೆಗೆ ಯತ್ನಿಸುವರು. ಇದು ಚಿಕಿತ್ಸಾರೂಪದ ವಾಚನ.

ಓದುಗಾರಿಕೆ ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಪರಿಣಾಮ ಬೀರಬಲ್ಲ ಅಭ್ಯಾಸ. ವಾಚನವಸ್ತುವಿನ ಸ್ವರೂಪವನ್ನನುಸರಿಸಿ ಆ ಪರಿಣಾಮ ಕೆಟ್ಟದ್ದಾಗಿರಬಹುದು; ಒಳ್ಳೆಯದೂ ಆಗಿರಬಹುದು. ಹಾಸ್ಯ, ಆಶ್ಚರ್ಯ ಈ ಮನೋಗುಣಗಳನ್ನು ಪ್ರಚೋದಿಸಲು ವಿಕಾರವೂ ವಿಚಿತ್ರವೂ ಅಪರಾಧ ಪೂರ್ಣವೂ ಆದ ವರ್ಣನೆಗಳನ್ನೊಳಗೊಂಡ ವಾಚನ ವಸ್ತು ಓದುಗರಲ್ಲಿ ಕ್ಷುಲ್ಲಕ ಭಾವನೆಗಳನ್ನೂ ಅಪರಾಧದ ಕಾರ್ಯಗಳನ್ನು ಮಾಡುವ ಚಾಳಿಯನ್ನೂ ಬೆಳೆಸಬಹುದು. ಗಹನವೂ ಗಂಭೀರವೂ ರಮಣೀಯವೂ ಆದ ಕೃತಿಗಳು ವ್ಯಕ್ತಿಯಲ್ಲಿ ವಿಷಯಜ್ಞಾನ, ಅಭಿಪ್ರಾಯ ನಿಷ್ಪಕ್ಷತೆ, ಧರ್ಮ ಮತ್ತು ತತ್ತ್ವನಿಷ್ಠೆ, ನ್ಯಾಯಪರತೆ, ಕಾರ್ಯತತ್ಪರತೆ, ಮಾನವೀಯ ಮನೋಧರ್ಮ ಇತ್ಯಾದಿ ಲಕ್ಷಣಗಳನ್ನು ಪೋಷಿಸಬಲ್ಲವು. (ಎ.ಎಂ.ಎಸ್.)

**ಓದುವಗಿರಿಯ:** ಸು.1525. ವೀರಶೈವ ಕವಿ. ಹರಿಶ್ಚಂದ್ರ ಸಾಂಗತ್ಯ ಎಂಬ ಕಾವ್ಯದ ಕರ್ತೃ. ಇವನ ಗುರು ಕಂತೆಯ ದೇವ. ತಂದೆ ಕರಿಯ ಸೋಮನಪ್ಪ. ಕವಿ ತನ್ನನ್ನು ಗಿರಿಯ, ಓದುವ ಗಿರಿಯ ಎಂದು ಕರೆದುಕೊಂಡಿದ್ದಾನೆ. ಶ್ರೀಗಿರಿಯಮಲ್ಲೇಶನ ಚರಣಕಮಲಮಧುಕರ, ವರಕವಿಶರಧಿಚಂದ್ರಮ ಎಂದು ವಿಶ್ಲೇಷಿಸಿ ಕೊಂಡಿರುವುದರಿಂದ ಶ್ರೀಗಿರಿಯಮಲ್ಲೇಶ ಕವಿಯ ಇಷ್ಟದೈವ ಎಂದು ತೋರುತ್ತದೆ. ಸಾನಂದಗಣೇಶಸಾಂಗತ್ಯ ಈತನ ಇನ್ನೊಂದು ಕೃತಿ. ಇದರಲ್ಲಿ ಬರುವ ಹರಿಣಪುರದ ಸಿಂಹಾಸನಾಧೀಶ್ವರ ಗುರುಕೆಂಪನಂಜೇಶನ ಕರಜಾತ ನಂಜಯ್ಯ ಬರೆಸಿಹ ಹರಿಶ್ಚಂದ್ರಚರಿತೆ ಸಾನಂದ ಕೃತಿಯನು ಎಂಬ ಪದ್ಯದಿಂದ ಹರಿಣಪುರ ಸಿಂಹಾಸನಾಧೀಶ್ವರ ಗುರುಕೆಂಪನಂಜೇಶನ ಕರಜಾತ ನಂಜಯ್ಯ ಈ ಎರಡೂ ಕೃತಿಗಳನ್ನು ಬರೆಸಿದಂತೆ ವ್ಯಕ್ತವಾಗುತ್ತದೆ. ಹರಿಶ್ಚಂದ್ರ ಸಾಂಗತ್ಯದಲ್ಲಿ ಧರೆಯೊಳಧಿಕಪುಸ್ಥಾಪುರದೊಳೆಸೆವ ಎಂಬ ಮಾತು ಬಂದಿದೆ. ಈ ಅಧಿಕಪುಸ್ಥಾಪುರವೆಂಬುದು ಈಗಿನ ದೊಡ್ಡಬಳ್ಳಾಪುರದ ಪರ್ಯಾಯನಾಮ ವಾದುದರಿಂದ ಕವಿ ಇದೇ ಊರಿನವನಾಗಿರಬಹುದು. ಈತ ಭಕ್ತಕವಿ, ಪೂರ್ವ ಕವಿಗಳಲ್ಲಿ ಬಾಣ, ಮಯೂರ, ಉದ್ಭಟ, ಕಾಳಿದಾಸ, ಹಂಪೆಯ ಹರೀಶ್ವರ, ಮಲುಹಣ, ರಾಘವಾಂಕ, ಹಲಾಯುಧ ಇವರನ್ನು ಸ್ಮರಿಸಿದ್ದಾನೆ.

ಹರಿಶ್ಚಂದ್ರಸಾಂಗತ್ಯ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 6 ಸಂಧಿಗಳೂ 441 ಪದ್ಯಗಳೂ ಇವೆ. ಹರಿಶ್ಚಂದ್ರನ ಕಥೆ ಕಾವ್ಯವಸ್ತು. ಈ ಕೃತಿಯ ಹೆಚ್ಚಿನ ಪ್ರತಿಗಳು ಅಲಭ್ಯವಾದುದರಿಂದ ಇದರ ಬಗೆಗೆ ಹೆಚ್ಚಿನ ಮಾಹಿತಿಗಳು ದೊರಕುವುದಿಲ್ಲ. ಕಾವ್ಯದ ಆದಿಯಲ್ಲಿ ರಾಘವಾಂಕನನ್ನು ಸ್ತುತಿಸಿರುವುದರಿಂದ ಈತ ತನ್ನ ಕೃತಿಯನ್ನು ರಚಿಸಲು ಹರಿಶ್ಚಂದ್ರ ಕಾವ್ಯವನ್ನು ಆಧರಿಸಿರಬಹುದೆಂದು ಊಹಿಸಲಾಗಿದೆ.

ಸಾನಂದಗಣೇಶಸಾಂಗತ್ಯ ಸಾಂಗತ್ಯದಲ್ಲಿದ್ದು ಇದರಲ್ಲಿ 6 ಸಂಧಿಗಳೂ 432 ಪದ್ಯಗಳೂ ಇವೆ. ಸಾನಂದನೆಂಬ ಮುನಿ ನಾರಕಿಗಳನ್ನು ಉದ್ಧರಿಸಿದ ಕಥೆ ಇದರ ಕಥಾವಸ್ತು. ಕಾವ್ಯದಲ್ಲಿ 18 ವರ್ಣನೆಗಳೂ ನರಕಜೀವಿಗಳಿಗೆ ದೊರೆಯುವ ಹಿಂಸೆ, ಪುಣ್ಯಜೀವಿಗಳಿಗೆ ದೊರೆಯುವ ಉಪಚಾರ, ಭೋಗ, ಕೈಲಾಸಲೋಕ ಮೊದಲಾದವುಗಳ ವರ್ಣನೆಗಳೂ ಅಡಕವಾಗಿವೆ. ಕೆಲವು ಶಿವಶರಣರ ಕಥಾನಕಗಳ ಉಲ್ಲೇಖಗಳೂ ಇವೆ. ಸಾನಂದನ ಕಥೆ ಪುರಾಣೋಕ್ತ, ಸಂಸ್ಕೃತದಲ್ಲಿ ರಚಿತ ಎಂಬ ಪ್ರತೀತಿ ಇದ್ದರೂ ಇಲ್ಲಿ ಅದರ ಸುಳಿವೂ ಸಿಕ್ಕುವುದಿಲ್ಲ. ಕೆಲವು ವರ್ಣನೆಗಳು ಚೆನ್ನಾಗಿವೆ. (ಆರ್.ಎಸ್.ವಿ.)

**ಓದುನಾಟಕಗಳು:** ಮೂಲತಃ ಅಭಿನಯಕ್ಕಲ್ಲದೆ ಓದಿಗಾಗಿಯೇ ಸೃಷ್ಟಿಯಾದ ನಾಟಕಗಳು (ದಿ ಕ್ಲಾಸೆಟ್ ಪ್ಲೇಸ್), ನಾಟಕ, ರೂಪಕ, ಡ್ರಾಮ, ಪ್ಲೇ–ಎಂಬ ಮಾತುಗಳು ಆಡಿದ್ದು, ಮಾಡಿದ್ದು, ತೋರಿದ್ದು ಎಂಬ ಅರ್ಥವನ್ನೇ ಸೂಚಿಸುತ್ತವಾದರೂ ಕೆಲವು ನಾಟಕಗಳು ಶ್ರವ್ಯಕಾವ್ಯಗಳಂತೆ ಓದಿದಾಗಲೂ ಅಷ್ಟೇ ಆನಂದವನ್ನು ಕೊಡುತ್ತವೆಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. ರೋಮನ್ ನಾಟಕಕಾರನಾದ ಸೆನಕನ ರೂಪಕಗಳು ವಾಚನಕ್ಕೋಸ್ಕರವೇ ಬರೆದ ಕೃತಿಗಳು. ಗಯಟೆಯ ಫೌಸ್ಟ್ ನಾಟಕ ರಂಗಭೂಮಿಯ ನಿರ್ಮಾಪಕರಿಗೊಂದು ದೊಡ್ಡ ಸವಾಲು. ಷೆಲ್ಲಿಯ ಪ್ರೊಮಿಥಿಯಸ್ ಅನ್‍ಬೌಂಡ್ ಕೇವಲ ಓದುವ ನಾಟಕ, ಥಾಮಸ್ ಹಾರ್ಡಿ ತನ್ನ ಅತ್ಯಮೋಘ ಕೃತಿಯೆಂದೆಣಿಸುವ ದಿ ಡೈನಾಸ್ಟ್ಸ್ ನಾಟಕವನ್ನು ಬರೆದುದು ಓದಿಗಾಗಿಯೇ, ಈ ನಾಟಕದ ವಸ್ತು ಅತಿ ಭವ್ಯವಾಗಿದ್ದು ವಿಸ್ತಾರವಾದ ಯುರೋಪಿನ ವಿವಿಧ ಕದನ ಕ್ಷೇತ್ರಗಳೇ ನಾಟಕದ ಕ್ರಿಯಾರಂಗಗಳಾಗಿವೆ. ಯುರೋಪಿನ ನಾನಾದೇಶಗಳ ವಿರುದ್ಧ ನೆಪೋಲಿಯನ್ ಹೂಡಿದ ಯುದ್ಧಗಳೇ ಈ ನಾಟಕದ ವಸ್ತು. ಹಾರ್ಡಿ ಇದನ್ನು ನಾಟಕೀಯವಾದ ಭವ್ಯ ಕಾವ್ಯ (ಡ್ರಾಮಾಟಿಕ್ ಎಪಿಕ್)–ಎಂದು ಕರೆದಿದ್ದಾನೆ. ಈ ನಾಟಕವನ್ನು ನಾವು ನಮ್ಮ ಕಲ್ಪನಾರಂಗದ ಮೇಲೆ ಒಳಗಣ್ಣಿನಿಂದ ಮಾತ್ರ ನೋಡಿ ಆನಂದಿಸಬಹುದು. ಇದೊಂದು ಉತ್ತಮ ಓದುನಾಟಕ. ನೋಡಲು ಅರ್ಹವಾದ ಅನೇಕ ನಾಟಕಗಳನ್ನು ಕೇವಲ ಓದಿನಿಂದ ಅರಿಯಲು ಸಾಧ್ಯವಾಗದಿರಬಹುದು. ಹಾಗೆಯೇ ನಾಟಕದ ವಿಚಿತ್ರ ತಂತ್ರ ಮತ್ತು ತುಂಬ ಹರಹಿನ ರಂಗಸ್ಥಳಗಳಿಂದಾಗಿ ಕೆಲವು ನಾಟಕಗಳನ್ನು ಆಡಲು ಕಷ್ಟವಾದರೂ ಅವು ಓದಿ ಅರಿಯಲು ಯುಕ್ತವಾಗಿರುತ್ತವೆ. ರುದ್ರನಾಟಕದ ಆನಂದ ನೋಡಿದಾಗ ಹೇಗೋ ಹಾಗೆ ಅದನ್ನು ಓದಿದಾಗಲೂ ಸಿಗುತ್ತದೆಂದು ಮಿಲ್ಟನ್ ತನ್ನ ಸ್ಯಾಮ್ಸನ್ ಅಗೊನಿಸ್ಟೀಸ್ ನಾಟಕದ ಮುನ್ನುಡಿಯಲ್ಲಿ ಹೇಳಿದ್ದಾನೆ.

ಕೆಲವೊಮ್ಮೆ, ಆಯಾ ಕಾಲದೇಶಗಳ ರಂಗಭೂಮಿಗೆ ಅನುಗುಣವಾದ ಉತ್ತಮ ನಾಟಕಗಳನ್ನು, ಬೇರೊಂದು ಕಾಲದ ರಂಗಭೂಮಿಗೆ ಅಳವಡಿಸಲು ಕಷ್ಟಸಾಧ್ಯವಾದಾಗ ಅವನ್ನು ಬೇರೆ ಕಾಲದ ವಿಮರ್ಶಕರು ತಪ್ಪಾಗಿ ಅರ್ಥಮಾಡಿಕೊಂಡು, ಅವು ಕೇವಲ ಓದಲು ಅರ್ಹವಾದ ನಾಟಕಗಳೆಂದೂ ರಂಗಭೂಮಿಯ ಮೇಲೆ ಪ್ರದರ್ಶಿಸಲು ಸಾಧ್ಯವಾಗದ ಕೃತಿಗಳೆಂದೂ ಅಭಿಪ್ರಾಯಪಟ್ಟಿದ್ದಾರೆ. ಷೇಕ್ಸ್‌ಪಿಯರನ ಗಂಭೀರ ನಾಟಕಗಳಲ್ಲಿನ ಉನ್ನತ ಪಾತ್ರಸೃಷ್ಟಿ, ವಿಭಾವನಾಯುತವಾದ ಉತ್ಕೃಷ್ಟ ಕಾವ್ಯಮಯ ದೃಶ್ಯಗಳನ್ನು ರಂಗಭೂಮಿಯ ಮೇಲೆ ಪ್ರದರ್ಶಿಸುವುದು ಅಸಾಧ್ಯವೆಂದು ಚಾರಲ್ಸ್ ಲ್ಯಾಮ್ ಹೇಳಿದ್ದಾನೆ. ಷೇಕ್ಸ್‌ಪಿಯರನ ಲಿಯರ್ ನಾಟಕವನ್ನು ಅಭಿನಯಿಸಿ ತೋರಿಸುವುದು ದುಸ್ಸಾಧ್ಯವೆಂದು ಅವನ ಮತ, ಲ್ಯಾಮ್‌ನ ಮಾತನ್ನು ಹ್ಯಾಜ್ಲಿಟ್ ಸಮರ್ಥಿಸುತ್ತ ಈ ನಾಟಕವನ್ನು ರಚಿಸಿದ ಕವಿ ತಾನು ನೇಯ್ದ ಕಲ್ಪನೆಯ ಬಲೆಯಲ್ಲಿ ತಾನೇ ಚೆನ್ನಾಗಿ ಸಿಕ್ಕಿಬಿದ್ದಿದ್ದಾನೆ– ಎನ್ನುತ್ತಾನೆ. ಈ ಇಬ್ಬರು ವಿಮರ್ಶಕರ ಮಾತನ್ನು ಸ್ವಲ್ಪ ತಿದ್ದುತ್ತ ಬ್ರಾಡ್ಲೆ ಈ ನಾಟಕ ರಂಗಭೂಮಿ ಹಿಡಿಸಲಾರದಷ್ಟು ಅತ್ಯುನ್ನತ ಕೃತಿ– ಎನ್ನುತ್ತಾನೆ. ಆದರೆ ಈ ಶತಮಾನದ ಶ್ರೇಷ್ಠ ವಿಮರ್ಶಕ, ನಾಟಕಕಾರ ಹಾಗೂ ರಂಗಭೂಮಿಯ ನಿರ್ದೇಶಕನಾದ ಗ್ರೆನ್‌ವಿಲ್ ಬಾರ್ಕರ್ ಎಂಬಾತ ಲ್ಯಾಮ್, ಹ್ಯಾಜ್ಲಿಟ್, ಬ್ರಾಡ್ಲೆ ಮುಂತಾದವರ ತಪ್ಪು ಅಭಿಪ್ರಾಯವನ್ನು ತಿದ್ದಲು ಯತ್ನಿಸಿದ್ದಾನೆ. ಷೇಕ್ಸ್‌ಪಿಯರನ ನಾಟಕಗಳನ್ನು ಎಲಿಜûಬೆತ್ ಕಾಲದಲ್ಲಿದ್ದ ರಂಗಭೂಮಿಯನ್ನು ಸಜ್ಜುಗೊಳಿಸಿ ಅದರ ಮೇಲೆ ಸರಿಯಾಗಿ ಪ್ರಯೋಗಿಸಿದಾಗ ಮಾತ್ರ ಅವುಗಳ ಸ್ವಾರಸ್ಯ ನಮಗೆ ತಿಳಿಯುವುದು– ಎಂದು ಅವನ ಅಭಿಪ್ರಾಯ. ಅದರಲ್ಲೂ ಕಿಂಗ್ ಲಿಯರ್ ನಾಟಕದ ಉತ್ಕೃಷ್ಟ ಕಾವ್ಯಶೈಲಿಯನ್ನು ನಟರು ಚೆನ್ನಾಗಿ ಅರಿತುಕೊಂಡು ಮಾತುಗಳನ್ನು ಸರಿಯಾಗಿ ಆಡಿದಾಗ ಆ ನಾಟಕ ಎಷ್ಟೊಂದು ಯಶಸ್ವಿಯಾಗಬಲ್ಲುದೆಂಬುದನ್ನು ತನ್ನ ಪ್ರಯೋಗಗಳಿಂದ ಗ್ರೆನ್‌ವಿಲ್ ಬಾರ್ಕರ್ ತೋರಿಸಿಕೊಟ್ಟಿದ್ದಾನೆ. ಕನ್ನಡದಲ್ಲಿ ಕುವೆಂಪು ಅವರ ಶೂದ್ರತಪಸ್ವಿಯನ್ನಾಗಲೀ ಬೆರಳ್‌ಗೆ ಕೊರಳ್ ಅನ್ನಾಗಲಿ ಅಭಿನಯಿಸುವುದು ಕಷ್ಟ ಸಾಧ್ಯ. ಹಿನ್ನೆಲೆಯ ಸಜ್ಜಿಕೆಯ ಸಂಕೀರ್ಣತೆ ಮತ್ತು ಪ್ರಕೃತಿಯ ಪಾತ್ರವಹಿಸುವಿಕೆಯಿಂದಾಗಿ ಅವು ಅಭಿನಯಿಸಲು ಅಸಾಧ್ಯವಾದುವು ಎಂದರೂ ತಡೆಯುತ್ತದೆ. ಆದರೆ ಅವು ಉತ್ತಮ ಓದುನಾಟಕಗಳಾಗಿವೆ.

ಒಟ್ಟಿನಲ್ಲಿ ಓದುನಾಟಕದ ಭಾಷೆ, ತಂತ್ರಗಳು ರಂಗಭೂಮಿಯ ನಾಟಕಕ್ಕಿಂತ ಭಿನ್ನವಾದವು. ಕಾದಂಬರಿಯಲ್ಲಿದ್ದಂತೆ ಓದುನಾಟಕದ ಮಾತಿನ ಗತಿ, ಲಯ ಓದುವವನ ದೃಷ್ಟಿಯಿಂದ ರಚಿತವಾದುದು. ಅದರಿಂದ ಒಂದು ವೇಳೆ ಮಾತುಗಳಲ್ಲಿ ಕ್ಲಿಷ್ಟತೆ, ಅಸ್ಪಷ್ಟತೆಯಿದ್ದರೆ ಓದುವವ ಪುನಃ ಓದಿ ಅರ್ಥಮಾಡಿಕೊಳ್ಳಲು ಅವಕಾಶವಿದೆ. ಅಲ್ಲದೆ ರಂಗಸ್ಥಳ ನಿರ್ದೇಶನ ಅಥವಾ ಬೇರಾವ ರೀತಿಯ ಸೂಚನೆಗಳ ಮೂಲಕ ನಾಟಕಕಾರ ಮಾತುಗಳಿಗೂ ಘಟನೆಗಳಿಗೂ ವಿವರಣೆ ಕೊಟ್ಟು ವ್ಯಾಖ್ಯಾನ ಮಾಡಬಹುದು. ಇದಕ್ಕೆ ರಂಗಭೂಮಿಯ ನಾಟಕದಲ್ಲಿ ಅವಕಾಶವಿಲ್ಲ. (ಎಚ್.ಕೆ.ಆರ್.)

**ಓದು, ಬರೆಹ, ಲೆಕ್ಕ:** ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ಸಾಧಿಸಬೇಕೆಂದು ಪರಿಗಣಿತವಾಗಿದ್ದ ಮೂರು ಮೂಲಭೂತ ಕೌಶಲಗಳು (ದಿ ತ್ರಿ ಆರ್ಸ್). ಮಕ್ಕಳ ನಿತ್ಯಜೀವನಕ್ಕೆ ಓದುವುದು, ಬರೆಯುವುದು, ಲೆಕ್ಕಾಚಾರ–ಈ ಮೂರೇ ಸಾಕೆಂಬ ಶಿಕ್ಷಣದ ಸಂಕುಚಿತ ದೃಷ್ಟಿ ಈಚೆಗೆ ಮಾಯವಾಗುತ್ತಿದೆ. ಈ ಕೌಶಲಗಳು ಮುಂದಿನ ಸಾಧನೆಗೆ ಕೇವಲ ಉಪಕರಣಗಳು ಮಾತ್ರ; ಅವೇ ಶಿಕ್ಷಣವಲ್ಲ–ಎಂಬ ದೃಷ್ಟಿ ಬೆಳೆದಂತೆ ಪ್ರಾಥಮಿಕ ಶಾಲೆಯಲ್ಲಿ ಅವುಗಳ ಜೊತೆಗೆ ಸಾಹಿತ್ಯಾಭ್ಯಾಸ, ಸಮಾಜ ಪರಿಚಯ, ಸಾಮಾನ್ಯ ವಿಜ್ಞಾನ, ಶಾರೀರಿಕ ಶಿಕ್ಷಣ, ಕೈಕೆಲಸ ಇತ್ಯಾದಿಗಳೂ ಈಗ ವ್ಯಾಸಂಗಕ್ರಮದಲ್ಲಿ ಸೇರಿಕೊಂಡಿವೆ.

ಆದರೆ ಓದು, ಬರೆಹ, ಲೆಕ್ಕಗಳು ಎಲ್ಲ ವ್ಯಾಸಂಗದ ಅಡಿಪಾಯವೆನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇವಿಷ್ಟನ್ನಂತೂ ವಿದ್ಯಾರ್ಥಿ ಕಡ್ಡಾಯವಾಗಿ, ಖಚಿತವಾಗಿ ತಿಳಿಯಬೇಕು. ಆದರೆ ಇವನ್ನು ಮೇಲೆ ಸೂಚಿಸಿದ ಇತರ ಶಾಸ್ತ್ರಗಳ ಮುಖೇನ ಕಲಿಸಿದಲ್ಲಿ ವ್ಯಾಸಂಗ ವಿಶಾಲವಾಗುತ್ತದೆ. (ಎಂ.ಆರ್.ಆರ್.ಎ.)

**ಓಪರಾನ್:** ಪಕ್ಕಪಕ್ಕದಲ್ಲಿರುವ ಮತ್ತು ಸಂಘಟಿತ ರೀತಿಯಲ್ಲಿ ವ್ಯಕ್ತವಾಗುವ ಜೀನುಗಳನ್ನೂ ಎಂಥ ಜೀನುಗಳನ್ನು ನಿಯಂತ್ರಿಸುವ ಮತ್ತು ಅವುಗಳೊಡನೆ ನಿಕಟ ಸಂಪರ್ಕವನ್ನು ಪಡೆದಿರುವ ಘಟಕಗಳನ್ನೂ ಒಳಗೊಂಡಿರುವ ಗುಚ್ಛ. ಜೀವಿಗಳ ಕೋಶಗಳಲ್ಲಿ ಪ್ರೋಟೀನಿನ ಸಂಶ್ಲೇಷಣೆ ಅವಿರತವಾಗಿ ನಡೆಯುವುದಿಲ್ಲ. ಈ ಕ್ರಿಯೆ ಜೀವಿಯ ಅವಶ್ಯಕತೆಯನ್ನು ಅವಲಂಬಿಸಿದೆ. ಇಂಥ ನಿಯಂತ್ರಣ ಇರಬೇಕಾದದ್ದು ಅಗತ್ಯ. ನಿಯಂತ್ರಣದ ವಿಧಾನವನ್ನು ಅರಿಯಲು ಸೂಕ್ಷ್ಮಜೀವಿಗಳ ವ್ಯವಸ್ಥೆಯಲ್ಲಿ ಅಧ್ಯಯನಗಳನ್ನು ನಡೆಸಲಾಗಿದೆ.




ಎಷರೀಕಿಯಾ ಕೋಲೈ ಎಂಬ ಸೂಕ್ಷ್ಮಜೀವಿಯಲ್ಲಿ ಲ್ಯಾಕ್ಟೋಸ್ ಸಕ್ಕರೆಯ ಅಪಚಯಕ್ಕೆ ಬೇಕಾದ ಬೀಟಗ್ಯಾಲಾಕ್ಟೋಡೇಸ್ ಎಂಬ ಕಿಣ್ವ ಸಾಧಾರಣವಾಗಿ ಉತ್ಪತ್ತಿಯಾಗುವುದಿಲ್ಲ. ಆದರೆ ಬ್ಯಾಕ್ಟೀರಿಯ ಬೆಳೆಯುವ ಮಾಧ್ಯಮಕ್ಕೆ ಲ್ಯಾಕ್ಟೋಸ್ ಸಕ್ಕರೆಯನ್ನು ಸೇರಿಸಿದಾಗ ಈ ಕಿಣ್ವದ ಉತ್ಪತ್ತಿ ಪ್ರೇರೇಪಿತವಾಗುತ್ತದೆ. ಈಗ ಮಾಧ್ಯಮದಿಂದ ಸಕ್ಕರೆಯನ್ನು ತೆಗೆದರೆ ಅಷ್ಟೇ ಶೀಘ್ರವಾಗಿ ಕಿಣ್ವಸಂಶ್ಲೇಷಣೆ ನಿಂತುಹೋಗುತ್ತದೆ. ಪ್ರೇರೇಪಿತ (ಇಂಡ್ಯೂಸ್ಡ್) ವ್ಯವಸ್ಥೆಯಲ್ಲಿ ಬೀಟಗ್ಯಾಲಾಕ್ಟೋಸೈಡೇಸ್ ಕಿಣ್ವ ಮಾತ್ರವಲ್ಲದೆ ಲ್ಯಾಕ್ಟೋಸನ್ನು ಕೋಶದೊಳಗೆ ಸಾಗಿಸಲು ಬೇಕಾದ ಪರ್ಮಿಯೇಸ್ ಕಿಣ್ವ ಮತ್ತು ಗ್ಯಲಾಕ್ಟೋಸೈಡ್–ಅಸಿಟೈಲೇಸ್ ಕಿಣ್ವ ಸಹ ಉತ್ಪತ್ತಿಯಾಗುತ್ತವೆ. ಇವು ಮೂರು ಕಿಣ್ವಗಳ ಸಂಶ್ಲೇಷಣೆಗಳು ಪರಸ್ಪರವಾಗಿ ನಿಯಮಿತವಾದ ಅನುಪಾತದಲ್ಲಿವೆ. ಇವನ್ನು ನಿರ್ದೇಶಿಸುವ Z (ಬೀಟಗ್ಯಾಲಾಕ್ಟೋಸೈಡೇಸ್), Y (ಪರ್ಮಿಯೇಸ್) ಮತ್ತು Z (ಅಸಿಟೈಲೇಸ್) ಜೀನುಗಳು ಪಕ್ಕಪಕ್ಕದಲ್ಲಿವೆ ಈ ವ್ಯವಸ್ಥೆಯಲ್ಲಿ YZ$a$ ಜೀನುಗಳೂ ಮಾತ್ರವಲ್ಲದೆ i ಜೀನು ಒಂದಿದೆಯೆಂದೂ ಇದು Y ಮತ್ತು Z ಜೀನುಗಳೊಡನೆ ನಿಕಟ ಸಂಬಂಧವನ್ನು ಪಡೆದಿದೆಯೆಂದೂ ತಿಳಿದುಬಂದಿವೆ. Z ಜೀನಿನ ಒಂದು ತುದಿಯಲ್ಲಿ ವಿಕೃತಿಯಾದರೆ (ಮ್ಯುಟೇಷನ್) ಮೂರು ಜೀನುಗಳ ಕರ್ತವ್ಯನಿರ್ವಹಣೆಯ ಸಾಮರ್ಥ್ಯದ ಮೇಲೆಯೂ ಅದರ ಪರಿಣಾಮ ಉಂಟಾಗುತ್ತದೆ. ಇಂಥ ಪ್ರದೇಶವನ್ನು ಚಾಲಕ (ಆಪರೇಟರ್) ಪ್ರದೇಶವೆಂದು ಕರೆಯಲಾಗಿದೆ. ಕಿಣ್ವಗಳ ಸಂಶ್ಲೇಣೆಗೆ ನೇರವಾದ ಜವಾಬ್ದಾರಿಯನ್ನು ಹೊತ್ತಿರುವ ZY ಮತ್ತು $a$ ಗಳನ್ನು ರಚನಾತ್ಮಕ (ಸ್ಟ್ರಕ್ಚರಲ್) ಜೀನುಗಳೆಂದೂ ZY ಮತ್ತು $a$ ಜೀನುಗಳು ವ್ಯಕ್ತವಾಗುವ ಬಗೆಯನ್ನು ನಿಯಂತ್ರಿಸುವ $i$ ಜೀನನ್ನು ನಿಯಂತ್ರಕ (ರೆಗ್ಯುಲೇಟರಿ) ಜೀನು ಎಂದೂ ಕರೆಯಲಾಗಿದೆ. ನಿಯಂತ್ರಕ ಜೀನು ಓಪರಾನಿನ ಹೊರಭಾಗದಲ್ಲಿಯೂ ಇರಬಹುದು. ಲ್ಯಾಕ್ಟೋಸ್ ಸಕ್ಕರೆಯ ಚಯಾಪಚಯ ಕ್ರಿಯೆಯಲ್ಲಿ ರಚನಾತ್ಮಕ ಮತ್ತು ನಿಯಂತ್ರಕ ಜೀನುಗಳೂ ಚಾಲಕವೂ ಒಂದು ಮಾನದಂತೆ ಪಾಲ್ಗೊಳ್ಳುವುದನ್ನು ವಿವರಿಸಲು ಜಾಕೂಬ್ ಮತ್ತು ಮೋನೋ ಓಪರಾನ್ ಕಲ್ಪನೆಯನ್ನು ಮುಂದಿಟ್ಟರು (1961). ಅವರ ವಾದದ ಪ್ರಕಾರ

ಸರ್ವಸಾಧಾರಣವಾಗಿ ಸೂಕ್ಷ್ಮ ಜೀವಿಗಳಲ್ಲಿ ಪ್ರೇರೇಪಕವನ್ನೂ ಗುರುತಿಸಬಲ್ಲ ವಸ್ತುವೊಂದಿರಬೇಕು. ಇದು ಪ್ರೇರೇಪಕದಿಂದ ಬರುವ ಸಂದೇಶವನ್ನು ಸಾಗಿಸಿ ಈ ಮೂರು ಕಿಣ್ವಗಳ ಸಂಶ್ಲೇಷಣೆ ಮಾತ್ರ ಉಂಟುಮಾಡಬಲ್ಲುದು. ಈ ವಸ್ತು ಎರಡು ವಿಧಗಳಲ್ಲಿ ಕೆಲಸ ಮಾಡಬಲ್ಲುದು. ಇಂಥ ಕೆಲಸ ಕಿಣ್ವದ ಸಂಶ್ಲೇಷಣೆಗೆ ಅವಶ್ಯವಾಗಿರಬಹುದು ಅಥವಾ ಕಿಣ್ವದ ಸಂಶ್ಲೇಷಣೆಯನ್ನು ದಮನಮಾಡಬಹುದು. ಮೊದಲನೆಯ ಸಂದರ್ಭದಲ್ಲಿ ನಿಯಂತ್ರಣ ಸಕಾರಾತ್ಮಕವಾದದ್ದು ಮತ್ತು ಪ್ರೇರೇಪಕ ಈ ವಸ್ತುವನ್ನು ಪಟುತ್ವಗೊಳಿಸುತ್ತದೆ. ಎರಡನೆಯ ಸಂದರ್ಭದಲ್ಲಿ ನಿಯಂತ್ರಣ ನಕಾರಾತ್ಮಕವಾದದ್ದು ಮತ್ತು ಪ್ರೇರೇಪಕ ಈ ವಸ್ತುವನ್ನು ಪ್ರತಿರೋಧಿಸುತ್ತದೆ. *i* ಜೀನು ಈ ನಿಯಂತ್ರಕ ವಸ್ತುವನ್ನು ಉತ್ಪತ್ತಿಮಾಡುತ್ತದೆಂದು ಭಾವಿಸುವುದಾದರೆ, ನಿಯಂತ್ರಣದ ವಿಧಾನವನ್ನ ಸರಳವಾಗಿ ವಿವರಿಸಬಹುದು. ಸೂಕ್ಷ್ಮ ಜೀವಿಗಳ ವ್ಯತ್ಯಗಳಲ್ಲಿ (ಮ್ಯುಟೇಷನ್ಸ್) ನಡೆಸಿದ ಸಂಶೋಧನೆಗಳಿಂದ *i* ಜೀನಿನಿಂದ ಉತ್ಪತ್ತಿಯಾದ ಫಲಿತ ಕಿಣ್ವಗಳ ಸಂಶ್ಲೇಷಣೆಯನ್ನು ಪ್ರತಿರೋಧಿಸುತ್ತವೆಯೆಂದು ಗೊತ್ತಾಗಿದೆ. ಈ ವಸ್ತು ದಮನಕಾರಿಯಾಗಿರಬೇಕು ಮತ್ತು ಪ್ರೇರೇಪಕ ವಸ್ತು ಇದನ್ನು ನಿಷ್ಕ್ರಿಯೆಗೊಳಿಸುವುದರ ಮೂಲಕ ತನ್ನ ಕರ್ತವ್ಯವನ್ನು ನಿರ್ವಹಿಸಬೇಕು.

ಮೂರು ಕಿಣ್ವಗಳನ್ನೂ ನಿಯಂತ್ರಕ ದಮನಮಾಡುವುದರಿಂದ ಇವು ಮೂರಕ್ಕೂ ವಿಶಿಷ್ಟವಾದ ರಚನೆಯನ್ನು ಗುರುತಿಸಬೇಕು. ಇದೇ ಚಾಲಕ. ಲ್ಯಾಕ್ಟೋಸ್ ವ್ಯವಸ್ಥೆಯ ಮೂರು ಜೀನುಗಳನ್ನೂ ಚಾಲಕ ಹತೋಟಿಯಲ್ಲಿಟ್ಟುಕೊಂಡಿದೆ. ದೂತ–ಆರ್‌ಎನ್‌ಎ ಮಟ್ಟದಲ್ಲಿ ಅಂದರೆ ಜೀನುಗಳ ಪ್ರತಿಕೃತಿ (ಟ್ರಾನ್ಸ್‌ಸ್ಕ್ರಿಪ್ಟ್) ಮಟ್ಟದಲ್ಲಿ ನಿಯಂತ್ರಣ ನಡೆಯುತ್ತದೆ. ದಮನಕ ಚಾಲಕದೊಂದಿಗೆ ಸಂಯೋಜಿತವಾಗಿ ಚಾಲಕದ ಕಾರ್ಯಕ್ಕೆ ಅಡ್ಡಿಮಾಡುವುದರಿಂದ ದೂತ–ಆರ್‌ಎನ್‌ಎ ಸಂಶ್ಲೇಷಣೆ ನಿಂತುಹೋಗುತ್ತದೆ. ಪ್ರೇರೇಪಕ ದಮನಕದೊಂದಿಗೆ ವರ್ತಿಸಿ ಅದನ್ನು ಪ್ರತಿರೋಧಿಸಿದಾಗ ದಮನಕ ಚಾಲಕದಿಂದ ನಿರ್ಗಮಿಸುತ್ತದೆ ಮತ್ತು ದೂತ–ಆರ್‌ಎನ್‌ಎ ಸಂಶ್ಲೇಷಣೆ ಮುಂದುವರಿಯುತ್ತದೆ. ಈಚಿನ ಅಭಿಪ್ರಾಯಗಳ ಪ್ರಕಾರ ಚಾಲಕ ಮತ್ತು ರಚನಾತ್ಮಕ ಜೀನುಗಳ ನಡುವೆ ಉತ್ತೀರ್ಣಕ (ಪ್ರಮೋಟರ್) ಪ್ರದೇಶವೊಂದಿದೆಯೆಂದೂ ದೂತ–ಆರ್‌ಎನ್‌ಎ ಸಂಶ್ಲೇಷಣೆ ಈ ಪ್ರದೇಶದಿಂದ ಪ್ರಾರಂಭವಾಗುವುದೆಂದೂ ಭಾವಿಸಲಾಗಿದೆ.

ದಮನಕ ಪ್ರೋಟೀನ್ ವಸ್ತುವಾಗಿರಬೇಕೆನ್ನುವುದಕ್ಕೆ ಸಾಕಷ್ಟು ಆಧಾರಗಳು ದೊರೆತಿವೆ. ಈಗ ಮೂರು ದಮನಕಗಳನ್ನು ಬೇರ್ಪಡಿಸಲಾಗಿದೆ. ದಮನಕ ಎರಡು ನಕ್ರಿಯಾತ್ಮಕ ಪ್ರದೇಶಗಳನ್ನೊಳಗೊಂಡಿದೆ. ಒಂದು ಪ್ರದೇಶ (A–ಸೈಟ್) ಚಾಲಕದೊಂದಿಗೆ ಸೇರುತ್ತದೆ. ಇನ್ನೊಂದು ಪ್ರದೇಶ (S–ಸೈಟ್) ಚಾಲಕದೊಂದಿಗೆ ಸೇರುತ್ತದೆ. ಇನ್ನೊಂದು ಪ್ರದೇಶ (A–ಸೈಟ್) ಪ್ರೇರೇಪಕವನ್ನು ಬಂಧಿಸುತ್ತದೆ. ಪ್ರೇರೇಪಕದೊಂದಿಗೆ ಆಗುವ ಬಂಧನ ಪ್ರೋಟೀನಿನ ಆಕಾರದಲ್ಲಿ ವ್ಯತ್ಯಾಸವನ್ನು ಉಂಟುಮಾಡಿ ಚಾಲಕ–ದಮನಕಗಳಿಗಿರುವ ವಾತ್ಸಲ್ಯವನ್ನು ತಗ್ಗಿಸುತ್ತದೆ. ಈ ಅಭಿಪ್ರಾಯಗಳನ್ನು ಚಿತ್ರದಲ್ಲಿ ತೋರಿಸಿದೆ.

ಓಪರಾನ್ ಪ್ರಮೇಯ ಕೇವಲ ತಾತ್ತ್ವಿಕವಾಗಿಯೇ ಉಳಿದಿಲ್ಲ. ಎಷರೀಷಿಯಾ ಕೋಲೈ ಮತ್ತು ಸಾಲ್ಮೊನೆಲ್ಲಾ ಗುಂಪಿನ ಸೂಕ್ಷ್ಮ ಜೀವಿಗಳಲ್ಲಿ ಇದುವರೆಗೆ ಸುಮಾರು ಹತ್ತಕ್ಕೂ ಮಿಕ್ಕಿದ ಓಪರಾನುಗಳನ್ನು ಅಧ್ಯಯನ ಮಾಡಲಾಗಿದೆ. ಇವುಗಳ ಪೈಕಿ ಲ್ಯಾಕ್ಟೋಸ್ ಸಕ್ಕರೆಯ ಚಯಾಪಚಯ ಕ್ರಿಯೆಗೆ ಕಾರಣವಾದ ಲ್ಯಾಕ್ ಓಪರಾನ್, ಲ್ಯೂಸೀನ್ ಅಮೈನೋ ಆಮ್ಲದ ಸಂಶ್ಲೇಷಣೆಗೆ ಕಾರಣವಾದ ಲ್ಯೂ ಓಪರಾನ್, ಹಿಸ್ಟಿಡಿನ್ ಅಮೈನೋ ಆಮ್ಲದ ಸಂಶ್ಲೇಷಣೆಗೆ ಸಂಬಂಧಪಟ್ಟ ಹಿಸ್ ಓಪರಾನ್, ಇದನ್ನೂ ಇನ್ನೂ ಕೆಲವು ಓಪರಾನುಗಳನ್ನೂ ವಿಶದವಾಗಿ ಅಭ್ಯಸಿಸಲಾಗಿದೆ. 1969ರಲ್ಲಿ ಬೆಕ್‌ವಿತ್ ಮತ್ತು ಸಹೋದ್ಯೋಗಿಗಳು ಲ್ಯಾಕ್ ಓಪರಾನನ್ನು ಬೇರ್ಪಡಿಸುವುದರಲ್ಲಿ ಜಯಗಳಿಸಿದರು. ಇವೆಲ್ಲ ಅಧ್ಯಯನಗಳ ಫಲವಾಗಿ ಸೂಕ್ಷ್ಮಜೀವಿಗಳಲ್ಲಿ ನಿಯಂತ್ರಣ ವ್ಯವಸ್ಥೆಯ ಬಗ್ಗೆ ಕೆಲವು ವಿಷಯಗಳು ಬೆಳಕಿಗೆ ಬಂದಿವೆ. ಈಗಿರುವ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಹೀಗೆ ತಿಳಿಸಬಹುದು. ಜಾಕೋಬ್ ಮತ್ತು ಮೋನೋರವರ ಪ್ರಮೇಯ, ಕೆಲವು ಮಾರ್ಪಾಡುಗಳೊಡನೆ, ಸೂಕ್ಷ್ಮಜೀವಿಗಳಲ್ಲಿರುವ ನಿಯಂತ್ರಣವ್ಯವಸ್ಥೆಯನ್ನೂ ವಿವರಿಸಬಲ್ಲುದು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ. ಆದರೆ ನಿಯಂತ್ರಣ ಸಕಾರಾತ್ಮಕವೇ ಅಥವಾ ನಕಾರಾತ್ಮಕವೇ ಎಂಬುದು ಇನ್ನೂ ಬಗೆಹರಿಯದ ವಿಷಯ. ಲ್ಯಾಕ್ ಓಪರನಿನ ಸಂದರ್ಭದಲ್ಲಿ ನಡೆದಿರುವ ಪ್ರಯೋಗಗಳಿಂದ ನಿಯಂತ್ರಣ, ದಮನವಾದ ಜೀನು ವ್ಯಕ್ತವಾಗದಂತೆ, ನಕಾರಾತ್ಮಕವೆಂದು ತೋರಿಬಂದಿದೆ. ತದ್ವಿರುದ್ಧವಾಗಿ ಅರಾಬಿನೋಸ್ ಓಪರಾನಿನಲ್ಲಿ ಸಕಾರಾತ್ಮಕ ನಿಯಂತ್ರಣವಿದೆಯೆನ್ನುವುದಕ್ಕೆ ಬಲವತ್ತರವಾದ ಅನುವಂಶಿಕ ಸಾಕ್ಷ್ಯಗಳು ದೊರೆತಿವೆ.

ಓಪರಾನ್ ಪರಿಕಲ್ಪನೆ (ಕಾನ್‌ಸೆಪ್ಟ್) ಸಾರ್ವತ್ರಿಕ ಮನ್ನಣೆಯನ್ನು ಪಡೆದಿದ್ದರೂ ಜಾಕೊಬ್ ಮತ್ತು ಮೋನೋರವರ ನಿಯಂತ್ರಣಕ್ರಿಯಾವಿಧಿ ಅಷ್ಟಾಗಿ ಪುರಸ್ಕೃತವಾಗಿಲ್ಲ. ಅನೇಕ ಸೂಕ್ಷ್ಮಜೀವಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ಪಡೆದ ಫಲಿತಾಂಶಗಳನ್ನು ಈ ವಿಧಿ ತೃಪ್ತಿಕರವಾಗಿ ವಿವರಿಸಲಾರದು. ಉದಾಹರಣೆಗೆ, ಧ್ರುವೀಯ ವ್ಯತ್ಯಯಗಳಲ್ಲಿ (ಪೋಲಾರ್ ಮ್ಯುಟೆಂಟ್ಸ್) ನಿಯಂತ್ರಣವು ತರ್ಜುಮೆಯ ಮಟ್ಟದಲ್ಲಿ ನಡೆಯುವ ಸೂಚನೆಗಳಿವೆ. 1964ರಲ್ಲಿ ಸ್ಟೆಂಟ್ ಎಂಬಾತ ಮೇಲಿನ ಪ್ರಮೇಯದಿಂದ ತೀರ ಭಿನ್ನವಾದ ಅಭಿಪ್ರಾಯಗಳನ್ನು ಮುಂದಿಟ್ಟ, ಇದರ ಪ್ರಕಾರ ಓಪರಾನ್ ದೂತ–ಆರ್‌ಎನ್‌ಎಯನ್ನು ಸೃಷ್ಟಿಸುವ ದರ, ದೂತ–ಆರ್‌ಎನ್‌ಎ ಪ್ರೋಟೀನಿಗೆ ತರ್ಜುಮೆಯಾಗುವ ದರವನ್ನವಲಂಬಿಸಿದೆ. ದಮನಕವು ತರ್ಜುಮೆಗೆ ಬೇಕಾದ ವರ್ಗಾವಣೆ–ಆರ್‌ಎನ್‌ಎಯ ವಿಶಿಷ್ಟ ಜಾತಿಯನ್ನು ಪ್ರತಿರೋಧಿಸುತ್ತದೆ. ಹೀಗಾಗಿ ತರ್ಜುಮೆಯೂ ತತ್ಪರಿಣಾಮವಾಗಿ ಓಪರಾನಿನ ಪ್ರತಿಕೃತಿಯೂ ನಿಂತುಹೋಗುತ್ತವೆ.

ವಿಧ್ವಂಸನ ಪ್ರಮೇಯವೆಂಬ (ಡಿಸ್ಟ್ರಕ್ಟಿವ್ ಹೈಪಾಥಿಸಿಸ್) ಇನ್ನೊಂದು ಪ್ರಮೇಯವನ್ನೂ ಸೂಚಿಸಲಾಗಿದೆ. ಇದರ ಪ್ರಕಾರ ರಚಿತವಾಗುವ ದೂತ–ಆರ್‌ಎನ್‌ಎ ಪ್ರೋಟೀನಿಗೆ ತರ್ಜುಮೆಯಾಗುವ ಮೊದಲೇ ದಮನಕದಿಂದ ನಾಶಗೊಳ್ಳುತ್ತದೆ. ಆದ್ದರಿಂದ ದಮನಕ ರೈಬೋ ನ್ಯೂಕ್ಲಿಯೇಸ್ ಕಿಣ್ವದಂತೆ ವರ್ತಿಸುತ್ತದೆ. ಅಲ್ಲದೆ ಇದು ಚಾಲಕದಲ್ಲಿ ದೂತ–ಆರ್‌ಎನ್‌ಎಗೆ ಪ್ರತಿಕೃತಿಯಾಗುವ ಪ್ರದೇಶದ ಪ್ರತ್ಯಾಮ್ಲ ಅನುಕ್ರಮವನ್ನು ಗುರುತಿಸಬಲ್ಲ ಸಾಮರ್ಥ್ಯವನ್ನು ಪಡೆದಿರಬೇಕು.

ಈ ಮೂರು ಪ್ರಮೇಯಗಳಿಗೆ ಮತ್ತು ಸೂಚಿತವಾಗಿರುವ ಇತರ ಪ್ರಮೇಯಗಳಿಗೆ ಇರುವ ಮೂಲಭೂತ ಭಿನ್ನತೆಯೆಂದರೆ ಚಾಲಕಕ್ಕೆ ವಹಿಸಿಕೊಟ್ಟಿರುವ ಕರ್ತವ್ಯಭಾರ. ಜಾಕೋಬ್ ಮತ್ತು ಮೋನೋ ಪ್ರಕಾರ ಚಾಲಕ ದೂತ–ಆರ್‌ಎನ್‌ಎಗೆ ಪ್ರತಿಕೃತಿಯಾಗುವುದಿಲ್ಲ; ವಿಧ್ವಂಸನ ಪ್ರಮೇಯದ ಪ್ರಕಾರ ಚಾಲಕ ದೂತ–ಆರ್‌ಎನ್‌ಎಗೆ ಪ್ರತಿಕೃತಿಯಾಗುತ್ತದೆಯಾದರೂ ಪ್ರೋಟೀನಿಗೆ ತರ್ಜುಮೆಯಾಗುವುದಿಲ್ಲ; ಸ್ಟೆಂಟನ ಪ್ರಕಾರ ಚಾಲಕ ಪ್ರತಿಕೃತಿಯಾಗುತ್ತದೆ ಮತ್ತು ಪ್ರೋಟೀನಿಗೆ ತರ್ಜುಮೆಯಾಗುತ್ತದೆ. ಸದ್ಯದಲ್ಲಿ ಈ ಮೂರು ಪ್ರಮೇಯಗಳನ್ನು ನೇರವಾದ ಪ್ರಯೋಗಗಳಿಂದ ಪರೀಕ್ಷಿಸಲು ಸಾಧ್ಯವಿಲ್ಲ.

(ಎಚ್.ಎಸ್.ಎಸ್.)

**ಓಪನ್‌ಹೈಮರ್, ರಾಬರ್ಟ್:** 1904–67, ಭೌತವಿಜ್ಞಾನಿ; ಅಮೆರಿಕ ದೇಶದ ನ್ಯೂ ಮೆಕ್ಸಿಕೊ ಪ್ರಾಂತ್ಯದ ಲಾಸ್ ಅಲಮಾಸಿನಲ್ಲಿ ಪರಮಾಣುಬಾಂಬನ್ನು ತಯಾರಿಸುವ ಖಚಿತ ಉದ್ದೇಶದಿಂದ ಸ್ಥಾಪಿತವಾದ (1943) ವಿಜ್ಞಾನ ಪ್ರಯೋಗ ಮಂದಿರದ ಪ್ರಥಮ ನಿರ್ದೇಶಕ. ಈ ಮಂದಿರವನ್ನು ಕಟ್ಟಿ ಅದರ ಚಟುವಟಿಕೆಗಳನ್ನು ದಿಗ್ದರ್ಶಿಸಿ (1943–45) ಮುಂದಿನ ಮೂರು ವರ್ಷಗಳ ಮೊದಲೇ ಸಿದ್ಧಿ ಪಡೆದ ವಿಜ್ಞಾನಿ–ಆಡಳಿತಗಾರ.

ನ್ಯೂಯಾರ್ಕ್ ನಗರದಲ್ಲಿ 22 ಏಪ್ರಿಲ್ 1904ರಂದು ಸುಸಂಸ್ಕೃತ ಹಾಗೂ ಶ್ರೀಮಂತ ಕುಟುಂಬದಲ್ಲಿ ಓಪನ್‌ಹೈಮರ್ ಜನಿಸಿದ. ಬಲು ತೀಕ್ಷ್ಣಮತಿ ಎಂದು ಚಿಕ್ಕಂದಿನಿಂದಲೇ ಹೆಸರಾಂತ ಈ ತರುಣನ ವಿಶ್ವವಿದ್ಯಾಲಯ ಮಟ್ಟದ ವಿದ್ಯಾಭ್ಯಾಸ ನಡೆದದ್ದು ಹಾರ್ವರ್ಡಿನಲ್ಲಿ (1925). ಸಹಜ ಒಲವು ಭೌತವಿಜ್ಞಾನ ಸಂಶೋಧನೆಯ ಕಡೆಗೆ ಇತ್ತು. ಪ್ರಾರಂಭದಲ್ಲೇ ಶಕಲಸಿದ್ಧಾಂತ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿ ಪ್ರಸಿದ್ಧಿಗೆ ಬಂದ. ವಿಶ್ವಕಿರಣಗಳು (ಕಾಸ್ಮಿಕ್ ರೇಸ್), ಪರಮಾಣು ಭೌತಶಾಸ್ತ್ರ, ಮೂಲಕಣಗಳು ಮತ್ತು ರಿಲೆಟಿವಿಟಿ–ಈ ಕ್ಷೇತ್ರಗಳಲ್ಲಿ ಗಮನಾರ್ಹ ಸಂಶೋಧನೆಗಳನ್ನು ಮಾಡಿದ್ದಾನೆ. 1929ರಲ್ಲಿ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ಸೈದ್ಧಾಂತಿಕ ಭೌತವಿಜ್ಞಾನ ಉಪಪ್ರಾಧ್ಯಾಪಕನಾಗಿ ಸೇರಿ 1935ರ ವೇಳೆಗೆ ಅಲ್ಲೇ ಪ್ರಾಧ್ಯಾಪಕನಾದ. ಇದರ ಜೊತೆಗೆ ಓಪನ್‌ಹೈಮರ್ ಕ್ಯಾಲಿಫೋರ್ನಿಯದ ಟೆಕ್ನಾಲಜಿ ಇನ್‌ಸ್ಟಿಟ್ಯೂಟಿನಲ್ಲಿ ಪಾಠ ಹೇಳುತ್ತಿದ್ದು (1929–47) ವಿಶ್ವಕಿರಣಗಳ ಸಂಶೋಧನೆಗಳಿಗೆ ಪ್ರಸಿದ್ಧವಾದ ಆ ಸಂಸ್ಥೆಯಲ್ಲಿ ನಡೆದ ಪ್ರಯೋಗದಲ್ಲಿ ಸಹಕರಿಸಿದ್ದ, ಮೀಸಾನ್ಸ್ ಎಂದು ಈಗ ಕರೆಯಲಾಗುತ್ತಿರುವ ಭಾರವಾದ ಕಣಗಳು ವಿಶ್ವಕಿರಣಗಳಲ್ಲಿವೆಯೆಂದು ಸೂಚಿಸಿದುದು ಮಾತ್ರವಲ್ಲದೇ ವಿಶ್ವಕಿರಣಗಳ ಸುರಿಮಳೆಗಳ (ಕಾಸ್ಮಿಕ್ ರೇ ಶವರ್ಸ್) ಉತ್ಪತ್ತಿಯಲ್ಲಿ ಮೀಸಾನ್ ಕಣಗಳು ವಹಿಸುವ ಪಾತ್ರಕ್ಕೆ ಒಂದು ವಾದವನ್ನೂ ಮಂಡಿಸಿದ, ಕೃತಕ ಬದಲಾವಣೆಗಳಿಗೆ (ಆರ್ಟಿಫಿಶಿಯಲ್ ಟ್ರಾನ್ಸ್‌ಮ್ಯುಟೇಶನ್ಸ್) ಸಂಬಂಧಿಸಿದಂತೆ ಹಲವು ಪ್ರಯೋಗಗಳನ್ನು ವಿವರಿಸಲು ಈತ ಒಂದು ಹೊಸ ವಾದವನ್ನೇ ಮುಂದಿಟ್ಟ. ಡ್ಯೂಟ್ರಾನ್ ಕಣ ಪ್ರೋಟಾನ್ ಮತ್ತು ನ್ಯೂಟ್ರಾನುಗಳಿಂದ ಆಗಿದ್ದು ಒಂದು ನ್ಯೂಕ್ಲಿಯಸಿನ ವಿದ್ಯುತ್ ಕ್ಷೇತ್ರದಲ್ಲಿ ಅವು ಬೇರ್ಪಡುವುವೆಂದೂ ನ್ಯೂಕ್ಲಿಯಸಿನ ಧನವಿದ್ಯುತ್ತಿನಿಂದ ವಿಕರ್ಷಣಹೊಂದಿ ಪ್ರೋಟಾನ್ ಹೊರದೊಡಲ್ಪಡುವುದೆಂದೂ ನ್ಯೂಟ್ರಾನ್ ಆ ನ್ಯೂಕ್ಲಿಯಸನ್ನು ಪ್ರವೇಶಿಸುವುದೆಂದೂ ಓಪನ್‌ಹೈಮರ್ ಪ್ರತಿಪಾದಿಸಿದ. ಈ ಕ್ರಿಯೆಯನ್ನು ಓಪನ್‌ಹೈಮರ್–ಫಿಲಿಪ್ಸ್ ಕ್ರಿಯೆ ಎಂದು ಕರೆಯುವುದು ವಾಡಿಕೆ.

ಪರಮಾಣುಬಾಂಬಿನ ಪ್ರಥಮ ಯಶಸ್ವೀ ಪರೀಕ್ಷೆ ಮುಗಿದೊಡನೆಯೇ (1945) ಓಪನ್‌ಹೈಮರ್ ಪ್ರಯೋಗಮಂದಿರದ ನಿರ್ದೇಶಕತ್ವಕ್ಕೆ ರಾಜೀನಾಮೆಯಿತ್ತು ಹೊರಬಂದು ಕ್ಯಾಲಿಫೋರ್ನಿಯದಲ್ಲಿದ್ದ ತನ್ನ ಮೊದಲಿನ ಎರಡು ಪ್ರಾಧ್ಯಾಪಕ ಹುದ್ದೆಗಳಿಗೆ ಮರಳಿದ. ಮುಂದೆ ಪ್ರಿನ್ಸ್‌ಟನ್ನಿನ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡಿ ಸಂಸ್ಥೆಯ ನಿರ್ದೇಶಕನಾಗಿ

ನೇಮಕಗೊಂಡ (1947). ಯುದ್ಧೋತ್ತರ ಕಾಲದಲ್ಲಿ ಸೈದ್ಧಾಂತಿಕ ಭೌತವಿಜ್ಞಾನದಲ್ಲಿ ಅಸಂಖ್ಯಾತ ಗಮನಾರ್ಹ ಕೊಡುಗೆಗಳನ್ನು ನೀಡಿದ ಏಕೈಕ ಸಂಸ್ಥೆಯಿದು. ಈ ಹುದ್ದೆಯಿಂದ 1966ರಲ್ಲಿ ನಿವೃತ್ತಿ ಪಡೆದು ಅದೇ ಸಂಸ್ಥೆಯಲ್ಲಿ ಪ್ರಾಧ್ಯಾಪಕನಾಗಿ ಮುಂದುವರಿದ. 1947–52ರವರೆಗೆ ಅಮೆರಿಕ ದೇಶದ ಪರಮಾಣುಶಕ್ತಿ ಆಯೋಗದ (ಅಟಾಮಿಕ್ ಎನರ್ಜಿ ಕಮಿಶನ್) ಅಧ್ಯಕ್ಷನಾಗಿ ಸಹ ಕೆಲಸಮಾಡಿದ. ನ್ಯಾಷನಲ್ ಅಕಾಡಮಿ ಆಫ್ ಸೈನ್ಸಸ್ ಸಂಸ್ಥೆ ಈತನನ್ನು 1941ರಲ್ಲಿ ತನ್ನ ಸದಸ್ಯನಾಗಿ ಚುನಾಯಿಸಿ ಗೌರವಿಸಿತು. ಓಪನ್‌ಹೈಮರ್ ಫೆಲೋ ಆಫ್ ದಿ ರಾಯಲ್ ಸೊಸೈಟಿ ಗೌರವವನ್ನು ಸಹ ಪಡೆದ. ಈತನ ಸಂಶೋಧನೆಗಳ ಹಿರಿಮೆಯನ್ನು ಗಮನಿಸಿ 1963ರ ಫರ್ಮಿ ಬಹುಮಾನವನ್ನು ನೀಡಲಾಯಿತು.

ಸೈದ್ಧಾಂತಿಕ ವಿಜ್ಞಾನಿಯಾಗಿ, ದಕ್ಷ ಆಡಳಿತಗಾರನಾಗಿ, ಸಂಸ್ಥೆಯನ್ನು ಕಟ್ಟಿ ಪೋಷಿಸುವ ಮಹಾಚೈತನ್ಯವಾಗಿ ಓಪನ್‌ಹೈಮರ್ ಸಾಧಿಸಿದ ಯಶಸ್ಸು ಅಪೂರ್ವವಾದದ್ದು. ಆದರೆ ಪರಮಾಣುಬಾಂಬಿನ ಮಾರಕ ಹತ್ಯಾಕಾಂಡವನ್ನು (ಎಂದರೆ ತನ್ನ ಪ್ರಯತ್ನಗಳ ಪ್ರತ್ಯಕ್ಷ ಫಲವನ್ನು) ಕಂಡ ಈತ (ಜಪಾನ್ ವಿರುದ್ಧ ಪರಮಾಣು ಬಾಂಬಿನ ಪ್ರಯೋಗವನ್ನು ಅನುಮೋದಿಸಿದ್ದರೂ) ಯುದ್ಧಾನಂತರದ ದಿವಸಗಳಲ್ಲಿ ಬಾಂಬಿನ ಅಂತಾರಾಷ್ಟ್ರೀಯ ಹತೋಟಿಗೋಸ್ಕರ ಬಹಳವಾಗಿ ಹೆಣಗಾಡಿದ. ಹೈಡ್ರೊಜನ್ ಬಾಂಬಿನ ಆವಿಷ್ಕರಣದ ದಾರಿಯನ್ನು ವಿರೋಧಿಸಿದ. ಆದರೆ ಅಧ್ಯಕ್ಷ ಟ್ರೂಮನ್ ಈ ವಿರೋಧಗಳನ್ನು ನಿರಾಕರಿಸಿದುದರಿಂದ (1949) ಓಪನ್ ಹೈಮರನ ಮಾತು ನಡೆಯಲಿಲ್ಲ. ತಾನು ರಚಿಸಿ ಪೋಷಿಸಿದ ಪರಿಸರದಲ್ಲಿಯೇ ಪರಮಾಣು ಶಕ್ತಿಗೆ ಸಂಬಂಧಿಸಿದಂಥ ವರ್ಗೀಕೃತ ವಿವರಗಳಿಗೆ (ಎಂದರೆ ಗುಪ್ತ ಫಲಿತಾಂಶಗಳು) ಪ್ರವೇಶ ದೊರೆಯದೇ ಒಂದು ವಿಧದ ಅಜ್ಞಾತವಾಸ ಈ ವಿಜ್ಞಾನಿಗೆ ಪ್ರಾಪ್ತವಾಯಿತು.

ಸೈಂಟಿಫಿಕ್ ಫೌಂಡೇಶನ್ಸ್ ಫಾರ್ ವರ್ಲ್ಡ್ ಆರ್ಡರ್ ಎಂಬ ಗ್ರಂಥವನ್ನು 1947ರಲ್ಲೂ ಸೈನ್ಸ್ ಅಂಡ್ ದಿ ಕಾಮನ್ ಅಂಡರ್‌ಸ್ಟೇಂಡಿಂಗ್ ಎಂಬ ಗ್ರಂಥವನ್ನು 1954ರಲ್ಲೂ ದಿ ಓಪನ್ ಮೈಂಡ್ ಎಂಬ ಗ್ರಂಥವನ್ನು 1955ರಲ್ಲೂ ಬರೆದು ಪ್ರಕಟಿಸಿದ್ದಾನೆ. 18 ಫೆಬ್ರವರಿ 1967 ಪ್ರಿನ್ಸ್‌ಟನ್ನಿನಲ್ಲಿ ನಿಧನವಾದನು. (ಆರ್.ಎ.ಎ.)

**ಓಪಿಎಂ:** ರಷ್ಯನ್ ಭಾಷೆಯಲ್ಲಿ ಪ್ರಾಯೋಗಿಕ ರಾಕೆಟ್ ಎಂಜಿನ್ ಎಂಬ ಪದಗಳ ಸಂಕ್ಷೇಪ ರೂಪ. 6–300 ಕಿ.ಗ್ರಾಂ. ನೂಕುಬಲ ಇರುವ ದ್ರವಚಾಲಿತ ರಾಕೆಟ್ ಎಂಜಿನುಗಳ ಸಮುದಾಯ ಓಪಿಎಂ. 1930 – 33ರ ವರೆಗಿನ ಅವಧಿಯಲ್ಲಿ ಓಪಿಎಂ–1 – ಓಪಿಎಂ–52 ವಿವಿಧ ರಾಕೆಟ್ ಎಂಜಿನುಗಳನ್ನು ರೂಪಿಸಿ ಸಿದ್ಧಪಡಿಸಿದರು. ಓಪಿಎಂ–53 – ಓಪಿಎಂ–102 ಎಂಜಿನುಗಳನ್ನು ತಯಾರಿಸಿದ್ದು 1934–38ರ ಅವಧಿಯಲ್ಲಿ. *

**ಓಫಿಡೈಯಿಡೀ:** ಸಮುದ್ರದ ಮೀನುಗಳ ಒಂದು ಕುಟುಂಬ. ಓಫೀಡಿಯಾಯ್ಡಿಯ ಉಪಗಣದಲ್ಲಿನ ಮೂರು ಕುಟುಂಬಗಳಲ್ಲಿ ಒಂದು. ಈ ಕುಟುಂಬದ ಮೀನುಗಳು ಅಪ್ಪರ್ ಕ್ರಿಟೇಶಿಯಸ್ ಕಾಲದಿಂದ ಇಂದಿನವರೆಗೂ ಜೀವಂತವಾಗಿವೆ.

ಕಸ್ಕ್ ಈಲ್ (ಒರ್ಬಟ್ ಮೀನನ್ನು ಹೋಲುವ ಹಾವುಮೀನು) ಗಳೆಂದು ಕರೆಯುವ ಈ ಕುಟುಂಬದಲ್ಲಿ ಸು.30 ಪ್ರಭೇದಗಳನ್ನು ಗುರುತಿಸಲಾಗಿದೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ಉಷ್ಣ ಮತ್ತು ಸಮಶೀತೋಷ್ಣ ವಲಯ ಪ್ರದೇಶಗಳಲ್ಲಿ ಮಾತ್ರ ಇವು ಹೆಚ್ಚಾಗಿ ದೊರೆಯುವುವು.

ಓಫಿಡೈಯಿಡೀ ಕುಟುಂಬದ ಮೀನುಗಳು ಸಾಮಾನ್ಯವಾಗಿ 12 ಅಂಗುಲಕ್ಕಿಂತಲೂ ಹೆಚ್ಚು ಬೆಳೆಯುವುದಿಲ್ಲ. ಆದರೆ ದೊಡ್ಡ ಗಾತ್ರಕ್ಕೆ ಬೆಳೆಯುವ ಕೆಲವು ಪ್ರಭೇದಗಳೂ ಉಂಟು. ದಕ್ಷಿಣ ಆಫ್ರಿಕದ ನೆರೆಯ ಸಮುದ್ರಗಳಲ್ಲಿನ ಕಿಂಗ್‌ಕ್ಲಿಪ್ 5 ಅಡಿಯಷ್ಟು ಉದ್ದ ಬೆಳೆಯುವುದು. ಈ ಮೀನು ಬಹಳ ರುಚಿಕರವೆಂದು ಹೆಸರಾಗಿದೆ. ಈ ಕುಟುಂಬದ ಇನ್ನೆರಡು ಪ್ರಭೇದಗಳು ಪೆರು ದೇಶದ ಸಮುದ್ರದ ಮೀನುಗಾರಿಕೆಯಲ್ಲಿ ಮುಖ್ಯವಾದುವು. ಈ ಎರಡು ಪ್ರಭೇದಗಳ ಮೀನುಗಳು 21/2 ಅಡಿ ಉದ್ದ ಬೆಳೆಯುವುವು. ಈ ಮೀನುಗಳು ಸಾಮಾನ್ಯವಾಗಿ ಆಳವಾದ ಸಮುದ್ರದಲ್ಲಿ ಮಾತ್ರ ದೊರಕುವುವಾದರೂ ಕೆಲವೊಮ್ಮೆ ನದೀಮುಖಗಳಲ್ಲಿಯೂ ಸಮುದ್ರದ ಅಂಚಿನಲ್ಲಿಯೂ ಸಿಕ್ಕಿವೆ.

ಈ ಮೀನಿನ ದೇಹ ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾಗಿ ತೆಳುವಾಗಿರುವುದು. ಬೆನ್ನಿನ ಮತ್ತು ಗುದದ ರೆಕ್ಕೆಗಳು (ಅಥವಾ ಈಜುರೆಕ್ಕೆ) ತಲೆಯ ಹಿಂಭಾಗದಲ್ಲಿ ಪ್ರಾರಂಭವಾಗಿ ಬಾಲದ ಕೊನೆಯವರೆಗೆ ವ್ಯಾಪಿಸಿದ್ದು ಅನೇಕ ರೆಕ್ಕೆಗಳನ್ನು ಹೊಂದಿರುವುವು. ಈ ಕುಟುಂಬದ ಮೀನುಗಳನ್ನು ಗುರುತಿಸಲು ಸಹಾಯಕವಾದ ಅತಿ ಪ್ರಮುಖ ಲಕ್ಷಣವೆಂದರೆ ಪಕ್ಕೆಯ ಈಜುರೆಕ್ಕೆಗಳು. ಇವು ದೇಹದ ಮುಂಭಾಗದವರೆಗೂ (ಗಡ್ಡದಡಿಯಲ್ಲಿ) ಸಾಗಿ ಕೇವಲ ಒಂದು ಜೋಡಿ ಸೀಳಿದ ತಂತುಗಳಾಗಿ ಮಾರ್ಪಟ್ಟಿವೆ. ಅತಿಸೂಕ್ಷ್ಮವಾದ ಈ ತಂತುಗಳನ್ನು ಮೀನು ಸಮುದ್ರದ ತಳದಲ್ಲಿ ಚಲಿಸುವಾಗ ಕೆಳಭಾಗದಲ್ಲಿನ ಪರಿಸ್ಥಿತಿಯನ್ನು ಗ್ರಹಿಸಲು ಉಪಯೋಗಿಸುವುದು.

ಕ್ಯಾಲಿಫೋರ್ನಿಯದ ಸ್ಟೈನ್‌ಹಾರ್ಟ್ ಅಕ್ವೇರಿಯಂನ ಕ್ಯೂರೇಟರಾದ ಇ.ಎಸ್.ಹೆರಾಲ್ಡ್ ಈ ಕುಟುಂಬದ ಮೀನೊಂದರ ಬಗ್ಗೆ ಗಮನಾರ್ಹನಾದ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಕ್ಯಾಲಿಫೋರ್ನಿಯದ ನೆರೆಯ ಸಮುದ್ರದಲ್ಲಿ 600 ಅಡಿ ಆಳದಲ್ಲಿ ಹಿಡಿದ ಚುಕ್ಕಿ ಕಸ್ಕ್‌ಈಲ್ (ಓಟೋಫಿಡಿಯಂ ಟೈಲರಿ) ಮೀನು ಸಾಮಾನ್ಯವಾಗಿ ತನ್ನ ಬಾಲದ ಮೇಲೆ ನಿಲ್ಲುವ ಸ್ವಭಾವದ್ದೆಂದು ಇವರು ತಿಳಿಸಿರುವರು. ಅದು ಬಾಲವನ್ನೆ ಮುಂದಾಗಿ ಮಾಡಿಕೊಂಡು ಪೊಟರೆಗಳಲ್ಲಿ ನುಗ್ಗುವುದೆಂದೂ ಕೇವಲ ತಲೆಯನ್ನು ಮಾತ್ರ ಹೊರಗೆ ನೀಡುವುದೆಂದೂ ತಿಳಿದುಬಂದಿದೆ.

ಓಫಿಡೈಯಿಡೀ ಕುಟುಂಬದ ಮೀನುಗಳು ದಕ್ಷಿಣ ಆಫ್ರಿಕ, ಚಿಲಿ, ಪೆರು ಮತ್ತು ನ್ಯೂಜಿಲೆಂಡ್ ದೇಶಗಳ ಮೀನುಗಾರಿಕೆಯಲ್ಲಿ ಗಮನಾರ್ಹವಾದುವು. (ಸಿ.ಜಿ.ಕೆ.)

**ಓಫಿಯೂರಾಯ್ಡಿಯ:** ಕಂಟಕ ಚರ್ಮಿಗಳ (ಎಕಿನೊಡರ್ಮೇಟ) ವಂಶದ ಒಂದು ವರ್ಗ. ಸಮುದ್ರಜೀವಿಗಳಾದ ಪೆಡಸುನಕ್ಷತ್ರಗಳು (ಬ್ರಿಟಲ್ ಸ್ಟಾರ್ಸ್) ಇದಕ್ಕೆ ಉದಾಹರಣೆ. ದೇಹದಲ್ಲಿ ಮಧ್ಯದ ತಟ್ಟೆಯೂ ಕಿರಣಗಳಂತೆ ಚಾಚಿರುವ ಐದು ತೋಳುಗಳೂ ಇವೆ. ತೆಳುವಾದ ದುಂಡುತೋಳುಗಳು ಮಧ್ಯ ತಟ್ಟೆಯಿಂದ ಸ್ಪಷ್ಟವಾಗಿ ಭಿನ್ನತೆಯನ್ನು ಪ್ರದರ್ಶಿಸುತ್ತವೆ; ಇವು ಬಾಯಿವರೆಗೆ ಒಳಚಾಚಿಕೊಂಡು ಒಟ್ಟುಗೂಡಿ ಬಾಯಿಯ ಸುತ್ತಲೂ ಒಂದು ಆಧಾರ ಕಟ್ಟಿನಂತಾಗಿರುವುದು. ತೋಳುಗಳು ಬಿಡಿ. ತುದಿಯಲ್ಲಿ ಮೊನಚಾಗಿರುತ್ತವೆ. ಕೆಲವು ಪೆಡಸುನಕ್ಷತ್ರಗಳಲ್ಲಿ (ಯೂರಿಯೇಲಿ ಗಣದವು) ತೋಳುಗಳು ತುದಿಯಲ್ಲಿ ಕವಲೊಡೆದು ಸುತ್ತಲೂ ಒಂದು ರೀತಿಯ ಬಲೆಯನ್ನು ರಚಿಸಿಕೊಂಡಿವೆ.



ಆಸ್ಟಿರೊನಿಕ್ಸ್ ಎಕ್ಸ್‌ವೇಟಿ ಪ್ರಾಣಿ ಹವಳಕ್ಕೆ ಸುತ್ತಿಕೊಂಡಿರುವುದು

ಬಾಯಿ ಮಧ್ಯ ತಟ್ಟೆಯ ಅಧೋಭಾಗದ ನಡುವೆ ಇದೆ. ಆಂಬುಲ್ಯಾಕ್ರಲ್ ಕಾಲುವೆಗಳಾಗಲಿ ಆಸನದ್ವಾರವಾಗಲಿ ಇರುವುದಿಲ್ಲ. ಮರಿಯಲ್ಲಿ ಊರ್ಧ್ವಭಾಗದಲ್ಲಿರುವ ಮ್ಯಾಡ್ರಿಪೊರೈಟ್ ತಟ್ಟೆ ಪ್ರೌಢಜೀವಿಯ ಅಧೋಭಾಗಕ್ಕೆ ಸ್ಥಳಾಂತರವಾಗುವುದು. ಮೈಮೇಲಿನ ಚರ್ಮದ ಕೆಳಗೆ ತೆಳುವಾದ ಸುಣ್ಣದ ರಚನೆಯ ಫಲಕಗಳಿವೆ. ಇವುಗಳ ಇಕ್ಕಡೆಗಳಲ್ಲಿ ಸಣ್ಣ ಅಥವಾ ಉದ್ದವಾದ ಮುಳ್ಳುಗಳಂಥ ರಚನೆಗಳು ಹೊರಬಾಗುತ್ತವೆ. ಕೆಲವು ಪೆಡಸುನಕ್ಷತ್ರಗಳಲ್ಲಿ ಫಲಕಗಳ (ಪ್ಲೇಟ್) ಬದಲು ಹರಳಿನಂಥ ಸುಣ್ಣದ ರಚನೆಗಳಿವೆ. ಅಧೋಭಾಗದಲ್ಲಿ 5 ಜೊತೆ ಸಣ್ಣ ಚೀಲಗಳಿವೆ. ಇವು ಜನನ ಕುಹರದೊಳಕ್ಕೆ ತೆರೆಯುತ್ತವೆ. ಜನನೇಂದ್ರಿಯಗಳಲ್ಲಿ ಉತ್ಪತ್ತಿಯಾಗುವ ಪ್ರಜನನ ಜೀವಕಣಗಳೂ ಇವುಗಳಲ್ಲಿ ಬಂದು ಸೇರುವುವು. ಆ ಕುಹರಗಳು ಉಸಿರಾಡುವ ಮತ್ತು ವಿಸರ್ಜಿಸುವ ಕಾರ್ಯಗಳನ್ನೂ ನಡೆಸುತ್ತದೆ. ತೋಳುಗಳ ಚರ್ಮದ ಒಳಭಾಗದಲ್ಲಿ ಇರುವ ಆಂಬುಲ್ಯಾಕ್ರಲ್ ಫಲಕಗಳು ಅವಕ್ಕೆ ಆಧಾರವಾಗಿರುವುವು. ನಳಿಕೆಪಾದಗಳು ತೋಳುಗಳ ಪಕ್ಕಗಳಲ್ಲಿನ ಫಲಕಗಳ ಮಧ್ಯದಲ್ಲಿರುವ ಸಂದಿಗಳಿಂದ ಹೊರಬರುವುವು. ಒಂದೊಂದು ತೋಳಿನೊಳಗೂ ದೇಹಾಂತರಾ ವಕಾಶ, ನರತಂತು, ಆಂಬುಲ್ಯಾಕ್ರಲ್ ನಾಳಗಳು ಇವೆಲ್ಲವೂ ಸಾಗಿ ಬಂದಿರುತ್ತವೆ. ದೇಹಾಂತರಾವಕಾಶ ಸೀಲಾಮಿಕ್ ಅನುಲೇಪಕ ಕಣಗಳಿಂದ ಆವೃತವಾಗಿದೆ. ದೇಹದ ಹೊದಿಕೆ ಹೊರ ಮತ್ತು ಒಳಪೊರೆಗಳ ಮಧ್ಯೆ ವ್ಯಾಪಿಸಿರುವುದು. ಆಂಬುಲ್ಯಾಕ್ರಲ್ ನಾಳಗಳಲ್ಲಿ ಚಲಿಸುವ ದ್ರವದಲ್ಲಿ ಹಿಮೊಗ್ಲೋಬಿನ ತುಂಬಿದ ಅಮೀಬಾಕಾರದ ಜೀವಕಣಗಳಿವೆ. ಆಸ್ಟೆರಾಯ್ಡಿಯ ವರ್ಗದ ಪ್ರಾಣಿಗಳಲ್ಲಿರುವ ಟೀಡ್‌ಮನ್ ಕೋಶಗಳು ಈ ಗುಂಪಿನವುಗಳಲ್ಲಿ ಇರುವುದಿಲ್ಲ.

ಜೀರ್ಣಾಂಗಗಳಲ್ಲಿ ಬಾಯಿ, ಅನ್ನನಾಳ ಮತ್ತು ಚೀಲದಂಥ ಜಠರವೂ ಇವೆ. ಗುದದ್ವಾರವಿಲ್ಲ. ಜಲಪರಿಚಲನಾಂಗವ್ಯೂಹ (ವಾಟರ್ ವ್ಯಾಸ್ಕುಲರ್ ಸಿಸ್ಟಮ್) : ಅಧೋಭಾಗದಲ್ಲಿರುವ ರಂಧ್ರಮಯವಾದ ಮ್ಯಾಡ್ರಿಪೊರೈಟ್ ತಟ್ಟೆಯಿಂದ ಮುಚ್ಚಲ್ಪಟ್ಟ ಶಿಲಾನಾಳ ಆಂಬ್ರುಲ್ಯಾಕ್ರಲ್ ಉಂಗುರನಾಳವನ್ನು ಸೇರುವುದು. ಈ ನಾಳದಿಂದ ಹೊರಡುವ 5

ಆಂಬ್ಯುಲ್ಯಾಕ್ರಲ್ ನಾಳಗಳು ತೋಳುಗಳೊಳಗೆ ಹಾದುಹೋಗಿರುತ್ತವೆ. ಆಂಬ್ಯುಲ್ಯಾಕ್ರಲ್ ನಾಳಗಳ ಇಕ್ಕೆಲಗಳಲ್ಲಿ ನಳಿಕೆಪಾದಗಳಿವೆ. ನಳಿಕೆಪಾದಗಳಿಗೆ ಆಂಪ್ಯುಲೆಗಳಾಗಲಿ ಹೀರುಬಟ್ಟಲುಗಳಾಗಲಿ ಇರುವುದಿಲ್ಲ. ನಳಿಕೆಪಾದಗಳು ಪ್ರಾಣಿಯ ಚಲನೆಯಲ್ಲಿ ಪಾಲುಗೊಳ್ಳುವುದಕ್ಕಿಂತ ಹೆಚ್ಚಾಗಿ ಉಸಿರಾಟಕ್ಕೂ ಪರಿಸರದ ಅರಿವು ಪಡೆಯಲೂ ಸಹಕಾರಿಯಾಗಿವೆ. ಉಂಗುರನಾಳಕ್ಕೆ ಸೇರಿಕೊಂಡಂತೆ 4 ಪೋಲಿಯನ್ ಕೋಶಗಳಿವೆ (ವೆಸಿಕಲ್. ಜನನಕುಹರಗಳ ಒಳಮುಖ ಶಿಲಕೆಗಳುಳ್ಳ ಜೀವಕಣಗಳಿಂದ ಆವೃತವಾಗಿದೆ. ಅದರಲ್ಲಿ ಸಮುದ್ರದ ನೀರು ಯಾವಾಗಲೂ ಚಲಿಸುತ್ತಿರುತ್ತದೆ; ಆದ್ದರಿಂದ ಅದು ಉಸಿರಾಡಲೂ ಸಹಕಾರಿಯಾಗಬಹುದು



ಎಡಗಡೆಯದು: ಓಫಿಯೊಲೆಪಿಸ್ ಪ್ರಾಣಿಯ ತಟ್ಟೆಯ ಭಾಗದ ಮೇಲುನೋಟ;
ಬಲಗಡೆಯದು: ಓಫಿಯೊಮ್ಯೂಸಿಯಂ ಪ್ರಾಣಿಯ ತಟ್ಟೆಯ ಭಾಗದ ಕೆಳನೋಟ

ನರಮಂಡಲ ಮತ್ತು ಅದರಿಂದ ಹೊರಡುವ ತೋಳಿನ ನರದ ತಂತುಗಳು ಫಲಕಗಳ ತಳಭಾಗದಲ್ಲಿರುವುವು.

ಪೆಡಸು ನಕ್ಷತ್ರಗಳು ಏಕಲಿಂಗಗಳು; ಆದರೆ ಆಂಫಿಯೂರದಲ್ಲಿ ಹೆಣ್ಣು ಮತ್ತು ಗಂಡು ಜನನಾಂಗಗಳು ಒಂದೇ ಜೀವಿಯಲ್ಲಿರುತ್ತವೆ. ಒಂದೇ ವೇಳೆಯಲ್ಲಿ ತತ್ತಿಗಳೂ ವೀರ್ಯಾಣುಗಳೂ ಉತ್ಪತ್ತಿಯಾಗುತ್ತದೆ. ಉತ್ಪಾದನಾಂಗಗಳು ಜೋಡಿಜೋಡಿಯಾಗಿ ಕವಲೊಡೆದುಕೊಂಡು ತ್ರಿಜ್ಯಾಂತರ ಸ್ಥಾನಗಳಲ್ಲಿರುವುವು. ಪೆಂಟಿಸಿರಸ್ ಮತ್ತು ಇನ್ನು ಕೆಲವು ಜಾತಿಗಳಲ್ಲಿ 10 ಜೊತೆ ಉತ್ಪಾದನಾಂಗಗಳಿರುವುವು. ಇವು 10 ಜೊತೆ ಜನನ ಕುಹರಗಳಿಗೆ ಅಂಟಿರುವುವು. ಜೀವನ ಚರಿತ್ರೆಯಲ್ಲಿ ಉಭಯಪಾರ್ಶ್ವ ಸಮಾಂಗತೆಯನ್ನು ತೋರುವ ಓಫಿಯೋಪ್ಲೂಟಿಯಸ್ ಎಂಬ ಹೆಸರಿನ ಡಿಂಬದ ಅವಸ್ಥೆಯುಂಟು. ಇದು ರೂಪ ಪರಿವರ್ತನೆಯಾಗಿ ಅರೀಯ ಸಮಾಂಗತೆಯುಳ್ಳ (ರೇಡಿಯಲ್ ಸಿಮೆಟ್ರಿ) ಪ್ರೌಢಜೀವಿಯಾಗುವುದು. ಡಿಂಬದ ಅಂಗಾಂಗಗಳೆಲ್ಲವೂ ಪ್ರೌಢಜೀವಿಯಲ್ಲಿಯೂ ಮುಂದುವರಿಯುವುವು.

ದಕ್ಷಿಣ ಧ್ರುವ ಸಮುದ್ರದಲ್ಲಿ ಜೀವಿಸುವ ಓಫಿಯೋಫ್ಲೂಕಸ್‍ಗಳು ಮರಿಗಳನ್ನೇ ಈದು ಅವನ್ನು ಸಾಕುತ್ತವೆ.

ಪೆಡಸುನಕ್ಷತ್ರಗಳು ಸಮುದ್ರದಲ್ಲಿ ಸರಾಗವಾಗಿ ಈಜಬಲ್ಲವು. ಕೆಲವು ವೇಳೆ ಬಹಳ ನಿಧಾನವಾಗಿ ಚಲಿಸುವುವು. ತೋಳುಗಳನ್ನು ಸುಲಭವಾಗಿ ಬಗ್ಗಿಸಬಲ್ಲವಾದುವುದರಿಂದ ಬಂಡೆಗಳ ಕಂಡಿಗಳನ್ನು ಹೊಕ್ಕು ಅಲ್ಲಿ ಜೀವಿಸುವುವು. ಸಾಮಾನ್ಯವಾಗಿ ಸಮುದ್ರತಳದ ಮರಳಿನಲ್ಲಿ ಹೂತಿದ್ದು ರಾತ್ರಿಯ ವೇಳೆ ಚುರುಕಾಗಿ ಓಡಾಡುವುವು.

ನೀರಿನಿಂದ ಹೊರತಂದಾಗ ಅಥವಾ ಇತರ ರೀತಿಯಲ್ಲಿ ಕಾಟ ಕೊಟ್ಟಾಗ ಪೆಡಸು ನಕ್ಷತ್ರಗಳು ತಮ್ಮ ಮಧ್ಯಭಾಗವಾದ ತಟ್ಟೆಯನ್ನು ಉಳಿಸಿಕೊಂಡು ತೋಳುಗಳನ್ನು ಸ್ವಲ್ಪಸ್ವಲ್ಪವಾಗಿ ಕಡಿದುಕೊಳ್ಳುವುವು. ಅನಂತರ ಸ್ವಲ್ಪಸ್ವಲ್ಪವಾಗಿ ಬೆಳೆದು ಮತ್ತು 5 ತೋಳುಗಳುಳ್ಳ ಜೀವಿಗಳಾಗುವುವು. ತನಗೆ ತಾನೇ ತನ್ನ ತೋಳುಗಳನ್ನು ಕಡಿದುಕೊಳ್ಳುವುದು ಈ ಪ್ರಾಣಿಗೆ ಸ್ವಾಭಾವಿಕ. ಕಡಿದುಹೋದ ಒಂದು ತೋಳು ಕೆಲವು ವೇಳೆ ಪೂರ್ಣವಾದ ಜೀವಿಯಾಗುವುದುಂಟು. ಇದು ಒಂದು ರೀತಿಯ ಪುನರುತ್ಪಾದನೆಯೆಂದು ಕರೆಯಬಹುದು.

ಓಫಿಯೂರಾಯ್ಡಿಯ ವರ್ಗದಲ್ಲಿ 4 ಉಪವರ್ಗಗಳಿವೆ, ಲಿಸೋಫಿಯೂರೆ, ಸ್ಟ್ರೆಪ್ಟೋಫಿಯೂರೆ, ಕ್ಲಾಡೊಫಿಯೂರೆ, ಜೈಗೋಫಿಯೂರೆ– ಇವೇ ಆ ನಾಲ್ಕು ಉಪವರ್ಗಗಳು. ಲಿಸೋಫಿಯೂರೆಯ ಪ್ರಾಣಿಗಳಲ್ಲಿ ಆಂಬುಲ್ಯಾಕ್ರಲ್ ಕೋಡುಗಳುಳ್ಳ ತೋಳುಗಳಿದ್ದವು. ಈ ಜೀವಿಗಳು ಸೈಲ್ಯೂರಿಯನ್ ಮತ್ತು ಡಿವೋನಿಯನ್ ಯುಗದಲ್ಲಿ ಅಳಿದುಹೋದುವು. ಸ್ಟ್ರೆಪ್ಟೋಫಿಯೂರೆಯ ಪ್ರಾಣಿಗಳಲ್ಲಿ ಅಂಬುಲ್ಯಾಕ್ರಲ್ ಫಲಕಗಳು, ಚಲನೆಗೆ ಎಡೆಕೊಡುವ ಕೀಲುಗಳಂತೆ ಜೋಡಣೆಯಾಗಿದ್ದವು. ಕ್ಲಾಡೊಫಿಯೂರೆಯ ಪ್ರಾಣಿಗಳಲ್ಲಿ ಆಂಬುಲ್ಯಾಕ್ರಲ್ ಫಲಕಗಳು ಕೂಡುವೆಡೆಗಳಲ್ಲಿ ಉಸುಬಿನ ಗಡಿಯಾರದಂಥ ಅಂಚುಗಳಿರುವುವು. ತೋಳುಗಳು ಕವಲೊಡೆದಿರಬಹುದು. ಜೈಗೋಫಿಯೂರೆಯ ಪ್ರಾಣಿಗಳಲ್ಲಿ ಫಲಕಗಳು ಹೆಚ್ಚಿನ ಚಲನಕ್ಕೆ ಅವಕಾಶವಿಲ್ಲದಂತೆ ಜೋಡಣೆಯಾಗಿವೆ. ಫಲಕಗಳ ಅಂಚುಗಳಲ್ಲಿ ಸಣ್ಣ ಸಣ್ಣ ದಿಬ್ಬಗಳು ಮತ್ತು ಅವುಗಳ ಅಳವಡಿಕೆಗೆ ಸೂಕ್ತವೆನಿಸುವ ಗುಳಿಗಳಲ್ಲಿ ಇರುವುವು. ಇತ್ತೀಚೆಗೆ ಓಫಿಯೂರಾಯ್ಡಿಯ ವರ್ಗವನ್ನು ಓಫಿಯೂರಿ ಮತ್ತು ಯೂರಿಯೇಲಿ ಎಂಬ ಎರಡು ಗಣಗಳಾಗಿ ವಿಂಗಡಿಸುತ್ತಾರೆ. ಮೊದಲನೆಯದರಲ್ಲಿ 12 ಕುಟುಂಬಗಳು ಎರಡನೆಯದರಲ್ಲಿ 4 ಕುಟುಂಬಗಳೂ ಇವೆ.

ಓಫಿಯೂರಾಯ್ಡಿಯ ವರ್ಗದಲ್ಲಿ ಸು. 1,700 ಪ್ರಭೇದಗಳಿವೆ. ಈ ಸಂಖ್ಯೆ ಎಕಿನೊಡರ್ಮೇಟ ವಂಶದ ಇತರ ವರ್ಗಗಳ ಸಂಖ್ಯೆಗಿಂತ ಬಹಳ ಹೆಚ್ಚಿನದಾಗಿದ್ದು ಪೆಡಸು ನಕ್ಷತ್ರಗಳು ಉಳಿದ ಎಕಿನೊಡರ್ಮ್ ಪ್ರಾಣಿಗಳಿಗಿಂತ ಬಹು ಯಶಸ್ವಿ ಗುಂಪೆಂದು ತೋರಿಸುತ್ತದೆ. ಬಹುಶಃ ಇದಕ್ಕೆ ಕಾರಣ ಅವುಗಳ ಪುಟ್ಟ ಗಾತ್ರ ಮತ್ತು ನಿಶಾಚರ ಸ್ವಭಾವ, ಇದರಿಂದಾಗಿ ಇವು ಬೇರೆ ಪ್ರಾಣಿಗಳ ಗಮನದಿಂದ ತಪ್ಪಿಸಿಕೊಂಡಿವೆ. ಪ್ರಪಂಚದ ಎಲ್ಲ ಸಾಗರಗಳಲ್ಲಿಯೂ ಹೇರಳವಾಗಿ ಕಾಣಬರುವ ಇವು ಬಹು ಚುರುಕಾದ ಪ್ರಾಣಿಗಳು, ಮುಖ್ಯವಾದ ಕೆಲವು ಉದಾಹರಣೆಗಳು: ಓಫಿಯೋನೇಮಿಸ್ ಮಾರ್ಮೋರೇಟ ಎಂಬುವು ಸಮುದ್ರದ ತಳದಲ್ಲಿ ಮರಳಿನಲ್ಲಿರುತ್ತವೆ. ಓಫಿಯಾಕ್ಟಿಸ್ ಸವಿನಿ. ಓಫಿಯೋಫ್ರಾಗ್ಮಸ್ ರೆಲಿಕ್ಟಸ್, ಓಫಿಯೋಕೋಮ ಸ್ಕೋಲೋಪೆಂಡ್ರಿನ ಮತ್ತು ಓಫಿಯೋತ್ರಿಕ್ಸ ಹಿರ್ಸುಟ ಇವು ಭಾರತದ ಕೃಸಾಡೈ ಮತ್ತು ಪಾಂಬನ್ ಸಮುದ್ರಗಳಲ್ಲಿ ಜೀವಿಸುವುವು. ಆಸ್ಟರೋನಿಕ್ಸ್, ಓಫಿಯೊಲೆಪಿಸ್, ಓಫಿಯೊಮ್ಯೂಸಿಯಮ್ ಗಾರ್ಗನೊಸಿಫ್ಯಾಲಸ್ ಮುಂತಾದುವು ಪ್ರಪಂಚದ ಬೇರೆಡೆ ದೊರಕುವ ಕೆಲವು ಮುಖ್ಯ ಜಾತಿಗಳು. (ಸಿ.ಎ.ಆರ್.)

**ಓಫಿಯೋಗ್ಲಾಸಮ್:** ಓಫಿಯೋಗ್ಲಾಸೇಲಿಸ್ ಗಣದ ಓಫಿಯೋಗ್ಲಾಸೇಸಿ ಕುಟುಂಬಕ್ಕೆ ಸೇರಿದ ಒಂದು ಸಣ್ಣ ಜರಿಸಸ್ಯ. ಇದನ್ನು ಹಾವಿನ ನಾಲಿಗೆ ಜರಿಸಸ್ಯ ಎಂದು ಕರೆಯುವುದು ವಾಡಿಕೆ. ಸು. 40 ಪ್ರಭೇದಗಳಿರುವ ಈ ಸಸ್ಯ ಹೆಚ್ಚಾಗಿ ಉಷ್ಣವಲಯದ ಕಾಡುಗಳಲ್ಲಿ ಬೆಳೆಯುತ್ತದೆ. ಆದರೆ ಸಮಶೀತೋಷ್ಣವಲಯದಲ್ಲಿ ಬೆಳೆಯುವ ಪ್ರಭೇದಗಳು ಇಲ್ಲದಿಲ್ಲ. ಕೆಲವನ್ನು ಬಿಟ್ಟು ಮಿಕ್ಕ ಎಲ್ಲ ಪ್ರಭೇದಗಳು ಸಸ್ಯಸಂಬಂಧವಾದ ಗೊಬ್ಬರ ಹೆಚ್ಚಾಗಿರುವ ನೆಲದಲ್ಲಿ ಬೆಳೆಯುತ್ತವೆ. ಓಪೆಂಡುಲಮ್ ಪ್ರಭೇದ ಅಪ್ಪುಸಸ್ಯವಾಗಿ ಮರಗಳ ಕಾಂಡ ಮತ್ತು ಕೊಂಬೆಗಳ ಮೇಲೆ ಬೆಳೆಯುತ್ತದೆ. ಓ ಪಾಮೇಟಮ್ ಎಂಬ ಪ್ರಭೇದ ಬೇರು ಬಿಟ್ಟಿರುವ ಮರದ ಕಾಂಡಗಳ ಮೇಲೆ ಬೆಳೆಯುತ್ತದೆ. ಓಫಿಯೋಗ್ಲಾಸಮ್ ಸಸ್ಯದ ಜೀವನದಲ್ಲಿ ಎಲ್ಲ ಜರಿಗಿಡಗಳಲ್ಲಿರುವಂತೆ ಸ್ಪೋರೋಫೈಟ್ ಮತ್ತು ಗ್ಯಾಮಿಟೊಫೈಟ್ ಎಂಬ ಎರಡು ಅವಸ್ಥೆಗಳುಂಟು. ನಮಗೆ ಕಾಣಬರುವ ಅವಸ್ಥೆಗೆ ಸ್ಪೋರೋಫೈಟ್ ಎಂದು ಹೆಸರು. ಇದರಲ್ಲಿ ಕವಲೊಡೆಯದ, ಚಿಕ್ಕದಾಗಿರುವ, ನೆಲದೊಳಗೆ ಬೆಳೆಯುವ ಪ್ರಕಂದವಿದೆ (ರೈಜೋಮ್). ಇದು ಅಪರೂಪವಾಗಿ ಕವಲೊಡೆದಿರುವುದುಂಟು. ಇದರ ಮೇಲೆ ಬೇರುರೋಮಗಳಿಲ್ಲದ ಹಲವು ಬೇರುಗಳಿವೆ.

ಪ್ರಕಂದದಿಂದ ಸಾಮಾನ್ಯವಾಗಿ ಒಂದು ಬೆಳೆವಣಿಗೆಯ ಋತುವಿನಲ್ಲಿ ಒಂದೇ ಒಂದು ಎಲೆ ಮೂಡುತ್ತವೆ. ಪೂರ್ತಿ ಬೆಳೆದ ಎಲೆಯಲ್ಲಿ ಅಲಗು ಮತ್ತು ತೊಟ್ಟುಗಳಿವೆ. ಎಲೆಯ ಅಲುಗು ಅಗಲವಾಗಿ, ಸರಳವಾಗಿ (ಓ.ಪೆಂಡುಲಮ್ ಹೊರತು) ದೀರ್ಘವೃತ್ತಾಕಾರವಾಗಿದೆ. ಎಲೆಯ ನಾಳವಿನ್ಯಾಸ ದ್ವಿದಳಧಾನ್ಯ ಸಸ್ಯಗಳದ್ದನ್ನು ಹೋಲುತ್ತದೆ.

ಎಲೆಯ ಅಲುಗು ಮತ್ತು ತೊಟ್ಟು ಸೇರುವ ಜಾಗದಲ್ಲಿ ಒಂದು ಸಣ್ಣದಾದ ಫಲವಂತಿಕೆ ಗೊಂಚಲು ಇದೆ (ಫರ್ಟೈಲ್ ಸ್ಪೈಕ್). ಇದರ ಎರಡೂ ಪಾರ್ಶ್ವದಲ್ಲಿ ಹಲವು ಬೀಜಕೋಶದಿಂದ ಪ್ರಸಾರವಾದ ಬೀಜಕಣಗಳು ಸೂಕ್ತ ಪರಿಸರದಲ್ಲಿ ಮೊಳೆತು ಗ್ಯಾಮಿಟೊಟುಗಳಾಗುತ್ತವೆ. ಗ್ಯಾಮಿಟೋಫೈಟುಗಳಿಗೆ ಬಣ್ಣವಿಲ್ಲ. ನೆಲದೊಳಗೆ ಪೂತಿಜನ್ಯ ಸಸ್ಯಗಳಂತೆ ಬೆಳೆಯುವ ಇವುಗಳಲ್ಲಿ ಹೆಣ್ಣು ಮತ್ತು ಗಂಡು ಜನನೇಂದ್ರಿಯಗಳಿರುತ್ತವೆ. ಇವುಗಳಿಂದ ಬಂದ ಗಂಡು ಮತ್ತು ಹೆಣ್ಣು ಜೀವಾಣುಗಳು ಪರಸ್ಪರ ಕೂಡಿ ಮುಂದೆ ಸ್ಪೋರೋಫೈಟುಗಳನ್ನು ಉತ್ಪತ್ತಿಮಾಡುತ್ತವೆ. ಹೀಗೆ ಜೀವಚಕ್ರ ಪೂರ್ತಿಯಾಗುತ್ತದೆ.

ಭಾರತದಲ್ಲಿ ಓಫಿಯೋಗ್ಲಾಸಮ್ಮಿನ ಏಳು ಪ್ರಭೇದಗಳಿವೆ. ಅವುಗಳಲ್ಲಿ ಓ.ವಲ್ಗೇಟಮ್, ಓ.ಪೆಂಡುಲಮ್ ಮತ್ತು ಓ.ರೆಟಿಕ್ಯುಲೇಟಮ್ ಮುಖ್ಯವಾದುವು.

ಓ. ವಲ್ಗೇಟಮ್: ಹಿಮಾಲಯ, ಬಿಹಾರ, ಅಸ್ಸಾಂ ಮತ್ತು ಅಣ್ಣಾಮಲೈ ಬೆಟ್ಟಗಳಲ್ಲಿ 2,700 ಮೀಟರಗಳರವರೆಗೆ ಹರಡಿದೆ. ಈ ಗಿಡ ಪೂತಿನಾಶಕ, ಶುದ್ಧಿಕಾರಕ, ರಕ್ತಬಂಧಕ (ಸ್ಟಿಪ್ಟಿಕ್). ಅಲ್ಲದೆ ಗಾಯ ವಾಸಿಮಾಡುವ ಗುಣಗಳನ್ನೂ ಹೊಂದಿದೆ. ಈ ಸಸ್ಯದಿಂದ ಒಂದು ಬಗೆಯ ಅಂಟಾದ ಕಷಾಯವನ್ನು ತಯಾರಿಸಬಹುದು. ಅದನ್ನು ಗಂಟಲ ಊತ, ಎದೆಸೆಳವುಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಕಷಾಯವನ್ನು ಬಿಸಿ ಮಾಡಿ ದಕ್ಷಿಣ ಆಫ್ರಿಕದ ಸೂಟೊ ಜನಾಂಗದವರು ಹುಣ್ಣುಗಳಿಗೆ ಹಚ್ಚುತ್ತಾರೆ. ಓ. ಪೆಂಡುಲಮ್ ಎಂಬುದು ಮುಖ್ಯವಾಗಿ ಅಸ್ಸಾಮಿನ ಕಾಡುಗಳಲ್ಲಿ ಬೆಳೆಯುತ್ತದೆ. ಕೊಬ್ಬರಿ ಎಣ್ಣೆಯೊಂದಿಗೆ ಮಿಶ್ರಮಾಡಿ ತಯಾರಿಸಿದ ಎಲೆಯ ಮುಲಾಮು ಕೂದಲು ಬೆಳೆಯಲು ಸಹಕಾರಿ.

ಓ.ರೆಟಿಕ್ಯುಲೇಟಮ್ ಪ್ರಭೇದ ಮಸ್ಸೂರಿ, ಬಿಹಾರ, ಬಂಗಾಳ, ಅಸ್ಸಾಂ ಮತ್ತು ದಕ್ಷಿಣ ಭಾರತದಲ್ಲಿ ಬೆಳೆಯುತ್ತದೆ. ಇಂಡೋನೇಷಿಯದಲ್ಲಿ ಈ ಪ್ರಭೇದವನ್ನು ತರಕಾರಿಯಾಗಿ ಉಪಯೋಗಿಸುವುದುಂಟು. ಮೈಸೂರು ರಾಜ್ಯದಲ್ಲಿ, ರಂಗನತಿಟ್ಟು ಪಕ್ಷಿಧಾಮ ಮತ್ತು ಮಲೆನಾಡುಗಳಲ್ಲಿ ಓಫಿಯೋಗ್ಲಾಸಮ್ಮಿನ ಕೆಲವು ಪ್ರಭೇದಗಳು ಕಾಣಬರುತ್ತವೆ.

(ಎಸ್.ಆರ್.ಜಿ.)

**ಓಫ್ರಿಸ್:** ಆರ್ಕಿಡೇಸಿ ಕುಟುಂಬಕ್ಕೆ ಸೇರಿದ ಒಂದು ಸಸ್ಯಜಾತಿ. ಇದರಲ್ಲಿ ಸು. 30 ಪ್ರಭೇದಗಳಿವೆ. ಇವು ಪಶ್ಚಿಮ ಏಷ್ಯ, ಉತ್ತರ ಆಫ್ರಿಕ ಪ್ರದೇಶಗಳ ವಾಸಿಗಳು. ಭೂಮಿಯ ಮೇಲೆ ಮೂಲಿಕೆಗಳ ರೂಪದಲ್ಲಿ ಬೆಳೆಯುತ್ತವೆ. ಇವುಗಳಲ್ಲಿ ಎಲೆಗಳು ಗಿಡದ ಬುಡದಲ್ಲಿ ನೆಲದ ಮೇಲೆ ಹರಡಿಕೊಂಡಂತೆ ವರ್ತುಲಾಕಾರದಲ್ಲಿ ಜೋಡಣೆಗೊಂಡಿರುತ್ತವೆ. ಮಧ್ಯದಿಂದ ಉದ್ದವಾದ ಕಾವುಳ್ಳ (ದಿಂಡು) ಹೂಗೊಂಚಲು ಹೊರಟಿರುತ್ತದೆ. ಎಲ್ಲ ಆರ್ಕಿಡ್ ಸಸ್ಯಗಳ ಪುಷ್ಪಗಳ ಗುಣಗಳೂ ಈ ಜಾತಿಯ ಗಿಡದ ಪುಷ್ಪದಲ್ಲೂ ಕಂಡುಬರುತ್ತವೆ. ಈ ಜಾತಿಯ ಗಿಡಗಳಲ್ಲಿ ಸ್ವಪರಾಗಸ್ಪರ್ಶಕ್ರಿಯೆಯನ್ನು ಕಾಣಬಹುದು. ಕೀಟಗಳ ಮುಖಾಂತರ ಪರಾಗ ಪ್ರಸಾರವಾಗದಿದ್ದರೆ ಕೇಸರದಿಂದ ಪರಾಗ ಅದೇ ಹೂವಿನ ಅಂಡಕೋಶದ ಮೇಲ್ಭಾಗಕ್ಕೆ ನೇರವಾಗಿ ಬಿದ್ದು ಶಲಾಕಾಗ್ರಕ್ಕೆ ತಗಲಿಕೊಳ್ಳುತ್ತದೆ. ಹೀಗೆ ಗಟ್ಟಿಯಾಗಿ ತಗಲಿಕೊಳ್ಳುವುದರಿಂದ ಜೋರಾಗಿ ಗಾಳಿ ಬೀಸಿದರೂ ಬಿದ್ದುಹೋಗುವುದಿಲ್ಲ. ಇದರ ಕೆಲವು ಪ್ರಭೇದಗಳಾದ ಓ.ಏಪಿಫೆರ, ಓ.ಅರಾನಿಫೆರ ಮತ್ತು ಓ.ಮಸ್ಸಿಫೆರಗಳ ಹೂಗಳು ಜೇನ್ನೊಣ, ಜೇಡ, ಮುಂತಾದ ಕೀಟಗಳನ್ನು ಹೋಲುವುದರಿಂದ ಅವನ್ನು ಕ್ರಮವಾಗಿ ಬೀ ಆರ್ಕಿಡ್, ಸ್ಪೈಡರ್ ಆರ್ಕಿಡ್ ಹಾಗೂ ಫ್ಲೈ ಆರ್ಕಿಡ್ ಎಂದೂ ಕರೆಯುವ ವಾಡಿಕೆಯಿದೆ. ಇವುಗಳನ್ನು ತೋಟಗಳಲ್ಲಿ ಅಲಂಕಾರ ಸಸ್ಯಗಳನ್ನಾಗಿ ಬೆಳೆಸುತ್ತಾರೆ. (ಬಿ.ಪಿ.)

**ಓಬವ್ವ:** ಚಿತ್ರದುರ್ಗದ ಹೆಸರನ್ನು ಕೇಳಿದ ಒಡನೆಯೇ ಅಲ್ಲಿನ ಏಳುಸುತ್ತಿನ ಕೋಟೆಯ ನೆನಪಾಗುವುದು ಹೇಗೆ ಸಹಜವೋ ಹಾಗೆಯೇ ಇಂದಿಗೂ ಮನೆಮಾತಾಗಿ ಉಳಿದಿರುವ ಒನಕೆಯ ಓಬವ್ವನ ಪರಾಕ್ರಮವೂ ಕಣ್ಣುಮುಂದೆ ಕಟ್ಟಿದಂತಾಗುತ್ತದೆ. ಓಬವ್ವನ ದೇಶಪ್ರೇಮವನ್ನು ಕುರಿತ ಕಥೆ ಹೀಗಿದೆ. ಚಿತ್ರದುರ್ಗದ ಪಾಳೆಯಗಾರರಲ್ಲಿ ಕಡೆಯವನಾದ ಮದಕರಿನಾಯಕನಿಗೂ (1753–78) ಹೈದರನಿಗೂ ನಡೆದ ಕಾಳಗ ಇತಿಹಾಸ ಪ್ರಸಿದ್ಧವಾಗಿದೆ. ಹೈದರ್ ಈ ಅಭೇದ್ಯ ದುರ್ಗವನ್ನು ತಿಂಗಳುಗಟ್ಟಲೆ ಮುತ್ತಿಗೆ ಹಾಕಿ ಸ್ವಾಧೀನಪಡಿಸಿ ಕೊಳ್ಳಲಾರದೆ ಹೋದ. ಕಡೆಗೆ ತನ್ನ ಶತ್ರುವನ್ನು ಭೇದೋಪಾಯದಿಂದಲೇ ಗೆಲ್ಲಬೇಕೆಂದು ಬಯಸಿ, ತನ್ನ ಬೇಹುಗಾರರನ್ನು ಕರೆದು ಕೋಟೆಯ ಕಳ್ಳದಾರಿಗಳನ್ನು ಪತ್ತೆಮಾಡಿ ತಿಳಿಸಬೇಕೆಂದು ಆಜ್ಞೆಮಾಡಿದ. ವೇಷಧಾರಿಗಳಾದ ಆ ಬೇಹುಗಾರರು ಕೋಟೆಯ ಸುತ್ತಮುತ್ತಲೂ ಸುಳಿದಾಡುತ್ತಿರುವಾಗ, ಒಂದು ಪಾರ್ಶ್ವದಲ್ಲಿ ಒಬ್ಬ ಹೆಂಗಸು ಮೊಸರಿನ ಮಡಕೆಯನ್ನು ತಲೆಯ ಮೇಲೆ ಹೊತ್ತುಕೊಂಡು ಆ ಕೋಟೆಯ ಕಡೆನಡೆದು ಅದೃಶ್ಯಳಾದದ್ದು ಗಮನಕ್ಕೆ ಬಂತು. ಚಾರರು, ಆ ದಿಕ್ಕಿನಲ್ಲಿ ಎಲ್ಲಿಯೊ ಕಳ್ಳಗಂಡಿಯಿರಬೇಕೆಂದು ತರ್ಕಿಸಿ ಹುಡುಕತೊಡಗಿದಾಗ, ಬಂಡೆಗಳ ಮಧ್ಯೆ ನುಸುಳಿಕೊಂಡು ಹೋಗುವಂತೆ ಒಂದು ಇಕ್ಕಟ್ಟಾದ ಮಾರ್ಗವಿರುವುದು ಸ್ಪಷ್ಟವಾಯಿತು. ಈ ಸುದ್ದಿಯನ್ನು ಕೇಳಿದ ನವಾಬನಿಗೆ ತುಂಬ ಸಂತೋಷವಾಯಿತು. ಶತ್ರು ಸೈನಿಕರು ಒಬ್ಬೊಬ್ಬರಾಗಿ ಆ ದಾರಿಯ ಮೂಲಕ ಒಳಕ್ಕೆ ಹೋಗಲು ನಿಶ್ಚಯಿಸಿಕೊಂಡರು.

ಆ ಕಳ್ಳ ದಾರಿಯ ಒಳಭಾಗಕ್ಕೆ ಸ್ವಲ್ಪ ದೂರದಲ್ಲಿಯೇ ಒಂದು ಕೊಳವೂ ಕಾವಲುಗಾರನ ಒಂದು ಬತೇರಿಯೂ ಇದ್ದುವು. ಸರ್ಪಗಾವಲು ಕಾಯುತ್ತಿದ್ದ ಕಾವಲುಗಾರ ಸ್ವಲ್ಪ ಬಿಡುವು ಮಾಡಿಕೊಂಡು ತನ್ನ ಗುಡಿಸಿಲಿನಲ್ಲಿ ಊಟಮಾಡುತ್ತಿರುವಾಗ್ಗೆ ಅವನ ಹೆಂಡತಿ ಓಬವ್ವ ನೀರು ತರಲೆಂದು ಕೊಳದ ಬಳಿಗೆ ಬಂದಳು. ಆ ವೇಳೆಗೆ ಕಳ್ಳಗಂಡಿಯ ಸಮೀಪದಲ್ಲಿ ಶತ್ರು ಸೈನಿಕರು ಹೊಂಚುಹಾಕಿ, ಪಿಸಿಪಿಸಿ ಮಾತುಗಳನ್ನಾಡುತ್ತಿದ್ದುದು ಅವಳಿಗೆ ಕೇಳಿಸಿತು. ಆಕೆಗೆ ಆ ಸೂಕ್ಷ್ಮದ ಅರಿವಾಗಿ, ಕೂಡಲೆ ಗುಡಿಸಿಲಿಗೆ ತೆರಳಿ ಒಂದು ಒನಕೆಯನ್ನು ತೆಗೆದುಕೊಂಡು ಬಂದು ಆ ಕಳ್ಳಗಂಡಿಯ ಬಳಿನಿಂತಳು. ಅತ್ತ ಶತ್ರುಸೈನಿಕರು ಒಬ್ಬೊಬ್ಬರಾಗಿ ನುಸುಳಿ ಬರುವುದೇ ತಡ, ಓಬವ್ವ ಅವರ ತಲೆಯನ್ನು ಒನಕೆಯಿಂದ ಹೊಡೆದು ಕೆಡವುತ್ತಿದ್ದಳು. ಈ ಹತ್ಯೆ ಕೆಲಕಾಲ ಹೀಗೆಯೇ ಸಾಗಿತು. ಓಬವ್ವನ ಗಂಡ ಮನೆಯಲ್ಲಿ ತನ್ನ ಹೆಂಡತಿಯನ್ನು ಕಾಣದೆ ಹುಡುಕಿಕೊಂಡು ಕಳ್ಳಗಂಡಿಯ ಹತ್ತಿರಕ್ಕೆ ಬಂದಾಗ ಆಕೆಯ ಮುಂದೆ ಬಿದ್ದಿದ್ದ ಹೆಣದ ರಾಶಿಯನ್ನೂ ಹರಿಯುತ್ತಿದ್ದ ಕೆಣ್ಣೀರಿನ ಕಾಲುವೆಯನ್ನೂ ಕಂಡು ಕಂಗೆಟ್ಟ. ಆಕೆಯ ಹೆಸರು ಹಿಡಿದು ಕೂಗುತ್ತ ಮುಂದುವರಿಯಲು ವೀರಾವೇಶದಲ್ಲಿ ಮೈಮರೆತ್ತಿದ್ದ ಓಬವ್ವ ತನ್ನ ಗಂಡನನ್ನೂ ಹೊಡೆಯುವುದರಲ್ಲಿದ್ದಳು. ಗಂಡ ದೂರ ಸರಿದು, ಕೆಲಸ ಕೆಟ್ಟಿತೆಂದು ಎಣಿಸಿ ಕೂಡಲೆ ಕಹಳೆಯನ್ನು ಊದಿದ. ಆ ಎಚ್ಚರಿಕೆಯ ದನಿಯನ್ನು ಕೇಳಿದ ಒಡನೆಯೇ ಮದಕರಿನಾಯಕನ ಸೈನಿಕರು ಅತ್ತ ಧಾವಿಸಿಬಂದರು. ಶತ್ರು ಸೈನಿಕರೊಂದಿಗೆ ಯುದ್ಧ ಮೊದಲಾಯಿತು. ಆ ಗೊಂದಲದಲ್ಲಿ ಶತ್ರು ಸೈನಿಕನೊಬ್ಬನ ಪೆಟ್ಟಿಗೆ ಸಿಕ್ಕಿ ಓಬವ್ವ ಹತಳಾದಳು. ಮದಕರಿನಾಯಕನ ಆಳುಗಳ ಕೈಮೇಲಾಗಲು ಶತ್ರುಗಳು ಮತ್ತೆ ಹಿಮ್ಮೆಟ್ಟಿದರು. ಕ್ಷಣಮಾತ್ರದಲ್ಲಿ ಅಸದೃಶವಾದ ಕೆಚ್ಚನ್ನು ತೋರಿ ಕಾಳಗದಲ್ಲಿ ಬಲಿಯಾದ ಓಬವ್ವನ ಸಲುವಾಗಿ ಎಲ್ಲರೂ ಕಣ್ಣೀರು ಸುರಿಸಿದರು. ಕಾವಲುಗಾರನ ಹೆಂಡತಿಯಾದ ಓಬವ್ವನ ಆ ಪರಾಕ್ರಮದ ಕುರುಹಾಗಿ ಆ ಕಳ್ಳಗಂಡಿಗೆ ಒನಕೆಯ ಕಂಡಿ ಎಂಬ ಹೆಸರು ಇಂದಿಗೂ ಪ್ರಚಲಿತವಾಗಿದೆ. ಈ ಹೆಣ್ಣುಗಲಿಯನ್ನು ಕುರಿತು ಅನೇಕರು ಕನ್ನಡದಲ್ಲಿ ಕಥೆ ಕವಿತೆಗಳನ್ನು ಬರೆದಿರುತ್ತಾರೆ. ಅವುಗಳಲ್ಲಿ ಜಿ.ವರದರಾಜರಾಯರ ಕಥನಕವನ ತುಂಬ ಸೊಗಸಾಗಿದೆ. (ವಿ.ಜಿ.)

**ಓಬೆರಾನ್:** ಯುರೇನಸ್ ಗ್ರಹದ ಅತಿದೂರದ ಉಪಗ್ರಹ. ಸರ್‌ವಿಲಿಯಂ ಹರ್ಷೆಲ್ ಎಂಬ ಖಗೋಳವಿಜ್ಞಾನಿ ಇದರ ಇರವನ್ನು 1787ರಲ್ಲಿ ಕಂಡ. ಮಾತೃಗ್ರಹದಿಂದ ಓಬೆರಾನಿನ ಸರಾಸರಿ ದೂರ 3,64,000 ಮೈಲಿಗಳು. ಒಂದು ಪರಿಭ್ರಮಣೆಯ ಅವಧಿ (ಅಂದರೆ ಉಪಗ್ರಹದ ವರ್ಷ) 13 ದಿ. 11 ಗಂ. 7ಮಿ, ಓಬೆರಾನಿನ ವ್ಯಾಸ (500) ಮೈಲಿಗಳೆಂದು ಅಂದಾಜು. *

**ಓಮ್, ಜಾರ್ಜ್ ಸೈಮನ್:** 1787–1854. ಜರ್ಮನ್ ಭೌತವಿಜ್ಞಾನಿ, ವಿದ್ಯುಚ್ಛಕ್ತಿಯ ಕ್ಷೇತ್ರದಲ್ಲಿ ಈತನ ಮೂಲಭೂತ ಸಂಶೋಧನೆಗಳು ಗಮನಾರ್ಹವಾದುವು. ವಿದ್ಯುನ್ಮಂಡಲದ ಬೇರೆ ಬೇರೆ ಭಾಗಗಳಲ್ಲಿ ವಿದ್ಯುಚ್ಚಾಲಕ ಶಕ್ತಿಯ (ಎಲೆಕ್ಟ್ರೋಮೋಟೀವ್ ಫೋರ್ಸ್) ವಿತರಣೆ; ರೋಧತ್ವ (ರೆಸಿಸ್ಟೆನ್ಸ್), ವಿದ್ಯುತ್ಪ್ರವಾಹ ತೀವ್ರತೆ (ಎಲಕ್ಟ್ರಿಕ್ ಸ್ಟ್ರೆಂಗ್ತ್) ಮತ್ತು ವಿದ್ಯುಚ್ಚಾಲಕ ಶಕ್ತಿ ಇವುಗಳಿಗೆ ಇರುವ ನಿರ್ದಿಷ್ಟ ಸಂಬಂಧವನ್ನು ಪಡೆದು ಅದರ ಸಾಧನೆ ಇವೇ ಓಮನ ಮುಖ್ಯ ಸಂಶೋಧನೆಗಳು.

ಓಮ್ ಜನನ ಜರ್ಮನಿಯ ಎರ್‌ಲಾಂಗೆನ್ ಎಂಬ ಊರಿನಲ್ಲಿ. ಇವನ ತಂದೆ ಒಬ್ಬ ಪ್ರಸಿದ್ಧನಾದ ಮೆಕ್ಯಾನಿಕ್. ತನ್ನ ಮಗನಿಗೆ ವಿಜ್ಞಾನ ಶಿಕ್ಷಣವನ್ನು ಕೊಡಿಸಬೇಕೆಂದು ಅಪಾರ ಆಸಕ್ತಿ ಇತ್ತು. ಇದರಿಂದ ಓಮ್‌ಗೆ ಪ್ರಾರಂಭದಿಂದಲೂ ಗಣಿತ ಮತ್ತು ಭೌತವಿಜ್ಞಾನಗಳಲ್ಲಿ ವ್ಯಾಸಂಗವನ್ನು ಮುಂದುವರಿಸುವುದು ಸಾಧ್ಯವಾಯಿತು. ವಿದ್ಯಾಭ್ಯಾಸ ಎರ್‌ಲಾಂಗೆನ್ ವಿಶ್ವವಿದ್ಯಾನಿಲಯದಲ್ಲಿ. ಮುಂದೆ 1813–17ರವರೆಗೆ ಪಶ್ಚಿಮ ಜರ್ಮನಿಯಲ್ಲಿರುವ ಹ್ಯಾಂಬರ್ಗಿನ ಮಾಧ್ಯಮಿಕ ಶಾಲೆಯೊಂದರಲ್ಲಿ ಭೌತವಿಜ್ಞಾನ ಮತ್ತು ಗಣಿತವಿಜ್ಞಾನದ ಉಪಾಧ್ಯಾಯನಾಗಿಯೂ 1817–26ರವರೆಗೆ ಕೊಲೋನಿನ ಪ್ರೌಢಶಾಲೆಯೊಂದರಲ್ಲಿ ಬೋಧಕನಾಗಿಯೂ ಕೆಲಸಮಾಡಿದ. ಈ ಕಾಲದಲ್ಲಿ ಇವನು ಪ್ರಕಟಿಸಿದ ವೈಜ್ಞಾನಿಕ ಲೇಖನಗಳಲ್ಲಿ ಬೆಳೆಸಿದ ಹೊಸ ವಾದಗಳಿಗೆ ವೈಜ್ಞಾನಿಕ ಮನ್ನಣೆ ಲಭಿಸಲಿಲ್ಲ. ಆದ್ದರಿಂದ ಓಮ್ ತಲೆತಗ್ಗಿಸುವಂತಾಗಿ ಮುಂದಿನ ಆರು ವರ್ಷಗಳವರೆಗೆ ಮನೆ ಮೇಷ್ಟ್ರಾಗಿ ಇಂಗ್ಲೆಂಡಿನಲ್ಲಿಯೂ ಬರ್ಲಿನ್ನಿನ ಮಿಲಿಟರಿ ಅಕಾಡೆಮಿಯಲ್ಲಿಯೂ ಕೆಲಸಮಾಡಿದ. ಆದರೆ ವಿದ್ಯುತ್ಪ್ರಕರಣದಲ್ಲಿ ಓಮನ ನಿಯಮವೆಂದು ಕರೆಯುವ ನಿಯಮವನ್ನು 1826ರಲ್ಲಿ ಪ್ರಚುರಪಡಿಸಿ ಪ್ರಸಿದ್ಧಿಹೊಂದಿದ. ಇದನ್ನು ಗಮನಿಸಿದ ರಾಯಲ್ ಸೊಸೈಟಿಯು ಕೋಪ್ಲಿ ಪದಕವನ್ನು ನೀಡಿ ಓಮನನ್ನು ಗೌರವಿಸಿತು (1841). ಅಲ್ಲದೇ ಮರುವರ್ಷ (1842) ಓಮನನ್ನು ತನ್ನ ಪರದೇಶದ ಸದಸ್ಯನನ್ನಾಗಿಯೂ ಆರಿಸಿತು. 1833ರಲ್ಲಿ ಇವನನ್ನು ನ್ಯೂರೆನ್‌ಬರ್ಗಿನಲ್ಲಿರುವ ಪಾಲಿಟೆಕ್ನಿಕ್ ಶಾಲೆಯ ನಿಯಂತ್ರಕನನ್ನಾಗಿ ನೇಮಿಸಿದರು. ಮ್ಯೂನಿಚ್ ವಿಶ್ವವಿದ್ಯಾಲಯದ ಭೌತವಿಜ್ಞಾನದ ಮಹೋಪಾಧ್ಯಾಯ ಪೀಠ ಈತನಿಗೆ 1849ರಲ್ಲಿ ಲಭಿಸಿತು. ಮುಂದಿನ ವರ್ಷಗಳಲ್ಲಿ ಈ ಪೀಠವನ್ನು ಅಲಂಕರಿಸಿದವರು ರಂಟ್‌ಜನ್, ಸಮ್ಮರ್‌ಫಿಲ್ಡ್, ಡೀಬೈ ಮೊದಲಾದ ಸುಪ್ರಸಿದ್ಧ ವಿಜ್ಞಾನಿಗಳೆಂದು ಇಲ್ಲಿ ಸ್ಮರಿಸಬಹುದು. 1852ರ ವರೆಗೆ ಮ್ಯೂನಿಚ್ ವಿಶ್ವವಿದ್ಯಾಲಯದ ಮಹೋಪಾಧ್ಯಾಯ ಪೀಠದಲ್ಲಿಯೇ ಇದ್ದು 1854 ಜುಲೈ 7ರಂದು ಓಮ್ ನಿಧನಹೊಂದಿದ.

ಜೀವನದ ಉತ್ಪಾದಕ ವರ್ಷಗಳಲ್ಲಿ ಹಣಕಾಸಿನ ತೊಂದರೆ ಓಮನಿಗೆ ಬಹಳವಾಗಿದ್ದುದರಿಂದ ಇವನು ಉಪಯೋಗಿಸುತ್ತಿದ್ದ ಪ್ರಾಯೋಗಿಕ ಉಪಕರಣಗಳು ಸಾಕಷ್ಟು ಸೂಕ್ಷ್ಮವಾಗಿರದೆ ಬಹಳ ಒಡ್ಡಾಗಿರುತ್ತಿದ್ದುವು. ಆದ್ದರಿಂದ ಇವನ ಸಂಶೋಧನೆಗಳು ಮೊದಮೊದಲಲ್ಲಿ ಅಪ್ರಧಾನವಾದ ಪ್ರಕಟಣೆಗಳಲ್ಲಿ ಮಾತ್ರ ಕಂಡುಬಂದುವು. ಇವನ ಅತ್ಯಂತ ಮಹತ್ತ್ವಪೂರಿತವಾದ ಕೊಡುಗೆ ವಿದ್ಯುತ್ತು ಏಕಮುಖವಾಗಿ ಹರಿಯುತ್ತಿದ್ದಾಗ ಅದರ ಹರಿವಿನ ಬಗ್ಗೆ ತಿಳಿಯಬಹುದಾದ ಸಂಶೋಧನೆಗಳಿಗೆ ಸಂಬಂಧಿಸಿದ್ದು. ವಿದ್ಯುತ್ತನ್ನು ದ್ರವಗಳ ಮೂಲಕ ಹರಿಸಿ ಅವುಗಳ ವಾಹಕತ್ವವನ್ನು ಅಳೆಯಲು ಇವನು ಅನೇಕ ಪ್ರಯೋಗಗಳನ್ನು ಮಾಡಿದ. ಮುಂದೆ ಇವನ ಆಸಕ್ತಿ ದ್ಯುತಿವಿಜ್ಞಾನ ಮತ್ತು ಶ್ರವಣವಿಜ್ಞಾನಗಳ ಸಂಶೋಧನೆಗಳಿಗೆ ತಿರುಗಿತು. ಅಲ್ಲಿ ಹರಳುಗಳಲ್ಲಾಗುವ ವ್ಯತಿಕರಣವನ್ನು (ಇಂಡರ್‌ಫಿಯರೆನ್ಸ್ ಇನ್ ಕ್ರಿಸ್ಟಲ್ಸ್) ಪ್ರಯೋಗಗಳ ಮೂಲಕ ಈತ ಅಭ್ಯಸಿಸಿದ. ಲೋಹಗಳ ಮೂಲಕ ಸಂಪರ್ಕ ವಿದ್ಯುತ್ತು ಹಾಯುವಾಗ ಅದು ಅನುಸರಿಸುವ ನಿಯಮಗಳನ್ನು ಸಾಧಿಸುವುದು ಹೇಗೆ ಎಂಬ ಗ್ರಂಥವನ್ನು 1826ರಲ್ಲೂ ಏಕಮುಖ ವಿದ್ಯುತ್ಪ್ರವಾಹದ

ಗಣಿತೀಯ ಸಂಶೋಧನೆ ಎಂಬ ಗ್ರಂಥವನ್ನು 1827ರಲ್ಲೂ ಪ್ರಕಟಿಸಿದ. ಭೌತವಿಜ್ಞಾನದ ಆಧಾರ ತತ್ತ್ವಗಳು ಎಂಬುದು ಇವನು ಸಾಯುವ ಮೊದಲು ಪ್ರಕಟಿಸಿದ ಗ್ರಂಥ 1854 **(ನೋಡಿ– ಓಮನ–ನಿಯಮ).** (ಪಿ.ಕೆ.ವಿ.)

**ಓಮಗ್ರಂಥಿ:** ನಿಜಗೆಲಸ ಏನೆಂದು ಸರಿಯಾಗಿ ಗೊತ್ತಿರದ, ಚಪ್ಪಟೆಯಾದರೂ ಅಡ್ಡಾದಿಡ್ಡಿಯಾಗಿ, ಮೆತ್ತಗಿರುವ ಗ್ರಂಥಿ (ಥೈಮಸ್). ಎದೆಚಕ್ಕೆಯ (ಸ್ಟರ್ನಂ) ಹಿಂದೆ ಉಸಿರ್ನಾಳ, ದೊಡ್ಡ ರಕ್ತನಾಳಗಳು. ಹೃದಯದ ಕವಚದ ಮುಂದೆ ಇದರಲ್ಲಿ ಅಸಮಗಾತ್ರದ ಎರಡು ಹಾಲೆಗಳಿವೆ (ಲೋಬ್ಸ್). ಮಾಂಸಾಹಾರಿಗಳಿಗೆ ರುಚಿಕರವಾಗಿ ಮೆದುವಾಗಿ ಮಾಂಸ ತುಂಬಿದ ಅಂಗವಿದು. ಆದ್ದರಿಂದಲೇ ಇದನ್ನೂ ಮಾಂಸಲಿ (ಸ್ವೀಟ್ ಬ್ರೆಡ್) ಎನ್ನುವುದುಂಟು. ಹೊಟ್ಟೆಯೊಳಗೂ ಒಂದು ಮಾಂಸಲಿ (ಪ್ಯಾಂಕ್ರಿಯಾಸ್) ಇರುವುದರಿಂದ ಥೈಮಸನ್ನು ಕೊರಳಿನ ಮಾಂಸಲಿ ಎಂದಿದೆ. ವಯಸ್ಸಾದಂತೆಲ್ಲ ಈ ಗ್ರಂಥಿಯ ಗಾತ್ರದಲ್ಲಿ ಬಹಳ ಬದಲಾವಣೆ ಆಗುವುದು. ಆಗತಾನೇ ಹುಟ್ಟಿದ ಕೂಸಿನಲ್ಲಿ ಬಲು ದೊಡ್ಡದಾಗಿರುತ್ತದೆ. ಮೊದಲ ಎರಡು ವರ್ಷಗಳಲ್ಲಿ ಇದರ ಬೆಳೆವಣಿಗೆ ತೀವ್ರ ವಯಸ್ಸಿಗೆ ಬರುವ ಹೊತ್ತಿಗೆ ತುತ್ತತುದಿಗೇರುವುದು. ಆಮೇಲೆ ಬರುಬರುತ್ತ ಮುರುಟಿಕೊಳ್ಳುತ್ತ ಹೋಗಿ ಕೊನೆಗೆ ನೆಪಮಾತ್ರವಾಗಿ ಉಳಿದಿರುತ್ತದೆ. ಒಬ್ಬೊಬ್ಬರಲ್ಲೂ ಒಂದೊಂದು ಗಾತ್ರ, ತೂಕಕ್ಕಿರುವುದು. ಅದಕ್ಕದೇ ಹೀಗೆ ಮುರುಟಿಕೊಳ್ಳುವುದರ ಜೊತೆಗೆ, ಇದ್ದಕ್ಕಿದ್ದ ಹಾಗೆ ಸೋಂಕು, ವಿಷವೇರಿಕೆ, ಕಟ್ಟಾ ಉಪವಾಸಗಳಿಂದಲೂ ಹೀಗಾಗುವ ವರದಿಗಳಿವೆ.



ಓಮಗ್ರಂಥಿ

**ರಚನೆ:** ಕೂಡಿಸುವ ಊತಕದ ಕವಚದಿಂದಾದ ಸೂಕ್ಷ್ಮ ವಿಭಾಗಗಳ ಒಳಗಡೆ ಸಾವಿರಾರು ಕಿರುಹಾಲೆಗಳಿರುವುವು (ಲಾಬ್ಯೂಲ್ಸ್). ಇವುಗಳ ಅಡ್ಡಳತೆ 2 ಮಿಮೀ ಮೀರಿರದು. ಕಿರುಹಾಲೆಗಳಲ್ಲಿಯ ಗ್ರಂಥಿ ಹೊರಪದರದಂತಿರುವ ರಗಟೆಯಾಗಿಯೂ (ಕಾರ್ಟೆಕ್ಸ್) ಒಳಗಣ ತಿರುಳಾಗಿಯೂ (ಮೆಡುಲ) ವಿಂಗಡವಾಗಿ ಕಾಣುವುದು. ಇದರಲ್ಲಿ ನವಿರ್ಜಾಲಕಣಗಳೂ (ರೆಟಿಕ್ಯುಲೋಸೈಟ್ಸ್) ಹಾಲುರಸಕಣಗಳೂ (ಲಿಂಫೊಸೈಟ್ಸ್) ಇವೆ. ಹಿರಿಯ ನವಿರ್ಜಾಲಕಣಗಳ ಬಲೆಗಟ್ಟಿನಲ್ಲಿ ಹಾಲುರಸಕಣಗಳು ಸಿಕ್ಕಬಿದ್ದಂತಿರುವುವು. ಕಿರುಹಾಲೆಗಳ ರಗಟೆಯಲ್ಲಿ ಹಾಲುರಸಕಣಗಳು ದಟ್ಟವಾಗಿ ಕಿಕ್ಕಿರಿದಿವೆ. ತಿರುಳಿನಲ್ಲಿ ಹಾಲುರಸಕಣಗಳಿಗಿಂತಲೂ ನವಿರ್ಜಾಲಕಣಗಳೇ ಹೆಚ್ಚು. ಬೇರೆಡೆಯ ನವಿರ್ಜಾಲಗಳಿಗೂ ಇಲ್ಲಿನವಕ್ಕೂ ಅವುಗಳ ವಿಕಾಸದಲ್ಲಿ ವ್ಯತ್ಯಾಸಗಳಿವೆ. ಪಿಂಡವಿಕಾಸದಲ್ಲಿ ಇಲ್ಲಿನವು ಮೇಲ್ಪೊರೆಯಿಂದ (ಎಪಿತೀಲಿಯಂ) ಬರುವುದೇ ಹೊರತು ಮಿಕ್ಕವಂತೆ ನಡುರಚನಾಂಶದಿಂದ (ಮೀಸೆಂಕೈಮ) ಹುಟ್ಟವು. ಆಕಾರ, ವರ್ತನೆಗಳಲ್ಲೂ ಹಾಲುರಸಮಂಡಲದ ಹಾಲುರಸಕಣಗಳನ್ನೇ ಇವೆಲ್ಲವೂ ಹೋಲುವುವು. ಗ್ರಂಥಿಯ ನಡುಗಡೆಯಲ್ಲಿ ಹ್ಯಾಸಲನ ಗೋಳಕಗಳಿವೆ (ಕಾರ್ಪಸೆಲ್ಸ್). ಇವುಗಳ ಕೆಲಸವೇನೆಂದು ತಿಳಿದಿಲ್ಲ. ಓಮಗ್ರಂಥಿಗೆ ರಕ್ತನಾಳ ಪೂರೈಕೆ ಅಪಾರ. ಇದು ಮುರುಟಿಕೊಂಡಾಗ ಗ್ರಂಥಿವಸ್ತುವೆಲ್ಲ ಬದಲಾಗಿ ಕೊಬ್ಬುಗೂಡಿರುವುದು. ರಗಟೆಯಲ್ಲಿ ಮೊದಲಾಗಿ ಕುಸುರಿಯಲ್ಲಿ ಕೊನೆಗೊಳ್ಳುತ್ತದೆ. ಕೊನೆಗೆ ಇಡೀ ಗ್ರಂಥಿ ಕೊಬ್ಬುಗೂಡಿ ನಟ್ಟನಡುವೆ ಉಳಿದ ಚೂರಲ್ಲಿ ಹ್ಯಾಸಲನ ಗೋಳಕಗಳಿರುತ್ತವೆ.

**ಕೆಲವು ಅಸಹಜತೆಗಳು:** ಕೆಲವು ವೇಳೆ ಈ ಗ್ರಂಥಿಯ ಊತಕ (ಟಿಶ್ಯೂ) ಇತರ ಅಂಗಗಳಲ್ಲಿಯೂ ಕಂಡುಬರುವುದು. ಉದಾಹರಣೆಗೆ – 1. ಗುರಾಣಿಕ ಗ್ರಂಥಿ ಮತ್ತು ಶ್ವಾಸಕೋಶಗಳಲ್ಲಿ; 2. ಗ್ರಂಥಿಯ ಒಂದು ಭಾಗ, ಕೆಲವು ವೇಳೆ ಎರಡು ಭಾಗಗಳೂ ಕಿರಿದಾಗಿರಬಹುದು; 3. ಅಪೂರ್ವವಾಗಿ ಈ ಗ್ರಂಥಿ ಕೆಲವರಲ್ಲಿ ಇಲ್ಲದೆಯೇ ಹೋಗಬಹುದು.

**ಹುಟ್ಟು ಅಥವಾ ಭ್ರೂಣವಿಜ್ಞಾನ (ಎಂಬ್ರಿಯಾಲಜಿ):** ಓಮ ಗ್ರಂಥಿ ಮೂರನೆಯ ಬ್ರಾಂಕಿಯಲ್ ಪೌಚಿನಿಂದ ಉಗಮಗೊಳ್ಳುತ್ತದೆ. ಅದರಲ್ಲಿ ಇರಡು ಎಪಿಥೀಲಿಯಲ್ ಜೀವಕೋಶಗಳಿವೆ. ಇವು ಮೊದಲಿಗೆ ಕೊಳವೆಯಾಕಾರದಲ್ಲಿ ರೂಪ ತಾಳುತ್ತವೆ. ಅನಂತರ ಘನರೂಪ ತಳೆದು ಕೆಳಮುಖವಾಗಿ ಮೀಸೆಂಕೈಮದ ಆವರಣದೊಳಗೆ ಬೆಳೆಯುತ್ತವೆ. ಮೀಸೆಂಕೈಮದ ಲಸಿಕೆಯ ಜೀವಕೋಶಗಳು ಅದರೊಳಗೆ ಪ್ರವೇಶಿಸಿ ಮೊದಲೇ ಇದ್ದ ಒತ್ತುಕಟ್ಟಾದ ಎಪಿಥೀಲಿಯಲ್ ಜೀವಕೋಶಗಳನ್ನು ಬೇರ್ಪಡಿಸುತ್ತವೆ. ಇದರಿಂದಾಗಿ ಘನರೂಪದ ಜೀವಕೋಶಗಳು ಬಲೆಯಾಕಾರವನ್ನು ತಾಳುತ್ತವೆ. ಓಮಗ್ರಂಥಿಯಲ್ಲಿ ಲಸಿಕೆಯ ಜೀವಕೋಶಗಳು ಮೊಟ್ಟಮೊದಲಿಗೆ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿ ಭ್ರೂಣಾವಸ್ಥೆಯ ಮೂರನೆಯ ತಿಂಗಳಲ್ಲಿ.

**ನಿಜಗೆಲಸ:** 1. ಪ್ರತಿರೋಧಕ ಕಾರ್ಯಗಳು: ಪ್ರಾಣಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ಮತ್ತು ಮನುಷ್ಯದೇಹದಲ್ಲಿ ನಡೆಸಿದ ವೀಕ್ಷಣೆಗಳಿಂದ ಓಮಗ್ರಂಥಿ ಪ್ರತಿರೋಧಕ ಶಕ್ತಿಯ ಬೆಳವಣಿಗೆಯಲ್ಲಿ ಪ್ರಮುಖಪಾತ್ರವನ್ನು ವಹಿಸುತ್ತದೆಂದು ತಿಳಿದುಬಂದಿದೆ. ಮಗುವಿನ ಜನನಪೂರ್ವದ ಅಥವಾ ಜನನಾಂತರದ ಕೆಲವೇ ದಿವಸಗಳಲ್ಲಿ ಇದರ ಪ್ರಭಾವ ಶರೀರದಲ್ಲಿ ಕಂಡುಬರುತ್ತದೆ. ಈ ಪ್ರಭಾವ ಕಂಡು ಬರುವ ಕಾಲ ಬೇರೆ ಬೇರೆ ಪ್ರಾಣಿಜಾತಿಗಳಲ್ಲಿ ವ್ಯತ್ಯಾಸ ಹೊಂದುತ್ತವೆ.

ವಯಸ್ಕ ಪ್ರಾಣಿಗಳಲ್ಲಿ ಓಮಗ್ರಂಥಿಯನ್ನು ತೆಗೆದಾಗ ಯಾವ ವಿಶೇಷ ಪರಿಣಾಮ ಉಂಟಾದುದೂ ಕಂಡುಬಂದಿಲ್ಲ. ಆದರೆ ಆಗತಾನೆ ಹುಟ್ಟಿದ ಇಲಿಗಳಲ್ಲಿ ಮತ್ತು ಇತರ ದಂಶಕವರ್ಗದ ಪ್ರಾಣಿಗಳಲ್ಲಿ ಈ ಗ್ರಂಥಿಯನ್ನು ತೆಗೆದುಹಾಕಿದಾಗ ರಕ್ತದಲ್ಲಿ ಮತ್ತು ಲಸಿಕೆಯಲ್ಲಿ ಲಸಿಕೆಯ ಜೀವಕೋಶಗಳು ವಿರಳವಾದುವಲ್ಲದೆ ಊತಕಗಳು ರೋಧವಸ್ತುಗಳನ್ನು (ಆಂಟಿಬಾಡೀಸ್) ಉತ್ಪತ್ತಿಮಾಡುವ ಶಕ್ತಿಯನ್ನು ಕಳೆದುಕೊಂಡುವು; ಮತ್ತು ಚರ್ಮದ ಸ್ವಜಾತಿ ಕಸಿಗೆ (ಹೋಮೋಗ್ರಾಫ್ಟ್) ಅವುಗಳಲ್ಲಿ ವಿರೋಧ ಕಂಡುಬರಲಿಲ್ಲ. ಕ್ರಮೇಣ ಆ ಪ್ರಾಣಿಗಳ ಬೆಳೆವಣಿಗೆ ಕುಗ್ಗಿ ತಿಂಗಳೊಳಗೆ ಅವು ಸತ್ತುಹೋದುವು. ಮತ್ತೆ ಅದೇ ಬಗೆಯ ಓಮಗ್ರಂಥಿಗಳನ್ನು ಅವುಗಳ ದೇಹಕ್ಕೆ ಕಸಿ ಮಾಡಿದಾಗ ಮೇಲೆ ಹೇಳಿದ ದೋಷಗಳು ಕಡಿಮೆಯಾದುವು. ಇಲ್ಲವೆ ಅದೇ ಜಾತಿಯ ಲಸಿಕೆಯ ಜೀವಕೋಶ ಅಥವಾ ರಕ್ತದ ಜೀವಕೋಶಗಳನ್ನು ಉತ್ಪತ್ತಿಯಾಗುವ ಜೀವಕೋಶಗಳನ್ನು ಈ ಪ್ರಾಣಿಗಳಿಗೆ ಚುಚ್ಚಿದಾಗ ದೋಷಗಳು ಪೂರ್ಣವಾಗಿ ಮಾಯವಾದುದು ಕಂಡುಬಂದಿತು.

ರೋಧಶಕ್ತಿ ಓಮಗ್ರಂಥಿಗೆ ಹೇಗೆ ಪ್ರಾಪ್ತವಾಗುತ್ತದೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ಈ ಗ್ರಂಥಿಗಳು ಲಸಿಕೆಯ ಜೀವಕೋಶಗಳು. ಲಸಿಕೆಯ ಗ್ರಂಥಿ ಮತ್ತು ಗುಲ್ಮಗಳಿಗೆ ವಲಸೆಹೋಗುತ್ತವೆ. ದೇಹದ ಇತರ ಅಂಗಗಳಲ್ಲಿ ಉತ್ಪತ್ತಿಯಾಗುವ ಲಸಿಕೆಯ ಜೀವಕೋಶಗಳ ಮೇಲೂ ಈ ಗ್ರಂಥಿ ತನ್ನ ಪ್ರಭಾವ ಬೀರಬಹುದು. ಅಲ್ಲದೆ ಇದರಲ್ಲಿ ಒಂದು ಬಗೆಯ ವಸ್ತು (ಹ್ಯೂಮರಲ್ ಫ್ಯಾಕ್ಟರ್) ಉತ್ಪತ್ತಿಯಾಗಿ ಶಕ್ತಿಯನ್ನು ಇತರ ಲಸಿಕೆಯ ಕೇಂದ್ರಗಳಿಗೆ ಒಯ್ಯಬಹುದು.

2. ಒಳಸುರಿಕೆ ಕಾರ್ಯಗಳು; ಲಸಿಕೆಯ ಜೀವಕೋಶಗಳನ್ನು ಉತ್ಪತ್ತಿಮಾಡುವುದಲ್ಲದೇ ಗ್ರಂಥಿಯ ಬೇರೆ ಕಾರ್ಯವೇನೆಂಬುದು ಸರಿಯಾಗಿ ತಿಳಿದುಬಂದಿಲ್ಲ. ಇದು ಚೋದನಿಕಗಳನ್ನು (ಹಾರ್ಮೋನ್ಸ್) ಉತ್ಪತ್ತಿಮಾಡುವುದೇ ಇಲ್ಲವೆ ಎಂಬ ವಿಷಯದಲ್ಲಿ ಒಮ್ಮತವಿಲ್ಲ. ಓಮಗ್ರಂಥಿಗೂ ಇತರ ಒಳಸುರಿಕ ಗ್ರಂಥಿಗಳಿಗೂ ಅನೇಕ ವಿಧವಾದ ಪರಸ್ಪರ ಸಂಬಂಧವಿರುವುದು ಕಂಡುಬಂದಿದೆ. ಜನನಪೂರ್ವದ, ಜನನಾಂತರದ ಹಾಗೂ ವಯಸ್ಕ ಪ್ರಾಣಿಗಳಲ್ಲಿ ಆಡ್ರಿನಲ್ ಕಾರ್ಟಿಕಲ್ ಗ್ರಂಥಿಯ ಕಾರ್ಯಚಟುವಟಿಕೆಗೂ ಓಮಗ್ರಂಥಿಯ ಗಾತ್ರಕ್ಕೂ ಪ್ರತಿಲೋಮ ಸಂಬಂಧವಿರುವುದು (ಇನ್‌ವರ್ಸ್ ರಿಲೇಶನ್) ಕಂಡುಬಂದಿದೆ. ಆಡ್ರಿನಲ್ ಕಾರ್ಯಚಟುವಟಿಕೆ ಕುಗ್ಗಿದಾಗ ಇವುಗಳ ಗಾತ್ರ ಹೆಚ್ಚಾಗುತ್ತದೆ. ನಿರ್ವೀರ್ಯಕರಣದಿಂದ (ಕ್ಯಾಸ್ಟ್ರೇಶನ್) ಅಥವಾ ಗುರಾಣಿಕ ಗ್ರಂಥಿಯನ್ನು ತೆಗೆದುಹಾಕುವುದರಿಂದ ಓಮಗ್ರಂಥಿಯ ಗಾತ್ರ ದೊಡ್ಡದಾಗುತ್ತದೆ. ಕೆಲವು ಪ್ರಾಣಿಗಳಲ್ಲಿ ಓಮಗ್ರಂಥಿಯನ್ನು ತೆಗೆದಾಗ ಜನನಾಂಗಗಳು, ಆಡ್ರಿನಲ್ ಕಾರ್ಟೆಕ್ಸ್ ಮತ್ತು ಗುರಾಣಿಕ ಗ್ರಂಥಿಗಳು ದೊಡ್ಡದಾಗುತ್ತವೆ ಮತ್ತು ದೈಹಿಕ ಬೆಳೆವಣಿಗೆ ಕುಗ್ಗುತ್ತದೆ. ಪ್ರಾಯಪೂರ್ವದಲ್ಲಿ ಈ ಗ್ರಂಥಿಯ ಬೆಳೆವಣಿಗೆ ಅತಿ ಹೆಚ್ಚಾಗಿರುವುದರಿಂದ ದೈಹಿಕ ಬೆಳೆವಣಿಗೆಯಲ್ಲಿ ಇದರ ಪಾತ್ರವಿರಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ.

**ರೋಗಗಳು:** ಓಮಗ್ರಂಥಿಯಿಂದ ದೇಹದ ಆರೋಗ್ಯದಲ್ಲಾಗುವ ಏರಿಳಿತಗಳು ಅಷ್ಟೇನೂ ಗಮನಾರ್ಹವಾದುವಲ್ಲ. ವಿರಳವಾಗಿ ಗ್ರಂಥಿಯಲ್ಲಿ ಗಂಟುಗಳು (ಟ್ಯೂಮರ್ಸ್) ಮತ್ತು ಹುಣ್ಣುಗಳು ಕಾಣಿಸಿಕೊಳ್ಳುವುವು. ಮಯಸ್ತೀನಿಯ ಕಾಯಿಲೆಗೆ ಇದು ಕೆಲವು ವೇಳೆ ಕಾರಣವಾಗಬಹುದು. ಓಮಗ್ರಂಥಿ ಉಸಿರುಗಟ್ಟುವಿಕೆಯಿಂದುಂಟಾಗುವ ಸಾವಿಗೆ ಕಾರಣವೆಂದು ಹಿಂದೆ ತಿಳಿದಿದ್ದರು. ಆದರೆ ಇದನ್ನು ದೃಢಪಡಿಸುವ ಖಚಿತ ಸಾಕ್ಷಿಗಳಿಲ್ಲ.

ಪ್ರಾಣಿಗಳಲ್ಲಿ ಈ ಗ್ರಂಥಿಯ ಅಭಾವದಿಂದ ಅಸಹಜವಾದ ಪ್ರತಿನಿರೋಧಕ ಪ್ರತಿಕ್ರಿಯೆ (ಅಬ್‌ನಾರ್ಮಲ್ ಇಮ್ಯೂನ್ ರೆಸ್ಪಾನ್ಸ್) ಕಂಡುಬರುವುದೆಂದು ಈಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಇದರ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳು ದೈಹಿಕ ಆರೋಗ್ಯದಲ್ಲಿ ವಿವಿಧ ರೀತಿಯ ಬದಲಾವಣೆಗಳನ್ನು ತರುತ್ತವೆಯಾದರೂ ಅವುಗಳ ಕಾರ್ಯ ಕಾರಣ ಸಂಬಂಧ ನಿರ್ದಿಷ್ಟವಾಗಿಲ್ಲ.

**ಅನವಶ್ಯಕ ಬೆಳವಣಿಗೆ ಅಥವಾ ಗಂಟುಗಳು:** ಓಮಗ್ರಂಥಿಯ ಗಂಟುಗಳಿಗೆ ಥೈಮೋಮಾಸ್ ಎಂದು ಹೆಸರು. ಅವುಗಳಲ್ಲಿ ಕಂಡುಬರುವ ಪ್ರಮುಖ ಜೀವಕೋಶಗಳ ಆಧಾರದ ಮೇಲೆ ಗಂಟುಗಳನ್ನು ವಿಭಜಿಸಲಾಗುತ್ತದೆ. 20 ವರ್ಷ ವಯಸ್ಸಿಗಿಂತ ಕಡಿಮೆಯ ವ್ಯಕ್ತಿಗಳಲ್ಲಿ ಇವು ಕಾಣಿಸುವುದು ವಿರಳ. ಈ ಗಂಟುಗಳು ದೇಹದ ಇತರ ದೂರದ ಅಂಗಗಳಿಗೆ ವ್ಯಾಪಿಸುವುದು ಕಡಿಮೆ. ಆದರೆ ಅಕ್ಕಪಕ್ಕದ ಅಂಗಗಳು ಇದರ ಬಾಧೆಗೊಳಗಾಗಬಹುದು. ಈ ರೋಗದ ಚರ್ಯೆಯನ್ನು ಕೇವಲ ಅದರ ಜೀವಕೋಶಗಳ ರಚನೆಯ ಆಧಾರದಿಂದಲೇ ವಿವರಿಸಲಾಗುವುದಿಲ್ಲ. ಈ ಗಂಟುಗಳು ಕಾಣಿಸಿಕೊಂಡಾಗ ಎದೆಯ ಭಾಗದ ಅಂಗಗಳ ಮೇಲೆ ಒತ್ತಡವುಂಟಾದ ಅನುಭವವಾಗುತ್ತದೆ. ಮತ್ತೆ ಕೆಲವು ಬಾರಿ ಈ ಚಿಹ್ನೆಗಳು ಕಾಣಿಸಿಕೊಳ್ಳದೆಯೂ ಇರಬಹುದು. ಆಗ ಎಕ್ಸ್‌ಕಿರಣ ಪರೀಕ್ಷೆಯಿಂದ ಅದನ್ನು ಪತ್ತೆಹಚ್ಚಬಹುದು. ಶಸ್ತ್ರಕ್ರಿಯೆಯಿಂದ ತೆಗೆದುಹಾಕಿದಾಗ ಅದು ಇತರ ಭಾಗಗಳಿಗೆ ವ್ಯಾಪಿಸದಿದ್ದಲ್ಲಿ ದೇಹಕ್ಕೆ ಯಾವ ಅಪಾಯವೂ ಉಂಟಾಗದು.

ದೇಹದ ಇತರ ಅನೇಕ ಕಾಯಿಲೆಗಳ ಜೊತೆಗೆ ಈ ಗಂಟುಗಳೂ ಇರಬಹುದು. ಅವುಗಳ ನಡುವಣ ಸಂಬಂಧ ಕೇವಲ ಆಕಸ್ಮಿಕವಾಗಿರಬಹುದು; ಕೆಲವು ವೇಳೆ ಆಕಸ್ಮಿಕವಲ್ಲದೆಯೂ ಇರಬಹುದು. ಕೆಲವು ಮಯಸ್ತೀನಿಯ ಗ್ರೆವಿಸಿನಿಂದ ನರಳುತ್ತಿರುವ ರೋಗಿಗಳಲ್ಲಿ ಓಮಗ್ರಂಥಿಯ ಗಂಟುಗಳು ಕಂಡುಬಂದಿವೆ. ಕೆಲವರಲ್ಲಿ ಗ್ರಂಥಿಗಳು ದೊಡ್ಡದಾಗಿರುವುದೂ ಉಂಟು. ಈ ಗಂಟುಗಳನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದಾಗ ಕಾಯಿಲೆಯಲ್ಲಿ ಗುಣ ಕಂಡುಬಂದಿತಲ್ಲದೆ ಕೆಲವರಿಗೆ ಪೂರ್ತಿ ವಾಸಿಯಾಗಿರುವುದೂ ಉಂಟು. ಈ ರೋಗದಿಂದ ಬಳಲುತ್ತಿರುವ 40 ವರ್ಷದ ಕೆಳಗಿನ ಹೆಂಗಸರಲ್ಲಿ ಓಮಗ್ರಂಥಿಯ ಗಂಟುಗಳಿಲ್ಲದಿದ್ದರೂ ಗ್ರಂಥಿಯನ್ನು ತೆಗೆದುಹಾಕಿದಾಗ ಕಾಯಿಲೆ ಗುಣವಾಗಿರುವುದು ಕಂಡುಬಂದಿದೆ. ಅಪರಿಹಾರ್ಯವಾದ ರಕ್ತಹೀನತೆಯಲ್ಲೂ ಓಮಗ್ರಂಥಿಯ ಪಾತ್ರವಿದೆಯೆಂಬುದು ಕಂಡುಬಂದಿದೆ. ಈ ಗಂಟುಗಳನ್ನು ತೆಗೆದಾಗ ಮೂರರಲ್ಲಿ ಒಂದು ಭಾಗ ರೋಗಿಗಳಲ್ಲಿ ಗುಣ ಕಂಡುಬಂದಿತು. ರಕ್ತದ ಏಡಿಗಂತಿಗೆ ಈ ಗ್ರಂಥಿ ಕೆಲವು ವೇಳೆ ಕಾರಣವಾಗಬಹುದೆಂಬುದು ಪ್ರಾಣಿಗಳಲ್ಲಿ ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದ್ದರೂ ಮನುಷ್ಯನ ವಿಷಯದಲ್ಲಿ ಅದು ಖಚಿತವಾಗಿಲ್ಲ.

**ಥೈಮೊಲಿಪೊಮ:** ಓಮಗ್ರಂಥಿಯಲ್ಲಿ ವಿರಳವಾಗಿ ಉಂಟಾಗುವ ಈ ಬಗೆಯ ಗಂಟು ವಿಶೇಷವಾಗಿ 10-15 ವರ್ಷದ ಮಕ್ಕಳಲ್ಲಿ ಕಂಡುಬರುತ್ತದೆ. ಇದು ಕೊಬ್ಬು ಮತ್ತು ಓಮಗ್ರಂಥಿಯ ಜಾಲಗಳಿಂದ ಕೂಡಿದೆ. ಇದಕ್ಕೆ ಹೊರಕವಚ ಇದೆ. ಕೆಮ್ಮು, ದಮ್ಮು ಮತ್ತು ನೋವುಗಳಿಗೆ ಇದು ಕಾರಣವಾಗಬಹುದು. ಎಕ್ಸ್‌ಕಿರಣ ಪರೀಕ್ಷೆಯ ಮೂಲಕ ಇದನ್ನು ಪತ್ತೆಹಚ್ಚಬಹುದು. ಈ ಗಂಟು ತುಂಬ ದೊಡ್ಡದಾಗಿ ಬೆಳೆದರೂ ಅಷ್ಟೇನೂ ಅಪಾಯಕಾರಿಯಲ್ಲ.

**ಉಸಿರುಕಟ್ಟುವಿಕೆ:** ಓಮಗ್ರಂಥಿ ಉಸಿರುಕಟ್ಟುವಿಕೆಗೆ ಕಾರಣವಾಗುತ್ತದೆಂಬ ಭಾವನೆ ಹಿಂದೆ ಇತ್ತು. ಆದರೆ ಸಂಶೋಧನೆಗಳಿಂದ ಅದು ನಿರಾಧಾರವೆನಿಸಿದೆ. ಉಸಿರುಗಟ್ಟುವಿಕೆಯಿಂದಾಗುವ ಸಾವಿಗೆ, ಓಮಗ್ರಂಥಿ ದೊಡ್ಡದಾಗಿದ್ದರೂ ಬೇರೆಯೇ ಕಾರಣಗಳಿದ್ದುವು. ಕೆಲವು ವೇಳೆ ಚಿಕ್ಕ ಮಕ್ಕಳಲ್ಲಿ, ಓಮಗ್ರಂಥಿ ದೊಡ್ಡದಾಗಿದ್ದು ಶ್ವಾಸನಾಳದ ಮೇಲೆ ಒತ್ತುವುದರಿಂದ ಉಸಿರಾಡಲು ತೊಂದರೆಯಾಗಬಹುದು.

ಹುಟ್ಟಿನಿಂದುಂಟಾಗುವ ಪ್ರತಿರೋಧಕ ಕಾಯಿಲೆಗಳಿಗೆ ಓಮಗ್ರಂಥಿ ಕಾರಣವಿರಬಹುದೆಂದು ಕೆಲವರ ಅಭಿಪ್ರಾಯ. ಇಂಥ ಕಾಯಿಲೆಯಲ್ಲಿ ಎರಡು ವಿಧಗಳಿವೆ; (1) ಹುಡುಗರಲ್ಲಿ ಮಾತ್ರ ಕಂಡುಬರುವುದು. (2) ಸ್ವಿಸ್ ಮಾದರಿಯ ಹುಡುಗ ಹುಡುಗಿಯರಲ್ಲಿ ಕಂಡುಬರುವಂಥದು. ಮೊದಲನೆಯದರಲ್ಲಿ ಓಮಗ್ರಂಥಿಗೆ ಸಂಬಂಧಿಸಿದಂತೆ ಯಾವ ದೋಷವೂ ಇರುವುದಿಲ್ಲ. ಆದರೆ ಎರಡನೆಯದು ಓಮಗ್ರಂಥಿ ಬಹಳ ಹಿರಿದಾಗಿರುತ್ತದೆ. ಜೊತೆಗೆ ಅದರಲ್ಲಿ ಲಸಿಕೆಯ ಜೀವಕೋಶಗಳೂ ತುಂಬ ಕಡಿಮೆ ಅಥವಾ ಇಲ್ಲದೆಯೇ ಇರಬಹುದು. ಈ ಕಾಯಿಲೆಯುಳ್ಳವರ ದೇಹದಲ್ಲಿ ರೋಧವಸ್ತುಗಳ ಉತ್ಪತ್ತಿಯಾಗುವುದಿಲ್ಲ ಮತ್ತು ಸ್ವಜಾತಿ ಕಸಿಯನ್ನು ವಿರೋಧಿಸುವ ಶಕ್ತಿಯೂ ಇರುವುದಿಲ್ಲ. ಇದರಿಂದ ನರಳುವವರು ಎರಡು ವರ್ಷ ಬದುಕಿದ್ದರೆ ಹೆಚ್ಚು. ಓಮಗ್ರಂಥಿಯನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಿದಾಗ ಈ ಕಾಯಿಲೆಗಳು ಪೂರ್ತಿ ವಾಸಿಯಾಗುತ್ತವೆಂದು ಹೇಳಲು ಬರುವುದಿಲ್ಲ. ಇದರ ಬಗ್ಗೆ ಸಂಶೋಧನೆ ಇನ್ನೂ ನಡೆಯುತ್ತಿದೆ.

(ಜೆ.ಇ.ಸಿ.ಎಚ್.; ಎನ್.ಎಸ್.)

**ಓಮನ ನಿಯಮ:** ಉಷ್ಣತೆ ಬದಲಾದಂತೆ ವಿದ್ಯುತ್ತು ಹರಿಯುತ್ತಿರುವಾಗ ವೋಲ್ಟೇಜಿಗೂ (V) ವಿದ್ಯುತ್ಪ್ರವಾಹಕ್ಕೂ (I) ಇರುವ ಪ್ರಮಾಣಾಂಕ ಸ್ಥಿರವಾಗಿದೆ ಎಂದು ತಿಳಿಸುವ ನಿಯಮ (ಓಮ್ಸ್ ಲಾ). ಸಾಂಕೇತಿಕವಾಗಿ $V/I = R$. R ಈ ಸ್ಥಿರಾಂಕ. ಉಷ್ಣತೆ ವ್ಯತ್ಯಾಸವಾಗದಂತೆ ಪದಾರ್ಥವನ್ನು ಇಟ್ಟಾಗ ಈ ನಿಯಮ ಪಾಲಿತವಾಗುವುದಾದರೂ ಇದು ಪದಾರ್ಥಗಳನ್ನು ಅವಲಂಬಿಸದೆ ಇರುವಂಥ ಭೌತ ನಿಯಮಗಳ ವಿಶೇಷ ಗುಂಪಿಗೆ ಸೇರಿಲ್ಲ.

ಎಲೆಕ್ಟ್ರಾನುಗಳು ಒಂದು ಪದಾರ್ಥದ ಮೂಲಕ ಪ್ರವಹಿಸುವಾಗ ಅದು ಪ್ರವಾಹದ ವಿರುದ್ಧ ಪ್ರದರ್ಶಿಸುವ ತಡೆಯೇ ಪದಾರ್ಥದ ರೋಧತ್ವ (R) ಇದರ ಪ್ರಾಯೋಗಿಕ ಏಕಕವನ್ನು ಓಮ್ ಎಂದೇ ಹೆಸರಿಸಿ (1861) ವಿಜ್ಞಾನಿಗಳು ಓಮನಿಗೆ ಗೌರವ ಸಲ್ಲಿಸಿದ್ದಾರೆ. (ನೋಡಿ- ಓಮ್,-ಜಾರ್ಜ್-ಸೈಮನ್). $0^0$ ಸೆಂ. ಉಷ್ಣತೆಯಲ್ಲಿ (106.3) ಸೆಂಮೀ. ಉದ್ದಕ್ಕೆ ಅಡ್ಡಕೊಯ್ತ (ಕ್ರಾಸ್‌ಸೆಕ್ಷನ್) ಒಂದೇ ಸಮನಾಗಿರುವಂತೆ ನಿಂತಿರುವ (14.4521) ಗ್ರಾಂ. ಪಾದರಸದ ಸ್ತಂಭ ಅನಿಶ್ಚಿತವಲ್ಲದ ವಿದ್ಯುತ್ಪ್ರವಾಹಕ್ಕೆ ಒಡ್ಡುವ ರೋಧತ್ವವನ್ನು ಅಂತರರಾಷ್ಟ್ರೀಯ ಓಮೆಂದು (ವ್ಯಾವಹಾರಿಕ ಓಮೆಂದು) ಒಪ್ಪಿಕೊಳ್ಳಲಾಗಿದೆ. (0.76) ಸೆಂಮೀ. ವ್ಯಾಸವಿರುವ (1) ಮೈಲಿ ಉದ್ದ ತಾಮ್ರದ ತಂತಿಗೆ ರೋಧತ್ವ ಉಪಸಮವಾಗಿ (0.6) ಓಮ್ ಇರುವುದೆಂದೂ (220) ವೋಲ್ಟ್ ವಿದ್ಯುತ್ ಒತ್ತಡದಲ್ಲಿ (200) ವಾಟ್ ಶಕ್ತಿಯ ವಿದ್ಯುದ್ದೀಪ ಉರಿಯುವಾಗ ಅದರ ರೋಧತ್ವ (242) ಓಮ್ ಇರುವುದೆಂದೂ ನೆನಪಿನಲ್ಲಿಟ್ಟರೆ ಒಂದು ಓಮಿನ ಪ್ರಮಾಣ ಎಷ್ಟೆಂದು ತಿಳಿಯಬಹುದು.

ಓಮನ ನಿಯಮ ಮೇಲುನೋಟಕ್ಕೆ ಬಲು ಸರಳವಾಗಿ ಕಾಣುತ್ತದೆ. ಆದರೆ ಓಮ್ ಮೊದಲು ಮಂಡಿಸಿದಾಗ ಜನರು ಇದನ್ನು ನಂಬಲಿಲ್ಲ. ಆ ಮಹೂರ್ತ ಬರಲು ಈ ವಿಜ್ಞಾನಿ (14) ವರ್ಷಗಳಷ್ಟು ದೀರ್ಘಕಾಲ ಅಜ್ಞಾತವಾಸ ಅನುಭವಿಸಬೇಕಾಯಿತು.

ಓಮನ ನಿಯಮ ಎಲ್ಲ ಪದಾರ್ಥಗಳಿಗೂ ಅನ್ವಯಿಸುವುದಿಲ್ಲ. ತಾಮ್ರ, ಅಲ್ಯುಮಿನಿಯಂ, ಕಬ್ಬಿಣ, ಟಂಗ್‌ಸ್ಟನ್, ಕಂಚು ಮುಂತಾದ ವಿದ್ಯುದ್ವಾಹಕಗಳಲ್ಲಿ ಈ ನಿಯಮ ಸರಿಹೊಂದುತ್ತದೆ. ವಿರುದ್ಧ ವಿದ್ಯುಚ್ಚಾಲಕ ಶಕ್ತಿ (ಬ್ಯಾಕ್ ಎಲೆಕ್ಟ್ರೋಮೋಟೀವ್ ಫೋರ್ಸ್) ಇಲ್ಲದ ಕೆಲವು ವಿದ್ಯುದ್ವಿಭಜನೀಯಗಳಲ್ಲಿ (ಎಲೆಕ್ಟ್ರೋಲೈಟ್ಸ್) ವೋಲ್ಟೇಜ್ ಕಡಿಮೆ ಇದ್ದಾಗ ಓಮನ ನಿಯಮ ಪಾಲಿತವಾಗುವುದು.

ಓಮನ ನಿಯಮಕ್ಕೆ ಕೆಲವು ಮುಖ್ಯವಾದ ಅಪವಾದಗಳು: (1) ವಿದ್ಯುತ್ ಪ್ರವಾಹದಿಂದ ಒಂದು ಪದಾರ್ಥ ಕಾದು ಬಿಸಿಯಾದಾಗ ಅದರ ರೋಧತ್ವ ಬದಲಾಗುತ್ತದೆ. ವಿದ್ಯುದ್ದೀಪದ ಬುರುಡೆಯೊಳಗಿರುವ ತಂತು ಉರಿಯುತ್ತಿರುವಾಗ ಅದರ ರೋಧತ್ವದಲ್ಲಾಗುವ ವ್ಯತ್ಯಾಸ ಎದ್ದುಕಾಣುತ್ತದೆ. ಟಂಗ್‌ಸ್ಟನ್ ತಂತುವಿನಲ್ಲಿ ವಿದ್ಯುತ್ಪ್ರವಾಹ ಹೆಚ್ಚಿದಂತೆ ರೋಧತ್ವ ಹೆಚ್ಚಾಗುವುದರಿಂದ ಪ್ರಯುಕ್ತವಾದ ವೋಲ್ಟೇಜಿನೊಡನೆ ವಿದ್ಯುತ್ಪ್ರವಾಹದ ಏರುವಿಕೆ ಕುಂಠಿತವಾಗುತ್ತದೆ. ಉಷ್ಣತೆ ಏರುವುದಕ್ಕಿಂತ ಮುಂಚೆ ಆಗುತ್ತಿದ್ದ ಹಾಗೆ ಶೀಘ್ರವಾಗಿ ಅದು ಏರುವುದಿಲ್ಲ. ಆದರೆ ಅರ್ಧವಾಹಕಗಳನ್ನು ಉನ್ನತ ಉಷ್ಣತೆಗಳಿಗೆ ಏರಿಸಿದಾಗ ಅವುಗಳ ರೋಧತ್ವ ತಗ್ಗುವುದಲ್ಲದೆ ಪ್ರಯುಕ್ತ ವೋಲ್ಟೇಜಿನೊಡನೆ ವಿದ್ಯುತ್ಪ್ರವಾಹದ ಪ್ರಮಾಣ ರೇಖೀಯವಾಗಿ ಹೆಚ್ಚುವುದಕ್ಕಿಂತ ಶೀಘ್ರವಾಗಿ ಹೆಚ್ಚುತ್ತದೆ.

(2) ವಿದ್ಯುನ್ಮಂಡಲದಲ್ಲಿರುವ ಬೇರೆ ಬೇರೆ ಅವಯವಗಳು ಪರ್ಯಾಯ ವಿದ್ಯುತ್ಪ್ರವಾಹಕ್ಕೆ ಯಾವುದಾದರೊಂದು ಉಷ್ಣತೆಯಲ್ಲಿ ತೋರಿಸುವ ರೋಧತ್ವ ವಿದ್ಯುತ್ಪ್ರವಾಹದ ಪ್ರಮಾಣ, ಅದರ ಆವರ್ತನ ಸಂಖ್ಯೆ ಇವೆರಡರ ಉತ್ಪನ್ನ.

(3) ವೋಲ್ಟೇಜ್ ಹೆಚ್ಚಿದಂತೆ ವಿದ್ಯತ್ಪ್ರವಾಹಕಗಳ ಸಂಖ್ಯೆ ಹೆಚ್ಚಾಗುವಂತೆ ಅಯಾನುಗಳಿರುವ ಅನಿಲಗಳಲ್ಲಿ ವಿದ್ಯುತ್ಪ್ರವಾಹದ ಪ್ರಮಾಣ ವೋಲ್ಟೇಜಿನೊಡನೆ ರೇಖೀಯವಾಗಿ ಏರುವುದಕ್ಕಿಂತ ಇನ್ನೂ ವೇಗವಾಗಿ ಹೆಚ್ಚುತ್ತದೆ.

(4) ಟ್ರಯೋಡಿನಲ್ಲಿ (ಟ್ರಯೋಡ್ ವ್ಯಾಕೂಂ ಟ್ಯೂಬ್) ಉತ್ಪನ್ನವಾಗುವ ವಿದ್ಯುತ್ಪ್ರವಾಹದ ಎಷ್ಟು ಪ್ರಮಾಣವು ಫಲಕವನ್ನು (ಪ್ಲೇಟ್) ತಲುಪುತ್ತದೆಂಬುದು ಜಾಲ (ಗ್ರಿಡ್) ಕೊಡುವ ಪ್ರೋತ್ಸಾಹಕ್ಕನುಗುಣವಾಗಿರುತ್ತದೆ. ಕೆಲವು ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಫಲಕಕ್ಕೆ ಪ್ರಯೋಗಿಸಿರುವ ವೋಲ್ಟೇಜನ್ನು ಗಮನಾರ್ಹವಾಗಿ ಬದಲಾಯಿಸದೆ ಫಲಕವನ್ನು ತಲುಪುವ ವಿದ್ಯುತ್ಪ್ರವಾಹದ ಪ್ರಮಾಣವನ್ನು ಹೆಚ್ಚಿಸಬಹುದು. ಅಂಥ ಸಂದರ್ಭಗಳಲ್ಲಿ ಟ್ರಯೋಡಿನ ಪ್ರಭಾವೀ ರೋಧತ್ವ (ಎಫಿಕ್ಟಿವ್ ರೆಸಿಸ್ಟೆನ್ಸ್) ಉಪಸಮವಾಗಿ ಸೊನ್ನೆಯಾಗುತ್ತದೆ.

(5) ಅರೆವಾಹಕಗಳಲ್ಲಿ ದೊರೆಯುವಂಥ ವಿದ್ಯುದಾವೇಶಗಳನ್ನು (ಎಲೆಕ್ಟ್ರಿಕ್ ಚಾರ್ಜಸ್) ಹರಿಸಿದ ಮೇಲೆ ಪ್ರಯೋಗಿಸುತ್ತಿರುವ ವೋಲ್ಟೇಜನ್ನು ಹೆಚ್ಚಿಸಿದರೆ, ಪ್ರತಿಯೊಂದು ಸಲವೂ ಉಂಟಾಗುವ ವಿದ್ಯುತ್ಪ್ರವಾಹ ವೋಲ್ಟೇಜಿನ ಹೆಚ್ಚುವರಿಗೆ ಸರಳಾನುಪಾತದಲ್ಲಿರುವುದಿಲ್ಲ.

ಮೇಲೆ (3), (4), (5)ರಲ್ಲಿ ತಿಳಿಸಿರುವಂತೆ ವರ್ತಿಸುವ ವಿದ್ಯುನ್ಮಂಡಲದ ಅವಯವಗಳನ್ನು ನಾನ್‌ಓಮಿಕ್ ಅವಯವಗಳೆನ್ನುತ್ತೇವೆ. ಎಲೆಕ್ಟ್ರಾನಿಕ್ಸಿನಲ್ಲಿ ಈ ಅವಯವಗಳಿಗೆ ಪ್ರಮುಖವಾದ ಉಪಯೋಗಗಳುಂಟು.

ಪರ್ಯಾಯ ವಿದ್ಯುನ್ಮಂಡಲಗಳಲ್ಲಿ ಉಪಯೋಗಿಸುವ ಪ್ರೇರಕತ್ವ (ಇಂಡಕ್ಟನ್ಸ್), ಸಂಗ್ರಾಹಕ (ಕೆಪಾಸಿಟರ್)–ಈ ರೀತಿಯ ಅವಯುವಗಳನ್ನು ನಾನ್‌ಓಮಿಕ್ ಅವಯವಗಳೆನ್ನುತ್ತೇವೆ. (q) ಎಂಬುದು ವಿದ್ಯುದಾವೇಶವಾದರೆ ಯಾವುದಾದರೊಂದು ರೋಧತ್ವದ ತುದಿಗಳಲ್ಲಿರುವ ವೋಲ್ಟೇಜ್ vಯನ್ನು $V = R\frac{dq}{dt}$ ಎಂದೂ (L) ಪ್ರೇರಕತ್ವದ ತುದಿಗಳಲ್ಲಿರುವ ವೋಲ್ಟೇಜನ್ನು $V = L\frac{d^2q}{dt^2}$ ಎಂದೂ ಒಂದು ಸಂಗ್ರಾಹಕ ಫಲಕಗಳ ನಡುವೆ ಇರುವ ವೋಲ್ಟೇಜ್ V ಯನ್ನು $V = \frac{q}{C}$ ಎಂದೂ ಬರೆಯಬಹುದು. ಇಲ್ಲಿ C ಎಂಬುದು ಸಂಗ್ರಾಹಕದ ಸಂಗ್ರಾಹಕತ್ವವೆನಿಸಿಕೊಳ್ಳುತ್ತದೆ. (ಸಿ.ಕೆ.ವಿ.; ವಿ.ವಿ.)

**ಓಮಾನ್**: ಮಧ್ಯ ಪ್ರಾಚ್ಯದ ಸೌದಿ ಅರೇಬಿಯ ಪರ್ಯಾಯ ದ್ವೀಪಕ್ಕೆ ಪೂರ್ವ ಮತ್ತು ಆಗ್ನೇಯ ಭಾಗದಲ್ಲಿನ ಪ್ರದೇಶ (ಸುಲ್ತಾನೇಟ್ ಆಫ್ ಓಮಾನ್). ಪಶ್ಚಿಮ ಮತ್ತು ವಾಯವ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್, ಈಶಾನ್ಯದಲ್ಲಿ ಓಮಾನ್‌ಕೊಲ್ಲಿಯನ್ನು ಒಳಗೊಂಡಿದೆ. ಒಂದು ಕೇಂದ್ರಾಡಳಿತ ಪ್ರದೇಶವಾಗಿದೆ. $22^0$–$23^0$ ಉ.ಅ. ಹಾಗೂ $58^0$–$59^0$ ಪೂ.ರೇ. ಗಳ ನಡುವೆ ಹಬ್ಬಿದೆ. ಇದರ ಒಟ್ಟು ವಿಸ್ತೀರ್ಣ 3,00,000 ಚ.ಕಿಮೀ. 1600 ಕಿಮೀ ಉದ್ದದ ತೀರ ಪ್ರದೇಶವನ್ನು ಒಳಗೊಂಡಿದೆ. ಓಮಾನ್ ಕೊಲ್ಲಿ ಇರಾನನ್ನು ಓಮಾನ್‌ನಿಂದ ಬೇರ್ಪಡಿಸುತ್ತದೆ.

ಭೂ ಸ್ವರೂಪ: ಒಳ ಭಾಗವು ಬೆಟ್ಟ ಗುಡ್ಡಗಳಿಂದಾವೃತವಾಗಿದ್ದು 3770 ಮೀ. ಎತ್ತರವಾದ ಶಿಖರವನ್ನು ಒಳಗೊಂಡಿದೆ. (ಜಬಲ್ ಶ್ಯಾಮ್) ಇದು ಮರುಭೂಮಿಯಾಗಿದ್ದು, ತೀರ ಪ್ರದೇಶದಲ್ಲಿ ಮಾತ್ರ ಫಲವತ್ತಾಗಿದೆ. ಅನೇಕ ದ್ವೀಪಗಳನ್ನು ಒಳಗೊಂಡಿದ್ದು ಆಫ್ ಶೋರ್ಸ್ ಕುರಿಯ, ಮೂರಿಯ, ಮಸ್ಸೀರ ದ್ವೀಪಗಳನ್ನು ಒಳಗೊಂಡಿದೆ.

ವಾಯುಗುಣ: ಇದು ಉಷ್ಣವಲಯದ ಮರುಭೂಮಿ ವಾಯುಗುಣವನ್ನು ಹೊಂದಿದ್ದು ವಾರ್ಷಿಕ ಸರಾಸರಿ ಉಷ್ಣಾಂಶ $35^o$ಸೆ. ಗಳು. ಆದರೆ ತೀರಪ್ರದೇಶಗಳಲ್ಲಿ ಮಾನ್ಸೂನ್ ವಾಯುಗುಣದ ಪ್ರಭಾವದಿಂದಾಗಿ $21^o$ಸೆ. ಉಷ್ಣಾಂಶ ಕಂಡುಬರುತ್ತದೆ. ಒಳನಾಡಿನ ಎತ್ತರದ ಪ್ರದೇಶಗಳು ಹೆಚ್ಚು ಮಳೆಯನ್ನು ಮಾನ್ಸೂನ್ ಮಾರುತಗಳಿಂದ ಪಡೆಯುತ್ತವೆ. ಅಲ್ಲದೆ ನೈರುತ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಮಳೆ ಹೆಚ್ಚು. ಬೇಸಗೆಯಲ್ಲಿ ಹೆಚ್ಚು ಬಿಸಿಲು, ಮಳೆಗಾಲದಲ್ಲಿ ಹೆಚ್ಚು ಮಳೆ, ಚಳಿಗಾಲದಲ್ಲಿ ಚಳಿ ಕಂಡುಬರುತ್ತದೆ.

ಸ್ವಾಭಾವಿಕ ಸಸ್ಯವರ್ಗ: ಓಮನ್ ಮರುಭೂಮಿ ಮತ್ತು ಮಾನ್ಸೂನ್ ವಾಯುಗುಣವನ್ನು ಹೊಂದಿರುವುದರಿಂದ ಇಲ್ಲಿ ತೀರ ಪ್ರದೇಶಗಳಲ್ಲಿ ಕುರುಚಲು ಸಸ್ಯವರ್ಗ ಕಂಡುಬರುತ್ತದೆ. ಮುಳ್ಳು ಕಳ್ಳಿಯ ಜಾತಿಗೆ ಸೇರಿದ ಸಸ್ಯವರ್ಗ, ಖರ್ಜೂರ, ಅಂಜೂರ, ನೀಲಗಿರಿ, ಆಲೀವ್ಸ್ ಹೆಚ್ಚಾಗಿ ಕಂಡುಬರುತ್ತದೆ.

ಪ್ರಾಣಿಗಳು: ಕಾಡು ಪ್ರಾಣಿಗಳು ಕಂಡುಬರುವುದಿಲ್ಲ. ಮರುಭೂಮಿಗಳಲ್ಲಿ ಮರಳುಗಪ್ಪೆ, ಅಳಿಲು, ಹಾವುಗಳು, ಮೊಲ, ಕುದುರೆ ಮುಂತಾದವುಗಳು ಇವೆ.

ಜನಸಂಖ್ಯೆ: 3.2 ಮಿ. ಜನಸಂಖ್ಯೆಯನ್ನು ಹೊಂದಿದೆ (2003). ತೀರ ಪ್ರದೇಶದ ನಗರ ಪಟ್ಟಣಗಳು ಅಭಿವೃದ್ಧಿಹೊಂದಿದ್ದು ಮಸ್ಕಟ್, ಆಲ್–ಬಾಬಿನ, ಮುಸನ್‌ದಮ್, ಆದಿ–ದಾಹೀರ, ಅದ್–ದಕ್ಕಲಿಯ, ಆಶ–ಶರ್ಕ್ವಿಯ, ಆಲ್‌ವೋಸ್ಟ್, ದೋಫಾರ್ಡ್ ಹೆಚ್ಚು ಜನದಟ್ಟಣೆಯಾಗಿವೆ. ಜನಸಾಂದ್ರತೆ ಪ್ರತಿ ಚ.ಕಿಮೀ ಗೆ 6.5. ಮಸ್ಕಟ್ ದಟ್ಟ ಜನಸಂಖ್ಯೆ ಹೊಂದಿದ್ದು, ಪ್ರಮುಖನಗರ, ರಾಜಧಾನಿ, ಬಂದರಾಗಿದೆ. ಜನಸಂಖ್ಯೆ 3,50,000 (2004).

ಧರ್ಮ: ಶೇ. 87.41 ರಷ್ಟು ಜನರು ಇಸ್ಲಾಮಿಯರು. ಇವರಲ್ಲಿ ಇಬ್ದಿಯಾ ಮುಸ್ಲಿಂ ಶೇ. 75 ರಷ್ಟು ಸುನ್ನಿ ಮುಸ್ಲಿಂ ಇದ್ದಾರೆ. ಹಿಂದುಗಳು ಶೇ. 5.7 ರಷ್ಟು, ಕ್ರಿಶ್ಚಿಯನ್ ಶೇ. 4.7, ಬೌದ್ಧರು 0.8, ಇತರರು ಶೇ. 1.2 ರಷ್ಟಿದ್ದಾರೆ.

ಭಾಷೆ: ಅರೇಬಿಕ್ ರಾಷ್ಟ್ರಭಾಷೆ, ಇಂಗ್ಲಿಷ್ ಮತ್ತು ಅರೇಬಿಕ್ ಆಡಳಿತ ಭಾಷೆಯೂ ಆಗಿವೆ. ಕೆಲವು ಪ್ರದೇಶಗಳಲ್ಲಿ ಭಾರತೀಯ ಭಾಷೆಗಳು ಅಭಿವೃದ್ಧಿ ಹೊಂದಿವೆ.

ಆರ್ಥಿಕತೆ: ವ್ಯವಸಾಯ, ಪ್ರಾಣಿ ಸಾಕಾಣಿಕೆ, ಮೀನುಗಾರಿಕೆ, ಗಣಿಗಾರಿಕೆ, ಕೈಗಾರಿಕೆ, ವಾಣಿಜ್ಯ ವ್ಯವಹಾರಗಳು ಕಂಡುಬರುತ್ತವೆ.

ವ್ಯವಸಾಯ: ತೀರ ಪ್ರದೇಶಗಳಲ್ಲಿ ದ್ವಿದಳ ಧಾನ್ಯ, ತರಕಾರಿಗಳಾದ ಆಲೂಗಡ್ಡೆ, ಟೊಮೊಟೊ, ಈರುಳ್ಳಿ, ಕೋಸುಗಳನ್ನು ಬೆಳೆಯುವುದಲ್ಲದೆ ಹುಳಿಭರಿತ ಹಣ್ಣುಗಳಾದ ದ್ರಾಕ್ಷಿ, ಖರ್ಜೂರ, ಸೇಬು, ಮಾವು, ಬಾಳೆ, ತಂಬಾಕು, ಕಲ್ಲಂಗಡಿ, ಕರ್ಬೂಜ, ನಿಂಬೆಗಳನ್ನು ಬೆಳೆಯುತ್ತಾರೆ.




ಪಶುಸಂಗೋಪನೆ: ಸಾಗಾಣಿಕೆಗೆ ಬೇಕಾದ ಒಂಟೆ, ಕುದುರೆ, ಕತ್ತೆ, ಹೇಸರಗತ್ತೆ ಪ್ರಮುಖ ಪ್ರಾಣಿಗಳು. ಅಲ್ಲದೆ ಕುರಿ, ಮೇಕೆ, ಕೋಳಿ, ದನಗಳನ್ನು ಸಾಕುತ್ತಾರೆ.

ಗಣಿಗಾರಿಕೆ: ಶೇ. 30.4 ರಷ್ಟು ದೇಶದ ಆದಾಯವು ಗಣಿಗಾರಿಕೆಯನ್ನು ಅವಲಂಬಿಸಿದೆ. ದೇಶದ ಶೇ. 27 ಜನರು ಗಣಿಗಾರಿಕೆಯನ್ನು ಉದ್ಯೋಗಕ್ಕಾಗಿ ಅವಲಂಬಿಸಿದ್ದಾರೆ. ಪೆಟ್ರೋಲಿಯಂ ನಿಕ್ಷೇಪವು ಬೃಹತ್ ಪ್ರಮಾಣದಲ್ಲಿದ್ದು ಪೆಟ್ರೋಲಿಯಂ ಮತ್ತು ಅದರ ಉತ್ಪನ್ನ, ಸ್ವಾಭಾವಿಕ ಅನಿಲಗಳನ್ನು ಉತ್ಪಾದಿಸುವುದಲ್ಲದೆ, ಕ್ರೋಮೈಟ್, ಚಿನ್ನ, ಉಪ್ಪು, ಮಾರ್ಬಲ್, ಜಿಪ್ಸಂ, ಸುಣ್ಣಕಲ್ಲುಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತದೆ.

ಮೀನುಗಾರಿಕೆ: ಸಮುದ್ರದ ಮೀನುಗಾರಿಕೆ ಪ್ರಮುಖವಾಗಿದ್ದು ಆರ್ಥಿಕವಾಗಿ 1,17,000 ಮೆಟ್ರಿಕ್ ಟನ್ ಗಿಂತಲೂ ಅಧಿಕ ಮೀನನ್ನು ಉತ್ಪಾದಿಸಲಾಗುತ್ತದೆ. ಟ್ರಾಫರ್ಸ್, ಸ್ನಾಪರ್ಸ್, ಜಾಟ್ ಫಿಶ್, ಕ್ರಾಕರ್ಸ್, ಡ್ರಮ್ ಫಿಶ್, ಜಾಕ್ ಫಿಶ್, ಕ್ರಿವೆಲ್ಲಾ, ಕವರೀವ, ಶಾರ್ಕ್, ರೇಸ್, ಸ್ಕೆಬ್, ಕಟಲೆಸ್ ಮುಂತಾದ ಪ್ರಮುಖ ಮೀನುಗಳನ್ನು ಹಿಡಿಯುತ್ತಾರೆ. ಮೀನುಗಾರಿಕೆ ಪ್ರಮುಖ ಉದ್ಯೋಗವಾಗಿದೆ.

ಕೈಗಾರಿಕೆ: ಎಣ್ಣೆ ಶುದ್ಧೀಕರಣಕೇಂದ್ರ, ಗ್ಯಾಸೋಲಿನ್, ಪೆಟ್ರೋಲ್, ಸೀಮೆಎಣ್ಣೆ, ಗ್ಯಾಸ್, ಡೀಸಲ್, ವಿದ್ಯುತ್ ಶಕ್ತಿ ಮುಂತಾದವುಗಳ ಉತ್ಪಾದನೆಯ ಅಭಿವೃದ್ಧಿ ಹೊಂದಿವೆ. ಅಲ್ಲದೆ ಕಟ್ಟಡ ನಿರ್ಮಾಣ ವಸ್ತುಗಳು, ಸಿಮೆಂಟ್, ತಾಮ್ರ ಶುದ್ಧೀಕರಣ, ಆಹಾರ ಸಂಸ್ಕರಣೆ, ಹಗುರ ಎಂಜಿನಿಯರಿಂಗ್ ಪದಾರ್ಥಗಳು, ಹಡಗು, ಸಿದ್ಧ ವಸ್ತುಗಳ ಕೈಗಾರಿಕೆಗಳು ಅಭಿವೃದ್ಧಿಯನ್ನು ಹೊಂದಿವೆ.

ವ್ಯಾಪಾರ: ಕಚ್ಚಾ ಪೆಟ್ರೋಲಿಯಂ, ಶುದ್ಧಪೆಟ್ರೋಲ್, ಡೀಸೆಲ್, ಪ್ರಾಣಿಗಳು, ಮೀನು, ತಾಮ್ರ, ಕಟ್ಟಡ ನಿರ್ಮಾಣ ವಸ್ತುಗಳನ್ನು ಹೊರದೇಶಗಳಿಗೆ ರಫ್ತು ಮಾಡುತ್ತಿದೆ. ಖನಿಜಗಳು, ಆಹಾರ ಪದಾರ್ಥಗಳು, ಪ್ಲಾಸ್ಟಿಕ್, ರಬ್ಬರ್, ಜವಳಿ, ಬೆಲೆಬಾಳುವ ಹರಳುಗಳು,

ವಾಹನ, ವಾಹನಗಳ ಬಿಡಿಭಾಗಗಳು, ಪಾತ್ರೆಗಳು, ವಿಮಾನಗಳು, ಫೋಟೋಗ್ರಾಫಿಕ್ ಉಪಕರಣ, ಔಷಧಿ, ರಾಸಾಯನಿಕ, ಸಂಗೀತ ಉಪಕರಣ, ಜವಳಿ, ಗಡಿಯಾರ, ಅಪರೂಪದ ವಸ್ತುಗಳು, ಯಂತ್ರ, ಯಂತ್ರೋಪಕರಣ ಮುಂತಾದವುಗಳನ್ನು ಆಮದು ಮಾಡಿಕೊಳ್ಳುತ್ತದೆ. ಆಸ್ಟ್ರೇಲಿಯ, ಬೆಲ್ಜಿಯಂ, ಚೀನ, ಫ್ರಾನ್ಸ್, ಇಟಲಿ, ಜಪಾನ್, ಭಾರತ, ಮಲೇಷ್ಯ, ನೆದರ್ಲೆಂಡ್, ಸೌದಿ ಅರೇಬಿಯ, ಸಿಂಗಪುರ, ಸ್ವೀಡನ್, ಯುಎಈ, ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟನ್ ಮುಂತಾದ ದೇಶಗಳೊಡನೆ ವ್ಯಾಪಾರ ನಡೆಸಲಾಗುತ್ತಿದೆ.

ಸಾರಿಗೆ ಸಂಪರ್ಕ: ಇದು ರಸ್ತೆ , ರೈಲು, ಹಡಗು, ವಿಮಾನ ಸಾರಿಗೆ ವ್ಯವಸ್ಥೆಯನ್ನು ಒಳಗೊಂಡಿದೆ. ರೇಡಿಯೋ, ಪತ್ರಿಕೆ, ಟೆಲಿಫೋನ್, ಟೆಲಿವಿಷನ್, ಕಂಪ್ಯೂಟರ್ ಮುಂತಾದ ಮಾಧ್ಯಮಗಳನ್ನು ಒಳಗೊಂಡಿದೆ. ಶೇ. 71.7 ಜನರು ವಿದ್ಯಾವಂತರಾಗಿದ್ದಾರೆ.

ಸರ್ಕಾರ: ದೇಶದಲ್ಲಿ ಸುಲ್ತಾನ್ ರಾಷ್ಟ್ರಾಧ್ಯಕ್ಷನಾಗಿದ್ದು ಪ್ರಧಾನಮಂತ್ರಿ, ಹಾಗೂ ಇತರ ಮಂತ್ರಿ ಮಂಡಲವನ್ನು ಒಳಗೊಂಡಿದೆ. (ಎಸ್.ಕೆ.)

**ಓಮಹಾ:** ಅಮೆರಿಕ ಸಂಯುಕ್ತ ಸಂಸ್ಥಾನದ ನಿಬ್ರ್ಯಾಸ್ಕ ರಾಜ್ಯದ ಅತ್ಯಂತ ದೊಡ್ಡ ನಗರ, ಮುಖ್ಯ ವ್ಯಾಪಾರಕೇಂದ್ರ, ಈ ಸ್ಥಳದಲ್ಲಿ ಮೊದಲು ಓಮಹಾ (ಅಥವಾ ಮಹಾ) ಬುಡಕಟ್ಟಿನ ಇಂಡಿಯನರು ವಾಸಿಸುತ್ತಿದ್ದುದರಿಂದ ಇದಕ್ಕೆ ಈ ಹೆಸರು ಬಂದಿದೆ. ದೇಶದ ಮಧ್ಯದಲ್ಲಿರುವ ಈ ನಗರ ಅಲ್ಲಿಯ ಮಿಸೂರಿ ನದಿಯ ದಂಡೆಯ ಮೇಲಣ ಪ್ರಮುಖ ಬಂದರು ; ರೈಲುನಿಲ್ದಾಣ 1825ರಷ್ಟು ಹಿಂದಿನಿಂದಲೇ ಇದು ಇಂಡಿಯನರ ವ್ಯಾಪಾರಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು. ನಿಬ್ರ್ಯಾಸ್ಕ ಪ್ರದೇಶದಲ್ಲಿ ವಸತಿಗೆ ಅವಕಾಶ ನೀಡಿದಾಗ ಜನ ಅಲ್ಲಿ ನೆಲಸಿದರು; ಓಮಹಾ ಪಟ್ಟಣದ ಸ್ಥಾಪನೆಯಾಯಿತು (1854). 13 ವರ್ಷಗಳ ಅನಂತರ ಇದನ್ನು ನಗರವನ್ನಾಗಿ ಪರಿಗಣಿಸಲಾಯಿತು. 1867ರವರೆಗೆ ಇದು ಆ ಪ್ರದೇಶದ ಆಡಳಿತ ಕೇಂದ್ರವೂ ಆಗಿತ್ತು. ಜಾನುವಾರು ವ್ಯಾಪಾರಕೇಂದ್ರ, ಜೋಸ್ಲಿನ್ ವಸ್ತುಸಂಗ್ರಹಾಲಯ, 1868ರಲ್ಲಿ ನಿರ್ಮಿಸಲಾದ ಓಮಹಾ ಕೋಟೆ ಇವು ಇಲ್ಲಿಯ ಪ್ರೇಕ್ಷಣೀಯ ಕಟ್ಟಡಗಳು. ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಪಂಥಗಳ ಚರ್ಚುಗಳೂ ಸೈನಿಕ ಮತ್ತು ಇತರ ಖಾತೆಗಳ ಪ್ರಾದೇಶಿಕ ಕೇಂದ್ರ ಕಚೇರಿಗಳೂ ಇಲ್ಲಿವೆ. ಸಂಯುಕ್ತಸಂಸ್ಥಾನದ ವಿಮಾನದಳದ ಯುದ್ಧತಂತ್ರ ವಿಭಾಗದ ಮುಖ್ಯ ಕಚೇರಿ ಇರುವುದು ನಗರಕ್ಕೆ 16 ಕಿಮೀ ದೂರದಲ್ಲಿ.

ಆಹಾರ ಸಂಸ್ಕರಣ ಮತ್ತು ಸಂವೇಷ್ಟನ, ರಸಾಯನ ಪದಾರ್ಥ, ವ್ಯವಸಾಯ ಯಂತ್ರ, ರೈಲು ರಸ್ತೆ ಸಲಕರಣೆ, ಕೀಟನಾಶಕ ಮುಂತಾದ ಕೈಗಾರಿಕೆಗಳು ಇಲ್ಲಿವೆ. ಧಾನ್ಯ, ಜಾನುವಾರು ಮತ್ತು ರಾಕೀಪರ್ವತದ ಅದಿರುಗಳ ಮಾರಾಟಕ್ಕೆ ಈ ನಗರ ಪ್ರಸಿದ್ಧ.

ಓಮಹಾ ಮುನಿಸಿಪಲ್ ವಿಶ್ವವಿದ್ಯಾನಿಲಯ, ಕ್ರೇಯ್ಟನ್ ವಿಶ್ವವಿದ್ಯಾನಿಲಯ, ನಿಬ್ರ್ಯಾಸ್ಕ ಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜ್ ವಿಶ್ವವಿದ್ಯಾನಿಲಯ–ಈ ಮೂರು ಇಲ್ಲಿಯ ವಿಶ್ವವಿದ್ಯಾನಿಲಯಗಳು. (ಆರ್.ಡಿ.ಆರ್.)

**ಓಮಿಚಂದ್:** 18ನೆಯ ಶತಮಾನದ ಮಧ್ಯಕಾಲದಲ್ಲಿ ಕೋಲ್ಕತ್ತದಲ್ಲಿ ವಾಸವಾಗಿದ್ದ ದ್ರೋಹಚಿಂತಕ ವ್ಯಾಪಾರಿ, ಲೇವಾದೇವಿಗಾರ. ಅಮೀರ್‌ಚಂದ್ ಎಂದೂ ಈತನ ಹೆಸರು. ಈಸ್ಟ್ ಇಂಡಿಯ ಕಂಪನಿಯವರ ಜೊತೆ ಸೇರಿ ಕಳ್ಳ ಹಣವನ್ನೂ ಆಸ್ತಿಯನ್ನೂ ಸಂಪಾದಿಸಿ, ಕೊನೆಗೆ ತಾನೇ ಮೋಸಕ್ಕೆ ಬಲಿಯಾದ. ಸಿರಾಜ್–ಉದ್–ದೌಲನನ್ನು ಬಂಗಾಳದ ನವಾಬಗಿರಿಯಿಂದ ಪದಚ್ಯುತಿಗೊಳಿಸಿ ಮೀರ್ ಜಾಫರ್‌ನನ್ನು ಆ ಸ್ಥಾನದಲ್ಲಿ ಕುಳ್ಳಿರಿಸುವ ಸಲುವಾಗಿ ಇಂಗ್ಲಿಷರೊಂದಿಗೆ ಸಂಧಾನ ನಡೆಸಿದ. ಇಂಗ್ಲಿಷರು ಇದಕ್ಕೊಪ್ಪಿ, ಈ ಸಂಚಿನಲ್ಲಿ ಪಾಲುದಾರರಾದರು. ಅವರನ್ನು ಸಿಕ್ಕಿಸಿಕೊಂಡ ಮೇಲೆ ಓಮಿಚಂದ್ ಹೊಸ ಪಟ್ಟು ತೆಗೆದ. ಮುರ್ಷಿದಾಬಾದಿನಲ್ಲಿ ನವಾಬನ ಭಂಡಾರದಲ್ಲಿ ಅಗಾಧ ಧನರಾಶಿಯೇ ಇಂಗ್ಲಿಷರ ವಶವಾಗುವುದೆಂದೂ ಅದರಲ್ಲಿ ಶೇಕಡ ಇಂತಿಷ್ಟೆಂದು ತನಗೆ ದಳ್ಳಾಳಿ ಕೊಡಬೇಕೆಂದೂ ಇದಕ್ಕೊಪ್ಪದಿದ್ದರೆ ಇಡೀ ಸಂಚನ್ನೇ ಸಿರಾಜ್–ಉದ್–ದೌಲನಿಗೆ ತಿಳಿಸುವುದಾಗಿಯೂ ಬೆದರಿಸಿದ. ರಾಬರ್ಟ್ ಕ್ಲೈವ್ ಈ ಠಕ್ಕಿಗೆ ಪ್ರತಿಠಕ್ಕು ಹೂಡಿದ. ಮೀರ್ ಜಾಫರ್‌ನೊಂದಿಗೆ ಇಂಗ್ಲಿಷರು ಮಾಡಿಕೊಂಡರೆನ್ನಲಾದ ಒಪ್ಪಂದದ ಎರಡು ಭಿನ್ನ ಪ್ರತಿಗಳನ್ನು ತಯಾರಿಸಲಾಯಿತು. ಇದರಲ್ಲಿ ಒಂದು ನಿಜ; ಇನ್ನೊಂದು ಖೋಟಾ. ಓಮಿಚಂದ್ ಕೇಳಿದ ರುಸುಮನ್ನು ಅವನಿಗೆ ಕೊಡಲು ಅಧಿಕಾರ ನೀಡಿರುವಂತೆ ಕಾಣಿಸಿದ್ದ ಖೋಟಾ ಒಪ್ಪಂದವನ್ನು ಓಮಿಚಂದನಿಗೆ ತೋರಿಸಲಾಯಿತು. ನಿಜ ಒಪ್ಪಂದದಲ್ಲಿ ಆ ಅಂಶ ಇರಲಿಲ್ಲ. ಖೋಟಾ ಒಪ್ಪಂದದ ಪ್ರತಿಗೆ ಅಡ್ಮಿರಲ್ ವಾಟ್ಸನ್ ಸಹಿ ಹಾಕಲಿಲ್ಲ. ರಾಬರ್ಟ್ ಕ್ಲೈವ್‌ನೂ ವಾಟ್ಸನನ್ನುಳಿದು ಕಂಪನಿಯ ಕೋಲ್ಕತ್ತ ಮಂಡಲಿಯ ಇತರ ಸದಸ್ಯರೂ ಸಹಿ ಹಾಕಿದರು. ವಾಟ್ಸನನ ಕಳ್ಳರುಜುವನ್ನು ಕ್ಲೈವ್ ಮಾಡಿದ. ಪ್ಲಾಸಿ ಕದನ ಮುಗಿಯಿತು. ಇಂಗ್ಲಿಷರು ಮಾಡಿದ ಮೋಸ ಓಮಿಚಂದನಿಗೆ ಗೊತ್ತಾದದ್ದು ಆಗಲೇ. ಇದರಿಂದ ಮತಿಗೆಟ್ಟು ಓಮಿಚಂದ್ ಸತ್ತನೆಂದು (1767) ಪ್ರತೀತಿ. (ಸಿ.ಎಸ್.)

**ಓಮು:** ಅಂಬೆಲಿಫೆರಿ ಕುಟುಂಬಕ್ಕೆ ಸೇರಿದ ಟ್ರಾಕಿಸ್ಪರ್ಮಮ್ ಕಾಪ್ಟಿಕಮ್ ಎಂಬ ಏಕವಾರ್ಷಿಕ ಪ್ರಭೇದ. ಈಜಿಪ್ಟಿನ ಮೂಲವಾಸಿಯಾದ ಈ ಗಿಡವನ್ನು ಬೀಜಗಳಿಗಾಗಿ ಇರಾಕ್, ಇರಾನ್, ಆಫ್ಘಾನಿಸ್ಥಾನ ಹಾಗು ಭಾರತದಲ್ಲಿ ಬೆಳೆಸುತ್ತಿದ್ದಾರೆ. ವಾದಕ್ಕಿ, ಓಮಕ್ಕಿ ಅಥವಾ ಅಜ್ವಾನ ಪರ್ಯಾಯನಾಮಗಳು. ಇದರ ಬೀಜಗಳನ್ನು ಸಂಬಾರ ಪದಾರ್ಥವಾಗಿಯೂ ಔಷಧಿಯಾಗಿಯೂ ಬಳಸುತ್ತಾರೆ. ಭಾರತದಲ್ಲಿ ಸು. 1 ಲಕ್ಷ ಎಕರೆಗಳಲ್ಲಿ ಇದರ ಸಾಗುವಳಿಯಾಗುತ್ತಿದೆ. ಓಮಿನ ಅಧಿಕ ಉತ್ಪನ್ನ ಬಂಗಾಳ ಹಾಗೂ ರಾಜಾಸ್ಥಾನಗಳಲ್ಲಿ, ಸಾಮಾನ್ಯವಾಗಿ ಬಯಲು ಹಾಗೂ ತಗ್ಗು ಪ್ರದೇಶದ ಬೆಳೆಯಾದರೂ ಎತ್ತರದ ಪ್ರದೇಶಗಳಲ್ಲೂ ಇದನ್ನು ಬೆಳೆಸಬಹುದು.

ಇದು 2–3 ಅಡಿಗಳ ಎತ್ತರಕ್ಕೆ ಬೆಳೆಯುವುದು. ಕಾಂಡ ನುಣುಪು ಮತ್ತು ಬೂದು ಮಿಶ್ರಿತ ಹಸಿರು ಬಣ್ಣದ್ದು. ವಿರಳವಾಗಿ ಪರ್ಯಾಯವಾಗಿ ಜೋಡಣೆಗೊಂಡಿರುವ ಎಲೆಗಳು ಪುನಸ್ಸಂಯುಕ್ತವಾಗಿ ವಿಭಜನೆ ಹೊಂದಿವೆ. ಹೂಗಳು ಅಚ್ಚ ಬಿಳಿಯವೂ ಬಹಳ ಚಿಕ್ಕವೂ ಆಗಿದ್ದು ಸಂಯುಕ್ತ ಅಂಬೆಲ್ ಹೂ ಗೊಂಚಲುಗಳಲ್ಲಿ ಇರುತ್ತವೆ. ಪುಷ್ಪದಳಗಳು ಮತ್ತು ಕೇಸರಗಳು ಐದೈದು ಇವೆ. ಅಂಡಾಶಯ ನೀಚಸ್ಥಾನದಲ್ಲಿದ್ದು ಎರಡು ಕಾರ್ಪೆಲ್‌ಗಳಿಂದ ಕೂಡಿದೆ. ಕಾಯಿಗಳು ಬಹಳ ಸಣ್ಣ ಮತ್ತು ಒಂದೊಂದರಲ್ಲಿಯೂ ಎರಡು ಪುಟ್ಟ ಬೀಜಗಳಿವೆ.

ಸಾಮಾನ್ಯವಾಗಿ ಚಳಿಗಾಲದಲ್ಲಿ (ಅಕ್ಟೋಬರ್ ಅಥವಾ ನವೆಂಬರ್ ತಿಂಗಳುಗಳಲ್ಲಿ) ಬಿತ್ತನೆ ಆರಂಭಿಸುತ್ತಾರೆ. ಬೀಜ ಬಿತ್ತುವ ಮೊದಲು, ಭೂಮಿಯನ್ನು ಚೆನ್ನಾಗಿ ಉತ್ತು, ಹದ ಮಾಡಿ ದನದ ಗೊಬ್ಬರ ಹಾಕುತ್ತಾರೆ. ಬಿತ್ತಿದ 4–5 ದಿನಗಳಲ್ಲಿ ಬೀಜಗಳು ಮೊಳಕೆಯೊಡೆಯುತ್ತವೆ. ಆಗಿಂದಾಗ್ಗೆ ಲಘುವಾಗಿ ನೀರು ಹಾಯಿಸಿ, ಕಳೆ ಕಿತ್ತು, ಪೈರು ಚೆನ್ನಾಗಿ ಬೆಳೆಯುವಂತೆ ನೋಡಿಕೊಳ್ಳುತ್ತಾರೆ. ಎರಡು ತಿಂಗಳಲ್ಲಿ ಗಿಡಗಳು ಹೂಬಿಡಲು ಪ್ರಾರಂಭಿಸಿ, ಫೆಬ್ರವರಿ, ಮಾರ್ಚ್ ಹೊತ್ತಿಗೆ ಫಸಲು ಬರುತ್ತದೆ. ಗಿಡಗಳನ್ನು ಬೇರು ಸಹಿತ ಕಿತ್ತು, ಚಾಪೆಗಳ ಮೇಲೆ ಹರಡಿ, ಬಿಸಿಲಿನಲ್ಲಿ ಒಣಗಿಸುತ್ತಾರೆ. ಆಮೇಲೆ ಕೈಯಿಂದ ಉಜ್ಜಿಯೊ ಕಾಲಿನಿಂದ ತುಳಿದೊ ಬೀಜಗಳನ್ನು ಬೇರ್ಪಡಿಸುತ್ತಾರೆ. ಸಾಮಾನ್ಯವಾಗಿ ಎಕರೆಗೆ 90–140 ಕಿಗ್ರಾಂ ಇಳುವರಿಯಾಗುತ್ತದೆ.

ಬೀಜಗಳಲ್ಲಿ ಒಂದು ಬಗೆಯ ತೈಲವಿರುತ್ತದೆ. ಬೀಜಗಳ ವಿಶಿಷ್ಟ ವಾಸನೆ ಮತ್ತು ರುಚಿಗೆ ಇದೇ ಕಾರಣ. ಈ ತೈಲದಲ್ಲಿ ಸುಮಾರು ಶೇ. 50 ಭಾಗ ಥೈಮಾಲ್ ಎಂಬ ವಸ್ತುವಿರುತ್ತದೆ. ಬೀಜವನ್ನು ಪಚನಕಾರಿಯಾಗಿಯೂ ಉತ್ತೇಜಕವಾಗಿಯೂ ಬಳಸುತ್ತಾರೆ. ಅಜೀರ್ಣ, ಭೇದಿ, ಹೊಟ್ಟೆಶೂಲೆ ಮುಂತಾದ ಪಚನಾಂಗ ಸಂಬಂಧಿ ಕಾಯಿಲೆಗಳಿಗೆ ಇದು ತುಂಬ ಒಳ್ಳೆಯ ಔಷಧಿ. ಬೀಜಗಳನ್ನು ನೀರಿನೊಂದಿಗೆ ಕುದಿಸಿ, ಬಟ್ಟಿಯಿಳಿಸಿ ತಯಾರಿಸಿದ ಓಮು ನೀರನ್ನು ಕಾಲರಾ ಬೇನೆಯ ಪ್ರಥಮ ಹಂತಗಳಲ್ಲಿ ವಾಂತಿ, ಭೇದಿ ನಿಲ್ಲಿಸಲು ಉಪಯೋಗಿಸುತ್ತಾರೆ. ಶೀತ, ನೆಗಡಿಯಾಗಿದ್ದಾಗ ಬೀಜಗಳನ್ನು ಉಜ್ಜಿ ಅದರ ವಾಸನೆಯನ್ನು ಸೇವಿಸುವುದೂ ಉಂಟು. ಆಹಾರ ಪಚನಕ್ರಿಯೆಯಲ್ಲಿ ಸಹಕಾರಿಯಾಗಲು ಉಪಯೋಗಿಸುವ ಹಿಂಗ್ವಾಷ್ಟಕ ಚೂರ್ಣದಲ್ಲಿ ಓಮು ಪ್ರಮುಖವಾಗಿರುತ್ತದೆ. ಅಲ್ಲದೆ, ಓಮನ್ನು ತಾಂಬೂಲದೊಂದಿಗೂ ಉಪಯೋಗಿಸುತ್ತಾರೆ. ಓಮಿನ ಪುಡಿಯನ್ನು ಕಾರಸೇವು, ಓಮುಪುಡಿ ಮೊದಲಾದ ಖಾದ್ಯ ವಸ್ತುಗಳಿಗೆ ರುಚಿಕಟ್ಟಲು ಬಳಸುತ್ತಾರೆ. *

**ಓ – ಯೋಮೈ ತತ್ತ್ವ:** ಅಂತರಾತ್ಮ ಭಾವನೆಗೆ, ನೇರ ಅಪರೋಕ್ಷಾನುಭವಕ್ಕೆ ಪ್ರಾಧಾನ್ಯವಿರುವ ಒಂದು ತತ್ತ್ವಪಂಥ ಸು. 17ನೆಯ ಶತಮಾನದಿಂದ ಜಪಾನಿನಲ್ಲಿ ಬಳಕೆಯಲ್ಲಿದೆ. ಅಕಲುಷಿತವಾದ ಆದಿ ಅಂತರಾತ್ಮನೇ ವಿಶ್ವದ ಆತ್ಮ. ಅದು ಮಾನವರಲ್ಲಿ ಪ್ರತಿಫಲಿಸಿದಾಗ ಕಲುಷಿತವಾಗುತ್ತದೆ. ಕಲುಷಿತವಾದ ಅಂತರಾತ್ಮವನ್ನು ಕಲ್ಮಶದಿಂದ ಪ್ರತ್ಯೇಕಿಸಿ ಅದರ ಮೂಲರೂಪವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಈ ಸಾಕ್ಷಾತ್ಕಾರದ ಅನುಭವವೇ ನೇರವಾದ ಅಕಲುಷಿತವಾದ ಅಪರೋಕ್ಷಾನುಭವ. ಇದು ಈ ತತ್ತ್ವಪಂಥದ ತಿರುಳು.

ಈ ಪಂಥದ ಪ್ರವರ್ತಕ ಚೀನೀ ತಾತ್ತ್ವಿಕ ವಾಂಗ್ ಯಂಗ್ ಮಿಂಗ್ 1473–1529 ಬೌದ್ಧಿಕ ತತ್ತ್ವವಾದಿಗಳಲ್ಲದ ಜಪಾನೀಯರಿಗೆ ಅಪರೋಕ್ಷಾನುಭವವನ್ನು ಪ್ರತಿಪಾದಿಸಿದ ಈತ ತುಂಬ ಮೆಚ್ಚಿಗೆಯವನಾದನಲ್ಲದೆ ಟೊಕುಗಾವ ಅವಧಿಯಲ್ಲಿ 1615–1867 ಈ ಪಂಥವನ್ನವರು ತಮ್ಮಲ್ಲಿ ಪ್ರಚುರಗೊಳಿಸಿದರು. (ಜಿ.ಎಚ್.)

**ಓರ್ ಮೀನು:** ಎಲ್ಲ ಮಹಾಸಾಗರಗಳಲ್ಲಿಯೂ ಇರುವ ರೀಗೆಲಿಸಿಡೆ ಕುಟುಂಬದ ಮೀನು. ದೇಹ ಪಟ್ಟಿಯಂತೆ ಬಲು ಉದ್ದವಾಗಿದೆ. ಬೆನ್ನಿನ ರೆಕ್ಕೆ ದೇಹದ ಉದ್ದಕ್ಕೂ ವಿಸ್ತರಿಸಿದ್ದು ಇದರ ಮೊದಲ ಕೆಲವು ಎಳೆಗಳು ತಲೆಯ ಮೇಲೆ ನೀಳವಾದ ಶಿಖೆಯಂತೆ ಇವೆ. ನಡುವಿನ ರೆಕ್ಕೆಗಳು ದೀರ್ಘವಾದ ಎಳೆಗಳಾಗಿ ಮಾರ್ಪಟ್ಟು ಕೊನೆಯಲ್ಲಿ ಹುಟ್ಟಿನಂತೆ (ಓರ್) ಚಪ್ಪಟೆಯಾಗಿವೆ. ಇಂಥ ರಚನೆಯಿಂದಲೇ ಇವುಗಳಿಗೆ ಓರ್ (ಹುಟ್ಟು) ಮೀನುಗಳೆಂದು ಹೆಸರು ಬಂದಿದೆ. ಇದೊಂದು ಅಪರೂಪದ ಮೀನು. ಶೀತ ವಲಯದ ಸಮುದ್ರದಲ್ಲಿರುತ್ತವೆ. ಪೂರ್ವ ಹಿಂದೂ ಮಹಾಸಾಗರ, ಟಾಸ್ಮಾನಿಯ, ನ್ಯೂಜಿಲಾಂಡ್, ಆಸ್ಟ್ರೇಲಿಯಾಗಳಲ್ಲಿ ಕಂಡುಬರುತ್ತವೆ.

ಕೆಲವು ಓರ್ ಮೀನುಗಳು 10–15 ಮೀ ಉದ್ದ ಬೆಳೆಯುತ್ತವೆ. ಸಾಗರಗಳಲ್ಲಿ ಅಗಾಧವಾದ ಹಾವುಗಳಿರುವುವೆಂಬ ದಂತಕಥೆಗಳು ಈ ಮೀನುಗಳಿಂದ ಹುಟ್ಟಿರಬಹುದೆಂದು ಕಾಣುತ್ತದೆ. ಇದನ್ನು 'ಹೆರಿಂಗ್ ಮೀನುಗಳ ರಾಜ' ಎಂದೂ ಕರೆಯುತ್ತಾರೆ. ಈ ಮೀನುಗಳ ಕುರಿತು ಅನೇಕ ದಂತಕಥೆಗಳೂ ನಂಬಿಕೆಗಳೂ ಇವೆ. (ಪಿ.ಜಿ.ಕೆ.)

**ಓರಿನೋಕೋ:** ವೆನಿಜ್ವೀಲದ ದಕ್ಷಿಣ ಭಾಗದಲ್ಲಿರುವ ಪರಮ ಪರ್ವತಗಳಲ್ಲಿ ಹುಟ್ಟಿ ಟ್ರಿನಿಡಾಡ್ ದ್ವೀಪದ ದಕ್ಷಿಣದಲ್ಲಿ ಅಟ್ಲಾಂಟಿಕ್ ಸಾಗರ ಸೇರುವ ನದಿ; ದಕ್ಷಿಣ ಅಮೆರಿಕದ ಅತ್ಯಂತ ದೊಡ್ಡ ನದಿಗಳ ಪೈಕಿ ಮೂರನೆಯದು. ಇದರ ಉದ್ದ 2,050 ಕಿಮೀ. ಓರಿನೋಕೋ ನದಿಯ ಮೂಲವನ್ನು ಪತ್ತೆಹಚ್ಚಲು ಅನೇಕ ವರ್ಷಗಳಿಂದ ಪ್ರಯತ್ನ ನಡೆಯುತ್ತಿದ್ದು, 1951ರಲ್ಲಿ ಮೇಜರ್ ರಿಸ್‌ಕ್ವಿಸ್ ಇರಿಬಾರೆನ್ ಸಫಲನಾದ. ಇದು ಉತ್ತರ ಅಕ್ಷಾಂಶ $2^0$ 19' ಮತ್ತು ಪಶ್ಚಿಮ ರೇಖಾಂಶ $63^0$ 22' ಕೂಡುವೆಡೆಯಲ್ಲಿ–ಬ್ರಜಿಲ್ ಗಡಿಯ ಹತ್ತಿರ ಹತ್ತಿರ–ಹುಟ್ಟಿ ಮೊದಲು ಪಶ್ಚಿಮಕ್ಕೆ ಹರಿದು, ಅನಂತರ ಉತ್ತರಕ್ಕೆ ಸಾಗಿ ಕೊಲಂಬಿಯ ಮತ್ತು ವೆನಿಜ್ವೀಲ ರಾಷ್ಟ್ರಗಳ ಗಡಿಯಾಗಿ ಪರಿಣಮಿಸುತ್ತದೆ. ಓರಿನೋಕೋ ನದಿಯ ಮುಖಜಭೂಮಿಯ ವಿಸ್ತೀರ್ಣ ಸುಮಾರು 5000 ಚ.ಮೈ. ಇಲ್ಲಿ ಈ ನದಿ ಹಲವು ಕವಲುಗಳಾಗಿ ಒಡೆಯುತ್ತದೆ.

ಓರಿನೋಕೋ ನದಿಗೆ ಅನೇಕ ಉಪನದಿಗಳಿವೆ. ಇವುಗಳ ಪೈಕಿ ಅಟಪೊ ಮತ್ತು ಗ್ವವಿಯೇರ್ ಮುಖ್ಯ. ಇವುಗಳಿಂದ ಕೂಡಿ ಅರ್ಧ ದೂರ ಕ್ರಮಿಸುವ ವೇಳೆಗೆ ನದಿಯ ಪಾತ್ರ ಸುಮಾರು ಒಂದು ಮೈಲಿ ಅಗಲವಾಗುತ್ತದೆ. ಇದು ಅಲ್ಲಲ್ಲಿ ಕವಲೊಡೆದು ಕೂಡುವುದರಿಂದ ಸಂಭವಿಸಿರುವ ದ್ವೀಪಗಳು ಅನೇಕ. ಋತುಮಾನಕ್ಕನುಸಾರವಾಗಿ ಪ್ರವಾಹ ಹೆಚ್ಚುಕಡಿಮೆಯಾಗುತ್ತದೆ; ಜೂನ್ ತಿಂಗಳಿಂದ ಆಗಸ್ಟ್‌ವರೆಗೆ ಅಧಿಕ, ನವೆಂಬರಿನಿಂದ ಏಪ್ರಿಲ್‌ವರೆಗೆ ಕಡಿಮೆ. ಜಲಾನಯನ ಪ್ರದೇಶದ ವಿಸ್ತೀರ್ಣ 3,60,000 ಚ.ಮೈ.ಗಳಿಗೂ ಹೆಚ್ಚು ಇದು ವೆನಿಜ್ವೀಲದ ವಿಸ್ತೀರ್ಣದ 4/5 ಭಾಗ. ಈ ನದಿ 3,523 ಅಡಿಗಳ ಎತ್ತರ ಪ್ರದೇಶದಿಂದ ಇಳಿದು ಬರುವಾಗ ಸಂಭವಿಸಿರುವ ಜಲಪಾತಗಳು ಹಲವಾರು. ಇದರಿಂದಾಗಿ ವೆನಿಜ್ವೀಲ ರಾಷ್ಟ್ರದಲ್ಲಿ ವಿದ್ಯುದುತ್ಪಾದನೆಯ ಅವಕಾಶ ಧಾರಾಳವಾಗಿದೆ. ಅಟುರಾಸ್ ನದೀಮುಖದಿಂದ ಮೇಲೆ 700 ಮೈಲಿಗಳವರೆಗೆ ನೌಕಾಯಾನ ಸಾಧ್ಯ. ಓರಿನೋಕೋ ನದಿಯ ದಕ್ಷಿಣಕ್ಕೆ ಉತ್ತಮವಾದ ಕಬ್ಬಿಣದ ಅದುರಿನ ನಿಕ್ಷೇಪವುಂಟು. ಇದನ್ನು ನದಿಯ ಮೇಲೆ ಸಾಗಿಸಲಾಗುತ್ತದೆ. (ಆರ್.ಡಿ.ಆರ್.)

**ಓರಿಯಾನಿ, ಆಲ್‌ಫ್ರೆಡೊ:** 1852–1909. ಇಟಲಿಯ ಕಾದಂಬರಿಕಾರ, ದಾರ್ಶನಿಕ, ನಾಟಕಕಾರ, ಕವಿ. 20ನೆಯ ಶತಮಾನದಿಂದ ಆ ದೇಶದಲ್ಲಿ ಬೆಳೆದುಬಂದ ಫ್ಯಾಸಿಸ್ಟ್ ತತ್ತ್ವದ ಮೇಲೆ ಪ್ರಭಾವ ಬೀರಿದ ವ್ಯಕ್ತಿ. ಪ್ರಾರಂಭದಲ್ಲಿ ಬರೆದ ಕಾದಂಬರಿಗಳಲ್ಲಿ ಜೀವನವನ್ನು ಕುರಿತ ವಿಕೃತ, ವಿಷಮ ದೃಷ್ಟಿಯಿದೆ. ಆದರೆ ಅನಂತರ ಬಂದ ಲ ಡಿಸ್ಫಾಟ (ಸೋಲು) ಎಂಬ ಕಾದಂಬರಿಯಲ್ಲಿ ಬಾಳಿನ ನೋವು, ನಿಸ್ಸಹಾಯಕತೆ, ಸಂಕಟಗಳ ಚಿತ್ರವಿದೆ, ಗಹನವಾದ ಚಿಂತನೆಯಿದೆ. ಇದು ಚಿರಕಾಲ ನಿಲ್ಲಬಲ್ಲ ಕೃತಿ. ಜರ್ಮನಿಯ ಹೆಗಲನ ಪ್ರಭಾವಕ್ಕೊಳಗಾಗಿ ಈತ ಬರೆದ ಲ ಲಾಟ ಪೊಲಿಟಿಕ ಇನ್ ಇಟಾಲಿಯ (ಇಟಲಿಯ ರಾಜಕೀಯ ಹೋರಾಟ) ಎಂಬ ಗ್ರಂಥವನ್ನು ಜನ ಕೆಲಕಾಲ ಅತಿಯಾಗಿ ಶ್ಲಾಘಿಸಿ, ಈತನನ್ನು ಫ್ಯಾಸಿಸ್ಟ್ ತತ್ತ್ವದ ಅಗ್ರದೂತನೆಂದು ಕೊಂಡಾಡಿದರು. (ಎಚ್.ಕೆ.ಆರ್.)

**ಓರೊಬ್ಯಾಂಕೇಸಿ:** ದ್ವಿದಳ ಸಸ್ಯಗಳ ವರ್ಗದ ಟ್ಯೂಬಿಫ್ಲೋರಿ ಗಣಕ್ಕೆ ಸೇರಿದ ಒಂದು ಕುಟುಂಬ. ಸು. 14 ಜಾತಿ, 180 ಪ್ರಭೇದಗಳು ಇವೆ. ಸಾಮಾನ್ಯವಾಗಿ ಉತ್ತರ ಸಮಶೀತೋಷ್ಣವಲಯಕ್ಕೆ ಬಹುಪಾಲು ಸೀಮಿತಗೊಂಡಿರುವ ಇವುಗಳ ಕೆಲವು ಜಾತಿಗಳು ಯುರೋಪು ಹಾಗೂ ಏಷ್ಯಾಗಳ ಕೆಲವು ಪ್ರದೇಶಗಳಲ್ಲೂ ಬೆಳೆಯುತ್ತವೆ. ಈ ಕುಟುಂಬದಲ್ಲಿ ಬರುವ ಸಸ್ಯಗಳಲ್ಲಿ ಸಾಮಾನ್ಯವಾಗಿ ಪತ್ರಹರಿತ್ತು ಇರುವುದಿಲ್ಲ. ಇದ್ದರೂ ಅತ್ಯಲ್ಪ ಪ್ರಮಾಣದಲ್ಲಿ ಇರುತ್ತದೆ. ಆದ್ದರಿಂದ ಈ ಸಸ್ಯಗಳು ಬೇರೆ ಸಸ್ಯಗಳ ಬೇರುಗಳ ಮೇಲೆ ಪರಾವಲಂಬಿಗಳಾಗಿ ಮೂಲಿಕೆಗಳ ರೂಪದಲ್ಲಿ ವಾರ್ಷಿಕ ಮತ್ತು ಬಹುವಾರ್ಷಿಕಗಳಾಗಿ ಬೆಳೆಯುತ್ತವೆ. ಎಲೆಗಳು ಹುರುಪೆ ಎಲೆಗಳ ರೂಪದಲ್ಲಿರುತ್ತವೆ. ಹೂಗಳು ಗೊಂಚಲುಗಳಲ್ಲಿರಬಹುದು ಅಥವಾ ಏಕಪುಷ್ಪಗಳಾಗಿರಬಹುದು. ಏಕಪುಷ್ಪವಾದರೆ ಸಸ್ಯದ ತುದಿಯಲ್ಲಿ ಬಿಡುತ್ತದೆ (ಫೆಲಿಪಿಯ), ಹೂಗೊಂಚಲಾದರೆ ಸಸ್ಯದ ತುದಿಯಲ್ಲಿ ಅಥವಾ ಎಲೆಯ ಕಂಕುಳಲ್ಲಿದ್ದು ರೇಸೀಮ್ ಅಥವಾ ಕದಿರುಗೊಂಚಲು (ಸ್ಪೈಕ್) ಮಾದರಿಯದ್ದಾಗಿರುತ್ತದೆ. ಹೂಗಳು ದ್ವಿಲಿಂಗ ಮತ್ತು ಉಭಯಪಾರ್ಶ್ವ ಸಮಾಂಗತೆ ಉಳ್ಳವು.

ಪ್ರತಿ ಹೂ ಒಂದು ಬ್ರಾಕ್ಟ್ ಮತ್ತು ಸಾಮಾನ್ಯವಾಗಿ ಎರಡು ಬ್ರ್ಯಾಕ್ಟಿಯೋಲುಗಳನ್ನು ಹೊಂದಿರುತ್ತದೆ. ಹೂವಿನ ಪುಷ್ಪಪತ್ರ ಭಾಗ ವಿವಿಧ ರೀತಿಯಲ್ಲಿದ್ದು ಈ ಗುಣ ಕುಟುಂಬದಲ್ಲಿ ಬರುವ ಸಸ್ಯಗಳ ವರ್ಗೀಕರಣದಲ್ಲಿ ಬಲು ಸಹಾಯವನ್ನು ಮಾಡುತ್ತದೆ. ಸಾಮಾನ್ಯವಾಗಿ ಒಂದು ಹೂವಿನಲ್ಲಿ ಐದು ಪುಷ್ಪ ಪತ್ರಗಳಿರಬೇಕು. ಕೆಲವು ಪ್ರಭೇದಗಳು ಅಕ್ಕಪಕ್ಕದಲ್ಲಿ ಅಥವಾ ಮುಂಭಾಗದಲ್ಲಿ ಬರುವ ಪುಷ್ಪಪತ್ರಗಳು ಇರುವುದಿಲ್ಲ. ಪುಷ್ಪದಳಗಳು ಐದು; ಎರಡು ತುಟಿಗಳಾಗುವಂತೆ ಕೂಡಿಕೊಂಡಿರುತ್ತವೆ. ಕೇಸರಗಳು ನಾಲ್ಕು. ಕೆಲವೊಮ್ಮೆ ಐದನೆಯದೂ ಇರುವುದುಂಟು. ಆದರೆ ಅದು ಬರಡಾಗುತ್ತದೆ (ಸ್ಟ್ಯಾಮಿನೋಡ್) ಪರಾಗಕೋಶಗಳು ಉದ್ದಕ್ಕೂ ಬಿರುಕು ಬಿಟ್ಟುಕೊಳ್ಳುತ್ತವೆ. ಕ್ರಿಸ್ಟಿಸೋನಿಯಾ ಜಾತಿಯಲ್ಲಿ ಒಂದು ಕೇಸರದಲ್ಲಿ ಅರ್ಧ ಭಾಗ ಮಾತ್ರವಿರುತ್ತದೆ. ಅಂಡಾಶಯ ಉಚ್ಚಸ್ಥಾನದ್ದಾಗಿದ್ದು ಸಾಮಾನ್ಯವಾಗಿ ಎರಡು ಕಾರ್ಪೆಲುಗಳಿಂದ ಕೂಡಿರುತ್ತದೆ. ಪ್ರತಿ ಕಾರ್ಪೆಲಿನಲ್ಲೂ ಅಧಿಕ ಸಂಖ್ಯೆಯಲ್ಲಿರುವ ಅಂಡಕಗಳು ಅಂಡಾಶಯದ ಒಳಭಿತ್ತಿಗೆ ಅಂಟಿಕೊಂಡಿರುತ್ತವೆ. ಫಲ ಸಂಪುಟ (ಕ್ಯಾಪ್ಸೂಲ್) ಮಾದರಿಯದು. ಬೀಜಗಳು ತುಂಬ ಚಿಕ್ಕವು. ಅವುಗಳ ಪ್ರಸಾರ ಗಾಳಿಯ (ಕ್ಯಾಪ್ಸೂಲ್) ಮಾದರಿಯದು. ಬೀಜಗಳು ತುಂಬ ಚಿಕ್ಕವು. ಅವುಗಳ ಪ್ರಸಾರ ಗಾಳಿಯ ಮುಖಾಂತರ. ಈ ಕುಟುಂಬದ ಪ್ರಭೇದಗಳು ಕೆಲವೇ ನಿರ್ದಿಷ್ಟ ಆಶ್ರಯ ಸಸ್ಯಗಳ ಮೇಲೆ ಬೆಳೆಯುತ್ತವೆ. ಉದಾಹರಣೆಗಾಗಿ ಓ ಹೆಡರಿಯೇಯು ಐವಿ ಗಿಡದ ಮೇಲೂ ಓ.ಮೈನರ್ ಎಂಬುದು ಕ್ಲೋವರ್ ಗಿಡದ ಮೇಲೂ ಬೆಳೆಯುತ್ತವೆ.

ಓ. ಈಜಿಪ್ಟಿಯಾಕ ಮತ್ತು ಓ.ಸೆರ್ನುವ ಸಾಧಾರಣವಾಗಿ ಭಾರತದಲ್ಲಿ ಬೆಳೆಯುತ್ತವೆ. ದನಗಳ ಗಂಟಲಿನ ಹುಣ್ಣುಗಳನ್ನು ಹಾಗೂ ಡಯೇರಿಯ ರೋಗವನ್ನು ನಿಲ್ಲಿಸಲು ಓ. ಈಜಿಪ್ಟಿಯಾಕ ಗಿಡವನ್ನು ಔಷಧಿಯಾಗಿ ಉಪಯೋಗಿಸುತ್ತಾರೆ. ಕೆಲವು ಜಾತಿ ಹಾಗೂ ಪ್ರಭೇದಗಳು ಉಪಯುಕ್ತ ಸಸ್ಯಗಳ ಮೇಲೆ ಬೆಳೆದು ತುಂಬ ದುಷ್ಪರಿಣಾಮವನ್ನುಂಟು ಮಾಡುತ್ತವೆ. ಸಾಮಾನ್ಯವಾಗಿ ಸಾಸಿವೆ ಜಾತಿಯ ಗಿಡಗಳು ಭಂಗಿ, ಬದನೆ, ಹೊಗೆಸೊಪ್ಪು, ಗಸಗಸೆ, ಮುಸುಕಿನ ಜೋಳ, ಕುಸುಬೆ ಗಿಡಗಳ ಮೇಲೆ ಪರಾವಲಂಬಿಗಳಾಗಿ ಬೆಳೆದು ಬೆಳೆಯನ್ನು ಹಾಳುಮಾಡುತ್ತವೆ. (ಬಿ.ಪಿ.)

**ಓಲಿಫಿನ್ನುಗಳು:** ಅಪರ್ಯಾಪ್ತ ಹೈಡ್ರೊಕಾರ್ಬನ್ನುಗಳು, ಅಂದರೆ ಇಂಗಾಲ ಪರಮಾಣುವಿನ ಚತುಸ್ಸಂಯೋಗಶಕ್ತಿ ಸ್ವಾಭಾವಿಕವಾಗಿ ತೃಪ್ತಿಯಾಗದಿರುವ ಸಂಯುಕ್ತಗಳು. ಇವುಗಳಲ್ಲಿ ಒಂದು ದ್ವಿಬಂಧವಿದೆ. ಇವುಗಳ ಕ್ರಿಯಾಶೀಲ ಗ್ರೂಪು (—C=C—) ಎಂದಾಯಿತು. ದ್ವಿಬಂಧದ ಇರವು ದೌರ್ಬಲ್ಯದ ಕುರುಹು, ಸಹಜವಾಗಿಯೇ ಇಂಥ ವಸ್ತುಗಳು ಇತರ ವಸ್ತುಗಳನ್ನು ಕೂಡಿಸಿಕೊಂಡು ಪರ್ಯಾಪ್ತಗೊಳಿಸಲು ಹವಣಿಸುತ್ತವೆ. ಪರಿಣಾಮವಾಗಿ ಓಲಿಫಿನ್ನುಗಳು ಕ್ರಿಯಾಶೀಲ ಹೈಡ್ರೊಕಾರ್ಬನ್ನುಗಳು ಎನಿಸಿಕೊಂಡಿವೆ. ಓಲಿಯಂ(ತೈಲ) ಮತ್ತು ಫಿಯಾಂಟ್ (ಜನಕ) ಎಂಬ ಲ್ಯಾಟಿನ್ ಪದಗಳಿಂದ ಓಲಿಫಿನ್ ಹುಟ್ಟಿದೆ. ಕ್ಲೋರಿನ್ ಅಥವಾ ಬ್ರೋಮಿನಿನೊಡನೆ ಈ ವರ್ಗದ ಮೊದಲನೆಯ ಸಂಯುಕ್ತವಾದ ಎಥಿಲೀನ್ ವರ್ತಿಸಿದಾಗ ಎಣ್ಣೆಯಂಥ ವಸ್ತುಗಳು ಉಂಟಾಗುವುದರಿಂದ ಈ ಹೆಸರು ಬರಲು ಕಾರಣವಾಯಿತು.

1949ರಲ್ಲಿ ಆಮ್‌ಸ್ಟರ್‌ಡ್ಯಾಂ ನಗರದಲ್ಲಿ ಸಮಾವೇಶಗೊಂಡಿದ್ದ ಅಂತಾರಾಷ್ಟ್ರೀಯ ರಸಾಯನ ವಿಜ್ಞಾನಿಗಳ ಸಮ್ಮೇಳನದಲ್ಲಿ ಕೈಗೊಂಡ ತೀರ್ಮಾನದ ಪ್ರಕಾರ ಈ ಗುಂಪಿನ ಹೈಡ್ರೊಕಾರ್ಬನ್ನುಗಳನ್ನು (ಆಲ್ಕೇನುಗಳು) ಹೆಸರಿನಲ್ಲಿರುವ ಏನ್ ಪ್ರತ್ಯಯದ ಬದಲು ಈನ್ ಪ್ರತ್ಯಯ ಸೇರಿಸಿ ಈ ವರ್ಗದ ಹೈಡ್ರೊಕಾರ್ಬನ್ನುಗಳನ್ನು ಕರೆಯುವುದು ರೂಢಿ. ಉದಾಹರಣೆ—

| ಪ್ಯಾರಫಿನ್ (ಆಲ್ಕೇನ್) | ಓಲಿಫಿನ್ (ಆಲ್ಕೀನ್) |
|---|---|
| $C_2H_6$ ಈಥೇನ್ | $C_2H_4$ ಈಥೀನ್ |
| $C_3H_8$ ಪ್ರೋಪೇನ್ | $C_3H_6$ ಪ್ರೋಪೀನ್ |
| $C_4H_{10}$ ಬ್ಯೂಟೇನ್ ಇತ್ಯಾದಿ | $C_4H_8$ ಬ್ಯೂಟೀನ್ ಇತ್ಯಾದಿ |

ಪ್ಯಾರಾಫಿನ್ನುಗಳ ಸಾರ್ವತ್ರಿಕ ಅಣುಸೂತ್ರ $C_nH_{2n+2}$ ಆಗಿದ್ದರೆ ಓಲಿಫಿನ್ನುಗಳನ್ನು $C_2H_{2n}$ ಎಂಬ ಸೂತ್ರದಿಂದ ಸೂಚಿಸಬಹುದು. ನೇರಸರಣಿಯಲ್ಲಿರುವ ಇಂಗಾಲದ ಪರಮಾಣುಗಳ ಸಂಖ್ಯೆಗೆ ಅನುಗುಣವಾಗಿ ಆಲ್ಕೀನಿನ ಹೆಸರನ್ನು ನಿರ್ಧರಿಸಲಾಗುವುದು. ದ್ವಿಬಂಧಕ್ಕೆ ಒಳಗಾದ ಎರಡು ಇಂಗಾಲದ ಪರಮಾಣುಗಳ ಕ್ರಮಸಂಖ್ಯೆಗಳ ಪೈಕಿ ಕನಿಷ್ಠ ಸಂಖ್ಯೆಯಿಂದ ದ್ವಿಬಂಧದ ಸ್ಥಾನವನ್ನು ಸೂಚಿಸುವುದು ಪದ್ಧತಿ. ಕೆಳಗಿನ ಉದಾಹರಣೆಗಳಿಂದ ಇದು ಸ್ಪಷ್ಟವಾಗುತ್ತದೆ;

$$\overset{4}{CH_3}-\overset{3}{CH_3}-\overset{2}{CH}=\overset{1}{CH_2} \quad \text{ಬ್ಯೂಟೀನ್ –1}$$

$$CH_3-CH=CH-CH_3 \quad \text{ಬ್ಯೂಟೀನ್ –2}$$

$$\begin{array}{c} \quad\quad\quad\quad CH_3 \\ 1 \quad 2 \quad 3 \;|\, 4 \;\; 5 \\ CH_3-CH_2=C-C-CH_3 \\ \quad\quad\quad | \quad | \\ \quad\quad CH_3\; CH_3 \end{array}$$

3, 4, 4 ಟ್ರೈಮೀಥೈಲ್ ಪೆಂಟೀನ್ –2

ಕೆಲವು ಪರಿಚಿತ ಓಲಿಫಿನ್ನುಗಳ ರೂಢಿನಾಮಗಳನ್ನೂ ಅಣುಸೂತ್ರ ಮೊದಲಾದ ವಿವರಗಳನ್ನೂ ಕೆಳಗೆ ಪಟ್ಟಿಮಾಡಲಾಗಿದೆ.

| ಹೆಸರು | ಅಣು ಸೂತ್ರ | ರಚನಾ ಸೂತ್ರ | ಕುದಿಯುವ ಬಿಂದು $^0$ಸೆಂ. |
|---|---|---|---|
| ಎಥಿಲೀನ್ | $C_2H_4$ | $CH_2=CH_2$ | -103 |
| ಪ್ರೋಪೈಲೀನ್ | $C_3H_6$ | $CH_3\text{-}CH=CH_2$ | -48 |
| ನಾರ್ಮಲ್ ಬ್ಯುಟಿಲೀನ್ | $C_4H_8$ | $CH_3\text{-}CH\text{-}CH=CH_2$ | -5 |
| ಐಸೊ ಬ್ಯುಟಿಲೀನ್ | $C_4H_8$ | $CH_3\text{-}CH\text{-}CH=CH_3$ | -5 |
| ನಾರ್ಮಲ್ ಅಮೈಲೀನ್ | $C_5H_{10}$ | $CH_3\text{-}CH_2\text{-}CH_2\text{-}CH=CH_2$ | -40 |
| ನಾರ್ಮಲ್ ಹೆಕ್ಸೈಲೀನ್ | $C_6H_{12}$ | $CH_3\text{-}CH_2\text{-}CH_2\text{-}CH_2\text{-}CH=CH_2$ | -64 |

ಓಲಿಫಿನ್ನುಗಳನ್ನು ತಯಾರಿಸಲು ರೂಢಿಯಲ್ಲಿರುವ ಸಾರ್ವತ್ರಿಕ ವಿಧಾನಗಳನ್ನು ಮುಂದೆ ವಿವರಿಸಲಾಗಿದೆ.

1 ಆಲ್ಕೊಹಾಲುಗಳ ನಿರ್ಜಲೀಕರಣ: ಇದರ ಸಲುವಾಗಿ ಜಲರಹಿತ ಜಿಂಕ್ ಕ್ಲೋರೈಡ್, ಪ್ರಬಲ ಸಲ್ಫ್ಯೂರಿಕ್ ಆಮ್ಲ, ಫಾಸ್ಪಾರಿಕ್ ಆಮ್ಲ, ಫಾಸ್ಪರಸ್ ಪೆಂಟಾಕ್ಸೈಡ್, ಅಲ್ಯೂಮಿನಾ ($Al_2O_3$) ಮೊದಲಾದ ನಿರ್ಜಲಕಾರಿಗಳನ್ನು ಬಳಸುವರು. ಈ ಕ್ರಿಯೆಯನ್ನು ಸ್ಥೂಲವಾಗಿ ಕೆಳಕಂಡಂತೆ ಸೂಚಿಸಬಹುದು.

$$C_nH_{2n+1}.OH \longrightarrow C_nH_{2N} + H_2O$$

ಆಲ್ಕೊಹಾಲ್ ಓಲಿಫಿನ್

$$C_2H_5.OH \longrightarrow C_2H_4 + H_2O$$

ಈಥೈಲ್ ಆಲ್ಕೊಹಾಲ್ ಎಥಿಲೀನ್

ಅಲ್ಯೂಮಿನಾ ತುಂಬಿರುವ $360^0$ ಸೆಂ. ಉಷ್ಣತೆಗೆ ಕಾಯಿಸಿದ ಕೊಳವೆಯ ಮೂಲಕ ಆಲ್ಕೊಹಾಲಿನ ಆವಿಯನ್ನು ಹಾಯಿಸಿದಾಗ, ಗಣನೀಯ ಪ್ರಮಾಣದಲ್ಲಿ ಓಲಿಫಿನ್ ಉತ್ಪತ್ತಿಯಾಗುವುದು ಕಂಡುಬಂದಿದೆ.

2 ಪೊಟ್ಯಾಸಿಯಂ ಹೈಡ್ರಾಕ್ಸೈಡಿನ ಆಲ್ಕೊಹಾಲಿನ ದ್ರಾವಣ ಆಲ್ಕೈಲ್ ಹ್ಯಾಲೈಡುಗಳೊಡನೆ ವರ್ತಿಸಿ ಪಡೆಯಬಹುದು.

$$C_nH_{2n+1}X + KOH \longrightarrow C_nH_{2n} + H_20 + Kx$$

($x$ = ಹ್ಯಾಲೊಜನ್) ಪೊಟ್ಯಾಸಿಯಂ ಹ್ಯಾಲೈಡ್

$$C_2H_5I + KOH \longrightarrow C_2H_4 + H_20 + KI$$

ಈಥೈಲ್ ಅಯೊಡೈಡ್ ಎಥಿಲೀನ್

ಇದಕ್ಕೆ ಡೀಹೈಡ್ರೊಹ್ಯಾಲೊಜನೇಷನ್ ಕ್ರಿಯೆ ಎನ್ನುವರು,

3 ಜಮ್‌ಡೈಹ್ಯಾಲೈಡುಗಳಿಂದ (ಒಂದೇ ಇಂಗಾಲದ ಪರಮಾಣುವಿಗೆ ಎರಡು ಹ್ಯಾಲೋಜನ್ ಪರಮಾಣುಗಳು ಕೂಡಿರುವುದು) ಅಥವಾ ವಿಸಿನಾಲ್ ಡೈಹ್ಯಾಲೈಡುಗಳಿಂದ (ಅಕ್ಕಪಕ್ಕದ ಇಂಗಾಲದ ಪರಮಾಣುಗಳಿಗೆ ಒಂದೊಂದು ಹ್ಯಾಲೊಜನ್ ಪರಮಾಣು ಕೂಡಿರುವುದು) ಪಡೆಯಬಹುದು.




ಈ ಕ್ರಿಯೆಗೆ ಡೀಹ್ಯಾಲೊಜನೇಷನ್ ಎಂದು ಹೆಸರು.




4 ಪರ್ಯಾಪ್ತ ದ್ವಿಪ್ರತ್ಯಾಮ್ಲೀಯ (ಡೈಬೇಸಿಕ್) ಆಮ್ಲಗಳ ಪೊಟ್ಯಾಸಿಯಂ ಲವಣಗಳ ದ್ರಾವಣಗಳನ್ನು ವಿದ್ಯುದ್ವಿಭಜನೆಗೆ ಗುರಿಪಡಿಸಿ ಪಡೆಯಬಹುದು.

ಸಾಮಾನ್ಯ ಗುಣಗಳು: $C_2$– $C_4$ ಹೈಡ್ರೊಕಾರ್ಬನ್ನುಗಳು ಅನಿಲಗಳು, $C_5$– $C_{15}$ ದ್ರವಗಳು. ಉನ್ನತ ಓಲಿಫಿನ್ನುಗಳು ಘನವಸ್ತುಗಳು. ಇವುಗಳಿಗೆ ಬಣ್ಣವಿಲ್ಲ. ಭೌತಗುಣಗಳಲ್ಲಿ ಪ್ಯಾರಫಿನ್ನುಗಳನ್ನು ಹೋಲುವುವು. ಅವುಗಳಂತೆ ಅಣುತೂಕ ಹೆಚ್ಚಿದಂತೆಲ್ಲ ಸಾಂದ್ರತೆ ದ್ರವೀಕರಣ ಅಥವಾ ಕುದಿಯುವ ಬಿಂದುಗಳಲ್ಲಿ ಕ್ರಮಬದ್ಧವಾದ ವ್ಯತ್ಯಾಸ ತೋರುವುದು. ನೀರಿನಲ್ಲಿ ಅದ್ರಾವ್ಯವೆನ್ನಬಹುದು. ಆಲ್ಕೊಹಾಲ್ ಮತ್ತು ಈಥರಿನಲ್ಲಿ ವಿಲೀನವಾಗುವುವು. ಪ್ರಕಾಶಮಾನವಾದ ಜ್ವಾಲೆಯಿಂದ ಉರಿದು ಗಾಳಿ ಅಥವಾ ಆಕ್ಸಿಜನ್ನಿನೊಡನೆ ಸ್ಫೋಟಕ ಮಿಶ್ರಣ ಕೊಡುತ್ತವೆ. ಅಂತಿಮವಾಗಿ ಇಂಗಾಲದ ಡೈಆಕ್ಸೈಡ್ ಮತ್ತು ನೀರಾಗುವುವು, ದ್ವಿಬಂಧಿತ ಇಂಗಾಲದ ಪರಮಾಣುಗಳಿರುವುದರಿಂದ ಸರಾಗವಾಗಿ ಸಂಯೋಗ ಕ್ರಿಯೆಗಳಲ್ಲಿ ಭಾಗವಹಿಸುತ್ತವೆ. ಕೆಲವು ಮಾದರಿ ಕ್ರಿಯೆಗಳನ್ನು ಮುಂದೆ ಸೂಚಿಸಲಾಗಿದೆ.

1 ಸಮಾಂಗಸಂಯೋಗ (ಸಿಮೆಟ್ರಿಕಲ್ ಅಡಿಶನ್):

(i) ಹೈಡ್ರೊಜನ್ – ಸೂಕ್ಷ್ಮಕಣಗಳ ರೂಪದಲ್ಲಿರುವ ಪ್ಲಾಟಿನಂ ಅಥವಾ ಪೆಲೇಡಿಯಂ, ಉನ್ನತ ಉಷ್ಣತೆ ಒತ್ತಡಗಳಲ್ಲಿ ತಾಮ್ರ ಮತ್ತು ಕ್ರೋಮಿಯಂ ಆಕ್ಸೈಡುಗಳ ಮಿಶ್ರಣ, ನಿಕ್ಕಲ್, ಸಾಮಾನ್ಯ ಉಷ್ಣತೆ ಒತ್ತಡಗಳಲ್ಲಿ ರಾಣೆ ನಿಕ್ಕಲ್ ಇದಕ್ಕಾಗಿ ಉಪಯೋಗಿಸುವ ವೇಗ ವರ್ಧಕಗಳು.

$$R\text{-}CH=CH_2 \xrightarrow{H_2} R\text{-}CH_2\text{-}CH_3$$

(ii) ಹ್ಯಾಲೊಜನ್ನುಗಳು ಸಂಯೋಗಲಾಲಿತ್ಯ Cl>Br>I ಕ್ರಮದಲ್ಲಿದ್ದು ಬೆಳಕು ಅಲ್ಯೂಮಿನಿಯಂ ಅಥವಾ ಫೆರಿಕ್ ಕ್ಲೋರೈಡುಗಳು ಕ್ರಿಯೆಯನ್ನು ಪ್ರಚೋದಿಸುವುವು.

$$CH_3\text{-}CH=CH_2 \xrightarrow{Cl_2} CH_3\text{-}CHCl\text{-}CH_2Cl$$

ಆದರೆ $400^0$–$600^0$ ಸೆಂ. ಉಷ್ಣತಾ ಮಿತಿಯಲ್ಲಿ ಆದೇಶಕ್ರಿಯೆ (ಸಬ್‌ಸ್ಟಿಟ್ಯೂಷನ್ ರಿಆಕ್ಷನ್) ನಡೆದು ಅಲ್ಲೈಲ್ ಕ್ಲೋರೈಡಿನ ($Cl\text{-}CH_2\text{-}CH=CH_2$) ಅಂಶ ಪ್ರಧಾನವಾಗಿರುವುದು. ದ್ವಿಬಂಧಕ್ಕೆ ಬ್ರೋಮಿನ್ ಕೂಡಿದಾಗ ಬ್ರೋಮಿನ್ ದ್ರಾವಣ ನಿರ್ವರ್ಣವಾಗುವುದು. ದ್ವಿಬಂಧದ ಇರವನ್ನು ಹೀಗೆ ಗುರುತಿಸಬಹುದು.

(iii) ಓಲಿಫಿನ್ನಿನ ದ್ವಿಬಂಧಕ್ಕೆ ಒಂದು ಓಜ಼ೋನ್ ಅಣು ಕೂಡಿ ಓಜ಼ೋನೈಡುಗಳಾಗುವುವು. ಈ ಕ್ರಿಯೆಯನ್ನು ಕ್ಲೋರೋಫಾರಂ ಅಥವಾ ಕಾರ್ಬನ್ ಟೆಟ್ರಕ್ಲೋರೈಡ್ ಮಾಧ್ಯಮದಲ್ಲಿ ನಡೆಸಬೇಕು.

$$\underset{\displaystyle R}{R'\text{–}C} = CH - R' \xrightarrow{O_3} \underset{\displaystyle R}{R'\text{–}C} \overset{O\text{———}O}{–O–} CH – R'$$

ಓಜ಼ೋನೈಡ್

ಇಳಿಸಿದ ಒತ್ತಡದಲ್ಲಿ ಕುದಿಸಿ ಲೀನಕಾರಿಯನ್ನು ತೆಗೆದುಹಾಕಿದ ಅನಂತರ ನೀರು ಮತ್ತು ಸತುವಿನ ಧೂಳನ್ನು ಸೇರಿಸಿದರೆ ಓಜ಼ೋನೈಡ್ ವಿಭಜಿಸಿ ಆಲ್ಡಿಹೈಡ್ ಮತ್ತು ಕೀಟೋನುಗಳನ್ನು ಕೊಡುವುದು.

$$R'-C=O \quad + \quad O=C-R'' + H_2O_2$$
(R ಮೊದಲ C ಗೆ ಬಂಧಿತ; H ಎರಡನೆಯ C ಗೆ ಬಂಧಿತ)

**ಕೀಟೋನ್** **ಆಲ್ಡಿಹೈಡ್**

ಉತ್ಪತ್ತಿಯಾದ ಹೈಡ್ರೋಜನ್ ಪರಾಕ್ಸೈಡನ್ನು ಸತುವಿನ ಧೂಳು ನಾಶಪಡಿಸುತ್ತದೆ. ಇಲ್ಲದಿದ್ದರೆ ಅದು ಆಲ್ಡಿಹೈಡನ್ನು ಆಮ್ಲವಾಗಿ ಉತ್ಕರ್ಷಿಸುವುದು. ಓಲಿಫಿನ್ನಿನ ಇಂಗಾಲದ ಸರಣಿಯಲ್ಲಿ ದ್ವಿಬಂಧವಿದ್ದ ಸ್ಥಾನವನ್ನು ನಿರ್ಧರಿಸಲು ಈ ಕ್ರಿಯೆಗಳು ಸಹಾಯಕವಾಗಿವೆ.

ಅಸಮಾಂಗ ಸಂಯೋಗ (ಅನ್‌ಸಿಮೆಟ್ರಿಕಲ್ ಅಡಿಶನ್):

**(i) ಹೈಡ್ರೋಜನ್ ಹ್ಯಾಲೈಡುಗಳು:** ಸಂಯೋಗ ಲಾಲಿತ್ಯದ ಕ್ರಮ HI>HBr>HCl. ದ್ವಿಬಂಧಿತ ಪರಮಾಣುಗಳ ಪೈಕಿ ಸಂಖ್ಯೆ ಹೈಡ್ರೋಜನ್ ಪರಮಾಣುಗಳನ್ನು ಹೊಂದಿರುವ ಇಂಗಾಲ ಆಮ್ಲದ ಹೈಡ್ರೋಜನ್ ಭಾಗವನ್ನೂ ಮತ್ತೊಂದು ಇಂಗಾಲ ಹ್ಯಾಲೊಜನ್ ಭಾಗವನ್ನೂ ಕೂಡಿಸಿಕೊಳ್ಳುವುವು. ಇದೇ 1869ರಲ್ಲಿ ಪ್ರತಿಪಾದಿತವಾದ ಮಾರ್ಕೋನಿಕಾಫನ ನಿಯಮ. ಪ್ರೊಪೈಲೀನಿನೊಡನೆ ಹೈಡ್ರೋಜನ್ ಬ್ರೋಮೈಡ್ ವರ್ತಿಸಿದಾಗ ಹೀಗಾಗುತ್ತದೆ.

$$CH_3-CH=CH_2 \xrightarrow{HBr} CH_3-\underset{\displaystyle Br}{\underset{|}{CH}}=CH_3$$

ಐಸೋಪ್ರೊಪೈಲ್ ಬೋಮೈಡ್

ಈ ನಿಯಮ ಪಾಲಿತವಾಗಬೇಕಾದರೆ ಓಲಿಫಿನ್ನಿನ ಅಣುವಿನ ಮಧ್ಯದಲ್ಲಿ ದ್ವಿಬಂಧವಿರಬಾರದು. ಆದರೆ ಆಕ್ಸಿಜನ್ ಅತಿನೇರಳೆ ಕಿರಣಗಳು ಮತ್ತು ಪೆರಾಕ್ಸೈಡುಗಳ ಸಂಪರ್ಕದಲ್ಲಿ ಹೈಡ್ರೋಜನ್ ಬ್ರೋಮೈಡ್ ಮಾತ್ರ ಈ ನಿಯಮಕ್ಕೆ ವಿರೋಧವಾಗಿ ಓಲಿಫಿನ್ನಿಗೆ ಕೊಡುವುದು.

$$CH_3-CH=CH_2+HBr \xrightarrow{\text{ಪೆರಾಕ್ಸೈಡ್}} CH_3-CH_2-CH_2.Br$$

ಇದಕ್ಕೆ ಪರಾಕ್ಸೈಡ್ ಪರಿಣಾಮ ಎಂದು ಹೆಸರು. ಪ್ರಾಯಶಃ ಪರಾಕ್ಸೈಡು ಬಿಡುಗಡೆ ಮಾಡುವ ಬ್ರೋಮಿನಿನ ಅಯಾನು ಪ್ರೊಪೈಲೀನಿನೊಡನೆ ವರ್ತಿಸಿ ಸ್ವತಂತ್ರ ರ್‍ಯಾಡಿಕಲ್ ನಿರ್ಮಾಣವಾಗುವುದು. ಇದು ಕೆಳಕಂಡ ಸರಪಳಿ ಕ್ರಿಯೆಯನ್ನು ಪ್ರೇರೇಪಿಸುವುದೆಂದು ನಂಬಲಾಗಿದೆ.

$$\bar{Br}+CH_3-CH=CH_2 \longrightarrow CH_3-CH-CH_2.Br$$
$$\downarrow HBr$$
$$\bar{Br}+CH_3-CH_2-CH_2.Br$$

(ಇದು ಕ್ರಿಯೆಯನ್ನು ಪುನರಾವರ್ತಿಸುವುದು)

(ii) ನೀರು ಮತ್ತು ಸಲ್ಫ್ಯೂರಿಕ್ ಆಮ್ಲಗಳು ಸಹ ಮಾರ್ಕೋನಿ ಕಾಫನ ನಿಯಮದ ಅನುಸಾರವಾಗಿಯೇ ಕೂಡುವುವು.




(iii) ಹೈಪೊ ಹ್ಯಾಲಸ್ ಆಮ್ಲಗಳು: ಇವುಗಳ ಹ್ಯಾಲೊಜನ್ ಅಧಿಕ ಸಂಖ್ಯೆ ಹೈಡ್ರೋಜನ್ ಪರಮಾಣುಗಳಿರುವ ದ್ವಿಬಂಧಿತ ಇಂಗಾಲಕ್ಕೆ ಕೊಡುವುದು.

$$CH_3-CH=CH_2 \xrightarrow{HO,\,Cl} CH_3-\underset{\displaystyle OH}{\underset{|}{CH}}-CH_2.Cl$$

ಉತ್ಕರ್ಷಣ: 90% ಹೈಡ್ರೋಜನ್ ಪೆರಾಕ್ಸೈಡು ಅಸಿಟಿಕ್ ಅಥವಾ ಫಾರ್ಮಿಕ್ ಆಮ್ಲದ ದ್ರಾವಣದಲ್ಲಿ ಎರಡು ಹೈಡ್ರಾಕ್ಸಿಲ್ ಗ್ರೂಪುಗಳನ್ನು ಕೂಡಿಸುವುದು.

$$R-CH=CH-R' \longrightarrow R-\underset{\displaystyle OH}{\underset{|}{CH}}-\underset{\displaystyle OH}{\underset{|}{CH}}-R'$$

ಗ್ಲೈಕಾಲ್

ತಣ್ಣಗಿರುವ ಕ್ಷಾರ ಮಿಶ್ರಿತ ಪೊಟ್ಯಾಸಿಯಂ ಪರ್ಮ್ಯಾಂಗನೇಟು ಓಲಿಫಿನ್ನಿನಿಂದ ನಿರ್ವರ್ಣಗೊಳ್ಳುವುದು. ಆರ್ಗ್ಯಾನಿಕ್ ಸಂಯುಕ್ತಗಳ ಅಪರ್ಯಾಪ್ತತೆಯನ್ನು ಹೀಗೆ ಗುರುತಿಸಬಹುದು. ಇದಕ್ಕೆ ಬೇಯರ್ ಪರೀಕ್ಷಾ ಪ್ರಯೋಗ ಎನ್ನುವರು.

$$R-CH=CH-R+H_2O+[O]$$
$$\downarrow \quad \text{ಪರ್ಮ್ಯಾಗನೇಟ್ ಒದಗಿಸಿದ ಆಕ್ಸಿಜನ್}$$
$$R-\underset{\displaystyle OH}{\underset{|}{CH}}-\underset{\displaystyle OH}{\underset{|}{CH}}-R'$$

ಗ್ಲೈಕಾಲ್

ಆಮ್ಲಮಿಶ್ರಿತ ಪೊಟ್ಯಾಸಿಯಂ ಪರ್ಮ್ಯಾಂಗನೇಟ್ ಅಥವಾ ಡೈಕ್ರೋಮೇಟುಗಳು ದ್ವಿಬಂಧ ಸ್ಥಾನದಲ್ಲಿ ಓಲಿಫಿನ್ನಿನ ಅಣುಛೇದನ ಮಾಡುವುವು.

$$CH_3-\overset{\displaystyle CH_3}{\overset{|}{C}}=CH-CH_3 \xrightarrow{3[O]} \overset{\displaystyle CH_3}{\overset{|}{CH_3-CO}}+CH_3-CO.OH$$

ಅಸಿಟೋನ್ ಅಸಿಟಿಕ್ ಆಮ್ಲ

**ಐಸೊಮರೈಸೇಷನ್:** ಓಲಿಫಿನ್ನನ್ನು ಏಕಾಂಗಿಯಾಗಿ $500^0$–$700^0$ ಸೆಂ. ಉಷ್ಣತಾಮಿತಿಯಲ್ಲಿ ಅಥವಾ ಅಲ್ಯೂಮಿನಿಯಂ ಸಲ್ಫೇಟ್ ವೇಗವರ್ಧಕದ ಸಂಪರ್ಕದಲ್ಲಿ $200^0$–$300^0$ ಸೆಂ. ಉಷ್ಣತಾ ಮಿತಿಯಲ್ಲಿ ಕಾಯಿಸಿದರೆ ರೂಪಾಂತರ ಹೊಂದುವುದು. ದ್ವಿಬಂಧ ಇಂಗಾಲದ ಸರಣಿಯ ಕೇಂದ್ರಕ್ಕೆ ಸರಿಯುವ ಪ್ರವೃತ್ತಿಯಿಂದ ಅಥವಾ ಮೀಥೈಲ್ ಗ್ರೂಪಿನ ಸ್ಥಾನಪಲ್ಲಟದಿಂದ ಹೀಗಾಗಬಹುದೆಂದು ಭಾವಿಸಲಾಗಿದೆ.

$$CH_3-CH_2-CH_2-CH=CH_2 \rightarrow CH_3-CH_2-CH=CH-CH_3$$

ಪೆಂಟಿನ್–1 ಪೆಂಟಿನ್–2

$$CH_3-CH_2-CH-CH_2 \rightarrow CH_3-\overset{\displaystyle CH_3}{\overset{|}{C}}=CH_2$$

ಬ್ಯೂಟಿನ್–1 2–ಮಿಥೈಲ್‌ಪ್ರೊಪೀನ್

**ಪೊಲಿಮರೈಸೇಷನ್ (ಅಣುಸಂಘಟನೆ):** ಸೂಕ್ತ ಸನ್ನಿವೇಶದಲ್ಲಿ ಓಲಿಫಿನ್ನಿನ ಅಣುಗಳು ಸಂಘಟಿತವಾಗಿ ದೊಡ್ಡ ಅಣುಗಳನ್ನು ಕೊಡುವುವು. ಫಲಿತ ವಸ್ತುವಿನ ಅಂಗಮೂಲಧಾತುಗಳೂ ಅವುಗಳ ತೂಕ ಪ್ರಮಾಣವೂ ಮೂಲ ಓಲಿಫಿನ್ನಿನಂತೆಯೇ ಇದ್ದು ಅಣುತೂಕ ಮಾತ್ರ ವ್ಯತ್ಯಾಸವಾಗಿರುವುದು. ಈ ವಿಶೇಷ ಕ್ರಿಯೆಗೆ ಪೊಲಿಮರೈಸೇಷನ್ ಎಂದು ಹೆಸರು. ಉದಾಹರಣೆಗೆ $300^0$ ಸೆಂ. ಉಷ್ಣತೆಯಲ್ಲಿ 1,500 ವಾಯುಮಂಡಲ ಒತ್ತಡದಲ್ಲಿ ಅಲ್ಪಪ್ರಮಾಣ ಆಕ್ಸಿಜನ್ನಿನ ಸಂಪರ್ಕದಲ್ಲಿ ದ್ರವಿತ ಎಥಿಲೀನ್ ಪಾಲಿಥೀನ್ ಎಂಬ ಉತ್ತಮ ಪ್ಲಾಸ್ಟಿಕ್ ಆಗುವುದು.

$$n(CH_2=CH_2) \longrightarrow (C_2H_4)n$$

$n$=100-1000 ಆಗಿರಬಹುದು. $140^0$ ಸೆಂ. ಉಷ್ಣತೆಯಲ್ಲಿ ಮೆದುವಾಗುವ ಈ ಶ್ರೇಷ್ಠ ಪ್ಲಾಸ್ಟಿಕ್ಕಿನಿಂದ ನಾನಾ ತರಹೆಯ ಸೀಸೆಗಳು ಮತ್ತು ಪ್ರಯೋಗಶಾಲೆಯ

ಉಪಕರಣಗಳನ್ನು ಮಾಡುತ್ತಿದ್ದಾರೆ. ಇದು ವಿದ್ಯುತ್ ನಿರೋಧಕವಾಗಿಯೂ ಬಳಸಲ್ಪಟ್ಟುತ್ತಿದೆ. ತಣ್ಣಗಿರುವ ಪ್ರಬಲ ಸಲ್ಫೂರಿಕ್ ಆಮ್ಲದ ಸಂಪರ್ಕದಲ್ಲಿ ಐಸೊ ಬ್ಯುಟಲೀನು ಐಸೊ ಆಕ್ಟೇನಾಗಿ ಪರಿವರ್ತಿತವಾಗುವುದು ಮತ್ತೊಂದು ನಿದರ್ಶನ.

$$2CH_3-\overset{\overset{\large CH_3}{|}}{C}=CH_2 \rightarrow CH_3-\overset{\overset{\large CH_3}{|}}{C}=CH_2-\overset{\overset{\large CH_3}{|}}{\underset{\large CH_3}{C}}=CH_2$$

**ಆಲ್ಕೈಲೇಷನ್:** ಆಮ್ಲೀಯ ವೇಗವರ್ಧಕಗಳಾದ ಅಲ್ಯೂಮಿನಿಯಂ ಕ್ಲೋರೈಡ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಸಂಪರ್ಕದಲ್ಲಿ ಉನ್ನತ ಉಷ್ಣತೆ ಒತ್ತಡಗಳಲ್ಲಿ ಆಲ್ಕೇನುಗಳು ದ್ವಿಬಂಧಕ್ಕೆ ಸೇರುವ ಪ್ರಸಂಗವಿದು. ಐಸೊ ಬ್ಯುಟೇನ್ ಮತ್ತು ಐಸೋ ಬ್ಯುಟಲೀನ್ ಪರಸ್ಪರ ಕೂಡಿ ಐಸೊ ಆಕ್ಟೇನ್ ಆಗುವುದು ಇದಕ್ಕೆ ಉದಾಹರಣೆ.



2:2:4 ಟ್ರೈಮೀಥೈಲ್ ಪೆಂಟೇನ್

**ಉಪಯೋಗಗಳು:** ಎಥಿಲೀನಿನಿಂದ ಆಲ್ಕೊಹಾಲ್ ಮತ್ತು ಮಸ್ಟರ್ಡ್ ಅನಿಲಗಳನ್ನು ಮಾಡುವರು. 1000 ಭಾಗ ಗಾಳಿಯಲ್ಲಿ ಒಂದು ಭಾಗ ಎಥಿಲೀನ್ ಇದ್ದರೆ ಸಾಕು. ಸಿಟ್ರಸ್ ವರ್ಗದ ಹಣ್ಣುಗಳು ಬೇಗ ಮಾಗುವುವು. ಆಲೂಗೆಡ್ಡೆಯ ಬೆಳೆವಣಿಗೆಗೆ ಉತ್ತೇಜನಕವಾಗಿದೆ. ಟ್ರೈಕ್ಲೋರೊಎಥಿಲೀನ್ ಎಂಬುದು ಕೊಬ್ಬುಗಳಿಗೆ ಲೀನಕಾರಿ. ಸೋಡಿಯಂ ಟೆಟ್ರಾಸಲ್ಫೈಡ್ ($Na_2S_4$) ಮತ್ತು ಎಥಿಲೀನ್ ಕ್ಲೋರೈಡುಗಳ ಸಂಯೋಗದಿಂದ ಥಯೊಕಾಲ್ ಎಂಬ ಕೃತಕ ರಬ್ಬರ್ ಆಗುತ್ತದೆ. ಪಾಲಿಥೀನ್ ಪ್ಲ್ಯಾಸ್ಟಿಕ್ ವಿಷಯ ಆಗಲೇ ಪ್ರಸ್ತಾಪಿಸಲಾಗಿದೆ. ಟೆಟ್ರಫ್ಲೋರೋ ಎಥಿಲೀನಿನಿಂದ ($CF_2=CF_2$) ಟೆಫ್ಲಾನ್ ($(C_2F_4)_n$ ಎಂಬ ಕೃತಕ ನೂಲಾಗುತ್ತದೆ. ಪ್ರೊಪೈಲೀನಿಂದ ಅಸಿಟೋನ್ ಮತ್ತು ಗ್ಲಿಸರಾಲುಗಳನ್ನು ಕೈಗಾರಿಕಾ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ. (ಎಚ್.ಜಿ.ಎಸ್.)

**ಓಲಿಯಿಕ್ ಆಮ್ಲ:** ಅಣುಸೂತ್ರ $C_{17}H_{33}CO.OH$. ಕೊಬ್ಬು ಮತ್ತು ತೈಲಗಳಲ್ಲಿ ಗ್ಲಿಸರೈಡಾಗಿ ದೊರೆಯುತ್ತದೆ. ಆಲಿವ್ ಎಣ್ಣೆಯಲ್ಲಿ 76%–86% ಓಲಿಯಿಕ್ ಆಮ್ಲವಿದೆ. ತಿಳಿಹಳದಿ ಬಣ್ಣದ ರುಚಿ ವಾಸನೆಗಳಿಲ್ಲದ ದ್ರವ, $286^0$ ಸೆಂ.ನಲ್ಲಿ ಕುದಿಯುತ್ತದೆ. ನೀರಿಲ್ಲಿ ಅದ್ರಾವ್ಯ. ಆಲ್ಕೊಹಾಲ್ ಮತ್ತು ಈಥರುಗಳಲ್ಲಿ ಲೀನವಾಗುತ್ತದೆ. ವೇಗವರ್ಧಕದ ಸಂಪರ್ಕದಲ್ಲಿ ಹೈಡ್ರೊಜನ್ನನ್ನು ಹಾಯಿಸಿದಾಗ ಪರ್ಯಾಪ್ತಗೊಂಡು ಸ್ಟಿಯರಿಕ್ ಆಮ್ಲವಾಗುವುದು. ಗಾಳಿಯಲ್ಲಿರುವ ಆಕ್ಸಿಜನ್ನಿನಿಂದ ಉತ್ಕರ್ಷಿತವಾಗಿ ಕಮಟು ಹಿಡಿಯುತ್ತದೆ. ಸಿಸ್–ಟ್ರಾನ್ಸ್ ಅಥವಾ ಜ್ಯಾಮಿತೀಯ ರೂಪಾಂತರ (ಜೊಮೆಟ್ರಿಕ್ ಐಸೊಮೆರಿಸಂ) ಪ್ರದರ್ಶಿಸುವುದು ಇದರ ವೈಶಿಷ್ಟ್ಯ. ಓಲಿಯಿಕ್ ಆಮ್ಲದಲ್ಲಿ ಸಿಸ್ ರಚನೆಯಿದೆ. ಅಂದರೆ ದ್ವಿಬಂಧಿಕ ಇಂಗಾಲದ ಪರಮಾಣುಗಳ ಒಂದೇ ಪಾರ್ಶ್ವದಲ್ಲಿ ಹೈಡ್ರೊಜನ್ನಿನ ಪರಮಾಣುಗಳು ಇರುತ್ತವೆ. ಇದರ ಪ್ರತಿರೂಪದ ಇಲೇಡಿಕ್ ಆಮ್ಲದಲ್ಲಿ ದ್ವಿಬಂಧದ ಇಕ್ಕೆಲಗಳಲ್ಲಿ ಹೈಡ್ರೋಜನ್ನಿನ ಪರಮಾಣುಗಳು ಇರುವುದನ್ನು ಗಮನಿಸಬಹುದು. ಈ ರೂಪಾಂತರಕ್ಕೆ ನೈಟ್ರಸ್‌ಆಮ್ಲ ವೇಗವರ್ಧಕವಾಗಿ ವರ್ತಿಸುತ್ತದೆ. $180^0$–$200^0$ ಸೆಂ.ಉಷ್ಣತಾ ಮಿತಿಯಲ್ಲಿ ಸೆಲೆನಿಯಂ ಸಂಪರ್ಕದಲ್ಲಿ 66% ಪರಿವರ್ತನೆಯನ್ನು ಸಾಧಿಸಬಹುದು.

$$\begin{array}{c} CH_3.(CH_2)_7\text{—}C\text{—}H \\ \| \\ HOOC\text{—}(CH_2)_7\text{—}C\text{—}H \end{array} \longrightarrow \begin{array}{c} CH_3.(CH_2)_7\text{—}C\text{—}H \\ \| \\ H\text{—}C\text{—}(CH_2)_7.COOH \end{array}$$

ಓಲಿಯಿಕ್ ಆಮ್ಲ  ಇಲೇಡಿಕ್ ಆಮ್ಲ

ಓಲಿಯಿಕ್ ಆಮ್ಲ ನೆಟ್ರಿಕ್ ಆಮ್ಲದಿಂದ ಉತ್ಕರ್ಷಣಗೊಂಡು ಪೆಲಾರ್ಗೋನಿಕ್ ಆಮ್ಲ [$CH_3.(CH_2)_7.COOH$] ಮತ್ತು ಅಜ್ಜಿಲೇಯಿಕ್ ಆಮ್ಲಗಳನ್ನು [$HOOC\text{—}(CH_2)_7\text{—}COOH$] ಕೊಡುವುದು. ಆದ್ದರಿಂದ ಓಲಿಯಿಕ್ ಆಮ್ಲದಲ್ಲಿ 9:10 ಸ್ಥಾನದ ನಡುವೆ ದ್ವಿಬಂಧಕವಿರಬೇಕೆಂದು ಗೊತ್ತಾಗುತ್ತದೆ. ಓಲಿಯಿಕ್ ಆಮ್ಲದ ಪ್ರಧಾನ ಉಪಯೋಗ ಉಣ್ಣೆಯಿಂದ ನೂಲು ತೆಗೆಯುವುದರಲ್ಲಿ. ಇದರ ಸೋಡಿಯಂ ಮತ್ತು ಪೊಟ್ಯಾಸಿಯಂ ಲವಣಗಳೇ ಸಾಬೂನು. ಇತರ ಲೋಹಗಳ ಓಲಿಯೇಟುಗಳನ್ನು ಒತ್ತರ ವಿಧಾನದಿಂದ ತಯಾರಿಸುವರು. ಸೋಡಿಯಂ ಮತ್ತು ಪೊಟ್ಯಾಸಿಂ ಓಲಿಯೇಟುಗಳು ದ್ರಾವ್ಯ ವಸ್ತುಗಳು. ಇವುಗಳಿಗೆ ಖನಿಜಾಮ್ಲಗಳು ಇತರ ಲೋಹ ಲವಣಗಳ ದ್ರಾವಣಗಳನ್ನು ಸೇರಿಸಿದರೆ ಆಯಾ ಲೋಹದ ಓಲಿಯೇಟುಗಳು ಒತ್ತರಿಸುವುವು. ಇದಕ್ಕೆ ಅಗತ್ಯವಾದ 90% ಶುದ್ಧವಾದ ಓಲಿಯಿಕ್ ಆಮ್ಲ ಈಗ ಮಾರುಕಟ್ಟೆಯಲ್ಲಿ ದೊರೆಯುತ್ತಿದೆ. ಕ್ಯಾಡ್ಮಿಯಂ ಓಲಿಯೇಟು ಹಳದಿ, ತಾಮ್ರ ಮತ್ತು ನಿಕ್ಕಲ್ ಓಲಿಯೇಟುಗಳು ನೀಲಿ, ಕಬ್ಬಿಣದ ಓಲಿಯೇಟು ಹಸುರು ಮತ್ತು ಮ್ಯಾಂಗನೀಸ್ ಓಲಿಯೇಟು ತಿಳಿನೇರಳೆ ಬಣ್ಣದ ಲವಣಗಳು. ಪರಿಶುದ್ಧ ಸೋಡಿಯಂ ಓಲಿಯೇಟು ಬಿಳಿಯ ಪುಡಿ. ಇದು ಕೊಲೆಲಿಥಿಯಾಸಿಸ್ ರೋಗಕ್ಕೆ ಪರಿಣಾಮಕಾರಿಯಾದ ಮದ್ದು. ಪೊಟ್ಯಾಸಿಯಂ ಓಲಿಯೇಟಿನ ದ್ರಾವಣದಿಂದ ಕೀವು ತುಂಬಿದ ವ್ರಣಗಳನ್ನು ತೊಳೆಯುತ್ತಿದ್ದರೆ ಬೇಗ ವಾಸಿಯಾಗುವುವು. ಓಲಿಯಿಕ್ ಆಮ್ಲದ ಮೀಥೈಲ್ ಈಥೈಲ್ ಬ್ಯೂಟೈಲ್ ಮತ್ತು ಗ್ಲೈಕಾಲ್ ಎಸ್ಟರುಗಳು ಈಗ ಮಾರುಕಟ್ಟೆಯ ಮಸ್ತುಗಳು. ಗ್ಲೈಕಾಲ್ ಓಲಿಯೇಟುಗಳು ಬಟ್ಟೆ, ಚರ್ಮ ಮತ್ತು ಪೆಟ್ರೋಲಿಯಂ ಉದ್ಯಮಗಳಲ್ಲಿಯೂ ಕೀಟನಾಶಕಗಳೂ ಮತ್ತು ಅಂಗರಾಗಗಳ ತಯಾರಿಕೆಯಲ್ಲಿಯೂ ವ್ಯಾಪಕವಾಗಿ ಉಪಯೋಗವಾಗುತ್ತಿವೆ. (ಎಚ್.ಜಿ.ಎಸ್.)

**ಓಲೆ ಗ್ರಂಥಗಳು:** ತಾಳೆಯ ಮರದ ಗರಿಗಳನ್ನು ಹದಗೊಳಿಸಿ, ಅವುಗಳಲ್ಲಿ ಅಕ್ಷರಗಳನ್ನು ಕೊರೆದು ಸಿದ್ಧಪಡಿಸಿದ ಪುಸ್ತಕಗಳು, ಕಾಗದ ದೊರೆಯದಿದ್ದ ಪ್ರಾಚೀನ ಯುಗದ ಜ್ಞಾನ ತಲೆಮಾರಿನಿಂದ ತಲೆಮಾರಿಗೆ ಉಳಿದು ಬಂದಿರುವುದು ಇಂಥ ಗ್ರಂಥಗಳಿಂದಲೇ (**ನೋಡಿ– ಓಲೆಮರ**).



ಎಡದಿಂದ ಬಲಕ್ಕೆ 1, 3, 5 ಮೂರು ಬಗೆಯ ಕಂಠಗಳು. ಎರಡನೆಯದು ಕಂಠದ ಒರೆ. 4ನೆಯದು ಒರೆಯಲ್ಲಿ ಇಟ್ಟ ಕಂಠ

ಓಲೆಗರಿಗಳನ್ನು ಬರೆವಣಿಗೆಗೆ ಉಪಯೋಗಿಸುತ್ತಿದ್ದುದನ್ನು ಪ್ಲಿನೀ (ಪ್ರ.ಶ.23–79) ಎಂಬ ಪ್ರಕೃತಿಶಾಸ್ತ್ರಜ್ಞ ಉಲ್ಲೇಖಿಸಿದ್ದಾನೆ. ಭಾರತ ದೇಶವನ್ನು ಸಂದರ್ಶಿಸಿದ ಹ್ಯೂಯೆನ್ ತ್ಸಾಂಗ್ (ಪ್ರ.ಶ. 629–45) ಕೊಂಕಣಪುರದ ಉತ್ತರಕ್ಕೆ ತಾಳೆಮರಗಳ ಕಾಡಿರುವುದನ್ನೂ ಅವುಗಳ ಎಲೆಗಳನ್ನು ಜನ ಬರೆವಣಿಗೆಗಾಗಿ ಉಪಯೋಗಿಸುವುದನ್ನೂ ತಿಳಿಸಿದ್ದಾನೆ.

ಸು.ಪ್ರ.ಶ. 1030ರಲ್ಲಿ ಭಾರತಕ್ಕೆ ಬಂದಿದ್ದ ಅಲ್‌ಬೆರೂನಿ ಎಂಬ ಪ್ರವಾಸಿ ತಾಳೆ ಮತ್ತು ಭೂರ್ಜಪತ್ರಗಳನ್ನು ನೋಡಿದ್ದುದಾಗಿ ತಿಳಿಸಿದ್ದಾನೆ. ಖರ್ಜೂರ ಉತ್ತುತ್ತೆ, ತೆಂಗಿನಮರಗಳನ್ನು ಹೋಲುವ ಒಂದು ಜಾತಿಯ ಮರಗಳು ದಕ್ಷಿಣ ದೇಶದಲ್ಲಿ ಬೆಳೆಯುತ್ತವೆ. ಅವುಗಳ ಹಣ್ಣುಗಳನ್ನು ತಿನ್ನುತ್ತಾರೆ. ಅವುಗಳ ಎಲೆಗಳು ಒಂದು ಗಜ ಉದ್ದವಾಗಿಯೂ ಮೂರು ಕೈಬೆರಳುಗಳಷ್ಟು ಅಗಲವಾಗಿಯೂ ಇವೆ. ಹೀಗೆಂದು ಆತ ಹೇಳಿದ್ದಾನೆ. ಜನ ಇವನ್ನು ತಾರೀ (ತಾಲ ಮತ್ತು ತಾರ) ಎಂದು ಕರೆಯುವರೆಂದೂ ಬರವಣಿಗೆಗೆ ಉಪಯೋಗಿಸುವರೆಂದೂ ಬರೆದಾದ ಮೇಲೆ ಎಲ್ಲ ಎಲೆಗಳನ್ನೂ ಅವುಗಳ ಮಧ್ಯದಲ್ಲಿ ಮಾಡಿದ ರಂಧ್ರದ ಮೂಲಕ ದಾರವನ್ನು ಹಾಕಿ ಒಟ್ಟಿಗೆ ಕಟ್ಟಿಡುವರೆಂದೂ ತಿಳಿಸಿದ್ದಾನೆ. ಸು.ಪ್ರ.ಶ. 1441ರಲ್ಲಿ ಬಂದಿದ್ದ ಅಬ್ದುರ್ ರಜಾಕ್ ಎಂಬ ಪ್ರವಾಸಿ ವಿಜಯನಗರದಲ್ಲಿ ಓಲೆಗ್ರಂಥಗಳ ಬಳಕೆ ಇದ್ದುದನ್ನು ತಿಳಿಸಿ ಈ ಓಲೆಗರಿಗಳಲ್ಲಿ ತಾಲ ಮತ್ತು ಶ್ರೀತಾಲವೆಂಬ ಎರಡು ಬಗೆ ಇರುವುದನ್ನು ಗುರುತಿಸಿದ್ದಾನೆ. ತಾಲ ಎಲೆಯ ಮೇಲೆ ಕಬ್ಬಿಣದ ಕಂಠದಿಂದ ಬರೆಯುತ್ತಿದ್ದರೆಂದೂ ಶ್ರೀತಾಲ ಎಲೆಯನ್ನು ಮೊದಲು ಕಪ್ಪುಮಾಡಿ, ಅದರ ಮೇಲೆ ಲೇಖನಿಯಂಥ ಮೃದುವಾದ ಚೂಪು ಕಲ್ಲಿನಿಂದ ಬರೆಯುತ್ತಿದ್ದರೆಂದೂ ಆತ ತಿಳಿಸಿದ್ದಾನೆ. ಈ ರೀತಿ ಬರೆಯುತ್ತಿದ್ದುದನ್ನು ತಾನು ಕನ್ನಡ ಜಿಲ್ಲೆಗಳಲ್ಲಿಯೂ ದಕ್ಷಿಣ ಭಾರತದಲ್ಲಿಯೂ ಕಂಡುದಾಗಿ ಎ. ಹ್ಯಾಮಿಲ್ಟನ್ ಎಂಬಾತ ತಿಳಿಸಿದ್ದಾನೆ. ರಾಜೇಂದ್ರಮಿತ್ರ ಅವರು ಬಂಗಾಲದಲ್ಲಿ ಚಂಡಿ ಗ್ರಂಥ ಓಲೆಯಲ್ಲಿರುವುದಾಗಿ ತಿಳಿಸಿದ್ದಾನೆ.



ಓಲೆಗ್ರಂಥದ ಒಂದು ಮಾದರಿ

ಈ ಓಲೆ ಅಥವಾ ತಾಳೆ ಗ್ರಂಥಗಳು ಭಾರತದ ವಿವಿಧ ಭಾಗಗಳಲ್ಲಿ ದೊರೆತರೂ ಒರಿಸ್ಸ, ಗುಜರಾತ್, ಮದ್ರಾಸ್, ಕೇರಳ ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಪ್ರಾಚ್ಯ ವಿದ್ಯಾ ಸಂಶೋಧನಾಲಯಗಳಲ್ಲಿ, ಮದ್ರಾಸು ಓರಿಯಂಟಲ್ ಮ್ಯಾನ್ಯೂಸ್ಕ್ರಿಪ್ಟ್ಸ್ ಲೈಬ್ರರಿ ಮತ್ತು ಅಡಿಯಾರ್ ಲೈಬ್ರರಿಗಳಲ್ಲಿ, ತಿರುವಾಂಕೂರ್ ಸರಸ್ವತಿಮಹಲ್ ಲೈಬ್ರರಿಯಲ್ಲಿ ಬಹುಮಟ್ಟಿಗೆ ಹಸ್ತಪ್ರತಿಗಳೆಲ್ಲವೂ ಓಲೆಯಲ್ಲಿವೆ. ಅಂತೆಯೇ ಅನೇಕ ಮಠಗಳಲ್ಲಿ, ಮಂದಿರಗಳಲ್ಲಿ, ಮನೆಗಳಲ್ಲಿ ಇವನ್ನು ಕಾಣಬಹುದು. ಗುಪ್ತರ ಲಿಪಿಯಲ್ಲಿ ಬರೆದ ಹಳೆಯ ಓಲೆಗ್ರಂಥವನ್ನು (6ನೆಯ ಶತಮಾನ) ಜಪಾನಿನ ಹೊರಿಂಜಿ ಎಂಬ ಮಠದಲ್ಲಿ ಕಾಪಾಡಲಾಗಿದೆ. ತಕ್ಲಮಕನ್ ಮರುಭೂಮಿಯಲ್ಲಿ ಇನ್ನೂ ಹಳೆಯ ಕಾಲದ ಓಲೆಗ್ರಂಥಗಳಿರಬಹುದೆಂದೂ ನಿಖರವಾಗಿ ಹೇಳಲು ಯಾವ ಆಧಾರ ಸಾಹಿತ್ಯವೂ ಇಲ್ಲವೆಂದೂ ಆದರೆ ನೇಪಾಳದಲ್ಲಿ ಗುಪ್ತಲಿಪಿಯ ಹಸ್ತಪ್ರತಿಗಳನ್ನು (7ನೆಯ ಶತಮಾನ) ನೋಡಿದುದಾಗಿಯೂ ಗುಜರಾತಿನಲ್ಲಿರುವ ಪಾಟನ್ ಹಸ್ತಪ್ರತಿಗಳ ಭಂಡಾರ ಅತ್ಯಂತ ಪ್ರಾಚೀನವಾದ ಹಸ್ತಪ್ರತಿಗಳನ್ನು ಹೊಂದಿದ್ದು, 1101ರ (ವಿ.ಸಂ. 1157) ನಿಶಿತಚೂರ್ಣಿ ಎಂಬ ಹಸ್ತಪ್ರತಿ ಇರುವುದಾಗಿಯೂ ಬರೋಡ ಓರಿಯಂಟಲ್ ಇನ್‌ಸ್ಟಿಟ್ಯೂಟಿನ ನಿರ್ದೇಶಕರಾದ ಬಿ. ಭಟ್ಟಾಚಾರ್ಯ ತಿಳಿಸಿದ್ದಾರೆ.

ಜಯಸಲ್ಮೀರ್‌ನಲ್ಲಿ ಜೈನತತ್ತ್ವಕ್ಕೆ ಸಂಬಂಧಪಟ್ಟ ಜ್ಞಾನಭಂಡಾರಗಳಿವೆ. ಪುರಾತನ ಓಲೆ ಹಸ್ತಪ್ರತಿಗಳ ಸಂಗ್ರಹ ಶಂಬುನಾಥ್ ಜೈನಮಂದಿರದ ಹತ್ತಿರವಿರುವ ಕೋಟೆಯಲ್ಲಿವೆ. ಇವುಗಳಲ್ಲಿ ಕುವಲಯಮಾಲಾ, ಮಹಾಪುರುಷ ಚರಿತ, ವಸುದೇವ ಹಿಂಡಿ ಮೊದಲಾದ ಮುಖ್ಯ ಗ್ರಂಥಗಳಿವೆ. ಪಂಚಮಿಕಹ ಎಂಬ ಗ್ರಂಥದ ಹಸ್ತಪ್ರತಿಯ ಕಾಲ (ವಿ.ಶ 1109) 1053 ಎಂದು ಜೋದಪುರದ ಜಿನಸಾಗರ ಸೂರಿ ಹೇಳುತ್ತಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳ ಕೋಶಾಗಾರದಲ್ಲಿ ಕಾಲ ಉಲ್ಲೇಖವಾಗಿರುವ ಪುರಾತನ ಗ್ರಂಥವೆಂದರೆ ಸು. 1235ರಲ್ಲಿದ್ದ ಗುಣವರ್ಮನ ಪುಷ್ಪದಂತ ಪುರಾಣವೆಂಬ ಚಂಪೂಗ್ರಂಥ. ಈ ಪ್ರತಿಯ ಕಾಲ 1436. ಇದಕ್ಕಿಂತಲೂ ಹಿಂದಿನದಾದ ಓಲೆಗ್ರಂಥವೆಂದರೆ ಶ್ರವಣಬೆಳಗೊಳದ ಜೈನಮಠದಲ್ಲಿರುವ ಪಂಪನ ಆದಿಪುರಾಣ. ಪ್ರತಿಯ ಕಾಲ 1379. ಕಾಲ ನಮೂದಾಗಿರುವ ಮತ್ತೊಂದು ಮುಖ್ಯ ಪ್ರತಿಯೆಂದರೆ 1554ರಲ್ಲಿ ನಕಲಾಗಿರುವ ಗದುಗಿನ ನಾರಣಪ್ಪನ ಮಹಾಭಾರತದ ಪ್ರತಿ. ಇದರ ಪ್ರತಿ ಪತ್ರದ ಎರಡು ರಂಧ್ರಗಳಿಗೂ ಬೆಳ್ಳಿಯ ಉಂಗುರಗಳನ್ನು ಅಳವಡಿಸಲಾಗಿದೆ. ಕಟ್ಟಲು ಪೋಣಿಸುವ ದಾರವನ್ನು ಅತ್ತಿತ್ತ ಎಳೆಯುವಾಗ ಹರಿಯದಿರಲೆಂಬ ಶ್ರದ್ಧೆಯಿಂದ ಈ ಬೆಳ್ಳಿಯ ಉಂಗುರಗಳನ್ನು ಅಳವಡಿಸಿರುವುದು ಅತ್ಯಂತ ಮೆಚ್ಚುಗೆಯ ವಿಷಯವಾಗಿದೆ.

ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ದೇವೀಸ್ತೋತ್ರ ಮತ್ತು ರಾಮಾಯಣದ ಭಾಗವಾದ ಸುಂದರಕಾಂಡ ಓಲೆಗ್ರಂಥಗಳು ಸೂಕ್ಷ್ಮಲಿಪಿಗೆ ಪ್ರಸಿದ್ಧವಾಗಿವೆ. ದೇವೀಸ್ತೋತ್ರದಲ್ಲಿ ಒಟ್ಟು 90 ಪತ್ರಗಳಿದ್ದು ಪ್ರತಿ ಪತ್ರವೂ 3 1/4 ×1 1/2 ಅಂಗುಲ ಅಳತೆಯುಳ್ಳದ್ದಾಗಿದೆ. ಬರವಣಿಗೆಯ ಅಳತೆ 2 1/2 ×1 1/3 ಅಂಗುಲ. ಈ ಉದ್ದದಲ್ಲಿ 25 ಅಕ್ಷರಗಳನ್ನು ಕೊರೆದಿದ್ದಾರೆ. ಅಗಲದಲ್ಲಿ 18–23 ಪಂಕ್ತಿಗಳಿವೆ. ಇದು ತೆಲುಗು ಲಿಪಿಯಲ್ಲಿದೆ. ಸುಂದರಕಾಂಡ ಗ್ರಂಥಾಕ್ಷರದಲ್ಲಿದೆ. ಇದರ ಪ್ರತಿಪತ್ರವೂ 4 1/2 ×1 3/4 ಅಂಗುಲ; ಅಳತೆಯುಳ್ಳದ್ದಾದರೂ ಬರಗಣಿಗೆಯ ಭಾಗದ ಅಳತೆ 3 3/4 ×1 1/2 ಅಂಗುಲ. ಈ ಉದ್ದದಲ್ಲಿ 47 ಅಕ್ಷರಗಳಿದ್ದು, ಅಗಲದಲ್ಲಿ 21 – 25 ಸಾಲುಗಳಿವೆ. ಇವುಗಳ ಜೊತೆಗೆ ಇದೇ ಮಾದರಿಯಲ್ಲಿ ಬರೆದಿರುವ, ಹೆಸರು ತಿಳಿಯದ ಯಾವುದೋ ಗ್ರಂಥದ ಒಂದು ಪತ್ರದ ಅಳತೆ 18 ×11/4 ಅಂಗುಲ; 1 1/4 ಅಂಗುಲ ಅಗಲದಲ್ಲಿ 22 ಪಂಕ್ತಿಗಳಿದ್ದು 18 ಅಂಗುಲ ಅಗಲದಲ್ಲಿ 420 ಅಕ್ಷರಗಳಿವೆ ಎಂದಾಗ ಬೆರಗು ಹುಟ್ಟಿ ಕುತೂಹಲ ಕೆರಳುವುದು ಸಹಜವಾಗಿದೆ.

ಮಹಾಧವಳದ ಒಂದು ಪತ್ರ

ತಾಲ ಮತ್ತು ಶ್ರೀತಾಲಗಳಲ್ಲಿ ತಾಳೆಗರಿಗಳನ್ನೇ ಹೆಚ್ಚಾಗಿ ಉಪಯೋಗಿಸಿರುವುದು ಕಂಡುಬರುತ್ತದೆ. ಏಕೆಂದರೆ ಇದು ಸ್ವಲ್ಪ ಮಂದವಾಗಿ ಅಗಲವಾದ ಕಬ್ಬಿಣದ ಸಲಾಕೆಯಂಥ ಕಂಠದಿಂದ ಕೊರೆಯಲು ಅನುಕೂಲವಾಗಿತ್ತು. ಒಂದು ಸಾರಿ ಕೊರೆದ ಅಕ್ಷರಗಳು ಮತ್ತು ಅಳಿಸಿಹೋಗುತ್ತವೆಂಬ ಹೆದರಿಕೆ ಇರಲಿಲ್ಲ. ಕೊರೆದ ಅಕ್ಷರಗಳ ಮೇಲೆ ಕಪ್ಪುಬಣ್ಣದ ಪುಡಿಯನ್ನು ಹಚ್ಚಿದರೆ ಕೊರೆದ ಭಾಗದಲ್ಲಿ ಆ ಬಣ್ಣ ಸೇರಿ ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತಿದ್ದುವು. ಈ ಕಪ್ಪು ಬಣ್ಣ ಮಾಸಿ ಹೋದಾಗ ಮತ್ತೆ ಆ ಬಣ್ಣವನ್ನೇ ಉಪಯೋಗಿಸಿ ಚೆನ್ನಾಗಿ ಕಾಣುವಂತೆ ಮಾಡಬಹುದಾಗಿತ್ತು.

ಶ್ರೀತಾಲ ಎಲೆ ಬಹಳ ತೆಳುವಾಗಿರುವುದರಿಂದ ಕೊರೆಯಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇದು ನಯವಾಗಿ ಮೃದುವಾಗಿದ್ದು ಮಸಿಯನ್ನು ಸುಲಭವಾಗಿ ಹೀರಬಲ್ಲುದಾಗಿದ್ದಿತು. ಬರೆದಾಗ ಚೆನ್ನಾಗಿ ಕಂಡರೂ ಯಾವುದೇ ಕಾರಣದಿಂದ ಅಳಿಸಿಹೋದಾಗ ಅದನ್ನು ಮತ್ತೆ ತುಂಬುವುದು ಸಮಸ್ಯೆಯಾಗಿ ಪರಿಣಮಿಸುತ್ತಿತ್ತು. ಅಂತಹದೇ ಮತ್ತೊಂದು ಪ್ರತಿ ದೊರೆಯದೆ ಅದನ್ನು ತುಂಬುವಂತಿರಲಿಲ್ಲ. ಆದ್ದರಿಂದಲೇ ಶ್ರೀತಾಲಕ್ಕಿಂತ ಹೆಚ್ಚಾಗಿ ತಾಳೆಗರಿಯನ್ನೇ ಎಲ್ಲೆಡೆಯೂ ಬಳಸಿದ್ದಾರೆ.

ತಾಳೆ ಎಲೆಗಳನ್ನು ಒಣಗಿಸಿ ಬೇಯಿಸಿ ಅಥವಾ ನೀರಿನಲ್ಲಿ ನೆನೆಸಿ ಮತ್ತೆ ಒಣಗಿಸಿ ಬೇಕಾದ ಅಳತೆಗೆ ಕತ್ತರಿಸಿ ಬರೆಯಲು ಉಪಯೋಗಿಸುತ್ತಿದ್ದರು ಎಂಬುದಾಗಿ ರಾಜೇಂದ್ರಲಾಲ್ ಮಿತ್ರ ಅವರು ತಿಳಿಸುತ್ತಾರೆ. ಗಿಡದಿಂದ ಎಲೆಯ ಮೋತೆ ಹೊರಹೊರಟು ಇನ್ನೇನು ಬಿಚ್ಚಿ ಹರಡುತ್ತದೆ ಎನ್ನುವಷ್ಟರಲ್ಲಿ ಹಾಳೆಯನ್ನು ಕತ್ತರಿಸಿ ತಂದು, ಕೊನೆಯಪಕ್ಷ ಏಳು ದಿನಗಳವರೆಗಾದರೂ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಅನಂತರ ಮೂರು ತಿಂಗಳವರೆಗಾದರೂ ನೆಲದಲ್ಲಿ ಹೂಳಿ, ತೆಗೆದು ಶುದ್ಧಗೊಳಿಸಿ, ಬೇಕಾದ ಅಳತೆಗೆ ಎಲೆಗಳನ್ನು ಕತ್ತರಿಸಿ ಅಡಿಗೆಮನೆಯ ಅಟ್ಟಗಳಲ್ಲಿಡುತ್ತಿದ್ದರು. ಅಡಿಗೆಮನೆಯ ಹೊಗೆಯಿಂದ ಅವು ಹದಗೊಳ್ಳುತ್ತಿದ್ದುವು. ಹೀಗೆ ಹದಗೊಂಡವನ್ನು ತಮಗೆ ಬೇಕಾದಾಗ ತೆಗೆದು ಉಪಯೋಗಿಸುತ್ತಿದ್ದರು–ಎಂಬುದಾಗಿ ಬಿ. ಭಟ್ಟಾಚಾರ್ಯರು ತಿಳಿಸುತ್ತಾರೆ.

ತಾಳೆಯ ಗರಿಗಳನ್ನು ಹಸಿಯದಾಗಿರುವಾಗ ಕುದಿನೀರಿನಲ್ಲಿ ಬೇಯಿಸಿ ಒಣಗಿಸಿ ನುಣುಪಾದ ಗಾರೆಯ ಕಲ್ಲಿನಿಂದ ಉಜ್ಜಿ ಮೃದುವಾಗಿ ಮಾಡುತ್ತಾರೆ. ಆಗ ಅದರ ಎರಡು ಪಕ್ಕಗಳೂ ಸಮತಲವಾಗುತ್ತವೆ. ಬರೆಹಕ್ಕೆ ಯೋಗ್ಯವಾಗುತ್ತವೆ–ಎಂದು ಡಿ.ಎಲ್. ನರಸಿಂಹಾಚಾರ್ ತಿಳಿಸಿದ್ದಾರೆ.

ಹೀಗೆ ಓಲೆಗರಿಗಳನ್ನು ವಿವಿಧ ರೀತಿಯಲ್ಲಿ ಹದಗೊಳಿಸಿ ಬರೆವಣಿಗೆಗೆ ಉಪಯೋಗಿಸುವಾಗ ವಿಷಯದ ಜೊತೆಗೆ ವಿಷಯನಿರೂಪಣೆಗೆ ಸಹಾಯಕವಾಗಿ ಕೆಲವು ಪ್ರತಿಗಳಲ್ಲಿ ಅಲ್ಲಲ್ಲಿಯೇ ಚಿತ್ರಗಳನ್ನೂ ಕೊರೆದಿದ್ದಾರೆ. ಇಂಥ ಚಿತ್ರಗಳನ್ನು ಮೂಡಬಿದರೆ ಮಠದಲ್ಲಿರುವ ಅರ್ಧಮಾಗಧಿ ಭಾಷೆಯ ಕನ್ನಡ ಶಾಸನ ಲಿಪಿಯ ಜೈನ ಧವಳಗ್ರಂಥದಲ್ಲಿಯೂ ನೇಮಿಚಂದ್ರನ ನೇಮಿನಾಥಪುರಾಣ ಹಸ್ತಪ್ರತಿಯಲ್ಲಿಯೂ ಕಾಣಬಹುದಾಗಿದೆ

ಈ ಓಲೆಗ್ರಂಥಗಳಲ್ಲಿ ವಿವಿಧ ರೀತಿಯ ಬರೆವಣಿಗೆಯನ್ನೂ ಒಂದೇ ಕೃತಿಯ ಹಲವಾರು ಪ್ರತಿಗಳನ್ನೂ ನಾವು ಕಾಣುತ್ತಿರುವುದು ಮೂಲಗ್ರಂಥಗಳನ್ನು ನಕಲುಮಾಡಿ ಜನರು ಉಪಯೋಗಿಸುತ್ತಿದ್ದುದರಿಂದ. ನಮಗೆ ಕೃತಿಕಾರನೇ ಬರೆದ ಪ್ರತಿಗಳು ದೊರೆಯುವುದು ದುರ್ಲಭ. ದೊರೆಯುವ ಪ್ರತಿಗಳೆಲ್ಲವೂ ನಕಲುಗಳೇ. ಇಂಥ ನಕಲುಗಳನ್ನು ಮಾಡುವಾಗ್ಗೆ ವಿವಿಧ ಪ್ರತಿಕಾರರು ವಿವಿಧ ರೀತಿಯ ಬರೆವಣಿಗೆಯನ್ನೂ ಮಾಡಿದ್ದಾರೆ. ಆಯಾ ಭಾಷಾಗ್ರಂಥಗಳಲ್ಲಿ ಆಯಾ ಭಾಷಾಲಿಪಿಯನ್ನೇ ಸಾಮಾನ್ಯವಾಗಿ ಉಪಯೋಗಿಸಿದರೂ ಓದುಗರ ಇಚ್ಛೆಗೆ ಅನುಸಾರವಾಗಿ ಆಯಾ ಪ್ರಾಂತದ ವಿಭಾಗದ ಜನರ ರೂಢಿಗೆ ತಕ್ಕಂತೆ ಕನ್ನಡ, ತಮಿಳು, ತೆಲುಗು, ತುಳು, ತಿಗಳಾರಿ, ನಾಗರಿ, ಗ್ರಂಥ– ಮೊದಲಾದ ಹಲವಾರು ಲಿಪಿಗಳನ್ನು ಬೇರೆ ಬೇರೆ ಭಾಷಾಗ್ರಂಥಗಳಲ್ಲಿ ಬಳಸಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಭಾಷಾಭೂಷಣ ಹಸ್ತಪ್ರತಿ ಈ ಮಾದರಿಗೆ ಅತ್ಯಂತ ಉತ್ತಮ ನಿದರ್ಶನವಾಗಿದೆ. ಇದರಲ್ಲಿ ನೋಡುವುದು ಮಲಯಾಳಿ ಲಿಪಿಯನ್ನು, ಓದುವುದು ಸಂಸ್ಕೃತ ಭಾಷೆಯನ್ನು ತಿಳಿಯುವುದು ಕನ್ನಡ ವ್ಯಾಕರಣವನ್ನು.

ನಕಲುಮಾಡುವ ವ್ಯಕ್ತಿಗಳು ಬಹುಪ್ರಯಾಸದಿಂದ ಈ ಕೆಲಸ ನಿರ್ವಹಿಸುತ್ತಿದ್ದರು. ಕೆಲವರು ಅದನ್ನೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ನಕಲುಗಳನ್ನೆತ್ತಿದ ಪ್ರತಿಕಾರರು ಪ್ರತಿಗಳ ಕೊನೆಯಲ್ಲಿ ತಂತಮ್ಮ ವಿಳಾಸಗಳನ್ನು ಕೊಡುವುದರ ಜೊತೆಗೆ ಕೆಲವರು ತಿಥಿ ವಾರ ನಕ್ಷತ್ರಗಳನ್ನೂ ಕೊಟ್ಟಿದ್ದಾರೆ. ತಪ್ಪಿದ್ದರೆ ತಿದ್ದಿಕೊಳ್ಳಿರೆಂದು ಪ್ರಾರ್ಥಿಸಿದ್ದಾರೆ.

ರಾಸಾಯನಿಕ ಕ್ರಿಯೆಯಿಂದ ತಯಾರಾದ ಕಾಗದಕ್ಕಿಂತಲೂ ಪ್ರಕೃತಿಸಹಜವಾಗಿ ಬಂದ ಓಲೆಗರಿ ಹೆಚ್ಚು ಬಾಳಿಕೆ ಬರುವಂಥದೂ ಬಹುಬೇಗ ಹುಳುಗಳ ಹೊಡೆತಕ್ಕೆ ಬಲಿಯಾಗದುದೂ ಆದರೂ ಶೀತೋಷ್ಣಗಳಿಂದಲೂ ಹುಳುಗಳ ಕಾಟದಿಂದಲೂ ಹೊರತಾದುದಲ್ಲ. ಆದುದರಿಂದ ಈ ಅಮೂಲ್ಯ ಜ್ಞಾನಸಂಪತ್ತನ್ನು ರಕ್ಷಿಸುವಲ್ಲಿ ಹಲವರು ಹಲವು ಮಾರ್ಗಗಳನ್ನು ಅನುಸರಿಸಿದ್ದಾರೆ. ಕೆಲವರು ಅವನ್ನು ಬಣ್ಣದ ಬಟ್ಟೆಗಳಲ್ಲಿ ಸುತ್ತಿಟ್ಟು ದೂಳು ಮತ್ತು ಹುಳುಗಳಿಂದ ರಕ್ಷಿಸಿದ್ದಾರೆ. ಈ ಬಟ್ಟೆಯಲ್ಲಿ ಕೆಂಪು ಮತ್ತು ಹಳದಿ ಬಣ್ಣದವೂ ರೇಷ್ಮೆ ಬಟ್ಟೆಯೂ ಹುಳುಗಳನ್ನು ದೂರವಿಡಬಲ್ಲ ಶಕ್ತಿಯನ್ನು ಪಡೆದಿವೆಯೆಂದು ತಿಳಿದುಬರುತ್ತದೆ. ಕೆಲವರು ಓಲೆಕಟ್ಟಿನ ಆಕಾರಕ್ಕೆ ತಕ್ಕ ಮರದ ಪೆಟ್ಟಿಗೆಗಳಲ್ಲಿಟ್ಟು ಕಾಪಾಡಿದ್ದಾರೆ. ಮತ್ತೆ ಕೆಲವೆಡೆಯಲ್ಲಿ ಘೋಡಾವಚ, ಅದಕ್ಕಾಗಿಯೇ ಸಿದ್ಧಪಡಿಸಿದ ಎಣ್ಣೆ– ಮೊದಲಾದುವುಗಳನ್ನೂ ಉಪಯೋಗಿಸುತ್ತಿದ್ದರು. ಇವುಗಳ ಸಂಗ್ರಹ, ಸಂರಕ್ಷಣೆ ಮತ್ತು ಪ್ರಕಟಣೆಗಾಗಿ ಹಲವಾರು ಸಂಸ್ಥೆಗಳು ಸ್ಥಾಪಿತವಾಗಿ ಕೆಲಸಮಾಡುತ್ತಿವೆ (**ನೋಡಿ– ಪಪೈರಸ್**).

(ಎಸ್.ಬಿ.ಎಸ್.)

**ಓಲೆಮರ:** ಪಾಮೇಸೀ ಅಥವಾ ಅರಿಕೇಸೀ ಕುಟುಂಬಕ್ಕೆ ಸೇರಿದ ಕಾರಿಫ ಜಾತಿಯ ವೃಕ್ಷ. ಇದರಲ್ಲಿ ಸು. 20 ಪ್ರಭೇದಗಳಿವೆ. ಇವುಗಳಲ್ಲಿ ಕಾರಿಫ ಟಾಲಿಯೇರ ಮತ್ತು ಕಾ.ಅಂಬ್ರಾಕ್ಯುಲಿಫೆರ ಪ್ರಭೇದಗಳು ಮುಖ್ಯವಾದುವು. ಇವಕ್ಕೆ ಶ್ರೀತಾಲ, ತಾಲ, ತಾರ, ತಾಡಪತ್ರ ಮುಂತಾದ ಇತರ ಸಾಮಾನ್ಯ ಹೆಸರುಗಳೂ ಉಂಟು. ಏಷ್ಯದ ಉಷ್ಣಪ್ರದೇಶಗಳಲ್ಲೆಲ್ಲ ಇದು ವ್ಯಾಪಿಸಿದೆ. ದಕ್ಷಿಣ ಭಾರತ, ಮಲಯ, ಅಂಡಮಾನ್ ದ್ವೀಪಗಳು ಮುಂತಾದೆಡೆಗಳಲ್ಲಿ ಹೇರಳವಾಗಿ ಕಾಣಬರುತ್ತದೆ. ಶ್ರೀಲಂಕ, ಮಯನ್ಮಾರ್‌ಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವುದಲ್ಲದೆ ಇದನ್ನು ನೆಟ್ಟು ಬೆಳೆಸುವುದೂ ಉಂಟು. ಉದ್ಯಾನಗಳಲ್ಲಿ ಅಲಂಕಾರ ಸಸ್ಯವಾಗಿ ಇದನ್ನು ಬೆಳೆಸಿರುವುದನ್ನು ಕಾಣಬಹುದು. ಬೆಳವಣಿಗೆ ಬಲು ನಿಧಾನ. ಸಸ್ಯ ತೆಂಗಿನಮರವನ್ನು ಹೋಲುತ್ತದೆ. ತೆಂಗಿನಂತೆ ಸು. 60'–80' ಎತ್ತರಕ್ಕೆ ಬೆಳೆಯುತ್ತದೆ. ಕಾಂಡ ಕಂಬದಂತೆ ನೇರ, ಕವಲೊಡೆಯುವುದಿಲ್ಲ. ತುದಿಯಲ್ಲಿ ಗರಿಗಳ ಮಕುಟವಿದೆ. ಎಲೆಗಳು ಹಸ್ತಾಕಾರದಲ್ಲಿದ್ದು (ಪಾಮೇಟ್) ಅಗಲವಾಗಿ ಬೀಸಣಿಗೆಯಂತೆ ಕಾಣುತ್ತವೆ. ಒಂದೊಂದಕ್ಕೆ ತುಂಬ ಉದ್ದವಾದ 5'–10' ತೊಟ್ಟಿದೆ. ತೊಟ್ಟಿನ ಎರಡೂ ಅಂಚುಗಳಲ್ಲಿ ಮುಳ್ಳುಗಳಿರುವುದೊಂದು ವೈಶಿಷ್ಟ್ಯ. ಎಲೆಯ ಅಲಗು 80–100 ವಿಭಾಗಗಳಾಗಿ ಸೀಳಿಕೊಂಡಿವೆ. ಕಾಂಡದ ತುದಿಯ ಸುತ್ತ ಹಸಿರು ಎಲೆಗಳ ಕೆಳಗೆ ಒಣಗಿದ ಗರಿಗಳು ತೂಗುಬಿದ್ದಿರುವುದುಂಟು. ಪ್ರಭೇದಕ್ಕನುಗುಣವಾಗಿ ಮರಕ್ಕೆ 20–80 ವರ್ಷ ವಯಸ್ಸಾದಾಗ, ಕಾಂಡದ ತುಟ್ಟತುದಿಯಲ್ಲಿ ಹೂಗೊಂಚಲು ಮೂಡಲು ಆರಂಭವಾಗುತ್ತದೆ. ಹೂ ಬಿಡುವ ಮುನ್ನ ಗರಿಗಳೆಲ್ಲ ಉದುರಿಹೋಗುವುದೂ ಮರ ತನ್ನ ಜೀವಿತದಲ್ಲಿ ಒಮ್ಮೆ ಮಾತ್ರ ಹೂ ಬಿಡುವುದೂ ಇದರ ಸೋಜಿಗಗಳು. ಹೂಗೊಂಚಲು ತಾಳುಗುಚ್ಛ (ಸ್ಪೇಡಿಕ್ಸ್) ಮಾದರಿಯದು, ಬೃಹದಾಕಾರದ (ಉದ್ದ 10'–20') ಇದು ವಿಪುಲವಾಗಿ ಕವಲೊಡೆದಿರುತ್ತದೆ. ಒಂದೊಂದು ಕವಲಿನಲ್ಲಿಯೂ ಹಲವಾರು ಕದಿರುಗೊಂಚಲುಗಳು (ಸ್ಪೈಕ್ಸ್) ಮತ್ತು ಅವುಗಳಲ್ಲಿ ಜೋಡಣೆಗೊಂಡಿರುವ ಅಸಂಖ್ಯಾತವಾದ ಪುಟ್ಟ ಹೂಗಳು ಇವೆ. ಹೂಗೊಂಚಲು ಹೊರಬಂದು ಸಂಪೂರ್ಣವಾಗಿ ಅರಳಿದಾಗ ಮರ ತೇರಿನಂತೆ ಬಹು ಅಂದವಾಗಿ



ಕಾಣುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ಇದಕ್ಕೆ ಕಾರಿಫ ಎಂದು ಹೆಸರು ಬಂದಿರುವುದು (ಗ್ರೀಕ್ ಭಾಷೆಯಲ್ಲಿ ಕಾರಿಫ ಎಂದರೆ ತುದಿ ಎಂದು ಅರ್ಥ). ಹೂವಿನ ರಚನೆ ಈ ರೀತಿ ಇದೆ; ಮೂರು ಮೂರರಂತೆ ಜೋಡಣೆಗೊಂಡಿರುವ ಆರು ಪೆರಿಯಾಂತುಗಳು. ಆರು ಕೇಸರಗಳು ಮತ್ತು ಮೂರು ಕಾರ್ಪೆಲ್ಲುಗಳನ್ನೊಳಗೊಂಡ ಉಚ್ಚಸ್ಥಾನದ ಅಂಡಾಶಯ. ಅಂಡಕೋಶದಲ್ಲಿ 3 ಕೋಣೆಗಳಿವೆ. ಒಂದೊಂದರಲ್ಲಿಯೂ ಒಂದೊಂದು ಅಂಡಕವಿದೆ. ಮೆದುವಾಗಿ ಗುಂಡಾಗಿರುವ ಹಣ್ಣಿನಲ್ಲಿ ಒಂದೇ ಬೀಜವಿರುತ್ತದೆ. ಈ ಮಾದರಿಯನ್ನು ಅಷ್ಟಿಫಲ (ಡ್ರೂಪ್) ಎನ್ನುತ್ತಾರೆ. ಬೀಜಗಳು ಬಲಿತಾದ ಮೇಲೆ ಮರ ಸತ್ತುಹೋಗುತ್ತದೆ.

ಓಲೆಮರ ತೆಂಗಿನಮರದಂತೆಯೇ ತುಂಬ ಉಪಯುಕ್ತವಾದುದು. ಇದರ ಎಲೆಗಳನ್ನು ಛಾವಣಿಗಳನ್ನು ಮುಚ್ಚಲೂ, ಬೀಸಣಿಗೆ, ಚಾಪೆ, ಕೊಡೆ, ಬುಟ್ಟಿ ಮುಂತಾದುವನ್ನು ಮಾಡಲೂ ಬಳಸುತ್ತಾರೆ. ಅಲ್ಲದೆ ಹಿಂದಿನ ಕಾಲದಲ್ಲಿ ಗರಿಗಳನ್ನು ಕತ್ತರಿಸಿ ಹದಗೊಳಿಸಿ ಬರೆವಣಿಗೆಗಾಗಿ ಉಪಯೋಗಿಸುತ್ತಿದ್ದರು (**ನೋಡಿ– ಓಲೆ–ಗ್ರಂಥಗಳು**). ಗರಿಗಳ ತೊಟ್ಟಿನಿಂದ ದೃಢವಾದ ಕಂದುಬಣ್ಣದ ಕಾಗದ ತಯಾರಿಸುತ್ತಾರೆ. ಕಾಂಡದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಿಷ್ಟವಿದೆ. ಅದನ್ನು ಹೊರತೆಗೆದು ಒಂದು ವಿಧದ ಅಕ್ಕಿಯನ್ನು (ಸ್ಯಾಗೊ) ತಯಾರಿಸುವುದುಂಟು. ಕಾಂಡದಿಂದ ನಾರನ್ನೂ ತೆಗೆಯಬಹುದು. ಕೆಲವು ಕಡೆ ಎಳೆಯ ಕಾಯಿಗಳನ್ನು ತಿನ್ನುವ ರೂಢಿಯಿದೆ. ಅವು ಹಣ್ಣಾಗಿ ಬಲಿಯುತ್ತ ಹೋದಂತೆ ಬೀಜಗಳು ವಿಷಪೂರಿತವಾಗುತ್ತವೆ. ಇಂಥ ಬೀಜಗಳನ್ನು ಜಜ್ಜಿ ತಯಾರಿಸಿದ ಸರಿಯನ್ನು ಕೆರೆ, ನದಿಗಳಲ್ಲಿ ಕದಡಿದರೆ ಆ ನೀರು ಕುಡಿದ ಮೀನುಗಳು ನಿಶ್ಚೇತನಗೊಳ್ಳುತ್ತವೆ. ಮೀನುಗಳನ್ನು ಹಿಡಿಯಲು ಈ ವಿಧಾನವನ್ನನುಸರಿಸುತ್ತಾರೆ. ಬೀಜಗಳು ಗಟ್ಟಿಯಾಗಿ ಬಿಳಿಯ ಬಣ್ಣಕ್ಕಿರುತ್ತವೆ. ಇವುಗಳಿಂದ ಮಣಿಗಳನ್ನೂ ಗುಂಡಿಗಳನ್ನೂ ಮಾಡುತ್ತಾರೆ.

ಕಾರಿಫ ಜಾತಿಯ ಇನ್ನೊಂದು ಪ್ರಭೇದ ಕಾ.ಇಲೇಟ ಎಂಬುದು ಬರ್ಮ, ಜಾವ, ಅಂಡಮಾನ್ ದ್ವೀಪಗಳು ಮತ್ತು ಫಿಲಿಪೀನ್ಸ್‌ಗಳಲ್ಲಿ ಬೆಳೆಯುತ್ತದೆ. ಕಾ.ಟಾಲಿಯೇರ ಮತ್ತು ಕಾ.ಅಂಬ್ರಾಕ್ಯುಲಿಫೆರಗಳಂತೆಯೇ ಇರುವ ಇದೂ ಹಲವು ರೀತಿಯಿಂದ ಉಪಯುಕ್ತ. ಒರಟಾದ ಗರಿಗಳಿಂದ ಚಾಪೆ, ಹಾಯಿಪಟ ಮುಂತಾದುವನ್ನೂ ನಯವಾದ ಮತ್ತು ಉತ್ತಮವಾದ ಗರಿಗಳಿಂದ ಹ್ಯಾಟುಗಳನ್ನೂ ಬುಟ್ಟಿಗಳನ್ನೂ ಮಾಡುತ್ತಾರೆ. ಎಳೆಯ ಗರಿಗಳ ತೊಟ್ಟಿನಿಂದ ಪಡೆಯಬಹುದಾದ ನಾರನ್ನು ಬ್ಯಾಂಗ್‌ಕಾಕ್ ಹ್ಯಾಟ್ ಮಾಡುವುದಕ್ಕೂ ಒರಟು ಬಟ್ಟೆಯನ್ನು ನೇಯುವುದಕ್ಕೂ ಉಪಯೋಗಿಸುತ್ತಾರೆ. ಈ ಬಟ್ಟೆಯಿಂದ ಚೀಲಗಳು, ತೆರೆಗಳು ಮತ್ತು ಹೊದಿಕೆಗಳನ್ನು ತಯಾರಿಸಬಹುದು.

ಈ ಜಾತಿಯ ಸಸ್ಯಗಳನ್ನು ಬೀಜಗಳಿಂದ ವೃದ್ಧಿ ಮಾಡುತ್ತಾರೆ. ಜೌಗಿಲ್ಲದ ಫಲವತ್ತಾಗಿರುವ ಗೋಡುಮಣ್ಣಿನಲ್ಲಿ ಇವು ಚೆನ್ನಾಗಿ ಬೆಳೆಯುತ್ತವೆ. (ಡಿ.ಎಂ.)

**ಓಲ್ಡನ್‌ಬರ್ಗ್, ಹರ್ಮನ್:** 1854–1920. ಪ್ರಾಚೀನ ಭಾರತದ ವಿವಿಧ ಮುಖಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಅಭ್ಯಸಿಸಿ ಅನೇಕ ಉದ್ಗ್ರಂಥಗಳನ್ನು ರಚನೆ ಮಾಡಿರುವ ವಿದ್ವಾಂಸ. ಬರ್ಲಿನ್‌ನಲ್ಲಿ ಪ್ರಾಧ್ಯಾಪಕನಾಗಿದ್ದುಕೊಂಡು ಗೃಹ್ಯಸೂತ್ರಗಳನ್ನೂ (1886) ಋಗ್ವೇದದ ಸೂತ್ರಗಳನ್ನೂ (1888) ಇಂಗ್ಲಿಷ್ ಭಾಷೆಗೆ ಪರಿವರ್ತಿಸಿ, ವೈದಿಕಧರ್ಮ (1894) ಋಗ್ವೇದ ಟಿಪ್ಪಣಿಗಳ ಎರಡು ಸಂಪುಟಗಳು (1909,1912)–ಇತ್ಯಾದಿ ಉದ್ಗ್ರಂಥಗಳನ್ನು ಬರೆದಿದ್ದಾನೆ. ಮಹಾಭಾರತದ ಹಸ್ತಪ್ರತಿಗಳನ್ನು ಕಲೆಹಾಕಿ, ಅವನ್ನೆಲ್ಲ ಪರಿಶೀಲಿಸಿ ಮಹಾಭಾರತದ ಉತ್ಪತ್ತಿ ಹಾಗು ಬೆಳೆವಣಿಗೆಯ ಬಗ್ಗೆ ಒಂದು ಅಪೂರ್ವ ಗ್ರಂಥವನ್ನು ಜರ್ಮನ್ ಭಾಷೆಯಲ್ಲಿ ಬರೆದಿದ್ದಾನೆ. ಪ್ರಾಚೀನ ಗದ್ಯಗ್ರಂಥಗಳ ಶೈಲಿಯನ್ನು ಕುರಿತು ಈತ ರಚಿಸಿದ ಗ್ರಂಥ ಮಹತ್ತ್ವದ್ದಾಗಿದೆ.

ಇದಲ್ಲದೆ ಪಾಲೀ ಭಾಷೆಯ ಕ್ಷೇತ್ರದಲ್ಲಿ ಈತ ಮಾಡಿದ ಸಾಧನೆ ಭಾರತೀಯ ಸಾಹಿತ್ಯಚರಿತ್ರೆಯಲ್ಲಿ ಒಂದು ಮುಖ್ಯ ಮೈಲಿಗಲ್ಲು. ವಿನಯಪಿಟಕ, ದೀಪವಂಶ ಇತ್ಯಾದಿ ಬೌದ್ಧಗ್ರಂಥಗಳ ಪ್ರಕಟಣೆ ಆಸಕ್ತರಿಗೆ ಕೈದೀವಿಗೆಯಾಗಿದೆ. ಲಂಡನ್ನಿನ ಇಂಡಿಯ ಆಫೀಸ್ ಗ್ರಂಥಾಲಯದಲ್ಲಿರುವ ಪಾಲೀ ಹಸ್ತಪ್ರತಿಸೂಚಿಯನ್ನು ಈತನೇ ಸಿದ್ಧಪಡಿಸಿದ್ದಾನೆ. ಗೌತಮ ಬುದ್ಧನ ಜೀವನ ಹಾಗೂ ತತ್ತ್ವಜ್ಞಾನದ ಬಗ್ಗೆ ಈತ ಬರೆದಿರುವ ಗ್ರಂಥ ಹೆಸರು ಗಳಿಸಿದೆ. (ಬಿ.ಆರ್.ಎಂ.)

**ಓಲ್ಡುವೈ:** ಮಾನವನ ಉಗಮ ಮತ್ತು ಅವನ ಇತಿಹಾಸ ಪೂರ್ವ ಸಂಸ್ಕೃತಿಗಳನ್ನು ತಿಳಿಯಲು ಬಹಳ ಮುಖ್ಯವಾದ ಸ್ಥಳ. ಪೂರ್ವ ಆಫ್ರಿಕದ ಟ್ಯಾಂಘಾನಿಯದ (ಈಗಿನ ಟಾಂಗನೀಕ) ಆಗ್ನೇಯ ಭಾಗದಲ್ಲಿನ ಸೆರೆಂಗಟಿ ಮೈದಾನದ ಒಂದು ಭಾಗ. ಪ್ಲಿಸ್ಟೊಸೀನ್ ಯುಗದ ಪ್ರಾರಂಭದಲ್ಲಿ ಉದಿಸಿದ ಶಿಲಾಪದರಗಳು ಇಲ್ಲಿನ ಓಲ್ಡುವೈ ನದಿಯ ಬಯಲಿನಲ್ಲಿ ಹರಡಿವೆ. ಪ್ರವಾಹದ ಕೊರೆತದಿಂದ ಇಲ್ಲಿ ಸು. 300 ಅಡಿಗಳ ಆಳವಿರುವ ಕಮರಿಯೊಂದು ಏರ್ಪಟ್ಟು, ಕಮರಿಯ ಪಕ್ಕಗಳಲ್ಲಿ ವಿವಿಧ ಶಿಲಾಪದರಗಳು ಕಂಡುಬಂದಿವೆ.

ಕಮರಿಯ ತಳದಿಂದ ಮೇಲಕ್ಕೆ ಕಂಡುಬರುವ ಪದರಗಳು ಈ ರೀತಿಯಾಗಿವೆ. ತಳದಲ್ಲಿ ಜ್ವಾಲಾಮುಖಿಯ ಸ್ಫೋಟದಿಂದ ಹುಟ್ಟಿದ ಬಸಾಲ್ಟ್ ಶಿಲೆಯ ದಪ್ಪನಾದ ಪದರಗಳಿದ್ದು, ಅದರ ಮೇಲೆ ಕೆಂಪು ಶಿಲೆಯ 100 ಅಡಿ ದಪ್ಪದ ಪದರವೂ ಅನಂತರ ಬೂದುಬಣ್ಣದ ಪದರವೂ ಮೇಲ್ಭಾಗದಲ್ಲಿ ಈಗಿನ ನೆಲಮಟ್ಟವೂ ಇವೆ. ಈ ಪ್ಲಿಸ್ಟೊಸೀನ್ ಶಿಲಾಪದರಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ತಳಗಿನಿಂದ ಮೊದಲನೆಯ ಪದರ ಮತ್ತು ಎರಡನೆಯ ಪದರದ ಕೆಳಭಾಗವನ್ನು ಒಂದು ಗುಂಪಾಗಿಯೂ ಎರಡನೆಯ ಪದರದ ಮೇಲ್ಭಾಗ, ಮೂರನೆಯ ಮತ್ತು ನಾಲ್ಕನೆಯ ಪದರಗಳನ್ನು ಮತ್ತೊಂದು ಗುಂಪಾಗಿಯೂ ಇತ್ತೀಚಿನ ಸಂಶೋಧನೆಗಳಿಂದ ನಿರ್ದೇಶಿಸಲಾಗಿದೆ. ಭೂವಿಜ್ಞಾನ ರೀತ್ಯ ಮೊದಲ ಮತ್ತು ಎರಡನೆಯ ಪದರಗಳ ಕೆಳಭಾಗದಲ್ಲಿ ಇಲ್ಲ. ಫ್ರಾಂಚಿಯನ್ ಯುಗಕ್ಕೆ ಸೇರಿದ ಪ್ರಾಣಿಗಳ ಅವಶೇಷಗಳ ಮೊದಲ ನೆಲೆಗಳಲ್ಲಿ ಸಣ್ಣ ಆಕಾರದ ಸಸ್ತನಿಗಳು, ಪಕ್ಷಿಗಳು ಮತ್ತು ಸರೀಸೃಪಗಳು ಅನಂತರದ ಕಾಲಕ್ಕೆ ಸೇರಿದ ವಿಶಾಲವಾದ ನೆಲೆಗಳಲ್ಲಿ ಬೃಹದಾಕಾರದ ಸಸ್ತನಿಗಳಾದ ಆನೆ, ಹಂದಿ, ಜಿಂಕೆ ಮತ್ತು ಮಾಂಸಭಕ್ಷಕ ಪ್ರಾಣಿಗಳ ಪಳೆಯುಳಿಕೆಗಳೂ ಈ ಗುಂಪಿನ ಪದರಗಳ ಅಂತ್ಯಕಾಲದ ನೆಲೆಗಳಲ್ಲಿ ಉಷ್ಣಹವೆಯಲ್ಲಿ ವಾಸಿಸುವ ಗಜೆಲ್ (ಆಡಿನ ಜಾತಿಗೆ ಸೇರಿದ ಒಂದು ಪ್ರಾಣಿ) ಜಿಂಕೆ ಮತ್ತು ಕುದುರೆಗಳ ಪಳೆಯುಳಿಕೆಗಳೂ ಕಂಡುಬಂದಿವೆ. ಎರಡನೆಯ ಗುಂಪಿನ ಪದರಗಳಲ್ಲಿ ಬೇರೆ ರೀತಿಯ ಪ್ರಾಣಿಗಳ ಅವಶೇಷಗಳು ಗೋಚರವಾಗಿವೆ. ಜೌಗು ಹವೆಯಿದ್ದ ಎರಡನೆಯ ಪದರದ ಮೇಲ್ಮಟ್ಟದಲ್ಲಿ ಹಿಪೊಪೊಟಮಸ್, ಹಂದಿ, ದೈತ್ಯಾಕಾರದ ಕುರಿ, ಕುದುರೆ, ಮಾಂಸಾಹಾರಿ ಪ್ರಾಣಿಗಳು, ಡೈನಾಸರಸ್ ಮತ್ತು ಕಪಿಮಾನವವರ್ಗದ ಸಸ್ತನಿಗಳ ಅವಶೇಷಗಳು ಪ್ರಧಾನವಾಗಿವೆ.

ಈ ವಿವಿಧ ಪದರಗಳ ಹವಾಗುಣವನ್ನು ವಿದ್ವಾಂಸರು ಈ ರೀತಿಯಾಗಿ ನಿರ್ಧರಿಸಿದ್ದಾರೆ. ಮೊದಲು ಮತ್ತು ಎರಡನೆಯ ಪದರದ ಕೆಳಭಾಗಗಳನ್ನು ಹೆಚ್ಚು ಮಳೆ ಸುರಿಯುತ್ತಿದ್ದ, ತೇವ ಹವೆಯಿದ್ದ ಆಫ್ರಿಕದ ಎರಡನೆಯ ಪ್ಲೂವಿಯಲ್ ಯುಗಕ್ಕೂ ಎರಡನೆಯ ಪದರದ ಮೇಲ್ಮಟ್ಟವನ್ನು ಒಣಹವೆಯಿದ್ದ ಎರಡನೆಯ ಪ್ಲೂವಿಯಲ್ ಯುಗದ ಅಂತ್ಯಕಾಲಕ್ಕೂ (ಈ ಕಾಲದಲ್ಲಿ ಅಲ್ಲಿದ್ದ ಸರೋವರದಲ್ಲಿ ಅಡಿಗಡಿಗೆ ಪ್ರವಾಹಗಳೇರ್ಪಡುತ್ತಿದ್ದು ಆ ಪ್ರವಾಹಗಳಿಂದ ಉಂಟಾದ ಪದರಗಳನ್ನು ಇಲ್ಲಿ ಕಾಣಬಹುದು) ಮೂರನೆಯ ಪದರವನ್ನು ಉಷ್ಣಹವೆಯ ಎರಡನೆಯ ಅಂತರ ಪ್ಲೂವಿಯಲ್ ಯುಗಕ್ಕೂ ನಾಲ್ಕನೆಯ ಪದರವನ್ನು ಪುನಃ ಆ ಸರೋವರ ಪ್ರಬಲಿಸಿದ ತೇವ ಹವೆಯ ಮೂರನೆಯ ಪ್ಲೂವಿಯಲ್ ಯುಗಕ್ಕೂ ನಿರ್ದೇಶಿಸಲಾಗಿದೆ.

ಪೊಟ್ಯಾಸಿಯಂ ಆರ್ಗಾನ್ ಕಾಲಗಣನಾಪದ್ಧತಿಯ ರೀತ್ಯ ಮೊದಲ ಪದರ ಸು.2 ದಶಲಕ್ಷ ವರ್ಷಗಳಷ್ಟೂ ಎರಡನೆಯ ಪದರದ ಮೇಲ್ಭಾಗ ಸು. 5 ಲಕ್ಷ ವರ್ಷಗಳಷ್ಟೂ ಪುರಾತನವೆಂದು ತಿಳಿದುಬಂದಿದೆ. ನಾಲ್ಕನೆಯ ಪದರದ ಮೇಲ್ಭಾಗ ಮಧ್ಯ ಪ್ಲಿಸ್ಟೊಸೀನ್ ಯುಗದ ಅಂತ್ಯ ಅಥವಾ ಅಂತ್ಯ ಪ್ಲಿಸ್ಟೊಸೀನ್ ಯುಗದ ಆರಂಭ ಕಾಲಕ್ಕೆ ಸೇರುತ್ತದೆ.

**ಮಾನವ ಜಾತಿಯ ಉಗಮ:** ಇಲ್ಲಿ ಆದಿ ಮಾನವನ ಉಗಮ ಮತ್ತು ವಿಕಾಸದ ಅಭ್ಯಾಸಕ್ಕೆ ಬಹಳ ಮುಖ್ಯವಾದ ಪುರಾವೆಗಳು ದೊರಕಿದ್ದು, ಪೂರ್ವಆಫ್ರಿಕ ಮಾನವ ಜನಾಂಗದ ಉಗಮಸ್ಥಾನವೆಂದು ತೋರಿಸಿಕೊಟ್ಟಿವೆ. ಇವುಗಳಲ್ಲಿ ಬಹಳ ಮುಖ್ಯವಾದುದು ಪ್ರಶ. 1959ರಲ್ಲಿ ಮೊದಲ ಪದರದ ಮೇಲ್ಮಟ್ಟದಲ್ಲಿ ದೊರಕಿದ ಜಿಂಜಾಂಥ್ರೊಪಸ್ ಕಪಿಮಾನವ ಅವಶೇಷಗಳು., 17,50,000 ವರ್ಷಗಳಷ್ಟು ಹಳೆಯದಾದ ಈ ಮಾನವಾಶೇಷಗಳು ಈವರೆಗೂ ಬೆಳಕಿಗೆ ಬಂದ ಮಾನವಸಂತತಿಯಲ್ಲಿ ಮೊದಲಿನವೆಂದು ಅಭಿಪ್ರಾಯಪಡಲಾಯಿತು. ಅದೇ ಸುಮಾರಿಗೆ ಸೇರಿದ ಇನ್ನೊಂದು ಗುಂಪಿನ ಮಾನವನ ಹೋಮೋ ಹ್ಯಾಬಿಲಿಸ್ ಅವಶೇಷಗಳೊಂದಿಗೆ ಮೊತ್ತಮೊದಲಿನ ಮಾನವನಿರ್ಮಿತ ಆಯುಧೋಪಕರಣಗಳೂ ಕೆಲವು ಜಲಚರಗಳ ಅವಶೇಷಗಳೂ ಈ ನೆಲೆಯಲ್ಲಿ ಕಂಡುಬಂದುವು. ಇಲ್ಲಿ ಕಂಡುಬಂದಿರುವ ಕಲ್ಲಿನ ಅರ್ಧವರ್ತುಲದ ಅವಶೇಷಗಳು ಆ ಮಾನವರ ವಸತಿಗಳ ಅವಶೇಷಗಳಿದ್ದಿರಬಹುದೆಂದು ಅಭಿಪ್ರಾಯಪಡಲಾಗಿದೆ. ಎರಡನೆಯ ಪದರದ ಕೆಳಮಟ್ಟದಲ್ಲಿ ಹೋಮೋ ಹ್ಯಾಬಿಲಿಸ್ ಮತ್ತು ಮೇಲ್ಮಟ್ಟದಲ್ಲಿ ಹೋಮೋ ಎರಕ್ಟಸ್ ಮಾನವಾಶೇಷಗಳೂ ಆಯುಧೋಪಕರಣಗಳೂ ದೊರಕಿವೆ.

**ಸಾಂಸ್ಕೃತಿಕ ಅವಶೇಷಗಳು:** ಇಲ್ಲಿ ಕಂಡುಬಂದಿರುವ ಮಾನವ ನಿರ್ಮಿತ ಅವಶೇಷಗಳನ್ನು ಎರಡು ಸಾಂಸ್ಕೃತಿಕ ವಿಧಾನಗಳಿಗೆ ನಿರ್ದೇಶಿಸಲಾಗಿದೆ. ಮೊದಲ ಪದರ ಮತ್ತು ಎರಡನೆಯ ಪದರದ ಕೆಳಮಟ್ಟದಲ್ಲಿ, ಖಚಿತವಾಗಿ ಮಾನವ ನಿರ್ಮಿತವೆಂದು ಪರಿಗಣಿಸಲ್ಪಟ್ಟಿರುವ ಉಂಡೆಕಲ್ಲಿನಾಯುಧ, ತುಂಡುಕೊಡಲಿಗಳು ಹೇರಳವಾಗಿದ್ದು ಅದನ್ನು ಓಲ್ಡೋವನ್ ಸಂಸ್ಕೃತಿಯೆಂದು ಕರೆಯಲಾಗಿದೆ. ಎರಡೂ ಪಾರ್ಶ್ವಗಳಿಂದ ಚಕ್ಕೆಗಳನ್ನು ತೆಗೆದುದರಿಂದ ಉಂಟಾದ ಚೂಪಾದ ಆಯುಧಗಳ ಅಂಚಿನ ಮೇಲೆ ಉಪಯೋಗದಿಂದುಂಟಾದ ಚಿಪ್ಪೆಗಳು ಕಂಡುಬರುತ್ತವೆ. ಈ ಆಯುಧಗಳ ತಯಾರಿಕೆಯಲ್ಲಿ

ಬಂದ ಚಕ್ಕೆಕಲ್ಲುಗಳನ್ನು ಕೊಯ್ಯುವ ಮತ್ತು ಒರೆಯುವ ಸಾಧನಗಳನ್ನಾಗಿ ಉಪಯೋಗಿಸಿಕೊಂಡ ಮಾಹಿತಿಗಳು ಕಂಡುಬಂದಿವೆ. ಕ್ರಮೇಣ ಈ ಉಂಡೆಕಲ್ಲಿನಾಯುಧಗಳು ರೂಪಾಂತರ ಹೊಂದಿ, ಎರಡು ಪಾರ್ಶ್ವಗಳಿಂದ ಚಕ್ಕೆಗಳನ್ನು ತೆಗೆದಿರುವ ಮೊನೆಯಾದ ತುದಿಯಿರುವ ಮತ್ತು ದಪ್ಪನಾದ ಕೈಪಿಡಿಯಿರುವ, ಕೈಗೊಡಲಿಯ ಪೂರ್ವರೂಪದ ಆಯುಧಗಳು ತಲೆದೋರಿವೆ. ಈ ಸಂಸ್ಕೃತಿಯನ್ನು ಕೈಕೊಡಲಿ ಸಂಸ್ಕೃತಿಯೆಂದು ಕರೆಯಲಾಗಿದೆ. ಎರಡನೆಯ ಪದರದ ಮೇಲ್ಮಟ್ಟದಲ್ಲಿ ಉಂಡೆಕಲ್ಲಿನ ತುಂಡುಕೊಡಲಿಗಳು ಉಳಿದುಬಂದಿದ್ದರೂ ಅಬ್ಬೆವಿಲ್ಲಿಯನ್ ಹಂತದ ಕೈಗೊಡಲಿಗಳು ಪ್ರಧಾನವಾಗಿವೆ. ಈ ಹಂತದಲ್ಲಿ ಕೆಲವು ಅಷ್ಯೂಲಿಯನ್ ಹಂತಕ್ಕೆ ಸೇರಿದ ಆಯುಧಗಳು ದೊರಕಿದ್ದರೂ ಅವು ಮೇಲಿನಿಂದ ಅಂತಸ್ಸರಿತವಾಗಿರಬಹುದೆಂದು ಅಭಿಪ್ರಾಯಪಡಲಾಗಿದೆ. ಈ ಪದರದ ಅಂತ್ಯಕಾಲದ ಅಷ್ಯೂಲಿಯನ್ ರೀತಿಯ ಆಯುಧಗಳು ಮೊದಲ ಬಾರಿಗೆ ಬಳಕೆಗೆ ಬಂದುವು. ಮೂರನೆಯ ಪದರದಲ್ಲಿ ಅಬ್ಬೆವಿಲ್ಲಿಯನ್ ಅಷ್ಯೂಲಿಯನ್ ಆಯುಧೋಪಕರಣಗಳು ದೊರಕಿದ್ದರೂ ಅಷ್ಯೂಲಿಯನ್ ಸಂಸ್ಕೃತಿ ಪ್ರಧಾನವಾಗುತ್ತದೆ. ನಾಲ್ಕನೆಯ ಪದರದಲ್ಲಿ ಅಷ್ಯೂಲಿಯನ್ ಕೈಗಾರಿಕೆಯ ಆರು ಬೇರೆ ಬೇರೆ ಹಂತಗಳಿಗೆ ನಿರ್ದೇಶಿತವಾಗುವ ಆಯುಧಗಳು ದೊರಕುತ್ತವೆ. ಕ್ಲೀವರ್ ರೀತಿಯ ಆಯುಧಗಳು ಎರಡನೆಯ ಪದರದಲ್ಲಿ ಮೊದಲ ಬಾರಿಗೆ ದೊರೆತರೂ ಈ ಕಾಲದಲ್ಲಿ ಅವನ್ನು ಹೆಚ್ಚು ಸಂಖ್ಯೆಯಲ್ಲಿ ಮತ್ತು ವಿವಿಧಾಕೃತಿಗಳಲ್ಲಿ ಮಾಡಿದುದಕ್ಕೆ ಸೂಚನೆಗಳಿವೆ. ಮೊನೆಯಾದ ತುದಿಯುಳ್ಳ ಅಂಡಾಕಾರದ ಮತ್ತು ಭಲ್ಲೆಯಾಕಾರದ ಕೈಗೊಡಲಿಗಳು ಈ ಕೈಗಾರಿಕೆಯ ವೈವಿಧ್ಯವನ್ನು ತೋರುತ್ತವೆ. ಈ ಪದರದ ಅಂತ್ಯಕಾಲದಲ್ಲಿ ಕೈಗೊಡಲಿ ಸಂಸ್ಕೃತಿ ಉಚ್ಛ್ರಾಯ ಸ್ಥಿತಿಯಲ್ಲಿದ್ದುದನ್ನು ನಯವಾಗಿ ಕಂಡರಿಸಿದ ಅನೇಕ ಉತ್ತಮ ಆಯುಧಗಳು ತೋರುತ್ತವೆ. (ಬಿ.ಕೆ.ಜಿ.)

**ಓಲ್ಡ್‌ಹ್ಯಾಂ, ಥಾಮಸ್:** ಭಾರತ ದೇಶದ ಜಿಯಾಲಾಜಿಕಲ್ ಸರ್ವೆ ಸಂಸ್ಥೆಯ ಪ್ರಥಮ ನಿರ್ದೇಶಕ. ಬ್ರಿಟಿಷ್ ಪ್ರಜೆ. ಮೊದಲು ಐರ್ಲೆಂಡಿನ ಜಿಯಾಲಾಜಿಕಲ್ ಸರ್ವೇಯ ನಿರ್ದೇಶಕನಾಗಿದ್ದ. 1850ರಲ್ಲಿ ಈತನನ್ನು ಬ್ರಿಟಿಷ್ ಸರ್ಕಾರ ಭಾರತದ ಈ ವರಿಷ್ಠ ಹುದ್ದೆಗೆ ವರ್ಗಮಾಡಿತು. ನವಸಂಸ್ಥೆಯೊಂದನ್ನು ಕಟ್ಟುವಲ್ಲಿ ಈತನ ಪ್ರತಿಭೆ ಅಸಾಮಾನ್ಯಮಟ್ಟದ್ದು. ದಕ್ಷರಾದ ಭೂವಿಜ್ಞಾನಿಗಳ ಒಂದು ಪಡೆಯನ್ನೇ ಈತ ರಚಿಸಿದ. ಅಂದಿನ ಭಾರತದ (ಪಾಕಿಸ್ತಾನ್–ಬರ್ಮ, ಸಿಂಹಳ ಎಲ್ಲವೂ ಭಾರತದ ಆಡಳಿತಕ್ಕೆ ಒಳಪಟ್ಟಿದ್ದವು) ಶಿಲಾ–ಖನಿಜ ಸಂಪತ್ತನ್ನು ಪರಿಶೀಲಿಸಿ ಭಾರತದ ಭೂವಿಜ್ಞಾನದ ಇತಿಹಾಸದ ರಚನೆಗೆ ಸುಭದ್ರ ತಳಹದಿಯನ್ನು ಹಾಕಿದ. 1851–76ರವರೆಗೆ 25 ವರ್ಷಗಳ ಕಾಲ ಈತ ಭಾರತದಲ್ಲಿ ನೆಲೆಸಿ ಅವಿರತವಾಗಿ ಕೆಲಸಮಾಡಿ ಆಧಾರಸಹಿತವಾದ ಭೂವಿದ್ಯಾನಕ್ಷೆಯನ್ನು (ಜಿಯಾಲಾಜಿಕಲ್ ಮ್ಯಾಪ್) ರಚಿಸಲು ಸರ್ವಪ್ರಯತ್ನವನ್ನೂ ಮಾಡಿದ. 1876ರಲ್ಲಿ ದೇಹಾಲಸ್ಯದಿಂದ ಈತ ವಿಶ್ರಾಂತನಾದ. ಮರುವರ್ಷವೇ ಭಾರತದ ಮೊದಲನೆಯ ಭೂವಿದ್ಯಾನಕ್ಷೆ ಪ್ರಕಟವಾಯಿತು. 1869ರಲ್ಲಿ ಕಾಚಾರ್ ಭೂಕಂಪವಾದ ಮೇಲೆ ಓಲ್ಡ್‌ಹ್ಯಾಂ ಭಾರತದ ಬಗ್ಗೆ ವಿಶೇಷ ಅಧ್ಯಯನ ಮಾಡಿ ಒಂದು ಗ್ರಂಥವನ್ನು ಪ್ರಕಟಿಸಿದ. ಇದು ಭೂಕಂಪಶಾಸ್ತ್ರಕ್ಕೆ ಆದಿಗ್ರಂಥ ಎನಿಸಿತು. ಭಾರತದ ಚಿಲುಮೆಗಳ (ಸ್ಪ್ರಿಂಗ್ಸ್) ಬಗ್ಗೆ ಒಂದು ಪುಸ್ತಕವನ್ನು ಬರೆದ. ಈತನ ಕೆಲಸವನ್ನು ಅಂದಿನ ಸರ್ಕಾರ ಬಲವಾಗಿ ಮೆಚ್ಚಿಕೊಂಡಿತು.

1856ರಲ್ಲಿ ಓಲ್ಡ್‌ಹ್ಯಾಂ ತನ್ನ ಸಂಸ್ಥೆಯ ಪುನರ್ವ್ಯವಸ್ಥೆಗೆ ಕೊಟ್ಟ ಸಲಹೆಗಳನ್ನು ಸರ್ಕಾರ ಮಂಜೂರು ಮಾಡಿತು. ಬಂಗಾಲದ ಏಷ್ಯಾಟಿಕ್ ಸೊಸೈಟಿಯ ಅಧ್ಯಕ್ಷನಾಗಿದ್ದ. ಈತನೇ ಕೋಲ್ಕತ್ತ ನಗರದ ಸೊಗಸಾದ ವಸ್ತುಸಂಗ್ರಹಾಲಯದ (ಮ್ಯೂಸಿಯಂ) ನಿರ್ಮಾಣಕ್ಕೆ ಕಾರಣ. 1867–76ರ ವರೆಗೆ ಓಲ್ಡ್‌ಹ್ಯಾಂ ಭಾರತ ವಸ್ತುಸಂಗ್ರಹಾಲಯಗಳ ನಿರ್ದೇಶಕನೂ ಆಗಿದ್ದ. ಈತ ಪ್ರಕಟಿಸಿದ 35 ಕೃತಿಗಳಿಂದ ವಿಜ್ಞಾನದ ಪ್ರಪಂಚದಲ್ಲಿ ಇವನಿಗೆ ಹಿರಿಯ ಪ್ರಶಸ್ತಿ ಲಭಿಸಿತು. ಪೂರ್ವಾರ್ಧಗೋಳದಲ್ಲಿ ಕಲ್ಲಿದ್ದಲು, ಮಧ್ಯಪ್ರಾಂತಗಳ ಭೂಚರಿತ್ರೆ, ಉಲ್ಕಾಶಿಲೆಗಳು ಇತ್ಯಾದಿ ಇವನ ಪ್ರಸಿದ್ಧ ಕೃತಿಗಳು. ತನ್ನ ದುಡಿಮೆಗೆ ಒಂದು ಅಚ್ಚುಕಟ್ಟಾದ ಶಾಶ್ವತ ರೂಪವನ್ನು ಕೊಡುವುದಕ್ಕೆ ಮೊದಲೇ ಕುಂದುತ್ತಿದ್ದ ದೇಹಾರೋಗ್ಯದ ನಿಮಿತ್ತವಾಗಿ ಈತನು ಕೆಲಸದಿಂದ ವಿಶ್ರಾಂತಿಪಡೆದು ಭಾರತವನ್ನು ಬಿಡಬೇಕಾಯಿತು. ಆದರೆ ಓಲ್ಡ್‌ಹ್ಯಾಮನ ಕಾಲು ಶತಮಾನದ ಕೆಲಸವೇ ಅವನ ಸೇವೆಯ ಮೌಲ್ಯದ ಶಾಶ್ವತವಾದ ದಾಖಲೆ ಎಂಬ ಈತನ ಉತ್ತರಾಧಿಕಾರಿಯ ಮಾತು ಯಥಾರ್ಥವಾದದ್ದು.

ಓಲ್ಡ್‌ಹ್ಯಾಂ ಅಧಿಕಾರಾವಧಿಯಲ್ಲಿ ಬರ್ಮ ದೇಶಕ್ಕೆ ಮೂರು ಸಲ ಭೇಟಿಯಿತ್ತು ಅದರ ಶಿಲಾ–ಖನಿಜಸಂಪತ್ತನ್ನು ಪರೀಕ್ಷಿಸಿದ. 1855ರಲ್ಲಿ ಎನಾಂಗ್‌ಯಾಂಗ್ ತೈಲಕ್ಷೇತ್ರವನ್ನು ಪರಿಶೀಲಿಸುತ್ತಿದ್ದಾಗ ಶಿಲೆಗಳ ಮಡಿಕೆಗಳ ರಚನೆಗೂ ತೈಲದ ಶೇಖರಣೆಯೂ ಇರುವ ಸಂಬಂಧವನ್ನು ಅವನು ಮೊತ್ತಮೊದಲು ಗುರುತಿಸಿದ. ಇದು ಮುಂದೆ ಪ್ರಪಂಚದಲ್ಲಿ ಖನಿಜ ತೈಲ ಉದ್ಯಮದ ಮುನ್ನಡೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು.

ಓಲ್ಡ್‌ಹ್ಯಾಂ ಕಾಲದಲ್ಲಿಯೇ ಭಾರತದ ಭೂವಿಜ್ಞಾನ ಪರಿಭಾಷೆಯ ಅನೇಕ ಶಬ್ದಗಳು ಜನ್ಮ ತಾಳಿದುವು. ಉದಾಹರಣೆಗೆ ದಾಮೋದರ ಶಿಲಾಸ್ತೋಮ, ಧಾರವಾಡ ಶಿಲಾಸ್ತೋಮ, ದಖನ್‌ಲಾವಾ, ತಾಲ್‌ಚೇರ್ ಪದರ (ಹಿಮನದಿಯ ಸ್ಮಾರಕ), ಗೊಂಡ್ವಾನಾ ಶಿಲಾಸ್ತೋಮ ಇತ್ಯಾದಿ. ಹೀಗೆ ಭಾರತ ದೇಶದ ಭೂಚರಿತ್ರೆಯ ಇತಿಹಾಸದಲ್ಲಿ ಓಲ್ಡ್‌ಹ್ಯಾಂ ಚಿರಸ್ಮರಣೀಯ ಹೆಸರು. (ಎ.ಎನ್.ಎಸ್.ಐ.)

**ಓವರ್‌ಬರಿ, ಸರ್ ಥಾಮಸ್:** 1581–1613. ಆಂಗ್ಲಕವಿ ಮತ್ತು ಪ್ರಬಂಧಕಾರ. ವಾರ್‌ವಿಕ್‌ಷೈರಿನ ಕಾಂಪ್ಟನ್ ಸ್ಕಾರ್‌ಪಿಯನ್‌ನಲ್ಲಿ ಹುಟ್ಟಿದ. ಆಕ್ಸ್‌ಫರ್ಡ್‌ನಲ್ಲಿ ವಿದ್ಯಾಭ್ಯಾಸ ಮಾಡಿ ಚಕ್ರವರ್ತಿ ಒಂದನೆಯ ಜೇಮ್ಸನ ಕೃಪಾಪಾತ್ರನಾದ ರಾಬರ್ಟ್ ಕಾರನ ಕಾರ್ಯದರ್ಶಿ ಹಾಗೂ ಆಪ್ತಸಲಹೆಗಾರನಾಗಿ ಕೆಲಸಮಾಡಿದ. ಕ್ರಮೇಣ ಕಾರ್ ಓವರ್‌ಬರಿಯ ಕೈಗೊಂಬೆಯಾದ. ಓವರ್‌ಬರಿಯ ಕೈಗೊಂಬೆ ಕಾರ್, ಕಾರ್‌ನ ಕೈಗೊಂಬೆ ಚಕ್ರವರ್ತಿ – ಎಂಬ ಮಾತು ಜನಜನಿತವಾಯಿತು.

ಕಾರ್ ರಾಚೆಸ್ಟರಿನ ಅರ್ಲ್ ಆದ ಮೇಲೆ ಎಸೆಕ್ಸಳೊಂದಿಗೆ ಪ್ರೇಮ ಬೆಳೆಸಿದ. ಮೊದಲಿಗೆ ಇವರಿಬ್ಬರ ಮದುವೆಯಿಂದ ಪರಸ್ಪರ ವ್ಯಕ್ತಿತ್ವ, ಘನತೆಗಳು ಹೆಚ್ಚುತ್ತವೆಂದು ಭಾವಿಸಿದ ಓವರ್‌ಬರಿ ಈ ಪ್ರೇಮಪ್ರಕರಣವನ್ನು ಪ್ರೋತ್ಸಾಹಿಸಿದನಾದರೂ ಅನಂತರ ಇವರಿಬ್ಬರ ಒಗ್ಗೂಡಿಕೆಯಿಂದ ಕಾರ್ ಎಸೆಕ್ಸಳ ಕೈಗೊಂಬೆಯಾಗುವನೆಂದೂ ಭಾವಿಸಿದ ಓವರ್‌ಬರಿ ಇವರ ಪ್ರೇಮಪ್ರಕರಣವನ್ನು ಬಯಲಿಗೆಳೆದು ಬಲವಾಗಿ ವಿರೋಧಿಸಿದ. ಅದೇ ಸಮಯದಲ್ಲಿ ಮದುವೆಯಾಗುವ ಯುವಕ ಎಂಥ ಹೆಂಡತಿಯನ್ನು ಬಯಸಬೇಕೆಂಬ ವಿಷಯಗಳನ್ನೊಳಗೊಂಡ ಎ ವೈಫ್ ಎಂಬ ಕವನವನ್ನು ರಚಿಸಿದ. ಇದು ಪರೋಕ್ಷವಾಗಿ ಎಸೆಕ್ಸಳ ವ್ಯಂಗ್ಯಚಿತ್ರವಾಗಿತ್ತು. ಇದರಿಂದಾಗಿ ಓವರ್‌ಬರಿ ಚಕ್ರವರ್ತಿಯ ಅಸಂತುಷ್ಟಿಗೆ ಪಾತ್ರನಾಗಬೇಕಾಯಿತು. ಪರಿಣಾಮವಾಗಿ ರಾಜದ್ರೋಹದ ಆಪಾದನೆಯ ಮೇಲೆ ಓವರ್‌ಬರಿ ಕಾರಾಗೃಹಕ್ಕೆ ಅಟ್ಟಲಾಯಿತು. ಎಸೆಕ್ಸಳ ಕುತಂತ್ರದಿಂದಾಗಿ ಕಾರಾಗೃಹದ ಅಧಿಕಾರಿಯ ಮೂಲಕ ಓವರ್‌ಬರಿ ಕೊಲೆಯಾಯಿತು.

ಈ ಪ್ರಕರಣ ನಡೆದ ಒಂದು ವರ್ಷದ ಮೇಲೆ ಸತ್ಯ ಬೆಳಕಿಗೆ ಬಂದು ನ್ಯಾಯ ವಿಚಾರಣೆ ನಡೆಯಿತು. ನ್ಯಾಯಾಲಯ ಎಸೆಕ್ಸ್ ಹಾಗೂ ಕಾರ್ ಇಬ್ಬರಿಗೂ ಶಿಕ್ಷೆ ವಿಧಿಸಿತು. ಆದರೆ ದೊರೆಯ ಕೃಪೆಯಿಂದಾಗಿ ಇಬ್ಬರೂ ಬಿಡುಗಡೆಯಾದರು.

ಓವರ್‌ಬರಿ ಕಾರಾಗೃಹಕ್ಕೆ ಹೋದ ಅನಂತರ ಯಾರ ನೆರವೂ ಇಲ್ಲದೆ ಬರೆಹಗಾರನೆಂದು ಬೆಳಕಿಗೆ ಬಂದ. ಎ ವೈಫ್ ಎಂಬ ಅವನ ಕವನ 1614ರಲ್ಲಿ ಪ್ರಕಟವಾಗಿ ಅದೇ ವರ್ಷ ಅನೇಕ ಮುದ್ರಣಗಳನ್ನು ಕಂಡಿತು. ವ್ಯಕ್ತಿಚಿತ್ರಗಳನ್ನೊಳಗೊಂಡ ಇವನ ಕ್ಯಾರೆಕ್ಟರ್ಸ್ ಎಂಬ ಪ್ರಬಂಧಸಂಕಲನವೂ ಈತನಿಗೆ ಕೀರ್ತಿ ತಂದಿತು. (ಎಚ್.ಎಸ್.ಎಚ್.)

**ಓವಿಡ್:** ಪ್ರ.ಶ.ಪೂ. 43–ಪ್ರ.ಶ. 18. ರೋಮ್ ದೇಶದ ಅಗಸ್ಟನ್ ಸಾಹಿತ್ಯ ಯುಗದ ಕೊನೆಯ ಕವಿ. ಪೂರ್ಣನಾಮ ಪಬ್ಲಿಯಸ್ ಓವಿಡಿಯಸ್ ನ್ಯಾಸೊ. ರಮಣೀಯವಾದ ಅಬ್ರುಜಿ ಮಲೆಗಳ ನಡುವೆ ಸಲ್ಮೋ ಎಂಬ ಊರಿನಲ್ಲಿ ಶ್ರೀಮಂತ ಜಮೀನ್ದಾರರ ಮನೆಯಲ್ಲಿ ಹುಟ್ಟಿದ. ಚೇತೋಹಾರಿಯಾದ ನಿಸರ್ಗದ ಚೆಲುವಿನಿಂದ ಪ್ರಭಾವಿತವಾಗಿಯೇ ಈ ಕವಿಚೇತನ ಬೆಳೆಯಿತು. ರೋಮಿನಲ್ಲಿ ಸಾಹಿತ್ಯಾಲಂಕಾರಶಾಸ್ತ್ರಪರಿಣಿತರಾದ ಆರೆಲ್ಲಿಯಸ್ ಫಸ್ಕಸ್ ಮತ್ತು ಪೋರ್ಷಿಯಸ್ ಲ್ಯಾಟ್ರೊ ಎಂಬ ಗುರುಗಳ ಬಳಿ ವ್ಯಾಸಂಗ ಮಾಡಿದ. ಮಗ ಉನ್ನತ ಅಧಿಕಾರಿಯಾಗಬೇಕೆಂಬ ಅಭಿಲಾಷೆಯಿಂದ ಅದಕ್ಕೆ ತಕ್ಕ ತರಬೇತಿಯನ್ನೇ ತಂದೆ ಕೊಡಿಸಿದ. ಆದರೆ ಮಗನ ಒಲವೆಲ್ಲ ಕಾವ್ಯದ ಕಡೆ ತಿರುಗಿತು. ಆಡಳಿತ, ಕಾನೂನು ಶಾಸ್ತ್ರಗಳಲ್ಲಿ ಶಿಕ್ಷಣವಾದ ಅನಂತರ ಸರ್ಕಾರದಲ್ಲಿ ಒಳ್ಳೆಯ ಕೆಲಸ ಸಿಕ್ಕಿತು. ಆಗ ನಾನು ಬರೆದುದೆಲ್ಲ ಅನಾಯಾಸವಾಗಿ ಛಂದೋರೂಪವನ್ನು ತಾಳುತ್ತಿತ್ತು. ತಂದೆಯ ಪ್ರೀತ್ಯರ್ಥವಾಗಿ ಕೆಲವು ಕಾಲ ಸರ್ಕಾರದ ನಾಲ್ಕಾರು ಕಿರಿಯ ಹುದ್ದೆಗಳಲ್ಲಿ ಕೆಲಸಮಾಡಿದನಾದರೂ ಕಡೆಗೂ ಕಾವ್ಯದೇವಿ ತನ್ನೆಡೆಗೆ ನನ್ನನ್ನು ಸಂಪೂರ್ಣವಾಗಿ ಸೆಳೆದುಕೊಂಡುಬಿಟ್ಟಳು–ಎಂದು ಕವಿ ತನ್ನ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾನೆ. ನ್ಯಾಯಾಧೀಶನಾಗಿ ಕೆಲಸ ಮಾಡಿದ್ದುಂಟು. ಉನ್ನತ ಸ್ಥಾನವನ್ನು ಪಡೆದ.

ಎರಡು ಬಾರಿ ಮದುವೆ ಆದಾಗಲೂ ದಾಂಪತ್ಯದ ವಿರಸವನ್ನೇ ಅನುಭವಿಸಿದ ಕವಿ ಮೂರನೆಯ ಬಾರಿ ಫೇಬಿಯನ್ ಹಿರಿಯ ಮನೆತನದ ಹುಡುಗಿಯನ್ನು ಮದುವೆಯಾದ. ಈಕೆ ಮಾತ್ರ ಪ್ರೀತಿಯ ಮಡದಿಯಾಗಿ ಕೊನೆಯವರೆಗೂ–ಕವಿ ದೇಶಭ್ರಷ್ಟನಾಗಿ ಹೋದಾಗಲೂ–ನಿಷ್ಠೆಯ ಸತಿಯಾಗಿ ಇದ್ದಳು.

ಓವಿಡ್‌ನ ಆಕರ್ಷಣೀಯ ವ್ಯಕ್ತಿತ್ವದಿಂದಲೂ ಸ್ನೇಹಶೀಲ ಸ್ವಭಾವದಿಂದಲೂ ಹಲವರು, ಅದರಲ್ಲೂ ಹಿರಿಯ ಕಿರಿಯ ಕವಿಗಳೆಲ್ಲರೂ, ಅವನ ಮಿತ್ರರಾಗಿದ್ದರು. ಪ್ರೊಪರ್ಟಿಯಸ್ ಮತ್ತು ಟೈಬುಲಸರಂತೂ ಆತ್ಮೀಯರಾಗಿದ್ದರು. ಟೈಬುಲಸನ ಅಕಾಲಮರಣದಿಂದ ಬಹು ದುಃಖಿತನಾದ ಕವಿ ಒಂದು ಉತ್ಕೃಷ್ಟ ಶೋಕಗೀತೆಯನ್ನು ರಚಿಸಿದ್ದಾನೆ. ಮಹಾಕವಿ ವರ್ಜಿಲನನ್ನು

ಒಮ್ಮೆ ನೋಡಿರುವೆ ಮಾತ್ರ ಎಂದು ಹೇಳುವ ಓವಿಡ್ ವರ್ಜಿಲದ ಪರಮ ಸ್ನೇಹಿತನಾಗಿದ್ದ ಈಮಿಲಿಯಸ್ ಮೇಸರನಿಗೆ ಅಚ್ಚುಮೆಚ್ಚಾಗಿದ್ದ. ಆತನೊಂದಿಗೆ ಮಾಡಿದ ಅಥೆನ್ಸ್, ಸಿಸಿಲಿಗಳ ಪ್ರವಾಸಗಳ ಮಧುರಸ್ಮೃತಿ ಓವಿಡ್‌ನ ಕೆಲವು ಕಾವ್ಯಗಳಲ್ಲಿ ಚಿರಂತನವಾಗಿ ಉಳಿದಿದೆ.

ಅಗಸ್ಟಸ್ ಚಕ್ರವರ್ತಿಯ ಕಾಲ ವೈಭವದ ಯುಗ. ಆಗ ರೋಮ್ ನಗರ ಸಕಲ ವಿಲಾಸವಿಭ್ರಮಗಳಿಂದ ಮೆರೆಯುತ್ತಿತ್ತು. ಅದಕ್ಕೆ ತಕ್ಕಂತಿತ್ತು ಅಂದಿನ ಬೆಡಗಿನ ನಾಗರಿಕ ಸಮಾಜ. ಎಲ್ಲ ಬಗೆಯ ಭೋಗವಿಲಾಸಗಳ ರಸಮಯ ಬದುಕೊಂದೇ ಹಿರಿಯ ಆದರ್ಶ. ನೀತಿಧರ್ಮಗಳ ಬದಲು ಥಳಕಿನ ಶಿಷ್ಟಾಚಾರ, ಚತುರ ಮಾತುಗಾರಿಕೆ, ಬುದ್ಧಿಯ ಜಾಣ್ಮೆ ಮುಖ್ಯವಾಗಿದ್ದುವು. ಭೋಗವನ್ನುಳಿದು ಎಲ್ಲದರ ಬಗ್ಗೆಯೂ ತಿರಸ್ಕಾರವಿತ್ತು. ಆಡಂಬರದಿಂದ ಕೂಡಿದ ಆಲಂಕಾರಿಕ ಭಾಷೆಯ ಕಾವ್ಯವೇ ಶ್ರೇಷ್ಠ ಎಂಬ ಅಭಿರುಚಿ ಎದ್ದು ಕಾಣುತ್ತಿತ್ತು. ಇಂಥ ಸಮಾಜದ ಅಚ್ಚುಮೆಚ್ಚಿನ ಕವಿ ಎನಿಸಿದ ಓವಿಡ್.

ಆರ್ಸ್ ಅಮೋರ್ಸ್ ಎಂಬ ಕೃತಿ ಮೂರು ಸಂಪುಟಗಳಲ್ಲಿ ಪ್ರಕಟವಾಯಿತು. ಇದರ ವಸ್ತು ಪ್ರಣಯ, ಈ ಕಾವ್ಯ ಕೊರಿನ್ನಾ ಎಂಬ ಸುಂದರಿಯೊಬ್ಬಳನ್ನು ಲಕ್ಷ್ಯವಾಗಿಟ್ಟುಕೊಂಡು ಬರೆದುದು.

ಇನ್ನೊಂದು ಕೃತಿ, ಹಿರೋಯಿಡ್ಸ್. ಪ್ರಾಚೀನ ಗ್ರೀಕ್ ವೀರಯುಗದ ಸುಂದರಿಯರು ಬರೆದಂತೆ ಕಲ್ಪಿಸಿದ ಪ್ರಣಯಪತ್ರಗಳ ಸಂಕಲನ. ಇದು ಓವಿಡ್ ಬರೆದದ್ದೇ ಇಲ್ಲವೇ ಅವನ ಹೆಸರಿನಲ್ಲಿ ಬೇರೆ ಯಾರೋ ಬರೆದುದೇ ಎಂಬುದು ವಾದಗ್ರಸ್ತವಾಗಿದೆ.

ದ ಮೆಡಿಕಮೈನ್ ಫೇಸಿ ಎಂಬುದು ಮುಖದ ಸೌಂದರ್ಯ ಪ್ರಸಾಧನಕ್ಕೆ ಸಂಬಂಧಿಸಿದ ಪುಸ್ತಕ.

ಆರ್ಸ್ ಅಮೆಟೋರಿಯ ಎಂಬ ಮತ್ತೊಂದು ಕೃತಿ ಮೂರು ಸಂಪುಟಗಳಲ್ಲಿದೆ. ಇದರ ವಸ್ತುವೂ ಪ್ರಣಯವೇ, ಯುವತಿಯರ ಹೃದಯವನ್ನು ಆಕರ್ಷಿಸುವ ಕಲೆಯನ್ನು ಕವಿ ಇಲ್ಲಿ ಸ್ವಾರಸ್ಯವಾಗಿ ಬೋಧಿಸುತ್ತಾನೆ. ಇದು ಓವಿಡ್‌ನ ವಿಶಿಷ್ಟ ವ್ಯಕ್ತಿತ್ವವನ್ನು ಸಮರ್ಥವಾಗಿ ಪ್ರತಿಬಿಂಬಿಸುವ ಶ್ರೇಷ್ಠ ಕೃತಿ ಎಂದು ಮೆಕಾಲೆಯ ಅಭಿಪ್ರಾಯ. (ಬಹುಶಃ ಅಶ್ಲೀಲ ಸಾಹಿತ್ಯದಲ್ಲಿ ಇದನ್ನು ಮೀರಿಸುವ ಕೃತಿ ಮತ್ತೊಂದಿರಲಾರದು).

ರೆಮೆಡಿಯಾ ಅಮೋರ್ಸ್ ಪ್ರೇಮದ ತಾಪನಿವಾರಣೆ ಮಾಡಿಕೊಳ್ಳುವ ವಿಧಾನವನ್ನು ಕುರಿತದ್ದು. ಆರ್ಸ್ ಅಮೋರ್ಸ್‌ಗೆ ಚಿಕಿತ್ಸೆರೂಪವಾದ ಕಾವ್ಯ. ಅದರ ಅತಿರೇಕವನ್ನು ಸ್ವಲ್ಪ ಸರಿಪಡಿಸುವ ಯತ್ನ ಇದರಲ್ಲಿ ನಡೆದಿದೆ, ಅಶ್ಲೀಲದಲ್ಲಿ ಅದಕ್ಕೂ ಒಂದು ಕೈ ಮಿಗಿಲಾದರೂ ಮೊದಲ ಕಾವ್ಯದ ಪರಿಣತ ಶೈಲಿ ಇಲ್ಲಿ ಕಾಣುವುದಿಲ್ಲ.

ಮಿಡಿಯಾ ಎಂಬ ದುರಂತನಾಟಕವನ್ನು ಅನೇಕ ಪ್ರಾಚೀನ ವಿಮರ್ಶಕರು ಮೆಚ್ಚಿ ಉಲ್ಲೇಖಿಸಿರುವರಾದರೂ ಕೃತಿ ಇದುವರೆಗೆ ದೊರೆತಿಲ್ಲ.

ಮೆಟಾಮಾರ್ಫೋಸಿಸ್ ಎಂಬುದು ಗ್ರೀಕ್ ಪುರಾಣದಿಂದ ಸಂಗ್ರಹಿಸಿದ ಜಗತ್ತಿನ ಸೃಷ್ಟಿ-ವಿಕಾಸಗಳ ಕಥೆಗಳನ್ನು 15 ಸಂಪುಟಗಳಲ್ಲಿ ನಿರೂಪಿಸುವ ದೊಡ್ಡ ಕಾವ್ಯ ಕ್ರಿಸ್ತಶಕದ ಪ್ರಾರಂಭದಲ್ಲಿ ರಚಿಸಲಾಯಿತು. ಅನುಕರಣೀಯವಾದ ಕಥನಶೈಲಿ, ಲಲಿತವಾದ ಬಂಧ, ಬೇರೆ ಬೇರೆ ಕಥೆಗಳನ್ನು ಸಹಜವಾಗಿ ಸುಸಂಬದ್ಧವಾಗಿ ಹೆಣೆದಿರುವ ಕೌಶಲ, ಈ ಕೃತಿಯ ಗುಣಾಂಶಗಳು. ಇಲ್ಲಿನ ಮೋಹಕ ಕಥನಶೈಲಿಗೆ ಮನ ಸೋಲದವರಿಲ್ಲ. ಷೇಕ್ಸ್‌ಪಿಯರ್, ಮಾರ್ಲೊ, ಮಿಲ್ಟನ್, ಡ್ರೈಡನ್ ಮುಂತಾದ ಶ್ರೇಷ್ಠ ಇಂಗ್ಲಿಷ್ ಕವಿಗಳ ಮೇಲೂ ಬಿದ್ದ ಈ ಕಾವ್ಯದ ಪ್ರಭಾವ ಅದ್ಭುತವಾದುದು. ಮಧ್ಯಯುಗದ ವರ್ಣಶಿಲ್ಪಿಗಳ ಚಿತ್ರಗಳ ವಸ್ತುಗಳಿಗೆ ಈ ಕಾವ್ಯ ಒಂದು ಸಮೃದ್ಧ ನಿಧಿಯಾಯಿತು.

ಫಾಸ್ಟಿ 12 ಸಂಪುಟಗಳಲ್ಲಿ ಪೂರೈಸಬೇಕಾಗಿದ್ದ ಬೃಹತ್ ಗ್ರಂಥ. ಆದರೆ ಬರೆದುದು 6 ಸಂಪುಟ ಮಾತ್ರ. ರೋಮಿನ ಪ್ರಮುಖ ಹಬ್ಬಗಳ ವೈಶಿಷ್ಟ್ಯವನ್ನು ವಿವರಿಸುವ ಸ್ವಾರಸ್ಯವಾದ ಕಾವ್ಯವಿದು. ಒಂದೊಂದು ಹಬ್ಬದ ಪೂರ್ವಕಥೆ, ಆಚರಿಸುವಾಗ ಅನುಸರಿಸುವ ಕ್ರಮ ವಿಧಿಗಳ ಅರ್ಥ, ಔಚಿತ್ಯ ಮೊದಲಾದುವನ್ನು ವ್ಯಾಖ್ಯಾನಿಸುವ ನೆಪದಲ್ಲಿ ಅನೇಕ ಮನೋರಂಜಕವಾದ ಕಥೆಗಳನ್ನು ಹೇಳಿರುವುದೇ ಇದರಲ್ಲಿನ ವಿಶೇಷ.

ಈ ಕಾವ್ಯವನ್ನು ಬರೆಯುತ್ತಿದ್ದಾಗಲೇ ಓವಿಡ್‌ನ ಮೇಲೆ ರಾಜಾಜ್ಞೆ ಸಿಡಿಲಿನಂತೆರಗಿತು (ಪ್ರ.ಶ.8). ಕವಿ ದೇಶಭ್ರಷ್ಟನಾಗಿ ಯೂಜಿನ್ ಬೆಂಗಾಡಿನ ಟೋಮಿ ಎಂಬ ಊರಿನಲ್ಲಿ ತನ್ನ ಉಳಿದ ಜೀವಿತವನ್ನು ಕಳೆಯಬೇಕಾಯಿತು. ರೋಮಿನ ಮೂರು ಮುಖ್ಯಗ್ರಂಥಭಂಡಾರಗಳಲ್ಲಿ ಆತನ ಕೃತಿಗಳನ್ನು ಬಹಿಷ್ಕರಿಸಿದರು. ಆತನ ಆಸ್ತಿಪಾಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಮಾಡಿಕೊಳ್ಳಲಿಲ್ಲವಾದರೂ ಮುಂದೆ ಎಂದಾದರೊಮ್ಮೆ ಕ್ಷಮಾದಾನ ದೊರಕಿ ಕವಿಯನ್ನು ಹಿಂದಕ್ಕೆ ಕರೆಸಿಕೊಳ್ಳಬಹುದೆಂಬ ಭರವಸೆಯೇನೂ ಕಾಣಲಿಲ್ಲ. ಈ ಅನಿರೀಕ್ಷಿತ ಬಹಿಷ್ಕಾರಕ್ಕೆ ಆರ್ಸ್ ಅಮೆಟೋವಿಯ' ಕವನ ಕಾರಣ ಎಂದು ಹೇಳಲಾಯಿತು. ಆದರೆ ನಿಜವಾಗಿ ಏನು ಕಾರಣವೋ ತಿಳಿಯದು. ಚಕ್ರವರ್ತಿಯ ಮೊಮ್ಮಗಳಾದ ಜೂಲಿಯಾ ಮತ್ತು ಸಿಲೇನಸರ ರಹಸ್ಯ ಪ್ರಣಯದ ಪ್ರಕರಣದಲ್ಲಿ ಓವಿಡ್‌ನ ಕೈವಾಡವಿದ್ದರೂ ಅಸಂಭವವಲ್ಲ. ಬಹುಶಃ ಇದೇ ಚಕ್ರವರ್ತಿಯ ಆಗ್ರಹಕ್ಕೆ ಕಾರಣವಿರಬಹುದು.

ತನ್ನ ನೆಚ್ಚಿನ ರೋಮನ್ ಸಮಾಜದಿಂದ, ಪ್ರಿಯರಾದ ಗೆಳೆಯರಿಂದ, ಪುಸ್ತಕಗಳಿಂದ ದೂರವಾಗಿ ಕಾಲ ನೂಕಬೇಕಾಗಿ ಬಂದುದೇ ಕವಿಗೆ ದೊಡ್ಡ ಕೊರಗಾಯಿತು. ಆಗ ರಚಿಸಿದ ಕಾವ್ಯಗಳಲ್ಲಿ ಟ್ರಿಸ್ಟಿಯಾ ಎಂಬ 5 ಸಂಪುಟಗಳ ಆತ್ಮಕಥೆ ಮತ್ತು ಎಪಿಸ್ಟುಲೇ ಎಕ್ಸ್‌ಪೋಂಟೋ ಎಂಬ 4 ಸಂಪುಟಗಳ ಕೃತಿ ಮುಖ್ಯವಾದುವು. ಉಳಿದ ಅನೇಕ ಕೃತಿಗಳು ಕಳೆದುಹೋಗಿವೆ. ತನ್ನ ಪ್ರಿಯಪತ್ನಿಗೆ, ಆತ್ಮೀಯರಿಗೆ ಮತ್ತು ಆಗಸ್ಟಸ್ ಚಕ್ರವರ್ತಿಗೆ ಬರೆದ ಶೋಕಾರ್ತವಾದ, ಪತ್ರರೂಪದ, ಕವನಗಳಲ್ಲಿ ಕವಿಯ ಕೊರಗೂ ತಾಯ್ನಾಡಿಗೆ ಬೇಗನೆ ಹಿಂತಿರುಗಬೇಕೆಂಬ ಹಂಬಲವೂ ತೀವ್ರವಾಗಿ ಬಹು ಕರುಣಾಜನಕವಾಗಿ ವ್ಯಕ್ತವಾಗಿವೆ.

ಚಕ್ರವರ್ತಿಯ ಮನವನ್ನೊಲಿಸಿಕೊಳ್ಳಲು ಮಾಡಿದ ಅವನ ಪ್ರಯತ್ನಗಳೆಲ್ಲ ವಿಫಲವಾದುವು. ತಾನಿದ್ದ ಟೋಮಿ ಎಂಬ ಊರಿನ ಜನರ ಪ್ರೀತ್ಯಾದರಗಳಿಗೆ ಪಾತ್ರನಾಗಿದ್ದರೂ ತಾಯ್ನಾಡನ್ನೂ ಮನೆಯನ್ನೂ ಮತ್ತೆ ನೋಡಬೇಕೆಂಬ ಹಂಬಲ ಈಡೇರದ ಕೊರಗಿನಲ್ಲೇ ಕವಿ ಕೊನೆಯುಸಿರನ್ನೆಳೆದ.

ಮೃದುಮಧುರವಾದ ಭಾಷೆ, ಸುಂದರವಾದ ಶೈಲಿ, ರಂಜಕವಾದ ವೈವಿಧ್ಯ, ಸ್ವಚ್ಛಂದವಾದ ಕಲ್ಪನಾವಿಲಾಸ, ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ವರ್ಣನಾ ಸಾಮರ್ಥ್ಯಮನವನ್ನು ಸೆಳೆಯುವ ಕಥನಕಲೆ-ಇವು ಓವಿಡ್‌ನ ಸಾಹಿತ್ಯದ ಅಪೂರ್ವ ಗುಣಗಳು.

ಇಂದಿನ ಸಣ್ಣ ಕಥೆಗಳ ಕಲಾತ್ಮಕ ತಂತ್ರದ ಮೂಲವನ್ನು ಓವಿಡ್‌ನ ಕಥೆಗಳಲ್ಲಿ ಗುರುತಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. (ಕೆ.ಬಿ.ಪಿ.)

ನಿಯೊಕ್ಲಾಸಿಕಲ್ ಯುಗದಲ್ಲಿ ಓವಿಡ್ ಯುರೋಪಿನಲ್ಲಿ ಜನಪ್ರಿಯ ಕವಿಯಾಗಿದ್ದ. ಡ್ರೈಡನ್ ಮೊದಲಾದ ಕವಿಗಳು ಆತನ ಕವನಗಳನ್ನು ಅನುವಾದಿಸಿದರು. ಆದರೆ ಅನಂತರ ಅವನ ಪ್ರಭಾವ ಇಳಿಮುಖವಾಯಿತು. ಯೂರಿಪಿಡೀಸನಂತೆ ಓವಿಡನು, ಪೌರಾಣಿಕ ಕಥೆಗಳನ್ನು ವಿಡಂಬನೆಗಾಗಿ ಬಳಸಿಕೊಳ್ಳುತ್ತಾನೆ.

ಓವಿಡ್‌ನ ಕಾವ್ಯರಚನೆಯಲ್ಲಿ ಮೂರು ಸ್ಪಷ್ಟ ಅವಧಿಗಳಿವೆ. ಯೌವನದ ಕಾಲದಲ್ಲಿ ತನ್ನ ಹಿಂದಿನ ಕವಿಗಳ 'ಎಲಿಜಿ' ಸಂಪ್ರದಾಯವನ್ನು ಮುಂದುವರಿಸಿದ. ಈ ಕಾಲದ ಪ್ರಣಯ ಕವನಗಳಲ್ಲಿ ಪ್ರಾಮಾಣಿಕ ಭಾವ ಕಡಿಮೆ, ಕೃತಕತೆ ಹೆಚ್ಚು. ಈ ಕಾಲದಲ್ಲಿಯೇ ಪೌರಾಣಿಕ ಸಾಮಗ್ರಿಯ ಅವನ ಆಸಕ್ತಿ ಚುರುಕಾಯಿತು.

'ಮೆಟಮಾರ್ಫಸಿಸ್' ಮಧ್ಯ ಕಾಲಕ್ಕೆ ಸೇರಿದ್ದು, ರೂಪಾಂತರಕ್ಕೆ ಸಂಬಂಧಿಸಿದ ಕಥೆಗಳ ಸಂಗ್ರಹ, ಜೂಲಿಯಟ್ ಸೀಸರ್ ದೇವತೆಯಾಗುವುದೇ ಕಡೆಯ ಕಥೆ. ದೇವತೆಗಳು-ಮನುಷ್ಯರ ಸಂಬಂಧಕ್ಕೆ ಇಲ್ಲಿ ಒತ್ತು; ದೇವತೆಗಳಿಗೆ ವಿಧೇಯನಾದವನಿಗೆ ಕಡೆಯಲ್ಲಿ ಒಂದು ರೂಪಾಂತರದ ಭಾಗ್ಯ ಒದಗುತ್ತದೆ. ಪ್ರೇಮ ಪ್ರಣಯಗಳ ಕವಿ ಈ ಕೃತಿಯಲ್ಲಿ ಗಂಭೀರವಾಗಿ ಕಾಣುತ್ತಾನೆ, ಶೋಧಿಸುತ್ತಾನೆ.

ಕವಿಯ ದೇಶಾಂತರದ ಕಾಲದ ಕವನಗಳಲ್ಲಿ ವಿಷಾದವೇ ಶ್ರುತಿ. ಇಲ್ಲಿ ಆತ್ಮಾವಲೋಕನವೂ ಕಾಣುತ್ತದೆ.

ಓವಿಡ್ ತನ್ನ ಜೀವಿತ ಕಾಲದಲ್ಲಿಯೂ ಅನಂತರವೂ ಜನಪ್ರಿಯವಾಗಿದ್ದ ಕವಿ. ಅವನು ಪ್ರಣಯವನ್ನು ಚಿತ್ರಿಸಿದ ಕಡೆಯ ಮಧ್ಯಯುಗದ ಫ್ರೆಂಚ್ ಕವಿಗಳ ಮೇಲೆ ಪ್ರಭಾವ ಬೀರಿತು. (ಎಲ್.ಎಸ್.ಎಸ್.)

**ಓವೆನ್, ರಾಬರ್ಟ್:** 1771-1858. ಬ್ರಿಟನ್ನಿನ ಸಮಾಜವಾದಿ, ಸುಧಾರಕ, 1771 ಮೇ 14ರಂದು ವೇಲ್ಸಿನ ಮಾಂಟ್ಗಮರಿಷೈರಿನ ನ್ಯೂಟೌನಿನಲ್ಲಿ ಹುಟ್ಟಿದ. ಒಂಬತ್ತನೆಯ ವರ್ಷದವರೆಗೆ ಇವನ ವಿದ್ಯಾಭ್ಯಾಸ ನಡೆದಿದ್ದು ಸ್ಥಳೀಯ ಶಾಲೆಗಳಲ್ಲೇ. ಹತ್ತೊಂಬತ್ತನೆಯ ವರ್ಷ ನಡೆಯುತ್ತಿದ್ದಾಗ ಓವೆನ್ ಮಾಂಚೆಸ್ಟರಿನ ಹತ್ತಿಗಿರಣಿಯೊಂದರ ವ್ಯವಸ್ಥಾಪಕನಾದ. ಶೀಘ್ರದಲ್ಲೇ ಅದು ಇಡೀ ಗ್ರೇಟ್‌ಬ್ರಿಟನ್ನಿನ ಅತ್ಯುತ್ತಮ ಸಂಸ್ಥೆಯಾಯಿತು. ಅಮೆರಿಕದಿಂದ ಸೀ-ಐಲೆಂಡ್ ಹತ್ತಿಯನ್ನು ತರಿಸಿ ಗಿರಣಿಯಲ್ಲಿ ಪ್ರಥಮವಾಗಿ ಬಳಸಿದವನೀತನೇ. ಈತ ಚಾರ್ಲ್‌ಟನ್ ಟ್ವಿಸ್ಟ್ ಕಂಪೆನಿಯ ವ್ಯವಸ್ಥಾಪಕನೂ ಪಾಲುದಾರನೂ ಆದಾಗ ಇವನ ಸಲಹೆಯ ಮೇರೆಗೆ ನ್ಯೂ ಲ್ಯಾನಾರ್ಕ್ ಗಿರಣಿಯನ್ನು ಆ ಸಂಸ್ಥೆ ಕೊಂಡುಕೊಂಡಿತು. ಆಗ ಉತ್ಪಾದನೆ ನಡೆಸುತ್ತಿದ್ದ ಇತರ ಗಿರಣಿಗಳಿಗಿಂತ ಉನ್ನತವಾದ ತತ್ತ್ವಗಳನ್ನು ತನ್ನ ಗಿರಣಿಯಲ್ಲಿ ಜಾರಿಗೆ ತರಲು ಓವೆನ್ ಪ್ರಯತ್ನಿಸಿ ಯಶಸ್ವಿಯಾದ.

ಓವೆನ್‌ನ ದೃಷ್ಟಿಯಲ್ಲಿ ಆ ಗಿರಣಿ ಕೇವಲ ಲಾಭಗಳಿಕೆಯ ಉದ್ಯಮವಾಗಿರಲಿಲ್ಲ: ಅದು ನ್ಯೂ ಲ್ಯಾನಾರ್ಕಿನ ಸರ್ಕಾರ. ಗಿರಣಿಯೊಂದಕ್ಕೆ ಕೇವಲ ವ್ಯವಸ್ಥಾಪಕನಾಗಿರಲು ಅವನಿಗೆ ಇಷ್ಟವಿರಲಿಲ್ಲ. ಜನನಿರ್ವಹಣೆಯ ತತ್ತ್ವಗಳನ್ನು ಪ್ರಯೋಗಿಸುವುದು ಅವನ ಉದ್ದೇಶವಾಗಿತ್ತು. ಶೀಲ ರೂಪಿಸಬೇಕೆಂಬುದು ಆತನ ಹಂಬಲ. ಗಿರಣಿಯಲ್ಲಿ ಕೆಲಸಕ್ಕಿದ್ದ 2,000 ಜನರ ಪೈಕಿ 500 ಮಂದಿ ಮಕ್ಕಳು; ಎಡಿನ್‌ಬರೊ ಮತ್ತು ಗ್ಲ್ಯಾಸ್ಗೊಗಳ ದರಿದ್ರ ಗೃಹಗಳಿಂದ ಬಂದಿದ್ದವರು. ಹಿಂದಿನ ಮಾಲೀಕರು ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದರಾದರೂ ಒಟ್ಟಿನಲ್ಲಿ ಜನರ ಪರಿಸ್ಥಿತಿ ಶೋಚನೀಯವಾಗಿತ್ತು. ಅಜ್ಞಾನ,

ಕಶ್ಮಲ, ವ್ಯಾಧಿ, ಅಪರಾಧ, ಹೀನವಸತಿ, ಕುಡಿತ–ಇವು ಸಾಮಾನ್ಯವಾಗಿದ್ದುವು. ಕಾರ್ಖಾನೆಯೇ ಈ ಕೆಟ್ಟ ಚಾಳಿಗಳಿಗೆ ಪಾಠಶಾಲೆ. ಇವನ್ನೆಲ್ಲ ತೊಲಗಿಸಲು ಓವೆನ್ ಶಪಥ ಮಾಡಿದ. ಅವರಿಗೆ ಒಳ್ಳೆಯ ಜೀವನ ಬೋಧಿಸಿದ. ವಸತಿ ಉತ್ತಮಗೊಂಡಿತು. ಶುದ್ಧ ಸರಕುಗಳ ಮಾರಾಟಕ್ಕಾಗಿ ಓವೆನ್ ದಿನಸಿ ಅಂಗಡಿ ತೆರೆಯಿಸಿದ. ಮದ್ಯದ ಮಾರಾಟಕ್ಕೆ ನಿರ್ಬಂಧ ವಿಧಿಸಲಾಯಿತು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆ ಪ್ರಾರಂಭಿಸಿದ. ದೊಡ್ಡವರಿಗೂ ವಿದ್ಯೆ ಕಲಿಸಬೇಕೆಂಬುದು ಇವನ ಮತವಾಗಿತ್ತು.

ಮೊದಮೊದಲು ಓವೆನ್‌ನ ವಿಚಾರಗಳಲ್ಲಿ ಜನಕ್ಕೆ ನಂಬಿಕೆಯಿರಲಿಲ್ಲ. ಕ್ರಮೇಣ ಈತ ಅವರ ಅಭಿಮಾನಕ್ಕೆ ಪಾತ್ರನಾದ. ಆದರೆ ಇವನ ಅನೇಕ ಪ್ರಯೋಗಗಳು ಬಹಳ ದುಬಾರಿ ವೆಚ್ಚದವಾಗಿದ್ದುದರಿಂದ ಅವಕ್ಕೆ ಪಾಲುದಾರರ ಒಪ್ಪಿಗೆ ದೊರಕಿಸುವುದು ಅನೇಕ ಸಾರಿ ಕಷ್ಟವೇ ಆಗಿರುತ್ತಿತ್ತು. ಕೊನೆಗೆ ಓವೆನ್ ಬೇಸತ್ತು ಅವರಿಂದ ಬೇರ್ಪಟ್ಟು, ಬಂಡವಾಳದ ಮೇಲೆ ಶೇ. 5ರಷ್ಟು ಲಾಭ ಪಡೆದು ತೃಪ್ತರಾಗಿರುವಂಥವರೊಂದಿಗೆ ಸೇರಿ ಉದ್ಯಮ ಸ್ಥಾಪಿಸಿದ. ಜೆರಿಮಿ ಬೆಂಥಮ್ ಮುಂತಾದ ವಿಚಾರಶೀಲ ಉದಾರವಾದಿಗಳನೇಕರು ಪಾಲುದಾರರಾದರು. ಓವೆನ್‌ನ ಹೊಸದೃಷ್ಟಿಯನ್ನು ಕುರಿತ ಪ್ರಬಂಧಗಳು ಇವನ ಲೇಖನಿಯಿಂದ ಹೊರಬಿದ್ದುವು. ಒಬ್ಬನ ಲಾಭ, ಇನ್ನೊಬ್ಬನಿಗೆ ನಷ್ಟ ಎಂಬ ಸ್ಪರ್ಧಾವ್ಯವಸ್ಥೆಯ ಸೂತ್ರವನ್ನು ಈತ ನಿರಾಕರಿಸಿದ. ಸಹಕಾರ ತತ್ತ್ವದ ತಳಹದಿಯ ಮೇಲೆ ಹೊಸ ಸಮಾಜ ಕಟ್ಟುವುದು ಇವನ ಕನಸಾಗಿತ್ತು. ಮಾನವನ ಶೀಲಸಂವರ್ಧನಕ್ಕೆ ಆತನ ಪರಿಸರವೇ ಕಾರಣ. ಚಿಕ್ಕಂದಿನಿಂದಲೇ ಅವನನ್ನು ಸರಿಯಾಗಿ ಬೆಳೆಸಿದರೆ ಆತ ಆದರ್ಶ ಪ್ರಜೆಯಾಗುತ್ತಾನೆ–ಎಂಬುದು ಓವೆನ್‌ನ ನಂಬಿಕೆಯಾಗಿತ್ತು. ಇವನ ಹೊಸ ಗಿರಣಿಯಲ್ಲಿ ಈ ಪ್ರಯೋಗ ಯಶಸ್ವಿಯಾಯಿತು. ಇಡೀ ಬ್ರಿಟನ್ನಿನಲ್ಲಿ ಮಾತ್ರವಲ್ಲದೆ ಯುರೋಪಿನಲ್ಲೂ ಇದು ಪ್ರಸಿದ್ಧಿ ಗಳಿಸಿತು. ಆಗ ಸಮಾಜವಾದಿಗಳಿಗೆ ಓವೆನನ ಗಿರಣಿಯೊಂದು ಯಾತ್ರಾಸ್ಥಳ.

ಕಾರ್ಖಾನೆ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕೆಂಬುದು ಓವೆನ್‌ನ ಆಶಯವಾಗಿತ್ತು. ಆದರೆ ಇವನ ಚಳುವಳಿ ಫಲಿಸಲಿಲ್ಲ. ಅನೇಕರು ಇವನಿಗೆ ವಿರೋಧಿಗಳಾದರು. ಅವರ ಬೆಂಬಲ ಕುಸಿದುಬಿತ್ತು. ಯಂತ್ರದೊಂದಿಗೆ ಮಾನವನ ಸ್ಪರ್ಧೆಯೇ ನಿರಂತರ ಸಂಕಟಕ್ಕೆ ಕಾರಣ. ಆದ್ದರಿಂದ ಜನರೆಲ್ಲ ಸಂಘಟಿತರಾಗಬೇಕು, ಯಂತ್ರ ಅವರಿಗೆ ಅಧೀನವಾಗಬೇಕು ಎಂಬುದು ಇವನ ಸೂತ್ರ. ತಲಾ ಸು. 1,200 ಜನ ಒಟ್ಟಿಗೆ ವಾಸಿಸುವ ಸಾಮೂಹಿಕ ವ್ಯವಸ್ಥೆ ರಚಿಸಬೇಕೆಂಬುದಾಗಿ ಈತ ಸೂಚಿಸಿದ. ಇವನ ಭಾವನೆಗಳಿಂದಾಗಿ ಅಲ್ಲಿಯ ಚರ್ಚು ಇವನಿಗೆ ವಿರೋಧವಾಯಿತು. ಓವೆನ್ ಅದನ್ನೂ ಟೀಕಿಸಲಾರಂಭಿಸಿದ. ಬ್ರಿಟನ್ನಿನ ಸಾರ್ವಜನಿಕ ಅಭಿಪ್ರಾಯ ಇವನಿಗೆ ಅಷ್ಟೇನೂ ಬೆಂಬಲ ನೀಡುವುದಿಲ್ಲವೆಂಬುದು ವೇದ್ಯವಾದಾಗ ಓವೆನ್ ಅಮೇರಿಕಕ್ಕೆ 1824ಹೋದರಲ್ಲಿ. ಇಂಡಿಯಾನದಲ್ಲಿ ಜಮೀನು ಕೊಂಡು ಅಲ್ಲಿ ತನ್ನ ಸಾಮೂಹಿಕ ವಸತಿಯೋಜನೆಯನ್ನು ಕಾರ್ಯರೂಪಕ್ಕೆ ತಂದ. ನ್ಯೂ ಹಾರ್ಮೊನಿ ಎಂದೇ ಅದರ ಹೆಸರು. ಮೊದಮೊದಲು ಇದು ಬಲು ಯಶಸ್ಸುಗಳಿಸಿತು. ಆದರೆ ಕ್ರಮೇಣ ಅಲ್ಲೇ ಒಡಕು ಪ್ರಾರಂಭವಾಯಿತು. ಓವೆನ್ ನಿರಸನಗೊಂಡು ಹಿಂದೆ ಸರಿದ. ಆ ವೇಳೆಗೆ ಆತ ಗಳಿಸಿದ ಸಂಪತ್ತಿನಲ್ಲಿ ಐದನೆಯ ನಾಲ್ಕು ಭಾಗ ಕೈಬಿಟ್ಟುಹೋಗಿತ್ತು.

1829ರಲ್ಲಿ ಓವೆನ್ ಬ್ರಿಟನ್ನಿಗೆ ವಾಪಸ್ಸು ಬಂದ. ಶ್ರಮಾಧಾರಿತ ಮೌಲ್ಯಮಾಪನ, ಸಹಕಾರಿ ಉತ್ಪಾದನೆ ಇವನ್ನು ಕುರಿತ ಓವೆನನ ಭಾವನೆಗಳಿಗೆ ಬ್ರಿಟನ್ನಿನಲ್ಲಿ ಆಗ ಕಾರ್ಮಿಕರ ವಲಯಗಳಲ್ಲಿ ಪುರಸ್ಕಾರ ದೊರಕಿತ್ತು. ಅಲ್ಲಿನ ಕಾರ್ಮಿಕ ರಾಜಕಾರಣದಲ್ಲಿ ಓವೆನ್ ನಾಯಕನೆಂದು ಪರಿಗಣಿತನಾದ. ಗ್ರ್ಯಾಂಡ್ ನ್ಯಾಷನಲ್ ಕನ್ಸಾಲಿಡೇಟೆಡ್ ಯೂನಿಯನ್ ರೂಪುಗೊಂಡಿತು. 1834ರಲ್ಲಿ ಇದಕ್ಕೆ 5 ಲಕ್ಷಕ್ಕೂ ಹೆಚ್ಚು ಮಂದಿ ಸದಸ್ಯರಿದ್ದರು.

ಆದರೆ ಉದ್ಯಮಪತಿಗಳ ವಿರೋಧ, ಸರ್ಕಾರದ ತೀವ್ರ ಕ್ರಮ ಇವುಗಳಿಂದಾಗಿ ಈ ಚಳುವಳಿ ಕ್ಷೀಣಿಸಿತು. ಸಂಘದ ಸದಸ್ಯ ಸಂಖ್ಯೆ ಇಳಿಮುಖವಾಯಿತು. ಕಾರ್ಮಿಕರೇ ತಳಹದಿಗಾಗಿ, ಕಾರ್ಮಿಕ ವಿನಿಮಯ ವ್ಯವಸ್ಥೆಯೇ ಶಿಖರವಾಗಿ ಉಳ್ಳ ಉತ್ಪಾದಕ ವರ್ಗಗಳ ಭವ್ಯ ನೈತಿಕ ಸಂಘವೆಂಬ ಸಾಮಾಜಿಕ ಪಿರಮಿಡ್ ವ್ಯವಸ್ಥೆ ರಚಿಸಬೇಕೆಂಬ ಇವನ ಕನಸು ಕನಸಾಗಿಯೇ ಉಳಿಯಿತು.

1840ರ ದಶಕದಲ್ಲಿ ರಾಚ್‌ಡೇಲ್ ಪ್ರವರ್ತಕರ ನಾಯಕತ್ವದಲ್ಲಿ ಬೆಳವಣಿಗೆ ಹೊಂದಿದ ಕಾರ್ಮಿಕವರ್ಗದ ಸಹಕಾರ ಚಳವಳಿಗೆ ಓವೆನನ ಆದರ್ಶವೇ ಸ್ಫೂರ್ತಿಯ ನೆಲೆಯಾಗಿತ್ತು. ಆದರೂ ಓವೆನ್ ಕನಸುಗಾರ ಸಮಾಜವಾದಿ (ಯುಟೋಪಿಯನ್ ಸೋಷಿಯಲಿಸ್ಟ್) ಎಂದೇ ಅನೇಕರು ಭಾವಿಸಿದ್ದರು. ಈತ ಸಮಾಜವಾದಿಯೇ ಅಲ್ಲವೆಂದೂ ಕೆಲವರು ಸಾಧಿಸಿದ್ದುಂಟು. ಆದರೂ ಕೈಗಾರಿಕಾ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿ ಟೀಕೆ ಮಾಡಿದವನೂ ಸಮಾಜವಾದದ ಪರಿಭಾಷೆಯನ್ನು ರೂಪಿಸಿದವನೂ ಕಾರ್ಮಿಕರನ್ನು ಸಂಘಟಿಸಿ ಕಾರ್ಯಪ್ರವೃತ್ತರಾಗುವಂತೆ ಪ್ರೇರಣೆ ನೀಡಿದವನೂ ರಾಬರ್ಟ್ ಓವೆನ್. 1858 ನವೆಂಬರ್ 17ರಂದು ಈತ ಕಾಲವಾದ. (ಆರ್.ಎಸ್.ಪಿ.)

**ಓವೆನ್, ವಿಲ್‌ಫ್ರೆಡ್:** 1893–1918. ಆಂಗ್ಲಕವಿ. ಷ್ರಾಪ್‌ಷೈರಿನ ಆಸ್‌ವೆಸ್ಟ್ರಿಯಲ್ಲಿ ಹುಟ್ಟಿದ. ಬರ್ಕನ್‌ಹೆಡ್ ಇನ್ಸ್ಟಿಟ್ಯೂಟ್ ಮತ್ತು ಲಂಡನ್ ವಿಶ್ವವಿದ್ಯಾನಿಲಯಗಳಲ್ಲಿ ಇವನ ವಿದ್ಯಾಭ್ಯಾಸ ನಡೆಯಿತು. 1913–15ರ ವರೆಗೆ ಬೋರ್ಡೊ ಬಳಿಯಲ್ಲಿದ್ದ ಒಂದು ಫ್ರೆಂಚ್ ಕುಟುಂಬದ ಉಪಾಧ್ಯಾಯನಾಗಿದ್ದ. ಒಂದನೆಯ ಮಹಾಯುದ್ಧ ಕಾಲದಲ್ಲಿ ಆರ್ಟಿಸ್ಟ್ಸ್ ಬಂದೂಕು ಪಡೆಗೆ ಈತ ಸೇರಿದ. ಅನಾರೋಗ್ಯದ ನಿಮಿತ್ತ 1917ರಲ್ಲಿ ಕ್ರೇಗ್‌ಲಾಕ್‌ಹಾರ್ಟ್ ಆಸ್ಪತ್ರೆಗೆ ಈತನನ್ನು ಕೊಂಡೊಯ್ಯಲಾಯಿತು. ಅಲ್ಲಿ ಇವನೊಂದಿಗಿದ್ದ ಸೀಗ್‌ಫ್ರಿಡ್ ಸಸೂನ್ ಎಂಬ ಖ್ಯಾತ ಕವಿ ಕವನಗಳನ್ನು ಬರೆಯಲು ಈತನನ್ನು ಉತ್ತೇಜಿಸಿದ. ಮುಂದೆ ಇವನನ್ನು ಒಂದು ಸೇನಾ ತುಕಡಿಯ ಅಧಿಕಾರಿಯಾಗಿ ಫ್ರಾನ್ಸಿಗೆ ಕಳುಹಿಸಿಕೊಡಲಾಯಿತು. ಈತ ಪ್ರದರ್ಶಿಸಿದ ಶೌರ್ಯಕ್ಕಾಗಿ ಸೇನಾಪದಕ ದೊರೆಯಿತಾದರೂ ಶಾಂತಿ ನೆಲೆಗೊಳ್ಳುವುದಕ್ಕೆ ಒಂದು ವಾರ ಮೊದಲೇ ಈತ ಯುದ್ಧರಂಗದಲ್ಲಿ ಗುಂಡಿನ ಏಟಿಗೆ ಬಲಿಯಾಗಿ ಸತ್ತ. ಸಸೂನ್ ಸಂಗ್ರಹಿಸಿರುವ ಈತನ ಕವನ ಸಂಗ್ರಹದಲ್ಲಿ (1920) ಪ್ರಾಸಕ್ಕಿಂತ ಸ್ವರಪ್ರಾಸಗಳು ಹೆಚ್ಚಾಗಿದ್ದು ಕವನಗಳ ಶೋಭೆಯನ್ನು ಹೆಚ್ಚಿಸಿವೆ. ಇದೇ ಧಾಟಿ ಮುಂದೆ ಬಂದ ಆಡೆನ್ ಮತ್ತು ಸ್ಪೆಂಡರ್ ಕವಿಗಳಿಗೆ ಒಂದು ಮಾದರಿಯನ್ನೊದಗಿಸಿತೆನ್ನ ಬಹುದು. ಪ್ರಧಾನವಾಗಿ ಓವೆನ್ ತನ್ನ ಕೃತಿಗಳಲ್ಲಿ ಯುದ್ಧದಿಂದ ಸಂಭವಿಸುವ ಅನಾಹುತಗಳನ್ನು ವಾಸ್ತವಿಕವಾಗಿ, ಮನಮುಟ್ಟುವಂತೆ ತೋರಿದ್ದಾನೆ. (ಎನ್.ಎಸ್.ಎಲ್.)

**ಓವ್ರೆಗಾನಿಯ:** ಕ್ಯಾಕ್ಟೇಸಿ ಕುಟುಂಬಕ್ಕೆ ಸೇರಿದ ಒಂದು ಸಸ್ಯಜಾತಿ, ಇದರ ಪರಿಶೋಧನೆ ಈಚಿನದು. ಮೆಕ್ಸಿಕೋದ ಮೂಲವಾಸಿ. ಮೆಕ್ಸಿಕೋದ ಹೆಸರಾಂತ ಅಧ್ಯಕ್ಷ ಡಾನ್ ಅಲ್‌ವಾರೊ ಓವ್ರೆಗಾನ್ ಎಂಬಾತನ ಗೌರವಾರ್ಥವಾಗಿ ಇದಕ್ಕೆ ಈ ಹೆಸರು ಕೊಡಲಾಗಿದೆ. ಫಲವತ್ತಾಗಿರುವ ಸುಣ್ಣಕಲ್ಲುಗಳ ಮಧ್ಯದಲ್ಲಿ ಬೆಳೆದಿದ್ದ ಈ ಸಸ್ಯವನ್ನು ನೋಡಿದವ ಫ್ರಿಕ್ (1925). ಬಾಹ್ಯರೂಪದಲ್ಲಿ ಇದು ಎನ್‌ಸೆಫಲೊಕಾರ್‌ಪಸ್ ಸಸ್ಯವನ್ನು ಹೋಲುತ್ತದೆ. ಆದರೆ ಇದರ ಗಿಣ್ಣುಗಳು ಎಲೆಗಳಂತೆ ದಪ್ಪ ಮತ್ತು ಉದ್ದ. ಇವುಗಳಲ್ಲಿ ರಂಧ್ರಗಳಿವೆ (ಏರಿಯೋಲ್).

ಓವೆಗ್ರಾನಿಯ ಡಿನಿಗ್ರಿ ಎಂಬ ಪ್ರಭೇದಕ್ಕೆ ದಪ್ಪವಾದ ತಾಯಿಬೇರು ಇದೆ. ಇದರ ಗಿಣ್ಣುಗಳು ತ್ರಿಕೋನಾಕಾರದ ಬಿಲ್ಲೆಯಂತಿವೆ; ಬಣ್ಣ ಬೂದಿಮಿಶ್ರಿತ ಹಸಿರು; ಹಿಂಭಾಗದಲ್ಲಿ ಉಬ್ಬುಗಳಿವೆ. ಅವುಗಳ ತುದಿಯಲ್ಲಿ ದೃಢವಲ್ಲದ, ಹಿಂದಕ್ಕೆ ಬಾಗಿದ ಮುಳ್ಳುಗಳಿವೆ. ಬಿಳುಪು ಅಥವಾ ನಸುಗುಲಾಬಿ ಬಣ್ಣದ ಹೂಗಳು ಮುಕುಟದ ಮೇಲುಭಾಗದಲ್ಲಿ ಅರಳುತ್ತವೆ (**ನೋಡಿ– ಕಳ್ಳಿ**). (ಡಿ.ಎಂ.)

**ಓಷಿಯಾನಿಯ:** ಪೆಸಿಫಿಕ್ ಸಾಗರದ ದ್ವೀಪಗಳ ಪ್ರದೇಶಕ್ಕೆ ಸಾಮಾನ್ಯವಾಗಿ ಈ ಹೆಸರಿದೆ. ಏಷ್ಯ ಮತ್ತು ಅಮೆರಿಕ ಖಂಡಗಳ ನಡುವಣ ಎಲ್ಲ ಭೂಪ್ರದೇಶಗಳನ್ನೂ ಇದರ ವ್ಯಾಪ್ತಿಯೊಳಗೆ ಸೇರಿಸುವುದು ಕೆಲವು ಲೇಖಕರ ಪದ್ಧತಿ. ಇವರ ಪ್ರಕಾರ ಆಸ್ಟ್ರೇಲಿಯ ಮತ್ತು ನ್ಯೂಜ಼ೀಲೆಂಡ್ ಕೂಡ ಇದರಲ್ಲಿ ಸೇರುತ್ತವೆ. ಉಷ್ಣವಲಯದ ಪ್ರದೇಶಗಳಲ್ಲದ ರ‍್ಯುಕ್ಯು ಮತ್ತು ಅಲ್ಯೂಷಿಯನ್ ದ್ವೀಪಗಳನ್ನೂ ಜಪಾನ್ ದ್ವೀಪಸ್ತೋಮವನ್ನೂ ಇದರಿಂದ ಹೊರಗು ಮಾಡುವುದು ಹೆಚ್ಚು ಸೂಕ್ತವೆನಿಸಬಹುದು. ಇಂಡೋನೇಷ್ಯ, ಫಿಲಿಪೀನ್ಸ್ ಮತ್ತು ಫಾರ್ಮೋಸ ದ್ವೀಪಗಳ ನಿವಾಸಿಗಳು ಏಷ್ಯನರ ನಿಕಟ ಸಂಬಂಧಿಗಳಾದ್ದರಿಂದ ಅವನ್ನೂ ಹೊರಗಿಡುವುದು ಇನ್ನೂ ನಿಷ್ಪಕ್ಷಪಾತವೆನಿಸುತ್ತದೆ. ಹೀಗೆ ಮಾಡಿದರೆ ಪಾಲಿನೇಷ್ಯ, ಮಲನೇಷ್ಯ ಮತ್ತು ಮೈಕ್ರೊ ನೇಷ್ಯಗಳು ಓಷಿಯಾನಿಯವೆನಿಸಿಕೊಳ್ಳುತ್ತವೆ. ಈ ಪ್ರದೇಶದ ಭೂಪಟ ತಯಾರಿಸಿದ ಐರೋಪ್ಯರು ಓಷಿಯಾನಿಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ಆಸ್ಟ್ರೇಲಿಯವೇ ಮೊದಲನೆಯದು. ನ್ಯೂಗಿನಿಯಿಂದ ಫೀಜಿಯವರಗಿನ ಪ್ರದೇಶವಾದ ಮೆಲನೇಷ್ಯ ಎರಡನೆಯ ಭಾಗ. ಮೂರನೆಯ ಮೈಕ್ರೊನೇಷ್ಯದಲ್ಲಿ ಮೇರಿಯಾನ, ಕ್ಯಾರೊಲೈನ್, ಮಾರ್ಷಲ್ ಮತ್ತು ಗಿಲ್ಬರ್ಟ್ ದ್ವೀಪಗಳು ಸೇರಿವೆ. ನಾಲ್ಕನೆಯದು ಪಾಲಿನೇಷ್ಯ. ಇದು ಹವಾಯಿ, ನ್ಯೂಜ಼ೀಲೆಂಡ್ ಮತ್ತು ಈಸ್ಟರ್‌ಗಳನ್ನೊಳಗೊಂಡ ಹಲವು ದ್ವೀಪಗಳ ಒಂದು ತ್ರಿಕೋಣ. ಸಾಗರಿಕ (ಓಷಿಯಾನಿಕ್) ಪ್ರದೇಶವನ್ನು ಮಾತ್ರವೇ ಓಷಿಯಾನಿಯವೆಂದು ಕರೆಯುವುದಾದರೆ ಉತ್ತರ ದಕ್ಷಿಣ ಅಕ್ಷಾಂಶ $30^0$ಗಳ ನಡುವಣ ದ್ವೀಪಗಳನ್ನೂ ಅಗ್ನಿಶಿಲಾಭೂಯಿಷ್ಠ ಜ್ವಾಲಾಮುಖಿಗಳನ್ನೂ ಹವಳ ದ್ವೀಪಗಳನ್ನೂ ಮಾತ್ರವೇ ಪರಿಗಣಿಸಬೇಕಾಗುತ್ತದೆ. (ಪಿ.ಎಚ್.)

ಓಷಿಯಾನಿಯದ ನಾನಾ ವಿಭಾಗಗಳ ಭೂವಿವರಣೆ, ಇತಿಹಾಸ ಮುಂತಾದುವಕ್ಕೆ (**ನೋಡಿ– ಆಸ್ಟ್ರೇಲಿಯ; ಟಾಸ್ಮೇನಿಯ; ಪೆಸಿಫಿಕ್–ದ್ವೀಪಗಳು; ಫೀಜಿ; ಪಾಲಿನೇಷ್ಯ; ಮೆಲನೇಷ್ಯ; ಮೈಕ್ರೊನೇಷ್ಯ**).

ಓಷಿಯಾನಿಯ ಪ್ರದೇಶದಲ್ಲಿ ಚಿಕ್ಕ ದೊಡ್ಡ ದ್ವೀಪಗಳೂ ಜ್ವಾಲಾಮುಖಿಗಳ ಮತ್ತು ಹವಳದ ನೆಲಗಳೂ ಬೆಟ್ಟಗಳೂ ಮೈದಾನಗಳೂ ಇರುವುದಾದರೂ ಒಟ್ಟಿನಲ್ಲಿ ಇಲ್ಲಿರುವ ಜನರೆಲ್ಲರಿಗೂ ಸಮುದ್ರದ ಪ್ರಭಾವದ ಫಲವಾಗಿ ಒಂದೇ ಬಗೆಯ ಸಂಸ್ಕೃತಿಯಿದೆ.

ನ್ಯೂಗಿನಿಯ ಮತ್ತು ಮೆಲನೇಷ್ಯದ ಇತರ ಪ್ರದೇಶಗಳ ಜನರ ಸಂಸ್ಕೃತಿ ಮಾತ್ರ ಭಿನ್ನ ಬಗೆಯದು. ಇಲ್ಲಿಯ ಪೊದೆವಾಸಿಗಳಿಗೂ ಸಮುದ್ರಕ್ಕೂ ಬಹಳ ದೂರ. ಸಾಗರಿಕ ಪದಾರ್ಥಗಳಿಗಾಗಿ ಇವರು 'ಉಪ್ಪುನೀರಿನ' ಜನರೊಂದಿಗೆ ವ್ಯಾಪಾರ ನಡೆಸುತ್ತಾರೆ. ಇವರನ್ನು ಬಿಟ್ಟರೂ ಒಟ್ಟಿನಲ್ಲಿ ಇಲ್ಲಿಯ ಮೂಲನಿವಾಸಿಗಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸುವುದು ಸಾಧ್ಯ.

**ಜನತೆ:** ಶರೀರ ಲಕ್ಷಣಗಳಿಗೆ ಅನುಗುಣವಾಗಿ ಓಷಿಯಾನಿಯದ ಜನರನ್ನು 5 ಗುಂಪುಗಳಾಗಿ ವಿಂಗಡಿಸಬಹುದು: 1. ಕಾಕಸಾಯಿಡ್ ವಿಭಾಗಕ್ಕೆ ಸೇರಿದ ಪಾಲಿನೇಷ್ಯನರು; 2. ಮಂಗೋಲಾಯಿಡರೆನ್ನಬಹುದಾದ ಮೈಕ್ರೋನೇಷ್ಯನ್ನರು; 3. ಮೆಲನೇಷ್ಯನರು; 4.ಪ್ಯಾಪವನರು ಮತ್ತು 5. ನಿಗ್ರೀಟೋಗಳು. ಇವರು ನೀಗ್ರಾಯಿಡರು, ನಿಗ್ರೀಟೋಗಳು ಸಾಗರಿಕ ಕುಬ್ಜರು; ಬಲು ಹಿಂದುಳಿದವರು. ಇವರು ಪಾಪುವನರ ಪ್ರಾಚೀನ ಶಾಖೆಯೆಂದೇ ಅನೇಕರ ಮತ. ಇವರ ಸರಾಸರಿ ಎತ್ತರ 4′ 9″ ಕೂದಲು ತುಂಡ, ಉಣ್ಣೆಯ ತೆರ, ತಲೆ ದುಂಡು, ಮೂಗು ಅಗಲ, ಕಪ್ಪಿನಿಂದ ಹಳದಿ ಮಿಶ್ರಿತ ಕಂದಿನ ವರೆಗೆ ಮೈಬಣ್ಣ. ಪಾಪುವನರು ನ್ಯೂ ಗಿನಿಯ ಬಹು ಭಾಗದಲ್ಲೂ ಆಗ್ನೇಯದ ತುದಿಯಲ್ಲೂ ವಾಸವಾಗಿದ್ದಾರೆ. ಇವರದು ಮಿಶ್ರಮಾದರಿ. ಉದ್ದ ತಲೆ, ಹಿಂದೂಡಿದ ಹಣೆ, ದಪ್ಪ ಹುಬ್ಬು, ದೊಡ್ಡ ಮೂಗು, ದಟ್ಟ ಚಾಕೊಲೇಟಿನ ಮೈಬಣ್ಣ, ಉಣ್ಣೆ ಕೂದಲು, ಒತ್ತು ಗಡ್ಡ, 5′ 2″ ದಿಂದ 5′ 7″ ವರೆಗೆ ಎತ್ತರ, ನ್ಯೂಗಿನಿಯ ಆಗ್ನೇಯ ಭಾಗದಲ್ಲಿ ಫೀಜಿ ದ್ವೀಪಗಳ ವರೆಗೂ ಅಲ್ಲಿಂದ ನ್ಯೂ ಕ್ಯಾಲೆಡೊನಿಯದವರೆಗೂ ಇರುವ ಪ್ರದೇಶದ ಮೂಲನಿವಾಸಿಗಳು ಮೆಲನೇಷ್ಯನರು. ಇವರು ಬಹುಶಃ ಪಾಪುವನರಿಂದ ಬಂದವರು. ಆದರೆ ಇಲ್ಲಿಗೆ ವಲಸೆ ಬಂದ ಹಲವಾರು ಪಂಗಡಗಳೊಂದಿಗೆ ಮಿಶ್ರವಾಗಿ ವೈವಿಧ್ಯಮಯ ವಾಗಿದ್ದಾರೆ. ಇವರದೂ ಉದ್ದ ತಲೆ, ಚಿಕ್ಕದೂ ನೇರವೂ ಅಗಲವೂ ಅದ ಮೂಗು, ಮುಖ ಹೆಚ್ಚು ದುಂಡು, ತುಟಿ ದಪ್ಪ, ಸೊಟ್ಟ ಕಣ್ಣು, ಕಾಫಿಯ ಮೈಬಣ್ಣ, ಗುಂಗುರು ಕೂದಲು. ಇವರು ಸಾಧಾರಣವಾಗಿ ಕುಳ್ಳ. ನ್ಯೂಜ಼ೀಲೆಂಡ್, ಹವೈಯನ್ ದ್ವೀಪಗಳು ಮತ್ತು ಈಸ್ಟರ್ ದ್ವೀಪಗಳ ತ್ರಿಭುಜ ಪ್ರದೇಶದಲ್ಲಿರುವವರು ಪಾಲಿನೇಷ್ಯನರು. ಪೂರ್ವ ಪೆಸಿಫಿಕಿನಲ್ಲೂ ಮಧ್ಯ ಪೆಸಿಫಿಕಿನ ಬಹು ಭಾಗದಲ್ಲೂ ಇವರೇ ಇದ್ದಾರೆ. ಇತರರಿಗಿಂತ ಇವರಲ್ಲಿ ಸಮಾನ ಲಕ್ಷಣಗಳು ಹೆಚ್ಚು. ಅಗಲವಾದ ಎತ್ತರ ಹಣೆ, ದೊಡ್ಡ ನೀರ ಮೂಗು, ಮಾಟವಾದ ತುಟಿ, ಅಲೆ ಅಲೆ ಕೂದಲು, ಬಿಳಿಯಿಂದ ಕಂದಿನ ವರೆಗೆ ಮೈಬಣ್ಣ, ಸರಾಸರಿಯಲ್ಲಿ 5' 9" ಎತ್ತರ. ಮೈಕ್ರೋನೇಷ್ಯನರೂ ಸ್ಥೂಲವಾಗಿ ಪಾಲಿನೇಷ್ಯನರನ್ನೇ ಹೋಲುತ್ತಾರೆ. ಪಶ್ಚಿಮದ ಕಡೆಯಲ್ಲಿರುವವರು ಮಂಗೋಲಾಯಿಡರ ಲಕ್ಷಣ ಪಡೆದಿದ್ದಾರೆ. ಸಾಮಾನ್ಯವಾಗಿ ಅವರದು ಉಬ್ಬಿದ ಉದ್ದ ಹಣೆ, ಅಗಲ ಕಪೋಲ ಮೂಳೆ, ದಪ್ಪ ಮೂಗು, ಅಗಲ ಬಾಯಿ. ನ್ಯೂ ಗಿನಿಯ ಉತ್ತರಕ್ಕೆ ಪೆಲೂ, ಕ್ಯಾರೊಲೈನ್, ಮಾರ್ಷಲ್ ಮತ್ತು ಗಿಲ್ಬರ್ಟ್ ದ್ವೀಪ, ಸಮೋವದ ಉತ್ತರದ ದ್ವೀಪಗಳು ಈ ಜನರ ವಾಸಸ್ಥಾನ.

ಈ ನಾನಾ ಬುಡಕಟ್ಟುಗಳ ಜನ ಎಲ್ಲಿಂದ ಬಂದರು, ಎಲ್ಲೆಲ್ಲಿ ಸಂಚರಿಸಿ ನೆಲೆಸಿದರು–ಎಂಬ ವಿಚಾರವಾಗಿ ನಾನಾ ವಾದಗಳುಂಟು. ಇಲ್ಲೊಂದು ದೊಡ್ಡ ಭೂಖಂಡ ಇತ್ತು; ಅದು ಮುಳುಗಿಹೋಯಿತು; ಅದರ ಪರ್ವತಶಿಖರಗಳು ಮಾತ್ರ ಉಳಿದಿವೆ; ಆದ್ದರಿಂದ ಈ ವಿಶಾಲ ಪ್ರದೇಶದ ದ್ವೀಪಗಳ ಜನರಲ್ಲಿ ಸಾಮಾನ್ಯ ಲಕ್ಷಣಗಳು ಇರುವುದು ಸಹಜ–ಎಂಬುದೊಂದು ವಾದ. ಆದರೆ ಈ ವಾದವನ್ನು ಸ್ಥಾಪಿಸಲು ಸಾಮಗ್ರಿಯೇನೂ ಇಲ್ಲ. ಕ್ಯಾರೊಲೈನ್ಗಳ ಪೋನಪೇ ಮತ್ತು ಕೂಸ್ಯೆಯೆಗಳಲ್ಲಿರುವ ಪಳಿಯುಳಿಕೆಗಳನ್ನು ಪರೀಕ್ಷಿಸುವ ಕೆಲವರು ಇವಕ್ಕೂ ಈಜಿಪ್ಟಿನ ಪಿರಮಿಡುಗಳಿಗೂ ಸಂಬಂಧವುಂಟೆಂದೂ ಆ ಸೂರ್ಯಪುತ್ರರು ಬಲು ಹಿಂದೆ ಮುತ್ತು ಚಿನ್ನಗಳಿಗಾಗಿ ಇಲ್ಲಿಗೆ ಬಂದಿರಬಹುದೆಂದೂ ಹೇಳುತ್ತಾರೆ. ಆದರೆ ಇದೂ ಬರಿಯ ಊಹೆ ಮಾತ್ರ. ಈ ಪಳೆಯುಳಿಕೆಗಳು ಆ ಕಾಲದಿಂದ ಬಲು ಈಚೆಗಿನ ಪಾಲಿನೇಷ್ಯನ್ ಸಂಸ್ಕೃತಿವಿನ್ಯಾಸಗಳೆಂಬುದು ಹೆಚ್ಚು ಸಮಂಜಸ. ಈಸ್ಟರ್ ದ್ವೀಪದ ಲಿಪಿಗೂ ಮೊಹೆಂಜೊದಾರೊದವಕ್ಕೂ ಸಂಬಂಧ ಕಲ್ಪಿಸುವ ಪ್ರಯತ್ನವೂ ನಡೆದಿದೆ. ಆದರೆ ಈ ಸಂಬಂಧ ಕೇವಲ ಬಾಹ್ಯವಾದದ್ದು. ಇವೆರಡಕ್ಕೂ ಸಮಾನವಾದ ಅಕ್ಷರಗಳಿಗಿಂತ ಭಿನ್ನವಾದವೇ ಅಧಿಕ. ಈಸ್ಟರ್ ದ್ವೀಪದ ಲಿಪಿಗೆ ಬಹುಶಃ ಧ್ವನಿಮೌಲ್ಯವಿದ್ದಿರಲಾರದು. ಅದು ನಿರೂಪಕನಿಗೆ ಅವನ ಅನುಭವವನ್ನು ನೆನಪಿಸಿಕೊಡುವ ಭಾವದ ಸೂಚಕವಾಗಿದ್ದಿರಬೇಕು. ಪಾಲಿನೇಷ್ಯನರ ಮೂಲಪುರುಷರು ಅಮೆರಿಕದಿಂದ ಬಂದವರು ಎಂಬುದಾಗಿ ಕಾನ್–ಟಿಕಿಯ ತೆಪ್ಪದ ಮೇಲೆ ಕುಳಿತು ಟೌಮೋಟು ದ್ವೀಪಸ್ತೋಮಕ್ಕೆ ಯಾನ ಮಾಡಿದ ಹೈಯರ್‌ಡಾಲ್ ಸ್ಥಾಪಿಸಲೆತ್ನಿಸಿದ್ದಾನೆ. ಆದರೆ ಅಮೆರಿಕದ ಪೆರುವಿನಲ್ಲಿ ಸಾಮಾನ್ಯವಾಗಿರುವ ತೆಪ್ಪಗಳು ಪಾಲಿನೇಷ್ಯದಲ್ಲಿ ಬಲು ವಿರಳ. ಪೆರುವಿನ ಸಾಮಾನ್ಯ ಉಪಕರಣ ಕೊಡಲಿ. ಆದರೆ ಪಾಲಿನೇಷ್ಯದ್ದು ಕೈಬಾಚಿ. ಪಾಲಿನೇಷ್ಯಕ್ಕೆ ಅಮೆರಿಕದೊಂದಿಗೆ ಇರುವ ಸಾಂಸ್ಕೃತಿಕ ಸಾಮ್ಯಕ್ಕಿಂತಲೂ ಏಷ್ಯದೊಂದಿಗಿನದೇ ಅಧಿಕ. ಅಮೆರಿಕದವರು ಇಲ್ಲಿಗೆ ಆಗಿಂದಾಗ್ಗೆ ಬಂದಿರಬಹುದೇ ಹೊರತು, ಇವರ ಸಾಮೂಹಿಕ ವಲಸೆ ಆಗಿದ್ದಿರಲಾರದು–ಎಂಬುದು ಹೈಯರ್‌ಡಾಲನ ಊಹೆಯ ಬಗ್ಗೆ ಇರುವ ಒಂದು ಟೀಕೆ.




ಏಷ್ಯದೊಂದಿಗೆ ಈ ಪ್ರದೇಶದ ಸಂಬಂಧ ಹೆಚ್ಚಾಗಿದ್ದಿರಬಹುದೆಂಬುದು ಇಲ್ಲಿ ಹರಡಿರುವ ಕೆಲವು ಸಸ್ಯಗಳ ಪರಿಶೀಲನೆಯಿಂದ ಉದ್ಭವಿಸುವ ಅನುಮಾನ. ಪಾಲಿನೇಷ್ಯನರಿಗೆ ಬರವಣಿಗೆ ಗೊತ್ತಿರಲಿಲ್ಲ; ಆದರೆ ಅವರು ತಮ್ಮ ವಂಶವನ್ನು ನಿಖರವಾಗಿ ನೆನಪಿಟ್ಟುಕೊಂಡು ತಮ್ಮ ಇತಿಹಾಸದ ಸೂತ್ರವನ್ನು ಉಳಿಸಿಕೊಂಡಿದ್ದಾರೆ. ಪುರಾಣದಿಂದ ಆರಂಭವಾಗಿ ಇತಿಹಾಸದ ಪ್ರವಾಹವಾಗಿ ಹರಿಯುವ ಇವರ ಐತಿಹ್ಯಗಳು ನಂಬಲರ್ಹವೆಂಬುದು ನಾನಾ ಪರೀಕ್ಷೆಗಳಿಂದ ಸ್ಥಿರಪಟ್ಟಿವೆ. ಬಲು ಹಿಂದೆ ನೀಗ್ರಾಯಿಡ್ ಜನಾಂಗಗಳು ಏಷ್ಯದಲ್ಲಿನ ಒತ್ತಡದಿಂದಾಗಿ ಇಲ್ಲಿಗೆ ಬಂದಿದ್ದಿರಬಹುದು. ಮೊದಲು ಬಂದವರು ನಿಗ್ರೀಟೋ. ಆಮೇಲೆ ನೀಗ್ರಾಯಿಡರು ಬಂದು ಇವರನ್ನು ಒತ್ತರಿಸಿರಬಹುದು. ಕೆಲವರು ನ್ಯೂ ಗಿನಿಯಲ್ಲೆ ಉಳಿದು ಹೊಸಬರೊಂದಿಗೆ ರಕ್ತಸಂಬಂಧ ಬೆಳೆಸಿರುವುದೂ ಸಾಧ್ಯ. ಇತರರು ಸಾಹಸದಿಂದೆ ಮುಂದೆಮುಂದೆ ಸಾಗಿದ್ದಿರಬೇಕು. ಪಾಲಿನೇಷ್ಯನರು ಭಾರತದಿಂದ ಬಂದು, ಇಂಡೋನೇಷ್ಯದಲ್ಲಿ ಕೆಲಕಾಲ ತಂಗಿ, ಅಲ್ಲಿಯ ಭಾಷೆಯ ಕೆಲವು ಗುಣಗಳನ್ನು ಪಡೆದುಕೊಂಡು, ಮುಂದೆ ಸಾಗಿದ್ದಿರಬಹುದೆಂಬುದು ಸಕಾರಣವಾದ ಊಹೆ. ಪಾಲಿನೇಷ್ಯನರ ಅನಂತರ ಮಂಗೋಲಾಯಿಡರು ಇಲ್ಲಿಗೆ ಬಂದು, ಅವರಲ್ಲಿ ಕೆಲವರನ್ನು ಮುಂದೆ ತಳ್ಳಿ, ಕೆಲವರೊಂದಿಗೆ ವಿವಾಹಸಂಬಂಧ ಬೆಳೆಸಿದ್ದಿರಬಹುದು. ಮೈಕ್ರೋನೇಷ್ಯನರು ಹುಟ್ಟಿಕೊಂಡದ್ದು ಬಹುಶಃ ಹೀಗೆ. ಇವರಿಗೆ ಪಾಲಿನೇಷ್ಯನರ ಗುಣಲಕ್ಷಣಗಳು ಹಲವುಂಟು.

**ಸಂಸ್ಕೃತಿ:** ಈ ದ್ವೀಪಗಳ ನಡುವೆ ಬಹಳ ಮಟ್ಟಿಗೆ ಸಾಂಸ್ಕೃತಿಕ ಸಾಮ್ಯಗಳೂ ಇವೆ. ಸಮುದ್ರಕ್ಕೂ ವಾಸಸ್ಥಳಕ್ಕೂ ನಡುವಣ ದೂರ, ಸಾಧನ ಸಂಪತ್ತಿಯ ಲಭ್ಯತೆ ಇವೇ ಸಂಸ್ಕೃತಿಯ ಸ್ವರೂಪದ ನಿರ್ಣಾಯಕ ಅಂಶ. ಜನಾಂಗಗಳ ಭಿನ್ನತೆಗನುಸಾರವಾಗಿ

ಇಷ್ಟಷ್ಟು ವ್ಯತ್ಯಾಸಗಳುಂಟಾದರೂ ಮೂಲಾಂಶಗಳು ಎಲ್ಲಕ್ಕೂ ಸಮಾನ. ಸಾಮಾನ್ಯವಾಗಿ ಇಲ್ಲಿಯ ಜನ ಸಣ್ಣ ಸಣ್ಣ ಸಮುದಾಯಗಳಾಗಿ ವಿಂಗಡವಾಗಿರುತ್ತಾರೆ. ದೊಡ್ಡ ದ್ವೀಪಗಳಲ್ಲಿ ಹಳ್ಳಿಗಳುಂಟು. ಪೆಲೂದ ಹಳ್ಳಿಗಳಲ್ಲಿ ಎರಡೆರಡು ಚಾವಡಿಗಳುಂಟು. ನ್ಯೂ ಗಿನಿಯ ಅನೇಕ ಹಳ್ಳಿಗಳಲ್ಲಿ ಸಮುದಾಯ ಭವನಗಳಿವೆ. ಅಡ್ಮಿರಾಲ್ಟಿ ದ್ವೀಪಗಳಲ್ಲಿಯ ಕರಾವಳಿ ಹಳ್ಳಿಗಳನ್ನು ಸಾಮಾನ್ಯವಾಗಿ ಸಮುದ್ರದೊಳಕ್ಕೆ ಚಾಚಿದ ದಿಬ್ಬಗಳ ಮೇಲೆ ನಿರ್ಮಿಸಲಾಗಿದೆ. ಸ್ವಿಸ್ ಸರೋವರ ವಸತಿಗಳನ್ನೆ ಇವು ಹೋಲುತ್ತವೆ.

ಪಾಲಿನೇಷ್ಯನ್ ಹಳ್ಳಿಗಳಲ್ಲಿ ಮನೆಗಳು ಅಡ್ಡಾದಿಡ್ಡಿ, ಕುಣಿತದ ಕಣಗಳೂ ಇಲ್ಲಿರುವುದುಂಟು. ಇವು ಪವಿತ್ರ. ಇಲ್ಲಿಗೆ ಸ್ತ್ರೀಯರ ಪ್ರವೇಶ ನಿಷಿದ್ಧ. ಮನೆಗಳಿಗೆ ಮರದ ಕಂಬಗಳಿರುತ್ತವೆ. ಸಾಮಾನ್ಯವಾಗಿ ಇವುಗಳದು ಆಯತಾಕೃತಿ. ಸಮೋವದಲ್ಲಿ ದುಂಡನೆಯ ಮನೆಗಳು ಸಾಮಾನ್ಯ. ಮೇಲಂತಸ್ತಿನವರ ಮನೆಗಳ ಕಟ್ಟುಗಾರಿಕೆ ಉತ್ತಮತರ. ಅಂತಸ್ತಿಗೆ ತಕ್ಕಂತೆ ಎತ್ತರವಾಗಿರುವ ಕಲ್ಲಿನ ಜಗಲಿಗಳ ಮೇಲೆ ಅವುಗಳ ನಿರ್ಮಾಣ. ಹವಾಯಿಯಲ್ಲಿ ಇದೇ ತೆರನಾದ ಪವಿತ್ರ ವೇದಿಕೆಗಳಿವೆ. ಧಾರ್ಮಿಕ ವಿಧಿಗಳಿಗೆ ಇವನ್ನು ಬಳಸಲಾಗುತ್ತಿತ್ತು. ಇವುಗಳ ಮೇಲೆ ಬೃಹದಾಕಾರದ ಮರದ ಪ್ರತಿಮೆಗಳನ್ನು ಸ್ಥಾಪಿಸುತ್ತಿದ್ದದ್ದೂ ಉಂಟು. ಈ ಅಂಶದಲ್ಲಿ ಇವು ಈಸ್ಟರ್ ದ್ವೀಪಗಳ ವೇದಿಕೆಗಳನ್ನು ಹೋಲುತ್ತವೆ. ಪಾಲಿನೇಷ್ಯದಲ್ಲೆಲ್ಲ ಅಲ್ಲಲ್ಲಿ ಇಂಥ ಪಾಷಾಣವೇದಿಕೆಗಳಿವೆ. ಇಂಥವು ದೂರದ ಮಾಲ್ಡೆನ್ ದ್ವೀಪಗಳಲ್ಲಿದ್ದುದೂ ಉಂಟು. ಇವುಗಳ ಪಳೆಯುಳಿಕೆಗಳಿಂದಲೇ ಈ ಪ್ರದೇಶಕ್ಕೂ ಈಜಿಪ್ಟಿಗೂ ಹಿಂದಿನ ಕಾಲದಲ್ಲಿ ಸಂಬಂಧವಿತ್ತೆಂಬುದಾಗಿ ಊಹಿಸಲಾಗಿತ್ತು. ಲೇಲೆ ಮತ್ತು ಮೆಟಲೇನಿಕ್ ದ್ವೀಪಗಳಲ್ಲಿ ಜೀರ್ಣವಾದ ನಗರಗಳೇ ಸಿಕ್ಕಿವೆ. ಇವುಗಳಲ್ಲಿ ಹಲವಾರು ಸೌಧಗಳ, ಕೋಟೆಗಳ ಮತ್ತು ಕಾಲುವೆಗಳ ಪಳೆಯುಳಿಕೆಗಳಿವೆ. ಇವನ್ನು ಕಟ್ಟಿದವರು ಯಾರೆಂಬುದು ಗೊತ್ತಿಲ್ಲ. ಇವು ಈಚಿನವೆಂದೂ ಈ ವಿಭಾಗದ ಇತರ ಕಟ್ಟಡಗಳೂ ಇವಕ್ಕೂ ಹೆಚ್ಚಿನ ವ್ಯತ್ಯಾಸಗಳಿದ್ದಿರಲಾರವೆಂದೂ ಅಭಿಪ್ರಾಯ ಪಡಲಾಗಿದೆ.

ಮೆಲನೇಷ್ಯ ಮತ್ತು ಮೈಕ್ರೋನೇಷ್ಯಗಳಲ್ಲಿ ಗೋತ್ರ ಪದ್ಧತಿ ಸಾಮಾನ್ಯವಾಗಿತ್ತು. ಪ್ರತಿಯೊಂದು ಗೋತ್ರಕ್ಕೂ ಹಕ್ಕಿಯೋ ಪ್ರಾಣಿಯೋ ಮೂಲಪುರುಷ. ಅವರವರ ಕುಲದೇವತಾ ಪ್ರಾಣಿಗಳ ಮಾಂಸದ ಸೇವನೆ ಅವರವರಲ್ಲಿ ನಿಷಿದ್ಧ. ಆಯಾ ಗೋತ್ರಗಳಿಗೆ ಆಯಾ ಕುಲದೇವತಾ ಪ್ರಾಣಿಗಳೇ ಲಾಂಛನ. ಸಗೋತ್ರ ವಿವಾಹ ನಿಷಿದ್ಧ. ಆದರೆ ಆಧುನಿಕ ಪರಿಸ್ಥಿತಿಯಲ್ಲಿ ಈ ಕಟ್ಟು ಮುರಿದು ಬೀಳುತ್ತಿದೆ. ಎರಡು ಅಥವಾ ಹೆಚ್ಚು ಗೋತ್ರಗಳ ಜನ ಒಂದೇ ಹಳ್ಳಿಯಲ್ಲಿ ವಾಸಿಸುವುದೂ ಸಾಮಾನ್ಯ.

**ಸಾಮಾಜಿಕ ರಾಜಕೀಯ ವ್ಯವಸ್ಥೆ:** ಎಲ್ಲ ದ್ವೀಪಗಳಿಗೂ ಸಾಮಾನ್ಯವಾದ ರೀತಿಯ ಸಾಮಾಜಿಕ ಸಂಘಟನೆಯಿಲ್ಲ. ಅಂತಸ್ತು ಮತ್ತು ಯಜಮಾನಿಕೆಗಳ ನಿಯಮಗಳಲ್ಲೂ ಗುಂಪಿನಿಂದ ಗುಂಪಿಗೆ ವ್ಯತ್ಯಾಸವುಂಟು. ಪಾಲಿನೇಷ್ಯದಲ್ಲಿ ಯಜಮಾನಿಕೆ ವಂಶ ಪಾರಂಪರ್ಯ ವಾದದ್ದು. ಮೆಲನೇಷ್ಯದ ಕೆಲಭಾಗಗಳಲ್ಲೂ ಈ ಪದ್ಧತಿಯುಂಟು. ಇನ್ನು ಕೆಲವಡೆಗಳಲ್ಲಿ ಧಾರ್ಮಿಕ ಮುಖಂಡ ಮತ್ತು ಯುದ್ಧ ನಾಯಕ ಎಂದು ಎರಡು ಸ್ಥಾನಗಳಿರುವುದುಂಟು.

ಅಮೆರಿಕದ ಆಡಳಿತ ಬರುವುದಕ್ಕೆ ಮುಂಚೆ, 19ನೆಯ ಶತಮಾನದಲ್ಲಿ ಹವಾಯಿಯ ಯಜಮಾನಿಕೆಗೆ ರಾಜತ್ವದ ಮಹತ್ತ್ವ ಬಂದಿತ್ತು. ಟಾಂಗ ರಾಜ್ಯದಲ್ಲಿ ಬಲುಸಂಕೀರ್ಣವಾದ ರಾಜಪದ್ಧತಿ ಬೆಳೆಯಿತು. ಮೆಲನೇಷ್ಯದಲ್ಲಿ ದಕ್ಷ ಅನುಭವಿ ಹಿರಿಯರು ಯಜಮಾನರು, ಅಂತಸ್ತಿನ ವಿಚಾರದಲ್ಲೂ ಭಿನ್ನತೆಗಳುಂಟು. ಶ್ರೀಮಂತರು, ಸಾಮಾನ್ಯರು ಅಥವಾ ಸ್ವತಂತ್ರರು ಮತ್ತು ಗುಲಾಮರು–ಎಂಬ ಮೂರು ವಿಭಾಗಗಳು ಪಾಲಿನೇಷ್ಯದಲ್ಲೂ ಮೈಕ್ರೋನೇಷ್ಯದಲ್ಲೂ ಇದ್ದುವು. ಮೆಲನೇಷ್ಯನರದು ಭಿನ್ನಪದ್ಧತಿ. ಅಲ್ಲಿಯ ಕೆಲವು ಭಾಗಗಳಲ್ಲಿ ಹಲವು ಶ್ರೇಣಿಗಳು ವಿಕಾಸಗೊಂಡುವು.

**ಧಾರ್ಮಿಕ ವ್ಯವಸ್ಥೆ:** ಧಾರ್ಮಿಕ ವ್ಯವಸ್ಥೆಗಳೂ ನಂಬಿಕೆಗಳೂ ನಾನಾ ತೆರ. ಆದರೆ ಕೆಲವು ಲಕ್ಷಣಗಳು ಇಲ್ಲಕ್ಕೂ ಸಾಮಾನ್ಯ. ಯಜಮಾನರೂ ಶ್ರೀಮಂತರೂ ದೈವಿಕಶಕ್ತಿಸಂಪನ್ನರು. ಇವರೊಂದಿಗೆ ಇತರರ ಸಂಪರ್ಕ ವರ್ಜ್ಯ. ಪಾಲಿನೇಷ್ಯದಲ್ಲಿ ದೇವರುಗಳು ಅನೇಕ. ಇವರಲ್ಲೂ ತರತರ. ಹವಾಯಿಯ ಜ್ವಾಲಾಮುಖಿಗಳು ಅಲ್ಲಿಯ ಅಗ್ನಿದೇವತೆಯ ರೂಪ. ಪ್ರತಿಯೊಂದು ಮರಕ್ಕೂ ಒಂದು ಅಧಿದೇವತೆ. ಸತ್ತವರ ಆತ್ಮಗಳು ಪಶ್ಚಿಮಾಭಿಮುಖವಾಗಿ ಹೋಗಿ ತಮ್ಮ ಶಾಶ್ವತ ನೆಲೆ ತಲುಪುತ್ತವೆ. ಮೆಲನೇಷ್ಯದ ದೆವ್ವಗಳು ಎರಡು ತೆರ: ಸತ್ತವರ ಪ್ರೇತಗಳು ಮತ್ತು ದೇಹವನ್ನೇ ಹೋಗದವು. ಅನೇಕ ಕಡೆಗಳಲ್ಲಿ ಪ್ರತ್ಯೇಕ ಪುರೋಹಿತ ವರ್ಗವಿಲ್ಲ. ಯೋಗ್ಯತೆಯಿದ್ದವನು ಪುರೋಹಿತನಾಗ ಬಹುದು. ಆದರೆ ಪಾಲಿನೇಷ್ಯದಲ್ಲಿ ಹೀಗಲ್ಲ. ಅಲ್ಲಿ ಪ್ರತ್ಯೇಕ ಪುರೋಹಿತ ಜಾತಿ ಉಂಟು.

ಪರಿಶೋಧಕರು ಈ ಪ್ರದೇಶವನ್ನು ಮೊಟ್ಟಮೊದಲು ಕಂಡಾಗ ಇಲ್ಲಿಯ ಜನರಿನ್ನೂ ನವಶಿಲಾಯುಗದಲ್ಲೇ ಇದ್ದರು. ವ್ಯವಸಾಯ ಸರಳವಾಗಿತ್ತು. ಮೆಲನೇಷ್ಯರ ಮತ್ತು ಪಾಲಿನೇಷ್ಯನರ ಇಡೀ ಅರ್ಥವ್ಯವಸ್ಥೆಗೆ ಮೀನುಗಾರಿಕೆ ಮತ್ತು ತೋಟಗಾರಿಕೆಗಳೇ ಕೇಂದ್ರಗಳಾಗಿದ್ದುವು.

ಉಡುಗೆಗಳು ಸಸ್ಯಮೂಲ, ನ್ಯೂ ಗಿನಿಯ ಕೆಲವೆಡೆಗಳಲ್ಲಿ ಸಂಪೂರ್ಣ ನಗ್ನತೆಯೂ ಇತ್ತು. ಅಲ್ಲಿ ಉಡುಗೆ ಕೇವಲ ಅಲಂಕಾರಕ್ಕೆ. ಹವಾಗುಣದ ಕಾರಣದಿಂದ ದಕ್ಷಿಣ ತುದಿಯ ಮಾವೊರಿ (ಮೌರಿ) ಜನ ಹೆಚ್ಚು ಉಡುಪು ಧರಿಸುತ್ತಿದ್ದರು. ಇನ್ನು ಕೆಲವು ಕಡೆಗಳಲ್ಲಿ ಸರಳವಾದ ನೇಯ್ಗೆಯ ವಿಧಾನವೂ ಗೊತ್ತಿತ್ತು.

ಉದ್ದನೆಯ ಮರಗಳ ತೋಡುದೋಣಿಗಳೇ ಇವರು ಬಳಸುತ್ತಿದ್ದ ಸಮುದ್ರಯಾನ ಸಾಧನಗಳು.

*

**ಓಷಿಯಾನಿಯ ಕಲೆ:** ಪೆಸಿಫಿಕ್ ಅಥವಾ ಶಾಂತಸಾಗರ, ಅದರ ಸುತ್ತಮುತ್ತಲಿನ ದ್ವೀಪ ಪ್ರಾಂತ್ಯಗಳ ಅಂದರೆ, ಪಾಲಿನೇಷ್ಯ, ಮೆಲನೇಷ್ಯ, ಪಾಪುವಗಳ ಕಲೆಗಳು ಅತಿ ಪ್ರಾಚೀನವಾದುವು. ಪಾಲಿನೇಷ್ಯದ ಆದಿಪುರುಷರು ಮಲಯ ದ್ವೀಪಗಳು ಸಮೂಹವನ್ನು ದಾಟಿ ಭಾರತದಿಂದ ಬಂದರೆಂದೂ ಮೆಲನೇಷ್ಯದವರು ಏಷ್ಯ ಖಂಡದ ಆಗ್ನೇಯ ಭಾಗದಿಂದ ಬಂದರೆಂದೂ ಮೈಕ್ರೋನೇಷ್ಯದವರು ಪಾಲಿನೇಷ್ಯ ಮೆಲನೇಷ್ಯದವರ ಸಂಕೀರ್ಣ ಜಾತೀಯರೆಂದೂ ನ್ಯೂ ಗಿನಿಯ (ಪಾಪುವ) ಪ್ರದೇಶಕ್ಕೆ ಸೇರಿದವರ ಪೈಕಿ ಆಗ್ನೇಯ ಭಾಗದಲ್ಲಿರುವವರು ಮೆಲನೇಷ್ಯರೆಂದೂ ವಿದ್ವಾಂಸರ ಅಭಿಪ್ರಾಯ.

ಪಾಲಿನೇಷ್ಯದವರ ತೊಗಟೆ ಬಟ್ಟೆಗಳ ಮೇಲೆ ಛಾಪಿಸಿದ ಕ್ಷೇತ್ರಗಣಿತ ನಕ್ಷೆಗಳ ನಮೂನೆಗಳು ಸುಂದರವಾಗಿಯೂ ಅವರ ಉಪಕರಣಗಳ ನಿರೂಪಣೆ, ಕಾವಾಗಳು ಬಟ್ಟಲುಗಳು ಮೇಲಿನ ಸುರುಳಿಗಳು ಗಂಭೀರವಾಗಿವೆ. ಫಿಜಿ, ಸಾಮೂವ (ಹವಾಯಿ) ದ್ವೀಪಗಳ ಕಲಾಕೃತಿಗಳಂತೆ ಒಕ್ಕಲಿಗರ ಸರಳತೆಯನ್ನು ಪಡೆದಿರದೆ, ಅವು ಕುಲೀನ ಮಾದರಿಯಾಗಿವೆ. ಪಾಲಿನೇಷ್ಯ ಕಲಾಕೃತಿಗಳಲ್ಲಿ ಅತಿ ಸುಂದರವಾದುವು ಟೀಕೀ ಹೆಸರಿನ ತಿಮಿಂಗಿಲ ದಂತದಿಂದ ಕೊರೆದ ಕಂಠಾಭರಣದ ಪದಕಗಳು. ಮಯೋರೀಯರ ಹೀಟಕೀ ಪದಕಗಳು, ಗರ್ಭಪಿಂಡದ ರೂಪವನ್ನು ತಾಳಿದ್ದು, ಅವುಗಳ ಮೇಲೆ ಧರಿಸುವವರ ಹೆಸರುಗಳನ್ನು ಕೆತ್ತಲಾಗಿವೆ. ಮಯೋರೀಯರ ಮತ್ತೊಂದು ಕೆತ್ತನೆ, ಪಕ್ಷಿಮುಖವನ್ನು ತಾಳಿದ ಪಶುಮುಂಡದ ಮನಾಯಿಯಗಳು. ಅವರ ಪುರಾತನರ ಪ್ರತಿಮೆಗಳಿಗೆ ಎರಡು ಪಾರ್ಶ್ವದಲ್ಲಿಯೂ ಮನೆಯ ಮೇಲ್ಭಾಗಕ್ಕೂ ಇವನ್ನು ಅಂಟಿಸಲಾಗಿದೆ. ಗರಿ ಪೆಟ್ಟಗಳ ಮೇಲಿನ ಸುರಳಿ ಕೆತ್ತನೆ ಉತ್ಕೃಷ್ಟವಾಗಿವೆ. ಹರ್ವೆ ದ್ವೀಪಗಳ ದೋಣಿ ನಡೆಸುವ ಕೋಲುಗಳ ಅಲಂಕಾರದಲ್ಲಿ ಕ್ಷೇತ್ರಗಣಿತದ ನಕ್ಷೆಗಳನ್ನು ವಿಧ ವಿಧ ರೂಪದಲ್ಲಿ ಕೋಮಲವಾಗಿ ಕೆತ್ತಲಾಗಿದೆ. ಆದರೆ ಹವಾಯಿ ದ್ವೀಪದ ಶಿಲ್ಪಾಕೃತಿಗಳು ವಿಕಟವಾಗಿಯೂ ಬಿರುಸಾಗಿಯೂ ಕಾಣುತ್ತವೆ. ಈಸ್ಟರ್ ದ್ವೀಪಗಳ ಮಾನವ ಶಿಲ್ಪಾಕೃತಿಗೆ ದೊಡ್ಡ ತಲೆಯೂ ಸಮುದ್ರಪಕ್ಷಿಯ ಮುಖವೂ ಇವೆ. ಓಷಿಯಾನಿಯ ಕಲೆಯಲ್ಲಿ ಸಮುದ್ರಪಕ್ಷಿ ಜೀವಾತ್ಮನ ಸಂಕೇತ. ಕೊರೊಮೊರೊ ದಾರುವಿನಿಂದ ರಚಿಸಿದ ಪ್ರತಿಮೆಗಳು ಸುಂದರವಾಗಿವೆ.

ಮೈಕ್ರೋನೇಷ್ಯದವರ ಕಲೆಯಲ್ಲಿ ಅತಿ ಮುಖ್ಯವಾದುವು ಮರದಲ್ಲಿ ಕೆತ್ತಿದ ಪಶುಪ್ರಾಣಿಗಳ ಪ್ರತಿಮೆಗಳು ಆದರೆ ನುಕುವಾರೊ ಮತ್ತು ಉತ್ತರದ ಫಿಲಿಪೀನ್ಸ್ ಪ್ರದೇಶಗಳಿಗೆ ಸೇರಿದ ಪ್ರತಿಮೆಗಳಲ್ಲಿ ಕೃತಕತೆ ಕಾಣುತ್ತದೆ. ಅವಕ್ಕೆ ರೂಪದ ಸ್ಪಷ್ಟತೆ ಇಲ್ಲ. ತಲೆಗಳು ಅಂಡಾಕಾರದಲ್ಲಿಯೂ ಕಾಲು ಕೈಗಳು, ಅವುಗಳ ಬೆರಳುಗಳು ಅಸ್ಪಷ್ಟವಾಗಿಯೂ ಇದ್ದು ಕೇವಲ ಅಮೂರ್ತ ಕಲಾಶೈಲಿಯನ್ನು ಪ್ರದರ್ಶಿಸುತ್ತವೆ. ಪಿಲ್ಯೂ ದ್ವೀಪಗಳ ಅಲಂಕಾರದಲ್ಲಿ ಎರಡು ತರಹವಿದ್ದು, ಮೊದಲನೆಯ ಜಾತಿಗೆ ನಾನಾವಿಧ ಬಣ್ಣಗಳಿಂದ ಕೂಡಿದ ಪುರಾಣೋಕ್ತ ಕೆತ್ತನೆ ಮತ್ತು ಮದುವೆಯಾಗದ ಪುರುಷರ ಮನೆಯ ಇಪ್ಪಾರುಗಳ ವಿನ್ಯಾಸ ಸೇರುತ್ತವೆ. ಎರಡನೆಯ ಜಾತಿಗೆ, ಇಂದಿನ ಶೈಲಿಯಲ್ಲಿ ಕೊರೆದ, ಕೆಮ್ಮಣ್ಣು ಬಳಿದ ಬಟ್ಟಲುಗಳು ಸೇರುತ್ತವೆ. ಈ ಬಟ್ಟಲುಗಳಿಗೆ ಸಸ್ಯದ್ರಾವಕದಿಂದ ಬಣ್ಣ ಕಟ್ಟಿದ್ದು ಅಲ್ಲಲ್ಲಿ ಕಪ್ಪೆ ಚಿಪ್ಪಿನ ಚೂರುಗಳ ಕುಂದಣ ಮಾಡಲಾಗಿದೆ.

ಮೆಲನೇಷ್ಯದ ದಕ್ಷಿಣ ಭಾಗಕ್ಕೆ ಸೇರಿದ ತೊಂಬಾರ ಪ್ರಾಂತ್ಯದಲ್ಲಿ ಕೀಳುಮಟ್ಟದ, ನ್ಯೂ ಐರ್ಲೆಂಡಿನ ಮಧ್ಯಭಾಗದಲ್ಲಿ ಮಧ್ಯಮ ಮಟ್ಟದ, ನ್ಯೂ ಐರ್ಲೆಂಡಿನ ಉತ್ತರದಲ್ಲಿ ಉನ್ನತ ಮಟ್ಟದ, ಕಲೆಗಳನ್ನು ಕಾಣಬಹುದು. ಮೆಲನೇಷ್ಯದ ದಕ್ಷಿಣ ಭಾಗದಲ್ಲಿ ಸೀಮೆಸುಣ್ಣದಲ್ಲಿ ಬಿಡಿಸಿದ ಪಿತೃಗಳ ಶಿಲ್ಪ ಮಧ್ಯಮ ಭಾಗದಲ್ಲಿ ಸ್ಮಾರಕ ಪ್ರತಿಮೆಗಳು, ಉತ್ತರದಲ್ಲಿ ಬಟ್ಟಲುಗಳು ಮತ್ತು ವಾಸಮಾಡುವ ಗುಡಿಸಲುಗಳ ಬಾಗಿಲಿನ ಪಕ್ಕಗಳಲ್ಲಿ ಇಡುವ ಮೇಲಿನ ಆಕೃತಿಗಳು ಸಂಪ್ರದಾಯಬದ್ಧ ಶೈಲಿಯಲ್ಲಿವೆ. ಮನುಷ್ಯ, ಮತ್ಸ್ಯ, ಪಕ್ಷಿಗಳ ರೂಪಾಂತರಗಳನ್ನಿಲ್ಲಿ ಕಾಣಬಹುದು. ಆರಾಧನೆಗೆ ಯೋಗ್ಯವಾದ, ಅಲ್ಲಿನ ಪದ್ಧತಿಗಳಿಗೆ ಅನುಗುಣವಾದ ಶೈಲಿ ಇಲ್ಲಿ ಎದ್ದು ತೋರುತ್ತದೆ. ಬಿರಾರಾ (ನ್ಯೂ ಬ್ರಿಟನ್) ಶಿಲಾಕೃತಿಗಳು ಮೃದುವಾದ

ಬೂದಿಬಣ್ಣದ ಕಲ್ಲಿನಿಂದ ಕೊರದವಾಗಿದ್ದು ವಾಟ ಮಂತ್ರಗಳಿಗಾಗಿ ಬಳಕೆಯಾಗುವಂಥವಾಗಿವೆ. ಆದರೆ ಸಾಲೊಮನ್ ದ್ವೀಪಗಳ ದಾರುಶಿಲ್ಪ ಪ್ರತ್ಯೇಕ ಶೈಲಿಯಲ್ಲಿದ್ದು ನಾನಾ ವಿಧದ ರೇಖಾವಿಲಾಸಗಳನ್ನು ಪ್ರದರ್ಶಿಸುತ್ತದೆ. ಚಿಕ್ಕಮಟ್ಟ ಪ್ರತಿಮೆಗಳನ್ನು ದೊಣ್ಣೆ, ಕಟ್ಟಿಗೆಗಳಿಂದ ಮಾಡಲಾಗಿದೆ. ಅವುಗಳಿಗೆ ಬಿಳಿ ಮತ್ತು ಕಪ್ಪು ಬಣ್ಣಗಳನ್ನು ಹಾಕಿದ್ದಾರೆ. ದಕ್ಷಿಣ ವಲಯದ ದ್ವೀಪಗಳಲ್ಲಿ, ಅವಕ್ಕೆ ಕಪ್ಪು ಬಣ್ಣ ಮಾತ್ರ ಹಾಕಿ, ಅವುಗಳ ಮೇಲೆ ಮುಕ್ಕೋಣದ ಮುತ್ತಿನ ಚಿಪ್ಪಿನ ಚೂರುಗಳನ್ನು ಅನೇಕ ಆಕಾರಗಳಲ್ಲಿ ಅಂಟಿಸಿದ್ದಾರೆ. ದೋಣಿಗಳ ಮುಂಭಾಗಗಳಲ್ಲಿ ಮತ್ತು ಮಾನವ ಪ್ರತಿಮೆಗಳಲ್ಲಿ ಇದೇ ರೀತಿಯ ಕೆತ್ತನೆ ಮತ್ತು ಅಲಂಕರಣಗಳನ್ನು ಕಾಣಬಹುದು. ಮಾನವಾಕೃತಿಗಳಿಗೆ ಸುಂದರವಾದ ಮುತ್ತಿನ ಚಿಪ್ಪಿನ ಕಣ್ಣುಗಳಿವೆ. ಇವು ಭಾವಚಿತ್ರಗಳೆಂದು ನಿಸ್ಸಂಶಯವಾಗಿ ಹೇಳಬಹುದು. ಪ್ರಾಚೀನ ಕೋಲುಶಿಲ್ಪದ ಮಾನವಾಕೃತಿಗಳಲ್ಲಿ ಮುಂಡ, ಕೈ, ಕಾಲುಗಳು ಪ್ರತ್ಯೇಕವಾಗಿರದೆ ಅಖಂಡವಾಗಿವೆ. ಇಲ್ಲಿನ ಕೋಲುಪ್ರತಿಮೆಗಳಲ್ಲಿ ಕಾಲು, ಕೈಗಳು ಪ್ರತ್ಯೇಕವಾಗಿದ್ದು ಮುಂಡಕ್ಕೆ ಅಂಟಿದಂತಿದೆ. ಆಕಾರದ ಶಿಲ್ಪ ಅತ್ಯುತ್ತಮವಾಗಿದ್ದು ಪ್ರತಿಮೆಗಳ ವೈಶಿಷ್ಟ್ಯ, ಕೋಮಲತ್ವ ಪ್ರಶಂಸನೀಯವಾಗಿವೆ.

ಪಾಪುವ ಪ್ರಾಂತ್ಯದ ಕಲಾವೈಶಿಷ್ಟ್ಯ ನೀಗ್ರೊ ಆಫ್ರಿಕ ಮತ್ತು ಅಮೆರಿಕ ವಾಯವ್ಯ ಭಾಗದ ಕಲಾವೈಶಿಷ್ಟ್ಯವನ್ನು ಮೀರಿಸುವಂತಿದೆ. ಗುಂಡಾದ ಶಿಲ್ಪ ಅಪರೂಪ ಸಾಧಾರಣ ಉಪಕರಣಗಳು ಕೂಡ ಅಲಂಕಾರಮಯವಾಗಿವೆ. ರೇಖೆಗಳಲ್ಲಿ ಬಣ್ಣಗಳು ತುಂಬಿವೆ. ಯಂತ್ರನಕ್ಷೆಗಳಿಂದೊಡಗೂಡಿರುವ ಈ ಅಲಂಕಾರ ಪುರಾಣೋಕ್ತವಾಗಿ, ಧಾರ್ಮಿಕವಾಗಿದ್ದು ಪೂರ್ವಿಕರ ಆರಾಧನೆಗೆ ಅನುಕೂಲತೆಯನ್ನು ಕಲ್ಪಿಸಿಕೊಡುತ್ತದೆ. ಡಚ್ಚರ ನ್ಯೂ ಗಿನಿಯ ಕಲಾಕೃತಿಗಳು ಇಂಡೋನೇಷ್ಯದ ಪ್ರತ್ಯೇಕವಾದ ಸುರುಳಿ ಸಂಪತ್ತನ್ನು ಹೊಂದಿವೆ. ಈ ಅಲಂಕಾರದಲ್ಲಿ ತೀಕ್ಷ್ಣವಾದ ಆಡಂಬರದ ವೈಖರಿ, ಅಂದರೆ ಕ್ಷೇತ್ರಗಣಿತ ನಕ್ಷೆಗಳು ಬೆರೆತು ಲತಾಸುರುಳಿಗಳು, ಪಶುಪ್ರಾಣಿಗಳ ರೂಪಗಳು ಕಂಡುಬರುತ್ತವೆ. ಇವುಗಳಲ್ಲಿ ಪಿತೃಗಳ ಕಪಾಲಗಳನ್ನು ಜೋಪಾನ ಮಾಡುವುದಕ್ಕೆ ಉಪಯುಕ್ತವಾದ ಕೋರ್‌ವಾರ್ ಹೆಸರಿನ ಮರದ ಸಂಪುಟಗಳು ಗಣನೀಯವಾದುವು. ಪಿತೃಗಳ ಆತ್ಮಗಳು ಇವುಗಳಲ್ಲಿ ವಾಸಿಸುತ್ತವೆನ್ನುವ ಭಾವನೆ ಪ್ರಚಲಿತವಿದೆ.

ಸೆಫಿಕ್ ಮತ್ತು ರಾಮು ಕಣಿವೆಗಳಲ್ಲಿನ ಗುಂಡು ಪ್ರತಿಮೆಗಳ ಕೌಶಲ್ಯ ಹೆಚ್ಚಿನ ಮನ್ನಣೆ ಪಡೆದಿವೆ. ಇಲ್ಲಿನ ಜನರ ಮರದ ಬಟ್ಟಲುಗಳು ಅತಿ ಸುಂದರವಾಗಿವೆ. ಇವುಗಳ ಮೇಲೂ ಮಾನವ, ಪಶುರೂಪಾಲಂಕಾರ ಹೇರಳವಾಗಿದೆ. ಮುಖವಾಡಗಳು, ಕಟ್ಟಿಗೆಯ ಕಾಲುಮಣೆಗಳು ಮುಂತಾದುವು ಇತರ ಗಮನಾರ್ಹ ವಸ್ತುಗಳು, ರಾಮು ಕಣಿವೆಗೆ ಸೇರಿದ ವಾಟುಟ್ ಬುಲಾಲೊ ಪ್ರಾಂತ್ಯಗಳ ಕಲ್ಲಿನ ವಿಗ್ರಹಗಳು ನೋಡತಕ್ಕವು. ಮಾಸಿಂ ಮತ್ತು ಟೋಬ್ರಿಯನ್ಡ್ ದ್ವೀಪಗಳ ಕೈಪಿಡಿಗಳಿಗೆ ಮತ್ತು ದೋಣಿಯ ಮುಂಭಾಗಗಳಿಗೆ ಪ್ರತ್ಯೇಕವಾದ ಸುರುಳಿ ಅಲಂಕರಣದ ಸೊಬಗಿದೆ. ಇದನ್ನು ಹೆಣಿಗೆಗೊಂಡ ಪ್ರಶ್ನಾರ್ಥಕ ಚಿಹ್ನೆ ಸರಣಿ (ಇಂಟರ್‌ಲಾಕಿಂಗ್ ಕ್ವಶ್ಚನ್ ಮಾರ್ಕ್) ಎಂದು ಕರೆಯುತ್ತಾರೆ. ಈ ಅಲಂಕಾರ ಪುರಾಣೋಕ್ತವಾಗಿ ಆಗಲೀ ಯಾಂತ್ರಿಕವಾಗಿಯಾಗಲೀ ಇಲ್ಲ. ಸಾಂಕೇತಿಕ ಭೂಪ್ರದೇಶ ಚಿತ್ರಗಳ ಕೆತ್ತನೆ. ಬಿದುರು ವಸ್ತುಗಳ ಮೇಲೆ ರಮ್ಯವಾಗಿ ಮೂಡಿ ನಿಂತಿದೆ. ಆಳವಾದ ನೀರು, ಗಾಳಿಯಿಂದ ಪಲ್ಲಟವಾದ ಸಮುದ್ರದ ಮೇಲೆ ಸುರಿಯುವ ಮಳೆ. ಸಮುದ್ರದ ಅಲೆಗಳಿಂದ ಹೊಡೆತ ತಿನ್ನುವ ಗುಡ್ಡಗಳು-ಮುಂತಾದುವು ತುಂಬ ಮನೋಹರವಾಗಿ ಕೊರೆಯಲ್ಪಟ್ಟಿದೆ. ದೋಣಿಗಳ ಮತ್ತು ನಾಟ್ಯದಲ್ಲಿ ಉಪಯೋಗಿಸುವ ಗುರಾಣಿಗಳ ಅಲಂಕಾರ ಸಹ ಸುಂದರವಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಓಷಿಯಾನಿಯ ಕಲೆಯಲ್ಲಿ ಭಾರತದ ಸಂಸ್ಕೃತಿ ಮಧುರವಾಗಿ ಮುದ್ರಿತವಾಗಿದೆ. (ಪಿ.ಎಸ್.)

**ಓಸಝೋನುಗಳು:** ಫಿನೈಲ್ ಹೈಡ್ರಜೀನ್ ಪರಿವರ್ತಕದೊಡನೆ ಕೀಟೋನುಗಳು ಮತ್ತು ಆಲ್ಡಿಹೈಡುಗಳು ವರ್ತಿಸಿ ಫಿನೈಲ್ ಹೈಡ್ರಝೋನುಗಳಾಗಿ ಪರಿವರ್ತಿತವಾಗುತ್ತವೆ; ಹೈಡ್ರಝೋನುಗಳು ಫಿನೈಲ್ ಹೈಡ್ರಜೀನಿನ ಮತ್ತೆರಡು ಅಣುಗಳೊಡನೆ ಸಂಯೋಜಿಸಿ ಓಸಝೋನುಗಳ ಉತ್ಪತ್ತಿಯಾಗುತ್ತದೆ.

OSe+hydrAZONE→OSAZONE

ಓಸಝೋನುಗಳು ಹಳದಿ ಬಣ್ಣವುಳ್ಳ ಸ್ಫಟಿಕಾಕೃತಿಯ ಘನಗಳು. ನೀರಿನಲ್ಲಿ ಹೆಚ್ಚಾಗಿ ಕರಗುವುದಿಲ್ಲ. ನಿರ್ದಿಷ್ಟವಾದ ಕರಗುವ ಬಿಂದುಗಳಿವೆ. ಕರುಗುವ ಉಷ್ಣತೆಯಲ್ಲಿ ಅವು ವಿಭಜನೆಗೊಳ್ಳುತ್ತವೆ. ಸಕ್ಕರೆಗಳನ್ನು ಗೊತ್ತುಪಡಿಸುವುದಕ್ಕೂ ಕೆಲವು ಸಂದರ್ಭಗಳಲ್ಲಿ ಅದನ್ನು ಬೇರ್ಪಡಿಸುವುದಕ್ಕೂ ಓಸಝೋನುಗಳ ಉಪಯೋಗ ವಿದೆ. —CO—CHOH— ಗುಂಪು ಇರುವ ಎಲ್ಲ ಆರ್ಗ್ಯಾನಿಕ್ ರಾಸಾಯನಿಕ ಸಂಯುಕ್ತಗಳೂ ಓಸಝೋನುಗಳನ್ನು ಕೂಡುತ್ತವೆ.

ಫಿನೈಲ್ ಹೈಡ್ರಜೀನ್ ಸಂಯೋಜಕವು ಶರ್ಕರಪಿಷ್ಟ ಪದಾರ್ಥಗಳೊಡನೆ ಹೈಡ್ರೋಕ್ಲೋರಿಕ್ ಆಮ್ಲದ ಸಂಪರ್ಕದಲ್ಲಿ ಸಂಯೋಜನೆಗೊಂಡು ಓಸಝೋನುಗಳ ಉತ್ಪತ್ತಿಯಾಗುವುದನ್ನು 1884ರಲ್ಲಿ ಫಿಶರ್ ಮೊಟ್ಟಮೊದಲ ಬಾರಿಗೆ ಕಂಡುಹಿಡಿದ ಗ್ಲೂಕೋಸ್ ಮತ್ತು ಫ್ರಕ್ಟೋಸುಗಳೆರಡೂ ಒಂದೇವಸ್ತು ಗ್ಲೂಕೋಸಝೋನನ್ನು ಉತ್ಪತ್ತಿಮಾಡುವುದನ್ನು ಸಹ ಈತ ಶೋಧಿಸಿದ. ಈ ರೀತಿಯಲ್ಲಿ ಓಸಝೋನ್ ಆಗುವುದಕ್ಕೆ ಸಮರ್ಪಕವಾಗಿ ವಿವರಿಸುವ ಸಿದ್ಧಾಂತವನ್ನು ಫಿಶ್ ಕೊಟ್ಟಿದ್ದಾನೆ. ಫಿನೈಲ್ ಹೈಡ್ರಜೀನಿನ ಮೊದಲನೇ ಅಣು ಗ್ಲೂಕೋಸಿನಲ್ಲಿರುವ ಆಲ್ಡಿಹೈಡ್ ಗುಂಪಿನೊಂದಿಗೆ ಸಂಯೋಜಿಸಿ ಫಿನೈಲ್ ಹೈಡ್ರಝೋನಾಗುತ್ತದೆ. ಎರಡನೇ ಅಣು ಆ ಗುಂಪಿನ ಪಕ್ಕದಲ್ಲಿರುವ (ಅಂದರೆ 2ನೆಯ ಸ್ಥಾನದ) ಹೈಡ್ರಾಕ್ಸಿಲ್ ಗುಂಪನ್ನು ಉತ್ಕರ್ಷಿಸಿ ಕಿಟೋನಿಕ್ ಗುಂಪಾಗಿ ಪರಿವರ್ತಿಸುತ್ತದೆ. ಮೂರನೆಯ ಅಣು ಆ ಗುಂಪಿನೊಂದಿಗೆ ಸಂಯೋಜಿಸಿ ಗ್ಲೂಕೋಸಜಷೋನ್ ಉತ್ಪತ್ತಿಯಾಗುತ್ತದೆ. ಆದರೆ ಈ ವಿವರಣೆ ಸಮರ್ಪಕವಾಗಿಲ್ಲ. ಕಾರಣ, ಫಿನೈಲ್ ಹೈಡ್ರಜೀನ್ ಇಲ್ಲೂ ಉತ್ಕರ್ಷಣಕಾರಿ ವರ್ತಿಸುವುದು ಕಂಡುಬಂದಿಲ್ಲ. 1940ರಲ್ಲಿ ವೀಗ್ಯಾಂಡ್ ಎಂಬಾತ ಬೇರೆ ಸಿದ್ಧಾಂತವನ್ನು ಮಂಡಿಸಿದ್ದಾನೆ. ಅಣುವಿನೊಳಗಡೆಯೇ ಉತ್ಕರ್ಷಣ-ಅಪಕರ್ಷಣಗಳ ಪರಸ್ಪರ ಹೊಂದಾಣಿಕೆ (ಅಮೆಡೋರಿಯ ಪರಸ್ಪರ ಹೊಂದಾಣಿಕೆಯ ವಿಧಾನ) ಆಗುತ್ತದೆ. ತತ್ಫಲವಾಗಿ ಓಸಝೋನ್ ಉತ್ಪತ್ತಿಯಾಗುತ್ತದೆ.

CHO | CHOH | $(CHOH_3)$ | $CH_2OH$ (ಗ್ಲೂಕೋಸ್) $+ C_6H_5NHNH_2$ (ಫಿನೈಲ್ ಹೈಡ್ರಜೀನ್ (ಮೊದಲನೇ ಅಣು)) ⟶ $CH=N.NH.C_6H_5$ | CHOH | $(CHOH)_3$ | $CH_2OH$ (ಗ್ಲೂಕೋಸಿನ ಫಿನೈಲ್ ಹೈಡ್ರಝೋನ್)

$CH.NHNHC_6H_5$ || C—OH | $(CHOH)_3$ | $CH_2OH$ ⇄ $CH_2NHNHC_6H_5$ | C = O | $(CHOH)_3$ | $CH_2OH$ + $C_6H_5NHNH_2$ (ಎರಡನೇ ಅಣು) →

$CH_2NHNHC_6H_5$ | $C=N.NH.C_6H_5$ | $(CHOH_3)$ | $CH_2OH$ ⇄ $CH.NHNHC_6H_5$ || $C=N.NH.C_6H_5$ | $(CHOH_3)$ | $CH_2OH$ ⟶ $C_6H_5NH_2$

$CH=N.NH.C_6H_5$ | C =NH | $(CHOH_3)$ | $CH_2OH$ ಅಥವಾ CH = NH | $C=N,NH.C_6H_5$ | $(CHOH_3)$ | $CH_2OH$ $+ C_6H_5NHNH_2$ (ಮೂರನೇ ಅಣು) ⟶ ($- NH_3$) $CH = N.NH.C_6H$ | $C = N,NH.C_6H_5$ | $(CHOH_3)$ | $C_2HOH$ (ಗ್ಲೂಕೋಸಜೋನ್)

ಈ ವಿವರಣೆ ಕೂಡ ಅಸಮರ್ಪಕವಾದದು. ಏಕೆಂದರೆ ಇದರಿಂದ ಮೊದಲ ಎರಡೇ ಇಂಗಾಲದ ಪರಮಾಣುಗಳು ಈ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಔಚಿತ್ಯದ ಮಿತಿಯನ್ನು ವಿವರಿಸಲಾಗದು, ಆದರೂ ಬ್ಯಾರ್ರಿ ಮತ್ತು ಮಿಚ್ಚೆಲ್ ಈ ವಿವರಣೆಯನ್ನೇ ಅಲ್ಪ ಬದಲಾವಣೆಯೊಂದಿಗೆ ಪುಷ್ಟೀಕರಿಸಿದ್ದಾರೆ (1955). ಎಲ್. ಮೆಸ್ಟರ್ ಎಂಬಾತ ಓಸಜ಼ೋನುಗಳು ಅಚಕ್ರೀಯ ವಸ್ತುಗಳು ಹಾಗೂ ಖಿಲೇಟ್ ಉಂಗುರ ಉಳ್ಳವಾದ್ದರಿಂದ ಸ್ಥಿರವಾದ ಸಂಯುಕ್ತಗಳು ಎಂಬುದನ್ನು ಸಮರ್ಥಿಸಿದ್ದಾನೆ (1955).

ಸಕ್ಕರೆ ಮತ್ತು ಫಿನೈಲ್ ಹೈಡ್ರಜ಼ೀನ್ ಅಸಿಟೇಟ್ ದ್ರಾವಣವನ್ನು ಒಂದು ಕುದಿಯುವ ನೀರಿನ ತಾಪಕದಲ್ಲಿ ಕಾಯಿಸಿದಾಗ ಓಸಜ಼ೋನ್ ಉತ್ಪತ್ತಿಯಾಗುತ್ತದೆ. ಈ ರೀತಿ ಸಕ್ಕರೆಗಳು ಓಸಜ಼ೋನುಗಳಾಗಿ ಪರಿವರ್ತನೆಯಾಗಲು ತೆಗೆದುಕೊಳ್ಳುವ ಕಾಲ ಮತ್ತು ಈ ಓಸಜ಼ೋನುಗಳ ದೃಢ ಕರಗುವ ಬಿಂದುಗಳನ್ನು ಕಂಡುಹಿಡಿಯುವುದರಿಂದ ಸಕ್ಕರೆಗಳನ್ನು ಗೊತ್ತುಪಡಿಸುತ್ತಾರೆ.

| ಓಸಜ಼ೋನಿನ ಹೆಸರು | ಕರಗುವ ಬಿಂದು $^0$ಸೆಂ. | ಉತ್ಪತ್ತಿಯಾಗಲು ತೆಗೆದುಕೊಳ್ಳುವ ಕಾಲ (ಮಿನಿಟುಗಳು) |
|---|---|---|
| ಗ್ಲೂಕೋಸಜ಼ೋನ್ | 205 | 8.0 |
| ಫ್ರಕ್ಟೋಸಜ಼ೋನ್ | 205 | 5.0 |
| ಮ್ಯಾನ್ನೋಸಜ಼ೋನ್ | 200 | 0.5 |
| ಗ್ಯಾಲಕ್ಟೋಸಜ಼ೋನ್ | 194 | 30.0 |
| ಅರಾಬಿನೋಸಜ಼ೋನ್ | 167 | 10.0 |
| ಗ್ಲೈಲೋಸಜ಼ೋನ್ | 163 | 7.0 |
| ಮಾಲ್ಟೋಸಜ಼ೋನ್ | 206 | ಶೈತ್ಯಗೊಳಿಸಿದ ಆನಂತರ |
| ಲ್ಯಾಕ್ಟೋಸಜ಼ೋನ್ | 200 | ಶೈತ್ಯಗೊಳಿಸಿದ ಆನಂತರ |
| ಸುಕ್ರೋಸಜ಼ೋನ್ (ಇಲ್ಲ) | — | — |

ಓಸಜ಼ೋನುಗಳ ಆವರ್ತಶಕ್ತಿ (ಸ್ಪೆಸಿಫಿಕ್ ರೊಟೇಶನ್) ಕೂಡ ಅವುಗಳ ಮುಖ್ಯ ಗುಣವಾಗಿದೆ. ಇದನ್ನು ಕಂಡುಹಿಡಿಯುವುದರಿಂದಲೂ ಸಕ್ಕರೆಗಳನ್ನು ಗುರುತಿಸಬಹುದು. ಓಸಜ಼ೋನುಗಳು ಹರಳುಗಳ ಆಕಾರದ ಘನವಸ್ತುಗಳು. ಅವನ್ನು ಸೂಕ್ಷ್ಮದರ್ಶಿಯಲ್ಲಿ ಪರೀಕ್ಷಿಸುವುದರಿಂದ, ಓಸಜ಼ೋನುಗಳ ಹರಳುಗಳ ವೈಶಿಷ್ಟ್ಯ, ಆಕಾರ ಗೊತ್ತಾಗುತ್ತವೆ. ಇದರಿಂದಲೂ ಓಸಜ಼ೋನು ಯಾವ ಸಕ್ಕರೆಯಿಂದಾದುದು ಇಂದು ಗೊತ್ತುಪಡಿಸುತ್ತಾರೆ.




**ಓಸಜ಼ೋನುಗಳ ಹರಳುಗಳು (ಸೂಕ್ಷ್ಮದರ್ಶಿಯಲ್ಲಿ ನೋಡಿದಾಗ) : 1. ಗ್ಲೂಕೋಸಜ಼ೋನ್ (ಫ್ರಕ್ಟೋಸಜ಼ೋನ್), 2. ಮಾಲ್ಟೋಸಜ಼ೋನ್, 3. ಲ್ಯಾಕ್ಟೋಸಜ಼ೋನ್**

ಓಸಜ಼ೋನನ್ನು ತಾಮ್ರದ ಸಲ್ಫೇಟ್ ದ್ರಾವಣದೊಡನೆ ಕಾಯಿಸಿದಾಗ, ಓಸಟ್ರೈಯಜ಼ೋಲ್ ಉತ್ಪತ್ತಿಯಾಗುತ್ತದೆ. ಈ ಸಂಯುಕ್ತಗಳೂ ಸಕ್ಕರೆಯನ್ನು ಗುರುತಿಸಲು ಸಹಾಯಕವಾಗಿವೆ. ಓಸಜ಼ೋನನ್ನು ಹೈಡ್ರೋಕ್ಲೋರಿಕ್ ಆಮ್ಲದಿಂದ ಜಲ ವಿಶ್ಲೇಷಣೆ ಮಾಡಿದಾಗ, ಫಿನೈಲ್ ಹೈಡ್ರಜ಼ೀನ್ ಬಿಡುಗಡೆ ಹೊಂದಿ, ಓಜ಼ೋನ್ ಸಂಯುಕ್ತ ಉತ್ಪತ್ತಿಯಾಗುತ್ತದೆ. ಓಜ಼ೋನ್ ಫಿನೈಲ್ ಹೈಡ್ರಜ಼ೀನಿನೊಡನೆ ವರ್ತಿಸಿದಾಗ ಓಸಜ಼ೋನ್ ತಯಾರಾಗುತ್ತದೆ.

ಓಸಜ಼ೋನುಗಳ ಉತ್ಪತ್ತಿ: α–ಹೈಡ್ರಾಕ್ಸಿ ಕೀಟೋನುಗಳು ಉದಾಹರಣೆಗೆ ಬೆನ್‌ಜ಼ಾಯಿನ್ $C_6H_5CHOHCOC_6H_5$ಮತ್ತು ಅಸಿಟಾಯಿನ್ $CH_3CHOHCOCH_3$ಗಳ ಸಾಮಾನ್ಯಗುಣ. ಗ್ಲೈಕಾಲ್ಡಿಹೈಡ್ ಮತ್ತು ಗ್ಲೈಆಕ್ಸಾಲುಗಳೆರಡೂ ಒಂದೇ ಲಕ್ಷಣಗಳುಳ್ಳ ಓಸಜ಼ೋನನ್ನು ಕೊಡುತ್ತವೆ.

ಗ್ಲೂಕೋಸನ್ನು ಫ್ರಕ್ಟೋಸಾಗಿ ಪರಿವರ್ತಿಸುವ ರಾಸಾಯನಿಕ ಕ್ರಿಯೆಯಲ್ಲಿ ಓಸಜ಼ೋನ್ ತಯಾರಿಸುವುದು ಆ ಕ್ರಿಯೆಯ ಮೊದಲ ಘಟ್ಟ.

ಓಸಜ಼ೋನುಗಳಿಗೆ ತೆರೆದ ಸರಪಳಿ ಮತ್ತು ಚಕ್ರಾಕಾರಗಳ ರಚನೆ ಇರಬಹುದು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಓಸಜ಼ೋನುಗಳ ರಚನೆಯ ಪ್ರಶ್ನೆ ಹಾಗೂ ಅವು ಉತ್ಪತ್ತಿಯಾಗುವ ವಿಧಾನದ ತಾಂತ್ರಿಕಜ್ಞಾನ ಸಂಪೂರ್ಣವಾಗಿ ಬಗೆಹರಿಸಲಾಗಿದೆ ಎಂದು ಹೇಳಲಾಗದು (**ನೋಡಿ– ಫಿನೈಲ್–ಹೈಡ್ರಜ಼ೀನುಗಳು**). (ಪಿ.ಜಿ.ಆರ್.)

**ಓಸಾಕ:** ಜಪಾನಿನ ಅತ್ಯಂತ ಪುರಾತನ ನಗರಗಳಲ್ಲೊಂದು. ಗಾತ್ರದಲ್ಲಿ ಜಪಾನಿನಲ್ಲೇ ಎರಡನೆಯದು; ವಿಸ್ತೀರ್ಣದಲ್ಲಿ ಮೂರನೆಯದು. ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರ. ಇದೇ ಹೆಸರಿನ ನಗರಪ್ರಾಂತ್ಯದ ಮುಖ್ಯಸ್ಥಳ. ಓಸಾಕ ಕೊಲ್ಲಿಯ ಮೇಲೆ, ಯೋಡೋ ನದಿಯ ಮುಖದ ಬಳಿ ಇದೆ (ಉತ್ತರ ಅಕ್ಷಾಂಶ $30^0$ 32', ಪೂರ್ವ ರೇಖಾಂಶ $135^0$). ಕೋಬೆ ನಗರ ಇರುವುದು ಇದರಿಂದ ಪಶ್ಚಿಮಕ್ಕೆ 8 ಮೈ. ದೂರದಲ್ಲಿ.

ಪೂರ್ವದಲ್ಲಿ ಇದು ನಾನಿವ ಅಥವಾ ಪ್ರಕ್ಷುಬ್ಧ ಅಲೆಗಳು ಎಂಬ ಹೆಸರಿನ ಒಂದು ಸಣ್ಣ ಹಳ್ಳಿಯಾಗಿತ್ತು. ಪ್ರ.ಶ. 300ರ ಸುಮಾರಿನಲ್ಲಿ ಓಜಿನ್ ಚಕ್ರವರ್ತಿನಿ ಇದರ ಎದುರಿಗಿನ ಬೆಟ್ಟದ ಮೇಲೆ ಅರಮನೆ ಕಟ್ಟಿಸಿದಳು. 16ನೆಯ ಶತಮಾನದಲ್ಲಿ ಹಿಡೆಯೋಷಿ ಇದನ್ನು ಬೆಳೆಸಿ ಇಲ್ಲಿ ದುರ್ಗವೊಂದನ್ನು ಕಟ್ಟಿಸಿದ. 1583ರಲ್ಲಿ ಇದು ಆತನ ರಾಜಧಾನಿಯಾಯಿತು. 1868ರಲ್ಲಿ ಈ ದುರ್ಗ ಬೆಂಕಿಗೆ ಆಹುತಿಯಾದಾಗ ಸಿಮೆಂಟಿನಿಂದ ಇದನ್ನು ಮತ್ತೆ ನಿರ್ಮಿಸಲಾಯಿತು. 1900ರಲ್ಲಿ ಈ ನಗರದ ಜನಸಂಖ್ಯೆ 8,81,000. ಸಾರಿಗೆ ಸಂಪರ್ಕಕ್ಕೆ ಅನೇಕ ಕಾಲುವೆಗಳನ್ನೆ ಅವಲಂಬಿಸಿದ್ದು, ಜಪಾನಿನ ವೆನಿಸ್ ಎನಿಸಿಕೊಂಡಿದ್ದ ಈ ನಗರ 20ನೆಯ ಶತಮಾನದ ಆರಂಭದ ವೇಳೆಗೆ ಪಾಶ್ಚಾತ್ಯ ಪಟ್ಟಣಗಳ ಮಾದರಿಯಲ್ಲಿ ಪರಿವರ್ತನೆಗೊಳ್ಳಲಾರಂಭಿಸಿತು. ಕಾಲುವೆಗಳ ಪ್ರಾಮುಖ್ಯವೂ ತಗ್ಗಿತು. 1930ರ ವೇಳೆಗೆ ಇದು ವಿಶ್ವದ ಆರನೆಯ ಪಟ್ಟಣವೆನಿಸಿಕೊಂಡಿತು. ಆಗ ಇದರ ಜನಸಂಖ್ಯ 24,53,000. ಈಗ ಇದು ಪೌರಸ್ತ್ಯ ಜಗತ್ತಿನ ಬೃಹತ್ತಮ ಕೈಗಾರಿಕಾ ನಗರ. ದಿಗಂತದಿಂದ ಮೇಲೆದ್ದ ಹೊಗೆ ಉಗುಳುವ ಸಾವಿರಾರು ಕಾರ್ಖಾನೆಗಳು ತಲೆಯೆತ್ತಿವೆ. 1940ರ ವೇಳೆಗೆ ಇಲ್ಲಿ 5,800 ಕಾರ್ಖಾನೆಗಳಿದ್ದುವು. ಇವುಗಳ ವಾರ್ಷಿಕ ಉತ್ಪನ್ನದ ಮೌಲ್ಯ 37,75,00,000 ಡಾಲರ ಆಗಿತ್ತು. ಹತ್ತಿ, ಜವಳಿ, ಮೋಟಾರು, ರಸಾಯನ ಪದಾರ್ಥ, ಔಷಧಿ, ಪ್ರಸಾಧನ ಸಲಕರಣೆಗಳು (ಟಾಯ್ಲೆಟ್ ಗುಡ್ಸ್), ಯಂತ್ರಸ್ಥಾವರ (ಪ್ಲಾಂಟ್), ಮುದ್ರಣಯಂತ್ರ, ರಟ್ಟು ಕಟ್ಟುವ ಯಂತ್ರ ಮುಂತಾದವು ಇಲ್ಲಿ ತಯಾರಾಗುತ್ತವೆ. ಆರಂಭದಲ್ಲಿ ಓಸಾಕದ ರಫ್ತಿನಲ್ಲಿ ಬಹು ಭಾಗ ಕೋಬೆ ಬಂದರಿನ ಮೂಲಕ ಸಾಗುತ್ತಿತ್ತು. ಆದರೆ ಎರಡನೆಯ ಮಹಾಯುದ್ಧಕ್ಕೆ ಮೊದಲೇ ಓಸಾಕದ ಬಂದರು ಅಭಿವೃದ್ಧಿಹೊಂದಿ, ಅದರ ಆಮದು ರಫ್ತುಗಳೆಲ್ಲ ಬಹುತೇಕ ಈ ಬಂದರಿನ ಮೂಲಕವೇ ಸಾಗಲಾರಂಭವಾದುವು. ಇದಕ್ಕಾಗಿ 1,200 ಎಕರೆಗಳಷ್ಟು ನೆಲವನ್ನು ಸಮುದ್ರದಿಂದ ಪುನರ್ವಶಪಡಿಸಿಕೊಳ್ಳಲಾಯಿತು. ಇಂದು ಓಸಾಕ ಜಪಾನಿನ ಬೃಹತ್ತಮ ಬಂದರಗಳಲ್ಲೊಂದು.

ಓಸಾಕ ಸೌಂದರ್ಯ ಕ್ಷೇತ್ರವೇನಲ್ಲ. ಆದರೆ ನಾಗರಿಕ ಆಕರ್ಷಣೆಗಳೂ ಟಂಕಸಾಲೆ, ವಾಣಿಜ್ಯ ವಸ್ತುಪ್ರದರ್ಶನಾಲಯ ಮತ್ತು ಉದ್ಯಾನಗಳೂ ಇವೆ. ಟೆನ್ನೋಜಿ ಉದ್ಯಾನ 56 ಎಕರೆಗಳ ಪ್ರದೇಶ. ಇಲ್ಲಿ ಮೃಗಾಲಯ, ಸಸ್ಯಕ್ಷೇತ್ರ, ಟೆನಿಸ್ ಕ್ರೀಡಾರಂಗ, ಕತ್ತಿವರಸೆಯ ಭವನ, ಮನೋರಂಜನೆಯ ಕೇಂದ್ರ ಇವೆಲ್ಲ ಉಂಟು. ಇದು ಜಪಾನಿ ರಂಗಶಾಲೆಗಳ ತವರು. ಗೊಂಬೆಯಾಟದ ರಂಗಶಾಲೆ (ಬುನ್ರಾಕು) ಬಲು ಪ್ರಖ್ಯಾತ. ಓಸಾಕ ವಿಶ್ವವಿದ್ಯಾನಿಲಯ, ಓಸಾಕ ಪೌರಸಭೆ ವಿಶ್ವವಿದ್ಯಾನಿಲಯ, ಓಸಾಕ ಆರ್ಥಿಕ ವಿಶ್ವವಿದ್ಯಾನಿಲಯ, ಓಸಾಕ ಎಂಜಿನಿಯರಿಂಗ್ ವಿಶ್ವವಿದ್ಯಾನಿಲಯ. ಓಸಾಕ ವೈದ್ಯ ವಿಶ್ವವಿದ್ಯಾನಿಲಯ, ಓಸಾಕ ವಿದೇಶೀ ಭಾಷೆಗಳ ವಿಶ್ವವಿದ್ಯಾನಿಲಯ ಮುಂತಾದ ಅನೇಕ ವಿದ್ಯಾಸಂಸ್ಥೆಗಳು ಇಲ್ಲಿವೆ. ಎರಡನೆಯ ಮಹಾಯುದ್ಧ ಕಾಲದಲ್ಲಿ ಜಪಾನಿನ ಇತರ ನಗರಗಳಂತೆ ಇದೂ ದಾಳಿಗಳಿಗೆ ಗುರಿಯಾಗಿತ್ತು. 1940ರ ಅನಂತರ ಜನಸಂಖ್ಯೆ ಶೀಘ್ರವಾಗಿ ಇಳಿಯಲಾರಂಭಿಸಿತು. ಚೇತರಿಸಿಕೊಳ್ಳುವುದು ಬಲು ನಿಧಾನವೇ ಆಯಿತು. 1960ರಲ್ಲಿ ಇದರ ಜನಸಂಖ್ಯೆ 30,11,563. ಏಷ್ಯ ಖಂಡದೊಡನೆ ವ್ಯಾಪಾರದ ಇಳಿತ, ಸರ್ಕಾರದ ಹತೋಟಿಕ್ರಮಗಳ ಫಲವಾಗಿ ಟೋಕಿಯೋ–ಯೋಕೊಹಾಮ ಪ್ರದೇಶದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ–ಇವು ಈ ನಗರದ ಮಂದ ಚೇತರಿಕೆಗೆ ಕಾರಣಗಳು. ನಗರದ ವಾಣಿಜ್ಯ ಕೇಂದ್ರವಿರುವುದು ದುರ್ಗದ ಭಾಗದಲ್ಲಿ. ಕೈಗಾರಿಕೆಗಳು ಸಮುದ್ರದಿಂದ ಪುನರ್ವಶವಾದ ಪ್ರದೇಶದಲ್ಲೂ ಯೋಡೋ ನದಿಯ ತಗ್ಗು ದಂಡೆಯ ಮೇಲೂ ಸಂದಣಿಗೊಂಡಿವೆ. ಕೋಬೆ, ನಿಷಿನೋಮಿಯಾ ಅಮಾಗಾಸಾಕಿ, ಸಾಕೈ, ಕೈಜ಼ುಕ, ಕಿಷಿವಾಡಾ ಮುಂತಾದ ನಗರಗಳ ಮತ್ತು ಉಪನಗರಗಳ ಕೈಗಾರಿಕಾ ಪಟ್ಟಿಗೆ ಓಸಕವೇ ಕೇಂದ್ರ. ಇದು ಪಶ್ಚಿಮ ಜಪಾನಿನ ಹಣಕಾಸಿನ ಮತ್ತು ವಾಣಿಜ್ಯದ ಮುಖ್ಯ ಪಟ್ಟಣ. ಬೃಹದ್ ಬ್ಯಾಂಕುಗಳೂ ವ್ಯಾಪಾರ ಸಂಸ್ಥೆಗಳೂ ಪಲಸರಕಿನಂಗಡಿಗಳೂ, ಒಟ್ಟು ವ್ಯಾಪಾರದಂಗಡಿಗಳೂ ಇಲ್ಲಿ ಕಿಕ್ಕಿರಿದಿವೆ. ಇದರ ಹತ್ತಿರದಲ್ಲೆ ಆಧುನಿಕ ವಿಮಾನ ನಿಲ್ದಾಣವನ್ನೂ ನೆಲೆಗೊಳಿಸಲಾಗಿದೆ.

1970ರ ಎಕ್ಸ್‌ಪೋ ಪ್ರದರ್ಶನ ನಡೆದಿದ್ದು ಈ ನಗರದ ಬಳಿಯಲ್ಲೆ (**ನೋಡಿ– ಎಕ್ಸ್‌ಪೊ**). (ಜಿ.ಎಸ್.ಎಚ್.)

**ಓಸಿಲಾಟ್:** ಬೆಕ್ಕಿನ ಕುಟುಂಬಕ್ಕೆ (ಫೆಲಿಡೀ) ಸೇರಿದ ಫೆಲಿಸ್ ಪಾರ್ಡಾಲಿಸ್ ಎಂಬ ಪ್ರಾಣಿ. ದಕ್ಷಿಣ ಅಮೆರಿಕದ ಕೆಲವು ಪ್ರದೇಶಗಳಲ್ಲಿ ವಾಸಿಸುವುದು. ದೊಡ್ಡ ಪ್ರಮಾಣದ ಮನೆಯ ಬೆಕ್ಕಿಗಿಂತೇನೂ ಅತಿ ದೊಡ್ಡದಲ್ಲ. ಎತ್ತರ ಸು. ಅರ್ಧ ಮೀಟರು, ಉದ್ದ ಸು. ಒಂದು ಮೀಟರು. ದೇಹದ ಬಣ್ಣ ಬೂದು ಅಥವಾ ಕಂದು. ಮೈಮೇಲೆ ಕಪ್ಪು ಮಚ್ಚೆಗಳಿವೆ. ಕತ್ತಿನ ಮೇಲೆ ಕೆನ್ನೆಯ ಮೇಲೆ ಕಪ್ಪು ಪಟ್ಟೆಗಳಿವೆ. ಹೊಟ್ಟೆ ಬಿಳಿ, ಕಾಡಿನಲ್ಲಿ ವಾಸಿಸುವ ಇದನ್ನು ಕೆಲವರು ಮನೆಗಳಲ್ಲಿ ಸಾಕುವರು. ಮಾಂಸಾಹಾರಿ, ಬಹಳ ಚೆನ್ನಾಗಿ ಮರ ಹತ್ತಬಲ್ಲುದು. ತನ್ನ ಆಹಾರವನ್ನು ಬೇಟೆಯಾಡಿ ಹಿಡಿದು ತಿನ್ನುವುದು. ಹಿಡಿದ ಪ್ರಾಣಿಯ ಶರೀರವನ್ನು ಹರಿಯುವುದಕ್ಕೂ ಕತ್ತರಿಸುವುದಕ್ಕೂ ಅನುಕೂಲವಾದ ಹಲ್ಲುಗಳಿವೆ. ಮುಂದಿನ ಹಲ್ಲುಗಳು ಸಣ್ಣದಾಗಿವೆ. ಕೋರೆ ಹಲ್ಲುಗಳು ದೊಡ್ಡದಾಗಿ ಚೂಪಾಗಿವೆ. ದವಡೆ ಹಲ್ಲುಗಳಲ್ಲಿ ಮೊನಚಾದ ತುದಿಗಳಿರುವುದರಿಂದ ಕತ್ತರಿಯಂತೆ ಕತ್ತರಿಸುತ್ತವೆ. ತಲೆಬುರುಡೆಯ ಹಿಂಭಾಗ ಎತ್ತರವಾಗಿ ಮೊನಚಾಗಿದೆ. ಇದಕ್ಕೆ ಕತ್ತಿನ ಬಲವಾದ ಸ್ನಾಯುಗಳು ಸೇರಿಕೊಂಡಿವೆ. ಹಿಡಿದ ಬೇಟೆ ಒದ್ದಾಡಿ ತಪ್ಪಿಸಿಕೊಳ್ಳದಂತೆ ಇವು ಸಹಾಯಮಾಡುತ್ತವೆ. ಅಲ್ಲದೆ ಕೆಳದವಡೆ ಮೇಲಕ್ಕೆ ಕೆಳಗೆ ಮಾತ್ರ ಆಡಬಲ್ಲುದು, ಎಡಬಲಕ್ಕೆ ಆಡಲಾರದು. ಬೇಟೆ ತಪ್ಪಿಸಿಕೊಳ್ಳದಂತೆ ಇದು ಸಹ ಸಹಾಯ ಮಾಡುತ್ತದೆ. ಬೆರಳುಗಳಲ್ಲಿರುವ ಮೊನಚಾದ ಬಾಗಿದ ನಖಗಳನ್ನು ಮೃದುವಾದ ಚೀಲಗಳೊಳಗೆ ಎಳೆದುಕೊಳ್ಳಬಲ್ಲುದು. ಸಾಮಾನ್ಯವಾಗಿ ಒಂದು ಸಲಕ್ಕೆ ಎರಡು ಮರಿಗಳನ್ನು ಈಯುತ್ತದೆ. (ಎಸ್.ಎನ್.ಕೆ.ಯು.)

**ಓಸೈರಿಸ್:** ಈಜಿಪ್ಟ್ ದೇಶದ ಪುರಾಣ ಕಥೆಗಳಲ್ಲಿ ಬರುವ ಪ್ರಸಿದ್ಧ ದೇವತೆ. ಗೆಬ್ (ಭೂದೇವತೆ) ಮತ್ತು ನಟ್ (ಜಲದೇವತೆ) ದೇವತೆಗಳ ನಾಲ್ವರು ಮಕ್ಕಳಲ್ಲಿ ಮೊದಲನೆಯವ. ಉಳಿದ ಮೂವರು ಐಸಿಸ್ (ಹೆಣ್ಣು), ಸೆತ್ ಮತ್ತು ನೆಫ್ತಿಸ್. ಓಸೈರಿಸ್ ತನ್ನ ತಂಗಿ ಐಸಿಸ್‌ಳನ್ನೇ ಮದುವೆಯಾಗಿ ಹೋರಸನನ್ನು ಪಡೆದಳೆಂದು ಪುರಾಣ ಕಥೆ.

ಈಜಿಪ್ಟ್ ಜನರ ನಂಬಿಕೆಯಂತೆ ಭೂಮಿ ಗಂಡು, ಆಕಾಶ ಹೆಣ್ಣು, ಜಲ ಹಾಗೂ ಸಸ್ಯವರ್ಗಗಳ ಅಧಿದೇವತೆಯಾದ ಓಸೈರಿಸ್ ಅತ್ಯಂತ ಜನಪ್ರಿಯ ದೇವತೆ. ಈತ ಜೀವದಾತನೆಂದು ಪೂಜೆಗೊಳ್ಳುತ್ತಿದ್ದ. ಕೆಲ ವಿದ್ವಾಂಸರ ಮತದಂತೆ ಓಸೈರಿಸ್ ಕೆಳ ಈಜಿಪ್ಟನ್ನು ಆಳಿದ ದೊರೆ. ಬರಬರುತ್ತ ಪಶ್ಚಿಮದ ದೊರೆಯೆನಿಸಿದ. ಅಂದರೆ ಸತ್ತ ಅನಂತರ ಜೀವಾತ್ಮಗಳು ತಂಗುವ ಪರಲೋಕದ ಅರಸು–ಎಂದು ಪ್ರಸಿದ್ಧಿ ಪಡೆದ. ಪರಲೋಕ ಸೇರಿದ ಜೀವಾತ್ಮಗಳ ಧರ್ಮಕರ್ಮಗಳನ್ನು ನ್ಯಾಯದ ತಕ್ಕಡಿಯಲ್ಲಿ ತೂಗಿ ನೋಡುವ ಅಧಿದೈವ ಓಸೈರಿಸ್‌ನನ್ನು ಮರಣಾನಂತರ ಒದಗುವ ಒಳಿತು ಕೆಡಕುಗಳಲ್ಲಿ ಅಪಾರ ಶ್ರದ್ಧೆಯುಳ್ಳ ಈಜಿಪ್ಟಿನ ಜನ ಪ್ರಮುಖ ದೇವತೆಯೆಂದು ಪರಿಗಣಿಸಿದುದರಲ್ಲಿ ಔಚಿತ್ಯವಿತ್ತು.

ಸು. 85ರಲ್ಲಿ ರಚಿತವಾದ ಪ್ಲೂಟಾರ್ಕನ ಡಿ ಐಸೈಡ್ ಎಟ್ ಓಸಿರೈಡ್ ಗ್ರಂಥದ ಪ್ರಕಾರ ಓಸೈರಿಸ್‌ನನ್ನು ಸೆತ್ ಕೊಂದನೆಂದೂ ಅವನ ದೇಹವನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ನೈಲ್ ನದಿಗೆ ಎಸೆಯಲಾಯಿತೆಂದೂ ಅದು ತೇಲಿಕೊಂಡು ಬಂದು ಸಿರಿಯದ ನದೀ ದಂಡೆಯ ಮೇಲಿದ್ದುದನ್ನು ಐಸಿಸ್ ಕಂಡು ಈಜಿಪ್ಟ್‌ಗೆ ತಂದಳೆಂದೂ ಅಲ್ಲಿ ಓಸೈರಿಸ್‌ನ ದೇಹದ ಎದೆಭಾಗ ಮಾತ್ರ ಇರುವುದನ್ನು ಗಮನಿಸಿದ ಐಸಿಸ್ ಆತನ ಉಳಿದೆಲ್ಲ ಭಾಗಗಳನ್ನು ಸಂಗ್ರಹಿಸಿ ಕೂಡಿಸಿದಳೆಂದೂ ಆಗ ದೇವತೆಗಳು ಓಸೈರಿಸ್‌ಗೆ ಜೀವದಾನಮಾಡಿ ದೇವತ್ವ–ಅಮರತ್ವಗಳನ್ನು ಕರುಣಿಸಿದರೆಂದೂ ಕಥೆ.

ವ್ಯವಸಾಯ ಮತ್ತು ಸೌಂದರ್ಯಾಭಿಜ್ಞತೆಯನ್ನು ಕರುಣಿಸುವ ಈ ದೇವತೆಯ ಆಕಾರ ಮಮ್ಮಿಯಂತಿದ್ದು ತಲೆಯಲ್ಲಿ ಕಿರೀಟ, ಕೈಯಲ್ಲಿ ಚಾವುಟಿ, ಮತ್ತೊಂದು ಕೈಲಿ ಬಾಗುದಂಡವಿದೆ. ಅಬಿಡಾಸ್ ನಗರ ಒಂದು ಕಾಲದಲ್ಲಿ ಈ ದೇವತೆಯ ಆರಾಧನೆಯ ಮುಖ್ಯ ಕೇಂದ್ರವಾಗಿತ್ತು. (ಬಿ.ಎಸ್.ಎಚ್.)

**ಓಸ್ಕಲೂಸ:** ಅಮೆರಿಕ ಸಂಯುಕ್ತಸಂಸ್ಥಾನದ ಅಯೋವ ರಾಜ್ಯದ ಆಗ್ನೇಯ ಭಾಗದಲ್ಲಿರುವ ಒಂದು ಪಟ್ಟಣ. ಜನಸಂಖ್ಯೆ 11,463 (2010). ಪಶುಪಾಲನೆ ಮತ್ತು ಕೃಷಿಗಳ ಕೇಂದ್ರ ಮುಸುಕಿನ ಜೋಳ ಮುಖ್ಯ ಬೆಳೆ. ಕಲ್ಲಿದ್ದಲು ಪ್ರದೇಶದಲ್ಲಿದೆ. ಆಹಾರ ಪದಾರ್ಥ, ಅಗ್ನಿಶಾಮಕ ವ್ಯವಸ್ಥೆಗೆ ಬೇಕಾದ ನೀರಿನ ನಲ್ಲಿ. ಕವಾಟ(ವಾಲ್ವ್), ಬಟ್ಟೆ ಒಗೆಯುವ ಯಂತ್ರ, ಪಶು ಔಷಧ, ಆಟದ ಸಾಮಾನು ಮುಂತಾದುವುಗಳ ಕೈಗಾರಿಕೆಗಳಿವೆ. ಸಂಗೀತ ಪ್ರಕಟಣೆಗಳಿಗೂ ಇದು ಪ್ರಸಿದ್ಧವಾಗಿದೆ. ಇದೊಂದು ವ್ಯಾಪಾರಸ್ಥಳ.

ಶಾಂತಿತತ್ತ್ವಗಳಲ್ಲಿ ನಿಷ್ಠೆಯುಳ್ಳ, ಸರಳ ನಡೆನುಡಿಯ, ಬಿರುದುಗಳನ್ನು ನಿರಾಕರಿಸುವ, ಕ್ರೈಸ್ತೇತರ ಧರ್ಮಸೂಚಕ ಪದಗಳನ್ನು ಬಳಸಲೊಲ್ಲದ ಪುರೋಹಿತರಹಿತ ಧರ್ಮಸಭೆಗಳಲ್ಲಿ ಕೂಡುವ ಮಿತ್ರಮಂಡಲಿಯವರಾದ ಕ್ವೇಕರುಗಳಿಂದ 1843ರಲ್ಲಿ ಇಲ್ಲಿ ವಸತಿ ಏರ್ಪಟ್ಟಿತು. ಮಸ್ಕೋಜಿಯನ್ ಇಂಡಿಯನರ ಒಂದು ಪಂಗಡವಾದ ಸೆಮಿನೋಲರ ನಾಯಕನಾದ ಒಸ್ಸಿಯೋಲನಿಂದ ಓಸ್ಕಲೂಸ ಎಂಬ ಹೆಸರು ಬಂದಿದೆ. 1844ರಲ್ಲಿ ಇದು ಕೌಂಟಿಯ (ವಿಭಾಗದ) ಮುಖ್ಯಸ್ಥಳವಾಯಿತು. ಇದು ನಗರವೆನಿಸಿಕೊಂಡದ್ದು 1853ರಲ್ಲಿ. ವಿಲಿಯಂ ಪೆನ್ ಕಾಲೇಜ್ ಇಲ್ಲಿಯ ಮುಖ್ಯ ಶಿಕ್ಷಣಸಂಸ್ಥೆ. ಇದನ್ನು ಸ್ಥಾಪಿಸಿದವರೂ (1853) ಕ್ವೇಕರರೇ. ಈ ನಗರದಲ್ಲಿ ಕ್ವೇಕರರ ವಾರ್ಷಿಕ ಧಾರ್ಮಿಕ ಸಭೆ ನಡೆಯುತ್ತದೆ. (ಪಿ.ಎಚ್.)

**ಓಹಿಲಯ್ಯ:** ನೂತನ ವೀರಶೈವ ಶರಣರಲ್ಲಿ ಒಬ್ಬ. ಗುಜರಾತಿನ ವಿಲಾಸವತಿ ಪಟ್ಟಣದಲ್ಲಿ ರಾಜ್ಯಭಾರ ಮಾಡುತ್ತಿದ್ದ ನಿಃಕುಂಭರಾಜನ ಮಗ. 16 ವರ್ಷದವನಾದಾಗ ತಂದೆ ಶಿವೈಕ್ಯನಾದ. ಸಾವೆಂದರೆ ಏನೆಂಬುದನ್ನೆ ಅರಿಯದಿದ್ದ ಮುಗ್ಧ ಬಾಲಕ ತನ್ನ ತಂದೆ ಇನ್ನೆಂದಿಗೂ ಹಿಂದಿರುಗನೆಂಬುದನ್ನು ಕೇಳಿ ಅಂಥ ಸಾವಿನಿಂದ ಹೇಗೆ ಪಾರಾಗಬಹುದೆಂದು ಯೋಚಿಸಿ ಉಮ್ಮಳಿಸುತ್ತಾನೆ. ಈ ಸಾವಿನಿಂದ ತಪ್ಪಿಸಿಕೊಳ್ಳಲು ಸೌರಾಷ್ಟ್ರದ ಸೋಮೇಶ್ವರನ ಕೃಪೆಯೊಂದೇ ಮಾರ್ಗವೆಂಬುದನ್ನು ಶಿವಭಕ್ತನೋರ್ವನಿಂದ ತಿಳಿದ ಓಹಿಲಯ್ಯ ರಾಜ್ಯಕೋಶಗಳನ್ನು ತೊರೆದು ಸೋಮೇಶ್ವರಲಿಂಗದ ಪೂಜೆಯಲ್ಲಿ ತತ್ಪರನಾದ. ಒಮ್ಮೆ ಆತ ಧ್ಯಾನಮಗ್ನನಾಗಿದ್ದಾಗ ಪರಶಿವ ಕಾಣಿಸಿಕೊಂಡು 12 ವರ್ಷಕಾಲ ತನಗೆ ಗುಗ್ಗುಳ ಸೇವೆಯನ್ನು ಸಲ್ಲಿಸಿದರೆ ಸಶರೀರನಾಗಿ ಆತನನ್ನು ಕೈಲಾಸಕ್ಕೆ ಕೊಂಡೊಯ್ಯುವುದಾಗಿ ತಿಳಿಸಿದ. ಓಹಿಲಯ್ಯ ಪರಮ ಸಂತೋಷದಿಂದ ತನ್ನ ಪ್ರಜೆಗಳಿಂದ ಗುಗ್ಗುಳವನ್ನು ತರಿಸಿ, 12 ವರ್ಷ ಆ ವ್ರತವನ್ನಾಚರಿಸಿ, ಧೂಪದೋಹಿಲನೆಂಬ ಅನ್ವರ್ಥನಾಮವನ್ನು ಪಡೆದ. ಆದರೆ ಸೋಮೇಶ್ವರ ಅದರಿಂದ ತೃಪ್ತನಾಗದೆ ಓಹಿಲಯ್ಯನೇ ಕಾಲ್ನಡಿಗೆಯಿಂದ ಗುಗ್ಗುಳದ್ವೀಪಕ್ಕೆ ಹೋಗಿ ಗುಗ್ಗುಳವನ್ನು ಹೊತ್ತು ತಂದು, ಸೇವೆ ಸಲ್ಲಿಸಬೇಕೆಂದು ವಿಧಿಸಿದ. ಓಹಿಲಯ್ಯ ಅದಕ್ಕೂ ಹಿಂಜರಿಯದೆ, ಅತ್ಯಂತ ಕಷ್ಟದಿಂದ, ಪ್ರಾಣವನ್ನು ಪಣವಾಗಿ ಒಡ್ಡಿ ಈ ಕಾರ್ಯವನ್ನು ನೆರವೇರಿಸಿದ. ಓಹಿಲಯ್ಯನ ಇಂಥ ಅಚಲಭಕ್ತಿ, ಉಗ್ರನಿಷ್ಠೆಗಳಿಗೆ ಮೆಚ್ಚಿದ ಶಿವ ಆತನನ್ನು ವಿಮಾನದಲ್ಲಿ ಕೈಲಾಸಕ್ಕೆ ಕೊಂಡೊಯ್ದು ಗಣಪದವಿಯನ್ನಿತ್ತ. ದೈವಸಾಕ್ಷಾತ್ಕಾರಕ್ಕೆ ಉತ್ಕಟಭಾವ ಅತ್ಯಗತ್ಯವೆಂಬುದನ್ನು ಪ್ರತಿಮಿಸುತ್ತದೆ. ಓಹಿಲಯ್ಯನ ಕಥಾ ಚಿತ್ರಣ.

ಓಹಿಲಯ್ಯನ ಕಥೆ ತುಂಬ ಜನಪ್ರಿಯವಾದುದು. ಹರಿಹರ ಕವಿ ಆತನ ಕಥೆಯನ್ನು ರಗಳೆಯ ಛಂದಸ್ಸಿನಲ್ಲಿ ರಚಿಸಿದ್ದಾನೆ. ಅದವನ ಸ್ವತಂತ್ರಕೃತಿ. ಉತ್ತರಪ್ರದೇಶದ ಬಸವಲಿಂಗದೇವರು, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಶಾಂತಲಿಂಗದೇಶಿಕ, ಲಕ್ಕಣದಂಡೇಶ, ಸಿದ್ಧನಂಜೇಶ, ಗುಬ್ಬಿಯ ಮಲ್ಲಣಾರ್ಯ, ಅದೃಶ್ಯಕವಿ ಮೊದಲಾದ ಹಲವಾರು ವೀರಶೈವಕವಿಗಳು ಈತನ ಕಥೆಯನ್ನು ಭಕ್ತಿಯಿಂದ ಬಣ್ಣಿಸಿದ್ದಾರೆ. (ಟಿ.ಎಸ್.ಎಸ್.ಆರ್.)

## ಔ

ಕನ್ನಡ ವರ್ಣಮಾಲೆಯಲ್ಲಿ 14ಯದು. ದೀರ್ಘ ಸ್ವರಾಕ್ಷರ. ವ್ಯಂಜನಗಳ ಜೊತೆ ಸೇರದೆ, ಸ್ವತಂತ್ರವಾಗಿ ದೊರಕುವುದು ಅಪೂರ್ವ. ಆದುದರಿಂದ ಈ ಅಕ್ಷರದ ಬ್ರಾಹ್ಮೀಲಿಪಿಯ ಸ್ವರೂಪವನ್ನು ತಿಳಿಯುವುದು ಕಷ್ಟ. ಪ್ರ.ಶ. 12ನೆಯ ಶತಮಾನದ ಕಲ್ಯಾಣಿ ಚಾಲುಕ್ಯರ ಶಾಸನಗಳಲ್ಲಿ ಈ ಅಕ್ಷರ ಈಗಿರುವಂತೆ ಇರುವುದನ್ನು ಗಮನಿಸಬಹುದು. ಆದುದರಿಂದ ಪ್ರ.ಶ. 12ನೆಯ ಶತಮಾನಕ್ಕಿಂತ ಮುಂಚೆಯೇ ಇದು ಬ್ರಾಹ್ಮೀಲಿಪಿಯಿಂದ ವಿಕಾಸವಾಗಿರಬೇಕು. ಪ್ರ.ಶ. 12ನೆಯ ಶತಮಾನದಿಂದ ಈ ಅಕ್ಷರದ ರೂಪ ಸ್ಥಿರವಾಗಿದ್ದು ಬದಲಾವಣೆಯಿಲ್ಲದೆ ಮುಂದುವರಿಯುತ್ತಿದೆ. ಐ ಎಂಬ ಅಕ್ಷರಕ್ಕೆ ಅಯ್ ಎಂಬ ಉಚ್ಚಾರಣೆ ಬರುವಂತೆ ಔಗೆ ಅವ್ ಎಂಬ ಉಚ್ಚಾರಣೆಯೂ ಇರುವುದು ಕಂಡುಬಂದಿದೆ. ಇದು ಸಂಯುಕ್ತಸ್ವರ.




(ಎ.ವಿ.ಎನ್.)

**ಔಚಿತ್ಯ:** ತಕ್ಕುದಾದ ಅಥವಾ ಸರಿಹೊಂದುವ ಎಂಬ ಅರ್ಥವನ್ನು ಕೊಡುವ ಉಚಿತ ಎಂಬುದರ ಭಾವ. ಇದರ ರೂಪಾಂತರ ಔಚಿತೀ. ಔಚಿತ್ಯದ ವ್ಯಾಪ್ತಿ ಅಪಾರವಾದುದು. ಸಂಸ್ಕೃತ ಸಾಹಿತ್ಯ ವಿಮರ್ಶೆಯಲ್ಲಿ ಅಲಂಕಾರಿಕರು ಇದನ್ನು ವಿಶೇಷವಾಗಿ ಗಮನಿಸಿದ್ದಾರೆ. ಸಾಮಾನ್ಯವಾಗಿ ವಸ್ತು, ಪಾತ್ರ ಮುಂತಾದುವುಗಳಲ್ಲಿ ಇರಲೇಬೇಕಾದ ಪರಸ್ಪರ ಸಮನ್ವಯದ ವಿಚಾರದಿಂದ ಅಲ್ಲಿ ಪ್ರಾರಂಭವಾಗಿ ಕಾವ್ಯಜೀವಿತವೆಂಬ ಪ್ರತಿಪಾದನೆಯ ಹಂತವನ್ನು ಕಡೆಯಲ್ಲಿ ಮುಟ್ಟುತ್ತದೆ.

ಕವಿವರ್ಮಕ್ಕೆ ಸಂಬಂಧಪಟ್ಟಂತೆ ಭಾಷೆ, ಪದಗಳು, ರಚನೆ ಮುಂತಾದುವುಗಳಲ್ಲಿರಬೇಕಾದ ಔಚಿತ್ಯದ ಅರಿವು ಅಲಂಕಾರಿಕರಲ್ಲಿ ಬಹು ಹಿಂದಿನಿಂದಲೂ ಉಂಟಾಗಿ ಬೆಳೆದು ಬಂದಿದೆ; ಭರತಮುನಿಯಿಂದ ರಚಿತವಾದ ಮತ್ತು ಸಂಸ್ಕೃತಸಾಹಿತ್ಯ ಮೀಮಾಂಸೆಯಲ್ಲಿ ಆದಿಗ್ರಂಥವೆನಿಸಿಕೊಂಡಿರುವ ನಾಟ್ಯಶಾಸ್ತ್ರದಲ್ಲಿ ಇದರ ಅವಶ್ಯಕತೆ ಪ್ರಾಮುಖ್ಯಗಳ ಸೂಚನೆ ಇದೆ. ಆನಂತರ ಬಂದ ಭಾಮಹ, ದಂಡಿ, ರುದ್ರಟರಲ್ಲಿ ಇದರ ಅಭಿಪ್ರಾಯ ರೂಪುಗೊಳ್ಳುತ್ತದೆ.

ಸುಪ್ರಸಿದ್ಧ ಅಲಂಕಾರಿಕರಾದ ಆನಂದವರ್ಧನ ಮತ್ತು ಅಭಿನವಗುಪ್ತರ ಆಳವಾದ ಕಾವ್ಯತತ್ತ್ವ ಪರಿಶೀಲನೆಯಲ್ಲಿ ಇದಕ್ಕೆ ಬಹು ಮುಖ್ಯವಾದ ಸ್ಥಾನ ದೊರಕುತ್ತದೆ. ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಮ್ । ಪ್ರಸಿದ್ಧೌಚಿತ್ಯ ಬಂದಸ್ತು ರಸಸ್ಯೋಪನಿಷತ್ಪರಾ ॥ (ಅನೌಚಿತ್ಯ ಹೊರತು ಬೇರೆ ಯಾವುದೂ ರಸಭಂಗಕ್ಕೆ ಕಾರಣವಲ್ಲ. ಔಚಿತ್ಯದ ಪ್ರಸಿದ್ಧ ನಿಯಮಗಳ ಅನುಸರಣೆಯೇ ರಸದ ಪರಮ ರಹಸ್ಯ) ಎಂದು ಆನಂದವರ್ಧನ ಇದನ್ನು ತನ್ನ ಧ್ವನ್ಯಾಲೋಕದಲ್ಲಿ ಮನೋಜ್ಞವಾಗಿ ಪ್ರತಿಪಾದಿಸಿದ್ದಾನೆ. ತನ್ನ ಧ್ವನಿತತ್ತ್ವದಲ್ಲಿ ರಸಕ್ಕೇ ಪ್ರಾಧಾನ್ಯಕೊಡುವ ಆನಂದವರ್ಧನ ವಿಷಯ, ವಾಚ್ಯ, ವಾಚಕ ಮುಂತಾದುವು ರಸಕ್ಕನು ಗುಣವಾಗಿರಬೇಕಾದ ಔಚಿತ್ಯವನ್ನು ಸಾಕಷ್ಟು ವಿಸ್ತಾರವಾಗಿ ನಿರೂಪಿಸಿದ್ದಾನೆ. ರಸವಿದ್ದಲ್ಲಿ ಔಚಿತ್ಯದೃಷ್ಟಿ ಇರಲೇಬೇಕೆಂದು ಅಭಿನವಗುಪ್ತನ ಮತ; ಅದರಂತೆ ರಸ ಧ್ವನಿ ಔಚಿತ್ಯಗಳು ಕಾವ್ಯಜೀವಾಳದ ಮೂರು ಅಂಶಗಳೆನಿಸಿಕೊಂಡು ರಸೌಚಿತ್ಯದ ಸಿದ್ಧಾಂತ ಸ್ಥಾಪಿತವಾಗುತ್ತದೆ. ಕ್ರಮೇಣ ಕುಂತಕ, ಭೋಜ ಇವರು ಇದನ್ನು ಕಾವ್ಯತತ್ತ್ವದ ಒಂದು ಮೂಲಭೂತ ವಿಚಾರವೆಂದು ಪರಿಗಣಿಸಿದ್ದಾರೆ.

ಹೀಗೆ ರಸಕ್ಕನ್ವಯಿಸುವಂತೆ ಪ್ರತಿಪಾದಿತವಾದ ಔಚಿತ್ಯ ಕ್ರಮೇಣ ಮಹಿಮಭಟ್ಟನ ಒಪ್ಪಿಗೆಯನ್ನು ಪಡೆದು ಆನಂತರ ಬಂದ ಕ್ಷೇಮೇಂದ್ರನ ಔಚಿತ್ಯವಿಚಾರ ಚರ್ಚಾ ಎಂಬ ಗ್ರಂಥದಲ್ಲಿ ವ್ಯಾಪ್ತಿವೈಶಾಲ್ಯದಿಂದ ಕೂಡಿದ ಒಂದು ಸಿದ್ಧಾಂತವಾಗಿ ಪರಿಣಮಿಸಿತು. ಇದನ್ನು ವಿಶ್ಲೇಷಿಸಿ ನಿರೂಪಿಸಲು ಹೊರಟ ಕ್ಷೇಮೇಂದ್ರ ಮೊದಲು ಇದರ ಸಾಮಾನ್ಯಲಕ್ಷಣವನ್ನು ಉಚಿತಂ ಪ್ರಾಹುರಾಚಾರ್ಯಾಂ ಸದೃಶಂ ಕಿಲ ಯಸ್ಯ ಯತ್ । ಉಚಿತಸ್ಯ ಚ ಯೋ ಭಾವಸ್ತದೌಚಿತ್ಯಂ ಪ್ರಚಕ್ಷತೇ ॥ ಯಾವುದು ಯಾವುದಕ್ಕೆ ಅದನ್ನು ತಕ್ಕುದಾಗಿರುವುದೋ ಅದನ್ನು ವಿದ್ವಾಂಸರು ಉಚಿತವೆಂದಿದ್ದಾರೆ; ಉಚಿತದ ಭಾವವನ್ನು ಔಚಿತ್ಯವೆನ್ನುತ್ತಾರೆ– ಎಂಬ ಮಾತುಗಳಲ್ಲಿ ಹೇಳಿದ್ದಾರೆ. ಆನಂದವರ್ಧನ, ಅಭಿನವಗುಪ್ತರ ರಸದೃಷ್ಟಿಯನ್ನೊಪ್ಪಿಕೊಂಡಿರುವ ಕ್ಷೇಮೇಂದ್ರನಿಗೆ ಇದು ಸೌಂದರ್ಯಾಸ್ವಾದನೆಯಲ್ಲಿ ಚಮತ್ಕಾರಕಾರಿಯೂ ರಸಕ್ಕೆ ಪ್ರಾಣಸ್ವರೂಪವೂ ಆಗಿದೆ; ಅವನ ಅಭಿಪ್ರಾಯದಲ್ಲಿ ಇದು ರಸಸಿದ್ಧವಾದ ಕಾವ್ಯಕ್ಕೆ ಸ್ಥಿರವಾದ ಜೀವ (ಔಚಿತ್ಯಸ್ಯ ಚಮತ್ಕಾರಕಾರಿಣಶ್ಚಾರುಚರ್ಮಣೇ । ರಸಜೀವಿತ ಭೂತಸ್ಯ ವಿಚಾರಂ ಕುರುತೇಧನಾ ॥ ಅಲಂಕಾರಾಸ್ತ್ವಲಂಕಾರಾ ಗುಣಾ ಏವ ಗುಣಾಃ ಸದಾ । ಔಚಿತ್ಯಂ ರಸಸಿದ್ಧಸ್ಯ ಸ್ಥಿರಂ ಕಾವ್ಯಸ್ಯ ಜೀವಿತಮ್ ॥).

ಕ್ಷೇಮೇಂದ್ರನ ಪ್ರಕಾರ ಕಾವ್ಯಶರೀರಕ್ಕೆ ಜೀವವಾಗಿರುವ ಇದರ ವಿಂಗಡಣೆ ಈ 27 ಪ್ರಕಾರಗಳಿಗೆ ಸಂಬಂಧಪಟ್ಟಿದೆ; ಪದ, ವಾಕ್ಯ, ಪ್ರಬಂಧಾರ್ಥ, ಗುಣ, ಅಲಂಕಾರ, ರಸ, ಕ್ರಿಯಾಪದ, ಕಾರಕ, ಲಿಂಗ, ವಚನ, ವಿಶೇಷಣ, ಉಪಸರ್ಗ, ನಿಪಾತ, ಕಾಲ, ದೇಶ, ಕುಲ, ವ್ರತ, ತತ್ತ್ವ, ಸತ್ವ, ಅಭಿಪ್ರಾಯ, ಸ್ವಭಾವ, ಸಾರಸಂಗ್ರಹ, ಪ್ರತಿಭೆ, ಅವಸ್ಥೆ, ವಿಚಾರ, ಹೆಸರು, ಅಶಂಸನೆ. ಈ ಎಲ್ಲ ಕಾವ್ಯಾಂಗಗಳಲ್ಲಿ ವ್ಯಾಪ್ತಿಯಾದ, ಜೀವಾಳವೇ ಔಚಿತ್ಯ. ಅವನ್ನು ಉದಾಹರಣೆ ಪ್ರತ್ಯುದಾಹರಣೆಗಳ ಮೂಲಕ ವಿವರಿಸಿ ಕಾವ್ಯದ ಒಂದೊಂದು ಅಂಶದಲ್ಲೂ ಅವುಗಳ ಪರಸ್ಪರ ಹೊಂದಿಕೆಯಲ್ಲೂ ಸಹೃದಯಶ್ಲಾಘವೂ ರಸಯುಕ್ತವೂ ಆದಕಾವ್ಯತ್ತ್ವ ಸಿದ್ಧಿಗೆ ಪ್ರಾಣಪ್ರದ ಔಚಿತ್ಯವಿರಬೇಕೆಂಬುದನ್ನು ಕ್ಷೇಮೇಂದ್ರ ತನ್ನ ಗ್ರಂಥದಲ್ಲಿ ವಿಶದಪಡಿಸಿದ್ದಾನೆ. ಇಂಥ ಪ್ರಯತ್ನ ಸಂಸ್ಕೃತ ಸಾಹಿತ್ಯಮೀಮಾಂಸೆಯಲ್ಲಿ ಅಪೂರ್ವವಾದ ಒಂದು ಪ್ರಾಯೋಗಿಕ ವಿಮರ್ಶೆಯಾಗಿರುವುದಲ್ಲದೆ ಅಭಿಪ್ರಾಯಗಳ ಸ್ಪಷ್ಟತೆಯಿಂದ ಕೂಡಿ ಮಹತ್ತ್ವಪಡೆದಿದೆ.

ಹೀಗೆ, ಒಂದು ವಸ್ತುವಿನ ಭಾಗಗಳಲ್ಲಿ ಮತ್ತು ಒಂದು ವಸ್ತುವಿಗೂ ಇನ್ನೊಂದಕ್ಕೂ ಇರಬೇಕಾದ ಪರಸ್ಪರ ಸಮನ್ವಯವೆಂಬ ಸಾಮಾನ್ಯಾರ್ಥವುಳ್ಳ ಔಚಿತ್ಯ ಅಲಂಕಾರಶಾಸ್ತ್ರದಲ್ಲಿ ಮೊದಮೊದಲು ವಸ್ತು, ಪಾತ್ರ ಮುಂತಾದುವುಗಳ ಸಮನ್ವಯದ ಸೂಚಕವಾಗಿದ್ದು ಕಡೆಯಲ್ಲಿ ಕಾವ್ಯತತ್ತ್ವನಿರೂಪಣೆಯ ದೃಷ್ಟಿಯಿಂದ ಕಾವ್ಯ ಜೀವಿತವೆಂಬ ಸಿದ್ಧಾಂತವಾಗಿ ಪರಿಣಮಿಸುತ್ತದೆ. ಹಿಂದಿನ ಪಂಥಗಳಾದ ಅಲಂಕಾರ, ಗುಣ, ರೀತಿ, ವಕ್ರೋಕ್ತಿ, ರಸ, ಧ್ವನಿ, ಅನುಮಾನ ಇವೆಲ್ಲವನ್ನೂ ಅಳವಡಿಸಿಕೊಂಡು ವ್ಯಾಪಕವಾಗಿರುವುದೇ ಇದರ ವೈಶಿಷ್ಟ್ಯ. ಪ್ರಾಚೀನ ಆಲಂಕಾರಿಕರು ಶಬ್ದಾರ್ಥಗಳ ಸಂಯೋಜನೆಯ ಬಾಹ್ಯಸ್ವರೂಪ ವಿಶ್ಲೇಷಣೆಯಲ್ಲಿ ಆಸಕ್ತರಾಗಿ ಇದರ ಕೆಲವು ಧರ್ಮಗಳಾದ ಅಲಂಕಾರ, ಗುಣ, ರೀತಿಗಳನ್ನು ಬೇರೆ ಬೇರೆಯಾಗಿ ಪ್ರತಿಪಾದಿಸಿದರು; ಆದರೆ ನವೀನರು ಇವೆಲ್ಲಕ್ಕೂ ವಕ್ರೋಕ್ತಿ ವ್ಯಾಪಕವೆಂಬ ಮರ್ಮವನ್ನು ತಿಳಿದು, ಮುಂದೆ ರಸ ಧ್ವನಿ ಅನುಮಾನಗಳೆಂಬ ಸಿದ್ಧಾಂತಗಳಿಗೆ ಔಚಿತ್ಯ ವ್ಯಾಪಕವೆಂದು ನಿರ್ಣಯಿಸಿದುದಲ್ಲದೆ ಇದರಲ್ಲಿ ಮೇಲ್ಕಂಡ ಅಲಂಕಾರಾದಿಕಾವ್ಯತತ್ತ್ವಗಳು ಐಕ್ಯವಾಗಬಹುದಾದ ಸ್ಥಿತಿಯನ್ನೂ ಅರಿತುಕೊಂಡರು. ಈ ವಿಚಾರವನ್ನು ಎಸ್.ಕುಪ್ಪುಸ್ವಾಮಿಶಾಸ್ತ್ರಿಗಳು ಅರ್ಥಗರ್ಭಿತವಾದ ಶ್ಲೋಕವೊಂದರ ಮೂಲಕ ಹೀಗೆ ಪ್ರತಿಪಾದಿಸಿದ್ದಾರೆ:

ಔಚಿತೀಮನುಧಾವಂತಿ ಸರ್ವೇ ಧ್ವನಿರಸೋನ್ನಯಾ: ।
ಗುಣಾಲಂಕೃತಿರೀತೀನಾಂ ನಯಾಶ್ಚಾನೃಜುವಾಙ್ಮಯಾಃ ॥

ಧ್ವನಿ ರಸ ಅನುಮಾನಗಳೂ ಗುಣ ಅಲಂಕಾರ ರೀತಿ ವಕ್ರೋಕ್ತಿಗಳೂ ಔಚಿತ್ಯವನ್ನೇ ಅನುಸರಿಸುತ್ತವೆ.

ಕಾವ್ಯತ್ವದ ಅತಿಮುಖ್ಯವಾದ ಒಂದು ಧರ್ಮವೆಂದು ಗೋಚರವಾದ ಔಚಿತ್ಯಕ್ಕೆ ಸಂಸ್ಕೃತಕಾವ್ಯಮೀಮಾಂಸೆಯಲ್ಲಿ ಹಿರಿದಾದ ಸ್ಥಾನವಿದೆ. ಇದು ಕಾವ್ಯತತ್ತ್ವಕ್ಕೆ ಮೂಲಭೂತವಾದ ಅಂಶವೆಂಬ ಪ್ರತಿಪಾದನೆ ಅಲ್ಲಿ ಉದ್ದಕ್ಕೂ ಕಂಡುಬರುತ್ತದೆ. ಕಡೆಕಡೆಗೆ ಆ ಅಂಶವೇ ಪುಷ್ಟಿಗೊಂಡು ಎಲ್ಲ ಕಾವ್ಯಾಂಗಗಳಿಗೂ ಇರಬಹುದಾದ ಪ್ರಾಮುಖ್ಯದ ದೃಷ್ಟಿಯಿಂದ ನಡೆಸಿದ ವಿಶೇಷ ಪರಿಶೀಲನೆಯ ಫಲವೇ ಔಚಿತ್ಯ–ಎಂಬ ಕಲ್ಪನೆ ಪ್ರಬಲಗೊಳ್ಳುತ್ತದೆ.

(ಬಿ.ಕೆ.ಎಸ್.)

**ಔಟ್ರ್ಯಾಂ, ಸರ್ ಜೇಮ್ಸ್:** 1803–63. ಭಾರತದ ಹುಚ್ಚು ಧೈರ್ಯದ ಮಡ್ಡಿಮನುಷ್ಯ – ಎಂಬ ಖ್ಯಾತಿಯ ಈತ ಇಂಗ್ಲೆಂಡಿನ ಡರ್ಬಶೈರಿನ ಬಟರ್ಲಿಹಾಲ್ ಎಂಬಲ್ಲಿ 1803ರಲ್ಲಿ ಜನಿಸಿದ. ಬಾಲ್ಯದಿಂದಲೇ ಸೈನ್ಯಕ್ಕೆ ಸೇರಬೇಕೆಂಬ ಆಸೆಯಿತ್ತಲ್ಲದೆ ಇದಕ್ಕೆ ತಕ್ಕ ದೃಢಕಾಯ, ಶೌರ್ಯ ಅವನಲ್ಲಿದ್ದುವು. ಎಳವೆಯಿಂದಲೂ ಒಳ್ಳೆಯ ಆಟಗಾರನೆಂದು ಪ್ರಸಿದ್ಧಿ ಗಳಿಸಿದ್ದು ತನ್ನ 16ನೆಯ ವರ್ಷದಲ್ಲಿ (1819) ಭಾರತದಲ್ಲಿ ಬ್ರಿಟಿಷ್ ಸೈನ್ಯದಲ್ಲಿ ಕಡಟ್ ಆಗಿ ನೇಮಕಗೊಂಡ. ಕಾಲಕಳೆದಂತೆ, ತನ್ನ ಯುಕ್ತಿ, ಶೌರ್ಯಗಳನ್ನು ಪ್ರದರ್ಶಿಸಿ ಮುಂಬಯಿಯಲ್ಲಿದ್ದ ಬ್ರಿಟಿಷ್ ಸೇನೆಗೆ ಮುಖ್ಯ ಸೇನಾಧಿಪತಿಯಾದ. ಬ್ರಿಟಿಷರು ಸಿಂಧ್ ಮತ್ತು ಆಫ್ಘಾನಿಸ್ತಾನಗಳಲ್ಲಿ ನಡೆಸಿದ ಯುದ್ಧಗಳಲ್ಲಿ ಭಾಗವಹಿಸಿ ಆ ಯುದ್ಧರಂಗಗಳಲ್ಲಿನ ತನ್ನ ಅನುಭವವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ. 1856–57ರಲ್ಲಿ ಬ್ರಿಟಿಷರು ಪರ್ಷಿಯದೊಡನೆ ಯುದ್ಧ ನಡೆಸಿದ ಸಂದರ್ಭದಲ್ಲಿ ಮಹತ್ತ್ವದ ಪಾತ್ರವಹಿಸಿ ಬ್ರಿಟಿಷರು ಜಯಗಳಿಸಲು ನೆರವಾದ.

ಔಟ್ರ್ಯಾಂ ಯುದ್ಧರಂಗಗಳಲ್ಲಿ ಹೇಗೋ ಹಾಗೆ ಆಡಳಿತ ಕ್ಷೇತ್ರದಲ್ಲೂ ಒಳ್ಳೆಯ ಕೀರ್ತಿ ಗಳಿಸಿದ ಭಾರತದಲ್ಲಿ ಬ್ರಿಟಿಷ್ ಸರ್ಕಾರ ಅವನಿಗೆ ಅನೇಕ ಸ್ಥಾನಮಾನಗಳನ್ನು ಕೊಟ್ಟಾಗ ಅಲ್ಲೆಲ್ಲ ತನ್ನ ಆಡಳಿತ ಶಕ್ತಿಯನ್ನು ಪ್ರದರ್ಶಿಸಿದ. 1847 ರಲ್ಲಿ ಸರ್ಕಾರ ಅವನನ್ನು ಬರೋಡದ ರೆಸಿಡೆಂಟನ್ನಾಗಿ ನೇಮಿಸಿದಾಗ ಅಧಿಕಾರಿಗಳ ಭ್ರಷ್ಟಾಚಾರಗಳನ್ನು ಬಯಲಿಗೆಳೆದು ಆಡಳಿತ ಕ್ಷೇತ್ರದಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿದ.

1854 ರಿಂದ ಎರಡು ವರ್ಷ ಲಖ್‌ನೌ ರೆಸಿಡೆಂಟನಾಗಿ ಕೆಲಸ ಮಾಡಿದ. ಔಧ್ ಪ್ರಾಂತ್ಯವನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸುವ ಕಾರ್ಯದಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿದ. 1857ರ ಬಂಡಾಯದ ಸಂದರ್ಭದಲ್ಲಿ ಅಂದಿನ ಸರ್ಕಾರದ ಪರವಾಗಿ ತುಂಬ ಶ್ರಮಿಸಿದ. ಲಖ್‌ನೌ ನಗರವನ್ನು ಮತ್ತೆ ಬ್ರಿಟಿಷರ ವಶಕ್ಕೆ ತರುವುದರಲ್ಲಿ ನೆರವಾದ. ಬಂಡಾಯ ಕೊನೆಗೊಂಡ ಮೇಲೆ ವೈಸರಾಯ್ ಕ್ಯಾನಿಂಗನಿಗೆ ಬೆಂಬಲವಾಗಿ ನಿಂತು ದೇಶದಲ್ಲಿ ಶಾಂತಿ ಸ್ಥಾಪಿಸಲು ನೆರವು ನೀಡಿದ. ಸರ್ಕಾರದ ನೀತಿ ಇವನ ಪ್ರಭಾವದಿಂದಾಗಿ ಉದಾರವಾಯಿತು. ರಾಜನಿಯೋಗಿಯಾಗಿ ದಕ್ಷಿಣ ಸಿಂಧ್ (1839) ಮತ್ತು ಉತ್ತರ ಸಿಂಧ್‌ಗಳಲ್ಲಿ ಕೆಲಸ ಮಾಡಿದ. ಅಲ್ಲಿನ ಜಮೀನುದಾರರ ಬಗ್ಗೆ ಸರ್ ಚಾರಲ್ಸ್ ನೀಪಿಯರ್ ತಳೆದ ಧೋರಣೆಯನ್ನು ತೀವ್ರವಾಗಿ ವಿರೋಧಿಸಿ ಅವನಿಂದ ಭಾರತದ ಹುಚ್ಚು ಧೈರ್ಯದ ಮಡ್ಡಿ ಮನುಷ್ಯ ಎಂಬ ಟೀಕೆಗೆ ಒಳಗಾದ. ಔಟ್‌ರ್‍ಯಾಂ ಸೇವೆಯನ್ನು ಮೆಚ್ಚಿದ ಸರ್ಕಾರ ಅವನನ್ನು 1858 ರಲ್ಲಿ ಗೌರ್‍ನರ್ ಜನರಲ್ಲನ ಸಭೆಗೆ ಸದಸ್ಯನಾಗಿ ನೇಮಿಸಿತು. 1860ರವರೆಗೆ ಆ ಸ್ಥಾನದಲ್ಲಿದ್ದು ಅದೇ ವರ್ಷ ಇಂಗ್ಲೆಂಡಿಗೆ ಹಿಂತಿರುಗಿದ ಔಟ್‌ರ್‍ಯಾಂ ಫ್ರಾನ್ಸಿನಲ್ಲಿ ಅಸು ನೀಗಿದ.

ಇತಿಹಾಸದಲ್ಲಿ ಔಟ್‌ರ್‍ಯಾಂ ಧೀರಯೋಧನೆಂದು ಪ್ರಖ್ಯಾತನಾಗಿದ್ದಾನೆ. ಆಗಿನ ಕಾಲದ ಯುವಕರಿಗೆ ಶೌರ್ಯದಲ್ಲಿ, ಸಾಹಸದಲ್ಲಿ ಆತ ಮಾದರಿಯಾಗಿದ್ದ. ಭಿಲ್ಲರೆಂಬ ಕಾಡುಜನರ ಮಧ್ಯೆ ತಂಗಿ, ಅವರನ್ನು ಸುರಕ್ಷಿತವಾಗಿ ಒಂದು ಕಡೆ ನೆಲೆಯೂರುವಂತೆ ಈತ ಒತ್ತಾಯಮಾಡಿದ. ಇವನ ಸಾಹಸಗಳಿಗೆ, ಸೇವೆಗಳಿಗೆ ಮಾರುಹೋದ ಬ್ರಿಟಿಷ್ ಸರ್ಕಾರ ಇವನಿಗೆ ಅನೇಕ ಬಿರುದಾವಳಿಗಳನ್ನು ಕೊಟ್ಟು ಗೌರವಿಸಿತು. ಅಷ್ಟೇ ಅಲ್ಲದೆ ಜ್ಞಾಪಕಾರ್ಥವಾಗಿ ಲಂಡನ್ ನಗರದಲ್ಲಿ ಇವನ ಶಿಲಾಪ್ರತಿಮೆಯನ್ನು ಸಂಸ್ಥಾಪಿಸಲಾಯಿತು. ಸರ್ ಫ್ರೆಡರಿಕ್ ಗೋಲ್ಡ್‌ಸ್ಮಿತ್ ಎಂಬಾತ ಔಟ್‌ರ್‍ಯಾಂನ ಜೀವನಚರಿತ್ರೆಯನ್ನು ಎರಡು ಸಂಪುಟಗಳಲ್ಲಿ ಬರೆದಿದ್ದಾನೆ. (ಬಿ.ಎಸ್.ಎ.; ಎಚ್.ಆರ್.)

**ಔಡಲ:** ಯೂಫೋರ್ಬಿಯೇಸಿ ಕುಟುಂಬಕ್ಕೆ ಸೇರಿದ ಮಧ್ಯಮ ಎತ್ತರಕ್ಕೆ ಬೆಳೆಯುವ ವಾರ್ಷಿಕ ಗಿಡ. ಬಹುವಾರ್ಷಿಕ ಬಗೆಗಳೂ ಉಂಟು. ರಿಸಿನಸ್ ಕಮ್ಯೂನಿಸ್ ಎಂಬುದು ವೈಜ್ಞಾನಿಕ ಹೆಸರು. ಹರಳು ಪರ್ಯಾಯ ನಾಮ. ಇದು ಮೂಲತಃ ಆಫ್ರಿಕದ್ದೆಂದು ಕೆಲವರೂ ಭಾರತದ್ದೆಂದು ಮತ್ತೆ ಕೆಲವರೂ ಅಭಿಪ್ರಾಯಪಡುತ್ತಾರೆ. ಈಚೆಗೆ ಉಷ್ಣ ಮತ್ತು ಸಮಶೀತೋಷ್ಣವಲಯದ ದೇಶಗಳಲ್ಲಿ ಇದನ್ನು ಹೇರಳವಾಗಿ ಬೆಳೆಸುತ್ತಾರೆ. ಇದು ಪೊದರು ಸಸ್ಯವಾಗಿಯೊ ಮರವಾಗಿಯೊ ಬೆಳೆಯುವುದು. ಉಷ್ಣವಲಯದಲ್ಲಿ ಅನೇಕ ಕಡೆ ಇದು 40´ಗಳಷ್ಟು ಎತ್ತರದ ಮರವಾಗಿ ಬೆಳೆಯುವುದೂ ಉಂಟು.



ಔಡಲಗಿಡದ ಕಾಯಿಗಳು ಮತ್ತು ಬೀಜಗಳು

ಸಾಮಾನ್ಯವಾಗಿ ಹೊಲಗಳಲ್ಲಿ ಬೆಳೆಸುವ ಔಡಲ ಸುಮಾರು 15´ಗಳಷ್ಟು ಎತ್ತರವಿರುತ್ತದೆ. ಕಾಂಡ ನಯ, ಬಣ್ಣ ನಸು ಊದಾ ಅಥವಾ ಹಸಿರು. ಕೆಲವು ತಳಿಗಳಲ್ಲಿ ಕಾಂಡದ ಮೇಲೆಲ್ಲ ಬಿಳಿಯ ಮೇಣದಂಥ ಲೇಪವಿರುತ್ತದೆ. ಗಿಡಕ್ಕೆ ವಯಸ್ಸಾದಂತೆಲ್ಲ ಕಾಂಡ ಟೊಳ್ಳಾಗುವುದು. ಎಲೆಗಳು ಅಗಲ, ಹಸ್ತಾಕಾರ; ಪರ್ಯಾಯವಾಗಿ ಜೋಡಣೆಗೊಂಡಿವೆ. ಅಂಚು ಗರಗಸದ ಹಲ್ಲಿನಂತೆ, ಹೂಗಳು ಏಕಲಿಂಗಗಳು. ಗಂಡು ಮತ್ತು ಹೆಣ್ಣು ಹೂಗಳೆರಡೂ ದೊಡ್ಡದಾದ ಒಂದೇ ಸಂಕೀರ್ಣ ಪುಷ್ಪಗುಚ್ಛದಲ್ಲಿ ಜೋಡಣೆಗೊಂಡಿವೆ. ಕೆಲವು ಬಗೆಗಳಲ್ಲಿ ಕೇವಲ ಹೆಣ್ಣು ಹೂಗಳನ್ನು ಮಾತ್ರ ಒಳಗೊಂಡ ಪುಷ್ಪಗುಚ್ಛವಿರುತ್ತದೆ. ಈ ಗುಣವನ್ನು ಅಡ್ಡತಳಿಯೆಬ್ಬಿಕೆ ಪ್ರಯೋಗಗಳಲ್ಲಿ ಬಳಸಿಕೊಳ್ಳುವರು. ಹೂಗಳಿಗೆ ದಳಗಳಿಲ್ಲ, ಬರಿಯ ಪುಷ್ಪಪತ್ರ ಮಾತ್ರ ಉಂಟು. ಗಂಡು ಹೂವಿನಲ್ಲಿ ಕವಲೊಡೆದು ಹಲವಾರು ಕೇಸರಗಳಿವೆ. ಹೆಣ್ಣು ಹೂವಿನಲ್ಲಿ ಉಚ್ಚಸ್ಥಾನದ ಮೂರು ಕಾರ್ಪೆಲ್ಲುಗಳನ್ನೊಳಗೊಂಡ ಅಂಡಾಶಯವಿದೆ. ಅಂಡಕೋಶದಲ್ಲಿ ಮೂರು ಕೋಣೆಗಳಿವೆಯಲ್ಲದೆ ಒಂದೊಂದು ಕೋಣೆಯಲ್ಲಿ ಒಂದೊಂದರಂತೆ ಅಂಡಕಗಳಿವೆ. ಕಾಯಿ ಸಂಪುಟ (ಕ್ಯಾಪ್ಸೂಲ್) ಮಾದರಿಯದು. ಮೇಲೆಲ್ಲ ಮುಳ್ಳುಗಳು, ಒಳಗೆ ಮೂರು ಬೀಜಗಳು ಇವೆ. ಬೀಜಗಳ ಮೇಲೆ ನಯವಾದ ಸಿಪ್ಪೆಯೂ ಅದರ ಮೇಲೆ ವಿವಿಧ ವರ್ಣವಿನ್ಯಾಸಗಳೂ ಇವೆ. ಕಾಯಿ ಬಲಿತಾಗ ಫಟ್ಟನೆ ಸಿಡಿದು ಬೀಜಗಳನ್ನು ಹೊರಕ್ಕೆ ಚಿಮ್ಮಿಸುತ್ತದೆ. ಅಲ್ಲದೆ ಕಾಯಿಗಳು ಒಂದೇ ಬಾರಿಗೆ ಬಲಿಯದೆ ಒಂದಾದಮೇಲೊಂದರಂತೆ ನಿಧಾನವಾಗಿ ಬಲಿತು ಬೀಜಗಳನ್ನು ಸಿಡಿಸುತ್ತವೆ. ಇದರಿಂದ ಬೀಜಸಂಗ್ರಹಣೆ ಕಷ್ಟ. ಈ ತೊಂದರೆಯನ್ನು ನಿವಾರಿಸಲೋಸುಗ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ತಾವಾಗಿಯೇ ಒಡೆಯದ ಕಾಯಿಗಳುಳ್ಳ, ಗಿಡದ ಎಲ್ಲ ಕಾಯಿಗಳೂ ಏಕಕಾಲದಲ್ಲಿ ಬಲಿಯುವಂಥ ಗುಣವುಳ್ಳ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುತ್ತಾರೆ.

ಔಡಲ ಒಂದು ಮುಖ್ಯವಾದ ವಾಣಿಜ್ಯ ಬೆಳೆ. ಇದರ ಬೀಜದಲ್ಲಿರುವ ಎಣ್ಣೆಗೋಸ್ಕರ ಇದು ಕೈಗಾರಿಕೆಗಳ ದೃಷ್ಟಿಯಿಂದ ಮಹತ್ತ್ವ ಪಡೆದಿದೆ. ಅಮೆರಿಕದ ಸಂಯುಕ್ತಸಂಸ್ಥಾನಗಳು. ಈಜಿಪ್ಟ್, ಸೂಡಾನ್, ಮಧ್ಯ ಹಾಗೂ ಪೂರ್ವ ಆಫ್ರಿಕ, ಭಾರತ, ಚೀನ, ಜಪಾನ್, ಬ್ರೆಜಿಲ್ ಮುಂತಾದ ದೇಶಗಳಲ್ಲಿ ಇದನ್ನು ವಿಸ್ತಾರವಾಗಿ ಬೆಳೆಸುತ್ತಿದ್ದಾರೆ. ಭಾರತದಲ್ಲಿ ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಇದರ ವ್ಯವಸಾಯಕ್ಕೆ ಹೆಸರಾದುವು. ಔಡಲ ಒಂದು ಒರಟು ಸಸ್ಯ. ಇದು ವಿವಿಧ ಮಣ್ಣು ಮತ್ತು ವಾತಾವರಣಗಳಲ್ಲಿ ಬೆಳೆಯಬಲ್ಲುದು. ಬೇರೆ ಏನನ್ನೂ ಬೆಳೆಯಲು ಸಾಧ್ಯವಾಗದ ಕಡೆಗಳಲ್ಲೂ ತೀರ ನಿಕೃಷ್ಟವಾದ ಮರಳಿನಂಥ ಮಣ್ಣಿನಿಂದ ಹಿಡಿದು ಬಹಳ ಉತ್ಕೃಷ್ಟವಾದ ಮೆಕ್ಕಲು ಮಣ್ಣಿನಲ್ಲಿಯೂ ಇದನ್ನು ಬೆಳೆಸಬಹುದು. ವಾರ್ಷಿಕ ಬೆಳೆಯಾದ ಇದು ಸಾಮಾನ್ಯವಾಗಿ 280 ದಿವಸಗಳ ಕಾಲ ಬದುಕಿರುತ್ತದೆ. ನೀರಾವರಿ ಸೌಕರ್ಯವಿದ್ದರೆ ಇದು ಬಹು ವಾರ್ಷಿಕ ಸಸ್ಯವಾಗಿ ಬೆಳೆಯುವುದೂ ಉಂಟು. ಸಾಧಾರಣವಾಗಿ ಇದನ್ನು ಹತ್ತಿ, ಕಡಲೆಕಾಯಿ ಮುಂತಾದುವುಗಳೊಡನೆ ಮಿಶ್ರ ಬೆಳೆಯಾಗಿ ಬೆಳೆಸುತ್ತಾರೆ. ಬೀಜದ ಇಳುವರಿ ಎಕರೆಗೆ 400–900 ಪೌಂಡುಗಳು.

ಔಡಲ ಸಸ್ಯದಲ್ಲಿ ಹಲವಾರು ವಿಧಗಳಿವೆ. ಅವು ಬೀಜಗಳ ಗಾತ್ರ, ಬಣ್ಣ ಹಾಗೂ ಎಣ್ಣೆಯ ಪ್ರಮಾಣಗಳಲ್ಲಿ ವ್ಯತ್ಯಾಸವನ್ನು ತೋರುತ್ತವೆ. ಕೆಲವು ಬಗೆಗಳಲ್ಲಿ ಬೀಜದ ಗಾತ್ರ 3/16" ಇದ್ದರೆ ಇನ್ನು ಕೆಲವು ಬಗೆಗಳಲ್ಲಿ 1/2" ಅಥವಾ 7/8" ಇರುತ್ತದೆ. ಹಾಗೆಯೇ ಕೆಲವು ವಿಧಗಳ ಬೀಜಗಳಲ್ಲಿ 56% ರಷ್ಟು ಎಣ್ಣೆಯಿದ್ದರೆ ಉಳಿದವುಗಳಲ್ಲಿ 48%ರಷ್ಟು ಎಣ್ಣೆಯಿರುತ್ತದೆ. ಸಾಧಾರಣವಾಗಿ ಶುಷ್ಕಭೂಮಿಯಲ್ಲಿ ಬೆಳೆಯುವ ಔಡಲ ಗಿಡಗಳು ವಾರ್ಷಿಕ ಸಸ್ಯಗಳು. ಅವುಗಳ ಬೀಜ ಸಣ್ಣಗಿದ್ದರೂ ಎಣ್ಣೆಯ ಪ್ರಮಾಣ ಅಧಿಕ. ದೊಡ್ಡ ಗಾತ್ರದ ಬೀಜಗಳನ್ನುಳ್ಳ ಔಡಲ ಗಿಡಗಳಲ್ಲಿ ಎಣ್ಣೆಯ ಪ್ರಮಾಣ ಕಡಿಮೆ. ಸ್ವಾಭಾವಿಕವಾಗಿ ಕಾಣಬರುವ ಈ ಬಗೆಗಳಲ್ಲದೆ ಅಡ್ಡತಳಿಯೆಬ್ಬಿಸಿ ಪಡೆದಿರುವ ಉತ್ತಮ ತಳಿಗಳೂ ವ್ಯವಸಾಯದಲ್ಲಿವೆ. ಸಾಮಾನ್ಯವಾಗಿ ಇವೆಲ್ಲವೂ ಅನಾವೃಷ್ಟಿ ಪರಿಸ್ಥಿತಿಗೆ ಪ್ರತಿರೋಧಕ ಶಕ್ತಿಯನ್ನು ಪಡೆದಿದ್ದು ಹೆಚ್ಚು ಇಳುವರಿ ಕೊಡುತ್ತವೆ.

ಔಡಲ ತನ್ನ ಬೀಜದಲ್ಲಿರುವ ಎಣ್ಣೆಯಿಂದಾಗಿ ಬಹಳ ಉಪಯುಕ್ತ ಬೆಳೆಯೆನಿಸಿದೆ. ಹಸಿಬೀಜಗಳನ್ನು ನೆಗ್ಗಿ ಅಥವಾ ಗಾಣಕ್ಕೆ ಕೊಟ್ಟು ಎಣ್ಣೆ ತೆಗೆಯುವುದು. ಹರಳುಬೀಜಗಳನ್ನು ಕುಟ್ಟಿ ಬೇಯಿಸಿ ಎಣ್ಣೆ ತೆಗೆಯುವುದೂ ಹಿಂದಿನಿಂದ ರೂಢಿಯಲ್ಲಿರುವ ಗೃಹಕೈಗಾರಿಕೆ. ಹಸಿಬೀಜಗಳಿಂದ ತೆಗೆದ ಎಣ್ಣೆ ಬಣ್ಣರಹಿತ ಅಥವಾ ನಸುಹಳದಿ ಬಣ್ಣದ್ದಾಗಿರುತ್ತದೆ. ವಾಸನೆಯೂ ಕಡಿಮೆ. ಔಷಧಿ ರೂಪದಲ್ಲಿ ಬಳಸುವುದಕ್ಕೆ ಹಸಿಬೀಜದ ಎಣ್ಣೆಯೇ ಉತ್ತಮ. ಈಚೆಗೆ ಯಂತ್ರಗಳಿಂದ ಹಸಿ ಎಣ್ಣೆಯನ್ನು ಹಿಂಡಿ, ಶುದ್ಧೀಕರಿಸಿ, ಸ್ನಿಗ್ಧತೆಯನ್ನು ಕಡಿಮೆ ಮಾಡಿ, ಸುಗಂಧಗಳನ್ನೂ ಬಣ್ಣಗಳನ್ನೂ ಕೂಡಿಸಿ ಮನೋಹರವಾದ ಕೇಶತೈಲಗಳನ್ನು ಸಿದ್ಧಪಡಿಸುವ ಉದ್ಯಮ ಭಾರತದಲ್ಲಿ ವೇಗವಾಗಿ ಬೆಳೆಯುತ್ತಿದೆ. ಬೇಯಿಸಿ ತೆಗೆದ ಎಣ್ಣೆ ಸ್ವಲ್ಪ ಕೆಂಪಾಗಿರುತ್ತದೆ. ಔಡಲ ಎಣ್ಣೆಗೆ ಓಕರಿಕೆ ತರುವ ವಿಶಿಷ್ಟ ರುಚಿ ಉಂಟು. ಇದರ ಉಪಯೋಗಗಳು ಹಲವಾರು. ಆಯುರ್ವೇದ, ಸಿದ್ಧ ಹಾಗೂ ಯುನಾನಿ ಔಷಧಿ ಪದ್ಧತಿಗಳಲ್ಲೆಲ್ಲ ಹರಳೆಣ್ಣೆಯ ಉಪಯೋಗ ಇದ್ದೇ ಇದೆ. ಎಣ್ಣೆಯನ್ನು ಮೈಗೆ, ತಲೆಗೆ ಹಚ್ಚಿಕೊಂಡು ಅಭ್ಯಂಜನ ಸ್ನಾನ ಮಾಡುವುದು ಎಲ್ಲರಿಗೂ ತಿಳಿದದ್ದೇ. ಹಿಂದಿನ ಕಾಲದಲ್ಲಿಯೂ ಹರಳೆಣ್ಣೆ ಸುಖರೇಚಕವೆಂದು ಹೆಸರಾಗಿದೆ. ಎಳೆಯ ಮಕ್ಕಳಾಗಲಿ, ಮುದುಕರಾಗಲಿ ಇದನ್ನು ತೆಗೆದುಕೊಂಡರೆ ದೇಹದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದು. ಹರಳೆಣ್ಣೆ ಜಠರರಸದೊಡನೆ ವರ್ತಿಸಿದಾಗ ರಿಸಿನೋಲಿಯಿಕ್ ಆಮ್ಲವೆಂಬ ಚುರುಗುಟ್ಟಿಸುವ ವಸ್ತು ಉತ್ಪತ್ತಿಯಾಗಿ ಕರುಳಿನ ಗೋಡೆ ಇರುಕಿಸುವಂತೆ

ಮಾಡಿ ಭೇದಿಯುಂಟಾಗುತ್ತದೆ. ಎಣ್ಣೆ ಸೇವಿಸಿದ ನಾಲ್ಕು ಐದು ಗಂಟೆಗಳ ಅನಂತರ ವಿರೇಚನಕಾರ್ಯ ಆರಂಭವಾಗುತ್ತದೆ. ಗ್ಲಿಸರೀನಿನೊಂದಿಗೆ ಹರಳೆಣ್ಣೆ ಮಿಶ್ರಮಾಡಿ ಸೇವಿಸಿದರೆ ಪರಿಣಾಮ ಹೆಚ್ಚು. ಎಣ್ಣೆಯನ್ನು ಅತಿಸಾರ, ಮೂಲವ್ಯಾಧಿ, ಸಂಧಿವಾತ, ಕಟಿವಾಯು, ಹೊಟ್ಟೆನುಲಿತ ಮುಂತಾದ ರೋಗಗಳಿಗೂ ಬಳಸುತ್ತಾರೆ. ಕೆಲವು ಬಗೆಯ ಕಣ್ಣಿನ ಊತಗಳಿಗೆ (ಕಂಜಂಕ್ಟಿವಿಟಿಸ್) ಹರಳೆಣ್ಣೆಯ ಬಳಕೆಯಿಂದ ತಾತ್ಕಾಲಿಕ ಪರಿಹಾರ ಸಿಗುತ್ತದೆ. ಎಣ್ಣೆಯಿಂದರಲ್ಲೇ ಅಲ್ಲದೆ ಬೇರು, ಬೀಜ, ಎಲೆ ಇವುಗಳಲ್ಲೂ ಔಷಧೀಯ ಗುಣಗಳಿವೆ. ಬೇರು ಮತ್ತು ಬೀಜಗಳಿಂದ ತಯಾರಿಸಿದ ಕಷಾಯವನ್ನು ಸಂಧಿವಾತ, ಕಟಿವಾಯುಗಳ ರೋಗನಿವಾರಣೆಗೆ ಉಪಯೋಗಿಸುತ್ತಾರೆ. ಹರಳೆಣ್ಣೆಯಿಂದ ಹಲವಾರು ಉತ್ಪನ್ನಗಳನ್ನು ಪಡೆಯಬಹುದು. ಎಣ್ಣೆಯನ್ನು ಆಮ್ಲಜನಕದೊಡನೆ $80^0$–$130^0$ ಸೆಂ. ಉಷ್ಣತೆಯಲ್ಲಿ ವರ್ತಿಸುವಂತೆಮಾಡಿ ಉತ್ಕರ್ಷಿತ ತೈಲ (ಬ್ಲಾನ್ ಆಯಿಲ್) ತಯಾರಿಸುವರು. ಹರಳೆಣ್ಣೆಯನ್ನು ಕಾಯಿಸಿ, ವಿಭಜಿಸಿ, ಕ್ಷಾರಗಳಿಗೆ ಒಡ್ಡಿ ಸುಗಂಧದ್ರವ್ಯಗಳಿಗೆ ಬೇಕಾಗುವ ವಸ್ತುಗಳನ್ನೂ ಕೃತಕ ಗೋಂದಿನ ತಯಾರಿಕೆಗೆ ಬೇಕಾಗುವ ಡೈಬೇಸಿಕ್ ಆಮ್ಲವನ್ನೂ ಪಡೆಯಬಹುದು. ಮೆರುಗೆಣ್ಣೆ (ವಾರ್ನಿಷ್), ಮುದ್ರಣ ಬಣ್ಣ, ನೈಲಾನ್ ದಾರ ಮುಂತಾದುವುಗಳ ತಯಾರಿಕೆಯಲ್ಲಿ ಬಳಸುವರು. ಸಾಮಾನ್ಯವಾಗಿ ದ್ರವರೂಪದಲ್ಲಿರುವ ಹರಳೆಣ್ಣೆ ಉಚ್ಚ ಉಷ್ಣತೆಯಲ್ಲೂ ತನ್ನ ಸ್ನಿಗ್ಧತೆಯನ್ನೂ ಉಳಿಸಿಕೊಳ್ಳುವುದರಿಂದ ಬಹಳ ಉತ್ತಮವಾದ ಮೃದುಚಾಲಕವೆಂದು ಹೆಸರಾಗಿದೆ. ಇದನ್ನು ಮೃದು ಚಾಲಕಗಳ (ಲೂಬ್ರಿಕೆಂಟ್ಸ್) ತಯಾರಿಕೆಯಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. ಇದರಲ್ಲಿ ಟೋಕೊಫೆರಾಲ್ ಪ್ರತಿಉತ್ಕರ್ಷಕಗಳು (ಆಂಟಿ ಆಕ್ಸಿಡೆಂಟ್ಸ್) ಇರುವುದರಿಂದ ಮತ್ತು ಇದರಲ್ಲಿನ ಗ್ಲಿಸರೈಡುಗಳಿಗೆ ಉತ್ಕರ್ಷಕ ಪ್ರತಿರೋಧಕ ಶಕ್ತಿಯಿರುವುದರಿಂದ (ರೆಸಿಸ್ಟೆನ್ಸ್‍ಟು ಆಟೋಆಕ್ಸಿಡೇಷನ್) ಹರಳೆಣ್ಣೆಗೆ ಅತಿಹೆಚ್ಚಿನ ಸ್ಥಿರತೆ ಇದೆ. ಬೀಜದ ತಿರುಳಿನಲ್ಲಲ್ಲದೆ ಅದರ ಸಿಪ್ಪೆಯಲ್ಲಿಯೂ ಕೊಂಚ ಪ್ರಮಾಣದಲ್ಲಿ ಎಣ್ಣೆಯಿದೆ. ಈ ಎಣ್ಣೆಯಲ್ಲಿ ತಿರುಳಿನ ಎಣ್ಣೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಒಲಿಯಿಕ್ ಮತ್ತು ಲಿನೋಲಿಯಿಕ್ ಆಮ್ಲಗಳೂ ಸ್ವಲ್ಪ ಪ್ರಮಾಣದಲ್ಲಿ ರಿಸಿನೋಲಿಯಿಕ್ ಆಮ್ಲವೂ ಇವೆ.

ಎಣ್ಣೆ ತೆಗೆದ ಮೇಲೆ ಉಳಿಯುವ ಔಡಲ ಹಿಂಡಿ (ಮಡ್ಡಿ) ಗೊಬ್ಬರವಾಗಿ ಬಳಕೆಯಾಗುತ್ತದೆ. ಇದರಲ್ಲಿ ರಿಸಿನ್ ಎಂಬ ರಕ್ತ ಹೆಪ್ಪುಗಟ್ಟಿಸುವಂಥ ವಿಷವಸ್ತುವಿರುವುದರಿಂದ ದನಗಳಿಗೆ ಮೇವಾಗಿ ಇದನ್ನು ಉಪಯೋಗಿಸುವುದಕ್ಕಾಗುವುದಿಲ್ಲ.

ಕಾಂಡದಿಂದ ಕಾಗದ ತಯಾರಿಕೆಗೆ ಬೇಕಾದ ಮೂಲ ವಸ್ತುವನ್ನು ತಯಾರಿಸಬಹುದು. ಎಲೆಗಳನ್ನು ಎರಿ ರೇಷ್ಮೆ ಹುಳುಗಳಿಗೆ ಆಹಾರವಾಗಿ ಹಾಕುತ್ತಾರೆ.

ಔಡಲ ಸಸ್ಯಕ್ಕೆ ಹಲವಾರು ಬಗೆಯ ರೋಗಗಳೂ ಪೀಡೆಗಳೂ ಅಂಟುವುದುಂಟು. ಮೆಲಾಂಸ್ಪೋರೆಲ್ಲಾ ರಿಸಿನಿ ಎಂಬ ಬೂಷ್ಟಿನಿಂದ ಬರುವ ಅರಿಸಿನ ರೋಗವೂ ಸರ್ಕೊಸ್ಪೊರಿನ ರಿಸಿನೆಲ್ಲ ಎಂಬುವುದರಿಂದ ಉಂಟಾಗುವ ಎಲೆರೋಗವೂ ಡಿಪ್ಲೋಡಿಯ ರಿಸಿನೆಲ್ಲ ಎಂಬ ಬ್ಯಾಕ್ಟೀರಿಯದಿಂದ ಬರುವ ಕೊಳೆರೋಗವೂ ಮುಖ್ಯವಾದುವು. ಇವಾವುವೂ ಅಂಥ ಹೆಚ್ಚಿನ ಪ್ರಮಾಣದಲ್ಲಿ ನಷ್ಟವನ್ನುಂಟುಮಾಡುವುದಿಲ್ಲ. ಕೀಟಗಳಲ್ಲಿ ಮುಖ್ಯವಾದುವು ಎಲೆ ತಿನ್ನುವ ಅಕೊಯಿಯ ಜೇನೇಟ ಮತ್ತು ಕಾಂಡ ಹಾಗೂ ಕಾಯಿಗಳನ್ನು ಕೊರೆಯುವ ಡೈಕೊಕ್ರೋಸಿಸ್ ಪಂಕ್ಟಿಫೆರಾಲಿಸ್ ಎಂಬುವು. ಕ್ಯಾಲ್ಸಿಯಂ ಆರ್ಸಿನೇಟ್ ಮತ್ತು ಗ್ಯಾಮೆಕ್ಸೀನ್ ಡಿ.025 ಔಷಧಿಗಳನ್ನು ಸಿಂಪಡಿಸುವುದರಿಂದ ಇವನ್ನು ತಡೆಗಟ್ಟಬಹುದು. ಅದಲ್ಲದೆ ಔಡಲ ಬೆಳೆಯುವ ಭೂಮಿಯನ್ನು ಅಗೆದು ಈ ಹುಳುಗಳ ಡಿಂಭಗಳನ್ನು ಹೊರತೆಗೆದು ನಾಶಪಡಿಸುವುದರಿಂದಲೂ ಕೀಟರೋಗಗಳನ್ನು ತಡೆಗಟ್ಟಬಹುದು. (ಎಸ್.ಎಸ್.ಎಸ್.ಐ.)

**ಔದಾಸೀನ್ಯ ರೇಖೆಗಳು:** ಅನುಭೋಗಿಗಳ ಬೇಡಿಕೆಯನ್ನು ವಿಶ್ಲೇಷಿಸಲು ಅರ್ಥಶಾಸ್ತ್ರದಲ್ಲಿ ಅನುಸರಿಸುವ ಒಂದು ವಿಧಾನ (ಇಂಡಿಫರೆನ್ಸ್ ಕರ್ವ್ಸ್). ಬೇಡಿಕೆಯ ದೃಷ್ಟಿಯಿಂದ ಈ ಜಗತ್ತಿನಲ್ಲಿ ಸರಕುಗಳು ವಿರಳವಾಗಿರುವುದರಿಂದ ಪ್ರತಿಯೊಬ್ಬನು ತನಗೆ ಸೂಕ್ತ ಕಂಡಂತೆ ಈ ಸರಕುಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ತನ್ನಲ್ಲಿರುವ ಹಣದಿಂದ ಯಾವ ಯಾವ ಸರಕುಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಕೊಳ್ಳಬೇಕೆಂಬುದನ್ನು ನಿಷ್ಕರ್ಷಿಸಿಕೊಳ್ಳಬೇಕಾಗುತ್ತದೆ. ಒಬ್ಬ ಅನುಭೋಗಿಗೆ ಎರಡು ಸರಕುಗಳು ಮಾತ್ರವೇ ಲಭ್ಯವಿರುವುದೆಂದು ಭಾವಿಸುವುದಾದರೆ ಅಥವಾ ಆತ ಎರಡು ಸರಕುಗಳನ್ನು ಕೊಳ್ಳಬೇಕೆಂದು ಬಯಸುವುದಾದರೆ, ತನ್ನ ಹಣದ ವರಮಾನದಿಂದ ಇವೆರಡನ್ನೂ ಯಾವುದೋ ಒಂದು ಗೊತ್ತಾದ ಪ್ರಮಾಣದಲ್ಲಿ ಕೊಳ್ಳಬೇಕೆಂದು ತೀರ್ಮಾನಿಸುತ್ತಾನೆ. ಈ ಎರಡು ಸರಕುಗಳ ಈ ಬಗೆಯ ಸಂಯೋಜನೆಯಿಂದ ಅವನಿಗೆ ದೊರಕುವಷ್ಟೇ ತೃಪ್ತಿ ಅಥವಾ ಉಪಯುಕ್ತತೆ ಅವನಿಗೆ ಇವೆರಡನ್ನೂ ಬೇರೆ ಬೇರೆ ಪ್ರಮಾಣದಲ್ಲಿ ಸಂಯೋಜಿಸಿದರೆ ಲಭ್ಯವಾಗಬಹುದು; ಅಥವಾ ಆಗದಿರಬಹುದು. ಮೊದಲನೆಯ ಬಗೆಯ ಸಂಯೋಜನೆಯಿಂದ ಅವನಿಗೆ ಎಷ್ಟು ತೃಪ್ತಿ ಅಥವಾ ಉಪಯುಕ್ತತೆ ಲಭ್ಯವಾಗುವುದೋ ಅಷ್ಟೇ ಉಪಯುಕ್ತತೆ ಲಭ್ಯವಾಗುವಂತೆ ಈ ಎರಡು ಸರಕುಗಳನ್ನೂ ಬೇರೆ ಬೇರೆ ಪ್ರಮಾಣಗಳಲ್ಲಿ ಸಂಯೋಜಿಸಬಹುದು. ಹೀಗೆ ಏಕರೀತಿಯ ಉಪಯುಕ್ತತೆ ಲಭ್ಯವಾಗುವಂತೆ ಈ ಎರಡು ಸರಕುಗಳನ್ನೂ ಬೇರೆ ಬೇರೆ ಪ್ರಮಾಣಗಳಲ್ಲಿ ಸಂಯೋಜಿಸಬಹುದು. ಹೀಗೆ ಏಕರೀತಿಯ ಉಪಯುಕ್ತತೆ ಲಭಿಸುವ ಸಂಯೋಜನೆಗಳನ್ನೆಲ್ಲ ಒಂದು ನಕ್ಷೆಯಲ್ಲಿ ಬಿಂದುಗಳಾಗಿ ಗುರುತಿಸಿ ಆ ಬಿಂದುಗಳನ್ನೆಲ್ಲ ಒಂದು ರೇಖೆಯಾಗಿ ಕೂಡಿಸಬಹುದು. ಆ ರೇಖೆಯ ಮೇಲೆ ಯಾವುದೇ ಬಿಂದುವಿನಿಂದ ಸೂಚಿತವಾಗುವ ಪ್ರಮಾಣಗಳಲ್ಲಿ ಆ ಎರಡು ಸರಕುಗಳನ್ನು ಪಡೆದುಕೊಂಡರೂ ಅವನಿಗೆ ಒಂದೇ ಸಮನಾದ ತೃಪ್ತಿ ಲಭಿಸುವುದರಿಂದ ಆ ರೇಖೆಯಿಂದ ಸೂಚಿತವಾಗುವ ಸಂಯೋಜನೆಗಳೆಲ್ಲ ಒಂದೇ ಎಂಬ ಔದಾಸೀನ್ಯ ಅವನಿಗಿರುವುದರಿಂದ ಆ ರೇಖೆಗೆ ಔದಾಸೀನ್ಯ ರೇಖೆಯೆಂದು ಹೆಸರು ಬಂದಿದೆ.

ತನಗೆ ಹಣದ ರೂಪದಲ್ಲಿ ಬಂದ ಕ್ಲುಪ್ತ ವರಮಾನದಿಂದ ಒಬ್ಬ ಅನುಭೋಗಿಗೆ ಆಹಾರ ಹಾಗೂ ಬಟ್ಟೆ ಕೊಳ್ಳಬೇಕೆನಿಸಬಹುದು. ಅವನಲ್ಲಿರುವ ಹಣದಿಂದ ಮೂರು ಕಿಲೋ ಅಕ್ಕಿ ಹಾಗೂ ಎರಡು ಮೀಟರ್ ಬಟ್ಟೆ ಕೊಳ್ಳಬಹುದು ಅಥವಾ ಎರಡು ಕಿಲೋ ಅಕ್ಕಿ ಮತ್ತು ಮೂರು ಮೀಟರ್ ಬಟ್ಟೆ ಕೊಳ್ಳಬಹುದು. ಇವೆರಡರ ಜೊತೆಗಳಲ್ಲಿ ಮೊದಲನೆಯ ಜೊತೆಯೇ ವಾಸಿಯೆಂದು ಆತ ಭಾವಿಸಬಹುದು; ಅಥವಾ ಎರಡನೆಯದು ವಾಸಿಯೆಂದು ಅವನಿಗೆ ತೋರಬಹುದು; ಇಲ್ಲವೆ ಇವೆರಡು ಬಗೆಯ ಸಂಯೋಜನೆಗಳಲ್ಲಿ ಯಾವುದಾದರೂ ಒಂದೇ ಎಂದೂ ಎನಿಸಬಹುದು.

ಇವೆರಡು ಸಂಯೋಜನೆಗಳು ಒಂದೇ ಎಂಬುದು ಅವನ ಭಾವನೆಯಾದರೆ, ಆಗ ಇದೇ ರೀತಿ ಎನಿಸುವ ಬೇರೆ ಬೇರೆ ಪ್ರಮಾಣಗಳ ಜೋಡಿಗಳನ್ನೂ ಭಾವಿಸಬಹುದು. ಹೀಗೆ ಅವನಿಗೆ ಒಂದೇ ಎನಿಸಬಹುದಾದ, ಅವುಗಳಲ್ಲಿ ಯಾವುದಾದರೂ ಸರಿಯೆಂದು ಅವನು ಉದಾಸೀನನಾಗಿರಬಹುದಾದ, ಸಂಯೋಜನೆಗಳನ್ನು ಮುಂದೆ ಕೊಟ್ಟಿದೆ:

| ಅಕ್ಕಿ (ಕಿಲೋ) | | ಬಟ್ಟೆ (ಮೀಟರ್) |
|---|---|---|
| 1 | ... | 6 |
| 2 | ... | 3 |
| 3 | ... | 2 |
| 4 | ... | 1 1/2 |

ಈ ಪಟ್ಟಿಯಲ್ಲಿ ಕೊಟ್ಟಿರುವ ಜೋಡಿಗಳನ್ನೇ ನಕ್ಷೆಯ ರೂಪದಲ್ಲಿ ತೋರಿಸಬಹುದು (ನಕ್ಷೆ 1):

ಹಿಂದಿನ ಯಾದಿಯಲ್ಲಿ ಕೊಟ್ಟಿರುವ ನಾಲ್ಕು ಸಂಯೋಜನೆಗಳು ಮೇಲಿನ ನಕ್ಷೆಯಲ್ಲಿ A,B,C,D ಎಂಬ ಬಿಂದುಗಳು. ಈ ಬಿಂದುಗಳನ್ನೆಲ್ಲ ಸೇರಿಸಿ ಎಳೆದ ರೇಖೆಯೇ ಔದಾಸೀನ್ಯ ರೇಖೆ. ಈ ಔದಾಸೀನ್ಯ ರೇಖೆಯ ಮೇಲೆ ಯಾವ ಬಿಂದುವನ್ನೇ ತೆಗೆದುಕೊಂಡರೂ ಆ ಬಿಂದುವಿನಿಂದ ಸೂಚಿತವಾಗುವ ಪ್ರಮಾಣದಲ್ಲಿ ಅಕ್ಕಿ ಹಾಗೂ ಬಟ್ಟೆಯನ್ನು ಕೊಂಡರೂ ಅವನಿಗೆ ಒಂದು ಎನಿಸುತ್ತದೆ. ಈ ರೇಖೆಯಿಂದ ಸೂಚಿತವಾಗುವ ಸಂಯೋಜನೆಗಳನ್ನು ಅವನ ಮುಂದೆ ಇಟ್ಟರೆ ಅವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ತೀರ್ಮಾನಿಸಲು ಆತ ಅಶಕ್ತ.

ಈ ಔದಾಸೀನ್ಯ ರೇಖೆಯ ಕೆಲವು ಲಕ್ಷಣಗಳನ್ನು ಇಲ್ಲಿ ಗಮನಿಸಬೇಕು. ಇದು ಎಡದಿಂದ ಬಲಕ್ಕೆ ಇಳುಕಲಾಗುತ್ತ ಹೋಗುತ್ತದೆ. ಮೂಲ ಬಿಂದುವಿನ (O) ಕಡೆಗೆ ಉಬ್ಬಿದೆ; ಅಥವಾ ಮೇಲಿಂದ ನೋಡುವುದಾದರೆ ತಗ್ಗಿದೆ. ಈ ರೇಖೆಯ ಇಳಿಜಾರು ಮುಂದೆ ಕಡಿಮೆಯಾಗುತ್ತ ಹೋಗುತ್ತದೆ. ತಳದ ರೇಖೆಗೆ ಸಮಾನಾಂತರವಾಗುವ ಪ್ರವೃತ್ತಿ ತೋರುತ್ತದೆ. ಅನುಭೋಗಿ ತನ್ನ ನಿಯಮಿತ ವರಮಾನದಲ್ಲಿ ಎರಡು ಬದಲಿ ಸರಕುಗಳನ್ನು (ಸಬ್‍ಸ್ಟಿಟ್ಯೂಟ್ಸ್) ಬಳಸುವಾಗ ಒಂದು ವಸುವಿನ ಪ್ರಮಾಣವನ್ನು ಹೆಚ್ಚಿಸುತ್ತ ಹೋದಂತೆಲ್ಲ ಮತ್ತೊಂದು ಸರಕಿನ ಪ್ರಮಾಣವನ್ನು ಕಡಿಮೆ ಮಾಡುತ್ತ ಹೋಗಬೇಕಾಗುತ್ತದೆ. ಒಂದು ಸರಕು ವಿರಳವಾದಂತೆಲ್ಲ ಇನ್ನೊಂದು ಸರಕಿನ ದೃಷ್ಟಿಯಲ್ಲಿ ಮೊದಲನೆಯ ಸರಕಿನ ಪ್ರತಿನಿಧಾನದ ಮೌಲ್ಯ ಹೆಚ್ಚುತ್ತದೆ. ಹೆಚ್ಚು ವಿರಳವಾದ ಸರಕಿನ ಪರಿಸರದ ಉಪಯುಕ್ತತೆ ಹೆಚ್ಚು ಯಥೇಚ್ಛವಾಗಿರುವ ಸರಕಿನ ಪರಿಸರದ ಉಪಯುಕ್ತತೆಯ ದೃಷ್ಟಿಯಲ್ಲಿ ಅಧಿಕವಾಗುತ್ತದೆ. ಮೊದಲನೆಯ ನಕ್ಷೆಯಲ್ಲಿ ಕೊಟ್ಟಿರುವ ರೇಖೆಯ ಮೇಲೆ (A) ಬಿಂದುವಿನಲ್ಲಿ ಸೂಚಿತವಾಗಿರುವ ಸನ್ನಿವೇಶದಲ್ಲಿ ಇನ್ನೊಂದು ಕಿಲೋ ಅಕ್ಕಿ ಪಡೆಯುವುದಕ್ಕಾಗಿ ಆರು ಮೀಟರ್ ಬಟ್ಟೆಯಲ್ಲಿ ಮೂರು ಮೀಟರನ್ನೆ ಬಿಟ್ಟುಕೊಡಲು ಅನುಭೋಗಿ ಸಿದ್ಧನಾಗಿರುತ್ತಾನೆ. ಆದರೆ B ಬಿಂದುವಿಗೆ ಬರುವ ವೇಳೆಗೆ ಇನ್ನೊಂದು ಕಿಲೋ ಅಕ್ಕಿಗಾಗಿ ಒಂದು ಮೀಟರ್ ಬಟ್ಟೆ ಮಾತ್ರ ಬಿಟ್ಟುಕೊಟಲು ಆತ ಸಿದ್ಧ. C ಗೆ ಬರುವ ವೇಳೆಗೆ ಆತ ಮತ್ತೊಂದು ಕಿಲೋ ಅಕ್ಕಿಗಾಗಿ ಕೇವಲ 1/2 ಮೀಟರ್ ಬಟ್ಟೆ ಬಿಡಲು ತಯಾರು. ಬಟ್ಟೆ ಆ ವೇಳೆಗೆ ಅವನಲ್ಲಿ ಬಹಳ ವಿರಳವಾಗಿರುವುದರಿಂದ

ಅವನಿಗೆ ಅದರ ಸಾಪೇಕ್ಷ ಉಪಯುಕ್ತತೆ ಬಹಳ ಹೆಚ್ಚು. ಈ ನಕ್ಷೆಯಲ್ಲಿ A ಗೂ B ಗೂ ನಡುವಿನ ಇಳುಕಲಿನ ಅಳತೆ 3; B ಗೂ Cಗೂ ನಡುವಿನ ಇಳುಕಲು 1 ಮಾತ್ರ; Cಗೂ




ನಕ್ಷೆ 1 ಅನುಭೋಗಿಯ ಔದಾಸೀನ್ಯ ರೇಖೆ

Dಗೂ ನಡುವೆ ಇರುವ ಇಳುಕಲು ಕೇವಲ 1/2. ಅಕ್ಕಿಗೂ ಬಟ್ಟೆಗೂ ನಡುವಣ ಪ್ರತಿನಿಧಾನದ ಗತಿಯನ್ನು ಹೀಗೆ ಅಳೆಯಬಹುದು. ಇದನ್ನೇ ಹೀಗೆ ತೋರಿಸಬಹುದು:

| ಸಂಯೋಜನೆ | | ಬಟ್ಟೆ (ಮೀಟರು) | ಅಕ್ಕಿ (ಕಿಲೋ) | | ಬದಲಿಸುವ (ಪ್ರತಿನಿಧಾನದ) ಪ್ರಮಾಣ (ಬಟ್ಟೆ : ಅಕ್ಕಿ) |
|---|---|---|---|---|---|
| A | ... | 6 | 1 | ... | 3 : 1 |
| B | ... | 3 | 2 | ... | 1 : 1 |
| C | ... | 2 | 3 | ... | 1/2 :1 |
| D | ... | 1 1/2 | 4 | ... | |

ನಕ್ಷೆ 1 ರಲ್ಲಿ ತೋರಿಸಿರುವ ಔದಾಸೀನ್ಯ ರೇಖೆಯಲ್ಲಿ ಒಂದು ಕಿಲೋ ಅಕ್ಕಿ ಮತ್ತು ಆರು ಕಿಲೋ ಬಟ್ಟೆಯ ಸಂಯೋಜನೆಯಿಂದ ಒಬ್ಬ ಅನುಭೋಗಿಗೆ ಲಭ್ಯವಾಗುವ ಉಪಯುಕ್ತತೆಯನ್ನು ಗುರುತಿಸಿ, ಅಷ್ಟೇ ಉಪಯುಕ್ತತೆ ಲಭ್ಯವಾಗುವ ನಾನಾ ಸಂಯೋಜನೆಗಳನ್ನು ಸೂಚಿಸುವ ರೇಖೆಯನ್ನು ರಚಿಸಿದೆ. 1 ಕಿಲೋ ಅಕ್ಕಿ ಮತ್ತು 6 ಮೀಟರ್ ಬಟ್ಟೆಯಿಂದ ಆರಂಭಿಸುವ ಬದಲು 2 ಕಿಲೋ ಅಕ್ಕಿ ಮತ್ತು 7 ಮೀಟರ್ ಬಟ್ಟೆಯಿಂದಾಗಲಿ, 3 ಕಿಲೋ ಅಕ್ಕಿ ಮತ್ತು 7 ಮೀಟರ್ ಬಟ್ಟೆಯಿಂದಾಗಲಿ ಆರಂಭಿಸಬಹುದು. ಈ ಒಂದೊಂದು ಜೋಡಿಯಿಂದಲೂ ಒಂದೊಂದು ಪ್ರಮಾಣದ ಉಪಯುಕ್ತತೆ




ನಕ್ಷೆ 2 ಔದಾಸೀನ್ಯ ರೇಖೆಗಳು

ಅನುಭೋಗಿಗೆ ಲಭ್ಯವಾಗುತ್ತದೆ. ಅಷ್ಟಷ್ಟೇ ಉಪಯುಕ್ತತೆಗಳಿರುವ ನಾನಾ ಸಂಯೋಜನೆಗಳನ್ನು ಗುರುತಿಸಿ ಅವುಗಳನ್ನೂ ನಕ್ಷೆಯ ಮೇಲೆ ತೋರಿಸಬಹುದು. ಆಗ ಈ ಔದಾಸೀನ್ಯ ರೇಖೆಗಳು ಹೀಗೆ ಕಾಣುತ್ತದೆ.

ಈ ರೇಖೆಗಳಲ್ಲಿ $I_3$ ಎಂಬುದು ನಕ್ಷೆ 1ರಲ್ಲಿ ಕೊಟ್ಟಿರುವ ರೇಖೆ. ಈ ರೇಖೆಗಳಲ್ಲಿ ಒಂದೊಂದು ಒಂದೊಂದು ಪ್ರಮಾಣದ ತೃಪ್ತಿಯನ್ನು ನೀಡುವ ಸಂಯೋಜನೆಗಳನ್ನು ಸೂಚಿಸುತ್ತವೆ. ಒಂದು ರೇಖೆಯ ಮೇಲೆ ಎಲ್ಲೇ ಆದರೂ ಒಂದೇ ರೀತಿಯ ತೃಪ್ತಿ ದೊರಕುತ್ತದೆ. ನಕ್ಷೆಯಲ್ಲಿ ಸೂಚಿತವಾಗಿರುವ ಎರಡು ಸರಕುಗಳನ್ನು ಹೆಚ್ಚಿಸಿದಂತೆಲ್ಲ ತೃಪ್ತಿಯ ಮಟ್ಟ ಏರುತ್ತ ಹೋಗುತ್ತದೆ. ನಕ್ಷೆ 2ರಲ್ಲಿ ಇದನ್ನು ಕಾಣಬಹುದು. $I_1$ ಕ್ಕಿಂತ $I_2$ ರ ತೃಪ್ತಿಯ ಮಟ್ಟ ಹೆಚ್ಚು. ಅದಕ್ಕಿಂತ ಹೆಚ್ಚಿನವು $I_3$, $I_4$ ... ಹೀಗೆ. O ಬಿಂದುವಿನಿಂದ ಆರಂಭಿಸಿ ಈಶಾನ್ಯದಿಕ್ಕಿಗೆ ಸಾಗಿದಂತೆಲ್ಲ ಹಲವಾರು ಔದಾಸೀನ್ಯ ರೇಖೆಗಳನ್ನು ದಾಟಿ ಹೋಗಬೇಕಾಗುತ್ತದೆ.

ಒಬ್ಬ ಅನುಭೋಗಿ ತನ್ನ ನಿಯಮಿತ ವರಮಾನದಿಂದ ಈ ಎರಡು ಸರಕುಗಳನ್ನೂ ಯಾವುದೇ ಒಂದು ಪ್ರಮಾಣದಲ್ಲಿ ಕೊಂಡರೆ ಮಾತ್ರವೇ ಅವನಿಗೆ ಪರಮ ತೃಪ್ತಿ ಅಥವಾ ಉಪಯುಕ್ತತೆ ಲಭಿಸುತ್ತದೆ. ಇಂಥ ಸ್ಥಿತಿಯೇ ಸಮತೋಲ ಸ್ಥಿತಿ (ಈಕ್ವಿಲಿಬ್ರಿಯಂ




ನಕ್ಷೆ 3 ಅನುಭೋಗ ಸಾಧ್ಯತೆಯ ರೇಖೆ

ಪೊಸಿಷನ್). ಅವನ ವರಮಾನದಿಂದ ಈ ಎರಡು ಸರಕುಗಳನ್ನು ಎಷ್ಟೆಷ್ಟು ಕೊಳ್ಳುವುದು ಸಾಧ್ಯವೆಂಬುದನ್ನು ಪಟ್ಟಿಮಾಡಿ ಆ ಸಾಧ್ಯತೆಗಳನ್ನೆಲ್ಲ ನಕ್ಷೆಯ ಮೇಲೆ ಗುರುತಿಸಬಹುದು. ಹೀಗೆ ಎಳೆದ (ಸರಳ) ರೇಖೆಯ ಮೇಲೆ ಸಾಗಿದರೆ ಅದು O ಬಿಂದುವಿನಿಂದ ಸಾಧ್ಯವಾದಷ್ಟು ಹೆಚ್ಚು ದೂರದಲ್ಲಿ — ಅತ್ಯಂತ ಹೆಚ್ಚಿನ ತೃಪ್ತಿ ಕೊಡಬಲ್ಲ–ಔದಾಸೀನ್ಯ (ವಕ್ರ) ರೇಖೆಯನ್ನು ಎಲ್ಲಿ ಸೋಕುವುದೋ ಆ ಸ್ಪರ್ಶಬಿಂದುವೇ (ಟ್ಯಾಂಜೆಂಟ್ ಪಾಯಿಂಟ್) ಆ ಬೆಲೆ ಹಾಗೂ ವರಮಾನಗಳ ಮಟ್ಟದಲ್ಲಿ ಸಾಧ್ಯವಿರುವ ಸಮತೋಲ ಸ್ಥಿತಿ.

ನಕ್ಷೆ 1 ಮತ್ತು 2 ರಲ್ಲಿ ತೋರಿಸಿರುವ ಸರಕುಗಳಿಗೆ ಸಂಬಂಧಿಸಿದಂತೆ ಇದನ್ನು ಹೀಗೆ ವಿವರಿಸಬಹುದು: ಒಬ್ಬನಿಗೆ ದಿನಕ್ಕೆ ಆರು ರೂಪಾಯಿ ವರಮಾನವಿದ್ದು, ಅಕ್ಕಿ ಕಿಲೋಗೆ ಒಂದೂವರೆ ರೂಪಾಯಿಯೂ ಬಟ್ಟೆ ಮೀಟರಿಗೆ ಒಂದು ರೂಪಾಯಿಯೂ ಇದ್ದರೆ ಆಗ ಆತ ತನ್ನ ವರಮಾನದಿಂದ ನಾಲ್ಕು ಕಿಲೋ ಅಕ್ಕಿಯನ್ನೇ ಕೊಳ್ಳುವುದು ಸಾಧ್ಯ P; ಅಥವಾ ಆರು ಮೀಟರ್ ಬಟ್ಟೆಯನ್ನೆ ಕೊಳ್ಳಬಹುದು. Q ಈ ಎರಡು ಪರಮಾವಧಿಗಳ ನಡುವೆ, ತನ್ನಲ್ಲಿರುವ ಹಣದ ಒಂದು ಭಾಗದಿಂದ ಅಕ್ಕಿಯನ್ನೂ ಉಳಿದ ಭಾಗದಿಂದ ಬಟ್ಟೆಯನ್ನೂ ನಾನಾ ಪ್ರಮಾಣಗಳಲ್ಲಿ ಕೊಳ್ಳಬಹುದು. P ಮತ್ತು Q ಬಿಂದುಗಳನ್ನು ಸೇರಿಸಿ ಎಳೆದ ರೇಖೆಯೇ ಬೆಲೆ ವರಮಾನ ರೇಖೆ (ಪ್ರೈಸ್–ಇನ್‌ಕಂ ಲೈನ್) ಅಥವಾ ಅನುಭೋಗ ಸಾಧ್ಯತೆಯ ರೇಖೆ (ಕನ್ಸಂಪ್ಷನ್ ಪಾಸಿಬಿಲಿಟಿ ಲೈನ್). ಇದೇ ಅವನ ಬಜೆಟ್ ರೇಖೆ.

ನಕ್ಷೆ 4ರಲ್ಲಿ PO ರೇಖೆ $I_1$ ಮತ್ತು $I_2$ ಔದಾಸೀನ್ಯ ರೇಖೆಗಳನ್ನು ಹಾದು ಹೋಗುತ್ತದೆ. $I_3$ ರೇಖೆಯನ್ನು ಇ ಎಂಬಲ್ಲಿ ಸ್ಪರ್ಶಿಸುತ್ತದೆ. ಈ ಮೂರು ರೇಖೆಗಳಲ್ಲಿ ಅತ್ಯಂತ ಬಲಗಡೆಗೆ ಅತ್ಯಂತ ಎತ್ತರದ ಔದಾಸೀನ್ಯ ರೇಖೆ ಯಾವುದೋ ಆ ರೇಖೆಯನ್ನು $I_3$ ಸ್ಪರ್ಶಿಸುವ ಅನುಭೋಗಿಗೆ ಆತನ ವರಮಾನದಿಂದ (ಆ ಬೆಳೆಗಳಲ್ಲಿ) ಪರಮಾವಧಿ ತೃಪ್ತಿ ಸಾಧ್ಯ. ಈ ಬಿಂದುವೇ ಅನುಭೋಗಿಯ ಸಮತೋಲ ಸ್ಥಿತಿಯನ್ನು ತೋರಿಸುತ್ತದೆ.

ಅನುಭೋಗಿಯ ಸಮತೋಲ ಸ್ಥಿತಿ ಯಾವಾಗಲೂ ಸ್ಥಿರವಾಗಿರುವುದಿಲ್ಲ. ಕೆಳಗಿನ ಸಂದರ್ಭಗಳಲ್ಲಿ ಅವನ ಸಮತೋಲ ಸ್ಥಿತಿಯಲ್ಲಿ ವ್ಯತ್ಯಾಸವಾಗುವುದುಂಟು:




ನಕ್ಷೆ 4 ಅನುಭೋಗಿಯ ಪ್ರಶಸ್ತ ಸಮತೋಲ ಸ್ಥಿತಿ

1. ಅನುಭೋಗಿಯ ವರಮಾನ ಸ್ಥಿರವಿದ್ದು ಆತ ಬಳಸುವ ಸರಕುಗಳ ಬೆಲೆಗಳಲ್ಲಿ ವ್ಯತ್ಯಾಸವಾದಾಗ: (a) ಬೆಲೆಹೆಚ್ಚಿದಾಗ ಕೆಳಮಟ್ಟದ ಔದಾಸೀನ್ಯರೇಖೆಯ ಮೇಲೆ ಸಮತೋಲ ಸ್ಥಿತಿ ಏರ್ಪಡುತ್ತದೆ (b) ಬೆಲೆ ಇಳಿದಾಗ ಮೇಲ್ಮಟ್ಟದ ಔದಾಸೀನ್ಯ ರೇಖೆಯ ಮೇಲೆ ಸಮತೋಲ ಸ್ಥಿತಿ ಏರ್ಪಡುತ್ತದೆ.

2. ಸರಕುಗಳ ಬೆಲೆಗಳು ಸ್ಥಿರವಿದ್ದು ಅನುಭೋಗಿಯ ವರಮಾನದಲ್ಲಿ ವ್ಯತ್ಯಾಸವಾದಾಗ (a) ವರಮಾನ ಹೆಚ್ಚಿದಾಗ ಮೇಲ್ಮಟ್ಟದ ಔದಾಸೀನ್ಯ ರೇಖೆಯ ಮೇಲೆ ಸಮತೋಲ, (b) ವರಮಾನ ತಗ್ಗಿದಾಗ ಕೆಳಮಟ್ಟದ ಔದಾಸೀನ್ಯ ರೇಖೆಯ ಮೇಲೆ ಸಮತೋಲ.

ಹೀಗೆ ಸರಕುಗಳ ಬೇರೆ ಬೇರೆ ಬೆಲೆಗಳ ಮಟ್ಟದಲ್ಲಿ ಅನುಭೋಗಿ ಪಡೆಯುವ ಬೇರೆ ಬೇರೆ ಸಮತೋಲ ಸ್ಥಿತಿಗಳ ಮೇಲಿಂದ (ಎಂದರೆ ಅವನು ಕೊಳ್ಳುವ ಸರಕುಗಳ ಪ್ರಮಾಣಗಳಿಂದ) ಅವನ ಬೇಡಿಕೆಯ ರೇಖೆಯನ್ನು ಕಂಡುಹಿಡಿಯುವುದು ಸಾಧ್ಯ **(ನೋಡಿ– ಬೇಡಿಕೆ)**.

ವ್ಯಕ್ತಿಯ ಬೇಡಿಕೆಯ ಸಿದ್ಧಾಂತವನ್ನು ವಿವರಿಸಲು ಈ ಔದಾಸೀನ್ಯ ರೇಖೆಯ ವಾದಸರಣಿಯನ್ನು ಮಂಡಿಸಿದಾತ ಜೆ.ಆರ್.ಡಿ. ಆಲೆನ್ ಎಂಬ ಆಧುನಿಕ ಅರ್ಥಶಾಸ್ತ್ರಜ್ಞ. ಇವನ ಈ ವಿಶ್ಲೇಷಣೆ ಆಲ್ಫ್ರೆಡ್ ಮಾರ್ಷಲ್ ಮಂಡಿಸಿದ ಎಲ್ಲರಿಗೂ ಒಂದೇ ಸಮನಾಗಿರುವುದಿಲ್ಲ. ಪ್ರತಿಯೊಬ್ಬರೂ ಒಂದಕ್ಕಿಂತ ಹೆಚ್ಚು ಸರಕುಗಳನ್ನು ಬಳಸುತ್ತಾರೆ. ಆತ ಅನುಭೋಗಿಸುವ ಸರಕುಗಳನ್ನು ಯಾವ ಪ್ರಮಾಣದಲ್ಲಿ ಸಂಯೋಜಿಸಿದರೆ ಅದರಿಂದ ಎಷ್ಟು ತೃಪ್ತಿ ಲಭಿಸಬಹುದೆಂಬುದನ್ನು ಹೋಲಿಕೆಯ ವಿಧಾನದಿಂದ ತಿಳಿಯಬಹುದಲ್ಲದೆ ಆ ತೃಪ್ತಿಯನ್ನೇ ನಿರ್ದಿಷ್ಟವಾಗಿ ಅಳೆಯುವುದು ಸಾಧ್ಯವಿಲ್ಲವೆಂಬ ವಾದದ ಮೇಲೆ ಈ ವಿಶ್ಲೇಷಣೆಯ ವಿಧಾನವನ್ನು ಅಳವಡಿಸಲಾಗಿದೆ. (ಕೆ.ಆರ್.ಎಂ.)

**ಔದ್ಯೋಗಿಕ ಮಾರ್ಗದರ್ಶನ:** ಬೇರೆ ಬೇರೆ ವೃತ್ತಿಗಳಲ್ಲಿ ಇರುವ ಉದ್ಯೋಗಾವಕಾಶ, ಆಯಾ ವೃತ್ತಿಗೆ ಅಗತ್ಯವಾಗುವ ಸಾಮರ್ಥ್ಯ, ಕೌಶಲ್ಯ, ಮೊದಲಾದ ಅರ್ಹತೆ, ಅದಕ್ಕಾಗಿ ಸಮಾಜ ಅಥವಾ ರಾಷ್ಟ್ರ ವ್ಯವಸ್ಥೆಗೊಳಿಸಿರುವ ತರಬೇತಿ ಕಾರ್ಯಕ್ರಮ ಇತ್ಯಾದಿ ವಿವರಗಳನ್ನು ನೀಡಿ, ವ್ಯಕ್ತಿ ಉದ್ಯೋಗ ದೊರಕಿಸಿಕೊಳ್ಳಲು ನೆರವಾಗಿ, ಅನಂತರ ಆ ಕೆಲಸದಲ್ಲಿ ಹೊಂದಿಕೊಳ್ಳಲು ನೀಡುವ ಸಲಹಾ ಸಹಾಯ (ವೊಕೇಷನಲ್ ಗೈಡೆನ್ಸ್). ಇದು ಶೈಕ್ಷಣಿಕ ಮಾರ್ಗದರ್ಶನದ ಒಂದು ವಿಶಿಷ್ಟ ಮುಖವಾಗಿದ್ದು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ವ್ಯವಸ್ಥೆಗೊಳಿಸಬಹುದಾದ ಕಾರ್ಯಕ್ರಮವಾಗಿದೆ. ತಂದೆತಾಯಿಗಳು, ನೆಂಟರಿಷ್ಟರು, ಸ್ನೇಹಿತರು, ಸಮಾಜ, ರಾಷ್ಟ್ರ–ಇವೆಲ್ಲ ಮೂಲಗಳಿಂದಲೂ ಮಾರ್ಗದರ್ಶನ ದೊರಕಬಹುದಾದರೂ ಶಾಲಾಕಾಲೇಜುಗಳು ಇದನ್ನೊಂದು ನಿರ್ದಿಷ್ಟವೂ ವ್ಯವಸ್ಥಿತ ರೀತಿಯದೂ ಆದ ಸೇವಾಸೌಲಭ್ಯವನ್ನಾಗಿ ಏರ್ಪಡಿಸಿಕೊಂಡಿವೆ. ವಿದ್ಯಾರ್ಥಿಗಳು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪರಿಪೂರ್ಣವಾಗಿ ಬೆಳೆಸಿಕೊಂಡು ತಮ್ಮ ಅಗತ್ಯವನ್ನೂ ಆಶೋತ್ತರಗಳನ್ನೂ ಪೂರೈಸಿಕೊಳ್ಳುವಂತೆ ನೆರವಾಗುವುದೇ ಇದರ ಉದ್ದೇಶ. ವ್ಯಕ್ತಿಯ ಅಭಿರುಚಿ ಆಸಕ್ತಿಗಳನ್ನು ನಿರ್ಧರಿಸಿ, ಅವುಗಳ ಆಧಾರದ ಮೇಲೆ, ವ್ಯಕ್ತಿ ತನಗೆ ಯುಕ್ತನಾದ ಉದ್ಯೋಗವೊಂದನ್ನು ಆರಿಸಿಕೊಳ್ಳಲು ನೆರವಾಗುವ ಈ ಸೇವಾಕಾರ್ಯದಲ್ಲಿ ಶಾಸ್ತ್ರೀಯ ವಿಧಾನವನ್ನು ಅನುಸರಿಸಲಾಗುವುದು. ಈ ಕಾರ್ಯದಲ್ಲಿ ಸಂಚಿತಾಭಿವೃದ್ಧಿ ದಾಖಲೆ, ಪ್ರಶ್ನಾವಳಿ, ಆಸಕ್ತಿಸೂಚಿ, ವೈಯಕ್ತಿಕ ಅಥವಾ ಸಾಮೂಹಿಕ ಭೇಟಿ. ಮನೋಭಾವ ಮಾಪಕ, ಪ್ರಮಾಣೀಕರಿಸಿದ ಶಿಕ್ಷಣಾಭಿವೃದ್ಧಿ ಪರೀಕ್ಷಣಗಳು. ಸಾಮರ್ಥ್ಯ ಪರೀಕ್ಷಣ, ಕೌಶಲ್ಯ ಪರೀಕ್ಷಣ–ಇತ್ಯಾದಿ ಉಪಕರಣಗಳನ್ನು ಬಳಸಲಾಗುವುದು. ಆ ಮೂಲಕ ಸಂಗ್ರಹಿಸುವ ಆಧಾರಾಂಶವನ್ನು ಬಳಸಿಕೊಂಡು ಯುಕ್ತ ರೀತಿಯ ಮಾರ್ಗದರ್ಶನ ನೀಡಲಾಗುವುದು. ಹಾಗೆ ನೀಡುವ ಸಲಹೆ ಎಷ್ಟರಮಟ್ಟಿಗೆ ಫಲಕಾರಿಯಾಗಿದೆ, ಎಷ್ಟರಮಟ್ಟಿಗೆ ವ್ಯಕ್ತಿ ತನ್ನ ಉದ್ಯೋಗದಲ್ಲಿ ಯಶಸ್ಸನ್ನು ಸಾಧಿಸುವಂತೆ ಮಾಡಿದೆ ಎಂಬುದನ್ನು ಅರಿತುಕೊಳ್ಳಲು ಅನಂತರವೂ ಅನುವರ್ತಿ (ಫಾಲೋ ಅಪ್) ಪರೀಕ್ಷೆಯನ್ನು ನಡೆಸಲಾಗುವುದು.

**ಇತಿಹಾಸ:** ತಂದೆತಾಯಿಗಳೂ ಬಂಧುಬಳಗದವರೂ ವ್ಯಕ್ತಿಗೆ ತಾನು ಅನುಸರಿಸಬೇಕಾದ ಉದ್ಯೋಗದ ಬಗ್ಗೆ ಮಾರ್ಗದರ್ಶನ ನೀಡುವುದು ಪ್ರಾಚೀನಕಾಲದಿಂದ ನಡೆದು ಬಂದಿದ್ದರೂ ಅದಕ್ಕೊಂದು ಶಾಸ್ತ್ರೀಯ ವಿಧಾನ ಆರಂಭವಾಗಿ ತಾಂತ್ರಿಕ ಚೌಕಟ್ಟು, ದೊರತದ್ದು ಈ ಶತಮಾನದ ಆರಂಭದಿಂದ ಮಾತ್ರ. ಒಂದನೆಯ ಮಹಾಯುದ್ಧಕಾಲದಲ್ಲಿ, ವ್ಯಕ್ತಿಗೆ ಅವನ ಶಕ್ತಿಸಾಮರ್ಥ್ಯಗಳಿಗೊಪ್ಪುವಂಥ ಕಾರ್ಯವನ್ನು ವಹಿಸುವುದು ವ್ಯಕ್ತಿಯ ಮತ್ತು ಸಮಾಜದ ಹಿತದೃಷ್ಟಿಗಳೆರಡರಲ್ಲೂ ಎಷ್ಟು ಮುಖ್ಯವೆಂಬುದು ವ್ಯಕ್ತಪಟ್ಟಿತು. ಮನೋವೈಜ್ಞಾನಿಕ ಪರೀಕ್ಷಣಗಳ ಫಲಿತಾಂಶಗಳ ಆಧಾರದ ಮೇಲೆ ಅಮೆರಿಕದ ಸೈನಿಕರಿಗೆ ಯುದ್ಧಕ್ಷೇತ್ರದಲ್ಲಿ ಅವರವರಿಗೊಪ್ಪುವ ಕಾರ್ಯವನ್ನು ವಹಿಸಿ ಅದು ಫಲಕಾರಿಯಾದುದೇ ಆಧುನಿಕ ಔದ್ಯೋಗಿಕ ಮಾರ್ಗದರ್ಶನದ ಇತಿಹಾಸ ಆರಂಭವಾಯಿತೆನ್ನಬಹುದು. 1920ರ ವೇಳೆಗೆ ಪ್ರತಿ ವ್ಯಕ್ತಿಯೂ ನಿರ್ದಿಷ್ಟ ವೃತ್ತಿಯೊಂದನ್ನನುಸರಿಸುವುದು ಸಾಧ್ಯವೆಂಬ ಭಾವನೆ ಬೆಳೆದು, ಮೊದಮೊದಲು ವ್ಯಕ್ತಿಯ ಬುದ್ಧಿಶಕ್ತಿ ಮತ್ತು ಕೌಶಲ್ಯಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಮಾರ್ಗದರ್ಶನ ನೀಡುವ ಕಾರ್ಯ ಆರಂಭವಾಯಿತು. ಆಗ ನೀಡಿದ ಸಲಹೆಗಳು ಅನೇಕ ವೇಳೆ ವಿಫಲವಾಗುತ್ತಿದ್ದು ಕಂಡ ಮನೋವಿಜ್ಞಾನಿಗಳು ಆ ಕಾರ್ಯದಲ್ಲಿ ಇತರ ಅಂಶಗಳ ಪರಿಗಣನೆಯೂ ಅಗತ್ಯವೆಂಬುದನ್ನು ಕಂಡುಕೊಂಡರು. ಬುದ್ಧಿಶಕ್ತಿ ಕೌಶಲ್ಯಗಳಂತೆ ವ್ಯಕ್ತಿಯ ಪ್ರೇರಣೆ, ಚಿತ್ತಪ್ರವೃತ್ತಿ, ಇತ್ಯಾದಿ ಅಂಶಗಳೂ ವ್ಯಕ್ತಿಯ ಕಾರ್ಯನಿರ್ವಹಣಾ ಸಾಮರ್ಥ್ಯಕ್ಕೆ ಕಾರಣವೆಂಬುದನ್ನು ಸಂಶೋಧನೆಗಳು ಸೂಚಿಸಿದುವು. ಜೊತೆಗೆ, ವೃತ್ತಿಗಳ ಸ್ವರೂಪದಲ್ಲಿ ತೀವ್ರವೇಗದ ಬದಲಾವಣೆಗಳಾಗುತ್ತಿರುವ ಈ ಕಾಲದಲ್ಲಿ ವ್ಯಕ್ತಿಗೆ ಸಂಕುಚಿತ ಕ್ಷೇತ್ರದ ಒಂದು ನಿರ್ದಿಷ್ಟ ವೃತ್ತಿಯನ್ನನುಸರಿಸುವಂತೆ ಸಲಹೆ ನೀಡುವುದು ಸೂಕ್ತವಾಗದೆಂಬ ಅಂಶವೂ ವ್ಯಕ್ತಪಟ್ಟಿತು; ಅಲ್ಲದೆ, ತೀರ ಚಿಕ್ಕ ವಯಸ್ಸಿನಲ್ಲೇ ನಿರ್ದಿಷ್ಟ ವೃತ್ತಿಯೊಂದಕ್ಕೆ ವ್ಯಕ್ತಿಯನ್ನು ಕಟ್ಟಿಹಾಕುವುದು ಅಪಾಯಕಾರಿಯೆಂಬ ಅಂಶವೂ ಗಮನಕ್ಕೆ ಬಂತು. ಇವೆಲ್ಲದರ ಫಲವಾಗಿ ಪ್ರತ್ಯೇಕವಾಗಿ ಪರಿಗಣಿಸಲಾಗುತ್ತಿದ್ದ ಔದ್ಯೋಗಿಕ ಮಾರ್ಗದರ್ಶನವನ್ನು ಶೈಕ್ಷಣಿಕ ಮಾರ್ಗದರ್ಶನದ ಒಂದು ಅಂಗವಾಗಿ ಪರಿಗಣಿಸಿ, ವ್ಯಕ್ತಿಯ ಸಂಪ್ರದಾಯ ಆರಂಭವಾಯಿತು. 1920ರ ಅನಂತರ ಈ ಕಾರ್ಯಕ್ಕಾಗಿ ವಿವಿಧ ಉಪಕರಣಗಳನ್ನು ರೂಢಿಸುವ ಯತ್ನ ನಡೆಯಿತು. ಈ ಕಾರ್ಯ ಮುಖ್ಯವಾಗಿ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಆರಂಭವಾಯಿತು. ರಾಷ್ಟ್ರದ ರಕ್ಷಣೆಯ ದೃಷ್ಟಿಯಿಂದಲ್ಲದೆ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ನೆಮ್ಮದಿಯ ದೃಷ್ಟಿಯಿಂದಲೂ ಔದ್ಯೋಗಿಕ ಮಾರ್ಗದರ್ಶನ ಬಹುಮುಖ್ಯ ಕಾರ್ಯಕ್ರಮವೆಂದು ಪರಿಗಣಿಸಿ ಆ ಕಾರ್ಯಕ್ಕಾಗಿ ಅಗತ್ಯವಾದ ಧನಸಹಾಯವನ್ನು ಸರ್ಕಾರ ಒದಗಿಸಿತು. ಶೈಕ್ಷಣಿಕ ಮಾರ್ಗದರ್ಶನ ಪ್ರೌಢಶಾಲೆಗಳಲ್ಲೂ ಕಾಲೇಜುಗಳಲ್ಲೂ ಬಹುಬೇಗ ಜನಪ್ರಿಯವಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲೂ ಅನಂತರವೂ ಈ ಸೌಲಭ್ಯವನ್ನು ಸೈನಿಕರಿಗೆ ಕೆಲಸಗಳನ್ನು ಹಂಚುವಾಗ ಬಳಸಿಕೊಂಡು ಪ್ರಚಾರಕ್ಕೆ ತರಲಾಯಿತು. 1960ರ ವೇಳೆಗೆ ನಗರಗಳ ಪ್ರತಿ ಪ್ರೌಢಶಾಲೆಗೂ ಒಬ್ಬೊಬ್ಬ ಮಾರ್ಗದರ್ಶನ ತಜ್ಞರನ್ನು ನೇಮಿಸಿಕೊಳ್ಳಲಾಯಿತು. ಈಚೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಅವರಿಗೆ ಉದ್ಯೋಗವೊದಗಿಸುವ ಕಾರ್ಯವನ್ನೂ ಈ ಸೇವಾಸೌಲಭ್ಯದ ಅಂಗವಾಗಿ ಕೈಗೊಳ್ಳಲಾಗುತ್ತದೆ. ಅಲ್ಲಿ ಅಂದಿಗಾಗಲೆ ಅಸ್ತಿತ್ವಕ್ಕೆ ಬಂದಿದ್ದ ಉದ್ಯೋಗ ವಿನಿಮಯ ಕಚೇರಿ, ತರಬೇತಿ, ಮರುತರಬೇತಿ ಮತ್ತು ಸಲಹಾ ಕಚೇರಿಗಳು, ಪುನರ್ವಸತೀಕರಣ ಸಂಸ್ಥೆ. ಔದ್ಯೋಗಿಕ ಸಿಬ್ಬಂದಿಯ ಕಚೇರಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳೂ ಯುವಜನರಿಗೆ ತಕ್ಕಮಟ್ಟಿಗೆ ಔದ್ಯೋಗಿಕ ಮಾರ್ಗದರ್ಶನವನ್ನು ಈಗ ನೀಡುತ್ತಿವೆ; ಸ್ವಲ್ಪಮಟ್ಟಿಗೆ ವೈಯಕ್ತಿಕ ಸಮಸ್ಯೆಗಳ ಬಗ್ಗೆಯೂ ಅವು ಮಾರ್ಗದರ್ಶನ ನೀಡುತ್ತವೆ. ಏಕೆಂದರೆ, ಔದ್ಯೋಗಿಕ ಜೀವನದ ಯಶಸ್ಸು ಮತ್ತು ನೆಮ್ಮದಿಗಳಿಗೂ ವೈಯಕ್ತಿಕ ಅಂಶಗಳಿಗೂ ನಿಕಟಸಂಬಂಧವಿದೆ.

ಮೊದಮೊದಲು ಮಾರ್ಗದರ್ಶನ ಪ್ರೌಢಶಾಲೆಯನ್ನು ಮಧ್ಯೆ ಬಿಡುವವರಿಗೆ ಮಾತ್ರ ನೀಡಲಾಗಿತ್ತು. ಆಗ ಅವರನ್ನು ಸುಮ್ಮನೆ ಭೇಟಿ ಮಾಡಿ, ವೃತ್ತಿಯೊಂದರ ಅನುಸರಣೆಗೆ ಸ್ಥೂಲವಾಗಿ ಸಲಹೆ ನೀಡಲಾಗುತ್ತಿತ್ತು. 1930ರ ಅನಂತರ ಅದಕ್ಕಾಗಿ ಶಾಸ್ತ್ರೀಯ ರೀತಿಯ ಉಪಕರಣಗಳನ್ನು ಬಳಸಿಕೊಂಡು, ವ್ಯಕ್ತಿಯ ಯೋಗ್ಯತೆಗಳನ್ನು ನಿರ್ಧರಿಸಿ, ಅವನ್ನು ಉದ್ಯೋಗಗಳ ಆವಶ್ಯಕತೆಗಳೊಡನೆ ಸರಿಹೊಂದಿಸಿಕೊಂಡು ಸಲಹೆ ನೀಡಲಾಗುತ್ತಿದೆ. ಜೊತೆಗೆ, ಈಚೆಗೆ ಉನ್ನತ ಶಿಕ್ಷಣ ಸಂಸ್ಥೆಗಳಿಗೂ ಅದನ್ನು ವಿಸ್ತರಿಸಿದೆ.

ಇಂಗ್ಲೆಂಡಿನಲ್ಲಿ ಹಾಗೂ ಯುರೋಪಿನ ಕೆಲವು ರಾಷ್ಟ್ರಗಳಲ್ಲಿ ಔದ್ಯೋಗಿಕ ಮಾರ್ಗದರ್ಶನ ಅಷ್ಟು ತಾಂತ್ರಿಕ ಸ್ವರೂಪವನ್ನು ತಾಳದಿದ್ದರೂ ಕಾರ್ಯರೂಪದಲ್ಲಿ ಫಲಕಾರಿಯಾಗುವಂತೆ ವ್ಯವಸ್ಥೆಗೊಂಡಿದೆ. ಪ್ರೌಢಶಾಲೆಗಳಲ್ಲೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲೂ ಮುಖ್ಯೋಪಾಧ್ಯಾಯರೂ ಉದ್ಯೋಗಗಳ ಪ್ರತಿನಿಧಿಗಳೂ ವಿದ್ಯಾರ್ಥಿಗಳನ್ನು ಭೇಟಿಮಾಡಿ ಆಯಾ ಉದ್ಯೋಗಕ್ಕೆ ಸೂಕ್ತರಾದವರನ್ನು ಆರಿಸಿಕೊಳ್ಳುವ ಸಂಪ್ರದಾಯ ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ. ಈ ಭೇಟಿಯಲ್ಲಿ ಪೋಷಕರೂ ಹಾಜರಿರುವುದುಂಟು. ಈಚೆಗೆ ಮನೋವೈಜ್ಞಾನಿಕ ಉಪಕರಣಗಳನ್ನೂ ಆ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ವ್ಯಕ್ತಿಗಳಿಗೆ ಉದ್ಯೋಗಗಳನ್ನು ದೊರಕಿಸಿಕೊಡಲು ವ್ಯವಸ್ಥೆಗೊಂಡಿರುವ ಸಾರ್ವಜನಿಕ ಮತ್ತು ದೃಷ್ಟಿಯ ಉದ್ಯೋಗ ವಿನಿಮಯ ಸಂಸ್ಥೆಗಳೂ ಈ ಕಾರ್ಯವನ್ನೂ ತಕ್ಕಮಟ್ಟಿಗೆ ನಿರ್ವಹಿಸುತ್ತಿವೆ.

**ಮಾರ್ಗದರ್ಶನ ಒಂದು ತಾಂತ್ರಿಕ ಕಾರ್ಯ:** ಔದ್ಯೋಗಿಕ ಮಾರ್ಗದರ್ಶನವನ್ನು ಶೈಕ್ಷಣಿಕ ಮಾರ್ಗದರ್ಶನದ ಅಂಗವಾಗಿಯೇ ನೀಡಲಿ, ಪ್ರತ್ಯೇಕವಾಗಿಯೇ ನೀಡಲಿ, ಅದನ್ನು ನೀಡತಕ್ಕವರು ಅಗತ್ಯವಾದ ತರಬೇತನ್ನೂ ನೈಪುಣ್ಯವನ್ನೂ ಹೊಂದಿರಬೇಕು. ಈಗಾಗಲೆ ಆ ಕಾರ್ಯದಲ್ಲಿ ಬಳಸಲು ರೂಪುಗೊಂಡಿರುವ ಶಾಸ್ತ್ರೀಯ ಉಪಕರಣಗಳ ಬಳಕೆ, ಅವು ದೊರಕಿಸುವ ವ್ಯಕ್ತಿಗೆ ಸಂಬಂಧಿಸಿದ ಆಧಾರಾಂಶಗಳ ವಿಶ್ಲೇಷಣೆ. ವಿವಿಧ ವೃತ್ತಿಗಳಿಗೆ ಅಗತ್ಯವಾಗುವ ಅರ್ಹತೆಗಳ ಪರಿಚಯ ಇವೆಲ್ಲ ಅಂಶಗಳ ಬೆಳಕಿನಲ್ಲಿ ವ್ಯಕ್ತಿಗೆ ಸಲಹೆ ನೀಡುವ ಕೌಶಲ್ಯ ಈ ಎಲ್ಲದರಲ್ಲೂ ಮಾರ್ಗದರ್ಶಕರು ಪಳಗಿರಬೇಕು; ಮನೋವಿಜ್ಞಾನದ ಪರಿಚಯ, ಆಧುನಿಕ ಸಮಾಜ ಜೀವನದಲ್ಲಿ ಉದ್ಯೋಗಾವಕಾಶ ದಲ್ಲಾಗುತ್ತಿರುವ ಬದಲಾವಣೆಗಳು. ವೃತ್ತಿ ವಿಶ್ಲೇಷಣದಿಂದ ಬೇರೆ ಬೇರೆ ವೃತ್ತಿಗಳಿಗೆ ಅಗತ್ಯವೆಂದು ನಿರ್ಧರಿಸಲಾಗಿರುವ ಕೌಶಲ್ಯಾದಿ ಅರ್ಹತೆಗಳು ಇತ್ಯಾದಿ ವಿವರಗಳನ್ನೂ ಅರಿತಿರಬೇಕು. ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕಾದರೆ ಈ ಎಲ್ಲ ಪೂರ್ವಸಿದ್ಧತೆಯೂ ಅಗತ್ಯ. ಮಾರ್ಗದರ್ಶನ ಇಷ್ಟು ಸಂಕೀರ್ಣವೂ ತಾಂತ್ರಿಕವೂ ಆದ ಕ್ರಿಯೆಯಾದ್ದರಿಂದ ಈಚೆಗೆ ಅನೇಕ ದೇಶಗಳಲ್ಲಿ ಅಧ್ಯಾಪಕರ ವೃತ್ತಿಶಿಕ್ಷಣ ಸಂಸ್ಥೆಗಳು ಅದನ್ನೊಂದು ಅಧ್ಯಯನ ವಿಷಯವನ್ನಾಗಿ ಗೊತ್ತುಮಾಡಿಕೊಂಡಿವೆ.

**ಭಾರತದಲ್ಲಿ ಔದ್ಯೋಗಿಕ ಮಾರ್ಗದರ್ಶನ:** ಭಾರತದಲ್ಲಿ ಎರಡನೆಯ ಮಹಾಯುದ್ಧದ ಅನಂತರ ನಿಧಾನವಾಗಿ ಪ್ರಚಾರಕ್ಕೆ ಬಂದ ಔದ್ಯೋಗಿಕ ಮಾರ್ಗದರ್ಶನ ಕೆಲವು ರಾಜ್ಯಗಳ ಪ್ರೌಢಶಾಲೆಗಳಲ್ಲಿ ಆಚರಣೆಗೆ ಬರಲಾರಂಭಿಸಿತು. 1953ರಲ್ಲಿ ಮೊದಲಿಯಾರ್ ಶಿಕ್ಷಣ ಆಯೋಗ ಆ ಬಗ್ಗೆ ನಿರ್ದಿಷ್ಟ ಸಲಹೆಯನ್ನು ಮಂಡಿಸಿತು. ಆ ಸಲಹೆಯನ್ನನುಸರಿಸಿ 1954ರಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯ ದೆಹಲಿಯಲ್ಲಿ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನದ ಕಾರ್ಯಾಲಯವನ್ನು ಆರಂಭಿಸಿತು; ಪ್ರತಿ ರಾಜ್ಯದಲ್ಲೂ ಒಂದೊಂದು ಮಾರ್ಗದರ್ಶನದ ಕಾರ್ಯಾಲಯಗಳು ಆರಂಭಿಸಲು ನೆರವು ನೀಡಿತು. ಈಗಾಗಲೆ ಅಂಥ ಕಾರ್ಯಾಲಯಗಳು ಅನೇಕ ರಾಜ್ಯಗಳಲ್ಲಿ ಆರಂಭವಾಗಿವೆ. ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಆರಂಭವಾಗಿರುವ ಈ ಸಂಸ್ಥೆಗಳು ಸುಶಿಕ್ಷಿತ ಮಾರ್ಗದರ್ಶಕರ ಮತ್ತು ವೃತ್ತಿತಜ್ಞರ ಸಹಾಯದಿಂದ ಪ್ರೌಢಶಾಲೆಗಳ ಬಾಲಕಬಾಲಕಿಯರಿಗೆ ವೃತ್ತಿಶಿಕ್ಷಣದಲ್ಲಿ ಮಾರ್ಗದರ್ಶನ ನೀಡುವ ಕಾರ್ಯವನ್ನು ತಕ್ಕಮಟ್ಟಿಗೆ ನಿರ್ವಹಿಸುತ್ತಿವೆ. ಈಗಾಗಲೆ ಸುಮಾರು ಸಾವಿರಾರು ಪ್ರೌಢಶಾಲೆಗಳಲ್ಲಿ ಈ ಕಾರ್ಯ ಆರಂಭವಾಗಿದೆ. ಆದರೆ ಸದ್ಯಕ್ಕೆ ಅಲ್ಲಿ ಅವರಿಗೆ ವೃತ್ತಗಳಿಗೆ ಸಂಬಂಧಿಸಿದ ವಿವರಗಳನ್ನು ಮಾತ್ರ ಒದಗಿಸುತ್ತಿರುವರು. ಎಲ್ಲೋ ಕೆಲವು ಪ್ರೌಢಶಾಲೆಗಳಲ್ಲಿ ಮಾತ್ರ ಪೂರ್ಣಕಾಲದ ತರಬೇತು ಪಡೆದ ಮಾರ್ಗದರ್ಶಕರಿರುತ್ತಾರೆ. ಅಂಥ ಶಾಲೆಗಳಲ್ಲಿ ಮಾತ್ರ ಶಾಸ್ತ್ರೀಯ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸಿ, ವಿದ್ಯಾರ್ಥಿಗಳಿಗೆ ಸೂಕ್ತ ರೀತಿಯಲ್ಲಿ ಅವರವರು ಕೈಗೊಳ್ಳಬಹುದಾದ ವೃತ್ತಿಶಿಕ್ಷಣದ ಮತ್ತು ಉದ್ಯೋಗಗಳ ಬಗ್ಗೆ ಸಲಹೆ ನೀಡಲಾಗುತ್ತಿದೆ.

ಸು. 15 ವರ್ಷಗಳ ಹಿಂದೆ ಔದ್ಯೋಗಿಕ ಮಾರ್ಗದರ್ಶನದ ಬಗ್ಗೆ ನಿರ್ದಿಷ್ಟ ಯತ್ನ ಆರಂಭವಾಗಿದ್ದರೂ ಅದು ಅಷ್ಟು ಹುರುಪಿನಿಂದಾಗಲಿ ವ್ಯಾಪಕವಾಗಿಯಾಗಲಿ ನಡೆಯುತ್ತಿಲ್ಲ. ಇನ್ನೂ ಸು. 20,000 ಪ್ರೌಢಶಾಲೆಗಳಿಗೆ ಆ ಸೌಲಭ್ಯವನ್ನು ದೊರಕಿಸಬೇಕಾಗಿದೆ. ಜೊತೆಗೆ, ಶಾಲೆಯ ಸಾಮಾನ್ಯ ಅಧ್ಯಾಪಕರು ಅಷ್ಟಿಷ್ಟು ತರಬೇತು ಪಡೆದು ಹಾಗೂ ಹೀಗೂ ಆ ಕಾರ್ಯವನ್ನು ಅನೇಕ ಶಾಲೆಗಳಲ್ಲಿ ನಡೆಸುತ್ತಿದ್ದಾರೆ. ಅಲ್ಲದೆ, ಆ ಕಾರ್ಯಕ್ಕೆ ಅಗತ್ಯವಾಗುವ ವಿವಿಧ ಪರೀಕ್ಷೋಪಕರಣಗಳೂ ಸಿದ್ಧವಾಗಿಲ್ಲ. ಇದರ ಫಲವಾಗಿ ಔದ್ಯೋಗಿಕ ಮಾರ್ಗದರ್ಶನ ತಕ್ಕಷ್ಟೂ ಪ್ರತಿಫಲ ನೀಡುತ್ತಿಲ್ಲವೆಂದೇ ಹೇಳಬೇಕಾಗುತ್ತದೆ.

ಪ್ರತಿ ಪ್ರೌಢಶಾಲೆಗೂ ಪೂರ್ಣಾವಧಿಯ ತರಬೇತು ಪಡೆದ ಒಬ್ಬೊಬ್ಬ ಮಾರ್ಗದರ್ಶಕನನ್ನು ನೇಮಿಸಿಕೊಂಡು ಅಲ್ಲಿನ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಮಾರ್ಗದರ್ಶನದ ಸೇವಾಸೌಲಭ್ಯವನ್ನು ಒದಗಿಸಬೇಕೆಂಬುದನ್ನು ಅಂತಿಮ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದರೂ ಅದಕ್ಕೆ ಅಗತ್ಯವಾದ ಆರ್ಥಿಕ ಬೆಂಬಲ ದೊರಕುತ್ತಿಲ್ಲ; ಅಧಿಕ ಸಂಖ್ಯೆಯಲ್ಲಿ ಮಾರ್ಗದರ್ಶಕರಿಗೆ ತರಬೇತು ನೀಡಬಲ್ಲ ಸಂಸ್ಥೆಗಳೂ ಏರ್ಪಟ್ಟಿಲ್ಲ. ಆದ್ದರಿಂದ ಸದ್ಯಕ್ಕೆ ಆ ಯೋಜನೆಯನ್ನು ಮಾರ್ಪಡಿಸಿಕೊಂಡು ತಾತ್ಕಾಲಿಕ ವ್ಯವಸ್ಥೆಯೊಂದನ್ನು ಆಚರಣೆಗೆ ತರುವ ಯತ್ನ ಕೆಲವು ರಾಜ್ಯಗಳಲ್ಲಿ ಆರಂಭವಾಗಿದೆ. ಪ್ರತಿ 10–15 ಪ್ರೌಢಶಾಲೆಗಳಿಗೆ ಒಬ್ಬೊಬ್ಬರು ಮಾರ್ಗದರ್ಶಕನನ್ನು ನೇಮಿಸಿಕೊಂಡು ಸರದಿಯ ಪ್ರಕಾರ ಪ್ರತಿ ಶಾಲೆಯಲ್ಲೂ ಮಾರ್ಗದರ್ಶನ ನೀಡುವ ಕಾರ್ಯ ನಡೆಯುತ್ತಿದೆ. ಆಯಾ ರಾಜ್ಯದಲ್ಲಿ ಆರಂಭವಾಗಿರುವ ಮಾರ್ಗದರ್ಶನದ ಕಾರ್ಯಾಲಯ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಮಾರ್ಗದರ್ಶಕರಿಗೆ ಅಗತ್ಯವೆನಿಸುವ ತಾಂತ್ರಿಕ ಸಲಹೆ ಸಹಕಾರಗಳನ್ನು ಒದಗಿಸುತ್ತಿದೆ; ವಿವಿಧ ವೃತ್ತಿಗಳ ಬಗ್ಗೆ ಪರಿಶೀಲನೆ ನಡೆಸಿ, ವೃತ್ತಿವಿಶ್ಲೇಷಣವನ್ನು ಕೈಗೊಂಡು ಆಯಾ ವೃತ್ತಿಗೆ ಅಗತ್ಯವೆನಿಸುವ ಕೌಶಲ್ಯ, ಸಾಮರ್ಥ್ಯ, ಮನೋಭಾವ, ಚಿತ್ತವೃತ್ತಿ ಇತ್ಯಾದಿಗಳನ್ನು ನಿರ್ಧರಿಸುತ್ತಿದೆ; ಕಾರ್ಯಕರ್ತರಿಗೆ ಪ್ರಚಾರಪತ್ರ, ಕಿರುಹೊತ್ತಿಗೆ, ನಿಯತಕಾಲಿಕ ಪತ್ರಿಕೆ ಇತ್ಯಾದಿ ಪ್ರಕಟಣೆಗಳ ಮೂಲಕ ಆ ವಿವರಗಳನ್ನು ಒದಗಿಸುತ್ತಿದೆ. ರಾಜ್ಯದಲ್ಲಿ ದೊರಕತಕ್ಕ ಉದ್ಯೋಗಾವಕಾಶಗಳ ಬಗ್ಗೆಯೂ ವಿವರಗಳನ್ನು ಪ್ರಕಟಿಸುತ್ತಿದೆ. ಈಚೆಗೆ ಪ್ರೌಢಶಾಲೆಯ ಎಲ್ಲ ಅಧ್ಯಾಪಕರೂ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನದಲ್ಲಿ ತಕ್ಕಮಟ್ಟಿನ ತರಬೇತು ಪಡೆಯುವ ಸೌಲಭ್ಯವನ್ನೂ ಕಲ್ಪಿಸಲಾಗುತ್ತಿದೆ. ರಾಷ್ಟ್ರೀಯ ಉದ್ಯೋಗ ಸೇವಾ ಶಾಖೆಯ (ನ್ಯಾಷನಲ್ ಎಂಪ್ಲಾಯ್ಮೆಂಟ್ ಸರ್ವಿಸ್) ತಜ್ಞರೂ ಆ ಕಾರ್ಯದಲ್ಲಿ ನೆರವು ನೀಡುತ್ತಿದ್ದಾರೆ. ಈಚೆಗೆ ವಿಶ್ವವಿದ್ಯಾನಿಲಯಗಳಲ್ಲಿ ದೀರ್ಘಾವಧಿಯ ತರಬೇತು ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸುವ ಯೋಜನೆಯೂ ಆರಂಭವಾಗಿದೆ. ಆದರೆ ಆ ಕಾರ್ಯಕ್ಕೆ ತಕ್ಕಷ್ಟು ಸಂಖ್ಯೆಯಲ್ಲಿ ತಜ್ಞರು ದೊರಕುತ್ತಿಲ್ಲವಾಗಿ ಯೋಜನೆ ಕುಂಟುತ್ತ ಸಾಗುತ್ತಿದೆ. ಸದ್ಯಕ್ಕೆ ರಾಜ್ಯದ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುತ್ತಿವೆ. ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರ ಮಾರ್ಗದರ್ಶನ ಕಾರ್ಯಾಲಯವೂ ನ್ಯಾಷನಲ್ ಕೌನ್ಸಿಲ್ ಆಫ್ ಎಜ್ಯುಕೇಷನಲ್ ರೀಸರ್ಚ್ ಅಂಡ್ ಟ್ರೈನಿಂಗ್ (ಎನ್.ಸಿ.ಇ.ಆರ್.ಟಿ.) ಸಂಸ್ಥೆಯೂ ಈ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುವ ಮತ್ತು ಉಪಕರಣಗಳನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದೆ. ಮಾರ್ಗದರ್ಶಕರಿಗೆ ಔದ್ಯೋಗಿಕ ಮಾರ್ಗದರ್ಶನದಲ್ಲಿ ಬಳಸುವ ಉಪಕರಣಗಳೂ ಆ ಕಾರ್ಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಸಾಹಿತ್ಯವೂ ದೇಶೀಯ ಭಾಷೆಗಳಲ್ಲಿ ಇನ್ನು ಮೇಲೆ ಸೃಷ್ಟಿಯಾಗಿ ಪ್ರಕಟವಾಗಬೇಕು. ಸದ್ಯದಲ್ಲಿ ಮಾರ್ಗದರ್ಶಕರು ಬಳಸುತ್ತಿರುವ ಪರೀಕ್ಷಣ, ಪ್ರಶ್ನಾವಳಿ, ಆಸಕ್ತಿಸೂಚಿ, ಸಾಮರ್ಥ್ಯ ಪರೀಕ್ಷಣ ಮತ್ತು ಇತರ ಸಾಹಿತ್ಯ–ಇವೆಲ್ಲ ಇಂಗ್ಲಿಷಿನಲ್ಲಿ ಅನ್ಯದೇಶಗಳಲ್ಲಿ ಪ್ರಕಟವಾಗಿದ್ದು, ಭಾರತೀಯ ಸನ್ನಿವೇಶಗಳಿಗೆ ಅಷ್ಟಾಗಿ ಸೂಕ್ತವಾಗಿಲ್ಲ. ಅವನ್ನೆಲ್ಲ ನಮ್ಮ ನಾಡಿನ ಜನಜೀವನ, ಸಾಮಾಜಿಕ ಪರಿಸ್ಥಿತಿ, ಉದ್ಯೋಗಗಳ ಸ್ವರೂಪ, ಉದ್ಯೋಗಾವಕಾಶ ಇತ್ಯಾದಿಗಳಿಗೆ ಸರಿಹೊಂದುವಂತೆ ಮಾರ್ಪಡಿಸಿಕೊಳ್ಳುವ ಕಾರ್ಯವೂ ನಡೆಯಬೇಕು. ಇಲ್ಲಿ ಈಚೆಗೆ ಹೊಸ ಹೊಸ ಉದ್ಯೋಗಗಳು ಆರಂಭವಾಗುತ್ತಿದೆ; ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಉದ್ಯೋಗಗಳಲ್ಲಿ ಇರುವ ಅವಕಾಶ, ದೊರಕುವ ಸಂಬಳ ಇತ್ಯಾದಿಗಳು, ಒಂದೊಂದು ಉದ್ಯೋಗಕ್ಕೂ ಅಗತ್ಯವೆನಿಸುವ ಸಾಮಾನ್ಯ ವಿದ್ಯಾರ್ಹತೆ, ವಿಶಿಷ್ಟ ತರಬೇತು, ಅಗತ್ಯ ಕೌಶಲ್ಯ, ಬುದ್ಧಿಶಕ್ತಿಯ ಮಟ್ಟ, ಮನೋಭಾವದ ಸ್ವರೂಪ, ಆ ಉದ್ಯೋಗಕ್ಕೆ ಸಿದ್ಧತೆ ನೀಡಲು ವ್ಯವಸ್ಥೆಗೊಳಿಸಿರುವ ತರಬೇತು ಸಂಸ್ಥೆಗಳು, ಉದ್ಯೋಗವನ್ನು ದೊರಕಿಸಿ ಕೊಡಲು ನೆರವಾಗುತ್ತಿರುವ ಸಂಸ್ಥೆಗಳು ಇತ್ಯಾದಿ ವಿವರಗಳನ್ನೂ ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಿ ಪ್ರಕಟಿಸಬೇಕು. ಆ ವಿಷಯವನ್ನು ಯುವಜನರಿಗೆ ಒದಗಿಸಲು ಉಪನ್ಯಾಸ, ಪ್ರದರ್ಶನ, ಪ್ರಸಾರ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಸದ್ಯದಲ್ಲಿ ಅಲ್ಲಲ್ಲಿ ಏರ್ಪಟ್ಟಿರುವ ಉದ್ಯೋಗ ವಿನಿಮಯ ಕೇಂದ್ರಗಳೂ ಮಾರ್ಗದರ್ಶನ ಕಾರ್ಯಾಲಯಗಳೂ ರೇಡಿಯೋ ಪ್ರಸಾರ ಕೇಂದ್ರಗಳೂ ಅಧ್ಯಾಪಕರ ಕಾಲೇಜುಗಳೂ ಈ ಕಾರ್ಯವನ್ನು ಸ್ವಲ್ಪಮಟ್ಟಿಗೆ ನಿರ್ವಹಿಸುತ್ತಿವೆ. ಎಲ್ಲಕ್ಕೂ ಮಿಗಿಲಾಗಿ ಈಗಾಗಲೇ ಕೇಂದ್ರದಲ್ಲೂ ರಾಜ್ಯಗಳಲ್ಲೂ ಆ ಕಾರ್ಯಕ್ಕಾಗಿ ಆರಂಭವಾಗಿರುವ ವಿವಿಧ ಸಂಸ್ಥೆಗಳಲ್ಲೂ ಕಾರ್ಯಾಲಯಗಳಲ್ಲೂ ಸಮಾಯೋಜನೆಯುಂಟು ಮಾಡಬೇಕು.

ಪ್ರೌಢಶಾಲೆಗಳಲ್ಲಿ ಮಾರ್ಗದರ್ಶನ ನೀಡುವುದರ ಜೊತೆಗೆ ಆ ಸೇವಾಸೌಲಭ್ಯದ ಅಂಗವಾಗಿ ಭಾಗಶಃ ಕಾಲದ ಉದ್ಯೋಗಗಳನ್ನು ಕೊಡಿಸುವ ವ್ಯವಸ್ಥೆಯನ್ನೂ ಕೈಗೊಳ್ಳಬೇಕು. ಆ ಮೂಲಕ ವಿದ್ಯಾರ್ಥಿಗಳು ತಾವು ಯಾವ ಕೆಲಸಕ್ಕೆ ಸೂಕ್ತರೆಂಬುದನ್ನು ಪ್ರಾಯೋಗಿಕವಾಗಿ ಅರಿತುಕೊಳ್ಳಬಹುದಾದ ಅವಕಾಶವನ್ನು ದೊರಕಿಸಿದಂತಾಗುತ್ತದೆ. ವಿಶ್ವವಿದ್ಯಾನಿಲಯ, ಕಾಲೇಜು, ತಾಂತ್ರಿಕ ಮತ್ತು ವೃತ್ತಿಶಿಕ್ಷಣ ಸಂಸ್ಥೆಗಳು ಇತ್ಯಾದಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಇನ್ನೂ ಹೆಚ್ಚಿನ ಅಗತ್ಯ. ಪ್ರತಿ ದೊಡ್ಡ ಶಿಕ್ಷಣ ಸಂಸ್ಥೆಗೂ ಒಬ್ಬೊಬ್ಬ ಮಾರ್ಗದರ್ಶನ ಪ್ರವೀಣನನ್ನು ನೇಮಿಸಿಕೊಳ್ಳುವ ಅಗತ್ಯವನ್ನು ಕೊಠಾರಿ ಶಿಕ್ಷಣ ಆಯೋಗ ಸೂಚಿಸಿದೆ. ಹೇಗೊ ಹಣವನ್ನು ಒದಗಿಸಿಕೊಂಡರೂ ಆ

ಜಾಗಕ್ಕೆ ತಕ್ಕ ತಜ್ಞರು ಸಿಕ್ಕುವುದು ದುರ್ಲಭವಾಗುತ್ತಿದೆ. ಈ ಕೊರತೆಯನ್ನು ನಿವಾರಿಸಲು ತಕ್ಕಷ್ಟು ಸೌಲಭ್ಯವುಳ್ಳ ಯಾವುದಾದರೂ ವಿಶ್ವವಿದ್ಯಾನಿಲಯ ಪದವಿ ಮಟ್ಟದಲ್ಲಿ ಇದನ್ನೊಂದು ಐಚ್ಛಿಕ ವಿಷಯವನ್ನಾಗಿ ಗೊತ್ತುಮಾಡಬಹುದು. ಆ ಮೂಲಕ ಕೆಲವೇ ವರ್ಷಗಳಲ್ಲಿ ಆ ವಿಷಯವನ್ನು ಇತರ ವಿಶ್ವವಿದ್ಯಾನಿಲಯಗಳೂ ಆರಂಭಿಸಲು ಸಹಾಯವಾಗುತ್ತದೆ; ಜೊತೆಗೆ, ನಮ್ಮ ಪ್ರೌಢಶಾಲೆಗಳಿಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೂ ಮಾರ್ಗದರ್ಶನದಲ್ಲಿ ತರಬೇತು ತಜ್ಞರೂ ದೊರಕುವಂತಾಗುತ್ತದೆ.

ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ರಾಷ್ಟ್ರೀಯ ಉದ್ಯೋಗಾವಕಾಶ ಸೇವಾಶಾಖೆಯ ಉದ್ಯೋಗ, ಸಮಾಚಾರ ಮತ್ತು ಮಾರ್ಗದರ್ಶನ ಕಾರ್ಯಾಲಯಗಳೂ ವಿದ್ಯಾರ್ಥಿ ಸಲಹಾ ಮಂಡಲಿಗಳೂ ಸ್ವಲ್ಪಮಟ್ಟಿಗೆ ಔದ್ಯೋಗಿಕ ಮಾರ್ಗದರ್ಶನವನ್ನು ನಿರ್ವಹಿಸುತ್ತವೆ. ಅವು ಬೇರೆ ಬೇರೆ ರಾಜ್ಯಗಳಲ್ಲಿರುವ ಉದ್ಯೋಗಾವಕಾಶವನ್ನು ಸಂಗ್ರಹಿಸಿ, ಪ್ರಕಟಿಸಿ ಸೂಕ್ತವಾದ ಅಭ್ಯರ್ಥಿಗಳ ಅರ್ಜಿಗಳನ್ನು ಸ್ವೀಕರಿಸಿ, ಸಂಬಂಧಿಸಿದವರಿಗೆ ಕಳಿಸಿ ಕೆಲಸ ದೊರಕಿಸಲು ಸಹಾಯ ಮಾಡುತ್ತಿವೆ. ಅಲ್ಲದೆ, ಆಗಾಗ ಬೇರೆ ಬೇರೆ ಉದ್ಯೋಗಗಳ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಿ, ಉದ್ಯೋಗಾರ್ಥಿಗಳಿಗೆ ವಿವರಗಳನ್ನೂ ಮಾರ್ಗದರ್ಶನವನ್ನೂ ಒದಗಿಸುತ್ತಿವೆ. ಬೇರೆ ಬೇರೆ ಉದ್ಯೋಗಗಳಿಗೆ ಬೇಕಾದ ತರಬೇತು, ಅವನ್ನು ಒದಗಿಸುವ ಸಂಸ್ಥೆಗಳು, ಅದಕ್ಕಾಗಿ ದೊರೆಯುವ ವಿದ್ಯಾರ್ಥಿ ವೇತನ, ಉಮೇದುವಾರಿ ಶಿಕ್ಷಣ ಇತ್ಯಾದಿಗಳ ಬಗ್ಗೆಯೂ ತಜ್ಞರಿಂದ ಭಾಷಣಗಳನ್ನು ಏರ್ಪಡಿಸುತ್ತವೆ. ಕೇಂದ್ರ-ಸಚಿವಾಲಯ ಮೊದಲು, ಪರದೇಶಗಳಲ್ಲಿ ಶಿಕ್ಷಣಕ್ಕಾಗಿ ಇರುವ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಈ ವಿದ್ಯಾರ್ಥಿ ಸಲಹಾ ಸೇವಾ ಕಚೇರಿಗಳನ್ನು (ಸ್ಟೂಡೆಂಟ್ಸ್ ಅಡ್ವೈಸರಿ ಬ್ಯೂರೊ) ಆರಂಭಿಸಿತು. ಈಗ ಅವು ಭಾರತದಲ್ಲಿ ಸಾಮಾನ್ಯ ಮತ್ತು ವೃತ್ತಿ ಶಿಕ್ಷಣಗಳಲ್ಲಿ ಇರತಕ್ಕ ಸೌಲಭ್ಯಗಳನ್ನು ಕುರಿತ ವಿವರಗಳನ್ನೂ ಒದಗಿಸುತ್ತಿವೆ. ಮೇಲಿನ ಎರಡು ವಿಧವಾದ ಕಾರ್ಯಾಲಯಗಳೂ ಒಂದಕ್ಕೊಂದಕ್ಕೆ ಪೂರಕವಾಗಿ ಕೆಲಸ ಮಾಡುತ್ತಿವೆ. ಆದ್ದರಿಂದ ಅವೆರಡನ್ನೂ ಒಟ್ಟುಗೂಡಿಸಿ, ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನಗಳೆರಡನ್ನೂ ತಮ್ಮ ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳುವ ಯತ್ನ ನಡೆಯುತ್ತಿದೆ.

ವ್ಯಕ್ತಿ ತಾನು ಯಶಸ್ಸನ್ನು ಸಾಧಿಸಬಲ್ಲ, ತನ್ನ ಮನಸ್ಸಿಗೆ ತೃಪ್ತಿಯಾಗಿ ಜೀವನದಲ್ಲಿ ನೆಮ್ಮದಿಯನ್ನು ದೊರಕಿಸುವಂಥ ಉದ್ಯೋಗವನ್ನು ಅವಲಂಬಿಸುವುದು ರಾಷ್ಟ್ರದ ಆರ್ಥಿಕ ಪ್ರಗತಿಗೆ ಅಗತ್ಯವೆನಿಸುತ್ತದೆ. ಹಾಗೆ ವ್ಯಕ್ತಿ ಸೂಕ್ತ ಉದ್ಯೋಗವನ್ನು ಆರಿಸಿಕೊಳ್ಳುವ ಕಾರ್ಯದಲ್ಲಿ ಔದ್ಯೋಗಿಕ ಮಾರ್ಗದರ್ಶನ ಒಳ್ಳೆಯ ನೆರವನ್ನು ಪರಿಣಮಿಸಬಲ್ಲದು **(ನೋಡಿ- ಉದ್ಯೋಗ-ವಿನಿಮಯ-ವ್ಯವಸ್ಥೆ).** (ಎನ್.ಎಸ್.ವಿ.)

**ಔಪಯೋಗಿಕ ಮನಶ್ಶಾಸ್ತ್ರ:** ಮಾನವನ ವರ್ತನೆಯನ್ನು ಕುರಿತ ವಾಸ್ತವಿಕ ಸಮಸ್ಯೆಗಳ ಪರಿಹಾರದಲ್ಲಿ ವೈಜ್ಞಾನಿಕ ಮನಶ್ಶಾಸ್ತ್ರದ ಕಾಣಿಕೆಗಳು ಮತ್ತು ವಿಧಾನಗಳ ಉಪಯೋಗದ ವಿವರಣೆ (ಅಪ್ಲೈಡ್ ಸೈಕಾಲಜಿ). ಅನ್ವಯ ಮನಶ್ಶಾಸ್ತ್ರವೆಂದೂ ಇದನ್ನು ಕರೆಯಲಾಗಿದೆ. ನಿರ್ದಿಷ್ಟ ಉಪಯುಕ್ತತೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಯೋಗಾಲಯದಲ್ಲಿ ನಡೆಸುವ ಪರೀಕ್ಷೆಗಳಿಂದ ಹಿಡಿದು, ತೊಂದರೆಗೆ ಈಡಾದ ವ್ಯಕ್ತಿಗಳಿಗೆ ನೀಡಲಾಗುವ ನೇರ ಸೇವೆಗಳವರೆಗೆ ವಿಭಿನ್ನ ರೀತಿಯಲ್ಲಿ ಇದು ವ್ಯಾಪಿಸಿದೆ.

**ಮನಶ್ಶಾಸ್ತ್ರಕ್ಕೂ ಔಪಯೋಗಿಕ ನಿಜವಾದ ವ್ಯತ್ಯಾಸವಿದು:** ಮಾನವ ವರ್ತನೆಯ ವಾಸ್ತವಿಕ ಮತ್ತು ನಿರ್ದಿಷ್ಟ ಸಂದರ್ಭಗಳನ್ನು ಅಧ್ಯಯನ ಮಾಡುವುದು ಔಪಯೋಗಿಕ ಮನಶ್ಶಾಸ್ತ್ರಜ್ಞನ ಕರ್ತವ್ಯ. ಈ ಅಧ್ಯಯನದಿಂದ ಆತ ಸಾಮಾನ್ಯ ಸೂತ್ರಗಳನ್ನೇನೂ ರಚಿಸುವ ಹವ್ಯಾಸಕ್ಕೆ ಹೋಗಬೇಕೆಂದಿಲ್ಲ. ಅನೇಕ ವೇಳೆಗಳಲ್ಲಿ ಪ್ರಯೋಗಶಾಲೆಯ ಹೊರಗೇ ಆತನಿಂದ ಇಂಥ ವರ್ತನೆಯ ಅವಲೋಕನ, ಅಧ್ಯಯನ ನಡೆಯುತ್ತವೆ. ಆದರೆ ಪ್ರಾಯೋಗಿಕ ಮನಶ್ಶಾಸ್ತ್ರಜ್ಞ ಹೀಗಲ್ಲ. ಕೆಲವು ಸಂದರ್ಭಗಳನ್ನು ಗಮನಿಸಿ ಅವುಗಳಿಂದ ಸಾಮಾನ್ಯ ಸೂತ್ರಗಳನ್ನು ರಚಿಸುವುದು ಅವನ ಹವ್ಯಾಸ. ಆತನ ಚಟುವಟಿಕೆ ಪ್ರಯೋಗಶಾಲೆಗೇ ಸೀಮಿತ. ಉದಾಹರಣೆಗೆ ಹೇಳುವುದಾದರೆ, ಒಂದು ಸಂಸ್ಥೆಯ ಮತ್ತು ಅದರಲ್ಲಿನ ಹುದ್ದೆಯ ಆವಶ್ಯಕತೆಗಳನ್ನು ಪೂರೈಸುವ ಉದ್ದೇಶದಿಂದ ಅಭ್ಯರ್ಥಿಯ ವೈಜ್ಞಾನಿಕ ವಿಧಾನಗಳನ್ನು ರೂಪಿಸಿ, ಆ ಸಂಸ್ಥೆಯ ಸಿಬ್ಬಂದಿ ಸಮಸ್ಯೆಗೆ ಪರಿಹಾರ ದೊರಕಿಸುವುದು ಔಪಯೋಗಿಕ ಮನಶ್ಶಾಸ್ತ್ರಜ್ಞನ ಕಾರ್ಯಭಾರ. ಈ ರೀತಿಯ ವಿಧಾನ ಅದರ ಎಲ್ಲ ವಿವರಗಳ ದೃಷ್ಟಿಯಿಂದ ಮತ್ತೊಂದು ಉದ್ಯಮ ಸಂಸ್ಥೆಗೆ ಸಮರ್ಪಕವಾಗಬಹುದು ಅಥವಾ ಆಗದಿರಬಹುದು. ಮತ್ತೊಂದು ಕಡೆ ಮನೋಮಾಪನ ತಜ್ಞ (ಸೈಕೊಮೆಟ್ರಿಷಿಯನ್) ಒಂದು ಕಸುಬಿನ ಮತ್ತು ಉದ್ಯಮ ಸಂಸ್ಥೆಯ ವೈಶಿಷ್ಟ್ಯವನ್ನು ಪರಿಗಣಿಸದೆ ಮೂಲ ಸಮಸ್ಯೆಯತ್ತ ತನ್ನ ಗಮನ ಹರಿಸುತ್ತಾನೆ. ತದ್ವಿರುದ್ಧವಾಗಿ ಚಿಕಿತ್ಸಾ ಮನಶ್ಶಾಸ್ತ್ರಜ್ಞ (ಕ್ಲಿನಿಕಲ್ ಸೈಕಾಲಜಿಸ್ಟ್) ಮನೋರೋಗಿಯ ತೊಂದರೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಒಂದು ಚಿಕಿತ್ಸಾಕ್ರಮವನ್ನು ಕಾರ್ಯಗತಗೊಳಿಸಲು ತನ್ನಲ್ಲಿರುವ ಮನೋವೈಜ್ಞಾನಿಕ ತಿಳಿವನ್ನು ಉಪಯೋಗಿಸುತ್ತಾನೆ. ಒಬ್ಬ ರೋಗಿಯನ್ನು ಅರ್ಥಮಾಡಿಕೊಂಡಾಗ ದೊರಕಿದ ಅರಿವು ಒಂದು ಮನೋರೋಗ ಅಥವಾ ಅದರ ಚಿಕಿತ್ಸೆಗೆ ಸಂಬಂಧಪಟ್ಟ ಒಂದು ಸಿದ್ಧಾಂತವನ್ನೇ ರೂಪಿಸಲು ಸಹಕಾರಿಯಾಗಬಹುದು. ಆದರೆ ಇತರ ರೋಗಿಗಳಿಗೂ ಅದನ್ನು ಸಾಮಾನ್ಯೀಕರಿಸಲು ಅದು ನೆರವಾಗುವುದಿಲ್ಲ. ಇದೇ ರೀತಿಯಲ್ಲಿ ಒಬ್ಬ ಶಾಲಾ ಮನಶ್ಶಾಸ್ತ್ರಜ್ಞ (ಸ್ಕೂಲ್ ಸೈಕಾಲಜಿಸ್ಟ್) ಒಂದು ಶಾಲೆಯ ಶೈಕ್ಷಣಿಕ ಕಾರ್ಯಕ್ರಮಕ್ಕೆ ನೆರವಾಗಬಹುದು. ಆ ಕಾರ್ಯದಲ್ಲಿ ಆತ ತನಗೆ ಗೊತ್ತಿರುವ ಇಲ್ಲ ಮನೋವೈಜ್ಞಾನಿಕ ವಿಧಾನಗಳನ್ನೂ ತಿಳಿವನ್ನೂ ಉಪಯೋಗಿಸುತ್ತಾನೆ. ಆದರೆ ಎಲ್ಲ ಶಾಲೆಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಸರಿಹೊಂದುವ ಸಾಮಾನ್ಯ ನಿರ್ಣಯಗಳನ್ನು ಸೂಚಿಸುವುದರಲ್ಲಿ ಮೂಲತಃ ಆತನ ಗಮನವಿರುವುದಿಲ್ಲ.

ಇದರಿಂದಾಗಿ ಒಬ್ಬ ಮನಶ್ಶಾಸ್ತ್ರಜ್ಞನಿಗೆ ದೊರಕಬೇಕಾದ ತರಬೇತಿ ವಿಶಾಲ ತಳಹದಿಯ ಮೇಲೆ ನಿಂತಿರಬೇಕಲ್ಲದೆ ಅದು ಮನಶ್ಶಾಸ್ತ್ರ ಸಿದ್ಧಾಂತ ಹಾಗೂ ವಿಧಾನಗಳು, ಅಂಕಿಅಂಶ ವಿಧಾನಗಳು ಮತ್ತು ಸಂಶೋಧನಾ ವಿಧಾನಗಳಿಗೆ ಸಂಬಂಧಪಟ್ಟಂತೆ ಸ್ಪಷ್ಟವಾದ ಜ್ಞಾನವನ್ನು ಒಳಗೊಂಡಿರಬೇಕೆಂಬುದು ವ್ಯಕ್ತವಾಗುತ್ತದೆ.

**ಬೆಳವಣಿಗೆ:** ಔಪಯೋಗಿಕ ಮನಶ್ಶಾಸ್ತ್ರ 20ನೆಯ ಶತಮಾನದ ಫಲ. ಮಾನವನ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಬೆಳೆಯುತ್ತಿರುವ ಜಟಿಲತೆಯಿಂದಾಗಿ ಮನಶ್ಶಾಸ್ತ್ರದ ಬೆಳವಣಿಗೆಯಲ್ಲೇ ಅಲ್ಲದೆ ಅನೇಕ ಮನಶ್ಶಾಸ್ತ್ರಜ್ಞರು ವಾಸ್ತವಿಕ ಸಮಸ್ಯೆಗಳ ಪರಿಹಾರ ಕಾರ್ಯದಲ್ಲೂ ತಮ್ಮ ಗಮನವನ್ನು ಹರಿಸ ತೊಡಗುವುದು ಅನಿವಾರ್ಯವಾಗಿದೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ 1908ರಷ್ಟು ಹಿಂದೆಯೇ ಜಾಹೀರಾತು ಮನಶ್ಶಾಸ್ತ್ರದ ಮೇಲೆ ಒಂದು ಗ್ರಂಥ ಪ್ರಕಟವಾಯಿತು. 1915ರಲ್ಲಿ ಅಮೆರಿಕದ ಕಾರ್ನೆಗಿ ತಂತ್ರಜ್ಞಾನ ಸಂಸ್ಥೆಯಲ್ಲಿ (ಕಾರ್ನೆಗಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ನೇಮಕಗೊಂಡ ಮನಶ್ಶಾಸ್ತ್ರದ ಮೊಟ್ಟಮೊದಲ ಪ್ರಾಧ್ಯಾಪಕ ಬಹುಶಃ ಡಬ್ಲ್ಯು. ಡಿ. ಸ್ಕಾಟ್. ಮನಶ್ಶಾಸ್ತ್ರದ ಮೊಟ್ಟಮೊದಲನೆಯ ನಿಯತಕಾಲಿಕ ಪತ್ರಿಕೆ 1917ರಲ್ಲಿ ಪ್ರಕಟವಾಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ 1914-18, ಸೈನ್ಯದ ತುರ್ತು ಆವಶ್ಯಕತೆಗಳನ್ನು ಪೂರೈಸಲು, ವಾಸ್ತವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ಮನಶ್ಶಾಸ್ತ್ರವನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸಲಾಯಿತೆಂದು ಹೇಳಬಹುದು. ಅಮೆರಿಕದ ವ್ಯಾಪಾರ ಮತ್ತು ಉದ್ಯಮಗಳಲ್ಲಿ ಮನಶ್ಶಾಸ್ತ್ರವನ್ನು ಬಳಸಲು ಕೈಗಾರಿಕಾಕರಣ ಮತ್ತು ನಗರೀಕರಣಗಳು (ಅರ್ಬನೈಸೇಷನ್) ಮುಖ್ಯವಾದ ಪ್ರಚೋದನೆಗಳಾದುವೆಂದು ಕಾಣುತ್ತದೆ. ಆದ್ದರಿಂದ 20ನೆಯ ಶತಮಾನದ ಮೊದಲ ಎರಡು ದಶಕಗಳಲ್ಲಿ ಮನಶ್ಶಾಸ್ತ್ರ ಸೈನಿಕವಿಜ್ಞಾನ, ವ್ಯಾಪಾರ, ಉದ್ಯಮ, ಶಿಕ್ಷಣ ಮತ್ತು ಮನೋರೋಗ ನಿದಾನ (ಸೈಕೋಪೆಥಾಲಜಿ) ಮೊದಲಾದ ಕ್ಷೇತ್ರಗಳಲ್ಲಿ ಮೊದಲು ಪ್ರವೇಶಿಸಿತು. ಮೊಟ್ಟಮೊದಲು ಮಾನಸಿಕ ಚಿಕಿತ್ಸಾಲಯ ಸ್ಥಾಪಿತವಾದದ್ದು ಈ ಕಾಲದಲ್ಲಿ. ಇಂದು ಅಮೆರಿಕದ ಮನೋವೈಜ್ಞಾನಿಕ ಸಂಘದಲ್ಲಿ ಅರ್ಧಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಔದ್ಯೋಗಿಕ ಮನಶ್ಶಾಸ್ತ್ರಜ್ಞರೇ ಸದಸ್ಯರಾಗಿದ್ದಾರೆ. ಇದಲ್ಲದೆ ಇಪ್ಪತ್ತಕ್ಕಿಂತ ಹೆಚ್ಚು ಶಾಖೆಗಳಲ್ಲಿ ಎರಡು ಅಥವಾ ಮೂರು ಶಾಖೆಗಳು ಮಾತ್ರ ಈ ಕ್ಷೇತ್ರಗಳಿಗೆ ಸಂಬಂಧಪಟ್ಟಿಲ್ಲ. ಮನಶ್ಶಾಸ್ತ್ರ ಕ್ಷೇತ್ರದಲ್ಲಿ ಆರು ದಶಕಗಳಲ್ಲಿ ಆಗಿರುವ ಚೈತನ್ಯಪೂರ್ಣ ಬೆಳವಣಿಗೆಗೆ ಎರಡು ಮಹಾಯುದ್ಧಗಳು ಎಷ್ಟು ಕಾರಣವೂ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಆಗಿರುವ ತೀವ್ರ ಪ್ರಗತಿಯೂ ಅಷ್ಟೇ ಕಾರಣ. ಆಧುನೀಕರಣ ಪ್ರಕ್ರಿಯೆ ಮತ್ತು ವಿಶ್ವಾದ್ಯಂತ ಆಗುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳೊಡನೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ಸೇರಿಕೊಂಡು, ವಾಸ್ತವಿಕ ಸಮಸ್ಯೆಗಳಲ್ಲಿ ಮಾನವಾಂಶ ಎಷ್ಟೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ.

**ಭಾರತದಲ್ಲಿ:** ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಸೈನಿಕ ಆಯ್ಕೆ ಮಂಡಳಿ ಸ್ಥಾಪಿತವಾದುದರಿಂದ ಭಾರತದಲ್ಲಿ ಔಪಯೋಗಿಕ ಮನಶ್ಶಾಸ್ತ್ರದ ಇತಿಹಾಸ ಆರಂಭವಾಯಿತು. ರಕ್ಷಣಾ ಇಲಾಖೆಯ ಪ್ರಮುಖ ಮನಶ್ಶಾಸ್ತ್ರಜ್ಞನಾಗಿ ನೇಮಕಗೊಂಡ ಮೊತ್ತಮೊದಲ ಭಾರತೀಯ ಸೋಹನ್ ಲಾಲ್, ಭಾರತೀಯ ವಿಶ್ವವಿದ್ಯಾನಿಲಯವೊಂದರಲ್ಲಿ ಔಪಯೋಗಿಕ ಮನಶ್ಶಾಸ್ತ್ರ ವಿಭಾಗ ಮೊತ್ತಮೊದಲಿಗೆ ಆರಂಭವಾದದ್ದು 1945ರಲ್ಲಿ ಪಟ್ನಾ ವಿಶ್ವವಿದ್ಯಾಲಯದಲ್ಲಿ. ಆದರೆ ಕಲ್ಕತ್ತ ವಿಶ್ವವಿದ್ಯಾನಿಲಯದ ಮನಶ್ಶಾಸ್ತ್ರ ವಿಭಾಗದ ಅನ್ವಯ ಕ್ಷೇತ್ರಗಳಲ್ಲಿ ಈ ಬಗೆಯ ಕೆಲಸ ಇದಕ್ಕೂ ಮುಂಚೆಯೇ ಆರಂಭವಾಗಿತ್ತು.

**ಮುಖ್ಯ ವಿಭಾಗಗಳು:** ಔಪಯೋಗಿಕ ಮನಶ್ಶಾಸ್ತ್ರದ ಮುಖ್ಯವಾದ ಕ್ಷೇತ್ರಗಳಿವು: 1.ಕೈಗಾರಿಕೆ 2. ವ್ಯವಹಾರ, 3. ಆರೋಗ್ಯ, 4. ಶಿಕ್ಷಣ, 5. ಸಮಾಜ ಕಲ್ಯಾಣ 6. ಕೃಷಿ, 7. ರಕ್ಷಣೆ ಮತ್ತು 8. ನ್ಯಾಯ ಹಾಗೂ ಸುವ್ಯವಸ್ಥೆ.

ಬುದ್ಧಿಶಕ್ತಿಯ ಮನೋವೈಜ್ಞಾನಿಕ ಪರೀಕ್ಷೆಗಳನ್ನು ಈ ಶತಮಾನದ ಆದಿಭಾಗದಲ್ಲಿ ರೂಪಿಸಿದ ತರುಣದಲ್ಲೇ ಕೈಗಾರಿಕೆ ಮತ್ತು ಸೈನ್ಯ ಇವೆರಡರಲ್ಲೂ ಸಿಬ್ಬಂದಿಯ ಆಯ್ಕೆಯ ವಿಧಾನಗಳ ಅಗತ್ಯ ಕಂಡುಬಂತು. ಆದ್ದರಿಂದ ಅನ್ವಯಮನಶ್ಶಾಸ್ತ್ರದ ಅತ್ಯಂತ ಆರಂಭಿಕ ಕಾರ್ಯಭಾರಗಳಲ್ಲಿ ಸಿಬ್ಬಂದಿಯ ಆಯ್ಕೆಯೂ ಒಂದು. ಉದ್ಯೋಗಿಗಳ ಅನುಸ್ಥಾಪನ

(ಓರಿಯಂಟೇಷನ್) ಮತ್ತು ತರಬೇತಿ ಕಾರ್ಯವೂ ಅನಂತರ ಇದಕ್ಕೆ ಕೂಡಿಕೊಂಡಿತು. ಔಪಯೋಗಿಕ ಮನಶ್ಶಾಸ್ತ್ರದ ಪ್ರಮುಖ ಕ್ಷೇತ್ರಗಳಲ್ಲಿ ಕೈಗಾರಿಕಾ ಮನಶ್ಶಾಸ್ತ್ರವೂ ಒಂದು. ಬುದ್ಧಿಶಕ್ತಿ ಮತ್ತು ನಿರ್ದಿಷ್ಟ ಸಾಮರ್ಥ್ಯ ಮತ್ತು ಕೌಶಲಗಳಲ್ಲಿ ವೈಯಕ್ತಿಕ ವ್ಯತ್ಯಾಸಗಳ ಅಳತೆಯಿಂದ ಇದು ಪ್ರಾರಂಭವಾಯಿತಾದರೂ ಅಲ್ಪಕಾಲದಲ್ಲಿಯೇ ಮನಶ್ಶಾಸ್ತ್ರದ ಒಂದು ಪ್ರಮುಖ ಶಾಖೆಯಾಗಿ ಅಭಿವೃದ್ಧಿ ಹೊಂದಿತು. ಮಾನವ ಶಿಲ್ಪ, ಯಜಮಾನ–ನೌಕರ ಸಂಬಂಧ ಇವೂ ಇದರ ವಿಷಯವಾಯಿತು. ಉದ್ಯೋಗ ನಿರತರ ಸರಳ ವರ್ಗೀಕರಣ, ಮಂದಬೆಳಕು. ಗದ್ದಲ ಮುಂತಾದುವುಗಳಿಂದ ಕಾರ್ಮಿಕನ ಕಾರ್ಯವೇಗದ ಮೇಲೆ ಆಗುವ ಪರಿಣಾಮದ ಪರಿಶೀಲನೆ ಮೊದಲಾದುವು ಮಾತ್ರ ಕೈಗಾರಿಕಾ ಮನಶ್ಶಾಸ್ತ್ರದ ಆರಂಭಿಕ ಅಧ್ಯಯನದ ಕ್ಷೇತ್ರಗಳಾಗಿದ್ದುವು. ಆದರೆ ಇಂದು ಅದು ಹೆಚ್ಚು ತೊಡಕಿನ ವಿಧಾನಗಳನ್ನಳವಡಿಸಿಕೊಂಡು ಜಟಿಲ ಸಮಸ್ಯೆಗಳನ್ನೆಲ್ಲ ಬಿಡಿಸಲು ತೊಡಗುತ್ತಿದೆ. ಮಾನವ ಸಂಬಂಧಗಳು, ಪ್ರೇರಣೆಗಳು, ನೈತಿಕ ಸ್ಥೈರ್ಯ, ಉತ್ಪಾದಕತೆ ಮತ್ತು ಸಂಘಟನೆ ಇವು ಸೇರಿಕೊಂಡು ಕೈಗಾರಿಕಾ ಮನಶ್ಶಾಸ್ತ್ರಕ್ಕೆ ಹಲವು ಹೊಸ ಆಯಾಮಗಳನ್ನೇ ಸೃಷ್ಟಿಸಿವೆ. ಅನ್ವಯ ಮನಶ್ಶಾಸ್ತ್ರದ ಇತರ ಕ್ಷೇತ್ರಗಳಂತೆ ಕೈಗಾರಿಕಾ ಮನಶ್ಶಾಸ್ತ್ರವಾದರೂ ಕೈಗಾರಿಕಾ ಚೌಕಟ್ಟಿನಲ್ಲಿ ಉದ್ಭವಿಸುವ ಸಮಸ್ಯೆಗಳ ಪರಿಹಾರಕ್ಕೆ ಮನೋವಿಜ್ಞಾನದ ಪರಿಕಲ್ಪನೆಗಳನ್ನೂ ವಿಧಾನಗಳನ್ನೂ ಅನ್ವಯಿಸಲು ಯತ್ನಿಸುತ್ತದೆ.

ಭಾರತದಲ್ಲಿ ಮೊತ್ತಮೊದಲಿಗೆ ಎರಡನೆಯ ಮಹಾಯುದ್ಧದ ಕೊನೆಯ ಹೊತ್ತಿಗೆ ಜಮ್‌ಷೆಡ್‌ಪುರದಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಕೈಗಾರಿಕಾ ಮನಶ್ಶಾಸ್ತ್ರಜ್ಞರ ನೇಮಕವಾಯಿತು. ಯುದ್ಧ ಕಳೆದ ಕೂಡಲೇ ಅಹಮದಾವಾದ್ ಜವಳಿ ಕೈಗಾರಿಕೆಗಳ ಸಂಶೋಧನ ಸಂಘದಲ್ಲಿ ಮಾನವಸಂಬಂಧಗಳ ವಿಭಾಗವೊಂದನ್ನು ಸ್ಥಾಪಿಸಲಾಯಿತು. ಇತ್ತೀಚೆಗೆ ಫೋರ್ಡ್ ಪ್ರತಿಷ್ಠಾನದ ನೆರವಿನಿಂದ ಕಲ್ಕತ್ತ ಮತ್ತು ಅಹಮದಾಬಾದ್‌ಗಳಲ್ಲಿ ಒಂದೊಂದು ಕೈಗಾರಿಕಾ ವ್ಯವಸ್ಥಾಪನ ಶಿಕ್ಷಣಸಂಸ್ಥೆಗಳು ಸ್ಥಾಪಿತವಾದುವು. ಇಲ್ಲಿ ಕೈಗಾರಿಕಾ ಮನಶ್ಶಾಸ್ತ್ರಜ್ಞರು ವ್ಯವಸ್ಥಾಪಕ ಸಿಬ್ಬಂದಿಗೆ ತರಬೇತಿ ನೀಡುತ್ತಾರೆ. ಕೆಲವು ಖಾಸಗಿ ಉದ್ಯಮ ಸಂಸ್ಥೆಗಳಲ್ಲೂ ಕೈಗಾರಿಕಾ ಮನಶ್ಶಾಸ್ತ್ರಜ್ಞರು ಕಾರ್ಯನಿರತರಾಗಿದ್ದಾರೆ.

ಅನುಭೋಗಿಗಳ ಸಂಪರ್ಕ, ಅವರ ಮುನ್ನೊಲವುಗಳು (ಪ್ರಿಫರೆನ್ಸಸ್), ಜಾಹೀರಾತಿನ ಅಂಶಗಳು, ಹೊಸ ಉತ್ಪನ್ನಗಳ ಜನಪ್ರಿಯಕರಣ ಮತ್ತು ಮಾರಾಟ ಮುಂತಾದವನ್ನು ಕುರಿತು ಅಧ್ಯಯನ ಮಾಡುವುದು ವ್ಯವಹಾರಿಕ ಮನಶ್ಶಾಸ್ತ್ರದ ಕ್ಷೇತ್ರ.

ಶಾಲೆ, ಕಾರ್ಖಾನೆ, ಕಚೇರಿ ಮತ್ತು ಸಂಸಾರಗಳಲ್ಲಿ ವ್ಯಕ್ತಿಗಳ ಹೊಂದಿಕೆಯ ಸಮಸ್ಯೆಗಳನ್ನು ಪರಿಹರಿಸಲು ಮನಶ್ಶಾಸ್ತ್ರದ ಇತಿಹಾಸದ ಆದಿಯಲ್ಲೇ ಮನಶ್ಶಾಸ್ತ್ರಜ್ಞರಿಗೆ ಬೇಡಿಕೆ ಬಂದಿತ್ತು. ಮಕ್ಕಳ, ಕಿಶೋರರ (ಅಡೊಲೆಸೆಂಟ್ಸ್) ಮತ್ತು ವಯಸ್ಕರ ಮಾನಸಿಕ ಆರೋಗ್ಯದ ಸಮಸ್ಯೆಗಳು ಅನೇಕ ಮನಶ್ಶಾಸ್ತ್ರಜ್ಞರನ್ನು ಆಕರ್ಷಿಸಿದವು. ಅನ್ವಯಮನಶ್ಶಾಸ್ತ್ರದ ಇನ್ನೊಂದು ಮುಖ್ಯ ಕ್ಷೇತ್ರವಾಗಿ ಚಿಕಿತ್ಸಾಮನಶ್ಶಾಸ್ತ್ರ (ಕ್ಲಿನಿಕಲ್ ಸೈಕಾಲಜಿ) ಅಭಿವೃದ್ಧಿ ಹೊಂದಿತು. ಮತ್ತೆ ಇಲ್ಲೂ ಯುದ್ಧಪರಿಸ್ಥಿತಿಯ ತುರ್ತು ಆವಶ್ಯಕತೆಗಳ ಕಾರಣದಿಂದಾಗಿ ಶೀಘ್ರ ಬೆಳೆವಣಿಗೆಯಾಯಿತು. ಮನೋರೋಗ ನಿದಾನ ಮತ್ತು ಚಿಕಿತ್ಸೆಗಳೇ ಚಿಕಿತ್ಸಾ ಮನಶ್ಶಾಸ್ತ್ರಜ್ಞನ ಪ್ರಮುಖ ಕರ್ತವ್ಯ.

ಸಲಹಾ (ಕೌನ್ಸೆಲಿಂಗ್) ಮನಶ್ಶಾಸ್ತ್ರ ಒಂದು ಕಡೆಯಲ್ಲಿ ಚಿಕಿತ್ಸಾ ಮನಶ್ಶಾಸ್ತ್ರದಿಂದಲೂ ಮತ್ತೊಂದು ಕಡೆಯಲ್ಲಿ ಪರೀಕ್ಷಾವಿಧಾನಗಳಿಂದಲೂ ಪ್ರಭಾವಿತವಾಗಿ, ಕುಟುಂಬ, ಸಮಾಜ, ಶಾಲಾಕಾಲೇಜುಗಳು ಮತ್ತು ಕೆಲಸದ ಸನ್ನಿವೇಶದಲ್ಲಿ ಕಂಡುಬರುವ ತಪ್ಪು ಹೊಂದಾವಣೆಯ (ಮಾಲ್–ಅಡ್ಜಸ್ಟ್‌ಮೆಂಟ್) ಸಮಸ್ಯೆಗಳ ವಿಶೇಷ ಕ್ಷೇತ್ರವನ್ನೇ ಒಳಗೊಂಡಿದೆ. ಸಹಜ ಪ್ರವೃತ್ತಿಗಳ (ಅಪ್ಟಿಟ್ಯೂಡ್ಸ್) ಪರೀಕ್ಷೆಗಳ ಆಧಾರದ ಮೇಲೆ ಮೊದಮೊದಲು ರೂಪಿತವಾದ ಮಾರ್ಗದರ್ಶನ ಕಾರ್ಯಕರ್ತರ ಅನುಸ್ಥಾಪನ (ಓರಿಯಂಟೇಷನ್) ಪದ್ಧತಿ ಬಹಳ ಮಟ್ಟಿಗೆ ಬದಲಾವಣೆಗೊಂಡು ಈಗ ಅದು ಸಲಹೆಯ ರೂಪು ತಳೆದಿದೆ. ಈ ರೀತಿ ಈಗ ಉದ್ಯೋಗ, ವಿವಾಹ ಮುಂತಾದವನ್ನು ಕುರಿತ ಸಲಹೆಗಳನ್ನು ನೀಡುವ ಪರಿಪಾಟಿಯಿದೆ. ಸಲಹಾನ್ವೇಷಿ (ಕೌನ್ಸೆಲೀ) ತನ್ನ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಳ್ಳಲು ನುರಿತ ಸಲಹೆಗಾರ (ಕೌನ್ಸೆಲರ್) ನೆರವಾಗುತ್ತಾನೆ.

ಮಾನಸಿಕ ಆರೋಗ್ಯವೇ ಅಲ್ಲದೆ, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲೂ ಮನಶ್ಶಾಸ್ತ್ರಜ್ಞರು ಆಸ್ಪತ್ರೆಗಳ ಆಡಳಿತ, ವೈದ್ಯಕೀಯ ಸೇವೆಗಳು, ಸಿಬ್ಬಂದಿಯ ಆಯ್ಕೆ, ಮಾನವ ಸಂಬಂಧಗಳು, ಮನೋಭಾವಗಳು ಮುಂತಾದ ಸಮಸ್ಯೆಗಳ ಅಧ್ಯಯನದಲ್ಲಿ ತೊಡಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮ ದೇಶದಲ್ಲಿ ಕುಟುಂಬ ಯೋಜನೆಗೆ ವಿರೋಧದ ಕಾರಣಗಳನ್ನು ಅರ್ಥಮಾಡಿಕೊಳ್ಳಲು ಈ ಕಾರ್ಯಕ್ರಮದಲ್ಲಿ ಮನೋವಿಜ್ಞಾನಿಗಳ ಸಹಾಯವನ್ನು ಕೋರಲಾಗಿದೆ.

ಮನಶ್ಶಾಸ್ತ್ರವನ್ನು ಬಹಳ ಹಿಂದೆಯೇ ಬಳಸಿಕೊಂಡ ಕ್ಷೇತ್ರಗಳಲ್ಲಿ ಶಿಕ್ಷಣವೂ ಒಂದು. ಶಿಕ್ಷಣದ ಒಂದು ತುರ್ತು ಆವಶ್ಯಕತೆಯಿಂದ–ಎಂದರೆ ಮಾನಸಿಕವಾಗಿ ಹಿಂದುಳಿದವರ ಶಿಕ್ಷಣದ ಅಗತ್ಯದಿಂದ–ಇದು ಕುಡಿಯೊಡೆಯಿತು. ಬುದ್ಧಿಶಕ್ತಿಯ ಪ್ರಥಮ ವೈಯಕ್ತಿಕ ಮಾಪನ ವಿಧಾನವನ್ನು ರೂಪಿಸಿದವನು ಫ್ರೆಂಚ್ ಮನಶ್ಶಾಸ್ತ್ರಜ್ಞ ಆಲ್‌ಫ್ರೆಡ್ ಬೀನೇ (1857–1911) ಎಂಬುದು ಈಗಾಗಲೇ ಪ್ರಸಿದ್ಧವಾಗಿದೆ. ಮಾನಸಿಕವಾಗಿ ಹಿಂದುಳಿದ ಮಕ್ಕಳ ಶಿಕ್ಷಣ ಸಮಸ್ಯೆಯನ್ನು ಆತ ಎದುರಿಸಬೇಕಾಗಿತ್ತು. ಕಲಿಕೆಯ ವರ್ಗಾವಣೆಯನ್ನು (ಟ್ರಾನ್ಸ್‌ಫರ್ ಆಫ್ ಟ್ರೇನಿಂಗ್) ಕುರಿತು ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಆರ್. ಎಲ್. ಥಾರ್ನ್‌ಡೈಕ್ ಮಾಡಿದ ಸಂಶೋಧನೆಯಿಂದ ಶಿಕ್ಷಣದ ಮೇಲೆ ತತ್‌ಕ್ಷಣದ ಪರಿಣಾಮವುಂಟಾಯಿತು. ಇತ್ತೀಚೆಗೆ ಸ್ಕಿನ್ನರನ ಸಂಶೋಧನೆಗಳಿಂದ ಕಾರ್ಯ ಕ್ರಮಬದ್ಧ ಕಲಿಕೆಯ (ಪ್ರೋಗ್ರಾಮ್ಡ್ ಲರ್ನಿಂಗ್) ಬೆಳೆವಣಿಗೆಯಾಗಿದೆ.

ಬುದ್ಧಿಶಕ್ತಿ, ಸಹಜ ಪ್ರವೃತ್ತಿ, ಸಾಧನೆ ಮತ್ತು ಅಭಿರುಚಿಗಳಲ್ಲಿ ವೈಯಕ್ತಿಕ ವ್ಯತ್ಯಾಸಗಳು, ಶಾಲಾ ವಿದ್ಯಾರ್ಥಿಗಳ ವ್ಯಕ್ತಿತ್ವ ಕಲಿಕೆಯ ಮೇಲೆ ಇವುಗಳ ಪರಿಣಾಮ ಇವನ್ನೆಲ್ಲ ಅಳೆಯುವುದು ಶಿಕ್ಷಣ ಮನಶ್ಶಾಸ್ತ್ರದ ಕೆಲಸ. ಪಠ್ಯ ವಿಷಯಗಳ ಕಲಿಕೆ, ಶೀಲರಚನೆ, ಸೂಕ್ತ ಮನೋಭಾವಗಳ ಮತ್ತು ಮೌಲ್ಯಗಳ ಸಂವರ್ಧನೆ ಇವನ್ನು ಕುರಿತ ಸಮಸ್ಯೆಗಳು ಸಾಮಾನ್ಯವಾಗಿ ಶಿಕ್ಷಣಮನಶ್ಶಾಸ್ತ್ರಜ್ಞರ ಹವ್ಯಾಸ. ಇದರಿಂದಾಗಿ ಅಮೆರಿಕದ ಮನಶ್ಶಾಸ್ತ್ರ ಸಂಘದಲ್ಲಿ ಒಂದು ವಿಶೇಷ ವಿಭಾಗ ಆರಂಭವಾಗಿದೆ. ಶಾಲಾ ಮನಶ್ಶಾಸ್ತ್ರಜ್ಞನೆಂಬ ವಿಶೇಷಜ್ಞನೇ ಇದ್ದಾನೆ. ಮಕ್ಕಳ ಹೊಂದಾವಣಿಯ ಸಮಸ್ಯೆಗಳಲ್ಲಿ ಆತನ ಆಸಕ್ತಿ. ಇವನ್ನು ಅರಿಯಬೇಕಾದರೆ ಮಗುವಿನ ಸಾಮಾಜಿಕ ಒತ್ತಡಗಳನ್ನೂ ಅದು ನಿರ್ವಹಿಸಬೇಕಾದ ಕರ್ತವ್ಯಗಳನ್ನೂ ತಿಳಿದುಕೊಳ್ಳುವುದೇ ಅಲ್ಲದೆ, ಅದರ ಬೆಳೆವಣಿಗೆಗೆ ಸಂಬಂಧಿಸಿದ ಒತ್ತಡ ಮತ್ತು ತ್ರಾಸಗಳನ್ನೂ ಅರ್ಥಮಾಡಿಕೊಳ್ಳುವುದು ಅತ್ಯಾವಶ್ಯಕ. ಉದ್ಯಮಕ್ಷೇತ್ರವನ್ನು ಪ್ರವೇಶಿಸಿರುವ ಸಾಮಾಜಿಕ ವಿಜ್ಞಾನ ಈ ಕ್ಷೇತ್ರದಲ್ಲೂ ಕಾಲಿಟ್ಟಿದೆ. ಆದ್ದರಿಂದ ಶಿಕ್ಷಣ ಮನಶ್ಶಾಸ್ತ್ರಜ್ಞನಾದವನು ಶಾಲಾ ಆಡಳಿತ ಮತ್ತು ಸಂಘಟನೆ, ಬೋಧಕರ ಪ್ರಭಾವ, ಬೋಧನೆಯ ವಿವಿಧ ವಿಧಾನಗಳ ಪರಿಣಾಮಕತೆ ಮತ್ತು ಬೋಧಕರ ತರಬೇತಿಗಳಿಗೆ ಸಂಬಂಧಿಸಿದ ಸಮಸ್ಯೆಯನ್ನು ಅಧ್ಯಯನ ಮಾಡಬೇಕಾಗುತ್ತದೆ.

ಪಠ್ಯ ವಿಷಯಗಳ ಆಯ್ಕೆ ಮತ್ತು ಉದ್ಯೋಗದ ಆಯ್ಕೆಗಳ ವಿಚಾರವಾಗಿ ಶಾಲಾ ಬಾಲಕಬಾಲಕಿಯರಿಗೆ ಮಾರ್ಗದರ್ಶನ ನೀಡುವ ಕಾರ್ಯದಲ್ಲಿ ತೊಡಗಿರುವ ಸಂಸ್ಥೆ (ಬ್ಯೂರೊ) ಭಾರತದ ಪ್ರತಿಯೊಂದು ರಾಜ್ಯದಲ್ಲೂ ಇದೆ. ಶಿಕ್ಷಕರ ಶಿಕ್ಷಣ ತರಗತಿಗಳಲ್ಲಿ ಶಿಕ್ಷಣಮನಶ್ಶಾಸ್ತ್ರವೂ ಒಂದು ಪಠ್ಯ ವಿಷಯ. ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಸಂಸ್ಥೆಯಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದು ಪೂರ್ಣ ವಿಭಾಗವನ್ನೇ ತೆರೆಯಲಾಗಿದೆ.

ಸಮಾಜ ಕಲ್ಯಾಣ ಕ್ಷೇತ್ರವೂ ಮನಶ್ಶಾಸ್ತ್ರಜ್ಞನಿಗೆ ಹೊರಗಾದುದಲ್ಲ. ಮಾನವನ ಸಂಕಟವನ್ನು ಪರಿಹರಿಸಲು ಸಹಕಾರಿಯಾಗಿರುವ ಅನೇಕ ಸಾಮಾಜಿಕ ಸಂಸ್ಥೆಗಳೊಂದಿಗೆ ಮನಶ್ಶಾಸ್ತ್ರಜ್ಞರೂ ಕಾರ್ಯಪ್ರವೃತ್ತರಾಗಿದ್ದಾರೆ. ಕುಂಟ ಹೆಳವ ಮಕ್ಕಳು, ಕುರುಡರು, ಕಿವುಡರು ಮುಂತಾದ ನತದೃಷ್ಟ ಜೀವಿಗಳಿಗೆ ನೆರವೀಯುವ ಅನೇಕ ಸಂಸ್ಥೆಗಳಿವೆ. ಸಂವೇಗಾತ್ಮಕ (ಇಮೋಷನಲ್) ಹೊಂದಾವಣೆ, ಕುಶಲತೆಯ ಕಲಿಕೆ ಮುಂತಾದವಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ಈ ಸಂಸ್ಥೆಗಳಲ್ಲಿ ಮನಶ್ಶಾಸ್ತ್ರಜ್ಞರನ್ನು ನೇಮಿಸಲಾಗಿರುತ್ತದೆ. ಸಮಾಜಕಲ್ಯಾಣ ಕ್ಷೇತ್ರದಲ್ಲಿ ಮುಪ್ಪಿನ ಸಮಸ್ಯೆಯ ಕಡೆಗೂ ಮನಶ್ಶಾಸ್ತ್ರಜ್ಞನ ಗಮನ ಹರಿದಿದೆ. ಇದು ಸಮಾಜ ಕಲ್ಯಾಣದ ಒಂದು ವಿಷಯ. ವಿವಾಹ ಮತ್ತು ಸಂಸಾರ ಸಮಸ್ಯೆಗಳ ಬಗ್ಗೆ ಜನಕ್ಕೆ ಸಲಹೆ ನೀಡುವ ಸಂಸ್ಥೆಗಳೂ ಉಂಟು.

ಭಾರತದ ಕೃಷಿಸಂಶೋಧನೆ ಸಂಸ್ಥೆಗಳ ಒಬ್ಬ ಮನಶ್ಶಾಸ್ತ್ರಜ್ಞ ಕಾರ್ಯನಿರತನಾಗಿದ್ದಾನೆಂಬುದು ಗಮನಾರ್ಹ ವಿಷಯ. ಕೃಷಿಕ್ಷೇತ್ರದಲ್ಲಿ ನವೀನ ವಿಧಾನಗಳ ಅನ್ವಯದ ಬಗ್ಗೆ ರೈತರ ಮನೋಭಾವ ಮತ್ತು ಅವರ ವಿರೋಧಗಳನ್ನು ಅರ್ಥಮಾಡಿಕೊಳ್ಳಲು ಮನಶ್ಶಾಸ್ತ್ರದ ಜ್ಞಾನವನ್ನು ಬಳಸಿಕೊಳ್ಳುವುದನ್ನು ಭಾರತದಲ್ಲಿ ಒಪ್ಪಿಕೊಳ್ಳುತ್ತಿರುವುದು ಇದೇ ಮೊದಲು. ಕೃಷಿಪದ್ಧತಿಗಳನ್ನು ಸುಧಾರಿಸಲು ಇಂಥ ಅರಿವಿನಿಂದ ಮಾತ್ರ ಸಾಧ್ಯ.

ಭಾರತದಲ್ಲಿ ರಕ್ಷಣಾ ವಿಭಾಗ ಅತ್ಯಧಿಕ ಸಂಖ್ಯೆಯಲ್ಲಿ ಮನಶ್ಶಾಸ್ತ್ರಜ್ಞರನ್ನು ನೇಮಿಸಿಕೊಂಡಿದೆ. ದೆಹಲಿಯ ರಕ್ಷಣಾ ವಿಜ್ಞಾನ ಸಂಸ್ಥೆಯಲ್ಲಿ ಸೈನಿಕ ಸಮಸ್ಯೆಗಳನ್ನು ಕುರಿತು ಅಧ್ಯಯನ ನಡೆಸುತ್ತಿರುವ ಅನೇಕ ಮನಶ್ಶಾಸ್ತ್ರಜ್ಞರಿರುವ ಮನೋವೈಜ್ಞಾನಿಕ ಸಂಶೋಧನ ನಿರ್ದೇಶನ ಮಂದಿರವೇ ಇದೆ. ಇದಲ್ಲದೆ ಭಾರತದ ಅನೇಕ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಆಯ್ಕೆ ಮಂಡಳಿಗಳಲ್ಲಿ ಮನಶ್ಶಾಸ್ತ್ರಜ್ಞರಿದ್ದಾರೆ. ಸೈನ್ಯದ ಹುದ್ದೆಗಳಲ್ಲಿ ಸೂಕ್ತ ಹುದ್ದೆಗಳಲ್ಲಿ ಸೂಕ್ತ ಆಯ್ಕೆ ನಡೆಸುವಲ್ಲಿ ನೆರವಾಗುವುದು ಅವರ ಕರ್ತವ್ಯ. ವಿಮಾನಚಾಲಕರ ತರಬೇತಿ ಮತ್ತು ಸಮಸ್ಯೆಗಳಿಗೂ ಹಾರಾಟ ಸುರಕ್ಷೆಗೂ ಸಂಬಂಧಿಸಿದ ಆಕಾಶಯಾನ ಮನಶ್ಶಾಸ್ತ್ರವನ್ನು ಕುರಿತು ಕಾರ್ಯಪ್ರವೃತ್ತರಾದ ಮನಶ್ಶಾಸ್ತ್ರಜ್ಞರು ವಿಮಾನಪಡೆಯ ಪ್ರಧಾನ ಕಚೇರಿಯಲ್ಲಿದ್ದಾರೆ. ನೌಕಾಪಡೆಯಲ್ಲೂ ಮನಶ್ಶಾಸ್ತ್ರಜ್ಞರು ಕೆಲಸ ಮಾಡುತ್ತಿದ್ದಾರೆ. ಸಿಬ್ಬಂದಿಯ ಆಯ್ಕೆ ಮತ್ತು ತರಬೇತಿಗಳು ಮಾತ್ರವೇ ಅಲ್ಲದೆ ಅವರ ಕೌಶಲವನ್ನು ಉತ್ತಮಗೊಳಿಸುವುದೂ ಇವರ ಕಾರ್ಯಭಾರ. ನೈತಿಕ ಸ್ಥೈರ್ಯ, ಮಾನಸಿಕ

ಯುದ್ಧ ಮುಂತಾದುವುಗಳನ್ನೂ ಒತ್ತಡದ ಸಂದರ್ಭದಲ್ಲಿ ಯೋಧರ ಪ್ರತಿಕ್ರಿಯೆಗಳನ್ನೂ ಕುರಿತ ಸಮಸ್ಯೆಗಳ ಅಧ್ಯಯನವೇ ರಕ್ಷಣಾಕ್ಷೇತ್ರಗಳಲ್ಲಿ ಮನಶ್ಶಾಸ್ತ್ರಜ್ಞರ ಕಾರ್ಯಭಾರ. ಸೂಪರ್‌ಸಾನಿಕ್ ವಿಮಾನದ ನಿರ್ಮಾಣ ಮತ್ತು ಹಿಮಾಲಯದ ಎತ್ತರದ ಗಡಿಯಲ್ಲಿ ರಾಷ್ಟ್ರರಕ್ಷಣೆಯ ಅಗತ್ಯಗಳ ಫಲವಾಗಿ ಈ ಉನ್ನತ ಮಟ್ಟದಲ್ಲಿ ಮನುಷ್ಯರ ಪ್ರತಿಕ್ರಿಯೆಗಳೇನೆಂಬುದನ್ನು ಅಧ್ಯಯನ ಮಾಡುವುದು ಅವಶ್ಯವಾಗಿದೆ.

ಪ್ರತಿಯೊಂದು ಸಮಾಜಕ್ಕೂ ಅಪರಾಧಿಯದೊಂದು ನಿರಂತರ ಸಮಸ್ಯೆ. ಅಪರಾಧಿಗಳ ಪತ್ತೆ, ಸುಧಾರಣೆ ಮತ್ತು ಪುನರುತ್ಥಾನ ಇವುಗಳಲ್ಲೂ ಮನಶ್ಶಾಸ್ತ್ರಜ್ಞರು ನಿರತರಾಗಿದ್ದಾರೆ. ಅನೇಕ ದೇಶಗಳಲ್ಲಿ ಬಾಲಾಪರಾಧ ಒಂದು ಜಟಿಲ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಇದರ ಫಲವಾಗಿ ಅನೇಕ ಮನೋವಿಜ್ಞಾನಿಗಳು ಬಾಲಾಪರಾಧಿಗಳನ್ನು ತಿದ್ದುವ ಕಾರ್ಯದಲ್ಲಿ ತೊಡಗಿದ್ದಾರಲ್ಲದೆ ಕಾನೂನಿನ ದೃಷ್ಟಿಯಲ್ಲಿ ತಪ್ಪಿತಸ್ಥರಾದ ಕಿರಿಯರ ಬಂಧನಾವಧಿಯಲ್ಲಿ ಅವರ ಹಿತರಕ್ಷಣೆಯ ಹೊಣೆ ವಹಿಸುತ್ತಾರೆ. ಸಾಕ್ಷ್ಯ ಮತ್ತು ರುಜುವಾತುಗಳನ್ನು ವಿಶ್ಲೇಷಿಸುವ ಕಾರ್ಯದಲ್ಲೂ ಮನಶ್ಶಾಸ್ತ್ರಜ್ಞರು ನಿರತರಾಗಿದ್ದಾರೆ. (ಎಸ್.ಕೆ.ಎಂ.)

**ಔರಂಗ್‌ಜ಼ೇಬ್:** 1618–1707. ಭಾರತದ ಆರನೆಯ ಮೊಗಲ್ ಚಕ್ರವರ್ತಿ. ಷಾಜಹಾನನ (ನೋಡಿ– ಷಾಜಹಾನ್) ಮೂರನೆಯ ಮಗ. 1618ರ ನವೆಂಬರ್ 23 ರಂದು ಗುಜರಾತಿನ ದೋಹಾದಿನಲ್ಲಿ ಜನಿಸಿದ. ತಾಯಿ ಮುಮ್ತಾಜ಼್ ಮಹಲ್. ಚಿಕ್ಕಂದಿನಲ್ಲಿ ಈತ ಒಳ್ಳೆಯ ಶಿಕ್ಷಣ ಪಡೆದ. ಅರಬ್ಬೀ ಮತ್ತು ಪಾರಸೀ ಭಾಷೆಯನ್ನು ಚೆನ್ನಾಗಿ ಅರಿತ. ಈತನ ತಾಯಿನುಡಿ ಉರ್ದು. ಹಿಂದಿ ಮತ್ತು ತುರ್ಕಿಭಾಷೆಗಳಲ್ಲಿ ಮಾತಾಡಬಲ್ಲವನೂ ಆಗಿದ್ದ. 1636ರಲ್ಲಿ ದಖನ್ ಪ್ರಾಂತ್ಯಗಳ ವೈಸ್‌ರಾಯಿಯಾಗಿ ನೇಮಕವಾದಾಗಲೇ ಈತನ ಯೋಗ್ಯತೆ ಪ್ರಥಮವಾಗಿ ಪ್ರಕಾಶಕ್ಕೆ ಬಂತು. ಆದರೆ ಅಣ್ಣನಾದ ದಾರಾಗೂ ಈತನಿಗೂ ಮನಸ್ತಾಪ ಬಂದುದರಿಂದ ಔರಂಗ್‌ಜೇಬ್ ಈ ಹುದ್ದೆಗೆ ರಾಜೀನಾಮೆ ಕೊಟ್ಟ. ಮರುವರ್ಷ ಇವನಿಗಾಗಿ ಗುಜರಾತಿನ ರಾಜ್ಯಪಾಲ ಹುದ್ದೆ ಕಾದಿತ್ತು. 1647ರಲ್ಲಿ ಇವನನ್ನು ಬಲ್ಖ್ ಮತ್ತು ಬಡಕ್‌ಷಾನ್ ಪ್ರದೇಶಕ್ಕೆ ಕಳಿಸಲಾಯಿತು. ಮಧ್ಯ ಏಷ್ಯದಲ್ಲಿ ಮೊಗಲರಿಗೆ ಹಿಂದೆ ಸೇರಿದ್ದ ಪ್ರಾಂತ್ಯಗಳನ್ನು ಗೆಲ್ಲಬೇಕೆಂದು ತಂದೆ ಷಾಜಹಾನನ ಆಕಾಂಕ್ಷೆಯಾಗಿತ್ತು. ಆದರೆ ಈ ಯುದ್ಧಗಳು ನಿರ್ಣಾಯಕವಾಗಿ ಪರಿಣಮಿಸಲಿಲ್ಲ. ಖಜಾನೆ ಬರಿದಾಯಿತು. ಔರಂಗ್‌ಜ಼ೇಬನ ಶೌರ್ಯಕೌಶಲಗಳು ಅಸಾಧಾರಣವಾದುವಾಗಿದ್ದರೂ ಆ ಚಳಿನಾಡಿನಲ್ಲಿ ಹೋರಾಟ ಮುಂದುವರಿಸುವುದು ಸೂಕ್ತವೆನಿಸಲಿಲ್ಲವಾದ್ದರಿಂದ ತಂದೆ ಇವನನ್ನು ಹಿಂದಕ್ಕೆ ಕರೆಯಿಸಿಕೊಂಡ. 1648ರಲ್ಲಿ ಈತ ಮುಲ್ತಾನಿನ ರಾಜ್ಯಪಾಲನಾದ. ಮರುವರ್ಷ ಸಿಂಧ್ ಕೂಡ ಇವನ ಆಡಳಿತಕ್ಕೆ ಒಳಪಟ್ಟಿತು. ಪರ್ಷಿಯನ್ನರು ಏರಿಬಂದಿದ್ದ ಕಾಂದಹಾರಿನ ವಿಮೋಚನೆಗಾಗಿ 1649ರಲ್ಲಿ ಇವನನ್ನು ಸೈನ್ಯದೊಂದಿಗೆ ಕಳಿಸಲಾಯಿತು. ಆದರೆ ಔರಂಗ್‌ಜ಼ೇಬ್ ಹೋಗುವ ವೇಳೆಗೆ ಅದು ಅವರಿಗೆ ಅಧೀನವಾಗಿತ್ತು. ಪರ್ಷಿಯನ್ನರನ್ನು ಜಗ್ಗಿಸಲು ಇವನ ಸೈನ್ಯದಿಂದಾಗಲಿಲ್ಲ. ಮೂರು ವರ್ಷಗಳ ಅನಂತರ ಮತ್ತೆ ನಡೆಸಿದ ಯತ್ನವೂ ವಿಫಲವಾಯಿತು. 1652ರಲ್ಲಿ ಈತ ಮತ್ತೆ ದಖನ್ನಿನ ವೈಸ್‌ರಾಯಿಯಾದ. ಅಲ್ಲಿಯ ಆಡಳಿತವನ್ನು ಸುಧಾರಿಸಿ, ವರಮಾನ ಹೆಚ್ಚಿಸಿದ. ಗೋಲ್ಕಂಡ ಮತ್ತು ಬಿಜಾಪುರಗಳ ಮೇಲೆ ಕ್ರಮವಾಗಿ 1656 ಮತ್ತು 1657ರಲ್ಲಿ ದಂಡೆತ್ತಿಹೋದ. ಆದರೆ ಷಾಜಹಾನ್ ಅಡ್ಡಬಂದುದರಿಂದ ಈ ಆಕ್ರಮಣಗಳನ್ನು ಔರಂಗ್‌ಜ಼ೇಬ್ ಮುಂದುವರಿಸಲಾಗಲಿಲ್ಲ.

ಅಷ್ಟರಲ್ಲಿ (1657) ಷಾಜಹಾನ್ ಕಾಯಿಲೆಯಿಂದ ಮಲಗಿದ. ತನ್ನ ಹಿರಿಯ ಮಗ ದಾರಾ ಷುಕೋ ಚಕ್ರವರ್ತಿಯಾಗಬೇಕೆಂಬುದು ಷಾಜಹಾನನ ಇಚ್ಛೆಯಾಗಿತ್ತು. ಆತ ತಂದೆಗೊಡನೆಯೇ ದೆಹಲಿಯಲ್ಲಿದ್ದ. ಎರಡನೆಯ ಮಗ ಷೂಜಾ ಬಂಗಾಲದಲ್ಲಿ ವೈಸ್‌ರಾಯಿಯಾಗಿದ್ದ. ಔರಂಗ್‌ಜ಼ೇಬನ ತಮ್ಮ–ಷಾಜಹಾನನ ಕೊನೆಯ ಮಗ–ಮುರಾದ್ ಇದ್ದದ್ದು ಗುಜರಾತಿನಲ್ಲಿ ವೈಸ್‌ರಾಯಿಯಾಗಿ. ತಂದೆಯ ಜಡ್ಡಿನ ಸುದ್ದಿ ಬಂದೊಡನೆಯೇ ಷೂಜಾ ಬಂಗಾಳದ ಚಕ್ರವರ್ತಿಯೆಂದು ಸಾರಿಕೊಂಡ. ಮುರಾದನೂ ಷೂಜಾನ ಮಾರ್ಗವನ್ನೇ ಅನುಸರಿಸಿದ. ಈ ಸ್ಪರ್ಧೆಯಲ್ಲಿ ಔರಂಗ್‌ಜ಼ೇಬ್ ಹಿಂದೆ ಬೀಳಲಿಲ್ಲ. ಸಾಮ್ರಾಜ್ಯವನ್ನು ಎರಡು ಭಾಗ ಮಾಡಿ ತನಗೊಂದು ಪಾಲು ಕೊಡಬೇಕೆಂಬ ಷರತ್ತಿನ ಮೇಲೆ ಮುರಾದನಿಗೆ ಜೊತೆಯಾದ. ಇವರಿಬ್ಬರ ಸಂಯುಕ್ತ ಸೇನೆಗಳಿಗೂ ಷಾಜಹಾನನ ಸೇನೆಗೂ ನಡುವೆ ಯುದ್ಧಗಳು ನಡೆದುವು. ದಾರಾ ಷುಕೋ ಸೋತು ಆಗ್ರಕ್ಕೆ ಪಲಾಯನ ಮಾಡಿದ. ಔರಂಗ್‌ಜ಼ೇಬ್ ಮುರಾದರ ಸೈನ್ಯಗಳು ಬೆನ್ನಟ್ಟಿ ನಡೆದು, ಆಗ್ರವನ್ನು ಮುತ್ತಿ ಗೆದ್ದುವು (1658ರ ಜೂನ್ 8). ಷಾಜಹಾನ್ ಆಮರಣಾಂತ ಬಂದಿಯಾದ. 1657ರಲ್ಲಿ ಗುಜರಾತಿನಲ್ಲಿ ತನ್ನ ದಿವಾನನ ಕೊಲೆ ಮಾಡಿಸಿದನೆಂಬ ಅಪವಾದವನ್ನು ಮುರಾದನ ಮೇಲೆ ಔರಂಗ್‌ಜ಼ೇಬ್ ಹೊರಿಸಿ ಅವನನ್ನು ಮರಣಕ್ಕೆ ಗುರಿಪಡಿಸಿದ. ಈ ನಡುವೆ ದಾರಾನ ಮಗನಿಂದ ಹಿಂದೆಯೇ ಸೋತಿದ್ದ ಷೂಜಾ ಗರಿಗೂಡಿಸಿಕೊಳ್ಳುತ್ತಿದ್ದದ್ದನ್ನು ಅರಿತ ಔರಂಗ್‌ಜ಼ೇಬ್ ಅವನ ವಿರುದ್ಧವಾಗಿ ಖುದ್ದಾಗಿ ಯುದ್ಧ ನಡೆಸಿದಾಗ ಷೂಜಾ ಸೋತ. ಓಡಿಹೋಗುತ್ತಿದ್ದ ಅವನನ್ನು ಔರಂಗ್‌ಜ಼ೇಬನ ಸೈನ್ಯ ಬೆನ್ನಟ್ಟಿತು. ಆತ ದಖನ್ನಿಗೆ ಹೋಗಿ ಅಲ್ಲಿಂದ ಅರಕಾನಿಗೆ ಪಲಾಯನ ಮಾಡಿದ. ಅವನೂ ಅವನ ಸಂಸಾರದವರೂ ಅಲ್ಲಿ ನಾಶಹೊಂದಿದರು. ಇನ್ನುಳಿದಿದ್ದವ ದಾರಾ ಮಾತ್ರ. ಆಗ್ರದಿಂದ ಓಡಿಹೋಗಿದ್ದ ಅವನೊಂದಿಗೆ ಔರಂಗ್‌ಜ಼ೇಬನ ಸೈನ್ಯ ಕಾದಿ ಅವನನ್ನು ಹಿಡಿತಂದಿತು. ದಾರಾಗೆ ಔರಂಗ್‌ಜ಼ೇಬನಿಂದ ಆದ ಅವಮಾನ ಅಷ್ಟಿಷ್ಟಲ್ಲ. ಧರ್ಮಭ್ರಷ್ಟನೆಂಬ ಅಪವಾದದ ಮೇಲೆ ಅವನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ತಪ್ಪು ಸಾಬೀತಾಯಿತು. 1659ರ ಆಗಸ್ಟ್ 30ರಂದು ಆತ ಮರಣದಂಡನೆಗೆ ಗುರಿಯಾದ. ಔರಂಗ್‌ಜ಼ೇಬನ ಸೋದರರೆಲ್ಲ ನಿರ್ನಾಮವಾದ ಮೇಲೆ ಅವನಿಗೆ ನಿರಾತಂಕವಾಯಿತು. 1658ರ ಜುಲೈ 21ರಂದೇ ಷಾ ಜಹಾನ್ ಬಂಧನಕ್ಕೊಳಗಾದಾಗ–ಅನೌಪಚಾರಿತನಾಗಿ ಕಿರೀಟಧಾರಿಯಾಗಿದ್ದ ಔರಂಗ್‌ಜ಼ೇಬನ ಕೈ ತಡೆಯುವವರು ಯಾರೂ ಇರಲಿಲ್ಲ. 1659ರ ಜೂನಿನಲ್ಲಿ ಆತ ಅಲಂಗೀರ್ (ವಿಶ್ವವಿಜೇತ) ಎಂಬ ಬಿರುದು ತಾಳಿ ಅಧಿಕೃತವಾಗಿ ಸಿಂಹಾಸನವನ್ನೇರಿ ದೀರ್ಘಕಾಲ ಆಳ್ವಿಕೆ ನಡೆಸಿದ.

ತನ್ನ ಹಿರಿಯರಂತೆ ಔರಂಗ್‌ಜ಼ೇಬನೂ ಭಾರತದಲ್ಲಿ ಮೊಗಲ್ ಚಕ್ರಾಧಿಪತ್ಯವನ್ನು ವಿಸ್ತರಿಸಿದ. ಇವನ ಆಳ್ವಿಕೆಯ ಮೊದಲ ಭಾಗ (1658–81) ಉತ್ತರ ಭಾರತದಲ್ಲಿ ತನ್ನ ಅಧಿಕಾರವನ್ನು ಕ್ರೋಡೀಕರಿಸಿಕೊಳ್ಳುವುದಕ್ಕೇ ವಿನಿಯೋಗವಾಯಿತು. 1662ರಲ್ಲಿ ಪಶ್ಚಿಮ ಅಸ್ಸಾಂ ಇವನ ಅಧೀನವಾಯಿತು. ಔರಂಗ್‌ಜ಼ೇಬ್ 1666ರಲ್ಲಿ ಚಿತ್ತಗಾಂಗನ್ನು ವಶಪಡಿಸಿಕೊಂಡ. ವಾಯವ್ಯಗಡಿನಾಡಿನಲ್ಲಿ ದಂಗೆಯೆದ್ದ (1667) ಆಫ್ಘನರನ್ನು 1675ರ ವೇಳೆಗೆ ಅಡಗಿಸಲಾಯಿತು. ಅನೇಕ ವಿದೇಶೀ ಮುಸ್ಲಿಂ ರಾಜ್ಯಗಳು ಇವನೊಂದಿಗೆ ರಾಯಭಾರ ಸಂಬಂಧ ಬೆಳೆಸಿದುವು 1679ರಲ್ಲಿ ರಜಪೂತರೊಂದಿಗೆ ಔರಂಗ್‌ಜೇಬ್ ಯುದ್ಧ ಹೂಡಿದ. 1681ರ ಮೇವಾಡದ ರಾಣನೊಂದಿಗೆ ಶಾಂತಿಯ ಒಪ್ಪಂದ ಮಾಡಿಕೊಳ್ಳಲಾಯಿತು.

ಅನಂತರ ಔರಂಗ್‌ಜ಼ೇಬನ ಗಮನ ದಕ್ಷಿಣದತ್ತ ತಿರುಗಿತು. 1685ರಲ್ಲಿ ಈತ ಬಿಜಾಪುರದ ಮುಸ್ಲಿಂ ಷಿಯ ರಾಜ್ಯಗಳನ್ನು ಗೆದ್ದುಕೊಂಡ. 1689ರಲ್ಲಿ ಗೋಲ್ಕಂಡ ಇವನ ಬಗಲಿಗೆ ಬಿತ್ತು. ಹೀಗೆ ಇವನ ಚಕ್ರಾಧಿಪತ್ಯ ಕೋರಮಂಡಲದಿಂದ ಚಿತ್ತಗಾಂಗಿನವರೆಗೂ ಉತ್ತರದಲ್ಲಿ ಹಿಂದೂಕುಷ್‌ವರೆಗೂ ಹಬ್ಬಿತಾದರೂ ದಖನ್ ಪ್ರದೇಶ ಇವನಿಗೆ ತೊಂದರೆ

ಕೊಡುತ್ತಲೇ ಇತ್ತು. ಮರಾಠರನ್ನು ಅಡಗಿಸುವುದು ಸಾಧ್ಯವಾಗಲಿಲ್ಲ. 1689ರಲ್ಲಿ ಶಿವಾಜಿಯ ಮಗನಾದ ಶಂಭುಜಿಯನ್ನು ಹಿಡಿದು ಕೊಲ್ಲಲಾಯಿತು. ರಾಜಧಾನಿ ರಾಯಗಢವೂ ವಶವಾಯಿತು. ಶಿವಾಜಿಯ ಕಿರಿಯ ಮಗ ಸಾಹುವನ್ನು ಔರಂಗ್‌ಜ಼ೇಬ್ ಸೆರೆಯಲ್ಲಿಟ್ಟ. ತಂಜಾವೂರು ತಿರುಚಿನಾಪಳ್ಳಿಗಳ ಹಿಂದೂ ರಾಜರು ಔರಂಗ್‌ಜ಼ೇಬನ ಸಾಮಂತರಾದರು. ಆದರೂ ಔರಂಗ್‌ಜ಼ೇಬನಿಗೆ ನೆಮ್ಮದಿ ದೊರಕಲಿಲ್ಲ. ಇವನ ಮಹಾ ಸಾಮ್ರಾಜ್ಯದ ಅತಿಯಾದ ವಿಸ್ತೀರ್ಣವೇ ಒಂದು ಹೊರೆಯಾಯಿತು. ಇದರ ಮೇಲೆ ಹತೋಟಿ ಇಟ್ಟುಕೊಳ್ಳುವುದು ಸುಲಭವಾಗಲಿಲ್ಲ. ಒಂದು ಕೇಂದ್ರದಿಂದ ಒಬ್ಬನ ನಿರ್ವಹಣೆಗೆ ಇದನ್ನೆಲ್ಲ ಒಳಪಡಿಸುವುದು ಅಸಾಧ್ಯವೇ ಎನಿಸಿತು. 1667–75ರ ಆಫ್ಘನ್ ಯುದ್ಧಗಳಿಂದಾಗಿ ಔರಂಗ್‌ಜ಼ೇಬನ ಬೊಕ್ಕಸ ಬರಿದಾಗಿತ್ತು. ಆಫ್ಘನ್ ಸಿಪಾಯಿಗಳನ್ನು ಯುದ್ಧಕ್ಕೆ ಬಳಸಿಕೊಳ್ಳುವುದಂತೂ ಸಾಧ್ಯವಿರಲಿಲ್ಲ. ಶಿವಾಜಿಯ ವಿರುದ್ಧವಾಗಿ ಸೆಣಸುವುದು ಕಠಿಣವಾದುದಕ್ಕೆ ಇದೂ ಒಂದು ಕಾರಣ. 1669ರಲ್ಲಿ ಮಥುರಾದಲ್ಲಿ ಜಾಟರೂ 1671ರಲ್ಲಿ ಬುಂದೇಲ್‌ಖಂಡ ಮತ್ತು ಮಾಳ್ವದಲ್ಲಿ ಬುಂದೇಲರೂ 1672ರಲ್ಲಿ ಪಟಿಯಾಲದ ಶತಮಾನಿಗಳು ಆಳ್ವರದ ಮೇವಟಿಗಳೂ ದಂಗೆಯೆದ್ದರು. ಇವರನ್ನೆಲ್ಲ ನಿರ್ದಯೆಯಿಂದ ಔರಂಗ್‌ಜ಼ೇಬ್ ಅಡಗಿಸಿದ. ಆದರೂ ಈ ದಂಗೆಗಳು ಮೊಗಲ್ ಆಳ್ವಿಕೆಯ ವಿರುದ್ಧ ಇದ್ದ ಶಕ್ತಿಗಳ ಪ್ರತೀಕಗಳಾಗಿದ್ದುವು. ಪಂಜಾಬಿನಲ್ಲಿ ಸಿಖ್ಖರಲ್ಲಿ ಜಾಗೃತಿ ಉಂಟಾಗಿತ್ತು. ಅವರೂ ಸಂಘಟಿತರಾಗುತ್ತಿದ್ದರು. 1663ರಲ್ಲಿ ತಮ್ಮ ಮೇಲೆ ಹೊರಿಸಲಾಗಿದ್ದ ಕೌಲನ್ನು ಅಸ್ಸಾಮಿನ ಅಹೋಂಗಳು ಕಿತ್ತೊಗೆದು 1671ರಲ್ಲಿ ತಮ್ಮ ನೆಲವನ್ನು ಮತ್ತೆ ಗೆದ್ದುಕೊಂಡರು. ಮರಾಠರಾದರೂ ಸುಮ್ಮನಿರಲಿಲ್ಲ. ಶಂಭೂಜಿಯ ತಮ್ಮ ರಾಜಾರಾಮನೂ ಅವನ ಮರಣಾನಂತರ ಅವನ ಪತ್ನಿ ತಾರಾಬಾಯಿಯೂ ಮೊಗಲರ ವಿರುದ್ಧ ಹೋರಾಟ

ಮುಂದುವರಿಸಿದರು. ಔರಂಗ್‌ಜೇಬನ ಕಣ್ಣಮುಂದೆಯೇ ಎಷ್ಟೋ ಪ್ರದೇಶಗಳು ಮರಾಠರ ವಶವಾದುವು. ಹೀಗೆ ಔರಂಗ್‌ಜೇಬನ ಆಳ್ವಿಕೆಯ ಕಾಲದ ಉತ್ತರಾರ್ಧವನ್ನೆಲ್ಲ (1681–1707) ಆತ ದಖನನ್ನು ಮೆಟ್ಟನಿಲ್ಲುವುದಕ್ಕೆ ವಿನಿಯೋಗಿಸಬೇಕಾಯಿತು. ಇದಕ್ಕಾಗಿ ಮಾಡಬೇಕಾಗಿಬಂದ ವೆಚ್ಚ ಅಗಾಧ. ಈ ಘಟನೆಗಳು ಮೊಗಲ್ ಸಾಮ್ರಾಜ್ಯವನ್ನು ವಿನಾಶದ ಹಾದಿಯಲ್ಲಿ ಕೊಂಡೊಯ್ದುವು. 1679–80ರ ರಜಪೂತ ಯುದ್ಧದಲ್ಲಿ ಔರಂಗ್‌ಜೇಬ್ ಗೆದ್ದಿದ್ದನಾದರೂ ಅಲ್ಲೂ ಈತ ಹಿಂದೂ ದೊರೆಗಳ ವಿರೋಧ ಗಳಿಸಿಕೊಂಡ. ಅಕ್ಬರನ ಸ್ನೇಹಮಾರ್ಗವನ್ನು ಈತ ಅನುಸರಿಸಲಿಲ್ಲ. ರಾಷ್ಟ್ರವೇ ಧರ್ಮಕ್ಕೆ ಅಧೀನವಾಯಿತು. ಕುರಾನಿನ ನ್ಯಾಯಕ್ಕನುಸಾರನಾಗಿ ರಾಜ್ಯವಾಳಲು ಯತ್ನಿಸಿದ ಈ ಸುನ್ನಿ ಮುಸಲ್ಮಾನ ಬುದ್ಧಿವಂತನಾದರೂ ಅವಿವೇಕಿ; ವಾಸ್ತವದೃಷ್ಟಿಹೀನ; ಮತಾಂಧ. ನಿಷ್ಠಾವಂತ ಮುಸ್ಲಿಮನ ನಿಷ್ಠುರ ನಿಯಮಗಳನ್ನೆಲ್ಲ ಈತ ತನ್ನ ಮೇಲೆ ವಿಧಿಸಿಕೊಂಡನಷ್ಟೇ ಅಲ್ಲ; ಇಡೀ ಚಕ್ರಾಧಿಪತ್ಯವನ್ನೇ ಇಸ್ಲಾಂ ಸಾಮ್ರಾಜ್ಯವಾಗಿ (ದಾರ್–ಉಲ್–ಇಸ್ಲಾಂ) ಪರಿವರ್ತಿಸಲೆತ್ನಿಸಿದ. ಇದರಿಂದ ಉದ್ಭವವಾದ ಅಸಹನೆಯ ನೆಲಗಟ್ಟಿನ ಮೇಲೆ ಆಡಳಿತ ನಡೆಸಲು ಯತ್ನಿಸಿದ್ದೇ ಔರಂಗ್‌ಜೇಬನ ಆಳ್ವಿಕೆಯ ಮಹಾದುರಂತ. 1564ರಲ್ಲಿ ಅಕ್ಬರ್ ರದ್ದುಮಾಡಿದ್ದ ಜೆಸಿಯಾ ಕಂದಾಯವನ್ನು ಈತ 1679 ರಲ್ಲಿ ಮತ್ತೆ ವಿಧಿಸಿದ. ಉನ್ನತ ಹುದ್ದೆಗಳಿಗೆ ಹಿಂದೂಗಳನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸಿದನೆಂದೂ ಅನೇಕ ಹಳೆಯ ಹಿಂದೂ ದೇವಸ್ಥಾನಗಳನ್ನು ನಾಶಗೊಳಿಸಿದನೆಂದೂ ಹೊಸದಾಗಿ ದೇಗುಲಗಳ ನಿರ್ಮಾಣ ಮಾಡಕೂಡದೆಂದು ವಿಧಿಸಿದನೆಂದೂ ಜೋಧಪುರದ ದೊರೆಯಾಗಿದ್ದ ಜಸ್ವಂತ್‌ಸಿಂಗನ ಮಗನನ್ನು ಬಲಾತ್ಕಾರದಿಂದ ಹಿಡಿದು ಇಸ್ಲಾಂ ಮತಕ್ಕೆ ಪರಿವರ್ತಿಸಲು ಪ್ರಯತ್ನಸಿದನೆಂದೂ ಹೇಳಲಾಗಿದೆ.

ವಿ. ರಾಘವೇಂದ್ರರಾಯರು ಹಿಂದೂ ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು ಎಂಬ ಪುಸ್ತಕದಲ್ಲಿ ಔರಂಗ್‌ಜೇಬನ ರಾಜ್ಯಭಾರದ ಬಗ್ಗೆ ಹೀಗೆ ಹೇಳುತ್ತಾರೆ; ಔರಂಗ್‌ಜೇಬನ ರಾಜ್ಯವ್ಯವಹಾರ ಭಿನ್ನಾಭಿಪ್ರಾಯಗಳಿಗೆ ಗುರಿಯಾಗಿದೆ. ಮುಸಲ್ಮಾನರು ಇವನನ್ನು ಒಬ್ಬ ಪೀರ್ ಅಂದರೆ ಸಂತನೆಂದು ತಿಳಿದಿರುವರು. ಕೆಲವು ಹಿಂದೂಗಳು ಇವನನ್ನು ಅಸುರೀ ಸ್ವಭಾವದವನೆಂದು ತಿಳಿದಿದ್ದಾರೆ. ಇವನಿಗೆ ಹಿಂದೂಗಳ ಮೇಲೆ ವೈಷಮ್ಯವಿದ್ದುದೇನೋ ನಿಜ. ಆದರೆ ಅದು ಅವನ ಮನಸ್ಸಿನಲ್ಲಿ ಏಕಾಏಕಿ ಹುಟ್ಟಲಿಲ್ಲ. ಪಟ್ಟಾಭಿಷಿಕ್ತನಾದ ಹತ್ತು ವರ್ಷಕಾಲ ಹಿಂದೂಗಳನ್ನು ರಕ್ಷಣೆಮಾಡಲು ಪ್ರಯತ್ನಪಟ್ಟ. ಕಾಶಿ ದೇವಾಲಯದ ಅರ್ಚಕರಿಗೆ ಅವರ ಹಕ್ಕು ಬಾಧ್ಯತೆಗಳನ್ನು ಸುರಕ್ಷಿತವಾಗಿ ಪಾಲಿಸುವೆನೆಂದು ಒಂದು ಅಭಯಪತ್ರ ಕೊಟ್ಟ. ಕಾಲಕ್ರಮದಲ್ಲಿ ಧರ್ಮಬೋಧಕರ ಕೈಯ ಸೂತ್ರದ ಬೊಂಬೆಯಾದ. ಹಿಂದೂಗಳ ಮೇಲೆ ಜೆಸಿಯಾ ತಲೆಗಂದಾಯವನ್ನು ಹಾಕಿದ. ಇಸ್ಲಾಮೀ ರಾಜನೀತಿಯಲ್ಲಿ ಜಿಮ್ಮಿಗಳ ಪುರಾತನ ದೇವಾಲಯಗಳನ್ನು ಸುರಕ್ಷಿತವಾಗಿ ಇಡಬಹುದು; ಆದರೆ ಹೊಸ ದೇವಸ್ಥಾನಗಳ ಸ್ಥಾಪನೆಗೆ ಅವಕಾಶವಿಲ್ಲ. ಈ ನೀತಿಯನ್ನು ಅನುಸರಿಸಿ ಔರಂಗ್‌ಜೇಬ್ ಅರ್ವಾಚೀನ ದೇವಸ್ಥಾನಗಳನ್ನು ನೆಲಸಮ ಮಾಡಬೇಕೆಂದು ಆಜ್ಞೆ ಇತ್ತ. ಇದೊಂದು ಸುಸಮಯವೆಂದು ತಿಳಿದು ಅಶಿಕ್ಷಿತಾದ ಇವನ ಅಧಿಕಾರಿಗಳು ಹಿಂದಿನವು ಇಂದಿನವು ಎಂದು ಎಣಿಸದೆ ಎಲ್ಲಾ ದೇವಸ್ಥಾನಗಳನ್ನು ಲೂಟಿಮಾಡಿ ತಮ್ಮ ಚಕ್ರವರ್ತಿಯನ್ನು ಅಪಕೀರ್ತಿಗೆ ಗುರಿಮಾಡಿದರು; ರಾಜ್ಯದಲ್ಲಿ ದೊಡ್ಡ ಕ್ರಾಂತಿಯ ಬೀಜ ಬಿತ್ತಿದರು.

ಔರಂಗಜೇಬನಿಗೆ ಹಿಂದೂಗಳಲ್ಲಿ ವ್ಯಕ್ತಿಶಃ ದ್ವೇಷವಿರಲಿಲ್ಲ. ರಜಪೂತರಾಜರು ಮೊದಲಿನಂತೆ ಇವನ ಸೈನ್ಯದಲ್ಲಿ ದುಡಿದರು; ಇವನಿಗೋಸ್ಕರ ಕಾಬೂಲ್ ಪ್ರಾಂತ್ಯದಲ್ಲೂ ದಖನ್ ಪ್ರಾಂತ್ಯದಲ್ಲೂ ತಮ್ಮ ಜೀವಗಳನ್ನು ಅರ್ಪಿಸಿದರು. ಇವನ ಖಾಸ ಕಾರ್ಯದರ್ಶಿ ವಾಲೀರಾಮ್ ಹಿಂದೂ ಇವನ ಹಣಕಾಸಿನ ಮಂತ್ರಿಗಳಲ್ಲಿ ಒಬ್ಬನಾದ ರಘುನಂದನರಾಯನೂ ಹಿಂದೂವೇ. ಈ ಚಕ್ರವರ್ತಿ ಕೇವಲ ಸಂಕುಚಿತ ಮನಸ್ಕನಾಗಿ ಸ್ವಂತ ಮಕ್ಕಳನ್ನೂ ಕೂಡ ನಂಬಲಿಲ್ಲ. ಆದ್ದರಿಂದಲೇ ಇವನ ತನುಜರೂ ಇವನ ಮುಸಲ್ಮಾನ್ ಸರದಾರರೂ ಇವನ ಮೇಲೆ ದಂಗೆ ಎದ್ದು ರಾಜ್ಯವನ್ನು ಚೂರುಚೂರಾಗಿ ಮಾಡಿದರು. ಇವರು ಹಾಕಿದ ಮೇಲ್ಪಂಕ್ತಿಯನ್ನು ರಜಪೂತರೂ ಮರಾಠರೂ ಸಿಖ್ಖರೂ ಅನುಸರಿಸಿದರು. ಇವರ ದಂಗೆ ಸ್ವರಾಜ್ಯಸ್ಥಾಪನೆಗೋಸ್ಕರ ಕೈಗೊಂಡದ್ದು; ಧರ್ಮವೈಷಮ್ಯದಿಂದ ಉದಿಸಿದುದು ಎಂಬುದು ನಿರಾಧಾರವಾದ ತಪ್ಪಿನ ಅಭಿಪ್ರಾಯ. ಮುಸಲ್ಮಾನರೂ ದಂಗೆಯೆದ್ದರು, ಹಿಂದೂಗಳೊಬ್ಬರೇ ಔರಂಗ್‌ಜೇಬನನ್ನು ಹಾಳು ಮಾಡಿದರೆಂಬುದು ತಪ್ಪಭಿಪ್ರಾಯ.

ಈ ವಿಚಾರ ಹೇಗಾದರೂ ಇರಲಿ, ಔರಂಗ್‌ಜೇಬ್ ದಖನ್ನನ್ನು ಹತೋಟಿಯಲ್ಲಿ ಟ್ಟುಕೊಳ್ಳುವ ಪ್ರಯತ್ನದಲ್ಲೇ ಅಹಮದ್‌ನಗರದಲ್ಲಿ ಸತ್ತ (1707ರ ಮಾರ್ಚ್ 3); ಅಶಾಂತಿಯ ಗೊಂದಲವನ್ನೆಬ್ಬಿಸಿ ಚಕ್ರಾಧಿಪತ್ಯವನ್ನು ತನ್ನ ಉತ್ತರಾಧಿಕಾರಿಗಳಿಗೆ ಬಿಟ್ಟುಹೋದ. ಇವನ ಜೀವಮಾನದ ಕಾಲದಲ್ಲೇ ಐರೋಪ್ಯ ಶಕ್ತಿಗಳು ಭಾರತದ ಮೇಲೆ ಕಣ್ಣುಹಾಕಿದ್ದುವು. ಈ ಸುಪ್ತ ಅಪಾಯವನ್ನು ಔರಂಗ್‌ಜೇಬ್ ಕಂಡರಿಯಲಿಲ್ಲ. ಹಿಂದೂ–ಮುಸ್ಲಿಂ, ಷಿಯ–ಸುನ್ನಿ ಮುಂತಾದ ಬಗೆಬಗೆಯ ಒಡಕುಗಳನ್ನು ಹೆಚ್ಚಿಸಿ ಭಾರತವನ್ನು ಪಾಶ್ಚಾತ್ಯರ ಕೈಯಲ್ಲಿಡಲು ಈತನೂ ತನಗರಿವಿಲ್ಲದೆಯೇ ಕಾರಣನಾದ.

ಔರಂಗ್‌ಜೇಬನ ಮುಖ್ಯ ಪತ್ನಿ ದಿಲ್‌ರಸ್ ಬಾನು ಬೇಗಂ. ಇವನಿಗೆ ಐವರು ಮಕ್ಕಳಿದ್ದರು. ತಾನು ತನ್ನ ತಂದೆಗೆ ಮಾಡಿದ್ದನ್ನೆ ತನ್ನ ಮಕ್ಕಳು ತನಗೂ ಮಾಡಿಯಾರೆಂದು ಈತ ಬಹಳ ಅಂಜಿದ್ದ. ಅವರನ್ನು ಆದಷ್ಟು ದೂರ ಇಟ್ಟಿದ್ದ. ಯಾರನ್ನೇ ಆಗಲಿ ನಂಬುವುದು ಇವನ ಸ್ವಭಾವವೇ ಅಲ್ಲ. ಈತನ ಮಕ್ಕಳ ಪೈಕಿ ಮಹಮ್ಮದ್ 1676ರಲ್ಲಿ ಗುಪ್ತ ಕೊಲೆಗೀಡಾದ. ಔರಂಗ್‌ಜೇಬನ ಅನಂತರ ಅಧಿಕಾರಕ್ಕೆ ಬಂದಾತ ಮುಅಜ್ಜಮ್. ಮೂರನೆಯ ಅಜ್ಞಂ. ಸಿಂಹಾಸನಕ್ಕಾಗಿ ನಡೆಸಿದ ಹೋರಾಟದಲ್ಲಿ ಈತ ಮಡಿದ. ನಾಲ್ಕನೆಯ ಮಗ ಅಕ್ಬರ್ ತಂದೆಯ ವಿರುದ್ಧವಾಗಿ ದಂಗೆ ಎದ್ದು ದೇಶಭ್ರಷ್ಟನಾಗಿ ಪರ್ಷಿಯಕ್ಕೆ ಹೋಗಿ ಅಲ್ಲಿ ಸತ್ತ (1704). ಕೊನೆಯ ಕಾಂ ಬಕ್ಷನೂ ಸಿಂಹಾಸನಕ್ಕಾಗಿ ನಡೆದ ಬಡಿದಾಟದಲ್ಲಿ 1700ರಲ್ಲಿ ಪ್ರಾಣ ತೆತ್ತ. (ಎಚ್.ಜಿ.ಆರ್.)

**ಔರಂಗಾಬಾದ್:** ಮಹಾರಾಷ್ಟ್ರದಲ್ಲಿರುವ ಒಂದು ಜಿಲ್ಲೆ ಮತ್ತು ಜಿಲ್ಲಾ ಆಡಳಿತ ಕೇಂದ್ರ. 1956ರ ವರೆಗೂ ಇದು ಹೈದರಾಬಾದ್ ರಾಜ್ಯದಲ್ಲಿತ್ತು. ಪೂನಕ್ಕೆ ಈಶಾನ್ಯದಲ್ಲಿ 330 ಕಿಮೀ ದೂರದಲ್ಲಿ. ಮುಂಬಯಿಗೆ ಪೂರ್ವ ಈಶಾನ್ಯಗಳ ನಡುವೆ 220 ಕಿಮೀ. ದೂರದಲ್ಲಿ ಕೌನ್ ನದಿಯ ದಡದ ಮೇಲಿದೆ. ಹೈದರಾಬಾದ್ ಮನ್‌ಮಾಡ್ ರೈಲುಮಾರ್ಗದಲ್ಲಿ ಔರಂಗಾಬಾದ್ ಒಂದು ನಿಲ್ದಾಣ.

ಔರಂಗಾಬಾದಿನ ರಬಿಯಾ ದೌರಾನಿ ಗೋರಿ

ಔರಂಗಾಬಾದಿನ ಪೂರ್ವದ ಹೆಸರು ಖಿಡ್ಕಿ (ಖಿರ್ಕಿ). ಅಹಮದ್ ನಗರದ ಪ್ರಧಾನಿಯಾಗಿದ್ದ ಮಲಿಕ್ ಅಂಬರ್ **(ನೋಡಿ- ಮಲಿಕ್-ಅಂಬರ್)** 1601ರಲ್ಲಿ ಇದನ್ನು ಸ್ಥಾಪಿಸಿದ. 1636ರಲ್ಲಿ ದಖನ್ ಪ್ರಾಂತ್ಯಗಳ ವೈಸ್‌ರಾಯಿಯಾಗಿ ಬಂದ ಔರಂಗ್‌ಜೇಬ್ **(ನೋಡಿ- ಔರಂಗ್‌ಜೇಬ್)** ಇದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ಇದಕ್ಕೆ ಈಗಿನ ಹೆಸರಿಟ್ಟ. ನಿಜಾಮರು ದೆಹಲಿಯ ಸಾಮ್ರಾಜ್ಯದಿಂದ ಸ್ವತಂತ್ರರಾದ ಮೇಲೆ ಈ ನಗರ ಅವರ ರಾಜಧಾನಿಯಾಗಿ ಮುಂದುವರಿಯಿತಾದರೂ ಮುಂದೆ ಅವರ ತಮ್ಮ ರಾಜಧಾನಿಯನ್ನು ಹೈದರಾಬಾದಿಗೆ ವರ್ಗಾಯಿಸಿದಾಗಿನಿಂದ ಈ ನಗರದ ಪ್ರಾಮುಖ್ಯ ಕುಂದಲಾರಂಭಿಸಿತು. 1956ರಲ್ಲಿ ಭಾರತದ ರಾಜ್ಯಪುನರ್ವಿಂಗಡಣೆಯಾದಾಗ ಇದೂ ಔರಂಗಾಬಾದ್ ಜಿಲ್ಲೆಯೂ ಬೊಂಬಾಯಿ ರಾಜ್ಯದಲ್ಲಿ ಸೇರಿದುವು. 1960ರಲ್ಲಿ ಇವು ಮಹಾರಾಷ್ಟ್ರದಲ್ಲಿ ಮುಂದುವರಿದುವಲ್ಲದೆ ಈ ವಿಭಾಗಕ್ಕೆ ಔರಂಗಾಬಾದ್ ನಗರವೇ ಕೇಂದ್ರವಾಯಿತು. ಔರಂಗಾಬಾದ್ ನಗರದ ಸುತ್ತಲೂ ಕಲ್ಲಿನಿಂದ ಕಟ್ಟಿದ ಭದ್ರವಾದ ಕೋಟೆಯಿದೆ. ನಗರಕ್ಕೆ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಮಾರ್ಗಗಳುಂಟು. ಇಲ್ಲಿ ಮರಾಠ್‌ವಾಡಾ ವಿಶ್ವವಿದ್ಯಾನಿಲಯವೂ ಹತ್ತಿ ಗಿರಣಿಯೂ ಇವೆ.

ಪ್ರಾಚೀನವಾದ ಪ್ರತಿಷ್ಠಾನಪುರ–ಉಜ್ಜಯಿನಿ ವಾಣಿಜ್ಯಮಾರ್ಗ ಔರಂಗಾಬಾದಿನ ಬಳಿಯಲ್ಲಿ ಹಾದುಹೋಗುತ್ತದೆ. ಬೃಹತ್ ಪರ್ವತಶ್ರೇಣಿಗಳ ಮಧ್ಯೆ ವಿಶಾಲ ಬಯಲಿನಲ್ಲಿರುವ ಔರಂಗಾಬಾದ್ ಪ್ರಾಚೀನ ಅವಶೇಷಗಳಿಗೆ ಪ್ರಸಿದ್ಧವಾದುದ್ದು. ಇಲ್ಲಿ ಬೆಟ್ಟಸಾಲಿನಲ್ಲಿ ಕೊರೆದ ಬೌದ್ಧರ 11 ಚೈತ್ಯ ಮತ್ತು ವಿಹಾರ ಗುಹೆಗಳಿವೆ. 4ನೆಯ ಗುಹೆಯಲ್ಲಿ ಪ್ರ.ಶ. 2ನೆಯ ಶತಮಾನದ ಹೀನಯಾನ ಪಂಥದ ಭವ್ಯ ಬುದ್ಧನ ಮೂರ್ತಿಯುಳ್ಳ ಚೈತ್ಯ ಹಾಗೂ ಚೈತ್ಯವಿಹಾರಗಳಿವೆ. 1, 8, 9ನೆಯ ಗುಹೆಗಳು ಅಪೂರ್ಣ. ಗರ್ಭಗುಡಿಯನ್ನು ಹಿಂದಿನ ಗೋಡೆಯಿಂದ ಬೇರ್ಪಡಿಸಿ, ಪ್ರದಕ್ಷಿಣ ಪಥವಿಟ್ಟಿರುವುದು ಈ ಚೈತ್ಯಗಳಲ್ಲಿ ಹೆಚ್ಚಾಗಿ ಕಾಣುತ್ತದೆ. 3ನೆಯ ಗುಹೆಯಲ್ಲಿರುವ ಸುತಸೋಮಜಾತಕದ ನಿರೂಪಣೆ, ಸ್ತಂಭಗಳ ವೈವಿಧ್ಯಮಯ ಕುಸುರಿ ಕೆಲಸ. ಭಕ್ತವೃಂದ ಇವೂ 6ನೆಯ ಗುಹೆಯಲ್ಲಿ

ಬೋಧಿಸತ್ತ್ವನೊಡನೆ ಇರುವ ಸ್ತ್ರೀಮೂರ್ತಿಗಳ ಸಾಲು, ಅವಲೋಕಿತೇಶ್ವರ ಪದ್ಮಪಾಣಿ. ತಾರಾವೃಂದದ ಚೌಕಟ್ಟು ಮತ್ತು ನೃತ್ಯಗೋಷ್ಠಿ ಇವೂ ಅಂಗಸೌಷ್ಠವ, ಚೆಲುವು, ಶಿಲ್ಪಕಲೆಯ ಪ್ರತಿಭೆ ಮತ್ತು ಕುಶಲತೆಯ ಅತ್ಯುನ್ನತಿಯ ಗುರುತುಗಳಿವೆ. ಅಜಂತ ಗುಹೆಗಳಲ್ಲಿರುವ ಹಾಗೆ ಅಲ್ಲಲ್ಲಿ ವರ್ಣಚಿತ್ರಗಳ ತುಣುಕುಗಳಿವೆ. ಇತ್ತೀಚೆಗೆ ದೃಷ್ಟಿಗೋಚರವಾದ ಎರಡು ಗುಹೆಗಳ ಪೈಕಿ ಒಂದರಲ್ಲಿ ವೀರಭದ್ರ, ಸಪ್ತಮಾತೃಕೆಯರು, ಗಜಾನನ, ದುರ್ಗಾ ಮತ್ತು ಬುದ್ಧನ ಮೂರ್ತಿಗಳಿರುವುದು ಒಂದು ವಿಶೇಷ.

ದಖನಿನ ತಾಜ್‌ಮಹಲ್ ಎಂದು ಪ್ರಸಿದ್ಧವಾಗಿರುವ ಬೀಬೀಕಾ–ಮುಕ್‌ಬರಾದಲ್ಲಿ ಔರಂಗ್‌ಜೇಬನ ಪತ್ನಿ ದಿಲ್‌ರಸ್ ಬಾನು ಬೇಗಮಳ (1660) ಗೋರಿಯಿದೆ. ಅತುಲ್ಲಾ ಮತ್ತು ಹನ್‌ಸ್ವತ್ ರೈ ಇದರ ವಾಸ್ತುಶಿಲ್ಪಿಗಳೆಂದು ಮುಖದ್ವಾರದ ಬಲಬಾಗಿಲಿನ ಲೋಹಶಾಸನದಲ್ಲಿದೆ. ಗುಮ್ಮಟದ ಸುತ್ತಲೂ ಒತ್ತಾಗಿ ಸಣ್ಣ ಸಣ್ಣ ಗುಮ್ಮಟಗಳಿದ್ದು, ಎತ್ತರ ಅಗಲಗಳು ಹದವಾಗಿರದೆ, ತಾಜ್‌ಮಹಲಿನ ಸನ್ನಿವೇಶ, ಪ್ರಮಾಣಬದ್ಧ ವಾಸ್ತುಶಿಲ್ಪ, ವೈಶಾಲ್ಯ, ಚೆಲುವು ಮತ್ತು ಕಲಾಭಿರುಚಿಗಳಿಗೆ ಇದು ಸರಿಗಟ್ಟದಿದ್ದರೂ ಒಂದು ವಿಧವಾದ ಬಿಳಿಗಾರೆಯಿಂದ ರಚಿಸಿದ (ಸ್ಟಕೊ ಪ್ಲಾಸ್ಟರ್) ಅಲಂಕಾರಿಕ ಚಿತ್ರಗಳಿಗೂ ಲಾವಣ್ಯಕ್ಕೂ ಉದಾಹರಣೆಯಾಗಿರುವ ಮೊಗಲರ ಶೈಲಿಯ ಘನವಾದ ಕಟ್ಟಡ.

ಕೆಲವು ಮಸೀದಿಗಳು, ನೌಖಂದ್ ಅರಮನೆ, ಕಲ್ಲಿನ ಕೋಟೆಗಳಲ್ಲದೆ, ಮಲಿಕ್ ಅಂಬರನ ಕಾಲದಲ್ಲಿ ನೀರು ಪೂರೈಸುವ ಯೋಜನೆಯ ಭಾಗವಾಗಿ ಅದರ ಸರಳತೆಯಷ್ಟೆ ಚತುರತೆಯಿಂದ ಕಟ್ಟಿದ ನೀರಿನ ಕಾಲುವೆಯುಳ್ಳ ಯಂತ್ರ ಪಂಚಕ್ಕಿ ಕುತೂಹಲಜನಕವಾಗಿದೆ.

ಔರಂಗಾಬಾದ್ ಜಿಲ್ಲೆಯ ವಿಸ್ತೀರ್ಣ 16,353 ಚಕಿಮೀ, ಜನಸಂಖ್ಯೆ 29,20548. ಈ ಜಿಲ್ಲೆಯ ಉತ್ತರದಲ್ಲಿರುವುದೇ ಸಹ್ಯಾದ್ರಿಶ್ರೇಣಿ. ಅಜಂತ ಮತ್ತು ಜಾಸ್ನ ಬೆಟ್ಟಗಳು ಇದರಲ್ಲಿವೆ. ಗೋದಾವರಿ ನದಿ ಈ ಜಿಲ್ಲೆಯ ನದಿ. ಇದರ ಕೆಲವು ಉಪನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತವೆ. ಪರ್ವತಗಳ ಇಳಿಜಾರಿನಲ್ಲಿ ದಟ್ಟವಾದ ಕಾಡುಗಳಿವೆ. ಕಾಡುಹಂದಿ, ಕರಡಿ, ತೋಳ ಮುಂತಾದುವು ಅಲ್ಲಿರುವ ವನ್ಯಮೃಗಗಳು. ಹುಲಿ ಚಿರತೆಗಳನ್ನೂ ಕಾಣಬಹುದು. ಈ ಜಿಲ್ಲೆಯ ಭೂಮಿ ಮಸಬು ಮತ್ತು ಮಿಲ್ವಾ ಎಂಬ ಎರಡು ರೀತಿಯದು. ಜೋಳ, ಸಜ್ಜೆ ಮತ್ತು ಗೋದಿ ಇಲ್ಲಿಯ ಮುಖ್ಯ ಆಹಾರ ಬೆಳೆಗಳು. ದ್ವಿದಳಧಾನ್ಯ ಮತ್ತು ಬತ್ತವನ್ನೂ ಬೆಳೆಯುತ್ತಾರೆ. ಹತ್ತಿ ಮತ್ತು ಎಣ್ಣೆಕಾಳುಗಳನ್ನೂ ಬೆಳೆಯುವುದುಂಟು. ನೆಯ್ಗೆ, ಕಿನ್‌ಕಾಪು ಕೆಲಸ, ಎಣ್ಣೆ ತಯಾರಿಕೆ ಮುಖ್ಯ ಕೈಗಾರಿಕೆಗಳು. ಸಾಗವಾನಿ ಮುಖ್ಯ ಅರಣ್ಯೋತ್ಪನ್ನ. ಜಗತ್ಪ್ರಸಿದ್ಧ ಎಲ್ಲೋರ (**ನೋಡಿ– ಎಲ್ಲೋರ**) ಮತ್ತು ಅಜಂತ (**ನೋಡಿ– ಅಜಂತ**) ಗುಹೆಗಳು ಇರುವುದು ಈ ಜಿಲ್ಲೆಯಲ್ಲೇ. 13ನೆಯ ಶತಮಾನದ ಕೋಟೆಯನ್ನುಳ್ಳ ದೌಲತಾಬಾದ್ (**ನೋಡಿ– ದೌಲತಾಬಾದ್**) ಇದೇ ಜಿಲ್ಲೆಯಲ್ಲಿದೆ. ಔರಂಗಾಬಾದಿನಿಂದ 14 ಕಿಮೀ ದೂರದಲ್ಲಿ ಬೆಟ್ಟವೊಂದರ ಮೇಲಿರುವ ಈ ನಗರದ ಪೂರ್ವದಹೆಸರು ದೇವಗಿರಿ. 14ನೆಯ ಶತಮಾನದಲ್ಲಿ ದೆಹಲಿಯ ಸುಲ್ತಾನನಾಗಿದ್ದ ಮಹಮ್ಮದ್ ತೊಗಲಖ್ ತನ್ನ ರಾಜಧಾನಿಯನ್ನು ಇಲ್ಲಿಗೆ ಬದಲಾಯಿಸಿ ಇದಕ್ಕೆ ದೌಲತಾಬಾದ್ (ವೈಭವನಗರ) ಎಂದು ಹೆಸರಿಟ್ಟ. ಗೋದಾವರಿ ನದಿಯ ದಡದಲ್ಲಿರುವ ಪೈಠಣ ಒಂದು ಯಾತ್ರಾಸ್ಥಳ. 17ನೆಯ ಶತಮಾನದಲ್ಲಿದ್ದ ವೈಷ್ಣವ ಸಂತ ಏಕನಾಥ ದೇಹತ್ಯಾಗ ಮಾಡಿದ್ದು ಇಲ್ಲೇ. ಔರಂಗಾಬಾದ್ ನಗರಕ್ಕೆ 28 ಕಿಮೀ ಖುಲ್ದಾಬಾದಿನಲ್ಲಿ ಚಕ್ರವರ್ತಿ ಔರಂಗ್‌ಜೇಬನ ಸಮಾಧಿಯಿದೆ. ಅದೊಂದು ತೀರಸರಳವಾದ ಗೋರಿ. ತಾನು ಬಟ್ಟೆ ಹೊಲಿದು ಸಂಪಾದಿಸಿದಷ್ಟು ಹಣದಿಂದ ಮಾತ್ರ ತನ್ನ ಗೋರಿ ನಿರ್ಮಿಸಬೇಕೆಂದು ಔರಂಗ್‌ಜೇಬ್ ಸೂಚನೆ ನೀಡಿದ್ದನೆಂದು ಪ್ರತೀತಿ. (ಎ.ಎಸ್.ಯು.; ಬಿ.)

**ಔರಸತ್ವ ಮತ್ತು ಔರಸೀಕರಣ:** ಒಂದು ಮಗುವಿನ ಜನನ ಸಮಯದಲ್ಲಿ ಅದರ ತಂದೆತಾಯಿಯರು ನ್ಯಾಯಬದ್ದವಾಗಿ ವಿವಾಹವಾಗಿದ್ದ ಪಕ್ಷದಲ್ಲಿ ಈ ರೀತಿ ಪ್ರಾಪ್ತವಾದ ಸಂತಾನವನ್ನು ಔರಸ ಸಂತಾನವೆಂದು ಕರೆಯಲಾಗುತ್ತದೆ. ಈ ಗುಣ ಅಥವಾ ಕಾನೂನುಬದ್ಧ ಸ್ಥಿತಿಯೇ ಔರಸತ್ವ (ಲೆಜಿಟಿಮಿಸಿ). ಜಾರಸ ಅಥವಾ ಅನೌರಸ ಸಂತಾನವನ್ನು ಔರಸ ಅಥವಾ ಧರ್ಮಸಂತಾನವೆಂದು ಪರಿವರ್ತನೆ ಮಾಡುವ ಕ್ರಮವೇ ಔರಸೀಕರಣ (ಲೆಜಿಟಿಮೇಷನ್).

ವಿವಾಹ ಬಂಧನದ ಹೊರಗೆ–ಎಂದರೆ ಅಧರ್ಮ ಅಥವಾ ಅನೀತಿಯ ಸಂಬಂಧದಿಂದ–ಹುಟ್ಟಿದ ಮಗು ಜಾರಜ ಅಥವಾ ಅನೌರಸ ಸಂತಾನ (**ನೋಡಿ– ಜಾರಜ**). ಅದು ಮದುವೆಯಾಗದ ಹೆಂಗಸಿನ ಅಥವಾ ಗಂಡಸಿನ ಮಗುವಾಗಿರಬಹುದು; ಹೆಂಗಸು (ಗಂಡಸು) ಮದುವೆಯಾಗಿದ್ದರೂ ಗಂಡನಿಲ್ಲದೆ (ಹೆಂಡತಿಯಲ್ಲದೆ) ಬೇರೆಯವರ ಸಂಪರ್ಕದಿಂದ ಹುಟ್ಟಿದ ಮಗುವಾಗಿರಬಹುದು.

ಧರ್ಮ ಅಥವಾ ನ್ಯಾಯದೃಷ್ಟಿಯಿಂದ ಎಲ್ಲ ಸಂತಾನವೂ ಔರಸ ಸಂತಾನವೆಂದೇ ಪರಿಗಣಿಸುವ ಧೋರಣೆಯನ್ನು ಎಲ್ಲ ಸುಶಿಕ್ಷಿತ ರಾಷ್ಟ್ರಗಳೂ ಅನುಸರಿಸುತ್ತಿವೆ. ಎಲ್ಲ ಸಂತಾನವೂ ಧರ್ಮೋತ್ಪನ್ನವೆಂದು ವ್ಯಾವಹಾರಿಕವಾಗಿ ಹೇಳಲು ಸಾಧ್ಯವಾದರೆ ಅದನ್ನು ಧರ್ಮಸಂತಾನವೆಂದು ಪರಿಗಣಿಸಬೇಕೆಂದು ಕಾನೂನಿನ ಧೋರಣೆ. ಯಾವುದೇ ಮಗು ಅನೌರಸ ಅಥವಾ ಅಧರ್ಮಸಂತಾನವೆಂದು ಸ್ಥಿರಪಡದಿದ್ದರೆ ಅಂಥ ಮಗು ಔರಸ ಅಥವಾ ಧರ್ಮಸಂತಾನವೆಂದೇ ಪರಿಗಣಿಸಲ್ಪಡಬೇಕಾಗುತ್ತದೆ.

ಯಾವುದೇ ಮದುವೆಯ ಸಮಾರಂಭ ಆದದ್ದರ ಬಗ್ಗೆ ಸಾಕ್ಷ್ಯ ದೊರೆತರೆ ಆ ಮದುವೆ ನ್ಯಾಯಬದ್ಧವಾಗಿದೆಯೆಂದು ಪ್ರಥಮತಃ ಗ್ರಹಿಸಬೇಕು. ಈ ಬಗೆಯ ಗ್ರಹಿಕೆಯ ವಿರುದ್ಧ ಯಾವುದೂ ನಿರ್ಣಾಯಕ ಸಾಕ್ಷ್ಯ ಇಲ್ಲದಿದ್ದಲ್ಲಿ ಈ ಗ್ರಹಿಕೆಯನ್ನು ಸ್ಥಿರವೆಂದು ಪರಿಗಣಿಸಲಾಗುವುದು.

ವಿವಾಹದ ಅನಂತರ ದಂಪತಿಗಳಿಗೆ ಜನಿಸಿದ ಸಂತತಿ ಧರ್ಮಸಂತತಿಯೆಂದು ಕಾಯಿದೆ ಪರಿಗಣಿಸುತ್ತದೆ. ಗರ್ಭದಾರಣೆಯ ಕಾಲಕ್ಕೆ ಗಂಡನ ಸಂಪರ್ಕ ವ್ಯಾವಹಾರಿಕವಾಗಿ ಸಾಧ್ಯವಾಗಿರದಿದ್ದರೂ ಅಂಥ ಸಂತಾನ ಧರ್ಮಸಂತಾನವೆಂದೇ ಅಂಗೀಕರಿಸಬೇಕೆಂಬ ಅಭಿಮತವಿದೆ. ಅಲ್ಲದೆ ಗರ್ಭಧಾರಣೆ ಹೆಂಡತಿಯ ದುಶ್ಶೀಲದ ಫಲವಿರಬಹುದೆಂಬ ಸಂಶಯವಿದ್ದರೂ ಆ ಮಗು ಧರ್ಮಸಂತಾನವೆಂದೇ ತಿಳಿಯಬೇಕಾಗುತ್ತದೆ. ವೈವಾಹಿಕ ಸಂಬಂಧ ಕಡಿಯಲ್ಪಡದಿರುವಾಗ ಅಥವಾ ಕೊನೆಗೊಳ್ಳದಿರುವಾಗ ಜನ್ಮತಾಳಿದ ಸಂತತಿಯನ್ನು ಧರ್ಮಸಂತತಿಯೆಂದೇ ಪರಿಗಣಿಸಲಾಗುವುದು ಎಂಬ ನಿರ್ಧಾರ ನಿರ್ಣಯಾತ್ಮಕವಲ್ಲ. ಹೀಗೆ ಮಾಡುವ ನಿರ್ಧಾರ ತಪ್ಪೆಂದು ತೋರಿಸಲು ಭಾರತೀಯ ಸಾಕ್ಷ್ಯ ಕಾಯಿದೆಯ 112 ಹಾಗೂ 114ನೆಯ ಕಲಮುಗಳ ಪ್ರಕಾರ ಅವಕಾಶವಿದೆ. ಅನೀತಿಯ ಮದುವೆಯಿಂದ ಉತ್ಪನ್ನವಾದ ಸಂತತಿ ಪಾಶ್ಚಾತ್ಯ ದೇಶಗಳ ಕಾನೂನಿನ ಪ್ರಕಾರ ಅನೌರಸ ಅಥವಾ ಅಧರ್ಮದ್ದೆಂದು ತಿಳಿಯಲಾಗುವುದು. ಅಂಥ ಸಂತತಿಯನ್ನು ಕಾನೂನಿನ ಆಧಾರದ ಮೇಲೆ ಔರಸೀಕರಣ ಅಥವಾ ಧರ್ಮಸಂತತಿಯೆಂದು ನಿರ್ಣಯಿಸಲು ಅವಕಾಶವಿದೆ. ರದ್ದು ಮಾಡಿಸಿಕೊಳ್ಳಬಹುದಾದಂಥ ಮದುವೆಯಿಂದ ಹುಟ್ಟಿದ ಸಂತತಿಯನ್ನು ಔರಸ ಅಥವಾ ಧರ್ಮಸಂತತಿಯೆಂದೇ ಗಣಿಸಲಾಗುತ್ತದೆ. ಆ ಮಗು ಹುಟ್ಟಿದ ಆನಂತರ ಆ ಮದುವೆ ರದ್ದಾದರೆ ಅಥವಾ ಆ ಮದುವೆ ಅನೀತಿಪರವೆಂದು ನಿರ್ಣಿತವಾದರೆ ಆ ಮಗು ಮಾತ್ರ ಔರಸಂತತಿಯೆಂದೇ ಪರಿಗಣಿತವಾಗುತ್ತದೆ. ಆ ಮಗುವಿನ ಗರ್ಭಧಾರಣೆಯ ಕಾಲಕ್ಕಿದ್ದ ಅದರ ತಂದೆತಾಯಿಗಳ ಸಂಬಂಧದ ಸ್ವರೂಪದ ಆಧಾರದ ಮೇಲೆ ಮಗು ಧರ್ಮಸಂತತಿಯೋ ಅಥವಾ ಅಧರ್ಮಸಂತತಿಯೋ ಎಂಬುದರ ನಿರ್ಣಯವಾಗುತ್ತದೆ. ಎಂದರೆ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳ ಕಾಯಿದೆಗಳೂ ಎಲ್ಲ ಸಂತಾನವೂ ಧರ್ಮಸಂತಾನವೆಂದು ಮನ್ನಿಸುವ ಧೋರಣೆಯನ್ನು ಅನುಸರಿಸಿದ್ದು, ಯಾವುದೇ ಸಂತಾನ ಅಧರ್ಮ ಅಥವಾ ಜಾರಜ ಸಂತಾನವೆಂದು ಶಾಶ್ವತವಾಗಿ ಪರಿಗಣಿಸುವ ಬಗ್ಗೆ ಸಮ್ಮತಿ ನೀಡುವ ಮನಃಪ್ರವೃತ್ತಿಯನ್ನು ಹೊಂದಿಲ್ಲ.

ಮದುವೆಗಳು ಅಧರ್ಮ ಅಥವಾ ಅನೀತಿಯೆಂದು ರದ್ದಾಗಲು ಅನೇಕ ಕಾರಣಗಳಿವೆ. ಮದುವೆಯ ಕಾಲಕ್ಕೆ ಮೊದಲಿನ ಗಂಡ ಅಥವಾ ಹೆಂಡತಿ ಜೀವಂತವಾಗಿದ್ದು ಹಾಗೆ ಜೀವಂತವಿಲ್ಲವೆಂದು ನೆರೆನಂಬಿ ಮದುವೆಯಾಗಿದ್ದರೆ ಆ ಸಂಬಂಧದಿಂದ ಹುಟ್ಟಿದ ಮಗುವನ್ನು ಔರಸ ಅಥವಾ ಧರ್ಮಸಂತಾನವೆಂದು ತಿಳಿಯಬೇಕೆಂದು ಕೆಲವು ರಾಷ್ಟ್ರಗಳ ಕಾನೂನುಗಳು ಹೇಳುತ್ತವೆ. ಮೊದಲನೆಯ ಮದುವೆ ಮುಕ್ತಾಯವಾಗಿದೆ ಅಥವಾ ರದ್ದಾಗಿದೆ ಎಂದು ಭಾವಿಸಿ, ಇಲ್ಲವೆ ಮೊದಲನೆಯ ಮದುವೆಯಾಗಿರುವ ಬಗ್ಗೆ ತಿಳಿವಳಿಕೆಯೇ ಇಲ್ಲದಿದ್ದಾಗ ಮದುವೆಯಾಗಿ ಆ ಮದುವೆಯ ಸಂಬಂಧದಿಂದ ಮಗು ಹುಟ್ಟಿದರೆ ಮುಂದೆ ಈ ಮದುವೆ ರದ್ದಾದರೂ ಆ ಮಗು ಮಾತ್ರ ಔರಸ ಅಥವಾ ಧರ್ಮಸಂತಾನವೆಂದೇ ತಿಳಿಯಬೇಕೆಂದು ಕೆಲವು ರಾಷ್ಟ್ರಗಳ ಕಾನೂನುಗಳು ಹೇಳುತ್ತವೆ. ಮಗುವಿನ ತಾಯಿ ಆ ಮಗುವಿನ ತಂದೆಯಾದ ಗಂಡನಿಂದ ಬಿಡುಗಡೆ ಪಡೆಯದೆ, ಮದುವೆಯನ್ನು ರದ್ದುಪಡಿಸಿಕೊಳ್ಳದೆ, ಮತ್ತೊಬ್ಬನನ್ನು ಮದುವೆಯಾದರೆ ಅಂಥ ಮಗುವನ್ನು ಜಾರಜ ಅಥವಾ ಅಧರ್ಮಸಂತಾನವೆಂದು ಪರಿಗಣಿಸಲಾಗದು.

ಒಂದು ಸಲ ಆದ ಮದುವೆ ಮುಂದೆ ರದ್ದಾದರೆ ಹಾಗೆ ರದ್ದಾಗುವುದಕ್ಕೆ ಮುಂಚೆ ಹುಟ್ಟಿದ ಮಗು ಜಾರಜನೆಂದಾಗುವುದಿಲ್ಲ. ಮದುವೆಯನ್ನು ರದ್ದುಪಡಿಸುವ ನಿರ್ಣಯದಿಂದ ಆ ಮಗುವಿನ ಔರಸತ್ವವನ್ನು ಅಥವಾ ಧರ್ಮಜನನವನ್ನು ಅಲ್ಲಗಳೆಯಲಾಗುವುದಿಲ್ಲ. ಇಂಥ ನಿರ್ಣಯದಲ್ಲಿ ಆ ಮಗುವಿನ ಔರಸತ್ವವನ್ನು ಮನ್ನಿಸಿ ಅದರ ಸ್ಥಾನವನ್ನು ರಕ್ಷಿಸುವಂತೆ ನಿರ್ದೇಶಿಸಿ ಮದುವೆಯನ್ನು ರದ್ದುಪಡಿಸುವುದಕ್ಕೆ ಅವಕಾಶವಿದೆ. ಮದುವೆ ಆದ ಅತ್ಯಲ್ಪಕಾಲದಲ್ಲಿ ಮಗುವಿನ ಜನ್ಮವಾದರೆ ಅದು ವಿವಾಹಪೂರ್ವದ ಸಂಬಂಧದಿಂದ ಹುಟ್ಟಿದುದು ಎಂದು ಖಚಿತವಾಗಿದ್ದರೂ ಮಗು ಹುಟ್ಟಿದಾಗ ಆ ತಾಯಿಯ ಮದುವೆಯಾಗಿರುವುದರಿಂದ ಆ ಮಗುವನ್ನು ಔರಸ ಅಥವಾ ಧರ್ಮಸಂತಾನವೆಂದೇ ಪರಿಗಣಿಸಲಾಗುವುದು. ಈ ಔರಸತ್ವದ ಬಗ್ಗೆ ಮಾಡುವ ಪ್ರಥಮ ನಿರ್ಧಾರ ನಿರ್ಣಾಯಕವೆಂದು ತಿಳಿಯದಕ್ಕದ್ದಲ್ಲ. ಈ ಗ್ರಹಿಕೆಯನ್ನು ಅಲ್ಲಗಳೆಯುವಾಗ ಗಂಡ

ಷಂಡನೆಂದು ಅಥವಾ ತಾಯಿಯಾದ ಹೆಂಡತಿಯ ಸಂಗಡ ಆತನ ಸಂಪರ್ಕವಿದ್ದಿಲ್ಲವೆಂದು ಇಲ್ಲವೇ ವಿವಾಹಪೂರ್ವದಲ್ಲಿ ಗಂಡ ಹೆಂಡತಿಯೊಡನೆ ಸುರಸಂಬಂಧವನ್ನಿಟ್ಟರಲಿಲ್ಲವೆಂದು ತೋರಿಸಲು ಅವಕಾಶವಿದೆ.

ಬಹಳ ಕಾಲದವರೆಗೆ ಔರಸತ್ವವನ್ನು ಅನುಮೋದಿಸುವುದರಿಂದ ಅಥವಾ ಬಹಳ ಕಾಲದವರೆಗೆ ಅದನ್ನು ವಿರೋಧಿಸಿಲ್ಲವೆಂಬ ಕಾರಣದಿಂದ ಔರಸತ್ವಪ್ರತಿಪಾದನೆಗೆ ಬಲ ಬರುತ್ತದೆ. ಸಂಬಂಧಪಟ್ಟ ದಂಪತಿಗಳು ಸತ್ತುಹೋಗಿದ್ದರೆ ಈ ನಿರ್ಧಾರ ವಿಶೇಷವಾಗಿ ಸತ್ಯವೆಂದು ಕಂಡುಬರುವುದು ಮತ್ತು ಇಂಥ ಸಂದರ್ಭಗಳಲ್ಲಿ ಅನೌರಸತ್ವದ ಗ್ರಹಿಕೆ ಉಳಿಯುವುದಿಲ್ಲ.

ತಾಯಿಯಲ್ಲದ ಬೇರೆ ಹೆಂಗಸಿನ ಪೋಷಣೆಯಲ್ಲಿ ಮಗು ಇದ್ದುದು ಕಂಡುಬಂದರೂ ಅದು ಆ ಮಗುವಿನ ಪೋಷಣೆ ಮಾಡುವ ಹೆಂಗಸಿನ ಹಾಗೂ ಅವಳ ಗಂಡನ ಸಂಯೋಗದಿಂದ ಹುಟ್ಟಿದ ಮಗುವೆಂದು ಗ್ರಹಿಸಲು ಸಾಧ್ಯವಿಲ್ಲ.

ಮೇಲಿನ ತತ್ತ್ವಗಳು ಪಾಶ್ಚಾತ್ಯ ದೇಶಗಳಲ್ಲಿ ಅನುಸರಣೆಯಲ್ಲಿದ್ದು ಭಾರತದಲ್ಲಿಯೂ ಇತ್ತೀಚೆಗೆ ಕೆಲವು ಮಟ್ಟಿಗೆ ಇವನ್ನು ಅನುಸರಿಸಲಾಗಿದೆ. ಮದುವೆಯಾದ ಗಂಡಹೆಂಡಿರ ಪೈಕಿ ಒಬ್ಬರು ಬೇಡಿದ ಕಾರಣದಿಂದ ದಾಂಪತ್ಯಸಂಬಂಧ ಕೊನೆಗೊಂಡಿತೆಂದು ನಿರ್ಣಯವಾದರೂ ವೈವಾಹಿಕ ಸಂಬಂಧ ಉಳಿದಿದ್ದ ಕಾಲದಲ್ಲಿ ಹುಟ್ಟಿದ ಸಂತತಿ ಇಲ್ಲ ಉದ್ದಿಶ್ಯಗಳಿಗಾಗಿ ಆ ದಂಪತಿಗಳ ಔರಸ ಅಥವಾ ಧರ್ಮ ಸಂತಾನವೆಂದೇ 1955ರ ಹಿಂದೂ ವಿವಾಹ ಕಾಯಿದೆಯ 16ನೆಯ ಕಲಮಿನನ್ವಯ ಪರಿಗಣಿಸಲಾಗುವುದು. ಆದರೆ ಆ ಕಲಮಿನ ಅಪವಾದದ ಮೂಲಕ ಆ ಸಂತತಿ ತನ್ನ ತಂದೆತಾಯಿಯರ ಹೊರತು ಬೇರೆ ಯಾವುದೇ ವ್ಯಕ್ತಿಯ ಆಸ್ತಿಯಲ್ಲಿ ಹಿತ ಸಂಬಂಧವನ್ನು ಪಡೆಯುವ ಹಕ್ಕುಳ್ಳದ್ದಾಗುವುದಿಲ್ಲ. ಕೋರ್ಟಿನ ನಿರ್ಣಯವಿದ್ದರೂ ಈ ಪರಿಣಾಮ ಉಂಟಾಗುವುದಿಲ್ಲ. ರದ್ದಾಗಬಹುದಾದಂಥ ಮದುವೆಯನ್ನು ಅಲ್ಲಗಳೆಯುವ ಅಧಿಕಾರ ಆ ಮದುವೆಗೆ ಸಂಬಂಧಿಸಿದ ಇಬ್ಬರಿಗೂ ಇರುತ್ತದೆ. ಮದುವೆಗೆ ಸಂಬಂಧಪಟ್ಟ ಇಬ್ಬರೂ ಜೀವಂತವಿರುವವರೆಗೆ ಮಾತ್ರ ಆ ಮದುವೆಯನ್ನು ಅಲ್ಲಗಳೆಯುವ ಅಧಿಕಾರ ಯಾರೊಬ್ಬರಿಗೂ ಉಂಟಾಗಬಹುದು. ಈ ಇಬ್ಬರಲ್ಲಿ ಒಬ್ಬರು ಮರಣ ಹೊಂದಿದ ಆನಂತರ ಈ ಮದುವೆಯನ್ನು ಅಲ್ಲಗಳೆಯುವ ಅಧಿಕಾರ ಇನ್ನೊಬ್ಬರಿಗೂ ಉಳಿಯುವುದಿಲ್ಲ. ಅಂಥ ಮದುವೆಯಿಂದ ಉಂಟಾದ ಸಂತಾನ ಔರಸ ಅಥವಾ ಧರ್ಮಸಂತಾನವೆಂದೇ ಪರಿಗಣಿಸಲ್ಪಟ್ಟು ಆ ಪ್ರಕಾರ ರಕ್ಷಿಸಲ್ಪಡುತ್ತದೆ.

**ಔರಸೀಕರಣ:** ಒಮ್ಮೆ ಅನೌರಸವಾಗಿ ಪಡೆದ ಸಂತಾನದ ತಂದೆ ತಾಯಿಯರು ಅನಂತರ ಪರಸ್ಪರ ಮದುವೆ ಮಾಡಿಕೊಂಡು ಅದನ್ನು ಔರಸಂತಾನವಾಗಿ ಪರಿವರ್ತಿಸುವುದು ಸಾಧ್ಯವಿಲ್ಲವೆಂಬುದು ಇಂಗ್ಲೆಂಡಿನ ಸಂಪ್ರದಾಯ ನ್ಯಾಯದ ಕಟ್ಟಳೆಯಾಗಿತ್ತು. ಅನೌರಸಸಂತಾನದ ಅವಿವಾಹಿತ ತಂದೆತಾಯಿಯರು ಮದುವೆಯಾದ ಕೂಡಲೇ ಆ ವಿವಾಹದ ಫಲವಾಗಿ ಆ ಸಂತಾನ ಔರಸವಾಗುತ್ತದೆಯೆಂಬುದಾಗಿ 1926ರಲ್ಲಿ ಕಾಯಿದೆಯಿಂದ ಸಿದ್ಧವಾಯಿತು. 1959ರ ಕಾಯಿದೆ ಇನ್ನೂ ಉದಾರವಾಗಿದೆ. ಮಗುವಿನ ತಂದೆ ಅಥವಾ ತಾಯಿ ಇನ್ನೊಂದು ವ್ಯಕ್ತಿಯೊಂದಿಗೆ ಮದುವೆಯಾಗಿದ್ದ ಪಕ್ಷದಲ್ಲಿ. ಅವರ ಪರಸ್ಪರ ಮುದುವೆಯಾದ ಕೂಡಲೇ ಆ ಮಗು ಔರಸ ಸಂತಾನವಾಗುತ್ತದೆಂದು ಅದರಲ್ಲಿ ಹೇಳಲಾಗಿದೆ. ವಿವಾಹ ಬಂಧನ ಕಾಲದಲ್ಲಿ ಮಗು ಹುಟ್ಟಿತೆಂಬುದೇ ಅದರ ಔರಸತ್ವ ಸ್ಥಾಪನೆಗೆ ಸಾಕಷ್ಟು ಕಾರಣವೆಂದು ಅಮೆರಿಕ ಸಂಯುಕ್ತಸಂಸ್ಥಾನದ ಕಾನೂನು ಸಾರುತ್ತದೆ. ಆದರೆ ತಂದೆಯ ನಪುಂಸಕತ್ವ, ಗರ್ಭಧಾರಣೆಯ ಕಾಲದಲ್ಲಿ ಆತನ ಸಂಪರ್ಕರಾಹಿತ್ಯ ಇಂಥ ಯಾವುದಾದರೂ ರುಜುವಾತು ಕೊಟ್ಟು ಅದನ್ನು ಅನೌರಸಸಂತಾನವೆಂದು ಸ್ಥಾಪಿಸಬಹುದಾಗಿದೆ. ಅನೌರಸಸಂತಾನವನ್ನು ಅನಂತರದ ಮದುವೆಯಿಂದ ಔರಸೀಕರಣಗೊಳಿಸಬಹುದೆಂಬ ತತ್ತ್ವವನ್ನು ಅಮೆರಿಕದಲ್ಲೂ ಮಾನ್ಯಮಾಡಲಾಗಿದೆ. ಮದುವೆಯಾಗದಿದ್ದರೂ ತಂದೆತನವನ್ನೊಪ್ಪಿಕೊಂಡು ಮಗುವನ್ನು ಔರಸಸಂತಾನವೆಂದು ಸ್ಥಾಪಿಸಬಹುದೆಂಬ ಕಾನೂನು ಅಮೆರಿಕದ ಅನೇಕ ರಾಜ್ಯಗಳಲ್ಲಿ ಜಾರಿಗೆ ಬಂದಿದೆ. ಒಮ್ಮೆ ಅನೌರಸವೆನಿಸಿಕೊಂಡಿದ್ದು ಆನಂತರ ಔರಸೀಕರಣವಾದ ಸಂತಾನಗಳ ವಾರಸು ಹಕ್ಕುಗಳನ್ನು ಪುರಸ್ಕರಿಸುವ ಕಾಯಿದೆಗಳೂ ಇವೆ.

ಔರಸೀಕರಣದ ಕ್ರಮ ಅನೌರಸ ಸಂತಾನದ ತಂದೆಯ ಖಾಯಂ ವಾಸಸ್ಥಳದ ಕಾಯಿದೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಔರಸೀಕರಣದ ವೇಳೆಯಲ್ಲಿಯ ವಾಸಸ್ಥಳದ್ದೇ ಪ್ರಾಮುಖ್ಯ. ಒಮ್ಮೆ ಅಲ್ಲಿಯ ಕಾಯಿದೆಯ ಪ್ರಕಾರ ಔರಸೀಕರಣವಾದಲ್ಲಿ ಮುಂದೆ ಆ ತಂದೆ ಯಾವ ದೇಶಕ್ಕೆ ವಾಸಸ್ಥಳವನ್ನು ಬದಲಾಯಿಸಿದರೂ ಔರಸೀಕರಣ ರದ್ದಾಗುವುದಿಲ್ಲ. ವಾಸಸ್ಥಳದ ಬದಲಾವಣೆಯಿಂದ ಒಮ್ಮೆ ಪಡೆದ ಔರಸೀಕರಣ ನಿರುಪಯೋಗಿ ಅಥವಾ ನಿರರ್ಥಕವಾಗುವುದಿಲ್ಲ. ಉದಾಹರಣಾರ್ಥವಾಗಿ, ತಂದೆತಾಯಿಗಳು ಮಗುವಿನ ಜನನದ ಅನಂತರ ಮದುವೆ ಮಾಡಿಕೊಂಡರೆ ಇಲ್ಲವೆ ಆಗಿರುವ ಅಧರ್ಮದ ಮದುವೆಗೆ ಮನ್ನಣೆ ಪಡೆದರೆ ಅಥವಾ ಅನೌರಸ ಸಂತಾನವನ್ನೂ ಔರಸೀಕರಣಗೊಳಿಸಿದರೆ ಅಂಥ ಸಂತಾನದ ಬದಲಾದ ಸ್ಥಿತಿ ತಂದೆಯ ವಾಸಸ್ಥಾನ ಬದಲಾದರೂ ಅಬಾಧಿತರಾಗಿ ಮುಂದುವರಿಯುತ್ತದೆ. ಔರಸೀಕರಣದ ಮೂಲಕ ಪ್ರಾಪ್ತವಾದ ಔರಸತ್ವ ತಂದೆಯ ವಾಸಸ್ಥಾನ ಅಥವಾ ಕಾಯಿದೆಯ ಬದಲಾವಣೆಯಿಂದ ನಷ್ಟವಾಗುವುದಿಲ್ಲ. ಸಾಮಾನ್ಯವಾಗಿ ಔರಸೀಕರಣದಿಂದ ಸಂತಾನದ ಪರಿಸ್ಥಿತಿ ಬದಲಾಗುತ್ತದೆ. ಅಧರ್ಮ ಅಥವಾ ಅನೀತಿಯ ಸಂತಾನ ಔರಸೀಕರಣದಿಂದ ಧರ್ಮಸಂತಾನವೆಂದು ಪರಿಗಣಿತವಾಗುವುದಲ್ಲದೆ ಧರ್ಮಸಂತಾನಕ್ಕೆ ಸಲ್ಲಬೇಕಾದ ಸಾರ್ವಜನಿಕ, ಸಾಮಾಜಿಕ ಮತ್ತು ನ್ಯಾಯಸಮ್ಮತವಾದ ಎಲ್ಲ ಹಕ್ಕುಗಳೂ ಅದಕ್ಕೆ ಪ್ರಾಪ್ತವಾಗುತ್ತದೆ. ಅಂದರೆ ಇಂಥ ಸಂತಾನದ ಕಾನೂನು ಅಥವಾ ಸಾಮಾಜಿಕ ಸ್ಥಿತಿ ನೈಸರ್ಗಿಕ (ಜನಕ) ತಂದೆಯ ಔರಸಸಂತಾನದ ಸ್ಥಿತಿಯಂತೆ ಬದಲಾಗುವುದು. ಒಮ್ಮೆ ಒಂದು ಮಗುವಿನ ಔರಸೀಕರಣವಾದರೆ ಅದರ ಸ್ಥಿತಿ ಸರ್ವಕಾಲಿಕ, ಸಾರ್ವತ್ರಿಕ ಹಾಗೂ ಸರ್ವ ಉದ್ದೇಶಗಳಿಗಾಗಿ ಸ್ಥಾಪಿತವಾದ ಹಾಗೆ. ತಂದೆ ತೆಗೆದುಕೊಂಡ ಕ್ರಮದಿಂದ ಈ ಔರಸೀಕರಣ ಉಂಟಾಗಿದ್ದರೆ ಔರಸೀಕೃತ ಸಂತಾನ ವಾರಸುಹಕ್ಕು ಸಹಿತವಾಗಿ ಔರಸಸಂತಾನದ ಎಲ್ಲ ಹಕ್ಕುಗಳನ್ನೂ ಪಡೆಯುತ್ತದೆ. ಒಮ್ಮೆ ಔರಸೀಕರಣವಾದ ಮೇಲೆ ಆ ತಂದೆಗೆ ಔರಸೀಕರಣವನ್ನು ಅಲ್ಲಗಳೆಯಲು ಹಾಗೂ ತಾನು ಔರಸೀಕರಣಕ್ಕಾಗಿ ತೆಗೆದುಕೊಂಡ ಕ್ರಮ ತಪ್ಪು ಎನ್ನಲು ಮತ್ತು ಅಂಥ ಸಂತಾನ ಅನೌರಸವೆಂದು ಸಾಧಿಸಲು ಕಾಯಿದೆಯ ಪ್ರತಿಬಂಧಕವಿರುತ್ತದೆ.

ಅಂಥ ಮಗು ವಾರಸುಹಕ್ಕನ್ನು ಪಡೆಯುವುದಲ್ಲದೆ ಮುಂದಿನ ಸಂತತಿಗೆ ವಾರಸುಹಕ್ಕನ್ನು–ತನ್ನ ತಂದೆಯ ವಾರಸು ಹಕ್ಕು ಸಹಿತವಾಗಿ–ನೀಡಲು ಸಮರ್ಥವಾಗುತ್ತದೆ. ಇಂಥ ಕಾನೂನಿನ ಮೂಲಕ ಯಾವುದೇ ವ್ಯಕ್ತಿ ಔರಸನೆಂದು ಮನ್ನಿಸಲ್ಪಟ್ಟಿದ್ದರೆ ಮತ್ತು ಕೆಲವೊಂದು ಹಕ್ಕುಗಳಿಗೆ ಬಾಧ್ಯಸ್ಥನಾಗಿದ್ದರೆ ಇನ್ನೊಂದು ಕಾನೂನಿನ ಅರ್ಥ ಹಾಗೂ ಪರಿಣಾಮವನ್ನು ವಿಚಾರಿಸಬೇಕಾದಾಗ ಇಂಥ ಸಂತಾನ ಯಾವುದೇ ಸೂಚ್ಯಾರ್ಥದ ಮೂಲಕ, ವಾದದ ಮೂಲಕ ಇಲ್ಲವೇ ಅರ್ಥವಿವರಣೆಯ ಮೂಲಕ ಜಾರಜನೆಂದು ತಿಳಿಯಲಾಗದೆಂಬ ದೃಷ್ಟಿ ಬೆಳೆದು ಬಂದಿದೆ ಮತ್ತು ಆ ವ್ಯಕ್ತಿಗೆ ಪ್ರಾಪ್ತವಾದ ಹಕ್ಕುಗಳನ್ನು ಆ ವ್ಯಕ್ತಿ ಅನಂತರ, ಆದರೆ ಅವನ ತಂದೆಯ ಮರಣದ ಪೂರ್ವದಲ್ಲಿ, ಕಾಯಿದೆಯಲ್ಲಿ ಉಂಟಾಗಬಹುದಾದ ಬದಲಾವಣೆಯ ಮೂಲಕ ಕಸಿದುಕೊಳ್ಳಬಾರದೆಂಬ ದೃಷ್ಟಿಯೂ ಬೆಳೆದು ಬಂದಿದೆ.

ವಾರಸುಹಕ್ಕಿನಿಂದ ಒಮ್ಮೆ ಔರಸಸಂತಾನಕ್ಕೆ ಬಂದ ಆಸ್ತಿ ಅದರ ಅನಂತರದಲ್ಲಿ ಔರಸೀಕೃತವಾದ ಜಾರಜನಿಗೆ ಸಲ್ಲತಕ್ಕದ್ದಲ್ಲ.

ಜಾರಜಸಂತಾನವನ್ನು ಔರಸೀಕರಣ ಮಾಡುವುದಕ್ಕಾಗಿ ಹಿಂದೂ ಕಾಯಿದೆ ಯಾವ ನಿಯಮಗಳನ್ನೂ ಮಾಡಿದಂತೆ ಕಾಣುವುದಿಲ್ಲ. ದ್ವಿಜರಲ್ಲಿ ಜಾರಜರಿಗೆ ವಾರಸುಹಕ್ಕು ಪ್ರಾಪ್ತವಾಗುವುದಿಲ್ಲ. ಆದರೆ ಹಿಂದೂ ಕಾಯಿದೆ ದಾಸೀಪುತ್ರ–ಖಾಯಂ ಆಗಿ ಇಟ್ಟುಕೊಂಡವಳ (ಅವಿರುದ್ಧ ಸ್ತ್ರೀ) ಮಗು–ಮತ್ತು ಜಾರಜತನದಿಂದ ಹುಟ್ಟಿದ ಮಗು ಅಂತರವನ್ನು ಪರಿಗಣಿಸುತ್ತದೆ. ಮೇಲೆ ಕೆಲವೊಂದು ಹಕ್ಕುಗಳನ್ನು ಹಿಂದೂ ಕಾಯಿದೆ ಕಲ್ಪಿಸಿದೆ; ಮತ್ತು ಅವನ್ನು ಕಾನೂನಿನಿಂದ ಸ್ಥಾಪಿಸಿಕೊಳ್ಳಲು ಅವಕಾಶವಿದೆ. ಇಂಥ ಸಂತಾನಕ್ಕೆ ಅವಿಭಾಜ್ಯ ಹಿಂದೂ ಸಂಸಾರದಲ್ಲಿ ಯಾವ ಸ್ಥಾನವೂ ಇಲ್ಲದಿದ್ದಾಗ್ಯೂ ಅವನ ಜೀವಮಾನದವರೆಗೆ ಜೀವನಾಂಶ ಅಥವಾ ಪೋಟಗಿ ಪಡೆಯುವ ಹಕ್ಕನ್ನು ಮಾನ್ಯ ಮಾಡಲಾಗಿದೆ ಮತ್ತು ದ್ವಿಜರಲ್ಲದವರಲ್ಲಿ ಜಾರಜನಿಗೂ ಕೂಡ–ಅವನು ದಾಸೀಪುತ್ರನಾಗಿದ್ದರೆ ತನ್ನ ತಂದೆಯ ಆಸ್ತಿಯಲ್ಲಿ ಪಾಲು ಕೇಳುವ ಹಕ್ಕಿದೆ. ಆದರೆ ಅವನಿಗೆ ಬರುವ ಪಾಲು ಔರಸನಿಗೆ ಬರುವ ಪಾಲಿಗೆ ಸಮವಾಗಿರಬಹುದು. 1956ರ ಹಿಂದೂ ದತ್ತಕ ಹಾಗೂ ಜೀವನಾಂಶ ಕಾಯಿದೆಯ ಕಲಮು 20ರ ಪ್ರಕಾರ ಹಿಂದೂ ತಂದೆ ಇಲ್ಲವೆ ತಾಯಿ ತನ್ನ ಜೀವಮಾನದವರೆಗೆ ತನ್ನ ಜಾರಜ ಸಂತಾನವನ್ನು ಪೋಷಣೆ ಮಾಡುವ ಜವಾಬ್ದಾರಿ ಇರುತ್ತದೆ. ಮತ್ತು ಜಾರಜ ತಾನು ಅವಯಸ್ಕನಾಗಿರುವಷ್ಟು ಕಾಲ ತನ್ನ ತಂದೆ ಇಲ್ಲವೆ ತಾಯಿಯಿಂದ ಪೋಟಗಿ ಪಡೆಯಲು ಅಧಿಕಾರ ಉಳ್ಳವನಾಗಿರುತ್ತಾನೆ. ಜಾರಜರ ಜೀವನಾಂಶದ ಹಕ್ಕು ಅವರ ವೈಯಕ್ತಿಕ ಹಕ್ಕಾಗಿದ್ದು ಅವರ ಮರಣದ ಅನಂತರ ಅವರ ಸಂತತಿಗೆ ಉತ್ತರಾಧಿಕಾರ ಕ್ರಮದಿಂದ ಮುಂದುವರಿಯುವುದಿಲ್ಲ.

ಅಂಗೀಕಾರ ಮಾಡುವುದರ ಮೂಲಕ ಜಾರಜಸಂತಾನವನ್ನು ಔರಸವೆಂದು ಪರಿಗಣಿಸುವ ನಿಯಮ ಮಹಮ್ಮದೀಯರ ಕಾಯಿದೆಯಲ್ಲಿದೆ. ಈ ಅಂಗೀಕಾರ ಪದ್ಧತಿಯಿಂದ ವಾರಸುಹಕ್ಕೂ ಪ್ರಾಪ್ತವಾಗುತ್ತದೆ. ಅಂಗೀಕಾರ ಪ್ರಕಟವಾಗಿರಬಹುದು ಇಲ್ಲವೆ ಸೂಚ್ಯವಾಗಿರಬಹುದು. ಒಬ್ಬ ಒಂದು ಮಗುವನ್ನು ನಿರಾತಂಕವಾಗಿ ಹಾಗೂ ಬಹಿರಂಗವಾಗಿ ಔರಸಂತಾನವೆಂದು ಪರಿಗಣಿಸಿದರೆ ಆ ಮೂಲಕ ಅವನನ್ನು ಔರಸಸಂತಾನವೆಂದು ಅಂಗೀಕರಿಸಿದಂತೆಂದು ತಿಳಿಯಬೇಕು. ಅಂಗೀಕಾರದಿಂದ ವಾರಸುಹಕ್ಕು ನೀಡಿದಂತೆ. ಒಮ್ಮೆ ಅಂಗೀಕಾರವಾದ ಮೇಲೆ ಅದನ್ನು ರದ್ದುಪಡಿಸಲು ಅಥವಾ ಮುರಿದುಕೊಳ್ಳಲು ಕಾಯಿದೆಯಿಂದ ಅವಕಾಶವಿಲ್ಲ.

(ಎಂ.ಕೆ.ಎಸ್.ಡಬ್ಲ್ಯು.)

**ಔರಾದ:** ಬೀದರ್ ಜಿಲ್ಲೆಯ ಒಂದು ತಾಲೂಕು ಮತ್ತು ಅದರ ಮುಖ್ಯಸ್ಥಳ. ಈ ತಾಲೂಕು ಕರ್ನಾಟಕ ರಾಜ್ಯದ ಅತ್ಯಂತ ಉತ್ತರದ ಗಡಿಯಲ್ಲಿದೆ. ಪಶ್ಚಿಮ ಮತ್ತು ಉತ್ತರದಲ್ಲಿ ಮಹಾರಾಷ್ಟ್ರ ಪೂರ್ವದಲ್ಲಿ ಆಂಧ್ರ ಪ್ರದೇಶ, ದಕ್ಷಿಣದಲ್ಲಿ ಭಾಲ್ಕಿ ಮತ್ತು ಬೀದರ್ ತಾಲೂಕುಗಳು ಸುತ್ತವರಿದಿವೆ. 149 ಗ್ರಾಮಗಳಿವೆ. ತಾಲೂಕಿನ ವಿಸ್ತೀರ್ಣ 1228.6ಚ.ಕಿಮೀ. ಜನಸಂಖ್ಯೆ 2,45,099.

ಮಾಂಜರಾ ನದಿ ಈ ತಾಲ್ಲೂಕಿನ ದಕ್ಷಿಣದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿದು ತಾಲೂಕು ಗಡಿಯಾಗಿ ಔರಾದವನ್ನು ಭಾಲ್ಕಿ ಮತ್ತು ಬೀದರ್ ತಾಲೂಕುಗಳಿಂದ ಬೇರ್ಪಡಿಸುತ್ತದೆ. ಬೀದರ್ ಜಿಲ್ಲೆಯ ಇತರ ತಾಲೂಕುಗಳಿಗಿಂತ ಈ ತಾಲೂಕಿನಲ್ಲಿ ಅರಣ್ಯಪ್ರದೇಶ ಹೆಚ್ಚು. ಈ ತಾಲೂಕು ಎರೆಮಣ್ಣಿನಿಂದ ಕೂಡಿದ್ದು ಮಳೆ ಕಡಿಮೆ. ವಾರ್ಷಿಕ ಸರಾಸರಿ 910ಮಿಮೀ. ಜೋಳ, ಹತ್ತಿ, ಕಡಲೆ, ಗೋದಿ, ಸೇಂಗ, ತೊಗರಿ ಮತ್ತು ಉದ್ದು ಇಲ್ಲಿಯ ಬೆಳೆಗಳು. ತಾಲ್ಲೂಕಿನ ದೇವಣಿ ತಳಿಯ ಎತ್ತುಗಳು ಪ್ರಸಿದ್ಧವಾದವು. ತಾಲ್ಲೂಕಿನಲ್ಲಿ ಹತ್ತಿ ಕಾರ್ಖಾನೆಗಳು, ಮರಕೊಯ್ಯುವ ಮತ್ತು ಹೆಂಚಿನ ಕಾರ್ಖಾನೆಗಳು ಇವೆ. ವಿಕಾರಾಬಾದ್ ಪರಭಣಿ ರೈಲುಮಾರ್ಗ ತಾಲ್ಲೂಕಿನ ಪಶ್ಚಿಮದ ಭಾಗಗಳಲ್ಲಿ ಕಮಾಲನಗರದ ಮೂಲಕ ಹಾದುಹೋಗಿದೆ. ಜೊತೆಗೆ ಉತ್ತಮ ರಸ್ತೆಗಳಿವೆ.

ಔರಾದ ಈ ತಾಲೂಕು ಮತ್ತು ಹೋಬಳಿ ಕೇಂದ್ರ. ಜನಸಂಖ್ಯೆ 16,189. ಇಲ್ಲಿ ಅಮರೇಶ್ವರನ ದೇವಾಲಯವಿದೆ. ಪ್ರತಿ ವರ್ಷ ಶಿವರಾತ್ರಿಗೆ ಇಲ್ಲಿ ಜಾತ್ರ ನಡೆಯುತ್ತದೆ.

(ಬಿ.)

**ಔರ್‌ಬಾಹ್ ಬೆರ್ಥೋಲ್ಡ್ :** 1812–82. 19ನೆಯ ಶತಮಾನದ ಮಧ್ಯಭಾಗದಲ್ಲಿ ಬಹು ಜನಪ್ರಿಯನಾಗಿದ್ದ ಜರ್ಮನ್ ಕಾದಂಬರಿಕಾರ. ಬ್ಲಾಕ್ ಫಾರೆಸ್ಟ್‌ನ ವುರ್ಟೆಮ್‌ಬೆರ್ಗ್ ಭಾಗದ ನಾರ್ಡ್‌ಸ್ಟೆಟನ್ ಎಂಬ ಊರಿನ ಯೆಹೂದಿ ಕುಟುಂಬವೊಂದರಲ್ಲಿ ಜನಿಸಿದ. ಯೆಹೂದಿ ಧಾರ್ಮಿಕ ಮಡಿವಂತಿಕೆಯ ಕಟ್ಟನ್ನು ಬಹುಬೇಗ ಕಳಚಿಕೊಂಡು ಟ್ಯೂಬಿಂಗನ್ ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷವಿದ್ದು ವ್ಯಾಸಂಗಮಾಡಿದ. ಆಗಲೇ ಈತನಿಗೆ ಸುವಿಖ್ಯಾತ ತತ್ತ್ವಜ್ಞನಾಗಿದ್ದ ಸ್ಪಿನೋಜನಲ್ಲಿ ಆಸಕ್ತಿಯುಂಟಾಯಿತು. ಮೆಚ್ಚುಗೆಯೂ ಆಯಿತು. ಆತನನ್ನೇ ನಾಯಕನನ್ನಾಗಿ ಮಾಡಿಕೊಂಡು ಸ್ಪಿನೋಜ ಎಂಬ ತನ್ನ ಮೊದಲ ಕಾದಂಬರಿಯನ್ನು ಬರೆದು ಪ್ರಕಟಿಸಿದ (1837). 18ನೆಯ ಶತಕದ ಯೆಹೂದಿ ಜೀವನವನ್ನಾಧರಿಸಿ ದಿಷ್ಟರ್ ಊಂಡ್ ಕಾಫ್‌ಮನ್ ಎಂಬ ಮತ್ತೊಂದು ಕಾದಂಬರಿಯನ್ನು ಪ್ರಕಟಿಸಿದ (1839).

ಷ್ವಾರ್ಟ್‌ವಾಲ್ಡೆರ್ ಡೋರ್ಫ್ ಗೆಷಿಷ್ಟೆನ್ ಎಂಬ ಬೃಹತ್ ಕಾದಂಬರಿಯ ಮೊದಲ ಭಾಗ 1843ರಲ್ಲೇ ಬಂದರೂ ಅವನ್ನು ಪೂರ್ಣವಾಗಿ ಬರೆಯಲು 10 ವರ್ಷ ಹಿಡಿಯಿತು. ಮೊದಲ ಭಾಗ ಪ್ರಕಟವಾಗುತ್ತಲೆ ಅದರ ಕೀರ್ತಿ ಹಬ್ಬಿತು. ಸಮಾಜದಲ್ಲಿ ಕ್ರಾಂತಿಯುತ ಮಾರ್ಪಾಟಾಗಬೇಕು ಎಂಬ ಉದ್ದೇಶವಿಟ್ಟುಕೊಂಡೇ ಬರೆಯುತ್ತಿದ್ದವರ ಕಾದಂಬರಿಗಳನ್ನೇ ಓದಿ ಓದಿ ಸಾಕಾಗಿಹೋಗಿದ್ದ ವಾಚಕರಿಗೆ ಹಳ್ಳಿಗಾಡಿನ ಬದುಕನ್ನು ಕುರಿತ ಈ ಕಾದಂಬರಿ ಅಪೇಕ್ಷಣೀಯ ಸಮಯಕ್ಕೆ ಬೀಸಿದ ಹಿತವಾದ ತಂಗಾಳಿಯಂತೆ ಸ್ವಾಗತಾರ್ಹವಾಯಿತು.

ಹಳ್ಳಿಯ ಜೀವನವನ್ನು ಚಿತ್ರಿಸುವಂಥ ಕಾದಂಬರಿಗಳನ್ನು ಬರೆದ ಮೊದಲಿಗರಲ್ಲಿ ಈತನೂ ಒಬ್ಬ. ಆಗ ಜರ್ಮನ್ ಸಾಹಿತ್ಯದಲ್ಲಿ ವಾಸ್ತವತಾವಾದದ ಹೊಸ ದೃಷ್ಟಿ ಪ್ರಮುಖವಾಗಿತ್ತು. ಯಾವ ಅತಿರೇಕಕ್ಕೂ ವಾಲದೆ ವಾಸ್ತವತೆ ಹಾಗೂ ರಮ್ಯಕತೆಯ ಮಧುರ ಮಿಶ್ರಣವನ್ನು ತನ್ನ ಕೃತಿಗಳಲ್ಲಿ ಬಳಸಿಕೊಂಡ ಔರ್‌ಬಾಹ್ ಜನಪ್ರಿಯನಾದ.

ತನ್ನ ಸಮಕಾಲೀನ ಬದುಕಿನ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ಎತ್ತಿಕೊಂಡು ಶ್ರೀಸಾಮಾನ್ಯನ ಅಂತರಂಗವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಈತ ಕೃತಿರಚನೆ ಮಾಡಿದ್ದಾನೆನ್ನುವುದು ಸುವ್ಯಕ್ತವಾಗಿದೆ. ಈತ ಸೃಜಿಸಿದ ಹಳ್ಳಿಗರಿಗೆ ಸಮಕಾಲೀನ ಪ್ರಜ್ಞೆ ಇಲ್ಲದಿರಲಿಲ್ಲ. ಆಗಿನ ಯುವಜನರ ವಿಚಾರದ ಗಾಳಿ ಅವರ ಮೇಲೂ ಬೀಸಿ ಅವರು ಪ್ರಗತಿಶೀಲರಾಗಿದ್ದರು. ಕಾದಂಬರಿಕಾರನ ಮನೋಧರ್ಮ, ವಿಚಾರ ದೃಷ್ಟಿಗಳೇ ಸಾಕಷ್ಟು ಅವರಲ್ಲಿ ತುಂಬಿದ್ದವು. ಈತನ ಕಾದಂಬರಿಗಳಲ್ಲಿ ಪ್ರಜ್ಞಾಪೂರ್ವಕವಾದ ಭಾವಾತಿರೇಕವಿರುವುದು ಎದ್ದುಕಾಣುತ್ತದೆ. ಕ್ರಮೇಣ ಈ ಭಾವುಕತೆ ವಾಸ್ತವತೆಯ ಕಡೆ ಬಾಗುತ್ತದೆ. ಆದರೆ ಮೊದಲಲ್ಲಿ ಔರ್‌ಬಾಹ್ ಭಾವಪ್ರಧಾನವಾಗಿ ಬರೆದ ಕಾದಂಬರಿಗಳು ಓದುಗರ ಚಿತ್ತವನ್ನು ತುಂಬ ಆಕರ್ಷಿಸಿದುವಲ್ಲದೆ, ಅಂಥ ಕಾದಂಬರಿಗಳನ್ನೇ ಅಪೇಕ್ಷಿಸುವ, ಓದುವ, ಗೀಳನ್ನು ಹೊತ್ತಿಕ್ಕಿದುವು.

ಈತನ ಅತ್ಯಂತ ಜನಪ್ರಿಯ ಕೃತಿಗಳಲ್ಲಿ ಡೈ ಫ್ರಾವ್ ಪ್ರೊಫೆಸ್ಸೊರಿನ್ (1846), ಬಾರ್ಫ್ಯೂಸ್ಸೆಲೆ (1856), ಡೈ ಗೆಷಿಷ್ಟೆ ಡೆಸ್ ಡೀಥೆಲ್ಮ್ ಫೋನ್ ಬ್ಯೂಷೆನ್‌ಬೆರ್ಗ್ (1852), ಔಫ್ ಡೆರ್ ಹೋಹೆ (1865) ಮತ್ತು ಡಾಸ್ ಲ್ಯಾನ್ಡೌಸ್ ಆಮ್ ರ್ಹೀನ್ ಎಂಬೀ ಕಾದಂಬರಿಗಳನ್ನು ಹೆಸರಿಸಬಹುದು.

(ಕೆ.ಬಿ.ಪಿ.)

**ಔಲುಮೀನು:** ಓಫಿಯೋಸೆಫ್ಯಾಲಿಡೆ ಅಥವಾ ಚಾನಿಡೆ ಕುಟುಂಬಕ್ಕೆ ಸೇರಿದ ಸಿಹಿನೀರಿನ ಎಲುಬು ಮೀನುಗಳ ಒಂದು ಪ್ರಭೇದ. ಹಾವಿನತಲೆ ಮೀನುಗಳೆಂದು ಪ್ರಸಿದ್ಧವಾಗಿವೆ. ಸಾಮಾನ್ಯವಾಗಿ ಹೂಮೀನೆಂದೂ ಇಂಗ್ಲಿಷಿನಲ್ಲಿ ಮರಲ್ ಎಂದೂ ಕರೆಯಲಾಗುವ ಇದರ ಶಾಸ್ತ್ರೀಯ ನಾಮ ಓಫಿಸಿಫ್ಯಾಲಸ್ ಮರೂಲಿಯಸ್ (ಚಾನ್ನಾ ಮರೂಲಿಯಸ್). ಇದು ಮಧ್ಯ ಆಫ್ರಿಕ, ಭಾರತ, ದಕ್ಷಿಣ ಚೀನಗಳ ಮೂಲನಿವಾಸಿ; ಕರ್ನಾಟಕ ರಾಜ್ಯದ ಕೆರೆಗಳಲ್ಲೂ ಸಾಮಾನ್ಯವಾಗಿ ಸಿಕ್ಕುತ್ತದೆ. ಆಹಾರಕ್ಕಾಗಿ ಇದನ್ನು ಹಿಡಿಯುತ್ತಾರೆ.



ಬೆಳವಣಿಗೆ ನಿಧಾನ. ಸಾಮಾನ್ಯವಾಗಿ 180 ಸೆಂಮೀ ವರೆಗೂ ಬೆಳೆಯುವುದು. ದೇಹ ಸ್ವಲ್ಪ ದುಂಡಗೆ ನೀಳವಾಗಿ ಬಾಲದ ಭಾಗದಲ್ಲಿ ಕೊಂಚ ಚಪ್ಪಟೆಯಾಗಿದೆ. ಮೈಮೇಲೆ ಸೈಕ್ಲಾಯ್ಡ್ ಅಥವಾ ಟೀನಾಯ್ಡ್ ಹುರುಪೆಗಳಿವೆ. ದೇಹದುದ್ದಕ್ಕೂ ಮೂರು ಪಂಕ್ತಿಗಳಲ್ಲಿ ಜೋಡಣೆಗೊಂಡಿರುವ ದೊಡ್ಡ ಮಚ್ಚೆಗಳಿವೆ. ಉದರಭಾಗದ ಎರಡನೆಯ ಜೊತೆ ಈಜುರೆಕ್ಕೆಗಳು ಕೊಂಚ ಮುಂದಕ್ಕಿವೆ. ಮಿಕ್ಕ ಹಾವಿನತಲೆ ಮೀನುಗಳಲ್ಲಿರುವಂತೆ ಇದರಲ್ಲಿಯೂ ಗಾಳಿಯನ್ನು ಸೇವಿಸಲು ಕಿವಿರುಕೋಣೆಯಲ್ಲಿ ಸಹಕಾರಿ ಶ್ವಾಸಾಂಗಗಳಿವೆ. ಇವು ಇರುವುದರಿಂದಲೇ ಈ ಜಾತಿಯ ಮೀನುಗಳು ನೀರಿನ ಹೊರಗೂ ಹೆಚ್ಚು ಬದುಕಬಲ್ಲುವು. ಇದು ಮಾಂಸಾಹಾರಿ ಮೀನು. ಈ ಮೀನಿನ ಆಹಾರ ಸಾಧಾರಣವಾಗಿ ಇತರ ಸಣ್ಣ ಮೀನುಗಳು, ಕಪ್ಪೆಗಳು, ಮತ್ತು ನೀರಿನಲ್ಲಿ ವಾಸಿಸುವ ಕೀಟಗಳು.

ಗಂಡು ಮತ್ತು ಹೆಣ್ಣುಮೀನುಗಳಿಗೆ ಬಾಹ್ಯರೂಪದಲ್ಲಿಯಾಗಲಿ ಬಣ್ಣದಲ್ಲಾಗಲಿ ವ್ಯತ್ಯಾಸವಿಲ್ಲ. ನೀರಿನಲ್ಲಿನ ಜೊಂಡಿನ ಮಧ್ಯೆ ಹೆಣ್ಣುಮೀನು ಮೊಟ್ಟೆಯಿಡುತ್ತದೆ. ಮೊಟ್ಟೆಯಿಡಲು ಹೆಣ್ಣಿಗೆ ಗಂಡುಮೀನು ಜೊಂಡಿನ ಮಧ್ಯೆ ಸ್ಥಳ ಮಾಡಿಕೊಂಡಿರುವುದಲ್ಲದೆ ಮೊಟ್ಟೆಯೊಡೆದು ಮರಿಗಳು ಹೊರಬರುವ ತನಕ ಮೊಟ್ಟೆಗಳ ರಕ್ಷಣೆಯನ್ನು ವಹಿಸಿಕೊಳ್ಳುವುದೂ ಉಂಟು.

(ಎನ್.ವಿ.ಎ.)

**ಔಲುಕ್ಯ:** ಉಲೂಕನಿಂದ ಪ್ರತಿಪಾದಿತವಾದ ವೈಶೇಷಿಕ ದರ್ಶನಕ್ಕೆ ಈ ಹೆಸರಿದೆ. **ನೋಡಿ – ವೈಶೇಷಿಕ ದರ್ಶನ.** *

**ಔವೆನ್‌ಬ್ರುಗ್ಗರ್, ಲಿಯೋಪಾಲ್ಡ್ ಜೋಸೆಫ್, ಫಾನ್:** 1722–1809. ಎದೆಯ ಮೇಲೆ ಬೆರಳುಗಳಿಂದ ಬಡಿದು ತಿಳಿವ ರೋಗನಿದಾನ ವಿಧಾನವನ್ನು ತೋರಿಸಿಕೊಟ್ಟ ವಿಯನ್ನದ ವೈದ್ಯ. ಅಲ್ಲಿನ ಆಸ್ಪತ್ರೆಯಲ್ಲಿದ್ದಾಗ ಇಂಥ ಪ್ರಯೋಗಗಳನ್ನು ನಡೆಸಿ ಒಳಗಿರುವ ಅಂಗಗಳ ಸ್ಥಿತಿಯನ್ನು ಅರಿವುದನ್ನು ಕಂಡುಕೊಂಡು ಒಂದು ಕಿರುಹೊತ್ತಗೆಯನ್ನು ಪ್ರಕಟಿಸಿದ (1761). ಈತ ಸಾಯುವುದಕ್ಕೆ ಒಂದು ವರ್ಷ ಮೊದಲು (1808) ಕಾರ್ವಿಸಾರ್ಟ್ ಆ ಪುಸ್ತಕವನ್ನು ಫ್ರೆಂಚ್ ನುಡಿಗೆ ಇಳಿಸುವ ತನಕವೂ ಇದನ್ನು ಬಹುಪಾಲು ಯಾರೂ ಗಮನಿಸಿರಲಿಲ್ಲ. ಇದಲ್ಲದೆ ಗುಂಡಿಗೆಯ ಸುತ್ತಲೂ ಅದರ ಕವಚದೊಳಗಡೆ ನೀರು ತುಂಬಿಕೊಂಡಾಗ ಹೊಟ್ಟೆಮುಗುಳು (ಎಪಿಗ್ಯಾಸ್ಟ್ರಿಯಂ) ಉಬ್ಬಿಕೊಂಡಿರುವ ಚಿಹ್ನೆಯನ್ನೂ ಈತ ವಿವರಿಸಿದ್ದಾನೆ. *

**ಔಷಧಗಾರಿಕೆ:** ವೈದ್ಯವಿಜ್ಞಾನದಲ್ಲಿ ಔಷಧಗಳ ಗುರುತಿಸುವಿಕೆ, ಜಮಾವಣೆ, ತಯಾರಿಕೆ, ಜೋಪಾಸನೆ, ಹಂಚಿಕೆ ಮತ್ತು ಶಿಷ್ಟೀಕರಣದ ವಿಜ್ಞಾನ (ಫಾರ್ಮಸಿ). ಔಷಧ ವಿಜ್ಞಾನದಲ್ಲಿ (ಫಾರ್ಮಾಕಾಲಜಿ) ಇದೊಂದು ಭಾಗ. ಮದ್ದುಗಳನ್ನು ತಯಾರಿಸಲು ಗಿಡಮರಗಳನ್ನು ಬೆಳೆಸುವುದೂ ರಾಸಾಯನಿಕ ವಸ್ತುಗಳನ್ನು ಹೊಸದಾಗಿ ತಯಾರಿಸುವುದೂ ರೋಗನಿವಾರಣೆ, ಪರೀಕ್ಷೆ, ಚಿಕಿತ್ಸೆಗಳಲ್ಲಿ ಮದ್ದುಗಳಾಗಿ ಬಳಕೆಯಾಗುವ ವಸ್ತುಗಳ ಬಿಡಿಪರೀಕ್ಷೆ, ಗುಣಮಟ್ಟ ನಿರ್ಧರಿಸುವುದೂ ಔಷಧಗಾರನ (ಫಾರ್ಮಸಿಸ್ಟ್) ಕೆಲಸಗಳೇ. ಗುಳಿಗೆ, ಮಾತ್ರೆ, ಲೇಪ, ಮುಲಾಮು, ದ್ರವ, ಮುಚ್ಚಿರೆಗಳು (ಕ್ಯಾಪ್ಸೂಲ್ಸ್) ಚುಚ್ಚಿ ಹೋಗಿಸುವ ಕ್ರಿಮಿಶದ್ಧ (ಸ್ಟೆರಿಲೈಸ್ಡ್) ಮದ್ದುಗಳೇ ಮುಂತಾದವನ್ನು ಈತ ವೈದ್ಯನ ನಿಯಮಗಳಿಗೆ (ಪ್ರಿಸ್ಕ್ರಿಪ್ಷನ್ಸ್) ಸರಿಯಾಗಿ ತಯಾರಿಸಿ ಕೊಡುತ್ತಾನೆ.

ಔಷಧಗಾರಿಕೆ ಹೇಗೆ ಚಿಗುರಿತೆಂಬುದನ್ನು ಸುಲಭವಾಗಿ ಊಹಿಸುವಂತಿಲ್ಲ. ಗಾಯವಾದಾಗ ಸೊಪ್ಪುಸದೆ ಹಾಕಿ ಕಟ್ಟಿದಾಗ, ವಾತಿಭೇದಿ ಆದವನಿಗೆ ನೀರು ಕುಡಿಸಿದಾಗ ಔಷಧಗಾರಿಕೆ ಮಾಡಿದಂತಾಯಿತು ಎನ್ನಬಹುದು. ಗ್ರೀಕರ ಪುರಾಣದಲ್ಲಿ, ಈಸ್ಕುಲೇಪಿಯಸ್ (**ನೋಡಿ– ಈಸ್ಕುಲೇಪಿಯಸ್**) ಮದ್ದುಗಳನ್ನು ತಯಾರಿಸಿ ನೀಡುವ ಕೆಲಸವನ್ನು ಸುಂದರಿ ಆರೋಗ್ಯದೇವತೆಗೆ ವಹಿಸಿದ್ದನಂತೆ, ಈಜಿಪ್ಟಿನ ಪೂಜಾರಿ ವೈದ್ಯರಲ್ಲೂ ಔಷಧಗಾರರಿದ್ದರು.

ಹಿಂದಿನ ಕಾಲದಲ್ಲಿ ವೈದ್ಯರೆಲ್ಲರೂ ಔಷಧಗಾರಿಕೆಯನ್ನು ಕಲಿತಿರಬೇಕಿತ್ತು. ಪುರಾತನ ಗ್ರೀಕರೂ ರೋಮನ್ ವೈದ್ಯರೂ ಔಷಧಗಾರಿಕೆಗೂ ವೈದ್ಯಕಲೆಗೂ ವ್ಯತ್ಯಾಸ ಕಂಡಿದ್ದರು. ಮಧ್ಯಕಾಲದ ಯುರೋಪಿನಲ್ಲಿ ಈ ವ್ಯತ್ಯಾಸ ಅಷ್ಟಾಗಿರದೆ ವೈದ್ಯರು ತಮ್ಮ ಮದ್ದುಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಆದರೆ ಮೂರ್ ಜನರ ಪ್ರಭಾವದಿಂದ ಔಷಧಗಾರಿಕೆ ಬೇರೆಯಾಯಿತು. 18ನೆಯ ಶತಮಾನದ ನಡುವಿನಲ್ಲಿ ಫ್ರಾನ್ಸಿನ ಸೇನೆಯಲ್ಲಿ ಔಷಧಗಾರನ ಖಾತೆಯೊಂದನ್ನು ತೆರೆಯಲಾಯಿತು. ಪೆನ್ಸಿಲ್ವೇನಿಯ ಆಸ್ಪತ್ರೆಯಲ್ಲಿ ಮದ್ದುಗಳನ್ನು ತಯಾರಿಸಿಕೊಡಲು ಬೇರೊಬ್ಬ ಗಂದಿಗನನ್ನು (ಅಪೊತೆಕರಿ) ನೇಮಿಸಿ ಇದನ್ನು ಜಾರಿಗೆ ತಂದವ ಬೆಂಜಮಿನ್ ಫ್ರಾಂಕ್‌ಲಿನ್.

ವೈದ್ಯಶಾಸ್ತ್ರದೊಂದಿಗೇ ಔಷಧಗಾರಿಕೆ ವಿಜ್ಞಾನವೂ ಮುಂದುವರಿಯುತ್ತಿದೆ. ಮೊಟ್ಟಮೊದಲು ಔಷಧಗಾರಿಕೆಯ ಕಾಲೇಜನ್ನು ತೆರೆದುದು (1821) ಅಮೆರಿಕದ ಫಿಲಿಡೆಲ್ಫಿಯದಲ್ಲಿ. ಆಮೇಲೆ ಬ್ರಿಟನ್, ಯುರೋಪುಗಳಲ್ಲೂ ತೆರೆಯಲಾಯಿತು. ಹಲವು ವಿಶ್ವವಿದ್ಯಾನಿಲಯಗಳಲ್ಲೂ ಇದರ ವ್ಯಾಸಂಗಗಳು ಮೊದಲಾದುವು. ಪ್ರಪಂಚದಲ್ಲಿ ಎಲ್ಲೆಲ್ಲೂ ಈಗ ಬೇರೆಯಾಗಿಯೇ ಎಷ್ಟೋ ಔಷಧಗಾರಿಕೆಯ ಶಾಲೆ, ಕಾಲೇಜುಗಳು ಕೆಲಸ ಮಾಡುತ್ತಿವೆ.

**ಶಿಕ್ಷಣ:** ಔಷಧಗಾರಿಕೆಯ ಪದವಿ ವ್ಯಾಸಂಗದ ಅವಧಿ ನಾಲ್ಕು ವರ್ಷಗಳಿಗೂ ಮೀರಿ ಇದೆ. ಇದರಲ್ಲಿ ಮುಂದೆ ಡಾಕ್ಟೊರೇಟ್ ಪದವೀಧರರಾಗಲು ಅವಕಾಶಗಳಿವೆ. ಈ ಪದವೀಧರರು ಮುಖ್ಯವಾಗಿ ಸಂಶೋಧನೆ, ಕೃತಕ ತಯಾರಿಕೆ, ಶಿಕ್ಷಣಗಳಿಗಾಗಿ ಇರುವವರು.

ಬೇನೆ ಬಿದ್ದವರ ಚಿಕಿತ್ಸೆ ಮಾಡಲು ಮದ್ದುಗಳನ್ನು ನೀಡುವವರ ಔಷಧಗಾರಿಕೆಯ ಶಿಕ್ಷಣಕ್ಕೆ ಜೀವ, ರಸಾಯನ, ಭೌತವಿಜ್ಞಾನಗಳ ತಿಳಿವಳಿಕೆ ಚೆನ್ನಾಗಿರಲೇಬೇಕು. ಔಷಧಗಾರಿಕೆ ಕಾಲೇಜುಗಳ ಮೂಲ ಶಿಕ್ಷಣದಲ್ಲಿ ಭೌತ, ರಸಾಯನ, ಜೀವ, ಏಕಾಣುಜೀವಿ, ಶಿಲ್ಪತಂತ್ರ, ಅಂಗಕ್ರಿಯೆ, ಔಷಧ, ಔಷಧನೀಡಿಕೆ–ಇವೇ ಮುಂತಾದ ಹಲವಾರು ವಿಜ್ಞಾನಗಳಲ್ಲಿ ಕಡ್ಡಾಯವಾಗಿ ಶಿಕ್ಷಣ ದೊರೆಯುತ್ತದೆ. ಅಲ್ಲದೆ, ಸಾಮಾನ್ಯ ಅರಿವೂ ನುಡಿಯ ತಿಳಿವೂ ಇರಬೇಕು. ಔಷಧಗಾರಿಕೆಯ ಕಸಬಿನಲ್ಲಿ ವ್ಯಾಪಾರ ಉದ್ಯಮಗಳೂ ಸೇರಿರುವುದರಿಂದ ಆ ಸಂಬಂಧದಲ್ಲೂ ಹೆಚ್ಚಿನ ತಿಳಿವನ್ನು ಕೊಡುವರು. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು, ಮಣಿಪಾಲಗಳಲ್ಲಿ ಔಷಧಗಾರಿಕೆ ಕಾಲೇಜುಗಳಿವೆ.

**ಕಾಯಿದೆ ಕಟ್ಟಳೆ:** ಔಷಧಗಾರಿಕೆ ನಡೆಸಬೇಕೆನ್ನುವವರು ಮೊದಲು ಸರಕಾರದಿಂದ ನೇಮಿತವಾದ ಔಷಧಕಾರಿಕೆ ಮಂಡಲಿಯಿಂದ ಸೂಚಿತವಾದ ಔಷಧಗಾರಿಕೆ ಕಾಲೇಜಿನಿಂದ ಅರ್ಹತಾಪತ್ರ (ಡಿಪ್ಲೊಮ) ಇಲ್ಲವೇ ಪದವಿಯ ಅರ್ಹತೆ, ಅನುಭವ ಪಡೆದಿರಬೇಕು. ಆಗ ಔಷಧಗಾರಿಕೆ ನಡೆಸಲು ಕಾನೂನಿನಂತೆ ಹಕ್ಕು ಬಾಧ್ಯತೆಗಳು ಇರುತ್ತವೆ. ಇಂಥವನು ನೋಂದಾಯಿತ ಔಷಧಗಾರ (ರಿಜಿಸ್ಟರ್ಡ್ ಫಾರ್ಮಸಿಸ್ಟ್). ಔಷಧಗಾರಿಕೆಯ ಕಾಯಿದೆಗಳಲ್ಲಿ ಔಷಧಗಾರಿಕೆ ನಡೆಸಲು ಮುಖ್ಯವಾಗಿ ಪಾಲಿಸಬೇಕಾದ ನಿಯಮಗಳು ಇರುವುವಲ್ಲದೆ ವಿಷ ವಸ್ತುಗಳನ್ನು ಮಾರಲೂ ಮಂಪರಿಕ (ನಾರ್ಕೋಟಿಕ್) ಮದ್ದುಗಳನ್ನು ಕೊಡಲೂ ಅಪಾಯಕರ ಮದ್ದುಗಳ ಮೇಲೆ ಹಾಗೆಂದು ನಮೂದಿಸಿ ಮಾರಲೂ ಗೊತ್ತಾದ ಇನ್ನೂ ಕೆಲವು ಕಾಯಿದೆಗಳಿವೆ. ಈ ಕಾಯಿದೆಗಳಲ್ಲಿ ಮದ್ದುಗಳ ವಿಚಾರ ಬಂದಾಗಲೆಲ್ಲ ಆಯಾ ದೇಶದ ಅಧಿಕೃತ ಔಷಧಮಂಜರಿಯಲ್ಲಿ (ಫಾರ್ಮಕೋಪಿಯ) ಸೂಚಿಸಿರುವ ಮದ್ದುಗಳ ಗುಣಮಟ್ಟಗಳನ್ನು ಪಾಲಿಸುವುದು ಕಡ್ಡಾಯ.

1948ರ ಔಷಧಗಾರಿಕೆ ಕಾಯಿದೆಯ ಪ್ರಕಾರ ಭಾರತದ ಔಷಧಗಾರಿಕೆಯ ಮಂಡಲಿ ನೇಮಕವಾಗಿದೆ. ಔಷಧಗಾರಿಕೆಯ ಕಸುಬು, ಆಚರಣೆಗಳನ್ನು ಚೆನ್ನಾಗಿಯೂ ಔಷಧಗಾರಿಕೆಯ ಕಾಯಿದೆಯನ್ನು ಪೂರ್ತಿಯಾಗಿಯೂ ಜಾರಿಗೆ ತರುವುದು, ಔಷಧಗಾರಿಕೆಯಲ್ಲಿ ಹೆಚ್ಚಿನ ಮಟ್ಟದ ತರಬೇತು ಮುಂದುವರಿಸಲು ಒತ್ತಾಸೆ ಕೊಡುವುದು, ಈ ಕಸಬಿನ ವಿಚಾರವಾಗಿ ಜನರಿಗೆ ಸರಿಯಾದ ತಿಳಿವಳಿಕೆ ಕೊಡುವುದು–ಈ ಮಂಡಲಿಯ ಮುಖ್ಯ ಗುರಿಗಳು.

ಭಾರತದಲ್ಲಿ ಹೊರಗಿನಿಂದ ತರಿಸಿಕೊಂಡ, ದೇಶದಲ್ಲಿ ತಯಾರಿಸಿದ, ಮಾರುವ, ಹಂಚುವ ಮದ್ದುಗಳ ಗುಣಮಟ್ಟದ ಮೇಲಿನ ಹತೋಟಿಯು ಔಷಧಗಳ ಕಾಯಿದೆ, 1940 ಮತ್ತೆ 1955, 1961, 1962ರ ತಿದ್ದುಪಡಿಗಳೂ ಮತ್ತದರ ಮೇಲೆ ರಚಿಸಿದ ಕಟ್ಟಳೆಗಳ ಕೈಯಲ್ಲಿದೆ. ಮುಖ್ಯವಾಗಿ ಇದು ರಾಜ್ಯಗಳ ಜವಾಬ್ದಾರಿ. ಈ ಕಾಯಿದೆ ಸುಗಮವಾಗಿ ಆಚರಣೆಗೆ ಬರುವಂತೆ ಹಲವು ಅಧಿಕೃತ ಸಮಿತಿಗಳನ್ನು ಕೇಂದ್ರ ಸರ್ಕಾರ ನೇಮಿಸಿದೆ. ಕೊಲ್ಕೊತ್ತದಲ್ಲಿರುವ ಕೇಂದ್ರ ಔಷಧಗಳ ಪ್ರಯೋಗಾಲಯ ಮೊಟ್ಟಮೊದಲನೆಯ ಸಮಿತಿಯಾಗಿ, ಅಲ್ಲಿಗೆ ಕೇಂದ್ರ ಸರ್ಕಾರ ಇಲ್ಲವೇ ರಾಜ್ಯಗಳ ಅಧಿಕಾರಿಗಳು ಕಳುಹಿಸಿದ ಔಷಧಗಳ ಮಾದರಿಗಳನ್ನು ಬಿಡಿಪರೀಕ್ಷೆ ಮಾಡಿ ವರದಿ ಸಲ್ಲಿಸುವುದು, ಔಷಧಿಗಳ, ಚಮತ್ಕಾರೀ ಪರಿಹಾರಗಳ (ಆಕ್ಷೇಪಕರ ಜಾಹೀರಾತುಗಳು) ಕಾಯಿದೆ, 1954ರ ಪ್ರಕಾರ ಕಾಮಚೋದಕಗಳು, ಎಂಥೆಂಥ ಮೇಹರೋಗಗಳು, ಹೆಂಗಸರ ಕಾಯಿಲೆಗಳಿಗೂ ಸುಲಭ ಗುಣಕಾರಿ ಎನ್ನುವ ಜಾಹೀರಾತುಗಳನ್ನು ಪ್ರಕಟಿಸುವಂತಿಲ್ಲ.

**ಸಂಸ್ಥೆಗಳು:** ಔಷಧಗಾರರ ರಾಷ್ಟ್ರೀಯ ಸಂಸ್ಥೆಗಳು ಬಹಳ ಇವೆ. (1841)ರಲ್ಲಿ ಸ್ಥಾಪನೆಯಾದ ಗ್ರೇಟ್ ಬ್ರಿಟನ್ನಿನ ಔಷಧ ತಯಾರಿಕಾ ಸಂಘ ಇಂಥದೊಂದು ಮಾದರಿ, ಅಮೆರಿಕದ ಔಷಧ ತಯಾರಿಕಾ ಸಂಘದಲ್ಲಿ ಈ ಶಾಖೆಯ ಎಲ್ಲ ವಿಭಾಗಗಳೂ ಸೇರಿವೆ. ಭಾರತದಲ್ಲೂ 1938ರಿಂದಲೇ ಇಂಥ ಒಂದು ಸಂಘವಿದೆ. ಇವಲ್ಲದೆ ಔಷಧ ಮಾರಾಟಗಾರರ ಸಂಘಗಳೂ ಇವೆ. 1912ರಲ್ಲಿ ಆರಂಭವಾದ ಅಂತಾರಾಷ್ಟ್ರೀಯ ಔಷಧ ತಯಾರಿಕಾ ಸಂಘದಲ್ಲಿ ಸುಮಾರು 35 ರಾಷ್ಟ್ರೀಯ ಸಂಘಗಳು ಒಂದುಗೂಡಿವೆ.

ಈ ಸಂಘ, ಸಂಸ್ಥೆಗಳ ನೀತಿಸೂತ್ರಗಳು ಅಮೆರಿಕದಲ್ಲಿರುವಂತೆ ಎಲ್ಲೆಲ್ಲೂ ಜಾರಿಯಲ್ಲಿವೆ. ಮದ್ದುಗಳ ತಯಾರಿಕೆ, ದಾಸ್ತಾನು, ಕೊಡುಗೆಗಳಲ್ಲಿ ಗುಣಮಟ್ಟವನ್ನು ಕಾಪಾಡಿ ಜನರಿಗೆ ಸೇವೆ ಸಲ್ಲಿಸುವುದು ಮುಖ್ಯ ನೀತಿ. ಔಷಧಗಾರ ಇಷ್ಟಪಟ್ಟು ಮದ್ದುಗಳ ವಿಷಯದಲ್ಲಿನ ತನ್ನ ಹೆಚ್ಚಿನ ತಿಳಿವಳಿಕೆಯನ್ನು ಇತರ ಆರೋಗ್ಯ ಶಾಖೆಗಳವರಿಗೆ ನೀಡುವನು. ಔಷಧಗಾರ ತಾನಾಗಿ ಯಾವ ರೋಗಿಯನ್ನೂ ಪರೀಕ್ಷಿಸುವುದೂ ಇಲ್ಲ; ಮದ್ದನ್ನು ನಿಯಮಿಸುವುದೂ ಇಲ್ಲ. ಅಂಥ ಸಲಹೆ ಬೇಕೆಂದವರನ್ನು ನುರಿತ ವೈದ್ಯರಿಗೆ ಕಳುಹಿಸಿಕೊಡುವನು. ಅವನು ವೈದ್ಯ ನಿಯಮಿಸಿದ ಪಟ್ಟಿಯಂತೆ ಮದ್ದನ್ನು ಚಾಚೂ ತಪ್ಪದೆ ಎಚ್ಚರಿಕೆಯಿಂದ ಚೆನ್ನಾಗಿ ತಯಾರಿಸಿ ನೀಡುತ್ತಾನೆ.

ಮುಖ್ಯವಾಗಿ ಔಷಧಗಾರಿಕೆ ಶಾಲೆಗಳಲ್ಲೂ ಔಷಧ ತಯಾರಕರ ಪ್ರಯೋಗಾಲಯ ಗಳಲ್ಲೂ ಔಷಧ ತಯಾರಿಕೆಯಲ್ಲಿ ಸಂಶೋಧನೆ ನಡೆಯುತ್ತದೆ. ಮದ್ದುಗಳಾಗಿ ಬಳಸುವ ಹೊಸ ರಾಸಾಯನಿಕಗಳ ತಯಾರಿಕೆಯೂ ಗಿಡಮೂಲಿಕೆಗಳಿಂದ ಕ್ರಿಯಾಂಶಗಳನ್ನು ಚೊಕ್ಕ ರೂಪದಲ್ಲಿ ಬೇರ್ಪಡಿಸುವುದೂ ಇದರಲ್ಲಿ ಸೇರಿದೆ. ಮದ್ದುಗಳ ಗುಣಮಟ್ಟದ ನಿರ್ಧಾರವೂ ಮುಖ್ಯ ಕೆಲಸಗಳಲ್ಲಿ ಒಂದು. ಮದ್ದುಗಳ ತಯಾರಿಕೆ, ಬಳಕೆಗಳಿಗೆ ರಸಾಯನವಿಜ್ಞಾನದ ಅನ್ವಯವಿದು. ಇವೆಲ್ಲವೊಂದಿಗೆ ಮದ್ದುಗಳ ರೂಪ, ರುಚಿ, ರೋಗಿಗೆ ಹಿಡಿಸುವಂತೆ ಮಾಡುವ, ಒಪ್ಪುವಂತೆ ಕೊಡುವ ವಿಧಾನಗಳು, ಕೆಡದಂತೆ ಇರಿಸುವಿಕೆ, ಕರಗುವಿಕೆ ಮುಂತಾದವುಗಳ ಸಂಶೋಧನೆಯೂ ನಡೆವುದು (**ನೋಡಿ– ಔಷಧಮಂಜರಿ; ಔಷಧವಿಜ್ಞಾನ**). (ಡಿ.ಎಸ್.ಎನ್.)

**ಔಷಧಮಂಜರಿ:** ಒಂದು ದೇಶಕ್ಕೆ ಅನ್ವಯಿಸುವಂತೆ ಮದ್ದುಗಳನ್ನು ಗುರುತಿಸುವ ಶಿಷ್ಟಮಾನಕಗಳನ್ನೂ ಮದ್ದುಗಳ ಗುಣಮಟ್ಟ, ಪ್ರಮಾಣಗಳನ್ನೂ ನಿಗದಿಯಾಗಿ ಸೂಚಿಸುವ ಪುಸ್ತಕ (ಫಾರ್ಮಕೋಪಿಯ). ಸರಕಾರದ ಅಧಿಕೃತ ಸಮಿತಿ ಇಲ್ಲವೇ ಸರಕಾರ ಒಪ್ಪಿದ ಸಂಘ ಪ್ರಕಟಿಸುವ, ಕಾನೂನುಬದ್ಧವಾಗುವ ಪುಸ್ತಕವಿದು. ಯಾರೇ ಆಗಲಿ ಮದ್ದುಗಳನ್ನು ಬಳಸುವಾಗ ಅದಕ್ಕಾಗಿ ನಿಯಮಿತವಾಗಿರುವ ಗುಣಮಟ್ಟ, ಪ್ರಮಾಣಗಳ ಮದ್ದುಗಳನ್ನು ಪಟ್ಟಿಯಲ್ಲಿ ವಿವರಿಸುವುದೇ ಔಷಧಮಂಜರಿಯ ಮುಖ್ಯ ಗುರಿ. ಇದರಲ್ಲಿ ಹೇಳಿರುವ ಗುಣಮಟ್ಟಕ್ಕೆ ಬರುವ ಮದ್ದುಗಳನ್ನು ಗುರುತಿಸಲು ಆಯಾ ದೇಶದ ಔಷಧಮಂಜರಿಯ ಹೆಸರನ್ನು ಮದ್ದುಗಳಿಗೆ ಜೋಡಿಸುವುದುಂಟು. ಅಮೋನಿಯಂ ಕಾರ್ಬೊನೇಟ್, ಐ.ಪಿ.(ಫಾರ್ಮಕೋಪಿಯ ಆಫ್ ಇಂಡಿಯ), ಅಮೊನಿಯ ಕಾರ್ಬೊನೇಟ್, ಬಿ.ಪಿ (ಬ್ರಿಟಿಷ್ ಫಾರ್ಮಕೋಪಿಯ) ಇತ್ಯಾದಿ. ಮದ್ದುಗಳಾಗಿ ಬಳಕೆಗೆ ಬರುವ ವಸ್ತುಗಳನ್ನು ಗುರುತಿಸಲೂ ಗುಣಮಟ್ಟ ನಿರ್ಧರಿಸಲೂ ರಾಸಾಯನಿಕ ಭೌತಜೀವಿಗಳ ಮೇಲಿನ ಪರೀಕ್ಷೆಗಳು, ಕೆಲವು ಮಿಶ್ರಣಗಳ ವಿವರಗಳೂ ಇವೆ. ಔಷಧಮಂಜರಿಯಲ್ಲಿ ಮದ್ದುಗಳ ವರ್ತನೆಯಾಗಲಿ, ಅವುಗಳ ವಿಷವೇರಿಕೆಯ ವಿಷಯವಾಗಲಿ ಸಿಕ್ಕದು. ಔಷಧಗಳನ್ನು ತಯಾರಿಸುವವರೂ ಮಾಡಿ ಕೊಡುವವರೂ ಆಯಾ ದೇಶದಲ್ಲಿ ಜಾರಿಯಲ್ಲಿರುವ ಹೊಸ ಅಧಿಕೃತ ಔಷಧಮಂಜರಿಯಲ್ಲಿರುವುದನ್ನು ಕಾನೂನುಬದ್ಧವಾಗಿ ಆಚರಿಸುವುದು ಕಡ್ಡಾಯವಿದೆ. ಜನರಿಗೆ ವಿಷಕರ ಕೆಟ್ಟ, ಕಳಪೆ ಮದ್ದುಗಳನ್ನು ಕೊಡದಿರುವಂತೆ ಮಾಡುವುದೇ ಇದರ ಮುಖ್ಯ ಉದ್ದೇಶ.

ಸಾಮಾನ್ಯವಾಗಿ ಜನರ ಒಳಿತಿಗಾಗಿ ದುಡಿವ ಒಂದು ಸಂಸ್ಥೆ ಇಲ್ಲವೇ ಸಮಿತಿ ಔಷಧಮಂಜರಿಯ ಪ್ರಕಟಣೆಯ ಭಾರವನ್ನು ಹೊತ್ತುಕೊಂಡು ವೈದ್ಯ, ರಸಾಯನ, ಔಷಧಗಾರಿಕೆ, ಔಷಧ ತಯಾರಿಕೆ ವಿಜ್ಞಾನಗಳಲ್ಲಿ ಪರಿಣತರಾದವರ ನೆರವಿನಿಂದ ಅದನ್ನು ಪ್ರಕಟಿಸುವುದು. ಭಾರತದಲ್ಲಿರುವಂತೆ, ಬಹಳ ದೇಶಗಳಲ್ಲಿ ಸರ್ಕಾರವೇ ಒಂದು ಅಧಿಕೃತ ಸಮಿತಿಯ ಮೂಲಕ ಈ ಕೆಲಸದ ಜವಾಬ್ದಾರಿಯನ್ನು ಕೈಗೊಳ್ಳುತ್ತದೆ. ಆದರೆ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಸರ್ಕಾರದ ಒಪ್ಪಿಗೆ ಪಡೆದ ಖಾಸಗಿ ಸಂಘಗಳು ಇದನ್ನು ಲಾಭವಿಲ್ಲದೆ ಪ್ರಕಟಿಸುತ್ತದೆ. ಇವನ್ನು ಮಾರಿ ಬಂದ ಆದಾಯದಿಂದ ತಿದ್ದುಪಡಿಗಳ ಪ್ರಕಟಣೆ ಕೆಲಸಗಳಿಗೆ ಹಣ ಒದಗುವುದು. ತಿದ್ದುಪಡಿಯಾದಾಗ ಹಳೆಯ ಕೆಲವು ಔಷಧಗಳನ್ನು ಮಂಜರಿಯಿಂದ ತೆಗೆದುಹಾಕಿ ಕೆಲವು ಹೊಸವನ್ನು ಸೇರಿಸಲಾಗುವುದು.

ಔಷಧಮಂಜರಿಯ ರೂಪದಲ್ಲಿ ದೊರತಿರುವ ತೀರ ಪುರಾತನ ಕಾಲದ ದಾಖಲೆಯೆಂದರೆ ಪ್ರ.ಶ.ಪೂ. ಸು. 1700ರಲ್ಲಿ ಕೆತ್ತಿರಬಹುದಾದ ಪುರಾತನ ಬ್ಯಾಬಿಲೋನಿಯದ ಕಲ್ಲುಬಿಲ್ಲೆ. ಯುರೋಪಿನಲ್ಲಿ ನಿಜವಾದ ಔಷಧಮಂಜರಿ ಮೊದಲು ಬಂದುದು ಫ್ಲಾರೆಂಟೇನಿನದು (1498). ಅಧಿಕೃತವಾಗಿ ಸರ್ಕಾರದ ವತಿಯಿಂದ ಮೊಟ್ಟಮೊದಲು (1542) ಪ್ರಕಟಿಸಿದವ ವೇಲೇರಿಯಸ್ ಕಾರ್ಡಸ್. ಈಗಿರುವಲ್ಲಿ ಬಲು ಹಳೆಯುದು ಡೇನರದು (1772). ಲಂಡನ್ನಲ್ಲಿ 1618ರಲ್ಲೂ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ 1821ರಲ್ಲೂ ಭಾರತದಲ್ಲಿ 1958ರಲ್ಲೂ ಔಷಧಮಂಜರಿಗಳು ಮೊದಲು ಪ್ರಕಟವಾದುವು. ಬೇರೆ ಬೇರೆ ದೇಶಗಳಲ್ಲಿ ಜಾರಿಯಲ್ಲಿರುವ ಔಷಧಮಂಜರಿಗಳಿವು; ಅಮೆರಿಕದ ಸಂಯುಕ್ತಸಂಸ್ಥಾನಗಳು 1955. ಆರ್ಜಂಟೀನ (1957), ಆಸ್ಟ್ರಿಯ (1906), ಭಾರತ (1968), ಇಟಲಿ (1940), ಈಜಿಪ್ಟ್ (1953), ಗ್ರೀಸ್ (1924), ಚಿಲಿ (1941), ಚೀನ (1953), ಚೆಕೋಸ್ಲೊವಾಕಿಯ (1958), ಜಪಾನ್ (1951), ಜರ್ಮನಿ (1951), ಡೆನ್ಮಾರ್ಕ್ (1954), ಟರ್ಕಿ (1948), ನಾರ್ವೆ (1953), ನೆದರ್ಲೆಂಡ್ಸ್ (1958), ಪರಗ್ವೆ (1945), ಪೋರ್ಚುಗಲ್ (1946), ಪೋಲೆಂಡ್ (1954), ಫ್ರಾನ್ಸ್ (1954), ಫಿನ್ಲೆಂಡ್ (1956), ಬ್ರಿಟನ್ (1969), ಬೆಲ್ಜಿಯಂ (1953), ಬ್ರೆಜಿಲ್ (1947), ಮೆಕ್ಸಿಕೊ (1952), ಯುಗೋಸ್ಲಾವಿಯ (1951), ರಷ್ಯ, ರೂಮೇನಿಯ (1952), ವೆನಿಜ್ವೇಲ (1942), ಸ್ಪೇನ್ (1954), ಸ್ವೀಡನ್ (1946), ಹಂಗರಿ (1954). ತಮ್ಮ ದೇಶದ್ದೇ ಬೇರೆ ಒಂದು ಔಷಧಮಂಜರಿ ಇಲ್ಲವಾದರೆ ಅಂಥ ನಾಡುಗಳು ನೆರೆಯ ದೇಶದ್ದನ್ನೋ ಅಂತಾರಾಷ್ಟ್ರೀಯವಾದದ್ದನ್ನೋ ಅನುಸರಿಸಬಹುದು. ಇಥಿಯೋಪಿಯ, ಇಸ್ರೇಲುಗಳು ಅಂತಾರಾಷ್ಟ್ರೀಯವಾದದ್ದನ್ನು ಅನುಸರಿಸುತ್ತವೆ.

ಒಂದು ದೇಶದಲ್ಲಿ ಮದ್ದುಗಳ ಗುಣಮಟ್ಟ ಹೇಗಿರಬೇಕೆಂದು ನಿರ್ಧರಿಸಲು ಮೂಲಾಧಾರ ಈ ಔಷಧಮಂಜರಿಯೇ. ಆಯಾ ದೇಶದ ವೈದ್ಯಗಾರಿಕೆ, ಔಷಧಗಾರಿಕೆ, ಜನಾರೋಗ್ಯಗಳು ಇದರಲ್ಲಿ ಸೂಚಿಸಿರುವ ಗುಣಮಟ್ಟಗಳನ್ನವಲಂಬಿಸಿವೆ. ಆದರೆ ಕೆನಡದಂಥ ದೇಶವನ್ನು ಬಿಟ್ಟು ಉಳಿದಡೆಗಳಲ್ಲಿ ಗುಣಮಟ್ಟಗಳನ್ನು ನಿರ್ಧರಿಸುವವರೇ ಬೇರೆ. ಅವು ಜಾರಿಯಲ್ಲಿ ಬಂದು ಎಲ್ಲರೂ ಪಾಲಿಸುವಂತೆ ನೋಡಿಕೊಳ್ಳುವವರೇ ಬೇರೆ. ಕರ್ನಾಟಕ ರಾಜ್ಯದಲ್ಲಿರುವ ಹಾಗೆ ಭಾರತದ ಇತರೆಡೆಗಳಲ್ಲೂ ಔಷಧ ಹತೋಟಿ ತನಿಖಾಧಿಕಾರಿಗಳು (ಡ್ರಗ್ ಕಂಟ್ರೋಲ್ ಇನ್‌ಸ್ಪೆಕ್ಟರ್ಸ್) ನೇಮಕವಾಗಿರುವರು. ಔಷಧಗಳು ಮತ್ತು ಅಂಗರಾಗಗಳ ಕಾನೂನುಗಳ ರೀತಿ ಸರಿಯಾದ ಗುಣಮಟ್ಟದ ಮದ್ದುಗಳು ಕೆಡದಂತೆ ದಾಸ್ತಾನಿವೆಯೇ, ವೈದ್ಯನ ನಿಯಮಚೀಟಿಗಳಿಗೆ ಸರಿಯಾಗಿ ಮದ್ದು ವಿಲೇವಾರಿ ಆಗುವುದೇ ಮುಂತಾದವನ್ನು ನೋಡಿಕೊಳ್ಳುವುದೇ ಔಷಧ ಹತೋಟಿ ತನಿಖೆಯ ಇಲಾಖೆಯ ಮುಖ್ಯ ಕೆಲಸಗಳು. ಔಷಧಗಾರರು ಮಾರಾಟಕ್ಕಾಗಿ ಇಟ್ಟುಕೊಂಡಿರುವ ಮದ್ದುಗಳ ಮಾದರಿಗಳನ್ನು ಆಗಿಂದಾಗ್ಗೆ ತೆಗೆದುಕೊಂಡು ಹೋಗಿ, ಸೀಸೆಗಳ ಮೇಲೆ ನಮೂದಿಸಿರುವ ಮದ್ದು, ಪ್ರಮಾಣಗಳಂತೆ ಒಳಗಿರುವುದೇ ಎಂದು ಇವರು ಪ್ರಯೋಗಾಲಯಗಳಲ್ಲಿ ಪರೀಕ್ಷಿಸುವರು. ಇವುಗಳಲ್ಲಿ ಹೊಂದಾಣಿಕೆ ಇಲ್ಲವಾದರೆ ಕಾನೂನಿಗೆ ತಕ್ಕಂತೆ ಅಪರಾಧದ ತಕ್ಸೀರು ಹಾಕಬೇಕಾಗುತ್ತದೆ. ಈ ತೆರನ ಹತೋಟಿ ಕಾನೂನುಗಳು ಕೆಲವು ಔಷಧಗಳ ವಿಷಯದಲ್ಲಿ ಒಂದೊಂದು ದೇಶದಲ್ಲೂ ಒಳರಾಜ್ಯಗಳಲ್ಲೂ ಬಗೆಬಗೆಯಾಗಿರುವುವು. ಒಂದು ಮದ್ದನ್ನು ರೋಗಿ ಬೇರೆ ಬೇರೆ ದೇಶಗಳಲ್ಲಿ ಕೊಂಡು ಬಳಸಬೇಕಾದರೆ ಹಲಬಗೆಯ ಗುಣಮಟ್ಟಗಳ ಮದ್ದನ್ನು ಕೊಳ್ಳಬೇಕಾಗುವುದೊಂದು ತೊಡಕೇ ಸರಿ. ಇನ್ಸುಲಿನ್ ಒಂದು ಒಳ್ಳೆಯ ಉದಾಹರಣೆ. ಗುಣಮಟ್ಟ ಹೆಚ್ಚುಕಡಿಮೆಯಾದರೆ ರೋಗಿಯ ಪ್ರಾಣಕ್ಕೆ ಊನವಾಗಬಹುದು. ಪ್ರಾಣಿಗಳಿಂದ ಪಡೆದ ಇನ್ಸುಲಿನ್ನನ್ನು ಮೊದಲು ಮೊಲ, ಚಿಟ್ಟಿಲಿಗಳಿಗೆ ಕೊಟ್ಟು ಶಿಷ್ಟೀಕರಣ ಮಾಡಿ ನಿರ್ಧರಿಸಬೇಕು. ಶೀತಕದಲ್ಲಿ ತಣ್ಣಗಿರಿಸದಿದ್ದಲ್ಲಿ ಅದು ಬೇಗನೆ ಕೆಡುತ್ತದೆ. ಆದರೆ ಇನ್ಸುಲಿನ್ ವಿಚಾರದಲ್ಲಿ ಅಂತಾರಾಷ್ಟ್ರೀಯ ಶಿಷ್ಟಪ್ರಮಾಣಗಳು ಇರುವುದರಿಂದ ಅಂಥ ಭಯವಿಲ್ಲ.

ಪ್ರಪಂಚದಲ್ಲಿ ಹಲವಾರು ದೇಶಗಳಲ್ಲಿ ಮದ್ದುಗಳ ಹೆಸರುಗಳು, ಗುಣಮಟ್ಟಗಳು ಲೆಕ್ಕವಿಲ್ಲದಷ್ಟಿವೆ. ಕೆಲವು ಮದ್ದುಗಳಿಗೆ 15–20 ಹೆಸರುಗಳಿರುವುದೂ ಹೆಚ್ಚಲ್ಲ. ಮದ್ದುಗಳ ಹೆಸರುಗಳನ್ನು ಸಾಮಾನ್ಯೀಕರಿಸುವುದರೊಂದಿಗೆ ಟಿಂಕ್ಚರುಗಳ ಮತ್ತು ಊರಿದ ಸಾರಗಳ (ಇನ್‌ಫ್ಯೂಷನ್ಸ್) ಗುಣಮಟ್ಟವನ್ನಾದರೂ ಶಿಷ್ಟೀಕರಿಸಲು ಮೊಟ್ಟಮೊದಲಾಗಿ ಬ್ರಸೆಲ್ಸ್ ಒಪ್ಪಂದವಾಯಿತು (1906). ಇದನ್ನು ವಿಸ್ತರಿಸಿ ಬಳಕೆಯಲ್ಲಿರುವ ಇನ್ನಷ್ಟು ಮದ್ದುಗಳಿಗೆ ಮುಂದೆ (1925). ಅನ್ವಯಮಾಡಲಾಗಿದೆ. ಈ ದಿಸೆಯಲ್ಲಿ ರಾಷ್ಟ್ರಗಳ ಒಕ್ಕೂಟದ (ಲೀಗ್ ಆಫ್ ನೇಷನ್ಸ್) ಯತ್ನ ಕೈಗೂಡಲಿಲ್ಲ. ಆದರೆ ಇದರ ಜಾಗಕ್ಕೆ ಬಂದ ವಿಶ್ವಸಂಸ್ಥೆಯ ವಿಶ್ವಆರೋಗ್ಯ ಸಂಸ್ಥೆ ಪುರವಣಿಯೂ (1958) ಹೊರಬಂದಿದೆ. ಇದು ಇಂಗ್ಲಿಷ್, ಫ್ರೆಂಚ್, ಸ್ಪಾನಿಷ್ ನುಡಿಗಳಲ್ಲಿದೆ.

(ಡಿ.ಎಸ್.ಎಸ್.)

**ಔಷಧವಿಜ್ಞಾನ:** ಔಷಧವಾಗಿ ಬಳಸಬಹುದಾದ ಇಲ್ಲ ವಸ್ತುಗಳ ಗುಣ, ತಯಾರಿಕೆ, ವರ್ತನೆ, ಪ್ರಭಾವಗಳೇ ಮುಂತಾದ ವಿಷಯಗಳನ್ನು ಕುರಿತ ವಿಜ್ಞಾನ (ಫಾರ್ಮಕಾಲಜಿ). ಮದ್ದುಗಳ ವಿಷಯವಾಗಿ ಎಲ್ಲ ತೆರನ ತಿಳಿವಳಿಕೆಗಳನ್ನೂ ಒದಗಿಸುತ್ತದೆ. ಒಂದು ರೀತಿಯಲ್ಲಿ ನೋಡಿದರೆ ಇದು ಪ್ರಾಣವಿರುವ ಎಲ್ಲ ಬಗೆಗಳ ಜೀವಿಗಳ ಮೇಲೂ ರಾಸಾಯನಿಕ ವಸ್ತುಗಳ ಪ್ರಭಾವವನ್ನು ತಿಳಿಸುವ ವಿಜ್ಞಾನ ಎನ್ನಬಹುದು. ಕೆಲವೇಳೆ ಮದ್ದುಗಳ ಕೇವಲ ಮೈಯಲ್ಲಿನ ವರ್ತನೆಗೆ ಅಂದರೆ ಅವುಗಳ ಪ್ರಭಾವಗಳ ತಿಳಿವಳಿಕೆಗೆ ಇದನ್ನು ಮಿತಿಗೊಳಿಸುವುದುಂಟು. ಇದರಿಂದಲೇ ವೈದ್ಯವಿಜ್ಞಾನದಲ್ಲಿ ಇದರ ಹಿರಿಯ ಪಾತ್ರ ಗೊತ್ತಾಗುವುದು. ಬಳಸುವ ರೂಪದಲ್ಲಿ ಮದ್ದುಗಳನ್ನು ಒದಗಿಸುವು ಔಷಧಗಾರಿಕೆ (ಫಾರ್ಮಸಿ) ಔಷಧವಿಜ್ಞಾನದ ಒಂದು ವಿಭಾಗ. ಅಷ್ಟೇ ಅಲ್ಲದೆ, ಇದರಲ್ಲಿ ರೋಗಚಿಕಿತ್ಸೆವಿಜ್ಞಾನ (ತೆರಪ್ಯೂಟಿಕ್ಸ್), ವಿಷವಿಜ್ಞಾನ (ಟಾಕ್ಸಿಕಾಲಜಿ) ಸೇರಿವೆ. ಒಂದು ರೀತಿಯಲ್ಲಿ ಪ್ರಯೋಗಾಲಯದಲ್ಲಿ ಪ್ರಾಣಿಗಳ ಮೇಲೆ ಪರೀಕ್ಷಿಸಿ ಮದ್ದುಗಳನ್ನು ಚಿಕಿತ್ಸೆಗಾಗಿ ಸೂಚಿಸುವ ವಿಜ್ಞಾನ ಎನ್ನಲೂಬಹುದು.

**ಹುಟ್ಟು, ಮೂಲ:** ರೋಗ ನಿವಾರಣೆಗಾಗಿನ ಚಿಕಿತ್ಸೆ ಮಾನವನ ಆದಿಯಿಂದಲೇ ಹುಟ್ಟಿರಬಹುದಾದರೂ ವಿಜ್ಞಾನದ ಅರಿವು ಹೆಚ್ಚಿ ಬಂದ ಕಳೆದ ಶತಮಾನದ ತನಕ ಬಹುಮಟ್ಟಿಗೆ ಕುರುಡು ನಂಬಿಕೆ. ಮಂತ್ರ, ತಂತ್ರ, ಧರ್ಮಗಳನ್ನು ನೆಚ್ಚಿಕೊಂಡಿದ್ದು, ಕೇವಲ ಮದ್ದನ್ನು ಸುಮ್ಮನೆ ಕೊಟ್ಟು ಒಪ್ಪುತಪ್ಪು ನೋಡುವುದರ ಮೇಲಿತ್ತು. ಯುರೋಪಿನಲ್ಲಿ ಪುರಾತನ ಗ್ರೀಕರಿಗಂತೂ ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಗ್ಯಾಲೆನನ (131–20) ತತ್ತ್ವಗಳೇ ವೇದವಾಕ್ಯಗಳಾಗಿದ್ದುವು. ಅವನ ನೂರಾರು ಬರೆಹಗಳಲ್ಲೂ ಅವನವೇ ಕಣ್ಣರಿಕೆಗಳೊಂದಿಗೆ ಎಷ್ಟೋ ಮದ್ದುಗಳನ್ನು ಸೂಚಿಸಿರುವುದರೊಂದಿಗೆ ಅವನ ಮೊಂಡು ವಾದಗಳೂ ತುಂಬಿದ್ದುವು. ಈ ಬರೆಹಗಳನ್ನು ಸಾವಿರಾರು ವರ್ಷಗಳ ತನಕ ಯಾರೂ ಎದುರಿಸಲಾರದೆ ಅವು ಅಧಿಕೃತಗೊಂಡು ಯಾರಾದರೂ ಪ್ರಯೋಗ ನಡೆಸಲೂ ಕಂಡದ್ದನ್ನು ಕಂಡಹಾಗೇ ಹೇಳಲೂ ಹಿಂಜರಿಯುತ್ತಿದ್ದರು. ಆದರೆ ಗ್ಯಾಲೆನನ ಯುಗದ ಎದುರು ಮೊದಲು ಎದೆಗಾರಿಕೆ ತೋರಿ ಕಟುವಾಗಿ ಟೀಕಿಸಿದವ ಪ್ಯಾರಸೆಲ್ಸಸ್ (1493–1541). ಉತ್ತರ ಯುರೋಪಿನಲ್ಲಿ ಅಲೆದಾಡುತ್ತಿದ್ದ ಈ ಬಾಯಿಬಡಕ ಅಲ್ಲಲ್ಲಿ ಕೀಟಲೆ ಎಬ್ಬಿಸಿ ತೊಡರುತ್ತಿದ್ದರೂ ತನ್ನ ಸಫಲ ಮದ್ದುಗಾರಿಕೆಯ ಕಾರಣದಿಂದ ಪಾರಾಗುತ್ತಿದ್ದ. ಮಿಶ್ರಣಗಳಲ್ಲಿ ಹತ್ತಾರು ಮದ್ದುಗಳನ್ನು ಗ್ಯಾಲೆನ್ ಬೆರೆಸುತ್ತಿದ್ದೆಡೆಯಲ್ಲಿ ಇವನು ಕೆಲವೇ ಕೆಲವು ಹೊಸವನ್ನು ಹಾಕಿ ಪರಿಣಾಮಕಾರಿ ಆಗುವುದನ್ನು ತೋರಿಸಿಕೊಟ್ಟ.

ಆರೋಗ್ಯದಲ್ಲೂ ರೋಗಗಳಲ್ಲೂ ಮೈ ಅಂಗರಚನೆ, ನಿಜಗೆಲಸಗಳ ತಿಳಿವಳಿಕೆ ಮುಂದಿನ 3 ಶತಮಾನಗಳಲ್ಲಿ ಕೂಡಿಬಂದಿತಾದರೂ ರೋಗಚಿಕಿತ್ಸೆ ಮಾತ್ರ ಒಂದು ಕಲೆಯಾಗಿತ್ತೇ ಹೊರತು ವಿಜ್ಞಾನ್ರವಾಗಿರಲಿಲ್ಲ. ವೈದ್ಯದಲ್ಲಿ ಬಳಸುವ ಮದ್ದುಗಳಿಗೇ ಡೇಲ್ (1692) ಫಾರ್ಮಕಾಲಜಿ (ಔಷಧವಿಜ್ಞಾನ) ಪದವನ್ನು ಮೊದಲು ಬಳಸಿದ್ದ. ಆಗಿನ ಕಾಲದಲ್ಲಿ ಒಣಗಿಸಿದ ಕರಿನಾಗರ, ನರಿಗಳ ಪುಪ್ಪುಸ, ಗಲ್ಲಿಗೇರಿದವರ ತಲೆ ಸುಂಡುಗಳ ಜೊತೆಗೆ ಕೆಲವು ಗುಣಕಾರಿ ಮದ್ದುಗಳೂ ವೈದ್ಯದಲ್ಲಿ ಬಳಕೆಯಲ್ಲಿದ್ದುವು. 1850ರ ಸುಮಾರಿನಲ್ಲಿ ಫ್ರೆಂಚ್ ಅಂಗಕೆಲಸ ವಿಜ್ಞಾನಿ ಫ್ರಾಂಕಾಯ್ಸ್ ಮೆಜೆಂಡಿ ತೋರಿಸಿಕೊಡುವ ತನಕ ಮದ್ದುಗಳ ವರ್ತನೆಯನ್ನು ತಿಳಿಯಲು ಪ್ರಯೋಗಾಲಯದ ಶೋಧನೆಗಳ ಸುಳಿವೇ ಇರಲಿಲ್ಲ. ಮೈಯಲ್ಲಿ ನಡೆಯುತ್ತಿರುವ ನಿಜಗೆಲಸಗಳಲ್ಲಿನ ಬದಲಾವಣೆಗಳನ್ನು ಗುರುತಿಸಿ ಅಳೆಯುವಂಥ ವಿಧಾನಗಳನ್ನು ಹೊಸ ಅಂಗ ಕೆಲಸ ವಿಜ್ಞಾನಿಗಳು ಹೊರತಂದ ಮೇಲೆ ರಾಸಾಯಾನಿಕ ವಸ್ತುಗಳ ಮೈಮೇಲಿನ ಪ್ರಭಾವಗಳನ್ನು ಗುರುತಿಸುವಂತಾಯಿತು. ಇದಕ್ಕೂ ಹೆಚ್ಚಿನದಾಗಿ, ರಸಾಯನ ವಿಜ್ಞಾನದಲ್ಲಿ ಬಹಳ ಮುನ್ನಡೆಯಾಗಿತ್ತು. ಒಂದೊಂದೂ ಒಂದೊಂದು ತೆರೆನಾಗಿದ್ದುದರಿಂದ ಕಚ್ಚುಮದ್ದು, ಮೂಲಿಕೆಗಳ ಕಷಾಯಗಳಿಂದ ಪ್ರಯೋಗ ಈಡೇರುತ್ತಿರಲಿಲ್ಲ. 19ನೆಯ ಶತಮಾನದ ಮೊದಲಲ್ಲಿ ಫ್ರಾನ್ಸ್, ಜರ್ಮನಿಗಳ ರಸಾಯನ ವಿಜ್ಞಾನಿಗಳು ಗಿಡಮರಗಳಿಂದ ಚೊಕ್ಕ ರೂಪದಲ್ಲಿ ಕ್ವಿನೀನು, ಮಾರ್ಫೀಯ, ಸ್ಟಿಕ್ನೀನು, ಅಟ್ರೋಪೀನುಗಳೇ ಮುಂತಾದುವನ್ನು ಬೇರ್ಪಡಿಸಿದಾಗ ಸ್ಥಿತಿ ಉತ್ತಮವಾಯಿತು.

ಚೊಕ್ಕ ರೂಪದಲ್ಲಿ ಮದ್ದುಗಳು ದೊರಕುವಂತಾಯಿತು. ಜರ್ಮನಿಯಲ್ಲಿ ಮುಖ್ಯವಾಗಿ ಬಣ್ಣವಸ್ತುಗಳ ತಯಾರಿಕೆಯಲ್ಲಿ ಉಪಉತ್ಪನ್ನಗಳಾಗಿ ಬಂದವೇ ಹೊಸ ಮದ್ದುಗಳ ವಿಕಾಸಕ್ಕೆ ಮೂಲವಾದುವು. ಗುಂಡಿಗೆಯ ಬಡಿತ ವೇಗ, ಉಸಿರಾಟದ ಕ್ರಮ, ಮೂತ್ರಸುರಿಕೆ, ಜೊಲ್ಲು ಸುರಿತವೇ ಮುಂತಾದ ಅಂಗಕೆಲಸಗಳ ಮೇಲೆ ಈ ಹೊಸ ರಾಸಾಯನಿಕಗಳ ಪ್ರಭಾವ ಕಂಡ, ಇಲ್ಲವೇ ಅಂಗಕೆಲಸಗಳನ್ನು ಶೋದಿಸುವುದರಲ್ಲಿ ಇವನ್ನು ಮೊದಮೊದಲಲ್ಲಿ ಬಳಸಿದ ಜನರೇ ಅಂದಿನ ಔಷಧ ವಿಜ್ಞಾನಿಗಳಾಗಿದ್ದರು.

ಹೀಗಿರುವಾಗ ಔಷಧವಿಜ್ಞಾನದಲ್ಲೇ ಪ್ರಯೋಗಗಳನ್ನು ನಡೆಸಲೆಂದೇ ಡೊರ್ಪಾರ್ಟಿನಲ್ಲಿ ಮೊದಲು ಕಾಲಿಟ್ಟ ಬುಖೀಂ (1847–47) ಮೈಯಲ್ಲಿ ಮದ್ದುಗಳ ಪ್ರಭಾವವನ್ನು ಸುಮ್ಮನೆ ವಿವರಿಸುವುದೇ ಅಲ್ಲದೆ ಅರ್ಥವನ್ನೂ ಹೇಳಬೇಕೆಂದ. ತನ್ನ ಕಾಲಿನ ಮೇಲೇ ತಾನು ನಿಂತ ಪ್ರಯೋಗವಿಜ್ಞಾನವಾಗಿ ಔಷಧವಿಜ್ಞಾನವನ್ನು ನೆಲೆಗೊಳಿಸಿದವ ಜರ್ಮನಿಯ ಮಹಾವಿಜ್ಞಾನಿ ಅಸ್ವಾಲ್ಡ್ ಸ್ಮೀಡರ್‌ಬರ್ಗ್, ಆಹಾರ ವಸ್ತುಗಳನ್ನು ಬಿಟ್ಟರೆ ಮೈಮೇಲೆ ರಾಸಾಯನಿಕಗಳಿಂದಾಗುವ ಕೆಡುಕನ್ನು ತಿಳಿವುದೇ ಇದರ ಉದ್ದೇಶವೆಂದು ವಿವರಿಸಿದ. ಔಷಧವಿಜ್ಞಾನದ ಮೊಟ್ಟಮೊದಲ ಪಠ್ಯಪುಸ್ತಕವನ್ನು ಬರೆದವನೂ ಇವನೇ. ಔಷಧವಿಜ್ಞಾನದಲ್ಲಿನ ಪ್ರಯೋಗಗಳ ವರದಿಗಳಿಗೇ ಮೀಸಲಾದ ಮೊದಲ ಪತ್ರಿಕೆ ಹೊರಡಿಸಲು ನೆರವಾಗಿ ಸ್ಟ್ರಾಸ್‌ಬರ್ಗಿನಲ್ಲಿ ಔಷಧವಿಜ್ಞಾನಕ್ಕಾಗಿ ಒಂದು ಶಾಲೆಯನ್ನು ತೆರೆದವನೂ ಇವನೇ. ಈ ಶಾಲೆ ಪ್ರಪಂಚದ ಎಲ್ಲೆಡೆಗಳಿಂದಲೂ ಕಲಿತವರನ್ನು ಸೆಳೆಯಿತು. ಪ್ರಪಂಚದ ಬೇರೆ ಬೇರೆ ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಔಷಧವಿಜ್ಞಾನ ಇಲಾಖೆಗಳನ್ನು ತೆರೆದವರು ಒಂದಿಲ್ಲೊಂದು ರೀತಿಯಲ್ಲಿ ಇಲ್ಲಿ ಕಲಿತು ಚಿಗುರಿ ಮೊಳೆತವರೇ.

**ಗುರಿ, ವಿಧಾನಗಳು:** ಮದ್ದುಗಳಿಂದ ಮೈಮೇಲೆ ಆಗುವ ಪ್ರಭಾವಗಳನ್ನು ಚೆನ್ನಾಗಿ ತಿಳಿಯಬೇಕಾದರೆ ಮೊದಲು ಅಂಗಗಳ ನಿಜಗೆಲಸಗಳನ್ನು ತಿಳಿದುಕೊಂಡು ಅಳೆಯುವುದು ಗೊತ್ತಿರಬೇಕು. ಅಲ್ಲದೆ, ಪೆಟ್ಟು, ಗಾಯ, ರೋಗಗಳಿಂದ ಅಂಗರಚನೆ, ನಿಜಗೆಲಸಗಳಲ್ಲಿ ಆಗುವ ಬದಲಾವಣೆಗಳನ್ನು ತಿಳಿಸಿಕೊಡುವ ರೋಗವಿಜ್ಞಾನದ (ಪೆಥಾಲಜಿ) ಅರಿವು ಚೆನ್ನಾಗಿರಬೇಕು. ಇದನ್ನು ತಿಳಿಯಲು ಬದುಕಿರುವ ಪ್ರಾಣಿಗಳ ಅಂಗಗಳನ್ನು ಬರಿಗಣ್ಣಿನಿಂದ ನೋಡುವುದಲ್ಲದೆ ಊತಕಗಳು, ಜೀವಕಣಗಳನ್ನು ಸೂಕ್ಷ್ಮದರ್ಶಿಯ ಅಡಿಯಲ್ಲೂ ಮೈರಸಗಳು, ಮಲ, ಮೂತ್ರ, ಬೆವರೇ ಮುಂತಾದವನ್ನು ರಾಸಾಯನಿಕವಾಗೂ ಪರೀಕ್ಷಿಸಬೇಕಾಗಬಹುದು. ಮೈಯೊಳಗಿನ ನಿಜಗೆಲಸಗಳ ಮೇಲೆ ಮದ್ದುಗಳ ಪ್ರಭಾವ ಗೊತ್ತಾಗಬೇಕಾದರೆ ಜೀವರಸಾಯನವಿಜ್ಞಾನ ತಿಳಿದಿರಲೇಬೇಕು. ನಂಜುರೋಧಕಗಳು (ಆಣಟಿಸೆಪ್ಟಿಕ್ಸ್), ಜೀವನಿರೋಧಕ (ಆಂಟಿಬಯೊಟಿಕ್) ಮದ್ದುಗಳ ಪ್ರಭಾವ ಕಾಣಬೇಕಾದರೆ ಏಕಾಣುಜೀವಿವಿಜ್ಞಾನದ (ಬ್ಯಾಕ್ಟೀರಿಯಾಲಜಿ) ಕಲ್ಪನೆ, ವಿಧಾನಗಳ ತಿಳಿವಳಿಕೆ ಇರಲೇಬೇಕು. ಗಿಡಮೂಲಿಕೆ, ನಾರುಬೇರುಗಳಲ್ಲಿನ ಮದ್ದುಗಳನ್ನು ಪಡೆಯಲು ರಸಾಯನವಿಜ್ಞಾನ, ಸಸ್ಯವಿಜ್ಞಾನಗಳು ಗೊತ್ತಿರಬೇಕಾಗುತ್ತದೆ.

ಒಂದು ಮದ್ದಿನ ರಾಸಾಯನಿಕ ರಚನೆಗೂ ಮೈಯಲ್ಲಿ ಅದರ ವರ್ತನೆಗೂ ನಿಕಟ ಸಂಬಂಧ ಇರುವುದನ್ನು ಔಷಧವಿಜ್ಞಾನಪರಿಣತರು ಬಲುಬೇಗನೆ ಕಂಡುಕೊಂಡರು. ರಸಾಯನವಿಜ್ಞಾನಪಟುಗಳು ಮೂಲದವನ್ನು ಹೋಲುವ ಹೊಸ ಮದ್ದುಗಳನ್ನು ತಯಾರಿಸಿದಂತೆಲ್ಲ ಇದು ಇನ್ನಷ್ಟು ಖಚಿತವಾಗುತ್ತ ಬಂದಿದೆ. ಮದ್ದುಗಳಲ್ಲಿ ಗೊತ್ತಾದ ಪ್ರಭಾವಕ್ಕೆ ಕಾರಣವಾದ ರಾಸಾಯನಿಕ ರಚನೆಯ ಅಣ್ವಂಶ ತಿಳಿದರೆ, ಕೊಂಚಮಟ್ಟಿಗೆ ಬದಲಿಸಿ ಇನ್ನೂ ಒಳ್ಳೆಯ ನಿರಪಾಯಕರ ಮದ್ದುಗಳನ್ನು ಕೃತಕವಾಗಿ ತಯಾರಿಸಲು ಅನುಕೂಲ. ಬಳಕೆ ಮದ್ದುಗಳಲ್ಲಿ ಬಹುಪಾಲು ಇಂಗಾಲ ಪರಮಾಣುಗಳಿರುವುದರಿಂದ ಜೈವಿಕ ರಸಾಯನವಿಜ್ಞಾನದ ಪರಿಣತೆಯೂ ಇರಬೇಕು.

ಎರಡನೆಯ ಮಹಾಯುದ್ಧ ಮುಗಿದ ಮೇಲಿನ ಶಾಂತ ಕಾಲದಲ್ಲಿ ಪರಮಾಣು ಮೂಲಗಳು ಔಷಧವಿಜ್ಞಾನಿಗಳಿಗೂ ದೊರೆತುದರಿಂದ ಶಾಸ್ತ್ರದ ಮೇಲೆ ಹೊಸ ಬೆಳಕು ಬಿತ್ತು. ನಾವು ಸೇವಿಸಿದ ಮದ್ದು ಮೈಯಲ್ಲಿ ಯಾವಾಗ, ಎಲ್ಲಿ ಏನಾಗುತ್ತದೆಂದು ವಿವರವಾಗಿ ತಿಳಿಯುವುದು ಆ ತನಕ ಸುಲಭವಾಗಿರಲಿಲ್ಲ. ಪ್ರಭಾವಿ ಮದ್ದುಗಳು, ವಿಷಕರ ವಸ್ತುಗಳನ್ನು ಕೊಡುವುದೇ ಬಹು ಸ್ವಲ್ಪ ಪ್ರಮಾಣದಲ್ಲಿ. ಅಷ್ಟು ಕೊಂಚ ಮೈಯಲ್ಲೆಲ್ಲ ಹರಡಿಕೊಂಡರೆ ಒಂದು ಊತಕದಲ್ಲೋ ಅಂಗದಲ್ಲೋ ಸಾಂದ್ರವಾಗಿ ಇರುವಷ್ಟನ್ನು ಕೂಡ ಅಳೆಯುವಂತಿಲ್ಲ. ಅದು ಎಷ್ಟು ಕಾಲ ಉಳಿದಿರುವುದೆಂದೂ ಗೊತ್ತಾಗದು. ಇದಕ್ಕೆ ಉತ್ತರವೆಂಬಂತೆ (1945)ರಿಂದಲೂ ವಿಕಿರಣಶೀಲ ಸಮಸ್ಥಾನಿಗಳು (ರೇಡಿಯೊ ಆಕ್ಟಿವ್ ಐಸೊಟೋಪ್ಸ್) ಕೈಲಿವೆ. ಇವುಗಳ ವಿಕಿರಣತೆ ತೀರ ಕೊಂಚವಾದ್ದರಿಂದ ಜೀವಿಗಂತೂ ಯಾವ ತೊಂದರೆಯೂ ಇಲ್ಲ. ಪರೀಕ್ಷಿಸಬೇಕಿರುವ ಮದ್ದುಗಳೊಂದಿಗೆ ಇವನ್ನು ಬೆರೆಸಿಕೊಟ್ಟು ಗೀಗರ್ ಗುಣಕದಿಂದ ಮೈಯಲ್ಲಿನ ಬೇರೆ ಬೇರೆ ಅಂಗಗಳಲ್ಲಿ ಮದ್ದಿನ ಸುಳಿವನ್ನು ಹಿಡಿಯಬಹುದು. ಸುಳಿವಿಡಿತ ಸಂಯುಕ್ತಗಳನ್ನು (ಟ್ರೇಸರ್ ಕಂಪೌಂಡ್ಸ್) ಕೃತಕ ರಾಸಾಯನಿಕಗಳಾಗಿ ತಯಾರಿಸುವುದುಂಟು. ಅದಾಗದಿದ್ದಲ್ಲಿ ಗಿಡಮರವನ್ನೋ ಜೀವಿಯನ್ನೋ ವಿಕಿರಣತೆಗೊಡ್ಡಿ ಬೇಕಿರುವ ವಿಕಿರಣಶೀಲ ಸಂಯುಕ್ತಗಳು ತಯಾರಾಗುವಂತೆ ಮಾಡಿ ಹೊರತೆಗೆದು ಚೊಕ್ಕಪಡಿಸಬಹುದು.

ಒಟ್ಟಿನಲ್ಲಿ ಮದ್ದನ್ನು ಕೊಟ್ಟರೆ ಅಂಗಗಳ ನಿಜಗೆಲಸಗಳಲ್ಲಾಗುವ ವ್ಯತ್ಯಾಸಗಳನ್ನು ಗುರುತಿಸುವುದೂ ಮದ್ದಿನ ಗತಿ ಏನಾಗುವುದೆಂದು ತಿಳಿವುದೂ ಔಷಧವಿಜ್ಞಾನದ ಪ್ರಯೋಗಗಳ ಮುಖ್ಯ ಗುರಿ. ಈ ವ್ಯತ್ಯಾಸಗಳನ್ನು ಅಂಗಕ್ರಿಯಾಶಾಸ್ತ್ರ, ರಸಾಯನವಿಜ್ಞಾನ, ಭೌತವಿಜ್ಞಾನಗಳ ವಿಧಾನಗಳಲ್ಲಿ ವಿವರಿಸಬೇಕು. ರಸಾಯನವಿಜ್ಞಾನ ರೀತಿಯಾಗಿ ರಾಸಾಯನಿಕ ವರ್ತನೆಗಳನ್ನು ಮೈಯಲ್ಲಿ ನಡೆವವಕ್ಕೆ ಅನ್ವಯಿಸಿದರೆ ಜೀವರಸಾಯನವಿಜ್ಞಾನವಾಯಿತು. ಇದರಿಂದ ಅಂಗಕ್ರಿಯಾವಿಜ್ಞಾನ ಮತ್ತಿತರ ಜೀವವಿಜ್ಞಾನಗಳ ತಿಳಿವಳಿಕೆ ಹೆಚ್ಚುತ್ತದಲ್ಲದೆ ಮದ್ದುಗಳನ್ನು ಇನ್ನೂ ಚೆನ್ನಾಗಿ ಬಳಸಬಹುದು. ಮದ್ದುಗಳಲ್ಲಿನ ಹೆಚ್ಚಿನ ಗುಣಗಳು ಗೊತ್ತಾಗಿ ಕೆಡುಕಿಲ್ಲದವನ್ನು ತಯಾರಿಸಲು ಅನುವಾಗುತ್ತದೆ. ಕೈಗಾರಿಕೆಯ, ಬೇಸಾಯಗಾರಿಕೆಯ, ಮನೆಬಳಕೆಯ ವಸ್ತುಗಳನ್ನು ಸಹ ಹೀಗೆ ರೂಪಿಸಬಹುದು.

**ಸಂಶೋಧನೆ:** ವೈದ್ಯ, ಔಷಧಗಾರಿಕೆ, ದಂತವೈದ್ಯ, ದನವೈದ್ಯಗಳನ್ನು ಕಲಿವವರ ಪಾಠಕ್ರಮಗಳಲ್ಲಿ ಔಷಧವಿಜ್ಞಾನವೂ ಒಂದು. ಆದ್ದರಿಂದ ಇವನ್ನು ಶಾಲಾಕಾಲೇಜುಗಳಲ್ಲಿ ಕಲಿಸುತ್ತಾರೆ. ಅಲ್ಲದೇ ಕೆಲವು ಮೂಲ ವಿಷಯಗಳ ಮೇಲೆ ಸಂಶೋಧನೆಯೂ ನಡೆಯುತ್ತದೆ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಟ್ಟು ರೋಗಚಿಕಿತ್ಸೆಯಲ್ಲಿ ಮದ್ದುಗಳ ಆಗುಹೋಗುಗಳನ್ನು ಕಂಡುಕೊಳ್ಳಲು ಅವಕಾಶವಿದೆ.

**ಕೈಗಾರಿಕೆಯಲ್ಲಿ:** ರಾಸಾಯನಿಕಗಳ ತಯಾರಿಕೆ ಸಂಸ್ಥೆಗಳ ಸಂಶೋಧನಾಲಯಗಳಲ್ಲೂ ಔಷಧಗಳ ಮುಖ್ಯವಾದ ಮೂಲಶೋಧನೆ ನಡೆವುದು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಂತೂ 40 ವರ್ಷಗಳಿಂದೀಚೆಗೆ ಔಷಧ ಕೈಗಾರಿಕೆಗಳಲ್ಲಿ ಸಂಶೋಧನೆ ಅಪಾರವಾಗಿ ನಡೆಯುತ್ತಿದೆ. ಕೈಗಾರಿಕೆಯ ಹಣಕಾಸು, ವಿಶ್ವವಿದ್ಯಾನಿಲಯಗಳು, ಆಸ್ಪತ್ರೆಗಳು, ಸಂಶೋಧನೆ ಸಂಘಗಳ ಒಗ್ಗಟ್ಟಿನಿಂದ ಹೆಚ್ಚಿನ ಮುನ್ನಡೆಯಾಗಿ ಎಷ್ಟೊ ತೊಡಕುಗಳು ಬಗೆಹರಿದಿವೆ. ಸ್ವಲ್ಪಮದ್ದುಗಳು, ಜೀವಿ ವಿರೋಧಕಗಳು, ಕಾರ್ಟಿಸೋನ್ ತೆರನವು, ನೆಮ್ಮದಿಕಾರಿಗಳು (ಟ್ರಾಂಕ್ವಿಲೈಸರ್ಸ್), ಮೂತ್ರಕಾರಿಗಳು. ಸಿಹಿಮೂತ್ರರೋಧಕಗಳು, ರಕ್ತದ ಬದಲಿಗಳು, ಏಡಿಗಂತಿರೋಧಕಗಳೇ ಮುಂತಾದವು ಉದಾಹರಣೆಗಳು. ಔಷಧವಿಜ್ಞಾನದ ಮೂಲ ತಿಳಿವಳಿಕೆಯೂ ಅಪಾರವಾಗಿ ಹೆಚ್ಚಿದೆ.

ರೋಗಿಗಳ ಬಳಕೆಗೆ ಹೊಸ ಹೊಸ ಮದ್ದುಗಳನ್ನು ತಯಾರಿಸಿ ವೈದ್ಯನ ಕೈಗೆಕೊಡುವ ಮುನ್ನ ಅವು ವಿಷಕರವಲ್ಲವೆಂದು ಖಚಿತ ಮಾಡಿಕೊಳ್ಳಲು, ಪ್ರಾಣಿಗಳ ಮುಖ್ಯವಾದ ಎಲ್ಲ ಅಂಗಗಳು, ಮಂಡಲಗಳ ಮೇಲೂ ಪ್ರಭಾವವನ್ನು ತಿಳಿಯಲು ಪರೀಕ್ಷೆಗಳನ್ನು ಸಾಂಗವಾಗಿ ಮಾಡಿ ಮುಗಿಸಿರಬೇಕು. ಯಾವ ಮದ್ದನ್ನೇ ಆಗಲಿ ಮೊಟ್ಟಮೊದಲು ಪ್ರಯೋಗದ ಪ್ರಾಣಿಗಳಿಗೆ ಕೊಟ್ಟು ನೋಡಿದ ಮೇಲೆ ಮಾತ್ರವೇ ರೋಗಿಗೆ ಕೊಡುವುದು. ಬಳಸುವ ಮದ್ದುಗಳ ಗುಣಮಟ್ಟ ಒಂದೇ ಸಮನಾಗಿ ಇರುವಂತೆ ನೋಡಿಕೊಳ್ಳಲು ತಯಾರಾದವನ್ನು ಮೇಲಿಂದ ಮೇಲೆ ಪರೀಕ್ಷಿಸುತ್ತಿರಲೇಬೇಕು. ಮದ್ದುಗಳಾದ ಅಚ್ಚರಾಸಾಯನಿಕ ವಸ್ತುಗಳನ್ನೇನೋ ರಾಸಾಯನಿಕ ಪರೀಕ್ಷೆಗಳಿಂದ ಶಿಷ್ಟೀಕರಿಸಬಹುದು. ಆದರೆ ಇನ್ಸುಲಿನ್, ಪ್ರಾಣಿಗಳು ಇಲ್ಲವೇ ಗಿಡಮರಗಳಿಂದ ಪಡೆದ ಕಚ್ಚ ಉತ್ಪನ್ನಗಳಾದ ಡಿಜಿಟ್ಯಾಲಿಸಿನಂಥವನ್ನು ಇಷ್ಟು ಸರಳವಾಗಿ ಪರೀಕ್ಷಿಸುವಂತಿಲ್ಲ. ಖಚಿತವಾಗಿ ಅಧಿಕೃತವಾಗಿ ಗೊತ್ತು ಪಡಿಸಿಟ್ಟುಕೊಂಡಿರುವ ಗುಣಮಟ್ಟವೊಂದಿಗೆ ಹೋಲಿಸಿನೋಡಿ ಒರೆಹಚ್ಚಿ ನಿರ್ಧರಿಸಬೇಕು. ಈ ಪರೀಕ್ಷೆಗಳನ್ನು ಯಾವುದಾದರೂ ಬದುಕಿರುವ ಪ್ರಾಣಿಯಲ್ಲಿ ಮಾಡಬೇಕು. ಇನ್ಸುಲಿನ್ನನ್ನು ಮೊಲದ ರಕ್ತದ ಸಕ್ಕರೆಮಟ್ಟ ಇಳಿಸುವುದರಿಂದಲೂ ಡಿಜಿಟ್ಯಾಲಿಸನ್ನು ಬೆಕ್ಕಿನ ಗುಂಡಿಗೆಯನ್ನು ನಿಲ್ಲಿಸುವುದರಿಂದಲೂ ನಿರ್ಧರಿಸುವುದು ವಾಡಿಕೆಯಲ್ಲಿವೆ. ಹೀಗೆ ಜೀವಿಗಳಲ್ಲಿ ಒರೆಹಚ್ಚಿ ನೋಡುವುದಕ್ಕೆ ಜೀವದೊರೆ (ಬಯೊಆಸ್ಸೆ) ಎಂದಿದೆ. ಬಹುಪಾಲು ಜೀವಾತುಗಳಿಗೂ ಜೀವದೊರೆ ಹಚ್ಚಬೇಕಾಗುತ್ತದೆ.

**ಜನಾರೋಗ್ಯ:** ಕೈಗಾರಿಕೆಗಳಲ್ಲಿ ಹೊಸ ಹೊಸ ಉತ್ಪನ್ನಗಳನ್ನು ವಿಧಾನಗಳನ್ನೂ ಹೊರತರುವಾಗ ಅಲ್ಲಿನ ಕೆಲಸಗಾರರ ಆರೋಗ್ಯಕ್ಕೆ ಕೆಲವೇಳೆ ಕೆಡುಕಾಗುವುದುಂಟು. ಅವರಿಗಾಗುವ ಅಪಾಯಗಳನ್ನು ತಿಳಿಯಲೋಸುಗ ಔಷಧವಿಜ್ಞಾನದ ಪ್ರಯೋಗ ವಿಧಾನಗಳನ್ನೇ ಹೆಚ್ಚಿನ ರೀತಿಯಲ್ಲಿ ಅನುಸರಿಸಬೇಕಾಗುತ್ತದೆ. ಗಿಡಮರಗಳ, ಪ್ರಾಣಿಗಳ ಆರೋಗ್ಯಕ್ಕಾಗಿ ಕೀಟನಾಶಕಗಳನ್ನು ಬೇಸಾಯದಲ್ಲಿ ಬಳಸುವಾಗ ಅನ್ವಯವಾಗುವುದೂ ಔಷಧವಿಜ್ಞಾನದ ವಿಭಾಗವಾದ ವಿಷವಿಜ್ಞಾನಕ್ಕೆ ಸಂಬಂಧಿಸಿದ್ದೇ. ನಾಶಕ ಮದ್ದುಗಳು ಕೀಟಗಳನ್ನು ಹೀಗೆ ಸಾಯಿಸುವುವೆಂದು ಔಷಧವಿಜ್ಞಾನದ ಪ್ರಯೋಗಗಳನ್ನು ಮಾಡಿನೋಡುವರು. ಇಲಿ ವಿಷಗಳಲ್ಲಿ ಕೆಲವು, ಇಲಿಗಳನ್ನು ರಕ್ತ ಸುರಿಸಿ ಸಾಯಿಸುತ್ತವೆ. ಡಿಡಿಟಿ ತೆರನ ಮದ್ದುಗಳು ತಾಕುವುದರಿಂದಲೇ ಸೊಳ್ಳೆಚಿಗಟಗಳು ಸಾಯುತ್ತವೆ. ಮದ್ದು ಕೆಲಸಮಾಡುವ ರೀತಿ ಸರಿಯಾಗಿ ಗೊತ್ತಾದರೆ ಇನ್ನೂ ಪ್ರಭಾವೀ ರಾಸಾಯನಿಕಗಳನ್ನು ತಯಾರಿಸಲು ಅನುಕೂಲ. ಇವುಗಳ ತಯಾರಿಕೆಯ ಕೆಲಸಗಾರರು, ಸಾಗಿಸುವವರು, ಮುಟ್ಟಿಕೊಳ್ಳುವವರು, ದೂಳಿಗೆ ಸಿಕ್ಕುವವರಿಗೆ ಯಾವ ಅಪಾಯಗಳಾಗಬಹುದೆಂದೂ ಅಕಸ್ಮಾತ್ ವಿಷವೇರಿದರೆ ತಕ್ಕ ಚಿಕಿತ್ಸೆ ಮತ್ತು ಕಟ್ಟುಮದ್ದುಗಳನ್ನೂ (ಅಂಟಿಡೋಟ್ಸ್) ಕಂಡುಕೊಳ್ಳಬಹುದು **(ನೋಡಿ–ಅಪಾಯಕರ–ವೃತ್ತಿಗಳು; ಔಷಧಗಾರಿಕೆ; ಔಷಧಮಂಜರಿ).**

(ಡಿ.ಎಸ್.ಎಸ್.)

**ಔಷಧಿಸಸ್ಯಗಳು:** ಮಾನವನ ಮತ್ತು ಪಶುಪಕ್ಷಿಗಳ ಯಾವುದೇ ರೀತಿಯ ರೋಗಗಳನ್ನು ಶಮನ ಮಾಡುವ ಕಾರ್ಯದಲ್ಲಿ ಉಪಯುಕ್ತವೆನಿಸಬಲ್ಲ ಉತ್ಪನ್ನಗಳನ್ನು ನೀಡುವ ಗಿಡ, ಬಳ್ಳಿ, ಮರ, ಮೂಲಿಕೆ ಮುಂತಾದ ಸಸ್ಯಗಳು (ಮೆಡಿಸನಲ್ ಪ್ಲ್ಯಾಂಟ್ಸ್). ಪ್ರಾಚೀನ ಕಾಲದಿಂದಲೂ ಔಷಧಕ್ಕೆ ಬರತಕ್ಕ ಅಂಥ ಅನೇಕ ಸಸ್ಯಗಳು ಮಾನವನಿಗೆ ಗೊತ್ತಾಗಿದೆ. ಅನುಭವದಿಂದ ಕಂಡುಕೊಂಡ ಅವುಗಳ ರೋಗಪರಿಹಾರಕ ಗುಣ ದೃಢಪಟ್ಟಂತೆಲ್ಲ ಅವುಗಳ ಬಳಕೆಯೂ ಹೆಚ್ಚುತ್ತ ಬಂದಿದೆ. ಮಾನವನ ನಾಗರೀಕತೆ ಹಾಗೂ ಜ್ಞಾನ ಬೆಳೆದಂತೆಲ್ಲ ಈ ಔಷಧಗಳ ತಯಾರಿಕಾ ವಿಧಾನಗಳೂ ರೂಪಗಳೂ ಸುಧಾರಿಸುತ್ತ ಬಂದಿವೆ. ಆಯುರ್ವೇದ ಮತ್ತು ಯುನಾನಿ ಪದ್ಧತಿಯ ಔಷಧಗಳಲ್ಲೆಲ್ಲ ಸಸ್ಯಗಳ ಒಂದಲ್ಲ ಒಂದು ಭಾಗ ಬಳಕೆಯಾಗುವುದುಂಟು. ಅನೇಕ ಅಲೋಪತಿಕ್ ಔಷಧಗಳೂ ಸಸ್ಯಗಳ ಉತ್ಪನ್ನಗಳಿಂದಲೇ ಸಿದ್ಧವಾಗುತ್ತವೆ. ಸಸ್ಯಗಳಿಂದ ದೊರಕಿದ ಭಾಗಗಳೆಲ್ಲ ನೇರವಾಗಿ ರೋಗಪರಿಹಾರಕ್ಕೆ ಯೋಗ್ಯವಾಗಿಲ್ಲದಿರಬಹುದು; ಅವುಗಳಲ್ಲಿ ಕೆಲವನ್ನು ವಿಶೇಷ ರೀತಿಯಿಂದ ಪರಿಷ್ಕರಿಸುವುದು ಅವಶ್ಯವಾಗುತ್ತದೆ.

ಹೂತಬೇವು

ಔಷಧಿಸಸ್ಯಗಳೆಲ್ಲ ನಿಸರ್ಗದಲ್ಲಿ ಹೆಚ್ಚಾಗಿ ಸ್ವೇಚ್ಛೆಯಾಗಿಯೇ ಬೆಳೆಯುತ್ತದೆ. ಕೆಲವೊಂದನ್ನು ಪ್ರಯತ್ನಪೂರ್ವಕವಾಗಿಯೂ ಬೆಳೆಸುವುದುಂಟು. ಕೆಲವು ವಿಶಿಷ್ಟ ಸಸ್ಯಗಳ ವಿವಿಧ ಭಾಗಗಳನ್ನು ಸಂಗ್ರಹಿಸಿ ಅವನ್ನು ಪರಿಷ್ಕರಿಸಿ ಔಷಧರೂಪಕ್ಕೆ ಪರಿವರ್ತಿಸುವ ತಯಾರಿಕಾ ಸಂಸ್ಥೆಗಳಿಗೆ ಕಳುಹಿಸಿ ಕೊಡುವುದುಂಟು. ಸಸ್ಯಗಳ ಬೇರು, ಕಾಂಡ, ಎಲೆ, ಹೂ, ಹಣ್ಣು, ಕಾಯಿ, ಬೀಜ ಮತ್ತು ತೊಗಟೆ ಇತ್ಯಾದಿ ಭಾಗಗಳೆಲ್ಲವನ್ನು ಔಷಧತಯಾರಿಕೆಯಲ್ಲಿ ಬಳಸಲಾಗುತ್ತದೆ. ಸಸ್ಯಗಳ ವಿವಿಧ ಭಾಗಗಳಲ್ಲಿರುವ ಕೆಲವು ನಿರ್ದಿಷ್ಟ ರಾಸಾಯನಿಕ ಘಟಕಗಳಿಂದಲೇ ಅವಕ್ಕೆ ರೋಗಪರಿಹಾರಕ ಸಾಮರ್ಥ್ಯ ಒದಗುತ್ತದೆ. ಈ ರಾಸಾಯನಿಕ ಘಟಕಗಳು ಮಾನವನ ಶರೀರದಲ್ಲಿ ಕೆಲವು ವಿಶಿಷ್ಟ ರೀತಿಯ ಜೈವಿಕ ಕ್ರಿಯೆ ನಡೆಸಿ ರೋಗಶಮನ ಮಾಡಬಲ್ಲವು. ಇಲ್ಲಿ ಪ್ರಾತಿನಿಧಿಕವಾಗಿರುವಂತೆ ಪ್ರಮುಖ ಹಾಗೂ ನಿತ್ಯಬಳಕೆಯ ಕೆಲವು ಔಷಧಿಸಸ್ಯಗಳನ್ನು ಮಾತ್ರ ಪ್ರಸ್ತಾಪಿಸಲಾಗುವುದು.

ಔಷಧಿಸಸ್ಯಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು: ಕೆಳವರ್ಗದ ಸಸ್ಯಗಳಿಂದ ಅಂದರೆ ಬೂಷ್ಟು (ಫಂಗೈ) ಮತ್ತು ಪಾಚಿ (ಆಲ್ಗೆ) ಗಳಿಂದ ಉತ್ಪಾದನೆಯಾಗುವ ಔಷಧಗಳು; ಮೇಲುವರ್ಗದ ಸಸ್ಯಗಳಿಂದ ಉತ್ಪಾದನೆಯಾಗುವ ಔಷಧಗಳು.

**ಕೆಳವರ್ಗದ ಸಸ್ಯಗಳಿಂದ ಉತ್ಪಾದನೆಯಾಗುವ ಔಷಧಗಳು:** 1ಪೆನಿಸಿಲಿನ್: ಇದು ಅಲೋಪತಿಕ್ ಪದ್ಧತಿಯ ರೋಗಚಿಕಿತ್ಸಾಕ್ರಮ ಹಾಗೂ ಔಷಧಗಳಲ್ಲಿ ಒಂದು ಪ್ರಸಿದ್ಧ ಜೀವಿರೋಧಕ (ಆಂಟಿಬಯಾಟಿಕ್), ಪೆನಿಸಿಲಿಯಂ ನೊಟೇಟಂ ಎಂಬ ಹಸಿರು ಬೂಷ್ಟಿನಿಂದ ತಯಾರಾಗುತ್ತದೆ. ಈ ಬೂಷ್ಟನ್ನು ಕೊಳೆಯುವ ಹಣ್ಣು ಹಂಪಲು ಮತ್ತಿತರ ಕೃತಕ ಮಾಧ್ಯಮಗಳಲ್ಲಿ ಬೆಳೆಸಬಹುದು. ಇದಿರುವ ಸಸ್ಯ ದೇಹದಲ್ಲಿ ಸೊಂಪಾಗಿ ಮತ್ತು ಶಾಖೋಪಶಾಕೆಗಳಾಗಿ ಕವಲೊಡೆವ ಎಳೆಗಳಿರುತ್ತವೆ. ಅವುಗಳಿಗೆ ಹೈಪೆ ಎಂದು ಹೆಸರು. ಅವು ಬೆಳೆಯುವ ಮಾಧ್ಯಮದಲ್ಲಿ ಪೆನಿಸಿಲಿನ್ ಎಂಬ ವಸ್ತುವನ್ನು ಸ್ರವಿಸುತ್ತವೆ. ಈ ವಸ್ತುವನ್ನು ಮುಂದೆ ಬೇರ್ಪಡಿಸಿ ಶುದ್ಧೀಕರಿಸಲಾಗುತ್ತದೆ. ಪೆನಿಸಿಲಿಯಂ ಕ್ರೈಸೋಜಿನಂ ಎಂಬ ಇನ್ನೊಂದು ವಿಶಿಷ್ಟ ಬಗೆಯ ಬೂಷ್ಟಿನಿಂದಲೂ ಪೆನಿಸಿಲಿನ್ ಸಿದ್ಧವಾಗುತ್ತದೆ. ಪೆನಿಸಿಲಿನ್ ಎಂಬ ಔಷಧವನ್ನು ವ್ಯಾಪಕವಾಗಿ ಅನೇಕ ರೀತಿಯಲ್ಲಿ ಬಳಸಾಗುತ್ತದೆ. ಬ್ಯಾಕ್ಟೀರಿಯಗಳಿಂದಾಗುವ ಸಂಸರ್ಗದೋಷಗಳಿಗೂ ಗನೋರಿಯ, ನ್ಯೂಮೋನಿಯ ಮುಂತಾದ ರೋಗಗಳಿಗೂ ಕೆಲವು ಸ್ಥಳೀಯ ಸಂಸರ್ಗದೋಷಗಳಿಗೂ ಯಶಸ್ವೀ ಔಷಧವಾಗಿ ಪೆನಿಸಿಲಿನ್ ಬಳಕೆಯಾಗುತ್ತಿದೆ.

ಸ್ಟ್ರೆಪ್ಟೊಮೈಸಿಸ್ ಗ್ರಿಸಿಯಸ್ ಎಂಬ ಬೂಷ್ಟಿನಿಂದ ಸ್ಟ್ರೆಪ್ಟೊಮೈಸಿನ್ ಎಂಬ ಜೀವಿರೋಧಕ ಔಷಧವೂ ಸ್ಟ್ರೆಪ್ಟೊಮೈಸಿಸ್ ವೆನೆಝೂಲೆ ಎಂಬುದರಿಂದ ಕ್ಲೋರೊಮೈಸಿಟಿನ್ ಎಂಬುದೂ ಸ್ಟ್ರೆಪ್ಟೊಮೈಸಿಸ್ ಆರಿಯೋಫೇಸಿಯನ್ಸ್ ಎಂಬುದರಿಂದ ಆರಯೊಮೈಸಿನ್ ಎಂಬುದೂ ಸ್ಟ್ರೆಪ್ಟೊಮೈಸಿಸ್ ರಿಮೊಸಸ್ ಎಂಬುದರಿಂದ ಟೆರಮೈಸಿನ್ ಎಂಬುದೂ ಸಿದ್ಧವಾಗುತ್ತವೆ. ಈ ಬಗೆಯ ಬೂಷ್ಟುಗಳೆಲ್ಲ ಪೂತಿಜನ್ಯ (ಸ್ಯಾಪ್ರೊಫೈಟ್) ಸಸ್ಯಗಳಾಗಿದ್ದು, ಅವುಗಳನ್ನು ಕೃತಕ ಮಾಧ್ಯಮಗಳಲ್ಲಿ ಬೆಳೆಸಬಹುದು. ಸ್ಟ್ರೆಪ್ಟೊಮೈಸಿನ್ ಎಂಬುದನ್ನು ನ್ಯುಮೋನಿಯ, ಕ್ಷಯ, ಮಿದುಳುಜ್ವರ (ಮೆನಿನ್ಜೈಟಿಸ್) ಮತ್ತು ಕೆಲವು ಸ್ಥಳೀಯ ರೂಪದ ಸೋಂಕುಗಳಿಗೆ ಪರಿಣಾಮಕಾರಿಯಾಗಿ ಬಳಸಲಾಗುತ್ತದೆ. ಕ್ಲೋರೊಮೈಸಿಟಿನ್ ಎಂಬುದನ್ನು ಟೈಫಾಯಿಡ್ ಜ್ವರ ಮತ್ತು ನ್ಯೂಮೋನಿಯಗಳಿಗೆ ಬಳಸುತ್ತಾರೆ. ಹನಿಗಳ ರೂಪದಲ್ಲಿ ಕಿವಿಯೊಳಕ್ಕೂ (ಇಯರ್ ಡ್ರಾಪ್ಸ್) ಬಳಸುವುದುಂಟು. ಆರಿಯೋಮೈಸಿನ್ ಎಂಬುದನ್ನು ವೈರಸ್ ಸಂಬಂಧದ ನ್ಯೂಮೋನಿಯ, ನಾಯಿಕೆಮ್ಮು ಮತ್ತು ಕಣ್ಣಿನ ಸೋಂಕುಗಳಿಗೆ ಬಳಸುವುದುಂಟು. ಟೆರಮೈಸಿನ್ ಎಂಬುದನ್ನು ರಿಕೆಟ್ಸಿಯ (ಮೆದುಮೂಳೆ) ಎಂಬ ರೋಗಕ್ಕೆ ಬಳಸಲಾಗುತ್ತದೆ.

**1 ಎರ್ಗಟ್:** ಕ್ಲಾವಿಸೆಪ್ಸ್ ಪರ್ಪ್ಯೂರಿಯ ಎಂಬ ಬೂಷ್ಟಿನಿಂದ ತಯಾರಾಗುವ ವಸ್ತು. ಈ ಸಸ್ಯ ರೈ, ಬಾರ್ಲಿ, ಓಟ್ಸ್ ಮತ್ತು ಇತರ ಧಾನ್ಯಗಿಡಗಳ ಮೇಲೆ ಪರೋಪಜೀವಿಯಾಗಿ ಬೆಳೆಯುತ್ತದೆ. ಆ ಗಿಡಗಳ ಮೇಲೆ ಧಾನ್ಯಕ್ಕೆ ಬದಲು ಸ್ಕ್ಲಿರೋಷಿಯಂ ಎಂಬ ಕುಡುಗೋಲಿನಾಕಾರದ ಚಿಕ್ಕ ಶುಷ್ಕಫಲಗಳು ನಿರ್ಮಾಣವಾಗುತ್ತವೆ. ಇವಕ್ಕೆ ಎರ್ಗಟ್ ಎಂದು ಹೆಸರು. ಇದನ್ನು ವಿಶಿಷ್ಟರೀತಿ ಪರಿಷ್ಕರಿಸಿ ಸ್ತ್ರೀಯರ ಗರ್ಭಾಶಯ ಸಂಬಂಧದ ರೋಗಗಳಿಗೂ ರಕ್ತಸ್ರಾವಕ್ಕೂ ರಕ್ತದ ಒತ್ತಡವನ್ನು ವರ್ಧಿಸುವುದಕ್ಕೂ ಔಷಧ ರೂಪದಲ್ಲಿ ಬಳಸಲಾಗುತ್ತದೆ. ವಿಶೇಷವಾಗಿ ಸ್ತ್ರೀಯರಲ್ಲಿ ಜನನಕಾಲದ ಅನಂತರ ಇದರ ಬಳಕೆ ಹೆಚ್ಚು.

ಪಾಚಿಯಿಂದ ದೊರೆಯುವ ಔಷಧಗಳು: 1 ಅಗಾರ್: ಇದು ಜಿಲೆಟಿನ್ನಿನಂಥ ಒಂದು ಅಂಟು ವಸ್ತು. ಇದನ್ನು ಜಿಲಾಡಿಯಂ ಕಾಂಡ್ರಸ್, ಗ್ರಾಸಿಲೇರಿಯ ಮತ್ತು ಇನ್ನೂ ಹಲವಾರು ಬಗೆಯ ಪಾಚಿಗಳಿಂದ ತಯಾರಿಸಲಾಗುತ್ತದೆ. ಅಗಾರ್ ಎಂಬುದನ್ನು ಔಷಧಗಳಲ್ಲಿ ಸುಲಭವಾಗಿ ಹೀರಿಕೊಳ್ಳುವ ಮತ್ತು ನುಣುಪಾಗಿ ಜಾರುವ ವಸ್ತುಗಳಂತೆ ಬಳಸುವುದು ಹೆಚ್ಚು. ಇದನ್ನು ಸೂಕ್ಷ್ಮಜೀವಿಗಳ ಬೆಳವಣಿಗೆಗೆ ಪ್ರಯೋಗ ಮಂದಿರಗಳಲ್ಲಿ ಕೃತಕ ಮಾಧ್ಯಮವಾಗಿ ಬಳಸುವುದೂ ಉಂಟು.

**2 ಕ್ಯಾಲಿಯೊಮಿನ್:** ಕೆಲವು ಬಗೆಯ ಪಾಚಿಗಳಿಂದ ದೊರೆಯುವ ಇದನ್ನು ಸಂಧಿವಾತಗಳಿಗೆ (ಗೌಟ್) ಔಷಧರೂಪದಲ್ಲಿ ಬಳಸುವುದುಂಟು.

**3 ಅಯೋಡಿನ್:** ಇದು ಲ್ಯಾಮಿನೇರಿಯ, ಫ್ಯೂಕಸ್, ಎಕಲೋನಿಯ ಮುಂತಾದ ಕೆಲವು ಬಗೆಯ ಸಮುದ್ರ ಪಾಚಿಗಳಿಂದ ದೊರೆಯುತ್ತದೆ. ರಷ್ಯ ದೇಶದಲ್ಲಿ ಫಿಲ್ಲೋಫೋರಾ ಎಂಬ ಒಂದು ಬಗೆಯ ಕೆಂಪು ಪಾಚಿಯಿಂದಲೂ ಇದು ಸಿದ್ಧವಾಗುತ್ತದೆ. ಇದನ್ನು ಹೆಚ್ಚಾಗಿ ಗಳಗಂಡ (ಗಾಯ್ಟರ್) ರೋಗಕ್ಕೂ ಸಾಮಾನ್ಯ ಆರೋಗ್ಯಕ್ಕೂ ಬಳಸುವುದುಂಟು.

**4 ಕ್ಲೊರೆಲ್ಲಿನ್:** ಇದು ಕ್ಲೊರೆಲ್ಲ ಎಂಬ ಒಂದು ಬಗೆಯ ಹಸಿರು ಪಾಚಿಯಿಂದ ತಯಾರಾಗುವ ಜೀವವಿರೋಧಕ. ಇದನ್ನು ಕೆಲವು ಬಗೆಯ ಬ್ಯಾಕ್ಟೀರಿಯಗಳ ವಿರುದ್ಧ ಯಶಸ್ವಿಯಾಗಿ ಬಳಸಲಾಗುತ್ತದೆ.

**ಮೇಲ್ಮಟ್ಟದ ಸಸ್ಯಗಳಿಂದ ಉತ್ಪಾದನೆಯಾಗುವ ಔಷಧಗಳು:**

ಅ. ಬೇರು ಮತ್ತು ಕಂದ-ಗೆಡ್ಡೆಗಳಿಂದ ದೊರೆಯುವ ಔಷಧಗಳು: ಈ ಬಗೆಯ ಔಷಧಗಳನ್ನೆಲ್ಲ ಬೇರು ಇಲ್ಲವೆ ಭೂಮಿಯೊಳಗಿರುವ ಕಂದ-ಗೆಡ್ಡೆಗಳಿಂದ ಉತ್ಪಾದಿಸಲಾಗುತ್ತದೆ.

**1 ಅಕೊನಿಟಂ:** ಇದು ರ್‍ಯಾನನ್‌ಕ್ಯುಲೇಸಿ ಕುಟುಂಬಕ್ಕೆ ಸೇರಿದ ಸಸ್ಯ. ಇದರ ಸು. 20 ಜಾತಿಯ ಸಸ್ಯಗಳು ಪರ್ವತದ ತಪ್ಪಲು ಪ್ರದೇಶಗಳಲ್ಲಿ ಬೆಳೆಯುತ್ತದೆ. ಅವುಗಳಲ್ಲಿ ಕೆಲವು ಉಪಯುಕ್ತ ಔಷಧಿ ಸಸ್ಯಗಳಾಗಿರುವಂತೆ ಕೆಲವು ವಿಷಪೂರಿತ ಸಸ್ಯಗಳೂ ಆಗಿರುವುದುಂಟು. ಅಮೆರಿಕ ದೇಶದಲ್ಲಿ ಅಕೊನಿಟಂ ನೀಪೆಲ್ಲಸ್ ಎಂಬ ಜಾತಿಯೂ ಅಕೊನಿಟಂ ಹೆಟರೊಫಿಲ್ಲಂ (ಅತಿವಿಷ) ಎಂಬುದೂ ಮುಖ್ಯ ಪ್ರಭೇದಗಳೆನಿಸಿದೆ. ಈ ಸಸ್ಯಗಳ ಬೇರು ಮತ್ತು ಎಲೆಗಳಿಂದ

ದೊರೆಯುವ ಔಷಧಿಗಳಿಂದಾಗಿ ಇವಕ್ಕೆ ಮಹತ್ತ್ವ ಬಂದಿದೆ. ಇವುಗಳಲ್ಲಿರುವ ಕ್ಷಾರೀಯ (ಆಲ್ಕಲಾಯಿಡ್) ಘಟಕಗಳಿಂದ ಅಕೋನೈಟ್ ಎಂಬ ಔಷಧವನ್ನು ತಯಾರಿಸುತ್ತಾರೆ. ಅದು ಬಾವು ಮತ್ತು ಜಠರ ಸಂಬಂಧದ ರೋಗಗಳಿಗೆ ಉಪಯುಕ್ತವೆನಿಸಿದೆ. ಅದನ್ನು ಕ್ವಿನೈನಿಗೆ ಬದಲಾಗಿಯೂ ಮತ್ತು ಜ್ವರ ನಿಂತ ಮೇಲೆ ಸೂಕ್ತ ಶಕ್ತಿವರ್ಧಕವಾಗಿಯೂ ಬಳಸಲಾಗುತ್ತದೆ.

**2 ಪೋಡೊಫಿಲ್ಲಂ:** ಇದು ಬರ್ಬೆರಿಡೇಸಿ ಕುಟುಂಬಕ್ಕೆ ಸೇರಿದ ಒಂದು ಚಿಕ್ಕ ಮೂಲಿಕೆಯಂತಿದ್ದು ನಿರಂತರ ಕಾಲ ಬೆಳೆಯುವ ಬೇರು ಮತ್ತು ಕಂದ-ಗಡ್ಡೆಗಳನ್ನು ಒಳಗೊಂಡಿರುತ್ತದೆ. ಇದು ಹಿಮಾಲಯದ ತಪ್ಪಲಿನ ಸಮಶೀತೋಷ್ಣ ಪ್ರದೇಶಗಳಲ್ಲಿ, ಅಂದರೆ, ಪಂಜಾಬ್, ಹಿಮಾಚಲಪ್ರದೇಶ ಮತ್ತು ಕಾಶ್ಮೀರಗಳಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಭಾರತದ ಈ ಸಸ್ಯಗಳಿಗೆ ಮೊದಲು ಅಷ್ಟಾಗಿ ಬೇಡಿಕೆ ಇರಲಿಲ್ಲ. ಆದರೆ ಕಳೆದ ಮಹಾಯುದ್ಧದಲ್ಲಿ ಅಮೆರಿಕದಿಂದ ಪೂರೈಕೆ ನಿಂತುಹೋದಾಗ ಇಲ್ಲಿನ ಸಸ್ಯಗಳಿಗೆ ವಿಶೇಷ ಬೇಡಿಕೆ ಬಂದಿತು. ಇದರಲ್ಲಿ ಒಂದು ಬಗೆಯ ಪೋಡೊಫಿಲ್ಲಿನ್ ಎಂಬ ರಾಳ ಅಥವಾ ಅಂಟು (ರೆಸಿನ್) ಇರುತ್ತದೆ. ಇದನ್ನು ಯಕೃತ್ತಿನ ಉತ್ತೇಜಕವಾಗಿಯೂ ಪಿತ್ತರಸ ಹೆಚ್ಚು ಉತ್ಪತ್ತಿಯಾಗುವಂತೆ ಮಾಡಿ ಅದು ಕರುಳಿನೊಳಕ್ಕೆ ಸುರಿಯುವಂತೆ ಮಾಡುವುದಕ್ಕೂ ವಿರೇಚಕವಾಗಿಯೂ ಬಳಸಲಾಗುತ್ತದೆ.

**3 ಕೋಷ್ಠ:** ವಾಣಿಜ್ಯದ ದೃಷ್ಟಿಯಿಂದ ಮಹತ್ತ್ವದ್ದಾದ ಇದು ಸಾಸುರಿಯಾ ಲೆಪ್ಪ ಮತ್ತು ಸಾ. ಕ್ಯಾಂಡಿಕೆನ್ಸ್ ಎಂಬ ಬಹುವಾರ್ಷಿಕ ಮೂಲಿಕೆಗಳ ಬೇರುಗಳಿಂದ ದೊರೆಯುತ್ತದೆ. ಇವು ಕಂಪಾಸಿಟಿ ಸಸ್ಯಗಳಾಗಿದ್ದು ಕಾಶ್ಮೀರ ಪ್ರದೇಶಗಳಲ್ಲಷ್ಟೇ ಬೆಳೆಯುತ್ತದೆ. ಬೇರುಗಳನ್ನು ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಸಂಗ್ರಹಿಸಿ, 2–3 ಅಂಗುಲಗಳಷ್ಟು ಉದ್ದುದ್ದವಾಗಿರುವಂತೆ ಕತ್ತರಿಸುತ್ತಾರೆ. ಬೇರಿನಿಂದ ದೊರೆಯುವ ಘಟಕಗಳನ್ನು ಕೆಮ್ಮು, ದಮ್ಮು ಮತ್ತು ಚರ್ಮರೋಗಗಳಿಗೆ ಬಳಸಲಾಗುತ್ತದೆ. ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿಯೂ ಇದರ ಬಳಕೆ ಹೆಚ್ಚು. ಕಾಶ್ಮೀರದಲ್ಲಿ ಶಾಲುಗಳನ್ನು ಕೀಟಗಳಿಂದ ರಕ್ಷಿಸಲೂ ಇದನ್ನು ಬಳಸುವುದುಂಟು. ಈ ಸಸ್ಯಗಳಿಂದ ದೊರೆಯುವ ಔಷಧಗಳಲ್ಲಿ ಕ್ಷಾರೀಯ ವಸ್ತುಗಳು (ಗ್ಲೂಕೊಸೈಡ್) ಮತ್ತು ಸಾರ (ಎಸೆನ್ಷಿಯಲ್) ತೈಲ ಮುಂತಾದ ಅಂಶಗಳು ಇರುತ್ತದೆ.

**4 ಕಾಲ್ಚಿಕಮ್:** ಇದು ಲಿಲಿಯೇಸಿ ಕುಟುಂಬದ ಸಸ್ಯ. ಕಾಲ್ಚಿಕಮ್ ಆಟಮ್ನೇಲ್ ಮತ್ತು ಕಾ.ಲ್ಯೂಟಿಯಂ ಎಂಬ ಸಸ್ಯಗಳ ಶುಷ್ಕ ಕಂದ-ಗೆಡ್ಡೆಗಳಿಂದ ಕಾಲ್ಚಿಸಿನ್ ಔಷಧ ತಯಾರಿಸಲಾಗುತ್ತದೆ. ಅವುಗಳನ್ನು ವಾತ (ರುಮ್ಯಾಟಿಸಂ) ಮತ್ತು ಸಂಧಿವಾತಗಳಿಗೆ (ಗೌಟ್) ಔಷಧದ ರೂಪದಲ್ಲಿ ಬಳಸಲಾಗುತ್ತದೆ. ಬಾವು ಮತ್ತು ನೋವುಗಳನ್ನು ಶಮನ ಮಾಡಲೂ ಬಾಹ್ಯ ಲೇಪನಗಳಂತೆ ಬಳಸುವುದುಂಟು. ಆಧುನಿಕ ತಳಿವಿಜ್ಞಾನ ಪರಿಶೀಲನೆಗಳಲ್ಲಿ ಕ್ರೋಮೋಸೋಮುಗಳ ಸಂಖ್ಯೆಯನ್ನು ಇಮ್ಮಡಿಗೊಳಿಸಲು ಸಹ ಕಾಲ್ಚಿಸಿನನ್ನು ಬಳಸಲಾಗುತ್ತದೆ.

**5 ಜಲಪ್ :** ಇದು ಎಕ್ಸೊಗೋನಿಯಂ ಪರ್ಗ ಎಂಬ ಸಸ್ಯದ ಹಸಿರು ಬೇರುಗಳಿಂದ ತೆಗೆದ ಅಂಟಿನಂಥ ಔಷಧ. ಇದನ್ನು ಭಾರತ, ಮೆಕ್ಸಿಕೊ, ಜಮೈಕ ಮುಂತಾದ ಕಡೆಗಳಲ್ಲಿ ಬೆಳೆಸಲಾಗುತ್ತದೆ. ಇದಕ್ಕೆ ಉತ್ತಮ ರೇಚಕಗುಣ ಉಂಟು.

**6 ಜೆನ್ಶಿಯನ್ :** ಇದು ಜೆನ್ಶಿಯಾನಾ ಲ್ಯೂಟಿಯ (ಕಿರಿಯಾತು) ಎಂಬ ಸಸ್ಯದ ಕಂದ-ಗೆಡ್ಡೆ ಮತ್ತು ಬೇರುಗಳಿಂದ ದೊರೆಯುತ್ತದೆ. ಅದನ್ನು ತುಂಡರಿಸಿ ಒಣಗಿಸಿ ಮಾರಾಟಕ್ಕೆ ಸಿದ್ಧಪಡಿಸುವರು. ಈ ಸಸ್ಯಗಳು ಯುರೋಪ್ ಖಂಡದ ಪರ್ವತ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ. ಜೆನ್ಶಿಯನ್ ಎಂಬುದರಲ್ಲಿ ಕೆಲವು ಬಗೆಯ ಗ್ಲೂಕೊಸೈಡ್ಸ್ ಎಂಬ ಘಟಕಗಳಿವೆ. ಜೆನ್ಶಿಯನನ್ನು ಒಂದು ಶಕ್ತಿವರ್ಧಕವಾಗಿ ಬಳಸುವುದು ವಾಡಿಕೆ.

**7 ಸ್ಕ್ವಿಲ್ಸ್ :** ಇವು ಅರ್ಜಿನಿಯ ಮ್ಯಾರಿಟಿಮ ಮತ್ತು ಅ.ಇಂಡಿಕ ಎಂಬ ಸಸ್ಯಗಳ ಲಶುನಗಳಿಂದ (ಬಲ್ಬ್ಸ್) ದೊರೆಯುತ್ತವೆ. ಲಿಲಿಯೇಸಿ ಕುಟುಂಬಕ್ಕೆ ಸೇರಿದ ಸಸ್ಯಗಳಿವು. ಇವುಗಳಲ್ಲಿ ಕೆಲವು ಬಗೆಯ ಗ್ಲೂಕೊಸೈಟ್ ಎಂಬ ಘಟಕಗಳಿವೆ. ಹೃದಯಕ್ರಿಯೆಯನ್ನು ಉದ್ದೀಪನಗೊಳಿಸಬಲ್ಲ ಶಕ್ತಿ ಇವುಗಳಿಗಿದೆ. ಇವನ್ನು ಶ್ವಾಸನಾಳ ಸಂಬಂಧದ ದೀರ್ಘಕಾಲದ ರೋಗಗಳಿಗೆ ಪಾಕದ ರೂಪದಲ್ಲಿ (ಸಿರಪ್) ಔಷಧವಾಗಿ ಬಳಸಲಾಗುತ್ತದೆ.

**8 ಅಬ್ರೊಮ ಅಗಸ್ಟ:** ಇದು ಸ್ಟರ್‌ಕ್ಯುಲಿಯೇಸಿ ಕುಟುಂಬಕ್ಕೆ ಸೇರಿದ ಸಸ್ಯ. ಇದರ ಬೇರುಗಳಿಂದ ತೆಗೆದ ವಸ್ತು ಸ್ತ್ರೀಯರ ಗರ್ಭಕೋಶದ ತೊಂದರೆಗಳು ಮತ್ತು ಮುಟ್ಟುದೋಷಗಳಿಗೆ ಸಿದ್ಧ ಔಷಧ. ಈ ಔಷಧವನ್ನು ನೀರು ಮತ್ತು ಮೆಣಸಿನೊಡನೆ ಕೂಡಿಸಿ ಸರಿಯ ರೂಪದಲ್ಲಿ ಬಳಸುವುದುಂಟು.

**9 ಅರಿಶಿನ :** ಇದು ಜಿಂಜಿಬರೇಸಿ ಕುಟುಂಬಕ್ಕೆ ಸೇರಿದ ಕರ್ಕ್ಯೂಮ ಲಾಂಗ ಮತ್ತು ಕರ್ಕ್ಯೂಮ ಡೊಮೆಸ್ಟಿಕ ಎಂಬ ಸಸ್ಯಗಳಿಂದ ದೊರೆಯುತ್ತದೆ. ಈ ಸಸ್ಯಗಳ ಎತ್ತರ ಬೆಳೆಯುವ ಮೂಲಿಕೆಗಳಂತಿದ್ದು, ಭೂಮಿಯೊಳಗೆ ಕಂದ-ಗೆಡ್ಡೆಗಳನ್ನು ಉತ್ಪಾದಿಸುತ್ತವೆ. ಇವುಗಳನ್ನು ಅನೇಕ ಕಡೆ ಮಲೆನಾಡಿನ ಪ್ರದೇಶಗಳಲ್ಲಿ ಬೆಳೆಸುವರು. ಇವುಗಳ ಕಂದಗಳಿಂದ ದೊರೆಯುವ ಈ ವಸ್ತುವಿಗೆ ಉದ್ದೀಪನ ಶಕ್ತಿ. ವಾತಹರ ಶಕ್ತಿ. ರಕ್ತಶುದ್ಧೀಕರಣ ಶಕ್ತಿ. ಇತ್ಯಾದಿ ವಿಶೇಷ ಗುಣಗಳಿವೆ. ಇದನ್ನು ಭೇದಿ, ಬಿಟ್ಟು ಬಿಟ್ಟು ಬರುವ ಜ್ವರ, ಕಾಮಾಲೆ ಮತ್ತು ಯಕೃತ್ತಿನ ದೋಷಗಳು ಇತ್ಯಾದಿಗಳಿಗೂ ಬಳಸುವುದುಂಟು. ಕೆಲವು ಚರ್ಮರೋಗಗಳಿಗೆ ಗೆಡ್ಡೆಯ ರಸ ಅಥವಾ ಪುಡಿಯನ್ನು ಬಾಹ್ಯಲೇಪನವಾಗಿ ಉಪಯೋಗಿಸಲಾಗುತ್ತದೆ.

**10 ಇಂಗು :** ಇದು ಅಂಬೆಲಿಫೆರಿ ಎಂಬ ಕುಟುಂಬಕ್ಕೆ ಸೇರಿದ ಫೆರುಲ ಫೀಟಿಡ ಮತ್ತು ಫೆ. ನಾರ್ತೆಕ್ಸ್ ಎಂಬ ಸಸ್ಯಗಳ ಕಾಂಡದ ಕೆಳಭಾಗದಿಂದ (ಭೂಮಿಯೊಳಗಿರುವ ಭಾಗ) ಹೊರಬರುವ ಒಂದು ಅಂಟಿನಂಥ ದ್ರವ್ಯ ವಾಣಿಜ್ಯ ಹಾಗೂ ಬಳಕೆಯ ದೃಷ್ಟಿಯಿಂದ ಇದನ್ನು ಇಂಗು ಅಥವಾ ಹಿಂಗು ಎಂದು ಕರೆಯುವುದುಂಟು. ಈ ಸಸ್ಯಗಳು ದೀರ್ಘಕಾಲ ಬೆಳೆಯುವ ಮೂಲಿಕೆಗಳಾಗಿದ್ದು ವಿಶೇಷವಾಗಿ ಕಾಶ್ಮೀರ ಪಂಜಾಬ್ ರಾಜ್ಯಗಳಲ್ಲಿ ಬೆಳೆಯುತ್ತವೆ. ಇಂಗು ಸಂಬಾರ ಪದಾರ್ಥಗಳಲ್ಲೊಂದು. ಇದಕ್ಕೆ ವಾತಹರ, ಪಚನಕಾರಿ, ಉಪಶಾಮಕ, ಮೂತ್ರವರ್ಧಕ ಇತ್ಯಾದಿ ಪರಿಹಾರ ಗುಣಗಳಿವೆ. ಇದನ್ನು ಉದರಶೂಲೆ (ಹೊಟ್ಟೆನೋವು), ಅಗ್ನಿಮಾಂದ್ಯ, ಅಜೀರ್ಣ, ಚಿತ್ತೋದ್ರೇಕ, ಕಾಲರ ಇತ್ಯಾದಿಗಳಿಗೆ ಸಿದ್ಧೌಷಧವಾಗಿ ಬಳಸುವುದುಂಟು.

**11 ಶುಂಠಿ:** ಇದು ಜಿಂಜಿಬರೇಸಿ ಕುಟುಂಬಕ್ಕೆ ಸೇರಿದ ಜಿಂಜಿಬರ್ ಅಫಿಷಿನೇಲ್ ಎಂಬ ಸಸ್ಯದ ಪ್ರಕಂದಗಳಿಂದ ದೊರೆಯುತ್ತದೆ. ಇದನ್ನು ಭಾರತದಾದ್ಯಂತ ಅನೇಕ ಕಡೆ ಬೆಳೆಸಲಾಗುತ್ತದೆ. ಪ್ರಕಂದಗಳಿಂದ ದೊರೆಯುವ ವಸ್ತುವಾತಹರ, ಉದ್ದೀಪಕ ಹಾಗೂ ಚುರುಕುಗೊಳಿಸುವಂಥದು ಮತ್ತು ವಿಶಿಷ್ಟ ತೀಕ್ಷ್ಣ ವಾಸನೆಯುಳ್ಳದ್ದು. ಇದನ್ನು ಜಠರ ಮತ್ತು ಕರುಳು ಸಂಬಂಧದ ದೋಷಗಳು, ಅಜೀರ್ಣ, ಹೊಟ್ಟೆನೋವು, ವಾಂತಿ, ಆಮಶಂಕೆ ಮತ್ತು ಕಾಲರ ಇತ್ಯಾದಿ ರೋಗಗಳಿಗೆ ಒಳ್ಳೆಯ ಔಷಧವಾಗಿ ಬಳಸಲಾಗುತ್ತದೆ.

**12 ಈರುಳ್ಳಿ :** ಇದು ಲಿಲಿಯೇಸಿ ಕುಟುಂಬಕ್ಕೆ ಸೇರಿದ ಅಲ್ಲಿಯಂ ಸೀಪಾ ಎಂಬ ಸಸ್ಯದ ಲಶುನ. ಇದನ್ನು ವಿಶೇಷವಾಗಿ ಆಹಾರಕ್ಕೂ ಕೆಲವು ಔಷಧಿಗಳಿಗೂ ಬಳಸಲಾಗುತ್ತದೆ. ಸಸ್ಯದ ಕೆಳಭಾಗದಲ್ಲಿ ಹಲವಾರು ಲಶುನಗಳ ಗೆಡ್ಡೆಯಿದ್ದು ಮೇಲ್ಭಾಗದಲ್ಲಿ ನೀಳ ಹಾಗೂ ಕೊಳವೆಯಾಕಾರದ ಹಸಿರೆಲೆಗಳಿವೆ. ಕಾಂಡದ ಭಾಗ ಬಹಳ ಕ್ಷೀಣಿಸಿದ್ದು, ಒಂದು ಚಿಕ್ಕ ತಟ್ಟೆಯಂತಿದೆ. ಅದರ ಸುತ್ತ ಹಾಗೂ ಮೇಲೆ ಅನೇಕ ರಕ್ಷಕ ಪತ್ರಗಳು ಇವೆ. ಈ ಸಸ್ಯಮೂಲಿಕೆಯನ್ನು ಒಂದು ವಾಣಿಜ್ಯ ಬೆಳೆಯಾಗಿ ಭಾರತದಲ್ಲಿ ಎಲ್ಲೆಡೆಯೂ ಬೆಳೆಸಲಾಗುತ್ತದೆ. ಲಶುನಗಳು ಉದ್ದೀಪಕಗಳೂ ಮೂತ್ರವರ್ಧಕಗಳೂ ಕಫ ಕತ್ತರಿಸುವಂಥವುಗಳೂ ಕಾಮೋದ್ದೀಪಕಗಳೂ ಆಗಿರುವಂತೆ ವಿಶಿಷ್ಟ ಪರಿಹಾರಗುಣಗಳನ್ನೂ ಹೊಂದಿವೆ. ಅದರಲ್ಲಿ ಭಾಷ್ಪೀಭವನವಾಗುವ ಒಂದು ಬಗೆಯ ಎಣ್ಣೆ ಇದ್ದು ಅದು ಕಾಮಾಲೆ, ಮೂಲವ್ಯಾಧಿ, ಜ್ವರ, ಕೆಮ್ಮು ಮತ್ತು ಉದರಶೂಲೆ ಇತ್ಯಾದಿಗಳಿಗೆ ಸಿದ್ಧೌಷಧವೆಂದು ಬಳಕೆಯಾಗುತ್ತದೆ. ಗೆಡ್ಡೆಯನ್ನು ಜಜ್ಜಿ ಹೊರತೆಗೆದ ರಸವನ್ನು ಕೆಲವು ಚರ್ಮರೋಗಗಳಿಗೆ ಲೇಪನದಂತೆ ಉಪಯೋಗಿಸುವುದುಂಟು. ರಸವನ್ನು ಕಾಯಿಸಿ ಕಿವಿಯಲ್ಲಿ ಹಾಕಿದರೆ ಕಿವಿನೋವು ಶಮನವಾಗುತ್ತದೆ.

**13 ಬೆಳ್ಳುಳ್ಳಿ :** ಇದು ಲಿಲಿಯೇಸಿ ಕುಟುಂಬದ ಅಲ್ಲಯಂ ಸೇಟಿವಮ್ ಎಂಬ ಸಸ್ಯದಿಂದ ದೊರೆಯುತ್ತದೆ. ಸಸ್ಯ ವಿಶಿಷ್ಟ ಹಾಗೂ ತೀವ್ರವಾಸನೆಯುಳ್ಳದ್ದಾಗಿ ಲಶುನಗಳಿಂದಾದ ಈರುಳ್ಳಿ ಗಡ್ಡೆಯಂತೆಯೇ ಒಂದು ಮೂಲಿಕೆಯಾಗಿ ಬೆಳೆಯುತ್ತದೆ. ಲಶುನದಿಂದ ಇಲಕುಗಳನ್ನು ಬೇರ್ಪಡಿಸಿ ಅಡುಗೆ ಮತ್ತು ಆಹಾರಗಳಲ್ಲಿ ರುಚಿ ಮತ್ತು ವಾಸನೆಗಾಗಿಯೂ ಕೆಲವು ಔಷಧಗಳ ತಯಾರಿಕೆಗೂ ಬಳಸುವುದುಂಟು. ಇದನ್ನು ಭಾರತದಲ್ಲಿ ಎಲ್ಲ ಕಡೆಯೂ ಬೆಳೆಸುತ್ತಾರೆ. ಲಶುನಗಳನ್ನು ಉದ್ದೀಪಕ, ಮೂತ್ರವರ್ಧಕಗಳಾಗಿಯೂ ಅಜೀರ್ಣಸಂಬಂಧದ ದೋಷಗಳು ಮತ್ತು ಜಠರಶೋಲೆ, ಜ್ವರ, ಕೆಮ್ಮು, ಚಿತ್ತೋದ್ರೇಕಗಳ ಶಮನಕ್ಕೂ ಕಾಮ ಮತ್ತು ಹಸಿವಿನ ಉದ್ದೀಪನಕ್ಕೂ ಸಿದ್ಧೌಷದವಾಗಿ ಬಳಸಲಾಗುತ್ತದೆ.

**14 ಚಿರೆಟ್ಟಾ :** ಜೆನ್ಶಿಯನೇಸಿ ಕುಟುಂಬಕ್ಕೆ ಸೇರಿದ ಸ್ವರ್ಟಿಯ ಚಿರಾಟಾ ಎಂಬ ಇಡಿ ಸಸ್ಯವೇ ಔಷಧೀಯ ದೃಷ್ಟಿಯಿಂದ ಹೆಸರುವಾಸಿಯಾಗಿದ್ದರೂ ಅದರ ಬೇರಿಗೆ (ಚಿರೆಟ್ಟಾ) ವಿಶೇಷ ಮಹತ್ತ್ವವಿದೆ. ಈ ಸಸ್ಯಗಳು ಕಾಡಿನಲ್ಲಿ ಬೆಳೆಯುತ್ತಿದ್ದು ನೇಪಾಲ, ಭೂತಾನ, ಕಾಶ್ಮೀರ ಮತ್ತು ಹಿಮಾಲಯ ಪ್ರದೇಶಗಳಲ್ಲಿ 4–5 ಸಾವಿರ ಅಡಿಗಳ ಎತ್ತರದಲ್ಲೂ ಸಿಕ್ಕಿವೆ. ಬೇರಿನಲ್ಲಿ ಒಫೀಲಿಕ್ ಆಮ್ಲ ಮತ್ತು ಚಿರಾಟಿನ್ ಎಂಬ ವಿಶಿಷ್ಟ ಘಟಕಗಳಿವೆ. ಅವು ವಿರೇಚಕಗಳೂ ಹೌದು, ಜಠರ ಸಂಬಂಧದ ದೋಷಗಳಿಗೂ ಪರಿಣಾಮಕಾರಿ. ಅವುಗಳನ್ನು ಅಜೀರ್ಣ, ಓಕರಿಕೆ ಮತ್ತು ಯುಕೃತ್ತು ಹಾಗೂ ಪ್ಲೀಹ ದೋಷಗಳಿಗೆ ಔಷಧಗಳಂತೆ ಬಳಸುವುದುಂಟು.

**15 ಸೆನೆಗಾ :** ಇದು ಪಾಲಿಗೆಲೇಸಿ ಕುಟುಂಬಕ್ಕೆ ಸೇರಿದ ಪಾಲಿಗೆಲ ಸೆನೆಗಾ ಎಂಬ ಸಸ್ಯದ ಒಣಗಿದ ಬೇರಿನಿಂದ ದೊರೆಯುತ್ತದೆ. ಇದರಲ್ಲಿ ಗ್ಲೂಕೊಸೈಡ್ ಎಂಬ ಘಟಕವಿದ್ದು ಅದನ್ನು ಹಾವಿನ ಕಡಿತಕ್ಕೂ ಉದ್ದೀಪಕವಾಗಿಯೂ ಕಫ ಕತ್ತರಿಸುವುದಕ್ಕೂ ವಾಂತಿಕಾರಕ ಔಷಧವಾಗಿಯೂ ಬಳಸಲಾಗುತ್ತದೆ.

**16 ರಾವುಲ್ಫಿಯ (ಸೂತ್ರನಾಭಿ, ಪಾತಾಳಗರುಡ) :** ಇದು ಅಪೋಸೈನೇಸೀ ಕುಟುಂಬಕ್ಕೆ ಸೇರಿದ ರಾವುಲ್ಫಿಯ ಸರ್ಪೆಂಟಿನ ಎಂಬ ಪೊದರು ಸಸ್ಯದ ಬೇರುಗಳಿಂದ ದೊರೆಯುತ್ತದೆ. ಇದು ಅಸ್ಸಾಂ ಮತ್ತು ಹಿಮಾಚಲ ಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಇದರಲ್ಲಿ ರಾವುಲ್ಫಿನ್ ಎಂಬ ಕ್ಷಾರೀಯ ಘಟಕವಿದ್ದು, ಇದು ಕೃತಕ ನಿದ್ರೆ ಬರಿಸುವಂಥ, ದುಗುಡ ಮನಸ್ಸನ್ನು ಶಾಂತಗೊಳಿಸುವಂಥ ವಸ್ತುವಾಗಿದೆ. ಹೀಗಾಗಿ ಇದನ್ನು ರಕ್ತದ ಅಧಿಕ ಒತ್ತಡ ಮತ್ತು ಮಾನಸಿಕ ಅಸಮತೋಲನ ಇತ್ಯಾದಿಗಳಿದ್ದ ರೋಗಿಗಳಿಗೆ ಕೊಡುವುದುಂಟು.

**17 ಇಪಿಕ್ಯಾಕ್ :** ಇದು ಸಿಫ್ಯಾಲಿಸ್ ಇಪಿಕ್ಯಾಕ್ಯುವಾನ ಎಂಬ ಸಸ್ಯದ ಬೇರುಗಳಿಂದ ದೊರೆಯುವ ಔಷಧ. ಬೇರಿನ ಮೇಲೆ ಉಂಗುರ ಅಥವಾ ವಲಯಗಳಂಥ ಗುರುತುಗಳು ಇರುವುದು ಈ ಗಿಡದ ವೈಶಿಷ್ಟ್ಯ. ಬೇರಿನಲ್ಲಿ 2–3% ರಷ್ಟು ಎಮೆಟಿನ್ ಎಂಬ ವಾಂತಿಕಾರಕ ಹಾಗೂ ಕ್ಷಾರೀಯ ಘಟಕವಿದೆ. ಬೇರನ್ನು ನುಣ್ಣಗೆ ಪುಡಿಮಾಡಿ ಔಷಧ ರೂಪದಲ್ಲಿ ಅಮೀಬಾಗಳಿಂದಾದ ಆಮಶಂಕೆ ರಕ್ತದ ಅಧಿಕ ಒತ್ತಡ, ಜಠರ ರಸದ ಉತ್ಪಾದನೆಯನ್ನು ನಿಯಂತ್ರಿಸುವಿಕೆ ಇತ್ಯಾದಿಗಳಿಗೆ ಬಳಸುವುದುಂಟು.

**18 ವ್ಯಾಲೇರಿಯನ್ :** ಇದಕ್ಕೆ ಹಿಂದೂಸ್ತಾನಿಯಲ್ಲಿ ಸೋಮರಾಜ್ ಎಂದು ಹೇಳುವುದುಂಟು. ಇದು ಕಂಪಾಸಿಟೆ ಕುಟುಂಬಕ್ಕೆ ಸೇರಿದ ವರ್ನೋನಿಯ ಎಂಬ ವಾರ್ಷಿಕ ಸಸ್ಯದ ಮೂಲಿಕೆಯ ಬೇರುಗಳಿಂದ ದೊರೆಯುತ್ತದೆ. ಈ ಔಷಧವನ್ನು ಕೆಮ್ಮು, ಬಿಳಿತೊನ್ನು, ಜಂತುಹುಳು, ಬೊಜ್ಜು, ಜಲೋದರ ಇತ್ಯಾದಿಗಳಿಗೆ ಬಳಸುವುದುಂಟು.

**ಆ. ತೊಗಟೆಯಿಂದ ದೊರೆಯುವ ಔಷಧಗಳು : 1 ಕ್ವಿನೀನು :** ಇದು ಭಾರತದಲ್ಲಿ ವಿಶೇಷ ಬಳಕೆಯಲ್ಲಿರುವ ಔಷಧಗಳಲ್ಲಿ ಒಂದೆನ್ನಬಹುದು. ರೂಬಿಯೀಸಿ ಎಂಬ ಕುಟುಂಬಕ್ಕೆ ಸೇರಿದ ಸಿಂಕೋನ ಜಾತಿಯ ವಿವಿಧ ಪ್ರಭೇದಗಳಾದ ಸಿಂಕೋನ ಕ್ಯಾಲಿಸಾಯ, ಸಿಂಕೋನ ಅಫಿಷಿನಾಲಿಸ್, ಸಿಂಕೋನ ಲೆಡ್ಜೇರಿಯಾನ ಇತ್ಯಾದಿ ಸಸ್ಯಗಳ ತೊಗಟೆಗಳಿಂದ ಕ್ವಿನೀನನ್ನು ತಯಾರಿಸಲಾಗುತ್ತದೆ. ಇದರ ಮೂಲಸ್ಥಾನ ದಕ್ಷಿಣ ಅಮೆರಿಕ. ಇದು ಎತ್ತರ ಹಾಗೂ ಸುಂದರವಾಗಿ ಬೆಳೆಯುವ ಒಂದು ಮರ. 1638 ರಲ್ಲಿ ಮೊಟ್ಟಮೊದಲು ಬಳಕೆಗೆ ಬಂದ ಇದು ಮಲೇರಿಯ ರೋಗಕ್ಕೆ ರಾಮಬಾಣವೆನಿಸಿಕೊಂಡಿದೆ. ಕೆಲವು ಬಗೆಯ ಜ್ವರಗಳಿಗೂ ಇದು ಸಿದ್ಧೌಷಧವೇ ಟಾನಿಕ್, ಪೂತಿನಾಶಕ ಇತ್ಯಾದಿಗಳ ರೂಪದಲ್ಲಿಯೂ ಇದರ ಬಳಕೆ ಇದೆ. ಮರ 12 ವರ್ಷಗಳ ವರೆಗೆ ಬೆಳೆದ ಮೇಲೆ ಅದನ್ನು ಕಡಿದು ಕಾಂಡ ಮತ್ತು ಬೇರುಗಳ ಮೇಲಿರುವ ತೊಗಟೆಯನ್ನು ಬೇರ್ಪಡಿಸಲಾಗುತ್ತದೆ. ಈ ತೊಗಟೆಯಲ್ಲಿ ಸುಮಾರು 30 ಬಗೆಯ ಕ್ಷಾರೀಯ ಘಟಕಗಳಿದ್ದು ಅವು ಕ್ವಿನೀನ್ ಎಂಬ ಹೆಸರಿನಲ್ಲಿ ಔಷಧೀಯ ದೃಷ್ಟಿಯಿಂದ ಮಹತ್ತ್ವದವಾಗಿವೆ. ಕ್ವಿನೀನ್ ಎಂಬುದು ಬಿಳಿ ರವೆಯ ಕಣಗಳಂತಿದೆ. ಇದು ಬಹು ಕಹಿವಸ್ತು. ಬ್ರಿಟನ್ ಮತ್ತ ನೆದರ್ಲೆಂಡ್ಸಿನಿಂದ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಇದು ರಫ್ತಾಗುತ್ತಿತ್ತು. ಈಗಲೂ ಜಗತ್ತಿನ ಪೂರೈಕೆಯಲ್ಲಿ 90%ರಷ್ಟು ನೆದರ್ಲೆಂಡ್ಸಿನಿಂದಲೇ ಬರುತ್ತದೆ.

**2 ದಾಲಚಿನ್ನಿ ಅಥವಾ ಚಕ್ಕೆ (ಸಿನ್ನಮಾನ್) :** ಲಾರೇಸಿ ಕುಟುಂಬಕ್ಕೆ ಸೇರಿದ ಸಿನಮೋಮಮ್ ಜಿಲಾನಿಕಂ ಎಂಬ ಮರದಿಂದ ದೊರೆಯುವ ಚಕ್ಕೆ ಅಥವಾ ತೊಗಟೆಯೇ ದಾಲಚಿನ್ನಿ. ಇದಕ್ಕೆ ತೀಕ್ಷ್ಣವೂ ವಿಶಿಷ್ಟವೂ ಆದ ವಾಸನೆ ಇದೆ. ರುಚಿ ಒಗಚುಳ್ಳ ಸಿಹಿ. ಇದು ವಾತಹರ, ಇದನ್ನು ಅತಿಸಾರ ಮತ್ತು ಆಮಶಂಕೆಗಳಿಗೆ ಶಮನಕಾರಿಯಾಗಿ ಕಷಾಯ ರೂಪದಲ್ಲಿ ಬಳಸುವುದುಂಟು.

**3 ಕ್ಯಾಷಿಯ ತೊಗಟೆ :** ಇದೂ ಲಾರೇಸಿ ಕುಟುಂಬಕ್ಕೆ ಸೇರಿದ ಸಿನಮೋಮಮ್ ತಮಲಾ ಎಂಬ ಸಸ್ಯದಿಂದ ದೊರೆಯುವ ತೊಗಟೆ. ಈ ಸಸ್ಯಗಳು ಬಂಗಾಳ ಮತ್ತು ಖಾಸಿ ಗುಡ್ಡಗಳಲ್ಲಿ ಸಾಮಾನ್ಯ. ಔಷಧ ಮತ್ತು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಇವುಗಳ ಬಳಕೆ ಹೆಚ್ಚು.

**4 ಆಲದ ಮರದ ಚಕ್ಕೆ :** ಮೊರೇಸಿ ಕುಟುಂಬಕ್ಕೆ ಸೇರಿದ ಫೈಕಸ್ ಬೆಂಗಲೆನ್ಸಿಸ್ ಎಂಬ ಮರದ ತೊಗಟೆ. ತೊಗಟೆ ಅಥವಾ ಚಕ್ಕೆಯ ರಸವನ್ನು ನೀರಿನಲ್ಲಿ ಕೂಡಿಸಿ ಮಧುಮೇಹ ರೋಗಕ್ಕೆ ಮತ್ತು ಲ್ಯುಕೋರಿಯ ಅಥವಾ ಶ್ವೇತಪ್ರದರವೆಂಬ ಸ್ತ್ರೀರೋಗಗಳಿಗೆ ಔಷಧವಾಗಿ ಬಳಸುವುದುಂಟು.

**5 ಬಿಳಿಸೆ ಅಥವಾ ಬಾಹಿನಿಯ :** ಲೆಗ್ಯುಮಿನೋಸಿ ಕುಟುಂಬಕ್ಕೆ ಸೇರಿದ ಬಾಹಿನಿಯ ವೇರಿಗೇಟ ಎಂಬ ಸಸ್ಯದ ತೊಗಟೆ ಅಥವಾ ಚಕ್ಕೆಗೆ ಮಹತ್ತ್ವವಿದೆ. ತೊಗಟೆಯ ಕಷಾಯವನ್ನು ಕೆಲವು ರೋಗಗಳಿಗೆ (ಉದಾ: ಸಿಫಿಲಿಸ್, ತೊನ್ನು, ವ್ರಣ ಮತ್ತು ಚರ್ಮರೋಗ) ಔಷಧವಾಗಿ ಹೊಟ್ಟೆಗೆ ತೆಗೆದುಕೊಳ್ಳುವುದುಂಟು. ಈ ಸಸ್ಯಗಳು ಅಸ್ಸಾಂ, ಮಧ್ಯಪ್ರದೇಶ, ಸಿಕ್ಕಿಂ, ಭೂತಾನ್ ಇತ್ಯಾದಿ ಪ್ರದೇಶಗಳಲ್ಲಿ ಬೆಳೆಯುತ್ತವೆ.

**6 ಸಪ್ತವರ್ಣ :** ಇದು ಅಪೋಸೈನೇಸಿ ಕುಟುಂಬಕ್ಕೆ ಸೇರಿದ ಆಲ್‍ಸ್ಟೋನಿಯ ಸ್ಕೊಲಾರಿಸ್ ಎಂಬ ಎತ್ತರವಾಗಿ ಬೆಳೆಯುವ ಹಾಗೂ ನಿತ್ಯಹರಿದ್ವರ್ಣದ ಮರ. ಇದು ಜವುಗು ಮತ್ತು ತಂಪು ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದರ ತೊಗಟೆಯನ್ನು ದೀರ್ಘಕಾಲದ ಆಮಶಂಕೆಗೆ ಬಳಸಲಾಗುತ್ತದೆ. ಯುದ್ಧಕಾಲದಲ್ಲಿ ಇದು ಕ್ವಿನೀನಿಗೆ ಬದಲಿ ವಸ್ತುವಾಗಿ ಬಳಕೆಯಾಗುತ್ತಿತ್ತು. ಇದಕ್ಕೆ ಜಂತಾಲ ಮರ, ಮದ್ದಾಲೆ, ಏಳೆಲೆಬಾಳೆ, ಕೋಡಾಲೆ, ಬಂತನೆ ಎಂಬ ಇತರ ಹೆಸರುಗಳಿವೆ.

**7 ಅಶೋಕ ಮರದ ಚಕ್ಕೆ :** ಈ ಗಿಡ ಲೆಗ್ಯುಮಿನೋಸಿ ಕುಟುಂಬಕ್ಕೆ ಸೇರಿದ ಸರಕ ಇಂಡಿಕ ಎಂಬ ಹೆಸರಿನ, ನಿತ್ಯಹರಿದ್ವರ್ಣದ ಎತ್ತರ ಬೆಳೆಯುವ ಮರ. ಇದನ್ನು ಎಲ್ಲೆಡೆಯಲ್ಲೂ ಅಲಂಕಾರ ಸಸ್ಯವಾಗಿ ಬೆಳೆಸುವುದುಂಟು. ಇದಕ್ಕೆ ಕೆಂಕಾಳಿ, ಆಚಂಗೆ ಇತ್ಯಾದಿ ಹೆಸರುಗಳೂ ಉಂಟು. ತೊಗಟೆ ಒಗರಾಗಿದ್ದು ಗರ್ಭಕೋಶದ ತೊಂದರೆಗಳಿಗೆ ಪರಿಣಾಮಕಾರಿಯಾಗಿದೆ.

**8 ಕ್ಯಾಸ್ಕಾರಾ :** ಇದು ರ್‍ಯಾಮ್ನೇಸಿ ಕುಟುಂಬಕ್ಕೆ ಸೇರಿದ ರ್‍ಯಾಮ್ನಸ್ ಪರ್ಷಿಯಾನಾ ಎಂಬ ಮರದ ತೊಗಟೆಯಿಂದ ದೊರೆಯುವ ಔಷಧ. ಉದ್ದನೆಯ ಪಟ್ಟಿಯಂತಿರುವ ಈ ತೊಗಟೆಯನ್ನು ಒಣಗಿಸಿ, ಒಂದು ವರ್ಷ ಕಾಲ ಇಟ್ಟ ಮೇಲೆ ಔಷಧವಾಗಿ ಉಪಯೋಗಕ್ಕೆ ಬರುತ್ತದೆ. ಇದನ್ನು ಶಕ್ತಿವರ್ಧಕ ಮತ್ತು ರೇಚಕವಾಗಿಯೂ ಬಳಸುವುದುಂಟು.

**9 ಬಾರಿ ಅಥವಾ ಎಲಚಿ :** ಇದು ರ್‍ಯಾಮ್ನೇಸಿ ಕುಟುಂಬದ ಜಿಜಿಫಸ್ ಜುಜೂಬ ಎಂಬ ಮರ. ಇದರ ತೊಗಡೆಯನ್ನು ಆಮಶಂಕೆ, ಅತಿಸಾರ, ಕರುಳು ಬೇನೆ, ವಸಡು ನೋವು ಇತ್ಯಾದಿಗಳಿಗೆ ಬಳಸುವುದುಂಟು.

**10 ಚೆಳ್ಳಿಮರ :** ಇದು ಬೊರ್‍ರ್ಯಾಜಿನೇಸಿ ಕುಟುಂಬಕ್ಕೆ ಸೇರಿದ ಕಾರ್ಡಿಯ ಡೈಕಾಟೊಮಾ ಎಂಬ ಮರ. ಇದರ ತೊಗಡೆಯ ರಸವನ್ನು ಹಾಲಿನಲ್ಲಿ ಕೂಡಿಸಿ, ಶಕ್ತಿವರ್ಧಕವಾಗಿಯೂ ಕರುಳುಬೇನೆಗಳಿಗೆ ಶಮನಕಾರಿಯಾಗಿಯೂ ಬಳಸುವುದುಂಟು.

**ಇ. ಕಾಂಡದಿಂದ ದೊರೆಯುವ ಔಷಧಗಳು : 1 ಎಫಿಡ್ರಿನ್ :** ಇದನ್ನು ಅನಾವೃತ ಬೀಜ ಸಸ್ಯಗಳ ಗುಂಪಿಗೆ ಸೇರಿದ ಎಫಿಡ್ರ ಎಂಬ ಜಾತಿಯ ವಿವಿಧ ಪ್ರಭೇಧಗಳಿಂದ ಉತ್ಪಾದಿಸಲಾಗುತ್ತದೆ. ಸಸ್ಯ ಎಲೆಯೋ ಇಲ್ಲದ ಹಸಿರು ಬಣ್ಣದ ಕಂಟಿಯಂತಿದೆ ಎಫಿಡ್ರಿನ್ ಎಂಬ ಕ್ಷಾರೀಯ ಘಟಕವುಳ್ಳ ಈ ಔಷಧವನ್ನು ಶೀತ, ದಮ್ಮು, ಜ್ವರ ಇತ್ಯಾದಿಗಳಿಗೆ ಬಳಸುವುದುಂಟು.

**2 ಬಿಳಿ ಗಂಧದ ಮರ (ಸ್ಯಾಂಡಲ್‍ವುಡ್) :** ಇದು ಸ್ಯಾಂಟಲೇಸಿ ಕುಟುಂಬಕ್ಕೆ ಸೇರಿದ ಸ್ಯಾಂಟಲಂ ಆಲ್ಬಂ ಎಂಬ ಹೆಸರಿನ ಮರ. ಇದಕ್ಕೆ ಗಂಧದ ಮರ ಅಥವಾ ಚಂದನತರು ಎಂದೂ ಹೆಸರಿದೆ. ಮರದ ಕಾಂಡ ಮತ್ತು ಅದರಿಂದ ತೆಗೆದೆಣ್ಣೆ ಎರಡೂ ಔಷಧೋಪಯೋಗಿ ವಸ್ತುಗಳು. ಅವು ಸುಗಂಧ ವಾಸನೆಯುಳ್ಳವು ತಂಪು ಮತ್ತು ಶಮನಕಾರಿಗಳು. ಕಟ್ಟಿಗೆಪುಡಿಯನ್ನು ಗನೋರಿಯ ಮತ್ತು ಜ್ವರಗಳಿಗೆ ಔಷಧವಾಗಿ ಬಳಸುತ್ತಾರೆ. ಗಂಧವನ್ನು ತೇಯ್ದು ಬಾಹ್ಯ ಲೇಪನವಾಗಿ ಕುರು, ಹುಣ್ಣು, ಹುರುಪೆ ಇತ್ಯಾದಿ ಚರ್ಮರೋಗಗಳಿಗೆ ಹಚ್ಚುತ್ತಾರೆ. ಗಂಧದ ಎಣ್ಣೆಯನ್ನು ಅನ್ನ ಮತ್ತು ಜೇನುತುಪ್ಪದೊಡನೆ ಕೂಡಿಸಿ ಸೇವಿಸಿದಾಗ ಮಿತಿಮೀರಿದ ನೀರಡಿಕೆ ಮತ್ತು ಆಮಶಂಕೆ ನಿವಾರಣೆಯಾಗುತ್ತದೆ.

**3 ಕೆಂಪು ಗಂಧದ ಮರ :** ಇದು ಲೆಗ್ಯುಮಿನೋಸಿ ಕುಟುಂಬಕ್ಕೆ ಸೇರಿದ ಟೀರೋಕಾರ್ಪಸ್ ಸ್ಯಾಂಟಲಿನಸ್ ಎಂಬ ಮರದಿಂದ ಕೆಂಪು ಅಥವಾ ರಕ್ತಚಂದನ ಕಟ್ಟಿಗೆಯಾಗಿ ದೊರೆಯುತ್ತದೆ. ಇದಕ್ಕೆ ಬಿಳಿ ಗಂಧದ ಕಟ್ಟಿಗೆಯಂತೆಯೇ ಕೆಲವು ಔಷಧೀಯ ಗುಣಗಳಿವೆ. ಕಟ್ಟಿಗೆಯನ್ನು ತೇಯ್ದು, ಕಣ್ಣುಬೇನೆಗಳಿಗೆ ಹಚ್ಚುವುದುಂಟು.

**4 ಎಕ್ಕದ ಗಿಡ :** ಇದು ಆಸ್ಕ್ಲಿಪಿಯಡೇಸಿ ಕುಟುಂಬದ ಕ್ಯಾಲೊಟ್ರೊಪಿಸ್ ಪ್ರೊಸಿರ ಎಂಬ ಚಿಕ್ಕ ಗಿಡ. ಇದರಿಂದ ದೊರೆಯುವ ಬಿಳಿದ್ರವದಿಂದ (ಲ್ಯಾಟೆಕ್ಸ್) ಸಂಧಿವಾತ, ತೊನ್ನು, ಜಲೋದರ, ಟೈಫಸ್ ಜ್ವರ, ಸಿಫಿಲಿಸ್, ಹುಳುಕಡ್ಡಿ, ಗಜಕರ್ಣ, ಹಲ್ಲುನೋವು ಇತ್ಯಾದಿಗಳ ನಿವಾರಣೆಯಾಗುತ್ತದೆ. ಒಣಗಿಸಿದ ಬಿಳಿದ್ರವ ಕಫಹಾರಿಯಾಗಿದ್ದು, ನರಗಳಿಗೆ ಉತ್ತಮ ಶಕ್ತಿವರ್ಧಕ ಕೂಡ ಆಗಿದೆಯೆಂದು ಭಾವಿಸಲಾಗಿದೆ.

**5 ಬಿದಿರು :** ಇದು ಗ್ರ್ಯಾಮಿನಿ ಕುಟುಂಬಕ್ಕೆ ಸೇರಿದ ಬ್ಯಾಂಬುಸಾ ಬ್ಯಾಂಬಾಸ್ ಎಂಬ ಮರ ಅಥವಾ ಮೆಳೆ. ಕಾಂಡದ ತಿರುಳಿಗೆ ಅನೇಕ ಔಷಧೀಯ ಗುಣಗಳಿವೆ. ಎಳೆಯ ಕಾಂಡದಲ್ಲಿ ಬೆಂಜೊಯಿಕ್ ಮತ್ತು ಹೈಡ್ರೊಸಯನಿಕ್ ಆಮ್ಲಗಳಿದ್ದು, ಶ್ವಾಸಸಂಬಂಧದ ರೋಗಗಳಿಗೆ ಪರಿಣಾಮಕಾರಿಯೆನಿಸಿದೆ. ನೀರಿನಲ್ಲಿ ಕುದಿಸಿದ ಎಳೆಯ ಕಾಂಡಗಳು ಗಾಯಗಳನ್ನು ತೊಳೆಯಲು ಉಪಯುಕ್ತ. ಕಾಂಡದ ಗಂಟುಗಳಿಂದ ತೆಗೆದ ಕಷಾಯ ಎಲುಬು ಸಂಧಿಗಳ ಬಾವನ್ನು ಶಮನಗೊಳಿಸುತ್ತದೆ.

**6 ಪಾಪಾಸು (ಡಬ್ಬು) ಕಳ್ಳಿ :** ಹಸಿರು ಹಾಗೂ ಚಪ್ಪಟೆಯಾದ ಈ ಪಾಪಾಸು ಕಳ್ಳಿಯಲ್ಲಿ ಇರುವ ಲೋಳೆಯಂಥ ದ್ರವಕ್ಕೆ (ಮ್ಯೂಸಿಲೇಜ್) ವಿಶೇಷ ಔಷಧೀಯ ಗುಣವುಂಟು. ಅದನ್ನು ಬಿಸಿಮಾಡಿ ಬೆಚ್ಚಾರದಂತೆ ಉಪಯೋಗಿಸಿದರೆ ಕುರು, ಹುಣ್ಣು, ಬಾವು ಇತ್ಯಾದಿ ಶಮನಗೊಳ್ಳುತ್ತವೆ.

**ಈ ಎಲೆಗಳಿಂದ ದೊರೆಯುವ ಔಷಧಗಳು : 1 ಬೇವು (ನೀಮ್) :** ಮೀಲಿಯೇಸಿ ಎಂಬ ಕುಟುಂಬಕ್ಕೆ ಸೇರಿದ ಅಝಾದಿರಕ್ತ ಇಂಡಿಕ ಎಂಬ ಹೆಸರಿನ ಮರಗಳ ಎಲೆಗಳ ಜೊತೆಗೆ ಕಾಂಡ, ತೊಗಟೆ ಮತ್ತು ಫಲಗಳೂ ಉಪಯುಕ್ತವೇ. ಇದು ಭಾರತದಲ್ಲಿ ಎಲ್ಲೆಡೆಯೂ ಬೆಳೆಯುವಂಥ ಮರ. (**ನೋಡಿ– ಬೇವು**).

**2 ಬೆಲ್ಲಡೋನಾ :** ಇದು ಸೊಲನೇಸಿ ಕುಟುಂಬದ ಅಟ್ರೋಪಾ ಬೆಲ್ಲಡೋನಾ ಮತ್ತು ಆ. ಅಕ್ಯೂಮಿನೇಟಾ ಎಂಬ ಸಸ್ಯಗಳ ಒಣ ಎಲೆಗಳಿಂದ ದೊರೆಯುತ್ತದೆ. ಸಸ್ಯ ನೇರ ಹಾಗೂ ಎತ್ತರ ಬೆಳೆಯುವ ಮೂಲಿಕೆಯಾಗಿದ್ದು, ಅದನ್ನು ಭಾರತ, ಯುರೋಪ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಎಲ್ಲೆಡೆ ಬೆಳೆಸಲಾಗುತ್ತದೆ. ಹೂ ಬಿಡುವ ಕಾಲಕ್ಕೆ ಎಲೆಗಳನ್ನು ಕಿತ್ತು ಒಣಗಿಸುತ್ತಾರೆ. ಎಲೆಯಲ್ಲಿ ಹಯೊಸಯಾಮಿನ್ ಮತ್ತು ಅಟ್ರೊಪಿನ್ ಎಂಬ ಎರಡು ರಾಸಾಯನಿಕ ಘಟಕಗಳಿವೆ. ಎಲೆಗಳಿಂದ ತಯಾರಿಸಿದ ಔಷಧಗಳನ್ನು ಅಫೀಮು ಸೇವನೆಯಿಂದಾದ ವಿಷಪರಿಣಾಮವನ್ನು ನಿವಾರಿಸುವುದು, ಸ್ರಾವಕ ಗ್ರಂಥಿಗಳ ಕ್ರಿಯೆಗಳನ್ನು ನಿಯಂತ್ರಿಸುವುದು, ಬಾಹ್ಯಲೇಪನದಿಂದ ನೋವು ಕಡಿಮೆ ಮಾಡುವುದು, ಅಸ್ತಮ, ಉದರ ಶೂಲೆ, ಮೂತ್ರಕೋಶದ ದೋಷಗಳು, ಕಣ್ಣಿನ ಪರೀಕ್ಷೆ ನಡೆಸುವಾಗ ಕಣ್ಣಾಪೆಯನ್ನು ಹಿಗ್ಗಿಸುವುದು — ಇತ್ಯಾದಿ ಹಲವಾರು ಉದ್ದೇಶಗಳಿಗೆ ಬಳಸಲಾಗುತ್ತದೆ.

**3 ನೀರು ಬ್ರಾಹ್ಮಿ :** ಇದು ಸ್ಕ್ರಾಫ್ಯುಲೇರಿಯೇಸಿ ಕುಟುಂಬಕ್ಕೆ ಸೇರಿದ ಬೆಕೋಪ ಮಾನಿಯೆರ ಇಂಬ ಸಸ್ಯದ ಎಲೆಗಳಿಂದ ದೊರೆಯುತ್ತದೆ. ಸಸ್ಯ ಭೂಮಿಗೆ ಹತ್ತಿದಂತೆ ಅಡ್ಡಡ್ಡಲಾಗಿ ಬೆಳೆಯುವ ಮೂಲಿಕೆಯಾಗಿದ್ದು ಗಿಣ್ಣುಗಳಿಂದ ಆಗಂತುಕ ಬೇರುಗಳನ್ನು ಉತ್ಪಾದಿಸುತ್ತದೆ. ಮಳೆ ಹಾಗೂ ಚಳಿಗಾಲಗಳಲ್ಲಿ ಮಾತ್ರ ಈ ಸಸ್ಯ ಕಾಣಿಸಿಕೊಳ್ಳುತ್ತದೆ. ಎಲೆಯ ರಸವನ್ನು ಶ್ವಾಸನಾಳದ ದೋಷಗಳು, ಅತಿಸಾರ, ನೆಗಡಿ ಇತ್ಯಾದಿಗಳಿಗೆ ಬಳಸುವುದುಂಟು.

**4 ನೀಲಗಿರಿ ಎಣ್ಣೆ :** ಮಿರ್ಟೇಸಿ ಕುಟುಂಬಕ್ಕೆ ಸೇರಿದ ಯೂಕಲಿಪ್ಟಸ್ ಜಾತಿಯ ಸಸ್ಯಗಳಿಂದ ತೆಗೆದ ಒಂದು ಸಾರತೈಲ. ಔಷಧೀಯ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. ಭಾರತದಲ್ಲಿ ಹಲವಾರು ಪ್ರಭೇದದ ನೀಲಗಿರಿ ತೈಲದ ಮರಗಳನ್ನು ಬೆಳೆಸಲಾಗುತ್ತಿದೆ.

ನೀಲಗಿರಿ ಗಿಡದ ರೆಂಬೆ

ಇದರ ಸಾರತೈಲ ಪೂತಿನಾಶಕವಾಗಿದ್ದು, ಸಂಧಿವಾತ, ಅಸ್ತಮ ಮತ್ತು ಶ್ವಾಸನಾಳ ವಿಕಾರಗಳು, ಮೂಗು ಗಂಟಲು ಬೇನೆಗಳು ಇತ್ಯಾದಿಗಳಿಗೂ ಸುಟ್ಟ ಗಾಯಗಳಿಗೆ ಲೇಪನ ರೂಪದಲ್ಲಿಯೂ ಬಳಕೆಯಲ್ಲಿದೆ.

**5 ಉಮ್ಮತ್ತಿ :** ಸೊಲನೇಸಿ ಕುಟುಂಬಕ್ಕೆ ಸೇರಿದ ಈ ದತ್ತೂರ ಸ್ಟ್ರಮೋನಿಯಮ್ ಎಂಬ ಸಸ್ಯದಿಂದ ವಾಣಿಜ್ಯಮಹತ್ತ್ವದ ದತ್ತೂರ ದೊರೆಯುತ್ತದೆ. ಸಸ್ಯವೂ ದೊಡ್ಡ ಗಾತ್ರದ ಮೂಲಿಕೆಯಾಗಿದ್ದು, ದೊಡ್ಡ ದೊಡ್ಡ ಹೂಗಳನ್ನು ಬಿಡುತ್ತದೆ. ಅದು ಸಾಮಾನ್ಯವಾಗಿ ಎಲ್ಲೆಡೆ ಕಾಡುಗಿಡದಂತೆ (ವೀಡ್) ಬೆಳೆಯುತ್ತದೆ. ಎಲೆ ಮತ್ತು ಕಾಯಿಗಳು ಔಷಧ ದೃಷ್ಟಿಯಿಂದ ಮಹತ್ತ್ವದ್ದಾಗಿವೆ. ಎಲೆಗಳನ್ನು ಬಾಹ್ಯಲೇಪನಕ್ಕಾಗಿಯೂ ಮಾದಕ ವಸ್ತುವಿನಂತೆಯೂ ನೋವುಶಮನಕಾರಿಯಾಗಿಯೂ (ವೇದನಾಹರ) ಕಫ ಕತ್ತರಿಸುವುದಕ್ಕೂ ಬಳಸಲಾಗುತ್ತದೆ. ಅವುಗಳಲ್ಲಿ ಹಯೊಸಿನ್, ಹಯೊಸಯಾಮಿನ್ ಮತ್ತು ಅಟ್ರೊಪಿನ್ ಎಂಬ ರಾಸಾಯನಿಕ ಘಟಕಗಳಿವೆ. ಅವುಗಳ ಬಳಕೆ ಅಸ್ತಮ ರೋಗದಲ್ಲಿ ವಿಶೇಷ. ಎಲೆಗಳಿಂದ ತಯಾರಿಸಿದ ಬೆಚ್ಚಾರ ಸಂಧಿವಾತ, ಬಾತು ನೋವುಂಟುಮಾಡುವ ಗೆಡ್ಡೆ, ಸಿಡುಬು, ದಡಾರ ಇತ್ಯಾದಿಗಳಿಗೆ ಪರಿಣಾಮಕಾರಿ, ಫಲಗಳು ಅಜೀರ್ಣ, ಉದರಶೂಲೆ, ಅಸ್ತಮ, ಧನುರ್ವಾತ (ಟಿಟಾನಸ್), ಬೆನ್ನುಫಣಿ ಇತ್ಯಾದಿಗಳಿಗೆ ಸಿದ್ಧೌಷಧ.

**6 ಡಿಜಿಟ್ಯಾಲಿಸ್ :** ಸ್ಕ್ರಾಫ್ಯುಲೇರಿಯೇಸಿ ಕುಟುಂಬಕ್ಕೆ ಸೇರಿದ ಡಿಜಿಟ್ಯಾಲಿಸ್ ಪರ್ಪ್ಯೂರಿಯ ಎಂಬ ಈ ಮೂಲಿಕೆಯ ಎಲೆಗಳನ್ನು ಒಣಗಿಸಿ ಸಂಗ್ರಹಿಸಲಾಗುತ್ತದೆ. ಈ ಸಸ್ಯ ಯುರೋಪ್ ಖಂಡದಲ್ಲಿ ಬೆಳೆಯುವುದು ಹೆಚ್ಚು. ಇವು ಡಿಜಿಟ್ಯಾಕ್ಸಿನ್ ಎಂಬ ರಾಸಾಯನಿಕ ಘಟಕವಿದೆ. ಎಲೆಗಳಿಂದ ತಯಾರಿಸಿದ ಔಷಧಗಳು ಹೃದಯ ಕ್ರಿಯೆಯ ಪ್ರಚೋದಕಗಳು. ಇದರಿಂದ ಅನೇಕ ಬಗೆಯ ಹೃದ್ರೋಗಗಳಿಗೆ ಔಷಧ ತಯಾರಿಸುವರು.

**7 ಕೊಕೇನ್ :** ಎರಿತ್ರೊಕ್ಸೈಲೇಸಿ ಕುಟುಂಬಕ್ಕೆ ಸೇರಿದ ಎರಿತ್ರೊಕ್ಸೈಲಾನ್ ಕೋಕೊ ಎಂಬ ಸಸ್ಯದಿಂದ ತಯಾರಾದ ಔಷಧ. ಇದನ್ನು ಶಸ್ತ್ರ ಚಿಕಿತ್ಸೆಯಲ್ಲಿ ಸ್ಥಳೀಯ ಅರಿವಳಿಕವಾಗಿ (ಲೋಕಲ್–ಅನೀಸ್ತೀಸಿಯ), ಬಳಸುವುದುಂಟು.

**8 ಗಾಂಜಾ (ಇಂಡಿಯನ್ ಹೆಂಪ್) :** ಕ್ಯಾನಬೀಸಿ ಕುಟುಂಬಕ್ಕೆ ಸೇರಿದ ಕ್ಯಾನಬಿಸ್ ಸಟೈವ ಎಂಬ ಸಸ್ಯದ ಒಣಗಿದ ಎಲೆಗಳಿಗೆ ಗಾಂಜಾ ಅಥವಾ ಭಂಗಿ ಎಂದು ಹೇಳುವುದುಂಟು. ಈ ಎಲೆಗಳನ್ನು ಅರೆದು ನೀರಿನೊಡನೆ ಕೂಡಿಸಿ ಹೊಟ್ಟೆಗೆ ತೆಗೆದುಕೊಳ್ಳುವುದು ಹೆಚ್ಚು. ಅದರಿಂದ ಅರೆನಿಶೆಯುಂಟಾಗುತ್ತದೆ. ಸಸ್ಯ (5–6) ಅಡಿ ಎತ್ತರಕ್ಕೆ ಬೆಳೆಯುವ ಒಂದು ವಾರ್ಷಿಕ ಮೂಲಿಕೆ. ಉತ್ತರ ಭಾರತದಲ್ಲಿ ಅನೇಕ ಕಡೆ ಬೆಳೆಯುತ್ತದೆ. ಎಲೆಗಳಿಗೆ ಉಪಶಾಮಕ, ಪಚನಕ್ರಿಯೆ, ಚೋದಕ, ಮೂತ್ರವರ್ಧಕ ಗುಣಗಳಿವೆ. ಅದರಿಂದ ಇವುಗಳನ್ನು ಆಮಶಂಕೆ, ಅತಿಸಾರ ಅಜೀರ್ಣ ಮುಂತಾದ ದೋಷಗಳಿಗೆ ಬಳಸುವುದುಂಟು. ವೈದ್ಯಕೀಯ ದೃಷ್ಟಿಯಿಂದ ಸಸ್ಯದ ಕರಕು, ಗಾಂಜಾ ಇತ್ಯಾದಿಗಳು ಮಹತ್ತ್ವದವು.

ತುಳಸಿ

**9 ತುಳಸಿ :** ಲೇಬಿಯೇಟಿ ಕುಟುಂಬಕ್ಕೆ ಸೇರಿದ ಅಸಿಮಮ್ ಸ್ಯಾಂಕ್ಟಮ್ ಎಂಬ ಸಸ್ಯ; ಭಾರತೀಯರಿಗೆ ಪವಿತ್ರವಾದುದು. ಔಷಧೀಯ ದೃಷ್ಟಿಯಿಂದಲೂ ಮುಖ್ಯವಾಗಿದೆ. ಇದನ್ನು ಭಾರತದಲ್ಲಿ ಎಲ್ಲೆಡೆ ಹಿಂದೂ ಜನರು ಮನೆಗಳ ಆವರಣದಲ್ಲಿ ಬೆಳೆಸುತ್ತಾರೆ. ಎಲೆಗಳಿಗೆ ಹಸಿವು ವೃದ್ಧಿಮಾಡುವ, ಕಫ ಕತ್ತರಿಸುವ, ಉದ್ದೀಪಕ, ಸುವಾಸನೆಕೊಡುವ, ಶೀತಹರ ಇತ್ಯಾದಿ ಗುಣಗಳಿವೆ. ಎಲೆಗಳನ್ನು ಅರೆದು ಜೇನುತುಪ್ಪ ಮತ್ತು ಕರಿಮೆಣಸಿನೊಡನೆ ಕೂಡಿಸಿ ಚಳಿಜ್ವರ ಯಕೃತ್ತಿನ ವಿಕಾರಗಳು, ನೆಗಡಿ, ಕೆಮ್ಮು, ಗಂಟಲುಬೇನೆ ಇತ್ಯಾದಿಗಳಿಗೆ ಬಳಸುವುದುಂಟು. ಮಲೇರಿಯ ಜ್ವರಕ್ಕೆ ಮೆಣಸು, ಶುಂಠಿ ಮತ್ತು ತುಳಸಿ ಎಲೆಗಳನ್ನು

ಕೂಡಿಸಿ ಕೊಡುವುದುಂಟು. ಆಮಶಂಕೆ, ವಾಂತಿ, ರಕ್ತಸ್ರಾವ ಇತ್ಯಾದಿಗಳನ್ನೂ ಅದು ಗುಣಪಡಿಸಬಲ್ಲದು.

**10 ವೀಳೆಯದೆಲೆ (ಬೀಟಲ್‌ಲೀಫ್) :** ಪೈಪರೇಸಿ ಕುಟುಂಬಕ್ಕೆ ಸೇರಿದ ಪೈಪರ್ ಬೀಟಲ್ ಅಥವಾ ಬೀಟಲ್ ವೈನ್ ಎಂಬ ಬಳ್ಳಿಯ ಎಲೆಗಳಿಗೆ ವೀಳೆಯದೆಲೆ ಅಥವಾ ತಿನ್ನುವ ಎಲೆ ಎಂದೂ ಹೇಳಲಾಗುತ್ತದೆ. ಅವುಗಳಿಗೆ ವಾತಹರ, ಸುವಾಸನೆಕೊಡುವ ಮತ್ತು ಪ್ರಚೋದಕ ಗುಣಗಳಿವೆ. ಎಲೆಯ ರಸವನ್ನು ಜೇನುತುಪ್ಪದೊಡನೆ ಕೂಡಿಸಿ ಮಕ್ಕಳಿಗೆ ಹಲ್ಲು ಬರುವಾಗ ಕೊಡುವುದುಂಟು. ರಸವನ್ನು ಹಸಿ ಶುಂಠಿಯೊಡನೆ ಸೇವಿಸಿದಾಗ ಶ್ವಾಸನಾಳದ ದೋಷಗಳು, ನೆಗಡಿ, ಅಜೀರ್ಣ ಇತ್ಯಾದಿ ಮಾಯವಾಗುತ್ತವೆ. ರಸವನ್ನು ಕಣ್ಣಿಗೆ ಹಾಕಿಕೊಂಡರೆ ಇರುಳು ಕುರುಡು ಮತ್ತಿತರ ಕಣ್ಣಿನ ದೋಷಗಳು ಪರಿಹಾರವಾಗುವುವು. ಎಲೆಗೆ ಎಣ್ಣೆ ಸವರಿ ಬಿಸಿಮಾಡಿ ಕುರು, ಹುಣ್ಣುಗಳ ಮೇಲಿಟ್ಟು ಕಟ್ಟಿದರೆ, ಅವು ಮೆತ್ತಗಾಗಿ ಒಡೆಯುವಂತೆ ಮಾಡುತ್ತದೆ.

**11 ಸೆನ್ನ ಅಥವಾ ಸೋನಾಮುಖಿ :** ಲೆಗ್ಯುಮಿನೋಸಿ ಕುಟುಂಬಕ್ಕೆ ಸೇರಿದ ಕ್ಯಾಷಿಯ ಆಕ್ಯುಟಿಫೋಲಿಯ ಮತ್ತು ಕ್ಯಾಷಿಯ ಅಂಗುಸ್ಟಿಫೋಲಿಯ ಎಂಬ ಸಸ್ಯಗಳ ಸಣ್ಣೆಲೆಗಳು (ಪರ್ಣಿಕೆ) ಮತ್ತು ಕಾಯಿಗಳಿಂದ ಈ ಔಷಧವಸ್ತು ದೊರೆಯುತ್ತದೆ. ಇದು ಒಳ್ಳೆಯ ಪರಿಣಾಮಕಾರಿ ರೇಚಕ. ಇದನ್ನು ಭಾರತ, ಈಜಿಪ್ಟ್ ಮತ್ತು ಅರೇಬಿಯ ದೇಶಗಳಲ್ಲಿ ಹೆಚ್ಚಾಗಿ ಬೆಳೆಸಲಾಗುತ್ತದೆ. ಇದಕ್ಕೆ ಸಂಧಿವಾತ, ಶೋಣಿತವಾಯು, ಯಕೃತ್ತನ್ನು ಚುರುಕುಗೊಳಿಸುವುದು, ಕರುಳಿನ ಜಂತುಗಳನ್ನು ನಾಶಪಡಿಸುವುದು, ಮೊಡವೆ, ಕೆಲವು ಬಗೆಯ ಚರ್ಮರೋಗಗಳನ್ನು ಗುಣಪಡಿಸುವುದು ಇತ್ಯಾದಿ ಗುಣಗಳಿವೆ.

**12 ಮಲ್ಲಿಗೆ :** ಓಲಿಯೇಸಿ ಕುಟುಂಬಕ್ಕೆ ಸೇರಿದ ಜಾಸ್ಮಿನಮ್ ಗ್ರಾಂಡಿಫ್ಲೋರಮ್, ಜಾ. ಅಫಿಷಿನೇಲ್ ಜಾತಿಯ ಈ ಸಸ್ಯ ಪ್ರಭೇದಗಳನ್ನು ಎಲ್ಲ ಕಡೆ ಹೂವಿಗಾಗಿ ಬೆಳೆಸುವರು. ಎಲೆಗಳು ಒಗರಾಗಿದ್ದು, ಅವುಗಳನ್ನು ಅಗೆದಾಗ ವಸಡು ಮತ್ತು ದಂತಸಂಬಂಧದ ನೋವು, ಬಾಯಿಹುಣ್ಣು ಇತ್ಯಾದಿಗಳು ಗುಣವಾಗುತ್ತದೆ. ಎಲೆಯನ್ನು ಅರೆದು ರಸ ಅಥವಾ ಸರಿಯನ್ನು ಕಲ್ಬೆರಳುಗಳ ನಡುವಿನ ಹುಣ್ಣು (ಕೆಸರುಹುಣ್ಣು) ಮತ್ತಿತರ ಬಗೆಯ ಸಣ್ಣಪುಟ್ಟ ವ್ರಣಗಳನ್ನು ಮಾಯಿಸಲು ಉಪಯೋಗಿಸುವರು.

**13 ಎಕ್ಲಿಪ್ಟ ಅಥವಾ ಗರುಗದ ಗಿಡ :** ಕಂಪಾಸಿಟಿ ಕುಟುಂಬಕ್ಕೆ ಸೇರಿದ ಎಕ್ಲಿಪ್ಟ ಆಲ್ಬ ಎಂಬ ಈ ಗಿಡಕ್ಕೆ, ಹಿಂದೂಸ್ತಾನಿಯಲ್ಲಿ ಭಿಂಗ್‌ರಾಜ ಎಂದು ಹೆಸರು. ಇದರ ಎಲೆಗಳನ್ನು ಚರ್ಮರೋಗಗಳು, ಕೆಮ್ಮು, ತಲೆಶೂಲೆ, ಯಕೃತ್ತು, ಮತ್ತು ಗರ್ಭಕೋಶದ ವಿಕಾರಗಳು ಹಾಗೂ ಕಾಮಾಲೆ ರೋಗಗಳಿಗೆ ಸಿದ್ಧೌಷಧವೆಂದು ಬಳಸುವುದುಂಟು.

**14 ಸೀಮೆ ಅಗಸೆ :** ಲೆಗ್ಯುಮಿನೋಸಿ ಕುಟುಂಬಕ್ಕೆ ಸೇರಿದ ಕ್ಯಾಷಿಯ ಅಲಾಟಾ ಎಂಬ ಸಸ್ಯ ದೊಡ್ಡ ಕಂಟಿಯಾಗಿದ್ದು ಭಾರತದಲ್ಲಿ ಎಲ್ಲೆಡೆ ಬೆಳೆಯುತ್ತದೆ. ಇದರ ಎಲೆಗಳು ಒಗರಾಗಿದ್ದು, ಸೌಮ್ಯರೇಚಕ ಮತ್ತು ಶಕ್ತಿವರ್ಧಕದಂತೆ ಕಾರ್ಯಮಾಡುತ್ತವೆ. ಮಕ್ಕಳಿಗೆ ಹಲ್ಲು ಬರುವಾಗ ಎಲೆಗಳ ಕಷಾಯವನ್ನು (ಕಾಡೆ) ಕೊಡಲಾಗುತ್ತದೆ. ವಿಶೇಷವಾಗಿ ಹುಳಕಡ್ಡಿ, ಗಜಕರ್ಣ ಇತ್ಯಾದಿ ಚರ್ಮರೋಗಗಳಿಗೆ ಇದು ಸಿದ್ಧೌಷಧ. ಪರೋಪಜೀವಿಗಳ ಶತ್ರುವೂ ಅಹುದು. (ಆಂಟಿಪ್ಯಾರಾಸೈಟಿಕ್).

**15 ಲಕ್ಕಿಗಿಡ :** ವರ್ಬಿನೇಸಿ ಕುಟುಂಬಕ್ಕೆ ಸೇರಿದ ವೈಟೆಕ್ಸ್ ನಿಗಂಡೋ ಎಂಬ ಸಸ್ಯ, ಇದಕ್ಕೆ ಹಲವು ಔಷಧೀಯ ಗುಣಗಳಿವೆ. ಎಲೆಗಳನ್ನು ಮೆಣಸಿನೊಡನೆ ಕೂಡಿಸಿ ಸೇವಿಸಿದರೆ ನೆಗಡಿ, ಜ್ವರ ಗುಣವಾಗುತ್ತದೆ. ಒಣ ಎಲೆಗಳನ್ನು ತಂಬಾಕಿನಂತೆ ಸೇವಿಸಿದರೆ ತಲೆಶೂಲೆ ಇಲ್ಲವಾಗುತ್ತದೆ. ಎಲೆಗಳನ್ನು ಅರೆದು ಸಂದುಗಳ ಬಾವು, ಹಿಗ್ಗಿದ ಯಕೃತ್ತು ಮತ್ತು ಪ್ಲೀಹ ಮತ್ತು ಕೆಲವು ಬಗೆಯ ಗಾಯಗಳಿಗೆ ಬಳಸುವುದುಂಟು. ಕೂದಲು ಬೆಳೆಯಲೂ ಎಲೆಗಳನ್ನು ಉಪಯೋಗಿಸಲಾಗುತ್ತಿದೆ.

**ಉ ಪುಷ್ಪಗಳಿಂದ ದೊರೆಯುವ ಔಷಧಗಳು : 1 ಮದುಗಣಿಕೆ ಅಥವಾ ಉಮ್ಮತ್ತಿ** : ಸೊಲನೇಸಿ ಕುಟುಂಬಕ್ಕೆ ಸೇರಿದ ದತ್ತೂರ ಸ್ಟ್ರಮೋನಿಯಂಗೆ ಮದುಗಣಿಕೆ ಅಥವಾ ಉಮ್ಮತ್ತಿ ಎಂತಲೂ ಹೆಸರು. ಅದರ ಒಣಗಿಸಿದ ಎಲೆ ಮತ್ತು ಹೂಗಳಿಂದ ಸ್ಟ್ರಮೋನಿಯಂ ಎಂಬ ಔಷಧವಸ್ತು ದೊರೆಯುತ್ತದೆ. ಅದು ಅತ್ಯಂತ ವಿಷಪೂರಿತವಾಗಿದ್ದು, ಕೆಲವು ವೇಳೆ ಬೆಲ್ಲಡೋನಾಕ್ಕೆ ಬದಲಿ ವಸ್ತುವಾಗಿ ಇದನ್ನು ಬಳಸುವುದುಂಟು.

**2 ಸ್ಯಾಂಟೋನಿನ್ :** ಇದು ಕಂಪಾಸಿಟಿ ಕುಟುಂಬಕ್ಕೆ ಸೇರಿದ ಆರ್ಟೆಮಿಸಿಯ ಸೈನ ಮತ್ತು ಆ.ಅಬ್‌ಸಿಂತಿಯಮ್ ಎಂಬ ಸಸ್ಯಗಳ ಎಲೆ ಮತ್ತು ಹೂಗಳಿಂದ ದೊರೆಯುವ ಔಷಧವಸ್ತು. ಇದು ರಷ್ಯ ಮತ್ತು ತುರ್ಕಿಸ್ತಾನಗಳಿಂದ ಪರದೇಶಗಳಿಗೆ ರಫ್ತಾಗುತ್ತದೆ. ಇದು ಉದರಶೂಲೆ ಮತ್ತು ಜಂತುಹುಳುಗಳಿಗೆ ಪರಿಣಾಮಕಾರಿ ಔಷಧ.

**3 ಎಕ್ಕ :** ಆಸ್ಕ್ಲಿಪಿಯಡೇಸಿ ಕುಟುಂಬಕ್ಕೆ ಸೇರಿದ ಕೆಲೊಟ್ರೊಪಿಸ್ ಪ್ರೊಸಿರ, ಕೆ.ಜೈಗಾಂಷಿಯ ಇತ್ಯಾದಿ ಸಸ್ಯಗಳು. ಇವು ದೊಡ್ಡ ಪೊದರು ಅಥವಾ ಕಂಟಿಯಂತೆ ಬೆಳೆಯುವುವು. ಹೂಗಳನ್ನು ಹೊಟ್ಟೆಗೆ ಶಕ್ತಿವರ್ಧಕದಂತೆಯೂ ಅಸ್ತಮ, ಶೀತ, ತೂನ್ನು, ಸಫಿಲಿಸ್ ಮತ್ತು ಗನೋರಿಯ ಮುಂತಾದ ರೋಗಗಳಿಗೂ ಬಳಸುತ್ತಾರೆ

ಎಕ್ಕ

**4 ದಾಳಿಂಬ :** ಪ್ಯೂನಿಕೇಸಿ ಕುಟುಂಬಕ್ಕೆ ಸೇರದ ಪ್ಯೂನಿಕ ಗ್ರನೇಟಂ ಎಂಬ ಸಸ್ಯ. ಇದರ ಹೂ, ಮೊಗ್ಗುಗಳನ್ನು ಪರಿಷ್ಕರಿಸಿ ಬಿಳಿಸ್ರಾವ, ಅತಿಸಾರ, ಆಮಶಂಕೆ, ಶ್ವಾಸನಾಳದೋಷ ಇತ್ಯಾದಿಗಳಿಗೂ ಎಳೆಯ ಹಾಗೂ ಒಣಗಿದ ಹೂಗಳ ಪುಡಿಯನ್ನು ಜಂತುಹುಳುಗಳ ನಾಶ, ಮೂಗಿನಿಂದ ರಕ್ತಹರಿಯುವಿಕೆ ಇತ್ಯಾದಿಗಳಿಗೂ ಔಷಧರೂಪದಲ್ಲಿ ಬಳಸಲಾಗುತ್ತದೆ. ಗಿಡ ಒಂದು ದೊಡ್ಡ ಪೊದರು ಅಥವಾ ಕಂಟಿಯಂತೆ ಬೆಳೆಯುತ್ತದೆ. ಹಿಂದೂಸ್ತಾನಿಯಲ್ಲಿ ಅದಕ್ಕೆ ಗುಲ್‌ನಾರ್ ಎಂತಲೂ ಹೆಸರು.

**5 ಚೆಂಡುಹೂ :** ಕಂಪಾಸಿಟಿ ಎಂಬ ಕುಟುಂಬಕ್ಕೆ ಸೇರಿದ ಕ್ಯಾಲೆಂಡ್ಯೂಲ ಅಫಿಸಿನಾಲಿಸ್ ಅಥವಾ ಚೆಂಡುಹೋವಿನ ಹೂಪಕಳೆಗಳನ್ನು ನೋವು, ಕೀಟಗಳು ಕಡಿಯುವುದರಿಂದಾಗುವ ತುರಿಕೆ, ಉಳುಕು ಇತ್ಯಾದಿಗಳಿಗೆ ಔಷಧವಾಗಿ ಬಳಸುತ್ತಾರೆ.

**6 ವಯೊಲಾ :** ವಯೊಲೇಸಿ ಕುಟುಂಬಕ್ಕೆ ಸೇರಿದ ವಯೊಲಾ ಓಡೊರೇಟ ಎಂಬ ಸಸ್ಯ. ಈ ಪ್ರಭೇದದಲ್ಲಿ ಹಲವಾರು ಬಗೆಗಳಿವೆ. ಇವು ರೇಚಕ ಮತ್ತು ಮೂತ್ರವರ್ಧಕ ಗುಣವುಳ್ಳವು. ಇವುಗಳನ್ನು ಕೆಮ್ಮು, ಗಂಟಲುನೋವು, ಯಕೃತ್ತಿನ ಹಾಗೂ ಮೂತ್ರಪಿಂಡಗಳ ವಿಕಾರಗಳು, ವಿವಿಧ ರೀತಿಯ ಬಾವು–ನೋವುಗಳಿಗೆ ಉಪಯೋಗಿಸಲಾಗುತ್ತದೆ.

**7 ಕುಂಕುಮ ಕೇಸರಿ :** ಇರಿಡೇಸಿ ಕುಟುಂಬಕ್ಕೆ ಸೇರಿದ ಕ್ರಾಕಸ್ ಸಟೈವಸ್ ಎಂಬ ಮೂಲಿಕೆಯ ಹೂಗಳಲ್ಲಿ 3 ಶಾಖೆಗಳಿಂದಾದ ದೊಡ್ಡ ಶಲಾಕಾಗ್ರವೊಂದು ಇದೆ. ಈ ಶಲಾಕಾಗ್ರದ ತುದಿಯಲ್ಲಿ ಇರುವ ಕಿತ್ತಳೆಬಣ್ಣದ ಭಾಗವೇ ಶುದ್ಧವಾದ ಕೇಸರಿ. ಉಳಿದ ಭಾಗಗಳು ಅಶುದ್ಧ, ಕೇಸರಿಯನ್ನು ಮಿಠಾಯಿ, ಸಿಹಿ ಮತ್ತು ಮಸಾಲೆ ತಿಂಡಿತಿನಸುಗಳಲ್ಲಿ ಸುವಾಸನೆ ಮತ್ತು ಆಕರ್ಷಕ ಬಣ್ಣಕ್ಕೆ ಬಳಸುವುದುಂಟು. ಔಷಧೀಯ ದೃಷ್ಟಿಯಿಂದಲೂ ಇದು ಮುಖ್ಯವಾಗಿದ್ದು, ಮಕ್ಕಳಿಗೆ ಶೀತ, ನೆಗಡಿ ಮುಂತಾದುವುಗಳಿಗೆ ಬಳಸುವುದುಂಟು.

**ಎಫ್. ಫಲ–ಬೀಜಗಳಿಂದ ದೊರೆಯುವ ಔಷಧಿಗಳು : 1 ಜೀರಿಗೆ :** ಅಂಬೆಲಿಫೆರಿ ಕುಟುಂಬಕ್ಕೆ ಸೇರಿದ ಕ್ಯುಮಿನಂ ಎಂಬ ಸಸ್ಯಗಳ ಫಲಗಳೇ ಜೀರಿಗೆ. ಇವುಗಳಿಗೆ ವಾತಹರ, ಮೂತ್ರವರ್ಧಕ, ಪ್ರಚೋದಕ, ಹಸಿವನ್ನು ಉಂಟು ಮಾಡುವುದು ಇತ್ಯಾದಿ ವಿಶೇಷ ಗುಣಗಳಿವೆ. ಇವನ್ನು ಅತಿಸಾರ, ಅಗ್ನಿಮಾಂದ್ಯ ಮತ್ತು ಹಾಲು ಉತ್ಪಾದನೆಯನ್ನು ತೀವ್ರಗೊಳಿಸುವುದು ಇತ್ಯಾದಿಗಳಿಗೆ ಔಷಧವಾಗಿ ಬಳಸುತ್ತಾರೆ. ಇವು ದ್ವೈವಾರ್ಷಿಕ ಮೂಲಿಕೆಗಳು.

**2 ಬಾಲಮೆಣಸು :** ಪೈಪರೇಸಿ ಕುಟುಂಬಕ್ಕೆ ಸೇರಿದ ಪೈಪರ್ ಲಾಂಗಮ್ ಎಂಬ ಬಳ್ಳಿಯ ಫಲ ಔಷಧ ಗುಣವುಳ್ಳದ್ದು. ಅದಕ್ಕೆ ಹೃದಯಕ್ರಿಯೆಯನ್ನು ಉತ್ತೇಜನಗೊಳಿಸುವ ರೇಚಕ, ವಾತಹರ, ಜೀರ್ಣಕಾರಿ, ಪೂತಿನಾಶಕ ಇತ್ಯಾದಿ ಗುಣಗಳಿವೆ. ಒಣಗಿಸಿದ ಫಲ ಅಥವಾ ಕಾಳನ್ನು ಅರೆದು ಜೇನುತುಪ್ಪದೊಡನೆ ಕೂಡಿಸಿ ಅಗ್ನಿಮಾಂದ್ಯ, ಕೆಮ್ಮು, ಶ್ವಾಸನಾಳ

ದೋಷಗಳು, ಅಸ್ತಮ, ಅಜೀರ್ಣ ಮುಂತಾದ ರೋಗಗಳಿಗೆ ಔಷಧವಾಗಿ ಕೊಡುವುದುಂಟು. ಅಂತೆಯೇ ಕಪ್ಪು ಮೆಣಸು (ಪೈಪರ್ ನಿಗ್ರಮ್) ಕಾಳುಗಳಲ್ಲಿ ಪೈಪರಿನ್ ಎಂಬ ಕ್ಷಾರೀಯ ಘಟಕವುಂಟು. ಮೆಣಸಿನ ಬೆಳೆ ಪಶ್ಚಿಮ ಘಟ್ಟದ ಪ್ರದೇಶಗಳು ಮತ್ತು ಕೇರಳದಲ್ಲಿ ಹೆಚ್ಚು. ಮೆಣಸನ್ನು ಸಾಮಾನ್ಯ ನಿಶ್ಶಕ್ತಿ, ಅತಿಸಾರ, ಕಾಲರಾ, ಚಳಿಜ್ವರ, ಗಂಟಲುಬೇನೆ, ಪಾರ್ಶ್ವವಾಯು, ತಲೆಶೂಲೆ, ಹಲ್ಲುನೋವು, ಮೂಲವ್ಯಾಧಿ (ಪೈಲ್ಸ್), ಶೋಣಿತವಾಯು, ಚರ್ಮರೋಗಗಳು ಇತ್ಯಾದಿಗಳಿಗೆ ಔಷಧವಾಗಿ ಬಳಸುವುದುಂಟು.



ಬಾಲಮೆಣಸು

**3 ನೆಲ್ಲಿ :** ಯುಫೋರ್ಬಿಯೇಸಿ ಕುಟುಂಬಕ್ಕೆ ಸೇರಿದ ಎಂಬ್ಲಿಕ ಅಫಿಸಿನಾಲಿಸ್ ಎಂಬುದಕ್ಕೆ ನೆಲ್ಲಿಕಾಯಿ ಎಂತಲೂ ಹೆಸರು. ಈ ಫಲಗಳಲ್ಲಿ ವಿಟಮಿನ್ ಸಿ ಅಂಶ ಹೆಚ್ಚು. ಇವುಗಳಿಗೆ ಶೈತ್ಯಕ, ರೇಚಕ. ಮೂತ್ರವರ್ಧಕ ಇತ್ಯಾದಿ ಗುಣಗಳಿವೆ. ಪಚನವಿಕಾರಗಳಿಗೆ ಇವು ಪರಿಣಾಮಕಾರಿ. ದೇಹವನ್ನು ತಂಪುಗೊಳಿಸುವುದೂ ಉಂಟು. ಅದರಿಂದ ಇವುಗಳ ಉಪಯೋಗ ಉಪ್ಪಿನಕಾಯಿ, ಕೇಶತೈಲ ಇತ್ಯಾದಿಗಳಲ್ಲಿ ಹೆಚ್ಚು.



ಬೆಟ್ಟೆ ನೆಲ್ಲಿ

**4 ಅಜವಾನ (ಬಿಷಪ್ಸ್ ವೀಡ್) :** ಅಂಬೆಲಿಫೆರಿ ಕುಟುಂಬಕ್ಕೆ ಸೇರಿದ ಕೇರಂ ಕಾಪ್ಟಿಕಮ್ ಎಂಬ ದ್ವೈವಾರ್ಷಿಕ ಮೂಲಿಕೆಯ ಫಲ ಮತ್ತು ಬೀಜಗಳಿಗೆ ಅಜವಾನ ಎಂದು ಹೆಸರು. ಓಮು ಎಂದೂ ಕರೆಯುತ್ತಾರೆ. ಇವುಗಳಿಗೆ ವಾತಹರ, ಕಫ ನಿರ್ಮೂಲನ ಮತ್ತು ಉತ್ತೇಜಕ ಗುಣಗಳಿವೆ. ಇವುಗಳನ್ನು ಅಗ್ನಿಮಾಂದ್ಯ, ಉದರಶೂಲೆ, ಅತಿಸಾರ, ಕಾಲರಾ ಇತ್ಯಾದಿಗಳಿಗೂ ಸಿದ್ಧೌಷಧವೆಂದು ಬಳಸುವುದುಂಟು.

**5 ಅಳಲೆಕಾಯಿ (ಮಿರೋಬಲನ್) :** ಕಾಂಬ್ರಿಟೇಸಿ ಕುಟುಂಬಕ್ಕೆ ಸೇರಿದ ಟರ್ಮಿನೇಲಿಯ ಚಬುಲ ಎಂಬುದಕ್ಕೆ ಅಳಲೆಕಾಯಿ ಎಂತಲೂ ಹಿಂದೂಸ್ತಾನಿಯಲ್ಲಿ ಹರ್ ಎಂತಲೂ ಹೆಸರು. ಈ ಮರದ ಫಲಗಳಿಗೆ ವೈದ್ಯಕೀಯ ಮಹತ್ತ್ವಹೆಚ್ಚು. ಇವುಗಳಿಗೆ ತೀಕ್ಷ್ಣರೇಚಕಶಕ್ತಿ ಇದ್ದು, ಇವುಗಳನ್ನು ಮೂಲವ್ಯಾಧಿ, ಆಮಶಂಕೆ, ಅಸ್ತಮ, ವಾಂತಿ, ಬೆಳೆದ ಯಕೃತ್ತು ಮತ್ತು ಪ್ಲೀಹಗಳಂಥ ವಿಕಾರಗಳಿಗೆ ಔಷಧವಾಗಿ ಬಳಸುವುದುಂಟು. ಕಾಯಿಯ ಪುಡಿಯನ್ನು ಹುಣ್ಣು, ಗಾಯ, ವಸಡುಸ್ರಾವ ಇತ್ಯಾದಿಗಳಿಗೂ ಕಾಯಿಯನ್ನು ತೇಯ್ದು ಸುಟ್ಟ ಗಾಯ, ಮೂಲವ್ಯಾಧಿ ಇತ್ಯಾದಿಗಳಿಗೂ ಕಾಯನ್ನು ನೀರಿನಲ್ಲಿ ಕುದಿಸಿ, ಅದರ ಕಷಾಯವನ್ನು ರಕ್ತ ಸೋರುವ ಮೂಲವ್ಯಾಧಿಯನ್ನು ನಿಲ್ಲಿಸುವುದಕ್ಕೂ ಮತ್ತು ಬಾಯಿ ಮುಕ್ಕಳಿಸುವುದಕ್ಕೂ ಬಳಸುವುದುಂಟು.

ಅಳಲೆಕಾಯಿ ಬೀಜ

**6 ಹೊಂಗೆ :** ಪ್ಯಾಲಿಪಿಯೊನೇಸಿ ಎಂಬ ಉಪ ಕುಟುಂಬಕ್ಕೆ ಸೇರಿದ ಪೊಂಗೆಮಿಯ ಗ್ಲಾಬ್ರಾ ಅಥವಾ ಪೊ.ಪಿನ್ನೇಟ ಎಂಬ ಈ ಸಸ್ಯಗಳಿಗೆ ಹಿಂದೂಸ್ತಾನಿಯಲ್ಲಿ ಕಾರಂಜ್ ಎನ್ನುತ್ತಾರೆ. ಈ ಮರದ ಬೀಜಗಳನ್ನು ನಾಯಿಕೆಮ್ಮು ಮತ್ತು ಮೂಲ ಶ್ವಾಸನಾಳ ದೋಷಗಳಿಗೆ ಔಷಧವಾಗಿ ವಿಶೇಷವಾಗಿ ಬಳಸುವುದುಂಟು. ಬೀಜಗಳನ್ನು ನುಣ್ಣಗೆ ಅರೆದು ತೊನ್ನು, ಚರ್ಮರೋಗಗಳು, ಶೋಣಿತವಾಯು, ಮುಂತಾದುವುಗಳಿಗೂ ಬಳಸಲಾಗುತ್ತದೆ. ಹೊಂಗೆ ಬೀಜದ ಎಣ್ಣೆಯನ್ನು ಕಜ್ಜಿ, ತುರಿಕೆ ಇತ್ಯಾದಿಗಳಿಗೂ ಉಪಯೋಗಿಸುವುದುಂಟು.

ಹೊಂಗೆಕಾಯುಳ್ಳ ಒಂದು ರೆಂಬೆ

**7 ಮೆಂತ್ಯ :** ಲೆಗ್ಯುಮಿನೋಸಿ ಕುಟುಂಬಕ್ಕೆ ಸೇರಿದ ಟ್ರೈಗೊನೆಲ್ಲ ಫೀನಂಗ್ರೀಕಂ ಎಂಬ ಸಸ್ಯಮೂಲಿಕೆ. ಈ ಮೂಲಿಕೆಯ ಬೀಜದಲ್ಲಿ ಟ್ರೈಗೊನೆಲ್ಲಿನ್ ಎಂಬ ರಾಸಾಯನಿಕ ಘಟಕವುಂಟು. ಇದು ಮೂತ್ರವರ್ಧಕವೂ ಆಹಾರ ದೃಷ್ಟಿಯಿಂದ ಪೋಷಕವೂ ಆದುವು. ಬೀಜಗಳನ್ನು ವಿವಿಧ ರೀತಿಯಲ್ಲಿ ಹುರಿದು, ಬೇಯಿಸಿ, ಅರೆದು, ಔಷಧವಾಗಿ ಕೆಮ್ಮು, ಅತಿಸಾರ, ಆಮಶಂಕೆ, ಅಗ್ನಿಮಾಂದ್ಯ, ಉದರಶೂಲ; ಜಲೋದರ, ಕರುಳುಬೇನೆ, ಕುರು, ಕೇಶತೈಲ ಇತ್ಯಾದಿಗಳಿಗೆ ಬಳಸುತ್ತಾರೆ.

**8 ಬಿಲ್ವಪತ್ರೆಕಾಯಿ :** ರುಟೇಸಿ ಕುಟುಂಬಕ್ಕೆ ಸೇರಿದ ಈಗಲ್ ಮಾರ್ಮೆಲೋಸ್ ಎಂಬ ಮರದ ಕಾಯಿ. ಬಿರುಸು ಕವಚವುಳ್ಳ ಈ ಫಲದ ಬಳಕೆ ವೈದ್ಯಕೀಯದಲ್ಲಿ ಬಹಳ,

ಹಣ್ಣಿನ ತಿರುಳು ಒಗರು. ಬಲವರ್ಧಕ ಮತ್ತು ಸೌಮ್ಯರೇಚಕ. ಅದನ್ನು ಬೇಸಿಗೆಯಲ್ಲಿ ತಂಪು ಪಾನೀಯವಾಗಿಯೂ ಬಳಸುವುದುಂಟು. ತಿರುಳನ್ನು ಅತಿಸಾರ, ಕರುಳಿನ ದೋಷಗಳು, ಮಲಬದ್ಧತೆ ಇತ್ಯಾದಿಗಳಿಗೂ ಔಷಧವಾಗಿ ಉಪಯೋಗಿಸಲಾಗುತ್ತದೆ.

ಬಿಲ್ವಪತ್ರೆಕಾಯಿ

**9 ಸ್ಟ್ರಿಕ್ನಿನ್ :** ಇದು ಲೊಗಾನಿಯೇಸಿ ಕುಟುಂಬಕ್ಕೆ ಸೇರಿದ ಸ್ಟ್ರಿಕ್ನಾಸ್ ನಕ್ಸ್‌ವಾಮಿಕ ಎಂಬ ಮರದ ಬೀಜಗಳಿಂದ ದೊರೆಯುತ್ತದೆ. ಈ ಮರಗಳು ಹೆಚ್ಚಾಗಿ ದಕ್ಷಿಣ ಭಾರತ, ಒರಿಸ್ಸ, ಬಂಗಾಲ, ಶ್ರೀಲಂಖ ಮತ್ತು ಚೀನ ದೇಶಗಳಲ್ಲಿ ಬೆಳೆಯುತ್ತದೆ. ತಾಜಾ ಫಲಗಳನ್ನು ಸಂಗ್ರಹಿಸಿ ಒಣಗಿಸುತ್ತಾರೆ. ಬೀಜದಲ್ಲಿ ಸ್ಟ್ರಿಕ್ನಿನ್ ಮತ್ತು ಬ್ರೂಸಿನ್ ಎಂಬ ಕ್ಷಾರೀಯ ಘಟಕಗಳಿವೆ. ಈ ಔಷಧ ಎಲ್ಲೆ ಮೀರಿದರೆ ಅತ್ಯಂತ ವಿಷಪೂರಿತವೂ ಹೌದು. ಇದನ್ನು ಜಗತ್ತಿನಾದ್ಯಂತ ಒಳ್ಳೆಯ ಶಕ್ತಿವರ್ಧಕವಾಗಿ ಬಳಸುವುದುಂಟು ಪಾರ್ಶ್ವವಾಯು, ಮಲಬದ್ಧತೆ, ಚಿತ್ತೋದ್ರೇಕ, ಅತಿಸಾರ, ಉದರಶೂಲೆ ಮುಂತಾದುವುಗಳಿಗೂ ಇದು ಸಿದ್ಧೌಷಧ.

**10 ಅಫೀಮು (ಓಪಿಯಂ) :** ಪಪಾವರೇಸಿ ಕುಟುಂಬಕ್ಕೆ ಸೇರಿದ ಪಪಾವರ್ ಸಮ್ನಿಫೆರಂ ಎಂಬ ವಾರ್ಷಿಕ ಮೂಲಿಕೆಯಿಂದ ದೊರೆಯುವ ವಸ್ತು. ಈ ಗಿಡ ಭಾರತ, ಚೀನಗಳಲ್ಲಿ ಹೆಚ್ಚು ಬೆಳೆಯುತ್ತದೆ. ಕಚ್ಚಾ ಫಲಗಳಮೇಲೆ ಸಣ್ಣ ಸಣ್ಣ ಕಚ್ಚುಗಳನ್ನು ಮಾಡಿ ಹೊರಬರುವ ಹಾಲನ್ನು ಒಣಗಿಸಿ ಸಂಗ್ರಹಿಸುತ್ತಾರೆ. ಈ ಹಾಲೇ ಅಫೀಮು. ಇದರಲ್ಲಿ ಸುಮಾರು 25 ಬಗೆಯ ಕ್ಷಾರೀಯ ಘಟಕಗಳಿವೆ. ಅವುಗಳಲ್ಲಿ ಮುಖ್ಯವಾಗಿ ಮಾರ್ಫಿನ್, ಕೋಟಿಯಿನ್, ನಾರ್ಕೊಟಿನ್, ಥಿಬೇನ್, ನಾರ್ಸಿಯಿನ್ ಇತ್ಯಾದಿ ಘಟಕಗಳಿವೆ. ಇವು ಉಪಶಾಮಕ ಮತ್ತು ಮಾದಕ ವಸ್ತುಗಳು. ನಿದ್ರೆ ಬರಿಸುವುದಕ್ಕೆ ಇವುಗಳ ಬಳಕೆ ಹೆಚ್ಚು. ಬೀಜದಿಂದ ತೆಗೆದ ಎಣ್ಣೆಯನ್ನು ಔಷಧವಾಗಿ ಹಲವಾರು ರೀತಿ ಬಳಸುವುದುಂಟು. ಕರುಳುಬೇನೆ, ಅತಿಸಾರ, ಆಮಶಂಕೆ ಇತ್ಯಾದಿಗಳಿಗೂ ಇವು ಉಪಯುಕ್ತ. ಅಲ್ಪ ಪ್ರಮಾಣದಲ್ಲಿ ಇದನ್ನು ಔಷಧವಾಗಿ ಉಪಯೋಗಿಸುವುದು ವಾಡಿಕೆ.

**11 ಔಡಲ ಅಥವಾ ಹರಳು :** ಯುಫೋರ್ಬಿಯೇಸಿ ಕುಟುಂಬಕ್ಕೆ ಸೇರಿದ ರಿಸಿನಸ್ ಕಮ್ಯೂನಿಸ್ ಎಂಬ ಚಿಕ್ಕ ಮರದ ಒಣಫಲಗಳಿಂದ ತೆಗೆದ ಬೀಜಗಳು. ಇದು ಭಾರತದಲ್ಲಿ ಕೆಲವು ಕಡೆ ತಾನಾಗಿಯೇ ಬೆಳೆದರು ಅನೇಕ ಕಡೆ ಅದನ್ನು ಉದ್ದೇಶಪೂರ್ವಕವಾಗಿಯೂ ಬೆಳೆಸುತ್ತಾರೆ. ಬೀಜವನ್ನು ಒತ್ತಡಕ್ಕೊಳಪಡಿಸಿಯೋ ಇಲ್ಲವೆ ನೀರಿನಲ್ಲಿ ಕುದಿಸಿಯೋ ಎಣ್ಣೆಯನ್ನು ತೆಗೆಯುತ್ತಾರೆ. ಬೀಜದಲ್ಲಿ ರಿಸಿನಿನ್ ಎಂಬ ಕ್ಷಾರೀಯ ಘಟಕವಿದೆ. ಇದು ಎಲ್ಲ ವಯಸ್ಕರಿಗೂ ಉತ್ತಮ ರೇಚಕ. ಎಣ್ಣೆಯನ್ನು ಆಮಶಂಕೆ, ಕರುಳಿನ ಬಾಧೆ, ಅಸ್ತಮ, ಜಲೋದರ ಇತ್ಯಾದಿಗಳಿಗೊ ವಿವಿಧ ರೀತಿ ಬಳಸಲಾಗುತ್ತದೆ. ಎಲೆ ಅಥವಾ ಬೀಜಗಳಿಂದ ತಯಾರಿಸಿದ ಬೆಚ್ಚಾರವನ್ನು ಕುರು, ಬಾವು ಮುಂತಾದುವುಗಳಿಗೂ ಉಪಯೋಗಿಸುವುದುಂಟು.

**12 ಚೌಲಮೂಗ್ರ ಎಣ್ಣೆ :** ಇದು ಫ್ಲಕೂರ್ಟಿಯೇಸಿ ಕುಟುಂಬಕ್ಕೆ ಸೇರಿದ ಗೈನೊಕಾರ್ಡಿಯ ಓಡೊರೇಟ, ಹಿಡ್ನೊಕಾರ್ಪಸ್ ಕುರ್ಜಿ ಮತ್ತು ಹಿ.ವೈಟಿಯಾನ ಎಂಬ ನಿತ್ಯಹರಿದ್ವರ್ಣ ಮರಗಳ ಬೀಜಗಳಿಂದ ತೆಗೆದ ಎಣ್ಣೆ. ಶತಮಾನಗಳಿಂದ ಈ ಎಣ್ಣೆಯನ್ನು ತೊನ್ನು ನಿವಾರಣೆಗೂ ಇಸುಬು, ಕಜ್ಜಿ ಮುಂತಾದ ಕೆಲವು ಚರ್ಮರೋಗಗಳಿಗೂ ಬಳಸಲಾಗುತ್ತಿದೆ. ಈಗೀಗ ಶೋನಿತವಾಗು, ಸಿಫಿಲಿಸ್, ಸಂಧಿವಾತ ಇತ್ಯಾದಿಗಳಿಗೂ ಔಷಧವಾಗಿ ಬಳಸಲಾಗುತ್ತದೆ.

**13 ಇಸ್ಸಗೋಲ :** ಪ್ಲಾಂಟಾಜಿನೇಸಿ ಕುಟುಂಬಕ್ಕೆ ಸೇರಿದ ಪ್ಲಾಂಟಾಗೋ ಜಾತಿಯ ಮೂಲಿಕೆಗಳ (ಉದಾ: ಪ್ಲಾ.ಓವೇಟಾ, ಪ್ಲಾ.ಇಂಡಿಕ, ಪ್ಲಾ.ಸಿಲಿಯಂ ಇತ್ಯಾದಿ) ಬೀಜಗಳಿಂದ ಉತ್ಪಾದನೆಯಾಗುವ ಔಷಧ. ಬೀಜದ ಆವರಣದಲ್ಲಿ ಲೋಳೆಯಂಥ ವಸ್ತುವೊಂದು ಇರುತ್ತದೆ. ಇದು ರೇಚಕ ಹಾಗೂ ಇತರ ಔಷಧೀಯ ಗುಣಗಳುಳ್ಳದ್ದು. ಇದನ್ನು ಜಠರ ಮತ್ತು ಕರುಳಿನ ಸಂಬಂಧದ ಬೇನೆಗಳು, ಮಲಬದ್ಧತೆ, ಆಮಶಂಕೆ, ಅತಿಸಾರ, ಉದರಶೂಲೆ ಇತ್ಯಾದಿಗಳಿಗೆ ಬಳಸಲಾಗುತ್ತದೆ. ಬೀಜ ಮತ್ತು ಎಣ್ಣೆಯನ್ನು ಕೂಡಿಸಿದ ಬೆಚ್ಚಾರವನ್ನು ಸಂಧಿವಾತ, ಬಾವು ಮುಂತಾದುವುಗಳಿಗೆ ಶಮನಕಾರಿಯಾಗಿ ಬಳಸುವುದುಂಟು.

**14 ಕಕ್ಕೆಗಿಡ :** ಲೆಗ್ಯುಮಿನೋಸಿ ಗುಂಪಿಗೆ ಸೇರಿದ ಕ್ಯಾಷಿಯ ಫಿಸ್ಟುಲ ಎಂಬ ಈ ಕಂಟಿಗೆ ಅಮಲ್ತಾಸ್ ಎಂದೂ ಹೆಸರು. ಇದು ಆಯುರ್ವೇದ ಮತ್ತು ಯುನಾನಿ ಪದ್ಧತಿಯ ಔಷಧಗಳಲ್ಲಿ ಪ್ರಾಮುಖ್ಯವಾಗಿದೆ. ಇದರ ಕಾಯಿ ಫಲಗಳು ಸೌಮ್ಯರೇಚಕ, ಇದು ಉದರಶೂಲೆ, ಬೊಜ್ಜು ಇತ್ಯಾದಿಗಳಿಗೆ ಉಪಯುಕ್ತ. ಬಾದಾಮಿ ಎಣ್ಣೆ ಅಥವಾ ಅಗಸೆ ಎಣ್ಣೆಯೊಡನೆ ಕರುಳಿನ ದೋಷಗಳಿಗೂ ಬಳಸಲಾಗುತ್ತದೆ.



ಪರಂಗಿಕಾಯಿಯ ಒಳಭಾಗ

**15 ಪರಂಗಿ ಹಣ್ಣು ಮತ್ತು ಬೀಜ (ಪಪಾತಯ) :** ಕ್ಯಾರಿಕೇಸಿ ಕುಟುಂಬಕ್ಕೆ ಸೇರಿದ ಕ್ಯಾರಿಕ ಪಪಾಯ ಎಂಬ ಮರದ ಹಣ್ಣು ಮತ್ತು ಬೀಜಗಳು ಔಷಧೀಯ ಗುಣವುಳ್ಳವು. ಅಪಕ್ವವಾದ ಹಣ್ಣಿನಿಂದ ಬರುವ ಹಾಲಿನಲ್ಲಿ ಪಪಾಯಿನ್ ಎಂಬ ಘಟಕವುಂಟು. ಇದು ಜಂತುಹುಳುನಾಶಕ. ಕರುಳುಬೇನೆ, ಬೆಳೆದ ಯಕೃತ್ತು ಮತ್ತು ಪ್ಲೀಹ ಮುಂತಾದುವುಗಳಿಗೂ ಪರಮೌಷಧ. ಬೀಜಗಳಲ್ಲಿ ಕ್ಯಾರಿಸಿನ್ ಎಂಬ ಘಟಕವಿದೆ. ಇದು ರಕ್ತ ಚಿಮ್ಮುವ ಮೂಲವ್ಯಾಧಿ. ಹುಳುಕಡ್ಡಿ, ಮತ್ತಿತರ ಚರ್ಮರೋಗಗಳಿಗೆ ಪರಿಣಾಮಕಾರಿ ಔಷಧ.

**16 ಕುಸುಬೆ :** ಇದು ಕಂಪಾಸಿಟಿ ಕುಟುಂಬಕ್ಕೆ ಸೇರಿದ ಕಾರ್ಥಮಸ್ ಟಿಂಕ್ಟೋರಿಯಸ್ ಎಂಬ ಚಿಕ್ಕ ಕಂಟಿ ಗಿಡಗಳ ಬೀಜಗಳಿಂದ ದೊರೆಯುವ ಎಣ್ಣೆ. ಇದು ಸೌಮ್ಯರೇಚಕ. ಬೀಜದ ಬೆಚ್ಚಾರದಿಂದ ಗರ್ಭಕೋಶದ ಬಾವು ಶಮನಗೊಳ್ಳುತ್ತದೆ. ಎಣ್ಣೆಯನ್ನು ವ್ರಣ ಮತ್ತು ಬಾತ ಎಲುಬು ಸಂಧಿಗಳಲ್ಲಿ ನೋವು ಕಡಿಮೆ ಮಾಡಲು ಬಳಸಲಾಗುತ್ತದೆ.

ಔಷಧಿಸಸ್ಯಗಳು ಅನೇಕಾನೇಕ. ಅವುಗಳಲ್ಲಿ ಗೊತ್ತಿಲ್ಲದಿರುವುದು ಇಲ್ಲವೆ ಇನ್ನೂ ಬಳಕೆಗೆ ಬಂದಿಲ್ಲದಿರುವುವು ಎಷ್ಟೊ ಇವೆ. ದಿನಬಳಕೆಯ ಎಷ್ಟೊ ಮಸಾಲೆ ಮತ್ತು ಸಾಂಬಾರವಸ್ತುಗಳೂ ಕೆಲಮಟ್ಟಿಗೆ ಔಷಧೀಯ ಗುಣಗಳನ್ನು ಪಡೆದಿರುತ್ತವೆ.

ಕನ್ನಡ ವರ್ಣಮಾಲೆಯಲ್ಲಿನ ವರ್ಗೀಯ ವ್ಯಂಜನಗಳ ಸರಣಿಯಲ್ಲಿ ಮೊದಲನೆಯದು. ಕ್ ಮತ್ತು ಅ ಸೇರಿ ಆಗಿದೆ. ಲಂಬರೇಖೆ ಮತ್ತು ಸಮತಲರೇಖೆಗಳಿಂದ ಕೂಡಿದ ಈ ಅಕ್ಷರದ ಬ್ರಾಹ್ಮೀಸ್ವರೂಪ ಶಾತವಾಹನರ ಕಾಲದಲ್ಲಿ ಕೆಲವು ಬದಲಾವಣೆಗಳನ್ನು ಹೊಂದಿದೆ. ಲಂಬರೇಖೆ ಎಡಭಾಗಕ್ಕೆ ಸ್ವಲ್ಪ ಬಾಗುತ್ತದೆ ಮತ್ತು ಸಮತಲರೇಖೆ ಸಣ್ಣದಾಗುತ್ತದೆ. ತ್ರಿಕೋಣಾಕೃತಿಯ ತಲೆಕಟ್ಟು ಕಾಣಬರುತ್ತದೆ. ಕದಂಬರ ಕಾಲದಲ್ಲಿ ಚೌಕ ತಲೆಯ ತಲೆಕಟ್ಟಿನ ಜೊತೆಗೆ ಲಂಬರೇಖೆ ಇನ್ನೂ ಬಾಗುತ್ತದೆ. ಪ್ರಶ. 9ನೆಯ ಶತಮಾನದಲ್ಲಿ ಲಂಬರೇಖೆಯ ಕೆಳಭಾಗ ವೃತ್ತವಾಗುವ ಪ್ರವೃತ್ತಿಯನ್ನು ವ್ಯಕ್ತಪಡಿಸುತ್ತದೆಯಲ್ಲದೆ ತಲೆಕಟ್ಟು ಸ್ಪಷ್ಟವಾಗುತ್ತದೆ. ಪ್ರ. ಶ. 13ನೆಯ ಶತಮಾನದಲ್ಲಿ ಅಕ್ಷರದ ಆಕಾರ ಗುಂಡಾಗಿ ಅದೇ ರೂಪ ಮುಂದಿನ ಶತಮಾನಗಳಲ್ಲಿಯೂ ಮುಂದುವರಿಯುತ್ತದೆ.




ಈ ಅಕ್ಷರ ಕಂಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಸೂಚಿಸುತ್ತದೆ. (ಎ.ವಿ.ಎನ್.)

**ಕಂಕ** : ಅಜ್ಞಾತವಾಸ ಕಾಲದಲ್ಲಿ ವಿರಾಟನ ಆಸ್ಥಾನದಲ್ಲಿ ಯತಿವೇಷದಿಂದ ಇದ್ದ ಯುಧಿಷ್ಠಿರನ ಹೆಸರು. ಗೋಹರಣ ಮಾಡಿದ ಕೌರವರನ್ನು ಜಯಿಸುವುದಕ್ಕಾಗಿ ಬೃಹನ್ನಳೆಯ ಸಾರಥ್ಯದಲ್ಲಿ ಹೋದ ಉತ್ತರಕುಮಾರ ಜಯಶೀಲನಾಗಿ ಹಿಂತಿರುಗಿದ ವಾರ್ತೆಯನ್ನು ಕೇಳಿದ ವಿರಾಟ ಕಂಕನೊಡನೆ ತನ್ನ ಮಗನ ಶೌರ್ಯವನ್ನು ಹೊಗಳತೊಡಗಿದ. ವಾಸ್ತವಾಂಶವನ್ನು ಅರಿತಿದ್ದ ಕಂಕಭಟ್ಟ ವಿರಾಟನನ್ನು ವಿರೋಧಿಸಲಾಗಿ ಕುಪಿತನಾದ ವಿರಾಟ ಪಗಡೆ ದಾಳಗಳಿಂದ ಹೊಡೆದಾಗ ಕಂಕನ ಕೆನ್ನೆಯಲ್ಲಿ ರಕ್ತ ಚಿಮ್ಮಿತು. ಯಾರೇ ಆಗಲಿ ಯುಧಿಷ್ಠಿರನ ದೇಹದಿಂದ ಒಂದು ತೊಟ್ಟು ರಕ್ತ ನೆಲಕ್ಕೆ ಬೀಳಿಸಿದರೂ ಆತ ಬದುಕಲಾರನೆಂಬ ಅಂಶವನ್ನು ತಿಳಿದಿದ್ದ ಸೈರಂಧ್ರಿ (ದ್ರೌಪದಿ) ತತ್‌ಕ್ಷಣವೇ ಅಲ್ಲಿಗೆ ಬಂದು ತನ್ನ ಸೆರಗಿನಿಂದಲೇ ಆ ರಕ್ತವನ್ನು ಒರಸಿದಳು. ಅನಂತರ ನಿಜಾಂಶವನ್ನು ತಿಳಿದ ವಿರಾಟ ಯುಧಿಷ್ಠಿರನ ಕ್ಷಮಾಪಣೆ ಕೇಳಿದನಲ್ಲದೆ ಅರ್ಜುನನ ಮಗನಾದ ಅಭಿಮನ್ಯುವಿಗೆ ತನ್ನ ಮಗಳು ಉತ್ತರೆಯನ್ನು ಕೊಟ್ಟು ಲಗ್ನಮಾಡಿದ. (ಎನ್.ಎಸ್.ಆರ್.ಬಿ.)

**ಕಂಕಂಟಿ ಪಾಪರಾಜು** : 18ನೆಯ ಶತಮಾನದ ಕೊನೆಯಲ್ಲಿದ್ದ ಈ ಆಂಧ್ರ ಕವಿ ಇಂದಿನ ನೆಲ್ಲೂರು ಮಂಡಲಕ್ಕೆ ಸೇರಿದವನೆಂಬ ಒಂದು ಹೇಳಿಕೆ ಇದೆ. ಅನಂತಪುರ ಮಂಡಲದ ಕಂಕಂಟಿ ಎಂಬ ಹೆಸರಿನ ಗ್ರಾಮದವನೆಂದೂ ಕೆಲವರು ನಂಬುತ್ತಾರೆ. ಕಂಕಂಟಿಯಲ್ಲಿ ಹುಟ್ಟಿ ನೆಲ್ಲೂರಿಗೆ ಹೋಗಿ ಸೇರಿರಬಹುದೆಂಬ ಊಹೆಗೆ ಅವಕಾಶವಿದೆ. ನೆಲ್ಲೂರು ಗೂಡೂರು ತಾಲ್ಲೂಕಿನಲ್ಲಿ ವಾಸವಾಗಿದ್ದ ಆಗತಾನೆ ವ್ಯಾಪಾರಾರ್ಥವಾಗಿ ಭಾರತಕ್ಕೆ ಬಂದ ಡಚ್ಚರಿಗೂ ಇಂಗ್ಲಿಷರಿಗೂ ದುಭಾಷಿಯಾಗಿದ್ದುಕೊಂಡು ಚೆನ್ನಾಗಿ ಸಂಪಾದನೆ ಮಾಡಿದನೆಂದು ಆರುದ್ರರು ಆಂಧ್ರ ಸಾಹಿತ್ಯ ಚರಿತ್ರೆಯಲ್ಲಿ ತಿಳಿಸುತ್ತಾರೆ. ಕಂಕಂಟಿವಂಶಪಯಃ ಪಾರಾವಾರಪರಿಪೂರ್ಣಸುಧಾಕರನೆಂದು ಕವಿ ತನ್ನ ವಿಷಯವಾಗಿ ಹೇಳಿಕೊಂಡಿರುವುದರಿಂದ ಅವನ ಮನೆತನಕ್ಕೆ ಕಂಕಂಟಿಯವರೆಂಬ ಹೆಸರಿದ್ದಿತೆಂದು ಸ್ಪಷ್ಟವಾಗುತ್ತದೆ.

ಈ ಕವಿ ಆರವೇಲು ನಿಯೋಗಿ ಪಂಗಡಕ್ಕೆ ಸೇರಿದ ಶ್ರೀವತ್ಸ ಗೋತ್ರದ ಬ್ರಾಹ್ಮಣ. ತನ್ನ ಕಾವ್ಯದಲ್ಲಿ ಆ ಪಂಗಡವನ್ನು ಬಹಳವಾಗಿ ಪ್ರಶಂಸೆ ಮಾಡಿಕೊಂಡಿದ್ದಾನೆ. ಅಖಿಲ ರಾಜಾಧಿರಾಜಾಸ್ಥಾನಜನಹೃದ್ಯವಿದ್ಯಾವಿಹಾರಿಗಳು – ಅರವೇಲಿನವರು! ಅವರು ಬಲಿ, ಕರ್ಣರಂತೆ ವಿತರಣೋದಾರಿಗಳಂತೆ! ಘನದುರ್ಘಟ ಸ್ವಾಮಿಕಾರ್ಯ ನಿರ್ವಹಣ ಪ್ರವೀಣರವರು ಎಲ್ಲಕ್ಕಿಂತ ಮಿಗಿಲಾಗಿ ಅವರು ವಿಮತಗರ್ವಾಪಹರರು! ಇಂಥ ಶ್ರೇಷ್ಠವಾದ ಪಂಗಡದಲ್ಲಿ ಕೀರ್ತಿಶಾಲಿಯಾದ ಅಪ್ಪಯಾಮಾತ್ಯನ ಸುಪುತ್ರ, ಕವಿ ಪಾಪರಾಜು. ಈತ ರಾಜನೀತಿ ಮತ್ತು ಗಣಿತವಿಜ್ಞಾನಗಳಲ್ಲಿ ನಿಷ್ಣಾತನೂ ರಾಜಸನ್ಮಾನಿತನೂ ಆಗಿದ್ದನೆಂದು ಹೇಳಿಕೊಂಡಿದ್ದಾನೆ.

ಪಾಪರಾಜು ವಿಷ್ಣುಮಾಯಾವಿಲಾಸ ಎಂಬ ಒಂದು ಯಕ್ಷಗಾನವನ್ನೂ ಉತ್ತರ ರಾಮಾಯಣ ಎಂಬ ಪ್ರೌಢಪ್ರಬಂಧಕಾವ್ಯವನ್ನೂ ರಚಿಸಿದ್ದಾನೆ. ಮೊದಲು ರಚಿಸಿದ್ದು ಯಕ್ಷಗಾನ, ಭರತಭೂಮಿಯ ಮೇಲೆ ಬ್ರಾಹ್ಮಣನಾಗಿ ಹುಟ್ಟಿ ಕವಿತಾ ಪ್ರತಿಭೆಯನ್ನು ಪಡೆದಿದ್ದು ಇಹಪರಸಾಧಕವಾದ ಶ್ರೀರಾಮಕಥೆಯನ್ನು ಹೇಳದೆ ಅಸತ್ಕಥೆಗಳನ್ನೆಷ್ಟು ಬರೆದರೂ ಜನ್ಮ ವ್ಯರ್ಥವೆಂದು ಕವಿಯ ತ್ರಿಕರಣಪೂರ್ವಕವಾದ ನಂಬಿಕೆ. ಆದ್ದರಿಂದಲೇ ಈತ ಉತ್ತರರಾಮಾಯಣವನ್ನು ರಚಿಸಲು ಸಂಕಲ್ಪಿಸಿದ. ಆಂಧ್ರ ಮಹಾಭಾರತಕರ್ತರಲ್ಲಿ ಒಬ್ಬನಾದ ತಿಕ್ಕನ ಸೋಮಯಾಜಿ ನಿರ್ವಚನೋತ್ತರ ರಾಮಾಯಣ ಎಂಬ ಹೆಸರಿನಿಂದ ಈ ರಾಮಚರಿತೆಯನ್ನೇ ಪದ್ಯಕಾವ್ಯವಾಗಿ ರಚಿಸಿದ್ದಾನೆ. ಪ್ರಶ. 1300ರ ಸುಮಾರಿನಲ್ಲಿ ಜೀವಿಸಿದ್ದ ಕಾಚ ಮತ್ತು ವಿಠಲನೆಂಬ ರಾಜಕವಿಗಳು ಉತ್ತರರಾಮಚರಿತೆಯನ್ನು ದ್ವಿಪದಕಾವ್ಯವಾಗಿ ರಚಿಸಿದರು. ಇಷ್ಟಿದ್ದರೂ ಪಾಪರಾಜು ಈ ಕಾವ್ಯರಚನೆಗೆ ಸಂಕಲ್ಪಿಸಿದ. ಶ್ರೀರಾಮನ ಚರಿತ್ರೆಯನ್ನು ಎಷ್ಟು ವಿಧಗಳಲ್ಲಿ ಹೇಳಿದರೂ ಸಾಲದೆಂದು ಕವಿಯ ತಿಳಿವಳಿಕೆ. ಸುಧೀಪರಿಷತ್ಸಂತತ ಸೇವ್ಯವಾದ ಉತ್ತರರಾಮಾಯಣವನ್ನು ಮೃದುವಚೋಧಾರಾರ್ಥ ಸಂದರ್ಭ ನಿರ್ಭರವಾದ ರೀತಿಯಲ್ಲಿ ಬರೆಯುವೆನೆಂದು ಪ್ರತಿಜ್ಞೆ ಮಾಡಿ ಪಾಪರಾಜು ಬಹಳ ಉತ್ತಮವಾದ ಶೈಲಿಯಲ್ಲಿ ಕೃತಿರಚನೆ ಮಾಡಿ ಸತ್ಯಸಂಕಲ್ಪನಾಗಿದ್ದಾನೆ.

ತೆಲುಗಿನಲ್ಲಿ ಇದುವರೆಗೂ ಲಭಿಸಿರುವ ಉತ್ತರರಾಮಾಯಣಗಳಲ್ಲೆಲ್ಲ ಈ ಕೃತಿಯೇ ದೊಡ್ಡದು. ಎಂಟು ಆಶ್ವಾಸಗಳುಳ್ಳ ವಿಸ್ತಾರವಾದ ಪ್ರೌಢಪ್ರಬಂಧ ಕಾವ್ಯವಿದು. ಇದರಲ್ಲಿ ರಾಮ ಪಟ್ಟಾಭಿಷಿಕ್ತನಾದ ಮೇಲೆ ಸೀತೆಯನ್ನು ಅಡವಿಗೆ ಕಳುಹಿಸಿದ ಕಥೆ ಮುಖ್ಯವಾದರೂ ಕವಿ ಸಿಂಹಾವಲೋಕನ ಕ್ರಮದಿಂದ ರಾವಣೇಶ್ವರನ ಪೂರ್ವಚರಿತ್ರೆಯನ್ನೂ ಆಂಜನೇಯನ ಕಥೆ. ವೃತ್ತಾಸುರ ವಧೆಯಿಂದ ಸಂಭವಿಸಿದ ಬ್ರಹ್ಮಹತ್ಯಾದೋಷ ಪರಿಹಾರವಾದ ಬಗೆ–ಮೊದಲಾದ ಹಲವು ಉಪಾಖ್ಯಾನಗಳನ್ನೂ ಅಚ್ಚುಕಟ್ಟಾಗಿ ಜೋಡಿಸಿ ಹೇಳಿದ್ದಾನೆ. ರಂಭಾ ರಾವಣ ಸಂವಾದ, ಸೀತಾ ವನವಾಸ, ಮೊದಲಾದ ಭಾಗಗಳು ಬಹು ಸ್ವಾರಸ್ಯವಾಗಿವೆ. ಭಾರತ ಭಾಗವತಗಳನ್ನು ಬಿಟ್ಟರೆ ಈ ಕೃತಿಯೇ ತೆಲುಗು ದೇಶದಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದ ಕಾವ್ಯವೆಂದು ಹೇಳಬೇಕು. ರಾಯಲಸೀಮೆಯಲ್ಲಂತೂ ಉತ್ತರರಾಮಾಯಣ ಬಹಳ ಪ್ರಚಾರದಲ್ಲಿದ್ದು ಜನಮನ್ನಣೆ ಗಳಿಸಿದೆ.

ಪಾಪರಾಜು ಪ್ರೌಢ ಪಂಡಿತಕವಿ. ಇವನ ಬರೆವಣಿಗೆಯಲ್ಲಿ ಸಂಸ್ಕೃತದ ಬಳಕೆ ಹೆಚ್ಚು, ಆದರೂ ಇವನ ಕಥನಕೌಶಲ, ವರ್ಣನಾವಿಲಾಸಗಳಿಂದ ಈ ಕಾವ್ಯ ಸರ್ವಜನಾದರಣೀಯವಾಗಿದೆ. ಶ್ರಾವ್ಯವೂ ರಸಭರಿತವೂ ಆದ ಈ ಕೃತಿಯಲ್ಲಿ ಕವಿಯ ನಿರರ್ಗಳವಾದ ಪದರಚನೆ ಸುಪ್ರಕಟವಾಗಿದೆ; ಲೋಕೋಕ್ತಿಗಳು, ಶಬ್ದಾಲಂಕಾರ, ಅರ್ಥಾಲಂಕಾರಗಳು ಹೇರಳವಾಗಿದ್ದು ಪಂಡಿತಪಾಮರರಿಬ್ಬರಿಗೂ ರಂಜಕವಾಗಿದೆ.

ಪಾಪರಾಜು ಹೀಗೆ ರಾಘವೇಶ್ವರಚರಿತವನ್ನು ರಚಿಸಿ ಅದನ್ನು ಯಾರಿಗೆ ಅಂಕಿತಮಾಡುವುದೆಂದು ಯೋಚಿಸುತ್ತಿದ್ದಾಗ ಒಂದು ರಾತ್ರಿ ಕನಸಿನಲ್ಲಿ ಅವನ ಇಷ್ಟದೈವನಾದ ಮದನಗೋಪಾಲಸ್ವಾಮಿ ದರ್ಶನ ಕೊಟ್ಟು ವತ್ಸ, ನಿನ್ನ ಪ್ರಬಂಧವನ್ನು ನನಗೆ ಅಂಕಿತ ಮಾಡಿ ಅರ್ಪಿಸು, ನೀನು ಕೃತಾರ್ಥನಾಗುವೆ. ನಿನ್ನ ಕೃತಿಯೂ ಆಚಂದ್ರಾರ್ಕವಾಗಿ ಬೆಳಗುತ್ತದೆ. ಹಿಂದೆ ನೀನು ವಿಷ್ಣುಮಾಯಾವಿಲಾಸವನ್ನು ನನಗೆ ಸಮರ್ಪಿಸಿದೆ. ಅಂದಿನಿಂದ ನಿನ್ನ ಸುಧಾನುಸಾರಿಯಾದ ವಾಕ್ಕುಗಳನ್ನು ಸವಿಯುತ್ತಿದ್ದೇನೆ ಎಂದು ಹೇಳಿಕೊಂಡನಂತೆ! ಅದರಂತೆ ಕವಿ ತನ್ನ ಈ ಬೃಹತ್ಕಾವ್ಯವನ್ನು ಸುಜನೈಕಕೃಪಾಳುವಾದ ಮದನಗೋಪಾಲನಿಗೆ ಭಕ್ತಿಯಿಂದ ಸಮರ್ಪಿಸಿದ್ದಾನೆ.

ಕೃತಿರಚನೆಯಲ್ಲಿ ತನಗೆ ಪುಷ್ಪಗಿರಿ ತಿಮ್ಮನನೆಂಬ ಕವಿಮಿತ್ರ ವಿಶೇಷವಾದ ಸಹಾಯಮಾಡಿದನೆಂದು ಹೇಳಿ ಅವನ ಉಪಕಾರವನ್ನು ಕವಿ ಕೊಂಡಾಡಿದ್ದಾನೆ.

(ಕೆ.ಎಸ್.ಯು.ಬಿ.)

**ಕಂಕಣಗ್ರಹಣ** : ಸೂರ್ಯಗ್ರಹಣದಲ್ಲಿ ಚಂದ್ರಬಿಂಬ ಸೂರ್ಯಬಿಂಬದ ಅಂಚನ್ನು ಮಾತ್ರ ತೆರಪು ಬಿಟ್ಟು ಉಳಿದ ಮಧ್ಯ ಭಾಗವನ್ನು ನಮ್ಮ ದೃಷ್ಟಿಯಿಂದ ಮರೆಮಾಡುವ



**ಸೂರ್ಯಗ್ರಹಣದ ಎರಡು ಬಗೆಗಳು: ಚಂದ್ರಬಿಂಬ ಸೂರ್ಯ ಬಿಂಬಕ್ಕಿಂತ ದೊಡ್ಡದಾಗಿದ್ದರೆ ಸೂರ್ಯ ಗ್ರಹಣವೂ (ಎಡಗಡೆಯ ಚಿತ್ರ) ಚಿಕ್ಕದಿದ್ದರೆ ಕಂಕಣ ಗ್ರಹಣವೂ ಒದಗುತ್ತದೆ (ಬಲಗಡೆಯ ಚಿತ್ರ)**

ಒಂದು ವಿಶೇಷ ಪರಿಸ್ಥಿತಿ (ಆನ್ಯುಲರ್ ಎಕ್ಲಿಪ್ಸ್), ಸೂರ್ಯಬಿಂಬದ ಹೊಳೆವ ಭಾಗ ಒಂದು ಬಳೆಯಂತೆ ಕಾಣುವುದರಿಂದ ಈ ಹೆಸರು ಬಂದಿದೆ. ಚಂದ್ರ ಗ್ರಹಣದಲ್ಲಿ ಕಂಕಣಗ್ರಹಣ ಸಂಭವಿಸುವುದಿಲ್ಲ.

ಸೂರ್ಯಚಂದ್ರರ ಗಾತ್ರದಲ್ಲಿನ ತೀವ್ರವ್ಯತ್ಯಾಸ ಸೂರ್ಯ–ಭೂಮಿ ದೂರದ ಅಗಾಧತೆ ಹಾಗೂ ಚಂದ್ರ–ಭೂಮಿ ಸಾಮೀಪ್ಯ ಈ ಕಾರಣಗಳಿಂದ ಅಪೂರ್ವವಾಗಿ ಭೂಮಿಯ ಮೇಲಣ ಕೆಲವು ಪ್ರದೇಶಗಳಲ್ಲಿ ಕಂಕಣ ಗ್ರಹಣ ಕೇವಲ ಕೆಲವು ನಿಮಿಷಗಳ ಕಾಲ ಕಾಣಿಸಿಕೊಳ್ಳುವುದುಂಟು. ಯಾವುದೇ ಪ್ರದೇಶದಲ್ಲಿ ಸೂರ್ಯಗ್ರಹಣ ದರ್ಶನವೇ ಒಂದು ಅಪೂರ್ವ ಘಟನೆ. ಅದರಲ್ಲೂ ಕಂಕಣಗ್ರಹಣ ತೀರ ವಿರಳ. 1971 ರಿಂದ 1990ರ ವರೆಗೆ ಸಂಭವಿಸಿದ ಹಾಗೂ ತದನಂತರ ಸಂಭವಿಸಲಿರುವ ಕಂಕಣಗ್ರಹಣಗಳ ವಿವರಗಳನ್ನು ಮುಂದಿನ ಯಾದಿಯಲ್ಲಿ ಬರೆದಿದೆ.

| ಕ್ರಮ ಸಂಖ್ಯೆ | ತಾರೀಖು | ಕಂಕಣಗ್ರಹಣ ಕಾಣುವ ಪ್ರದೇಶ |
|---|---|---|
| 1 | 1971 | ಇಲ್ಲ |
| 2 | 1972 ಜನವರಿ 16 ... | ಮೇರಿ ಬರ್ಡ್‌ಲೆಂಡ್ ಮತ್ತು ಪೂರ್ವ ಅಂಟಾರ್ಕ್‌ಟಿಕ್ |
| 3 | 1973 ಜನವರಿ 4 ... | ದಕ್ಷಿಣ ಪೆಸಿಫಿಕ್, ದಕ್ಷಿಣ ಅಮೆರಿಕದಿಂದ ದಕ್ಷಿಣ ಅಟ್ಲಾಂಟಿಕ್ ಕಡೆಗೆ |
| 4 | 1973 ಡಿಸೆಂಬರ್ 24 ... | ದಕ್ಷಿಣ ಅಮೆರಿಕದ ಉತ್ತರಭಾಗದ ಮೂಲಕ ಅಟ್ಲಾಂಟಿಕ್ ಸಾಗರಕ್ಕಾಗಿ ಉತ್ತರ ಆಫ್ರಿಕದಲ್ಲಿ ಅಂತ್ಯ |
| 5 | 1976 ಏಪ್ರಿಲ್ 29 ... | ಅಟ್ಲಾಂಟಿಕ್,ಉತ್ತರ ಆಫ್ರಿಕ, ಮೆಡಿಟರೇನಿಯನ್ ಸಮುದ್ರ ದಕ್ಷಿಣ ಮಧ್ಯ ಏಷ್ಯ |
| 6 | 1977 ಏಪ್ರಿಲ್ 18 ... | ದಕ್ಷಿಣ ಅಟ್ಲಾಂಟಿಕ್, ದಕ್ಷಿಣ ಆಫ್ರಿಕದ ಮೂಲಕ ಹಿಂದೂ ಸಾಗರಕ್ಕೆ |
| 7 | 1979 ಆಗಸ್ಟ್ 22 ... | ಆಮುಂಡ್‌ಸೆನ್ ಸಮುದ್ರದ ಮೂಲಕ ಪಶ್ಚಿಮ ಅಂಟಾರ್ಕ್‌ಟಿಕಕ್ಕೆ |
| 8 | 1980 ಆಗಸ್ಟ್ 10 ... | ಮಧ್ಯ ಪೆಸಿಫಿಕ್ ಸಾಗರದ ಮೂಲಕ ಬ್ರೆಜಿಲ್‌ಗೆ |
| 9 | 1981 ಫೆಬ್ರವರಿ 4 ... | ಪೆಸಿಫಿಕ್ ಸಾಗರ, ಆಸ್ಟ್ರೇಲಿಯದ ದಕ್ಷಿಣ ಭಾಗದಿಂದ ದಕ್ಷಿಣ ಅಮೆರಿಕದ ಕರಾವಳಿ ಸಮೀಪದ ವರೆಗೆ |
| 10 | 1983 ಡಿಸೆಂಬರ್ 4 ... | ಉತ್ತರ ಅಟ್ಲಾಂಟಿಕ್ ಸಾಗರ, ಮಧ್ಯ ಆಫ್ರಿಕದ ಮೂಲಕ |
| 11 | 1987 ಸೆಪ್ಟೆಂಬರ್ 22 ... | ಮಧ್ಯ ಏಷ್ಯದಿಂದ ಮಧ್ಯ ಪೆಸಿಫಿಕ್ ಸಾಗರಕ್ಕೆ |
| 12 | 1988 ಸೆಪ್ಟೆಂಬರ್ 11 ... | ಪಶ್ಚಿಮ ಹಿಂದೂ ಸಾಗರದಿಂದ ನ್ಯೂಜಿಲೆಂಡಿನ ದಕ್ಷಿಣದ ಪೆಸಿಫಿಕ್ ವರೆಗೆ |
| 13 | 1990 ಜನವರಿ 26 ... | ದಕ್ಷಿಣ ಹಿಂದೂ ಸಾಗರ ಮತ್ತು ದಕ್ಷಿಣ ಅಟ್ಲಾಂಟಿಕ್ ಸಾಗರ |

ಇದೇ ಅವಧಿಯಲ್ಲಿ ಸಂಭವಿಸುವ ಪೂರ್ಣ ಸೂರ್ಯಗ್ರಹಣಗಳ ಸಂಖ್ಯೆ 16. *

**ಕಂಕರ್ (ಸುಣ್ಣದ ಕಲ್ಲು) :** ವಿವಿಧ ಗಾತ್ರದ ಉಂಡೆಗಳ ರೂಪದಲ್ಲಿರುವ ಸುಣ್ಣಶಿಲೆಯ ಒಂದು ಬಗೆ. ಕಂಕರೆ ಎಂದೂ ಕರೆಯುವುದುಂಟು. ಭಾರತದಂಥ ಉಷ್ಣವಲಯ ಪ್ರದೇಶಗಳಲ್ಲಿ ಕೆಲವೆಡೆ ದೊರೆಯುತ್ತದೆ. ಇದು ಕ್ಯಾಲ್ಸಿಯಂ ಫೆಲ್ಡ್‌ಸ್ಪಾರ್ ಮತ್ತು ಇತರ ಸುಣ್ಣದ ಸಿಲಿಕೇಟ್ ಖನಿಜಗಳ ರಾಸಾಯನಿಕ ಬದಲಾವಣೆಯಿಂದಲೂ ಆಮ್ಲಗ್ರಾನೈಟಿನಿಂದ ಹಿಡಿದು ಪ್ರತ್ಯಾಮ್ಲ ಒಡ್ಡುಗಳವರೆಗೆ ಇರುವ ವಿವಿಧ ಶಿಲೆಗಳ ರಾಸಾಯನಿಕಶಿಥಿಲಿಕೆಯಿಂದಲೂ ಉಂಟಾಗಿ ಭೂಮಟ್ಟದಲ್ಲಿಯೂ ನೆಲದ ಮಣ್ಣಿನಲ್ಲಿಯೂ ಉಂಡೆಗಳಂತೆ ಶೇಖರಗೊಳ್ಳುತ್ತದೆ. ಉಂಡೆಗಳ ಗಾತ್ರ 5–8 ಸೆಂಮೀ. ಸುಣ್ಣಶಿಲೆಯಂತೆ ಇದು ಬದ್ಧವಾದ ಶಿಲಾಸ್ತರಗಳಾಗುವುದಿಲ್ಲ. ಭೂಮಿಯೊಳಗಡೆ ಇಂಗಾಲದ ಡೈ ಆಕ್ಸೈಡಿನಿಂದ ಒಡಗೂಡಿದ ಅಂತರ್ಜಲ ($H_2O+CO_2$) ಶಿಲಾಸ್ತರಗಳ ಬಿರುಕುಗಳ ಮೂಲಕ ಹರಿಯುವಾಗ ಅವುಗಳಲ್ಲಿರುವ ಕ್ಯಾಲ್ಸಿಯಂ ಆಕ್ಸೈಡ್ ನೀರಿನಲ್ಲಿರುವ ಇಂಗಾಲಾಮ್ಲದೊಡನೆ ಸೇರಿ ಕ್ಯಾಲ್ಸಿಯಂ ಕಾರ್ಬೊನೇಟ್ ($CaCO_3$) ಆಗಿ ಭೂಮಿಯ ಮೇಲ್ಭಾಗದಲ್ಲಿ ಕಣ ರೂಪವಾಗಿಯೂ ಗಂಟುಗಳಂತೆಯೂ ಸಂಗ್ರಹವಾಗುತ್ತದೆ. ಶುದ್ಧವಾದ ಸುಣ್ಣಶಿಲೆಯಲ್ಲಿ 95%–98% ಭಾಗದಷ್ಟು ಕ್ಯಾಲ್ಸಿಯಂ ಕಾರ್ಬೊನೇಟ್ ಇರುತ್ತದೆ. ಗ್ರಾನೈಟ್ ನೈಸ್ ಶಿಲೆಗಳಿಂದ, ಉತ್ಪತ್ತಿಯಾದ ಸುಣ್ಣಶಿಲೆಯ ಸಕ್ಯಾಲ್ಸಿಯಂ ಕಾರ್ಬೊನೇಟ್ 80%–85% ಭಾಗಕ್ಕಿಂತ ಹೆಚ್ಚಾಗಿರುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಸುಣ್ಣಶಿಲೆ ನಿಕ್ಷೇಪಗಳು ವಿಸ್ತಾರವಾಗಿ ಹರಡಿವೆ. ಬಿಜಾಪುರ ಜಿಲ್ಲೆಯ ಮಲಪ್ರಭಾ ನದಿಯ ಎಡದಂಡೆ, ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕು ಮತ್ತು ಹಿರೇಕೆರೂರು ತಾಲ್ಲೂಕಿನ ಅಣಜಿ, ಗುಡ್ಡದ ಮಾದಾಪುರ, ನಾಗವಂದ, ಮೈದೂರ್, ಕಾಮಲಾಪುರ ಮತ್ತು ಚಟ್ಟಹಳ್ಳಿ (ಇಲ್ಲಿನ ನಿಕ್ಷೇಪ ಸು. 5 ಲಕ್ಷ ಟನ್ನುಗಳಷ್ಟು ಆಗಬಹುದು). ಬೆಳಗಾಂವಿ ಜಿಲ್ಲೆಯ ಹುಕ್ಕೇರಿ, ಬೈಲಹೊಂಗಲು ಮತ್ತು ಅಥಣಿ ತಾಲ್ಲೂಕುಗಳು (ಇಲ್ಲಿನ ನಿಕ್ಷೇಪ ಸು. 3 ಲಕ್ಷ ಟನ್ನುಗಳಷ್ಟು ಆಗಬಹುದು) ಇತ್ಯಾದಿ ಸ್ಥಳಗಳು ಇಂಥ ನಿಕ್ಷೇಪಗಳಿರುವ ಪ್ರದೇಶಗಳು. ಬೈಲಹೊಂಗಲ ಮತ್ತು ಅಥಣಿ ನಿಕ್ಷೇಪಗಳು ಅತ್ಯುತ್ಕೃಷ್ಟವಾದವು; ಸಾಕಷ್ಟು ಪ್ರಮಾಣದಲ್ಲಿ ಇಲ್ಲಿ ಸುಣ್ಣಶಿಲೆ ದೊರೆಯುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಕಂಕರ್ ಸಿಕ್ಕುವುದು. ತುಮಕೂರಿನ ಓಬಳಾಪುರದ ಬಳಿ ಮತ್ತು ಮೈಸೂರು ತಾಲ್ಲೂಕಿನಲ್ಲಿ ಅತಿ ವಿಪುಲವಾಗಿ ದೊರೆಯುವ ಕಂಕರನ್ನು ಅಧಿಕ ಪ್ರಮಾಣದಲ್ಲಿ ತೆಗೆದು ಪರಸ್ಥಳಗಳಿಗೆ ರವಾನಿಸುತ್ತಾರೆ. ಇದರ ಗುಣಮಟ್ಟ ಉತ್ತಮವಾಗಿದೆ. ಇದರಿಂದ ಅನೇಕ ರಾಸಾಯನಿಕ ವಸ್ತುಗಳನ್ನು ಮುಖ್ಯವಾಗಿ ಕ್ಯಾಲ್ಸಿಯಂ ಅಸಿಟೇಟನ್ನು ತಯಾರಿಸಬಹುದು. (ಜಿ.ಎಸ್.ಎ.)

**ಕಂಕಾಳ ಜ್ವರ :** ಮೂತ್ರದಲ್ಲಿ ರಕ್ತಬಣ್ಣ (ಹಿಮೋಗ್ಲೋಬಿನ್) ಹೋಗುತ್ತಿರುವ ವಿಷಮ ಬಗೆಯ ಮಲೇರಿಯ ಜ್ವರ (ಬ್ಲ್ಯಾಕ್ ವಾಟರ್ ಫೀವರ್). ಮಲೇರಿಯ ತೀವ್ರವಾಗಿರುವ ಪ್ರದೇಶಗಳಲ್ಲಿ ಈ ಜ್ವರವೂ ಹರಡಿರುವಂತಿದೆ. ರೋಗಿಯ ಮೂತ್ರ ಕರಿ ಶಾಯಿಯಂತಿರುವುದರಿಂದ ಈ ಹೆಸರಾಗಿದೆ. ರಕ್ತದಲ್ಲಿ ಸುತ್ತಾಡುತ್ತಿರುವ ಕೆಂಪು ರಕ್ತಕಣಗಳಲ್ಲಿ ಅರೆಪಾಲಿಗೂ ಹೆಚ್ಚಾಗಿ ಒಂದೇ ಬಾರಿ ಇಲ್ಲವೇ ಕೊಂಚಕೊಂಚವಾಗಿ ಮೇಲಿಂದ ಮೇಲೆ ರಕ್ತನಾಳಗಳೊಳಗೇ ಒಡೆದುಕೊಂಡು ಹಾಳಾಗುತ್ತಿರುತ್ತವೆ. ಸಾಮಾನ್ಯವಾಗಿ ಈ ರೋಗ ಹತ್ತಿದವನು ಉಳಿಯುವುದಿಲ್ಲ. ಮೇಲಿಂದ ಮೇಲೆ ಮಲೇರಿಯಗ್ರಸ್ತನಾದ ರೋಗಿ (ಕನಿಷ್ಠ ಪಕ್ಷ ನಾಲ್ಕು ಸಲ) ಅದೇ ಸ್ಥಳದಲ್ಲಿ (ಅಂದರೆ ಮಲೇರಿಯ ಪೀಡಿತ ಸ್ಥಳ) ಆರು ತಿಂಗಳ ಕಾಲ ಇದ್ದಾಗ ಆತನಿಗೆ ಕಂಕಾಳ ಜ್ವರ ಬರುವುದನ್ನು ಗಮನಿಸಿದ್ದಾರೆ. ಇಂದು ಮಲೇರಿಯ ನಿರೋಧ ಸಾಕಷ್ಟು ಪರಿಣಾಮಕಾರಿಯಾಗಿರುವುದರಿಂದಲೂ ಹೊಸ ಮದ್ದುಗಳು ಬಂದಿರುವುದರಿಂದಲೂ ಈ ರೋಗದ ಸುಳಿವೇ ಇಲ್ಲ. **ನೋಡಿ– ಮಲೇರಿಯ.** (ಡಿ.ಎಸ್.ಎಸ್.)

**ಕಂಕೋಶ :** ಮೂತ್ರಪಿಂಡಗಳಿಂದ ಮೂತ್ರಕನಾಳಗಳ (ಯೋರೀಟರ್ಸ್) ಮೂಲಕ ಕೆಳಗೆ ಹರಿದು ಬರುತ್ತಿರುವ ಮೂತ್ರವನ್ನು ಕೆಲಕಾಲ ಕೂಡಿಟ್ಟುಕೊಳ್ಳುವ ಸ್ನಾಯುಗಳಿಂದಾದ, ಲೋಳೆಪದರ ಒಳವರಿಯಾಗಿರುವ ಕೋಶ (ಬ್ಲಾಡರ್). ಇಲ್ಲಿಂದ ಇಷ್ಟಪಟ್ಟಾಗ ಮೂತ್ರನಾಳದ (ಯೂರಿತ್ರ) ಮೂಲಕ ಮೂತ್ರವನ್ನು ಹೊರ ಸುರಿಬಿಡುವುದು. **ನೋಡಿ – ಮೂತ್ರಮಂಡಲ.** *

**ಕಂಕೋಶ ಹುಳು :** ಒರೆತೂರಿಸಿದ (ಇನ್‌ವೆಜಿನೇಟೆಡ್) ಒಂಟಿ ಕೊಂದಲೆಯೂ (ಸ್ಕೊಲೆಕ್ಸ್) ಒಂದು ದೊಡ್ಡ ಜಿಟ್ಟಿಯೂ (ಸಿಸ್ಟ್) ಇರುವ ಲಾಡಿಹುಳುವಿನ ಮರಿಹುಳು (ಲಾರ್ವಲ್) ರೂಪ (ಬ್ಲಾಡರ್ ವರ್ಮ್). ಗೋಳದಂತಿರುವ ಜಿಟ್ಟಿಭಾಗ ಕಂಕೋಶವನ್ನು ಹೋಲುವುದರಿಂದ ಈ ಹೆಸರಾಗಿದೆ. ಕಂಕೋಶಹುಳುವಿಗೆ ವೈದ್ಯದಲ್ಲಿ ಸಂಚಿಬಾಲ (ಸಿಸ್ಟಿಸರ್ಕಸ್) ಎಂದು ಹೆಸರು. ಕಂಕೋಶ ಹುಳುವಾಗುವುದು ಲಾಡಿಹುಳುಗಳ ಒಂದು ವಿಶೇಷ ಲಕ್ಷಣ. ಹಂದಿಗಳ ಮತ್ತು ದನಗಳ ಮಾಂಸಗಳಲ್ಲಿ ಕಂಕೋಶಹುಳುವಿನ ಸೋಂಕಾಗುವುದು ಸಾಮಾನ್ಯ. ಹಂದಿಯಲ್ಲಿನ ಈ ಸೋಂಕು ಮಾನವನಿಗೂ ಹತ್ತಬಹುದು. ಯಾವ ಅಂಗದಲ್ಲಿ ನೆಲೆಸಿರುವುದೋ ಅದಕ್ಕೆ ತಕ್ಕ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮಿದುಳಲ್ಲಿ ನೆಲೆಸಿತೆಂದರೆ ಮೊಲ್ಲಾಗರದ ಸೆಳವುಗಳು ಕಾಣಿಸಿಕೊಳ್ಳಬಹುದು. (ಡಿ.ಎಸ್.ಎಸ್.; ಎನ್.ಎಸ್.)



ಕಂಕೋಶ ಹುಳು

**ಕಂಗೊಂದಿ ಬಳ್ಳಿ :** ಸಿಲ್ಯಾಸ್ಟ್ರೇಸಿ ಕುಟುಂಬದ ಒಂದು ಪ್ರಭೇದ (ಸಿಲ್ಯಾಸ್ಟ್ರಸ್ ಪ್ಯಾನಿಕ್ಯುಲೇಟಸ್). ಭಾರತ, ಸಿಂಹಳ, ಮಲಯ ಹಾಗೂ ಫಿಲಿಪೀನ್ಸ್ ದ್ವೀಪಗಳಲ್ಲಿ ಕಾಣಬರುತ್ತದೆ. ಸಾಮಾನ್ಯವಾಗಿ ಗುಡ್ಡಗಾಡು ಜಿಲ್ಲೆಗಳಿಗೆ ಸೀಮಿತಗೊಂಡಿದ್ದು ಸು. 4000, ಎತ್ತರದ ಪ್ರದೇಶಗಳಲ್ಲೂ ಬೆಳೆಯುತ್ತದೆ. ಬಳ್ಳಿಯಂತೆ ಹಬ್ಬಿ ಬೆಳೆಯುವ ಪೊದೆಸಸ್ಯವಿದು.

ಬೆಳೆಯುತ್ತಿರುವ ಕವಲುಗಳ ಮೇಲೆ ಮಸೂರದ ಆಕಾರದ (ಲೆನ್ಸ್ ಆಕಾರದ) ಗಂಟುಗಳಿವೆ. ಮುಳ್ಳುಗಳಿಲ್ಲ. ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿರುವ ಎಲೆಗಳಿವೆ. ಅವು ಅಂಡಾಕಾರ ಅಥವಾ ದೀರ್ಘವೃತ್ತಾಕಾರದವು. ಅಲಗಿನ ತುದಿ ಮೊನಚು. ಅಂಚು ಗರಗಸದ ಹಲ್ಲಿನಂತೆ. ಮೈನುಣುಪು. ಹೂಗೊಂಚಲು ಸಂಕೀರ್ಣ ಪುಷ್ಪಗುಚ್ಛ ಮಾದರಿಯದು; 2"–6" ಉದ್ದ. ಹೂಗೊಂಚಲಿನ ತೊಟ್ಟಿನ ಮೇಲೆ ಮೃದು ತುಪ್ಪಳದ ಹೊದಿಕೆಯಿದೆ. ಹೂಗಳು ಏಕಲಿಂಗಗಳು. ಬಣ್ಣ ಹಳದಿ ಅಥವಾ ಹಸಿರುಮಿಶ್ರಿತ ಬಿಳಿ. ಹೂಗಳಲ್ಲಿ ಬೇಗ ಉದುರುಹೋಗುವಂಥ ಅನೇಕ ಚಿಕ್ಕ ಚಿಕ್ಕ ಉಪಪತ್ರಗಳು (ಬ್ರಾಕ್ಟ್ಸ್) ಇರುವುದು ಈ ಬಳ್ಳಿಯ ವೈಶಿಷ್ಟ್ಯ. ಪುಷ್ಪಪತ್ರ (ಸೆಪಲ್ಸ್) ಮತ್ತು ಪುಷ್ಪದಳಗಳ (ಪೆಟಲ್ಸ್) ಸಂಖ್ಯೆ ತಲಾ ಐದು. ಗಂಡು ಹೂವಲ್ಲಿ ದಳಗಳಿಂದ ಆವರಿಸಿಕೊಂಡಂತೆ ಒಂದು ತಟ್ಟೆಯಿದೆ (ಡಿಸ್ಕ್). ಇದರ ಬುಡಕ್ಕೆ ಐದು ಕೇಸರಗಳು ಅಂಟಿಕೊಂಡಿವೆ. ಕೆಲವೊಮ್ಮೆ ಗಂಡುಹೂವಿನಲ್ಲಿ ಬಂಜೆ ಅಂಡಾಶಯ (ಪಿಸ್ಟಿಲೋಡ್) ಇರುವುದೂ ಉಂಟು. ಹೆಣ್ಣುಹೂವಿನಲ್ಲಿ ಗಂಡು ಹೂವಿನಲ್ಲಿರುವಷ್ಟೇ ಸಂಖ್ಯೆಯ ಪುಷ್ಪಪತ್ರ ಮತ್ತು ದಳಗಳೂ ಮೂರು ಕಾರ್ಪೆಲುಗಳನ್ನೊಳಗೊಂಡ ಉಚ್ಚಸ್ಥಾನದ ಅಂಡಾಶಯವೂ ಇವೆ. ಶಲಾಕೆ ಚಿಕ್ಕದು. ಶಲಾಕಾಗ್ರ ಮೂರು ಭಾಗಗಳಾಗಿ ಒಡೆದಿದೆ. ಕಾಯಿ ಸಂಪುಟ ಮಾದರಿಯದು. ಬಣ್ಣ ಹಚ್ಚಹಳದಿ. ಒಳಗೆ 1–6 ಅಂಡಾಕಾರದ ಕಂದು ಬಣ್ಣದ ಬೀಜಗಳಿವೆ. ಬೀಜದ ಸುತ್ತ ಕಂದುಗೆಂಪು ಬಣ್ಣದ, ಮೃದುವಾದ, ತಿರುಳಿನಂಥ ಹೊರಹೊದಿಕೆಯಿದೆ (ಏರಿಲ್).

ಕಂಗೊಂದಿ ಬಳ್ಳಿಯಲ್ಲಿ ಹಲವಾರು ಔಷಧವಸ್ತುಗಳಿವೆ. ಇದರಿಂದಾಗಿ ಈ ಬಳ್ಳಿ ತುಂಬ ಉಪಯುಕ್ತವೆನಿಸಿದೆ. ಮಿತಿಮೀರಿದ ಅಫೀಮು ಸೇವನೆಯಿಂದ ಉಂಟಾದ ವಿಷಕಾರಿ ಪರಿಣಾಮದ ಪರಿಹಾರಕ್ಕೆ ಎಲೆಗಳ ರಸವನ್ನು ಬಳಸುತ್ತಾರೆ. ತೊಗಟೆಯಲ್ಲಿ ಗರ್ಭಸ್ರಾವಕಗಳಿವೆ. ಬೀಜಕ್ಕೆ ಕಾಮೋದ್ದೀಪಕ ಹಾಗೂ ಸ್ವೇದಕಾರಿ ಗುಣಗಳಿವೆ. ಕಹಿಯಾದ್ದರಿಂದ ತಿಂದರೆ ವಾಂತಿಯಾಗುತ್ತದೆ. ಹಸಿ ಬೀಜಗಳನ್ನು ಜಜ್ಜಿ ತೆಗೆದು ಕೆಂಪು ಮಿಶ್ರಿತ ಹಳದಿ ಬಣ್ಣದ ಎಣ್ಣೆಯನ್ನು ಪಾರ್ಶ್ವವಾಯು, ಕುಷ್ಠರೋಗ ಮತ್ತು ಸಂಧಿವಾತ ರೋಗಗಳಿಗೆ ಸಿದ್ಧೌಷಧವಾಗಿ ಉಪಯೋಗಿಸುತ್ತಾರೆ. ಬೀಜಗಳನ್ನು ಜಜ್ಜಿ ಬಟ್ಟಿಯಿಳಿಸುವುದರಿಂದ ಒಂದು ಬಗೆಯ ಕಪ್ಪು ಬಣ್ಣದ ಎಣ್ಣೆ ಬರುವುದು. ಇದಕ್ಕೆ ಓಲಿಯಮ್ ನೈಗ್ರಮ್ ಎಂದು ಔಷಧಶಾಸ್ತ್ರೀಯ ಹೆಸರಿದೆ. ಇದನ್ನು ಸ್ವೇದಕಾರಿಯಾಗಿ ಉಪಯೋಗಿಸುತ್ತಾರೆ. ಬೀಜಗಳಲ್ಲಿ ಹಲವಾರು ಬಗೆಯ ಸ್ನಿಗ್ಧ ಆಮ್ಲಗಳೂ ಅದರ ಹೊರಹೊದಿಕೆಯಲ್ಲಿ (ಏರಿಲ್) ಸಿಲ್ಯಾಸ್ಟ್ರಿನ್ ಮತ್ತು ಪ್ಯಾನಿಕುಲೇಟಿನ್ ಎಂಬ ಸಸ್ಯಕ್ಷಾರಗಳೂ ಇವೆ. (ಕೆ.ಎಸ್.ಎನ್.ಎ.)

**ಕಂಚಲದೇವಿ :** ಕಲ್ಯಾಣಿ ಚಾಳುಕ್ಯ ದೊರೆ ಎರಡನೆಯ ಸೋಮೇಶ್ವರ ಭುವನೈಕಮಲ್ಲನ (1068–1076) ಹಿರಿಯ ಹೆಂಡತಿ. ಪೆರಿಯರಸಿ ಕಂಚಲದೇವಿ ಮೂಲಗುಂದ ನಾಡನ್ನು ಆಳುತ್ತಿದ್ದಳೆಂಬುದಾಗಿ ಪ್ರ.ಶ. 1072 ರ ಗುಡಿಗೇರಿ ಶಾಸನದಿಂದ ತಿಳಿದುಬರುತ್ತದೆ. (**ನೋಡಿ– ಸೋಮೇಶ್ವರ–2**). (ಜಿ.ಆರ್.ಆರ್.)

**ಕಂಚಿ :** ಭಾರತದ ಮಹಾ ಪುಣ್ಯಕ್ಷೇತ್ರಗಳಲ್ಲಿ ಒಂದು. ಪ್ರಾಚೀನ ಸಂಸ್ಕೃತಿಯ ನೆಲೆವೀಡಾಗಿದ್ದು ಭವ್ಯ ದೇವಾಲಯಗಳ ಪಟ್ಟಣವೆಂದು ಪ್ರಸಿದ್ಧಿ ಪಡೆದಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಸಾಕಷ್ಟು ಪ್ರಸಿದ್ಧವೆನಿಸಿದೆ. ಕಾಂಚೀಪುರ, ಕಾಂಜೀವರಂ ಎಂಬ ಹೆಸರುಗಳೂ ಇವೆ. ಚೆನ್ನೈನಿಂದ ನೈಋತ್ಯಕ್ಕೆ 75 ಕಿಮೀ ದೂರದಲ್ಲಿ, ಪಾಲಾರ್ ನದಿಯ ದಡದಲ್ಲಿ ಚೆಂಗಲ್‌ಪಟ್ಟಿಗೆ 35 ಕಿಮೀ ದೂರದಲ್ಲಿದೆ. ಉತ್ತರ ಅಕ್ಷಾಂಶ 12–50. ಪೂರ್ವ ರೇಖಾಂಶ 79–75. ಜನಸಂಖ್ಯೆ 1,64,384 (2011). ಪ್ರಾಚೀನ ಕಾಲದಿಂದಲೂ ಅನೇಕ ಸಂತರು, ಭಕ್ತರು, ಕಲಾವಿದರು, ರಾಜಕಾರಣಿಗಳು, ಸಂಗೀತಗಾರರು. ಶ್ರವಣರು ಹಾಗೂ ತಾತ್ತ್ವಿಕರಿಗೆ ವಿದ್ಯಾಕೇಂದ್ರವೂ ಜನ್ಮಸ್ಥಳವೂ ಆಗಿದೆ. ಅರ್ಥಶಾಸ್ತ್ರ ರಚಿಸಿದ ಚಾಣಕ್ಯ ಮತ್ತು ಕರ್ನಾಟಕ ಸಂಗೀತದ ಪಿತಾಮಹರೆನಿಸಿದ ಶಾಮಶಾಸ್ತ್ರಿಗಳು ಇಲ್ಲಿ ಜನ್ಮವೆತ್ತಿದ್ದಾರೆ. ತಮಿಳುನಾಡಿನ ಚೆಂಗಲ್‌ಪಟ್ಟು ಜಿಲ್ಲೆಯ ಆಡಳಿತಕೇಂದ್ರವಿದು. ಚೆನ್ನೈಗೆ ಹತ್ತಿರದಲ್ಲಿರುವುದರಿಂದ ಹೆಚ್ಚಿನ ಪ್ರಾಮುಖ್ಯ ಪಡೆದಿದೆ. ವ್ಯಾಪಾರ ಮತ್ತು ವಾಣಿಜ್ಯಕೇಂದ್ರ. ಇಲ್ಲಿಯ ಗುಡಿಗೋಪುರಗಳು ಬೃಹತ್ ಪ್ರಮಾಣದಲ್ಲಿದ್ದು ತಮ್ಮ ಶಿಲ್ಪಕಲೆಯ ಭವ್ಯತೆಯಿಂದ ಅದ್ಭುತ ಎನಿಸಿವೆ. ಶಿವಕಂಚಿ, ವಿಷ್ಣುಕಂಚಿ ಎಂದು ನಗರ ಎರಡು ವಿಭಾಗಗಳಾಗಿದೆ. ಶಿವಕಂಚಿಯಲ್ಲಿ ಸುಪ್ರಸಿದ್ಧ ಕಾಮಾಕ್ಷಿ, ಏಕಾಂಬರೇಶ್ವರ, ಕೈಲಾಸನಾಥ ದೇವಸ್ಥಾನಗಳಿವೆ. ಶಂಕರಾಚಾರ್ಯರ ಪೀಠಗಳಲ್ಲಿ ಒಂದಾದ ಕಾಮಕೋಟಿ ಪೀಠವಿರುವುದೂ ಇಲ್ಲೇ. ವಿಷ್ಣುಕಂಚಿಯಲ್ಲಿ ವರದರಾಜಸ್ವಾಮಿ ದೇವಸ್ಥಾನವಿದೆ. ವರ್ಷಂಪ್ರತಿ ಇಲ್ಲಿ ನಡೆಯುವ ಉತ್ಸವಗಳಿಗೆ ದಕ್ಷಿಣ ಭಾರತದಿಂದಲೇ ಅಲ್ಲದೆ ಉತ್ತರ ಭಾರತದಿಂದಲೂ ಅಸಂಖ್ಯಾತ ಯಾತ್ರಾರ್ಥಿಗಳು ಆಗಮಿಸುತ್ತಾರೆ. ಇದು ವಿದ್ಯಾಕೇಂದ್ರವೆನಿಸಿದೆ. ಇಲ್ಲಿ ಧರ್ಮದರ್ಶಿಗಳು ನಡೆಸುವ ಎರಡು ಕಾಲೇಜುಗಳಲ್ಲದೆ, ಏಳು ಪ್ರೌಢಶಾಲೆಗಳಿವೆ. ಭಕ್ತವತ್ಸಲಂ ತಾಂತ್ರಿಕ ಶಿಕ್ಷಣಶಾಲೆಯೊಂದು ಸ್ಥಾಪಿತವಾಗಿದೆ. ಸಂಸ್ಕೃತ ವಿದ್ಯೆಗೆ ಹೇಗೊ ಹಾಗೆ ತಮಿಳು ವಿದ್ಯಾಸಾಹಿತ್ಯಗಳಿಗೂ ಈ ಪಟ್ಟಣ ಹೆಸರುವಾಸಿಯಾಗಿದೆ. ಇದು ಆಧುನಿಕ ಜೀವನದ ಎಲ್ಲ ಸೌಲಭ್ಯಗಳೂ ಇರುವ ಪ್ರವಾಸಿಕೇಂದ್ರ ಎನಿಸಿದೆ. ಇಲ್ಲಿ ಉತ್ತಮವಾದ ಜಿಲ್ಲಾಮಟ್ಟದ ಗ್ರಂಥಾಲಯವಿದೆ. 32 ನಗರಸಭಾಸದಸ್ಯರುಗಳನ್ನೊಳಗೊಂಡ ಪ್ರಥಮ ದರ್ಜೆಯ ನಗರಸಭೆಯಿದೆ. ಸಿಮೆಂಟ್ ಹಾಗೂ ಟಾರ್ ರಸ್ತೆಗಳು ವಿಪುಲವಾಗಿವೆ. ಬಸ್ಸು ಹಾಗೂ ರೈಲು ಸೌಕರ್ಯಗಳಿವೆ.

ಕಾಮಾಕ್ಷಿ ದೇವಸ್ಥಾನದ ಗೋಪುರ

ಇದು ರೇಷ್ಮೆ ನೇಯ್ಗೆಯಲ್ಲಿ ಜಗದ್ವಿಖ್ಯಾತವೆನಿಸಿದೆ. ಇಲ್ಲಿ ತಯಾರಾದ ರೇಷ್ಮೆ ಸೀರೆಗಳಿಗೆ ವಿದೇಶಗಳಿಂದ ಹೆಚ್ಚಿನ ಬೇಡಿಕೆಯಿದೆ. ಇಲ್ಲಿ 8,000 ಕ್ಕೂ ಮೇಲ್ಪಟ್ಟು ರೇಷ್ಮೆ ಕೈಮಗ್ಗಗಳಿವೆ. ಅಲ್ಲದೆ ಸಹಕಾರಿ ಬೆಂಕಿಕಡ್ಡಿ ಕಾರ್ಖಾನೆಯಿದೆ. ಇಲ್ಲಿನ ವ್ಯವಸಾಯೋತ್ಪನ್ನಗಳಿಗೆ ಅತಿ ಹೆಚ್ಚಿನ ಮಾರುಕಟ್ಟೆಯಿದೆ. ಬೊಂಬಿನಿಂದ ತಯಾರಾಗುವ ಹಲವು ವಸ್ತುಗಳು, ಬುಟ್ಟಿ ಹೆಣಿಗೆ, ಮಣ್ಣಿನ ಪಾತ್ರೆಗಳು ಮುಂತಾದ ಕುಶಲ ಕೈಗಾರಿಕೆಗಳಿಗೆ ಪ್ರಸಿದ್ಧಿ ಪಡೆದಿದೆ. (ಎನ್.ಎ.; ಎಂ.ವಿ.ಕೆ.)

ಪುರಾತನ ಪಟ್ಟಣದ ಇತಿಹಾಸ ಗಮನಾರ್ಹ. ದಕ್ಷಿಣ ದೇಶದ ಮತಚರಿತ್ರೆಯಲ್ಲಿ ಇದರ ಪಾತ್ರ ಮಹತ್ತರವಾದುದು. ಇದು ಎರಡು ಸಾವಿರ ವರ್ಷಗಳ ಹಿಂದೆ ದಕ್ಷಿಣದಲ್ಲಿ ಬೌದ್ಧಧರ್ಮ ಮುಖ್ಯ ಕೇಂದ್ರವಾಗಿತ್ತು. ಶಂಕರಾಚಾರ್ಯರು ಇದನ್ನು ಶೈವ ಮತ್ತು ವೈಷ್ಣವ ಕೇಂದ್ರವಾಗಿ ಪರಿವರ್ತಿಸಿದರು. ಕಂಚಿಯ ಒಂದು ಭಾಗದಲ್ಲಿ ಬೌದ್ಧಸ್ತೂಪಗಳಿದ್ದುವೆಂದು ಹ್ಯೂಯೆನ್‌ತ್ಸಾಂಗ್ ಹೇಳಿದ್ದಾನಾದರೂ ಅದಕ್ಕೆ ಸರಿಯಾದ ರುಜುವಾತುಗಳು ಇನ್ನೂ ಸಿಕ್ಕಿಲ್ಲ. ಊರಿನ ಇನ್ನೊಂದು ಭಾಗ ಶೈವದೇವಾಲಯಗಳುಳ್ಳದ್ದು, ಮತ್ತೊಂದು ವೈಷ್ಣವ ದೇವಾಲಯಗಳುಳ್ಳದ್ದು, ಕಾಮಾಕ್ಷಿ ದೇವಾಲಯ ಶಂಕರಾಚಾರ್ಯರಿಂದ ಸ್ಥಾಪಿತವಾದುದೆಂದು ಪ್ರಸಿದ್ಧವಾಗಿದೆ. ವೈಷ್ಣವ ದೇವಾಲಯಗಳಲ್ಲಿ ವರದಸ್ವಾಮಿಯ ದೇವಸ್ಥಾನ ಪ್ರಸಿದ್ಧವಾದುದ್ದು. ರಾಮಾನುಜಾಚಾರ್ಯರು ಶ್ರೀರಂಗಕ್ಕೆ ಹೋಗುವುದಕ್ಕೆ ಮುಂಚೆ ಕಂಚೀ ಪೂರ್ಣರ ಶಿಷ್ಯರಾದ ವರದರಾಜಸ್ವಾಮಿಗೆ ಸೇವೆ ಸಲ್ಲಿಸುತ್ತಿದ್ದರು. ಶಂಕರಾಚಾರ್ಯರು ಜೈನವಿದ್ವಾಂಸರೊಡನೆ ಚರ್ಚೆ ನಡೆಸಿದರೆಂದು ಐತಿಹ್ಯವಿರುವುದರಿಂದ ಆ ಕಾಲದಲ್ಲಿ ಕಂಚಿಯಲ್ಲಿ ಜೈನಧರ್ಮದವರೂ ಗಣ್ಯರಾಗಿದ್ದಿರಬೇಕು. ಈಗಲೂ ಕಂಚಿಯಲ್ಲಿ ಒಂದು ಪುರಾತನ ಜೈನ ದೇವಾಲಯವಿದೆ. ಗುರುನಾನಕ್ ಕಂಚಿಯಲ್ಲಿ ತನ್ನ ಧರ್ಮಪ್ರಚಾರ ಮಾಡಿದನೆಂದು ಐತಿಹ್ಯವಿದೆ. ಇದಕ್ಕೆ ಸಾಕ್ಷಿಯಾಗಿ ಇಲ್ಲಿ ಒಂದು ಸಿಖ್ಖರ ಮಠವಿದೆ. ಕಾಲಕ್ರಮದಲ್ಲಿ ಕಂಚಿ ಮುಸಲ್ಮಾನರ ದಾಳಿಗೆ ಸಿಕ್ಕಿ ಅಪಾರ ನಷ್ಟಕ್ಕೊಳಗಾಯಿತು. ಇಲ್ಲಿಯ ಕೆಲವು ದೇವಸ್ಥಾನಗಳು ನೆಲಸಮವಾದುವು. ದೊಡ್ಡ ಮಂಟಪಗಳು ಮಸೀದಿಗಳಾಗಿ ಮಾರ್ಪಟ್ಟುವು. ಮದ್ರಾಸ್ ಪ್ರಾಂತ್ಯ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಮೇಲೆ ಕ್ರೈಸ್ತರ ಚರ್ಚುಗಳು ನಿರ್ಮಾಣವಾದುವು. (ಜಿ.ಎಚ್.)

ಪ್ರ.ಶ.ಪೂ. 150ರಲ್ಲೇ ಪತಂಜಲಿ ಕಂಚಿಯ ವಿಚಾರವನ್ನು ಪ್ರಸ್ತಾಪಿಸಿದ್ದಾನೆ. ದಕ್ಷಿಣ ಭಾರತದಲ್ಲಿ 5ನೆಯ ಶತಮಾನದಲ್ಲಿದ್ದ ತೊಂಡಮಂಡಲಂ ಪ್ರದೇಶಕ್ಕೆ ಕಂಚಿ ರಾಜಧಾನಿಯಾಗಿತ್ತು. ಶಾಸನಾಧಾರದಂತೆ ಈ ಪ್ರದೇಶವನ್ನು ಪಲ್ಲವರು ಆಳುತ್ತಿದ್ದರೆಂದು ಗೊತ್ತಾಗುವುದು. ಇವರಿಗೆ ತೊಂಡಮಾನ್ ರಾಜರೆಂದು ಹೆಸರಿತ್ತೆಂದು ತಮಿಳು ಸಾಹಿತ್ಯದಿಂದ ತಿಳಿದುಬರುತ್ತದೆ. ವಿಷ್ಣುಗೋಪ ಎಂಬಾತ ಪಲ್ಲವ ರಾಜನಾಗಿದ್ದನೆಂದೂ ಉತ್ತರದಿಂದ ದಂಡೆತ್ತಿ ಬಂದ ಸಮುದ್ರಗುಪ್ತ ಇವನನ್ನು ಸೋಲಿಸಿದನೆಂದೂ ಇತಿಹಾಸ ಹೇಳುತ್ತದೆ. ಉತ್ತರದಲ್ಲಿ ಕೃಷ್ಣಾನದಿಯವರೆಗೂ ದಕ್ಷಿಣದಲ್ಲಿ ಪಾಂಡ್ಯರ ಮಧುರೆ ಹೊರವಲಯದವರೆಗೂ ಪಲ್ಲವರ ಆಳ್ವಿಕೆ ಹರಡಿತ್ತು. ಈ ಸಮುದ್ರದಲ್ಲಿ ಕಂಚಿ ದಕ್ಷಿಣದ ಮಹತ್ತ್ವದ ಪಟ್ಟಣವೆನಿಸಿತ್ತು; ಉತ್ತಮ ಶಿಕ್ಷಣ ಹಾಗೂ ವಿಶ್ವವಿದ್ಯಾನಿಲಯ ಕೇಂದ್ರವಾಗಿತ್ತು. ಪಲ್ಲವರು ಸಂಸ್ಕೃತದ ಅಭಿಮಾನಿಗಳೂ ಪ್ರತಿಪಾದಕರೂ ಆಗಿದ್ದು ಅವರ ಶಾಸನಗಳೆಲ್ಲ ಆ ಭಾಷೆಯಲ್ಲೇ ಇವೆ. ಅಂದು ಕಂಚಿಯಿಂದ ಸಂಸ್ಕೃತ ಪ್ರಸಾರ ಅವ್ಯಾಹತವಾಗಿ ನಡೆದಿತ್ತು. ದಕ್ಷಿಣದಲ್ಲಿ ಮಾತ್ರವಲ್ಲದೆ, ದೂರಪ್ರಾಚ್ಯದಲ್ಲಿದ್ದ ಭಾರತೀಯ ಸ್ವಾಸ್ಥ್ಯಗಳಿಗೂ ಅದು ಹರಡಿ ಜನಪ್ರಿಯತೆ ಗಳಿಸಿತ್ತು. ಪಲ್ಲವರು ತಮ್ಮದೇ ಆದ ವೈಶಿಷ್ಟ್ಯಮಯ ಶಿಲ್ಪಕಲಾವೈಭವವನ್ನು ನಿರ್ಮಾಣ ಮಾಡಿದರು. ಮುಂದೆ ಆಕ್ರಮಣ ನಡೆಸಿದ ರಾಜ ವಂಶೀಕರು ಇಲ್ಲಿನ ಕಲಾ ವೈಭವಕ್ಕೆ ಮುಗ್ಧರಾಗಿ ತಮ್ಮ ರಾಜ್ಯಗಳಲ್ಲಿ ಇದನ್ನು ಬೆಳೆಸಿ ಪೋಷಿಸಿದ ನಿದರ್ಶನಗಳು ಕಂಡುಬರುತ್ತವೆ. ಹ್ಯೂಯೆನ್‌ತ್ಸಾಂಗ್ ಇಲ್ಲಿನ ವಿಶ್ವವಿದ್ಯಾನಿಲಯದ ಶ್ರೇಷ್ಠತೆಯನ್ನು ಕೊಂಡಾಡಿದ್ದಾನೆ. ತರ್ಕಶಾಸ್ತ್ರನಿಪುಣನೂ ನ್ಯಾಯಭಾಷ್ಯದ ಕರ್ತೃವೂ ಆದ ವಾತ್ಸಾಯನ ಕಂಚಿಯಲ್ಲಿ ಅಂದು ಪಂಡಿತನಾಗಿದ್ದನೆಂದೂ ಆತ ಹೇಳಿದ್ದಾನೆ. ಇಂಥ ಶಿಕ್ಷಣಕೇಂದ್ರವಾದ ಈ ಪಟ್ಟಣದಲ್ಲಿ ಅನೇಕ ಮಹಿಮಾನ್ವಿತರು ಶಿಕ್ಷಣ ಪಡೆದರು. ವಿಶಿಷ್ಟಾದ್ವೈತ ಧರ್ಮಸ್ಥಾಪನಾಚಾರ್ಯರಾದ ರಾಮಾನುಜಾಚಾರ್ಯರು ಮೊಟ್ಟಮೊದಲು ಇಲ್ಲಿ ಶಿಕ್ಷಣ ಹೊಂದಿದರು. 5ನೆಯ ಶತಮಾನದಲ್ಲಿ ಕದಂಬಕುಲದ ಮಯೂರಶರ್ಮ ಉನ್ನತಶಿಕ್ಷಣಕ್ಕಾಗಿ ಕಂಚಿಗೆ

ಏಕಾಂಬರನಾಥ ದೇವಸ್ಥಾನದ ಗೋಪುರ

ಬಂದಿದ್ದನೆಂದು ಶಾಸನಗಳು ತಿಳಿಸುತ್ತವೆ. ಈ ಸಂದರ್ಭದಲ್ಲಿ ನಡೆದ ಒಂದು ಘಟನೆ ಅತ್ಯಂತ ಗಮನಾರ್ಹ. ಶಿವಮೊಗ್ಗ ಜಿಲ್ಲೆಯ ತಾಳಗುಂದದ ಬ್ರಾಹ್ಮಣ ವರ್ಗದ ಈ ಮಯೂರಶರ್ಮ ತನ್ನ ಗುರು ವೀರಶರ್ಮನೊಂದಿಗೆ ಕಂಚಿಯ ಘಟಿಕಾಶ್ರಮದಲ್ಲಿ ವೇದಾಧ್ಯಯನ ಮಾಡಲು ತೆರಳಿದಾಗ ಅಲ್ಲಿನ ಪಲ್ಲವರಾಜನ ಅಶ್ವಾರೋಹಿ ಕಾವಲುಗಾರರಿಂದ ಅವಮಾನಿತನಾಗಿ ನೊಂದನೆಂದೂ ಆಗ್ಗೆ ಅವನಲ್ಲಿ ಸೇಡಿನ ಕಿಡಿ ಹೊತ್ತಿ, ಕಡೆಗೆ ಯುದ್ಧಕಲೆಯನ್ನು ಹಸ್ತಗತಮಾಡಿಕೊಳ್ಳಲು ನಿರ್ಧರಿಸಿದನೆಂದೂ ಹೇಳಲಾಗಿದೆ. ಕಡೆಗೆ ತನ್ನ ನಿರ್ಧಾರದಂತೆ ಅವನು ಖಡ್ಗವನ್ನು ಹಿಡಿದು ದಿಗ್ವಿಜಯಕ್ಕೆ ಹೊರಟು ಪಲ್ಲವರಾಜ್ಯದ ಗಡಿಯನ್ನು ರಕ್ಷಿಸುತ್ತಿದ್ದ ಕಾವಲು ಅಧಿಕಾರಿಗಳನ್ನು ಸೋಲಿಸಿ ಅನೇಕ ಪ್ರದೇಶಗಳನ್ನು ಆಕ್ರಮಿಸಿಕೊಂಡನೆಂತಲೂ ಆಗ್ಗೆ ಪಲ್ಲವರು ಮಣಿಯಬೇಕಾಯಿತೆಂದೂ ಇತಿಹಾಸ ಹೇಳುತ್ತದೆ. ಕಂಚಿಯ ಚರಿತ್ರೆಯಲ್ಲಿ ಈ ಘಟನೆ ಅತಿ ಮುಖ್ಯವಾಗಿ ಪರಿಣಮಿಸಿತು.

ಕೈಲಾಸನಾಥ ದೇವಸ್ಥಾನ

ಇಷ್ಟೇ ಅಲ್ಲ, ಇನ್ನೊಂದು ಬಗೆಯಲ್ಲಿಯೂ ಕಂಚಿ ಗಮನಾರ್ಹವಾದುದು. ಚಾಲುಕ್ಯ ಅರಸನಾದ ಎರಡನೆಯ ಪುಲಿಕೇಶಿಯನ್ನು ಪಲ್ಲವ ನರಸಿಂಹ ಸೋಲಿಸಿದ್ದರಿಂದ ಚಾಲುಕ್ಯರ ಆಳ್ವಿಕೆಗೆ ಭಾರಿ ಪೆಟ್ಟು ಬಿದ್ದಂತಾಯಿತು. ಆದರೆ ಚಾಲುಕ್ಯರ ಎರಡನೆಯ ವಿಕ್ರಮಾದಿತ್ಯ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದು, ಕಡೆಗೊಮ್ಮೆ ದಂಡೆತ್ತಿಬಂದು ಕಂಚಿಯನ್ನು ವಶಪಡಿಸಿಕೊಂಡ; ಪಲ್ಲವ ಸಿಂಹಾಸನಕ್ಕೆ ಹಾತೊರೆಯುತ್ತಿದ್ದ ವಿರೋಧವಾದಗಳಿಗೆ ಸಿಂಹಾಸನ ದಕ್ಕುವಂತೆ ಮಾಡಿದ. ಈ ಸಂದರ್ಭದಲ್ಲಿ ವಿಕ್ರಮಾದಿತ್ಯ ಕಂಚಿಯಿಂದ ಹಿಂತಿರುಗುವಾಗ ಅಲ್ಲಿನ ಪ್ರಖ್ಯಾತ ಶಿಲ್ಪಿ ಸರ್ವಸಿದ್ಧಿ ಆಚಾರ್ಯನನ್ನು ಕರೆದೊಯ್ದು ಅವನಿಂದ ದೇವಾಲಯಗಳನ್ನು ತನ್ನ ರಾಜ್ಯದಲ್ಲಿ ನಿರ್ಮಿಸಿದನೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಪಲ್ಲವರ ತರುವಾಯ ಚೋಳರು ಮುನ್ನೂರು ವರ್ಷಗಳ ತನಕ ಅಲ್ಲಿ ರಾಜ್ಯಭಾರ ನಡೆಸಿದರು. ಅಷ್ಟರಲ್ಲೇ ಮುಸಲ್ಮಾನರ ದಾಳಿ ಮೊದಲಾಯಿತು. ಕ್ವಿಲಾನಿನ ವೀರ ಕವಿವರ್ಮನ್ ಕುಲಶೇಖರ ಅವರ ದಾಳಿಯನ್ನು ಅಡಗಿಸಿ ಕಂಚಿಯಲ್ಲಿ ತಾನೇ ಅರಸನಾಗಿ ಪಟ್ಟಾಭಿಷಿಕ್ತನಾದ. ಇದಕ್ಕೂ ಪೂರ್ವದಲ್ಲಿ ರಾಷ್ಟ್ರಕೂಟದ ಮೂರನೆಯ ಕೃಷ್ಣ ಕಂಚಿಯನ್ನು ವಶಪಡಿಸಿಕೊಂಡಿದ್ದನೆಂದು ಇತಿಹಾಸ ಹೇಳುತ್ತದೆ. ಹೀಗೆ ಕಂಚಿ ಇತಿಹಾಸಪ್ರಸಿದ್ಧವಾಗಿ ಕೆಲವು ರಾಜವಂಶದವರ ಹಸ್ತಕ್ಷೇಪಕ್ಕೆ ಒಳಗಾಯಿತು. (ಎಂ.ವಿ.ಕೆ.)

14ನೆಯ ಶತಮಾನದಲ್ಲಿ ಕಂಚಿ ವಿಜಯನಗರ ರಾಜ್ಯದ ರಾಜಧಾನಿಯಾಗದಿದ್ದರೂ ತೊಂಡಮಂಡಲದ ಮುಖ್ಯಪಟ್ಟಣವಾಗಿ ಶೋಭಿಸಿತು. ವಿಜಯನಗರದ ರಾಜರು ಇಲ್ಲಿಗೆ ಪದೇ ಪದೇ ಬಂದು ಇಲ್ಲಿನ ದೇವರುಗಳಿಗೆ ಸೇವೆ ಸಲ್ಲಿಸುತ್ತಿದ್ದರು. ಕೆಲವು ರಾಜರ ಪಟ್ಟಾಭಿಷೇಕ ಕಂಚಿಯಲ್ಲಿ ನಡೆಯಿತು. ಈ ರಾಜರ ಕಾಲದಲ್ಲಿ ಕಂಚಿಯ ದೇವಸ್ಥಾನಗಳು ತುಂಬ ವಿಸ್ತರಿಸಿದುವು.

ಈಗಲೂ ಕಂಚಿ ಪ್ರಸಿದ್ಧ ಯಾತ್ರಾಸ್ಥಳವೆನಿಸಿದೆ. ಅಲ್ಲಿನ ಏಕಾಂಬರ ದೇವಸ್ಥಾನ ಇಡೀ ಭಾರತದಲ್ಲೇ ಅತ್ಯಂತ ದೊಡ್ಡ ದೇವಸ್ಥಾನ. ಅದರ ಗೋಪುರದ ಎತ್ತರ 57.24 ಮೀ. ಅದರ ಪೌಳಿಯ ಗೋಡೆ ಇಪ್ಪತ್ತೈದು ಎಕರೆ ಪ್ರದೇಶವನ್ನು ಒಳಗೊಂಡಿದೆ. ಕೇಂದ್ರ ದೇವಸ್ಥಾನದ ಸುತ್ತ ಅರುವತ್ತುಮೂರು ಪುರಾತನರ ವಿಗ್ರಹಗಳಿವೆ. ಇತ್ತೀಚೆಗೆ ನಾಟುಕೋಟಿ ಶೆಟ್ಟರು ಶಿಥಿಲವಾಗಿದ್ದ ಭಾಗಗಳನ್ನು ಹತ್ತಿಪ್ಪತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಸರಿಪಡಿಸಿರುತ್ತಾರೆ.

ಏಕಾಂಬರನಾಥ ದೇವಸ್ಥಾನವನ್ನು ಬಿಟ್ಟರೆ ಉಳಿದ ಶೈವ ದೇವಸ್ಥಾನಗಳಲ್ಲಿ ಕಾಮಾಕ್ಷಿ ದೇವಸ್ಥಾನ ಪ್ರಸಿದ್ಧವಾದುದು. ಮೊದಲಿಗೆ ಈ ದೇವಸ್ಥಾನದಲ್ಲಿ ಪಶುಬಲಿ ಯಥೇಷ್ಟವಾಗಿ ನಡೆಯುತ್ತಿತ್ತು. ಶಂಕರಾಚಾರ್ಯರು ಈ ದುಷ್ಟ ಸಂಪ್ರದಾಯವನ್ನು ತಪ್ಪಿಸಿ ಸಾತ್ತ್ವಿಕ ಪೂಜೆ ನಡೆಯುವಂತೆ ಕಟ್ಟುಮಾಡಿದರು. ಇಲ್ಲಿದ್ದ ಪೂಜಾರಿಗಳನ್ನು ಓಡಿಸಿ ತಮ್ಮ ಸ್ಥಳದಿಂದ ನಂಬೂದರಿ ಬ್ರಾಹ್ಮಣರನ್ನು ಕರೆಸಿ ಅವರನ್ನು ಅರ್ಚಕರನ್ನಾಗಿ ನೇಮಿಸಿದರು. ಈಗಲೂ ಇಲ್ಲಿನ ಅರ್ಚಕರು ಆ ಸಂತತಿಯವರೇ ಆಗಿದ್ದಾರೆ.

ವಿಷ್ಣುಕಂಚಿಯಲ್ಲಿ ತುಂಬ ಪ್ರಸಿದ್ಧವಾದದ್ದು ವರದರಾಜಸ್ವಾಮಿ ದೇವಸ್ಥಾನ. ಅದರಲ್ಲಿ ಚೋಳರ ಮತ್ತು ವಿಜಯನಗರ ರಾಜರ ಶಾಸನಗಳಿವೆ. ದೇವಸ್ಥಾನದ ಉದ್ದ 1,200 ಅಡಿ, ಅಗಲ 800 ಅಡಿ. ವಿಸ್ತಾರದಲ್ಲಿ ಇದು ಇತರ ದೇವಸ್ಥಾನಗಳಿಗಿಂತ ದೊಡ್ಡದಾದರೂ ಏಕಾಂಬರನಾಥ ದೇವಸ್ಥಾನದಷ್ಟು ದೊಡ್ಡದಲ್ಲ. ಏಕಾಂಬರನಾಥ ದೇವಸ್ಥಾನದಲ್ಲಿ

ವರದರಾಜಸ್ವಾಮಿ ದೇವಸ್ಥಾನ

ಶೈವಪುರಾತನರಿಗೆ ಪೂಜೆ ಸಲ್ಲುವಂತೆ ಈ ದೇವಸ್ಥಾನದಲ್ಲಿ ವಿಷ್ಣುಭಕ್ತರಾದ ಆಳ್ವಾರುಗಳಿಗೆ ಮತ್ತು ರಾಮಾನುಜಾಚಾರ್ಯರಿಗೆ ಪೂಜೆ ಸಲ್ಲುತ್ತದೆ. ಕಂಚಿಯಲ್ಲಿ ನಡೆಯುವ ಉತ್ಸವಗಳೆಲ್ಲೆಲ್ಲ ವರದರಾಜಸ್ವಾಮಿಯ ಉತ್ಸವಗಳು ತುಂಬ ಜನಮೆಚ್ಚಿನವು. ನಿತ್ಯೋತ್ಸವ, ಮಾಸೋತ್ಸವಗಳು ವಿಜೃಂಭಣೆಯಿಂದ ಜರುಗುತ್ತದೆ. ಇಲ್ಲಿನ ಸಂವತ್ಸರೋತ್ಸವ ಹತ್ತುಹನ್ನೆರಡು ದಿನಗಳ ಕಾಲ ನಡೆಯುತ್ತದೆ. ಇಲ್ಲಿ ನಡೆಯುವ ದೇವರ ಮೆರವಣಿಗೆಯ ಬಳಸು ಆರು ಮೈಲಿ; ಉತ್ಸವ ವಿಷ್ಣುಕಂಚಿಯಿಂದ ಶಿವಕಂಚಿಗೆ ಹೋಗಿ ಮತ್ತೆ ವಿಷ್ಣುಕಂಚಿಗೆ ಹಿಂತಿರುಗುತ್ತದೆ. ಇಲ್ಲಿಯ ಸ್ಥಳಪುರಾಣದ ಪ್ರಕಾರ ಶಿವನೂ ವಿಷ್ಣುವೂ ಭಾವ ಮೈದುನರು. ವಾರ್ಷಿಕೋತ್ಸವದ ಏಳನೆಯ ದಿವಸ ಹೊರಟ ಮೆರವಣಿಗೆ ಕೆಲವು ಕಾಲ ಏಕಾಂಬರ ದೇವಾಲಯದ ಮುಂದೆ ತಂಗುತ್ತದೆ. (ಚಿ.ಎಚ್.)

**ಉತ್ಖನನಗಳು:** ಇಲ್ಲಿ ಹಲವಾರು ಬಾರಿ ನಡೆದ ಪ್ರಾಕ್ತನ ಶಾಸ್ತ್ರೀಯ ಉತ್ಖನನಗಳು ಕಂಚಿಯ ಇತಿಹಾಸದ ಆರಂಭಕಾಲದ ಮಾಹಿತಿಗಳನ್ನು ಒದಗಿಸಿಕೊಡುತ್ತವೆ. ಪಾಲೆಯರ ದಿಬ್ಬ ಅಥವಾ ಪಲ್ಲವ ಮೇಟು ಎಂಬ ಇತ್ತರವಾದ ಸ್ಥಳದಲ್ಲಿ 1952–53ರಲ್ಲಿ ನಡೆಸಿದ ಉತ್ಖನನದಿಂದ ಪಲ್ಲವರ ಕಾಲಕ್ಕೆ ನಿರ್ದೇಶಿಸಬಹುದಾದ ಯಾವ ಮಾಹಿತಿಗಳೂ ದೊರಕಿರಲಿಲ್ಲ. ಅನೇಕ ಶಂಖಗಳೂ ಶಂಖಗಳಿಂದ ಮಾಡಿದ ಬಳೆಯ ಚೂರುಗಳೂ ದೊರಕಿದುವು. ಆನಂತರ 1965–66ರಲ್ಲಿ ಅದೇ ಇಲಾಖೆಯವರು ಉತ್ಖನನ ನಡೆಸಿದರು. ಇತ್ತೀಚೆಗೆ 1968–69ಮತ್ತು 1969–70ರಲ್ಲಿ ಮದರಾಸು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗದವರು ಉತ್ಖನನಗಳನ್ನು ನಡೆಸಿದರು. ಈ ಸಂಶೋಧನೆಗಳಿಂದ ಕಂಚಿ ಪ್ರ.ಶ.ದ ಆರಂಭ ಕಾಲದಿಂದಲೂ ನಾಗರಿಕತೆಯ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಪ್ರ.ಶ.ದ ಮೊದಲೆರಡು ಶತಮಾನಗಳಲ್ಲಿ ರೋಮನರು ದಕ್ಷಿಣ ಭಾರತದೊಡನೆ ವಾಣಿಜ್ಯ ಸಂಬಂಧ ಪಡೆದಿದ್ದ ಸಂಗತಿ ಪೂರ್ವತೀರದಲ್ಲಿ ಪಾಂಡಿಚೇರಿಯ ಬಳಿಯಿರುವ ಅರಿಕಮೇಡು ಮತ್ತು ಕಾವೇರಿಯ ಮುಖಜಭೂಮಿಯಲ್ಲಿರುವ ಕಾವೇರಿ ಪೂಂಪಟ್ಟಿನಮ್ ಉತ್ಖನನಗಳಿಂದ ತಿಳಿದು ಬಂದಿದೆ. **(ನೋಡಿ– ಅರಿಕಮೇಡು) (ನೋಡಿ– ಕಾವೇರಿ–ಪೂಂಪಟ್ಟಿನಂ)**

ಒಳಪ್ರದೇಶದಲ್ಲಿ ಅವರ ವ್ಯಾಪಾರ ಕೇಂದ್ರಗಳಿದ್ದುದಕ್ಕೆ ದಕ್ಷಿಣ ಭಾರತದ ಹಲವಾರು ಭಾಗಗಳಲ್ಲಿ ದೊರೆತಿರುವ ಅವರ ನಾಣ್ಯಗಳು ಮತ್ತಿತರ ಅವಶೇಷಗಳು ಸಾಕ್ಷಿಗಳಾಗಿವೆ. ಚಿತ್ರದುರ್ಗದ ಪರಿಸರದಲ್ಲಿರುವ ಚಂದ್ರವಳ್ಳಿ, ಕಾವೇರಿ ದಂಡೆಯಲ್ಲಿ ತಿರುಚಿರಾಪಳ್ಳಿಯ ಭಾಗವಾದ ಪ್ರಾಚೀನ ಚೋಳ ರಾಜಧಾನಿ ಉರೈಯೂರುಗಳಲ್ಲಿ ನಡೆದ ಉತ್ಖನನಗಳೂ ಈ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನೊದಗಿಸಿವೆ. ಪ್ರಸ್ತುತ ಕಂಚಿ ಉತ್ಖನನಗಳು ಸಹ ಸಮಕಾಲೀನ ರೋಮನರ ಅವಶೇಷಗಳನ್ನು ಒದಗಿಸಿವೆ. ಪ್ರ.ಶ.ದ ಆರಂಭಕಾಲಕ್ಕೆ ನಿರ್ದೇಶಿಸಿಬಹುದಾದ ಪದರಗಳಲ್ಲಿ ರೋಮನರು ಎಣ್ಣೆ ಮತ್ತು ಮದ್ಯಗಳ ದಾಸ್ತಾನಿಗೆ ಉಪಯೋಗಿಸುತ್ತಿದ್ದ ಸುಟ್ಟ ಮಣ್ಣಿನ ನೀಳವಾದ ಹೂಜಿಗಳು (ಅಂಪೋರ) 36ಕ್ಕೂ ಹೆಚ್ಚು ಸಂಖ್ಯೆಯಲ್ಲಿ ದೊರಕಿ, ಇಲ್ಲಿದ್ದ ರೋಮನರ ವ್ಯಾಪಾರಕೋಠಿಯಪ್ರಾಮುಖ್ಯವನ್ನು ತೋರಿಸುತ್ತದೆ. ಸು. ಅದೇ ಕಾಲಕ್ಕೆ ನಿರ್ದೇಶಿಸಬಹುದಾದ ಸುಟ್ಟ ಇಟ್ಟಿಗೆಯ ಕಟ್ಟಡವೊಂದರ ಅವಶೇಷಗಳೂ ಬೆಳಕಿಗೆ ಬಂದಿವೆ. ಸರಾಸರಿ 18×9×3 ಅಂಗುಲಗಳ ಅಳತೆಯ ಇಟ್ಟಿಗೆಗಳು ದಕ್ಷಿಣ ಭಾರತದಲ್ಲಿ ಶಾತವಾಹನರ ಕಾಲದಿಂದ ಹಲವಾರು ಶತಮಾನಗಳವರೆಗೂ ಬಳಕೆಯಲ್ಲಿದ್ದುವು. ಈ ಉತ್ಖನನಗಳಲ್ಲಿ ಬೆಳಕಿಗೆ ಬಂದ ಮತ್ತೊಂದು ಮುಖ್ಯ ಸಂಗತಿಯೆಂದರೆ ಮಧ್ಯ ಚಾರಿತ್ರಿಕ ಯುಗಕ್ಕೆ ನಿರ್ದೇಶಿಸಬಹುದಾದ ಸುಟ್ಟಮಣ್ಣಿನ ಬಳೆಯಾಕಾರದ ವಲಯಗಳಿಂದ ಪಕ್ಕಗಳನ್ನು ಭದ್ರಪಡಿಸಿದ ನೀರಿನ ಬಾವಿಗಳು. ಈ ರೀತಿಯ ಬಾವಿಗಳು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದುವು. ಇವಲ್ಲದೆ ವಿವಿಧ ರೀತಿಯ ಮಡಕೆ ಚೂರುಗಳನ್ನು ಮಣಿಗಳು, ಬಳೆ ಚೂರುಗಳು, ಸುಟ್ಟಮಣ್ಣಿನ ವಸ್ತುಗಳು ಮತ್ತು ಕೆಲವು ಪುರಾತನ ನಾಣ್ಯಗಳು ದೊರಕಿ ಅಂದಂದಿನ ಜನಜೀವನದ ಮೇಲೆ ಬೆಳಕನ್ನು ಬೀರಿವೆ.

**ಪ್ರಾಕ್ತನ ವಿಚಾರ:** ಪ್ರ.ಶ. 2ನೆಯ ಶತಮಾನಕ್ಕೂ ಮೊದಲು ಮರ, ಇಟ್ಟಿಗೆ, ಗಾರೆಗಳಿಂದ ಕಟ್ಟಿದುವೆಂದು ಹೇಳಲಾದ ಏಕಾಂಬರೇಶ್ವರ, ತಿರುವೇರ್‌ಕಾ, ತಿರುಮೇಟ್ರಳಿ, ಕಚ್ಛಪೇಶ್ವರ ಮುಂತಾದ ದೇವಾಲಯಗಳ ವಿಷಯ ಪ್ರಸ್ತಾಪವಾಗಿದ್ದರೂ ಅವುಗಳ ಜೀರ್ಣೋದ್ಧಾರಕಾಲದಲ್ಲಿ ಕಲ್ಲನ್ನು ಬಳಸಲಾಗಿದೆ. ಮೊಟ್ಟಮೊದಲಿಗೆ ಈ ಪ್ರಾಂತ್ಯದಲ್ಲಿ ದೇವಾಲಯ ನಿರ್ಮಾಣಕ್ಕೆ ಕಲ್ಲನ್ನು ಉಪಯೋಗಕ್ಕೆ ತಂದ ಮೊದಲನೆಯದು ಮಹೇಂದ್ರ ಪಲ್ಲವನಕಾಲದ (ಪ್ರ.ಶ. 610–30) ದೇವಾಲಯವಾವುದೂ ಕಂಚಿಯಲ್ಲಿ ಈಗಿಲ್ಲದಿದ್ದರೂ ಅವನ ಕಾಲದ ದೇವಾಲಯವೊಂದರ ಶಾಸನಗಳಿಂದೊಡಗೂಡಿದ ಕೆಲವು ಕಂಬಗಳು ಏಕಾಂಬರೇಶ್ವರ ದೇವಾಲಯದಲ್ಲಿ ಕಂಡುಬಂದಿವೆ.

ಇಲ್ಲಿನ ದೇವಮಂದಿರಗಳು, ಮೂರ್ತಿಗಳು ದಕ್ಷಿಣ ಭಾರತದ ಕಲಾವೈಭವದ ಔನತ್ಯವನ್ನು ಸೂಚಿಸುತ್ತವೆ. ಪಲ್ಲವ ರಾಜಸಿಂಹ ಕಟ್ಟಿಸಿದ ರಾಜಸಿಂಹೇಶ್ವರಗೃಹವೇ (ಪ್ರ.ಶ. 7ನೆಯ ಶತಮಾನ) ಕೈಲಾಸನಾಥ ದೇವಾಲಯ, ಎರಡನೆಯ ವಿಕ್ರಮಾದಿತ್ಯ ಕಂಚಿಯನ್ನು ಗೆದ್ದು ಅಲ್ಲಿಯ ಸಂಪತ್ತನ್ನು ಸ್ವಾಧೀನಪಡಿಸಿಕೊಂಡು ಈ ಭವ್ಯವೂ ಸುಂದರವೂ ಆದ ಶಿವಾಲಯವನ್ನು ನೋಡಿ ಭಕ್ತಿಭರದಿಂದ ಆ ಸಂಪತ್ತನ್ನೆಲ್ಲ ಈ ದೇವಾಲಯಕ್ಕೆ ದಾನಮಾಡಿದನೆಂದು ಅಲ್ಲಿ ಕೊರೆದಿರುವ ಅವನ ಕನ್ನಡ ಶಾಸನದಿಂದ ಗೊತ್ತಾಗುತ್ತದೆ.

ವೈಕುಂಠ ಪೆರುಮಾಳ್ ದೇವಸ್ಥಾನ

ಈ ದೇವಾಲಯ ಶುದ್ಧವಾದ ದ್ರಾವಿಡ (ದಕ್ಷಿಣ) ಶೈಲಿಯಲ್ಲಿ ಕಟ್ಟಿದ್ದಾಗಿದೆ. ಇದಕ್ಕೆ ಪಲ್ಲವ ಶೈಲಿಯೆಂದೂ ಹೆಸರಿದೆ. ಇಲ್ಲಿಯ ಶಿವ, ಸೋಮಸ್ಕಂದ ಮೂರ್ತಿಗಳೂ ಮಹಿಷಾಸುರಮರ್ದಿನಿಯ ಮೂರ್ತಿಯೂ ನಟರಾಜನ ವಿಗ್ರಹಗಳೂ ಪಲ್ಲವಶಿಲ್ಪದ ಖ್ಯಾತ ಮಾದರಿಗಳು. ವೈಕುಂಠ ಪೆರುಮಾಳ್, ಮುಕ್ತೇಶ್ವರ, ಮತಂಗೇಶ್ವರ, ಐರಾವತೇಶ್ವರ ಮೊದಲಾದ ದೇವಸ್ಥಾನಗಳು ಪಲ್ಲವ ಶೈಲಿಯಲ್ಲಿದ್ದು ಗರ್ಭಗೃಹ, ಅರ್ಧಮಂಟಪ, ವಿಮಾನಗಳಿಂದಲೂ ಕುಸುರಿ ರೇಖಾಚಿತ್ರಗಳುಳ್ಳ ಕಂಬ ಮತ್ತು ವಿವಿಧ ಸುಂದರ ಸ್ತ್ರೀಪುರುಷರ ಶಿಲ್ಪಗಳಿಂದಲೂ ಅಲಂಕೃತವಾಗಿ ಸುಂದರವಾಗಿವೆ.

ಚೋಳರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಇಲ್ಲಿ ಅನೇಕ ದೇವಮಂದಿರಗಳನ್ನು ಕಟ್ಟಿಸಿದ್ದಾರೆ. ಸೊಕ್ಕೇಶ್ವರ, ಪಾಂಡವ ಪೆರುಮಾಳ್, ಜ್ವರಹರೇಶ್ವರ, ಕಾಮಾಕ್ಷಿ ದೇವಾಲಯಗಳು ತಮ್ಮ ಎತ್ತರವಾದ ಭವ್ಯ ವಿಮಾನಗಳಿಂದ ಕಲಾವಿದರ ಚಿತ್ತವನ್ನು ಆಕರ್ಷಿಸುತ್ತವೆ. ವಿಜಯನಗರದ ಅರಸರು ಹೊಸತಾಗಿ ದೇವಾಲಯಗಳನ್ನು ಕಟ್ಟಿಸದಿದ್ದರೂ ಹಳೆಯ ಮಂದಿರಗಳನ್ನು ಜೀರ್ಣೋದ್ಧಾರ ಮಾಡಿ, ಅನೇಕ ಮಂಟಪ, ಪ್ರಾಕಾರ, ಗೋಪುರಗಳನ್ನು ಜೋಡಿಸಿ ವಿಸ್ತಾರಗೊಳಿಸಿ ಅಲ್ಲಿನ ವಾಸ್ತುಶಿಲ್ಪದ ಭವ್ಯತೆಯನ್ನು ಹೆಚ್ಚಿಸಿದ್ದಾರೆ. ಕೃಷ್ಣದೇವರಾಯ ಏಕಾಂಬರೇಶ್ವರ ದೇವಾಲಯದ ದಕ್ಷಿಣಗೋಪುರವನ್ನು ಕಟ್ಟಿಸಿದ. ಇದು ದಕ್ಷಿಣ ಹಿಂದೂಸ್ಥಾನದಲ್ಲಿಯೇ ಎಲ್ಲಕ್ಕೂ ಎತ್ತರವೂ ಅಗಲವೂ ಆದುದಾಗಿದೆ. ಹಂಪೆಯ ವಿಜಯ ವಿಟ್ಠಲನ ಗುಡಿಯ ಕಲಾ ಕುಶಲತೆಯನ್ನು ಇಲ್ಲಿ ಕಾಣಬಹುದು. ಹರಿಹರ (ಪ್ರ.ಶ. 1393) ಕಾಮಾಕ್ಷಿ ಗುಡಿಯ ವಿಮಾನವನ್ನು ಕಟ್ಟಿಸಿದ. ಇಲ್ಲಿಯ ಕಲ್ಲಿನ ಮಂಟಪದಲ್ಲಿ ಕೂಡಿಸಲ್ಪಟ್ಟ ಕೂರ್ಮನ ವಿಗ್ರಹ ಅತ್ಯಂತ ಸುಂದರವಾಗಿದೆ. ನೂರು ಕಂಬದ ವರದರಾಜಮಂದಿರದ ಭವ್ಯವಾದ ಮಂಟಪ ಕೆತ್ತನೆಯ ಕುಶಲತೆಯ ಪರಿಕಾಷ್ಠೆಯನ್ನು ತೋರಿಸುತ್ತದೆ. ಏಕಾಂಬರೇಶ್ವರ ಗುಡಿ, ಕಾಮಾಕ್ಷಿ ಗುಡಿ ಮತ್ತು ವರದರಾಜ ಮಂದಿರಗಳು ಶಿಲ್ಪಕಲೆಯ ಆಗರ ಗಳೆನಿಸಿವೆ.

ತಂತ್ರೋದ್ರೀಶ್ವರ ದೇವಾಲಯದ ಒಂದು ಭಾಗದ ಪಲ್ಲವ ಕಲಾಕೃತಿ

ಕಂಚಿಯಲ್ಲಿ ಶೈವ, ವೈಷ್ಣವ ಮಂದಿರಗಳಲ್ಲದೆ ಜೈನ ತೀರ್ಥಂಕರರ ಮತ್ತು ಬುದ್ಧನ ವಿಗ್ರಹಗಳೂ ವಿಶೇಷವಾಗಿ ಸಿಕ್ಕಿವೆ. ಜೈನರ ಚಂದ್ರಪ್ರಭ ಮತ್ತು ವರ್ಧಮಾನರ ಬಸದಿಗಳು ಪಲ್ಲವ ಶೈಲಿಯಲ್ಲಿ ಕಟ್ಟಿದವಾಗಿವೆ. ವರ್ಧಮಾನ ಬಸದಿಯ ಸಂಗೀತ ಮಂಟಪದ ಒಳ ಛತ್ತಿನಲ್ಲಿಯೂ ಮುಖ ಮಂಟಪದಲ್ಲಿಯೂ 11ನೆಯ ಶತಮಾನದ ಬಣ್ಣದ ಚಿತ್ರಗಳು ತೀರ್ಥಂಕರರ ಜೀವನ ಚರಿತ್ರೆಯನ್ನು ಚಿತ್ರಿಸುತ್ತವೆ.

ಕಾಂಚೀ ನಗರ ದಕ್ಷಿಣದ ವಾಸ್ತು ಮತ್ತು ಮೂರ್ತಿ ಶಿಲ್ಪದ ಬೆಳೆವಣಿಗೆಯ ಕ್ರಮವನ್ನು ತೋರಿಸುವ ಭವ್ಯ ಪ್ರದರ್ಶನಾಲಯವೆಂದು ಹೇಳಬಹುದು. ಬಾದಾಮಿ, ಪಟ್ಟದಕಲ್ಲು, ಐಹೊಳೆಗಳು ಚಾಲುಕ್ಯ ಶಿಲ್ಪದ ಮಾದರಿಗಳಾದರೆ ಕಂಚಿ, ಮಹಾಬಲಿಪುರ, ತಿರುಕ್ಕುಳಿಕ್ಕುನ್ರಂ ಮೊದಲಾದ ಕ್ಷೇತ್ರಗಳು ಪಲ್ಲವ ಮತ್ತು ಚೋಳರ ಮಾದರಿಗಳಾಗಿವೆ. (ಆರ್.ಎಸ್.ಪಿ)

ಅನಂತರದ 2ನೆಯ ನರಸಿಂಹವರ್ಮ ರಾಜಸಿಂಹನಿಂದ (ಪ್ರ.ಶ. 690–728) ನಿರ್ಮಿಸಲ್ಪಟ್ಟ ರಾಜಸಿಂಹೇಶ್ವರ ಅಥವಾ ಕೈಲಾಸನಾಥ ದೇವಾಲಯ ಪಲ್ಲವನಿರ್ಮಿತ ವಾಸ್ತುಶಿಲ್ಪಗಳಲ್ಲೇ ಅತ್ಯಂತ ಸುಂದರವಾದುದು. ಸುಂದರವಾದ ಗರ್ಭಗುಡಿಯ ಮೇಲಿರುವ ವಿಮಾನ, ಕಂಬಗಳಿಂದ ಕೂಡಿದ ಮಂಟಪ, ಮುಂಭಾಗ ಮತ್ತು ಸುತ್ತಲೂ ಪ್ರಾಕಾರದಲ್ಲಿರುವ 58 ಪುಟ್ಟ ಗುಡಿಗಳೂ ಅವುಗಳಲ್ಲಿರುವ ಮೆದುವಾದ ಮರಳುಗಲ್ಲಿನಿಂದ ಮಾಡಲ್ಪಟ್ಟಿರುವ ಶಿವ ವಿಗ್ರಹಗಳೂ ಈ ದೇವಾಲಯದ ಹಿರಿಮೆಯ ಪ್ರತೀಕಗಳು. ಮೊದಲಿಗೆ ಈ ವಿಗ್ರಹಗಳನ್ನು ಅಲಂಕರಿಸಲು ಬಳಸಿದ ಆ ಬಣ್ಣಗಳ ಚಿಹ್ನೆಗಳು ಮಾತ್ರ ಈಗ ಉಳಿದುಬಂದಿದೆ. ಈ ಮಂದಿರದ ಕಂಬವೊಂದರ ಮೇಲೆ ಚಾಲುಕ್ಯ ಅರಸ 2ನೆಯ ವಿಕ್ರಮಾದಿತ್ಯ ಕಂಚಿಯನ್ನು ಗೆದ್ದಾಗ ಕೆತ್ತಿಸಿದ ಕನ್ನಡ ಶಾಸನ ಕಂಡುಬರುತ್ತದೆ.

ಅನಂತರ ನಿರ್ಮಿತವಾದ ವೈಕುಂಠ ಪೆರುಮಾಳ್ ದೇವಾಲಯ ಅಮೋಘವಾಗಿದ್ದು ಚಾರಿತ್ರಿಕ ದೃಷ್ಟಿಯಲ್ಲಿ ಪಲ್ಲವನಿರ್ಮಿತ ಮಂದಿರಗಳಲ್ಲಿ ಅತ್ಯಂತ ಗಣ್ಯವಾದುದಾಗಿದೆ. ನಂದಿವರ್ಮ ಪಲ್ಲವ ಮಲ್ಲನಿಂದ ನಿರ್ಮಿತವಾದ ಇದಕ್ಕೆ ಪರಮೇಶ್ವರ ವಿಣ್ಣಗರವೆಂದೂ ಹೆಸರಿದೆ. ಗರ್ಭಗುಡಿ, ಅಂತರಾಳ, ಕಂಬಗಳಿಂದ ಕೂಡಿದ ಮಂಟಪ ಮತ್ತು ಚಾವಣಿಯುಳ್ಳ ಮೊಗಸಾಲೆಗಳಿಂದ ಕೂಡಿರುವ ಈ ದೇವಾಲಯದ ವಿಮಾನ ನಾಲ್ಕಂತಸ್ತುಗಳಲ್ಲಿ ಪ್ರತಿಯೊಂದರಲ್ಲೂ ಒಂದು ಗುಡಿಯಿದ್ದು ಎರಡಂತಸ್ತುಗಳಿಗೊಂದರಂತೆ ಪ್ರದಕ್ಷಿಣೆಪಥವೂ ಇದೆ. ಇಲ್ಲಿ ಅನೇಕ ಶಿಲಾಶಾಸನಗಳಿವೆ. ಪಲ್ಲವ ವಾಸ್ತುಶೈಲಿಯ ಔನ್ನತ್ಯವನ್ನು ಈ ದೇವಾಲಯದಲ್ಲಿ ನೋಡಬಹುದು. ಮೇಲಿನೆರಡು ದೇವಾಲಯಗಳೂ ರಾಜಸಿಂಹಶೈಲಿಗೆ ಸೇರಿದುವು.

ಅನಂತರ ನಿರ್ಮಿತವಾದ ನಂದಿವರ್ಮ ಪಲ್ಲವ ಮಲ್ಲನ ಶೈಲಿಗೆ ಸೇರಿದ ಮತ್ತು ಆತನ ರಾಣಿಯಿಂದ ನಿರ್ಮಿತವಾದ ಮುಕ್ತೇಶ್ವರ ಶಿವಾಲಯ ಮಹಾದೇವೀಶ್ವರವೆಂದು ಶಾಸನಗಳಲ್ಲಿ ಕರೆಯಲ್ಪಟ್ಟಿದೆ. ಎತ್ತರವಾದ ಜಗತಿಯ ಮೇಲಿರುವ ಈ ಮಂದಿರದಲ್ಲಿ ಗರ್ಭಗೃಹವಿದ್ದು ಮುಂಭಾಗದಲ್ಲಿ ಅಂತರಾಳಗಳಿವೆ. ಶಿವಲಿಂಗದ ಹಿಂಬದಿಯ ಗೋಡೆಯ ಮೇಲೆ ಸೋಮಾಸ್ಕಂ ವಿಗ್ರಹ ಕೆತ್ತಲ್ಪಟ್ಟಿವೆ. ಇಲ್ಲಿನ ಕಂಬಗಳ ಬುಡದಲ್ಲಿ ಸಿಂಹಗಳು ರೂಪಿತವಾಗಿವೆ. ಈ ಎರಡೂ ರಾಜಸಿಂಹ ವಾಸ್ತುಶೈಲಿಯ ಲಕ್ಷಣಗಳು. ಅಂತರಾಳದಲ್ಲಿ ರಾವಣಾನುಗ್ರಹ ಮತ್ತು ನೃತ್ಯ ಭಂಗಿಯಲ್ಲಿರುವ ಶಿವಮೂರ್ತಿಗಳ ಕೆತ್ತನೆಗಳಿವೆ. ಪಕ್ಕದಲ್ಲಿರುವ ಮಾತಂಗೇಶ್ವರ ದೇವಾಲಯ ನಂದಿವರ್ಮನ ಕಾಲಕ್ಕೆ ಸೇರಿದುದು. ಮಟ್ಟದಾದ ವಾಲೀಶ್ವರನ ಮಂದಿರವೂ ಈ ಕಾಲಕ್ಕೆ ಸೇರುತ್ತದೆ. ಇಲ್ಲಿನ ಲಿಂಗದ ಮೇಲೆ 32 ಪಟ್ಟಿಗಳಿವೆ. ಹಿಂಬದಿಯ ಗೋಡೆಯಲ್ಲಿ ಸೋಮಾಸ್ಕಂಧ ಫಲಕದ ಬದಲು ಉಮಾಮಹೇಶ್ವರರ ಕೆತ್ತನೆಯಿದೆ. ಇದಲ್ಲದೆ ಐರಾವತೇಶ್ವರ, ತ್ರಿಪುರಾಂತಕೇಶ್ವರ, ಜಲಂಧರೇಶ್ವರ ಮೊದಲಾದ ಹಲವಾರು ದೇವಾಲಯಗಳು ಪಲ್ಲವರ ಕಾಲಕ್ಕೆ ಸೇರುತ್ತದೆ.

ಅನಂತರ ಬಂದ ಚೋಳರ ಕಾಲದ ಹಲವಾರು ದೇವಾಲಯಗಳು ಇಲ್ಲವೆ. ಅವುಗಳಲ್ಲಿ ಮುಖ್ಯವಾದುವೆಂದರೆ ಚೊಕ್ಕೀಶ್ವರ, ಅನೇಕ ತಂಗಾವಥ, ಜ್ವರಹರೇಶ್ವರ ಪಾಂಡವ ಪೆರುಮಾಳ್ ಮುಂತಾದವು. ಚೊಕ್ಕೀಶ್ವರ ದೇವಾಲಯ ಮೊದಲ ಪರಾಂತಕನ ಕಾಲಕ್ಕೆ ಸೇರುತ್ತದೆ. ಅನೇಕ ತಂಗಾವಥ ದೇವಾಲಯದ ಕರ್ತೃ ಮೊದಲನೆಯ ಕುಲೋತ್ತುಂಗ ಚೋಳ.

ಈಗ ಜನಪ್ರಿಯವಾಗಿ ಪೂಜೆಗೊಳ್ಳುತ್ತಿರುವ ಮುಖ್ಯ ದೇವಾಲಯಗಳಾದ ಏಕಾಂಬರೇಶ್ವರ, ವರದರಾಜ ಪೆರುಮಾಳ್ ಮತ್ತು ಕಾಮಾಕ್ಷಿ ದೇವಾಲಯಗಳು ವಿಜಯನಗರದ ಕಾಲದಲ್ಲಿ ಬಹುಮಟ್ಟಿಗೆ ಜೀರ್ಣೋದ್ಧಾರಗೊಂಡಿವೆ. ಏಕಾಂಬರೇಶ್ವರ ದೇವಾಲಯದ ಒಳಭಾಗ, ಗರ್ಭಗೃಹ ಮತ್ತು ಅದರ ಪರಿಸರಗಳು ಮೂರನೆಯ ಕುಲೋತ್ತುಂಗನ ಕಾಲಕ್ಕೆ ಸೇರಬಹುದು. ಈ ವಿಶಾಲ ದೇವಾಲಯ ಕಂಚಿಯಲ್ಲೇ ಅತ್ಯಂತ ಎತ್ತರವಾದ ಗೋಪುರಗಳನ್ನು ಹೊಂದಿದೆ. ಒಂಬತ್ತು ಅಂತಸ್ತುಗಳುಳ್ಳ ದಕ್ಷಿಣ ಭಾರತದ ಎತ್ತರವಾದ ಗೋಪುರಗಳನ್ನು ಹೊಂದಿದೆ. ಒಂಬತ್ತು ಅಂತಸ್ತುಗಳುಳ್ಳ ದಕ್ಷಿಣ ಭಾರತದ ಎತ್ತರವಾದ ಗೋಪುರಗಳಲ್ಲೊಂದಾದ ದಕ್ಷಿಣದ ಗೋಪುರ ಶ್ರೀಕೃಷ್ಣ ದೇವರಾಯ ನಿರ್ಮಿತ. ಆದಿಶಂಕರಾಚಾರ್ಯರ ಕಾಲಕ್ಕಿಂತಲೂ ಇದು ಹಳೆಯದೆಂದೂ ಇಲ್ಲಿರುವ ಶ್ರೀಚಕ್ರ ಅವರಿಂದ ಸ್ಥಾಪಿಸಲ್ಪಟ್ಟಿತೆಂದೂ ಪ್ರತೀತಿಗಳಿದ್ದರೂ ಈಗಿನ ಕಟ್ಟಡದ ಹಲಭಾಗಗಳು ಪ್ರ.ಶ. 12ನೆಯ ಶತಮಾನಕ್ಕೆ ಸೇರುತ್ತವೆ. ಮತ್ತೊಂದು ಮುಖ್ಯ ಮಂದಿರವಾದ ವರದರಾಜ ದೇವಾಲಯ ಹಸ್ತಿಗಿರಿ ಎಂಬ ಗುಡ್ಡದ ಮೇಲೆ ಸ್ಥಾಪಿತವಾಗಿದೆ. ಈ ಮಂದಿರದ ವಿಶಿಷ್ಟ ಲಕ್ಷಣವೆಂದರೆ ಗರ್ಭಗುಡಿ ಎರಡನೆಯ ಅಂತಸ್ತಿನಲ್ಲಿದೆ. ವಿಜಯನಗರ ವಾಸ್ತುಶೈಲಿಯ ಮುಖ್ಯ ಲಕ್ಷಣಗಳನ್ನು ಇಲ್ಲಿ ಕಾಣಬಹುದು. ಕಂಬಗಳ ಮೇಲಿನ ಮೂರ್ತಿಶಿಲ್ಪಗಳು ಜೀವಂತಸುಂದರ ಕಲಾಕೃತಿಗಳಾಗಿವೆ.

ಇದರ ಪಕ್ಕದಲ್ಲಿರುವ ಜೈನಕಂಚಿಯೆಂದು ಹೆಸರಾದ ತಿರುಪ್ಪರುತ್ತಿ ಕುಂಡ್ರಮ್ ಜೈನಬಸದಿಗಳಿಂದಲೂ ಇತರ ಅವಶೇಷಗಳಿಂದಲೂ ಕೂಡಿದೆ. ಇಲ್ಲಿರುವ ಎರಡು ಬಸದಿಗಳಲ್ಲಿ ಸಣ್ಣದಾದ ಚಂದ್ರಪ್ರಭಾಲಯ ಪಲ್ಲವ ಕಾಲಕ್ಕೂ ದೊಡ್ಡದಾದ ವರ್ಧಮಾನ ಬಸದಿ ಚೋಳರ ಕಾಲಕ್ಕೂ ಸೇರುತ್ತದೆ. (ಎಚ್.ಎಸ್.ಆರ್.)

**ಕಂಚಿನ ಯುಗ :** ಪೂರ್ವಶಿಲಾಯುಗ, ನವಶಿಲಾಯುಗ ಸಂಸ್ಕೃತಿಗಳ ಅನಂತರ ರೂಢಿಗೆ ಬಂದ ಸಂಸ್ಕೃತಿಯನ್ನು ಸೂಚಿಸುವ ಯುಗ, ತವರ ಮತ್ತು ತಾಮ್ರಗಳ ಮಿಶ್ರಲೋಹವಾದ ಕಂಚಿನಿಂದ ಮಾಡಿದ ಆಯುಧೋಪಕರಣಗಳ ಬಳಕೆ ಪ್ರಧಾನವಾಗಿದ್ದುದರಿಂದ ಈ ಯುಗಕ್ಕೆ ಕಂಚಿನ ಯುಗವೆಂದು ಹೆಸರು. ಈ ಕಾಲದಲ್ಲೂ ಕಲ್ಲಿನಾಯುಧಗಳು ಬಳಕೆಯಲ್ಲಿ ಮುಂದುವರಿಯುತ್ತಿದ್ದವು. ಈ ಸಂಸ್ಕೃತಿಯ ಮೊದಲ ಹಂತದಲ್ಲಿ ಶುದ್ಧವಾದ ತಾಮ್ರದಿಂದ ಮಾಡಿದ ಮತ್ತು ಕಲ್ಲಿನ ಆಯುಧೋಪಕರಣಗಳು ರೂಢಿಯಲ್ಲಿದ್ದುದರಿಂದ, ಆ ಕಾಲವನ್ನು ತಾಮ್ರ ಶಿಲಾಯುಗವೆಂದು ಪುರಾತತ್ತ್ವಜ್ಞರು ಕರೆದಿದ್ದಾರೆ. ಮೆಸೊಪೊಟೇಮಿಯದ ಪ್ರಾಗೈತಿಹಾಸಿಕ ಯುಗಕ್ಕೆ ಸೇರಿದ ಹಲಾಫ್ ಸಂಸ್ಕೃತಿಯಲ್ಲೂ (ಪ್ರ.ಶ.ಪೂ. 4000 ವರ್ಷಗಳ ಸು.) ಇರಾನಿನಿಂದ ಸೈಲೀಷಿಯದವರೆಗಿನ ಸಮಕಾಲೀನ ಸಂಸ್ಕೃತಿಗಳಲ್ಲೂ ಮೊದಲ ಬಾರಿಗೆ ತಾಮ್ರ ಉಪಯೋಗಿಸಲ್ಪಟ್ಟಿತು. ಪ್ರ.ಶ.ಪೂ. 4ನೆಯ ಸಹಸ್ರಮಾನದಲ್ಲಿ ಲೋಹಗಾರಿಕೆ ಬಹಳ ಮುಂದುವರಿದು ಅನೇಕ ರೀತಿಯ ಆಯುಧೋಪಕರಣಗಳು ಬಳಕೆಗೆ ಬಂದು ಮೆಸೊಪೊಟೇಮಿಯದಲ್ಲಿ ನಗರೀಕರಣ ಕಾರ್ಯ ಆರಂಭವಾಯಿತು. ಪ್ರ.ಶ.ಪೂ. 2000 ವರ್ಷಗಳ ಸುಮಾರಿನಲ್ಲಿ ಮಧ್ಯ ಪ್ರಾಚ್ಯದ ಎಲ್ಲೆಡೆಗಳಲ್ಲೂ ಯುರೋಪಿನ ನವಶಿಲಾಯುಗ ಸಂಸ್ಕೃತಿನೆಲೆಗಳಲ್ಲೂ ತಾಮ್ರದ ಉಪಯೋಗ ರೂಢಿಗೆ ಬಂತು. ಈ ಮೊದಲ ಹಂತದ ಸಂಸ್ಕೃತಿಗಳನ್ನು ತಾಮ್ರಯುಗೀನ ಸಂಸ್ಕೃತಿಯೆಂದು ಕರೆಯಬಹುದಾದರೂ ಬಹುತೇಕ ವಿದ್ವಾಂಸರು ಇದನ್ನು ಕಂಚಿನ ಯುಗದ ಸಂಸ್ಕೃತಿಗಳ ಮೊದಲ ಹಂತವೆಂದು ಪರಿಗಣಿಸುತ್ತಾರೆ.

ತಾಮ್ರದೊಂದಿಗೆ ತವರ ಅಥವಾ ಸೀಸವನ್ನು ಮಿಶ್ರಮಾಡಿ ತಯಾರಿಸಿದ ಕಂಚಿನ ಉಪಯೋಗ ಪ್ರ.ಶ.ಪೂ. 2000ಕ್ಕೂ ಮೊದಲು ಎಲ್ಲೂ ಕಂಡುಬಂದಿಲ್ಲ. ಅನಂತರವೂ ಹಲವು ಶತಮಾನಗಳ ಕಾಲ ಇದರ ಬಳಕೆ ಕಡಿಮೆಯಾಗಿತ್ತು. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ರೂಢಿಗೆ ಬಂದರೂ ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಏಷ್ಯ ಮೈನರ್, ಗ್ರೀಸ್, ಮೆಸೊಪೊಟೇಮಿಯ ಮತ್ತು ಭಾರತಗಳ ಮುಂದುವರಿದ ನಾಗರಿಕತೆಗಳಲ್ಲಿ ಕಂಚಿನ ಉಪಯೋಗ ವಿಶೇಷವಾಗಿ ಕಂಡುಬರುತ್ತದೆ.

ಮೊದಲಿಗೆ ಪ್ರಾಕೃತಿಕವಾಗಿ ತಾಮ್ರದೊಂದಿಗೆ ತವರ ಅಥವಾ ಸೀಸ ಮಿಶ್ರಣವಾಗಿ ಕಂಚಾಗಿದ್ದಿರಬಹುದು. ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ತವರದ ನಿಕ್ಷೇಪಗಳ ಪತ್ತೆಯಾದ ಅನಂತರ ಉದ್ದೇಶಪೂರ್ವಕವಾಗಿ ತಯಾರಿಸಿದ ಕಂಚಿನ ಬಳಕೆ ರೂಢಿಗೆ ಬಂದಿರಬೇಕು. ಮೊದಲಿಗೆ ಅನಟೋಲಿಯದ (ಈಗಿನ ಟರ್ಕಿ) ಪ್ರದೇಶದಲ್ಲಿ ಇಂಥ ಕಂಚಿನ ಆಯುಧಗಳು ಉಪಯೋಗದಲ್ಲಿದ್ದುವು. ಪ್ರಾಕ್ತನ ಜಗತ್ತಿನಲ್ಲಿ ತವರವನ್ನು ವಿಶೇಷವಾಗಿ ಒದಗಿಸುತ್ತಿದ್ದ ಇಂಗ್ಲೆಂಡಿನ ಕಾರ್ನ್‌ವಾಲ್ ಪ್ರಾಂತ್ಯದ ನಿಕ್ಷೇಪಗಳು ಪ್ರ.ಶ.ಪೂ. 2ನೆಯ ಸಹಸ್ರಮಾನದಲ್ಲಿ ಕಂಡುಹಿಡಿಯಲ್ಪಟ್ಟು ಬಳಕೆಗೆ ಬಂದುವು. ಈ ರೀತಿ ಸು. 2,000 ವರ್ಷಗಳ ಕಾಲ ಮೊದಲಿಗೆ ತಾಮ್ರ, ಅನಂತರ ಕಂಚಿನ ಬಳಕೆ ಪ್ರಮುಖವಾಗಿದ್ದು ಪ್ರ.ಶ.ಪೂ. 2ನೆಯ ಸಹಸ್ರಮಾನದಂತ್ಯದಿಂದ ಕಬ್ಬಿಣದ ಆವಿಷ್ಕಾರ ನಡೆದು ಕಬ್ಬಿಣದ ಯುಗ ಹುಟ್ಟಿಕೊಂಡಿತು.

ಈ ಕಾಲದಲ್ಲಿ ವ್ಯಾಪಾರ ಮತ್ತು ವೃತ್ತಿನಿಪುಣತೆಗಳು ಬೆಳೆದುಬಂದವು. ಲೋಹದ ಕೆಲಸಗಾರರು, ಅದಿರಿನ ನಿಕ್ಷೇಪಗಳನ್ನು ಅಗೆದು ತೆಗೆಯುತ್ತಿದ್ದವರು ತಮ್ಮ ಕಾರ್ಯಕ್ಷೇತ್ರಗಳಲ್ಲಿ, ನಿಷ್ಣಾತರಾಗಿದ್ದು ವ್ಯವಸಾಯಾದಿ ಆಹಾರಸಂಪಾದನ ಕಾರ್ಯದಲ್ಲಿ ಭಾಗವಹಿಸಬೇಕಾಗಿರಲಿಲ್ಲ. ತಮ್ಮ ಉತ್ಪನ್ನಗಳನ್ನು ರೈತರಿಗೊದಗಿಸಿ, ಅವರಿಂದ ಆಹಾರ ಅಥವಾ ಇತರ ವಸ್ತುಗಳನ್ನು ಅವರು ಪಡೆದುಕೊಳ್ಳುತ್ತಿದ್ದರು. ಈ ರೀತಿ ಅದಲುಬದಲು ವ್ಯಾಪಾರ ಬೆಳೆಯಿತು. ಅದಿರಿನಿಂದ ಲೋಹವನ್ನು ಬೇರ್ಪಡಿಸುವುದು ಮತ್ತು ಆವಶ್ಯಕವಾದ ಆಯುಧೋಪಕರಣಗಳನ್ನು ನಿರ್ಮಿಸುವುದು ಕುಶಲಕಲೆಗಳಾಗಿ ಬೆಳೆದುವು. ಆಯಾ ವೃತ್ತಿಗೆ ಸಂಬಂಧಿಸಿದ ಕುಶಲ ಕೆಲಸಗಾರರ ಸಂಘಗಳು ಹುಟ್ಟಿಕೊಂಡವು. ವೃತ್ತಿಸಂಬಂಧವಾದ ರಹಸ್ಯಗಳನ್ನು ಅವುಗಳ ಸದಸ್ಯರು ಜತನದಿಂದ ಕಾಪಾಡಿಕೊಳ್ಳುತ್ತಿದ್ದರು. ನವಶಿಲಾಯುಗದಲ್ಲಿ ಪ್ರತಿಯೊಂದು ಕುಟುಂಬ ಮತ್ತು ಪಂಗಡ ಸ್ವಯಂಪೂರ್ಣವಾಗಿರುತ್ತಿದ್ದರೆ ಈ ಕಾಲದಲ್ಲಿ ಸಮಾಜದ ವ್ಯಕ್ತಿಗಳು ಪರಸ್ಪರಾವಲಂಬನೆಯಿಂದ ಜೀವಿಸುತ್ತಿದ್ದುದು ಮಾತ್ರವಲ್ಲ, ದೂರಪ್ರದೇಶಗಳಲ್ಲಿ ಉತ್ಪಾದಿಸುತ್ತಿದ್ದ ವಸ್ತುಗಳನ್ನು ವ್ಯಾಪಾರ ಮುಖೇನ ಪಡೆಯಬೇಕಾಗಿತ್ತು. ಪ್ರತಿಯೊಂದು ವೃತ್ತಿಯವರೂ ತಮಗೆ ಬೇಕಾದುದಕ್ಕಿಂತ ಹೆಚ್ಚಿನ ಉತ್ಪನ್ನಗಳನ್ನು ಇತರರಿಗೆ ನೀಡಿ ಅವರಿಂದ ಅವರ ಉತ್ಪನ್ನಗಳನ್ನು ತಾವು ಪಡೆಯುತ್ತಿದ್ದರು. ಇದರಿಂದ ಒಂದು ರೀತಿಯ ಸಹಕಾರೀ ಸಾಮಾಜಿಕ ಜೀವನ ರೂಢಿಗೆ ಬಂತು. ಈ ಯುಗದ ಮತ್ತೆರಡು ಬಹಳ ಮುಖ್ಯ ಆವಿಷ್ಕಾರಗಳೆಂದರೆ ವ್ಯವಸಾಯದ ಪ್ರಗತಿಗೆ ಸಾಧಕವಾಗಿದ್ದು ಎತ್ತುಗಳಿಂದ ಎಳೆಯಲ್ಪಡುತ್ತಿದ್ದ ನೇಗಿಲು ಮತ್ತು ವ್ಯಾಪಾರದ ಸಾಮಾನುಗಳನ್ನು ದೂರ ಪ್ರದೇಶಗಳಿಂದ ಸಾಗಿಸಲು ಅತ್ಯುಪಯುಕ್ತವಾದ ಗಾಡಿಯ ಚಕ್ರ. ಈ ಎರಡು ಶೋಧನೆಗಳಿಂದ ಜನಜೀವನ ರೀತಿಯಲ್ಲಿ ಕ್ರಾಂತಿಕಾರೀ ಬದಲಾವಣೆಗಳು ಸಂಭವಿಸಿ ಸಂಪದಭಿವೃದ್ಧಿಗೆ ಕಾರಣವಾಯಿತು.

(ಬಿ.ಕೆ.ಜಿ.; ಎ.ವಿ.ಎನ್.)

**ಕಂಚು :** ತಾಮ್ರ ಮತ್ತು ತವರ ಲೋಹಗಳ ಯುಕ್ತ ಮಿಶ್ರಣದಿಂದ ದೊರೆಯುವ ಸಂಯುಕ್ತ ಲೋಹ (ಬ್ರಾನ್ಸ್). ಇದರಲ್ಲಿ ತಾಮ್ರ ಮತ್ತು ತವರದ ಅಂಶ ಇಂತಿಷ್ಟೇ ಇರಬೇಕೆಂಬ ನಿರ್ಬಂಧ ಇಲ್ಲ. ಆದರೆ ಸಾಮಾನ್ಯವಾಗಿ ತವರದ ಅಂಶ 5%–25% ಮತ್ತು ತಾಮ್ರದ ಅಂಶ 95%–75%. ಕಂಚನ್ನು ಮೆದುಗೊಳಿಸಲು ಕೆಲವೊಮ್ಮೆ ಸತು, ಬೆಳ್ಳಿ, ಸೀಸ ಮುಂತಾದ ಲೋಹಗಳನ್ನು ಬೆರೆಸುವುದೂ ಉಂಟು. ಕಂಚು ಗುಣದಲ್ಲಿ ಗಡಸು. ಆದ್ದರಿಂದ ಇದು ಮೇಲ್ಮೈ ಸವೆತವನ್ನು ತಡೆದುಕೊಳ್ಳಬಲ್ಲುದು. ಇದನ್ನು ಬೇಕಾದ ರೂಪಕ್ಕೆ ಎರಕಹೊಯ್ಯಬಹುದು ಹಾಗೂ ಉರುಳೆಯಂತ್ರಗಳಲ್ಲಿ ತಂತಿ, ಸರಳು ಮತ್ತು ತಗಡುಗಳನ್ನಾಗಿ ಒತ್ತಬಹುದು, ಕಂಚನ್ನು ಪಾತ್ರೆ ಪರಟು, ಅಚ್ಚಿನ ಭಾಗ, ರೇಚಕ ಅಸ್ತರಿ (ಪಂಪ್ ಲೈನಿಂಗ್) ಮುಂತಾದವನ್ನು ಮಾಡಲು ಉಪಯೋಗಿಸುತ್ತಾರೆ.

ಕಂಚಿನಲ್ಲಿರುವ ಅನೇಕ ವಿಧಗಳಲ್ಲಿ ಬಹಳವಾಗಿ ಬಳಕೆಯಲ್ಲಿರುವುವು ಐದು :

**1. ರಂಜಕ ಕಂಚು (ಫಾಸ್ಫರ್ ಬ್ರಾನ್ಸ್) :** ಕಂಚಿನಲ್ಲಿ ರಂಜಕ ಇದ್ದರೆ ಅದು ರಂಜಕ ಕಂಚು. ಇದರಲ್ಲಿ ಸಾಮಾನ್ಯವಾಗಿ 93.7% ತಾಮ್ರ, 6% ತವರ ಮತ್ತು 0.3% ರಂಜಕ ಇರುತ್ತವೆ. ಆದರೆ ಎರಕ ಹೊಯ್ಯಲು ಅನುಕೂಲವಾದ ರಂಜಕ ಕಂಚಿನಲ್ಲಿ 11% ತವರ, 0.3% ರಂಜಕ ಮತ್ತು 88.7% ತಾಮ್ರ ಇರಬೇಕು. ಈ ಪ್ರಮಾಣದಲ್ಲಿ ತಾಮ್ರ, ತವರ ಹಾಗೂ ರಂಜಕಗಳಿರುವ ಕಂಚನ್ನು ಅತಿ ಹೆಚ್ಚಿನ ಭಾರವನ್ನು ಹೊರಬೇಕಾದ ಅಚ್ಚಿನ ಭಾಗ, ಅಳವಡಿಕೆ, ನಟ್ಟು ಹಾಗೂ ಇನ್ನಿತರ ಯಂತ್ರಭಾಗಗಳನ್ನು ಮಾಡಲು ವಿಶೇಷವಾಗಿ ಉಪಯೋಗಿಸುತ್ತಾರೆ. ಕೆಲವೊಮ್ಮೆ ಸಿಡಿಗಳನ್ನು ಮಾಡಲೂ ರಂಜಕ ಕಂಚನ್ನು ಉಪಯೋಗಿಸುವುದುಂಟು.

**2. ಸಿಲಿಕಾನ್ ಕಂಚು:** ಇದರಲ್ಲಿ 96% ತಾಮ್ರ, 3% ಸಿಲಿಕಾನ್ ಮತ್ತು 1% ಮ್ಯಾಂಗನೀಸ್ ಅಥವಾ ಸತು ಇವೆ. ಹೆಚ್ಚಿನ ಶಕ್ತಿ ಮತ್ತು ತುಕ್ಕುನಿರೋಧಕ ಗುಣದ ಆವಶ್ಯಕತೆ ಎಲ್ಲೆಲ್ಲಿ ಇದೆಯೊ ಅಲ್ಲೆಲ್ಲ ಸಾಮಾನ್ಯ ಸಿಲಿಕಾನ್ ಕಂಚಿನಿಂದ ಮಾಡಿದ ಬಿಡಿ ಭಾಗಗಳನ್ನು ಬಳಸುತ್ತಾರೆ. ಉದಾಹರಣೆಗೆ ಸ್ಟೌ, ಗುಡಾಣ ಇವುಗಳ ಕೆಲವು ಭಾಗಗಳು.

**3. ಬಂದೂಕ ಲೋಹ (ಗನ್ ಮೆಟಲ್):** ಇದರಲ್ಲಿ 10% ತವರ, 88% ತಾಮ್ರ ಮತ್ತು 2% ಸತು ಇವೆ. ಬಂದೂಕದ ಲೋಹ ತಣ್ಣಗಿನ ಸ್ಥಿತಿಯಲ್ಲಿರುವಾಗ ಅದನ್ನು ಬಡಿದು ಬೇಕಾದ ರೂಪ ಕೊಡಲು ಸಾಧ್ಯ ಇಲ್ಲ. ಆದರೆ ಅದು $600^{O}$ ಸೆಂ. ಉಷ್ಣತೆಯಲ್ಲಿರುವಾಗ ಹಾಗೆ ಮಾಡಲು ಸಾಧ್ಯ. ಬಂದೂಕ ಲೋಹ ಬಹಳ ಗಡಸು, ಗಾಳಿ, ನೀರುಗಳಿಂದ ಇದು ತುಕ್ಕುಹಿಡಿಯುವುದಿಲ್ಲ. ಬಹಳ ಹಿಂದೆ ಬಂದೂಕ ಲೋಹದ ಉಪಯೋಗ ಬಂದೂಕಗಳನ್ನು ಎರಕ ಹೊಯ್ಯಲು ಮಾತ್ರ ಸೀಮಿತವಾಗಿದ್ದು ಅದರಿಂದಲೇ ಈ ಹೆಸರು ಬಂದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅಚ್ಚುಗುಡಾಣ ಮುಂತಾದೆಡೆಗಳಲ್ಲಿ ಇದನ್ನು ಯಥೇಚ್ಛವಾಗಿ ಬಳಸುತ್ತಿದ್ದಾರೆ.

**4. ಗಂಟೆಲೋಹ (ಬೆಲ್ ಮೆಟಲ್):** ಇದರಲ್ಲಿ 20% ತವರ ಹಾಗೂ 80% ತಾಮ್ರ ಇವೆ. ಇದನ್ನು ಗಂಟೆ, ಜಾಗಟೆ, ಪಾತ್ರೆ ಮುಂತಾದುವುಗಳನ್ನು ಮಾಡಲು ಉಪಯೋಗಿಸುತ್ತಾರೆ.

**5. ಮ್ಯಾಂಗನೀಸ್ ಕಂಚು:** ಇದು ತಾಮ್ರ, ಸತು, ಸೀಸ ಮತ್ತು ಸ್ವಲ್ಪ ಭಾಗ ಮ್ಯಾಂಗನೀಸ್ ಇವುಗಳ ಮಿಶ್ರಣ. ಇದು ಅತ್ಯುತ್ತಮ ತುಕ್ಕುನಿರೋಧಕ, ಇದನ್ನು ಸಾಮಾನ್ಯವಾಗಿ ಉಳಿಬಳೆ (ಬುಶಸ್), ಆಡುಬೆಣೆ (ಪ್ಲಂಜರ್), ಸರಳು ಮುಂತಾದುವುಗಳನ್ನು ಮಾಡಲು ಉಪಯೋಗಿಸುತ್ತಾರೆ.

(ಎಚ್.ಎಲ್.ಕೆ.)

**ಕಂಚಿನ ಎರಕ:** ಕಂಚನ್ನು ಎರಕಹೊಯ್ದು ವಿವಿಧ ಆಕಾರದ ಪಾತ್ರೆಗಳನ್ನೂ ಸುಂದರವಾದ ಮೂರ್ತಿಗಳನ್ನೂ ಮಾಡುವುದು ಸಾಧ್ಯ. ಮೂರ್ತಿಶಿಲ್ಪದಲ್ಲಿ ಶಿಲೆಯ ಬಳಿಕ ಎರಡನೆಯ ಸ್ಥಾನ ಕಂಚಿಗೆ. ಕಂಚಿನ ಮೂರ್ತಿಗಳಲ್ಲಿ ಭಾವಪ್ರದರ್ಶನ ಸುಲಭಸಾಧ್ಯವಾದ್ದರಿಂದಲೂ ಕಂಚು ಶಾಶ್ವತ ಲೋಹವಾದ್ದರಿಂದಲೂ ಮೂರ್ತಿಶಿಲ್ಪಿಗಳಿಗೆ ಇದು ಬಹಳ ಪ್ರಿಯವಾದ ಲೋಹ. ಕಂಚಿನ ಹೊರಮೈಗೆ ಹಲವು ವಿಧದ ಮೆರುಗನ್ನು ಕೊಡುವುದು ಸಾಧ್ಯ.

ಎರಕಹೊಯ್ಯಲು ಉಚ್ಚಮಟ್ಟದ ತಾಂತ್ರಿಕ ನೈಪುಣ್ಯ ಮತ್ತು ಹಲವು ವಿಶಿಷ್ಟ ಉಪಕರಣಗಳು ಅತ್ಯಗತ್ಯ. ಎರಕಹೊಯ್ಯುವ ಕ್ರಮದಲ್ಲಿ ಮುಖ್ಯವಾಗಿ ಎರಡು ವಿಧಗಳು ಪ್ರಚಲಿತವಿವೆ; ಲಾಕ್ಷಾ ವಿಧಾನ ಮತ್ತು ಮರಳು ವಿಧಾನ.

**ಲಾಕ್ಷಾ ವಿಧಾನ :** ಶಿಲ್ಪಕೃತಿ ಎರಕದ ಮನೆಗೆ ಬಂದಾಗ ಪ್ರಥಮವಾಗಿ ಜಿಲೇಟಿನ್ ಅಚ್ಚನ್ನು ತಯಾರಿಸಬೇಕಾಗುವುದು. ಶಿಲ್ಪಕೃತಿಯ ಆಕಾರ ಕಿರಿದಾಗಿದ್ದರೆ ಒಂದೇ ಒಂದು ಅಚ್ಚು ಸಾಕು. ದೊಡ್ಡದಾಗಿದ್ದರೆ ಅದನ್ನು ಹಲವು ಭಾಗಗಳಾಗಿ ವಿಂಗಡಿಸಿ ಆಯಾ ಭಾಗಕ್ಕೆ ಪ್ರತ್ಯೇಕವಾಗಿ ಅಚ್ಚನ್ನು ತಯಾರಿಸಬೇಕಾಗುವುದು. ಶಿಲ್ಪಕೃತಿಯ ಎಲ್ಲ ರೇಖಾವಿನ್ಯಾಸಗಳೂ ಜಿಲೇಟಿನ್ ಅಚ್ಚಿನಲ್ಲಿ ಹಿಮ್ಮೊಗವಾಗಿ ಮುದ್ರಿಸಲ್ಪಟ್ಟಿರುತ್ತವೆ. ಈ ಅಚ್ಚನ್ನು ಬಳಿಕ ಚೊಕ್ಕಟಗೊಳಿಸಿ ಅರಗಿನ ಎರಕಕ್ಕೆ ಅಣಿಗೊಳಿಸುತ್ತಾರೆ. ಅರಗಿನ ಎರಕವನ್ನು ಪಡೆಯಲು, ಜಿಲೇಟಿನ್ ಅಚ್ಚಿನ ಒಳಭಾಗಕ್ಕೆ ದ್ರವೀಕೃತ ಅರಗಿನ ಲೇಪನವನ್ನು ಕೊಟ್ಟು ಬಳಿಕ ಅದರ ಮೇಲೆ ಬಿಸಿ ಅರಗಿನ ಹಾಳೆಗಳನ್ನು ಹೊಂದಿಸುತ್ತಾರೆ. ಇಂಥ ಅರಗಿನ ಹಾಳೆಯ ದಪ್ಪ, ಕಂಚಿನ ಮೂರ್ತಿಯಲ್ಲಿ ನಾವು ಅಪೇಕ್ಷಿಸುವ ಕಂಚಿನ ದಪ್ಪಕ್ಕಿಂತ ಹೆಚ್ಚಿರಬಾರದು. ಈಗ ಜಿಲೇಟಿನ್ ಅಚ್ಚನ್ನು ತೆಗೆದುಬಿಟ್ಟರೆ, ಶಿಲ್ಪಕೃತಿಯ ಪ್ರತಿರೂಪ ಅರಗಿನಲ್ಲಿ ಉಳಿಯುವುದು. ಅರಗಿನ ಈ ಪ್ರತಿರೂಪ ಒಳಗೆ ಟೊಳ್ಳಾಗಿರುವುದು. ಅಂತಿಮವಾಗಿ ಅಚ್ಚನ್ನು ಕುಲುಮೆಯಲ್ಲಿ ಸುಡುವ ಸಮಯದಲ್ಲಿ ಕರಗಿದ ಅರಗನ್ನು ಹೊರಬಿಡಲು ಅನುಕೂಲವಾಗುವಂಥ ದ್ವಾರಗಳನ್ನು ಕಲ್ಪಿಸಲು ಮೇಲೆ ಹೇಳಿದ ಅರಗಿನ ಮಟ್ಟ ಕಂಬಿಯನ್ನು ಸೇರಿಸಿರುತ್ತಾರೆ.

ಈಗ ಉಷ್ಣ ನಿರೋಧಕವಾದ ಅರ್ಧದ್ರವೀರೂಪದ ಸಿಲಿಕಾಮಿಶ್ರಣವನ್ನು ಅರಗಿನ ಅಚ್ಚಿನ ಒಳಭಾಗಕ್ಕೆ ಹೊಯ್ದಾಗ ಒಂದು ಅಂತರ್ಭಾಗ ಉಂಟಾಗುತ್ತದೆ. ಸಿಲಿಕಾ ಮಿಶ್ರಣವನ್ನು ಅರಗಿನ ಅಚ್ಚಿನ ಹೊರಮೈಗೆ ಲೇಪಿಸಿದಾಗ ಒಂದು ಹೊರ ಕವಚ ಉಂಟಾಗುತ್ತದೆ. ಈಗ ಇದನ್ನು ಕುಲುಮೆಯಲ್ಲಿಟ್ಟು ಅರಗು ಸಂಪೂರ್ಣವಾಗಿ ಕರಗಿಹೋಗುವ ತನಕ ಸುಡುತ್ತಾರೆ. ಕುಲುಮೆಯಿಂದ ಹೊರತೆಗೆದ ಅಚ್ಚಿಗೆ ಮರಳು ಮತ್ತು ಮಣ್ಣನ್ನು ಸವರುತ್ತಾರೆ. ಬಳಿಕ ಅಚ್ಚಿನಲ್ಲಿರುವ ತೂತಿನ ಮೂಲಕ ದ್ರವೀರೂಪದ ಕಂಚನ್ನು ಅಚ್ಚಿಗೆ ಹೊಯ್ಯುತ್ತಾರೆ. ಅರಗು ಕರಗಿ ಹೋಗಿ ತೆರವು ಮಾಡಿದ ಸ್ಥಳವನ್ನು ದ್ರವೀರೂಪದಲ್ಲಿರುವ ಕಂಚು ಆವರಿಸುವುದು.

ಕಂಚು ತಣಿದ ಅನಂತರ ಸಿಲಿಕಾದ ಹೊರಕವಚ ಮತ್ತು ಅಂತರ್ಭಾಗವನ್ನು ತೆಗೆಯಲಾಗುವುದು. ತರುವಾಯ ಶುದ್ಧೀಕರಣಕ್ಕಾಗಿ ಕಂಚನ್ನು ಆಮ್ಲದಲ್ಲಿ ಮುಳುಗಿಸುವರು. ಈ ಶುದ್ಧೀಕೃತ ಶಿಲ್ಪಕೃತಿಯ ಅನಪೇಕ್ಷಿತ ಭಾಗಗಳನ್ನು ಕೆತ್ತಿ ತೆಗೆದು ಅದಕ್ಕೆ ಹೊಳಪನ್ನು ಕೊಡಲಾಗುವುದು.

**ಮರಳು ವಿಧಾನ :** ತೇವವಿರುವ ಫ್ರೆಂಚ್ ಮರಳನ್ನು (ಆವೆಮಣ್ಣು, ಸಿಲಿಕಾ ಮತ್ತು ಅಲ್ಯುಮಿನಾಗಳ ಮಿಶ್ರಣ) ಶಿಲ್ಪಿಯ ಮೂಲಕೃತಿಗೆ ಒತ್ತುವುದರಿಂದ ಅಚ್ಚು ಸಿದ್ಧವಾಗುವುದು. ಈ ತರಹದ ಅಚ್ಚಿನಲ್ಲಿ ಸಾಮಾನ್ಯವಾಗಿ ಎರಡು ಭಾಗಗಳಿವೆ.–ಒಂದು ಭಾಗ ಮೂಲ ಕೃತಿಯ ಮುಂಭಾಗದ ಪಡಿಯಚ್ಚು, ಇನ್ನೊಂದು ಹಿಂಭಾಗದ ಪಡಿಯಚ್ಚು. ಈ ಮರಳಿನ ಅಚ್ಚಿನ ಒಳಭಾಗದಲ್ಲಿ ಮರಳಿನಿಂದ ಇನ್ನೊಂದು ಅಂತರ್ಭಾಗವನ್ನು ನಿರ್ಮಿಸುತ್ತಾರೆ. ಇವೆರಡರ ಮಧ್ಯೆ ದ್ರವೀರೂಪದ ಕಂಚನ್ನು ಸುರಿಯಲು ಎಡೆಯಿರುತ್ತದೆ. ಕರಗಿದ ಕಂಚನ್ನು ಹೊಯ್ಯಲು ಮತ್ತು ಉತ್ಪನ್ನವಾದ ಅನಿಲಗಳನ್ನು ವಿಸರ್ಜಿಸಲು ಅನುಕೂಲವಾಗುವಂತೆ ಅಚ್ಚಿನಲ್ಲಿ ತೂತುಗಳನ್ನು ಕೊರೆದಿರುತ್ತಾರೆ. ಅಚ್ಚು ಮತ್ತು ಅಂತರ್ಭಾಗ ಇವೆರಡೂ ಗಟ್ಟಿಯಾಗಲು ಅವನ್ನು ಹಲವು ಗಂಟೆಗಳ ತನಕ ಬೆಂಕಿಯಲ್ಲಿ ಸುಡುತ್ತಾರೆ. ಕರಗಿಸಲ್ಪಟ್ಟ ಕಂಚನ್ನು ಅಚ್ಚಿನೊಳಗಡೆ ಸುರಿದಾಗ ಅಚ್ಚಿನ ಹೊರಭಾಗ ಮತ್ತು ಅಂತರ್ಭಾಗಗಳ ನಡುವಣ ಎಡೆಯನ್ನು ಅದು ತುಂಬುವುದು. ಇದು ತಣಿದ ಬಳಿಕ ಹೊರಗಣ ಮರಳಿನ ಅಚ್ಚನ್ನು ಒಡೆಯಲಾಗುವುದು. ಕೊನೆಯ ಅಂಗವಾಗಿ ಹೊರಮೈಯನ್ನು ನುಣುಪು ಮಾಡುತ್ತಾರೆ.

**ಕಂಚಿಗೆ ಹೊಳಪು ಕೊಡುವುದು :** ಕಂಚು ನೈಸರ್ಗಿಕವಾಗಿ ಗಾಢವಾದ (ಡಾರ್ಕ್) ಸುಂದರ ವರ್ಣವನ್ನು ಪಡೆಯುವುದು. ಆದರೆ ಇದಕ್ಕೆ ಅಧಿಕ ಕಾಲಾವಕಾಶ ಬೇಕಾಗುವುದು. ಹೀಗಾಗಿ ಶಿಲ್ಪಿಗಳು ಸಾಮಾನ್ಯವಾಗಿ ತಮ್ಮ ಕೃತಿಗಳಿಗೆ ಒಪ್ಪುವ ಬಣ್ಣವನ್ನು ಲೇಪಿಸುತ್ತಾರೆ. ಕಂಚಿನಲ್ಲಿರುವ ತಾಮ್ರದ ಮಿಶ್ರಣದಿಂದಾಗಿ ಅದಕ್ಕೆ ವೈವಿಧ್ಯಮಯವಾದ ಹಸಿರು, ಕೆಂಪು, ಕಪ್ಪು, ಕಂದು ಮತ್ತು ನೀಲಿಬಣ್ಣದ ಬೆಡಗನ್ನು ಕೊಡುವುದು ಸಾಧ್ಯವೆನಿಸುವುದು. ಕಂಚಿಗೆ ಹೊಳಪು ಕೊಡುವ ಒಂದು ವಿಧಾನದಲ್ಲಿ ಅದನ್ನು ಕಾಸುತ್ತಿದ್ದಂತೆಯೇ ಅದಕ್ಕೆ ಕುಂಚದ ಮೂಲಕ ಆಮ್ಲದ ಲೇಪನವನ್ನು ಕೊಡುತ್ತಾರೆ. ಈ ಲೇಪನದ ದಪ್ಪ ಅಧಿಕವಾಗದಂತೆ ತಡೆಯಲು ಕಂಚನ್ನು ಆಗಾಗ ನೀರಿನಿಂದ ತೊಳೆಯಬೇಕು. (ಕೆ.ಸಿ.ಜಿ.)

**ಕಂಚುಕಗಳು :** ಚಿದ್ರೂಪಿಯಾದ ಆತ್ಮನ ಸ್ವರೂಪಾವರಣಗಳು. ಇವು ಸಂಖ್ಯೆಯಲ್ಲಿ ಆರು. ಇವುಗಳಲ್ಲಿ ಮೊದಲನೆಯದಾದ ಮಾಯೆಯ ಪ್ರಭಾವದಿಂದ ಆತ್ಮನ ಸ್ವರೂಪಾಭಿನ್ನವಾಗಿರುವ ಸರ್ವಜ್ಞತ್ವ, ಸರ್ವಕರ್ತೃತ್ವ, ಪೂರ್ಣತ್ವ, ವ್ಯಾಪಕತ್ವ, ನಿತ್ಯತ್ವ ಶಕ್ತಿಗಳು ಸಂಕುಚಿತವಾಗಿ ವಿದ್ಯಾ, ಕಲಾ, ರಾಗ, ಕಾಲ, ನಿಯತಿರೂಪಗಳಿಂದ ಮಾರ್ಪಟ್ಟವು. ಇವನ್ನು ಕಂಚುಕಪಂಚಕಗಳೆನ್ನುತ್ತಾರೆ. ಈ ಐದು ತತ್ತ್ವಗಳು. ಬಟ್ಟೆಗೆ ಬಣ್ಣ ಅಂಟಿಕೊಂಡಿರುವ ಹಾಗೆ ಜೀವಾತ್ಮನಿಗೆ ಅಂಟಿಕೊಂಡಿರುವಂಥವು. ಭೇದದೃಷ್ಟಿ, ಭೇದಭಾವ, ಭೇದಜ್ಞಾನವನ್ನುಂಟುಮಾಡುವ ಶಕ್ತಿವಿಶೇಷವೇ ಮಾಯೆ. ಈ ಆರು ಕಂಚುಕಗಳು ಆತ್ಮನ ಸ್ವರೂಪವನ್ನು ಮರೆಮಾಚಿ ಶಕ್ತಿಗಳನ್ನು ಸಂಕೋಚಗೊಳಿಸಿ ಆತ್ಮನನ್ನು ಬದ್ಧಜೀವವನ್ನಾಗಿ ಮಾಡುತ್ತವೆ. ಈ ಸಂಪುಟದಲ್ಲಿ ಸಿಲುಕಿದ ಜೀವಾತ್ಮ ಜನನಮರಣ, ಕಷ್ಟಸುಖಗಳಿಗೆ ಗುರಿಯಾಗುತ್ತಾನೆ. ಶಕ್ತಿಗಳ ಸಂಪೂರ್ಣ ವಿಕಾಸವಾದಾಗ ಶಿವನಾಗುತ್ತಾನೆ.

ಶೈವಸಿದ್ಧಾಂತದಲ್ಲಿನ ಮೂವತ್ತಾರು ತತ್ತ್ವಗಳಲ್ಲಿ ಈ ಆರನ್ನು ಮಿಶ್ರ ತತ್ತ್ವಗಳು ಎನ್ನಲಾಗಿದೆ. (ಜೆ.ಆರ್.ಎಂ.ಜಿ.ಎಸ್.)

**ಕಂಚುಗಾರ ಕುಕ್ಕ :** ಪಕ್ಷಿವರ್ಗದ ಸಿಕೋನಿಯಿಫಾರ್ಮಿಸ್ ಗಣದ ಸಿಕೋನಿಯೀ ಉಪಗಣದ ಸಿಕೊನೈಯಿಡೀ ಕುಟುಂಬಕ್ಕೆ ಸೇರಿದ ಪಕ್ಷಿ (ಸ್ಟಾರ್ಕ್), ಇದಕ್ಕೆ ನೀಳವಾದ ಕತ್ತು, ಉದ್ದನೆಯ ದಪ್ಪನಾಗಿ ನೇರವಾಗಿರುವ ಕೊಕ್ಕು, ಉದ್ದವಾದ ಕಾಲುಗಳಿವೆ. ಪಾದಗಳಲ್ಲಿ ಬಲೆ ಸಂಪೂರ್ಣವಾಗಿಲ್ಲ. ಉಗುರುಗಳು ಚಪ್ಪಟೆಯಾಗಿ ಸಣ್ಣವಾಗಿವೆ. ಕಾಲನ್ನು ಒರಟಾಗಿರುವ ವಡಿವತ್ತಳೆಯ ಮೇಲೆ ಊರುವುದು. ರೆಕ್ಕೆಗಳು ಅಗಲವಾಗಿಯೂ ಉದ್ದವಾಗಿಯೂ ಇವೆ. ಬಾಲದ ರೆಕ್ಕೆಗಳು ಸಣ್ಣ. ಫರ್ಕುಲ U–ರೀತಿ ಇರುವುದು. ನಾಲಗೆ ಸಣ್ಣ.

ಇವು ಸಾಧಾರಣವಾಗಿ ಪುಕ್ಕಲು ಸ್ವಭಾವದ ಹಕ್ಕಿಗಳು. ಸಾಮಾನ್ಯವಾಗಿ ವನ್ಯ ಅಥವಾ ಹುಲ್ಲುಗಾವಲು ಪ್ರದೇಶಗಳಲ್ಲಿ ನೀರಿರುವ ಸ್ಥಳಗಳಲ್ಲಿರುತ್ತವೆ. ಇವುಗಳ ಹಾರಾಟ ಆಕರ್ಷಕವಾಗಿರುವುದು. ಇವು ಬಲವಾಗಿ ತ್ವರಿತವಾಗಿ ಆದರೆ ಶಬ್ದ ಮಾಡದೆ ಹಾರುತ್ತವೆ. ಹಾರುವಾಗ ಕತ್ತನ್ನೂ ಕಾಲುಗಳನ್ನೂ ತಮ್ಮ ದೇಹದ ನೇರಕ್ಕೆ ಚಾಚಿ ಸುತ್ತುಸುತ್ತಾಗಿ ಹಾರಿ ಬಹಳ ಎತ್ತರಕ್ಕೆ ಏರುತ್ತವೆ. ನೆಲದ ಮೇಲೆ ಸುಲಭವಾಗಿ ನಡೆಯಬಲ್ಲವು. ವಿಶ್ರಮಿಸುವಾಗ ಅಂಗಾಲನ್ನು ನೆಲದ ಮೇಲೂರುತ್ತವೆ. ಹಗಲಿನಲ್ಲಿ ಶಾಖ ಹೆಚ್ಚಿದ್ದಾಗ ನಿಶ್ಚಲವಾಗಿ ಕೂತಿರುತ್ತವೆ. ಮೀನು, ಸರೀಸೃಪಗಳು, ದ್ವಿಚರಿಗಳು, ಕಠಿಣಚರ್ಮಿಗಳು, ಮೃದ್ವಸ್ಥಿಗಳು, ಮಿಡತೆಗಳು ಮತ್ತು ಜೀರುಂಡೆಗಳು ಇವುಗಳ ಆಹಾರ. ಕೆಲವು ವೇಳೆ ಚಿಕ್ಕ ಸ್ತನಿಗಳು ಅಥವಾ ಮೊಟ್ಟೆಗಳು ಮತ್ತು ಸಣ್ಣ ಹಕ್ಕಿಗಳನ್ನೂ ತಿನ್ನುತ್ತವೆ.

ಸಾಮಾನ್ಯವಾಗಿ ಎತ್ತರವಾದ ಮರಗಳಲ್ಲಿ, ಗುಡ್ಡಗಳಲ್ಲಿ, ಬಂಡೆಗಳ ಸಣ್ಣಗವಿಗಳಲ್ಲಿ ಅಥವಾ ಗುಡ್ಡಗಳ ಮೇಲಿನ ಚಪ್ಪಟೆ ಜಾಗಗಳಲ್ಲಿ ಗೂಡುಗಳನ್ನು ಕಟ್ಟುತ್ತವೆ. ಗೂಡನ್ನು ಸಣ್ಣ ಕಡ್ಡಿಗಳಿಂದ ಕಟ್ಟಿ ಅದರ ಮೇಲೆ ಅನೇಕ ವೇಳೆ ಒಂದು ಪದರ ಹುಲ್ಲನ್ನೋ ಎಲೆಗಳನ್ನೋ ಅಥವಾ ಪುಕ್ಕಗಳನ್ನೋ ಹರಡುತ್ತವೆ. ಕೆಲವು ಸಾರಿ ಇವನ್ನು ಹರಡದೆಯೂ ಇರಬಹುದು. ಗೂಡು ಕಟ್ಟಲು ಜೇಡಿಮಣ್ಣನ್ನು ಉಪಯೋಗಿಸುವುದೂ ಉಂಟು. ಸಾಧಾರಣವಾಗಿ ಋತುಕಾಲದಲ್ಲಿ ಅನೇಕ ಹಕ್ಕಿಗಳು ಒಂದೇ ಕಡೆ ಗುಂಪು ಸೇರುತ್ತವೆ. ಕೆಲವು ಬಗೆಗಳು ಮಾತ್ರ ದೂರದೂರವಾಗಿ ಗೂಡು ಕಟ್ಟುವುದೂ ಉಂಟು. ಇವು



ಯೂರೋಪಿನ ಕಂಚುಗಾರ ಕುಕ್ಕಗಳು; ನೆಟ್ಟಗೆ ನಿಂತಿರುವುದು ಬಿಳಿ ಕುಕ್ಕ, ನಸುಬಾಗಿರುವುದು ಕರಿಕುಕ್ಕ

ಒಂದು ಸಲಕ್ಕೆ 3–6 ಬಿಳುಪಾದ ಮೊಟ್ಟೆಗಳನ್ನಿಡುತ್ತವೆ. ಗಂಡುಹೆಣ್ಣುಗಳೆರಡೂ ಮೊಟ್ಟೆಗಳಿಗೆ ಸಾಧಾರಣವಾಗಿ 4 ವಾರ ಕಾಲ ಕಾವನ್ನು ಕೊಡುವುವು. ತಾಯಿ ಮರಿಗಳಿಗೆ ಗುಟುಕು ಕೊಡುವಾಗ ಗಂಡು ಅವನ್ನು ಕಾಯುವುದು. ಭಾರತದಲ್ಲಿ ಒಟ್ಟು ಒಂಬತ್ತು ಪ್ರಭೇದದ ಕುಕ್ಕಗಳು ಕಂಡುಬರುತ್ತವೆ. ಇವುಗಳಲ್ಲಿ ಬಣ್ಣದ ಬಕ (ಮಿರಿಸ್ಟಿಕ ಟ್ರಕೊಸಿಫಾಲ) ಕಪ್ಪು ಕತ್ತಿನ ಕುಕ್ಕ (ಎಫಿಪ್ಪಿಯೊರಿಂಚಸ್ ಏಷಿಯಾಟಿಕಸ್) ಗಳು ಅಪಾಯಯದಂಚಿನಲ್ಲಿದ್ದರೆ, ಸಣ್ಣ ಅಡ್ಜುಜಂಟ್ ಕುಕ್ಕ (ಲೆಪ್ಟೊಪ್ಟಿಲೋಸ್ ಜವಾನಿಕಸ್) ಅಪಾಯಕ್ಕೆ ಪಕ್ಕಾಗುವಂತಿದೆ. ದೊಡ್ಡ ಅಡ್ಜುಜಂಟ್ ಕುಕ್ಕ (ಲೆಪ್ಟೊಪ್ಟಿಯೊಸ್ ಡೂಬಿಯಸ್) ಈಗಾಗಲೇ ಅಪಾಯಕ್ಕೊಳಗಾಗಿವೆ. **(ನೋಡಿ : ಬಣ್ಣದ ಬಕ)** (ಎನ್.ಪಿ.ಎ.; ಕೆ.ಎಸ್.ಎನ್.)

**ಕಂಚುಪ್ರಾಂತಿ :** ಯುಫೋರ್ಬಿಯೇಸೀ ಕುಟುಂಬದ ಮಕರಂಗ ಪೆಲ್ಟೇಟ ಎಂಬ ವೈಜ್ಞಾನಿಕ ಹೆಸರಿನ ಮರ. ಮಕರಂಗ ಟೊಮೆಂಟೋಸ ಎಂಬುದು ಇದರ ಪರ್ಯಾಯ ನಾಮ. ಕನ್ನಡದಲ್ಲಿ ಚಂದಕನ್ನೆ ಎಂದೂ ಕರೆಯುವುದುಂಟು.

ಮಧ್ಯಮ ಎತ್ತರದ ಈ ಮರ ಬಂಗಾಲ, ಬಿಹಾರ, ಒರಿಸ್ಸ ಮತ್ತು ದಕ್ಷಿಣ ಭಾರತದ ಬೆಟ್ಟಗುಡ್ಡಗಳಲ್ಲಿ ಬೆಳೆಯುತ್ತದೆ. ಕೊಂಬೆಗಳು ಒರಟು, ಎಳೆಯ ರೆಂಬೆಗಳು ತುಪ್ಪುಳಭರಿತವಾಗಿವೆ. ತೊಗಟೆ ನಸುಕಪ್ಪು ಬಣ್ಣದ್ದು, ಎಲೆಗಳ ಉದ್ದ 5"–8"; ಅಗಲ 3¼"–5½"; ಅಂಡಾಕಾರ ಅಥವಾ ದೀರ್ಘವೃತ್ತಾಕಾರವಾಗಿವೆ. ತಾವರೆ ಎಲೆಯಲ್ಲಿರುವಂತೆ ಎಲೆಯ ಅಲಗಿನ ತಳಭಾಗದ ಮಧ್ಯದಲ್ಲಿ ಅಂಟಿಕೊಂಡಿರುವ ಉದ್ದನೆಯ ತೊಟ್ಟಿದೆ. ಅಲಗು ಸರಳ, ಎಲೆಯ ಮೇಲ್ಭಾಗ ಹೊಳೆಯುತ್ತದೆ. ಕೆಳಭಾಗದಲ್ಲಿ ಅಂಟು ಸ್ರವಿಸುವ ರೋಮಗ್ರಂಥಿಗಳಿವೆ, ಎಲೆಗಳಲ್ಲಿ ಹಿಂದಕ್ಕೆ ಬಾಗಿರುವ, ಬೇಗ ಉದುರಿಹೋಗುವಂಥ ವೃಂತಪರ್ಣಗಳಿವೆ. ಹೂಗಳು ಏಕಲಿಂಗಿಗಳು; ಸಂಕೀರ್ಣ ಪುಷ್ಪಗುಚ್ಛದಲ್ಲಿ ಜೋಡಣೆಗೊಂಡಿವೆ. ಪುಷ್ಪ ಪತ್ರಗಳ ಸಂಖ್ಯೆ ಮೂರು, ಕೇಸರಗಳು 2–3, ಹೆಣ್ಣು ಹೂವಿನಲ್ಲಿ ಅಂಟಾದ ದ್ರವದಿಂದ ಆವೃತವಾಗಿರುವ, ಒಂದೇ ಕೋಣೆಯನ್ನುಳ್ಳ

ಅಂಡಾಶಯವಿದೆ. ಕಾಯಿ ಸಂಪುಟ ಮಾದರಿಯದು, ದುಂಡಗಿದೆ ಹಾಗೂ ರಸಗ್ರಂಥಿಗಳನ್ನು ಹೊಂದಿದೆ. ಬೀಜಗಳು ಗುಂಡಗೆ, ಗಟ್ಟಿಯಾಗಿ ಒರಟಾಗಿವೆ; ಬಣ್ಣ ಕಂದು, ವಂಶಾಭಿವೃದ್ಧಿ ಬೀಜಗಳ ಮೂಲಕ, ಮರದಿಂದ ಪ್ರಸಾರವಾದ ಬೀಜಗಳು ಮುಂಗಾರು ಮಳೆಯ ಸಮಯದಲ್ಲಿ ಮೊಳೆತು ಹುಲುಸಾಗಿ ಬೆಳೆಯುತ್ತವೆ.

ಕಂಚುಪ್ರಾಂತಿಯ ಎಲೆಗಳನ್ನೂ ಸಣ್ಣ ರೆಂಬೆಗಳನ್ನೂ ಪಶ್ಚಿಮ ಕರಾವಳಿಯಲ್ಲಿ ಬತ್ತದ ಗದ್ದೆಗಳಿಗೆ ಹಸಿರು ಗೊಬ್ಬರವಾಗಿ ಬಳಸುತ್ತಾರೆ. ಎಲೆಗಳಲ್ಲಿ ಪೊಟ್ಯಾಷ್ ಹಾಗೂ ಸಾರಜನಕಗಳು ಅಧಿಕ ಪ್ರಮಾಣದಲ್ಲಿವೆ. ಈ ಮರವನ್ನು ಕಾಫಿತೋಟಗಳಲ್ಲಿ ನೆರಳಿಗಾಗಿ ಬೆಳೆಸುವುದೂ ಉಂಟು. ಎಲೆಯ ಕಾಂಡ, ಕಾಯಿ, ತೊಟ್ಟಿನ ಬುಡ ಮತ್ತು ಕತ್ತರಿಸಿದ ರೆಂಬೆಗಳಿಂದ ಒಂದು ಬಗೆಯ ಕೆಂಪು ಬಣ್ಣದ ಅಂಟುದ್ರವ ಒಸರುತ್ತದೆ. ಇದನ್ನು ಶೇಖರಿಸಿ ಮುದ್ದೆಗಳಂತೆ ಮಾಡಿ ಅಂಗಡಿಗಳಲ್ಲಿ ಮಾರುವುದುಂಟು. ನಾಣ್ಯ, ಎಲೆ, ಪದಕ ಮುಂತಾದವುಗಳ ಪಡಿಯಚ್ಚು ತೆಗೆಯಲು ಇದನ್ನು ಬಳಸುತ್ತಾರೆ; ಗೋಂದಿನಂತೆಯೂ ಉಪಯೋಗಿಸಬಹುದು, ಗುಹ್ಯರೋಗದ ವ್ರಣಗಳಿಗೆ ಲೇಪಿಸಲು ಇದರಿಂದ ತಯಾರಿಸಿದ ಸರಿಯನ್ನು (ಪೇಸ್ಟ್) ಉಪಯೋಗಿಸುತ್ತಾರೆ. ಎಲೆ ಮತ್ತು ತೊಗಟೆಯಿಂದ ಪಡೆದ ಕಷಾಯವನ್ನು ಹುಣ್ಣುಗಳನ್ನು ತೊಳೆಯಲು ಉಪಯೋಗಿಸುವುದುಂಟು. ಸ್ವಲ್ಪ ಕಂದು ಬಣ್ಣವುಳ್ಳ ಈ ಮರದ ಚೌಬೀನೆಯನ್ನು ಬೆಂಕಿಕಡ್ಡಿ ಮತ್ತು ಕಾಗದದ ಪಲ್ಪಿನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. (ಎಸ್.ಆರ್.ಜಿ.)

**ಕಂಚುವಾಳ :** ಲೆಗ್ಯುಮಿನೋಸೀ ಕುಟುಂಬದ ಸಿಸಾಲ್ಪಿನೀ ಉಪಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಸಸ್ಯಜಾತಿ. ಇದರಲ್ಲಿ ಸು. 250 ಪ್ರಭೇದಗಳಿವೆ. ಅವುಗಳಲ್ಲಿ ಪೊದರು, ಅಡರುಬಳ್ಳಿ ಮತ್ತು ಮರ ಇತ್ಯಾದಿಗಳೆಲ್ಲ ಇವೆ. ಭಾರತದಲ್ಲಿ ಮುಖ್ಯವಾಗಿ ಬೌಹಿನಿಯ ಪರ್ಪ್ಯೂರಿಯ (ಕಂಚುವಾಳ ಮರ), ಬಾ.ವಾಹ್ಲಿ (ಬಿಳೀ ಕಂಚುವಾಳ ಅಥವಾ ಕಂಬಿಹೂ), ಬಾ.ವೇರಿಗೇಟ(ಉಳಿಪೆ), ಬಾ.ಮಲಬಾರಿಕ (ಬಸವನ ಪಾದ) ಮತ್ತು ಬಾ.ಟೊಮೆಂಟೋಸ (ಆನೆಪಾದ) ಪ್ರಭೇದಗಳು ಬೆಳೆಯುತ್ತವೆ. ಭಾರತ ಮತ್ತು ಚೀನದೇಶಗಳ ಮೂಲನಿವಾಸಿಯಾದ ಕಂಚುವಾಳ ಮರವನ್ನು ರಸ್ತೆಗಳ ಪಕ್ಕದಲ್ಲೂ ಮನೆಗಳ ಆವರಣಗಳಲ್ಲೂ ಉದ್ಯಾನವನಗಳಲ್ಲೂ ಬೆಳೆಸುವುದುಂಟು.

ಕಂಚುವಾಳದ ಮರ

ಇದು ಸು. 30' ಎತ್ತರ ಬೆಳೆಯುವ ಮಧ್ಯಮಗಾತ್ರದ ಸದಾ ಹಸಿರಾಗಿರುವ ಮರ. ಎಲೆ 3" ರಿಂದ 6" ಉದ್ದ. ಆಕಾರ ಕರನೆಯಂತೆ. ಅಂಚು ನಯ. ತುದಿಯಿಂದ ಅರ್ಧಭಾಗದವರೆಗೆ ಮಧ್ಯದಲ್ಲಿ ಸೀಳಿರುವುದು ಇದರ ವೈಶಿಷ್ಟ್ಯ. ಈ ಸಸ್ಯ ಸೆಪ್ಟೆಂಬರ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ಹೂ ಬಿಡುತ್ತದೆ. ಬಿಳುಪು ಅಥವಾ ಕೆಂಪುಬಣ್ಣದ ಅಂತ್ಯಾರಂಭಿ ಹೂಗೊಂಚಲು ಬಹಳ ಸುಂದರವಾಗಿದೆ; ಕೇಸರುಗಳು 10. ಇವುಗಳಲ್ಲಿ 3–4 ಮಾತ್ರ ಫಲವತ್ತಾಗಿವೆ; ಉಳಿದವು ಬರಡು; ಅಂಡಾಶಯ ಬಹು ಅಂಡಕಗಳನ್ನೊಳಗೊಂಡ ಉಚ್ಚ ಮಾದರಿಯದು. ಫಲ ಬಹುಬೀಜವಿರುವ ಸು.1' ಉದ್ದದ ಪಾಡ್ ಮಾದರಿಯದು.

ಕಂಚುವಾಳ ಮರವನ್ನು ಬೀಜಗಳಿಂದ ವೃದ್ಧಿಮಾಡಬಹುದು. ಇದರ ಕಾಂಡದಲ್ಲಿ ಸಿಕ್ಕುವ ಗೋಂದಿಗೆ ವಾಣಿಜ್ಯ ಪ್ರಾಮುಖ್ಯವಿದೆ. ಚೌಬೀನೆ ಕಂದು ಬೂದು ಮಿಶ್ರಿತ ಬಣ್ಣದ್ದು; ಹಗುರ ಮತ್ತು ಮೃದು. ಗೆದ್ದಲು ಮತ್ತು ಕುಟ್ಟೆ ಹುಳು ತಿಂದುಹಾಕುವುದು ಸಾಮಾನ್ಯ. ವ್ಯವಸಾಯೋಪಕರಣಗಳ ತಯಾರಿಕೆಯಲ್ಲೂ ಬಡವರು ಒಮ್ಮೊಮ್ಮೆ ಮನೆ ಕಟ್ಟಲೂ ಇದನ್ನು ಬಳಸುವರು. ಹೂವನ್ನು ತರಕಾರಿಯಾಗಿ ಮತ್ತು ಉಪ್ಪಿನಕಾಯಿಗಳಲ್ಲಿ ಉಪಯೋಗಿಸುವುದೂ ಉಂಟು. ಗೋಂದನ್ನು ಬಟ್ಟೆ ಮತ್ತು ಕಾಗದದ ತಯಾರಿಕೆಯಲ್ಲಿ ಉಪಯೋಗಿಸುವರು. ಬೇರು, ಕಾಂಡದ ತೊಗಟೆ ಮತ್ತು ಹೂಗಳನ್ನು ಸ್ಥಳೀಯ ಔಷಧಿಗಳಲ್ಲಿ ಉಪಯೋಗಿಸುತ್ತಾರೆ. ಬೇರುಗಳ ಮೇಲಿನ ತೊಗಟೆ ವಿಷಪೂರಿತವಾದದ್ದು. ಎಲೆಗಳು ದನಕರುಗಳಿಗೆ ಒಳ್ಳೆಯ ಆಹಾರ.

ವಾಹ್ಲಿ (ಬಿಳೀ ಕಂಚುವಾಳ) ಎಂಬ ಪ್ರಭೇದ ಒಂದು ಭೀಷ್ಮ ಬಳ್ಳಿ. ನಮ್ಮ ದೇಶದ ಕಾಡುಗಳಲ್ಲಿ ಬೆಳೆಯುತ್ತದೆ. ಬಳ್ಳಿಯ ನಾರನ್ನು ಹಗ್ಗವಾಗಿ ಉಪಯೋಗಿಸುವರು. ಬೀಜಗಳು ಗೇರುಬೀಜದ ರುಚಿ ಕೊಡುವುದರಿಂದ ಹುರಿದು ತಿನ್ನುವುದುಂಟು. ಎಲೆ ಅಗಲವಾಗಿರುವುದರಿಂದ ತಿಂಡಿ ತಿನ್ನಲೂ ಊಟ ಮಾಡಲೂ ಗುಡಿಸಿಲ ಮೇಲ್ಛಾವಣಿಗೆ ಹೊದಿಸಲೂ ಬರುತ್ತದೆ

ಇನ್ನೊಂದು ಪ್ರಭೇದವಾದ ವೇರಿಗೇಟ (ಉಳಿಪೆ) ಎಂಬುದು ಸು. 10–15 ಮೀ ಎತ್ತರ ಬೆಳೆದು ಬೇಸಗೆಯಲ್ಲಿ ಹೂಬಿಡುತ್ತದೆ. ಇದನ್ನು ಉದ್ಯಾನವನಗಳಲ್ಲಿ ಗಿಡವಾಗಿ ಬೆಳೆಸುವರು. ಗೋಂದು ಚೆರಿ ಗೋಂದಿನಂತಿದೆ. ವಿವಿಧ ಬಣ್ಣಗಳನ್ನು ಕಟ್ಟಲು ತೊಗಟೆಯನ್ನು ಬಳಸಲಾಗುವುದು.

ಬಿಳಿಯ ಹೂಬಿಡುವ ಬಾಹಿನಿಯ ಆಲ್ಬ, ಬಾ.ಕ್ಯಾಂಡಿಡ, ಬಾ.ಹುಕರಿ, ಬಾ.ಅಕ್ಯುಮಿನೇಟ ಪ್ರಭೇದಗಳನ್ನೂ ಕಗ್ಗೆಂಪು ಹೂ ಬಿಡುವ ಬಾ.ಗಾಲ್ಪಿನಿ ಪ್ರಭೇದವನ್ನೂ ಅಲಂಕಾರಕ್ಕೋಸ್ಕರ ಉದ್ಯಾನಗಳಲ್ಲಿ ಬೆಳೆಸುವುದೂ ಉಂಟು. (ಎಚ್.ಎನ್.ಸಿ.; ಬಿ.ವಿ.ಸಿ.)

**ಕಂಚು ಶಿಲ್ಪ :** ಅಚ್ಚುಗಳಲ್ಲಿ ಎರಕಹೊಯ್ದು ಆಕೃತಿಗಳನ್ನು ತಯಾರಿಸುವುದಕ್ಕೆ ಅತ್ಯಂತ ಪ್ರಶಸ್ತ ಲೋಹವಾದ ಕಂಚಿನಿಂದ ಶಿಲ್ಪಕಲಾಕೃತಿಗಳನ್ನು ರೂಪಿಸುವ ವಿಧಾನ. ಕಂಚಿನಿಂದ ವಿಗ್ರಹಗಳು ಮುಂತಾದ ಕಲಾವಸ್ತುಗಳ ತಯಾರಿಕೆ ಬಹು ಹಿಂದಿನ ಕಾಲದಿಂದಲೇ ನಡೆದು ಬಂದಿದೆ. ಈ ಮಿಶ್ರಲೋಹ ಗಟ್ಟಿ, ಹೊಳಪು ಹೊಂದಿದೆ.

ನಟರಾಜಮೂರ್ತಿ

ಗಾಳಿಗೆ ಶೀತೋಷ್ಣಗಳಿಗೆ ಒಡ್ಡಿದರೂ ಬೇಗ ಹೊಳಪನ್ನು ಕಳೆದುಕೊಳ್ಳುವುದಿಲ್ಲ. ಅಲ್ಲದೆ ಅಚ್ಚಿನ ಎಲ್ಲ ಸಂದು ಬಿರುಕುಗಳಿಗೂ ಹರಿದು ಅಚ್ಚಿನಲ್ಲಿರುವ ಆಕೃತಿಯನ್ನೇ ತಾಳುತ್ತದೆ. ನವಶಿಲಾಯುಗ (ನಿಯೋಲಿಥಿಕ್ ಏಜ್) ಮತ್ತು ಕಬ್ಬಿಣಯುಗಗಳ ಮಧ್ಯದ ಅವಧಿಯಲ್ಲಿ ಕಂಚಿನ ತಯಾರಿಕೆ ಪ್ರಾರಂಭವಾಯಿತೆಂದು ತಿಳಿದುಬಂದಿದೆ. ಚರಿತ್ರೆ ಪೂರ್ವಕಾಲದಲ್ಲೇ

ಏಷ್ಯದ ಮತ್ತು ಯುರೋಪಿನ ಅನೇಕ ದೇಶಗಳಲ್ಲಿ ಕಂಚನ್ನು ಆಯುಧಗಳನ್ನು ಮತ್ತು ಅನೇಕ ಅಲಂಕಾರ ಪದಾರ್ಥಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಿದ್ದರು. ಪ್ರ.ಶ.ಪೂ. ಮೂವತ್ತು ಶತಮಾನಗಳಷ್ಟು ಹಿಂದೆಯೇ ಕಂಚನ್ನು ಕರಗಿಸಿ ಆಯುಧಗಳು ಮುಂತಾದುವನ್ನು ತಯಾರಿಸುವ ಕ್ರಮ ಭಾರತದಲ್ಲಿ ತಿಳಿದಿತ್ತೆಂಬುದು ಮೊಹೆಂಜೊದಾರೊದಲ್ಲಿ ನಡೆಸಿದ ಉತ್ಖನನಗಳಿಂದ ತಿಳಿದುಬಂದಿದೆ.

ದೇವರುಗಳ ಮತ್ತು ದೇವತಾಂಶ ಸಂಭೂತರಾದ ರಾಜರ, ಸಂತರ, ಭಕ್ತಾದಿಗಳ ವಿಗ್ರಹಗಳು; ಪೂಜಾನುಕೂಲತೆಯನ್ನು ಒದಗಿಸಿಕೊಡುವ ಸಲಕರಣೆಗಳು, ಉಪಕರಣಗಳು, ದೇವಸ್ಥಾನದ ಕವಾಟಗಳು, ಬಾಗಿಲುಗಳು, ಶವಾಗಾರಗಳು, ಕಲ್ಲಿನ ಗೋರಿ ಅಲಂಕಾರ, ದೀಪದ ಮಲ್ಲಿಗಳು, ಹಲಗಾರತಿಗಳು, ತಟ್ಟೆಗಳು, ಅರ್ಘ್ಯ ಪಾತ್ರೆಗಳು, ಉದ್ದರಣೆಗಳು, ದೀಪಸ್ತಂಭಗಳು, ಸ್ತೂಪಗಳು ಮತ್ತು ಕುದುರೆಗಾಡಿಗಳ ಮಸ್ತಿಷ್ಕು, ಮೇಣದ ಬತ್ತಿಗಳನ್ನಿಡುವ ಗೆಲಿಂಚೆಗಳು, ಹೊಗೆಬತ್ತಿಯ ಮತ್ತು ಹೂವಿನ ಕರಂಡಕಗಳು, ಬಾಗಿಲ ಚಿಲಕ ಬೀಗಗಳು, ಮಕ್ಕಳ ಆಟದ ಸಾಮಾನುಗಳು, ದುಂಡಾದ ಮುದ್ರೆಗಳು–ಮುಂತಾದ ಅನೇಕಾನೇಕ ವಸ್ತುಗಳು ಕಂಚುಶಿಲ್ಪಕ್ಕೆ ಉತ್ತಮ ಉದಾಹರಣೆಗಳಾಗಿವೆ.

ಪ್ರಾಚ್ಯ ಮತ್ತು ಪಾಶ್ಚಾತ್ಯ ಕಂಚುಶಿಲ್ಪಗಳಲ್ಲಿನ ಪ್ರಮುಖ ವ್ಯತ್ಯಾಸಗಳಿಗೆ ಅಲ್ಲಲ್ಲಿನ ಧಾರ್ಮಿಕ, ಸಾಂಸ್ಕೃತಿಕ ಹಾಗೂ ನಾಗರಿಕ ಧೋರಣೆಗಳಲ್ಲಿನ ವ್ಯತ್ಯಾಸಗಳೇ ಕಾರಣಗಳಾಗಿವೆ. ಪಾಶ್ಚಾತ್ಯ ಕಲೆಯಲ್ಲಿ ಕಾಲಾನುಕಾಲಕ್ಕೆ ಗಮನಾರ್ಹವಾದ ಮಾರ್ಪಾಟುಗಳಾಗಿದ್ದರೂ ಕಂಚುಶಿಲ್ಪ ಮಾತ್ರ ಆಧುನಿಕ ಕಾಲದವರೆಗೆ ತನ್ನ ಅಭಿಜಾತ ಗುಣವನ್ನು ಉಳಿಸಿಕೊಂಡು ಬಂದಿದೆ ಎನ್ನಬಹುದು.

ಏಷ್ಯ ಖಂಡಕ್ಕೆ ಸೇರಿದ ಚೀನ, ಜಪಾನ್, ಟಿಬೆಟ್, ಭೂತಾನ್, ನೇಪಾಲ, ಮಲಯ, ಕೊರಿಯ, ಇಂಡೋನೇಷ್ಯ, ಮಯನ್ಮಾರ್ ಮುಂತಾದ ಪ್ರದೇಶಗಳ ಕಲಾಸಂಸ್ಕೃತಿಗಳು, ದೇಶೀಯವೆನ್ನಬಹುದಾದ ಸವರಣೆಗಳಿಗೆ ಒಳಪಟ್ಟಿದ್ದರೂ ಹೆಚ್ಚಾಗಿ ಮತ್ತು ಮುಖ್ಯವಾಗಿ ಭಾರತದ ಕಲಾಸಂಸ್ಕಾರವನ್ನೇ ಪ್ರತಿಬಿಂಬಿಸುತ್ತವೆ. ಏನಾದರೂ ಅಂತರಗಳಿದ್ದಲ್ಲಿ, ಅವು ಈಚಿನ ಪಾಶ್ಚಾತ್ಯ ಪ್ರಭಾವಕ್ಕೆ ಅನುಗುಣವಾದುವಾಗಿವೆ.

**ಪ್ರಾಚ್ಯ ಕಂಚುಗಳು:** ಕಂಚನ್ನು ಕರಗಿಸಿ ಮೂರ್ತಿಗಳನ್ನೂ ಆಯುಧಗಳನ್ನೂ ಇತರ ಪದಾರ್ಥಗಳನ್ನೂ ತಯಾರು ಮಾಡುವ ಕಲೆ ಮೊತ್ತಮೊದಲು (ಪ್ರ.ಶ.ಪೂ. 3000) ಭಾರತ ಮತ್ತು ಅಸ್ಸೀರಿಯಗಳಲ್ಲಿ ಬೆಳೆಯಿತು. ತಾಮ್ರದೊಂದಿಗೆ ಇತರ ಲೋಹ ಬೆರೆಸಿ ಕರಗಿಸಿ ಕಂಚು ಮಾಡುವುದರಲ್ಲಿ ಭಾರತೀಯರು ಮುಂದುವರಿದಿದ್ದರೂ ಅಂದವಾದ, ಕಲಾವೈಶಿಷ್ಟ್ಯ ಹೊಂದಿದ ಪದಾರ್ಥಗಳನ್ನು ತಯಾರಿಸುವುದರಲ್ಲಿ ಅಸ್ಸೀರಿಯನ್ನರು ಹೆಚ್ಚು ನೈಪುಣ್ಯಹೊಂದಿದ್ದರು. ಕ್ರಮೇಣ ಇದರಲ್ಲೂ ಭಾರತೀಯರು ಮೇಲ್ಮೆ ಪಡೆದರು. ಹಿಂದೂ ದೇವತಾಮೂರ್ತಿಗಳು ಎಲ್ಲ ಕಡೆ ತಯಾರಾದುವು. ಬೌದ್ಧ ಮತ್ತು ಜೈನಮುನಿಗಳ ಮೂರ್ತಿಗಳೂ ಹೊರಬಂದುವು. ಪ್ರತಿಯೊಂದು ದೇವಾಲಯದಲ್ಲೂ ದೇವತಾ ಮೂರ್ತಿಗಳು, ಹೆಚ್ಚಾಗಿ ಉತ್ಸವಮೂರ್ತಿಗಳು ಕಂಚಿನಿಂದಲೇ ತಯಾರಾದುವು. ಶ್ರೀಲಂಕ, ಆಗ್ನೇಯ ಏಷ್ಯ ದೇಶಗಳು, ಟಿಬೆಟ್–ಹೀಗೆ ನೆರೆದೇಶಗಳಿಗೂ ಈ ಕಂಚು ಕಲೆ ಹರಡಿತು. ಈಗ ಉತ್ತರ ಭಾರತದ ಮಧ್ಯಪ್ರದೇಶ, ಜಯಪುರ ಮುಂತಾದ ಕೆಲವು ಕಡೆಗಳಲ್ಲಿ, ದಕ್ಷಿಣದ ಕುಂಭಕೋಣಂ, ತಿರುವನಂತಪುರ, ತಂಜಾವೂರು ಪ್ರದೇಶಗಳಲ್ಲಿ, ದೇವತಾಮೂರ್ತಿಗಳನ್ನಲ್ಲದೆ ಪಾತ್ರೆಗಳು, ದೀಪಸ್ತಂಭಗಳು ಮುಂತಾದ ಪೂಜೋಪಕರಣಗಳು, ಮಕ್ಕಳ ಆಟದ ಸಾಮಾನುಗಳು ಮುಂತಾದುವನ್ನೂ ತಯಾರುಮಾಡುತ್ತಾರೆ. ಭಾರತದಲ್ಲಿ ಈ ಕಲೆ ಇಂದಿಗೂ ಜೀವಂತವಾಗುಳಿದಿದೆಯಲ್ಲದೆ ನಿತ್ಯೋಪಯೋಗಿ ಸಾಮಾನುಗಳೊಂದಿಗೆ ಶ್ರೀಮಂತ ಕಲಾಭಿರುಚಿಯನ್ನು ತೃಪ್ತಿ ಪಡಿಸುವ ಕಲಾ ವಸ್ತುಗಳ ನಿರ್ಮಾಣವೂ ಸೇರಿ ಅನೇಕಾನೇಕ ಕಾರ್ಮಿಕ ಕುಟುಂಬಗಳಿಗೆ ಜೀವನ ನಿರ್ವಹಣೆ ಒದಗಿದಂತಾಗಿದೆ.

ಭಾರತದ ದೇವತಾಸ್ವರೂಪಗಳಲ್ಲಿ ನಟರಾಜ, ಉಮಾಮಹೇಶ್ವರ, ಶಿವಶಕ್ತಿ, ಶಿವ ಮತ್ತು ರಾಮಪಂಚಾಯತನ ಮೂರ್ತಿಗಳು, ಸಂಧ್ಯಾರಾಗಮೂರ್ತಿ, ದಕ್ಷಿಣಾಮೂರ್ತಿ, ವೀರಭದ್ರ, ಭೈರವ, ದತ್ತಾತ್ರೇಯ ಮುಂತಾದ ಪ್ರತಿಮೆಗಳು, ದೇವೀಸ್ವರೂಪದ ದುರ್ಗೆ, ದಾಕ್ಷಾಯಿಣಿ, ಅನ್ನಪೂರ್ಣ, ಮಹಿಷಾಸುರಮರ್ದಿನಿ, ಕಾಳಿ, ಪಾರ್ವತಿ, ಇಂದ್ರಾಣಿ, ಭೈರವಿ, ವಾರಾಹಿ, ವೈಷ್ಣವೀ, ಶಿವಕಾಮಿನಿಗಳು, ಸಪ್ತಮಾತೃಕೆಗಳು, ಲಕ್ಷ್ಮಿ, ಸರಸ್ವತಿ, ಗಜಲಕ್ಷ್ಮಿ, ಭೂದೇವಿ, ಭಾರತಿ ಮೊದಲಾದುವು, ಗಣೇಶ, ಸೋಮಸ್ಕಂಧ, ವೇಣುಗೋಪಾಲ, ಸುಬ್ರಹ್ಮಣ್ಯ, ನಾರಸಿಂಹ, ಲಕ್ಷ್ಮೀನರಸಿಂಹ, ರಾಧೆ, ಕೃಷ್ಣ, ಆಂಜನೇಯ, ಗರುಡ, ಅಷ್ಟದಿಕ್ಪಾಲಕರು, ನವಗ್ರಹಮೂರ್ತಿಗಳು, ವಿಷ್ಣು, ರಂಗನಾಥ, ಶೇಷಶಾಯಿ, ಸತ್ಯನಾರಾಯಣ ಮುಂತಾದ ದೇವಸ್ವರೂಪಗಳು, ಗೌತಮಬುದ್ಧ, ಅಮಿತಾಭ, ರತ್ನಸಂಭವ, ಅಮೋಘಸಿದ್ಧಿ ಮುಂತಾದ ಧ್ಯಾನಿಬುದ್ಧರು, ಅವರ ಕುಟುಂಬಕ್ಕೆ ಸೇರಿದ ಹೇಣುಕಾ, ಏಕಜಾತ, ನೈರಾತ್ಮಾ, ಮಾರೀಚೀ, ವಜ್ರವಾರಾಹಿ, ಲೋಕೇಶ್ವರ, ಜಂಭಲ, ವಸುಧಾರಾ, ಪರ್ಣಶವರೀ ಪ್ರಜ್ಞಾಪಾರಮಿತಾ, ಮಂಜುಶ್ರೀ, ಮೈತ್ರೇಯ ಮುಂತಾದುವೂ ಜೈನಧರ್ಮಕ್ಕೆ ಸಂಬಂಧಿಸಿದಂತೆ ಆದಿನಾಥ, ಜೀವಂಧರ ಮುಂತಾದವರು; ಭಕ್ತವರ್ಯರಾದ ಸುಂದರ ಸುಂದರಮೂರ್ತಿ, ಮಾಣಿಕ್ಯವಾಚಕರ್ ಮುಂತಾದವರು. ಚರಿತ್ರ ಪುರುಷರಾದ ಶ್ರೀಕೃಷ್ಣದೇವರಾಯ ಮತ್ತು ಅವನ ರಾಣಿಯರು–ಇಂಥ ಶಿಲ್ಪಗಳು ಅಸಂಖ್ಯಾತವಾಗಿವೆ. ಭಾವದರ್ಶನದಲ್ಲಿ ಕಲಾದೃಷ್ಟಿಯಲ್ಲಿ ಅತ್ಯಂತ ಲೋಕಮಾನ್ಯತೆ ಪಡೆದ ವಿಗ್ರಹಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಬಹುದು:

1. ಶ್ರೀಶೈಲ, ತಂಜಾವೂರು, ಕಾಳಹಸ್ತಿ ತಿರುಮಂಗಳಗಳ ನಟರಾಜರು, ಸಂಧ್ಯಾರಾಗಮೂರ್ತಿಗಳು, ಭಿಕ್ಷಾಟನಶಿವರು; ಲೇಪಾಕ್ಷಿಯ ಭಿಕ್ಷಾಟನ ಶಿವ, ವೀರಭದ್ರ, ಉಮಾಮಹೇಶ್ವರರು. 2. ಶ್ರೀಶೈಲದ ದಕ್ಷಿಣಾಮೂರ್ತಿ. 3. ಸಿಂಹಳದ ಮತ್ತು ತಂಜಾವೂರಿನ ಸುಂದರಮೂರ್ತಿ, ಮಾಣಿಕ್ಯವಾಚಕರ್. 4. ನೇಪಾಲದ ಶಿವಶಕ್ತಿ ಸ್ವರೂಪಗಳು, ಬೋಧಿಸತ್ತ್ವರು. 5. ಕೂರ್ಕಿಹಾರಿನ ಪದ್ಮಪಾಣಿವಿಗ್ರಹ. 6. ಚಂಪದೇಶದ ಬುದ್ಧ. 7. ಜಾವ ಮತ್ತು ನಳಂದಗಳ ಪ್ರಜ್ಞಾಪಾರಮಿತ. 8. ನಾಗಪಟ್ಟಣದಲ್ಲಿನ ಬುದ್ಧನ ವಿಗ್ರಹ, ವಿಷಾಪಹರಣ ಮೂರ್ತಿ. 9 ಚೋಳಯುಗದ ಪಾರ್ವತಿ, ಶಿವಕಾಮಿನಿ ವಿಗ್ರಹಗಳು. 10. ನಳಂದ ಪ್ರದೇಶದ ತಾರಾ, ಮಂಜುಶ್ರೀ, ಪ್ರತಿಮೆಗಳ ಮಧ್ಯದಲ್ಲಿರುವ ಬುದ್ಧ ಮತ್ತು ಅವಲೋಕಿತೇಶ್ವರರು. ಅದೇ ಪ್ರದೇಶದ ಪದ್ಮಪಾಣಿ ಮತ್ತು ಸಿಂಹನಾದರು. 11. ಟಿಬೆಟ್ ಮತ್ತು ನೇಪಾಲ ಪ್ರದೇಶಗಳ ವಜ್ರಪಾಣಿ, ಪದ್ಮಪಾಣಿ, ವಜ್ರಧಾರಾ, ಲೋಕೇಶ್ವರರು. 12. ಸಿಂಹಳದ್ವೀಪದ ಬೋಧಿಸತ್ತ್ವರು, ನಾಟ್ಯವಿಗ್ರಹ, ಅನುರಾಧಾಪುರದ ವಜ್ರಸತ್ತ್ವ ಸ್ವರೂಪ. 13. ಚೀನದ ಆಸನಸ್ಥ ಬುದ್ಧ ಪ್ರತಿಮೆಗಳು, ಕ್ವಾನ್‌ಇನ್, ಸಿಂಹನಾದ ಅವಲೋಕಿತೇಶ್ವರರು. 14. ನೇಪಾಲದ ಅಮಿತಭಾತ್ರಿ ಮೂರ್ತಿ, ಬುದ್ಧನ ಜನನ ಶಿಲ್ಪ. 15. ಸಿಕ್ಕಿಂ ದೇಶದ ಪಂಚಲೋಹದ ಶಾಕ್ಯಶಿಲ್ಪ, ಮಿಲರೇಪ ತಾರಾ ಮುಂತಾದುವು. 16. ಜಪಾನಿನ ದೊಡ್ಡ ಪ್ರಮಾಣದ ಬುದ್ಧ ಅವಲೋಕಿತೇಶ್ವರ, ತಾರಾ, ಮಂಜುಶ್ರೀ ವಿಗ್ರಹಗಳು. 17. ಭೂತಾನ್ ದೇಶದ ದೀಪಂಕರ ಮೈತ್ರೇಯ, ಪದ್ಮಸಂಭವ, ರತ್ನಸಂಭವ ಮುಂತಾದ ಬೋಧಿಸತ್ತ್ವರು. 18. ತಿರುಪತಿಯಲ್ಲಿಯ ಶ್ರೀಕೃಷ್ಣದೇವರಾಯ ಮತ್ತು ಅವನ ರಾಣಿಯರ ಪ್ರತಿಮೆಗಳು.

ದಕ್ಷಿಣ ಭಾರತದಲ್ಲಿ ತಂಜಾವೂರು, ಕುಂಭಕೋಣಂ, ತಿರುವನಂತಪುರ ಪ್ರದೇಶಗಳಲ್ಲೂ ಉತ್ತರದಲ್ಲಿ ಮಧ್ಯಪ್ರದೇಶ, ಜಯಪುರ, ಆಗ್ರ, ಅಯೋಧ್ಯ ಮೊದಲಾದ ಕಡೆಯೂ ಕಂಚುಶಿಲ್ಪದ ಕೆಲಸ ಚೆನ್ನಾಗಿ ನಡೆಯುತ್ತದೆ. ಮಧ್ಯಪ್ರದೇಶದವುಗಳಲ್ಲಿ ನವಿಲುಗಳು, ನಂದಿಗಳು, ಸರ್ಪಗಳು, ವಿಧವಿಧವಾದ ದೇವತಾ ಸ್ವರೂಪಗಳು, ಚಿಕ್ಕಮಟ್ಟ ದೇವಾಲಯಗಳು, ಶಿವಶಕ್ತಿ ಸ್ವರೂಪಗಳು, ಶಿವ ಮತ್ತು ಬುದ್ಧನ ಮುಖಗಳು, ಗಂಟೆಗಳು, ಕೈಯಲ್ಲಿ ಬೆಣ್ಣೆಯ ಮುದ್ದೆಯನ್ನು ಹಿಡಿದು ಅಂಬೆಗಾಲಿಡುವ ಬಾಲಕೃಷ್ಣಾಕೃತಿಗಳು–ಮುಂತಾದುವು ಬಹು ರಮ್ಯವಾಗಿವೆ. ಈ ದೇವತೆಗಳ ದೊಡ್ಡ ರೂಪಗಳೇ ಉತ್ಸವಮೂರ್ತಿಗಳಾಗಿ ದೇವಾಲಯಗಳಲ್ಲಿ ಬಳಕೆಯಲ್ಲಿವೆ. ಉತ್ತರಕ್ಕಿಂತ ದಕ್ಷಿಣದಲ್ಲಿ, ಶಾಸ್ತ್ರಾಂಶಕ್ಕೆ ಹೆಚ್ಚು ಪ್ರಾಧಾನ್ಯ. ದಕ್ಷಿಣ ಭಾರತದ ದೀಪಸ್ತಂಭಗಳಿಗೆ ಹಂಸ, ಕಿನ್ನರ, ಆಂಜನೇಯ, ಗರುಡ, ಕಲ್ಪವೃಕ್ಷ ಮುಂತಾದ ನಮೂನೆಗಳನ್ನು ಹೊಂದಿಸಿರುತ್ತಾರೆ. ಹಿನ್ನೆಲೆಯಲ್ಲಿ ತುಪ್ಪ, ಎಣ್ಣೆ ತುಂಬಲು ಮಾಡಿರುವ ಬುಡ್ಡಿಗಳ ಅಲಂಕಾರ ತಗಡಿನಲ್ಲಿ ನಿರ್ಮಿಸಿ ಒತ್ತಿ ಅಂಟಿಸಿದ ಗಜಲಕ್ಷ್ಮಿ, ಲಕ್ಷ್ಮಿ, ಸರಸ್ವತಿ, ಮೂರು, ಐದು, ಏಳು, ಒಂಬತ್ತು ಹೆಡೆಗಳುಳ್ಳ ಆದಿಶೇಷ ಮುಂತಾದ ಆಕೃತಿಗಳನ್ನೊಳಗೊಂಡಿರುತ್ತವೆ. ಸರ್ಪಾಕೃತಿಯ ದೀಪಗಳಿಗೆ ನಾಗದೀಪಗಳೆಂದು ಹೆಸರು. ಸಂಪೂರ್ಣವಾಗಿ ಗುಂಡುಗುಂಡಾಗಿಯೂ ಇರುವ ಪ್ರತಿಮಾಶಿಲ್ಪವಲ್ಲದೆ ಕಂಚುತಗಡಿನ ಶಿಲ್ಪ ಕೂಡ ಬಳಕೆಯಲ್ಲಿತ್ತು. ಈ ಕೆಲಸ ಕವಾಟಸ್ತಂಭಗಳ ಅಲಂಕಾರಕ್ಕೂ ಬಾಗಿಲುಗಳ ಅಲಂಕಾರಕ್ಕೂ ಸರಿಹೋಗುತ್ತಿತ್ತು. ಶ್ರೀಶೈಲ ದೇವಸ್ಥಾನದ ಗೋಡೆಗಳಲ್ಲಿ ಇಂಥ ಅಲಂಕರಣವನ್ನು ಕಾಣಬಹುದು. ಪಾಶ್ಚಾತ್ಯ ದೇಶಗಳಲ್ಲಿ ಕೂಡ ಈ ನಮೂನೆಯ ಅಲಂಕಾರ ಕವಾಟಗಳಿಗೂ ಬಾಗಿಲುಗಳಿಗೂ ಬಲಿಪೀಠಗಳಿಗೂ ಪ್ರಾರ್ಥನಾಭಾಗಗಳಿಗೂ ಅಳವಟ್ಟಿದೆ.

ಪರ್ಷಿಯದ ಲ್ಯೂರಿಸ್ತಾನ್ ಮತ್ತು ರಷ್ಯಕ್ಕೆ ಸೇರಿದ ಅಜ಼ರ್ ಬೈಜಾನ್‌ಗಳಲ್ಲೂ ಕಂಚುಕಲೆ ಮೊಹೆಂಜೊದಾರೊ ಕಾಲದಲ್ಲೇ ಪ್ರಾರಂಭವಾಯಿತೆನ್ನಬಹುದು. ಲ್ಯೂರಿಸ್ತಾನದ ತಯಾರಿಕೆ ಮೇಲ್ಮಟ್ಟದ್ದು. ದೇವತಾವಿಗ್ರಹಗಳು ಕೊಂಚ ಮಟ್ಟಿಗೆ ಗ್ರೀಕರ ಡಯಾನಾ ವಿಗ್ರಹದ ಮಾದರಿಯವು. ಅವರ ಕುದುರೆ ಪ್ರತಿಮೆಗಳು ಉಚ್ಚಮಟ್ಟದ ಕಲಾಪ್ರತಿಭೆಯನ್ನು ತೋರಿಸುತ್ತವೆ. ಭಾರತದ ನೆರೆರಾಜ್ಯವಾದ್ದರಿಂದ ಪರ್ಷಿಯನ್ನರ ಕಲಾದೃಷ್ಟಿ ಆಧ್ಯಾತ್ಮಿಕವಾಗಿಯೂ ಇತ್ತು. ಅವರ ಜೀವನವೃಕ್ಷ (ಟ್ರೀ ಆಫ್ ಲೈಫ್) ಸಾಂಕೇತಿಕ; ಭಾರತದ ಆಧ್ಯಾತ್ಮಿಕ ಧೋರಣೆಗಳನ್ನೊಳಗೊಂಡಿದೆ.

**ಪಾಶ್ಚಾತ್ಯ ಕಂಚುಗಳು:** ಪಾಶ್ಚಾತ್ಯ ಕಲಾಧೋರಣೆಗಳಿಗೂ ಧ್ಯೇಯಗಳಿಗೂ ಗ್ರೀಸ್ ದೇಶದ ಕಲಾಸಂಸ್ಕೃತಿ ಆಧಾರವಾಗಿದೆ. ಗ್ರೀಸಿನ ಪ್ರಭಾವ ಒಂದು ಕಾಲದಲ್ಲಿ ಹೆಚ್ಚಾಗಿಯೂ ಮತ್ತೊಂದರಲ್ಲಿ ಕಡಿಮೆಯಾಗಿಯೂ ಇರುತ್ತಲೇ ಬಂದಿದೆ. ಈ ಪ್ರಭಾವಕ್ಕೆ ಅಭಿಜಾತ ಧೋರಣೆ ಎನ್ನುತ್ತಾರೆ. ಪ್ರ.ಶ. 13ನೆಯ ಶತಮಾನದವರೆಗೂ ಇದು ತಾನೇ ತಾನಾಗಿದ್ದು ಗಾಥಿಕ್ ವೈಖರಿ ಜಾರಿಗೆ ಬಂದ ಅನಂತರ ಕಡಿಮೆಯಾಗಿ ಮತ್ತೆ ಯುರೋಪಿನ

ಸಾಹಿತ್ಯ ಕಲೆಗಳ ಪುನರುಜ್ಜೀವನ ಕಾಲದಲ್ಲಿ ಹೆಚ್ಚಾಗಿ ದೇಶೀಯ ಸಂಸ್ಕೃತಿಗಳಿಗೆ ಒಳಪಟ್ಟು ನವೀನ ಅಭಿಜಾತ ಮಾರ್ಗ ಎಂಬ ಹೆಸರನ್ನು ಪಡೆದು ಈಗ ಅತಿ ನವೀನ ಧೋರಣೆಗಳಾದ ಕ್ಯೂಬಿಸಂ, ಮುಂತಾದ ಧೋರಣೆಗಳಿಂದಾಗಿ ಹಿಂದೆ ಬಿದ್ದಿದೆ.

ಗ್ರೀಸ್ ಪ್ರದೇಶದ ಕಂಚುಶಿಲ್ಪ ಅಮೃತಶಿಲೆಯ ಶಿಲ್ಪದಷ್ಟು ವಿಪುಲವಾಗಿಲ್ಲದಿದ್ದರೂ ರಚನೆಯ ವಿಧಾನದಲ್ಲಾಗಲಿ ಅಥವಾ ಕಲಾಧ್ಯೇಯಗಳಲ್ಲಾಗಲಿ ಉಚ್ಚ ಮಟ್ಟದ್ದಾಗಿದೆ. ಅಮೃತಶಿಲೆ ಮತ್ತಿತ್ತರ ವಸ್ತುಗಳಲ್ಲಿ ಸಾಧಿಸಿದ ಕಲಾಶ್ರೇಷ್ಠತೆಯನ್ನವರು ಕಂಚುಶಿಲ್ಪದಲ್ಲೂ ಸಾಧಿಸಿದರು. ಅವರ ಕಲಾಪ್ರೌಢಿಮೆಗೆ ನಿದರ್ಶನವಾಗಿ ಅನೇಕ ಕಂಚುಪ್ರತಿಮೆಗಳು ಇಂದಿಗೂ ಉಳಿದಿವೆ.

ಇವುಗಳಲ್ಲಿ ಕೆಲವು ಮುಖ್ಯಕೃತಿಗಳೆಂದರೆ–ಆರ್ಮೀನಿಯ ಪ್ರದೇಶದಲ್ಲಿ ಸಿಕ್ಕ ಆರ್ಟೆಮಿಸ್ ದೇವತೆಯ ದೊಡ್ಡ ಪ್ರಮಾಣದ ತಲೆ, ಸೇಬನ್ನು ಹಿಡಿದ ಹರ್ಕ್ಯುಲಿಸ್, ಪಾಲಿಕ್ಲೀಟಸ್ ರಚಿಸಿದ ಅಮೆಜ಼ಾನ್ ವಿಗ್ರಹ, ತಗಡಿನ ಉಬ್ಬು ಕೆತ್ತನೆಯ ಸಿರಿಯಸ್, ಪಾಂಪೇ ಪ್ರದೇಶದ ಆರ್ಟೆಮಿಸ್, 20" ಎತ್ತರದ ನಾರ್ಸಿಸಸ್ ವಿಗ್ರಹಗಳು. ಈ ವಿಗ್ರಹಗಳಲ್ಲಿನ ಕೂದಲಿನ ರಚನೆ ಗಮನಾರ್ಹವಾದ್ದು, ಉದಾಹರಣೆಗೆ, ಜುಪಿಟರ್‌ನ ಪ್ರತಿಮೆಯಲ್ಲಿ ತಲೆಗೂದಲು ಸಿಂಹದ ಕೇಸರಗಳಂತೆ ಸುರುಳಿ ಸುರುಳಿಯಾಗಿದ್ದರೆ ಅಪೋಲೊ ವಿಗ್ರಹದಲ್ಲಿ ಕೂದಲು ಕಂಠದ ಮೇಲೆ ಮತ್ತು ಕಪಾಲದ ಮೇಲೆ ಹರಿದಿದೆ. ಬ್ಯಾಕಸ್ ವಿಗ್ರಹದಲ್ಲಿ ಕೂದಲಿನ ಉಂಗುರಗಳು ಕಂಠದ ಮೇಲೆ ಮಾತ್ರ ಬಿದ್ದಿವೆ.

ಪ್ರಾಟೆಸ್ಟೆಂಟ್ ಧರ್ಮ ಹೆಚ್ಚಾಗಿ ವ್ಯಾಪಿಸಿರುವ ಕ್ರೈಸ್ತ ದೇಶಗಳಲ್ಲಿ ಕಂಚು ಪ್ರತಿಮೆಗಳು ಹೆಚ್ಚಾಗಿ ಸಂಸಾರಜೀವನಕ್ಕೆ ಸಂಬಂಧಿಸಿದುವು. ಆದರೆ, ರೋಮನ್ ಕೆಥೊಲಿಕ್ ಧರ್ಮ ವ್ಯಾಪಕವಾಗಿರುವ ದೇಶಗಳಲ್ಲಿ ಆರಾಧನೆಗಾಗಿ ನಿರ್ಮಾಣವಾದ ಮೇರಿ ಅವಳ ಶಿಶು ಮತ್ತು ಸಂತರು, ದೇವದೂತರು–ಇವರ ವಿಗ್ರಹಗಳು ಭಾವಗರ್ಭಿತವಾಗಿವೆ, ಪ್ರಾಚ್ಯದೇಶಗಳಲ್ಲಿರುವಂತೆ ಇವುಗಳಲ್ಲಿ ದೇವತಾಂಶ ಪ್ರಧಾನ.

**ಗಾಥಿಕ್ ಯುಗದ ಕಂಚುಗಳು:** ಇಂಗ್ಲೆಂಡಿನಲ್ಲಿ ಸಾಧಾರಣವಾಗಿ ರಾಜರ ಮತ್ತು ಶ್ರೀಮಂತರ ಪ್ರತಿಮೆಗಳು ಮಾತ್ರ ಕಂಚಿನವಾಗಿವೆ. ಇವಕ್ಕೆ ಚಿನ್ನದ ಲೇಪನ ಮಾಡಿದೆ. ಫ್ರಾನ್ಸಿನಲ್ಲಿ 13–14 ಶತಮಾನಗಳಲ್ಲಿ ಗೋರಿಗಳ ಅಲಂಕಾರಕ್ಕಾಗಿ ಪ್ರತಿಮೆಗಳು ನಿರ್ಮಿತವಾದುವು. ಇವರ ಕಲಾವೈಶಿಷ್ಟ್ಯ ಇಂಗ್ಲೆಂಡಿಗೂ ಹರಡಿತು. ಇವುಗಳಲ್ಲಿ ಉಲ್ಲೇಖಾರ್ಹವಾದುದೆಂದರೆ 15ನೆಯ ಶತಮಾನದಲ್ಲಿ ರಚಿತವಾದ ರಿಚರ್ಡ್ ಬ್ಯುಷಾಂನ ವಿಗ್ರಹ. ಬಹು ಸುಂದರವಾದ ಇದಕ್ಕೆ ನೆದರ್ಲೆಂಡಿನ ಅಕ್ಕಸಾಲೆ ಬಾರ್ತ್‌ಲೋಮ್ಯೂ ಲ್ಯಾಂಬ್‌ಸ್ಟ್ರಿಂಗ್ ಚಿನ್ನದ ಲೇಪ ಕೊಟ್ಟಿದ್ದಾನೆ.

15, 16ನೇ ಶತಮಾನಗಳಲ್ಲಿ, ನ್ಯೂರೆಂಬರ್ಗ್, ಆಗ್ಸ್‌ಬರ್ಗ್, ಇನ್ಸ್‌ಬ್ರುಕ್ ಮುಂತಾದ ಅನೇಕ ನಗರಗಳಲ್ಲಿ ಅತ್ಯಂತ ಸುಂದರವಾದ ಕಂಚುಕಲಾಕೃತಿಗಳು ತಯಾರಾದುವು. ಚಕ್ರವರ್ತಿ ಮ್ಯಾಕ್ಸಿಮಿಲಿಯನ್ನನ ಸಮಾಧಿಯ ಮೇಲಿರುವ ಇಪ್ಪತ್ತೆಂಟು ಮೂರ್ತಿಗಳಿಂದಲಕೃತವಾಗಿರುವ ಕೃತಿಯಂತೂ ಮೋಹಕ ಕಲಾಸೌಂದರ್ಯವನ್ನು ಹೊಂದಿದೆ. ಇಟಲಿ, ನೆದರ್ಲೆಂಡ್ಸ್ ಮುಂತಾದ ಇತರ ದೇಶಗಳಲ್ಲೂ ರಚಿಸಲ್ಪಟ್ಟು ಇಂದಿಗೂ ಪ್ರೇಕ್ಷಕರನ್ನು ಬೆರಗುಗೊಳಿಸುತ್ತಿರುವ ಕಂಚು ಪ್ರತಿಮೆಗಳು ಇಂಥ ಉತ್ಕೃಷ್ಟ ಕಲಾಪ್ರೌಢಿಮೆಗೆ ನಿದರ್ಶನಗಳು.

ಈ ಕಾಲದಲ್ಲಿ ಇಂಗ್ಲೆಂಡಿನಲ್ಲಿ ರಚಿತವಾದ ಕಂಚು ಕೃತಿಗಳು ಕಲಾಪ್ರೌಢಿಮೆಯಲ್ಲಿ ಇನ್ನೂ ಉನ್ನತಮಟ್ಟವನ್ನು ಸಾಧಿಸಿದವು. ಪುನರುಜ್ಜೀವನಯುಗದಲ್ಲಿ ಅಂದರೆ 15ನೆಯ ಶತಮಾನಗಳಲ್ಲಿ ರಚಿತವಾದ ಕೆಲವು ಕಲಾಕೃತಿಗಳು–ಉದಾಹರಣೆಗೆ ಏಳನೆಯ ಹೆನ್ರಿಯ ಸಮಾಧಿಯ ಮೇಲಿರುವ ಪ್ರತಿಮಾ ಪುಂಜ, ಉಬ್ಬು ಆಕೃತಿಗಳು, ರಿಚ್ಮಂಡನ ಮಾರ್ಗರೆಟ್ ಪ್ರತಿಮೆ–ಶವಗಳಿಂದಲೇ ಅಚ್ಚು ತಯಾರಿಸಿ ಎರಕಹೊಯ್ದು ಮಾಡಿದುವೋ ಎಂಬಂತೆ ಯಥಾವತ್ತಾದ ಮೂಲಪ್ರತಿಬಿಂಬನೆ ಪಡೆದು ರಮ್ಯವಾಗಿವೆ. ಇದೇ ಕಾಲದಲ್ಲಿ ಇಟಲಿ, ಫ್ರಾನ್ಸ್, ಸ್ಪೇನ್‌ಗಳಲ್ಲಿ ರಚಿತವಾದ ಕಂಚುಪ್ರತಿಮೆಗಳು, ಇಂಥ ನೈಸರ್ಗಿಕತೆಯನ್ನೂ ಚೆಲುವನ್ನೂ ಹೊಂದಿಲ್ಲವೆನ್ನಬೇಕು.

19ನೆಯ ಶತಮಾನದಿಂದೀಚೆಗೆ ಪೂರ್ವಸಂಪ್ರದಾಯಗಳೂ ವಿಶ್ವಾಸಗಳ ನಿರ್ಬಂಧವಿಲ್ಲದೆ ವಾಸ್ತವಿಕತೆಯ ಮತ್ತು ಅದರ ಹಿನ್ನೆಲೆಯ ಭಾವನೆಗಳ ಮತ್ತು ರಾಗವಿಶೇಷಗಳ ನಿರೂಪಣೆ ಹೆಚ್ಚಾಗಿ ಬೆಳೆಯಿತು; ಸಂಕೇತ ಪ್ರಯೋಗ ಕ್ರಮ ಕಲಾಪ್ರಪಂಚಕ್ಕೂ ಹರಡಿತು. ತ್ವರಿತಗತಿಯಿಂದ ಬೆಳೆಯುತ್ತಿದ್ದ ವಿಜ್ಞಾನ ಸಾಧನಗಳೂ ಕಲಾಸೃಷ್ಟಿಗೆ ನೆರವಾದವು. ಹೀಗೆ ಈ ಕಾಲದಲ್ಲಿ ರಚಿತವಾದ ಕಂಚು ಪ್ರತಿಮೆಗಳಲ್ಲಿ ಇನ್ನೂ ಹೆಚ್ಚು ವಾಸ್ತವಿಕತೆ, ಸಂಕೇತಾರ್ಥ ನಿರೂಪಣೆಗಳನ್ನು ಕಾಣಬಹುದು. ಈ ಬೆಳವಣಿಗೆ ಹೆಚ್ಚಾಗಿ ಫ್ರಾನ್ಸ್, ಇಂಗ್ಲೆಂಡ್‌ಗಳಲ್ಲಿ ಕಂಡುಬರುತ್ತದೆ. (ಪಿ.ಎಸ್.)

**ಕಂಚೂಲಿಯರು :** ಶಾಕ್ತೇಯರಲ್ಲಿ ಒಂದು ಗುಂಪಿನವರು. ಮದರಾಸು ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ವಿಶೇಷವಾಗಿದ್ದಾರೆ. ಮದರಾಸು ಭಾಗದಲ್ಲಿ ಇವರನ್ನು ಕಂಚೂಲಿಯರು ಎಂದು ಕರೆಯುತ್ತಾರೆ. ಕಂಚೂಲಿಯರು ವಾಮಪಕ್ಷಕ್ಕೆ ಸೇರಿದವರು. ಮದ್ಯಸೇವನೆ, ಮಾಂಸಭಕ್ಷಣ ಮತ್ತು ಸ್ವೇಚ್ಛಾರತಿ ಇವರ ಮತಾಚಾರಗಳಲ್ಲಿ ಮುಖ್ಯವಾದುವು. ಇವರು ತಮ್ಮದೇ ಆದ ರಹಸ್ಯಕೂಟಗಳಲ್ಲಿ ಸೇರಿ ಘಟಕಂಚುಕಿ, ಎಂದರೆ ಗಡಿಗೆ ಮತ್ತು ರವಿಕೆ ಎಂಬ ವ್ರತವನ್ನು ಆಚರಿಸುತ್ತಾರೆ. ಈ ರಹಸ್ಯಕೂಟದಲ್ಲಿ ಗಂಡಸರ ಮತ್ತು ಹೆಂಗಸರ ಸಂಖ್ಯೆ ಸಮನಾಗಿರುತ್ತದೆ. ಅಲ್ಲಿ ಸೇರಿದ ಹೆಂಗಸರೆಲ್ಲ ತಮ್ಮ ಕುಪ್ಪುಸಗಳನ್ನು ಬಿಚ್ಚಿ ಪೂಜಾಸ್ಥಳದ ನಡುವೆ ಇಟ್ಟಿರುವ ಗಡಿಗೆಯಲ್ಲಿ ಹಾಕುತ್ತಾರೆ. ಅನಂತರ ಭಕ್ತಾದಿಗಳು ದೇವರ ಪ್ರಸಾದ ರೂಪವಾಗಿ ಮಾಂಸವನ್ನು ಭಕ್ಷಿಸಿ ಮದ್ಯಸೇವನೆ ಮಾಡುತ್ತಾರೆ. ಅನಂತರ ಒಬ್ಬೊಬ್ಬ ಗಂಡಸೂ ಗಡಿಗೆಯಲ್ಲಿರುವ ಒಂದು ಕುಪ್ಪುಸವನ್ನು ತೆಗೆಯುತ್ತಾನೆ. ಆ ಕುಪ್ಪುಸತೊಟ್ಟಿದ್ದವಳೊಡನೆ ಅವನು ಆ ರಾತ್ರಿ ಕಳೆಯುತ್ತಾನೆ. (ಜಿ.ಎನ್.)

**ಕಂಟಕಚರ್ಮಿಗಳು : (ನೋಡಿ– ಎಕಿನೊಡರ್ಮೇಟ)**

**ಕಂಠಸ್ಥ ಸಂಪ್ರದಾಯ :** ಗ್ರಂಥಸ್ಥಮೂಲವನ್ನು ಅವಲಂಬಿಸದೆ ತಲೆಮಾರಿನಿಂದ ತಲೆಮಾರಿಗೆ ಕರ್ಣಾಕರ್ಣಿಯಾಗಿ ಭಾಷೆ, ಸಂಗೀತ, ಸಾಹಿತ್ಯ ಮೊದಲಾದ ಎಲ್ಲ ಬಗೆಯ ಜ್ಞಾನವನ್ನೂ ಕಾಪಾಡಿಕೊಂಡು ಬರುವ ಕ್ರಮ. ತಾಯಿಯಿಂದ ಮಗಳಿಗೆ, ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ, ಹಿರಿಯ ತಲೆಮಾರಿನಿಂದ ಕಿರಿಯ ತಲೆಮಾರಿಗೆ, ಪೈಕದಿಂದ ಪೈಕಕ್ಕೆ ಈ ಸಂಪ್ರದಾಯದ ಮೂಲಕ ಪರಂಪರಾನುಗತ ಜ್ಞಾನವನ್ನು ಅರ್ಪಿಸುವ ಬಗೆ ಮಾನವಕುಲಕ್ಕೆ ಸಹಜವಾಗಿ ಬಂದ ಒಂದು ವರವಾಗಿದೆ. ಪ್ರಾಣಿಕುಲಕ್ಕೂ ಮಾನವಕುಲಕ್ಕೂ ಇರುವ ಮೂಲಭೂತ ಅಂತರವನ್ನು ಇದು ಶ್ರುತಪಡಿಸುತ್ತದೆ. ಓದು, ಬರೆಹ ಬೆಳೆದಂತೆಲ್ಲ ಈ ಸಂಪ್ರದಾಯದೊಂದಿಗೆ ಗ್ರಂಥಸ್ಥ ಸಂಪ್ರದಾಯವೂ ಬೆಳೆದು ಬಂದಿತೆಂದು ತೋರುತ್ತದೆ.

ಜಾನಪದ ಸಮಗ್ರ ಸಂಸ್ಕೃತಿಯ ಎರಡು ಅಂಗಗಳೆಂದು ಜಾನಪದ ವಿದ್ವಾಂಸರು ಗುರುತಿಸಿರುವ ಶಿಷ್ಟಸಂಸ್ಕೃತಿ ಹಾಗೂ ಜನಪದ ಸಂಸ್ಕೃತಿಗಳು ಪರಸ್ಪರ ಸ್ವೀಕರಣಕ್ಕೆ ಬದ್ಧವಾಗಿದ್ದರೂ ಎರಡೂ ನಡೆದು ಬಂದಿರುವ ದಾರಿ ಬೇರೆ ಬೇರೆ. ಎರಡರಲ್ಲಿಯೂ ಪರಂಪರೆಯ ಮುದ್ರೆ ಇದ್ದೇ ಇದೆ. ಅದರ ಶಿಷ್ಟಸಂಸ್ಕೃತಿ ಗ್ರಂಥಗಳಿಂದ, ವಿದ್ವಾಂಸರಿಂದ, ಧಾರ್ಮಿಕ ವಿಧಿಗಳಿಂದ ಪರಿಷ್ಕಾರಗೊಂಡದ್ದು, ಗೊತ್ತಾದ ಮೂಲದಿಂದ ಇದು ಶಿಷ್ಟರೂಪದಲ್ಲಿ ಉಳಿದುಬರುತ್ತದೆ. ಜನಪದ ಸಂಸ್ಕೃತಿ ವ್ಯಾಪಕವಾದುದು, ಕಂಠಸ್ಥಮೂಲದಲ್ಲಿ ಮಾತ್ರ ಉಳಿದುಬರತಕ್ಕದ್ದು. ಮೊದಲಿನದರಲ್ಲಿ ವ್ಯಷ್ಟಿಯ ಪಾತ್ರ ಹೆಚ್ಚಾದರೆ ಎರಡನೆಯದರಲ್ಲಿ ಸಮಷ್ಟಿಯ ಪಾತ್ರ ಹಿರಿದು.

ಸಹಸ್ರಾರು ವರ್ಷಗಳ ಮಾನವ ಜೀವನದ ಸುದೀರ್ಘ ಇತಿಹಾಸದಲ್ಲಿ ಅಕ್ಷರ ಜ್ಞಾನ ಬಂದದ್ದು ತೀರ ಇತ್ತೀಚೆಗೆ, ಒಂದು ಅರ್ಥದಲ್ಲಿ ನೆನ್ನೆ ಮೊನ್ನೆ. ಆದ್ದರಿಂದ ಗ್ರಂಥಸ್ಥಸಂಪ್ರದಾಯ ಕಂಠಸ್ಥ ಸಂಪ್ರದಾಯಕ್ಕಿಂತ ತುಂಬ ಇತ್ತೀಚಿನದು. ಮೊದಲಿಗೆ ಸಮಗ್ರ ಮಾನವ ವ್ಯವಹಾರಗಳ ಏಕೈಕವಾಹಕವಾಗಿದ್ದುದು ಕಂಠಸ್ಥ ಸಂಪ್ರದಾಯವೇ. ಮಾನವ ಅಕ್ಷರ ಜ್ಞಾನವನ್ನು ಪಡೆದ ಮೇಲೆ ತನ್ನ ಅನುಭವದ ಸ್ವಲ್ಪ ಭಾಗವನ್ನು ಮಾತ್ರ ಗ್ರಂಥಸ್ಥಗೊಳಿಸಲು ಸಾಧ್ಯವಾಯಿತು. ಅವನ ಅನಂತಜ್ಞಾನ ರಾಶಿ ಪರಂಪರಾನುಗತವಾಗಿ ಮುಂದುವರಿಯುತ್ತ ಬಂದಿರುವುದು ಕಂಠಸ್ಥ ಸಂಪ್ರದಾಯದಿಂದಲೇ.

ಅನಕ್ಷರಸ್ಥ ಸಮಾಜಗಳಲ್ಲಿ ಕಂಠಸ್ಥಸಂಪ್ರದಾಯದ ಪಾತ್ರ ವಿಶಿಷ್ಟವಾದುದು. ಬದುಕಿಗೆ ಬೇಕಾಗುವ ಸಕಲವಿದ್ಯೆ ಹಾಗೂ ವ್ಯವಹಾರ ಜ್ಞಾನವನ್ನು ಈ ಸಂಪ್ರದಾಯದಿಂದಲೇ ಗ್ರಹಿಸಬೇಕಾಗುತ್ತದೆ. ಮನೋರಂಜನೆ ಹಾಗೂ ದೈನಂದಿನ ಆವಶ್ಯಕತೆಗಳ ಪೂರೈಕೆಗೆ ಕಂಠಸ್ಥಸಂಪ್ರದಾಯದಲ್ಲಿಯೇ ಬಂದ ಜ್ಞಾನ ನೆರವಾಗುತ್ತದೆ. ಪುರಾಣ, ಐತಿಹ್ಯ, ಕಥೆ, ಗಾದೆ, ಒಗಟು, ಹಾಡು, ಲಾವಣಿ, ಭಾಷೆ, ನಂಬಿಕೆ, ಆಚರಣೆ, ಕಲೆ, ವೈದ್ಯ, ವ್ಯವಸಾಯದ ಕ್ರಮ, ಅಡುಗೆಗಳ ರೀತಿ, ಬೇಟೆಯಾಡುವ ವಿಧಾನ, ಆಟ, ಮಂತ್ರ, ಮಾಟ–ಹೀಗೆ ಎಲ್ಲವೂ ಕೇಳಿ ನೆನಪಿಡುವುದರ ಮೂಲಕ, ನೋಡಿ ಅನುಕರಿಸುವುದರ ಮೂಲಕ ಹಿರಿಯ ತಲೆಮಾರಿನಿಂದ, ಕಿರಿಯ ತಲೆಮಾರಿಗೆ ಹರಿದು ಬರುತ್ತವೆ. ಇಲ್ಲಿ ನೋಡಿ ಅನುಕರಿಸುವ ಕೆಲವು ವಿಷಯಗಳನ್ನು ಬಿಟ್ಟರೆ ಮಿಕ್ಕ ಎಲ್ಲ ವಿಷಯಗಳೂ ಕಂಠಸ್ಥ ಮೂಲದಲ್ಲಿಯೇ ಸಾಗಿ ಬರುತ್ತವೆ. ಅನುಕರಣೆಯ ಮೂಲಕ ಕಲಿಕೆ ಹಾಗೂ ಕಂಠಸ್ಥ ಸಂಪ್ರದಾಯದ ಪರಂಪರಾನುಗತ ಜ್ಞಾನವನ್ನೇ ಜಾನಪದ (ಫೋಕ್‌ಲೋರ್) ಎಂದು ಕರೆಯಲಾಗಿದೆ.

ಕಂಠಸ್ಥ ಸಂಪ್ರದಾಯದಲ್ಲಿ ಬಂದದ್ದೆಲ್ಲವೂ ಜಾನಪದವಾಗಬೇಕಿಲ್ಲ. ಬರೆವಣಿಗೆಯಿಲ್ಲದ ಸಂಸ್ಕೃತಿಯಲ್ಲಿ ಎಲ್ಲ ವ್ಯವಹಾರಗಳೂ ಕಂಠಸ್ಥಸಂಪ್ರದಾಯದಲ್ಲೇ ನಡೆಯುತ್ತವೆ. ರೇಡಿಯೋವನ್ನು ತಿರುಗಿಸುವ ಬಗೆ, ಬೈಸಿಕಲ್ಲನ್ನು ಸರಿಪಡಿಸುವ ಬಗೆ, ಬ್ರಷ್ಷಿನಿಂದ ಹಲ್ಲನ್ನು ಉಜ್ಜುವ ಬಗೆ–ಇವುಗಳ ಜ್ಞಾನವೂ ಕಂಠಸ್ಥಸಂಪ್ರದಾಯದಲ್ಲೇ ಬಂದರೂ ಇವನ್ನು ಜಾನಪದ ಎಂದು ಕರೆಯಲಾಗುವುದಿಲ್ಲ. ಜಾನಪದವಲ್ಲದ ಇತರ ವಿಷಯಗಳೂ ಈ ಸಂಪ್ರದಾಯದಲ್ಲಿ ಬರುವ ಸಾಧ್ಯತೆ ಇರುವುದರಿಂದ ಜಾನಪದವನ್ನು ನಿರ್ಧರಿಸಲು ಇದೊಂದೇ ಅಳತೆಗೋಲಲ್ಲ. ಆದರೆ ಯಾವುದೇ ಜಾನಪದ ಪ್ರಕಾರ ಕಂಠಸ್ಥಮೂಲದಲ್ಲಿ ಒಮ್ಮೆಯಾದರೂ ಪ್ರಸರಣವಾಗದಿದ್ದರೆ ಅದು ಜಾನಪದವಾಗಲಾರದು.

ಜಾನಪದ ಎಲ್ಲಿಯೂ ಎಂದೂ ಗ್ರಂಥಸ್ಥವಾಗಿರುವುದಿಲ್ಲ. ಆದರೆ ಕೆಲವು ಗಾದೆಗಳು, ಕಥೆಗಳು, ಗೀತೆ, ಲಾವಣಿ, ಸಂಪ್ರದಾಯಗಳು ಲೇಖಕನೊಬ್ಬನ ಕೃತಿಯಲ್ಲಿ ಸೇರಿಕೊಂಡಿರಬಹುದು. ಇವುಗಳ ಜಾನಪದತ್ವವನ್ನು ನಿರ್ಧರಿಸಲು ಕಂಠಸ್ಥಸಂಪ್ರದಾಯದ ಭಿನ್ನರೂಪಗಳನ್ನೇ ಮತ್ತೆ ತೌಲನಿಕವಾಗಿ ಅಭ್ಯಾಸ ಮಾಡಬೇಕಾಗುತ್ತದೆ.

ದೈಹಿಕ ಚಲನೆಗಳಿಗೆ ಸಂಬಂಧಿಸಿದಂತೆ ಕೆಲವು ಜಾನಪದ ಪ್ರಕಾರಗಳು ಸಾಗಿಬರುತ್ತವೆ. ಕುಣಿತಗಳು, ಸಂಜ್ಞೆಗಳು, ಆಟಗಳು, ಅಚರಣೆಗಳು ಮುಂತಾದವನ್ನು ಹೇಳಿಸಿಕೊಂಡು ಕಲಿಯುವ ಅಗತ್ಯವಿಲ್ಲ. ನಿರೀಕ್ಷೆಯಿಂದಲೇ ಅಭ್ಯಾಸದಿಂದಲೇ ಅವು ಕರಗತವಾಗುತ್ತವೆ. ಶಾಬ್ದಿಕರೂಪದಲ್ಲಿ ಇವು ಪ್ರವಹಿಸುವುದಿಲ್ಲವಾದುದರಿಂದ ಶುದ್ಧ ಕಂಠಸ್ಥ ಸಂಪ್ರದಾಯವನ್ನು ಇಲ್ಲಿ ಅರಸಬೇಕಾದುದಿಲ್ಲ. ಆದರೆ ಜಾನಪದದ ಸಾಹಿತ್ಯಕ ಬಗೆ, ಭಾಷಿಕ ಬಗೆಗಳು ಮಾತ್ರ ಕಂಠಸ್ಥಸಂಪ್ರದಾಯದಿಂದಲೇ ಬರತಕ್ಕವು.

ಜಾನಪದವನ್ನು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸುವ ಹವ್ಯಾಸ ಎಲ್ಲ ದೇಶಗಳಲ್ಲೂ ಕಂಡುಬಂದಿದೆ. ಕಥೆ, ಗೀತೆ, ಲಾವಣಿಗಳು ಬರೆವಣಿಗೆಗೆ ಇಳಿದಾಗ ಅವುಗಳ ಸಾಹಿತ್ಯಿಕ ಸ್ವರೂಪ ಮಾತ್ರ ಉಳಿದಂತಾಗುತ್ತದೆ. ಅದರೆ ಸಂಗೀತದ ಅಂಶವೂ ಅವುಗಳಲ್ಲಿ ಪ್ರಧಾನವಾದುದರಿಂದ, ಒಂದೊಂದು ಪ್ರಕಾರಕ್ಕೂ ವಿಶಿಷ್ಟವಾದ ಮಟ್ಟುಗಳು ಪರಂಪರೆಯಿಂದಲೇ ಬಂದಿರುವುದರಿಂದ ಅವುಗಳ ಮೂಲಧಾಟಿಗಳನ್ನು ಉಳಿಸುವ ಸಾಹಸವನ್ನೂ ವೈಜ್ಞಾನಿಕವಾಗಿ ಮಾಡಲಾಗುತ್ತಿದೆ. ಹೀಗೆ ಮಾಡಲು ಕಂಠಸ್ಥಪರಂಪರೆಯನ್ನು ಮೊರೆಹೋಗುವುದು ಅನಿವಾರ್ಯವಾಗುತ್ತದೆ. ಗ್ರಂಥಸ್ಥಮೂಲದಲ್ಲಿಯೂ ಕಂಠಸ್ಥಸಂಪ್ರದಾಯದ ಪ್ರಭಾವ ಇದ್ದೇ ಇದೆ. ಅಕ್ಷರಗಳಲ್ಲಿ ಹಿಡಿದಿಡಲಾಗದ ನಾದದ ಆಂಶ. ಓದುಗಾರಿಕೆಯ ವಿನ್ಯಾಸ ಮುಂತಾದುವು ಇಲ್ಲಿ ಕಂಠಸ್ಥ ಸಂಪ್ರದಾಯದಲ್ಲಿಯೇ ಬರಬೇಕಾಗುತ್ತದೆ. ಅಂಶಗಣ ಘಟಿತವಾದ ತ್ರಿಪದಿ, ಸಾಂಗತ್ಯ ಮುಂತಾದುವನ್ನು ಓದುವ ಧಾಟಿ ಪರಂಪರಾನುಗತವಾಗಿ ಬಂದದ್ದು. ಗದ್ಯವನ್ನು ವಾಚನಮಾಡುವುದರಲ್ಲಿಯೂ ಪರಂಪರಾನುಗತ ವಿನ್ಯಾಸವನ್ನು ಕಾಣಬಹುದು.

ಆಡುಮಾತಿನ ಗತ್ತು, ಉಚ್ಚಾರಣೆಯ ವೈಖರಿಗಳು ಮುಂತಾದವುಗಳಿಗೂ ಈ ಮಾತು ಅನ್ವಯವಾಗುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಆಡುಮಾತಿನಲ್ಲಿ ಕಾಣಬರುವ ವೈವಿಧ್ಯವನ್ನು ಉಪಭಾಷಾ ಪರಿವೀಕ್ಷಣೆಯಿಂದ ವಿದ್ವಾಂಸರು ಗುರುತಿಸಿದ್ದಾರೆ. ಮಾತಿನ ಬೆಡಗು, ಬಿನ್ನಾಣಗಳನ್ನು ಪುಸ್ತಕ ಎಂದೂ ಹಿಡಿದಿಡಲು ಸಾಧ್ಯವಿಲ್ಲ. ಅವು ಕಂಠಸ್ಥ ಮೂಲದಲ್ಲಿ ತಾವಾಗಿಯೇ ಸಾಗಿಬರುತ್ತವೆ, ಹುಟ್ಟು, ವಿವಾಹ, ಮರಣ ಸಂಬಂಧವಾದ ಅಚರಣೆಗಳಲ್ಲಿ, ಹಬ್ಬಹರಿದಿನ, ಆರಾಧನೆ ಮುಂತಾದ ಸಂಪ್ರದಾಯಗಳಲ್ಲಿ ಕಂಠಸ್ಥ ಸಂಪ್ರದಾಯದ ಪಾತ್ರ ಸ್ವಲ್ಪ ಮಟ್ಟಿಗಾದರೂ ಇದ್ದೇ ಇರುತ್ತದೆ. ಮದುವೆ, ಒಸಗೆ ಮುಂತಾದುವನ್ನು ಕ್ರಮವತ್ತಾಗಿ ನಿರೂಪಿಸುವ ಸಾಹಿತ್ಯ ಪರಂಪರಾನುಗತವಾಗಿ ಬರುತ್ತದೆ. ಇಲ್ಲಿ ಯಾವ ಶಾಸ್ತ್ರವೂ ಕ್ರಮ ತಪ್ಪದೆ ನಡೆದುಕೊಂಡು ಬರಲು ಇದು ನೆರವಾಗುತ್ತದೆ. ಆದ್ದರಿಂದ ಆಚರಣೆ, ಸಂಪ್ರದಾಯಗಳ ಮೇಲೂ ವಾಕ್ಸಂಪ್ರದಾಯದ ಪ್ರಭಾವ ಗಣನೀಯವಾದದ್ದು.

ಪಾಶ್ಚಾತ್ಯರಲ್ಲಿ ಜನಪದ ಭಾಷೆಯ ಅಭ್ಯಾಸದಲ್ಲಿ ಕಂಠಸ್ಥ ಸಂಪ್ರದಾಯ ಎಂಬ ಮಾತಿನ ಬಳಕೆ ಇದ್ದರೂ ಕ್ರಮೇಣ ಅದು ಜನಪದ ಸಂಗೀತಕ್ಕೂ ಅಳವಟ್ಟಿತು. ಆದರೆ ಅದರ ವ್ಯಾಪ್ತಿ ಇತರ ಕ್ಷೇತ್ರವನ್ನು ಒಳಕೊಳ್ಳುವುದು ಗಮನಾರ್ಹ, ಶಿಷ್ಟ ಅಥವಾ ಶಾಸ್ತ್ರೀಯ ಸಂಗೀತದ ಮೇಲೂ ಕಂಠಸ್ಥಸಂಪ್ರದಾಯದ ಪ್ರಭಾವ ಇದ್ದೇ ಇದೆ. ತುಟಿಯಿಂದ ತುಟಿಗೆ ಹರಿದು ಬಂದ ರಾಗವಿನ್ಯಾಸ ಗುರು ಶಿಷ್ಯರ, ಹೇಳಿಕೆ ಕಲಿಕೆಗಳನ್ನೇ ಅವಲಂಬಿಸಿರುತ್ತದೆ. ಎಷ್ಟೋ ಪ್ರಸಿದ್ಧವಾದ ಕೀರ್ತನೆಗಳಲ್ಲಿ ಲಂಬೋದರ ಲಕುಮಿಕರ ಎಂಬಂತೆ ಆಯಾ ಮಾತುಗಳನ್ನೇ ಬಳಸಿ ಕಂಠಸ್ಥ ಸಂಪ್ರದಾಯದ ಹಿನ್ನೆಲೆಯಲ್ಲಿ ನಡೆದ ರಚನೆಗಳನ್ನೂ ಗಮನಿಸಬಹುದು.

ಕಂಠಸ್ಥಸಂಪ್ರದಾಯ ಜಾನಪದಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾಗಿ ಕಂಡರೂ ಇತರ ಕ್ಷೇತ್ರಗಳಲ್ಲಿ ಅದರ ಪ್ರಭಾವ ಗೌಣವಾದುದೇನಲ್ಲ ಎಂಬ ಅಂಶ ಸ್ಪಷ್ಟ. **(ಜೆ.ಎಸ್.ಪಿ.)**

**ವೇದಪಾಠಕ್ರಮ:** ಭಾರತ ದೇಶದಲ್ಲಿ ಬಹು ಪವಿತ್ರವೆಂದು ಪರಿಗಣಿತವಾಗಿರುವ ವೇದರೂಪದ ಜ್ಞಾನಭಂಡಾರ ಅತ್ಯಂತ ಪ್ರಾಚೀನವೆಂಬುದು ಸರ್ವಸಮ್ಮತವಾಗಿದೆ. ಅದನ್ನು ಇದ್ದಂತೆ ಇರಿಸಿ ಮುಂದುವರಿಸಿಕೊಂಡು ಬರುವ ಹೊಣೆ ಹೊತ್ತ ಪೂರ್ವಜರಿಗೆ ಪ್ರಾಚೀನ ಕಾಲದಲ್ಲಿ ವೇದದ ಎಲ್ಲ ಭಾಗಗಳೂ ಶ್ರುತಪಟ್ಟು ಕಂಠಗತವಾದುವು. ಶ್ರುತದ ಆಧಾರದ ಮೇಲೆ ಕಂಠಗತ ಮಾಡಿಕೊಳ್ಳುವ ಈ ಪದ್ಧತಿ ಆಯಾ ಕಾಲದಲ್ಲಿ ಗುರು ಶಿಷ್ಯ, ತಂದೆ ಮಗ ಮುಂತಾದವರಿಂದ ಅನುಸರಿಸಲ್ಪಟ್ಟಿತು. ಅಲ್ಲದೆ, ಮುಂದೆ ಮುಂದೆ ವಂಶಪರಂಪರೆಯಲ್ಲಿ ಅದು ರೂಢಿಸಿ, ಇಂದಿಗೂ ವಿಪುಲವಾದ ವೈದಿಕಸಾಹಿತ್ಯ ಕಂಠಸ್ಥವಾಗಿ ನಿಂತಿರುವ ವಿಚಾರ ಗಮನಾರ್ಹವಾಗಿದೆ. ಅಂದರೆ ವೇದಕ್ಕಿರುವ ಶ್ರುತಿ ಎಂಬ ಹೆಸರಿಗೆ ತಕ್ಕಂತೆ ಅದರ ಪಾಠವಿನಿಮಯದ ತತ್ತ್ವ ಕಿವಿಯಿಂದ ಕೇಳಿ ಕಂಠಗತ ಮಾಡಿಕೊಳ್ಳತಕ್ಕದ್ದು. ವೇದದ ಪ್ರಾರಂಭದ ಕಾಲವೆಂದು ಹೇಳಲಾಗಿರುವ ಪ್ರ.ಶ.ಪೂ. 2500–500ರ ವರೆಗೆ ಅದೆಲ್ಲವನ್ನೂ ಕಂಠಸ್ಥ ಮಾಡಿಕೊಳ್ಳಬೇಕಾದುದಕ್ಕೆ ಲಿಪಿಯ ಮತ್ತು ಲೇಖನ ಸಾಮಗ್ರಿಗಳ ಅಭಾವವೆಂಬ ಚಾರಿತ್ರಿಕ ಕಾರಣವಿದ್ದರೂ ಪವಿತ್ರತೆಯ ಉಚ್ಚಸ್ಥಾನವನ್ನು ಉಚ್ಚಾರಣೆ ಮೊದಲಾದವುಗಳ ಶುದ್ಧತೆ ನಿಷ್ಕೃಷ್ಟತೆಗಳಿಂದ ಅಚ್ಚಳಿಯದೆ ಸದಾ ಇರಿಸಿಕೊಂಡು ಬರಬೇಕೆಂಬ ಮಹತ್ತ್ವಾಕಾಂಕ್ಷೆ ಆ ಸಂಪ್ರದಾಯವನ್ನು ರೂಪಿಸಿದೆಂಬುದು ಅತಿ ಮುಖ್ಯ ವಿಚಾರವಾಗಿದೆ. ಹೀಗೆ ವೈದಿಕಗ್ರಂಥಗಳನ್ನು ಕಂಠಸ್ಥಮಾಡಿಕೊಂಡು ಬಂದಿರುವ ಸಂಪ್ರದಾಯದಲ್ಲಿ ಪವಿತ್ರ ವಸ್ತು ರಕ್ಷಣೆಯ ಪ್ರಯತ್ನದ ಶಾಶ್ವತತೆಯ ದೃಷ್ಟಿ ಗಮನಾರ್ಹವಾದುದು.

ಸಹಸ್ರಾರು ವರ್ಷಗಳಲ್ಲಿ ಒಂದೊಂದು ತಲೆಮಾರಿನವರೂ ಕಲೆತು, ಕಲಿತು ಅದನ್ನು ಮುಂದುವರಿಸಲು ಸಹಾಯ ಮಾಡಿರುವ ಈ ಸಂಪ್ರದಾಯದಲ್ಲಿ ಕೆಲವು ವೈಶಿಷ್ಟ್ಯಗಳಿವೆ. ಅದು ಆಯಾ ಕೃತಿಯನ್ನು ಕಂಠಗತಮಾಡಿಕೊಳ್ಳುವ ಪ್ರಯತ್ನ ಮಾತ್ರವಲ್ಲ; ಮೂಲಪಾಠದ ಅಕ್ಷರ, ಪದ, ಪದರಚನೆ, ಸ್ವರ ಇವೆಲ್ಲವೂ ಚಾಚೂ ತಪ್ಪದೆ, ವ್ಯತ್ಯಾಸವಾಗದೆ ಇರುವಂತೆ ಮಾಡುವ ವ್ಯವಸ್ಥೆಯನ್ನೂ ಆ ಸಂಪ್ರದಾಯ ಒಳಗೊಂಡಿದೆ. ಅದಕ್ಕೋಸ್ಕರ ಸಂಹಿತಾಪಾಠವೆಂದು ಕರೆಯಲ್ಪಟ್ಟಿರುವ ಮೂಲವನ್ನು ಕಂಠಗತಮಾಡಿಕೊಳ್ಳುವುದರ ಜೊತೆಗೆ ಅದನ್ನು ಪದಗಳಾಗಿ ವಿಂಗಡಿಸಿ ಬಂದ ಪದಪಾಠವೂ ಕಂಠಗತವಾಗಬೇಕು–ಅಂದರೆ, ಒಂದು ಮಂತ್ರದ ಸಂಹಿತಾಪಾಠದಲ್ಲಿ ಇರುವ ಅಕ್ಷರಗಳ ಸಂಖ್ಯೆ ಹನ್ನೆರಡು ಎನ್ನೋಣ, ಅವುಗಳಲ್ಲಿ ಒಂದೊಂದನ್ನೂ ಸಂಧಿ ಮುಂತಾದವುಗಳ ದೃಷ್ಟಿಯಿಂದ ಬೇರ್ಪಡಿಸಿ ಹೇಳಬೇಕು, ಅನಂತರ ಮೊದಲಿನಿಂದ ಪ್ರಾರಂಭಿಸಿ ಒಂದನೆಯ ಪದವನ್ನೂ ಎರಡನೆಯದನ್ನೂ ಪಠಿಸಿ ಮುಂದೆ ಎರಡು ಮೂರು, ಮೂರು ನಾಲ್ಕು ಈ ವಿಧವನ್ನನುಸರಿಸಿ ಬಂದಿರುವ ಕ್ರಮಪಾಠ, ಆಮೇಲೆ ಒಂದು ಎರಡು, ಎರಡು ಒಂದು, ಒಂದು ಎರಡು, ಎರಡು ಮೂರು–ಹೀಗೆ ಮಂತ್ರದ ಹನ್ನೆರಡು ಪದಗಳಲ್ಲೂ ಮುಂದುವರಿಯುವ ಜಟಾಪಾಠ, ಬಳಿಕ, ಒಂದು ಎರಡು, ಎರಡು ಒಂದು, ಒಂದು ಎರಡು ಮೂರು, ಮೂರು ಎರಡು ಒಂದು, ಒಂದು ಎರಡು ಮೂರು–ಈ ರೀತಿಯ ಘನಪಾಠ.

ಹೀಗೆ ಕಂಠಗತ ಮಾಡಿಕೊಳ್ಳಬೇಕಾದ ಪಾಠಗಳು–ಸಂಹಿತಾ, ಪದ, ಕ್ರಮ, ಜಟಾ, ಘನ–ಈ ಐದು ಹೆಚ್ಚು ಬಳಕೆಯಲ್ಲಿರತಕ್ಕವು. ಇವಲ್ಲದೆ ಮಾಲಾ, ಶಿಖಾ, ರೇಖಾ, ಧ್ವಜ, ದಂಡ, ರಥ ಎಂಬ ಪಾಠಗಳೂ ಇವೆ. ಪದಗಳ ಕ್ರಮಬದ್ಧ ಪುನರುಚ್ಚಾರಣೆಯೇ ಈ ಎಲ್ಲ ಪಾಠಗಳ ಮುಖ್ಯನಿಯಮ.

ಅತಿ ವಿಸ್ತಾರವಾಗಿರುವ ಸಂಹಿತಾಪಾಠವೊಂದನ್ನಲ್ಲದೆ, ಈ ನಾನಾ ಪಾಠಗಳನ್ನೂ ಅಷ್ಟೇ ಏಕೆ, ವೈದಿಕ ಸಾಹಿತ್ಯವೆಲ್ಲವನ್ನೂ ಸಂಸ್ಕೃತಸಾಹಿತ್ಯದ ಬಹುಭಾಗಗಳನ್ನೂ ಇಂದಿನವರೆಗೂ ಕಂಠಸ್ಥ ಮಾಡಿಕೊಂಡು ಬಂದಿರತಕ್ಕ ಈ ಸಂಪ್ರದಾಯ ಜಗತ್ತಿನ ಅಚ್ಚರಿಗಳಲ್ಲೊಂದಾಗಿದೆ.

**(ಬಿ.ಕೆ.ಎಸ್.)**

**ಕಂಠಿ, ಎಸ್.ಆರ್. :** 1908–69. ಕರ್ನಾಟಕದ ಮಾಜಿ ಮುಖ್ಯಮಂತ್ರಿ (1962). ಬಾಗಲಕೋಟೆ ತಾಲ್ಲೂಕಿನ ಕೆರೂರಿನಲ್ಲಿ 1908 ಡಿಸೆಂಬರ್ 21ರಂದು ಜನಿಸಿದರು. ಧಾರವಾಡದ ಕರ್ನಾಟಕ ಕಾಲೇಜು, ಕೊಲ್ಲಾಪುರದ ರಾಜಾರಾಮ್ ಕಾಲೇಜು ಮತ್ತು ಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ಇವರು ಬಾಗಲಕೋಟೆಯಲ್ಲಿ ವಕೀಲರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು (1935). ಹರಿಜನರ, ರೈತರ ಮತ್ತು ನೇಕಾರರ ಏಳ್ಗೆಗಾಗಿ ಶ್ರಮಿಸಿದರು. 1939ರಲ್ಲಿ ಕೆ.ಪಿ.ಸಿ.ಸಿ. ಮತ್ತು ಎ.ಐ.ಸಿ.ಸಿಗಳಿಗೆ ಸದಸ್ಯರಾಗಿ ಆಯ್ಕೆಯಾದರು. 1940–41ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಸತ್ಯಾಗ್ರಹ ವ್ಯವಸ್ಥೆ ಮಾಡಿ 10 ತಿಂಗಳ ಸೆರೆಮನೆವಾಸ ಅನುಭವಿಸಿದರು. 1942ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಮತ್ತೊಮ್ಮೆ ಸೆರೆಯಾಗಿ ಅದೇ ವರ್ಷ ಬಿಡುಗಡೆ ಹೊಂದಿದರು. ಅನಂತರ ಮುಂಬಯಿ ಸ್ಥಳೀಯ ಆಹಾರ ಸಮಿತಿಯ ಕ್ರಿಯಾಶೀಲ ಸದಸ್ಯರಾಗಿದ್ದುಕೊಂಡು ಕ್ಷಾಮ ಪರಿಹಾರ ಸಮಿತಿಯ ಪರವಾಗಿ ಕ್ಷಾಮಪೀಡಿತ ಪ್ರದೇಶಗಳಿಗೆ ಊಟ, ಬಟ್ಟೆ ಇತ್ಯಾದಿ ಸರಬರಾಜು ಮಾಡುವ ಸಾರ್ವಜನಿಕ ಸೇವೆಯಲ್ಲಿ ಪ್ರವೃತ್ತರಾದರು. 1946ರಲ್ಲಿ ಬಿಜಾಪುರ ಜಿಲ್ಲೆಯ ರೈತ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದರು. ಅನಂತರ ಅಂದಿನ ಮುಂಬಯಿ ಮಂತ್ರಿ ಮಂಡಲದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿ ನೇಮಕಗೊಂಡು 6 ವರ್ಷಗಳ ಕಾಲ ಸೇವೆಸಲ್ಲಿಸಿದರು (1946–52). ಆಗ ಸುಮಾರು ಎರಡು ವರ್ಷಗಳ ಕಾಲ ಹಣಕಾಸಿನ ಶಾಖೆಯನ್ನು ಹಾಗೂ ಮೂರು ವರ್ಷಗಳ ಕಾಲ ವ್ಯವಸಾಯ, ಅರಣ್ಯ ಮತ್ತು ಸಹಕಾರ ಇಲಾಖೆಗಳ ಅಧಿಕಾರವನ್ನು ವಹಿಸಿಕೊಂಡಿದ್ದರು. 1952–56ರ ವರೆಗೆ ಮುಂಬಯಿ ವಿಧಾನಸಭೆಯ ಉಪಾಧ್ಯಕ್ಷರಾಗಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕರ್ನಾಟಕ ರಾಜ್ಯದ ನಿರ್ಮಾಣದ ಬಗ್ಗೆ ವಿಷಯ ಸಂಗ್ರಹಿಸಿ ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಲು ರಚಿಸಿದ ಸಮಿತಿಗೆ ಇವರನ್ನು ಕಾರ್ಯದರ್ಶಿಯಾಗಿ ನೇಮಿಸಿತ್ತು. ಕರ್ನಾಟಕ ರಾಜ್ಯ ನಿರ್ಮಾಣವಾದ ಮೇಲೆ 1956ರಲ್ಲಿ ಮೈಸೂರು ವಿಧಾನ ಸಭೆಯ ಅಧ್ಯಕ್ಷರಾದ ಕಂಠಿಯವರು ಸುಮಾರು 6 ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದರು.

1961ರಲ್ಲಿ ಪಶ್ಚಿಮ ಜರ್ಮನಿಗೆ ಭೇಟಿ ನೀಡಿದ ಸಂಸದೀಯ ನಿಯೋಗಕ್ಕೆ ಇವರು ಮುಖ್ಯಸ್ಥರಾಗಿದ್ದರು. ಮೂರನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಹುನಗುಂದ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದ ಇವರು 1962 ಮಾರ್ಚ್ 9ರಿಂದ 1962 ಜುಲೈ 20ರವರೆಗೆ ವಿಶಾಲ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅನಂತರ 1962 ಜುಲೈ 21ರಂದು ವಿದ್ಯಾಮಂತ್ರಿಯಾಗಿ ನೇಮಕಗೊಂಡರು. ಬೆಂಗಳೂರು ವಿಶ್ವವಿದ್ಯಾಲಯ ಸ್ಥಾಪನೆಯಾದದ್ದು ಇವರು ವಿದ್ಯಾಮಂತ್ರಿಯಾಗಿದ್ದಾಗ. ನಾಲ್ಕನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೊಮ್ಮೆ ವಿಧಾನಸಭೆಗೆ ಆಯ್ಕೆಯಾಗಿ 1967 ಮಾರ್ಚ್ 14ರಿಂದ 1968 ಏಪ್ರಿಲ್ 29ರವರೆಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿದ್ದರು. ಇವರು ಕೆಲಕಾಲ ಕರ್ನಾಟಕ ಹಿಂದಿ ಪ್ರಚಾರ ಸಭೆಯ ಅಧ್ಯಕ್ಷರೂ ಮೈಸೂರು ಪ್ರದೇಶದ ಭಾರತ ಸೇವಕ ಸಮಾಜದ ಅಧ್ಯಕ್ಷರೂ ಆಗಿದ್ದರು. 1959ರಲ್ಲಿ ಲಂಡನಿನಲ್ಲಿ ನಡೆದ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನಕ್ಕೆ ಕರ್ನಾಟಕ ಸರ್ಕಾರ ಇವರನ್ನು ತನ್ನ ಪ್ರತಿನಿಧಿಯನ್ನಾಗಿ ಕಳಿಸಿತ್ತು. ಆ ಸಂದರ್ಭದಲ್ಲಿ ತಮಗಾದ ಅನುಭವಗಳನ್ನು ಇವರು ನೋಟ್ಸ್ ಆನ್ ದಿ ಪಾರ್ಲಿಮೆಂಟರಿ ಕೋರ್ಸ್ ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾರೆ.

ಕರ್ನಾಟಕದ ಏಳಿಗೆಗೆ ಅಪಾರವಾಗಿ ಶ್ರಮಿಸಿದ ಕಂಠಿಯವರು ರಾಜ್ಯ ವಿಧಾನ ಸಭೆಯ ಸದಸ್ಯರಾಗಿರುವಾಗಲೇ, 1969 ಡಿಸೆಂಬರ್ 25ರಂದು ನಿಧನ ಹೊಂದಿದರು. (ಟಿ.ಇ.ಎಚ್.)

**ಕಂಠೀರವ :** 1919ರ ಏಪ್ರಿಲ್ ಒಂದನೆಯ ತಾರೀಖು ಯುಗಾದಿ ದಿನದಂದು ಮಂಗಳೂರಿನಿಂದ ಪ್ರಕಟವಾದ ವಾರಪತ್ರಿಕೆ. ಕೆಲಕಾಲ ದ್ವೈವಾರ ಪತ್ರಿಕೆಯಾಗಿ ನಡೆದು (1933–53) 1967ರ ನವೆಂಬರ್ ತಿಂಗಳಲ್ಲಿ ನಿಂತುಹೋಯಿತು.

ಬೋಳಾರು ವಿಠಲರಾಯರು ಇದರ ಪ್ರಥಮ ಸಂಪಾದಕರು ಹಾಗೂ ಪ್ರಕಾಶಕರು. ಪ್ರಾರಂಭಕಾಲದಲ್ಲಿ ಸಂಪಾದಕ ವಿಭಾಗಕ್ಕೆ ಹುರುಳಿ ಭೀಮರಾಯರು, ಕಡೆಕಾರು ಗೋಪಾಲಕೃಷ್ಣರಾಯರು, ಬೆನಗಲ್ ರಾಮರಾಯರು, ಡಿ.ಕೆ. ಭಾರದ್ವಾಜರು ಬರೆಯುತ್ತಿದ್ದರು. ಮೊದಲಿನಿಂದಲೂ ಸಂಪಾದಕೀಯವನ್ನು ಬರೆಯುತ್ತಿದ್ದ ಹುರುಳಿ ಭೀಮರಾಯರೇ 1943ರಲ್ಲಿ ಸಂಪಾದಕತ್ವವನ್ನು ವಹಿಸಿಕೊಂಡರು.

ಪತ್ರಿಕೆ ಪ್ರಾರಂಭವಾದಾಗ ಮಂಗಳೂರಿನ ಧರ್ಮಪ್ರಕಾಶ ಮುದ್ರಣಾಲಯದಲ್ಲಿ ಅಚ್ಚಾಯಿತು. ಮುಂದೆ 1923ರಿಂದ 1938ರ ವರೆಗೆ ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದು 1939ರಲ್ಲಿ ಒಂದು ವರ್ಷ ಮಾತ್ರ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಮುದ್ರಣಗೊಂಡಿತು. ಬಳಿಕ 1941ರಿಂದ ಆಚೆ ಮಂಗಳೂರು ಪ್ರೆಸ್ಸಿನಲ್ಲಿ ಮುದ್ರಣವಾಗತೊಡಗಿತು. 1943ರಿಂದ ಮಂಗಳೂರು ಪ್ರೆಸ್ಸಿನ ಒಡೆಯರಾದ ಎಂ.ಬಾಬುರಾಯ ಪ್ರಭು ಕಂಠೀರವದ ಪ್ರಕಾಶಕರಾದರು.

ಹದಿನಾರು ಪುಟಗಳು ಪತ್ರಿಕೆಯಾಗಿ ಹೊರಟ ಕಂಠೀರವ ಜನಪ್ರಿಯವಾಗಿ ಅಭಿವೃದ್ಧಿಗೊಂಡು ಒಂದು ಕಾಲಕ್ಕೆ ಮೂವತ್ತೆರಡು ಪುಟಗಳ ಪತ್ರಿಕೆಯಾಯಿತು.



ಕಂಠೀರವ ಪತ್ರಿಕೆಯ ಮುಖಪುಟದ ಮೇಲುಭಾಗ

ಕಳೆದ ವಾರ, ಅದಿಷ್ಟು ಇದಿಷ್ಟು, ಅದೂ ಇದೂ ಎಲ್ಲವೂ–ಎಂಬ ಒಂದಲ್ಲ ಒಂದು ಶೀರ್ಷಿಕೆಯಲ್ಲಿ ವಾರದ ವಿಶೇಷ ವಿಚಾರಗಳು; ಮಧ್ಯಪುಟದಲ್ಲಿ ಸಂಪಾದಕೀಯದ ಬಳಿಕ ವಿದೇಶ, ಹಿಂದೂದೇಶ, ಕರ್ನಾಟಕ, ದಕ್ಷಿಣಕನ್ನಡ ಮತ್ತು ತಾಲ್ಲೂಕುಗಳ ವಾರ್ತಾಸಂಗ್ರಹ; ದಾಸಯ್ಯನ ಜೋಳಿಗೆ, ಮಿಸ್ಟರ್ ತಿಪ್ಪಯ್ಯನ ಡೈರಿ, ಮಹಮ್ಮದ್ ಸಾಹೇಬನ ಸೂಕ್ತಗಳು, ಗುಂಡನ ಗಜೇಟು ಎಂಬ ಶೀರ್ಷಿಕೆಗಳಲ್ಲಿ ಹುರುಳಿ ಭೀಮರಾಯರು ವ್ಯಂಗ್ಯಲೇಖನಗಳನ್ನು ಬರೆಯುತ್ತಿದ್ದರು. ಈ ಶೀರ್ಷಿಕೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದು ಪತ್ರಿಕೆಯ ಕೊನೆಯ ದಿನಗಳಲ್ಲಿ ಗುಂಡನ ಗಜೇಟು ಎಂಬ ಶೀರ್ಷಿಕೆಯ ಮಾತ್ರ ಉಳಿಯಿತು. ಇವುಗಳಲ್ಲದೆ ಆಗಾಗ್ಗೆ ವ್ಯಕ್ತಿಪರಿಚಯಗಳೂ ಸಣ್ಣಕಥೆಗಳೂ ಕವನಗಳೂ ಧಾರಾವಾಹಿ ಕಾದಂಬರಿಗಳೂ ಪ್ರಕಟವಾಗುತ್ತಿದ್ದುವು. ಪತ್ರವ್ಯವಹಾರ ಎಂಬ ವಿಭಾಗ ಯಾವಾಗಲೂ ಇರುತ್ತಿತ್ತು. ದ್ವೈವಾರಪತ್ರಿಕೆಯಾದಾಗ ಶುಕ್ರವಾರದ ಸಂಚಿಕೆಯಲ್ಲಿ ವಿಶೇಷ ಲೇಖನ ಮತ್ತು ಪತ್ರವ್ಯವಹಾರಗಳಿಗಿಂತ ವಾರ್ತೆಗೇ ಹೆಚ್ಚಿನ ಪ್ರಾಶಸ್ತ್ಯವಿತ್ತು.

1919ರಲ್ಲಿ ಪ್ರಾರಂಭವಾಗುವಾಗ ಮೊದಲ ಪುಟದ ಮೇಲ್ಗಡೆಯಲ್ಲಿ ಕಂಠೀರವ ಎಂಬ ಹೆಸರಿನ ಇಕ್ಕಡೆಗಳಲ್ಲಿ ಯೂನಿಯನ್ ಜಾಕ್ ಎಂಬ ಬ್ರಿಟಿಷ್ ಸಾಮ್ರಾಜ್ಯಧ್ವಜವನ್ನೆತ್ತಿ ಹಿಡಿದ ಸಿಂಹಗಳು ಕುಳಿತ ಚಿತ್ರವಿತ್ತು. ಅದರ ಕೆಳಗಡೆಯಲ್ಲಿ ಸಂಸ್ಕೃತ ಕನ್ನಡಗಳಲ್ಲಿ ಕೆಳಗಿನ ಸೂಕ್ತಿಯಿತ್ತು.

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ
ಶಸ್ತಸ್ತದ್ವದಮೀಸು ಸಂವ್ಯವಹೃತಿ ಪ್ರಾಗಲ್ಭ್ಯ ಮತ್ತೋಽನ್ವಹಂ
ಜೀಯಾದ್ವಿಶ್ವಜನೀನ ವೃತ್ತಿಚ ತುರಶ್ರೀಕಂಠಕಂಠೀರವಃ
ನರರ ಕುಲಗಳೊಳಾರ್ಯವಂಶವು, ಧರೆಯ ದೇಶಗಳೊಳಗೆ ಭಾರತ,
ಅರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ
ತಿರುಳುಗನ್ನಡವೊದಕ್ಕೊಂದೊಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ಅರಸಗೆ ನುಡಿಗೆ ಸೊಬಗೆನಿಸೀ

ಇದಲ್ಲದೆ ಮಧ್ಯಪುಟದಲ್ಲಿ ಸಂಪಾದಕೀಯದ ಮೇಲ್ಗಡೆ ಪತ್ರಿಕೆಯ ಹೆಸರಿನ ಕೆಳಗೆ

ವಿನಾ ನವಾರುಣಂ ನದೀನಾಯತೇ ನಿಶಾ
ನವಾನಿಲಂ ವಿನಾ ಶಿಶಿರೋ ನ ಪುಷ್ಪವಾನ್

ಎಂದು ಮೊದಲಾಗುವ ಒಂದು ಶ್ಲೋಕವಿತ್ತು. ಮುಂದೆ ದೇಶದ ರಾಜಕೀಯ ವಾತಾವರಣಕ್ಕನುಗುಣವಾಗಿ ಕಂಠೀರವ ತನ್ನ ಧೋರಣೆಯನ್ನು ಬದಲಾಯಿಸಿಕೊಂಡಾಗ ಸಿಂಹಗಳು ಹಿಡಿದಿದ್ದ ಆಂಗ್ಲ ಸಾಮ್ರಾಜ್ಯಧ್ವಜ ಬಿದ್ದುಹೋಗಿ ಬರೇ ಸಿಂಹಗಳೆರಡು ಮಾತ್ರ ಉಳಿದುವು. ಅದರೊಂದಿಗೆ ಸಂಸ್ಕೃತ ಕನ್ನಡ ಶ್ಲೋಕಗಳೂ ಮಾಯವಾದುವು.

ಈ ಪತ್ರಿಕೆಯಲ್ಲಿ ಮೊದಮೊದಲು ಪಂಜೆ ಮಂಗೇಶರಾವ್, ಮಂಜೇಶ್ವರ ಗೋವಿಂದ ಪೈ, ಎಂ.ಎನ್.ಕಾಮತ್, ಉಳ್ಳಾಲ, ಮಂಗೇಶರಾವ್ ಮುಂತಾದವರು ಬರೆಯುತ್ತಿದ್ದರು. ಅನಂತರ ಜೆ.ವಾಮನಭಟ್ಟ, ಕಡೆಂಗೋಡ್ಲು ಶಂಕರ ಭಟ್ಟ, ಕುಡ್ವಿ ವಾಸುದೇವ ಶೆಣೈ, ಬಿ. ಶಂಕರಭಟ್ಟ ಮುಂತಾದವರೂ ಬರೆಯುತ್ತಿದ್ದರಲ್ಲದೆ ಜಿಲ್ಲೆಯ ಹೊರಗಿನ ವಿದ್ವಾಂಸರು ವಿಶೇಷ ಲೇಖನಗಳನ್ನೂ ಬರೆಯುತ್ತಿದ್ದರು. ಕಂಠೀರವ ದಸರಾ ವಿಶೇಷ ಸಂಚಿಕೆಗಳನ್ನೂ ರಾಜ್ಯೋತ್ಸವ ವಿಶೇಷ ಸಂಚಿಕೆಗಳನ್ನೂ ಪ್ರಕಟಿಸಿದೆ.

ಸ್ಪಷ್ಟವಾದ ಹಾಗೂ ತೀಕ್ಷ್ಣವಾದ ಸಂಪಾದಕೀಯಕ್ಕಾಗಿ ಕಂಠೀರವ ಪ್ರಸಿದ್ಧವಾಗಿತ್ತು. ಅದರಲ್ಲಿನ ಪತ್ರವ್ಯವಹಾರ ಅದೇ ರೀತಿಯಲ್ಲಿ ಸತ್ಯ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತಿತ್ತು. ತನ್ನ ಧೋರಣೆ ಹಾಗೂ ಬರೆಹಗಳಿಗಾಗಿ ಕೆಲಕಾಲ ಅಂದಿನ ಮೈಸೂರು ಸಂಸ್ಥಾನದಲ್ಲಿ ಈ ಪತ್ರಿಕೆ ಬಹಿಷ್ಕಾರಕ್ಕೊಳಗಾಗಿತ್ತು.

ಕರ್ನಾಟಕ ಏಕೀಕರಣ ಎಂಬ ಸಂಪಾದಕೀಯದ (23–5–1933) ಒಂದು ವಾಕ್ಯ ಹೀಗಿದೆ:

ಹಲವು ಸರ್ಕಾರಗಳ ಆಡಳಿತಕ್ಕೆ ಒಳಪಟ್ಟು ಯಾವ ಮುಖಂಡ ಮಹನೀಯರ ಬೆಂಬಲವೂ ಇಲ್ಲದ ನಮ್ಮ ಅನಾಥ ದರಿದ್ರಕರ್ನಾಟಕ ಈ ಮಹತ್ಕಾರ್ಯವನ್ನು ಸಾಧಿಸುವುದೆಂದರೆ ಸ್ವಪ್ನಪ್ರಾಯವಲ್ಲವೇ ಎಂದು ಹಲವರು ತಿಳಿಯಬಹುದಾದರೂ ಕನ್ನಡಿಗರು ತಮ್ಮ ನಿದ್ರಾವಸ್ಥೆಯಿಂದ ಎಚ್ಚೆತ್ತು ಏಕೀಕರಣ ಸದ್ಯದಲ್ಲೇ ಸಾಧಿಸದಿದ್ದರೂ ಅದು ಸಮೀಪಗತವಾಗುವುದರಲ್ಲಿ ಸಂದೇಹವಿಲ್ಲ.

1964 ಗಣರಾಜ್ಯೋತ್ಸವದ ದಿನದಂದು ದೀಕ್ಷಾದಿನವೆಂದು ಬರೆದ ಅಗ್ರಲೇಖನದ ಭಾಗ ಒಂದು ಹೀಗಿದೆ :

ಈವೊತ್ತು ನಮ್ಮದು ಪ್ರಜಾರಾಜ್ಯ. ಅದನ್ನು ಉಳಿಸಿ ಬೆಳೆಸಲು, ಆ ಕರ್ತವ್ಯ ಸಾಧಿಸಲು ನಾವು ಇಂದು ದೀಕ್ಷಾಬದ್ಧರಾಗಬೇಕಾಗಿದೆ. ಕಷ್ಟ ಕಾರ್ಪಣ್ಯ, ದುಃಖ ಯಾತನೆ, ಲೋಕಕ್ಕೆಲ್ಲ ಇರುವಂತೆ ನಮಗೂ ತಪ್ಪಿದ್ದಲ್ಲ. ಅದೇನಿದ್ದರೂ ಅದು ವ್ಯಕ್ತಿಗೂ ಸಮಾಜಗಳಿಗೂ ಅನ್ವಯಿಸುವಂಥದು. ರಾಷ್ಟ್ರ ಅಂಥ ವ್ಯಕ್ತಿಗಳಿಗೂ ಸಮಾಜಗಳಿಗೂ ಅತಿ ಹೆಚ್ಚಿನದು. ಆ ರಾಷ್ಟ್ರ ಕಲ್ಯಾಣವಾದರೇನೇ ಆ ರಾಷ್ಟ್ರದ ಮತ್ತು ಸಮಾಜದ ಹಿತಸಾಧನೆಯಾಗುತ್ತದೆ. ಇದಕ್ಕೆ ಬೇರೆ ದಾರಿಯಿಲ್ಲ. ಅಂತಲೇ ನಾವು ಇಂದು ರಾಷ್ಟ್ರ ಉದ್ಧಾರದ ದಿಸೆಯಲ್ಲಿ ಕೆಲಕೆಲವು ದೀಕ್ಷಾಕ್ರಮಗಳನ್ನು ಕೈಕೊಳ್ಳಲೇಬೇಕಾಗುವುದು. (ಪಿ.ಕೆ.ಎನ್.)

**ಕಂಠೀರವ ನರಸರಾಜ 1 : ಆಳ್ವಿಕೆ :** 1638–59, ಮೈಸೂರು ಒಡೆಯರ ಸಂತತಿಯ ಹೆಸರಾಂತ ರಾಜರಲ್ಲಿ ಒಬ್ಬ. ಬೆಟ್ಟದ ಚಾಮರಾಜ ಒಡೆಯನ ಮಗ. ಬೋಳ ಚಾಮರಾಜನ ಅನಂತರ ಬೆಟ್ಟದ ಚಾಮರಾಜನೇ ಸಿಂಹಾಸನಕ್ಕೆ ಬಂದಿದ್ದರೂ ಆಡಳಿತ ಸಾಮರ್ಥ್ಯದ ಅಭಾವದಿಂದಾಗಿ ತನ್ನ ತಮ್ಮನಾದ ರಾಜ ಒಡೆಯನಿಗೆ ಅಧಿಕಾರ ಬಿಟ್ಟುಕೊಟ್ಟಿದ್ದ. ಅವನ ಅನಂತರ ಸಿಂಹಾಸನವನ್ನೇರಿದ ಇಮ್ಮಡಿ ರಾಜ ಒಡೆಯ ವಿಷಪ್ರಾಶನದಿಂದ ಕೊಲೆಗೀಡಾದಾಗ ಪಟ್ಟಕ್ಕೆ ಬಂದವನೇ ಒಂದನೆಯ ಕಂಠೀರವ ನರಸರಾಜ. ಈತನೂ ಇವನ ತಂದೆಯಂತೆಯೇ ಅಸಮರ್ಥನೆಂದೂ ಇದರಿಂದ ತನ್ನ ಹಾದಿ ಸುಗಮವಾದೀತೆಂದೂ

ಇಮ್ಮಡಿ ರಾಜ ಒಡೆಯನನ್ನು ಕೊಲೆ ಮಾಡಿಸಿದ ದಳವಾಯಿ ವಿಕ್ರಮರಾಯನ ಭಾವನೆಯಾಗಿತ್ತು. ಆದರೆ ಈ ನಿರೀಕ್ಷೆ ಸುಳ್ಳಾಯಿತು. ಕಂಠೀರವ ನರಸರಾಜ ಅಜ್ಞಾತನಾಗಿದ್ದಾಗಲೇ ತನ್ನ ಪರಾಕ್ರಮವನ್ನು ಮೆರೆದಿದ್ದ. ತಿರುಚಿನಾಪಳ್ಳಿಯ ಜಟ್ಟಿಯೊಂದಿಗೆ ಕಾದಾಡಿ ಅವನನ್ನು ಸೋಲಿಸಿ ಕೊಂದು ಅಲ್ಲಿಯ ರಾಜನ ಯಾವ ಮರ್ಯಾದೆಯನ್ನೂ ಸ್ವೀಕರಿಸದೆ ಗುಟ್ಟಾಗಿ ಹಿಂತಿರುಗಿದ್ದನೆಂಬುದಾಗಿ ಖ್ಯಾತಿ ಗಳಿಸಿದ್ದ. ಈತ ಸಿಂಹಾಸನವನ್ನೇರಿದ ಕೂಡಲೇ ದಳವಾಯಿ ವಿಕ್ರಮರಾಯನನ್ನು ಕೊಲ್ಲಿಸಿ ಪೂರ್ಣ ಅಧಿಕಾರವಹಿಸಿಕೊಂಡ. ಆ ವೇಳೆಗೆ ವಿಜಯನಗರದ ಅಧಿಕಾರ ಕ್ಷೀಣಿಸಿ, ಬಿಜಾಪುರದ ಸುಲ್ತಾನನೂ ಮೊಗಲರೂ ಕನ್ನಡನಾಡಿನ ಮೇಲೆ ತಮ್ಮ ಅಧಿಕಾರ ಸ್ಥಾಪಿಸುವ ಹವಣಿಕೆಯಲ್ಲಿದ್ದರು. ಬಿಜಾಪುರದ ಸುಲ್ತಾನ ಪ್ರಸಿದ್ಧ ದಳಪತಿಯಾದ ರಣದುಲ್ಲಾಖಾನನ ನೇತೃತ್ವದಲ್ಲಿ ಶ್ರೀರಂಗಪಟ್ಟಣವನ್ನು ಮುತ್ತಲು ಒಂದು ಸೈನ್ಯವನ್ನು ಕಳುಹಿಸಿದ. ಕಂಠೀರವ ನರಸರಾಜ ಒಡೆಯ ಪರಾಕ್ರಮದಿಂದ ಹೋರಾಡಿ ಅವನನ್ನು ಸೋಲಿಸಿ ಹಿಂತಿರುಗುವಂತೆ ಮಾಡಿದ.

ಅನಂತರ ಈತ ದಕ್ಷಿಣದ ಜಿಲ್ಲೆಗಳ ಮೇಲೆ ದಂಡೆತ್ತಿಹೋಗಿ ಮಧುರೆಯ ನಾಯಕನನ್ನು ಸೋಲಿಸಿ ಸತ್ಯಮಂಗಲವನ್ನೂ ಡಣ್ಣಾಯಕನ ಕೋಟೆಯನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಪೆರಿಯಪಟ್ಟಣ ಮತ್ತು ಇಕ್ಕೇರಿಯ ಪಾಳೆಯಗಾರರೂ ಇವನಿಗೆ ಸೋತರು. ಮೂಗುಗಳಿಗಾಗಿ ಮಾಡಿದ ಯದ್ಧವೆಂದು ಇದನ್ನು ಪ್ರೋನೇಜ ಎಂಬ ಪಾದ್ರಿ ವರ್ಣಿಸಿದ್ದಾನೆ. ಎದುರಾಳಿಗಳ ಮೂಗುಗಳನ್ನು ಕತ್ತರಿಸಬೇಕೆಂದು ಕಂಠೀರವ ನರಸರಾಜ ಆಜ್ಞೆಯಿತ್ತನೆಂಬುದಾಗಿ ಆತನ ಅಭಿಪ್ರಾಯ. ತನ್ನ ಸ್ವಾಮಿಯ ವಿರುದ್ಧ ಬಂಡಾಯವೆದ್ದ ದ್ರೋಹಿಯೆಂದು ತಿರುಮಲನಿಗೆ ಈ ಶಿಕ್ಷೆಯನ್ನು ಕಂಠೀರವ ನರಸರಾಜ ವಿಧಿಸಿದ್ದ, ವಿಶ್ವಾಸಘಾತಕರಿಗೆ ಈ ಬಗೆಯ ಶಿಕ್ಷೆ ನೀಡುವುದು ಆಗ ಸಾಮಾನ್ಯವಾಗಿತ್ತು. ನರಸರಾಜನ ರಾಜ್ಯ ಕೊಡಗಿನ ಗಡಿ ಮತ್ತು ಹಾಸನ ಜಿಲ್ಲೆಗಳವರೆಗೂ ವಿಸ್ತಾರವಾಯಿತು. ನಾಗಮಂಗಲದಲ್ಲಿ ಅಧಿಕಾರ ನಡೆಸುತ್ತಿದ್ದ ದೊಡ್ಡಯ್ಯ ಇವನ ವಿರುದ್ಧವಾಗಿ ಒಳಗೊಳಗೆ ಪಿತೂರಿ ನಡೆಸುತ್ತಿದ್ದನೆಂಬುದು ಗೊತ್ತಾಗಿ ಅವನನ್ನು ಶಿಕ್ಷಿಸಿದ. ಮಾಗಡಿ ಕೆಂಪೇಗೌಡನನ್ನು ಯಲಹಂಕದ ಬಳಿ ಸೋಲಿಸಿ ಅವನಿಂದಲೂ ಕಪ್ಪ ವಸೂಲು ಮಾಡಿದ. ವಿಜಯನಗರದ ಶ್ರೀರಂಗರಾಯನಿಗೆ ಬೇಲೂರಿನಲ್ಲಿ ನರಸರಾಜನ ಆಶ್ರಯ ದೊರಕಿತು. ವಿಜಯನಗರದ ನಾಮಪತ್ರ ಸಾರ್ವಭೌಮತ್ವ ಸಂಪೂರ್ಣ ನಶಿಸಿಹೋಗುವ ಸ್ಥಿತಿಯಲ್ಲಿದ್ದುದನ್ನು ಮನಗಂಡ ಕಂಠೀರವ ನರಸರಾಜ ಆ ಸಮಯಕ್ಕೆ ಸರಿಯಾಗಿ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ. ಇದರ ಸಂಕೇತವಾಗಿ ಶ್ರೀರಂಗಪಟ್ಟಣದಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದನಲ್ಲದೆ ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಅಚ್ಚು ಹಾಕಿಸಿದ. ಇವಕ್ಕೆ ಕಂಠೀರಾಯಹಣ ಎಂದು ಹೆಸರು. ಕಂಠೀರಾಯ ಎಂಬ ಕನ್ನಡ ಅಕ್ಷರಗಳು ನಾಣ್ಯಗಳ ಮೇಲಿವೆ. ಈ ನಾಣ್ಯಗಳು ಹೈದರ್ ಮತ್ತು ಟಿಪ್ಪು ಅಧಿಕಾರಕ್ಕೆ ಬರುವವರೆಗೂ ಚಲಾವಣೆಯಲ್ಲಿದ್ದುವು.

ಜನರಿಗೆ ಕಿರುಕುಳ ಕೊಡುತ್ತಿದ್ದ ಶ್ರೀಮಂತರನ್ನೂ ದುಷ್ಟರನ್ನೂ ಈತ ಸೂಕ್ತರೀತಿಯಲ್ಲಿ ಶಿಕ್ಷಿಸಿದ. ಆಡಳಿತ ಸುಧಾರಣೆ ಮಾಡಿ, ತೆರಿಗೆ ವಸೂಲಿಯನ್ನು ಬಿಗಿಗೊಳಿಸಿದ್ದರಿಂದ ಬೊಕ್ಕಸಕ್ಕೆ ಹೆಚ್ಚು ಹಣ ಬಂತು. ಇದರಿಂದ ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಲಾಯಿತು. ಅಲ್ಲಿ ನರಸಿಂಹ ದೇವಾಲಯವನ್ನು ಕಟ್ಟಿಸಿದವನೀತನೇ. ಈ ದೇವಾಲಯದಲ್ಲಿ ಕಂಠೀರವ ನರಸರಾಜನ ಪ್ರತಿಮೆಯನ್ನು ಕಡೆದು ನಿಲ್ಲಿಸಲಾಗಿದೆ. ಲಕ್ಷ್ಮೀನರಸಿಂಹದೇವರ ಪ್ರೀತ್ಯರ್ಥವಾಗಿ ಏಕಾದಶಿ ವ್ರತ ವಿಜೃಂಭಣೆಯಿಂದ ನಡೆಯುವಂತೆ ಈತ ಏರ್ಪಾಡು ಮಾಡಿದನೆಂದು ಪ್ರತೀತಿಯಿದೆ. ಈತ ಕೃಷ್ಣನ ಅವತಾರವೆಂದು ಹೊಗಳಿರುವ ಒಂದು ಶಾಸನವೂ ಉಂಟು. ಈತ ಅನೇಕ ಅಗ್ರಹಾರಗಳನ್ನು ಕಟ್ಟಿಸಿ ದಾನದತ್ತಿಗಳನ್ನು ಕೊಟ್ಟ. ಆರನೆಯ ಚಾಮರಾಜ ಒಡೆಯರಿಗೆ ಬಂಗಾರದೊಡ್ಡಿ ಎಂಬ ಮೆಚ್ಚಿನ ಪ್ರೇಯಸಿಯಿದ್ದಳೆಂದೂ ಅವಳ ಜ್ಞಾಪಕಾರ್ಥವಾಗಿ ಕಂಠೀರವ ನರಸರಾಜ ಶ್ರೀರಂಗಪಟ್ಟಣದ ಬಳಿಯ ಬಂಗಾರದೊಡ್ಡಿ ನಾಲೆಯನ್ನು ನಿರ್ಮಿಸಿದನೆಂದೂ ಹೇಳುತ್ತಾರೆ. ದಳವಾಯಿಗಳು ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳದಂತೆ ಈತ ಸೂಕ್ತಕ್ರಮ ಕೈಗೊಂಡನಲ್ಲದೆ, ಯಾವೊಬ್ಬ ದಳವಾಯಿಯೂ ಹೆಚ್ಚು ವರ್ಷಗಳ ಕಾಲ ಅಧಿಕಾರದಲ್ಲಿ ಮುಂದುವರಿಯದಂತೆ ಎಚ್ಚರಿಕೆ ವಹಿಸಿದ. ಇವನ 20 ವರ್ಷಗಳ ಆಳ್ವಿಕೆಯ ಕಾಲದಲ್ಲಿ ಸು. 10 ಜನ ದಳವಾಯಿಗಳು ಅಧಿಕಾರದಲ್ಲಿದ್ದು ಹೋದರು.

ಕಂಠೀರವ ನರಸರಾಜ ವಿದ್ವಾಂಸರಿಗೂ ಕವಿಗಳಿಗೂ ಪ್ರೋತ್ಸಾಹ ನೀಡುತ್ತಿದ್ದ, ಭಾಸ್ಕರ ವಿರಚಿತ ಬೇಹಾರ ಗಣಿತ, ತಿಮ್ಮರಸಕವಿಯ ಮಾರ್ಕಂಡೇಯ ರಾಮಾಯಣ, ಗೋವಿಂದ ವೈದ್ಯನ ನರಸರಾಜವಿಜಯ–ಇವು ಈತನ ಕಾಲದಲ್ಲಿ ರಚಿತವಾದ ಕೆಲವು ಗ್ರಂಥಗಳು. ನರಸರಾಜವಿಜಯ ಆಗಿನ ಇತಿಹಾಸಕ್ಕೆ ಒಂದು ಆಕರ ಗ್ರಂಥ. ಅನೇಕ ಶಾಸನಗಳಲ್ಲಿ ಕಂಠೀರವ ನರಸರಾಜನ ಸಾಹಸ ಪರಾಕ್ರಮಗಳ ವರ್ಣನೆಯುಂಟು. ಈತ ರಣಧೀರ ಕಂಠೀರವ ಎಂದೂ ಪ್ರಸಿದ್ಧನಾಗಿದ್ದಾನೆ. ಕಂಠೀರವ ನರಸರಾಜ 1659ರಲ್ಲಿ ಕಾಲವಾದ. ಇವನಿಗೆ ಮಕ್ಕಳಿರಲಿಲ್ಲ. (ಜಿ.ಆರ್.ಆರ್.)

**ಕಂಠೀರವ ನರಸರಾಜ II** : 1704–13. ಮೈಸೂರಿನ ದೊರೆ. ಚಿಕ್ಕದೇವರಾಜನ ಮಗ. ಜನ್ಮತಃ ಕಿವುಡ, ಮೂಗ, ಆದ್ದರಿಂದ ಮೂಕರಸು ಎಂದೇ ಈತನನ್ನು ಕರೆಯುತ್ತಿದ್ದರು. ಆದರೂ ಅಮಾತ್ಯ ತಿರುಮಲೈಯಂಗಾರ್ಯನ ಪ್ರಭಾವದಿಂದ ಈತ ಸಿಂಹಾಸನವನ್ನೇರಿದ. ಇವನ ಕಾಲದಲ್ಲಿ ದಳವಾಯಿ ಕಂಠೀರವನೆಂಬವನು ಚಿಕ್ಕಬಳ್ಳಾಪುರವನ್ನು ಮುತ್ತಿ ಅದನ್ನು ಮಣಿಸಲು ಯತ್ನಿಸಿ ಆ ಪ್ರಯತ್ನದಲ್ಲಿ ಪ್ರಾಣ ತೆತ್ತ. ಅನಂತರ ಅವನ ಮಗ ಬಸವರಾಜ ಆ ಮುತ್ತಿಗೆಯನ್ನು ಮುಂದುವರಿಸಿ, ಅದನ್ನು ಬಗ್ಗಿಸಿ ಕಪ್ಪ ವಸೂಲು ಮಾಡಿದನೆಂದು ಹೇಳಲಾಗಿದೆ. ಬೆಂಗಳೂರು ಕೋಟೆಯ ಬಳಿಯಲ್ಲಿ ಚಿಕ್ಕದೇವರಾಜ ಕಟ್ಟಿಸಿದ ವೆಂಕಟೇಶ್ವರ ದೇವಾಲಯಕ್ಕೆ ಕಂಠೀರವ ನರಸರಾಜ ಭೂಮಿಯ ದತ್ತಿ ಕೊಟ್ಟನೆಂದು ತಿಳಿಸುವ 1705ರ ಒಂದು ಶಾಸನವಿದೆ. ಈತನ ತರುವಾಯ ಇವನ ತಮ್ಮ ದೊಡ್ಡ ಕೃಷ್ಣರಾಜ (ಒಂದನೆಯ ಕೃಷ್ಣರಾಜ) ಪಟ್ಟಕ್ಕೆ ಬಂದ. (ಜಿ.ಆರ್.ಆರ್.)

**ಕಂಠೀರವ ನರಸಿಂಹರಾಜ ಒಡೆಯರ್** : 1888–1940. ಮೈಸೂರಿನ ಮಹಾರಾಜ ಚಾಮರಾಜೇಂದ್ರ ಒಡೆಯರ (1863–94) ಎರಡನೆಯ ಮಗ; ಕೃಷ್ಣರಾಜ ಒಡೆಯರ (1884–1940) ತಮ್ಮ, ಮೈಸೂರಿನ ಯುವರಾಜ, 1888ರ ಜುಲೈ 5ರಂದು ಇವರ ಜನನ. ಅಣ್ಣನೊಂದಿಗೆ ಸರ್ ಸ್ಟ್ಯೂಯರ್ಟ್ ಫ್ರೇಸರನಲ್ಲಿ ಬೇಸಗೆ ಅರಮನೆಯಲ್ಲಿ ವ್ಯಾಸಂಗ ನಡೆಯಿತು. ಪಿ.ರಾಘವೇಂದ್ರರಾವ್ ಇವರ ಇನ್ನೊಬ್ಬ ಗುರು. ರಾಜಯೋಗ್ಯವಾದ ಇತರ ವಿಷಯಗಳಲ್ಲೂ ಇವರಿಗೆ ಶಿಕ್ಷಣ ದೊರಕಿತು. ಓದಿನ ಜೊತೆಗೆ ಅಂಗಸಾಧನೆ, ಕುದುರೆ ಸವಾರಿ, ಶಿಕಾರಿ, ಕ್ರಿಕೆಟ್, ಟೆನಿಸ್, ಪೋಲೋ ಮೊದಲಾದವಲ್ಲೂ ಒಡೆಯರಿಗೆ ವಿಶೇಷ ಆಸಕ್ತಿಯಿತ್ತು. ಚಿಕ್ಕ ವಯಸ್ಸಿನಲ್ಲೇ ರಾಜ್ಯದಲ್ಲೆಲ್ಲ ಪರ್ಯಟನ ಕೈಗೊಂಡದ್ದರಿಂದ ದೇಶದ ಸ್ಥಿತಿಯೂ ಜನಜೀವನದ ಪರಿಚಯವೂ ದೊರಕಿದ್ದುವು. ಅಣ್ಣನೊಂದಿಗೆ ಬರ್ಮದಲ್ಲಿ ಸಂಚರಿಸಿ ಬಂದರು. 1903ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಜ್ಮೀರಿನ ಮೇಯೋ ರಾಜಕುಮಾರ್ ಕಾಲೇಜನ್ನು ಸೇರಿದರೂ ಅನಾರೋಗ್ಯದ ದೆಸೆಯಿಂದ ಮರು ವರ್ಷ ಮೈಸೂರಿಗೆ ಮರಳಿ ಅಲ್ಲೇ ಕ್ಯಾಪ್ಟನ್ ಆರ್.ಜೆ.ಡಬ್ಲ್ಯು. ಹೀಲ್ ಮತ್ತು ಎಂ.ಎ.ನಾರಾಯಣ ಐಯಂಗಾರ್ಯರಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಕರ್ನಲ್ ಡ್ರೇಕ್‌ಬ್ರಾಕ್ಮನನ ಜೊತೆಯಲ್ಲಿ ಕಾಶ್ಮೀರ ಪ್ರವಾಸ ಮಾಡಿದ್ದು 1908ರಲ್ಲಿ.

ನಾಲ್ಮಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ ರಾಜಸೂತ್ರ ವಹಿಸಿದಾಗ (1902) ಇವರು ಯುವರಾಜ ಪದವಿಯನ್ನಲಂಕರಿಸಿದರು. 1908–09ರಲ್ಲಿ ಜಪಾನ್ ದೇಶಕ್ಕೆ ಭೇಟಿಯಿತ್ತು ಆ ದೇಶದ ತಾಂತ್ರಿಕ ಮುನ್ನಡೆಯನ್ನು ಸಂದರ್ಶಿಸಿ ಹಿಂತಿರುಗಿದರು. ಒಡೆಯರ ವಿವಾಹವಾದದ್ದು 1910ರಲ್ಲಿ–ಸರದಾರ್ ದಳವಾಯಿ ದೇವರಾಜೇ ಅರಸರ ನಾಲ್ಕನೆಯ ಮಗಳು ಕೆಂಪು ಚೆಲುವಾಜಮ್ಮಣ್ಣಿಯೊಂದಿಗೆ. 1911ರಲ್ಲಿ ಇವರು ದೆಹಲಿಯಲ್ಲಿ ನಡೆದ ದರ್ಬಾರಿಗೆ ಅಣ್ಣನೊಡನೆ ಹೋಗಿದ್ದರು. ಬ್ರಿಟಿಷ್ ದೊರೆಯಿಂದ ಇವರಿಗೆ ನೈಟ್ ಕಮಾಂಡರ್ ಪ್ರಶಸ್ತಿ ದೊರಕಿತು. 1913ರಲ್ಲಿ ಐರೋಪ್ಯ ಪ್ರವಾಸ ಕೈಕೊಂಡು ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಸರ್‌ಲೆಂಡ್ ಮತ್ತು ಬೆಲ್ಜಿಯಂ ರಾಷ್ಟ್ರಗಳನ್ನು ಸಂದರ್ಶಿಸಿದರು. ಪ್ರವಾಸದಿಂದ ಹಿಂತಿರುಗಿದ ಅನಂತರ ಇವರಿಗೆ ಮಹಾರಾಜರ ಸಚಿವ ಮಂಡಲಿಯ ವಿಶೇಷ ಸದಸ್ಯತ್ವ ದೊರಕಿತು. ಸೇನಾ ಖಾತೆಯನ್ನು ಇವರಿಗೆ ವಹಿಸಲಾಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಸೈನ್ಯ ಸರಬರಾಜಿನ ಕಾರ್ಯವನ್ನು ಯಶಸ್ವಿಯಾಗಿ ಇವರು ನೆರವೇರಿಸಿದರು. 1915ರಲ್ಲಿ ಬ್ರಿಟಿಷ್ ಸರ್ಕಾರದಿಂದ ಇವರಿಗೆ ಜಿ.ಸಿ.ಐ.ಇ. ಬಿರುದೂ 1918ರಲ್ಲಿ ಹಿಸ್ ಹೈನೆಸ್ ಪ್ರಶಸ್ತಿಯೂ ಲಭ್ಯವಾದುವು.

ಕೃಷ್ಣರಾಜ ಒಡೆಯರ ಅನಂತರ ಮೈಸೂರು ಸಂಸ್ಥಾನದ ರಾಜರಾದ ಜಯಚಾಮರಾಜ ಒಡೆಯರು ಇವರ ಪುತ್ರ (ಜನನ 1918ರ ಜುಲೈ 18).

ಕಂಠೀರವ ನರಸಿಂಹರಾಜ ಒಡೆಯರಿಗೆ ಸಂಸ್ಥಾನದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಕಾರ್ಯಗಳಲ್ಲಿ ವಿಶೇಷ ಆಸಕ್ತಿಯಿತ್ತು. ಇವರು ಸಂಸ್ಥಾನದ ಸ್ಕೌಟ್ ಚಳವಳಿಯ ಮುಖ್ಯರಾಗಿದ್ದುದಲ್ಲದೆ ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯರಾಗಿದ್ದರು. ಗರ್ಭಿಣಿ ಮತ್ತು ಶಿಶು ಸಂರಕ್ಷಣ ಕಾರ್ಯದಲ್ಲಿ ವಿಶೇಷ ಆಸ್ಥೆ ವಹಿಸಿದ್ದು ಈ ಕ್ಷೇತ್ರದಲ್ಲಿ ಅನೇಕ ಚಿಕಿತ್ಸಾಲಯಗಳ ಸ್ಥಾಪನೆಗೆ ಕಾರಣರಾದರು. ಕಿವುಡ ಮತ್ತು ಕುರುಡರ ಶಿಕ್ಷಣಕ್ಕೆ ಇದರಿಂದ ವಿಶೇಷ ಪ್ರೋತ್ಸಾಹ ಲಭಿಸಿತು. ಸಂರಕ್ಷಣ ಕಾರ್ಯದಲ್ಲಿ ವಿಶೇಷ ಪ್ರೋತ್ಸಾಹ ಲಭಿಸಿತು. ದೀನದಲಿತರಲ್ಲಿ ಇವರು ತೋರಿಸುತ್ತಿದ್ದ ಔದಾರ್ಯ ವಿಶೇಷ. ಆ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಹಲವು ಕಡೆಗಳಲ್ಲಿ ಸ್ಥಾಪಿತವಾದ ಹರಿಜನ ವಿದ್ಯಾರ್ಥಿ ನಿಲಯಗಳಿಗೆ ಇವರ ಹೆಸರನ್ನಿಡಲಾಗಿದೆ. ಸಂಗೀತ ಮತ್ತು ಸಾಹಿತ್ಯದಲ್ಲಿ ಇವರಿಗೆ ಹೆಚ್ಚಿನ ಅಭಿರುಚಿಯಿತ್ತು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕ–ಅಧ್ಯಕ್ಷರೂ ಮಿಥಿಕ್ ಸೊಸೈಟಿಯ ಮುಖ್ಯ ಉಪಪೋಷಕರೂ ಮೈಸೂರು ವಿಶ್ವವಿದ್ಯಾನಿಲಯದ ಪ್ರೊ–ಛಾನ್ಸಲರೂ ಆಗಿದ್ದರು. ಕಂಠೀರವ ನರಸಿಂಹರಾಜ ನಾಮಾಂಕಿತ ಕಟ್ಟಡಗಳೂ ರಸ್ತೆಗಳೂ ಬಡಾವಣೆಗಳೂ ಗ್ರಾಮಗಳೂ ಹಳೆಯ ಮೈಸೂರಿನಲ್ಲಿವೆ. ಇವರು 1940ರ ಮಾರ್ಚ್ 11ರಂದು ಮುಂಬೈಯಲ್ಲಿ ನಿಧನ ಹೊಂದಿದರು. (ಜಿ.ಆರ್.ಆರ್.)

**ಕಂಠೀರಾವ್ :** 1926–. ಕರ್ನಾಟಕ ರಾಜಭಾಷಾ ಆಯೋಗದ ಅಧ್ಯಕ್ಷರು. ಕನ್ನಡ ಕಾನೂನು ಸಾಹಿತ್ಯ ಲೇಖಕರು. ಬಹು ಭಾಷಾ ವಿಶಾರದರು. ಇವರು ರಾಯಚೂರು ಜಿಲ್ಲೆ ಗುಡುಗುಂಟಿ ಸಂಸ್ಥಾನದ ಜಹಗೀರದಾರರ ಮನೆತನಕ್ಕೆ ಸೇರಿದವರು. 1926ರಲ್ಲಿ ಜನಿಸಿದರು. ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಎಲ್.ಎಲ್.ಬಿ. ಪದವಿಗಳನ್ನು ಪಡೆದರು. ಕರ್ನಾಟಕ ರಾಜ್ಯದ ಭಾಷಾಂತರ ನಿರ್ದೇಶನಾಲಯದಲ್ಲಿ ಸೇವೆ ಸಲ್ಲಿಸಿ ಅದರ ನಿರ್ದೇಶಕರಾಗಿ ನಿವೃತ್ತರಾದರು. ಆಡಳಿತ ಪದಕೋಶ ಪರಿಶೀಲನಾ ಸಮಿತಿಯ ಅಧ್ಯಕ್ಷರೂ ಆಗಿದ್ದ ಇವರು ಅನಂತರ ರಾಜಭಾಷಾ ಆಯೋಗದ ಅಧ್ಯಕ್ಷರೂ ಆದರು.

ಕಾನೂನು ಮತ್ತು ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಕನ್ನಡದಲ್ಲಿ 16ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಭಾರತೀಯ ನ್ಯಾಯ ಪದ್ಧತಿ, ಮಕ್ಕಳು ಮತ್ತು ಕಾನೂನು ಎಂಬ ಗ್ರಂಥಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನಗಳು ಬಂದಿವೆ. ಆಡಳಿತ ವಿಷಯ ಪಾರಿಭಾಷಿಕ, ಇಸ್ಲಾಮೀನ್ಯಾಯ, ಕಾನೂನು ಭಾಷೆ–ಭಾಷಾಂತರ ಸಮಸ್ಯೆ, ನ್ಯಾಯ ನಿಬಂಧನೆ – ಇವರ ಇತರ ಮುಖ್ಯ ಕೃತಿಗಳು. ಆಡಳಿತ ಸಂಬಂಧಿಯಾದ ಶುಷ್ಕ ಭಾಷಿಕ ವಿಚಾರವನ್ನೂ ಹಿತವಾಗಿ ಹೃದ್ಯವಾಗಿ ಬರೆಯುವ ಕಲೆ ಇವರಿಗೆ ಸಿದ್ಧಿಸಿತ್ತು. ಇಂಗ್ಲಿಷ್, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ಆಳವಾದ ಜ್ಞಾನ ಹೊಂದಿದ್ದ ಇವರು ಭಾರತೀಯ ಕಾನೂನಿನ ತಳಹದಿಯಾದ ಸಂಸ್ಕೃತ ಕೃತಿಗಳ ಸಾರವನ್ನು ಮನಮುಟ್ಟುವಂತೆ ನಿರೂಪಿಸುವ ಮತ್ತು ವಿಶ್ಲೇಷಿಸುವ ವಿಶೇಷ ಪಾಂಡಿತ್ಯ ಮತ್ತು ಸಾಮರ್ಥ್ಯವನ್ನು ಪಡೆದಿದ್ದರು. ಉತ್ತಮ ವಾಗ್ಮಿಯಾಗಿದ್ದ ಇವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸಿ ವಿದ್ವಜ್ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ರಾಜ್ಯದ ಭಾಷಾಂತರ ನಿರ್ದೇಶನಾಲಯದ ರೂವಾರಿಯಾಗಿದ್ದ ಇವರನ್ನು ವಿ.ಕೃ.ಗೋಕಾಕರು ಕನ್ನಡ ಕಾನೂನು ಆಚಾರ್ಯ ಎಂದು ಕರೆದಿದ್ದಾರೆ. ಸೇವೆಯಿಂದ ನಿವೃತ್ತರಾದ ಮೇಲೂ ಇವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗಾಗಿ ಹಲವು ಭಾಷಾಂತರ ಕಾರ್ಯಗಳಲ್ಲಿ ತೊಡಗಿದ್ದರು. ಇವರು ನಿವೃತ್ತಿಯ ಅನಂತರ ಹೆಚ್ಚುಕಾಲ ಬದುಕಲಿಲ್ಲ. *

**ಕಂಡಗರಿಗೆ :** ಮೀಲಿಯೇಸೀ ಕುಟುಂಬಕ್ಕೆ ಸೇರಿದ ಸಿಡ್ರೆಲ್ಲ ಟೂನ ಅಥವಾ ಟೂನ ಸಿಲಿಯೇಟ ಎಂಬ ವೈಜ್ಞಾನಿಕ ಹೆಸರುಳ್ಳ ದೊಡ್ಡ ಮರ. ಮಂಡುಕರಿಕೆ ಪರ್ಯಾಯ ನಾಮ. ಇಂಗ್ಲಿಷಿನಲ್ಲಿ ರೆಡ್ ಸಿಡಾರ್ ಎನ್ನುತ್ತಾರೆ. ಪ್ರಮುಖವಾಗಿ ಹಿಮಾಲಯದ ಅರಣ್ಯಗಳಲ್ಲಿ 4,000' ಎತ್ತರದವರೆಗೂ ಹರಡಿರುವ ಇದು ಬಂಗಾಲ, ಅಸ್ಸಾಂ ಮತ್ತು ಪಶ್ಚಿಮಘಟ್ಟಗಳಲ್ಲೂ ಕಾಣಬರುತ್ತದೆ. ಮೈಸೂರು ರಾಜ್ಯದಲ್ಲಿ ಕೊಡಗಿನ ಕಾಫಿತೋಟಗಳಲ್ಲಿ ಇದನ್ನು ಬೆಳೆಸಿರುವುದನ್ನು ನೋಡಬಹುದು. ಇದು ತೇವಪೂರಿತ ಗೋಡುಮಣ್ಣಿನ ನೆಲದಲ್ಲಿ ಮತ್ತು ವರ್ಷಕ್ಕೆ 45"–160" ಮಳೆಬೀಳುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುವುದು, ವಾತಾವರಣದ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ತಡೆದುಕೊಳ್ಳುವ ಶಕ್ತಿ ಇದಕ್ಕೆ ಇದೆ.

ಸು. 70'–100' ಎತ್ತರಕ್ಕೆ ಬೆಳೆಯುವ ಈ ಮರಕ್ಕೆ 6'–10' ದಪ್ಪದ ಕಾಂಡವಿದೆ. ಎಲೆಗಳು ಬೇವಿನ ಎಲೆಯಂತೆ, ಜೋಡಣೆ ಪರ್ಯಾಯ ರೀತಿಯದು, ಚಳಿಗಾಲದಲ್ಲಿ ಉದುರಿಹೋಗುತ್ತವೆ. ಫೆಬ್ರವರಿ–ಏಪ್ರಿಲ್ ತಿಂಗಳುಗಳು ಹೂ ಬಿಡುವ ಕಾಲ. ಹೂಗಳು ದ್ವಿಲಿಂಗಿಗಳು. ಬಣ್ಣ ಬಿಳಿ, ಸಣ್ಣ ರೆಂಬೆಗಳ ತುದಿಯಲ್ಲಿನ ಸಂಕೀರ್ಣ ಪುಷ್ಪಗುಚ್ಛದಲ್ಲಿ ಜೋಡಣೆಗೊಂಡಿವೆ. ಪುಷ್ಪದಳ ಐದು. ಬಿಡಿಬಿಡಿಯಾಗಿವೆ. ಕೇಸರಗಳೂ 4–6, ಬಿಡಿಯಾಗಿವೆ. ಕೆಲವೊಮ್ಮೆ ಬರಡು ಕೇಸರಗಳೂ ಇರುವುದುಂಟು. ಅಂಡಾಶಯ ಉಚ್ಚಸ್ಥಾನದ್ದು; ಅಂಡಕಗಳಿವೆ. ಕಾಯಿ ಸಂಪುಟ (ಕ್ಯಾಪ್ಸ್ಯೂಲ್) ಮಾದರಿಯದು. ಬೀಜಗಳು ಬಲು ಸಣ್ಣವು (ಸು. 15,300 ಬೀಜಗಳು ಕೇವಲ ಒಂದು ಔನ್ಸು ತೂಗುತ್ತವೆ). ಸಹಜವಾಗಿ ಬೀಜ ಮೊಳೆಯುವುದು ತುಂಬ ಕಡಿಮೆ. ಶೇಖರಿಸಿ ನರ್ಸರಿಗಳಲ್ಲಿ ಬಿತ್ತಿದರೆ ಸು.70%ರಷ್ಟು ಬೀಜಗಳು ಮೊಳೆತು ಸಸಿಗಳಾಗುತ್ತವೆ.

ಕಂಡಗರಿಗೆಯ ರಸಕಾಷ್ಠ (ಸ್ಯಾಪ್‌ವುಡ್) ಸ್ವಲ್ಪ ಕೆಂಪು ಅಥವಾ ಬೂದುಮಿಶ್ರಿತ ಬಿಳಿ ಬಣ್ಣದ್ದು. ಚೇಗು (ಹಾರ್ಟ್‌ವುಡ್) ಹೊಸದಾಗಿ ಕತ್ತರಿಸಿದಾಗ ಕೆಂಪು ಬಣ್ಣದ್ದಾಗಿದ್ದು ಕ್ರಮೇಣ ಕಂದು ಮಿಶ್ರಿತ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಚೌಬೀನೆ ಹಗುರ ನೇರ ಕಣ ವಿನ್ಯಾಸ ಮತ್ತು ಮಧ್ಯಮದರ್ಜೆಯ ಗಡುಸುಳ್ಳದ್ದು. ಇದನ್ನು ಪೀಠೋಪಕರಣ, ಮೇಲ್ಛಾವಣಿ, ಬಾಗಿಲು, ಟೀ ಪೆಟ್ಟಿಗೆಗಳು ಮುಂತಾದವನ್ನು ಮಾಡಲೂ ನೆಲದ ಮೇಲೆ ಹಾಸಲೂ ಉಪಯೋಗಿಸುತ್ತಾರೆ. ಹೂಗಳಲ್ಲಿ ನಿಕ್ಟ್ಯಾಂತಿನ್ ಎಂಬ ಕೆಂಪುಬಣ್ಣದ ವಸ್ತು ಹಾಗೂ ಫ್ಲೇವೋನ್ ಮತ್ತು ಫ್ಲೇವೊನಾಲ್ ಎಂಬ ಬಣ್ಣಗಳೂ ಇವೆ. ಬಂಗಾಳದಲ್ಲಿ ಹೂಗಳಿಂದ ಗುನಾರಿ ಎಂಬ ಬಣ್ಣವನ್ನು ತಯಾರಿಸುತ್ತಾರೆ. ಅಲ್ಲದೆ ಅವನ್ನು ಕುಸುಬೆ ಹೂ ಮತ್ತು ಅರಿಸಿನಗಳ ಜೊತೆಯಲ್ಲಿ ಸೇರಿಸಿ ಬಸಂತಿ ಎಂಬ ಗಂಧಕದ ಹಳದಿ ಬಣ್ಣವನ್ನು ಪಡೆಯಬಹುದು. ಆಯುರ್ವೇದ ಔಷಧ ಪದ್ಧತಿಯಲ್ಲಿ ಕಂಡಗರಿಗೆಯ ಉಪಯೋಗ ಉಂಟು. ಇದರ ತೊಗಟೆಗೆ ಬಂಧಕ (ಆಸ್ಟ್ರಿಂಜೆಂಟ್) ಮತ್ತು ಕಾಲಿಕ ಜ್ವರರೋಧಕ (ಆ್ಯಂಟಿಪೀರಿಯಾಡಿಕ್) ಗುಣಗಳಿವೆ. ಇದನ್ನು ಎಳೆಯಕೂಸುಗಳಿಗೆ ಬರುವ ಆಮಶಂಕೆಯ ನಿವಾರಣೆಗೂ ವ್ರಣಗಳ ಬಾಹ್ಯಲೇಪನಕ್ಕೂ ಬಳಸುತ್ತಾರೆ. (ಎಸ್.ಆರ್.ಜಿ.)

**ಕಂಡಬತ್ತದ ಹುಲ್ಲು :** ಏಕದಳ ಸಸ್ಯ ಕುಟುಂಬಗಳಲ್ಲಿ ಬಹು ದೊಡ್ಡದಾದ ಗ್ರಾಮಿನಿ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ತೃಣಸಸ್ಯ; ವೈಜ್ಞಾನಿಕ ಹೆಸರು ಡೈಕ್ಯಾಂತಿಯಮ್ ಎಂದು. ಇರುವ 5–6 ಪ್ರಭೇದಗಳಲ್ಲಿ ಡಿ.ಅನ್ಯು ಲೇಟಮ್ ಮತ್ತು ಡಿ.ಕ್ಯಾರಿಕೋಸಮ್ ಮುಖ್ಯವಾದುವು.

ಡಿ.ಆನ್ಯುಲೇಟಮ್ ಎಂಬುದು ಆಂಡ್ರೊಪೋಗಾನ್ ಆನ್ಯುಲೇಟಸ್ ಎಂಬುದರ ಪರ್ಯಾಯನಾಮ; ನೆಟ್ಟಗೆ ಗೊಂಚಲಾಗಿ ಬೆಳೆಯುತ್ತದೆ. ಎತ್ತರ ಸು. ಮೂರು ಅಡಿಗಳು. ಭಾರತದ ಪ್ರಸ್ಥಭೂಮಿ ಮತ್ತು 1523,57 ಮೀ ಗಳಷ್ಟು ಎತ್ತರದವರೆಗಿನ ಬೆಟ್ಟಗಳಲ್ಲಿ ಕಂಡುಬರುತ್ತದೆ. ಬೇಲಿ, ರಸ್ತೆಬದಿ ಮತ್ತು ಹುಲ್ಲುಗಾವಲುಗಳಲ್ಲಿ ಬೆಳೆಯುವುದು ಸಾಮಾನ್ಯ, ಎಲೆಗಳ ಉದ್ದ 3"–12" ಮತ್ತು ಅಗಲ 1/8" –1/4". ತುದಿ ಮೊನಚು, ಹೊಳಪು. ಕೆಲವು ತುಪ್ಪಳ ರಹಿತವಾದರೆ ಕೆಲವು ಬುಡ ದಪ್ಪವಿರುವ ಸಣ್ಣ ಕೂದಲುಗಳಿಂದ ಆವೃತವಾಗಿವೆ. ಹೂಗೊಂಚಲು ಅಂತ್ಯಾರಂಭಿ; ಉದ್ದ 1" ರಿಂದ 1 1/2". ಬಣ್ಣ ತಿಳಿಗೆಂಪು ಅಥವಾ ಬಿಳಿ.

ಚೆನ್ನಾಗಿ ಕುಯ್ಯಲು ಬರುವ ಡಿ.ಆನ್ಯುಲೇಟಮ್ ಮೇವಿನ ಹುಲ್ಲುಗಳಲ್ಲೆಲ್ಲ ವಿಶಿಷ್ಟಸ್ಥಾನವನ್ನು ಹೊಂದಿದೆ. ಎಕರೆಗೆ ಸು. 8,000 ಪೌಂಡುಗಳಷ್ಟು ಇಳುವರಿ ಸಿಗುವುದು. ಹೂ ಬಿಡುವುದಕ್ಕೆ ಮುಂಚೆ ಕತ್ತರಿಸಿ ಒಣಗಿಸಿದ ಒಣ ಹುಲ್ಲು ದನಗಳಿಗೆ ಒಳ್ಳೆಯ ಆಹಾರ.

ಡಿ.ಕ್ಯಾರಿಕೋಸಮ್ (ಆಂಡ್ರೊಪೋಗಾನ್ ಕ್ಯಾರಿಕೋಸಮ್) ಪ್ರಭೇದವನ್ನು ಮೈಸೂರಿನ ಕೆಲವು ಭಾಗಗಳಲ್ಲಿ ಉರುಕನ ಹುಲ್ಲು ಎಂದು ಕರೆಯವುದು ರೂಢಿ. ಬಹಳವಾಗಿ ಡಿ.ಆನ್ಯುಲೇಟಮ್ಮನ್ನು ಹೋಲುತ್ತದೆ. ಪ್ರಸ್ಥಭೂಮಿ ಮತ್ತು 3,000 ಅಡಿಗಳವರೆಗಿನ ಸಣ್ಣ ಬೆಟ್ಟಗಳಲ್ಲಿ ಬೆಳೆಯುವುದು ಸಾಮಾನ್ಯ. ಒಣ ಮತ್ತು ಮರಳುಮಿಶ್ರಿತ ತಾಣಗಳಲ್ಲಿ, ಬತ್ತದ ಗದ್ದೆಗಳ ತೆವರಿನ ಮೇಲೆ ಮತ್ತು ನೆರಳಿರುವ ಸ್ಥಳಗಳಲ್ಲಿ ವಿಶೇಷವಾಗಿ ಹರಡಿರುತ್ತದೆ. ಕ್ಷಾಮ ಪರಿಸ್ಥಿತಿಯಲ್ಲೂ ಬದುಕಬಲ್ಲದು. ಎಲೆಯ ತುದಿ ಮೊನಚು; ಉದ್ದ 6"–8", ಅಗಲ 1/10"–1/6". ಹೂಗೊಂಚಲು ಅಂತ್ಯಾರಂಭಿ. ಉದ್ದ 1"–4", ಬಣ್ಣ ತಿಳಿಹಸಿರು ಅಥವಾ ಹೊಳೆಯುವ ಬಿಳುಪು. ಎಕರೆಗೆ ಸು. 8,000 ಪೌಂಡುಗಳಿಗಿಂತ ಮಿಗಿಲಾಗಿ ಇಳುವರಿ ಕೊಡುತ್ತದೆ. (ಎಸ್.ಆರ್.ಜಿ.)

**ಕಂಡಿ :** ತಡೆಗೋಡೆಯಲ್ಲಿ ರಚಿತವಾಗಿರುವ ತರಲನಿರ್ಗಮದ್ವಾರ (ಆರಿಫಿಸ್). ದ್ರವ ಮತ್ತು ಅನಿಲ ಪದಾರ್ಥಗಳ ಒಟ್ಟು ಹೆಸರು ತರಲ (ಫ್ಲೂಯಿಡ್). ಒಂದು ಶೇಖರಣಪ್ರದೇಶದಲ್ಲಿನ ತರಲದಲ್ಲಿ ಸಂಚಯಿತವಾಗಿರುವ ಸ್ಥಿತಿಶಕ್ತಿಯನ್ನು ಗತಿಶಕ್ತಿಯನ್ನಾಗಿ




**ಕಂಡಿಗಳ ವಿವಿಧ ಬಗೆಗಳು: ಚೂಪು ಅಂಚುಳ್ಳ ಕಂಡಿಯ ಪಾರ್ಶ್ವನೋಟದಲ್ಲಿ [ಎಡಗಡೆಯದು] ಧಾರಾಸಂಕೋಚವನ್ನೂ (1). ಧಾರೆಯ ಹಾದಿಯನ್ನೂ (2) ತೋರಿಸಿದೆ. ದುಂಡು ಕಿಂಡಿಯನ್ನು (3) ಮತ್ತು ಬೋರ್ಡ ಮಾದರಿಯದನ್ನು (4) ಬಲಗಡೆಯಲ್ಲಿ ತೋರಿಸಿದೆ.**

ಪರಿವರ್ತಿಸುವ ಸಾಧನ ಕಂಡಿ. ಇಲ್ಲಿ ಆಗುವುದಿಷ್ಟೇ; ಶೇಖರಣೆಯಲ್ಲಿನ ತೀವ್ರಸಂಮರ್ದ ಅದರ ಸ್ಥಿತಿಶಕ್ತಿ; ಅದರ ತಳದಲ್ಲಿರುವ ಕಿರಿಯ ಕಂಡಿ ತರಲಕ್ಕೆ ನಿರ್ಗಮದ್ವಾರವಾಗುತ್ತದೆ. ಇದರ ಮೂಲಕ ಅದು ಅಧಿಕ ವೇಗದಿಂದ ಪ್ರವಹಿಸುತ್ತದೆ. ಸೈದ್ಧಾಂತಿಕವಾಗಿ ಈ ವೇಗ $v$ ಯ ಬೆಲೆಯನ್ನು $v = \sqrt{2gH}$ ಸಮೀಕರಣ ನೀಡುವುದು. $H$ ಇಲ್ಲಿ ತರಲದ

ಮೇಲುಭಾಗದಿಂದ ಕಂಡಿ ಆಳ, ಆದರೆ ಕಂಡಿಯಲ್ಲಿ ತರಲಕ್ಕೆ ಒದಗುವ ಘರ್ಷಣೆಯ ಪರಿಣಾಮವಾಗಿ ತರಲಧಾರೆಯ ವೇಗದ ವಾಸ್ತವ ಬೆಲೆ $V$ ಸೈದ್ಧಾಂತಿಕಬೆಲೆ $v$ ಗಿಂತ ಕಡಿಮೆ, $V{:}v$ ಅನುಪಾತದ ಹೆಸರು ವೇಗ ಗುಣಕ $\rho$

$$\rho = \frac{V}{v}$$

ಹೊರಗೆ ಧಾವಿಸಲು ಕಂಡಿಯೆಡೆಗೆ ಮುನ್ನುಗ್ಗುವ ತರಲದ ಅಣುಗಳು ಕಂಡಿಯ ಗಾತ್ರಾನುಸಾರ ಸಂಕೋಚಗೊಂಡು ಒಂದು ಧಾರೆಯ ರೂಪದಲ್ಲಿ ಹೊರ ಚಿಮ್ಮುತ್ತವೆ. ಧಾರೆಯ ಪ್ರಾರಂಭ ಅಡ್ಡಕೊಯ್ತ ಕಂಡಿಯ ಗಾತ್ರಕ್ಕಿಂತ ಸ್ವಲ್ಪಮಟ್ಟಿಗೆ ಕಿರಿದಾಗಿರುವುದು. ಇದರ ಹೆಸರು ಧಾರಾಸಂಕೋಚ (ವೇನಾ ಕಂಟ್ರಾಕ್ಟ). ಮುಂದೆ ಇದರ ಗಾತ್ರ ಹಿಗ್ಗುತ್ತದೆ. ಧಾರಾಸಂಕೋಚದ ಗಾತ್ರ $S$ ಮತ್ತು ಕಂಡಿಯ ಗಾತ್ರ $A$ ಆಗಿದ್ದರೆ $S{:}A$ ಅನುಪಾತದ ಹೆಸರ ಸಂಕೋಚ ಗುಣಕ σ.

$$\sigma = \frac{S}{A}$$

ಕಂಡಿಯ ಮೂಲಕ ಹರಿಯುವ ಪ್ರವಾಹವು ವೇಗ ಮತ್ತು ಗಾತ್ರಗಳ ಗುಣ ಲಬ್ಧ. ಇದರ ವಾಸ್ತವ ಬೆಲೆ $SV$, ಎಂದರೆ ಧಾರಾಸಂಕೋಚ ಹಾಗೂ ವಾಸ್ತವ ವೇಗ ಇವುಗಳ ಗುಣಲಬ್ಧ. ಇದರ ಸೈದ್ಧಾಂತಿಕ ಬೆಲೆ $Av$ ಎಂದರೆ ಕಂಡಿಯ ಗಾತ್ರ ಹಾಗೂ ಸೈದ್ಧಾಂತಿಕ ವೇಗ ಇವುಗಳ ಗುಣಲಬ್ಧ. ಇವೆರಡು ಗುಣಲಬ್ಧಗಳ ಅನುಪಾತ $\tau$ ಆಗಿದ್ದರೆ ಆಗ

$$\tau = \frac{SV}{Av} = \sigma\rho$$

$\tau$ ದ ಹೆಸರು ಪ್ರವಾಹ ಗುಣಕ. ಇದರ ಬೆಲೆ ಸಂಕೋಚ ಹಾಗೂ ವೇಗ ಗುಣಕಗಳ ಗುಣಲಬ್ಧವೆಂದು ಮೇಲಿನ ಸಮೀಕರಣದಿಂದ ತಿಳಿಯುತ್ತದೆ. ಸಾಮಾನ್ಯವಾಗಿ ಬಳಕೆಯಲ್ಲಿರುವ ಹರಿತ ಅಂಚಿನ ಕಂಡಿಯಲ್ಲಿ $\tau$ ದ ಬೆಲೆ ಸು. 0.61. ಆಗ $a$ ಗಾತ್ರವಿರುವ ಒಂದು ಕಂಡಿಯಿಂದ ನಿರ್ಗಮಿಸುವ ಪ್ರವಾಹ Qವಿನ ಬೆಲೆ

$$Q = 0.61.a\sqrt{2gH}$$

ಆಗುತ್ತದೆ.

ಕಂಡಿಯಿಂದ ಹೊರಬಿದ್ದ ಧಾರೆ ಇತರ ಬಾಹ್ಯ ಬಲಗಳ ಪ್ರಭಾವವಿಲ್ಲದೇ ಕೇವಲ ಗುರುತ್ವಾಕರ್ಷಣ ಬಲವೊಂದರಿಂದಲೇ ಪ್ರಭಾವಿತಗೊಂಡಾಗ ಅದರ ಪಥಪ್ಯಾರಾಬೊಲ.

ತರಲ ಪ್ರವಾಹಮಾಪನ, ಎತ್ತರದ ಜಲಾಶಯಗಳಿಂದ ತಗ್ಗಿಗೆ ನೀರು ಹಾಯಿಸುವಿಕೆ, ಎಂಜಿನ್ನಿನಲ್ಲಿ ಕಾರ್ಬುರೇಟರಿಗೆ ಇಂಧನ ಒದಗಿಸುವಿಕೆ ಮುಂತಾದ ಕ್ರಿಯೆಗಳಲ್ಲಿ ಕಂಡಿಯ ಉಪಯೋಗ ಉಂಟು. (ಎಚ್.ಸಿ.ಕೆ.)

**ಕಂತಿ :** ಕನ್ನಡದ ಪ್ರಥಮ ಕವಯಿತ್ರಿ. ನಾಗಚಂದ್ರನ ಸಮಕಾಲೀನಳೆಂದೂ(1140) ದೋರರಾಯನ ಆಸ್ಥಾನದಲ್ಲಿದ್ದಳೆಂದೂ ಹೇಳಲಾಗಿದೆ. ಈಕೆಯ ಹೆಸರಿನಲ್ಲಿ ಕಂತಿ–ಹಂಪನ ಸಮಸ್ಯೆಗಳು ಎಂಬ ಪುಟ್ಟ ಕೃತಿಯೊಂದು ಸಿಕ್ಕಿದೆ. 16ನೆಯ ಶತಮಾನದ ಬಾಹುಬಲಿ ಎಂಬ ಕವಿ ಅಭಿನವವಾಗ್ದೇವಿಯಾದ ಕಂತಿಕೆಯನ್ನು ಹೊಗಳಿದ್ದಾನೆ, 19ನೆಯ ಶತಮಾನದ ದೇವಚಂದ್ರ ತನ್ನ ರಾಜಾವಳಿ ಕಥೆಯಲ್ಲಿ ಇವಳ ಬಗ್ಗೆ ಈ ಕಥೆ ಹೇಳಿದ್ದಾನೆ. ದೋರರಾಯನ ಮಂತ್ರಿಯಾದ ಧರ್ಮಚಂದ್ರನ ಮಗ ಉಪಾಧ್ಯಾಯನಾಗಿ ಪಾಠ ಹೇಳುತ್ತಿದ್ದು, ಮಕ್ಕಳ ಮತಿಪ್ರಕಾಶಕ್ಕಾಗಿ ಜ್ಯೋತಿಷ್ಮತೀತೈಲವನ್ನು ಮಾಡಿ ಕುಡಿಕೆಯಲ್ಲಿಟ್ಟುಕೊಂಡು ಮಂದಮತಿಗಳಿಗೆ ಅರೆಬಿಂದುವನ್ನು ಮಾತ್ರ ಸೇವಿಸಲು ಕೊಡುತ್ತಿದ್ದ ಕಂತಿ ಎಂಬ ಮನೆಗೆಲಸದವಳು ಅರಿಯದೆ ಆ ತೈಲವೆಲ್ಲವನ್ನೂ ಸೇವಿಸಲಾಗಿ ಉರಿ ಹತ್ತಿ ಬಾವಿಯಲ್ಲಿ ಬಿದ್ದಳು. ಅಲ್ಲಿ ಕಂಠಪ್ರಮಾಣದ ನೀರಿದ್ದುದರಿಂದ ಆಕೆ ಸಾಯದೆ ಉಳಿದಳಲ್ಲದೆ ವಿದ್ಯಾವಿಶಾರದೆಯಾಗಿ ಕಾವ್ಯಕಟ್ಟಿ ಹೇಳುತ್ತಿರಲಾಗಿ ದೋರರಾಯನ ಆಸ್ಥಾನದ ಪಂಪಕವಿ ಒಂದು ಸಾವಿರ ಪ್ರಶ್ನೆಗಳನ್ನು ಕೇಳಿದ. ಅವಕ್ಕೆಲ್ಲ ಅವಳು ಸಮಂಜಸವಾಗಿ ಉತ್ತರ ಕೊಡಲಾಗಿ, ಅವಳನ್ನು ರಾಜಸಭೆಗೆ ಕರೆಸಲಾಯಿತು. ಅಲ್ಲಿ ಅವಳು ವಿದ್ವತ್ಸಮೂಹದಲ್ಲಿ ಅಧಿಕ ಕವೀಶ್ವರಿಯಾದಳು.

ರಾಜಾಸ್ಥಾನದಲ್ಲಿ ಅಭಿನವಪಂಪನಿಗೂ ಕಂತಿಗೂ ಬಹಳ ಸಂವಾದಗಳೂ ಕವಿತ್ವ ಸ್ಪರ್ಧೆಗಳೂ ನಡೆಯುತ್ತಿದ್ದಂತೆ ತೋರುತ್ತದೆ. ಕಂತಿಯ ಬಾಯಲ್ಲಿ ಹೊಗಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನಾಗಚಂದ್ರ ಒಮ್ಮೆ ಸತ್ತಂತೆ ನಟಿಸಿದನೆಂದೂ ಆಗ ಕಂತಿ ಬಂದು ಅವನನ್ನು ಕೊಂಡಾಡುತ್ತ ಪ್ರಲಾಪಿಸಿದಳೆಂದೂ ಅವನು ತನ್ನ ಪಂಥ ಗೆದ್ದಿತು ಎಂದು ಎದ್ದು ಕುಳಿತನೆಂದೂ ಕಥೆಯಿದೆ.

ಕಂತಿ ವಿಷಯವೆಲ್ಲ ದಂತಕಥೆಯೆಂದೂ ಆ ಹೆಸರಿನ ಕವಯಿತ್ರಿ ಇರಲೇ ಇಲ್ಲವೆಂದೂ ಒಂದು ವಾದವಿದೆ. ಇದನ್ನು ಸಮರ್ಥಿಸುವ ಅಂಶಗಳಿವು: ಕಂತಿಯೆಂದರೆ ಜೈನ ಸಂನ್ಯಾಸಿನಿಯೆಂದರ್ಥ. ಅದು ಒಬ್ಬಳ ಹೆಸರು ಎನ್ನುವುದು ಕಷ್ಟ ನಾಗಚಂದ್ರನ ಕೃತಿಗಳಲ್ಲಾಗಲಿ ಬೇರೆ ಕಡೆಗಳಲ್ಲಾಗಲಿ ಕಂತಿಯ ಉಲ್ಲೇಖವಿಲ್ಲ. ಬಾಹುಬಲಿ, ದೇವಚಂದ್ರರು ಇತ್ತೀಚಿನವರಾದುದರಿಂದ ಅವರ ಹೇಳಿಕೆ ವಿಶ್ವಸನೀಯವಲ್ಲ. ದೋರರಾಯ ಎಂಬ ಹೆಸರಿನ ಯಾವ ರಾಜನೂ ಆಳಿದಂತೆ ಚರಿತ್ರೆಯಿಂದ ತಿಳಿದು ಬರುವುದಿಲ್ಲ. ಆದ್ದರಿಂದ ಕಂತಿಯದೆಲ್ಲ ಕಟ್ಟುಕಥೆ. ಕಂತಿ ಹಂಪನ ಸಮಸ್ಯೆಗಳನ್ನು ಈಚೆಗೆ ಯಾರೋ ಬರೆದು ಕಂತಿಗೆ ಆರೋಪಿಸಿದ್ದಾರೆ ಎನ್ನಬೇಕಾಗುತ್ತದೆ. ಅವುಗಳ ಶೈಲಿಯೂ ಸಂಶಯಾಸ್ಪದವಾಗಿದೆ. ಅವಳ ಅಸ್ತಿತ್ವವೇ ಕಲ್ಪಿತವಾದುದೆನ್ನುವುದು ಸಮರ್ಪಕವಾಗಲಿಕ್ಕಿಲ್ಲ ಎಂಬ ಅಭಿಪ್ರಾಯವೂ ಉಂಟು.

ಕಂತಿ–ಹಂಪನ ಸಮಸ್ಯೆಗಳಲ್ಲಿ ಪ್ರತಿಭೆಯಿಂದ ಮೂಡಿದ ಕವಿತ್ವವಿಲ್ಲ. ಬುದ್ಧಿಯ ಚಮತ್ಕಾರವಷ್ಟೆ ಎದ್ದು ಕಾಣುತ್ತದೆ. ಒಂದು ಉದಾಹರಣೆಯನ್ನು ನೋಡಬಹುದು. ದನಮಂ ಕಡಿ ಕಡಿದು ಬಸದಿಗೆಳೆಯುತ್ತಿರ್ದರ್ ಎಂಬ ಒಗಟನ್ನು ಪಂಪ ಮುಂದಿಟ್ಟನಂತೆ, ಅದನ್ನು ಕಂತಿ ಬಿಡಿಸಿದ ಬಗೆ ಹೀಗೆ :

ವನದೊಳಗೆ ಪುಟ್ಟಿ ಬೆಳೆಯುತೆ
ತನಿಗಂಪಂ ಪತ್ತುದೆಸೆಗೆ ಬೀಱುತ್ತಿರ್ಪಾ
ಘನತರ ಸುರುಚಿರ ಸಚ್ಚಂ
ದನಮಂ ಕಡಿ ಕಡಿದು ಬಸದಿಗೆಳೆಯುತ್ತಿರ್ದರ್

ಕಂತಿ ಎಂಬ ಕಬ್ಬಿಗಿತಿ ನಾಗಚಂದ್ರನ ಕಾಲದಲ್ಲಿ ನಿಜವಾಗಿಯೂ ಇದ್ದಳು ಎಂದು ಒಪ್ಪವುದಾದರೆ, ಅವಳು ಜೈನಧರ್ಮೀಯಳೆಂದೂ ಅವಳ ಕಾಲ ಸು.ಪ್ರ.ಶ. 1140 ಎಂದೂ ಹೇಳಬೇಕಾಗುತ್ತದೆ. (ಸಿ.ಪಿ.ಕೆ.)

**ಕಂತು ವಿಕ್ರಯ :** ಗ್ರಾಹಕ ಕೊಂಡ ಪದಾರ್ಥದ ಕ್ರಯವನ್ನು ಒಂದು ಗೊತ್ತಾದ ಅವಧಿಯಲ್ಲಿ ಸಮಾನ ಕಂತುಗಳಲ್ಲಿ ಪಾವತಿ ಮಾಡಬಹುದೆಂದು ವ್ಯವಹಾರದ ಉಭಯ ಪಕ್ಷಗಳೂ ಸಮ್ಮತಿಸಿ, ಸಾಮಾನ್ಯವಾಗಿ ಪ್ರಥಮ ಕಂತನ್ನು ಕೊಟ್ಟ ಕೂಡಲೇ ಪದಾರ್ಥವನ್ನು ಗ್ರಾಹಕನಿಗೆ ಒಪ್ಪಿಸುವ ಮಾರಾಟ (ಇನ್‌ಸ್ಟಾಲ್‌ಮೆಂಟ್ ಸೇಲ್). ಬಾಡಿಗೆ ಕೊಳ್ಳಿಕೆಗೂ (ಹೈರ್ ಪರ್ಚೇಸ್) ಇದಕ್ಕೂ ಒಂದು ಮುಖ್ಯ ವ್ಯತ್ಯಾಸವುಂಟು (**ನೋಡಿ–ಬಾಡಿಗೆ–ಕೊಳ್ಳಿಕೆ**). ಈ ಒಪ್ಪಂದವಾದೊಡನೆಯೇ ಪದಾರ್ಥ ಗ್ರಾಹಕನ ಸ್ವತ್ತಾಗುತ್ತದೆ. ಆದರೆ ಬಾಡಿಗೆ ಕೊಳ್ಳಿಕೆಯಲ್ಲಿ ಹಾಗಲ್ಲ. ಅದರ ಪ್ರಕಾರ ಕೊಳ್ಳುವಿಕೆಯಲ್ಲಿ ಗ್ರಾಹಕ ಮೊದಲ ಕಂತನ್ನು ಕೊಟ್ಟು ಪದಾರ್ಥವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವನಾದರೂ ಕೊನೆಯ ಕಂತು ಪಾವತಿ ಮಾಡುವವರೆಗೂ ಪದಾರ್ಥದ ಮಾಲೀಕತ್ವ ಮಾತ್ರ ಮಾರಾಟಗಾರನಲ್ಲೇ ಮುಂದುವರಿಯುತ್ತದೆ. ಪೂರ್ಣವಾಗಿ ಕಂತು ಪಾವತಿಯಾಗದಿದ್ದರೆ ಅದುವರೆಗೆ ಗ್ರಾಹಕ ಕೊಟ್ಟ ಹಣವೆಲ್ಲ ಪದಾರ್ಥದ ಬಾಡಿಗೆಯೆನಿಸಿಕೊಳ್ಳುತ್ತದೆ. ಪದಾರ್ಥವನ್ನು ಮಾಲೀಕ ವಾಪಸ್ಸು ಪಡೆಯಬಹುದು.

ಕಂತು ವಿಕ್ರಯ ಪದ್ಧತಿಯಲ್ಲಿ ಮೊದಲ ಕಂತನ್ನು ಪಾವತಿಸಿದ ಕೂಡಲೇ ಕೊಳ್ಳುವವನು ವಸ್ತುವಿನ ಮಾಲೀಕನಾಗುವುದರಿಂದ ಈ ವ್ಯವಹಾರವನ್ನು ವ್ಯಾಪಾರವೆಂದೇ ಪರಿಗಣಿಸಬಹುದು. ಮುಂದೆ ಆತ ಉಳಿದ ಕಂತುಗಳನ್ನು ಕಟ್ಟದೆ ಹೋದರೆ ಆ ವಸ್ತುವಿನ ಮಾರಾಟಗಾರ ಕೊಂಡವನ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಬಹುದು.

ಎಲ್ಲ ವಸ್ತುಗಳೂ ಕಂತು ವಿಕ್ರಯ ಅಥವಾ ಬಾಡಿಗೆ ಕೊಳ್ಳಿಕೆಗೆ ಹೊಂದಿಕೊಳ್ಳುವುದಿಲ್ಲ. ಮೊದಲನೆಯದಾಗಿ ಆ ವಸ್ತು ಹೆಚ್ಚು ಬೆಲೆಯದಾಗಿರಬೇಕು, ಕಂತುಗಳ ಅವಧಿಗಿಂತ ಹೆಚ್ಚುಕಾಲ ಬಾಳುವಂತಿರಬೇಕು. ಆದ್ದರಿಂದ ಅಣೆಕಟ್ಟು (ಫರ್ನಿಚರ್), ಹೊಲಿಗೆ ಯಂತ್ರ, ಪಿಯಾನೊ, ಗ್ರಾಮೋಫೋನ್, ರೇಡಿಯೊ, ಮೋಟಾರ್ ಕಾರ್, ಬೆರಳಚ್ಚು ಯಂತ್ರ, ಶೀತಕ ಇತ್ಯಾದಿ ವಸ್ತುಗಳನ್ನು ಮಾತ್ರ ಈ ರೀತಿಯಲ್ಲಿ ಮಾರಬಹುದು.

ಕಂತು ವಿಕ್ರಯದ ಅಥವಾ ಬಾಡಿಗೆ ಕೊಳ್ಳಿಕೆಯ ಪ್ರಧಾನ ಗುಣಗಳೂ ಎರಡು : ಹೆಚ್ಚು ಬೆಲೆಯ ಪದಾರ್ಥಗಳನ್ನು ಒಂದೇ ಮೊತ್ತದಲ್ಲಿ ಹಣ ಪಡೆದು ಮಾರಾಟ ಮಾಡುವುದು ಕಠಿಣ. ಕಂತು ಸೌಲಭ್ಯ ಇರುವುದರಿಂದ ಇವನ್ನು ಮಾರುವುದು ಸುಲಭ. ಎರಡನೆಯದಾಗಿ ಇದರಿಂದ ಅನುಭೋಗಿಗಳಲ್ಲಿ ಉಳಿತಾಯಕ್ಕೆ ಪ್ರೋತ್ಸಾಹ ದೊರಕುತ್ತದೆ. ಏಕೆಂದರೆ ಕೊಂಡ ಪದಾರ್ಥಕ್ಕಾಗಿ ಕಂತು ಪಾವತಿ ಮಾಡಲು ಅನುಭೋಗಿ ತನ್ನ ವೆಚ್ಚ ತಗ್ಗಿಸುವುದು ಅಗತ್ಯವಾಗುತ್ತದೆ.

ಆದರೆ ಈ ಪದ್ಧತಿಗಳಲ್ಲಿ ಹಲವು ದೋಷಗಳೂ ಇವೆ : ಕೆಲವು ಜನರಿಗೆ ಹಣ ಉಳಿಸಲು ಮತ್ತು ಕಂತುಗಳನ್ನು ಸಲ್ಲಿಸಲು ಸಾಧ್ಯವಾಗದೆ ಹೋಗಬಹುದು. ಅಂಥ ಸಂದರ್ಭಗಳಲ್ಲಿ ಮಾರಾಟಗಾರನಿಗೆ ಸಲ್ಲಬೇಕಾದ ಕಂತುಗಳು ಸಲ್ಲದೆ ಆತ ನಷ್ಟ ಹೊಂದುತ್ತಾನೆ. ಜನ ತಮ್ಮ ಆದಾಯವನ್ನು ಮೀರಿದ ಜೀವನವನ್ನು ನಡೆಸಲು ಈ ಪದ್ಧತಿ ಉತ್ತೇಜಿಸಬಹುದು. ಏಕೆಂದರೆ ಒಂದು ಪದಾರ್ಥವನ್ನು ಈ ರೀತಿ ಕೊಂಡ

ಒಡನೆಯೇ ಈಗಿನ ಅನುಕೂಲಕ್ಕಾಗಿ ಅನುಭೋಗಿ ತನ್ನ ಮುಂದಿನ ವರಮಾನವನ್ನು ಆಧಾರ ಮಾಡುತ್ತಾನೆ. ತಮ್ಮ ತಿಂಗಳ ವೇತನದ ಬಹುಭಾಗವನ್ನು ಕಂತು ಕಟ್ಟಲು ಉಪಯೋಗಿಸುವ ಅಮೆರಿಕನ್ ಸಂಸಾರಗಳು ಇದಕ್ಕೆ ನಿದರ್ಶನ.

ಅದೇನೇ ಇರಲಿ, ಈ ಪದ್ಧತಿಯನ್ನು ಬಹು ಜಾಣ್ಮೆಯಿಂದ ಉಪಯೋಗಿಸಿದರೆ ಮತ್ತು ಕೊಳ್ಳುವವರನ್ನು ಅತ್ಯಂತ ಜಾಗರೂಕತೆಯಿಂದ ಆರಿಸಿದರೆ, ಗ್ರಾಹಕ ವರ್ತಕರಿಬ್ಬರಿಗೂ ಇದು ಉಪಯುಕ್ತವಾಗುತ್ತದೆ.

ಕಂತು ವಿಕ್ರಯಕ್ಕಿಂತ ಬಾಡಿಗೆ ಕೊಳ್ಳಿಕೆ ಪದ್ಧತಿ ಈಚೆಗೆ ಹೆಚ್ಚು ಜನಪ್ರಿಯವಾಗುತ್ತಿದೆ. ಭಾರತದಲ್ಲೂ ಈಚೆಗೆ ಕಂತು ವಿಕ್ರಯವೂ ಬಾಡಿಗೆ ಕೊಳ್ಳಿಕೆಯೂ ಹೆಚ್ಚು ಬಳಕೆಗೆ ಬರುತ್ತಿವೆ. ಆದರೆ ಕಂತು ಪಾವತಿ ಮಾಡದಿದ್ದರೆ ಪದಾರ್ಥ ವಾಪಸು ಪಡೆಯಲು ಸಾಧ್ಯವಾಗದ–ಎಂದರೆ ಸೇವೆಯೇ ಪ್ರಮುಖವಾದ–ವ್ಯವಹಾರಗಳಲ್ಲಿ ಕಂತು ವಿಕ್ರಯ ಪದ್ಧತಿಯೇ ಉಳಿದುಕೊಂಡು ಬರುತ್ತಿದೆ. ಉದಾಹರಣೆ: ಕಂತುಗಳಲ್ಲಿ ಹಣ ಪಾವತಿ ಮಾಡಬಹುದಾದ ವಿಮಾನ ಪ್ರಯಾಣ ದರ. (ಜಿ.ಕೆ.ಎ.)

**ಕಂದ**[1] : ಒಂದು ಮಾತ್ರಾವೃತ್ತ. ಕನ್ನಡ ಮತ್ತು ತೆಲುಗು ಚಂಪೂಕಾವ್ಯಗಳಲ್ಲಿ ಇದರ ಬಳಕೆ ವಿಶೇಷವಾಗಿ ಕಾಣುತ್ತದೆ. ಕನ್ನಡದಲ್ಲಿಯಂತೂ ಕಂದವನ್ನೇ ಮುಖ್ಯ ಛಂದಸ್ಸಾಗಿಟ್ಟುಕೊಂಡು ರಚಿಸಿರುವ ಕೃತಿಗಳೇ ಇವೆ. ಲಕ್ಷಣಗ್ರಂಥಗಳ ಸೂತ್ರಗಳು ಸಾಮಾನ್ಯವಾಗಿ ಕಂದದಲ್ಲಿಯೇ ಕಟ್ಟಿದವಾಗಿವೆ. ಉದಾಹರಣೆಗೆ, ಜನ್ನಕವಿಯ ಯಶೋಧರ ಚರಿತೆ (ಪ್ರಶ.1209), ಕೇಶಿರಾಜನ ಶಬ್ದಮಣಿದರ್ಪಣ (ಪ್ರ.ಶ. ಸು. 1260) ಇಂಥವನ್ನು ಹೇಳಬಹುದು. ಹೀಗೆ ಕನ್ನಡ ಕವಿಗಳಿಗೆ ಕಂದ ಅಚ್ಚುಮೆಚ್ಚಿನ ಛಂದಸ್ಸು, ಕಂದಂಗಳಮೃತ ಲತಿಕಾ। ಕಂದಂಗಳ್।.... ಕಂದಂಗಳ್ ವಾಗ್ವನಿತೆಯ। ಕಂದಂಗಳ್...ಎಂದು ಮುಂತಾಗಿ ಹರಿಹರ, ಸುರಂಗಕವಿ ಮೊದಲಾದ ಒಬ್ಬಿಬ್ಬರು ಕವಿಗಳು ತಮ್ಮ ಮೆಚ್ಚಿಗೆಯನ್ನು ವ್ಯಕ್ತವಾಗಿಯೇ ತಿಳಿಸಿದ್ದಾರೆ.

ಕನ್ನಡದಲ್ಲಿ ಕಂದದ ಬಳಕೆಗೆ ದೀರ್ಘವಾದ ಇತಿಹಾಸವಿದೆ. ಪ್ರಾಚೀನ ಕನ್ನಡ ಶಾಸನಗಳಲ್ಲಿಯೇ ಅದು ತಲೆದೋರಿದೆ. ಕವಿರಾಜಮಾರ್ಗದಲ್ಲಿಯ (ಪ್ರ.ಶ.ಸು.850) ಸೂತ್ರೋದಾಹರಣೆಗಳಲ್ಲಿ ಅದು ವಿಪುಲವಾಗಿ ಬಳಕೆಯಾಗಿದೆ. ಅದರ ಬಂಧದ ಸೊಗಸು ನೆನೆಯತಕ್ಕದ್ದಾಗಿದೆ. ಅಲ್ಲಿಂದೀಚೆಗೆ ಪಂಪ ಮೊದಲಾದ ಕನ್ನಡ ಚಂಪೂ ಕವಿಗಳು ತಮ್ಮ ಕೃತಿಗಳಲ್ಲಿ ಕಂದವನ್ನು ಇತರ ವೃತ್ತಜಾತಿಗಳಿಗಿಂತ ಪ್ರಾಯಃ ಹೆಚ್ಚಾಗಿಯೇ ಎನ್ನುವಂತೆ ಹೇರಳವಾಗಿ ಬಳಸಿದ್ದಾರೆ. ಕವಿರಾಜ ಮಾರ್ಗದ ಕರ್ತೃವೂ ಪಂಪ, ಜನ್ನ, ಷಡಕ್ಷರಿ ಈ ಮೊದಲಾದ ಕೆಲವರೂ ಕಂದಪದ್ಯವನ್ನು ಸೊಗಸಾಗಿ ಬರೆಯಬಲ್ಲವರೆಂದು ಹೆಸರಾಗಿದ್ದಾರೆ. ಅದು ಹಳಗನ್ನಡ ಸಾಹಿತ್ಯದ ಜೀವಾಳವಾದ ಛಂದಸ್ಸು. ಅದರ ಲಕ್ಷಣದಲ್ಲಿ, ನಡುಗನ್ನಡದ ಕಾಲದಿಂದೀಚೆಗೆ ಆಗಾಗ ಶೈಥಿಲ್ಯಗಳು ತಲೆದೋರದಿದ್ದರೂ ಇಂದಿಗೂ ಅದರ ರಚನೆ ನಿಂತಿಲ್ಲ.

ಕಂದಪದ್ಯ ಸಂಸ್ಕೃತದ ಮಾತ್ರಾವೃತ್ತಗಳಲ್ಲಿ ದ್ವಿಪದಿಯಾದ ಆರ್ಯಾ ಅಥವಾ ಪ್ರಾಕೃತದ ಮಾತ್ರಾವೃತ್ತಗಳಲ್ಲಿ ದ್ವಿಪದಿಯಾದ ಗಾಥಾ ಎಂಬ ವೃತ್ತಜಾತಿಯ ವರ್ಗಕ್ಕೆ ಸೇರಿದ್ದಾಗಿದೆ. ಆರ್ಯೆಯ ಸಾಮಾನ್ಯಲಕ್ಷಣ ಹೀಗೆ: ಎರಡು ಅರ್ಧಗಳು; ಪೂರ್ವಾರ್ಧದಲ್ಲಿ 7 ಚತುರ್ಮಾತ್ರಾಗಣ + 1 ಗುರು (= 30 ಮಾತ್ರೆ); ಉತ್ತರಾರ್ಧದಲ್ಲಿ 5 ಚತುರ್ಮಾತ್ರಾಗಣ+1 ಲಘು+1 ಚತುರ್ಮಾತ್ರಾಗಣ+1 ಗುರು (=27 ಮಾತ್ರೆ); ಎರಡೂ ಅರ್ಧಗಳ ವಿಷಮಸ್ಥಾನಗಳಲ್ಲಿ ಮಧ್ಯಗುರುವಿನ ಗಣ(ಜಗಣ) ಬರಕೂಡದು; ಪೂರ್ವಾರ್ಧದಲ್ಲಿ 6ನೆಯ ಗಣಸ್ಥಾನದಲ್ಲಿ ತಪ್ಪದೆ ಮಧ್ಯ ಗುರುವಿನ ಗಣ (ಜಗಣ) ಅಥವಾ ಸರ್ವಲಘುವಿನ ಗಣ ಬಂದಿರಬೇಕು; ಸರ್ವ ಲಘುವಿನ ಗಣವಾಗಿದ್ದ ಪಕ್ಷದಲ್ಲಿ 2ನೆಯ ಲಘುವಿಂದ ಹೊಸಪದ ಆರಂಭವಾಗಿರಬೇಕು; ಆದರೆ ಪೂರ್ವಾರ್ಧದ 7ನೆಯ ಗಣ ಅಥವಾ ಉತ್ತರಾರ್ಧದ 5ನೆಯ ಗಣ ಇವು ಸರ್ವಲಘು ರೀತಿಯದಾಗಿದ್ದರೆ 1ನೆಯ ಲಘುವಿಂದಲೇ ಹೊಸಪದ ಆರಂಭವಾಗಬೇಕು. ಚತುರ್ಮಾತ್ರಾಗಣಗಳ ಕಟ್ಟು ಕೆಡಬಾರದು.

ಗಾಥಾದ ಲಕ್ಷಣವೂ ಇದೇ ರೀತಿಯಾಗಿರುತ್ತದೆ. ಆರ್ಯಾ ಮತ್ತು ಗಾಥಾ ಎರಡರಲ್ಲಿಯೂ ಲಕ್ಷಣದ ಚೌಕಟ್ಟನ್ನು ಹೀಗೆಯೇ ಉಳಿಸಿಕೊಂಡು ಮಾತ್ರಾಸಂಖ್ಯೆಯಲ್ಲಿ ಮಾತ್ರ ಅದಲು ಬದಲು ಮಾಡಿಕೊಳ್ಳುವುದರ ಮೂಲಕ, ಅಲ್ಪಸ್ವಲ್ಪ ವ್ಯತ್ಯಾಸವನ್ನು ಮಾಡಿಕೊಳ್ಳುವುದರ ಮೂಲಕ, ಕೆಲವು ಪ್ರಭೇದಗಳನ್ನು ಕಲ್ಪಿಸಿಕೊಂಡಿದೆ. ಆರ್ಯಾದಲ್ಲಿ:– ಗೀತಿ 30, 30; ಉದ್ಗೀತಿ 27, 30; ಉಪಗೀತಿ 27, 27; ಆರ್ಯಾಗೀತಿ–32, 32 ಇತ್ಯಾದಿ. ಹೀಗೆಯೇ ಗಾಥಾದಲ್ಲಿ ಕೂಡ.

ಸಂಸ್ಕೃತದ ಆರ್ಯಾಪ್ರಭೇದಗಳಲ್ಲಿ ಆರ್ಯಾಗೀತಿ ಎಂಬುದೂ ಪ್ರಾಕೃತ ಗಾಥಾ ಪ್ರಭೇದಗಳಲ್ಲಿ ಸ್ಕಂಧಕ ಎಂಬುದೂ ಕನ್ನಡ ತೆಲುಗುಗಳ ಕಂದವನ್ನು ಹತ್ತಿರದಿಂದ ಹೋಲತಕ್ಕವಾಗಿವೆ. ಆದುದರಿಂದ ಅವುಗಳ ಸ್ವರೂಪವನ್ನು ಸ್ವಲ್ಪ ಗಮನಿಸಬೇಕಾಗುತ್ತದೆ.

ಸಂಸ್ಕೃತದಲ್ಲಿ ಆರ್ಯಾಗೀತಿ ಎಂದು ಹೇಳಿರುವುದನ್ನೇ ಪ್ರಾಕೃತದಲ್ಲಿ ಸ್ಕಂಧಕ ಎಂದಿರುತ್ತದೆ. ಭರತಪಿಂಗಲಾದ್ಯರು ಆರ್ಯಾಗೀತಿಯ ಲಕ್ಷಣವನ್ನೂ ಸ್ವಯಂಭು ಹೇಮಚಂದ್ರಾದ್ಯರು ಸ್ಕಂಧಕದ ಲಕ್ಷಣವನ್ನೂ ನಿರೂಪಿಸಿದ್ದಾರೆ. ಅವುಗಳ ಲಕ್ಷಣ ಒಂದೇ. ಅದು ಹೀಗೆ: ಎರಡು ಅರ್ಧಗಳು; ಪ್ರತಿಯರ್ಧದಲ್ಲಿಯೂ 8 ಚತುರ್ಮಾತ್ರಾಗಣಗಳಿರುತ್ತವೆ. ಎರಡೂ ಅರ್ಧಗಳ 6ನೆಯ ಗಣಸ್ಥಾನದಲ್ಲಿ ತಪ್ಪದೆ ಮಧ್ಯಗುರುವಿನ ಗಣವೋ (ಜಗಣ) ಸರ್ವಲಘುವಿನ ಗಣವೋ ಬಂದಿರುತ್ತದೆ. (ಸುಲ್ಹಣ ಮೊದಲಾದ ಕೆಲವರು ಆರ್ಯೆಯನ್ನೆ 2 ಮಾತ್ರೆಗಳಿಂದ ಬೆಳೆಸಿದ್ದು ಎಂಬುದಾಗಿ ಹೇಳಿರುವುದುಂಟು. ಆಗ ಮಾತ್ರಾ ಸಂಖ್ಯೆ ಕ್ರಮವಾಗಿ 32, 29 ಆಗುವುದು. ಆದರೆ 32 ಮಾತ್ರೆಗಳ 2 ಸಮಾರ್ಧಗಳಾಗಿ ತಿಳಿಯುವುದೇ ಸಾಮಾನ್ಯ).

ಆರ್ಯಾ ಅಥವಾ ಗಾಥಾಭೇದವಾದ, ಎರಡು ಸಮಾರ್ಧಗಳನ್ನುಳ್ಳ, ಗೀತಿಯ (30,30) ಎರಡೂ ಅರ್ಧಗಳ ಕೊನೆಯ ಗುರುವಿಗೆ ಇನ್ನೊಂದು ಗುರುವನ್ನು ಸೇರಿಸಿ ಒಂದು ಚತುರ್ಮಾತ್ರಾಗಣವನ್ನಾಗಿ ಮಾಡಿಕೊಂಡದ್ದು (32,32) ಆರ್ಯಾಗೀತಿ ಅಥವಾ ಸ್ಕಂಧಕಯೆನಿಸಿದಂತೆ ತೋರುತ್ತದೆ. ಆರ್ಯೆ(ಗಾಥೆಯ) ಗೀತಿಯಾದಾಗ ಆರ್ಯೆಯ (ಗಾಥೆಯ) ಪೂರ್ವಾರ್ಧದ ಲಕ್ಷಣ ಗೀತಿಯ ಪೂರ್ವಾರ್ಧ ಉತ್ತರಾರ್ಧಗಳಿಗೂ ಅನ್ವಯಿಸಿದಂತೆ, ಗೀತಿ ಆರ್ಯಾಗೀತಿಯಾದಾಗ (ಸ್ಕಂಧಕವಾದಾಗ) ಗೀತಿಯ ಲಕ್ಷಣ ಆರ್ಯಾಗೀತಿಗೂ (ಸ್ಕಂಧಕಕ್ಕೂ) ಅನ್ವಯಿಸಿತೆಂದು ಸಹಜವಾಗಿಯೇ ತಿಳಿಯಬಹುದು. ಮುಖ್ಯವಾಗಿ ಸೂತ್ರಕಾರರೂ ವ್ಯಾಖ್ಯಾನಕಾರರೂ ಆರ್ಯಾಗೀತೆ (ಸ್ಕಂಧಕ) ಪ್ರತಿಯರ್ಧದಲ್ಲಿ 8 ಚತುರ್ಮಾತ್ರಾಗಣಗಳಿಂದ ಕೂಡಿದ್ದು, ಅದರ 6ನೆಯ ಗಣ ಸ್ಥಾನದಲ್ಲೆಲ್ಲ ಮಧ್ಯಗುರುವಿನ ಗಣ (ಜಗಣ) ಅಥವಾ ಸರ್ವ ಲಘುವಿನ ಗಣ ಬರತಕ್ಕದ್ದು ಎಂಬುದನ್ನು ಒತ್ತಿ ಹೇಳಿದ್ದಾರೆ. ಆರ್ಯಾದ ಅಥವಾ ಗಾಥಾದ (ಗೀತಿಯ) 7ನೆಯ ಗಣದ ಲಕ್ಷಣಾಂಶವನ್ನು ಎತ್ತಿರುವಂತೆ ತೋರುವುದಿಲ್ಲ. ಆದರೆ ಎರಡೂ ಅರ್ಧಗಳ 6 ಮತ್ತು 7ನೆಯ ಗಣಗಳು ಸರ್ವ ಲಘುವಿನ ಗಣಗಳಾದಾಗ ಪಾಲಿತವಾಗಬೇಕಾದ ನಿಯಮವನ್ನು ಕೂಡ ಆರ್ಯಾಗೀತಿಗೆ (ಸ್ಕಂಧಕಕ್ಕೆ) ಅವರು ಒಪ್ಪಿದ್ದಾರೆಂಬುದು ಗ್ರಹಿಸಬಹುದು.

ಮೊದಲು ಪ್ರಾಯಃ ಸಂಸ್ಕೃತದಲ್ಲಿ ಆರ್ಯಾಪ್ರಭೇದವಾಗಿ ಆರ್ಯಾಗೀತಿ ಕಾಣಿಸಿಕೊಂಡಿರಬೇಕು. ಅದೇ ಅನಂತರದಲ್ಲಿ ಪ್ರಾಕೃತಕ್ಕೆ ಸ್ಕಂಧಕವೆಂಬ ಹೆಸರಿಂದ ಗಾಥಾ ಪ್ರಭೇದಗಳ ಸಾಲಿಗೆ ಸ್ವೀಕೃತವಾಗಿರಬೇಕು. ಆರ್ಯಾಗೀತಿಯ ಲಕ್ಷಣವನ್ನು ಭರತ, ಪಿಂಗಲ ಮೊದಲಾದ ಪ್ರಾಚೀನರು ಹೇಳಿರುವುದು ಈ ಭಾವನೆಗೆ ಅವಕಾಶಕೊಡುತ್ತದೆ. ಆದರೆ ಈ ಪೌರ್ವಾಪರ್ಯವನ್ನು ಹೀಗೆಯೇ ಸರಿ ಎನ್ನುವುದು ಕಷ್ಟ.

ಈಗ ಆರ್ಯಾಗೀತಿಗೂ ಸ್ಕಂಧಕಕ್ಕೂ ಒಂದೊಂದು ಉದಾಹರಣೆಯನ್ನು ನೋಡಬಹುದು.

1 ಆರ್ಯಾಗೀತಿಗೆ : ಅಜಮಜ। ರಮಮರ। ಮೇಕಂ। ಪ್ರತ್ಯ । ಕ್ಚೈತ।
∪ – ∪
ನ್ಯಮೀಶ್ವ । ರಂ ಬ್ರ। ಹ್ಮಪರಮ್ ॥
ಆತ್ಮಾ । ನಂ ಭಾ। ವಯತೋ।ಭವಮು।ಕ್ತಿಃಸ್ಯಾ ।
∪ – ∪
ದಿತೀಯ । ಮಾರ್ಯಾ। ಗೀತಿಃ ॥
(ಪಿಂಗಲ ಛಂದಶಾಸ್ತ್ರ)

2 ಸ್ಕಂಧಕಕ್ಕೆ : ಚಲಿಅಂ । ಚ ವಾಣ । ರವಲಂ
∪ – ∪
ಚಲಿಏ । ತಮ್ಮಿಚ । ಲಕೇಸ । ರಸಡು । ಜ್ಞೋಅಮ್ ॥
ಗಹಿಅದಿ। ಸಾಪರಿ।ಣಾಹಂ।
∪∪ ∪∪
ವಲೂಹ । ಜಾಲಂ ।ವ.ದಿಣಅ । ರಸ್ಸ ಪು ।ರನ್ತಮ್ ॥
(ಪ್ರವರಸೇನನ ಸೇತುಬಂಧ)

ಈ ಮೇಲಿನ ವಿವೇಚನೆಯ ಬೆಳಕಿನಲ್ಲಿ ಈಗ ಕಂದಪದ್ಯದ ಸ್ವರೂಪವನ್ನು ಪರಿಶೀಲಿಸುವುದು ಸುಲಭ. ಕನ್ನಡದಲ್ಲಿ ಕಂದದ ಲಕ್ಷಣವನ್ನು ಮೊದಲು ನಾಗವರ್ಮನ ಛಂದೋಂಬುಧಿಯಲ್ಲಿ; (ಪ್ರ.ಶ.ಸು.990) ಅದರ ಚತುರ್ಥಾಧಿಕಾರದಲ್ಲಿ ಕಾಣುತ್ತೇವೆ. ಆರ್ಯಾ ಮತ್ತು ಅದರ ಕೆಲವು ಪ್ರಭೇದಗಳ ಲಕ್ಷಣವನ್ನು ಅಲ್ಲಿಯೇ ಹೇಳಿದ್ದರೂ ಕಂದಕ್ಕೆ ಅವುಗಳೊಡನೆ ಇರುವ ಸಂಬಂಧವನ್ನು ಉಚಿತವಾದ ಕ್ರಮದಲ್ಲಿ ಸ್ಪಷ್ಟವಾಗಿ ತೋರಿಸಿಲ್ಲ. ಆತನು ಕೊಡುವ ಕಂದಪದ್ಯದ ಲಕ್ಷಣ: 4 ಪಾದಗಳು; ಇವುಗಳಲ್ಲಿ ಕ್ರಮವಾಗಿ 3,5,3,5 ಗಣಗಳಿರುತ್ತವೆ. ಹಾಗೂ 12, 20, 12, 20 ಮಾತ್ರೆಗಳು ಬರುತ್ತವೆ (4–5). ಹಿಂದೆ ಆರ್ಯಾದಿಗಳಿಗೆ ಹೇಳಿದ ಸಾಮಾನ್ಯ ಲಕ್ಷಣಗಳನ್ನು ಇಲ್ಲಿಗೆ ಅನ್ವಯಿಸಿಕೊಳ್ಳಬೇಕು ಎಂಬುದು ಆತನ ನಿರೂಪಣೆಯ ಕ್ರಮವನ್ನು ನೋಡಿದರೆ ತಿಳಿಯುತ್ತದೆ. ಕಂದದ ಗಣಗಳು ಕೂಡ ಚತುರ್ಮಾತ್ರೆಗಳಿಂದಾದವು. ಆ ಗಣಗಳು ∪∪–, –∪∪,––, ∪–∪, ∪∪∪∪ ಎಂಬ ಐದು ತೆರನಾದವು. ಈ ಐದು ಗಣಗಳಲ್ಲಿ ∪–∪ ಎಂಬುದು ವಿಷಮಸ್ಥಾನಗಳಲ್ಲಿ ಬರಕೂಡದು. ಇವು ಹಾಗೆ ಅನ್ವಯವಾಗತಕ್ಕ ಲಕ್ಷಣಗಳು. ಇನ್ನು 6ನೆಯ ಗಣಸ್ಥಾನದಲ್ಲಿ ಮಧ್ಯಗುರುವಿನ ಅಥವಾ ಸರ್ವಲಘುವಿನ

ರೀತಿಯ ಚತುರ್ಮಾತ್ರಾ ಗಣ ತಪ್ಪದೆ ಬಂದಿರಬೇಕು ಎಂಬುದನ್ನೂ, ಸರ್ವಲಘುವಿನ ಗಣವಾಗಿದ್ದ ಪಕ್ಷದಲ್ಲಿ 2ನೆಯ ಲಘುವಿಂದ ಹೊಸಪದ ಆರಂಭವಾಗಿರಬೇಕು ಎಂಬುದನ್ನೂ ವ್ಯಕ್ತವಾಗಿ ಹೇಳದಿದ್ದರೂ ಲಕ್ಷಣಗಳನ್ನು ನೋಡಿ ತಿಳಿದುಕೊಳ್ಳಬೇಕು.

ಕಂದದ ಈ ನಿಯಮಗಳು ಈ ಮೊದಲು ನೋಡಿದ ಆರ್ಯಾಗೀತಿ ಅಥವಾ ಸ್ಕಂಧಕದ ನಿಯಮಗಳಿಗೆ ಅನುಸಾರವಾಗಿಯೇ ಇವೆ. ಕಂದದ ಮೂಲ ಆರ್ಯಾಗೀತಿಯೋ ಸ್ಕಂಧಕವೋ ಆಗಿರಬೇಕೆಂದು ತಿಳಿಯುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಪಾದಸಂಖ್ಯೆಯನ್ನು ಕಂದದಲ್ಲಿ ನಾಲ್ಕು ಎಂದು ನಾಗವರ್ಮ ಹೇಳಿರುವುದು ಒಂದು ತೋರಿಕೆಯ ವ್ಯತ್ಯಾಸ. ಆರ್ಯಾಗೀತಿ, ಸ್ಕಂಧಕಗಳು ದ್ವಿಪದಿಗಳಾದ ಮಾತ್ರಾವೃತ್ತಗಳು, ಆದರೆ ಅವುಗಳಲ್ಲಿಯೂ ಆ ವರ್ಗದ ಇತರ ಪ್ರಭೇದಗಳಲ್ಲಿಯೂ ಪ್ರತಿಯರ್ಧದಲ್ಲಿಯೂ 12ನೆಯ ಮಾತ್ರೆಯಾದ ನಂತರ ಯತಿ ಬರುವುದನ್ನು ನಿದರ್ಶನಗಳ ಪರಿಶೀಲನೆಯಿಂದ ಕಾಣುತ್ತೇವೆ ಎನ್ನುವುದರಿಂದಲೂ ಪಥ್ಯಾರ್ಯಾ ಮೊದಲಾದ ಕಡೆ ಅದನ್ನು ವ್ಯಕ್ತವಾಗಿಯೇ ಹೇಳಿರುವುದರಿಂದಲೂ ಪ್ರತಿಯರ್ಧವನ್ನೂ ಎರಡು ಭಾಗಗಳಾಗಿ ಗಣಿಸುವುದು ಸಹಜವೇ ಆಗಿದೆ. ಕನ್ನಡದಲ್ಲಿ ದ್ವಿತೀಯಾಕ್ಷರ ಪ್ರಾಸದ ಬಳಕೆಯಿಂದಾಗಿ ಕಂದ 4 ಸಾಲುಗಳಾಗಿಯೇ ರೂಪುಗೊಂಡಿದೆ.

ಇದನ್ನು ಗಮನಿಸಿ ಕಂದದ ಲಕ್ಷಣವನ್ನು ಹೀಗೆ ಹೇಳಬಹುದು; 4 ಪಾದಗಳು, ಇವುಗಳಲ್ಲಿ 1, 2ನೆಯ ಪಾದಗಳಂತೆಯೇ 3,4ನೆಯ ಪಾದಗಳಿರುತ್ತವೆ. 1,2ನೆಯ ಪಾದಗಳಲ್ಲಿ ಕ್ರಮವಾಗಿ 3,5ರ ಹಾಗೆ ಒಟ್ಟು 8 ಚತುರ್ಮಾತ್ರಾಗಣಗಳು (12+20=32); 3,4ನೆಯ ಪಾದಗಳಲ್ಲಿಯೂ ಹೀಗೆಯೇ (12+20=32). ಚತುರ್ಮಾತ್ರಾ ಗಣಗಳ ಕಟ್ಟು ಕೆಡಬಾರದು. ಪ್ರಥಮಾರ್ಧದ ಹಾಗೂ ದ್ವಿತೀಯಾರ್ಧದ 8ನೆಯ ಗಣಸ್ಥಾನದ ಅಂತ್ಯದಲ್ಲಿ ಗುರು ತಪ್ಪದೆ ಬಂದಿರಬೇಕು; ಈ ಎರಡೂ ಅರ್ಧಗಳ ವಿಷಮ ಸ್ಥಾನಗಳಲ್ಲಿ ಮಧ್ಯ ಗುರುವಿನ ಗಣ (ಜಗಣ) ಬರಬಾರದು. ಆದರೆ ಅವುಗಳ 6ನೆಯ ಗಣಸ್ಥಾನದಲ್ಲಿ ಮಧ್ಯ ಗುರುವಿನ ಗಣ (ಜಗಣ)ವಾಗಲಿ ಸರ್ವ ಲಘುವಿನ ಗಣವಾಗಲಿ ತಪ್ಪದೆ ಬಂದಿರಬೇಕು. ಸರ್ವಲಘುವಿನ ಗಣವಾಗಿದ್ದ ಪಕ್ಷದಲ್ಲಿ, ಹಾಗೆಯೇ ಮಧ್ಯಗುರುವಿನ ಗಣ ಎಂದರೆ ಜಗಣವಾಗಿದ್ದ ಪಕ್ಷದಲ್ಲಿಯೂ ಮೊದಲನೆಯ ಹ್ರಸ್ವದ ಮುಂದೆ ಯತಿಯಿರಬೇಕು. 7ನೆಯ ಗಣ ಸರ್ವಲಘುವಿನ ಗಣವಾಗಿದ್ದಲ್ಲಿ ಮೊದಲನೆಯ ಹ್ರಸ್ವದಿಂದಲೇ ಹೊಸಪದ ಮೊದಲಾಗಬೇಕು.

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕವಿಗಳು ಬಲುಮಟ್ಟಿಗೆ ಈ ನಿಯಮಕ್ಕೆ ಅನುಗುಣವಾಗಿಯೇ ಕಂದಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ಯತಿ ನಿಯಮ ಐಚ್ಛಿಕವಾದುದು ಎಂದು ತಿಳಿದಿರುವುದರಿಂದ ಯತಿಯನ್ನು ನಿಯುತವಾಗಿ ಪಾಲಿಸುವ ವಿಷಯದಲ್ಲಿ ಅಲ್ಲಲ್ಲಿ ಅಪವಾದಗಳು ಕಾಣಿಸಿಕೊಂಡಿರುವುದುಂಟು. ಹಾಗೆಯೇ ಈಚಿನ ಕಾಲದ ಕವಿಗಳು ಚತುರ್ಮಾತ್ರಾಗಣ ನಿಯಮಕ್ಕೆ ಸರಿಯಾಗಿ ಲಕ್ಷ್ಯಕೊಡದೆ, 8ನೆಯ ಗಣದ ಕೊನೆಗೆ ಗುರುವನ್ನು ತರದೆ, ಸಾಮಾನ್ಯ ನಿಯಮವನ್ನು ಮೀರಿರುವುದೂ ಉಂಟು. ಆದರೆ ಒಟ್ಟಿನಲ್ಲಿ ಕಂದದಲ್ಲಿ ಗಣನಿಯಮ ಯತಿ ನಿಯಮಗಳ ಪಾಲನೆ ಬಲುಮಟ್ಟಿಗೆ ಸರಿಯಾಗಿಯೇ ಆಗಿದೆಯೆಂಬುದನ್ನು ನಿದರ್ಶನಗಳ ಪರಿಶೀಲನೆಯಿಂದ ತಿಳಿಯಬಹುದು.

ಲಕ್ಷಣಾನ್ವಿತವಾದ ಕಂದಕ್ಕೆ ಉದಾಹರಣೆ :

ಕಾವೇ । ರಿಯಿಂದ । ಮಾ ಗೋ ।
　　　　ᴗ　– ᴗ
ದಾವರಿ । ವರಮಿ ।ರ್ಪ. ನಾಡ । ದಾ ಕ । ನ್ನಡದೊಳಗೆ
ಭಾವಿಸಿ । ದ ಜನಪ । ದಂ ವಸ್ತು ।
　　　　ᴗ　ᴗᴗᴗ
ಧಾವಳ । ಯವೀಲೀ । ನ. ವಿಶದ । ವಿಷಯವಿಶೇಷಂ॥

(ಕವಿರಾಜಮಾರ್ಗ 1–36)

ಕಂದಪದ್ಯ ಸಂಸ್ಕೃತದ ಆರ್ಯಾಗೀತಿಯ ಅಥವಾ ಪ್ರಾಕೃತದ ಸ್ಕಂಧಕ ಮೂಲಕವಾಗಿ ಬಂದಿದೆಯೆಂದು ಅವುಗಳ ತುಲನಾತ್ಮಕ ಪರಿಶೀಲನೆಯಿಂದ ಸಿದ್ಧಪಡುವುದು. ಆದರೆ ಅದು ಆರ್ಯಾಗೀತಿಯ ಮೂಲಕವಾಗಿ ಬಂತೇ ಸ್ಕಂಧಕದ ಮೂಲವಾಗಿ ಬಂತೇ ಎಂಬುದನ್ನು ಖಚಿತವಾಗಿ ನಿರ್ಣಯಿಸುವುದು ಕಷ್ಟ. ಆರ್ಯಾ ವರ್ಗವನ್ನು ಪ್ರಾಕೃತದಲ್ಲಿ ಸ್ಕಂಧಕಜಾತಿಯೆಂದೇ ತಿಳಿದಿರುವುದುಂಟು (ಸ್ವಯಂಭೂಚ್ಛಂದಃ). ಕನ್ನಡದಲ್ಲಿಯೂ ನಾಗವರ್ಮ ಹೀಗೆಯೇ ಮಾಡಿದಂತೆ ತೋರುತ್ತದೆ. ವಾಕಾಟಕ ಪ್ರವರಸೇನ IIನ (ಪ್ರ.ಶ.ಸು.410–40) ಸೇತುಬಂಧ ಪೂರ್ತಿಯಾಗಿ ಸ್ಕಂಧಕದಲ್ಲಿ ರಚಿತವಾಗಿರುವ ಪ್ರಾಕೃತಕಾವ್ಯ. ಇಲ್ಲಿಯ ಸ್ಕಂಧಕಗಳು ನಿಯಮಬದ್ಧವಾಗಿವೆ. ಕನ್ನಡ ಭಾಷೆಗೆ ಪ್ರಾಕೃತಭಾಷೆ ಸಾಹಿತ್ಯಗಳ ಸಂಪರ್ಕವಾದ ಆರಂಭಕಾಲದಲ್ಲಿ ಪ್ರಾಕೃತಕಾವ್ಯದ ಸ್ಕಂಧಕದ ಛಂದಸ್ಸು ಕಂದವಾಗಿ ಕನ್ನಡಕ್ಕೆ ಪ್ರವೇಶಿಸಿ, ಈ ಭಾಷೆಗೆ ಹೊಂದಿಕೊಂಡಿತೆಂದು ತೋರುತ್ತದೆ. ಕಂದ ಎಂಬ ಹೆಸರು ಕೂಡ ಸ್ಕಂಧಕದ ಪ್ರಾಕೃತ ರೂಪಗಳಲ್ಲಿ ಒಂದರಿಂದ ನಿಷ್ಪನ್ನವಾಗಿರುವಂತೆ ಕಾಣುವುದು (ಖಂಧಕಂ, ಖಂಧಅ, ಖಂಧಯ ಎಂಬವು ಸ್ಕಂಧಕದ ಪ್ರಾಕೃತರೂಪಗಳು; ಖಂಧಅ–ಖಂದ–ಕಂದ ಎಂದು ಆಗಿರುವುದು ಸಾಧ್ಯ) ಈ ರೀತಿ ತಿಳಿಯುವುದಕ್ಕೆ ಅವಕಾಶಕೊಡುತ್ತವೆ.

ಕನ್ನಡದಲ್ಲಿ ಉತ್ತಮ ಕಂದಗಳಿಗೆ ಶಾಸನಗಳಲ್ಲಿಯೂ ಕವಿರಾಜಮಾರ್ಗದಲ್ಲಿಯೂ ಹೇರಳವಾದ ನಿದರ್ಶನಗಳು ಸಿಗುತ್ತವೆ. ಪಂಪ, ರನ್ನ, ಪೊನ್ನ, ಕಾದಂಬರಿಯ ನಾಗವರ್ಮ, ನಾಗಚಂದ್ರ, ನಯಸೇನ ಮೊದಲಾದ ಕವಿಗಳು ಇದನ್ನು ತಮ್ಮ ಕಾವ್ಯಗಳಲ್ಲಿ ವಿಪುಲವಾಗಿ ಬಳಸಿಕೊಂಡಿದ್ದಾರೆ. ವ್ಯಾಕರಣಕಾರರಾದ ನಾಗವರ್ಮ ಮತ್ತು ಕೇಶಿರಾಜರು ಸೂತ್ರಗಳನ್ನು ಶುದ್ಧ ಕಂದಛಂದಸ್ಸಿನಲ್ಲಿ ರಚಿಸಿದ್ದಾರೆ. ಜನ್ನನಂತೂ ತನ್ನ ಯಶೋಧರ ಚರಿತೆಯೆಂಬ ಕಾವ್ಯವನ್ನು ಕಂದದಲ್ಲೇ ನಿರ್ವಹಿಸಿರುವುದು ಗಮನಾರ್ಹವಾದ ಸಂಗತಿ. ಈಚೆಗೆ ಬಸವಪ್ಪ ಶಾಸ್ತ್ರಿಗಳು. ಡಿ.ವಿ.ಜಿ. ಮೊದಲಾದ ಆಧುನಿಕರಲ್ಲೂ ಉತ್ತಮ ಕಂದರಚನೆ ಕಂಡುಬರುತ್ತದೆ. ಈಚೆಗೆ ನವ್ಯ ಕಾವ್ಯ ಸೃಷ್ಟಿಯಾಗತೊಡಗಿದ ಮೇಲೆ ಕಂದ ಸ್ವಲ್ಪ ಹಿಂದೆ ಬಿದ್ದಿದೆಯೆನ್ನಬೇಕು.

(ಟಿ.ವಿ.ವಿ.)

**ಕಂದ² :** ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಮಕ್ಕಳ ಮಾಸಿಕೆ, ಮೈಸೂರು ನಗರದ ಜಯನಗರದಲ್ಲಿರುವ ಚಿಲ್ಡ್ರನ್ಸ್ ಬುಕ್ ಕೌನ್ಸಿಲ್ ಎಂಬ ಸಂಸ್ಥೆಯ ಆಶ್ರಯದಲ್ಲಿ 1947ರ ನವೆಂಬರ್ 27ರಂದು ಇದರ ಪ್ರಕಟನೆ ಆರಂಭವಾಯಿತು. ಎನ್. ನಾಗೇಶರಾವ್ ಸಂಪಾದಕರು.

ಮಕ್ಕಳ ಆಸಕ್ತಿಯನ್ನು ಪ್ರಚೋದಿಸುವ, ಸೃಜನಾತ್ಮಕ ಶಕ್ತಿಯನ್ನು ಬೆಳೆಸುವ ಮತ್ತು ಅವರ ಮನಸ್ಸುಗಳನ್ನು ರಂಜಿಸುವ ಲೇಖನ ಕವಿತೆ ಕಥೆ ಚುಟಕಗಳೇ ಮುಂತಾದವನ್ನು ಅನುರೂಪ ಚಿತ್ರಗಳೊಂದಿಗೆ ಪ್ರಕಟಿಸುತ್ತ ಬಂದ ಈ ಪತ್ರಿಕೆ ಮೂರು ವರ್ಷಗಳ ಕಾಲ ನಡೆದು ನಿಂತಿತು. ಹೀಗೆ ಒಂದೊಂದು ಸಂಚಿಕೆಯಲ್ಲೂ ನಾನಾ ವಿಷಯಗಳನ್ನೊಳಗೊಂಡ ಪತ್ರಿಕಾರೂಪದ ಪ್ರಕಟನೆಯ ಬದಲು ಒಂದೊಂದು ಸಂಚಿಕೆಯನ್ನು ಒಂದೊಂದು ವಿಷಯಕ್ಕೆ ಮೀಸಲಾಗಿಟ್ಟು ಶಾಶ್ವತವಾದ ಮಕ್ಕಳ ಸಾಹಿತ್ಯಸೃಷ್ಟಿಯಲ್ಲಿ ಇದನ್ನು ತೊಡಗಿಸಬೇಕೆಂದು 1956ರ ನವೆಂಬರ್‌ನಲ್ಲಿ ನಡೆದ ಕೌನ್ಸಿಲಿನ ಸಭೆಯಲ್ಲಿ ಕೈಗೊಂಡ ತೀರ್ಮಾನಕ್ಕೆ ಅನುಗುಣವಾಗಿ ಇದನ್ನು 1957ರಲ್ಲಿ ಕಂದ ಕಾವ್ಯಮಾಲೆಯೆಂದು ಪರಿವರ್ತಿಸಲಾಯಿತು. ರಾಮಾಯಣ, ಮಹಾಭಾರತ ಮತ್ತು ಪೌರಸ್ತ್ಯ ಪಾಶ್ಚಾತ್ಯ ಕಥೆಗಳು, ಜೀವನ ಚರಿತ್ರೆಗಳು, ವಿಜ್ಞಾನ ವಿಚಾರ, ಚರಿತ್ರೆ, ಭೂವಿವರಣೆ, ಸಾಮಾನ್ಯಜ್ಞಾನ, ನಾಟಕಗಳು–ಇವೆಲ್ಲ ಈ ಮಾಲೆಯಲ್ಲಿ ಪ್ರಕಟವಾಗಿವೆ. ಇಂಥ ಸಂಚಿಕೆಗಳ ಒಟ್ಟು ಸಂಖ್ಯೆ 110, 1964ರಲ್ಲಿ ಈ ಪ್ರಕಟನೆಗಳೂ ನಿಂತು ಹೋದುವು.　(ಎನ್.ಎನ್.)

**ಕಂದಕ :** ಅಗಲ ಕಿರಿದಾಗಿ, ಕಡಿದಾದ ಬದಿಗಳಿರುವ, ಆಳವಾದ ಮತ್ತು ಉದ್ದವಾದ ಕಾಲುವೆ (ಟ್ರೆಂಚ್). ಅಗಲದಲ್ಲಿಯೂ ವಿಸ್ತಾರದಲ್ಲಿಯೂ ಕಣಿವೆಗಿಂತ ಚಿಕ್ಕದು. ಕಂದಕಗಳು ನೈಸರ್ಗಿಕವಾಗಿರಬಹುದು–ಸಮುದ್ರತಳಗಳಲ್ಲಿ. ಗುಡ್ಡ ಪ್ರದೇಶಗಳಲ್ಲಿ ಇರುವಂತೆ; ಬೆಟ್ಟದ ನೆತ್ತಿಯಲ್ಲಿರುವ ಕೋಟೆ ಕೊತ್ತಳಗಳಿಗೆ ಸಹಜ ಕಂದಕಗಳೇ ಕಾಪು ನೀಡುತ್ತವೆ. ಯುದ್ಧ ಮತ್ತು ಗಣಿ ಉದ್ಯಮಗಳಲ್ಲಿ ಮನುಷ್ಯ ತನಗೆ ಬೇಕಾದೆಡೆ ಕಂದಕಗಳನ್ನು ನಿರ್ಮಾಣಮಾಡಿಕೊಂಡಿರುವುದೂ ಉಂಟು. ಭೂಮೇಲ್ಮೈ ಅಥವಾ ಅದರ ಹತ್ತಿರ ಸಿಗಬಹುದಾದ ಅದಿರನ್ನು ಪತ್ತೆ ಮಾಡಿ ಅದರ ಮೌಲ್ಯ ಮೂಲ ಮತ್ತು ವಿಸ್ತಾರಗಳನ್ನು ಕಂಡುಹಿಡಿಯಲು ಸರಣಿಯಲ್ಲಿ ಕಂದಕ ತೋಡುತ್ತಾರೆ. ಆಧುನಿಕ ಅಗೆಯುವ ಯಂತ್ರಗಳಿಂದ ತೋಡುವ ಕೆಲಸ ಈಚೆಗೆ ಸುಲಭವಾಗಿದೆ. **(ನೋಡಿ–ಅಗೆಯುವ–ಯಂತ್ರಗಳು)** ಯುದ್ಧಕಾರ್ಯದಲ್ಲಿ ಕಂದಕದ ಪ್ರಯೋಜನವನ್ನು ತಿಳಿಯಲು **(ನೋಡಿ–ಕಂದಕ–ಯುದ್ಧ)**.

(ಟಿ.ಟಿ.)

**ಕಂದಕ ಯುದ್ಧ :** ಕಂದಕಗಳ ನೆರವಿನಿಂದ ನಡೆಸುವ ಕಾದಾಟ (ಟ್ರೆಂಚ್ ವಾರ್‌ಫೇರ್). ಒಂದು ಸ್ಥಳವನ್ನು ಆಕ್ರಮಿಸಲು ಮುನ್ನಡೆಯುತ್ತಿರುವ ಆಕ್ರಮಣಬಲದ ವಿರುದ್ಧ ಆ ಸ್ಥಳದಲ್ಲಿ ಭದ್ರವಾಗಿ ನೆಲೆ ಊರಿರುವ ರಕ್ಷಣಾಬಲ ಗುಂಡಿನ ಮಳೆ ಸುರಿಸುತ್ತದೆ. ಇಂಥ ಕದನದಲ್ಲಿ ಸ್ಥಳದ ವಿನ್ಯಾಸವನ್ನು ಅನುಸರಿಸಿ ಆಕ್ರಮಣಬಲ ತನ್ನ ಎಡಪಾರ್ಶ್ವದಲ್ಲಿ ಶತ್ರುವನ್ನು ಕದನೋದ್ಯುಕ್ತಗೊಳಿಸಿ ಬಲಪಾರ್ಶ್ವದಿಂದ ಗುಟ್ಟಾಗಿ ಮುಂದುವರಿಸಿ ಆತನನ್ನು ಹಠಾತ್ತಾಗಿ ಸದೆ ಬಡಿಯಬಹುದು. ಇದು ಬಲಪಾರ್ಶ್ವದ ಆಕ್ರಮಣ. ಹೀಗೆಯೇ ಎಡಪಾರ್ಶ್ವದ ಆಕ್ರಮಣವೂ ಇದೆ. ಆದರೆ ಕೆಲವು ನೆಲಗಳಲ್ಲಿ ಇಂಥ ಯಾವ ಮುನ್ನಡೆಯೂ ಸಾಧ್ಯವಾಗದು. ಆಗ ಎದುರಾಳಿಗೆ ನೇರಿದಿರಾಗಿ ಸಾಗುವುದೊಂದೇ ಆಕ್ರಮಣ ಪಕ್ಷಕ್ಕೆ ಉಳಿಯುವ ದಾರಿ. ಇಂಥಲ್ಲಿ ಈ ಪಕ್ಷ ಎದುರಿಸುವ ಹೊಡೆತ ಅತಿತೀವ್ರ : ಅದರಿಂದ ಸಂಭವಿಸುವ ಸಾವು ನೋವು ಅಪಾರ. ಆಗ ಮುನ್ನಡೆಯನ್ನು ನಿಲ್ಲಿಸಿ ಅಲ್ಲೇನೆಲ ಕೊರೆದು ಆತ್ಮರಕ್ಷಣೆಯನ್ನು ಸಾಧಿಸುವ ಯುದ್ಧತಂತ್ರವನ್ನು ಬಳಸಬೇಕಾಗುತ್ತದೆ. ಇದೇ ಕಂದಕ ಯುದ್ಧ.

ಸೈನಿಕರು ಕಂದಕ ತೋಡುತ್ತಿರುವುದು

ಕಂದಕ ರಚನೆಯ ತಂತ್ರವಿಷ್ಟು, ರಾತ್ರಿ ವೇಳೆ ಶತ್ರುವಿಗೆ ಅರಿಯದಂತೆ ಮುಂದುವರಿದು ಯುಕ್ತ ಪ್ರದೇಶದಲ್ಲಿ ಕಂದಕಗಳನ್ನು ತೋಡಬಹುದು. ಅಥವಾ ಮುಂಚೂಣಿ ಬಲಗಳು ಶತ್ರುವನ್ನು ಕದನದಲ್ಲಿ ತೊಡಗಿಸಿರುವಾಗ ಹಿಂಚೂಣಿಯವರು ಕಂದಕಗಳನ್ನು ರಚಿಸಿ ಒಂದು ಸುಭದ್ರ ನೆಲೆ ಒದಗಿಸಬಹುದು. ನೆಲದಲ್ಲಿ ಸಾಕಷ್ಟು ಆಳದ ನೇರವಾದ ಅಥವಾ ಅಂಕುಡೊಂಕಾದ (ಇದು ಯುದ್ಧತಂತ್ರವನ್ನು ಅವಲಂಬಿಸಿದೆ) ಕಾಲುವೆಗಳನ್ನು ಹೊಡೆಯುತ್ತಾರೆ. ಅವುಗಳಿಂದ ಹೊರತೆಗೆದ ಮಣ್ಣನ್ನು ಶತ್ರುವಿನ ಕಡೆಗಿನ ಬದಿಗಳಲ್ಲಿ ದಿಬ್ಬದಂತೆ ಪೇರಿಸಿದಾಗ ಕಂದಕ ಪೂರ್ಣವಾಗುತ್ತದೆ. ಇದರೊಳಗೆ ನಿಂತ ಅಥವಾ ಮಲಗಿದ ಸೈನಿಕರ ರೈಫಲ್ ಮುಂತಾದ ಅಗ್ನ್ಯಸ್ತ್ರಗಳು ದಿಬ್ಬದ ಮೇಲೆ ಶತ್ರುವಿನೆಡೆಗೆ ಗುರಿ ಮಾಡಿರುತ್ತವೆ. ಶತ್ರುವಿನ ಗುಂಡು ಕಂದಕದೊಳಗೆ ಹುದುಗಿರುವ ಸೈನಿಕನ ಮೇಲೆ ಬೀಳುವುದು ಕಷ್ಟ. ಆದರೆ ಈತ ಮಾತ್ರ ಶತ್ರುವಿನ ಮೇಲೆ ಅಗ್ನಿವರ್ಷ ಸುರಿಸಿ ಆತನ ಬಲವನ್ನು ಕುಂದಿಸಬಹುದು.

ಕಂದಕ ಯುದ್ಧ ಒಂದೆರಡು ದಿವಸಗಳಲ್ಲಿ ಮುಗಿಯುವ ಘಟನೆ ಅಲ್ಲ. ದಿವಸಗಟ್ಟಲೆ ವಾರಗಟ್ಟಲೆ–ಅನೇಕ ದಿವಸಗಳ ಕಾಲ ಯಾವ ಯುದ್ಧ ಕಾರ್ಯಾಚರಣೆಯೂ ಇಲ್ಲದೆ–ಇಲ್ಲಿ ಹೊಂಚುಹಾಕುತ್ತಿರಬೇಕಾಗುವುದು. ಅನೇಕ ವೇಳೆ ಈ ಯುದ್ಧ ರಕ್ಷಣೆ ಹಾಗೂ ಆಕ್ರಮಣ ಬಲಗಳ ನಡುವಿನ ಒಂದು ಧೃತಿ ಯುದ್ಧವೇ (ವಾರ್ ಆಫ್ ನರ್ವ್ಸ್) ಆಗುವುದುಂಟು. ಅಂಥ ದಿವಸಗಳಲ್ಲಿ ಕಂದಕಗಳೇ ಸೈನಿಕರ ತಂಗುದಾಣಗಳು. ಹೀಗಾಗಿ ಇವು ಶಿಬಿರಗಳೇ ಆಗುತ್ತವೆ. ಅಲ್ಲಿ ಆಹಾರ, ವೈದ್ಯ, ವಿರಾಮ ಮುಂತಾದ ಸಕಲ ಕನಿಷ್ಠ ಸೌಕರ್ಯಗಳನ್ನೂ ಒದಗಿಸಬೇಕಾಗುತ್ತದೆ.

ಕಂದಕಗಳ ಉಪಯೋಗ ಆಕ್ರಮಣ ಬಲದ ಮುನ್ನಡೆಯಲ್ಲಿ ಮಾತ್ರವಲ್ಲ, ಪೌರರಕ್ಷಣೆಯಲ್ಲೂ (ಸಿವಿಲ್ ಡಿಫೆನ್ಸ್) ಉಂಟು. ಬಾಂಬ್ ದಾಳಿಯಿಂದ ಪೌರರಿಗೆ ರಕ್ಷಣೆ ನೀಡಲು ನಗರಗಳಲ್ಲಿ ಕಂದಕಗಳನ್ನು ತೋಡುತ್ತಾರೆ. ಅಮೆರಿಕ ದೇಶದ ಪರಮಾಣು ಶಕ್ತಿ ಆಯೋಗ ಪರಮಾಣು ಬಾಂಬಿನ ಸ್ಫೋಟನೆಯ ಪ್ರಯೋಗಗಳನ್ನು ನೆವಾಡದಲ್ಲಿ ನಡೆಸಿತು (1950). ಆಗ ಕಂದಕಗಳಲ್ಲಿ ಮಂಡಿಯೂರಿ ನಿಂತ ಸೈನಿಕರಿಗೆ ಯೋಗ್ಯರಕ್ಷಣೆ ದೊರೆತದ್ದು ಮಾತ್ರವಲ್ಲ, ನೆಲದ ಮೇಲಿನ ಶೂನ್ಯ ಬಿಂದುವಿಗೆ (ಬಾಂಬಿನ ಪ್ರಹಾರ ಬಿಂದು ಅಥವಾ ಅದರ ನೇರ ಕೆಳಗಿನ ಬಿಂದು) ಅದುವರೆಗೆ ಊಹಿಸಿದುದಕ್ಕಿಂತ ಅದೆಷ್ಟೋ ಸಮೀಪ ಬಂದಾಗಲೂ ಅವರಿಗೆ ಬಾಂಬ್ ಸ್ಫೋಟನೆಯ ಪರಿಣಾಮ ಆಗಲಿಲ್ಲ, ಆದ್ದರಿಂದ ಪರಮಾಣು ಬಾಂಬ್ ಯುದ್ಧದಲ್ಲಿ ಕಂದಕಗಳ ರಕ್ಷಣಾ ಸಾಮರ್ಥ್ಯ ಅಪಾರವಾಗಿದೆ. **ನೋಡಿ–ರಕ್ಷಣಾವರಣ**

*

**ಕಂದಾಯ :** ಸ್ಥೂಲವಾಗಿ ತೆರಿಗೆ ಎಂಬ ಅರ್ಥದಲ್ಲಿ ಕನ್ನಡದಲ್ಲಿ ಪ್ರಚಲಿತವಾಗಿರುವ ಶಬ್ದ. ಇದು ಸರ್ಕಾರ ತನ್ನ ವೆಚ್ಚದ ನಿರ್ವಹಣೆಗಾಗಿ ಸಾರ್ವಜನಿಕರಿಂದ ಕಡ್ಡಾಯವಾಗಿ ಪಡೆಯುವ ಹಣ. ಇದಕ್ಕೆ ನೇರವಾದ ಪ್ರತಿಫಲವನ್ನು (ಪ್ರತ್ಯರ್ಪಣೆಯನ್ನು) ತೆರಿಗೆದಾರ ನಿರೀಕ್ಷಿಸುವಂತಿಲ್ಲ. ಸರ್ಕಾರದ ಜವಾಬ್ದಾರಿಗಳೂ ಕಾರ್ಯಚಟುವಟಿಕೆಗಳೂ ಹೆಚ್ಚಿದಂತೆ ಅದರ ಖರ್ಚುಗಳೂ ಹೆಚ್ಚುವುದು ಅನಿವಾರ್ಯ. ಈ ವೆಚ್ಚಕ್ಕೆಲ್ಲ ಹಣವನ್ನೊದಗಿಸಲು ವಿವಿಧ ತೆರಿಗೆಗಳು ಜಾರಿಗೆ ಬಂದಿವೆ. ಪ್ರಸ್ತುತ ಲೇಖನದಲ್ಲಿ ಎಲ್ಲ ತೆರಿಗೆಗಳನ್ನೂ ವಿವರಿಸುವ ಉದ್ದೇಶವಿಲ್ಲ. ಯಾವ ತೆರಿಗೆಗಳಿಗೆ ಕಂದಾಯ ಎಂಬ ಪದವೇ ಹೆಚ್ಚು ಬಳಕೆಯಲ್ಲಿದೆಯೋ ಅವುಗಳಲ್ಲಿ ಮುಖ್ಯವಾದ ಭೂಕಂದಾಯ ಮತ್ತು ತಲೆಗಂದಾಯಗಳನ್ನು ಇಲ್ಲಿ ವಿವರಿಸಿದೆ. ಇವೆರಡೂ ಅಲ್ಲದೆ, ಬ್ರಿಟಿಷ್ ಭಾರತದಲ್ಲಿ ಸರ್ಕಾರದ ವಿರುದ್ಧ ಚಳವಳಿ ಹೂಡಿದ ಗ್ರಾಮಗಳ ಜನರ ಮೇಲೆ ಶಿಕ್ಷಾರ್ಥವಾಗಿ ವಿಧಿಸುತ್ತಿದ್ದ ಪುಂಡುಗಂದಾಯವನ್ನೂ ಈ ಗುಂಪಿಗೆ ಸೇರಿಸಬಹುದು.

**ಭೂಕಂದಾಯ:** ಇದು ಅತ್ಯಂತ ಪ್ರಾಚೀನ ತೆರಿಗೆ ಎಂಬುದು ಕೆಲವರ ಅಭಿಮತ. ಆದರೆ ತಲೆಗಂದಾಯ ಮತ್ತು ಗುಡಿಸಲು ತೆರಿಗೆ ಭೂಕಂದಾಯಕ್ಕಿಂತ ಪ್ರಾಚೀನವಾದುದು ಎಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ಇವುಗಳಲ್ಲಿ ಯಾವುದು ಮೊದಲು ರೂಢಿಗೆ ಬಂತೆಂದು ಹೇಳುವುದು ಕಷ್ಟವಾದರೂ ಇವೆರಡೂ ಪ್ರಾಚೀನ ತೆರಿಗೆಗಳೆಂಬುದರಲ್ಲಿ ಸಂಶಯವಿಲ್ಲ.

ಪ್ರಾಚೀನ ಕಾಲದಿಂದಲೂ ಎಲ್ಲ ರಾಷ್ಟ್ರಗಳಲ್ಲೂ ಭೂಕಂದಾಯ ರಾಜಸ್ವದ ಒಂದು ಮುಖ್ಯ ಮೂಲವಾಗಿದೆ. ಈಚಿನ ದಿನಗಳಲ್ಲಿ ಬೇರೆ ತೆರಿಗೆಗಳಿಂದ ದೊರಕುವ ಆದಾಯ ಹೆಚ್ಚಾಗಿರುವುದರಿಂದ ಭೂಕಂದಾಯದಿಂದ ದೊರಕುವ ಆದಾಯ ಇತರ ತೆರಿಗೆಗಳಿಂದ ದೊರಕುವ ಆದಾಯಕ್ಕೆ ಹೋಲಿಸಿದಾಗ ಕಡಿಮೆಯಾಗಿ ಕಾಣುತ್ತದೆ. ಆದರೂ ಇದರ ಮೂಲಕ ಸರ್ಕಾರ ಆದಾಯ ಪಡೆಯುವುದು ತಪ್ಪಿಲ್ಲ. ಭೂಕಂದಾಯವನ್ನು ಸರ್ಕಾರ ಯಾವ ಆಧಾರದ ಮೇಲೆ ವಿಧಿಸುತ್ತದೆಂಬುದನ್ನು ಅರಿಯುವುದು ಆವಶ್ಯಕ. ಈ ಬಗ್ಗೆ ಎಲ್ಲ ರಾಷ್ಟ್ರಗಳಲ್ಲೂ ಒಂದೇ ಪದ್ಧತಿ ಜಾರಿಯಲ್ಲಿಲ್ಲ: ಭಾರತದಲ್ಲೇ ಎಲ್ಲ ಭಾಗಗಳಲ್ಲೂ ಒಂದೇ ಪದ್ಧತಿ ರೂಢಿಯಲ್ಲಿಲ್ಲ. ಕಂದಾಯವನ್ನು ನಿರ್ಧರಿಸಲು ಅನುಸರಿಸುವ ಆಧಾರ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಿದೆ. ವಸೂಲಿ ಮಾಡುವ ವಿಧಾನದಲ್ಲೂ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗಿದೆ. ಪ್ರಾರಂಭದಲ್ಲಿ ಭೂವಿಸ್ತೀರ್ಣ ಭೂಕಂದಾಯದ ದರವನ್ನು ನಿರ್ಧರಿಸಲು ಆಧಾರವಾಗಿತ್ತು. ರೋಮಿನಲ್ಲಿ ಒಂದುನೂರು ಎಕರೆಗೆ ಇಂತಿಷ್ಟು ಕಂದಾಯ ಎಂದು ನಿರ್ಧರಿಸಲಾಗುತ್ತಿತ್ತು. 1915ಕ್ಕೆ ಮೊದಲು ಫ್ರಾನ್ಸಿನಲ್ಲಿ ಭೂಮಿಯ ಮೌಲ್ಯಕ್ಕೆ ಅನುಗುಣವಾಗಿ ಭೂಕಂದಾಯವನ್ನು ನಿರ್ಧರಿಸಲಾಗುತ್ತಿತ್ತು. ಉತ್ಪನ್ನದ ಆಧಾರದ ಮೇಲೆ ಭೂಕಂದಾಯವನ್ನು ವಿಧಿಸುವುದೂ ಇತರ ಪದ್ಧತಿಗಳಂತೆಯೇ ಪ್ರಾಚೀನವಾದುದೆಂದು ಹೇಳಲಾಗಿದೆ. ಭೂಮಿಯ ಸಾರಗುಣ, ನೀರಾವರಿ ಸೌಲಭ್ಯ, ಮಾರುಕಟ್ಟೆಯ ಸಾಮೀಪ್ಯ ಮುಂತಾದ ಅಂಶಗಳನ್ನು ಆಧಾರವಾಗಿ ಪರಿಗಣಿಸುವುದು ಕಾಲಕ್ರಮದಲ್ಲಿ ಜಾರಿಗೆ ಬಂತು. ಭೂಕಂದಾಯವನ್ನು ಪಡೆಯುವ ರೀತಿಯಲ್ಲೂ ಪ್ರಮುಖ ಬದಲಾವಣೆಯುಂಟಾಗಿದೆ. ಪ್ರಾರಂಭದಲ್ಲಿ ಭೂಮಿಯಿಂದ ಪಡೆಯುವ ಧಾನ್ಯದ ರೂಪದಲ್ಲಿ ಕಂದಾಯ ಕೊಡಬೇಕಾಗಿತ್ತು. ಅನಂತರ ಹಣದ ರೂಪದಲ್ಲಿ ಕಂದಾಯ ಕೊಡುವುದು ರೂಢಿಗೆ ಬಂತು.

ಭಾರತದಲ್ಲೂ ಭೂ ಉತ್ಪಾದನೆಯ ಸ್ವಲ್ಪ ಭಾಗವನ್ನು ಕಂದಾಯ ರೂಪದಲ್ಲಿ ಪಡೆಯುವುದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಮನುವಿನ ಪ್ರಕಾರ ಒಟ್ಟು ಭೂ ಉತ್ಪನ್ನದ ಆರನೆಯ ಒಂದು ಭಾಗವನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ಯುದ್ಧಕಾಲದಲ್ಲಿ ಇದನ್ನು ನಾಲ್ಕನೆಯ ಒಂದು ಭಾಗಕ್ಕೆ ಹೆಚ್ಚಿಸಲಾಗುತ್ತಿತ್ತು. ಒಂದೊಂದು

ಹಳ್ಳಿಯೂ ಇಂತಿಷ್ಟು ಕಂದಾಯ ಕೊಡಬೇಕೆಂದು ನಿರ್ಧರಿಸಲಾಗುತ್ತಿತ್ತು. ಹಳ್ಳಿಯ ಪ್ರತಿ ಭೂಮಾಲೀಕನೂ ಎಷ್ಟು ಕಂದಾಯ ಕೊಡಬೇಕೆಂಬುದನ್ನು ನಿರ್ಧರಿಸಿ ಇಡೀ ಹಳ್ಳಿಯ ಕಂದಾಯವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಒಪ್ಪಿಸುವುದು ಆಗ ಹಳ್ಳಿಯ ಮುಖ್ಯಸ್ಥನ ಕರ್ತವ್ಯ. ಉತ್ಪಾದನೆಯ ಒಂದು ನಿರ್ದಿಷ್ಟ ಭಾಗವನ್ನು ಕೊಡಬೇಕಾಗಿದ್ದುದರಿಂದ ಪ್ರತಿಯೊಬ್ಬನೂ ಕೊಡಬೇಕಾದ ಕಂದಾಯವನ್ನು ನಿರ್ಧರಿಸುವುದು ಸುಲಭ. ರಾಜನಿಂದ ನೇಮಿತನಾದ ಅಧಿಕಾರಿಯ ಸಮ್ಮುಖದಲ್ಲಿ ಕಟಾವಾದ ಬೆಳೆಯನ್ನು ಹರಡಿ ನಿರ್ದಿಷ್ಟವಾದ ಪಾಲನ್ನು ಸರ್ಕಾರಕ್ಕೆ ಒಪ್ಪಿಸಲಾಗುತ್ತಿತ್ತು. ಬೆಳೆ ಕೆಟ್ಟುಹೋದಾಗ ಕಂದಾಯ ಇಲ್ಲವಾಗುತ್ತಿದ್ದುದು ಸ್ವಯಂ ವೇದ್ಯ. ಆದರೆ ಕ್ರಮೇಣ ವ್ಯವಸಾಯ ಅಭಿವೃದ್ಧಿಯಾದಂತೆ ಮತ್ತು ಹೆಚ್ಚು ಹೆಚ್ಚು ಭೂಮಿಯನ್ನು ವ್ಯವಸಾಯಕ್ಕೆ ಉಪಯೋಗಿಸುವುದು ಆರಂಭವಾದ ಮೇಲೆ ಸರಳವಾದ ಹಿಂದಿನ ಪದ್ಧತಿಯನ್ನು ಅನುಸರಿಸುವುದು ಕಷ್ಟವಾಯಿತು. ಕಂದಾಯ ಕೊಡುವುದನ್ನು ತಪ್ಪಿಸಿಕೊಳ್ಳುವುದು ಪ್ರಾರಂಭವಾಯಿತು. ಅಧಿಕಾರಿಗಳೂ ಸರ್ಕಾರಕ್ಕೆ ವಂಚನೆ ಮಾಡಲಾರಂಭಿಸಿದರು. ಆದ್ದರಿಂದ ಬೆಳೆಯ ಆಧಾರದ ಮೇಲೆ ಇಂತಿಷ್ಟು ಕಂದಾಯ ಕೊಡಬೇಕೆಂದು ನಿರ್ಧರಿಸುವ ಮತ್ತು ಹಣದ ರೂಪದಲ್ಲಿ ಕಂದಾಯ ಪಡೆಯುವ ಪದ್ಧತಿಗಳು ಆಚರಣೆಗೆ ಬಂದುವು. ಅಕ್ಬರನ ಕಾಲದಲ್ಲಿ ಎಲ್ಲ ನೆಲವನ್ನೂ ಅದರ ಸಾರಗುಣದ ಆಧಾರದ ಮೇಲೆ ನಾಲ್ಕು ಗುಂಪಾಗಿ ವಿಂಗಡಿಸಿ ಹಿಂದಿನ ಹತ್ತು ವರ್ಷಗಳ ಉತ್ಪನ್ನದ ಸರಾಸರಿಯನ್ನು ಲೆಕ್ಕ ಹಾಕಿ ಅದರ ಆಧಾರದ ಮೇಲೆ ಕಂದಾಯ ವಿಧಿಸುವುದಕ್ಕಾಗಿ ಉತ್ಪನ್ನವನ್ನು ನಿರ್ಧರಿಸಲಾಗುತ್ತಿದ್ದಿತು. ಈ ಉತ್ಪನ್ನದ ಬೆಲೆಯನ್ನು ನಿರ್ಧರಿಸಲು ಹಿಂದಿನ ಹತ್ತೊಂಬತ್ತು ವರ್ಷಗಳ ಬೆಲೆಯ ಸರಾಸರಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿತ್ತು. ಮೊಗಲರ ಕಾಲದಲ್ಲಿ ಆದ ಈ ಬದಲಾವಣೆ ಬಹಳ ಕಾಲದವರೆಗೆ ಭೂ ಕಂದಾಯನೀತಿಗೆ ಆಧಾರವಾಗಿತ್ತು. ಈಸ್ಟ್ ಇಂಡಿಯ ಕಂಪನಿಯ ಆಳ್ವಿಕೆಯ ಕಾಲದಲ್ಲಿ ಪುನಃ ಭೂ ಕಂದಾಯದ ನೀತಿಯಲ್ಲಿ ಪ್ರಮುಖ ಬದಲಾವಣೆಯಾಯಿತು. ಬಂಗಾಲ, ಬಿಹಾರ ಮತ್ತು ಒರಿಸ್ಸ ಪ್ರದೇಶಗಳಲ್ಲಿ ಖಾಯಂ ತೆರ ಪದ್ಧತಿ ಜಾರಿಗೆ ಬಂತು. ಜಮೀನ್ದಾರರು ಸರ್ಕಾರಕ್ಕೆ ಒಪ್ಪಿಸಬೇಕಾದ ಕಂದಾಯವನ್ನು ಒಂದು ಬಾರಿ ನಿಗದಿ ಮಾಡಿದ ಮೇಲೆ ಎಂದೆಂದಿಗೂ ಅದನ್ನು ಬದಲಾಯಿಸದಿರುವುದು ಈ ಪದ್ಧತಿಯ ಉದ್ದೇಶ. ಮುಂದೆ ಭೂ ಅಭಿವೃದ್ಧಿಯಿಂದ ಲಭಿಸಿದ ಆದಾಯ ಮತ್ತು ಮೌಲ್ಯಗಳ ಹೆಚ್ಚಳದಲ್ಲಿ ಅವರು ಸರ್ಕಾರಕ್ಕೆ ಏನನ್ನೂ ಕೊಡಬೇಕಾಗುತ್ತಿರಲಿಲ್ಲ. ಅವರು ರೈತರಿಂದ ಪಡೆಯುವ ಗುತ್ತಿಗೆಯ ಹನ್ನೊಂದನೆಯ ಹತ್ತು ಭಾಗವನ್ನು ಕಂದಾಯವಾಗಿ ಸರ್ಕಾರಕ್ಕೆ ಒಪ್ಪಿಸಬೇಕಾಗಿದ್ದಿತು. ಈ ದರದ ಕಂದಾಯದ ಹೊರೆ ಅತಿಯೇ ಎನ್ನಬೇಕು. ನಿಗದಿಯಾದ ಅವಧಿಯಲ್ಲಿ ಪಾವತಿ ಮಾಡದಿದ್ದರೆ ಬಾಕಿಗಾಗಿ ಜಮೀನನ್ನು ಸರ್ಕಾರ ಮಾರಾಟ ಮಾಡಬಹುದಾಗಿತ್ತು. ಅತಿಯಾದ ಹೊರೆಯನ್ನು ತಾಳಲಾರದೆ ಅನೇಕರು ಭೂಮಿಯನ್ನು ಕಳೆದುಕೊಂಡರು. ಖಾಯಂ ತೆರ ಪದ್ಧತಿಯನ್ನು ಕ್ರಮೇಣ ಬನಾರಸ್ (ವಾರಾಣಸಿ), ಚೆನ್ನೈ, ಅಸ್ಸಾಂ ಮುಂತಾದ ಪ್ರದೇಶಗಳಿಗೂ ವಿಸ್ತರಿಸಲಾಯಿತು. ಹಲವಾರು ವರ್ಷಗಳ ಅನಂತರ ಕಂಪನಿಯ ಆಡಳಿತ ಸುಭದ್ರಗೊಂಡ ಮೇಲೆ ಖಾಯಂ ಆಗಿ ಕಂದಾಯವನ್ನು ನಿರ್ಧರಿಸುವ ಬದಲಾಗಿ ಕಾಲಕಾಲಕ್ಕೆ ಬದಲಾವಣೆ ಮಾಡುವುದು ಅನುಕೂಲವೆಂದು ಮನಗಾಣಲಾಯಿತು ಮತ್ತು ಮಹಲ್ವಾರಿ ಮತ್ತು ರೈತವಾರಿ ಪದ್ಧತಿಗಳು ಜಾರಿಗೆ ಬಂದುವು. ಒಂದು ಇಡೀ ಹಳ್ಳಿ ಅಥವಾ ಮಹಲ್ ಎಷ್ಟು ಕಂದಾಯ ಕೊಡಬೇಕೆಂದು ನಿರ್ಧರಿಸಲಾಗುತ್ತಿತ್ತು. ಹಳ್ಳಿಯವರೆಲ್ಲರೂ ಒಟ್ಟಾಗಿ ಕಂದಾಯ ಕೊಡಲು ಬದ್ಧರು. ಇದೇ ಮಹಲ್ವಾರಿ ಪದ್ಧತಿ. ರೈತವಾರಿ ಪದ್ಧತಿಯಲ್ಲಿ ಪ್ರತಿ ರೈತನೂ ಎಷ್ಟು ಕಂದಾಯ ಕೊಡಬೇಕೆಂಬುದನ್ನು ಪ್ರತ್ಯೇಕವಾಗಿ ನಿರ್ಧರಿಸಲಾಗುತ್ತಿತ್ತು. ಈ ಎರಡು ಪದ್ಧತಿಗಳಲ್ಲೂ ನಿರ್ದಿಷ್ಟ ಅವಧಿಗೆ ಅನ್ವಯಿಸುವಂತೆ ಕಂದಾಯವನ್ನು ನಿರ್ಧರಿಸಿ, ಅವಧಿಯ ಅನಂತರ ಅದನ್ನು ಬದಲಾಯಿಸಲಾಗುತ್ತಿತ್ತು. ಸ್ವಾತಂತ್ರ್ಯಾನಂತರ ವ್ಯಾಪಕವಾದ ಭೂ ಸುಧಾರಣೆಯ ಕ್ರಮಗಳನ್ನು ಕೈಗೊಂಡ ಮೇಲೆ ರೈತರಿಗೂ ಸರ್ಕಾರಕ್ಕೂ ನಡುವೆ ಇದ್ದ ಮಧ್ಯವರ್ತಿಗಳೆಲ್ಲ ಹೋಗಿ ರೈತರೇ ನೇರವಾಗಿ ಸರ್ಕಾರಕ್ಕೆ ಕಂದಾಯ ಕೊಡುವ ಪದ್ಧತಿ ಜಾರಿಗೆ ಬಂದಿದೆ.

ಭೂ ಕಂದಾಯವನ್ನು ನಿರ್ಧರಿಸಲು ಭಾರತದ ಎಲ್ಲ ಭಾಗಗಳಲ್ಲೂ ಒಂದೇ ಅಂಶವನ್ನು ಆಧಾರವಾಗಿಟ್ಟುಕೊಂಡಿಲ್ಲ. ಭೂಮಿಯ ಒಟ್ಟು ಉತ್ಪನ್ನ, ನಿವ್ವಳ ಉತ್ಪನ್ನ, ಅದರ ಮೌಲ್ಯ, ಅದರಿಂದ ದೊರಕಬಹುದಾದ ಗೇಣಿ, ನೀರಾವರಿ ಸೌಲಭ್ಯ, ಹವಾಗುಣ, ಮಾರುಕಟ್ಟೆಯ ಸಾಮೀಪ್ಯ, ಸಾರಿಗೆ ಸಂಪರ್ಕ ವ್ಯವಸ್ಥೆ–ಇವೇ ಮುಂತಾದ ಅಂಶಗಳನ್ನು ಸಾಮಾನ್ಯವಾಗಿ ಗಣನೆಗೆ ತೆಗೆದುಕೊಂಡು ಒಂದು ಎಕರೆ ಭೂಮಿಗೆ ಕೊಡಬೇಕಾದ ಕಂದಾಯವನ್ನು ನಿರ್ಧರಿಸಲಾಗುತ್ತದೆ. ಒಂದು ಬಾರಿ ನಿರ್ಧರಿಸಿದ ದರವನ್ನು ಒಂದು ನಿಶ್ಚಿತ ಅವಧಿಯವರೆಗೆ ಜಾರಿಗೆ ಕೊಡಲಾಗಿರುತ್ತದೆ. ಮರುತೀರ್ಮಾನ ಮಾಡುವ ಅವಧಿ ಸಾಮಾನ್ಯವಾಗಿ 30 ವರ್ಷ.

ಆರೋಹಿ ತೆರಿಗೆಯ ಲಕ್ಷಣವನ್ನು ಪಡೆದಿಲ್ಲದಿರುವುದು ಭೂ ಕಂದಾಯದ ಒಂದು ಮುಖ್ಯ ದೋಷ. ಅದರ ಹೊರೆ ಸಮಾನವಾಗಿ ಹಂಚಿಕೆಯಾಗುತ್ತಿಲ್ಲ. ಆದ್ದರಿಂದ ಭೂಕಂದಾಯವನ್ನು ಕಡಿಮೆ ದರದಲ್ಲಿ ನಿರ್ಣಯಿಸಿ ವ್ಯವಸಾಯೋತ್ಪನ್ನಗಳಿಂದ ಪಡೆಯುವ ಆದಾಯದ ಮೇಲೆ ತೆರಿಗೆ ವಿಧಿಸಬೇಕೆಂಬ ಅಭಿಪ್ರಾಯವಿದೆ. ಭೂಕಂದಾಯವನ್ನು ತೆಗೆದು ಹಾಕಿ ಆರೋಹಿಲಕ್ಷಣವುಳ್ಳ ವ್ಯಾವಸಾಯಿಕ ವರಮಾನ ಮೇಲಿನ ತೆರಿಗೆಯೊಂದನ್ನೇ ವಿಧಿಸಬಹುದೆಂಬ ಅಭಿಪ್ರಾಯವೂ ಇದೆ.

**ತಲೆಗಂದಾಯ:** ಪ್ರಾಚೀನ ತೆರಿಗೆಗಳಲ್ಲಿ ಒಂದಾದ ತಲೆಗಂದಾಯ ಈಗ ಕೇವಲ ಚಾರಿತ್ರಿಕ ಅಂಶವಾಗಿದೆ. ರೋಮನರು ಬ್ರಿಟಿಷರ ಮೇಲೆ ಈ ತೆರಿಗೆಯನ್ನು ವಿಧಿಸುತ್ತಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಯುದ್ಧದಲ್ಲಿ ಸೋತು ರಾಷ್ಟ್ರದ ಮೇಲೆ ಗೆದ್ದ ರಾಷ್ಟ್ರದ ಸರ್ಕಾರ ಈ ಕಂದಾಯವನ್ನು ವಿಧಿಸುವುದು ರೂಢಿಯಲ್ಲಿತ್ತು. ಗ್ರೀಸಿನಲ್ಲಿ ಈ ಕಂದಾಯವನ್ನು ಕೊಡುವುದು ಗುಲಾಮಗಿರಿಯ ಚಿಹ್ನೆ ಎಂಬ ಭಾವನೆಯಿತ್ತು. ಫ್ರೆಂಚ್ ಮಾದರಿಯನ್ನನುಸರಿಸಿ ಇಂಗ್ಲೆಂಡಿನಲ್ಲಿ 1377ರಲ್ಲಿ ವಿಧಿಸಲಾದ ತಲೆಗಂದಾಯದ ಬಗ್ಗೆ ಇಂಗ್ಲಿಷರ ಇತಿಹಾಸದಲ್ಲಿ ಮೊದಲ ವಿವರಣೆ ದೊರಕುತ್ತದೆ. ಹದಿನಾಲ್ಕು ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಹೆಂಗಸರು ಮತ್ತು ಗಂಡಸರೆಲ್ಲರೂ ತಲಾ ನಾಲ್ಕು ಪೆನ್ನಿಯಂತೆ ಈ ಕಂದಾಯವನ್ನು ಕೊಡಬೇಕಾಗಿತ್ತು. ನಿಜವಾದ ಭಿಕ್ಷುಕರಿಗೆ ವಿನಾಯಿತಿಯಿತ್ತು. ಅಮೆರಿಕದಲ್ಲೂ ತಲೆಗಂದಾಯ ಹಿಂದಿನಕಾಲದಲ್ಲಿದ್ದುದಷ್ಟೇ ಅಲ್ಲದೆ ಅಲ್ಲಿಯ ಹಲವು ರಾಜ್ಯಸರ್ಕಾರಗಳು ಈಗಲೂ ಇದನ್ನು ವಿಧಿಸುತ್ತವೆ. ಆ ದೇಶದ ಸಂವಿಧಾನದ ಪ್ರಕಾರ ಹದಿಮೂರು ರಾಜ್ಯಗಳು ತಲೆಗಂದಾಯ ವಿಧಿಸುವ ಅಧಿಕಾರ ಹೊಂದಿವೆ. ಇವುಗಳಲ್ಲಿ ಒಂಬತ್ತು ರಾಜ್ಯಗಳಲ್ಲಿ ಸ್ಥಳೀಯ ಸಂಸ್ಥೆಗಳು ಈ ಕಂದಾಯ ವಿಧಿಸುತ್ತವೆ. ಭಾರತದಲ್ಲಿ ಮೊಗಲರ ಕಾಲದಲ್ಲಿ ಈ ಕಂದಾಯ ವಿಧಿಸಲಾಗಿತ್ತು. ಹಿಂದೂಗಳು ಮಾತ್ರ ಕೊಡಬೇಕಾಗಿದ್ದ ಜಿಸಿಯಾ ತಲೆಗಂದಾಯ ಭಾರತದ ಇತಿಹಾಸದಲ್ಲಿ ಕುಖ್ಯಾತಿ ಗಳಿಸಿದೆ. ತಲೆಗಂದಾಯದಿಂದ ದೊರಕಿದ ಆದಾಯವನ್ನು ರಸ್ತೆಗಳ ನಿರ್ಮಾಣ ಮತ್ತು ಪಾಠಶಾಲೆಗಳ ವ್ಯವಸ್ಥೆಗಳಿಗೆ ಉಪಯೋಗಿಸುವುದು ಸಾಮಾನ್ಯವಾಗಿತ್ತು. ಕೆಲಸ ಮಾಡುವ ಶಕ್ತಿಯಿದ್ದ ವಯಸ್ಕರ ಮೇಲೆ ಮಾತ್ರ ಈ ಕಂದಾಯ ವಿಧಿಸುತ್ತಿದ್ದುದು ಈ ಕಾರಣದಿಂದಲೇ. ಒಂದು ವೇಳೆ ಕಂದಾಯ ಕೊಡಲಾಗದಿದ್ದರೆ ರಸ್ತೆಯ ಕೆಲಸದಲ್ಲಿ ಶ್ರಮದಾನ ಮಾಡುವುದರ ಮೂಲಕ ಕಂದಾಯ ತೀರಿಸಬಹುದಾಗಿತ್ತು.

ತಲೆಗಂದಾಯದ ಕೆಲವು ವಿಶೇಷ ಲಕ್ಷಣಗಳಿವು : ಮೊದಲನೆಯದಾಗಿ, ಪ್ರತಿಯೊಬ್ಬ ನಾಗರಿಕನೂ ಆತನ ಆದಾಯ ಮತ್ತು ಆಸ್ತಿಯ ಮಟ್ಟ ಏನೇ ಇದ್ದರೂ ಇದನ್ನು ಕಡ್ಡಾಯವಾಗಿ ಪಾವತಿ ಮಾಡಲೇಬೇಕು. ವಿನಾಯಿತಿ ದೊರಕುವುದೇನಿದ್ದರೂ ವಯಸ್ಸಿನ ಆಧಾರದ ಮೇಲೆ. ಯಾವ ಆಸ್ತಿಯಿಂದಲೂ ದುಡಿಮೆಯಿಂದಲೂ ಆದಾಯವಿಲ್ಲದೆ, ಭಿಕ್ಷದಿಂದ ಜೀವನ ನಡೆಸುವವರಿಗೂ ವಿನಾಯಿತಿ ಇರುತ್ತಿತ್ತು. ಎರಡನೆಯದಾಗಿ, ಈ ಕಂದಾಯವನ್ನು ಯಾರ ಮೇಲೆ ವಿಧಿಸಲಾಗುತ್ತದೊ ಸಾಮಾನ್ಯವಾಗಿ ಅವರ ಮೇಲೆಯೇ ಇದರ ಹೊರೆ ಅಂತಿಮವಾಗಿ ಬೀಳುತ್ತದೆ. ಇದು ಸಾಮಾನ್ಯವಾಗಿ ಅಲ್ಪದರದಲ್ಲಿ ವಿಧಿಸಲ್ಪಡುವುದರಿಂದ ಹೊರೆಯನ್ನು ವರ್ಗಾಯಿಸುವ ಪ್ರಯತ್ನವಿರುವುದಿಲ್ಲ. ಆದರೆ ಹೆಚ್ಚಿನ ದರದಲ್ಲಿ ವಿಧಿಸಿದಾಗ ಕೂಲಿಯನ್ನು ಹೆಚ್ಚಿಸುವಂತೆ ಮಾಡಿ ಉದ್ಯೋಗದಾತರಿಗೆ ಹೊರೆಯನ್ನು ಕೆಲಸಗಾರರು ವರ್ಗಾಯಿಸಬಹುದು. ಮತ್ತು ಉದ್ಯೋಗದಾತರು ಬೆಲೆಯ ಮೂಲಕ ಗ್ರಾಹಕರಿಗೆ ವರ್ಗಾಯಿಸಬಹುದು ಮೂರನೆಯದಾಗಿ, ಪ್ರಾರಂಭದಲ್ಲಿ ಸಮವಾದ ದರದಲ್ಲಿ ಎಲ್ಲರ ಮೇಲೆ ತಲೆಗಂದಾಯ ಬೀಳುತ್ತಿತ್ತು. ಕ್ರಮೇಣ ಕಂದಾಯದ ದರವನ್ನು ವರ್ಗಾನುಗುಣವಾಗಿ ವಿಂಗಡಿಸುವ ಪದ್ಧತಿ ಕೆಲವು ದೇಶಗಳಲ್ಲಿ ಜಾರಿಗೆ ಬಂತು. ಫ್ರಾನ್ಸಿನಲ್ಲಿ 1701ರಲ್ಲಿ ತಲೆಗಂದಾಯ ವಿಧಿಸುವುದಕ್ಕಾಗಿ ಜನರನ್ನು ಇಪ್ಪತ್ತೆರಡು ಗುಂಪುಗಳಾಗಿ ವಿಂಗಡಿಸಿ ಒಂದೊಂದು ಗುಂಪಿಗೆ ಒಂದೊಂದು ದರದ ಕಂದಾಯ ಹಾಕುವುದು ರೂಢಿಗೆ ಬಂತು. ರಷ್ಯದಲ್ಲಿ ಪೀಟರ್ ದೊರೆ 1718ರಲ್ಲಿ ತೆರಿಗೆದಾರರನ್ನು ಮೂರು ಗುಂಪುಗಳಾಗಿ ವಿಂಗಡಿಸಿದ. 1811ರಲ್ಲಿ ಪ್ರಷ್ಯದಲ್ಲಿ ತೆರಿಗೆದಾರರನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಯಿತು. ನಾಲ್ಕನೆಯದಾಗಿ, ಈ ಕಂದಾಯಕ್ಕೂ ರಾಜಕೀಯ ಹಕ್ಕುಬಾಧ್ಯತೆಗಳಿಗೂ ಒಂದು ರೀತಿಯ ಸಂಬಂಧವಿದೆ. ಅಮೆರಿಕದಲ್ಲಿ ಈ ಕಂದಾಯವನ್ನು ಪಾವತಿ ಮಾಡದೆ ತಪ್ಪಿಸಿಕೊಂಡವರಿಗೆ ಚುನಾವಣೆಗಳಲ್ಲಿ ಮತ ನೀಡುವ ಹಕ್ಕು ಇಲ್ಲದಂತಾಗುತ್ತಿತ್ತು. ಮತ ನೀಡುವ ಹಕ್ಕನ್ನು ಈ ರೀತಿ ಮೊಟಕು ಮಾಡುವುದು ಸರಿಯಲ್ಲವೆಂಬುದು ವೇದ್ಯವಾಗಿ 1964ರ ಸಂವಿಧಾನದ ಇಪ್ಪತ್ನಾಲ್ಕನೆಯ ತಿದ್ದುಪಡಿಯಲ್ಲಿ ಈ ನಿರ್ಬಂಧವನ್ನು ತೆಗೆದುಹಾಕಲಾಯಿತು.

ತೆರಿಗೆಯ ತತ್ತ್ವಗಳ ದೃಷ್ಟಿಯಿಂದ ತಲೆಗಂದಾಯಕ್ಕೆ ಯಾವ ಸಮರ್ಥನೆಯೂ ಇಲ್ಲ. ಸಾಮಾನ್ಯವಾಗಿ ಈ ಕಂದಾಯ ಎಲ್ಲರ ಮೇಲೂ ಒಂದೇ ದರದಲ್ಲಿ ಬೀಳುವುದರಿಂದ ಅವರೋಹಿಲಕ್ಷಣ ಪಡೆದಿದೆ. ವ್ಯಕ್ತಿಯ ಆದಾಯವಾಗಲಿ ಆಸ್ತಿಯಾಗಲಿ ಯಾವುದೂ

ಆಧಾರವಾಗಿರದೆ, ಕೇವಲ ವ್ಯಕ್ತಿಯೇ ಆಧಾರವಾಗಿರುವುದು ಈ ಕಂದಾಯದ ವಿಶೇಷ ನ್ಯೂನತೆ. ಅಷ್ಟೇ ಅಲ್ಲದೆ ರಾಜ್ಯಾದಾಯದ ದೃಷ್ಟಿಯಿಂದಲೂ ಇದರ ಪ್ರಯೋಜನ ಅಷ್ಟೇನೂ ಇಲ್ಲ. ಅಮೆರಿಕದ ಕೆಲವು ರಾಜ್ಯಗಳ ಹೊರತು ಬೇರೆಲ್ಲೂ ತಲೆಗಂದಾಯಕ್ಕೆ ಈಗ ಮಾನ್ಯತೆಯಿಲ್ಲ. **(ನೋಡಿ–ತೆರಿಗೆ)** (ಬಿ.ಎಸ್.ಎಸ್.ಎ.)

**ಕಂದಾರ್ :** ಮಹಾರಾಷ್ಟ್ರ ರಾಜ್ಯದ ನಾಂದೇಡ್ ಜಿಲ್ಲೆಯ ಐತಿಹಾಸಿಕ ಸ್ಥಳ. ಇಲ್ಲಿನ ರಾಷ್ಟ್ರಕೂಟ ಮುಮ್ಮಡಿಕೃಷ್ಣನ ಶಾಸನದಲ್ಲಿ ಸ್ವಾರಸ್ಯಕರ ವಿವರಣೆಗಳಿವೆ. ಇದರಲ್ಲಿ ನಾಲ್ಕು ಭಾಗಗಳಿದ್ದು, ಮೊದಲನೆಯ ಭಾಗದಲ್ಲಿ ಕೃಷ್ಣನವರೆಗಿನ ವಂಶಾವಳಿಯ ಪ್ರಶಸ್ತಿಯಿದೆ. ಕಾಲಪ್ರಿಯ ದೇವಾಲಯದಲ್ಲಿ ಮಂತ್ರಪಠನ ಮಾಡುವವರಿಗೆ ಹಣ ಮತ್ತು ಹೊಸ ವಸ್ತ್ರ, 30 ಬ್ರಾಹ್ಮಣರಿಗೆ ಸತ್ರಸಾಲೆಯಲ್ಲಿ ಭೋಜನದ ವ್ಯವಸ್ಥೆ ಮತ್ತು ಗೋದಾವರಿ ನದಿಯ ದಡದ ಮೇಲಿದ್ದ ನಂದಿಪಟ ವಿದ್ಯಾಪೀಠದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಸ್ನಾನಕ್ಕೆ ಎಣ್ಣೆ, ಊಟಕ್ಕೆ ಉಪ್ಪನ್ನು ಒದಗಿಸುವ ವ್ಯವಸ್ಥೆಯಿದ್ದ ಸಂಗತಿಗಳು ಎರಡನೆಯ ಭಾಗದಲ್ಲಿವೆ. ಮೂರನೆಯ ಭಾಗದಲ್ಲಿ ಜನಸಾಮಾನ್ಯರಿಗೆ ವಸತಿಯನ್ನು ಒದಗಿಸುವ ಉದ್ದೇಶದಿಂದ ಹಾಸಿಗೆ ಹೊದಿಕೆ ವ್ಯವಸ್ಥೆಯನ್ನೊಳಗೊಂಡ ಸರ್ವಲೋಕಾಶ್ರಯ ಮಂಟಪ ನಿರ್ಮಾಣ, ಬೇಸಗೆಯಲ್ಲಿ ಬಾಯಾರಿದವರಿಗೆ ಮಕರ ತೋರಣದ ಹತ್ತಿರ, ಯಕ್ಷ ಹೆಬ್ಬಾಗಿಲಿನ ಹತ್ತಿರ, ಮಂಡಲ ಸಿದ್ಧಿವಿನಾಯಕನ ಹತ್ತಿರ, ಪ್ರಧಾನ ರಾಜ ವಿಲಾಸಿನಿಯರ ಕೇರಿಯ ಕಾಮದೇವ (ಮನ್ಮಥ) ಗುಡಿಯ ಹತ್ತಿರ, ಕಾಲಪ್ರಿಯ ದೇವಾಲಯದ ಪ್ರಾಕಾರ ಮತ್ತು ಸರ್ವಲೋಕಾಶ್ರಯ ಮಂಟಪದ ಹತ್ತಿರ ನೀರು ಒದಗಿಸುವ ಅರವಟ್ಟಿಗೆ ನಿರ್ಮಾಣ, ಚಳಿಗಾಲದಲ್ಲಿ ನಿಸ್ಸಹಾಯ ಜನರಿಗೆ ಬೆಂಕಿ ಕಾಯಿಸಿಕೊಳ್ಳಲು ಸರ್ವಲೋಕಾಶ್ರಯ, ಮಂಡಲ ಸಿದ್ಧಿ ವಿನಾಯಕ, ಕಾಲಪ್ರಿಯ, ಜಗತ್ತುಂಗ ಸಮುದ್ರ ಎಂಬ ಕೆರೆದಂಡೆಯ ಮೇಲಿನ ಸಗರೇಶ್ವರ ದೇವಾಲಯ ಮತ್ತು ನಗರದ ಉತ್ತರ ಭಾಗದಲ್ಲಿಯ ಬಂಕೇಶ್ವರ ದೇವಾಲಯದ ಹತ್ತಿರ ಅಗ್ಗಿಷ್ಟಿಕೆಗಳ ವ್ಯವಸ್ಥೆಯಿದ್ದ ಬಗೆಗೆ ವಿವರಗಳಿವೆ. ನಾಲ್ಕನೆಯ ಭಾಗದಲ್ಲಿ ಎತ್ತುಗಳಿಗೆ ಹುಲ್ಲು ಮತ್ತು ಮೇವುಗಳನ್ನು ಗುರ್ಜರ ವರ್ತಕರ ಅಂಗಡಿ ಬೀದಿಯಲ್ಲಿ, ವೀರ ನಾರಾಯಣ, ಕೃಷ್ಣೇಶ್ವರ, ಕ್ಷೇತ್ರಪಾಲ ದೇವಾಲಯಗಳ ಹತ್ತಿರ ಹಾಗೂ ಹೆಚ್ಚು ವ್ಯಾಪಾರ ವ್ಯವಹಾರ ನಡೆಯುವ ಸ್ಥಳಗಳಲ್ಲಿ ಕೊಡುವ ವ್ಯವಸ್ಥೆ ಮಾಡಿದ್ದರ ಬಗೆಗೆ ವಿವರಗಳಿವೆ. ಇವನ್ನು ನಡೆಸಿಕೊಂಡು ಹೋಗಲು ಪ್ರತಿದಿನ 50 ದ್ರಮ್ಮಗಳನ್ನು ಕೊಡಲಾಗುತ್ತಿತ್ತು, ಬಂಕೇಶ್ವರ, ಚಲ್ಲೇಶ್ವರ, ಗಂಜಿಗ ಸೋಮನಾಥ, ತಂಟೇಶ್ವರ ಮತ್ತು ತುಡಿಗೇಶ್ವರ ದೇವಾಲಯಗಳಲ್ಲಿ ದೇವರಿಗೆ ಪಂಚಾಮೃತ ಅಭಿಷೇಕಕ್ಕೋಸ್ಕರ 50 ದ್ರಮ್ಮಗಳ ನೀಡಿಕೆ ಮೊದಲಾದ ಮಹತ್ತ್ವದ ವಿಷಯಗಳ ಪ್ರಸ್ತಾಪವೂ ಈ ಭಾಗದಲ್ಲಿದೆ.

ಉತ್ಖನನ: ಈ ಶಾಸನದಲ್ಲಿಯ ಉಲ್ಲೇಖಗಳನ್ನು ಗಮನಿಸಿ ಡೆಕ್ಕನ್ ಕಾಲೇಜ್ 1984ರಲ್ಲಿ ಉತ್ಖನನ ನಡೆಸಿತು. ಈ ಉತ್ಖನನದಲ್ಲಿ ಪ್ರಥಮ ಬಾರಿಗೆ ನೆಲದ ಮೇಲೆ ಮಲಗಿದಂತಿರುವ ದೊಡ್ಡ ಮನುಷ್ಯಾಕಾರದ ಶಿಲಾಮೂರ್ತಿ ಬೆಳಕಿಗೆ ಬಂದಿತು. ಇದು ಏಕಶಿಲಾ ಮೂರ್ತಿಯಲ್ಲ; ವ್ಯವಸ್ಥಿತವಾಗಿ ಕೆತ್ತಲಾದ ವಿವಿಧ ಭಾಗಗಳನ್ನು ನೆಲದಲ್ಲಿ ಒತ್ತೊತ್ತಾಗಿ ಜೋಡಿಸಿ ಮೂರ್ತಿಯನ್ನು ರಚಿಸಲಾಗಿದೆ. ಇದು 23.05 ಮೀ ಉದ್ದ, ಗರಿಷ್ಠ 7 ಮೀ ಅಗಲವಿದೆ. ವಾಯವ್ಯಾಭಿಮುಖ ವಾಗಿರುವ ತಲೆಯೇ 6.35 ಮೀ ಉದ್ದ, 4.82 ಮೀ ಅಗಲ. ಆಗ್ನೇಯ ಅಭಿಮುಖವಾಗಿರುವ ಕಾಲುಗಳು 10.38 ಮೀ ಉದ್ದ, ತೊಡೆ 2.20ಮೀ ಅಗಲ, ಕೈಗಳು 9.95ಮೀ ಉದ್ದ, ಭುಜ 2.05ಮೀ ಅಗಲವಿದ್ದು ಹಸ್ತ 1.05ಮೀ ಅಗಲ ಇದೆ. ಇದರ ಸುತ್ತಲೂ ಸಮಾನಾಂತರ ದಲ್ಲಿರುವ ಎರಡು ಪೌಳಿ ಗೋಡೆಗಳಿವೆ. ಇದರ ಗರಿಷ್ಠ ಉದ್ದಗಲ 37X33ಮೀ. ಪೂರ್ವ ಬದಿಯಲ್ಲಿ ಪ್ರವೇಶದ್ವಾರವಿದೆ. ಈ ಪೌಳಿಗೋಡೆಯನ್ನು ತುಂಡುಕಲ್ಲುಗಳಿಂದ ಮತ್ತು ಸಣ್ಣಸಣ್ಣ ಕಲ್ಲುಚಕ್ಕೆಗಳಿಂದ ಕಟ್ಟಲಾಗಿದೆ. ಇದಕ್ಕೆ ಮಣ್ಣಿನ ಗಾರೆಯನ್ನು ಮಾಡಲಾಗಿದೆ. ಈ ಬೃಹತ್ ಕಟ್ಟಡಕ್ಕೆ ಚಾವಣಿ ಇರಲಿಲ್ಲ. ಈ ಕಟ್ಟಡದ ಉತ್ತರ ಬದಿಯಲ್ಲಿ 10.40X3.52ಮೀ ಉದ್ದಗಲದ ಕಲ್ಲುತುಂಡುಗಳಿಂದ ಮಾಡಿದ ನೆಲವಿದೆ. ಈ ಹಾಸುಗಲ್ಲಿನ ಪಶ್ಚಿಮ ಭಾಗದಲ್ಲಿ ಶಾಸನ ಉಲ್ಲೇಖಿತವಾದ ಯೋಗೇಶ್ವರಮೂರ್ತಿ ಇದ್ದಿರಬೇಕು. ಇದನ್ನು ರಾಷ್ಟ್ರಕೂಟ ಅರಸು ಮುಮ್ಮಡಿಕೃಷ್ಣ ಕಟ್ಟಿಸಿದ. ಇದು ಆ ಕಾಲದಲ್ಲಿ ನಗರದ ಹೊರವಲಯದಲ್ಲಿತ್ತು. ಮಲಗಿದ ಭಂಗಿಯಲ್ಲಿರುವ ಇಷ್ಟು ದೊಡ್ಡ ಮೂರ್ತಿಯನ್ನು ಒಂದೇ ಕಲ್ಲಿನಲ್ಲಿ ಮಾಡಲು ಬೇಕಾದ ದೊಡ್ಡಶಿಲೆ ಈ ಪ್ರದೇಶದಲ್ಲಿ ಸಿಗುವುದು ದುರ್ಲಭವಾದ ಕಾರಣದಿಂದ ಲೆಕ್ಕಾಚಾರವಾಗಿ ಮೂರ್ತಿಯ ಭಾಗಗಳನ್ನು ಬಿಡಿ ಬಿಡಿಯಾಗಿ ಮಾಡಿ ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಹೀಗೆ ಜೋಡಿಸಲಾದ ಮೂರ್ತಿಯ ಭಾಗಗಳಲ್ಲಿ ಒಂದರಲ್ಲಿ ಗೂಟವಿದ್ದರೆ ಇದನ್ನು ಸೇರಿಸಿರುವ ಮತ್ತೊಂದು ಭಾಗದಲ್ಲಿ ಗುಳಿಯಿದೆ. ಹೀಗೆ ಇಡೀ ಮೂರ್ತಿಯ ಬಿಡಿ ಭಾಗಗಳನ್ನು ಪ್ರತ್ಯೇಕ ಮಾಡಿ ನಿರ್ದಿಷ್ಟ ಸ್ಥಳದಲ್ಲಿ ಜೋಡಿಸಿದ ತಂತ್ರಜ್ಞಾನ ಪ್ರಶಂಸನೀಯ. ಈ ಮೂರ್ತಿಯ ಅಂಗಾಲನ್ನು ಕೂಡ ಎಚ್ಚರಿಕೆಯಿಂದ ನಯ ಮಾಡಲಾಗಿದೆ. ಉತ್ಖನನ ಪೂರ್ವದಲ್ಲಿಯೇ ಈ ಮೂರ್ತಿಯ ತುಂಡುಗಳು ಈ ನೆಲೆಯ ಹತ್ತಿರ ಅಲ್ಲಲ್ಲಿ ಬಿದ್ದಿದ್ದವು. ಹಣೆಯ ಮೇಲೆ ಹಣೆಗಣ್ಣನ್ನು ಬಿಡಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿಸಿದ ಕ್ಷೇತ್ರವನ್ನು ರಕ್ಷಿಸುವಂತೆ ಕ್ಷೇತ್ರಪಾಲನೆಂದು ಈ ಮೂರ್ತಿಯನ್ನು ಗುರುತಿಸಲಾಗಿದೆ. ಇದರ ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಬಹುಬೀಜ ಫಲವಿದೆ. ಇದು ವಾಯವ್ಯ–ಆಗ್ನೇಯ ಅಭಿಮುಖವಾಗಿ ಮಲಗಿರುವ ಭಂಗಿಯಲ್ಲಿ ಇರುವುದರಿಂದ ಮತ್ತು ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ವರ್ಣಿಸಿದ ವಾಸ್ತುಲಕ್ಷಣಗಳಿಗೆ ಹೊಂದುವುದರಿಂದ ಇದನ್ನು ವಾಸ್ತುಪುರುಷನೆಂದೂ ಹೇಳಬಹುದು. (ಎ.ಎಸ್.;ಎನ್.ಎಲ್.)

**ಕಂದು ಆಲ್ಗೆ :** ಆಲ್ಗೆ ಸಸ್ಯಗಳ ಗುಂಪಿನ ಒಂದು ವರ್ಗ (ಫಿಯೋಫೈಸೀ–ಬ್ರೌನ್ ಆಲ್ಗೆ). ಇವು ಪ್ರಮುಖವಾಗಿ ಚಾಕೊಲೇಟ್ ಕೆಂಪು ಬಣ್ಣವಾದ್ದರಿಂದ ಈ ಹೆಸರು ಬಂದಿದೆ. ಇದರಲ್ಲಿ ಸು. 240 ಜಾತಿ ಮತ್ತು ಸು. 1500 ಪ್ರಭೇದಗಳಿವೆ. ಮೂರು ಪ್ರಭೇದಗಳನ್ನು ಬಿಟ್ಟು ಉಳಿದವೆಲ್ಲ ಸಮುದ್ರವಾಸಿಗಳು. ಮುಖ್ಯವಾಗಿ ಉತ್ತರ ಸಮಶೀತೋಷ್ಣವಲಯದ ಸಾಗರ ಮತ್ತು ಶೀತವಲಯದ ಸಾಗರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೆ ಭಾರತ ಮತ್ತು ಇತರ ಉಷ್ಣವಲಯದ ಸಮುದ್ರಗಳಲ್ಲಿ ಡಿಕ್ಟಿಯೋಟೇಲಿಸ್ ಗಣದ ಮತ್ತು ಸಾರ್ಗ್ಯಾಸಮ್ ಜಾತಿಯ ಆಲ್ಗೆಗಳು ಹೇರಳವಾಗಿ ಕಂಡುಬರುತ್ತವೆ.

ಕಂದು ಅಲ್ಗೆಗಳ ದೇಹರಚನೆಯಲ್ಲಿ ವೈವಿಧ್ಯವಿದೆ. ಕೆಲವು ಸೂಕ್ಷ್ಮರೂಪಿಗಳಾದರೂ ಹೆಚ್ಚಿನವು ದೈತ್ಯಾಕಾರದವು. ಉದಾಹರಣೆಗೆ 30 ಮೀ ಗಿಂತ ಹೆಚ್ಚು ಉದ್ದಕ್ಕೆ ಬೆಳೆಯುವ ಮ್ಯಾಕ್ರೊಸಿಸ್ಟಿಸ್, ಲ್ಯಾಮಿನೇರಿಯ, ನೀರಿಯೊಸಿಸ್ಟಿಸ್ ಇತ್ಯಾದಿ. ಎಲ್ಲವೂ ಒಟ್ಟಿನಲ್ಲಿ ಬಹುಕಣಜೀವಿಗಳೇ. ಆದರೆ ಗಾತ್ರ, ಆಕಾರ, ರೂಪ ಬೆಳವಣಿಗೆಯ ರೀತಿ ಮುಂತಾದುವುಗಳಲ್ಲಿ ವೈವಿಧ್ಯವಿದೆ. ಎಕ್ಟೋಕಾರ್ಪಸ್, ಸ್ಪೇಸಿಲೇರಿಯ ಪ್ರಭೇದಗಳಲ್ಲಿ ಎಳೆಯಂಥ ದೇಹವಿದೆ. ಡಿಕ್ಟಿಯೋಟೇಲಿಸ್ ಗಣದವುಗಳಲ್ಲಿ ದೇಹ ಪಟ್ಟಿಯಂತಿದೆ. ಹಟರೋಜೆನರೇಟ ಮತ್ತು ಸೈಕ್ಲೋಸ್ಪೋರಿ ವಿಭಾಗದ ಸಸ್ಯಗಳ ದೇಹದಲ್ಲಿ ಕಾಂಡ, ಬೇರು ಮತ್ತು ಎಲೆಗಳಂಥ ಭಾಗಗಳಿವೆ. ಕಂದು ಆಲ್ಗೆ ಸಸ್ಯಗಳ ಜೀವಕೋಶಗಳಲ್ಲಿ ಒಂದೊಂದೇ ಕಣಬೀಜ (ನ್ಯೂಕ್ಲಿಯಸ್) ಇರುವುದೂ ಕ್ಲೋರೋಫಿಲ್ ಎ ಮತ್ತು ಬಿ, $\beta$– ಕ್ಯಾರೋಟೀನ್ ಮತ್ತು ಫ್ಯೂಕೋಜ಼ಾಂತಿನ್ ಎಂಬ ಬಣ್ಣಗಳಿಂದ ಕೂಡಿದ ಪ್ಲಾಸ್ಟಿಡ್ಡುಗಳಿರುವುದೂ ಇವುಗಳ ಮುಖ್ಯ ಲಕ್ಷಣಗಳು. ದ್ಯುತಿಸಂಶ್ಲೇಷಣ ಕ್ರಿಯೆಯ ಉತ್ಪತ್ತಿ ಪಿಷ್ಟ ಪದಾರ್ಥವಲ್ಲ, ಲ್ಯಾಮಿನೇರಿನ್ ಮತ್ತು ಮ್ಯಾನಿಟಾಲ್ ಎಂಬ ವಿಶಿಷ್ಟ ಬಗೆಯ ಕಾರ್ಬೊಹೈಡ್ರೇಟುಗಳು. ಕೊಂಚ ಕೊಬ್ಬು ಹಾಗೂ ಫೈಸೋಡ್ ಅಥವಾ ಫ್ಯೂಕೋಸ್ ಎಂಬ ಸಾವಯವ ಪದಾರ್ಥಗಳೂ ಇರುತ್ತವೆ. ಜೀವಕೋಶವನ್ನು ಆವರಿಸಿರುವ ಗೋಡೆಯಲ್ಲಿ ಮೂರು ಪದರಗಳಿವೆ. ಒಳಪದರ ಸೆಲ್ಯುಲೋಸಿನಿಂದಾದದ್ದು. ಮಧ್ಯ ಪದರದಲ್ಲಿ ಪೆಕ್ಟಿಕ್ ಸಂಯುಕ್ತಗಳಿವೆ. ಹೊರಪದರದಲ್ಲಿ ಆಲ್ಜಿನ್ ಎಂಬ ವಿಶೇಷ ಬಗೆಯ ಲೋಳೆ ವಸ್ತುವಿದೆ.

ಈ ವರ್ಗದ ಸಸ್ಯಗಳ ವಂಶಾಭಿವೃದ್ಧಿ ಸ್ವಾರಸ್ಯಕರವಾಗಿದೆ. ಜೀವನಚಕ್ರದಲ್ಲಿ ಒಂದಾದಮೇಲೆ ಮತ್ತೊಂದು ಪರ್ಯಾಯವಾಗಿ ಬರುವ ಎರಡು ಪೀಳಿಗೆಗಳು (ಜನರೇಷನ್) ಇವೆ. ಲಿಂಗಕಣಗಳನ್ನು (ಗ್ಯಾಮೀಟ್ಸ್) ಉತ್ಪತ್ತಿ ಮಾಡುವ ಪೀಳಿಗೆಗೆ ಗ್ಯಾಮಿಟೋಫೈಟ್ ಎಂದೂ ಸ್ಪೋರುಗಳನ್ನು ಉತ್ಪತ್ತಿ ಮಾಡುವ ಪೀಳಿಗೆಗೆ ಸ್ಪೋರೋಫೈಟ್ ಎಂದೂ ಹೆಸರು. ಈ ಬಗೆಯ ಪರ್ಯಾಯವನ್ನು ಪೀಳಿಗೆಗಳ ಪರ್ಯಾಯಕ್ರಮ ಎನ್ನುತ್ತಾರೆ. ಐಸೋಜನರೇಟಿ ಗುಂಪಿನ ಎಕ್ಟೋಕಾರ್ಪಸ್ ಮುಂತಾದ ಜಾತಿಗಳಲ್ಲಿ ಎರಡೂ ಪೀಳಿಗೆಗಳಲ್ಲಿನ ದೇಹ (ಥಾಲಸ್ಸು) ಒಂದೇ ವಿಧವಾಗಿರುತ್ತದೆ. ಇಲ್ಲಿನ ಪರ್ಯಾಯಕ್ಕೆ ಸಮರೂಪ ಪೀಳಿಗೆಗಳ ಪರ್ಯಾಯಕ್ರಮ ಎಂದು ಹೆಸರು. ಹೆಟರೋಜನರೇಟಿ ಗುಂಪಿಗೆ ಸೇರಿದ ಲ್ಯಾಮಿನೇರಿಯ, ಡಿಕ್ಟಿಫೈಟ್ ಪೀಳಿಗೆ ದೊಡ್ಡದಾಗಿ ಪ್ರಧಾನವಾಗಿಯೂ ಇರುತ್ತದೆ. ಇದಕ್ಕೆ ಅಸಮರೂಪ ಪೀಳಿಗೆಗಳ ಪರ್ಯಾಯಕ್ರಮ ಎಂದು ಹೆಸರು. ಫ್ಯೂಕಸ್, ಸಾರ್ಗ್ಯಾಸಮ್ ಪರ್ಯಾಯಕ್ರಮ ಇಲ್ಲವೆಂದೇ ಹೇಳಬಹುದು. ಇಲ್ಲಿ ಸ್ಪೋರೋಫೈಟ್ ಪೀಳಿಗೆ ಮಾತ್ರ ಪ್ರಧಾನವಾದುದು. ಸಂತಾನಾಭಿವೃದ್ಧಿಯ ಕಾಲದಲ್ಲಿ ಸ್ಪೋರೋಫೈಟ್ ಪೀಳಿಗೆಯ ಥಾಲಸ್ಸಿನಲ್ಲಿ ಒಂದೇ ಕೋಶವುಳ್ಳ ಯೂನಿಲಾಕ್ಯುಲರ್ ಸ್ಪೊರಾಂಜಿಯಗಳೆಂಬ ಅಂಗಗಳು ಹುಟ್ಟುತ್ತವೆ. ಇವುಗಳಲ್ಲಿ ಅಸಂಖ್ಯವಾಗಿ ಚಿಫುವೊಸ್ಪೋರುಗಳು ಉತ್ಪತ್ತಿಯಾಗುತ್ತವೆ. ಬಿಡುಗಡೆ ಹೊಂದಿದ ಇವು ಸೂಕ್ತ ಪರಿಸ್ಥಿತಿಯಲ್ಲಿ ಮೊಳೆತು ಥಾಲಸ್ಸಿನಲ್ಲಿ ಹಲವಾರು ಕೋಳವುಳ್ಳ ಪ್ಲೂರಿಲಾಕ್ಯುಲರ್ ಸ್ಪೊರಾಂಜಿಯಗಳು ಮೂಡುತ್ತವೆ. ಇವು ವಿಪುಲ ಸಂಖ್ಯೆಯಲ್ಲಿ ಲಿಂಗಕಣಗಳನ್ನು (ಗ್ಯಾಮೀಟ್ಸ್) ಉತ್ಪಾದಿಸುತ್ತವೆ. ಲಿಂಗಕಣಗಳು ಸ್ಪೊರಾಂಜಿಯಗಳಿಂದ ಹೊರಬಂದು ಒಂದರೊಡನೊಂದು ಸಂಯೋಗ ಹೊಂದಿ ಜೈಗೋಟುಗಳಾಗುತ್ತವೆ. ಮುಂದೆ ಈ ಜೈಗೋಟ್ ಮೊಳೆತು ಸ್ಪೋರೋಫೈಟ್ ಸಸ್ಯವಾಗಿ ಬೆಳೆಯುತ್ತದೆ. ಲಿಂಗಕಣಗಳು ಸಮರೂಪ ಹೊಂದಿರಬಹುದು. ಉದಾಹರಣೆಗೆ ಎಕ್ಟೋಕಾರ್ಪಸ್. ಇಂಥ ಲಿಂಗಕಣಗಳ ಸಂಯೋಗಕ್ಕೆ ಸಮಲಿಂಗಕಣ ಸಂಯೋಗ (ಐಸೊಗ್ಯಾಮಿ) ಎಂದು ಹೆಸರು. ಕಟ್ಲೇರಿಯ ಜಾತಿಯಲ್ಲಿ ಲಿಂಗಕಣಗಳು ಅಸಮರೂಪವಾದುವು. ಇಂಥ ಸಂಯೋಗವನ್ನು ಅಸಮಲಿಂಗಕಣ ಸಂಯೋಗ (ಅನ್ ಐಸೊಗ್ಯಾಮಿ) ಎನ್ನುತ್ತಾರೆ. ಇನ್ನು ಕೆಲವು ಜಾತಿಗಳಲ್ಲಿ

(ಲ್ಯಾಮಿನೇರಿಯ, ಫ್ಯೂಕಸ್ ಇತ್ಯಾದಿ) ಗಂಡುಲಿಂಗಕಣಗಳು ಚಿಕ್ಕವು. ಅವುಗಳಿಗೆ ಚಲನಶಕ್ತಿ ಇದೆ. ಹೆಣ್ಣು ಲಿಂಗಕಣಗಳು ದೊಡ್ಡವು. ಅವು ಚಲಿಸಲಾರವು. ಇಂಥ ಗ್ಯಾಮೀಟುಗಳ ಸಂಯೋಗಕ್ಕೆ ಊಗ್ಯಾಮಿ ಎಂದು ಹೆಸರು. ಸೈಕ್ಲೋಸ್ಪೋರಿ ಗುಂಪಿನ ಆಲ್ಗೆಯಾದ ಫ್ಯೂಕಸ್‍ನಲ್ಲಿ ಯೂನಿಲಾಕ್ಯುಲರ್ ಸ್ಪೊರಾಂಜಿಯಗಳಲ್ಲಿ ಉತ್ಪತ್ತಿಯಾಗುವ ಸ್ಪೋರುಗಳೇ ನೇರವಾಗಿ ಲಿಂಗಕಣಗಳಂತೆ ವರ್ತಿಸುತ್ತವೆ. ಅಲ್ಲದೆ ಸ್ಪೊರಾಂಜಿಯಗಳು ಕಾನ್ಸೆಪ್ಟಕಲ್ಲುಗಳೆಂಬ ವಿಶಿಷ್ಟ ಬಗೆಯ ಕುಹರಗಳಲ್ಲಿ ಉತ್ಪತ್ತಿಯಾಗುತ್ತವೆ.

ಸಮುದ್ರ ಕಳೆಗಳೆಂದು ಪರಿಗಣಿತವಾಗಿರುವ ಕಂದು ಆಲ್ಗೆಗಳು ಆರ್ಥಿಕ ಪ್ರಾಮುಖ್ಯ ಪಡೆದಿವೆ. ಇವುಗಳಿಂದ ಸುಲಭವಾಗಿ ಪಡೆಯಬಹುದಾದ ಆಲ್ಜಿನ್ನನ್ನು ಐಸ್‍ಕ್ರೀಮ್, ಟೂತ್‍ಪೇಸ್ಟ್, ಸುಗಂಧದ್ರವ್ಯ, ಸಾಬೂನು ಇತ್ಯಾದಿಗಳ ತಯಾರಿಕೆಯಲ್ಲಿ ಬಳಸುತ್ತಾರೆ. ರಬ್ಬರನ್ನು ಪರಿಷ್ಕಾರಗೊಳಿಸುವಾಗ ಇದನ್ನು ಬಳಸುವ ರೂಢಿಯಿದೆ. ಲ್ಯಾಮಿನೇರಿಯ ಮತ್ತು ಏಲೇರಿಯ ಪ್ರಭೇದಗಳಿಂದ ಕೊಂಬು ಎಂದು ಕರೆಯಲಾಗುವ ಆಹಾರ ವಸ್ತುವನ್ನು ತಯಾರಿಸುತ್ತಾರೆ. ಜಪಾನಿನಲ್ಲಿ ಇದನ್ನು ಮೀನು, ಮಾಂಸ ಮುಂತಾದುವುಗಳೊಡನೆ ಬೆರೆಸಿ ಆಹಾರವಾಗಿ ಉಪಯೋಗಿಸುತ್ತಾರೆ. ಒಂದು ಕಾಲದಲ್ಲಿ ಈ ಆಲ್ಗೆಗಳಿಂದ ಅಯೊಡೀನ್ ಮತ್ತು ಪೊಟ್ಯಾಸಿಯಂಗಳನ್ನು ಬೇರ್ಪಡಿಸುತ್ತಿದ್ದರು. (ಕೆ.ಎಸ್.ಜಿ.ಪಿ.ಬಿ.)

**ಕಂಧ :** ವೇದತತ್ತ್ವವೇತ್ತನಾದ ಒಬ್ಬ ಋಷಿ. ಕಂಡು ಎಂದೂ ಹೆಸರು. ಗೋಮತೀ ನದಿಯ ತೀರದಲ್ಲಿ ತೀವ್ರವಾದ ತಪಸ್ಸನ್ನಾಚರಿಸುತ್ತಿರುವಾಗ ತಪೋಭಂಗ ಮಾಡಲೋಸುಗ ದೇವೇಂದ್ರ ಪ್ರಮ್ಲೋಚಾ ಎಂಬ ಅಪ್ಸರ ಸ್ತ್ರೀಯನ್ನು ಕಳುಹಿಸಿದ. ಆ ದಿವ್ಯಾಂಗನೆಯೊಡನೆ ಕಂಧ ಋಷಿ ಒಂಬೈನೂರು ವರ್ಷಗಳ ಕಾಲ ಸಂಸಾರಜೀವನ ನಡೆಸಿದ. ಒಂದು ದಿನ ಜ್ಞಾನೋದಯವಾಗಿ ಇಂದ್ರಿಯಾಧೀನ ಜೀವನಕ್ಕೂ ದೇವತೆಗಳ ತಪೋಭಂಗ ಪ್ರಯತ್ನಕ್ಕೂ ಧಿಕ್ಕಾರ ಹೇಳಿ ಬ್ರಹ್ಮಪಾರವೆಂಬ ಮಹಾತಪಸ್ಸು ಮಾಡಲು ಪುರುಷೋತ್ತಮಕ್ಷೇತ್ರಕ್ಕೆ ಹೋದ. ಇವರ ಮಗಳಾದ ಮಾರಿಷೆಯನ್ನು ಪ್ರಚೇತಸ್ ಮುನಿ ವರಿಸಿದ. ಪ್ರೇಮಬಂಧ ಎಷ್ಟು ಪ್ರಬಲವಾದುದೆಂಬುದಕ್ಕೆ ಕಂಧವೃತ್ತಾಂತ ಉತ್ತಮ ನಿದರ್ಶನವಾಗಿದೆ. (ಎನ್.ಎಸ್.ಆರ್.ಐ.)

**ಕಂನಡ ಸಮಾಚಾರ :** ಒಂದು ದೃಷ್ಟಿಯಿಂದ ಕನ್ನಡದಲ್ಲಿ ಪ್ರಕಟವಾದ ಮೊದಲ ವಾರ್ತಾಪತ್ರಿಕೆಯಾಗಿರುವುದರಿಂದಲೂ ಇತರ ಹಲವಾರು ದೃಷ್ಟಿಗಳಿಂದ, ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ ಗಣ್ಯಸ್ಥಾನವನ್ನು ಪಡೆಯಲು ಅರ್ಹವಾಗಿರುವುದರಿಂದಲೂ ಮುಖ್ಯವೆನಿಸಿರುವ ಒಂದು ಪತ್ರಿಕೆ. ಮೊದಲು ಇದು ಮಂಗಳೂರು ಸಮಾಚಾರ ಎಂಬ ಹೆಸರಿನಿಂದ ಆರಂಭವಾದದ್ದು 1843ನೆಯ ಜುಲೈ 1ನೆಯ ತಾರೀಖು. ಈ ಪತ್ರಿಕೆ ಹುಟ್ಟಿದ್ದು ಬಾಸೆಲ್ ಮಿಷನ್ನಿನ ಪಾದ್ರಿಗಳ ಪ್ರಯತ್ನದ ಫಲವಾಗಿ. ಈ ಸಂಸ್ಥೆಯ ಪಾದ್ರಿಗಳು ಭಾರತದ ನೆಲದ ಮೇಲೆ ಹೆಜ್ಜೆಯಿಟ್ಟದ್ದು 1834ರಲ್ಲಿ–ಮಲೆಯಾಳದ ಕರಾವಳಿಯ ಕಲ್ಲಿಕೋಟೆಯಲ್ಲಿ. ಅಲ್ಲಿಂದ ಅವರು ಮಂಗಳೂರಿಗೆ ಹೊರಟು, ಅದೇ ವರ್ಷ ಅಕ್ಟೋಬರ್ 30ನೆಯ ತಾರೀಖಿನಂದು ಮಂಗಳೂರನ್ನು ಮುಟ್ಟಿದ್ದರು. ಈ ಐತಿಹಾಸಿಕ ಘಟನಾನಂತರ, ಸು. 4 ವರ್ಷಗಳ ಮೇಲೆ, 1836ರ ಕೊನೆಯಲ್ಲಿ ರೆವರೆಂಡ್ ಹರ್ಮನ್ ಮೊಗ್ಲಿಂಗ್ ಮಂಗಳೂರಿಗೆ ಬಂದ. ಕನ್ನಡ ಭಾಷೆಯನ್ನು ಕಲಿತ. ಎರಡು ವರ್ಷಗಳ ಅನಂತರ ಕೊಡಗಿಗೆ ಹೋಗಿ ಅಲ್ಲಿ ಉಪದೇಶಕನಾಗಿ ಕೆಲಸ ಮಾಡಿದ. 1843ರಲ್ಲಿ ಮಂಗಳೂರು ಸಮಾಚಾರವನ್ನು ತನ್ನ ಸಂಪಾದಕತ್ವದಲ್ಲಿ ಪಕ್ಷಪತ್ರಿಕೆಯಾಗಿ ಆರಂಭಿಸಿದ.

ಪತ್ರಿಕೆಯ ಉದ್ದೇಶ ಕುರಿತು ಮೊಗ್ಲಿಂಗ್ ನೀಡಿರುವ ವಿವರಣೆ:

ಈ ದೇಶವೆಂಬ ಮನೆಯಲ್ಲಿ ವಾಸಿಸುವ ಜನರು ಇಂದಿನ ಪರಿಯಂತರ ಹೊರಗಿನ ದೇಶಸ್ಥರ ಸಮಾಚಾರ ಮಾರ್ಗ ಮರ್ಯಾದೆಗಳನ್ನು ತಿಳಿಯದೇ ಕಿಟಕಿಯಿಲ್ಲದ ಬಿಡಾರದಲ್ಲಿ ಉಳಕೊಳ್ಳುವವರ ಹಾಗೆಯಿರುತ್ತಾ ಬಂದರು. ಅದು ಕಾರಣ ಹೊರಗಿನ ಕಾರ್ಯಗಳನ್ನು ಕಾಣುವ ಹಾಗೆಯೂ ವೊಳಗೆ ಸ್ವಲ್ಪ ಬೆಳಕು ಬೀರುವ ಹಾಗೆಯೂ ನಾಲ್ಕೂ ದಿಕ್ಕಿಗೆ ಕಿಟಕಿಗಳನ್ನು ಮಾಡುವ ಈ ಸಮಾಚಾರ ಕಾಗದವನ್ನು ಪಕ್ಷಕ್ಕೆವೊಂದು ಸಾರಿ ಶಿದ್ಧ ಮಾಡಿ ಅದನ್ನು ಓದಬೇಕೆಂದಿರುವೆಲ್ಲರಿಗೆ ಕೊಟ್ಟರೆ ಕಿಟಕಿಗಳನ್ನು ಮೋಡಿದ ಹಾಗಾಗಿರುವದು.

ಪ್ರಕಟವಾಗಲಿರುವ ಸಮಾಚಾರ ಸ್ವರೂಪ:

1. ವೂರ ವರ್ತಮಾನಗಳು 2. ಸರಕಾರಿ ನಿರೂಪಗಳು/ಕಾನೂನು 3. ಸುಬುದ್ಧಿಯನ್ನು ಹೇಳುವ ಸಮತಿಗಳು, ಹಾಡುಗಳು 4. ಕಥೆಗಳು 5. ಸರ್ವರಾಜ್ಯ ವರ್ತಮಾನಗಳು.

ವಾಚಕರವಾಣಿ ಆದ್ಯತೆ ಇತ್ತು. ಸುದ್ದಿಯ ಹರಹು ವ್ಯಾಪಕವಾಗಿತ್ತು. ಅದನ್ನು ಕೊಡುವಲ್ಲಿ ಇಂದಿನ ವೃತ್ತ ಪತ್ರಿಕೆಗಳ ಕ್ರಮ ಇತ್ತು. ಆಧುನಿಕ ಪತ್ರಿಕೋದ್ಯಮದ ಅನೇಕ ಲಕ್ಷಣಗಳನ್ನು ಕಾಣಬಹುದಾಗಿತ್ತು.

ಎಂಟು ತಿಂಗಳ ಕಾಲ ಈ ಪತ್ರಿಕೆಯನ್ನು ಮಂಗಳೂರಿನಿಂದ ನಡೆಸಿದ್ದ ಮೇಲೆ ಅದರ ಹೆಸರನ್ನು 'ಕಂನಡ ಸಮಾಚಾರ' ಎಂದು ಬದಲಿಸಿ ಬಳ್ಳಾರಿಯಿಂದ ಅದನ್ನು ಪ್ರಕಟಿಸಲಾರಂಭಿಸಿದ. ಈ ಪರಿವರ್ತನೆಗೆ ಕಾರಣವೇನೆಂಬುದನ್ನು ಆತ ಮಂಗಳೂರು ಸಮಾಚಾರದ ಹದಿನಾರನೆಯ ಸಂಚಿಕೆಯಲ್ಲಿ ವಿವರಿಸಿದ್ದಾನೆ.

ಮಂಗಳೂರು, ಮೈಸೂರು, ತುಮಕೂರು, ಬಳ್ಳಾರಿ, ಶಿವಮೊಗ್ಗ, ಹುಬ್ಬಳ್ಳಿ ಶಿರಸಿ ಹೊಂನಾವರ ಮೊದಲಾದ ಸ್ಥಳಗಳಲ್ಲಿ ಕೆಲವು ನೂರು ಮಂದಿ ಈ ಕಾಗದವನ್ನು ಈವರೆಗೆ ತೆಗೆದುಕೊಳ್ಳುತ್ತಾ ಬಂದರು. ಮೊದಲಿನ ನಂಬ್ರದ ಕಾಗದಗಳನ್ನು ಛಾಪಿಸಿ ಪ್ರಕಟನ ಮಾಡುವಾಗ್ಯೆ ನಾವು ಮಾಡಿದ ಆಲೋಚನೆ ಈ ಕಾಲದಲ್ಲಿ ಈ ದೇಸಸ್ಥರೊಳಗೆ ನಡಿಯುವದೊ ಏನೊ ಎಂದು ಸ್ವಲ್ಪ ಸಂದೇಹ ಪಡುತ್ತಿದ್ದೆವು. ಈಗ ಈ ದೇಸಸ್ಥರಲ್ಲಿ ಅನೇಕರಿಗೆ ಕನಡು ಭಾಷೆಯಲ್ಲಿ ಬರೆದ ಒಂದು ಸಮಾಚಾರ ಕಾಗದವನ್ನು ಓದುವುದರಲ್ಲಿ ಮತಿ ಆಗುವುದೆಂದು ನೋಡಿ ಸಂತೋಷದಿಂದ ಅದನ್ನು ವೃದ್ಧಿಮಾಡುವ ಪ್ರಯತ್ನದಿಂದ ಇನ್ನು ಮುಂದೆ ಅದನ್ನು ಕಲ್ಲಿನಲ್ಲಿ ಛಾಪಿಸದೆ ಬಳ್ಳಾರಿಯಲ್ಲಿ ಇರುವ ಅಕ್ಷರ ಛಾಪಖಾನೆಯಲ್ಲಿ ಅಚ್ಚುಪಡಿ ಮಾಡಲಿಕ್ಕೆ ನಿಶ್ಚೈಸಿದ್ದೇವೆ. ಆಮೇಲೆ ಕಂನಡ ಶೀಮೆಯ ನಾಲ್ಕು ದಿಕ್ಕುಗಳಲ್ಲಿಯಿರುವವರು ಶುದ್ಧವಾದ ಮೊಳೆ ಅಚ್ಚುಗಳಿಂದ ಆಗುವ ಬರಹವನ್ನು ಸುಲಭವಾಗಿ ಓದಬಹುದು, ಇದಲ್ಲದೆ.......ಹೆಚ್ಚು ವರ್ತಮಾನವನ್ನೂ ಚರಿತ್ರೆಗಳನ್ನೂ ವಿದ್ಯಾ ಪಾಠಗಳನ್ನೂ ಬುದ್ಧಿ ಮಾತುಗಳನ್ನೂ ಬರಿಯುವುದಕ್ಕೆ ಸ್ಥಳ ಸಿಕ್ಕುವುದು.

ಈ ವಿವರಣೆಯಲ್ಲಿ ಕೆಲವು ಸ್ವಾರಸ್ಯವಾದ ಅಂಶಗಳಿವೆ; ಪತ್ರಿಕೆಗೆ ಸಂಪಾದಕ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಪ್ರೋತ್ಸಾಹ ದೊರೆಯಿತು; ಕನ್ನಡ ವಾರ್ತಾಪತ್ರವನ್ನು ಓದುವುದರಲ್ಲಿ ಕನ್ನಡಿಗರು ಆಸಕ್ತಿಯನ್ನು ತೋರುತ್ತಿದ್ದರಾಗಿ ಅವರ ಈ ಆಸಕ್ತಿಯನ್ನು ಬೆಳೆಸುವ ಉದ್ದೇಶದಿಂದ ಪತ್ರಿಕೆಯ ಮುದ್ರಣಾದಿಗಳನ್ನು ಉತ್ತಮಗೊಳಿಸಲು ಬಯಸಿ ಕಲ್ಲಚ್ಚಿನ ಮುದ್ರಣದ ಬದಲು ಅಚ್ಚುಮೊಳೆಗಳನ್ನುಪಯೋಗಿಸಿ ಪತ್ರಿಕೆಯನ್ನು ಮುದ್ರಿಸಲು ನಿರ್ಧರಿಸಲಾಯಿತು. ಬಳ್ಳಾರಿಯಲ್ಲಿ ಆ ಸೌಕರ್ಯವಿರುವುದರಿಂದ ಪತ್ರಿಕಾ ಮುದ್ರಣವನ್ನು ಅಲ್ಲಿಗೆ ಬದಲಾಯಿಸಲಾಯಿತು.

ಪತ್ರಿಕೆಯ ಹೆಸರಿನಲ್ಲಿ ಬದಲಾವಣೆ ಮಾಡಿದ್ದೇಕೆ ಎಂಬುದನ್ನು ವಿವರಿಸುತ್ತ ಸಂಪಾದಕ ಮೊಗ್ಲಿಂಗ್, ಕನ್ನಡ ಮಾತನಾಡುವ ಎಲ್ಲ ಜನರಲ್ಲೂ ಇದು ಪ್ರಸಾರಕ್ಕೆ ಬರಲಿ ಎಂಬ ಆಶಯದಿಂದ ಹಾಗೆ ಮಾಡಲಾಯಿತೆಂದು ಹೇಳಿದ್ದಾನೆ. ಇದರ ಹಿಂದಿರುವ ಕನ್ನಡ ಪ್ರಜ್ಞೆ ಮೆಚ್ಚುವಂತಹುದು.

ಕಂನಡ ಸಮಾಚಾರದ ಮೊದಲ ಸಂಚಿಕೆ. 1844ನೆಯ ಮಾರ್ಚಿ ಒಂದನೆಯ ತಾರೀಖು ಬಳ್ಳಾರಿಯಿಂದ ಪ್ರಕಟವಾಯಿತು. ಈ ಸಂಚಿಕೆಯಿಂದ ಪತ್ರಿಕೆಯ ಪುಟಸಂಖ್ಯೆ ನಾಲ್ಕರಿಂದ ಎಂಟಕ್ಕೆ ಹೆಚ್ಚಿತು. ಬೆಲೆಯೂ ಅಷ್ಟೇ–ಹಿಂದೆ ಒಂದು ದುಡ್ಡು (ಹಿಂದಿನ ಎರಡು ಕಾಸು) ಇದ್ದದ್ದು ಎರಡು ದುಡ್ಡಿಗೆ ಏರಿತು.

ಹತ್ತು ತಿಂಗಳ ಕಾಲ ನಡೆದು ಈ ಪತ್ರಿಕೆ ನಿಂತುಹೋಯಿತು. ಬಳ್ಳಾರಿಯ ಪತ್ರಿಕೆಯ ಮೇಲ್ವಿಚಾರಣೆ ಮಿಷಿನರಿ ರೀಡ್ ನೋಡಿಕೊಳ್ಳುತ್ತಿದ್ದ, ಆತ ತೀರಿಕೊಂಡ ಮೇಲೆ (1842) ಕರ್ತೃತ್ವ ಶಾಲಿಯಾದ ಮಿಷನರಿ ಇರಲಿಲ್ಲ. ದೂರದ ಮಂಗಳೂರಿನಲ್ಲಿ ಕುಳಿತು ಮೊಗ್ಲಿಂಗ್ ವ್ಯವಸ್ಥಾಪಕನಾಗಿ ಲೇಖನ ಸಂಪಾದನಾ ಹೊಣೆಯನ್ನು ನಿರ್ವಹಿಸಲಾಗಲಿಲ್ಲ. ಆ ವರ್ಷಾಂತ್ಯಕ್ಕೆ ಪತ್ರಿಕೆಯ ಪ್ರಕಟಣೆ ನಿಂತಿತು.

ಕಂನಡ ಸಮಾಚಾರದ ಸಂಪಾದಕ ಮೊಗ್ಲಿಂಗ್ ಹುಟ್ಟು ಸಾಹಸಿ: ಹುಟ್ಟು ಪತ್ರಿಕೋದ್ಯಮಿ. ತಾನು ಆರಂಭಿಸಿದ ಪತ್ರಿಕೆಗಳು ನಿಂತುಹೋದ ಮೇಲೂ ಅವನು ಪತ್ರಿಕೋದ್ಯಮದಲ್ಲಿ ಆಸಕ್ತನಾಗಿದ್ದನೆಂದೂ ಮೈಸೂರು ಸರ್ಕಾರದ ಆಶ್ರಯದಲ್ಲಿ ಪ್ರಕಟವಾದ ವಾಗ್ವಿಧಾಯಿನಿ, ಉಡುಪಿಯಲ್ಲಿ ಆರಂಭವಾದ ಕ್ರೈಸ್ತ ಸಭಾ ಪತ್ರಿಕೆಗಳ ಸ್ಥಾಪನೆಗೆ ಸಹಾಯ ಮಾಡಿದನೆಂದೂ ಉಲ್ಲೇಖಗಳಿವೆ.

ಆ ಕಾಲದಲ್ಲಿ ಅಂದರೆ–ಸು. ನೂರ ಐವತ್ತು ವರ್ಷಗಳಿಗೂ ಹಿಂದೆ–ಸಂಪರ್ಕ ಸಾಧನಗಳು ಏನೇನೂ ಇಲ್ಲದಿದ್ದಾಗ ಮೊಗ್ಲಿಂಗ್ ತನ್ನ ಪತ್ರಿಕೆಗಳಲ್ಲಿ ಸ್ಥಳೀಯ ವಾರ್ತೆಗಳ ಜೊತೆಗೆ ದೇಶವಿದೇಶಗಳ ವಾರ್ತೆಯನ್ನೂ ಪ್ರಕಟಿಸುತ್ತಿದ್ದನೆಂಬುದು ಅವನ ವಾರ್ತಾಪ್ರಜ್ಞೆಗೆ ಸಾಕ್ಷಿಯಾಗಿದೆ. ಕಂನಡ ಸಮಾಚಾರವನ್ನು ಅವನು ಕ್ಯಾನರೀಸ್ ನ್ಯೂಸ್‌ಪೇಪರ್ ಎಂದು ಭಾಷಾಂತರಿಸಿದ್ದನೆಂಬುದನ್ನೂ ಗಮನಿಸಬೇಕು.

ಆಧುನಿಕ ಕನ್ನಡದಲ್ಲಿ ಗದ್ಯರಚನೆ ಮಾಡುವ ಕೃಷಿ ಆಗತಾನೆ ಆರಂಭವಾಗಿತ್ತಾದರೂ ಮೊಗ್ಲಿಂಗ್ ಅದನ್ನು ಪತ್ರಿಕೋದ್ಯಮಕ್ಕೆ ಪಳಗಿಸಿಕೊಳ್ಳಲು ಪ್ರಯತ್ನಿಸಿ, ಬಹುಮಟ್ಟಿಗೆ ಜಯಶಾಲಿಯಾದನೆಂಬುದು ಮೆಚ್ಚತಕ್ಕ ಅಂಶ.

ಕನ್ನಡನಾಡು ಹಲವಾರು ಆಡಳಿತಗಳಿಗೆ ಹಂಚಿ ಹೋಗಿದ್ದು, ಆಡುಮಾತಿನಲ್ಲಿ ಪ್ರಾದೇಶಿಕ ಪ್ರಭೇದಗಳು ಬಲವಾಗಿದ್ದ ಆ ಕಾಲದಲ್ಲಿ ಮೊಗ್ಲಿಂಗ್ ಆ ಅಡಚಣೆಗಳನ್ನು ದಾಟಿ, ಕನ್ನಡ ಜನತೆಯ ಮತ್ತು ಭಾಷೆಯ ಐಕ್ಯವನ್ನು ಗುರುತಿಸಿದನೆಂಬುದು ಕೂಡ ಮನನೀಯವಾದದ್ದು. ಕರ್ನಾಟಕದಲ್ಲಿ ಜುಲೈ 1 ಪತ್ರಿಕಾ ದಿನವನ್ನಾಗಿ ಆಚರಿಸಲಾಗುತ್ತಿದೆ.

**(ಎಂ.ಎನ್.ಸಿ.ಎಚ್.)**

**ಕಂಪಕಾರಿ :** ಕಾಂಕ್ರೀಟನ್ನು ಪೆಟ್ಟಿಸಲು ಉಪಯೋಗಿಸುವ ಸಾಧನ (ವೈಬ್ರೇಟರ್), ಕಾಂಕ್ರೀಟಿನ ಮೇಲ್ಭಾಗದಲ್ಲಿ, ಒಳಭಾಗದಲ್ಲಿ ಮತ್ತು ಸುತ್ತಲೂ ಉಪಯೋಗಿಸಲು ಮೂರು ಬಗೆಯ ಕಂಪಕ ಯಂತ್ರಗಳಿವೆ. ಇವನ್ನು ಉಪಯೋಗಿಸುವುದರಿಂದ ಕಾಂಕ್ರೀಟಿನ ಬಲ ಮತ್ತು ಘನಸಾಂದ್ರತೆ ಹೆಚ್ಚುತ್ತವೆ. ಚಿಕ್ಕಮಟ್ಟ ಕೆಲಸಗಳಿಗೂ ದೊಡ್ಡ ಕೆಲಸಗಳಾದ ನೀರಾವರಿ ಕಟ್ಟಡದ ಮತ್ತು ಸೇತುವೆ ಕಟ್ಟಡಗಳಲ್ಲೂ ಇವನ್ನು ಬಳಸುತ್ತಾರೆ. ಆದರೆ ಈ ಯಂತ್ರಗಳ ಬೆಲೆ ಹೆಚ್ಚು ಇರುವುದರಿಂದ ಕಾಂಕ್ರೀಟಿಗೆ ಬೀಳುವ ವೆಚ್ಚ ಹೆಚ್ಚು.

ಕಾಂಕ್ರೀಟನ್ನು ಕಟ್ಟಡದ ಕೆಲಸಗಳಲ್ಲಿ ಸುರಿದ ಕೂಡಲೆ ಕಂಪಕಾರಿಯನ್ನು ಮಧ್ಯದಲ್ಲಿ ಇಟ್ಟಾಗ ಕಾಂಕ್ರೀಟು ಕಂಪನಗಳ ಪ್ರಭಾವಕ್ಕೆ ಒಳಪಟ್ಟು ಚೆನ್ನಾಗಿ ಅಡಕವಾಗುತ್ತದೆ. ಕಾಂಕ್ರೀಟನ್ನು ರಸ್ತೆ ಕೆಲಸಗಳಲ್ಲಿ ಉಪಯೋಗಿಸಿದಾಗ ಕಂಪನಕಾರಿಗಳು ಮೇಲ್ಭಾಗದಿಂದ ಕಾಂಕ್ರೀಟನ್ನು ಗಟ್ಟಿಸುತ್ತವೆ.

**(ಜಿ.ಟಿ.ಜಿ.; ಎಂ.ಜಿ.ಎಸ್.)**

**ಕಂಪಣ್ಣ :** ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಐವರು ಸೋದರರಲ್ಲಿ ಎರಡನೆಯವ. ಉಳಿದ ನಾಲ್ವರು ಕ್ರಮವಾಗಿ ಹರಿಹರ, ಬುಕ್ಕ ಮಾರಪ್ಪ ಮತ್ತು ಮುದ್ದಪ್ಪ, ಒಂದನೆಯ ಸಂಗಮ, ತಾಯಿ ಶಾರದೆ, ಈತ ಕೊಡವಾಲೂರಿನ 1346–47ರ ಶಾಸನವೊಂದರ ಪ್ರಕಾರ ಪೂರ್ವ ಪಶ್ಚಿಮ ಸಮುದ್ರಾಧೀಶ್ವರನೆಂಬ ಬಿರುದು ಹೊತ್ತು, ಕಡಪ ಮತ್ತು ನೆಲ್ಲೂರು ಜಿಲ್ಲೆಗಳನ್ನೊಳಗೊಂಡ ತೆಲುಗು ಸೀಮೆಯಲ್ಲಿ ತನ್ನ ಅಣ್ಣ ಹರಿಹರನ ಸಮಕಾಲೀನನೂ ಮಾಂಡಲಿಕನೂ ಆಗಿ ಅಧಿಕಾರ ನಡೆಸುತ್ತಿದ್ದ. ರಾಜ್ಯವಿಸ್ತರಣೆಯ ಕಾರ್ಯದಲ್ಲಿ ಹರಿಹರನಿಗೆ ಇವನಿಂದ ಬಹಳ ಒತ್ತಾಸೆ ಸಿಕ್ಕಿತೆಂದು ಅನೇಕ ಆಧಾರಗಳಿಂದ ತಿಳಿದುಬರುತ್ತದೆ. ಬಹಳ ಮಟ್ಟಿಗೆ ಈತ ಸ್ವತಂತ್ರ್ಯನಾಗಿಯೇ ಆಳುತ್ತಿದ್ದಿರಬೇಕು. ಕಂಪಣ್ಣನ ಅನಂತರ ಇವನ ಮಗ ಸಂಗಮ ಆಳುತ್ತಿದ್ದನೆಂಬುದಾಗಿ ತಿಳಿಸುವ ಬಿಟ್ರಗುಂಟೆಯ ಶಾಸನದಿಂದ ಈ ಅಂಶ ವ್ಯಕ್ತಪಡುತ್ತದೆ. ಇಂದಿನ ನೆಲ್ಲೂರು ಅಥವಾ ವಿಕ್ರಮ ಸಿಂಹಪುರ ಈತನ ರಾಜಧಾನಿಯಾಗಿತ್ತು. ಸುಭದ್ರ ಕೋಟೆಯಿದ್ದ ಉದಯಗಿರಿ ಈ ರಾಜ್ಯಕ್ಕೆ ಸೇರಿದ್ದುದರಿಂದ ಉದಯಗಿರಿ ರಾಜ್ಯವೆಂಬ ಹೆಸರು ರೂಢಿಯಲ್ಲಿತ್ತು. ಬಹುಶಃ ಕೋಲಾರ ಜಿಲ್ಲೆಯ ಹಲವು ಭಾಗಗಳು ಈತನ ಆಡಳಿತಕ್ಕೆ ಸೇರಿದ್ದುವು. ಸಂಗಮ ಸೋದರರು ಹೊಯ್ಸಳ ಮುಮ್ಮಡಿ ಬಲ್ಲಾಳನ ಸೇವೆಯಲ್ಲಿದ್ದರು. ವಾರಂಗಲ್‌ವರೆಗೂ ಹಬ್ಬಿದ್ದ ಮುಸ್ಲಿಮ್ ದಾಳಿಗಳನ್ನು ತಡೆದು ದಕ್ಷಿಣ ದೇಶವನ್ನು ರಕ್ಷಿಸಬೇಕೆಂಬ ಉದ್ದೇಶದಿಂದ ಕಂಪಣ್ಣನನ್ನು ಪೂರ್ವತೀರದ ಮಾಂಡಲಿಕನನ್ನಾಗಿ ಹೊಯ್ಸಳ ಬಲ್ಲಾಳ ನೇಮಿಸಿದ್ದನೆಂದು ತಿಳಿದುಬರುತ್ತದೆ. ವೀರ ಕಂಪಣ್ಣನ ಮಂತ್ರಿ ಸೋಮಪ್ಪ ಅಲ್ಲಿಯ ದೇವಾಲಯಕ್ಕೆ ಭೂಮಿಯನ್ನು ದತ್ತಿ ಬಿಟ್ಟಿದ್ದನೆಂಬುದು ಟೇಕಲ್ ಶಾಸನದಿಂದ (1343) ಗೊತ್ತಾಗುತ್ತದೆ. ಮಹಾಮಂಡಲೇಶ್ವರ, ಅರಿರಾಯ ವಿಭಾಡ ಮತ್ತು ಭಾಷೆಗೆ ತಪ್ಪುವ ರಾಯರ ಗಂಡನೆಂದು ಕಂಪಣ್ಣನನ್ನು ಆ ಶಾಸನ ಹೊಗಳುತ್ತದೆ. ಹರಿಹರ ಬುಕ್ಕರಿಗೂ ಇವೇ ಬಿರುದುಗಳಿದ್ದು ಅವರ ಸಮಾನಸ್ಕಂಧತೆಯನ್ನು ತೋರಿಸುತ್ತದೆ. 1346ರಲ್ಲಿ ಈ ಐವರು ಸೋದರರೂ ಶೃಂಗೇರಿಗೆ ಭೇಟಿ ಕೊಟ್ಟು ಜಗದ್ಗುರು ಶ್ರೀ ವಿದ್ಯಾ ತೀರ್ಥರ ಅನುಗ್ರಹ ಪಡೆದರೆಂಬುದು ಅಲ್ಲಿಯ ಶಾಸನವೊಂದರಿಂದ ವ್ಯಕ್ತವಾಗುವ ವಿಚಾರ. 1346ರಲ್ಲಿ ಕಂಪಣ್ಣನ ಮುಖ್ಯಮಂತ್ರಿ ಮುದ್ರಾಚಿಡ್ಡಿ ಸಾಯಣ್ಣ ಒಡೆಯನೇ ಮಾಧವಾಚಾರ್ಯರ (ವಿದ್ಯಾರಣ್ಯ) ತಮ್ಮ ಸಾಯಣಾಚಾರ್ಯ. ಈತ ಇಮ್ಮಡಿ ಸಂಗಮನ ಅನಂತರ 1364–65ರಲ್ಲಿ ಬುಕ್ಕರಾಯನ ಪರವಾಗಿ ನೆಲ್ಲೂರು ಪ್ರಾಂತ್ಯಾಧಿಕಾರಿಯಾಗಿದ್ದಂತೆ ತಿಳಿದುಬರುತ್ತದೆ. ಸಾಯಣ್ಣನ ತಮ್ಮ ಭೋಗನಾಥ ಕಂಪಣ್ಣನ ನರ್ಮ ಸಚಿವನಾಗಿದ್ದ. ಕಂಪಣ್ಣ 1355ರಲ್ಲಿ ಮೃತನಾದ.

**(ಬಿ.ಕೆ.ಜಿ.)**

**ಕಂಪನಿ :** ಹಲವರು ಸೇರಿ ರಚಿಸಿಕೊಂಡ, ತನ್ನ ಸದಸ್ಯರಿಗೆ ಇರುವವಕ್ಕಿಂತ ಪ್ರತ್ಯೇಕವಾದ ಸ್ವತ್ತನ್ನೂ ಅಧಿಕಾರಗಳನ್ನೂ ಹೊಣೆಗಳನ್ನೂ ಪಡೆದಿರುವ ವಿಧಿಯುಕ್ತ ಸಂಸ್ಥೆ. ಸೈನ್ಯದಲ್ಲಿ ಒಬ್ಬ ಕ್ಯಾಪ್ಟನ್ನನ ಅಥವಾ ಮೇಜರನ ಆಡಳಿತದಲ್ಲಿರುವ ದಳವನ್ನು ಕಂಪನಿ ಎಂದು ಕರೆಯುವರಾದರೂ ಸಾಮಾನ್ಯ ಪರಿಭಾಷೆಯಲ್ಲಿ ಈ ಶಬ್ದವನ್ನು ಮೇಲೆ ತಿಳಿಸಿದ ಅರ್ಥದಲ್ಲಿ ಬಳಸಲಾಗುತ್ತಿದೆ. ಆಧುನಿಕ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳು ಕಂಪನಿಗಳು. ಅಮೆರಿಕದಲ್ಲಿ ಇವಕ್ಕೆ ಕಾರ್ಪೊರೇಷನುಗಳೆಂದು ಹೆಸರು. ವಾಣಿಜ್ಯೇತರ ಉದ್ದೇಶಗಳಿಗಾಗಿ ಸ್ಥಾಪಿತವಾದ ಸಂಸ್ಥೆಗಳನ್ನು ಭಾರತದಲ್ಲೂ ಬ್ರಿಟನ್ನಿನಲ್ಲೂ ಕಾರ್ಪೊರೇಷನ್ ಎಂದು ಕರೆಯಲಾಗುತ್ತದೆ **(ನೋಡಿ–ಕಾರ್ಪೊರೇಷನ್)**. ಆದರೆ ಈ ಎರಡು ಪದಗಳೂ ಸಮಾನಾರ್ಥಕಗಳೆಂಬಂತೆ ರೂಢಿಯಲ್ಲಿವೆ.

**ಇಂಗ್ಲೆಂಡಿನಲ್ಲಿ:** ಆಧುನಿಕ ವ್ಯವಹಾರ ಪ್ರಪಂಚದಲ್ಲಿ ಕಂಪನಿಯ ವ್ಯವಸ್ಥೆ ಬಹಳ ಮುಖ್ಯವಾದದ್ದು. ಇದು ಪಾಶ್ಚಾತ್ಯರಿಂದ ಭಾರತಕ್ಕೆ ಬಂದದ್ದು. ಬ್ರಿಟನಿನಲ್ಲಿ ಈ ಬಗೆಯ ಸಂಸ್ಥೆಗಳು ಅನೇಕ ಶತಮಾನಗಳಿಂದ ಬೆಳೆದುಬಂದಿವೆ. ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದು, ಇಲ್ಲಿ ತನ್ನ ಆಡಳಿತವನ್ನು ಸ್ಥಾಪಿಸಿದ ಈಸ್ಟ್ ಇಂಡಿಯ ಕಂಪನಿ **(ನೋಡಿ–ಈಸ್ಟ್–ಇಂಡಿಯ–ಕಂಪನಿ)** ಇಂಥ ಒಂದು ಹಳೆಯ ಸಂಸ್ಥೆ (1600). ಇಂಥ ಸಂಸ್ಥೆಗಳು ವ್ಯವಹಾರ ನಡೆಸುವ ಉದ್ದೇಶದಿಂದ ಆ ಕಾಲದಲ್ಲಿ ಬ್ರಿಟಿಷ್ ರಾಜರಿಂದ ವಿಶೇಷ ಸನ್ನದುಗಳನ್ನು ಪಡೆದಿದ್ದುವು. ಇವು ಯಾವ ಬಗೆಯ ವ್ಯಾಪಾರ ಬೇಕಾದರೂ ಮಾಡಬಹುದಿತ್ತು. ಈ ವಿಚಾರದಲ್ಲಿ ಇವಕ್ಕೆ ಯಾವ ಕಟ್ಟುಪಾಡೂ ಇರಲಿಲ್ಲ. ಇವುಗಳ ವ್ಯವಹಾರದಿಂದ ನಷ್ಟವೇನಾದರೂ ಸಂಭವಿಸಿದರೆ, ಇವುಗಳಿಂದ ಇತರರಿಗೆ ಸಲ್ಲಬೇಕಾದ ಸಾಲಗಳಿಗೆ ಸದಸ್ಯರು ಬಾಧ್ಯರಾಗುತ್ತಿರಲಿಲ್ಲ. ಈ ಕಾರಣದಿಂದ ಇಂಥ ಸಂಸ್ಥೆಗಳ ಮೇಲೆ ಆ ಕಾಲದಲ್ಲಿ ನಾನಾ ಬಗೆಯ ದೂರುಗಳು ಬರುತ್ತಿದ್ದುವು. ಇವುಗಳ ಸ್ವೇಚ್ಛೆಯ ವರ್ತನೆಯಿಂದ ಈ ಸಂಸ್ಥೆಗಳ ಸದಸ್ಯರ ಹಾಗೂ ಸಾಲಗಾರರ ಹಿತಗಳಿಗೆ ಧಕ್ಕೆ ಒದಗುತ್ತಿದೆಯೆಂದು ಅನೇಕರು ಆಕ್ಷೇಪಿಸುತ್ತಿದ್ದರು.

17–18ನೆಯ ಶತಮಾನಗಳಲ್ಲಿ ಸರ್ಕಾರದ ನೋಂದಣಿಯನ್ನು ಪಡೆಯದೆಯೇ ಅನೇಕ ಕಂಪನಿಗಳು ಇಂಗ್ಲೆಂಡಿನಲ್ಲಿ ಹುಟ್ಟಿಕೊಂಡುವು. ಇವುಗಳ ಬಂಡವಾಳ ಭಾಗಗಳನ್ನು–ಷೇರುಗಳನ್ನು–ಹೊಂದಿದ್ದ ಸದಸ್ಯರು ಈ ಷೇರುಗಳನ್ನು ಇತರರಿಗೆ ವರ್ಗಾಯಿಸಬಹುದಾಗಿತ್ತು. ಇಂಥ ಸಂಸ್ಥೆಗಳು ಶಾಸನಬದ್ಧವಾಗಿಲ್ಲದಿದ್ದುದರಿಂದ ಇವು ಜನರಲ್ಲಿ ಬಹಳ ಅಪ್ರಿಯವಾದುವು. ಇವುಗಳ ಮೇಲೆ ಸರ್ಕಾರದ ಹತೋಟಿ ಇರಲಿಲ್ಲವಾದುದರಿಂದ ಇವುಗಳಿಂದ ಅನೇಕರು ಮೋಸ ಹೋದರು. ಆದ್ದರಿಂದ ಇವನ್ನು ಹತೋಟಿಗೆ ಒಳಪಡಿಸಲು ಅನೇಕ ಕಾಯಿದೆಗಳು ಕ್ರಮೇಣ ಜಾರಿಗೆ ಬಂದುವು. ಕಂಪನಿಗಳು ಅನುಸರಿಸಬಹುದಾದಂಥ ಮಾದರಿ ನಿಬಂಧನೆಗಳು ರಚಿತವಾದುವು. ಪರಿಮಿತ ಹೊಣೆಗಾರಿಕೆ ತತ್ತ್ವವನ್ನು (ಲಿಮಿಟೆಡ್ ಲೈಯಬಿಲಿಟಿ ಪ್ರಿನ್ಸಿಪಲ್) ಒಳಗೊಂಡ ಕಂಪನಿಗಳು ಅಧಿಕ ಸಂಖ್ಯೆಯಲ್ಲಿ ಜನ್ಮ ತಾಳಿದುವು. ಇಂದು ದೊಡ್ಡ ಉದ್ಯಮಗಳಲ್ಲಿ ನಿರತವಾದ ಸಂಸ್ಥೆಗಳೆಲ್ಲ ಸಾಮಾನ್ಯವಾಗಿ ಕಂಪನಿಗಳೇ ಆಗಿವೆ.

**ಭಾರತದಲ್ಲಿ:** ಬ್ರಿಟನಿನಿಂದ ಭಾರತಕ್ಕೆ ಬಂದ ಕಂಪನಿ ವ್ಯವಸ್ಥೆ ಕಳೆದ ಸು. ನೂರು ವರ್ಷಗಳಲ್ಲಿ ಈ ದೇಶದಲ್ಲೂ ತಕ್ಕ ಮಟ್ಟಿಗೆ ಬೆಳೆದಿದೆ. ಭಾರತದಲ್ಲಿ ಕಂಪನಿಗಳ ಕಾಯಿದೆ ಮೊಟ್ಟಮೊದಲು ಜಾರಿಗೆ ಬಂದದ್ದು ಪ್ರ.ಶ. 1850ರಲ್ಲಿ ಕಂಪನಿಗಳ ಪರಿಮಿತ ಹೊಣೆಗಾರಿಕೆಯ ತತ್ತ್ವ ಅನುಷ್ಠಾನಕ್ಕೆ ಬಂದದ್ದು 1857ರಲ್ಲಿ. ಈ ಕಾಯಿದೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ನಿವಾರಿಸುವ ಸಲುವಾಗಿ ಇದಕ್ಕೆ ಆಗಿಂದಾಗ್ಗೆ ಅನೇಕ ತಿದ್ದುಪಡಿಗಳಾದುವು. ಇವನ್ನೆಲ್ಲ ಕ್ರೋಡೀಕರಿಸಿ. 1913ರಲ್ಲಿ ಒಂದು ಹೊಸ ಕಾಯಿದೆಯನ್ನು ಜಾರಿಗೆ ತರಲಾಯಿತು. ಹಳೆಯ ಕಾಯಿದೆಯನ್ನು ಸಂಪೂರ್ಣವಾಗಿ ಬದಲಾಯಿಸಿ ಹೊಸದಾಗಿ ರೂಪಿಸಲಾದ ಕಾಯಿದೆ ಬಂದದ್ದು 1956ರಲ್ಲಿ. ಅನಂತರವೂ ಹಲವು ಸಾರಿ ಅಗತ್ಯ ಕಂಡಂತೆಲ್ಲ ಈ ಹೊಸ ಕಾಯಿದೆಗೂ ಸೂಕ್ತ ತಿದ್ದುಪಡಿಗಳಾಗಿವೆ.

**ಕಂಪನಿಯ ಲಕ್ಷಣಗಳು:** ಏಕವ್ಯಕ್ತಿ ಸಂಸ್ಥೆ (**ನೋಡಿ–ಏಕವ್ಯಕ್ತಿ–ಸಂಸ್ಥೆ**) ಮತ್ತು ಪಾಲುದಾರಿಕೆ ಸಂಸ್ಥೆಗಳಿಗೂ (**ನೋಡಿ–ಪಾಲುದಾರಿಕೆ**) ಕಂಪನಿಗೂ ಬಹಳ ವ್ಯತ್ಯಾಸಗಳುಂಟು. ಆ ಎರಡು ಸಂಸ್ಥೆಗಳ ಹಲವು ನ್ಯೂನತೆಗಳನ್ನು ಇದು ನಿವಾರಿಸುತ್ತದೆ. ಏಕವ್ಯಕ್ತಿ ಸಂಸ್ಥೆಯ ಗಾತ್ರವೂ ವ್ಯವಹಾರವೂ ಬಹಳ ಪರಿಮಿತ, ಒಬ್ಬ ವ್ಯಕ್ತಿ ತರಬಹುದಾದ ಬಂಡವಾಳ, ಬುದ್ಧಿಶಕ್ತಿ ಮತ್ತು ಅನುಭವಗಳ ಪ್ರಮಾಣವನ್ನು ಅದು ಅವಲಂಬಿಸಿರುತ್ತದೆ. ಆದರೆ ಆತನ ಹೊಣೆಯೋ, ಅಪರಿಮಿತ, ಸಂಸ್ಥೆಯ ಗಾತ್ರ ಅತಿಯಾಗಿ ಬೆಳೆದಾಗ ಅದನ್ನು ಅವನೊಬ್ಬನೇ ನಿರ್ವಹಿಸಲಾರ, ಸಹಾಯಕ್ಕಾಗಿ ಆತ ನೇಮಿಸಿಕೊಳ್ಳಬಹುದಾದ ಜನ ಅವನ ನೌಕರರೇ ಹೊರತು ಸಹಭಾಗಿಗಳಲ್ಲ. ಒಬ್ಬನಿಗಿಂತ ಹೆಚ್ಚು ಮಂದಿ ಕೂಡಿ ಸ್ಥಾಪಿಸುವ ಪಾಲುದಾರಿಕೆ ಸಂಸ್ಥೆಯ ಬಂಡವಾಳ ಏಕವ್ಯಕ್ತಿ ಸಂಸ್ಥೆಯದಕ್ಕಿಂತ ಹೆಚ್ಚಾಗಿರುವುದು ಸಾಧ್ಯ. ಹೆಚ್ಚು ಜನರ ಬುದ್ಧಿಶಕ್ತಿ, ಅನುಭವ ಒದಗುವುದೂ ಸಾಧ್ಯ. ಆದರೆ ಆಧುನಿಕ ಕೈಗಾರಿಕೆ ವ್ಯವಸ್ಥೆಯಲ್ಲಿ ಅನಿವಾರ್ಯವಾದ ಬೃಹತ್ ಸಂಸ್ಥೆಗಳ ಸ್ಥಾಪನೆ ನಿರ್ವಹಣೆಗಳು ಪಾಲುದಾರಿಕೆ ಸಂಸ್ಥೆಗಳಿಂದಲೂ ಸಾಧ್ಯವಾಗದೆ ಹೋಗಬಹುದು. ಕೇವಲ ಕೆಲವೇ ಮಂದಿಯ ಬಂಡವಾಳ, ಸಾಮರ್ಥ್ಯ ಮತ್ತು ಅನುಭವಗಳ ಮಿತಿಯನ್ನೂ ಮೀರಿ ಸಂಸ್ಥೆ ಬೆಳೆದಾಗ ಈ ಗಾತ್ರಕ್ಕೆ ತಕ್ಕಂತೆ ಹೊಸ ಬಗೆಯ ಸಂಸ್ಥೆಯನ್ನೇ ಸ್ಥಾಪಿಸುವುದು ಅಗತ್ಯವಾಗುತ್ತದೆ. ಇಂಥ ಸಂಸ್ಥೆಯೇ ಕಂಪನಿ.

ಕಂಪನಿಯ ಲಕ್ಷಣಗಳನ್ನು ಸ್ಥೂಲವಾಗಿ ಹೀಗೆ ಹೇಳಬಹುದು : ಅದು ಸ್ವಪ್ರೇರಣೆಯಿಂದ ಬಂದ, ಹಲವರು ಕಲೆತ ಸಂಸ್ಥೆ. ಈ ಸಂಸ್ಥೆಗೂ ಒಂದು ಹೆಸರು ಇರುತ್ತದೆ. ಇದಕ್ಕೆ ಒಂದು ಮುದ್ರೆಯೂ ಉಂಟು. ಲಾಭ ಗಳಿಸುವುದಕ್ಕಾಗಿ ಯಾವುದಾದರೊಂದು ವ್ಯಾಪಾರ ಮಾಡುವುದೇ ಸಾಮಾನ್ಯವಾಗಿ ಇದರ ಉದ್ದೇಶ. ಇದರ ಬಂಡವಾಳ ಹಲವು ಷೇರುಗಳಾಗಿ ವಿಭಾಗವಾಗಿರುತ್ತದೆ. ಷೇರುಗಳನ್ನು ಹೊಂದಿರುವವರೇ ಕಂಪನಿಯ ಸದಸ್ಯರು. ಅವರು ತಮ್ಮ ಷೇರುಗಳನ್ನು ಇತರರಿಗೆ ವರ್ಗಾಯಿಸಬಹುದು. ಇದರ ಸದಸ್ಯರ ಹೊಣೆಗಾರಿಕೆ ಸೀಮಿತವಾದದ್ದು; ಎಂದರೆ ಕಂಪನಿಯ ಸಾಲಿಗರರಿಗೆ ಸದಸ್ಯರು ವೈಯಕ್ತಿಕವಾಗಿ ಬದ್ಧರಲ್ಲ. ಕಂಪನಿಯಲ್ಲಿ ಆ ಸದಸ್ಯರು ಎಷ್ಟು ಷೇರುಗಳನ್ನು ಹೊಂದಿರುತ್ತಾರೋ, ಆ ಷೇರುಗಳ ಸೂಚಿತ ಮೌಲ್ಯ ಅಥವಾ ಅಂಕಿತಮೌಲ್ಯಕ್ಕಿಂತ (ನಾಮಿನಲ್ ವ್ಯಾಲ್ಯೂ) ಹೆಚ್ಚು ನಷ್ಟಕ್ಕೆ ಬದ್ಧರಲ್ಲ, ಕಂಪನಿಯೆಂಬುದು ಒಂದು ವ್ಯಕ್ತಿಪ್ರಾಯವಾದ ಸಂಸ್ಥೆ. ಅದು ಕಾನೂನಿನ ಸೃಷ್ಟಿ. ಭೌತಿಕ ದೇಹ ಅದಕ್ಕಿಲ್ಲ. ಅದರ ಸದಸ್ಯರಿಂದ ಅದು ಸ್ಥಾಪಿಸಲ್ಪಟ್ಟಿದ್ದಾದರೂ ಆ ಸದಸ್ಯರಿಂದ ಭಿನ್ನವಾದ ಪ್ರತ್ಯೇಕವಾದ ವ್ಯಕ್ತಿತ್ವ ಅದಕ್ಕೆ ಉಂಟು. ಸದಸ್ಯರ ಸಾವು, ನಿರ್ಗಮನ, ಮನೋವೈಕಲ್ಯ, ದಿವಾಳಿತನ ಮುಂತಾದ ಘಟನೆಗಳಿಂದ ಸಂಸ್ಥೆಯ ಅಸ್ತಿತ್ವಕ್ಕೆ ಕುಂದು ಉಂಟಾಗುವುದಿಲ್ಲ. ಇಂಥ ಘಟನೆಗಳಿಂದ ಅಬಾಧಿತವಾಗಿ ಅದು ಮುಂದುವರಿಯಬಹುದಾದ ಸಂಸ್ಥೆ. ಕಂಪನಿಯ ಸದಸ್ಯರಿಗೂ ಕಂಪನಿಗೂ ವ್ಯತ್ಯಾಸ ಇರುವುದರಿಂದ ಅದರ ಸದಸ್ಯರು ಅದರ ಸಾಲಗಾರರೂ ಆಗಬಹುದು; ಅದರೊಂದಿಗೆ ವ್ಯವಹಾರ ನಡೆಸಬಹುದು. ಅವರು ಇತರರೊಂದಿಗೆ ಮಾಡುವ ವ್ಯವಹಾರದಿಂದ ಕಂಪನಿಗೆ ಯಾವ ಬಗೆಯ ಬಾಧ್ಯತೆಯೂ ಇರುವುದಿಲ್ಲ. ಏಕವ್ಯಕ್ತಿ ಸಂಸ್ಥೆ ಹಾಗೂ ಪಾಲುದಾರಿಕೆ ಸಂಸ್ಥೆಗಳಿಗೂ ಕಂಪನಿಗಳಿಗೂ ಇರುವ ಮುಖ್ಯ ವ್ಯತ್ಯಾಸಗಳಲ್ಲಿ ಇದೂ ಒಂದು.

ಕಂಪನಿಗಳನ್ನು ಮೂರು ರೀತಿಯಾಗಿ ಸ್ಥಾಪಿಸಬಹುದು :

1 ದೊರೆಯಿಂದ ಸನ್ನದು ಪಡೆದು ಸ್ಥಾಪಿಸಿದ ಸಂಸ್ಥೆ (ಉದಾಹರಣೆ: ಈಸ್ಟ್ ಇಂಡಿಯ ಕಂಪನಿ). ಸನ್ನದಿನಲ್ಲಿ ಸೂಚಿಸಿರುವ ನಿಬಂಧನೆಗಳಿಗೆ ಅನುಗುಣವಾಗಿ ಇದು ನಿರ್ವಹಿಸಲ್ಪಡುತ್ತದೆ. ಭಾರತ ಸ್ವಾತಂತ್ರ್ಯ ಪಡೆಯುವುದಕ್ಕೆ ಮುಂಚೆ ಇಂಥ ಸಂಸ್ಥೆಗಳು ಸ್ಥಾಪಿತವಾಗುವ ಸಾಧ್ಯತೆಯಿತ್ತು.

2 ಸರ್ಕಾರದ ವಿಶೇಷ ಕಾಯಿದೆಯ ಮೂಲಕ ಸ್ಥಾಪಿತವಾದ ಸಂಸ್ಥೆ (ಉದಾಹರಣೆ: ರಿಸರ್ವ್ ಬ್ಯಾಂಕ್ ಆಫ್ ಇಂಡಿಯ). ಈ ಸಂಸ್ಥೆಯ ನಿರ್ವಹಣೆಗೆ ಇದಕ್ಕೆ ಸಂಬಂಧಿಸಿದ ಕಾಯಿದೆಯಲ್ಲಿರುವ ವಿಧಿಗಳೇ ಆಧಾರ.

3 ಭಾರತದ ಕಂಪನಿಗಳ ಶಾಸನದ ಪ್ರಕಾರವಾಗಿ ಕೂಡುಬಂಡವಾಳ ಕಂಪನಿಗಳ ರಿಜಿಸ್ಟ್ರಾರಿಂದ (ವಿಲೇಖನಾಧಿಕಾರಿ ಅಥವಾ ನೋಂದಣಿ ಅಧಿಕಾರಿ) ಸಮ್ಮತಿ ಪಡೆದು ಸ್ಥಾಪಿತವಾದ ಕಂಪನಿಯೇ ರಿಜಿಸ್ಟರ್ಡ್ ಕಂಪನಿ ಅಥವಾ ನಿಬದ್ಧ ಸಂಸ್ಥೆ ಅಥವಾ ನೋಂದಣಿಯಾದ ಸಂಸ್ಥೆ. ಇಪ್ಪತ್ತಕ್ಕಿಂತ ಹೆಚ್ಚು ಸದಸ್ಯರಿರುವ ಎಲ್ಲ ಸಂಸ್ಥೆಗಳೂ ಕಂಪನಿಗಳ ಶಾಸನದ ಪ್ರಕಾರವೋ ಇನ್ನಾವುದಾದರೂ ತತ್ಸಮವಾದ ಶಾಸನದ ಪ್ರಕಾರವೋ ನಿಬದ್ಧವಾಗತಕ್ಕದ್ದೆಂಬುದು ಭಾರತ ಕಂಪನಿಗಳ ಕಾಯಿದೆಯ ಹನ್ನೊಂದನೆಯ ಕಲಮಿನ ವಿಧಿ (ಬ್ಯಾಂಕು ವ್ಯವಹಾರ ಮಾಡುವ ಸಂಸ್ಥೆಯಾಗಿದ್ದರೆ ಅದರಲ್ಲಿ ಹತ್ತಕ್ಕಿಂತ ಹೆಚ್ಚು ಸದಸ್ಯರು ಇದ್ದರೂ ಅದು ನೋಂದಣಿ ಮಾಡಿಸಿಕೊಳ್ಳಬೇಕು).

ನಿಬದ್ಧ ಅಥವಾ ನೋಂದಣಿಯಾದ ಕಂಪನಿಗಳಲ್ಲಿ ಎರಡು ವಿಧ: 1 ಪರಿಮಿತ ಹೊಣೆಗಾರಿಕೆಯುಳ್ಳವು; 2 ಅಪರಿಮಿತ ಹೊಣೆಗಾರಿಕೆಯುಳ್ಳವ. ಅಪರಿಮಿತ ಹೊಣೆಗಾರಿಕೆಯುಳ್ಳ ಕಂಪನಿಗಳ ಸದಸ್ಯರು ಕಂಪನಿಯ ಸಾಲಕ್ಕೆ ವೈಯುಕ್ತಿಕವಾಗಿ ಹೊಣೆಯಾಗಿರುತ್ತಾರೆ. ಇಂಥ ಕಂಪನಿಗಳು ಬಲು ವಿರಳ.

ಪರಿಮಿತ ಹೊಣೆಗಾರಿಕೆ ಕಂಪನಿಗಳಲ್ಲಿ ಎರಡು ವಿಧ. ಒಂದನೆಯದು ಖಾತರಿಯ ಪರಿಮಿತಿಯ ಕಂಪನಿ. ಸಂಸ್ಥೆಯ ಸದಸ್ಯರಲ್ಲಿ ಒಬ್ಬೊಬ್ಬರೂ ಅವರವರು ಒಪ್ಪಿದ ಒಂದು ಪರಮಾವಧಿ ಮೊತ್ತದವರೆಗೆ ಕಂಪನಿಯ ಋಣದ ಹೊಣೆ ಹೊರುವುದಾಗಿ ಖಾತರಿ ಕೊಡುತ್ತಾರೆ. ಇಂಥ ಸಂಸ್ಥೆ ಸಾಮಾನ್ಯವಾಗಿ ವ್ಯಾಪಾರದ ಉದ್ದೇಶದಿಂದ ಸ್ಥಾಪಿತವಾಗಿರುವುದಿಲ್ಲ. ಯಾವುದಾದರೊಂದು ವಿಶಿಷ್ಟ ಹಿತದ ರಕ್ಷಣೆಯೋ ಸಮಾಜ ಸೇವೆಯೋ ಲಾಭವೇ ಉದ್ದೇಶವಲ್ಲದ ಬೇರೆ ಯಾವುದಾದರೂ ಉದ್ಯಮವೋ ಇದರ ಗುರಿ. ಈ ಸಂಸ್ಥೆಗಳು ತಮ್ಮ ಹೆಸರಿನ ಕೊನೆಯಲ್ಲಿ ಕಂಪನಿ ಎಂಬ ಪದವನ್ನಾಗಲಿ, ಲಿಮಿಟೆಡ್ (ಪರಿಮಿತ) ಎಂಬ ಪದವನ್ನಾಗಲಿ ಹೊಂದಿರುವುದಿಲ್ಲ. ಇಂಥ ಕಂಪನಿಗಳು ಈಚೆಗೆ ವಿರಳವಾಗಿ ಸ್ಥಾಪಿತವಾಗುತ್ತಿವೆ.

ಪರಿಮಿತ ಹೊಣೆಗಾರಿಕೆಯ (ಲಿಮಿಟೆಡ್) ಸಂಸ್ಥೆ ಇನ್ನೊಂದು ವಿಧ. ಇದು ಸಾಮಾನ್ಯವಾಗಿ ವ್ಯಾಪಾರದ ಉದ್ದೇಶದಿಂದ ಸ್ಥಾಪಿತವಾಗುತ್ತದೆ. ಇದರ ಸದಸ್ಯರು ಇದರಲ್ಲಿ ಷೇರುಗಳನ್ನು ಹೊಂದಿರುತ್ತಾರೆ. ಈ ಷೇರುಗಳ ಅಂಕಿತಮೌಲ್ಯದ (ನಾಮಿನಲ್ ವ್ಯಾಲ್ಯು) ಅಥವಾ ಸೂಚಿತಮೌಲ್ಯದ ಹಣದವರೆಗೆ ಮಾತ್ರ ಸದಸ್ಯರು ಹೊಣೆ ಹೊರಬೇಕಾಗತಕ್ಕದ್ದು ಈ ಸಂಸ್ಥೆಯ ಮುಖ್ಯ ಲಕ್ಷಣ. ವ್ಯವಹಾರ ಪ್ರಪಂಚದಲ್ಲಿ ಇಂಥ ಸಂಸ್ಥೆಗಳೇ ಅಧಿಕ ಸಂಖ್ಯೆಯಲ್ಲಿವೆ.

ಪರಿಮಿತ ಹೊಣೆಗಾರಿಕೆಯ ಕಂಪನಿಗಳನ್ನು ಮತ್ತೆ ಎರಡು ರೀತಿಯಾಗಿ ವಿಂಗಡಿಸಬಹುದು: 1 ಸಾರ್ವಜನಿಕ (ಪಬ್ಲಿಕ್) ಕಂಪನಿ ಮತ್ತು 2 ಖಾಸಗಿ (ಪ್ರೈವೇಟ್) ಕಂಪನಿ. ಸಾರ್ವಜನಿಕ ಕಂಪನಿಯ ಲಕ್ಷಣಗಳು ಇವು: 1 ಕಂಪನಿಯ ವಿಧಿಗಳಿಗೆ ಅನುಸಾರವಾಗಿ ಸಾರ್ವಜನಿಕರು ಅದರ ಸದಸ್ಯರಾಗಿರಬಹುದು. 2 ಅದರಲ್ಲಿ ಕನಿಷ್ಠ ಪಕ್ಷ ಏಳು ಮಂದಿ ಸದಸ್ಯರಿರಬೇಕು; ಏಳಕ್ಕಿಂತ ಹೆಚ್ಚಾಗಿ ಎಷ್ಟು ಮಂದಿ ಸದಸ್ಯರು ಬೇಕಾದರೂ ಇರಬಹುದು. 3 ಸಾರ್ವಜನಿಕರು ಅದರ ಷೇರುಗಳನ್ನು ಪಡೆಯಬಹುದೆಂದು ವಿವರಣಪತ್ರದ (ಪ್ರಾಸ್ಪೆಕ್ಟಸ್) ಮೂಲಕ ಅದು ಆಹ್ವಾನಿಸುತ್ತದೆ. 4 ಅದಕ್ಕೆ ಕನಿಷ್ಠಪಕ್ಷ ಮೂವರಾದರೂ ನಿರ್ವಾಹಕರು (ಡೈರೆಕ್ಟರುಗಳು) ಇರತಕ್ಕದ್ದು. 5 ಅದರ ಷೇರುಗಳನ್ನು ಸದಸ್ಯರು ಇತರರಿಗೆ ವರ್ಗಾಯಿಸಬಹುದು.

ಖಾಸಗಿ ಕಂಪನಿಯ ಲಕ್ಷಣಗಳು ಈ ರೀತಿ ಇವೆ: 1 ಇದರ ಸದಸ್ಯರ ಸಂಖ್ಯೆ ಎರಡಕ್ಕಿಂತ ಕಡಿಮೆಯಾಗಿಯೂ ಐವತ್ತಕ್ಕಿಂತ ಹೆಚ್ಚಾಗಿಯೂ (ಈ ಸಂಖ್ಯೆಯಲ್ಲಿ ಆ ಕಂಪನಿಯ ನೌಕರರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾದುದಿಲ್ಲ) ಇರಬಾರದು. 2 ಇದರ ಷೇರುಗಳನ್ನು ವರ್ಗಾಯಿಸಲು ನಿರ್ಬಂಧಗಳಿರುತ್ತವೆ. 3 ಈ ಕಂಪನಿಯ ಷೇರು ಹಾಗೂ ಸಾಲಪತ್ರಕ್ಕೆ ಚಂದಾ ನೀಡಬೇಕೆಂದು ಸಾರ್ವಜನಿಕರನ್ನು ವಿವರಣ ಪತ್ರದ ಮೂಲಕ ಆಹ್ವಾನಿಸುವಂತಿಲ್ಲ. 4 ಇದು ಒಂದು ದೃಷ್ಟಿಯಲ್ಲಿ ಪಾಲುದಾರಿಕೆ ಸಂಸ್ಥೆಯಂತೆಯೇ ಇರುತ್ತದೆ. ಕ್ಲುಪ್ತವಾದ ಸಂಖ್ಯೆಯನ್ನೊಳಗೊಂಡು, ಸಾಮಾನ್ಯವಾಗಿ ಪರಸ್ಪರ ಪರಿಚಿತರೂ ಸಂಬಂಧಿಗಳೂ ಕೂಡಿ ಸ್ಥಾಪಿಸಿದ ಸಂಸ್ಥೆಯೇ ಖಾಸಗಿ ಕಂಪನಿ.

**ಕಂಪನಿಯ ಪ್ರವರ್ತನೆ (ಕಂಪನಿ ಪ್ರೊಮೋಷನ್) ಮತ್ತು ಪ್ರವರ್ತಕ (ಪ್ರೊಮೋಟರ್):** ಒಂದು ಕಂಪನಿಯನ್ನು ಸ್ಥಾಪಿಸುವುದು ಕಷ್ಟಸಾಧ್ಯವಾದ ಕೆಲಸ. ಆರಂಭಿಸಲಿರುವ ಉದ್ಯಮದ ಯಶಸ್ಸಿನಲ್ಲಿ ನಂಬಿಕೆಯಿಟ್ಟು ಆ ಕಂಪನಿಯ ಬಂಡವಾಳಕ್ಕೆ ಹಣ ಕೊಡಲು ಮುಂದೆಬರುವಂತೆ ಜನರನ್ನು ಆಕರ್ಷಿಸಬೇಕಾಗುತ್ತದೆ. ಲಾಭದಾಯಕವಾಗಬಹುದಾದಂಥ ಉದ್ಯಮವೊಂದನ್ನು ಕಂಡುಹಿಡಿದು ಅದರ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ, ಆ ಉದ್ಯಮಕ್ಕೆ ಅಗತ್ಯವಾದ ನಾನಾ ಅಂಶಗಳನ್ನು ಸಂಘಟಿಸಿ ವಿವರಗಳನ್ನಿತ್ತು, ಕಂಪನಿಯನ್ನು ಸ್ಥಾಪಿಸುವ ಕಾರ್ಯಕ್ಕೆ ಕಂಪನಿಯ ಪ್ರವರ್ತನೆ ಎಂದು ಹೆಸರು, ಈ ಕಾರ್ಯನಿರ್ವಹಣೆ ಮಾಡುವವನೇ ಕಂಪನಿಯ ಪ್ರವರ್ತಕ.

ಹೊಸ ಹೊಸ ಕಂಪನಿಗಳನ್ನು ಸ್ಥಾಪಿಸುವುದನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿರುವವರು ಅನೇಕರುಂಟು. ಕಂಪನಿಯ ಪ್ರವರ್ತನೆಯೇ ತಮ್ಮ ವೃತ್ತಿಯಾಗಿರದಿದ್ದರೂ ತಮ್ಮ ವ್ಯವಹಾರದ ಅಂಗವಾಗಿ ಆಗೊಮ್ಮೆ ಈಗೊಮ್ಮೆ ಕಂಪನಿಗಳನ್ನು ಸ್ಥಾಪಿಸಿ ಅದರಲ್ಲೇ ಆಸಕ್ತಿವಹಿಸಿ ಅದರ ಆಡಳಿತವನ್ನು ಮುಂದುವರಿಸಿಕೊಂಡು ಹೋಗುವವರೂ ಉಂಟು. ಒಂದು ಹೊಸ ಉತ್ಪಾದನೆಯ ವಿಧಾನವನ್ನು ಕಂಡುಹಿಡಿದವನು ಆ ವಿಧಾನವನ್ನು ಅಳವಡಿಸಿ ಉದ್ಯಮವೊಂದನ್ನು ಪ್ರಾರಂಭಿಸುವ ಸಲುವಾಗಿ ಒಂದು ಕಂಪನಿಯನ್ನು ಪ್ರವರ್ತಿಸಬಹುದು.

ಕಂಪನಿಯ ಪ್ರವರ್ತಕರು ಬಿಡಿ ವ್ಯಕ್ತಿಗಳೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ಒಬ್ಬರಿಗಿಂತ ಹೆಚ್ಚು ಜನ ಸೇರಿ ಇದಕ್ಕಾಗಿಯೇ ಒಂದು ಮಂಡಳಿಯನ್ನೋ ಪಾಲುದಾರಿಕೆ ಸಂಸ್ಥೆಯನ್ನೋ ಕಂಪನಿಯನ್ನೋ ಸ್ಥಾಪಿಸಿಕೊಳ್ಳಬಹುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕಂಪನಿಯ ಪ್ರವರ್ತನೆಯೇ ಉದ್ಯೋಗವಾಗಿ ಉಳ್ಳವರು ಅನೇಕರಿದ್ದಾರೆ. ಕಂಪನಿಗಳನ್ನು ಪ್ರಾರಂಭಿಸುವುದಷ್ಟೇ ಅವರ ಕೆಲಸ. ಮುಂದೆ ಅದನ್ನು ನಡೆಸುವುದು ಅವರ ಹೊಣೆಯಲ್ಲ. ಅದನ್ನು ಬೇರೆಯವರು ನಿರ್ವಹಿಸುತ್ತಾರೆ. ಆದರೆ ಭಾರತದಲ್ಲಿ ಈ ಬಗೆಯ ಪ್ರತ್ಯೇಕ ವರ್ಗವಿಲ್ಲ. ಕಂಪನಿಯನ್ನು ಪ್ರಾರಂಭಿಸಿದವರೇ ಸಾಮಾನ್ಯವಾಗಿ ಅದನ್ನು ನಡೆಸುವ ಕರ್ತವ್ಯ ನಿರ್ವಹಿಸುತ್ತಾರೆ.

ಪ್ರವರ್ತಕರ ಜವಾಬ್ದಾರಿ ಗುರುತರವಾದದ್ದು, ಜನ್ಮ ತಾಳಲಿರುವ ಕಂಪನಿಗೆ ಸರಿಯಾದ ರೂಪು ನೀಡುವವರು ಅವರು. ಅದು ಸರಿಯಾದವರ ಉಸ್ತುವಾರಿಯಲ್ಲಿ ಸಮರ್ಪಕವಾಗಿ ನಡೆಯುವಂತೆ ಮಾಡುವ ಭಾರ ಅವರದು. ಅವರು ಜನಿಸಲಿರುವ ಕಂಪನಿಗೆ ದ್ರೋಹ ಬಗೆಯದೆ ಅದರ ಆರ್ಥಿಕ ಹಿತರಕ್ಷಣೆ ಮಾಡುವ ನಂಬಿಕೆಗೆ ಅರ್ಹರಾದವರಾಗಿರಬೇಕು. ಭಾವಿ ಕಂಪನಿಯ ಪ್ರತಿನಿಧಿಗಳೂ ಅವರೇ. ಕಂಪನಿಯ ಪ್ರವರ್ತನೆಯ ಸಂದರ್ಭದಲ್ಲಿ ಅವರು ರಹಸ್ಯವಾಗಿ ಯಾವ ಲಾಭ ಗಳಿಸುವುದಕ್ಕೂ ಯತ್ನಿಸಬಾರದು. ಕಂಪನಿಯ ಭವಿಷ್ಯವೇ ಪ್ರವರ್ತಕರ ಕೈಯ್ಯಲ್ಲಿದೆಯೆಂದರೆ ಉತ್ಪ್ರೇಕ್ಷೆಯಲ್ಲ.

ಕಂಪನಿಯ ಪ್ರವರ್ತನೆಯ ಕಾರ್ಯದಲ್ಲಿ ಸಾಮಾನ್ಯವಾಗಿ ನಾಲ್ಕು ಘಟ್ಟಗಳಿರುತ್ತವೆ. ಮೊದಲನೆಯದಾಗಿ ಸ್ಥಾಪಿಸಬಹುದಾದ ಉದ್ಯಮದ ಕಲ್ಪನೆ. ಎರಡನೆಯದು ಅದರ ದೀರ್ಘ ಪರಿಶೀಲನೆ. ಮೂರನೆಯದು ಸಂಘಟನೆ ಅಥವಾ ಜೋಡಣೆ, ನಾಲ್ಕನೆಯದು ಹಣಶೇಖರಣೆ. ಯಾವುದಾದರೂ ಒಂದು ಉದ್ಯಮದಿಂದ ಲಾಭ ಗಳಿಸಬಹುದೆಂಬ ಭಾವನೆ ಯಾರಿಗಾದರೂ ಹೊಳೆಯಬಹುದು, ಆದರೆ ಈ ಕಲ್ಪನೆಯ ಕೂಸಿಗೆ ವಾಸ್ತವಿಕತೆಯ ರಕ್ತಮಾಂಸ ತುಂಬುವುದು ಬಹಳ ಅಗತ್ಯ. ಉದಾಹರಣೆಗೆ, ಒಂದು ಪದಾರ್ಥವನ್ನು ತಯಾರಿಸುವ ಹೊಸ ವಿಧಾನವೊಂದನ್ನು ಯಾರಾದರೂ ಕಂಡುಹಿಡಿಯಬಹುದು. ಆ ವಿಧಾನವನ್ನು ಕಂಡುಹಿಡಿದವನಿಗೆ ಅದರ ವಿಚಾರದಲ್ಲಿ ಬಹಳ ಮಮತೆಯೂ ಉತ್ಸಾಹವೂ ಇರುವುದು ಸಹಜ. ಆದರೆ ಅದು ಎಷ್ಟರಮಟ್ಟಿಗೆ ಲಾಭಪ್ರದವಾಗಿ ಅನುಷ್ಠಾನಯೋಗ್ಯವೆಂಬುದನ್ನು ಪರಿಶೀಲಿಸುವುದು ಅತ್ಯಾವಶ್ಯಕ. ಹೊಸ ವಿಧಾನದ ರಚನಕಾರನಿಗೆ ಈ ದೃಷ್ಟಿಯಲ್ಲಿ ಸಾಕಷ್ಟು ಅನುಭವ ಇರುವುದು ಬಹಳ ಅಪರೂಪ. ವ್ಯವಹಾರಚಾತುರ್ಯವೂ ಅವನಿಗೆ ಇಲ್ಲದೆ ಇರಬಹುದು. ಆದ್ದರಿಂದ ಆತ ಈ ವಿಚಾರದಲ್ಲಿ ನಿಪುಣನಾದ ಪ್ರವರ್ತಕನಿಗೆ ತನ್ನ ಅಭಿಪ್ರಾಯವನ್ನು ವಿವರಿಸಬೇಕಾಗುತ್ತದೆ. ಪ್ರವರ್ತಕ ಅದನ್ನು ಸ್ಥೂಲವಾಗಿ ಪರಿಶೀಲಿಸುತ್ತಾನೆ. ಅದನ್ನು ಕಾರ್ಯಗತಗೊಳಿಸಿದರೆ ಅದು ಲಾಭದಾಯಕವಾದೀತೆಂದು ಕಂಡುಬಂದರೆ ಆಗ ಅವನು ಅದನ್ನು ದೀರ್ಘವಾದ ಪರಿಶೀಲನೆಗೆ ಒಳಪಡಿಸುತ್ತಾನೆ. ಇದಕ್ಕೆ ಅಗತ್ಯವಾದ ಬಂಡವಾಳವೆಷ್ಟು, ಇದರಿಂದ ಬರಬಹುದಾದ ಲಾಭವೆಷ್ಟು ಎಂಬ ವಿಚಾರವಾಗಿ ಪರಿಣತರಿಂದ ದೀರ್ಘವರದಿಯನ್ನು ಪಡೆಯುತ್ತಾನೆ. ಉತ್ಪಾದನೆಗೆ ಸಂಬಂಧಿಸಿದ ಸಮಸ್ಯೆಗಳು ಯಾವುವು, ಮಾರಾಟದ ಸಾಧ್ಯಾಸಾಧ್ಯತೆಗಳೆಷ್ಟು, ಕಾರ್ಖಾನೆಯನ್ನು ಯಾವ ಸ್ಥಳದಲ್ಲಿ ಸ್ಥಾಪಿಸಿದರೆ ಅದರಿಂದ ಪರಮಾವಧಿಯ ಪ್ರಯೋಜನ ಪಡೆಯಬಹುದು, ಉತ್ಪಾದನೆಗೆ ಅಗತ್ಯವಾದ ಕಚ್ಚಾ ಸಾಮಗ್ರಿ, ಕಾರ್ಮಿಕರ ಪಡೆ, ವಾತಾವರಣ ಮುಂತಾದ ಸೌಕರ್ಯಗಳು ಎಷ್ಟರಮಟ್ಟಿಗೆ ಉಂಟು–ಎಂಬುದನ್ನೆಲ್ಲ ಆಯಾ ವಿಚಾರಗಳಿಗೆ ಸಂಬಂಧಪಟ್ಟ ತಜ್ಞರೊಂದಿಗೆ ಸಮಾಲೋಚಿಸಿ ಅವರ ಸಲಹೆ ಪಡೆಯುತ್ತಾನೆ.

ಈ ದೀರ್ಘ ಪರಿಶೀಲನೆಯ ಅನಂತರ ಮೂರನೆಯ ಘಟ್ಟ ಪ್ರಾರಂಭವಾಗುತ್ತದೆ. ಕಂಪನಿಯನ್ನು ಸ್ಥಾಪಿಸಬಹುದೆಂದು ಅವನಿಗೆ ಮನವರಿಕೆಯಾದ ಮೇಲೆ ಆತ ಅದಕ್ಕೆ ಬೇಕಾದ ಬಂಡವಾಳ ಸಂಗ್ರಹಣೆಯ ಯತ್ನದಲ್ಲಿ ತೊಡಗುತ್ತಾನೆ. ಕಂಪನಿಯಲ್ಲಿ ಅನುಸರಿಸಲಿರುವ ಹೊಸ ಉತ್ಪಾದನೆಯ ವಿಧಾನವನ್ನು ಇತರರು ಯಾರೂ ಅನುಕರಿಸದಂತೆ ಅದಕ್ಕೆ ಕಾನೂನಿನ ರಕ್ಷಣೆ ದೊರಕಿಸಿಕೊಳ್ಳುತ್ತಾನೆ. ಆ ಉದ್ಯಮಕ್ಕೆ ಬೇಕಾದ ನಿವೇಶನವೇ ಮುಂತಾದ ಆಸ್ತಿಗಳನ್ನು ಪಡೆಯಲು ಕ್ರಮಕೈಗೊಳ್ಳಬೇಕಾಗುತ್ತದೆ. ಕಂಪನಿಯ ಮುಖ್ಯ ನಿರ್ವಾಹಕರ ಹುದ್ದೆಗಳಿಗೆ ಯಾರನ್ನು ನೇಮಕ ಮಾಡಿಕೊಳ್ಳಬೇಕೆಂಬ ವಿಚಾರವಾಗಿ ತೀರ್ಮಾನ ಮಾಡುವುದು ಆವಶ್ಯ.

ಹೀಗೆ ಕಂಪನಿಯ ಸ್ಥಾಪನೆಗೆ ಅಗತ್ಯವಾದ ಅಂಶಗಳನ್ನೆಲ್ಲ ಜೋಡಿಸಿಕೊಂಡ ಮೇಲೆ ಪ್ರವರ್ತನೆಯ ಮುಂದಿನ ಘಟ್ಟದಲ್ಲಿ ತೊಡಗಬೇಕಾಗುತ್ತದೆ. ಸ್ಥಾಪಿಸಲಿರುವ ಕಂಪನಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನೊಳಗೊಂಡ ಒಂದು ವರದಿಯನ್ನು ಸಿದ್ಧಪಡಿಸಬೇಕು. ಸಾರ್ವಜನಿಕರಿಗೂ ಕಂಪನಿಯ ಷೇರುಗಳನ್ನು ಸಾರ್ವಜನಿಕರಿಗೆ ಮಾರುವ ಹೊಣೆ ಹೊರುವವರಿಗೂ ಇದನ್ನು ನೀಡಲಾಗುತ್ತದೆ.

ಕಂಪನಿಯನ್ನು ಸ್ಥಾಪಿಸುವ ಕಾರ್ಯದಲ್ಲಿ ಆತ ಇನ್ನೂ ಕೆಲವರೊಂದಿಗೆ ಸೇರಬೇಕಾಗುತ್ತದೆ. ಇವರೆಲ್ಲರೂ ಪ್ರವರ್ತಕರೇ, ಇವರೆಲ್ಲ ಸೇರಿ ತಮ್ಮ ರಾಜ್ಯದಲ್ಲಿರುವ ಕೂಡುಬಂಡವಾಳ ಕಂಪನಿಗಳ ರಿಜಿಸ್ಟ್ರಾರರಿಗೆ ಅರ್ಜಿ ಹಾಕಿಕೊಳ್ಳಬೇಕು. ಇವರು ತಮ್ಮ ಕಂಪನಿಯ ಸ್ವರೂಪ ಹಾಗೂ ಆಡಳಿತಗಳನ್ನು ವಿವರಿಸಿರುವ ಎರಡು ದಸ್ತಾವೇಜುಗಳನ್ನು ತಯಾರಿಸಿ ರಿಜಿಸ್ಟ್ರಾರರಿಗೆ ಸಲ್ಲಿಸಬೇಕಾಗುತ್ತದೆ. ಸಂಘದ ಷರತ್ತುಗಳ ಲಿಖಿತ (ಮೆಮೊರಾಂಡಂ ಆಫ್ ಅಸೋಸಿಯೇಷನ್) ಎಂಬುದು ಮೊದಲನೆಯದು. ಸಂಘದ ವಿಧಿಗಳು (ಆರ್ಟಿಕಲ್ಸ್ ಆಫ್ ಅಸೋಸಿಯೇಷನ್) ಎರಡನೆಯದು.

**ಸಂಘದ ಷರತ್ತುಗಳ ಲಿಖಿತ :** ಇದು ಬಹಳ ಮುಖ್ಯವಾದ ದಸ್ತಾವೇಜು, ಇದೇ ಕಂಪನಿಯ ಪ್ರಣಾಳಿಕೆ, ಕಂಪನಿಯ ಸ್ಥಾಪನೆಗೆ ಮುಖ್ಯವಾದ ಅಂಶಗಳನ್ನೆಲ್ಲ ಇದು ಒಳಗೊಂಡಿರುತ್ತದೆ. ಕಂಪನಿಯ ಹೆಸರು, ಅದರ ಅಧಿಕೃತ ಕಚೇರಿ ಇರುವ ರಾಜ್ಯದ ಹೆಸರು, ಅದರ ಉದ್ದೇಶ–ಇವನ್ನು ಮುಖ್ಯವಾಗಿ ಇಲ್ಲಿ ನಮೂದಿಸಬೇಕಾಗುತ್ತದೆ.

ಕಂಪನಿಗೆ ಯಾವ ಹೆಸರನ್ನು ಬೇಕಾದರೂ ಇಡಬಹುದು. ಆದರೆ ಆಗಲೇ ಇರತಕ್ಕ ಯಾವ ಕಂಪನಿಯ ಹೆಸರನ್ನೂ ಮತ್ತೆ ಇಡಲಾಗದು. ಅದನ್ನು ಹೋಲುವಂಥ ಹೆಸರನ್ನಿಡಲು ಅವಕಾಶವಿಲ್ಲ. ಹೆಸರಿನ ಕೊನೆಯಲ್ಲಿ ಲಿಮಿಟೆಡ್ ಎಂಬ ಪದ ಇರತಕ್ಕದ್ದು. ಅದು ಖಾಸಗಿ ಕಂಪನಿಯಾದ ಪಕ್ಷದಲ್ಲಿ ಪ್ರೈವೇಟ್ ಲಿಮಿಟೆಡ್ ಎಂಬುದಾಗಿ ಸೇರಿಸತಕ್ಕದ್ದು.

ಕಂಪನಿಯ ಉದ್ದೇಶ ಬಹಳ ಮುಖ್ಯ. ಅದರ ಅಧಿಕಾರವ್ಯಾಪ್ತಿಗೆ ಉದ್ದೇಶವೇ ಆಧಾರ, ಇದನ್ನು ವಿವರಿಸುವಾಗ ಬಹಳ ಎಚ್ಚರಿಕೆ ಇರಬೇಕು. ಕಂಪನಿಯ ಉದ್ದೇಶ ಸ್ಪಷ್ಟವಾಗಿರಬೇಕು; ಖಚಿತವಾಗಿರಬೇಕು. ಮುಂದೆ ಕಂಪನಿಯ ಮೂಲಭೂತವಾದ ಚಟುವಟಿಕೆಗಳು ಬೆಳೆಯಲು ಸಾಕಷ್ಟು ಅವಕಾಶವಿರುವಂತೆ ಅದರ ಉದ್ದೇಶಗಳ ವಿವರಣೆ ಇರಬೇಕು. ಆದರೆ ಅದು ತೀರ ವ್ಯಾಪಕವಾಗಬಾರದು.

ಷೇರುದಾರರು ಷೇರುಗಳ ಮೇಲೆ ಇನ್ನೂ ಕೊಟ್ಟಿಲ್ಲದ ಹಣವಷ್ಟಕ್ಕೆ ಅವರ ಹೊಣೆಗಾರಿಕೆ ಸೀಮಿತವಾಗಿದೆಯೆಂಬ ಹೇಳಿಕೆಯನ್ನು ಸಂಘದ ಷರತ್ತುಗಳಲ್ಲಿ ಸೇರಿಸಬೇಕು.

ಇದರ ಇನ್ನೊಂದು ಮುಖ್ಯ ವಿಭಾಗವೆಂದರೆ ಬಂಡವಾಳವನ್ನು ಕುರಿತ ವಿಚಾರದ್ದು, ಕಂಪನಿ ಪಡೆಯಬಯಸುವ ಅಧಿಕೃತಬಂಡವಾಳದ ಮೊಬಲಗನ್ನೂ ಷೇರುಗಳಾಗಿ ಅದರ ವಿಂಗಡಣೆಯನ್ನೂ ಅದರಲ್ಲಿ ಸೂಚಿಸಬೇಕು.

ಸಂಘದ ಷರತ್ತುಗಳ ಲಿಖಿತದಲ್ಲಿ ಕಂಪನಿಯ ಪ್ರವರ್ತಕರ ಹೆಸರುಗಳೂ ಅವರ ವಿಳಾಸಗಳೂ ಅವರು ಕಂಪನಿಯಿಂದ ಪಡೆಯುವ ಷೇರುಗಳ ಸಂಖ್ಯೆಗಳೂ ಅವರ ಸಹಿಗಳೂ ಇರಬೇಕು. ಇವರೇ ಕಂಪನಿಯ ಪ್ರಥಮ ನಿರ್ವಾಹಕರಾಗುತ್ತಾರೆ.

**ಸಂಘದ ವಿಧಿಗಳು:** ಕಂಪನಿಯ ಆಂತರಿಕ ರಚನೆಯ ಸ್ವರೂಪವೂ ಕಂಪನಿಯ ನಿರ್ವಹಣೆಯಲ್ಲಿ ಅನುಸರಿಸಬೇಕಾದ ನಿಬಂಧನೆಗಳೂ ಇಲ್ಲಿ ಉಲ್ಲೇಖಿತವಾಗಿರುತ್ತವೆ. ಕಂಪನಿಯ ನಿರ್ವಾಹಕರ ಅಧಿಕಾರ, ಕಂಪನಿಯ ಸಭೆಗಳನ್ನು ನಡೆಸುವ ವಿಧಾನ, ಮತನೀಡಿಕೆ, ಸಭೆಯನ್ನು ನಡೆಸಲು ಹಾಜರಿರಬೇಕಾದ ಸದಸ್ಯರ ಕನಿಷ್ಠಸಂಖ್ಯೆ, ಷೇರುಗಳ ವರ್ಗಾವಣೆ ಹಾಗೂ ರದ್ದುಮಾಡುವ ವಿಧಾನಗಳು, ಕಂಪನಿಯ ಲೆಕ್ಕ ಇಡುವ ರೀತಿ–ಮುಂತಾದವುಗಳಿಗೆ ಸಂಬಂಧಿಸಿದ ನಿಬಂಧನೆಗಳು ಇಲ್ಲಿರುತ್ತವೆ.

ಸಂಘದ ವಿಧಿಗಳನ್ನು ಪ್ರತ್ಯೇಕವಾಗಿ ತಯಾರಿಸದೆ ಇದ್ದರೆ ಭಾರತೀಯ ಕಂಪನಿಗಳ ಶಾಸನದ ಎ ತಃಖ್ತೆಯಲ್ಲಿರುವ (ಟೇಬಲ್ ಎ) ಮಾದರಿ ವಿಧಿಗಳನ್ನೇ ಅನುಸರಿಸಬಹುದು.

ಸಂಘದ ಷರತ್ತುಗಳನ್ನೂ ವಿಧಿಗಳನ್ನೂ ಅಚ್ಚು ಮಾಡಿಸಬೇಕು. ಇವುಗಳಲ್ಲಿ ಸೂಚಿತವಾಗಿರುವ ನಿಯಮಗಳಿಗೆ ಕಂಪನಿ ಬದ್ಧವಾಗಿರುತ್ತದೆ; ಸದಸ್ಯರೂ ಬದ್ಧರಾಗಿರುತ್ತಾರೆ. ಇವು ಸಾರ್ವಜನಿಕ ದಾಖಲೆಗಳು. ಕಂಪನಿಯೊಂದಿಗೆ ವ್ಯವಹಾರ ಮಾಡಬಯಸುವ ಯಾರಾದರೂ ಇವನ್ನು ಪರಿಶೀಲಿಸಬಹುದು.

ಪ್ರವರ್ತಕರು ಇವುಗಳ ಜೊತೆಗೆ ಕಂಪನಿಯ ನಿರ್ವಾಹಕರ (ಡೈರಕ್ಟರುಗಳ) ಪಟ್ಟಿಯನ್ನೂ ಅವರು ನಿರ್ವಾಹಕರಾಗಿರಲು ನೀಡಿರುವ ಲಿಖಿತ ಒಪ್ಪಿಗೆಯನ್ನೂ ಕಂಪನಿಯ ಬಂಡವಾಳದ ಸೂಚಿತ ಮೌಲ್ಯದ ಪಟ್ಟಿಯನ್ನೂ ಕಂಪನಿಯನ್ನು ನಡೆಸಲು ಒಪ್ಪಿರುವ ಮ್ಯಾನೇಜಿಂಗ್ ಏಜೆಂಟರು ಅಥವಾ ಕಾರ್ಯದರ್ಶಿಗಳು ಅಥವಾ ಕೋಶಾಧಿಕಾರಿಗಳೊಂದಿಗೆ ಮಾಡಿಕೊಂಡಿರಬಹುದಾದ ಕರಾರನ್ನೂ ಜಾಯಿಂಟ್–ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರರಿಗೆ ಸಲ್ಲಿಸಬೇಕು. ಕಂಪನಿಗಳ ಶಾಸನದ ವಿಧಿಗಳಿಗೂ ಅದಕ್ಕೊಳಪಟ್ಟ ನಿಬಂಧನೆಗಳಿಗೂ ಅನುಗುಣವಾಗಿ ಎಲ್ಲ ಕ್ರಮಗಳನ್ನೂ ಕೈಗೊಂಡಿದೆಯೆಂದು ಕಂಪನಿಯ ನಿರ್ವಾಹಕರ ಪೈಕಿ ಒಬ್ಬನೋ ತತ್ಸಮನಾದ ಬೇರಾವ ಅಧಿಕಾರಿಯೋ ಒಂದು ಹೇಳಿಕೆಯನ್ನು ಕೊಡಬೇಕು.

ಕಂಪನಿಯ ಪ್ರವರ್ತನೆಗೆ ಸಂಬಂಧಿಸಿದ ಎಲ್ಲ ಕ್ರಮಗಳನ್ನೂ ಅನುಸರಿಸಿದೆಯೆಂಬುದನ್ನು ಮನವರಿಕೆ ಮಾಡಿಕೊಂಡ ಮೇಲೆ ಕಂಪನಿಗಳ ರಿಜಿಸ್ಟ್ರಾರರು ಈ ಕಂಪನಿಯ ಹೆಸರನ್ನು ತಮ್ಮ ರಿಜಿಸ್ಟರಿನಲ್ಲಿ ದಾಖಲು ಮಾಡಿಕೊಳ್ಳುವರು. ಕಂಪನಿಯ

ದಾಖಲುಪತ್ರವನ್ನು ಅಥವಾ ನೋಂದಣಿ ಪತ್ರವನ್ನು ಅಥವಾ ಜನ್ಮಪತ್ರವನ್ನು (ಸರ್ಟಿಫಿಕೇಟ್ ಆಫ್ ಇನ್‌ಕಾರ್ಪೊರೇಷನ್) ನೀಡುವರು. ಕಂಪನಿ ಜನ್ಮ ತಳೆಯುತ್ತದೆ. ಅದು ಖಾಸಗಿ ಕಂಪನಿಯಾಗಿದ್ದ ಪಕ್ಷದಲ್ಲಿ ಕೂಡಲೇ ನೇರವಾಗಿ ಉದ್ಯಮವನ್ನಾರಂಭಿಸಬಹುದು. ಅದು ಸಾರ್ವಜನಿಕ ಕಂಪನಿಯಾಗಿದ್ದರೆ ಅದಕ್ಕೆ ಆಗಲೇ ಉದ್ಯಮವನ್ನಾರಂಭಿಸುವ ಹಕ್ಕು ಬರುವುದಿಲ್ಲ. ಅದಕ್ಕೆ ಮುಂಚೆ ಪ್ರವರ್ತಕರು ಇನ್ನು ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

**ವಿವರಣಪತ್ರ:** ಪ್ರತಿಯೊಂದು ಸಾರ್ವಜನಿಕ ಕಂಪನಿಯೂ ಸಾರ್ವಜನಿಕರನ್ನು ಆ ಕಂಪನಿಯ ಬಂಡವಾಳ ಭಾಗಗಳಿಗೆ-ಎಂದರೆ ಷೇರುಗಳಿಗೆ-ಚಂದಾ ಸಲ್ಲಿಸಲು ಆಹ್ವಾನಿಸಬೇಕಾಗುತ್ತದೆ; ಕಂಪನಿಯ ಜನ್ಮವಾರ್ತೆಯನ್ನು ಪ್ರಚುರಪಡಿಸಬೇಕಾಗುತ್ತದೆ. ಇದಕ್ಕಾಗಿ ಅದು ಇನ್ನೊಂದು ದಾಖಲೆಯನ್ನು ರಚಿಸಿ ಅದನ್ನು ಸಾರ್ವಜನಿಕರಿಗೆ ನೀಡಬೇಕು. ಇದೇ ವಿವರಣಪತ್ರ. ಕಂಪನಿಯ ಭವಿಷ್ಯವನ್ನೂ ಅದರ ಷೇರುಗಳನ್ನು ಪಡೆಯುವುದರಿಂದ ಲಭಿಸುವ ಉಪಯೋಗಗಳನ್ನೂ ಅದರಲ್ಲಿ ವಿವರಿಸಲಾಗುತ್ತದೆ. ಸಂಘದ ಷರತ್ತುಗಳ ಲಿಖಿತದಲ್ಲಿರುವ ಅಂಶಗಳನ್ನೇ ಅಲ್ಲದೆ, ಸಾರ್ವಜನಿಕರು ಈ ಕಂಪನಿಯ ಷೇರುಗಳನ್ನು ಕೊಳ್ಳಬೇಕೆಂಬ ತೀರ್ಮಾನಕ್ಕೆ ಬರಲು ಅಗತ್ಯವಾದ ಎಲ್ಲ ವಿವರಗಳನ್ನೂ ಇದರಲ್ಲಿ ಕೊಟ್ಟಿರುತ್ತದೆ. ವಿವರಣಪತ್ರದಲ್ಲಿರುವ ಅಂಶಗಳು ಖಚಿತವಾಗಿರಬೇಕು. ಸತ್ಯವಾಗಿರಬೇಕು; ಅದರಲ್ಲಿ ಉತ್ಪ್ರೇಕ್ಷೆಯಿರಬಾರದು. ಸಾರ್ವಜನಿಕರು ತೀರ್ಮಾನಕ್ಕೆ ಬರಲು ಅಗತ್ಯವಾದ ಯಾವ ವಿಷಯವನ್ನೂ ಮುಚ್ಚಿಡಬಾರದು. ಭಾವೀ ಷೇರುದಾರರ ಮನಸ್ಸಿನಲ್ಲಿ ತಪ್ಪು ಕಲ್ಪನೆಗೆ ಎಡೆ ಕೊಡಬಹುದಾದ ರೀತಿಯಲ್ಲಿ ಅದು ಇರಬಾರದು. ಹಾಗೇನಾದರೂ ಆದ ಪಕ್ಷದಲ್ಲಿ ಸಂಬಂಧಪಟ್ಟವರು ಮುಂದೆ ಕಂಪನಿಯ ಮೇಲೆ ಕಟ್ಟಳೆ ನಡೆಸಬಹುದು. ಷೇರುಧನಕ್ಕಾಗಿ ಅವರು ಕೊಟ್ಟ ಹಣವನ್ನು ವಾಪಸ್ಸು ಕೊಡಬೇಕೆಂದು ಕೇಳಬಹುದು. ಆದ್ದರಿಂದ ಕಂಪನಿಯ ವಿವರಣಪತ್ರವನ್ನು ಬಹಳ ಎಚ್ಚರಿಕೆಯಿಂದ ರಚಿಸಬೇಕು. ಕಂಪನಿಯ ನಿರ್ವಾಹಕರು, ವ್ಯವಸ್ಥಾಪಕ ನಿರ್ವಾಹಕರು, ಕಂಪನಿ ನೀಡಲಿರುವ ವಿವಿಧ ಬಗೆಯ ಷೇರುಗಳು, ಈ ಷೇರುಗಳನ್ನು ಕೊಳ್ಳುವ ಭರವಸೆ ಕೊಟ್ಟಿರುವವರ (ಅಂಡರ್‌ರೈಟರ್ಸ್) ಹೆಸರುಗಳೇ ಮುಂತಾದ ವಿವರಗಳು. ಷೇರು ಕೊಳ್ಳಲು ಬಯಸಿ ಅರ್ಜಿ ಸಲ್ಲಿಸಿದವರಿಗೆ ಷೇರು ಹಂಚುವುದಕ್ಕೆ (ಅಲಾಟ್) ಪೂರ್ವಭಾವಿಯಾಗಿ ಕಂಪನಿಗೆ ಬಂದಿರಲೇಬೇಕಾದ ಕನಿಷ್ಠಚಂದಾಹಣ (ಮಿನಿಮಮ್ ಸಬ್‌ಸ್ಕ್ರಿಪ್ಷನ್), ಕಂಪನಿ ಕೊಂಡ ಸ್ವತ್ತನ್ನು ಅದಕ್ಕೆ ಮಾರಿದವರ ಹೆಸರುಗಳು, ಆ ಸ್ವತ್ತಿನ ಬೆಲೆಯನ್ನು ಅವರಿಗೆ ಕೊಡುವ ವಿಧಾನ, ಕಂಪನಿಯ ಸ್ಥಾಪನೆಯ ಸಂದರ್ಭದಲ್ಲಿ ಅಗತ್ಯವಾದ ಪೂರ್ವಭಾವಿ ಖರ್ಚುಗಳು (ಪ್ರಿಲಿಮಿನರಿ ಎಕ್ಸ್‌ಪೆನ್ಸಸ್) ಕಂಪನಿಯ ನಿರ್ವಾಹಕರಿಗೆ ಕಂಪನಿಯಲ್ಲಿರಬಹುದಾದ ವಿಶೇಷ ಹಿತಾಸಕ್ತಿಗಳು ಮುಂತಾದ ವಿವರಗಳೂ ಇದರಲ್ಲಿ ಅಡಕವಾಗಿರುತ್ತವೆ. ಕಂಪನಿಯ ನಿರ್ವಾಹಕರು (ಅಥವಾ ನಿರ್ವಾಹಕರಾಗಲಿರುವವರ) ಸಹಿ ಹಾಕಿ, ದಿನಾಂಕವನ್ನೂ ಹಾಕಬೇಕು. ಇದನ್ನು ಕಂಪನಿಗಳ ರಿಜಿಸ್ಟ್ರಾರರಿಗೆ ಸಲ್ಲಿಸಬೇಕು. ವಿವರಣಪತ್ರವನ್ನು ಸಲ್ಲಿಸಬೇಕಾದುದಿಲ್ಲವೆಂದು ಕಂಪನಿ ತೀರ್ಮಾನಿಸಿದ ಪಕ್ಷದಲ್ಲಿ, ವಿವರಣಪತ್ರದ ಬದಲು ಒಂದು ತಃಖ್ತೆಯನ್ನು (ಸ್ಟೇಟ್‌ಮೆಂಟ್ ಇನ್ನ ಲ್ಯೂ ಆಫ್ ಪ್ರಾಸ್ಪೆಕ್ಟಸ್) ತಯಾರಿಸಿ ಎಲ್ಲ ನಿರ್ವಾಹಕರೂ ಇದಕ್ಕೆ ಸಹಿ ಹಾಕಿ, ಇದನ್ನೇ ರಿಜಿಸ್ಟ್ರಾರರಿಗೆ ಸಲ್ಲಿಸಬೇಕು.

**ಷೇರುಗಳ ಹಂಚಿಕೆ (ಅಲಾಟ್‌ಮೆಂಟ್):** ವಿವರಣಪತ್ರವನ್ನು ಪ್ರಕಟಿಸಿದ ಮೇಲೆ ಸಾರ್ವಜನಿಕರಿಂದ ಅರ್ಜಿಗಳು ಬರುತ್ತವೆ. ಈ ಅರ್ಜಿಗಳೊಂದಿಗೆ, ಅವರು ಪಡೆಯಬಯಸುವ ಷೇರುಗಳ ಸಂಖ್ಯೆಗೆ ಅನುಗುಣವಾಗಿ ಆ ಷೇರುಗಳ ಒಂದು ಗೊತ್ತಾದ ಪ್ರಮಾಣದ ಹಣವನ್ನೂ ಅವರು ಸಲ್ಲಿಸಬೇಕಾಗುತ್ತದೆ. ವಿವರಣಪತ್ರದಲ್ಲಿ ನಮೂದಿಸಿರುವಂತೆ ಕಂಪನಿಗೆ ಕನಿಷ್ಠ ಚಂದಾಹಣ ಬಂದಿದ್ದರೆ ಆಗ ಅದರ ನಿರ್ವಾಹಕರು ಕಂಪನಿ ನೀಡಿರುವ ಷೇರುಗಳನ್ನು ಅಭ್ಯರ್ಥಿಗಳಿಗೆ ಹಂಚುವ ಕಾರ್ಯ ಕೈಗೊಳ್ಳುತ್ತಾರೆ. ಇದಕ್ಕಾಗಿ ನಿರ್ವಾಹಕರ ಒಂದು ಸಭೆ ಸೇರುತ್ತದೆ. ಷೇರುಗಳಿಗಾಗಿ ಬಂದಿರುವ ಎಲ್ಲ ಅರ್ಜಿಗಳನ್ನೂ ಕಂಪನಿಯ ಕಾರ್ಯದರ್ಶಿ ಈ ಸಭೆಯ ಮುಂದೆ ಇಡುತ್ತಾನೆ. ಕಂಪನಿ ನೀಡಿರುವ ಷೇರುಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದಿದ್ದರೆ ಕೆಲವು ಅಭ್ಯರ್ಥಿಗಳಿಗೆ ನಿವಾರ್ಹಕರು ಷೇರುಗಳನ್ನು ನಿರಾಕರಿಸಬೇಕಾಗುತ್ತದೆ. ಅಥವಾ ಅವರು ಕೇಳಿರುವುದಕ್ಕಿಂತ ಕಡಿಮೆ ಸಂಖ್ಯೆಯ ಷೇರುಗಳನ್ನು ಹಂಚಬೇಕಾಗುತ್ತದೆ. ಯಾರಿಗೆ ಷೇರುಗಳನ್ನು ಹಂಚಲಾಗುವುದಿಲ್ಲವೋ ಅವರಿಗೆ ಷೇರುಗಳನ್ನು ಕೊಡಲಾಗದುದಕ್ಕಾಗಿ ವಿಷಾದ ಸೂಚಿಸಿ ಪತ್ರವನ್ನೂ (ಲೆಟರ್ ಆಫ್ ರಿಗ್ರೆಟ್) ಯಾರಿಗೆ ಷೇರುಗಳನ್ನು ಹಂಚಲಾಗುವುದೋ ಅವರಿಗೆ ಷೇರುಹಂಚಿಕೆ ಪತ್ರವನ್ನೂ (ಲೆಟರ್ ಆಫ್ ಅಲಾಟ್‌ಮೆಂಟ್) ಕಳುಹಿಸಲಾಗುವುದು. ಯಾರಿಗೆ ಷೇರು ಹಂಚಿದೆಯೋ ಅವರು ಆ ಹಂಚಿಕೆ ಪತ್ರದಲ್ಲಿ ಸೂಚಿಸಿರುವಷ್ಟು ಹಣವನ್ನು ಒಂದು ಗೊತ್ತಾದ ಅವಧಿಯಲ್ಲಿ ಕಳುಹಿಸಕೊಡಬೇಕಾಗುವುದು. ಇದು ಷೇರುಧನಕ್ಕಾಗಿ ಕೊಡುವ ಎರಡನೆಯ ಕಂತು. ಷೇರಿನ ಮೇಲೆ ಉಳಿದ ಹಣವನ್ನು ಕಂತುಗಳಾಗಿಯೋ ಇಲ್ಲವೇ ಒಟ್ಟಾಗಿಯೋ, ವಿವರಣ ಪತ್ರದಲ್ಲಿ ಸೂಚಿಸಿರುವಂತೆ, ವಸೂಲು ಮಾಡುವ ಹಕ್ಕು ಕಂಪನಿಗೆ ಇರುತ್ತದೆ.

ಯಾರಿಗೆ ಷೇರುಗಳನ್ನು ಕೊಡಲಾಗುವುದಿಲ್ಲವೋ ಅವರಿಗೆ ಅವರು ಕಳುಹಿಸಿರುವ ಹಣವನ್ನು ವಾಪಸ್ಸು ಕೊಡಬೇಕಾಗುತ್ತದೆ. ಅಭ್ಯರ್ಥಿಗಳಲ್ಲಿ ಯಾರಿಗಾದರೂ ಷೇರುಹಂಚುವ ಅಥವಾ ಹಂಚದಿರುವ ಅಧಿಕಾರವನ್ನು ಸಾಮಾನ್ಯವಾಗಿ ನಿರ್ವಾಹಕರು ಹೊಂದಿರುತ್ತಾರೆ.

ಕಂಪನಿಯ ವಿವರಣಪತ್ರವನ್ನು ಹೊರಡಿಸಿದ ನೂರಿಪ್ಪತ್ತು ದಿನಗಳೊಳಗಾಗಿ ಆ ಪತ್ರದಲ್ಲಿ ನಮೂದಿಸಿರುವ ಕನಿಷ್ಠ ಚಂದಾಹಣ ಬಾರದಿದ್ದರೆ, ಅರ್ಜಿದಾರರಿಂದ ಬಂದಿರುವ ಎಲ್ಲ ಹಣವನ್ನೂ ಕೂಡಲೇ ಅವರಿಗೆ ಹಿಂತಿರುಗಿಸಬೇಕೆಂಬುದಾಗಿ ಕಂಪನಿಗಳ ಕಾಯಿದೆ ವಿಧಿಸುತ್ತದೆ. ಅನಂತರವೂ ಹತ್ತು ದಿನಗಳ ಒಳಗಾಗಿ ಅದನ್ನು ಹಿಂತಿರುಗಿಸದಿದ್ದರೆ ವರ್ಷಕ್ಕೆ ಶೇ. 6ರ ಹಾಗೆ ಬಡ್ಡಿಯೊಂದಿಗೆ ಅದನ್ನು ಕೊಡಬೇಕಾಗುತ್ತದೆ.

ಮೇಲೆ ಸೂಚಿಸಿದ ರೀತಿಯಲ್ಲಿ ಸಾರ್ವಜನಿಕರಿಗೆ ಷೇರುಗಳನ್ನು ಹಂಚಿ ಆದಮೇಲೆ ಕಂಪನಿಯ ಕಾರ್ಯದರ್ಶಿಯೋ ನಿರ್ವಾಹಕನೋ ಈ ಬಗೆಗೆ ಕಂಪನಿಗಳ ರಿಜಿಸ್ಟ್ರಾರರಿಗೆ ಒಂದು ತಃಖ್ತೆಯನ್ನು ಒಪ್ಪಿಸುತ್ತಾನೆ. ಹಂಚಿದ ಷೇರುಗಳ ಸಂಖ್ಯೆ ಮುಂತಾದ ವಿವರಗಳನ್ನು ಇದರಲ್ಲಿ ಕೊಡಬೇಕು. ಈ ವಿಚಾರದಲ್ಲಿ ಕಂಪನಿಯ ಶಾಸನಗಳಲ್ಲಿ ನಿಯಮಿಸಿರುವ ಎಲ್ಲ ವಿಧಿಗಳನ್ನೂ ಅನುಸರಿಸಲಾಗಿದೆಯೆಂದು ಒಂದು ಹೇಳಿಕೆಯನ್ನು ನೀಡಬೇಕು. ಎಲ್ಲವೂ ವಿಧಿಬದ್ಧವಾಗಿ ಅನುಸರಿಸಲ್ಪಟ್ಟಿದೆಯೆಂದು ರಿಜಿಸ್ಟ್ರಾರರಿಗೆ ಮನವರಿಕೆಯಾದರೆ ಆಗ ಅವರು ವ್ಯವಹಾರವನ್ನಾರಂಭಿಸಲು ಅಪ್ಪಣೆ ಪತ್ರವನ್ನು ನೀಡುತ್ತಾರೆ. ಇದನ್ನು ನೀಡಿದ ದಿನದಿಂದ ಮಾತ್ರವೇ ಸಾರ್ವಜನಿಕ ಕಂಪನಿ ವ್ಯವಹಾರ ಆರಂಭಿಸಬಹುದಾಗಿದೆ.

ಖಾಸಗಿ ಕಂಪನಿಗೆ ಈ ಅಪ್ಪಣೆ ಪತ್ರದ ಅಗತ್ಯವಿಲ್ಲ. ನೋಂದಣಿ ಪತ್ರವನ್ನು ಪಡೆದಕೂಡಲೇ ಅದು ಷೇರುಗಳನ್ನು ಹಂಚಿ ನೇರವಾಗಿ ವ್ಯವಹಾರವನ್ನಾರಂಭಿಸಬಹುದಾಗಿದೆ.

**ಷೇರುಗಳ ಒಟ್ಟು ಕೊಳ್ಳಿಕೆ ಭರವಸೆ:** ಒಂದು ಕಂಪನಿಯ ಷೇರುಗಳನ್ನು ಕೊಳ್ಳಲು ಸಾರ್ವಜನಿಕರು ಸಾಕಷ್ಟು ಸಂಖ್ಯೆಯಲ್ಲಿ ಮುಂದೆ ಬಂದೇಬರುವರೆಂಬ ಭರವಸೆ ಯಾವಾಗಲೂ ಇರುವುದಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಇವು ಮಾರಾಟವಾಗಲಿಲ್ಲವೆಂಬ ಕಾರಣದಿಂದ ಕಂಪನಿಯನ್ನು ಪ್ರಾರಂಭ ಮಾಡಲು ಸಾಧ್ಯವಾಗದೆ ಹೋಗಬಹುದು. ಇಂಥ ಅನಿಶ್ಚಯಕರ ಪರಿಸ್ಥಿತಿಯನ್ನು ಹೋಗಲಾಡಿಸಲು ಪ್ರವರ್ತಕರು ಷೇರುಗಳ ಒಟ್ಟು ಕೊಳ್ಳಿಕೆ ಭರವಸೆ ಒಪ್ಪಂದ (ಅಂಡರ್-ರೈಟಿಂಗ್ ಆಫ್ ಷೇರ್ಸ್) ಮಾಡಿಕೊಳ್ಳಬಹುದು. ಯಾರಾದರೂ ದಳ್ಳಾಳಿಯೋ ಯಾವುದಾದರೂ ಬ್ಯಾಂಕೋ ಷೇರುಗಳನ್ನು ಕೊಳ್ಳುವ ಭರವಸೆ ನೀಡಲು ಒಪ್ಪಬಹುದು. ಕಂಪನಿ ನೀಡುತ್ತಿರುವ ಷೇರುಗಳಲ್ಲಿ ಎಲ್ಲವನ್ನೋ ಅಥವಾ ಒಂದು ಗೊತ್ತಾದ ಸಂಖ್ಯೆಯನ್ನೋ ಸೂಚಿಸಿ, ಈ ಸಂಖ್ಯೆಯ ಷೇರುಗಳೆಲ್ಲವನ್ನೂ ಮಾರಾಟ ಮಾಡದಿದ್ದ ಪಕ್ಷದಲ್ಲಿ ಹಾಗೆ ಮಾರಾಟ ಮಾಡದೆ ಉಳಿದ ಷೇರುಗಳನ್ನು ಕೊಳ್ಳಲು ಭರವಸೆ ನೀಡಬಹುದು. ಎಲ್ಲ ಷೇರುಗಳೂ ಮಾರಾಟವಾದ ಪಕ್ಷದಲ್ಲಿ ಇವರು ಷೇರುಗಳನ್ನು ಕೊಳ್ಳಬೇಕಾದುದಿಲ್ಲ. ಅಂತೂ ಹೀಗೆ ಒಪ್ಪಂದ ಮಾಡಿಕೊಂಡ ಒಟ್ಟು ಷೇರುಗಳ ಮೇಲೆ ಇವರು ನೀಡಿದ ಭರವಸೆಗಾಗಿ ಇವರಿಗೆ ನಿಗದಿ ಮಾಡಿದ ಕಮಿಷನ್ ಕೊಡಬೇಕಾಗುತ್ತದೆ. ಈ ಕಮಿಷನಿಗೆ ಕೊಳ್ಳಿಕೆ ಭರವಸೆ ಕಮಿಷನ್ (ಅಂಡರ್-ರೈಟಿಂಗ್ ಕಮಿಷನ್) ಎಂದು ಹೆಸರು.

**ಕಂಪನಿಯ ಬಂಡವಾಳ:** ಒಂದು ಕಂಪನಿ ತನ್ನ ಉದ್ಯಮಕ್ಕೆ ಅಗತ್ಯವಾದ ಬಂಡವಾಳವನ್ನು ಷೇರುಧನದ ರೂಪದಲ್ಲಿ ಸದಸ್ಯರಿಂದ ಪಡೆಯುತ್ತದೆಯಷ್ಟೆ, ಅದು ಹೊಂದಿರಬಹುದಾದ ಪರಮಾವಧಿ ಬಂಡವಾಳದ ಹಣವನ್ನು ಸಂಘದ ಷರತ್ತುಗಳಲ್ಲಿ ನಮೂದಿಸಿರುತ್ತದೆ. ಇದಕ್ಕಿಂತ ಹೆಚ್ಚು ಬಂಡವಾಳವನ್ನು ಕಂಪನಿ ಹೊಂದಿರತಕ್ಕದ್ದಲ್ಲ. ಕಂಪನಿಯ ರಿಜಿಸ್ಟ್ರಾರರಿಂದ ಅಪ್ಪಣೆ ಪಡೆದ ಈ ಪರಮಾವಧಿ ಬಂಡವಾಳಕ್ಕೆ ಅಧಿಕೃತ್ಯ ಬಂಡವಾಳ, ಸೂಚಿತ ಬಂಡವಾಳ ಅಥವಾ ನೋಂದಣಿಯಾದ ಬಂಡವಾಳ (ಆಥರೈಸ್ಡ್ ಕ್ಯಾಪಿಟಲ್; ರಿಜಿಸ್ಟರ್ಡ್ ಕ್ಯಾಪಿಟಲ್) ಎಂದು ಹೆಸರು.

ಇಷ್ಟು ಬಂಡವಾಳವೂ ಕಂಪನಿಗೆ ಆಗಲೇ ಬೇಡದೆ ಇರಬಹುದು. ಅದರ ಉದ್ಯಮಕ್ಕೆ ಸದ್ಯಕ್ಕೆ ಎಷ್ಟು ಬಂಡವಾಳ ಬೇಕೋ ಅಷ್ಟನ್ನು ಮಾತ್ರ ಸಾರ್ವಜನಿಕರಿಂದ ಚಂದಾ ಬಯಸಿ ಅವರಿಗೆ ನೀಡಬಹುದು. ವಿವರಣಪತ್ರದ ಪ್ರಕಟನೆಯ ಮೂಲಕ ಹೀಗೆ ಸಾರ್ವಜನಿಕರಿಗೆ ನೀಡಿರುವ ಬಂಡವಾಳಕ್ಕೆ ನೀಡಿದ ಬಂಡವಾಳ ಅಥವಾ ಪ್ರಕಟಿತ ಬಂಡವಾಳ ಎಂದು ಹೆಸರು (ಇಷ್ಯೂಡ್ ಕ್ಯಾಪಿಟಲ್).

ಕಂಪನಿ ನೀಡಿದ ಬಂಡವಾಳದಲ್ಲಿ ಅಷ್ಟಕ್ಕೂ ಸಾರ್ವಜನಿಕರಿಂದ ಅರ್ಜಿ ಬರಬಹುದು, ಬಾರದಿರಬಹುದು. ಸಾರ್ವಜನಿಕರು ಎಷ್ಟಕ್ಕೆ ಅರ್ಜಿಸಲ್ಲಿಸುತ್ತಾರೋ ಅಷ್ಟನ್ನು ಮಾತ್ರ ಕಂಪನಿ ಅವರಿಗೆ ಷೇರುಗಳ ರೂಪದಲ್ಲಿ ಹಂಚಬೇಕಾಗುತ್ತದೆ. ಹೀಗೆ ಸಾರ್ವಜನಿಕರು ಅರ್ಜಿ ಸಲ್ಲಿಸಿದ ಬಂಡವಾಳಕ್ಕೆ ಕೂಡಿಸಿದ ಬಂಡವಾಳ ಅಥವಾ ಚಂದಾ ಆದ ಬಂಡವಾಳ (ಸಬ್‌ಸ್ಕ್ರೈಬ್ಡ್ ಕ್ಯಾಪಿಟಲ್) ಎಂದು ಹೆಸರು.

ಹೀಗೆ ಕೂಡಿಸಿದ ಬಂಡವಾಳದಲ್ಲಿ ಸದಸ್ಯರು ಅಥವಾ ಷೇರುದಾರರು ಕೊಡಬೇಕೆಂದು ಕಂಪನಿಯ ನಿರ್ವಾಹಕರು ಕೇಳಿರುವ ಭಾಗಕ್ಕೆ ಆಹ್ವಾನಿತ ಬಂಡವಾಳ (ಕಾಲ್ಡ್-ಅಪ್-ಕ್ಯಾಪಿಟಲ್) ಎಂದು ಹೆಸರು. ಇದರಲ್ಲಿ ಷೇರುದಾರರು ಪಾವತಿ ಮಾಡಿರುವ ಬಂಡವಾಳಕ್ಕೆ ಸಂದಾಯವಾದ ಬಂಡವಾಳ (ಪೇಡ್-ಅಪ್ ಕ್ಯಾಪಿಟಲ್) ಎಂದು ಹೆಸರು.

**ಷೇರುಗಳು:** ಒಂದು ಕಂಪನಿಯ ಬಂಡವಾಳದ ಹಣವನ್ನು ಅನೇಕ ಮಂದಿ ಸದಸ್ಯರಿಂದ ಕೂಡಿಸಲಾಗುತ್ತದೆ. ಇದಕ್ಕಾಗಿ ಬಂಡವಾಳವನ್ನು ಸಮನಾದ ವಿಭಾಗಗಳಾಗಿ ವಿಂಗಡಿಸಲಾಗುತ್ತದೆ. ಒಂದೊಂದು ಭಾಗಕ್ಕೂ ಷೇರು ಎಂದು ಹೆಸರು. ಷೇರು ಕಂಪನಿಯ ಬಂಡವಾಳದ ಕನಿಷ್ಠ ಭಾಗ. ಇದನ್ನು ಮತ್ತೆ ತುಂಡರಿಸಲುಬಾರದು. ಹಣ ಕೊಟ್ಟು ಈ ಷೇರುಗಳನ್ನು ಪಡೆದಿರುವವರೇ ಷೇರುದಾರರು ಅಥವಾ ಕಂಪನಿಯ ಸದಸ್ಯರು. ಒಬ್ಬ ಷೇರುದಾರ ಒಂದಕ್ಕಿಂತ ಹೆಚ್ಚು ಷೇರುಗಳನ್ನು ಹೊಂದಿರಲು ಯಾವ ಅಭ್ಯಂತರವೂ ಇಲ್ಲ.

ಷೇರುಗಳಲ್ಲಿ ನಾನಾ ವಿಧ. ಭಾರತದ ಕಂಪನಿಗಳ ಕಾಯಿದೆಯ (1956) ರೀತ್ಯಾ 1956ರಿಂದ ಈಚೆಗೆ ಭಾರತದಲ್ಲಿ ಕಂಪನಿಗಳು ನೀಡಬಹುದಾದ ಷೇರುಗಳಲ್ಲಿ ಎರಡು ಬಗೆ:

1 ಮೊದಲ ಹಕ್ಕಿನ ಷೇರುಗಳು (ಪ್ರಿಫರೆನ್ಸ್ ಷೇರ್ಸ್)

2 ಸಮಾನ ಹಕ್ಕುಗಳ ಷೇರುಗಳು (ಎಕ್ವಿಟಿ ಷೇರ್ಸ್)

ಮೊದಲ ಹಕ್ಕಿನ ಷೇರುಗಳ ಒಡೆಯರಿಗೆ ಕೆಲವು ವಿಶಿಷ್ಟವಾದ ಹಕ್ಕುಗಳಿರುತ್ತವೆ. ಕಂಪನಿ ಲಾಭ ಗಳಿಸಿದಾಗ ಆ ಹಣವನ್ನು ಮೊದಲು ಈ ಷೇರುದಾರರಿಗೆ ಕೊಡಲು ಒಪ್ಪಿರುವ ದರದಲ್ಲಿ ಲಾಭಾಂಶವನ್ನು (ಡಿವಿಡೆಂಡ್) ಹಂಚಿ, ಉಳಿದ ಲಾಭವನ್ನು (ಉಳಿದಿದ್ದರೆ) ಇತರ ಷೇರುದಾರರಿಗೆ ಹಂಚಬೇಕು. ಅಥವಾ ಕಂಪನಿಯನ್ನು ಮುಚ್ಚಬೇಕಾದ ಸಂದರ್ಭದಲ್ಲಿ, ಕಂಪನಿಯ ಆಸ್ತಿಯಿಂದ ಅದು ಕೊಡಬೇಕಾದ ಋಣಗಳನ್ನೆಲ್ಲ ತೀರಿಸಿ ಆದಮೇಲೆ ಉಳಿದ ಹಣದಲ್ಲಿ ಮೊದಲು ಈ ಷೇರುದಾರರ ಷೇರು ಹಣವನ್ನು ಹಿಂದಿರುಗಿಸಬೇಕು. ಇವೆರಡರಲ್ಲಿ ಯಾವುದಾದರೂ ಒಂದು ಹಕ್ಕನ್ನಾಗಲಿ ಎರಡು ಹಕ್ಕುಗಳನ್ನೂ ಆಗಲಿ ಹೊಂದಿರುವ ಷೇರುಗಳೇ ಮೊದಲ ಹಕ್ಕಿನ ಷೇರುಗಳು.

ಒಂದು ವರ್ಷದಲ್ಲಿ ಮೊದಲ ಹಕ್ಕಿನ ಷೇರುದಾರರಿಗೆ ಗೊತ್ತಾದ ದರದಲ್ಲಿ ಲಾಭಾಂಶ ಹಂಚುವಷ್ಟು ಲಾಭವನ್ನು ಕಂಪನಿ ಗಳಿಸದಿದ್ದರೆ, ಹಾಗೆ ಹಂಚಲು ಸಾಧ್ಯವಾಗದೆ ಹೋದ ಹಣವನ್ನು ಬಾಕಿಯಾಗಿ ಪರಿಗಣಿಸಿ, ಮುಂದೆ ಲಾಭಗಳಿಸಿದಾಗ ಈ ಬಾಕಿಯನ್ನು ಸೇರಿಸಿ ಕೊಡಬೇಕೆಂಬ ಷರತ್ತೂ ಈ ಮೊದಲ ಹಕ್ಕಿನ ಷೇರುಗಳಿಗೆ ಇರಬಹುದು. ಇಂಥ ಷರತ್ತು ಇಲ್ಲದಿದ್ದ ಪಕ್ಷದಲ್ಲಿ ಆಯಾ ವರ್ಷಗಳ ಲಾಭಾಂಶದ ಹಕ್ಕು ಆಯಾ ವರ್ಷಗಳಿಗೆ ಮುಕ್ತಾಯವಾಗುತ್ತದೆ. ಒಂದು ವರ್ಷ ಕೊಡಲಾಗದೆ ಹೋದ ಲಾಭಾಂಶವನ್ನು ಮುಂದಿನ ವರ್ಷಕ್ಕೆ ಬಾಕಿಯೆಂದು ಪರಿಗಣಿಸುವುದಿಲ್ಲ.

ಸಮಾನಹಕ್ಕುಗಳ ಷೇರುಗಳ ಒಡೆಯರಿಗೆ ಯಾವ ವಿಶಿಷ್ಟ ಹಕ್ಕುಗಳೂ ಇರುವುದಿಲ್ಲ. ಮೊದಲ ಹಕ್ಕಿನ ಷೇರುಗಳ ಮೇಲೆ ಲಾಭಾಂಶ ಹಂಚಿದ ಮೇಲೆ ಉಳಿದ ಲಾಭದ ಹಣವನ್ನು ಸಮಾನ ಹಕ್ಕುಗಳ ಷೇರುದಾರರಿಗೆ ಹಂಚಬಹುದು. ಕಂಪನಿ ಸಾಕಷ್ಟು ಲಾಭಗಳಿಸದೆ ಹೋದರೆ ಇವರಿಗೆ ಏನೂ ಲಾಭಾಂಶವೇ ದೊರಕದೆ ಹೋಗಬಹುದು. ಕಂಪನಿ ಅಧಿಕ ಲಾಭ ಗಳಿಸಿದಾಗ ಇವರಿಗೆ ಹೆಚ್ಚು ಲಾಭಾಂಶವೂ ದೊರಕಬಹುದು. ಕಂಪನಿಯನ್ನು ಮುಚ್ಚಿದ ಸಂದರ್ಭದಲ್ಲಿ ಬಂಡವಾಳಕ್ಕೆ ಸಂಬಂಧಿಸಿದಂತೆ ಮೊದಲ ಹಕ್ಕು ಪಡೆದಿರುವ ಷೇರುದಾರರ ಬಂಡವಾಳವನ್ನು ಹಿಂದಿರುಗಿಸಿದ ಮೇಲೆ ಮಾತ್ರವೇ ಸಮಾನ ಹಕ್ಕುಗಳ ಷೇರುದಾರರಿಗೆ ಅವರ ಬಂಡವಾಳದ ಹಣವನ್ನು ಹಿಂದಿರುಗಿಸಲಾಗುವುದು.

**ಕಂಪನಿಯ ಸಭೆಗಳು:** ಕಂಪನಿಯ ಆಡಳಿತದ ಜವಾಬ್ದಾರಿ ಇರತಕ್ಕದ್ದು ನಿರ್ವಾಹಕ ಮಂಡಳಿಯ ವಶದಲ್ಲಿ. ಕಂಪನಿಯ ಸದಸ್ಯರೇ ಈ ಮಂಡಳಿಯ ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಕಂಪನಿಯ ಸದಸ್ಯರು ನಿರ್ವಾಹಕ ಮಂಡಳಿಗೆ ಕಂಪನಿಯ ನಿರ್ವಹಣೆಯ ಜವಾಬ್ದಾರಿ ನೀಡುತ್ತಾರೆ. ಅಂತೂ ಕಂಪನಿಯ ಸದಸ್ಯರದೇ ಪರಮಾಧಿಕಾರ. ಆದ್ದರಿಂದ ಈ ಅಧಿಕಾರದ ಚಲಾವಣೆ ಸರಿಯಾದ ರೀತಿಯಲ್ಲಿ ಆಗಬೇಕಾದರೆ ಷೇರುದಾರರು ಆಗಿಂದಾಗ್ಗೆ ಒಟ್ಟಿಗೆ ಸೇರಿ, ಕಂಪನಿಗೆ ಸಂಬಂಧಪಟ್ಟ ಮುಖ್ಯ ವಿಚಾರಗಳನ್ನು ಪರಿಶೀಲಿಸಿ, ಚರ್ಚೆ ನಡೆಸಿ, ನಿರ್ಣಯಗಳ ರೂಪದಲ್ಲಿ ತೀರ್ಮಾನ ಕೈಕೊಳ್ಳಬೇಕಾಗುತ್ತದೆ. ಕಂಪನಿಯ ಸದಸ್ಯರಿಂದ ಆಯ್ಕೆಯಾದ ನಿರ್ವಾಹಕರೂ ಆಗಿಂದಾಗ್ಗೆ ಒಂದಾಗಿ ಸೇರಿ ಕಂಪನಿಯ ದಿನದಿನದ ವ್ಯವಹಾರಗಳನ್ನು ಕುರಿತು ಚರ್ಚೆ ನಡೆಸಿ, ನಿರ್ಣಯಿಸಿ, ಕಂಪನಿಯ ವ್ಯವಸ್ಥಾಪಕ ವರ್ಗಕ್ಕೆ ಸೂಕ್ತವಾದ ಸೂಚನೆಗಳನ್ನು ಕೊಡುತ್ತಿರಬೇಕಾಗುತ್ತದೆ. ಹೀಗೆ ಇವರು ಸಮಾಲೋಚನೆ ನಡೆಸಿ ನಿರ್ಣಯಗಳನ್ನು ಅಂಗೀಕರಿಸುವ ಸಲುವಾಗಿ ಒಂದಾಗಿ ಸೇರಿದರೆ ಅಂಥ ಕೂಟವನ್ನು ಸಭೆಯೆಂದು ಕರೆಯಬಹುದು.

ಕಂಪನಿಯ ಸಭೆಗಳು ಮುಖ್ಯವಾಗಿ ಎರಡು ವಿಧ : 1 ನಿರ್ವಾಹಕ ಮಂಡಳಿಯ ಸಭೆ, 2 ಷೇರುದಾರರ ಸಭೆ, ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ನಿರ್ವಾಹಕಮಂಡಲಿಯ ಸಭೆ ಸೇರಬೇಕು. ಮಂಡಳಿಯ ಎಲ್ಲ ಸದಸ್ಯರಿಗೂ ಸಭೆಯ ತಿಳಿವಳಿಕೆ ಪತ್ರ ಕಳಿಸಬೇಕು. ಇಲ್ಲದಿದ್ದರೆ ಅಂಥ ಸಭೆಗೆ ಕಾನೂನಿನ ಬಲ ಇರುವುದಿಲ್ಲ. ಆ ಸಭೆಯಲ್ಲಿ ನಡೆಸಿದ ಕಲಾಪಗಳು ನಿರರ್ಥಕವಾಗುತ್ತವೆ. ಮಂಡಳಿಯ ಸಭೆಯಲ್ಲಿ ಕನಿಷ್ಠ ಪಕ್ಷ ಇಷ್ಟು ಮಂದಿ ಸದಸ್ಯರು ಇರಬೇಕೆಂಬುದು ಕಂಪನಿಯ ಸಂಘದ ಷರತ್ತುಗಳಲ್ಲಿ ಉಲ್ಲೇಖವಾಗಿರುತ್ತದೆ. ಈ ಸಂಖ್ಯೆಯೇ ಕೋರಂ (ಆವಶ್ಯ ಸಂಖ್ಯೆ). ಕೋರಂ ಇಲ್ಲದ ಸಭೆಯ ಕಲಾಪಗಳು ಊರ್ಜಿತವಾಗುವುದಿಲ್ಲ. ಮಂಡಳಿಯ ತೀರ್ಮಾನಗಳೂ ನಿರ್ಣಯಗಳ ರೂಪದಲ್ಲಿರುತ್ತವೆ. ಇವನ್ನು ಕಂಪನಿಯ ಕಲಾಪಗಳ ಪುಸ್ತಕದಲ್ಲಿ ಬರೆದು ಸಭೆಯ ಅಧ್ಯಕ್ಷರ ಸಹಿಪಡೆಯಬೇಕು. ಮುಂಚೆಯೇ ಗೊತ್ತಾದ ಕಾರ್ಯಸೂಚಿಯ ಪ್ರಕಾರ ಸಭೆಯ ಕಲಾಪಗಳು ನಡೆಯಬೇಕು. ಸಭೆಯಲ್ಲಿ ನಡೆದ ಕಲಾಪಗಳನ್ನು ನಡಾವಳಿಕೆಯ ಪುಸ್ತಕದಲ್ಲಿ ಬರೆದಿಡುವಂತೆ, ಅದರ ಕಾರ್ಯಸೂಚಿಯನ್ನು ಕಂಪನಿಯ ಕಾರ್ಯದರ್ಶಿ ಕಂಪನಿಯ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಿ ತಯಾರಿಸುತ್ತಾನೆ. ಇದರ ಪ್ರತಿಗಳನ್ನು ಮಂಡಳಿಯ ಸದ್ಯಸರಿಗೆ, ಅವರಿಗೆ ಕಳುಹಿಸುವ ಸಭೆಯ ತಿಳಿವಳಿಕೆ ಪತ್ರದೊಂದಿಗೆ, ಕಳುಹಿಸಿಕೊಡಬೇಕು. ಇದು ಕಾರ್ಯದರ್ಶಿಯ ಕರ್ತವ್ಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಹೆಸರು, ಸಭೆಯಲ್ಲಿ ನಡೆಸಿದ ಚರ್ಚೆ, ಸ್ವೀಕರಿಸಿದ ಗೊತ್ತುವಳಿಗಳು ಇವುಗಳೆಲ್ಲ ನಡಾವಳಿಕೆಯ ಪುಸ್ತಕದಲ್ಲಿ ಇರಬೇಕು. ಪ್ರತಿಯೊಂದು ಸಭೆಯಲ್ಲೂ ಕಾರ್ಯದರ್ಶಿ ಹಾಜರಿರುತ್ತಾನೆ. ಅಲ್ಲಿ ನಡೆದ ಕಲಾಪಗಳ ಟಿಪ್ಪಣಿ ಮಾಡಿಕೊಂಡು ಅದರ ಆಧಾರದ ಮೇಲೆ ನಡಾವಳಿಕೆಯನ್ನು ಬರೆಯುತ್ತಾನೆ. ಮುಂದಣ ಸಭೆಯಲ್ಲಿ ಹಿಂದಣ ಸಭೆಯ ನಡಾವಳಿಕೆಯನ್ನು ಓದಿ, ಅದು ಸರಿಯಾಗಿದೆಯೆಂದು, ಸಭೆಯ ಒಪ್ಪಿಗೆ ಪಡೆಯಬೇಕು. ಹಿಂದಣ ನಡಾವಳಿಕೆಯ ಪಠಣ ಮತ್ತು ಒಪ್ಪಿಗೆ ಎಂಬುದೇ ಸಭೆಯ ಕಾರ್ಯಸೂಚಿಯ ಮೊದಲನೆಯ ಕಲಾಪ.

ಕಂಪನಿಯ ಷೇರುದಾರರ ಸಭೆಗಳು ಮೂರು ವಿಧ: 1. ಶಾಸನಬದ್ಧ ಸಭೆ, 2.ಸಾಮಾನ್ಯ ಸಭೆ, ಅಥವಾ ವಾರ್ಷಿಕ ಸಾರ್ವತ್ರಿಕ ಸಭೆ, 3. ಅಸಾಧಾರಣ ಸಾರ್ವತ್ರಿಕ ಸಭೆ.

ಖಾಸಗಿ ಕಂಪನಿಯನ್ನು ಬಿಟ್ಟು ಉಳಿದ ಪ್ರತಿಯೊಂದು ಕಂಪನಿಯೂ ಶಾಸನಬದ್ಧ ಸಭೆಯನ್ನು (ಸ್ಟ್ಯಾಚ್ಯುಟರಿ ಮೀಟಿಂಗ್) ನಡೆಸಲೇಬೇಕು. ಕಂಪನಿ ವ್ಯವಹಾರ ಆರಂಭಿಸಲು ಅಧಿಕಾರಪತ್ರ ಪಡೆದ ದಿನದ ಒಂದು ತಿಂಗಳಿಗೆ ಮುಂಚೆಯಿಲ್ಲದಂತೆ, ಆರು ತಿಂಗಳಿಗೆ ಮೀರಿದಂತೆ, ಈ ನಡುವಿನ ಅವಧಿಯಲ್ಲಿ ಈ ಸಭೆಯನ್ನು ನಡೆಸಲೇಬೇಕೆಂಬುದು ಭಾರತದ ಕಂಪನಿಗಳ ಕಾಯಿದೆಯ 165ನೆಯ ವಿಧಿ. ಸಾಮಾನ್ಯವಾಗಿ ಇದೇ ಕಂಪನಿಯ ಸದಸ್ಯರ ಮೊದಲ ಸಭೆ. ಕಂಪನಿಯ ಸ್ಥಿತಿಗತಿಗಳನ್ನು ಸದಸ್ಯರಿಗೆ ತಿಳಿಸಿಕೊಡುವುದೇ ಈ ಸಭೆಯ ಮುಖ್ಯೋದ್ದೇಶ. ಈ ಸಭೆ ನಡೆಯಲು ಕನಿಷ್ಟಪಕ್ಷ ಇಪ್ಪತ್ತೊಂದು ದಿನಗಳ ಮುಂಚೆ, ಈ ಸಭೆಯ ತಿಳಿವಳಿಕೆ ಪತ್ರದೊಂದಿಗೆ ಕಂಪನಿಯ ಬಗೆಗೆ ಒಂದು ವರದಿಯನ್ನು ಎಲ್ಲ ಸದಸ್ಯರಿಗೂ ಕಳಿಸಿಕೊಡಬೇಕು. ಇದು ಶಾಸನಬದ್ಧ ವರದಿ (ಸ್ಟ್ಯಾಚ್ಯುಟರಿ ರಿಪೋರ್ಟ್). ಈ ವರದಿಯನ್ನು ತಯಾರಿಸುವುದು ಕಾಯದರ್ಶಿಯ ಕರ್ತವ್ಯ. ಇದು ಸರಿಯಾಗಿದೆಯೆಂದು ಕಡೆಯ ಪಕ್ಷ ಇಬ್ಬರು ನಿರ್ವಾಹಕರಾದರೂ ಸಹಿ ಹಾಕಬೇಕು. ಅಥವಾ ಕಂಪನಿಯ ಅಧ್ಯಕ್ಷರು ಸಹಿ ಹಾಕಬೇಕು. ಕಂಪನಿಯ ಲೆಕ್ಕಶೋಧಕರ ಸಹಿಯೂ ಇರಬೇಕು. ಕಂಪನಿಗಳ ರಿಜಿಸ್ಟ್ರಾರರಿಗೆ ಇದರ ಒಂದು ಪ್ರತಿಯನ್ನು ಸಲ್ಲಿಸಬೇಕು. ಸಾರ್ವಜನಿಕರಿಗೆ ಹಂಚಿಕೆಯಾದ ಷೇರುಗಳ ಸಂಪೂರ್ಣ ವಿವರ, ಇವುಗಳಿಗಾಗಿ ಕಂಪನಿಗೆ ಬಂದ ಹಣ, ವರದಿಯ ತಾರೀಖಿಗೆ ಹಿಂದಿನ ಏಳು ದಿನಗಳವರೆಗೆ ಕಂಪನಿಗೆ ಬಂದ ಹಾಗೂ ಕಂಪನಿ ಪಾವತಿ ಮಾಡಿದ ನಗದು ಗೋಷ್ವಾರೆ (ಅಬ್‌ಸ್ಟ್ರಾಕ್ಟ್), ಕಂಪನಿಯ ನಿರ್ವಾಹಕರು, ಲೆಕ್ಕ ಶೋಧಕರು, ಮ್ಯಾನೇಜಿಂಗ್ ಏಜೆಂಟರು, ಕಾರ್ಯದರ್ಶಿಗಳು, ಕೋಶಾಧ್ಯಕ್ಷರು, ವ್ಯವಸ್ಥಾಪಕರು, ಕಾರ್ಯದರ್ಶಿ–ಇವರ ಹೆಸರು, ವಿಳಾಸ ಹಾಗೂ ಉದ್ಯೋಗ, ಕಂಪನಿ ಮಾಡಿಕೊಂಡಿದ್ದ ಕರಾರುಗಳಲ್ಲಿ ಮಾಡಬೇಕಾಗಿ ಬಂದಿರುವ ಬದಲಾವಣೆಗಳ ವಿವರ, ಷೇರುಗಳ ಒಟ್ಟು ಕೊಳ್ಳಿಕೆ ಭರವಸೆ ಒಪ್ಪಂದದ ನಿರ್ವಹಣ, ಷೇರುಗಳ ಮೇಲೆ ಹಣಕೊಡಬೇಕೆಂದು ಕಂಪನಿ ಕಳುಹಿಸಿದ ಕರೆಪತ್ರದ (ಕಾಲ್ ನೋಟೀಸ್) ಬಾಬ್ತು ಕಂಪನಿಯ ನಿರ್ವಾಹಕರು, ಮ್ಯಾನೇಜಿಂಗ್ ಏಜೆಂಟರು, ವ್ಯವಸ್ಥಾಪಕರು ಇವರಿಂದ ಬರಬೇಕಾಗಿರುವ ಮೊಬಲಗಿನ ವಿವರ, ಷೇರುಗಳ ನೀಡಿಕೆಯ ಸಂಬಂಧವಾಗಿ ಕಂಪನಿಯ ನಿರ್ವಾಹಕರು, ಮ್ಯಾನೇಜಿಂಗ್ ಏಜೆಂಟರು, ಕಾರ್ಯದಶಿಗಳು, ಕೋಶಾಧ್ಯಕ್ಷರು ಅಥವಾ ವ್ಯವಸ್ಥಾಪಕರಿಗೆ ಕೊಟ್ಟ ಅಥವಾ ಕೊಡಬೇಕಾದ ಕಮಿಷನ್ ಅಥವಾ ದಲ್ಲಾಳಿಯ ವಿವರ, ಇವನ್ನೆಲ್ಲಾ ಈ ವರದಿ ಒಳಗೊಂಡಿರುತ್ತದೆ. ಕಂಪನಿಯ ಶಾಸನಬದ್ಧ ಸಭೆಯನ್ನು ನಡೆಸದೆ ಇದ್ದರೆ ಅಥವಾ ಶಾಸನಬದ್ಧ ವರದಿಯನ್ನು ಸಲ್ಲಿಸದೆ ಇದ್ದರೆ, ಕಂಪನಿಯ ಯಾವ ಸದಸ್ಯನಾದರೂ ಕಂಪನಿಯನ್ನು ಮುಚ್ಚಬೇಕೆಂದು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ನ್ಯಾಯಾಲಯ ಕಂಪನಿಯನ್ನು ಮುಚ್ಚಲು ಆಜ್ಞೆ ಹೊರಡಿಸಬಹುದು. ಅಥವಾ ಸಭೆಯನ್ನು ನಡೆಸಿ ವರದಿಯನ್ನು ಸಲ್ಲಿಸಬೇಕೆಂದು ನಿರೂಪ ಹೊರಡಿಸಬಹುದು. ಸಂಬಂಧಪಟ್ಟ ನಿರ್ವಾಹಕರಿಗೂ ಅಧಿಕಾರಿಗಳಿಗೂ ಜುಲ್ಮಾನೆ ವಿಧಿಸಬಹುದು.

ವಾರ್ಷಿಕ ಸಾರ್ವತ್ರಿಕ ಸಭೆ ಅಥವಾ ಸಾಮಾನ್ಯ ಸಭೆ : ಇದು ಪ್ರತಿವರ್ಷವೂ ನಡೆಯಬೇಕು. ಮೊದಲನೆಯ ಸಭೆಯನ್ನು ಕಂಪನಿ ನೋಂದಣಿಯಾದ ದಿನದಿಂದ ಹದಿನೆಂಟು ತಿಂಗಳೊಳಗೆ ನಡೆಸಬೇಕು. ಆಮೇಲೆ ಪ್ರತಿಯೊಂದು ಸಭೆಯೂ ಹಿಂದಿನ ಸಭೆಯ ದಿನದಿಂದ ಹದಿನೈದು ತಿಂಗಳೊಳಗೆ ನಡೆಯಬೇಕು. ವಾರ್ಷಿಕ ಸಭೆಯ

ಕಲಾಪಗಳನ್ನು ಕುರಿತು ಕಂಪನಿಯ ಸಂಘದ ಷರತ್ತುಗಳಲ್ಲಿ ನಿಬಂಧನೆಗಳಿರುತ್ತವೆ. ನಿರ್ವಾಹಕರ ಹಾಗೂ ಲೆಕ್ಕಶೋಧಕರ ವರದಿ, ಕಂಪನಿಯ ಲೆಕ್ಕ, ಆಸ್ತಿ–ಜವಾಬ್ದಾರಿ ಪಟ್ಟಿ, ಕಂಪನಿಯ ಲಾಭ ಹಂಚಿಕೆಯ ತೀರ್ಮಾನ, ಕಂಪನಿಯ ನಿರ್ವಾಹಕರ ಹಾಗೂ ಲೆಕ್ಕಶೋಧಕರ ಆಯ್ಕೆ, ಲೆಕ್ಕಶೋಧಕರ ಸಂಭಾವನೆಯ ಇತ್ಯರ್ಥ–ಮುಂತಾದ ಸಾಮಾನ್ಯ ಕಲಾಪಗಳು ಈ ಸಭೆಯಲ್ಲಿ ನಡೆಯುತ್ತವೆ. ಈ ಸಭೆಯ ನಡೆಯಲು ಗೊತ್ತಾದ ದಿನಕ್ಕೆ ಇಪ್ಪತ್ತೊಂದು ದಿನಗಳ ಮುಂಚಿತವಾಗಿ ಇದರ ತಿಳಿವಳಿಕೆ ಪತ್ರವನ್ನು ಸದಸ್ಯರಿಗೆ ಕಳಿಸಿಕೊಡಬೇಕು. ಕಂಪನಿಯ ಸದಸ್ಯರು ಸಭೆಯಲ್ಲಿ ಹಾಜರಿರಲು ಸಾಧ್ಯವಾಗದಿದ್ದರೆ ಅಂಥವರು ಇನ್ನೊಬ್ಬ ಸದಸ್ಯರಿಗೆ ಸಭೆಯಲ್ಲಿ ತಮ್ಮ ಪರವಾಗಿ ಮಾತನಾಡುವ ಅಧಿಕಾರವನ್ನು ಕೊಡುವ ಪ್ರತಿನಿಧಿ ಪತ್ರದ (ಲೆಟರ್ ಆಫ್ ಪ್ರಾಕ್ಸಿ) ನಮೂನೆಯನ್ನು ತಿಳಿವಳಿಕೆ ಪತ್ರದೊಂದಿಗೆ ಕಳುಹಿಸಿಕೊಡಬೇಕು. ಸಂಘದ ವಿಧಿಗಳಲ್ಲಿ ಈ ಅವಕಾಶ ಇದ್ದಲ್ಲಿ ಮಾತ್ರ ಇದನ್ನು ಕಳುಹಿಸಿಕೊಡಬೇಕು.

ಕಂಪನಿಯ ನಿರ್ವಾಹಕರ ವರದಿಯನ್ನು ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಕಾರ್ಯದರ್ಶಿ ತಯಾರಿಸುತ್ತಾನೆ. ಈ ವರದಿಯನ್ನು ನಿರ್ವಾಹಕ ಮಂಡಳಿ ಒಪ್ಪಬೇಕು. ಅನಂತರ ಇದಕ್ಕೆ ನಿರ್ವಾಹಕರೂ ಕಂಪನಿಯ ಅಧ್ಯಕ್ಷರೂ ಸಹಿ ಹಾಕುತ್ತಾರೆ. ಇದನ್ನೂ ಕಂಪನಿಯ ಲಾಭ ನಷ್ಟಗಳ ಲೆಕ್ಕ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಯನ್ನೂ ಅಚ್ಚುಹಾಕಿಸಿ ಇವುಗಳ ಪ್ರತಿಗಳನ್ನು ಎಲ್ಲ ಸದಸ್ಯರಿಗೂ ಕಳುಹಿಸಿಕೊಡಬೇಕು.

**ಲಾಭಾಂಶ ಹಂಚಿಕೆ :** ಮೊದಲೇ ತಯಾರಿಸಿದ ಕಾರ್ಯಸೂಚಿಗೆ ಅನುಸಾರವಾಗಿ ಈ ಸಭೆಯಲ್ಲಿ ಕಲಾಪಗಳು ನಡೆಯುತ್ತವೆ. ಕಂಪನಿಯ ಕಳೆದ ವರ್ಷದ ಲಾಭದ ವಿನಿಯೋಗ ಹೇಗಾಗಬೇಕೆಂಬುದರ ವಿಚಾರವಾಗಿ ನಿರ್ವಾಹಕರು ಸೂಚಿಸಿರುವ ಶಿಫಾರಸಿನ ದೃಷ್ಟಿಯಲ್ಲಿ ತೀರ್ಮಾನ ಕೈಕೊಳ್ಳುವುದೂ ಈ ಸಭೆಯ ಮುಖ್ಯ ಕರ್ತವ್ಯಗಳಲ್ಲೊಂದು. ಕಳೆದ ವರ್ಷದ ನಿವ್ವಳ ಆದಾಯವನ್ನು ಯಾವ ರೀತಿ ವಿನಿಯೋಗ ಮಾಡಬೇಕೆಂಬುದನ್ನು ನಿರ್ವಾಹಕರು ಪರಿಶೀಲಿಸಿ ಆ ಬಗ್ಗೆ ಸೂಕ್ತ ಶಿಫಾರಸುಗಳನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಇಡುತ್ತಾರೆ. ಸಭೆಯ ಸದಸ್ಯರು ಚರ್ಚಿಸಿ ಇದನ್ನು ಒಪ್ಪುವರು; ಅಥವಾ ಬಿಡುವರು; ಇಲ್ಲವೇ ಸೂಕ್ತ ಮಾರ್ಪಾಟುಗಳನ್ನು ಮಾಡುವರು. ಕಂಪನಿಯ ಪಾವತಿಯಾದ ಷೇರುಗಳ ಮೇಲೆ ನಿಗದಿಯಾದ ಶೇಕಡ ದರದ ಲಾಭವನ್ನು ಲಾಭದ ಹಂಚಿಕೆಯಲ್ಲಿ ಮೊದಲಹಕ್ಕು ಇರಬಹುದಾದ ಷೇರುಗಳ ಮೇಲೆ ಮೊದಲು ಹಂಚಬೇಕು. ಉಳಿದದ್ದು ಸಾಮಾನ್ಯ ಹಕ್ಕುಗಳ ಷೇರುದಾರರಿಗೆ ಹಂಚಿಕೆಯಾಗಬಹುದು. ಈ ವಿಚಾರದಲ್ಲಿ ಕಂಪನಿಯ ನಿರ್ವಾಹಕರು ಮಾಡಿರುವ ಶಿಫಾರಿಸಿನ ದರಕ್ಕಿಂತ ಹೆಚ್ಚಿನ ದರದಲ್ಲಿ ಹಂಚಬೇಕೆಂದು ಹೇಳಲು ಷೇರುದಾರರಿಗೆ ಅಧಿಕಾರ ಇರುವುದಿಲ್ಲ. ಹೀಗೆ ಒಂದೊಂದು ಷೇರಿನ ಮೇಲೂ ನೀಡಿದ ಲಾಭದ ಅಂಶವೇ ಲಾಭಾಂಶ (ಡಿವಿಡೆಂಡ್).

ಈ ವಿಚಾರದಲ್ಲಿ ಕಂಪನಿಯ ಸಭೆಯಲ್ಲಿ ನಿರ್ಣಯವಾದ ಮೇಲೆ ಕಂಪನಿಯ ಕಾರ್ಯದರ್ಶಿ ಪ್ರತಿಯೊಬ್ಬ ಷೇರುದಾರನಿಗೂ ಎಷ್ಟು ಲಾಭಾಂಶ ಸಲ್ಲಬೇಕೆಂಬ ಪಟ್ಟಿಯನ್ನು ತಯಾರಿಸಿ ಅವರಿಗೆ ಅದನ್ನು ಹಂಚಲು ಸೂಕ್ತ ಏರ್ಪಾಟು ಕೈಕೊಳ್ಳುತ್ತಾನೆ.

**ಅಸಾಧಾರಣ ಸಾರ್ವತ್ರಿಕ ಸಭೆ :** ಎರಡು ವಾರ್ಷಿಕ ಸಾಮಾನ್ಯಸಭೆಗಳ ನಡುವೆ ನಡೆಯುವ ಸಭೆಯೇ ಅಸಾಧಾರಣ ಸಾರ್ವತ್ರಿಕ ಸಭೆ. ಇದನ್ನು ನಿರ್ವಾಹಕರೇ ಕರೆಯಬಹುದು. ಕಂಪನಿಯ ಷೇರುಬಂಡವಾಳದ ಹತ್ತನೆಯ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಮೊತ್ತದ ಬಂಡವಾಳವನ್ನು ಹೊಂದಿರುವ ಅಥವಾ ಕಂಪನಿಯ ಸದಸ್ಯರ ಒಟ್ಟು ಮತಾಧಿಕಾರದ ಹತ್ತನೆಯ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಅಧಿಕಾರ ಹೊಂದಿರುವ ಸಂಖ್ಯೆಯ ಸದಸ್ಯರು ಇಂಥ ಸಭೆಯನ್ನು ಕರೆಯಬೇಕೆಂದು ಇಚ್ಛಿಸಿ, ಅದಕ್ಕೆ ಕಾರಣವನ್ನೂ ಸೂಚಿಸಿ, ಕಂಪನಿಗೆ ಪತ್ರ ಬರೆದಾಗ ಈ ಸಭೆಯನ್ನು ಆ ಪತ್ರದ ತಾರೀಖಿನಿಂದ ಇಪ್ಪತ್ತೊಂದು ದಿನಗಳೊಳಗಾಗಿ ಕರೆಯಬೇಕು; ನಲವತ್ತೈದು ದಿನಗಳೊಳಗೆ ಈ ಸಭೆಯನ್ನು ನಡೆಸದಿದ್ದರೆ, ಆಗ ಇಚ್ಛಾಪತ್ರ ಸಲ್ಲಿಸಿದ ಸದಸ್ಯರೇ ಸಭೆಯನ್ನು ಕರೆದು ಕಲಾಪ ನಡೆಸಬಹುದು.

**ನಿರ್ಣಯಗಳು :** ಕಂಪನಿಯ ಸಭೆಯ ತೀರ್ಮಾನಗಳು ನಿರ್ಣಯಗಳ ರೂಪದಲ್ಲಿ ಆಗುತ್ತವೆ. ಸೂಚನೆಯ ಪರವಾಗಿಯೂ ವಿರೋಧವಾಗಿಯೂ ತಲಾ ಎಷ್ಟು ಮಂದಿ ಮತ ನೀಡುವರೆಂಬುದನ್ನು ಲೆಕ್ಕ ಹಾಕಿ, ಆ ಸೂಚನೆ ಸ್ವೀಕೃತವೇ ಅಸ್ವೀಕೃತವೇ ಎಂಬುದನ್ನು ಗಮನಿಸಿ ತೀರ್ಮಾನಿಸಬೇಕು. ಸೂಚನೆಗೆ ಹೆಚ್ಚು ಮತ ಬಂದಿದ್ದರೆ ಆಗ ಅದು ಸಾಮಾನ್ಯವಾಗಿ ಸ್ವೀಕೃತ. ಸ್ವೀಕೃತವಾದ ಸೂಚನೆಯೇ ನಿರ್ಣಯ.

ನಿರ್ಣಯಗಳು ಎರಡು ವಿಧ : ಸಾಮಾನ್ಯ ನಿರ್ಣಯಕ್ಕೆ ಸಾಮಾನ್ಯ ಬಹುಮತ ಇದ್ದರೆ ಸಾಕು. ನಿರ್ವಾಹಕರ ವರದಿಯ ಸ್ವೀಕಾರ, ವಾರ್ಷಿಕ ಲೆಕ್ಕಗಳ ಒಪ್ಪಿಗೆ. ಲೆಕ್ಕ ಶೋಧಕರ ನೇಮಕ ನಿರ್ವಾಹಕರ ಆಯ್ಕೆ ಮುಂತಾದವಕ್ಕೆ ಸಾಮಾನ್ಯ ಬಹುಮತ ಸಾಕು. ಕಂಪನಿಯ ನಿಬಂಧನೆಗಳ ತಿದ್ದುಪಡಿಯೇ ಮುಂತಾದ ಮುಖ್ಯ ವಿಚಾರಗಳ ತೀರ್ಮಾನಕ್ಕೆ ವಿಶೇಷ ನಿರ್ಣಯವೇ ಆಗಬೇಕು. ಇಂಥ ನಿರ್ಣಯದ ಸೂಚನೆಯನ್ನು ಸದಸ್ಯರಿಗೆ ಕನಿಷ್ಠ ಪಕ್ಷ ಇಪ್ಪತ್ತೊಂದು ದಿನಗಳ ಮುಂಚೆ ಕಳಿಸಬೇಕು. ಕೊಟ್ಟ ಮತದಲ್ಲಿ ಮುಕ್ಕಾಲು ಸಂಖ್ಯೆ ಮತ ಈ ನಿರ್ಣಯದ ಪರವಾಗಿ ಬರಬೇಕು.

**ಡಿಬೆಂಚರ್ ಅಥವಾ ಸಾಲಪತ್ರ :** ಕಂಪನಿಗೆ ಷೇರುಗಳ ಮೂಲಕ ಪಡೆದ ಬಂಡವಾಳಕ್ಕಿಂತ ಹೆಚ್ಚಿನ ಬಂಡವಾಳ ಬೇಕಿದ್ದರೆ ಅದನ್ನು ಡಿಬೆಂಚರ್ ಅಥವಾ ಸಾಲಪತ್ರಗಳ ಮೂಲಕ ಪಡೆಯಬಹುದು. ಡಿಬೆಂಚರುಗಳನ್ನೂ ಷೇರುಗಳ ಹಾಗೆಯೇ ಸಾರ್ವಜನಿಕರಿಗೆ ನೀಡಲಾಗುತ್ತದೆ. ಆದರೆ ಒಂದು ಮುಖ್ಯ ವ್ಯತ್ಯಾಸ ಷೇರುದಾರರು ಕಂಪನಿಯ ಒಡೆಯರು, ಡಿಬೆಂಚರುದಾರರು ಸಾಲಗಾರರು, ಕಂಪನಿ ಲಾಭ ಸಂಪಾದನೆ ಮಾಡಿದಾಗ ಷೇರುಗಳ ಮೇಲೆ ಲಾಭದ ಹಂಚಿಕೆಯಾಗುತ್ತದೆ. ಕಂಪನಿ ಲಾಭ ಗಳಿಸಲಿ ಬಿಡಲಿ, ಗೊತ್ತಾದ ದರದಲ್ಲಿ ಡಿಬೆಂಚರುಗಳ ಮೇಲೆ ಬಡ್ಡಿ ಸಲ್ಲಿಸಲೇ ಬೇಕು. ಷೇರುಗಳ ಹಣವನ್ನು ಸಾಮಾನ್ಯವಾಗಿ ಹಿಂತಿರುಗಿಸುವುದಿಲ್ಲ. ಆದರೆ ಡಿಬೆಂಚರಿನ ಹಣವನ್ನು ಕ್ಲುಪ್ತವಾದ ಅವಧಿಯ ಪೂರೈಕೆಯಾದಾಗ ಹಿಂತಿರುಗಿಸಬೇಕು. ಈ ನಡುವೆ ಕಂಪನಿಯನ್ನು ಮುಚ್ಚಿದರೆ ಡಿಬೆಂಚರಿನ ಹಣವನ್ನು ಕೊಟ್ಟಮೇಲೆಯೇ ಷೇರುದಾರರಿಗೆ ಮಿಕ್ಕ ಹಣದ ವಿನಿಯೋಗ.

ಡಿಬೆಂಚರುಗಳಲ್ಲಿ ನಾನಾ ವಿಧ, ಕಂಪನಿ ಸ್ವತ್ತಿನ ಆಧಾರ ಪಡೆದ ಡಿಬೆಂಚರುಗಳು, ಆಧಾರವಿಲ್ಲದ ಡಿಬೆಂಚರುಗಳು, ಕಂಪನಿಯ ಪುಸ್ತಕದಲ್ಲಿ ದಾಖಲಾಗದ ಡಿಬೆಂಚರುಗಳು, ದಾಖಲಾದ ಡಿಬೆಂಚರುಗಳು ಇತ್ಯಾದಿ, ಕಂಪನಿಯ ಪುಸ್ತಕದಲ್ಲಿ ಡಿಬೆಂಚರುದಾರರ ಹೆಸರು ದಾಖಲಾಗದಿದ್ದ ಪಕ್ಷದಲ್ಲಿ ಅಂಥ ಡಿಬೆಂಚರುಗಳನ್ನು ಒಬ್ಬರು ಇನ್ನೊಬ್ಬರಿಗೆ ಬಲು ಸುಲಭವಾಗಿ ವರ್ಗಾಯಿಸಬಹುದು. ಕಂಪನಿಯ ಪುಸ್ತಕದಲ್ಲಿ ದಾಖಲಾಗಿದ್ದ ಪಕ್ಷದಲ್ಲಿ ಅಂಥವನ್ನು ವರ್ಗಾಯಿಸಬೇಕಾದರೆ ಡಿಬೆಂಚರುದಾರರು ಕಂಪನಿಗೆ ಬರೆದು ಹೆಸರು ಬದಲಾವಣೆ ಮಾಡಿಸಬೇಕು, ಆಧಾರ ಹೊಂದಿ ಡಿಬೆಂಚರುಗಳ ಒಡೆಯರಿಗೆ ಕಂಪನಿ ಆಧಾರವಾಗಿ ನೀಡಿದ ಸ್ವತ್ತುಗಳ ಮೇಲೆ ಹಕ್ಕುಂಟು. ಕಂಪನಿಯನ್ನು ಮುಚ್ಚಿದ ಸಂದರ್ಭದಲ್ಲಿ ಆ ಸ್ವತ್ತುಗಳನ್ನು ಮಾರಿ ಬಂದ ಹಣದಲ್ಲಿ ಈ ಡಿಬೆಂಚರುದಾರರಿಗೆ ಮೊದಲು ಹಣ ಸಲ್ಲಬೇಕು. ಆಧಾರರಹಿತ ಡಿಬೆಂಚರುಗಳ ಒಡೆಯರು ಕಂಪನಿಯ ಸಾಮಾನ್ಯ ಸಾಲಿಗರು. ಅವರಿಗೆ ಯಾವ ಒಂದು ಸ್ವತ್ತಿನ ಮೇಲೂ ವಿಶಿಷ್ಟವಾದ ಅಧಿಕಾರ ಇರುವುದಿಲ್ಲ.

**ಕಂಪನಿಯ ಅವಸಾಯನ (ಲಿಕ್ವಿಡೇಷನ್) ಅಥವಾ ದಿವಾಳಿತನ (ಬ್ಯಾಂಕ್ರಪ್ಸಿ) :** ಕಂಪನಿಯ ಕಲಾಪಗಳನ್ನು ಮುಗಿಸಿ, ಅದರ ವ್ಯವಹಾರಗಳನ್ನು ಕೊನೆಗೊಳಿಸಿ, ಅದನ್ನು ಮುಚ್ಚುವುದೇ ಕಂಪನಿಯ ಅವಸಾಯನ ಅಥವಾ ಅಂತ್ಯ. ಕಂಪನಿಯ ಅಂತ್ಯವಾದಾಗ ಅದು ದಿವಾಳಿಯಾಯಿತೆಂದು ಯಾವಾಗಲೂ ಅರ್ಥವಲ್ಲ. ಕಂಪನಿ ತನ್ನ ಆಸ್ತಿಯಿಂದ ತನ್ನ ಸಾಲವೆಲ್ಲವನ್ನೂ ತೀರಿಸಲು ಅಸಮರ್ಥವಾದ ಸಂದರ್ಭದಲ್ಲಿ ಮಾತ್ರವೇ ದಿವಾಳಿ ಆಗುತ್ತದೆ. ಅದು ಕಡ್ಡಾಯ ಪೂರ್ವಕ ಅವಸಾಯನ. ಇದೇ ಅಲ್ಲದೆ ಇನ್ನೆರಡು ರೀತಿಯಲ್ಲಿ ಕಂಪನಿಯ ಅವಸಾಯನ ಆಗಬಹುದು; ಸ್ವಇಚ್ಛೆಯಿಂದ ಆದ ಅವಸಾಯನ ಮತ್ತು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಆದ ಅವಸಾಯನ.

ಕಡ್ಡಾಯಪೂರ್ವಕ (ಕಂಪಲ್ಸರಿ) ಅವಸಾಯನವೆಂದರೆ ನ್ಯಾಯಾಲಯದಿಂದ ಜಾರಿಗೆ ತರಲಾದ ಅಂತ್ಯ. ಸದಸ್ಯರು ನ್ಯಾಯಾಲಯದಿಂದಲೇ ಕಂಪನಿಯ ಅಂತ್ಯವಾಗಬೇಕೆಂದು ವಿಶೇಷನಿರ್ಣಯ ಮಾಡಿದಾಗಲೋ, ಕಾನೂನುಬದ್ಧವಾದ ಸದಸ್ಯಸಭೆಯನ್ನು ಕಂಪನಿ ಏರ್ಪಡಿಸದಾಗಲೋ ಕಂಪನಿಯ ರಿಜಿಸ್ಟರಾದ ಒಂದು ವರ್ಷದೊಳಗೆ ಅದು ವ್ಯವಹಾರವನ್ನು ಆರಂಭಿಸದೆ ಹೋದಾಗಲೋ ಕಂಪನಿಯ ಸದಸ್ಯರ ಸಂಖ್ಯೆ ಕನಿಷ್ಠ ಮಿತಿಗಿಂತ ಕಡಿಮೆಯಾದಾಗಲೋ ಕಂಪನಿಯ ಸಾಲವನ್ನು ತೀರಿಸುವುದು ಅಸಾಧ್ಯವಾದಾಗಲೋ ನ್ಯಾಯಾಲಯವೇ ಕಂಪನಿಯನ್ನು ಅಂತ್ಯಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಾಗಲೋ ಈ ಬಗೆಯ ಅಂತ್ಯವಾಗುತ್ತದೆ.

ಈ ಸಂದರ್ಭದಲ್ಲಿ ನ್ಯಾಯಾಲಯ ಒಬ್ಬ ಅಧಿಕೃತ ಅವಸಾಯಕನನ್ನು (ಅಫಿಷಿಯಲ್ ಲಿಕ್ವಿಡೇಟರ್) ನೇಮಿಸುತ್ತದೆ, ಈತ ಕಂಪನಿಯ ಆಸ್ತಿಯನ್ನು ಮಾರಿ ನಗದು ಹಣ ಪಡೆದು ಕಂಪನಿಗೆ ಬರಬೇಕಾದ ಹಣವನ್ನೆಲ್ಲ ವಸೂಲುಮಾಡಿ, ಆ ಹಣದಿಂದ ಸಾಲಗಳನ್ನೆಲ್ಲ ತೀರಿಸಿ, ಹಣವೇನಾದರೂ ಉಳಿದಿದ್ದರೆ ಅದನ್ನು ಷೇರುದಾರರಲ್ಲಿ ಅವರ ಹಕ್ಕಿಗೆ ಅನುಸಾರವಾಗಿ ಹಂಚುತ್ತಾನೆ.

ಕಂಪನಿಯ ಅವಧಿ ಮುಗಿದರೆ ಅಥವಾ ಕಂಪನಿಯ ಷೇರುದಾರರು ಕಂಪನಿಯನ್ನು ಮುಚ್ಚಲು ವಿಶೇಷ ಏರ್ಪಾಡು ಮಾಡಿದರೆ ಆಗ ಅದು ಕಂಪನಿಯ ಸ್ವಇಚ್ಛೆಯ ಅಂತ್ಯವಾಗುತ್ತದೆ. ಕಂಪನಿಯೇ ಆಗ ಲೇಣೆದೇಣೆಗಳ ವ್ಯವಸ್ಥಾಪಕನೊಬ್ಬನನ್ನು ನೇಮಿಸುತ್ತದೆ.

ಕಂಪನಿಯನ್ನು ಮುಚ್ಚಬೇಕೆಂದು ಷೇರುದಾರರು ನಿರ್ಣಯ ಮಾಡಿದ ಮೇಲೆ ಕಂಪನಿಯ ಯಾವ ಷೇರುದಾರನಾಗಲಿ, ಡಿಬೆಂಚರುದಾರನಾಗಲಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಕಂಪನಿಯ ಅವಸಾಯಕ ಆಗಬೇಕೆಂದು ಕೇಳಿಕೊಂಡಲ್ಲಿ ಅಂಥ ಸಂದರ್ಭದಲ್ಲಿ ನ್ಯಾಯಾಲಯ ಮೇಲ್ವಿಚಾರಣೆ ನಡೆಸುತ್ತದೆ.

ಕಂಪನಿಯ ಅಂತ್ಯವಾದ ಮೇಲೆ ಅದರ ಹೆಸರಿನಲ್ಲಿ ಯಾವ ಬಗೆಯ ವ್ಯವಹಾರವೂ ನಡೆಯುವುದಿಲ್ಲ. ಕಂಪನಿಯನ್ನು ಅಂತ್ಯಗೊಳಿಸುವ ಕ್ರಮ ಕೈಕೊಂಡ ಕಾಲದಲ್ಲಿ ಆ ಕಂಪನಿಯ ಹೆಸರಿನಲ್ಲಿ ವ್ಯವಹಾರ ನಡೆಸುವ ಕರಾರು ಮಾಡಿಕೊಳ್ಳುವ ಎಲ್ಲ ಹಕ್ಕುಗಳೂ ಕಂಪನಿಯ ನಿರ್ವಾಹಕರಿಂದ ತಪ್ಪಿ ಅವಸಾಯಕನಲ್ಲಿ ನಿಹಿತವಾಗುತ್ತದೆ. (ಎಚ್.ಎಸ್.ಕೆ.)

**ಕಂಪನಿ (ಸೈನ್ಯದಲ್ಲಿ) :** ಆಡಳಿತದ ದೃಷ್ಟಿಯಿಂದ ಸ್ವಯಂಪೂರ್ಣವಾದ ಅತ್ಯಂತ ಕಿರಿಯ ಯೋಧಸಮೂಹ. ಮೂರು ಸೆಕ್ಷನ್ನುಗಳ ಸಮೂಹ ಒಂದು ಪ್ಲೆಟೂನು; ಇಂಥ ಮೂರು ಪ್ಲೆಟೂನುಗಳ ಸಮೂಹ ಒಂದು ಕಂಪನಿ, ಇದರ ಮುಖ್ಯಸ್ಥನಿಗೆ ಕಂಪನಿ ಕಮಾಂಡರ್ ಎಂದು ಹೆಸರು. ಈತನ ದರ್ಜೆ ಸಾಮಾನ್ಯವಾಗಿ ಕ್ಯಾಪ್ಟನ್ ಅಥವಾ ಮೇಜರ್. **ನೋಡಿ – ಸೈನ್ಯಬಲ.** *

**ಕಂಪವಾತ :** ಅಕ್ರಮ ಸೆಡವು ನಡುಕಗಳಿಂದ ಪ್ರಕಟಗೊಳ್ಳುವ ಒಂದು ನರವ್ಯಾಧಿ (ಕೋರಿಯ; ಸೆಂಟ್ ವಿಟಸ್ ಡ್ಯಾನ್ಸ್). ಕೀಲುಜ್ವರದ ವಿಷದ ಸೋಂಕಿನ ಫಲವಾಗಿ ಮಕ್ಕಳಲ್ಲಿ ಮತ್ತು ಯುವಕರಲ್ಲಿ ದೇಹದ ಭಾಗಗಳು ತಮ್ಮಷ್ಟಕ್ಕೇ ಅದುರುತ್ತ ಕಂಪವಾತದ ರೂಪದಲ್ಲಿ ತೋರುವುದಿದೆ. ಮಿದುಳಿನ ನರಮಂಡಲದಲ್ಲಿ ಊತ ಮತ್ತು ರಕ್ತ ಕಟ್ಟುತೋರಿಬರುವುದಲ್ಲದೆ ನರ ಕಣಗಳ ಕೇಂದ್ರಗಳು ಅನುವಳಿಕೆ ಹೊಂದುತ್ತವೆ. 5–20 ವರ್ಷದವರೆಗಿನವರಲ್ಲಿ ಕೂಲು ಜ್ವರದ ಫಲವಾಗಿ ಆದರ ಇತರ ಲಕ್ಷಣಗಳು ಕಾಣಿಸಬಹುದು ಇನ್ನು ಕೆಲವು ಬಾರಿ ಇದು ಕೀಲುಜ್ವರದ ಏಕಮೇವ ಲಕ್ಷಣವೂ ಆಗುವುದುಂಟು. ಮಾನಸಿಕ ಒತ್ತಡ ಮತ್ತು ಶಾಲೆಯಲ್ಲಿ ಹೆಚ್ಚು ಶ್ರಮದ ಪರಿಣಾಮವಾಗಿ ಇದು ತಲೆದೋರುವುದಿದೆ. ಕೆಲವರು ಗರ್ಭಿಣಿಯರಲ್ಲೂ ಇದು ಮೊದಲ ಬಾರಿ ಕಾಣಿಸಿಕೊಳ್ಳಬಹುದು.

ಕಂಪವಾತದ ಲಕ್ಷಣಗಳು ನಿಧಾನವಾಗಿ ಬೆಳಕಿಗೆ ಬರುವುದರಿಂದ ಅದರ ಇರುವಿಕೆಯ ಅರಿವು ಆಗುವಷ್ಟರಲ್ಲೇ ಅನೇಕ ದಿನಗಳು ಕಳೆದು ಹೋಗಿರುತ್ತದೆ. ಹೀಗೆ ದೈಹಿಕ ಕಂಪನದ ಮೇಲೆ ಹಿಡಿತವಿಲ್ಲದಿರುವುದು ರೋಗದ ಪ್ರಮುಖ ಲಕ್ಷಣ, ಏನೋ ಕೆಲಸ ಮಾಡಲು ಹೊರಟು ಅದು ಗುರಿಯನ್ನು ಮುಟ್ಟದೆ ಅರ್ಧಂಬರ್ಧ ಆದಂತೆ ಯದ್ವಾತದ್ವವಾಗಿ ದೇಹದ ಭಾಗಗಳನ್ನು ಆಡಿಸುವುದು ತೋರಿಬರುತ್ತದೆ. ಹುಬ್ಬು ಮೇಲೇರಿಕೆ, ತುಟಿ ಕಚ್ಚುವುದು ಕಾರಣವಿಲ್ಲದೆ ನಗು, ಹೆದರಿಸುವ ಮುಖ ಭಾಗ, ಮುಖ ಕಿವಿಚುವುದು, ತಲೆ, ಕಣ್ಣುಗುಡ್ಡೆ ಮತ್ತು ನಾಲಿಗೆಯ ಚಲನೆ ಇವನೆಲ್ಲ ಗುರುತಿಸಬಹುದು. ಆಹಾರವನ್ನು ಜಗಿಯಲು ಮತ್ತು ನುಂಗಲು ತೊಂದರೆಯಾಗುವುದು. ಅಕಾರಣವಾಗಿ ಬೆರಳು ಮೊಣಕೈ ಮಡಿಸುವುದು, ಉದ್ದ ಮಾಡುವುದು ತೋಳು ಮುಂದೆ ಚಾಚುವುದು, ಕಾಲಾಡಿಸುವುದು ತೋರಿಬರುತ್ತದೆ. ಉಸಿರಾಟದ ಗತಿಯಲ್ಲಿ ವ್ಯತ್ಯಾಸ ಮತ್ತು ಮಾತನಾಡುವುದರಲ್ಲಿ ತೊಡರುವುದು ಕಾಣಿಸುತ್ತದೆ. ಏನಾದರೂ ಕೆಲಸ ಮಾಡುವಾಗ ಮತ್ತು ಗಾಬರಿಯಾದ ಕಂಪನ ಹೆಚ್ಚಾಗುತ್ತದೆ. ಮಗು ಮಲಗಿದಾಗ ಕಂಪನ ತೋರಿಬರುವುದಿಲ್ಲ.

ಈ ರೋಗ ಸಾಧಾರಣ ಸ್ಥಿತಿಯಲ್ಲಿರುವಾಗ ಯಾವ ಕೆಲಸಕ್ಕೂ ಇದರಿಂದ ತೊಂದರೆ ಉಂಟಾಗುವುದಿಲ್ಲ. ಅದು ಉಲ್ಬಣಗೊಂಡಂತೆ ಅಸಂಬದ್ಧ ಚಲನೆ ಮತ್ತು ಕಂಪನಗಳು ತೀವ್ರವಾಗುತ್ತವೆ. ಅವನ್ನು ಹಿಡಿತಲ್ಲಿಡುವುದು ಕಷ್ಟ. ಸ್ನಾಯುಗಳ ಶಕ್ತಿ ಕುಂದಿರುತ್ತದೆ. ಮಾನಸಿಕ ಅಸ್ಥಿರತೆಯಿದ್ದರೂ ಬುದ್ಧಿಮತ್ತೆಯಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಕೆಲವರಲ್ಲಿ ಹೃದಯದ ದೌರ್ಬಲ್ಯ ತೋರಿ ಅದರ ಗಾತ್ರ ದೊಡ್ಡದಾಗಬಹುದು; ಆಲಿಸಿದಾಗ ಮರಮರ ಶಬ್ದ ಕೇಳಿ ಬರಬಹುದು. ಆಗ ನಾಡಿ ತೀವ್ರಗತಿಯಿಂದ ಮಿಡಿಯುತಿರುವುದು.

ಹೆಚ್ಚು ಜನ ರೋಗಿಗಳು ಎರಡು ಮೂರು ತಿಂಗಳುಗಳಲ್ಲಿ ಗುಣಮುಖರಾಗುತ್ತಾರೆ. ಕೆಲವರಲ್ಲಿ ಒಂದು ವರ್ಷದಲ್ಲಿಯೇ ರೋಗ ಮರುಕಳಿಸಬಹುದು. ಕೆಲವರಲ್ಲಿ ಕಂಪನ ರೂಢಿಯಾಗಿ ತೋರುತ್ತ ಉಳಿಯಬಹುದು. ಈ ಲಕ್ಷಣಗಳು ತೋರಿದಾಗ ನಾಲ್ಕುವಾರ ಹಾಸಿಗೆಯಲ್ಲಿದ್ದು ಸಂಪೂರ್ಣ ವಿಶ್ರಾಂತಿಯನ್ನು ಪಡೆಯಬೇಕು. ಆಸ್ಪಿರಿನ್ ಮತ್ತು ಫೀನೋಬಾರ್ಬಿಟೋನ್ ಔಷಧಗಳು ಕಂಪನವನ್ನು ಕಡಿಮೆ ಮಾಡಲು ಬಲು ಸಹಾಯಕಾರಿ. ರೋಗದಿಂದ ಚೇತರಿಸಿಕೊಳ್ಳುವಾಗ ಉತ್ತೇಜನ ಕೊಟ್ಟು ಮೊದಲಿನ ಚಟುವಟಿಕೆಯನ್ನು ಪಡೆಯುವಂತೆ ಮಾಡಬೇಕು. (ಪಿ.ಎಸ್.ಎಸ್.)

**ಕಂಪಾಲ :** ಪೂರ್ವ ಆಫ್ರಿಕದಲ್ಲಿರುವ ಉಗಾಂಡ ದೇಶದ ರಾಜಧಾನಿ; ಅಲ್ಲಿಯ ಅತ್ಯಂತ ದೊಡ್ಡ ನಗರ, ಬುಗಾಂಡ ಪ್ರಾಂತ್ಯದಲ್ಲಿ ಎನ್‍ಟೆಬ್ಬೆಗೆ ಉತ್ತರಕ್ಕೂ ಈಶಾನ್ಯಕ್ಕೂ ನಡುವೆ 34 ಕಿಮೀ ದೂರದಲ್ಲಿ ವಿಕ್ಟೋರಿಯ ಸರೋವರದ ದಡದ ಮೇಲಿದೆ. ಈ ನಗರದ ವಿಸ್ತೀರ್ಣ 22 ಚ.ಕಿಮೀ ಜನವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಪ್ರದೇಶಗಳು ಪ್ರತ್ಯೇಕವಾಗಿವೆ. ಮುಖ್ಯ ರಸ್ತೆಯ ಉದ್ದ 8 ಕಿಮೀ ಇದರ ಮಧ್ಯದಲ್ಲಿ ಇರುವ ಪುರಭವನವನ್ನು ಕಟ್ಟಿಸಿದಾತ (1950) ಒಬ್ಬ ಭಾರತೀಯ ವ್ಯಾಪಾರಿ. ಸರ್ಕಾರಿ ಭವನವೂ ಕೆಲವು ಸಚಿವಾಲಯಗಳೂ ಎನ್‍ಟೆಬ್ಬೆಯಲ್ಲಿವೆ. ಇತರ ಖಾತೆಗಳೂ ಸರ್ಕಾರಿ ಕಚೇರಿಗಳೂ ಇರುವುದು ಕಂಪಾಲದಲ್ಲಿ. ವಿಧಾನ ಪರಿಷತ್ತಿನ ಅಧಿವೇಶನ ನಡೆಯುವುದೂ ಸಂಸದೀಯ ಭವನ ಇರುವುದೂ ಇಲ್ಲೇ, ಮುಖ್ಯರಸ್ತೆಯ ಎರಡು ಪಕ್ಕಗಳಲ್ಲೂ ಹಿಂದೆ ಇದ್ದ ಹಳೆಯ ಭಾರತೀಯ ಮಳಿಗೆಗಳಿಗೆ ಬದಲಾಗಿ ಈಗ ಹೊಸ ಭವನಗಳು ಎದ್ದಿವೆ. ಉಗಾಂಡದ ವಿದ್ಯುಚ್ಛಕ್ತಿ ಮಂಡಳಿಯ ಭವನ (ಅಂಬರ್ ಹೌಸ್), ಲಿಂಟ್ ಮಾರುಕಟ್ಟೆ ಮತ್ತು ಕಾಫಿ ಮಂಡಲಿಯ ಭವನಗಳು ಉದಾಹರಣೆಗಳು. ಉಗಾಂಡದ ವಸ್ತುಸಂಗ್ರಹಾಲಯ ಮತ್ತು ನ್ಯಾಯಾಲಯಗಳು ಹಳೆಯ ಮಾದರಿಯ ಕಟ್ಟಡಗಳಲ್ಲಿಯೇ ಇವೆ. 1952ರಲ್ಲಿ ವಸ್ತುಸಂಗ್ರಹಾಲಯವನ್ನು ಹೊಸದಾಗಿ ಕಟ್ಟಲಾಯಿತು. ಕಂಪಾಲದಲ್ಲಿ ಅನೇಕ ಮಸೀದಿಗಳು, ದೇವಾಲಯಗಳು, ಚರ್ಚುಗಳು, ಆಸ್ಪತ್ರೆಗಳು, ಶಾಲಾ ಕಾಲೇಜುಗಳು, ಜ್ಯೂಬಿಲಿ ಉದ್ಯಾನ, ಕ್ರೀಡಾಂಗಣ ಮುಂತಾದುವೂ ಇವೆ. ಕಂಪಾಲದ ಬಾನುಲಿ ಕೇಂದ್ರ ಇರುವುದು ಬುಗೋಲೋಬಿ ಬೆಟ್ಟದ ಮೇಲೆ ಒಂದು ವಿಶ್ವವಿದ್ಯಾನಿಲಯವಿದೆ.

ಕಂಪಾಲ ಉಗಾಂಡದ ಮುಖ್ಯರಸ್ತೆ, ರೈಲ್ವೆ, ಜಲಮಾರ್ಗ ಮತ್ತು ವಾಯುಮಾರ್ಗಗಳ ಕೇಂದ್ರ. ಇಲ್ಲಿಯ ಜನಸಂಖ್ಯೆ 1,659,600 (2011). (ಕೆ.ಎನ್.ಪಿ.)

**ಕಂಪಾಸಿಟಿ :** ಹೂ ಬಿಡುವ ಸಸ್ಯಕುಟುಂಬಗಳಲ್ಲೆಲ್ಲ ಅತ್ಯಂತ ದೊಡ್ಡದು. ದ್ವಿದಳ ಸಸ್ಯವರ್ಗ, ಸಂಯುಕ್ತ ದಳಗಳುಳ್ಳ ಸಸ್ಯ ವಿಭಾಗ, ಕಂಪ್ಯಾನುಲೇಟ ಅಥವಾ ಆಸ್ಟರೇಲಿಸ್ ಗಣಕ್ಕೆ ಸೇರಿದೆ. ಆಸ್ಟರೇಸೀ ಪರ್ಯಾಯನಾಮ. ಇದರಲ್ಲಿ ಒಂಬೈನೂರು ಜಾತಿಗಳು, ಸು. ಹದಿಮೂರು ಸಾವಿರ ಪ್ರಭೇದಗಳು ಇವೆ. ಜಗತ್ತಿನಾದ್ಯಂತ ಪಸರಿಸಿರುವ ಈ ಕುಟುಂಬದ ಸಸ್ಯಗಳನ್ನು ಅವುಗಳ ವಿಶಿಷ್ಟವಾದ ಚಂಡುಮಂಜರಿ ಹೂಗೊಂಚಲಿನಿಂದ ಗುರುತಿಸಬಹುದು. ಕಂಪಾಸಿಟಿ ಕುಟುಂಬದ ಸಸ್ಯಗಳು ತಮ್ಮ ಬೆಳವಣಿಗೆಯ ರೀತಿಯ ವೈವಿಧ್ಯಕ್ಕೆ ಹೆಸರಾಗಿವೆ. ಹೆಚ್ಚಿನವು ಮೂಲಿಕೆಗಳು. ಪೊದೆಗಳೂ ಸಾಮಾನ್ಯ. ಆದರೆ ಮರ, ಬಳ್ಳಿ, ಅಪ್ಪು ಗಿಡ ಮುಂತಾದುವು ಬಹು ವಿರಳ. ಅಲ್ಲದೆ ಇವು ಬೆಳೆಯುವ ಸ್ಥಳಗಳಲ್ಲೂ ವೈವಿಧ್ಯ ಇದೆ. ಬಹುಪಾಲು ಪ್ರಭೇದಗಳು ಸಾಧಾರಣ ನೆಲದಲ್ಲಿ ಬೆಳೆದರೂ ಕೆಲವು ಕೆಸರು ಭೂಮಿಯಲ್ಲಿರುವುದೂ ಉಂಟು. ಆದರೆ ನಿಜವಾದ ಜಲಸಸ್ಯಗಳಿಲ್ಲ. ಒಂದೇ ಜಾತಿಯ ವಿವಿಧ ಪ್ರಭೇದಗಳು ಬೇರೆ ಬೇರೆ ಆಕಾರ, ರಚನೆ, ಬೆಳವಣಿಗೆಯ ರೀತಿಯನ್ನು ಪ್ರದರ್ಶಿಸಬಹುದು. ಉದಾಹರಣೆಗೆ ಸಿನೀಶಿಯೋ. ಇದರ ಬೇರು ಸಮೂಹ ತಾಯಿಬೇರು ಪ್ರಕಾರಕ್ಕೆ ಸೇರಿದ್ದು. ಕೆಲವು ಜಾತಿಗಳಲ್ಲಿ ಬೇರುಗಳು ಆಹಾರ ಸಂಗ್ರಹಿಸುವುದರಿಂದ ಗೆಡ್ಡೆಯಂತಿವೆ. ಉದಾಹರಣೆಗೆ ಡೇಲಿಯ, ಟರ‍್ಯಾಕ್ಸಕಮ್ ಮತ್ತು ಸಿಕೋರಿಯಮ್. ಕಾಂಡದ ರಚನೆಯಲ್ಲೂ ವೈವಿಧ್ಯವಿದೆ. ಕಾಂಡ ಕೆಲವು ಜಾತಿಗಳಲ್ಲಿ ಮೃದುವಾಗಿದ್ದರೆ, ಇನ್ನು ಕೆಲವು ಬಗೆಗಳಲ್ಲಿ ಒರಟಾಗಿರುವುದು. ಸಾಮಾನ್ಯವಾಗಿ ಮೇಲಕ್ಕೆ ನೇರವಾಗಿ ಬೆಳೆಯುತ್ತದೆ. ಹಲವು ಪ್ರಭೇದಗಳಲ್ಲಿ ನೆಲದ ಮೇಲೆಯೂ ನೆಲದ ಒಳಗೂ ಭೂಮಿಗೆ ಸಮಾನಾಂತರವಾಗಿ ಬೆಳೆಯುವುದು ಉಂಟು. ಬೆಲ್ಲಿಸ್, ಅಕಿಲೀಯ, ಸೇವಂತಿಗೆ ಮುಂತಾದುವುಗಳಲ್ಲಿ ಕಾಂಡದ ಕವಲುಗಳು ನಿರ್ಲಿಂಗರೀತಿ ವಂಶಾಭಿವೃದ್ಧಿಯಲ್ಲಿ ಸಹಾಯಕವಾಗಿವೆ. ಕಾಂಡದ ಮೇಲೆಲ್ಲ ನಯವಾದ ತುಪ್ಪುಳವಿದೆ. ಸಿನರಿಯಿ ಗುಂಪಿನ ಪ್ರಭೇದಗಳ ಕಾಂಡದಲ್ಲಿ ಮುಳ್ಳುಗಳಿರುವುದುಂಟು. ಲೆಟಿಸ್, ಡ್ಯಾಂಡಿಲೈಯನ್ ಮುಂತಾದ ಜಾತಿಗಳಲ್ಲಿ ಕಾಂಡಗಳಲ್ಲಿ ಬಿಳಿಯ ಬಣ್ಣದ ಹಾಲ್ನೊರೆಯಿದೆ. ಈ ಕುಟುಂಬದಲ್ಲಿ ಸಾಧಾರಣವಾಗಿ ಎಲ್ಲ ರೀತಿಯ ಎಲೆಗಳೂ ಇವೆ. ಕಾಂಡದ ಮೇಲೆ ಎಲೆಗಳಿರುವುದು ಸಾಮಾನ್ಯವಾದರೂ ಕೆಲವು ಪ್ರಭೇದಗಳಲ್ಲಿ ಕಾಂಡ ಬಹುಚಿಕ್ಕದಾಗಿದ್ದು, ಎಲೆಗಳು ಬೇರಿನಿಂದಲೇ ಹೊರಟಂತೆ (ರ‍್ಯಾಡಿಕಲ್ ಎಲೆಗಳು) ಕಾಣುತ್ತವೆ. ಉದಾಹರಣೆಗೆ ಟರ‍್ಯಾಕ್ಸಕಮ್. ಕಾಂಡದ ಮೇಲಿನ ಎಲೆಗಳ ಜೋಡಣೆ ವಿವಿಧ ಬಗೆಯದು–ಪರ್ಯಾಯ, ಅಭಿಮುಖ, ಸುತ್ತುಜೋಡಣೆ–ಹೀಗೆ. ಕೆಲವು ಬಗೆಗಳಲ್ಲಿ ಎಲೆಗಳು ಸರಳ, ಇನ್ನು ಕೆಲವುಗಳಲ್ಲಿ ಸಂಯುಕ್ತ. ಎಲೆಯ ಅಲಗು ಗರಿಯ ರೂಪದಲ್ಲೊ ಹಸ್ತಾಕಾರದಲ್ಲೊ ವಿಭಾಗವಾಗಿರುವುದೂ ಉಂಟು. ಸಾಮಾನ್ಯವಾಗಿ ವೃಂತಪರ್ಣಗಳಿಲ್ಲ.

ಪುಷ್ಪಮಂಜರಿ ಮೂಲತಃ ರೇಸಿಮೋಸ್ ತರದ್ದು. ಸಾಮಾನ್ಯವಾಗಿ ಹೂಗಳೆಲ್ಲ ಚಿಕ್ಕವಾಗಿದ್ದು ಗುಂಪಾಗಿ ಕೂಡಿ ಚಂಡುಮಂಜರಿಯಾಗಿದೆ. ಚಿಕ್ಕದಾದ ಈ ಹೂಗಳನ್ನು ಫ್ಲೊರೆಟುಗಳೆನ್ನುತ್ತಾರೆ. ಕೆಲವು ಚಂಡುಮಂಜರಿಗಳಲ್ಲಿ ಒಂದೇ ಒಂದು ಪುಷ್ಪವಿರುವುದನ್ನು ಕಾಣಬಹುದು. ಇನ್ನು ಕೆಲವು ಸಸ್ಯಗಳಲ್ಲಿ ಕೋರಿಂಬ್, ಮಧ್ಯಾರಂಭಿಮಂಜರಿ ಅಥವಾ ಸಂಯುಕ್ತ ಚಂಡುಮಂಜರಿಗಳು ಕೂಡ ಇವೆ. ಚಂಡುಮಂಜರಿಯನ್ನು ಆವರಿಸಿಕೊಂಡು ಹಸಿರಾದ ಉಪಪತ್ರಗಳಿವೆ (ಬ್ರಾಕ್ಟ್). ಇವು ಪುಷ್ಪಪಾತ್ರೆಯಂತೆ ಕಾರ್ಯ ನಿರ್ವಹಿಸುತ್ತವೆ. ಹೂಗಳೆಲ್ಲ ಚಿಕ್ಕವಾಗಿದ್ದು ಒಂದೇ ಹೂಗೊಂಚಲಿನ ಅಕ್ಷಾಕಾಂಡದ ಮೇಲೆ ತಳವೂರಿವೆ. ಅಕ್ಷಕಾಂಡದ ತುದಿಭಾಗ ವಿಶಾಲವಾಗಿ, ಚಪ್ಪಟೆಯಾಗಿ ಹೊರಮೈ ಉಬ್ಬಿರುತ್ತದೆ ಅಥವಾ ಕದಿರಾಕಾರವಾಗಿದೆ. ಅಕ್ಷಕಾಂಡದ ಆಕಾರ, ಹೊರಮೈ ಪದರಗಳು ಕುಟುಂಬದ ಸಸ್ಯಗಳ ವರ್ಗೀಕರಣದಲ್ಲಿ ಸಹಾಯಕವಾಗಿವೆ. ನಯವಾದ ಅಥವಾ ರೋಮಯುಕ್ತವಾದ ಪೊರೆಗಳು ಪ್ರತಿಯೊಂದು ಹೂವಿನ ಬುಡದಲ್ಲೂ ಕಾಣಿಸಿಕೊಳ್ಳುತ್ತವೆ. ಸಿನರಿಯಿಗಳಲ್ಲಿ ಬ್ರಾಕ್ಟ್‌ಗಳು ಬಿರುಗೂದಲಿನಂತಿವೆ.

ಹೂಗೊಂಚಲಿನ ಎಲ್ಲ ಹೂಗಳು ಒಂದೇ ತೆರನಾಗಿದ್ದು ದ್ವಿಲಿಂಗಿಗಳಾಗಿರಬಹುದು. ಆದರೆ ಕೆಲವು ಜಾತಿಗಳಲ್ಲಿ ಎರಡು ಬಗೆಯ ಹೂಗಳಿವೆ. ಕೆಲವು ಹೂಗಳು ಹೂಗೊಂಚಲಿನ ಮಧ್ಯಭಾಗದಲ್ಲಿ ಜೋಡಣೆಯಾಗಿ ಅರೀಯ ಸಮಾಂಗತೆಯನ್ನು ಪ್ರದರ್ಶಿಸುತ್ತವೆ. ಅವನ್ನು ಡಿಸ್ಕ್ ಹೂಗಳೆನ್ನುತ್ತಾರೆ. ಇನ್ನು ಕೆಲವು ಹೂಗಳು ಹೂಗೊಂಚಲಿನ ಅಂಚಿನಲ್ಲಿ ಜೋಡಣೆಯಾಗಿ ಉಭಯಪಾರ್ಶ್ವಸಮಾಂಗತೆಯನ್ನು ಹೊಂದಿವೆ. ಇವಕ್ಕೆ ರೇ ಹೂಗಳೆಂದು ಹೆಸರು. ಉದಾಹರಣೆಗೆ ಸೂರ್ಯಕಾಂತಿ. ಸಾಮಾನ್ಯವಾಗಿ ಡಿಸ್ಕ್ ಹೂಗಳು ದ್ವಿಲಿಂಗಿಗಳಾಗಿಯೂ ರೇ ಹೂಗಳು ಏಕಲಿಂಗಿಗಳಾಗಿಯೂ ಇರುತ್ತವೆ. ರೇ ಹೂಗಳ ಸಂಖ್ಯೆ ಜಾತಿಯಿಂದ ಜಾತಿಗೆ ವ್ಯತ್ಯಾಸಗೊಳ್ಳಬಹುದು. ಹೂಗಳೆಲ್ಲಲ್ಲ ನೀಚಸ್ಥಾನದ ಅಂಡಾಶಯವಿದೆ. ಆಂಬ್ರೊಸಿಯಾದಲ್ಲಿ ಪುಷ್ಪಪಾತ್ರೆಯಿಲ್ಲ. ಇನ್ನು ಕೆಲವು ಹೂಗಳಲ್ಲಿ ಪುಷ್ಪಪಾತ್ರೆ ಅನೇಕ ಕೂದಲುಗಳಾಗಿ ಮಾರ್ಪಟ್ಟಿದೆ. ಅವನ್ನು ಪ್ಯಾಪಸ್‌ಗಳೆಂದು ಕರೆಯುತ್ತಾರೆ. ಹಣ್ಣುಗಳಲ್ಲಿ ಸ್ಪಷ್ಟವಾಗಿ ಎದ್ದುತೋರುವ ಪ್ಯಾಪಸ್‌ಗಳು ಫಲಪ್ರಸಾರಕ್ರಿಯೆಯಲ್ಲಿ ಉಪಯುಕ್ತವಾಗಿವೆ. ದಳಗಳು ಐದು; ಸಂಯುಕ್ತವಾಗಿವೆ. ಅವು ಡಿಸ್ಕ್ ಹೂಗಳಲ್ಲಿ ಸಮನಾಗಿವೆ. ಆದರೆ ರೇ ಹೂಗಳಲ್ಲಿ ಅಸಮ. ಕೇಸರಗಳು ಐದು. ಕೇಸರ ದಂಡಗಳು ಸ್ವತಂತ್ರವಾಗಿದ್ದು, ಪರಾಗಕೋಶಗಳು ಮಾತ್ರ ಕೂಡಿವೆ. ಈ ರೀತಿಯ ಕೂಡುವಿಕೆಯನ್ನು ಸಿಂಜಿನಿಶಿಯಸ್ ಸ್ಥಿತಿ ಎನ್ನುತ್ತಾರೆ. ಅಂಡಾಶಯದಲ್ಲಿ ಕೂಡಿರುವ ಎರಡು ಕಾರ್ಪೆಲುಗಳಿವೆ. ಶಲಾಕೆ ಸರಳವಾಗಿದ್ದು ಪರಾಗಕೋಶವಲಯದಿಂದ ಆವೃತವಾಗದೆ. ಶಲಾಕಾಗ್ರ ವಿಭಾಗವಾಗಿದೆ. ಅಂಡಾಶಯದಲ್ಲಿ ಒಂದೇ ಕೋಣೆ ಹಾಗೂ ಒಂದೇ ಅಂಡಕ ಇವೆ. ಇವು ಉತ್ಪಾದಿಸುವ ಒಡೆಯದ ಒಣಫಲಗಳಿಗೆ ಏಕೀನುಗಳೆನ್ನುತ್ತಾರೆ. ಹೂಗಳೆಲ್ಲ ಚಂಡಮಂಜರಿಯಲ್ಲಿ ಕೂಡಿರುವುದರಿಂದ ಪರಾಗ ಪ್ರಸಾರ ಬಹಳ ಸುಲಭ. ಒಂದು ಕೀಟದ ಒಂದೇ ಸಂದರ್ಶನ ಬಹುಪಾಲು ಹೂಗಳಿಗೆ ಪರಾಗವನ್ನು ಒದಗಿಸುತ್ತದೆ.

ಕಂಪಾಸಿಟಿ ಕುಟುಂಬದ ಕೆಲವು ಪ್ರಭೇದಗಳು ಆಹಾರಸಸ್ಯಗಳಾಗಿ ಪ್ರಖ್ಯಾತವಾಗಿವೆ. ಉದಾಹರಣೆಗೆ ಲ್ಯಾಕ್ಟುಕ (ಲೆಟಿಸ್), ಸಿನರ (ಆರ್ಟಿಚೋಕ್), ಟ್ರಾಗೋಪೋಗಾನ್ (ಸಾಲ್ಸಿಫೈ) ಇತ್ಯಾದಿ. ಕಾರ್ಥಮಸ್ ಟಿಂಕ್ಟೋರಿಯಸ್ (ಕುಸುಬೆ) ಗಿಡದಿಂದ ಸ್ಯಾಫ್ಲವರ್ ಎಂಬ ಕೆಂಪು ಬಣ್ಣವನ್ನು ತಯಾರಿಸುತ್ತಾರೆ. ಅಲ್ಲದೆ ಇದರಿಂದ ಖಾದ್ಯ ಎಣ್ಣೆಯನ್ನೂ ತೆಗೆಯಬಹುದು. ಪ್ರಮುಖ ಕೀಟನಾಶಕವಾದ ಪೈರಿತ್ರಮ್ ಎಂಬುದು ಸೇವಂತಿಗೆಯಿಂದ (ಕ್ರೈಸಾಂತಿಮಮ್ ಕಾಕ್ಸಿನಿಯಮ್) ಬರುತ್ತದೆ. ಕಾಫಿಪುಡಿಯೊಂದಿಗೆ ಬೆರೆಸಲಾಗುವ ಚಿಕೋರಿಯನ್ನು ಈ ಕುಟುಂಬದ ಸಿಕೋರಿಯಮ್ ಪ್ರಭೇದದಿಂದ ಪಡೆಯಲಾಗುತ್ತದೆ. ಆರ್ಟಿಮಿಸಿಯ ಜಾತಿಯ ಪ್ರಭೇದಗಳಿಂದ ಸ್ಯಾಂಟೋನಿನ್ ಎಂಬ ಜಂತುನಾಶಕ ಔಷಧಿಯನ್ನು ತಯಾರಿಸುತ್ತಾರೆ. ಎಲ್ಲದಕ್ಕಿಂತ ಮುಖ್ಯವಾಗಿ ಈ ಕುಟುಂಬದ ಸು. 215 ಜಾತಿಯ ಗಿಡಗಳನ್ನು ಅಲಂಕಾರ ಸಸ್ಯಗಳಾಗಿ ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಇವುಗಳಲ್ಲಿ ಡೇಲಿಯ, ಸೂರ್ಯಕಾಂತಿ, ಸೇವಂತಿಗೆ, ಆಸ್ಟರ್, ಡೇಸಿ, ಜಿನಿಯ; ಕ್ಯಾಲೆಂಡುಲ, ಕಾಸ್ಮಾಸ್, ಗೇಲಾರ್ಡಿಯ–ಮುಂತಾದುವು ಬಹುಮುಖ್ಯವಾದುವು. (ಎ.ಕೆ.ಕೆ.)

**ಕಂಪಿಲ ನಗರ :** ಉತ್ತರ ಪ್ರದೇಶದ ಫರೂಖಾಬಾದ್ ಜಿಲ್ಲೆಯಲ್ಲಿನ ಒಂದು ಪ್ರಸಿದ್ಧ ಜೈನ ಕ್ಷೇತ್ರ. ವಿಮಲತೀರ್ಥಂಕರನ ಆತ್ಮವಿಕಾಸಕಾರ್ಯಕ್ಕೆ ಕೇಂದ್ರವಾಗಿತ್ತು. ಚೈತ್ರಮಾಸದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. (ಬಿ.ಜಿ.)

**ಕಂಪ್ಲಿ :** ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನಲ್ಲಿ ಹೊಸಪೇಟೆಯ ವಾಯವ್ಯಕ್ಕೆ 32ಕಿಮೀ ದೂರದಲ್ಲಿ ತುಂಗಭದ್ರಾ ನದಿಯ ಸನಿಹದಲ್ಲಿರುವ ಒಂದು ಊರು. ಇತಿಹಾಸ ಪ್ರಸಿದ್ಧ ಸ್ಥಳ. ಕೈಗಾರಿಕಾ ಕೇಂದ್ರ. ಜನಸಂಖ್ಯೆ 39,307 (2011).

ತುಂಗಭದ್ರಾನದಿಯ ಅಂಚಿನಲ್ಲಿರುವ ಆ ನದಿಯ ಪಾತ್ರ ಭೂಮಿಯಲ್ಲಿ ಉಪಲಬ್ಧವಾದ ಕಪ್ಪು ಬಂಡೆಗಳಿಂದ ರಚಿತವಾಗಿರುವ ಇಲ್ಲಿನ ಕೋಟೆಯನ್ನು ಬಳ್ಳಾರಿಯ ಪಾಳೆಯಗಾರರಲ್ಲೊಬ್ಬ ಕಟ್ಟಿಸಿದನೆಂದು ಪ್ರತೀತಿ. ಕೋಟೆಯಲ್ಲಿ ಮತ್ತು ಕೋಟೆಯ ಹೊರಗಿರುವ ಪೇಟೆಯಲ್ಲಿ ಇಕ್ಕಟ್ಟಾದ ರಸ್ತೆಗಳ ಇಕ್ಕೆಲದಲ್ಲೂ ಗುಂಪು ಮನೆಗಳಿವೆ.

ಮೊದಲು ಇಲ್ಲಿ ನೇಯ್ಗೆ ಪ್ರಧಾನವೆನಿಸಿತ್ತು. ಕಬ್ಬಿನಿಂದ ಬೆಲ್ಲ ತಯಾರಿಸುತ್ತಿದ್ದರು. ಮರದ ಕೆತ್ತನೆ ಕೆಲಸ ಹಾಗೂ ಆಟದ ಸಾಮಾನುಗಳನ್ನು ಮಾಡುವ ಉದ್ಯಮಗಳಿಗೂ ಈ ಸ್ಥಳ ಹೆಸರಾಗಿತ್ತು. 1954ರಿಂದ ಇಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ನಡೆಯುತ್ತಿದೆ. ಇದು ಕರ್ನಾಟಕದಲ್ಲಿ ಸ್ಥಾಪಿತವಾದ ಮೊದಲನೆಯ ಸಹಕಾರಿ ಸಕ್ಕರೆ ಕಾರ್ಖಾನೆ. ಕಬ್ಬು ಅರೆಯುವ ಕಾಲದಲ್ಲಿ ಇದು ಸು.1000 ಕಾರ್ಮಿಕರಿಗೆ ಉದ್ಯೋಗ ಒದಗಿಸುತ್ತದೆ. ಇಲ್ಲಿನ ನಗರ ಪಂಚಾಯಿತಿ 1896ರಲ್ಲೇ ಸ್ಥಾಪಿತವಾಗಿದ್ದು, ಬಳ್ಳಾರಿ ಜಿಲ್ಲೆಯಲ್ಲೇ ಅತಿ ಪುರಾತನ ಪಂಚಾಯಿತಿಗಳಲ್ಲೊಂದಾಗಿದೆ. ಇದು 1960ರಲ್ಲಿ ಹೊಸ ನಿಯಮಗಳಿಗನು ಸಾರವಾಗಿ ಪುನರ್ರೂಪಿತವಾಗಿದೆ. 1958ರಲ್ಲಿ ಸ್ಥಾಪಿತವಾದ ಇಲ್ಲಿಯ ಮಹಿಳಾಸೇವಾ ಸಮಾಜ ಮಹಿಳೆಯರ ಅಭ್ಯುದಯಕ್ಕಾಗಿ ದುಡಿಯುತ್ತಿದೆ. ಗಾಂಧೀಕುಟೀರ ಸಮಾಜಸೇವೆ ನಡೆಸುತ್ತಿದೆ.

11–14ನೆಯ ಶತಮಾನಗಳಲ್ಲಿ ಇದು ಚಿಕ್ಕ ರಾಜ್ಯವೊಂದರ ರಾಜಧಾನಿಯಾಗಿತ್ತು (ನೋಡಿ: ಕಂಪಿಲಿ ರಾಜ್ಯ). 1851ರ ವರೆಗೆ ಇದು ತಾಲ್ಲೂಕಿನ ಕೇಂದ್ರವಾಗಿತ್ತು. ಅಂದಿನ ಕಂಪ್ಲಿ ತಾಲ್ಲೂಕು ಈಗಿನ ಹೊಸಪೇಟೆ ತಾಲ್ಲೂಕಿನ ಭಾಗಗಳನ್ನೊಳಗೊಂಡಿತ್ತು. (ಎಸ್.ಜಿ.)

**ಕಂಪು ಜಿನಸುಗಳು :** ಉಪ್ಪು, ಹುಳಿ, ಕಾರ, ಸಿಹಿಗಳಲ್ಲದೆ ಆಹಾರಗಳಿಗೆ ರುಚಿಕಟ್ಟುವುದಕ್ಕಾಗಿ ಬಳಸುವ ಕಂಪು ಅಥವಾ ಪರಿಮಳವನ್ನು ಕೊಡುವ ಕೆಲವು ಗ್ರಂದಿಗೆ ಅಥವಾ ಮಸಾಲೆ ಪದಾರ್ಥಗಳು, (ಫ್ಲೇವರಿಂಗ್ಸ್). ಇವುಗಳಲ್ಲಿ ಕೆಲವನ್ನು ಸಾರಿನ ಅಥವಾ ಹುಳಿಯ ಪುಡಿಗಳಲ್ಲಿ ಉಪಯೋಗಿಸುವುದರಿಂದ ಈ ಕಂಪುಜಿನಸುಗಳಿಗೆ ಸಂಬಾರ ಜಿನಸುಗಳೆಂದೂ ಹೆಸರುಂಟು. ಮತ್ತೆ ಕೆಲವನ್ನು ಒಗ್ಗರಣೆಗಳಾಗಿಯೂ ಇನ್ನು ಕೆಲವನ್ನು ಹಾಗೆಯೆ ಆಹಾರಗಳಲ್ಲಿಯೂ ಬೆರೆಸುತ್ತಾರೆ. ಕಂಪು ಜಿನಸುಗಳೆಲ್ಲ ಸಸ್ಯಜನಿತವಾದುವು. ಇವನ್ನು ಭಾರತ, ಶ್ರೀಲಂಕ, ಮಲೇಷ್ಯ, ಇಂಡೊನೇಷ್ಯ ಇತ್ಯಾದಿ ದೇಶಗಳಲ್ಲಿ ಮಾತ್ರ ಬೆಳೆಯಲಾಗುತ್ತದೆ. ಆದ್ದರಿಂದ ಬಹು ಪುರಾತನ ಕಾಲಗಳಿಂದಲೂ ಈ ದೇಶಗಳಿಂದ ಪಾಶ್ಚಾತ್ಯ ದೇಶಗಳಿಗೆ ಮಸಾಲೆ ಜಿನಸುಗಳ ವ್ಯಾಪಾರ ನಡೆದುಬಂದಿದೆ. ಈ ಜಿನಸುಗಳು ಸಸ್ಯಗಳ ನಾನಾ ಭಾಗಗಳಿಂದಲೂ ತಯಾರಾಗುತ್ತವೆ. ಉಪಯೋಗ ದಲ್ಲಿರುವ ಅನೇಕ ಮಸಾಲೆ ಜಿನಸುಗಳಲ್ಲಿ ಮುಖ್ಯವಾದವುಗಳು ಇವು:

ಎಲೆಗಳು–ಕರಿಬೇವು, ಕೊತ್ತಂಬರಿ ಸೊಪ್ಪು, ಪುದಿನ, ಮಜ್ಜಿಗೆ ಸೊಪ್ಪು, ದೊಡ್ಡಪತ್ರೆ ಇತ್ಯಾದಿ.

ಹೂಗಳು–ಲವಂಗ (ಮೊಗ್ಗು), ಕೇಸರಿ (ಪುಷ್ಪಶಲಾಕೆ), ಮರಾಟ ಮೊಗ್ಗು ಇತ್ಯಾದಿ.

ಫಲಗಳು–ಮೆಣಸು, ಏಲಕ್ಕಿ, ಧನಿಯ, ಬಡಿಸೋಂಪು, ವನಿಲ, ಹಸಿ ಮತ್ತು ಒಣಮೆಣಸಿನಕಾಯಿ, ಮರಗಳ ಹಿಪ್ಪಲಿ, ನಿಂಬೆ ಇತ್ಯಾದಿ.

ಬೀಜಗಳು–ಸಾಸುವೆ, ಮೆಂತ್ಯ, ಜೀರಿಗೆ, ಸಬ್ಬಸಿಗೆ, ಜಾಯಿಕಾಯಿ, ಜಾಪತ್ರೆ ಇತ್ಯಾದಿ.

ತೊಗಟೆಗಳು–ದಾಲ್ಚಿನ್ನಿ ಇತ್ಯಾದಿ.

ಬೇರು, ಗೆಡ್ಡೆ, ಗೆಣಸುಗಳು–ಅರಸಿನ, ಬಜೆ, ಹಸಿ ಮತ್ತು ಒಣಶುಂಠಿ, ಬೆಳ್ಳುಳ್ಳಿ, ಈರುಳ್ಳಿ ಇತ್ಯಾದಿ.

ಇತರ ಭಾಗಗಳು–ಹಿಂಗು (ಇದು ಒಂದು ಗಿಡದ ಅಂಟು ಅಥವಾ ರಾಳ).

ಮೇಲೆ ಹೇಳಿದ ಜಿನಸುಗಳಲ್ಲಿ–ಕೇಸರಿ, ಏಲಕ್ಕಿ, ಲವಂಗ, ಬಡಿಸೋಂಪು, ವನಿಲ, ಜಾಯಿಕಾಯಿ, ಜಾಪತ್ರೆ, ಸಬ್ಬಸಿಗೆ–ಇವನ್ನು ಮುಖ್ಯವಾಗಿ ಲಾಡು, ಮಿಠಾಯಿ, ಐಸ್‌ಕ್ರೀಮ್, ಕೀರು, ಪಾಯಸ ಇತ್ಯಾದಿ ಸಿಹಿ ಪದಾರ್ಥಗಳಲ್ಲಿಯೂ ತಾಂಬೂಲದಲ್ಲಿಯೂ ಉಪಯೋಗಿಸುತ್ತಾರೆ. ಮಿಕ್ಕವುಗಳನ್ನು ಒಗ್ಗರಣೆ, ಸಾಂಬಾರ ಪುಡಿಗಳು, ಹುಳಿ, ಸಾರು, ವಡೆ ಇತ್ಯಾದಿ ಖಾರದ ಪದಾರ್ಥಗಳಲ್ಲಿ ಉಪಯೋಗಿಸುತ್ತಾರೆ. ಶಾಖಾಹಾರದಲ್ಲಿ ಹೇಗೋ ಹಾಗೆ ಮಾಂಸಾಹಾರದಲ್ಲೂ ಇವೆಲ್ಲದರ ಬಳಕೆ ಇದೆ. (ಎನ್.ಎನ್.ಎ.)

**ಕಂಪ್ಯಾನುಲ :** ಕಂಪ್ಯಾನುಲೇಸೀ ಕುಟುಂಬಕ್ಕೆ ಸೇರಿದ ಸಸ್ಯಜಾತಿ. ಪೊದೆಯಂತೆ ಬೆಳೆಯುವ ಇದು ಬೆಟ್ಟಗಾಡು ಪ್ರದೇಶಗಳಲ್ಲಿ ಹೇರಳವಾಗಿ ಕಾಣಬರುತ್ತದೆ. ಈ ಜಾತಿಯಲ್ಲಿ ಸು. 250 ಏಕವಾರ್ಷಿಕ, ದ್ವೈವಾರ್ಷಿಕ ಹಾಗೂ ಬಹುವಾರ್ಷಿಕ ಪ್ರಭೇದಗಳಿವೆ. ಇವುಗಳಲ್ಲಿ ಕೆಲವು ಅತ್ಯಂತ ಸುಂದರವಾದ ಹೂ ಬಿಡುವ ಗಿಡಗಳಾಗಿದ್ದು ಅಂಚುಸಸ್ಯಗಳಾಗಿ ಉದ್ಯಾನಪ್ರಾಮುಖ್ಯವನ್ನು ಪಡೆದಿವೆ. ಗಿಡದ ಎತ್ತರ ಸು. 18"–36". ಬೇರಿನಿಂದ ಹೊರಟಂತಿರುವ ಎಲೆಗಳು (ಭೂಎಲೆ) ಮತ್ತು ಕಾಂಡದ ಮೇಲಿನ ಎಲೆಗಳು–ಹೀಗೆ ಎಲೆ ಎರಡು ಬಗೆ. ಬೇರಿನ ಎಲೆಗಳು ಕಾಂಡದವಕ್ಕಿಂತ ದೊಡ್ಡವು ಮತ್ತು ಅನಿರ್ದಿಷ್ಟ ಆಕಾರದವು. ಹೂಗಳು ಅಂತ್ಯಾರಂಭಿ (ರೇಸಿಮೋಸ್) ಮಾದರಿಯ ಹೂಗೊಂಚಲಿನಲ್ಲಿವೆ. ಪುಷ್ಪಪತ್ರಗಳು 5. ಇವು ಬಟ್ಟಲಿನಂತೆ ಅಗಲ. ಗಂಟೆಯಾಕಾರದ ಪುಷ್ಪದಳಗಳು 5; ಕೂಡಿಕೊಂಡಿವೆ. ಕೇಸರಗಳು 5. ಇವುಗಳ ದಂಡ ಬುಡದಲ್ಲಿ ಅಗಲ. ಅಂಡಾಶಯ ನೀಚಸ್ಥಾನದ್ದು. ಅದರಲ್ಲಿ 5 ಅಥವಾ 2 ಕೋಣೆಗಳಿವೆ. ಅಂಡಕ ಗಳು ಅನೇಕ. ಬಹುಬೀಜಗಳಿರುವ ಬೆರ್ರಿ ಮಾದರಿಯ ಫಲ. ಉದ್ಯಾನ ಪ್ರಾಮುಖ್ಯ ಗಳಿಸಿರುವ ಎರಡು ಪ್ರಭೇದ ಗಳನ್ನು ಕೆಳಗೆ ವಿವರಿಸಿದೆ.

**ಕಂಪ್ಯಾನುಲ ಪಿರಮಿಡ್ಯಾಲಿಸ್:** ಈ ಪ್ರಭೇದ ಸು. 5 ಅಡಿ ಎತ್ತರ ಬೆಳೆಯುತ್ತದೆ. ಕಾಂಡ ಕೊಳವೆ ಯಾಕಾರ, ದಪ್ಪ; ಕೆಲವು ಸಸ್ಯಗಳಲ್ಲಿ ಟೊಳ್ಳಾಗಿರುತ್ತದೆ. ಉದ್ದವಾದ ತೊಟ್ಟಿರುವ ಭೂಎಲೆ ಹೃದಯಾಕಾರ ಅಥವಾ ಕರನೆಯಾಕಾರದಲ್ಲಿದ್ದು ಹಲ್ಲು ಅಂಚು ಮತ್ತು ಗ್ರಂಥಿಗಳಿಂದ ಕೂಡಿರುತ್ತದೆ. ಕಾಂಡ ಎಲೆ ಕರನೆಯಾಕಾರದಲ್ಲಿದ್ದು ತುದಿ ಮೊನಚಾಗಿರುತ್ತದೆ. ಹೂಗೊಂಚಲು ತುದಿಯಲ್ಲಿರುವ ಉದ್ದವಾದ ಅಂತ್ಯಾರಂಭಿ ಅಥವಾ ಸಂಕೀರ್ಣ ಪುಷ್ಪಗುಚ್ಛ (ಪ್ಯಾನಿಕಲ್) ಮಾದರಿಯದು. ಹೂಗೊಂಚಲು ಗೋಪುರಾಕಾರ ವಾಗಿರುವುದರಿಂದ ಈ ಪ್ರಭೇದಕ್ಕೆ ಪಿರಮಿಡ್ಯಾಲಿಸ್ ಎಂಬ ಹೆಸರು ಬಂದಿದೆ. ಪುಷ್ಪಪತ್ರ

ಸಮೂಹದ ಭಾಗಗಳು ವಿಶಾಲವಾಗಿ ಹರಡಿಕೊಂಡಿದ್ದು, ಅದರ ಮೇಲೆ ಬಟ್ಟಲಿನಂಥ ದಳ ಸಮೂಹವಿರುವುದರಿಂದ ತಟ್ಟೆಯಲ್ಲಿ ಬಟ್ಟಲು ಇಟ್ಟಂತೆ ಕಾಣುತ್ತದೆ. ಈ ಸಸ್ಯ ದಕ್ಷಿಣ ಎಕ್ವಡಾರ್ ದೇಶದ ಮೂಲವಾಸಿ.

**ಕಂಪ್ಯಾನುಲ ಮೀಡಿಯಮ್:** ಇದು ಸು. 4' ಎತ್ತರ ಬೆಳೆಯುವ ಮಧ್ಯಮ ಎತ್ತರದ ದ್ವೈವಾರ್ಷಿಕ ಸಸ್ಯ. ಭೂಎಲೆ ವಿರುದ್ಧ ಭರ್ಜಿಯಾಕಾರದ್ದಾಗಿದ್ದು ಬುಡ ಕಿರಿದಾಗಿ ತುದಿ ಅಗಲವಾಗಿರುತ್ತದೆ. ತೊಟ್ಟಿಲ್ಲದ ಕಾಂಡ ಎಲೆ ಭರ್ಜಿಯಾಕಾರ ಅಥವಾ ಆಯತಾಕಾರದ್ದಾಗಿದೆ. ತುದಿಯಲ್ಲಿ ಉದ್ದವಾಗಿ ಸಡಿಲವಾಗಿರುವ ಹೂಗಳಿಂದ ಕೂಡಿದ ಅಂತ್ಯಾರಂಭಿ ಹೂಗೊಂಚಲಿದೆ; ಹಿಂದಕ್ಕೆ ಬಾಗಿದ ಕೂಡುಪುಷ್ಪಪತ್ರ ಸಮೂಹವಿದೆ. ಭರ್ಜಿಯಾಕಾರದ ಬಿಡಿ ತುದಿಭಾಗ ಹಿಂದಕ್ಕೆ ಬಾಗಿರುತ್ತದೆ. ಗಂಟೆಯಾಕಾರದ ಹೂದಳಗಳ ತುದಿಭಾಗ ಹಿಂದಕ್ಕೆ ಬಾಗಿರುತ್ತವೆ. ಕೇಸರಗಳು 5. ಈ ಪ್ರಭೇದದ ಸೈಕ್ಲಾಂತಿಯ ತಳಿ ಹೆಚ್ಚಿನ ಬೇಸಾಯದಲ್ಲಿದೆ.

ಈ ಸಸ್ಯಗಳನ್ನು ಬೀಜ, ಕಾಂಡದ ತುಂಡುಗಳು ಮತ್ತು ಬೇರು ತುಂಡುಗಳಿಂದ ವೃದ್ಧಿ ಮಾಡಬಹುದು. ಬಿತ್ತಿದ ಸು. 10 ದಿವಸಗಳಲ್ಲಿ ಬೀಜಗಳು ಮೊಳೆಯುತ್ತವೆ. 3–4 ಅಂಗುಲ ಎತ್ತರದ ಸಸಿಗಳನ್ನು ಕಿತ್ತು 2 ಅಡಿ ಅಂತರದಲ್ಲಿ ನಾಟಿ ಮಾಡಬೇಕು. ಕೊಂಚ ನೆರಳಿದ್ದರೆ ಬೆಳವಣಿಗೆಗೆ ಅನುಕೂಲ. ಸಸಿ ನಾಟಿಮಾಡಿದ 6 ತಿಂಗಳ ಅನಂತರ ಹೂ ಬಿಡುತ್ತದೆ.

ಕಂಪ್ಯಾನುಲ ಮೀಡಿಯಂ

(ಎಂ.ಎಚ್.ಎಂ.)

**ಕಂಬಗಳು, ಕಮಾನುಗಳು ಮತ್ತು ಗುದ್ದು ಕಂಬಗಳು :** ಸೇತುವೆಗಳ ಮತ್ತು ಕಟ್ಟಡಗಳ ರಚನೆಯಲ್ಲಿ ಬಳಸುವ ಪದಗಳು. ತೂಕವನ್ನು ಹೊರಲು ಭದ್ರ ಅಡಿಪಾಯದ ಮೇಲೆ ಲಂಬವಾಗಿ ಸಾಕಷ್ಟು ಎತ್ತರಕ್ಕೆ ಮತ್ತು ಕ್ಲುಪ್ತದೂರಗಳಲ್ಲಿ ರಚಿಸಿರುವ ಕಟ್ಟಡಗಳ ಹೆಸರು ಕಂಬಗಳು (ಪಿಯರ್ಸ್). ಇವು ಊರ್ಧ್ವ ದಿಕ್ಕಿನಲ್ಲಿ ಮಾತ್ರ ತೂಕವನ್ನು ಒಯ್ಯಬಲ್ಲವು. ವಿಶಿಷ್ಟವಾದ ವಕ್ರರೇಖಾವಿನ್ಯಾಸಗಳೂ ಅವುಗಳ ನಡುವೆ ತೆರಪುಗಳೂ



ಕಂಬಗಳ ಎರಡು ಬಗೆಗಳು : ಎಡಗಡೆಯದು ಇಗ್ಗುಂಡು ಮಾದರಿಯ ಆರ್.ಸಿ.ಸಿ. ಕಂಬ; ಬಲಗಡೆಯದು ಉರುಳೆಯಾಕಾರದ್ದು

ಇದ್ದು ಮೇಲಿನಿಂದ ಸಂಮರ್ದಿತವಾಗುವ ಊರ್ಧ್ವದಿಕ್ಕಿನ ಹೊರೆಯನ್ನು ಮಟ್ಟಸ ಒತ್ತಡವಾಗಿ ಪರಿವರ್ತಿಸುವ ರಚನೆಗಳೇ ಕಮಾನುಗಳು (ಆರ್ಚಸ್). ಕಮಾನಿನ ತಳದಲ್ಲಿ ಸಂಮರ್ದಿತವಾಗುವ ತೂಕವನ್ನು ಸ್ವೀಕರಿಸಲು ಏರ್ಪಟ್ಟ ಸ್ವಲ್ಪ ಅಗಲವಾದ ಶಿರೋಭಾಗದಿಂದ ಕೂಡಿರುವ ಕಂಬದ ಹೆಸರು ಗುದ್ದುಕಂಬ (ಅಬಟ್‌ಮೆಂಟ್). ಒಂದು ಸೇತುವೆಯ



ಕಮಾನುಗಳ ವಿವಿಧ ಬಗೆಗಳು



ವಿವಿಧ ಬಗೆ ಗುದ್ದುಗಂಬಗಳ ನಕಾಸೆ

ಅಥವಾ ಕಟ್ಟಡದ ಮಟ್ಟಸ ಮೇಲುಭಾಗದ ತೂಕ ಕಮಾನುಗಳಲ್ಲಿ ಯುಕ್ತರೀತಿಯಲ್ಲಿ ವಿಘಟಿತಗೊಂಡು ಗುದ್ದುಕಂಬಗಳ ಹಾಗೂ ಕಂಬಗಳ ಮೂಲಕ ಅಡಿಪಾಯಕ್ಕೆ ಸಾಗುತ್ತದೆ. ತೂಕದ ಈ ಸಮಪ್ರಮಾಣದ ವಿತರಣೆ ಕಟ್ಟಡಕ್ಕೆ ಭದ್ರತೆಯನ್ನು ಒದಗಿಸುವುದು.

3.33 ಮೀ ಅಗಲದ ತೆರಪುಗಳುಳ್ಳ ಕಲ್ಲಿನ ಸೇತುವೆಗಳನ್ನು 0.91 ಮೀ ಮಂದವಾದ ಕಮಾನಿನ ಕಲ್ಲುಗಳಿಂದ ಕಟ್ಟಬೇಕಾಗುತ್ತದೆ. ಕಮಾನಿನ ಏರಿಕೆ (ರೈಸ್) ಕಂಬದ ತಲೆಯ ಮೇಲೆ ಕಮಾನಿನ ಕೆಳಭಾಗಕ್ಕೆ 1.82 ಮೀ (ಅಗಲದ 1/5 ಭಾಗ) 2.27 ಮೀ (ಅಗಲದ 1/4 ಭಾಗ) ಎತ್ತರವಾಗಿರುತ್ತದೆ. ಅದರ ಮೇಲೆ 0.91 ಮೀ ಮಂದವಾದ ಕಮಾನಿನ ಕಲ್ಲುಗಳುಳ್ಳ ಸೇತುವೆ ಬರುತ್ತದೆ. ಪ್ರತಿ ನಾಲ್ಕನೆಯ ಕಂಬವನ್ನು ಕೊಂಚ ಹೆಚ್ಚಿನ ಅಗಲದ ಗುದ್ದುಗಂಬವಾಗಿ ಸಂವಿಧಾನ ಮಾಡಿರುತ್ತಾರೆ. ಮೊದಲನೆಯ ಕಮಾನಿನ ತಲೆಗಲ್ಲುಗಳನ್ನು (ಕೀಸ್ಟೋನ್ಸ್) ಬಡಿದು ಕೂರಿಸುವಾಗ ಎರಡನೆಯ ಕಮಾನಿನ ಆಧಾರದ (ಸೆಂಟರಿಂಗ್) ಮೇಲೆ ಎರಡು ಕಡೆಗಳಿಂದಲೂ ಮೂರನೆಯ ಎರಡು ಭಾಗ ಕಮಾನಿನ ಕಲ್ಲುಗಳನ್ನೂ ಮೂರನೆಯ ಕಮಾನಿನ ಆದಾರದ ಮೇಲೆ ಮೂರರಲ್ಲಿ ಒಂದನೆಯ ಭಾಗ ಕಮಾನಿನ ಕಲ್ಲುಗಳನ್ನೂ (ಸಿಮೆಂಟಿಗೆ ಮರಳನ್ನು ಬೆರೆಸಿ ತಯಾರಿಸಿದ ಗಾರೆಯಲ್ಲಿ) ಜೋಡಿಸಿರುತ್ತಾರೆ. ಮೊದಲನೆಯ ತೆರಪಿನ ಕಮಾನಿನ ತಲೆಗಲ್ಲುಗಳು ಭದ್ರವಾದ ಮೇಲೆ, ಹೀಗೆಯೇ ನಾಲ್ಕನೆಯ ತೆರಪಿನಲ್ಲಿ ಮೂರನೆಯ ಒಂದು ಭಾಗ ಕಲ್ಲುಗಳನ್ನು ಜೋಡಿಸಿ ಎರಡನೆಯ ಕಮಾನಿನ ಕಲ್ಲುಗಳನ್ನು ಮೊದಲನೆಯದರಂತೆಯೇ ಸಿಮೆಂಟ್ ಗಾರೆಯಲ್ಲಿ ಬಡಿದು ಕೂರಿಸುತ್ತಾರೆ.

ಕಾವೇರಿ ನದಿಗೆ ಅಡ್ಡಲಾಗಿ ಹಾಸನ ಜಿಲ್ಲೆಯ ರಾಮನಾಥಪುರ ಕ್ಷೇತ್ರದಲ್ಲಿ ಮೂರು ಶತಮಾನಗಳಿಗೂ ಹಿಂದೆ (1636) ಕಟ್ಟಿದ ಕಲ್ಲಿನ ಕಮಾನುಗಳ ಸೇತುವೆಯೇ ಭಾರತದಲ್ಲಿ ಕೊನೆಯದು. ಅಲ್ಲಿಂದ ಮುಂದೆ ಅದರ ಸ್ಥಾನವನ್ನು ಪ್ರಬಲಿತಕಾಂಕ್ರೀಟು (ಭದ್ರಶಿಲಾ ಸ್ವೀಟು) (ರೀಇನ್‌ಫೋರ್ಸ್ಡ್) ಮತ್ತು ಉಕ್ಕು ತೆಗೆದುಕೊಂಡಿವೆ. **(ನೋಡಿ– ಕಮಾನು)**

(ಎಚ್.ಸಿ.ಕೆ.)

**ಕಂಬದಕಡ ಯೋಜನೆ :** ಇದು ಕಾವೇರಿ ನದಿಯ ನೀರನ್ನು ಬಳಸಿಕೊಳ್ಳುವ ಒಂದು ಯೋಜನೆ. ಸು. 2,500 ಎಕರೆ ಜಮೀನಿಗೆ ಪೂರೈಸುವ ಯೋಜನೆ ವೆಚ್ಚ ಸು.190 ಲಕ್ಷ ರೂಪಾಯಿ. ಇದರ ಬದಲಾಗಿ ಇನ್ನೆರಡು ಯೋಜನೆಗಳನ್ನು ಸೂಚಿಸಬೇಕೆಂದು ಸರ್ಕಾರ ಆದೇಶವಿತ್ತಿತು. ಹೊಸಪಟ್ಟಣದ ಕಾವೇರಿ ನೀರಾವರಿ ಯೋಜನೆ ಇವುಗಳಲ್ಲೊಂದು. ಇದನ್ನೇ ಕೆಲವೊಮ್ಮೆ ಕಂಬದಕಡ ಯೋಜನೆಯೆಂದು ಕರೆಯುವುದುಂಟು. ಸೋಮವಾರಪೇಟೆ ತಾಲ್ಲೂಕಿನ ಹೊಸಪಟ್ಟಣದ ಬಳಿ ಕಾವೇರಿ ನದಿಗೆ ಒಂದು ಕಟ್ಟೆ ಕಟ್ಟಿ ಸು. 5,110 ದಶಲಕ್ಷ ಘನ ಅಡಿ ನೀರನ್ನು ಶೇಖರಿಸುವುದು ಇದರ ಉದ್ದೇಶ. ಈ ಕಟ್ಟೆಯ ಬಲದಂಡೆ ಕಾಲುವೆಯ ನೀರು ಸು. 4,200 ಎಕರೆ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿ, ಕೊನೆಗೆ ಹಾರಂಗಿ ನೀರಾವರಿ ಯೋಜನೆಯ ಬಲಭಾಗದ ಶಾಖೆಯ ಕಾಲುವೆಯನ್ನು ಸೇರಿ ಸು. 15,800 ಎಕರೆ ಅಧಿಕ ಪ್ರಮಾಣದ ಭೂಮಿಗೆ ನೀರನ್ನೊದಗಿಸುವುದು. ಸು.4,200 ಎಕರೆಗಳಲ್ಲಿ ಬೆಳೆಯುವ, ವರ್ಷಕ್ಕೆ ಎರಡು ಬತ್ತದ ಬೆಳೆ ಮತ್ತು ಸು. 15,800 ಎಕರೆಗಳಲ್ಲಿ ಕಬ್ಬಿನ ಬೆಳೆ–ಈ ಯೋಜನೆಯಿಂದ ನೀರಿನ ಸೌಲಭ್ಯವನ್ನು ಪಡೆಯುವುವು. ಈ ಯೋಜನೆಯ ಒಟ್ಟು ವೆಚ್ಚ ಸು. 500 ಲಕ್ಷ ರೂಪಾಯಿ.

ಈ ಕಟ್ಟೆ ಗುಡ್ಡೆಹೊಸೂರಿನಿಂದ ಸು. 8 ಕಿಮೀ ದೂರದ ಹೊಸಪಟ್ಟಣದ ಬಳಿ ಇದೆ. ಕುಶಾಲನಗರದಿಂದ ಇಲ್ಲಿಗೆ ಸು. 12 ಕಿಮೀ ದೂರ. ಕಟ್ಟೆಯ ಉದ್ದ 4,975' ಅಡಿ 1516 ಮೀ ನದಿಯ ತಳಭಾಗದಿಂದ ಕಟ್ಟೆಯ ಎತ್ತರ ಸು. 25.6 ಮೀ ಇದರ ಜಲ ಶೇಖರಣಾ ಸಾಮರ್ಥ್ಯ ಸು. 6,100 ದಶಲಕ್ಷ ಘನ ಅಡಿಗಳು. ಜಲಾಶಯ ಸು. 5,057 ಎಕರೆಯಷ್ಟು ಭೂಮಿಯನ್ನು ಆವರಿಸುವುದು. ಇದರಲ್ಲಿ 2,304 ಎಕರೆ ಖಾಸಗೀ ಆಸ್ತಿಯೂ ಸು. 2,753 ಕಾಡುಪ್ರದೇಶವೂ ಸೇರಿವೆ. ಕರ್ನಾಟಕದ ಪಾಲಿನ ಕಾವೇರಿ ನದಿಯ ನೀರಿನಲ್ಲಿ ಸು. 5,650 ದಶಲಕ್ಷ ಘನ ಅಡಿ ನೀರು ಇಲ್ಲಿ ಬಳಕೆ ಆಗುವುದು. (ಕೆ.ಸಿ.ಜಿ.)

**ಕಂಬದ ಮರ :** ಅನೋನೇಸೀ ಕುಟುಂಬಕ್ಕೆ ಸೇರಿದ್ದು ಉದ್ಯಾನಪ್ರಾಮುಖ್ಯವನ್ನು ಪಡೆದ ಒಂದು ಸುಂದರವಾದ ಮರ. ಈ ಜಾತಿಯ ವೈಜ್ಞಾನಿಕ ಹೆಸರು ಪಾಲಿಯಾಲ್ತಿಯ. ಇದರಲ್ಲಿ ಸು. 70 ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ಉಷ್ಣವಲಯದ ಅದರಲ್ಲೂ ಏಷ್ಯದ ನಿವಾಸಿಗಳು. ಭಾರತದಲ್ಲಿ ಸು. 12 ಪ್ರಭೇದಗಳಿವೆ. ಇವುಗಳಲ್ಲಿ ಪಾಲಿಯಾಲ್ತಿಯ ಲಾಂಜಿಫೋಲಿಯ, ಪಾ.ಸೆರಸಾಯ್ಡಿಸ್, ಪಾ.ಫ್ರೇಗ್ರನ್ಸ್ ಮತ್ತು ಪಾ.ಸ್ಯೂಬಿರೋಸಗಳು ಮುಖ್ಯವಾದ ಪ್ರಭೇದಗಳು.

ಕಂಬದ ಮರ (ಪಾ.ಲಾಂಜಿಫೋಲಿಯ) ಸಿಂಹಳದ ಒಳಪ್ರದೇಶಗಳ ಮೂಲವಾಸಿ ಯೆಂದು ಹೇಳುತ್ತಾರೆ. ಭಾರತದ ಎಲ್ಲ ಪ್ರದೇಶಗಳಲ್ಲೂ ಇದು ಸರ್ವೇಸಾಮಾನ್ಯ. ಸುಂದರವಾಗಿ ತೇರಿನಂತೆ ಇದ್ದು ಸದಾ ಹಸಿರಾಗಿ ಕಂಗೊಳಿಸುವ ಇದನ್ನು ಅಲಂಕಾರಕ್ಕಾಗಿ ಉದ್ಯಾನವನಗಳಲ್ಲೂ ಬೀದಿಯ ಇಕ್ಕೆಲಗಳಲ್ಲಿ ಸಾಲುಮರವಾಗಿಯೂ ಬೆಳೆಸುವರು. ಇದಕ್ಕೆ ಹೆಸ್ಸರೆ, ವುಬ್ಬಿನ ಮುಂತಾದ ಇತರ ಹೆಸರುಗಳೂ ಉಂಟು. ಇದು ನೇರವಾಗಿ ಕೊಂಬೆಗಳಿಲ್ಲದೆ ತೇರಿನಂತೆ ಬೆಳೆಯುವ ಮರ. ಕೆಲವೊಮ್ಮೆ ಪಕ್ಕದಲ್ಲಿ ಇಳಿಬಿದ್ದಿರುವ ರೆಂಬೆಗಳಿರುವುದೂ ಉಂಟು. ತೊಗಟೆ ನಯ, ದಪ್ಪ ಹಾಗೂ ಕಂದು ಬಣ್ಣದ್ದು. ಕಾಂಡದ ಒಳಭಾಗ ಹಗುರವಾಗಿಯೂ ಮೆತ್ತಗೂ ಇರುತ್ತದೆ. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ,

ಮಿರುಗುವ ಅವುಗಳ ಮೇಲ್ಮೈ, ನಯ, ಹಚ್ಚಹಸಿರು; ಆಕಾರ ಈಟಿಯಂತೆ; ಅಂಚು ಅಲೆಯಲೆಯಾಗಿದೆ. ಹೂಗಳು ಕೊಂಚ ಹಳದಿ ಮಿಶ್ರಿತ ಹಸಿರು ಬಣ್ಣದವು; ದ್ವಿಲಿಂಗಿಗಳು. ಹೂಗೊಂಚಲು ಎಲೆಗಳ ಕಂಕುಳಲ್ಲೊ ರೆಂಬೆಗಳ ತುದಿಯಲ್ಲೊ ಎಲೆಗಳಿಗೆ ಅಭಿಮುಖವಾಗೊ ಅಥವಾ ಎಲೆಗಳ ಕೆಳಗೆ ನೇರವಾಗಿ ಕಾಂಡಕ್ಕೆ ಅಂಟಿಕೊಂಡಂತೆಯೊ ಇರುತ್ತವೆ. ಪುಷ್ಪಪತ್ರಗಳು 3; ಬಿಡಿಬಿಡಿಯಾಗಿವೆ. ದಳಗಳು 6; ಬಿಡಿ ಹಾಗೂ ಮೂರು ಮೂರರಂತೆ ಎರಡು ಸುತ್ತುಗಳಲ್ಲಿ ಜೋಡಣೆಗೊಂಡಿವೆ. ಕೇಸರಗಳು ಹಲವಾರು; ಬೆಣೆಯಂತೆ ಆಕಾರವುಳ್ಳವು. ಅಂಡಾಶಯ ಉಚ್ಚಸ್ಥಾನದ್ದು; ಅನೇಕ ಕಾರ್ಪೆಲುಗಳ ನ್ನೊಳಗೊಂಡಿದೆ. ಕಾರ್ಪೆಲುಗಳು ಬಿಡಿಬಿಡಿಯಾಗಿವೆ. ಒಂದೊಂದರಲ್ಲೂ ಒಂದು ಅಂಡಕೋಶ, ಉದ್ದನೆಯ ಶಲಾಕೆ, ಇವೆ. ಅಂಡಕಗಳ ಸಂಖ್ಯೆ 1–2. ಫಲ ಹಲವಾರು ಅಂಡಾಶಯಗಳಿಂದ ಬೆಳೆದ ಸಾಮೂಹಿಕ ಮಾದರಿಯದು. ಒಂದೊಂದು ಅಂಡಾಶಯ ದಲ್ಲೂ ಒಂದೊಂದೇ ಬೀಜವಿದೆ. ಕಾಯಿಗಳ ಬಣ್ಣ ಊದಾ; ಆಕಾರ ಗುಂಡಗೆ.

ಕಂಬದ ಮರ ತೇವಪೂರಿತ ಹಾಗೂ ಬೆಚ್ಚನೆಯ ಪ್ರದೇಶಗಳಲ್ಲಿ ಹುಲಸಾಗಿ ಬೆಳೆಯುತ್ತದೆ. ಬೀಜಗಳ ಮುಖಾಂತರ ಇದನ್ನು ವೃದ್ಧಿ ಮಾಡಬಹುದು. ಮರಗಳನ್ನು ಬೆಳೆಸುವ ಸ್ಥಳಗಳಲ್ಲೆ ನೇರವಾಗಿ ಬೀಜ ಬಿತ್ತಿ ಸಸಿ ಮಾಡಬಹುದು. ಅಥವಾ ಕುಂಡಗಳಲ್ಲೊ ಬುಟ್ಟಿಗಳಲ್ಲೊ ಬೀಜ ಬಿತ್ತಿ ಸಸಿಗಳನ್ನು ಪಡೆದು ಸ್ಥಳಾಂತರಿಸಬಹುದು. ಬೀಜಗಳ ಮೊಳೆಯುವ ಸಾಮರ್ಥ್ಯ ಒಂದೇ ಋತುಮಾನ ಮಾತ್ರ ಇರುವುದರಿಂದ ಆ ವರ್ಷದ ಜುಲೈ ಅಥವಾ ಆಗಸ್ಟ್ ತಿಂಗಳಿನಲ್ಲಷ್ಟೆ ಬಿತ್ತಬೇಕು.

ಕಂಬದ ಮರದ ಚೌಬೀನೆ ಕೊಂಚ ಹಳದಿ ಅಥವಾ ಬಿಳುಪು. ಮೃದು, ಹಗುರ ಹಾಗೂ ಮೆತುವಾಗಿದೆ, ಇದನ್ನು ಪೆಟ್ಟಿಗೆ, ಪೀಪಾಯಿ, ಆಸರೆಗಂಬ, ಗಾಡಿಪಟ್ಟಿ ಮೊದಲಾದುವನ್ನು ಮಾಡಲು ಬಳಸುತ್ತಾರೆ. ಅಲ್ಲದೆ ಪೆನ್ಸಿಲ್ ಮತ್ತು ಬೆಂಕಿ ಕಡ್ಡಿಗಳನ್ನೂ ಇದರಿಂದ ತಯಾರಿಸಬಹುದು. ಹಿಂದಿನ ಕಾಲದಲ್ಲಿ ಹಡಗುಗಳ ಪಟಸ್ತಂಭಗಳನ್ನು

ಮಾಡಲೂ ಈ ಮರವನ್ನು ಉಪಯೋಗಿಸುತ್ತಿದ್ದರು. ಹಣ್ಣುಗಳನ್ನು ಅನಾವೃಷ್ಟಿ ಕಾಲದಲ್ಲಿ ತಿನ್ನುವ ರೂಢಿಯಿದೆ. ಎಲೆಗಳು ಸ್ವಲ್ಪಮಟ್ಟಿಗೆ ಸುವಾಸನಾಯುಕ್ತವಾಗಿರುವುದರಿಂದ ಅಲಂಕಾರಕ್ಕಾಗಿಯೂ ಉಪಯೋಗಿಸುವುದುಂಟು. ಭಾರತದ ಕೆಲವೆಡೆಗಳಲ್ಲಿ ಈ ಮರದ ತೊಗಟೆಯ ಕಷಾಯವನ್ನು ಜ್ವರಶಮನಕಾರಕವಾಗಿ ಬಳಸುವುದೂ ಇದೆ. ಕೆಲವು ಸಾರಿ ಅಶೋಕವೃಕ್ಷದ ತೊಗಟೆಯ ಬದಲಾಗಿ ಅಥವಾ ಅದರೊಂದಿಗೆ ಕಲಬೆರಕೆ ಮಾಡಿ ಇದನ್ನು ಉಪಯೋಗಿಸುತ್ತಾರೆ. ಇವೆರಡೂ ತೊಗಟೆಗಳಲ್ಲಿ ಬರಿಗಣ್ಣಿಗೇ ಕಾಣಿಸುವ ವ್ಯತ್ಯಾಸಗಳಿರುವುದರಿಂದಲೂ ಇವುಗಳ ಪುಡಿಗಳು ರಾಸಾಯನಿಕ ಗುಣ ಮತ್ತು ಕಿರಣಸ್ಫುರಣ (ಫ್ಲೂರಸೆನ್ಸ್) ಕ್ರಿಯೆಯಲ್ಲಿ ಬೇರೆಬೇರೆಯಾಗಿರುವುದರಿಂದಲೂ ಇವನ್ನು ಸುಲಭವಾಗಿ ಗುರುತಿಸಬಹುದು. ತೊಗಟೆಯ ಸಾರ ಹೃದಯದ ಬಡಿತವನ್ನು ಕುಗ್ಗಿಸುವ, ರಕ್ತದ ಒತ್ತಡವನ್ನು ಕಡಿಮೆ ಮಾಡುವ, ಉಸಿರಾಟವನ್ನು ಹೆಚ್ಚಿಸುವ ಗುಣವನ್ನು ಹೊಂದಿದೆ.

ಈ ಜಾತಿಯ ಇನ್ನೊಂದು ಪ್ರಭೇದವಾದ ಪಾ.ಸೆರಸಾಯ್ಡಿಸ್ ಎಂಬುದು ಸು.15ಮೀ ಎತ್ತರಕ್ಕೆ ಬೆಳೆಯುವ ಮರ. ಬಿಹಾರ, ಒರಿಸ್ಸ, ಅಸ್ಸಾಂ ಹಾಗೂ ಕೇರಳಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಬಹಳಮಟ್ಟಿಗೆ ಪಾ.ಲಾಂಜಿ ಪೋಲಿಯ ಪ್ರಭೇದವನ್ನು ಹೋಲುವ ಇದಕ್ಕೆ ನೆಟ್ಟಲಿಂಗಮರ ಅಥವಾ ಸಣ್ಣ ಹೆಸ್ರೆ ಎಂಬ ಹೆಸರುಗಳೂ ಇವೆ. ಇದರ ಎಲೆ, ಹೂ ಮುಂತಾದುವು ಕಂಬದ ಮರದಂತೆಯೇ ಇವೆ. ತೊಗಟೆ ಮಾತ್ರ ಕಪ್ಪು ಅಥವಾ ಬೂದಿ ಬಣ್ಣದ್ದು, ತೆಳುವಾಗಿ ಒರಟಾಗಿದೆ. ಚೌಬೀನೆ, ಆಲಿವ್–ಬೂದಿ ಬಣ್ಣದ್ದು, ಕೊಂಚ ಗಡುಸು, ಹಾಗೂ ಭಾರ; ಸರಿಯಾಗಿ ಹದಗೊಳಿಸದಿದ್ದಲ್ಲಿ ಕೊಂಚಕಾಲದ ಮೇಲೆ ಉದ್ದವಾದ, ಆಳವಾದ ಬಿರುಕುಗಳುಂಟಾಗುತ್ತವೆ. ಆದರೆ ಗರಗಸದಿಂದ ಕೊಯ್ಯಲೂ ಮೆರುಗುಗಳನ್ನು ಮಾಡಲೂ ಉಪಯೋಗಿಸುತ್ತರೆ. ಅಲ್ಲದೆ ಇದು ಒಳ್ಳೆಯ ಉರುವಲು ಕೂಡ ಹೌದು.

ಪಾಲಿಯಾಲ್ತಿಯದ ಮತ್ತೊಂದು ಪ್ರಭೇದ ಪಾ.ಫ್ರೇಗ್ರನ್ಸ್ ಎಂಬುದು ಪಶ್ಚಿಮ ಘಟ್ಟಗಳ ಸದಾ ಹಸುರಿನ ಕಾಡುಗಳಲ್ಲಿ ಕಾಣಬರುತ್ತದೆ. ಈ ಗಿಡ ಸು. 25 ಮೀ ಎತ್ತರಕ್ಕೆ ಬೆಳೆಯುತ್ತದೆ. ಇದಕ್ಕೆ ಕನ್ನಡದಲ್ಲಿ ಗೌರಿ ಅಥವಾ ಹಬ್ಬೆ ಮರ ಎಂಬ ಹೆಸರುಗಳಿವೆ. ಇದರ ಚೌಬೀನೆ ಬೂದಿಮಿಶ್ರಿತ ಬಿಳುಪು, ಮೃದು ಮತ್ತು ಹಗುರ. ಆದರೆ ಬಹುಕಾಲ ಬಾಳಿಕೆ ಬರುವಂಥದ್ದಲ್ಲ. ಇದನ್ನು ತಾತ್ಕಾಲಿಕ ಕಟ್ಟಣೆಗಳು, ಪೀಠೋಪಕರಣ, ಬೆಂಕಿಪೆಟ್ಟಿಗೆ, ಪೆಟ್ಟಿಗೆಗಳು ಮುಂತಾದುವನ್ನು ಮಾಡುವುದಕ್ಕೆ ಉಪಯೋಗಿಸುತ್ತಾರೆ. ವಿರೋಪ್ಲೇನುಗಳ ರೆಕ್ಕೆ, ಟೆನ್ನಿಸ್ ಮತ್ತು ಬ್ಯಾಡ್‌ಮಿಂಟನ್ ಬ್ಯಾಟುಗಳು, ಫೋಟೋ ಕಟ್ಟುಗಳು, ಬಿಲಿಯರ್ಡ್ ಕೋಲುಗಳು, ಪ್ಲೈವುಡ್ ಮುಂತಾದುವುಗಳ ತಯಾರಿಕೆಯಲ್ಲಿ ಇದನ್ನು ಬಳಸಬಹುದಾಗಿದೆ.

ಪಾಲಿಯಾಲ್ತಿಯ ಸ್ಯೂಬಿರೋಸ ಎಂಬುದು ಭಾರತಾದ್ಯಂತ ಕಾಣಬರುವ ಇನ್ನೊಂದು ಪ್ರಭೇದ. ದೊಡ್ಡ ಪೊದೆಯಂತೆಯೋ ಸಣ್ಣ ಮರವಾಗಿಯೋ ಬೆಳೆಯುವ ಇದರ ಚೌಬೀನೆಯನ್ನು ಮರಗೆಲಸಗಳಲ್ಲಿ, ಪಟಸ್ತಂಭಗಳ ಹಾಗೂ ದೋಣಿಗಳ ದೂಲಗಳ ತಯಾರಿಕೆಯಲ್ಲಿ ಉಪಯೋಗಿಸುವುದುಂಟು. ಹಣ್ಣುಗಳನ್ನು ತಿನ್ನಬಹುದು. ಹೊಸದಾಗಿ ಅಗೆದು ತೆಗೆದ ಬೇರುಗಳಿಂದ ತಯಾರಿಸಿದ ಕಷಾಯವನ್ನು ಫಿಲಿಪೀನ್ಸ್ ದ್ವೀಪವಾಸಿಗಳು ಗರ್ಭಪಾತಕ್ಕಾಗಿ ಬಳಸುತ್ತಾರೆಂದು ಹೇಳಲಾಗಿದೆ. ಈ ಮರ ಒಂದು ಬಗೆಯ ಅರಗುಕೀಟಕ್ಕೆ ಆಶ್ರಯವಾಗಿದೆ. (ಎನ್.ಡಿ.ಕೆ.)

**ಕಂಬದಹಳ್ಳಿ :** ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿರುವ ಒಂದು ಪುಣ್ಯಕ್ಷೇತ್ರ. ಇಲ್ಲಿನ ಪಂಚಕೂಟಬಸ್ತಿಯ ಉತ್ತರದಲ್ಲಿರುವ 15.24 ಮೀ ಎತ್ತರದ ಕರಿಕಲ್ಲಿನ ಬ್ರಹ್ಮದೇವರ ಕಂಬವೇ ಊರಿನ ಹೆಸರಿಗೆ ಕಾರಣ. ಈ ಕಂಬದ ತಳಭಾಗದ ಎಂಟು ಮುಖಗಳ ಮೇಲೂ ಅಷ್ಟದಿಕ್ಪಾಲಕರ ಶಿಲ್ಪಗಳಿದ್ದು ಈ ಕಂಬದ ಮೇಲೆ ಪೂರ್ವಾಭಿಮುಖವಾದ ಬ್ರಹ್ಮದೇವರ ಶಿಲ್ಪವಿದೆ. ಸಮೀಪದಲ್ಲಿ ದ್ರಾವಿಡ ಶೈಲಿಯಲ್ಲಿ ಕಲ್ಲಿನಿಂದ ಕಟ್ಟಲಾದ ಏಳು ದೇವಾಲಯಗಳಿವೆ. ಪ್ರ.ಶ. 900ರ ಸುಮಾರಿನಲ್ಲಿ ಕಟ್ಟಲ್ಪಟ್ಟ ಪಂಚಕೂಟಬಸ್ತಿಯಲ್ಲಿ ನಡುವೆ ಇರುವುದೇ ತ್ರಿಕೂಟಾಚಲ ಆದಿನಾಥಬಸ್ತಿ. ಇದರಲ್ಲಿ ಪಲ್ಲವಶಿಲ್ಪದ ಪ್ರಭಾವ ಕಂಡುಬರುತ್ತದೆ. ದೇವಾಲಯದ ಕೆಳಭಾಗ ಅಷ್ಟಕೋಣಾಕಾರವಾಗಿದ್ದು ಗೋಡೆಯ ಮೇಲುಗಡೆ ಯಕ್ಷ, ಜಿನರ ಲತಾಪಟ್ಟಿಕೆಗಳಿವೆ. ಗೂಡುಗಳಿಗೆ ಪುಷ್ಪ ಅಥವಾ ಮಕರತೋರಣಗಳಿವೆ. ಇವುಗಳಲ್ಲಿ ಗಂಧರ್ವ, ಯಾಳಿ, ಮುಕ್ಕೊಡೆ, ಮಕರಗಳ ಅಲಂಕರಣಗಳಿವೆ. ಮೇಲ್ಚಾವಣಿಗಳು ಬಾಗಿದ್ದು ಲಾಳದ ಆಕಾರದ ಕಮಾನುಗಳಿಂದ ಅಲಂಕೃತವಾಗಿವೆ. ಕೈಪಿಡಿ ಗೋಡೆಯ ಮೇಲೆ ಸಿಂಹಮುಖದ ಮೀನು, ನೀರ್ಗುದುರೆಗಳಿವೆ. ಬಲಭಾಗದ ಗರ್ಭಗುಡಿಯಲ್ಲಿ ನೇಮಿನಾಥ ಮತ್ತು ಎಡಭಾಗದ ಗುಡಿಯಲ್ಲಿ ಶಾಂತಿನಾಥ ವಿಗ್ರಹಗಳು ಕುಳಿತಿರುವಂತೆ ನಿರ್ಮಿತವಾಗಿವೆ. ಈ ದೇವಾಲಯದ ಮೂರು ಶಿಖರಗಳು ಕಣಶಿಲೆಯಿಂದ ನಿರ್ಮಿತವಾಗಿವೆ. ಈ ಮೂರು ಶಿಖರಗಳೂ ಮೂರು ವಿಧವಾಗಿವೆ. ಪೂರ್ವದ ಶಿಖರ ದುಂಡಾಗಿಯೂ ಉತ್ತರದ ಶಿಖರ ಚತುರಸ್ರವಾಗಿಯೂ ಪಶ್ಚಿಮದ ಶಿಖರ ಅಷ್ಟಾಸ್ರವಾಗಿಯೂ ಇವೆ. ಇವುಗಳ ಮೇಲೆ ಲತಾಪಟ್ಟಿಕೆಯೂ ಪೀಠದ ಮೇಲಿರುವ ಲಾಳದ ಆಕಾರದ ಕಮಾನಗಳೂ ಇವೆ. ಇವು ತಾಜ್‌ಮಹಲಿನ ಬುದ್ಬುದಾಕಾರದ ಶಿಖರಗಳನ್ನು ನೆನಪಿಗೆ ತರುತ್ತವೆ. ಗ್ರೀವಾಕಾರದ ಅಂತಸ್ತುಗಳುಳ್ಳ ಇಲ್ಲಿನ ಗೋಪುರಗಳು ಸುಂದರವಾಗಿಯೂ ಎತ್ತರವಾಗಿಯೂ ಇದ್ದು ಸ್ತಂಭಿಕೆಗಳಿಂದ ಅಲಂಕೃತವಾಗಿವೆ. ಶಿಖರದ

ಆದಿನಾಥ ಬಸ್ತಿಯ ಪಶ್ಚಿಮ ದಿಕ್ಕಿನ ಗೋಪುರ

ಮೇಲೆ ಮಗುಚಿಹಾಕಿದ ಪದ್ಮ ಆಕರ್ಷಣೀಯವಾಗಿದೆ. ಆದರೆ ಈ ಶಿಖರಕ್ಕೆ ಕಳಶಗಳಿಲ್ಲ. ಪೂರ್ವದಿಕ್ಕಿನ ಗೋಪುರದಲ್ಲಿರುವ ಅಂಡಾಕಾರದ ಗುಮ್ಮಟ ಮಹಾಬಲಿಪುರದ ಧರ್ಮರಾಜ ರಥ ಅಥವಾ ಎಲ್ಲೋರದ ಕೈಲಾಸ ದೇವಾಲಯದ ಗುಮ್ಮಟಗಳ ನೆನಪನ್ನುಂಟುಮಾಡುತ್ತದೆ. ಬಸ್ತಿಯಲ್ಲಿರುವ ವಾಹನಸ್ಥ ದಿಕ್ಪಾಲಕರಾದಿಯಾದ ಹಲವು ಪ್ರತಿಮೆಗಳು ಗಮನಾರ್ಹವಾಗಿವೆ.



ಆನೆ ಮತ್ತು ಸಿಂಹಗಳ ಹಾಗೂ ವೃಷಭಗಳ ಪಟ್ಟಿಕೆಗಳು

ಈ ತ್ರಿಕೂಟಾಚಲದ ನವರಂಗದಲ್ಲಿ ಹೆಚ್ಚು ಕೆತ್ತನೆ ಕೆಲಸವಿಲ್ಲ. ಸ್ತಂಭಗಳು ಸಾಮಾನ್ಯವಾಗಿವೆ. ಮೇಲ್ಚಾವಣಿಯ ಕಲ್ಲುಗಳ ಮಧ್ಯದಿಂದ ಹರಡಿಕೊಂಡಿವೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರೂ ಬಲಗೈಯಲ್ಲಿ ಶಂಖವನ್ನೂ ಎಡಗೈಯಲ್ಲಿ ದಂಡವನ್ನೂ

ಹಿಡಿದು ಐದು ಹೆಡೆಯ ಹಾವಿನ ಕೆಳಗಿರುವ ಧರಣೇಂದ್ರ, ಯಕ್ಷ, ಚಾಮರಧಾರಿಣಿಯರೂ ಇರುವುದು ಆಕರ್ಷಣೀಯ ದೃಶ್ಯವಾಗಿದೆ. ಬಳಿಯಲ್ಲಿ ಎರಡು ಮಂದಿರಗಳಿದ್ದು ಒಂದರಲ್ಲಿ ನಿಂತಿರುವ ಶಾಂತಿನಾಥನ ಮೂರ್ತಿಯಿದೆ. ಇಲ್ಲಿನ ಒಂದು ಶಾಂತಿನಾಥ ಬಸ್ತಿ 20

ನೇಮಿನಾಥ ತೀರ್ಥಂಕರ

ಚದರಡಿಯ ವಿಸ್ತೀರ್ಣದ್ದಾಗಿದ್ದು, ಇದರ ಗರ್ಭಗೃಹದ ಮೇಲ್ಛಾವಣಿಯಲ್ಲಿ ಪದ್ಮಗಳೂ ನಾಲ್ಕು ಅಷ್ಟಕೋಣ ಸ್ತಂಭಗಳೂ ಇವೆ. ಅಷ್ಟಕೋಣದ ಪೀಠದಲ್ಲಿ ದಿಕ್ಪಾಲಕರಿರುವುದು ಕಾಣಿಸುತ್ತದೆ. ಪೀಠದ ಮೇಲೆ ಸು. 3.05 ಮೀ ಎತ್ತರದ ಶಾಂತಿನಾಥನ ಮೂರ್ತಿ



ಯಕ್ಷಿ, ಶಾಂತಿನಾಥ ಬಸ್ತಿ

ಕಂಗೊಳಿಸುತ್ತದೆ. ಇದಕ್ಕೆ ಆಮೇಲೆ ಸೇರಿಸಿದ ಒಂಬತ್ತಂಕಣಗಳ ನವರಂಗದಲ್ಲಿ ನಾಲ್ಕು ಹೊಯ್ಸಳ ರೀತಿಯ ಬಳಪದ ಕಲ್ಲಿನ ಕಂಬಗಳಿವೆ. ನವರಂಗದ ಆಗ್ನೇಯ ಮೂಲೆಯಲ್ಲಿ ಪದ್ಮ ಪರಶು ಅಕ್ಷಮಾಲಾ ಫಲಗಳನ್ನು ಹಿಡಿದ ಯಕ್ಷವಿಗ್ರಹ ಮಗುಚಿ ಹಾಕಿದ ವೃಷಭಪೀಠದ ಹತ್ತಿರ ಇದೆ. ಮತ್ತೊಂದರಲ್ಲಿ ಯಾವ ಪ್ರತಿಮೆಯೂ ಇಲ್ಲ. ಶಾಂತಿನಾಥ ಮಂದಿರದಲ್ಲಿರುವ ಶಾಸನದಿಂದ ಈ ಮಂದಿರವನ್ನು ಪ್ರ.ಶ.12ನೆಯ ಶತಮಾನದಲ್ಲಿ ಹೊಯ್ಸಳ ವಿಷ್ಣುವರ್ಧನನ ದಂಡನಾಯಕ ಗಂಗರಾಜನ ಬೊಪ್ಪನು ದ್ರೋಹಘರಟ್ಟಾಚಾರಿ ಎಂಬ ಶಿಲ್ಪಿಯ ಸಹಾಯದಿಂದ ಕಟ್ಟಿಸಿದನೆಂದು ತಿಳಿದುಬರುತ್ತದೆ. ಇದರ ಹೊರವಲಯದ ಗೋಡೆಗಳ ಮೇಲಿರುವ ಆನೆ, ಕುದುರೆ, ಸಿಂಹ ಮತ್ತು ಯಾಳಿಗಳ ಚಿತ್ರಪಟ್ಟಿಕೆಗಳು ಅಮೋಘ ಕೆತ್ತನೆಗಳಾಗಿದ್ದು ಇತರ ಹೊಯ್ಸಳ ದೇವಾಲಯಗಳಲ್ಲಿರುವ ಕೆತ್ತನೆಗಳನ್ನು ಹೋಲುತ್ತವೆ. ಹಸನ್ಮುಖ ಶಾಂತಿನಾಥ ವಿಗ್ರಹ 3.05 ಮೀ ಗಳೆತ್ತರವಿದ್ದು ಇಲ್ಲಿನ ಬಹು ಸುಂದರ ಶಿಲ್ಪಕೃತಿಗಳಲ್ಲೊಂದಾಗಿದೆ. ಧ್ಯಾನಮಗ್ನ ನೇಮಿನಾಥ ಮತ್ತು ಜಿನಮೂರ್ತಿಗಳೂ ನವರಂಗದಲ್ಲಿರುವ ಯಕ್ಷಿಣಿ ಗೊಂಬೆಯೂ ಉತ್ತಮ ಕೃತಿಗಳು. ಉಬ್ಬು ಎದೆ, ತೆಳುವಾದ ಉದರ, ನೀಳವಾಗಿ ಜೋತಾಡುತ್ತಿರುವ ಕೂದಲು ಮತ್ತು ಅನೇಕ ಆಭರಣಯುಕ್ತವಾದ ಯಕ್ಷಿಣಿಶಿಲ್ಪ ಚೋಳಶೈಲಿಯ ಅತ್ಯುತ್ತಮ ಶಿಲ್ಪಗಳನ್ನು ಹೋಲುತ್ತದೆ. ನವರಂಗದ ಚಾವಣಿಯಲ್ಲಿನ ಇತರ ಕೆತ್ತನೆಗಳೂ ಉತ್ತಮ ಕಲಾಕೃತಿಗಳಾಗಿವೆ.

ಈ ಬಸ್ತಿಯ ಗರ್ಭಗುಡಿಯ ತೊಲೆಯ ಮೇಲೆ ವೀರರಾಜೇಂದ್ರನ ಶಾಸನವಿದೆ. ಆಗ್ನೇಯ ಸ್ತಂಭದ ಮೇಲೆ 14ನೆಯ ಶತಮಾನದ ಶಾಸನವಿದೆ. ಮೊದಲಿನ ಸುಕನಾಸಿದ್ವಾರದ ಹತ್ತಿರ ಅಷ್ಟಕೋಣಪೀಠ, ಎರಡು ದ್ವಾರಪಾಲ ವಿಗ್ರಹಗಳೂ ಇವೆ.

ಶಾಂತಿನಾಥ ಬಸ್ತಿಯ ಪೂರ್ವದಲ್ಲಿ ಮತ್ತೊಂದು ಬಸ್ತಿಯಿದೆ. ಇದರ ನವರಂಗದಲ್ಲಿ ಹಳೆಯ ರೀತಿಯ ಸ್ತಂಭಗಳಿವೆ. ಇದರ ಹಿಂಭಾಗದ ಗೋಡೆಯನ್ನು ತೆಗೆದು ಪೂರ್ವದ್ವಾರವನ್ನು ನಿಲ್ಲಿಸಲಾಗಿದೆ. ನವರಂಗದ ಮಧ್ಯದಲ್ಲಿರುವ ಭುವನೇಶ್ವರಿ ಆಕರ್ಷಣೀಯವಾಗಿದೆ. ಅಷ್ಟದಿಕ್ಪಾಲಕರು ಮತ್ತು ತೊಲೆಗಳು ಸಂಧಿಸುವ ಜಾಗದಲ್ಲಿ ಪುಷ್ಪಮಾಲಿಕೆಗಳನ್ನು ಹಿಡಿದಿರುವ ನಾಲ್ವರು ಗಂಧರ್ವರ ವಿಗ್ರಹಗಳಿವೆ. ಮಧ್ಯಫಲಕದಲ್ಲಿ ಯಕ್ಷ–ಯಕ್ಷಿ ಗಂಧರ್ವರ ನಡುವೆ ಸಿಂಹಪೀಠವಿದ್ದು ಅದರ ಹಿಂದೆ ಆನೆಗಳಿವೆ. ಸಿಂಹಪೀಠದ ಮೇಲೆ ಪ್ರಭಾವಳಿ, ಮುಕ್ಕೊಡೆಗಳಿಂದಲಂಕೃತವಾದ ಜಿನವಿಗ್ರಹವಿದೆ. ಈ ವಿಗ್ರಹಕ್ಕೆ ಬುದ್ಧನಿಗಿರುವಂತೆ ಊರ್ಣಕೇಶವಿದೆ. (ಬಿ.ಕೆ.ಜಿ.)

**ಕಂಬನ್ :** ತಮಿಳುನಾಡಿನ ಪ್ರಮುಖ ಕವಿಗಳ ಸಾಲಿನಲ್ಲಿ ಮೊದಲಿಗನೆನಿಸಿದವ. ರಾಮಾಯಣದ ಕರ್ತೃ. ಕಾಲ 9ನೆಯ ಅಥವಾ 12ನೆಯ ಶತಮಾನವೆಂದೂ ಅಭಿಪ್ರಾಯಭೇದವಿದೆ. ಈ ಹೆಸರು ಕವಿಗೆ ಹೇಗೆ ಬಂತೆಂಬುದನ್ನು ಹಲವು ರೀತಿಯಲ್ಲಿ ವಿವರಿಸುತ್ತಾರೆ. ಕಾಳಿಕಾಲಯದ ಧ್ವಜಸ್ತಂಭದಡಿಯಲ್ಲಿ ಅನಾಥಶಿಶುವಾಗಿ ಬಿದ್ದಿದ್ದ ಈತನನ್ನು ಉದಾರಿಯೊಬ್ಬ ಸ್ವೀಕರಿಸಿ ಬೆಳೆಸಿದುದರಿಂದ ಈ ಹೆಸರು ಬಂತೆಂದು ಕೆಲವರು ಹೇಳುತ್ತಾರೆ. ಕಾಂಚೀಪುರದ ದೇವರ ಹೆಸರಾದ ಏಕಂಬನ್ ಎಂಬುದೇ ಕಂಬನ್ ಎಂದಾಯಿತೆಂದು ಮತ್ತೆ ಕೆಲವರು ಹೇಳುತ್ತಾರೆ. ಕಂಬಂಗೊಲ್ಲೈ–ಎಂದರೆ ನವಣೆಯ ಹೊಲವನ್ನು ಕಾದುಕೊಂಡಿದ್ದುದರಿಂದ ಕಂಬನ್ ಎಂಬ ಹೆಸರು ಬಂತೆಂದು ಇನ್ನು ಕೆಲವರು ಹೇಳುತ್ತಾರೆ. ಕವಿ ಚೋಳ ನಾಡಿನ ತಿರುವಳಂದೂರಿನಲ್ಲಿ ಉವಚ್ಚರ್ (ಒಂದು ನೀಚಕುಲ) ಎಂಬ ಜಾತಿಗೆ ಸೇರಿದವನೆಂದು ಪ್ರತೀತಿ, ತಂದೆಯ ಹೆಸರು ಆದಿತ್ತರ್ ಎಂದು ಕೆಲವರ ಊಹೆ, ಇವನನ್ನು ಸಲಹಿದ ಉದಾರಿ ತಿರುವೆಣ್ಣೈನಲ್ಲೂರಿಗೆ ಸೇರಿದ ಜಡೆಯಪ್ಪ. ಸಲಹಿದವನಿಗೆ ತನ್ನ ಕೃತಜ್ಞತೆಯನ್ನು ತೋರಿಸುವುಕ್ಕಾಗಿ, ಕಾವ್ಯದಲ್ಲಿ ಕವಿ ಸಾವಿರ ಪದ್ಯಗಳಿಗೊಮ್ಮೆ ಆತನ ಹೆಸರನ್ನು ಸೂಚಿಸಿ ಹೊಗಳಿದ್ದಾನೆ. ಕಂಬನ್ ವೈಷ್ಣವ ಸಂಪ್ರದಾಯಕ್ಕೆ ಸೇರಿದವನಾದರೂ ಇತರ ಧರ್ಮಗಳನ್ನು ಕಿಂಚಿತ್ತೂ ಹೀನೈಸಿಲ್ಲ. ಕಂಬನ ಮಗನೇ ಅಂಬಿಕಾಪತಿ, ಇವನೂ ಕವಿಯೇ, ಕೊನೆಯಲ್ಲಿ ಕಂಬನ್ ರಾಮನಾಥಪುರ ಜಿಲ್ಲೆಯ ನಾಟ್ಟರಸನ್‌ಕೋಟೆಯೆಂಬಲ್ಲಿ ಕಾಲವಾದನೆಂದು ತಿಳಿಯುತ್ತದೆ. ಆ ಊರಿನಲ್ಲಿ ಕವಿಯ ಸಮಾಧಿಯಿದೆ.

ಸಂಸ್ಕೃತದಲ್ಲಿ ವಾಲ್ಮೀಕಿಯಿಂದ ರಚಿತವಾದ ರಾಮಾಯಣವನ್ನು ಕಂಬನ್ ತಮಿಳಿನಲ್ಲಿ ಬರೆದಿದ್ದಾನೆ. ಇಡೀ ಕಾವ್ಯದಲ್ಲಿ 10 ಸಾವಿರಕ್ಕಿಂತ ಮೇಲ್ಪಟ್ಟು ಪದ್ಯಗಳಿವೆ. ಇದು ಶ್ರೀರಂಗಂನಲ್ಲಿ ಪ್ರಕಟವಾಯಿತು. ಈ ಕಾವ್ಯಕ್ಕೆ ವಾಲ್ಮೀಕಿ ರಾಮಾಯಣ ಆಧಾರವಾಗಿದ್ದರೂ ತಮಿಳು ಸಂಪ್ರದಾಯ, ರೀತಿನೀತಿಗಳಿಗನುಸಾರವಾದ ಅನೇಕ ಮಾರ್ಪಾಟುಗಳೂ ಸನ್ನಿವೇಶ ಮತ್ತು ವ್ಯಕ್ತಿಚಿತ್ರಣದಲ್ಲಿ ವ್ಯತ್ಯಾಸಗಳೂ ಆಗಿರುವುದನ್ನು ಗಮನಿಸಬೇಕಾಗುತ್ತದೆ. ಬಿಲ್ಲನ್ನು ಮುರಿಯುವ ಮೊದಲೇ ರಾಮ ಸೀತೆಯನ್ನು ನೋಡುತ್ತಾನಲ್ಲದೆ ಪರಸ್ಪರರಿಗೆ ಪ್ರೇಮವಂಕುರಿಸುತ್ತದೆ–ಎಂಬ ಅಂಶವನ್ನು ನೋಡಬಹುದು. ಇದು ವಾಲ್ಮೀಕಿ ರಾಮಾಯಣದಲ್ಲಿಲ್ಲ. ಹಾಗೆಯೇ ಸೀತೆಯನ್ನು ರಾವಣ ಕದ್ದುಕೊಂಡೊಯ್ಯುವಾಗ ಅವನು ಅವಳನ್ನು ಸ್ಪರ್ಶಿಸದೆ, ಪರ್ಣಶಾಲಾಸಮೇತ ಎತ್ತಿಕೊಂಡು ಹೋದನೆಂಬುದು ಸಹ ಮುಖ್ಯಮಾರ್ಪಾಡು. ಮಾಯಾಜನಕ ವೃತ್ತಾಂತ, ಹಿರಣ್ಯವಧೆಯ ಸಂದರ್ಭಗಳು ಕವಿ ಮಾಡಿಕೊಂಡ ಹೊಸ ಕಲ್ಪನೆಗಳು. ಗುಹ ತಾರೆಯರಂಥ ಪಾತ್ರಗಳನ್ನು ಕವಿ ಉತ್ತಮಗೊಳಿಸಿದ್ದಾನೆ. ಒಟ್ಟಿನಲ್ಲಿ ಕಂಬರಾಮಾಯಣ ತಮಿಳಿನಲ್ಲಿ ಅತ್ಯಂತ ಉತ್ತಮ ಕಾವ್ಯ. ಗುಣದಲ್ಲೂ ಗಾತ್ರದಲ್ಲೂ ಹಿರಿದಾದುದೆಂಬ ಹೊಗಳಿಕೆಗೆ ಪಾತ್ರವಾಗಿದೆ. ಕಾವ್ಯ

ಲಕ್ಷಣಗಳನ್ನೆಲ್ಲ ಚೆನ್ನಾಗಿ ಕಲಿತ ಕಂಬನ್ ತನ್ನ ಕಾವ್ಯದಲ್ಲಿ ಅವನ್ನು ಸರಿಯಾಗಿ ಹೊಂದಿಸುತ್ತಾನೆ. ಸಂಸ್ಕೃತಭಾಷಾಪರಿಚಯ, ಲೋಕಾನುಭವ, ಆಳವಾದ ಪಾಂಡಿತ್ಯ ಮತ್ತು ಉತ್ಸಾಹಗಳನ್ನುಳ್ಳವ ಕಂಬನ್, ಪಾತ್ರಗಳಿಗೆ ಸಂದರ್ಭಗಳಿಗೆ ತಕ್ಕಂತೆ. ಸಹಜತೆಯನ್ನು ಮಾತಿನಲ್ಲಿ, ದೃಶ್ಯದಲ್ಲಿ, ಛಂದಸ್ಸಿನ ಮಾಧುರ್ಯದಲ್ಲಿ, ತಂದಿರುವುದನ್ನು ಕಾವ್ಯದುದ್ದಕ್ಕೂ ಕಾಣಬಹುದು. ರಚನೆಯಲ್ಲಿ ಆಳವಾದ ಅರ್ಥ, ನಯ, ನಾಜೂಕು, ಇಂಪಾದ ಛಂದೋಲಯ, ಅರ್ಥಸ್ಪಷ್ಟತೆ, ಸಂಕ್ಷಿಪ್ತತೆ, ರಸಪೂರ್ಣತೆ, ಸುಂದರ ಉಪಮೆಗಳ ಮೇಳ–ಇವುಗಳಿಂದ ಹೊಮ್ಮುವ ಕಾವ್ಯಸೌಂದರ್ಯದ ಉತ್ಕರ್ಷವನ್ನು ಕಾಣುತ್ತೇವೆ. ಸನ್ನಿವೇಶ ಸಂದರ್ಭಗಳನ್ನು ವರ್ಣಿಸುವುದರಲ್ಲಿ ಕಂಬನ್ ಅಪ್ರತಿಮ. ಕಾವ್ಯದುದ್ದಕ್ಕೂ ನಾಟಕೀಯತೆ ಎದ್ದು ಕಾಣುತ್ತದೆ. ಸಹೋದರಪ್ರೇಮ, ಪತಿವ್ರತಾಮಹಿಮೆ, ಶಿಷ್ಟರ ಉನ್ನತಿ, ದುಷ್ಟರ ಅವನತಿ, ದೈವಭಕ್ತಿ–ಇವನ್ನೆಲ್ಲ ಕಾವ್ಯದಲ್ಲಿ ಕವಿ ಎತ್ತಿಹಿಡಿದಿದ್ದಾನೆ. ಇಂಥ ಗುಣ ಗಳಿರುವುದರಿಂದಲೇ ಕಂಬನನ್ನು ಕವಿಚಕ್ರವರ್ತಿ ಎಂದು ಜನಸಾಮಾನ್ಯರೂ ಪಂಡಿತರೂ ಕೊಂಡಾಡುತ್ತಾರೆ. ವಿದ್ಯೆಯಲ್ಲಿ ಕಂಬನ್ ಬಲ್ಲಿದನೆಂಬುದಕ್ಕೆ ಕಂಬರ್ ವೀಟ್ಟು ಕಟ್ಟುತರಿಯುಂ ಕವಿಪಾಡುಂ–ಎಂದರೆ ಕಂಬನ ಮನೆಯ ಕೈಮಗ್ಗವೂ ಕವಿತೆಯನ್ನು ಹಾಡುವುದು–ಎಂಬ ನಾಣ್ಣುಡಿ ಸಾಕ್ಷಿಯಾಗಿದೆ. ತಮಿಳಿಗೆ ಗತಿ ಇಬ್ಬರೇ–ಒಬ್ಬ ಕಂಬನ್, ಇನ್ನೊಬ್ಬ ತಿರುವಳ್ಳುವರ್–ಎಂಬ ಜನಪ್ರಶಂಸೆ ಸಾರ್ಥಕವಾದುದಾಗಿದೆ. ಎಲ್ಲರೂ ಇಲ್ಲವೆನ್ನದವ ರಾಗಬೇಕು, ಅತುಳೈಶ್ವರ್ಯವನ್ನು ಹೊಂದಿದವರಾಗಬೇಕು–ಇಂಥ ಸುಖದಿಂದ ಬಾಳುವ ಜನರಿರುವ ನಾಡಿನ ಕನಸು ಕಾಣುತ್ತಾನೆ–ಕಂಬನ್.

ಉಳುವವರ ಹಿರಿಮೆಯನ್ನು ಏರ್ ಎಳುವದು–ಎಂಬ ತನ್ನ ಎಪ್ಪತ್ತು ಹಾಡುಗಳಲ್ಲಿಯೂ ಬೇಸಾಯಗಾರರು ಎಂಥ ಉಪಕಾರಿಗಳು ಎಂಬುದನ್ನು ತಿರುಕ್ಕೈವಳಕ್ಕಂ ಎಂಬ ಗ್ರಂಥದಲ್ಲಿಯೂ ಕಂಬನ್ ತೋರಿಸಿದ್ದಾನೆ. ಮತ್ತೆ ನಮ್ಮಾಳ್ವಾರರನ್ನು ಹೊಗಳುವ ಶಡಗೋಪರಂತಾದಿ, ಸರಸ್ವತಿಯನ್ನು ಸ್ತುತಿಸುವ ಸರಸ್ವತಿ ಅಂತಾದಿ ಎಂಬ ಗ್ರಂಥಗಳನ್ನೂ ಅಲ್ಲದೆ ಇತರ ಕವಿತೆಗಳನ್ನೂ ಈತ ರಚಿಸಿದ್ದಾನೆ.

ಪುಗಳ್ ಕಂಬನ್ ಪಿರಂದ ತಮಿಳ್‌ನಾಡ್ (ಶ್ರೇಷ್ಠ ಕವಿ ಕಂಬನುದಿಸಿದ ತಮಿಳುನಾಡು) ಎಂಬ ಕವಿತೆಯನ್ನೂ, ನಾವು ತಿಳಿದ ಕವಿಗಳಲ್ಲಿ ಕಂಬನಂಥ ಕವಿಗಳು ಭೂಮಿಯಲ್ಲಿ ಎಲ್ಲಿಯೂ ಹುಟ್ಟಲಿಲ್ಲ–ಎಂದರ್ಥ ಬರುವ ಮತ್ತೊಂದು ಹಾಡನ್ನೂ ಕವಿ ಭಾರತಿಯವರು ರಚಿಸಿದ್ದಾರೆ. ಕಂಬನ್ ಭಾರತದ ಇತರ ಶ್ರೇಷ್ಠ ಕವಿಗಳ ಅಗ್ರಸಾಲಿನಲ್ಲಿ ಸೇರತಕ್ಕವನಾಗಿದ್ದಾನೆ. (ಎಸ್.ಪಿ.ಟಿ.)

**ಕಂಬನ್, ಗುಯೋಮುನ್‌ಡೂರ್ :** 1888–1945. ಐಸ್ಲೆಂಡ್ ದೇಶದ ಕಾದಂಬರಿಕಾರ ಹಾಗೂ ನಾಟಕಕಾರ. ಐಸ್ಲೆಂಡಿನ ಲಿಟ್ಲ್‌ಬಯರ್‌ನಲ್ಲಿ ಜನಿಸಿದ. ಬಾಲ್ಯವಿದ್ಯಾಭ್ಯಾಸದ ಅನಂತರ ಡೆನ್‌ಮಾರ್ಕಿನಲ್ಲಿ ನೆಲೆಸಿ, ಡೇನಿಷ್ ಭಾಷೆಯಲ್ಲಿ ಕೃತಿಗಳನ್ನು ರಚಿಸಿದ. ನಾಟಕಗಳಲ್ಲಿ ಸಮಾಜದ ರೀತಿನೀತಿಗಳನ್ನು ಟೀಕಿಸಿದರೂ ವಿಶಾಲಹೃದಯಿ ಯೆನಿಸಿದ್ದ. ಪ್ರಾಚೀನ ಸಾಗಾಗಳಲ್ಲಿ ಆತನಿಗಿರುವ ಉತ್ಕಟ ಪ್ರೇಮವನ್ನು ಅವನ ಕಾದಂಬರಿ ಗಳಾದ ದಿ ವರ್ಜಿನ್ ಆಫ್ ಸ್ಕಾಲ್ ಹೋಲ್ಟ್ ಮತ್ತು ಐ ಸಿ ಎ ವಂಡ್ರಸ್ ಲ್ಯಾಂಡ್‌ಗಳಲ್ಲಿ ಕಾಣಬಹುದು. ಎರಡನೆಯ ಮಹಾಯುದ್ಧವಾದ ಮೇಲೆ ಡೇನಿಷ್ ಪ್ರೇಮಿಗಳು ಆತನನ್ನು ನಾಟ್ಸೀ ಪಕ್ಷದವನೆಂದು ತಪ್ಪು ತಿಳಿದು ಕೊಂದರು. (ಟಿ.ನಿ.ಎಸ್.)

**ಕಂಬರ್ಲೆಂಡ್ :** ಅಮೆರಿಕ ಸಂಯುಕ್ತಸಂಸ್ಥಾನದ ಮೆರಿಲೆಂಡ್ ರಾಜ್ಯದ ದೊಡ್ಡ ನಗರಗಳಲ್ಲಿ ಮೂರನೆಯದು. ರಾಜ್ಯದ ವಾಯವ್ಯ ಭಾಗದಲ್ಲಿ, ಪೊಟೋಮೆಕ್ ನದಿಯ ದಡದ ಮೇಲಿದೆ. ಸಮುದ್ರಮಟ್ಟಕ್ಕಿಂತ 194 ಮೀ ಎತ್ತರದಲ್ಲಿರುವ ಈ ನಗರದ ಮೂರು ಕಡೆಗಳಲ್ಲಿ ಪರ್ವತಗಳಿವೆ. ನ್ಯಾರೋಸ್ ಎಂದು ಪ್ರಸಿದ್ಧವಾದ ಸುಂದರ ಕಮರಿಯೊಂದು ಇದರ ನೈಸರ್ಗಿಕ ಹೆಬ್ಬಾಗಿಲು. ಕಂಬರ್ಲೆಂಡ್ ಅಥವಾ ರಾಷ್ಟ್ರೀಯ ರಸ್ತೆ ಈ ನಗರದಿಂದ ಆರಂಭವಾಗಿ ಪಶ್ಚಿಮಾಭಿಮುಖವಾಗಿ ಸಾಗುತ್ತದೆ. ಚೆಸಪೀಕ್ ಮತ್ತು ಒಹಾಯೊ ನಾಲೆಯ ಪಶ್ಚಿಮದ ಕೊನೆಯ ನಿಲುದಾಣ ಈ ನಗರ.

ಕಲ್ಲಿದ್ದಲು ವ್ಯಾಪಾರದಲ್ಲಿ ಇದು ಪ್ರಮುಖ ಸ್ಥಾನ ಪಡೆದಿದೆ. ವರ್ಷಕ್ಕೆ ಸು. 15,00,000 ಟನ್ ಕಲ್ಲಿದ್ದಲನ್ನು ಈ ಸುತ್ತಿನ ಪ್ರದೇಶದಲ್ಲಿ ಉತ್ಪಾದಿಸಲಾಗುತ್ತದೆ. ಇದಲ್ಲದೆ ಪ್ಲಾಸ್ಟಿಕ್, ಟೈರು, ಗಾಜಿನ ಸಾಮಾನು, ಇಟ್ಟಿಗೆ ಮತ್ತು ಮರದ ಸಾಮಾನುಗಳ ಉತ್ಪಾದನೆಯಾಗುತ್ತದೆ. ಕಂಬರ್ಲೆಂಡ್ ನಗರ ಪಶ್ಚಿಮ ಮೆರಿಲೆಂಡ್, ಪಶ್ಚಿಮ ವರ್ಜಿನಿಯ ಮತ್ತು ಪೆನ್ಸಿಲ್‌ವೇನಿಯಗಳ ಪ್ರಮುಖ ಕೇಂದ್ರ. ಇಲ್ಲಿ ಪ್ರಥಮವಾಗಿ ವಸತಿ ಏರ್ಪಟ್ಟಿದ್ದು 1750ರಲ್ಲಿ; 1763ರಲ್ಲಿ ಪಟ್ಟಣದ ಸ್ಥಾಪನೆಯಾಯಿತು; ನಗರದ ಸನ್ನದು ದೊರೆತದ್ದು 1850ರಲ್ಲಿ, ಜನಸಂಖ್ಯೆ 33,415 (1960). (ಎಂ.ಎ.ಎಸ್.)

**ಕಂಬರ್ಲೆಂಡ್ ಕಣಿವೆ :** ವರ್ಜಿನಿಯ, ಟೆನೆಸೀ ಮತ್ತು ಕೆಂಟಕಿಗಳು ಸೇರುವ ಸ್ಥಳದಲ್ಲಿದೆ. ಕಂಬರ್ಲೆಂಡ್ ಪರ್ವತ ಇಳಿಜಾರಾಗಿದೆ. ಈ ಕಣಿವೆಯ ಎತ್ತರ 1650'. ಇದನ್ನು ಥಾಮಸ್ ವಾಕರ್ 1750ರಲ್ಲಿ ಕಂಡುಹಿಡಿದ. ಅಮೆರಿಕನ್ ಅಂತರ್ಯುದ್ಧದ ಕಾಲದಲ್ಲಿ ಇದು ಕ್ರಮವಾಗಿ ಎರಡೂ ಪಕ್ಷಗಳ ಸೇನಾ ನೆಲೆಯಾಗಿತ್ತು. (ಎಂ.ಎ.ಎಸ್.)

**ಕಂಬರ್ಲೆಂಡ್ ನದಿ :** ದಕ್ಷಿಣ ಕಂಬರ್ಲೆಂಡ್ ಪ್ರಸ್ಥಭೂಮಿಯ ಕಂಬರ್ಲೆಂಡ್ ಪರ್ವತಪ್ರದೇಶದಲ್ಲಿ ಹುಟ್ಟಿ ಕೆಂಟಕಿ ಮತ್ತು ಟೆನೆಸೀಗಳಲ್ಲಿ ಹರಿದು 1100 ಕಿಮೀ ದೂರ ಕ್ರಮಿಸಿ ಒಹಿಯೊ ನದಿಯನ್ನು ಸೇರುತ್ತದೆ. ಬೇಸಗೆಯಲ್ಲಿ ಇದರ ಪ್ರವಾಹ ಕಡಿಮೆ. ಇದು ಮಳೆಗಾಲದಲ್ಲಿ ತುಂಬಿ, ಅನಾಹುತಕಾರಿಯಾಗಿ ಹರಿಯುತ್ತದೆ. ಈ ನದಿಯ ಮತ್ತು ಇದರ ಉಪನದಿಗಳ ಮೇಲೆ ಅನೇಕ ಕಟ್ಟೆಗಳನ್ನು ಕಟ್ಟಿ ನೌಕಾಯಾನಕ್ಕೂ ವಿದ್ಯುದುತ್ಪಾದನೆಗೂ ಸೌಲಭ್ಯ ಕಲ್ಪಿಸಲಾಗಿದೆ.

ಮೂರು ಜಲ ಮೂಲಗಳಿಂದ ರೂಪುಗೊಂಡಿರುವ ಈ ನದಿ ಜಲಪಾತ ಮತ್ತು ಕಂದರವನ್ನು ರೂಪಿಸುತ್ತದೆ. ವಿಟ್ಲೆಕೌಂಟಿಯಲ್ಲಿ 19 ಮೀ (63 ಅಡಿ) ಎತ್ತರದಿಂದ ಧುಮುಕಿ ಜಲಪಾತವನ್ನು ಸೃಷ್ಟಿಸಿದೆ. ಅಲ್ಲೊಂದು ರಾಷ್ಟ್ರೀಯ ಉದ್ಯಾನವಿದೆ (ಕೆಂಟಕಿ). ಇದಕ್ಕೂ ಮುಂಚೆ ಕಂಬರ್ಲೆಂಡ್ ಪ್ರಸ್ಥಭೂಮಿ ನಡುವೆ ಹರಿಯುತ್ತ 90–120 ಎತ್ತರದ ಪ್ರಪಾತವುಳ್ಳ ಕಂದರವನ್ನು ನಿರ್ಮಿಸಿದೆ. ಲಾರೆಲ್, ರಾಕ್ ಕ್ಯಾಸಲ್, ದಕ್ಷಿಣ ಫೋರ್ಕ್ (ಕೆಂಟಕಿ), ಬಜೆ, ಕಾನೆಫೋರ್ಕ್, ಹಾರ್ಪೆತ್ ಮತ್ತು ರೆಡ್ (ಟೆನಿಸ್ಸಿ) ಎಂಬುವು ಮುಖ್ಯ ಉಪನದಿಗಳು. (ಎಂ.ಎ.ಎಸ್.)

**ಕಂಬರ್ಲೆಂಡ್ ಪ್ರಸ್ಥಭೂಮಿ :** ಅಮೆರಿಕ ಸಂಯುಕ್ತಸಂಸ್ಥಾನದ ಪಶ್ಚಿಮ ಆಪಲೇಚಿಯಸ್ ಪ್ರಸ್ಥಭೂಮಿಯ ಒಂದು ಮುಖ್ಯಭಾಗ. ಪಶ್ಚಿಮ ವರ್ಜಿನಿಯದಿಂದ ಉತ್ತರ ಅಲಬಾಮದವರೆವಿಗೂ ವಿಸ್ತರಿಸಿದೆ. ಸು. 750 ಕಿಮೀ ಉದ್ದ ಮತ್ತು 60–80 ಕಿಮೀ ಗಳವರೆಗೂ ಅಗಲವಾಗಿದೆ. ಸು. 140 ಮೈಲಿ ಉದ್ದವಾಗಿರುವ ಪರ್ವತ ಪಂಕ್ತಿಯೊಂದು ಇದರ ಪೂರ್ವದ ಅಂಚು. ಇದನ್ನು ಕಂಬರ್ಲೆಂಡ್ ಪರ್ವತವೆಂದು ಕರೆಯುವುದು ರೂಢಿ. ಕಲ್ಲಿದ್ದಲು ಮತ್ತು ಸುಣ್ಣಕಲ್ಲು ಈ ಪ್ರಸ್ಥಭೂಮಿಯ ಮುಖ್ಯ ಖನಿಜಗಳು. (ಎಂ.ಎ.ಎಚ್.)

**ಕಂಬರ್ಲ್ಯಾಂಡ್, ರಿಚರ್ಡ್ :** 1732–1811. ಗೋಲ್ಡ್‌ಸ್ಮಿತ್, ಷೆರಿಡನ್, ಗ್ಯಾರಿಕ್‌ರ ಸಮಕಾಲೀನ ಇಂಗ್ಲಿಷ್ ನಾಟಕಕಾರ, ಆ ಕಾಲಕ್ಕೆ ಬಹುಜನ ಪ್ರಿಯವಾದ ಭಾವನಾಶೀಲ ಕಾಮೆಡಿಗಳನ್ನು ಬರೆದ ಖ್ಯಾತಿ ಇವನದು. 18ನೆಯ ಶತಕದಲ್ಲಿ ಯಾವ ರಂಗಮಂದಿರದಲ್ಲಿ ನೋಡಿದರೂ ಯಶಸ್ವಿಯಾಗಿ ಪ್ರದರ್ಶಿತವಾದ ನಾಟಕ ಎಂದರೆ ಇವರ ದಿ ವೆಸ್ಟ್ ಇಂಡಿಯನ್ (1771) ಎಂಬುದು, ಇವನ ಇನ್ನೊಂದು ಪ್ರಸಿದ್ಧ ನಾಟಕ ದಿ ಬ್ರದರ್ಸ್.

ಕೇಂಬ್ರಿಜ್ ಟ್ರಿನಿಟಿ ಕಾಲೇಜಿನಲ್ಲಿ ಪದವೀಧರನಾದ ಈತ ಕೆಲವು ಕಾಲ ಹ್ಯಾಲಿ ಫಾಕ್ಸ್‌ನ ಅರ್ಲ್ ಅವರ ಕಾರ್ಯದರ್ಶಿಯಾಗಿದ್ದ. ಅನಂತರ ವಾಣಿಜ್ಯ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದು ನಿವೃತ್ತನಾದ ಮೇಲೆ ಸಂಪೂರ್ಣವಾಗಿ ಸಾಹಿತ್ಯಕ್ಕೆ ಸಮಯವನ್ನು ವಿನಿಯೋಗಿಸುತ್ತ ಕೆಲವು ಕಾದಂಬರಿಗಳನ್ನೂ ಧರ್ಮಬೋಧಕ ಕವನಗಳನ್ನೂ ಬರೆದ. ಆದರೆ ಅವು ಯಾವುದರಲ್ಲೂ ಮಹತ್ವದ ಗುಣ ಇಲ್ಲ. ಮೆಮಾಯರ್ಸ್ ಬರೆದ. ಆದರೆ ಅವು ಯಾವುದರಲ್ಲೂ ಮಹತ್ವದ ಗುಣ ಇಲ್ಲ. ಮೆಮಾಯರ್ಸ್ ಎಂಬ ಈತನ ಆತ್ಮಕಥಾನಕ ಗ್ರಂಥ ಚೆನ್ನಾಗಿದೆ. ಕಂಬರ್‌ಲ್ಯಾಂಡನ ವಿಶೇಷತೆ ಇರುವುದೆಲ್ಲ ಆತನ ಕಾಮೆಡಿಗಳಲ್ಲಿ. ಈತ ಬರೆದ ಕೆಲವು ರುದ್ರನಾಟಕಗಳಲ್ಲಿ ದಿ ಜ್ಯೂ ಎಂಬುದು ಚೆನ್ನಾಗಿದೆ.

ದಿ ಅಬ್ಸರ್ವರ್ ಎಂಬ ಪ್ರಬಂಧ ಸಂಕಲನದಲ್ಲಿ ತಾನು ನೋಡಿದ ಜನರ, ಸಮಾಜ ಜೀವನದ ಚಿತ್ರಗಳನ್ನು ಈತ ಕೊಡುತ್ತಾನೆ. ಈತನ ಸೂಕ್ಷ್ಮ ಅವಲೋಕನಶಕ್ತಿ ಮೆಚ್ಚುವಂಥದಾದರೂ ಅತಿ ಆತ್ಮನಿಷ್ಠವಾದ ಇಲ್ಲಿನ ಬರೆವಣಿಗೆ ಓದುಗರಿಗೆ ಹಿಡಿಸುವುದಿಲ್ಲ. ಷೆರಿಡನ್ ತನ್ನ ನಾಟಕದಲ್ಲಿ ಸರ್ ಫ್ರೆಟ್‌ಫುಲ್ ಎಂಬ ಪಾತ್ರವನ್ನು ಸೃಷ್ಟಿಸಿ ಕಂಬರ್‌ಲ್ಯಾಂಡನನ್ನು ಲೇವಡಿಮಾಡಿದ್ದಾನೆ. (ಕೆ.ಬಿ.ಪಿ.)

**ಕಂಬಳ :** ಕೋಣಗಳ ಓಟದ ಸ್ಪರ್ಧೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಜೀವಂತವಾಗಿರುವ ಜನಪದ ವಿನೋದಗಳಲ್ಲಿ ಪ್ರಮುಖವಾದುದು. ಹೊಲಗಳನ್ನು ಉತ್ತು, ಹರಗಿ ಆದ ಬಳಿಕ ವಿನೋದಕ್ಕಾಗಿ ಕೋಣಗಳನ್ನು ಗದ್ದೆಯಲ್ಲಿ ಓಡಿಸುತ್ತಿದ್ದ ಸಾಮಾನ್ಯ ವಿಷಯವೇ ಗ್ರಾಮೀಣ ಅಭಿರುಚಿಯ ಒಂದು ವಿನೋದವಾಗಿ ಪರಿಣಮಿಸಿ ದೊಡ್ಡ ಉತ್ಸವದ ರೂಪ ತಾಳಿತು. ಗ್ರಾಮದ ಹಿರಿಯ ಗುತ್ತು ಮನೆಯವರೂ ಇತರ ಮುಖ್ಯಸ್ಥರೂ ನಾಡಿನ ಬಲ್ಲಾಳರೂ ಕಂಬಳಗಳನ್ನು ಏರ್ಪಡಿಸತೊಡಗಿದರು. ಅರಸರು ಜರುಗಿಸುತ್ತಿದ್ದ ದೊಡ್ಡ ಕಂಬಳಕ್ಕೆ ಅರಸುಕಂಬಳ ಎಂಬ ಹೆಸರಿತ್ತು. ಮೂಲ್ಕಿ ಸಾವಂತ ಅರಸರ ಕಾಲದಲ್ಲಿ ಇಂಥ ಕಂಬಳದ ಪರಂಪರೆ ತುಂಬ ಪ್ರಸಿದ್ಧಿ ಪಡೆದಿತ್ತು. ವಂಡಾರು ಎಂಬಲ್ಲಿಯ ಕಂಬಳ ಬಹು ಹೆಸರುವಾಸಿಯಾದುದು.

ಪ್ರತ್ಯೇಕವಾಗಿ ಒಳ್ಳೆಯ ತಳಿಯ ಕೋಣಗಳನ್ನು ವಿಶೇಷ ಪೌಷ್ಟಿಕ ಆಹಾರ ಕೊಟ್ಟು ಕಂಬಳದ ಓಟಕ್ಕಾಗಿ ಸಾಕುವ ಹವ್ಯಾಸ ಇತ್ತೀಚಿನವರೆಗೂ ಇತ್ತು. ಇಂಥ ಕೋಣಗಳ ಎಷ್ಟು ಜೊತೆಗಳು ಹಟ್ಟಿಯಲ್ಲಿರುತ್ತಿದ್ದುವೋ ಅಷ್ಟಷ್ಟು ವ್ಯಕ್ತಿಯ ಪ್ರತಿಷ್ಠೆ ಹೆಚ್ಚಾಗುತ್ತಿತ್ತು. ಓಟಕ್ಕಾಗಿ ಮಾತ್ರ ಮೀಸಲಾಗಿದ್ದ ಇಂಥ ಕೊಬ್ಬಿದ ಕೋಣಗಳಿಂದ ಗದ್ದೆ ಉಳುವಂಥ

ಇತರ ಕೆಲಸಗಳನ್ನು ಸಾಮಾನ್ಯವಾಗಿ ಮಾಡಿಸುತ್ತಿರಲಿಲ್ಲ. ನಾಗರಿಕ ಆಕರ್ಷಣೆಗಳು ಹೆಚ್ಚಾದಂತೆಲ್ಲ ಓಟದ ಕೋಣಗಳನ್ನು ಸಾಕುವ ಹವ್ಯಾಸ ಬಹಳ ಕಡಿಮೆಯಾಗುತ್ತಿದೆ. ಯಕ್ಷಗಾನ ಮೇಳಗಳಂತೆ ಕಂಬಳದ ನಿರ್ವಹಣೆ ತುಂಬ ದುಬಾರಿಯಾಗುತ್ತಿರುವುದೂ ಅದರ ಇಳಿಮುಖಕ್ಕೆ ಇರುವ ಮತ್ತೊಂದು ಕಾರಣ.

ವಿಶಾಲವಾದ ಹೊಲದ ಒಂದು ಮಗ್ಗುಲಿನ ಉದ್ದಕ್ಕೆ ಸು. 15 ಅಡಿಗಳಷ್ಟು ಅಗಲಕ್ಕೆ ಕರೆಕಡಿದು ಓಟದ ಜಾಗವನ್ನು ಪ್ರತ್ಯೇಕಿಸಿ ಪ್ರಶಸ್ತಗೊಳಿಸುತ್ತಾರೆ. ಇದರ ಇಮ್ಮಡಿಯಷ್ಟು ಜಾಗವನ್ನು ಕಡಿದಿದ್ದರೆ ಅದಕ್ಕೆ ಜೋಡುಕರೆ ಎನ್ನುತ್ತಾರೆ. ಹೀಗಿದ್ದಲ್ಲಿ ಓಡಿದ ಕೋಣಗಳು ಹಿಂದೆ ತಿರುಗಿ ಬರುವುದಕ್ಕೂ ಸಾಧ್ಯವಾಗುತ್ತದೆ. ಓಟದ ಜಾಗಕ್ಕೆ ಒಂದು ಹದದಲ್ಲಿ ನೀರು ಬಿಟ್ಟಿರುತ್ತಾರೆ. ನೀರು ಹೆಚ್ಚು ಅಥವಾ ಕಡಿಮೆಯಾದರೆ ಓಟಕ್ಕೆ ಆತಂಕವಾಗುತ್ತದೆ. ಕೆಲವು ಕಡೆ ಹೊಳೆಯ ನೀರನ್ನು ಕಾಲುವೆಯಂತೆ ಉಪಯೋಗಿಸುತ್ತಾರೆ. ಅಲ್ಲಿ ಕಂಬಳದ ಕರೆ ಕಡಿಸುವುದೂ ಉಂಟು.

ಓಟದ ಸ್ಪರ್ಧೆಗೆ ಸಿದ್ಧವಾಗುತ್ತಿರುವ ಒಂದು ಜೊತೆ ಕೋಣಗಳು. ಅವನ್ನು ಕಣಕ್ಕೆ ಸಿದ್ಧಮಾಡಿದ ಜನ ಪಕ್ಕದಲ್ಲಿದ್ದು ಕುಮ್ಮಕ್ಕು ಕೊಡಲು ಕಾತರರಾಗಿದ್ದಾರೆ

ಕಂಬಳಕ್ಕೆ ಕ್ರಮದಂತೆ ಆಮಂತ್ರಣ ಹೋದಮೇಲೆ ಓಟದ ಕೋಣಗಳನ್ನು ಸಿಂಗರಿಸಿ, ವಾದ್ಯಘೋಷ, ಕುಣಿತ, ಹಾಡು, ಸಿಡಿಮದ್ದುಗಳ ಸಂಭ್ರಮಗಳಿಂದ ಕಂಬಳದ ಗದ್ದೆಯ ಬಳಿಗೆ ತರುತ್ತಾರೆ. ಈಚೆಗೆ ಅವನ್ನು ಲಾರಿಯಲ್ಲಿ ಸಾಗಿಸುವುದೂ ಉಂಟು. ಅನಂತರ ಒಂದೊಂದೇ ಜೊತೆ ಕೋಣಗಳನ್ನು ವಿಧಿವತ್ತಾಗಿ ಕಂಬಳದ ಕಳಕ್ಕೆ ಇಳಿಸುತ್ತಾರೆ. ಕೋಣಗಳಿಗೆ ಕಟ್ಟಿದ ಹರಗುವ ಹಲಗೆಯ (ಗೋರುಹಲಗೆ) ಮೇಲೆ ಕೋಣಗಳನ್ನು ಓಡಿಸುವ ವ್ಯಕ್ತಿ ನಿಂತು, ಕೋಣಗಳ ಬಾಲಗಳನ್ನು ಎಡಗೈಯಿಂದ ಬಿಗಿಹಿಡಿದು ಬಲಗೈಯ ಚಾವಟಿಯಿಂದ ಬಲವಾಗಿ ಅವುಗಳಿಗೆ ಬಾರಿಸುತ್ತ ಅವು ವೇಗವಾಗಿ ಓಡುವಂತೆ ಚೋದಿಸುತ್ತಾನೆ. ಸೊಕ್ಕಿದ ಕೋಣಗಳನ್ನು ನಿಯಂತ್ರಿಸುವುದು ಕಷ್ಟಸಾಧ್ಯವೂ ಅಪಾಯಕಾರಿಯೂ ಆದ ಕೆಲಸವಾದ್ದರಿಂದ ಅದನ್ನು ನಿರ್ವಹಿಸುವವ ಬಲಶಾಲಿಯೂ ನುರಿತವನೂ ಆಗಿರಬೇಕು. ವ್ಯಕ್ತಿ ನಿಂತ ಅಡ್ಡ ಹಲಗೆ ನೀರನ್ನು ಮೇಲಕ್ಕೆ ಹಾಯಿಸುತ್ತ ಮುಂದಕ್ಕೆ ಧಾವಿಸುತ್ತದೆ. ಸಾಮಾನ್ಯವಾದ ಗೋರು ಹಲಗೆಯನ್ನೇ ಓಟಕ್ಕೂ ಅಡ್ಡ ಹಲಗೆಯಾಗಿ ಹಿಂದೆ ಉಪಯೋಗಿಸುತ್ತಿದ್ದರು. ಆದರೆ ಅದರ ಮೂಲಕ ಸಾಕಷ್ಟು ಹೆಚ್ಚು ಎತ್ತರಕ್ಕೆ ನೀರು ಚಿಮ್ಮುವುದಿಲ್ಲವೆಂಬುದರಿಂದ, ಅದರ ರಚನೆಯಲ್ಲಿ ತುಸು ವ್ಯತ್ಯಾಸ ಮಾಡಿ ಕಣೆಹಲಗೆ ಎಂಬುದನ್ನು ಈಗ ಬಳಸತೊಡಗಿದ್ದಾರೆ. ಕಂಬಳದ ತಳದ ಕೊನೆಯ ತುದಿಗೆ ಅಂದರೆ ಕೋಣಗಳು ಓಡಿ ಗುರಿಮುಟ್ಟುವಲ್ಲಿಗೆ ಮಂಜೊಟ್ಟಿ ಎನ್ನುತ್ತಾರೆ. ಕಂಬಳದ ಕೋಣಗಳನ್ನು ಮಂಜೊಟ್ಟಿಕೋಣ ಎಂದೂ ಕರೆಯುವುದುಂಟು. ಹಿಂದೆ ನಡೆದುದೆನ್ನಲಾದ ಕಂಬಳದ ಒಂದು ದುರಂತ ಪ್ರಕರಣ ಮಂಜೊಟ್ಟಿಗೋಣ ಎಂಬ ತುಳುಪಾಡ್ದನವಾಗಿ ಈಗಲೂ ಪ್ರಚಲಿತವಾಗಿದೆ. ಕಂಬಳದ ಕರೆಯ ಸು. ಮಧ್ಯದಲ್ಲಿ, ಅಥವಾ ಮಂಜೊಟ್ಟಿಗೆ ಸಮೀಪವಾಗಿ ಒಂದೋ ಎರಡೋ ನಿಶಾನೆಗಳನ್ನು ನೆಟ್ಟಿರುತ್ತಾರೆ. ಸು. 20 ಅಡಿಗಳಷ್ಟು ಎತ್ತರಕ್ಕೆ ಅಡ್ಡವಾಗಿ ಕಟ್ಟಿರುವ ನಿಶಾನೆಗೆ ಬಟ್ಟೆಯನ್ನು ಅಥವಾ ಹಲಗೆಯನ್ನು ಉಪಯೋಗಿಸುತ್ತಾರೆ. ನಿಶಾನೆಗೆ ನೀರು ಮುಟ್ಟಿಸಿದ ಕೋಣಗಳು ಓಟದಲ್ಲಿ ಉತ್ತಮ ಎಂಬ ಪ್ರಶಸ್ತಿಗೆ ಪಾತ್ರವಾಗುತ್ತವೆ. ನಿಶಾನೆ ಎಷ್ಟು ಎತ್ತರಕ್ಕೆ ಒದ್ದೆಯಾಯಿತು ಎಂಬುದರ ಮೇಲಿಂದ ಒಂದನೆಯ ಎರಡನೆಯ ಇತ್ಯಾದಿ ಬಹುಮಾನಗಳು ಅನುಕ್ರಮವಾಗಿ ಸಲ್ಲುತ್ತವೆ. ಚಿನ್ನದ, ಬೆಳ್ಳಿಯ ಪದಕಗಳು, ಬಾಳೆಯ ಗೊನೆ ಇತ್ಯಾದಿ ಬಹುಮಾನಗಳನ್ನು ಇರಿಸುವ ವಾಡಿಕೆಯುಂಟು. ಒಟ್ಟೊಟ್ಟಿಗೆ ಎರಡೆರಡು ಜೊತೆ ಕೋಣಗಳನ್ನು ಓಡಿಸಿ, ಓಟದಲ್ಲಿ ಯಾವುದು ಮೊದಲು ಬರುತ್ತದೆ ಎಂದು ಸ್ಪರ್ಧೆಯನ್ನು ಏರ್ಪಡಿಸುವುದುಂಟು. ಕಂಬಳದ ಅಂಗವಾಗಿ ಕೋಳಿಕಾಳಗ (**ನೋಡಿ–ಕೋಳಿ–ಅಂಕ**) ಇತ್ಯಾದಿ ಇತರ ಮನರಂಜನೆಗಳನ್ನು ಏರ್ಪಡಿಸುವುದೂ ಉಂಟು. (ಎ.ಎಸ್‍ಓ)

**ಕಂಬಳಿ :** ಹೊದೆಯಲು ಹಾಸಲು ಉಪಯೋಗಿಸುವ ಉಣ್ಣೆಯ ನೇಯ್ಗೆ. ಇದು ಉಷ್ಣ ಅವಾಹಕವಾದ್ದರಿಂದ ದೇಹೋಷ್ಣತೆಯನ್ನು ಒಳಗೇ ಕಾಪಿಡುವುದಲ್ಲದೇ ಪರಿಸರದ ಶೈತ್ಯ ಒಳಗೆ ಬರದಂತೆಯೂ ನಿವಾರಿಸುವುದು.

**ಪ್ರಾರಂಭ:** ಋಗ್ವೇದದ ಕಾಲದಿಂದಲೂ ಉಣ್ಣೆಯ ವಸ್ತ್ರ ಬಳಕೆಯಲ್ಲಿ ಇತ್ತೆಂಬುದಕ್ಕೆ ಆಧಾರವಿದೆ. ಊರ್ಣವತೀ ಯುವತಿಃ ಶೀಲ ಮಾವತಿ, ಊರ್ಣವಂತಂ ಊರ್ಣವಸತ ಶೃಂದ್ರುವ ಮುಂತಾದ ಋಗ್ವೇದೋಕ್ತಿಗಳನ್ನು ಗಮನಿಸಬಹುದು. ಉಣ್ಣೆ, ನಾರು, ರೇಷ್ಮೆ ಮುಂತಾದವುಗಳಿಂದ ನೇದ ಬಟ್ಟೆಗಳು ದೇವತಾಕಾರ್ಯಗಳಲ್ಲಿ ತೊಟ್ಟುಕೊಳ್ಳಲು ಉಪಯೋಗಿಸಬಹುದಾದ ಮಡಿವಸ್ತ್ರಗಳೆಂದೂ ವೈದಿಕ ಕಾಲದಿಂದಲೂ ಬೆಳೆದು ಬಂದಿರುವ ಸಂಪ್ರದಾಯವೂ ಉಣ್ಣೆ ವಸ್ತ್ರದ ಪ್ರಾಚೀನತೆಗೆ ಸಾಕ್ಷಿ.

ಮಧ್ಯ ಏಷ್ಯದ ಅಲೆಮಾರಿ ಜನ ಮೊದಲು ಕುರಿಗಳನ್ನು ಸಾಕಿ ಉಣ್ಣೆಯಿಂದ ನೂಲನ್ನು ತೆಗೆದು ನೇಯುವುದನ್ನು ಕಲಿತಿದ್ದರೆಂದು ಅನೇಕ ಐತಿಹಾಸಿಕ ವಿವರಗಳು ತಿಳಿಸುತ್ತವೆ. ಇವರೇ ಅನಂತರ ಯುರೋಪಿನ ಇತರ ಭಾಗಗಳಿಗೂ ಭಾರತಕ್ಕೂ ವಲಸೆ ಹೋಗಿ ಉಣ್ಣೆಯ ಕುಶಲ ಕೈಗಾರಿಕೆಯನ್ನು ಎಲ್ಲ ಕಡೆಗಳಲ್ಲಿಯೂ ಪ್ರಚಾರಮಾಡಿ ಬೆಳೆಸಿದರು ಎಂದು ಹೇಳಬಹುದು. ಹೀಗೆ ಉಣ್ಣೆಯ ವಸ್ತ್ರ ತಯಾರಿಕೆ–ಅದರಲ್ಲಿಯೂ ಪ್ರಮುಖವಾಗಿ ಕಂಬಳಿ ರತ್ನಗಂಬಳಿ–ಅತಿ ಪ್ರಾಚೀನವಾದುದು. ಇದು ಜನಜೀವನದೊಂದಿಗೆ ಹಾಸುಹೊಕ್ಕಾಗಿ ಬೆಳೆದು ಕಾಲಾನುಸಾರ ವಿವಿಧ ಮಾರ್ಪಾಡುಗಳನ್ನೂ ದರ್ಜೆಗಳನ್ನೂ ಪಡೆದಿದೆ.

ಪ್ರ.ಶ.ಪೂ. 3000 ವರ್ಷಗಳಷ್ಟು ಪ್ರಾಚೀನವಾದ ಒಂದು ಮಗ್ಗ ಮತ್ತು ಅದರಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರನ್ನು ಈಜಿಪ್ಟಿನ ಭಿತ್ತಿಚಿತ್ರವೊಂದರಲ್ಲಿ ಚಿತ್ರಿಸಲಾಗಿದೆ. ಒರಟು ಸಾಧನಗಳಿಂದ ನೇಯುವ ಕಲೆ ಈಜಿಪ್ಟಿನ ಜನಾಂಗಕ್ಕೆ ಇನ್ನೂ ಹಿಂದಿನಿಂದಲೇ ತಿಳಿದಿತ್ತೆಂದು ಇದರಿಂದ ಸ್ಪಷ್ಟವಾಗುವುದು. ಬಹುಶಃ ಅದು ಇರಾನ್, ಮೆಸೊಪೊಟೇಮಿಯಗಳಲ್ಲಿ ಆರಂಭವಾಗಿರಬೇಕು. ಮೊದಲನೆಯ ಉಣ್ಣೆಯ ಜಮಖಾನೆ ಬ್ಯಾಬಿಲೋನ್ ಅಥವಾ ನಿನೆವೆಯಲ್ಲಿ ಪ್ರ.ಶ.ಪೂ. 5000 ವರ್ಷಗಳಿಗಿಂತ ಮೊದಲೇ ತಯಾರಾಗಿರಬೇಕು ಎಂಬುದು ಪಾಶ್ಚಾತ್ಯ ವಿದ್ವಾಂಸರ ಮತ. ಬ್ಯಾಬಿಲೋನಿಯನ್ನರು ಚತುರ ನೇಯ್ಗೆಯ ಕಲೆಗೆ ಹೆಸರಾದವರೆಂದು ರೋಮಿನ ಚರಿತ್ರಕಾರ ಪ್ಲಿನಿ ಹೇಳಿದ್ದಾನೆ. ಜಮಖಾನೆಯ ಉಪಯೋಗವನ್ನು ತಿಳಿಸುವ ಅತ್ಯಂತ ಪುರಾತನ ಪುರಾವೆಗಳಲ್ಲಿ ಬೈಬಲ್ಲೂ ಸೇರಿದೆ. ನೆಲಕ್ಕೆ ಹಾಸುವ ನೇಯ್ಗೆಯ ಕಂಬಳಿಗಳು ಬಹಳ ಹಿಂದಿನ ಕಾಲದಲ್ಲಿಯೇ ಭಾರತ, ಚೀನ, ಅರೆಬಿಯ, ಪರ್ಷಿಯ ಮತ್ತು ಅಸ್ಸೀರಿಯ ದೇಶಗಳ ಜನರಲ್ಲಿ ಬಳಕೆಯಲ್ಲಿದ್ದುವು. ಪ್ರಶ.ಪೂ. ಸು. 1500 ವರ್ಷಗಳಿಗಿಂತ ಮುಂಚೆಯೇ ರತ್ನಗಂಬಳಿಗಳನ್ನು ದೇವಾಲಯಗಳಲ್ಲಿ ಉಪಯೋಗಿಸಲು ನೇಯುವ ಕಲೆ ಈಜಿಪ್ಟಿನವರಿಗೆ ತಿಳಿದಿತ್ತು. ಅವು ಈಗಿನ ಕಂಬಳಿ ಜಮಖಾನೆಗಳಂತಿರದಿದ್ದರೂ ಮೃದುವಾದ ಉಣ್ಣೆಯಿಂದ ಜುಂಗು ಜುಂಗಿನ ಮೇಲ್ಮೈವುಳ್ಳ ನೆಲಗಂಬಳಿಗಳಾಗಿದ್ದುವೆಂದು ಹೇಳಬಹುದು. ಈಗ ಉಳಿದಿರುವ ಅತ್ಯಂತ ಪ್ರಾಚೀನವಾದ ಹಾಸು ಸಾಧನ ಪ್ರ.ಶ. 2ನೆಯ ಶತಮಾನದ್ದು, ಇದಕ್ಕೆ ಜುಂಗಿನ ಮೇಲ್ಮೈ ಇದೆ. ಇದನ್ನು ಆಧುನಿಕ ಜಮಖಾನೆಯ ಅತ್ಯಂತ ಪ್ರಾಚೀನ ರೂಪ ಎಂದು ಹೇಳಬಹುದು.

ಕಂಬಳಿ ಮತ್ತು ಜಮಖಾನೆಯ ನೇಯ್ಗೆಯಲ್ಲಿ ಪರ್ಷಿಯ ಅತ್ಯಂತ ಪ್ರಾಚೀನ ದೇಶವೆಂದು ಇತಿಹಾಸಕಾರರ ಅಭಿಮತ. ಇಲ್ಲಿನ ರತ್ನಗಂಬಳಿಗಳಿಗೆ ವಿಶ್ವದಾದ್ಯಂತ ಅರಮನೆ ಮತ್ತು ಶ್ರೀಮಂತ ಗೃಹಗಳ ಬೇಡಿಕೆಯಿತ್ತೆಂದು ತಿಳಿದಿದೆ. ಪ್ರ.ಶ.ಪೂ.538ರಲ್ಲಿ ಪರ್ಷಿಯನ್ನರು ಬ್ಯಾಬಿಲೋನನ್ನು ಗೆದ್ದಮೇಲೆ ಪರ್ಷಿಯದ ಕಂಬಳಿ ತಯಾರಿಕೆ ಏಳಿಗೆಗೊಂಡಿತು. ಪರ್ಷಿಯದ ಕಂಬಳಿ ನೇಯ್ಗೆಯ ಕಲೆಗಾರಿಕೆ ಉಪಮಾತೀತವಾದ ಕಲೆಗಾರಿಕೆ. ಈ ಕಂಬಳಿಗಳನ್ನು ಆ ಕಾಲದ ಅತ್ಯಂತ ಐಶ್ವರ್ಯಯುತ ಸಾಧನಗಳೆಂದು ಪರಿಗಣಿಸಲಾಗಿತ್ತು. ಗ್ರೀಕ್ ಮತ್ತು ರೋಮ್ ದೇಶಗಳೆರಡೂ ಅಂಥ ರತ್ನಗಂಬಳಿ ಮತ್ತು ಜಮಖಾನೆಗಳನ್ನು ಬಹಳವಾಗಿ ಹೊಗಳಿವೆ. ಅಲೆಕ್ಸಾಂಡರನ ಸೈನಿಕರು ತಮ್ಮ ಪೂರ್ವದೇಶದ ಯುದ್ಧಗಳಿಂದ ಹಿಂತಿರುಗುವಾಗ ಜೊತೆಯಲ್ಲಿ ಉತ್ತಮ ಜಮಖಾನೆಗಳನ್ನು ತಂದರೆಂದೂ ರೋಮನರು ಆ ಪ್ರದೇಶವನ್ನು ಆಕ್ರಮಿಸಿಕೊಂಡಾಗ ಅಲ್ಲಿದ್ದ ಪುರಾತನ ಮಗ್ಗಗಳು ಮತ್ತೂ ಪಶ್ಚಿಮಕ್ಕೆ ಎಂದರೆ ಇಟಲಿಯವರೆಗೆ ತಮ್ಮ ದಾರಿಯನ್ನು ಕಂಡುಕೊಂಡುವೆಂದೂ ತಿಳಿದುಬರುತ್ತದೆ. ಶತಮಾನಗಳ ಅನಂತರ ತುರ್ಕರು ಕಾನ್‍ಸ್ಟಾಂಟಿನೋಪಲನ್ನು

ಆಕ್ರಮಿಸಿಕೊಂಡಾಗ ಅದು ಅನೇಕ ನುರಿತ ಕಲಾವಿದರನ್ನು ಇಟಲಿಯತ್ತ ರವಾನಿಸಿತು. ಆದ್ದರಿಂದಲೇ ಫ್ರಾನ್ಸ್‌ನಲ್ಲಿ ಯುರೋಪಿನ ಇತರ ಭಾಗಗಳಲ್ಲಿಲ್ಲದ ಜಮಖಾನೆಗಳ ಅತ್ಯಂತ ಪ್ರಾಚೀನ ಅವಶೇಷಗಳು ಉಳಿದಿವೆ.

13ನೆಯ ಶತಮಾನದಲ್ಲಿ ವೆನಿಸ್ಸಿನಿಂದ ಏಷ್ಯ ಮೂಲಕ ತಾನು ಕೈಗೊಂಡ ಸುಪ್ರಸಿದ್ಧ ಯಾತ್ರೆಯ ಕಾಲದಲ್ಲಿ ನೋಡಿದ ಕಂಬಳಿಗಳ ಕಲಾಪೂರ್ಣತೆ ಮತ್ತು ಸೌಂದರ್ಯಗಳಿಗೆ ಆಶ್ಚರ್ಯಚಕಿತನಾದುದಾಗಿ ಮಾರ್ಕೋಪೋಲೊ ಹೇಳಿಕೊಂಡಿದ್ದಾನೆ. ಈ ಕಂಬಳಿಗಳು ಬೆಲೆಕಟ್ಟಲಾಗದಂಥ ಕಲಾಕೆಲಸಗಳೆಂದೂ ಅವು ಅನನುಕರಣೀಯ ಬಣ್ಣಗಳಿಂದ ಕೂಡಿದವೆಂದೂ ಆತ ಬರೆದಿದ್ದಾನೆ. ರಿಚರ್ಡ್ ಹ್ಯಾಕ್ಲೂಟನ ಪ್ರಿನ್ಸಿಪಾಲ್ ನ್ಯಾವಿಗೇಷನ್ಸ್ ಎಂಡ್ ಡಿಸ್ಕವರಿ ಆಫ್ ಇಂಗ್ಲಿಷ್ ನೇಷನ್ ಎಂಬ ಕೃತಿಯಲ್ಲಿ (1589) ಪರ್ಷಿಯಕ್ಕೆ ಪ್ರಯಾಣ ಮಾಡಲಿದ್ದ ವ್ಯಾಪಾರಿಯೊಬ್ಬ ಆಡುವ ಮಾತು ಪ್ರಪಂಚದಲ್ಲಿ ಅತ್ಯುತ್ತಮವಾದ ಉಣ್ಣೆಯ ಜುಂಗು. ಜುಂಗಿನ ಬಣ್ಣದ ಜಮಖಾನೆಗಳು ಅಲ್ಲಿ ದೊರೆಯುತ್ತವೆ. ಆ ಜುಂಗು ಕಂಬಳಿಗಳಿಗೆ ಬಣ್ಣಹಾಕುವ ಕಲೆಯನ್ನು ನೀವು ಕಲಿಯಬೇಕಾದರೆ ನಿಮ್ಮ ಎಲ್ಲ ಶಕ್ತಿಸಾಮರ್ಥ್ಯಗಳನ್ನೂ ಉಪಯೋಗಿಸಬೇಕಾಗುತ್ತದೆ. ಅವುಗಳಿಗೆ ಹೇಗೆ ಬಣ್ಣ ಹಾಕಲಾಗಿದೆಯೆಂದರೆ ಮಳೆ, ಮದ್ಯ ಅಥವಾ ಅನಿಲ ಅದನ್ನು ಅಳಿಸಲಾರವು.

ಮಧ್ಯಯುಗದ ಪೂರ್ವಭಾಗದಲ್ಲಿ ಧರ್ಮಯುದ್ಧಗಳಲ್ಲಿ (ಕ್ರೂಸೇಡ್ಸ್) ವಿಜಯಿಗಳಾದವರು ಪರಾಜಿತ ರಾಷ್ಟ್ರಗಳಿಂದ ಕಂಬಳಿ ಜಮಖಾನೆ ಮುಂತಾದ ಅಮೂಲ್ಯ ಕಲಾವಸ್ತುಗಳನ್ನು ಕೊಳ್ಳೆಹೊಡೆದುಕೊಂಡು ಹೋದುದಕ್ಕೆ ದಾಖಲೆಗಳಿವೆ. ಇಟಲಿ ಮತ್ತು ಸ್ಪೇನ್ ದೇಶಗಳಲ್ಲಿ ಕಂಬಳಿ ಮತ್ತು ಜಮಖಾನೆ ನೇಯ್ಗೆಯನ್ನು ಆರಂಭಿಸಿದ (14ನೆಯ ಶತಮಾನ) ಕೀರ್ತಿ ಸೊರ್‍ಯಾಸಿಯನ್ನರದು. ಸೊರ್‍ಯಾಸಿಯನ್ನರು ಅಥವಾ ಮೂರರು ಸ್ಪೇನ್ ದೇಶವನ್ನು ಆಕ್ರಮಿಸಿದಾಗ ವಾಸ್ತವವಾಗಿ ಪ್ರಥಮ ಜಮಖಾನೆಯ ಮಗ್ಗಗಳು ಸ್ಥಾಪನೆಯಾದ ಬಗ್ಗೆ ಮೊದಲ ಸ್ಪಷ್ಟ ಪುರಾವೆಗಳು ಇಂದಿಗೂ ಉಳಿದಿವೆ. ಫ್ರಾನ್ಸಿನ ನಾಲ್ಕನೆ ಹೆನ್ರಿ 1604ರಲ್ಲಿ ಲುವಿಯರ್‌ನಲ್ಲಿ ಜಮಖಾನೆ ನೇಯ್ಗೆಯ ಕೋಣೆಯೊಂದನ್ನು ನಿರ್ಮಿಸಿದ ಬಗ್ಗೆ ಆಧಾರಗಳು ಉಂಟು, ಅಬುಸನ್ ಮತ್ತು ಪ್ಯಾರಿಸ್‌ಗಳಲ್ಲಿ ಬೆಳೆದ ಕಂಬಳಿ ತಯಾರಿಕೆಯ ಉದ್ಯಮ ನಾರಿನ ಕಂಬಳಿ ನೇಯ್ಗೆಯಿಂದ ಆರಂಭವಾಗಿದೆ. ಅಬುಸನ್ ಕಂಬಳಿಗೆ ಅದೇ ಹೆಸರನ್ನು ಕೊಡಲಾಗಿದೆ. ತುಪ್ಪಟದಿಂದ ನೇಯ್ದವುಗಳಾದರೂ ನೆಲಕ್ಕೆ ಹಾಸಲು ಉಪಯೋಗವಾಗುವಂತೆ ದಪ್ಪನಾಗಿ ಮಾಡಲು ಒಂದರ ಮೇಲೊಂದು ದಾರದಿಂದ ನೇಯ್ದು ಅವನ್ನು ಸಿದ್ಧಪಡಿಸುತ್ತಾರೆ. ಪ್ಯಾರಿಸ್ಸಿನಲ್ಲಿ ಕೈಗಳಿಂದಲೇ ನೇಯ್ದು ಉದ್ದನೆಯ ಜುಂಗಿನ ಒಳ್ಳೆ ಕಂಬಳಿಗಳು ಅಬುಸನ್ನಿನವಕ್ಕಿಂತ ಉತ್ತಮವಾದುವು.

**ಬೆಳವಣಿಗೆ :** ಹಾಳುಬಿದ್ದ ಸಾಬೂನಿನ ಕಾರ್ಖಾನೆಯಲ್ಲಿ ಕಂಬಳಿಗಳು ಮೊದಲು ತಯಾರಾದುದರಿಂದ ಅವು ಸ್ಯಾವಾನ್ರೀ ಎಂದೇ ಪ್ರಸಿದ್ಧವಾದುವು. ಸವೊನ್ ಎಂಬುದು ಸಾಬೂನು ಎಂಬ ಪದದ ಫ್ರೆಂಚ್ ಮೂಲ. ಸವೊನ್ನರಿ ನೇಯ್ಗೆಯ ತಂತ್ರವೂ ಪ್ರಾಚೀನ ಕಾಲದ ಕೈಮಗ್ಗದ ನೇಯ್ಗೆಯ ತಂತ್ರವೂ ಒಂದೇ ರೀತಿಯಾಗಿತ್ತು. ಫ್ರಾನ್ಸಿನ ಅಬುಸನ್ ಮತ್ತು ಸ್ಯಾವಾನ್ರೀಗಳು ಜಮಖಾನೆಯ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದುವೆಂದು ಪ್ರಸಿದ್ಧವಾಗಿವೆ. ಆ ಕಾಲದ ಅತ್ಯಂತ ಚತುರ ಕಲಾವಿದರಿಂದ ವಿನ್ಯಾಸಗೊಂಡು ಬಹು ಎಚ್ಚರಿಕೆಯಿಂದ ನೇಯ್ದ ಜಮಖಾನೆಗಳು ಅರಮನೆ ಮತ್ತು ಶ್ರೀಮಂತರ ಗೃಹಗಳಲ್ಲಿ ಉಪಯೋಗಿಸಲಾಗುತ್ತಿದ್ದ ಕಲಾ ಕೃತಿಗಳಾಗಿದ್ದುವು. 14ನೆಯ ಲೂಯಿಯ ಕಾಲದಲ್ಲಿ ಕಂಬಳಿ ಮತ್ತು ಜಮಖಾನೆಯ ನೇಯ್ಗೆಯವರು ತಮ್ಮ ಸುವರ್ಣಯುಗವನ್ನು ಕಂಡರು. 1685ರಲ್ಲಿ ಈ ನಿರಂಕುಶ ಸರ್ವಾಧಿಕಾರಿ ಸಾನ್‌ಟ್ಸ್ ನಗರದ ಮೇಲಿನ ತನ್ನ ವಾಗ್ದಾನವನ್ನು ರದ್ದುಪಡಿಸಿ ಶಾಸನ ಹೊರಡಿಸಿದಾಗ, ನೇಕಾರರ ಸಂಘದ ಸದಸ್ಯರಲ್ಲಿ ಬಹುಮಂದಿ ಪ್ರಾಟೆಸ್ಟೆಂಟರಾದುದರಿಂದ ಅವರಿಗೆ ಧಾರ್ಮಿಕ ರಕ್ಷಣೆ ದೊರೆಯದೆ ಈ ಫ್ರೆಂಚ್ ಕುಶಲಿ ಕೆಲಸಗಾರರು ಜರ್ಮನಿ, ಬೆಲ್ಜಿಯಂ ಮತ್ತು ಇಂಗ್ಲೆಂಡ್‌ಗಳಿಗೆ ವಲಸೆ ಹೋದರು. ಈ ನಿರಾಶ್ರಿತರು ಬ್ರಸಲ್ಸ್‌ನಲ್ಲಿ ಕುಣಿಕೆಯ ಮಖಮಲ್ಲು ಜಮಖಾನೆ ತಯಾರಿಸಿ ಆ ನಗರದ ಹೆಸರಿನಿಂದಲೆ ಕರೆದರು. ಇಂಗ್ಲೆಂಡಿನಲ್ಲಿ ವಿಲ್ಟನ್ ಮತ್ತು ಆಕ್ಸ್‌ಮಿನ್‌ಸ್ಟರ್ ನಗರಗಳಲ್ಲಿ ಜಮಖಾನೆ ನೇಯ್ಗೆಯ ಉದ್ಯಮ ಅದೇ ನಗರದ ಹೆಸರಿನಿಂದ ಕಾರ್ಯಾರಂಭ ಮಾಡುವಂತೆ ಮೂರನೆಯ ವಿಲಿಯಮ್ ಒಂದು ಶಾಸನ ಹೊರಡಿಸಿದ. ಇಂಗ್ಲೆಂಡಿನ ಜಮಖಾನೆ ಉದ್ಯಮದಲ್ಲಿ ಒಂದು ಪ್ರಮುಖವಾದ ಹೆಸರಾದ ಕಿಡ್ಡರ್‌ಮಿನ್‌ಸ್ಟರ್‌ನಲ್ಲಿ ಸ್ಕಾಟ್ ನೆಯ್ಗೆಯವರು ಮಗ್ಗಗಳನ್ನು ಸ್ಥಾಪಿಸಿದರು. 1740ರಲ್ಲಿ ಫ್ರಾನ್ಸ್ ಮತ್ತು ಹಾಲೆಂಡುಗಳಿಂದ ಬಂದ ನೇಯ್ಗೆಯವರೊಂದಿಗೆ ಇಂಗ್ಲೆಂಡಿನ ಬ್ರುಸೆಲ್ಸಿನಲ್ಲಿ ನೇಯ್ಗೆಯನ್ನು ಆರಂಭಿಸಲಾಯಿತು.

**ಭಾರತದಲ್ಲಿ :** ಕಂಬಳಿ ಮತ್ತು ಜಮಖಾನೆಯ ಉದ್ಯಮದ ಬಗ್ಗೆ ಭಾರತದಲ್ಲಿ ಆಧಾರಗಳು ಬಹಳ ಕಡಿಮೆಯೆಂದು ಐರೋಪ್ಯರ ಅಭಿಮತ. ಭಾರತ ಉಷ್ಣದೇಶ ವಾದುದರಿಂದ ಸ್ವಾಭಾವಿಕವಾಗಿಯೇ ಇಲ್ಲಿ ಉಣ್ಣೆಯ ವಸ್ತ್ರಗಳಿಗೆ ಬೇಡಿಕೆ ಕಡಿಮೆ ಎಂಬುದು ಅವರ ವಾದಕ್ಕೆ ಇಂಬುಕೊಟ್ಟಿರುವ ಸಂಗತಿ. ಆದರೆ ಈ ವಾದವನ್ನು ಒಪ್ಪಲು ಸಾಧ್ಯವಾಗುವುದಿಲ್ಲ. ಭಾರತ ರತ್ನಗಂಬಳಿಯ ನೇಯ್ಗೆಯಲ್ಲಿ ತನ್ನದೇ ಆದ ಹೆಸರುಗಳಿಸಿದ ನಾಡು. ಕಂಬಳಿ ಉದ್ಯಮ ಈ ರಾಷ್ಟ್ರದಲ್ಲಿ ಎಷ್ಟು ಪ್ರಾಚೀನವಾದದ್ದೆನ್ನುವುದಕ್ಕೆ ಈ ಮೊದಲೇ ಆಧಾರವನ್ನು ತೋರಿಸಿದೆ. 16, 17ನೆಯ ಶತಮಾನದಲ್ಲಿ ಮೊಗಲರು ಈ ಉದ್ಯಮವನ್ನು ಪರ್ಷಿಯದಿಂದ ತಂದರೆಂದು ಐರೋಪ್ಯ ವಿದ್ವಾಂಸರ ಅಭಿಪ್ರಾಯ. ಅರಮನೆಯ ಆವಶ್ಯಕತೆಗಳಿಗಾಗಿಯೇ ಅಕ್ಬರ್ ಒಂದು ಮಗ್ಗವನ್ನು ಸ್ಥಾಪಿಸಿದ್ದನೆಂದು ಹೇಳುತ್ತಾರೆ. ಆದರೆ ಕಂಬಳಿಗಳು ಆಗಲೂ ಪರ್ಷಿಯ ದೇಶದಿಂದ ಬರುತ್ತಿದ್ದುವೆಂದು ಅವನ ಜೀವನಚರಿತ್ರೆ ಬರೆದ ಅಬ್ದುಲ್ ಫಜಲ್ ಹೇಳಿದ್ದಾನೆ. ಮೊಗಲರ ಆಸ್ಥಾನದ ರತ್ನಗಂಬಳಿಗಳು ಅತಿ ಆಡಂಬರದಿಂದ ಕೂಡಿದ್ದುವು. ಮೂಲತಃ ಪರ್ಷಿಯನ್ನರಾದ ಮೊಗಲರು ಅಲ್ಲಿಂದ ಕಂಬಳಿಗಳನ್ನು ತರಿಸಿರಬಹುದಾದರೂ ಭಾರತದಲ್ಲಿ ಈ ಉದ್ಯಮವಿರಲಿಲ್ಲ ಎಂದು ಹೇಳುವಂತಿಲ್ಲ. ಉದಾಹರಣೆಗೆ ಷಾ ಜಹಾನ್ ತನ್ನ ಅರಮನೆಗಾಗಿ ದೂರದ ಹಿಮಾಲಯದ ಕಣಿವೆ ಮತ್ತು ಕಾಶ್ಮೀರದಿಂದ ಮೃದುವಾದ ಉಣ್ಣೆ ತರಿಸಿ ಕಂಬಳಿ ಮಾಡಿಸುತ್ತಿದ್ದನೆಂದು ತಿಳಿದುಬರುತ್ತದೆ. ಒಂದು ಜಮಖಾನೆಗೆ ಅದರ ಬೆಲೆಯನ್ನು ಲೆಕ್ಕಿಸದೆ ಒಂದು ಅಂಗುಲಕ್ಕೆ 800–1200 ಹೆಣಿಗೆಗಳಿರುವಂತೆ ಅತ್ಯಂತ ಅಂದವಾಗಿ ತಯಾರಿಸುತ್ತಿದ್ದ ಕೀರ್ತಿ ಭಾರತದ್ದು. ವಿಶೇಷ ಜಮಖಾನೆಗಳು ಮತ್ತು ಪ್ರಾರ್ಥನಾ ರತ್ನಗಂಬಳಿಗಳು ಅಸಾಧಾರಣವಾಗಿರುತಿದ್ದುವು. ಕಂಬಳಿ ಉದ್ಯಮ ಭಾರತದ ಕಾಶ್ಮೀರ, ತಂಜಾವೂರು, ದಾವಣಗೆರೆ ಮುಂತಾದೆಡೆಗಳಲ್ಲಿ ಬಹಳ ಪ್ರಸಿದ್ಧ ಪಡೆದಿತ್ತು. ಭಾರತ ವ್ಯವಸಾಯಪ್ರಧಾನ ರಾಷ್ಟ್ರ. ಇಲ್ಲಿ ಕುರಿ ಸಾಕಣೆ ಮತ್ತು ಉಣ್ಣೆ ನೇಯ್ಗೆ ಅತ್ಯಂತ ಪ್ರಾಚೀನವಾದ ಉದ್ಯಮಗಳಲ್ಲೊಂದಾಗಿರುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಸಲ್ಲದು.

ಕಂಬಳಿ ನೇಯುತ್ತಿರುವರು

ಕಂಬಳಿ ಉದ್ಯಮ 16, 17ನೆಯ ಶತಮಾನದಲ್ಲಿ ಭಾರತಕ್ಕೆ ಪರ್ಷಿಯನ್ನರಿಂದ ಬಂದಿತು ಎಂದು ಹೇಳುವ ಆ ವಿದ್ವಾಂಸರು ಭಾರತೀಯ ಸಾಹಿತ್ಯದಲ್ಲಿನ ಹೇಳಿಕೆಗಳನ್ನು ಗಮನಿಸಲಿಲ್ಲ ಎಂದು ಕಾಣುತ್ತದೆ. ಜಂಗಮ ದಾಸೋಹದಲ್ಲಿ ಸಣ್ಣ ಕಂಬಳಿ ಮತ್ತು ಶಾಲುಗಳ ಅರ್ಪಣೆಯೂ ಒಂದು ಪ್ರಮುಖ ವಿಧಿಯಾಗಿ ಬರುತ್ತದೆ. 12ನೆಯ ಶತಮಾನದ ವಚನಗಳಲ್ಲಿ ಕಂಬಳಿ ನಾಗಿದೇವ ಎಂಬ ವಚನಕಾರನೊಬ್ಬ ಪ್ರಾಯಶಃ ಕಂಬಳಿ ಮಾಡುವ ವೃತ್ತಿಯವನಿರಬೇಕು. ಕಂಬಳಿ ಮತ್ತು ಕರಿಯ ಕಂಬಳಿಗಳಂತೂ ಜನಪದ ಸಾಹಿತ್ಯ ಮತ್ತು ಗಾದೆಗಳಲ್ಲಿ ವಿಲೀನವಾಗುವಷ್ಟು ಪ್ರಸಿದ್ಧಿ ಪಡೆದಿದ್ದುವು.

ಕನ್ನಡನಾಡು ಕಂಬಳಿ ತಯಾರಿಕೆಯಲ್ಲಿ ಬಹಳ ಪುರಾತನವಾದ ದೇಶ. 12ನೆಯ ಶತಮಾನದ ವಚನ ಸಾಹಿತ್ಯದಲ್ಲಿ ಕಂಬಳಿ ದಾನದ ಬಗ್ಗೆ ವಿಪುಲವಾದ ಹೇಳಿಕೆಗಳಿವೆ. ಕಂಬಳಿಯ ಗದ್ದುಗೆಯಂತೂ ಬಹಳ ಪ್ರಸಿದ್ಧವಾದುದು. ವಿಜಯನಗರದ ಅಕ್ಕಪಕ್ಕದ ಮೈದಾನಗಳಲ್ಲಿ ಹುಡುಗರು ಕುರಿಗಳ ಮೇಲೆ ಸವಾರಿ ಮಾಡುತ್ತಿದ್ದುದನ್ನು ಕಂಡುದಾಗಿ ಪೋರ್ಚುಗೀಸ್ ಯಾತ್ರಿಕ ಪೇಯಿಜ್ ಹೇಳಿದ್ದಾನೆ. ಈ ಹೇಳಿಕೆ ಆ ಕಾಲದ ಕುರಿಗಳ ಸುದೃಢತೆಗೆ ಸಾಕ್ಷಿ. ತರುವಾಯ ಮೈಸೂರು ಅರಸರು ಕುರಿಸಾಕಣೆ ಮತ್ತು ಉಣ್ಣೆಯ ಉದ್ಯಮಕ್ಕೆ ಉದಾರ ನೆರವು ನೀಡಿದರು.

**ಕಂಬಳಿ ತಯಾರಿಕೆ :** ಕಂಬಳಿ ತಯಾರಿಕೆಯ ಮೊದಲನೆಯ ಹಂತ ತುಪ್ಪಟ ಸಂಗ್ರಹ. ಇದನ್ನು ಬಂಡ ಎಂದು ಕರೆಯುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಕುರುಬ, ಹಳ್ಳಿಕಾರ, ಹಟ್ಟಿಕಾರ, ಒಕ್ಕಲಿಗರು, ಗೊಲ್ಲರು, ಲಿಂಗಾಯಿತರು ಗೊಬ್ಬರ ಮತ್ತು ಮಾಂಸಕ್ಕಾಗಿ

ಕುರಿ ಸಾಕುತ್ತಾರೆ. ಹೀಗೆ ಸಾಕಿದ ಕುರಿಗಳ ತುಪ್ಪಟದಿಂದ ಹೊದೆಯುವ ಕಂಬಳಿಗಳು ಅವರಿಗೆ ದೊರೆಯುವ ಉಪಆದಾಯ. ಮೇಲೆ ಹೇಳಿದ ಜನಾಂಗಗಳಲ್ಲಿ ಕುರಿಯ ತುಪ್ಪಟ ಕತ್ತರಿಸಿ ಕಂಬಳಿ ಮಾಡುವ ಕಲೆ ಕುರುಬ ಜನಾಂಗದವರಿಗೆ ಮಾತ್ರ ಸಿದ್ಧಿಸಿದೆ. ಯಂತ್ರಯುಗದ ಆರಂಭದವರೆಗೆ ಇದು ಬರಿಯ ಕುರುಬರ ಕಸುಬು. ಒಂದು ಕತ್ತರಿ, ಕೆಲವು ಕಂಬಳಿಗಳನ್ನು ಹೆಗಲ ಮೇಲೆ ಹಾಕಿಕೊಂಡು ಈ ಕಂಬಳಿ ನೇಯ್ಗೆಕಾರ ವರ್ಷಕ್ಕೆ ಎರಡುಬಾರಿ ಬಂಡ ಸಂಗ್ರಹಣೆಗೆ ಹಳ್ಳಿಗಳ ಮೇಲೆ ಹೋಗುತ್ತಾನೆ. ಕುರಿ ಸಾಕಿದ ರೈತರು ತುಪ್ಪಟ ಬೆಳೆದ ತಮ್ಮ ಕುರಿಗಳನ್ನು ಕತ್ತರಿಸಲು ಅವನಿಗೊಪ್ಪಿಸಿ ಅದಕ್ಕೆ ಬದಲಾಗಿ ಕಂಬಳಿಗಳನ್ನು ಪಡೆಯುತ್ತಾರೆ. ಐವತ್ತು ಕುರಿಗಳ ಒಂದು ಸೊಲಿಗೆ ತುಪ್ಪಟಕ್ಕೆ ಒಂದು ದಡೂತಿ ಕಂಬಳಿ ವಿನಿಮಯವಾಗುತ್ತದೆ. ಹೀಗೆ ಪಡೆದ ಒಂದು ಸೊಲಿಗೆ ತುಪ್ಪಟ ಹಳೇ ತೂಕದ ಒಂದು ಮಣವಿರುತ್ತದೆ. ಅದರಲ್ಲಿ ಮೂರು ದಡೂತಿಯ ಕಂಬಳಿಗಳಾಗುತ್ತವೆ. ಅದರಿಂದ ಕಸುಬುದಾರನಿಗೆ ಎರಡು ಕಂಬಳಿಗಳ ಲಾಭ ದೊರೆಯುತ್ತದೆ.

ಬಂಡದಲ್ಲಿ ಎರಡು ವಿಧ, ಮೊದಲೇ ಕುರಿಗಳನ್ನು ಚೆನ್ನಾಗಿ ತೊಳೆದು ಕತ್ತರಿಸುವುದು ಮೊದಲನೆಯ ರೀತಿ. ಇದು ಒಳ್ಳೆಯ ಬಂಡ, ಏಕೆಂದರೆ ಕುರಿಗಳ ಮೈಗೆ ಅಂಟಿದ್ದ ಕಸಕಡ್ಡಿ, ಮುಳ್ಳು, ಕೊಳೆಯೆಲ್ಲ ಹೋಗಿ ತುಪ್ಪಟ ಸ್ವಚ್ಛವಾಗಿರುತ್ತದೆ. ಕುರಿಗಳನ್ನು ತೊಳೆಯದೆ ಕತ್ತರಿಸುವುದು ಎರಡನೆಯ ವಿಧ. ಅದನ್ನು ಬೆವರು ತುಪ್ಪಟ ಎಂದು ಕರೆಯುತ್ತಾರೆ. ಈ ಬೆವರು ತುಪ್ಪಟವನ್ನು ಗೆರಸಿಗಳಲ್ಲಿ ಹಾಕಿಕೊಂಡು ಕೆರೆಗಳಲ್ಲಿ ಅಥವಾ ಹೊಳೆಯ ತಿಳಿನೀರಿನಲ್ಲಿ ಕೀರೇಸೊಪ್ಪು ಜಾಲಿಸುವಂತೆ ಜಾಲಿಸಿ ತೊಳೆದು ಒಣಗಿಸುತ್ತಾರೆ ಇದನ್ನು ಹಿಂಜಿ ಹಂಜಿ ಮಾಡುವುದು ಎರಡನೆಯ ಕೆಲಸ. ಈಗ ತುಪ್ಪಟ ಹಿಂಜುವುದಕ್ಕೆ ಯಂತ್ರಗಳಿವೆ. ಆದರೆ ಮೊದಲಿಗೆ ಪಿಂಜಾರರು ಕೈಬೆಸಗಳಿಂದ ತುಪ್ಪಟ ಹೊಡಚುತ್ತಿದ್ದರು. ಕಂಬಳಿ ತಯಾರಿಕೆ ಗೃಹಕೈಗಾರಿಕೆಯಾಗಿರುವ ಕಡೆಗಳಲ್ಲೆಲ್ಲ ಇಂದಿಗೂ ಈ ಪದ್ಧತಿ ಜಾರಿಯಲ್ಲಿದೆ. ಚೆನ್ನಾಗಿ ಹೊಡಚಿದ ತುಪ್ಪಟ ಬಹಳ ಮೃದುವಾಗುತ್ತದೆ. ಇದರಿಂದ ಹಂಜಿಗಳನ್ನು ತಯಾರುಮಾಡುತ್ತಾರೆ.

ಕಂಬಳಿ ನೇಯ್ಗೆಯಲ್ಲಿ ನೂಲುವುದು ಒಂದು ಪ್ರಮುಖವಾದ ಕಾರ್ಯ, ಆದ್ದರಿಂದಲೇ ಬಹುಶಃ ನೂಲಿನಂತೆ ಸೀರೆ ಎಂಬ ಗಾದೆಯ ಮಾತು ಹುಟ್ಟಿಕೊಂಡಿರಬೇಕು. ನೂಲು ಯಾವ ಮಟ್ಟವಿರುತ್ತದೆಯೋ ಕಂಬಳಿ ಆ ಮಟ್ಟದ್ದಾಗುತ್ತದೆ. ಹೊಡಚಿ ಹಿಂಜಿ ಹಂಜಿಮಾಡಿದ ತುಪ್ಪಟವನ್ನು ಕಂಬಳಿಗಳ ವಿನ್ಯಾಸದ ಯೋಜನೆಗನುಗುಣವಾಗಿ ನೂಲುತ್ತಾರೆ.

ಬಹಳ ಹಿಂದೆ ಇಂಥ ಹಂಜಿಗಳನ್ನೂ ತೊಡೆಗದಿರಿನಿಂದ ನೂಲುತ್ತಿದ್ದರು. ಇದು ಬಹಳ ನಿಧಾನ ಮತ್ತು ಕಷ್ಟದ ಕೆಲಸವಾಗಿತ್ತು. ರಾಟೆಯ ಪ್ರವೇಶ ಬಹುಶಃ ನೂಲುವುದರ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನು ಎಬ್ಬಿಸಿತು. ಈ ಕುಶಲ ಕಲೆ ಬೆಳೆದುಬಂದ ರೀತಿಯೇ ಒಂದು ಕೌತುಕದ ಕಥೆ. ಸು. 600 ವರ್ಷಗಳಷ್ಟು ಹಳೆಯದಾದ ಚರಕವನ್ನು ಭಾರತೀಯರೇ ಮೊದಲು ಕಂಡುಹಿಡಿದದ್ದು ಎಂದು ಅನೇಕರ ಅಭಿಪ್ರಾಯ. ಆದರೆ ಇದನ್ನು ಕಂಡುಹಿಡಿದವರ ಹೆಸರು ಅಜ್ಞಾತವಾಗಿಯೇ ಉಳಿದಿದೆ. ತಿರುಗಿಸಲು ದೊಡ್ಡ ಚಕ್ರದ ಬಳಕೆ ಮತ್ತು ಅದಕ್ಕೆ ತಕ್ಕ ಕದರನ್ನು ಉಪಯೋಗಿಸಿದುದರಿಂದ ಚರಕವನ್ನು ವೇಗವಾಗಿ ತಿರುಗಿಸಲು ಸಾಧ್ಯವಾಗಿ ಹೆಚ್ಚು ನೂಲು ತೆಗೆಯಲು ಅನುಕೂಲವಾಯಿತು. ಆದುದರಿಂದಲೇ ಕಂಬಳಿ ಮತ್ತು ಜಮಖಾನೆಯ ಉದ್ಯಮದಲ್ಲಿ ಚರಕ ಬಹಳ ಪ್ರಮುಖವಾದ ಮಾಧ್ಯಮವಾಗಿದೆ.

ಚರಕದಿಂದ ನೂತ ನೂಲನ್ನು ಕಂಡಿಕೆಗಳಾಗಿ ಮಾಡಿಕೊಳ್ಳುತ್ತಾರೆ. ಕಂಬಳಿ ನೇಕಾರರೇ ನೂಲನ್ನು ನೂಲುವುದಿಲ್ಲ. ಬೇರೆಯವರಿಗೆ ಕೂಲಿ ಕೊಟ್ಟು ನೂಲಿಸುವುದೂ ಉಂಟು. ಇಪ್ಪತ್ತೆಂಟು ತೊಲ ಹಿಂಜಿದ ತುಪ್ಪಟಕ್ಕೆ ಒಂದು ಹಂಜಿ ಎಂದು ಹೆಸರು. ನೂಲಿನಲ್ಲಿ ಅನೇಕ ವಿಧಗಳುಂಟು: 1 ಹುರಿಗಂಬಳಿ ನೂಲು, 2 ಉಜ್ಜುಗಂಬಳಿ ನೂಲು, 3 ಸಣ್ಣಕಂಬಳಿ ನೂಲು, ಇತ್ಯಾದಿ ಒಟ್ಟಿನಲ್ಲಿ ನೂಲಿನ ಗುಣಮಟ್ಟದಂತೆ ಕಂಬಳಿ ತಯಾರಾಗುತ್ತದೆ.

ಆಧಾರವೆಂತೆಂಬ ಅಂಬಲಿಯನೆ ತೊಡೆದು–ಎಂಬ ಜನಪದ ನುಡಿಯೊಂದರಂತೆ ಅಂಬಲಿಯ ತಯಾರಿಕೆ ಮತ್ತು ಅದನ್ನು ನೂತ ದಾರಕ್ಕೆ ಸವರುವುದು ಒಂದು ವಿಶಿಷ್ಟ ಕಲೆ. ಕಂಬಳಿಯ ತಯಾರಿಕೆಯಲ್ಲಿ ಅಂಬಲಿಯ ಪಾತ್ರ ಹಿರಿದಾದುದು. ಇದರ ತಯಾರಿಕೆಯೇ ಒಂದು ವಿಶಿಷ್ಟ ರೀತಿಯದು. ಮೊದಲು ಒಳ್ಳೆಯ ಹುಣಿಸೆ ಬೀಜವನ್ನು ಹದವರಿತು ಹುರಿಯಬೇಕು. ಆಮೇಲೆ ಅವನ್ನು ನೆಗ್ಗಿ ಮೇಲಿನ ಕರಿಯ ಸಿಪ್ಪೆ ತೆಗೆದರೆ ದೊರೆಯುವ ಬಿಳಿ ಪೊಪ್ಪುಗಳನ್ನು ಸು. ಹನ್ನೆರಡು ಗಂಟೆಗಳ ಕಾಲ ಅಥವಾ ಒಂದು ರಾತ್ರಿ ನೀರಿನಲ್ಲಿ ನೆನೆಹಾಕಬೇಕು. ಚೆನ್ನಾಗಿ ನೆನೆದ ಬೀಜವನ್ನು ಒರಳಲ್ಲಿ ಹಾಕಿ ಚೆನ್ನಾಗಿ ನುಣ್ಣಗೆ ತಿರುವಿ ಆ ಹಿಟ್ಟನ್ನು ನೀರಿನಲ್ಲಿ ಕದರಿ ಒಲೆಯ ಮೇಲಿಟ್ಟು ಹದವಾದ ಉರಿಯಲ್ಲಿ ಚೆನ್ನಾಗಿ ಬೇಯಿಸಬೇಕು. ಉದ್ದನೆಯ ಕೋಲಿನ ತುದಿಗೆ ಈಚಲುಗರಿಯನ್ನು ಸಿಕ್ಕಿಸಿದ ಉಜ್ಜುಗುಲ್ಲದಿಂದ ಅದನ್ನು ಗಂಟಾಗದಂತೆ ತಿರುವುತ್ತಿರಬೇಕು. ಸು. 2–3 ಗಂಟೆಗಳ ಕಾಲ ಹೀಗೆ ಬೇಯಿಸಿದ ಅನಂತರ ಅದು ಚೆನ್ನಾಗಿ ಬೆಂದು ಒಂದು ರೀತಿಯ ಮುದ್ದೆಯಂತಾಗುತ್ತದೆ. ಈ ಮುದ್ದೆಯನ್ನು ಮತ್ತೆ ನೀರಿನಲ್ಲಿ ಕದರಿದರೆ ಅದು ಅಂಟು ಅಂಟಾದ ಗಂಜಿಯಂಥ ಸರಿಯಾಗುತ್ತದೆ. ಇದನ್ನು ಹುಣಿಸೆ ಅಂಬಲಿ, ಗಂಜಿ ಸರಿ ಎಂದೆಲ್ಲ ಕರೆಯುತ್ತಾರೆ.

ಮುಂದಿನ ಕ್ರಮ ದಾರವನ್ನು ಹಾಸುಮಾಡುವುದು, ಸು. ಒಂಬತ್ತು ಮೊಳ ಉದ್ದದ 220–240 ಜೊತೆ ದಾರಗಳುಳ್ಳ ಹಾಸುಗಳನ್ನಾಗಿ ಮಾಡುತ್ತಾರೆ. ಹಾಸು ಎಂದರೆ ಎಳೆಗಳು ಬಿಡಿ ಬಿಡಿಯಾಗಿ ಒಂದರ ಪಕ್ಕದಲ್ಲೊಂದು ಬರುವಂತೆ ಜೋಡಿಸುವ ರೀತಿ. ಏಳು, ಗೂಟಗಳ ಅರುಗಣಿ ಎಂಬ ಹಲಗೆಯಂಥ ಸಾಧನದಲ್ಲಿ ನೂಲನ್ನು ಹಾಸಿಕ್ಕುತ್ತಾರೆ. ಹೀಗೆ ಹಾಸಿದ ನೂಲನ್ನು ಒಂದು ಕ್ರಮದಲ್ಲಿ ಕಟ್ಟಿ ತಿಳಿಯಾದ ಹುಣಿಸೆ ಸರಿಯಲ್ಲಿ ಅದ್ದಿ ಬಿಸಿಲಿನಲ್ಲಿಟ್ಟುಕೊಂಡು ಕುಂಚಿಗೆ ಎಂಬ ಉಪಕರಣದ ಸಹಾಯದಿಂದ ಊಕೆ ಮಾಡುತ್ತಾರೆ–ಎಂದರೆ ನೂಲನ್ನು ನಯಗೊಳಿಸುವುದು ಎಂದರ್ಥ. ಆಗ ನೂಲಿನ ಕೂದಲು ಅಂಬಲಿಯೊಡನೆ ಸೇರಿ ಒಂದು ಹದಕ್ಕೆ ಬರುತ್ತದೆ. ಎಳೆಗಳು ಒಂದಕ್ಕೊಂದು ಅಂಟದೆ ಬಿಡಿಬಿಡಿಯಾಗಿರುತ್ತವೆ.

ಇಷ್ಟೆಲ್ಲ ಆದ ಮೇಲೆ ದಾರ ಅಥವಾ ಹುರಿಯನ್ನು ಮಗ್ಗಕ್ಕೆ ಏರಿಸುತ್ತಾರೆ. ಹೋಳು ಎನ್ನುವ ಸಾಧನದಲ್ಲಿ ನೂಲನ್ನು ಜೋಡಿಸಿ ಮಗ್ಗದಲ್ಲಿಟ್ಟು ನೇಯುತ್ತಾರೆ. ಈ ಹೋಳುಗಳು 9 ಮೊಳ ಉದ್ದ 3 ಮೊಳ ಅಗಲವಿರುತ್ತವೆ. (ನೇಯ್ದ ಮೇಲೆ ಅನುಕೂಲಕ್ಕೆ ತಕ್ಕಹಾಗೆ ಈ ಹೋಳುಗಳನ್ನು ಎರಡರಿಂದ ನಾಲ್ಕನ್ನು ಸೇರಿಸಿ ಒಂದು ಕಂಬಳಿ ಮಾಡುತ್ತಾರೆ). ಅಣಿಗಳನ್ನು ಬಿಡಿಸಿ ಗಂಜಿಯಲ್ಲಿ ಅದ್ದಿ ಸಿದ್ಧವಾದ ಹುರಿಯನ್ನು ಲಾಳಿಯ ಮೂಲಕ ಸೇರಿಸಿ ಮತ್ತೆ ಅಣಿಯನ್ನು ಕೂಡಿಸಿ ಬೇವು ಎಂಬ ಸಾಧನದಿಂದ ಒತ್ತಿ ಹುರಿಗಳನ್ನು ಹತ್ತಿರ ಸೇರಿಸುತ್ತ ಹೋಗುತ್ತಾರೆ. ಹೀಗೆ ನೇಯ್ದು ಸಿದ್ಧವಾದ ಕಂಬಳಿಯ ಹೋಳುಗಳಿಗೆ ಮತ್ತೆ ಹುಣಿಸೆ ಸರಿಯನ್ನು ಸವರಿ ಬಿಸಿಲಿನಲ್ಲಿ ನೇತುಹಾಕಿ ಒಣಗಿಸುತ್ತಾರೆ. ಹೀಗೆ ಕ್ರಮಬದ್ಧವಾಗಿ ಒಣಗಿಸಿದ ನೇಯ್ದ ಹೋಳುಗಳನ್ನು ಅನುಕೂಲಕ್ಕೆ ಅನುಗುಣವಾಗಿ ಎರಡರಿಂದ ನಾಲ್ಕು ಹೋಳುಗಳನ್ನು ಉಣ್ಣೆಯ ದಾರದಿಂದ ಹೊಲೆದರೆ ಒಂದು ಪೂರ್ಣ ಕಂಬಳಿ ಸಿದ್ಧವಾದಂತಾಯಿತು.

ಕಂಬಳಿಗಳಲ್ಲಿ ಹಲವು ವಿಧಗಳುಂಟು. ತುಪ್ಪಟದ ಉತ್ಕೃಷ್ಟತೆ ಮತ್ತು ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ 1 ಹುರಿಗಂಬಳಿ, 2 ಉಜ್ಜುಗಂಬಳಿ, 3 ಸಣ್ಣ ಕಂಬಳಿ 4 ಶಾಲು 5 ಗದ್ದುಗೆ ದಾವಳಿ 6 ಕರಿಯ ಕಂತೆ, ಇತ್ಯಾದಿ.

**ಹುರಿಗಂಬಳಿ:** ಇದು ಸಾಮಾನ್ಯ ಬಳಕೆಗೆ ತಯಾರುಮಾಡುವ ಒರಟು ಕಂಬಳಿ. ಅಂಥ ಮೃದುವಲ್ಲದ ತುಪ್ಪಟದಿಂದ ನೂತ ಕೊಂಚ ದಪ್ಪನೆಯ ನೂಲುಗಳಿಂದ ಇದನ್ನು ನೇಯುತ್ತಾರೆ. ನೂಲು ಹುರಿ ಗಾತ್ರವಿರುವುದರಿಂದ ಹುರಿಗಂಬಳಿ ಎಂದು ಕರೆಯುತ್ತಾರೆ. ಹುರಿಗಂಬಳಿ ನಾಲ್ಕು ಹೋಳುಗಳಿಂದ ತಯಾರಾಗಿರುತ್ತದೆ. ಒಂದೇ ಕಂಬಳಿಯ ಅರ್ಧವನ್ನು ಹಾಸಿ ಮತ್ತರ್ಧವನ್ನು ಹೊದೆಯುತ್ತಾರೆ. ಇದನ್ನು ಹೆಗ್ಗಂಬಳಿ ಎಂದೂ ಕರೆಯುತ್ತಾರೆ, ಹಳ್ಳಿಗಾಡುಗಳಲ್ಲಿ ವಾಸಿಸುವ ರೈತರು ಇದನ್ನು ಕೊಳ್ಳುತ್ತಾರೆ; ಕುರಿ ಸಾಕುವವರು ಬಂಡದ ವಿನಿಮಯಕ್ಕೆ ಪಡೆಯುತ್ತಾರೆ.

**ಉಜ್ಜುಗಂಬಳಿ :** ಕಂಬಳಿ ತಯಾರಿಕೆಯಲ್ಲಿ ಉಜ್ಜುಗಂಬಳಿ ಮಾಡುವುದು ಒಂದು ವಿಶೇಷ ಕಲೆ. ಕಂಬಳಿ ಮಾಡುವ ಎಲ್ಲ ಕಸುಬುದಾರರಿಗೂ ಇದು ಬರುವುದಿಲ್ಲ. ಆ ಕೆಲಸದಲ್ಲಿ ನಿಷ್ಣಾತರಾದ ಕೆಲವು ಜನ ಮಾತ್ರ ಇದನ್ನು ಮಾಡಬಲ್ಲರು. ಉಜ್ಜು ಕಂಬಳಿಯನ್ನು ಸಾಮಾನ್ಯ ಬಂಡದಿಂದ ಮಾಡಲು ಬರುವುದಿಲ್ಲ. ನೇಕಾರರು ತರುವ ರಾಶಿಬಂಡದಲ್ಲಿ ಮೃದುವಾದುದನ್ನು ಆರಿಸಬೇಕು. ಒಂದು ಮಣದಷ್ಟಿರುವ ಬಂಡದ ರಾಶಿಯಲ್ಲಿ ಇಂಥ ಮೃದುವಾದ ತುಪ್ಪಟ ಮೂರು ಅಥವಾ ನಾಲ್ಕು ಪೌಂಡು ದೊರೆಯುತ್ತದೆ. ಸಾಮಾನ್ಯವಾಗಿ ಈ ತುಪ್ಪಟ ಕುರಿಯ ಮೊದಲನೆಯ ಕತ್ತರಿಯದಾಗಿರಬೇಕು. ಕುರಿಯ ಕತ್ತಿನ ಭಾಗ ಮತ್ತು ಬೆನ್ನಿನ ಮೇಲಿನ ತುಪ್ಪಟ ಇದಕ್ಕೆ ಉತ್ತಮವಾದುದು. ಹೀಗೆ ಆರಿಸಿ ತೆಗೆದ ಅಪ್ಪಟವಾದ ಮೃದು ತುಪ್ಪಟವನ್ನು ಹಿಂಜಿ ಹಂಜಿ ಮಾಡಬೇಕು. ಈಗಿನಂತೆ ಹಿಂಜು ಯಂತ್ರಗಳು ಇಲ್ಲದಿದ್ದ ಹಿಂದಿನ ಕಾಲದಲ್ಲಿ ತುಪ್ಪಟವನ್ನು ಕೈಬೆಸಗಳಿಂದ ಹಿಂಜುತ್ತಿದ್ದರು. ಹಿಂಜಿದ ಹಂಜಿಯಿಂದ ಮೃದುವಾದ, ಹೆಚ್ಚು ಸಡಿಲವಲ್ಲದ, ಹೆಚ್ಚು ಹುರಿಯ ಅಲ್ಲದ ಹೆಚ್ಚು ದಪ್ಪನಲ್ಲದ, ಹೆಚ್ಚು ಸಣ್ಣವೂ ಅಲ್ಲದ ಮಧ್ಯಮ ರೀತಿಯ ದಾರ ತೆಗೆಯಬೇಕು. ಉಜ್ಜುಗಂಬಳಿಯ ನೂಲು ತೆಗೆಯುವುದೇ ಇಲ್ಲಿ ಬಹು ಮುಖ್ಯ ಕೆಲಸ. ಎಷ್ಟರ ಮಟ್ಟಿಗೆ ಒಳ್ಳೆಯ ನೂಲು ಬರುತ್ತದೆಯೋ ಅಷ್ಟರ ಮಟ್ಟಿಗೆ ಕಂಬಳಿ ಉತ್ತಮವಾಗುತ್ತದೆ. ಉಜ್ಜುಗಂಬಳಿ ನೇಯ್ಗೆಯೂ ಒಂದು ವಿಶೇಷ ಕ್ರಮ. ಹುರಿಗಂಬಳಿ ನೇಯ್ಯುವಾಗ ಹೊಕ್ಕನ್ನು ಹುಣಿಸೆ ಸರಿಯಲ್ಲಿ ನೆನೆಸಿ ಉಪಯೋಗಿಸುತ್ತಾರೆ. ಉಜ್ಜುಗಂಬಳಿಗೆ ಉಪಯೋಗಿಸುವ ಹೊಕ್ಕನ್ನು ಹುಣಿಸೆ ಸರಿಯಲ್ಲಿ ಅದ್ದುವುದಿಲ್ಲ. ನೇಯ್ಗೆಗೆ ತಯಾರಾದ ಹಾಸನ್ನು ತಕ್ಕ ಉಪಕರಣಗಳಿಂದ ಮಗ್ಗದಲ್ಲಿ ಜೋಡಿಸಿ ಹೊಕ್ಕಿನ ಎಳೆಗಳನ್ನು ಒಂದು ಕ್ರಮದಲ್ಲಿ ನೇಯುತ್ತಾರೆ. ಉಜ್ಜುಗಂಬಳಿಯ

ತಯಾರಿಕೆಯಲ್ಲಿ ನೇಯ್ಗೆ ಬಹಳ ಜಾಗರೂಕತೆಯಿಂದ ಮಾಡಬೇಕಾದ ಕೆಲಸ. ಹೀಗೆ ನೇಯ್ದ ಹೋಳುಗಳು 9 ಮೊಳ ಉದ್ದ 2 ½ ಮೊಳ ಅಗಲವಿರುತ್ತವೆ. ಇಂಥ ಎರಡು ಹೋಳುಗಳನ್ನು ಸೇರಿಸಿ ಉಣ್ಣೆಯ ದಾರದಿಂದ ಹೊಲೆಯುತ್ತಾರೆ. ಆಗ ಅದು ಒಂದು ಕಂಬಳಿಯಾಗುತ್ತದೆ ಈ 9 ಮೊಳ ಉದ್ದ 5 ಮೊಳ ಅಗಲದ ಕಂಬಳಿಯನ್ನು 6 ಮೊಳ ಉದ್ದ 4 ಮೊಳ ಅಗಲಕ್ಕೆ ಇಳಿಸುವ ಕಾರ್ಯ ಉಜ್ಜುವುದರಿಂದ ಆಗುತ್ತದೆ.

ಈಚಲು ಗರಿಗಳ ಸುತ್ತ ಇರುವ ಸೀಬು ಎಂಬ ನಾರನ್ನು ತಂದು ಅದನ್ನು ಹಿಂಜಿ ಹದಮಾಡಿ ಹಗ್ಗದಂಥ ದಾರ ತೆಗೆಯುತ್ತಾರೆ. ಈ ಹಗ್ಗವನ್ನು ಸು. ನಾಲ್ಕು ಅಡಿ ಉದ್ದದ ನಾಲ್ಕು ಮರದ ತುಂಡುಗಳನ್ನು ಚಚ್ಚೌಕವಾಗಿ ಜೋಡಿಸಿ ಮಧ್ಯೆ ಚಪ್ಪಟೆಯಂತೆ ಒತ್ತಾಗಿ ಹೆಣೆಯುತ್ತಾರೆ. ಇದು ಒಂದು ರೀತಿಯ ಚೌಕಟ್ಟಿನಂತೆ ಕಾಣುತ್ತದೆ. ಇದನ್ನು ಚೌಕಾಕಾರವಾಗಿ ಒಂದೇ ಎತ್ತರದಲ್ಲಿ ನೆಟ್ಟಿರುವ 3 ಅಡಿ ಎತ್ತರದ ನಾಲ್ಕು ಕಲ್ಲುಕಂಬಗಳ ಮೇಲಿಡುತ್ತಾರೆ.

ನೇಯ್ದ ಕಂಬಳಿಯನ್ನು ಕುದಿಯುವ ನೀರಿನಲ್ಲಿ ಚೆನ್ನಾಗಿ ನೆನೆಯುವಂತೆ ಅದ್ದಿ ವರ್ಚಿನ ಮೇಲೆ ಹಾಕಿ ನಾಲ್ಕು ಮಂದಿ ಬಲವಾದ ಆಳುಗಳು-ಆ ಕಡೆ ಇಬ್ಬರು ಈ ಕಡೆ ಇಬ್ಬರು-ಎದುರುಬದುರಾಗಿ ನಿಂತುಕೊಂಡು ಉಜ್ಜುತ್ತಾರೆ, ಮಧ್ಯೆ ಮಧ್ಯೆ ಕುದಿಯುವ ನೀರಿನಲ್ಲಿ ಅದ್ದಿಕೊಳ್ಳುತ್ತಿರುತ್ತಾರೆ. ಕಂಬಳಿಯ ಉದ್ದ 6 ಮೊಳ ಅಗಲ 4 ಮೊಳಕ್ಕೆ ಇಳಿಯುವವರೆಗೆ ಈ ಉಜ್ಜುವಿಕೆ ನಿರಂತರವಾಗಿ ನಡೆಯುತ್ತದೆ. ವಿರಳವಾಗಿ ಹೆಣೆಯಲಾಗಿದ್ದ ಕಂಬಳಿ ಒತ್ತಾಗಿ, ಮಂದವಾಗುತ್ತದೆ. ಎಳೆಗಳು ಒಡೆದು ಒಂದರೊಡನೊಂದು ಬಲವಾಗಿ ಹೊಂದಿಕೊಳ್ಳುತ್ತವೆ. ನೇಯ್ದು ಯಾವ ಗುರುತೂ ಈಗ ಉಳಿಯುವುದಿಲ್ಲ. ಹೀಗೆ ಉಜ್ಜಿದ ಕಂಬಳಿಯನ್ನು ಕೆರೆಗೋ, ಹೊಳೆಗೋ, ತೆಗೆದುಕೊಂಡು ಹೋಗಿ ಗಂಜಿಯೆಲ್ಲ ಹೋಗುವ ಹಾಗೆ ತಿಳಿನೀರಿನಲ್ಲಿ ಜಾಲಾಡಿ ತೊಳೆಯುತ್ತಾರೆ. ಅನಂತರ ಕಂಬಳಿಯನ್ನು ಬಿಸಿಲಿನಲ್ಲಿ ಒಣಗುಹಾಕಿ, ಸು. ನಾಲ್ಕೈದು ಗಂಟೆ ಆದ ಮೇಲೆ, ಇನ್ನೂ ಹಸಿಯಿದ್ದ ಹಾಗೆಯೆ, ಕ್ರಮವಾಗಿ ಮಡಿಸಿ ಅಕ್ಕೆಗೆ ಹಾಕುತ್ತಾರೆ. ಇನ್ನೂ ಹಸಿಯಾಗಿರುವ ಕಂಬಳಿ ಹೇಗೆ ಎಳೆದರೆ ಹಾಗೆ ಬರುತ್ತದೆ. ಉದ್ದ ಅಗಲಗಳನ್ನು ಕ್ರಮವಾಗಿ ಎಳೆದು ಸರಿಪಡಿಸುತ್ತಾರೆ. ತರುವಾಯ ನೆಲದ ಮೇಲೆ ಹಾಕಿ ಅದರ ಮೇಲೆ ಒಣಗಿದ ಕಂಬಳಿಯನ್ನೋ ಚಾಪೆಯನ್ನೋ ಹಾಸಿ ಒಂದು ದಿನ ಬಿಡುತ್ತಾರೆ. ಮೂರನೆಯ ದಿನ ಮತ್ತೆ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಮಡಿಸಿಡುತ್ತಾರೆ. ಇಲ್ಲಿಗೆ ತಯಾರಿಕೆ ಪೂರ್ಣವಾದಂತವಾಗಿ ಅದು ಹೊದೆಯಲು ಸಿದ್ಧವಾಗುತ್ತದೆ.

ಉಜ್ಜುಗಂಬಳಿಗೆ ಕೃತಕವಾದ ಬಣ್ಣಹಾಕುವುದು ಅಸಾಧ್ಯವಾದ ಮಾತೆಂದೇ ಹೇಳಬೇಕು. ಏಕೆಂದರೆ ಕಂಬಳಿಯನ್ನು ನೇಯ್ದ ಮೇಲೆ ಕುದಿಯುವ ನೀರಿನಲ್ಲಿ ಅದ್ದಿ ಅದ್ದಿ ಉಜ್ಜಿ ಅನಂತರ ತೊಳೆಯುವುದರಿಂದ ಕಟ್ಟಿದ ಬಣ್ಣ ಉಳಿಯುವುದು ಕಷ್ಟ. ಸಾಮಾನ್ಯವಾಗಿ ಉಣ್ಣೆಯ ಬಣ್ಣವೇ ಉಜ್ಜುಗಂಬಳಿಯ ಬಣ್ಣವೂ ಆಗಿದೆ. ಉಣ್ಣೆಯ ಪ್ರಕೃತಿದತ್ತವಾದ ಕಪ್ಪು, ಬಿಳಿ, ಮಾಸಲು ಕಂದುಬಣ್ಣಗಳಲ್ಲಿ ಇವು ದೊರೆಯುತ್ತವೆ. ಈ ಬಣ್ಣಗಳು ಯಾವ ಪರಿವರ್ತನೆಯನ್ನೂ ಹೊಂದದೆ ಕಡೆಯತನಕ ಉಳಿಯುತ್ತವೆ. ಮೊನ್ನೆಮೊನ್ನೆಯವರೆಗೆ ಉಜ್ಜುಗಂಬಳಿಗಳು ಯಾವ ನಮೂನೆಯೂ ಇಲ್ಲದೆ ಪ್ರಕೃತಿದತ್ತ ಬಣ್ಣಗಳಲ್ಲಿ ದೊರೆಯುತ್ತಿದ್ದವು. ಈಗ ಕೊಳ್ಳುವವರ ಅಭಿರುಚಿಗೆ ತಕ್ಕಹಾಗೆ ಮೇಲೆ ಹೇಳಿದ ವಿವಿಧ ಬಣ್ಣದ ಉಣ್ಣೆಯನ್ನೂ ಉಪಯೋಗಿಸಿ, ಬಹು ಆಕರ್ಷಕವಾದ ಹೊಸ ಹೊಸ ನಮೂನೆಯ ಉಜ್ಜುಗಂಬಳಿಗಳನ್ನು ಮಾಡುತ್ತಾರೆ.

**ಶಾಲು, ಸಕಲಾತಿ ಮತ್ತು ಸಣ್ಣ ಕಂಬಳಿ :** ಉತ್ತಮವಾದ ಉಣ್ಣೆಯಿಂದ ಸಣ್ಣದಾಗಿ ನೂಲು ತೆಗೆದು ಈ ವಸ್ತ್ರಗಳನ್ನು ನೇಯುತ್ತಾರೆ. ಶಾಲು ಮತ್ತು ಸಕಲಾತಿಗಳು ಅತ್ಯುತ್ತಮವಾದ ಹೊದೆಯುವ ವಸ್ತ್ರಗಳು. ಇವು ಮೇಲುದರ್ಜೆಯ ಜನರಿಗಾಗಿ ತಯಾರಾಗುತ್ತಿದ್ದುವು. ಈ ಯಂತ್ರಯುಗದಲ್ಲಂತೂ ಶಾಲು ಅತ್ಯಂತ ವ್ಯಾಪಕವಾದ ಜನಪ್ರಿಯತೆಯನ್ನು ಪಡೆದಿದೆ. ಸಕಲಾತಿ ಈಗ ಶಾಲಿನಲ್ಲಿ ಐಕ್ಯವಾಗಿದೆ. ಸಣ್ಣಕಂಬಳಿ ಶಾಲಿನ ರೀತಿಯ ಒರಟು ಹೊದೆಯುವ ವಸ್ತ್ರ. ಇದನ್ನು ತೊಳೆಗಂಬಳಿ ಎಂದೂ ಕರೆಯುತ್ತಾರೆ. ಏಕೆಂದರೆ ಕೊಳೆಯಾದಾಗಲೆಲ್ಲ ಇದನ್ನು ತೊಳೆದು ಶುಭ್ರಗೊಳಿಸಬಹುದು. ಕೋಲಾರ, ರಾಣಿಬೆನ್ನೂರು, ದಾವಣಗೆರೆ, ಚಿಕ್ಕನಾಯಕನಹಳ್ಳಿಗಳಲ್ಲಿ ವಿಶೇಷವಾಗಿ ಇದನ್ನು ತಯಾರಿಸುತ್ತಾರೆ. ಶಾಲಿನ ತಯಾರಿಕೆ ಇಂದು ಬಹುಮಟ್ಟಿಗೆ ಯಂತ್ರಗಳಿಂದ ಆಗುತ್ತಿದೆ. ಕಾಶ್ಮೀರ ಇವುಗಳಿಗೆ ಜಗದ್ವಿಖ್ಯಾತವಾದ ಸ್ಥಳವಾಗಿದೆ.

**ಗದ್ದುಗೆಧಾವಳಿ:** ಧಾವಳಿ ಎಂದರೆ ಧವಳ, ಬಿಳಿ ಎಂದು ಅರ್ಥ. ಗದ್ದುಗೆ ಕೂರುವ ಸ್ಥಳ. ಆದುದರಿಂದ ಗದ್ದುಗೆಧಾವಳಿ ಕೂರಲು ಉಪಯೋಗಿಸುವ ಅಚ್ಚ ಬಿಳಿಯ ಕಂಬಳಿ, ಧಾರ್ಮಿಕ ಗುರುಗಳ ಗದ್ದುಗೆಗೂ ಮಿಕ್ಕಂತೆ ಪವಿತ್ರ ಕಾರ್ಯಗಳಲ್ಲಿಯೂ ಅದನ್ನು ಉಪಯೋಗಿಸುತ್ತಿದ್ದರು. ಈ ಕಂಬಳಿ ವಿಶೇಷವಾಗಿ ವೈದಿಕರ ಉಪಯೋಗಕ್ಕಾಗಿ ತಯಾರಾಗುತ್ತಿತ್ತು. ಗದ್ದುಗೆಗಾಗಿಯೇ ಇದನ್ನು ಹೆಚ್ಚಾಗಿ ಬಳಸುತ್ತಾರಾದರೂ ಇದನ್ನು ಶಾಲಿನಂತೆ ಹೊದೆಯಲು ಉಪಯೋಗಿಸುವುದೂ ಉಂಟು, ಪೂಜಾವಸ್ತುಗಳನ್ನಿಡುವ ಚೀಲಗಳನ್ನು ಇದರಿಂದ ತಯಾರಿಸುತ್ತಾರೆ.

**ಕರಿಯ ಕಂತೆ :** ಕುರುಬರ ಗುರು ರೇವಣ ಸಿದ್ಧೇಶ್ವರ ತನ್ನ ಅವತಾರ ಕಾಲದಲ್ಲಿ ಕುರಿ ಕಾಯುತ್ತಿದ್ದನೆಂದೂ ಅದರಿಂದಲೇ ಕುರುಬರಿಗೆ ಕುರಿಸಾಕಣೆಯ ಪರಂಪರೆ ಉಂಟಾಯಿತೆಂದೂ ನಂಬಿಕೆ. ರೇವಣ ಸಿದ್ಧೇಶ್ವರನಿಗೆ ಉಣ್ಣೆಯ ವಸ್ತ್ರ ಬಹುಪ್ರಿಯ. ಕುರುಬ ಜನಾಂಗ ಎಲ್ಲೆಲ್ಲುಂಟೊ ಅಲ್ಲೆಲ್ಲ ರೇವಣಸಿದ್ಧೇಶ್ವರನ ಮಠಗಳಿದ್ದು ಅಲ್ಲೆಲ್ಲ ಉಣ್ಣೆಯ ಕರಿಯ ವಸ್ತ್ರವನ್ನು ಗುರುವಿಗೆ ಅರ್ಪಿಸುತ್ತಾರೆ. ಇದನ್ನು ಕರಿಯ ಕಂತೆ ಎಂದು ಕರೆಯುತ್ತಾರೆ. ಕಂತೆ ಎಂದರೆ ಪೂಜೆಯ ಸಮಯದಲ್ಲಿ ಉಡುವ ವಸ್ತ್ರ-ಎಂದು ಅರ್ಥ. ಈ ಕರಿಯ ಕಂತೆಯ ಪ್ರಸ್ತಾಪ ಕುರುಬರ ಜನಾಂಗದ ನಂಬಿಕೆ ಮತ್ತು ಸಂಪ್ರದಾಯಗಳನ್ನು ವಿವರಿಸುವ ತಗರ ಪವಾಡ ಎಂಬ ಪ್ರಾಚೀನ ಗ್ರಂಥದಲ್ಲಿ ಬರುತ್ತದೆ.

ಕರಿಯ ಕಂತೆಯನ್ನು ಮಾಡುವವರು ಗುರುಪರಂಪರೆಯಲ್ಲಿ ಬಂದ ಒಡೆಯರ ಮನೆತನದವರು, ನಾಲ್ಕೈದು ಜನ ಸ್ನಾನಮಡಿಗಳಿಂದ ಉಪವಾಸವಿದ್ದು ಅಚ್ಚಕರಿಯ ತುಪ್ಪಟವನ್ನು ಕೈಯಲ್ಲಿಯೇ ಹಿಂಜಿ ಕೈಯಲ್ಲಿಯೇ ಎಳೆ ಹೊಸೆದು ಅಣಿಮಾಡಿ ವಸ್ತ್ರವನ್ನು ನೇಯುತ್ತಾರೆ. ಇದು ರೇವಣ ಸಿದ್ಧೇಶ್ವರನ ಗರ್ಭಗುಡಿಯಲ್ಲಿ ನಡೆಯುವ ಕೆಲಸ. ಇದೊಂದು ಮೂರು ಮೂಲೆಯ ಉಣ್ಣೆಯ ವಸ್ತ್ರ, ಕಂತೆ ಸಿದ್ಧವಾದ ಮೇಲೆ ಅದನ್ನು ರೇವಣ ಸಿದ್ಧೇಶ್ವರನಿಗೆ ಒದಿಸುವ ಪವಿತ್ರ ಸಮಾರಂಭ ವೈಭವಯುತವಾಗಿ ನಡೆಯುತ್ತದೆ. ಇದಲ್ಲದೆ ಅಚ್ಚಕರಿಯ ತುಪ್ಪಟದಿಂದ ಮಾಡಿದ ಕಂಬಳಿಯನ್ನು ಮದುವೆ ಸಂದರ್ಭಗಳಲ್ಲಿ ಗುರುಗಳಿಗೆ ಪೀಠವಾಗಿಯೂ ಧಾರೆ ಹರವಿಯ ಕೆಳಗೆ ಹಾಸಲೂ ಕುರುಬ ಜನಾಂಗದವರು ಇಂದಿಗೂ ಉಪಯೋಗಿಸುತ್ತಾರೆ.

**ಯಂತ್ರಮಗ್ಗಗಳ ಆಗಮನ :** 19ನೆಯ ಶತಮಾನದ ಆದಿಭಾಗದಲ್ಲಿ ಫ್ರಾನ್ಸಿನ ಜೋಸೆಫ್ ಮೆರಿ ಜಾಕ್ವರ್ಡ್ ಎಂಬಾತ ಮೊದಲು ಯಂತ್ರಮಗ್ಗವನ್ನು ಕಂಡಿಹಿಡಿದ. ಅವನ ಈ ಸಂಶೋಧನೆ ತಮ್ಮ ಕೆಲಸಗಳಿಗೆ ಸಂಚಕಾರ ತಂದೀತೆಂಬ ಭಯದಿಂದ ಅವನ ಅಕ್ಕಪಕ್ಕದ ನೇಯ್ಗೆಯವರು ಫ್ರೆಂಚ್‌ನಗರ ಲೆಯೊನ್ಸಿನಿಂದ ಅವನನ್ನು ಕಲ್ಲುಗಳಿಂದ ಹೊಡೆದು ಹೊರಗಟ್ಟಿದರು. ಜಾಕ್ವರ್ಡನ ಯಂತ್ರಮಗ್ಗ ವಿಲ್ಟನ್ ಮತ್ತು ಬ್ರುಸೆಲ್ಸಿನ ನೇಯ್ಗೆಯಲ್ಲಿ ಕ್ರಾಂತಿಯುಂಟುಮಾಡಿ ನೇಯ್ಗೆಯ ವೆಚ್ಚವನ್ನು ಕುಗ್ಗಿಸಿ ಕಂಬಳಿಯ ಬೆಲೆ ಸಾಮಾನ್ಯರಿಗೂ ಎಟಕುವಂತೆ ಮಾಡಿತು. ಇದರ ಪರಿಣಾಮವಾಗಿ ನೇಯ್ಗೆ ಕಂಪನಿಗಳಲ್ಲಿ ಹೆಚ್ಚು ಕೆಲಸಗಳು ಹುಟ್ಟಿಕೊಂಡುವು. ಜಾಕ್ವರ್ಡ್ ಸತ್ತ 6 ವರ್ಷಗಳ ಮೇಲೆ ಲೆಯಾನ್ಸಿನ ಜನರು ಅವನ ಹೆಸರಿನಲ್ಲಿ ಒಂದು ಭವ್ಯ ಸ್ಮಾರಕವನ್ನು ನಿರ್ಮಿಸಿದರು. ಈಗಿನ ವಿಲ್ಟನ್ನಿನ ಎಲ್ಲ ಕಂಬಳಿಗಳೂ ಜಾಕ್ವರ್ಡ್ ಯಂತ್ರಮಗ್ಗದಿಂದ ತಯಾರಾಗುತ್ತವೆ.

ಮತ್ತೆರಡು ಪ್ರಮುಖವಾದ ಐರೋಪ್ಯ ಸಂಶೋಧನೆಗಳು ಕಂಬಳಿ ಮತ್ತು ಜಮಖಾನೆಯ ಉದ್ಯಮದ ಭವಿಷ್ಯವನ್ನು ಉಜ್ವಲಗೊಳಿಸಿ ಕಾರ್ಖಾನೆಗಳ ಸ್ಥಾಪನೆಗೆ ಪ್ರಚೋದನೆಯನ್ನು ನೀಡಿದವು. 1831ರಲ್ಲಿ ಸ್ಕಾಟ್‌ಲೆಂಡಿನ ಬರ್ಲಿನ್ ರಿಚರ್ಡ್ ವೈಟೋಕ್ ಎಂಬುವನು ಬಣ್ಣದ ದಾರದ ನೇಯ್ಗೆಯಿಂದ ತಯಾರಿಕಾ ವೆಚ್ಚವನ್ನು ಇಳಿಸುವ ವಿಧಾನವನ್ನು ಜಾರಿಗೆ ತಂದ, ಈ ಬೆಳವಣಿಗೆಯನ್ನು ಹಿಂಬಾಲಿಸಿ 1839ರಲ್ಲಿ ಜೇಮ್ಸ್ ಟೆಂಪಲ್‌ಸನ್ ಎಂಬುವನು ಪೇಟೆಂಟ್ ಅಕ್ಸಮಿನಿಸಲರ್ ಅಥವಾ ಡಬಲ್ ವೀವಿಂಗ್ ಚೌನಲ್ ಪ್ರೋಸೆಸ್ ಎಂಬ ಹೆಚ್ಚು ತುಪ್ಪಟ ಉಳಿಸುವ ವಿಧಾನವನ್ನು ಕಂಡುಹಿಡಿದ. ಈ ಹೆಜ್ಜೆ ತಯಾರಿಕೆಯ ವೆಚ್ಚವನ್ನು ಮತ್ತೂ ಕಡಿಮೆ ಮಾಡಿದ್ದೇ ಅಲ್ಲದೆ, ಕಂಬಳಿ ತಯಾರಿಸುವ ಯಂತ್ರಮಗ್ಗಗಳಿಗೆ ಉತ್ತಮ ಮಾರುಕಟ್ಟೆಯನ್ನೂ ಒದಗಿಸಿತು.

**ವಿದ್ಯುತ್ ಮಗ್ಗಗಳು :** ಮೊದಲನೆಯ ವಿದ್ಯುತ್ ಮಗ್ಗ : ಕಂಬಳಿ ಜಮಖಾನೆಯ ಆಧುನಿಕ ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿ 1839 ಯುಗ ಪ್ರವರ್ತಕ ವರ್ಷ-ಎರಾಸ್ಟಸ ಬ್ರಿಗ್‌ಹ್ಯಾಮ್‌ಬಿಗೆಲೋನ ವಿದ್ಯುತ್ ಮಗ್ಗಗಳ ಸಂಶೋಧನೆ ಆದದ್ದು ಅಂದು. ಮೊದಲನೆಯ ಹಬೆಯ ಯಂತ್ರದಿಂದ ನಡೆಸಲಾಗುತ್ತಿದ್ದ ಮಗ್ಗ ಲೋವೆಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಯಲ್ಲಿ ಮೊದಲು ಸ್ಥಾಪಿತವಾಯಿತು. ಇಲ್ಲಿಯವರೆಗೆ ದಿನಕ್ಕೆ 10-12 ಗಂಟೆಗಳ ಕಾಲ ಒಬ್ಬ ದೊಡ್ಡಾಳು ಮತ್ತು ಒಬ್ಬ ಹುಡುಗ ಕಷ್ಟಪಟ್ಟು ದುಡಿದರೆ 7 ಗಜ ಬ್ರುಸೆಲ್ಸ್ ಮಾದರಿಯ ಜಮಖಾನೆಯನ್ನು ನೇಯಲು ಸಾಧ್ಯವಾಗುತ್ತಿತ್ತು.

ಬಿಗೆಲೋ ಮಗ್ಗ ಆ ಕಾಲದ ಅತ್ಯುತ್ತಮ ರೀತಿಯ ಜಮಖಾನೆಯ 25 ಗಜ ನೇಯಲು ಸಮರ್ಥವಾಯಿತು. ಈ ಸಂಶೋಧನೆ ಕೈಗಾರಿಕಾ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿತು ಮತ್ತು ಉಣ್ಣೆಯ ಜಮಖಾನೆ ಮತ್ತು ರತ್ನಗಂಬಳಿಗಳು ಜನಸಾಮಾನ್ಯರಿಗೆ ಎಟಕುವಂತಾಯಿತು. ಸಾವಿರಾರು ವರ್ಷಗಳಿಂದ ನೇಯ್ಗೆಯ ಕಲೆ ನೆಲಕ್ಕೆ ಹಾಸುವ ಸೌಂದರ್ಯಸಾಧನವಾಗಿ ಬರಿಯ ರಾಜರು ಮತ್ತು ಶ್ರೀಮಂತರ ಸ್ವತ್ತಾಗಿತ್ತು. 1800ರಲ್ಲಿ ಸಹ ಅಮೆರಿಕಯ ಕೆಲವೇ ಮುಂದುವರಿದ ಶ್ರೀಮಂತ ಗೃಹಗಳು ಮಾತ್ರ ರತ್ನಗಂಬಳಿ ಮತ್ತು ಜಮಖಾನೆಯನ್ನು ಹೊಂದಿದ್ದುವು. ಬಿಗೆಲೋ ಸಂಶೋಧನೆಯಿಂದಾಗಿ ಎರಡು ದಶಕಗಳಲ್ಲಿ ಹಿಂದಿನ ಕಾಲದವುಗಳಿಗಿಂತ ಉತ್ತಮವಾದ ನೆಲಗಂಬಳಿಗಳನ್ನು ಸಾಮಾನ್ಯ ಜನರಿಗೂ ನಿಲುಕುವ ಹಾಗೆ ಒದಗಿಸಲು ಅಮೆರಿಕೆಯ ಕಂಬಳಿ ಉದ್ಯಮಕ್ಕೆ ಸಾಧ್ಯವಾಯಿತು.

**ಆಕ್ಸಮಿನ್ಸ್ಟರ್ ಮಗ್ಗ :** 1876ರಲ್ಲಿ ಹಾಲ್ಸಿಯಾನ್ ಕಿನ್ನರನ ಆಕ್ಸಮಿನ್ಸ್ಟರ್ ಸುಧಾರಿತವಾದ ಯಂತ್ರ ಮಗ್ಗ ಈ ಉದ್ಯಮದ ಸುಧಾರಣೆಯಲ್ಲಿ ವಿದ್ಯುತ್ ಮಗ್ಗದಷ್ಟೇ ಪ್ರಮುಖವಾದುದು. ಕಿನ್ನರ್ ಮೂಲತಃ ಮೆಕ್ವೆಟ್ಟೆ ಮಗ್ಗವನ್ನು ಅಲೆಕ್ಸಾಂಡರ್ ಸ್ಮಿತ್ ಅಂಡ್ ಸನ್ಸ್ ಸಂಸ್ಥೆಯ ಧನಸಹಾಯದಿಂದ ಅವನ ಸಂಶೋಧನೆಯಲ್ಲಿ ಉತ್ತಮಗೊಳಿಸಿದ. ಆ ಶತಮಾನದ ಕಡೆಯ ಹೊತ್ತಿಗೆ ಇಂಥ ಆಕ್ಸಮಿನ್ಸ್ಟರ್ ಮಗ್ಗಗಳು ದಿನಕ್ಕೆ 40–60 ಗಜ ನೇಯುತ್ತಿದ್ದುವು. ಅದಕ್ಕಿಂತ ಹಿಂದೆ ಇವುಗಳಲ್ಲಿ ಇಬ್ಬರು ದೊಡ್ಡಾಳುಗಳು ಮತ್ತು ಒಬ್ಬ ಹುಡುಗ ದಿನದಲ್ಲಿ ನೇಯುತ್ತಿದ್ದ $1\frac{1}{2}$ ಗಜಕ್ಕೆ ಹೋಲಿಸಿದರೆ ನಿಜಕ್ಕೂ ಅದೊಂದು ಕ್ರಾಂತಿಕಾರಕವಾದ ಬದಲಾವಣೆ.

**ವಿಶಾಲ ಮಗ್ಗ :** ಮೊದಲಿನ ವಿದ್ಯುತ್ ಮಗ್ಗಗಳು ಸಾಮಾನ್ಯವಾಗಿ 27 ಅಂಗುಲದ ಜಮಖಾನೆಗಳನ್ನು ತಯಾರಿಸುತ್ತಿದ್ದುವು. ನೆಲದ ತುಂಬ ಹಾಸಬೇಕಾದರೆ, ನೆಲದ ಉದ್ದ ಮತ್ತು ಅಗಲಕ್ಕೆ ಅನುಗುಣವಾಗಿ ಅವನ್ನು ಸೇರಿಸಿ ಹೊಲೆಯಬೇಕಾಗುತ್ತಿತ್ತು. ಅನಂತರ ವಿಶಾಲ ಜಮಖಾನೆಯ ಮಗ್ಗಗಳು ಜಾರಿಗೆ ಬಂದು ಎಲ್ಲ ರೀತಿಯ ಉಪಯೋಗಕ್ಕೂ ಬರುವ 9–18 ಅಡಿ ಅಗಲದ ಜಮಖಾನೆಗಳನ್ನು ತಯಾರಿಸಿ ಉತ್ಪಾದನೆಯ ವಿನ್ಯಾಸದಲ್ಲಿ ಕ್ರಾಂತಿಯನ್ನುಂಟುಮಾಡಿದುವು. ಈ ಮಗ್ಗಗಳು ಬಣ್ಣ, ನಮೂನೆ ಮತ್ತು ರೀತಿಗಳಲ್ಲಿ ಯಾವ ಬದಲಾವಣೆಗಳನ್ನೂ ಮಾಡದೆ ಸಾಮಾನ್ಯ ಮತ್ತು ಚಿತ್ರಗಳಿರುವ $4\frac{1}{2}$ ಅಡಿ ಅಥವಾ ಅದಕ್ಕಿಂತ ಅಗಲವಾದ ಜಮಖಾನೆಗಳನ್ನು ನೇಯ್ದು ವಿಶಾಲ ಮಗ್ಗ ಎಂಬ ಹೆಸರನ್ನು ಪಡೆದುಕೊಂಡವು. ವಿಶಾಲ ಮಗ್ಗಗಳ ಆಗಮನ ಜಮಖಾನೆ ಮತ್ತು ಕಂಬಳಿಗಳ ಅಲಂಕರಣವನ್ನು ಗಮನಾರ್ಹವಾಗಿ ಹೆಚ್ಚಿಸಿದುವು. ಮನೆಗಳ ನೆಲವನ್ನು ಮುಚ್ಚುವ ಉಪಯೋಗ ಸಾಧನ ಮಾತ್ರವಾಗಿ, ಮನೆಯ ಕಸ ತೆಗೆಯುವಾಗ ಮಾತ್ರ ಒದರಲು ಹೊರಗೆ ಬರುತ್ತಿದ್ದ ಜಮಖಾನೆಗಳು ಕ್ರಮೇಣವಾಗಿ ವಿವಿಧ ನಮೂನೆಯ ಮನೆ ಅಲಂಕರಣ ವಸ್ತುಗಳಾಗಿ ಪರಿವರ್ತನೆಗೊಂಡವು. ಅಮೆರಿಕೆಯ ಆಧುನಿಕ ಕಂಬಳಿ ಜಮಖಾನೆ ಉದ್ಯಮಗಳೆಲ್ಲ ಕಲೆಗಾರರು, ವಿನ್ಯಾಸಗಾರರು ಮತ್ತು ಬಣ್ಣಗಾರರಾದ ಕುಶಲ ಕರ್ಮಿಗಳನ್ನು ಹೊಂದಿದ್ದಾರೆ. 1930 ರಿಂದೀಚೆಗೆ ಗೋಡೆಯಿಂದ ಗೋಡೆಯವರೆಗೆ ಹಾಸುವ ದೊಡ್ಡ ಜಮಖಾನೆಗಳ ಬೇಡಿಕೆ ಬೆಳೆಯಿತು. ಸಣ್ಣ ಮನೆಗಳಲ್ಲಿ ಆಸನಗಳನ್ನೂ ಕಡಿಮೆ ಮಾಡಿ, ಜಮಖಾನೆಗಳನ್ನು ಹಾಸಿ ಕೊಠಡಿಗಳು ವಿಶಾಲವಾಗಿ ಕಾಣುವಂತೆ ಏರ್ಪಾಡು ಮಾಡುತ್ತಾರೆ.

ಕಂಬಳಿ ಮತ್ತು ಜಮಖಾನೆಯ ಉದ್ಯಮಕ್ಕೆ ಉಣ್ಣೆ, ಹತ್ತಿ, ಸೆಣಬು ಮುಖ್ಯವಾದ ಕಚ್ಚಾವಸ್ತುಗಳು. ಇವು ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಇಂದು ಉತ್ಪನ್ನವಾಗುತ್ತಿವೆ. ಅಮೆರಿಕ, ಆಸ್ಟ್ರೇಲಿಯ, ಇಂಗ್ಲೆಂಡ್, ರಷ್ಯ ಉಣ್ಣೆಗೆ ಪ್ರಸಿದ್ಧವಾದರೆ, ಈಜಿಪ್ಟ್ ಹತ್ತಿಗೆ ಪ್ರಸಿದ್ಧವಾದರೆ, ಭಾರತ ಮತ್ತು ಪಾಕಿಸ್ತಾನ ಸೆಣಬಿಗೆ ಪ್ರಸಿದ್ಧವಾಗಿವೆ. ಇಂದು ವಿಶ್ವದ ಬಹುತೇಕ ದೇಶಗಳಲ್ಲಿ ಕಂಬಳಿ ಮತ್ತು ಜಮಖಾನೆಗಳ ಯಾಂತ್ರಿಕ ತಯಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಪಶ್ಚಿಮ ರಾಷ್ಟ್ರಗಳಲ್ಲಿಯಂತೂ ಈ ಉದ್ಯಮ ಸಂಪೂರ್ಣವಾಗಿ ಯಂತ್ರೀಕೃತವಾಗಿದೆ. ಭಾರತದಲ್ಲಿಯೂ ಅನೇಕ ಕಂಬಳಿ ಮಿಲ್ಲುಗಳು ವಿಪುಲವಾಗಿ ಕಂಬಳಿ ತಯಾರಿಕೆಯಲ್ಲಿ ತೊಡಗಿದ್ದರೂ ಕೈಮಗ್ಗಗಳಲ್ಲಿ ನೇಯುವ ಕಲೆ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವುದೊಂದು ಆಶ್ಚರ್ಯದ ಸಂಗತಿಯೇ ಸರಿ. ಆದರೆ ದಿನದಿನಕ್ಕೂ ವೈಜ್ಞಾನಿಕ ಪ್ರಗತಿ ಮನುಷ್ಯನನ್ನು ಯಂತ್ರ ನಾಗರಿಕತೆಯತ್ತ ರಭಸದಿಂದ ಎಳೆದೊಯ್ಯುತ್ತಿರುವಾಗ ಈ ಕುಶಲ ಕೈಗಾರಿಕೆಯ ಭವಿಷ್ಯವೇನಾಗುತ್ತದೆಂದು ಕಾದುನೋಡಬೇಕಾಗಿದೆ. (ಎಚ್.ಕೆ.ಆರ್.ಜಿ.)

ಜನಪದರು ಹೊದೆಯಲು ಹಾಸಲು ಉಪಯೋಗಿಸುವ ಉಣ್ಣೆಯ ನೇಯ್ಗೆ. ಇದು ಉಷ್ಣ ಅವಾಹಕವಾದ್ದರಿಂದ ದೇಹೋಷ್ಣತೆಯನ್ನು ಒಳಗೇ ಕಾಪಿಡುವುದಲ್ಲದೇ ಪರಿಸರದ ಶೈತ್ಯ ಒಳಗೆ ಬರದಂತೆಯೂ ನಿವಾರಿಸುವುದು.

ಭಾರತದಲ್ಲಿ ಋಗ್ವೇದದ ಕಾಲದಿಂದಲೂ ಉಣ್ಣೆಯ ವಸ್ತ್ರ ಬಳಕೆಯಲ್ಲಿ ಇತ್ತೆಂಬುದಕ್ಕೆ ಆಧಾರವಿದೆ. ಊರ್ಣಾವತೀ ಯುವತಿಃ ಶೀಲ ಮಾವತಿ, ಊರ್ಣಾವಂತಂ ಊರ್ಣಾವಸತ ಶೃಂದ್ರುವ ಮುಂತಾದ ಋಗ್ವೇದೋಕ್ತಿಗಳನ್ನು ಗಮನಿಸಬಹುದು. ಉಣ್ಣೆ, ನಾರು, ರೇಷ್ಮೆ ಮುಂತಾದವುಗಳಿಂದ ನೇದ ಬಟ್ಟೆಗಳು ದೇವತಾಕಾರ್ಯಗಳಲ್ಲಿ ತೊಟ್ಟುಕೊಳ್ಳಲು ಉಪಯೋಗಿಸಬಹುದಾದ ಮಡಿವಸ್ತ್ರಗಳೆಂದೂ ವೈದಿಕ ಕಾಲದಿಂದಲೂ ಬೆಳೆದು ಬಂದಿರುವ ಸಂಪ್ರದಾಯವೂ ಉಣ್ಣೆ ವಸ್ತ್ರದ ಪ್ರಾಚೀನತೆಗೆ ಸಾಕ್ಷಿ.

ಜಂಗಮ ದಾಸೋಹದಲ್ಲಿ ಸಣ್ಣ ಕಂಬಳಿ ಮತ್ತು ಶಾಲುಗಳ ಅರ್ಪಣೆಯೂ ಒಂದು ಪ್ರಮುಖ ವಿಧಿಯಾಗಿ ಬರುತ್ತದೆ. ಕಂಬಳಿ ಮತ್ತು ಕರಿಯ ಕಂಬಳಿಗಳಂತೂ ಜನಪದ ಸಾಹಿತ್ಯ ಮತ್ತು ಗಾದೆಗಳಲ್ಲಿ ಪ್ರಸಿದ್ಧಿ ಪಡೆದಿದ್ದುವು. ಅಂಬಲಿಯಂತ ಊಟವಿಲ್ಲ ಕಂಬಳಿಯಂತ ಹೊದಿಕೆಯಿಲ್ಲ ಎಂಬ ಗಾದೆಯೇ ಜನಪದರಲ್ಲಿ ಅಂಬಲಿ, ಕಂಬಳಿಗಳ ಬಗೆಗಿನ ಪ್ರೀತಿ ಭಾವವನ್ನು ಪ್ರಕಟಿಸುತ್ತದೆ. *

**ಕಂಬಳಿ ಹುಳು :** ಪತಂಗ, ಚಿಟ್ಟೆ ಮುಂತಾದ ಸಂಧಿಪದಿವಂಶದ ಲೆಪಿಡಾಪ್ಟೀರ ಗಣಕ್ಕೆ ಸೇರಿದ ಕೀಟಗಳ ಡಿಂಭಗಳ ಸಾಮಾನ್ಯ ಹೆಸರು (ಕ್ಯಾಟರ್‌ಪಿಲರ್). ಆದರೆ ಹೆಸರು ಸೂಚಿಸುವಂತೆ ಎಲ್ಲ ಹುಳುಗಳ ಮೈಮೇಲೂ ಕಂಬಳಿಯಂಥ ಕವಚ ಇರಬೇಕಾದುದಿಲ್ಲ. ಈ ಹುಳುವಿನ ದೇಹವನ್ನು ತಲೆ, ಎದೆಯ ಭಾಗ ಮತ್ತು ಉದರ ಭಾಗ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು; ಎದೆಯ ಭಾಗದಲ್ಲಿ ಮೂರು ಜೊತೆ ಸಂಧಿಪಾದಗಳಿವೆ. ಅವುಗಳ ತುದಿಯಲ್ಲಿ ಕೊಂಡಿಗಳಿವೆ. ಉದರಭಾಗದಲ್ಲಿ ಸಾಮಾನ್ಯವಾಗಿ ಐದು ಜೊತೆ ಪಾದಗಳಿವೆ. ಕೆಲವೊಮ್ಮೆ ಅವುಗಳ ಸಂಖ್ಯೆ ಒಂದು ಪ್ರಭೇದದಿಂದ ಮತ್ತೊಂದಕ್ಕೆ ವ್ಯತ್ಯಾಸವಾಗುವುದುಂಟು. ಕಾಲುಗಳು ದಪ್ಪ ಮತ್ತು ದುಂಡು. ಇವುಗಳ ತುದಿಯಲ್ಲಿ ಬಾಗಿದ ಮುಳ್ಳುಗಳಂಥ ರಚನೆಗಳಿವೆ. ಚಲಿಸುವಾಗ ಈ ಮುಳ್ಳುಗಳು ಭದ್ರವಾಗಿ ಹಿಡಿದುಕೊಳ್ಳಲು ಸಹಾಯಕ.



ಕಂಬಳಿ ಹುಳುಗಳ ಮೂರು ಬಗೆಗಳು

ಕಂಬಳಿಹುಳುವಿನ ತಲೆಯನ್ನು ಗಟ್ಟಿಯಾದ ಕ್ಯೂಟಿಕಲ್ ಕವಚ ಆವರಿಸಿದೆ. ತಲೆಯ ಇಕ್ಕೆಲದಲ್ಲಿ ಆರು ಸರಳಾಕ್ಷಿಗಳು, ತುದಿಯಲ್ಲಿ ಒಂದು ಜೊತೆ ತುಂಡಾಗಿರುವ ಕುಡಿಮೀಸೆಗಳು ಇವೆ. ದವಡೆ ಗಟ್ಟಿಯಾಗಿ ಶಕ್ತಿಯುತವಾಗಿದೆ. ಮ್ಯಾಕ್ಸಿಲ ಅತಿ ಚಿಕ್ಕವಾಗಿರುವುದರಿಂದ ಕಾಣುವುದಿಲ್ಲ. ಕೆಳತುಟಿಯ ಭಾಗಕ್ಕೆ ರೇಷ್ಮೆಯ ದಾರವನ್ನು ಉತ್ಪತ್ತಿ ಮಾಡುವ ಗ್ರಂಥಿಗಳ ನಾಳಗಳು ಬಂದು ಕೊನೆಗೊಂಡಿವೆ. ಈ ಗ್ರಂಥಿಗಳು ಮಾರ್ಪಡಾಗಿರುವ ಲಾಲಾಗ್ರಂಥಿಗಳು. ರೇಷ್ಮೆಗ್ರಂಥಿಗಳಲ್ಲಿ ಉತ್ಪತ್ತಿ ಹೊಂದಿದ ರಸದಿಂದ ರೇಷ್ಮೆಯಂಥ ದಾರಗಳನ್ನು ಈ ಹುಳುಗಳು ನೂಲುತ್ತವೆ. ಈ ದಾರ ಕೋಶ ತಯಾರಿಕೆಗೆ ಅಗತ್ಯ. ಅನೇಕ ಕಂಬಳಿಹುಳುಗಳಲ್ಲಿ ಈ ಗ್ರಂಥಿಗಳು ಉದ್ದವಾಗಿರುತ್ತವೆ. ರೇಷ್ಮೆ ಚಿಟ್ಟೆಗಳ ಕಂಬಳಿಹುಳುಗಳಲ್ಲಿ ಈ ಗ್ರಂಥಿಗಳು ಮಿಕ್ಕ ಜಾತಿಯ ಕಂಬಳಿಹುಳುವಿನ ಪಕ್ಕೆಗಳಲ್ಲಿ ಒಂಬತ್ತು ಜೊತೆ ಉಸಿರಾಡುವ ರಂಧ್ರಗಳಿವೆ. ಇವುಗಳಿಗೆ ಸ್ಪೈರಕಲ್ಲುಗಳೆಂದು ಹೆಸರು. ಸ್ಪೈರಕಲ್ಲುಗಳು ಚಿಕ್ಕ ಚುಕ್ಕೆಗಳಂತಿರುತ್ತವೆ. ಕಂಬಳಿಹುಳಗಳು ರಕ್ಷಣೆಗಾಗಿ ನಾನಾ ಹೊಂದಾಣಿಕೆಯ ವ್ಯವಸ್ಥೆಗಳನ್ನು ಮಾಡಿಕೊಂಡಿವೆ. ಶರೀರದ ರಚನೆ ಮತ್ತು ಅವುಗಳ ನಡತೆಯಲ್ಲಿ ಈ ಹೊಂದಿಕೆಗಳನ್ನು ಕಾಣಬಹುದು. ಹುಲಿ ಪತಂಗಗಳ ಕಂಬಳಿಹುಳುವಿನ ಶರೀರದ ಮೇಲೆ ಒತ್ತಾಗಿರುವ ರೋಮಗಳಿವೆ. ವೇಪೋರರ್ ಪತಂಗಗಳ ಕಂಬಳಿಹುಳುವಿನ ಶರೀರದ ಮೇಲಿರುವ ರೋಮಗಳು ಗುಂಪು ಗುಂಪಾಗಿದ್ದು ಕುಂಚಗಳಂತೆ ಕಾಣುತ್ತವೆ. ಕೆಲವು ಕಂಬಳಿಹುಳುಗಳಲ್ಲಿ ಈ ರೋಮಗಳು ಸೂಜಿಯಂತೆ ಚೂಪಾಗಿ ಗಟ್ಟಿಯಾಗಿರುತ್ತವೆ. ಇವು ಮುಟ್ಟಿದ ತತ್‌ಕ್ಷಣ ಚುಚ್ಚಿಕೊಂಡು ಮುಟ್ಟಿದವರ ಮೈಭಾಗದಲ್ಲಿ ಉರಿ ಮತ್ತು ನೋವನ್ನುಂಟು ಮಾಡುತ್ತವೆ. ಇದಕ್ಕೆ ಕಂಬಳಿಹುಳು ಸುರಿಸುವ ವಿಷಪದಾರ್ಥವೇ ಕಾರಣ. ದಕ್ಷಿಣ ಅಮೆರಿಕ ಮತ್ತು ಉಷ್ಣವಲಯಗಳಲ್ಲಿರುವ ಕೆಲವು ಕಂಬಳಿಹುಳುಗಳ ಮೈಮೇಲೆ ನಳಿಕೆಯ ರೂಪದ ಚೂಪಾದ ವಿಷದ ಮುಳ್ಳುಗಳೇ ಇವೆ. ಇವುಗಳ ಬುಡದಲ್ಲಿ ವಿಷೋತ್ಪಾದಕ ಗ್ರಂಥಿಗಳಿವೆ. ಇವುಗಳ ಮುಳ್ಳುಗಳೇನಾದರೂ ಚುಚ್ಚಿಕೊಂಡರೆ ನಂಜೇರುತ್ತದೆ. ಉರಿ ಮತ್ತು ನೋವು ಇದರ ಮುಖ್ಯ ಲಕ್ಷಣ. ನೋಟೊಡಾಂಟಿಡ್ ಜಾತಿಯ ಕಂಬಳಿಹುಳು ಮುಟ್ಟಿದ ತತ್‌ಕ್ಷಣ ಫಾರ್ಮಿಕ್ ಆಮ್ಲವನ್ನು ಉಗುಳುತ್ತದೆ. ಕೆಲವು ಕಂಬಳಿಹುಳುಗಳ ಶರೀರದ್ರವವೂ ವಿಷಪೂರಿತವಾಗಿರುತ್ತದೆ.

ಕೆಲವು ಚಿಟ್ಟೆಗಳ ಕಂಬಳಿಹುಳುಗಳ ಮೇಲೆ ವಿಷವಿಲ್ಲದ ಮುಳ್ಳಿನ ರಚನೆಗಳಿರುತ್ತವೆ. ವನೆಸ್ಸ ಪ್ರಭೇದ ಮತ್ತು ಸಮ್ರಾಟ ಪತಂಗಗಳ ಕಂಬಳಿಹುಳುಗಳಲ್ಲಿ ಈ ಈ ರೀತಿಯ ರೋಮಗಳನ್ನು ಕಾಣಬಹುದು. ಕೆಲವು ಪತಂಗಗಳ ಕಂಬಳಿಹುಳುವಿನ ತಲೆಯ ಮುಂದೆ ಒಂದು ಕೋಡಿನಂಥ ರಚನೆ ಇರುತ್ತದೆ. ಮತ್ತೆ ಕೆಲವು ಕಂಬಳಿ ಹುಳುಗಳ ಶರೀರದ ಮೇಲೆ ರೋಮಗಳೇ ಇರುವುದಿಲ್ಲ. ಇಂಥವುಗಳ ಶರೀರ ಅತಿ ಮೃದುವಾಗಿರುತ್ತದೆ.

ಬಹುಪಾಲು ಜಾತಿಯ ಕಂಬಳಿಹುಳುಗಳು ರಕ್ಷಣೆಗೋಸ್ಕರ ರಾತ್ರಿ ವೇಳೆ ಮಾತ್ರ ಹೊರಬರುತ್ತವೆ. ಹಗಲಿನಲ್ಲಿ ಎಲೆ, ಕಲ್ಲು, ಮರದ ತೊಗಟೆಗಳಡಿಯಲ್ಲಿ ನಿದ್ರಿಸುತ್ತವೆ. ಕಂಬಳಿಹುಳುಗಳ ಬಣ್ಣದಲ್ಲೂ ವೈವಿಧ್ಯವುಂಟು. ಕೆಲವು ಕಣ್ಣಿಗೆ ರಂಜಿಸುವಂಥ ಬಣ್ಣಗಳಿಂದ ಕೂಡಿವೆ; ಮತ್ತೆ ಕೆಲವು ಹುಳುಗಳ ಬಣ್ಣ ಭಯಂಕರ. ಎಲೆ, ತೊಗಡೆ ಮುಂತಾದ ಪದಾರ್ಥಗಳನ್ನು ಇವು ಅನುಕರಿಸುವುದೂ ಉಂಟು.

ಕಂಬಳಿಹುಳುಗಳು ಬಹುತೇಕ ಸಸ್ಯಾಹಾರಿಗಳು. ಇವುಗಳಿಂದ ಬಹಳವಾಗಿ ಸಸ್ಯಹಾನಿ ಯಾಗುತ್ತದೆ. ಕೇವಲ ಕೆಲವೇ ಜಾತಿಯ ಕಂಬಳಿಹುಳುಗಳು ಮಾತ್ರ ಮಾಂಸಾಹಾರಿಗಳು. ಲೈಸೀನ ಅರಿಯಾನ್ ಚಿಟ್ಟೆಗಳ ಕಂಬಳಿಹುಳುಗಳು ಇರುವೆ ಗೂಡುಗಳಿಗೆ ಮುತ್ತಿಗೆ ಹಾಕಿ ಅವುಗಳ ಮರಿಗಳನ್ನು ತಿನ್ನುತ್ತವೆ. ಉತ್ತರ ಅಮೆರಿಕದ ಫೆನಿಸೆಕ ಟ್ರಾಕ್ವಿನಿಯಸ್ ಎಂಬ ಪ್ರಭೇದದವು ಸಸ್ಯತಿಗಣೆಗಳನ್ನು ತಿನ್ನುತ್ತವೆ. ತಮ್ಮ ಜಾತಿಯ ಹುಳುಗಳನ್ನೇ ತಿನ್ನುವ ಜಾತಿಗಳೂ ಉಂಟು. (ಎಲ್.ಎಸ್.ಜಿ.ಡಿ.ಎಸ್.)

**ಕಂಬಿಯ ಪದಗಳು :** ಕಂಬಿಯ ಅಯ್ಯಗಳು ಮಾರ್ಗಾಯಾಸ ಪರಿಹಾರಾರ್ಥ ವಾಗಿ ಹಾಡುವ ದೇವರ ಪದಗಳು. ಅವರು ಹೊತ್ತುಕೊಂಡು ಹೋಗುತ್ತಿದ್ದ ಕಂಬಿ (ಕೋಲು), ಕಾವಡಿಗಳೇ (ನೆಲುವು) ಕಂಬಿಯ ಮಲ್ಲಯ್ಯನಾಗಿ ಪೂಜೆಗೊಳ್ಳುತ್ತ ಬಂದಿವೆ. ಪುರಾತನ ಕಾಲದಿಂದಲೂ ನಡೆದುಬಂದಿರುವ ಜನಪದ ಸಂಪ್ರದಾಯಗಳಲ್ಲಿ ಇದೂ ಒಂದು. ಶ್ರೀಶೈಲ ಮಲ್ಲಿಕಾರ್ಜುನನ ಭಕ್ತರು ಯಾತ್ರೆಯ ಸಂದರ್ಭದಲ್ಲಿ ಕಂಬಿಯ ಪದಗಳನ್ನು ಮೇಳದೊಡನೆ ಹಾಡುವರು.

ಐದಾರು ಮೊಳ ಬಿದಿರಿನ ಕಂಬಿಯ ಎರಡೂ ತುದಿಗಳಿಗೆ ಮೂರು ಮೊಳ ಎತ್ತರವಿರುವ ಎರಡು ಟಿಸಿಲುಗಾಲುಗಳನ್ನು ಜೋಡಿಸಿ ಅವುಗಳಿಗೆ ಕಾಯಕ ಗಂಟೆಗಳನ್ನು ಕಟ್ಟುವರು. ಈ ಟಿಸಿಲುಗಳು ಕೂಡುವ ಮುಂಭಾಗದಲ್ಲಿ ನಂದಿಯನ್ನು ಸ್ಥಾಪಿಸಿ ಅದಕ್ಕೆ ಕಳಸವನ್ನು ಕೂಡಿಸುವರು. ಇದಕ್ಕೆ ಗಲ್ಲೀಪಗಳನ್ನು ಹಾಕಿ ಕಂಬಿಗೆ ಪತಾಕೆಗಳನ್ನು ಸುತ್ತಿ ಅಲ್ಲಲ್ಲಿ ವಿಭೂತಿಯನ್ನು ಹಚ್ಚುವರು. ಎರಡೂ ತುದಿಗಳಿಗೆ ಕಾವಡಿಗಳನ್ನು ಕಟ್ಟಿ ಅವುಗಳಲ್ಲಿ ತಮಗೆ ಬೇಕಾಗುವ ಹಾದಿಯ ಬುತ್ತಿಯನ್ನೂ ಪ್ರವಾಸದ ಸಾಮಗ್ರಿಗಳನ್ನೂ ಇಟ್ಟುಕೊಳ್ಳುವರು. ಈ ಜನ ಉದ್ದಕ್ಕೂ ಹಾಡುವ ಪದಗಳು ಮಲ್ಲಯ್ಯನ ಹಾಗೂ ಅವನ ಭಕ್ತರ ಮಹಿಮೆಯನ್ನು ಒಳಗೊಂಡಿರುತ್ತವೆ. ಇವು ಹೆಚ್ಚಾಗಿ ದ್ವಿಪದಿಗಳು.

ಪ್ರಧಾನವಾಗಿ ಯಾತ್ರೆಯ ಪದಗಳ ಉದ್ದೇಶ ತಮ್ಮ ಆರಾಧ್ಯ ದೈವವನ್ನು ಹೆಜ್ಜೆಹೆಜ್ಜೆಗೂ ಕೊಂಡಾಡುವುದೇ ಎನ್ನಬಹುದಾದರೂ ನೂರಾರೂ ಮೈಲಿಗಳ ಯಾತ್ರೆಯಲ್ಲಿ ಹಾಡಿನ ಆವಶ್ಯಕತೆ ಮತ್ತೊಂದು ರೀತಿಯಲ್ಲಿಯೂ ಕಂಡುಬರುತ್ತದೆ. ಕಾಡುಮೇಡುಗಳಲ್ಲಿ ಅನೇಕ ದಿನ ಯಾತ್ರೆ ಹೋಗುವಾಗ ಯಾವ ವಾಹನ ಸಂಚಾರವೂ ಇಲ್ಲದ ಕಾಲದಲ್ಲಿ ಇಂಥ ಹಾಡುಗಳು ಭಕ್ತಿಯ ಆವೇಶವನ್ನು ತುಂಬಿ ಯಾತ್ರೆಯಲ್ಲಿ ಶ್ರದ್ಧೆಯನ್ನೂ ನಿಷ್ಠೆಯನ್ನೂ ಮೂಡಿಸುತ್ತಿದ್ದುವು. ಮಾರ್ಗಾಯಾಸವನ್ನು ಕುಗ್ಗಿಸುತ್ತಿದ್ದವು. ಮೂಡುಮಲೆ ಮಾದಯ್ಯನ ಗಿರಿಯ ಯಾತ್ರೆ, ತಿರುಪತಿಕ್ಷೇತ್ರದ ಯಾತ್ರೆ, ಚುಂಚನಗಿರಿಯ ಯಾತ್ರೆ, ಶ್ರೀಶೈಲದ ಯಾತ್ರೆಗಳು ಅತ್ಯುತ್ತಮ ಯಾತ್ರೆಯ ಪದಗಳನ್ನು ಒದಗಿಸುತ್ತವೆ.

ದಕ್ಷಿಣ ಭಾರತದ ಎಲ್ಲ ಕಡೆಗಳಲ್ಲೂ ಶ್ರೀಶೈಲಕ್ಕೆ ನಡೆದುಕೊಳ್ಳುವ ಭಕ್ತರ ಸಂಖ್ಯೆ ಅಪಾರವಾಗಿದೆ. ಶಿವರಾತ್ರಿ ಹಾಗೂ ಯುಗಾದಿಯಲ್ಲಿ ಪ್ರತಿವರ್ಷವೂ ಜರುಗುವ ರಥೋತ್ಸವಕ್ಕೆ ಸಹಸ್ರಾರು ಮಂದಿ ಭಕ್ತರು ಕಲೆಯುತ್ತಾರೆ.

ಪೂರ್ವಕಾಲದಲ್ಲಿ ದಟ್ಟವಾದ ಅರಣ್ಯಪ್ರದೇಶದಿಂದ ಸುತ್ತುವರಿದಿದ್ದ ಶ್ರೀಶೈಲ ಕ್ಷೇತ್ರಕ್ಕೆ ಎಲ್ಲ ಭಕ್ತರು ದೂರ ದೂರದಿಂದ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಗಿರಿಗೆ ಹೋಗುವ ಅಯ್ಯಗಳ ಜೊತೆ ತಮ್ಮ ಹರಕೆಯನ್ನು ಶ್ರೀಮಲ್ಲಿಕಾರ್ಜುನನ ಪದತಲಕ್ಕೆ ಮುಟ್ಟಿಸಲು ಕಳಿಸುತ್ತಿದ್ದರು. ಈ ಅಯ್ಯಗಳು ಕಂಬಿಯನ್ನು ಹೊತ್ತು ಹೋಗುವಾಗ ಅನೇಕ ಊರುಗಳ ಮೂಲಕ ಹಾದುಹೋಗುತ್ತಿದ್ದರು.

ಕಂಬಿಯ ಅಯ್ಯನವರಿಗೆ ಯಾತ್ರೆಯ ಉದ್ದಕ್ಕೂ ಜನರು ಆದರದ ಸತ್ಕಾರ ಏರ್ಪಡಿಸುತ್ತಿದ್ದರು; ಯಾತ್ರೆಯಿಂದ ಹಿಂತಿರುಗುವಾಗ ಇವರ ದರ್ಶನಕ್ಕೆ ಅಷ್ಟೇ ಸಂಭ್ರಮದಿಂದ ಕಾದಿರುತ್ತಿದ್ದರು. ತಮ್ಮ ಕಂಬಿಯಲ್ಲೇ ಮಲ್ಲಯ್ಯ ನೆಲೆಸಿ ಗಿರಿಗೆ ಸುರಕ್ಷಿತವಾಗಿ ತಮ್ಮನ್ನು ಕರೆದೊಯ್ದನೆಂದು ಈ ಭಕ್ತರ ನಂಬಿಕೆ, ಕಂಬಿಯ ಮಲ್ಲಯ್ಯ ಎಂಬ ಹೆಸರು ಬಂದದ್ದು ಹೀಗೆ. ಕಂಬಿಯ ಅಯ್ಯಗಳ ಬಗ್ಗೆ ಸಂಶೋಧನೆಯನ್ನು ನಡೆಸಿ, ಅವರ ಸಾಹಿತ್ಯವನ್ನೆಲ್ಲ ಗದ್ದಗೀಮಠರು ಸಮಗ್ರವಾಗಿ ಸಂಗ್ರಹಿಸಿದ್ದಾರೆ.

ಇಂಥ ಕಂಬಿಗಳನ್ನು ಹೊತ್ತ ಅಯ್ಯಗಳು ಹರಕೆಯನ್ನು ಒಯ್ಯುವ ಮೂಲಕ ಮಾಡುವ ಸೇವೆಯನ್ನು ಕಂಬಿಯ ಕಾಯಕ ಎನ್ನುತ್ತಾರೆ. ಆ ಅಯ್ಯಗಳಿಗೆ ಕಾವಡಿ ಅಯ್ಯಗಳು ಎಂಬ ಮತ್ತೊಂದು ಹೆಸರೂ ಇದೆ. ಈಗಲೂ ದೊಡ್ಡ ದೊಡ್ಡ ಶ್ರೀಮಂತರು ತಮ್ಮ ಮನೆಗಳಲ್ಲಿ ಕಂಬಿಗಳನ್ನಿಟ್ಟು ವರ್ಷಕ್ಕೊಂದು ಬಾರಿ ಹಣ ನೀಡಿ ಕಂಬಿಯ ಅಯ್ಯಗಳನ್ನು ಶ್ರೀಶೈಲಕ್ಕೆ ಕಳಿಸುತ್ತಾರೆ.

ಊರಿಗೆ ಮರಳಿದ ಕಂಬಿಯ ಅಯ್ಯಗಳು ಪೂಜೆಯನ್ನು ನಡೆಸಿ ಮಲ್ಲಿಕಾರ್ಜುನನ ಲೀಲೆಗಳನ್ನು ಕೊಂಡಾಡುವರು; ಹಿಮ್ಮೇಳ ಮುಮ್ಮೇಳಗಳೊಡನೆ ರಾಗವೆತ್ತಿ ಹಾಡುವರು.

ಮಲ್ಲಯ್ಯ ಮಲ್ಲಯ್ಯ ಸಿರಿಗಿರಿ ಮಲ್ಲಯ್ಯನ ನೋಡುವ ಬನ್ನಿ ।
ಎಲ್ಲಾ ದೇವರಿಗೆ ಒಡೆಯಾ ಬಲ್ಲಿದನೋ ಚೆನ್ನಮಲ್ಲ ॥

ಹೀಗೆ ಪಲ್ಲವಿಯೊಡನೆ ಜೀವನದ ಸಂದೇಶವನ್ನು ಸಾರುವ ಹಾಡನ್ನು ಆರಂಭಿಸಿ ಗಂಡಹೆಂಡಿರ ಸಾಮರಸ್ಯ, ಬದುಕಿನ ಆದರ್ಶಗಳನ್ನು ಬಿತ್ತರಿಸುವರು.

ಕಂಬಿಯ ಸಂಪ್ರದಾಯ ತುಂಬ ಪ್ರಾಚೀನವಾದುದೆಂದು ಅನೇಕ ಆಧಾರಗಳಿಂದ ಸಾಧಿಸಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ಬಸವೇಶ್ವರರಿಗೂ ಪೂರ್ವದ, ಐತಿಹಾಸಿಕ ವ್ಯಕ್ತಿಯೆಂದು ನಂಬಲಾದ ಗೊಲ್ಲಾಳ, ಇಳಿಹಾಳ ಬೊಮ್ಮಯ್ಯ ಮುಂತಾದವರ ಕಥೆಗಳಲ್ಲಿ ಕಂಬಿಯ ಅಯ್ಯಗಳ ಯಾತ್ರೆಯ ಪ್ರಸ್ತಾಪ ಬರುತ್ತದೆ. ಆ ಸಂಬಂಧದ ಜನಪದ ಗೀತೆಗಳು ಲಭ್ಯವಾಗಿವೆ. ಗೊಲ್ಲಾಳನ ಕಥೆಯಲ್ಲಂತೂ ಕಾವಡಿ ಹೊತ್ತ ಜಂಗಮನ ವರ್ಣನೆಯೇ ಬರುತ್ತದೆ. ಕಂಬಿಯನ್ನು ಕುರಿತ ಜನಪದ ಗೀತೆಗಳೂ ಲಭ್ಯವಾಗುತ್ತವೆ :

ಮೇಲು ಗುಡಿಯ ಶಿಖರದ ಒಡೆಯ
ಕೋಲು ಕಡಿದು ಕೈಯಲ್ಲಿ ಕೊಟ್ಟ
ಕಾಲು ಜಾರಿತು ಕೋಲು ಮುರಿಯಿತು
ಬಿಂದಿಗಿ ಒಡೆಯಿತು ಮಲ್ಲಯ್ಯ
ಕಂಬಿಯ ಹೊತ್ತು ಬಿಂದಿಗಿ ಒಡೆದು
ಕುಂಬಾರನ ಮನೆ ಎಲ್ಲೆಂದ
ಕುಂಬಾರ ಗುಂಡನ ಭಕ್ತಿಯ ಕೇಳಿ
ಶಂಭುಶಂಕರ ಮಾದೇವ
ಕಂಬಿ ಕಾವಡಿ ನಂದಿಕೋಲು
ಮುಂಡಾಡುವ ಪಾತ ಮ್ಯಾಳ
ಸಾಲ ದೀವಟಿಗೆ ಮಲಬಾರಿ
ಹೊಯ್ದಾಡು ಪರಿಗಳ ನೋಡ

(ಗದ್ದಗೀಮಠ ಅವರ ಸಂಕಲನ)

ಕಂಬಿಯನ್ನು ಕರುಣಿಸಿದವ ಮೇಲುಗುಡಿಯ ಶಿಖರದ ಒಡೆಯ ಮಲ್ಲಿಕಾರ್ಜುನ. ಅಷ್ಟು ಪವಿತ್ರವಾದ ಸಾಧನವದು.

ಕಂಬಿಯ ಪದಗಳೆಲ್ಲವೂ ಮಲ್ಲಯ್ಯನನ್ನು ನೆನೆದು ಹಾಡಿದ ಸುಂದರ ಗೀತೆಗಳು.

ಉದಿಯದಲೆದ್ದು ನೆನೆ ಮನವೆ ಮದನಾರಿ ಶಿವಶರಣರ
ಕದಳಿಬನದ ಒಡೆಯನ ನೆನೆದೆ ಪದವಿಕಾರ ಚೆನ್ನಮಲ್ಲ
ಹೊತ್ತಿಲೆದ್ದು ಗುರುವಿನ ಪಾದವ ಅರತಿಯಲ್ಲಿ ನೀನೆನೆಮನವೆ
ಮಹಾಮಲ್ಲೇಶನ ಪಾದವ ನೆನೆದರೆ ಚಿತ್ತದ ಪಾಪ ಪರಿಹಾರ

ಭಕ್ತಿ ತನ್ಮಯರಾಗಿ ಕಂಬಿಯ ಅಯ್ಯಗಳು ತಮ್ಮ ನೆಚ್ಚಿನ ದೈವ ಮಲ್ಲಯ್ಯನನ್ನು ಕುರಿತು ಹಾಡುತ್ತ ಸಾಗುತ್ತಾರೆ. ಅವರನ್ನು ಹಿಂಬಾಲಿಸಿ ಹೊರಟ ಭಕ್ತರೂ ಈ ಹಾಡಿನಿಂದ ಸ್ಫೂರ್ತಿಗೊಳ್ಳುತ್ತಾರೆ.

ಕಂಬಿಯ ಪದಗಳು ಎರಡೆರಡು ಸಾಲಿನ ವಿಶಿಷ್ಟ ಧಾಟಿಯ ಪದ್ಯಗಳಂತೆ ಕಂಡರೂ ಅವೆಲ್ಲವೂ ಹೇರಳವಾಗಿ ದೊರೆಯುವ ಜನಪದ ತ್ರಿಪದಿಗಳ ಮುರಿದ ರೂಪದಂತೆ ಕಾಣುತ್ತವೆ. ಕೆಲವನ್ನು ಸುಲಭವಾಗಿಯೇ ತ್ರಿಪದಿಗಳೆಂದು ಹೇಳಿ ಬಿಡಬಹುದು.

ಎತ್ತು ಕುಂಟಲಿ ಸಹಿತವಾಗಿ ಮುತ್ತೈದೇರು ಮೊದಲಾಗಿ
ಎತ್ತಿದ ಕೂಸು ಸಮನಾಗಿ ಬಂದರೆ ಒಪ್ಪಿಸಿಕೋ ನಿಮ್ಮ ಹರಕೆಗಳ ॥
ಎತ್ತು ಕುಂಟಲಿ ಸಹಿತವಾಗಿ ಮುತ್ತೈದೇರು ಮೊದಲಾಗಿ
ಎತ್ತಿದ ಕೂಸು ಸಮನಾಗಿ । ಬಂದರೆ
ಒಪ್ಪಿಸಿಕೊ ನಿಮ್ಮ ಹರಕೆಗಳ

ಕನ್ನಡದ ಜನಪದ ಗೀತೆಯಲ್ಲಿ ಎಲ್ಲ ದೈವಗಳಿಗೂ ಕ್ಷೇತ್ರಗಳಿಗೂ ಸಂಬಂಧಪಟ್ಟ ತ್ರಿಪದಿಗಳಲ್ಲೂ ಮಿಡಿದ ಹೃದಯ ಒಂದೇ, ಹರಿದ ಭಕ್ತಿರಸ ಒಂದೇ. ಕಂಬಿಯ ಪದಗಳೂ ಭಕ್ತರ ನಾನಾ ರೀತಿಯ ಹರಕೆ, ಹಂಬಲಗಳನ್ನು ಇತರ ಭಕ್ತಿಗೀತೆಗಳಂತೆಯೇ ಚಿತ್ರಿಸುತ್ತವೆ.

ಜಡೆಯ ಮಕ್ಕಳನೆತ್ತಿಕೊಂಡು ತಡೆಯದೆ ಬಂದೆ ಶಿವನೆ
ಒಡೆಯ ಚೆನ್ನ ಬಹುಳ ಮಲ್ಲ ಬಿಡಲಾರೆ ನಿಮ್ಮ ಪಾದಗಳ

(ಕಂಬಿಯ ಪದಗಳು)

ಒಕ್ಕಲು ಬತ್ತೀವಿ ಒಡೆಯ ಬಾಗಿಲು ತೆಗಿಯೊ
ತೊಟ್ಟಿಲು ತತ್ತೀವಿ ತೊಳಗಾಕೆ–ಭೈರುವ
ಶಿಶುವ ತತ್ತೀವಿ ಹೆಸರ್ಹೇಳೊ

(ಶ್ರೀ ಆದಿಚುಂಚನಗಿರಿ ಜನಪದ ಗೀತೆಗಳು)

ಕಂಬಿಯ ಅಯ್ಯಗಳ ಈ ಪದಗಳೂ ಬಹುಮಟ್ಟಿಗೆ ಸ್ತ್ರೀಯರು ಹಾಡುವ ತ್ರಿಪದಿಗಳಿಂದಲೇ ಬಂದುವು ಎಂಬುದಕ್ಕೆ ಮೇಲಿನ ನಿದರ್ಶನಗಳನ್ನು ಗಮನಿಸಬಹುದು. ಮಲ್ಲಯ್ಯನಿಗೆ ಸಂಬಂಧಿಸಿದ ಹಾಡುಗಳನ್ನು ಎಲ್ಲ ಜನಪದ ಮೂಲಗಳಿಂದಲೂ ಇವರು ಸಂಗ್ರಹಿಸಿಕೊಂಡಂತೆ ತೋರುತ್ತದೆ. ಏಕೆಂದರೆ ನಡುನಡುವೆ ನೀತಿ ಪ್ರಧಾನ, ಹಾಸ್ಯಪ್ರಧಾನ ಗೀತೆಗಳೂ ಕಾಣಿಸಿಕೊಳ್ಳುತ್ತವೆ. ಪುರುಷರು ಬಹುಶಃ ಬೇರೆ ಬೇರೆ ಸಂದರ್ಭಗಳಲ್ಲಿ ಹಾಡುವ ಪದಗಳೂ ಕಂಬಿ ಪದಗಳಾಗಿ ಸ್ವೀಕೃತವಾಗಿರಬಹುದು.

ಗಂಡಹೆಂಡಿರ ಮನವೆರಡಾದರ ತಪ್ಪದು ತಲೆದಂಡ ಮಲ್ಲಯ್ಯ
ಗಂಡಹೆಂಡಿರ ಮನವೊಂದಾದರ ನಂದಾದೀಪೊ ಮಲ್ಲಯ್ಯ (ನೀತಿ)
ಇಬ್ಬರು ಹೆಂಡರ ಕಾಟಕ್ಕಾಗಿ ಎದ್ದುಬಂದೆನೊ ಮಲ್ಲಯ್ಯ
ಇಬ್ಬರೊಳಗೆ ಒಬ್ಬಾಕಿ ಹೋದರ ಗುಗ್ಗಳ ಹೊರುವೆ ಮಲ್ಲಯ್ಯ (ಹಾಸ್ಯ)

ಧಾಟಿ ಮತ್ತು ವಸ್ತು ವಿನ್ಯಾಸದಲ್ಲಿ ಇಲ್ಲಿನ ಕೆಲವು ಹಾಡುಗಳು ಕೋಲಾಟದ ಗತ್ತಿಗೆ ಒಗ್ಗುತ್ತವೆ. ಗದ್ದಗೀಮಠರು ಸಂಗ್ರಹಿಸಿಕೊಟ್ಟಿರುವ ಕಂಬಿಯ ಹಾಡುಗಳಲ್ಲಿ ಹಲವು ಬಗೆಯ ವೈವಿಧ್ಯಮಯ ಹತ್ತು ಗೀತೆಗಳು ಕಾಣಬರುತ್ತವೆ. ಉರ್ದುಮಿಶ್ರಿತ ಕಂಬಿಯ ಹಾಡುಗಳು ಇಲ್ಲಿ ಗಮನಾರ್ಹ.

ಬೇಬಿಸ್ಮಿಲ್ಲ ಬೇಬಿಸ್ಮಿಲ್ಲಾ ಲಗು ಬಾರೊ ಪರುವುತಮಲ್ಲ
ಕ್ಯಾಹೂವ ಆಯಿತು ಅಕ್ಕೇಲ ನಿಮ್ಮ ಹೊರ್ತು ಯಾರ್‍ಯಾರಿಲ್ಲ.

ಕಂಬಿಯ ಅಯ್ಯಗಳು ವಿಧರ್ಮೀಯರ ಕೈಯಿಂದ ಪಾರಾಗಿ ತಮ್ಮ ಯಾತ್ರೆಯನ್ನು ಸುಗಮಗೊಳಿಸಿಕೊಳ್ಳಲು ಇಂಥ ರಚನೆಗಳನ್ನು ಮಾಡಿಕೊಂಡಿರಬೇಕೆಂದು ಗದ್ದಗೀಮಠರು ಊಹಿಸುತ್ತಾರೆ. ತಮ್ಮನ್ನು ತಡೆದು ಪ್ರಶ್ನಿಸುವವರಿಗೆ ಉರ್ದುಮಿಶ್ರಿತ ಹಾಡುಗಳನ್ನು ಹೇಳಿ ಅವರ ಧರ್ಮದ ಬಗ್ಗೆ ತಮಗಿರುವ ಸಹಿಷ್ಣುತೆಯನ್ನು ಶ್ರುತಪಡಿಸಿ ಎಂಥ ಅಡಚಣೆಗಳಿಂದಲೂ ಪಾರಾಗಿಹೋಗುತ್ತಿದ್ದರು ಎಂಬ ಈ ಊಹೆ ಸಮರ್ಥನೀಯವಾಗಿದೆ.

ಬಿರುದಾವಳಿಗಳೂ ಇತರ ಬಗೆಯ ಹಾಡುಗಳೂ ಕಂಬಿಯ ಪದಗಳಲ್ಲಿ ಬರುತ್ತವೆ. ಇವುಗಳ ವ್ಯಾಪಕವಾದ ಸಂಗ್ರಹ, ಅಧ್ಯಯನ ಕನ್ನಡದಲ್ಲಿ ಇನ್ನೂ ಆಗಬೇಕಾಗಿದೆ.

(ಜಿ.ಎಸ್.ಪಿ.; ಸಿ.ಕೆ.ಎ.)

**ಕಂಬುಜ :** ಈಗಿನ ಕಾಂಬೋಡಿಯದ ಪ್ರದೇಶದಲ್ಲಿ ಪ್ರಾಚೀನ ಭಾರತೀಯರು ಸ್ಥಾಪಿಸಿದ್ದ ಹಿಂದೂ ರಾಜ್ಯ. ಕಂಬುಜದ ಇತಿಹಾಸ, ಪೂರ್ವೇತಿಹಾಸ, ವಾಸ್ತುಶಿಲ್ಪ ಮತ್ತು ಶಾಸನಗಳನ್ನು ಕುರಿತ ಲೇಖನಗಳನ್ನು ಮುಂದೆ ಕೊಡಲಾಗಿದೆ. ಕಾಂಬೋಡಿಯದ ಭೂವಿವರಣೆ, ಅದರ ಈಚಿನ ಇತಿಹಾಸ ಮುಂತಾದವಕ್ಕೆ ಕಾಂಬೋಡಿಯವನ್ನು ಕುರಿತ ಲೇಖನಗಳನ್ನು ನೋಡಿ.

*

**ಕಂಬುಜದ ಇತಿಹಾಸ :** ಕಂಬು ಸ್ವಾಯಂಭುವನೆಂಬ ಭಾರತೀಯ ಶಿವಭಕ್ತನೊಬ್ಬ ಪತ್ನಿಯ ಮರಣದಿಂದ ದುಃಖಿತನಾಗಿ, ತನ್ನ ದೇಶವನ್ನು ಬಿಟ್ಟು ಕಂಬುಜ ದೇಶ ತಲುಪಿದ. ತನ್ನ ಜೀವನವನ್ನು ಕೊನೆಗಾಣಿಸಿಕೊಳ್ಳಬೇಕೆಂದು ಯೋಚಿಸುತ್ತಿರುವಾಗ ಒಂದು ಸರ್ಪ ಅವನಿಗೆ ಬುದ್ಧಿವಾದ ಹೇಳಿತು. ಅದರ ಮಾತಿನಂತೆ ಕಂಬು ಆತ್ಮಹತ್ಯೆ ಮಾಡಿಕೊಳ್ಳದೆ ಅಲ್ಲಿಯೇ ಇದ್ದು ಕೊನೆಗೆ ರಾಜನಾದ. ಆದ್ದರಿಂದ ಈ ದೇಶಕ್ಕೆ ಕಂಬುಜ ಎಂಬ ಹೆಸರು ಬಂತೆಂದು ಒಂದು ಐತಿಹ್ಯವಿದೆ. ಮತ್ತೊಂದು ಕಥೆಯ ಪ್ರಕಾರ ಕೌಂಡಿನ್ಯನೆಂಬ ಬ್ರಾಹ್ಮಣ ದೇವರ ಆಜ್ಞೆಯಂತೆ ಆ ರಾಜ್ಯಕ್ಕೆ ಹೋಗಿ ಅಲ್ಲಿಯ ರಾಣಿಯನ್ನು ಸೋಲಿಸಿ ತಾನೇ ರಾಜನಾದನೆಂದು ತಿಳಿಯುತ್ತದೆ. ಒಟ್ಟಿನಲ್ಲಿ ಪ್ರಶ. 1ನೆಯ ಶತಮಾನದ ಹೊತ್ತಿಗೆ ಭಾರತೀಯರು ಕಂಬುಜಕ್ಕೆ ಹೋಗಿ ಅಲ್ಲಿ ರಾಜ್ಯ ಕಟ್ಟಿದರೆಂಬುದು ಖಚಿತ.

ಈ ದೇಶವನ್ನು ಚೀನೀಯರು ಮೊಟ್ಟಮೊದಲು ಫೂನಾನ್ ಎಂದು ಕರೆದರು. ಹ್ಯುಯೆನ್‌ತೀನ್ ಅಥವಾ ಹ್ಯುಯೆನ್‌ಚೆನ್ ಎಂಬ ಭಾರತೀಯನೇ ಫೂನಾನಿನ ಮೊದಲನೆಯ ದೊರೆ. ಫೂನಾನಿನ ಅನಾಗರಿಕ ಜನ ಉಡುಗೆ ತೊಡುಗೆಗಳನ್ನು ಹಾಕಿಕೊಳ್ಳುವಂತೆ ಮಾಡಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಸು. 200ರಲ್ಲಿ ಆಳಿದ ಫಾನ್ ಚೆಮಾನ್ ಫೂನಾನಿನ ಬೆಳೆವಣಿಗೆಗೆ ಕಾರಣನಾದ ದೊರೆ. ಸಯಾಂ, ಲಾವೋಸ್, ಮಲಯ ಪರ್ಯಾಯದ್ವೀಪ ಮುಂತಾದವನ್ನು ಈತ ಆಳುತ್ತಿದ್ದ. ಅನಂತರ ಆಳಿದ ಫಾನ್‌ಚೆನ್ ದೊರೆ ಚೀನದೊಡನೆ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿದ್ದ. ಸು. 5ನೆಯ ಶತಮಾನದ ಆದಿಭಾಗದಲ್ಲಿ ಇಂದ್ರವರ್ಮನೆಂಬ ರಾಜ ಆಳಿದ. ಅನಂತರ ಆಳಿದ ಜಯವರ್ಮ ಚೀನದೊಡನೆ ಮೈತ್ರಿ ಬೆಳೆಸಿದ. ಈತ ಶೈವಮತಾವಲಂಬಿ. ಇವನ ಮಗನಾದ ರುದ್ರವರ್ಮ 514ರಲ್ಲಿ ರಾಜನಾದ. ಇವನ ಅನಂತರ ಫೂನಾನ್ ರಾಜ್ಯದ ಪ್ರಾಮುಖ್ಯ ಕಳೆದುಹೋಯಿತು.

7ನೆಯ ಶತಮಾನದಿಂದ ಈ ರಾಜ್ಯ ಕಂಬುಜವಂಶದ ಅರಸರ ಆಳ್ವಿಕೆಗೆ ಒಳಪಟ್ಟು, 14ನೆಯ ಶತಮಾನದವರೆಗೆ ಅವರ ಆಳ್ವಿಕೆಗೆ ಸೇರಿತ್ತು, ಶ್ರುತವರ್ಮನೇ ಈ ವಂಶದಲ್ಲಿ ನಮಗೆ ತಿಳಿದಿರುವ ಪ್ರಾಚೀನತಮ ದೊರೆ. ಇವನ ಮಗ ಶ್ರೇಷ್ಠ ವರ್ಮ ಶ್ರೇಷ್ಠಪುರವೆಂಬ ರಾಜಧಾನಿಯನ್ನು ಸ್ಥಾಪಿಸಿ ಅಲ್ಲಿ ಭದ್ರೇಶ್ವರ ಲಿಂಗವನ್ನು ಪ್ರತಿಷ್ಠಿಸಿದ. ಅನಂತರ ಈ ರಾಜ್ಯ ಭವವರ್ಮನ ವಂಶಸ್ಥರಿಗೆ ಸೇರಿತು. ಭವಪುರ ಇವನ ರಾಜಧಾನಿ. ಇವನ ಮಗನೇ ಮಹೇಂದ್ರವರ್ಮ. ಈತ 616ರಲ್ಲಿ ಮರಣ ಹೊಂದಲು ಇವನ ಮಗ ಈಶಾನವರ್ಮ ರಾಜನಾದ. ಇವನೇ ಈಶಾನಪುರದ (ಈಗಿನ ಸಂಬೊರ್ ಪ್ರೆಕುಕ್) ನಿರ್ಮಾತ. ಇವನ ಅನಂತರ ಎರಡನೆಯ ಭವವರ್ಮ, ಜಯವರ್ಮ ಮುಂತಾದ ರಾಜರು ಆಳಿದರೂ ಅವರ ಆಳ್ವಿಕೆಯಲ್ಲಿ ಗಮನಾರ್ಹವಾದ ಅಂಶಗಳೇನೂ ಇಲ್ಲ.

ಎರಡನೆಯ ಜಯವರ್ಮ 802ರಲ್ಲಿ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ, ಈತ ಭಾರತದಿಂದ ಬಂದಿದ್ದ ಹಿರಣ್ಯದಾಮನೆಂಬ ಬ್ರಾಹ್ಮಣನನ್ನು ಆಹ್ವಾನಿಸಿ. ದೇವರಾಜಲಿಂಗ ಉಪಾಸನೆಯೆಂಬ ಧಾರ್ಮಿಕ ಕಾರ್ಯವನ್ನು ಪ್ರಾರಂಭಿಸಿದ. ಪರ್ವತಗಳಲ್ಲಿ ಈಶ್ವರಲಿಂಗಗಳನ್ನು ಸ್ಥಾಪಿಸುವುದೇ ಇದರ ಮೂಲತತ್ತ್ವ. ಇದೇ ಆಂಕೋರ್‌ವಾಟ್‌ನಂಥ ಶಿಲ್ಪಕಲಾ ಕೃತಿಗಳಿಗೆ ತಳಹದಿಯಾಯಿತು. ಈತ ಇಂದ್ರಪುರ, ಹರಿಹರಾಲಯ, ಅಮರೇಂದ್ರಪುರ, ಮಹೇಂದ್ರಪರ್ವತ ಮುಂತಾದ ನಗರಗಳನ್ನು ಸ್ಥಾಪಿಸಿದ. ಕಂಬುಜದ ಚರಿತ್ರೆಯಲ್ಲಿ ಈತನೇ ಮೊದಲನೆಯ ಶ್ರೇಷ್ಠದೊರೆ. ಈತ 850ರಲ್ಲಿ ಮರಣ ಹೊಂದಲು ಇವನ ಮಗ ಮೂರನೆಯ ಜಯವರ್ಮ ರಾಜನಾದ. ಇವನ ಮರಣಾನಂತರ ಇಂದ್ರವರ್ಮನ ವಂಶಸ್ಥರು ಕಂಬುಜದ ರಾಜರಾದರು. 877ರಲ್ಲಿ ರಾಜನಾದ ಇಂದ್ರವರ್ಮ ಜಾವ ಚಂಪಗಳ ಮೇಲೆ ಅಧಿಪತ್ಯ ಹೊಂದಿದ್ದ. ಅನಂತರ 889ರಲ್ಲಿ ಯಶೋವರ್ಮ ರಾಜನಾದ. ಇವನ ಕಾಲದಲ್ಲಿ ಸಂಸ್ಕೃತ ಸಾಹಿತ್ಯ ಕಂಬುಜದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿತ್ತು. ಈತ ಅನೇಕ ಆಶ್ರಮಗಳನ್ನು ನಿರ್ಮಿಸಿ, ಕಂಬುಜದಲ್ಲಿ ಹಿಂದೂಧರ್ಮ ಬೆಳೆಯಲು ಸಹಾಯಕನಾದ. ಈತ ಆಂಕೋರಿನಿಂದ ಯಶೋಧರಪುರಕ್ಕೆ ರಾಜಧಾನಿಯನ್ನು ಬದಲಾಯಿಸಿದ. ಅನೇಕ ದೇವಾಲಯಗಳನ್ನು ಯಶೋಧರಪುರದಲ್ಲಿ ನಿರ್ಮಿಸಿದ ಯಶೋವರ್ಮ 900ರಲ್ಲಿ ಮರಣಹೊಂದಿದ. ಸ್ವಲ್ಪಕಾಲದ ಅನಂತರ ಆಳಿದ ನಾಲ್ಕನೆಯ ಜಯವರ್ಮ ಕೊಹ್‌ಕೆರ್ ಎಂಬಲ್ಲಿಗೆ ರಾಜಧಾನಿಯನ್ನು ಬದಲಾಯಿಸಿ ಅನೇಕ ದೇವಾಲಯಗಳನ್ನು ನಿರ್ಮಿಸಿ ಪ್ರಸಿದ್ಧನಾದ. 941ರಲ್ಲಿ ಈತ ಮರಣಹೊಂದಲು ರಾಜೇಂದ್ರವರ್ಮ (944–68) ದೊರೆಯಾದ. ಇವನೂ ಅನೇಕ ದೇವಾಲಯಗಳನ್ನು ಕಟ್ಟಿಸಿ ಪ್ರಸಿದ್ಧನಾಗಿದ್ದಾನೆ.

ಅನಂತರ ಆಳಿದ ರಾಜರುಗಳಲ್ಲಿ ಮುಖ್ಯರಾದವರು ಮೊದಲನೆಯ ಮತ್ತು ಎರಡನೆಯ ಸೂರ್ಯವರ್ಮ. ಮೊದಲನೆಯ ಸೂರ್ಯವರ್ಮ (1002–1050) ಬರ್ಮ (ಮಯನ್ಮಾರ್) ಮತ್ತು ಸಯಾಮ್‌ಗಳನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಈತ ಕಾವ್ಯ, ಭಾಷ್ಯ, ಧರ್ಮಶಾಸ್ತ್ರ ಮತ್ತು ಷಡ್ದರ್ಶನಗಳಲ್ಲಿ ಪಂಡಿತ. ಬೌದ್ಧಧರ್ಮಾವಲಂಬಿಯಾಗಿದ್ದರೂ ಶೈವ ಮತ್ತು ವೈಷ್ಣವ ದೇವಾಲಯಗಳನ್ನು ನಿರ್ಮಿಸಿದ. ಇವನ ಅನಂತರ ಎರಡನೆಯ ಉದಯಾದಿತ್ಯವರ್ಮ, ಮೂರನೆಯ ಹರ್ಷವರ್ಮ ಮತ್ತು ಆರನೆಯ ಜಯವರ್ಮ ಕ್ರಮವಾಗಿ ಆಳಿದರು. ಅನಂತರ, ಎಂದರೆ 1113ರಲ್ಲಿ ಎರಡನೆಯ ಸೂರ್ಯವರ್ಮ ರಾಜನಾದ ಕೆಳ ಬರ್ಮ ಮತ್ತು ಮಲಯ ಪರ್ಯಾಯದ್ವೀಪಗಳು ಇವನ ಆಳ್ವಿಕೆಗೆ ಸೇರಿದ್ದುವು. ಚೀನೀರಾಜ ಈತನನ್ನು ಗೌರವಿಸಿ ರಾಯಭಾರಿಗಳನ್ನು ಕಳುಹಿಸಿದ್ದ. ತನ್ನ ರಾಜಗುರುವಾದ ದಿವಾಕರ ಪಂಡಿತನ ನೇತೃತ್ವದಲ್ಲಿ ಈತ ಕೋಟಿಹೋಮ, ಲಕ್ಷಹೋಮ, ಮಹಾಹೋಮ ಮುಂತಾದ ಯಾಗಗಳನ್ನು ಮಾಡಿದ. ಆಂಕೋರ್‌ವಾಟ್ ವಾಸ್ತುಶಿಲ್ಪಕೃತಿಯನ್ನು ನಿರ್ಮಿಸಿ ಎರಡನೆಯ ಸೂರ್ಯವರ್ಮ ಇತಿಹಾಸದಲ್ಲಿ ಅಮರನಾಗಿದ್ದಾನೆ. 1145ರಲ್ಲಿ ಈತ ಕಾಲವಾದಾಗ ಧರಣೀಂದ್ರವರ್ಮ ರಾಜನಾದ.

ಅನಂತರ ಕಂಬುಜದಲ್ಲಿ ಒಳಜಗಳಗಳು ಪ್ರಾರಂಭವಾದುವು. ಇವುಗಳನ್ನೆಲ್ಲ ಅಡಗಿಸಿ ಕಂಬುಜವನ್ನು ಒಟ್ಟುಗೂಡಿಸಿದ ಕೀರ್ತಿ ಏಳನೆಯ ಜಯವರ್ಮನಿಗೆ (1811–18) ಸೇರುತ್ತದೆ. ಇವನೇ ಕಂಬುಜದ ಕೊನೆಯ ಶ್ರೇಷ್ಠ ದೊರೆ. ಕಂಬುಜಕ್ಕೆ ತೊಂದರೆ ಕೊಡುತ್ತಿದ್ದ ಚಂಪರಾಜ್ಯವನ್ನು ಈತ ಹತ್ತಿಕ್ಕಿದ, ಅದು ಕಂಬುಜದ ಅಧೀನಕ್ಕೊಳಪಟ್ಟಿತು. ಈತ ಅನ್ನಾಂ ರಾಜ್ಯದ ಮೇಲೂ ಅನೇಕ ಯುದ್ಧಗಳನ್ನು ಮಾಡಿದ. ಇವನ ರಾಜ್ಯ ಬಹಳ

ವಿಸ್ತಾರವಾಗಿದ್ದು. ಉತ್ತರ ಸಯಾಮ್, ಕೆಳ ಬರ್ಮ, ಟಾಂಕಿಂಗ್, ಮಲಯ ಪರ್ಯಾಯದ್ವೀಪ ಇವನ್ನೆಲ್ಲ ಒಳಗೊಂಡಿತ್ತು. ಜಯವರ್ಮ ಶೂರನೂ ಧೀರನೂ ಮಾತ್ರವಲ್ಲದೆ ಕಲೆಗಳಿಗೆ ಆಶ್ರಯದಾತನೂ ಆಗಿದ್ದ. ಆಂಕೋರ್ ಥೊಂ ಎಂಬ ನಗರವನ್ನು ನಿರ್ಮಿಸಿ ವಾಸ್ತುಶಿಲ್ಪ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದ್ದಾನೆ. ಬಯಾನ್ ದೇವಾಲಯದ ಗೋಪುರಗಳಲ್ಲಿರುವ ಲೋಕೇಶ್ವರನ ಬೃಹದಾಕಾರದ ಶಿಲ್ಪಗಳೂ ಇಂದಿಗೂ ಅಳಿಯದೆ ಉಳಿದಿವೆ. ಈತ ಅನೇಕ ಔಷಧಾಲಯಗಳನ್ನೂ ಆಶ್ರಮಗಳನ್ನೂ ಗ್ರಂಥಾಲಯಗಳನ್ನೂ ನೀರಾವರಿ ವ್ಯವಸ್ಥೆಗಳನ್ನೂ ನಿರ್ಮಿಸಿದ. ಚುಟಾಕುವಾನನೆಂಬ ಚೀನಿ ಚರಿತ್ರಕಾರ ಏಳನೆಯ ಜಯವರ್ಮನ ಕಾಲದಲ್ಲಿ ಕಂಬುಜದಲ್ಲಿ ಸಂಚಾರ ಮಾಡಿ, ತಾನು ಕಂಡ ವಿಷಯಗಳನ್ನೆಲ್ಲ ಬರೆದಿದ್ದಾನೆ. ಇದರಿಂದ ಜಯವರ್ಮನ ಕಾಲದಲ್ಲಿ ಕಂಬುಜ ದೇಶ ರಾಜಕೀಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ವಿಶೇಷ ಮಹತ್ತ್ವಸ್ಥಾನ ಪಡೆದಿತ್ತೆಂದು ಗೊತ್ತಾಗುತ್ತದೆ.

ಏಳನೆಯ ಜಯವರ್ಮನ ಮರಣಾನಂತರ ಕಂಬುಜದಲ್ಲಿ ಸಮರ್ಥ ರಾಜರ ಅಭಾವದಿಂದ ಒಳಜಗಳಗಳು ಪ್ರಾರಂಭವಾದುವು. ಸಾಲದುದಕ್ಕೆ ಮಂಗೋಲ್ ಮುಖಂಡ ಕುಬ್ಲಾಖಾನನಿಗೆ 1285ರಲ್ಲಿ ಕಂಬುಜ ಶರಣಾಗತವಾಯಿತು. 1327ರಲ್ಲಿ ಆಳುತ್ತಿದ್ದ ಜಯವರ್ಮ ಪರಮೇಶ್ವರ ಕಂಬುಜದ ಹಿಂದೂ ರಾಜ್ಯದ ಕೊನೆಯ ದೊರೆ. ಅನಂತರ ಥೈ ರಾಜ್ಯ ರಾಮ ಕಮ್ಹೆಂಗನ ನೇತೃತ್ವದಲ್ಲಿ ಕಂಬುಜದ ಮೇಲೆ ದಾಳಿ ನಡೆಸಿತು. ಇತ್ತಕಡೆ ಅನ್ನಾಂ ರಾಜ್ಯ ಬಲಯುತವಾಗುತ್ತಿತ್ತು. ಥೈ ಮತ್ತು ಅನ್ನಾಂ ರಾಜ್ಯಗಳ ರಾಜ್ಯ ವಿಸ್ತರಣೆಯಿಂದಾಗಿ ಕಂಬುಜ ನಾಶವಾಯಿತು.

1–14ನೆಯ ಶತಮಾನದವರೆಗಿನ ಕಂಬುಜದ ಚರಿತ್ರೆಯಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವ ವಿಶೇಷವಾಗಿ ಕಾಣುತ್ತದೆ. ಇಲ್ಲಿಯ ರಾಜರು ಕೌಟಿಲ್ಯ, ಮನು ಮುಂತಾದವರ ಗ್ರಂಥಗಳನ್ನೇ ಮಾದರಿಯಾಗಿಟ್ಟುಕೊಂಡು ರಾಜ್ಯವಾಳುತ್ತಿದ್ದರು. ರಾಜ ದೈವಾಂಶಸಂಭೂತನೆಂಬ ಭಾವನೆ ಬೇರೂರಿತ್ತು. ರಾಮ ರಾಜ್ಯಕ್ಕೆ ಸಮನಾಗಿ ತಮ್ಮ ರಾಜ್ಯವಿರಬೇಕೆಂದು ಅವರ ಅಪೇಕ್ಷೆ. ಪ್ರಾಚೀನ ಕಂಬುಜದ ಸಾಮಾಜಿಕ ಜೀವನದಲ್ಲಿ ವರ್ಣಾಶ್ರಮಧರ್ಮಗಳು ಮಹತ್ತ್ವದ ಪಾತ್ರ ವಹಿಸಿದ್ದುವು. ಪುರಾಣೋಕ್ತ ಹಿಂದೂ ಧರ್ಮ ಚೆನ್ನಾಗಿ ಬೇರೂರಿತ್ತು. ಶೈವ ಮತ್ತು ವೈಷ್ಣವ ಧರ್ಮಗಳು ವಿಶೇಷವಾಗಿ ಬಳಕೆಯಲ್ಲಿದ್ದುವು. ವಿಷ್ಣು, ಶಿವ, ಲಕ್ಷ್ಮಿ, ದುರ್ಗಾ, ಸರಸ್ವತಿ, ಅಗ್ನಿ ಮುಂತಾದ ದೇವತೆಗಳ ಸ್ತೋತ್ರಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ವೇದ, ವೇದಾಂಗ, ಉಪನಿಷತ್ತು, ಧರ್ಮಶಾಸ್ತ್ರ ಮುಂತಾದವುಗಳಲ್ಲಿ ಪರಿಣತರಾದ ಅನೇಕ ಪಂಡಿತರ ಹೆಸರು ಶಾಸನಗಳಲ್ಲಿ ಕಾಣಬರುತ್ತವೆ. ರಾಮಾಯಣ, ಮಹಾಭಾರತ ಮತ್ತು ಇತರ ಪುರಾಣಗಳ ವಾಚನ ಮತ್ತು ಶ್ರವಣ ಕಂಬುಜದ ಆಶ್ರಮಗಳಲ್ಲಿ ದಿನದಿನವೂ ನಡೆಯುತ್ತಿದ್ದುವು. ಆಶ್ರಮಗಳನ್ನು ನಿರ್ಮಿಸುವುದು ಮತ್ತು ಅವಕ್ಕೆ ದತ್ತಿಗಳನ್ನು ಬಿಡುವುದು ಮುಖ್ಯ ಧಾರ್ಮಿಕ ಕಾರ್ಯಗಳಾಗಿದ್ದುವು. 9ನೆಯ ಶತಮಾನದಿಂದ ಕಂಬುಜದಲ್ಲಿ ಸಂಸ್ಕೃತ ಭಾಷೆ ಉನ್ನತ ಮಟ್ಟದಲ್ಲಿತ್ತು. ಈ ಕಾಲಕ್ಕೆ ಸೇರಿದ ನೂರಾರು ಸಂಸ್ಕೃತ ಶಾಸನಗಳು ಬೆಳಕಿಗೆ ಬಂದಿವೆ. ಕೆಲವಂತೂ ಉತ್ತಮ ಕಾವ್ಯಗಳಾಗಿವೆ. ಸಂಸ್ಕೃತದ ಎಲ್ಲ ಛಂದಸ್ಸುಗಳನ್ನೂ ಕಂಬುಜದ ಕವಿಗಳು ಸರಳವಾಗಿ ಬಳಸಿದ್ದಾರೆ. ಪಾಣಿನಿಯ ಅಷ್ಟಾಧ್ಯಾಯಿತಿ, ಮನುಸ್ಮೃತಿ, ರಾಮಾಯಣ, ಪತಂಜಲಿಯ ಮಹಾಭಾಷ್ಯ, ವಾತ್ಸಾಯನನ ಕಾಮಸೂತ್ರ, ಹರಿವಂಶ ಮುಂತಾದ ಗ್ರಂಥಗಳು ಜನಾನುರಾಗ ಗಳಿಸಿದ್ದುವು. ಕಾಳಿದಾಸ ಶ್ರೇಷ್ಠ ಕವಿಯೆಂದು ಪರಿಗಣಿತನಾಗಿದ್ದ. ಕಂಬುಜದ ಅನೇಕ ಶಾಸನಗಳಲ್ಲಿ ರಘುವಂಶದ ನಾಲ್ಕು ಶ್ಲೋಕಗಳು ಉದಾಹೃತವಾಗಿವೆ. ಪ್ರವರಸೇನ, ಮಯೂರ, ಗುಣಾಢ್ಯ ಮುಂತಾದವರ ಹೆಸರುಗಳು ಶಾಸನದಲ್ಲಿ ಬರುತ್ತವೆ. ವಾಸ್ತುಶಿಲ್ಪ ಕಲೆಯಲ್ಲಂತೂ ಭಾರತೀಯ ಮಾರ್ಗದ ಪೂರ್ಣಛಾಯೆಯೇ ಎದ್ದು ಕಾಣುತ್ತದೆ. ಆಂಕೋರ್‌ವಾಟ್ ಆಂಕೋರ್ ಥೊಮ್‌ನಲ್ಲಿರುವಂಥ ಶಿಲ್ಪಗಳು ನಿರ್ಮಾಣವಾದುದು ಕಂಬುಜದಲ್ಲಿ. ಇವೆಲ್ಲವೂ ಅದು ಭಾರತದೊಡನೆ ಸಾಧಿಸಿದ ಸಖ್ಯದ ಫಲ. (ಎ.ವಿ.ಎನ್.; ಕೆ.ಪಿ.ಎ.)

**ಕಂಬುಜದ ಪೂರ್ವೇತಿಹಾಸ :** ಕಂಬುಜದಲ್ಲಿ ಪೂರ್ವ ಶಿಲಾಯುಗ ಸಂಸ್ಕೃತಿಗಳಿದ್ದುದಕ್ಕೆ ಆಧಾರಗಳು ದೊರಕಿಲ್ಲ. ಅತ್ಯಂತ ಪುರಾತನ ಅವಶೇಷಗಳು ನವ ಶಿಲಾಯುಗದ ಟಾನ್ಲೆಸಾಪ್ ಪ್ರದೇಶದಿಂದ ಉತ್ತರದಲ್ಲಿ ವಿಯೆಟ್ನಾಮ್‌ವರೆಗೂ ಹಬ್ಬಿರುವ ಸಾಮ್ರಾಂಗ್‌ಸನ್ ಸಂಸ್ಕೃತಿಗೆ ಸೇರಿವೆ. ಈವರೆಗೂ ಭೂಶೋಧನೆಗಳಲ್ಲಿ ವಿವಿಧ ಮಟ್ಟಗಳ ಪರಸ್ಪರ ಸಂಬಂಧ ತಿಳಿದಿಲ್ಲವಾದ್ದರಿಂದ ಖಚಿತವಾಗಿ ಕಾಲನಿರ್ಣಯ ಮಾಡಲಾಗಿಲ್ಲ. ಭುಜಗಳುಳ್ಳ ಗುದ್ದಲಿ (ಷೌಲ್ಡರ್ಡ್ ಹೋ), ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಅರೆಯುವ ಕಲ್ಲು, ಚಕ್ರ, ಕೊಳವಿ ಮುಂತಾದವು ಆ ಕಾಲದ ಮುಖ್ಯ ಕಲ್ಲಿನ ಶಿಲೋಪಕರಣಗಳು, ಕೆಲವು ಚಾಕುಗಳು, ಹೆರೆಯುವ ಆಯುಧ. ಈಟಿನಾಳ, ಶಂಖದ ಅಲಂಕರಣ ವಸ್ತುಗಳು ಮತ್ತು ಕಲ್ಲಿನ ಗುಂಡು ಮಣಿಗಳು ವಿರಳವಾಗಿ ದೊರಕಿವೆ. ಮಡಕೆಗಳು ಕೈಯಿಂದ ಮಾಡಿದವಾಗಿದ್ದು ಹಗ್ಗದ ಅಥವಾ ಕೊರೆದ ಚಿತ್ರಗಳಿಂದ ಅಲಂಕರಿಸಲ್ಪಟ್ಟಿರುತ್ತಿತ್ತು. ಈ ರೀತಿಯ ಮಡಕೆಗಳು ಆಗ್ನೇಯ ಚೀನದಲ್ಲಿ ಬಳಕೆಯಲ್ಲಿದ್ದುವು. ಕಂಚನ್ನು ತಯಾರಿಸಲು ಉಪಯೋಗಿಸುತ್ತಿದ್ದ ಮೂಸೆಗಳು ದೊರಕಿರುವುದರಿಂದ ಸ್ವಲ್ಪ ಮಟ್ಟಿಗೆ ಕಂಚನ್ನು ಈ ಜನ ಉತ್ಪಾದಿಸುತ್ತಿದ್ದಿರಬಹುದು. ಒಟ್ಟಿನಲ್ಲಿ ಉತ್ತರ ಭಾಗಗಳಲ್ಲಿ ಕಂಡುಬಂದಿರುವ ಡಾಂಗ್ಸನ್ ಸಂಸ್ಕೃತಿಗಿಂತಲೂ ಇದು ಹಳತೆಂದು ಹೇಳಬಹುದು.

ಅನಂತರದ ಸಂಸ್ಕೃತಿಗಳ ವಿಷಯ ಹೆಚ್ಚಾಗಿ ತಿಳಿದುಬಂದಿಲ್ಲವಾದರೂ ಐತಿಹಾಸಿಕ ಯುಗದ ನಾಗರಿಕತೆ ಈ ಸಂಸ್ಕೃತಿಯಿಂದ ಉತ್ತೇಜಿತವಾಯಿತೆಂಬುದು ಖಚಿತ. ಈ ಕಾಲದಲ್ಲಿ ಪಶ್ಚಿಮದ ನವಶಿಲಾಯುಗ ಮತ್ತು ಅನಂತರದ ಸಂಸ್ಕೃತಿಗಳ ಪ್ರಭಾವ ಹಬ್ಬಿತು. ಅನೇಕ ನೀರಾವರಿ ಕಾಲುವೆಗಳೂ ಜಲಸಾರಿಗೆ ಮಾರ್ಗಗಳೂ ವಿಶಾಲವಾದ ವಸಾಹತುಗಳ ಸಮೀಪದಲ್ಲಿ ನಿರ್ಮಿತವಾಗಿದ್ದುವು. ಇಂಥ ವಸಾಹತುಗಳಲ್ಲಿ ಓಕ್–ಇಯೊ ಮುಖ್ಯವಾದುದು. ಸಮುದ್ರ ತೀರದಿಂದ 24 ಕಿಮೀ ದೂರವಿರುವ ಇಲ್ಲಿಗೆ ರೇವುಪಟ್ಟಣವಾದ ಟಾ–ಕಿಯೊವಿನಿಂದ ಜಲಸಾರಿಗೆ ಮಾರ್ಗವಿತ್ತು. ಬಹುಶಃ ಈ ನೆಲೆಗಳು ಪುರಾತನ ಫೂನಾನಿನ ನೆಲೆಗಳಿದ್ದಿರಬೇಕು. ದಕ್ಷಿಣ ಏಷ್ಯದೊಡನೆ ವ್ಯಾಪಾರ ಸಂಪರ್ಕವಿದ್ದುದಾಗಿ ಓಕ್–ಇಯೊವಿನ ಭೂಶೋಧನೆಗಳಿಂದ ತಿಳಿದುಬರುತ್ತದೆ. ಬೃಹತ್ ಶಿಲಾ ಸಮಾಧಿ ಸಂಸ್ಕೃತಿಯಲ್ಲಿಯ ಕಲ್ಲುಕೆಲಸದ ರೀತಿಗಳು ಭಾರತದಿಂದ ಬಂದಂತೆಯೂ ಕಂಡುಬರುತ್ತದೆ. ಈ ಕಾಲದಲ್ಲಿ ಕಬ್ಬಿಣದ ಉಪಯೋಗ ಬಳಕೆಗೆ ಬಂತು. 2ನೆಯ ಶತಮಾನದಿಂದ 4ನೆಯ ಶತಮಾನದವರೆಗಿನ ಕಾಲದ ಮುದ್ರೆಗಳಿಂದ ಇಲ್ಲಿ ಅನೇಕ ಚೀನೀ ಮತ್ತು ಭಾರತೀಯ ಪ್ರಭಾವಗಳೂ ಭಾರತದ ಮಾರ್ಗವಾಗಿ ಬಂದ ಶಕ–ರೋಮನ್ನರ ಪ್ರಭಾವಗಳೂ ಕಂಡುಬರುತ್ತವೆ. (ಬಿ.ಕೆ.ಜಿ.)

**ಕಂಬುಜದ ವಾಸ್ತುಶಿಲ್ಪ :** ಬಹಳ ಪ್ರಾಚೀನ ಕಾಲದಿಂದಲೂ ಭಾರತದೊಡನೆ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದ ಕಂಬುಜ ದೇಶ, ಈ ಸಂಬಂಧಗಳ ಫಲವಾಗಿ ಹೊಸ ಶೈಲಿಯ ವಾಸ್ತುಶಿಲ್ಪ ಕೃತಿಗಳನ್ನು ನಿರ್ಮಾಣ ಮಾಡಿ, ವಿಶ್ವದ ಇತಿಹಾಸದಲ್ಲೇ ಮಹತ್ತ್ವಸ್ಥಾನ ಪಡೆದಿದೆ. ಕಂಬುಜದ ವಾಸ್ತುಶಿಲ್ಪ ಕಲಾಕೃತಿಗಳು ಹಾಳಾಗಿ ಅರಣ್ಯಗಳ ಮಧ್ಯದಲ್ಲಿ ಶತಮಾನಗಳ ಕಾಲ ಮುಚ್ಚಿಹೋಗಿದ್ದುವು. 1860ರಲ್ಲಿ ಹೆನ್ರಿ ಮೌ ಹೆತ್ ಎಂಬ ಪ್ರಕೃತಿವಿಜ್ಞಾನಿ ಆಂಕೋರ್‌ವಾಟ್ ದೇವಾಲಯದ ಅವಶೇಷಗಳನ್ನು ಪತ್ತೆ ಹಚ್ಚಿ ಕಂಬುಜದ ವಾಸ್ತುಶಿಲ್ಪ ಅಧ್ಯಯನಕ್ಕೆ ತಳಹದಿ ಹಾಕಿದ. ಅನಂತರ ಐಮೊನೀರ್, ಸೀಡಸ್, ಬ್ರಿಗ್ಸ್ ಮುಂತಾದ ವಿದ್ವಾಂಸರು ಹೊಸ ಹೊಸ ದೇವಾಲಯಗಳನ್ನು ಪತ್ತೆ ಮಾಡಿದುದೇ ಅಲ್ಲದೆ ಆಳವಾದ ಸಂಶೋಧನೆ ನಡೆಯಿಸಿ, ಕಂಬುಜದ ವಾಸ್ತುಶಿಲ್ಪದ ವಿಷಯದಲ್ಲಿ ತಿಳಿವಳಿಕೆಯನ್ನುಂಟು ಮಾಡಿದ್ದಾರೆ.

ಕಂಬುಜದ ವಾಸ್ತುಶಿಲ್ಪ ಶೈಲಿಯನ್ನು ಆಂಕೋರ್ ಪೂರ್ವ ಮತ್ತು ಆಂಕೋರ್ ಎಂದು ವಿಭಾಗಿಸಬಹುದು. ಮೊದಲನೆಯ ಶೈಲಿಯನ್ನು ಇಂಡೊಖ್ಮೆರ್ ಎಂದೂ ಎರಡನೆಯದನ್ನು ಖ್ಮೆರ್ ಎಂದೂ ಕರೆಯುವುದುಂಟು. ಕಂಬುಜದ ಪ್ರಾಚೀನತೆಯ ವಾಸ್ತುಶಿಲ್ಪ ಕೃತಿಗಳು ಫೂನಾನ್ ರಾಜ್ಯಕ್ಕೆ ಸೇರಿದವು. ಪ್ರ.ಶ. 1–7ನೆಯ ಶತಮಾನದವರೆಗಿನ ಈ ಕಲೆಯ ಉಗಮದ ವಿಷಯದಲ್ಲಿ ಖಚಿತವಾದ ಮಾಹಿತಿ ದೊರಕಿಲ್ಲ. ಭಾರತದಂತೆ ಕಂಬುಜದಲ್ಲಿಯೂ ಕಲ್ಲಿನ ಬಳಕೆಗೆ ಮುಂಚೆ ವಾಸ್ತುಶಿಲ್ಪ ಕೃತಿಗಳು ಮರದಲ್ಲಿ ನಿರ್ಮಿತವಾಗುತ್ತಿದ್ದುವು. ಸುಲಭವಾಗಿ ನಾಶವಾಗಿ ಹೋಗುವ ಮರದ ಕಟ್ಟಡಗಳು, ಶಿಲ್ಪಗಳು ನಮಗೆ ಉಪಲಬ್ಧವಾಗಿಲ್ಲವಾದುದರಿಂದ ಆ ಕಾಲದ ವಾಸ್ತುಶಿಲ್ಪಗಳ ಸ್ವರೂಪ ತಿಳಿಯದಾಗಿದೆ ಅನಂತರ ಇಟ್ಟಿಗೆಗಳಿಂದ ನಿರ್ಮಿತವಾದ ದೇವಾಲಯಗಳಲ್ಲಿ ಚೌಕವಾದ ಹಜಾರ ಮತ್ತು ಶಿಖರಗಳಿದ್ದುವು. ಇವು ಗುಪ್ತರ ಕಾಲದ ದೇವಾಲಯಗಳನ್ನು ವಿಶೇಷವಾಗಿ ಹೋಲುತ್ತವೆ.

ಆದುದರಿಂದ ಫೂನಾನಿನ ವಾಸ್ತುಶಿಲ್ಪ ಕೃತಿಗಳು ಪೂರ್ಣ ಭಾರತೀಯ ಶೈಲಿಗೆ ಸೇರಿದವು ಎಂದು ಹೇಳಬಹುದಾಗಿದೆ. ಈ ಕಲೆಯ ಕೊನೆಯ ಹಂತವನ್ನು ಆಂಕೋರ್ ಬೊರೈ ಎಂಬಲ್ಲಿ ನೋಡಬಹುದು. ಹಿಂದೂ ಮತ್ತು ಬೌದ್ಧ ದೇವಾಲಯಗಳಿಗೆ ಪ್ರಸಿದ್ಧವಾದ ಆಂಕೋರ್ ಬೊರೈಯಲ್ಲಿ ಹಿಂದೂ ಮತ್ತು ಬೌದ್ಧ ದೇವತೆಗಳ ಶಿಲ್ಪಗಳೂ ವಿಶೇಷವಾಗಿದೆ. ಫ್ನಾಮ್‌ದಲ್ಲಿ ದೊರಕಿರುವ ಹರಿಹರ, ವಿಷ್ಣು, ಬಲರಾಮ–ಈ ಶಿಲ್ಪಗಳು ಫೂನಾನಿನ ಶಿಲ್ಪಗಳಲ್ಲಿ ಅತಿಮುಖ್ಯವಾದವು. ಹರಿಹರನ ವಿಗ್ರಹವಂತೂ ಬಹು ಸುಂದರವಾಗಿದೆ. ಒಂದು ಭಾಗದಲ್ಲಿ ವಿಷ್ಣುವಿನ, ಮತ್ತೊಂದು ಭಾಗದಲ್ಲಿ ಈಶ್ವರನ ಅಂಶಗಳನ್ನು ಹೊಂದಿರುವ ಈ ಮೂರ್ತಿ ಹೆಚ್ಚು ಅಲಂಕಾರಗಳಿಲ್ಲದೆ ಬಲು ಸರಳವಾಗಿದೆ. ಸು. ಇದೇ ಕಾಲಕ್ಕೆ ಸೇರಬಹುದಾದ ಮತ್ತೊಂದು ಶಿಲ್ಪವೆಂದರೆ ವತ್‌ಖೊ ಎಂಬಲ್ಲಿನ ಗೋವರ್ಧನಗಿರಿಧಾರಿ ಕೃಷ್ಣ. ವತ್ ರೊಮೊಲೊಕ್ ವಿಹಾರದಲ್ಲಿ ದೊರಕಿರುವ ಮರಳುಶಿಲೆಗಳಿಂದ ನಿರ್ಮಿತವಾದ ಬುದ್ಧನ ಶಿಲ್ಪ ಭಾರತದಲ್ಲೇ ನಿರ್ಮಾಣವಾಯಿತೋ ಎನ್ನುವಷ್ಟು ಭಾರತೀಯತೆಯನ್ನು ಪ್ರದರ್ಶಿಸುತ್ತದೆ.

7ನೆಯ ಶತಮಾನದ ಮೊದಲ ಭಾಗದಲ್ಲಿ ನಿರ್ಮಾಣವಾದ ಈಶಾನಪುರವೇ ಈಗಿನ ಸಂಬೊರ್ ಪ್ರೆಕುಕ್. ಇದೊಂದು ವಾಸ್ತುಶಿಲ್ಪ ಕಲಾ ಕೇಂದ್ರ. ಇಟ್ಟಿಗೆಯಿಂದಲೇ ನಿರ್ಮಾಣವಾದ ಶಿಖರಗಳು ಇಲ್ಲಿಯ ವೈಶಿಷ್ಟ್ಯ. ಮೆದುಗಾರೆಯಿಂದ ಮಾಡಿದ

ಶಿಲ್ಪಫಲಕಗಳಲ್ಲಿ ವಿಷ್ಣು, ಲೋಕೇಶ್ವರ, ಮತ್ತು ಇತರ ದೇವತೆಗಳ ಶಿಲ್ಪಗಳಿವೆ. ಇಲ್ಲಿಯ ಸ್ತ್ರೀವಿಗ್ರಹಗಳು ಸೌಂದರ್ಯದ ದೃಷ್ಟಿಯಿಂದ ಗಮನಾರ್ಹ, ಕಂಬುಜದ ವಾಸ್ತುಶಿಲ್ಪದ ಮುಂದಿನ ಹಂತವನ್ನು ಪ್ರಸತ್ ಅಂದೆತ್, ಪ್ರೆಮ್ಮೆಂಗ್ ಮತ್ತು ಕೊಂಪೊಂಗ್‌ಗಳಲ್ಲಿ ಕಾಣಬಹುದು. 7ನೆಯ ಶತಮಾನದ ಉತ್ತರಾರ್ಧ ಮತ್ತು 8ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿತವಾದ ಇಲ್ಲಿಯ ದೇವಾಲಯಗಳಲ್ಲಿ ಶಿಲ್ಪಗಳು ವಿಶೇಷವಾಗಿವೆ. ಪ್ರಸತ್ ಅಂದೆತ್ ದೇವಾಲಯದ ಹರಿಹರ ಶಿಲ್ಪ ಆಂಕೋರ್ ಪೂರ್ವ ಕಂಬುಜದಲ್ಲಿ ಅತ್ಯುತ್ತಮ ಶಿಲ್ಪಕೃತಿಯೆಂದು ಪರಿಗಣಿತವಾಗಿದೆ. ಮುಖ ಲಕ್ಷಣಗಳಲ್ಲಿ ಇದು ಕಂಬುಜದ ಸ್ವಂತಿಕೆಯನ್ನು ಪ್ರದರ್ಶಿಸಿದರೂ ಇತರ ವಿಷಯಗಳಲ್ಲಿ ಭಾರತೀಯವೆನಿಸುತ್ತದೆ. ಇಲ್ಲಿಗೆ ಆಂಕೋರ್ ಪೂರ್ವ (ಇಂಡೋಖ್ಮೆರ್) ಶೈಲಿ ಕೊನೆಗೊಂಡಿತು.

ಅನಂತರ ಬೆಳೆದು ಬಂದ ಆಂಕೋರ್ ಕಲಾಶೈಲಿ 9ನೆಯ ಶತಮಾನದಿಂದ ಪ್ರಾರಂಭವಾಗಿ ಐದು ಶತಮಾನಗಳ ಕಾಲ ಬೆಳಗಿತು. ಶೈಲಿಯ ದೃಷ್ಟಿಯಿಂದ ಇದನ್ನು ಪೂರ್ವಾರ್ಧ (9–11ನೆಯ ಶತಮಾನದವರೆಗೆ) ಮತ್ತು ಉತ್ತರಾರ್ಧ (11–13ನೆಯ ಶತಮಾನದವರೆಗೆ) ಎಂದು ವಿಭಾಗಿಸಬಹುದು. ಪೂರ್ವಾರ್ಧದಲ್ಲಿ ಕುಲೆನ್, ಪ್ರಿಹ್‌ಕೊ, ಒಖೆಂಗ್, ಕೊಹ್‌ಕೆರ್, ಬಾಂಟೆಶ್ರೀ, ಮತ್ತು ಕ್ಲಿಯಾಂಗ್ ಎಂದು ಮುಖ್ಯವಾದ ಸ್ಥಳೀಯ ಪ್ರಭೇದಗಳನ್ನು ನೋಡಬಹುದು.

9ನೆಯ ಶತಮಾನದ ಪೂರ್ವಾರ್ಧದಲ್ಲಿ ಬೆಳೆದುಬಂದ ಕುಲೆನ್ ಶೈಲಿಯ ವಾಸ್ತುಶಿಲ್ಪಗಳನ್ನು ಫ್ನಾಮ್ ಕುಲೆನ್‌ನಲ್ಲಿ ನೋಡುತ್ತೇವೆ. ಇಲ್ಲಿ ಜಾವ ಮತ್ತು ಚಂಪ ರಾಜ್ಯದ ಶಿಲ್ಪಪ್ರಭಾವಗಳು ಕಂಡುಬರುತ್ತವೆ. ವಿವಿಧ ಕಟ್ಟಡಗಳನ್ನು ಒಂದು ಕ್ರಮವನ್ನನುಸರಿಸಿ ನಿರ್ಮಿಸುವ ವಿನ್ಯಾಸ ಪ್ರಾರಂಭವಾದುದು. ಈ ಕಾಲದಲ್ಲಿ, ಶಿಲ್ಪಗಳಲ್ಲಿ ಮಕರತೋರಣಗಳು, ಲತೆಗಳು, ಕಾಲಮುಖಗಳು ವಿಶೇಷವಾಗಿದೆ. ಪ್ರ.ಶ. 9ನೆಯ ಶತಮಾನದ ಕೊನೆಯ ಭಾಗದಲ್ಲಿ ನಿರ್ಮಾಣವಾದ ಪ್ರಿಹ್‌ಕೊ ಶೈಲಿಯ ದೇವಾಲಯಗಳು ಪ್ರಸತ್ ಕೊಕ್‌ಪೊ ಮತ್ತು ರೋಲೊಗಳಲ್ಲಿವೆ. ಪ್ರಿಹ್‌ಕೊನಲ್ಲಿರುವ ಇಟ್ಟಿಗೆಯ ಆರು ಶಿಖರಗಳು, ಲೊಲೈನಲ್ಲಿರುವ ನಾಲ್ಕು ಶಿಖರಗಳು ಮತ್ತು ಬಕಾಂಗಿನ ಎಂಟು ಶಿಖರಗಳು ಈ ಕಾಲದವು. ಇವು ಸುಂದರವಾಗಿವೆ. ಶಿಲ್ಪವಿನ್ಯಾಸದಲ್ಲಿ ಹೊಸ ಪ್ರಯೋಗಗಳು ಕಾಣುತ್ತವೆ. ಸ್ತ್ರೀ ಮತ್ತು ಪುರುಷರ ಶಿಲ್ಪಗಳಲ್ಲಿ ಆಭರಣಗಳು ವಿಶೇಷವಾಗಿವೆ.

9ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿತವಾದ ಒಖೆಂಗ್ ಶೈಲಿಯ ವಾಸ್ತುಶಿಲ್ಪಗಳು ಅನೇಕ ದೃಷ್ಟಿಗಳಿಂದ ಪ್ರಾಮುಖ್ಯ ಪಡೆದಿವೆ. ಆಗ ಇಟ್ಟಿಗೆ ಗೋಪುರಗಳ ಜೊತೆಗೆ ಕಲ್ಲಿನ ಗೋಪುರಗಳೂ ನಿರ್ಮಾಣವಾಗತೊಡಗಿದುವು. ಆಂಕೋರಿನ ರೂಪುರೇಖೆಗಳನ್ನು ಫ್ನಾಮ್ ಒಖೆಂಗ್‌ನಲ್ಲಿ ಪ್ರಯೋಗ ಮಾಡಿ ನೋಡಿದರೋ ಎನ್ನುವಂತೆ ತೋರುತ್ತದೆ. ಹಂತಹಂತದ ಪಿರಮಿಡ್ಡಿನ ಆಕಾರದ ಶಿಖರಗಳು, ಆ ಶಿಖರಗಳ ಸಮಾನಾಂತರ ನಿರ್ಮಾಣ, ಅವುಗಳ ಸುತ್ತಲಿನ ಜಗುಲಿಗಳು ಮುಂತಾದವು ಇಲ್ಲಿ ರೂಪುಗೊಂಡು, ಮಾದರಿಯಾಗಿ ಮುಂದೆ ಸ್ಥಿರವಾದುವು. ಫ್ನಾಮ್ ಒಖೆಂಗ್‌ನಲ್ಲಿ ಐದು ಹಂತಗಳಿದ್ದು, ಪ್ರತಿ ಹಂತದಲ್ಲೂ ಹನ್ನೆರಡು ಗೋಪುರಗಳಿವೆ.

4ನೆಯ ಜಯವರ್ಮ ಮಹಾರಾಜ (921–41) ತನ್ನ ರಾಜಧಾನಿಯನ್ನು ಯಶೋಧರಪುರದಿಂದ ಕೊಹ್‌ಕೆರ್ ಎಂಬಲ್ಲಿಗೆ ಬದಲಾಯಿಸಿ, ಹೊಸ ವಾಸ್ತು ಶಿಲ್ಪಶೈಲಿಗೆ ಕಾರಣನಾದ. ಈ ಶೈಲಿ ಕಂಬುಜದ ಇತಿಹಾಸದಲ್ಲೇ ಗಣ್ಯ ಸ್ಥಾನ ಪಡೆದಿದೆ. ಕೊಹ್‌ಕೆರನ ಶಿಲ್ಪಗಳು ಜೀವಂತವಾಗಿರುವಂತೆ ತೋರುತ್ತವೆ. ಅಂಗಾಂಗಗಳು ಚಲಿಸುತ್ತವೆಯೋ ಎನ್ನುವ ಭ್ರಾಂತಿ ಬರುವಂತೆ ಕೆತ್ತಿರುವ ಈ ಶಿಲ್ಪಗಳ ಅಂಗವಿನ್ಯಾಸ ಬಲು ಮೋಹಕ. ನರ್ತನ ಮಾಡುತ್ತಿರುವ ಶಿವ, ಹಾರುತ್ತಿರುವ ಗರುಡ, ವಾಲಿ–ಸುಗ್ರೀವ ಮೊದಲಾದವು ಉತ್ತಮ ಕೃತಿಗಳು. ಆಂಕೋರ್ ಶೈಲಿಯ ಮುಖ್ಯಾಂಶಗಳಲ್ಲೊಂದಾದ ಹಸನ್ಮುಖ ಶಿಲ್ಪಗಳು ಪ್ರಾರಂಭವಾದುದು ಕೊಹ್‌ಕೆರ್‌ನಲ್ಲಿ.

ಮುಂದಿನ ಹಂತವನ್ನು ಬಾಂಟೆಶ್ರೀ ಎಂಬಲ್ಲಿ ನೋಡಬಹುದು. ವಾಸ್ತುಶಿಲ್ಪ ಇತಿಹಾಸದಲ್ಲೇ ಒಂದು ವಿಶಿಷ್ಟ ಸ್ಥಾನ ಗಳಿಸಿರುವ ಬಾಂಟೆಶ್ರೀ ದೇವಾಲಯಗಳು ಯಜ್ಞವರಾಹನೆಂಬ ಬ್ರಾಹ್ಮಣನ ನೇತೃತ್ವದಲ್ಲಿ ರಾಜೇಂದ್ರವರ್ಮ ಮಹಾರಾಜನ ಕಾಲದಲ್ಲಿ ನಿರ್ಮಾಣವಾದುವು. ಇಲ್ಲಿಯ ದೇವಾಲಯಗಳು ಒಂದೇ ಸಾಲಿನಲ್ಲಿರುವ ಮೂರು ಗೋಪುರಗಳನ್ನೊಳಗೊಂಡಿವೆ. ಇವುಗಳಿಗಿಂತ ಇಲ್ಲಿಯ ಶಿಲ್ಪಗಳು ಹೆಚ್ಚು ಸುಂದರವಾದವು. ಆಂಕೋರ್‌ವಾಟ್‌ನ ಶಿಲ್ಪಗಳಿಗಿಂತ ಇದು ಹೆಚ್ಚು ಸುಂದರವಾಗಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಭಾರತೀಯ ಪುರಾಣಗಳು ಮತ್ತಿತ್ತರ ಗ್ರಂಥಗಳಿಂದ ಸ್ಫೂರ್ತಿಪಡೆದ ಶಿಲ್ಪಗಳು ದೇವತೆಗಳ ಅದ್ಭುತಕಾರ್ಯಗಳನ್ನು ವಿಸ್ತಾರವಾಗಿ ರೂಪಿಸಿದರು. ಮಹಿಷಾಸುರಮರ್ದಿನಿಯ ಶಿಲ್ಪವಂತೂ ಅದ್ಭುತವಾಗಿದೆ. ಕಂಸವಧೆ, ರಾವಣ ಕೈಲಾಸವನ್ನು ಅಲುಗಿಸುತ್ತಿರುವುದು, ವಿಷ್ಣುವಿನ ವಿವಿಧ ಅವತಾರಗಳು ಮೊದಲಾದವು ಉತ್ತಮ ಶಿಲ್ಪಗಳು. ಕೆಲವು ಶಿಲ್ಪಗಳಲ್ಲಿ ಚಿನ್ನದ ಕುಸುರಿಕೆಲಸದಷ್ಟು ಸೂಕ್ಷ್ಮವಾಗಿರುವ ಕೌಶಲವೂ ಕಾಣಿಸುತ್ತದೆ.

ಪ್ರ.ಶ. 11ನೆಯ ಶತಮಾನದ ಮೊದಲ ಭಾಗದಲ್ಲಿ ಕ್ಲಿಯಾಂಗ್ ಶೈಲಿಯ ದೇವಾಲಯಗಳು ಬೆಳಕಿಗೆ ಬಂದುವು. ಫಿಮೆನಕಗಳಲ್ಲಿ ನಿರ್ಮಾಣವಾದ ಗೋಪುರಗಳು ಈ ಕಾಲಕ್ಕೆ ಸೇರಿದವು. ಇದಾದ ಅನಂತರ ಬಾಫುವಾನ್ ಶೈಲಿ ಬೆಳಕಿಗೆ ಬಂತು. ಇಲ್ಲಿಯ ದೇವಾಲಯ ಐದು ಹಂತಗಳಲ್ಲಿರುವ ಬೃಹತ್ ಗೋಪುರ. 1,440' ಉದ್ದ, 560' ಅಗಲ, 160' ಎತ್ತರವಾಗಿರುವ ಇಲ್ಲಿಯ ಶಿಖರ ಗಮನಾರ್ಹ. ಬಾಫುವಾನ್ ಶಿಲ್ಪಶೈಲಿಯನ್ನು ಸುಧಾರಣೆಗಳಿಂದ ಅತ್ಯುತ್ತಮಗೊಳಿಸಿ ಹೊಸದಾದ ಶೈಲಿಯನ್ನು ಆರಂಭಿಸಿದ ಕೀರ್ತಿ ಎರಡನೆಯ ಸೂರ್ಯವರ್ಮನಿಗೆ ಸೇರುತ್ತದೆ. ಸೂರ್ಯವರ್ಮನ (1113–45) ಕಾಲ ಕಂಬುಜದ ಸಾಂಸ್ಕೃತಿಕ ಇತಿಹಾಸದಲ್ಲಿ ಪೂರ್ವಕಾಲ. ಸೂರ್ಯವರ್ಮ ಸ್ಥಾಪಿಸಿದ ಆಂಕೋರ್‌ವಾಟ್ ವಿಶ್ವವಿಖ್ಯಾತವಾಗಿದೆ. ಇಲ್ಲಿಯ ದೇವಾಲಯದ ಮಧ್ಯಾಂಗಣದ ಸುತ್ತಲೂ ಮೇಲ್ಛಾವಣಿಯಿರುವ ಹಾದಿಯೊಂದು 5,100' ಉದ್ದ, 4,500' ಅಗಲ ಇರುವ ಪ್ರದೇಶವನ್ನು ಹೊರವಲಯದಿಂದ ಬೇರ್ಪಡಿಸುತ್ತದೆ. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯವನ್ನು ಪ್ರವೇಶಿಸಲು, 1,500' ಉದ್ದದ ಭವ್ಯವಾದ ರಾಜಪಥವಿದೆ. ಇದರ ಎರಡು ಕಡೆಗಳಲ್ಲೂ ಕಲ್ಲಿನ ನಾಗ–ನಾಗಿನಿಯರ ಶಿಲ್ಪಗಳಿವೆ. ಪ್ರವೇಶದ್ವಾರದಲ್ಲಿರುವ ಸಿಂಹದ ಸಾಲುಶಿಲ್ಪಗಳು ಈ ಕಟ್ಟಡದ ಮಹತ್ತ್ವವನ್ನು ಪ್ರವೇಶದಲ್ಲೇ ತೋರಿಸಿಕೊಡುತ್ತವೆ. ಕೊನೆಯದಾದ ಹಂತದಲ್ಲಿ ಈಶ್ವರನ ದೇವಾಲಯವಿದೆ. ಇದರ ಶಿಖರ 210' ಎತ್ತರವಾಗಿದ್ದು ದೂರದಿಂದಲೂ ಎದ್ದುಕಾಣುತ್ತದೆ. ಒಟ್ಟಿನಲ್ಲಿ ವಾಸ್ತುಕಲೆಯಲ್ಲಿ ಇದೊಂದು ಮಹತ್ಸಾಧನೆ. ಆಂಕೋರ್‌ವಾಟ್‌ನಲ್ಲಿ ವಾಸ್ತು ಮತ್ತು ಶಿಲ್ಪಕಲೆಗಳಲ್ಲಿ ಯಾವುದಕ್ಕೆ ಹೆಚ್ಚು ಪ್ರಾಮುಖ್ಯ ಎನ್ನುವುದು ನಿರ್ಧರಿಸಲಾಗದ ಪ್ರಶ್ನೆ. ಈ ಎರಡು ಕಲೆಗಳೂ ಒಂದಕ್ಕೊಂದು ಪೂರಕವಾಗಿ ಮಿತವಾಗಿರುವುದು ಇಲ್ಲಿಯ ವೈಶಿಷ್ಟ್ಯ. ಅರೆ ಉಬ್ಬು ಶಿಲ್ಪಗಳನ್ನು ಕೆತ್ತುವ ಕಲೆಯಲ್ಲಿ ಇಲ್ಲಿ ಪರಿಣತಿ ಸಾಧಿಸಿದೆ. ರಾಮಾಯಣ ಮಹಾಭಾರತಗಳ ಕಥೆಗಳಿಂದ ಸ್ಫೂರ್ತಿ ಬಂದಿದೆ. ರಾಮರಾವಣರ ಯುದ್ಧ, ರಾವಣ ಜಟಾಯುವನ್ನು ಶಿಕ್ಷಿಸುವುದು, ಹನುಮಂತ ಲಂಕೆಯನ್ನು ಸುಡುವುದು, ರಾವಣ ಸೀತೆಯನ್ನು ಅಪಹರಿಸುವುದು, ಕುರುಕ್ಷೇತ್ರಯುದ್ಧ ಮುಂತಾದವನ್ನು ಶಿಲ್ಪಿ ಅತ್ಯುತ್ತಮವಾಗಿ ಕೆತ್ತನೆ ಮಾಡಿ ಕಂಬುಜದ ಜನಗಳ ಮನಸ್ಸನ್ನು ಸೂರೆಗೊಂಡಿದ್ದಾನೆ. ಅಪ್ಸರ ಸ್ತ್ರೀಯರನ್ನು ವಿಶೇಷ ಆಸಕ್ತಿಯಿಂದ ಕಡೆದಿದ್ದಾನೆ. ಎಲ್ಲೆಲ್ಲಿ ನೋಡಿದರೂ ಸುಂದರವಾದ ತೆಳ್ಳಗೆ ಬಳುಕುವ, ಆಭರಣ ಭೂಷಿತೆಯರಾದ ಅಪ್ಸರೆಯರ ಮೂರ್ತಿಗಳು. ಇವುಗಳಲ್ಲಿ ಶಿಲ್ಪಿ ಕಲೆಯ ಪರಾಕಾಷ್ಠೆಯನ್ನು ಕಾಣಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಈ ರೀತಿಯ ಸೂಕ್ಷ್ಮವೂ ಸುಂದರವೂ ಆದ ವಾಸ್ತುಶಿಲ್ಪಗಳ ನಿರ್ಮಾಣವಾದ ಅನಂತರ, ಕಂಬುಜದಲ್ಲಿ ಬೃಹತ್ ಪ್ರಮಾಣದ ವಾಸ್ತುಶಿಲ್ಪ ಕೃತಿಗಳು ನಿರ್ಮಾಣವಾದುವು. ಕಂಬುಜದ ಚರಿತ್ರೆಯಲ್ಲಿ ಶ್ರೇಷ್ಠ ದೊರೆಯೆನಿಸಿಕೊಂಡಿರುವ ಏಳನೆಯ ಜಯವರ್ಮನೇ ಆಂಕೋರ್ ಥೊಮ್ ನಗರದ ನಿರ್ಮಾಪಕ. 1200ರಲ್ಲಿ ಪ್ರಾರಂಭವಾದ ಆಂಕೋರ್ ಥೋಮ್ ಕಟ್ಟಡಗಳು ಅವನ ಜೀವಿತ ಕಾಲದಲ್ಲೇ ಪೂರ್ಣಗೊಂಡದ್ದು ಆತ ನೀಡಿದ ಆಶ್ರಯದ ಫಲ. 100' ಅಗಲ ಮತ್ತು 16 ಕಿಮೀ ಉದ್ದದ ಕಂದಕವನ್ನು ನಿರ್ಮಿಸಿ ಅದರ ಒಳಭಾಗದಲ್ಲಿ ಬೃಹದಾಕಾರದ ಗೋಡೆಗಳನ್ನು ನಿರ್ಮಿಸಿದ. ಈ ಶಿಖರಗಳ ನಾಲ್ಕು ಮುಖಗಳಲ್ಲಿಯೂ ಬೋಧಿಸತ್ತ್ವ ಲೋಕೇಶ್ವರನ ಶಿಲ್ಪಗಳಿವೆ. ಶಿಖರಗಳೇ ಬುದ್ಧನ ರೂಪದಲ್ಲಿ ಮೂರ್ತಿವೆತ್ತಂತೆ ಇರುವುದು ಇಲ್ಲಿಯ ವೈಶಿಷ್ಟ್ಯ. ಇವು ಬೃಹತ್ ಪ್ರಮಾಣದಲ್ಲಿರುವುದು ಮಾತ್ರವಲ್ಲದೆ, ಕಲಾದೃಷ್ಟಿಯಿಂದಲೂ ಅದ್ಭುತಗಳಾಗಿದ್ದು, ಇವುಗಳ ಮುಗುಳ್ನಗೆ ಬಲು ದೂರದಿಂದಲೇ ನಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ. ಆಂಕೋರ್ ಥೊಮ್‌ನ ಮಧ್ಯಭಾಗದಲ್ಲಿರುವ ಬಯಾನ್ ದೇವಾಲಯವಂತೂ ಶಿಖರಗಳ ಸಮೂಹ. ಇಲ್ಲಿಯ ಶಿಲ್ಪಗಳೂ ಬಾಂಟೆಕ್ಡೆ, ತಪ್ರೊಮ್, ನೀಕ್ ಪೀಯನ್, ಬಾಂಟೆಖ್ಮೆರ್, ವತ್‌ನೊಕೊರ್ ಮುಂತಾದ ಕಡೆಗಳ ಶಿಲ್ಪಗಳೂ ಮೋಹಕವಾಗಿವೆ. ಪ್ರಿಖಾನ್ ದೇವಾಲಯದಲ್ಲಿರುವ ಏಳನೆಯ ಜಯವರ್ಮನ ಶಿಲ್ಪವೂ ಉತ್ತಮ ಕೃತಿಗಳಲ್ಲೊಂದಾಗಿದೆ.

ಜಯವರ್ಮನ ಮರಣಾನಂತರ ಕಂಬುಜದಲ್ಲಿ ವಾಸ್ತುಶಿಲ್ಪ ಸಂಪ್ರದಾಯ ಕ್ಷೀಣಿಸಿತು. ಬೌದ್ಧ ತಾಂತ್ರಿಕ ಧರ್ಮ ತಲೆಯೆತ್ತಿದಂತೆ ವಾಸ್ತುಕೃತಿಗಳ ನಿರ್ಮಾಣ ಕಡಿಮೆಯಾಗಿ, ಸಣ್ಣ ಸಣ್ಣ ಕಂಚಿನ ಮತ್ತು ತಾಮ್ರದ ವಿಗ್ರಹಗಳು ವಿಶೇಷವಾಗಿ ಬೆಳಕಿಗೆ ಬಂದುವು. ಆದರೆ ಇವು ಉತ್ತಮ ಕಲಾಕೃತಿಗಳಾಗಲಿಲ್ಲ. ಸೂರ್ಯವರ್ಮ ಜಯವರ್ಮರಂಥ ಕಲಾಭಿಮಾನಿ ದೊರೆಗಳು ಮತ್ತೆ ಕಂಬುಜದಲ್ಲಿ ಜನ್ಮ ತಾಳಲಿಲ್ಲ. ಹೀಗಾಗಿ ವಿಶ್ವವಿಖ್ಯಾತವಾಗಿದ್ದ ಕಂಬುಜದ ವಾಸ್ತುಶಿಲ್ಪ ಅವನತಿ ಹೊಂದಿತು. ನೋಡಿ – ಆಂಕೋರ್‌ವಾಟ್ – ಆಗ್ನೇಯ ಏಷ್ಯ. (ಎ.ವಿ.ಎನ್.)

**ಕಂಬುಜದ ಶಾಸನಗಳು :** ಕಂಬುಜದ ಶಾಸನಗಳು ಸಂಸ್ಕೃತ ಹಾಗೂ ಖ್ಮೆರ್ (ಕಾಂಬೋಡಿಯದ ದೇಶಭಾಷೆ) ಭಾಷೆಗಳಲ್ಲಿ ರಚಿತವಾಗಿವೆ. ಇಲ್ಲಿಯವರೆವಿಗೂ ದೊರೆತಿರುವ ಶಾಸನಗಳು ಪ್ರ.ಶ. 5ನೆಯ ಶತಮಾನದಿಂದ 14ನೆಯ ಶತಮಾನದವರೆವಿಗೂ

ಹರಡಿವೆ. ಖ್ಮೆರ್ ಭಾಷೆಯ ಶಾಸನಗಳನ್ನು ಗದ್ಯದಲ್ಲಿ ಬರೆಯಲಾಗಿದೆ. ಅವು ಸಂಸ್ಕೃತ ಶಾಸನಗಳಲ್ಲಿ ನಿರ್ದೇಶಿಸಿದ ದಾನಧರ್ಮಗಳ ವಿವರಗಳನ್ನೂ ಇತರ ಪಾರಿಭಾಷಿಕಾಂಶಗಳನ್ನೂ ತಿಳಿಸುತ್ತವೆ. ಸಂಸ್ಕೃತ ಶಾಸನಗಳನ್ನು ಅನುಷ್ಟುಪ್ ಮತ್ತು ಇತರ ಛಂದಸ್ಸುಗಳಲ್ಲಿ ರಚಿಸಲಾಗಿದೆ. ಅವುಗಳ ಭಾಷೆ ನಿರ್ದಿಷ್ಟವಾದ ಕಾವ್ಯಶೈಲಿಯಲ್ಲಿದ್ದು ಉತ್ತಮ ಸಾಹಿತ್ಯಾಂಶಗಳಿಂದ ಕೂಡಿದೆ. ಸಾಮಾನ್ಯವಾಗಿ ಈ ಶಾಸನಗಳು ರಾಜರ ವಂಶಾವಳಿ, ಪ್ರಶಸ್ತಿ, ಭವ್ಯವಾದ ಸ್ಮಾರಕಗಳ ನಿರ್ಮಾಣ ಹಾಗೂ ಅನೇಕ ವಿಧವಾದ ದಾನಧರ್ಮಗಳನ್ನು ಕುರಿತು ತಿಳಿಸುತ್ತವೆ. ಅಲ್ಲದೆ ಭಾರತದ ಪುರಾಣ, ಇತಿಹಾಸ, ದರ್ಶನ, ರಾಜನೀತಿ ಮತ್ತು ಲಲಿತಕಲೆಗಳ ವಿಷಯವಾಗಿ ಬೆಳಕು ಚೆಲ್ಲುತ್ತವೆ. ಈ ಶಾಸನಗಳಲ್ಲಿ ಪ್ರತ್ಯೇಕವಾಗಿ ರಾಮಾಯಣ, ಭಾರತ, ಮನುಸ್ಮೃತಿ ಮುಂತಾದ ಗ್ರಂಥಗಳ ಉಲ್ಲೇಖವಿದೆ. ಶೈವ, ವೈಷ್ಣವ, ಬೌದ್ಧಧರ್ಮ ತತ್ತ್ವಗಳ, ವರ್ಣಾಶ್ರಮ ಧರ್ಮಗಳ, ಯಜ್ಞಯಾಗಾದಿಗಳ, ವಿದ್ಯಾಶ್ರಮಗಳ ಹಾಗೂ ವೈದ್ಯಶಾಲೆಗಳ ಬಗೆಗೂ ಇವು ವಿಶದವಾದ ಮಾಹಿತಿ ನೀಡುತ್ತವೆ.

ಸಂಸ್ಕೃತದ ಈ ಶಾಸನಗಳನ್ನು ರಚಿಸಿದವರು ನಿಸ್ಸಂದೇಹವಾಗಿ ಭಾರತದಿಂದ ಬಂದ ಪ್ರಸಿದ್ಧ ಪಂಡಿತರು ಮತ್ತು ಕಂಬುಜದ ಸ್ಥಳೀಯ ಪ್ರಬುದ್ಧ ವಿದ್ವಾಂಸರು. ಇವನ್ನು ಕಲ್ಲುಗಳ ಮೇಲೆ ಕೆತ್ತಿದವರೂ ಸಂಸ್ಕೃತತಜ್ಞರೆಂದು ವಿಮರ್ಶಕರು ಅಭಿಪ್ರಾಯಪಟ್ಟಿರುತ್ತಾರೆ. ಇವುಗಳಲ್ಲಿ ಕೆಲವು ಶಾಸನಗಳನ್ನು ಉದಾಹರಿಸಬಹುದಾಗಿದೆ: ಧರ್ಮಶಾಸ್ತ್ರ ಅರ್ಥಶಾಸ್ತ್ರಗಳಲ್ಲಿ ಪರಿಣತರಾದ ವಿದ್ವಾಂಸರನ್ನು ಭವವರ್ಮ ಸಲಹೆಗಾರರನ್ನಾಗಿ ಪಡೆದಿದ್ದನೆಂದು ಆಂಗ್ ಚುಮ್ನಿಕ್ ಶಾಸನ (6ನೆಯ ಶತಮಾನದ ಉತ್ತರಾರ್ಧ) ತಿಳಿಸುತ್ತದೆ. ವಿದ್ಯಾವಿಶೇಷನೆಂಬ ಬ್ರಾಹ್ಮಣನೊಬ್ಬ ವ್ಯಾಕರಣ. ನ್ಯಾಯ ಮತ್ತು ಬೌದ್ಧ ದರ್ಶನಗಳಲ್ಲಿ ಸುವಿಖ್ಯಾತನಾದ ಪಂಡಿತನೆಂದು ಸಾಂಬೊರ್ ಪ್ರಕುಕ್ ಶಾಸನ (627) ತಿಳಿಸುತ್ತದೆ. ದುರ್ಗಸ್ವಾಮಿ ಎಂಬ ಬ್ರಾಹ್ಮಣ, ರಾಜನಾದ ಈಶಾನವರ್ಮನ (616–35) ಮಗಳನ್ನು ವಿವಾಹವಾಗಿದ್ದನೆಂದೂ ತೈತ್ತಿರೀಯ ಶಾಖೆಯ ಮಂತ್ರ, ಬ್ರಾಹ್ಮಣ ಹಾಗೂ ಸೂತ್ರಗಳಲ್ಲಿ ನಿಷ್ಣಾತನಾಗಿದ್ದನೆಂದೂ ಸಾಂಬೊರ್ ಪ್ರಿಕುಕ್‌ನ ಮತ್ತೊಂದು ಶಾಸನ ವಿಶದೀಕರಿಸುತ್ತದೆ. ಸ್ಡಾಕ್‌ಕಾಕ್ ಥೊಯ್ ಶಾಸನ (1052) ದೀರ್ಘವಾದ ಸಂಸ್ಕೃತ ಶಾಸನಗಳಲ್ಲಿ ಒಂದಾಗಿದ್ದು ಬಹಳ ಮುಖ್ಯವಾದುದಾಗಿದೆ. ಇದು ದೇವರಾಜ ಧರ್ಮಪದ್ಧತಿಯನ್ನು ತಿಳಿಸುತ್ತದೆ ಮತ್ತು ಎರಡನೆಯ ಜಯವರ್ಮನಿಂದ (802–50) ಆಹ್ವಾನಿತನಾದ ಹಿರಣ್ಯದಾಮನೆಂಬ ಪುರೋಹಿತ ಬೋಧಿಸಿದ ತುಂಬುರು ತಂತ್ರದ ನಾಲ್ಕು ಮುಖಗಳಾದ ಶಿರಚ್ಛೇದ, ವಿನಾಶಿಕ, ಸಮ್ಮೋಹ ಮತ್ತು ನ್ಯಾಯೋತ್ತರಗಳೆಂಬ ನಾಲ್ಕು ಶಾಸ್ತ್ರಗಳನ್ನು ಪ್ರತಿಪಾದಿಸುತ್ತದೆ.

ಹೀಗೆ ಕಂಬುಜದ ಶಾಸನಗಳು ವೇದ, ಶಾಸ್ತ್ರ, ದರ್ಶನ, ತಂತ್ರ, ಕಾಮಸೂತ್ರ, ಅರ್ಥಶಾಸ್ತ್ರ, ಮನುಸ್ಮೃತಿ ಮಹಾಭಾಷ್ಯ ಮುಂತಾದವನ್ನು ವಿಪುಲವಾಗಿ ವಿವರಿಸುವುದಲ್ಲದೆ ಕಂಬುಜದಲ್ಲಿ ಭಾರತದ ಸಂಪ್ರದಾಯ, ಆಚಾರ ಮತ್ತು ವ್ಯವಹಾರಗಳ ಅಸ್ತಿತ್ವವನ್ನು ನಿರೂಪಿಸುತ್ತ ಭಾರತೀಯ ಸಂಸ್ಕೃತಿಯ ಅಚ್ಚಳಿಯದ ಪ್ರಭಾವವನ್ನು ಪ್ರತಿಫಲಿಸುತ್ತವೆ.

6 ಮತ್ತು 8ನೆಯ ಶತಮಾನಗಳ ಮಧ್ಯಕಾಲದ ಕಂಬುಜದ ಶಾಸನಗಳ ಲಿಪಿ, ಶೈಲಿ ಮುಂತಾದವನ್ನು ಸಮಕಾಲೀನವಾದ ದಕ್ಷಿಣ ಭಾರತದ ಪಲ್ಲವ ಹಾಗೂ ಬಾದಾಮಿ ಚಳುಕ್ಯರ ಶಾಸನಗಳೊಡನೆ ಹೋಲಿಸಬಹುದಾಗಿದೆ. ಉದಾ: ಕಂಬುಜದ ಕೋಡಿ ಆಂಗ್ ಚುಮ್ನಿಕ್ ಶಾಸನಕ್ಕೂ (629) ಭಾರತದ ಬಾದಾಮಿಯ ಮಂಗಳೀಶನ ಶಾಸನಕ್ಕೂ (578) ಪಟ್ಟದಕಲ್ಲಿನ ಎರಡನೆಯ ವಿಕ್ರಮಾದಿತ್ಯನ ಶಾಸನಗಳಿಗೂ (8ನೆಯ ಶತಮಾನದ ಮಧ್ಯಭಾಗ) ಲಿಪಿ, ಭಾಷೆ ಹಾಗೂ ವ್ಯಾಕರಣ ಪ್ರಕ್ರಿಯೆಗಳಲ್ಲಿ ಹೋಲಿಕೆಯಿದೆ.

6–9ನೆಯ ಶತಮಾನದ ಮಧ್ಯಕಾಲದ ಕಂಬುಜದ ಶಾಸನಗಳ ಲಿಪಿಗೂ ಅದೇ ಕಾಲದ ದಕ್ಷಿಣ ಭಾರತದ ಪಲ್ಲವ ಹಾಗೂ ವೇಂಗಿ (ಕೃಷ್ಣಾ ಗೋದಾವರಿಗಳ ಮಧ್ಯದೇಶ) ಲಿಪಿಗಳಿಗೂ ಹೆಚ್ಚಿನ ಅಂತರವಿಲ್ಲವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಯಶೋವರ್ಮನ 9ನೆಯ ಶತಮಾನದ ಶಾಸನಗಳ ಲಿಪಿ ಉತ್ತರ ಭಾರತದ ಆ ಕಾಲದ ನಾಗರೀ ಲಿಪಿಯನ್ನು ಹೋಲುತ್ತದೆಂಬುದು ಪಂಡಿತರ ಅಭಿಪ್ರಾಯ.

ಕಂಬುಜದ ಶಾಸನಗಳು 7ನೆಯ ಶತಮಾನದಿಂದ ಸಂಸ್ಕೃತ ಹಾಗೂ ಖ್ಮೆರ್ ಭಾಷೆಗಳಲ್ಲಿ ಏಕಕಾಲದಲ್ಲಿ ರಚಿತವಾದುವು. ಇದೇ ಕಾಲದಲ್ಲಿ ದಕ್ಷಿಣ ಭಾರತದಲ್ಲೂ ಶಾಸನಗಳನ್ನು ಸಂಸ್ಕೃತ ಹಾಗೂ ದೇಶಭಾಷೆಗಳಲ್ಲಿ ಬರೆಯಲಾಯಿತು ಎಂಬುದನ್ನು ಈ ಸಂದರ್ಭದಲ್ಲಿ ಗುರುತಿಸಬಹುದಾಗಿದೆ. ಸಮಾಜದ ಎಲ್ಲ ವರ್ಗಗಳ ಜನರಿಗೂ ಇವು ತಿಳಿಯಲೆಂದು ಬಹುಶಃ ಈ ರೀತಿ ದ್ವಿಭಾಷಾಪದ್ಧತಿಯನ್ನು ಅನುಸರಿಸಲಾಯಿತೆಂದು ಅಭಿಪ್ರಾಯಪಡಲಾಗಿದೆ. ಹೀಗೆ ರಚಿತವಾದ ಖ್ಮೆರ್ ಶಾಸನಗಳಲ್ಲಿ ಸಂಸ್ಕೃತ ಪದಗಳ ಪ್ರಭಾವವನ್ನು ಕಾಣಬಹುದಾಗಿದೆ. ಕಂಬುಜದ ಶಾಸನಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದ ಗೌರವ ಎಚ್.ಕೆರ್ನ್‌ನಿಗೆ ಸಲ್ಲುತ್ತದೆ. ಈತ ಜೂಲ್ಸ್ ಹಾರ್ಮಂಡನಿಂದ ತಯಾರಿಸಲಾದ ಶಾಸನಗಳ ಪಡಿಯಚ್ಚುಗಳನ್ನು ಓದಿ ಪರಿಷ್ಕರಿಸಿದ. ಆದರೆ ಪ್ರಪ್ರಥಮವಾಗಿ ಕ್ರಮಬದ್ಧವಾಗಿ ಕಂಬುಜದ ಶಾಸನಗಳನ್ನು ಸಂಗ್ರಹಿಸಿದವ ಎಂ.ಏಮೋಸರ್. ಎಂ.ಎ.ಬಾರ್ತ್ ಮತ್ತು ಎಂ.ಎ.ಬರ್ಗೇನ್ ಇವನ್ನು ಸಂಪಾದಿಸಿ ಎರಡು ಭಾಗಗಳಲ್ಲಿ ಪ್ರಕಟಿಸಿದರು.

ಕಂಬುಜದ ಖ್ಮೆರ್ ಭಾಷೆಯ ಶಾಸನಗಳನ್ನು ಎಂ.ಏಮೋನೀರ್ ಎಂಬ ವಿದ್ವಾಂಸನೆ ಕಾಂಬೋಜ್ ಎಂಬ ಉದ್ಗ್ರಂಥದಲ್ಲಿ ಸಂಗ್ರಹಿಸಿ ಮೂರು ಸಂಪುಟಗಳಲ್ಲಿ ಕ್ರಮವಾಗಿ 1900, 1901 ಮತ್ತು 1904ರಲ್ಲಿ ಪ್ರಕಾಶಪಡಿಸಿದೆ. 20ನೆಯ ಶತಮಾನದ ಪ್ರಾರಂಭದಿಂದ ಹಾನಾಯಿಯ ಎಕೋಲ್ ಫ್ರಾನ್ಸೇಸ್ ಸಂಸ್ಥೆ ಎಂ.ಫಿನೋ ಮತ್ತು ಜಿ.ಸೀಡಸ್ ಎಂಬ ಫ್ರೆಂಚ್ ವಿದ್ವಾಂಸರ ನೇತೃತ್ವದಲ್ಲಿ ಕಾಲಾನುಕ್ರಮದಲ್ಲಿ ಬೆಳಕಿಗೆ ಬಂದ ಹೊಸ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಾ ಬಂದಿದೆ.

ಹೀಗೆ ಸಂಗ್ರಹಿಸಿದ ಸಂಸ್ಕೃತ ಹಾಗೂ ಖ್ಮೆರ್ ಶಾಸನಗಳನ್ನು ಅತ್ಯಂತ ಸಮರ್ಪಕವಾದ ರೀತಿಯಲ್ಲಿ ಸಂಪಾದಿಸಿದ ಶ್ರೇಷ್ಠ ತಜ್ಞನಾದ ಜಿ.ಸೀಡೆಸ್, ಇವು ನಾಲ್ಕು ಸಂಪುಟಗಳಲ್ಲಿ ಕ್ರಮವಾಗಿ 1937, 1942, 1951 ಮತ್ತು 1952ರಲ್ಲಿ ಪ್ರಕಾಶಗೊಂಡಿವೆ.

ಭಾರತದ ಚರಿತ್ರಕಾರರಲ್ಲೊಬ್ಬನಾದ ಆರ್.ಸಿ. ಮಜುಂದಾರ್ ಕಂಬುಜದ ಶಾಸನಗಳು ಎಂಬ ಹೊತ್ತಿಗೆಯನ್ನು ಸಂಪಾದಿಸಿ ಟಿಪ್ಪಣಿಯೊಡನೆ 1953ರಲ್ಲಿ ದಿ ಏಷಿಯನ್ ಸೊಸೈಟಿ, ಕಲ್ಕತ್ತ ಅವರ ವತಿಯಿಂದ ಪ್ರಕಟಿಸಿದ್ದಾರೆ. (ಎಸ್.ವಿ.ಎಸ್.ಬಿ.)

**ಕಂಸ[1]** : ಯದುವಂಶದ ಉಗ್ರಸೇನನ ಮಗ. ಕೃಷ್ಣವೈರಿಗಳಲ್ಲಿ ಒಬ್ಬ ಇವನ ಜನನವೇ ಕಾಲನೇಮಿಯೆಂಬ ರಾಕ್ಷಸನ ಅಂಶದಿಂದ. ಹಾಗಾಗಿ ದುಷ್ಟಗುಣಗಳು ಮೊದಲಿನಿಂದಲೂ ಇವನಲ್ಲಿ ಬೆಳೆದುಬಂದುವು. ಪ್ರಾಯಕ್ಕೆ ಬಂದಮೇಲೆ ತಂಗಿಯನ್ನು ಸೆರೆಯಲ್ಲಿಟ್ಟು ತಾನೇ ಮಧುರೆಗೆ ರಾಜನಾದ. ಜರಾಸಂಧನ ಮಕ್ಕಳಾದ ಅಸ್ತಿ ಮತ್ತು ಪ್ರಾಸ್ತಿಯರು ಈತನ ಹೆಂಡಿರು. ತಂಗಿಯಾದ ದೇವಕಿಯನ್ನು ವಾಸುದೇವನಿಗೆ ಕೊಟ್ಟು ವಿಜೃಂಭಣೆಯಿಂದ ಮದುವೆ ಮಾಡಿದ. ಅವಳ ಎಂಟನೆಯ ಗರ್ಭದ ಮಗು ತನ್ನನ್ನು ಕೊಲ್ಲುತ್ತದೆ ಎಂದ ಅಶರೀರವಾಣಿಯ ಮಾತು ಕೇಳಿ ವ್ಯಗ್ರನಾದ. ತಂಗಿಯನ್ನೂ ಭಾವ ವಾಸುದೇವನನ್ನೂ ಸೆರೆಯಲ್ಲಿಟ್ಟ ಅವರ ಸಂತಾನವನ್ನು ಕುಡಿಯಲ್ಲೇ ಕತ್ತರಿಸ ಬಯಸಿ ದೇವಕಿಗೆ ಹುಟ್ಟಿದ ಆರು ಮಕ್ಕಳನ್ನೂ ಕೊಂದ. ದೇವತೆಗಳ ಹಂಚಿಕೆಯಂತೆ ಏಳನೆಯ ಗರ್ಭ ನಂದಗೋಪನ ಮಡದಿ ರೋಹಿಣಿಯ ಬಳಿ ಬಲರಾಮನಾಗಿ ಬೆಳೆಯಿತು. ಎಂಟನೆಯ ಗರ್ಭದಲ್ಲಿ ಶ್ರೀಕೃಷ್ಣ ಹುಟ್ಟಿದ. ಒಡನೆಯೇ ದೇವದೇವನ ನಿರ್ದೇಶನಾನುಸಾರ ವಾಸುದೇವ ಮಗುವನ್ನು ಗೋಪನ ಮನೆಗೆ ಕೊಂಡೊಯ್ದು ಅಲ್ಲಿ ಆಗತಾನೇ ಜನಿಸಿದ್ದ ಹೆಣ್ಣುಮಗುವನ್ನು ತಂದ. ಎಂಟನೆಯ ಮಗು ಹುಟ್ಟಿತೆಂದು ತಿಳಿದ ಕಂಸ ಅದನ್ನು ಕೊಲ್ಲಲು ಪ್ರಯತ್ನಿಸಿದ. ಆದರೆ ಮಾಯೆಯ ಅಂಶವಾದ ಆ ಮಗು ಕೈಯಿಂದ ಹಾರಿ ಆಕಾಶಕ್ಕೆ ಚಿಮ್ಮಿ ಅವನ ಮೃತ್ಯು ನಂದಗೋಕುಲದಲ್ಲಿ ಬೆಳೆಯುತ್ತಿರುವ ಅಂಶವನ್ನು ಘೋಷಿಸಿ ಮಾಯವಾಯಿತು.

ಕಂಸ ಕೃಷ್ಣನನ್ನು ಕೊಲ್ಲಲು ಪರಿಪರಿಯ ಯತ್ನಗಳನ್ನು ಮಾಡಿದ.ಪೂತನಿ, ಶಕಟ, ಧೇನುಕ, ಯಮಲಾರ್ಜುನ, ಕೇಶಿ, ತೃಣಾವರ್ತ ಮುಂತಾದ ರಾಕ್ಷಸರನ್ನು ಆ ಕೆಲಸಕ್ಕಾಗಿ ಕಳುಹಿಸಿದ. ಆದರೆ ಅವನ ದುಷ್ಟಯೋಚನೆಗಳೆಲ್ಲ ವಿಫಲವಾದುವು. ಅವರೆಲ್ಲ ಕೃಷ್ಣನಿಂದ ಹತರಾದರು. ಆಮೇಲೆ ಆ ಕ್ರೂರನನ್ನು ಕಳಿಸಿ ಬಿಲ್ಲುಹಬ್ಬದ ನೆಪದಲ್ಲಿ ಕೃಷ್ಣಬಲರಾಮರನ್ನು ಮಧುರೆಗೆ ಕರೆಸಿದ. ಅವರು ಸಂತೋಷದಿಂದ ಬಂದವರೇ ಕಂಸನ ದುಷ್ಟತನಕ್ಕೆ ಮಂಗಳ ಹಾಡಿದರು. ಚಾಣೂರ ಮುಷ್ಟಿಕರೆಂಬ ಮಲ್ಲರನ್ನೂ ಕುವಲಯಾಪೀಡವೆಂಬ ಆನೆಯನ್ನೂ ಕೊಂದರು. ಕೊನೆಗೆ ಕೃಷ್ಣನ ಮುಷ್ಟಿಯಲ್ಲಿ ಕಂಸ ಹತನಾದ.

ಕಂಸನ ವಿಚಾರ ಭಾಗವತ, ಹರಿವಂಶ, ಮಹಾಭಾರತಗಳಲ್ಲಿ ಬರುತ್ತದೆ. ಕನ್ನಡದ ಪ್ರಸಿದ್ಧಕವಿ ಚಾಟುವಿಠಲನಾಥನ ಷಟ್ಪದೀರೂಪದ ಭಾಗವತ ಕಾವ್ಯದಲ್ಲಿಯೂ ರುದ್ರಭಟ್ಟನ ಜಗನ್ನಾಥವಿಜಯದಲ್ಲೂ ಅವನ ಪಾತ್ರ ಚಿತ್ರಿತವಾಗಿದೆ. ಪ್ರಚಲಿತವಾದ ಈ ಕೃತಿಗಳಲ್ಲಿ ಬರುವ ಕಥೆಗೂ ಮೂಲ ಭಾಗವತದಲ್ಲಿ ಬರುವ ಕಥೆಗೂ ಇರುವ ಎರಡು ಮುಖ್ಯ ವ್ಯತ್ಯಾಸಗಳನ್ನು ನೋಡಬೇಕು. ಭಾಗವತದಲ್ಲಿ ಕಂಸ ತಂಗಿಯ ಮೇಲೆ ತುಂಬ ಪ್ರೀತಿವಿಶ್ವಾಸಗಳುಳ್ಳವನು. ಅಶರೀರವಾಣಿಯ ಮಾತು ಕೇಳಿ ಕುಪಿತನಾಗಿ ತಂಗಿಯನ್ನು ಕೊಲ್ಲಲು ಹೋಗುತ್ತಾನೆ, ನಿಜ. ಆದರೆ ದೇವಕಿಯ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳನ್ನೆಲ್ಲ ಅವನಿಗೆ ಒಪ್ಪಿಸಿಬಿಡುವುದಾಗಿ ವಸುದೇವನೇ ತಿಳಿಸಿದಾಗ ಅದಕ್ಕೆ ಒಪ್ಪಿ ಅವರನ್ನು ಬಂಧನದಲ್ಲಿಡುತ್ತಾನೆ. ಮೊದಲ ಮಗು ಹುಟ್ಟಿದೊಡನೆ ವಸುದೇವ ಅದನ್ನು ತಂದು ಕಂಸನ ಕೈಗಿತ್ತಾಗ ಅವನಿಗೆ ಸಂತೋಷವಾಗುತ್ತದೆ. ಆಡಿದ ಮಾತನ್ನು ಉಳಿಸಿಕೊಂಡ ಸತ್ಯಸಂಧ ನೀನು ಎಂದು ವಸುದೇವನನ್ನು ಬಾಯಿತುಂಬ ಹೊಗಳಿ ನಿಮ್ಮ ಎಂಟನೆಯ ಮಗು ನನ್ನ ಮೃತ್ಯುವಾದ್ದರಿಂದ ಅನ್ಯಾಯವಾಗಿ ಇವುಗಳನ್ನು ಏಕೆ ಕೊಲ್ಲಲಿ ಎಂದು ಹಿಂದಕ್ಕೆ ಕೊಟ್ಟುಬಿಡುತ್ತಾನೆ. ಹಾಗೆಯೇ ಎಂಟನೆಯ ಶಿಶು ಆಕಾಶಕ್ಕೆ ಹಾರಿ ನಿನ್ನ ಶತ್ರು ಬೇರೆಕಡೆ ಬೆಳೆಯುತ್ತಿದ್ದಾನೆ ಎಂದು ತಿಳಿಸಿದಾಗಲೂ ಕಂಸ ಕ್ಷಣಕಾಲ ದಿಗ್ಭ್ರಮೆಗೊಳ್ಳುತ್ತಾನೆ.

ವಿಧಿಯ ಕೈವಾಡ ಅವನಿಗೆ ಅಚ್ಚರಿಯುಂಟುಮಾಡುತ್ತದೆ. ಒಡನೆಯೇ ವಿವೇಕ ಮುಂದಾಗಿ ಅವನು ವಸುದೇವನನ್ನು ಕುರಿತು ಇನ್ನು ನಿಮ್ಮನ್ನು ಹಿಂಸಿಸಿ ಉಪಯೋಗವೇನು, ಸ್ವಾರ್ಥದಿಂದ ಅವಿವೇಕಿಯಾಗಿ ಸ್ನೇಹಬಾಂಧವ್ಯಗಳನ್ನು ತ್ಯಜಿಸಿ ನಾನು ಪಾಪಿಯಾದೆ. ಸ್ವಂತ ತಂಗಿಯನ್ನೇ ಬಳಲಿಸಿದೆ. ನೀವು ನನ್ನನ್ನು ಕ್ಷಮಿಸಿರಿ ಎಂದು ಪಶ್ಚಾತ್ತಾಪದಿಂದ ಕೇಳಿಕೊಳ್ಳುತ್ತಾನೆ. ಅವರನ್ನು ಸೆರೆಯಿಂದ ಬಿಡಿಸುತ್ತಾನೆ.

ಹೀಗೆ ಎರಡು ಬಗೆಯ ಕಂಸನ ಚಿತ್ರ ನಮಗೆ ದೊರೆಯುತ್ತದೆ. ವಾಸ್ತವವಾಗಿ ಕಂಸ ಖಳನಲ್ಲ. ಆದರೆ ಮೃತ್ಯುಭೀತಿ, ಸ್ವಾರ್ಥ ಅವನನ್ನು ದುಷ್ಟತನಕ್ಕೆ ಚೋದಿಸುತ್ತದೆ. ವಿಧಿವಶನಾಗಿ, ದುರ್ಮಂತ್ರಿಗಳ ಪ್ರಚೋದನೆಗೆ ಸಿಕ್ಕಿ ಕಂಸ ದುಷ್ಟನಾಗುತ್ತಾನೆ. (ಆರ್.ಎಲ್.ಎ.)

**ಕಂಸ²** : ಒಂದು ವೃತ್ತದ ಪರಿಧಿಯನ್ನು ಅದರ ಎರಡು ನಿರ್ದಿಷ್ಟ ತ್ರಿಜ್ಯಗಳಿಂದ ವಿಭಾಗಿಸಿದಾಗ ದೊರೆಯುವ ಪ್ರತಿಯೊಂದು ವಕ್ರರೇಖೆಗೂ (ಎಂದರೆ ಪರಿಧಿ ಖಂಡಕ್ಕೂ) ಈ ಹೆಸರಿದೆ (ಆರ್ಕ್), ವೃತ್ತ ಚಾಪ ಪರ್ಯಾಯನಾಮ. ಚಿತ್ರದಲ್ಲಿ OA,OB ತ್ರಿಜ್ಯಗಳು ($\angle AOB=\theta$) APB ಮತ್ತು AQB ಎನ್ನುವ ಎರಡು ಕಂಸಗಳನ್ನು ರಚಿಸುತ್ತವೆ. ಇವುಗಳಲ್ಲಿ ಕಿರಿಯದರ (APB) ಹೆಸರು ಹ್ರಸ್ವ ಕಂಸ (ಮೈನರ್ ಆರ್ಕ್) ಮತ್ತು ಹಿರಿಯದರ ಹೆಸರು (AQB) ದೀರ್ಘ ಕಂಸ (ಮೇಜರ್ ಆರ್ಕ್). $\theta$ ಕೋನವನ್ನು ರೇಡಿಯನ್ ಮಾನದಲ್ಲಿ ಅಳೆದಾಗ ಕಂಸ APBಯ ಉದ್ದ $a\theta$ ಆಗುವುದು $a$ಯು ವೃತ್ತದ ತ್ರಿಜ್ಯ.



ಚಿತ್ರ 1

ಕಾರ್ಟೀಸಿಯನ್ ನಿರ್ದೇಶಕ ವ್ಯವಸ್ಥೆಯಲ್ಲಿ ದತ್ತ ವಕ್ರರೇಖೆಯ ನಿರ್ದಿಷ್ಟ ಚಾಪದ ಉದ್ದವನ್ನು ಕಂಡುಹಿಡಿಯಲು ಎರಡು ಸೂತ್ರಗಳಿವೆ.




ಚಿತ್ರ : 2 ಚಾಪ AB = $$\int_{x=a}^{b}\sqrt{1+\left(\frac{dy}{dx}\right)^2}\,dx$$




ಚಿತ್ರ : 3 ಚಾಪ AB = $$\int_{y=l}^{m}\sqrt{1+\left(\frac{dy}{dx}\right)^2}\,dy$$




ಚಿತ್ರ : 4 ಧ್ರುವೀಯ ನಿರ್ದೇಶಕಗಳಲ್ಲಿ ಚಾಪ EF $$=\int_{\theta=\alpha}^{\beta}\sqrt{r^2+\left(\frac{dr}{d\theta}\right)^2}\,d\theta$$

*

**ಕಂಸಾಳೆ** : ದೇವರ ಗುಡ್ಡರು ಎಂಬ ಒಂದು ವರ್ಗದ ಜನಪದ ಗಾಯಕರು ಬಳಸುವ ಕಂಚಿನ ತಾಳಗಳಿವು. ಕಾಂಸ್ಯತಾಲ ಎಂಬುದರ ತದ್ಭವ ರೂಪವೇ ಕಂಸಾಳೆ. ಸಾಧಾರಣ ತಾಳಗಳಿಗಿಂತ ಕಂಸಾಳೆ ಗಾತ್ರದಲ್ಲಿ ದೊಡ್ಡದು; ಆಕೃತಿಯಲ್ಲಿ ವಿಶಿಷ್ಟವಾದುದು. ಅಂಗೈ ಅಗಲದ ಚಕ್ರಾಕಾರವಾದ ಬಟ್ಟಲು. ಚಿಕ್ಕ ಜಾಗಟೆಯಂತಿರುವ ಮಟ್ಟಸವಾದ ಮೇಲುತಾಳ, ಮೇಲು ತಾಳಕ್ಕೆ ಸೇರಿದಂತೆ ಹಿಡಿದುಕೊಳ್ಳಲು ಮಾಡಿಕೊಂಡ ಗೊಂಡೇವದ ಕಲಾತ್ಮಕ ಹುರಿ–ಇವು ಕಂಸಾಳೆಯ ಮುಖ್ಯ ಭಾಗಗಳು. ಬಟ್ಟಲನ್ನು ಮೇಲು ಮುಖವಾಗಿ


ಕಂಸಾಳೆ ತಾಳಗಳು

ಅಂಗೈ ಮೇಲೆ ಇರಿಸಿಕೊಂಡು ಬಲಗೈಯಲ್ಲಿ ಹಿಡಿದು ಮೇಲು ತಾಳವನ್ನು ಅದರ ಮೇಲೆ ಕುಟ್ಟುವುದರಿಂದ ಕಣಿಕಣಿನಾದ ಉಂಟಾಗುತ್ತದೆ. ಈ ನಾದದ ಹಿನ್ನೆಲೆಯಲ್ಲಿ ಗುಡ್ಡರು ಅನೇಕ ಗೀತೆಗಳನ್ನೂ ಲಾವಣಿಗಳನ್ನೂ ಹಾಡುತ್ತಾರೆ. ಒಂದು ಆರಾಧ್ಯದೈವದ ಪರಂಪರೆಗೆ ಈ ವಾದ್ಯ ಸೇರುವುದರಿಂದ ವಿಶಿಷ್ಟವರ್ಗದ ಭಕ್ತರು ಇದನ್ನು ಬಳಸುವುದರಿಂದ ಇದೊಂದು ಧಾರ್ಮಿಕವಾದ್ಯವೆನಿಸಿದೆ. ಜನಪದ ಕಲಾವಿದರು ಮಾತ್ರ ಇದನ್ನು ಬಳಸುವುದರಿಂದ ಇದೊಂದು ಜನಪದ ವಾದ್ಯವೂ ಹೌದು. ವೃತ್ತಿಗಾಯಕರು ಬಳಸುವ ವಾದ್ಯಗಳಲ್ಲೆಲ್ಲ ಭಿಕ್ಷಾಪಾತ್ರೆಯಾಗಿಯೂ ಬಳಸಲ್ಪಡುವ ಏಕಮಾತ್ರ ಸಾಧನವಿದು. ಗುಡ್ಡರು ಭಿಕ್ಷೆಯನ್ನು ಸ್ವೀಕರಿಸುವಾಗ ಕಂಸಾಳೆಯ ಬಟ್ಟಲನ್ನು ಮಾತ್ರ ಮುಂದೆ ಒಡ್ಡಿ ಅನಂತರ ಜೋಳಿಗೆಗೆ ಸುರಿದುಕೊಳ್ಳುತ್ತಾರೆ. ಇದೊಂದು ಪವಿತ್ರ ಸಾಧನವಾದುದರಿಂದ, ಅರ್ಪಿಸುವ ಕಾಣಿಕೆ ಮಲೆಯ ಮಾದಯ್ಯನಿಗೆ ಸಮರ್ಪಿತವಾದಂತೆಯೇ ಎಂಬ ಭಾವನೆ ಗುಡ್ಡನಿಗೂ ದಾನಿಗೂ ಇರುತ್ತದೆ. ಕಂಸಾಳೆಯ ಮಹಿಮೆ ದೊಡ್ಡದು ಎಂದು ಭಾವಿಸುವ ಗುಡ್ಡ ಅದನ್ನು ಪೂಜಿಸುತ್ತಾನೆ. ಕೈಗೆತ್ತಿಕೊಳ್ಳುವ ಮುನ್ನ ಶರಣುಮಾಡಿಕೊಳ್ಳುತ್ತಾನೆ. ಮಾದಯ್ಯನ ಕೋಲನ್ನು ಕಂಕುಳಲ್ಲಿಟ್ಟು, ಕೈಯಲ್ಲಿ ಕಂಸಾಳೆ ಹಿಡಿದು, ಹಸುಬೆಯನ್ನು ಹೆಗಲಿಗೆ ಹಾಕಿ, ಬುತ್ತಿಯಗಂಟನ್ನು ತಲೆಯ ಮೇಲೆ ಹೊತ್ತು ಯಾತ್ರೆ ಹೊರಡುತ್ತಾನೆ, ಗುಡ್ಡ ಮಾದಯ್ಯನ

ಗಿರಿಗೆ. ಜೊತೆಯಲ್ಲಿ ತನ್ನ ಮರಿಗುಡ್ಡರನ್ನೂ ಜೊತೆಗಾರರನ್ನೂ ಕರೆದುಕೊಳ್ಳುತ್ತಾನೆ. ಶಿವರಾತ್ರಿ ನವರಾತ್ರಿಗಳಲ್ಲಿ ಮಾದಯ್ಯನ ಗಿರಿಗೆ ಯಾತ್ರೆ ಹೊರಡುವ ಭಕ್ತರು ಅನೇಕ ತಂಡಗಳಾಗಿ ಒಂದೊಂದು ತಂಡದವರೂ ಇಂಥ ಗುಡ್ಡರ ಪುಟ್ಟ ಪರಿವಾರವನ್ನು ಮುಂದೆ ಬಿಟ್ಟುಕೊಂಡು ಹೊರಡುತ್ತಾರೆ. ದಟ್ಟವಾದ ಅರಣ್ಯ ಪ್ರದೇಶದಲ್ಲಿ ಏಳುಮಲೆಗಳಿಗೆ ಸಾಗಬೇಕಾಗಿದ್ದ ಈ ಭಕ್ತರಿಗೆ ಕಂಸಾಳೆಯ ಕಣಿಕಣಿನಾದ ಒಂದು ರೀತಿಯ ರಕ್ಷೆಯೂ ಆಗಿದ್ದಿರಬಹುದು. ನಾಲ್ಕಾರು ಕಂಸಾಳೆಗಳ ನಾದ ಕೂಡಿದಾಗ ಕಾಡಿನ ದುಷ್ಟಪ್ರಾಣಿಗಳು ಅಂಜಿ ದೂರ ಸರಿಯುವಷ್ಟು ದೊಡ್ಡನಾದ ಶಬ್ದ ಕೇಳಿಬರುತ್ತದೆ. ಕಂಸಾಳೆಯ ನಾದ, ಮಾದಯ್ಯನನ್ನು ಕುರಿತ ಜೈಕಾರ, ತಮಟೆಗಳ ಸದ್ದು ಕಾಡನ್ನು ಭೇದಿಸಿಕೊಂಡು ಸಾಗುತ್ತಿದ್ದ ಯಾತ್ರಾರ್ಥಿಗಳ ಅಂತರಂಗದಲ್ಲಿ ಭಕ್ತಿಯನ್ನೂ ಧೈರ್ಯವನ್ನೂ ಸೋಲದೆ ಮುಂದೆ ಸಾಗುವ ಉತ್ಸಾಹವನ್ನೂ ತುಂಬುತ್ತವೆ. ಅಲ್ಲದೆ ಭಕ್ತರು ತಾವು ತಂಗುವ ಪ್ರದೇಶಗಳಲ್ಲಿ ರಾತ್ರಿಯೆಲ್ಲ ಮಾದಯ್ಯನ ಪುಣ್ಯ ಕಥೆಗಳನ್ನು ಹಾಡುತ್ತ ಕಂಸಾಳೆಯನ್ನು ಬಾರಿಸುತ್ತ ಎಚ್ಚರವಾಗಿರುತ್ತಾರೆ. ಮಾದಯ್ಯನ ಜಾತ್ರೆಯಲ್ಲಂತೂ ಎಲ್ಲ ಕಡೆಯ ಕಂಸಾಳೆಯ ಗುಡ್ಡರೂ ಸೇರಿ ಅವರದೇ ಒಂದು ದೊಡ್ಡ ಕೂಟವಾಗುತ್ತದೆ. ಎಲ್ಲೆಂದರಲ್ಲಿ ಕಂಸಾಳೆಯ ಮೇಳಗಳು ನಡೆಯುತ್ತಿರುತ್ತವೆ.

ಭಿಕ್ಷಾಟನೆ ಹಾಗೂ ಯಾತ್ರೆಗಳ ಸಂದರ್ಭದಲ್ಲಿ ಬಿಡಿಹಾಡುಗಳನ್ನು ಹೇಳಿಕೊಳ್ಳಲು ಮಾತ್ರವಲ್ಲದೆ ವಿಶೇಷ ಸಂದರ್ಭಗಳಲ್ಲಿ, ಹಬ್ಬ, ಆಚರಣೆಗಳಲ್ಲಿ ಮೇಳವನ್ನು ನಡೆಸಲೂ ಬೀಸು ಕಂಸಾಳೆಯ ನೃತ್ಯದಲ್ಲಿ ಹಾಡಲೂ ಕುಣಿಯಲೂ ಕಂಸಾಳೆಯನ್ನು ಬಳಸುತ್ತಾರೆ. ಗುಡ್ಡರು ಹಾಡುವ ಗೀತೆಗಳು, ತಾಳದ ಗತ್ತಿಗೆ ತಕ್ಕಂತೆ ವಿವಿಧ ಮಟ್ಟುಗಳಲ್ಲಿರುತ್ತವೆ. ಕಂಸಾಳೆಯ ನಾದವೈಖರಿಗೆ ತಕ್ಕಂತೆ, ಶಕ್ತಿವತ್ತಾದ, ಲಯಬದ್ಧವಾದ ರಚನೆಗಳವು.

ಕಂಸಾಳೆ ಪದ ಹಾಡುವವ

ಕೂಗೊ ಕೂಗೊ ಮಾದೇವನ
ಕೂಗಯ್ಯ ದುಂಡು ಮಾದೇವನ
ಕೂಗಿದರೆ ಕುಣಿಯುತ್ತ ಬರುವನು ಮಾದೇವ
ಕೂಗಯ್ಯ ಮುದ್ದು ಮಾದೇವನ
ಮಗ್ಗು ಮಗ್ಗುಲ ಗಿರಿಗೆ
ಮೊಗ್ಗು ಬಂದವು ನೋಡಿರಿ
ಮಾದಯ್ಯ ಗಿರಿಗೆ
ಹೂವು ಬಂದವು ನೋಡಿರಿ

ಕಂಸಾಳೆ ಮೇಳದಲ್ಲಿ ಏಕತಾರಿ, ದಮ್ಮಡಿಗಳನ್ನು ಹಿಮ್ಮೇಳದವರು ಬಳಸಿದರೂ ಮುಖ್ಯಗುಡ್ಡ, ಮುಮ್ಮೇಳಗಾರಿ ಕಂಸಾಳೆಯನ್ನೇ ಹಿಡಿಯಬೇಕು. ಇದು ಕುಳಿತು ಮಾಡುವ ಮೇಳ, ನಡುವೆ ಕಂಸಾಳೆ ಹಿಡಿದು ಮುಖ್ಯ ಹಾಡುಗಾರ ಕುಳಿತಿರುತ್ತಾನೆ. ಅವನ ಅಕ್ಕ ಪಕ್ಕದಲ್ಲಿ ಹಿಮ್ಮೇಳದ ಗುಡ್ಡರು ಕುಳಿತಿರುತ್ತಾರೆ. ಕಂಸಾಳೆಯ ಗತ್ತಿಗೆ ತಕ್ಕಂತೆಯೇ ತಾಳಕ್ಕೆ ಅನುಗುಣವಾಗಿಯೇ ಕಥೆಯನ್ನು ಪದ್ಯ ಗದ್ಯಗಳಲ್ಲಿ ನಿರೂಪಿಸಲಾಗುತ್ತದೆ.

ಮಲೆಯ ಮಾದೇವ ಬರುವ ಚೆಂದವ
ನೋಡಿ ನಮ್ಮ ಶಿವನ

ಇದು ಪಲ್ಲವಿ. ಕಥೆಯನ್ನು ಒಂದು ವಿಶಿಷ್ಟವಾದ ಪದ್ಯಗಂಧಿಯಾದ ಗದ್ಯದಲ್ಲಿ ನಡೆಸಿಕೊಂಡು ಹೋಗಲಾಗುತ್ತದೆ. ಒಂದೊಂದು ಪುಟ್ಟ ಪುಟ್ಟ ಪಾದದ ಅಂತ್ಯದಲ್ಲಿ ಕಂಸಾಳೆಯನ್ನು ಬಾರಿಸುತ್ತ ಕಥಾನಿರೂಪಣೆಗೆ ಚೈತನ್ಯವನ್ನು ತುಂಬಿಕೊಳ್ಳಲಾಗುತ್ತದೆ. ಹೆಜ್ಜೆಹೆಜ್ಜೆಗೂ ಕಂಸಾಳೆಯ ಮಿಡಿತ ಅದರ ಜೊತೆಯಲ್ಲೆ ಸಾಗುವ ವಿಸ್ತಾರ ಗದ್ಯಕಥನ,

ಹರ ಹರ ನಮ್ಮಪ್ಪಾಜಿ ಮಾಯಕಾರ ಮಾದೇವ
ಆ ಬಂಕಾಪುರಿ ಶ್ರವಣ ದೊರೆ ಮೇಲೆ ।
ದೃಷ್ಟಿ ಮಡಗುತಾರೆ ಮಾದೇವ ॥
ಮಲೆಯ ಮಾದೇವ ಬರುವ ಚೆಂದವ
ಆ ಶ್ರವಣದೊರೆ ಅಂದರೆ ಸಾಮಾನ್ಯವಲ್ಲ ।
ಈ ಭೂಮಿ ಭೂಮಂಡಲವನ್ನೆಲ್ಲ ಕೈಕೆಳಗಿಟ್ಟುಕೊಂಡಿದ್ದಾನೆ ।
ಸುರ ಮುನ್ನೂರು ಕೋಟಿ ದೇವ ಮಾನ್ಯವರ ತಂದು ।
ಕೈಸೆರೆ ಹಿಡಿದುಕೊಂಡಿದ್ದಾನೆ ।
ಕಂಗಳ್ಳಿ ಮಲ್ಲಿಕಾರ್ಜುನ ಪಟೇಲನಂತೆ ।
ಮುಡುಕುತೊರೆ ಮಲ್ಲಣ್ಣ ಚಾಕರನಂತೆ ।
ಕಂಕುಳಲ್ಲಿ ದೊಣ್ಣೆ ಕೊಟ್ಟಿದ್ದಾನೆ ।
ತಲೆದಿಂಬು ಮಾಡಿಕೊಂಡವನೆ ಶಿವನೆ
ಶನಿದೇವರ ಹಿಡಿದು ಮಕ್ಕಡೆ ಕೆಡವಿಕೊಂಡು
ನಾಲ್ಕುಕಾಲು ಮಂಚಮಾಡಿಕೊಂಡು
ತನ್ನ ಪಾದವನ್ನು ಅವನ ಬೆನ್ನ ಮೇಲೆ ಇಟ್ಟುಕೊಂಡು ಕೂತವನೆ ಶಿವನೆ
ಮಲಯಮಾದೇವ ಬರುವ ಚೆಂದವ ನೋಡಿ ನಮ್ಮ ಶಿವನಾ ॥

ಪದ್ಯ, ವಚನಗಳೆರಡಕ್ಕೂ ಕಂಸಾಳೆಯ ನಾದ ಒಗ್ಗಿಕೊಳ್ಳುತ್ತದೆ. ಅದರ ಗುಂಗಿನಲ್ಲಿಯೇ ಕಥೆ ಸಾಗುತ್ತದೆ. ಪಿರಿಯಾಪಟ್ಟಣದ ಲಾವಣಿ, ಸಾರಂಗಧರ, ಚೆನ್ನಿಗರಾಮ, ಘನಪತಿರಾಯ–ಮುಂತಾದ ವಿಸ್ತಾರವಾದ ಲೌಕಿಕ ಕಥೆಗಳನ್ನು ಗುಡ್ಡರು ಕಂಸಾಳೆಯ ಹಿನ್ನೆಲೆಯಲ್ಲೇ ಹಾಡುತ್ತಾರೆ. ಅವೆಲ್ಲ ಬಹುಮಟ್ಟಿಗೆ ಪದ್ಯಕಾವ್ಯಗಳೇ ಆದರೂ ನಡುನಡುವೆ ಗದ್ಯದಲ್ಲಿ ವಿವರಣೆ ಬರುತ್ತದೆ. ಪಿರಿಯಾಪಟ್ಟಣದ ಲಾವಣಿ ಮಾತ್ರ ವಿಶಿಷ್ಟವಾದ ಬಂಧುರವಾದ ಪದ್ಯಕಾವ್ಯ. ಕಂಸಾಳೆಯ ಗತ್ತಿಗೇ ರಚಿಸಿದಂತೆ ತೋರುತ್ತದೆ, ಆ ಲಾವಣಿ.

ತಂದನಾನಿ ತಂದಾನಿ ತಾನನ
—ತಂದೇಽನಾನ
ತಂದನಾನಿ ತಂದಾನಿ ತಾನನ
ಕೊಡಗು ಮಲೆಯಾಳ ರಾಜ್ಯಕೆ
ಗಡಿಯಾವುದು ಎಂದರೆ
ಬೆಡಗಿನಂಥ ಪಿರಿಯಾಪಟ್ಟಣ
ಬೆಡಗಿನಂಥ ಪಿರಿಯಾಪಟ್ಟಣಕೆ
ದೊರೆಯಾರು ಎಂದರೆ
—ಹೆಚ್ಚಿನದೊರೆ
ವೀರರಾಜು ದೊರೆರಾಯ

ಬೀಸು ಕಂಸಾಳೆನೃತ್ಯ ಕರ್ನಾಟಕದ ಜನಪದ ನೃತ್ಯಗಳಲ್ಲಿ ಅತ್ಯಪೂರ್ವವಾದುದು. ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ ಮುದ್ದು ಲಿಂಗ ಬಾ । ನಮ್ಮ ಮುದ್ದು ಮಾದಯ್ಯನ ಲಿಂಗ ಬಾ ಎಂದು ಹಾಡುತ್ತಾರೆ. ಒಬ್ಬ ಗುಡ್ಡ ಕಂಸಾಳೆಯನ್ನು ಆ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತ ಕುಣಿಯುತ್ತಾನೆ. ತಲೆಯಮೇಲೆ ಬೆನ್ನಹಿಂದೆ, ಕಾಲಕೆಳಗೆ, ಕುಳಿತು, ನಿಂತು, ಬಾಗಿಬಳುಕಿ, ತೀವ್ರಗತಿಯಲ್ಲಿ ನರ್ತಿಸುವ ಬಗೆ ಆಶ್ಚರ್ಯಕರವಾದುದು, ಅದ್ಭುತವಾದುದು, ಮನೋಜ್ಞವಾದದ್ದು. ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲೆತು ನರ್ತಿಸುವುದೂ ಉಂಟು. ಒಬ್ಬರ ಕಂಸಾಳೆಗೆ ಇನ್ನೊಬ್ಬರ ಕಂಸಾಳೆಯನ್ನು ಕುಟ್ಟುತ್ತ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ.

ಯಾತ್ರೆಯಲ್ಲಿ ಭಿಕ್ಷಾಟನೆಯಲ್ಲಿ, ಹಾಡುಗಾರಿಕೆಯಲ್ಲಿ ನೃತ್ಯದಲ್ಲಿ–ಹೀಗೆ ಹಲವು ಬಗೆಗಳಲ್ಲಿ ಬಳಕೆಯಾಗುವ ಕಂಸಾಳೆ ಇತರ ಜನಪದ ವಾದ್ಯಗಳಿಗಿಂತ ವ್ಯಾಪಕವಾದ ಬಳಕೆಯನ್ನು ಪಡೆದಿದೆ. ಇದನ್ನು ಬಳಸುವ ಕಲಾವಿದರು ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ವಿಶೇಷವಾಗಿದ್ದಾರೆ. ಕಂಚಿನ ತಾಳಗಳಿಗೆ ಬದಲಾಗಿ ಹಿತ್ತಾಳೆಯ ತಾಳಗಳನ್ನು ಕೆಲವರು ಬಳಸುವುದುಂಟು. ಮೈಸೂರು ನಗರದಲ್ಲಿ ಕಂಸಾಳೆಗಳನ್ನು ಬಾರಿಸುವ ಕುಶಲಿಗಳಿದ್ದಾರೆ. ಗೊಂಡೇವವನ್ನು ಆಯಾ ಕಲಾವಿದರೇ ಮಾಡಿಕೊಳ್ಳುತ್ತಾರೆ. ಅವುಗಳ ಮಾರಾಟವೂ ಜಾತ್ರೆಗಳಲ್ಲಿ ನಡೆಯುವುದುಂಟು. ಕಂಸಾಳೆ, ಕರ್ನಾಟಕದ ಈ ಜಿಲ್ಲೆಗಳಲ್ಲಿ ಹೊರತು ಇನ್ನೆಲ್ಲಿಯೂ ಕಂಡುಬಂದಿಲ್ಲ. (ಜಿ.ಎಸ್.ಪಿ.)

**ಕಂಸಾಳೆ ಮಹಾದೇವಯ್ಯ :** 1920–96. ಪ್ರಸಿದ್ಧ ಜನಪದ ಕಲಾವಿದ. ಇವರ ಮೂಲ ಹೆಸರು ಬಡಗಲಹುಂಡಿ ಮಹಾದೇವಯ್ಯ. ಕಂಸಾಳೆ ಜನಪದ ಕಲೆಗಾಗಿ ತಮ್ಮ ಬದುಕನ್ನು ಅರ್ಪಿಸಿಕೊಂಡದ್ದರಿಂದ ಇವರು ಕಂಸಾಳೆ ಮಹದೇವಯ್ಯ ಎಂದೇ ಪ್ರಸಿದ್ಧರು. ಮೂಲತಃ ಇವರು ಮೈಸೂರು ತಾಲ್ಲೂಕಿನ ವರಕೋಡು ಹೋಬಳಿಯ ಬಡಗಲಹುಂಡಿಯವರು. ಸು.1920ರಲ್ಲಿ ಜನಿಸಿದರು. ಕಂಸಾಳೆ ಕಲೆ ಇವರಿಗೆ ವಂಶಪಾರಂಪರ್ಯವಾಗಿ ಬಂದ ಆಸ್ತಿ. ಇವರ ತಂದೆ ನಂಜಯ್ಯನವರೂ ಕಂಸಾಳೆ ಕಲಾವಿದರಾಗಿದ್ದು ಮೈಸೂರಿಗೆ ಬಂದು ಹಾಲು ಮಾರುವ ವೃತ್ತಿಯಲ್ಲಿ ತಮ್ಮನ್ನುತೊಡಗಿಸಿಕೊಂಡಿದ್ದರು. ಬಾಲ್ಯದಲ್ಲಿ ಈ ಕಲೆಯನ್ನು ತಂದೆಯಿಂದ ಕಲಿಯಲು ಇವರು ಇಷ್ಟಪಡಲಿಲ್ಲ. ಇವರ ತುಂಟಾಟ ಸಹಿಸದ ತಂದೆ ಕಂಬಕ್ಕೆ ಕಟ್ಟಿ ಹಾಕುತ್ತಿದ್ದುದುಂಟು. ಅಂಥ ಒಂದು ಸಂದರ್ಭದಲ್ಲಿ ಮನೆ ಮುಂದಿನ ದಾರಿಯಲ್ಲಿಸಾಗುತ್ತಿದ್ದ ನೀಲಗಾರ ಜೋಗಿಯೊಬ್ಬರು ಈ ಬಾಲಕನನ್ನು ಕಂಬದಿಂದ ಬಿಡಿಸಿದರಂತೆ. ಆ ನೀಲಗಾರ ಜೋಗಿಯಿಂದ ಕಂಸಾಳೆ ಕಲಿತ ಮಹಾದೇವಯ್ಯ ಹತ್ತು ವರ್ಷಗಳ ತರುವಾಯ ಪುನಃ ಮನೆಯವರಿಗೆ ಕಾಣಿಸಿಕೊಂಡದ್ದು ನಂಜನಗೂಡಿನ ಜಾತ್ರೆಯಲ್ಲಿ. ಮನೆಬಿಟ್ಟು ಹೋದಾಗಿನಿಂದ ಅವಿರತವಾಗಿ ಈ ಕಲೆಯನ್ನು ಕಲಿತು ಸ್ವಂತ ತಂಡವೊಂದನ್ನು ಅಷ್ಟು ಹೊತ್ತಿಗೆ ಕಟ್ಟಿಕೊಂಡಿದ್ದರು.

ಮಹದೇಶ್ವರನ ಒಕ್ಕಲೆಂದೇ ಕರೆಯಲಾಗುವ ದಕ್ಷಿಣ ಕರ್ನಾಟಕದ ಈ ಜನ ದೀಪಾವಳಿಯಂಥ ಹಬ್ಬಗಳ ಸಂದರ್ಭದಲ್ಲಿ ದೇವರ ಹೆಸರಿನಲ್ಲಿ ಮಹದೇಶ್ವರನ ಕಾವ್ಯವನ್ನು ಹಾಡುತ್ತ ಕಂಸಾಳೆ ಕುಣಿಯುತ್ತ ಬೆಟ್ಟಕ್ಕೆ ಹೋಗುವುದೊಂದು ವಾಡಿಕೆ. ಮಹಾದೇವಯ್ಯನವರು ಈ ಪರಂಪರೆಗೆ ಸೇರಿದವರು. ನಂಜನಗೂಡಿನಲ್ಲಿ ಪತ್ತೆಯಾದ ಮಹಾದೇವಯ್ಯ ಪುನಃ ಓಡಿಹೋಗಬಹುದೆಂದು ಹೆದರಿದ ಮನೆಯವರು ಏಳರ ಬಾಲೆ ಪುಟ್ಟಮಾದಮ್ಮನವರ ಜೊತೆ ವಿವಾಹ ಮಾಡಿಸಿದರು. ಅನಂತರ ಇವರಿಗೆ ರೈಲ್ವೆ ಇಲಾಖೆಯಲ್ಲಿ ಕೆಲಸವೊಂದನ್ನು ಕೊಡಿಸಿದರು. ಕಂಸಾಳೆ ಪ್ರದರ್ಶನ ನೀಡಲು ಕಚೇರಿ ನಿಯಮಾವಳಿಗಳು ಅಡ್ಡ ಬರುತ್ತಿದ್ದುವು. ಇದರಿಂದ ಬೇಸತ್ತ ಇವರು ತಮ್ಮ ನೌಕರಿ ತ್ಯಜಿಸಿ ಸ್ವತಂತ್ರ ಕಲಾವಿದರಾದರು. ಇವರ ಕಲಾಸಾಧನೆಯನ್ನು ಗುರುತಿಸಿದ ಮೈಸೂರು ವಿಶ್ವವಿದ್ಯಾನಿಲಯ ಇವರನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಂದರ್ಶಕ ಕಲಾವಿದರನ್ನಾಗಿ ನೇಮಿಸಿಕೊಂಡಿತು. ಇಲ್ಲಿನ ಜಾನಪದ ವಸ್ತುಸಂಗ್ರಹಾಲಯದಲ್ಲಿ ಹಲವಾರು ವರ್ಷ ದುಡಿದು ಮಹಾದೇವಯ್ಯನವರು ಸ್ಥಳೀಯ ಹಾಗೂ ಹೊರರಾಜ್ಯಗಳ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಆಸಕ್ತರಿಗೆ, ಕಂಸಾಳೆಕಲೆ ಕಲಿಸಿದರು. ಗಂಡುಕಲೆ ಕಂಸಾಳೆಯನ್ನು ಮಹಿಳೆಯರಿಗೆ ಮೊದಲು ಕಲಿಸಿದ ಕೀರ್ತಿಯೂ ಇವರದು. ದೇಶದ ನಾನಾ ಕಡೆಗಳಲ್ಲಿ ತರಬೇತಿಗಳನ್ನು ನೀಡಿದ ಇವರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ, ಮೈಸೂರಿನ ರಂಗಾಯಣ ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ಕಲಾವಿದರಿಗೆ ಕಂಸಾಳೆ ತರಬೇತಿ ನೀಡಿದರು. 1950ರ ದಶಕದಲ್ಲಿ ಎಂ.ವಿ.ಗೋಪಾಲಸ್ವಾಮಿಯವರು ಮೈಸೂರಿನಲ್ಲಿ ಆಕಾಶವಾಣಿ ಆರಂಭಿಸಿದಾಗ ಬಿತ್ತರವಾದ ಮೊದಲ ಜನಪದ ಗೀತೆ ಮಹಾದೇವಯ್ಯನವರದು.

ಅಪ್ಪಟ ಜನಪದ ಕಲಾವಿದರಾದ ಇವರು ಕಂಸಾಳೆ ಕಲೆಯನ್ನು ದೇಶಾದ್ಯಂತ ಪ್ರದರ್ಶಿಸಿದರು. 1974ರಲ್ಲಿ ಅಂತಾರಾಷ್ಟ್ರೀಯ ಜನಪದ ಕಲಾ ಮೇಳದಲ್ಲಿ ಭಾರತವನ್ನು ಪ್ರತಿನಿಧಿಸಿ ಇಟಲಿ, ಟರ್ಕಿ, ಸೈಪ್ರಸ್ ಮುಂತಾದ ಹೊರದೇಶಗಳಲ್ಲೂ ತಮ್ಮ ತಂಡದ ಪ್ರದರ್ಶನ ನೀಡಿ ಪ್ರತಿಭೆ ಪ್ರದರ್ಶಿಸಿದರು. ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ ಭಾಗವಹಿಸಿದ ಇವರ ಕಲಾತಂಡದ ಪ್ರದರ್ಶನವನ್ನು ಅಂದಿನ ಪ್ರಧಾನಿಗಳಾಗಿದ್ದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಮೆಚ್ಚಿಕೊಂಡಿದ್ದರು.

ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ದೊರೆತಿವೆ. ಅವುಗಳಲ್ಲಿ ಮುಖ್ಯವಾದವು–ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1968), ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1982), ಇಂದಿರಾಗಾಂಧಿ ಫೆಲೋಶಿಪ್ (1988), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1990), ಕರ್ನಾಟಕ ಸರ್ಕಾರದ ಅತ್ಯುನ್ನತ ಪ್ರಶಸ್ತಿಗಳಲ್ಲೊಂದಾದ 1995ನೆಯ ಸಾಲಿನ ಜಾನಪದಶ್ರೀಯನ್ನು ಮರಣೋತ್ತರವಾಗಿ ಇವರಿಗೆ ಪ್ರದಾನ ಮಾಡಲಾಗಿದೆ. ಇವರ ಸಿರಿಕಂಠದಲ್ಲಿ ಮಲೆಯ ಮಹದೇಶ್ವರ ಕಾವ್ಯದ ಇಪ್ಪತ್ತೈದು ಧ್ವನಿಸುರುಳಿಗಳು ಹೊರಬಂದಿವೆ. ಇವರ ಕಂಸಾಳೆ ಪ್ರದರ್ಶನಗಳನ್ನು ಕನ್ನಡ, ಹಿಂದಿ ಹಾಗೂ ಇಂಗ್ಲಿಷ್ ಚಲನಚಿತ್ರಗಳಲ್ಲೂ ಬಳಸಿಕೊಳ್ಳಲಾಗಿದೆ. ಏಕತಾರಿ ಹಾಗೂ ಕಂಜರಿಗಳನ್ನೂ ನುಡಿಸುತ್ತಿದ್ದ ಇವರ ಸಂಗೀತವನ್ನು ವಂಶವೃಕ್ಷ ಚಲನಚಿತ್ರದಲ್ಲಿ ಅಳವಡಿಸಿಕೊಂಡಿದೆ. ಮಹಾದೇವಯ್ಯ ಸಂಪ್ರದಾಯ ನಿಷ್ಠರಾಗಿದ್ದರು. ಸೋಮವಾರ ಹಾಗೂ ಶುಕ್ರವಾರ ಕ್ವಾರಣ್ಯ(ಭಿಕ್ಷೆ)ಕ್ಕಾಗಿ ಕಂಸಾಳೆ ನುಡಿಸುತ್ತ ಮನೆ ಮನೆಗೆ ತೆರಳುತ್ತಿದ್ದುದುಂಟು. ಈ ಕಾಯಕವನ್ನು ಸಾಯುವವರೆಗೂ ನಿಲ್ಲಿಸಲಿಲ್ಲ. ನೋಡುಗರ ಮೈನವಿರೇಳುವಂತೆ ಕಂಸಾಳೆ ನೃತ್ಯ ಪ್ರದರ್ಶನ ನೀಡುತ್ತಿದ್ದ ಮಹಾದೇವಯ್ಯನವರ ಕಲೆಯಲ್ಲಿ ನೈಪುಣ್ಯ ಹಾಗೂ ಜನಪದ ಸೊಗಡು ಹದವಾಗಿ ಬೆರೆತಿರುತ್ತಿದ್ದುವು. ಕುಣಿತದ ಭಂಗಿ ಹಾಗೂ ಗತ್ತುಗಳಿಂದ ಇವರು ನಾಡಿನ ಅಪರೂಪದ ಕಲಾವಿದರಾಗಿದ್ದರು. ಇವರು 1996 ಏಪ್ರಿಲ್ 21ರಂದು ಮೈಸೂರಿನಲ್ಲಿ ನಿಧನರಾದರು.

ಇವರ ಮಗ ಕುಮಾರಸ್ವಾಮಿ ತಂದೆಯಂತೆಯೇ ಕಂಸಾಳೆ ಕಲೆಯಲ್ಲಿ ಪ್ರಾವೀಣ್ಯ ಪಡೆದಿದ್ದಾರೆ. ಮೊಮ್ಮಕ್ಕಳಾದ ಕೆ.ರವಿಚಂದ್ರ ಹಾಗೂ ಕೆ.ಮಹದೇವ ಕೂಡ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. (ಎಸ್.ಬಿಎಚ್.ಎ.)

**ಕಕುತ್ಸ್ಥ :** ಸೂರ್ಯವಂಶದ ಒಬ್ಬ ರಾಜ, ಇವನ ತಂದೆ ಶಶಾದ, ತಾತ ಇಕ್ಷ್ವಾಕು. ರಾಜಧಾನಿ ಅಯೋಧ್ಯೆ. ಈತನಿಗೆ ಇಂದ್ರವಾಹ, ಪುರಂಜಯ ಇತರ ಹೆಸರುಗಳು, ಅನೇನಸ್ ಈತನ ಮಗ.

ಕಕುತ್‌ಸ್ಥ ಎಂದರೆ ವೃಷಭದ ಹಿಣಿಲ (ಕಕುತ್) ಮೇಲೆ (ಸ್ಥ) ಕುಳಿತವನು ಎಂದರ್ಥ. ಹಿಂದೆ ದೇವದಾನವರ ಮಧ್ಯೆ ಭಯಂಕರ ಯುದ್ಧವಾಗಿ ದೇವತೆಗಳು ಪರಾಜಿತರಾಗ ಬೇಕಾಯಿತು. ಕೊನೆಗೆ ವಿಶ್ವಾತ್ಮನೂ ದೇವದೇವನೂ ಆದ ವಿಷ್ಣುವಿನ ಆದೇಶದಂತೆ ಸೂರ್ಯವಂಶದ ಈ ರಾಜನನ್ನು ದೇವತೆಗಳ ಸೈನ್ಯದ ಮಹಾದಂಡನಾಯಕ (ಪಾರ್ಷ್ಣಿಗ್ರಾಹ)ನಾಗುವಂತೆ ಪ್ರಾರ್ಥಿಸಿದರು. ಇಂದ್ರ ತನಗೆ ವಾಹನವಾಗುವುದಾದರೆ ತಾನು ಸಹಾಯ ಮಾಡುವೆನೆಂದು ಈತನೆನ್ನಲು ಇಂದ್ರ ಮಹಾವೃಷಭ ರೂಪಧಾರಿಯಾದ. ಆಗ ಆ ವೃಷಭದ ಹಿಣಿಲ ಮೇಲೆ ಕುಳಿತು ದಿವ್ಯಧನುವನ್ನು ಹಿಡಿದು, ದೇವತೆಗಳು ಜಯಜಯಕಾರ ಮಾಡುತ್ತಿರಲು ಕಕುತ್ಸ್ಥ, ನಿಶಿತವಾದ ಬಾಣಗಳ ವರ್ಷವನ್ನೇ ದಾನವರ ಮೇಲೆ ಸುರಿಸಿ ಯುಗಾಂತಾಗ್ನಿಯಂತೆ ಅವರ ಮೇಲೆ ಬಿದ್ದು ಅವರ ಪುರ, ಧನ ಮುಂತಾದುವುಗಳನ್ನು ಜಯಿಸಿ ವಜ್ರಪಾಣಿಗೆ ಕೊಟ್ಟ. ಅಂದಿನಿಂದ ಇವನಿಗೆ ಇಂದ್ರವಾಹ ಮತ್ತು ಪುರಂಜಯ ಎಂಬ ಹೆಸರುಗಳೂ ಅನ್ವರ್ಥವಾದುವು. ಈತನ ವಂಶದವರಿಗೆ–ಮುಖ್ಯವಾಗಿ ರಾಮಾಯಣದಲ್ಲಿ–ಕಾಕುತ್ಸ್ಥರೆಂದೂ ಹೆಸರಿದೆ. (ಸಿ.ಜಿ.ಪಿ.)

**ಕಕುದ್ಮಿ :** ಸೂರ್ಯವಂಶದ ರಾಜ. ರೇವತ ಎಂಬುದು ಈತನ ಇನ್ನೊಂದು ಹೆಸರು. ತನ್ನ ಮಗಳಾದ ರೇವತಿಗೆ ಯಾರು ತಕ್ಕ ವರ ಎಂಬುದನ್ನು ತಿಳಿಯಲು ಅವಳನ್ನು ಬ್ರಹ್ಮನ ಹತ್ತಿರ ಕರೆದುಕೊಂಡು ಹೋದ. ಬ್ರಹ್ಮಲೋಕದಲ್ಲಿ ದೇವಋಷಿಗಳು ಶಾಸ್ತ್ರಚರ್ಚೆ ಮಾಡುತ್ತಿದ್ದರು. ಅದು ಮುಗಿದ ಮೇಲೆ ಕಕುದ್ಮಿ ಬ್ರಹ್ಮನನ್ನು ಕೇಳಲಾಗಿ ಭೂಲೋಕವನ್ನು ಬಿಟ್ಟು ನೀನು ಬಹಳ ಕಾಲ ಇಲ್ಲಿದ್ದದ್ದರಿಂದ ನಿನಗೆ ತಿಳಿಯಲಿಲ್ಲ; ಈಗ ವಸುದೇವನ ಹಿರಿಯ ಮಗ ಬಲರಾಮ ಇವಳಿಗೆ ತಕ್ಕ ವರ ಎಂದು ಬ್ರಹ್ಮ ಹೇಳಿದ. ಆ ಪ್ರಕಾರ ಕಕುದ್ಮಿ ಭೂಲೋಕಕ್ಕೆ ಬಂದು ಬಲರಾಮನಿಗೆ ತನ್ನ ಮಗಳಾದ ರೇವತಿಯನ್ನು ಕೊಟ್ಟು ಮದುವೆ ಮಾಡಿದ.

ಕಕುದ್ಮಿ ಎಂಬ ಹೆಸರಿನ ಆನರ್ತದೇಶದ ದೊರೆಯೊಬ್ಬನಿದ್ದಾನಲ್ಲದೆ ಅದು ವಿಷ್ಣುವಿನ ಒಂದು ನಾಮಾಂತರವೂ ಆಗಿದೆ. (ಬಿ.ಎಚ್.ಎಸ್.)

**ಕಕೇಲಿಯ :** ಕಂಪಾಸಿಟಿ ಕುಟುಂಬಕ್ಕೆ ಸೇರಿದ ಬಹು ಸುಂದರವಾದ ವಾರ್ಷಿಕ ಸಸ್ಯಜಾತಿ. ಇದನ್ನು ಸಾಮಾನ್ಯವಾಗಿ ಟ್ಯಾಸಲ್ ಫ್ಲವರ್ಸ್ ಅಥವಾ ಫ್ಲೋರಾಸ್ ಪೆಯಿಂಟ್ ಬ್ರಷ್ ಎಂದು ಕರೆಯುವುದು ವಾಡಿಕೆ. ಇದು ಕಳೆಯಂತೆ ಬೆಳೆಯುವುದರಿಂದ ಯಾವ ವಿಧವಾದ ಗಮನವನ್ನೂ ಕೊಡಬೇಕಾಗಿಲ್ಲ. ಅಲಂಕಾರಕ್ಕೋಸ್ಕರ ಮಡಿಗಳ ಅಂಚುಗಳಲ್ಲಿ ಬೆಳೆಸುತ್ತಾರೆ. ಗಿಡ 15" ಎತ್ತರ ಬೆಳೆಯುತ್ತದೆ. 10 ವಾರಗಳಲ್ಲಿ ಸಣ್ಣ ಕುಚ್ಚುಗಳಂತಿರುವ ಹಳದಿ, ಕಿತ್ತಳೆ, ಬಿಳುಪು ಮತ್ತು ಕಡುಗೆಂಪು ಬಣ್ಣದ ಹೂಗೊಂಚಲು ಕಾಣಿಸಿಕೊಳ್ಳುತ್ತವೆ. (ಕೆ.)

**ಕಕೇಸಿಯನ್ ಭಾಷಾ ಪರಿವಾರ :** ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರಗಳ ಮಧ್ಯ ಭಾಗದಲ್ಲಿ ಇರುವ ಬಹು ವಿಶಾಲವಾದ ಕಕೇಸಿಯ ಪ್ರದೇಶದಲ್ಲಿ ವಾಸಿಸುವ ಜನ ಆಡುತ್ತಿರುವ ವಿವಿಧ ಭಾಷೆಗಳ ಒಂದು ಸಮೂಹ. ಈ ಭಾಷಾಕ್ಷೇತ್ರ ರಷ್ಯದ ದಕ್ಷಿಣದಲ್ಲಿ ಕಕೇಸಿಯನ್ ಭೂಸಂಧಿಯಿಂದ ಮೊದಲಾಗಿ ತುರ್ಕಿ ಮತ್ತು ಇರಾನ್ ದೇಶಗಳವರೆಗೂ ಹರಡಿಕೊಂಡಿದೆ. ಈ ವಿಶಾಲವಾದ ಭೂಪ್ರದೇಶದಲ್ಲಿ ಸು. 40 ಲಕ್ಷಕ್ಕೂ ಹೆಚ್ಚು ಜನ ಈ ಭಾಷೆಗಳನ್ನು ಬಳಸುತ್ತಿದ್ದಾರೆ. ಈ ಭಾಷಾಪರಿವಾರಕ್ಕೆ ಸೇರಿದ ಹೆಚ್ಚು ಉಪಭಾಷೆಗಳು ಕಾಕಸಸ್ ಪರ್ವತದ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಎಲ್ಲ ಭಾಷೆ ಮತ್ತು ಉಪಭಾಷೆಗಳನ್ನು ಅಧ್ಯಯನ ಮಾಡಲು

ಹೊರಟಾಗ ಅವು ಪರಸ್ಪರ ಭಿನ್ನ ಭಿನ್ನವಾಗಿಯೇ ಕಂಡುಬಂದಿವೆ. ಈ ಕಾರಣಗಳಿಂದಾಗಿ ಇವು ವಿಶ್ವದ ಯಾವ ಭಾಷಾ ಪರಿವಾರಕ್ಕೂ ಸೇರದೆ ಒಂದು ಸ್ವತಂತ್ರಭಾಷಾ ಪರಿವಾರವಾಗಿಯೇ ಉಳಿದಿವೆ. ಇವು ಪ್ರಾಚೀನ ಮೆಡಿಟರೇನಿಯನ್ ಭಾಷೆಗಳ ಪಳೆಯುಳಿಕೆಗಳಿಂದ ವಿಕಾಸಗೊಂಡ ಭಾಷೆಗಳಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಹೆಚ್ಚಿನ ವಿಚಾರಗಳನ್ನು ತಿಳಿಯಲು ಸಾಕಷ್ಟು ಪುರಾವೆಗಳಿಲ್ಲದೆ ಇವು ಇನ್ನೂ ಅಸ್ಪಷ್ಟವಾಗಿಯೇ ಉಳಿದಿವೆ. ಈ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ.

ಕಕೇಸಿಯನ್ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳನ್ನು ಮುಖ್ಯವಾಗಿ ಮೂರು ವರ್ಗಗಳನ್ನಾಗಿ ವಿಂಗಡಿಸಬಹುದು:

1. ಪೂರ್ವ ಕಕೇಸಿಯನ್ ಭಾಷಾವರ್ಗ: (1) ಚೆಚೆನ್ (2) ಅವ್ರೊ–ಅಂದಿ (3) ದರ್ಘಿ (4) ಸಮುರ್ (5) ಲಕ್ ಅಥವಾ ಕಸಿ–ಕುಮುಕ್ (6) ಅರ್ಚ್ಚಿ (7) ಹಿನುಲುಘ್ (8) ಉದಿ ಎಂಬ ಎಂಟು ಭಾಷಾಶಾಖೆಗಳು ಸೇರಿವೆ.

2. ಪಶ್ಚಿಮ ಕಕೇಸಿಯನ್ ಭಾಷಾವರ್ಗ: (1) ಅಭಜ (2) ಉಭಿಕ್ (3) ಅದಿಘೆ ಎಂಬ ಮೂರು ಭಾಷಾ ಶಾಖೆಗಳು ಸೇರಿವೆ.

3. ದಕ್ಷಿಣ ಕಕೇಸಿಯನ್ ಭಾಷಾವರ್ಗ: (1) ಜಾರ್ಜಿಯಸ್ (2) ಮಿಂಗ್ರೆಲಿಯನ್ ಮತ್ತು ಲಜ್ (3) ಸ್ವನೇತಿಯನ್ ಎಂಬ ಭಾಷಾಶಾಖೆಗಳು ಸೇರಿವೆ.

ಈ ಭಾಷಾರ್ಗೀಕರಣವನ್ನು ಸಮರ್ಪಕ ಹಾಗೂ ಪರಿಪೂರ್ಣ ಎಂದು ಒಪ್ಪದ ಕೆಲವು ವಿದ್ವಾಂಸರು ಈ ವರ್ಗದ ಕೆಲವು ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿ ಅವುಗಳಲ್ಲಿ ಮುಖ್ಯವಾಗಿ ಕಂಡುಬರಬಹುದಾದ ಸಾಮ್ಯಗಳನ್ನು ಆಧಾರವಾಗಿರಿಸಿಕೊಂಡು ಅವನ್ನು ಮತ್ತೆ ವರ್ಗೀಕರಿಸತೊಡಗಿದರು. ಪೂರ್ವ ಮತ್ತು ಪಶ್ಚಿಮ ಕಕೇಸಿಯನ್ ಭಾಷೆಗಳಲ್ಲಿ ಸಾಕಷ್ಟು ಸಾಮ್ಯ ಕಂಡು ಬಂದ ಕಾರಣದಿಂದ ಅವನ್ನು ಒಟ್ಟುಗೂಡಿಸಿ ಉತ್ತರ ಕಕೇಸಿಯನ್ ಭಾಷಾವರ್ಗವೆಂದು ಕರೆದರು. ಅಂದಿನಿಂದ ಈ ಕಕೇಸಿಯನ್ ಭಾಷಾಪರಿವಾರಕ್ಕೆ ಸೇರಿದ ಎಲ್ಲ ಭಾಷೆಗಳನ್ನೂ ಉತ್ತರ ಮತ್ತು ದಕ್ಷಿಣ ಕಕೇಸಿಯನ್ ಭಾಷಾವರ್ಗಗಳೆಂದು ಕರೆಯುವುದು ರೂಢಿಗೆ ಬಂತು. ಉತ್ತರ ಕಕೇಸಿಯನ್ ಭಾಷೆಗಳಾದ ಪೂರ್ವ ಮತ್ತು ಪಶ್ಚಿಮ ಕಕೇಸಿಯನ್ ಭಾಷೆಗಳು ದಕ್ಷಿಣ ಕಾಕೇಸಿಯನ್ ಭಾಷೆಗಳೊಡನೆ ಹೋಲಿಸಿದಾಗ ಪರಸ್ಪರ ಭಿನ್ನವಾಗಿಯೇ ಕಂಡುಬರುತ್ತವೆ. (ಕೆ.ಕೆ.ಜಿ.)

**ಕಕ್ಕ[1] :** ಕರ್ನಾಟಕವನ್ನು ಆಳಿದ ರಾಷ್ಟ್ರಕೂಟ ವಂಶದ ಅರಸರ ಮೂಲ ಪುರುಷರಲ್ಲಿ ಒಬ್ಬ. ಈತನ ಬಗ್ಗೆ ಇತಿಹಾಸದಲ್ಲಿ ವಿವರಗಳು ದೊರೆಯುವುದಿಲ್ಲ. ಇವನ ಆಳ್ವಿಕೆಯ ಕಾಲದ ಬಗ್ಗೆಯೂ ಖಚಿತವಾದ ಅಂಶಗಳು ಬೆಳಕಿಗೆ ಬಂದಿಲ್ಲ. ಈತ ಒಂದನೆಯ ಗೋವಿಂದರಾಜನ ಮಗ. ತನ್ನ ಪೂರ್ವಿಕರಾದ ದಂತಿವರ್ಮ, ಒಂದನೆಯ ಇಂದ್ರ ಮತ್ತು ತಂದೆಯಾದ ಗೋವಿಂದರಾಜನಂತೆ ಬಾದಾಮಿ ಚಳುಕ್ಯರ ಮಾಂಡಲಿಕನಾಗಿ ರಾಜ್ಯಭಾರ ನಡೆಸಿರಬಹುದೆಂದು ಊಹಿಸಬಹುದು. ಈತ 8ನೆಯ ಶತಮಾನಕ್ಕೂ ಹಿಂದಿನವ. (ಎಸ್.ಕೆ.ಎಸ್.)

**ಕಕ್ಕ[2] :** ಕರ್ನಾಟಕವನ್ನು ಆಳಿದ ರಾಷ್ಟ್ರಕೂಟ ರಾಜ್ಯರಲ್ಲಿ ಕೊನೆಯವ. ಕರ್ಕ್ಕ ಎಂದೂ ಈತನನ್ನು ಕರೆಯುವುದುಂಟು. ರಾಷ್ಟ್ರಕೂಟ ದೊರೆಯಾದ ನಾಲ್ಕನೆಯ ಗೋವಿಂದನಿಗೆ (930–934/35) ಮೂರನೆಯ ಕೃಷ್ಣ (939–66), ಕೊಟ್ಟಿಗ (967–72) ಮತ್ತು ನಿರುಪಮ ಎಂಬ ಮೂವರು ಮಕ್ಕಳಿದ್ದರು. ಕಕ್ಕ ನಿರುಪಮನ ಮಗ. ಮೂರನೆಯ ಕೃಷ್ಣ ಮಕ್ಕಳಿಲ್ಲದೆ ತೀರಿಕೊಂಡಾಗ ಅವನ ತಮ್ಮ ಕೊಟ್ಟಿಗ ಸಿಂಹಾಸನವನ್ನೇರಿದ. ಆ ವೇಳೆಗಾಗಲೇ ಕೊಟ್ಟಿಗನಿಗೆ ಮುಪ್ಪಡಸಿತ್ತಾದ್ದರಿಂದ ಆತ ಬಹುಕಾಲ ಆಳಲಿಲ್ಲ. ಆತನ ಅನಂತರ ಆಳಿದವನೇ ಕಕ್ಕ.

ಕೊಟ್ಟಿಗನ ಕಾಲದಲ್ಲೇ ರಾಷ್ಟ್ರಕೂಟರ ಅವನತಿ ತುತ್ತತುದಿ ಮುಟ್ಟುವುದರಲ್ಲಿತ್ತು. ಆತ ಮೊದಲೇ ಅಸಮರ್ಥ, ಜೊತೆಗೆ ಮುದುಕ. ಆದ್ದರಿಂದ ತನ್ನ ರಾಜ್ಯವನ್ನು ರಕ್ಷಿಸಲಾರದೆ ಹೋದ. ಹಳೆಯ ವೈರ ಸಾಧಿಸುತ್ತಿದ್ದ ಪರಮಾರ ದೊರೆ ಶಿಯಕ ಆತನ ಮೇಲೆ ದಂಡೆತ್ತಿ ಬಂದು ರಾಜಧಾನಿಯನ್ನು ಹಿಡಿದುಕೊಂಡು ಕೊಳ್ಳೆಹೊಡೆದ. ಕೊಟ್ಟಿಗ ಎದೆಯೊಡೆದು ಸತ್ತ. ಇಂಥ ಸಮಯದಲ್ಲಿ ಅಧಿಕಾರಕ್ಕೆ ಬಂದ ಕಕ್ಕನಾದರೂ ದಕ್ಷನಾಗಿದ್ದಿದ್ದರೆ ಪರಿಸ್ಥಿತಿ ಸುಧಾರಿಸುತ್ತಿತ್ತು. ಆದರೆ ಇವನಿಗೂ ಆಡಳಿತ ಗೊತ್ತಿರಲಿಲ್ಲ. ಈತ ದುಷ್ಟ ಮಂತ್ರಿಗಳಿಬ್ಬರ ಕೈಗೊಂಬೆಯಾಗಿದ್ದ. ಈ ದೌರ್ಬಲ್ಯದಿಂದಾಗಿ ಇವನ ಸಾಮಂತರಾಜರಲ್ಲಿ ದುರಾಸೆ ಬೆಳೆಯಿತು. ಪಟ್ಟಕ್ಕೆ ಬಂದ ಹದಿನೆಂಟೇ ತಿಂಗಳಲ್ಲಿ ಕಕ್ಕ ರಾಜ್ಯ ಕಳೆದುಕೊಂಡ.

ರಾಷ್ಟ್ರಕೂಟ ಸಾಮ್ರಾಜ್ಯದ ದುಃಸ್ಥಿತಿಯ ದುರುಪಯೋಗಪಡಿಸಿಕೊಳ್ಳುವುದರಲ್ಲಿ ಪ್ರತಿಹಾರ ವಂಶದವರು ಮೊದಲಿಗರಾದರು. ಉತ್ತರ ಭಾರತದ ಹಲಕೆಲವು ಪಾಳೆಯಪಟ್ಟುಗಳೊಡನೆ ಸಂಚು ನಡೆಸಿ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಮುತ್ತಿಗೆ ಹಾಕಲು ಇವರು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಇವರು ಎಷ್ಟರ ಮಟ್ಟಿಗೆ ಜಯಶಾಲಿಗಳಾದರು ಎಂಬುದರ ಬಗ್ಗೆ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. 972ರಲ್ಲಿ ಬರೆಯಲಾದ ಕಾರ್ಡದ ಶಾಸನವನ್ನು ನಂಬುವುದಾದರೆ ಈತ ಪ್ರತಿಹಾರರ ದಾಳಿಯನ್ನು ಹಿಮ್ಮೆಟ್ಟಿಸಲು ಸಮರ್ಥನಾದನೆಂದು ಹೇಳಬಹುದು.

ಆದರೂ ಕಕ್ಕನ ರಾಜ್ಯ ಉಳಿಯಲಿಲ್ಲ. ಬಾದಾಮಿಯ ಚಳುಕ್ಯ ವಂಶದ ಎರಡನೆಯ ತೈಲಪ ದಂಡೆತ್ತಿ ಬಂದ. ಮೂರನೆಯ ಗೋವಿಂದನಿಂದ ತರದವಾಡಿ ಪ್ರಾಂತ್ಯದಲ್ಲಿ ಮಾಂಡಲಿಕನಾದಾಗಿನಿಂದಲೂ ಆತ ರಾಷ್ಟ್ರಕೂಟರನ್ನು ನಾಶಮಾಡುವ ಹಂಚಿಕೆ ಹೂಡಿದ್ದ. ಬಾದಾಮಿಯ ಚಳುಕ್ಯರ ವಂಶಜನೆಂದು ಭಾವಿಸಿದ್ದ ತೈಲಪನಿಗೆ ತನ್ನ ಹಿರಿಯರಿಂದ ರಾಷ್ಟ್ರಕೂಟರು ಕಿತ್ತುಕೊಂಡಿದ್ದ ಸಾಮ್ರಾಜ್ಯವನ್ನು ಮತ್ತೆ ಸಂಪಾದಿಸಬೇಕೆಂಬ ಆಕಾಂಕ್ಷೆಯಿತ್ತು. ಎರಡನೆಯ ಕಕ್ಕನ ಕಾಲದಲ್ಲಿ ಆತನಿಗೆ ಈ ಅವಕಾಶ ದೊರೆಯಿತು. ಕಕ್ಕನ ವಿರುದ್ಧವಾಗಿ ಎದ್ದ ತೈಲಪನನ್ನು ಅಡಗಿಸುವ ಉದ್ದೇಶದಿಂದ ದಂಡೆತ್ತಿಹೋದ ಕಕ್ಕನಿಗೆ ಸೋಲು ಕಾದಿತ್ತು (973). ಕಕ್ಕನ ಮಂತ್ರಿಗಳು ಕಾಳಗದಲ್ಲಿ ಕೊನೆಗೊಂಡರು. ಕಕ್ಕ ಮಾತ್ರ ಹೇಗೋ ತಲೆ ತಪ್ಪಿಸಿಕೊಂಡು ಹೋಗಿ, ಮೈಸೂರು ರಾಜ್ಯದ ಸೊರಬ ತಾಲ್ಲೂಕಿನಲ್ಲಿ ಒಂದಿಷ್ಟು ನೆಲ ಗಿಟ್ಟಿಸಿಕೊಂಡು ಅಲ್ಲಿ 991ರ ವರೆಗೂ ಆಳ್ವಿಕೆ ನಡೆಸಿದ. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಮತ್ತೆ ಸಂಪಾದಿಸುವ ಆಸೆಯನ್ನು ಕಕ್ಕ ಕೈಬಿಟ್ಟನಾದರೂ ಮೂರನೆಯ ಕೃಷ್ಣನ ಮಗನಾದ ನಾಲ್ಕನೆಯ ಇಂದ್ರನನ್ನು ಸಿಂಹಾಸನಕ್ಕೆ ತರಲು ಗಂಗವಂಶದ ದೊರೆ ಎರಡನೆಯ ಮಾರಸಿಂಹ ಪ್ರಯತ್ನಪಟ್ಟ. ಆದರೆ ಅದು ಫಲಿಸಲಿಲ್ಲ. (ಎಸ್.ಕೆ.ಎಸ್.)

**ಕಕ್ಕೆ :** ಲೆಗ್ಯುಮಿನೋಸೀ ಕುಟುಂಬಕ್ಕೆ ಸೇರಿದ ಕ್ಯಾಶಿಯ ಫಿಸ್ಚುಲ ಎಂಬ ವೈಜ್ಞಾನಿಕ ಹೆಸರಿನ ಮಧ್ಯಮ ಪ್ರಮಾಣದ ಮರ, ಇದಕ್ಕೆ ಇಂಡಿಯನ್ ಲಬರ್ನಮ್ ಎಂಬ ಹೆಸರೂ ಉಂಟು. 1220 ಮೀಗಳ ಎತ್ತರದ ಹಿಮಾಲಯದ ತಪ್ಪಲಿನಿಂದ ಹಿಡಿದು ಕನ್ಯಾಕುಮಾರಿಯವರೆಗೂ ಹರಡಿದೆ. ಅಲ್ಲಲ್ಲಿ ಇದು ಸಾಮೂಹಿಕವಾಗಿ ತೋಪಿನಂತೆ ಬೆಳೆದಿರುವುದೂ ಉಂಟು. ಆಫ್ರಿಕದಲ್ಲಿ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಲ್ಲೂ ಇದನ್ನು ಬೆಳೆಸುತ್ತಾರೆ.

ಕಕ್ಕೆ ಮರ 15'–20' ಎತ್ತರಕ್ಕೆ ಬೆಳೆಯುತ್ತದೆ. ಅತ್ಯಲ್ಪಕಾಲ ಎಲೆ ಉದುರಿದ್ದು ಏಪ್ರಿಲ್–ಮೇ ತಿಂಗಳುಗಳಲ್ಲಿ ಹೊಸ ಚಿಗುರು ಬರುವುದು. ಚಿಗುರಿನೊಂದಿಗೇ ಉದ್ದನೆ ಜೋಲಾಡುವ ಹಳದಿಯ ಹೂಗೊಂಚಲುಗಳು ಮೂಡಿ ಗಿಡ ನೋಡಲು ಅತ್ಯಂತ ಸುಂದರವೂ ಆಕರ್ಷಣೀಯವೂ ಆಗುತ್ತದೆ. ಹೂಗಳು ಹಳದಿ ಅಥವಾ ನಸುಗೆಂಪಾಗಿದ್ದು ಸುವಾಸನೆ ಬೀರುತ್ತಿರುತ್ತವೆ. ಜನವರಿ–ಮಾರ್ಚಿ ತಿಂಗಳುಗಳಲ್ಲಿ ಬಲಿಯುವ ಕಾಯಿಗಳು ಒಂದರಿಂದ ಎರಡು ಮೀ ಉದ್ದವಿದ್ದು, ಕಂದುಬಣ್ಣದ ಉರುಳೆ ಆಕಾರದಲ್ಲಿ ನೇತಾಡುತ್ತಿರುತ್ತವೆ. ಮರ ಕತ್ತರಿಸಿದಾಗ ಹೊಸ ಚಿಗುರು, ಬೇರುಸಸಿಗಳು ಧಾರಾಳವಾಗಿ ಬರುತ್ತವೆ. ಕೋತಿ, ಕರಡಿ, ಹಂದಿ ಇತ್ಯಾದಿ ಪ್ರಾಣಿಗಳು ಕಾಯಿಯ ತಿರುಳನ್ನು ತಿಂದು ಮಲದಲ್ಲಿ ವಿಸರ್ಜಿಸಿದ ಬೀಜ ಸುಲಭವಾಗಿ ಮೊಳೆತು ಹೊಸ ಗಿಡಗಳು ಹುಟ್ಟುತ್ತವೆ. ಇದರ ಚೌಬೀನೆ ಗಡುಸಾಗಿದ್ದು, ಬಾಳಿಕೆ ಬರುವುದರಿಂದ ಮನೆ ಕಂಬಗಳಿಗೂ ಗಾಡಿಸಾಮಾನುಗಳಿಗೂ ವ್ಯವಸಾಯದ ಉಪಕರಣಗಳಿಗೂ ಉಪಯೋಗವಾಗುತ್ತದೆ. ಕಾಯ ತಿರುಳನ್ನು (ಪಲ್ಪ್) ತೀಕ್ಷ್ಣವಾದ ಹಾಗೂ ಸುಖವಿರೇಚಕವಾಗಿ ಬಳಸುವುದುಂಟು. ಈ ಮರದ ಒಣತೊಗಟೆಯನ್ನು ಚರ್ಮ ಹದಮಾಡಲು ಉಪಯೋಗಿಸುತ್ತಾರೆ. ಕರ್ನಾಟಕ ರಾಜ್ಯದ ಅರಣ್ಯಗಳಲ್ಲಿ ಇದನ್ನು ಗೌಣಸಸ್ಯಗಳಲ್ಲಿ ಮುಖ್ಯವಾದುದೆಂಬ ಕಾರಣದಿಂದ ಚೆನ್ನಾಗಿ ಕೃಷಿಮಾಡುತ್ತಿದ್ದಾರೆ. (ಎ.ಕೆ.ಎಸ್.; ಎಂ.ಎಚ್.ಎಂ.)

**ಕಕ್ಕೇರಿ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರ–ಹಳ್ಯಾಳ ರಸ್ತೆಯಲ್ಲಿ ಖಾನಾಪುರಕ್ಕೆ 30ಕಿಮೀ ದೂರದಲ್ಲಿದೆ. ಇದು ವೀರಶೈವ ಶರಣನಾದ ಡೋಹರ ಕಕ್ಕಯ್ಯ ಚೆನ್ನಬಸವಣ್ಣನೊಂದಿಗೆ ಕಲ್ಯಾಣದಿಂದ ಉಳುವಿಗೆ ಹೋಗುವ ಮಾರ್ಗದಲ್ಲಿ ಕಳಚುರಿ ಸೈನ್ಯದೊಂದಿಗೆ ಹೋರಾಡಿ ವೀರಮರಣ ಹೊಂದಿದ ಸ್ಥಳವೆಂಬ ನಂಬಿಕೆ ಇದೆ. ಹೊಲಗಳ ಮಧ್ಯದಲ್ಲಿ ಡೋಹರ ಕಕ್ಕಯ್ಯನದು ಎನ್ನಲಾದ ಗದ್ದುಗೆಯಿದೆ. ಈ ಗುಡಿಗೆ ಒಂದು ಚಿಕ್ಕ ಗರ್ಭಗೃಹವಿದ್ದು ಇದರಲ್ಲಿ ಲಿಂಗಪೂಜೆಯಲ್ಲಿ ನಿರತನಾದ ಕಕ್ಕಯ್ಯನ ಕಲ್ಲಿನ ಮೂರ್ತಿಯಿದೆ. ಇವನ ಗದ್ದುಗೆ ಬಳಿ ಪ್ರತಿವರ್ಷ ಶಿವರಾತ್ರಿಯಲ್ಲಿ ಮೂರು ದಿನಗಳವರೆಗೆ ಜಾತ್ರೆ ನಡೆಯುವುದು. ಈ ಗದ್ದುಗೆಯ ಸಮೀಪ ಇತ್ತೀಚೆಗೆ ನಿರ್ಮಿತವಾದ ಪ್ರಜ್ಞೋದಯ ಆಶ್ರಮ ಇದೆ. ಆಶ್ರಮದಲ್ಲಿ ವಿರಕ್ತ ಸನ್ಯಾಸಿನಿಯೊಬ್ಬರು ವಾಸವಾಗಿರುವರು. ಊರಲ್ಲಿ ವೀರಭದ್ರ, ಬಸವಣ್ಣ, ಮಾರವ್ವ ಮೂಕಮ್ಮ, ದುರಗವ್ವ ದೇವಾಲಯಗಳಿವೆ. ಅಡವಿ ಸಿದ್ದೇಶ್ವರ ಎಂಬ ಮಠವಿದೆ. ಸುಮಾರು ಮೂರು ಶತಮಾನಗಳ ಹಿಂದೆ ನಿರ್ಮಿಸಲಾದ ಎರಡು ಹಳೆಯ ದೇವಾಲಯಗಳಲ್ಲಿ, ಒಂದನ್ನು ಸ್ಥಳೀಯರು ಬೀಷ್ಟದೇವಿ ದೇವಾಲಯವೆಂದು ಕರೆಯುವರು. ಅದು ಇಂಡೋ–ಸರಾಸೆನಿಕ್ ಶೈಲಿಯಲ್ಲಿದ್ದು, ಗುಮ್ಮಟವನ್ನು ಹೊಂದಿದೆ. ಈ ದೇವಿಯ ಜಾತ್ರೆ ವರ್ಷಕ್ಕೊಮ್ಮೆ 3 ದಿನಗಳವರೆಗೆ ನಡೆಯುತ್ತದೆ. ಈ ಊರಲ್ಲಿ ಸೇಂಟ್ ಅಂಥೊನಿ ಚರ್ಚ್ ಎಂದು ಕರೆಯಲಾಗುವ ಕೆಥೊಲಿಕ್ ಚರ್ಚ್ ಇದೆ. (ಆರ್.ಐ.)

**ಕಕ್ಷಕ :** ಪರಮಾಣುವಿನ ಎಲೆಕ್ಟ್ರಾನನ್ನು ನಿಶ್ಚಲ ತರಂಗದಂತೆ (ಸ್ಟೇಷನರಿ ವೇವ್) ಪರಿಗಣಿಸಿ ಅದರ ಚಲನೆಯನ್ನು ವರ್ಣಿಸುವ ಅವಕಲನ ಸಮೀಕರಣಗಳನ್ನು ಬಿಡಿಸಿದಾಗ ದೊರೆಯುವ ಉತ್ತರಮಾಲೆ (ಆರ್ಬಿಟಲ್). ತರಂಗೋತ್ಪನ್ನ (ವೇವ್‌ಫಂಕ್ಷನ್) ಪರ್ಯಾಯಪದ.

ಇದು ಗ್ರಹಗಳ ಚಲನೆಯನ್ನು ವರ್ಣಿಸುವ ಶಾಸ್ತ್ರೀಯ ಸಮೀಕರಣಗಳ ಉತ್ತರಗಳಾದ ಕಕ್ಷೆಗಳಿಗೆ ತಾಳೆಯಾಗುತ್ತದೆ. ಕಕ್ಷೆ ಒಂದು ರೇಖೆಯ ಸಮೀಕರಣ. ಆದರೆ ಕಕ್ಷಕ ಮೂರು ಆಯಾಮಗಳಲ್ಲಿ ಯಾವುದೊಂದು ಸ್ಥಾನದಲ್ಲಿ ನಿರ್ದಿಷ್ಟವಾದ ಪರಿಮಾಣವುಳ್ಳ ಒಂದು ಅಂಶ. ನ್ಯೂಕ್ಲಿಯಸ್ಸಿನಿಂದ ಕೆಲವೇ ಆಂಗ್‌ಸ್ಟ್ರಮ್‌ಗಳಿಂದಾಚೆ ಈ ಅಂಶದ ಪರಿಮಾಣ ಅತ್ಯಲ್ಪ. ತರಂಗೋತ್ಪನ್ನದ (ψ) ವರ್ಗ $(\psi)^2$ ಯಾವುದೊಂದು ಬಿಂದುವಿನಲ್ಲಿ ಎಲೆಕ್ಟ್ರಾನಿನ ಇರುವಿಕೆಯ ಸಂಭವವನ್ನು ಸೂಚಿಸುತ್ತದೆಂದು ಭಾವಿಸಲಾಗಿದೆ. ನ್ಯೂಕ್ಲಿಯಸ್ಸಿನಿಂದ ವಿವಿಧ ದೂರಗಳಲ್ಲಿರುವ ಸಮ ಆಕಾರದ ಅಲ್ಪಗಾತ್ರದ ಮಾನಗಳನ್ನು ಪರಿಗಣಿಸಿದ್ದರೆ, $10^{-6}$ ಸೆಂಮೀ ದೂರದಲ್ಲಿರುವ ಮಾನಗಾತ್ರದಲ್ಲಿ ಎಲೆಕ್ಟ್ರಾನಿನ ಸಂಭವ, $10^{-7}$ ಸೆಂಮೀ ದೂರದಲ್ಲಿರುವ ಮಾನಗಾತ್ರದಲ್ಲಿನ ಸುಭವಕ್ಕಿಂತ 10ರಷ್ಟು ಹೆಚ್ಚು.

ಪರಮಾಣುವಿನಲ್ಲಿ ಎಲೆಕ್ಟ್ರಾನುಗಳ ಅಸ್ತಿತ್ವವಿರಬೇಕೆಂಬ ಅಭಿಪ್ರಾಯವನ್ನು ಅಂಗೀಕರಿಸಿದ ಅನಂತರ ಧಾತುಗಳ ಅಯಾನನ ವಿಭವ (ಅಯೊನೈಸೇಷನ್ ಪೊಟೆನ್ಷಿಯಲ್), ಕಾಂತಪ್ರವೃತ್ತಿ, ಸಂಯೋಜನಸಾಮರ್ಥ್ಯ (ವೇಲೆನ್ಸಿ) ಮತ್ತು ರಾಸಾಯನಿಕ ಗುಣಗಳನ್ನು ವಿವರಿಸಲು ಎಲೆಕ್ಟ್ರಾನುಗಳು ಪರಮಾಣುವಿನ ನ್ಯೂಕ್ಲಿಯಸ್ಸಿನ ಸುತ್ತಲೂ ಪೃಥಕ್ಕಾದ ಪರಂಪರಾನುಗತವಾದ ಸಕೇಂದ್ರ ವಲಯಗಳಲ್ಲಿ ಸುತ್ತುತ್ತಿವೆಯೆಂಬ ಭಾವನೆ ಬೆಳೆದುಬಂದಿತು. ಎಲೆಕ್ಟ್ರಾನುಗಳನ್ನು ಕಣಗಳೆಂದು ಭಾವಿಸಿ ಅವುಗಳ ಚಲನೆಯನ್ನು ಅಭಿಜಾತ ಗತಿವಿಜ್ಞಾನದ ಸಮೀಕರಣಗಳಿಂದ ವರ್ಣಿಸಬಹುದೆಂಬ ಅಭಿಪ್ರಾಯ ಈ ಭಾವನೆಗಳಿಗೆ ಮೂಲಕಾರಣ. ನೀಲ್ಸ್ ಬೋಹರ್‌ನಿಂದ ಮುಖ್ಯವಾಗಿ ಅಭಿವೃದ್ಧಿಮಾಡಲ್ಪಟ್ಟ ಈ ಮಾದರಿ ಸರಿಸುಮಾರಾಗಿ ಸೌರವ್ಯೂಹವನ್ನು ಹೋಲುತ್ತದೆ. ಇದಕ್ಕೆ ಶಕಲ ಬಲವಿಜ್ಞಾನದ (ಕ್ವಾಂಟಂ ಮೆಕಾನಿಕ್ಸ್) ತತ್ತ್ವಗಳನ್ನು ಅನ್ವಯಿಸಿ ಎಲೆಕ್ಟ್ರಾನುಗಳು ಕೆಲವು ಪೃಥಕ್ಕಾದ (ಡಿಸ್‌ಕ್ರೀಟ್) ಸ್ಥಿರ ಶಕ್ತಿಮಟ್ಟಗಳಲ್ಲಿ ಮಾತ್ರ ಇರಬಲ್ಲವೆಂದೂ ಪೃಥಕ್ಕಾದ ಪ್ರಮಾಣಗಳಲ್ಲಿ ಮಾತ್ರ ಶಕ್ತಿಯನ್ನು ಹೀರಿಯೋ ಅಥವಾ ಹೊರಸೂಸಿಯೋ ಎಲೆಕ್ಟ್ರಾನುಗಳು ಒಂದು ಶಕ್ತಿ ಮಟ್ಟದಿಂದ ಇನ್ನೊಂದು ಶಕ್ತಿಮಟ್ಟಕ್ಕೆ ಲಂಘಿಸಬಲ್ಲವೆಂದೂ ಭಾವಿಸಲಾಯಿತು. ಈ ವಲಯಗಳನ್ನು ನ್ಯೂಕ್ಲಿಯಸ್ಸಿನಿಂದ ಪ್ರಾರಂಭಿಸಿ K, L, M, N, O, P ಮತ್ತು Q ಎಂದು ನಾಮಕರಣ ಮಾಡಲಾಯಿತು. ಇವು ಪ್ರಮುಖ ಶಕಲ (ಕ್ವಾಂಟಂ). ಶಕ್ತಿ ವಲಯಗಳಾದ 1, 2, 3, 4, 5, 6 ಮತ್ತು 7 ಸಂಖ್ಯೆಗಳಿಗೆ ಸರಿಹೊಂದುತ್ತವೆ. ಪ್ರತಿವಲಯದಲ್ಲಿ ನಿರ್ದಿಷ್ಟ ಸಂಖ್ಯೆಯ ಎಲೆಕ್ಟ್ರಾನುಗಳು ಮಾತ್ರ ಇರಬಲ್ಲವು. ತೀರ ಹೊರವಲಯದಲ್ಲಿರುವ ಎಲೆಕ್ಟ್ರಾನುಗಳು ರಾಸಾಯನಿಕ ಬಂಧರಚನೆಯಲ್ಲಿ ಪಾಲ್ಗೊಳ್ಳುತ್ತವೆ.

ಕೇವಲ ಯಾದೃಚ್ಛಿಕವಾದ ಇಂಥ ಭಾವನೆಗಳು ರಾಸಾಯನಿಕ ಬಂಧಗಳ ರಚನೆಯ ಬಗ್ಗೆ ಈಗಿರುವ ಎಲೆಕ್ಟ್ರಾನಿಕ ಪ್ರಮೇಯಗಳನ್ನು ತೃಪ್ತಿಕರವಾಗಿ ವಿವರಿಸಲಾರವು. ಪರಮಾಣುವಿನಲ್ಲಿ ಎಲೆಕ್ಟ್ರಾನುಗಳು ತರಂಗಗತಿಗಳ ಗುಣವನ್ನು ಪಡೆದಿರಬಹುದೆಂಬ ಅತ್ಯಂತ ಉಪಯುಕ್ತ ಸಲಹೆಯನ್ನು ಡೀ ಬ್ರೋಗ್ಲೀ ನೀಡಿದ (1924). ಒಡನೆಯೇ ಈ ಸಲಹೆಗೆ ಪ್ರಾಯೋಗಿಕ ಸಮರ್ಥನೆ ದೊರೆಯಿತು. 1926ರಲ್ಲಿ ಎರ್ವಿನ್ ಷ್ರೋಡಿಂಗರ್ ರಸಾಯನವಿಜ್ಞಾನಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಎಲೆಕ್ಟ್ರಾನುಗಳ ಚಲನೆಯನ್ನು ಅವುಗಳ ಶಕ್ತಿಯ ಆಧಾರದ ಮೇಲೆ ವಿವರಿಸಬಲ್ಲ ಸಮೀಕರಣವನ್ನು ನಿರೂಪಿಸಿದ ಕ್ಷಣಗಳ ಗುಣಗಳನ್ನು ಮಾತ್ರವಲ್ಲದೆ ತರಂಗಗಳ ಗುಣಗಳನ್ನೂ ಪ್ರದರ್ಶಿಸುತ್ತವೆಂಬ ಅಭಿಪ್ರಾಯಗಳ ಆಧಾರದ ಮೇಲೆ ಇವು ರೂಪಿತವಾಗಿರುವುದರಿಂದ ಇವನ್ನು ತರಂಗ ಸಮೀಕರಣಗಳೆಂದು ಕರೆಯಲಾಗಿವೆ.

ಅತ್ಯಂತ ಜಟಿಲವಾದ ಕೆಲವು ಸಮೀಕರಣಗಳನ್ನು ನಿಖರವಾಗಿ ಸಾಧಿಸಲು ಸಾಧ್ಯವೇ ಇಲ್ಲ. ಅಂತಹ ಸಂದರ್ಭದಲ್ಲಿ ಸರಿಸುಮಾರಾದ ಉತ್ತರಗಳನ್ನು ಪಡೆಯುವ ವಿಧಾನಗಳನ್ನು ಅನುಸರಿಸಲಾಗಿದೆ. ಹೀಗೆ ಪಡೆದ ಉತ್ತರಗಳ ಹೆಸರು ತರಂಗೋತ್ಪನ್ನಗಳು (ವೇವ್ ಫಂಕ್ಷನ್ಸ್). ಈ ಸಮೀಕರಣಗಳ ಸ್ವಭಾವ ಹೇಗಿದೆ ಎಂದರೆ, ತರಂಗೋತ್ಪನ್ನದಿಂದ ದೊರಕುವ ಶಕ್ತಿಯ ಪರಿಮಾಣ ಅಲ್ಪವಾದಂತೆ. ತರಂಗೋತ್ಪನ್ನದ ನಿಖರತೆ ಹೆಚ್ಚುವುದು. ಈ ಪರಿಮಾಣಗಳು ಸರಿಸುಮಾರಾಗಿದ್ದರೂ ಇವು ವಾಸ್ತವಾಂಶಗಳಿಗೆ ಬಲು ಚೆನ್ನಾಗಿ ಹೊಂದಿಕೊಳ್ಳುತ್ತವೆ. ಆದ್ದರಿಂದ ಮೇಲೆ ಹೇಳಿದ ವಿಧಾನಗಳನ್ನು ಪರಮಾಣುವಿನ ಮತ್ತು ಅಣುಗಳ ರಚನೆಗಳನ್ನು ಅರ್ಥ ಮಾಡಿಕೊಳ್ಳುವ ಸಫಲ ಮಾರ್ಗವೆಂದು ಅಂಗೀಕರಿಸಲಾಗಿದೆ.

ತರಂಗ ಸಮೀಕರಣವು ಎಲೆಕ್ಟ್ರಾನ್ ಯಾವುದೊಂದು ಕ್ಷಣದಲ್ಲಿ ಯಾವ ಒಂದು ಸ್ಥಳದಲ್ಲಿರುತ್ತದೆ ಎಂದಾಗಲಿ ಮತ್ತು ಅದರ ಗತಿವೇಗವನ್ನಾಗಲಿ ತಿಳಿಸುವುದಿಲ್ಲ. ಅಲ್ಲದೆ ಇದರ ನೆರವಿನಿಂದ ನ್ಯೂಕ್ಲಿಯಸ್ಸಿನ ಸುತ್ತ ಎಲೆಕ್ಟ್ರಾನಿನ ಕಕ್ಷೆಯನ್ನು (ವಲಯವನ್ನು) ನಿಖರವಾಗಿ ಗುರುತಿಸಲೂ ಸಾಧ್ಯವಿಲ್ಲ. ಬದಲಾಗಿ ಇದು ಎಲೆಕ್ಟ್ರಾನನ್ನು ಯಾವುದೊಂದು ಸ್ಥಳದಲ್ಲಿ ಕಾಣಬಹುದಾದ ಸಂಭವವನ್ನು ಮಾತ್ರ ತಿಳಿಸುತ್ತದೆ.

ಆಕಾಶದಲ್ಲಿ (ಸ್ಪೇಸ್) ಎಲೆಕ್ಟ್ರಾನನ್ನು ಕಾಣುವ ಸಂಭವವಿರುವ ಪ್ರದೇಶವನ್ನು ಕಕ್ಷಕ ಎನ್ನುತ್ತಾರೆ. ಕಕ್ಷಕಗಳಲ್ಲಿ ಅನೇಕ ಪ್ರಭೇದಗಳಿದ್ದು, ಅವುಗಳ ಆಕಾರ ಮತ್ತು ಗಾತ್ರಗಳಲ್ಲಿ (ಸೈಜ಼್) ಭಿನ್ನತೆಗಳಿವೆ. ಎಲೆಕ್ಟ್ರಾನ್, ಅದರ ಶಕ್ತಿಯ ಮಟ್ಟವನ್ನು ಅವಲಂಬಿಸಿ, ಅದಕ್ಕೆ ವಿಶಿಷ್ಟವಾದ ಕಕ್ಷಕವನ್ನು ಆಕ್ರಮಿಸುತ್ತದೆ. ಅಣುವಿನಲ್ಲಿ ಪರಮಾಣುಗಳು ಮೂರು ಆಯಾಮಗಳಲ್ಲಿ (ಡೈಮೆನ್ಷನ್ಸ್) ವ್ಯವಸ್ಥಿತವಾಗುವ ಕ್ರಮ ಕಕ್ಷಕಗಳ ಆಕಾರಗಳನ್ನು ಅವಲಂಬಿಸಿರುವುದರಿಂದ ರಸಾಯನವಿಜ್ಞಾನಿಗೆ ಕಕ್ಷಕಗಳ ಆಕಾರಗಳನ್ನು ನಿರ್ಧರಿಸುವುದರಲ್ಲಿ ಆಸಕ್ತಿ ಹೆಚ್ಚು.

ಪರಮಾಣುವಿನಲ್ಲಿರುವ ಎಲೆಕ್ಟ್ರಾನನ್ನು ಪೃಥಕ್ಕಾದ ಕಣವೆಂದು ಭಾವಿಸುವ ಬದಲು ವಿಸರಿತವಾದ ಮೇಘವೆಂದು (ಡಿಫ್ಯೂಸ್ಡ್ ಕ್ಲೌಡ್) ಕಲ್ಪಿಸಿಕೊಳ್ಳುವುದು ಉತ್ತಮ. ಬಹಳ ವೇಗದಲ್ಲಿ ಚಲಿಸುತ್ತಿರುವ ಎಲೆಕ್ಟ್ರಾನಿನ ಛಾಯಾಚಿತ್ರವನ್ನು ತೆಗೆದು ಪಡೆದ ಅಸ್ಪಷ್ಟ ಚಿತ್ರವೆಂದೂ ಈ ಮೇಘವನ್ನು ಕಲ್ಪಿಸಿಕೊಳ್ಳಬಹುದು. ಇಂಥ ಮೇಘದ ಆಕಾರವೇ ಕಕ್ಷಕದ ಆಕಾರ. ಮೇಘದ ಸಾಂದ್ರತೆ ಎಲ್ಲೆಡೆಯಲ್ಲಿಯೂ ಒಂದೇ ಆಗಿರದೆ ಎಲೆಕ್ಟ್ರಾನನ್ನು ಕಾಣುವ ಸಂಭವ ಹೆಚ್ಚಾಗಿದ್ದೆಡೆಯಲ್ಲಿ ಅಧಿಕವಾಗಿರುತ್ತದೆ. ಅಂದರೆ ಈ ಪ್ರದೇಶಗಳಲ್ಲಿ ಸರಾಸರಿ ಋಣ ವಿದ್ಯುದಂಶ ಅಥವಾ ಎಲೆಕ್ಟ್ರಾನ್ ಸಾಂದ್ರತೆ ಅತ್ಯಧಿಕವಾಗಿರುವುದು. ನಿಕೃಷ್ಟ ಶಕ್ತಿಮಟ್ಟದಲ್ಲಿರುವ ಕಕ್ಷಕವನ್ನು ಚಾರಿತ್ರಿಕ ಕಾರಣಗಳಿಗೋಸ್ಕರ 1s ಕಕ್ಷಕವೆಂದು ಕರೆಯಲಾಗಿದೆ. ಒಂದೇ ಎಲೆಕ್ಟ್ರಾನ್ ಇರುವ ಜಲಜನಕದ ಸಂದರ್ಭದಲ್ಲಿ ಷ್ರೋಡಿಂಗರ್ ಸಮೀಕರಣವನ್ನು ಅನ್ವಯಿಸಿ ಎಲೆಕ್ಟ್ರಾನ್ ಸಂಭವ ಪ್ರಸರಣವನ್ನು ನಿರ್ಧರಿಸಿದರೆ 1ನೆಯ ಚಿತ್ರದಲ್ಲಿ ತೋರಿಸಿರುವ ಗೋಳಾಕಾರದ ಮೇಘಾಕೃತಿ ದೊರೆಯುವುದು. ಇದರ ಅಂಚುಗಳು ಸುಸ್ಪಷ್ಟವಾಗಿರದೆ ಮಸುಕಾಗಿವೆ. ಕೇಂದ್ರದಲ್ಲಿ ನ್ಯೂಕ್ಲಿಯಸ್ಸಿದೆ. ಕಕ್ಷಕಕ್ಕೆ ಸುಸ್ಪಷ್ಟ ವಾದ ಎಲ್ಲೆಕಟ್ಟು ಇಲ್ಲವಾಗಿ ಎಲೆಕ್ಟ್ರಾನನ್ನು ನ್ಯೂಕ್ಲಿಯಸ್ಸಿನಿಂದ ಎಷ್ಟು ದೂರದಲ್ಲಿಯಾದರೂ–ಆಕಾಶಗಂಗೆಯಲ್ಲಿ ಸಹ–ಕಾಣಬಹುದಾದ ಸಾಧ್ಯತೆಯನ್ನು, ಅದೆಷ್ಟೇ ಅಲ್ಪವಾದರೂ ಸಹ, ತಳ್ಳಿಹಾಕುವಂತಿಲ್ಲ. ವಾಸ್ತವವಾಗಿ ನ್ಯೂಕ್ಲಿಯಸ್ಸಿನಿಂದ ನಿರ್ದಿಷ್ಟ ಅಂತರದಿಂದಾಚೆ ಹೋದಂತೆ ಎಲೆಕ್ಟ್ರಾನನ್ನು ಕಾಣುವ ಸಂಭವ ಬಹು ಶೀಘ್ರವಾಗಿ ಕಡಿಮೆಯಾಗುತ್ತದೆ. ಆದ್ದರಿಂದ ವಿದ್ಯುದಂಶದ ಪ್ರಸರಣವನ್ನು 1ನೆಯ ಚಿತ್ರ ಹೆಚ್ಚುಕಡಿಮೆ ಸರಿಯಾಗಿಯೇ ನಿರೂಪಿಸುತ್ತದೆ ಎನ್ನಬಹುದು. ಸರಳತೆಯ ದೃಷ್ಟಿಯಿಂದ ಕಕ್ಷಕವನ್ನು 2ನೆಯ ಚಿತ್ರದಲ್ಲಿ ತೋರಿಸಿರುವಂತೆ ರೇಖೆಯಿಂದ ತೋರಿಸಬಹುದು. ಈ ರೇಖೆಯ ಒಳಭಾಗದಲ್ಲಿ ಎಲೆಕ್ಟ್ರಾನ್ ಶೇ. 95 ರಷ್ಟು ಕಾಲ ಇರುವುದೆಂದು ಕಲ್ಪಿಸಿಕೊಳ್ಳಬಹುದು.



ಚಿತ್ರ 1



ಚಿತ್ರ 2

*2s* ಕಕ್ಷಕವು *1s* ಕಕ್ಷಕದ ಅನಂತರದ ಉನ್ನತ ಶಕ್ತಿಮಟ್ಟಕ್ಕೆ ಸರಿಹೊಂದುತ್ತದೆ. ಇದಕ್ಕೆ ಸಹ ಗೋಳಾಕಾರವಿದೆ. ಇದು *1s* ಕಕ್ಷಕಕ್ಕಿಂತ ಗಾತ್ರದಲ್ಲಿ ದೊಡ್ಡದು. *2s* ಕಕ್ಷಕದ ಅನಂತರ ಸಮಾನಶಕ್ತಿಯ ಮೂರು *2p* ಕಕ್ಷಕಗಳಿವೆ. 3ನೆಯ ಚಿತ್ರದಲ್ಲಿ ತೋರಿಸಿರುವಂತೆ ಪ್ರತಿ *p* ಕಕ್ಷಕದ ಆಕಾರ ಇಗ್ಗುಂಡಿನಂತಿದೆ (ಡಂಬೆಲ್). ಇದರಲ್ಲಿ ಎರಡು ಹೋಳುಗಳಿವೆ; ಪರಮಾಣುವಿನ ನ್ಯೂಕ್ಲಿಯಸ್ಸು ಇವುಗಳ ನಡುವಿನಲ್ಲಿದೆ. ಪ್ರತಿಯೊಂದು *2p* ಕಕ್ಷಕದ ಅಕ್ಷವು ಉಳಿದೆರಡು *2p* ಕಕ್ಷಕಗಳ ಅಕ್ಷಗಳಿಗೆ ಲಂಬವಾಗಿದೆ. ಈ ಮೂರು ಕಕ್ಷಕಗಳನ್ನು ಪ್ರತ್ಯೇಕವಾಗಿ ಗುರುತಿಸಲು ಅನುಕೂಲವಾಗುವಂತೆ ಇವನ್ನು *2px 2py* ಮತ್ತು *2pz*ಗಳೆಂದು ಕರೆಯಲಾಗಿದೆ. *x, y* ಮತ್ತು *z*ಗಳು ತತ್ಸಂಬಂಧಿತ ಅಕ್ಷಗಳನ್ನು ಸೂಚಿಸುತ್ತವೆ.

*d* ಕಕ್ಷಕಗಳಲ್ಲಿ 4ನೆಯ ಚಿತ್ರದಲ್ಲಿ ತೋರಿಸಿರುವಂತೆ ನ್ಯೂಕ್ಲಿಯಸ್ಸಿನ ಸುತ್ತಲೂ ನಾಲ್ಕು ಬಾದಾಮಿಗಳು ಇವೆ. ಐದನೆಯದು ಒಂದು ಅಕ್ಷದ ಮೇಲೆ ಜೋಡಣೆಯಾಗಿದೆ.




ಚಿತ್ರ 3

ಬಹುಎಲೆಕ್ಟ್ರಾನಿಕ ಪರಮಾಣುಗಳಲ್ಲಿ ಎಲೆಕ್ಟ್ರಾನುಗಳ ಪ್ರಸರಣವನ್ನು ನಿರ್ಧರಿಸುವ ಅಂದರೆ ಪರಮಾಣುವಿನ ಎಲೆಕ್ಟ್ರಾನಿಕ ವಿನ್ಯಾಸವನ್ನು ನಿರ್ಧರಿಸುವ ಕೆಲವು ನಿಯಮಗಳಿವೆ. ಈ ನಿಯಮಗಳಲ್ಲಿ ಪೌಲಿಯ ಬಹಿಷ್ಕರಣ ತತ್ತ್ವ (ಪೌಲೀಸ್ ಎಕ್ಸ್‌ಕ್ಲೂಷನ್ ಪ್ರಿನ್ಸಿಪಲ್)

ಬಹಳ ಮುಖ್ಯವಾದದ್ದು. ಇದರ ಪ್ರಕಾರ ಯಾವುದೊಂದು ಪರಮಾಣಿಕ ಕಕ್ಷಕದಲ್ಲಿ ಕೇವಲ ಎರಡು ಎಲೆಕ್ಟ್ರಾನುಗಳು ಮಾತ್ರ ಇರಬಲ್ಲವು; ಮತ್ತು ಹೀಗಿರಬೇಕಾದರೆ ಅವುಗಳ ಭ್ರಮಣ (ಸ್ಪಿನ್) ವಿರುದ್ಧ ದಿಕ್ಕುಗಳಲ್ಲಿರಬೇಕು. ಇಂಥ ಎರಡು ಕಕ್ಷಕ ಎಲೆಕ್ಟ್ರಾನುಗಳನ್ನು ಮಿಥುನವಾದ ಅಥವಾ ಜೋಡಿಯಾದ ಎಲೆಕ್ಟ್ರಾನುಗಳೆನ್ನುತ್ತಾರೆ. ಒಂದೇ ದಿಕ್ಕಿನಲ್ಲಿ ಭ್ರಮಣೆಯಿರುವ ಎರಡು ಎಲೆಕ್ಟ್ರಾನುಗಳು ಪರಸ್ಪರವಾಗಿ ಆದಷ್ಟು ದೂರವಾಗಿರಲು ಯತ್ನಿಸುತ್ತವೆ. ಅಣುಗಳ ಆಕಾರ ಮತ್ತು ಗುಣಗಳನ್ನು ನಿರ್ಧರಿಸುವ ಹಲವು ಅಂಶಗಳಲ್ಲಿ ಇದು ಅತ್ಯಂತ ಪ್ರಮುಖವಾದದ್ದೆನ್ನಬಹುದು.




ಚಿತ್ರ 4

ಆವರ್ತಕೋಷ್ಟಕದ ಮೊದಲನೆಯ ಹತ್ತು ಧಾತುಗಳ ಎಲೆಕ್ಟ್ರಾನ್ ವಿನ್ಯಾಸವನ್ನು 1ನೆಯ ಪಟ್ಟಿಯಲ್ಲಿ ಕಾಣಬಹುದು.

**ಎಲೆಕ್ಟ್ರಾನ್ ವಿನ್ಯಾಸ**

| ಧಾತು | 1s | 2s | 2p | ಒಟ್ಟು ಎಲೆಕ್ಟ್ರಾನುಗಳು |
|---|---|---|---|---|
| ಜಲಜನಕ | 1 | – | – | 1 |
| ಹೀಲಿಯಂ | 2 | – | – | 2 |
| ಲಿಥಿಯಂ | 2 | 1 | – | 3 |
| ಬೆರಿಲಿಯಂ | 2 | 2 | – | 4 |
| ಬೋರಾನ್ | 2 | 2 | 1,–,– | 5 |
| ಇಂಗಾಲ | 2 | 2 | 1,1,– | 6 |
| ಸಾರಜನಕ | 2 | 2 | 1,1,1 | 7 |
| ಆಕ್ಸಿಜನ್ | 2 | 2 | 2,1,1 | 8 |
| ಫ್ಲೋರೀನ್ | 2 | 2 | 2,2,1 | 9 |
| ನಿಯಾನ್ | 2 | 2 | 2,2,2 | 10 |

ಈ ಪಟ್ಟಿಯಿಂದ ಕೆಲವು ವಿಷಯಗಳು ವೇದ್ಯವಾಗುತ್ತವೆ:

1 ಒಂದು ಕಕ್ಷಕ ತುಂಬುವ ಮುನ್ನ ಅದಕ್ಕಿಂತ ಅಲ್ಪತರ ಶಕ್ತಿಯ ಕಕ್ಷಕ ಪೂರ್ಣವಾಗಿ ಭರ್ತಿಯಾಗಬೇಕು. ಉದಾಹರಣೆಗೆ 2s ಕಕ್ಷಕ, 1s ಕಕ್ಷಕ ತುಂಬಿದ ಅನಂತರವೇ ಆಕ್ರಮಿತವಾಗುತ್ತವೆ; 2s ಪೂರ್ಣವಾದ ಅನಂತರವೇ 2p ತುಂಬುತ್ತದೆ; ಇತ್ಯಾದಿ.

2 ಸಮಾನ ಶಕ್ತಿಮಟ್ಟಗಳ ಕಕ್ಷಕಗಳ ಸಂದರ್ಭದಲ್ಲಿ–ಉದಾಹರಣೆಗೆ 2p ಕಕ್ಷಕಗಳ ಸಂದರ್ಭದಲ್ಲಿ–ಪ್ರತಿಯೊಂದು ಕಕ್ಷಕದಲ್ಲಿ ಒಂದು ಎಲೆಕ್ಟ್ರಾನ್ ಸೇರಿದ ಹೊರತು, ಒಂದು ಕಕ್ಷಕದಲ್ಲಿ ಎರಡನೆಯ ಎಲೆಕ್ಟ್ರಾನಿನ ಪ್ರವೇಶವಾಗುವುದಿಲ್ಲ.

3 1s ಎಲೆಕ್ಟ್ರಾನುಗಳು ಎರಡು ಎಲೆಕ್ಟ್ರಾನುಗಳನ್ನು ಒಳಗೊಂಡಿರುವ ಏವಲಯಕ್ಕೂ 2s ಮತ್ತು 2p ಎಲೆಕ್ಟ್ರಾನುಗಳು 8 ಎಲೆಕ್ಟ್ರಾನುಗಳಿರುವ ಐ ವಲಯಕ್ಕೂ ಸರಿಹೊಂದುತ್ತವೆ. ಮೊದಲನೆಯ 10 ಧಾತುಗಳ ಅನಂತರ ಇರುವ ಧಾತುಗಳ ಸಂದರ್ಭದಲ್ಲಿ 3s, 3p ಕಕ್ಷಕಗಳು ಇತ್ಯಾದಿಗಳನ್ನೊಳಗೊಂಡ ಮೂರನೆಯ ವಲಯವೊಂದಿದೆ.

ಮೇಲೆ ಹೇಳಿದ ಕಕ್ಷಕಗಳೆಲ್ಲ ಪ್ರತ್ಯೇಕಿತವಾದ ಒಂದು ಪರಮಾಣುವಿನಲ್ಲಿರುವ ಎಲೆಕ್ಟ್ರಾನುಗಳಿಂದ ಆಕ್ರಮಿತವಾಗಿವೆ. ಪರಮಾಣುವೊಂದು ಇನ್ನೊಂದು ಪರಮಾಣುವಿನೊಂದಿಗೆ ಕೋವೆಲೆಂಟ್ ಬಂಧಗಳನ್ನು ರಚಿಸಿದಾಗ, ಕಕ್ಷಕಗಳ ಅತಿವ್ಯಾಪನೆಯಾಗುತ್ತದೆಂದು ಭಾವಿಸಲಾಗಿದೆ. ಇಂಥ ಸಂದರ್ಭಗಳಲ್ಲಿ ಕಕ್ಷಕಗಳ ಪೂರ್ಣತರಂಗ ಸಮೀಕರಣಗಳನ್ನು ಪಡೆಯುವುದು ಬಹುಎಲೆಕ್ಟ್ರಾನಿಕ ಪರಮಾಣುಗಳ ಸಂದರ್ಭಕ್ಕಿಂತ ಕಷ್ಟಕರ. ಕರಾರುವಾಕ್ಕಾದ ಅಣ್ವಿಕತರಂಗೋತ್ಪನ್ನ ಎಲ್ಲ ಎಲೆಕ್ಟ್ರಾನುಗಳ ಮತ್ತು ನ್ಯೂಕ್ಲಿಯಸ್‌ಗಳ ನಿರ್ದೇಶಾಂಕವನ್ನು ಮತ್ತು ಪ್ರತಿಯೊಂದು ಕಣ ಇತರ ಕಣಗಳೊಂದಿಗೆ ಪರಸ್ಪರ ಕ್ರಿಯೆಗಳಿಗೆ ಒಳಗಾದಾಗ (ಆಕರ್ಷಣ ಮತ್ತು ವಿಕರ್ಷಣ) ದೊರೆಯುವ ಫಲಿತಾಂಶಗಳನ್ನು ವರ್ಣಿಸುವ ಪದಗಳನ್ನು (ಟರ್ಮ್ಸ್) ಒಳಗೊಂಡಿರಬೇಕು. ಇಂಥ ಒಂದು ಸಮೀಕರಣವನ್ನು ಇದುವರೆಗೆ ಯಾರೂ ನಿರೂಪಿಸಿಲ್ಲ. ನಿರೂಪಿಸಿದರೂ ಸಾಮಾನ್ಯವಾಗಿ ಇದನ್ನು ಅರ್ಥ ಮಾಡಿಕೊಳ್ಳುವುದು ಸಂದೇಹಾಸ್ಪದ. ಆದ್ದರಿಂದ ಅಣ್ವಿಕತರಂಗೋತ್ಪನ್ನ ಅಥವಾ ಅಣ್ವಿಕ–ಕಕ್ಷಕವನ್ನು ಸರಿಸುಮಾರಾಗಿ ವರ್ಣಿಸಲು ಅನೇಕ ವಿಧಾನಗಳನ್ನು ಬಳಸಲಾಗಿದೆ. ಇವುಗಳಲ್ಲಿ ಒಂದನ್ನು ಅಣ್ವಿಕ–ಕಕ್ಷಕ ವಿಧಾನವೆಂದು ಕರೆಯಲಾಗಿದೆ. ಇದನ್ನು ಕೆಳಗಿನ ಹಂತಗಳಲ್ಲಿ ನಡೆಸಬಹುದು: 1 ಪರಮಾಣಿಕ ಕಕ್ಷಕಗಳ ರೇಖೀಯ ಸಂಕಲನದಿಂದ (ಲೀನಿಯರ್ ಕಾಂಬಿನೇಷನ್) ಅಣ್ವಿಕ್–ಕಕ್ಷಕಗಳ ಶ್ರೇಣಿಯೊಂದನ್ನು ರಚಿಸುವುದು. 2 ಇವನ್ನು ವೃದ್ಧಿಯಾಗುವ ಶಕ್ತಿಗನುಸಾರವಾಗಿ ಜೋಡಿಸುವುದು. 3 ಅಲ್ಪತರ ಶಕ್ತಿಮಟ್ಟದಿಂದ ಪ್ರಾರಂಭಿಸಿ ಉನ್ನತ ಶಕ್ತಿಮಟ್ಟದ ಕಡೆಗೆ ಹೋಗುವಂತೆ ಎಲೆಕ್ಟ್ರಾನುಗಳನ್ನು ಮಿಥುನವಾದ ಭ್ರಮಣಗಳ ಜೋಡಿಯಂತೆ ಅಣ್ವಿಕ ಕಕ್ಷಕಗಳನ್ನು ವ್ಯವಸ್ಥೆ ಮಾಡುವುದು.

ಅಣ್ವಿಕ ರಚನೆಯ ವರ್ಣನೆಗೆ ಜಲಜನಕ ಅಣುವನ್ನು ಉದಾಹರಣೆಯನ್ನಾಗಿ ತೆಗೆದುಕೊಂಡು ಈ ವಿಧಾನದ ತತ್ತ್ವಗಳನ್ನು ನಿರೂಪಿಸಬಹುದು. ಜಲಜನಕ ಅಣು ದ್ವಿಪರಮಾಣಿಕ ಅಣು. ಪ್ರತಿಯೊಂದು ಜಲಜನಕದ ಪರಮಾಣುವಿನಲ್ಲಿ ಒಂದು 1s ಎಲೆಕ್ಟ್ರಾನಿದೆ. ಇದು ಕಕ್ಷಕ–ಕೇಂದ್ರದಲ್ಲಿ ನ್ಯೂಕ್ಲಿಯಸ್ಸನ್ನು ಒಳಗೊಂಡು ಗೋಳಾಕೃತಿಯಲ್ಲಿದೆ. ಬಂಧರಚನೆಯಾಗಲು ಇವೆರಡು ನ್ಯೂಕ್ಲಿಯಸ್ಸುಗಳು ಪರಮಾಣಿಕ ಕಕ್ಷಕಗಳು ಅತಿವ್ಯಾಪಿಸುವಂತೆ (ಓವರ್‌ಲ್ಯಾಪ್) ಸಾಕಷ್ಟು ಹತ್ತಿರದಲ್ಲಿರಬೇಕು. ಜಲಜನಕದ ಸಂದರ್ಭದಲ್ಲಿ ನ್ಯೂಕ್ಲಿಯಸ್ಸುಗಳ ಅಂತರ 0.74 ಆದಾಗ ವ್ಯವಸ್ಥೆ ಸ್ಥಿರತಮವಾಗಿರುತ್ತದೆ. ಈ ದೂರವನ್ನು ಬಂಧದೂರವೆಂದು (ಬಾಂಡ್‌ಲೆಂಗ್ತ್) ಕರೆಯಲಾಗಿದೆ. ಈ ಅಂತರದಲ್ಲಿ ಅತಿವ್ಯಾಪನೆಯಿಂದ ಒದಗಿ ಬರುವ ಸ್ಥಿರತೆ ಸದೃಶ ವಿದ್ಯುದಂಶವುಳ್ಳ ನ್ಯೂಕ್ಲಿಯಸ್‌ಗಳ ಪರಸ್ಪರ ವಿಕರ್ಷಣೆಗೆ ಕರಾರುವಾಕ್ಕಾಗಿ ಸರಿದೂಗುತ್ತದೆ. ಬಂಧರಚನೆಯಲ್ಲಿ ಶಕ್ತಿ ಬಿಡುಗಡೆಯಾಗುವುದರ ಫಲವಾಗಿ ಅಣುವಿನ ಶಕ್ತಿ ಘಟಕ ಜಲಜನಕ ಪರಮಾಣುಗಳ ಶಕ್ತಿಗಿಂತ ಪ್ರತಿಮೋಲಿಗೆ 103 ಕಿಲೋಕ್ಯಾಲರಿಯಷ್ಟು ಕಡಿಮೆಯಾಗುತ್ತದೆ ಮತ್ತು ಇದರಿಂದ ಅಣುವು ಸ್ಥಿರತೆಯನ್ನು ಗಳಿಸುತ್ತದೆ.



ಚಿತ್ರ 5

ಪರಮಾಣಿಕ ಕಕ್ಷಕಗಳ ಅತಿ ವ್ಯಾಪನೆಯಿಂದ ರಚಿತವಾಗುವ ಬಂಧಕಕ್ಷಕದ ಆಕಾರ ಎರಡು ಕಕ್ಷಕಗಳ ಲೀನತೆಯಿಂದ ನಿರೀಕ್ಷಿಸಬಹುದಾದ ಆಕಾರವನ್ನು ಸರಿಸುಮಾರಾಗಿ ಹೋಲುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ ಇದಕ್ಕೆ ನೇರಿಳೆ ಹಣ್ಣಿನ ಆಕಾರವಿದೆ. ಅದರ ದೀರ್ಘಾಕ್ಷ ಎರಡು ನ್ಯೂಕ್ಲಿಯಸ್ಸುಗಳನ್ನು ಕೂಡಿಸುವ ರೇಖೆಯ ಉದ್ದಕ್ಕೂ ಇದೆ. ಇದರ ಆಕಾರ ಈ ಅಕ್ಷದ ಸುತ್ತ ಉರುಳುಕೊಳವೆಯಂತೆ ಸಮಾಂಗವಾಗಿದೆ. ಇಂಥ ಬಂಧಕಕ್ಷಕಗಳನ್ನು ಸಿಗ್ಮ ($\frac{1}{10}$) ಕಕ್ಷಕಗಳೆಂದು ಕರೆಯಲಾಗಿದೆ ಮತ್ತು ಬಂಧಗಳನ್ನು $\frac{1}{10}$ – ಬಂಧಗಳೆಂದು ಕರೆಯಲಾಗಿದೆ. ಈ ಚಿತ್ರಣದ ರೀತ್ಯಾ ಜಲಜನಕದ ಅಣುವನ್ನು ನೇರಿಳೆಹಣ್ಣಿನ ಆಕಾರದ ಒಂದೇ ಎಲೆಕ್ಟ್ರಾನ್ ಮೇಘದಲ್ಲಿ ಅಡಕವಾಗಿರುವ ಎರಡು ನ್ಯೂಕ್ಲಿಯಸ್ಸುಗಳೆಂದು ಕಲ್ಪಿಸಿಕೊಳ್ಳಬಹುದು.

**ಸಂಕರ ಕಕ್ಷಕಗಳು:** ಇಂಗಾಲದ ಪರಮಾಣು ಇತರ ಪರಮಾಣುಗಳೊಂದಿಗೆ–ಉದಾಹರಣೆಗೆ ಜಲಜನಕ–ಕೋವೆಲೆಂಟ್ ಬಂಧಗಳನ್ನು ರಚಿಸುತ್ತದೆ. ಇಂಗಾಲದ ಪರಮಾಣುವಿನಲ್ಲಿ ಎರಡು ಕಕ್ಷಕಗಳಲ್ಲಿ ಪ್ರತಿಯೊಂದರಲ್ಲೂ ಮಿಥುನವಾಗದ ಒಂದು ಎಲೆಕ್ಟ್ರಾನಿದೆ. ಆದ್ದರಿಂದ ಇಂಗಾಲವು ಜಲಜನಕದೊಂದಿಗೆ ಸಂಯೋಗವಾಗುವಾಗ ಅಣು ಉತ್ಪತ್ತಿಯಾಗುತ್ತದೆಂದು ನಿರೀಕ್ಷಿಸಬಹುದು. ಆದರೆ ವಾಸ್ತವವಾಗಿ ನಾಲ್ಕು ಜಲಜನಕದ ಪರಮಾಣುಗಳು ಒಂದು ಇಂಗಾಲದ ಪರಮಾಣುವಿನೊಂದಿಗೆ ಸೇರಿ ಮೀಥೇನ್, $CH_4$, ಅಣುವನ್ನು ರೂಪಿಸುತ್ತವೆ; ಎಂದರೆ ನಾಲ್ಕು ಕೋವೆಲೆಂಟ್ ಬಂಧಗಳು ರಚಿತವಾಗುತ್ತವೆ. ಆದ್ದರಿಂದ ಇಂಗಾಲದಲ್ಲಿ ನಾಲ್ಕು ಮಿಥುನವಾಗದ ಎಲೆಕ್ಟ್ರಾನುಗಳಿರಬೇಕಾದ ಪ್ರಸಂಗವೊದಗುತ್ತದೆ. 2s ಎಲೆಕ್ಟ್ರಾನುಗಳಲ್ಲಿ ಒಂದನ್ನು 2p ಕಕ್ಷಕಕ್ಕೆ ಉತ್ತೀರ್ಣಗೊಳಿಸುವುದರ

ಮೂಲಕ ಇವನ್ನು ಒದಗಿಸಬಹುದು. ಹೀಗಾಗುವುದರಿಂದ ಇಂಗಾಲ ಒಂದು s ಕಕ್ಷಕವನ್ನು ಉಪಯೋಗಿಸಿ ಒಂದು ತರಹೆಯ ಬಂಧವನ್ನೂ ಮೂರು p ಕಕ್ಷಕಗಳನ್ನು ಉಪಯೋಗಿಸಿ ಒಂದು ತರಹೆಯ ಬಂಧವನ್ನೂ ರಚಿಸುತ್ತದೆಂದು ನಿರೀಕ್ಷಿಸಬಹುದು. ಆದರೆ ಲೆಕ್ಕಾಚಾರಗಳ ಪ್ರಕಾರ ಈ ನಾಲ್ಕು ಬಂಧಗಳೂ ಸಮತುಲ್ಯವಾಗಿದ್ದು (ಈಕ್ವಿವಲೆಂಟ್) ಚತುಷ್ಫಲಕದ (ಟೆಟ್ರಹೆಡ್ರನ್) ನಾಲ್ಕು ಮೂಲೆಗಳ ಕಡೆಗೆ ನಿರ್ದೇಶಿತವಾಗಿದ್ದರೆ ಬಂಧಗಳು ಅತಿಶಯವಾಗಿ ಬಲಯುತವಾಗಿರುತ್ತವೆಂದು ಗೊತ್ತಾಗಿದೆ.



ಚಿತ್ರ 6

6ನೆಯ ಚಿತ್ರ ಸೂಚಿಸುವಂತೆ ನಾಲ್ಕು ಜಲಜನಕ ಪರಮಾಣುಗಳೊಡನೆ ಸಂಯೋಗವಾಗಲಿರುವ ಕಾಲ್ಪನಿಕ ಇಂಗಾಲದ ಪರಮಾಣುವಿನಲ್ಲಿ ನಾಲ್ಕು ಸಮತುಲ್ಯ ಪರಮಾಣು ಕಕ್ಷಕಗಳಿವೆ. ಇವು ಒಂದು s ಕಕ್ಷಕವನ್ನೂ ಮತ್ತು ಮೂರು p ಕಕ್ಷಕಗಳನ್ನೂ ಮಿಶ್ರ ಮಾಡುವುದರಿಂದ ಉದ್ಭವ ವಾಗುತ್ತವೆಂದು ಪರಿಗಣಿಸಲಾಗಿದೆ. ಇವನ್ನು $sp^3$ ಕಕ್ಷಕ ಗಳೆಂದು ಕರೆಯಲಾಗಿದೆ. ಇವು ಒಂದು ತರಹೆಯ ಸಂಕರ ಕಕ್ಷಕಗಳು. ಈ ಪ್ರತಿಯೊಂದು $sp^3$ ಕಕ್ಷಕಗಳು ಒಂದು ಜಲಜನಕದ s ಕಕ್ಷಕದೊಂದಿಗೆ ಅತಿವ್ಯಾಪನೆಯಾದಾಗ ಮೀಥೇನ್ ಅಣು ಉತ್ಪತ್ತಿಯಾಗುತ್ತದೆ. (ಎಚ್.ಎಸ್.ಎಸ್.)

**ಕಕ್ಷಿಗಾರ :** ಪ್ರಾಚೀನ ರೋಮಿನಲ್ಲಿ ವಾಸಿಸುತ್ತಿದ್ದು, ಸ್ವತಂತ್ರನಾದರೂ ರೋಮಿನ ಪ್ರಜೆಯಲ್ಲವೆಂಬ ಕಾರಣದಿಂದ, ರೋಮನ್ ರಕ್ತವಿರುವ ಶ್ರೀಮಂತನ ರಕ್ಷಣೆಯಲ್ಲಿರಬೇಕಾದ ಪ್ರಜೆಯೆಂಬುದು ಇದರ ಸಮಾನ ಇಂಗ್ಲಿಷ್ ಪದವಾದ ಕ್ಲೈಯೆಂಟ್ ಎಂಬುದರ ಹಳೆಯ ಅರ್ಥ. ಇವನೊಬ್ಬ ಆಶ್ರಿತ, ಅವಲಂಬಿ, ತನ್ನ ಸಹಾಯಕ್ಕಾಗಿ ನ್ಯಾಯವಾದಿಯನ್ನು ನೇಮಿಸಿಕೊಳ್ಳುವವನು–ಎಂಬುದು ಕಕ್ಷಿಗಾರ (ಕ್ಲೈಯೆಂಟ್) ಶಬ್ದದ ಇನ್ನೊಂದು ಅರ್ಥ. ಯಾವ ಕಸಬಿನವನನ್ನಾದರೂ ತನ್ನ ಸಹಾಯಕ್ಕಾಗಿ ಇಟ್ಟುಕೊಳ್ಳುವವನು, ಗಿರಾಕಿ, ಗ್ರಾಹಕ–ಎಂಬ ಅರ್ಥದಲ್ಲೂ ಕ್ಲೈಯೆಂಟ್ ಪದವನ್ನು ಬಳಸಲಾಗುತ್ತದೆ.

ಪ್ರತಿಯೊಬ್ಬನೂ ತನ್ನ ದೇಶದ ಕಾನೂನನ್ನು ತಿಳಿದಿರುತ್ತಾನೆ ಎಂಬುದು ನ್ಯಾಯಶಾಸ್ತ್ರದ ಮೂಲತತ್ತ್ವಗಳಲ್ಲಿ ಒಂದು. ಆದರೆ ನ್ಯಾಯಶಾಸ್ತ್ರ ಅಗಾಧ ಸಮುದ್ರ. ಅದನ್ನು ಬಲ್ಲವರು ಬಹಳಿಲ್ಲ. ಬಹಳ ಬಲ್ಲವರಿಲ್ಲ. ಆದುದರಿಂದ ಸಾಮಾನ್ಯರು ಸಂದಿಗ್ಧ ಸಮಯದಲ್ಲಿ ನ್ಯಾಯಶಾಸ್ತ್ರ ಬಲ್ಲವರಲ್ಲಿ ಹೋಗುವುದು ಅನಿವಾರ್ಯ, ತನ್ನ ಸ್ಥಿರ ಚರ ಸ್ವತ್ತುಗಳ ಅಥವಾ ತನ್ನ ಹಕ್ಕುಬಾಧ್ಯತೆಗಳ ಸಂಬಂಧವಾಗಿ ಎದ್ದ ಸಮಸ್ಯೆಗಳನ್ನು ಅವನ ಮುಂದಿಟ್ಟು ಅವಕ್ಕೆ ಕಾನೂನು ರೀತ್ಯಾ ತಕ್ಕ ನಿವಾರಣೆಯನ್ನು ಅಪೇಕ್ಷಿಸುವವನು ಕಕ್ಷಿಗಾರ. ಈ ಅರ್ಥದಲ್ಲೇ ಈ ಲೇಖನವನ್ನು ಬರೆಯಲಾಗಿದೆ.

ರೋಮಿನಲ್ಲಿ ನ್ಯಾಯಪಂಡಿತರೂ ಕಕ್ಷಿಗಾರನಿಗಾಗಿ ಅಗತ್ಯವಾದ ಕೆಲಸ ಮಾಡುತ್ತಿದ್ದವರೂ ಮಹತ್ತ್ವದ ಸ್ಥಾನ ಗಳಿಸಿದ್ದರು. ಅವರನ್ನು ವೆಟರ್ಸ್ ಎಂದು ಕರೆಯಲಾಗುತ್ತಿತ್ತು. ಅವರು ತಮ್ಮ ಕಕ್ಷಿಗಾರನಿಗಾಗಿ ಕಾನೂನು ರೀತ್ಯಾ ಅಗತ್ಯವುಳ್ಳ ದಸ್ತಾವೇಜುಗಳನ್ನು ಬರೆಯುವುದರೊಂದಿಗೆ, ತನ್ನ ಕಕ್ಷಿಗಾರನ ಪರವಾಗಿ ನ್ಯಾಯಾಲಯದ ಮುಂದೆ ವಾದಿಸಲು ವಾಕ್ಚತುರನಿಗೆ ಬೇಕಾದ ಆಧಾರ ಸಾಮಗ್ರಿಗಳನ್ನು ಸಂಗ್ರಹಿಸಿಕೊಡುತ್ತಿದ್ದರು. ಕ್ಲಿಷ್ಟ ಸಮಸ್ಯೆಗಳ ಬಗ್ಗೆ ತಮ್ಮನ್ನು ಕೇಳಲಾದ ಪ್ರಶ್ನೆಗಳನ್ನು ಉತ್ತರಿಸುತ್ತಿದ್ದರು. ಈ ನ್ಯಾಯಪಂಡಿತರು ಹಣದ ಮೋಹಕ್ಕೆ ಸಿಕ್ಕಿ ಕೆಲಸ ಮಾಡುವುದು ಅನೈತಿಕವೆಂದು ಭಾವಿಸಲಾಗಿತ್ತು. ಕಕ್ಷಿಗಾರ ಮತ್ತು ವಕೀಲ–ಇವರ ಸಂಬಂಧ ಇಂದಿಗೂ ಹೆಚ್ಚುಕಡಿಮೆ ಅದೇ ರೀತಿ ನಡೆದು ಬಂದಿದೆ.

ಕಕ್ಷಿಗಾರನ ಸಮಸ್ಯೆಗಳನ್ನು ವಿಮರ್ಶಿಸಿ, ಸಂಬಂಧಪಟ್ಟ ನ್ಯಾಯಸೂತ್ರಗಳನ್ನು ಸರಿಯಾಗಿ ತಿಳಿದುಕೊಂಡು ಅವನಿಗೆ ಸೂಕ್ತ ಸಲಹೆ ಕೊಡುವುದು ವಕೀಲನ ಧರ್ಮ. ಅಮೆರಿಕದಲ್ಲಿ ಕಕ್ಷಿಗಾರ ಮತ್ತು ವಕೀಲರ ಸಂಬಂಧ ಇತರ ವ್ಯವಹಾರ ಸಂಬಂಧಗಳಂತೆಯೇ ಬೆಳೆದಿದೆ. ಅಲ್ಲಿ ಒಬ್ಬ ಕಕ್ಷಿಗಾರ ತನ್ನ ಸಮಸ್ಯೆಯ ನಿವೃತ್ತಿಗಾಗಿ ವಕೀಲನ ಬಳಿಗೆ ಬಂದರೆ ಅದನ್ನು ವಕೀಲ ತನ್ನಿಂದಾಗದೆಂದು ಬಿಟ್ಟುಬಿಡಬಹುದು. ಆದರೆ ಇಂಗ್ಲೆಂಡಿನಲ್ಲಿ ತನ್ನ ಬಳಿಗೆ ಬಂದ ಕಕ್ಷಿಗಾರ ನ್ಯಾಯವಾದ ಶುಲ್ಕ ಕೊಟ್ಟಲ್ಲಿ ಅವನ ಮೊಕದ್ದಮೆಯನ್ನು ಬ್ಯಾರಿಸ್ಟರ್ (ಉನ್ನತ ವಕೀಲ) ತೆಗೆದುಕೊಳ್ಳಲೇಬೇಕೆಂದು ಅಲ್ಲಿಯ ನ್ಯಾಯವಾದಿಗಳ ಸಂಘ (ಬಾರ್ ಅಸೋಸಿಯೇಷನ್) ನಿರ್ಣಯಿಸಿದೆ. ಜಸ್ಟಿಸ್ ಸುಂದರಂ ಐಯರ್ ಬರೆದಿರುವ ಪ್ರೊಫೆಷನಲ್ ಎಥಿಕ್ಸ್ ಎಂಬ ಪುಸ್ತಕದಲ್ಲಿ ಈ ಅಭಿಪ್ರಾಯವನ್ನೇ ಸಮರ್ಥಿಸಲಾಗಿದೆ. ಯಾರೇ ಆಗಲಿ ಆತ ತಪ್ಪಿತಸ್ಥನೆಂದೇ ವಕೀಲನಿಗೆ ಎನಿಸಿದ್ದರೂ ಕಾನೂನು ರೀತ್ಯಾ ತಪ್ಪಿತಸ್ಥನೆಂದು ರುಜುವಾತಾಗದೆ ಆತ ತಪ್ಪಿತಸ್ಥನೆಂದು ಹೇಳಲಾಗುವುದಿಲ್ಲ. ಅದರ ರುಜುವಾತಿನ ಬಗ್ಗೆ ಕಕ್ಷಿಗಾರ ಕಷ್ಟದಲ್ಲಿರುವಾಗ ವಕೀಲ ನುಣುಚಿಕೊಳ್ಳುವುದು ಸರಿಯಾಗಲಾರದು. ಇದಕ್ಕೆ ವಿರೋಧ ಅಭಿಪ್ರಾಯಗಳೂ ಇವೆ. ಕಕ್ಷಿಗಾರನ ಮೊಕದ್ದಮೆಯನ್ನು ತೆಗೆದುಕೊಂಡ ಬಳಿಕ ಅವನಿಗೆ ತಿಳಿಸದೆ ಅದರಿಂದ ಬಿಟ್ಟು ಹೋಗುವುದು ಸರಿಯಲ್ಲವೆಂದು ಉಚ್ಚ ನ್ಯಾಯಾಲಯ ತೀರ್ಮಾನ ಕೊಟ್ಟಿದೆ. (ಕೆ.ಜಿ.ಬಿ.)

**ಕಕ್ಷೆ :** ಎರಡು ವಸ್ತುಗಳು ಒಂದರ ಸುತ್ತ ಇನ್ನೊಂದು ಚಲಿಸುತ್ತಿರುವಾಗ ಒಂದನ್ನು ಕುರಿತು ಇನ್ನೊಂದರ ಪಥ (ಅರ್ಬಿಟ್). ಉದಾಹರಣೆಗೆ ಚಂದ್ರ–ಭೂಮಿ ವ್ಯವಸ್ಥೆಯನ್ನು ಪರಿಶೀಲಿಸಬಹುದು. ಗುರುತ್ವಾಕರ್ಷಣ ಬಲದ ನಿಯಮಾನುಸಾರ ಇವು ಪರಸ್ಪರ

$G.\frac{E.M}{d^2}$ ಬಲದಿಂದ ಆಕರ್ಷಿಸುತ್ತಿವೆ. ಇಲ್ಲಿ $G$ (ನ್ಯೂಟನ್ನನ) ಗುರುತ್ವಾಕರ್ಷಣದ




ಚಿತ್ರ 1

ಸಾರ್ವತ್ರಿಕ ನಿಯತಾಂಕ; $E$ ಮತ್ತು $M$ಗಳು ಭೂಮಿಯ ಹಾಗೂ ಚಂದ್ರನ ರಾಶಿಗಳು; $d$ ಭೂಮಿ–ಚಂದ್ರರ ಕೇಂದ್ರಾಂತರ.

ಇಲ್ಲಿ $E$ಯ ಬೆಲೆ $M$ ಬೆಲೆಗಿಂತ ದ್ರವ್ಯ ಬಹಳ ಹೆಚ್ಚಾಗಿರುವುದರಿಂದ (ಸರಿಸುಮಾರಾಗಿ 81 $M=E$) ಚಂದ್ರನ ಮೇಲೆ ಭೂಮಿಯಿಂದ

ಪರಿಣಮಿಸುವ ವೇಗೋತ್ಕರ್ಷ $\left(=\frac{G.E}{d^2}\right)$ ಭೂಮಿಯ ಮೇಲೆ ಚಂದ್ರನಿಂದ

ಪರಿಣಮಿಸುವ ವೇಗೋತ್ಕರ್ಷಕ್ಕಿಂತ $\left(=\frac{G.M}{d^2}\right)$ 81ರಷ್ಟು ಪಾಲು ಹೆಚ್ಚು. ನಿವ್ವಳ ಪರಿಣಾಮವಾಗಿ ಭೂಮಿ ಸ್ಥಿರವಾಗಿರುವಂತೆಯೂ ಚಂದ್ರ ಸಾಪೇಕ್ಷ ವೇಗದಿಂದ ಭೂಮಿಯನ್ನು ಪರಿಭ್ರಮಿಸುತ್ತಿರುವಂತೆಯೂ ಭಾಸವಾಗುತ್ತದೆ. ಭೂಮಿಯನ್ನು ಕುರಿತು ಚಂದ್ರ ರೇಖಿಸುವ ಪಥದ ಹೆಸರು ಚಂದ್ರಕಕ್ಷೆ. ಇದೇ ಪ್ರಕಾರ ಸೂರ್ಯನ ಮತ್ತು ಭೂಮಿ ರೇಖಿಸುವ ಪಥದ ಹೆಸರು ಭೂಕಕ್ಷೆ.

ನ್ಯೂಟನ್ನನ ಸಾರ್ವತ್ರಿಕ ಗುರುತ್ವಾಕರ್ಷಣಬಲದ ನಿಯಮಾನುಸಾರ, ಎರಡು ಆಕಾಶಕಾಯಗಳ ಪರಸ್ಪರಾಕರ್ಷಣೆಯಲ್ಲಿ ಪ್ರಬಲಿಯ ಸುತ್ತಲೂ ದುರ್ಬಲಿ ಒಂದು ದೀರ್ಘವೃತ್ತ ಕಕ್ಷೆಯಲ್ಲಿ ಚಲಿಸುವುದು.

$$u+\frac{d^2u}{d\theta^2}=\frac{P}{h^2u^2}$$

ಸಮೀಕರಣದಲ್ಲಿ $P=\frac{\mu}{r^2}=\mu u^2$

ಎಂದು ಆದೇಶಿಸಿದಾಗ $u+u_2=\frac{\mu}{h^2}$ ಆಗುತ್ತದೆ.

$$\therefore u = \mathrm{L}\cos\theta + \mathrm{M}\sin\theta + \frac{\mu}{h^2}$$

ಇಲ್ಲಿ ಪ್ರಾರಂಭಿಕ ಸ್ಥಿತಿಯನ್ನು ಅನುಸರಿಸಿ L ಮತ್ತು M ಎಂಬ ಸ್ಥಿರಾಂಕಗಳನ್ನು ಗಣಿಸಬಹುದು. ಮೇಲಿನ ಸಮೀಕರಣ ಪ್ರಬಲಿಯನ್ನು ಕುರಿತು ದುರ್ಬಲಿಯ ಕಕ್ಷೆ ಒಂದು ಶಂಕುಜವೆಂದೂ ಪ್ರಬಲಿಯು ಇದರ ಒಂದು ನಾಭಿಯಲ್ಲಿದೆಯೆಂದೂ ತೋರಿಸುತ್ತದೆ. ಇದು ಗಣಿತದ ಆದರ್ಶೀಕೃತ ಪರಿಸ್ಥಿತಿ ಒದಗಿಸುವ ಚಿತ್ರ. ವಾಸ್ತವಿಕತೆ ಇಷ್ಟು ಸರಳವಲ್ಲ. ಭೂಮಿ–ಚಂದ್ರ ವ್ಯವಸ್ಥೆಯನ್ನೇ ಪರಿಶೀಲಿಸಬಹುದು. ಇದನ್ನು ಕೇವಲ ದ್ವಿಕಾಯ ಸಮಸ್ಯೆ ಎಂದು ಭಾವಿಸಿದರೆ ಚಂದ್ರಕಕ್ಷೆ ದೀರ್ಘವೃತ್ತ ನಿಜ. ಆದರೆ, ಮೊದಲನೆಯದಾಗಿ ಭೂಮಿಯ ಮೇಲೆ ದ್ರವ್ಯ ವಿತರಣೆ ಅಸಮವಾಗಿರುವುದರಿಂದ ಆಕರ್ಷಣಬಲ ಎಲ್ಲೆಡೆಗಳಲ್ಲಿಯೂ

ಏಕಪ್ರಕಾರವಾಗಿರುವುದಿಲ್ಲ. ಇದರಿಂದ ಚಂದ್ರಕಕ್ಷೆಯಲ್ಲಿ ಲಘು ಆಂದೋಳನಗಳು ಉಂಟಾಗುತ್ತವೆ. ಎರಡನೆಯದಾಗಿ, ಸೂರ್ಯನ ಗುರುತ್ವಾಕರ್ಷಣಬಲವನ್ನು ಲೆಕ್ಕಕ್ಕೆ ತೆಗೆದು ಕೊಳ್ಳಲೇಬೇಕು; ಅಲ್ಲದೇ ಸೌರವ್ಯೂಹದ ಇತರ ಗ್ರಹಗಳ ಪ್ರಭಾವವನ್ನು ಕಡೆಗಣಿಸುವಂತಿಲ್ಲ. ಹೀಗಾಗಿ ಸೂಕ್ಷ್ಮ ಪರಿಶೀಲನೆಯಲ್ಲಿ ಚಂದ್ರನ ಚಲನೆ (ಆದ್ದರಿಂದ ಕಕ್ಷೆ) ಬಲು ಸಂಕೀರ್ಣವಾಗುತ್ತದೆ–ಇದೊಂದು ಬಹುಕಾಯ ಸಮಸ್ಯೆಯೇ ಆಗುವುದು. ಆಕಾಶಕಾಯಗಳ ಚಲನೆಯಲ್ಲಿ ಎದುರಾಗುವ ಇಂಥ ಪರಿಸ್ಥಿತಿಗಳಲ್ಲಿ ಗಣಿತದ ಆದರ್ಶೀಕೃತ ಪರಿಹಾರವನ್ನು ಮೊದಲು ತೀರ್ಮಾನಿಸಿ ತರುವಾಯ ವಾಸ್ತವಿಕ ಪರಿಸ್ಥಿತಿ ಇದರಿಂದ ಎಷ್ಟು ಭಿನ್ನವಾಗಿದೆ ಎಂದು ವೀಕ್ಷಣೆಗಳಿಂದ ತಿಳಿದು ಕಾರಣಗಳನ್ನು ಹುಡುಕುತ್ತಾರೆ.

ಸೌರವ್ಯೂಹದಲ್ಲಿ ಒದಗಿರುವ ಒಂದು ಸಹಜ ಪರಿಸ್ಥಿತಿ ಹೀಗಿದೆ–ಭೂಮಿ ಹಾಗೂ ಇತರ ಗ್ರಹಗಳು ಸೂರ್ಯನ ಸುತ್ತಲೂ ವಿಭಿನ್ನ, ಸರಿಸುಮಾರು ದೀರ್ಘವೃತ್ತ ಕಕ್ಷೆಗಳಲ್ಲಿ ಪರಿಭ್ರಮಿಸುತ್ತಿವೆ; ಸೂರ್ಯನ ಸ್ಥಾನ (ಎಲ್ಲ ಕಕ್ಷೆಗಳಿಗೂ) ಒಂದು ನಾಭಿಯಲ್ಲಿದೆ; ಎಲ್ಲ ಕಕ್ಷೆಗಳೂ ಭೂಮಿಯ ಕಕ್ಷಾತಲಕ್ಕೆ ಅತ್ಯಲ್ಪವಾಗಿ ಬಾಗಿಕೊಂಡಿವೆ; ಎಲ್ಲ ಗ್ರಹಗಳೂ ಒಂದೇ ದಿಕ್ಕಿನಲ್ಲಿ ಚಲಿಸುತ್ತವೆ. ಆದರೆ ಭೂವಾಸಿಗಳಾದ ನಮಗೆ ಕಾಣುವ ಚಿತ್ರವಿಷ್ಟು ಭೂಮಿ ಸ್ಥಿರವಾಗಿದೆ; ಸೂರ್ಯ ಹಾಗೂ ಸೌರವ್ಯೂಹದ ಇತರ ಗ್ರಹಗಳು ಭೂಮಿಯ ಸುತ್ತಲೂ ಪರಿಭ್ರಮಿಸುತ್ತಿವೆ; ಅವುಗಳ ಕಕ್ಷೆಗಳು ಖಗೋಳದ ಒಂದು ಇಕ್ಕಟ್ಟಾದ ಪಟ್ಟಿಗೆ ಮಾತ್ರ ಸೀಮಿತವಾಗಿವೆ. ವಿಶ್ಲೇಷಿಸಿ ನೋಡುವಾಗ ಭೂಮಿಯ ಕಕ್ಷಾತಲ ಖಗೋಳವನ್ನು ಛೇದಿಸುವ ಮಹಾವೃತ್ತವನ್ನು ಹೊಂದಿಕೊಂಡು ಈ ಪಟ್ಟಿ ಇದೆ ಎಂದು ತಿಳಿಯುವುದು. ಮಹಾ ವೃತ್ತದ ಹೆಸರು ಕ್ರಾಂತಿವೃತ್ತ (ನೋಡಿ–ಕ್ರಾಂತಿ–ವೃತ್ತ). ಆದ್ದರಿಂದ ಒಂದು ವಿಷಯ ಸ್ಪಷ್ಟವಾಯಿತು ಕ್ರಾಂತಿವೃತ್ತದ ಸಮತಲಕ್ಕೆ ಬಾಗಿಕೊಂಡಿರುವ ಬೇರೆ ಬೇರೆ ದೂರಗಳಲ್ಲಿರುವ ಬೇರೆ ಬೇರೆ ಕಕ್ಷೆಗಳೇ ಗ್ರಹಗಳು ಸೂರ್ಯನನ್ನು ಪರಿಭ್ರಮಿಸುವ ಪಥಗಳು.

ನಿರ್ದಿಷ್ಟ ಮುಹೂರ್ತದಲ್ಲಿ ಒಂದು ಗ್ರಹದ ಸ್ಥಾನವನ್ನು ನಿರ್ಧರಿಸಲು ಹಾಗೂ ಯಾವುದೇ ಭವಿಷ್ಯ ಕಾಲದಲ್ಲಿ ಅದರ ಸ್ಥಾನವನ್ನು ಮುನ್ನುಡಿಯಲು ತಿಳಿದಿರಬೇಕಾದ ಪರಿಮಾಣಗಳ ಕನಿಷ್ಠ ಸಂಖ್ಯೆ ಎಷ್ಟು ? ಈ ಪ್ರಶ್ನೆಯನ್ನು ಉತ್ತರಿಸುವಾಗ ಬಿಡಿಸಬೇಕಾದ ಸಮಸ್ಯೆಗಳು ಹೀಗಿವೆ–ಕ್ರಾಂತಿವೃತ್ತತಲ ತಿಳಿದಿರುವುದರಿಂದ ಇದೇ ನಮಗೆ ಆಧಾರತಲ; ಇದನ್ನು ಕುರಿತಂತೆ ಗ್ರಹದ ಕಕ್ಷಾತಲದ ಬಾಗುವಿನ ಗಣನೆ; ಇದು ಕಕ್ಷಾತಲದ ಸ್ಥಾನವನ್ನು ನಿಗದಿಸುತ್ತದೆ. ತರುವಾಯ ಈ ತಲದ ಮೇಲೆ ಕಕ್ಷೆಯ ಗಾತ್ರ, ಆಕಾರ ಹಾಗೂ ಸ್ಥಾನಗಳನ್ನು ನಿರ್ದಿಷ್ಟಗೊಳಿಸಬೇಕು. ಕೊನೆಯದಾಗಿ ಈ ಸ್ಥಿರ ಕಕ್ಷೆಯಲ್ಲಿರುವ ಒಂದು ಸ್ಥಿರ ಬಿಂದುವನ್ನು ಕುರಿತು ಗ್ರಹದ ಸ್ಥಾನವನ್ನು ಸೂಚಿಸಬೇಕು.




**ಚಿತ್ರ 2**

ಚಿತ್ರ 2ರಲ್ಲಿ π ಸಮತಲವು ಕ್ರಾಂತಿವೃತ್ತತಲವನ್ನೂ σ ಸಮತಲವು ಗ್ರಹದ ಕಕ್ಷಾತಲವನ್ನೂ ಸೂಚಿಸುತ್ತವೆ. ಭೂಮಿ ಮತ್ತು ಗ್ರಹಗಳೆರಡೂ ಸೂರ್ಯನನ್ನು ಪರಿಭ್ರಮಿಸುತ್ತಿರುವುದರಿಂದ π ಮತ್ತು σ ಸಮತಲಗಳ ಛೇದನೆ ರೇಖೆ ಸೂರ್ಯನ (S) ಮೂಲಕ ಸಾಗುವುದು. ಇದು ASB ಆಗಿರಲಿ. π ಯನ್ನು ಕುರಿತಂತೆ σ ವನ್ನು ನೆಲೆಗೊಳಿಸಲು ಇವೆರಡರ ನಡುವಿನ ಬಾಗುಕೋನ ತಿಳಿದಿರಬೇಕು. ಇದು *i* ಆಗಿರಲಿ.

ಗ್ರಹದ ಕಕ್ಷೆ ಕ್ರಾಂತಿವೃತ್ತವನ್ನು ಸಂಧಿಸುವ ಎರಡು ಬಿಂದುಗಳು ASB ರೇಖೆಯಲ್ಲಿವೆ; ಇವು ಸಮಪಾತ ಬಿಂದುಗಳು. ಚಿತ್ರ 3 ಮತ್ತು 4ರಲ್ಲಿ ನಾವು ಉತ್ತರ ಧ್ರುವದಿಂದ ಕೆಳಮುಖವಾಗಿ ನೋಡುತ್ತಿದ್ದೇವೆಂದೂ ಗ್ರಹವು ಅದರ ಕಕ್ಷೆಯ ಮೇಲೆ ಅಪ್ರದಕ್ಷಿಣವಾಗಿ ಚಲಿಸುತ್ತಿಯೆಂದೂ ಭಾವಿಸೋಣ. ಆಗ, ಗ್ರಹ ಕ್ರಾಂತಿವೃತ್ತವನ್ನು ದಕ್ಷಿಣದಿಂದ ಉತ್ತರಕ್ಕೆ (ಕೆಳಗಿನಿಂದ ಮೇಲಕ್ಕೆ) ಅಡ್ಡ ಹಾಯುವ ಬಿಂದುವಿಗೆ ಆರೋಹೀ ಸಂಪಾತ ಬಿಂದುವೆಂದೂ ಉತ್ತರದಿಂದ ದಕ್ಷಿಣಕ್ಕೆ (ಮೇಲಿನಿಂದ ಕೆಳಕ್ಕೆ) ಅಡ್ಡ ಹಾಯುವ ಬಿಂದುವಿಗೆ ಅವರೋಹೀ




**ಚಿತ್ರ 3**

ಸಂಪಾತ ಬಿಂದುವೆಂದೂ ಹೆಸರು. ಇವು ಕ್ರಮವಾಗಿ N ಮತ್ತು N′ ಆಗಿರಲಿ. N ಮತ್ತು N′ ಗಳು ಗ್ರಹದ ಕಕ್ಷೆಯಲ್ಲಿರುವ ಎರಡು ಸ್ಥಿರಬಿಂದುಗಳೂ ಹೌದು. ವಸಂತವಿಷುವದ್ಬಿಂದು (γ) ಕ್ರಾಂತಿವೃತ್ತದಲ್ಲಿರುವ ಒಂದು ಸ್ಥಿರಬಿಂದು (ವಿಷುವದ್ವೃತ್ತ ಕ್ರಾಂತಿವೃತ್ತಗಳ ಎರಡು ಉಭಯ ಸಾಮಾನ್ಯ ಬಿಂದುಗಳಲ್ಲಿ γ ಒಂದು) ಆದ್ದರಿಂದ Sγವು π ಸಮತಲದಲ್ಲಿರುವ ಒಂದು ಸ್ಥಿರರೇಖೆ. γSN ಕೋನದ ಬೆಲೆ–ಇದು ಆರೋಹೀ ಸಂಪಾತಬಿಂದುವಾದ Nನ ಖಗೋಳೀಯ ರೇಖಾಂಶವಾಗುತ್ತದೆ–ತಿಳಿದಿದ್ದರೆ N ಬಿಂದುವನ್ನು ನೆಲೆಗೊಳಿಸಬಹುದು. ಈ ಕೋನದ ಬೆಲೆ ω ಆಗಿರಲಿ. ಇಲ್ಲಿವರೆಗೆ σ ಸಮತಲವನ್ನೂ ಅದರಲ್ಲಿ ASB ರೇಖೆಯಲ್ಲಿ N ಬಿಂದುವನ್ನೂ ಗುರುತಿಸಿದಂತಾಯಿತು.




**ಚಿತ್ರ 4**

ಗ್ರಹದ ಕಕ್ಷೆ ದೀರ್ಘವೃತ್ತವೆಂದು ತಿಳಿದಿದೆ. ಇದರ ಶಿಷ್ಟಸಮೀಕರಣ

$$\frac{x^2}{a^2}+\frac{y^2}{b^2}=1, \quad b^2=a^2(1-e^2)$$

ಇಲ್ಲಿ $2a$ ದೀರ್ಘವೃತ್ತದ ಪ್ರಧಾನಾಕ್ಷದ ಉದ್ದ, $e$ ದೀರ್ಘವೃತ್ತದ ಉತ್ಕೇಂದ್ರತೆ. $a$ ಮತ್ತು $e$ಗಳ ಬೆಲೆ ತಿಳಿದರೆ ದೀರ್ಘವೃತ್ತವನ್ನು ಚಿತ್ರಿಸಬಹುದು–ಎಂದರೆ, ಅದರ ಆಕಾರ ಹಾಗೂ ಗಾತ್ರಗಳನ್ನು $a$, $e$ಗಳು ನಿರ್ಧರಿಸುತ್ತವೆ. ಗ್ರಹದ ಕಕ್ಷೆ $\Sigma$ ದೀರ್ಘವೃತ್ತವಾಗಿರಲಿ. ಇದು $\sigma$ ಸಮತಲದಲ್ಲಿದೆ; ಮತ್ತು S ಇದರ ಒಂದು ನಾಭಿ. ಇಷ್ಟರಿಂದ ಮಾತ್ರ $\Sigma$ದ ಸ್ಥಾನ ಭದ್ರವಾಗುವುದಿಲ್ಲ. ಅದು ಆಗಲು $\Sigma$ದಲ್ಲಿರುವ ಇನ್ನೊಂದು ಸ್ವತಂತ್ರ ಬಿಂದುವನ್ನು ನಿರ್ಧರಿಸುವುದು ಅಗತ್ಯ. $\Sigma$ದ ಮೇಲೆ ಗ್ರಹ ಚಲಿಸಿದಂತೆ ಅದರ ಸೂರ್ಯದೂರಗಳು ನಿರಂತರವಾಗಿ ವ್ಯತ್ಯಾಸವಾಗುತ್ತಿರುವುವು. ಸೂರ್ಯನಿಂದ ಗ್ರಹ ಗರಿಷ್ಠ ದೂರದಲ್ಲಿರುವಾಗಿನ ಸ್ಥಾನಕ್ಕೆ ಸೂರ್ಯದೂರ ಬಿಂದುವೆಂದೂ (A) ಕನಿಷ್ಠ ದೂರದಲ್ಲಿರುವಾಗಿನ ಸ್ಥಾನಕ್ಕೆ ಸೂರ್ಯನೀಚ ಬಿಂದುವೆಂದೂ (P) ಹೆಸರು. ಈಗ NSP ಕೋನದ ಬೆಲೆ–ಇದನ್ನು ಅಪ್ರದಕ್ಷಿಣವಾಗಿಯೇ, ಎಂದರೆ ಗ್ರಹದ ಚಲನೆಯ ದಿಕ್ಕಿನಲ್ಲಿಯೇ, ಅಳೆಯಬೇಕು–ತಿಳಿದಿದ್ದರೆ P ಬಿಂದುವನ್ನು ನೆಲೆಗೊಳಿಸಬಹುದು. ಈ ಬೆಲೆ $\omega'$ ಆಗಿರಲಿ.

ಇದುವರೆಗಿನ $i, \omega, a, e, \omega'$ ಈ ಐದು ಸ್ವತಂತ್ರ ಸ್ಥಿರಾಂಕಗಳ ನಿರ್ಧರಣದಿಂದ $\Sigma$ವನ್ನು ಸಂಪೂರ್ಣವಾಗಿ ನೆಲೆಗೊಳಿಸಬಹುದು. ಈಗ ಗ್ರಹವು $\Sigma$ದ ಮೇಲೆ ಚಲಿಸುತ್ತಿದೆ. ಅದು P (A,N, N′ ಯಾವುದೂ ಆಗಬಹುದು) ಬಿಂದುವನ್ನು ಉತ್ತರಿಸುವ ಮುಹೂರ್ತವನ್ನು ಆಧರಿಸಿ, ಅದರ ಕಕ್ಷಾವೇಗವೂ ಕಕ್ಷೆಯೂ ತಿಳಿದಿರುವುದರಿಂದ ಯಾವುದೇ ಇತರ ಮುಹೂರ್ತದಲ್ಲಿ T ಆಗಿರಲಿ. ಇದು ಆರನೆಯ ಸ್ವತಂತ್ರ ಸ್ಥಿರಾಂಕ.

ಆದ್ದರಿಂದ ನಿರ್ದಿಷ್ಟ ಮುಹೂರ್ತದಲ್ಲಿ ಒಂದು ಗ್ರಹದ ಸ್ಥಾನವನ್ನು ನಿರ್ಧರಿಸಲು ಹಾಗೂ ಯಾವುದೇ ಭವಿಷ್ಯಕಾಲದಲ್ಲಿ ಅದರ ಸ್ಥಾನವನ್ನು ಮುನ್ನುಡಿಯಲು ತಿಳಿದಿರಬೇಕಾದ ಪರಿಣಾಮಗಳ ಕನಿಷ್ಠ ಸಂಖ್ಯೆ ಆರು. ಇವುಗಳಿಗೆ ಕಕ್ಷಾಧಾತುಗಳೆಂದು ಹೆಸರು.

ಒಂದು ಗ್ರಹ ಮತ್ತು ಅದರ ಉಪಗ್ರಹವನ್ನು (ಉದಾ–ಭೂಮಿ ಮತ್ತು ಚಂದ್ರ; ಗುರು ಮತ್ತು ಅದರ ಉಪಗ್ರಹಗಳು; ಇತ್ಯಾದಿ) ಕುರಿತು ಚರ್ಚಿಸುವಾಗ ಮೇಲಿನ ವಿವರಣೆಯಲ್ಲಿನ ಕಾಯಗಳು ಬದಲಾಗುತ್ತವೆ; ಆದರೆ ಸಮಸ್ಯೆ ತಾತ್ತ್ವಿಕವಾಗಿ ಬದಲಾಗುವುದಿಲ್ಲ. ಸೂರ್ಯನ (S) ಸ್ಥಾನದಲ್ಲಿ ಗ್ರಹ ಬರುತ್ತದೆ; $\pi$ ಸಮತಲದ ಬದಲು ಗ್ರಹದ ಕಕ್ಷಾತಲ ಆಧಾರತಲವಾಗುತ್ತದೆ; ಇದನ್ನು ಕುರಿತಂತೆ ಉಪಗ್ರಹದ ಕಕ್ಷಾತಲದ ಬಾಗು; $i$ ಆಗುತ್ತದೆ; $\gamma$ ಬಿಂದುವಿನ ಬದಲು ಗ್ರಹದ ಆರೋಹೀ ಸಂಪಾತ ಬಿಂದುವನ್ನು (N) ಆರಿಸಿಕೊಳ್ಳಬಹುದು. ಇದರ ನೆರವಿನಿಂದ ಉಪಗ್ರಹದ ಕಕ್ಷೆಯು ಗ್ರಹದ ಕಕ್ಷೆಯನ್ನು ಸಂಧಿಸುವ ಬಿಂದುಗಳನ್ನು ನಿರ್ಧರಿಸಬಹುದು. P ಬಿಂದುವೀಗ ಉಪಗ್ರಹವು ಗ್ರಹಕ್ಕೆ ಅತಿ ಸಮೀಪದಲ್ಲಿರುವ ಸ್ಥಾನವನ್ನು ಸೂಚಿಸುತ್ತದೆ–ಈ ಬಿಂದುವಿನ ಹೆಸರು ಗ್ರಹನೀಚಬಿಂದು. ಗ್ರಹ ಹಾಗೂ ಉಪಗ್ರಹಗಳ ನಡುವೆ ಪ್ರಯುಕ್ತವಾಗುವ ಬಲ ಸಹ ನ್ಯೂಟನ್ನನ ಸಾರ್ವತ್ರಿಕ ಗುರುತ್ವಾಕರ್ಷಣಬಲದ ನಿಯಮಾನುಸಾರವೇ ಇರುವುದರಿಂದ ಉಪಗ್ರಹದ ಕಕ್ಷೆ (ಗ್ರಹವನ್ನು ಕುರಿತಂತೆ) ಒಂದು ದೀರ್ಘವೃತ್ತ, ಅದರ ಒಂದು ನಾಭಿಯಲ್ಲಿ ಗ್ರಹ ಇರುವುದು.

ಯಮಳನಕ್ಷತ್ರಗಳು ಆಕಾಶದ ಹಲವಾರು ವಿಶೇಷಗಳಲ್ಲಿ ಒಂದು. ಇಲ್ಲಿ (ನಮಗೆ ಕಾಣುವಂತೆ) ಎರಡು ಭಿನ್ನ ದ್ರವ್ಯರಾಶಿಗಳ ನಕ್ಷತ್ರಗಳು ಒಂದರ ಸುತ್ತ ಇನ್ನೊಂದು ಪರಿಭ್ರಮಿಸುತ್ತಿರುವುವು. ಇಂಥ ಚಲನೆಯಲ್ಲಿನ ಸೂತ್ರವೂ ಪುನಃ ಗುರುತ್ವಾಕರ್ಷಣ ನಿಯಮವೇ. ಆದ್ದರಿಂದ ನಿವ್ವಳ ಪರಿಣಾಮವಾಗಿ ಪ್ರಬಲಿಯ ಸುತ್ತಲೂ ದುರ್ಬಲಿ ಪರಿಭ್ರಮಿಸುತ್ತಿರುವುದು. ದ್ರವ್ಯರಾಶಿಗಳ ವ್ಯತ್ಯಾಸ ಅಲ್ಪವಾದಾಗ (ಸಮಾನ ಬಲಶಾಲಿಗಳ ಅಪ್ಪಾಲೆ ತಿಪ್ಪಾಲೆ ಆಟದಂತೆ) ಎರಡೂ ಒಂದರ ಸುತ್ತ ಇನ್ನೊಂದು ಪರಿಭ್ರಮಿಸುತ್ತಿರುವುವು. ಈ ಚಲನೆಯನ್ನು ಅಭ್ಯಸಿಸುವಾಗ ಖಗೋಳಶಾಸ್ತ್ರಿಗಳು ಒಂದು ಸಂಪ್ರದಾಯವನ್ನು ಅನುಸರಿಸುತ್ತಾರೆ. ಯಮಳನಕ್ಷತ್ರಗಳ ಕಕ್ಷಾತಲ ಹಾಗೂ ನಮ್ಮ ದೃಷ್ಟಿರೇಖೆಗೆ ಲಂಬವಾಗಿರುವ ಸಮತಲ ಇವುಗಳ ನಡುವಿನ ಬಾಗುಕೋನ $I$; ದುರ್ಬಲಿಯು ಪ್ರಬಲಿಗೆ ಅತಿ ಸಮೀಪವಾಗಿರುವ ಬಿಂದುವಿನ ಹೆಸರು ನಕ್ಷತ್ರನೀಚಬಿಂದು. ಇಲ್ಲಿ ನಕ್ಷತ್ರ ಪದ ಪ್ರಬಲಿಯನ್ನು ಕುರಿತು ಬಳಕೆಯಾಗಿದೆ. ಭೂಮಿಯಿಂದ ನಕ್ಷತ್ರ ದೂರಗಳು ಅಗಾಧವಾಗಿರುವುದರಿಂದ ನಕ್ಷತ್ರವೀಕ್ಷಣೆಯನ್ನು ಸಂಕೀರ್ಣ ಉಪಕರಣಗಳ ನೆರವಿನಿಂದ ನಡೆಸಿ ಜಟಿಲ ಗಣಿತ ಸಮೀಕರಣಗಳ ಸಹಾಯದಿಂದ ಕಕ್ಷೆಗಳನ್ನು ನಿರ್ಧರಿಸಬೇಕಾಗುತ್ತದೆ.

**ಭಿನ್ನ ಕಕ್ಷೆಗಳು:** ಆಕಾಶಕಾಯಗಳ ಚಲನೆಯನ್ನು ಕುರಿತು ವಿವೇಚಿಸುವಾಗ ಕಕ್ಷೆ ಎನ್ನುವ ಪರಿಕಲ್ಪನೆ ಆವಶ್ಯಕವಾಗುತ್ತದೆ. ಇಲ್ಲಿಯೂ ದೀರ್ಘವೃತ್ತ ಕಕ್ಷೆಗಳೇ ಪ್ರಧಾನ ಪಾತ್ರ ವಹಿಸುವುದರಿಂದ ಇದುವರೆಗೆ ಅದನ್ನೇ ಕುರಿತು ಪ್ರಸ್ತಾಪಿಸಲಾಯಿತು. ಆದರೆ ನ್ಯೂಟನ್ನನ ಸಾರ್ವತ್ರಿಕ ಗುರುತ್ವಾಕರ್ಷಣಬಲದ ನಿಯಮಾನುಸಾರ ಪ್ರಬಲಿಆಕಾಶಕಾಯವನ್ನು ಕುರಿತು ದುರ್ಬಲಿ ಆಕಾಶಕಾಯದ ಕಕ್ಷೆ ಒಂದು ಶಂಕುಜವೆಂದು ಗಣಿತಶಾಸ್ತ್ರ ತಿಳಿಸುವುದೇ ವಿನಾ ಅದು ದೀರ್ಘವೃತ್ತವೇ ಆಗಬೇಕೆಂದು ವಿಧಿಸುವುದಿಲ್ಲ. ಇವನ್ನು ಕುರಿತ ಸಮೀಕರಣಗಳನ್ನು ಮುಂದೆ ಬರೆದಿದೆ.

$$\frac{h^2}{p^2}\frac{dp}{dr} = P = \frac{\mu}{r^2},\ h^2 = \mu l$$

ಇದನ್ನು ಅನುಕಲನಿಸಿದಾಗ ದೊರೆಯುವ ಸಮೀಕರಣ

$$\frac{h^2}{p^2} = \frac{2\mu}{r} + C,\ C$$ ಅನುಕಲನ ನಿಯತಾಂಕ

$vp = h$ ಆಗಿರುವುದರಿಂದ

$$v^2 = \frac{2\mu}{r} + C \qquad \ldots \qquad (1)$$

ಈಗ ಶಂಕುಜದ ಸಮೀಕರಣ

$$\frac{1}{r} = 1 + e\cos\theta$$

$$\frac{v^2}{h^2} = \frac{1}{r^2} + \frac{1}{r^4}\left(\frac{dr}{d\theta}\right)^2 = \frac{e^{2-1}}{l^2} + \frac{2}{rl}$$

$$\therefore v^2 = \mu\left(\frac{2}{r} + \frac{e^{2-1}}{1}\right) \qquad \ldots \quad (2)$$

ಶಂಕುಜವು ದೀರ್ಘವೃತ್ತವಾದಾಗ $b^2 = a^2(1-e^2), e < 1$

ಶಂಕುಜವು ಪ್ಯರಾಬೋಲವಾದಾಗ $e = 1$

ಶಂಕುಜವು ಹೈಪರ್ಬೋಲವಾದಾಗ $b^2 = a^2(e^{2-1})\ e > 1$

ಆದ್ದರಿಂದ (1) ಮತ್ತು (2) ಸಮೀಕರಣಗಳನ್ನು ಸಮನ್ವಯಿಸುವುದರಿಂದ ಕಕ್ಷೆಯು ದೀರ್ಘವೃತ್ತ ಅಥವಾ ಪ್ಯರಾಬೋಲ ಅಥವಾ ಹೈಪರ್ಬೋಲ ಆಗಿರಲು ನಿಯಮಗಳು $v^2 \lesseqgtr \frac{2\mu}{r}$ ಎಂದು ವೇದ್ಯವಾಗುವುದು. ಇದರ ಭಾಷ್ಯವಿಷ್ಟು–ಕಕ್ಷಾವೇಗ ಹಾಗೂ ಕಾಯಗಳ ಅಂತರ ಇವನ್ನು ಅವಲಂಬಿಸಿ ಕಕ್ಷೆಯು ಶಂಕುಜದ ಮೂರು ಭಿನ್ನರೂಪಗಳಲ್ಲಿ ಯಾವುದೇ ಒಂದನ್ನು ಪಡೆಯುತ್ತದೆ. ಎಂದರೆ, ವಿವೃತ ವಕ್ರರೇಖೆಗಳಾದ ಪ್ಯರಾಬೋಲ ಹಾಗೂ ಹೈಪರ್ಬೋಲ ಕಕ್ಷೆಗಳಿರುವ ಕಾಯಗಳು ಆಕಾಶದಲ್ಲಿರುವುದು ಅವಾಸ್ತವಿಕವಲ್ಲ. ಸೌರವ್ಯೂಹದ ವಿದ್ಯಮಾನಗಳಾದ ಧೂಮಕೇತುಗಳನ್ನು ಇಲ್ಲಿ ಉದಾಹರಿಸಬಹುದು. ಅವು ಸೂರ್ಯನ ಸಮೀಪ ಚಲಿಸುವಾಗ ಮಾತ್ರ ನಮ್ಮ ವೀಕ್ಷಣೆಗೆ ಲಭಿಸುತ್ತವೆ. ಅವುಗಳ ಕಕ್ಷಾಧಾತುಗಳನ್ನು ಗಣಿಸಿ ಕಕ್ಷೆಗಳನ್ನು ನಿಖರವಾಗಿ ನಿರ್ಧರಿಸುತ್ತಾರೆ. ಇಂಥವಲ್ಲಿ ಹಲವಾರು ಧೂಮಕೇತುಗಳ ಕಕ್ಷೆಗಳು ಪ್ಯರಾಬೋಲಗಳೂ ಹೈಪರ್ಬೋಲಗಳೂ ಆಗಿರುವುದು ತಿಳಿದುಬಂದಿದೆ.

ವೃತ್ತವನ್ನು ಶಂಕುಜದ ಒಂದು ವಿಶಿಷ್ಟ ರೂಪ ಎಂದು ಪರಿಗಣಿಸುವುದು ಸಾಧ್ಯವಿದೆ. ಇಲ್ಲಿ ಶಂಕುಜದ ನಾಭಿಗಳು ಕೇಂದ್ರ ಬಿಂದುವಿನಲ್ಲಿ ಐಕ್ಯವಾಗುವುವು; ಆದ್ದರಿಂದ ಉತ್ಕೇಂದ್ರತೆ ಶೂನ್ಯ ($e$=0). ಈ ಸನ್ನಿವೇಶದಲ್ಲಿ ಕೇಂದ್ರಾಕರ್ಷಣದ ಬೆಲೆ ಒಂದು ನಿಯತಾಂಕವಾಗುತ್ತದೆ. ವಾಸ್ತವಿಕ ಪರಿಸ್ಥಿತಿಗಳಲ್ಲಿ ಇದು ತಲೆದೋರುವುದು ವಿರಳ; ವರ್ತುಳೀಯ ಕಕ್ಷೆಯನ್ನು ಉಳಿಸಿಕೊಳ್ಳುವುದು ಬಲು ಪ್ರಯಾಸಕರ.

ಇದುವರೆಗೆ ಆಕಾಶಕಾಯಗಳಿಗೆ ಸಂಬಂಧಿಸಿದಂತೆ ಕಕ್ಷೆಗಳ ವಿಚಾರ ಪರಿಶೀಲಿಸಿದ್ದಾಯಿತು. ಬೇರೆ ವಿಧದ ಕಕ್ಷೆಗಳೂ ಇವೆ. ಬಲಕೇಂದ್ರವು ಆಕರ್ಷಕವಾಗಿರಬಹುದು, ಅಪಕರ್ಷಕವಾಗಿರಬಹುದು. ಉದಾಹರಣೆಗೆ ಕೇಂದ್ರಾಕರ್ಷಕಬಲ $\mu/r^3$ (ವಿಲೋಮಘನ ನಿಯಮ) ಸೂತ್ರಾನುಸಾರವಿದ್ದಾಗ ಕಕ್ಷೆ ಅನಂತವಾಗಿ ಸುರುಳಿ ಸುತ್ತಿಕೊಂಡಂಥ

$\gamma = ae^{\theta \cot \alpha}$ ವಕ್ರರೇಖೆ ಆಗುತ್ತದೆ.

ಇದರ ಹೆಸರು ಸಮಾನಕೋನೀಯ ಸುರುಳಿ. ಇದಕ್ಕೆ ಆರಂಭ ಬಿಂದುವಿದೆ. ಕೊನೆ ಬಿಂದುವೇ ಇಲ್ಲ.

ಕಕ್ಷೆಗಳನ್ನು ಕುರಿತು ಚರ್ಚಿಸುವಾಗ ಪರಿಕಲ್ಪನೆ ಇಷ್ಟು–ಒಂದು ಬಲಕೇಂದ್ರವಿದೆ; ಅದರ ನಿಯಂತ್ರಣಾನುಸಾರ ಒಂದು ಕಾಯವು ಆ ಕೇಂದ್ರವನ್ನು ಕುರಿತು ರೇಖಿಸುವ ಪಥವೇ ಕಾಯದ ಕಕ್ಷೆ. ಈ ಕಾರಣದಿಂದಲೇ ಒಂದು ಪ್ರಬಲ ರಾಷ್ಟ್ರವನ್ನು ಅವಲಂಬಿಸಿರುವ ಇನ್ನೊಂದು ದುರ್ಬಲ ರಾಷ್ಟ್ರದ ವರ್ತನೆಯನ್ನು ಕುರಿತು ಹೇಳುವಾಗ ಮೊದಲಿನದರ ಉಪಗ್ರಹ ಎರಡನೆಯದು, ಅದನ್ನು ಕುರಿತು ಇದು ಕಕ್ಷೆಯಲ್ಲಿದೆ ಎಂದು ಮುಂತಾದ ನುಡಿಗಟ್ಟುಗಳು ಬಳಕೆಗೆ ಬಂದಿವೆ.

**ಕಕ್ಷಾವೇಗ:** ಕಕ್ಷೆಯ ಮೇಲೆ ಪರಿಭ್ರಮಿಸುತ್ತಿರುವ ಕಾಯದ ವೇಗಕ್ಕೆ ಈ ಹೆಸರಿದೆ (ಆರ್ಬಿಟಲ್ ವೆಲಾಸಿಟಿ). ಆಕಾಶಕಾಯಗಳ ಚಲನೆಯಲ್ಲಿ ಇದರ ಬೆಲೆ $v$ಯನ್ನು ಕೊಡುವ ಸಮೀಕರಣ

$$v^2 = \frac{2\mu}{r} + C$$

ಎಂದು ಹಿಂದೆ ನೋಡಿದೆ. $r$ನ ಬೆಲೆ (ಬಲಕೇಂದ್ರ ಹಾಗೂ ಕಾಯ ಇವುಗಳ ಅಂತರ) ನಿರಂತರವಾಗಿ ಬದಲಾಗುತ್ತಿರುವುದರಿಂದ ಕಕ್ಷಾವೇಗವೂ ನಿರಂತರವಾಗಿ ಬದಲಾಗುತ್ತಿರುವುದು. ಕೇಂದ್ರದಿಂದ ಕಾಯ ಅತಿ ದೂರದಲ್ಲಿರುವಾಗ $r$ನ ಬೆಲೆ ಗರಿಷ್ಠ (ದೀರ್ಘವೃತ್ತಕ್ಕೆ ಮಾತ್ರ ಇದು ಅನ್ವಯವಾಗುವುದು; ಉಳಿದೆರಡು ವಿವೃತ ಕಕ್ಷೆಗಳಲ್ಲಿ ಅಂದರೆ ಪರವಲಯ ಮತ್ತು ಅತಿಪರವಲಯಗಳಲ್ಲಿ ಈ ಬೆಲೆ ಅನಂತರವೇ ಆಗುವುದು). ಆಗ ಕಾಯದ ಕಕ್ಷಾವೇಗ ಕನಿಷ್ಠವಾಗಿದೆಯೆಂದು ಸಮೀಕರಣದಿಂದ ತಿಳಿಯುತ್ತದೆ. ಕಾಯವು ಕೇಂದ್ರಕ್ಕೆ ಅತಿ ಸಮೀಪದಲ್ಲಿರುವಾಗ ಡಿನ ಬೆಲೆ ಕನಿಷ್ಠ (ಎಲ್ಲ ಕಕ್ಷೆಗಳಿಗೂ ಇದು ಅನ್ವಯಿಸುವುದು). ಆಗ ಕಾಯದ ಕಕ್ಷಾವೇಗ ಗರಿಷ್ಠವಾಗಿರುವುದು. ಈ ಕಾರಣದಿಂದ ಭೂಮಿಯ ಕಕ್ಷಾವೇಗ ಪುರರವಿಯಲ್ಲಿ (ಪೆರಿ ಹೇಲಿಯನ್, ಜನವರಿ 3ರ ಸು.) ಗರಿಷ್ಠವಾಗಿಯೂ ಅಪರರವಿಯಲ್ಲಿ (ಅಪ್ ಹೇಲಯನ್, ಜುಲೈ 3ರ ಸು.) ಕನಿಷ್ಠವಾಗಿಯೂ ಇರುವುದು. ಜನವರಿ 3ರಿಂದ ಜುಲೈ 3ರ ತನಕ ಸೂರ್ಯ–ಭೂಮಿ ಅಂತರ ಏರುತ್ತ ಹೋದಂತೆ ಭೂಮಿಯ ಕಕ್ಷಾವೇಗ ಕಡಿಮೆಯಾಗುತ್ತ ಹೋಗುವುದು. ಜುಲೈ 3 ರಿಂದ ಜನವರಿ 3ರ ತನಕ ಈ ಅಂತರ ಇಳಿಯುತ್ತ ಹೋದಂತೆ ಭೂಮಿಯ ಕಕ್ಷಾವೇಗ ಏರುತ್ತ ಹೋಗುವುದು. ಪ್ರತಿಯೊಂದು ಗ್ರಹವೂ ಅದರದರ ಕಕ್ಷೆಯಲ್ಲಿ ಸೂರ್ಯನನ್ನು ಕುರಿತು ಮತ್ತು ಪ್ರತಿಯೊಂದು ಉಪಗ್ರಹವೂ ಅದರದರ ಕಕ್ಷೆಯಲ್ಲಿ ಮಾತೃಗ್ರಹವನ್ನು ಕುರಿತು (ಉದಾಹರಣೆಗೆ, ಭೂಮಿಯನ್ನು ಕುರಿತು ಚಂದ್ರ) ಇದೇ ರೀತಿ ವರ್ತಿಸುತ್ತದೆ.

ಆದ್ದರಿಂದ ಬಲಕೇಂದ್ರದ ಸಮೀಪದಲ್ಲಿ ಕಕ್ಷಾವೇಗ ಏರುವುದೆಂದೂ ದೂರದಲ್ಲಿ ಇಳಿಯುವುದೆಂದೂ ಸಿದ್ಧವಾಯಿತು. ಈಗ ಸೌರವ್ಯೂಹದ ಎರಡು ಗ್ರಹಗಳನ್ನು – ಉದಾಹರಣೆಗೆ ಅತಿ ಸಮೀಪದ ಬುಧ ಹಾಗೂ ಈಗ ತಿಳಿದಿರುವಂತೆ ಅತಿದೂರದ ಪ್ಲೂಟೋ–ಪರಿಶೀಲಿಸಬಹುದು. ಬುಧಗ್ರಹದ ಕಕ್ಷಾವೇಗ ಪ್ಲೂಟೋ ಗ್ರಹದ ಕಕ್ಷಾವೇಗಕ್ಕಿಂತ ಅದೆಷ್ಟೊ ಹೆಚ್ಚು. ಸೂರ್ಯದೂರ ಗ್ರಹಗಳ ಸರಾಸರಿ ಕಕ್ಷಾವೇಗ ಸೂರ್ಯಸಮೀಪ ಗ್ರಹಗಳ ಸರಾಸರಿ ಕಕ್ಷಾವೇಗಕ್ಕಿಂತ ಕಡಿಮೆ ಎಂದು ಇದರಿಂದ ತಿಳಿಯುತ್ತದೆ. ಸೌರವ್ಯೂಹದ ಗ್ರಹಗಳ ದೂರ ಮತ್ತು ಕಕ್ಷಾವೇಗಗಳನ್ನು ಮುಂದಿನ ಯಾದಿ ತೋರಿಸುತ್ತದೆ.

| ಗ್ರಹದ ಹೆಸರು | ಸೂರ್ಯನಿಂದ ದೂರ (ದಶಲಕ್ಷ ಕಿ.ಮೀ.ಗಳಲ್ಲಿ) | ಸರಾಸರಿ ಕಕ್ಷಾವೇಗ (ಕಿ.ಮೀ./ಸೆಕೆಂಡ್) |
|---|---|---|
| ಬುಧ ... | 58 ... | 47.9 |
| ಶುಕ್ರ ... | 108 ... | 35.0 |
| ಭೂಮಿ ... | 150 ... | 29.8 |
| ಮಂಗಳ ... | 228 ... | 24.1 |
| ಗುರು ... | 778 ... | 13.1 |
| ಶನಿ ... | 1427 ... | 9.6 |
| ಯುರೇನಸ್ ... | 2870 ... | 6.8 |
| ನೆಪ್ಚೂನ್ ... | 4500 ... | 5.4 |
| ಪ್ಲೂಟೋ ... | 5900 ... | 4.7 |

ಕೃತಕ ಉಪಗ್ರಹಗಳ ಕಕ್ಷೆಗಳನ್ನು ಕುರಿತ ವಿವರಗಳಿಗೆ **ನೋಡಿ– ಅಂತರಿಕ್ಷ–ಸಂಶೋಧನೆ; ಉಪಗ್ರಹ ಕೃತಕ.**

*

**ಕಗಲ್ನಿಸಿಅನು, ಮೈಹೇಲ್ :** 1817–91. ರುಮೇನಿಯದಲ್ಲಿ ಆಧುನಿಕ ಇತಿಹಾಸ ಲೇಖನವನ್ನು ಆರಂಭಿಸಿದಾತ, ಸಾಹಿತ್ಯ, ರಾಜಕಾರಣ, ಇತಿಹಾಸ ಕ್ಷೇತ್ರಗಳಲ್ಲಿ ಅಪ್ರತಿಮ ದೇಶಪ್ರೇಮವನ್ನು ಮೆರೆದ ಪ್ರತಿಭಾನ್ವಿತ ವ್ಯಕ್ತಿ. ಇಯಾಸಿ ಎಂಬಲ್ಲಿ ಹುಟ್ಟಿ, ಫ್ರಾನ್ಸಿನ ಲುನೆವಿಲ್ ಮತ್ತು ಬರ್ಲಿನ್ ವಿಶ್ವವಿದ್ಯಾನಿಲಯಗಳಲ್ಲಿದ್ದುಕೊಂಡು ಪ್ರಥಮವಾಗಿ ರುಮೇನಿಯದ ಚರಿತ್ರೆಯನ್ನು ನಾನಾ ಮೂಲಗಳಿಂದ ಸಂಪಾದಿಸಿ ಬರೆದ; ರುಮೇನಿಯನ್ ಭಾಷೆ ಹಾಗೂ ಸಾಹಿತ್ಯದ ಸಮೀಕ್ಷೆಯನ್ನೂ ನಡೆಸಿದ.

ತನ್ನ ಇಪ್ಪತ್ತಾರನೆಯ ವಯಸ್ಸಿನಲ್ಲಿಯೇ ಮೈಹೇಲಿಯ ಅಕೆಡಮಿಯಲ್ಲಿ ರಾಷ್ಟ್ರ ಚರಿತ್ರೆಯ ಬಗ್ಗೆ ಉಪನ್ಯಾಸ ಮಾಡಿದ. ರುಮೇನಿಯದ ಭಾಗವಾದ ಮಾಲ್ಡೇವಿಯದ ಪ್ರಾಚೀನ ಚರಿತ್ರೆಯನ್ನು ಸಂಪಾದಿಸಿ ಪ್ರಕಟಿಸಿದ. ಇದಲ್ಲದೆ ಅರ್ಹೈವ ರೂಮೆನಸ್ಕ ಎಂಬ ಚಾರಿತ್ರಿಕಪತ್ರಾಗಾರ ವಿಮರ್ಶಾಪತ್ರಿಕೆಯನ್ನೂ ಆರಂಭಿಸಿದ. ಸಾಹಿತ್ಯಕ್ಷೇತ್ರದಲ್ಲಿ ಡೇಸಿಯ ಲಿಟರೆರ ಎಂಬ ವಿಮರ್ಶಾಪತ್ರಿಕೆಯನ್ನೂ ಸ್ಥಾಪಿಸಿ, ಸಾಂಪ್ರದಾಯಿಕತೆಯನ್ನು ಬೆಳೆಸಿದ.

ಪ್ರಗತಿಪರ ಸುಧಾರಣೆಯೇ ಈತನ ರಾಜಕೀಯ ಚಟುವಟಿಕೆಯ ಗುರಿ, ಹೀಗಾಗಿ ಸರ್ಕಾರವನ್ನು ಎದುರಿಸಿದುದರಿಂದ 1846ರಲ್ಲಿ ಗಡಿಪಾರಾದ, ಫ್ರಾನ್ಸ್ ಸ್ಪೇನ್‌ಗಳಲ್ಲಿ ಸಂಚರಿಸಿ 1848ರಲ್ಲಿ ಹಿಂದಿರುಗಿ, ಮಾಲ್ಡೇವಿಯ–ವಾಲೇಷಿಯ ಪ್ರಾಂತ್ಯಗಳು ಒಂದುಗೂಡಬೇಕೆಂಬ ಪ್ರಚಾರವನ್ನು ಆರಂಭಿಸಿ ಅದಕ್ಕಾಗಿ ಒಂದು ದಿನಪತ್ರಿಕೆಯನ್ನು ಸ್ಥಾಪಿಸಿದ.

ಹನ್ನೊಂದು ವರ್ಷಗಳ ಅವ್ಯಾಹತ ಹೋರಾಟದ ಅನಂತರ 1859ರಲ್ಲಿ ಮಾಲ್ಡೇವಿಯ, ವಾಲೇಷಿಯ ಪ್ರಾಂತ್ಯಗಳು ಒಂದಾದಾಗ ಕಗಲ್ನಿಸಿಅನು ರಾಜಕುಮಾರನ ಆಪ್ತಸಲಹೆಗಾರನಾದ. 1863ರಲ್ಲಿ ಪ್ರಧಾನಿಯಾಗಿ ನೇಮಕಗೊಂಡು ಭೂಮಾಲೀಕತ್ವ, ಧಾರ್ಮಿಕ ಆಸ್ತಿಗಳು, ಶಿಕ್ಷಣ, ಆಡಳಿತಗಳಲ್ಲಿ ಸುಧಾರಣೆಗಳನ್ನು ಮಾಡಿದ, ಇದರಿಂದ ಆತ ಪ್ರಬಲ ವಿರೋಧವನ್ನು ಎದುರಿಸಬೇಕಾಯಿತು. ಅದರ ಫಲವಾಗಿ 1865ರಲ್ಲಿ ತನ್ನ ಪದವಿಗೆ ರಾಜೀನಾಮೆಯಿತ್ತ. 1876–80ರ ವರೆಗೆ ವಿದೇಶಾಂಗ ಮಂತ್ರಿಯಾಗಿದ್ದ. 1878ರಲ್ಲಿ ದೇಶದ ಪ್ರತಿನಿಧಿಯಾಗಿ ಬರ್ಲಿನ್ ಕಾಂಗ್ರೆಸ್‌ನಲ್ಲಿ ಭಾಗವಹಿಸಿ ರುಮೇನಿಯದ ಸ್ವಾತಂತ್ರ್ಯಕ್ಕೆ ಮನ್ನಣೆ ದೊರಕಿಸಿದ. 1891ರಲ್ಲಿ ಪ್ಯಾರಿಸಿನಲ್ಲಿ ನಿಧನನಾದ. (ಟಿ.ವಿ.ಎಸ್.)

**ಕಗ್ಗಲಿ :** ಲೆಗ್ಯುಮಿನೋಸೀ ಕುಟುಂಬದ ಮಿಮೋಸೀ ಉಪಕುಟುಂಬಕ್ಕೆ ಸೇರಿದ ಅಕೇಸಿಯ ಕ್ಯಾಟಿಚೂ ಎಂಬ ಪ್ರಭೇದದ ಮರ. ಇದಕ್ಕೆ ಕಚ್‌ಮರ ಎಂಬ ವಾಣಿಜ್ಯನಾಮವೂ ಉಂಟು. ತಮಿಳಿನಲ್ಲಿ ಇದನ್ನು ಕರಂಗಲಿ ಎನ್ನುತ್ತಾರೆ. ಇದು ಅತಿಯಾಗಿ ತೇವವುಳ್ಳ ಪ್ರದೇಶಗಳನ್ನು ಬಿಟ್ಟು ನಾನಾ ತರಹೆಯ ನೆಲಗಳಲ್ಲಿ ಸಾಧಾರಣವಾಗಿ ತೋಪುಗಳಾಗಿ ಬೆಳೆಯುತ್ತದೆ. ಬಿಸಿಲಿದ್ದಷ್ಟೂ ಈ ಗಿಡ ಚೆನ್ನಾಗಿ ಬೆಳೆಯುತ್ತದೆ. ಮರ ಮಧ್ಯ ಪ್ರಮಾಣದ್ದು. ಕೊಂಬೆಗಳಲ್ಲಿ ಬಗ್ಗಿದ ಮೊನಚಾದ ಮುಳ್ಳುಗಳಿವೆ. ತೊಗಟೆ ಬೂದುಗಪ್ಪು, ಮಂದ. ಬಿಸಿಲುಕಾಲದಲ್ಲಿ ಕೆಲಕಾಲ ಎಲೆ ಉದುರಿ. ಮೇ ತಿಂಗಳ ಸುಮಾರಿಗೆ ಹೊಸ ಚಿಗುರು ಬಂದು ಅದರೊಂದಿಗೇ ಬಿಳಿಯ ಹೂಗೊಂಚಲು ಮೂಡುತ್ತವೆ. ಕಾಯಿಗಳು ಡಿಸೆಂಬರಿನಲ್ಲಿ ಮಾಗುತ್ತವೆ. ಕಡಿದಾಗ ಸಾಧಾರಣವಾಗಿ ಮತ್ತೆ ಚಿಗುರುವುದು. ಬೇರುಸಸಿಗಳು ಕಂಡುಬರುತ್ತವೆ. ಬುಡದ ತೊಗಟೆಯನ್ನು ಮುಳ್ಳುಹಂದಿಗಳು ಕಡಿದು ಅನೇಕ ಗಿಡಗಳನ್ನು ಹಾಳು ಮಾಡುತ್ತವೆ. ಸ್ವಾಭಾವಿಕ ಪುನರುತ್ಪತ್ತಿ ಮೆಕ್ಕಲು ಮಣ್ಣಿನ ನದೀಪಾತ್ರಗಳಲ್ಲಿ ವಿಶೇಷ. ಬೀಜಗಳನ್ನು ಬಿತ್ತಿಯೂ ಮರಗಳನ್ನು ಬೆಳೆಸಬಹುದು. ಇದರಿಂದ ದೊರಕುವ ಮುಖ್ಯ ಉತ್ಪನ್ನ ತಾಂಬೂಲದೊಂದಿಗೆ ಉಪಯೋಗಿಸುವ ಕಾಚು (ನೋಡಿ– ಕಾಚು). ಇದರ ಚೌಬೀನೆ ಬಹುಗಟ್ಟಿಯಾಗಿದ್ದು ನೇಗಿಲು, ದೋಣಿಗಳ ಅಡಿಗಟ್ಟು, ಆಯುಧಗಳ ಹಿಡಿ– ಇವುಗಳಿಗೆ ಉಪಯುಕ್ತವಾಗಿದೆ. (ಎ.ಕೆ.ಎಸ್.)

**ಕಗ್ಗುಲ :** ಪಾರಿವಾಳ ಮತ್ತು ಕಪೋತಗಳನ್ನೊಳಗೊಂಡ ಕೊಲಂಬಿಡೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಪಕ್ಷಿ, ಈ ಜಾತಿಯ ವೈಜ್ಞಾನಿಕ ನಾಮ ಟ್ರೀರಾನ್. ಹಸಿರು ಪಾರಿವಾಳವೆಂದೂ ಹೆಸರುಂಟು. ಭಾರತದಿಂದ ಹಿಡಿದು ಮಲೇಷಿಯ, ಫಿಲಿಪೀನ್ಸ್ ದ್ವೀಪಗಳವರೆಗೂ ಹರಡಿದೆ. ದೇಹರಚನೆ ಗಾತ್ರ, ಆಕಾರ, ಪಾರಿವಾಳಗಳಂತೆಯೇ. ದೇಹದ ಮೇಲೆ ಹಳದಿಮಿಶ್ರಣವಾದ ಹಸಿರು ತುಪ್ಪಳ ಇರುವುದು ಒಂದು ವಿಶೇಷ ಗುಣ. ಇವುಗಳ ಬಾಲ ಭಾಗಶಃ ದುಂಡಾಗಿರಬಹುದು, ಬೆಣೆಯ ಆಕಾರದಲ್ಲಿರಬಹುದು ಅಥವಾ ಚೂಪಾಗಿರಬಹುದು. ಟಾರ್ಸಸ್ ಎಲುಬಿರುವ ಕಾಲಿನ ಭಾಗ ಮಧ್ಯದ ಬೆರಳಿಗಿಂತ ಚಿಕ್ಕದು ಮತ್ತು ಬಲಯುತವಾದುದು. ಕೊಕ್ಕು ಚಿಕ್ಕದು ಮತ್ತು ತೆಳು. ಅದರ ಬುಡದ ಭಾಗದಲ್ಲಿ ಪಾರಿವಾಳಗಳಿಗಿರುವಂತೆ ಒಂದು ದಪ್ಪನಾದ ಮೃದು ಚರ್ಮದ ದಿಂಡಿದೆ. ಮೇತೆ(ಕ್ರಾಪ್) ದೊಡ್ಡದು; ಅದರಲ್ಲಿ ಎಳೆಯ ಮರಿಗಳಿಗೆ ಉಣಿಸಲು ಹಾಲು ಉತ್ಪತ್ತಿಯಾಗುತ್ತದೆ. ಅಂಗಾಲು ಮಾಂಸಮಯವಾಗಿಯೂ ಮೆತ್ತಗೂ ಇದ್ದು ಬೆರಳುಗಳಿಗಿಂತ ವಿಸ್ತಾರವಾಗಿದೆ. ಹೀಗಿರುವುದು ಮರಗಳ ಮೇಲಿನ ವಾಸಕ್ಕೆ ಸೂಕ್ತವಾಗಿ ಹೊಂದಿಕೊಂಡಿರುವ ವೈಶಿಷ್ಟ್ಯ. ಕಗ್ಗುಲ ಸಾಮಾನ್ಯವಾಗಿ ಮರಗಳ ಮೇಲೆ ವಾಸಿಸಿದರೂ ಕೆಲವು ವೇಳೆ ಮಣ್ಣಿನಲ್ಲಿರುವ

ಉಪ್ಪನ್ನು ತಿನ್ನುವುದಕ್ಕೆ ಕೆಳಗಿಳಿಯುತ್ತದೆ. ಸಾಮಾನ್ಯವಾಗಿ ಗುಂಪಿನಲ್ಲಿ ವಾಸಿಸುತ್ತದೆ. ಅಪರೂಪಕ್ಕೆ ಒಂಟಿಯಾಗಿರುವುದೂ ಉಂಟು. ಒಂದೊಂದು ಗುಂಪಿನಲ್ಲಿ 10–30 ಪಕ್ಷಿಗಳಿರಬಹುದು. ಮೈಬಣ್ಣ ಗಿಡದ ಹಸಿರುಬಣ್ಣದೊಡನೆ ಐಕ್ಯವಾಗುವುದರಿಂದ ಮರದ ಮೇಲೆ ಅವನ್ನು ಗುರುತಿಸುವುದು ಕಷ್ಟ. ಆಕಸ್ಮಾತಾಗಿ ಗುಂಡಿನ ಶಬ್ದವಾದಾಗ ಪಕ್ಷಿಗಳೆಲ್ಲ



ಒಂದೇ ಗುಂಪಾಗಿ ಜೋರಾಗಿ ಹಾರಿ ಮತ್ತೆ ಅದೇ ಮರದ ಬಳಿ ಬಂದು ಕೂಡುತ್ತವೆ. ಇವುಗಳ ಆಹಾರ ವಿವಿಧ ಬಗೆಯ ಹಣ್ಣುಗಳು. ದಪ್ಪ ದಪ್ಪ ಹಣ್ಣುಗಳನ್ನು ಇಡಿಯಾಗಿ ನುಂಗುವುದು ವಾಡಿಕೆ. ಗಂಡುಹೆಣ್ಣುಗಳೆರಡೂ ಸೇರಿ ಮರಗಳ ತುದಿಯ ರೆಂಬೆಗಳ ಮೇಲೆ ಸಣ್ಣ ಸಣ್ಣ ಕಡ್ಡಿಗಳನ್ನು ಜೋಡಿಸಿ ಒರಟಾದ ಗೂಡುಗಳನ್ನು ಕಟ್ಟುತ್ತವೆ. ಒಂದೊಂದು ಗೂಡಿನಲ್ಲಿ ಎರಡು ಬಿಳಿಯ ಮೊಟ್ಟೆಗಳಿರುತ್ತವೆ. ಗಂಡು ಹೆಣ್ಣು ಎರಡೂ ಸರದಿಯ ಮೇರೆಗೆ ಕಾವು ಕೊಡುತ್ತವೆ. ಅಲ್ಲದೆ ಮರಿಗಳು ದೊಡ್ಡವಾಗುವವರೆಗೂ ಗುಟುಕು ಕೊಟ್ಟು ಸಲಹುತ್ತವೆ. ಕೆಲವು ಪ್ರಭೇದಗಳಲ್ಲಿ ಕಾವು ಕೊಡುವ ಕಾಲ 12–14 ದಿನಗಳಾದರೆ ಮತ್ತೆ ಕೆಲವಲ್ಲಿ 18–19 ದಿನಗಳು.

ಕಗ್ಗುಲಗಳಲ್ಲಿ ಹಲವು ಪ್ರಭೇದಗಳಿವೆ; ಹಾಗೂ ಒಂದೊಂದರಲ್ಲೂ ಒಂದಕ್ಕಿಂತಲೂ ಹೆಚ್ಚಾದ ಉಪಪ್ರಭೇದಗಳಿವೆ. ಉತ್ತರಭಾರತದ ಈಶಾನ್ಯಭಾಗದಲ್ಲಿ ಚೂಪುಬಾಲದ ಕಗ್ಗುಲ (ಟ್ರೀ.ಅಪಿಕ್ಯಾಡ), ಬೆಣೆಬಾಲದ ಕಗ್ಗುಲ (ಟ್ರೀ.ಸ್ಫೀನ್ಯೂರ), ದಪ್ಪಕೊಕ್ಕಿನ ಕಗ್ಗುಲ (ಟ್ರೀ.ಕರ್ವಿರಾಸ್ಟ್ರ), ಬೂದುತಲೆಯ ಕಗ್ಗುಲ (ಟ್ರೀ.ಪಾಂಪಡೋರ), ಹೊಂಬಣ್ಣದ ಎದೆಯ ಕಗ್ಗುಲ (ಟ್ರೀ.ಬೈಸಿಂಕ್ಟ), ತೆಂಕಣದ ಕಗ್ಗುಲ (ಟ್ರೀ.ಫೀನಿಕಾಪ್ಟೆರ) ಮೊದಲಾದುವುಗಳಿವೆ. ಇವುಗಳ ಪೈಕಿ ದಕ್ಷಿಣ ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ಪಶ್ಚಿಮಘಟ್ಟದ ಕಾಡುಗಳಲ್ಲಿ ಒಂದು ಬಗೆಯ ಬೂದುತಲೆಯ ಕಗ್ಗುಲ, ಹೊಂಬಣ್ಣದ ಎದೆಯ ಕಗ್ಗುಲ ಕಂಡುಬರುತ್ತವೆ.

(ಬಿ.ಎನ್.ಬಿ.)

**ಕಚ್ :** ಗುಜರಾತ್ ರಾಜ್ಯದ ಒಂದು ಜಿಲ್ಲೆ. ಇದನ್ನು ಕಛ್ ಎಂದೂ ಕರೆಯುವುದುಂಟು. ಸ್ಥೂಲವಾಗಿ ಉತ್ತರ ಅಕ್ಷಾಂಶ 22° 47' ನಿಂದ 24° ಮತ್ತು ಪೂರ್ವರೇಖಾಂಶ 68° 15' ನಿಂದ 71° 11'ಗಳ ನಡುವೆ ಹರಡಿರುವ ಪರ್ಯಾಯದ್ವೀಪ. ವಿಸ್ತೀರ್ಣ : 45,652 ಚಕಿಮೀ, ಜನಸಂಖ್ಯೆ : 15,83,225, ಜನಸಾಂದ್ರತೆ : ಚ ಕಿಮೀಗೆ 35 ಜನರು. ಇದರ ನಡುಭಾಗ ಉಬ್ಬು. ಇದನ್ನು ಸುತ್ತುವರಿದಿರುವ ಕಚ್ ರಣದ ತಗ್ಗುನೆಲ ಮಳೆಗಾಲದಲ್ಲಿ ನೀರಿನಿಂದಾವೃತವಾಗಿರುತ್ತದೆ. ಉತ್ತರದ್ದು ಮಹಾರಣ್; ದಕ್ಷಿಣದಲ್ಲಿರುವುದು ಸಣ್ಣ ರಣ್. ಪಶ್ಚಿಮದಲ್ಲಿ ಅಗಲವಾಗಿ ಪೂರ್ವಕ್ಕೆ ಕಿರಿದಾಗುವ ನಗ್ನೀಕೃತ ಬೆಟ್ಟಗಳ ಸಾಲೊಂದು ಈ ಜಿಲ್ಲೆಯ ನಡುವೆ ಹಾಯುತ್ತದೆ. ಈ ಜಿಲ್ಲೆಯ ಮುಖ್ಯಪಟ್ಟಣವಾದ ಭುಜ್‌ಗೆ 32 ಕಿಮೀ ದೂರದಲ್ಲಿರುವ ದಿನೋಧರ್ ಅತ್ಯಂತ ಎತ್ತರದ ಬೆಟ್ಟ (388 ಮೀ) ಪಚ್ಚಂ ದ್ವೀಪ ಇನ್ನೂ ಎತ್ತರ (465 ಮೀ).

ಕೇಂದ್ರದ ದಿಣ್ಣೆಯ ಪ್ರದೇಶ ಬಂಜರುನೆಲ. ಉತ್ತರ ದಕ್ಷಿಣ ಭಾಗಗಳನ್ನು ಇದು ಪ್ರತ್ಯೇಕಿಸುತ್ತದೆ. ಮಳೆ ಬಲು ಕಡಿಮೆ. ಬೆಟ್ಟಗಳ ಬುಡದ ಬಳಿ ಕಟ್ಟಲಾಗಿರುವ ಸಣ್ಣ ಕೆರೆಗಳು ಸಾಗುವಳಿಗೆ ನೀರೊದಗಿಸುತ್ತವೆ. ಈ ಪ್ರದೇಶದ ಜನಸಂಖ್ಯೆ ಬಲು ವಿರಳ.

ಕರಾವಳಿಯ ತಗ್ಗುನೆಲ ವೈವಿಧ್ಯಮಯ. ಉತ್ತರಕ್ಕೂ ದಕ್ಷಿಣಕ್ಕೂ ಹರಿಯುವ ನದಿಗಳು ನೆಲವನ್ನು ಅಲ್ಲಲ್ಲಿ ಕೊರೆದಿವೆ. ಸಮುದ್ರದ ಬಳಿಯ ನೆಲ ಬೀಳು ಬಿದ್ದಿದೆ. ಉತ್ತರದ ನದಿಗಳು ಸಮುದ್ರ ತಲುಪಲಾರದೆ ನೆಲದಲ್ಲೆ ಇಂಗಿಹೋಗುತ್ತವೆ. ಕರಾವಳಿಯಲ್ಲಿ ಅಲ್ಲಲ್ಲಿ ಜೌಗುನೆಲವನ್ನೂ ಮರಳಗುಡ್ಡೆಗಳನ್ನೂ ಕಾಣಬಹುದು.

ಉತ್ತರದ ಕರಾವಳಿಯ ತಗ್ಗುನೆಲ ಈಚೆಗೆ ಸಮುದ್ರದಿಂದ ಮೇಲೆದ್ದಿರಬೇಕು. ಇದು ತ್ರಿಕೋಣಾಕಾರವಾಗಿದೆ. ವರ್ಷಕ್ಕೆ 30 ಸೆಂ ಮಳೆಯೂ ಆಗದ ಈ ಪ್ರದೇಶ ಬಂಜರು. ಕೆಲಭಾಗಗಳಲ್ಲಿ ನೀರು ನಿಂತಿದೆ. ವ್ಯವಸಾಯ ಬಲು ಕಡಿಮೆ. ಪಶುಪಾಲನೆಯೇ ಜನರ ಮುಖ್ಯ ಉದ್ಯೋಗ. ಮೇವು ನೀರುಗಳ ಅಭಾವದಿಂದ ಹೈನು ಉದ್ಯೋಗವನ್ನು ಬೆಳೆಯಿಸುವುದಾಗಿಲ್ಲ. ಆದರೂ ಇವರು ಮಾರಾಟಕ್ಕಾಗಿ ಒಳ್ಳೆಯ ತಳಿಯ ದನಗಳನ್ನು ಸಾಕುತ್ತಾರೆ. ಚರ್ಮ ಹದಗಾರಿಕೆ, ಪಾದರಕ್ಷೆ ತಯಾರಿಕೆ ಮುಂತಾದ ಕಸಬುಗಳಲ್ಲಿ ನಿರತರಾದ ಕೆಲವರು ಇಲ್ಲಿದ್ದಾರೆ. ಇಲ್ಲಿಯ ಜನ ಸಿಂಧಿನಿಂದ ವಲಸೆ ಬಂದವರು. ಇವರ ಸಾಮಾಜಿಕ ಕಟ್ಟಳೆಗಳೂ ಸಂಪ್ರದಾಯಗಳೂ ಗುಜರಾತಿನ ಉಳಿದ ಭಾಗದವರವಕ್ಕಿಂತ ಭಿನ್ನ.

ಕಚ್‌ನ ನೈರುತ್ಯ ಕರಾವಳಿಯ ಉದ್ದ ಸು. 230 ಕಿಮೀ ಇದು ಕೋರಿಕಡಲಚಾಚಿನಿಂದ ಹಿಡಿದು ಪೂರ್ವದಲ್ಲಿರುವ ಕಾಂಡ್ಲದ ವರೆಗೆ ಹಬ್ಬಿದೆ. ಕೋರಿಕಡಲಚಾಚಿನ ದಕ್ಷಿಣದಲ್ಲಿರುವ ಕರಾವಳಿ ನೆಲವೂ ಪಶ್ಚಿಮಭಾಗವೂ ಸಮುದ್ರದಿಂದ ಈಚೆಗೆ ಮೇಲೆದ್ದ ಪ್ರದೇಶ. ಹಲವಾರು ಸಣ್ಣ ಪುಟ್ಟ ನದಿಗಳು ನೆಲವನ್ನೆಲ್ಲ ಕೊರೆದಿವೆ. ಕೊರೆಯದೆ ಉಳಿದಿರುವ ಪ್ರದೇಶದಲ್ಲಿ ಮಾತ್ರ ವ್ಯವಸಾಯ ಸಾಧ್ಯ, ಕಮರಿಗಳಿಗೆ ಅಲ್ಲಲ್ಲಿ ಕಟ್ಟೆ ಕಟ್ಟಿ ನೀರು ಶೇಖರಿಸಲಾಗಿದೆ. ನದಿ ಕಣಿವೆಗಳಲ್ಲಿ ಅಲ್ಲಲ್ಲಿ ವ್ಯವಸಾಯಕ್ಕಾಗಿ ಬಾವಿಗಳನ್ನೂ ತೋಡಲಾಗಿದೆ. ಇಲ್ಲೂ ಜನವಸತಿ ವಿರಳವೆಂದೇ ಹೇಳಬೇಕು.

ಕಚ್‌ನ ದಕ್ಷಿಣದ ಮೈದಾನಪ್ರದೇಶ ಆರ್ಥಿಕವಾಗಿ ಹೆಚ್ಚು ಮುಂದುವರಿದಿದೆ. ಇದನ್ನು ಕಾಥಿಯವಾಡ್ ಮತ್ತು ಗುಜರಾತ್ ಬಯಲುಗಳಿಗೆ ಹೋಲಿಸಬಹುದು. ಉತ್ತರ–ದಕ್ಷಿಣವಾಗಿ ಅನೇಕ ನದಿಗಳು ಈ ಪ್ರದೇಶದಲ್ಲಿ ಹರಿಯುತ್ತವೆ. ನೆಲ ಮಟ್ಟಸ; 30 ಕಿಮೀ ದೂರಕ್ಕೆ 80 ಮೀನಷ್ಟು ಮಾತ್ರ ಏರುತ್ತದೆ. ಇದು ಅಷ್ಟೇನೂ ನಗ್ನೀಕೃತವಾಗಿಲ್ಲ. ಕಚ್‌ನ ಉಳಿದ ಭಾಗಗಳಿಗಿಂತ ಇಲ್ಲಿ ಹೆಚ್ಚು ಮಳೆಯಾಗುತ್ತದೆ. ಆದ್ದರಿಂದ ವ್ಯವಸಾಯೋತ್ಪನ್ನ ಇಲ್ಲಿ ಹೆಚ್ಚು. ಮಳೆಗಾಲದಲ್ಲಿ ಹುಲ್ಲು ಬೆಳೆಯುತ್ತದೆ. ಆದ್ದರಿಂದ ದನಕರುಗಳ ಮೇವಿಗೆ ತೊಂದರೆಯಿಲ್ಲ. ಉಳಿದ ಭಾಗಗಳಿಗಿಂತ ಇಲ್ಲಿ ಜನಸಾಂದ್ರತೆ ಹೆಚ್ಚು ಇಡೀ ಜಿಲ್ಲೆಯ ಜನಸಾಂದ್ರತೆ ಚ ಕಿಮೀಗೆ 35 ಮಂದಿಯಾದರೆ ಇಲ್ಲಿಯ ತಾಲ್ಲೂಕುಗಳಾದ ಮಾಂಡ್ವಿ, ಮುಂಡ್ರ ಮತ್ತು ಅಂಜಾರ್‌ಗಳಲ್ಲಿ ಕ್ರಮವಾಗಿ 75, 63 ಮತ್ತು 78 ಮಂದಿ. ಕಚ್‌ನ ಆರು ಪಟ್ಟಣಗಳ ಪೈಕಿ ಐದು ಇಲ್ಲಿವೆ. ಮಾಂಡ್ವಿ (42,355), ಮುಂಡ್ರ (1293), ಅಂಜಾರ್ (68343), ಕಾಂಡ್ಲ (14695) ಮತ್ತು ಗಾಂಧೀಧಾಮ್ (151693) ಈ ಪಟ್ಟಣಗಳು. ಕಾಂಡ್ಲ ಮತ್ತು ಗಾಂಧೀಧಾಮ್‌ಗಳು ಈಚಿನವು. ಕಾಂಡ್ಲ ಮುಖ್ಯ ಬಂದರು. ಭಾರತದ ವಿಭಜನೆಯಾದಾಗ (1947) ಸಿಂಧ್‌ನಿಂದ ಭಾರತಕ್ಕೆ ಬಂದ ಜನ ಗಾಂಧೀಧಾಮದಲ್ಲಿ ವಸತಿ ಹೊಂದಿದ್ದಾರೆ. ಮಾಂಡ್ವಿ ಮಧ್ಯಮ ಗಾತ್ರದ ಬಂದರು.

ಜೋಳ, ಬಾರ್ಲಿ, ಗೋದಿ, ದ್ವಿದಳಧಾನ್ಯಗಳು, ಹತ್ತಿ ಇಲ್ಲಿ ಬೆಳೆಯುತ್ತವೆ. ಜಿಪ್ಸಮ್, ಸುಣ್ಣಕಲ್ಲು ಮತ್ತು ಅಮೃತಶಿಲೆ ಮುಖ್ಯ ಖನಿಜಗಳು. ಭುಜ್ ಜಿಲ್ಲಾ ಮುಖ್ಯಪಟ್ಟಣ. ಜನಸಂಖ್ಯೆ 136429 (2001). ಇದು ಅಹಮದಾಬಾದಿನಿಂದ ಪಶ್ಚಿಮಕ್ಕೆ 305 ಕಿಮೀ ದೂರದಲ್ಲಿದೆ, ಪಶ್ಚಿಮ ರೈಲ್ವೆಯ ದೆಹಲಿ–ಮುಂಬಯಿ ಮಾರ್ಗದೊಂದಿಗೆ ಭುಜ್‌ಗೆ ಸಂಬಂಧ ಕಲ್ಪಿಸಲಾಗಿದೆ.

ಮಾಂಡ್ವಿಯಲ್ಲಿರುವ ಅರಮನೆ ವಾಸ್ತುಶಿಲ್ಪ ದೃಷ್ಟಿಯಿಂದ ಮುಖ್ಯ. ಚಿನ್ನದ ಕುಸುರಿ, ರೇಷ್ಮೆ ಹತ್ತಿ ಕಸೂತಿ ಮುಖ್ಯ ಕರಕೌಶಲಗಳು. ಕಡಲ ಕರೆಯ ಜನ ಒಳ್ಳೆಯ ನಾವಿಕರು.

ಕಚ್ ಜಿಲ್ಲೆಯ ಪ್ರಾಚೀನ ಇತಿಹಾಸವೇನೆಂಬುದು ಗೊತ್ತಾಗಿಲ್ಲ. ಇಲ್ಲಿ ಶಿಲಾಯುಗದ ಅವಶೇಷಗಳಿಲ್ಲದಿದ್ದರೂ ದೇಶಲ್ಪುರ ಮತ್ತು ತೋಡಿಯಟಿಂಬೊಗಳಲ್ಲಿ ಹರಪ್ಪ ನಾಗರಿಕತೆಯ ಅವಶೇಷಗಳು ದೊರಕಿವೆ. ಆಮೇಲಿನ ಕಾಲಕ್ಕೆ ಸಂಬಂಧಿಸಿದಂತೆ ಇದ್ದಿರಬಹುದಾದ ಅವಶೇಷಗಳ ಬಗ್ಗೆ ಮಾಹಿತಿಗಳು ತಿಳಿದುಬಂದಿಲ್ಲ.

13ನೆಯ ಶತಮಾನದಲ್ಲಿ ಸಿಂಧ್‌ನಿಂದ ಓಡಿಬಂದ ನಮ್ಮ ರಜಪೂತರಿಗೆ ಕಚ್‌ನ ಚಾವಡ ರಜಪೂತರು ಆಶ್ರಯ ನೀಡಿದರು. ಆದರೆ ಸು. 1320ರಲ್ಲಿ ಇವರು ತಮ್ಮ ಆಶ್ರಯದಾತರನ್ನೇ ಉರುಳಿಸಿ ಅಧಿಕಾರ ಗಳಿಸಿದರು. 1540–1760ರ ವರೆಗೆ ಎಲ್ಲ ರಜಪೂತರೂ ಒಂದಾಗಿ ಆಳಿದರು. ಆಮೇಲೆ ಸ್ವಲ್ಪ ಕಾಲ ಇದು ಸಿಂಧಿನ ಮುಸ್ಲಿಮರ ಆಕ್ರಮಣಕ್ಕೆ ತುತ್ತಾಗಿತ್ತು. 1813ರಲ್ಲಿ ರಜಪೂತನೊಬ್ಬ ಮತ್ತೆ ಇದನ್ನು ವಶಪಡಿಸಿಕೊಂಡ. 1815ರಲ್ಲಿ ಬ್ರಿಟಿಷರು ರಣ್ ಪ್ರದೇಶವನ್ನು ಆಕ್ರಮಿಸಿ, ದೊರೆಯಾದ ಮಹಾರಾವ್ ಭಾರ್ಮಲ್ಜಿಯೊಂದಿಗೆ ಒಪ್ಪಂದ ಮಾಡಿಕೊಂಡರು. ಅಂಜಾರ್ ಬ್ರಿಟಿಷರಿಗೆ ಸೇರಿತು. 1819ರಲ್ಲಿ ಈ ರಾಜನ ಪದಚ್ಯುತಿಯಾಗಿ ಇವನ ಮಗನಾದ ಎರಡನೆಯ ರಾವ್ ದೇಸಾಲ್ಜಿಗೆ ಪಟ್ಟ ಕಟ್ಟಲಾಯಿತು.

ಬ್ರಿಟಿಷ್ ಆಳ್ವಿಕೆಯಲ್ಲಿ ಮೊದಲು ಇದು ಮುಂಬಯಿ ಪ್ರಾಂತ್ಯದ ಗವರ್ನರ ಆಡಳಿತಕ್ಕೆ ಒಳಪಟ್ಟಿತ್ತು. ಆಮೇಲೆ ಇದನ್ನು ಏಜೆನ್ಸಿಯ ಆಡಳಿತಕ್ಕೆ ವಹಿಸಲಾಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇದು ಕೇಂದ್ರಾಡಳಿತ ಪ್ರದೇಶವಾಗಿದ್ದು, 1956ರಲ್ಲಿ ಮುಂಬಯಿ ರಾಜ್ಯದ ಜಿಲ್ಲೆಯಾಗಿ, 1960ರಲ್ಲಿ ಗುಜರಾತ್ ರಾಜ್ಯಕ್ಕೆ ಸೇರಿತು. (ಎಂ.ಜಿ.ಬಿ.; ಬಿ.ಕೆ.ಜಿ.)

**ಕಚ :** ದೇವಗುರುವಾದ ಬೃಹಸ್ಪತ್ಯಾಚಾರ್ಯನ ಮಗ. ದೇವತೆಗಳ ಪ್ರಾರ್ಥನೆಯಂತೆ ಅಸುರಗುರುವಾದ ಶುಕ್ರಾಚಾರ್ಯನ ಶಿಷ್ಯನಾಗಿ ಮೃತಸಂಜೀವಿನೀ ವಿದ್ಯೆಯನ್ನು ಪಡೆಯುವ ಪ್ರಯತ್ನ ಮಾಡಿದ. ಅಲ್ಲಿ ಗುರುಪುತ್ರಿ ದೇವಯಾನಿ ಕಚನನ್ನು ಕಂಡು ಮೋಹಿತಳಾದಳು. ಇದನ್ನರಿತ ದಾನವರು ಎರಡು ಬಾರಿ ಕಚನನ್ನು ಕೊಲೆಮಾಡಿದರು. ಆದರೆ ಮಗಳಾದ

ದೇವಯಾನಿಯ ಅಪೇಕ್ಷೆಯಂತೆ ಸಂಜೀವಿನೀ ಮಂತ್ರಬಲದಿಂದ ಶುಕ್ರಾಚಾರ್ಯ ಎರಡು ಬಾರಿಯೂ ಕಚನನ್ನು ಬದುಕಿಸಿದ. ಮತ್ತೆ ಮತ್ತೆ ಬದುಕಿಬಂದ ಕಚನನ್ನು ಮೂರನೆಯ ಬಾರಿ ಕೊಂದು ಅವನ ಮಾಂಸವನ್ನು ಮದ್ಯದೊಡನೆ ಕಲಸಿ ತಮ್ಮ ಗುರುವಾದ ಶುಕ್ರಾಚಾರ್ಯನಿಗೆ ಅವರು ಉಣಬಡಿಸಿದರು. ಶುಕ್ರನಾದರೋ ತನ್ನ ಮಗಳಾದ ದೇವಯಾನಿಯ ಬೇಡಿಕೆಯಂತೆ ತನ್ನ ಉದರದಲ್ಲಿ ಪ್ರವೇಶಿಸಿದ್ದ ಕಚನಿಗೆ ಸಂಜೀವಿನಿ ವಿದ್ಯೆಯನ್ನು ಪೂರ್ಣವಾಗಿ ಉಪದೇಶಿಸಿ ಅವನನ್ನು ಬದುಕಿಸಿದ. ಬದುಕಿಬಂದ ಕಚ ಗುರುಪುತ್ರಿಯೆಂಬ ಕಾರಣದಿಂದ ದೇವಯಾನಿಯನ್ನು ಮದುವೆಯಾಗಲು ಒಪ್ಪಲಿಲ್ಲ. ಕುಪಿತಳಾದ ದೇವಯಾನಿ ಕಚ ಕಲಿತ ದಿವ್ಯಮಂತ್ರ ಫಲಿಸದಿರಲೆಂದು ಶಪಿಸಿದಳು. ಈ ವಿಚಾರ ಮಹಾಭಾರತದ ತೋಯಸಂಭವ ಪರ್ವದಲ್ಲಿದೆ. (ಎನ್.ಎಸ್.ಆರ್.ಬಿ.)

**ಕಚರಾ ವಿಲೇವಾರಿ :** ಸೋಂಕಿನ ರೋಗಾಣುಗಳು ನೀರಿನಲ್ಲಿ ಬೆರೆತು ಮಾನವ ಮತ್ತಿತರ ಜೀವಿಗಳಿಗೆ ಹಾನಿಯಾಗದಂತೆ ತಡೆಯಲು, ಒಂದು ಊರಿನ ಜನ ಬಳಸಿದ ನೀರಿನಿಂದಾದ ಗಲೀಜಿನ ಕಚರಾವನ್ನು (ಸ್ಯೂಯೇಜ್) ಯಾರಿಗೂ ಅಪಾಯವಾಗದಂತೆ ಸಾಗಹಾಕುವ ಏರ್ಪಾಡು. ಮಲಮೂತ್ರಗಳೊಂದಿಗೆ ಮನೆ, ಕೊಟ್ಟಿಗೆ, ಲಾಯ, ರೊಪ್ಪ, ಕಸಾಯಿಖಾನೆಗಳಿಂದ ಬರುವ ಕೊಳಕು ನೀರು, ಕೈಗಾರಿಕೆ ಕಾರ್ಖಾನೆಗಳಿಂದ ಬರುವ ಕಸರೆ ವಸ್ತುಗಳಿಂದ ಬಂದುದು ಕೈಗಾರಿಕೆ ಕಸರೆ (ವೇಸ್ಟ್). ಕಚರಾದಲ್ಲಿ ಸಾಗಿ ರೋಗ ಹರಡಲು ಜನರಿಂದ ಬರುವ ಮಲಮೂತ್ರಾದಿಗಳೇ ಮುಖ್ಯವಾದುವು. ಎಲ್ಲಿಂದ ನೀರನ್ನು ಪಡೆದರೋ ಅಲ್ಲಿಗೆ ಯಾವ ಕೊಳಕೂ ಸೋಂಕೂ ಇಲ್ಲದೆಯೇ ನೀರನ್ನು ಹಿಂತಿರುಗಿಸುವುದು ಎಲ್ಲ ಊರು, ರಾಜ್ಯ, ಕೈಗಾರಿಕೆಗಳ ಕರ್ತವ್ಯ. ಊರಿಂದ ಹೊರಬೀಳುವ ನೀರಲ್ಲಿ ಕಚರಾವಸ್ತುಗಳು ಮಿತಿಮೀರಿದಲ್ಲಿ ಇವನ್ನು ಪಡೆವ ಹೊಳೆ, ನದಿ ಕಡಲುಗಳಲ್ಲಿ ಮೀನು ಮತ್ತಿತರ ಪ್ರಾಣಿಗಳು ಬದುಕದಂತಾಗುತ್ತವೆ. ಅಲ್ಲದೆ ಹರಿವ ನೀರನ್ನು ಇನ್ನೂ ಕೆಳಗೆ ಬಳಸುವವರಿಗೂ ಅಪಾಯ ತಟ್ಟುವುದು. ಆರೋಗ್ಯವಾಗಿರಲೂ ಹೊಲಸನ್ನು ತಡೆಗಟ್ಟಲೂ ಕಚರಾ ವಿಲೇವಾರಿ ಚೆನ್ನಾಗಿರಲೇಬೇಕು. ಇಷ್ಟಾದರೂ, ಕಚರಾ ಎಂದರೆ ಬರಿಯ ಕೆಲಸಕ್ಕೆ ಬಾರದ್ದಲ್ಲ. ಸರಿಯಾಗಿ ವಿಲೇವಾರಿಯಾದ ಕಚರಾದಿಂದ ಬೆಲೆಯುಳ್ಳ ನೈಟ್ರೇಟುಗಳು, ಫಾಸ್ಫೇಟುಗಳು, ಬಿ ಜೀವಾತು, ಮಿಥೇನ್, ಗ್ರೀಸು, ಜಿಡ್ಡು ಇತ್ಯಾದಿ ದೊರೆಯುತ್ತವೆ. ಇವನ್ನು ತೆಗೆಯುವುದರಿಂದ ಹರಿವ ನೀರು ಶುದ್ಧವಾಗಿ ಕೆಳನದಿಯವರಿಗೆ ಅಪಾಯ ತಪ್ಪುವುದು.

ಮನೆಗಳಿಂದ ಬರುವ ಕಚರಾ ನೀರಲ್ಲಿ ಜೈವಿಕ ವಸ್ತುಗಳೇ ಹೆಚ್ಚಿದ್ದು ಜೀವಾಣುಗಳ ವರ್ತನೆಯಿಂದ ಬೇಗನೆ ಕೊಳೆತು ನಾರುವುದರಿಂದ ದುರ್ನಾತವೇಳುತ್ತದೆ. ಜನರ ಮಲಮೂತ್ರಗಳೊಂದಿಗೆ ಗಲೀಜು ನೀರು ಹೆಚ್ಚಾಗಿರುತ್ತದೆ. ಆದರೆ ಇದರ ರಚನೆ ಬಹುಮಟ್ಟಿಗೆ ಜನರ ನೀರಿನ ಬಳಕೆ, ಮಳೆನೀರು, ಕೈಗಾರಿಕೆಗಳಿಂದ ಹೊರಬಿದ್ದ ನೀರು ಇವುಗಳ ಪ್ರಮಾಣಕ್ಕೆ ತಕ್ಕಂತಿರುವುದು. ಈ ವಸ್ತುಗಳು ಕರಗಿಯೋ, ತೇಲುತ್ತಲೋ, ಅಂಟಂಟಾಗೋ ಇರಬಹುದು. ರೋಗಿಗಳ ಮಲಮೂತ್ರಾದಿಗಳು, ಸೇರಿದರಂತೂ ರೋಗ ಹರಡುವುದರಲ್ಲಿ ಕಚರಾ ಅಪಾಯಕಾರಕ. ಕಾರ್ಖಾನೆಗಳಿಂದ ಹೊರಬೀಳುವ ಕಸರೆಯಲ್ಲಿನ ಕೊಳಕು ಆಯಾ ಕೈಗಾರಿಕೆಗೆ ಅನುಗುಣವಾಗಿರುವುದು. ಕೆಲವೇಳೆ ಇದರಲ್ಲಿ ಬಲು ಕೆಡುಕಿನ, ವಿಷಕರವಾದ, ಹೊತ್ತಿ ಉರಿವ, ಸಿಡಿವ ಪದಾರ್ಥಗಳು ಇರಲೂಬಹುದು. ಮನೆಯ ಎಂದಿನ ಒಂದು ಟನ್ ಕಚರಾ ನೀರಲ್ಲಿ ಅರೆ ಕಿಲೋಗ್ರಾಂನಷ್ಟು ಗಟ್ಟಿವಸ್ತುಗಳಿರುತ್ತವೆ. ಇವುಗಳಲ್ಲಿ ಅರೆಪಾಲು ಕರಗಿರುತ್ತವೆ, ಉಳಿದುದರ ಅರೆಪಾಲು ತೇಲುತ್ತಿರುತ್ತವೆ.

**ಕಚರಾದ ಶುದ್ಧೀಕರಣ :** ಕಚರಾ ನೀರು ಅಪಾಯಕರವಾಗದಂತೆ ಮಾಡುವ ನಿಸರ್ಗದ ಕ್ರಮಗತಿಯಲ್ಲಿ ಹಲವು ಬಗೆಗಳ ಜೈವಿಕ ವಸ್ತುಗಳನ್ನು ಬೇರೆ ಬೇರೆ ಹಂತಗಳಲ್ಲಿ ಒಡಕೆಡವುವ ಏಕಾಣುಜೀವಿಗಳ ಪಾತ್ರ ದೊಡ್ಡದು. ಕಾಲಾನುಕಾಲಕ್ಕೆ ಎಂಥ ಕಚರಾವನ್ನಾದರೂ ಸರಿಯೇ ನಿಸರ್ಗ ನಿಭಾಯಿಸಬಲ್ಲುದಾದರೂ ಇದರಿಂದೇಳುವ ದುರ್ವಾಸನೆ, ಗಲೀಜು ತಡೆವಂತಿರದು. ಪ್ರೋಟೀನುಗಳನ್ನು ಒಡೆಯಲು ಆಮ್ಲಜನಕವನ್ನು ಬಳಸಿಬಿಟ್ಟರೆ ಮೀನುಗಳು ಸಾಯುತ್ತವೆ. ನೆಲದಲ್ಲಿ ನೀರು ಸೋಸಿ, ಸೋರಿಹೋಗದ ಹಾಗೆ ಕಚರಾ ಅಡ್ಡಿಯಾಗಬಹುದು. ಆಗ ನೆಲಕ್ಕೆ ಕಚರಾಬೇನೆ (ಸ್ಯೂಯೇಜ್ ಸಿಕ್ನೆಸ್) ಹತ್ತಿ ಕೆಲಸಕ್ಕೆ ಬಾರದಂತಾಗುವುದು. ಆದ್ದರಿಂದ ಕಲಬೆರೆತ ಕಚರಾವನ್ನು ಸರಳ, ಅಚಲ, ಹಾನಿಕರವಾಗದ ಧಾತುಗಳಾಗಿ ನಿಸರ್ಗವೇ ಯಾವ ಗಲೀಜು ಕೆಟ್ಟ ನಾತ ಬಡಿಸದೆ ಮಾರ್ಪಡಿಸುವಂತೆ ನೆರವಾಗಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

ಕಚರಾ ವಿಲೇವಾರಿಯಲ್ಲಿ ಹಲವು ಶುದ್ಧೀಕರಣ ಹಂತಗಳಿವೆ. ಮುಖ್ಯವಾಗಿ ಎರಡನ್ನು ಗುರುತಿಸಬಹುದು. ಇಂದಿನ ವಿಧಾನದಲ್ಲಿ ಮೊದಲಾಗಿ, ಕಚರಾ ಶುದ್ಧೀಕರಣ ಯಂತ್ರಾಗಾರವನ್ನು (ಪ್ಲಾಂಟ್) ಹಾಳುಗೆಡಿಸಿ ಕಚರಾ ಸಾಗಿ ಹರಿವ ಕೊಳಾಯಿಗಳಲ್ಲಿ ಅಡ್ಡಗಟ್ಟಬಹುದಾದ ಸರಳ, ಜಡವಾದ, ಗಟ್ಟಿವಸ್ತುಗಳಲ್ಲಿ ಆಗುವಷ್ಟನ್ನೂ ತೆಗೆಯಬೇಕು. ಇದಾದ ಮೇಲೆ ಎರಡನೆಯದಾಗಿ, ಕೊಳೆವ ವಸ್ತು ಬಹುಮಟ್ಟಿಗೆ ಭಾರದಿಂದ ತಳದಲ್ಲಿ ಗಸಿಯಾಗಿ ಕೂರಲು ಬಿಡಬೇಕು. ಆದ್ದರಿಂದ, ಆಮ್ಲಜನಕವನ್ನು ಉಳಿಸುವ ಗಟ್ಟಿವಸ್ತುಗಳನ್ನು ತೆಗೆದುಹಾಕುವ ಕಚರಾ ಶುದ್ಧೀಕರಣದ ಏರ್ಪಾಡು, ಎಷ್ಟರಮಟ್ಟಿಗೆ ಹೇಗಿರಬೇಕು ಎನ್ನುವುದು ಬಗೆಬಗೆಯಾಗಿರುವುದು.

**ಮೊದಲ ಶುದ್ಧೀಕರಣ:** ತೇಲಿಬರುವ ದೊಡ್ಡ ದೊಡ್ಡ ಕಸ, ಕಡ್ಡಿ ಮುಂತಾದುವನ್ನು ದಪ್ಪ ಕಣ್ಣಿನ ಬಲೆಗಳು ಸುಲಭವಾಗಿ ತೆಗೆದುಹಾಕಿದರೆ, ಇನ್ನುಳಿದ ಬೆರೆತು ತೇಲುವ ಪದಾರ್ಥದಲ್ಲಿ ಬಹುಪಾಲನ್ನು ಇನ್ನೂ ಸಣ್ಣ ಕಣ್ಣಿನ ಬಲೆಗಳಿಂದ ಬಾಚಿ ಹಾಕಬಹುದು. ಹೀಗೆ ತೆಗೆದ ಗಲೀಜನ್ನು ದಿನವೂ ಸುಟ್ಟುಹಾಕಬೇಕು. ಇಲ್ಲವೇ ಎಲ್ಲಾದರೂ ಹೂಳಬೇಕು.

ಬಲೆಗಳ ಹಿಂದುಗಡೆ ಎರಡು ಚಿಕ್ಕ ತೊಟ್ಟಿಗಳಿದ್ದು ಮರಳು ಬೂದಿ, ಕಲ್ಲು ಮಣ್ಣುಗಳಂಥ ಭಾರವಾದ ವಸ್ತುಗಳು ತಳವೂರಿದ ಮೇಲೆ, ಜೈವಿಕ ಪದಾರ್ಥ ಕಚರಾದೊಂದಿಗೆ ಮುಂದೆ ನಿಧಾನವಾಗಿ ಹರಿಯುತ್ತದೆ. ಮುಂದೆ, ಕಚರಾ ಹರಿವುದನ್ನು ಇನ್ನೂ ನಿಧಾನಗೊಳಿಸಿ ಗಟ್ಟಿವಸ್ತುಗಳಲ್ಲಿ ಬಹುಪಾಲನ್ನು ಗಸಿಗಟ್ಟಿಸುವ ತೊಟ್ಟಿಗಳಲ್ಲಿ (ಸೆಡಿಮೆಂಟೇಷನ್ ಟ್ಯಾಂಕ್ಸ್) ಹರಿಸಬೇಕು. ತೊಟ್ಟಿಗಳು ಯಾವಾಗಲೂ ತುಂಬಿರುತ್ತವೆ. ತಳದಲ್ಲಿ ಕೂಡಿದ ರಾಡಿಯನ್ನು ಆಗಾಗ್ಗೆ ಕೆರೆದು ಎತ್ತಿ ಹಾಕುತ್ತಿರಬೇಕು. ಗಸಿಗಟ್ಟಿಸುವ ತೊಟ್ಟಿಗಳಲ್ಲಿ ಹಲವು ಬಗೆಗಳಿವೆ.

**ಕೊನೆಯ ಶುದ್ಧೀಕರಣ:** ಇದು ಆಯಾ ಸಂದರ್ಭಕ್ಕೆ ತಕ್ಕಹಾಗಿರುವುದು. ಈ ಮುಂದಿನವಲ್ಲಿ ಯಾವುದಾದರೂ ಒಂದೋ ಎರಡೋ ಹೆಚ್ಚೋ ವಿಧಾನಗಳ ಬಳಕೆಯಾಗಬಹುದು. ಅವು 1 ನೀರು ಬೆರೆಸಿಕೆ (ಡೈಲ್ಯೂಷನ್), 2 ರಾಸಾಯನಿಕ ಶುದ್ಧೀಕರಣ, 3 ಜೈವಿಕ ಶುದ್ಧೀಕರಣ.

**ನೀರು ಬೆರೆಸಿಕೆ:** ಕಚರಾವನ್ನು ಮೊದಲು ಶುದ್ಧೀಕರಣಕ್ಕೆ ಒಳಪಡಿಸಿ ಇಲ್ಲವೇ ಒಳಪಡಿಸದೆಯೇ, ಹೊಳೆ, ನದಿ, ಕಡಲುಗಳಿಗೆ ಹರಿಯಬಿಡಬಹುದು. ಹಲವು ಗೊತ್ತಾದ ಭೌತ, ರಾಸಾಯನಿಕ, ಜೈವಿಕ ಕ್ರಮಗತಿಗಳಿಂದ ಕಚರಾ ಚೊಕ್ಕವಾಗುತ್ತದೆ. ಅಲ್ಲದೆ ಸುಮ್ಮನೆ ನೀರೊಳಕ್ಕೆ ಹರಿಯಬಿಟ್ಟರೆ ಕಚರಾದ ಎಷ್ಟೊ ಹೊಲಸು ಕಳೆದಂತಾಗುವುದು. ಒಂದಷ್ಟು ಗಟ್ಟಿ ಕಚರಾ ತಳವೂರುತ್ತವೆ. ನೀರಲ್ಲಿ ಸೇರಿದಾಗ ಅದರ ಸಾಂದ್ರತೆ ಇಳಿವುದು. ಗಿಡ, ಸಸಿ, ಜೀವಾಣುಗಳಿಗೂ ಶುದ್ಧೀಕರಣದಲ್ಲಿ ಪಾಲ್ಗೊಳ್ಳುತ್ತವೆ. ಕಚರಾಸಾರದಲ್ಲಿ ಆಮ್ಲಜನಕವಿರಬೇಕು. ಅಂತೂ ಹರಿವ ನೀರಿನ 40ರಿಂದ 20ರಲ್ಲಿ ಒಂದು ಪಾಲಿಗಿಂತಲೂ ಹೆಚ್ಚಿರಬಾರದು. ತಳದಲ್ಲಿ ಕಚರಾ ಕೂರಲೀಸದಷ್ಟು ವೇಗವಾಗಿ ನೀರು ಹರಿಯುತ್ತಿರಬೇಕು. ತೇಲುವ ಕಸ ದಂಡೆಯಲ್ಲಿ ರಾಶಿ ಬೀಳಬಾರದು. ಇಂಥ ನೀರಲ್ಲಿ ರೋಗಕಾರಕ ಜೀವಾಣುಗಳು ಇದ್ದೇ ಇರುವುದರಿಂದ ಆ ನೀರು ಜನರ ಬಳಕೆಗೆ ತಕ್ಕದ್ದಲ್ಲ. ಬಹುಮಟ್ಟಿಗೆ ಎಲ್ಲ ತೀರದ ಪಟ್ಟಣಗಳಲ್ಲೂ ಕೊಲ್ಲಿ ನೀರು ಹಿನ್ನುಗ್ಗುವ ನದಿಗಳ ತೀರದ ಊರುಗಳಲ್ಲೂ ಈ ತೆರನ ವಿಲೇವಾರಿ ಇತ್ತೀಚಿನ ತನಕ ರೂಢಿಯಲ್ಲಿತ್ತು. ಹೀಗೆ ಮಾಡುವುದರಿಂದ ಅಮೆರಿಕದಲ್ಲಿ ಇತ್ತೀಚೆಗೆ ಸ್ನಾನಮಾಡುವ ಕಡಲ ಕೆರೆಗಳಲ್ಲಿ ಗಲೀಜಾಗುವುದು ಕಂಡುಬಂದಿತು. ಬಲೆಗಳು, ಗಸಿಗಟ್ಟಿಸುವ ತೊಟ್ಟಿಗಳಿಂದ ಅರೆಬರೆ ಶುದ್ಧೀಕರಣದ ಗಟ್ಟಿವಸ್ತುಗಳನ್ನು ತೆಗೆವುದರಿಂದಲೋ ಹೊರಬಿಡುವ ಮುಂಚೆ ಕ್ಲೋರೀನೀಕರಣದಿಂದಲೋ ಇದರ ಬಗೆಹರಿಸಬಹುದು. ಲಂಡನ್, ಗ್ಲಾಸ್ಗೊ ನಗರಗಳ ಕಚರಾವನ್ನು ಅಲ್ಲಿನ ನದಿ, ಕೊಲ್ಲಿಗಳೊಳಕ್ಕೆ ಬಿಡುವ ಮುಂಚೆ ಚುರುಕುಗೊಳಿಸಿದ ರಾಡಿ (ಆಕ್ಟಿವೇಟೆಡ್ ಸ್ಲಡ್ಜ್) ವಿಧಾನದಿಂದ ಮೊದಲು ಶುದ್ಧೀಕರಣ ಆಗುತ್ತದೆ.

ಮುಂದುವರಿದ ನಾಡುಗಳಲ್ಲಿ ಆಗುವುದಕ್ಕಿಂತಲೂ ಹೆಚ್ಚು ಅಪಾಯಕಾರಿ ಭಾರತದ ಪರಿಸ್ಥಿತಿಯಾದ್ದರಿಂದ ಇಲ್ಲಿ ಶುದ್ಧೀಕರಿಸಿದ ಕಚರಾವನ್ನು ಎಂದಿಗೂ ನದಿ, ಹೊಳೆಗಳೊಳಕ್ಕೆ ಬಿಡಲೇಬಾರದು. ಯಾವ ಕೆಡಕೂ ಏಳದ ಹಾಗೆ ಕಚರಾವನ್ನು ಕೆಲವೇಳೆ ಅಪಾರವಾಗಿ ನದಿಯೊಳಕ್ಕೆ ತಳ್ಳಿಬಿಡಬಹುದು ಎನ್ನುವುದನ್ನು, ವಿದ್ಯಾಧರಿ ನದಿಯೊಳಕ್ಕೆ ಕೋಲ್ಕತ್ತಾದ ತೀರ ಕಚ್ಚಾ ಕಚರಾವನ್ನು ಹಾಕುತ್ತಿದ್ದುದರಿಂದ ಕಾಣಬಹುದಾಗಿತ್ತು. ಆದರೆ ಹಲವಾರು ವರ್ಷಗಳ ಕಾಲ ಅಷ್ಟೊಂದು ಕಚರಾವನ್ನು ತಳ್ಳುತ್ತಿದ್ದುದರಿಂದ ವಿದ್ಯಾಧರಿ ನದಿ ನೀರು ಇಂಗಿದುದನ್ನೂ ನೋಡಬಹುದು. ಹೀಗೆ ಅಪಾರ ನೀರಿನ ರಾಶಿಗೆ ಕಚರಾವನ್ನು ಬೆರೆಸುವ ಕಡೆಗಳಲ್ಲೆಲ್ಲ ಮೊದಲಾಗಿ ಬಲೆಗಟ್ಟಿ, ಭಾರವಾಗಿರುವ ಕೆಸರನ್ನು ಗಸಿಗಟ್ಟಿಸಿ, ಎಣ್ಣೆಜಿಡ್ಡುಗಳನ್ನು ತೆಗೆದುಹಾಕಿದ ಮೇಲೇ ಬಿಡಬೇಕು. ಕಚಾರದಲ್ಲೆ ತೇಲುತ್ತಿರುವ ಗಟ್ಟಿಪದಾರ್ಥಗಳನ್ನೂ ಗಸಿಗಟ್ಟಿಸುವ ಅಲ್ಲದೆ ನಂಜಿನ ತೊಟ್ಟಿಗಳಿಂದ (ಸೆಪ್ಟಿಕ್ ಟ್ಯಾಂಕ್ಸ್) ತೆಗೆದುಹಾಕಬೇಕು. ಕುಲ್ಟೆ ನದಿಗೆ ಕೋಲ್ಕತ್ತದ ಕಚರಾವನ್ನು ತಳ್ಳುವ ಮುಂಚೆ ಈ ವಿಧಾನವೇ ಈಗ ಜಾರಿಯಲ್ಲಿದೆ.

**ರಾಸಾಯನಿಕ ಶುದ್ಧೀಕರಣ:** ತೇಲುತ್ತಿರುವ, ಕರಗಿರುವ ಹಲವಾರು ವಸ್ತುಗಳನ್ನು ಗಟ್ಟಿಗೊಳಿಸಿ ತಳವೂರುವಂತೆ ಮಾಡುವ ರಾಸಾಯನಿಕಗಳನ್ನು ಕಚರಾಕ್ಕೆ ಬೆರೆಸುವುದುಂಟು. ತಿಳಿಯಾಗಿ ತೇಲಿಕೊಂಡ ದ್ರವವನ್ನು ಮತ್ತಷ್ಟು ಚೊಕ್ಕಗೊಳಿಸಿ ಇಲ್ಲವೇ ಯಾವುದಾದರೂ ಹರಿವ ನೀರಿಗೋ ನೆಲದೊಳಕ್ಕೋ ಬಿಡಬಹುದು. ರಾಡಿಯನ್ನು ಆಮೇಲೆ ಬೆರಣಿಗಳಂತೆ ತಟ್ಟಿ ಗೊಬ್ಬರವಾಗಿ ಬಳಸಬಹುದು. ಸುಣ್ಣ, ಅಲ್ಯೂಮಿನಿಯಂ ಸಲ್ಫೇಟು, ಅನ್ನಭೇದಿ (ಹಿರೇಕಸ) ಮುಂತಾದುವೇ ಹೀಗೆ ಬೆರಸುವ ರಾಸಾಯನಿಕಗಳು. ಕಚರಾವನ್ನು

ರಾಸಾಯನಿಕಗಳಿಂದ ಶುದ್ಧೀಕರಿಸುವುದರಲ್ಲಿ ಅವೆಷ್ಟೊ ಅನಾನುಕೂಲತೆಗಳಿವೆ. ಈ ಕ್ರಮ ಭಾರತದಲ್ಲಿ ಅಷ್ಟಾಗಿ ಎಲ್ಲೂ ಜಾರಿಯಲ್ಲಿಲ್ಲ. ಇದ್ದ ಕಡೆಗಳಲ್ಲೂ ಈಗ ಕೈಬಿಟ್ಟಂತಾಗಿದೆ. ದುಬಾರಿ ಖರ್ಚಿನದಲ್ಲದೆ, ರಾಡಿ ರಾಶಿ ಬೀಳುವುದರಿಂದ ವಿಲೇವಾರಿ ಕೂಡ ಕಷ್ಟ. ಕಚರಾ ತಿಳಿಯಾಗುವುದೇ ಹೊರತು, ಹೊರಬಿದ್ದ ನೀರಲ್ಲಿ ರೋಗಾಣುಗಳು ಇದ್ದೇ ಇರುವುವು.

**ಜೈವಿಕ ಶುದ್ಧೀಕರಣ:** ತೇಲುವ ವಸ್ತುಗಳನ್ನು ಹೆಪ್ಪುಗಟ್ಟಿಸಿ ತೆಗೆದುಹಾಕುವ ಬದಲಾಗಿ, ಈ ವಿಧಾನದಲ್ಲಿ ಜಟಿಲ ವಸ್ತುಗಳನ್ನು ಏಕಾಣುಜೀವಿಗಳು ಇನ್ನೂ ಸರಳವಸ್ತುಗಳಾಗಿ ಒಡಕೆಡವುತ್ತವೆ. ಮಲಮೂತ್ರಾದಿಗಳನ್ನು ಹಳ್ಳದಲ್ಲಿ ತಿಪ್ಪೆ, ಬೆರಗೊಬ್ಬರ (ಕಾಂಪೋಸ್ಟ್), ಕಚರಾ ತೋಟಗಾರಿಕೆ (ಫಾರ್ಮಿಂಗ್), ನೆಲದಲ್ಲಿ ಬಿಡುವು ಕೊಟ್ಟು ಸೋಸಿಬಿಡುವಿಕೆಗಳಲ್ಲೆಲ್ಲ ಜೀವಾಣುಗಳ ಕೈವಾಡವೇ ಇರುವುದರಿಂದ ಅವೂ ಜೈವಿಕ ಶುದ್ಧೀಕರಣಗಳೇ. ಜೀವಾಣುಗಳು ಗಾಳಿಜೀವಿಗಳೊ (ಈರೋಬ್ಸ್) ನಿರ್ಗಾಳಿಜೀವಿಗಳೊ (ಅನೀರೋಬ್ಸ್) ಆಗಿರಬಹುದು. ನಿರ್ಗಾಳಿಜೀವಿಗಳು ಕಚರಾದಲ್ಲಿರುವ ಹಲತೆರನ ಜೈವಿಕ ವಸ್ತುಗಳನ್ನು ಒಡಕೆಡವಿ, ಅರಗಿಸಿ, ನೀರಾಗಿಸಿ ಸರಳ ರಾಸಾಯನಿಕಗಳಿಗೆ ಇಳಿಸುತ್ತವೆ. ಅಮೋನಿಯ ಸಂಯುಕ್ತಗಳನ್ನು ನೈಟ್ರೇಟು, ನೈಟ್ರೈಟುಗಳಾಗಿ ಗಟ್ಟಿಗೊಳಿಸುವುವು ಗಾಳಿಜೀವಿಗಳು. ನೆಲದೊಳಕ್ಕೆ ಕಚರಾವನ್ನು ಬಿಟ್ಟರೂ ಹೀಗೇ ಆಗುವುದು.

ಚುರುಕುಗೊಳಿಸಿದ ರಾಡಿ ಶುದ್ಧೀಕರಣ ಇನ್ನೊಂದು ಜೈವಿಕ ವಿಧಾನ. ಮುಂಚೆ ಕೊಂಚ ಶುದ್ಧೀಕರಿಸಿದ ಕಚರಾದೊಂದಿಗೆ ಒಂದಿಷ್ಟು ಚುರುಕುಗೊಳಿಸಿದ ರಾಡಿಯನ್ನು ಬೆರೆಸಿ ಚೆನ್ನಾಗಿ ಗಾಳಿಗೊಡ್ಡಿದ ಮೇಲೆ ನೈಟ್ರೀಕರಣವನ್ನು ಗಾಳಿಜೀವಿಗಳು ಪೂರ್ತಿಗೊಳಿಸುತ್ತವೆ.

**ನಂಜಿನ ತೊಟ್ಟಿ:** ನಿರ್ಗಾಳಿಜೀವಿಗಳ ಪ್ರಭಾವಕ್ಕೆ ಸಾಕಷ್ಟು ಹೊತ್ತು ಕಚರಾ ಸಿಕ್ಕಿಬಿದ್ದಿರುವ, ಇದೊಂದು ಬಗೆಯ ಮುಚ್ಚಿದ ಬಚ್ಚಲುಗುಂಡಿ ಇಲ್ಲವೇ ಗಸಿಗಟ್ಟಿಸುವ ತೊಟ್ಟಿ ಎನ್ನಬಹುದು (ಸೆಪ್ಟಿಕ್ ಟ್ಯಾಂಕ್). ಸಾಕಷ್ಟು ನೀರಿನಿಂದ ಕೊಚ್ಚಿ ಹರಿಸಿದ ಕಚರಾ ನಂಜಿನ ತೊಟ್ಟಿಯೊಳಕ್ಕೆ



**ಚಿತ್ರ 1 ಮನೆಯ ನಂಜಿನ ತೊಟ್ಟಿ ಕಕ್ಕಸಿನ ನಕ್ಷೆ**

ಹರಿದು ಬಂದು ಇನ್ನೊಂದು ಕೊನೆಯಲ್ಲಿನ ಕೊಳಾಯಿಯಿಂದ ಆಚೆಗೆ ಹರಿಯುವುದು. ನಿರ್ಗಾಳಿ ಜೀವಿಗಳಿಂದ ಜೀರ್ಣವಾಗುವಷ್ಟು ಹೊತ್ತು ಕಚರಾ ಅಲ್ಲೇ ಉಳಿದಿರುತ್ತದೆ. ಈ ತೊಟ್ಟಿಯ ಮೂಲಕ ಹೊರಕ್ಕೆ ಹಾಯುವ ವೇಗ, ತಳದಲ್ಲಿ ಗಸಿಗಟ್ಟುವ ಆಶೆಗಳಿಗೆ ತಕ್ಕಂತೆ ತೊಟ್ಟಿಯ ಆಕಾರ, ಗಾತ್ರಗಳಿರುವಂತೆ ಕಟ್ಟಿರಬೇಕು. ಮೂಲೆಗಳಲ್ಲಿ ರಾಡಿ ನಿಲ್ಲುವಂತಿರಬಾರದು. ತೊಟ್ಟಿಯ ಅಗಲ ಕಡಿಮೆ ಇದ್ದರೆ ಕಚರಾ ಬೇಗನೆ ಮುಂದೆ ಸಾಗಿ ಗಸಿಗಟ್ಟುವುದೂ ತಗ್ಗುತ್ತದೆ. ಮನೆಯಲ್ಲಿ ಇದರ ಬಳಕೆದಾರ ಒಬ್ಬೊಬ್ಬನಿಗೂ 3 ಘನ ಮೀ ನಷ್ಟಾದರೂ ಇದರ ಘನಗಾತ್ರ ಇರಬೇಕು. ಒಬ್ಬನಿಗೆ ದಿನಕ್ಕೆ 10 ಲೀಟರುಗಳಿಗೆ ಕಡಿಮೆ ಇಲ್ಲದಷ್ಟು ನೀರಾದರೂ ಹಾಕಬೇಕು.

ಈ ತೊಟ್ಟಿಯಲ್ಲಿ ಬೀಳುವ ಮಡ್ಡಿ, ರಾಡಿಯನ್ನು ಆಗಾಗ್ಗೆ ತೆಗೆಯಲೀಸುವಂತೆ ಇದರ ಮುಚ್ಚಳ ಇರಬೇಕು ಇಲ್ಲಿ ಏಳುವ ಅನಿಲಗಳು ದೂರ ಸಾಗುವ ಹಾಗೆ ಉದ್ದ ಕೊಳವೆ ಒಂದನ್ನು ಇದಕ್ಕೆ ತಗುಲಿಸಿ ನೆಟ್ಟಗೆ ನಿಲ್ಲಿಸಬೇಕು. ಸೊಳ್ಳೆಗಳು ಒಳಸೇರದಂತೆ ಬಲೆ ಹಾಕಿರಬೇಕು. ಒಳಗೆ ಹರಿದು ಬರುವ ನೀರು ಕೂಡಲೇ ನೇರವಾಗಿ ಹೊರಸಾಗದ ಹಾಗೆ ತಡೆ ತೆರೆಗಳು ಒಂದೆರಡು ಇರಬೇಕು.

ಗಟ್ಟಿ ಉಂಡೆಗಳು, ಇಟ್ಟಿಗೆ, ಕಲ್ಲುಚೂರುಗಳು ತೊಟ್ಟಿ ಸೇರಿ ನಿಜವಾದ ನಂಜಿನ ಪ್ರಭಾವವನ್ನು ಅಣಗಿಸದ ಹಾಗೆ ಅವನ್ನು ತಡೆವ ತೆರೆಯನ್ನು ಅಡ್ಡ ಇರಿಸಬೇಕು. ಇದರಿಂದ ತೊಟ್ಟಿಯ ಎಂಟನೆಯ ಒಂದು ಭಾಗ ಈ ಚೂರುಗಳ ಅರೆಯಾಗುವುದು; ಉಳಿದ ಭಾಗ ಜೀರ್ಣಕ ಅರೆ. ಇವೆರಡರ ನಡುವಣ ಸಂಬಂಧ ತಳದ ತೂಬಿನ ಮೂಲಕ. ಮಲದ ಉಂಡೆಗಳಲ್ಲಿ ನೂರಕ್ಕೆ 95ರಷ್ಟು ನೀರಲ್ಲಿ ತೇಲುವುದರಿಂದ ಜೀರ್ಣಕ ಅರೆಗೆ ಬಾರವು. ನಂಜಿನ ತೊಟ್ಟಿಯ ತಳದ ನಡುವಣ ಭಾಗ ತಗ್ಗಾಗಿದ್ದಲ್ಲಿ ಭಾರವಾದ ಪದಾರ್ಥಗಳು ಅಲ್ಲೇ ಉಳಿಯುತ್ತವೆ. ಕಚರಾ ಬಂದ ಮೇಲೆ 2"–6" ದಪ್ಪದ ನೊರೆ ಕಟ್ಟಿ ತೇಲುವುದು. ಇದರ ತಳದಲ್ಲಿ ನಿರ್ಗಾಳಿ ಜೀವಿಗಳ ಚುರುಕು ಕೆಲಸದಿಂದ ಗಟ್ಟಿ ವಸ್ತುಗಳೆಲ್ಲ ಒಡಕೆಡವಿದಂತಾಗಿ ನುಣ್ಣಗೆ ಅರಗುವುವು. ಜೀರ್ಣವಾಗದ ಅರೆದ್ರವವಾದ ಕಪ್ಪು ರಾಡಿ ಕೊನೆಗೆ ಉಳಿಯುತ್ತದೆ.

ನಂಜಿನ ತೊಟ್ಟಿಯಿಂದ ಹೊರಬಿದ್ದ ಕೆಟ್ಟ ವಾಸನೆಗಳೆದ್ದ ರೊಚ್ಚನ್ನು ಬೇಸಾಯ, ತೋಟಗಾರಿಕೆಗಳಲ್ಲಿ ಬಳಸಬಹುದು. ಸರಿಯಾಗಿ ಕಟ್ಟಿದ ನಂಜಿನ ತೊಟ್ಟಿಯಿಂದ ಕೆಟ್ಟ ವಾಸನೆ ಏಳದ್ದರಿಂದ ಮನೆ ಕಟ್ಟಡಗಳ ಬಳಿಯಲ್ಲೇ ಇದು ಇರಬಹುದು. ಆದರೂ ರಾಡಿಯನ್ನು ತೆಗೆಯಬೇಕಾದ್ದರಿಂದ ತುಸು ದೂರವಿದ್ದರೆ ಅನುಕೂಲ. ಕೆಲವು ವರ್ಷಗಳಿಗೆ ಒಂದು ಬಾರಿ ರಾಡಿಯನ್ನು ತೆಗೆದು ಹಾಕುವುದನ್ನು ಬಿಟ್ಟರೆ ನಂಜಿನ ತೊಟ್ಟಿಗಳಿಗೆ ಹೆಚ್ಚು ಗಮನ ಕೊಡಬೇಕಿಲ್ಲ. ದೊಡ್ಡವಾಗಿದ್ದರೆ ವರ್ಷಕ್ಕೊಂದು ಸಾರಿ ತೆಗೆಯಬೇಕು.

ಇದರಲ್ಲಿ ಮುಖ್ಯ ಪಾತ್ರವಹಿಸುವ ಜೀವಾಣುಗಳು ಸಾಯುವುದರಿಂದ, ನಂಜಿನ ತೊಟ್ಟಿಗೆ ಯಾವ ರೋಗಾಣುನಾಶೀ (ಡಿಸಿನ್‌ಫೆಕ್ಟೆಂಟ್) ಮದ್ದನ್ನೂ ಹಾಕಬಾರದು. ಮನೆಯ ಬಚ್ಚಲಲ್ಲೂ ಸುರಿಯಬಾರದು. ತೊಟ್ಟಿಯಲ್ಲಿ ನೊರೆಗಟ್ಟಲೂ ಅನಿಲಗಳೇಳಲೂ ಮೇಲುಗಡೆ ಸಾಕಷ್ಟು ಜಾಗವಿರಬೇಕು. ಕೇವಲ ಮಲಮೂತ್ರ, ತೊಳೆದ ನೀರು ಸೇರುವ ಕಚರಾದ ಹರಿವು ಸಾಮಾನ್ಯವಾಗಿ ಒಬ್ಬನಿಗೆ ದಿನಕ್ಕೆ 3 ಲೀಟರುಗಳನ್ನು ಮೀರದು. ನಂಜಿನ ತೊಟ್ಟಿಯಿಂದ ಹೊರಬಿದ್ದ ನೀರಿನ ವಿಲೇವಾರಿಗೆ ನಮ್ಮಲ್ಲಿ ಕೊರೆಗುಂಡಿಗಳು (ಬೋರ್‌ಹೋಲ್ಸ್), ಇಮರುಗಣಿಗಳು, (ಸೋಕ್‌ಪಿಟ್ಸ್) ಒಳ್ಳೆಯವು.

**ನೀರು ಕಕ್ಕಸು :** ಮಲಮೂತ್ರ ಸಾಗಣೆಗೆ ಸಾಕಷ್ಟು ನೀರು ದೊರೆಯದಾಗ ಮುಖ್ಯವಾಗಿ ಕಾಡುತೋಟಗಳಲ್ಲಿ (ಪ್ಲಾಂಟೇಷನ್ಸ್) ಮತ್ತು ಚಿಕ್ಕ ರೈಲುನಿಲ್ದಾಣಗಳಲ್ಲಿ ಕಚರಾವನ್ನು ಜೈವಿಕ ವಿಧಾನದಲ್ಲಿ ವಿಲೇವಾರಿ ಮಾಡಲು ನೀರು ಕಕ್ಕಸನ್ನು (ಅಕ್ವ ಪ್ರಿವಿ) ಬಳಸುವುದುಂಟು.



**ಚಿತ್ರ 2 ನೀರು ಕಕ್ಕಸಿನ ನಕ್ಷೆ**

ಇದರಲ್ಲಿ ನಂಜಿನ ತೊಟ್ಟಿಯ ಮೇಲೆಯೇ ಕಕ್ಕಸಿನ ಪಾದಪೀಠಗಳಿರುವುವು. ಇದರಿಂದ ಅನಾನುಕೂಲತೆಗಳೇ ಹೆಚ್ಚು. ಕಚರಾ ನೊರೆಗಟ್ಟಿದ್ದು ಮಲ ಬಿದ್ದಾಗ ಒಂದೊಂದು ಬಾರಿಯೂ ಕಕ್ಕಸು ಕದಡಿದಂತಾಗಿ ದುರ್ನಾತದ ಅನಿಲಗಳು ಕಕ್ಕಸೊಳಕ್ಕೇ ಬರುತ್ತವೆ. ಅಲ್ಲದೆ ಗಲೀಜಿನ ನೊರೆ ಮೇಲುಗಡೆಯೇ ಕಾಣುವುದು. ಕಚರಾ ಸಾಕಷ್ಟು ದಿನಗಳು ನೀರು ಕಕ್ಕಸಲ್ಲಿ ಉಳಿಯದೆ ಶುದ್ಧೀಕರಣ ಆಗದೆಯೇ ಹೊರಬೀಳುತ್ತದೆ.

**ಬೇಸಾಯದಲ್ಲಿ ಕಚರಾ ವಿಲೇವಾರಿ :** ನೆಲದಲ್ಲಿ ಹರಿಸಿ ಕಚರಾ ವಿಲೇವಾರಿ ಮಾಡಲು, ನೆಲದೊಳಗೆ ನೀರಾವರಿ (ಸಬ್ಸಾಯಿಲ್ ಇರಿಗೇಷನ್), ಬಿಟ್ಟು ಬಿಟ್ಟು ಸೋಸಿ ಇಳಿಸುವಿಕೆ (ಇಂಟರ್ಮಿಟೆಂಟ್ ಡೌನ್‌ವರ್ಡ್ ಫಿಲ್ಟ್ರೇಷನ್), ಕಚರಾ ತೋಟಗಾರಿಕೆ (ಸ್ಯೂಯೇಜ್ ಫಾರ್ಮಿಂಗ್) ಎಂಬ ಮೂರು ವಿಧಾನಗಳಿವೆ.

**ನೆಲದೊಳಗೆ ನೀರಾವರಿ:** ಮನೆಯಲ್ಲಿ ಕಟ್ಟಿದ ನಂಜಿನ ತೊಟ್ಟಿಯಿಂದ ಬರುವ ಕಚರಾ ವಿಲೇವಾರಿಗೆ ಇದು ಸಾಮಾನ್ಯವಾಗಿ ಬಳಕೆಯಲ್ಲಿದೆ. ಅಲ್ಲಲ್ಲಿ ಬಿಟ್ಟು ಬಿಟ್ಟು



**ಚಿತ್ರ 3 ನೆಲದೊಳಗೆ ನೀರಾವರಿಗಾಗಿ ಚರಂಡಿ ಕೊಳಾಯಿಗಳ ಜೋಡಣೆ**

ಜೋಡಿಸಿದ ಬೇಸಾಯದ ಚರಂಡಿ ಕೊಳಾಯಿಗಳ ಮೂಲಕ ಶುದ್ಧೀಕರಿಸಿದ ಕಚರಾ ಹರಿಯುತ್ತದೆ. ನೆಲದ ಮಣ್ಣು ಒಣಕಲಾಗಿ ಮರಳಿನಂತಿರಬೇಕು. ಜೇಡಿಸುಣ್ಣ ಗೂಡಿದ ಮಣ್ಣುಗಳು ತಕ್ಕವಲ್ಲ. ಕಚರಾವನ್ನು ಬಿಡುವು ಕೊಟ್ಟು ಹರಿಸುವಾಗ ಈ ವಿಧಾನ ಒಳ್ಳೆಯದು.

**ಬಿಟ್ಟು ಬಿಟ್ಟು ಸೋಸಿ ಇಳಿಸುವಿಕೆ:** ಇಲ್ಲಿ ಕಚರಾ ನೀರನ್ನು ಶುದ್ಧೀಕರಿಸಲು ನೆಲವೇ ಸೋಸಬೇಕಾದ್ದರಿಂದ ಈ ವಿಧಾನಕ್ಕೆ ಉಸುಬಿನಂತಿರುವ ಮಣ್ಣಿದ್ದರೆ ಒಳ್ಳೆಯದು. ಇಲ್ಲಿ ಗೊತ್ತಾದ ಚಿಕ್ಕ ಜಾಗದಲ್ಲಿ ನೀರನ್ನು ಇಮರಿಸುವುದು ಮುಖ್ಯವೇ ಹೊರತು ಅದರಿಂದ ಬೆಳೆ ಎತ್ತುವುದು ಮುಖ್ಯ ಗುರಿಯಲ್ಲ. ಕಚರಾ ನೀರನ್ನು ತಡೆತಡೆದು ಬಿಡುವುದು ಮುಖ್ಯ. ಇಲ್ಲೂ ಶುದ್ಧೀಕರಣಕ್ಕೆ ಕಾರಣ ನೆಲದ ಮೇಲ್ಮೈ ಮಣ್ಣಿನಲ್ಲಿರುವ ನೈಟ್ರೀಕರಿಸುವ ಜೀವಾಣುಗಳು, ಏಕಾಣುಜೀವಿಗಳೇ. ಇದು ಕೈಗೂಡಬೇಕಾದರೆ ದೊಡ್ಡ ಸೋಸುಪಾತಿಗಳ (ಫಿಲ್ಟರ್ ಬೆಡ್ಸ್) ಮಾದರಿಯಲ್ಲಿರಬೇಕು.

ಪಾತಿಗಳ 6'ಗಳ ತಳದಲ್ಲಿ ಚರಂಡಿ ಕೊಳಾಯಿಗಳು 10'ಗಳಷ್ಟು ದೂರದಲ್ಲಿರಬೇಕು. ಇವುಗಳ ಮೇಲೆ ದಪ್ಪ ಕಲ್ಲುಚೂರುಗಳೂ ಮರಳಿನಂಥ ಮಣ್ಣನ್ನೂ ಹರವಬೇಕು. ನೆಲದ ಇಳಿಜಾರು ಕಚರಾ ನೀರನ್ನು ಎಲ್ಲ ಕಡೆಗಳಿಗೂ ಹರಿಸುವಂತಿರಬೇಕು. ನೆಲದ ಮೇಲೆ ಕಚರಾ ನೀರನ್ನು ಕಾಲುವೆಗಳಲ್ಲಿ ಹರಿಸಬೇಕು. 6 ತಾಸುಗಳು ಒಂದೆಡೆ ಹರಿದರೆ ಮುಂದಿನ 18 ತಾಸುಗಳು ಬಿಡುವು ಕೊಟ್ಟು ಗಾಳಿಯಾಡಲು ಬಿಡಬೇಕು. ಹೀಗೆ ಮಾಡಿದರೆ ನೆಲಕ್ಕೆ ಕಟ್ಟರೆ ಆಗದು. ಏರು ತಗ್ಗುಗಳಲ್ಲಿ ಬೆಳೆ ಇಡಲೂಬಹುದು. ಏರಿನಲ್ಲಿ ಕಚರಾ ಹರಿವಾಗ ತಗ್ಗು ಬಿಡುವಾಗಿರುತ್ತದೆ. ನೆಲದೊಳಗಿಂದ ಹೊರಬಿದ್ದ ಕಚರಾಸಾರ ಕೊಳೆಯದು. ಆದ್ದರಿಂದ ಯಾವ ಕೆಡುಕೂ ಇಲ್ಲದೆ ಸೀದಾ ಹೊಳೆ, ನದಿಗಳೊಳಕ್ಕೆ ಬಿಟ್ಟು ಬಿಡಬಹುದು. ಸಾಕಷ್ಟು ಜಮೀನು ಇರುವುದಾದರೆ ಇದು ಒಳ್ಳೆಯ ಸರಳ ವಿಧಾನ, 3,000 ಮಂದಿ ಇರುವೆಡೆಗೆ ಒಂದು ಎಕರೆ ಜಮೀನು ಸಾಕು.

**ಕಚರಾ ತೋಟಗಾರಿಕೆ:** ಪಟ್ಟಣ, ನಗರಗಳ ಬಳಿ ಜಮೀನು ದೊರೆತರೆ ಈ ವಿಧಾನ ಸಲ್ಲುತ್ತದೆ. ಇದು ಕಚರಾ ಶುದ್ಧೀಕರಣದ ಬಲು ಹಳೆಯ ವೈಜ್ಞಾನಿಕ ವಿಧಾನ. ವಿಶಾಲವಾಗಿರುವ ಸಾಮಾನ್ಯ ಬೇಸಾಯದ ಜಮೀನಿನ ಮೇಲೆ ಕಚರಾ ನೀರನ್ನು ಹರಿಯಿಸಿ, ಆಗುವಷ್ಟೂ ಹೆಚ್ಚಾಗಿ ತೋಟಗಾರಿಕೆಯಲ್ಲಿ ಬೆಳೆ ಎತ್ತಿ ಕಚರಾವನ್ನು ಶುದ್ಧೀಕರಿಸುವ ಏರ್ಪಾಡಿದು. ನಗರಕ್ಕೆ ತಗ್ಗಿನಲ್ಲಿದ್ದು ಒಳಚರಂಡಿಗಳ ಮೂಲಕ ಕಚರಾ ಹರಿದು ಬರುವಂತಿರಬೇಕು. ಮಣ್ಣು ಮರಳಿನಂತಿದ್ದರೆ ಒಳ್ಳೆಯದು. ಗಟ್ಟಿ ಕಸಕಡ್ಡಿಗಳನ್ನು ತಡೆ ಹಾಕಿಟ್ಟು ಕಚ್ಚಾ ಕಚರಾವನ್ನೇ ಹರಿಸಬೇಕು. ಜಮೀನಿನ ಮೇಲೆ ಒಂದೇ ಸಮನಾಗಿ ಕಚರಾ ಹರಿಸದೆ ಬಿಡುವು ಕೊಟ್ಟು ಹಾಯಿಸಿದರೆ ಗಾಳಿಗೆ ಒಡ್ಡಿದಂತಾಗುವುದು. ಎತ್ತರದ ಪಾತಿಗಳಲ್ಲಿ ಬೆಳೆಯಿಟ್ಟು ತಗ್ಗಿನ ಕಾಲುವೆಗಳಲ್ಲಿ ಕಚರಾವನ್ನು ಹರಿಸಬಹುದು. ಹೀಗೆ ಮಾಡಲು ಉಷ್ಣವಲಯದಲ್ಲಿ 100 ಮಂದಿಗೆ ಒಂದು ಎಕರೆ ಜಮೀನು ಬೇಕು. ಭಾರತದಲ್ಲಿ ಬಿಸಿಲಿನಿಂದ ಇಮರುವುದು ಹೆಚ್ಚಿರುವುದರಿಂದ ಅಷ್ಟೊಂದು ಜಾಗ ಬೇಕಿಲ್ಲ. ಆದರೆ ಮಳೆಗಾಲದಲ್ಲಿ ಕಚರಾ ವಿಲೇವಾರಿಗೆ ತೊಂದರೆಯಾಗುತ್ತದೆ.

ಭಾರತದಲ್ಲಿ ಮೈಸೂರು ನಗರದಲ್ಲೂ ಪಂಜಾಬ್, ಉತ್ತರ ಪ್ರದೇಶಗಳಲ್ಲೂ ಇದು ಲಾಭಕರವಾಗಿ ಜಾರಿಯಲ್ಲಿದೆ. ಈ ವಿಧಾನದಲ್ಲಿ ಶೇ. 90 ಗಲೀಜನ್ನೂ ಏಕಾಣುಜೀವಿಗಳನ್ನೂ ತೆಗೆದಂತಾದರೂ ಹೊರಸಾಗುವ ಕಚರಾ ನೀರು ಕೊಳೆವುದು. ಇದರ ಸಹಾಯದಿಂದ ಹುಲ್ಲು, ಕಬ್ಬು, ಬಾಳೆ, ತರಕಾರಿಗಳನ್ನು ಚೆನ್ನಾಗಿ ಬೆಳೆಸಬಹುದು. ಆದರೆ ಜಮೀನು ತಡೆಯಲಾರದಷ್ಟು ಕಚರಾವನ್ನು ಬಿಡುವಿಲ್ಲದೆ ಹರಿಸುತ್ತಿದ್ದರೆ ಅದು ಬೇಗನೆ ಕೆಲಸಕ್ಕೆ ಬಾರದಾಗುತ್ತದೆ.

**ಮರಳಿನ, ಕಂಕರೆಯ ಪಾತಿಗಳ ಮೂಲಕ ಸೋಸಿಕೆ:** ಈ ವಿಧಾನದಲ್ಲಿ, ತಾಕು ಪಾತಿಗಳು (ಕಾಂಟ್ಯಾಕ್ಟ್ ಬೆಡ್ಸ್) ಇಲ್ಲವೇ ಒಡಿಕಟ್ಟುವ (ಪರ್ಕೊಲೇಟಿಂಗ್) ಪಾತಿಗಳ ಮೂಲಕ ಕಚರಾದ ಶುದ್ಧೀಕರಣ ಆಗುತ್ತದೆ.



ಚಿತ್ರ 4 ಒಡಿಕಟ್ಟುವ ಕಚರ ಸೋಸಿಕದ ಸೀಳುಕೊಯ್ತು

**ತಾಕು ಪಾತಿಗಳು:** ನಾಲ್ಕಾರು ಮೀ ಗಳು ಆಳದ, ಗಟ್ಟಿ ಇಟ್ಟಿಗೆ, ಕಲ್ಲು ಚೂರುಗಳು ತುಂಬಿರುವ, ನೀಳ ಚೌಕಾಕಾರದ ಗಾರೆ ತೊಟ್ಟಿಗಳು. ನೀರನ್ನು ಹೊರಬಿಡಲು ತಳದಲ್ಲಿ ತೂಬುಗಳಿವೆ. ಇಟ್ಟಿಗೆ, ಕಲ್ಲುಗಳು ಕರಗದೆ ಉಳಿದು ಏಕಾಣುಜೀವಿಗಳ ಬೆಳೆವಣಿಗೆ, ಪ್ರಭಾವ ತೋರಲು ವಿಶಾಲ ತಳವನ್ನು ಒದಗಿಸುತ್ತವೆ. ಇವನ್ನು ಆಗಾಗ್ಗೆ ಹೊರತೆಗೆದು ತೊಳೆದು ಮತ್ತೆ ಹಿಂತಿರುಗಿಸಬೇಕು. ಗಸಿಗಟ್ಟಿಸುವ ತೊಟ್ಟಿಗಳಿಂದ ಬರುವ ಕಚರಾ ನೀರು ಇಲ್ಲವೇ ನಂಜಿನ ತೊಟ್ಟಿಯಿಂದ ಬಂದ ಗಲೀಜು ಸಾರವನ್ನು ಇವುಗಳಲ್ಲಿ 2–4 ತಾಸುಗಳಾದರೂ ಇರಿಸಿದ್ದರೆ ಅದು ಏಕಾಣುಜೀವಿಗಳ ಪ್ರಭಾವಕ್ಕೆ ಸಿಗುತ್ತದೆ. ಪಾತಿಗಳನ್ನು ಬರಿದು ಮಾಡಿದಾಗ ಗಾಳಿಗೊಡ್ಡಿದಂತಾಗುತ್ತದೆ. ತಾಕು ಪಾತಿ ತುಂಬಲೂ ಬರಿದಾಗಲೂ ತಾಸಿಗಿಂತಲೂ ಹೆಚ್ಚು ಹೊತ್ತು ಹಿಡಿಯಬಾರದು. 4 ತಾಸು ಕೆಲಸ ಮಾಡಿದರೆ 8 ತಾಸು ಬಿಡುವಿರದಿದ್ದಲ್ಲಿ ಏಕಾಣುಜೀವಿಗಳು ಗಾಳಿಯಿಲ್ಲದೆ ಸಾಯುತ್ತವೆ. ಇದರಿಂದ ಹೊರಬೀಳುವ ಸಾರದಲ್ಲಿ ಗಟ್ಟಿ ವಸ್ತುಗಳಿರುವುದರಿಂದ ಒಡಿಕಟ್ಟುವ ಸೋಸಿಕಗಳಿಂದ ಬಂದುದರಷ್ಟು ಒಳ್ಳೆಯದಲ್ಲ. ಈ ವಿಧಾನದಲ್ಲಿ ಉಸ್ತುವಾರಿ ಸಿಬ್ಬಂದಿ ಹೆಚ್ಚಾಗಿ ಬೇಕು. ಇದು ಅಷ್ಟಾಗಿ ಈಗ ಜಾರಿಯಲ್ಲಿಲ್ಲ.

**ಒಡಿಕಟ್ಟುವ ಸೋಸಿಕಗಳು:** ಇವನ್ನು ಚಿಮುಕಿಸುವ, ತೊಟ್ಟಿಕ್ಕಿಸುವ, ಚೆಲ್ಲುವ ಸೋಸಿಕಗಳೆಂದೂ ಕರೆವುದುಂಟು. ಇವುಗಳ ರೀತಿ, ಬಳಕೆ ತಾಕು ಪಾತಿಯದರ ಹಾಗೆ ಇದ್ದರೂ ತಿಳಿಗೊಳಿಸಿದ ಕಚರಾವನ್ನು ಇವುಗಳೊಳಕ್ಕೆ ಹಾಕುವ ವಿಧಾನ ಮಾತ್ರ ಬೇರೆ. ಇವು ಗುಂಡಗೋ ನೀಳ ಚೌಕಾಕಾರವಾಗೋ ಇದ್ದು, 2 ಮೀ ಆಳದಲ್ಲಿ ಕಲ್ಲು ಇಟ್ಟಿಗೆಗಳ ಗಟ್ಟಿ ಚೂರುಗಳಲ್ಲಿ ದಪ್ಪನವು ಕೆಳಗಿರುವಂತೆ ಕ್ರಮವಾಗಿ ಜೋಡಿಸಿರುವುದು. ಇದರಿಂದ ಗಾಳಿಯಾಡಲು ಸರಾಗ, ಗಸಿಗಟ್ಟಿಸುವ ತೊಟ್ಟಿಯಿಂದಲೋ ನಂಜಿನ ತೊಟ್ಟಿಯಿಂದಲೋ ಬಂದ ಸಾರವನ್ನು ಇದರ ಮೇಲೆ ಅಲುಗಾಡದಂತೆ ಜೋಡಿಸಿರುವ, ಅತ್ತಿಂದಿತ್ತಲೋ ಗುಂಡಗೋ ಸುತ್ತಿಡುವ, ಆಗಾಗ್ಗೆ ಚೆಲ್ಲುವ ಕೊಳಾಯಿಗಳಿಂದ, ಬಿಡುವು ಕೊಡುತ್ತ ಚೆಲ್ಲಬೇಕು. ಎಲ್ಲೆಲ್ಲೂ ಒಂದೇ ಸಮನಾಗಿ ಹರಡಿಕೊಳ್ಳುತ್ತದೆ. ಇಲ್ಲೂ ಚೆನ್ನಾಗಿ ಬೆಳೆದ ಏಕಾಣುಜೀವಿಗಳ ವರ್ತನೆಯಿಂದ ಕಚರಾ ಸಾರ ಚೊಕ್ಕವಾಗಿ ಹೊರಬೀಳುತ್ತದೆ. ಕೆಲವೇಳೆ ಪದರಗಟ್ಟಿದ ಏಕಾಣುಜೀವಿಗಳೂ ಹೊರಬಿದ್ದ ಸಾರದಲ್ಲಿ ಇರಬಹುದಾದ್ದರಿಂದ ಮತ್ತೊಂದು ಗಸಿಗಟ್ಟಿಸುವ ತೊಟ್ಟಿಯಲ್ಲಿ ಹಾಯಿಸಬೇಕು. ಈ ಸೋಸಿಕಗಳನ್ನು ಸರಿಯಾಗಿ ಯೋಜಿಸಿ ಆರಂಭಿಸಿದರೆ ಆಮೇಲೆ ಉಸ್ತುವಾರಿ ಬೇಕೆನಿಸದು. ಇದಕ್ಕೆ ದುಬಾರಿ ಖರ್ಚಿಲ್ಲ, ಹಿಡಿವ ಜಾಗ ಕಡಿಮೆ, ಚೆನ್ನಾಗಿ ಚೊಕ್ಕಗೊಳಿಸುವುದು.

**ಚುರುಕುಗೊಳಿಸಿದ ರಾಡಿ:** ಕಚರಾದ ವಿಲೇವಾರಿಯಲ್ಲಿ ನಿಜವಾಗೂ ಗಾಳಿಜೀವಿ ವಿಧಾನವಿದು. ಇರುವ ವಿಧಾನಗಳಲ್ಲೆಲ್ಲ ಇದೇ ಬಲು ಒಳ್ಳೆಯದು. ಒಡಿಕಟ್ಟುವ ಸೋಸಿಕಗಳಲ್ಲಿ ಏಕಾಣುಜೀವಿ ಪದರಗಳಲ್ಲಿ ಆಗುವ ಕೆಲಸವನ್ನು ಚುರುಕುಗೊಳಿಸಿದ ರಾಡಿ ಮಾಡುತ್ತವೆ.




**ಚಿತ್ರ 5 ಚುರುಕುಗೊಳಿಸಿದ ರಾಡಿ ವಿಧಾನದ ಜೋಡಣೆ : 1 ದಪ್ಪ ಕಣ್ಣಿನ ಬಲೆ, 2 ಗಾಳಿತೂರಿಕೆಗಳಿಂದ ಒತ್ತಡದ ಗಾಳಿ ತೂರಿ ಹರಿವ ಕಚರದಲ್ಲಿ ಉಂಡೆಗಟ್ಟಿದ ವಸ್ತುಗಳನ್ನು ಒಡೆಕೆಡವುವ ತೊಟ್ಟಿ, 3 ಸಣ್ಣ ಕಣ್ಣಿನ ಬಲೆ, 4 ಗಾಳಿಗೊಡ್ಡುವ ತೊಟ್ಟಿಯ ಭಾಗಗಳು, 5 ಕಚ್ಚಾಕಚರ ಚುರುಕುಗೊಳಿಸಿದ ರಾಡಿ, ಹೊರಬೀಳುವ ಕಚರಸಾರವಾಗಿ ಬೇರ್ಪಡುವ, ನಡುವೆ ಆಳವಾಗಿರುವ ಗಸಿಗಟ್ಟಿಸುವ ತೊಟ್ಟಿ, 6 ಬೆರೆತ ಕಚರ ಒಳಹೋಗುವ ಕಂಡಿ, 7 ಕಚರ ಸಾರ ಕೊನೆಗೆ ಹೊರಹೋಗುವ ಕೋಡಿ, 8 ಚುರುಕುಗೊಳಿಸಿದ ರಾಡಿಯನ್ನು ಮರುಚುರುಕುಗೊಳಿಸುವ ಕಾಲುವೆ, 9 ಮರುಚುರುಕಾದ ರಾಡಿಯನ್ನು ಮೇಲೆತ್ತುವ ಗಾಳಿಸಾಧನೆ, 10 ಮಿಗಿಲೆನಿಸಿದ ಒಣಗಿಸುವ ಪಾತಿಗಳಿಗೆ ಸಾಗಿಸುವ ಏರ್ಪಾಡು, 11 ಗಾಳಿತೂರಿಕಗಳು**

ಇನ್ನೂ ಚೆನ್ನಾಗೇ ಮಾಡುವುದೆನ್ನಬಹುದು. ಒಡಿಕಟ್ಟುವ ಸೋಸಿಕಗಳಲ್ಲಿ ಕಚರಾ ಸಾರವನ್ನು ಎರಚಿದರೆ, ಇಲ್ಲಿ ಅದಕ್ಕಾಗಿ ಕಟ್ಟಿದ ತೊಟ್ಟಿಗಳಲ್ಲಿ ತುಂಬಿರುವ ಕಚರಾದ ಮೂಲಕ ಸಣ್ಣ ಚಿಮ್ಮು ಗೋವಿಗಳಿಂದ ಗಾಳಿಬುಗ್ಗೆ ಏಳುತ್ತದೆ. ಕಚರಾದ ಸಾಂದ್ರತೆ, ಚೊಕ್ಕಗೊಳಿಸಬೇಕಾದ ಮಟ್ಟಗಳಿಗೆ ತಕ್ಕಂತೆ, ಸಾಮಾನ್ಯವಾಗಿ ಆರೆಂಟು ತಾಸುಗಳ ಹೊತ್ತು, ಕಚರಾದೊಂದಿಗೆ ಚುರುಕುಗೊಳಿಸಿದ ರಾಡಿಯನ್ನು ಬೆರೆಸಿ ಗಾಳಿಬುಗ್ಗೆ ಏಳಿಸಬೇಕು. ಕೆಲವೇಳೆ 2–24 ತಾಸುಗಳೇ ಹಿಡಿಯಬಹುದು. ಚೊಕ್ಕವಾದ ಸಾರದಿಂದ ರಾಡಿಯನ್ನು ತೆಗೆದು ಹಾಕಬಹುದು ಇಲ್ಲವೇ ಚುರುಕುಗೊಳಿಸಿ ಮತ್ತೆ ಬಳಸಬಹುದು.

ಒತ್ತಡದಲ್ಲಿರುವ ಗಾಳಿಯನ್ನು ಗುಳ್ಳೆಗಳೇಳುವಂತೆ ಒತ್ತಿ ಬಿಡುವ ಗಾಳಿತೂರಿಕಗಳ (ಡಿಫ್ಯೂಸರ್ಸ್) ತಳದಲ್ಲಿ ಅಳವಡಿಸಿರುವ ಗಾಳಿಗೊಡ್ಡುವ ತೊಟ್ಟಿಗಳಲ್ಲಿ ಕಚ್ಚಾಕಚರಾದಿಂದ ಚುರುಕುಗೊಳಿಸಿದ ರಾಡಿ ತಯಾರಾಗುತ್ತದೆ. 2 ಲೀಟರು ಕಚರಾಕ್ಕೆ 1.75 ಘನ ಮೀ ಗಳಷ್ಟು ಒತ್ತಡದ ಗಾಳಿ ಬೇಕಾಗುವುದು. ಕಚರಾದಲ್ಲಿರುವ ಅಮೋನಿಯ ಎಲ್ಲವೂ

ನೈಟ್ರೇಟುಗಳಾಗುವ ತನಕ ಹೀಗೇ ಮಾಡುತ್ತಿರಬೇಕು. ಒತ್ತು ಗಾಳಿಯನ್ನು ನಿಲ್ಲಿಸಿಬಿಟ್ಟರೆ ರಾಡಿ ತಳದಲ್ಲಿ ಕೂರುತ್ತದೆ. ತೇಲುವ, ತಿಳಿಯಾದ ಕಚರಾ ಸಾರವನ್ನು ಹೊರಬಿಟ್ಟು ಕಚ್ಚಾ ಕಚರಾವನ್ನು ಬೆರೆಸಬಹುದು. ಹೀಗೆ ಹಲವು ಸಾರಿ ನಡೆಸಿದ ಮೇಲೆ ಉಳಿವ ಚುರುಕುಗೊಳಿಸಿದ ರಾಡಿ ವಾಸನೆಯಿಲ್ಲದೆ, ಗಾಳಿಜೀವಿ ಏಕಾಣುಜೀವಿಗಳು ಹೇರಳವಾಗಿ ತುಂಬಿರುವುದರಿಂದ ಶುದ್ಧೀಕರಣ ವಿಧಾನಗಳಲ್ಲಿ ಬಳಸಬಹುದು.

ಇಲ್ಲಿ ಶುದ್ಧೀಕರಣ ಎರಡು ಹಂತಗಳಲ್ಲಿ ಸಾಗುತ್ತದೆ. ಮೊದಲು ಜೈವಿಕ ವಸ್ತುಗಳು ಒಡೆದು, ಇಂಗಾಲದಿಂದ ಇಂಗಾಲದ ಡೈಆಕ್ಸೈಡ್ ಹುಟ್ಟುತ್ತದೆ. ಆಮೇಲೆ ಕಚರಾಸಾರ ಇದ್ದಹಾಗೇ ಉಳಿದರೂ ಗಾಳಿಗೊಡ್ಡುವುದು ಮುಂದುವರಿದು ನೈಟ್ರೇಟುಗಳು ತಯಾರಾಗುತ್ತವೆ. ಚುರುಕುಗೊಳಿಸಿದ ರಾಡಿ ವಿಧಾನದ ಜೋಡಣೆಯನ್ನು ಚಿತ್ರದಿಂದ ತಿಳಿಯಬಹುದು.

ಚುರುಕುಗೊಳಿಸಿದ ರಾಡಿಯನ್ನೂ ಕಚರಾಸಾರವನ್ನೂ ಗಾಳಿಗೊಡ್ಡುವ ವಿಧಾನಗಳು ಹಲವಾರಿವೆ. ಗಾಳಿಗೊಡ್ಡುವ ತೊಟ್ಟಿಗಳ ತಳದಲ್ಲಿ ತೂತುತೂತಾಗಿರುವ ಕೊಳವೆಗಳು ಇಲ್ಲವೇ ಹಂಚುಗಳ ಮೂಲಕ ಗಾಳಿಯನ್ನು ರಾಡಿ ಇಲ್ಲವೇ ಕಚರಾಸಾರದ ಮೂಲಕ ಒತ್ತಿ ಬಿಡಬಹುದು. ಕಚರಾದೊಂದಿಗೆ ರಾಡಿ ಬೆರೆಸಿದ್ದನ್ನು ತೊಟ್ಟಿಯ ತಳದಲ್ಲಿರುವ ಕೊಳವೆಯ ಮೂಲಕ ಮೇಲೆಳೆದುಕೊಂಡು ಮೇಲ್ಮೈ ಮೇಲೆ ಸಿಂಪಡಿಸಿ ಗಾಳಿಗೊಡ್ಡಬಹುದು. ಎರಡನೆಯ ವಿಧಾನಕ್ಕೆ ಮೇಲ್ಮೈಗಾಳಿಗೊಡ್ಡುವ ಸಿಂಪ್ಲೆಕ್ಸ್ ವಿಧಾನ ಎಂದಿದೆ.

**ಸಿಂಪ್ಲೆಕ್ಸ್ ವಿಧಾನ:** ಇದರಲ್ಲಿ ತಲೆಕೆಳಗಾದ ಶಂಖಾಕಾರದ ತೊಟ್ಟಿಯ ನಡುವೆ ಮೇಲೆ ಸೇದಿಕೊಳ್ಳುವ ಕೊಳವೆ ಇರುವುದು. ಇದು ತಳದಿಂದ 6' ಎತ್ತರಕ್ಕಿದೆ. ಮೇಲಿನ ಬಾಯಿ ಬೀಸುವ ಕಲ್ಲಿನ ಗುಳಿಯಂತಿದ್ದು, ಅದರಲ್ಲಿ ನೆಟ್ಟಗಿರಿಸಿದ ನಡುಗಂಬಕ್ಕೆ ಬೀಸು ರೆಕ್ಕೆಗಳನ್ನು ಓಲಿಸಿ ಜೋಡಿಸಿರುತ್ತವೆ. ವಿದ್ಯುತ್ ಯಂತ್ರದಿಂದ ಇದು ಗಿರ್ರನೆ ತಿರುಗಿದಾಗ ಸೇದು ಕೊಳುವೆಯ ಮೂಲಕ ರಾಡಿ ಬೆರೆತ ಕಚರಾವನ್ನು ಮೇಲೆ ಸೇದಿಕೊಂಡು ತುಂತುರಾಗಿ ಮೇಲೆ ಚಿಮ್ಮಿ ಚೆನ್ನಾಗಿ ಗಾಳಿಗೊಡ್ಡುವುದು. ಹೀಗೆ ಸೇದುಕೊಳವೆಯಲ್ಲಿ ಮೇಲೇರಿ ತೊಟ್ಟಿಯಲ್ಲಿ ಚಿಮ್ಮಿ, ತಳ ಸೇರಿ, ಮತ್ತೆ ಮೇಲೇರಿ ಸುತ್ತಿ ಸುತ್ತಿರುವುದು. ಚೊಕ್ಕ ಕಚರಾ ಸಾರವನ್ನು ಚುರುಕುಗೊಳಿಸಿದ ರಾಡಿಯಿಂದ ಬೇರ್ಪಡಿಸಲು ಇದನ್ನು ಗಸಿಗಟ್ಟಿಸುವ ತೊಟ್ಟಿಗಳಿಗೆ ಬಿಡಬೇಕು.




**ಚಿತ್ರ 6 ಸಿಂಪ್ಲೆಕ್ಸ್ ಮೇಲ್ಮೈ ಗಾಳಿಗೊಡ್ಡಿಕೆ ವಿಧಾನ : 1. ಒಳಬಿಡುವ ಕೊಳಾಯಿ, 2 ವಿದ್ಯುತ್ತು ಮೋಟಾರು, 3 ಗಾಳಿಗೊಡ್ಡಿಸುವ ಬೀಸುರೆಕ್ಕೆ, 4 ಗಾಳಿಗೊಡ್ಡಿಸುವ ಅಂಕಣ, 5 ಮೇಲೆ ಸೆಳೆದುಕೊಳ್ಳುವ ಕೊಳವೆ, 6 ಹೊರ ಬಿಡುವ ಕೊಳಾಯಿ, 7 ಗಸಿಗಟ್ಟಿಸುವ ಅಂಕಣ**

**ರಾಡಿ ವಿಲೇವಾರಿ:** ಕಚರಾದಿಂದ ತೋಟಗಾರಿಕೆ ಒಂದರ ಹೊರತಾಗಿ, ಕಚರಾ ವಿಲೇವಾರಿಯ ಎಲ್ಲ ವಿಧಾನಗಳಲ್ಲೂ ಕಚರಾದ ರಾಡಿ ರಾಶಿ ಬೀಳುವುದೊಂದು ತೊಡಕು. ಇದರಲ್ಲಿ ನೀರು ವಿಪರೀತ (98–99.5%) ಇದೆ. ಅನುಕೂಲತೆಗಳಿಗೆ ತಕ್ಕಂತೆ, ಜಮೀನಿನ ಮೇಲೆ ಹರಿಸುವುದು, ಗೊಬ್ಬರವಾಗಿ ಉಳುಮೆಗೆ ಹಾಕುವುದು, ರಾಡಿ ಪಾತಿಗಳಲ್ಲಿ ಒಣಗಿಸುವುದು; ಹಳ್ಳ, ಗುಂಡಿಗಳಲ್ಲಿ ಸುರಿವುದು. ಜಿಡ್ಡನ್ನು ಮತ್ತೆ ಪಡೆವಂತೆ ಚೊಕ್ಕಗೊಳಿಸಿಕೆ, ಒಣಗಿಸಿ ಗೊಬ್ಬರ ಮಾಡುವುದು–ಮೊದಲಾದ ವಿಧಾನಗಳನ್ನು ಅನುಸರಿಸಬಹುದು. ಬೆರಗೊಬ್ಬರವನ್ನು (ಕಾಂಪೋಸ್ಟ್) ತಯಾರಿಸುವ ಯತ್ನಗಳೂ ಆಗಿವೆ. ರಾಡಿಯಲ್ಲಿ ಸಾರಜನಕ, ಫಾಸ್ಫೇಟುಗಳು ಹೇರಳವಾಗಿರುವುದರಿಂದ ನೀರನ್ನು ಕಳೆದುಬಿಟ್ಟರೆ ಬಲು ಒಳ್ಳೆಯ ಗೊಬ್ಬರವಾಗುತ್ತದೆ. ಅಮೆರಿಕದಲ್ಲಿ ಈ ವಿಧಾನ ರೂಢಿಯಲ್ಲಿದೆ. ಭಾರತದಲ್ಲಿ ಜಂಷಡ್‌ಪುರದಲ್ಲಿ ಸು. 50 ಎಕರೆ ಬಂಜರಿಗೆ ಹಾಕಿ ಹುಲುಸಾದ ಬೆಳೆ ಎತ್ತುತ್ತಿರುವರು.

**ರಾಡಿ ಅರಗಣೆ:** ನಂಜಿನ ತೊಟ್ಟಿಗಳ ವಿಚಾರವಾಗಿ ಕೇಮ್ರಾನ್ (1896) ನಡೆಸಿದ ಪ್ರಯೋಗದಿಂದ ಕಚರಾದ ರಾಡಿ ನಿರ್ಗಾಳಿ ಜೀವಿಗಳಿಂದ ಹುಳಿನೊರೆಯೆದ್ದು ಅನಿಲ ಹುಟ್ಟುವುದು ಗೊತ್ತಿದೆ. ಆದರೆ ಹೀಗಾಗಲು ಸರಿಯಾದ ಸಂದರ್ಭಗಳು ಇತ್ತೀಚೆಗೆ ಮಾತ್ರ ಗೊತ್ತಾಗಿವೆ. ಹುಳಿನೊರೆ ಸರಿಯಾಗಿ ಎದ್ದರೆ, ರಾಡಿ ರಾಶಿ ಕಡಿಮೆಯಾಗಿ ದುರ್ನಾತವಿಲ್ಲದಂತಾಗಿ, ಸುಲಭವಾಗಿ ಒಣಗಿ ಕೈಗೆತ್ತಿಕೊಳ್ಳುವಂತಾಗುತ್ತದೆ. ಇದರಿಂದ ಹುಟ್ಟಿದ ಅನಿಲದಿಂದ ಬರುವ ಕಾವು ಜೋರಾದುದು. ಬೆಳಕು, ಕಾವು, ಶಕ್ತಿಗಳಿಗಾಗಿ ಬಳಸಬಹುದು. ರಾಡಿ ಪೂರ್ತಿ ಅರಗಲು 20–30 ದಿವಸಗಳು ಹಿಡಿಯುತ್ತವೆ.

**ಮಲಮೂತ್ರ ಸಾಗಣೆ ವಿಧಾನಗಳು:** ವಾಸದ ಮನೆಗಳಿಂದ ಮಲಮೂತ್ರ ಎಲ್ಲವನ್ನೂ ಬೇಗನೆ ಹೊರಸಾಗಹಾಕುವುದು ಮುಖ್ಯ ಗುರಿ. ಕಕ್ಕಸಿನಲ್ಲಿ ಪುಟ್ಟಿಗೆಗಳನ್ನಿಟ್ಟು ಹೊತ್ತು ಸಾಗಿಸುವ ಒಣ ವಿಧಾನ ಎಂದಿಗೂ ಚೆನ್ನಕಾಣದು. ದಿನಕ್ಕೊಂದು ಬಾರಿ ಎತ್ತುವುದಲ್ಲದೆ ಅದರ ವಿಲೇವಾರಿ ಕೂಡ ಸರಿಯಿರದು. ಒಬ್ಬೊಬ್ಬನಿಗೂ ಸು. 60–70 ಲೀಟರುಗಳಷ್ಟು ನೀರು ಒದಗುವಂತಿರುವ ನಗರಗಳಲ್ಲಿ ನೀರಿಂದ ಸಾಗಿಸುವ ಒಳಚರಂಡಿ ಏರ್ಪಾಡೇ ಆರೋಗ್ಯಕರವಾದ ವಿಲೇವಾರಿ ವಿಧಾನ.

ಒಳಚರಂಡಿ ಏರ್ಪಾಡಿಲ್ಲದ ನಗರ, ಪಟ್ಟಣ, ಊರುಗಳಲ್ಲಿ ಕೊಳಾಯಿ ನೀರು ದೊರೆಯುತ್ತಿದ್ದರೆ, ನಂಜಿನ ತೊಟ್ಟಿ ವಿಧಾನವೇ ಒಳ್ಳೆಯದು. ಆರೋಗ್ಯ ಕೆಡದು, ಗಲೀಜೂ ಇರದು. ಮನೆ ಬಚ್ಚಲು, ಕಕ್ಕಸು ವ್ಯವಸ್ಥೆಗೆ ಒಬ್ಬನಿಗೆ ದಿವಸಕ್ಕೆ 40 ಲೀಟರುಗಳಷ್ಟಾದರೂ ನೀರು ಬೇಕು. ಇದರಿಂದ ಬರುವ ಕಚರಾ ಸಾರವನ್ನು ಹೊಳೆ, ನದಿಗಳಿಗೆ ಬಿಟ್ಟುಬಿಡದೆ, ಜಮೀನು ಇರುವುದಾದರೆ ಬಿಡುವು ಕೊಟ್ಟು ಸೋಸುವ ಇಲ್ಲವೇ ತೋಟಗಾರಿಕೆ ವಿಧಾನದಲ್ಲಿ ಬಳಸಬೇಕು.

ನೆಲದ ಮಣ್ಣಲ್ಲಿ ಸೋಸಿ ಬಂದ ಕಚರಾ ಸಾರವನ್ನು ಕುಡಿಯಲು ಬಳಸದ ಹೊಳೆಯೊಳಕ್ಕೆ ಬಿಡಬಹುದು. ಬೇಸಾಯಕ್ಕೆ ಬಳಸಿದರೆ ಜಮೀನು ಫಲವತ್ತಾಗುತ್ತದೆ. ಅಕ್ಕಪಕ್ಕದಲ್ಲಿ ಜಮೀನಿಲ್ಲವಾದರೆ, ಚುರುಕುಗೊಳಿಸಿದ ರಾಡಿ ವಿಧಾನದಲ್ಲಿ ವಿಲೇವಾರಿ ಆಗುವುದರ ಸಮ ಇನ್ನಿಲ್ಲ. ಇದರಿಂದ ಹೊರಬೀಳುವ ಕಚರಾಸಾರದಿಂದ ಅಪಾಯ ಇಲ್ಲದಿಲ್ಲ. ಮತ್ತೆ ಮಣ್ಣಲ್ಲಿ ಸೋಸಿಯೋ ರಾಸಾಯನಿಕವಾಗಿ ಸೋಂಕು ಕಳೆದೋ ಕಚರಾ ಸಾರವನ್ನು ಆಚೆ ಹರಿಯಬಿಡಬಹುದು.

ಸಾಕಷ್ಟು ನೀರು ದೊರೆಯದಿದ್ದರೆ, ಕೊಳಾಯಿ ಸರಬರಾಜು ಇಲ್ಲವಾದರೆ, ಕೈಯಲ್ಲಿ ಹೊತ್ತು ಮಲ ಸಾಗಿಸುವ ಕಕ್ಕಸು, ತಿಪ್ಪೆಗಳಿಗಿಂತಲೂ ಕೈಯಿಂದ ಕೊಚ್ಚುವ ನೀರಿನ ತಡೆಯ (ವಾಟರ್ ಸೀಲ್) ಕಕ್ಕಸೇ ಒಳ್ಳೆಯದು. ಅಗ್ಗ, ಆರೋಗ್ಯಕರ; ಇದರ ಕಚರಾ ನೀರನ್ನು ಆಳವಾದ ಇಮರುಗುಂಡಿಗೆ ಬಿಡಬಹುದು. ಇದರಿಂದ ಕಕ್ಕಸನ್ನು ಮನೆ ಒಳಗಿರಿಸಿಕೊಳ್ಳುವ, ಬೇಕೆಂದಾಗ ತೊಳೆದು ಚೊಕ್ಕಟಪಡಿಸುವ ದೊಡ್ಡ ಅನುಕೂಲತೆಯಿದೆ. ನೀರು ಸುರಿದು ಬಳಸುವ ಕಕ್ಕಸಿಗಂತೂ ಅಷ್ಟೊಂದು ನೀರೂ ಬೇಕಿರದು. ಪಟ್ಟಣಗಳಲ್ಲಿ ಇಮರುಗುಂಡಿಯನ್ನು ಗಾರೆಯಿಂದ ಕಟ್ಟಬೇಕು. ಇವೆಲ್ಲ ವಿಧಾನಗಳಿಂದ ಕುಡಿಯುವ ನೀರಿನ ಬಾವಿಗಳಿಗೆ ಯಾವ ಕೆಡುಕೂ ತಾಕದು. (ಡಿ.ಎಸ್.ಎಸ್.)

**ಕಚಾರಿ :** ಅಸ್ಸಾಂ ರಾಜ್ಯದ ಕಾಮರೂಪ ಮತ್ತು ದರಂಗ ಜಿಲ್ಲೆಯಲ್ಲಿ ಬ್ರಹ್ಮಪುತ್ರಾನದಿಗೂ ಭೂತಾನಿಗೂ ನಡುವಣ ಪ್ರದೇಶದಲ್ಲಿ ಇರುವ, ಬೋಡೋ ಗುಂಪಿಗೆ ಸೇರಿದ ಜನ; ಮಂಗೋಲ್ ಬುಡಕಟ್ಟಿನವರು. 13ನೆಯ ಶತಮಾನದವರೆಗೆ ಇವರ ದೊರೆಗಳು ಉತ್ತರ ಅಸ್ಸಾಮಿನಲ್ಲಿ ಆಡಳಿತ ನಡೆಸುತ್ತಿದ್ದರು. ಆಗ ಅಲ್ಲಿಗೆ ಬಂದ ಅಹೋಮ್ ಜನರ ಆಕ್ರಮಣದಿಂದಾಗಿ ಇವರು ನಾಗ ಬೆಟ್ಟಗಳ ಬುಡದ ಮತ್ತು ಕಚಾರ್ ಜಿಲ್ಲೆಯ ಕೆಲವು ಪ್ರದೇಶಗಳಿಗೆ ಇವರು ಸರಿದರು. ಧನಸಿರಿ ನದಿ ದಂಡೆಯ ಮೇಲಿರುವ ದೀಮಾಪುರ ಇವರ ರಾಜಧಾನಿಯಾಗಿತ್ತು. 1536ರ ವೇಳೆಗೆ ಅಹೋಮರಿಂದ ಇವರು ಸಂಪೂರ್ಣವಾಗಿ ಸೋತು ಹಿಂದಕ್ಕೆ ಸರಿದರು. ಆದರೂ ಅಹೋಮರ ಜೊತೆಗೆ ಅವಿರತ ಕದನ ನಡೆದೇ ಇತ್ತು. ಇವರ ಕೊನೆಯ ದೊರೆ ಗೋವಿಂದಚಂದ್ರನನ್ನು ಮಣಿಪುರದ ಸೇನಾನಿ ಪರಾಭವಗೊಳಿಸಿದ (1818). ಅನಂತರ ಬರ್ಮೀಯರು ಈ ರಾಜ್ಯವನ್ನು ಆಕ್ರಮಿಸಿದರು (1821). ಆ ಸಮಯದಲ್ಲಿ ಭಾರತದಲ್ಲಿ ಪ್ರಭಾವ ಗಳಿಸುತ್ತಿದ್ದ ಬ್ರಿಟಿಷರು ಬರ್ಮೀಯರನ್ನು ಓಡಿಸಿ (1826) ಗೋವಿಂದ ಚಂದ್ರನಿಗೆ ಪುನಃ ಸಿಂಹಾಸನ ದೊರಕಿಸಿಕೊಟ್ಟರು. 1830ರಲ್ಲಿ ಈತ ಕೊಲೆಗೆ ಈಡಾದ. ಈತನಿಗೆ ಸಂತಾನವಿಲ್ಲದ್ದರಿಂದ ಬ್ರಿಟಿಷರೇ ಈ ರಾಜ್ಯವನ್ನು ವಹಿಸಿಕೊಂಡರು (1832).

ಕಚಾರಿ ಜನರು ಮುಖ್ಯವಾಗಿ ಬೇಸಾಯಗಾರರು. ರೇಷ್ಮೆಹುಳುವನ್ನು ಸಾಕಿ ದಾರ ತೆಗೆಯುವುದು ಸ್ತ್ರೀಯರ ಕೆಲಸ. ಇವರ ಸಮಾಜದಲ್ಲಿ ಸ್ತ್ರೀಯರದು ಉನ್ನತ ಸ್ಥಾನ. ಸಾಮಾನ್ಯವಾಗಿ ಈ ಜನಾಂಗದಲ್ಲಿ ಏಕಪತ್ನೀತ್ವವಿದೆ. ವಿವಾಹವಾಗುವ ಮುನ್ನ ಹುಡುಗ ಹುಡುಗಿಯರು ಪರಸ್ಪರ ಒಪ್ಪಬೇಕಾಗುತ್ತದೆ. ಕನ್ಯಾಶುಲ್ಕ ಪದ್ಧತಿಯುಂಟು. ಅವಿವಾಹಿತರಿಗೆ ಪ್ರತ್ಯೇಕ ಶಿಬಿರ ಹೊಂದಿರುವ ಈ ಜನ ಅನೇಕ ಅಂಶಗಳಲ್ಲಿ ನಾಗಾ ಜನರನ್ನು ಹೋಲುತ್ತಾರೆ. ವಿವಾಹ, ಆಸ್ತಿ ಮುಂತಾದವಕ್ಕೆ ಸಂಬಂಧಿಸಿದ ಜಗಳಗಳನ್ನು ಗ್ರಾಮದ ಗಣ್ಯವ್ಯಕ್ತಿ ಪರಿಹರಿಸುತ್ತಾನೆ. ಆತ್ಮದಲ್ಲಿ ಇವರಿಗೆ ನಂಬಿಕೆಯುಂಟು. ಆದ್ದರಿಂದಲೇ ಇವರು ಭೂತಪ್ರೇತಗಳನ್ನು ಆರಾಧಿಸುವರು. ಪೃಥ್ವೀ, ಆಕಾಶ ಮತ್ತು ವಾಯುಗಳಲ್ಲಿ ದೈವೀಶಕ್ತಿಯಿದೆ ಎಂದು ಇವರ ನಂಬುಗೆ, ಪೂರ್ವಜರ ಮತ್ತು ಪ್ರಕೃತಿಯ ಪೂಜೆ ಮಾಡುತ್ತಾರಾದರೂ

ಅದಕ್ಕೆ ವಿಶೇಷ ಮಹತ್ತ್ವವಿಲ್ಲ. ಮೃತನ ಆತ್ಮ ನಶಿಸದೆ ಬದಲಾದ ರೂಪದಲ್ಲಿರುವುದೆಂದು ಇವರ ನಂಬಿಕೆ. ಹಿಂದೂ ಮತಪದ್ಧತಿಗಳನ್ನು ಇವರು ಈಚೆಗೆ ಹೆಚ್ಚಾಗಿ ಅನುಸರಿಸುತ್ತಿದ್ದಾರೆ. **(ನೋಡಿ– ಅಹೋಮ್)**

*

**ಕಚಿನ್ :** ಮಯನ್ಮಾರಿನ ಈಶಾನ್ಯ ಭಾಗದಲ್ಲಿರುವ ರಾಜ್ಯ. 1947ರ ಸಂವಿಧಾನಕ್ಕನುಗುಣವಾಗಿ ಏರ್ಪಟ್ಟಿತು. ವಾಯವ್ಯಕ್ಕೆ ಭಾರತ, ಉತ್ತರಕ್ಕೆ ಟಿಬೆಟ್, ಪೂರ್ವಕ್ಕೆ ಚೀನ ಇದರ ಮೇರೆಗಳು. ಬ್ರಿಟಿಷ್ ಬರ್ಮದ ಜಿಲ್ಲೆಗಳಾಗಿದ್ದ ಭಾಮೊ ಮತ್ತು ಮ್ಯಿಚೀನಾಗಳೂ ಉತ್ತರದ ಪುಟಾ–ಓ ಜಿಲ್ಲೆಯೂ ಈ ರಾಜ್ಯಕ್ಕೆ ಸೇರಿವೆ. ಇರಾವಾಡಿ ನದಿಯ ಮೇಲ್ದಂಡೆಯ ಮೇಲಿರುವ ಮ್ಯಿಚೀನಾ ಇದರ ರಾಜಧಾನಿ. ಇದೊಂದು ರೈಲ್ವೆನಿಲ್ದಾಣ. ಭಾಮೊ ಮತ್ತು ಮೋಗೌಂಗ್ ಇತರ ಪಟ್ಟಣಗಳು. ಇಲ್ಲಿಯ ಪರ್ವತಸೀಮೆಯಲ್ಲಿ ವಾಸವಾಗಿರುವ ಜನ ಕಚಿನರು. ರೈಲುಮಾರ್ಗದ ಪ್ರದೇಶದಲ್ಲೂ ದಕ್ಷಿಣದ ಕಣಿವೆಗಳಲ್ಲೂ ಇರುವವರು ಷಾನ್ ಮತ್ತು ಬರ್ಮೀಯರು. ಈ ಜಿಲ್ಲೆಯ ಉತ್ತರ ಗಡಿಸೀಮೆಯ ವಿಚಾರವಾಗಿ ಮಯನ್ಮಾರಿಗೂ ಚೀನಕ್ಕೂ ನಡುವೆ 1960ರ ದಶಕದ ಆದಿಕಾಲದ ವರೆಗೂ ವ್ಯಾಜ್ಯವಿತ್ತು. ಈ ಜಿಲ್ಲೆಯ ಪ್ರತಿನಿಧಿಯಾಗಿ ಕೇಂದ್ರ ಸರ್ಕಾರದಲ್ಲಿ ಒಬ್ಬ ಮಂತ್ರಿಯಿದ್ದಾನೆ. ಸು. 7,00,000 ಜನಸಂಖ್ಯೆಯಿದೆ.

*

**ಕಚೇರಿಯ ಯಂತ್ರೋಪಕರಣಗಳು :** ಆಧುನಿಕ ಕಚೇರಿಗಳಲ್ಲಿ ತೀವ್ರವಾಗಿ ಅಧಿಕವಾಗುತ್ತಿರುವ ವಿವಿಧ ಕಾರ್ಯಗಳನ್ನು ಶೀಘ್ರವಾಗಿಯೂ ಸಮರ್ಪಕವಾಗಿಯೂ ನಿರ್ವಹಿಸಲು ಬಳಸಲಾಗುತ್ತಿರುವ ಸಾಧನಗಳು (ಆಫೀಸ್ ಮಷೀನ್ಸ್ ಅಂಡ್ ಅಪ್ಲೈಯೆನ್ಸಸ್). ದೊಡ್ಡ ಕಚೇರಿಗಳಲ್ಲಿ ನಡೆಯುವ ಅನೇಕ ದಿನಚರಿಯ ಕೆಲಸಗಳು ಪುನರಾವರ್ತಿಸುವಂಥವು. ಇವನ್ನೆಲ್ಲ ಮಾನವನೇ ಮಾಡುವ ಬದಲು ಇವಕ್ಕೆ ತಕ್ಕುವಾದ ಯಂತ್ರೋಪಕರಣಗಳನ್ನು ಬಳಸುವುದರಿಂದ ದೊರಕುವ ಸೌಲಭ್ಯಗಳು ಮುಖ್ಯವಾಗಿ ಎರಡು.

ಇತರ ಎಲ್ಲ ಯಂತ್ರೋಪಕರಣಗಳಂತೆ ಇವುಗಳ ಉದ್ದೇಶವಾದರೂ ಶ್ರಮ ಮತ್ತು ಸಮಯದ ಉಳಿತಾಯವೇ ಆಗಿದೆ. ಶೀಘ್ರತೆ, ಆಯಾಸನಿವಾರಣೆ, ಸ್ಪಷ್ಟತೆ, ನಿಷ್ಕೃಷ್ಟತೆ– ಇವು ಇದರ ನಾಲ್ಕು ಮುಖ್ಯ ಸೌಲಭ್ಯಗಳು, ಇವುಗಳನ್ನು ಕಚೇರಿಯಲ್ಲಿ ಅಳವಡಿಸುವಾಗ ಕೆಲವು ಮುಖ್ಯ ವಿಚಾರಗಳನ್ನು ಪರಿಗಣಿಸುವುದು ಆವಶ್ಯ. ಒಂದು ಯಂತ್ರವನ್ನು ಸ್ಥಾಪಿಸುವುದರಿಂದ ಅದರ ಜೀವಿತಕಾಲದಲ್ಲಿ ಉಳಿತಾಯವಾಗುವ ವೇತನದ ಮೊತ್ತವನ್ನೂ ಯಂತ್ರಕ್ಕಾಗಿಯೇ ತಗಲುವ ವೆಚ್ಚವನ್ನೂ ತೂಗಿ ನೋಡಬೇಕಾಗುತ್ತದೆ. ಇದು ಮುಖ್ಯವಾದ ಅಂಶ, ಯಂತ್ರ ಸ್ಥಾಪನೆಯಿಂದ ಉಳಿತಾಯವಾದ ಶ್ರಮವನ್ನೂ ಸಮಯವನ್ನೂ ಉದ್ಯಮದ ಇತರ ವಿಚಾರಗಳಿಗೆ ವಿನಿಯೋಗಿಸುವುದು ಸಾಧ್ಯವಾಗಿ, ಅದರಿಂದ ಹೆಚ್ಚು ಲಾಭ ಅಥವಾ

ಕನ್ನಡ ಬೆರಳಚ್ಚು ಯಂತ್ರ – ಅನಂತ ಕೀಬೋರ್ಡಿನೊಂದಿಗೆ

ಪ್ರಯೋಜನ ದೊರಕುವುದೇ ಎಂಬುದನ್ನು ಪರಿಶೀಲಿಸಬೇಕು. ಯಂತ್ರಗಳನ್ನು ಸ್ಥಾಪಿಸಿದಾಗ ಕಾರ್ಯವಿಧಾನದಲ್ಲೇ ಅನೇಕ ಬದಲಾವಣೆಗಳನ್ನು ಮಾಡಬೇಕಾಗಿ ಬರಬಹುದು. ನೌಕರರಿಗೆ ಇದಕ್ಕೆ ತಕ್ಕಂತೆ ತರಬೇತಿ ನೀಡುವುದೂ ಅಗತ್ಯವಾಗಬಹುದು. ಯಂತ್ರಾಗಮನದಿಂದ ತಮ್ಮ ದುಡಿಮೆಗೆ ಬೇಡಿಕೆ ತಪ್ಪಬಹುದೆಂಬ ಭಯ ನೌಕರರಲ್ಲಿ ಸಂಭವಿಸಬಹುದು. ಇದರಿಂದಲೂ ಇಂಥ ಹಲವು ಕಾರಣಗಳಿಂದಲೂ ಉದ್ಭವಿಸುವ ನೈತಿಕ ಸಮಸ್ಯೆಗಳನ್ನು ಪರಿಶೀಲಿಸಬೇಕು. ಹಲವರ ಕೆಲಸವನ್ನು ಶೀಘ್ರವಾಗಿ ಮಾಡಿ ಮುಗಿಸುವ ಯಂತ್ರ ಒಂದು ದೃಷ್ಟಿಯಲ್ಲಿ ನಿರ್ದಾಕ್ಷಿಣ್ಯಪರ. ಇದನ್ನು ನಡೆಸುವಾಗ ನಿಷ್ಕೃಷ್ಟತೆಗೆ ಹೆಚ್ಚಿನ ಗಮನಕೊಡುವುದು ಆವಶ್ಯ. ಅತ್ಯಂತ ಸಂಕೀರ್ಣವಾದ ಯಂತ್ರದ ಸಮ್ಮುಖದಲ್ಲಿ ಒಮ್ಮೆ ಒಂದು ತಪ್ಪು ಮಾಡಿದರೂ ಅದು ಹಲವು ಮುಖವಾಗಿ ಹಲವು ಮಡಿಯಾಗಿ ಮುಂದುವರಿಯಬಹುದು; ಆವರ್ತಿಸಬಹುದು. ಇದರಿಂದ ಸಂಸ್ಥೆಯ ಗ್ರಾಹಕರಿಗೆ ಅಸಮಾಧಾನವುಂಟಾಗಿ ವ್ಯವಹಾರಕ್ಕೆ ಧಕ್ಕೆ ಒದಗಬಹುದು. ಆದ್ದರಿಂದ ಯಂತ್ರೋಪಕರಣಗಳನ್ನು ಬಳಸುವುರಿಂದ ಎಷ್ಟು ಸೌಲಭ್ಯಗಳುಂಟೋ ಅಷ್ಟೇ ಹೊಣೆಗಾರಿಕೆಯೂ ಇರುವುದೆಂಬುದು ಮುಖ್ಯವಾಗಿ ಗಮನಿಸಬೇಕಾದ ಅಂಶ. ನಾವೀನ್ಯದಿಂದಲೇ ಆಕರ್ಷಿತರಾಗಿ ಒಂದು ಯಂತ್ರ ಸ್ಥಾಪಿಸುವುದು ಸರಿಯಲ್ಲ. ಅದೂ ಒಂದು ಉಪಕರಣ. ಕೆಲಸಕ್ಕೆ ತಕ್ಕಂತೆ ಉಪಕರಣವಿರಬೇಕೇ ವಿನಾ, ಉಪಕರಣಕ್ಕೆ ತಕ್ಕಂತೆ ಕೆಲಸ ಹೊಂದಿಸುವುದು ಅವಾಸ್ತವಿಕ. ಒಂದು ಯಂತ್ರ ಲಭ್ಯವಿದೆಯೆಂದೇ ಕಾರ್ಯದ ಯಾಂತ್ರೀಕರಣ ಮಾಡುವುದು ಸೂಕ್ತವಲ್ಲ.

ಕಚೇರಿಯ ಕಾರ್ಯಗಳನ್ನು ನಿರ್ವಹಿಸಲು ಒದಗಿಬರುವ ಯಂತ್ರಗಳು ವೈವಿಧ್ಯಮಯ. ಗೊತ್ತಾದ ಒಂದೊಂದು ಕೆಲಸಗಳಿಗೂ ಅನುಗುಣವಾದ ಯಂತ್ರಗಳನ್ನು ಆರಿಸಿಕೊಳ್ಳುವುದು ಬಹಳ ಕಷ್ಟ. ಆದ್ದರಿಂದ ಹಂತಹಂತವಾಗಿ ಯಂತ್ರಗಳನ್ನು ಬಳಸುವುದು ಸರಿಯಾದ ವಿಧಾನ. ಈ ದೃಷ್ಟಿಯಿಂದ ಯಂತ್ರಗಳನ್ನು ಸರಳ ಮತ್ತು ಸಂಕೀರ್ಣವೆಂದು ಎರಡು



ರಂಧ್ರರಟ್ಟು ವಿಂಗಡನ ಯಂತ್ರ

ಬಗೆಯಾಗಿ ವಿಂಗಡಿಸಬಹುದು. ಒಮ್ಮೆಗೆ ಒಂದೇ ಕ್ರಿಯೆಯನ್ನು ನಡೆಸುವುದು ಸರಳಯಂತ್ರ, ಬೆರಳಚ್ಚು ಯಂತ್ರದ್ದು (ಟೈಪ್‍ರೈಟರ್) ಅಚ್ಚಿಸುವ ಕ್ರಿಯೆಯೊಂದೇ. ಕೂಡುವ ಯಂತ್ರದ್ದು ಕೂಡುವ ಕೆಲಸ ಮಾತ್ರ. ಛಾಯಾನಕಲು ಯಂತ್ರದ್ದು ಪ್ರತಿಮಾಡುವುದಷ್ಟೇ ಕೆಲಸ. ಇವನ್ನು ಗುಮಾಸ್ತರು ಬಳಸುತ್ತಾರೆ. ಗೊತ್ತಾದ ಅವಧಿಯಲ್ಲಿ ಹೆಚ್ಚು ಕೆಲಸವನ್ನು ಅಚ್ಚುಕಟ್ಟಾಗಿ ಮಾಡಲು ಇವು ಸಹಾಯಕ. ಇವನ್ನು ಬಳಸುವವರಿಗೆ ತಾವು ಮಾಡುವ ಕೆಲಸ ಗೊತ್ತಿರಬೇಕು. ಬೆರಳಚ್ಚುಯಂತ್ರ ಬಳಸುವವರಿಗೆ ಕಾಗುಣಿತವಾಗಲಿ ವಿರಾಮ ಚಿಹ್ನೆಗಳಾಗಲಿ ಗೊತ್ತಿಲ್ಲದಿದ್ದರೆ ಯಂತ್ರವನ್ನು ಬೈದು ಫಲವಿಲ್ಲ. ಅವರು ಮಾಡುವ ಲೋಪದೋಷಗಳನ್ನು ಯಂತ್ರವೂ ಯಥಾವತ್ತಾಗಿ ಪ್ರತಿಬಿಂಬಿಸುತ್ತದೆ. ಲೆಕ್ಕದ ನಾಲ್ಕು ನಿಯಮಗಳನ್ನು ಬಲ್ಲದವನು ಗಣಕವನ್ನು ಬಳಸಿದರೆ ಅದು ಸರಿಯಾದ ಫಲ ನೀಡಲಾರದು.

ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಕ್ರಿಯೆಗಳನ್ನು ನಿರ್ವಹಿಸುವವು ಸಂಕೀರ್ಣ ಯಂತ್ರಗಳು. ಇವು ಭಾಗಶಃ ಸ್ವಯಂಚಾಲಿತವಾಗಿರಬಹುದು. ಎಂದರೆ ಪ್ರಜ್ಞಾಪೂರ್ವಕ ಮಾರ್ಗದರ್ಶನವಿಲ್ಲದಿದ್ದರೂ ಅದು ತನಗೆ ತಾನೇ ಕೆಲವು ಕ್ರಿಯೆಗಳನ್ನು ನಿರ್ವಹಿಸುತ್ತದೆ. ಲೇಖಾ (ಅಕೌಂಟಿಂಗ್) ಯಂತ್ರಗಳು, ವಿಶ್ಲೇಷಕ (ಅನಾಲಿಸಿಸ್) ಯಂತ್ರಗಳು, ರಂಧ್ರರಟ್ಟಿನ (ಪಂಚ್‍ಡ್ ಕಾರ್ಡ್) ಯಂತ್ರಗಳು, ಎಲೆಕ್ಟ್ರಾನಿಕ್ ಗಣಕಯಂತ್ರಗಳು ಈ ಜಾತಿಯವು.

**ಬೆರಳಚ್ಚು ಯಂತ್ರ :** ಸು. ನೂರು ವರ್ಷಗಳಿಂದ ಸೇವಾನಿರತವಾಗಿರುವ ಬೆರಳಚ್ಚುಯಂತ್ರ ಇಂದು ಸಾರ್ವತ್ರಿಕವಾಗುತ್ತಿದೆ. ಇದರಿಂದ ಅಕ್ಷರಗಳನ್ನು ವೇಗವಾಗಿ, ಅಂದವಾಗಿ ಮತ್ತು ತಪ್ಪಿಲ್ಲದೆ ಮುದ್ರಿಸಬಹುದು, ಕಾರ್ಬನ್ ಕಾಗದದ ಸಹಾಯದಿಂದ ಕೆಲವು ಪ್ರತಿಗಳನ್ನು ಪಡೆಯಬಹುದು. ಇದು ಜನ್ಮತಳೆದಾಗಿನಿಂದ ಇದರಲ್ಲಿ ಅನೇಕ ಸುಧಾರಣೆಗಳಾಗಿವೆ. ವಿದ್ಯುತ್ ಬೆರಳಚ್ಚು ಯಂತ್ರಗಳೂ ಬಂದಿವೆ. **(ನೋಡಿ– ಬೆರಳಚ್ಚು–ಯಂತ್ರ)**

ಇತ್ತೀಚಿನ ದಿನಗಳಲ್ಲಿ ಸ್ವಕೀಯ ಗಣಕಯಂತ್ರ (ಪರ್ಸನಲ್ ಕಂಪ್ಯೂಟರ್) ಬಹಳ ಜನಪ್ರಿಯವಾಗಿ ಬೆರಳಚ್ಚು ಯಂತ್ರವನ್ನು ಬಹುವಾಗಿ ಸ್ಥಾನಪಲ್ಲಟಗೊಳಿಸಿದೆ. ಪಿ.ಸಿ.ಗಳಲ್ಲಿ ವರ್ಡ್ ಪ್ರಾಸೆಸರ್ ಎಂಬ ಲಿಪಿ ತಂತ್ರಾಂಶವನ್ನು ಒದಗಿಸಿರುತ್ತಾರೆ. ಈ ತಂತ್ರಾಂಶವು, ಸಹಾಯದಿಂದ ಗಣಕಯಂತ್ರವನ್ನು ಬಳಸುವವರು ತಮಗೆ ಬೇಕಾದ ಬರವಣಿಗೆಯ ಆವಶ್ಯಕತೆಗಳನ್ನು ತಾವೇ, ಕಸಬುದಾರ ಬೆರಳಚ್ಚುಗಾರರ ಸಹಾಯವಿಲ್ಲದೇ, ಪೂರೈಸಿಕೊಳ್ಳುವುದು ಸಾಧ್ಯ. ಈ ತಂತ್ರಾಂಶವು, ಎಲ್ಲ ಭಾಷೆಗಳಲ್ಲೂ ಲಭ್ಯವಾಗಿ, ಆ ಭಾಷೆಗಳ ಕೀಲಿಮಣೆಗಳನ್ನು ಒದಗಿಸುವದರಿಂದ, ಗಣಕ ಸಾಕ್ಷರತೆ ಹೊಂದಿದ ಎಲ್ಲರೂ,

ಸೂಕ್ತ ತಂತ್ರಾಂಶದ ಸಹಾಯದಿಂದ ತಮ್ಮ ವ್ಯವಹಾರದ ಬರೆವಣಿಗೆಗಳನ್ನು ಮಾಡಿಕೊಳ್ಳಬಹುದು ಅಥವಾ ಕಸಬುದಾರರ ಮುಖಾಂತರವೂ ಗಣಕಗಳಿಂದ ಮಾಡಿಸಿಕೊಳ್ಳಬಹುದು. ಬೆರಳಚ್ಚು ಯಂತ್ರಗಳು ಈ ಕಾರಣದಿಂದಾಗಿ ಕ್ರಮೇಣ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ.

**ನಕಲುಯಂತ್ರ:** ಕಾರ್ಬನ್ ಹಾಳೆಗಳ ನಡುಜೋಡಣೆಯಿಂದ ಬೆರಳಚ್ಚು ಯಂತ್ರವೇ ನಕಲುಯಂತ್ರವಾಗಬಹುದು. ಆದರೆ ಈ ವಿಧಾನದಿಂದ ಪಡೆಯಬಹುದಾದ ಪ್ರತಿಗಳ ಸಂಖ್ಯೆ ಅಮಿತವಲ್ಲ. ಮಾನವಚಾಲಿತ ಸಾಧಾರಣ ಬೆರಳಚ್ಚು ಯಂತ್ರದಿಂದ ಸು. 8 ಪ್ರತಿಗಳನ್ನು ಪಡೆಯಬಹುದು. ವಿದ್ಯುತ್‌ಚಾಲಿತವಾದರೆ 18 ಪ್ರತಿಗಳವರೆಗೂ ಪಡೆಯುವುದು



ಕೊರೆಯಚ್ಚು ನಕಲುಯಂತ್ರ

ಸಾಧ್ಯ. ಇದಕ್ಕಿಂತ ಹೆಚ್ಚಿನ ಪ್ರತಿಗಳು ಬೇಕಾದರೆ ಪ್ರತ್ಯೇಕವಾದ ನಕಲುಯಂತ್ರವನ್ನೇ ಬಳಸಬೇಕು. ಇದರಲ್ಲಿ ನಾನಾ ವಿಧಗಳುಂಟು. ಆರಂಭಿಕ ಪ್ರತಿಯೊಂದನ್ನು (ಮಾಸ್ಟರ್ ಕಾಪಿ) ಸಿದ್ಧಪಡಿಸಿಕೊಂಡು ಇದರಿಂದ ನಕಲುಗಳನ್ನು ಪಡೆಯುವುದು ಎಲ್ಲ ಯಂತ್ರಗಳ ಸಾಮಾನ್ಯ ವಿಧಾನ.

ಕೊರೆಯಚ್ಚಿನಿಂದ (ಸ್ಟೆನ್ಸಿಲ್) ನಕಲು ತೆಗೆಯುವ ವಿಧಾನ ಸಾಮಾನ್ಯವಾಗಿ ಬಳಕೆಯಲ್ಲಿದೆ. ರಿಬ್ಬನ್ ಸಹಾಯವಿಲ್ಲದೆ ಬೆರಳಚ್ಚುಯಂತ್ರದಿಂದ ಕೊರೆಯಚ್ಚು ಹಾಳೆಯ ಮೇಲೆ ಅಕ್ಷರಗಳ ಆಕಾರದಲ್ಲಿ ರಂಧ್ರಗಳು ಸಂಭವಿಸುತ್ತವೆ. ಈ ಹಾಳೆಯ ಮೇಲೆ ಕೊರೆಲೇಖನಿಯಿಂದ ಬರೆಯುವುದೂ ಸಾಧ್ಯ. ಟೊಳ್ಳಾದ ತಿರುಗುವ ಉರುಳೆಯ ಹೊರಮೈಗೆ ದ್ರವರೂಪೀಮಸಿ ಹಚ್ಚಿ, ಅದಕ್ಕೆ ಈ ಕೊರೆಯಚ್ಚು ಹಾಳೆಯನ್ನು ಸಿಕ್ಕಿಸಬೇಕು. ಉರುಳೆಯನ್ನು ತಿರುಗಿಸಿದಾಗ ಕೊರೆಯಚ್ಚು ಹಾಳೆಯಲ್ಲಿಯ ರಂಧ್ರದ ಮೂಲಕ ಶಾಯಿ ಹೊರಕ್ಕೆ ಹಾಯುತ್ತದೆ. ಅದೇ ಕಾಲಕ್ಕೆ ಖಾಲಿ ಹಾಳೆಗಳನ್ನು ಕೊರೆಯಚ್ಚಿನ ಹಾಳೆಗೆ ಒತ್ತಿದಂತೆ ಉರುಳೆಯ ಅಡಿಯಲ್ಲಿ ಹಾಯ್ದು ಸಾಗುವಂತೆ ಮಾಡುವುದರಿಂದ ರಂಧ್ರಗಳ ಆಕಾರದಲ್ಲಿ ಕಾಗದದ ಮೇಲೆ ಅಕ್ಷರ ಅಚ್ಚಾಗುತ್ತದೆ. ಈ ವಿಧಾನದಿಂದ ಸು. 5,000 ಪ್ರತಿಗಳನ್ನು ತೆಗೆಯಬಹುದು. ಕೊರೆಯಚ್ಚು ಹಾಳೆಗಳನ್ನು ಇಟ್ಟಿದ್ದು ಆವಶ್ಯವಿದ್ದಾಗ ನಕಲುಗಳನ್ನು ಪಡೆಯಬಹುದು.

ಇದಲ್ಲದೆ ನೂರಚ್ಚು ನಕಲುಯಂತ್ರವನ್ನೂ (ಹೆಕ್ಟೋಗ್ರಾಫ್) ಬಳಸುವುದುಂಟು. ಇದರಲ್ಲಿ ಎರಡು ವಿಧ: ವಿಶಿಷ್ಟವಾದ ಕಾಗದದ ಮೇಲೆ ವಿಶೇಷವಾದ ಮಸಿಯಿಂದ ಆರಂಭಿಕ ಪ್ರತಿಯನ್ನು ತಯಾರಿಸಲಾಗುವುದು. ಇದನ್ನು ಇನ್ನೊಂದು ವಿಶಿಷ್ಟ ಕಾಗದಕ್ಕೆ ಒತ್ತಿದಾಗ ಅದರಲ್ಲಿ ಇದರ ತಿರಗಮುರುಗ ಪ್ರತಿ ದೊರಕುತ್ತದೆ. ಇದರ ಮೇಲೆ ಕಾಗದದ ಹಾಳೆಗಳನ್ನು ಒತ್ತಿ ತದ್ವತ್ ನಕಲುಗಳನ್ನು ಪಡೆಯಬಹುದು. ಇದಕ್ಕೆ ವಿವಿಧ ವರ್ಣಗಳ ಮಸಿ ಬಳಸುವುದೂ ಸಾಧ್ಯ. ಇದರಿಂದ 200ರ ವರೆಗೂ ಪ್ರತಿಗಳನ್ನು (ಸಾಮಾನ್ಯವಾಗಿ) ಪಡೆಯುವುದು ಸಾಧ್ಯ.

ರಾಸಾಯನಿಕ ಪ್ರಯೋಗದಿಂದ ಲೋಹದ ಅಥವಾ ವಿಶಿಷ್ಟ ಕಾಗದದ ಹಾಳೆಯ ಮೇಲೆ ಆರಂಭಿಕ ಪ್ರತಿ ರಚಿಸಿ ಅದನ್ನು ರಬ್ಬರಿನ ಸಮತಲ ಪ್ರದೇಶದ ಅಥವಾ ಉರುಳೆಯ ಮೇಲೆ ತಕ್ಕಂತೆ ಒತ್ತಿ, ಪ್ರತಿಗಳನ್ನು ಎತ್ತಿ ತೆಗೆಯುವ ಆಫ್‌ಸೆಟ್ ನಕಲು ವಿಧಾನ ದೊಡ್ಡ ಸಂಸ್ಥೆಗಳಲ್ಲಿ ಬಳಕೆಯಲ್ಲಿದೆ. ಇದಲ್ಲದೆ, ಮುದ್ರಣಾಲಯದ ಮೊಳೆ ಜೋಡಿಸುವ ಯಂತ್ರದ ಮಾದರಿಯ ಯಂತ್ರದಿಂದ ಉಬ್ಬು ಚಿತ್ರಣ (ರೇಸ್ಡ್ ಇಮೇಜ್) ವಿಧಾನದಲ್ಲಿ ಆರಂಭಿಕಪ್ರತಿ ತಯಾರಿಸಿ ನಕಲು ಪಡೆಯುವುದೂ ಉಂಟು.

ಈಚೆಗೆ ನಾನಾ ಬಗೆಯ ಛಾಯಾನಕಲು ಯಂತ್ರಗಳನ್ನು ಮುಂದುವರಿದ ದೇಶಗಳಲ್ಲಿ ವಿಶೇಷವಾಗಿ ಬಳಸಲಾಗುತ್ತಿದೆ. "ಕ್ಸೆರಾಕ್ಸ್" ಎಂಬ ಅಮೆರಿಕದ ಸಂಸ್ಥೆ ನಕಲು ಮಾಡುವ ಹೊಸ ತಂತ್ರಜ್ಞಾನವನ್ನು ಕಂಡುಹಿಡಿದುದರಿಂದ, ಈಗ ಮೇಲೆ ವಿವರಿಸಿದ ತಂತ್ರಜ್ಞಾನದ ಬಳಕೆ ಬಹುಮಟ್ಟಿಗೆ ಕಣ್ಮರೆಯಾಗಿ ಕ್ಸೆರಾಕ್ಸ್ ವಿಧಾನದ ನಕಲುಪ್ರತಿಗಳೇ ಪ್ರಮುಖವಾಗಿವೆ. ಛಾಯಾನಕಲು ಯಂತ್ರದಲ್ಲಿ ಒಂದು ತಿರುಗುವ ವಿಶಿಷ್ಟರೀತಿಯ ಪೀಪಾಯಿ (ಡ್ರಮ್) ಇರುತ್ತದೆ. ಯಂತ್ರದ ಮೇಲೆ ಪಾರದರ್ಶಕ ಗಾಜಿನ ತಟ್ಟೆಯಿರುತ್ತದೆ. ಈ ಗಾಜಿನ ಮೇಲೆ ನಾವು ನಕಲು ಪಡೆಯಬೇಕೆಂದಿರುವ ಮೂಲ ಪ್ರತಿಯನ್ನು ಇಟ್ಟು, ಯಂತ್ರದ ವಿದ್ಯುದ್ದೀಪವನ್ನು ಬೆಳಗಿಸಿದಾಗ,ಪೀಪಾಯಿಯು ಎಲೆಕ್ಟ್ರೋಸ್ಟಾಟಿಕ್ ಆಗಿ ಛಾರ್ಜ್ ಆಗುತ್ತದೆ. ಯಂತ್ರದ ಒಳಗೆ "ಟೋನರ್" ಪುಡಿಯು ಇರುತ್ತದೆ. ಮೂಲ ಪ್ರತಿಯಲ್ಲಿ ಇರುವ ಬರೆವಣಿಗೆ ಅಥವಾ ಚಿತ್ರ ಕಪ್ಪಾಗಿದ್ದು, ದೀಪದ ಬೆಳಕನ್ನು ತಡೆಹಿಡಿಯುತ್ತದೆ. ಇದು ಛಾರ್ಜ್ ಆದ ಪೀಪಾಯಿಯ ಮೇಲೆ ಮೂಲಪ್ರತಿಯ ಮೇಲಿರುವ ಬರೆವಣಿಗೆ ಅಥವ ಚಿತ್ರದ ಪ್ರತಿಕೃತಿಯನ್ನು ಪೀಪಾಯಿಯ ಮೇಲೆ ನಿರ್ಮಿಸುತ್ತದೆ. ಈಗ ನಕಲಿಗಾಗಿ ಯಂತ್ರದಲ್ಲಿ ಹಾಯಿಸುವ ಕಾಗದವು ಛಾರ್ಜ್ ಆಗಿ ಪೀಪಾಯಿನಿಂದ ಟೋನರ್ ಪುಡಿಯನ್ನು ತನ್ನ ಮೇಲೆ ಎಳೆದುಕೊಳ್ಳುತ್ತದೆ. ಶಾಖಕ್ಕೆ ಕರಗುವ ಟೋನರ್ ಪುಡಿಯು, ಕಾಗದ ಡ್ರಮ್ ಬಿಡುವಾಗ ಅದಕ್ಕೆ ಅಂಟಿಕೊಳ್ಳುತ್ತದೆ. ನಕಲು ಪ್ರತಿ ಹೊರಬರುತ್ತದೆ.

**ಉಕ್ತಲೇಖನ ಪ್ರತಿವಾಣಿ ಯಂತ್ರಗಳು:** ಬೆರಳಚ್ಚು ಮಾಡಬೇಕಾದ ವಿಷಯವನ್ನು ಅಥವಾ ಪತ್ರವನ್ನು ಉಕ್ತಲೇಖನಯಂತ್ರದ ಮೂಲಕ ಧ್ವನಿಮುದ್ರಿಸಿಟ್ಟು ಯಥಾಕ್ರಮದಲ್ಲಿ ಇದನ್ನು ಸಂಬಂಧಪಟ್ಟ ಗುಮಾಸ್ತರಿಗೆ ಕಳಿಸಿ ಪ್ರತಿ ರಚಿಸುವ ವಿಧಾನವನ್ನು ಅನೇಕ ಕಚೇರಿಗಳಲ್ಲಿ ಅನುಸರಿಸಲಾಗುತ್ತಿದೆ. ಮುದ್ರಿತ ಧ್ವನಿಯ ತಟ್ಟೆ ಟೇಪು ಅಥವಾ ಉರುಳೆಯನ್ನು



ಉಕ್ತಲೇಖನ ಪ್ರತಿವಾಣಿ ಯಂತ್ರ

ಪ್ರತಿವಾಣಿಯಂತ್ರಕ್ಕೆ ಜೋಡಿಸಿ ಅದರಿಂದ ಧ್ವನಿಯನ್ನು ಕೇಳಿ ಅಂತೆಯೇ ಬೆರಳಚ್ಚು ಮಾಡುವುದು ಸಾಧ್ಯ. ಸಂಸ್ಥೆಯ ಅಧಿಕಾರಿ ತನಗೆ ಅನುಕೂಲವಾದಾಗ ಪತ್ರಗಳನ್ನು ಅಥವಾ ಸಂದೇಶಗಳನ್ನು ಈ ರೀತಿ ಮುದ್ರಿಸಿಡುವುದರಿಂದ ಆತನ ಮತ್ತು ಬೆರಳಚ್ಚುಗಾರನ ಸಮಯದಲ್ಲಿ ಎಷ್ಟೋ ಉಳಿತಾಯ ಮಾಡಬಹುದು. ಬೆರಳಚ್ಚುಗಾರ ಮುದ್ರಿತ ಸಾಮಗ್ರಿಯನ್ನು

ಬಳಸಿಕೊಂಡಾದ ಮೇಲೆ ಮುದ್ರಣವನ್ನು ಅಳಿಸಿಹಾಕಿ ಮತ್ತೆ ಆ ಟೇಪು, ತಟ್ಟೆ ಅಥವಾ ಉರುಳೆಯನ್ನು ಉಪಯೋಗಿಸಬಹುದು. ಒಂದು ಸಂಸ್ಥೆಯಲ್ಲಿ ಉಕ್ತಲೇಖನ ಯಂತ್ರವನ್ನು ಬಳಸಬೇಕಾದ ಅಧಿಕಾರಿಗಳು ಅನೇಕರಿದ್ದರೆ ಅವರಲ್ಲೊಬ್ಬೊಬ್ಬರಿಗೂ ಪ್ರತ್ಯೇಕವಾದ ಯಂತ್ರ ಬೇಕಾದುದಿಲ್ಲ. ಉಕ್ತಲೇಖನ ಯಂತ್ರದ ಕೇಂದ್ರಕ್ಕೆ ನಾನಾ ಅಧಿಕಾರಿಗಳ ಕೊಠಡಿಗಳಿಂದ ವರ್ಧಕ ವ್ಯವಸ್ಥೆ ಏರ್ಪಡಿಸಬಹುದು. ಇದು ಈಚಿನ ಬೆಳೆವಣಿಗೆ.

ಇತ್ತೀಚಿನ ಬೆಳೆವಣಿಗೆಯೆಂದರೆ, ಗಣಕಯಂತ್ರಗಳಲ್ಲಿ, ಮಾತು ಗುರುತಿಸುವ ತಂತ್ರಾಂಶ ಅಥವಾ 'ವಾಕ್ಯಭಿಜ್ಞ ತಂತ್ರಾಂಶ (ಸ್ಪೀಚ್ ರೆಕಗ್ನಿಷನ್ ಸಾಫ್ಟ್‌ವೇರ್) ಲಭ್ಯವಾಗಿರುತ್ತದೆ. ಇದರ ಮೂಲಕ, ಬಳಕೆದಾರರು, ಗಣಕಯಂತ್ರದಲ್ಲಿ ಇರುವ ಧ್ವನಿವರ್ಧಕಕ್ಕೆ, ತಾವು ಬರೆಯಬೇಕೆಂದಿರುವ ಸಾಮಗ್ರಿಯನ್ನು ಹೇಳಿದರೆ, ಅದು ರೆಕಾರ್ಡ್ ಆಗಿ, ತಂತ್ರಾಂಶದ ಮೂಲಕ, ಬರೆವಣಿಗೆಗೆ ಮಾರ್ಪಟ್ಟು, ಗಣಕದ ಹಾರ್ಡ್ ಡಿಸ್ಕ್‌ನಲ್ಲಿ ಸಂಗ್ರಹಿತವಾಗುತ್ತದೆ. ಇದನ್ನು ಅನಂತರ ಮುದ್ರಕದ ಮುಖಾಂತರ, ಅಚ್ಚಿಗೆ ಇಳಿಸಬಹುದು. ತಂತ್ರಾಂಶ ಸದುಪಯೋಗವಾಗುವ ಮುಂಚೆ, ಬಳಕೆದಾರನು, ತನ್ನ ಮಾತು ಮತ್ತು ಧ್ವನಿಗಳನ್ನು, ತಂತ್ರಾಂಶ ಸರಿಯಾಗಿ ಗ್ರಹಿಸುವಂತೆ, ತರಬೇತಿಯನ್ನು ಪಡೆಯಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಅವನ ಸ್ವಂತಿಕೆಯ ಉಚ್ಚಾರವಿರುತ್ತದೆ. ಮೇಲೆ ಹೇಳಿದ ತಂತ್ರಾಂಶವನ್ನು ಬಳಸಿ ಬಳಕೆದಾರನು ತನ್ನ ವಾಕ್ಕಿಗೆ ಸರಿಹೊಂದುವಂತೆ ಮಾಡಬಹುದು.

**ವಿಳಾಸಮುದ್ರಣ ಯಂತ್ರಗಳು:** ವಿಮಾಸಂಸ್ಥೆ, ಪತ್ರಿಕಾಸಂಸ್ಥೆ ಮುಂತಾದವು ತಮ್ಮ ಗ್ರಾಹಕರಿಗೆ ಪದೇ ಪದೇ ಪತ್ರಗಳನ್ನು ಕಳುಹಿಸುತ್ತಿರಬೇಕಾಗುತ್ತದೆ. ಇವಕ್ಕೆ ವಿಳಾಸ ಮುದ್ರಣಯಂತ್ರ ಬಹಳ ಉಪಯುಕ್ತ. ಪದಾರ್ಥದಿಂದ ಅಚ್ಚಿಸಿ ಕೊಂಡ ಆರಂಭಿಕ ಕಾರ್ಡುಗಳನ್ನೋ ಕೊರೆಯಚ್ಚು ಕಾರ್ಡುಗಳನ್ನೋ ಉಬ್ಬಕ್ಷರದ ಲೋಹದ ತಗಡುಗಳನ್ನೋ ತಯಾರಿಸಿಕೊಂಡು ಇವನ್ನು ವಿಶಿಷ್ಟ ಯಂತ್ರವೊಂದಕ್ಕೆ ಜೋಡಿಸಿ ಕಾಗದದ ಮೇಲೋ ಲಕೋಟೆಯ ಮೇಲೋ ಇವನ್ನು ಅಚ್ಚಿಸಿಕೊಳ್ಳಬಹುದು. ಅಗತ್ಯಕ್ಕೆ ತಕ್ಕಂತೆ ಈ ವಿಧಾನದಲ್ಲಿ ನಾನಾ ವೈಶಿಷ್ಟ್ಯಗಳನ್ನು ಸಾಧಿಸಿಕೊಳ್ಳಬಹುದಾಗಿದೆ.

ಸ್ವೀಯ ಗಣಕಗಳಲ್ಲಿ ಪದಸಂಸ್ಕಾರ(ವರ್ಡ್ ಪ್ರಾಸೆಸರ್) ತಂತ್ರಾಂಶವು ವಿಳಾಸ ಮುದ್ರಣ ಸೌಲಭ್ಯವನ್ನೂ ಒದಗಿಸುತ್ತದೆ. ಮೋಸದಿಂದ ಬದಲಾವಣೆ ಮಾಡುವುದು ಸಾಧ್ಯವಾಗದಂತೆ ಚೆಕ್ಕುಲೇಖನ ಯಂತ್ರಗಳೂ ಲಕೋಟೆಗಳನ್ನು ಅಂಟಿಸಿ ಅಂಚೆಹಾಸಲು ಹಚ್ಚುವ ಯಂತ್ರಗಳೂ ಆಧುನಿಕ ಕಚೇರಿಗಳಲ್ಲಿ ಬಳಕೆಯಲ್ಲಿರುವ ಇನ್ನೆರಡು ಮುಖ್ಯ ಉಪಕರಣಗಳು.

**ಗಣನ ಮತ್ತು ಲೇಖಾಯಂತ್ರಗಳು:** ಲೆಕ್ಕಮಾಡುವ ಕಷ್ಟವನ್ನು ಕಳೆದುಕೊಳ್ಳುವುದೂ ಮಾನವನ ಅತ್ಯಂತ ಪ್ರಾಚೀನ ಕನಸುಗಳಲ್ಲೊಂದು. ಮಣಿ ಚೌಕಟ್ಟು ನಮ್ಮ ಅತ್ಯಂತ ಪ್ರಾಚೀನ ಗಣನೋಪಕರಣ, ಲೆಕ್ಕಮಾಡುವ ಯಂತ್ರಗಳನ್ನು ರಚಿಸುವ ಆಸಕ್ತಿ ವಿಶೇಷವಾಗಿ ಹಬ್ಬಿದ್ದು 17ನೆಯ ಶತಮಾನದಲ್ಲಿ, ವಿಜ್ಞಾನಕ್ಷೇತ್ರದಲ್ಲಿ ಕಂಡುಹಿಡಿಯಲಾದ ನಾನಾ

ಮಾನವ ಚಾಲಿತ ಗಣನಯಂತ್ರ

ಸಿದ್ಧಾಂತಗಳನ್ನು ಪ್ರಯೋಗಿಸಲು ಗುಣಿಸುವ ವಿನೂತನ ವಿಧಾನಗಳನ್ನಳವಡಿಸಿಕೊಳ್ಳುವುದು ಅವಶ್ಯವಾಯಿತು. ಜಾನ್ ನೇಪಿಯರ್ ಲಾಗರಿದಮನ್ನು ಕಂಡುಹಿಡಿದ. ಇದನ್ನು ಯಂತ್ರೀಕರಿಸಲು ಯತ್ನ ನಡೆಸಿದಾಗ ಅನೇಕ ಗಣನಯಂತ್ರಗಳು ಉದ್ಭವವಾದುವು. 1642ರಲ್ಲಿ ಬ್ಲೇಸ್ ಪ್ಯಾಸ್ಕಲ್ ಕೂಡುವ ಯಂತ್ರವನ್ನು ಕಂಡುಹಿಡಿದ. ಕೂಡುವ, ಕಳೆಯುವ, ಗುಣಿಸುವ, ಭಾಗಿಸುವ ವ್ಯಾಪಾರಗಳನ್ನು ಮಾಡಬಲ್ಲ ತಃಖ್ತಾಗಣನಯಂತ್ರಗಳು ಸೃಷ್ಟಿಯಾದದ್ದು 19ನೆಯ ಶತಮಾನದ ಅಂತ್ಯದಲ್ಲಿ. ಅತ್ಯಂತ ಸಂಕೀರ್ಣವಾದ ಗಣಕ ಕಾರ್ಯವನ್ನೆಲ್ಲ ಮಾಡಬಲ್ಲ ಎಲೆಕ್ಟ್ರಾನಿಕ್–ಯಾಂತ್ರಿಕ ಗಣಕಗಳು ಇಪ್ಪತ್ತನೆಯ ಶತಮಾನದ ನಡುಗಾಲದ ಅದ್ಭುತ ಸಾಧನಗಳು (**ನೋಡಿ– ಗಣಕಯಂತ್ರ**).

ಆಧುನಿಕ ಕಚೇರಿಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವವೆಂದರೆ ನಗದು ದಾಖಲೆಯಂತ್ರ (ಕ್ಯಾಷ್ ರಿಜಿಸ್ಟರ್), ಲೇಖಾಯಂತ್ರ (ಅಕೌಂಟಿಂಗ್ ಮಷೀನ್), ವರ್ಗಕಾರಕ ಮತ್ತು ಯಾದಿರಚಕ ಯಂತ್ರ (ಕ್ಲಾಸಿಫೈಯಿಂಗ್ ಅಂಡ್ ಟ್ಯಾಬ್ಯುಲೇಟಿಂಗ್ ಮಷೀನ್)



ವಿದ್ಯುತ್ ಚಾಲಿತ ಗಣನ ಯಂತ್ರ

ಮುಂತಾದವು, ನಗದು ದಾಖಲೆಯಂತ್ರ ವರ್ತಕನಿಗೆ ಬಹಳಮಟ್ಟಿಗೆ ಸಹಾಯಕವಾಗಿದೆ. ಪ್ರತಿಯೊಂದು ವ್ಯವಹಾರವನ್ನೂ ಅದು ದಾಖಲುಮಾಡುತ್ತದೆ. ಪ್ರಮಾದ, ದ್ರೋಹ



ಲಕೋಟೆ ತೆರೆಯುವ ಯಂತ್ರ

ಇವುಗಳನ್ನು ತಪ್ಪಿಸುತ್ತದೆ. ವ್ಯವಹಾರದ ಮೊಬಲಗನ್ನು ನಮೂದಿಸುವುದಲ್ಲದೆ ವಿವಿಧ ವರ್ಗಗಳಲ್ಲಿ ಆದ ಮಾರಾಟದ ಮೊತ್ತಗಳನ್ನೂ ಉಲ್ಲೇಖಿಸುತ್ತದೆ. ನಗದುವ್ಯವಹಾರದ

ಎಲೆಕ್ಟ್ರಾನಿಕ್ ಗಣಕಯಂತ್ರ

ರಸೀದಿಯನ್ನೂ ಇದು ಮುದ್ರಿಸಬಲ್ಲುದು. ಅಲ್ಲದೆ ಪ್ರತಿಯೊಂದು ವ್ಯವಹಾರದ ಸಂಪೂರ್ಣ ದಾಖಲೆಯನ್ನಿಟ್ಟು ಲೆಕ್ಕಶೋಧಕನಿಗಾಗಿ ಪ್ರತ್ಯೇಕವೂ ಸಮಗ್ರವೂ ಆದ ಮಾಹಿತಿಯನ್ನು ಇಡುತ್ತದೆ.

ಲೇಖಾಯಂತ್ರದ್ದು ಬಲು ಸಂಕೀರ್ಣ ರಚನೆ. ಗಣಕಯಂತ್ರದ ಸೌಲಭ್ಯಗಳ ಜೊತೆಗೆ ಲೆಕ್ಕ ಬರೆಯುವ ಕೆಲಸವನ್ನೂ ಇದು ಮಾಡುತ್ತದೆ. ಬಿಕರಿಪಟ್ಟಿ ತಯಾರಿಕೆಯ ಜೊತೆಗೆ ಖಾತೆ ಕಾರ್ಡು ಮತ್ತು ರೋಜು ಲೇಖನಗಳೆರಡನ್ನೂ ಏಕಕಾಲದಲ್ಲಿ ಮಾಡುತ್ತದೆ. ಬ್ಯಾಂಕುಗಳಲ್ಲಿ ಬಳಸಲಾಗುವ ಯಂತ್ರಗಳು ಗ್ರಾಹಕರ ಪಾಸ್‌ಪುಸ್ತಕಗಳನ್ನು ಅಥವಾ ತಃಖ್ತೆಗಳನ್ನು ಮತ್ತು ಲೆಕ್ಕಶೋಧನಪ್ರತಿಯನ್ನು ತಯಾರಿಸುವುದಲ್ಲದೆ ಶಿಲ್ಕುಗಳನ್ನೂ ಲೆಕ್ಕಹಾಕಿ ತೋರಿಸುತ್ತದೆ.

ಸಂಗ್ರಹಿಸಲಾದ ಅಂಕಿಗಳನ್ನೂ ವಿವರಗಳನ್ನೂ ಆವಶ್ಯಕತೆಗೆ ಅನುಗುಣವಾಗಿ ವರ್ಗೀಕರಿಸಿ ತಾಳೆನೋಡಿ ವರದಿ ತಯಾರಿಸುವುದೇ ಮುಂತಾದ ನಾನಾ ಯಂತ್ರಗಳು ಬೃಹತ್ ಆಧುನಿಕ ಕಚೇರಿಗಳಿಗೆ ಬಲು ಉಪಯುಕ್ತವಾಗಿವೆ. ಮೂಲಸಾಮಗ್ರಿಯನ್ನೊದಗಿಸಿ, ಮಾಡಬೇಕಾದ ಕೆಲಸವನ್ನು ಸೂಚಿಸಿಕೊಟ್ಟರೆ ಸಾಕು, ಉದ್ದೇಶಿತ ಪರಿಣಾಮ ನೀಡುವ ಸ್ವಯಂಚಲೀ ಯಂತ್ರಗಳಿವು.

ಸ್ವಯಂಚಾಲಿತ ಖಾಸಗಿ ಟೆಲಿಫೋನ್

ಚಿಲ್ಲರೆ ಎಣಿಸುವ, ಕಾಗದ ಸುತ್ತುವ, ಕಚೇರಿಯ ಸಿಬ್ಬಂದಿಯವರು ತಂತಮ್ಮ ಕೋಣೆಗಳಿಂದಲೇ ಪರಸ್ಪರವಾಗಿ ಸಂಭಾಷಿಸುವ, ಕಾಗದ ಕತ್ತರಿಸುವ, ರಂಧ್ರ ಕೊರೆಯುವ, ರಟ್ಟುಕಟ್ಟುವ, ಮಡಿಸುವ, ಲಕೋಟೆ ತೆರೆಯುವ ದಿನವಹಿ ಸಂಭವಿಸುವಂಥ ಘಟನಾವಳಿಗಳ ಸಮಯಗಳನ್ನು ಗುರುತಿಸಿಡುವ–ಹೀಗೆ ನಾನಾ ಬಗೆಯ ಯಂತ್ರಗಳನ್ನು ಆಧುನಿಕ ಕಚೇರಿಯ ಉಪಕರಣಗಳ ಪಟ್ಟಿಯಲ್ಲಿ ಸೇರಿಸಬಹುದಾಗಿದೆ. (ಎಸ್.ಎಸ್.ಜಿ.; ಎನ್.ಎಸ್.ಎಸ್.)

**ಕಚೇರಿಯ ಸಂಘಟನೆ ಮತ್ತು ವ್ಯವಸ್ಥಾಪನೆ :** ಒಂದು ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಅದರ ಕಚೇರಿ ಸಲ್ಲಿಸುವ ಸೇವೆ ಮುಖ್ಯವಾದದ್ದು. ಅದರ ಸಂಘಟನೆ ಮತ್ತು ವ್ಯವಸ್ಥಾಪನೆಗಳ ಸ್ವರೂಪವೇ ಈ ಸೇವೆ ಎಷ್ಟರಮಟ್ಟಿಗೆ ಸಾರ್ಥಕ ಅಥವಾ ಸಮರ್ಪಕ ಎಂಬುದನ್ನು ನಿರ್ಣಯಿಸುವ ಅಂಶ. ಕಚೇರಿಯ ಕಾರ್ಯಭಾರ ಪ್ರತ್ಯೇಕವಾದದ್ದೆಂದೂ ಲೆಕ್ಕಪತ್ರಗಳನ್ನಿಡುವುದಷ್ಟೇ ಅದರ ಹೊಣೆಯೆಂದೂ ಭಾವನೆಯಿದ್ದ ಕಾಲವೊಂದಿತ್ತು. ಸಂಸ್ಥೆಯ ಉನ್ನತ ಕಾರ್ಯ ನಿರ್ವಾಹಕರಿಗೆ ಮಾತ್ರ ಅದು ಸೇವೆ ಸಲ್ಲಿಸುತ್ತಿತ್ತು. ಆದರೆ ಈಚಿನ ವರ್ಷಗಳಲ್ಲಿ ಈ ನಿಲುವಿನಲ್ಲಿ ಬದಲಾವಣೆಯಾಗಿದೆ. ಅದು ಸಂಸ್ಥೆಯ ವ್ಯವಹಾರದ ಚಲನಾತ್ಮಕ ಅಂಗ; ಒಟ್ಟು ಉತ್ಪಾದಕತೆಯಲ್ಲಿ ಅದರದ್ದೂ ನೇರ ಪಾತ್ರವುಂಟು ಎಂಬ ಅರಿವು ಈಚೆಗೆ ಮೂಡುತ್ತಿದೆ. ಸಂಸ್ಥೆಯಲ್ಲಿ ನಿರ್ವಹಿಸಬೇಕಾಗಿರುವ ಕೆಲಸದ ಯೋಜನೆ, ಸಂಘಟನೆ, ಉಪಕ್ರಮಣ ಮತ್ತು ನಿಯಂತ್ರಣಗಳು ಕಚೇರಿಯಿಂದ ಮಾತ್ರ ಸಾಧ್ಯ. ಸಂಸ್ಥೆಯ ಹಣಕಾಸಿನ ವ್ಯವಹಾರದ ನಿರ್ವಹಣೆಯೇ ಅಲ್ಲದೆ ಉತ್ಪಾದನೆಯ ಮತ್ತು ಕೊಳ್ಳುವ–ಮಾರುವ ವಿಭಾಗಗಳಿಗೆ ಅಗತ್ಯವಾದ ಅಂಕಿ–ಅಂಶಗಳನ್ನು ಸಂಗ್ರಹಿಸಿ, ಸಂಕಲಿಸಿ, ವಿಂಗಡಿಸಿ, ಇವು ಬೇಕಾದಾಗ, ಅರ್ಥವಾಗುವ ರೀತಿಯಲ್ಲಿ, ಒದಗಿಸುವ ಕಾರ್ಯವೂ ಕಚೇರಿಯ ಮುಖ್ಯ ಕೆಲಸ. ಲೆಕ್ಕಪತ್ರಗಳ ವ್ಯವಸ್ಥೆ, ಪಡಿಯಚ್ಚುಗಳ ತಯಾರಿಕೆ–ಇವೂ ಕಚೇರಿ ನಿರ್ವಹಿಸಬೇಕಾದ ಕರ್ತವ್ಯಗಳೇ. ವಿಮೆ, ಬ್ಯಾಂಕಿಂಗ್ ಮುಂತಾದ ಸಂಸ್ಥೆಗಳಲ್ಲಿ ಕಚೇರಿಯ ಪಾತ್ರದ ಪ್ರಾಮುಖ್ಯದ ಅರಿವಾಗಿರುವುದರಿಂದ ಈ ಸಂಸ್ಥೆಗಳಲ್ಲಿ ಕಚೇರಿಯ ಆಡಳಿತ ಮತ್ತು ವ್ಯವಸ್ಥೆಗಳಿಗೆ ಹೆಚ್ಚು ಗಮನ ಕೊಡಲಾಗಿದೆ. ಆದರೆ ಎಲ್ಲ ಉದ್ಯಮಗಳೂ ಕಚೇರಿಯ ಪ್ರಾಮುಖ್ಯವನ್ನು ಇನ್ನೂ ಅರಿತುಕೊಂಡಿಲ್ಲ.

ಆಡಳಿತಯಂತ್ರ ಅಯಸ್ಕಾಂತವಿದ್ದಂತೆ. ಇದು ಸಂಸ್ಥೆಯ ಅನೇಕ ವಿಭಾಗಗಳನ್ನು ಆಕರ್ಷಿಸಿ ಒಂದು ಗೊತ್ತಾದ ರೀತಿಯಲ್ಲಿ ನಡೆಯುವಂತೆ ಮಾಡುತ್ತದೆ. ಈ ರೀತಿಯ ಸೌಹಾರ್ದ ಇಲ್ಲದಿದ್ದ ಪಕ್ಷದಲ್ಲಿ ಸಂಸ್ಥೆಯ ಕೆಲಸಕಾರ್ಯಗಳಲ್ಲಿ ಅನೇಕ ಅಡೆತಡೆಗಳಾಗುತ್ತವೆ. ಸಾಮಾನ್ಯ ಆಡಳಿತದ ನಿಯಮಗಳೇ ಕಚೇರಿಯ ಮುಖ್ಯವಾದ ಆಡಳಿತಕ್ಕೂ ಅನ್ವಯವಾಗುತ್ತವೆಯೆನ್ನಬಹುದು. ಕಚೇರಿಯ ಸಂಘಟನೆಯಲ್ಲಿ ಅಂಶಗಳು ಮೂರು: 1 ಕಚೇರಿಯ ಕಾರ್ಯವಿಧಾನ, 2 ಉಪಕರಣಗಳ ಅಳವಡಿಕೆ ಮತ್ತು 3 ಸಿಬ್ಬಂದಿ ಅಥವಾ ಸೌಕರ್ಯ ವ್ಯವಸ್ಥೆ. ಈ ಮೂರೂ ವಿಭಾಗಗಳನ್ನು ಸರಿಯಾಗಿ ಹೊಂದಿಸಿದಲ್ಲಿ ಮಾತ್ರ ಕಚೇರಿಯ ಆಡಳಿತ ಸುಸೂತ್ರವಾಗಿ ಮುಂದುವರಿಯುತ್ತದೆ. ಕಚೇರಿಯ ಆಡಳಿತಗಳಲ್ಲಿ ವ್ಯಕ್ತಿಗತ ಭಾವನೆಗಳಿಗಿಂತ ವಸ್ತುನಿಷ್ಠೆಗೆ ಹೆಚ್ಚಿನ ಮಹತ್ತ್ವ ನೀಡಬೇಕು. ಹೀಗಿದ್ದಲ್ಲಿ ಮಾತ್ರ ಕಚೇರಿಯ ಸುವ್ಯವಸ್ಥೆ ಸಾಧ್ಯ, ತಪ್ಪು ಸಂಭವಿಸಿದಾಗ ಅದನ್ನು ತಿದ್ದುವುದು ಸುಲಭ. ಹೀಗೆ ಕ್ರಮಬದ್ಧವಾದ ವ್ಯವಸ್ಥೆಯೇ ವೈಜ್ಞಾನಿಕ ವ್ಯವಸ್ಥಾಪನ.

**ಕಚೇರಿಯ ಕಾರ್ಯವಿಧಾನ:** ಯಾವುದಾದರೊಂದು ಹೊಸ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ ಅದರ ಕಚೇರಿಯನ್ನು ವ್ಯವಸ್ಥಾಪಿಸುವ ಕೆಲಸ ಕಚೇರಿಯ ಮುಖ್ಯಾಧಿಕಾರಿಯದು. ಮೊದಲನೆಯದಾಗಿ ಆತ ತನ್ನ ಕಚೇರಿಯ ಆವಶ್ಯಕತೆಗಳೇನೆಂಬುದನ್ನು ಪಟ್ಟಿ ಮಾಡಬೇಕಾಗುತ್ತದೆ. ಅನಂತರ ಆ ಆವಶ್ಯಕತೆಗಳನ್ನು ಯಾರು, ಹೇಗೆ, ಎಷ್ಟರ ಮಟ್ಟಿಗೆ ಪೂರೈಸಬಲ್ಲರೆಂಬ ಬಗ್ಗೆ ಮನಸ್ಸನ್ನು ಹರಿಸಬೇಕಾಗುತ್ತದೆ. ಅದೂ ಅಲ್ಲದೆ, ಕಚೇರಿಯ ಸಲಕರಣೆಗಳ ಮತ್ತು ಸಿಬ್ಬಂದಿಯ ಆಯ್ಕೆಯ ಬಗ್ಗೆ ವಿಶದವಾಗಿ ಆಲೋಚಿಸಿ ವಿಧಾನಗಳನ್ನು ಗೊತ್ತುಪಡಿಸಬೇಕಾಗುತ್ತದೆ. ಸಾಮಾನ್ಯವಾಗಿ ವ್ಯವಸ್ಥಾಪಕರು ಕಚೇರಿಯ ಕಾರ್ಯವಿಧಾನದ ಬಗ್ಗೆ ಹೆಚ್ಚುಹೆಚ್ಚಾಗಿ ಗಮನ ಹರಿಸಲು ಪ್ರಯತ್ನಿಸುತ್ತಾರೆ. ಕಚೇರಿಯ ವಿನ್ಯಾಸ, ವೇಳಾಪಟ್ಟಿಗೆ ಅನುಗುಣವಾಗಿ ಕಾರ್ಯನಿರ್ವಹಣೆ, ಕಾರ್ಯಮಾಪನ, ಕಾರ್ಯದ ಸರಳೀಕರಣ, ಕಾರ್ಯದ ವೇಳೆಯ ಮತ್ತು ಚಲನೆಯ ಅಧ್ಯಯನ (ಟೈಂ ಅಂಡ್ ಮೋಷನ್ ಸ್ಟಡಿ)–ಶಿಷ್ಟಪದ್ಧತಿ (ಸ್ಟ್ಯಾಂಡರ್ಡ್‌ಪ್ರಾಕ್ಟೀಸಸ್), ತನಿಖೆ ಮತ್ತು ವೆಚ್ಚನಿಯಂತ್ರಣ (ಕಾಸ್ಟ್ ಕಂಟ್ರೋಲ್)–ಇವು ಮುಖ್ಯವಾಗಿ ಗಮನಿಸಬೇಕಾದ ಅಂಶಗಳು.

**1. ಕಚೇರಿಯ ವಿನ್ಯಾಸ:** ಇದರಲ್ಲಿ ಪ್ರಮುಖವಾಗಿ ನಿರ್ಧರಿಸಬೇಕಾದ ಅಂಶವೆಂದರೆ, ಪ್ರತಿಯೊಂದು ವಿಭಾಗಕ್ಕೂ ಪ್ರತಿಯೊಬ್ಬ ಉದ್ಯೋಗಿಗೂ ಬೇಕಾಗಬಹುದಾದ ಸ್ಥಳ. ಹೀಗೆ ನಿರ್ಧರಿಸಿದ ಸ್ಥಳದಲ್ಲಿ ಇರಬೇಕಾದ ಕಿಟಕಿ ಬಾಗಿಲುಗಳ ಮತ್ತು ಇತರ ಸಾಧನಗಳ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಸಾಮಾನ್ಯವಾಗಿ ನಿಕಟಸಂಬಂಧವಿರುವ ವಿಭಾಗಗಳನ್ನು ಅಕ್ಕಪಕ್ಕಗಳಲ್ಲೇ ಇರುವಂತೆ ಸ್ಥಾಪಿಸಬೇಕು (ಉದಾ: ಹಣಕಾಸು ವಿಭಾಗ, ಮತ್ತು ಲೆಕ್ಕ ವಿಭಾಗ). ಅದೂ ಅಲ್ಲದೆ ಕೆಲವು ವಿಭಾಗಗಳನ್ನು ಸಾರ್ವಜನಿಕರು ಸುಲಭವಾಗಿ ಉಪಯೋಗಿಸುವ ರೀತಿಯಲ್ಲಿ ಸ್ಥಾಪಿಸಬೇಕು (ಉದಾ: ಹಣಕಾಸು ವಿಭಾಗ, ಮಾರಾಟ ವಿಭಾಗ). ಕೆಲವು ವಿಭಾಗಗಳನ್ನು ಸಾರ್ವಜನಿಕರಿಂದ ದೂರವಿಡಲೂಬೇಕು (ಉದಾ: ಕಾಗದಪತ್ರಗಳ ವಿಭಾಗ). ಹೀಗೆ ಕಚೇರಿಯ ವಿನ್ಯಾಸವನ್ನು ಮೊದಲು ತಯಾರಿಸಿ ಅನಂತರ ಕಚೇರಿಯನ್ನು ವ್ಯವಸ್ಥೆಗೊಳಿಸಲು ಪ್ರಾರಂಭಿಸಬೇಕು. ಕಚೇರಿಯ ಕಾರ್ಯದಕ್ಷತೆ ಬಹಳ ಮಟ್ಟಿಗೆ ಅದರ ವಿನ್ಯಾಸವನ್ನೇ ಅವಲಂಬಿಸಿದೆಯೆಂದರೆ ತಪ್ಪಾಗಲಾರದು. ವಿಭಾಗದಿಂದ ವಿಭಾಗಕ್ಕೆ ಹೆಚ್ಚು ಅಂತರವಿದ್ದಲ್ಲಿ ಉದ್ಯೋಗಿಗಳು ತಮ್ಮ ಹೆಚ್ಚು ಕಾಲವನ್ನು ವಿಭಾಗಗಳಿಗೆ ಹೋಗಿ ಬರುವುದರಲ್ಲೇ ಕಳೆಯುತ್ತಾರೆ. ಇದರಿಂದಾಗಿ ಕೆಲಸ ನಿಧಾನವಾಗಿ ಸಾಗುತ್ತದೆ. ಇದನ್ನು ತಪ್ಪಿಸುವಲ್ಲಿ ಮುಖ್ಯಾಧಿಕಾರಿಯ ಪಾತ್ರ ಹಿರಿದಾದುದು.

**2. ವೇಳಾನಿರ್ಣಯ:** ಕಚೇರಿಯ ಕೆಲಸ ಸುಸೂತ್ರವಾಗಿ ನಡೆಯಬೇಕಾದರೆ ಕೆಲಸದಲ್ಲಿ ಕಾಣುವ ವಿಳಂಬನೀತಿಯನ್ನು ತೊಡೆದುಹಾಕಬೇಕು. ಆಗ ಉದ್ಯೋಗಿಗಳಿಂದ ಹೆಚ್ಚುಹೆಚ್ಚಾಗಿ ಉತ್ತಮ ಕೆಲಸ ಪಡೆಯಬಹುದು ಯಾವ ಕೆಲಸಕ್ಕೆ ಎಷ್ಟು ಕಾಲ ಬೇಕೆಂಬುದನ್ನು ಮೊದಲೇ ಅಂದಾಜು ಮಾಡಬೇಕು. ಮುಖ್ಯಾಧಿಕಾರಿ ಉದ್ಯೋಗಿಗಳಿಗೆ ಸರಿಯಾದ ಸಲಕರಣೆಗಳನ್ನು ಒದಗಿಸಿ, ಕಾಲ ವಿಳಂಬವಾಗದಂತೆ ಎಲ್ಲ ಸೌಲಭ್ಯಗಳನ್ನೂ ಒದಗಿಸುವುದೂ ಉಸ್ತುವಾರಿ ಮಾಡುವುದೂ ಆವಶ್ಯ.

**3. ಕಾರ್ಯಮಾಪನ:** ಯಾವುದೇ ಕೆಲಸವನ್ನು ಪ್ರಾರಂಭಿಸುವ ಮೊದಲು ಅದರ ಮಾಪನ ಮಾಡಬೇಕು. ಇದರ ಆಧಾರದ ಮೇಲೆ ಕೆಲಸ ಮಾಡಿಸುವ ರೀತಿಯನ್ನು ನಿರ್ಧರಿಸಬೇಕು. ಈ ಮಾಪನ ಸಾಮಾನ್ಯವಾಗಿ ಕೆಲಸದ ಗುಣದ ಬಗ್ಗೆಯಾಗಲಿ ಮೊತ್ತದ ಬಗ್ಗೆಯಾಗಲಿ ಇರಬಹುದು; ಕೆಲವು ಸಮಯಗಳಲ್ಲಿ ಈ ಎರಡರ ಬಗ್ಗೆಯೂ ಇರಬಹುದು.

**4. ಕಾರ್ಯದ ಸರಳೀಕರಣ:** ಕೆಲಸವನ್ನು ಸುಗಮಗೊಳಿಸಿ ಸರಿಯಾದ ಮತ್ತು ಸುಲಭವಾದ ರೀತಿಯಲ್ಲಿ ಮಾಡುವ ವಿಧಾನವೂ ಮುಖ್ಯ. ಕೆಲವು ಕಾರ್ಯಗಳನ್ನು ಸುಲಭಗೊಳಿಸಬಹುದು ಅಥವಾ ತೆಗೆದು ಹಾಕಬಹುದು. ಈ ರೀತಿ ಮಾಡುವಾಗ ಹಿಂದಿನ ಅನುಭವ ಹೆಚ್ಚು ಉಪಯೋಗಕ್ಕೆ ಬರುತ್ತದೆ. ಬಿಕರಿ ಪಟ್ಟಿಯ ರಚನೆ, ಟೆಲಿಫೋನ್ ಬಳಕೆ, ಪತ್ರವ್ಯವಹಾರ ನಿರ್ವಹಣೆ, ಪತ್ರಸಂಗ್ರಹಣೆ, ನಕಲು ರಚನೆ–ಮುಂತಾದ ನಾನಾ ಕಾರ್ಯಗಳನ್ನು ಅನಾವಶ್ಯಕವಾಗಿ ಬೆಳೆಸುವುದೂ ಮಾಡಿದ್ದನ್ನೇ ಮಾಡುವುದೂ ಉಂಟು. ಸೂಕ್ತ ಪರಿಶೀಲನದಿಂದ ಇವನ್ನೆಲ್ಲ ನಿವಾರಿಸುವುದು ಸಾಧ್ಯ.

**5. ಚಲನೆಯ ಅಧ್ಯಯನ:** ಉದ್ಯೋಗಿ ಕೆಲಸ ಮಾಡುವಾಗ ಕೆಲವು ನಿರ್ದಿಷ್ಟ ರೀತಿಗಳಲ್ಲಿ ಅಂಗಚಲನೆ ಮಾಡಬೇಕಾಗುತ್ತದೆ. ಅತಿಯಾದ ಅಥವಾ ಅನಾವಶ್ಯಕವಾದ ಅಂಗಚಲನೆಯಿಂದ ಬಳಲಿಕೆಯಾಗುವುದು ಸಹಜ. ಒಂದೇ ಬಗೆಯ ಕೆಲಸವನ್ನು ಹಲವು ಸಾರಿ ಮಾಡಿದಾಗ ಆ ಕೆಲಸದಲ್ಲಿ ಪರಿಣತೆ ಪ್ರಾಪ್ತವಾಗಿ ಅನಾವಶ್ಯಕವಾದ ಚಲನೆಯೂ ಕಡಿಮೆಯಾಗುತ್ತದೆ. ಅನಾವಶ್ಯಕವಾದ ಹಲವಾರು ಚಲನೆಗಳ ಬದಲು ಹವಣಾದ ಕೆಲವೇ ಚಲನೆಗಳನ್ನು ಆಲೋಚಿಸಿ ಅಳವಡಿಸುವುದೂ ಕಚೇರಿ ವ್ಯವಸ್ಥಾಪನೆಯ ಒಂದು ಮುಖ್ಯ ಅಂಶ.

**6. ಕಾಲದ ಅಧ್ಯಯನ:** ಕಾಲದ ಅಧ್ಯಯನವೂ ಚಲನೆಯ ಅಧ್ಯಯನದಷ್ಟೇ ಮುಖ್ಯವಾದದ್ದು, ಕೆಲಸವನ್ನು ಸರಳಗೊಳಿಸಿ ಉದ್ಯೋಗಿಯ ಚಲನೆಯ ನಿಷ್ಕರ್ಷೆ ಮಾಡಿದ ಮೇಲೆ ಒಂದು ಕೆಲಸಕ್ಕೆ ಅಗತ್ಯವಾದ ಕಾಲವೆಷ್ಟೆಂಬುದನ್ನು ನಿರ್ಧರಿಸಬೇಕು. ಹೀಗೆ ಮಾಡಬೇಕಾದರೆ ಆ ಕೆಲಸದ ನಾನಾ ಅಂಶಗಳನ್ನು ಪರಿಶೀಲಿಸಿ, ಒಂದೊಂದಕ್ಕೂ ಅಗತ್ಯವಾದ ಕಾಲವೆಷ್ಟೆಂಬುದನ್ನು ಗುರುತಿಸಿಕೊಳ್ಳಬೇಕು. ಆದರೆ ಎಲ್ಲ ಕಾಲದಲ್ಲೂ ಒಂದೇ ಬಗೆಯಲ್ಲಿ ಶ್ರಮ ವಿನಿಯೋಗ ಸಾಧ್ಯವಿಲ್ಲವೆಂಬುದನ್ನೂ ಅರಿಯಬೇಕು. ಆದ್ದರಿಂದ ಇವನ್ನೆಲ್ಲ ಗಮನದಲ್ಲಿಟ್ಟು ಪ್ರತಿಯೊಂದು ಕ್ರಿಯೆಗೂ ಕಾಲನಿರ್ಧಾರ ಮಾಡಬೇಕಾಗುತ್ತದೆ. ಇದು ದೀರ್ಘವಾದ ಅಧ್ಯಯನದಿಂದ ಸಾಧ್ಯ.

**7. ಶಿಷ್ಟ ಕ್ರಮ:** ಹೀಗೆ ಮೇಲೆ ಹೇಳಿದ ವಿಷಯಗಳ ಬಗ್ಗೆ ದೀರ್ಘವಾಗಿ ಆಲೋಚಿಸಿ ಅಭ್ಯಸಿಸಿದ ಮೇಲೆ, ಸೂಕ್ತ ನಿಯಮಾವಳಿಯನ್ನು ತಯಾರಿಸಿ ಉದ್ಯೋಗಿಗಳಿಗೆ ಹಂಚಬೇಕು. ಇದರಲ್ಲಿ ಕೆಲಸ ಮಾಡುವ ರೀತಿಯನ್ನು ವಿಶದವಾಗಿ ವಿವರಿಸಲಾಗಿರುತ್ತದೆ. ಹೊಸ ಉದ್ಯೋಗಿಗಳಿಗೆ ಈ ಬಗೆಯ ನಿಯಮಾವಳಿ ಬಹಳ ಸಹಾಯಕ.

**8. ಕೆಲಸದ ತನಿಖೆ ಅಥವಾ ಪರಿಶೀಲನೆ:** ನಿಯಮಾವಳಿಯನ್ನು ತಯಾರಿಸಿ ಅಭ್ಯಾಸಕ್ಕೆ ಕೊಟ್ಟ ಮೇಲೆ, ನಿರ್ಧಾರಿತ ಕೆಲಸ ಈ ಪ್ರಕಾರದಲ್ಲೆ, ಇಲ್ಲಿ ವಿವರಿಸಿದ ರೀತಿಯಲ್ಲೆ, ಆಗುತ್ತಿದೆಯೇ ಇಲ್ಲವೇ ಎಂಬ ಬಗ್ಗೆ ತನಿಖೆ ಮಾಡಬೇಕು. ಹೀಗೆ ಆಗಾಗ್ಗೆ ಪರಿಶೀಲನೆ ನಡೆಸುವುದರಿಂದ ತಪ್ಪುಗಳನ್ನು ಕಂಡುಹಿಡಿಯಬಹುದು. ಮತ್ತೇನಾದರೂ ತೊಂದರೆಗಳಿದ್ದಲ್ಲಿ ಅವನ್ನು ಸರಿಪಡಿಸುವುದಕ್ಕೂ ಇದು ಸಹಾಯಕವಾಗುತ್ತದೆ.

**9. ವೆಚ್ಚನಿಯಂತ್ರಣ:** ಕೆಲಸವನ್ನು ಅತಿ ಯಶಸ್ವಿಯಾಗಿ ಮತ್ತು ಅತಿ ಕಡಿಮೆ ಖರ್ಚಿನಲ್ಲಿ ಮಾಡುವಂತೆ ನೋಡಿಕೊಳ್ಳಬೇಕಾದ ಕೆಲಸ ಕಚೇರಿಯ ಮುಖ್ಯಾಧಿಕಾರಿಯದು. ವೆಚ್ಚ ಏರದಂತೆ ಎಚ್ಚರ ವಹಿಸಬೇಕು.

ಮೇಲೆ ಹೇಳಿದ ಎಲ್ಲ ಕೆಲಸಗಳನ್ನೂ ಕಚೇರಿಯ ಮುಖ್ಯಾಧಿಕಾರಿಯಾಗಲಿ ಆತನ ಸಹಾಯಕರಾಗಲಿ ನೋಡಿಕೊಳ್ಳಬೇಕು. ಅಲ್ಲದೆ ದೊಡ್ಡ ಕಚೇರಿಗಳಲ್ಲಿ ಈ ಕೆಲಸಗಳನ್ನು ಬೇರೆ ಒಂದು ವಿಭಾಗಕ್ಕೆ ವಹಿಸಿರುತ್ತಾರೆ. ಆ ವಿಭಾಗ ಆಗಾಗ್ಗೆ ಸಂಶೋಧನೆ ನಡೆಸಿ ಕಾರ್ಯವನ್ನು ಸುಗಮಗೊಳಿಸಲು ಪ್ರಯತ್ನಿಸುತ್ತದೆ.

**ಕಚೇರಿಯ ಉಪಕರಣ:** ಕಚೇರಿಯ ಆಡಳಿತ ವಿಚಾರದಲ್ಲಿ ಎರಡನೆಯ ಸ್ಥಾನ ಪಡೆಯಬೇಕಾದ ಅಂಶವೆಂದರೆ, ಕಚೇರಿಯ ಉಪಕರಣ, ಕಚೇರಿಯ ಮುಖ್ಯಾಧಿಕಾರಿ ತನ್ನ ಕಚೇರಿಗೆ ಬೇಕಾದ ಸಲಕರಣೆಗಳನ್ನು ಅತ್ಯಂತ ನಿಷ್ಠೆಯಿಂದ ಆರಿಸಿಕೊಳ್ಳಬೇಕು. ಅಲ್ಲದೆ ಅಣಿಕಟ್ಟಿನಲ್ಲಿ (ಫರ್ನಿಚರ್) ಪ್ರತಿಯೊಂದನ್ನೂ ಉದ್ಯೋಗಿಯ ಕೆಲಸಕ್ಕೆ ತಕ್ಕಂತೆ ವಿನ್ಯಾಸಗೊಳಿಸಲಾಗಿರುತ್ತದೆ.

ಆಧುನಿಕ ಕಚೇರಿಯಲ್ಲಿ ಅಣಿಕಟ್ಟು ಮಾತ್ರವೇ ಅಲ್ಲದೆ ಯಂತ್ರಗಳ ಬಳಕೆಯೂ ಹೆಚ್ಚುತ್ತಿದೆ. ಮುಖ್ಯಾಧಿಕಾರಿ ತನ್ನ ಕಚೇರಿಗೆ ಬೇಕಾಗಬಹುದಾದ ಯಂತ್ರಗಳ ಒಂದು ಪಟ್ಟಿ ಮಾಡಿ ಅವುಗಳ ಬೆಲೆಯನ್ನು ತಿಳಿದುಕೊಳ್ಳಬೇಕು. ಅದೂ ಅಲ್ಲದೆ ಯಾವ ಯಂತ್ರವನ್ನೇ ಆಗಲಿ, ಕೊಳ್ಳುವ ಮೊದಲು ಅದರ ಬಳಕೆ ಮತ್ತು ಉಪಯೋಗದ ಬಗ್ಗೆ ಯೋಚಿಸಿ ಅದಕ್ಕೆ ತಗಲುವ ವೆಚ್ಚದ ದೃಷ್ಟಿಯಿಂದ ಸರಿಯಾಗಿ ಬಳಸಿಕೊಳ್ಳಲು ಸಾಧ್ಯವೇ ಇಲ್ಲವೆ, ಅಥವಾ ಅದು ಕಚೇರಿಗೆ ಭೂಷಣಪ್ರಾಯವಾಗಿ ಮಾತ್ರ ಇರುತ್ತದೆಯೆ ಎಂಬುದನ್ನು ಸರಿಯಾಗಿ ಕಂಡುಕೊಳ್ಳಬೇಕು. ಯಥಾಕಾಲದಲ್ಲಿ ಅದನ್ನು ದುರಸ್ತಾಗಿಟ್ಟಿರುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. **(ನೋಡಿ- ಕಚೇರಿಯ-ಯಂತ್ರೋಪಕರಣಗಳು)**

ಕಚೇರಿಗೆ ಬಂದು ಹೋಗುವ ಪತ್ರಗಳ ದಾಖಲೆಯನ್ನು ಸರಿಯಾಗಿ ಇಡುವ ಕೆಲಸವೂ ಬಹಳ ಮುಖ್ಯವಾದದ್ದು. ಇದಕ್ಕಾಗಿ ಸರಿಯಾದ ಪತ್ರಕೋಶಗಳ ಆಯ್ಕೆಯಾಗಬೇಕು. ಆಧುನಿಕ ಕಚೇರಿಯಲ್ಲಿ ಅನೇಕ ಹೊಸ ಮಾದರಿಯ ಪತ್ರ ಕೋಶಗಳನ್ನು ಕಾಣಬಹುದು. ಅಲ್ಲದೆ ಕಚೇರಿಯಲ್ಲಿ ಬಳಕೆಯಲ್ಲಿರಬಹುದಾದ ಮೈಕ್ರೊಫಿಲಂಗಳಿಗಾಗಿ ಸರಿಯಾದ ಪತ್ರಕೋಶ ವ್ಯವಸ್ಥೆಯಾಗಬೇಕು.

ಕಚೇರಿಯ ವ್ಯವಸ್ಥಾಪನದಲ್ಲಿ ಇನ್ನೂ ಅನೇಕ ಸಲಕರಣೆಗಳ ಬಗ್ಗೆ ವ್ಯವಸ್ಥಾಪಕನ ಗಮನ ಹರಿಯಬೇಕು. ಲೇಖನಸಾಮಗ್ರಿ (ಸ್ಟೇಷನರಿ), ಶಬ್ದನಿರೋಧಕ ಸಾಧನಗಳು (ಉದಾ: ಮ್ಯಾಟಿಂಗ್ ಕಾರ್ಪೆಟ್), ವಿಭಾಗ ಗೋಡೆಗಳು, ಪುಸ್ತಕಗಳನ್ನು ಇಡಲು ಕಪಾಟುಗಳು, ಕಾಗದಗಳನ್ನು ಇಡುವ ತಟ್ಟೆಗಳು ಮುಂತಾದವು. ಇವುಗಳ ಆಯ್ಕೆಯಲ್ಲಿ ಸಹಾಯಕವಾಗಲೆಂದು ಅಮೆರಿಕದಲ್ಲಿ ಸಲಕರಣೆಗಳ ಬಗ್ಗೆ ಒಂದು ವಿಶದವಾದ ಪುಸ್ತಕವನ್ನೇ ಹೊರಡಿಸಲಾಗಿದೆ. ಈ ಪುಸ್ತಕದಿಂದ ಅವುಗಳ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು.

ಕಚೇರಿಯ ಬಳಕೆಗೆ ಬೇಕಾಗುವ ಲೇಖನಸಾಮಗ್ರಿ ಮತ್ತು ಅದರ ಸರಬರಾಜೂ ಬಹಳ ಮುಖ್ಯ. ಇವು ಗಾತ್ರದಲ್ಲಿ ಚಿಕ್ಕವಾದರೂ ಕಚೇರಿಯ ಕೆಲಸದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕಡಿಮೆ ವೆಚ್ಚದ ಸಾಮಗ್ರಿಯನ್ನು ಆಯ್ಕೆ ಮಾಡಿದಲ್ಲಿ ಕೆಲಸದಲ್ಲಿ ಕಡಿತ ಉಂಟಾಗಬಹುದು ಅಥವಾ ಗುಣಮಟ್ಟ ಕಡಿಮೆಯಾಗಬಹುದು. ಸೀಸದ ಕಡ್ಡಿ, ಮಸಿ, ಕ್ಲಿಪ್ಪುಗಳು ರಬ್ಬರಿನ ಹಿಡಿಕೆಗಳು, ಕಾಗದ, ಕಾರ್ಬನ್ ಪೇಪರ್, ಬೆರಳಚ್ಚು ಯಂತ್ರದ ಟೇಪು, ಲಕೋಟೆ, ಕ್ಯಾಲೆಂಡರು (ಗೋಡೆ ಮತ್ತು ಟೇಬಲ್), ಮೆಮೊ ಪುಸ್ತಕ ಇವು ಮುಖ್ಯವಾದ ಕೆಲವು ಮುಖ್ಯಾಧಿಕಾರಿ ಸರಿಯಾಗಿ ಎಚ್ಚರ ವಹಿಸಿದಲ್ಲಿ ಈ ಪದಾರ್ಥಗಳ ಬಳಕೆಯನ್ನು ನಿಯಂತ್ರಿಸಬಹುದು. ಇದರಿಂದ ಆಗುವ ಉಳಿತಾಯ ಅಲ್ಪವೇನಲ್ಲ. ಹವಣರಿತ ಧಾರಾಳವೇ ಇಲ್ಲಿ ಮುಖ್ಯ ಸೂತ್ರ.

**ಸಿಬ್ಬಂದಿ:** ಆಧುನಿಕ ಕಚೇರಿಯ ನಿರ್ವಹಣೆಯಲ್ಲಿ ಸಿಬ್ಬಂದಿಯ ಪಾತ್ರ ಅತ್ಯಂತ ಮುಖ್ಯವಾದದ್ದು. ಪ್ರತಿಯೊಬ್ಬ ಅಧಿಕಾರಿಯೂ ಸಿಬ್ಬಂದಿಯ ಜೊತೆಗೆ ಮತ್ತು ಅದರ ಮೂಲಕ ಕೆಲಸ ತೂಗಿಸುವ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಗಳಲ್ಲಿ ಕೆಲವು ಸಾಮಾನ್ಯ; ಮತ್ತೆ ಕೆಲವು ತಾಂತ್ರಿಕ ಕಚೇರಿಯ ಸಿಬ್ಬಂದಿ ಒಂದು ನಿರ್ದಿಷ್ಟ ಮಟ್ಟದಲ್ಲಿ ಕೆಲಸ ಮಾಡುವಂತೆ ಮಾಡುವ ಹೊಣೆ ಗುರುತರವಾದದ್ದು.

ನುರಿತ ಮತ್ತು ದೂರಾಲೋಚನೆಯ ಅಧಿಕಾರಿ ಸಿಬ್ಬಂದಿಯ ಆಯ್ಕೆಯಲ್ಲಿ ಹೆಚ್ಚು ಜಾಗರೂಕನಾಗಿರುತ್ತಾನೆ. ಅಭ್ಯರ್ಥಿಗಳ ಆಯ್ಕೆ ಮೊಟ್ಟಮೊದಲನೆಯದಾಗಿ ಬರವಣಿಗೆಯ ಪರೀಕ್ಷೆಯ ಮೂಲಕ ಪ್ರಾರಂಭವಾಗುತ್ತದೆ. ಇದರಲ್ಲಿ ತೇರ್ಗಡೆಯಾದವರನ್ನು ಮುಂದೆ ಸಂದರ್ಶನಕ್ಕೆ ಕರೆಯಲಾಗುವುದು. ಅನಂತರ ಆಯ್ಕೆಯಾದ ಅಭ್ಯರ್ಥಿಗಳನ್ನು ದೇಹಾರೋಗ್ಯ ಪರೀಕ್ಷೆಗೆ ಒಳಪಡಿಸಲಾಗುವುದು. ಹೀಗೆ ಎಲ್ಲ ವಿಷಯಗಳಲ್ಲೂ ಸರಿಯೆಂದು ಕಂಡು ಬಂದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಮೇಲೆ ಅಭ್ಯರ್ಥಿಯ ಕೆಲಸದ ಬಗ್ಗೆ ಹಿರಿಯ ಅಧಿಕಾರಿಯಾಗಲಿ ಆತನ ಕೆಳಗಿನವರಾಗಲಿ ಹಿತವಚನ ನೀಡುವರು. ಅದೂ ಅಲ್ಲದೆ ಮುಂದೆ ಕೆಲವು ಕಾಲ ಅಭ್ಯರ್ಥಿಯ ನಡೆನುಡಿ, ಆತ ಕೆಲಸ ಮಾಡುವ ರೀತಿ-ಇವನ್ನು ಅವರು ನೋಡುತ್ತಿರುತ್ತಾರೆ. ಹೊಸ ಉದ್ಯೋಗಿಯಾದವನು ಉತ್ತಮ ಕೆಲಸದ ಮೂಲಕ ತನ್ನ ಮೇಲಧಿಕಾರಿಯ ಮೇಲೆ ಪ್ರಭಾವ ಬೀರಬೇಕು ಮತ್ತು ತನ್ನ ಕೆಲಸಕ್ಕೆ ಅಗತ್ಯವಾದ ಉತ್ತಮ ಅಂಶಗಳನ್ನು ಕಲಿತುಕೊಳ್ಳಲು ಪ್ರಯತ್ನಿಸಬೇಕು.

ಕೆಲವು ಕಚೇರಿಗಳಲ್ಲಿ ಹೊಸ ಉದ್ಯೋಗಿಗಳಿಗೆ ವಿಶೇಷ ಶಿಕ್ಷಣವನ್ನು ಸಹಕೊಡುತ್ತಾರೆ. ಈ ರೀತಿಯ ಶಿಕ್ಷಣ ಕೆಲವು ವಾರಗಳಿಂದ ಹಿಡಿದು ಹಲವು ತಿಂಗಳುಗಳವರೆಗೆ ನಡೆಯಬಹುದು. ಈ ಸಮಯದಲ್ಲಿ ಆತನಿಗೆ ಕೆಲಸದ ಬಗ್ಗೆಯಲ್ಲದೆ ಆತನಿರುವ ಸಂಸ್ಥೆಯ ಮತ್ತು ಅದರ ನಿರ್ದಿಷ್ಟ ಗುರಿಗಳ ಬಗ್ಗೆಯೂ ಶಿಕ್ಷಣ ಕೊಡಲಾಗುವುದು. ಈ ಎಲ್ಲ ತರಬೇತಿಗಳು ಸಾಮಾನ್ಯವಾಗಿ ಹಿರಿಯಧಿಕಾರಿಯ ನೇತೃತ್ವದಲ್ಲಿ ನಡೆಯುತ್ತದೆ.

ಒಬ್ಬ ಹೊಸ ಉದ್ಯೋಗಿ ಶಾಲೆಯಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆದಿದ್ದರೂ ಅದರ ಹೆಚ್ಚು ಭಾಗ ತನ್ನ ಕೆಲಸಕ್ಕೆ ಪೂರ್ತಿ ಸಹಾಯಕವಾಗದೆ ಇರಬಹುದು. ಆದ್ದರಿಂದ ಕೆಲಸಕ್ಕೆ ಸೇರಿದ ಮೇಲೆ ಆ ಕೆಲಸದ ಬಗ್ಗೆ ಹೆಚ್ಚು ಹೆಚ್ಚಾಗಿ ವಿಷಯ ತಿಳಿದುಕೊಳ್ಳಲು ಆತ ಪ್ರಯತ್ನಪಡಬೇಕು. ಅದೂ ಅಲ್ಲದೆ ಇಂದು ಕಚೇರಿಯ ಕೆಲಸಕ್ಕೆ ಅಗತ್ಯವಾದ ಶಿಕ್ಷಣ ನೀಡುವ ವ್ಯವಸ್ಥಾಪಕ ಶಿಕ್ಷಣಸಂಸ್ಥೆಗಳು (ಮ್ಯಾನೇಜ್‌ಮೆಂಟ್ ಇನ್ಸ್‌ಟಿಟ್ಯೂಟ್) ಇವೆ. ಈ ಶಿಕ್ಷಣ ಪಡೆದ ಅಭ್ಯರ್ಥಿಗಳು ಕಚೇರಿಗೆ ದೊರಕಿದಲ್ಲಿ ಅವರಿಗೆ ಹೆಚ್ಚಿನ ಶಿಕ್ಷಣ ಕೊಡಿಸುವ ಕೆಲಸ ತಪ್ಪುತ್ತದೆ. ಮತ್ತು ಅವರು ಕೆಲಸಕ್ಕೆ ಬಹಳ ಬೇಗ ಹೊಂದಿಕೊಂಡು ಹೋಗುತ್ತಾರೆ. ವಾಣಿಜ್ಯ ಮತ್ತು ವ್ಯವಸ್ಥಾಪನ ವಿಷಯಗಳಲ್ಲಿ ತರಬೇತಿ ಹೊಂದಿದವರನ್ನೆ ಆಯ್ಕೆಮಾಡುವುದು ಈಗ ಸಾಮಾನ್ಯವಾಗುತ್ತಿದೆ.

ಕಚೇರಿಯ ಸಿಬ್ಬಂದಿಯ ಬಗ್ಗೆ ಇರುವ ಸಮಸ್ಯೆಗಳಲ್ಲಿ ಮುಖ್ಯವಾದವುಗಳೆಂದರೆ, ಅವರ ಕೆಲಸದ ಕಾಲ, ರಜಾದಿನಗಳು, ವಿರಾಮಕಾಲ, ಶಿಸ್ತು, ಉಡುಪು, ಬಡ್ತಿ ಮತ್ತು ಪ್ರತಿಫಲ. ಇವುಗಳಲ್ಲಿರುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಗ್ರಂಥಾಲಯ ಉಪಾಹಾರ ಮತ್ತು ಭೋಜನಗೃಹ ಮತ್ತು ಕ್ರೀಡಾ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ಕೊಡಬೇಕಾಗಬಹುದು ಅಥವಾ ಅವನ್ನು ಸ್ಥಾಪಿಸಲು ತಾನೇ ಪ್ರಯತ್ನ ಮಾಡಬಹುದು. ಅದೂ ಅಲ್ಲದೆ ಸಿಬ್ಬಂದಿಯ ಜನರ ಆರೋಗ್ಯದ ಬಗ್ಗೆಯೂ ಗಮನ ಹರಿಸಬೇಕಾಗುತ್ತದೆ. ಇವುಗಳಿಂದಾಗಿ ಮೇಲೆ ಹೇಳಿದ ಸಮಸ್ಯೆಗಳು ಹೆಚ್ಚುಕಡಿಮೆ ಪರಿಹಾರವಾಗುತ್ತವೆ. ಇವೇ ಅಲ್ಲದೆ ಇಂದಿನ ಪ್ರಪಂಚದಲ್ಲಿ ಕಾಣಬರುವ ಮತ್ತೊಂದು ಸಮಸ್ಯೆ ಎಂದರೆ ನೌಕರರ ಸಂಘ. ಅಧಿಕಾರಿ ಅದರೊಡನೆಯೂ ಸರಿಯಾಗಿ ವರ್ತಿಸಿ ಅದರ ಸಹಕಾರ ಗಳಿಸಬೇಕು.

ಸಿಬ್ಬಂದಿಯಿಂದ ಸಂಪೂರ್ಣ ಸಹಕಾರ ಪಡೆಯಲು ಮತ್ತು ಕಚೇರಿಯ ಕೆಲಸದಲ್ಲಿ ಹೆಚ್ಚು ಗಮನ ಕೊಡುವಂತೆ ಮಾಡಲು ಸಿಬ್ಬಂದಿವರ್ಗದ ಮನಸ್ಸನ್ನು ಅರಿಯಬೇಕು, ಅವರಲ್ಲಿ ಕೆಲಸದ ಬಗ್ಗೆ, ಸಂಸ್ಥೆಯ ಬಗ್ಗೆ ಅಭಿಮಾನ ಮೂಡುವಂತೆ ಮಾಡಬೇಕು ಇದಕ್ಕಾಗಿ ಸಂಸ್ಥೆ ತನ್ನದೇ ಆದ ನಿಯತಕಾಲಿಕ ಪ್ರಕಟಣೆಯ ಮೂಲಕ ಸಂಸ್ಥೆಯ ಸಾಧನೆ ಮತ್ತು ಮುಂದಿನ ಬೆಳೆವಣಿಗೆಗಳ ಬಗ್ಗೆ ಮಾಹಿತಿ ನೀಡಬಹುದು. ಇದನ್ನು ಓದುವುದರಿಂದ ಉದ್ಯೋಗಿ ಹೆಚ್ಚು ಆಕರ್ಷಿತನಾಗಿ ಸಂಸ್ಥೆಗಾಗಿ ನಿಷ್ಠೆಯಿಂದ ದುಡಿಯುತ್ತಾನೆ.

ಸಿಬ್ಬಂದಿಯ ಜನಕ್ಕೆ ಸಂಬಳವೇ ಅಲ್ಲದೆ ಅವರಿಗೆ ಅನೇಕ ಉತ್ತೇಜಕಗಳನ್ನೂ ಕೊಡಬಹುದು. ಸಂಸ್ಥೆಯ ಲಾಭದಲ್ಲಿ ಪಾಲು, ನಿವೃತ್ತಿವೇತನ, ಹೆಚ್ಚು ಶಿಕ್ಷಣಕ್ಕೆ ಸಹಾಯ, ಉಳಿತಾಯ ಯೋಜನೆಗಳಿಗೆ ನೆರವು, ವೈದ್ಯಕೀಯ ಸಹಾಯ ಮುಂತಾದವು ಕೆಲವು ಉತ್ತೇಜಕಗಳು.

ಇಷ್ಟೇ ಅಲ್ಲ, ಕಚೇರಿಯ ಮುಖ್ಯಸ್ಥ ತನ್ನ ಉದ್ಯೋಗಿಗಳಿಂದಲೂ ಸಲಹೆಗಳನ್ನು ಸ್ವೀಕರಿಸಲು ಮುಂದಾಗುತ್ತಾನೆ. ಹೀಗೆ ಉದ್ಯೋಗಿಗಳು ನೀಡಿದ ಸಲಹೆಗಳ ಉತ್ತಮವಾಗಿದ್ದು, ಕೆಲಸಕ್ಕೆ ಸಹಾಯಕವಾಗಿದ್ದ ಪಕ್ಷದಲ್ಲಿ ಮತ್ತು ಖರ್ಚನ್ನು ಕಡಿಮೆ ಮಾಡುವಲ್ಲಿ ಸಹಾಯ ಮಾಡಿದಲ್ಲಿ ಸಲಹೆ ನೀಡಿದ ವ್ಯಕ್ತಿಗೆ ಬಹುಮಾನ ನೀಡಬಹುದು. ಇದರಿಂದಾಗಿ ಸಿಬ್ಬಂದಿ ವರ್ಗದಲ್ಲಿ ಒಂದು ರೀತಿಯ ಕಾರ್ಯಪರತೆಯುಂಟಾಗುತ್ತದೆ.

ಕಚೇರಿಯ ವ್ಯವಸ್ಥೆಯ ಮುಖ್ಯಸ್ಥನ ಅತಿ ಕ್ಲಿಷ್ಟ ಸಮಸ್ಯೆಯೆಂದರೆ ಮಧ್ಯಮ ವರ್ಗದ ಅಧಿಕಾರಿಗಳ ಆಯ್ಕೆ, ಶಿಕ್ಷಣ ಮತ್ತು ಕಾರ್ಯದಲ್ಲಿ ಅವರ ಹೊಂದಾವಣೆ. ಅನೇಕ ಸಮಯಗಳಲ್ಲಿ ಸಾಮಾನ್ಯವಾಗಿ ಉತ್ತಮ ಕೆಲಸಗಾರ ಉತ್ತಮ ಆಡಳಿತಗಾರನಾಗಿರಲು ಸಾಧ್ಯವಿಲ್ಲ. ಅದಕ್ಕೆ ಆತನಲ್ಲಿ ಕೆಲವು ವಿಶೇಷ ಗುಣಗಳಿರಬೇಕು. ಇವು ಆತನಲ್ಲಿ ಹುಟ್ಟಿನಿಂದ ಬಂದಿರಬಹುದು ಅಥವಾ ಬೆಳೆಸಿಕೊಂಡಂಥವಾಗಿರಬಹುದು. ಅತಿ ಮುಖ್ಯವಾದದ್ದೆಂದರೆ ಉದ್ಯೋಗಿಗಳೊಂದಿಗೆ ಹೊಂದಿಕೊಂಡು ನಡೆದು ಅವರಿಂದ ಕೆಲಸ ತೆಗೆದುಕೊಳ್ಳುವುದು. ಈ ವಿಷಯದಲ್ಲಿ ಮಧ್ಯಸ್ಥ ಆಡಳಿತಗಾರನ ಕೆಲಸ ಬಹಳ ಮುಖ್ಯವಾದದ್ದು.

ಕಚೇರಿಯ ಕಾರ್ಯಾಚರಣೆಯಲ್ಲಿ ಮುಖ್ಯಸ್ಥನ ಸ್ಥಾನ ಅತ್ಯಂತ ಪ್ರಮುಖವಾದದ್ದು. ಕೆಲಸದ ಮುನ್ನಡೆ ಬಹುತೇಕ ಆತನ ಬುದ್ಧಿಶಕ್ತಿ, ನಡೆವಳಿಕೆ ಮತ್ತು ಕಾರ್ಯದಕ್ಷತೆಯನ್ನೇ ಅವಲಂಬಿಸಿರುತ್ತದೆ. ಆತನೇನಾದರೂ ಈ ವಿಷಯಗಳಲ್ಲಿ ಶಕ್ತಿಹೀನನಾಗಿದ್ದಲ್ಲಿ ಕೆಲಸ ಸುಗಮವಾಗಿ ನಡೆಯದೆ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗಬಹುದು.

**ಆಡಳಿತದಲ್ಲಿ ಮಿತವ್ಯಯ:** ಕಚೇರಿಯ ವೆಚ್ಚವಿತರಣೆ ಬಹಳ ಮುಖ್ಯ ಅಂಶ. ಒಂದು ಸಂಸ್ಥೆಯ ಲಾಭ ಹೆಚ್ಚಿಸಲು ಹೆಚ್ಚುಗಳಿಕೆಯಂತೆ ಮಿತವ್ಯಯವೂ ಮುಖ್ಯ. ಕಚೇರಿಯ ಮಿತವ್ಯಯದ ಬಗ್ಗೆ ನಡೆಯುತ್ತಿರುವ ಸಂಶೋಧನೆ ಇಂದು ನಿನ್ನೆಯದಲ್ಲ. ಇದನ್ನು ಸು. 3–4 ಸಾವಿರ ವರ್ಷಗಳಿಂದಲೂ ನಡೆಸಲಾಗುತ್ತಿದೆ. ಮಿತವ್ಯಯದ ಅಂಶಗಳು ಅನೇಕಾನೇಕ. ಅವುಗಳಲ್ಲಿ ಪ್ರಮುಖವಾದವನ್ನು ಇಲ್ಲಿ ಕೊಡಲಾಗಿದೆ.

**ಭೌತಿಕ ಅಂಶಗಳು:** ಮಿತವ್ಯಯದ ಪ್ರಶ್ನೆ ಬಂದಾಗ ದೂರಾಲೋಚನೆ ಇಲ್ಲದ ಅಧಿಕಾರಿಗಳು ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಲು ಅಥವಾ ಅವರ ಸಂಬಳವನ್ನು ಕಡಿಮೆ ಮಾಡಲು ಸಾಮಾನ್ಯವಾಗಿ ಪ್ರಯತ್ನಿಸುತ್ತಿರುತ್ತಾರೆ. ಇದು ಒಂದು ರೀತಿಯ ತಪ್ಪು ಕಲ್ಪನೆ. ಬೇರೆಲ್ಲ ವಿಧಾನಗಳೂ ವಿಫಲವಾದಾಗ ಕೊನೆಯದಾಗಿ ಮಾತ್ರವೇ ಈ ಕ್ರಮ ಕೈಕೊಳ್ಳಬೇಕು. ಮೊಟ್ಟಮೊದಲನೆಯದಾಗಿ, ಕಚೇರಿಯ ಕೆಲಸವನ್ನು ವಿಮರ್ಶಿಸಿದಾಗ ಕಾಣುವ ಅಂಶಗಳೆಂದರೆ ಉದ್ಯೋಗಿಗಳ ವಿಳಂಬ ವರ್ತನೆ, ಕಾರ್ಯದಲ್ಲಿ ಆಲಸ್ಯ ಮತ್ತು ಪ್ರಯೋಜನಕ್ಕೆ ಬಾರದ ಕೆಲಸದ ನಿರ್ವಹಣೆ. ಇವನ್ನು ತಪ್ಪಿಸಿದಲ್ಲಿ ಕಚೇರಿಯ ಕೆಲಸ ಸುಗಮವಾಗಿ ಮತ್ತು ಕಾಲಕ್ಕೆ ತಕ್ಕಂತೆ ಮುಂದುವರಿಯುತ್ತದೆ. ಸುವ್ಯವಸ್ಥಿತ ಕಚೇರಿಗಳಲ್ಲಿ. ಅದರಲ್ಲೂ ಕೈಗಾರಿಕಾ ಕಚೇರಿಗಳಲ್ಲಿ, ಇವನ್ನು ಕಾಣಲು ಸಾಧ್ಯವೇ ಇಲ್ಲ. ಈ ರೀತಿಯ ಕಾಲನಷ್ಟವನ್ನು ತಪ್ಪಿಸುವ ಹೊಣೆ ಅಧಿಕಾರಿಯದಕ್ಷತೆಯನ್ನು ಅವಲಂಬಿಸಿರುತ್ತದೆ.

ಕಚೇರಿಯ ಕೆಲಸದಿಂದ ಆಗುವ ಬಳಲಿಕೆಯನ್ನು ಆದಷ್ಟು ಕಡಿಮೆ ಮಾಡಿದಲ್ಲಿ ಕೆಲಸಕ್ಕೆ ತಪ್ಪಿಸಿಕೊಳ್ಳುವುದು, ಕಡಿಮೆ ಕೆಲಸ ಮಾಡುವುದು, ಕೆಳದರ್ಜೆಯ ಕೆಲಸ ಮಾಡುವುದು ಮುಂತಾದವನ್ನು ತಪ್ಪಿಸಬಹುದು. ಕೆಲಸವನ್ನು ಸರಳ ಮತ್ತು ಸುಲಭಗೊಳಿಸುವುದರಿಂದ ಮಾನಸಿಕ ಮತ್ತು ದೈಹಿಕ ಬಳಲಿಕೆಯನ್ನು ಕಡಿಮೆ ಮಾಡಬಹುದು. ಕಚೇರಿಯಲ್ಲಿ ಹಿತಕರವಾದ ಬೆಳಕಿನ ವ್ಯವಸ್ಥೆ ಇರಬೇಕು. ಇದು ಉದ್ಯೋಗಿಯ ದೈಹಿಕ ಮತ್ತು ಮಾನಸಿಕ ಶ್ರಮವನ್ನು ಬಹಳ ಕಡಿಮೆ ಮಾಡುತ್ತದೆ. ಸರಿಯಾದ ಬೆಳಕಿನ ವ್ಯವಸ್ಥೆಯಿಂದ ಉತ್ಪಾದನೆಯನ್ನು ಶೇ. 20ರಷ್ಟು ಹೆಚ್ಚಿಸಬಹುದು ಎಂಬುದನ್ನು ಸಂಶೋಧನೆಗಳಿಂದ ಸ್ಥಿರಪಡಿಸಲಾಗಿದೆ. ಬೆಳಕಿನ ವ್ಯವಸ್ಥೆಯೇ ಅಲ್ಲದೆ ಗೋಡೆಗಳಿಗೆ ಹಚ್ಚುವ ಬಣ್ಣವೂ ಕಣ್ಣುಗಳಿಗೆ ಒಂದು ರೀತಿಯ ತಂಪನ್ನು ನೀಡಬೇಕು. ಕಚೇರಿಯಲ್ಲಿ ಗಾಳಿಗೆ ಹೆಚ್ಚು ಅವಕಾಶವಿರಬೇಕು. ಹೀಗಿದ್ದಲ್ಲಿ ಉದ್ಯೋಗಿಗಳಿಂದ ಹೆಚ್ಚು ಕೆಲಸ ಪಡೆಯಬಹುದು.

ಗದ್ದಲಮಯ ಕಚೇರಿಯಲ್ಲಿ ಕೆಲಸ ಮಂದಗತಿಯಲ್ಲಿ ಅಥವಾ ವಕ್ರರೀತಿಯಲ್ಲಿ ಸಾಗಬಹುದು, ಶಬ್ದ ಆದಷ್ಟು ಕಡಿಮೆಯಿರುವಂತೆ ಪ್ರಯತ್ನಿಸಬೇಕು. ಸುಮಧುರ ಸಂಗೀತ ಕೆಲಸಗಾರನ ಕೆಲಸದ ಗತಿಯನ್ನು ಹೆಚ್ಚಿಸುತ್ತದೆ ಎಂಬ ವಿಷಯವನ್ನು ಕಂಡುಕೊಳ್ಳಲಾಗಿದೆ. ಆದ್ದರಿಂದ ಮಂದವಾದ, ಮಧುರವಾದ ಹಿನ್ನೆಲೆ ಸಂಗೀತವಿದ್ದಲ್ಲಿ ಒಳ್ಳೆಯದೆಂದು ಭಾವಿಸಲಾಗಿದೆ.

ಇದೇ ಅಲ್ಲದೆ ಉದ್ಯೋಗಿಗೆ ಕೊಡುವ ಪೀಠೋಪಕರಣಗಳು ಸುಖಪ್ರದವಾಗಿದ್ದು ಕೆಲಸ ಮಾಡಲು ಸಹಾಯಕವಾಗಿರಬೇಕು. ಕೆಲಸದ ಮಧ್ಯೆ ಸ್ವಲ್ಪ ವಿರಾಮ ನೀಡಿದಲ್ಲಿ ಬಳಲಿಕೆಯನ್ನು ನಿವಾರಿಸಿಕೊಂಡು ಮತ್ತೆ ಹೆಚ್ಚು ದಕ್ಷತೆಯಿಂದ ಕೆಲಸ ಮುಂದುವರಿಸಲು ಸಾಧ್ಯವಾಗುತ್ತದೆ.

**ಕೇಂದ್ರೀಕರಣ:** ಕಚೇರಿಯ ಕೆಲಸವನ್ನು ಕೇಂದ್ರೀಕರಿಸುವುದರಿಂದ ಅನೇಕ ರೀತಿಯಲ್ಲಿ ಮಿತವ್ಯಯ ಸಾಧಿಸಬಹುದು. ಇಂದಿನ ಕಚೇರಿಗಳಲ್ಲಿ ಹೆಚ್ಚುಹೆಚ್ಚಾಗಿ ಯಂತ್ರಗಳನ್ನು ಉಪಯೋಗಿಸುತ್ತಿರುವುದರಿಂದ ಕೆಲಸದ ಕೇಂದ್ರೀಕರಣ ಹೆಚ್ಚಾಗುತ್ತಿದೆ. ಹೆಚ್ಚಾಗಿ ಕೇಂದ್ರೀಕರಣವಿರುವ ವಿಭಾಗಗಳೆಂದರೆ ಲೆಕ್ಕದ ವಿಭಾಗ, ಹಣಕಾಸು ವಿಭಾಗ, ಸಿಬ್ಬಂದಿ ವಿಭಾಗ, ಕೊಳ್ಳುವ ಮತ್ತು ಮಾರುವ ವಿಭಾಗ, ಮತ್ತು ಬೆರಳಚ್ಚು ವಿಭಾಗ, ಇದರಿಂದಾಗಿ ಆ ವಿಭಾಗಗಳಲ್ಲಿ ಕೆಲಸ ಮಾಡುವವರು ಹೆಚ್ಚು ನಿಷ್ಣಾತರಾಗಿ ಚೆನ್ನಾಗಿ ಮತ್ತು ಸುಗಮವಾಗಿ ಕೆಲಸ ಮಾಡಲು ಸಹಾಯವಾಗುತ್ತದೆ. ಅದೂ ಅಲ್ಲದೆ ಕಾಲವಿಳಂಬ ಕಡಿಮೆಯಾಗುತ್ತದೆ. ಕಡಿಮೆ ಜನಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದರಿಂದ ಖರ್ಚಿನ ಉಳಿಕೆಯಾಗುತ್ತದೆ. ಮುಖ್ಯಸ್ಥನಿಗೆ ಆವಶ್ಯವಾದ ಮತ್ತು ರಹಸ್ಯ ಕಲಾಪಗಳ ವಿಭಾಗಗಳನ್ನು ಬಿಟ್ಟು ಉಳಿದೆಲ್ಲ ವಿಭಾಗಗಳನ್ನು ಕೇಂದ್ರೀಕೃತಗೊಳಿಸಿದಲ್ಲಿ ಮಿತವ್ಯಯ ಹೆಚ್ಚು ಸಾಧಿಸಬಹುದು.

ಕಚೇರಿಯ ಸಲಕರಣೆಗಳ ಸರಿಯಾದ ಉಪಯೋಗದಿಂದಲೂ ಮಿತವ್ಯಯ ಸಾಧ್ಯ. ಹೆಚ್ಚು ಬೆಲೆಯ ಯಂತ್ರಗಳು ಬೇಕೇ ಆಗಿದ್ದ ಪಕ್ಷದಲ್ಲಿ ಮಾತ್ರ ಅವನ್ನು ಕೊಳ್ಳಬೇಕು. ಇಲ್ಲದಿದ್ದಲ್ಲಿ ಅವನ್ನು ಬಾಡಿಗೆಯ ಮೇಲಾಗಲಿ ಬೇರೊಬ್ಬರೊಡನೆ ಸಹ ಭಾಗಿತ್ವದಲ್ಲಿಯಾಗಲಿ ಪಡೆದು ಉಪಯೋಗಿಸಬಹುದು. ಇದರಿಂದಾಗಿ ಆರಂಭಿಕ ಖರ್ಚಿನ ಉಳಿತಾಯವಾಗುತ್ತದೆ. ಮುಂದೆ ಸಂಸ್ಥೆ ಚೆನ್ನಾಗಿ ಬೆಳೆದಾಗ ಅಂಥ ಭಾರಿ ಬೆಲೆಯ ಯಂತ್ರಗಳನ್ನು ಕೊಳ್ಳಬಹುದು.

ಸಾಮಗ್ರಿ ಹಂಚಿಕೆಯ ಕಾರ್ಯದ ಕೇಂದ್ರೀಕರಣ, ಸಣ್ಣ ಸಣ್ಣ ಮೊತ್ತದಲ್ಲಿ ಅದರ ಹಂಚಿಕೆ ಮತ್ತು ಸೂಕ್ತವಾದ ನಮೂನೆಗಳ (ಫಾರಂ) ಬಳಕೆ–ಇವುಗಳಿಂದ ಶ್ರಮವೂ ಸಮಯವೂ ಹಣವೂ ಉಳಿತಾಯವಾಗುತ್ತವೆ. ಅನಾವಶ್ಯಕ ಕ್ರಿಯೆಯನ್ನು ತಪ್ಪಿಸುವ ನಮೂನೆಗಳು ಕಚೇರಿಯ ಕಚ್ಚಾಸಾಮಗ್ರಿ ಎಂಬುದು ಸುಳ್ಳಲ್ಲ. ಇವು ಸರಳವೂ ಪರಿಷ್ಕೃತವೂ ಆಗಿದ್ದು, ಉಪಯುಕ್ತದೃಷ್ಟಿಯಿಂದ ಇವನ್ನು ಅಳವಡಿಸಿದ್ದಾದರೆ ಸಾರ್ಥಕವೂ ಮಿತವ್ಯಯಕರವೂ ಆಗಿರುತ್ತವೆ. (ಕೆ.ಜಿ.ಆರ್.)

**ಕಝಾಕ್‌ಸ್ತಾನ :** ಹಿಂದಿನ ಸೋವಿಯತ್ ಒಕ್ಕೂಟಕ್ಕೆ ಸೇರಿದ್ದ 15 ರಾಜ್ಯಗಳಲ್ಲಿ ಒಂದು. 1991ರಲ್ಲಿ ಸ್ವತಂತ್ರ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂದಿತು. ಮಧ್ಯ ಏಷ್ಯದ ಉತ್ತರ ಭಾಗದಲ್ಲಿರುವ ಇದನ್ನು ಉತ್ತರದಲ್ಲಿ ರಷ್ಯ, ಪೂರ್ವಭಾಗದಲ್ಲಿ ಚೀನ, ದಕ್ಷಿಣದಲ್ಲಿ ಕಿರ್ಗಿಸ್ತಾನ ಸಮುದ್ರ ಹಾಗೂ ತುರ್ಕಮೇನಿಸ್ತಾನದ ಕೆಲವು ಪ್ರದೇಶಗಳು ಸುತ್ತುವರಿದಿವೆ.

ಕಝಾಕ್‌ಸ್ತಾನ ಗಾತ್ರದಲ್ಲಿ ಸಾಕಷ್ಟು ವಿಶಾಲವಾದ ರಾಜ್ಯ. ಸಮಶೀತೋಷ್ಣವಲಯದ ಹುಲ್ಲುಗಾವಲಿನಿಂದ (ಸ್ಟೆಪ್ಪಿಸ್) ಕೂಡಿರುವ ಈ ರಾಷ್ಟ್ರ ಏರಿಳಿತಗಳಿಂದ ಕೂಡಿರುವ ಮೈದಾನಗಳು, ಕಣಿವೆಗಳು ಹಾಗೂ ಪ್ರಸ್ಥಭೂಮಿಗಳನ್ನು ಹೊಂದಿದೆ. ಅಕ್ಷಾಂಶ $44^0 55'$ ಉ. ಮತ್ತು ರೇ. $50^0 90'$ ಪೂ.ದಲ್ಲಿ ವಿಸ್ತರಿಸಿರುವ ಈ ರಾಷ್ಟ್ರ 2,717,300 ಚ.ಕಿಮೀ ಭೌಗೋಳಿಕ ಪ್ರದೇಶವನ್ನು ಹೊಂದಿದೆ. ಇದರಲ್ಲಿ 1894 ಚ.ಕಿಮೀ ಕ್ಯಾಸ್ಪಿಯನ್ ಸಮುದ್ರ ಕರಾವಳಿ ತೀರವನ್ನು ಹೊಂದಿದೆ. ರಾಜಧಾನಿ ಆಸ್ತಾನ (ಜನಸಂಖ್ಯೆ 814,401 (2014)). ಕಝಾಕ್‌ಸ್ತಾನದ ಜನಸಂಖ್ಯೆ 17,948,816 (2014).

ಭೂ ಸಂಪನ್ಮೂಲಗಳು ಕಝಾಕ್‌ಸ್ತಾನದ ಕೃಷಿ ಅಭಿವೃದ್ಧಿಗೆ ಪೂರಕವಾಗಿಲ್ಲ. ಅಧಿಕ ಪ್ರಮಾಣದ ಮಣ್ಣಿನ ಸವಕಳಿ, ಅಲ್ಪಮಳೆ, ಒಣಹವೆ, ಅಲ್ಕಲೈನ್‌ನಿಂದ ಕೂಡಿರುವ ಅಂತರ್ಜಲ ಮೊದಲಾದ ಅಂಶಗಳಿಂದ ಕೃಷಿ ಭೂಮಿ ಸ್ವಾಭಾವಿಕ ಸತ್ತ್ವವನ್ನು ಕಳೆದುಕೊಂಡಿದೆ. ಈ ಕಾರಣದಿಂದ ಸರ್ಕಾರ ವಿಶೇಷ ಮಣ್ಣಿನ ಸಂರಕ್ಷಣೆಯ ಕಾರ್ಯವಿಧಾನಗಳನ್ನು ರೂಪಿಸುತ್ತಿದೆ. ಈ ರಾಷ್ಟ್ರ ಮಧ್ಯ ಸ್ಟೆಪಿ ಹುಲ್ಲುಗಾವಲಿನಲ್ಲಿದ್ದು, ಈ ವಲಯ ಸೈಬೀರಿಯದವರೆಗೆ ಹಂಚಿಕೆಯಾಗಿದೆ. ಈ ಭಾಗದಲ್ಲಿ ಸು. 11,000 ಸಣ್ಣಪುಟ್ಟ ನದಿಗಳು, 7,000 ಸರೋವರಗಳು ಹಾಗೂ ಜಲಾಶಯಗಳಿವೆ. ಅಗಾಧವಾದ ಜಲಸಂಪತ್ತು ಕೃಷಿಗೆ ಮತ್ತು ಶಕ್ತಿ ಸಂಪನ್ಮೂಲವಾಗಿ ಹಾಗೂ ನೌಕಾಯಾನಕ್ಕೆ ಬಳಸಿಕೊಳ್ಳಲಾಗುತ್ತಿದೆ. ಈ ಭಾಗದ ಕೆಲವು ಪ್ರಮುಖ ನದಿಗಳು: ಇರ್‌ಟಿಶ್ (1700 ಕಿಮೀ), ಇಷ್ಯ (1400 ಕಿಮೀ), ಯುರಲ್ (1082 ಕಿಮೀ), ಸಿರ್‌ದರ್ಯ (1400 ಕಿಮೀ), ಲೀ (815 ಕಿಮೀ), ಚೂ (800 ಕಿಮೀ), ಟೊಬೊಲ್ (800 ಕಿಮೀ) ಮತ್ತು ನುರು (978 ಕಿಮೀ).

ಸ್ವಾಭಾವಿಕ ಸಂಪನ್ಮೂಲಗಳ ನಿಕ್ಷೇಪಗಳನ್ನು ಸಾಕಷ್ಟು ಪ್ರಮಾಣದಲ್ಲಿ ಈ ದೇಶ ಹೊಂದಿದೆ. ಕ್ರೋಮಿಯ, ತಾಮ್ರ, ಸೀಸ ಮತ್ತು ಸತು, ಕಲ್ಲಿದ್ದಲು, ಪೆಟ್ರೋಲ್, ಚಿನ್ನದ ನಿಕ್ಷೇಪಗಳು ಪತ್ತೆಯಾಗಿವೆ. ಪೆಟ್ರೋಲ್ ಹಾಗೂ ಸ್ವಾಭಾವಿಕ ಅನಿಲದ ನಿಕ್ಷೇಪ ಸು. 14 ಕಣಿವೆಗಳಲ್ಲಿ ಹಂಚಿಕೆಯಾಗಿರುವುದನ್ನು ಪತ್ತೆಮಾಡಲಾಗಿದೆ. ಅವುಗಳಲ್ಲಿ 160 ಪ್ರದೇಶಗಳಲ್ಲಿ ಇಂಧನ ನಿಕ್ಷೇಪ ಉತ್ಕೃಷ್ಟವಾದುದು ಎಂದು ತಿಳಿದುಬಂದಿದೆ. ಚಿನ್ನದ ನಿಕ್ಷೇಪವನ್ನು ಸು. 300 ಪ್ರದೇಶಗಳಲ್ಲಿ ಶೋಧಿಸಲಾಗಿದ್ದು ಅವುಗಳಲ್ಲಿ 173 ಪ್ರದೇಶಗಳಲ್ಲಿ ಉತ್ತಮ ದರ್ಜೆಯ ನಿಕ್ಷೇಪಗಳಿವೆ. ಪ್ರಸ್ತುತ ಪ್ರಪಂಚದ ಶೇ. 1 ರಷ್ಟನ್ನು ಗಣಿಗಾರಿಕೆಯಿಂದ ಹೊರತೆಗೆಯಲಾಗುತ್ತಿದೆ.




ಕಜ್ಞಾಕ್‌ಸ್ತಾನ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ದೇಶ. ಕರಗಂಡ ಇಲ್ಲಿನ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ಪ್ರದೇಶ. ಇದು ಸು. 3,000 ಚ.ಕಿಮೀ ವಿಸ್ತೀರ್ಣದಲ್ಲಿ ಹರಡಿದೆ. ಇಲ್ಲಿ 34,000 ಮಿ.ಟನ್. ನಿಕ್ಷೇಪವಿದ್ದು ಅದರಲ್ಲಿ 31,000 ಮಿ.ಟನ್ ಉತ್ತಮ ದರ್ಜೆಯ ಆಂತ್ರಸೈಟ್ ಮತ್ತು ಬಿಟುಮಿನಸ್ ಕಲ್ಲಿದ್ದಲು, 3,000 ಮಿ.ಟನ್ ದ್ವಿತೀಯ ದರ್ಜೆಯ ಬಿಟುಮಿನಸ್ ಮತ್ತು ಲಿಗ್ನೈಟ್ ಕಲ್ಲಿದ್ದಲು ದೊರೆಯುತ್ತದೆ. ಇಲ್ಲಿನ ಕಲ್ಲಿದ್ದಲಿನ ನಿಕ್ಷೇಪವು ಪ್ರಪಂಚದ ಶೇ. 3.5 ರಷ್ಟು ಹಾಗೂ ವಿಶ್ವದ 9ನೆಯ ಅತಿದೊಡ್ಡ ಕಲ್ಲಿದ್ದಲಿನ ನಿಕ್ಷೇಪವನ್ನು ಹೊಂದಿರುವ ರಾಷ್ಟ್ರವಾಗಿದೆ. ಇಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲು ಇರುವುದರಿಂದ ಗಣಿಗಾರಿಕೆ ಸುಲಭ ಮತ್ತು ಲಾಭದಾಯಕವಾದುದು.

2001ರಲ್ಲಿ ಕಜ್ಞಾಕ್‌ಸ್ತಾನ ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 1.9 ರಷ್ಟು (72.2 ಮಿ.ಟನ್) ಕಲ್ಲಿದ್ದಲು ಉತ್ಪಾದಿಸಿತ್ತು ಹಾಗೂ 44.9 ಮಿ.ಟನ್‌ಗಳಷ್ಟು ಕಲ್ಲಿದ್ದಲು ದೇಶದಲ್ಲಿ ಬಳಕೆಯಾಗಿತ್ತು. ಅದೇ ವರ್ಷ 27.2 ಮಿ.ಟನ್ (ಶೇ.4) ರಫ್ತುಮಾಡಲಾಗಿತ್ತು.

ಬಾಕ್ಸೈಟ್ ಉತ್ಪಾದನೆಯ ಪ್ರಮುಖ ದೇಶಗಳ ಪಟ್ಟಿಯಲ್ಲಿ ಈ ದೇಶ 10ನೆಯ ಸ್ಥಾನದಲ್ಲಿದೆ. 3668 ಸಾವಿರ ಟನ್ (2001) ಉತ್ಪಾದಿಸಿತ್ತು. ಪ್ರಪಂಚದ ಒಟ್ಟು ಬಾಕ್ಸೈಟ್ ಉತ್ಪಾದನೆಯಲ್ಲಿ ಈ ದೇಶವು ಶೇ. 2.6 ರಷ್ಟು ಉತ್ಪಾದಿಸುತ್ತಿದೆ.

ಇಲ್ಲಿ ಸಾಕಷ್ಟು ಕಬ್ಬಿಣ ಅದಿರಿನ ನಿಕ್ಷೇಪ ಹಂಚಿಕೆಯಾಗಿದೆ. ಪ್ರಪಂಚದ ಒಟ್ಟು ನಿಕ್ಷೇಪದ ಶೇ. 6.1 ರಷ್ಟನ್ನು (19,000 ಮಿ.ಮೆ.ಟನ್) ಹೊಂದಿದೆ. 2001ರಲ್ಲಿ ಶೇ. 1.5 ಮೆ. ಟನ್‌ಗಳಷ್ಟು (16 ಮಿ) ಕಬ್ಬಿಣವನ್ನು ಉತ್ಪಾದಿಸಿತ್ತು. ಕಜ್ಞಾಕ್‌ಸ್ತಾನ ಪ್ರಪಂಚದ 9ನೆಯ ಪ್ರಮುಖ ತಾಮ್ರ ಉತ್ಪಾದಿಸುವ ದೇಶ. ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಶೇ. 3.4 ರಷ್ಟನ್ನು ಪೂರೈಸುವುದು (4,70,000 ಟನ್). ಈಗಾಗಲೆ ಈ ರಾಷ್ಟ್ರದಲ್ಲಿ ಉತ್ತಮ ದರ್ಜೆಯ ಕಬ್ಬಿಣದ ಅದಿರು ಪತ್ತೆಯಾಗಿದ್ದು ಸು. 19,000 ಮಿ.ಮೆ.ಟನ್ ನಿಕ್ಷೇಪವಿದೆ ಎಂದು ಅಂದಾಜುಮಾಡಲಾಗಿದೆ. ಈ ನಿಕ್ಷೇಪ ಪ್ರಪಂಚದ ಒಟ್ಟು ನಿಕ್ಷೇಪದ ಶೇ. 6.1 ರಷ್ಟು ಎಂದು ತಿಳಿದುಬಂದಿದೆ. 2001ರಲ್ಲಿ 16 ಮಿ.ಮೆ.ಟನ್ (ಶೇ.1.5) ಕಬ್ಬಿಣವನ್ನು ಉತ್ಪಾದಿಸಲಾಗಿತ್ತು.

ಕಜ್ಞಾಕ್‌ಸ್ತಾನ ಸೀಸದ ನಿಕ್ಷೇಪವನ್ನು ಹೊಂದಿರುವ ಪ್ರಪಂಚದ 7ನೆಯ ದೊಡ್ಡ ದೇಶ. ಇಲ್ಲಿನ ನಿಕ್ಷೇಪದ ಮೊತ್ತ 20 ಲಕ್ಷ ಮಿ.ಟನ್. ಮಿ.ಹೆ. (ಶೇ. 1.5) ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 3.4 ರಷ್ಟನ್ನು ಈ ದೇಶ ಉತ್ಪಾದಿಸುತ್ತಿದೆ. ಹಾಗೂ ಶೇ.3.8ರಷ್ಟು (3,44,000 ಟನ್) ಸತುವನ್ನು ಉತ್ಪಾದಿಸುತ್ತದೆ.

ಕೃಷಿ: ಗೋದಿ ಕಜ್ಞಾಕ್‌ಸ್ತಾನದ ಮುಖ್ಯಬೆಳೆ. 11.26 ಮಿ.ಹೆ. ಗಳಲ್ಲಿ ಬೆಳೆಯಲಾಗುತ್ತಿದೆ. ವಾರ್ಷಿಕ ಉತ್ಪಾದನೆಯು 11.52 ಮಿ.ಮೆ.ಟನ್‌ಗಳು. ಈ ರಾಷ್ಟ್ರ ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಶೇ. 2.1 ರಷ್ಟು ಉತ್ಪಾದಿಸುತ್ತಿದೆ. ಇಲ್ಲಿ ಪ್ರತಿ ಹೆಕ್ಟೇರಿಗೆ 1023 ಕಿಗ್ರಾಂ ಇಳುವರಿ ಸಿಗುತ್ತದೆ. ಗೋದಿ ಸಾಗುವಳಿ ಭೂಮಿಯ ಬಹುಭಾಗವನ್ನು ಆವರಿಸಿಕೊಂಡಿದೆ. ಇಲ್ಲಿ ಸಮಷ್ಟಿ ವ್ಯವಸಾಯ ವ್ಯವಸ್ಥೆ, ವೈಜ್ಞಾನಿಕ ಕೃಷಿವಿಧಾನ ಅನುಸರಿಸುತ್ತಿರುವುದು ಹಾಗೂ ಯಾಂತ್ರೀಕರಣ ಬೇಸಾಯ ಕ್ರಮಗಳು ಗೋದಿ ಬೇಸಾಯಕ್ಕೆ ಪೂರಕವಾಗಿವೆ. ವಾಯುಗುಣದ ವಿಷಮ ಪರಿಸ್ಥಿತಿಗಳು ಗೋದಿಯ ಯಶಸ್ವಿಗೆ ಒಮ್ಮೊಮ್ಮೆ ಅಡ್ಡಿಯುಂಟುಮಾಡುವವು. ವಸಂತ ಮತ್ತು ಚಳಿಗಾಲದ ಗೋದಿಗಳೆರಡನ್ನು ಬೆಳೆದರೂ ಉತ್ಪನ್ನದ ಅಧಿಕ ಭಾಗವು ವಸಂತಕಾಲದ ಗೋದಿಯಾಗಿರುತ್ತದೆ. ಪ್ರಪಂಚದ ಪ್ರಮುಖ ಗೋದಿ ರಫ್ತು ಮಾಡುವ ರಾಷ್ಟ್ರಗಳಲ್ಲಿ ಈ ದೇಶ 8ನೆಯ ಸ್ಥಾನ ಹೊಂದಿದೆ. ಈ ದೇಶ 51.4 ಲಕ್ಷ ಟನ್ (ಶೇ. 3.9) ಗೋದಿಯನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ರವಾನಿಸುತ್ತದೆ.

ಈ ದೇಶದ ಜನಸಂಖ್ಯೆ ಬೆಳವಣಿಗೆಯ ದರ ಶೇ. 03, ಜನನ ಪ್ರಮಾಣ ಪ್ರತಿ 1000ಕ್ಕೆ 16, ಶಿಶುಮರಣ ಪ್ರಮಾಣ ಪ್ರತಿ 1000 ಕ್ಕೆ 38.3. ಸರಾಸರಿ ಜೀವಿತಾವಧಿ 66.9 ವರ್ಷಗಳು.

ಕಜ್ಞಾಕ್‌ಸ್ತಾನದ ರಾಜಧಾನಿ ಅಸ್ತಾನ್ (28,82,000). ಇಲ್ಲಿನ ಪ್ರಮುಖ ನಗರಗಳು ಅಲ್‌ಮಟಿ (10,45,900) ಕರಗಾಂಡ (4,04,600), ಶೈಮ್‌ಕೆಂಟ್ (3,33,500), ಟಾರಾಜ್ (3,05,700), ಪೌಲೋಡರ್ (2,99,500), ಉಸ್ಟ್–ಕಮೆನೊರ್ಸ್ಕ (2,88,000) ಮತ್ತು ಅಕ್ಟ್ಯೂಟೋಬೆ (2,34,400).

ಅಧಿಕೃತ ಭಾಷೆ ರಷ್ಯನ್. ಶೇ. 95ರಷ್ಟು ಜನ ರಷ್ಯನ್ ಭಾಷೆಯನ್ನಾಡುವರು. ಶೇ. 64ರಷ್ಟು ಕಜಾರ್ ಭಾಷೆಯನ್ನೂ ಬಳಸುವುದುಂಟು. ರಾಷ್ಟ್ರೀಯತೆಯ ಪ್ರಕಾರ ಶೇ. 53.4 ರಷ್ಟು ಕಜ್ಞಾಕ್, ಶೇ. 30 ರಷ್ಟು ರಷ್ಯನ್, ಶೇ. 3.7 ರಷ್ಟು ಉಕ್ರೇನಿಯನ್, ಶೇ. 1.4 ರಷ್ಟು ತಾತರ್, ಶೇ. 1.4 ರಷ್ಟು ವೈಗುರ್ ಹಾಗೂ ಶೇ. 4.9 ರಷ್ಟು ಇತರ ಭಾಷೆಯನ್ನಾಡುವವರು ಇಲ್ಲಿ ನೆಲಸಿದ್ದಾರೆ. ಇಲ್ಲಿನ ಹಣ ಟೆಂಗೆ.

ಧಾರ್ಮಿಕವಾಗಿ ಇಸ್ಲಾಂ ಸಂಪ್ರದಾಯವಾದಿಗಳು ಬಹು ಸಂಖ್ಯಾತರಾಗಿದ್ದು, ಒಟ್ಟು ಜನಸಂಖ್ಯೆಯ ಶೇ. 47ರಷ್ಟಿದ್ದಾರೆ. ರಷ್ಯನ್ ಸಂಪ್ರದಾಯದವರು ಶೇ. 44, ಪ್ರಾಟೆಸ್ಟೆಂಟರು ಶೇ. 2, ಇತರರು ಶೇ. 7 ರಷ್ಟು. ಶೇ. 98ರಷ್ಟು ಸಾಕ್ಷರತೆಯ ಪ್ರಮಾಣವನ್ನು ಈ ದೇಶ ಸಾಧಿಸಿದೆ.

ಕಜ್ಞಾಕ್‌ಸ್ತಾನದ ಪ್ರಮುಖ ಆಹಾರ ಬೆಳೆಗಳು ಓಟ್ಸ್, ಮೆಕ್ಕೆಜೋಳ, ಗೋದಿ ಮತ್ತು ಬಾರ್ಲಿ. ಹತ್ತಿ ಇಲ್ಲಿನ ಪ್ರಮುಖ ವಾಣಿಜ್ಯಬೆಳೆ.

ಉಣ್ಣೆತಯಾರಿಕೆ, ಪೆಟ್ರೋಲ್ ಸಂಸ್ಕರಣೆ, ಪಶು ಸಂಗೋಪನೆ, ಧಾನ್ಯ ಸಂಸ್ಕರಣೆ, ಸಕ್ಕರೆಗೆಡ್ಡೆ, ತಾಮ್ರ ಕೈಗಾರಿಕೆ, ಕಬ್ಬಿಣ ಮತ್ತು ಉಕ್ಕು. ಇಲ್ಲಿನ ಪ್ರಮುಖ ಕೈಗಾರಿಕೆಗಳು.

ಸಾರಿಗೆ: ಕಜ್ಞಾಕ್‌ಸ್ತಾನ ಸು. 13,601 ಕಿಮೀ (2002) ಉದ್ದದ ರೈಲು ಸಂಪರ್ಕಜಾಲವನ್ನು ಹೊಂದಿದೆ. ರಾಷ್ಟ್ರೀಯ ಹೆದ್ದಾರಿಗಳ ಉದ್ದ 81,331 ಕಿಮೀ. ಸಂಚಾರಕ್ಕೆ ಯೋಗ್ಯವಾದ ರಸ್ತೆಗಳ ಉದ್ದ 77,020 ಕಿಮೀ. ಇತರೆ ರಸ್ತೆಗಳ ಉದ್ದ 4,311 ಕಿಮೀ. ಜಲಸಾರಿಗೆಯ ಉದ್ದ 3,900 ಕಿಮೀ. 2002ರಲ್ಲಿ 10,449 ಮೀ. ಪ್ರಯಾಣಿಕರು ರೈಲು ಪ್ರಯಾಣದ ಸೌಲಭ್ಯ ಪಡೆದಿದ್ದರು. 133,088 ಮಿ.ಟನ್‌ಗಳಷ್ಟು ಸರಕನ್ನು ಸಾಗಿಸಲಾಗಿತ್ತು.

*

**ಕಜ್ಜಿ :** ಮೇಲ್ಚರ್ಮ ಪದರದಲ್ಲಿ ಮಾನವನ ಮಾಂಸದಿನಿ (ಸಾರ್ಕಾಪ್ಟೀಸ್) ಕಜ್ಜಿಹುಳು ನೆಲೆಸಿದ್ದರಿಂದ ಏಳುವ ಒಂದು ಅಂಟುರೋಗ (ಸ್ಕೇಬೀಸ್), ಬೆರಳ ಸಂದುಗಳು, ಕಂಕುಳು, ಗಜ್ಜಲುಗಳ ಚರ್ಮದೊಳಕ್ಕೆ ಬಿಲದಂತೆ ತೋಡಿಕೊಂಡು ಕ್ರಿಮಿ ಒಳಸೇರಿ ಮೇಲೆ ದದ್ದು ಗುಳ್ಳೆ ಎದ್ದಿರಬಹುದು. ರಾತ್ರಿಹೊತ್ತು ಇದರ ಚಟುವಟಿಕೆ ಬಹಳ. ಇದರಿಂದ ಕೆರೆತ, ತುರಿಕೆಯಾಗಿ ಇನ್ನಷ್ಟು ತೊಡಕಾಗಿ ಕೀವುಗೂಡುವುದೂ ಉಂಟು. ಬರಗಾಲ, ಯುದ್ಧಕಾಲಗಳಲ್ಲಿ ಇದು ಸಾಂಕ್ರಾಮಿಕವಾಗಬಹುದು. ಮನುಷ್ಯರಿಗೆ ಮಾತ್ರ ಹತ್ತುವ ಕಜ್ಜಿಯೇ ಬೇರೆ. ಬೆಕ್ಕು, ನಾಯಿ, ಕುರಿಗಳ ತೆರನ ಸ್ತನಿಗಳಿಗೆ ಹತ್ತುವವೇ ಬೇರೆ. ಪ್ರಾಣಿಗಳವು ಜನರಿಗೆ ಹತ್ತಿದರೆ ಕಜ್ಜಿಯ ಲಕ್ಷಣಗಳು ಬೇರೆಯಾಗಿರುತ್ತವೆ. ಕಜ್ಜಿಯ ಬಗ್ಗೆ ಮತ್ತು ನಿವಾರಣೋಪಾಯಾದಿ ವಿವರಗಳಿಗೆ **(ನೋಡಿ–ಕಜ್ಜಿ–ಉಣ್ಣೆ–ಚರ್ಮರೋಗಗಳು)**

(ಡಿ.ಎಸ್.ಎಸ್.)

**ಕಜ್ಜಿ ಉಣ್ಣೆ :** ಅರ್ಯಾಕ್ನಿಡ ವರ್ಗದ ಆಕರೈನ ಗಣಕ್ಕೆ ಸೇರಿದ ಸಂಧಿಪದಿಗಳು, ಇವನ್ನು ಸಾರ್ಕಾಪ್ಟಿಡೀ ಕುಟುಂಬಕ್ಕೆ ಸೇರಿಸಲಾಗಿದೆ. ಪಕ್ಷಿಗಳು, ಸ್ತನಿಗಳು ಮುಂತಾದ ಪ್ರಾಣಿಗಳ ಶರೀರದ ಮೇಲೆ ಇವು ಪರತಂತ್ರ ಜೀವಿಗಳಾಗಿ ವಾಸಿಸುತ್ತವೆ. ಸಾರ್ಕಾಪ್ಟೀಸ್ ಸ್ಕೇಬಿಯೈ ಎಂಬ ಪ್ರಭೇದ ಮನುಷ್ಯ, ಸಾಕುಪ್ರಾಣಿಗಳು ಮತ್ತು ಕಾಡುಮೃಗಗಳಲ್ಲಿ ಕಜ್ಜಿರೋಗವನ್ನು ತರುತ್ತದೆ. ಈ ಪ್ರಭೇದದಲ್ಲಿ ಅನೇಕ ಬುಡಕಟ್ಟುಗಳುಂಟು. ಇವು ನಿರ್ದಿಷ್ಟವಾದ ಪ್ರಾಣಿ ಪ್ರಭೇದಗಳಲ್ಲಿ ಪರತಂತ್ರ ಜೀವನವನ್ನು ನಡೆಸುತ್ತವೆ. ಕಜ್ಜಿ ಉಣ್ಣಿಗಳು ಸಾಮಾನ್ಯವಾಗಿ ಚರ್ಮದ ಹೊರಪದರದಲ್ಲಿ ಹುದುಗಿಕೊಂಡು ವಾಸಿಸುತ್ತವೆ. ಇವುಗಳ ಬಣ್ಣ ಬಿಳುಪು.

ಸ್ಥೂಲವಾಗಿ ಉಣ್ಣಿಯ ದೇಹ ಆಮೆಯಾಕಾರದಲ್ಲಿದ್ದು ಉದರಭಾಗ ಚಪ್ಪಟೆಯಾಗಿಯೂ ಬೆನ್ನುಭಾಗ ಉಬ್ಬಿ ಕೊಂಡೂ ಇವೆ. ಬೆನ್ನುಭಾಗದ ಮೇಲೆಲ್ಲ ಸೂಕ್ಷ್ಮವಾದ ಸುಕ್ಕುಗಳಿವೆ. ಅಲ್ಲದೆ ಮೈಮೇಲೆ ಮುಳ್ಳುಗಳೂ ಬಿರುಗೂದಲುಗಳೂ ಇವೆ. ಇವುಗಳ ಸಂಖ್ಯೆ ಮತ್ತು ದೇಹದ ಮೇಲೆ ಇವು ಹರಡಿರುವ ರೀತಿಯ ಆಧಾರದ ಮೇಲೆ ಕಜ್ಜಿ ಉಣ್ಣಿಯನ್ನು ವಿವಿಧ ಬುಡಕಟ್ಟುಗಳಾಗಿ ವಿಂಗಡಿಸುತ್ತಾರೆ. ಚರ್ಮಕ್ಕೆ ಅಂಟಿಕೊಳ್ಳಲು ಉಣ್ಣಿಗೆ ಮುಳ್ಳುಗಳು ಸಹಾಯಕವಾಗಿವೆ. ಬಲು ಪುಟ್ಟದಾದ ಇದರ ದೇಹದ ಮುಂತುದಿಯಲ್ಲಿ ತುಂಬ ಚಿಕ್ಕ ತಲೆ ಇದೆ. ತಲೆಯ ತುದಿಯಲ್ಲಿ ಒಂದು ಜೊತೆ ಇಕ್ಕಳಕೊಂಡಿಗಳೂ (ಕಿಲಿಸರಿ) ಒಂದು ಜೊತೆ ಮೋಟಾದ ಸ್ಪರ್ಶಾಂಗಗಳೂ ಇವೆ. ಇವಕ್ಕೆ ಕಣ್ಣುಗಳೇ ಇಲ್ಲ. ದೇಹದ ಮುಂಭಾಗದಲ್ಲಿ ಎರಡು ಜೊತೆ ಮತ್ತು ಹಿಂಭಾಗದಲ್ಲಿ ಎರಡು ಜೊತೆ ಹೀಗೆ ಒಟ್ಟು ನಾಲ್ಕು ಜೊತೆ ಕಾಲುಗಳಿವೆ. ಹೆಣ್ಣು ಉಣ್ಣಿಯಲ್ಲಿ ಹಿಂಭಾಗದ ಎರಡು ಜೊತೆ ಕಾಲುಗಳಲ್ಲಿ ಬಿರುಗೂದಲುಗಳಿವೆ. ಗಂಡಿನಲ್ಲಿ ಹಿಂಭಾಗದ ಒಂದು ಜೊತೆ ಕಾಲುಗಳಲ್ಲಿ ಮಾತ್ರ ಬಿರುಗೂದಲುಗಳಿವೆ. ಉಳಿದೆಲ್ಲ ಕಾಲುಗಳಲ್ಲಿಯೂ ಹೀರುಬಟ್ಟಲುಗಳಿವೆ (ಸಕರ್ಸ್).




ಕಜ್ಜಿ ಉಣ್ಣಿಗಳು : A ಹೆಣ್ಣು, B ಗಂಡು

ಕಜ್ಜಿ ಉಣ್ಣಿಯಲ್ಲಿ ಲಿಂಗಭೇದವಿದೆ, ಹೆಣ್ಣು ಗಂಡಿಗಿಂತ ಗಾತ್ರದಲ್ಲಿ ದೊಡ್ಡದು. ಸಂಭೋಗಕ್ರಿಯೆಯ ಅನಂತರ ಹೆಣ್ಣು ಮನುಷ್ಯನ ಚರ್ಮದಲ್ಲಿ ಚಿಕ್ಕ ಗುಂಡಿ ತೋಡಿ, ಅದರಲ್ಲಿ 10–25 ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳು 3–4 ದಿನಗಳಲ್ಲಿ ಒಡೆಯುತ್ತವೆ. ಇವುಗಳಿಂದ ಹೊರಬಂದ ಡಿಂಭಗಳು ವಯಸ್ಕ ಪ್ರಾಣಿಯನ್ನೇ ಹೋಲಿದರೂ ಮೂರು ಜೊತೆ ಕಾಲುಗಳನ್ನು ಮಾತ್ರ ಹೊಂದಿವೆ. ಮುಂದಿನ ಎರಡು ಜೊತೆ ಕಾಲುಗಳಲ್ಲಿ ಹೀರುಬಟ್ಟಲುಗಳಿವೆ. 2–3 ದಿನಗಳ ಅನಂತರ ಡಿಂಭ ಪೊರೆಬಿಟ್ಟು, ಹೊಸಚರ್ಮ ಬೆಳೆಸಿಕೊಂಡು, ಎಂಟು ಕಾಲುಗಳುಳ್ಳ ಅರ್ಭಕ (ನಿಂಫ್) ಆಗುತ್ತದೆ. ಇದು ಎರಡು–ಮೂರು ಸಾರಿ ಪೊರೆ ಕಳಚಿಕೊಂಡು ವಯಸ್ಕ ಪ್ರಾಣಿಯಾಗಿ ಮಾರ್ಪಾಟಾಗುತ್ತದೆ.

ಈ ಉಣ್ಣಿಗಳಿಂದ ಮನುಷ್ಯನಿಗೆ ಬರುವ ಕಜ್ಜಿ ಹಿಂದಿನ ಕಾಲದಿಂದಲೂ ಜನರಿಗೆ ಗೊತ್ತಿದೆ. ಇದರ ಕಷ್ಟ ಅನುಭವಿಸಿದವರಿಗೇ ಗೊತ್ತು. ಕಜ್ಜಿಯಿಂದ ಪೀಡಿತನಾದ ರೋಗಿಯ ಸಂಪರ್ಕದಿಂದ ಅಥವಾ ಆತನ ಉಡಿಗೆಗಳನ್ನು ಮುಟ್ಟುವುದರಿಂದ ಈ ರೋಗ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ರೋಗದ ಮುಖ್ಯ ಲಕ್ಷಣ–ತುರಿಕೆ, ಕಡಿತ ಮತ್ತು ದೇಹದ ಮೇಲ್ಭಾಗದಲ್ಲಿ ತೋರುವ ಹುಣ್ಣು ಅಥವಾ ವ್ರಣ. ಅಲ್ಲದೆ ಕಜ್ಜಿಉಣ್ಣಿಗಳು ತೋಡಿದ ಗುಂಡಿಗಳಲ್ಲಿ ಸ್ಟ್ರೆಪ್ಟೊಕಾಕೈಗಳೆಂಬ ಬ್ಯಾಕ್ಟೀರಿಯ ಸೇರಿಕೊಂಡು ಬೇರೆ ಬೇರೆ ಬಗೆಯ ರೋಗಗಳು ಬರುವ ಸಾಧ್ಯತೆಯೂ ಉಂಟು. ಕ್ರಮವಾಗಿ ಸ್ನಾನ ಮಾಡುವುದರಿಂದ ಕಜ್ಜಿಯ ರೋಗವನ್ನು ಬಹುಮಟ್ಟಿಗೆ ತಡೆಗಟ್ಟಬಹುದು. ಗಂಧಕದ ಮುಲಾಮು, ಮಾರ್ಕ್ಸನ್ ಮುಲಾಮು, ಬೆಂಜೈಲ್ ಬೆಂಜೊಯೇಟ್ ಡೈಮೀಥೈಲ್–ಡೈಫೆನಿಲಿನ್ ಡೈಸಲ್ಫೈಡ್ ಮುಂತಾದುವು ಕಜ್ಜಿಗೆ ಗೊತ್ತಾಗಿರುವ ಮದ್ದುಗಳಲ್ಲಿ ಕೆಲವು. (ಜಿ.ಎಸ್.ಆರ್.)

**ಕಟಕ್ :** ಒರಿಸ್ಸ ರಾಜ್ಯದ ಒಂದು ನಗರ; ಜಿಲ್ಲೆ, ಮಹಾನದಿಯ ದಂಡೆಯ ಮೇಲೆ ಅದರ ಮುಖ್ಯ ಶಾಖೆಯಾದ ಕಟ್ಜೋರಿ ಕವಲೊಡೆಯುವಲ್ಲಿ, ಕೋಲ್ಕೊತದ ನೈರುತ್ಯಕ್ಕೆ 352 ಕಿಮೀ ಮತ್ತು ಸಮುದ್ರತೀರದಿಂದ 72 ಕಿಮೀ ದೂರದಲ್ಲಿ ಕಟಕ್ ನಗರವಿದೆ. ಉತ್ತರ ಅಕ್ಷಾಂಶ 20೦–26' ಮತ್ತು ಪೂರ್ವರೇಖಾಂಶ 850–56′ಗಳಲ್ಲಿದೆ. ಇದು ಆಗ್ನೇಯ ರೈಲ್ವೆಯ ಒಂದು ನಿಲ್ದಾಣ. ಚೆನ್ನೈ–ಹೌರಾ ರೈಲು ಮಾರ್ಗವೂ ಕೋಲ್ಕೊತ – ಚೆನ್ನೈ ರಾಷ್ಟ್ರೀಯ ಹೆದ್ದಾರಿಯೂ ಇದರ ಮೂಲಕ ಹಾದುಹೋಗುತ್ತವೆ.

ಕಟಕ್ ನಗರವನ್ನು ಸ್ಥಾಪಿಸಿದವನು ಮೂರನೆಯ ಅನಂಗಭೀಮದೇವ (1211–38), ಬಾರಾಬತಿ ಕೋಟೆಯನ್ನು ಇವನೇ ಕಟ್ಟಿಸಿದ, ಮಹಾನದಿ ಮತ್ತು ಕಟ್ಜೋರಿಗಳ ಪ್ರವಾಹದಿಂದ ನಗರವನ್ನು ರಕ್ಷಿಸುವ ಉದ್ದೇಶದಿಂದ ಇವುಗಳ ದಂಡೆಯ ಉದ್ದಕ್ಕೂ ಕಲ್ಕಟ್ಟಣೆ ನಿರ್ಮಿಸಿದವನೂ ಈತನೇ ಇರಬಹುದು. ಮುಕುಂದದೇವನ(1559–68) ಕಾಲಕ್ಕೆ ಬಾರಾಬತಿ ಕೋಟೆ ಒಂಬತ್ತು ಅಂತಸ್ತುಗಳ ರಚನೆಯಾಗಿ ಮಾರ್ಪಟ್ಟಿತು. 1568ರಲ್ಲಿ ಆಫ್ಘನರು ಕಟಕ್ ನಗರವನ್ನಾಕ್ರಮಿಸಿಕೊಂಡರು. ಈ ಆಕ್ರಮಣದೊಂದಿಗೆ ಒರಿಸ್ಸದಲ್ಲಿ ಹಿಂದೂ ರಾಜರ ಆಳ್ವಿಕೆಯೂ ಕೊನೆಗೊಂಡಿತು. 1590ರಲ್ಲಿ ಇದನ್ನು ಮೊಗಲರೂ 1751ರಲ್ಲಿ ಮರಾಠರೂ ವಶಪಡಿಸಿಕೊಂಡರು. ಮರಾಠರನ್ನು ಓಡಿಸಿ ಇದನ್ನು ಬ್ರಿಟಿಷರು ಆಕ್ರಮಿಸಿಕೊಂಡದ್ದು 1803ರಲ್ಲಿ, ಅವರ ಆಳ್ವಿಕೆಯ ಕಾಲದಲ್ಲಿ ಇದು ಒರಿಸ್ಸದ ರಾಜಧಾನಿಯಾಗಿತ್ತು.

ಕಟಕ್ ನಗರದಲ್ಲಿ ಅನೇಕ ಸ್ಮಾರಕಗಳಿವೆ. ಲಾಲ್‌ಬಾಗ್ ಅರಮನೆ (1633), ಜಾಮೀ ಮಸೀದಿ (1690), ಕದಾಂ ರಸೂಲ್ (1715) ಇವುಗಳೇ ಅಲ್ಲದೆ 18ನೆಯ ಶತಮಾನದಲ್ಲಿ ನಿರ್ಮಿತವಾದ ಅಮರೇಶ್ವರ ದೇವಸ್ಥಾನ ಮತ್ತು ಜೈನ ದೇವಾಲಯಗಳು ಮುಖ್ಯ, ಬ್ಯಾಪ್ಟಿಸ್ಟ್ ಚರ್ಚ್, ಕೆಥೊಲಿಕ್ ಚರ್ಚ್ ಇವು 19ನೆಯ ಶತಮಾನದಲ್ಲಿ ನಿರ್ಮಾಣವಾದವು.

ಕಟಕ್ ಉತ್ಕಲ ವಿಶ್ವವಿದ್ಯಾಲಯದ ಕೇಂದ್ರ. ರ‍್ಯಾವೆನ್‌ಷಾ ಕಾಲೇಜ್, ಕ್ರೈಸ್ಟ್ ಕಾಲೇಜ್, ಸ್ಟೀವರ್ಟ್ ವಿಜ್ಞಾನ ಕಾಲೇಜ್, ಶೈಲಬಾಲಾ ಮಹಿಳಾ ಕಾಲೇಜ್, ಶ್ರೀರಾಮಚಂದ್ರಭಂಜ್ ವೈದ್ಯಕೀಯ ಕಾಲೇಜ್, ರಾಧಾನಾಥ್ ಟ್ರೇನಿಂಗ್ ಕಾಲೇಜ್ ಇವು ಉತ್ಕಲ ವಿಶ್ವವಿದ್ಯಾನಿಲಯದ ಕೆಲವು ಮುಖ್ಯ ಉಚ್ಚ ಶಿಕ್ಷಣ ಸಂಸ್ಥೆಗಳು. ಕೇಂದ್ರೀಯ ಅಕ್ಕಿ ಸಂಶೋಧನ ಸಂಸ್ಥೆಯೊಂದು ಇಲ್ಲಿ ಸ್ಥಾಪಿತವಾಗಿದೆ. ಒರಿಸ್ಸದ ಉಚ್ಚನ್ಯಾಯಾಲಯವಿರುವುದು ಈ ನಗರದಲ್ಲೇ.

ಕಟಕ್ ಅನೇಕ ಗುಡಿಸಲು ಕೈಗಾರಿಕೆಗಳ ಕೇಂದ್ರ. ಚಿನ್ನ ಬೆಳ್ಳಿಯ ತೆರಪು ಚಿತ್ರ ಕಲೆಯೂ ಕೊಂಬಿನ ಕುಶಲ ಕಲೆಯೂ ಮುಖ್ಯ. ಜವಳಿ ಗಿರಣಿಯೂ ಕಾಗದ, ಉಕ್ಕಿನ ಕೊಳವೆ ಮತ್ತು ಗಾಜಿನ ಕಾರ್ಖಾನೆಗಳೂ ಆಧುನಿಕ ಉದ್ಯಮಗಳೂ, ಒರಿಸ್ಸದ ನಾನಾಭಾಗಗಳೊಂದಿಗೆ ರೈಲ್ವೆ ಮತ್ತು ರಸ್ತೆ ಸಂಪರ್ಕ ಪಡೆದಿರುವ ಕಟಕ್ ಒಂದು ಮುಖ್ಯ ವಾಣಿಜ್ಯ ಕೇಂದ್ರ. (ಆರ್.ಪಿ.ಎಸ್.)

ಬ್ರಾಹ್ಮಣೀ ಮತ್ತು ಮಹಾನದಿಗಳ ಮುಖಜಭೂಮಿಯನ್ನೂ ಹಿಂಬದಿಯ ಬೆಟ್ಟದ ನೆಲವನ್ನೂ ಒಳಗೊಂಡಿರುವ ಕಟಕ್ ಜಿಲ್ಲೆಯ ವಿಸ್ತೀರ್ಣ 10,846 ಚ.ಕಿಮೀ ಜನಸಂಖ್ಯೆ 23,41,984 (2001). ಈ ಜಿಲ್ಲೆಯ ಜನಸಾಂದ್ರತೆ ಪ್ರತಿ ಚಕಿಮೀಗೆ 596 ಜನರು.

ಕಟಕ್ ಜಿಲ್ಲೆಯಲ್ಲಿ ಮೂರು ಸ್ವಾಭಾವಿಕ ವಿಭಾಗಗಳಿವೆ. ಪೂರ್ವದಲ್ಲಿ 5–50 ಕಿಮೀವರೆಗೆ ಅಗಲವಾಗಿರುವ ಕಡಲಂಚು ಜೌಗು ನೆಲ ಲವಣಮಯ, ಇದರ ಪಶ್ಚಿಮಕ್ಕೆ ಸು. 64 ಚಕಿಮೀ ಅಗಲದ, ಮೆಕ್ಕಲುಮಣ್ಣಿನಿಂದ ಕೂಡಿದ ಫಲವತ್ತಾದ ಮೈದಾನವಿದೆ. ಇಲ್ಲಿ ಒಳ್ಳೆಯ ನೀರಾವರಿ ವ್ಯವಸ್ಥೆಯಿದೆ. ಎತ್ತರದ ಪ್ರದೇಶದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹಬ್ಬಿರುವ ಹಲವು ಬೆಟ್ಟಗಳಿವೆ. ಇವುಗಳ ಮೈ ವೃಕ್ಷ ಪೂರಿತ, ನಡುವೆ ಕಣಿವೆಗಳಿವೆ. ವೈತರಣೀನದಿ ಇದರ ಉತ್ತರದ ಗಡಿ. ಬತ್ತ ಮತ್ತು ದ್ವಿದಳ ಧಾನ್ಯ, ಸೆಣಬು ಈ ಜಿಲ್ಲೆಯ ಮುಖ್ಯ ಬೆಳೆ.

ವೈತರಣಿಯ ದಡದ ಮೇಲಿರುವ ಜಾರ್ಜ್‌ಪುರ ಮುಖ್ಯ ಯಾತ್ರಾಸ್ಥಳ, ಮಹಾಭಾರತದಲ್ಲೂ ಇದರ ಉಲ್ಲೇಖವಿದೆ. ಇದು ಅನೇಕ ರಾಜಮನೆತನಗಳ ರಾಜಧಾನಿಯಾಗಿತ್ತು. ಬೋಧಿಸತ್ತ್ವ ಮತ್ತು ಮಾತೃಕೆಯರ ಪ್ರತಿಮೆಗಳೂ 10 ಮೀ ಎತ್ತರದ ಷೋಡಶಮುಖಿ ಶಿಲಾಸ್ತಂಭವೂ ಪ್ರಾಚೀನಸ್ಮಾರಕಗಳಲ್ಲಿ ಮುಖ್ಯವಾದವು. 1656ರಲ್ಲಿ ನವಾಬ್ ಅಬು ನಾಸಿರ್‌ಖಾನ್ ನಿರ್ಮಿಸಿದ ಮಸೀದಿಯೊಂದು ಇಲ್ಲಿದೆ. ಈ ಜಿಲ್ಲೆಯ ದಕ್ಷಿಣಭಾಗದಲ್ಲಿರುವ ಉದಯಗಿರಿ, ಲಲಿತಗಿರಿ ಮತ್ತು ರತ್ನಗಿರಿ ಬೆಟ್ಟಗಳಲ್ಲಿ ಪ್ರಾಚೀನ ಬೌದ್ಧ ಮಂದಿರಗಳಿವೆ. **(ನೋಡಿ– ಒರಿಸ್ಸ)** *

**ಕಟಕಟೆ :** ಮೆಟ್ಟಲುಸಾಲಿನ ಒಂದು ಪಕ್ಕದಲ್ಲಿ ಅಥವಾ ಎರಡೂ ಪಕ್ಕಗಳಲ್ಲಿ, ಉಪ್ಪರಿಗೆ, ಮೊಗಸಾಲೆಯ (ಬಾಲ್ಕನಿ) ಹೊರಾಂಗಣ ಮುಂತಾದ ಕಡೆಗಳಲ್ಲಿ ರಕ್ಷಣೆ ಹಾಗೂ ಅಲಂಕಾರಕ್ಕೋಸ್ಕರ ನಿರ್ಮಿಸುವ ರಚನೆ (ಬ್ಯಾಲಸ್ಟ್ರೇಡ್). ಇದನ್ನೇ ಕಿಟಕಿಯಲ್ಲಿ ಕಂಬಿಗಳ ಬದಲು ಅಳವಡಿಸಿದಾಗ ಕಟಾಂಜನ ಎಂದು ಕರೆಯುತ್ತಾರೆ.

ಸಮಾಂತರವಾಗಿ ಸರಳರೇಖೆಯಲ್ಲೋ ತುಂಡಾದ ರೇಖೆಯಲ್ಲೋ ವಕ್ರರೇಖೆಯಲ್ಲೋ ಸಾಗುವ ಒಂದು ಜೊತೆ ಚೌಕಟ್ಟು, ಇವನ್ನು ಪರಸ್ಪರ ಬಂಧಿಸುವ ಮತ್ತು ನಿಲ್ಲಿಸುವ ಅಡ್ಡಕಂಬಗಳು (ಬ್ಯಾಲುಸ್ಟರ್ಸ್)–ಇವಿಷ್ಟು ಕಟಕಟೆಯ ಪ್ರಧಾನ ಅಂಗಗಳು. ಚೌಕಟ್ಟಿನ ತಳಭಾಗದ ಹೆಸರು ಆಧಾರಪಟ್ಟಿ. ಮಿಕ್ಕಂತೆ ಕಟಕಟೆ ಕಟಾಂಜನಗಳ ವಿನ್ಯಾಸ ಶಿಲ್ಪಿಯ ಹಾಗೂ ಮಾಲೀಕನ ಅಭಿರುಚಿಗಳಿಗೆ ತಕ್ಕಂತೆ ವಿವಿಧ ಆಕಾರ, ಅಲಂಕರಣಗಳಲ್ಲಿರುತ್ತವೆ.

ಕಟಕಟೆಯನ್ನು ಕಲ್ಲುಚಪ್ಪಡಿ, ಮರ, ಕಬ್ಬಿಣ, ಇಟ್ಟಿಗೆ, ಕಾಂಕ್ರೀಟು, ಕಬ್ಬಿಣದ ಪ್ರಬಲಿತ ಕಾಂಕ್ರೀಟು ಇವುಗಳಿಂದ ಕಟ್ಟಬಹುದು. ಕೆಲವು ಸಲ ಕಬ್ಬಿಣದ ಪಟ್ಟಿ ಮತ್ತು ಚಚ್ಚೌಕ ಗಾತ್ರದ ಕಬ್ಬಿಣದ ಕಂಬಿಗಳಿಂದ ಕಟಕಟೆಯನ್ನು ತಯಾರಿಸಿ ಮೆಟ್ಟಲುಗಳ ಇಕ್ಕೆಲಗಳಲ್ಲೂ

ಸುತ್ತುಮೆಟ್ಟಲಿನ ಕಟಕಟೆ

ಜೋಡಿಸಿರುತ್ತಾರೆ. ಕಟಕಟೆಯ ಮೇಲ್ಭಾಗ ನುಣುಪು ಮತ್ತು ಗುಂಡಗಿದ್ದು ಅದರ ಮೇಲೆ ಸರಾಗವಾಗಿ ಕೈಗಳನ್ನು ಚಲಿಸುವಂತೆ ಸೌಕರ್ಯವಿದೆ. ಕಟಕಟೆಯ ಎತ್ತರ

ನೇರಮೆಟ್ಟಲಿನ ಕಟಕಟೆ

0.75ಮೀ–0.91ಮೀ ಮೆಟ್ಟಲು ಹತ್ತುವವರಿಗೆ ಅಂತಸ್ತಿನ ಎರಡು ಕಡೆಗಳಲ್ಲೂ ಇದು ಊರುಗೋಲಿನಂತಿದ್ದು ಸಾಗುವವರು ಕೆಳಗೆ ಬೀಳದಂತೆ ರಕ್ಷಣೆ ಒದಗಿಸುತ್ತದೆ. ಕಟಕಟೆಗಳಲ್ಲಿ ವಿವಿಧ ರೀತಿಯ ಅಲಂಕರಣಗಳನ್ನು ಅಳವಡಿಸುವುದರಿಂದ ಕಟ್ಟಡಕ್ಕೆ ಸೌಂದರ್ಯದ ಒಪ್ಪ ದೊರೆಯುವುದು. (ಎಂ.ಜಿ.ಎಸ್.)

**ಕಟವಪ್ರ :** (ನೋಡಿ– ಶ್ರವಣಬೆಳಗೊಳ)

**ಕಟಾಂಗ :** ಆಫ್ರಿಕದ ಕಾಂಗೋ ಗಣರಾಜ್ಯದ ಒಂದು ಪ್ರಾಂತ್ಯವಾಗಿದ್ದ ಪ್ರದೇಶ. ಪೂರ್ವ ರೇಖಾಂಶ $22^0$ ಯಿಂದ $12^0$ ಯವರೆಗೂ ವ್ಯಾಪಿಸಿರುವ ಈ ಪ್ರದೇಶದ ವಿಸ್ತೀರ್ಣ 596962 ಚ ಕಿಮೀ ಜನಸಂಖ್ಯೆ ಸು. 5,608,683 (2010). ಇವರ ಪೈಕಿ 33,507 ಐರೋಪ್ಯರು. ಈಶಾನ್ಯದಲ್ಲಿ ಟಾಂಗನ್ಯೀಕ ಸರೋವರ, ಪೂರ್ವದಕ್ಷಿಣಗಳಲ್ಲಿ ಜ಼ಾಂಬಿಯ, ಪಶ್ಚಿಮದಲ್ಲಿ ಅಂಗೋಲ–ಇವು ಇದರ ಮೇರೆಗಳು. ಬೆಟ್ಟಗುಡ್ಡಗಳಿಂದಲೂ ಪ್ರಸ್ಥಭೂಮಿಗಳಿಂದಲೂ ಕೂಡಿರುವುದರಿಂದ ಈ ಪ್ರದೇಶದಲ್ಲಿ ನಡು ನಡುವೆ ತಗ್ಗು ನೆಲಗಳಿವೆ. ಇವುಗಳಲ್ಲಿ ಉಪೆಂಬ ಮುಖ್ಯವಾದುದು. ಸರೋವರಗಳಿಂದಲೂ ಜೌಗು ನೆಲಗಳಿಂದಲೂ ಕೂಡಿರುವ ಈ ಪ್ರದೇಶದಲ್ಲಿ ಕಾಂಗೋನದಿಯ ತಲೆದೊರೆಯಾದ (ಹಡ್‍ಸ್ಟ್ರೀಮ್) ಲೂವಲಾಬ ಹರಿಯುತ್ತದೆ. ಕಟಾಂಗ ಎತ್ತರದಲ್ಲಿರುವುದರಿಂದ ಇಲ್ಲಿಯ ವಾಯುಗುಣ ತಂಪು. ವಾರ್ಷಿಕ ಸರಾಸರಿ ಉಷ್ಣತೆ 200 ಸೆಂ. (680ಫ್ಯಾ.). ಅಕ್ಟೋಬರ್ ಮಧ್ಯದಿಂದ ಏಪ್ರಿಲ್ ಮಧ್ಯದ ವರೆಗೆ ಬೇಸಗೆ ಮತ್ತು ಮಳೆಗಾಲ. ವಾರ್ಷಿಕ ಮಳೆ 55". ಕಾಡು, ಸವನ್ನ, ಹುಲ್ಲುಗಾವಲು–ಇಲ್ಲಿಯ ಮುಖ್ಯ ಸಸ್ಯ. ಸಿಂಹಗಳೂ ಘೇಂಡಾಮೃಗಗಳೂ ಇವೆ. 12730 ಚ ಕಿಮೀ ವಿಸ್ತಾರವಾಗಿರುವ ಉಪೆಂಬ ರಾಷ್ಟ್ರೀಯ ವನದಲ್ಲಿ ಆನೆ, ಹೇಸರಗತ್ತೆ, ಎಮ್ಮೆ, ಜಿಂಕೆ ಮುಂತಾದವು ಆಶ್ರಯ ಪಡೆದಿವೆ.

ಮುಸುಕಿನ ಜೋಳ, ನೆಲಗಡಲೆ, ಮರಗೆಣಸು ಮತ್ತು ಹತ್ತಿ ಮುಖ್ಯ ಬೆಳೆಗಳು. ದನಕರುಗಳು ಮತ್ತು ಕುರಿಗಳನ್ನು ಮಾಂಸ ಮತ್ತು ಉಣ್ಣೆಗಳಿಗಾಗಿ ಸಾಕುವರು. ತಾಮ್ರ, ಕೋಬಾಲ್ಟ್, ಯುರೇನಿಯಂ, ಸೀಸ, ತವರ, ಸತುವು ಮುಖ್ಯ ಖನಿಜಗಳು. ಕಡಿಮೆ ದರ್ಜೆಯ ಕಲ್ಲಿದ್ದಲೂ ಸಿಗುತ್ತದೆ.

ಕಾಲ್‍ವೇಜಿ ತಾಮ್ರದ ಗಣಿಪಟ್ಟಣ. ಕಬಾಲೋ ಲೂವಬಾಲದ ದಡದ ಮೇಲಿದೆ. ಮನೋನೊ ಮತ್ತು ಮಿಟ್ವಾಬ ತವರದ ಗಣಿ ಕೇಂದ್ರಗಳು. ಕಮೀನ ರೈಲ್ವೆ ಮತ್ತು ರಸ್ತೆಗಳ ಸಂಧಿ, ಮುಖ್ಯ ಸೇನಾ ಕೇಂದ್ರ.

ಕಟಾಂಗದ ಸಾರಿಗೆ ವ್ಯವಸ್ಥೆ ತಕ್ಕಮಟ್ಟಿಗೆ ಅಭಿವೃದ್ಧಿ ಹೊಂದಿದೆ. ಎಲಿಸಬೆತ್ ವಿಲ್, ಜ಼ಾಡೋವೀಲ್ ಮತ್ತು ಆಲ್ಬೇರ್‍ವೀಲ್‍ಗಳಿಗೂ ಫ್ರಾಂಕ್ವೆ ಮತ್ತು ಎಂಪೇನ್ ಬಂದರುಗಳಿಗೂ ರೈಲ್ವೆಸಂಬಂಧ ಕಲ್ಪಿಸಲಾಗಿದೆ. ಪಶ್ಚಿಮದಲ್ಲಿ ಅಟ್ಲಾಂಟಿಕ್ ಬಂದರಾದ ಲೊಬಿಟೊ ದೊಡನೆಯೂ ಸಂಪರ್ಕವುಂಟು. ಟಾಂಗನ್ಯೀಕ ಸರೋವರವೂ ಲೂವಬಾಲ ನದಿಯೂ ಜಲಮಾರ್ಗಗಳಿಗೆ ಅನುಕೂಲಕರ. ಎಲಿಸಬೆತವಿಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ.

1891–92ರಲ್ಲಿ ಕ್ಯಾಪ್ಟನ್ ಸ್ಟೇರ್ಸ್ ನಡೆಸಿದ ಪರಿಶೋಧನೆಯ ಫಲವಾಗಿ ಕಟಾಂಗ ಪ್ರದೇಶ ಕಾಂಗೋಸ್ವತಂತ್ರ್ಯರಾಜ್ಯಕ್ಕೆ ಒಳಪಟ್ಟಿತು. ಕಾಂಗೋ ಸ್ವತಂತ್ರ್ಯರಾಜ್ಯವೂ ಕಟಾಂಗ ಕಂಪನಿಯೂ ಕೂಡಿಕೊಂಡು ಈ ಪ್ರದೇಶದಲ್ಲಿ ಖನಿಜ ತೆಗೆಯುವ ಹಕ್ಕನ್ನು ಬೆಲ್ಜಿಯನ್ ವ್ಯಾಪಾರಸಂಸ್ಥೆಯೊಂದಕ್ಕೆ ನೀಡಿದುವು (1906). 1910ರಲ್ಲಿ ಎಲಿಸಬೆತ್‍ವಿಲ್ ಕಟಾಂಗದ ರಾಜಧಾನಿಯಾದ ಮೇಲೆ ಬೆಲ್ಜಿಯನರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ನೆಲೆಸಿದರು. 1960ರ ಜೂನ್ 30ರಂದು ಕಾಂಗೋ ಸ್ವತಂತ್ರ್ಯವಾದ ಮೇಲೆ ಕಟಾಂಗದಲ್ಲಿ ಮೋಯಿಸ್ ಷೋಂಬೆ ಪ್ರಬಲನಾಗಿ, ಕೇಂದ್ರದಲ್ಲಿ ಕಮ್ಯೂನಿಸ್ಟ್ ಸರ್ಕಾರವಿದೆಯೆಂಬ ನೆವವೊಡ್ಡಿ ಕಟಾಂಗದ ಸ್ವಾತಂತ್ರ್ಯವನ್ನು ಸಾರಿದನಲ್ಲದೆ (1960ರ ಜುಲೈ 11) ಮುಂದೆ ತಾನೇ ಅಧ್ಯಕ್ಷನಾದ. ಕಾಂಗೋ ರಾಜ್ಯಗಳ ಒಕ್ಕೂಟಕ್ಕೆ ಷೋಂಬೆ ಸಮ್ಮತಿಸಿದನಾದರೂ ಕಟಾಂಗದ ಸ್ವಾಯತ್ತೆಯನ್ನು ಪುರಸ್ಕರಿಸಬೇಕೆಂಬುದು ಆತನ ವಾದವಾಗಿತ್ತು. 1962ರಲ್ಲಿ ವಿಶ್ವಸಂಸ್ಥೆ ಕಟಾಂಗದ ಮೇಲೆ ಸೇನಾ ಕ್ರಮ ಕೈಕೊಂಡ ಮೇಲೆ ಇದರ ಪ್ರತ್ಯೇಕತೆ ಕೊನೆಗೊಂಡಿತು. ಕೇಂದ್ರಸರ್ಕಾರ ಇದನ್ನು ಉತ್ತರ ಕಟಾಂಗ ಮತ್ತು ಲೂವಲಾಬ ಎಂದೂ ಪೂರ್ವ ಕಟಾಂಗ ಎಂದೂ ಎರಡು ಪ್ರಾಂತ್ಯಗಳಾಗಿ ವಿಂಗಡಿಸಿದೆ. (ಎ.ಕಿ.)

**ಕಟಾರಿ, ಆರ್ ಡಿ :** ಭಾರತೀಯ ನೌಕಾಬಲದ ವರಿಷ್ಠ ಹುದ್ದೆಗೆ ಏರಿದ ಪ್ರಥಮ ಭಾರತೀಯ. ರಾಮದಾಸ್ ಡಿ.ಕಟಾರಿಯವರ ಜನನ ತಮಿಳುನಾಡಿನ ಚೆಂಗಲ್‍ಪೇಟೆಯಲ್ಲಿ. ನೌಕಾಬಲದ ಡಫರಿನ್ ಎಂಬ ಶಿಕ್ಷಣ ನೌಕೆಯಲ್ಲಿ ಮೊದಲು ಶಿಕ್ಷಣ ದೊರೆಯಿತು. ಮುಂದೆ ಎರಡನೆಯ ಮಹಾಯುದ್ಧದಲ್ಲಿ ಅಟ್ಲಾಂಟಿಕ್ ಮತ್ತು ಹಿಂದೂ ಸಾಗರಗಳಲ್ಲಿ ಯುದ್ಧಾನುಭವ ಗಳಿಸಿದರು. ಸ್ವಲ್ಪಕಾಲ ನೌಕಾಬಲದಲ್ಲಿ ಶಿಕ್ಷಕರಾಗಿಯೂ ಇದ್ದರು.

ಐ.ಎನ್.ಎಸ್, ಕೃಷ್ಣ ಎಂಬ ಹಡಗಿನ ನಾಯಕರಾಗಿದ್ದಾಗ ಭಾರತದ ಮೊದಲನೆಯ ಐ.ಎನ್.ಎಸ್. ನ್ಯೂ ಡೆಲ್ಲಿ ಎಂಬ ಹೆಸರಿನ ಕ್ರೂಸರ್ ನೌಕೆಗೆ ಸೇರಿಕೊಳ್ಳಲು ಇಂಗ್ಲೆಂಡಿಗೆ ತೆರಳಿದರು. ಜುಲೈ 1948ರಲ್ಲಿ ಅದನ್ನು ವಹಿಸಿ ಕೊಂಡಂದಿನಿಂದ 1949ರ ಆದಿ ಭಾಗದವರೆಗೆ ಭಾರತದ ಪ್ರಥಮ ಪತಾಕಾ ನೌಕೆಯ (ಫ್ಲಾಗ್‍ಶಿಪ್) ಮುಖ್ಯಸ್ಥರು ಇವರೇ. ಆ ಬಳಿಕ ಭಾರತೀಯ ನೌಕಾದಳದ ಡಿಸ್ಟ್ರಾಯರ್ ಪಡೆಯ ಅಧಿನಾಯಕರಾಗಿ ಕೆಲಸಮಾಡಿ ಮುಂದೆ ಐ.ಎನ್.ಎಸ್. ರಾಜಪುತ್ ಎಂಬ ನೌಕೆಯ ನಾಯಕತ್ವವನ್ನು ವಹಿಸಿಕೊಂಡರು. 1954ರಲ್ಲಿ

ನೌಕಾಬಲದ ಉಪಮುಖ್ಯಸ್ಥರಾದರು. ಏಪ್ರಿಲ್ 1958ರಲ್ಲಿ ಇವರು ವೈಸ್ ಅಡ್ಮಿರಲ್ ದರ್ಜೆಗೆ (ಅಂದಿನ ವರಿಷ್ಠ ದರ್ಜೆ) ಬಡ್ತಿ ಪಡೆದು ನೌಕಾಬಲದ ಮುಖ್ಯಸ್ಥರಾದರು. ನಿವೃತ್ತರಾದುದು 1962ರಲ್ಲಿ. (ಎ.ಎನ್.ಎಸ್.ಎಂ.)

**ಕಟಾಸ್ :** ಉತ್ತರ ಪಂಜಾಬಿನಲ್ಲಿ ಒಂದು ಪ್ರಸಿದ್ಧ ಯಾತ್ರಾಸ್ಥಳ. ಶಿವನು ಸತಿಯನ್ನು ಕಳೆದುಕೊಂಡಾಗ ಅವನ ಕಣ್ಣೀರಿನಿಂದ ಕಟಾಕಕ್ಷವೆಂಬ ಹೆಸರಿನ ಇಲ್ಲಿನ ಸರೋವರಗಳಲ್ಲೊಂದು ಆಯಿತೆಂದು ಸ್ಥಳಪುರಾಣ ತಿಳಿಸುತ್ತದೆ.

ಇಲ್ಲಿ ಕ್ಷೀಣದಶೆಯಲ್ಲಿರುವ ಹನ್ನೆರಡು ದೇವಾಲಯಗಳಲ್ಲಿ ಏಳು, ಪಾಂಡವರು ತಮ್ಮ ವನವಾಸದ ಕಾಲದಲ್ಲಿ ಕಟ್ಟಿದವೆಂದು ಒಂದು ಐತಿಹ್ಯವಿದೆ. ಈ ದೇವಾಲಯಗಳ ವಾಸ್ತು ಶಿಲ್ಪ ಕಾಶ್ಮೀರಿ ಶೈಲಿಯನ್ನು ಹೋಲುತ್ತದೆ. (ಜಿ.ಎಚ್.)

**ಕಟಾಹ :** ಆಗ್ನೇಯ ಏಷ್ಯದ ಒಂದು ಪ್ರಾಚೀನ ಸ್ಥಳ. ಮೊಟ್ಟಮೊದಲನೆಯದಾಗಿ ಸಂಸ್ಕೃತ ಪುರಾಣಸಾಹಿತ್ಯದಲ್ಲಿ ಇದರ ಉಲ್ಲೇಖ ಬರುತ್ತದೆ. ಭೂಮಿ ಒಂಬತ್ತು ಭಾಗಗಳಿಂದ ಕೂಡಿದುದೆಂದೂ ಕಟಾಹ ಅವುಗಳಲ್ಲಿ ಒಂದೆಂದೂ ಕೆಲವು ಪುರಾಣಗಳು ತಿಳಿಸುತ್ತವೆ. ಮತ್ತೆ ಕೆಲವು ಪುರಾಣಗಳಲ್ಲಿ ಸುವರ್ಣದ್ವೀಪವೇ ಇದೆನ್ನಲಾಗಿದೆ. ಕಟಾಹ ದ್ವೀಪ ಮತ್ತು ಸುವರ್ಣದ್ವೀಪಗಳು ಭಿನ್ನವಾದವೆಂಬುದು ಕಥಾಸರಿತ್ಸಾಗರದಿಂದ ವೇದ್ಯವಾಗುವ ಅಂಶ. ಇತ್ತೀಚಿನ ಸಂಶೋಧನೆಗಳಿಂದ ಇದು ಮಲಯ ಪರ್ಯಾಯದ್ವೀಪದಲ್ಲಿ ಪೀನಾಂಗ್ ಬಳಿ ಇರುವ ಈಗಿನ ಕೆಡ್ಡಹ್ ಎಂಬ ಸ್ಥಳವೆಂದು ತಿಳಿದುಬಂದಿದೆ.

ಪ್ರಾಚೀನ ಕಾಲದಿಂದಲೂ ಭಾರತಕ್ಕೂ ಕಟಾಹಕ್ಕೂ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳಿದ್ದುವು. ಗಂಗೈಕೊಂಡ ಚೋಳನೆಂದು ಬಿರುದಾಂಕಿತನಾದ ಒಂದನೆಯ ರಾಜೇಂದ್ರಚೋಳ (1012–44) 1025ರಲ್ಲಿ ಅಲ್ಲಿಗೆ ದಂಡೆತ್ತಿಹೋದನೆಂದು ತಿರುವಾಳಂಗಾಡು ತಾಮ್ರಶಾಸನ ತಿಳಿಸುತ್ತದೆ. ರಾಜೇಂದ್ರಚೋಳ, ಪ್ರಕ್ಷುಬ್ಧ ಸಮುದ್ರದ ಮೇಲೆ ಅನೇಕ ಹಡಗುಗಳನ್ನು ಕಳಿಸಿ, ಕಡಾರಂ ದೊರೆಯಾದ ಸಂಗ್ರಾಮ ವಿಜಯೋತ್ತುಂಗವರ್ಮನನ್ನು ಅವನ ಅಶ್ವಸೇನೆಯೊಂದಿಗೆ ಹಿಡಿದು, ಆ ದೊರೆ ಸಂಗ್ರಹಿಸಿದ್ದ ಐಶ್ವರ್ಯರಾಶಿಯನ್ನು ವಶಪಡಿಸಿಕೊಂಡನಲ್ಲದೆ, ಶ್ರೀವಿಜಯ, ಪಣ್ಣೈ, ಮಲ್ಯೆಯೂರ್ ಮುಂತಾದವನ್ನು ಆಕ್ರಮಿಸಿಕೊಂಡನೆಂದೂ ಆಳವಾದ ಸಮುದ್ರದಿಂದ ರಕ್ಷಿತವಾಗಿದ್ದ ಕಡಾರಂ ಕೂಡ ಇವನ ಸ್ವಾಧೀನವಾಯಿತೆಂದೂ ತಿಳಿದುಬಂದಿದೆ. ಬಹುಶಃ ಕಡಾರಂ ಎಂಬುದು ಕಟಾಹದ ಇನ್ನೊಂದು ಹೆಸರಾಗಿತ್ತಲ್ಲದೆ ಅದು ಶ್ರೀವಿಜಯಸಾಮ್ರಾಜ್ಯದ ರಾಜಧಾನಿಯಾಗಿತ್ತು.

ರಾಜೇಂದ್ರಚೋಳನ ಈ ದಂಡಯಾತ್ರೆಗೆ ಕಾರಣವೇನೆಂಬುದು ಸ್ಪಷ್ಟವಾಗಿಲ್ಲ. ರಾಜೇಂದ್ರಚೋಳನ ತಂದೆಯ ಕಾಲದಲ್ಲಿ ಈ ಎರಡು ಸಾಮ್ರಾಜ್ಯಗಳ ನಡುವೆ ಸ್ನೇಹಭಾವವೇ ಇತ್ತು. ರಾಜೇಂದ್ರಚೋಳ ಪಟ್ಟಕ್ಕೆ ಬಂದ ಮೇಲೂ ಈ ಬಾಂಧವ್ಯ ಬೆಳೆದುಬಂದಿತ್ತು. ಹೀಗಿದ್ದಾಗ 1014–1025ರ ವರೆಗಿನ ಕಾಲದಲ್ಲಿ ಈ ಸ್ನೇಹ ವೈರವಾಗಿ ತಿರುಗಿದ್ದಾದರೂ ಏಕೆಂಬುದು ಗೊತ್ತಾಗುವುದಿಲ್ಲ. ಗಂಗಾನದಿಯ ಪ್ರದೇಶದಲ್ಲಿ ನಡೆಸಿದ ಜೈತ್ರಯಾತ್ರೆಯಿಂದ ಪ್ರತಿಷ್ಠೆ ಬೆಳೆಸಿಕೊಂಡ ರಾಜೇಂದ್ರಚೋಳ, ಶೈಲೇಂದ್ರ ಸಾಮ್ರಾಜ್ಯಕ್ಕೆ ತನ್ನ ನೌಕಾಶಕ್ತಿಯೆಷ್ಟೆಂಬುದನ್ನು ತೋರ್ಪಡಿಸಲು ಈ ವಿಜಯಯಾತ್ರೆ ಕೈಕೊಂಡಿದ್ದಿರಬಹುದು. ಭಾರತಕ್ಕೂ ದೂರ ಪ್ರಾಚ್ಯಕ್ಕೂ ನಡುವಣ ವ್ಯಾಪಾರದ ಮೇಲೆ ಸ್ವಾಮ್ಯ ಹೊಂದುವುದು ಇವನ ಉದ್ದೇಶವಾಗಿದ್ದರೂ ಇರಬಹುದು. ತಮಿಳು ವ್ಯಾಪಾರಿಗಳು ಈ ಪ್ರದೇಶದ ಮಣಿಮಂಗಳಂ ಎಂಬಲ್ಲಿ ವ್ಯಾಪಾರಸಂಸ್ಥೆಗಳನ್ನು ಸ್ಥಾಪಿಸಿದರೆಂದು ಹೇಳಲಾಗಿದೆ. ಕಟಾಹದ ಮೇಲೆ ರಾಜೇಂದ್ರಚೋಳನ ಅಧಿಕಾರ ಎಷ್ಟು ಕಾಲ ನಡೆಯಿತೆಂಬ ಬಗ್ಗೆಯೂ ನಿಖರವಾದ ಆಧಾರಗಳೇನೂ ದೊರಕುವುದಿಲ್ಲ.

ಅನಂತರ 1068ರಲ್ಲಿ ಒಂದನೆಯ ವೀರರಾಜೇಂದ್ರ ಕಟಾಹದ ಮೇಲೆ ಮತ್ತೆ ದಂಡೆತ್ತಿ ಹೋಗಿ ಅಲ್ಲಿಯ ರಾಜನನ್ನು ಸೋಲಿಸಿದನೆಂದೂ ಅನಂತರ ಇದನ್ನು ಅವನಿಗೇ ಹಿಂದಿರುಗಿಸಿದನೆಂದೂ ಶಾಸನಗಳಿಂದ ಗೊತ್ತಾಗುತ್ತದೆ. 13ನೆಯ ಶತಮಾನದ ಅನಂತರ ಆಗ್ನೇಯ ಏಷ್ಯದ ಇತರ ಭಾಗಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವ ನಶಿಸಿಹೋದಂತೆ ಕಟಾಹದಲ್ಲಿಯೂ ಕ್ಷೀಣಿಸಿತು. (ಎ.ವಿ.ಎನ್.; ಜಿ.ಆರ್.ಆರ್.)

**ಕಟುಕಾರಕ :** ಕಹಿಯಾದ ಕ್ರಿಯಾಂಶವಿರುವ, ಹಸಿವನ್ನು ಹುಟ್ಟಿಸುವ ಮದು (ಬಿಟ್ಟರ್ಸ್). ಇದರಲ್ಲಿ ಎರಡು ಬಗೆಗಳಿವೆ. ಕ್ವಾಸಿಯ ಚಕ್ಕೆ, ಕೆಲಂಬ ಬೇರುಗಳು, ರೇವಲ್ಚಿನ್ನಿ (ರುಬಾರ್ಬ್), ಲೋಳೆಸರ (ಆಲೋಸ್)–ಇವು ಸರಳ ಕಟುಕಾರಕಗಳು. ಪರಿಮಳದ (ಆರೋಮ್ಯಾಟಿಕ್) ಕಟುಕಾರಕಗಳಲ್ಲಿ ಕಿರಾಯತ, ಅಂಗೊಸ್ಟೂರ, ಕ್ಯಾಸ್ಕರಿಲ್ಲ, ಸೀಮೆಸೇವಂತಿಗೆ (ಕ್ಯಾಮೊಮೈಲ್), ಕಾಡುದಾಲ್ಚಿನ್ನಿ, ಚಿರಾಯತ (ಜಂಷಿಯನ್), ನಿಂಬೆ ಅಲ್ಲದೆ ಕಿತ್ತಳೆ ಸಿಪ್ಪೆಗಳಿವೆ. ಇವುಗಳಲ್ಲಿ ಆರಿಹೋಗುವ ಸುವಾಸನೆಯ ಎಣ್ಣೆಗಳಿದ್ದು ರುಚಿ ಕೊಡುವಂತಿವೆ. ಸರಳ ಕಟುಕಾರಕಕ್ಕಿಂತ ಪರಿಮಳದ ಕಟುಕಾರಕ ಹೆಚ್ಚು ಪರಿಣಾಮಕಾರಿ. ಬೇಗನೆ ವರ್ತಿಸುತ್ತದೆ. ಮದ್ಯಾರ್ಕವಾಗಿ (ಟಿಂಕ್ಚರ್) ತಯಾರಾದದ್ದು ಇನ್ನೂ ಸಾರಯುತ. ಕಟುಕಾರಕವನ್ನು ಬಾಯಿಗೆ ಹಾಕಿಕೊಂಡಾಗ ಜೊಲ್ಲುಸುರಿವಂತೆ ಮಾಡಿ, ರುಚಿಕುಡಿಗಳನ್ನು (ಟೇಸ್ಟ್ ಬಡ್ಸ್) ಹಿಮ್ಮುರಿವ ವರ್ತನೆಯಿಂದ (ರಿಫ್ಲೆಕ್ಸ್ ಆಕ್ಷನ್) ಚೋದಿಸಿ ಜಠರ ರಸವನ್ನೂ ಸುರಿಸುವಂತೆ ಮಾಡುತ್ತವೆ. ಆದ್ದರಿಂದಲೇ ಇವನ್ನು ಸುಮ್ಮನೆ ಮಾತ್ರೆಯಂತೆ ನುಂಗಿಬಿಟ್ಟರೆ ಹಸಿವನ್ನು ಹೆಚ್ಚಿಸವು; ಜೊಲ್ಲು, ಜಠರ ರಸಗಳನ್ನೂ ಚೋದಿಸವು. ಬಹಳ ದಿನಗಳು ಹಾಸಿಗೆ ಹಿಡಿದಿರುವ ರೋಗಿಗಳಿಗೆ ಹಸಿವು ಹುಟ್ಟಿಸಲು ಇವು ಬಲು ಸಹಾಯಕ. ಈ ಮದ್ದುಗಳಿರುವ ಪಾನೀಯಗಳನ್ನು ಊಟಕ್ಕೆ ಸು. ಅರೆತಾಸು ಮುನ್ನ ಕೊಡಬೇಕು. ಬಲು ಕಹಿಯಾದ ಕಾಜವಾರವಿಷ (ಸ್ಟ್ರಿಕ್ನೀನ್), ಕ್ವಿನೀನುಗಳಿರುವ ಬಲವರ್ಧಗಳು ಬಳಕೆಯಲ್ಲಿರುವುದು ಸರಿಯಲ್ಲ. ಮೇಲೆ ತಿಳಿಸಿದವಕ್ಕಿಂತ ಇವೇನೂ ಮೇಲ್ತರದವಲ್ಲ.

ಕಟುಕಾರಕಗಳನ್ನು ಬಹುಮಟ್ಟಿಗೆ ಊರಿದಸಾರವಾಗಿ ತಯಾರಿಸುವರು. ಗಿಡಗಳ ಹೂ, ಎಲೆ, ತೊಗಟೆ ಇಲ್ಲವೇ ಬೇರನ್ನು ಪಾತ್ರೆಯಲ್ಲಿ ಹಾಕಿ ಅದರ ಮೇಲೆ ಕುದಿವ ನೀರನ್ನು ಸುರಿದು, ತುಸು ಹೊತ್ತಾದ ಮೇಲೆ ಬಗ್ಗಿಸಿ ನೀರನ್ನು ಬಸಿದುಕೊಂಡು ಕುಡಿಯಲು ಕೊಡುವುದುಂಟು. ಕೆಲ ವೇಳೆ, ತಣ್ಣೀರಿನ ಸಾರಕವೇ ಸಾಕಾಗುತ್ತದೆ. ಮದ್ಯಸಾರದಿಂದಲೂ ಹೀಗೆ ಸಾರ ತೆಗೆವುದುಂಟು.

ಜಠರದ ಮೇಲೆ ಎಲ್ಲ ಕಟುಕಾರಕಗಳ ಪ್ರಭಾವ ಒಂದೇ ತೆರನಾದರೂ ಕರುಳುಗಳ ಮೇಲಿನ ಪ್ರಭಾವ ಬೇರೆ. ಪರಿಮಳದ ಕಟುಕಾರಕಗಳಲ್ಲಿ ಚೊಗರಿನ (ಅಸ್ಟ್ರಿಂಜೆಂಟ್) ಗುಣವಿರುವ ಟ್ಯಾನಿನ್ ಇರುವುದರಿಂದ ಇವನ್ನು ಬಹಳ ದಿನಗಳು ಸೇವಿಸುತ್ತಿದ್ದರೆ ಮಲಕಟ್ಟುತ್ತದೆ. ಇನ್ನು ಕೆಲವು ಹೊಟ್ಟೆಯಲ್ಲಿನ ವಾಯು ಕಳೆವುವು. (ಡಿ.ಎಸ್.ಎಸ್.)

**ಕಟೇನಿಯ :** ಸಿಸಿಲಿಯ ಒಂದು ನಗರ. ಇದೇ ಹೆಸರಿನ ಪ್ರಾಂತ್ಯದ ರಾಜಧಾನಿ. ಐಯೋನಿಯನ್ ಸಮುದ್ರತೀರದ ವಿಸ್ತಾರವಾದ ಮೈದಾನದಲ್ಲಿ ಎಟ್ನ ಅಗ್ನಿಪರ್ವತಕ್ಕೆ 27 ಕಿಮೀ ದೂರದಲ್ಲಿದೆ. ಸಮುದ್ರ ಮಟ್ಟದಿಂದ 13.1 ಮೀ ಗಳ ಎತ್ತರದಲ್ಲಿದೆ. ಜನಸಂಖ್ಯೆ 291,274 (2011). ಅಗ್ನಿಪರ್ವತಗಳು ಚಿಮ್ಮಿದ ಶಿಲಾ ಪ್ರವಾಹ ಆರಿ ಸಂಭವಿಸಿದ ಚಿಪ್ಪಿನ ಮೇಲೆ ಕಟೇನಿಯ ನಿಂತಿದೆ. ನೆಲ ಉತ್ತರದಿಂದ ದಕ್ಷಿಣಕ್ಕೆ ಇಳಿಜಾರು. ಇಲ್ಲಿಯ ವಾಯುಗುಣ ಸುಖೋಷ್ಣ, ಹಿತಕರ.

11ನೆಯ ಜನವರಿ 1693ರಂದು ಸಂಭವಿಸಿದ ಭೂಕಂಪದಲ್ಲಿ ಈ ನಗರ ಸಂಪೂರ್ಣವಾಗಿ ನೆಲಸಮವಾಗಿತ್ತು. ಮತ್ತೆ ಇದನ್ನು ನಕ್ಷೆಗೆ ಅನುಗುಣವಾಗಿ ಕಟ್ಟಲಾಯಿತು. ಆದ್ದರಿಂದ ಈ ನಗರದ ನಡುಭಾಗದ ವಿಶಾಲ ಬೀದಿಗಳ ಆಚೀಚೆ ಚರ್ಚುಗಳೂ ಅರಮನೆಗಳೂ ಇದ್ದು 18ನೆಯ ಶತಮಾನವನ್ನೇ ನೆನಪಿಗೆ ತರುತ್ತವೆ. ಇದು ಕ್ರೈಸ್ತ ಮಠಾಧಿಪತಿಯ ಸ್ಥಾನ. ಆಧುನಿಕ ಕಟೇನಿಯ ಕೈಗಾರಿಕೆಯ ಮತ್ತು ಸರಕು ಸಾಗಾಣಿಕೆಯ ಕೇಂದ್ರ. ಪಲರ್ಮೋ, ಮೆಸೀನ ಮತ್ತು ಸಿರಕಸ್‌ಗಳಿಗೆ ಇಲ್ಲಿಂದ ರೈಲ್ವೆ ಸಂಪರ್ಕವಿದೆ. ಇದು ಇಟಲಿಯ ಪ್ರಮುಖ ಬಂದರುಗಳಲ್ಲೊಂದು. ಬಳಿಯಲ್ಲೆ ವಿಮಾನ ನಿಲ್ದಾಣವು ಉಂಟು. ಆಹಾರ ಸಂಸ್ಕರಣ, ಯಂತ್ರ ಮತ್ತು ರಾಸಾಯನಿಕ ಪದಾರ್ಥ ತಯಾರಿಕೆ ಇಲ್ಲಿಯ ಮುಖ್ಯ ಕೈಗಾರಿಕೆಗಳು. ಮೀನುಗಾರಿಕೆಯೂ ಒಂದು ಕಸಬು. ಸಿಸಿಲಿಯ ಶುದ್ಧ ಗಂಧಕದ ಒಟ್ಟು ಉತ್ಪಾದನೆಯಲ್ಲಿ ಅರ್ಧಭಾಗ ಕಟೇನಿಯ ಕಾರ್ಖಾನೆಗಳಿಂದಲೇ ಹೊರಬರುತ್ತದೆ. ಈ ನಗರದ ಸುತ್ತಲೂ ಕೃಷಿ ಕ್ಷೇತ್ರಗಳಿರುವುದರಿಂದ ಇದು ವ್ಯವಸಾಯೋತ್ಪನ್ನದ ಮಾರುಕಟ್ಟೆಯೂ ಆಗಿದೆ. ಬಾದಾಮಿ ಮತ್ತು ಕಿತ್ತಳೆಹಣ್ಣು ಇಲ್ಲಿಂದ ರಫ್ತಾಗುತ್ತವೆ.

6ನೆಯ ಶತಮಾನದಲ್ಲಿದ್ದ ಇಮರದ ಗ್ರೀಕ್ ಪದ್ಯಕಾರ ಕವಿ ಸ್ಟೆಸಿಕೊರಸನ ಸಮಾಧಿಯನ್ನು ಈ ನಗರದಲ್ಲಿ ಕಾಣಬಹುದು. ಕಟೇನಿಯದ ಸಾಂಸ್ಕೃತಿಕ ಚರಿತ್ರೆ ಆಗಲೇ ಆರಂಭವಾಯಿತೆನ್ನಬಹುದು. ಕಟೇನಿಯ ವಿಶ್ವವಿದ್ಯಾಲಯ ಸ್ಥಾಪಿತವಾದದ್ದು 1434ರಲ್ಲಿ–ಆರಗಾನಿನ ಆಲ್ಫಾನ್ಸೋವಿನಿಂದ, 1755ರಲ್ಲಿ ಸ್ಥಾಪಿತವಾದ ಇಲ್ಲಿಯ ಗ್ರಂಥಾಲಯದಲ್ಲಿ 14 ಮತ್ತು 15ನೆಯ ಶತಮಾನಗಳ ಅಮೂಲ್ಯ ಕೈಬರೆಹದ ಪ್ರತಿಗಳಿವೆ. ಇಲ್ಲಿಯ ಪೌರಸಭಾ ಗ್ರಂಥಾಲಯದಲ್ಲಿರುವ 14ನೆಯ ಶತಮಾನದ ಪೀಟ್ರೊ ಕವಲಿನಿ ಪಂಥದ ಅಲಂಕೃತಾಕ್ಷರದ ಬೈಬಲ್ ಗ್ರಂಥವೂ ಅನೇಕರ ಹಸ್ತಾಕ್ಷರಗಳೂ ಚರ್ಮ ಕಾಗದದ ಹಸ್ತಪ್ರತಿಗಳೂ ಇವೆ.

ನಾರ್ಮ ಸಂಗೀತನಾಟಕವನ್ನು ರಚಿಸಿದ ವಿಂಚೆಂಸ್ಸೊ ಬೆಲೀನಿ ಹುಟ್ಟಿದ್ದು ಕಟೇನಿಯದಲ್ಲಿ (1801). ಈತನ ಜನ್ಮಸ್ಥಳದಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಇವನ ಶವದ ಹೊದಿಕೆಯನ್ನೂ ಈತನ ಹಾರ್ಪ್‌ಸಿಕಾರ್ಡ್ ತಂತಿ ವಾದ್ಯವನ್ನೂ ಇತರ ಸ್ಮಾರಕಗಳನ್ನೂ ಇಟ್ಟಿದ್ದಾರೆ. ಈತ ಸತ್ತ 40 ವರ್ಷಗಳ ಅನಂತರ 1835ರಲ್ಲಿ ಇವರ ಅವಶೇಷಗಳನ್ನು ಕಟೇನಿಯಕ್ಕೆ ತಂದು ಚರ್ಚಿನಲ್ಲಿ ಸಮಾಧಿ ಮಾಡಲಾಯಿತು. ಕವಿ ಮೇರಿಯೊ ರಾಪಿಸಾರ್ಡಿ, ಕಾದಂಬರಿಕಾರ ಗಯವನ್ನಿ ವೇರ್ಗ–ಇವರು ಕಟೇನಿಯದವರು.

2ನೆಯ ಶತಮಾನದ ರೋಮನ್ ವರ್ತುಲ ನಾಟಕಶಾಲೆ, ರೋಮನ್ ಸ್ನಾನ ಘಟ್ಟ ಮತ್ತು ಕಾಲುವೆಗಳ ಅವಶೇಷಗಳೂ 13ನೆಯ ಶತಮಾನದಲ್ಲಿ ಎರಡನೆಯ ಫ್ರೆಡರಿಕನಿಗಾಗಿ ನಿರ್ಮಿಸಲಾದ ದುರ್ಗವಾಗಿದ್ದು ಈಗ ವಸ್ತು ಸಂಗ್ರಹಾಲಯವಾಗಿರುವ ಕಟ್ಟಡವೂ ಇನ್ನೂ ಅನೇಕ ಕಟ್ಟಡಗಳೂ ಶಿಲ್ಪಗಳೂ ನಗರದಲ್ಲಿವೆ.

ಶಿಲಾ ಪ್ರವಾಹದಲ್ಲಿ ಮುಚ್ಚಿಹೋಗಿರುವ, ಮೊದಲನೆಯ ರೋಜರ್ ನಿರ್ಮಿಸಿದ, ಚರ್ಚಿನ ಅವಶೇಷಗಳಿವೆ. 1693ರ ಭೂಕಂಪದ ಅನಂತರ ನಾರ್ಮನ್ ವಾಸ್ತುಶಿಲ್ಪಿಗಳಾದ ಫ್ರಾಫಿಯಾಲ್ಮೊ ಫಲಜೊಟೊ ಮತ್ತು ಗಿಯಾವನಿ ಬಟಿಸ್ಟವಕಾರಿನಿ (1702–68) ಇವರು ಇದನ್ನು ಪುನಃ ನಿರ್ಮಿಸಿದರು. ಸಂತ ಅಗಾಥ ಚರ್ಚಿನಲ್ಲಿ ಸಿಯ್ನಾದ ಗಯವನ್ನಿ ಬಾರ್‌ಟುಲೊ ನಿರ್ಮಿಸಿದ 14ನೆಯ ಶತಮಾನದ ಸಂತನ ಬೆಳ್ಳಿ ವಿಗ್ರಹ ಮತ್ತು ಅವಶೇಷಗಳನ್ನೊಳಗೊಂಡ ಕರಂಡ ಇವೆ. ಇವನ್ನು ಸಂತನ ಉತ್ಸವದ ದಿನ ಪ್ರದರ್ಶಿಸುತ್ತಾರೆ. ಬೆಲ್ಲೀನಿಯ ಸಮಾಧಿಯ ಹತ್ತಿರವೇ 17ನೆಯ ಶತಮಾನದ ಸಂತ ಅಗಾಥ ಚರ್ಚಿದೆ. 1736ರಲ್ಲಿ ನಿರ್ಮಿಸಲಾದ ಆನೆ ಕಾರಂಜಿಯನ್ನೂ ನಗರ ಸಭಾ ಮಂದಿರವನ್ನೂ ಕಾಣಬಹುದು.

ಸಿಸಿಲಿಯಲ್ಲೆ ದೊಡ್ಡದಾದ (17ನೆಯ ಶತಮಾನದ) ಸಂತ ನಿಕೊಲೊ ಚರ್ಚ್ 65ಮೀ ಎತ್ತರದ ಗೋಪುರದಿಂದ ಕಂಗೊಳಿಸುತ್ತದೆ. ಇದಕ್ಕೆ ಸೇರಿದ ಕ್ರೈಸ್ತ ಸಂನ್ಯಾಸಿ ಮಠ 14ನೆಯ ಶತಮಾನದಲ್ಲಿ ಪ್ರಾರಂಭವಾಗಿ ಮೂರು ಶತಮಾನಗಳ ಅನಂತರ ಪೂರ್ಣಗೊಂಡಿತು. ಪ್ರಪಂಚದ ದೊಡ್ಡ ಮಠಗಳಲ್ಲಿ ಇದೂ ಒಂದು ಎಂದು ಇದನ್ನು ಹೊಗಳುತ್ತಾರೆ. 17ನೆಯ ಶತಮಾನದ ಮಾದರಿ ಇದು. 18ನೆಯ ಶತಮಾನದ ಸಂತ ಕಾರ್ಸಿರೆ ಚರ್ಚ್ 13ನೆಯ ಶತಮಾನದ ಬಿಷಪ್ ಆರಾಧನಾ ಮಂದಿರದ ಹೆಬ್ಬಾಗಿಲನ್ನೊಳಗೊಂಡಿದೆ. ಕಪ್ಪು ಲಾವಾ ಶಿಲೆಯಿಂದಲೂ ಬಿಳಿಯ ಸುಣ್ಣಕಲ್ಲಿನಿಂದಲೂ ಕಟ್ಟಿರುವ 18ನೆಯ ಶತಮಾನದ ಪೋರ್ಟಾ ಗರಿಬಾಲ್ಡಿ ಕಟ್ಟಡ ಬಲು ಆಕರ್ಷಕ.

**ಚರಿತ್ರೆ:** ಕಟೇನಿಯಗರ ಪ್ರಶ.ಪೂ 729ರಲ್ಲಿ ನ್ಯಾಕ್ಸಾನಿನ ಕ್ಯಾಲ್ಸಿಡಿಯನ್ ವಲಸೆಗಾರರಿಂದ ಸ್ಥಾಪಿತವಾಯಿತು. ಲ್ಯಾಟಿನಿನಲ್ಲಿ ಕಾಟಿನಮ್ ಎಂದರೆ ಜಲಾನಯನ ಭೂಮಿ. ಇದು ಕಟೇನಿಯದ ಭೌಗೋಳಿಕ ಸನ್ನಿವೇಶವನ್ನು ತಿಳಿಸುತ್ತದೆ. ಸಿರಕಸಿನ ಕ್ರೂರ ದೊರೆ ಒಂದನೆಯ ಹೈಯರೋ (ಪ್ರ.ಶ.ಪೂ 478–466) ಕಟೇನಿಯವನ್ನಾಕ್ರಮಿಸಿ ಇಲ್ಲಿಯವರನ್ನೆಲ್ಲ ಲಿಯೊಂಟನಿಗೆ ಸಾಗಿಸಿ 5,000 ಮಂದಿ ಸಿರಕಸ್ ಪ್ರಜೆಗಳನ್ನೂ 5,000 ಮಂದಿ ಫಿಲೊಫಿಯನ್ ಜನರನ್ನೂ ತಂದು ಪಟ್ಟಣದ ಹೆಸರನ್ನು ಎಟ್ನ ಎಂದು ಬದಲಿಸಿದ. ಪ್ರ.ಶ.ಪೂ 461ರಲ್ಲಿ ಇಲ್ಲಿಯ ಪ್ರಾಚೀನ ನಿವಾಸಿಗಳು ಪಟ್ಟಣವನ್ನು ಮತ್ತೆ ವಶಮಾಡಿಕೊಂಡು ಅದಕ್ಕೆ ಪೂರ್ವದ ಹೆಸರನ್ನೇ ಇರಿಸಿದರು. ಕಟೇನಿಯ ಪ್ರ.ಶ.ಪೂ 415–413ರ ವರೆಗೆ ಅಥೆನ್ಸಿನ ಯುದ್ಧ ನೆಲೆಯಾಗಿ ಸಿರಕಸ್ ಜನರ ಯುದ್ಧಕ್ಕೆ ಸಹಾಯ ಮಾಡಿತು. 403ರಲ್ಲಿ ಡೆಯನಾಸಿಯಸ್ ಕಟೇನಿಯವನ್ನು ಕೊಳ್ಳೆ ಹೊಡೆದು, ಸ್ಥಳೀಯರನ್ನು ಕೈಸೆರೆ ಹಿಡಿದು ಅವರನ್ನು ಗುಲಾಮರಾಗಿ ಮಾಡಿ, ತನ್ನ ಕೂಲಿ ಸೈನಿಕರಿಗೆ ಇದನ್ನು ನೆಲೆ ಮಾಡಿಕೊಟ್ಟ. ಪ್ರ.ಶ.ಪೂ 263ರ ಮೊದಲನೆಯ ಪ್ಯೂನಿಕ್ ಯುದ್ಧದಲ್ಲಿ ರೋಮನರು ಸಿಸಿಲಿಯ ಪಟ್ಟಣಗಳಲ್ಲಿ ಮೊದಲನೆಯದಾಗಿ ಇದನ್ನು ಆಕ್ರಮಿಸಿಕೊಂಡರು. ಪ್ರ.ಶ.ಪೂ 123ರಲ್ಲಿ ಎಟ್ನ ಪರ್ವತದ ಅಗ್ನಿಪರ್ವದಿಂದ ಆದ ನಷ್ಟವನ್ನು ರೋಮನರಿಗೆ ತುಂಬಿಕೊಡಲು ಕಟೇನಿಯದ ಜನ 10 ವರ್ಷ ತೆರ ಕೊಡಬೇಕಾಯ್ತು. 1ನೆಯ ಶತಮಾನದಲ್ಲಿ ಇದು ಮತ್ತೆ ಅಭಿವೃದ್ಧಿ ಹೊಂದಿತು. ಆದರೂ ಆಗಾಗ್ಗೆ ದಾಳಿಗೆ ಗುರಿಯಾಗುತ್ತಿತ್ತು. ಆಗಸ್ಟಸ್ ದೊರೆಯ ಕಾಲದಲ್ಲಿ ಇದು ರೋಮನರ ವಸಾಹತಾಯಿತು. ಸ್ಟ್ರಾಬೊ ಬರೆವಣಿಗೆಯಿಂದ ಮತ್ತು ಅನೇಕ ಶಾಸನಗಳಿಂದ ಕಟೇನಿಯ ಆಗ ಒಂದು ಪ್ರಮುಖ ನಗರವಾಗಿತ್ತೆಂದು ತಿಳಿಯುತ್ತದೆ. ಆಗ ಕಟೇನಿಯದ ಕ್ರೈಸ್ತರು ನಾನಾ ಚಿತ್ರಹಿಂಸೆಗಳಿಗೆ ಗುರಿಯಾಗಿದ್ದರು. ರೋಮನರ ಬಯಲುರಂಗಮಂದಿರ ನಾಶವಾಯಿತು. 251ರಲ್ಲಿ ಎಟ್ನ ಅಗ್ನಿಪರ್ವತದಿಂದ ನಷ್ಟವಾಯಿತು. ಬೈಜ಼ಾಂಟಿಯನರೂ ಅರಬೀಯರೂ ನಾರ್ಮನರೂ ಕಟೇನಿಯವನ್ನು ವಶಪಡಿಸಿಕೊಂಡಿದ್ದರು. 1170ರ ಭೂಕಂಪದಲ್ಲಿ ಪಟ್ಟಣ ನಾಶವಾಯಿತು. 1197ರಲ್ಲಿ 6ನೆಯ ಹೆನ್ರಿ ಪಟ್ಟಣವನ್ನು ಹಾಳುಗೆಡವಿದ. 13ನೆಯ ಮತ್ತು 14ನೆಯ ಶತಮಾನಗಳಲ್ಲಿ ಇದು ರಾಜಪ್ರತಿನಿಧಿಗಳ ವಾಸಸ್ಥಳವಾಯಿತು. ಡಿ ವಿಗೊ ಎಂಬ ರಾಜಪ್ರತಿನಿಧಿ 1552ರಲ್ಲಿ ಕೋಟೆ ಕಟ್ಟಿಸಿದ. 1669ರಲ್ಲಿ ಎಟ್ನದಿಂದ ಇದರ ಬಂದರಿನ ಮುಕ್ಕಾಲು ಭಾಗ ಮುಚ್ಚಿಹೋಯಿತು. ಪಟ್ಟಣ ಉಳಿಯಿತು. ಆದರೆ 1693ರಲ್ಲಿ ಪಟ್ಟಣವೂ ಉಳಿಯಲಿಲ್ಲ. ಕಟೇನಿಯ ಕಡಲುಗಳ್ಳರಿಂದ ಆಕ್ರಮಣಕಾರರಿಂದ ಮತ್ತು ರೋಗೋಪದ್ರವಗಳಿಂದ ಕೆಲವು ಕಾಲ ನರಳಿತು. ಸಿಸಿಲಿಯಿಂದ ಬೇರ್ಪಟ್ಟು ಸ್ವತಂತ್ರ್ಯವಾಗಲು ಕಟೇನಿಯ ಹೋರಾಟ ನಡೆಸಿದ್ದು 1848ರಲ್ಲಿ. ಆದರೆ ಈ ದಂಗೆಯನ್ನು ಅಡಗಿಸಲಾಯಿತು.

ಎರಡನೆಯ ಮಹಾಯುದ್ಧದಲ್ಲಿ–1943 ಜುಲೈ 9ರಂದು–ಮಿತ್ರ ಸೇನೆಗಳು ಸಿಸಿಲಿಯಲ್ಲಿ ಬಂದಿಳಿದಾಗ ಕಟೇನಿಯ ಬಾಂಬ್ ದಾಳಿಗೆ ಗುರಿಯಾಗಬೇಕಾಯಿತು. 1943 ಆಗಸ್ಟ್ 5ರ ವರೆಗೆ ಜರ್ಮನರು ಬ್ರಿಟಿಷರನ್ನು ಇಲ್ಲಿ ತಡೆದು ಹೋರಾಟ ನಡೆಸಿದ್ದರು. (ಬಿ.ಎಸ್.ಎಚ್.)

**ಕಟ್ಟಡ :** ಮನುಷ್ಯ ಮತ್ತು ಆತನ ಆಸ್ತಿಗೆ ಆಸರೆಯಾಗಿ ಒದಗಿಸಿದ ರಚನೆ (ಬಿಲ್ಡಿಂಗ್). ವಸತಿಗೃಹಗಳು, ದಾಸ್ತಾನು ಮಳಿಗೆಗಳು, ವಿವಿಧ ಸಂಘ ಸಂಸ್ಥೆಗಳ ಕಚೇರಿಗಳು ಮುಂತಾದುವೆಲ್ಲವೂ ಕಟ್ಟಡಗಳೇ. ಒಂದು ಕಟ್ಟಡದ ಪ್ರಧಾನಾವಶ್ಯಕತೆಗಳು ಎರಡು–ರಚನಾತ್ಮಕವಾಗಿ ಅದು ಭದ್ರವಾಗಿರಬೇಕು ಮತ್ತು ಹವೆ ಬೆಂಕಿ ನೀರು ಕಳ್ಳಕಾಕರು ಮುಂತಾದ ಪ್ರತಿಬಲಗಳ ವಿರುದ್ಧ ರಕ್ಷಣೆ ಒದಗಿಸಬೇಕು. ಇಂಥ ಕಟ್ಟಡವನ್ನು ಆದಷ್ಟು ಮಿತವ್ಯಯದಿಂದ ರಚಿಸುವುದು ಕಟ್ಟಡ ಉದ್ಯಮದ ಕೆಲಸ. ಇದಕ್ಕೆ ಒಪ್ಪ ಓರಣ ನೀಡುವುದು ಕಲೆಗಾರಿಕೆ.

ಕಟ್ಟಡ ರಚನೆಯಲ್ಲಿ ಕನಿಷ್ಠ ಪ್ರಯತ್ನದಿಂದ ಗರಿಷ್ಠ ದಕ್ಷತೆಯನ್ನು ಸಾಧಿಸುವುದೇ ಮಿತವ್ಯಯ ಅಥವಾ ಹಾಳತೆ–ಬಳಸಿದ ವಸ್ತುಗಳು ಗರಿಷ್ಠ ಉಪಯುಕ್ತತೆಯನ್ನು ಕೊಡಬೇಕು; ಪ್ರಯುಕ್ತಿಸಿದ ಜನಬಲ ಗರಿಷ್ಠ ಫಲಿತಾಂಶವನ್ನು ನೀಡಬೇಕು. ಎಂದರೆ ಕೆಲಸಗಾರರ ಮತ್ತು ವಸ್ತುಗಳ ಸಮರ್ಪಕ ಸಮನ್ವಯವೇ ಕಟ್ಟಡದ ಉದ್ಯಮದಲ್ಲಿ ಮಿತವ್ಯಯ.

ಒಂದು ಕಟ್ಟಡದ ಪ್ರಧಾನ ಅಂಗಗಳು ಹತ್ತು : 1 ಅಡಿಪಾಯ, 2 ಗೋಡೆ, 3 ಅಡ್ಡಗೋಡೆಗಳು, 4 ತಡಿಕೆ, 5 ಮಾಡು, 6 ನೆಲ, 7 ಗಿಲಾವು, 8 ಮಹಡಿಯ ಮೆಟ್ಟಿಲು, 9 ಕಿಟಕಿ, 10. ಬಾಗಿಲು. ಕಟ್ಟಡದ ತಾಂತ್ರಿಕ ಕ್ರಮಗಳು ಸಂಪ್ರದಾಯದಿಂದ ಬಂದಿರಬಹುದು. ಇಲ್ಲವೆ ಈಚೆಗೆ ಬೆಳೆದಿರಬಹುದು. ಈ ಕ್ರಮಗಳ ಸ್ಥೂಲವಿವರಣೆಯನ್ನು ಇಲ್ಲಿ ಕೊಟ್ಟಿದೆ.

**1. ಅಡಿಪಾಯ:** ಕಟ್ಟಡ ಮತ್ತು ಅದರ ಅಡಿಪಾಯದ ಸಂವಿಧಾನ ತಳದ ಮಣ್ಣಿನ ಸ್ವಭಾವವನ್ನೂ ನೆಲದ ಇಳಿಜಾರನ್ನೂ ಅವಲಂಬಿಸಿವೆ. ಸಾಮಾನ್ಯವಾಗಿ ಕಟ್ಟಡದ ಗೋಡೆಗಳ ಕೆಳಗಡೆ ನೀರು ಇಳಿಯದಂಥ ಗಟ್ಟಿಯಾದ ನೆಲ ಸಿಕ್ಕುವವರೆಗೂ (ಕನಿಷ್ಠಪಕ್ಷ 90 ಸೆಂಮೀ ಆದರೂ) ಅಗೆಯಬೇಕು. ವಿಶೇಷ ಸಂದರ್ಭಗಳಲ್ಲಿ ಅಡಿಪಾಯಗಳನ್ನು ನಾಲ್ಕು ನಮೂನೆಗಳಾಗಿ ವಿಂಗಡಿಸಬಹುದು, ತೊಲೆಯ ಅಡಿಪಾಯ, ಕಂಬದ ಅಡಿಪಾಯ, ತೆಪ್ಪದ ಅಡಿಪಾಯ, ದಸಿಯ ಅಡಿಪಾಯ.

**ತೊಲೆಯ ಅಡಿಪಾಯ:** ಇದೇ ಸಾಮಾನ್ಯವಾದ ಮಾದರಿ. ಕಟ್ಟಡದ ಭಾರವನ್ನು ಹೊರುವ ಗೋಡೆಗಳ ಸಾಲಿನಲ್ಲಿ ಅಗೆದು ಗುಂಡಿಗಳ ತಳದಲ್ಲಿ ಕಾಂಕ್ರೀಟನ್ನು ತುಂಬುತ್ತಾರೆ. ಕಾಂಕ್ರೀಟಿನ ಆಳ, ಅಗಲ ಮತ್ತು ದಪ್ಪ–ಇವು ಕೆಳಮಣ್ಣು ಮತ್ತು ಕಟ್ಟಡದ ತೂಕಗಳನ್ನವಲಂಬಿಸಿವೆ. ಮಣ್ಣು ಮೆತುವಾಗಿರುವ ಕಡೆ ಪ್ರಬಲಿತ ಕಾಂಕ್ರೀಟನ್ನು ಅಳವಡಿಸುವುದರಿಂದ ಆಳವಾಗಿ ಅಡಿಪಾಯದಲ್ಲಿ ಅಗೆಯುವುದು ತಪ್ಪುತ್ತದೆ. ತುಂಬುವ ಕಾಂಕ್ರೀಟೂ ಕಡಿಮೆಯಾಗುತ್ತದೆ.

ಮೈಸೂರಿನಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿದ ಒಂದು ನವೀನ ಮಾದರಿಯ ಕಲ್ಲುಕಟ್ಟಡ

**ಕಂಬದ ಅಡಿಪಾಯ:** ಕಟ್ಟಡದ ತೂಕ ಅಡಿಪಾಯದ ಮೇಲೆ ಒಂದೇ ಸಮಯವಾಗಿ ಹರಡಿರುವುದಕ್ಕೆ ಬದಲಾಗಿ ಕೆಲವು ಜಾಗಗಳಲ್ಲಿ ಮಾತ್ರವೇ ಕೇಂದ್ರೀಕರಿಸುವ ಕಡೆ ಈ ನಮೂನೆಯನ್ನು ಉಪಯೋಗಿಸುತ್ತಾರೆ. ತಳದಲ್ಲಿ ಸಿಕ್ಕುವ ಮಣ್ಣಿನ ಭಾರವನ್ನು ಹೊರುವ ಸಾಮರ್ಥ್ಯ ಸ್ಥಳದಿಂದ ಸ್ಥಳಕ್ಕೆ ಸೇತುವೆಯ ಅಡಿಪಾಯದಲ್ಲಿರುವ ಹಾಗೆ ಬದಲಾಯಿಸಬಹುದಾದ್ದರಿಂದ ಇವುಗಳ ಸಂವಿಧಾನದಲ್ಲಿಯೂ ಕಟ್ಟಡದಲ್ಲಿಯೂ ಹೆಚ್ಚಿನ ಜಾಗರೂಕತೆ ಬೇಕಾಗುತ್ತದೆ.

**ತೆಪ್ಪದ ಅಡಿಪಾಯ:** ಕಟ್ಟಡದ ಜಾಗದಲ್ಲಿ ಜೌಗಿದ್ದರೆ ಇಲ್ಲವೆ ತುಂಬಿದ ಮಣ್ಣಿದ್ದರೆ ಈ ಮಾದರಿಯನ್ನು ಉಪಯೋಗಿಸುತ್ತಾರೆ. ಮೇಲೆ ಬರುವ ತೂಕದಿಂದ ಕೆಳಗಿನ ಮಣ್ಣು ಹೆಚ್ಚು ಕಡಿಮೆಯಾಗಿ ಕೆಳಕ್ಕೆ ಇಳಿದರೂ ಅಥವಾ ಚಲಿಸಿದರೂ ಇಡೀ ಕಟ್ಟಡವನ್ನು ಹೊರುವ ಹಾಗೆ ಈ ಅಡಿಪಾಯವನ್ನು ಸಂವಿಧಾನಮಾಡಿ ಪ್ರಬಲಿತ ಕಾಂಕ್ರೀಟಿನಿಂದ ಕಟ್ಟಿರುತ್ತಾರೆ. ಸಮುದ್ರವನ್ನು ಆಚೆಗೆ ನೂಕಿ ಬಿಡಿಸಿಕೊಂಡ ನೆಲದ ಮೇಲೆ ಇದನ್ನು ಉಪಯೋಗಿಸುವುದು ರೂಢಿ. ವಾಸದ ಮನೆಗೂ ಇತರ ಸಣ್ಣ ಕಟ್ಟಡಗಳಿಗೂ ಈ ನಮೂನೆ ದುಬಾರಿಯಾಗುತ್ತದೆ.

**ದಸಿಯ ಅಡಿಪಾಯ:** ಮೇಲುಗಡೆ ಮೆತುವಾದ ಅಥವಾ ಜೌಗಿನ ನೆಲವಿದ್ದು ಸುಮಾರಾಗಿ ಕೆಳಗಡೆ ಭಾರವನ್ನು ಹೊರುವ ಮಣ್ಣಿದ್ದ ಕಡೆ ಇದನ್ನು ಉಪಯೋಗಿಸುತ್ತಾರೆ. ದೊಡ್ಡ ಕಟ್ಟಡಗಳ ಅಡಿಪಾಯಗಳಲ್ಲಿ ಚಚ್ಚೌಕವಾಗಿ ದಸಿಗಳನ್ನು ಪ್ರಬಲಿತ ಕಾಂಕ್ರೀಟಿನಿಂದ ಮಾಡಿ ತುದಿಗೆ ಉಕ್ಕಿನ ಕವಚವನ್ನು ಹಾಕಿ ಯಂತ್ರಗಳಿಂದ ಹೊಡೆದು ಬೇಕಾದ ಆಳಕ್ಕೆ ಇಳಿಸುತ್ತಾರೆ. ಈ ಯಂತ್ರ ದಸಿಯ ಚೌಕಟ್ಟಿನ ಮೇಲೆ ಭಾರಿ ಸುತ್ತಿಗೆಯ ಹಾಗೆ ತನ್ನ ತೂಕದಿಂದಲೇ ಕೆಳಕ್ಕೆ ಬಿದ್ದು ಅದನ್ನು ಮಣ್ಣಿನಲ್ಲಿ ಇಳಿಸುತ್ತದೆ. ಕಾಂಕ್ರೀಟು ಬರುವುದಕ್ಕೆ ಮುಂಚೆ ಮರದ ದಸಿಗಳನ್ನು ಉಪಯೋಗಿಸುತ್ತಿದ್ದರು. ದಸಿಗಳ ತಲೆಗಳ ಮೇಲೆ ಉಕ್ಕಿನ ಇಲ್ಲವೆ ಪ್ರಬಲಿತ ಕಾಂಕ್ರೀಟಿನ ತೊಲೆಗಳನ್ನು ಎಳೆದು ಅವುಗಳ ಮೇಲೆ ಕಟ್ಟಡದ ಭಾರವನ್ನು ಹೊರುವ ಗೋಡೆಗಳನ್ನು ಕಟ್ಟುತ್ತಾರೆ. ಇಂಥ ಅಡಿಪಾಯಕ್ಕೆ ಖರ್ಚು ಬಹಳ, ಬಹಳ ಬೆಲೆಬಾಳುವ ನೆಲದ ಮೇಲೆ ಕಟ್ಟುವ ವಾಣಿಜ್ಯದ ಕಟ್ಟಡಗಳಲ್ಲಿ ಮಾತ್ರ ಇದನ್ನು ಉಪಯೋಗಿಸುವರು.

ಇನ್ನೊಂದು ರೀತಿಯ ದಸಿಯ ಅಡಿಪಾಯದಲ್ಲಿ ಮಣ್ಣಿನಲ್ಲಿ ಯಂತ್ರಗಳಿಂದ ಬೇಕಾದ ಆಳದವರೆಗೂ ತೂತುಗಳನ್ನು ಕೊರೆದು ಅದರೊಳಗೆ ಪ್ರಬಲಿತ ಕಾಂಕ್ರೀಟನ್ನು ಸ್ಥಳದಲ್ಲಿಯೇ ತುಂಬುತ್ತಾರೆ.

**2. ಗೋಡೆಗಳು:** ಸಾಂಪ್ರದಾಯಿಕವಾಗಿ ಗೋಡೆಗಳನ್ನು ಇಟ್ಟಿಗೆ ಇಲ್ಲವೆ ಕಲ್ಲಿನಿಂದ ಕಟ್ಟುತ್ತಾರೆ. ಮರ ಹೇರಳವಾಗಿ ಸಿಕ್ಕುವಲ್ಲಿ ಮರದಿಂದಲೂ ಬಿದಿರು ಮೆಳೆಗಳು ವಿಪುಲವಾಗಿರುವ ಉಷ್ಣವಲಯಗಳಲ್ಲಿ ಬಿದಿರಿನ ತಡಿಕೆಗಳಿಂದಲೂ ಇನ್ನು ಕೆಲವು ಕಡೆ ಮಣ್ಣಿನಿಂದಲೂ ಗೋಡೆಗಳನ್ನು ಕಟ್ಟುವುದುಂಟು. ಈ ಶತಮಾನದ ಪ್ರಾರಂಭದಿಂದಲೂ ನಡೆದ ಸಂಶೋಧನೆಗಳ ಫಲವಾಗಿ ಗೋಡೆಗಳ ಕಟ್ಟುವಿಕೆಯಲ್ಲಿ ಅನೇಕ ಮಾರ್ಪಾಡುಗಳಾಗಿವೆ. ಈಗ ಉಕ್ಕು, ಕಾಂಕ್ರೀಟು, ಕಲ್ನಾರು, ಸಿಮೆಂಟ್ ಮುಂತಾದ ಸಾಮಗ್ರಿಗಳಿಂದ ಹೊರಗಿನ ಚಳಿಯಾಗಲಿ ಸೆಕೆಯಾಗಲಿ ಕಟ್ಟಡದೊಳಕ್ಕೆ ಬರದ ಹಾಗೂ ಮಳೆಯೂ ಗಾಳಿಯೂ ನುಗ್ಗದ ಹಾಗೂ ಹಗುರವಾದ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಅನೇಕ ದೊಡ್ಡ ಕಟ್ಟಡಗಳು ಹೊರಗಡೆ ನೋಡುವುದಕ್ಕೆ ಇಟ್ಟಿಗೆ ಅಥವಾ ಕಲ್ಲಿನಿಂದ ಕಟ್ಟಿದಂತೆ ಕಾಣುತ್ತಿದ್ದರೂ ಕಟ್ಟಡದ ತೂಕವನ್ನು ಒಳಗಡೆ ಇರುವ ಉಕ್ಕಿನ ಚೌಕಟ್ಟು ಹೊತ್ತಿರುವುದು. ತೂಕವನ್ನು ಹೊರುವುದಕ್ಕೆ ಪ್ರಬಲಿತ ಕಾಂಕ್ರೀಟನ್ನು ಉಪಯೋಗಿಸಿದಾಗ ಹೊರಗಡೆ ಇಟ್ಟಿಗೆಯಾಗಲಿ ಕಲ್ಲಾಗಲಿ ಇರುವುದಿಲ್ಲ. ಆಧುನಿಕ ಕಟ್ಟಡಗಳ ಗೋಡೆಗಳಲ್ಲಿ ಒಳಗಡೆ ಒಂದು ಹೊರಗಡೆ ಒಂದು ಪದರ ಇದ್ದು ನಡುವೆ ಗಾಳಿಯ ಪೊರೆಯಿರುವುದು. ಇದು ಹೊರಗಿನ ಗಾಳಿಯನ್ನು ಕುರಿತು ವಾಯುಬಂಧವಾಗಿದ್ದರೆ ಒಂದು ಉಷ್ಣವಾಹಕ ಗೋಡೆಯಂತೆ ವರ್ತಿಸುತ್ತದೆ. ಆದ್ದರಿಂದ ಹೊರಗಿನ ಉಷ್ಣತೆ ಹೇಗೆಯೇ ಇದ್ದರೂ ಕಟ್ಟಡದ ಒಳಗೆ ಒಂದೇ ವಿಧದ ಉಷ್ಣತೆ ಇರುವುದು.

ಒಳಗೋಡೆ ಉಷ್ಣವಾಹಕವಾಗಿದ್ದರೆ ಕಂಬಳಿಯನ್ನೋ ಗಾಜಿನ ಉಣ್ಣೆಯನ್ನೋ ಗೋಡೆಗೆ ತಾಗಿಸಬೇಕು. ಆದರೆ ಗೋಡೆಯನ್ನು ಇಟ್ಟಿಗೆಯಿಂದಲೋ ಕಲ್ಲಿನಿಂದಲೋ ಕಟ್ಟಿದ್ದರೆ ಈ ಎಚ್ಚರಿಕೆ ಬೇಕಾಗಿಲ್ಲ. ಹಾಗಿಲ್ಲದೆ ಹೋದರೆ ಮರಳೂ ದೂಳೂ ಇಲ್ಲದೆ ಇರುವ ಗೂಡುಗೂಡಾದ ಕಾಂಕ್ರೀಟಿನಿಂದ ಒಳಗೋಡೆಯನ್ನು ಕಟ್ಟಬಹುದು.

**ಇಟ್ಟಿಗೆ ಗೋಡೆಗಳು:** ಇವನ್ನು $4\frac{1}{2}$" – $1\frac{1}{2}$" ದಪ್ಪ ಇರುವಂತೆ ಸುಣ್ಣದ ಇಲ್ಲವೆ ಸಿಮೆಂಟಿನ ಗಾರೆಯಿಂದ ಕಟ್ಟಬಹುದು. 23 ಸೆಂಮೀ ದಪ್ಪದ ಹೊರಗೋಡೆಗಳು ಹೊರಗಿನಿಂದ ಚಳಿಯನ್ನೂ ಸೆಕೆಯನ್ನೂ ಒಳಕ್ಕೆ ಬಿಡುತ್ತವೆ. ಅಂಥ ಸನ್ನಿವೇಶಗಳಲ್ಲಿ ಹೊರಗಡೆಯೂ ಒಳಗಡೆಯೂ $4\frac{1}{2}$" ದಪ್ಪದ ಗೋಡೆ ಕಟ್ಟಿ ಒಳಗಡೆ ಖಾಲಿ ಜಾಗವನ್ನು ಬಿಡಬೇಕು.

**ಕಲ್ಲಿನ ಗೋಡೆಗಳು:** ಇವನ್ನು ಕಲ್ಲು ಹೇರಳವಾಗಿ ಸಿಕ್ಕುವ ಕಡೆ ಗೋಡೆಗಳನ್ನು ಕಲ್ಲಿನಿಂದಲೇ ಕಟ್ಟುತ್ತಾರೆ. ದೊಡ್ಡ ಕಟ್ಟಡಗಳಲ್ಲಿ ಕಲ್ಲನ್ನು ನಯಮಾಡುವುದೂ ಉಂಟು. ಹೆಚ್ಚು ಭಾರವನ್ನು ಹೊರುವ ಅನೇಕ ಮಹಡಿಗಳ ಕಟ್ಟಡಗಳಲ್ಲಿ ಬಲಕ್ಕಾಗಿ ಹಿಂದುಗಡೆ ಉಕ್ಕಿನ ಇಲ್ಲವೆ ಪ್ರಬಲಿತ ಕಾಂಕ್ರೀಟಿನ ಚೌಕಟ್ಟನ್ನಿಟ್ಟು ಹೊರಗಡೆ ತೆಳುವಾದ ಕಲ್ಲಿನ ಗೋಡೆಯನ್ನು ಅಂದಕ್ಕಾಗಿ ಕಟ್ಟುತ್ತಾರೆ.

**ಕಾಂಕ್ರೀಟಿನ ಗೋಡೆಗಳು:** ಹೊರಗಡೆ ಇಟ್ಟಿಗೆಯ ಗೋಡೆಯನ್ನು ಕಟ್ಟಿ ನಡುವೆ ತೆರಪನ್ನು ಬಿಟ್ಟು ಒಳಗಡೆ ಕಾಂಕ್ರೀಟಿನ ಗೋಡೆಯನ್ನು ಕಟ್ಟುವುದು ದೊಡ್ಡ ನಗರಗಳಲ್ಲಿ ರೂಢಿಯಲ್ಲಿದೆ ಅಥವಾ ಕಾಂಕ್ರೀಟಿನ ಚೌಕಟ್ಟನ್ನು ಕಟ್ಟಿ ಮಧ್ಯೆ ಇಟ್ಟಿಗೆಯನ್ನೋ ಕಾಂಕ್ರೀಟಿನ ದಿಮ್ಮಿಗಳನ್ನೋ ತುಂಬಬಹುದು. ದಪ್ಪವಾದ ಕಾಂಕ್ರೀಟಿನ ಗೋಡೆಗಳ ಮೇಲೆ ಬರುವ ತೂಕವನ್ನು ತಡೆಯುವುಕ್ಕಾಗಿ ಅವನ್ನು ಸೂಕ್ತ ರೀತಿಯಲ್ಲಿ ಉಕ್ಕಿನಿಂದ ಭದ್ರಮಾಡುತ್ತಾರೆ. ಮರಳನ್ನೇ ಹಾಕದೆ ಹಗುರವಾದ ಗೂಡಿನ ಕಾಂಕ್ರೀಟಿನ ವಿಷಯವಾಗಿ ಸಂಶೋಧನೆ ನಡೆಯುತ್ತಿದೆ. ಇದರಲ್ಲಿ ಉಕ್ಕನ್ನಿಡುವುದಿಲ್ಲ. ಆದ್ದರಿಂದ ಬಲ ಕಡಿಮೆ. ಸಾಮಾನ್ಯವಾಗಿ ಒಂದು ಮಹಡಿಯ ಸಣ್ಣ ವಾಸದ ಮನೆಗಳಲ್ಲಿ ಈ ಸಾಮಗ್ರಿಯನ್ನು ಉಪಯೋಗಿಸುತ್ತಾರೆ.

**3. ಅಡ್ಡ ಗೋಡೆಗಳು:** ಇವು ಕಟ್ಟಡವನ್ನು ವಿಭಾಗಗಳಾಗಿ ವಿಂಗಡಿಸುತ್ತವೆ. ಇವುಗಳಲ್ಲಿ ಎರಡು ವಿಧ. ಕೇವಲ ಜಾಗವನ್ನು ವಿಭಾಗಿಸತಕ್ಕವು, ಜೊತೆಗೆ ಕಟ್ಟಡದ ಒಂದು ಭಾಗವನ್ನು ಹೊರತಕ್ಕವು. ಮೊದಲನೆಯ ನಮೂನೆಯಲ್ಲಿ ಮರದ ಚೌಕಟ್ಟು, ಅಲ್ಯೂಮಿನಿಯಂ ಚೌಕಟ್ಟು ಹೆಚ್ಚಾಗಿ ಬಳಕೆಯಲ್ಲಿದೆ. ಇದರ ಅನುಕೂಲವೇನೆಂದರೆ ಯಾವ ಅಡಿಪಾಯವೂ ಇಲ್ಲದೆ ಇದನ್ನು ನೆಲದ ಮೇಲೆ ಇಡಬಹುದು. ಕಾಂಕ್ರೀಟಿನ ಚಪ್ಪಡಿಗಳೂ ಬಳಕೆಯಲ್ಲಿವೆ. ಎರಡನೆಯ ನಮೂನೆಯ ಅಡ್ಡಗೋಡೆಯಲ್ಲಿ ಅದು ಮೇಲಿನ ಮಹಡಿಯ ಭಾರವನ್ನು ಹೊರಬಲ್ಲುದೇ ಎಂಬುದು ಮಾತ್ರ ಮುಖ್ಯ ಪ್ರಶ್ನೆ.

ಕಲ್ಲಿನ ಜಲ್ಲಿಗೆ ಬದಲಾಗಿ ಹಗುರವಾದ ಕುಲುಮೆಯ ಕಿಟ್ಟವನ್ನೂ ಪುಡಿಮಾಡಿದ ಇಟ್ಟಿಗೆಯನ್ನೂ ಉಪಯೋಗಿಸಿ ಕಾಂಕ್ರೀಟಿನ ದಿಮ್ಮಿಗಳನ್ನು 75 ಮಿಮಿ. ದಪ್ಪದವರೆಗೆ ಗಟ್ಟಿಯಾಗಿಯೂ ಹೆಚ್ಚಿನ ದಪ್ಪವಿದ್ದರೆ ಟೊಳ್ಳಾಗಿಯೂ 457 ಮಿಮೀ ಉದ್ದ, 229 ಮಿಮೀ ಅಗಲದಲ್ಲಿ ತಯಾರು ಮಾಡಿ ಇಟ್ಟಿಗೆಯ ಕಟ್ಟಡದ ಹಾಗೆ ಕಟ್ಟಿ ಎರಡು ಮುಖಗಳಲ್ಲಿಯೂ ಗಿಲಾವು ಮಾಡಿ ಅಡ್ಡಗೋಡೆಗಳನ್ನು ಕಟ್ಟಬಹುದು.

**ಚೌಕಟ್ಟಿನ ಅಡ್ಡಗೋಡೆಗಳು:** ಕೆಳಗಡೆ ಒಂದು ಮರದ ಪಟ್ಟಿಯನ್ನು ಮೇಲುಗಡೆಯ ಪಟ್ಟಿಗೆ ಲಂಬವಾದ ಪಟ್ಟಿಗಳಿಂದ ಚೌಕಟ್ಟಿನ ಹಾಗೆ ಸೇರಿಸಿ ನಡುವೆ ಕಲ್ನಾರು ಸಿಮೆಂಟಿನ ಹಾಳೆ, ನಾರಿನ ಹಲಗೆಗಳು ಮರದ ದಬ್ಬೆ ಇವುಗಳ ಹಲಗೆಗಳನ್ನು ಮೊಳೆಗಳಿಂದಲೋ ತಿರುಪುಗಳಿಂದಲೋ ಜೋಡಿಸಬಹುದು.

**4. ತಡಿಕೆ:** ಪೂರ್ವ ನಿರ್ಮಿತ ಹೊಯ್ದ ಕಾಂಕ್ರೀಟಿನ ಚಪ್ಪಡಿಗಳನ್ನು ಒಂದು ಕ್ಲುಪ್ತವಾದ ಉದ್ದ ಮತ್ತು ಅಳತೆಗೆ 51–152 ಮಿಮೀ ದಪ್ಪದವರೆಗೆ ತಯಾರಿಸಿ ಜೋಡಿಸಿ ಗೋಡೆಗಳನ್ನು ಕಟ್ಟುತ್ತಾರೆ. ಈ ಚಪ್ಪಡಿಯನ್ನು ಮಾಡುವಾಗ ಕಲ್ಲಿನ ಜಲ್ಲಿಯನ್ನು ಉಪಯೋಗಿಸುವುದಿಲ್ಲ. ಹಗುರವಾಗುವುದಕ್ಕಾಗಿ ನೊರಜು ಕಲ್ಲು, ಮರಳು ಮತ್ತು ಕಿಟ್ಟಗಳನ್ನು ಬಳಸುತ್ತಾರೆ. ಕೈಗಾರಿಕೆಗಳ ಕಟ್ಟಡಗಳಲ್ಲಿ ಒಂದೇ ರೀತಿಯ ಹಗುರವಾದ ಗೋಡೆಗಳು ಬೇಕಾಗುವ ಕಡೆ ಇಂಥ ಚಪ್ಪಡಿಗಳನ್ನು ಉಪಯೋಗಿಸಬಹುದು. ಹೆಚ್ಚಿನ ಬಲ ಬೇಕಾದರೆ ಮಧ್ಯೆ ಪ್ರಬಲಿತ ಕಾಂಕ್ರೀಟಿನ ಕಂಬಗಳನ್ನು ಉಪಯೋಗಿಸಬೇಕಾಗುತ್ತದೆ.

**5. ಮಾಡು :** ಪ್ರಾದೇಶಿಕ ನೆಲದ ವಿಶೇಷ ಲಕ್ಷಣಗಳು ಮತ್ತು ವಾಯುಗುಣದ ಮೇಲೆ ಮಾಡಿನ ಸಂವಿಧಾನ ನಿಂತಿದೆ. ಮಾಡುಗಳನ್ನು ಇಳಿಜಾರಾದುವು ಮತ್ತು ಚಪ್ಪಟೆಯಾದವು ಎಂದು ಎರಡು ದರ್ಜೆಗಳಾಗಿ ವಿಂಗಡಿಸಬಹುದು.

**ಇಳಿಜಾರಾದ ಮಾಡುಗಳು:** ಇವುಗಳಲ್ಲಿ ಒಪ್ಪಾರಗಳು ಎತ್ತರವಾದ ಗೋಡೆಗಳಿಗೆ ಒರಗಿಕೊಂಡಿರಬಹುದು. ಇಲ್ಲವೆ ಸ್ವತಂತ್ರವಾಗಿರಬಹುದು. ಒಪ್ಪಾರದ ಇಳಿಜಾರು ನಾಲ್ಕಕ್ಕೆ ಒಂದು (ಎತ್ತರ) ಇದ್ದರೆ ಸಾಕು. ಮರದಿಂದ ಮಾಡನ್ನು ಮಾಡಿ ಹಂಚುಗಳು, ತಗಡುಗಳು, ಸ್ಲೇಟುಗಳು ಇವುಗಳಿಂದ ಮುಚ್ಚುತ್ತಾರೆ.

**ಇಳಿಜಾರಾದ ಚಾವಣಿಗಳು:** ಮಳೆ ಹೆಚ್ಚಾಗಿ ಬೀಳುವ ಕಡೆ ಮನೆಗಳ ಮಾಡನ್ನು ಮರದಿಂದ ಇಳಿಜಾರಾಗಿ ಕಟ್ಟಿ ಹೆಂಚುಗಳು, ಸ್ಲೇಟುಗಳು, ಹುಲ್ಲು ಇವುಗಳಿಂದ ಮುಚ್ಚುತ್ತಾರೆ. ಕಾರ್ಖಾನೆಗಳಲ್ಲಿ ಉಕ್ಕಿನಿಂದ ಮಾಡನ್ನು ಮಾಡಿ ಕಲ್ನಾರು ಸಿಮೆಂಟಿನ ಹಾಳೆಗಳಿಂದ ಮುಚ್ಚುತ್ತಾರೆ. ಮರದ ಮಾಡುಗಳಲ್ಲಿ ಚೌಕಟ್ಟುಗಳು ಇಲ್ಲವೆ ತೀರುಗಳ ಮೇಲೆ ಉದ್ದ ಸರಗಳನ್ನು ಹಾಕಿ ಮೇಲುಗಡೆಯ ತೀರಿನಿಂದ ಕೆಳಗಿನ ವರೆಗೆ ಸಾಮಾನ್ಯ ತೀರುಗಳನ್ನು ಎಳೆದು ಅವಕ್ಕೆ ಮರದ ರೀಪರುಗಳನ್ನು ಹೊಡೆದು ಮೇಲೆ ಹಂಚನ್ನು ಹೊದೆಸುತ್ತಾರೆ. ಮೊದಲು ಸುಟ್ಟ ಮಣ್ಣಿನ ನಾಡು ಹಂಚುಗಳನ್ನು ಹೊದೆಸುತ್ತಿದ್ದರೆ ಈಗ ಮಂಗಳೂರು ಹಂಚುಗಳು ರೂಢಿಯಾಗಿವೆ. ದೊಡ್ಡ ಅಳತೆಯ ಮಾಡುಗಳಲ್ಲಿ ಉಕ್ಕಿನ ಸರಕಟ್ಟುಗಳನ್ನು ದೂರದಲ್ಲಿಟ್ಟು ಮೇಲೆ ಉದ್ದ ಸರಗಳನ್ನು ಎಳೆದು ಅವುಗಳ ಮೇಲೆ ರೀಪರುಗಳನ್ನು ಹೊಡೆದು ಸತುವಿನ ತಗಡುಗಳನ್ನೋ ಸಿಮೆಂಟ್–ಕಲ್ನಾರಿನ ಹಾಳೆಗಳನ್ನೋ ಹೊದೆಸುತ್ತಾರೆ.

ಇಳಿಜಾರಾದ ಮಾಡಿನಲ್ಲಿ ಇಪ್ಪಾರು ಚಾವಣಿ **(ನೋಡಿ–ಇಪ್ಪಾರು–ಚಾವಣಿ)** ಮತ್ತು ಬಾಗುಚಾವಣಿ (**ಹಿಪ್ ರೂಫ್**) ಎಂಬ ಎರಡು ಮಾದರಿಗಳಿವೆ. ಉಪಯೋಗಿಸಬಹುದಾದ ಜಾಗ ಇಪ್ಪಾರುಚಾವಣಿಯಲ್ಲಿ ಹೆಚ್ಚಾಗಿದೆ. ಅಲ್ಲಿ ಕಿಟಕಿಗಳನ್ನಿಡಬಹುದು. ಮಳೆ ಹೆಚ್ಚಾದ ಕಡೆ ಬಾಗುಚಾವಣಿಯನ್ನು ಉಪಯೋಗಿಸುವುದೇ ಹೆಚ್ಚು.

**ಉತ್ತರದ ಬೆಳಕಿನ ಮಾಡು:** ಇದನ್ನು ದೊಡ್ಡ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಾರೆ. ಈ ಮಾದರಿಯಲ್ಲಿ ಒಂದು ಪಾರ್ಶ್ವದ ಇಳಿಕಲು ಕಡಿಮೆ. ಇದಕ್ಕೆ ಸಿಮೆಂಟ್–ಕಲ್ನಾರಿನ ತಗಡುಗಳನ್ನು ಹೊದಿಸಿರುತ್ತಾರೆ. ಮತ್ತೊಂದು ಪಾರ್ಶ್ವದ ಇಳಿಕಲು ಹೆಚ್ಚು. ಅದನ್ನು ಮರದ ಇಲ್ಲವೆ ಉಕ್ಕಿನ ಚೌಕಟ್ಟಿನಲ್ಲಿರುವ ಗಾಜಿನಿಂದ ಮುಚ್ಚಿರುತ್ತಾರೆ. ಇದು ಸುಮಾರಾಗಿ ಉತ್ತರದಿಕ್ಕಿನಲ್ಲಿರುವುದು. ಈ ಮಾದರಿಯಲ್ಲಿ ಬಿಸಿಲಿನ ಝಳವಿಲ್ಲದೆ ಗರಿಷ್ಠ ಬೆಳಕು ಒಳಕ್ಕೆ ಬರುತ್ತದೆ. ಮಾಡಿನ ಎರಡು ಇಳಿಕಲುಗಳಿಗೂ ಮಧ್ಯೆ ಮಳೆಯ ನೀರನ್ನು ದೋಣಿಗಳಿಂದ ಸಾಗಿಸುತ್ತಾರೆ.

**ಚಪ್ಪಟೆ ಮಾಡುಗಳು:** ಹಿಂದೆ ದೇವಸ್ಥಾನಗಳಲ್ಲಿ ಕಲ್ಲಿನ ಕಂಬಗಳ ಮೇಲೆ ಚಪ್ಪಡಿಗಳನ್ನು ಕೂರಿಸಿ ಚಪ್ಪಟೆಯಾದ ಮಾಡನ್ನು ಕಟ್ಟುತ್ತಿದ್ದರು. ಈಚೆಗೆ ಪಕ್ಕ ತಾರಸಿ ಎಂಬ ಮಾಡು, ಮಳೆ ಕಡಿಮೆಯಾಗಿರುವ ಪ್ರದೇಶಗಳಲ್ಲಿ ಬಳಕೆಯಲ್ಲಿತ್ತು. ಪ್ರಬಲಿತ ಕಾಂಕ್ರೀಟು ಬಂದ ಮೇಲೆ ಚಪ್ಪಟೆಯಾದ ಮಾಡುಗಳು ಸರ್ವತ್ರ ಬಳಕೆಗೆ ಬಂದಿವೆ. ಮಾಡಿನ ಅಗಲಕ್ಕೆ ಅನುಗುಣವಾಗಿ ಈ ನಮೂನೆಯನ್ನು ಶಾಸ್ತ್ರೀಯವಾಗಿ ಸಂವಿಧಾನ ಮಾಡಬೇಕು. ಅಗಲ ಕಡಿಮೆಯಾಗಿದ್ದರೆ ಗೋಡೆಗಳ ಮೇಲೆ ಚಪ್ಪಡಿಯನ್ನು ಎಳೆಯಬಹುದು. ಅಗಲ ಹೆಚ್ಚಾದರೆ 2.5–3 ಮೀ ಅಂತರದಲ್ಲಿ T–ತೊಲೆಗಳನ್ನು ಎಳೆದು ಮೇಲುಗಡೆ ಪ್ರಬಲಿತ ಕಾಂಕ್ರೀಟಿನ ಚಪ್ಪಡಿಯನ್ನು ಇಡಬೇಕಾಗುತ್ತದೆ.

ಕಾರ್ಖಾನೆಗಳಲ್ಲಿ ತೊಲೆ ಮತ್ತು ಚಪ್ಪಡಿಯ ಮಾದರಿಯಲ್ಲಿ ಪೂರ್ವನಿರ್ಮಿತ ಕಾಂಕ್ರೀಟಿನ ಮಾಡುಗಳನ್ನು ಕಟ್ಟಡದ ಜಾಗಕ್ಕೆ ಸಾಗಿಸಿ ಸ್ಥಳದಲ್ಲಿ ಜೋಡಿಸಬಹುದು. ಆಗ ತೊಲೆಗಳನ್ನು ಒಂದು ಕಡೆಯಿಂದ ಇನ್ನೊಂದಕ್ಕೆ ಸಾಗಿಸುವಾಗ ಬೀಳುವ ಹೆಚ್ಚಿನ ತ್ರಾಸವನ್ನು ತಡೆಯುವುದಕ್ಕಾಗಿ ಹೆಚ್ಚು ಉಕ್ಕನ್ನು ಉಪಯೋಗಿಸಬೇಕಾಗುತ್ತದೆ.

ಮತ್ತೊಂದು ನಮೂನೆಯ ಚಪ್ಪಟೆಯಾದ ಪ್ರಬಲಿತ ಕಾಂಕ್ರೀಟಿನಿಂದ ಮಾಡಿನಲ್ಲಿ ಮಾಡನ್ನು ಬೇರೆ ಬೇರೆ ಅಳತೆಗಳಲ್ಲಿಯೂ ದಪ್ಪಗಳಲ್ಲಿಯೂ ಕಾಂಕ್ರೀಟಿನಿಂದಲೋ ಸುಟ್ಟ ಮಣ್ಣಿನಿಂದಲೋ ಮಾಡಿದ ಒಂದೇ ಅಳತೆಯ ಚಪ್ಪಡಿಗಳ ರೂಪದಲ್ಲಿ ಮಾಡುತ್ತಾರೆ. ಚಪ್ಪಡಿಗಳ ಮಧ್ಯೆ ಉಕ್ಕಿನ ಕಂಬಿಗಳನ್ನು ಜೋಡಿಸಿ ಸಂದುಗಳಲ್ಲಿ ಸಿಮೆಂಟ್ ಕಾಂಕ್ರೀಟನ್ನು ತುಂಬುತ್ತಾರೆ. ಮೇಲುಗಡೆ ಕೊಂಚ ನಯವಾದ ಕಾಂಕ್ರೀಟಿನಿಂದ ಮುಚ್ಚುತ್ತಾರೆ.

ನವದೆಹಲಿಯಲ್ಲಿನ ಅಮೆರಿಕ ರಾಯಭಾರಿ ಕಚೇರಿ. ಅಮೆರಿಕನ್ ಮತ್ತು ಭಾರತೀಯ ಸಂಪ್ರದಾಯಗಳ ಮಿಲನಕ್ಕೊಂದು ನಿದರ್ಶನ. ಶಿಲ್ಪಿ – ಎಡ್ವರ್ಡ್ ಡರೆಲ್ ಸ್ಟೋನ್

ಈಚೆಗೆ ಹಿಂದೆಯೇ ತ್ರಾಸವನ್ನು ಹಾಕಿದ ಕಾಂಕ್ರೀಟಿನಲ್ಲಿ (ಪ್ರೀಸ್ಟ್ರೆಸ್ಡ್ ಕಾಂಕ್ರೀಟ್) ಎರಕ ಹೊಯ್ಯುವುದಕ್ಕೆ ಮುಂಚೆಯೇ ಹೆಚ್ಚಾದ ಎಳೆತದ ಶಕ್ತಿಯುಳ್ಳ ತಂತಿಯನ್ನು ತ್ರಾಸದಲ್ಲಿರಿಸಿ ಆ ಮೂಲಕ ಕಾಂಕ್ರೀಟನ್ನು ಕಡಿಮೆ ಮಾಡುವುದರಿಂದ ಉಕ್ಕಿನ ತೂಕವೂ ವಿಶೇಷವಾಗಿ ಕಡಿಮೆಯಾಗುತ್ತದೆ. ಇದರಿಂದ ಮಾಡನ್ನು ಇಳಿಸುವ ಸಮಸ್ಯೆಗೆ ಸಹಾಯವಾಗುತ್ತದೆ.

**ಬಾಗಿದ ಮಾಡುಗಳು:** ಇವುಗಳನ್ನು ಉಕ್ಕಿನ ಸರಕಟ್ಟುಗಳಿಂದಲೂ ಉದ್ದದ ಸರಗಳಿಂದಲೂ ಕಟ್ಟಿ ಸತುವಿನ ತಗಡುಗಳಿಂದಲೋ ಸಿಮೆಂಟ್–ಕಲ್ನಾರಿನ ಹಾಳೆಗಳಿಂದಲೋ ಮುಚ್ಚುತ್ತಾರೆ. ಭದ್ರ ಕಾಂಕ್ರೀಟಿನಿಂದಲೂ ಬಾಗಿದ ಮಾಡುಗಳನ್ನು ತಯಾರಿಸುತ್ತಾರೆ.

**6. ನೆಲ:** ಈಗಿನ ಕಟ್ಟಡಗಳ ನೆಲದಲ್ಲಿ ಸೌಕರ್ಯದ ದೃಷ್ಟಿಯಿಂದ ಪರಿಷ್ಕರಣಗಳಾಗುತ್ತಿವೆ. ಕಲ್ಲಿನ ಇಲ್ಲವೆ ಮಣ್ಣಿನ ನೆಲವೇ ಮೊನ್ನೆ ಮೊನ್ನೆಯ ವರೆಗೆ ಸಾಕಾಗಿತ್ತು. ಆಮೇಲೆ ಇಟ್ಟಿಗೆಯ ನೆಲ ಬಂತು. ಭೂಮಿಯ ತೇವ ಮನೆಯ ನೆಲದ ಮೇಲೆ ಒಸರುವುದನ್ನು ತಡೆಯುವುದಕ್ಕಾಗಿ ಮರದ ತೊಲೆಗಳ ಮೇಲೆ ಹಾಸಿದರು. ಅನಂತರ ಕೆಳಗಡೆ ಗಟ್ಟಿಯಾದ ನೆಲದ ಮೇಲೆ ತಂಡಿಯನ್ನು ತಡೆಯುವ ಪದರವೂ ಅದರ ಮೇಲೆ ಕಾಂಕ್ರೀಟೋ ಬಂದಮೇಲೆ ಸುಮಾರಾಗಿ ಅನುಕೂಲವಾದ ನೆಲ ದೊರೆತ ಹಾಗಾಯಿತು.

ಸಾರ್ವಜನಿಕ ಕಟ್ಟಡಗಳು, ಅಂಗಡಿಗಳೂ, ಕಚೇರಿಗಳು ಮತ್ತು ವಾಸದ ಮನೆಗಳಲ್ಲಿ ಕಾಂಕ್ರಿಟ್ ನೆಲದ ಮೇಲ್ಮೈಯ ಪರಿಷ್ಕರಣ ಮುಖ್ಯವಾಗುತ್ತಿದೆ. ಅನೇಕ ವರ್ಷಗಳಿಂದಲೂ ಮರ, ಹಂಚುಗಳು, ಟೆರಾಸೊ ಮತ್ತು ಅಮೃತಶಿಲೆಯ ನೆಲಗಳು ಉಪಯೋಗದಲ್ಲಿವೆ. ಬೇಗ ಸವೆಯದೆ ಇರುವುದು, ಜಾರದೆ ಇರುವುದು, ಕಟ್ಟುವುದಕ್ಕೂ ರಿಪೇರಿಯಲ್ಲಿ ಇಡುವುದಕ್ಕೂ ತಗಲುವ ಖರ್ಚು–ಇವನ್ನು ಗುರಿಯಾಗಿಟ್ಟುಕೊಂಡು ಈ ಪರಿಷ್ಕರಣಗಳ ಮೇಲೆಯೇ ಅಪಾರವಾದ ಸಂಶೋಧನೆಗಳು ನಡೆದಿವೆ. ಅಸ್ಫಾಲ್ಟ್, ಕಾರ್ಕ್, ರಬ್ಬರ್, ಇವು ಹಂಚುಗಳ ಮತ್ತು ತಗಡುಗಳ ರೂಪದಲ್ಲಿ ಜನಪ್ರಿಯವಾಗುತ್ತಿವೆ. ಗಟ್ಟಿಮರವೂ ಪದರದ ಮರವೂ ಇನ್ನೊಂದು ಕಡೆ ಉಪಯೋಗವಾಗುತ್ತಿವೆ.

**7. ಗಿಲಾವು:** ಗೋಡೆಗಳಿಗೂ ಮಾಳಿಗೆಗಳಿಗೂ ಗಾರೆಯಿಂದ ಗಿಲಾವು ಮಾಡುತ್ತಾರೆ. ಸಾಮಾನ್ಯವಾಗಿ ಗಿಲಾವನ್ನು ಎರಡು ಅಥವಾ ಮೂರು ಪದರುಗಳಲ್ಲಿ ಹಾಕುತ್ತಾರೆ. ಗೋಡೆಗಳ ಮೂಲೆಗಳ ಗಿಲಾವಿನ ಕಾರ್ನಿಸುಗಳನ್ನು ಮಾಲುಗಳನ್ನಿಟ್ಟು ಮುಗಿಸುತ್ತಾರೆ. ಇದು ಕುಶಲಕಲೆ. ಮನೆಗಳಿಗೆ ಹೊರಗಡೆ ಒರಟಾಗಿ ಸಿಮೆಂಟ್ ಗಾರೆಯಿಂದ ಗಿಲಾವು ಮಾಡಿದಾಗ ಮೊದಲು ಸಿಮೆಂಟನ್ನು ತೆಳುವಾಗಿ ಹೊಡೆದು ಗಟ್ಟಿಯಾಗುವುದಕ್ಕೆ ಬಿಡುತ್ತಾರೆ. ಆಮೇಲೆ ಅದನ್ನು ಕೊಂಚ ಕೆರೆದು ಮತ್ತೆ ಸಿಮೆಂಟ್ ಗಾರೆಯನ್ನು ಹಾಕಿ ಮುಗಿಸುತ್ತಾರೆ.

ಮೊದಲೇ ಕಟ್ಟಿದ ಮನೆ ಮತ್ತು ಮನೆಯ ಭಾಗಗಳನ್ನು ಜೋಡಿಸಿ ಅನೇಕ ಅಂತಸ್ತಿನ ದೊಡ್ಡ ಮನೆಯೊಂದನ್ನು ನಿರ್ಮಾಣ ಮಾಡುತ್ತಿರುವುದು

**8. ಮಹಡಿಯ ಮೆಟ್ಟಲುಗಳು:** ನೆಲಕ್ಕೂ ಮಹಡಿಗೂ ನಡುವೆ ಮರದ ಅಟ್ಟಗಳನ್ನು ಕಟ್ಟುವುದು ಮೊದಲಿನಿಂದಲೂ ರೂಢಿಯಲ್ಲಿದೆ. ಆಗ ಮಹಡಿಯನ್ನು ವಾಸಕ್ಕೆ ಉಪಯೋಗಿಸುವುದು ಸಾಧ್ಯವಾಯಿತು.

ಕೆಳಗಿನಿಂದ ಮೇಲಿನ ಮಹಡಿಗಳಿಗೆ ಸಾಂಪ್ರದಾಯಿಕವಾಗಿ ಇದ್ದ ಈ ಮೆಟ್ಟಿಲುಗಳನ್ನು ಹಳೆಯ ಕಾಲದಲ್ಲಿ ಮಣ್ಣು, ಮರ, ಕಲ್ಲು, ಇಟ್ಟಿಗೆ ಇವುಗಳಿಂದ ಕಟ್ಟುತ್ತಿದ್ದರು. ಈಗ ಪ್ರಬಲಿತ ಕಾಂಕ್ರೀಟಿನಿಂದಲೂ ಉಕ್ಕಿನಿಂದಲೂ ಕಟ್ಟುತ್ತಾರೆ. ಪೂರ್ವ ನಿರ್ಮಿತ ಕಾಂಕ್ರೀಟಿನ ಮೆಟ್ಟಲುಗಳನ್ನು ಕಲ್ಲಿನ ಮೆಟ್ಟಲುಗಳಂತೆಯೇ ಮಾಡಿ ಜೋಡಿಸುತ್ತಾರೆ. ಉಕ್ಕಿನ ಇಲ್ಲವೆ ಕಬ್ಬಿಣದ ಮೆಟ್ಟಲುಗಳನ್ನು ಸಾಮಾನ್ಯವಾಗಿ ಕಟ್ಟಡದೊಳಗೆ ಇಡುವುದಿಲ್ಲ. ಬೆಂಕಿಯೇನಾದರೂ ಬಿದ್ದರೆ ಕಾರ್ಖಾನೆಗಳಲ್ಲಿಯೂ ಕಚೇರಿಗಳಲ್ಲಿಯೂ ತಪ್ಪಿಸಿಕೊಂಡು ಹೋಗುವುದಕ್ಕೆ ಹೊರಗಡೆ ಇವನ್ನು ಇಟ್ಟಿರುತ್ತಾರೆ.

ಮಹಡಿಯ ಮೆಟ್ಟಲುಗಳ ಸಂವಿಧಾನದಲ್ಲಿ ಏರುವಾಗಿನ ಶ್ರಮವನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಕೆಲವು ಸಾಂಪ್ರದಾಯಿಕ ನಿಯಮಗಳಿವೆ. ಯಾವಾಗಲೂ ಮೆಟ್ಟಲಿನ ಅಗಲಕ್ಕೂ (ಟ್ರೆಡ್) ನಿಲುಪಟ್ಟಿಯ ಎತ್ತರಕ್ಕೂ (ರೈಸ್) ಒಂದು ಸಂಬಂಧವಿರಬೇಕು. ವಾಸದ ಮನೆಗಳಿಗೆ ಅನ್ವಯಿಸುವ ಒಂದು ಕ್ರಮದಲ್ಲಿ ಅಂಗುಲಗಳಲ್ಲಿ ಇವೆರಡನ್ನೂ ಗುಣಿಸಿದರೆ 66 ಬರಬೇಕು. ಎಂದರೆ ಮೆಟ್ಟಲುಗಳ ಎತ್ತರ 152 ಮಿಮೀ ಇದ್ದರೆ ಅಗಲ 279 ಮಿಮೀ ಇರಬೇಕು.

ಎತ್ತರವಾದ ಮಹಡಿಗಳನ್ನು ಹತ್ತುವಾಗ ಶ್ರಮ ಕಡಿಮೆಯಾಗಲು ಮಧ್ಯೆಮಧ್ಯೆ ನಿಲ್ಲುವುದಕ್ಕೆ ಅವಕಾಶ ಬೇಕು. ಮೆಟ್ಟಲುಗಳು ಪಕ್ಕಕ್ಕೆ ಕಿರಿದಾಗಲೂ ಸಂಪೂರ್ಣವಾಗಿ ದಿಕ್ಕನ್ನು ಬದಲಿಸಿದಾಗಲೂ ಅಗಲವಾದ ಜಾಗ ಬಿಡಬೇಕು. ಜಾಗ ಸಾಲದೆ ಹೋದಾಗ ಸುತ್ತು ಮೆಟ್ಟಲುಗಳನ್ನು ಉಪಯೋಗಿಸುತ್ತಾರೆ. ಆದರೆ ಇದು ಅನುಕೂಲವಲ್ಲ. ಒಂದು ಮೆಟ್ಟಲು ಸಾಲಿನಲ್ಲಿ ಎಲ್ಲ ಮೆಟ್ಟಲುಗಳೂ ತಿರುಗುತ್ತಲೇ ಹೋದರೆ ಅದನ್ನು ತಿರುಗುವ ಮೆಟ್ಟಲು ಅಥವಾ ತಿರುವು ಮೆಟ್ಟಲು ಎನ್ನುತ್ತಾರೆ. ಇದನ್ನು ಕಬ್ಬಿಣದಿಂದ ತಯಾರು ಮಾಡುವುದು ರೂಢಿ.

ಈಗ ಕಚೇರಿಗಳಲ್ಲಿಯೂ ವಾಣಿಜ್ಯದ ಕಟ್ಟಡಗಳಲ್ಲಿಯೂ ಹತ್ತಾರು ಮಹಡಿಯ ಮನೆಗಳಲ್ಲಿಯೂ ಮೆಟ್ಟಲುಗಳೇನೋ ಇದ್ದರೂ ಅವಕ್ಕೆ ಎರಡನೆಯ ಸ್ಥಾನ ಬಂದಿದೆ. ವಿದ್ಯುತ್ತಿನಿಂದ ಚಲಿಸುವ ಎತ್ತುಗೆಗಳಿಗೆ (ಲಿಫ್ಟ್ಸ್) ಮೊದಲನೆಯ ಸ್ಥಾನ ಬಂದಿದೆ. ಇನ್ನೂ ಆಧುನಿಕವಾದ ಕ್ರಮ ಚಲಿಸುವ ಮಹಡಿಯ ಮೆಟ್ಟಲು (ಇಸ್ಕಲೇಟರ್).

**9. ಕಿಟಕಿಗಳು :** ತೆರೆದು ಹಾಕಿ ಮಾಡುವ ಹಾಗಿರುವ ಪ್ರತಿಯೊಂದು ಕಿಟಕಿಯಲ್ಲಿಯೂ ಒಂದು ಚೌಕಟ್ಟು, ತೆರೆಯುವ ಬಾಗಿಲುಗಳೂ ಇರಬೇಕು. ಚೌಕಟ್ಟಿನಲ್ಲಿ ಬಾಗಿಲುಗಳು ಪಕ್ಕಕ್ಕೆ ತೆರೆಯುವುದು ಸಾಂಪ್ರದಾಯಿಕ ಕ್ರಮ. ಈಚೆಗೆ ಕಿಟಕಿಗಳ ಬಾಗಿಲು ಚೌಕಟ್ಟಿನಲ್ಲಿ ಮೇಲಕ್ಕೂ ಕೆಳಕ್ಕೂ ಸರಿಯುವಂತೆ ಮಾಡುತ್ತಾರೆ ರೈಲ್ವೆಗಾಡಿಗಳಲ್ಲಿ ಮೊದಲಿನಿಂದಲೂ ಈ ನಮೂನೆಯ ಕಿಟಕಿಗಳು ಉಪಯೋಗದಲ್ಲಿವೆ. ಕಿಟಕಿಗಳ ಜಾರುಕದದ ಚೌಕಟ್ಟುಗಳನ್ನು ಮೇಲುಗಡೆ ಹಗ್ಗಗಳಿಂದಲೋ ಸರಪಳಿಗಳಿಂದಲೋ ತೂಗುಹಾಕಿ ಅವುಗಳ ತೂಕವನ್ನು ಚೌಕಟ್ಟಿನಲ್ಲಿ ನೇತಾಡುವ ಸೀಸದ ಭಾರಗಳಿಂದ ಸಮತೂಕ ಮಾಡುವುದೂ ಒಂದೂ ಕ್ರಮ. ಇದಲ್ಲದೆ ಅಡ್ಡಗಲವಾಗಿ ಬಾಗಿಲುಗಳು ಸರಿದಾಡುವಂತೆಯೂ ಮಾಡುತ್ತಾರೆ.

ಕಿಟಕಿಯ ಬಾಗಿಲುಗಳನ್ನು ಮರ, ಗಾಜು, ಇವುಗಳಿಂದ ಸಾಮಾನ್ಯವಾಗಿ ಮುಚ್ಚುತ್ತಾರೆ. ಈಚೆಗೆ ಅನೇಕ ಹಗುರವಾದ ಹಲಗೆಗಳು ರೂಢಿಗೆ ಬಂದಿವೆ. ಈ ವಿಭಾಗದಲ್ಲಿ ಇನ್ನೂ ಸಂಶೋಧನೆಗಳು ನಡೆಯುತ್ತಲೇ ಇವೆ. ಇವನ್ನು ಬೇರೆ ಬೇರೆ ವ್ಯಾಪಾರೀ ನಾಮಗಳಿಂದ ಕರೆಯುತ್ತಾರೆ. ತಿರುಗುವ ಕಿಟಕಿಯನ್ನು ಮರದ ಚೌಕಟ್ಟಿನಲ್ಲಿ ಪಕ್ಕಗಳಲ್ಲಿ ತೂಗುಹಾಕಿ ಒಳಕ್ಕೂ ಹೊರಕ್ಕೂ ತೆರೆಯುವ ಹಾಗೆ ಮಾಡುತ್ತಾರೆ. ಹೊರಗೆ ತೆರೆದರೆ ಮಳೆಯ ನೀರು ಒಳಗೆ ಬರುವುದಿಲ್ಲ.

ಬಾಗಿಲುಗಳು ಮುಚ್ಚಿದ್ದಾಗ ಮೇಲಿನಿಂದ ಗಾಳಿ ಮನೆಯೊಳಕ್ಕೆ ಬರುವ ಹಾಗೆ ಅವುಗಳ ಮೇಲೆಯೂ ಅಡ್ಡ ಕಿಟಕಿಗಳನ್ನಿಟ್ಟಿರುತ್ತಾರೆ. ಈ ಕಿಟಕಿಗಳು ಮೇಲುಗಡೆ ಬಂಧಿತವಾಗಿದ್ದು ಹೊರಗಡೆಗೆ ತೆರೆಯುತ್ತವೆ.

ದೊಡ್ಡ ಕಿಟಕಿಗಳ ಬಾಗಿಲುಗಳು ಹೊರಗಡೆಯಾದರೂ ತೆರೆಯಬಹುದು. ಒಳಗಡೆಯಾದರೂ ತೆರೆಯಬಹುದು. ಉಷ್ಣದೇಶಗಳಲ್ಲಿ ಹೊರಗಡೆ ತೆರೆಯುವುದೇ ಅನುಕೂಲ. ಕಿಟಕಿಗಳ ಗಾಜುಗಳು ಪಾರಕವಾಗಿರಬಹುದು ಇಲ್ಲವೆ ಅಪಾರಕವಾಗಿರಬಹುದು.

ಉಕ್ಕಿನ ಕಿಟಕಿಗಳನ್ನು ಈಗ ಮೇಲುಗಡೆಯೂ ಕೆಳಗಡೆಯೂ ಚೌಕಟ್ಟಿನಲ್ಲಿ ಭದ್ರಮಾಡಿ ತಿರುಗಣೆ ಕಿಟಕಿಗಳ ಹಾಗೆ ಎಲ್ಲೆಲ್ಲಿಯೂ ಉಪಯೋಗಿಸುತ್ತಿದ್ದಾರೆ. ಈ ಕಿಟಕಿಗಳ ಉಕ್ಕಿಗೆ ತುಕ್ಕು ಹಿಡಿಯದ ಹಾಗೆ ಆಗಾಗ ಬಣ್ಣವನ್ನು ಬಳಿಯುತ್ತಿರಬೇಕು. ಮರದ ಕಿಟಕಿಗಳಿಗೂ ಹೊರಗಡೆ ಬಣ್ಣವನ್ನು ಹಚ್ಚಿ ಒಳಗಡೆ ವಾರ್ನೀಸು ಇಲ್ಲವೇ ಪಾಲಿಷ್ ಮಾಡುತ್ತಾರೆ. ಅಲ್ಯುಮಿನಿಯಮಿನಿಂದಲೂ ಪ್ಲಾಸ್ಟಿಕ್ಕಿನಿಂದಲೂ ಈಚೆಗೆ ಕಿಟಕಿಗಳು ತಯಾರಾಗುತ್ತಿವೆ.

**10. ಬಾಗಿಲುಗಳು :** ಬಾಗಿಲುಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. (1) ಯಾವ ಸಾಮಗ್ರಿಯಿಂದ ಮಾಡಿದೆಯೋ ಅದನ್ನು ಹೇಳಬಹುದು –ಕಬ್ಬಿಣ, ಮರ, ಇತ್ಯಾದಿ (2) ಮರದ ಬಾಗಿಲುಗಳನ್ನು ರಚನೆಯಲ್ಲಿ ಪುಟೀಪಿನಿಂದ ಇಲ್ಲವೆ ಚೌಕಟ್ಟಿನಿಂದ ಮಾಡಿರಬಹುದು. (3) ಬಾಗಿಲುಗಳು ಹೊರಗಡೆ ತೆರೆಯಬಹುದು ಇಲ್ಲವೆ ಒಳಗಡೆ ತೆರೆಯಬಹುದು.

ಬಾಗಿಲುಗಳನ್ನು ಬಡಗಿಗಳು ಬೇಕುಬೇಕಾದ ಅಳತೆಗೆ ತಯಾರಿಸುತ್ತಾರೆ. ನಗರಗಳಲ್ಲಿ ಯಂತ್ರಗಳನ್ನು ಉಪಯೋಗಿಸಿ ಶಿಷ್ಟ ಆಯಾಮಗಳ ಅನುಸಾರ ಅವನ್ನು ತಯಾರಿಸಲಾಗುತ್ತದೆ. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಒಲೆಗಳ ಶಾಖದಲ್ಲಿ ಹದವಾಗಿ ಒಣಗಿಸಿದ ಮರದಿಂದ ಕ್ಲುಪ್ತವಾದ ಎತ್ತರ, ಅಗಲ ಮತ್ತು ದಪ್ಪದಲ್ಲಿ ದೊಡ್ಡ ರೀತಿಯಲ್ಲಿ ಕಾರ್ಖಾನೆಗಳಲ್ಲಿ ಇವನ್ನು ಮಾಡುತ್ತಾರೆ. ಬಾಗಿಲುಗಳಿಗೆ ಎರಡು ಹಾಳೆಗಳಿರಬಹುದು ಇಲ್ಲವೆ ಒಂದೇ ಹಾಳೆಯಿರಬಹುದು. ಈಚೆಗೆ ಲೋಹಕ ಬಾಗಿಲುಗಳು ಹೆಚ್ಚಾಗಿ ಬಳಕೆಗೆ ಬರುತ್ತಿವೆ. ಹೊರಗಿನ ಬಾಗಿಲುಗಳನ್ನು ಯಾವಾಗಲೂ ಅನೇಕ ಕಡೆ ಲೋಹದಿಂದಲೇ ತಯಾರಿಸುತ್ತಾರೆ.

ಮನೆಯನ್ನೂ ಕಟ್ಟುವ ಕಲೆ ಬೆಳೆಯುತ್ತಲೇ ಇದೆ. ಈ ವಿಚಾರದಲ್ಲಿ ಸಂಶೋಧನೆಗಳೂ ನಡೆಯುತ್ತಲೇ ಇವೆ.

**ಕಟ್ಟಡನಿರ್ಮಾಣದ ಯೋಜನೆ :** ಒಂದು ದೊಡ್ಡ ಕಟ್ಟಡವನ್ನು ಕಟ್ಟುವ ಯೋಜನೆಯೂ ಅದಕ್ಕೆ ಆವಶ್ಯವಾದ ವ್ಯವಸ್ಥೆಯೂ ಕೆಲಸಗಾರರು ನಿವೇಶನದ ಹತ್ತಿರಕ್ಕೆ ಬರುವುದಕ್ಕೆ ಬಹಳ ಮುಂಚೆ ಪ್ರಾರಂಭವಾಗುತ್ತದೆ. ಭೂಮಿಯನ್ನು ಮೊದಲು ಮೋಜಣಿ ಮಾಡಿ ಮಣ್ಣಿನ ಗುಣವನ್ನು ಪರೀಕ್ಷಿಸಿದ ಮೇಲೆ ಪೀಠಿಕಾ ರೂಪವಾಗಿ ವಿನ್ಯಾಸಗಳನ್ನೂ ಅಂದಾಜುಗಳನ್ನು ತಯಾರಿಸಬೇಕು. ಕಟ್ಟಡವನ್ನು ಕಟ್ಟಲು ನಗರಸಭೆಯ ಅನುಮತಿಬೇಕು. ನಗರದ ಚರಂಡಿಯ ವ್ಯವಸ್ಥೆ ಮತ್ತು ನೀರಿನ ಸರಬರಾಜನ್ನು ಹೊಂದಿಸಿಕೊಳ್ಳಬೇಕು. ಆ ಕಟ್ಟಡದ ಪ್ರತಿಯೊಂದು ಭಾಗವೂ ತನ್ನ ಮೇಲೆ ಬೀಳುವ ಸ್ಥಾವರ ಮತ್ತು ಜಂಗಮ ಭಾರವನ್ನು ತಡೆಯಬಹುದೆಂದು ಇಂಜಿನಿಯರಿಗೆ ಮನದಟ್ಟಾದ ಮೇಲೆ ಅಖೈರಾಗಿ ನಕ್ಷೆಯನ್ನೂ ಲೆಕ್ಕಾಚಾರಗಳನ್ನೂ ತಯಾರಿಸಬೇಕು. ಒಂದೊಂದು ಭಾಗದಲ್ಲಿಯೂ ಉಪಯೋಗಿಸಬೇಕಾದ ಸಾಮಗ್ರಿಗಳನ್ನು ನಿರ್ಧರಿಸಿದ ಮೇಲೆ ಪ್ರತಿಯೊಂದಕ್ಕೂ ಬೇಕಾಗುವ ಸಾಮಗ್ರಿಗಳ ಪ್ರಮಾಣವನ್ನೂ ಅವಶ್ಯವಾದ ಜನಸಹಾಯವನ್ನೂ ಲೆಕ್ಕ ಹಾಕಬೇಕು. ಕೊನೆಯಲ್ಲಿ ಗುತ್ತಿಗೆದಾರರಿಂದ ದರಖಾಸ್ತು ತರಿಸಿ ದರ ಮತ್ತು ಕೆಲಸನಿರ್ವಹಣೆ ಸಮರ್ಪಕವಾಗಿರುವವರಿಗೆ ಕೆಲಸ ಕೊಡಬೇಕಾಗುತ್ತದೆ.

ಕೆಲಸವನ್ನು ಮಾಡಲು ಒಪ್ಪಿಕೊಂಡ ಗುತ್ತಿಗೆದಾರರಿಗೂ ಪೂರ್ವಭಾವಿಯಾದ ಕೆಲಸ ಬೇಕಾದಷ್ಟು ಇರುವುದು. ಕಟ್ಟಡವನ್ನು ಸಂವಿಧಾನ ಮಾಡಿದ ಇಂಜಿನಿಯರಿನೊಂದಿಗೆ ಕುಳಿತು ಕಟ್ಟಡದ ಕಾರ್ಯಕ್ರಮವನ್ನು ನಿರ್ಧರಿಸಿಕೊಳ್ಳಬೇಕು. ಬೇಕಾದ ಸಾಮಾನುಗಳಿಗೆ ಏರ್ಪಾಡು ಮಾಡಬೇಕು. ಭೂಮಿಯನ್ನು ಅಗೆಯುವುದಕ್ಕೂ ಅಗೆದ ಮಣ್ಣನ್ನು ಸಾಗಿಸುವುದಕ್ಕೂ ಬೇಕಾಗುವ ಯಂತ್ರಗಳು, ಒಂದೊಂದು ಘಟ್ಟದಲ್ಲಿಯೂ ಬೇಕಾಗುವ ಕೆಲಸಗಾರರು–ಇವಕ್ಕೆಲ್ಲ ಏರ್ಪಾಡು ಮಾಡಬೇಕು.

**ಅನೇಕ ಅಂತಸ್ತುಗಳುಳ್ಳ ಬೃಹತ್ ಸೌಧ. ಮೇಲಿನ ಅಂತಸ್ತಿನಿಂದ ಪ್ರಾರಂಭಿಸಿ ಕಟ್ಟಡವನ್ನು ಪೂರ್ತಿ ಮಾಡಲಾಗುತ್ತದೆ. ಒಂದೊಂದು ಭಾಗವೂ ಮೊದಲೇ ಸಿದ್ಧವಾಗಿದ್ದು ಒಂದರೊಡನೊಂದನ್ನು ಸಂಯೋಜಿಸಿ ಇಡೀ ಕಟ್ಟಡವನ್ನು ನಿರ್ಮಿಸುತ್ತಾರೆ.**

**ರಚನೆ :** ಇಂಜಿನಿಯರಿಂದ ತಪಶೀಲಾದ ನಕ್ಷೆಗಳು ಬಂದ ಮೇಲೆ ಅವಕ್ಕನುಸಾರವಾಗಿ ನೆಲದ ಮೇಲೆ ಗುರುತು ಮಾಡಿ ತಳಪಾಯದಲ್ಲಿ ಗಟ್ಟಿಯಾದ ಮಣ್ಣುಸಿಕ್ಕುವವರೆಗೂ ಅಗೆದು ಅವಶ್ಯವಾದ ಕಡೆ ಮರ, ಉಕ್ಕು ಇಲ್ಲವೆ ಪ್ರಬಲಿತ ಕಾಂಕ್ರೀಟಿನ ದಸಿಗಳನ್ನು ಭಾರವಾದ ಸಮಷ್ಟಿಯಿಂದ ಹೊಡೆದು ಹೂಳಬೇಕು. ಮಳೆಯ ನೀರಿನ ಚರಂಡಿಗಳು, ಕುಡಿಯುವ ನೀರಿನ ಕೊಳಾಯಿಗಳು, ಗ್ರಾಮಸಾರದ ಕೊಳವಿಗಳು–ಇವುಗಳಿಗೆ ಅಗಳುಗಳನ್ನು ಸೂಕ್ತವಾದ ಕಡೆ ತೆಗೆದು ಅವುಗಳಿಗೆ ಇಟ್ಟಿಗೆಯಿಂದಲೋ ಕಾಂಕ್ರೀಟಿನಿಂದಲೋ ಅಚ್ಚುಕಟ್ಟನ್ನು ಕಟ್ಟಿ ಮೇಲುಗಡೆ ಕಟ್ಟಡದ ಭಾರವನ್ನು ತಡೆಯುವ ಕಾಂಕ್ರೀಟಿನ ಚಪ್ಪಡಿಗಳನ್ನು ಎಳೆಯಬೇಕು–ಕಾರ್ಖಾನೆಯನ್ನು ಕಟ್ಟುವಾಗ ಭಾರವಾದ ಯಂತ್ರಗಳಿಗೆ ವಿಶಿಷ್ಟವಾದ ಅಡಿಪಾಯವನ್ನು ಹಾಕಬೇಕು.

ಕಟ್ಟಡದ ಭಾರವನ್ನು ಹೊರುವುದಕ್ಕೆ ಉಕ್ಕಿನ ಚೌಕಟ್ಟನ್ನು ಈ ಘಟ್ಟದಲ್ಲಿಯೇ ತಂದು ಲಂಬವಾಗಿ ನಿಲ್ಲಿಸಿ ಜಾಲಂದರದ (ಲ್ಯಾಟ್ಟೀಸ್) ಚೌಕಟ್ಟಿನ ಹಂದರವನ್ನು (ಸಕೆಲಿಟನ್) ತಯಾರಿಸಬೇಕು. ಈ ಚೌಕಟ್ಟನ್ನು ಪ್ರಬಲಿತ ಕಾಂಕ್ರೀಟಿನಿಂದ ಮಾಡಿದರೆ ಒಳಗಡೆ ಉಕ್ಕಿನ ಕಂಬಗಳನ್ನು ಲೆಕ್ಕಾಚಾರವಾಗಿ ಕೂಡಿಸಿ ಅಚ್ಚಿನ ಹಲಗೆಗಳ ಮಧ್ಯೆ ಕಂಬಿಗಳ ಸುತ್ತಲೂ ಸಿಮೆಂಟ್ ಕಾಂಕ್ರೀಟನ್ನು ಹೊಯ್ಯಬೇಕು. ಆಮೇಲೆ ಗೋಡೆಗಳನ್ನು ಇಟ್ಟಿಗೆ ಗಾರೆಯಿಂದಲೋ ಕಲ್ಲುಗಾರೆಯಿಂದಲೋ ಕಟ್ಟಬಹುದು. ಈಚೆಗೆ ಮೊದಲೇ ಜೋಡಿಸಿದ ಮರದ ಇಲ್ಲವೆ ಕಾಂಕ್ರೀಟಿನ ತೆಳ್ಳನೆಯ ಪುಟೀಪುಗಳನ್ನು ಚೌಕಟ್ಟಿಗೆ ಅಂಟಿಸುವುದು ವಾಡಿಕೆ, ಬಾಗಿಲುಗಳಿಗೂ ಕಿಟಕಿಗಳಿಗೂ ಜಾಗವನ್ನು ಬಿಟ್ಟು ಆಮೇಲೆ ಅವನ್ನು ಜೋಡಿಸಬಹುದು. ಕಟ್ಟಡ ಮೇಲಕ್ಕೆ ಹೋದ ಹಾಗೆ ಕಾಲಾವಧಿ (ಸಾರುವೆ) ಬೇಕಾಗುತ್ತದೆ. ಆಗ ಸಾಮಾನುಗಳನ್ನು ಕ್ರೇನುಗಳಿಂದಲೋ ಕಪ್ಪಿಗಳಿಂದಲೋ ಮೇಲಕ್ಕೆ ಎತ್ತಿ ಕೆಲಸಗಾರರಿಗೆ ಒದಗಿಸುತ್ತಾರೆ. ಗೋಡೆಗಳೇ ಭಾರವನ್ನು ಹೊರುವುದಾದರೆ, ಅವನ್ನು ಸಾಕಷ್ಟು ಭದ್ರವಾಗಿ ಕಲ್ಲುಗಾರೆ ಇಟ್ಟಿಗೆ ಇಲ್ಲವೆ ಕಾಂಕ್ರೀಟಿನಿಂದ ಕಟ್ಟಬೇಕು.

ಮೇಲಿನ ಮಹಡಿಗಳನ್ನು ಕಟ್ಟುತ್ತಿರುವಾಗ ಕೆಳಗಿನ ಅಂತಸ್ತುಗಳಲ್ಲಿ ಬಾಗಿಲು ಮತ್ತು ಕಿಟಕಿಗಳ ಚೌಕಟ್ಟುಗಳನ್ನು ಅದಕ್ಕಾಗಿ ಬಿಟ್ಟಿರುವ ಜಾಗದಲ್ಲಿ ಕೂರಿಸುತ್ತಾರೆ. ಕಟ್ಟಡದ ಒಳಗಡೆಯ ಅಡ್ಡಗೋಡೆಗಳನ್ನು ಈಗ ಹೊರಗಿನ ಗೋಡೆಗಳಂತೆಯೇ ಕಟ್ಟಲು ಪ್ರಾರಂಭಿಸುತ್ತಾರೆ. ಇವು ತೆಳುವಾಗಿದ್ದರೂ ಒಂದು ಕೊಠಡಿಯಿಂದ ಶಬ್ದ ಇನ್ನೊಂದಕ್ಕೆ ಕೇಳದಂತೆ ವಿಶಿಷ್ಟ ರೀತಿಯಲ್ಲಿರುತ್ತವೆ. ಮಹಡಿಯ ಮೆಟ್ಟಲುಗಳು, ಎತ್ತುಗೆಗಳು, ನೀರಿನ ಕೊಳವಿಗಳು, ವಿದ್ಯುತ್ತಿನ ತಂತಿಗಳು–ಇವಕ್ಕೆಲ್ಲ ಸೂಕ್ತವಾಗಿ ಜಾಗವನ್ನು ಬಿಟ್ಟಿರುತ್ತಾರೆ. ಮೇಲಿನ ಮಹಡಿಗಳನ್ನು ಮಟ್ಟವಾದ ತೊಲೆಗಳ ಮೇಲೆ ತೂರಿಸಿ ಮಾಡಿನ ಚಪ್ಪಡಿಗಳನ್ನು ಪ್ರಬಲಿತ ಕಾಂಕ್ರೀಟಿನಿಂದ ಮಾಡಿರುತ್ತಾರೆ. ಬೇರೆ ಬೇರೆ ಮಹಡಿಗಳಲ್ಲಿ ಸ್ವತಂತ್ರವಾಗಿ

ಸಂಸಾರಗಳು ವಾಸಮಾಡುವಾಗ ಶಬ್ದ ಒಂದು ಅಂತಸ್ತಿನಿಂದ ಇನ್ನೊಂದಕ್ಕೆ ಸಂಚಾರಮಾಡದ ಹಾಗೂ ಚೌಕಟ್ಟಿಗೂ ಮಧ್ಯೆ ಒಂದು ಮೆತುವಾದ ಕ್ವಿಲ್ಟನ್ನು ಗಾಜಿನ ಉಣ್ಣೆಯಿಂದಲೋ ಇನ್ನು ಯಾವುದಾದರೂ ಪುಟ ಚಿಮ್ಮುವಂಥ ಸಾಮಗ್ರಿಯಿಂದಲೊ ಇಡುತ್ತಾರೆ. ಚಾವಣಿಗಳು ಬಲವಾಗಿಯೂ ಹಗುರವಾಗಿಯೂ ಇರಬೇಕು.

**ಕೆಲಸದ ಪ್ರಗತಿ :** ಕಟ್ಟಡದ ಗುತ್ತಿಗೆದಾರ ಎಲ್ಲ ಕೆಲಸಕ್ಕೂ ಜವಾಬುದಾರನಾದರೂ ಉಕ್ಕಿನ ಕೆಲಸ, ಒಳಗಡೆಯ ಗಾಳಿಯನ್ನು ಒಂದೇ ಕಾವಿನಲ್ಲಿಟ್ಟಿರುವುದು ಮೊದಲಾದ ಕೆಲಸಗಳನ್ನು ಬೇರೆ ಬೇರೆ ಪ್ರವೀಣರಿಗೆ ಕೊಟ್ಟಿರುತ್ತಾರೆ, ಜೊತೆಗೆ ಕೊಳಾಯಿ ಜೋಡಿಸುವವರು, ಬಡಗಿಗಳು, ಬಣ್ಣ ಬಳಿಯುವವರು–ಇವರ ಕೆಲಸವನ್ನು ಒಂದು ವ್ಯವಸ್ಥೆಗೆ ಅನುಗುಣವಾಗಿ ಮಾಡಬೇಕಾಗುತ್ತದೆ.

ಹಣವೂ ಕೆಲಸವೂ ಪೋಲಾಗದೆ ಇರಬೇಕಾದರೆ ಸಾಮಗ್ರಿಗಳು ಸಕಾಲಕ್ಕೆ ಒದಗಬೇಕು. ಅನೇಕ ಚಿಲ್ಲರೆ ಕೆಲಸಗಳಲ್ಲಿ ಒಂದೊಂದಕ್ಕೂ ಎಷ್ಟು ದಿನ ಹಿಡಿಯುತ್ತದೆ–ಎಂದು ಅಂದಾಜು ಮಾಡುವುದಕ್ಕೂ ಇವನ್ನೆಲ್ಲ ಒಂದು ಕಾರ್ಯಕ್ರಮಕ್ಕೆ ಹೊಂದಿಸುವುದಕ್ಕೂ ಅಪಾರವಾದ ಅನುಭವವೂ ವಿವೇಚನಾಶಕ್ತಿಯೂ ಬೇಕು.

ಕಟ್ಟಡದ ಕೆಲಸ ಮುಂದುವರಿದ ಹಾಗೆ ಇಂಜಿನಿಯರ್‌ನ ಪ್ರತಿನಿಧಿ ಮೊದಲು ಮಾಡಿಕೊಂಡ ಕಾರ್ಯಕ್ರಮಕ್ಕೆ ತಿಂಗಳು ತಿಂಗಳು ವಾಸ್ತವವಾಗಿ ನಡೆದ ಕೆಲಸವನ್ನು ಹೋಲಿಸುತ್ತಾನೆ. ಮೊದಲು ಮಾಡಿದ ಅಂದಾಜಿನಲ್ಲಿ ಏನಾದರೂ ವ್ಯತ್ಯಾಸವಾಗಬೇಕಿದ್ದರೆ ಇಲ್ಲವೆ ಮಳೆ ಮುಂತಾದ ಅನಿರೀಕ್ಷಿತ ತೊಂದರೆಗಳು ಒದಗಿದರೆ ಗುತ್ತಿಗೆದಾರರಿಗೆ ಕೊಡಬೇಕಾದ ಹಣವನ್ನು ಸರಿಹೊಂದಿಸಬೇಕಾಗುತ್ತದೆ.

**ಕಟ್ಟಡದ ತತ್ತ್ವಗಳು :** ಮಾಲೀಕನಿಗೆ ಯಾವ ನಮೂನೆಯ ಕಟ್ಟಡ ಬೇಕೋ ಅದನ್ನು ಸುಲಭ ಖರ್ಚಿನಿಂದಲೂ ಲಕ್ಷಣವಾಗಿಯೂ ಸಂವಿಧಾನ ಮಾಡಿ ಕಟ್ಟುವುದರಲ್ಲಿ ಇಂಜಿನಿಯರ್‌ನ ಕೌಶಲ ಕಾಣುತ್ತದೆ. ಕಟ್ಟಡದ ಉದ್ದೇಶ, ಅದನ್ನು ಕಟ್ಟತಕ್ಕ ಜಾಗ– ಇವುಗಳಿಗೆ ಅವನು ಸಂವಿಧಾನವನ್ನು ಹೊಂದಿಸಬೇಕು. (ಎಚ್.ಸಿ.ಕೆ., ಎಂ.ಜಿ.ಎಸ್.)

**ಕಟ್ಟಡದ ಶಿಲೆಗಳು :** ಧಾರಣ ಸಾಮರ್ಥ್ಯ, ಬಾಳಿಕೆ, ಕಾರ್ಯೋಪಯೋಗ, ಬಣ್ಣ ಮತ್ತು ಅಂದ–ಈ ಗುಣಗಳು ಯುಕ್ತ ಪ್ರಮಾಣದಲ್ಲಿ ಮೇಳೈಸಿರುವ ಕಲ್ಲುಗಳಿಗೆ ಈ ಹೆಸರಿದೆ. ಇವನ್ನು ಅಡಿಪಾಯಕ್ಕೂ ಗೋಡೆಗಳಿಗೂ ಉಪಯೋಗಿಸುವುದಲ್ಲದೆ ಕಟ್ಟಡದಲ್ಲಿ ಹಾಸಲೂ ಇತರ ಅಲಂಕರಣಗಳಿಗೂ ಕಂಬಗಳಿಗೂ ಬಳಸುತ್ತಾರೆ.

**ಧಾರಣಸಾಮರ್ಥ್ಯ :** ಒಂದು ಕಲ್ಲು ಒತ್ತಡವನ್ನು ತಡೆದುಕೊಳ್ಳಬಲ್ಲ ಸಾಮರ್ಥ್ಯದಿಂದ ಇದನ್ನು ಅಳೆಯಲಾಗುವುದು. ಒತ್ತು ಒತ್ತಡ, ಎಳೆತದ ಒತ್ತಡ, ಅಡ್ಡ ಒತ್ತಡ ಇವೇ ಮುಂತಾದ ಬಗೆ ಬಗೆಯ ಒತ್ತಡಗಳಿಗೆ ಕಲ್ಲನ್ನು ಗುರಿಪಡಿಸಿ ಇದನ್ನು ನಿರ್ಧರಿಸುತ್ತಾರೆ, ಧಾರಣ ಸಾಮರ್ಥ್ಯ ಕಲ್ಲಿನ ವಸ್ತುಸಂಯೋಗ (ಕಾಂಪೊಸಿಷನ್), ಹೆಣಿಗೆ (ಟೆಕ್ಸ್ಚರ್), ರಚನೆ, ಒಟ್ಟೈಸಿರುವ ಕ್ರಮ ಮುಂತಾದುವನ್ನು ಅವಲಂಬಿಸಿದೆ.

ಕಟ್ಟಡದ ಕಲ್ಲುಗಳಲ್ಲಿರುವ ವಿವಿಧ ಖನಿಜಗಳು ಗಟ್ಟಿತನದಲ್ಲೂ ಒತ್ತಡರೋಧ ಸಾಮರ್ಥ್ಯದಲ್ಲೂ ತುಂಬ ಭಿನ್ನವಾಗಿವೆ. ಕ್ವಾರ್ಟ್ಜ್ ಅಥವಾ ಬೆಣಚುಕಲ್ಲು ಕ್ಯಾಲ್‌ಸೈಟ್ ಅಥವಾ ಫೆಲ್ಡ್‌ಸ್ಪಾರಿಗಿಂತ ಹೆಚ್ಚು ಗಟ್ಟಿಯಾಗಿರುವುದಲ್ಲದೆ ಅದರ ಒತ್ತಡ ಸಾಮರ್ಥ್ಯವೂ ಹೆಚ್ಚಾಗಿದೆ. ಬೇರೆ ಬೇರೆಯ ಖನಿಜಗಳಿಗೆ ಬೇರೆ ಬೇರೆ ಉಷ್ಣತೆಗಳಲ್ಲಿ ಬೇರೆ ಬೇರೆ ರೇಖಾವಿಸ್ತರಣ ಗುಣಕಗಳಿವೆ. ಕ್ಯಾಲ್‌ಸೈಟ್ ಮತ್ತು ಫೆಲ್ಡ್‌ಸ್ಪಾರ್ ಮುಂತಾದ ಕೆಲವು ಖನಿಜಗಳಿಗೆ ಎದ್ದುಕಾಣುವ ಸೀಳುರೇಖೆಗಳುಂಟು. ಆದರೆ ಕ್ವಾರ್ಟ್ಜ್ ಅಥವಾ ಬೆಣಚುಕಲ್ಲಿಗೆ ಈ ಬಗೆಯ ಸೀಳುಗಳಿರುವುದಿಲ್ಲ. ಒಂದು ಖನಿಜದ ದ್ರಾವಣತೆ (ಸಾಲ್ಯುಬಿಲಿಟಿ) ಅದರ ಸಾಮರ್ಥ್ಯದ ಒಂದು ಮುಖ್ಯ ನಿರ್ಧರಣಾಂಶ, ಮರಳುಶಿಲೆಗಳಲ್ಲಿ ಅಥವಾ ಸಂಚಿತ ಶಿಲೆಗಳಲ್ಲಿ ಬಂಧಕ ವಸ್ತು ಈ ತೆರನಾದ ಬದಲಾವಣೆಗೆ ಒಳಗಾದಲ್ಲಿ ಆಗ ಒಂದೊಂದು ಕಣಕ್ಕೂ ಇರುವ ಬಿಗಿ ತಪ್ಪಿ ಶಿಲೆ ಚೂರು ಚೂರಾಗಿ ಕುಸಿದು ಬೀಳುತ್ತದೆ.

**ಹೆಣಿಗೆ :** ಒರಟು ಹೆಣಿಗೆಯ ಕಲ್ಲುಗಳು ಅದೇ ವಸ್ತು ಸಂಯೋಗವುಳ್ಳ ಸೂಕ್ಷ್ಮ ಹೆಣಿಗೆಯ ಕಲ್ಲುಗಳಷ್ಟು ಸಮರ್ಥವಲ್ಲ, ಶಿಲೆಯ ಸರಂಧ್ರತೆಯೂ ಅದರ ಸಾಮರ್ಥ್ಯ ಗೊತ್ತುಪಡಿಸುವುದರಲ್ಲಿ ಪ್ರಧಾನಾಂಶವಾಗಿದೆ.

**ರಚನೆ :** ಕಟ್ಟಡದ ಕಲ್ಲುಗಳಲ್ಲಿ ಸ್ತರತೆ (ಲ್ಯಾಮಿನೇಷನ್) ಮುಖ್ಯವಾಗಿ ನೋಡಬೇಕಾದ ಅಂಶ. ಒಂದೇ ನೇರಕ್ಕಿರುವಂತೆ ಎಳೆಗಳಿದ್ದರೆ ಆ ಶಿಲೆ ಆ ನೇರದಲ್ಲಿ ಬೇರೆ ನೇರಕ್ಕೆ ಅಷ್ಟು ಸುಲಭವಾಗಿ ಸೀಳಿಕೊಳ್ಳುವುದಿಲ್ಲ.

**ಒಟ್ಟೈಸಿರುವ ವಿಧಾನ :** ಕಲ್ಲುಗಳ ಕಣಗಳು ಸಾಧಾರಣವಾಗಿ ಒಟ್ಟೈಸುವ ಮೂರು ವಿಧಾನಗಳು–ರಸಾಯನಿಕ, ಸ್ಫಾಟಿಕ ಮತ್ತು ಬಂಧಕ (ಸಿಮೆಂಟೇಷನ್). ರಾಸಾಯನಿಕ ಒಟ್ಟೈಸುವಿಕೆಗೆ ಸುಣ್ಣಕಲ್ಲುಗಳೂ ಸ್ಫಟಿಕ ಒಟ್ಟೈಸುವಿಕೆಗೆ ಗ್ರಾನೈಟುಗಳೂ ಬಂಧಕ ಒಟ್ಟೈಸುವಿಕೆಗೆ ಸಿಲಿಕವೂ ಉದಾಹರಣೆಗಳು.

**ಬಾಳಿಕೆ :** ಹೊರ ಆವರಣದ ಪರಿಸ್ಥಿತಿಗಳನ್ನು ತಡೆದುಕೊಳ್ಳಬಲ್ಲ ಕಲ್ಲಿನ ಸಾಮರ್ಥ್ಯವನ್ನು ಅವಲಂಬಿಸಿ ಅದರ ಬಾಳಿಕೆ ಇದೆ. ಉಷ್ಣತಾಮಾನಗಳ ಬದಲಾವಣೆಗಳು ಬಂಡೆಯ ಗಾತ್ರವನ್ನು ಮಾರ್ಪಡಿಸುತ್ತಿದ್ದು ಅವು ಒಡೆದು ಹೋಗುವಂತೆ ಮಾಡುತ್ತವೆ. ಸೂಕ್ಷ್ಮ ಕಣಗಳಿಂದ ಕೂಡಿರುವ ಅಸ್ಫಟಿಕ ಶಿಲೆಗಳಿಗಿಂತಲೂ ಹೆಚ್ಚಾಗಿ ಒರಟಾದ ಸ್ಫಟಿಕ ಕಣಗಳಿಂದ ಕೂಡಿರುವ ಕಲ್ಲುಗಳನ್ನು ಉಷ್ಣತೆ ಬಾಧಿಸುತ್ತದೆ. ಕಲ್ಲಿನ ಉಷ್ಣವಾಹಕ ಗುಣ ಅತ್ಯಲ್ಪ. ಮಧ್ಯಾಹ್ನದ ಸುಡುಬಿಸಿಲಿನ ಪ್ರಭಾವದಿಂದ ಅದರ ಹೊರಭಾಗ ಅಧಿಕ ಉಷ್ಣತೆಗೆ ಏರಬಹುದು. ಅದರ ತಳಕ್ಕೆ ಈ ಉಷ್ಣತೆ ಸ್ವಲ್ಪವೂ ಸೋಕದಿರಬಹುದು. ಇದರಿಂದ ಗಾತ್ರದ ಹಿಗ್ಗುವಿಕೆಯಲ್ಲಿ ಏರುಪೇರುಗಳಾಗಿ ಕಲ್ಲು ದುರ್ಬಲವಾಗುತ್ತದೆ. ಕಲ್ಲು ಗೋಡೆಗಳು ಹರಿಯುವ ನೀರಿನಿಂದ ಹೆಚ್ಚು ಸವೆಯುವುದಿಲ್ಲ. ಜಲಜಶಿಲೆಗಳನ್ನು ಉಪಯೋಗಿಸಿದಾಗ ಒಳಗಿನ ನೀರು ಅವನ್ನು ಸಡಿಲಗೊಳಿಸುವ ಸಾಧನವಾಗುತ್ತದೆ. ಇಂಥ ಕಲ್ಲುಗಳು ಇದ್ದಕ್ಕಿದ್ದಂತೆ ಒಡೆದು ಹೋಗುವುದುಂಟು. ಎಲ್ಲ ಶಿಲೆಗಳೂ ನೀರನ್ನು ಹೀರಿಕೊಳ್ಳುತ್ತವೆ, ಆದರೆ ಅದರ ಪ್ರಮಾಣ ಕಲ್ಲಿನ ವಸ್ತುಸಂಯೋಗವನ್ನೂ ಸರಂಧ್ರತೆಯನ್ನೂ ಅವಲಂಬಿಸಿದೆ. ಶಿಲಾಭಂಗ ನೀರು ಹೆಪ್ಪುಗಟ್ಟಿಕೊಳ್ಳುವುದನ್ನವಲಂಬಿಸಿದೆ. ಈ ಕಾರಣದಿಂದ ನೀರನ್ನು ತುಂಬ ಹೀರಿಕೊಳ್ಳುವ ಶಿಲೆಗಳನ್ನು, ಅದರಲ್ಲೂ ರಚನೆ ಸೂಕ್ಷ್ಮವಾಗಿರುವಂಥವನ್ನು ಪರಿತ್ಯಜಿಸುವುದು ಲೇಸು. ಗಾಳಿ ಬಿರುಸಾಗಿ ಬೀಸುವ ಜಾಗಗಳಲ್ಲಿ ಅದು ತರುವ ದೂಳು ಮತ್ತು ಮರಳು ಶಿಲಾ ವಿಧ್ವಂಸಕಾರಿಗಳು. ನೆಲಕ್ಕೆ ಹಾಸುವ ಮತ್ತು ಉಪಯೋಗಿಸುವ ಕಲ್ಲುಗಳ ಸವೆತದ ಪ್ರಮಾಣವೆಷ್ಟೆಂಬುದೂ ಗಮನಿಸಬೇಕಾದ ಅಂಶ. ಗ್ರಾನೈಟುಗಳೂ ಕ್ವಾರ್ಟ್ಜೈಟುಗಳೂ ಬೇಗ ಸವೆಯದೆ ಬಲು ಉಪಯುಕ್ತವಾಗಿವೆ; ಸುಣ್ಣಕಲ್ಲುಗಳು ಈ ದೃಷ್ಟಿಯಲ್ಲಿ ಉಪಯುಕ್ತವಾದುವಲ್ಲ. ರಾಸಾಯನಿಕವಾಗಿ ಶಿಲೆಯನ್ನು ಛಿದ್ರಗೊಳಿಸುವ ಕಾರಕಗಳು ವಾತಾವರಣದ ಸಾರಜನಕ, ಆಮ್ಲಜನಕ, ಇಂಗಾಲಾಮ್ಲ, ನೀರಿನ ಆವಿ, ಅಮೋನಿಯ, ನೈಟ್ರಿಕ್, ಸಲ್ಫ್ಯೂರಸ್ ಮತ್ತು ಸಲ್ಫ್ಯೂರಿಕ್ ಆಮ್ಲಗಳು ಮತ್ತು ಇತರ ಸಸ್ಯಜನ್ಯಸಾವಯವ ಸಂಯುಕ್ತಗಳು. ಆಮ್ಲಜನಕ ನೀರು ಮತ್ತು ಇಂಗಾಲಾಮ್ಲಗಳು ಕ್ರಮವಾಗಿ ಆಕ್ಸಿಡೇಷನ್, ಹೈಡ್ರೇಷನ್ ಮತ್ತು ಕಾರ್ಬೋನೇಷನ್ನುಗಳನ್ನು ಉಂಟುಮಾಡುತ್ತವೆ. ಒಂದು ಶಿಲೆಯ ರಾಸಾಯನಿಕ ಭಗ್ನತೆ ಬಹುಸಂಕೀರ್ಣವಾದ ಕ್ರಿಯೆ. ಇದರಲ್ಲಿ ಅನೇಕ ಪ್ರತಿಕ್ರಿಯೆಗಳೂ ಅಂತರ ಕ್ರಿಯೆಗಳೂ ಇವೆ. ಸುಣ್ಣಕಲ್ಲುಗಳು, ಅಮೃತಶಿಲೆ, ಕಬ್ಬಿಣ ಮತ್ತು ಸುಣ್ಣ ಇರುವ ಮರಳು ಕಲ್ಲುಗಳು ಗ್ರಾನೈಟುಗಳು ಮತ್ತು ಇತರ ಅಗ್ನಿಶಿಲೆಗಳ ವರ್ಣಖನಿಜಗಳು ಸುಲಭವಾಗಿ ಈ ದಾಳಿಗೆ ಈಡಾಗುತ್ತದೆ.

**ಕಾರ್ಯೋಪಯೋಗ:** ಸುಲಭವಾಗಿ ಚಪ್ಪಡಿಗಳನ್ನು ಎಬ್ಬಿಸುವುದು ಮತ್ತು ಕೆತ್ತನೆಗೆಲಸಕ್ಕೆ ಒದಗಿಬರುವುದು ಕಟ್ಟಡ ಕಲ್ಲುಗಳಲ್ಲಿ ಇರಬೇಕಾದ ಪ್ರಧಾನ ಗುಣಗಳು, ಚಪ್ಪಡಿಗಳನ್ನು ಪಡೆಯಲು ಬಂಡೆಯ ಸ್ತರಣ, ಸ್ತರದ ಬಾಗು ಅಥವಾ ಓಟ ಮತ್ತು ಸೀಳುಗಳು ಈ ಮುಂತಾದ ರಚನಾಂಶಗಳನ್ನು ಪರಿಶೀಲಿಸಬೇಕು.

**ಬಣ್ಣ ಮತ್ತು ಅಂದ :** ಕಟ್ಟಡದ ಕಲ್ಲುಗಳಲ್ಲಿ (ಅದರಲ್ಲೂ ನಗರದ ಕಟ್ಟಡಗಳಲ್ಲಿ) ಗಮನಿಸಬೇಕಾದ ಪ್ರಮುಖಾಂಶ ಕಲ್ಲಿನಬಣ್ಣ, ಅಗ್ನಿಶಿಲೆಗಳ ಬಣ್ಣ ಹೆಚ್ಚಾಗಿ ಅವುಗಳ ಒಳಗಿರುವ ಮುಖ್ಯ ಖನಿಜಗಳನ್ನು ಅವಲಂಬಿಸಿದೆ. ಆದ್ದರಿಂದ ಈ ಶಿಲೆಗಳ ಬಣ್ಣ ಸ್ಥಿರವಾದುದೆಂದು ಹೇಳಬಹುದು. ಆದರೆ ಜಲಜಶಿಲೆಗಳಲ್ಲಿ ವರ್ಣಕಾರಕವಸ್ತು ಮತ್ತು ಅದು ಹರಡಿರುವ ಬಗೆಯನ್ನು ಅವಲಂಬಿಸಿ ಕಲ್ಲಿನ ಬಣ್ಣ ಕಾಲಕ್ರಮೇಣ ಮಾಸಿಹೋಗುತ್ತದೆ.

(ಎಸ್.ಬಿ.ಎಲ್., ಎಂ.ಜಿ.ಎಸ್.)

**ಕಟ್ಟಡದ ಸಾಮಗ್ರಿಗಳು :** ಮಣ್ಣು, ಮರ, ಕಲ್ಲು, ಮರಳು ಇವು ಆದಿಕಾಲದಲ್ಲಿ ಬಳಸಿದ ವಸ್ತುಗಳು. ಸುಲಭ ಹಾಗೂ ಸಮೀಪ ಲಭ್ಯತೆಯೇ ಇದಕ್ಕೆ ಕಾರಣ. ಒಂದೊಂದು ಉದ್ದೇಶಕ್ಕಾಗಿ ಆರಿಸಿದ ಸಾಮಗ್ರಿಗಳೂ ಅವನ್ನು ಬಳಸುವ ಕ್ರಮವೂ ತಪ್ಪುಗಳನ್ನು ತಿದ್ದಿಕೊಂಡು ಕಾಲಕ್ರಮದಲ್ಲಿ ಸಾವಕಾಶವಾಗಿ ಬಳಕೆಗೆ ಬಂದಿವೆ. ಇದರಿಂದ ಕ್ರಮೇಣ ಸ್ಥಳೀಯ ಕೆಲಸಗಾರರ ಅನುಭವದ ಮೇಲೆ ಕೆಲವು ಸಾಂಪ್ರದಾಯಿಕ ಪದ್ಧತಿಗಳು ರೂಢಿಗೆ ಬಂದಿವೆ.

ನಾಗರಿಕತೆ ಬೆಳೆದಂತೆ ವಿವಿಧ ನಮೂನೆಯ ಕಟ್ಟಡಗಳನ್ನು ತ್ವರೆಯಿಂದ ಕಟ್ಟಬೇಕಾಗಿ ಬಂದಾಗ ಅನೇಕ ಹೊಸ ಸಾಮಗ್ರಿಗಳು ಬಳಕೆಗೆ ಬಂದುವು. ಕೆಲವನ್ನು ಸ್ಥಳದಲ್ಲಿಯೇ ಸಿಕ್ಕುವ ಸಾಮಗ್ರಿಗಳಿಂದ ದೊಡ್ಡರೀತಿಯಲ್ಲಿ ಯಂತ್ರಗಳಲ್ಲಿ ತಯಾರಿಸಲಾಯಿತು. ಸಂಚಾರ ಸೌಕರ್ಯಗಳು ಹೆಚ್ಚಿದ ಹಾಗೆ ಒಂದು ಜಾಗದಲ್ಲಿ ಸಂಪ್ರದಾಯವಾಗಿ ಬಳಸದೆ ಇದ್ದ ಸಾಮಗ್ರಿಗಳನ್ನು ದೂರದೇಶಗಳಿಂದ ಸಾಗಿಸಿ ಬಳಸಿದ್ದಾಯಿತು. ಕಟ್ಟಡವನ್ನು ಸಾಂಪ್ರದಾಯಿಕ ರೀತಿಯಲ್ಲಿ ಕಟ್ಟುವಾಗ ಆಗುವ ಸಾವಕಾಶಕ್ಕೆ ಎಡೆಗೊಡಬಾರದೆಂದು ಎಲ್ಲಿಯೋ ಕಾರ್ಖಾನೆಗಳಲ್ಲಿ ತಯಾರಿಸಿದ ಕಟ್ಟಡದ ಭಾಗಗಳನ್ನು ಉಪಯೋಗಿಸಿದ್ದಾಯಿತು. ಸಂಶೋಧನಾಲಯಗಳಲ್ಲಿ ಶಾಸ್ತ್ರೀಯವಾಗಿ ಈ ಸಾಮಗ್ರಿಗಳನ್ನು ಪರೀಕ್ಷಿಸಿ ಇವುಗಳ ಉಪಯೋಗದ ವಿಚಾರದಲ್ಲಿ ಕೆಲವು ನಿರ್ದೇಶಗಳನ್ನು ತಯಾರಿಸಲಾಯಿತು. ಸಂವಿಧಾನದ

ನಿಯಮಗಳ ಸ್ಥಾಪನೆಯಾಯಿತು. ನಗರಗಳಲ್ಲಿ ಹಳೆಯ ಪದ್ಧತಿಗಳು ಮಾಯವಾದುವು. ಹೊಸ ಸಾಮಗ್ರಿಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸುವುದು ಬಳಕೆಗೆ ಬಂತು. ಬೇಕಾಗುವ ಸಾಮಗ್ರಿಗಳನ್ನು ಧಾರಾಳವಾಗಿ ಎಲ್ಲೆಲ್ಲಿಯೂ ದೊರೆಯುವ ಸುಣ್ಣಕಲ್ಲು, ಮಣ್ಣು, ಮರಳು, ಲೋಹದ ಅದಿರುಗಳು ಮುಂತಾದ ಕಚ್ಚಾ ಮಾಲುಗಳಿಂದ ಈಗ ತಾಂತ್ರಿಕವಾಗಿ ತಯಾರಿಸುತ್ತಾರೆ.

ಮರ, ಇಟ್ಟಿಗೆ, ಕಲ್ಲು, ಸುಣ್ಣ, ಮರಳು, ಸಿಮೆಂಟ್ ಹಂಚು, ಕಬ್ಬಿಣ–ಇವು ಸಾಮಾನ್ಯವಾಗಿ ಕಟ್ಟಡಗಳಲ್ಲಿ ಉಪಯೋಗಿಸುವ ಸಾಮಗ್ರಿಗಳು. ಒಂದೊಂದಕ್ಕೂ ಕೆಲವು ವಿಶೇಷ ಗುಣಗಳಿವೆ. ಮೇಲೆಬರುವ ತೂಕವನ್ನು ಒಂದೊಂದು ತಡೆಯುವ ಶಕ್ತಿಯೂ ಬೇರೆಬೇರೆಯಾಗಿರುತ್ತದೆ. ಒಂದು ಸಾಮಗ್ರಿಯ ಮೇಲೆ ಹೊರೆಬಿದ್ದಾಗ ಅದು ಮೂರು ವಿಧಗಳಲ್ಲಿ ಪ್ರತಿಕ್ರಿಯೆ ತೋರ್ಪಡಿಸಬಹುದು : 1 ಅರಚಬಹುದು (ಕಂಪ್ರೆಶನ್), 2 ಎಳೆದು ಸೀಳಬಹುದು (ಟೆಯನ್), 3 ಬಾಗಬಹುದು (ಬೆಂಡಿಂಗ್). ಆದರೆ ಸುಲಭವಾಗಿ ಬಳುಕುವ ಇಲ್ಲವೆ ಎಳೆತದಲ್ಲಿ ಸೀಳುವ ಸಾಮಗ್ರಿ ಹೆಚ್ಚು ಒತ್ತಡವನ್ನು ತಡೆಯಬಹುದು. ಹಾಗೆಯೇ ಕೇವಲ ಎಳೆತದಲ್ಲಿ ಸೀಳುವ ಸಾಮಗ್ರಿ ಬಳಕುವ ತ್ರಾಸವನ್ನು ತಡೆಯಬಹುದು. ಆದ್ದರಿಂದ ಕಟ್ಟಡದ ಯಾವ ಭಾಗದಲ್ಲಿ ಯಾವ ಸಾಮಗ್ರಿಯನ್ನು ಹೆಚ್ಚು ಅನುಕೂಲವಾಗುವಂತೆ ಉಪಯೋಗಿಸಬಹುದು ಎನ್ನುವುದು ಅದರ ಆಕಾರ ಮತ್ತು ಮೇಲೆ ಬರುವ ತ್ರಾಸದ ನಮೂನೆಯ ಮೇಲೆ ಹೋಗುತ್ತದೆ. ಒತ್ತಡವನ್ನೂ ಎಳೆತವನ್ನೂ ತಡೆಯಬಲ್ಲ ಮರ, ಉಕ್ಕು, ಪ್ರಬಲಿತ ಕಾಂಕ್ರೀಟ್–ಇವನ್ನು ಕಂಬಗಳು, ತೊಲೆಗಳು ಮತ್ತು ಗರ್ಡರುಗಳಲ್ಲಿ ಉಪಯೋಗಿಸಬೇಕು. ಎಷ್ಟು ಒತ್ತಡವನ್ನಾದರೂ ತಡೆದು ಎಳೆತವನ್ನು ತಡೆಯಲೇ ಆರದ ಕಲ್ಲುಗಾರೆ, ಇಟ್ಟಿಗೆ, ಕಾಂಕ್ರೀಟ್ ಇವನ್ನು ಗೋಡೆಗಳನ್ನೂ ಕಮಾನುಗಳನ್ನೂ ಕಟ್ಟುವುದಕ್ಕೆ ಉಪಯೋಗಿಸಬೇಕು.

ಒಂದು ಕಟ್ಟಡದಲ್ಲಿ ಉಪಯೋಗಿಸುವ ಯಾವ ಸಾಮಗ್ರಿಯ ಮೇಲೂ ಅದು ಒಡೆದುಹೋಗುವಷ್ಟು ತೂಕವನ್ನು ಹೇರುವುದಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಎಲ್ಲ ಸಾಮಗ್ರಿಗಳ ಮೇಲೂ ತೂಕ ಮಿತಿಮೀರುತ್ತಿದ್ದಂತೆ ಅವು ಬಿರುಕುಬಿಡುತ್ತವೆ. ವಿರೂಪವಾಗುತ್ತವೆ. ಬಳುಕುತ್ತವೆ. ಅದಕ್ಕಾಗಿ ಸಾಮಗ್ರಿಗಳಲ್ಲಿರುವ ಗುಣಗಳಲ್ಲಿರುವ ವ್ಯತ್ಯಾಸಗಳಿಗೆ ತಕ್ಕಹಾಗೆ ತೂಕವನ್ನು ಬದಲಾಯಿಸಬೇಕಾಗುತ್ತದೆ.

ಈಗ ಸಾಮಾನ್ಯವಾಗಿ ಕಟ್ಟಡಗಳಲ್ಲಿ ಉಪಯೋಗಿಸುತ್ತಿರುವ ಕೆಲವು ಸಾಮಗ್ರಿಗಳನ್ನೂ ಅವುಗಳ ಗುಣಗಳನ್ನೂ ನೋಡಬಹುದು.

**ಮರ :** ಇದು ಎಲ್ಲೆಲ್ಲಿಯೂ ದೊರೆಯುವುದರಿಂದಲೂ ಇದರ ವಿಶೇಷ ಗುಣಗಳಿಂದಲೂ ಪ್ರಪಂಚದ ಕಟ್ಟಡದ ಸಾಮಗ್ರಿಗಳಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಇದನ್ನು ಇತಿಹಾಸದ ಪ್ರಾರಂಭದಿಂದಲೂ ಮಾನವ ಉಪಯೋಗಿಸುತ್ತಿದ್ದಾನೆ. ಇದು ಹಗುರವಾಗಿದೆ. ತೇಗದ ಮರದ ತೂಕ ಒಂದು ಸಲೆ ಮೀ ಗೆ 20.25 ಕಿಗ್ರಾಂ ಎಳೆತದ ತ್ರಾಸವನ್ನು ಇದು ತಡೆಯಬಲ್ಲದು; ಮರಗೆಲಸ ಸುಲಭ. ಇದನ್ನು ಕಂಬ, ತೊಲೆ, ದೂಲ, ಚೌಕಟ್ಟು, ಉದ್ದಸರ, ಹಲಗೆ–ಇವುಗಳಿಗೆ ಉಪಯೋಗಿಸಬಹುದು. ಕಟ್ಟಡಗಳಲ್ಲಿ ಮರದ ಬಾಳಿಕೆಯೂ ಉಪಯೋಗವೂ ಬೇಕಾದ ಗುಣಗಳುಳ್ಳ ಮರವನ್ನು ಆಯ್ಕೆ ಮಾಡಿ ಹದಮಾಡುವುದರ ಮೇಲೂ ಕ್ರಿಮಿಗಳು ತಿನ್ನದ ಹಾಗೆ ಕಾಪಾಡುವುದರ ಮೇಲೂ ನಿಂತಿರುತ್ತವೆ. ತೇಗ, ಹಲಸು, ಬೇವು, ಮಾವು, ಬೀಟೆ, ಹೊನ್ನೆ, ನಂದಿ, ಮತ್ತಿ, ಹುಣಸೆ, ಜಾಂಬೆ ಮೊದಲಾದ ಮರಗಳನ್ನು ಕಟ್ಟಡಗಳಲ್ಲಿ ಉಪಯೋಗಿಸುತ್ತಾರೆ.

**ಇಟ್ಟಿಗೆ :** ನೀರಿನಲ್ಲಿ ಕಲಸಿದ ಒಳ್ಳೆಯ ಮಣ್ಣನ್ನು ಅಚ್ಚುಗಳಲ್ಲಿ ಹೊಯ್ದು, ಒಣಗಿಸಿ, ಭಟ್ಟಿಗಳಲ್ಲಿ ಸುಟ್ಟು ಇಟ್ಟಿಗೆಯನ್ನು ತಯಾರಿಸುತ್ತಾರೆ. ಬಲಿಷ್ಠವಾದ ಇಟ್ಟಿಗೆಗಳನ್ನು ಯಂತ್ರಗಳಲ್ಲಿ ಅಚ್ಚುಹೊಯ್ದು ಯಂತ್ರದ ಒಲೆಗಳಲ್ಲಿ ಸುಡುತ್ತಾರೆ. ಸಾಮಾನ್ಯವಾಗಿ ಇಟ್ಟಿಗೆ 229 ಮಿಮೀ ಉದ್ದ 111 ಮಿಮೀ ಅಗಲ 57 ಮಿಮೀ ಎತ್ತರವಾಗಿರುತ್ತದೆ. ಇಟ್ಟಿಗೆಗಳನ್ನು ಎಲ್ಲ ಬಗೆಯ ಕಟ್ಟಡಗಳಲ್ಲಿಯೂ ಉಪಯೋಗಿಸುತ್ತಾರೆ. ಸು. 38 ಮಿಮೀ ಅಳತೆಗೆ ಒಡೆದ ಇಟ್ಟಿಗೆಗೆ ಸೂರ್ಕಿ ಎನ್ನುತ್ತಾರೆ. ನಮ್ಮ ದೇಶದಲ್ಲಿ ಕೃಷ್ಣರಾಜಸಾಗರ ಮೊದಲಾದ ನೀರಾವರಿಯ ಕಟ್ಟೆಗಳನ್ನು ಸೂರ್ಕಿಯನ್ನು ಸುಟ್ಟ ಸುಣ್ಣದೊಂದಿಗೆ ನಯವಾಗಿ ಅರೆದು ತಯಾರಿಸಿದ ಸೂರ್ಕಿ ಗಾರೆಯಿಂದ ಕಟ್ಟಿದ್ದಾರೆ.

**ಕಲ್ಲು :** ಇದನ್ನು ಭೂಗರ್ಭದ ರಚನೆ ಮತ್ತು ರಾಸಾಯನಿಕ ಸಂಯೋಜನೆಯ ಪ್ರಕಾರ ವರ್ಗೀಕರಿಸುತ್ತಾರೆ. ಗ್ರ್ಯಾನೈಟ್ ಕಲ್ಲಿನಲ್ಲಿ ಸಿಲಿಕಾನ್ ಡೈ ಆಕ್ಸೈಡ್ ಹೆಚ್ಚಾಗಿದೆ. ಅಮೃತಶಿಲೆಯಲ್ಲಿ ಸುಣ್ಣ ಹೆಚ್ಚಾಗಿದೆ. ಲ್ಯಾಟರೈಟಿನಲ್ಲಿ ಮಣ್ಣು ಹೆಚ್ಚಾಗಿದೆ. ಒಳ್ಳೆಯ ಕಲ್ಲಿನ ಗುಣಗಳು ಮತ್ತು ಬಲವನ್ನು ಇಂಜಿನಿಯರು ತಿಳಿದಿರಬೇಕು. ಕಟ್ಟಡಗಳನ್ನು ಕಟ್ಟಲು ಗ್ರ್ಯಾನೈಟ್ (ಕಣಶಿಲೆ), ನೀಸ್, ಟ್ರ್ಯಾಪ್, ಬಸಾಲ್ಟ್, ಸುಣ್ಣಕಲ್ಲುಗಳು ಮತ್ತು ಮರಳುಕಲ್ಲುಗಳನ್ನು ಉಪಯೋಗಿಸುತ್ತಾರೆ. ಉಜ್ಜಿದಾಗ ಮೇಲ್ಮೈಗೆ ಹೊಳಪು ಬರುವ ಅಮೃತಶಿಲೆ, ಗ್ರ್ಯಾನೈಟ್ ಮತ್ತು ಕಪ್ಪು ಕಲ್ಲುಗಳನ್ನು ದೇವಾಲಯ ಮತ್ತು ಅರಮನೆಗಳನ್ನು ಕಟ್ಟಲು ಬಳಸುತ್ತಾರೆ. ನಯವಾದ ಕಂಬಗಳ ಪೀಠಗಳು, ಕಂಬಗಳು, ತಲೆಗಲ್ಲುಗಳು, ಕಟ್ಟಡದ ಮೂಲೆ ಕಲ್ಲುಗಳು, ಕಮಾನಿನ ಕಲ್ಲುಗಳು, ಇವನ್ನು ಹೆಚ್ಚಿನ ಶ್ರಮದಿಂದ ನುರಿತ ಕೆಲಸಗಾರರು ತಯಾರಿಸುತ್ತಾರೆ. ಕಟ್ಟಡಗಳ ಹೊರಭಾಗದಲ್ಲಿ ಉಪಯೋಗಿಸುವ ಕಲ್ಲುಗಳು ಬಿಸಿಲು, ಮಳೆ, ಗಾಳಿಗಳ ಹೊಡೆತದಿಂದ ಕಾಲಾನುಕ್ರಮದಲ್ಲಿ ಕ್ಷೀಣವಾಗುತ್ತವೆ.

**ಸುಣ್ಣ :** ಕ್ಯಾಲ್ಸಿಯಂ ಕಾರ್ಬೊನೇಟಿನೊಡನೆ ಕೊಂಚ ಮಣ್ಣು ಬೆರೆತು ಗೋಲಿಗಳಂತೆ ಇರುವ (ನಾಡ್ಯುಲ್ಸ್) ಸುಣ್ಣಕಲ್ಲು ನೈಸರ್ಗಿಕವಾಗಿ ನಮ್ಮ ದೇಶದಲ್ಲಿ ಹೊಲಗಳಲ್ಲಿ ಮಣ್ಣಿನೊಡನೆ ಬೆರೆತಿರುತ್ತದೆ. ಅದನ್ನು ಪಿಕಾಸಿಗಳಿಂದ ಸುಲಭವಾಗಿ ಅಗೆದು ತೆಗೆಯಬಹುದು. ನೀರಾವರಿಯ ಕೆಲಸಗಳಲ್ಲಿ ಇಂಜಿನಿಯರ್ ಉಪಯೋಗಿಸುವ ಸುಣ್ಣ ಇದರಿಂದ ಬರುತ್ತದೆ. ಕೆಲವು ಕಡೆಗಳಲ್ಲಿ ಸುಣ್ಣಕಲ್ಲು ದಿಮ್ಮಿಗಳ ರೂಪದಲ್ಲಿರುತ್ತದೆ. ಅದನ್ನೂ ಸುಲಭವಾಗಿ ಅಗೆದು ತೆಗೆಯಬಹುದು.

ಸುಣ್ಣದಲ್ಲಿ ಎರಡು ಬಗೆಗಳಿವೆ : ಒಂದು ಶುದ್ಧ ಸುಣ್ಣ, ಇನ್ನೊಂದು ಕೊಂಚ ಮಣ್ಣು ಬೆರೆತದ್ದು, ಶುದ್ಧ ಸುಣ್ಣವನ್ನು ಬಟ್ಟಿಯಿಂದ ತೆಗೆದು ನೀರಿನೊಂದಿಗೆ ಬೆರೆಸಿದರೆ ಅದು ಉಬ್ಬಿ ಗಾತ್ರದಲ್ಲಿ ಒಂದೂವರೆಯಷ್ಟಾಗುತ್ತದೆ. ಮಣ್ಣು ಬೆರೆತಿರುವ ಸುಣ್ಣಕ್ಕೆ ನೀರು ಬಿದ್ದಾಗ ರಾಸಾಯನಿಕವಾದ ಮಾರ್ಪಾಡಾಗುತ್ತದೆ. ಆಗ ಅದು ಗಟ್ಟಿಯಾಗುತ್ತದೆ. ಶುದ್ಧ ಸುಣ್ಣ ನೀರಿನಲ್ಲಿ ಹೀಗೆ ಗಟ್ಟಿಯಾಗುವುದಿಲ್ಲ. ಎರಡುಬಗೆಯ ಸುಣ್ಣಗಳಿಗೂ ಪ್ರತ್ಯೇಕವಾದ ಉಪಯೋಗಗಳಿವೆ.

ಸಮುದ್ರತೀರದಲ್ಲಿ ಹೇರಳವಾಗಿ ದೊರೆಯುವ ಕವಡೆ, ಶಂಖ, ಕಚ್ಚಾ ಹವಳ–ಇವನ್ನು ಸುಟ್ಟಾಗ ಅಚ್ಚಸುಣ್ಣ ದೊರೆಯುತ್ತದೆ. ಕರ್ನಾಟಕದ ಚನ್ನಪಟ್ಟಣ, ಬೀರೂರು ಮೊದಲಾದ ಅನೇಕ ಕಡೆಗಳಲ್ಲಿ ಕಟ್ಟಡಗಳಿಗೆ ಉಪಯೋಗಿಸುವ ಸುಣ್ಣ ವಿಶೇಷವಾಗಿ ಸಿಕ್ಕುತ್ತದೆ. ಕೆಲವು ಕಡೆಗಳಲ್ಲಿ ಸಿಕ್ಕುವ ಸುಣ್ಣದಲ್ಲಿ ಮರಳು, ಅಲ್ಯೂಮಿನಿಯಮ್ ಆಕ್ಸೈಡ್ ಮತ್ತು ಮ್ಯಾಗ್ನಿಸಿಯಂ ಕಾರ್ಬೊನೇಟ್ ಬೆರೆತಿರುತ್ತವೆ. ರಾಸಾಯನಿಕವಾಗಿ ಸೇರಿರದೆ ಇರುವ ಮರಳಿನ ಭಾಗ ಹೆಚ್ಚಾದರೆ ಅದನ್ನು ತೆಳುವಾದ ಸುಣ್ಣವೆನ್ನುತ್ತಾರೆ. ಮನೆಗಳಲ್ಲಿ ಗೋಡೆಗಳಿಗೆ ಬಳಿಯುವುದಕ್ಕೆ ಇದನ್ನು ಉಪಯೋಗಿಸಲಾಗುವುದಿಲ್ಲ.

ಸುಟ್ಟ ಅಚ್ಚಸುಣ್ಣಕ್ಕೆ ನೀರನ್ನು ಬೆರೆಸಿದಾಗ ಅದು ಪುಡಿಯಾಗಿ ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಆಗುತ್ತದೆ. ಅಚ್ಚಸುಣ್ಣಕ್ಕೆ ನೀರನ್ನು ಸೇರಿಸಿದಾಗ ವಿಶೇಷವಾದ ಶಾಖ ಉತ್ಪನ್ನವಾಗಿ ಬಿರುಕುಬಿಟ್ಟು ಸೀಳಿ ಶಬ್ದಮಾಡಿ ಗಾತ್ರದಲ್ಲಿ ಎರಡುಮೂರು ಪಟ್ಟು ಹೆಚ್ಚಿ ಪುಡಿಯಾಗಿ ನೀರಿನೊಂದಿಗೆ ಬೆರೆಯುತ್ತದೆ. ಇದು ಒಣಗಿದಾಗ ಕುಗ್ಗುತ್ತದೆ, ಬಿರಿಯುತ್ತದೆ, ಇದನ್ನು ತಪ್ಪಿಸಲು ಅದಕ್ಕೆ ಮೂರರಷ್ಟು ಮರಳನ್ನು ಬೆರೆಸಿ ಚರಕಿಗಳಲ್ಲಿ ಅರೆದು ಗಾರೆಯನ್ನು ತಯಾರಿಸುತ್ತಾರೆ. ಕಟ್ಟಡಗಳಲ್ಲಿ ಉಪಯೋಗಿಸುವ ಸುಣ್ಣಕ್ಕೆ ನೀರನ್ನು ಹೊಯ್ದು ಅದನ್ನು ಮೆತುವಾಗಿ ಮಾಡಿ ಗಾರೆಯ ಗೂಡಿಗೆ ಹಾಕಬೇಕು. ಮನೆಗಳಲ್ಲಿ ಇಟ್ಟಿಗೆ ಮತ್ತು ಕಲ್ಲಿನ ಗೋಡೆಗಳನ್ನು ಕಟ್ಟುವುದಕ್ಕೂ ಅವಕ್ಕೆ ಹೊರಗಡೆ ಗಿಲಾವು ಮಾಡುವುದಕ್ಕೂ ಈ ಗಾರೆಯನ್ನು ಬಳಸುತ್ತಾರೆ.

ಗಾರೆಯನ್ನು ಗಿಲಾವಿಗೆ ಬಳಸುವಾಗ ಅದನ್ನು ರಾಶಿಹಾಕಿ ಮೇಲುಗಡೆ ಹೊಂಡ ಮಾಡಿ ನೀರನ್ನು ಕಟ್ಟಿ ಒಂದು ವಾರದವರೆಗೂ ಕೊಳೆಸಬೇಕು. ಇಲ್ಲವಾದರೆ ಗಿಲಾವಾದ ಗೋಡೆಗಳಲ್ಲಿ ಬೊಬ್ಬೆಗಳು ಬರುತ್ತವೆ. ಸುಣ್ಣದ ಗಾರೆ ನಿಧಾನವಾಗಿ ಗಾಳಿಯಿಂದ ಇಂಗಾಲಾಮ್ಲವನ್ನು ಹೀರಿ ಕ್ಯಾಲ್ಸಿಯಮ್ ಕಾರ್ಬೊನೇಟ್ ಆಗಿ ಗಟ್ಟಿಯಾಗುತ್ತದೆ. ಇದು ಸಾವಕಾಶವಾಗುವುದರಿಂದ ಕೆಲವು ಸಂದರ್ಭಗಳಲ್ಲಿ ಜೊತೆಗೆ ಕೊಂಚ ಸಿಮೆಂಟನ್ನು ಬೆರೆಸುತ್ತಾರೆ.

ಜಿಪ್ಸಮ್ ಎಂಬ ಕ್ಯಾಲ್ಸಿಯಮ್ ಸಲ್ಫೇಟಿನಿಂದಲೂ ಅದು ಸಿಕ್ಕುವ ಕಡೆಗಳಲ್ಲಿ ಗಿಲಾವು ಮಾಡುತ್ತಾರೆ. ಇದನ್ನು ಕಾಯಿಸಿದಾಗ ಕೊಂಚ ನೀರನ್ನು ಕಳೆದುಕೊಂಡು ಪ್ಲಾಸ್ಟರ್ ಆಫ್ ಪ್ಯಾರಿಸ್ ಆಗುತ್ತದೆ. ಇದಕ್ಕೆ ನೀರನ್ನು ಬೆರೆಸಿದರೆ ಬೇಗ ಗಟ್ಟಿಯಾಗಿ ಮತ್ತೆ ಜಿಪ್ಸಮ್ ಆಗುತ್ತದೆ. ಇಷ್ಟು ಬೇಗ ಗಟ್ಟಿಯಾಗುವ ಗಾರೆ ಕಟ್ಟಡದ ಕೆಲಸಕ್ಕೆ ಬೇಕಿಲ್ಲ. ಅದಕ್ಕಾಗಿ ಕೊಂಚ ಬೋರಾಕ್ಸನ್ನು ಬೆರೆಸಿ ನಿಧಾನವಾಗಿ ಗಟ್ಟಿಯಾಗುವಂತೆ ಮಾಡುತ್ತಾರೆ.

ಕಲ್ಲುಗಾರೆ ಕಟ್ಟೆ ಮೊದಲಾದ ಕಡೆಗಳಲ್ಲಿ ಉಪಯೋಗಿಸುವ ಸುಣ್ಣದಲ್ಲಿ ಮರಳು, ದ್ರಾವಣವಾದ ಸಿಲಿಕ, ಶೇ. 10–ಶೇ. 30 ವರೆಗೆ ಅಲ್ಯೂಮಿನಿಯಮ್ ಆಕ್ಸೈಡ್, ಮ್ಯಾಗ್ನೀಸಿಯಂ ಕಾರ್ಬೊನೇಟ್ ಮತ್ತು ಜೇಡಿ ಮಣ್ಣು ಬೆರೆತಿರುತ್ತವೆ. ನೀರಿನಲ್ಲಿದ್ದಾಗ ಗಟ್ಟಿಯಾಗುವ ಗುಣವನ್ನು ಸುಣ್ಣಕ್ಕೆ ಬೆರಕೆ ಪದಾರ್ಥಗಳು ಕೊಡುತ್ತವೆ. ಈ ಸುಣ್ಣಕ್ಕೆ ನೀರನ್ನು ಬೆರೆಸಿದಾಗ ಹೆಚ್ಚು ಶಾಖ ಉತ್ಪತ್ತಿಯಾಗುವುದಿಲ್ಲ. ಗಾತ್ರವೂ ಕೊಂಚವೇ ಹೆಚ್ಚಾಗುತ್ತದೆ. ಕುಗ್ಗುವುದಿಲ್ಲ, ಬಿರಿಯುವುದಿಲ್ಲ. ಇದು ಮಂಡ್ಯ, ಗಣಂಗೂರು, ಚೆಟ್ಟಿಹೊಂಡಿ ಮೊದಲಾದ ಕಡೆಗಳಲ್ಲಿ ಹೇರಳವಾಗಿ ದೊರೆಯುತ್ತದೆ. ಈ ಸುಣ್ಣಕಲ್ಲನ್ನು ಕೃಷ್ಣರಾಜಸಾಗರ ಮೊದಲಾದ ಕಟ್ಟೆಗಳ ಬಳಿ ವಿಶಿಷ್ಟವಾದ ಗೋಡೆಗಳನ್ನು ಕಟ್ಟಿ ಅವುಗಳ ನಡುವೆ 0.91ಮೀ ಅಂತರದಲ್ಲಿ

11ಕಿಗ್ರಾಂ ತೂಕದ ಕಂಬಿಗಳನ್ನು ಹರಡುತ್ತಾರೆ. ಬಟ್ಟಿ 6.06 ಮೀ ಉದ್ದ, 2ಮೀ ಅಗಲ, 0.91ಮೀ ಆಳವಾಗಿರುತ್ತದೆ. ಅದರ ಮೇಲಿನ ಮಟ್ಟದಲ್ಲಿ ಒಂದು ಬಟ್ಟಿಗೂ ಇನ್ನೊಂದಕ್ಕೂ ನಡುವೆ ಸುಣ್ಣ ಕಲ್ಲುಗಳನ್ನು ತುಂಬಲು 2ಮೀ ಜಗಲಿಯನ್ನು ಬಿಟ್ಟಿರುತ್ತಾರೆ. ಸುಣ್ಣಕಲ್ಲನ್ನು ಸುಡುವುದಕ್ಕೆ ಕಟ್ಟಿಗೆ, ಮರದ ಇದ್ದಲು ಮತ್ತು ಕೊಂಚ ಕಲ್ಲಿದ್ದಲು ಉಪಯೋಗಿಸುತ್ತಾರೆ. ಚೆನ್ನಾಗಿ ಸುಟ್ಟಮೇಲೆ ಆರುವುದಕ್ಕೆ ಬಿಟ್ಟು ಕೊಂಚ ಸುಣ್ಣವನ್ನು ತೆಗೆದು ನೀರಿನೊಳಕ್ಕೆ ಹಾಕಿ ಶೇ. 20ಕ್ಕಿಂತ ಹೆಚ್ಚಾಗಿ ಸಣ್ಣಗಂಟುಗಳು ಉಳಿಯದೆ ಹೋದರೆ ಸುಣ್ಣವನ್ನು ಕೂಡಿರುವ ಷೆಡ್ಡುಗಳಿಗೆ ಟ್ರಾಲಿಗಳ ಮೇಲೆ ರವಾನಿಸುತ್ತಾರೆ. ಗಂಟುಗಳು ಹೆಚ್ಚಾಗಿದ್ದರೆ ಸುಡದೆ ಇರುವ ಸುಣ್ಣವನ್ನು ಮತ್ತೆ ಸುಡಬೇಕಾಗುತ್ತದೆ. ಇಂದು ಸುಟ್ಟ ಸುಣ್ಣವನ್ನು 10 ದಿನಗಳೊಳಗೆ ಸಂಪೂರ್ಣವಾಗಿ ಬಳಸಬೇಕು. ಸುಟ್ಟ ಸುಣ್ಣದ ಬಟ್ಟೆಗಳನ್ನು ಅವಶ್ಯವಾದಾಗ ಮಾತ್ರ ಇಳಿಸಿಕೊಳ್ಳಬೇಕು.

**ಮರಳು:** ಮರಳನ್ನು ವಿಶೇಷವಾಗಿ ಗಾರೆಯನ್ನೂ ಸಿಮೆಂಟ್ ಕಾಂಕ್ರೀಟನ್ನೂ ತಯಾರಿಸಲು ಉಪಯೋಗಿಸುತ್ತಾರೆ. ಮರಳಿನ ಕಣಗಳು ಚೂಪಾಗಿರಬಾರದು. ಅದರಲ್ಲಿ ಸುದ್ದೆಮಣ್ಣು ಬೆರೆತಿರಬಾರದು. ಸಮುದ್ರದ ಮರಳು ಹೇರಳವಾಗಿಯೂ ಗುಂಡಾಗಿಯೂ ಇದ್ದರೂ ಕ್ಷಾರದ ಉಪ್ಪುಗಳು ಇರುವುದರಿಂದ ಗಾಳಿಯಿಂದ ತೇವವನ್ನು ಹೀರುತ್ತದೆ. ಮರಳಿನಲ್ಲಿ ಸಸ್ಯ ಮತ್ತು ಪ್ರಾಣಿವರ್ಗದ ಕಸ ಸೇರಿರಬಾರದು. ಜೇಡಿಮಣ್ಣು ಮಿಶ್ರವಾಗಿದ್ದರೆ ಮರಳನ್ನು ನೀರಿನ ತೊಟ್ಟಿಯಲ್ಲಿ ತೊಳೆಯಬೇಕು.

**ಸಿಮೆಂಟ್:** ಸಿಮೆಂಟಿನಲ್ಲಿ ಮೂರು ಪಾಲು ಕ್ಯಾಲ್ಸಿಯಂ ಕಾರ್ಬೋನೇಟ್ ಹೆಚ್ಚಾಗಿರುವ ಸುಣ್ಣಕಲ್ಲು ಮತ್ತು ಒಂದು ಪಾಲು ಜೇಡಿಮಣ್ಣು ಸೇರಿವೆ. ಸಿಮೆಂಟ್ ಗಟ್ಟಿಯಾಗುವುದನ್ನು ಸಾವಕಾಶಮಾಡಲು ಕೊಂಚ ಜಿಪ್ಸಮ್ಮನ್ನು ಸೇರಿಸುತ್ತಾರೆ. ಸುಣ್ಣಕಲ್ಲು ಮತ್ತು ಜೇಡಿಮಣ್ಣಿನ ಮಿಶ್ರಣವನ್ನು ಕರಗುವ ಮಟ್ಟಿಗೆ ಕಾಯಿಸಿ ಬಂದ ಕಿಟ್ಟವನ್ನು ನುಣ್ಣಗೆ ಪುಡಿಮಾಡಿದರೆ ಸಿಮೆಂಟ್ ಬರುತ್ತದೆ. ನೀರಿನೊಂದಿಗೆ ಬೆರೆಸಿದಾಗ ಇದು ಗಟ್ಟಿಯಾಗುತ್ತದೆ. ಬೀಡುಕಬ್ಬಿಣವನ್ನು ತಯಾರಿಸುವ ಕುಲುಮೆಗಳಿರುವ ಕಡೆ ಅದರಿಂದ ಬರುವ ಕಿಟ್ಟವನ್ನು ಸುಣ್ಣಕಲ್ಲಿಗೆ ಬದಲಾಗಿ ಉಪಯೋಗಿಸುತ್ತಾರೆ. ಸಿಮೆಂಟನ್ನು (1) ಶುಷ್ಕ ಮತ್ತು (2) ತೇವ ವಿಧಾನಗಳಲ್ಲಿ ತಯಾರಿಸುತ್ತಾರೆ. 94 ಪೌಂಡ್ ತೂಕವಿರುವ ಒಂದು ಸಲೆ ಅಡಿ ಸಿಮೆಂಟನ್ನು ಚೀಲಗಳಲ್ಲಿ ತುಂಬಿ ಮಾರುತ್ತಾರೆ. ಒಂದು ಬ್ಯಾರಲಿನಲ್ಲಿ 4 ಮೂಟೆ ಸಿಮೆಂಟು ಹಿಡಿಯುತ್ತದೆ. ಇದನ್ನು ನೇರವಾಗಿ ಕೆಲಸಗಳಲ್ಲಿ ಉಪಯೋಗಿಸುತ್ತಾರೆ. ಕೆಲವು ಕಡೆಗಳಲ್ಲಿ ಮಣ್ಣು ಬೆರೆತ ಸುಣ್ಣಕಲ್ಲಿನ ಗುಡ್ಡೆಗಳು ನೈಸರ್ಗಿಕವಾಗಿ ದೊರೆಯುತ್ತವೆ. ಇದನ್ನು ಕಾಯಿಸಿದರೆ ಇಂಗಾಲಾಮ್ಲ ಹೋಗಿ ಕಿಟ್ಟ ಉಳಿಯುತ್ತದೆ. ಇದನ್ನು ನುಣ್ಣಗೆ ಅರೆದಾಗ ನೈಸರ್ಗಿಕ ಸಿಮೆಂಟ್ ಬರುತ್ತದೆ. ಇದು ಗಾಳಿಯಲ್ಲಿ ಗಟ್ಟಿಯಾಗುವುದಿಲ್ಲ. ನೀರನ್ನು ಬೆರೆಸಿದಾಗ ಮಾತ್ರ ಗಟ್ಟಿ ಆಗುತ್ತದೆ. ಕೆಲವು ದೇಶಗಳಲ್ಲಿ ಜ್ವಾಲಾಮುಖಿಯ ಬೂದಿಯ ರಾಶಿಗಳಿರುತ್ತವೆ. ಇವುಗಳಲ್ಲಿ ಮಣ್ಣಿನ ಭಾಗದೊಂದಿಗೆ ನೀರನ್ನು ಸೇರಿಸಿದ ಸುಣ್ಣವನ್ನು ಬೆರೆಸಿ ಪೊಜೋಲಾನ ಸಿಮೆಂಟನ್ನು ತಯಾರಿಸುತ್ತಾರೆ. ಹಿಂದೆ ರೋಮನ್ ಸಾಮ್ರಾಜ್ಯದಲ್ಲಿ ಬಳಸುತ್ತಿದ್ದ ಸಿಮೆಂಟ್ ಈ ನಮೂನೆಯದು. ಕಬ್ಬಿಣದ ಆಕ್ಸೈಡನ್ನು ಬಹಳ ಕಡಿಮೆಮಾಡುವುದರಿಂದ ಸಿಮೆಂಟಿಗೆ ಬಿಳಿಯ ಬಣ್ಣ ಬರುತ್ತದೆ. ಕಬ್ಬಿಣದ ಆಕ್ಸೈಡಿನಿಂದ ಸಿಮೆಂಟಿಗೆ ಕೆಂಪು, ಹಳದಿ ಮತ್ತು ಕಂದು ಬಣ್ಣಗಳು ಬರುತ್ತವೆ. ಮ್ಯಾಂಗನೀಸ್ ಡೈಆಕ್ಸೈಡ್ ಕಪ್ಪು ಬಣ್ಣವನ್ನೂ ಕ್ರೋಮಿಯಂ ಆಕ್ಸೈಡ್ ಹಸಿರುಬಣ್ಣವನ್ನೂ ಕೋಬಾಲ್ಟ್ ನೀಲಿ ಬಣ್ಣವನ್ನೂ ಕೊಡುತ್ತವೆ.

**ಗಾರೆ :** ಸುಣ್ಣ ಇಲ್ಲವೆ ಸಿಮೆಂಟಿನೊಡನೆ ಸೂರ್ಕಿ ಅಥವಾ ಮರಳನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ಬೆರೆಸಿ ಗಾರೆಯನ್ನು ತಯಾರಿಸುತ್ತಾರೆ. ಇದನ್ನು ಮೂರು ಉದ್ದೇಶಗಳಿಗಾಗಿ ಕಟ್ಟಡಗಳಲ್ಲಿ ಬಳಸುತ್ತಾರೆ; (1) ಗೋಡೆ ಮತ್ತು ನೆಲಕ್ಕೆ ನಯವಾದ ರಕ್ಷಣೆಯ ಕವಚವನ್ನು ಕೊಡಲು. (2) ಇಟ್ಟಿಗೆ ಅಥವಾ ಕಲ್ಲುಗಳನ್ನು ಗೋಡೆಯಲ್ಲಿ ಕೂರಿಸಲು. (3) ಕಲ್ಲುಗಾರೆಯ ಕಟ್ಟೆಯಲ್ಲಿ ಕಲ್ಲುಗಳನ್ನು ಒಂದಕ್ಕೊಂದು ಬಿಗಿಯಲು. ಮೂರು ಬಗೆಯಾದ ಗಾರೆಗಳು ಬಳಕೆಯಲ್ಲಿವೆ; (1) ಸುಣ್ಣಕ್ಕೆ ಮರಳನ್ನು ಬೆರೆಸಿದ್ದು, (2) ಸುಣ್ಣಕ್ಕೆ ಸೂರ್ಕಿಯನ್ನು ಬೆರೆಸಿದ್ದು, (3) ಸಿಮೆಂಟಿಗೆ ಮರಳನ್ನು ಬೆರೆಸಿದ್ದು.

ಗಾರೆಯ ಬಲ ಸುಣ್ಣ ಅಥವಾ ಸಿಮೆಂಟಿಗೆ ಬೆರೆತಿರುವ ಸೂರ್ಕಿ ಅಥವಾ ಮರಳಿನ ದಾಮಾಶೆಗೂ ಗಾರೆಯನ್ನು ಅರೆದಿರುವ ನಯಕ್ಕೂ ಅನುಗುಣವಾಗಿದೆ. ಸಾಮಾನ್ಯವಾಗಿ ಸುಣ್ಣಕ್ಕೂ ಸಿಮೆಂಟಿಗೂ ಮೂರುಪಾಲು ಮರಳನ್ನೂ ಸುಣ್ಣಕ್ಕೆ ನಾಲ್ಕು ಪಾಲು ಸೂರ್ಕಿಯನ್ನೂ ಬೆರೆಸಿ ಗಾರೆಯನ್ನು ತಯಾರಿಸುತ್ತಾರೆ.

ಕೃಷ್ಣರಾಜಸಾಗರದಂಥ ಕಟ್ಟೆಗಳಲ್ಲಿ ಬಳಸಿರುವ ಗಾರೆಯನ್ನು 1 ಪಾಲು ಹೈಡ್ರಾಲಿಕ್ ಸುಣ್ಣದೊಂದಿಗೆ 4 ಪಾಲು ಸೂರ್ಕಿಯನ್ನು ವಿದ್ಯುತ್ತಿನಿಂದ ನಡೆಯುವ 8' ವ್ಯಾಸದ ಚರಕೆಗಳಲ್ಲಿ 35 ನಿಮಿಷ ಕಾಲ ಅರೆದು ಉಪಯೋಗಿಸುತ್ತಾರೆ. ಸೂರ್ಕಿ ಗಾರೆಯನ್ನು ಅರೆದ 8 ಗಂಟೆಗಳೊಳಗೆ ಬಳಸಬೇಕು.

**ಕಾಂಕ್ರೀಟ್ :** ಕಾಂಕ್ರೀಟಿನಲ್ಲಿ ಮೂರು ಬಗೆಗಳಿವೆ: (1) ಸುಣ್ಣದ ಕಾಂಕ್ರೀಟ್ (2) ಸೂರ್ಕಿ ಕಾಂಕ್ರೀಟ್ (3) ಸಿಮೆಂಟ್ ಕಾಂಕ್ರೀಟ್. ಮರಳು ಮತ್ತು ಸುಣ್ಣ ಇವನ್ನು ಗಾರೆಯ ಗುಂಡಿಯಲ್ಲಿ ಬೆರೆಸಿ ಗಾರೆಯನ್ನು ತಯಾರಿಸಿ ಕಲ್ಲಿನ ಜಲ್ಲಿಯೊಂದಿಗೆ ಒಂದೇ ಸಮನಾಗಿ ಬೆರೆಸಿದರೆ ಸುಣ್ಣದ ಕಾಂಕ್ರೀಟು ಬರುತ್ತದೆ. ಚರಕೆಗಳಲ್ಲಿ ಸೂರ್ಕಿ ಗಾರೆಯನ್ನು ಅರೆದು ಅದನ್ನು ಕಲ್ಲಿನ ಜಲ್ಲಿಯೊಂದಿಗೆ ಬೆರೆಸಿ ಸೂರ್ಕಿ ಕಾಂಕ್ರೀಟನ್ನು ತಯಾರಿಸುತ್ತಾರೆ. ಸಿಮೆಂಟ್ ಮತ್ತು ಮರಳನ್ನು ಬೆರೆಸಿ ಸಿಮೆಂಟ್ ಗಾರೆಯನ್ನು ಮಾಡಿ ಅದನ್ನು ಕಲ್ಲಿನ ಜಲ್ಲಿಯೊಂದಿಗೆ ಕೈಯಿಂದಲೇ ಸೇರಿಸಿ ಹಿಂದೆ ಸಿಮೆಂಟ್ ಕಾಂಕ್ರೀಟನ್ನು ತಯಾರಿಸುತ್ತಿದ್ದರು. ಈಗ ಎಲ್ಲಿಗೆ ಬೇಕಾದರೂ ಸಾಗಿಸಬಹುದಾದ ಕಾಂಕ್ರೀಟ್ ಮಿಕ್ಸರ್ ಎಂಬ ಯಂತ್ರದಲ್ಲಿ ಸಿಮೆಂಟ್, ಜಲ್ಲಿ ಮತ್ತು ನೀರನ್ನು ಅಳತೆಮಾಡಿ ಬೆರೆಸಿ ಒಳ್ಳೆಯ ಸಿಮೆಂಟ್ ಕಾಂಕ್ರೀಟನ್ನು ತಯಾರಿಸಬಹುದು. ಇದಕ್ಕೆ ಬೆರೆಸುವ ನೀರು ಕ್ಲುಪ್ತವಾಗಿಯೂ ಶುದ್ಧವಾಗಿಯೂ ಇರಬೇಕು. ಕಾಂಕ್ರೀಟನ್ನು ಅಡಿಪಾಯದಲ್ಲಿ ಹಾಕಬೇಕಾದಾಗ ತಳವನ್ನು ನೀರಿನಿಂದ ತೊಳೆದು ಅದರ ಮೇಲೆ 6" ಮೀರಿದ ದಪ್ಪದಲ್ಲಿ ಒಂದು ಕಡೆಯಿಂದ ಇನ್ನೊಂದರವರೆಗೂ ಸುರಿದು, ಹಿಡಿಯಿರುವ ಭಾರವಾದ ಮರದ ಹಲಗೆಯಿಂದ ಗಾರೆಯ ರಸ ಮೇಲಕ್ಕೆ ಉಕ್ಕುವಹಾಗೆ ದಮ್ಮಸ್ಸುಮಾಡಬೇಕು. ಹಾಕಿದ ಕಾಂಕ್ರೀಟು ಮಾಗಲು ನೀರು ಕಟ್ಟಬೇಕು. ಅಳತೆಯಿಂದ 1 ಪಾಲು ಸಿಮೆಂಟ್, 2 ಪಾಲು ಮರಳು ಮತ್ತು 4 ಪಾಲು ಕಲ್ಲಿನ ಜಲ್ಲಿಯನ್ನು ಮಿಕ್ಸರಿನಲ್ಲಿ ಬೆರೆಸಿ ಸಿಮೆಂಟ್ ಕಾಂಕ್ರೀಟನ್ನು ತಯಾರಿಸುತ್ತಾರೆ. ಈ ಕಾಂಕ್ರೀಟನ್ನು ಅದುಮುವ ತ್ರಾಸವನ್ನು ತಡೆಯಬೇಕಾದ ಅಡಿಪಾಯ, ಗೋಡೆ, ಜಲಾಶಯದ ಕಟ್ಟೆ, ಕಮಾನು, ಕಂಬ, ಮೊದಲಾದ ಕಡೆಗಳಲ್ಲಿ ಉಪಯೋಗಿಸುತ್ತಾರೆ.

ಪ್ರಬಲಿತಕಾಂಕ್ರೀಟ್ (ರೀಇನ್‌ಫೋರ್ಸ್ಡ್‌ಕಾಂಕ್ರೀಟ್): ಸಾದಾ ಕಾಂಕ್ರೀಟಿನ ಒತ್ತಡದ ಬಲ ಎಳೆತದ ಬಲದ ಹತ್ತರಷ್ಟು ಹೆಚ್ಚಾಗಿರುತ್ತದೆ. ಪ್ರಬಲಿತ ಕಾಂಕ್ರೀಟನಲ್ಲಿ ಅದರ ಮೇಲೆ ಬರುವ ಎಳೆತದ (ಟನ್ಸೈಲ್) ಮತ್ತು ಜಾರುವ (ಶಿಯರಿಂಗ್) ತ್ರಾಸಗಳನ್ನು ಮಾತ್ರ ತಡೆಯಲು ಉಕ್ಕನ್ನು ಗರ್ಭೀಕರಿಸಿದ್ದರೆ ಅದನ್ನು ಏಕಮುಖ ಪ್ರಬಲಿತವಾದ (ಸಿಂಗ್ಲಿ ರೀಇನ್‌ಫೋರ್ಸ್ಡ್) ತೊಲೆಯೆನ್ನುತ್ತಾರೆ. ಜೊತೆಗೆ ಅದುಮುವ ತ್ರಾಸದ ಭಾಗವನ್ನು ತಡೆಯಲು ಉಕ್ಕನ್ನು ಇಟ್ಟಿದ್ದರೆ ಅದು ದ್ವಿಮುಖವಾಗಿ ಪ್ರಬಲಿತವಾದ ತೊಲೆಯಾಗುತ್ತದೆ. ತೊಲೆಯ ಮೇಲುಭಾಗದಲ್ಲಿ ಒಂದು ತೊಲೆಯಿದ್ದರೆ ಅದನ್ನು ತಬಲೆ ಎನ್ನುತ್ತಾರೆ. ಕಂಬಿಗಳು ಕಾಂಕ್ರೀಟಿನಲ್ಲಿ ಜಾರದಹಾಗೆ ಕೊನೆಗಳನ್ನು ಕೊಕ್ಕೆಗಳ ಹಾಗೆ ಬಗ್ಗಿಸುತ್ತಾರೆ. ಜಾರುವ ಒತ್ತಡವನ್ನು ಎದುರಿಸಲು ಅಲ್ಲಲ್ಲಿ ರಿಕಾಪು ಕಂಬಿಗಳನ್ನು (ಸ್ಟಿರಪ್ಸ್) ಇಟ್ಟಿರುತ್ತಾರೆ. ಏಕಮುಖವಾಗಿ ಕಂಬಿಗಳಿರುವ ಕಡೆ ಅವಕ್ಕೆ ಸಮಕೋಣವಾಗಿ ದೂರವಾಗಿ ತೂಕವನ್ನು ಹರಡಿರುವ ಕಂಬಿಗಳಿರುತ್ತವೆ.

ಪ್ರಬಲಿತಕಾಂಕ್ರೀಟಿನಲ್ಲಿ ಉಪಯೋಗಿಸುವ ಸಿಮೆಂಟ್ ನಿಧಾನವಾಗಿ ಗಟ್ಟಿಯಾಗುವ ಪೋರ್ಟ್‌ಲೆಂಡ್ ಸಿಮೆಂಟಿನ ಮಟ್ಟಕ್ಕೆ ಬರಬೇಕು. ರಸ್ತೆಗಳಿಗೆ ಹಾಕುವ ಸಿಮೆಂಟ್ ಬಾಳಿಕೆ ಬರಬೇಕು. ಬಲಿಷ್ಠವಾಗಿರಬೇಕು. ಮೊದಲೇ ತ್ರಾಸವನ್ನು ಹೊರಿಸಿರುವ (ಪ್ರೀಸ್ಟ್ರೆಸ್ಡ್) ಕಾಂಕ್ರೀಟ್ ಈಚೆಗೆ ಬಳಕೆಗೆ ಬಂದಿದೆ. ಈ ಕ್ರಮದಲ್ಲಿ ಕಾಂಕ್ರೀಟಿನ ಒತ್ತಡದ ಬಲವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದು ಸಾಧ್ಯವಾಗಿದೆ. ಇದರಲ್ಲಿ ಕಟ್ಟಡದ ಒಂದು ಭಾಗ ಅದು ಹೊರಬೇಕಾದ ತೂಕದ ಪರಿಣಾಮವಾಗಿ ಯಾವ ತ್ರಾಸವನ್ನು ಪಡೆಯುವುದೋ ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ತ್ರಾಸವನ್ನು ಅದರ ಮೇಲೆ ಪೂರ್ವಭಾವಿಯಾಗಿ ಹೊರಿಸಿರುತ್ತಾರೆ. ಪ್ರಬಲಿತಕಾಂಕ್ರೀಟಿನಲ್ಲಿ ಇಲ್ಲದೆ ಇರುವ ಕೆಲವು ಗುಣಗಳು ಇದರಲ್ಲಿವೆ. (1) ತೂಕ ಬಿದ್ದಾಗ ಕಾಂಕ್ರೀಟ್ ಬಿರುಕು ಬಿಡುವುದಿಲ್ಲ, (2) ತೊಲೆಗಳು ಮಧ್ಯದಲ್ಲಿ ಬಾಗುವುದು ಕಡಿಮೆಯಾಗುತ್ತದೆ, (3) ಅದೇ ಬಲವುಳ್ಳ ಉಕ್ಕಿನ ಕಟ್ಟಡಕ್ಕಿಂತ ಇದು ಹಗುರವಾಗಿದೆ, (4) ಉಪಯೋಗಿಸುವ ಉಕ್ಕಿನಲ್ಲಿ 80%ರ ವರೆಗೂ ಕಾಂಕ್ರೀಟಿನಲ್ಲಿ ಉಳಿತಾಯ ಸಾಧ್ಯ, (5) ಇದನ್ನು ಮುಂಚೆಯೇ ಪರೀಕ್ಷಿಸಿದ್ದಾಗಿರುತ್ತದೆ.

ಸ್ಪಂದಿಸಿದ ಕಾಂಕ್ರೀಟ್ (ವೈಬ್ರೇಟೆಡ್ ಕಾಂಕ್ರೀಟ್); ಇದು ಒಂದು ಯಾಂತ್ರಿಕ ಕ್ರಮ, ಮೂರು ವಿಧವಾದ ಸ್ಪಂದಕಗಳು ಅಥವಾ ಕಂಪನಕಾರಿಗಳೂ ರೂಢಿಯಲ್ಲಿವೆ–(1) ಪೆಟ್ರೋಲಿನ ಯಂತ್ರ, (2) ಸಂಕೋಚಿಸಿದ ಗಾಳಿಯ ಯಂತ್ರ, (3) ವಿದ್ಯುತ್ತಿನ ಯಂತ್ರ, ಸ್ಪಂದನವನ್ನು ಮರು ಬಗೆಗಳಲ್ಲಿ ಮಾಡಬಹುದು–(1) ಸ್ಪಂದಕವನ್ನು ಕಾಂಕ್ರೀಟಿನೊಳಗೇ ಇಡಬಹುದು, (2) ಕಾಂಕ್ರೀಟಿನ ರಸ್ತೆಯ ಮೇಲ್ಮೈಯ ಮೇಲೆ ಸ್ಪಂದಿಸುವ ಭಾಗಗಳನ್ನು ಇಡಬಹುದು. (3) ಸೆಂಟ್ರಿಂಗುಗಳನ್ನೇ ಸ್ಪಂದನ ಮಾಡಬಹುದು. **(ನೋಡಿ– ಕಂಪನಕಾರಿ–(ಕಂಪಕ))**

**ಗನ್ನೈಟ್ :** ಎತ್ತರವಾದ ಕಲ್ಲುಗಾರೆಯ ಕಟ್ಟೆಗಳಲ್ಲಿ ಕಲ್ಲಿನ ತಳಪಾಯದಲ್ಲಿ ಬಿರುಕುಗಳಿದ್ದರೆ ತೆಳುವಾದ ಸಿಮೆಂಟಿನಿಂದ ತುಂಬುವುದು ಉಪಯೋಗವಾಗದೆ ಇದ್ದಾಗ ಸಿಮೆಂಟ್ ಮತ್ತು ಮರಳಿನ ಮಿಶ್ರಣವನ್ನು ಒತ್ತಡದಿಂದ ತುಂಬುವುದಕ್ಕೆ ಗನ್ನೈಟಿಂಗ್ ಎನ್ನುತ್ತಾರೆ. ನೀರನ್ನು ತುಂಬುವ ಕೊಳಗಳಲ್ಲಿ ಸೋರುವುದನ್ನು ತಪ್ಪಿಸುವುದಕ್ಕೂ ಇದನ್ನು ಉಪಯೋಗಿಸುತ್ತಾರೆ.

**ಕಬ್ಬಿಣ, ಉಕ್ಕು :** ಕಬ್ಬಿಣದ ಉಪಯೋಗ ಯಂತ್ರ ಇಂಜಿನಿಯರಿಂಗ್‌ನಲ್ಲಿ ಸಾರ್ವತ್ರಿಕವಾಗಿದೆ. ತಾಂಡವಾಳವಲ್ಲದೆ (ಕ್ಯಾಸ್ಟ್ ಐರನ್) ಇದರಲ್ಲಿ ಮೆದು ಕಬ್ಬಿಣ (ರಾಟ್ ಐರನ್) ಮತ್ತು ಉಕ್ಕು ಎಂಬ ನಮೂನೆಗಳಿವೆ. ಮೆದು ಕಬ್ಬಿಣದಲ್ಲಿ ಶೇ. 15ಕ್ಕಿಂತ ಹೆಚ್ಚು ಇಂಗಾಲವಿರುವುದಿಲ್ಲ. ಇದು ಮೆದುವಾಗಿಯೂ ಜಿಗಟಾಗಿಯೂ ಇದೆ. ಇದನ್ನು 815 ಸೆಂ. ಉಷ್ಣತೆಯಲ್ಲಿ ವೆಲ್ಡ್ ಮಾಡಬಹುದು. ಮಾಡುಗಳು ಗರ್ಡರುಗಳು ಮತ್ತು ಕಂಬಗಳನ್ನು ಮಾಡಲು ಇದನ್ನು ಬಳಸುತ್ತಿದ್ದರು. ಈಗ ಈ ಉದ್ದೇಶಗಳಿಗೆ ಉಕ್ಕನ್ನು ಬಳಸುತ್ತಾರೆ.

ಉಕ್ಕು ಎಳೆದರೆ ಹಿಗ್ಗುತ್ತದೆ. ಇದರಿಂದ ತಗಡುಗಳನ್ನು ಬಡಿಯಬಹುದು., ತಂತಿಗಳನ್ನು ಎಳೆಯಬಹುದು, ವೆಲ್ಡಿಸಬಹುದು, ಹದಮಾಡಿ ಎಷ್ಟು ಗಟ್ಟಿಯಾಗಿ ಬೇಕಾದರೂ ಮಾಡಬಹುದು. ಉಕ್ಕನ್ನು ತೊಲೆಗಳು, ಗರ್ಡರಗಳು, ಗುಂಡು ಮತ್ತು ಚೌಕದ ಸರಳುಗಳೂ, ತಗಡುಗಳನ್ನು ಮಾಡಲು ಬಳಸುತ್ತಾರೆ. ಕತ್ತರಿಸುವ ಹತಾರಗಳನ್ನು ಮಾಡಲು ಗಟ್ಟಿಯಾದ ಎರಕದ ಉಕ್ಕನ್ನು ಉಪಯೋಗಿಸುತ್ತಾರೆ. ತಾಂಡವಾಳದ ಇಂಗಾಲ, ಗಂಧಕ ಮತ್ತು ರಂಜಕ–ಇವು ಬೆರೆತಿರುತ್ತವೆ. ಇದರಿಂದ 152.4 ಮಿಮೀ ವ್ಯಾಸದಿಂದ ಹಿಡಿದು 1066 ಮಿಮೀ ವ್ಯಾಸದವರೆಗೂ ನೀರನ್ನು ಸಾಗಿಸುವ ಕೊಳಾಯಿಗಳನ್ನು ತಯಾರಿಸುತ್ತಾರೆ. ಇದರಿಂದ ಉಕ್ಕನ್ನು ತಯಾರಿಸಲು ಕಬ್ಬಿಣದ ಅದುರನ್ನು ಬೆರೆಸಿ ಇಂಗಾಲದ ಪ್ರಮಾಣವನ್ನು ತಗ್ಗಿಸುತ್ತಾರೆ. ಇನ್ನೊಂದು ಕ್ರಮದಲ್ಲಿ ಕರಗಿ ನೀರಾದ ಕಬ್ಬಿಣದ ಮೂಲಕ ಗಾಳಿಯನ್ನು ಒತ್ತಡದಲ್ಲಿ ಊದಿ ಇಂಗಾಲವನ್ನು ಕಡಿಮೆ ಮಾಡುತ್ತಾರೆ. **(ನೋಡಿ–ಉಕ್ಕು)**

**ತಾಮ್ರ :** ತಾಮ್ರವನ್ನು ಪ್ರಾಚೀನ ನಾಗರಿಕತೆಗಳ ಕಾಲದಿಂದಲೂ ಮಾನವ ಬಳಸುತ್ತಿದ್ದಾನೆ. ಇದು ಶ್ರೇಷ್ಠವಾದ ವಿದ್ಯುದ್ವಾಹಕ ವಸ್ತು. ಇದಕ್ಕೆ ತುಕ್ಕು ಹಿಡಿಯುವುದಿಲ್ಲ. ಕಾಂತಗುಣವಿಲ್ಲ, ಇದರಿಂದ ತಗಡುಗಳನ್ನು ಬಡಿಯಬಹುದು. ಕ್ಯಾಡ್ಮಿಯಂ ಕೊಂಚವೇ ಬೆರೆತಿರುವ ಮಿಶ್ರ ಲೋಹವನ್ನು ವಿದ್ಯುತ್ತನ್ನು ಸಾಗಿಸುವ ತಂತಿ ಸಾಲುಗಳಲ್ಲಿ ಉಪಯೋಗಿಸುತ್ತಾರೆ.

ಹಿತ್ತಾಳೆಯಲ್ಲಿ ಸತು ತಾಮ್ರದೊಂದಿಗೆ ಸೇರಿದೆ. ಸತು ಹೆಚ್ಚಾದ ಹಾಗೆ ಬಲ, ಗಡಸು ಹೆಚ್ಚಾಗುತ್ತವೆ, ಆದರೆ ವಿದ್ಯುದ್ವಾಹಕತ್ವ ಇಳಿಯುತ್ತದೆ. ಹಿತ್ತಾಳೆಗೆ ನಿಕ್ಕಲ್ಲನ್ನು ಸೇರಿಸಿದರೆ ಬೆಳ್ಳಿಯ ಬಣ್ಣದ ನಿಕ್ಕಲ್–ಸಿಲ್ವರ್ ಬರುತ್ತದೆ.

ಕಂಚು, ತಾಮ್ರ ಮತ್ತು ತವರದ ಮಿಶ್ರಲೋಹ–ಇದರ ಎಳೆತದ ಬಲ ಹೆಚ್ಚು. ಆದರೆ ವಿದ್ಯುತ್ ಮತ್ತು ಉಷ್ಣವಾಹಕ ಶಕ್ತಿ ಕಡಿಮೆ ಶೇ. 7.5ಯವರೆಗೆ ಅಲ್ಯೂಮಿನಿಯಮ್ ಇರುವ ಕಂಚಿನಿಂದ ತಂತಿಗಳನ್ನು ಎಳೆಯಬಹುದು. ತಾಮ್ರ ಮತ್ತು ನಿಕ್ಕಲ್ಲಿನ ಮಿಶ್ರಲೋಹಗಳನ್ನು ಕೈಗಾರಿಕೆಗಳಲ್ಲಿ ಬಳಸುತ್ತಾರೆ.

ಚಿನ್ನ, ಬೆಳ್ಳಿ, ಪ್ಲ್ಯಾಟಿನಮ್–ಇವನ್ನು ಘನಲೋಹಗಳೆನ್ನುತ್ತಾರೆ. ಸಂಶ್ಲೇಷಿತ ದಾರಗಳನ್ನು ತೆಗೆಯುವ ತಂತುಕಗಳನ್ನು (ಸ್ಪಿನ್ನರೆಟ್ಸ್) ಮಾಡುವುದಕ್ಕೆ ಈ ಗುಂಪಿನ ಮಿಶ್ರಲೋಹಗಳನ್ನು ಬಳಸುತ್ತಾರೆ.

ಈಗ ಎಲ್ಲೆಲ್ಲಿಯೂ ಬಳಕೆಯಲ್ಲಿರುವ ಅಲ್ಯೂಮಿನಿಯಮ್ಮನ್ನು 1825ರ ವರೆಗೆ ಯಾರೂ ಕಂಡಿರಲಿಲ್ಲ. ಇದಕ್ಕೆ ಸಣ್ಣ ಪ್ರಮಾಣಗಳಲ್ಲಿ ಕೆಲವು ಲೋಹಗಳನ್ನು ಬೆರೆಸಿ ಕಟ್ಟಡಗಳಲ್ಲಿ ಉಪಯೋಗಿಸುತ್ತಾರೆ. ಅಲ್ಯೂಮಿನಿಯಮ್ ಹಗುರವಾದ ಲೋಹ. ಆದರೆ ಡ್ಯುರಾಲ್ಮಿನ್, ಹಿಡ್ಯಮಿನಿಯಂ ಮೊದಲಾದ ಇದರ ಮಿಶ್ರ ಲೋಹಗಳು ಉಕ್ಕಿನಷ್ಟು ಬಲಿಷ್ಠವಾಗಿವೆ.

**ಗಾಜು :** ಇದು ಬಹುವಿಧಗಳಲ್ಲಿ ಯಂತ್ರ ಇಂಜಿನಿಯರಿಂಗ್‌ನಲ್ಲಿ ಉಪಯೋಗಕ್ಕೆ ಬರುತ್ತದೆ. ರಸಾಯನವಿಜ್ಞಾನದ ಪ್ರಯೋಗಶಾಲೆಯಲ್ಲಂತೂ ಇದನ್ನು ಬಿಟ್ಟು ಯಾವ ಕೆಲಸವೂ ನಡೆಯುವುದಿಲ್ಲ. ಹೆಚ್ಚಿನ ವಿದ್ಯುದ್ಬಲದಲ್ಲಿಯೂ ಇದು ಅವಾಹಕವಾಗಿ ಉಳಿದಿರುತ್ತದೆ. ಇದು ಉಷ್ಣಕ್ಕೂ ಉಣ್ಣೆಯ ರೂಪದಲ್ಲಿ ಅವಾಹಕ, ದೃಗ್ವಿಜ್ಞಾನದ (ಆಪ್ಟಿಕಲ್) ವಿಶೇಷ ಗುಣಗಳಿಂದ ಇದನ್ನು ವಿಜ್ಞಾನದ ಸಮಸ್ತಭಾಗಗಳಲ್ಲಿಯೂ ಬಳಸುತ್ತಾರೆ. ಇಂದು ಗಾಜಿನ ಕಾರ್ಖಾನೆಯಲ್ಲಿ ಪವಾಡಗಳೇ ನಡೆಯುತ್ತಿವೆ. ನೀರಿನ ತೂಕದ ಆರರಲ್ಲಿ ಒಂದು ಪಾಲು ವಿಶಿಷ್ಟ ತೂಕವುಳ್ಳ ಗಾಜಿನ ನೊರೆಯನ್ನು ಗಾಳಿ ಊದಿ ಮಾಡುತ್ತಾರೆ. ಉಕ್ಕಿಗಿಂತ ಗಡುಸಾದ ಮಾಪಕಗಳನ್ನು ಮಾಡುತ್ತಾರೆ. ರೇಷ್ಮೆಯಷ್ಟು ನುಣುಪಾದ ದಾರಗಳನ್ನು ಎಳೆಯುತ್ತಾರೆ. ಬೇರೆ ಬೇರೆ ಆಕ್ಸೈಡಿದ್ದರೆ ಹಸಿರುನೀಲಿ ಮಿಶ್ರಬಣ್ಣವೂ, ಕೊಂಚವೇ ಕೋಬಾಲ್ಟ್ ಇದ್ದರೆ ಪರ್ಪ್ಲ್ ಬಣ್ಣವೂ ಕ್ರೋಮಿಯಮ್ ಇದ್ದರೆ ಹಸಿರಿನಿಂದ ಹಿಡಿದು ಕಿತ್ತಲೆ ಹಣ್ಣಿನ ಬಣ್ಣವೂ ನಿಕ್ಕಲಿನಿಂದ ಕೆಂಪು ಮಿಶ್ರವಾದ ನೇರಳೆ ಬಣ್ಣವೂ ಬರುತ್ತವೆ. ಉತ್ಕೃಷ್ಟವಾದ ಗಾಜನ್ನು ಮಾಡಲು ಉಪಯೋಗಿಸುವ ಮರಳಿನಲ್ಲಿ ಹತ್ತು ಸಾವಿರದಲ್ಲಿ ಒಂದು ಪಾಲಿನಷ್ಟೂ ಕಬ್ಬಿಣದ ಆಕ್ಸೈಡ್ ಇರಬಾರದು. ಶುದ್ಧವಾದ ಗಾಜನ್ನು ಈಜಿಪ್ಟಿನಲ್ಲಿ ಪ್ರ.ಶ.ಪೂ 5000ರಲ್ಲಿ ತಯಾರು ಮಾಡಿದ್ದರಂತೆ ! ಎರಡು ಗಾಜಿನ ಪದರಗಳ ಮಧ್ಯೆ ಸಂಶ್ಲೇಷಿತ ರಾಳವಿದ್ದರೆ ಒಡೆದಾಗ ಗಾಜು ಚೂರು ಚೂರಾಗುವುದಿಲ್ಲ. ಕೈಗಾರಿಕಾ ಕೇಂದ್ರಗಳಲ್ಲಿ ಯಂತ್ರಾಗಾರಗಳ ಕೆಳಗಿನ ಅಂತಸ್ತುಗಳಿಗೆ ಬೆಳಕು ಬರುವ ಹಾಗೆ ಮುಪ್ಪಟ್ಟಿಯ ಗಾಜುಗಳನ್ನು (ಪ್ರಿಸ್ಮ್) ಬಳಸುತ್ತಾರೆ. ಗಾಜಿನ ದಾರದಿಂದ ಹೆಣೆದ ನೇಯ್ಗೆಯನ್ನು ಹಾಳೆ ಹಾಳೆಯಾದ ಫಲಕ ಗಾಜುಗಳಲ್ಲಿ ವಿಮಾನಗಳ ಕೈಗಾರಿಕೆಗಳಲ್ಲಿಯೂ ಮೋಟಾರಿನ ಮೇಲುಭಾಗದಲ್ಲಿಯೂ ಉಪಯೋಗಿಸುತ್ತಾರೆ.

**ಮಣ್ಣು :** ಕುಂಬಾರನ ಕಲೆ ನಾಗರಿಕತೆಯ ಮುಂಜಾವದಷ್ಟು ಪುರಾತನವಾದುದು. ಮಣ್ಣಿನ ಮಡಕೆಗಳೂ ಕುಡಿಕೆಗಳೂ ಈಗಲೂ ಬಳಕೆಯಲ್ಲಿವೆ. ಆದರೆ ಈಗಿನ ಯಂತ್ರಯುಗದಲ್ಲಿ ಹಳೆಯ ಸಾಮಗ್ರಿಗಳಿಗೆ ಹೊಸ ಉಪಯೋಗ ಬಂದಿದೆ. ಮಾಡನ್ನು ಮುಚ್ಚಲು ಸುಟ್ಟ ಮಣ್ಣಿನ ಹಂಚುಗಳನ್ನು ಮೊದಲೂ ಮಾಡುತ್ತಿದ್ದರು. ಈಗ ಮಂಗಳೂರು ಹಂಚುಗಳನ್ನು ಪ್ರತ್ಯೇಕವಾದ ಒಲೆಗಳಲ್ಲಿ ಸುಟ್ಟು ಮಾಡಿಗೆ ಹೊದೆಸುವುದಕ್ಕೂ ನೆಲಕ್ಕೆ ಹಾಸುವುದಕ್ಕೂ ಬಳಸುತ್ತಾರೆ.

ಯಂತ್ರ ಇಂಜಿನಿಯರಿಂಗ್‌ನಲ್ಲಿ ಬಳಸುವ ಮಣ್ಣುಗಳಲ್ಲಿ ಅನೇಕ ವಿಧಗಳಿವೆ : (1) ಮುದ್ದೆಯಾದ ಜೇಡಿಮಣ್ಣು, (2) ಕೆಂಪುಮಣ್ಣು, (3) ಚೀನಮಣ್ಣು ಅಥವಾ ಸುದ್ದೆಮಣ್ಣು (ಕೆಯೊಲಿನ್), (4) ಬೆಂಕಿಗೆ ಜಗ್ಗದ ಮಣ್ಣು, ಇವಕ್ಕೆ ಚಕಮುಕಿ ಕಲ್ಲು, ಎಲುಬು ಮೊದಲಾದ ಕಚ್ಚಾಮಾಲುಗಳನ್ನು ಬೆರೆಸುತ್ತಾರೆ.

ತಯಾರಾಗುತ್ತಿರುವ ಸಾಮಾನುಗಳಲ್ಲಿಯೂ ವೈವಿಧ್ಯ ಹೆಚ್ಚಾಗುತ್ತಿದೆ. ಮೊದಲು ಜೇಡಿಮಣ್ಣಿನ ಪಾತ್ರೆಗಳು, ಬಗೆಬಗೆಯ ಹಂಚುಗಳು, ಗ್ರಾಮಸಾರವನ್ನು ಸಾಗಿಸುವ ಕೊಳಾಯಿಗಳು, ಇಟ್ಟಿಗೆ, ಕಾವಿಟ್ಟಿಗೆ, ಟೆರಕಾಟ, ಬೆಂಕಿಯ ಶಾಖವನ್ನು ತಡೆಯುವ ಕುಲುಮೆ ಭಾಗಗಳು, ಪಿಂಗಾಣಿಯ ಬಟ್ಟಲು, ತಟ್ಟೆ–ಇವನ್ನು ಮಾಡುತ್ತಿದ್ದರು. ಅರವತ್ತು ವರ್ಷಗಳಿಂದ ಈಚೆಗೆ ವಿದ್ಯುತ್ತಿನ ಕೈಗಾರಿಕೆಯಲ್ಲಿ ವಿದ್ಯುದ್ವಾಹಕಗಳ (ಇನ್ಸುಲೇಟರ್ಸ್) ತಯಾರಿಯಲ್ಲಿ ಪಿಂಗಾಣಿಯ ಉಪಯೋಗ ವಿಶೇಷವಾಗಿದೆ ಪಿಂಗಾಣಿಯನ್ನು ಸುಡುವುದಕ್ಕೆ ಸುದ್ದೆಮಣ್ಣು, ಬೆಣಚುಕಲ್ಲು, ಫೆಲ್ಡ್‌ಸ್ಪಾರ್, ಜಿಪ್ಸಂ, ಬಳಪದ ಕಲ್ಲು, ಬೆರಿಲ್, ಸಿರ್ಕನ್, ಅಲ್ಯೂಮಿನಿಯಮ್ ಮತ್ತು ಸಿಲಿಕನ್ನಿನ ಆಕ್ಸೈಡುಗಳನ್ನು ಉಪಯೋಗಿಸುತ್ತಾರೆ. ಅಚ್ಚ ಬಿಳುಪಾದ ಪಿಂಗಾಣಿಯ ಉಪಯೋಗ ಕಾಫಿಯ ಲೋಟದಿಂದ ಹಿಡಿದು ಸರಂಧ್ರವಾದ ವಿದ್ಯುತ್ತಿನ ಸ್ವಿಚ್ಚಿನ ವರೆಗೆ ಹರಡಿದೆ. ಇದರ ವಿಶಿಷ್ಟ ತೂಕ 2.4, ಇದು ನೀರನ್ನು ಹೀರುವುದಿಲ್ಲ. ಬಿಳೀಪಿಂಗಾಣಿಯನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ಅಚ್ಚುಗಳಲ್ಲಿ ಸಂಸ್ಕಾರಮಾಡಿದ ಮಣ್ಣನ್ನು ಎರಕ ಹೊಯ್ದು ಒಣಗಿಸಿ $1200^0$ ಸೆಂ. ಉಷ್ಣತೆಯ ಒಲೆಗಳಲ್ಲಿ ಸುಡುತ್ತಾರೆ.

ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ಜಲವಿದ್ಯುತ್ತನ್ನು ಉತ್ಪಾದನೆ ಮಾಡುವ ಯೋಜನೆಗಳಿಗೆ ಪ್ರಾಮುಖ್ಯ ಕೊಡಲಾಗಿದೆ ವಿದ್ಯುಜ್ಜನಕಗಳಿಂದ ವಿದ್ಯುತ್ ಬಳಕೆಯಾಗುವ ಕ್ಷೇತ್ರಗಳಿಗೆ ಹೆಚ್ಚಿನ ವೋಲ್ಟತೆಯಲ್ಲಿ ನೂರಾರು ಮೈಲಿಗಳವರೆಗೆ ಸಾಗಿಸಬೇಕಾಗುತ್ತದೆ. ಅದಕ್ಕಾಗಿ 110 ವೋಲ್ಟಿನ ತಂತಿಸಾಲಿನಿಂದ ಹಿಡಿದು ಉಕ್ಕಿನ ಗೋಪುರಗಳ ಮೇಲಿನ ವೋಲ್ಟಿನ ತಂತಿಸಾಲಿನವರೆಗೂ ವಿದ್ಯುದ್ವಾಹಕ ಪಿಂಗಾಣಿಯನ್ನು ಉಪಯೋಗಿಸುತ್ತಾರೆ. ಹೀಗಾಗಿ ಪಿಂಗಾಣಿ ತಯಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯ ಬರುತ್ತಿದೆ.

ಹೆಚ್ಚಿನ ಆವರ್ತಸಂಖ್ಯೆಯ (ಹೈ ಫ್ರೀಕ್ವೆನ್ಸಿ) ವಿದ್ಯುತ್ಪ್ರವಾಹಗಳನ್ನು ತಡೆಯಬಲ್ಲ ವಿಶಿಷ್ಟವಾದ ಪಿಂಗಾಣಿ ತಯಾರಾದ ಮೇಲೆ ಪುಟ್ಟ (ಮಿಡ್ಜೆಟ್) ರೇಡಿಯೊ ಸೆಟ್ಟುಗಳನ್ನು ಮಾಡುವುದು ಸಾಧ್ಯವಾಯಿತು, ಮೋಟಾರ್ ಕಾರುಗಳಲ್ಲಿ ಸ್ಪಾರ್ಕಿಂಗ್ ಪ್ಲಗ್ ಮುಂತಾದ ಸಲಕರಣೆಗಳನ್ನು ಪಿಂಗಾಣಿಯಿಂದ ಮಾಡುತ್ತಾರೆ.

ಹೆಚ್ಚಿನ ಕಾವನ್ನು ತಡೆಯುವ ಕಾವಿಟ್ಟಿಗೆಗಳನ್ನು (ಫೈರ್ ಬ್ರಿಕ್ಸ್) (1) ಆಮ್ಲ, (2) ಕ್ಷಾರ, (3) ಎರಡೂ ಅಲ್ಲದ್ದು–ಎಂದು ವಿಭಾಗಿಸಬಹುದು. ಆಮ್ಲದ ಉಕ್ಕಿನ ಕುಲುಮೆಗಳಿಗೆ ಅಂಚುಕಟ್ಟಾಗಿ ಉಪಯೋಗಿಸುವ ಮಣ್ಣಿಗೆ ಮರಳು ಮತ್ತು ಸುಣ್ಣವನ್ನು ಬೆರೆಸಿ ಹೆಚ್ಚಿನ ಉಷ್ಣತೆಯಲ್ಲಿ ಸುಡುತ್ತಾರೆ. ಆದರೆ ಕ್ಷಾರದ ಕುಲುಮೆಗಳಲ್ಲಿ ಬಳಸುವ ಮಣ್ಣಿಗೆ ಮ್ಯಾಗ್ನೀಸಿಯಂ ಇಲ್ಲವೆ ಅಲ್ಯೂಮಿನಿಯಂ ಆಕ್ಸೈಡನ್ನು ಬೆರೆಸಿ ಹೆಚ್ಚಿನ ಉಷ್ಣತೆಯಲ್ಲಿ ಸುಡುತ್ತಾರೆ. ಗಟ್ಟಿಯಾದ ಟೆರಕಾಟವನ್ನು ಬಹಳ ಹೆಚ್ಚಿನ ಉಷ್ಣತೆಯಲ್ಲಿ ಮಣ್ಣನ್ನು ಸುಟ್ಟು ತಯಾರಿಸುತ್ತಾರೆ.

**ಪ್ರಬಲಿತಪಡಿಸಿದ ಇಟ್ಟಿಗೆಗಾರೆ (ರೀಇನ್‌ಫೋರ್ಸ್ಡ್ ಬ್ರಿಕ್‌ವರ್ಕ್) :** ಈ ಸಾಮಗ್ರಿಯನ್ನು ಇಂಗ್ಲೆಂಡಿನ ವಿಖ್ಯಾತ ಶಿಲ್ಪಿ ಬ್ರುನೆಲ್ 1825ರಲ್ಲಿ ಥೇಮ್ಸ್ ನದಿಯ ಕೆಳಗೆ ಸುರಂಗವನ್ನು ತೋಡುವಾಗ ಮೊದಲು ಉಪಯೋಗಿಸಿದ. ಇಲ್ಲಿ ಬಳಸುವ ಇಟ್ಟಿಗೆಗಳ ಅದುಮುವ ಶಕ್ತಿ ಹೆಚ್ಚಾಗಿರಬೇಕು. ಅವು ಹೆಚ್ಚಾಗಿ ನೀರನ್ನು ಹೀರಬಾರದು. ಇಟ್ಟಿಗೆಗಳನ್ನು ನೀರಿನಲ್ಲಿ ಅದ್ದಿ ಉಪಯೋಗಿಸಬೇಕು. ಇಟ್ಟಿಗೆ ಗಾರೆಯ ಸಂದುಗಳಲ್ಲಿ ಒಂದೇ ದಿಕ್ಕಿನಲ್ಲಿ ಕಬ್ಬಿಣದ ಕಂಬಿಗಳನ್ನು ಸಿಮೆಂಟ್ ಗಾರೆಯಲ್ಲಿ ಕೂರಿಸುತ್ತಾರೆ. ಇದರ ಸಂವಿಧಾನವನ್ನು ಪ್ರಬಲಿತ ಕಾಂಕ್ರೀಟಿನ ಹಾಗೆಯೇ ಮಾಡಬಹುದು. ಉದ್ದವಾಗಿ ಹೋಗುವ ಕಂಬಿಗಳಲ್ಲಿಯೂ ಚಪ್ಪಟೆಯಾದ ಭಾಗದ (ವೆಬ್) ಕಂಬಿಗಳಲ್ಲಿಯೂ ಎಳೆತದ ತ್ರಾಸ ಚದರ ಸೆಂಮೀಗೆ 18,000 ಪೌಂಡುಗಳಿರಬಹುದು.

**ಬಣ್ಣಗಳು, ಮೆರುಗೆಣ್ಣೆಗಳು (ಪೇಂಟ್ಸ್ ಅಂಡ್ ವಾರ್ನಿಷಸ್) :** ಕಟ್ಟಡದ ಸಾಮಗ್ರಿಗಳನ್ನು ಗಾಳಿ, ಬಿಸಿಲು ಮತ್ತು ಮಳೆಗಳಿಂದ ಕಾಪಾಡಲೂ ಅಲಂಕಾರಕ್ಕಾಗಿಯೂ ಅವಕ್ಕೆ ಬಣ್ಣಗಳನ್ನ ಮೆರುಗೆಣ್ಣೆಯನ್ನೂ ಬಳಿಯುತ್ತಾರೆ.

ತೈಲವರ್ಣಗಳಲ್ಲಿ ಈ ಭಾಗಗಳಿವೆ–(1) ವರ್ಣದ್ರವ್ಯ: ಬಿಳಿ ಸೀಸ, ಕೆಂಪು ಸೀಸ, ಬಿಳಿ ಸತು, ಲೋಹಗಳ ಆಕ್ಸೈಡುಗಳು. (2) ವರ್ಣದ್ರವ್ಯಗಳೊಂದಿಗೆ ಕೆಲವು ಜಟಪದಾರ್ಥಗಳನ್ನು ಬೆರೆಸಿ ಗಾತ್ರವನ್ನು ಹೆಚ್ಚಿಸುತ್ತಾರೆ. (3) ಬಣ್ಣದ ವಾಹಕ (ಕ್ಯಾರಿಯರ್) ವರ್ಣದ್ರವ್ಯಗಳನ್ನು ಕರಗಿಸುತ್ತದೆ. ಉದಾಹರಣೆಗೆ ಅಗಸೆ ಎಣ್ಣೆ. (4) ಟರ್ಪೆಂಟೈನ್ ಮುಖ್ಯವಾದ ದ್ರಾವಕ (ಸಾಲ್ವೆಂಟ್). (5) ತೇವವನ್ನು ಆರಿಸುವ ವಸ್ತುಗಳಲ್ಲಿ ಮುಖ್ಯವಾದದ್ದು ಅಗಸೆ ಎಣ್ಣೆ.

ರಾಳವನ್ನು ಅಗಸೆ ಎಣ್ಣೆಯಲ್ಲಿಯೋ ಸ್ಪಿರಿಟ್ಟಿನಲ್ಲಿಯೋ ದ್ರಾವಣಮಾಡಿ ಮೆರುಗೆಣ್ಣೆಯನ್ನು ತಯಾರಿಸುತ್ತಾರೆ. ಇದು ಪಾರದರ್ಶಕವಾಗಿದೆ. ತೇಗದ ಮರದ ಮೇಲೆ ಬಳಿದರೆ ಎಳೆಗಳ ರಚನೆ ಲಕ್ಷಣವಾಗಿ ಎದ್ದುಕಾಣುತ್ತದೆ. ಜೇನುಮೇಣವನ್ನು ಮರದ ರಂಧ್ರಗಳಿಗೆ ತೂರಿ ಉಜ್ಜಿದರೆ ಹೆಚ್ಚು ಕಾಲ ಉಳಿಯುವ ಮೆರುಗು ಬರುತ್ತದೆ.

**ಪದರ ಹಲಗೆ (ಪ್ಲೈವುಡ್):** ಈಚೆಗೆ ನೇರ ಮರದ ಉಪಯೋಗ ಮುಂದುವರಿದ ದೇಶಗಳಲ್ಲಿ ಕಡಿಮೆಯಾಗುತ್ತಿದೆ. ಇದಕ್ಕೆ ಮರದ ಅಭಾವವೂ ಮುಖ್ಯವಾದ ಒಂದು ಕಾರಣ. ಮರದ ಬದಲು ಈಗ ಸಂಶ್ಲೇಷಿತ ಅಂಟುಗಳಿಂದ ಜೋಡಿಸಿದ ಪದರದ ಹಲಗೆಯ ಉಪಯೋಗ ಹೆಚ್ಚುತ್ತಿದೆ. ಈ ಹಲಗೆಯಲ್ಲಿ ಒಂದು ಪದರವನ್ನು ಎಳೆಗಳ (ಗ್ರೇನ್ಸ್) ದಿಕ್ಕಿನಲ್ಲಿಯೂ ಇನ್ನೊಂದನ್ನು ಅದಕ್ಕೆ ಸಮಕೋನವಾಗಿಯೂ ಇಟ್ಟು ಒಂದು ಹಲಗೆಯಲ್ಲಿ ಇಂಥ ಮೂರೋ ಐದೋ ಜೊತೆಗಳನ್ನು ಅಂಟಿನಿಂದ ಅಂಟಿಸುತ್ತಾರೆ. ಇದರಿಂದ ಮರದ ಒಂದು ದಿಕ್ಕಿನ ಗುಣಗಳು ಸಮಕೋನವಾದ ದಿಕ್ಕಿನ ಗುಣಗಳೊಂದಿಗೆ ಬೆರೆತುಹೋಗುತ್ತವೆ. ನೀರನ್ನು ತಡೆಯತಕ್ಕ ಅಂಟುಗಳು ಬರುವವರೆಗೂ ಮನೆಯ ಒಳಗೇ ಇವನ್ನು ಉಪಯೋಗಿಬೇಕಾಗಿತ್ತು. ಇಂದಿನ ಪದರದ ಹಲಗೆಗಳನ್ನು ಮರಕ್ಕೆ ಬದಲಾಗಿ ಒಳಗೂ ಹೊರಗೂ ಬಳಸಬಹುದು. ರಚನಾವೈಶಿಷ್ಟ್ಯದಿಂದ ಅಗಲದಲ್ಲಿ ಇದು ಕುಗ್ಗುವುದು ಬಹು ಕಡಿಮೆ, ಮರವಾದರೆ ಇದರ ಹತ್ತು ಪಟ್ಟು ಕುಗ್ಗುತ್ತದೆ. ಆದರೆ ಉದ್ದದಲ್ಲಿ ಮಾತ್ರ ಇದು ಮರಕ್ಕಿಂತ ಮೂರು ಪಟ್ಟು ಹಿಗ್ಗುತ್ತದೆ.

ಪದರ ಹಲಗೆ ಈಜಿಪ್ಟಿನವರಿಗೆ 3,500 ವರ್ಷಗಳ ಹಿಂದೆಯೇ ತಿಳಿದಿತ್ತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಮರದ ಕೊರತೆಯ ಸಲುವಾಗಿ ಹಲಗೆಯ ಉಪಯೋಗ ಹೆಚ್ಚಿತು. ಸಂಶ್ಲೇಷಿತ ಅಂಟುಗಳು ತಯಾರಾದದ್ದು 1930ರಲ್ಲಿ, ಮರದ ತೆಳುವಾದ ಪದರಗಳ ಬಲವನ್ನು ಈ ಅಂಟು ಹೆಚ್ಚಿಸುತ್ತದೆ. ಪದರಗಳನ್ನು (ವಿನಿಯರ್ಸ್) ಗರಗಸದಿಂದ ಮರವನ್ನು ಕೊಯ್ದು ಮಾಡುತ್ತಾರೆ. ಅಂಟಿನಿಂದ ಮರದ ಗಡಸು (ಸ್ಟಿಫ್‌ನೆಸ್) ಹೆಚ್ಚಾಗುತ್ತದೆ. ಮರವನ್ನು ದುರ್ಬಲಗೊಳಿಸುವ ತೇವ, ಬೂಷ್ಟು, ಕ್ರಿಮಿಗಳು, ಬ್ಯಾಕ್ಟೀರಿಯ–ಇವುಗಳಿಂದ ಆಗುವ ತೊಂದರೆ ತಪ್ಪುತ್ತದೆ.

ಅಂಟುಗಳಲ್ಲಿ ಉಷ್ಣದಿಂದ ಗಟ್ಟಿಯಾಗತಕ್ಕವು (ಥರ್ಮೋಸೆಟ್ಟಿಂಗ್) ಮತ್ತು ಉಷ್ಣದಿಂದ ಜಿಗಟಾಗತಕ್ಕವು (ಥರ್ಮೋಪ್ಲಾಸ್ಟಿಕ್) ಎಂಬ ಎರಡು ಬಗೆಗಳಿವೆ. ಮೊದಲನೆಯ ನಮೂನೆಯ ಫಿನಾಲಿನ ರಾಳದಿಂದ ಮಾಡುವ ಅಂಟನ್ನು ತೆಳುವಾದ ಬಲಿಷ್ಠವಾದ ಪದರಗಳನ್ನು ಮಾಡಲು ಬಳಸುತ್ತಾರೆ. ಇದರ ಬೆಲೆ ಕಡಿಮೆ, ಎರಡನೆಯ ನಮೂನೆಯಲ್ಲಿ ಹೆಚ್ಚಿನ ಸ್ಥಿತಿಸ್ಥಾಪಕತ್ವವುಳ್ಳ ಬಂಧನ (ಬಾಂಡ್) ದೊರೆಯುತ್ತದೆ.

ವಿಮಾನಗಳಲ್ಲಿ ಬಳಸುವ ಮೂರು ಪದರದ ಹಲಗೆಗೆ ನೇರವಾಗಿ ಚದರ ಸೆಂಮೀಗೆ 8482 ಕಿಗ್ರಾಂಗಳಷ್ಟೂ ಅಡ್ಡಲಾಗಿ 10676 ಕಿಗ್ರಾಂಗಳಷ್ಟೂ ಬಿಗುವಿನ ಸಾಮರ್ಥ್ಯವಿದೆ. ಪದರಗಳನ್ನು ಹೀಗೆ ಹಾಗೆ ಜೋಡಿಸಿ ಅಂಟನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಹಲಗೆಯ ಶಕ್ತಿಯನ್ನು ಅವಶ್ಯಕತೆಗೆ ತಕ್ಕಂತೆ ಬದಲಾಯಿಸಬಹುದು. ಇದು ನೀರು ಬಿದ್ದರೂ ಕೆಡುವುದಿಲ್ಲ. 0.45 ಕಿಗ್ರಾಂ ತೂಕ ಉಕ್ಕಿಗಿಂತ 0.45 ಕಿಗ್ರಾಂ ಪದರದ ಹಲಗೆಯ ಬಲ ಹೆಚ್ಚು. ಹುಳುಗಳು ಇದನ್ನು ತಿನ್ನುವುದಿಲ್ಲ. ಇದು ಸೀಳುವುದಿಲ್ಲ. ಉಬ್ಬುವುದಿಲ್ಲ, ಬಿರುಕು ಬಿಡುವುದಿಲ್ಲ; ಉಷ್ಣವನ್ನು ನಿರೋಧಿಸುತ್ತದೆ. ಹಗುರವಾಗಿದೆ. ಅಗಲವಾದ ನಯವಾದ ಹಲಗೆಗಳಾಗಿ ದೊರೆಯುತ್ತವೆ.

ಪದರ ಹಲಗೆಗಳಿಂದ ಪೂರ್ವಭಾವಿಯಾಗಿ ಜೋಡಿಸಿದ ಮನೆಗಳನ್ನು ಹೂಡುವುದು ಸಾಧ್ಯ. ಇವನ್ನು ಸುಲಭವಾಗಿ ಬೇಗ ಕಟ್ಟಬಹುದು. ಬೆಲೆ ಮಾತ್ರ ಹೆಚ್ಚಾಗುತ್ತದೆ. ಯುದ್ಧಕಾಲದಲ್ಲಿ ತಾತ್ಕಾಲಿಕವಾದ ಕಚೇರಿಗಳಿಗೆ ಇಂಥ ಷೆಡ್ಡುಗಳನ್ನು ಉಪಯೋಗಿಸುತ್ತಿದ್ದರು. ರೈಲ್ವೆ ಗಾಡಿಗಳಲ್ಲಿಯೂ ಮೋಟಾರ್ ಲಾರಿಗಳಲ್ಲಿಯೂ ಈ ಹಲಗೆಗಳನ್ನು ಧಾರಾಳವಾಗಿ ಉಪಯೋಗಿಸುತ್ತಾರೆ.

ಮೆದುವಾದ ಮರದ ಹಲಗೆಗಳಿಗೆ ಸಂಶ್ಲೇಷಿತ ಅಂಟನ್ನು ಹಚ್ಚಿ ಮೇಲೆ ಪದರಗಳನ್ನು ಜೋಡಿಸಿ ಸಾಧಾರಣವಾದ ಪದರದ ಹಲಗೆಗಳನ್ನು ಶೇ. 10ಕ್ಕಿಂತ ಹೆಚ್ಚು ಸಂಕೋಚನ (ಕಂಪ್ರೆಶನ್) ಆಗದ ಹಾಗೆ ಮಾಡುತ್ತಾರೆ.

A ನಾರಿನ ಕಟ್ಟಡದ ಹಲಗೆಗಳು




B ಇತರ ಕಟ್ಟಡದ ಹಲಗೆಗಳು



| ಕ್ರಮ ಸಂಖ್ಯೆ | ಕಟ್ಟಡದ ಭಾಗಗಳು | ಸಂಪ್ರದಾಯದ ಸಾಮಗ್ರಿಗಳು | ಪರ್ಯಾಯ ಆಧುನಿಕ ಸಾಮಗ್ರಿಗಳು |
|---|---|---|---|
| 1. | ತೂಕವನ್ನು ಹೊರುವ ಗೋಡೆ | ಇಟ್ಟಿಗೆ ಇಲ್ಲವೆ ಕಲ್ಲು | ಉಕ್ಕು, ಪ್ರಬಲಿತ ಕಾಂಕ್ರೀಟಿನ ಚೌಕಟ್ಟಿನ ಗೋಡೆಗಳು, ಕಾಂಕ್ರೀಟಿನ ಅಂಕಣಗಳೂ, ಉಕ್ಕು ಸಿಮೆಂಟ್–ಕಲ್ನಾರು, ಅಲ್ಯೂಮಿನಿಯಂ ಮಿಶ್ರಲೋಹದ ತಗಡು |
| 2. | ತೆಳುಗೋಡೆಗಳು | ಮರ, ನಯಗಾರ | ಟೊಳ್ಳಾದ ಸುದ್ದೆಮಣ್ಣಿನ ದಿಮ್ಮಿಗಳು, ಹಗುರವಾದ ಕಾಂಕ್ರೀಟ್, ನಾರಿನ ಹಲಗೆ, ಲೋಹದ ತೆಳುವಾದ ತಗಡು, ಕಲ್ನಾರು–ಸಿಮೆಂಟಿನ ತಗಡುಗಳನ್ನು ಲೋಹದ ಚೌಕಟ್ಟಿನಲ್ಲಿ ಇರಿಸಿರುತ್ತಾರೆ. |
| 3. | ಇಳಿಜಾರಾದ ಮಾಡು | ಸುಟ್ಟಮಣ್ಣಿನ ಹೆಂಚು, ಸ್ಲೇಟು, ಸತು, ಸೀಸ, ತಾಮ್ರ | ತೊಡರಿಕೊಳ್ಳುವ ಮಣ್ಣಿನ ಹಂಚು, ಗಾಜಿನ ಹಂಚು, ಸಿಮೆಂಟ್–ಕಲ್ನಾರಿನ ಹಂಚು, ಸ್ಲೇಟ್, ಹಲಗೆ, ಪೂರ್ವನಿರ್ಮಿತ ಕಾಂಕ್ರೀಟ್, ಅಂಗಗಳು, ಅಲ್ಯೂಮಿನಿಯಂ ಮಿಶ್ರಲೋಹ. |
| 4. | ಚಪ್ಪಟೆಯಾದ ಮಾಡು | ಮರದ ಚೌಕಟ್ಟು | ಉಕ್ಕಿನ ಗರ್ಡರಿನ ಮೇಲೆ ಪ್ರಬಲಿತಕಾಂಕ್ರೀಟಿನ ಚಪ್ಪಡಿ. ಸ್ವಸ್ಥಾನ ಪ್ರಬಲಿತ ಕಾಂಕ್ರೀಟಿನ ಜಂತೆ, ಚಪ್ಪಡಿ, ಸ್ವಸ್ಥಾನ ಕಾಂಕ್ರೀಟಿನ ತೊಲೆ, ಸಿಮೆಂಟ್, ಕಲಾರಿನ ಅಟ್ಟ, ಒತ್ತಿದ ಉಕ್ಕು ಮತ್ತು ಅಲ್ಯೂಮಿನಿಯಂ ಮಿಶ್ರಲೋಹದ ಅಡ್ಡ. |
| 5. | ಒಳಗಡೆ ಪೀಠ, ಸಲಕರಣೆಗಳು | ಮರ, ಅಮೃತಶಿಲೆ ನಯಮಾಡಿದ ಕಲ್ಲು | ಪ್ಲಾಸ್ಟಿಕ್ ಹಲಗೆಗಳು, ಹಾರ್ಡ್‌ಬೋರ್ಡ್, ಚಿಪ್‌ಬೋರ್ಡ್ ಪ್ಲೈವುಡ್, ಅಲ್ಯೂಮಿನಿಯಂ ಮಿಶ್ರಲೋಹ, ಉಕ್ಕು |
| 6. | ಗೋಡೆ, ಒಳಮಾಳಿಗೆಯ ಅಂಚು | ನಯಗಾರೆ ಗಾಜಿನ ಹಂಚು, ಮರದ ಹಲಗೆ | ನಾರಿನ ಹಲಗೆ, ಹಾರ್ಡ್‌ಬೋರ್ಡ್, ಸಿಮೆಂಟ್–ಕಲ್ನಾರಿನ ಪ್ಲಾಸ್ಟಿಕ್ಕಿನ ಹಲಗೆ, ಚಿಪ್‌ಬೋರ್ಡ್. |
| 7. | ಜಂತೆಗಳ ಮೇಲಿನ ನೆಲ | ಮರದ ಹಲಗೆ | ಪ್ಲೈಮರ, ಪ್ಲಾಸ್ಟಿಕ್ಕಿನ ಹಲಗೆ, ಚಿಪ್‌ಬೋರ್ಡ್, ಆಸ್ಫಾಲ್ಟ್. |
| 8. | ಮನೆಯ ನೆಲ | ಕಲ್ಲಿನ ಚಪ್ಪಡಿ, ಸುಟ್ಟಮಣ್ಣಿನ ಹಂಚು | ಗ್ರ್ಯಾನೋಲಿಥಿಕ್ ಕಾಂಕ್ರೀಟ್, ಚದರಬಿಲ್ಲೆ, ಆಸ್ಫಾಲ್ಟ್, ಸಿಮೆಂಟ್–ಬಿಟ್ಯುಮೆನ್. |
| 9. | ಬಾಗಿಲು, ಕಿಟಕಿ | ಮರದ ಚೌಕಟ್ಟು ಪುಟೀಪು | ಚಿಪ್‌ಬೋರ್ಡ್, ಹಾರ್ಡ್‌ಬೋರ್ಡ್, ಪದರ ಹಲಗೆ, ಟೊಳ್ಳಾದ ಪ್ಲಾಸ್ಟಿಕ್ ಪುಟೀಪು, ಲೋಹಮುಖದ ಪದರ ಹಲಗೆ ಪುಟೀಪು. |
| 10. | ಬಾಗಿಲಿನ ಹಿಡಿ | ಕಬ್ಬಿಣ, ಹಿತ್ತಾಳೆ, ಕಂಚು | ಪ್ಲಾಸ್ಟಿಕ್ಕುಗಳು, ಅಲ್ಯೂಮಿನಿಯಂ ಮಿಶ್ರಲೋಹ |
| 11. | ಅಂಚುಕಟ್ಟು | ಮರ | ಲೋಹ, ಉಕ್ಕು ಮತ್ತು ಅಲ್ಯೂಮಿನಿಯಂ ಮಿಶ್ರಲೋಹ |
| 12. | ವಾಷ್‌ಬೇಸಿನ್ | ಪೋರ್ಸ್‌ಲೇನ್ | ಎನಾಮಲ್ ಮಾಡಿದ ಉಕ್ಕು, ತುಕ್ಕು ಹಿಡಿಯದ ಉಕ್ಕು, ಪ್ಲಾಸ್ಟಿಕ್. |
| 13. | ಬೆಳಕಿಗಾಗಿ ಕಿಟಕಿ | ಗಾಜಿನ ತಗಡು | ಅಲ್ಯೂಮಿನಿಯಮ್ಮಿನ ಮಿಶ್ರಲೋಹ, ಚಪ್ಪಟೆ ಮತ್ತು ಉಬ್ಬುತಗ್ಗುಳ್ಳ ಪ್ಲಾಸ್ಟಿಕ್ ಹಲಗೆ. |
| 14. | ಬಣ್ಣ ಅಲಂಕಾರ | ಸುಣ್ಣ, ಎಣ್ಣೆಯ ಬಣ್ಣಗಳು | ಬಣ್ಣದ ಸಿಮೆಂಟ್, ಬಿಟ್ಯುಮೆನ್, ಬಾಯಿಲ್ ಬೌಂಡ್ ಡಿಸ್‌ಟೆಂಪರ್, ಸೆಲ್ಯುಲೋಸ್ ಬಣ್ಣ, ಉಕ್ಕಿಗೆ ತುಕ್ಕು ಹಿಡಿಯದ ಹಾಗೆ ಮಾಡುವ ಕ್ರಮಗಳು. |
| 15. | ಮಳೆ ನೀರಿನ ದೋಣಿ, ಸ್ಯಾನಿಟರಿ ಕೊಳವಿಗಳು | ತಾಂಡವಾಳ, ಸತು, ಸೀಸ | ಸಿಮೆಂಟ್ ಕಲಾರಿನ ಕೊಳವಿಗಳು, ಚರಂಡಿಗಳು ಅಲ್ಯೂಮಿನಿಯಂ ಮಿಶ್ರ ಲೋಹದ ಚರಂಡಿಗಳು. |
| 16. | ವಿದ್ಯುತ್ತಿನ ಅವಾಹಕಗಳು | ಮರದ ಹಲಗೆಗಳು, ಸುಣ್ಣದ ನಯಗಾರೆ | ನಾರಿನ ಅವಾಹಕ ಹಲಗೆ, ಬೆಂಡಿನ ಹಲಗೆ, ಗೂಡುಗೂಡಾದ ಕಿಟ್ಟ, ಪ್ಯೂಮಿಸ್ ಕಾಂಕ್ರೀಟ್, ಹಗುರವಾದ ಕಾಂಕ್ರೀಟಿನ ಚಪ್ಪಡಿಗಳು, ದಿಮ್ಮಿಗಳು, ಗಾಜಿನ ರೇಷ್ಮೆ, ಚಿಪ್‌ಬೋರ್ಡ್. |

ತೆಳುವಾದ 0.71ಮಿಮೀ ಗಟ್ಟಿಮರದ ಪದರಗಳನ್ನು ರಾಸಾಯನಿಕ ಅಂಟಿನಿಂದ ಜೋಡಿಸಿ ನೂರಾರು ಟನ್ನುಗಳ ಒತ್ತಡದಲ್ಲಿ ಅಂಟು ಕರಗಿ ನೀರಾಗುವ ಕಾವಿನಲ್ಲಿ ತಯಾರಿಸಿದರೆ ಅದರ ತೂಕ ಸಲೆ ಮೀ ಗೆ 33.10 ಕಿಗ್ರಾಂ ವರೆಗೂ ಏರುತ್ತದೆ. ಬೀಚ್ ಮರದ ತೂಕ ಸಲೆ 21.21 ಕಿಗ್ರಾಂ ಫಾರ್ಮ್‌ಲಿಗ್ನಮ್ ಎಂಬ ಪದರದ ಹಲಗೆಯ ಬಿಗುವಿನ ಸಾಮರ್ಥ್ಯ ಚದರ ಅಂಗುಲಕ್ಕೆ 20320 ಮೆಟ್ರಿಕ್ ಟನ್. ಇದನ್ನು ವಿಮಾನದ ತಿರುಪಿನ ಚಾಲಕಗಳಲ್ಲಿ ಉಪಯೋಗಿಸುತ್ತಾರೆ.

ಕಾಯಿಸಿದ ಗಟ್ಟಿಯಾದ ಯೂರಿಯದ ದ್ರಾವಣದಲ್ಲಿ ತೋಯಿಸಿದ ಸಾಧಾರಣ ಮರವನ್ನು ಯೂರಲ್ಲಾಯ್ ಎನ್ನುತ್ತಾರೆ. ತೋಯಿಸಿದ ಕೂಡಲೆ ಈ ಮರವನ್ನು ಯಾವ ಆಕಾರಕ್ಕೆ ಬೇಕಾದರೂ ತಿರುಗಿಸಬಹುದು. ಗಟ್ಟಿಯಾದ ಮೇಲೆ ಇದು ಆಯಾ ಆಕಾರವನ್ನು ಉಳಿಸಿಕೊಳ್ಳುತ್ತದೆ. ಈ ಕ್ರಮದಲ್ಲಿ ಒಂದು ಹೊಸ ರೀತಿಯ ಸಾಮಗ್ರಿಯೇ ಉತ್ಪತ್ತಿಯಾಗುತ್ತದೆ.

**ಕಟ್ಟಡದ ಹಲಗೆಗಳು :** ಗೋಡೆಗಳು, ತಡಿಕೆಗಳು ಮತ್ತು ಒಳಮಾಳಿಗೆಗಳಿಗೆ ಹಗುರವಾಗಿರುವುದರಿಂದ ಎತ್ತಿ ಇಡುವುದು ಸುಲಭ, ಕೆಲವು ಹಲಗೆಗಳು ಉಷ್ಣವನ್ನೂ ಧ್ವನಿಯನ್ನೂ ತಡೆಯುತ್ತವೆ. ಮುಖ್ಯವಾದ ನಮೂನೆಗಳನ್ನು ಪುಟ 575ರಲ್ಲಿ ಕೊಟ್ಟಿದೆ.

A ಅವಾಹಕ ಹಲಗೆಗಳು ಧ್ವನಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬಿಡದ ಹಾಗೆ ತಡೆಯುತ್ತವೆ. ಇವನ್ನು ಗೋಡೆ ಮತ್ತು ಒಳಮಾಳಿಗೆಯಲ್ಲಿ ಉಪಯೋಗಿಸುತ್ತಾರೆ. ಬಿಟ್ಯುಮಿನ್‌ಪೂರಿತ ಹಲಗೆಗಳು ತೇವವನ್ನು ಒಳಗೆ ಬಿಡುವುದಿಲ್ಲ. ಪದರದ ಹಲಗೆಗಳನ್ನು ಪುಟೀಪುಗಳು, ತಡಿಕೆ ಮತ್ತು ಕೆಳಗೋಡೆಗಳಲ್ಲಿ ಬಳಸುತ್ತಾರೆ. ಗಟ್ಟಿಯಾದ ಹಲಗೆಗಳಿಂದ ಬೀರುಗಳು ಮತ್ತು ಅಂಗಡಿಯ ಬಾಗಿಲುಗಳನ್ನು ಮಾಡುತ್ತಾರೆ. ಬಹಳ ಗಟ್ಟಿಯಾದವನ್ನು ನೆಲಕ್ಕೆ ಹಾಸುತ್ತಾರೆ.

**ಪರ್ಯಾಯ (ಆಲ್ಟರ್ನೇಟಿವ್) ಮತ್ತು ಬದಲಿ (ಸಬ್‌ಸ್ಟಿಟ್ಯೂಟ್) ಸಾಮಗ್ರಿಗಳು :** ಭಾರತದಲ್ಲಿ ಎರಡನೆಯ ಮಹಾಯುದ್ಧದ ಕಾಲದಿಂದಲೂ ಕಟ್ಟಡದ ಸಾಮಗ್ರಿಗಳಿಗೆ ತೊಂದರೆಯಾಗಿದೆ. ಆಳುಗಳು ಸಿಕ್ಕುವುದಿಲ್ಲ. ಪದಾರ್ಥಗಳ ಬೆಲೆ ಮಿತಿಮೀರಿದೆ. ಅದಕ್ಕಾಗಿ ಸಾಕಷ್ಟು ಸಿಕ್ಕದೆ ಇರುವ ಆವಶ್ಯವಾದ ಸಾಮಗ್ರಿಗಳಿಗೆ ಬದಲಾಗಿ ಸಂಶೋಧನಾಲಯದಲ್ಲಿ ಬೇರೆ ಸಾಮಗ್ರಿಗಳ ನಿರ್ಮಾಣವಾಗಿ ಅವು ಮಾರುಕಟ್ಟೆಗೆ ಬಂದಿವೆ. ಇದರಿಂದ ಕಟ್ಟಡದ ಕೈಗಾರಿಕೆಗೆ ತುಂಬ ಸಹಾಯವಾಗಿದೆ. ಆದರೆ ಈ ಮಾನವನಿರ್ಮಿತ ಸಾಮಗ್ರಿಗಳ ಮಿತಿಯನ್ನು ಹುಷಾರಾಗಿ ತಿಳಿದು ಉಪಯೋಗಿಸಬೇಕು. ಮರ, ಕಲ್ಲು, ಇವುಗಳ ಹಾಗೆ ಈ ಸಾಮಗ್ರಿಗಳ ಉಪಯೋಗ ಸಾರ್ವತ್ರಿಕವಲ್ಲ, ಒಂದು ಉದ್ದೇಶಕ್ಕಾಗಿ ತಯಾರಾದ ಸಾಮಗ್ರಿಯನ್ನು ಇನ್ನೊಂದಕ್ಕೆ ಉಪಯೋಗಿಸಲಾಗುವುದಿಲ್ಲ. (ಎಚ್.ಸಿ.ಕೆ., ಎಂ.ಜಿ.ಎಸ್.)

**ಕಟ್ಟಡ ರಕ್ಷಣೆ :** ಕಟ್ಟಡಗಳಿಗೆ ಅಪಾಯಕಾರಿಗಳಾದ ನೈಸರ್ಗಿಕ ಕಾರಣಗಳು ಪ್ರಧಾನವಾಗಿ ನಾಲ್ಕು-ಬೆಂಕಿ, ನೀರು. ಸಿಡಿಲು, ಭೂಕಂಪನ, ಆದ್ದರಿಂದ ಕಟ್ಟಡದ ನಿವೇಶನದ ಆಯ್ಕೆ, ಅಲೇಖ್ಯದ ತಯಾರಿ, ಕಟ್ಟಲು ಬಳಸುವ ವಸ್ತುಗಳ ಸಂಗ್ರಹ, ಕಟ್ಟಿದ ತರುವಾಯ ಕಟ್ಟಡದ ವಿದ್ಯುದೀಕರಣ, ಅಲಂಕರಣ ಮುಂತಾದ ಸಮಸ್ತ ಕ್ರಿಯೆಗಳಲ್ಲೂ ಈ ಅಪಾಯಕಾರಕಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಯೋಗ್ಯ ನಿವಾರಣೋಪಾಯಗಳನ್ನು ಅಳವಡಿಸಿಕೊಳ್ಳುವುದು ಕಟ್ಟಡರಚನೆಯ ಒಂದು ಪ್ರಮುಖ ಆವಶ್ಯಕತೆ.

**ಬೆಂಕಿಯಿಂದ ರಕ್ಷಣೆ :** ಇದರಲ್ಲಿ ಎರಡು ಹಂತಗಳಿವೆ-ವಸ್ತುಗಳ ಆಯ್ಕೆ ಮತ್ತು ಜೋಡಣೆಗಳಲ್ಲಿ ಬೆಂಕಿಯಿಂದ ತಟ್ಟಬಹುದಾದ ಅಪಾಯವನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸುವುದು; ಬೆಂಕಿ ಬಿದ್ದಾಗ ಅದರ ವ್ಯಾಪ್ತಿ ಏರದಂತೆ, ಅಪಾಯ ಹೆಚ್ಚಾಗದಂತೆ ಎಚ್ಚರ ವಹಿಸುವುದು.

ಮರಮುಟ್ಟುಗಳ ಬಳಕೆಯನ್ನು ಕನಿಷ್ಠ ಮಿತಿಯಲ್ಲಿಡಬೇಕು. ಇಲ್ಲಿಯೂ ಉರಿಯನ್ನು ತಡೆಯುವ ದ್ರಾವಕಗಳಿಂದ ಅವನ್ನು ಸಂಸ್ಕರಿಸುವುದು ಲೇಸು, ಸಿನಿಮಾ, ನಾಟಕಮಂದಿರಗಳು ಮುಂತಾದ ಸಾರ್ವಜನಿಕ ಕಟ್ಟಡಗಳಲ್ಲಿ ಪೀಠೋಪಕರಣಗಳು, ಪರದೆಗಳು, ಒಳಮಾಡಿಗೆ ಬಳಸುವ ಹಲಗೆಗಳು ಮುಂತಾದುವೆಲ್ಲವನ್ನೂ ಇದೇ ಬಗೆಯ ಸಂಸ್ಕರಣಕ್ಕೆ ಒಳಪಡಿಸಬೇಕು. ಅನೇಕ ದೇಶಗಳಲ್ಲಿ ಕಾಯಿದೆಯ ಮೂಲಕ ಇದನ್ನು ನಿಗದಿಮಾಡಿರುವುದುಂಟು.

ಉದಾಹರಣೆಗಾಗಿ ಲಂಡನ್ ಕೌಂಟಿ ಸಭೆಯ ನಿಯಮಾವಳಿಗಳಲ್ಲಿ ಮರ, ಕ್ಯಾನ್ವಾಸ, ಹತ್ತಿಯ ಬಟ್ಟೆಗಳು ಮುಂತಾದುವನ್ನು ಕೆಲವು ದ್ರಾವಕಗಳಲ್ಲಿ ಅದ್ದಿ, ಬೆಂಕಿಬಿದ್ದಾಗ ಉರಿಯದಂತೆ ಮಾಡಬೇಕೆಂಬ ನಿಯಮವಿದೆ. ಆದರೆ ಮರಕ್ಕೆ ಬೆಂಕಿ ತಗಲಿದರೆ ಸುಡದ ಹಾಗೆ ಮಾಡುವುದು ಕಷ್ಟವಾದ್ದರಿಂದ, ಅದಕ್ಕೆ ಬದಲಾಗಿ ಬೆಂಕಿಬಿದ್ದರೆ ಉರಿಯದ ಕಲ್ನಾರಿನಂಥ ಪದಾರ್ಥಗಳನ್ನೇ ಬಳಸಬೇಕೆಂಬ ಶಾಸನ ಮಾಡಿದ್ದಾರೆ (1928). ಈಗ ನೆಲಗಳು, ಮಾಡುಗಳು ಇವನ್ನು ಬೆಂಕಿಯನ್ನು ತಡೆಯುವ ಸಾಮಗ್ರಿಗಳಿಂದಲೇ ತಯಾರಿಸಬೇಕು. ಮೆತುವಾದ ಮರವನ್ನು ಉಪಯೋಗಿಸಕೂಡದು. ಬೆಂಕಿಯ ಒಲೆಯನ್ನು ಬಳಸಬಾರದು. ಉರಿಯ ಮೇಲೆ ಕಾಣುವ ಯಾವ ಕಾಸುವ ಏರ್ಪಾಡನ್ನೂ ನಾಟಕರಂಗದ ಮೇಲೆ ಇಡಬಾರದು. ಎಣ್ಣೆ, ಹತ್ತಿ, ಕಾಗದ, ಸೆಣಬು, ಮರದ ಹಲಗೆಗಳು ಮುಂತಾದುವುಗಳ ಕಾರ್ಖಾನೆಗಳು, ದಾಸ್ತಾನುಮಳಿಗೆಗಳು ಇತ್ಯಾದಿಗಳಲ್ಲಿ ನಿರಂತರ ಜಾಗರೂಕತೆಯೊಂದೇ ಬೆಂಕಿಯಿಂದ ರಕ್ಷಣೆ ಒದಗಿಸುವ ಮಾರ್ಗ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 3 ಪಾಲು ಅಮೋನಿಯಂ ಫಾಸ್ಫೇಟ್, 2 ಪಾಲು ಅಮೋನಿಯಂ ನೈಟ್ರೇಟ್ ಮತ್ತು 1 ಪಾಲು ಅಮೋನಿಯಂ ಸಲ್ಫೇಟ್ ಇವುಗಳ ಮಿಶ್ರಣವನ್ನು 40 ಪಾಲು ನೀರಿನಲ್ಲಿ ಕರಗಿಸಿ ಹತ್ತಿಯ ಬಟ್ಟೆಗಳನ್ನು ಅದರಲ್ಲಿ ಅದ್ದಿ ಅವಕ್ಕೆ ಬೆಂಕಿ ತಗಲದ ಹಾಗೆ ಮಾಡುತ್ತಾರೆ. ಮುಚ್ಚಿದ ಉರುಳೆಗಳಲ್ಲಿ ಮರವನ್ನು ಇಟ್ಟು ಕೃತಕವಾಗಿ ಒತ್ತಡವನ್ನು ಪ್ರಯೋಗಿಸಿ, ಬೆಂಕಿಯನ್ನು ತಡೆಯುವ ರಾಸಾಯನಿಕಗಳು ಅದರೊಳಕ್ಕೆ ತೂರುವಂತೆ ಮಾಡುತ್ತಾರೆ. ಇಂಥ ಮರವನ್ನು ಬೆಂಕಿ ತಗಲದ ಮರವೆನ್ನುತ್ತಾರೆ. ನ್ಯೂಯಾರ್ಕ್ ನಗರದ ಕಟ್ಟಡಗಳ ಕಾನೂನಿನಲ್ಲಿ ಒಂದು ಕಟ್ಟಡ 150' ಗಿಂತ ಎತ್ತರವಾಗಿದ್ದರೆ ಹೀಗೆ ಸಂಸ್ಕರಿಸಿದ ಮರವನ್ನು ಮಾತ್ರ ಉಪಯೋಗಿಸಬೇಕೆಂಬ ನಿಯಮವಿದೆ.

ಪ್ರಪಂಚದಲ್ಲಿ ಸಂಭವಿಸುವ ವಾರ್ಷಿಕ ದುರ್ಮರಣಗಳು ಮತ್ತು ಸಂಪತ್ತಿನ ನಾಶ-ಇವುಗಳ ಕಾರಕಗಳಲ್ಲಿ ಮೊದಲ ಸ್ಥಾನ ಬೆಂಕಿಗೇ ಮೀಸಲು. ಆದ್ದರಿಂದ ಬೆಂಕಿಯ ಆಕಸ್ಮಿಕಗಳಿಂದ ಜನ ಹಾಗೂ ಸಂಪತ್ತಿನ ರಕ್ಷಣೆ ಎಲ್ಲ ನಾಗರಿಕ ಸರ್ಕಾರಗಳ ಮತ್ತು ಜನರ ಪ್ರಧಾನ ಹೊಣೆ. ದೊಡ್ಡ ನಗರಗಳಲ್ಲಿ ಒಂದೊಂದು ಸಾರಿ ಬೆಂಕಿ ಬಿದ್ದಾಗಲೂ ಬಂಡವಾಳ ಬಹುಪಾಲು ನಷ್ಟವಾಗುತ್ತದೆ. ಆಸ್ತಿಗಳನ್ನು ವಿಮೆ ಮಾಡುವ ಪದ್ಧತಿಯಿಂದ ಈ ನಷ್ಟ ಬಹು ಜನರಲ್ಲಿ ಹಂಚಿಹೋಗುತ್ತದೆ, ನಿಜ, ಆದರೆ ನಷ್ಟಗೊಂಡ ಸಂಪತ್ತನ್ನೂ ಮರಣಗೊಂಡ ಜನರನ್ನೂ ಹಿಂದೆ ಪಡೆಯಲಾಗುವುದಿಲ್ಲವಷ್ಟೆ. ಬೆಂಕಿಯನ್ನು ತಡೆಯಬಲ್ಲ ಸಾಮಗ್ರಿಗಳಿಂದ ಕಟ್ಟಡಗಳನ್ನು ಕಟ್ಟಿ ಒಂದು ವೇಳೆ ಬೆಂಕಿದಿದ್ದರೂ ಅದು ಹರಡದ ಹಾಗೆ ಮಾಡಲು ಒಂದು ಕಟ್ಟಡವನ್ನು ಇನ್ನೊಂದರಿಂದ ಪ್ರತ್ಯೇಕಿಸಬೇಕು. ಬೆಂಕಿಬಿದ್ದರೆ ಸುಡಬಹುದಾದ ಸಾಮಾನುಗಳನ್ನು ತುಂಬಿರುವ ಅಥವಾ ಅಪಾಯವೊದಗಬಹುದಾದ ಕೈಗಾರಿಕೆಗಳಿರುವ ದೊಡ್ಡ ಕಟ್ಟಡಗಳಲ್ಲಿ ಗೊಡೆಗಳು, ಮಾಡುಗಳು, ನೆಲಗಳು ಮತ್ತು ತೊಲೆಗಳು ಬೆಂಕಿಯನ್ನು ಎದುರಿಸುವ ಹಾಗಿರಬೇಕು. ಒಂದು ವೇಳೆ ಬೆಂಕಿ ತಗಲಿದರೆ ಅದು ಹರಡಬಹುದಾದ ಮಹಡಿಯ ಮೆಟ್ಟಲುಗಳು ಮತ್ತು ಸಾಮಾನುಗಳನ್ನು ಎತ್ತುವ ಯಂತ್ರಗಳು ಅಪಾಯವನ್ನು ಹರಡುತ್ತವೆ. ಒಂದು ಕಟ್ಟಡವನ್ನು ನಾವು ಯಾವುದಕ್ಕಾಗಿ ಬಳಸುತ್ತೇವೆಯೋ ಅದರಲ್ಲಿಯೇ ಬೆಂಕಿಯನ್ನು ಉತ್ಪತ್ತಿಮಾಡಬಹುದಾದ ಕಾರಣಗಳಿರುತ್ತವೆ. ಉದಾಹರಣೆಗೆ ಯಂತ್ರಗಳ ತಿಕ್ಕಾಟ, ಬೆಂಕಿ ಹೊತ್ತಬಹುದಾದ ಧೂಮಗಳು, ದ್ರವೀಕರಿಸಿದ ಮತ್ತು ಪುಡಿಮಾಡಿದ ಇಂಧನಗಳೂ, ಸ್ಥಾಯೀ ವಿದ್ಯುಚ್ಛಕ್ತಿ (ಸ್ಟ್ಯಾಟಿಕ್ ಎಲೆಕ್ಟ್ರಿಸಿಟಿ)-ಇವು ಇರುವಲ್ಲಿ ಬೆಂಕಿ ಹೊತ್ತುವ ಸಂಭವ ಇದ್ದೇ ಇರುತ್ತದೆ.

ಬೆಂಕಿಯಲ್ಲಿ ಉರಿಯಬಹುದಾದ ಸಾಮಗ್ರಿಯನ್ನು ಒಂದೇ ಕಡೆ ಕೂಡಿಟ್ಟರೆ ಒಂದು ಸಾರಿ ಬೆಂಕಿ ತಗಲಿದರೆ, ಎಲ್ಲವೂ ಸೂರೆ ಹೋಗಬಹುದು. ಅದಕ್ಕಾಗಿ ಬೆಲೆಬಾಳುವ ಸಾಮಗ್ರಿಗಳನ್ನು ಒಂದು ವೇಳೆ ಬೆಂಕಿ ತಗಲಿದರೂ, ಆಗುವ ನಷ್ಟ ಬಹಳ ಹೆಚ್ಚಾಗದಂತೆ ರಾಶಿಗಳಾಗಿ ಬೇರ್ಪಡಿಸಿ ಕೂಡಿಡುವುದು ಉತ್ತಮ. ಇದೇ ಕಾರಣಕ್ಕಾಗಿ ಸಾಮಾನುದಾಸ್ತಾನು ಮಳಿಗೆಗಳಲ್ಲಿ ಬೆಂಕಿಯನ್ನು ಆರಿಸುವ ಅನುಕೂಲತೆಗಳಿದ್ದರೂ ಅವನ್ನು ಬಹಳ ದೊಡ್ಡದಾಗಿ ಮಾಡಬಾರದು. ಎಲ್ಲಕ್ಕಿಂತಲೂ ಹೆಚ್ಚಾಗಿ, ಒಂದು ಉಗ್ರಾಣಕ್ಕೆ ಬೆಂಕಿ ತಗಲಿದರೆ ಅದರಲ್ಲಿ ಇರುವ ಜನ ಬೇಗ ಹೊರಗೆ ಹೋಗುವಂತೆ ಮಾರ್ಗಗಳಿರುವುದು ಅವಶ್ಯಕ. ಒಂದೊಂದು ಕಾರ್ಖಾನೆಯಲ್ಲಿಯೂ ಕೊನೆಯ ಪಕ್ಷ ಎರಡು ಪ್ರತ್ಯೇಕ ನಿರ್ಗಮನದ್ವಾರಗಳಿಂದ ಜನರು ಹೊರಗೆ ಹೋಗುವ ವ್ಯವಸ್ಥೆ ಇರಬೇಕು. **(ನೋಡಿ-ಅಗ್ನ್ಯಬಾಧಿತ-ಕಟ್ಟಡ)**. ಪ್ರತ್ಯೇಕವಾದ ಜಾಗಗಳಿಂದ ಒಳಗಿದ್ದ ಜನ ಹೊರಗೆ ಹೋಗುವ ಹಾಗಿರಬೇಕು. ಬೆಂಕಿಯನ್ನು ಆರಿಸುವ ವಿಧಾನಗಳಿಗೆ **(ನೋಡಿ-ಅಗ್ನಿಶಾಮಕದಳ)** (ಎಚ್.ಸಿ.ಕೆ.)

**ನೀರಿನಿಂದ ರಕ್ಷಣೆ :** ಮಳೆಗಾಲದಲ್ಲಿ ಇರಿಸಲಿನ ಹೊಡೆತದಿಂದ, ಅಡಿಪಾಯದ ಸುತ್ತಲೂ ನಿಂತ ನೀರಿನಿಂದ, ತೋಡು ಹೊಳೆ ನದಿಗಳ ಪ್ರವಾಹ ಉಕ್ಕಿಬರುವುದರಿಂದ ಕಟ್ಟಡಗಳಿಗೆ ಅಪಾಯ ಉಂಟು. ಸಿಮೆಂಟ್-ಕಾಂಕ್ರೀಟ್ ರಚನೆಗಳಲ್ಲಿ ಇರಿಸಲಿನಿಂದ ಕಟ್ಟಡದ ಗೋಡೆಗಳಿಗೆ ಆಗುವ ಹಾನಿ ಪ್ರಾಯಶಃ ಏನೂ ಇಲ್ಲ. ಆದರೆ ಇದರಿಂದ ಕಟ್ಟಡದ ಒಳಗೆ ತೇವ ವ್ಯಾಪಿಸಿ ಅಲ್ಲಿನ ಸಾಮಗ್ರಿಗಳಿಗೆ ನಷ್ಟ ಉಂಟಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಉದಾಹರಣೆಗೆ ಆಹಾರದ ಪದಾರ್ಥಗಳು, ಕಾಗದ, ಬಟ್ಟೆ ಮುಂತಾದವುಗಳ ಉಗ್ರಾಣಗಳಲ್ಲಿ ಇಂಥ ರಕ್ಷಣೆ ತೀರ ಅವಶ್ಯ. ಕಟ್ಟಡದ ಹೊರವಲಯದ ಭೂಮಿಯ ಮೇಲೆ ನೀರು ನಿಂತರೆ ಅಡಿಪಾಯಕ್ಕೆ ಅಪಾಯವಾಗುವುದುಂಟು. ಆ ಭಾಗವನ್ನೆಲ್ಲ ಹೊರಕ್ಕೆ ಇಳಿಜಾರಾಗಿರುವಂತೆ ಕಾಂಕ್ರೀಟಿನಿಂದ ಮುಚ್ಚಿ ಅಥವಾ ಬೇಕಾದಂತೆ ಚರಂಡಿಗಳನ್ನು ತೋಡಿ ನೀರು ನಿಲ್ಲದಂತೆ ಮಾಡಬೇಕು.

ಜಲಪ್ರವಾಹದಿಂದ ಒದಗುವ ಅಪಾಯ ಗುರುತರವಾದದ್ದು. ಬ್ರಹ್ಮಪುತ್ರಾ, ಗೋದಾವರಿ, ಕೋಸಿ ಮುಂತಾದ ನದಿಗಳು ತುಂಬುನೆರೆಯಿಂದ ಪ್ರವಹಿಸುವಾಗ ಅವುಗಳ ದಂಡೆಗಳಲ್ಲಿರುವ ನಗರಗಳಿಗೆ ತೀವ್ರ ಹಾನಿ ಆಗುವುದು ನಮ್ಮ ದೇಶದಲ್ಲಿನ ವಾರ್ಷಿಕ ಅನುಭವ. ನಗರದ ನಿವೇಶನಗಳನ್ನು ದೂರದ ಎತ್ತರ ಪ್ರದೇಶಗಳಿಗೆ ವರ್ಗಾಯಿಸುವುದು ಒಂದು ರಕ್ಷಣೋಪಾಯ, ಹಲವಾರು ಶತಕಗಳಿಂದ ವಿಕಸಿಸಿ ಬೆಳೆದುಬಂದಿರುವ ಈ ನಗರಗಳ ಬುಡ ಕೀಳುವುದು ಅಷ್ಟೇನು ಸುಲಭ ವಿಧಾನವಲ್ಲ. ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿ ನೀರಿನ ಸ್ವಚ್ಛಂದ ಹರಿವನ್ನು ಅಂಕೆಗೆ ತಂದು ನೆರೆಯ ಹಾವಳಿಯನ್ನು ನಿಯಂತ್ರಿಸುವುದು ಎರಡನೆಯ ರಕ್ಷಣೋಪಾಯ. ಸ್ವಾತಂತ್ರ್ಯಾನಂತರ ಭಾರತದಲ್ಲಿ ತ್ವರಿತಗತಿಯಿಂದ ಅಧಿಕ ಸಂಖ್ಯೆಯಲ್ಲಿ ಕಟ್ಟಿರುವ, ಕಟ್ಟಲಾಗುತ್ತಿರುವ ನೀರಾವರಿ ಯೋಜನೆಗಳ ಉದ್ದೇಶಗಳಲ್ಲಿ ನದೀ ದಂಡೆಗಳ ನಗರ ರಕ್ಷಣೆಯೂ ಒಂದು. ಮೂರನೆಯ ಒಂದು ರಕ್ಷಣೋಪಾಯವೂ ಇದೆ. ನದೀ ದಂಡೆಗಳ ಆಸುಪಾಸಿನಲ್ಲಿ ಕಟ್ಟುವ ಕಟ್ಟಡಗಳ ರಚನೆಯಲ್ಲಿಯೇ ಯೋಗ್ಯಮಾರ್ಪಾಡುಗಳನ್ನು ಮಾಡಬೇಕು. ತಳಪಾಯಗಳ ರಚನೆ, ಗೋಡೆಗಳ ವಿನ್ಯಾಸ, ನೆರೆನೀರು ಬಂದಾಗ ಹರಿದು ಹೋಗಲು ಕಟ್ಟಡ ಕಟ್ಟಡಗಳ ನಡುವೆ ನಾಲೆಗಳು ಮುಂತಾದ ವಿಶಿಷ್ಟ ವಿಧಾನಗಳಿಂದ ಸಮರ್ಪಕ ರಕ್ಷಣೆ ಒದಗಿಸಬಹುದು.

**ಸಿಡಿಲಿನಿಂದ ರಕ್ಷಣೆ :** ಗಗನಚುಂಬಿ ಸೌಧಗಳಿಗೆ, ವಿಶಾಲ ಪ್ರದೇಶಗಳಲ್ಲಿ ಒಂಟಿಯಾಗಿ ನಿಂತಿರುವ ಮನೆಗಳಿಗೆ, ವಿಶೇಷವಾಗಿ ಲೋಹಗಳ ಬಳಕೆಯಿಂದ ನಿರ್ಮಿಸಿದ ಕಟ್ಟಡಗಳಿಗೆ ಸಿಡಿಲಿನ ಹೊಡೆತ ತಾಗಿ ಅದರಿಂದ ಬೆಂಕಿಯ ಉತ್ಪಾದನೆಯಾಗುವುದು ವಿರಳವಲ್ಲ. ಇಂಥವುಗಳಿಗೆ ಸಿಡಿಲುಗ್ರಾಹಕಗಳನ್ನು ಅಳವಡಿಸಿ ಮಿಂಚಿನಲ್ಲಿ ಪ್ರವಹಿಸುವ ವಿದ್ಯುಚ್ಛಕ್ತಿಯನ್ನು ಅವುಗಳ ಮೂಲಕ ಭೂಮಿಗೆ ಒಯ್ದು ಕಟ್ಟಡಗಳನ್ನು ರಕ್ಷಿಸುತ್ತಾರೆ.

**ಭೂಕಂಪನದಿಂದ ರಕ್ಷಣೆ :** ನೈಸರ್ಗಿಕ ಭೂಕಂಪದ ಜೊತೆಗೆ ಕಾರ್ಖಾನೆಗಳಿಂದಲೂ ನೆಲದ ಅದಿರುವಿಕೆ ಆಗುತ್ತಿರುತ್ತದೆ. ಉದಾಹರಣೆಗೆ ರೈಲ್ವೆ ಹಳಿಯ ಸಮೀಪದ ಕಟ್ಟಡಗಳ ಅಡಿಪಾಯಗಳು ರೈಲುಬಂಡಿ ಸಾಗುವಾಗಲೆಲ್ಲ ಸಂಭವಿಸುವ ನೆಲದ ಅದಿರುವಿಕೆಯನ್ನು ಇದುರಿಸಿ ಕಟ್ಟಡಗಳಿಗೆ ರಕ್ಷಣೆ ಒದಗಿಸುವಂತಿರಬೇಕು. ಆಧುನಿಕ ಕಟ್ಟಡ ನಿರ್ಮಾಣತಂತ್ರ ಈ ಸಮಸ್ಯೆಯನ್ನು ಪರಿಶೀಲಿಸಿ ಧಕ್ಕಾನಿರೋಧಕ ರಚನೆಗಳನ್ನು ಅಳವಡಿಸುವುದರಲ್ಲಿ ಯಶಸ್ವಿಯಾಗಿದೆ. ಎಲ್ಲ ಮಹಾನಗರಗಳಲ್ಲಿಯೂ ಇಂಥ ಕಟ್ಟಡಗಳು ಈಗ ಸಾಮಾನ್ಯವಾಗಿವೆ.

ನೈಸರ್ಗಿಕ ಭೂಕಂಪನಗಳು ಸರ್ವಪ್ರದೇಶವ್ಯಾಪಿಗಳಲ್ಲ, ಸಾರ್ವಕಾಲಿಕ ಘಟನೆಗಳಲ್ಲ. ಆದರೂ ಅವು ಸಾಮಾನ್ಯವಾಗಿ ತಲೆದೋರುವ ಭೂಕಂಪನಪಟ್ಟಿಯ ಪ್ರದೇಶಗಳಲ್ಲಿ ವಿಶಿಷ್ಟ ಮಾದರಿಯ ನಿರ್ಮಾಣಗಳು ಅನಿವಾರ್ಯವಾಗಿವೆ. ಕಂಪನ ಎಷ್ಟೇ ತೀವ್ರವಾಗಿದ್ದರೂ ಕಟ್ಟಡ ಕುಸಿಯಬಾರದು. ಕುಸಿದಾಗಲೂ ಜನ, ಸಂಪತ್ತುಗಳಿಗೆ ಆಗುವ ನಷ್ಟ ಕನಿಷ್ಠವಾಗಿರಬೇಕು. ಕಟ್ಟಡಗಳು ಸುಲಭಸಾಧ್ಯವಾಗಿರಬೇಕು. ಇವೇ ಮುಂತಾದುವು ಇಂಥ ರಚನೆಗಳ ಹಿಂದೆ ಇರುವ ಮಾರ್ಗದರ್ಶೀ ಸೂತ್ರಗಳು, ಜಪಾನಿನಲ್ಲಿ ಮತ್ತು ಮಹಾರಾಷ್ಟ್ರದ ಕೊಯ್ನಾದಲ್ಲಿ ಇಂಥ ಭೂಕಂಪನ ಧಕ್ಕಾನಿರೋಧಕ ಕಟ್ಟಡಗಳನ್ನು ಕಾಣಬಹುದು.

**(ನೋಡಿ– ಭೂಕಂಪನ)** (ಎಂ.ಜಿ.ಎಸ್.)

**ಕಟ್ಟಡ ಶಾಸ್ತ್ರ :** ಸಂಸ್ಕೃತದಲ್ಲಿ ಕಟ್ಟಡಶಾಸ್ತ್ರವನ್ನು ವಾಸ್ತುಶಾಸ್ತ್ರವೆಂದು ಕರೆದಿದ್ದಾರೆ. ವಾಸ್ತು ಎಂದರೆ ವಾಸಿಸಲು ಮನೆಯನ್ನು ಕಟ್ಟಲು ಯೋಗ್ಯವಾದ ಭೂಮಿ, ಕಟ್ಟಬೇಕಾದ ಮನೆ ಎಂದು ಅರ್ಥ, ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸುವುದೇ ವಾಸ್ತು ಅಥವಾ ಕಟ್ಟಡಶಾಸ್ತ್ರ, ಇಲ್ಲಿ ನಿವೇಶನದ ಆಯ್ಕೆ, ಮನೆಯ ಉದ್ದಗಲ, ಎತ್ತರ ಮತ್ತು ವಿನ್ಯಾಸ, ನೋಡಬೇಕಾದ ತಿಥಿವಾರ ಇತ್ಯಾದಿಗಳು. ಉಪಯೋಗಿಸಬೇಕಾದ ಮರಮುಟ್ಟುಗಳು–ಈ ಎಲ್ಲ ವಿಷಯಗಳು ಬರುತ್ತವೆ.

ಭೃಗು, ಅತ್ರಿ, ವಸಿಷ್ಠ, ವಿಶ್ವಕರ್ಮ, ಯಮ, ನಾರದ, ನಗ್ನಜಿತ್, ವಿಶಾಲಾಕ್ಷ, ಪುರಂದರ, ಬ್ರಹ್ಮ, ಕುಮಾರ, ನಂದೀಶ, ಶೌನಕ, ಗರ್ಗ, ವಾಸುದೇವ, ಅನಿರುದ್ಧ, ಶುಕ್ರ, ಬೃಹಸ್ಪತಿ–ಈ ಹದಿನೆಂಟು ಮಂದಿ ವಾಸ್ತುಶಾಸ್ತ್ರದ ಉಪದೇಶಕರು. ಮತ್ಸ್ಯರೂಪಿಯಾದ ಭಗವಂತನಿಂದ ಮನವಿಗೆ ಇದು ಉಪದಿಷ್ಟವಾಗಿದೆ. ವಿಶ್ವಕರ್ಮ ಪ್ರಕಾಶದಲ್ಲಿರುವಂತೆ ಮೊಟ್ಟಮೊದಲು ಲೋಕಹಿತಕ್ಕಾಗಿ ಇದನ್ನು ತಿಳಿಸಿದವ ಶಂಭು. ಪುರಾತನವಾದ ಈ ಶಾಸ್ತ್ರವನ್ನು ಪರಾಶರ ಬೃಹದ್ರಥನಿಗೂ ಬೃಹದ್ರಥ ವಿಶ್ವಕರ್ಮನಿಗೂ ತಿಳಿಸುತ್ತಾನೆ. ವಿಶ್ವಕರ್ಮ ಈ ಶಾಸ್ತ್ರವನ್ನೇ ಲೋಕದಲ್ಲಿ ಪ್ರಚಾರ ಮಾಡಿರುತ್ತಾನೆ.

ಬಹಳ ಹಿಂದೆ, ತ್ರೇತಾಯುಗದಲ್ಲಿ, ದೊಡ್ಡ ಆಕಾರದ ಒಂದು ಭೂತ ತನ್ನ ಶರೀರದಿಂದ ಪ್ರಪಂಚವನ್ನೆಲ್ಲ ಆವರಿಸಿಕೊಂಡು ನಿದ್ರಿಸುತ್ತಿತ್ತು. ಇಂದ್ರನೇ ಮೊದಲಾದ ದೇವತೆಗಳು ಆ ಭಯಂಕರಾಕಾರದ ಭೂತವನ್ನು ನೋಡಿ ವಿಸ್ಮಿತರಾಗಿ ಭಯಪಟ್ಟು ಬ್ರಹ್ಮನ ಮರೆಹೊಕ್ಕು, ಭಯಂಕರ ರೂಪಿಯಾದ ಭೂತವೊಂದು ಮಲಗಿ ಪ್ರಪಂಚವನ್ನೆಲ್ಲ ಆವರಿಸಿಕೊಂಡಿದೆ, ನಾವು ಭೀತರಾಗಿದ್ದೇವೆ, ಈಗ ಎಲ್ಲಿಗೆ ಹೋಗುವುದು. ಏನು ಮಾಡುವುದು ಎಂಬ ಅರಿವಿಲ್ಲದೆ ನಿನ್ನಲ್ಲಿಗೆ ಬಂದಿದ್ದೇವೆ–ಎಂದು ವಿಷಯವನ್ನು ತಿಳಿಸಿ, ತಮ್ಮ ದುರಿತಗಳನ್ನು ನಿವಾರಿಸಿ ರಕ್ಷಿಸುವಂತೆ ಪ್ರಾರ್ಥಿಸಿದರು. ಆಗ ಬ್ರಹ್ಮ, ದೇವತೆಗಳಿಗೆ ಅಭಯ ಪ್ರದಾನಮಾಡಿ, ನೀವು ಹೆದರಬೇಡಿ, ಆ ಭೂತವನ್ನು ಕೆಳಮುಖ ಮಾಡಿ ತಳ್ಳಿ, ನಿಮಗೆ ಯಾವ ಭಯವೂ ಇರುವುದಿಲ್ಲ ಎಂದು ತಿಳಿಸುತ್ತಾನೆ. ಅದರಂತೆ, ದೇವತೆಗಳು ಆ ಭೂತವನ್ನು ಕೆಳಮೊಗನಾಗಿ ತಳ್ಳಿ ಹಿಂಸಿಸಿದರು. ಅವನೇ ಬ್ರಹ್ಮಕೃತ ವಾಸ್ತುಪುರುಷ. ಭಾದ್ರಪದ ಮಾಸದ ಕೃಷ್ಣಪಕ್ಷ ತೃತೀಯಾ ತಿಥಿ, ಕೃತ್ತಿಕಾ ನಕ್ಷತ್ರ, ವ್ಯತೀಪಾತ ಯೋಗ, ಭದ್ರಾಕರಣ ಶನಿವಾರ, ಗುಳಿಕ ಕಾಲದಲ್ಲಿ ವಾಸ್ತುಪುರುಷ ಬ್ರಹ್ಮನಲ್ಲಿಗೆ ಹೋಗಿ ಜಗತ್ಪ್ರಭುವೇ! ಚರಾಚರಾತ್ಮಕವಾದ ಸರ್ವವೂ ನಿನ್ನಿಂದ ಸೃಷ್ಟವಾಗಿದೆ. ಯಾವ ತಪ್ಪೂ ಇಲ್ಲದ ನನ್ನನ್ನು ವಿನಾಕಾರಣ ದೇವತೆಗಳು ಪೀಡಿಸುತ್ತಿದ್ದಾರೆ ಎನ್ನಲು ಪ್ರೀತನಾದ ಬ್ರಹ್ಮ ಅವನಿಗೆ ಗ್ರಾಮ, ನಗರ, ದುರ್ಗ, ಪ್ರಾಸಾದ, ಉದ್ಯಾನ, ಗೃಹ–ಈ ಸ್ಥಳಗಳಲ್ಲಿ ಯಾರು ನಿನ್ನನ್ನು ಪೂಜಿಸದೆ ಕಟ್ಟಡ ಮೊದಲಾದುವನ್ನು ನಿರ್ಮಿಸಲು ಪ್ರಾರಂಭಿಸುತ್ತಾರೋ ಅವರ ಸಂಪತ್ತು ನಾಶವಾಗುತ್ತದೆ, ವಿಘ್ನಪರಂಪರೆಗಳು ಬರುತ್ತವೆ, ಕಟ್ಟಡ ಕಟ್ಟುವವನಿಗೂ ಮೃತ್ಯು ಸಂಭವಿಸುತ್ತದೆ ಎಂದು ವರವನ್ನು ಕೊಟ್ಟು ಅಂತರ್ಧಾನನಾದ. ಅಂದಿನಿಂದ ಯಾವ ಕಟ್ಟಡವನ್ನು ಕಟ್ಟಿಸಲು ಪ್ರಾರಂಭಿಸಬೇಕಾದರೂ ಮೊದಲು ವಾಸ್ತುಪೂಜೆಯನ್ನು ಮಾಡುತ್ತಾರೆ. ಇಂದಿಗೂ ಇದು ಆಚರಣೆಯಲ್ಲಿದೆ.

ಇದಲ್ಲದೆ ಆದ್ಯ ಶಿಲಾಸ್ತಂಭ ವಿನ್ಯಾಸ ಸ್ಥಳವನ್ನು ಗೊತ್ತುಮಾಡುವಾಗ ತತ್ಕಾಲದಲ್ಲಿ ವಾಸ್ತುಪುರುಷನ ಸ್ಥಿತಿಯನ್ನು ಅರಿಯಬೇಕು. ಈ ವಾಸ್ತುವೇ ಚರವಾಸ್ತು. ಇದರ ವಿವರ ವಿದ್ಯಾಮಾಧವೀಯದಲ್ಲಿ ಹೀಗಿದೆ:

ಮಾರ್ತಾಂಡಾರೂಢ ರಾಶೌ ವಿನಿಹಿತಚರಣಸ್ತನ್ಮದನ್ಯಸ್ತ ಮೂರ್ಧಾ
ವಾಮೇ ಪಾರ್ಶ್ವೇ ಶಯಾನೋ ಭ್ರಮತಿ ಸ ಪರಿತಃ ಪೂರುಷೋ ವಾಸ್ತು ರೂಪಃ!
ಪಾದೇ ಯದ್ಯರ್ಥನಾಶಃ ಶಿರಸಿ ಚ ಮರಣಂ ತಸ್ಯ ಪೃಷ್ಠೇ ವಿಪತ್ತಿಃ
ವಕ್ಷಸ್ಯೂರೌ ಚ ನಾಶಶ್ಚು ಭಫಲಮುದರೇ ಸ್ತಂಭಮಾದ್ಯಂ ವಿದಧ್ಯತ್ ॥

ಕಟ್ಟಡವನ್ನು ಕಟ್ಟುವುದಕ್ಕೆ ಮೊದಲು ಸ್ಥಳವನ್ನು ಪರೀಕ್ಷಿಸುವುದು ಆದ್ಯ ಕರ್ತವ್ಯ. ನಿವೇಶನವನ್ನು ಚಾತುರ್ವರ್ಣಾನುಗುಣವಾಗಿ ನಿಷ್ಕರ್ಷಿಸಿಕೊಳ್ಳಬೇಕು. ಮಣ್ಣು ಬಿಳುಪು ವರ್ಣದವರಿಗೆ ಪೂರ್ವೋತ್ತರಗಳಲ್ಲಿ ತಗ್ಗಾದ ಭೂಮಿಯಾಗಿದ್ದು, ಮಣ್ಣು ಬಿಳುಪು ಬಣ್ಣದ್ದಾಗಿ, ಸುವಾಸನೆ ಉಳ್ಳದ್ದೂ ಮಧುರವೂ ದರ್ಭೆ ಬೆಳೆದಿರುವುದೂ ಆಗಿದ್ದರೆ ಶ್ರೇಯಃಪ್ರದ. ಕ್ಷತ್ರಿಯರಿಗೆ ತಿಟ್ಟುಪ್ರದೇಶವೂ ರಕ್ತಗಂಧವೂ ಕಷಾಯರುಚಿಯೂ ಆಗಿ ಹುಲ್ಲು ಬೆಳೆದಿರುವ ಕೆಂಪು ಮಣ್ಣಿನ ಭೂಮಿ ಶ್ರೇಷ್ಠ. ವೈಶ್ಯರಿಗೆ ಹಳ್ಳತಿಟ್ಟುಗಳಿಲ್ಲದ ಹಳದಿ ಬಣ್ಣದ, ಜೇನಿನ ವಾಸನೆ ಮತ್ತು ಸ್ವಲ್ಪ ಹುಳಿಯಾದ ರುಚಿಯುಳ್ಳ ಮಣ್ಣಿನಿಂದ ಕೂಡಿ ಫಲಪುಷ್ಪ ಭರಿತವಾದ ಭೂಮಿ ಉತ್ತಮ. ನಾಲ್ಕನೆಯ ವರ್ಣದವರಿಗೆ ಹಳ್ಳತಿಟ್ಟುಗಳುಳ್ಳ, ಮದ್ಯದ ವಾಸನೆಯಿಂದ ಕೂಡಿ ಆದ ಹುಲ್ಲು ಬೆಳೆದಿರುವ ಕಪ್ಪು ಮಣ್ಣಿನ ನಿವೇಶನ ಶುಭಪ್ರದ. ಹಳ್ಳತಿಟ್ಟುಗಳಿಲ್ಲದ ಸಮವಾದ ಬಿಳುಪು ಮಣ್ಣಿನಿಂದ ಕೂಡಿದ ಭೂಮಿ ಎಲ್ಲರಿಗೂ ಗ್ರಾಹ್ಯ.

ನಿವೇಶನದ ಪೂರ್ವಭಾಗ ಎತ್ತರವಾಗಿದ್ದು ಉಳಿದ ಭಾಗ ತಗ್ಗಾಗಿದ್ದರೆ ಅದಕ್ಕೆ ಗೋವೀಥಿ ಎಂದು ಹೆಸರು. ಇಲ್ಲಿ ಗೋಗಳಿಗೆ ವೃದ್ಧಿ ಇರುತ್ತದೆ. ಆಗ್ನೇಯದಲ್ಲಿ ಎತ್ತರವಾಗಿದ್ದರೆ ಅಗ್ನಿವೀಥಿ. ಇಲ್ಲಿ ಅಗ್ನಿಭಯ. ದಕ್ಷಿಣದಲ್ಲಿ ಎತ್ತರವಾಗಿದ್ದರೆ ಪ್ರೇತವೀಥಿ. ಇಲ್ಲಿ ಮೃತ್ಯುಭಯ. ನೈಋತ್ಯದಲ್ಲಿ ಎತ್ತರವಾಗಿದ್ದರೆ ನಾಗವೀಥಿ. ಇಲ್ಲಿ ಸರ್ಪಭಯ. ಪಶ್ಚಿಮದಲ್ಲಿ ಎತ್ತರವಾಗಿದ್ದರೆ ಜಲವೀಥಿ. ಇಲ್ಲಿ ದಾರಿದ್ರ್ಯ. ವಾಯವ್ಯದಲ್ಲಿ ಎತ್ತರವಾಗಿದ್ದರೆ ಧಾನ್ಯವೀಥಿ. ಇಲ್ಲಿ ಧನಪ್ರಾಪ್ತಿ. ಉತ್ತರದಲ್ಲಿ ಎತ್ತರವಾಗಿದ್ದರೆ ಗಜವೀಥಿ. ಇಲ್ಲಿ ಸಂಪದಭಿವೃದ್ಧಿ. ಈಶಾನ್ಯದಲ್ಲಿ ಎತ್ತರವಾಗಿದ್ದರೆ ಧನವೀಥಿ. ಇಲ್ಲಿ ಪುತ್ರಪೌತ್ರಧನವೃದ್ಧಿ. ನಿವೇಶನದ ಮಧ್ಯದಲ್ಲಿ ತಗ್ಗಾಗಿದ್ದರೆ ಸಿಂಹವೀಥಿ. ಇಲ್ಲಿ ಸರ್ವಸಮೃದ್ಧಿ. ಕಟ್ಟಡ ಕಟ್ಟಲು ನಿವೇಶನವನ್ನು ಗೊತ್ತುಮಾಡುವಾಗ ಈ ಫಲಗಳನ್ನು ಗಮನಿಸಿ ನಿವೇಶನವನ್ನು ಆರಿಸಬೇಕು.

ಕಟ್ಟಡ ಕಟ್ಟಬೇಕೆಂದಿರುವ ಭೂಮಿಯಲ್ಲಿ ಇಪ್ಪತ್ತುನಾಲ್ಕು ಅಂಗುಲ ಪ್ರಮಾಣದ ಆಳವುಳ್ಳ ಒಂದು ಬಿಲವನ್ನು ತೋಡಿ ಮತ್ತೆ ಅದೇ ಮಣ್ಣನ್ನು ಆ ಬಿಲಕ್ಕೆ ತುಂಬುವುದು. ಬಿಲ ತುಂಬಿ ಮಣ್ಣು ಹೆಚ್ಚಾಗಿ ಉಳಿದರೆ ಆ ಪ್ರದೇಶದಲ್ಲಿ ಕಟ್ಟಡವನ್ನು ಕಟ್ಟುವುದರಿಂದ ವೃದ್ಧಿಯುಂಟಾಗುತ್ತದೆ. ಸಮನಾದರೆ ಹಾನಿವೃದ್ಧಿಗಳಿಲ್ಲದೆ ಸಮಫಲಪ್ರದವಾಗುತ್ತದೆ. ಮಣ್ಣು ಸಾಲದೆ ಬಂದರೆ ಆ ನಿವೇಶನ ಶ್ರೇಷ್ಠವಲ್ಲವೆಂದು ತಿಳಿಯಬೇಕು.

ಆ ಹಳ್ಳದಲ್ಲಿ ಮೊದಲ ದಿವಸ ನೀರು ತುಂಬಿ ಮಾರನೆಯ ದಿವಸ ಬೆಳಗ್ಗೆ ನೋಡುವಾಗ ನೀರು ಉಳಿದಿದ್ದರೆ ಆ ನಿವೇಶನ ಕಟ್ಟಡವನ್ನು ಕಟ್ಟಲು ಯೋಗ್ಯವಾಗಿದೆ ಎಂದು ನಿಷ್ಕರ್ಷಿಸಬೇಕು. ಬದಿ ಇದ್ದರೆ ಅಲ್ಲಿ ಗೃಹವನ್ನು ಕಟ್ಟುವುದರಿಂದ ಹಲವು ದಾರಿದ್ರ್ಯಗಳ ಪೀಡೆ ಉಂಟಾಗುತ್ತದೆ. ನೀರಿನ ಅಂಶ ಸ್ವಲ್ಪವೂ ಇಲ್ಲದೆ ಒಣಗಿದ್ದರೆ ಆ ಜಾಗದಲ್ಲಿ ಮನೆಯನ್ನು ಕಟ್ಟಿದರೆ ಮೃತ್ಯು ಉಂಟಾಗುತ್ತದೆ.

ನಿವೇಶನದಲ್ಲಿ ಬಾವಿಯನ್ನು ತೆಗೆದಾಗ ಅದಕ್ಕೆ ಅನ್ಯಗೃಹದ ನೀರು ಬರುವ ಹಾಗಿದ್ದರೆ ಹಾನಿ ಮತ್ತು ಕಲಹ ಉಂಟಾಗುತ್ತವೆ. ಆ ಜಾಗದ ನೀರು ಉತ್ತರ ಈಶಾನ್ಯ ಪೂರ್ವ ದಿಕ್ಕುಗಳಿಗೆ ಹರಿದರೆ ಶುಭಫಲಪ್ರದವಾಗುತ್ತದೆ.

ಈ ಕ್ರಮದಲ್ಲಿ ಭೂಮಿಯನ್ನು ಪರೀಕ್ಷಿಸಿ ದೋಷಾಲ್ಪವೂ ಗುಣಬಾಹುಳ್ಯವೂ ಇರುವ ಸ್ಥಳವನ್ನು ಆರಿಸಿ ಅಲ್ಲಿ ಮನೆ ಕಟ್ಟಬೇಕು.

ಮೊದಲು ನಿವೇಶನವನ್ನು ಚೌಕನಾಗಿಯೂ ಸಮನಾಗಿಯೂ ಇರುವೆಡೆ ಅಗೆದು ಅಲ್ಲಿರುವ ಹುಲ್ಲು ಮೊದಲಾದುವನ್ನು ತೆಗೆದು ಚೊಕ್ಕಟಮಾಡಬೇಕು. ಬಳಿಕ ದಿಕ್ಕುಗಳನ್ನು ಗುರುತಿಸಬೇಕು.

ಶುಭಮುಹೂರ್ತದ ದಿನದಲ್ಲಿ ನಿವೇಶನವನ್ನು ಪಂಚಗವ್ಯ ಮತ್ತು ಔಷಧಿ ಜಲದಿಂದ ಶುದ್ಧಿಮಾಡಿ ಎಂಟು ದಿಕ್ಕುಗಳಲ್ಲೂ ಪೂರ್ಣಕುಂಭಗಳನ್ನಿರಿಸಿ, ಗಣಪತಿ ಗ್ರಹಾದಿಗಳನ್ನು ಪೂಜಿಸಿ ಪುಣ್ಯಾಹಮಾಡಿ ಆ ಜಲದಿಂದ ಸ್ಥಳಶುದ್ಧಿಮಾಡಿ ವಾಸ್ತು ದೇವತೆಯನ್ನು ಬರೆದು ಪ್ರತಿಷ್ಠಿಸಿ ಪೂಜಿಸಬೇಕು. ವಾಸ್ತುಪುರುಷನ ಕುಕ್ಷಿಸ್ಥಾನದಲ್ಲಿ ಅಗೆದು ಶಿಲಾನ್ಯಾಸವನ್ನು ಮಾಡಬೇಕು. ಬಳಿಕ ಈಶಾನ್ಯಾದಿ ದಿಕ್ಕುಗಳಲ್ಲಿ ಪ್ರದಕ್ಷಿಣವಾಗಿ ಶಿಲೆಗಳನ್ನು ಇಡಬೇಕು.

ಮನೆಯ ವಿಸ್ತಾರವನ್ನು ಒಂಬತ್ತು ವಿಭಾಗಮಾಡಿ ಬಲಗಡೆಗೆ ಐದು ಭಾಗಗಳನ್ನು ಎಡಗಡೆಗೆ ಮೂರು ಭಾಗವನ್ನು ಬಿಟ್ಟು ಮಧ್ಯದ ಒಂದು ಭಾಗದಲ್ಲಿ ಬಾಗಿಲನ್ನು ಇಡಬೇಕು. ಬಾಗಿಲಿಗೆ ದಕ್ಷಿಣ ಅಥವಾ ಪಶ್ಚಿಮಕ್ಕೆ ಕಿಟಕಿ ಇರಬೇಕು.

ಗೃಹನಿರ್ಮಾಣ ಸ್ಥಳ ಆಯಾಕಾರದಲ್ಲಿರಬೇಕು. ಗೃಹನಿವೇಶನದ ಉದ್ದ ಅಗಲಗಳನ್ನು ಯಜಮಾನನ ಹಸ್ತದಿಂದ ಅಳತೆಮಾಡಿ ಮೊಳೆಗಳಲ್ಲಿ ಗೊತ್ತು ಮಾಡಿಕೊಂಡು ಉದ್ದ ಅಗಲಗಳ ಪ್ರಮಾಣಗಳನ್ನು ಗುಣಿಸಿ ಬಂದ ಫಲವೇ ಕ್ಷೇತ್ರಫಲ. ಇದನ್ನು ಒಂಬತ್ತರಿಂದ ಗುಣಿಸಿ ಎಂಟರಿಂದ ಭಾಗಿಸಿ ನಿಂತ ಶೇಷಕ್ಕೆ ಆಯ ಎಂದು ಹೆಸರು. ಒಂದು ಶೇಷ ನಿಂತರೆ ಧ್ವಜಾಯ, ಎರಡು ನಿಂತರೆ ಧೂಮ್ರಾಯ, ಮೂರು ನಿಂತರೆ ಸಿಂಹಾಯ, ನಾಲ್ಕು ನಿಂತರೆ ಶುನಕಾಯ, ಐದು ನಿಂತರೆ ವೃಷಭಾಯ, ಆರು ನಿಂತರೆ ಖರಾಯ, ಏಳು ನಿಂತರೆ ಗಜಾಯ, ಎಂಟು ನಿಂತರೆ ಕಾಕಾಯ ಇವೆಂಟೂ ಆಯಗಳು. ಇವುಗಳಲ್ಲಿ 1, 3, 5, 7 ಈ ನಾಲ್ಕು ವಿಷಮಾಯಗಳು ಗೃಹ ನಿರ್ಮಾಣಕ್ಕೆ ಶುಭಪ್ರದಗಳು. ಧ್ವಜಾಯ ಎಲ್ಲರಿಗೂ ಶ್ರೇಷ್ಠ. ಸಿಂಹಾಯ ಬ್ರಾಹ್ಮಣನಿಗೆ ಕೂಡದು. ಇದರಲ್ಲಿ ಪಶುವೃದ್ಧಿ ಇಲ್ಲ. ಪಶ್ಚಿಮ ದಿಕ್ಕಿನ ಧ್ವಜಾಯ ಬ್ರಾಹ್ಮಣನಿಗೂ ಉತ್ತರಮುಖದ ಸಿಂಹಾಯ ರಾಜರಿಗೂ ಪೂರ್ವಾಭಿಮುಖದ ವೃಷಭಾಯ ವೈಶ್ಯನಿಗೂ ದಕ್ಷಿಣಾಭಿಮುಖದ ಗಜಾಯ ಶೂದ್ರನಿಗೂ ಶ್ರೇಷ್ಠ ಆನೆ, ಒಂಟೆಗಳ ಶಾಲೆಗೆ ಧ್ವಜ, ಗಜಾಯಗಳೂ ಕುದುರೆಲಾಯ, ದನದ ಕೊಟ್ಟಿಗೆಗಳಿಗೆ ಧ್ವಜ, ವೃಷಭಾಯಗಳೂ ಸ್ತ್ರೀಶಯ್ಯಾಗೃಹ, ಆಸ್ಥಾನ, ಯಂತ್ರಶಾಲೆಗಳಿಗೆ ಸಿಂಹ, ಧ್ವಜ, ವೃಷಭಾಯಗಳೂ ಉತ್ತಮ. ಕೊಳ, ಬಾವಿಗಳಿಗೆ ಗಜಾಯವೂ ಪೀಠಕ್ಕೆ ಸಿಂಹಾಯವೂ ಮ್ಲೇಚ್ಛರಿಗೆ ಶುನಕಾಯವೂ ವೈಶ್ಯರಿಗೆ ಖರಾಯವೂ ಶ್ರೇಷ್ಠ ಕ್ಷೇತ್ರಫಲವನ್ನು ಒಂಬತ್ತರಿಂದ ಗುಣಿಸಿ ಏಳರಿಂದ ಭಾಗಿಸಿದರೆ ನಿಂತ ಶೇಷ ಕ್ರಮವಾಗಿ ಭಾನುವಾರಾದಿಯಾಗಿ ವಾರಗಳನ್ನು ಸೂಚಿಸುತ್ತದೆ. ಶುಭಗ್ರಹಗಳ ವಾರವಾದರೆ ಒಳ್ಳೆಯ ಫಲ. ಕ್ಷೇತ್ರಫಲವನ್ನು ಆರರಿಂದ ಗುಣಿಸಿ ಒಂಬತ್ತರಿಂದ ಭಾಗಿಸಿ ನಿಂತ ಶೇಷ ಅಂಶವಾಗುತ್ತದೆ. ಅಧಿಕಾಂಶ ಬಂದರೆ ಶುಭಪ್ರದ. ಎಂಟರಿಂದ ಗುಣಿಸಿ ಹನ್ನೆರಡರಿಂದ ಭಾಗಿಸಿ ನಿಂತ ಶೇಷ ಧನ ಎಂದರೆ ಲಾಭವನ್ನು ಸೂಚಿಸುತ್ತದೆ. ಮೂರರಿಂದ ಗುಣಿಸಿ ಎಂಟರಿಂದ ಭಾಗಿಸಿ ನಿಂತ ಶೇಷ ಋಣ ಎಂದರೆ ನಷ್ಟವನ್ನು ಸೂಚಿಸುತ್ತದೆ. ನಷ್ಟಕ್ಕಿಂತ ಲಾಭ ಅಧಿಕವಾಗಿದ್ದರೆ ಶುಭಪ್ರದ. ಎಂಟರಿಂದ ಗುಣಿಸಿ ಇಪ್ಪತ್ತೇಳರಿಂದ ಭಾಗಿಸಿ ನಿಂತ ಶೇಷ ಅಶ್ವಿನ್ಯಾದಿ ನಕ್ಷತ್ರಗಳನ್ನು ಸೂಚಿಸುತ್ತದೆ. ಶುಭನಕ್ಷತ್ರವಾಗಿದ್ದು ಗೃಹದ ಯಜಮಾನನಿಗೆ ಅನುಕೂಲ ತಾರೆ ಆದರೆ ಶುಭಪ್ರದ.

ಕ್ಷೇತ್ರಫಲವನ್ನು ಎಂಟರಿಂದ ಗುಣಿಸಿ ಹದಿನೈದರಿಂದ ಭಾಗಿಸಿದರೆ ನಿಂತ ಶೇಷ ತಿಥಿಯನ್ನು ಸೂಚಿಸುತ್ತದೆ. ಶುಭತಿಥಿ ಶುಭಪ್ರದ. ಕ್ಷೇತ್ರಫಲವನ್ನು ನಾಲ್ಕರಿಂದ ಗುಣಿಸಿ ಇಪ್ಪತ್ತೇಳರಿಂದ ಭಾಗಿಸಿ ನಿಂತ ಶೇಷ ಯೋಗವನ್ನು ಸೂಚಿಸುತ್ತದೆ. ಶುಭಯೋಗವಾದರೆ ಶುಭ.

ಕ್ಷೇತ್ರಫಲವನ್ನು ಎಂಟರಿಂದ ಗುಣಿಸಿ ನೂರಿಪ್ಪತ್ತರಿಂದ ಭಾಗಿಸಿದರೆ ನಿಂತ ಶೇಷ ಆಯುಸ್ಸನ್ನು ಸೂಚಿಸುತ್ತದೆ. ಇದರಲ್ಲಿ ತಾರುಣ್ಯಾವಸ್ಥೆ ಶುಭಪ್ರದ.

ಈ ಎಲ್ಲದರಲ್ಲೂ ಶುಭಫಲದ್ಯೋತಕವಾದ ಆಯ ಶುಭ. ಈ ಅಳತೆಯ ನಿವೇಶನದಲ್ಲಿ ಕಟ್ಟಡವನ್ನು ಕಟ್ಟಿದರೆ ಯಜಮಾನನಿಗೆ ಸುಖಪ್ರದವಾಗಿರುತ್ತದೆ.

ಅಗಲದಷ್ಟೇ ಎತ್ತರವಿರುವ ಗೃಹ ಒಳ್ಳೆಯದು. ವಿಸ್ತಾರಕ್ಕೆ ಎರಡರಷ್ಟು ಉದ್ದವಿದ್ದರೆ ಏಕಶಾಲಾ ಎಂದೂ ಎರಡರಷ್ಟಿದ್ದರೆ ದ್ವಿಶಾಲಾ ಎಂದೂ ಮೂರರಷ್ಟಿದ್ದರೆ ತ್ರಿಶಾಲಾ ಎಂದೂ ನಾಲ್ಕರಷ್ಟಾದರೆ ಚತುಃಶಾಲಾ ಎಂದೂ ಕರೆಯುತ್ತಾರೆ. ಉದ್ದ ಅಗಲದ ಐದರಷ್ಟಕ್ಕಿಂತ ಮೀರಬಾರದು.

ಸ್ನಾನಾಗಾರಂ ದಿಶಿಪ್ರಾಚ್ಯಾಮಾಗ್ನೇಯ್ಯಾಂ ಚ ಮಹಾನಸಂ
ಯಾಮ್ಯಾಯಾಂ ಶಯನಾಗಾರಂ ನೈಋತ್ಯಾಂ ವಸ್ತ್ರಮಂದಿರಂ ।
ವಾರುಣ್ಯಾಂ ಭೋಜನಗೃಹಂ ವಾಯವ್ಯಾಂ ಪಶುಮಂದಿರಂ
ಭಂಡಾರವೇಶ್ಮೋತ್ತರಸ್ಯಾಮೈಶಾನ್ಯಾಂ ದೇವತಾಲಯಂ ॥

ಎಂದು ನಾರದ ತಿಳಿಸಿರುವಂತೆ ಮನೆಯ ಪೂರ್ವ ವಿಭಾಗದಲ್ಲಿ ಸ್ನಾನಗೃಹವೂ ಆಗ್ನೇಯ ವಿಭಾಗದಲ್ಲಿ ಅಡಿಗೆಮನೆಯೂ ದಕ್ಷಿಣ ವಿಭಾಗದಲ್ಲಿ ಮಲಗುವ ಮನೆಯೂ ನೈಋತ್ಯ ವಿಭಾಗದಲ್ಲಿ ವಸ್ತ್ರಮಂದಿರವೂ ಪಶ್ಚಿಮ ವಿಭಾಗದಲ್ಲಿ ಊಟದ ಮನೆಯೂ ವಾಯವ್ಯ ವಿಭಾಗದಲ್ಲಿ ದನದ ಕೊಟ್ಟಿಗೆಯೂ ಉತ್ತರ ವಿಭಾಗದಲ್ಲಿ ಭಂಡಾರವೂ ಈಶಾನ್ಯ ವಿಭಾಗದಲ್ಲಿ ದೇವರ ಮನೆಯೂ ಇರುವಂತೆ ಮನೆಯನ್ನು ಅಳವಡಿಸಬೇಕು.

ಚೈತ್ರ ಮಾಸದಲ್ಲಿ ಮನೆಯನ್ನು ಕಟ್ಟಲು ಪ್ರಾರಂಭಿಸಿದರೆ ವ್ಯಾಧಿಯೂ ವೈಶಾಖದಲ್ಲಿ ಧನಪ್ರಾಪ್ತಿಯೂ ಜ್ಯೇಷ್ಠದಲ್ಲಿ ಮೃತ್ಯುವೂ ಆಷಾಢದಲ್ಲಿ ಪಶುಹಾನಿಯೂ ಶ್ರಾವಣದಲ್ಲಿ ಮಿತ್ರಲಾಭವೂ ಭಾದ್ರಪದದಲ್ಲಿ ಹಾನಿಯೂ ಆಶ್ವಯುಜದಲ್ಲಿ ಜಗಳವೂ ಕಾರ್ತಿಕದಲ್ಲಿ ಧನಧಾನ್ಯವೃದ್ಧಿಯೂ ಮಾರ್ಗಶೀರ್ಷದಲ್ಲಿ ಧನವೃದ್ಧಿಯೂ ಪುಷ್ಯದಲ್ಲಿ ಕಳ್ಳರ ಭಯವೂ ಮಾಘದಲ್ಲಿ ಹೆಚ್ಚು ಮಕ್ಕಳೂ ಫಾಲ್ಗುಣದಲ್ಲಿ ದ್ರವ್ಯಲಾಭವೂ ವಂಶವೃದ್ಧಿಯೂ ಉಂಟಾಗುತ್ತದೆ.

ಮಾಘ ಫಾಲ್ಗುನ ವೈಶಾಖ ಮಾರ್ಗ ಶ್ರವಣ ಕಾರ್ತಿಕಾಃ ।
ಮಾಸಾಸ್ಸ್ಯುರ್ಗೃಗೃಹನಿರ್ಮಾಣೇ ಪುತ್ರಾರೋಗ್ಯಧನಪ್ರದಾಃ ॥

ಎಂದು ನಾರದನ ಉಕ್ತಿ.

ಮೇಷ–ವೃಷಭ ಮಾಸಗಳಲ್ಲಿ ಮನೆಯನ್ನು ಕಟ್ಟಿದರೆ ಶುಭಪ್ರದವೂ ಮಿಥುನ ಮಾಸದಲ್ಲಿ ಮರಣಭಯವೂ ಕರ್ಕಾಟಕ ಮಾಸದಲ್ಲಿ ಸೌಖವೂ ಸಿಂಹ ಮಾಸದಲ್ಲಿ ಭೃತ್ಯವೃದ್ಧಿಯೂ ಕನ್ಯಾಮಾಸದಲ್ಲಿ ರೋಗವೂ ತುಲಾಮಾಸದಲ್ಲಿ ಸೌಖ್ಯವೂ ವೃಶ್ಚಿಕಮಾಸದಲ್ಲಿ ಧನಧಾನ್ಯವೃದ್ಧಿಯೂ ಧನುರ್ಮಾಸದಲ್ಲಿ ತೊಂದರೆಯೂ ಮಕರಮಾಸದಲ್ಲಿ ಧನಪ್ರಾಪ್ತಿಯೂ ಕುಂಭಮಾಸದಲ್ಲಿ ಲಾಭವೂ ಮೀನಮಾಸದಲ್ಲಿ ಭಯಂಕರ ಸ್ವಪ್ನವೂ ಉಂಟಾಗುತ್ತವೆ.

ಸೂರ್ಯ ಚರ ಮತ್ತು ಸ್ಥಿರ ರಾಶಿಗಳಲ್ಲಿ ಸಂಚರಿಸುವಾಗ ಮನೆಯನ್ನು ಕಟ್ಟಲು ಪ್ರಾರಂಭಿಸಬೇಕು. ದ್ವಿಸ್ವಭಾವ ರಾಶಿಯಲ್ಲಿ ಸಂಚರಿಸುವಾಗ ಮನೆಯ ಕೆಲಸಕ್ಕೆ ಪ್ರಾರಂಭಿಸಿದರೆ ಅಶುಭಫಲ ಉಂಟಾಗುತ್ತದೆ. ಆದರೆ ಈ ಕಾಲದಲ್ಲಿ ಅಡಿಗೆ ಮನೆ, ಧಾನ್ಯ ಕುಟ್ಟುವ ಮನೆ, ಕೊಟ್ಟಿಗೆಗಳನ್ನು ಕಟ್ಟಲು ಪ್ರಾರಂಭಿಸಬಹುದು. ಸೂರ್ಯ ಮಕರ–ಕುಂಭ ರಾಶಿಗಳಲ್ಲಿರುವಾಗ ಪಶ್ಚಿಮ ಮುಖದ ಮನೆಯನ್ನೂ ವೃಷಭ–ಮೇಷರಾಶಿಗಳಲ್ಲಿರುವಾಗ ದಕ್ಷಿಣ ಮುಖದ ಮನೆಯನ್ನೂ ಸಿಂಹ–ಕರ್ಕಾಟಕರಾಶಿಗಳಲ್ಲಿರುವಾಗ ಪೂರ್ವ ಮುಖದ ಮನೆಯನ್ನೂ ತುಲಾ–ವೃಶ್ಚಿಕ ರಾಶಿಗಳಲ್ಲಿರುವಾಗ ಉತ್ತರ ಮುಖದ ಮನೆಯನ್ನೂ ಕಟ್ಟಲು ಪ್ರಾರಂಭಿಸುವುದು ಒಳ್ಳೆಯದು. ಭರಣಿ–ಕೃತ್ತಿಕಾ ನಕ್ಷತ್ರಗಳಲ್ಲಿ ಸೂರ್ಯನಿರುವಾಗ ಗೃಹಾರಂಭವನ್ನು ಮಾಡಕೂಡದೆಂದು ಕೆಲವರ ಅಭಿಪ್ರಾಯ.

ಅನೂರಾಧ, ರೋಹಿಣಿ, ರೇವತಿ, ಪುಷ್ಯ, ಉತ್ತರಾ, ಉತ್ತರಾಷಾಢ, ಉತ್ತರಾಭಾದ್ರ, ಮೃಗಶಿರ, ಹಸ್ತ–ಈ ಒಂಬತ್ತು ನಕ್ಷತ್ರಗಳು ಗೃಹಾರಂಭಕ್ಕೆ ಪ್ರಶಸ್ತಿ. ಚಿತ್ತ, ಮೂಲ, ಸ್ವಾತಿ, ಪುನರ್ವಸು, ಧನಿಷ್ಟ, ಶತಭಿಷ–ಈ ಆರು ನಕ್ಷತ್ರಗಳು ಮಧ್ಯಮ. ಉಳಿದವು ಅಶುಭಗಳು. ಸ್ಥಿರ ಮತ್ತು ಊರ್ಧ್ವಮುಖ ನಕ್ಷತ್ರಗಳು ಗೃಹಾರಂಭಕ್ಕೆ ಉತ್ತಮ, ಗುರು, ಶನಿ, ಬುಧ, ಶುಕ್ರವಾರಗಳಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸುವುದು ಉತ್ತಮ. ಸೋಮವಾರ ಮಧ್ಯಮ.

ರೋಹಿಣಿ, ಮೃಗಶಿರ, ಪುಷ್ಯ ನಕ್ಷತ್ರಗಳಲ್ಲಿ ಪೂರ್ವಾಭಿಮುಖ ಮನೆಯನ್ನೂ ಮಖ, ಸ್ವಾತಿ, ಭರಣಿ ನಕ್ಷತ್ರಗಳಲ್ಲಿ ದಕ್ಷಿಣಾಭಿಮುಖ ಮನೆಯನ್ನೂ ಉತ್ತರಾಷಾಢ, ಶ್ರವಣ, ಮಖ ಮೂಲ ನಕ್ಷತ್ರಗಳಲ್ಲಿ ಪಶ್ಚಿಮ ಮುಖದ ಮನೆಯನ್ನೂ ಶ್ರವಣ ಉತ್ತರಾಭಾದ್ರ, ಅಶ್ವಿನಿ, ಶತಭಿಷಾ ನಕ್ಷತ್ರಗಳಲ್ಲಿ ಉತ್ತರ ಮುಖದ ಮನೆಯನ್ನೂ ಕಟ್ಟುವುದು ಶುಭಫಲಪ್ರದ. ವೃಷಭ ರಾಶಿಯನ್ನು ಬಿಟ್ಟು ಉಳಿದ ಪೃಷ್ಠೋದಯ ರಾಶಿಗಳಲ್ಲಿ ಮನೆಕೆಲಸವನ್ನು ಪ್ರಾರಂಭಿಸಬಾರದು.

ಮನೆ ಕಟ್ಟುವ ಯಜಮಾನನಿಗೆ ಶುಭಗ್ರಹದಶಾಫಲಗಳು ನಡೆಯುವ ಕಾಲದಲ್ಲಿ ಗೃಹನಿರ್ಮಾಣ ಕಾರ್ಯವನ್ನು ಪ್ರಾರಂಭಿಸಬೇಕು. ಗೃಹಾರಂಭ ಲಗ್ನಕ್ಕೆ ಅಷ್ಟಮಶುದ್ಧಿ ಇರಬೇಕು. ಕೇಂದ್ರಗಳಲ್ಲಿ (1, 4, 7, 10ನೆಯ ಸ್ಥಾನಗಳಲ್ಲಿ) ಶುಭಗ್ರಹಗಳಿರಬೇಕು. ಪಾಪಗ್ರಹಗಳು 3, 6, 11ನೆಯ ಸ್ಥಾನಗಳಲ್ಲಿರಬೇಕು. ಶುಕ್ರ ಸಪ್ತಮಸ್ಥಾನದಲ್ಲಿ ಇರಕೂಡದು. ಎಂಟು ಮತ್ತು ಹನ್ನೆರಡನೆಯ ಸ್ಥಾನಗಳಲ್ಲಿ ಗ್ರಹ ಇರಕೂಡದು. ಲಗ್ನದಲ್ಲಿ ಚಂದ್ರನಿರಬಾರದು. ಈ ಅಂಶಗಳನ್ನೆಲ್ಲ ಗಮನಿಸಿ ಶುಭಕಾಲದಲ್ಲಿ ಗೃಹಾರಂಭ ಮಾಡಿದರೆ ಶುಭಪ್ರದವಾಗುತ್ತದೆ.

ರೇವತಿ, ಪುಷ್ಯ, ಮಖ, ಕೃತ್ತಿಕಾ, ಹಸ್ತ, ಮೂಲ–ಈ ನಕ್ಷತ್ರಗಳಲ್ಲಿ ಅಂಗಾರಕನಿದ್ದಾಗ ಮನೆಯನ್ನು ಕಟ್ಟಿದರೆ ಬೆಂಕಿ ಮನೆಯನ್ನು ಸುಡುತ್ತದೆ ಮತ್ತು ಪ್ರಾಣಕ್ಷಯವಾಗುತ್ತದೆ.

ಜ್ಯೇಷ್ಠ, ಪೂರ್ವಾಭಾದ್ರ, ಉತ್ತರಾಭಾದ್ರ, ಭರಣಿ, ಸ್ವಾತಿ, ಅನೂರಾಧಾ ನಕ್ಷತ್ರಗಳಲ್ಲಿ ಕಟ್ಟಿದ ಮನೆಯಲ್ಲಿ ಯಕ್ಷಾದಿ ಪೀಡೆ ಇರುತ್ತದೆ. ಇದರಲ್ಲಿ ಧಾನ್ಯ ಗೃಹವನ್ನು ಕಟ್ಟಿದರೆ ಶುಭಪ್ರದ.

ಪೂರ್ವಾಷಾಢ, ಶ್ರವಣ, ಉತ್ತರ, ಉತ್ತರಾಭಾದ್ರ, ಉತ್ತರಭಾದ್ರ, ರೋಹಿಣಿ ನಕ್ಷತ್ರಗಳಲ್ಲಿ ಗುರುವಿರುವಾಗ ಕಟ್ಟಿದ ಮನೆ ಕ್ಷತ್ರಿಯರಿಗೆ ಶುಭಪ್ರದ.

ಚಿತ್ರ, ಅಶ್ವಿನಿ, ವಿಶಾಖ, ಧನಿಷ್ಠಾ ನಕ್ಷತ್ರಗಳಲ್ಲಿ ಶುಕ್ರನಿರುವಾಗ ಕಟ್ಟಿಸಿದ ನಾಟ್ಯಗೃಹ ಮತ್ತು ದೇವಗೃಹ ಶುಭಫಲಪ್ರದ.

ಪುನರ್ವಸು ನಕ್ಷತ್ರದಲ್ಲಿ ಚಂದ್ರನಿರುವಾಗ ಸೂತಿಕಾಗೃಹವನ್ನು ರಚಿಸಬಹುದು.

ಮನೆಯನ್ನು ಕಟ್ಟಲು ಪ್ಲಕ್ಷ (ಜುಲ್ಲಿ), ಉದುಂಬರ (ಅತ್ತಿ), ವಿಭೀತಕ (ತಾರೆ), ವಟ (ಆಲ), ಅಶ್ವತ್ಥ, ಕಪಿತ್ಥ (ಬೇಲ), ಶಿಗ್ರು (ನುಗ್ಗೆ), ತಿಂತ್ರಿಣಿ (ಹುಣಿಸೆ) ನೆರಳಿಗಾಗಿ ಹಾಕಿರುವ ಮರ, ಮುಳ್ಳಿರುವ ಗಿಡ, ಬಳ್ಳಿಹಬ್ಬಿರುವ ಗಿಡ, ಕೆರೆ, ದೇವಾಲಯ, ಶ್ಮಶಾನದಲ್ಲಿರುವ ಗಿಡ, ಪೊಟ್ಟರೆ ಇರುವ ಮರ, ಸುಟ್ಟ ಮರ, ಆನೆ ಕೆಡವಿದ ಮರ–ಇವನ್ನು ಉಪಯೋಗಿಸಕೂಡದು.

ಕಡಿಯುವುದಕ್ಕೆ ಹಿಂದಿನ ರಾತ್ರಿ ಮರಕ್ಕೆ ಬಲಿಪ್ರದಾನ ಮಾಡಿ ಪೂಜಿಸಿ ಮಾರನೆಯ ಹಗಲಿನಲ್ಲಿ ಕಡಿಯಬೇಕು. ಶುಭವಾರ, ನಕ್ಷತ್ರ, ತಿಥಿ, ಯೋಗ, ಕರಣಗಳಿಂದ ಕೂಡಿ ಯಜಮಾನನಿಗೆ ಚಂದ್ರತಾರಾಬಲವಿರುವ ಶುಭದಿನದಲ್ಲಿ ಹಗಲು ಒಳ್ಳೆಯ ಲಗ್ನದಲ್ಲಿ ಉತ್ತರ ಅಥವಾ ಪೂರ್ವಾಭಿಮುಖವಾಗಿ ನಿಂತುಕೊಂಡು ಉದ್ದಿಷ್ಟವಾದ ಮರವನ್ನು ಕಡಿಯಬೇಕು.

ಮನೆಗೆ ಚೌಕಟ್ಟು, ಕಿಟಕಿ ಇವುಗಳನ್ನು ಒಳ್ಳೆಯ ದಿನದಲ್ಲಿ ನಿಲ್ಲಿಸಬೇಕು. ಮನೆಯ ಆವರಣವನ್ನು ಮುಚ್ಚುವುದಕ್ಕೂ ಶುಭದಿನಗಳನ್ನು ಗಮನಿಸಬೇಕು.

ಮನೆ ಸಿದ್ಧವಾದ ಮೇಲೆ ಸ್ಥಿರ, ಮೃದು ನಕ್ಷತ್ರಗಳಲ್ಲಿ ಮತ್ತು ಸ್ಥಿರರಾಶಿಗಳಲ್ಲಿ ಗೃಹವನ್ನು ಪ್ರವೇಶಿಸಬೇಕು. ಚರರಾಶಿ ಕೂಡದು. ಚರರಾಶಿ ಆದರೂ ಅದರಲ್ಲಿ ವೃಷಭಾಂಶವಾದರೆ ಶುಭಪ್ರದ. ಗೃಹಪ್ರವೇಶ ಲಗ್ನಕ್ಕೆ 4, 7, 8, 10, 12ನೆಯ ಸ್ಥಾನಗಳು ಶುದ್ಧವಾಗಿರಬೇಕು. ಲಗ್ನಕೇಂದ್ರದಲ್ಲಿ ಗುರುವಿರುವುದು ಒಳ್ಳೆಯದು.

ಗೃಹಪ್ರವೇಶ ಕಾಲದಲ್ಲಿ ಶುಕ್ರ ಪೃಷ್ಠ ಭಾಗದಲ್ಲಾಗಲೀ ದಕ್ಷಿಣಕ್ಕಾಗಲೀ ಇರುವುದು ಅನುಕೂಲ. ಮುಂದೆ ಅಥವಾ ವಾಮಭಾಗದಲ್ಲಿರುವುದು ಅಶುಭಪ್ರದ.

ದೇವಾಲಯದ ನಿರ್ಮಾಣದಲ್ಲಿ ಸಾಮಾನ್ಯ ಗೃಹನಿರ್ಮಾಣಕ್ಕಿಂತ ವಿಶೇಷಾಂಶಗಳನ್ನು ಗಮನಿಸಬೇಕಾಗುತ್ತದೆ. ಈ ವಿಷಯಗಳು ಶೈವ, ಪಾಂಚರಾತ್ರ, ವೈಖಾನಸ ಮೊದಲಾದ ಆಗಮಗಳಲ್ಲಿ ವಿವರವಾಗಿ ವರ್ಣಿತವಾಗಿವೆ. (ಎಸ್.ಎನ್.ಕೆ.)

**ಕಟ್ಟಳೆಗಳು, ಶೈಕ್ಷಣಿಕ :** ಸಾರ್ವಜನಿಕ ಶಿಕ್ಷಣದ ಯಾವುದಾದರೂ ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಂದಿಗಂದಿಗೆ ರೂಪುಗೊಂಡು ಸದ್ಯದಲ್ಲಿ ಆಚರಣೆಯಲ್ಲಿರುವ ಶಾಸನ, ಅಧಿಕೃತ ಆಜ್ಞೆ, ವ್ಯವಹಾರ ವಿಧಿ, ಕಾನೂನು ಬದ್ಧ ಸಾಂಪ್ರದಾಯಿಕ ನಿಬಂಧನೆ, ಲಿಖಿತಸೂತ್ರ ಇತ್ಯಾದಿಗಳನ್ನು ಸಂಗ್ರಹಿಸಿ ವ್ಯವಸ್ಥಿತ ರೀತಿಯಲ್ಲಿ ಜೋಡಿಸಿರುವ ನಿಯಮಾವಳಿ (ಕೋಡ್ಸ್, ಎಜುಕೇಷನಲ್). ಉದಾ: ಶಾಲೆಯ ಮಕ್ಕಳ ನಡೆವಳಿಕೆಗೆ ಸಂಬಂಧಿಸಿದ ಶಾಲೆಯ ಕಟ್ಟಳೆ, ಖಾಸಗಿ ಮತ್ತು ಸ್ಥಳೀಯ ಸರ್ಕಾರದ ಶಿಕ್ಷಣ ಸಂಸ್ಥೆಗಳಿಗೆ ಸಹಾಯಧನ ನೀಡಲು ಆಧಾರವೆನಿಸಿರುವ ಸಹಾಯಕ ಅನುದಾನ ಕಟ್ಟಳೆ, ಇತ್ಯಾದಿ. ಕೆಲವು ವೇಳೆ ರಾಜ್ಯವೊಂದರ ಶಿಕ್ಷಣ ಕ್ಷೇತ್ರದಲ್ಲಿ ಆಚರಣೆಯಲ್ಲಿರುವ ಸಮಗ್ರ ವಿಧಿನಿಯಮಾದಿಗಳಿಗೆಲ್ಲ ಒಟ್ಟಿಗೆ ಈ ಹೆಸರನ್ನು ಬಳಸುವುದುಂಟು. ಆ ಕಾನೂನುಗಳು ಅಧಿಕೃತವಾಗಿ ಹೊರಟವಾಗಿರ ಬಹುದು, ಅನಧಿಕೃತವಾಗಿದ್ದು ಆಚರಣೆಯಲ್ಲಿರತಕ್ಕವೂ ಆಗಿರಬಹುದು. ಆದರೆ ಅವೆಲ್ಲ ಲಿಖಿತರೂಪದಲ್ಲಿರತಕ್ಕವೇ ಆಗಿರಬೇಕು. ಹಾಗೆ ಸಂಗ್ರಹಿಸತಕ್ಕ ಕಟ್ಟಳೆ ಸಾರ್ವಜನಿಕ ಶಿಕ್ಷಣದ ಒಂದು ವಿಶಾಲ ಕ್ಷೇತ್ರಕ್ಕೆ ಸಂಬಂಧಿಸಿರಬಹುದು (ಉದಾ: ಶೈಕ್ಷಣಿಕ ಹಣಕಾಸಿನ ಕಟ್ಟಳೆ) ಅಥವಾ ಅದರ ಒಂದು ಸಂಕುಚಿತ ಕ್ಷೇತ್ರಕ್ಕೆ ಸಂಬಂಧಿಸಿರಬಹುದು (ಉದಾ: ಪರೀಕ್ಷೆಗೆ ಸಂಬಂಧಿಸಿದ ಕಟ್ಟಳೆ). ಯಾವ ಕ್ಷೇತ್ರಕ್ಕೆ ಸಂಬಂಧಿಸಿದವೇ ಆಗಲಿ ಅವೆಲ್ಲ ಲಿಖಿತ ರೂಪದಲ್ಲಿದ್ದು, ಆ ಕ್ಷೇತ್ರದ ಶೈಕ್ಷಣಿಕ ಕಾರ್ಯಾಚರಣೆಗೂ ಕಾರ್ಯಕ್ರಮಗಳಿಗೂ ಸಮಗ್ರತೆಯನ್ನೂ ಸಂಬದ್ಧತೆಯನ್ನೂ ತರುವ ರೂಪದಲ್ಲಿರುತ್ತವೆ. ಶೈಕ್ಷಣಿಕ ಕಟ್ಟಳೆಗಳಲ್ಲಿ ಬಹುಮುಖ್ಯವೆನಿಸಿದ ಸಹಾಯಧನ ಕಟ್ಟಳೆಯನ್ನು ಮಾತ್ರ ಈ ಲೇಖನದಲ್ಲಿ ವಿಶದವಾಗಿ ಪರಿಶೀಲಿಸಲಾಗಿದೆ. ಬೇರೆಬೇರೆ ಕಾಲಗಳಲ್ಲಿ ರೂಪಿಸಲಾದ ಆ ನಿಯಮಗಳಲ್ಲಿ ಒಂದಕ್ಕೊಂದಕ್ಕೆ ಇರಬಹುದಾದ ಗೊಂದಲ, ಭಿನ್ನತೆ ಇತ್ಯಾದಿಗಳನ್ನು ನಿವಾರಿಸಿ ಸಾಮರಸ್ಯವನ್ನು ತರುವಂತೆಯೂ ಉದ್ದೇಶಿಸಿದ ಅರ್ಥವನ್ನು ಮೂಡಿಸುವಂತೆಯೂ ಅವು ಕ್ರೋಡೀಕೃತವಾಗಿರುತ್ತವೆ.

**ಕಟ್ಟಳೆಯನ್ನು ಕ್ರೋಡೀಕರಿಸುವ ಕ್ರಮ:** ಸದ್ಯದಲ್ಲಿ ಆಚರಣೆಯಲ್ಲಿರುವ ಹಾಗೂ ಶಾಶ್ವತ ರೀತಿಯ ಕಾನೂನುಗಳನ್ನೆಲ್ಲ ಕ್ಷೇತ್ರಾನುಕ್ರಮವಾಗಿ ಒಂದೆಡೆ ಜೋಡಿಸುವುದು ಕಟ್ಟಳೆಯ ಕ್ರೋಡೀಕರಣದಲ್ಲಿ ಅನುಸರಿಸಲಾಗುತ್ತಿರುವ ಸಾಮಾನ್ಯ ವಿಧಾನ, ಅದರಲ್ಲಿ ತೊಡೆದು ಹಾಕಿರುವ, ಸ್ಥಳೀಯವಾಗಿರುವ ಅಥವಾ ವಿಶಿಷ್ಟವೂ ತಾತ್ಕಾಲಿಕವೂ ಆಗಿರುವ ವಿಧಿನಿಯಮಾದಿಗಳನ್ನು ಸೇರಿಸುವಂತಿಲ್ಲ. ತಿದ್ದುಪಡಿಯಾಗಿರತಕ್ಕ ವಿಧಿನಿಯಮಗಳನ್ನು ಅವುಗಳ ತಿದ್ದಿದ ಸ್ವರೂಪದಲ್ಲಿ ಸೇರಿಸಬೇಕು. ಒಮ್ಮೆ ಹೀಗೆ ಕ್ರೋಡೀಕರಿಸಿದ ಕಟ್ಟಳೆಯನ್ನು ಮತ್ತೆ ನೂತನ ಕಾನೂನುಗಳನ್ನಾಗಿ ಅಂಗೀಕರಿಸದಿರುವುದೂ ಮೂಲ ಕಾನೂನುಗಳ ಪಾಠದಲ್ಲಿ ಬದಲಾವಣೆ ಮಾಡದಿರುವುದೂ ಕ್ರೋಡೀಕರಣದ ಎರಡು ವಿಶಿಷ್ಟ ಲಕ್ಷಣಗಳು. ಹಾಗೆ ಕ್ರೋಡೀಕರಿಸಿದ ನಿಯಮಾವಳಿಯ ಒಂದೊಂದು ನಿಯಮಕ್ಕೂ ಅಧಿಕೃತ ಬೆಂಬಲವನ್ನು ದೊರಕಿಸಲಾಗದಿದ್ದರೂ ಅವೆಲ್ಲ ಸದ್ಯದಲ್ಲಿ ಆಚರಣೆಯಲ್ಲಿದೆಯೆಂಬ ಅಧಿಕೃತ ಬೆಂಬಲವನ್ನಾದರೂ ನೀಡಬೇಕಾಗುತ್ತದೆ. ಬೇರೆಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ನಿಯಮಗಳಲ್ಲಿರಬಹುದಾದ ಸೌಲಭ್ಯಗಳನ್ನು ಆಯ್ದು ಪ್ರತ್ಯೇಕ ಕ್ಷೇತ್ರವೊಂದರ ಕಟ್ಟಳೆಯ ಅಂಗವಾಗಿ ಸೇರಿಸುವಂತಿಲ್ಲ. ಹಾಗೆಯೆ, ಭಿನ್ನರೀತಿ ಸೌಲಭ್ಯಗಳನ್ನು ಒಳಗೊಂಡಂತೆ ತೋರುವ ನಿಯಮಗಳನ್ನೂ ಕೈಬಿಡುವಂತಿಲ್ಲ.

**ಕ್ರೋಡೀಕರಣದ ಅಗತ್ಯ :** ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದ ಮತ್ತು ಸದ್ಯದಲ್ಲಿ ಆಚರಣೆಯಲ್ಲಿರುವ ಕಾನೂನುಗಳು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಅಧಿಕಾರ ಮೂಲಗಳಿಂದ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹೊರಟಿರುತ್ತವೆ. ಅವುಗಳಲ್ಲಿ ಕೆಲವು ವ್ಯವಹಾರದಲ್ಲಿರುವ ಲಿಖಿತ ನಿಯಮಗಳು, ಇನ್ನು ಕೆಲವು ರಾಜ್ಯದ ಶಾಸನ ಸಭೆ ಅಂಗೀಕರಿಸಿದವು. ಮತ್ತೆ ಕೆಲವು ನ್ಯಾಯಾಲಯ ನೀಡಿದ ತೀರ್ಮಾನ, ಅಭಿಪ್ರಾಯ ಮತ್ತು ಅವುಗಳಿಂದ ಉದ್ಭವಿಸಿದವು. ಇನ್ನು ಕೆಲವು ಕಾರ್ಯನಿರ್ವಾಹಕಾಂಗ ಕಾನೂನಿಗೆ ವಿರುದ್ಧವೆನಿಸದಂತೆ ರೂಪಿಸಿದವು ಅಥವಾ ಸಾಂಪ್ರದಾಯಿಕ ನಿಯಮಗಳಿಗೆ ಪೂರಕವಾಗುವಂತೆ ಅನುಗೊಳಿಸಿದವು. ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಆ ನಿಯಮಗಳೆಲ್ಲ ಅವುಗಳ ಸದ್ಯದ ಸ್ವರೂಪದಲ್ಲಿ ಒಂದು ಕಡೆ ಕಾರ್ಯನಿರತರ ಮುಂದಿರುವುದು ಅಗತ್ಯ. ಆದ್ದರಿಂದ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ನಿಯಮಗಳನ್ನೆಲ್ಲ ಆಯಧ ಅವುಗಳ ಸದ್ಯದ ಸ್ವರೂಪದಲ್ಲಿ ವ್ಯವಸ್ಥಿತ ರೀತಿಯಲ್ಲಿ ಕ್ರೋಡೀಕರಿಸಿ ಸಿದ್ಧಪಡಿಸುವುದು ಆಡಳಿತ ಸೌಲಭ್ಯಕ್ಕೆ ಅನಿವಾರ್ಯವಾಗುತ್ತದೆ.

**ಕಟ್ಟಳೆಯ ಪುನರ್ವಿಮರ್ಶೆ:** ಸದ್ಯದಲ್ಲಿ ಆಚರಣೆಯಲ್ಲಿರುವ ಶಾಶ್ವತ ರೀತಿಯ ಮತ್ತು ಸಾರ್ವತ್ರಿಕ ಸ್ವರೂಪದ ನಿಯಮಗಳನ್ನು ವ್ಯವಸ್ಥಿತ ರೀತಿಯಲ್ಲಿ ಕ್ರೋಡೀಕರಿಸುವುದರ ಜೊತೆಗೆ ಅಧಿಕೃತ ವ್ಯಕ್ತಿ ಅಥವಾ ಮಂಡಲಿ ಪುನರ್ವಿಮರ್ಶಿಸುವುದೂ ಅಗತ್ಯ. ಹಾಗೆ ಪುನರ್ವಿಮರ್ಶಿತ ನಿಯಮಾವಳಿ ಮತ್ತೆ ಶಾಸನ ಸಭೆಯ ಅಂಗೀಕಾರ ಪಡೆಯಬೇಕಾಗುವುದು. ಸಾಮಾನ್ಯವಾಗಿ ಶಾಸನ ಸಭೆ ಇಡೀ ನಿಯಮಾವಳಿಯನ್ನು ಒಟ್ಟಿಗೆ ಅಂಗೀಕರಿಸಲು ಅನೇಕ ವೇಳೆ ಇಚ್ಛಿಸುವುದಿಲ್ಲ. ಅದರ ಒಂದೊಂದು ನಿಯಮವನ್ನೂ ಪ್ರತ್ಯೇಕವಾಗಿ ಪರಿಶೀಲನೆಗೆ ತೆಗೆದುಕೊಳ್ಳಲು ಬಯಸುವುಂಟು. ಪುನರ್ವಿಮರ್ಶೆ ಲಿಖಿತ ನಿಯಮಾದಿಗಳಿಗೆ ಮಾತ್ರವೇ ಹೊರತು ಲಿಖಿತವಲ್ಲದವಕ್ಕೆ ಅನ್ವಯಿಸುವುದಿಲ್ಲ. ಕೆಲವು ವೇಳೆ ಪುನರ್ವಿಮರ್ಶೆಗಿಂತ ಹೆಚ್ಚು ವ್ಯಾಪಕವೆನ್ನಬಹುದಾದ ರೀತಿಯಲ್ಲಿ ಕ್ರೋಡೀಕರಿಸುವುದೂ ಉಂಟು. ಸರ್ವಮಾನ್ಯ ಲಿಖಿತ ಕಾನೂನುಗಳಲ್ಲಿ ಕಂಡಬರುವ ಲೋಪದೋಷಗಳನ್ನು ನಿವಾರಿಸುವುದೇ ಇದರ ಉದ್ದೇಶ.

**ಸಹಾಯಧನದ ಕಟ್ಟಳೆ:** ಸಾರ್ವಜನಿಕ ಶಿಕ್ಷಣದಲ್ಲಿ ಸರ್ಕಾರದ ಸಂಸ್ಥೆಗಳಂತೆ ಖಾಸಗಿ ಮತ್ತು ಸ್ಥಳೀಯ ಸರ್ಕಾರದ ಸಂಸ್ಥೆಗಳೇ ಪ್ರಧಾನವಾಗಿದ್ದರೂ ಪ್ರಾಥಮಿಕ ಪೂರ್ವ, ಪ್ರೌಢ ಮತ್ತು ಉನ್ನತ ಶಿಕ್ಷಣಕ್ಷೇತ್ರಗಳಲ್ಲಿ ಖಾಸಗಿ ಮತ್ತು ಸ್ಥಳೀಯ ಸರ್ಕಾರದ ಶಿಕ್ಷಣ ಸಂಸ್ಥೆಗಳು ಅಧಿಕ ಸಂಖ್ಯೆಯಲ್ಲಿವೆ. ಅವೂ ಸಾರ್ವಜನಿಕ ಶಿಕ್ಷಣದಲ್ಲಿ ಭಾಗವಹಿಸುವುದರಿಂದ ಸರ್ಕಾರದ ಧನಸಹಾಯಕ್ಕೆ ಅವು ಅರ್ಹತೆ ಹೊಂದಿರುತ್ತವೆ. ಈ ಸಹಾಯಧನದ (ಸಹಾಯಕ ಅನುದಾನ) ಪದ್ಧತಿ, ಸಹಾಯ ಪಡೆಯತಕ್ಕ ಖಾಸಗಿ ಸಂಸ್ಥೆಯ ಆಡಳಿತ ಮಂಡಲಿ ಇತರ ಮೂಲಗಳಿಂದ ತನ್ನ ಪಾಲಿನ ಒಂದಷ್ಟು ಹಣವನ್ನು ಒದಗಿಸಿಕೊಳ್ಳಬೇಕೆಂಬ ತತ್ತ್ವದ ಮೇಲೆ ಏರ್ಪಟ್ಟಿದೆ. ಸಾಮಾನ್ಯವಾಗಿ ಖಾಸಗಿ ಅಥವಾ ಸ್ಥಳೀಯ ಸರ್ಕಾರಗಳ ಶಿಕ್ಷಣಸಂಸ್ಥೆಗಳಿಗೆ ಅಷ್ಟಾಗಿ ಧನದ ಬೆಂಬಲ ಇಲ್ಲದ್ದರಿಂದ ಅವು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಟ್ಟಡ, ಅಧ್ಯಾಪಕ ವರ್ಗ, ಉಪಕರಣಗಳು, ಗ್ರಂಥಾಲಯ, ಪ್ರಯೋಗಾಲಯ– ಇತ್ಯಾದಿ ಸೌಲಭ್ಯಗಳು ಅಷ್ಟು ಸಮರ್ಪಕವಾಗಿರಲಾರವು. ಅದರಿಂದ ಅವು ಸಮರ್ಪಕವಾಗಿ ಕೆಲಸ ಮಾಡಲಾರದೆ ಸಾರ್ವಜನಿಕ ಶಿಕ್ಷಣಸೇವೆಯ ಒಂದು ಪ್ರಧಾನ ಅಂಗ ಕರ್ತವ್ಯವಿಮುಖವಾದಂತಾಗುವುದು. ಹಾಗಾಗದಂತೆ ನೋಡಿಕೊಳ್ಳುವ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುವುದಕ್ಕಾಗಿ ಸರ್ಕಾರ ಅದಕ್ಕೆ ಸಹಾಯಧನ ನೀಡಬೇಕಾಗುತ್ತದೆ. ಹಾಗೆ ಸಾರ್ವಜನಿಕ ಬೊಕ್ಕಸದಿಂದ ಖಾಸಗಿ ಸಂಸ್ಥೆಗಳಿಗೆ ಹಣವನ್ನು ನೀಡುವಾಗ ಹಲವು ನೀತಿನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಆ ನೀತಿನಿಯಮಗಳು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅಧಿಕಾರ ಮೂಲಗಳಿಂದ ರೂಪುಗೊಂಡಿರುತ್ತವೆ. ಸಹಾಯಧನ ನೀಡಿಕೆಗೆ ಸಂಬಂಧಿಸಿದ ಷರತ್ತುಗಳು, ಕಾರ್ಯಕ್ರಮ, ಧನಸಹಾಯದ ಪ್ರಮಾಣವನ್ನು ಸೂಚಿಸುವ ಸೂತ್ರ–ಇವನ್ನೆಲ್ಲ ಒಳಗೊಂಡಂತೆ ರೂಪಿಸಿರುವ ರಾಜ್ಯಸರ್ಕಾರದ ಅಧಿಕೃತ ನಿಯಮಾವಳಿಯೇ ಸಹಾಯಧನದ ಕಟ್ಟಳೆ ಅಥವಾ ಸಹಾಯಕ ಅನುದಾನ ಸಂಹಿತೆ (ಗ್ರಾಂಟ್–ಇನ್–ಏಡ್ ಕೋಡ್). ಈ ನಿಯಮಗಳು ರಾಜ್ಯ ಶಾಸನಗಳ ಮೂಲಕ ಇಲ್ಲವೆ ಸರ್ಕಾರದ ಕಾರ್ಯನಿರ್ವಾಹಕಾಂಗದ ರೂಪುಗೊಂಡು, ಅಂದಿಗಂದಿಗೆ

ಪುನರ್ವಿಮರ್ಶಿತವಾಗಿ, ತಿದ್ದುಪಡಿಯಾಗಿ ಅಥವಾ ಹೊಸದಾಗಿ ರಚನೆಯಾಗಿ ಲಿಖಿತ ರೂಪದಲ್ಲಿರುತ್ತವೆ. ಸದ್ಯದಲ್ಲಿ ಸಂಬಂಧಿಸಿದ ಹಿಂದಿನ ಎಲ್ಲ ನಿಯಾಮವಳಿಗಳ ಬದಲು ಇದು ಪೂರ್ಣವಾಗಿ ಆಚರಣೆಗೆ ಬಂದಿರುತ್ತದೆ.

**ಸಹಾಯಧನಕ್ಕೆ ಅರ್ಹತೆ :** ಬೇರೆ ಬೇರೆ ರಾಜ್ಯಗಳಲ್ಲಿ ರೂಪಿಸಿರುವ ಬೇರೆ ಬೇರೆ ಅನುದಾನ ನಿಯಮಾವಳಿಗಳು ರಾಜ್ಯಸರ್ಕಾರದ ಧನಸಹಾಯವನ್ನು ಪಡೆಯಲು ಬೇರೆ ಬೇರೆ ರೀತಿಯ ಷರತ್ತುಗಳನ್ನು ವಿಧಿಸುತ್ತವೆ. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ಸೂಚಿಸಿದೆ: 1 ರಾಜ್ಯದ ಶಿಕ್ಷಣಶಾಖೆ ಅಥವಾ ಸರ್ಕಾರದಿಂದ ಅಂಗೀಕೃತವಾದ ವಿಶ್ವವಿದ್ಯಾನಿಲಯ, ಕೊಲಿಜಿಯೆಟ್ ಅಥವಾ ಪ್ರಿ ಯೂನಿವರ್ಸಿಟಿ ಮಂಡಲಿ ನಿರ್ಧರಿಸಿರುವ ಪಠ್ಯಕ್ರಮವನ್ನು ಅನುಸರಿಸಿ ಅದು ಕಟ್ಟಡ, ಉಪಕರಣ ಗ್ರಂಥಾಲಯ, ಪ್ರಯೋಗಾಲಯ, ಅಧ್ಯಾಪಕವರ್ಗ ಇತ್ಯಾದಿಗಳ ಬಗ್ಗೆ ರೂಪಿಸಿರುವ ನೀತಿನಿಯಮಗಳನ್ನು ಪಾಲಿಸಬೇಕು. 2 ಧನಸಹಾಯ ಪಡೆಯತಕ್ಕ ಸಂಸ್ಥೆಗೆ ಪ್ರತ್ಯೇಕ ಆಡಳಿತ ಮಂಡಲಿ ಇರಬೇಕು; ಅದರಲ್ಲಿ ಖಾಸಗಿ ಸಂಸ್ಥೆಯ ಪ್ರತಿನಿಧಿ, ಸರ್ಕಾರದ ಪ್ರತಿನಿಧಿ, ಅಧ್ಯಾಪಕರ ಪ್ರತಿನಿಧಿ ಮತ್ತು ಆ ಪ್ರದೇಶದಲ್ಲಿ ಶಿಕ್ಷಣದಲ್ಲಿ ಆಸಕ್ತಿಯುಳ್ಳ ಜನತಾ ಪ್ರತಿನಿಧಿ–ಸದಸ್ಯರಾಗಿರಬೇಕು; ಆ ಪ್ರದೇಶದಲ್ಲಿ ಶಿಕ್ಷಣದಲ್ಲಿ ಆಸಕ್ತಿಯುಳ್ಳ ಜನತಾ ಪ್ರತಿನಿಧಿ–ಸದಸ್ಯರಾಗಿರಬೇಕು; ಆ ಮಂಡಲಿಯ ರಚನೆ, ಹೊಣೆಗಾರಿಕೆ, ಅಧಿಕಾರವ್ಯಾಪ್ತಿ ಇತ್ಯಾದಿ ಅಂಶಗಳ ಬಗ್ಗೆ ಅನುದಾನ ನಿಯಮಾವಳಿಯಲ್ಲಿ ಉಲ್ಲೇಖವಿರುತ್ತದೆ. 3 ಅಧ್ಯಾಪಕರನ್ನು ನೇಮಿಸಿಕೊಳ್ಳುವಾಗ ಅವರ ವಿದ್ಯಾರ್ಹತೆ, ವಿಶೇಷ ತರಬೇತು ಸಂಬಳ ಭತ್ಯೆಗಳು ಮತ್ತು ಇತರ ಸೇವಾ ವಿವರಗಳ ಬಗ್ಗೆ ಸರ್ಕಾರ ಸೂಚಿಸಿರುವ ನಿಯಮಗಳನ್ನು ಪಾಲಿಸಬೇಕು. 4 ಅನುದಾನ ನಿಯಮಾವಳಿಯಲ್ಲಿ ಸೂಚಿಸಿರುವ ಪ್ರಮಾಣದಂತೆ ಆಡಳಿತ ಸಂಸ್ಥೆ ತನ್ನ ಪಾಲಿನ ಹಣವನ್ನು ಒದಗಿಸಬೇಕು.

**ಖಾಸಗಿ ಶಾಲೆ ಮತ್ತು ಕಾಲೇಜುಗಳಿಗೆ ಸಂಬಂಧಿಸಿದ ಅನುದಾನ ನಿಯಮಾವಳಿಗಳು:** ಸದ್ಯದಲ್ಲಿ ಪ್ರಚಾರದಲ್ಲಿರುವ ಅನುದಾನ ನಿಯಮಾವಳಿಗಳು ಎಲ್ಲ ಶಿಕ್ಷಣ ಸಂಸ್ಥೆಗಳು ಸಮಾನವೆಂಬ ದೃಷ್ಟಿಯಲ್ಲಿ ರೂಪುಗೊಂಡಿವೆ. ಇದರಿಂದ ಒಳ್ಳೆಯ ಸಂಸ್ಥೆಗೆ ತಕ್ಕಷ್ಟು ಸಹಾಯಧನದ ಪ್ರೋತ್ಸಾಹ ದೊರೆಯಲಾರದು. ಸರಿಯಾಗಿ ಕೆಲಸ ಮಾಡದ ಸಂಸ್ಥೆಗಳಿಗೂ ಅಧಿಕ ಧನಸಹಾಯ ದೊರಕಬಹುದು. ಅಂಥ ದುರ್ಬಲ ಸಂಸ್ಥೆಗಳಲ್ಲಿ ಅಧ್ಯಾಪಕರ ಸೇವಾವಧಿಯ ಹಕ್ಕು, ಸಂಬಳಗಳ ಬಟವಾಡೆ ಇತ್ಯಾದಿಯಾದ ರಕ್ಷಣೆ ಇರುವುದಿಲ್ಲ; ಕಾರ್ಯಕ್ರಮ, ಶಿಸ್ತು, ಪರೀಕ್ಷಾ ಫಲಿತಾಂಶ ಇತ್ಯಾದಿ ಅಂಶಗಳಲ್ಲೂ ಅವು ತೀರ ಕೆಳಮಟ್ಟದಲ್ಲಿರುತ್ತವೆ. ಅವುಗಳ ಕೆಲಸವನ್ನು ಉತ್ತಮಪಡಿಸಲು ಶಿಕ್ಷಣಶಾಖೆ ವ್ಯಾಪಕವಾದ ಕಟ್ಟುಕಟ್ಟಳೆಗಳನ್ನು ರೂಪಿಸಿ ಅವನ್ನು ಎಲ್ಲ ಖಾಸಗಿ ಶಾಲೆಗಳಿಗೂ ಅನ್ವಯಿಸುತ್ತದೆ. ಇದರಿಂದ ದಕ್ಷತೆಯಿಂದ ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೆ ಕಿರುಕುಳವುಂಟಾಗಿ ಸ್ವತಂತ್ರ ಸನ್ನಿವೇಶದಲ್ಲಿ ಕೆಲಸ ಮಾಡುವ ಅವಕಾಶ ತಪ್ಪಿಹೋಗಿದೆ. ಈ ತೊಂದರೆಯನ್ನು ತಪ್ಪಿಸಲು ಅನುದಾನ ನಿಯಮಾವಳಿಯಲ್ಲಿ ಒಳ್ಳೆಯ ಮತ್ತು ಕೆಟ್ಟ ಸಂಸ್ಥೆಗಳಲ್ಲಿ ವ್ಯತ್ಯಾಸ ಕಲ್ಪಿಸಿ, ಅನುದಾನ ನೀಡಲು ನೆರವಾಗುವಂತೆ ವಿಭೇದ ಕಲ್ಪಿಸಬಹುದಾದ ಅವಕಾಶವಿರಬೇಕು. ಉತ್ತಮ ಅಧ್ಯಾಪಕ ವರ್ಗವನ್ನು ನೇಮಿಸಿಕೊಂಡು ನಿಷ್ಠೆಯಿಂದ ಕೆಲಸ ಮಾಡುತ್ತ ಹೆಚ್ಚು ದಕ್ಷತೆಯನ್ನು ವ್ಯಕ್ತಪಡಿಸುವ ಸಂಸ್ಥೆಗೆ ಅಧಿಕ ಸ್ವಾತಂತ್ರ್ಯವನ್ನೂ ಹೆಚ್ಚು ಧನಸಹಾಯವನ್ನೂ ನೀಡುವಂತಿರಬೇಕು. ಅಂಥ ದಕ್ಷ ಶಿಕ್ಷಣ ಸಂಸ್ಥೆಗಳಿಂದಲೇ ಶಿಕ್ಷಣರಂಗದಲ್ಲಿ ಪ್ರಗತಿ ಸಾಧ್ಯವಾಗುವುದು. ಕೊಠಾರಿ ಶಿಕ್ಷಣ ಆಯೋಗ ಸೂಚಿಸುವಂತೆ ಅವು ಮುಂದಿನ ಶಿಕ್ಷಣ ಸುಧಾರಣೆಯ ಬೆಳೆಗೆ ಬೀಜವಿದ್ದಂತೆ. ಮಿಕ್ಕ ದುರ್ಬಲ ಶಿಕ್ಷಣ ಸಂಸ್ಥೆಗಳಿಗೆ ಪ್ರತ್ಯೇಕವಾಗಿ ಕಠಿಣ ನಿಯಮಗಳನ್ನು ಸೇರಿಸಬಹುದು. ಆ ಮೂಲಕ ಅವುಗಳ ಕಾರ್ಯಕ್ರಮಗಳ ಬಗ್ಗೆ ಕಟ್ಟು ನಿಟ್ಟಾದ ಒತ್ತಾಯವನ್ನು ತರಬಹುದಾದರೂ ಅವಕ್ಕಿರಬಹುದಾದ ಎಡರುತೊಡರುಗಳ ಬಗ್ಗೆ ಸಹಾನುಭೂತಿ ಅಗತ್ಯ. ಆ ಮೂಲಕ ಅಂಥ ದುರ್ಬಲ ಸಂಸ್ಥೆಗಳು ತಮ್ಮ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವಂತಾಗಬೇಕು. ಹಾಗೆ ಹೆಚ್ಚಿಸಿಕೊಳ್ಳಲಾರದವನ್ನು ಸರ್ಕಾರ ವಹಿಸಿಕೊಳ್ಳಬೇಕು ಅಥವಾ ಮುಚ್ಚಿಬಿಡಬೇಕು.

ಶಿಕ್ಷಣ ಶಾಖೆ ಖಾಸಗಿ ಶಿಕ್ಷಣಸಂಸ್ಥೆಗಳಿಗೆ ಧನಸಹಾಯ ನೀಡುವಂತೆ ರಾಜ್ಯ ಸರ್ಕಾರಗಳು ಕಾಲೇಜುಗಳಂಥ ಉನ್ನತ ಶಿಕ್ಷಣಸಂಸ್ಥೆಗಳಿಗೂ ಧನಸಹಾಯ ನೀಡುತ್ತದೆ. ಸದ್ಯದಲ್ಲಿ ಅದಕ್ಕಾಗಿ ಸರ್ಕಾರದ ಕಾಲೇಜುಗಳೊಡನೆ ಖಾಸಗಿ ಕಾಲೇಜುಗಳನ್ನು ಸಮಾನವಾಗಿ ಭಾವಿಸಿ ಅನುದಾನ ನಿಯಮಾವಳಿಯನ್ನು ರೂಪಿಸಿದೆ. ಅವುಗಳ ನಿಯಂತ್ರಣದ ಬಗ್ಗೆಯೂ ಅಂಥದೇ ಏಕರೀತಿಯ ದೃಷ್ಟಿಯನ್ನನುಸರಿಸಲಾಗುತ್ತಿದೆ. ಪ್ರೌಢಶಾಲೆಗಳಲ್ಲಿ ಕಂಡುಬರುವ ಈ ತೊಂದರೆ ಉನ್ನತ ಮಟ್ಟದ ಶಿಕ್ಷಣದಲ್ಲೂ ಆಗುತ್ತಿದೆ. ಆದ್ದರಿಂದ ಶಾಲೆಗಳ ಅನುದಾನದ ಬಗ್ಗೆ ಸೂಚಿಸಿರುವ ವಿಭೇದಕಾರಕ ನಿಯಮಾವಳಿ ಕಾಲೇಜುಗಳ ಅನುದಾನ ಮತ್ತು ನಿಯಂತ್ರಣದ ಬಗ್ಗೆಯೂ ರಚನೆಯಾಗಬೇಕು. ಆ ಮೂಲಕ ಒಳ್ಳೆಯ ಕಾಲೇಜುಗಳಿಗೆ ಹೆಚ್ಚು ಸ್ವಾತಂತ್ರವನ್ನು ಹೆಚ್ಚು ಧನಸಹಾಯವನ್ನೂ ನೀಡುವ ಅವಕಾಶವಾಗಬೇಕು.

ಸಹಾಯಧನದ ನಿಯಮಾವಳಿಯನ್ನು ರೂಪಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ.

1. ಸಂಸ್ಥೆಯ ಆವರ್ತ (ರೆಕರಿಂಗ್) ವೆಚ್ಚದ ಬಗ್ಗೆ ಸಹಾಯಧನ ನೀಡುವಾಗ, ಸಂಸ್ಥೆ ಖಾಸಗಿ ಚಂದಾ ಹಣದಿಂದ ಕಟ್ಟಿಸಿರುವ ಕಟ್ಟಡವಾದರೆ ಶಾಲೆಯ ಅಥವಾ ಕಾಲೇಜಿನ ಕಟ್ಟಡಕ್ಕೆ ಸೂಕ್ತ ಬಾಡಿಗೆ ಹಣವನ್ನು ಅನುದಾನ ನೀಡಿಕೆಗೆ ಸೇರಿಸಿಕೊಳ್ಳಬೇಕು. ಅನಾವರ್ತ (ನಾನ್–ರೆಕರಿಂಗ್) ವೆಚ್ಚದ ಬಗ್ಗೆ ಇಂಥ ಸಮಸ್ಯೆ ಉದ್ಭವಿಸುವುದಿಲ್ಲ.

2. ಆವರ್ತ ವ್ಯಯವನ್ನು ಅಧ್ಯಾಪಕರ ವೆಚ್ಚ ಮತ್ತು ಅಧ್ಯಾಪಕೇತರರ ವೆಚ್ಚ ಎಂದು ಎರಡು ಭಾಗ ಮಾಡಿ, ಅಧ್ಯಾಪಕರ ವೆಚ್ಚದಲ್ಲಿ ಅವರಿಗೆ ನಿಷ್ಕರ್ಷಿತವಾಗಿರುವಂತೆ ಕೊಡುವ ಸಂಬಳ, ಭತ್ಯ, ಸಾರಿಗೆ ವೆಚ್ಚ ಇತ್ಯಾದಿಗಳಿಗೆ ವ್ಯಯ ಮಾಡಿದ ಹಣವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಆದರೆ ಅಧ್ಯಾಪಕೇತರ ವೆಚ್ಚಗಳ ಬಗ್ಗೆ ತೊಡಕಾಗಬಹುದು. ಆದ್ದರಿಂದ ಆ ಬಗ್ಗೆ ಶಾಲಾಕಾಲೇಜುಗಳು ಮಾಡಬಹುದಾದ ಕನಿಷ್ಠ ಮತ್ತು ಗರಿಷ್ಠ ಮಿತಿಗಳನ್ನು ರೂಪಿಸಬಹುದು. ಅಥವಾ ಅಧ್ಯಾಪಕರ ವೆಚ್ಚದ ಒಂದು ಪ್ರಮಾಣವನ್ನಾದರೂ ಗೊತ್ತುಮಾಡಬಹುದು. ಹೀಗೆ ಸರ್ಕಾರ ಅಥವಾ ವಿಶ್ವವಿದ್ಯಾನಿಲಯ ನಿರ್ಧರಿಸಿದ ಮಿತಿಯೊಳಗೆ ಶಾಲೆ ಅಥವಾ ಕಾಲೇಜು ತನ್ನ ಕಾರ್ಯಕ್ರಮದ ಹಿತದೃಷ್ಟಿಯಲ್ಲಿ ಎಷ್ಟನ್ನಾದರೂ ವ್ಯಯ ಮಾಡಲು ಸ್ವಾತಂತ್ರ್ಯ ಹೊಂದಿರಬೇಕು.

3. ಸಹಾಯಧನವನ್ನು ನೀಡುವಾಗ, ಆಯಾ ಶಾಲೆ ಅಥವಾ ಕಾಲೇಜು ಬೋಧನೆಯ ಶುಲ್ಕ(ತೆರ)ದಿಂದ ಸಂಗ್ರಹಿಸಿದ ಹಣವನ್ನು ಕಳೆದು ಉಳಿದ ಹಣವನ್ನು ನೀಡಲಾಗುವುದು; ಕೆಲವು ಖಾಸಗಿ ಸಂಸ್ಥೆಗಳು ವಿದ್ಯಾರ್ಥಿಗಳಿಂದ ಸ್ವೇಚ್ಛೆಯಾಗಿ ಅಧಿಕ ದರದ ತೆರವನ್ನು ಸಂಗ್ರಹಿಸಿ ಅದನ್ನು ಚಂದಾ ಎಂದು ರಸೀದಿ ಕೊಡುವುದುಂಟು. ಆದ್ದರಿಂದ ಖಾಸಗಿ ಸಂಸ್ಥೆಗಳಿಗೆ ಅಂಗೀಕಾರ ನೀಡುವಾಗ ಅದು ಸಂಗ್ರಹಿಸಬಹುದಾದ ತೆರದ ಪರಮಾವಧಿ ಮೊತ್ತವನ್ನು ನಿರ್ಧರಿಸಬೇಕು. ಜೊತೆಗೆ ಅದು ಕೊಡಬೇಕಾದ ತೆರದ ರಿಯಾಯಿತಿ (ಫ್ರೀಷಿಪ್) ಸಂಖ್ಯೆಯನ್ನೂ ನಿರ್ಧರಿಸಬೇಕು, ವಿಶ್ವವಿದ್ಯಾನಿಲಯದ ಅಥವಾ ಸರ್ಕಾರದ ಸಂಸ್ಥೆಗಳಲ್ಲಿ ಸಂಗ್ರಹಿಸುವ ಶುಲ್ಕದ ದರಕ್ಕಿಂತ ಹೆಚ್ಚಾಗಿ ಸಂಗ್ರಹಿಸಲು ಅವಕಾಶವಿತ್ತರೂ ಆ ಬಗ್ಗೆ ಸರಿಯಾದ ಲೆಕ್ಕವಿಡುವಂತೆ ಕಡ್ಡಾಯ ಮಾಡಿ ಆ ಹಣವನ್ನು ಸಂಸ್ಥೆಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಅವಕಾಶವೀಯಬಹುದು.

4. ಅನುದಾನವನ್ನು ನಿರ್ಧರಿಸುವಾಗ ಅನುಸರಿಸಬಹುದಾದ ಸೂತ್ರವೊಂದನ್ನು ಕೊಠಾರಿ ಶಿಕ್ಷಣ ಆಯೋಗ ಸೂಚಿಸಿದೆ. ಅದನ್ನಿಲ್ಲಿ ಉಲ್ಲೇಖಿಸಬಹುದು: ಅಧ್ಯಾಪಕರೆಲ್ಲರ ಸಂಬಳದ ಹಣ, ಅಧ್ಯಾಪಕೇತರ ಬಾಬ್ತುಗಳಿಗೆ ಖರ್ಚು ಮಾಡಿದ ಒಟ್ಟು ಹಣ ಅಥವಾ ಆ ಬಗ್ಗೆ ಹಾಕಿರುವ ಗರಿಷ್ಠ ಮಿತಿ (ಅವೆರಡರಲ್ಲಿ ಕಡಿಮೆಯಾದ್ದು), ಇವೆರಡರ ಮೊತ್ತದಲ್ಲಿ ಆಡಳಿತಸಂಸ್ಥೆ ಕೊಡಬೇಕೆಂದು ನಿರ್ಧಾರವಾಗಿರುವ ಪಾಲು ಹಣವನ್ನು (ಬೋಧನೆಯ ತೆರದಿಂದ ಸಂಗ್ರಹಿಸಿದ ಹಣದಿಂದ ಇದನ್ನು ಕೊಡಕೂಡದು. ಸಂಸ್ಥೆ ತನ್ನ ಸ್ವಂತ ಆದಾಯದಿಂದ ಅಥವಾ ನಿಧಿಯಿಂದ ಕೊಡಬೇಕು) ನಿಯಮಾನುಸಾರ ವಿದ್ಯಾರ್ಥಿಗಳಿಗೆ ಶುಲ್ಕದ ರಿಯಾಯಿತಿಯನ್ನು ಕೊಟ್ಟ ಮೇಲೆ ಸಂಗ್ರಹವಾದ ಶುಲ್ಕದ ಒಟ್ಟು ಹಣವನ್ನೂ ಕಟಾಯಿಸಿಕೊಂಡು ಮಿಕ್ಕುದನ್ನು ಸಹಾಯಧನವಾಗಿ ಕೊಡಬೇಕು.

ಖಾಸಗಿ ಸಂಸ್ಥೆಗಳು ನೀಡಬೇಕಾದ ತಮ್ಮ ಪಾಲಿನ ಹಣದ ಪ್ರಮಾಣ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆಬೇರೆಯಾಗಿದೆ. ಹೇಗೆ ಇರಲಿ, ನೂತನ ಸನ್ನಿವೇಶಗಳಿಗೆ ಹೊಂದಿಸಿಕೊಳ್ಳಲು ಅನುಕೂಲಿಸುವಂತೆ ಅದರ ಪಾಲು ಹಣದ ಪ್ರಮಾಣವನ್ನು ಅಂದಿಗಂದಿಗೆ ಪುನರ್ವಿಮರ್ಶಿಸುವುದು ಅಗತ್ಯ. ಯುದ್ಧಾ ನಂತರದ ದಿನಗಳಲ್ಲಿ ಶಿಕ್ಷಣಕ್ಷೇತ್ರ ಅಗಾಧವಾಗಿ ವಿಸ್ತರಿಸಿದ್ದು, ಖಾಸಗಿ ಸಂಸ್ಥೆಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಲಾರದ ಫಲವಾಗಿ ಅವುಗಳ ಪಾಲುಹಣವನ್ನು ಏಕಪ್ರಕಾರವಾಗಿ ಕಡಿಮೆ ಮಾಡಲಾಗುತ್ತಿದೆ. ಆದ್ದರಿಂದ ಸರ್ಕಾರದಿಂದ ಬರುವ ಅನುದಾನ ಶೇ.50–100ರವರೆಗೂ ಹೆಚ್ಚಿದೆ.

ಈಚೆಗೆ ಪ್ರೌಢಶಾಲೆಯ ಹಂತದಲ್ಲಿ ಶಿಕ್ಷಣವನ್ನು ಉಚಿತಗೊಳಿಸಲಾಗುತ್ತಿದೆ. ಇದರ ಫಲವಾಗಿ ಪ್ರೌಢಶಾಲೆಗಳ ಅನುದಾನ ನಿಯಮಾವಳಿ ಬದಲಾಗಹತ್ತಿದೆ. ಖಾಸಗಿ ಶಾಲೆಗಳು ಸರ್ಕಾರದ ಈ ನೀತಿಯನ್ನೊಪ್ಪಿ, ಶುಲ್ಕವನ್ನು ಸಂಗ್ರಹಿಸದಿದ್ದರೆ ಮಾತ್ರ ಅವಕ್ಕೆ ಅನುದಾನ ದೊರಕುವುದು. ಇಲ್ಲವಾದರೆ ಅವು ಸ್ವತಂತ್ರ ಶಿಕ್ಷಣ ಸಂಸ್ಥೆಗಳಾಗಿ ಉಳಿಯಬೇಕಾಗುತ್ತದೆ. ಆಗ ಅದಕ್ಕೆ ಸಾರ್ವಜನಿಕ ಬೊಕ್ಕಸದಿಂದ ಅನುದಾನ ದೊರಕಲಾರದು ; ಮಿಕ್ಕ ಖಾಸಗಿ ಶಾಲೆಗಳಿಗೆ ಉದಾರವಾಗಿ ಅನುದಾನ ದೊರಕುವುದು.

ಪ್ರೌಢಶಾಲೆಗಳಿಗೆ ಅನುದಾನವನ್ನು ನಿರ್ಧರಿಸುವಾಗ ಮೇಲಿನ ಸೂತ್ರದೊಡನೆ ಈ ಎರಡು ಟಿಪ್ಪಣಿಗಳನ್ನೂ ಪರಿಗಣಿಸಬೇಕಾಗುತ್ತದೆ :

1. ಅಧ್ಯಾಪಕೇತರ ವ್ಯಯದ ಗರಿಷ್ಠ ಮಿತಿಯನ್ನು ಬೇರೆಬೇರೆ ವಿಧದ ಶಾಲೆಗಳಿಗೆ ಬೇರೆಬೇರೆಯಾಗಿ ಗೊತ್ತು ಮಾಡಬೇಕು; ಹಿಂದುಳಿದ ಭಾಗಗಳ ಶಾಲೆಗಳಿಗೂ ಬಾಲಿಕಾ ಪಾಠಶಾಲೆಗಳಿಗೂ ಸೂಕ್ತ ರೀತಿಯ ವಿಭೇದಕ ಮಿತಿಗಳನ್ನು ನಿರ್ಧರಿಸಬೇಕು. ತಮ್ಮ ಪಾಲುಹಣವನ್ನು ಒದಗಿಸುವುದಕ್ಕಾಗಿ ಪ್ರೌಢಶಾಲೆ 50,000 ರೂಪಾಯಿಯನ್ನೂ ಉನ್ನತ

ಪ್ರೌಢಶಾಲೆ 1,00,000 ರೂಪಾಯಿಯನ್ನೂ ದತ್ತಿಯಾಗಿ ಹೊಂದಿರಬೇಕು. ಅದು ಸಾಧ್ಯವಾಗುವರೆಗೆ ಆಯಾ ಸಂಸ್ಥೆಯ ಆಡಳಿತ ಮಂಡಲಿ ಆ ದತ್ತಿಗೆ ಬರತಕ್ಕ ಬಡ್ಡಿ ಹಣದಷ್ಟನ್ನು ಒದಗಿಸಬೇಕು.

2. ಪ್ರೌಢಶಾಲೆಗಳಲ್ಲಿ ಶಿಕ್ಷಣವನ್ನು ಉಚಿತವಾಗಿ ಮಾಡಿರುವ ಕಡೆ (ಅನುದಾನ ಸೂತ್ರದಲ್ಲಿ ಸೂಚಿಸಿರುವ) ಸಂಗ್ರಹಿಸಿದ ಶುಲ್ಕದಷ್ಟು ಹಣವನ್ನು ಅನುದಾನ ಹಣದಿಂದ ಕಟಾಯಿಸಿಕೊಳ್ಳುವ ಅಂಶವನ್ನು ಕೈಬಿಡಬೇಕು.

ಅನಾವರ್ತ ವೆಚ್ಚದ ಬಗ್ಗೆ ಖಾಸಗಿ ಶಾಲೆಯ ಆಡಳಿತ ಸಂಸ್ಥೆ ಒಟ್ಟು ವೆಚ್ಚದ ಬಹುಭಾಗವನ್ನು ವಹಿಸಬೇಕು. ಆದ್ದರಿಂದ ಒಟ್ಟು ವೆಚ್ಚದ ಶೇ. 50ರಷ್ಟು ಮಾತ್ರ ಅನುದಾನವನ್ನು ನೀಡಬಹುದು. ಶಿಕ್ಷಣದಲ್ಲಿ ಹಿಂದುಳಿದ ಪ್ರದೇಶಗಳ ಪಾಠಶಾಲೆಗಳಿಗೂ ಬಾಲಕಿಯರ ಪಾಠಶಾಲೆಗಳಿಗೂ ಆ ಪ್ರಮಾಣವನ್ನು ಹೆಚ್ಚಿಸಬಹುದು. ಹಾಗೆಯೇ ಬೇರೆಬೇರೆ ವಿಧದ ಪಾಠಶಾಲೆಗಳಿಗೂ ಆ ಪ್ರಮಾಣವನ್ನು ಹೆಚ್ಚುಕಡಿಮೆಯಾಗಿ ನಿಗದಿ ಮಾಡಬಹುದು.

ಮೇಲಿನ ಅನುದಾನ ಸೂತ್ರ ಸಾಮಾನ್ಯ ಸಂದರ್ಭಗಳಿಗೆ ಅನ್ವಯಿಸುತ್ತದೆ. ವಿಶೇಷ ಸಂದರ್ಭಗಳಿಗಾಗಿ ಕೆಲವು ಷರತ್ತುಗಳನ್ನು ನಿಯಮಾವಳಿ ಒಳಗೊಂಡಿರಬೇಕು. ಅಧ್ಯಾಪಕರನ್ನು ಸತತವಾಗಿ ಉಳಿಸಿಕೊಳ್ಳದಿರುವಿಕೆ, ಅವರಿಗೆ ಸೂಕ್ತ ಸೌಲಭ್ಯ ನೀಡದಿರುವಿಕೆ, ಅಶಿಸ್ತು, ಕಡಿಮೆ ಫಲಿತಾಂಶ–ಇವುಗಳಿಗಾಗಿ ಅನುದಾನವನ್ನು ಕಡಿಮೆ ಮಾಡುವ ಅವಕಾಶವಿರಬೇಕು. ಹಾಗೂ ಒಳ್ಳೆಯ ಅಧ್ಯಾಪಕರನ್ನು ನೇಮಿಸಿಕೊಂಡು, ಉತ್ತಮ ಆದರ್ಶವನ್ನು ಪ್ರದರ್ಶಿಸಿ, ದಕ್ಷತೆ ನಿಷ್ಠೆಗಳಿಂದ ಕೆಲಸ ಮಾಡಿ, ಉತ್ತಮ ಫಲಿತಾಂಶವನ್ನು ಸಾಧಿಸುವ ಶಾಲೆಯ ಅಭಿವೃದ್ಧಿಗೂ ಅವು ನಡೆಸುವ ಪ್ರಯೋಗಗಳಿಗೂ ಹೆಚ್ಚಿನ ಅನುದಾನ ನೀಡುವ ಅವಕಾಶವೂ ಇರಬೇಕು.

ಸಾಮಾನ್ಯವಾಗಿ ಎಲ್ಲ ಅನುದಾನ ನಿಯಮಾವಳಿಗಳಲ್ಲೂ ಅನುದಾನ ಬಯಸುವ ಖಾಸಗಿ ಸಂಸ್ಥೆಗಳು ಲಾಭದ ದೃಷ್ಟಿಯಿಲ್ಲದೆ ಧರ್ಮಾರ್ಥವಾಗಿ ಕೆಲಸ ಮಾಡಬೇಕೆಂಬ ನಿಯಮವುಂಟು. ಜೊತೆಗೆ ರಾಜ್ಯದ ಧರ್ಮಸಂಸ್ಥೆಗಳ ಕಾಯಿದೆಯ ಪ್ರಕಾರವನ್ನು ನೋಂದಣಿ ಆಗಬೇಕೆಂಬ ಷರತ್ತೂ ಇರುವುದುಂಟು. ಆದ್ದರಿಂದ ಖಾಸಗಿ ಮಾಲೀಕತ್ವವನ್ನು ಹೊಂದಿ ಲಾಭ ದೃಷ್ಟಿಯಿಂದ ಹೊರಟ ಸಂಸ್ಥೆಗಳಿಗೆ ಅಂಗೀಕಾರ ನೀಡಬಹುದಾದರೂ ಅವಕ್ಕೆ ಅನುದಾನವನ್ನು ನಿರಾಕರಿಸಬೇಕು.

ಕೆಲವು ರಾಜ್ಯಗಳ ಅನುದಾನ ನಿಯಮಾವಳಿಯಲ್ಲಿ ಅಗತ್ಯವೆನಿಸಿದಾಗ ಅಂಗೀಕಾರವನ್ನು ಹಿಂತೆಗೆದುಕೊಳ್ಳುವ ಷರತ್ತೂ ಇರುತ್ತದೆ. ಆದರೆ ಈ ಅಸ್ತ್ರವನ್ನು ನಿಜವಾಗಿ ಪ್ರಯೋಗಿಸುತ್ತಿಲ್ಲ, ಹಾಗೆ ಮಾಡಿದರೆ ಅಲ್ಲಿರುವ ಅಧ್ಯಾಪಕರಿಗೆ ಕೆಲಸ ಹೋಗುವುದಲ್ಲದೆ ಅಲ್ಲಿಯ ಜನರಿಗೆ ವಿದ್ಯಾಸೌಲಭ್ಯ ದೊರಕದಂತಾಗಬಹುದು. ಅಂಥ ಶಾಲೆಗಳನ್ನು ಸರ್ಕಾರವೇ ವಹಿಸಿಕೊಂಡರೆ ಆ ತೊಂದರೆಗಳಿಗೆ ಅವಕಾಶವಾಗುವುದಿಲ್ಲ; ಜೊತೆಗೆ ಹೀನಸ್ಥಿತಿಯಲ್ಲಿರುವ ಇತರ ಶಾಲೆಗಳಿಗೂ ಅದು ಒಂದು ಎಚ್ಚರಿಕೆಯಾಗಬಹುದು.

ಸ್ಥಳೀಯ ಸರ್ಕಾರದ ಶಾಲಾಕಾಲೇಜುಗಳಿಗೆ ಅನುದಾನ ನಿಯಮಾವಳಿ: ಭಾರತದಲ್ಲಿ ಜಿಲ್ಲಾ ಪರಿಷತ್ತು, ತಾಲೂಕು ಅಭಿವೃದ್ಧಿ ಮಂಡಲಿ ಇತ್ಯಾದಿ ಸ್ಥಳೀಯ ಸರ್ಕಾರದ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಿಗೂ ಕಾಲೇಜುಗಳಿಗೂ ಸರ್ಕಾರದ ಅನುದಾನವನ್ನು ಕೊಡಲಾಗುತ್ತಿದೆ. ಅದಕ್ಕಾಗಿ ರಚಿಸಿರುವ ನಿಯಮಾವಳಿ ಅಷ್ಟಾಗಿ ಸಮರ್ಪಕವಾಗಿಲ್ಲ. ಕೆಲವು ರಾಜ್ಯಗಳಲ್ಲಿ ಸ್ಥಳೀಯ ಸರ್ಕಾರ ಅದಕ್ಕಾಗಿ ಎತ್ತುವ ತೆರಿಗೆ ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡಾಗ ಆಗಿರುವ ವ್ಯಯದಲ್ಲಿ ಕಂಡುಬರುವ ಖಾತಾ ಹಣವನ್ನು ತುಂಬಿಕೊಡುವುದು ಆಚರಣೆಯಲ್ಲಿದೆ. ಇನ್ನು ಕೆಲವು ರಾಜ್ಯಗಳಲ್ಲಿ ಒಟ್ಟು ವೆಚ್ಚದ ಒಂದು ನಿಗದಿ ಮಾಡಿರುವ ಶೇಕಡಾ ಪ್ರಮಾಣದಲ್ಲಿ ಅನುದಾನ ನೀಡಲಾಗುವುದು. ಮೊದಲ ಪದ್ಧತಿಯಲ್ಲಿ ಪ್ರಭಾವಶಾಲಿ ಸಂಸ್ಥೆಗಳಿಗೆ ಹೆಚ್ಚು ಹಣವನ್ನೂ ಮಿಕ್ಕವಕ್ಕೆ ಕಡಿಮೆ ಹಣವನ್ನೂ ಹಂಚುವ ಅವಕಾಶವಾಗುವುದು. ಎರಡನೆಯ ಪದ್ಧತಿಯಲ್ಲಿ ಬಲವಾದ ಜಿಲ್ಲೆಗಳು ಹೆಚ್ಚು ವ್ಯಯಮಾಡಿ ಹೆಚ್ಚು ಅನುದಾನದ ಹಣ ಪಡೆಯುವುದಕ್ಕೂ ಬಡಜಿಲ್ಲೆಗಳೂ ಕಡಿಮೆ ಪಡೆಯುವುದಕ್ಕೂ ದಾರಿಯಾಗುತ್ತದೆ; ಜೊತೆಗೆ, ಮಾಡಿರುವ ಖರ್ಚಿನಲ್ಲಿ ಯಾವುದು ಸರಿ, ಯಾವುದು ಅಲ್ಲ ಎಂಬುದನ್ನು ನಿರ್ಧರಿಸುವ ಕಷ್ಟವೂ ತಲೆದೋರುತ್ತದೆ. ಇನ್ನು ಕೆಲವು ರಾಜ್ಯಗಳಲ್ಲಿ ಒಟ್ಟಾರೆ ಸಹಾಯಧನವನ್ನು (ಬ್ಲಾಕ್ ಗ್ರಾಂಟ್) ನಿಷ್ಕರ್ಷಿಸುವ ಪದ್ಧತಿಯೂ ಇದೆ. ಈ ಪದ್ಧತಿಯಲ್ಲಿ ಆಯವ್ಯಯವನ್ನು ಅಗತ್ಯಕ್ಕೆ ತಕ್ಕಂತೆ ಹೊಂದಿಸಿಕೊಳ್ಳುವುದು ಕಷ್ಟ; ಹಾಗೂ ಶಿಕ್ಷಣದ ವೆಚ್ಚ ದಿನದಿನಕ್ಕೂ ಹೆಚ್ಚುತ್ತಿರುವ ಈ ಕಾಲದಲ್ಲಿ ಇದು ಹಿತಕರವಾದ ಪದ್ಧತಿಯೇ ಅಲ್ಲ, ಆದ್ದರಿಂದ ಸದ್ಯದಲ್ಲಿ ಆಚರಣೆಯಲ್ಲಿರುವ ಸಹಾಯಧನದ ನಿಯಮಾವಳಿಯನ್ನು ಸುಧಾರಿಸಬೇಕು. ಮೊದಲನೆಯದಾಗಿ, ಸರ್ಕಾರ ಮಂಜೂರು ಮಾಡಿರುವಂತೆ ಅಧ್ಯಾಪಕರು, ಮೇಲ್ವಿಚಾರಕರು, ಕಾರ್ಯಾಲಯದ ಸಿಬ್ಬಂದಿ ಇವರೆಲ್ಲರ ಸಂಬಳ ಇತ್ಯಾದಿಗಳ ಒಟ್ಟು ಹಣದಲ್ಲಿ ಶೇ.100ರಷ್ಟನ್ನು ಅನುದಾನವಾಗಿ ಕೊಡಬೇಕು. ಆಗ, ವಿದ್ಯಾರ್ಥಿ ಸಂಖ್ಯಾಬಲಕ್ಕನುಗುಣವಾಗಿ ಅಧ್ಯಾಪಕರನ್ನೂ ಅಧ್ಯಾಪಕರ ಸಂಖ್ಯೆಗನುಗುಣವಾಗಿ ಮೇಲ್ವಿಚಾರಕರನ್ನೂ ನೇಮಕ ಮಾಡಿಕೊಳ್ಳಬಹುದಾದ ಅವಕಾಶವಿರುತ್ತದೆ. ಹಾಗೆ ನೇಮಕ ಮಾಡಿಕೊಳ್ಳಬಹುದಾದ ಅಧ್ಯಾಪಕರ ಮತ್ತು ಮೇಲ್ವಿಚಾರಕರ ಸಂಖ್ಯೆಯನ್ನು ಪೂರ್ವಭಾವಿಯಾಗಿ ನಿರ್ಧರಿಸಬೇಕು. ಎರಡನೆಯದಾಗಿ, ಕಾರ್ಯಾಲಯದ ಸಿಬ್ಬಂದಿಯ ವೆಚ್ಚದ ಬಗ್ಗೆ ವಿದ್ಯಾರ್ಥಿಸಂಖ್ಯಾಬಲಕ್ಕನುಗುಣವಾಗಿ ಅನುದಾನದ ಮೊತ್ತವನ್ನು ನಿರ್ಧರಿಸಬೇಕು. ಇದನ್ನು ಪ್ರತಿವರ್ಷವೂ ಪುನರ್ವಿಮರ್ಶಿಸುತ್ತಿರಬೇಕು. ಮೂರನೆಯದಾಗಿ, ಸ್ಥಳೀಯ ಸರ್ಕಾರ ಎತ್ತುವ ಶಿಕ್ಷಣದ ತೆರಿಗೆ ಮತ್ತು ಸರ್ಕಾರ ನೀಡುವ ಅನುದಾನದ ಹಣ ಆ ಸಂಸ್ಥೆಗೇ ಸೇರಿದ್ದಾಗಿದ್ದು ಅದರ ಶಿಕ್ಷಣದ ಅಭಿವೃದ್ಧಿ ಕಾರ್ಯಕ್ಕೆ ಬಳಕೆಯಾಗಬೇಕು. ಕೊನೆಯದಾಗಿ, ಅನಾವರ್ತ ವ್ಯಯಗಳ ಬಗ್ಗೆ ಪ್ರತ್ಯೇಕವಾಗಿ ಒಟ್ಟು ವ್ಯಯದ ಅರ್ಧದಷ್ಟು ಸಹಾಯಧನ ನೀಡಬೇಕು. ಈ ರೀತಿ ಅನುದಾನ ನಿಯಮಗಳನ್ನು ಪುನರ್ವಿಮರ್ಶಿಸುವಾಗ ಶಿಕ್ಷಣ ಸೇವಸೌಲಭ್ಯ ಎಲ್ಲ ಕಡೆಗೂ ಸಮಾನವಾಗಿ ದೊರಕುವಂತೆ ಮಾಡುವುದೇ ಮುಖ್ಯ ಉದ್ದೇಶವಾಗಿರಬೇಕು. ವರ್ಷದ ಅಂತ್ಯದೊಳಗಾಗಿ ಸಹಾಯಧನವನ್ನು ಬಳಸಿಕೊಳ್ಳಲು ಸಾಧ್ಯವಾಗದಿದ್ದರೆ ಅದನ್ನು ಅನಂತರ ಪಡೆದುಕೊಳ್ಳುವ ಅವಕಾಶ ಇರಬೇಕು. ಆಗ ಆ ಹಣವನ್ನು ನಿಧಾನವಾಗಿ ಎಚ್ಚರಿಕೆಯಿಂದ ಬಳಸಿಕೊಳ್ಳಲು ಅನುಕೂಲವಾಗುವುದು.

**ಪೌರಸಭೆಗಳ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನಿಯಮಾವಳಿ :** ತಾವು ನಡೆಸುವ ಶಿಕ್ಷಣ ಸಂಸ್ಥೆಗಳಿಗಾಗಿ ಪೌರಸಭೆಗಳು ಮನೆಗಂದಾಯದ ಮೇಲೆ ಶಿಕ್ಷಣದ ತೆರಿಗೆಯನ್ನು ಎತ್ತುವರಷ್ಟೆ. ಚಿಕ್ಕ ಪೌರಸಭೆಗಳಿಗೆ ಅದರಿಂದ ತಕ್ಕಷ್ಟು ಆದಾಯ ಬರುವಂತಿಲ್ಲ. ಆದ್ದರಿಂದ ಸರ್ಕಾರ ಸಹಾಯಧನ ನೀಡುವ ಬಗ್ಗೆ ಈ ಅಂಶವನ್ನು ಗಣನೆಗೆ ತೆಗೆದುಕೊಂಡು ಎಲ್ಲ ಪೌರಸಭೆಗಳೂ ಸಮಾನ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲು ಅವಕಾಶವಾಗುವಂತೆ ನಿಯಮಗಳನ್ನು ರಚಿಸಬೇಕು, ಪ್ರಾಥಮಿಕ ಶಿಕ್ಷಣಕ್ಕಾದರೆ ಪ್ರತಿ ಮಗುವಿನ ಶಿಕ್ಷಣಕ್ಕೂ ಪ್ರತಿವರ್ಷವೂ 50 ರೂ. ವ್ಯಯವಾಗುವುದೆಂದು ಭಾವಿಸಿ, ಆಯಾ ಪ್ರದೇಶದಲ್ಲಿ ಎತ್ತುವ ತೆರಿಗೆಯ ಜೊತೆಗೆ ಮಿಕ್ಕಿದ್ದನ್ನು ತುಂಬಿಕೊಡಬೇಕು. ಆಗ ಕಡಿಮೆ ತೆರಿಗೆ ಸಂಗ್ರಹವಾಗುವ ಕಡೆ ಹೆಚ್ಚಿಗೆ ಶೇ. ಪ್ರಮಾಣದ ಅನುದಾನವನ್ನೂ ಅಧಿಕ ತೆರಿಗೆ ಸಂಗ್ರಹವಾಗುವ ಕಡೆ ಕಡಿಮೆ ಶೇ. ಪ್ರಮಾಣದ ಅನುದಾನವನ್ನೂ ಗೊತ್ತು ಮಾಡಬಹುದು. ಇಂಥ ಅನುದಾನ ಪದ್ಧತಿಗೆ ಶಿಕ್ಷಣ ಸೇವಾಸೌಲಭ್ಯದ ಸಮೀಕರಣ ತತ್ತ್ವ ಎನ್ನುವರು.

ಕರ್ನಾಟಕ ರಾಜ್ಯದಲ್ಲಿ ಪ್ರೌಢಶಾಲೆಗಳ ಅನುದಾನ ನಿಯಮಾವಳಿ : ಕರ್ನಾಟಕ ರಾಜ್ಯದಲ್ಲಿ ಪ್ರೌಢಶಾಲೆಗಳ ಅನುದಾನಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಿರುವ 1967ರ ನಿಯಮಾವಳಿ ಮೇಲಿನ ಆದರ್ಶ ತತ್ತ್ವಗಳಲ್ಲಿ ಕೆಲವನ್ನು ಗಮನದಲ್ಲಿಟ್ಟುಕೊಂಡು ರೂಪಿಸಿದಂತಿದೆ. ಸಹಾಯಧನಕ್ಕೆ ಅರ್ಹತೆ ಪಡೆಯಲಿಚ್ಛಿಸುವ ಶಾಲೆ ಮಾನ್ಯತೆ ಪಡೆದಿರಬೇಕು; ಜೊತೆಗೆ ಆಡಳಿತ ಸಂಸ್ಥೆ ಆರಂಭದಲ್ಲಿ ನಿರ್ದಿಷ್ಟ ಠೇವಣಿಯನ್ನು ಇಡಬೇಕು. ಅನಂತರ ಆರಂಭವಾಗುವ ಪ್ರತಿ ತರಗತಿಗೂ ಅಧಿಕ ಠೇವಣಿ ಕೂಡಿಸಿಡಬೇಕು. ಶಾಲೆ ಸಂಗ್ರಹಿಸುವ ಬೋಧನೆಯ ಶುಲ್ಕವನ್ನು ಸರ್ಕಾರದ ಬೊಕ್ಕಸಕ್ಕೆ ಕಟ್ಟಬೇಕು. ಸಂಸ್ಥೆ ಸಂಗ್ರಹಿಸುವ ಚಂದಾಹಣ, ಠೇವಣಿಯ ಮೇಲೆ ಗಳಿಸಿದ ಬಡ್ಡಿಯ ಹಣ, ಸಹಾಯಧನ ಇತ್ಯಾದಿ ಆದಾಯದಿಂದ ಬರುವ ಹಣವನ್ನು ತನ್ನ ಹೆಸರಿನಲ್ಲಿ ಲೆಕ್ಕವಿಡಬೇಕು, ವಾರ್ಷಿಕ ಆದಾಯ ವೆಚ್ಚದಲ್ಲಿ ಅದನ್ನೆಲ್ಲ ತೋರಿಸಬೇಕು. ಆ ಬಗ್ಗೆ ಇಟ್ಟಿರುವ ಲೆಕ್ಕವನ್ನು ಅಂಗೀಕೃತ ಲೆಕ್ಕಪರೀಕ್ಷಕರಿಂದ ತನಿಖೆ ಮಾಡಿಸಿ ಶಿಕ್ಷಣ ಶಾಖೆಯ ಪರೀಕ್ಷೆ–ನಿರೀಕ್ಷೆಗಳಿಗೆ ಒಳಪಡಿಸಬೇಕು. ಆಡಳಿತ ಮಂಡಲಿ ಅಧ್ಯಾಪಕರನ್ನೂ ಇತರ ಸಿಬ್ಬಂದಿಯವರನ್ನೂ ಅದಕ್ಕಾಗಿ ರೂಪಿಸಿರುವ ನಿಯಮಗಳಿಗನುಸಾರವಾಗಿ ನೇಮಿಸಿಕೊಂಡು ಅನಂತರ ಶಿಕ್ಷಣಾಧಿಕಾರಿಗಳ ಒಪ್ಪಿಗೆಯನ್ನೂ ಪಡೆಯಬೇಕು. ಆಡಳಿತ ಮಂಡಲಿ ತನ್ನ ಆದಾಯದ ಹಣವನ್ನು ಆ ಸಂಸ್ಥೆಯ ಕಾರ್ಯಕ್ರಮಗಳಿಗಲ್ಲದೆ ಮಿಕ್ಕಾವ ಬಾಬಿಗೂ ವ್ಯಯ ಮಾಡಕೂಡದು. ಪ್ರತಿ ತರಗತಿಯಲ್ಲೂ ಸರಾಸರಿ ದೈನಂದಿನ ಹಾಜರಾತಿ 20ಕ್ಕಿಂತ ಕಡಿಮೆ ಇರುವ ಪ್ರೌಢಶಾಲೆಗಳಿಗೆ ಸಹಾಯಧನ ದೊರಕುವಂತಿಲ್ಲ. ಎಲ್ಲ ಪ್ರೌಢಶಾಲೆಗಳಲ್ಲೂ ಹತ್ತನೆಯ ತರಗತಿ ಪೂರ್ತ ಬೋಧನೆಯ ಶುಲ್ಕದ ವಿನಾಯಿತಿ ಇರಬೇಕು (ತೇರ್ಗಡೆಯಾಗದ ವಿದ್ಯಾರ್ಥಿಗಳನ್ನುಳಿದು). ಹಾಗೇನಾದರೂ ಶುಲ್ಕವನ್ನು ಎತ್ತಿದರೆ ಅಥವಾ ತೇರ್ಗಡೆಯಾದವರಿಂದ ಅಧಿಕ ಶುಲ್ಕ ಸಂಗ್ರಹಿಸಿದರೆ ಅಂಥ ಶಾಲೆಗಳಿಗೆ ಧನಸಹಾಯ ನೀಡುವುದಿಲ್ಲ. ಶಿಕ್ಷಣ ಶಾಖೆಯ ನಿಯಮಗಳನ್ನು ಆಲಿಸದಿದ್ದರೆ ಅಥವಾ ಇತರ ಸೂಕ್ತ ಕಾರಣಗಳಿಗಾಗಿ ಧನಸಹಾಯವನ್ನು ನಿಲ್ಲಿಸಬಹುದು ಅಥವಾ ಕಡಿಮೆ ಮಾಡಬಹುದು. ಹಾಗೂ ಸರ್ಕಾರ ಅಂಗೀಕರಿಸದಿರುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಕೂಡದು. ಇಷ್ಟೊಂದು ಷರತ್ತುಗಳನ್ನೊಳಗೊಂಡಿರುವುದರಿಂದ ಖಾಸಗಿ ಶಾಲೆಗಳಿಗೆ ಕೊಠಾರಿ ನಿಯೋಗ ಸೂಚಿಸಿದಷ್ಟು ಸ್ವಾತಂತ್ರ್ಯ ಇರುವುದಿಲ್ಲ. ಜೊತೆಗೆ ದಕ್ಷತೆಯಿಂದ ಕೆಲಸ ಮಾಡುವ ಸಂಸ್ಥೆಗಳಿಗೆ ಹೆಚ್ಚಿನ ಉತ್ತೇಜನವನ್ನಾಗಲಿ ದುರ್ಬಲ ಸಂಸ್ಥೆಗಳಿಗೆ ಹಿಡಿತವನ್ನಾಗಲಿ ತೋರಿಸುವ ಭೇದಕ ನೀತಿಯೂ ಅದರಲ್ಲಿ ಕಂಡುಬರುವುದಿಲ್ಲ.

**ಸಹಾಯಧನದ ಮೊತ್ತವನ್ನು ನಿಷ್ಕರ್ಷಿಸುವ ವಿಧಾನ :** ಶಾಲೆ ಮಾನ್ಯತೆ ಪಡೆದ ಅನಂತರದ ಮೊದಲ ಮೂರು ವರ್ಷಕಾಲ ಮಕ್ಕಳ ಸರಾಸರಿ ಹಾಜರಾತಿಯನ್ನು ಆಧಾರ ಮಾಡಿಕೊಂಡು ವರ್ಷದಲ್ಲಿ ಹತ್ತು ತಿಂಗಳ ಕಾಲದ ಅಧ್ಯಾಪಕರ ಸಂಬಳವನ್ನು ಲೆಕ್ಕಹಾಕಿ ಸಾಂಕೇತಿಕ ಧನಸಹಾಯವನ್ನು ನೀಡಲಾಗುವುದು. ಮೂರನೆಯ ವರ್ಷದ ಅನಂತರ ಪೂರ್ಣ ಪ್ರಮಾಣದ ಅನುದಾನ ದೊರಕುವುದು. ಅಧ್ಯಾಪಕರ ಮತ್ತು ಇತರ ಸಿಬ್ಬಂದಿಯವರ ಸಂಬಳ ಭತ್ಯಾದಿಗಳನ್ನು ಪೂರ್ಣವಾಗಿ ನೀಡಲಾಗುವುದು. ಅಧಿಕೃತ ಸಾಮಾನ್ಯ ವ್ಯಯಗಳಿಗೂ ಇತರ ವ್ಯಯಗಳಿಗೂ ತಗಲುವ ಸಾದಿಲ್ವಾರು ಹಣವನ್ನು ಗೊತ್ತುಪಡಿಸಿರುವ ಗರಿಷ್ಠ ಮಿತಿಯೊಳಗೆ ಧನಸಹಾಯ ನೀಡಲಾಗುವುದು. ಸರ್ಕಾರದ ಅನುಮತಿಯೊಡನೆ ಮಾಡುವ ಇನ್ನಾವುದಾದರೂ ಅಗತ್ಯ ಖರ್ಚಿನ ಬಗ್ಗೆ ಅದಕ್ಕಾಗಿ ಗೊತ್ತು ಮಾಡಿರುವ ಗರಿಷ್ಠ ಮಿತಿಯೊಳಗೆ ಧನಸಹಾಯ ನೀಡಲಾಗುವುದು. ಸಂಸ್ಥೆಗೆ ಸೇರಿದ ಕಟ್ಟಡ ಆಟದ ಮೈದಾನ ಇತ್ಯಾದಿಗಳ ರಿಪೇರಿ, ಕಂದಾಯ ಇತ್ಯಾದಿಗಳ ಬಗ್ಗೆ ತಗಲುವ (ನಿಗದಿ ಮಾಡಿರುವ ಗರಿಷ್ಠ ಮಿತಿಯೊಳಗೆ) ವೆಚ್ಚವನ್ನು ಅನುದಾನವಾಗಿ ಕೊಡುವುದುಂಟು. ಬಾಡಿಗೆ ಕಟ್ಟಡವಾದರೆ ಶಿಕ್ಷಣಶಾಖೆ ನಿರ್ಧರಿಸಿರುವ ಕೆಲವು ನಿಯಮಗಳ ಪ್ರಕಾರ ಬಾಡಿಗೆ ಹಣವನ್ನೂ ಕೊಡಲಾಗುವುದು. ಹೊಸದಾಗಿ ಕಟ್ಟಡ ಕಟ್ಟುವುದಕ್ಕೂ ಉಪಕರಣ, ಆಟದ ಮೈದಾನ ಮುಂತಾದವನ್ನು ಕೊಳ್ಳುವುದಕ್ಕೂ ತಗಲುವ ವೆಚ್ಚದ ಶೇ.50ರಷ್ಟನ್ನು ಅನುದಾನವಾಗಿ ಕೊಡಲಾಗುವುದು. ಶಾಲೆ ಕೈಗೊಳ್ಳುವ ಶೈಕ್ಷಣಿಕ ಪ್ರವಾಸಗಳಿಗೂ ನಡೆಸುತ್ತಿರುವ ನೂತನ ರೀತಿಯ ಶೈಕ್ಷಣಿಕ ಪ್ರಯೋಗಗಳಿಗೂ ಧನಸಹಾಯ ನೀಡುವುದಕ್ಕೂ ನಿಯಮಾವಳಿಯಲ್ಲಿ ಅವಕಾಶ ಕಲ್ಪಿಸಿದೆ. (ಎನ್.ಎಸ್.ವಿ.)

**ಕಟ್ಟಿನ ಕರೆ :** ಕೆಳಗಿನ ನ್ಯಾಯಪೀಠದಲ್ಲಿ ಅಥವಾ ಅರೆನ್ಯಾಯಾಲಯಗಳಂತೆ ಕಾರ್ಯನಿರ್ವಹಿಸುವ ತೆರಿಗೆ ಅಧಿಕಾರಗಳ ಸಮ್ಮುಖದಲ್ಲಿ ವಿಚಾರಣೆಗೆ ಬಂದ ಮೊಕದ್ದಮೆಯ ಕಟ್ಟನ್ನು-ಎಂದರೆ ಸಂಬಂಧಪಟ್ಟ ಕಾಗದಪತ್ರಗಳನ್ನು-ಕಳುಹಿಸಿಕೊಡಬೇಕೆಂದು ಪರಮೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದವರು ಕೊಡುವ ಆಜ್ಞಾಪತ್ರ (ಸರ್ಷಿಯೊರೇರೈ). ಕಕ್ಷಿಗೆ ಹೆಚ್ಚು ಶೀಘ್ರವಾಗಿ ನಿಶ್ಚಿತವಾದ ನ್ಯಾಯ ದೊರಕುವಂತೆ ಅಥವಾ ತಪ್ಪು ಆಕ್ರಮಗಳನ್ನು ಸರಿಪಡಿಸುವ ಸಲುವಾಗಿ ಕೈಕೊಳ್ಳುವ ಕ್ರಮವಿದು. ಕೆಳನ್ಯಾಯಾಲಯದಲ್ಲಿ ತನಗೆ ನ್ಯಾಯ ದೊರಕಿಲ್ಲವೆಂದೋ ಅಲ್ಲಿ ನ್ಯಾಯವಾದ ವಿಚಾರಣೆಯಾಗುವುದಿಲ್ಲವೆಂದೋ ಕಕ್ಷಿಯಿಂದ ಆಕ್ಷೇಪಣೆ ಬಂದಾಗ ಹೀಗೆ ಮಾಡಬಹುದು. ಪ್ರಜೆಗಳ ಹಕ್ಕುಗಳಿಗೆ ಬಾಧೆಯಾದ ಪ್ರಶ್ನೆಗಳನ್ನು ನಿರ್ಧರಿಸುವ ಬಗ್ಗೆ ವಿಚಾರಣೆ ನಡೆಸುವುದಕ್ಕಾಗಿ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಕಳುಹಿಸಿಕೊಡಬೇಕೆಂದು ಕೆಳಗಿನ ನ್ಯಾಯಪೀಠಕ್ಕೆ ಉಚ್ಚನ್ಯಾಯಾಲಯ ನೀಡಿದ ಆಜ್ಞೆಯಿದು-ಎಂಬುದು ಹ್ಯಾಲ್ಸ್‌ಬರಿಯ ಅಭಿಪ್ರಾಯ.

**ಚಾರಿತ್ರಿಕ ಹಿನ್ನೆಲೆ:** ದಿನದಿನಕ್ಕೆ ಸರ್ಕಾರದ ಕೆಲಸ ಕಾರ್ಯಗಳು ವಿಸ್ತಾರಗೊಳ್ಳುತ್ತವೆ. ಅದರೊಂದಿಗೆ ಕಾನೂನುಗಳೂ ನಿಯಮಗಳೂ ಹೆಚ್ಚುತ್ತವೆ. ಅವುಗಳ ಪಾಲನೆಗೆ ರೂಢವಾಗಿರುವ ನ್ಯಾಯಾಲಯಗಳು ಸಾಕಾಗುವುದಿಲ್ಲ. ಅದಕ್ಕಾಗಿ ಕಾನೂನುಗಳ ಮೂಲಕ ಅಧಿಕಾರಿಗಳಿಗೆ, ನ್ಯಾಯಪೀಠಗಳಿಗೆ (ಟ್ರೈಬ್ಯೂನಲ್) ನ್ಯಾಯವನ್ನು ಇತ್ಯರ್ಥಿಸುವ ಹಕ್ಕುಗಳನ್ನು ಕೊಡಲಾಗುತ್ತದೆ. ಅವರು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಬರುವಂತೆ ಮಾಡಲು ಉಚ್ಚನ್ಯಾಯಾಲಯಗಳಿಗೆ ಅವರ ಕೆಲಸಕಾರ್ಯಗಳ ಮೇಲೆ ಪರಾಮರ್ಶೆ ಮಾಡುವ ಅಧಿಕಾರ ಅಗತ್ಯ. ಬ್ರಿಟನಿನಲ್ಲಿ ಈ ಅಧಿಕಾರವನ್ನು ಕಿಂಗ್ಸ್ ಬೆಂಚ್‌ಗಳು ವಿಶೇಷಾಧಿಕಾರದ ಆಜ್ಞಾ ಪತ್ರಗಳ ಮೂಲಕ ಸಾಧಿಸುತ್ತಿದ್ದುವು. ಇಂಗ್ಲೆಂಡಿನಲ್ಲಿ 1938ರಲ್ಲಿ ಆದ ಒಂದು ಕಾಯಿದೆಯಲ್ಲಿ ಕಟ್ಟಿನ ಕರೆ, ಪರಮಾಜ್ಞೆ (ಮ್ಯಾಂಡೇಮಸ್) ಮತ್ತು ಪ್ರತಿಬಂಧಕಾಜ್ಞೆಗಳನ್ನು ಉಚ್ಚನ್ಯಾಯಾಲಯಗಳು ಕೊಡಕೂಡದೆಂದೂ ಅವನ್ನು ಹಿಂದೆ ಕೊಡುತ್ತಿದ್ದ ಸಂದರ್ಭಗಳಲ್ಲಿ ಸೂಕ್ತ ಆದೇಶಗಳನ್ನು ಕೊಡಬೇಕೆಂದೂ ವಿಧಿಸಲಾಯಿತು. ಇದರಿಂದ ವಿಧಾನದಲ್ಲಿ ಹೆಚ್ಚು ಕಡಿಮೆ ಆಯಿತೇ ಹೊರತು ಅವುಗಳ ಸಂಬಂಧವಾಗಿರುವ ಕಾನೂನಿನಲ್ಲಿ ವಿಶೇಷವಾಗಿ ಯಾವ ವ್ಯತ್ಯಾಸವೂ ಆಗಿಲ್ಲ.

ಭಾರತದ ಸಂವಿಧಾನ ಜಾರಿಗೆ ಬರುವ ಮೊದಲೆ ಕೋಲ್ಕತ್ತ, ಚೆನ್ನೈ ಮತ್ತು ಮುಂಬೈಯಲ್ಲಿ ಸ್ಥಾಪಿಸಲಾದ ಸುಪ್ರೀಂ ಕೋರ್ಟುಗಳು ಈ ಆಜ್ಞಾಪತ್ರಗಳನ್ನು ನೀಡುವ ಅಧಿಕಾರವನ್ನು ವಿವಿಧ ರಾಜಸನ್ನದುಗಳಿಂದ ಪಡೆದಿದ್ದುವು. ಆ ಹಕ್ಕುಗಳನ್ನು ಹೊಂದಿದ ಅಲ್ಲಿಯ ಹೈ ಕೋರ್ಟುಗಳೂ ಇವನ್ನು ಜಾರಿಮಾಡಬಹುದಾಗಿತ್ತು. ಆದರೆ ಈ ಅಧಿಕಾರ ಆ ರಾಜ್ಯಗಳ ಮುಖ್ಯ ಅಧಿಪತ್ಯದ ಪಟ್ಟಣಗಳಿಗೂ (ಪ್ರೆಸಿಡೆನ್ಸಿ ಟೌನ್ಸ್) ಅವುಗಳಲ್ಲಿ ನೆಲೆಸಿದವರಿಗೂ ಸೀಮಿತವಾಗಿತ್ತು.. 1877ರಲ್ಲಿ ನಿರ್ದಿಷ್ಟ ಪರಿಹಾರ ಕಾಯಿದೆಯ (ಸ್ಪೆಸಿಫಿಕ್ ರಿಲೀಫ್ ಆಕ್ಟ್) 50ನೆಯ ಕಲಮು ಪರಮಾಜ್ಞೆಯ ಹಕ್ಕನ್ನು ತೆಗೆದು ಅದಕ್ಕೆ ಪ್ರತಿಯಾಗಿ ಅದರ 45ನೆಯ ಕಲಂ ಪ್ರಕಾರ ಆದೇಶ ನೀಡುವ ಹಕ್ಕನ್ನಿತ್ತಿತ್ತು. 1898ರಲ್ಲಿ ಕ್ರಿಮಿನಲ್ ಪ್ರೊಸಿಜರ್ ಕೋಡಿನ 491ನೆಯ ವಿಧಿಯಲ್ಲಿ ಆಸಾಮಿ ಹಾಜರಿ ಹುಕಂ ಹಕ್ಕನ್ನು ತೆಗೆದು ಬದಲಾಗಿ ಆದೇಶ ನೀಡುವ ಹಕ್ಕನ್ನು ಕೊಡಲಾಗಿತ್ತು. 1923ರಲ್ಲಿ ಈ ಹಕ್ಕನ್ನು ಎಲ್ಲ ಹೈಕೋರ್ಟುಗಳಿಗೂ ಕೊಡಲಾಯಿತು. ಇದು ರೀತಿಯಲ್ಲಿ ಭೇದವಾದುದೇ ಹೊರತು ಹಕ್ಕಿನಲ್ಲಿ ಆದ ಹೆಚ್ಚು ಕಡಿಮೆಯಲ್ಲ. ಈಗ ಅವನ್ನೆಲ್ಲ ತೆಗೆದು ಹಾಕಲಾಗಿದೆ. ಭಾರತ ಸಂವಿಧಾನದ 32ನೆಯ ಮತ್ತು 226ನೆಯ ಅನುಚ್ಛೇದಗಳು ಕ್ರಮವಾಗಿ ಪರಮೋಚ್ಚ ಮತ್ತು ಉಚ್ಚನ್ಯಾಯಾಲಯಗಳಿಗೆ ಈ ರೀತಿಯ ಆಜ್ಞೆ ಅಥವಾ ನಿರ್ದೇಶನ ನೀಡುವ ಅಧಿಕಾರವನ್ನಿತ್ತಿವೆ. ಪರಮೋಚ್ಚ ನ್ಯಾಯಾಲಯಕ್ಕೆ ನೀಡಲಾದ ಅಧಿಕಾರದ ವ್ಯಾಪ್ತಿ ಮೂಲಭೂತ ಹಕ್ಕುಗಳಿಗೆ ಚ್ಯುತಿ ಬಂದಾಗ ಮಾತ್ರ. ಮೂಲಭೂತ ಹಕ್ಕುಗಳಿಗೆ ಚ್ಯುತಿ ಬಂದಾಗಲೂ ಇತರ ವಿಚಾರಗಳಲ್ಲೂ ವಿಚಾರಣೆ ನಡೆಸಲು ಉಚ್ಚನ್ಯಾಯಾಲಯಕ್ಕೆ ಅಧಿಕಾರವಿದೆ. ವಿವಿಧ ಬಗೆಯ ಆಜ್ಞೆ ಅಥವಾ ಹುಕುಮುಗಳಲ್ಲಿ (ರಿಟ್) ಕಟ್ಟಿನ ಕರೆಯಾಜ್ಞೆ ಒಂದು.

ಕಾನೂನುಬದ್ಧ ಅಧಿಕಾರವನ್ನು ಮೀರಿ ನಡೆಯಲಾಗಿದೆಯೆಂದು ಕಂಡಾಗ ಅದರ ಅಥವಾ ವಿಚಾರಣೆಯಾದ ಇಲ್ಲವೇ ಆಗಲಿರುವ ವಿವಾದಗಳ ಕಾಗದಪತ್ರಗಳನ್ನೂ ಅವುಗಳ ಕ್ರಮಬದ್ಧತೆಯನ್ನೂ ಪರಾಮರ್ಶಿಸುವ ಉದ್ದೇಶದಿಂದ ಅವನ್ನು ಕಳುಹಿಸಿಕೊಡಬೇಕೆಂದು ಹುಕುಂ ಮಾಡಲಾಗುತ್ತದೆ.

**ಕಟ್ಟಿನ ಕರೆಯ ಮುಖ್ಯಾಂಶಗಳು:** ನ್ಯಾಯಾಲಯಗಳೆನಿಸಲಾರದ ಮತ್ತು ಹಾಗೆ ಮಾನ್ಯತೆ ಪಡೆಯಲಾರದ ನ್ಯಾಯಮಂಡಳಿಯ ನಡವಳಿಗಳನ್ನು ಅಂಕೆಯಲ್ಲಿರಿಸಿಕೊಳ್ಳಲು ಆಜ್ಞಾಪತ್ರಗಳ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಪ್ರಜೆಗಳ ಹಕ್ಕುಗಳಿಗೆ ಬಾಧೆ ತರುವಂಥ ಪ್ರಶ್ನೆಗಳನ್ನು ನಿರ್ಧರಿಸುವಲ್ಲಿ ಕಾನೂನು ಬದ್ಧ ಅಧಿಕಾರಿಯಾಗಲಿ, ನ್ಯಾಯಾಲಯದಂತೆ ಕಾರ್ಯ ಮಾಡಲು ಬದ್ಧವಾದ ಯಾವುದಾದರೂ ಮಂಡಳಿಯಾಗಲಿ ತನ್ನ ಕಾನೂನುಬದ್ಧ ಅಧಿಕಾರಕ್ಕೆ ಮೀರಿ ನಡೆದರೆ ಈ (ಕಟ್ಟಿನ ಕರೆ ಮತ್ತು ನಿಷೇಧಾತ್ಮಕ) ಆಜ್ಞೆಗಳ ಮೂಲಕ ಅವನ್ನು ತನ್ನ ಅಂಕೆಯಲ್ಲಿ ಇರಿಸಿಕೊಳ್ಳಲು ಉನ್ನತ ನ್ಯಾಯಾಲಯಕ್ಕೆ ಅಧಿಕಾರವಿದೆಯೆಂಬುದು ಆಟ್‌ಕಿನ್ ಎಲ್.ಜೆ.ನೀಡಿರುವ ಒಂದು ತೀರ್ಪಿನಲ್ಲಿ (1924) ನಿರ್ಣಯ ಮಾಡಲಾಗಿದೆ. ಆಟ್‌ಕಿನ್ ನಿರ್ಣಯದಲ್ಲಿ ಕಟ್ಟಿನ ಕರೆಯ ಈ ಕೆಲವು ಮುಖ್ಯ ಅಂಶಗಳು ಅಡಕವಾಗಿವೆ:

1. ಕಟ್ಟಿನ ಕರೆ ಪಡೆಯುವ ನ್ಯಾಯಮಂಡಲಿಯೆಂದರೆ ಕನಿಷ್ಠ ನ್ಯಾಯಪೀಠಗಳು ಮಾತ್ರವಲ್ಲ. ನ್ಯಾಯಾಧೀಶರಂತೆ ವರ್ತಿಸುವ ಹೊಣೆಯುಳ್ಳ ವ್ಯಕ್ತಿ, ಮಂಡಲಿ ಅಥವಾ ಅಧಿಕಾರಿಯನ್ನು ಇದರಲ್ಲಿ ಸೇರಿಸಬೇಕು, ಸ್ಥಳೀಯ ಮಂಡಳಿ, ಕಾನೂನಿನ ಪ್ರಕಾರ ಏರ್ಪಟ್ಟ ಮಂಡಲಿ, ಅಧಿಕಾರಿ, ಮಂತ್ರಿ, ಸರಕಾರದ ವಿವಿಧ ಭಾಗಗಳು-ಮುಂತಾದವುಗಳ ಮೇಲೆ ಇದನ್ನು ಪ್ರಯೋಗಿಸಲಾಗಿದೆ. ಅದರೆ ಹೀಗೆ ಕಟ್ಟಿನ ಕರೆ ಪಡೆಯುವ ವ್ಯಕ್ತಿ ಅಥವಾ ಮಂಡಳಿ ಅಥವಾ ಅಧಿಕಾರಿ, ಆಜ್ಞೆ ನೀಡುವ ಉಚ್ಚನ್ಯಾಯಾಲಯಕ್ಕೆ ಕೆಳಗಿರಬೇಕು; ಅಲ್ಲದೆ ಉಚ್ಚನ್ಯಾಯಾಲಯದ ಆಡಳಿತದ ಅಥವಾ (ಭಾರತದಲ್ಲಿ) ಕ್ರಮದ ಕಾರಣದ (ಲಾಸ್ ಆಫ್ ಆಕ್ಷನ್) ವ್ಯಾಪ್ತಿಯೊಳಗೆ ಬರಬೇಕು. ಆದರೆ ಇದನ್ನು ಧರ್ಮಕ್ಕೆ ಸಂಬಂಧಿಸಿದ ನ್ಯಾಯಾಲಯಗಳಿಗೆ ಅನ್ವಯಿಸಲಾಗುವುದಿಲ್ಲ.

2. ಕಟ್ಟಿನ ಕರೆಯನ್ನು ಖಾಸಗಿ (ಪ್ರೈವೇಟ್) ನ್ಯಾಯಮಂಡಲಿಗೆ ಕೊಡಲು ಸಾಧ್ಯವಿಲ್ಲ. ಖಾಸಗಿ ಒಪ್ಪಂದದ ಪ್ರಕಾರ ಕಾನೂನುಬದ್ಧ ಪಂಚಾಯಿತಿದಾರನ ನಿಷ್ಕರ್ಷೆಗೆ ಒಂದು ವಿಚಾರವನ್ನು ಬಿಟ್ಟಲ್ಲಿ ಅಲ್ಲಿ ಕಟ್ಟಿನ ಕರೆ ನೀಡಬಹುದಾದರೂ ಕಾನೂನುಬದ್ಧ ಅಧಿಕಾರವಿಲ್ಲದ ಪಂಚಾಯಿತಿದಾರನಿಗೆ ಅಥವಾ ಮಂಡಲಿಗೆ ಕಟ್ಟಪ್ಪಣೆಯನ್ನು ವಿಧಿಸಲಾಗುವುದಿಲ್ಲ. ಒಂದು ಊರಿನವರು ಒಟ್ಟಾಗಿ ತಮ್ಮ ವಿವಾದಗಳನ್ನೆಲ್ಲ ತೀರಿಸಲು ಒಂದು ಸಮಿತಿ ಮಾಡಿ ವಿವಾದಗಳನ್ನು ಅದಕ್ಕೊಪ್ಪಿಸಬಹುದು, ಅಂಥ ಸಮಿತಿ ಕಾನೂನುಬದ್ಧವಲ್ಲವಾದ್ದರಿಂದ ಅದಕ್ಕೆ ಕಟ್ಟಿನ ಕರೆ ಆಜ್ಞೆ ನೀಡಲು ಸಾಧ್ಯವಿಲ್ಲ.

3. ಪ್ರಜೆಗಳ ಹಕ್ಕುಗಳಿಗೆ ಬಾಧೆ ತರುವಂಥ ಪ್ರಶ್ನೆಗಳನ್ನು ನಿರ್ಧರಿಸಲು ಕಟ್ಟಿನಕರೆ ನೀಡಬಹುದು. ಕಟ್ಟಿನ ಕರೆ ಪಡೆಯುವ ನ್ಯಾಯಮಂಡಲಿಯೇ ಮುಂತಾದವಕ್ಕೆ ಪ್ರಜೆಗಳ ಹಕ್ಕುಗಳ ವಿಚಾರವಾಗಿ ನಿರ್ಧಾರ ಕೈಕೊಳ್ಳುವ ಅಧಿಕಾರವಿರಬೇಕು. ಹಕ್ಕುಗಳು ಎಂಬ ಪದಕ್ಕೆ ಇಲ್ಲಿ ವಿಶಾಲವಾದ ಅರ್ಥವಿದೆ. ಹಕ್ಕುಗಳು ವೈಯಕ್ತಿಕ ಸ್ವಾತಂತ್ರ್ಯ ಅಥವಾ ಸ್ಥಿತಿಗೆ ಸಂಬಂಧಿಸಿದ್ದಾಗಿ ಇರಬಹುದು; ಅಥವಾ ಅವು ಒಡೆತನಕ್ಕೆ ಅಥವಾ ಹಣಕಾಸಿಗೆ ಅಥವಾ ಕರಾರುಗಳಿಗೆ ಸಂಬಂಧಿಸಿದವುಗಳಾಗಿರಬಹುದು.

4. ನ್ಯಾಯಾಲಯದಂತೆ ನಿರ್ವಹಿಸಬೇಕಾದ ಕಾರ್ಯಗಳಿಗೆಲ್ಲ ಇದು ವ್ಯಾಪಿಸುತ್ತದೆ. ಯಾವುದು ನ್ಯಾಯಾಲಯದ ಅಥವಾ ನ್ಯಾಯಾಧೀಶರಂತೆ ಮಾಡಿದ ಕಾರ್ಯ, ಯಾವ ಅಂಶಗಳಿದ್ದಲ್ಲಿ ಆ ಕಾರ್ಯವಾಗುತ್ತದೆ-ಎಂಬುದಕ್ಕೆ ಖಚಿತವಾದ ಉತ್ತರವಿನ್ನೂ ಸಿಕ್ಕಿಲ್ಲ. ಒಂದು ಕೃತಿ ನ್ಯಾಯಾಲಯದ (ಜುಡಿಷಿಯಲ್) ಅರೆನ್ಯಾಯಾಲಯದ (ಕ್ವಾಸೈಜುಡುಷಿಯಲ್) ತೀರ್ಪು ಹೌದೋ ಅಲ್ಲವೋ ಎಂಬುದನ್ನು ನಿರ್ಣಯಿಸಲು ಜಸ್ಟಿಸ್ ಎಸ್.ಕೆ.ದಾಸ್ ನೀಡಿರುವ ಸೂತ್ರಗಳು (1959) ಉಲ್ಲೇಖಾರ್ಹ, ಇಬ್ಬರೊಳಗೆ ವಿವಾದವಿದೆಯೆ? ಯಾವುದಾದರೊಂದು ಹಕ್ಕುಸಾಧನೆ ಕೇಳಿಕೆ (ಕ್ಲೇಮ್) ಇದೆಯೆ ಮತ್ತು ಅದಕ್ಕೆ

ವಿರೋಧವಿದೆಯೇ? ತೀರ್ಪು ನೀಡಲು ಪುರಾವೆಗಳನ್ನು ತೆಗೆದುಕೊಳ್ಳಬೇಕೇ ಅಥವಾ ಪ್ರಮಾಣಪತ್ರದಿಂದ (ಆಫಿಡೇವಿಟ್) ನಿರ್ಧರಿಸಬೇಕೆ? ತೀರ್ಪು ಸಂಪೂರ್ಣವಾಗಿ ಅಥವಾ ಭಾಗಶಃ ಯಾವುದಾದರೂ ಕಾರ್ಯನೀತಿ (ಪಾಲಿಸಿ) ಅಥವಾ ಸಮಯೌಚಿತ್ಯದೃಷ್ಟಿಯಿಂದ (ಎಕ್ಸ್‌ಪೀಡಿಯೆನ್ಸಿ) ಪ್ರಚೋದಿತವೆ? ಹಾಗಿದ್ದಲ್ಲಿ ತೀರ್ಪು ನೀಡುವಲ್ಲಿ ಪ್ರಸ್ತಾಪ (ಪ್ರಪೋಸಲ್), ವಿರೋಧ ಮತ್ತು ಪುರಾವೆಗಳನ್ನು ನೋಡಬೇಕೆ? ತೀರ್ಪು ನೀಡುವಾಗ ಮಂಡಲಿ ಕಾರ್ಯನೀತಿ ಅಥವಾ ಸಮಯೋಚಿತ್ಯವನ್ನು ಮಾತ್ರ ನೋಡಬೇಕೆ, ಅದರ ಮುಂದೆ ಯಾವ ರೀತಿಯ ಮೊಕದ್ದಮೆಯೂ ಇಲ್ಲವೆ? ಪರಿಶೀಲನೆಗೆ ಒಳಗಾದ ಮಂಡಲಿ, ಅಧಿಕಾರಿ ಅಥವಾ ವ್ಯಕ್ತಿಗೆ ನ್ಯಾಯಾಲಯ ಅಥವಾ ಅರೆನ್ಯಾಯಾಲಯದಂತೆ ವರ್ತಿಸಬೇಕಾದ ಬಾಧ್ಯತೆ ಇದೆಯೆ ಇಲ್ಲವೆ? ಈ ಮೊದಲಾದ ಸಮಸ್ಯೆಗಳನ್ನು ತೀರ್ಮಾನಿಸಲು ಈ ಅಂಶಗಳನ್ನು ಗಮನಿಸಬೇಕು. ಕೇವಲ ಆಡಳಿತ ಸಂಬಂಧವಾದ ತೀರ್ಪುಗಳ ಬಗ್ಗೆ ಕಟ್ಟಿನ ಕರೆ ಆಜ್ಞೆ ಸಾಧ್ಯವಿಲ್ಲ.

6. ಕಾನೂನುಬದ್ಧ ಅಧಿಕಾರಕ್ಕೆ ಮೀರಿ ನಡೆದರೆ: ನ್ಯಾಯಪೀಠ, ಮಂಡಲಿ ಅಥವಾ ಅಧಿಕಾರಿ ಯಾವ ಅಧಿಕಾರವೂ ಇಲ್ಲದೆ ನಡೆದಾಗ, ಸ್ವಾಭಾವಿಕ ನ್ಯಾಯಕ್ಕೆ (ನ್ಯಾಚುರಲ್ ಜಸ್ಟಿಸ್) ವಿರೋಧ ಮಾಡಿದಾಗ, ತನಗೆ ಕೊಟ್ಟ ಅಧಿಕಾರವನ್ನು ಉಪಯೋಗಿಸದಿದ್ದಾಗ, ಹೀಗಾಗಿದೆಯೆಂದು ಕಾಗದಪತ್ರಗಳಲ್ಲಿ ಮೇಲುನೋಟಕ್ಕೆ ಕಂಡುಬಂದರೆ ಉಚ್ಚನ್ಯಾಯಾಲಯ ಅವನ್ನು ತಿದ್ದಲು ಕಟ್ಟಿನ ಕರೆ ಆಜ್ಞೆ ನೀಡಬಹುದು.

7. ಭಾರತದಲ್ಲಿ ಕಟ್ಟಿನ ಕರೆ ಆಜ್ಞೆಯನ್ನು ರೂಢವಾಗಿರುವ ನ್ಯಾಯಾಲಯಗಳ ಮೇಲೆ ಕೊಡವುದಿಲ್ಲವೆಂಬುದು ಗಮನಿಸಬೇಕಾದ ಮುಖ್ಯ ಅಂಶ. ನ್ಯಾಯಾಲಯ ವೆನಿಸಿಕೊಳ್ಳದ ಮತ್ತು ಹಾಗೆ ಮಾನ್ಯತೆ ಪಡೆಯದ ನ್ಯಾಯಮಂಡಲಿ, ಅಧಿಕಾರಿ ಅಥವಾ ವ್ಯಕ್ತಿಯ ಕಾರ್ಯದ ಮೇಲೆ ಅದನ್ನು ಪ್ರಯೋಗಿಸಲಾಗುತ್ತದೆ. ಇವು ಅಥವಾ ಇವರು ನ್ಯಾಯಾಲಯ ಅಥವಾ ಅರೆನ್ಯಾಯಾಲಯದಂತೆ ವರ್ತಿಸಿದ ವಿಚಾರಗಳಲ್ಲಿ ಕಟ್ಟಿನ ಕರೆ ವಿಧಿಸಬಹುದು.

**ಭಾರತದ ಸಂವಿಧಾನದಲ್ಲಿ:** ಭಾರತದ ಸಂವಿಧಾನದ 32 ಮತ್ತು 226ನೆಯ ಅನುಚ್ಛೇದಗಳು ಕ್ರಮವಾಗಿ ಪರಮೋಚ್ಚ ನ್ಯಾಯಾಲಯಕ್ಕೂ ಉಚ್ಚನ್ಯಾಯಾಲಯಕ್ಕೂ ಪ್ರಚಲಿತವಿರುವ ಇತರ ಆಜ್ಞೆಗಳೊಡನೆ ಕಟ್ಟಿನ ಕರೆಯಾಜ್ಞೆಯ ಹಕ್ಕನ್ನೂ ಕೊಟ್ಟಿವೆ. ಪ್ರಜೆಯ ಹಕ್ಕುಗಳನ್ನು ಜಾರಿಗೆ ತರುವ ಉದ್ದೇಶದಿಂದ ಇವನ್ನು ವಿಧಿಸಿರುವುದರಿಂದ ಇವಕ್ಕೆ ಮೂಲತಃ ಹಕ್ಕು ಇರಬೇಕಾದ್ದು ಅವಶ್ಯ.

226ನೆಯ ಅನುಚ್ಛೇದದ ವ್ಯಾಪ್ತಿಯ ವಿಚಾರವಾಗಿ ಕೆಳಗಿನ ನ್ಯಾಯಪೀಠಗಳು ಅಥವಾ ಮಂಡಳಿಗಳು ಅಥವಾ ಅಧಿಕಾರಿಗಳು ತಮಗೇನೂ ಕ್ಷೇತ್ರಾಧಿಕಾರವಿಲ್ಲದೆ ಅಥವಾ ತಮ್ಮ ಕ್ಷೇತ್ರಾಧಿಕಾರವನ್ನು ಮೀರಿ ಅಥವಾ ಸ್ವಾಭಾವಿಕ ನ್ಯಾಯಕ್ಕೆ ವಿರೋಧವಾಗಿ ಅಧಿಕಾರವನ್ನು ಉಪಯೋಗಿಸಿದ್ದರೆ, ಇಲ್ಲವೇ ಕಾಗದಪತ್ರಗಳಲ್ಲಿ ಮೇಲ್ನೋಟಕ್ಕೆ ವ್ಯಕ್ತವಾಗುವ ತಪ್ಪುಗಳಿದ್ದರೆ ಮತ್ತು ಆ ಕೃತಿ ಅಥವಾ ನಿಷ್ಕೃತಿಯಿಂದಾಗಿ ಅಥವಾ ಮೀರಿದ ನಡೆವಳಿ ಯಿಂದಾಗಿ ಅನ್ಯಾಯವಾಗಿದೆಯೆಂಬುದು ಸ್ಪಷ್ಟವಾಗಿದ್ದರೆ ಅಂಥ ಗಂಭೀರ ಪರಿಸ್ಥಿತಿಯಲ್ಲಿ 226ನೆಯ ಅನುಚ್ಛೇದದಲ್ಲಿ ಹೇಳಿರುವಂತೆ ಆಜ್ಞಾಪತ್ರ ಜಾರಿ ಮಾಡಲು ಹಕ್ಕು ಕೊಡುವುದು ಉದ್ದೇಶವೆಂಬುದಾಗಿ ಭಾರತದ ಪರಮೋಚ್ಚ ನ್ಯಾಯಾಲಯದ ಒಂದು ತೀರ್ಪಿನಲ್ಲಿ (ಎ.ಐ.ಆರ್.1952 ಎಸ್.ಸಿ.192) ವಿವರಿಸಲಾಗಿದೆ.

32 ಮತ್ತು 226ನೆಯ ಅನುಚ್ಛೇದಗಳು ಇಂಗ್ಲಿಷ್ ನ್ಯಾಯದ ಆಜ್ಞೆಗಳ ಸ್ವರೂಪದಂತೆಯೇ ಇರುವುವಾದರೂ ನಾವು ಇವುಗಳ ವಿಚಾರದಲ್ಲಿ ಇಂಗ್ಲಿಷ್ ಪದ್ಧತಿಯಲ್ಲಿ ಕೈಗೊಳ್ಳುವ ವಿಶೇಷ ಕ್ರಮವೇ ಮುಂತಾದವನ್ನೇ ಅನುಸರಿಸಬೇಕೆಂದಿಲ್ಲ. ನಾವು ಸಮರ್ಪಕವಾದ ವಿಚಾರಗಳಲ್ಲಿ ಇರುವ ಇಂಗ್ಲಿಷ್ ಮೂಲತತ್ತ್ವಗಳನ್ನು ಇರಿಸಿಕೊಂಡಲ್ಲಿ ನಾವು ಸಮರ್ಪಕವಾದ ವಿಚಾರಗಳಲ್ಲಿ ಸಮರ್ಪಕವಾದ ಆದೇಶ ಅಥವಾ ಕಟ್ಟಿನ ಕರೆಯಾಜ್ಞೆ ಕೊಡಬಲ್ಲೆವು ಎಂಬುದು ಜಸ್ಟಿಸ್ ಮುಖರ್ಜಿ ನೀಡಿರುವ ಒಂದು ತೀರ್ಪು (1955 ಎಸ್.ಸಿ.ಜೆ. 695). ಆದ್ದರಿಂದ ಕಟ್ಟಿನ ಕರೆ ಆಜ್ಞೆ ನೀಡುವಾಗ ಭಾರತದ ನ್ಯಾಯಾಲಯಗಳು ಇಂಗ್ಲಿಷ್ ನ್ಯಾಯಾಲಯದಲ್ಲಿ ಈ ಬಗ್ಗೆ ಇರತಕ್ಕ ಮೂಲತತ್ತ್ವಗಳನ್ನು ಇರಿಸಿಕೊಳ್ಳಬೇಕಾಗುತ್ತದೆ.

32ನೆಯ ಅನುಚ್ಛೇದದ ಪ್ರಕಾರ ಪರಮೋಚ್ಚ ನ್ಯಾಯಾಲಯ ಭಾರತಾದ್ಯಂತ ಈ ಆಜ್ಞೆಗಳನ್ನು ಜಾರಿಮಾಡಬಹುದು. ಆದರೆ ಅವು ಮೂಲಭೂತ ವಿಚಾರಗಳಲ್ಲಿ ಮಾತ್ರ. 15ನೆಯ ತಿದ್ದುಪಡಿಗೆ ಮುಂಚೆ ಸಂವಿಧಾನದ 226ನೆಯ ಅನುಚ್ಛೇದದ ಎರಡು ತಡೆಗಳಿಂದ ಕೂಡಿತ್ತು. ಒಂದನೆಯದು, ಉಚ್ಚ ನ್ಯಾಯಾಲಯಗಳು ತಮ್ಮ ಕ್ಷೇತ್ರಾಧಿಕಾರಿಗಳೊಳಗೆ ಮಾತ್ರ, ಅವುಗಳ ಒಳಗಿನ ಅಧಿಕಾರಿಗಳಿಗೆ ಅಥವಾ ಮಂಡಲಿಗಳಿಗೆ ಮಾತ್ರ ಆಜ್ಞೆ ನೀಡಬಹುದಿತ್ತು. ಕ್ರಮದ ಕಾರಣ ಉಚ್ಚನ್ಯಾಯಾಲಯದ ಅಧಿಕಾರ ಕ್ಷೇತ್ರದಲ್ಲಿದ್ದರೆ 226ನೆಯ ಅನುಚ್ಛೇದ ಕೊಟ್ಟಿರುವ ವಿಸ್ತಾರವಾದ ಹಕ್ಕುಗಳನ್ನು ಅನುಲಕ್ಷಿಸಿ ಅಲ್ಲಿ ಹೇಳಿದ ಆಜ್ಞೆ ಅಥವಾ ನಿರ್ದೇಶನಗಳನ್ನಲ್ಲದೆ (ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದುದು ಮಾತ್ರವಲ್ಲದೆ), ಯಾವ ಆದೇಶ ಅಥವಾ ಸೂಚನೆಗಳನ್ನು ಯಾರ ಮೇಲಾಗಲಿ ಯಾವ ವಿಚಾರದಲ್ಲಾಗಲಿ ಕೊಡಬಹುದೆಂದು ವಾದಿಸಲಾಯಿತು. ಆ ಅನುಚ್ಛೇದವನ್ನು ಅಕ್ಷರಶಃ ತೆಗೆದುಕೊಂಡು ಅದಕ್ಕೆ ಅಷ್ಟೊಂದು ವ್ಯಾಪಕ ಅರ್ಥವನ್ನು ಕೊಡಕೂಡದೆಂದು ತೀರ್ಪು ನೀಡಲಾಗಿದೆ. ಯಾವ ವಿಚಾರದಲ್ಲಾಗಲಿ ಎಂಬುದನ್ನು ಸ್ಥಾಪಿತವಾದ ತತ್ತ್ವಗಳ ಪ್ರಕಾರ ಅರ್ಥ ಮಾಡಬೇಕು. ಇದು ಆಜ್ಞೆಗಳಿಗೂ ಆದೇಶಗಳಿಗೂ ಅನ್ವಯಿಸುತ್ತದೆ. 226ನೆಯ ಅನುಚ್ಛೇದ ಸಾಮಾನ್ಯವಾಗಿ ಪರಿಹಾರ (ರಿಲೀಫ್) ಹೊಂದಲು ಇರುವ ಅರ್ಜಿ ಅಥವಾ ವ್ಯಾಜ್ಯಗಳ ಬದಲಾಗಿ ಉಪಯೋಗಿಸಲು ಸಾಧನವಲ್ಲ. ನ್ಯಾಯಾಧೀಶರಂತೆ ಮಾಡಿದ ಕೆಲಸವನ್ನು ಮೇಲಿಂದ ವಿಚಾರಣೆ ಮಾಡಲು ಮಾತ್ರ ಕಟ್ಟಿನ ಕರೆಯನ್ನು ಉಪಯೋಗಿಸಲಾಗುವುದು.

32ನೆಯ ಅನುಚ್ಛೇದದ ಪ್ರಕಾರ ಮೂಲಭೂತ ಹಕ್ಕುಗಳಿಗೆ ಚ್ಯುತಿ ಬಂದಾಗ ಅಥವಾ ಚ್ಯುತಿಯ ಹೆದರಿಕೆ ಇದ್ದರೆ ಅರ್ಜಿದಾರ ತಕ್ಕ ಪರಿಹಾರ ಪಡೆಯಲು ಅರ್ಹನಾಗಿರುವುದೂ ಅವನ ಹಕ್ಕೆಂದು ಒಂದು ತೀರ್ಪಿನಲ್ಲಿ ಹೇಳಲಾಗಿದೆ. ಪರಿಹಾರ ಪಡೆಯುವ ಬೇರೆ ವಿಧಾನಗಳಿದ್ದರೂ ಮೇಲೆ ಹೇಳಿದ ಸಂದರ್ಭದಲ್ಲಿ ಅರ್ಜಿದಾರ ತಕ್ಕ ಪರಿಹಾರ ಪಡೆಯಲು ಅರ್ಹನಾಗಿರುತ್ತಾನೆ. ಕೆಲವು ಮೊಕ್ದದ್ದಮೆಗಳಲ್ಲಿ ಇದಕ್ಕೆ ವಿರೋಧವಾದ ಅಭಿಪ್ರಾಯ ವ್ಯಕ್ತವಾಗಿದ್ದರೂ ಅದು ಸರಿಯಲ್ಲ. 226ನೆಯ ಅನುಚ್ಛೇದದಲ್ಲಿ ಮೂಲಭೂತ ಹಕ್ಕುಗಳನ್ನು ಸಾಧಿಸುವ ವಿಚಾರವನ್ನು ಹಕ್ಕಾಗಿ ಕೊಟ್ಟಿಲ್ಲ. ಆದರೆ ಅದರ ಪ್ರಕಾರ ಮೂಲಭೂತ ಹಕ್ಕಿನ ವಿಚಾರದಲ್ಲಿ ಮಾತ್ರವಲ್ಲದೆ ಬೇರೆ ವಿಚಾರದಲ್ಲೂ ಆಜ್ಞೆ ಜಾರಿ ಮಾಡುವ ಹಕ್ಕಿದೆ. ಪರಿಹಾರ ನೀಡುವುದು ಉಚ್ಚನ್ಯಾಯಾಲಯದ ವಿವೇಚನೆಗೆ (ಡಿಸ್ಕ್ರಿಷನ್) ಒಳಪಟ್ಟ ಹಕ್ಕು. 32ನೆಯ ಮತ್ತು 226ನೆಯ ಅನುಚ್ಛೇದಗಳ ಪ್ರಕಾರ ನೀಡಲಾದ ಹಕ್ಕುಗಳನ್ನು ಕಾನೂನು ಪ್ರಕಾರ ತಿದ್ದುಪಡಿ ಮಾಡದೆ ಮೊಟಕು ಮಾಡುವುದು ಯಾವ ರೀತಿಯಿಂದಲೂ ಅಸಾಧ್ಯ. 32 ಮತ್ತು 226ನೆಯ ಅನುಚ್ಛೇದಗಳ ಪ್ರಕಾರ ಕಾಯಿದೆಗಳು ಅಸಿಂಧುವೆಂದು ಸಾರುವ ಹಕ್ಕುಗಳೂ ಇರುತ್ತವೆ. ಆದರೆ ಇಂಗ್ಲೆಂಡಿನಲ್ಲಿ ಇದು ಸಾಧ್ಯವಿಲ್ಲ. ಈ ಅನುಚ್ಛೇದಗಳಲ್ಲಿ ಕೊಟ್ಟ ಹಕ್ಕುಗಳನ್ನು ಸಾಮಾನ್ಯವಾಗಿ ಯಾವ ಕಾಯಿದೆಯೂ ಕಿತ್ತುಕೊಳ್ಳಲಾರವಾದರೂ ಅವನ್ನು ಕ್ರಮಬದ್ಧಪಡಿಸ (ರೆಗ್ಯುಲೇಟ್) ಬಹುದು. ಈ ವಿಧಾನದಿಂದ ಪೂರ್ವನ್ಯಾಯದ ತತ್ತ್ವವನ್ನು ಈ ಅನುಚ್ಛೇದಗಳ ನ್ಯಾಯವಿಮರ್ಶೆಯಲ್ಲಿ ತೆಗೆದುಕೊಳ್ಳಲಾಗಿದೆ.

ಆದರೆ 226ನೆಯ ಅನುಚ್ಛೇದವನ್ನು ಅತಿ ಅಗತ್ಯವಾದ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಬೇಕಾದುದರಿಂದ ನ್ಯಾಯಾಲಯಗಳು ಆಜ್ಞೆ ಕೊಡುವಾಗ ಕೆಲವು ನಿರ್ಬಂಧಗಳನ್ನು ತಾವಾಗಿ ಇಟ್ಟುಕೊಂಡಿವೆ. ಇನ್ನೊಂದು ಪರಿಹಾರವಿದ್ದಲ್ಲಿ, ವಿನಾ ಕಾರಣ ಪರಿಹಾರ ಕೇಳಲು ವಿಳಂಬ ಮಾಡಿದ್ದರೆ, ಪರಿಹಾರ ಹೊಂದಲು ಅರ್ಹನಾಗದಷ್ಟು ಅವನ ನಡೆವಳಿಕೆ ಸರಿಯಿಲ್ಲದಿದ್ದರೆ, ವಾಸ್ತವಾಂಶದ ಬಗ್ಗೆ ವ್ಯಾಜ್ಯ (ಡಿಸ್ಪ್ಯೂಟ್ ಆನ್ ಟು ಕ್ವೆಶ್ಚನ್ ಆಫ್ ಫ್ಯಾಕ್ಟ್) ಆಗಿದ್ದರೆ,–ಇಂಥ ಕಾರಣಗಳಿಗೆ ಉಚ್ಚನ್ಯಾಯಾಲಯ 226ನೆಯ ಅನುಚ್ಛೇದದ ಪ್ರಕಾರ ಪರಿಹಾರ ಕೊಡಲು ನಿರಾಕರಿಸಿದೆ.

ಕಟ್ಟಿನ ಕರೆಯಾಜ್ಞೆ ನೀಡುವ ವಿಚಾರವನ್ನು ವಿಮರ್ಶಿಸುವಾಗ ನ್ಯಾಯಾಲಯಗಳು ಅಪೀಲುಗಳಲ್ಲಿ ಅನುಸರಿಸುವ ವಿಧಾನವನ್ನು ಅನುಸರಿಸುವುದಿಲ್ಲ. ರುಜುವಾತುಗಳಿಂದ ಕೆಳಗೆ ತೀರ್ಮಾನಿಸಲಾದ ವಿಚಾರಗಳನ್ನು ತನಿಖೆ ಮಾಡುವುದಿಲ್ಲ. ಹಕ್ಕನ್ನು ನಿರ್ಧರಿಸುವುದಿಲ್ಲ. ಇದ್ದ ಹಕ್ಕನ್ನು ಊರ್ಜಿತಗೊಳಿಸಿ ಅಪ್ಪಣೆ ಕೊಡುತ್ತದೆ. ಸಿವಿಲ್ ಹಕ್ಕುಗಳನ್ನು ಪ್ರತಿಪಾದನೆ ಮಾಡಲು ಕ್ರಮವಿಹಿತವಾಗಿ ಏರ್ಪಡಿಸಿದ ನ್ಯಾಯಾಲಯಗಳೂ ಕಾನೂನುಗಳೂ ಇರುವುದರಿಂದ, ಭಾರತದ ಸಂವಿಧಾನದಲ್ಲಿ ಅದನ್ನು ಬಾಹಿರಪಡಿಸದಿದ್ದರೂ ಕಟ್ಟಿನ ಕರೆಯ ಕ್ರಮವನ್ನು ಅವಕ್ಕೆ ಉಪಯೋಗಿಸಿರುವುದಿಲ್ಲ. ಕ್ರಿಮಿನಲ್ ಮೊಕದ್ದಮೆಗಳಲ್ಲಿ ರಾಜ್ಯ ಸಂವಿಧಾನಕ್ಕೆ ವಿರೋಧವಾಗಿದ್ದರೆ ಅಥವಾ ಯಾವುದಾದರೂ ನಿಬಂಧನೆಯ (ರೆಗ್ಯುಲೇಷನ್) ಉಲ್ಲಂಘನೆಯಾಗಿದ್ದು, ಅದರ ಪ್ರಕಾರ ಆಪಾದನೆಯಾಗಿದ್ದು, ಆ ನಿಬಂಧನೆಯೇ ಕಾನೂನಿನ ಅಧಿಕಾರವ್ಯಾಪ್ತಿಗೆ ಮೀರಿದ್ದಾಗಿದ್ದರೆ (ಅಲ್ಟ್ರಾವೈರಿಸ್) ಅಂಥ ಸಂದರ್ಭದಲ್ಲಿ ಕಟ್ಟಿನ ಕರೆಯಾಜ್ಞೆ ಜಾರಿ ಮಾಡಬಹುದು. ಅಪೀಲು ಮುಂತಾದ ಕ್ರಮಗಳು ಇರುವುದರಿಂದ ಕಟ್ಟಿನ ಕರೆಯ ಕ್ರಮವನ್ನು ಕ್ರಿಮಿನಲ್ ಮೊಕದ್ದಮೆಗಳಲ್ಲೂ ಉಪಯೋಗಿಸುವುದು ಅಪರೂಪವಾಗಿದೆ. ಕಟ್ಟಿ ಕರೆಯಾಜ್ಞೆಯನ್ನು ಪಾಲಿಸದಿದ್ದಲ್ಲಿ ಅಂಥವರು ನ್ಯಾಯಾಲಯದ ಅವಜ್ಞೆಯ (ಕಂಟೆಮ್ಪ್ಟ್ ಆಫ್ ಕೋರ್ಟ್) ತಪ್ಪಿಗೆ ಗುರಿಯಾಗುತ್ತಾರೆ. (ಕೆ.ಜಿ.ಬಿ.)

**ಕಟೀಲು :** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಒಂದು ಗ್ರಾಮ. ಮಂಗಳೂರಿನ ಪೂರ್ವಕ್ಕೆ 27ಕಿಮೀ ದೂರದಲ್ಲಿ ಕಿನ್ನಿಗೋಳಿಗೆ ಹೋಗುವ ರಸ್ತೆ ಬದಿಯಲ್ಲಿದೆ. ಇದು ದಕ್ಷಿಣಕನ್ನಡದ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ಒಂದು. ನಂದಿನಿ ನದಿಯ ಎರಡು ಕವಲುಗಳ ಮಧ್ಯೆ ಬಂಡೆಗಳ ನಡುವೆ ಇರುವ ಉದ್ಭವ ಲಿಂಗದ ಆಕಾರದ ಮೂರ್ತಿಯನ್ನು ದುರ್ಗಾಪರಮೇಶ್ವರಿ ಎಂದು ಪೂಜಿಸುವರು. ನದಿಯ ಮಧ್ಯಭಾಗದಲ್ಲಿ ಅಂದರೆ ಕಟಿ ಪ್ರದೇಶದಲ್ಲಿ ಈ ಪವಿತ್ರ ಸ್ಥಳ ಇರುವುದರಿಂದ ಇದಕ್ಕೆ ಕಟೀಲು ಎಂಬ ಹೆಸರು

ಬಂದಿರಬಹುದು. ಅಲ್ಲದೆ ಈ ದೇವಿಗೆ ಕಟಿಳಾ ಎಂಬ ಹೆಸರೂ ಇರುವುದರಿಂದ ಗ್ರಾಮದ ಹೆಸರು ರೂಪುಗೊಂಡಿರಬೇಕು. ಅಸ್ರಣ್ಣ ಉಪನಾಮದ ಮಾಧ್ವ ವೈಷ್ಣವ ಕುಟುಂಬದವರು ಇಲ್ಲಿನ ಅರ್ಚನೆ ಹಾಗೂ ಆಡಳಿತ ನೋಡುತ್ತ ಬಂದಿದ್ದಾರೆ. ಹಿಂದಿನ ದೇವಾಲಯ ಪ್ರವಾಹದಿಂದ ಕೊಚ್ಚಿಹೋದ ಕಾರಣ ಈಗ ಇರುವ ವಿಸ್ತಾರವಾದ ದೇವಸ್ಥಾನದ ಕಟ್ಟಡವನ್ನು 1944ರಲ್ಲಿ ಕಟ್ಟಲಾಗಿದೆ. ಕಲ್ಲಿನ ಕಂಬಗಳ ಮೇಲೆ ಕುಸುರಿ ಕೆಲಸದ ಪ್ರತಿಮೆಗಳಿವೆ. ಈ ದೇವಾಲಯ ನದಿಯ ಮಧ್ಯದ ದಿಬ್ಬದ ಮೇಲಿದ್ದು ಗೋಪುರಗಳನ್ನು ಹೊಂದಿದೆ. ಕಾರ್ಕಳದ ಶಿಲ್ಪಿ ರಂಜಾಳ ಗೋಪಾಲ ಕೃಷ್ಣ ಶೆಣೈ ಈ ದೇವಾಲಯದ ಶಿಲ್ಪಗಳನ್ನು ಕೆತ್ತಿದ್ದಾರೆ.

ದುರ್ಗಾಪರಮೇಶ್ವರಿ ದೇವಾಲಯ

ಸ್ಥಳಪುರಾಣದಂತೆ ಇಲ್ಲಿಂದ 3ಕಿಮೀ ದೂರದ ಎಕ್ಕಾರು ಗ್ರಾಮದಲ್ಲಿ ಇದ್ದ ಬ್ರಹ್ಮನ ವರ ಪಡೆದ ಅರುಣಾಸುರನೆಂಬ ದೈತ್ಯನನ್ನು ದೇವಿಯು ಬೃಹದಾಕಾರದ ಭ್ರಮರ ರೂಪದಿಂದ ಬಂದು ಕೊಂದು, ಭಕ್ತರ ಪ್ರಾರ್ಥನೆಯಂತೆ ದುರ್ಗಾ ರೂಪದಲ್ಲಿ ನೆಲೆನಿಂತಿದ್ದಾಳೆ. ದಿನಮೂ ರಾಜಮರ್ಯಾದೆಗಳೊಡನೆ ಬಲಿ ಮೂರ್ತಿಯನ್ನು ದೇವಸ್ಥಾನದ ಆವರಣದಲ್ಲಿ ಮೆರೆಸುತ್ತಾರೆ. ಅನಂತರ ದೇವಿಯನ್ನು ಹೊತ್ತವರಿಂದ ಪ್ರಸಾದ ವಿನಿಯೋಗ. ಕೊನೆಗೆ (ದರ್ಪಣ) ವಸಂತ ಮಂಟಪದಲ್ಲಿ ದೇವಿಯನ್ನು ಕೂರಿಸಿ, ಅನೇಕ ಬಗೆಯಲ್ಲಿ ಪೂಜಿಸುತ್ತಾರೆ. ಗುಡಿ ಪ್ರವೇಶಿಸುವಾಗ ಪುಟ್ಟ ಗುಡಿಯಿರುವ ರಕ್ತೇಶ್ವರಿಕಲ್ಲು, ಒಳಗೆ ಗಣಪತಿ, ನಾಗರುಗಳಿವೆ. ಜಾತ್ರೆಯ ಸಮಯದಲ್ಲಿ ಹತ್ತಿರದ ಶಿಬರೂರು ಗ್ರಾಮದ ಕೊಡಮಣಿತ್ತಾಯ ಭೂತಕ್ಕೂ ಇಲ್ಲಿ ಮನ್ನಣೆಯಿದೆ.

ದೇವಸ್ಥಾನದಲ್ಲಿ ನಿತ್ಯ ಅನ್ನದಾನ ಸೇವೆಯಿರುತ್ತದೆ. ದೇವಸ್ಥಾನ ಮಂಡಳಿಯು ಪ್ರಾಥಮಿಕ ಶಾಲೆಯಿಂದ ಪದವಿ ಕಾಲೇಜಿನವರೆಗೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತದೆ. ಪ್ರಧಾನವಾಗಿ ದೇವಿಯ ಆರಾಧನೆಯ ರೂಪವಾಗಿ ಮೂರು ಯಕ್ಷಗಾನ ಮೇಳಗಳನ್ನು ನಡೆಸುತ್ತಿದೆ. ಮೇಳದವರು ಆಟ ನಡೆಸುವ ಊರಿನಲ್ಲಿ ಬೆಳಗ್ಗೆ ತಮ್ಮಲ್ಲಿನ ರಾಮಲಕ್ಷ್ಮಣರ ಕಿರೀಟಗಳಿಗೆ ಪೂಜೆ ಮಾಡುತ್ತಾರೆ. ಈ ಪೂಜೆ ಪ್ರಸಾದಕ್ಕೆ ಕಟೀಲಿನ ಪ್ರಸಾದದಂತೆಯೆ ಮನ್ನಣೆ ಇದ್ದು, ಭಕ್ತಾದಿಗಳು ಹರಕೆ ತೀರಿಸುವುದೂ ಉಂಟೂ. ಈ ಮೇಳದವರು ಕಟೀಲಿನಲ್ಲಿ ದೇವೀಮಹಾತ್ಮೆ, ಕಟೀಲು ಕ್ಷೇತ್ರ ಮಹಾತ್ಮೆ ಆಡುವಂತಿಲ್ಲ. ಇಲ್ಲಿ ಜಾಗ್ರತದೈವ ಎಂಬ ದೇವರಿದೆ. ಪ್ರತಿ 12 ವರ್ಷಕ್ಕೆ ಒಮ್ಮೆ ಬ್ರಹ್ಮಕಳಶ ನಡೆಯುತ್ತದೆ. ಮಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ಸ್ನಾತಕೋತ್ತರ ಕೇಂದ್ರ ಇಲ್ಲಿದೆ. (ಎಚ್.ಪಿ.ವಿ.)

**ಕಟ್ಟೀಮನಿ, ಬಸವರಾಜ :** 1919–89. ಕನ್ನಡ ಪ್ರಗತಿಶೀಲ ಸಾಹಿತ್ಯದ ಅಗ್ರಮಾನ್ಯ ಲೇಖಕರು. 1919 ಅಕ್ಟೋಬರ್ 5ರಂದು ಬೆಳಗಾಂ ಜಿಲ್ಲೆಯ ಗೋಕಾಕದಲ್ಲಿ ಜನಿಸಿದರು. ತಂದೆ ಅಪ್ಪಯ್ಯಣ್ಣ, ತಾಯಿ ಬಾಳವ್ವ, ತಾಯಿಯ ತವರೂರು ಮಲಾಮರಡಿ. ಅಲ್ಲಿನ ಬಸವಣ್ಣ ದೇವರಿಗೆ ಹರಕೆ ಹೊತ್ತು ಹುಟ್ಟಿದ ಹುಡುಗ ಬಸ್ಯಾ. ಅದೇ ಹೆಸರು ನಾನಾ ರೀತಿಯಾಗಿ ಬೆಳೆಯಿತು. ಬಸಣ್ಣ, ಬಸಪ್ಪ, ಬಸವೇಶ್ವರ –ಹೀಗೆ ವಿವಿಧ ರೂಪ ತಾಳಿತು. ಪತ್ರಿಕಾ ಸಂಪಾದಕರೊಬ್ಬರು ಬಸವರಾಜ ಎಂದು ಕರೆದರು. ಅದೇ ಹೆಸರು ಉಳಿದು ಸಾಹಿತ್ಯ ಪ್ರಪಂಚದಲ್ಲಿ ಬಸವರಾಜ ಕಟ್ಟೀಮನಿ ಎಂದೇ ಪ್ರಸಿದ್ಧರಾದರು. ನಿರಕ್ಷರಿಯಾಗಿದ್ದ ತಂದೆ ಅಪ್ಪಯ್ಯಣ್ಣನವರು ಸಂಬಂಧಿಕರೊಬ್ಬರ ಮೋಸಕ್ಕೆ ಬಲಿಯಾಗಿ ಇದ್ದ ಸಣ್ಣಹೊಲವನ್ನೂ ಕಳೆದುಕೊಂಡರು. ಜೀವನಕ್ಕಾಗಿ ಸಶಸ್ತ್ರ ಪೊಲೀಸ್ ಪಡೆಯಲ್ಲಿ ಸಿಪಾಯಿಯಾಗಿ ಸೇರಿಕೊಂಡರು.

ಕಟ್ಟೀಮನಿಯವರ ವ್ಯಕ್ತಿತ್ವದಲ್ಲಿ ಕಾಣಿಸುತ್ತಿದ್ದ ನೇರವಾದ ನಡೆ, ನುಡಿ, ಪ್ರಾಮಾಣಿಕತೆ, ಸರಳತೆ, ಔದಾರ್ಯ ಮುಂತಾದ ಗುಣಗಳು ನಿರಕ್ಷರಿಗಳಾದ ರೈತಾಪಿವರ್ಗದ ತಂದೆ ತಾಯಿಗಳಿಂದಲೇ ಬಂದವು. ಕುಂದರನಾಡ ಮಣ್ಣಿನ ಗುಣಗಳಾದ ಸ್ವಾಭಿಮಾನ, ಧೈರ್ಯ, ಕ್ರಾಂತಿಕಾರಿ ಮನೋಭಾವಗಳನ್ನು ಇವರು ರೂಢಿಸಿಕೊಂಡಿದ್ದರು. ಹಸಿವು, ಬಡತನ ಹುಟ್ಟಿನಿಂದಲೇ ಬಂದವು. ತಂದೆಗೆ ಆಗಾಗ ಬೇರೆ ಬೇರೆ ಊರುಗಳಿಗೆ ವರ್ಗವಾಗುತ್ತಿತ್ತು. ಆ ಊರುಗಳಲ್ಲಿ ಸರಿಯಾದ ಶಾಲೆ ಇರುತ್ತಿರಲಿಲ್ಲ. ಜೊತೆಗೆ ಭಾಷೆಯ ಸಮಸ್ಯೆ ಬೇರೆ. ಇದರಿಂದ ಕಟ್ಟೀಮನಿಯವರಿಗೆ ಶಿಕ್ಷಣದಲ್ಲಿ ಒಂದು ಬಗೆಯ ನಿರಾಸಕ್ತಿ ಉಂಟಾಯಿತು. ತಾಯಿಯ ಒಲವು ಒತ್ತಾಸೆಗಳಿಂದಲೇ ಇವರು ಕೊಂಚ ಶಿಕ್ಷಣ ಪಡೆದರು.

ಇವರ ಪ್ರಾಥಮಿಕ ಶಿಕ್ಷಣ ತೊಡಗಿದ್ದು ಕಿತ್ತೂರಿನಲ್ಲಿ. ಅಲ್ಲಿಂದ ಗೋಕಾಕಕ್ಕೆ ಬಂದು ಮೂರನೆಯ ತರಗತಿಗೆ ಸೇರಿದರು. ಅಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೆ ಇವರಿಗೆ ಕಿವುಡುತನ ಕಾಣಿಸಿಕೊಂಡಿತು. ಎಷ್ಟು ಪ್ರಯತ್ನಿಸಿದರೂ ಇವರು ಕಿವುಡುತನದಿಂದ ಪಾರಾಗಲಿಲ್ಲ. ಇದರಿಂದ ಇವರಲ್ಲಿ ಕೀಳರಿಮೆ ಬೆಳೆಯಿತು. ಸೂಕ್ಷ್ಮಗ್ರಹಣಶಕ್ತಿ ಹಾಗೂ ಜ್ಞಾಪಕ ಶಕ್ತಿಗಳು ಇವರನ್ನು ತರಗತಿಗಳಲ್ಲಿ ಮೊದಲಿಗರನ್ನಾಗಿಸುತ್ತಿದ್ದುವು. ಆದರೆ ಇವರಲ್ಲಿ ಏಕಾಂಗಿತನ ಮತ್ತು ಅಂತರ್‌ಮುಖತೆಗಳು ನೆಲೆಯಾದವು. ಈ ಅಂಶಗಳು ಇವರ ವ್ಯಕ್ತಿತ್ವದ ಮೇಲೂ ಪ್ರಭಾವಬೀರಿದುವು. ಬೆಳಗಾಂವಿಯಲ್ಲಿ ಇವರು ಪ್ರಗೋ. ಕುಲಕರ್ಣಿಯವರ ಶಿಷ್ಯರಾಗಿದ್ದರು. ಕಟ್ಟೀಮನಿಯವರ ಬದುಕಿನಲ್ಲಿ ಗಾಢ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಅವರ ಆಶ್ರಯದಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಿಕೊಂಡರು. ವಿದ್ಯಾರ್ಥಿ ಎಂಬ ಕೈಬರೆಹದ ಪತ್ರಿಕೆಯನ್ನೂ ಆರಂಭಿಸಿದರು. ಜಿಲ್ಲೆಗೆ ನಾಲ್ಕನೆಯವರಾಗಿ ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ತಂದೆಯವರಿಗೆ ಬೆಳಗಾಂವಿಯಿಂದ ಪುಣೆಗೆ ವರ್ಗವಾಯಿತು. ಆಗ ಶಿಕ್ಷಣಕ್ಕೆ ನಿಜವಾದ ತಡೆ ಉಂಟಾಯಿತು. ಕಟೀಮನಿಯವರನ್ನು ಬೆಳಗಾಂವಿಯಲ್ಲಿಯೇ ಬಿಡುವುದು ಅನಿವಾರ್ಯವಾಯಿತು. ತಮ್ಮ ಮನೆಯ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದಿದ್ದ ಇವರು ಬೆಳಗಾಂವಿಯಲ್ಲಿದ್ದಾಗ ಪತ್ರಿಕೆ ಹಂಚಿ, ಅಲ್ಪ ಸ್ವಲ್ಪ ಸಂಪಾದನೆ ಮಾಡುತ್ತ, ತಾವೇ ಅಡುಗೆ ಮಾಡಿಕೊಂಡು ಅಭ್ಯಾಸ ಸಾಗಿಸಿದರು. ಗಣಿತ ಮಾತ್ರ ಇವರಿಗೆ ತಲೆನೋವಿನ ವಿಷಯವಾಗಿತ್ತು. ಅದರಿಂದಲೇ ಇವರು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಉಳಿದರು. ಸರ್ಕಾರಿ ನೌಕರಿ ತಮ್ಮ ಗುರಿಯಲ್ಲ ಎಂದುಕೊಂಡು ಶಾಲೆ ತ್ಯಜಿಸಿದರು.

ಸಾಹಿತ್ಯ, ಪತ್ರಿಕೋದ್ಯಮಗಳಲ್ಲಿ ಕಟ್ಟೀಮನಿಯವರಿಗೆ ಆರಂಭದಿಂದಲೂ ಆಸಕ್ತಿ, ಜೀವನಕ್ಕಾಗಿ ಅದೇ ಕ್ಷೇತ್ರಗಳನ್ನು ಆಶ್ರಯಿಸಿದರು. ಇವರು ಕೆಲಸಕ್ಕೆ ಸೇರಿದ ಮೊದಲನೆಯ ಪತ್ರಿಕೆ 'ಸಂಯುಕ್ತ ಕರ್ನಾಟಕ'. ಅಲ್ಲಿಂದ ಮುಂದೆ 'ತರುಣ ಕರ್ನಾಟಕ'ದಲ್ಲಿ ಕೆಲಸಕ್ಕೆ ಸೇರಿದರು. ದಿವಾಕರರೊಡನೆ ನಡೆಸಿದ ಒಂದು ಸಂದರ್ಶನದ ಫಲವಾಗಿ ಅದನ್ನೂ ಬಿಡಬೇಕಾಯಿತು. ಫಾಣೇಕರ ಅವರ 'ಸಮಾಜ' ಪತ್ರಿಕೆಗೆ ಸೇರಿದರು. ಅದು ಬೆಂಗಳೂರಿಗೆ ಹೋದಾಗ ತಾವೂ ಬೆಂಗಳೂರಿಗೆ ಹೋದರು. ಆದರೆ ಅಲ್ಲಿ ಅದರ ಮಾಲೀಕರಾಗಿದ್ದವರ ಅಧಿಕಾರಶಾಹಿ ಪ್ರವೃತ್ತಿಗೆ ಬೇಸತ್ತು ಪ್ರತಿಭಟಿಸಿ ಪುನಃ ಹುಬ್ಬಳ್ಳಿಗೆ ಬಂದು 'ಲೋಕ ಮತ' ಪತ್ರಿಕೆ ಸೇರಿದರು. ಅದನ್ನೂ ಬಿಟ್ಟು ಗದಗಿಗೆ ಹೋಗಿ ಅಲ್ಲಿ 'ಕರ್ನಾಟಕ ಬಂಧು' ಪತ್ರಿಕೆಯಲ್ಲಿ ಕೆಲಸಕ್ಕೆ ತೊಡಗಿದರು. ಆ ಪತ್ರಿಕೆಯಲ್ಲಿರುವಾಗಲೇ ಕನ್ನಡದ ಹಿರಿಯ ಸಾಹಿತಿಗಳಾದ ಮಾಸ್ತಿ, ಬೇಂದ್ರೆ,ಅನಕೃ ಮೊದಲಾದವರ ಸಂಪರ್ಕಉಂಟಾಯಿತು. ಯಾವ ಪತ್ರಿಕೆಯಲ್ಲಿಯೂ ಇಪ್ಪತ್ತು ರೂಪಾಯಿಗಿಂತ ಹೆಚ್ಚಿನ ಸಂಬಳ ದೊರೆಯುತ್ತಿರಲಿಲ್ಲ. 'ಕರ್ನಾಟಕ ಬಂಧು' ಪತ್ರಿಕೆಯಲ್ಲಿ ಇದ್ದಕ್ಕಿದ್ದಂತೆ ಸಂಬಳ ಕಡಿಮೆ ಮಾಡಿದ್ದರಿಂದ ಅದನ್ನು ಬಿಟ್ಟು ಬೆಂಗಳೂರಿಗೆ ಬಂದರು. ಶಿವಮೂರ್ತಿ ಶಾಸ್ತ್ರಿಗಳು ಸಂಪಾದಿಸುತ್ತಿದ್ದ 'ಸ್ವತಂತ್ರ ಕರ್ನಾಟಕ' ಪತ್ರಿಕೆ ಸೇರಿದರು. ಆದರೆ ಇಲ್ಲಿಯೂ ಬಹಳ ಕಾಲ ನಿಲ್ಲುವುದು ಕಟ್ಟೀಮನಿಯವರಿಗೆ ಸಾಧ್ಯವಾಗಲಿಲ್ಲ.

1942ರ ಚಲೇಜಾವ್ ಚಳವಳಿಯಲ್ಲಿ ಕಟ್ಟೀಮನಿಯವರೂ ಧುಮುಕಿದರು. ಉಗ್ರಭಾಷಣಗಳನ್ನು ಮಾಡಿ, ಬಂಧನಕ್ಕೆ ಒಳಗಾದರು. ಇದರಿಂದ ಇವರ ಅನುಭವ ವಿಸ್ತಾರಗೊಂಡಿತು. ಸೆರೆಮನೆಯಿಂದ ಹೊರಬಂದ ಮೇಲೆ ಮತ್ತೆ ಪತ್ರಿಕೋದ್ಯೋಗದ

ಹುಡುಕಾಟದಲ್ಲಿ ತೊಡಗಿದರು. 'ಉಷಾ' ಪತ್ರಿಕೆಯಲ್ಲಿ ದುಡಿದು ಆ ಪತ್ರಿಕೆಗೊಂದು ಹೆಸರು ತಂದರು. ಆಗ ಕನ್ನಡದ ಸಿದ್ಧಪ್ರಸಿದ್ಧರೆಲ್ಲ ಅದರಲ್ಲಿ ಬರೆಯುತ್ತಿದ್ದರು. 'ಉಷಾ' ಪತ್ರಿಕೆಯೊಡನೆ ಇವರೂ ಬೆಳೆದರು. ಅದೇ ದಿನಗಳಲ್ಲಿ ಇವರ ಮದುವೆಯೂ ಆಯಿತು. ಈ ದಂಪತಿಗಳಿಗೆ ಐವರು ಮಕ್ಕಳು. ಎರಡು ಗಂಡು, ಮೂರು ಹೆಣ್ಣು. ಪ್ರಗತಿಶೀಲ ವಿಚಾರಗಳನ್ನು ಆಧರಿಸಿ 'ಸ್ವತಂತ್ರ' ಪತ್ರಿಕೆಯನ್ನು ಸ್ವಲ್ಪ ಕಾಲ ನಡೆಸಿದ್ದು ಇವರ ಮಹತ್ವದ ಸಾಧನೆ. ಇವರ ನಿಷುವಿರ ಸ್ವಭಾವ ಇವರನ್ನು ಯಾವ ಪತ್ರಿಕೆಯಲ್ಲಿಯೂ ಬಹಳ ಕಾಲ ಉಳಿಯುವಂತೆ ಮಾಡಲಿಲ್ಲ.

ಇವರು ಸು. 60 ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕಾದಂಬರಿಗಳದೇ ಮೇಲುಗೈ. ಹೆಚ್ಚು ಕಡಿಮೆ 40 ಕಾದಂಬರಿಗಳನ್ನು ಬರೆದಿದ್ದಾರೆ. ಹತ್ತು ಕಥಾಸಂಕಲನಗಳು ಪ್ರಕಟವಾಗಿವೆ. ಎರಡು ಕವನಸಂಗ್ರಹಗಳೂ ಎರಡು ಜೀವನಚಿತ್ರಗಳೂ ಒಂದು ಪ್ರವಾಸ ಕಥನವೂ ಪ್ರಕಟಗೊಂಡಿವೆ. ಕಾದಂಬರಿಕಾರನ ಆತ್ಮಕಥೆ ಶೀರ್ಷಿಕೆಯಲ್ಲಿ ಆತ್ಮಕಥೆ ರಚಿಸಿದ್ದಾರೆ (1981).

ಇವರ ಮೊದಲನೆಯ ಕಾದಂಬರಿ ಸ್ವಾತಂತ್ರ್ಯದೆಡೆಗೆ 1946ರಲ್ಲಿ ಪ್ರಕಟವಾಯಿತು. ಅಲ್ಲಿಂದ ಇವರು ಸತತವಾಗಿ ಬರೆಯತೊಡಗಿದರು. ಇವರ ಕಾದಂಬರಿಗಳಲ್ಲಿ ಅತ್ಯಂತ ಪ್ರಸಿದ್ಧವಾದವು ಎಂದರೆ ಮೋಹದ ಬಲೆಯಲ್ಲಿ (1952) ಮತ್ತು ಜರತಾರಿ ಜಗದ್ಗುರು (1953). ಆದರೆ ಗುಣದಲ್ಲಿ ಅವು ಅದೇ ಮಟ್ಟದವು ಎಂದು ಹೇಳುವಂತಿಲ್ಲ. ಇವರ ಕಾದಂಬರಿಗಳಲ್ಲಿ ನೆನೆಯಬೇಕಾದವು: ಮಾಡಿ ಮಡಿದವರು (1950), ಮಣ್ಣು ಮತ್ತು ಹೆಣ್ಣು (1953), ಖಾನಾವಳಿಯಲ್ಲಿ ನೀಲಾ (1953). ಜ್ವಾಲಾಮುಖಿಯ ಮೇಲೆ (1951), ಇವರಿಗೆ ಸೋವಿಯೆತ್ ದೇಶದ ನೆಹರೂ ಪ್ರಶಸ್ತಿ ತಂದು ಕೊಟ್ಟ ಕೃತಿ. ನಾನೂ ಪೊಲೀಸನಾಗಿದ್ದೆ ಹಾಗೂ ಬಂಗಾರದ ಜಿಂಕೆಯ ಹಿಂದೆ (1954) – ಈ ಎರಡೂ ಕಾದಂಬರಿಗಳು ಆತ್ಮಕಥನಾತ್ಮಕವಾದವು. ಗಿರಿಯ ನವಿಲು (1956) ಅಕ್ಕಮಹಾದೇವಿಯನ್ನು ಕುರಿತದ್ದು. ಇವರ ಯಾವುದೇ ಕಾದಂಬರಿಯಲ್ಲಾದರೂ ಆಸಕ್ತಿಯಿಂದ ಓದಿಸಿಕೊಳ್ಳುವ ಗುಣ ಇರುತ್ತದೆ. ಇವರ ಸಾಹಿತ್ಯದಲ್ಲಿ ವಾಸ್ತವತೆಯ ಯಥಾವತ್ತಾದ ಚಿತ್ರಣ ದೊರಕುತ್ತದೆ. ಅವುಗಳಲ್ಲಿ ಬರುವ ವ್ಯಕ್ತಿಗಳ ಹೆಸರಾದರೂ ನಿಜಜೀವನದ ವ್ಯಕ್ತಿಗಳ ಹೆಸರಿನ ಅಲ್ಪಸ್ವಲ್ಪ ಮಾರ್ಪಾಡೇ ಆಗಿರುತ್ತದೆ. ಇವರ ಕಾದಂಬರಿಗಳಲ್ಲಿ ಹೆಚ್ಚಿನ ಕಲೆಗಾರಿಕೆ ಕಾಣಿಸುವುದಿಲ್ಲ; ತಂತ್ರಗಾರಿಕೆಗೆ ಇವರು ಹೆಚ್ಚಿನ ಗಮನ ಕೊಡಲಿಲ್ಲ. "ಕಲೆಗಾಗಿ ಕಲೆ ಎನ್ನುವ ದೃಷ್ಟಿ ನನ್ನದಲ್ಲ. ನಮ್ಮ ಸುತ್ತಲಿನ ಹತ್ತಾರು ಜೀವಿಗಳ ಬದುಕು ಬಂಗಾರವಾಗಬೇಕು ಎನ್ನುವ ದೃಷ್ಟಿ ನನ್ನದು" ಎಂದು ಇವರೇ ಹೇಳಿಕೊಂಡಿದ್ದಾರೆ.

ಕಟ್ಟೀಮನಿಯವರು ವಿಧಾನ ಪರಿಷತ್ತಿನ ನಾಮಕರಣ ಸದಸ್ಯರಾಗಿದ್ದರು (1968–74). ಸೋವಿಯೆತ್ ದೇಶಕ್ಕೂ ಭೇಟಿ ಕೊಟ್ಟಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು (1970–73). ಅನೇಕ ಸಂಘ ಸಂಸ್ಥೆಗಳೊಡನೆ ಇವರ ಸಂಬಂಧ ನಿಕಟವಾಗಿತ್ತು. ಇವರ ಜೀವನ ಮತ್ತು ಸಾಹಿತ್ಯವನ್ನು ಕುರಿತಂತೆ ಬಸವರಾಜ ಸಾದರ ಅಧ್ಯಯನ ಮಾಡಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. (ಎಚ್.ಎಂ.ಎಸ್.ಐ.)

**ಕಟ್ಟುಕಥೆ :** ಅಸಂಭಾವ್ಯ ಪಾತ್ರಗಳ ಭ್ರಾಮಕ ಜಗತ್ತಿನ ದೈನ್ಯ ನಾಯಕರು ವಿಜಯಾದಿ ಕೀರ್ತಿ ಭಾಗ್ಯಗಳನ್ನು ಪಡೆವಂಥ ಅದ್ಭುತಗಳಿಂದ ಕೂಡಿರುವ ರಮಣೀಯ ಕಥನ (ಮೆರ್ಖನ್). ಲೋಕವಿಖ್ಯಾತ ಜಾನಪದ ವಿದ್ವಾಂಸ ಸ್ಟಿತ್ ಥಾಂಪ್ಸನ್ ಇದನ್ನು ಕುರಿತು ಹೇಳಿರುವ ಮಾತುಗಳಿವು: ಮೆರ್ಖನ್ ಆಶಯಗಳ ಅಥವಾ ಘಟನೆಗಳ ಆನುಪೂರ್ವಿಯನ್ನೊಳಗೊಂಡು ಕೆಲಮಟ್ಟಿಗೆ ದೊಡ್ಡದಾಗಿರುವ ಕಥೆ. ಅದು ಗೊತ್ತಾದ ಸ್ಥಳ ಅಥವಾ ಪಾತ್ರಗಳಿಲ್ಲದ ಅವಾಸ್ತವ ಪ್ರಪಂಚದಲ್ಲಿ ಚಲಿಸುತ್ತದೆಯಲ್ಲದೆ ಅದ್ಭುತಗಳಿಂದ ತುಂಬಿರುತ್ತದೆ. ಈ ಅಸಂಭಾವ್ಯ ಜಗತ್ತಿನಲ್ಲಿ ದೈನ್ಯ ನಾಯಕರು ವಿರೋಧಿಗಳನ್ನು ಕೊಲ್ಲುತ್ತಾರೆ, ಸಾಮ್ರಾಜ್ಯವನ್ನು ಗೆಲ್ಲುತ್ತಾರೆ, ರಾಜಕುಮಾರಿಯರನ್ನು ಮದುವೆಯಾಗುತ್ತಾರೆ.

ಕಟ್ಟುಕಥೆ ಜಗತ್ತಿನ ಜನಪದ ಕಥೆಗಳಲ್ಲಿ ಕಂಡುಬರುವ ಒಂದು ಪ್ರಮುಖ ಪ್ರಕಾರ. ಮೆರ್ಖನ್ ಜರ್ಮನ್ ಭಾಷೆಯ ಪದ. ಮೊದಲ ಬಾರಿಗೆ ಇದು ಗ್ರಿಮ್ ಸೋದರರು 1813ರಲ್ಲಿ ಹೊರತಂದ ಜನಪದ ಕಥಾಸಂಕಲನ ಕಿನ್ಡರ್–ಉನ್ಡ್ ಹಾಉಸ್ ಮೆರ್ಖನ್ ಮೂಲಕವಾಗಿ ಪ್ರಕಾಶನಗೊಂಡಿತು. ಮೊದಮೊದಲು ಇದರ ಕಡೆಗೆ ಹೆಚ್ಚಿನ ಗಮನ ಹರಿಯದಿದ್ದರೂ ಸಾರ್ವತ್ರಿಕ ಸ್ವೀಕಾರ ಇದಕ್ಕೆ ಸಿಗದಿದ್ದರೂ ಆಧುನಿಕ ವಿದ್ವಾಂಸರು ಈಚೆಗೆ ಇದರ ಪ್ರಾಮುಖ್ಯವನ್ನು ಒಪ್ಪಿಕೊಂಡಿರುವಂತೆ ಕಾಣುತ್ತದೆ. ಇದಕ್ಕೆ ಸಂವಾದಿಯಾಗಿ ಇಂಗ್ಲಿಷಿನಲ್ಲಿ ಫೇಯ್‌ರಿ ಟೇಲ್, ಹೌಸ್ ಹೋಲ್ಡ್ ಟೇಲ್ ಎಂಬ ಪದಗಳನ್ನು ಬಳಸಿದ್ದರೂ ಅವು ಅಷ್ಟು ತೃಪ್ತಿಕರವಾಗಿಲ್ಲ. ಫೇಯ್‌ರಿ ಟೇಲ್ ಅಥವಾ ಅಜ್ಜಿ ಕಥೆ (ಕಿನ್ನರ ಕಥೆ) ಎನಿಸಿಕೊಂಡ ಬಹುಸಂಖ್ಯಾತ ಕಥೆಗಳಲ್ಲಿ ಫೇಯ್‌ರೀಸ್ ಅಥವಾ ಕಿನ್ನರರೇ ಇರುವುದಿಲ್ಲ. ಹೌಸ್‌ಹೋಲ್ಡ್ ಟೇಲ್ ಅಥವಾ ಕೌಟುಂಬಿಕ ಕಥೆ ಶಾಸ್ತ್ರೀಯವಾಗಿ ತುಂಬ ವ್ಯಾಪಕವಾದು ದೆನಿಸುತ್ತದೆ. ಆದ್ದರಿಂದ ಇವೆರಡು ಮಾತುಗಳೂ ಮೂಲ ಜರ್ಮನ್ ಪದದ ಮೂಲಾರ್ಥವನ್ನು ಪೂರ್ಣವಾಗಿ ಸೂಚಿಸಲಾರವೆಂದು ಕೆಲವರ ಮತ. ಫ್ರೆಂಚಿನ ಕೊಂಟೆ ಪಾಪ್ಯುಲಯಿರೆ, ನಾರ್ವೆಯ ಪವೆಟ್ಯೆರ್, ಸ್ವಿಟ್ಜರ್ಲೆಂಡಿನ ಸಾಗಾ, ರಷ್ಯದ ಸ್ಕಾಜ್ಕಾ ಮೊದಲಾದವು ಮೆರ್ಖನಿನ ಸಂವಾದಿ ಪದಗಳು. ಆದರೆ ಇವು ಯಾವಾಗಲೂ ನಿಖರವಾಗಿ ಒಂದೇ ಅರ್ಥವ್ಯಾಪ್ತಿಯನ್ನು ಹೊಂದಿರುತ್ತವೆ ಎಂಬುದರಲ್ಲಿ ಸಂಶಯವಿದ್ದೇ ಇದೆ. ಈ ಎಲ್ಲ ಪದಗಳೂ ವಿವರಿಸಲು ಯತ್ನಿಸಿರುವುದು ಸಿಂಡ್ರೆಲ, ಸ್ನೋವೈಟ್, ಹನ್ಸೆಲ್ ಮತ್ತು ಗ್ರೆಟಲ್‌ನಂಥ ಕಥೆಗಳನ್ನು. ಈ ಸಂದಿಗ್ಧತೆಯನ್ನು ನಿವಾರಿಸಲು ಕಿಮೀಯರಟ ಪದವನ್ನು ಬಳಕೆಗೆ ತರುವಂತೆ ಸ್ಟಿತ್ ಥಾಂಪ್ಸನ್ ಸಲಹೆ ಮಾಡಿದ್ದಾನೆ. ಇದು ಕಿಮೀಯರ ಪದದಿಂದ ನಿಷ್ಪನ್ನವಾದುದು. ಸಿಂಹದ ತಲೆಯೂ ಆಡಿನ ಒಡಲೂ ಹಾವಿನ ಬಾಲವೂ ಉಳ್ಳ ರಾಕ್ಷಸಾಕಾರದ ಅದ್ಭುತ ಪ್ರಾಣಿಯೊಂದನ್ನು ದೃಷ್ಟಿಯಲ್ಲಿಟ್ಟುಕೊಂಡು ಥಾಂಪ್ಸನ್ ಈ ಪದವನ್ನು ರೂಪಿಸಿದಂತೆ ಕಾಣುತ್ತದೆ. ಅಸಂಭಾವ್ಯತೆ ಇಂಥ ಕಲೆಗಳಿಗೆ ತಿರುಳಾಗಿರುವುದೇ ಇದಕ್ಕೆ ಕಾರಣವಾಗಿರಬೇಕು. ಆದರೆ ಈ ಪದವೂ ಹೆಚ್ಚು ಬಳಕೆಗೆ ಬಂದಂತೆ ಕಾಣುವುದಿಲ್ಲ. ಕನ್ನಡದಲ್ಲಿ ಮೆರ್ಖನ್‌ಗೆ ಸಂವಾದಿಯಾಗಿ ಕಟ್ಟುಕಥೆ ಎಂಬ ಪದವನ್ನು ಹಾ.ಮಾ. ನಾಯಕರು ಮೊಟ್ಟಮೊದಲು ರೂಪಿಸಿ ಚಲಾವಣೆಗೆ ತಂದರು. ಇದು ಹೆಚ್ಚು ಔಚಿತ್ಯಪೂರ್ಣವಾಗಿದೆ ಎಂದು ಹೇಳಬಹುದು.

ಜರ್ಮನರು ಮೆರ್ಖನ್ ಪದದ ಬಳಕೆಯಲ್ಲಿ ನಿಖರತೆಯನ್ನು ತರಲು ವಿಶೇಷ ಪ್ರಯತ್ನ ಮಾಡಿರುವರಾದರೂ ಖಾಸಗಿ ಸೂತ್ರ ವಿವರಣೆಯಲ್ಲಿ ಅದು ಪರ್ಯವಸಾನ ವಾದಂತೆ ಕಾಣಬರುತ್ತದೆ. ಸಾಮಾನ್ಯವಾಗಿ ಜರ್ಮನಿಯಲ್ಲಿ ಬಳಕೆಯಲ್ಲಿರುವ ಈ ಪದ ಬಹಳ ಸಡಿಲವಾದುದು. ನಿಜವಾಗಿಯೂ ಗ್ರಿಮ್ ಸೋದರರ ಹಾಉಸ್ ಮೆರ್ಖನ್‌ನಲ್ಲಿನ ಎಲ್ಲ ಕಥೆಗಳನ್ನೂ ಗಮನಿಸಿದಾಗ ಈ ಪದದ ಅರ್ಥವ್ಯಾಪ್ತಿ ವಿಶಾಲವೆಂದು ಕರೆದಿರುವ ಸ್ನೋವೈಟ್, ಫೆಯ್‌ತ್‌ಫುಲ್ ಜಾನ್ ಮತ್ತು ದಿ ಫ್ರಾಗ್ ಪ್ರಿನ್ಸ್ ನಂಥವು ಮಾತ್ರವಲ್ಲದೆ, ಅವಿವೇಕದ ಕಥೆಗಳು, ಸಂಚಿತ ಕಥೆಗಳು, ದಡ್ಡರ ಕಥೆಗಳು, ಸಾಧುಗಳು ಮತ್ತು ಸ್ಥಳ ಐತಿಹ್ಯಗಳು, ಮಧ್ಯಯುಗದ ಧಾರ್ಮಿಕ ಕಥೆಗಳು, ಮತ್ತಿತರ ಅನೇಕ ವಿನೋದ ಹಾಗೂ ಗೂಢಚರಿತ್ರಾಂಶಗಳಿರುವ ಕಥೆಗಳನ್ನು ಕಾಣುತ್ತೇವೆ. ಆಲ್ಬರ್ಟ್ ವೆಸೆಲ್‌ಸ್ಕಿಯ ಪ್ರಕಾರ ಸಿಂಡ್ರೆಲ ಒಂದೇ ನಿಜವಾದ ಮೆರ್ಖನ್ ರೀತಿಯದು. ಇಂಥ ಸಂದರ್ಭದಲ್ಲಿ ಸಹಜವಾಗಿಯೇ ಅನಿರ್ದಿಷ್ಟತೆ ತಲೆದೋರುತ್ತದೆ.

ಈ ವಿಶಾಲ ದೃಷ್ಟಿಯಲ್ಲಿ ಮೆರ್ಖನ್ ಉಪಯೋಗಿಸುವಾಗ ಇದಕ್ಕೂ ಸಾಗಾಗಳಿಗೂ ಇರುವ ವ್ಯತ್ಯಾಸವನ್ನು ತಿಳಿಯಬೇಕು. ಮೆರ್ಖನ್ ಸಂಕೀರ್ಣ ಚಿತ್ರಣವೆಂದೂ ಸಾಗಾ ಸರಳ ಚಿತ್ರಣವೆಂದೂ ಹೇಳಲಾಗಿದೆ. ಸಾಗಾ ಕಥಾವಕ್ತ್ರ ವಾಸ್ತವವೆಂದು ನಂಬಿದ ವಸ್ತುಗಳಿಗೆ ಸಂಬಂಧಿಸಿದ್ದು ಅಥವಾ ಶ್ರೋತೃಗಳು ನಂಬುವಂತೆ ಹೇಳಿದ್ದು. ಇದರಲ್ಲಿ ಇತಿಹಾಸ ಅಥವಾ ಇತಿಹಾಸಾಭಾಸದ ವಿಷಯಗಳೂ ಇರಬಹುದು. ಆದರೆ ಮೆರ್ಖನ್ ಸಂಪೂರ್ಣವಾಗಿ ಕಲ್ಪಿತವಸ್ತುವನ್ನುಳ್ಳದ್ದು. ಮೆರ್ಖನಿಗೂ ನಾವೆಲ್ಲಕ್ಕೂ ಇರುವ ವ್ಯತ್ಯಾಸವನ್ನೂ ಇಲ್ಲಿ ಗಮನಿಸಬಹುದು. ಇವೆರಡರ ಸಂಬಂಧವೂ ಹೆಚ್ಚುಕಡಿಮೆ ಮೇಲಿನದನ್ನೇ ಹೋಲುತ್ತದೆ. ಮೆರ್ಖನಿನದು ಭ್ರಾಮಕ ಜಗತ್ತಾದರೆ, ನಾವೆಲ್ಲದ್ದು ವಾಸ್ತವಾಭಾಸ ಜಗತ್ತೆಂದು ಹೇಳಬಹುದು. ಆದರೆ ಎಷ್ಟೋ ಸಾರಿ ಇವೆರಡಕ್ಕಿರುವ ವ್ಯತ್ಯಾಸವನ್ನು ತೋರಿಸಲು ಸಾಧ್ಯವಾಗುವುದಿಲ್ಲ.

ನಿರೂಪಕರು ಕೇವಲ ಆನಂದಕೋಸ್ಕರವಾಗಿಯೇ ಹೇಳಿದ ಕಥೆ ಮೆರ್ಖನ್, ಇದು ವಾಸ್ತವವಾಗಿ ನಂಬಿ ಬಂದದ್ದೂ ಅಲ್ಲ ಅಥವಾ ನಡೆದದ್ದೂ ನಡೆಯಬಹುದಾದದ್ದೂ ಅಲ್ಲ. ಪಶ್ಚಿಮ ಯುರೋಪ್‌ಮತ್ತು ಅದರಿಂದ ಪ್ರಭಾವಿತಗೊಂಡ ಪ್ರದೇಶಗಳನ್ನು ಬಿಟ್ಟು ಉಳಿದ ಪ್ರಪಂಚದ ಇತರ ಭಾಗಗಳಲ್ಲಿನ ಸಾಹಿತ್ಯವನ್ನು ನೋಡಿದರೆ ಈ ವ್ಯತ್ಯಾಸ ನಿಜವಾಗಿಯೂ ಕಥಾವಕ್ತೃಗಳ ಮನಸ್ಸಿನಲ್ಲಿದ್ದಂತೆ ಕಾಣುವುದಿಲ್ಲ. ಎಲ್ಲಿಯವರೆಗೆ ಕಥೆಗಳಲ್ಲಿ ನಂಬಿಕೆಯ ಅಂಶ ಇರುತ್ತದೆಯೊ ಅಲ್ಲಿಯವರೆಗೆ ಅವನ್ನು ಕೇವಲ ಕಾಲ್ಪನಿಕವೆಂದು ತಳ್ಳಿಹಾಕಲಾಗುವುದಿಲ್ಲ. ಈ ಕಾರಣಕ್ಕಾಗಿಯೆ ಕೆಲವು ಲೇಖಕರು ಮೆರ್ಖನ್‌ನ ಲಕ್ಷಣಗಳನ್ನು ಪಶ್ಚಿಮ ಐರೋಪ್ಯ ಸಂಸ್ಕೃತಿಗೆ ಮಿತಿಗೊಳಿಸಲು ಅಪೇಕ್ಷಿಸಿದಂತೆ ಕಾಣುತ್ತದೆ.

ಒಂದೇ ರೀತಿಯ ಕಥಾವಸ್ತುಗಳ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿಯೂ ವ್ಯಕ್ತವಾಗುವುದರಿಂದ ಕಥಾವಕ್ತೃವಿನ ನಂಬಿಕೆ ಅಥವಾ ಅಪನಂಬಿಕೆಯನ್ನು ಆಧರಿಸಿ ಅವನ್ನು ವರ್ಗೀಕರಿಸುವುದು ಉಪಯುಕ್ತವಲ್ಲವೆಂದು ತೋರುತ್ತದೆ. ನಿರ್ದಿಷ್ಟ ಕಥೆಯೊಂದು ಒಂದು ಭಾಗದವರಿಗೆ ಮೆರ್ಖನ್ ಆಗಿದ್ದು ಇನ್ನೊಂದು ಭಾಗದವರಿಗೆ ಆಗದಿರುವುದು ಸಾಧ್ಯವಿಲ್ಲ. ಈ ಸ್ಥಿತಿಯನ್ನೇ ಗಮನಿಸಿ ಆಲ್ಬರ್ಟ್ ವೆಸೆಲ್‌ಸ್ಕಿ ಮೆರ್ಖನ್ ಪದವನ್ನು ಗ್ರಿಮ್ ಸೋದರರ ಕಥೆಗಳಲ್ಲಿ ನಿರ್ದಿಷ್ಟ ಶೈಲಿ ಮತ್ತು ಕಥನ ಪ್ರವೃತ್ತಿಯುಳ್ಳ ಸಮೂಹಗಳಿಗೆ ಮಾತ್ರ ಪರಿಮಿತಿಗೊಳಿಸಲು ಬಯಸಿದ. ಇವನ ಅಭಿಪ್ರಾಯದಂತೆ ಸ್ನೋವೈಟ್, ಸಿಂಡ್ರೆಲ, ಹನ್ಸೆಲ್ ಮತ್ತು ಗ್ರೆಟಲ್, ಪುಸ್ ಇನ್ ಬೂಟ್ಸ್, ಫೆಯ್‌ತ್‌ಫುಲ್ ಜಾನ್ಸ್– ಇವುಗಳೇ ಪ್ರಾತಿನಿಧಿಕ ಸ್ವರೂಪದ, ಆದರ್ಶ ಮೆರ್ಖನ್ ಮಾದರಿಗಳು. ಇವುಗಳ ನಿಶ್ಚಿತ ಶೈಲಿಯನ್ನು ವಿಶ್ಲೇಷಣೆ ಮಾಡಿ, ಈ ರೂಪ ಪ್ರಾಯಶಃ ಪುನರುಜ್ಜೀವನ ಕಾಲಕ್ಕಿಂತ ಮುನ್ನ ಮತ್ತು 16ನೆಯ ಶತಮಾನಕ್ಕಿಂತ ಹಿಂದೆ ರಚಿತವಾಗಿರಲಿಲ್ಲವೆಂದು ಆತ ತಿಳಿಸುತ್ತಾನೆ.

ಆದರೆ ಗ್ರೀಮ್ ಸೋದರರೇ ಮೊದಲಾದವರಲ್ಲಿ ಕಂಡುಬರುವ ಈ ವಿಶೇಷ ಶೈಲಿಯ ಕಥೆಗಳು ಸಾಕಷ್ಟು ಪ್ರತ್ಯೇಕವೂ ಸ್ವತಂತ್ರವೂ ಆದ ಅಸ್ತಿತ್ವವನ್ನು ಪಡೆದು ಬೇರೆ ಕಡೆಯೂ ರಚಿತವಾಗಿರಲಿಕ್ಕೆ ಸಾಕು. ಐರೋಪ್ಯ ಸಾಹಿತ್ಯವನ್ನು ಪರಿಶೀಲಿಸಿದರೆ ಜನಪ್ರೀತಿ ಪಡೆದಿರುವ ಯಾವುದೇ ಜನಪದ ಕಥೆ, ತನ್ನ ಜೀವನೇತಿಹಾಸದಲ್ಲಿ 16ನೆಯ ಶತಮಾನಕ್ಕಿಂತ ಹಿಂದಿನದಾಗಿರುತ್ತದೆ. ವೆಸೆಲ್‍ಸ್ಕಿ ಸಲಹೆ ಮಾಡಿರುವ ಹಾಗೆ ಮೆರ್ಖೆನ್ ಪದವನ್ನು ವಿಶೇಷ ಶೈಲಿಯವಕ್ಕೆ ಮಾತ್ರ ಮಿತಿಗೊಳಿಸಿದರೆ ಬಹಳವಾಗಿ ಪ್ರಸಿದ್ಧಿ ಪಡೆದಿರುವ ಇತರ ಅಸಂಖ್ಯಾತ ಪಾಠಗಳು ಈ ವ್ಯಾಪ್ತಿಗೆ ಸೇರದೆ ಬಿಟ್ಟು ಹೋಗುವ ಅವಕಾಶವಿದೆ ಎಂದು ಸ್ಟಿತ್ ಥಾಂಪ್ಸನ್ ಎಚ್ಚರಿಸಿದ್ದಾನೆ. ಆದ್ದರಿಂದ ವೆಸಲ್‍ಸ್ಕಿಯ ವಿಭಾಗಕ್ರಮ ಖಂಡಿತವಾಗಿಯೂ ಮೌಲಿಕವಲ್ಲ. ಇಂಥ ವಿಸ್ತಾರವಾದ ಹಾಗೂ ಸಡಿಲವಾದ ಪದದ ಬಳಕೆಯನ್ನು ಹಾಗೆ ಸಂಕುಚಿತಗೊಳಿಸುವುದು ಸರಿಯಲ್ಲ–ಎಂದು ಥಾಂಪ್ಸನ್ ಮತ್ತೊಂದೆಡೆ ಅಭಿಪ್ರಾಯಪಡುತ್ತಾನೆ. ಒಟ್ಟಾರೆ ಹೇಳುವುದಾದರೆ, ಈ ಪದ ಇಂಗ್ಲಿಷಿನ ಫೋಕ್ ಟೇಲ್‍ಗೆ (ಜನಪದ ಕಥೆ) ಸಂವಾದಿಯಾದುದು. ಅಜ್ಜಿಕಥೆಯನ್ನು **(ನೋಡಿ–ಅಜ್ಜಿಕಥೆ)** ಇಲ್ಲಿ ನೆನಸಿಕೊಳ್ಳಬಹುದು. ಪ್ರಾಯಶಃ ಮೆರ್ಖೆನ್ ಗದ್ಯ ಕಥೆಗಳಲ್ಲಿನ ಪುರಾಣ (ಮಿತ್) ಮತ್ತು ಐತಿಹ್ಯಗಳನ್ನು (ಲೆಜೆಂಡ್) ಬಿಟ್ಟು ಉಳಿದೆಲ್ಲ ಪ್ರಕಾರಗಳನ್ನೂ ಒಳಗೊಳ್ಳುತ್ತವೆಂದು ಹೇಳಬಹುದು. ಅದ್ಭುತಕಥೆ, ವಿನೋದಕಥೆ, ಕಿನ್ನರಕಥೆ, ಪ್ರಾಣಿಕಥೆ, ಸೂತ್ರಕಥೆ, ಅತಿಮಾನುಷಕಥೆ ಇತ್ಯಾದಿಗಳೆಲ್ಲ ಇದರ ಒಡಲಿನಲ್ಲಿ ಸೇರಿಕೊಳ್ಳುತ್ತವೆ. ಅದ್ದರಿಂದ ಇದು ವ್ಯಾಪಕಾರ್ಥದ ಒಂದು ಪದ. ಆದರೆ ಪಾಶ್ಚಾತ್ಯ ವಿದ್ವಾಂಸರು ಕಥೆಗಳ ಪ್ರಮುಖ ವರ್ಗವೊಂದಕ್ಕೆ ಮಾತ್ರ ಇದನ್ನು ಬಳಸಿರುವುದರಿಂದ, ಜನಪದ ಕಥೆಗಳಲ್ಲಿ ಇದಕ್ಕೆ ಪ್ರಮುಖ ಸ್ಥಾನವಿದೆ.

ಕಟ್ಟುಕಥೆ ನಿರ್ದಿಷ್ಟ ಕಾಲ ಅಥವಾ ಸ್ಥಳಗಳಿಗೆ ಸಂಬಂಧಿಸಿರುವುದಿಲ್ಲವೆಂದು ಅಗಲೇ ಹೇಳಿದ್ದಾಗಿದೆ. ಸಾಮಾನ್ಯವಾಗಿ ಕಥೆಯಲ್ಲಿ ರಾಜರಾಣಿಯರು, ರಾಜಕುಮಾರ ರಾಜಕುಮಾರಿಯರು, ಸೇವಕರು ಕಾಣಿಸಿಕೊಳ್ಳುತ್ತಾರೆ. ಒಬ್ಬ ನಾಯಿಕೆ ಅಥವಾ ನಾಯಕ ಇರುವುದುಂಟು. ನಾಯಿಕೆ ಕಿರಿಯ ಮಗಳು, ಮಾಟಗಾತಿಯರು, ರಾಕ್ಷಸರು, ಬೃಹದ್ದೇಹಿಗಳು ಮೊದಲಾದ ಅತಿಮಾನುಷ ಪಾತ್ರಗಳೂ ಸೇರಿಕೊಂಡಿರುತ್ತವೆ. ಕಥೆ ಸಹಜವಾಗಿ ಮಂತ್ರಜಾಲ, ರೂಪ ಪರಿವರ್ತನೆಗಳನ್ನು ಒಳಗೊಂಡಿರುತ್ತದೆ. ಪ್ರಶ್ನೆಗಳು, ಒಗಟುಗಳು, ಅನ್ವೇಷಣೆಗಳು ಬಹುತೇಕ ಕಥೆಗಳ ಕಥನಸೂತ್ರವಾಗಿರುವಂತೆ ಕಾಣುತ್ತದೆ. ಕಥೆಯಲ್ಲಿ ಮೂರರ ಸಂಖ್ಯೆ ಪದೇ ಪದೇ ಬರುವುದು ಮತ್ತೊಂದು ವೈಶಿಷ್ಟ್ಯ. ಉದಾಹರಣೆಗೆ, ರಾಜಕುಮಾರಿ ಮೂರು ಜನ ಹೆಣ್ಣು ಮಕ್ಕಳಲ್ಲಿ ಕಿರಿಯವಳಾಗಿರುವುದು. ಇದಲ್ಲದೆ ಶಾಬ್ದಿಕ ಸೂತ್ರಗಳಾದ ಪ್ರಾಸ, ಗೀತೆ ಮೊದಲಾದವು ಪುನರಾವರ್ತಿಸುತ್ತ ಕಥೆಯ ಕಟ್ಟಡದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವುದೊಂದು ಇದರ ವಿಶೇಷ. ಸಾಮಾನ್ಯವಾಗಿ ಒಳ್ಳೆಯ ಮನುಷ್ಯರಿಗೇ ಗೆಲುವು ದೊರೆಯುವುದು ಇಂಥ ಕಥೆಗಳ ಮಗುದೊಂದು ಗಮನಾರ್ಹ ಅಂಶ. ಇವರು ಉತ್ತಮರು ಮಾತ್ರವಾಗಿರದೆ, ಶ್ರೀಮಂತರೂ ಆಗಿರುತ್ತಾರೆ. ಇವರು ರಾಜಋಷಿಗಳಾಗಿರಲೂಬಹುದು. ಹಳೆಯ ರಾಜ ಕೆಟ್ಟವನಾಗಿದ್ದರೆ ಅಗ ಸಾಮಾನ್ಯವಾಗಿ ಒಳ್ಳೆಯ ರಾಜಕುಮಾರನೊಬ್ಬ ಜಯಗಳಿಸುವುದುಂಟು. ಇಂಥ ಕಥೆಗಳ ಸಂವಿಧಾನದಲ್ಲಿ ಕೆಲಮಟ್ಟಿಗೆ ಸಂಕೀರ್ಣತೆ ಗೋಚರಿಸಬಹುದು.

ಕಟ್ಟು ಕಥೆ ಕಾಲದಿಂದ ಕಾಲಕ್ಕೆ ಬಾಯಿಂದ ಬಾಯಿಗೆ ಹರಿದು ಬಂದಿರುವ ಕಂಠಸ್ಥ ಸಂಪ್ರದಾಯದ ಕಥೆ. ಅನೇಕ ಆಶಯಗಳು, ಘಟನಾ ಪರಂಪರೆಗಳು, ನಿರ್ದಿಷ್ಟ ದೀರ್ಘತೆ, ಸುಖಾಂತ ಮುಕ್ತಾಯ–ಇವು ರಚನೆಯಲ್ಲಿಯ ಕೆಲವು ಅಂಶಗಳು. ಧರ್ಮ, ತತ್ತ್ವ, ಇತಿಹಾಸ–ಇವುಗಳಲ್ಲಿ ಯಾವುದೊಂದೂ ಇದರಲ್ಲಿ ಇರುವುದಿಲ್ಲ. ಕಲ್ಪಿತ ಕಥೆಯಾಗಿರುವ ಇದು ಶುದ್ಧಾಂಗವಾಗಿ ಒಂದು ಕಲಾಕೃತಿ. ಇಂಥ ಕಥೆಗಳಿಗೆ ಮೇಲೆ ಹೇಳಿದಂತೆ ಸಿಂಡ್ರೆಲ, ಸ್ನೋವೈಟ್, ಹನ್ಸೆಲ್ ಮತ್ತು ಗ್ರೆಟಿಲ್, ದಿ ಫ್ರಾಗ್ ಪ್ರಿನ್ಸ್ ಮೊದಲಾದವು ನಿದರ್ಶನಗಳು. ಎಲ್ಲ ಭಾಷೆಗಳಲ್ಲಿಯೂ ಈ ರೀತಿಯ ಕಥೆಗಳು ಸಿಗುತ್ತವೆ. ಉದಾಹರಣೆಗೆ, ಕನ್ನಡದಲ್ಲಿಯ ಮಾಟಗಾತಿ (ಕರ್ಣಾಟಕ ಜನಪದ ಕಥೆಗಳು–ರಾಗೌ) ಸರ್ವವಿಧದಲ್ಲೂ ಗ್ರಿಮ್ ಸೋದರರ ಹನ್ಸೆಲ್ ಮತ್ತು ಗ್ರೆಟಲ್ ಕಥೆಯನ್ನು ಹೋಲುತ್ತದೆ. ಅಲ್ಲಿಯ ಹನ್ಸೆಲ್ ಮತ್ತು ಗ್ರೆಟಿಲ್ ಪಾತ್ರಗಳು ಇಲ್ಲಿಯ ಚೆನ್ನ ಮತ್ತು ಚೆನ್ನಿ. ಅಲ್ಲಿ ಇವರು ಹಿರಿ ಹೆಂಡತಿಯ ಮಕ್ಕಳಾಗಿದ್ದು ಮಲತಾಯಿಯ ಕ್ರೂರ ಅಸೂಯೆಗೆ ಪಾತ್ರವಾದರೆ, ಇಲ್ಲಿ ಸಿಕ್ಕಿದ ಮಕ್ಕಳಾಗಿದ್ದು ಅದೇ ಪರಿಣಾಮವನ್ನು ಅನುಭವಿಸುತ್ತಾರೆ. ಮುಂದೆ ಅವರನ್ನು ಕಾಡಿಗೆ ಬಿಡುವ ಪ್ರಯತ್ನ ಎರಡರಲ್ಲಿಯೂ ಒಂದೇ ರೀತಿಯಾಗಿದೆ. ಅವರನ್ನು ಕಾಡಿಗೆ ಬಿಟ್ಟು ಬರಲು ತಂದೆ ಕರೆದುಕೊಂಡು ಹೋಗುವಾಗ, ಹಿರಿಯವನಾದ ಹನ್ಸೆಲ್ ಅಥವಾ ಚೆನ್ನ ಹರಳು ಅಥವಾ ಕಲ್ಲುಗಳನ್ನು ದಾರಿಯುದ್ಧಕ್ಕೂ ಬಿಟ್ಟುಕೊಂಡು ಹೋಗಿ, ತಂದೆ ಹೊರಟು ಹೋದ ತರುವಾಯ ಅವುಗಳ ದಾರಿ ಹಿಡಿದು ಮನೆಗೆ ಬಂದು ಬಿಡುವುದು, ಎರಡನೆಯ ಸಾರಿ ಅದೇ ರೀತಿ ಹೋದಾಗ ರೊಟ್ಟಿ ಚೂರನ್ನು ದಾರಿಯುದ್ದಕ್ಕೂ ಬಿಡುತ್ತ ಹೋಗಿದ್ದು ಅವುಗಳನ್ನು ಪಕ್ಷಿಗಳು ತಿಂದುಕೊಂಡು ದಾರಿ ತಪ್ಪಿ ಹೋಗುವುದು ಎರಡು ಕಥೆಗಳಲ್ಲೂ ಒಂದೇ ರೀತಿಯಲ್ಲಿ ನಡೆಯುತ್ತದೆ. ಇದಲ್ಲದೆ ದಾರಿ ತಪ್ಪಿದ ಆ ಅಣ್ಣತಂಗಿಯರು ಕಾಣುವ ಮಾಟಗಾತಿ ಮತ್ತು ದೋಸೆ, ಮಿಠಾಯಿ, ಸಕ್ಕರೆ ಕಡ್ಡಿಯಿಂದ ಮಾಡಿದ ಅವಳ ಮನೆ ಎರಡರಲ್ಲೂ ಕಾಣಸಿಗುತ್ತವೆ. ಮುಕ್ತಾಯ ಮಾತ್ರ ಎರಡರಲ್ಲೂ ಸ್ವಲ್ಪ ಬೇರೆಬೇರೆಯಾಗಿದೆ. ಮಾಟಗಾತಿಯ ಕೈಗೆ ಸಿಕ್ಕಿದ ಹನ್ಸೆಲ್ ಮತ್ತು ಗ್ರೆಟಲ್ ಹೇಗೋ ತಪ್ಪಿಸಿಕೊಂಡು ಮತ್ತೆ ಮನೆ ಸೇರುವುದರಲ್ಲಿ ಅಲ್ಲಿಯ ಕಥೆ ಮುಕ್ತಾಯವಾಗುತ್ತದೆ. ಆದರೆ ಕನ್ನಡದ ಕಥೆಯಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಕಾಣುತ್ತೇವೆ. ಇಲ್ಲಿಯ ಚೆನ್ನ ಮತ್ತು ಚೆನ್ನಿ ಮಾಟಗಾತಿಯ ಮಾಯದ ಬುರುಡೆ ಮತ್ತು ಕೊಳಲುಗಳನ್ನು ತೆಗೆದುಕೊಂಡು ಬಹಳ ಚಾಣಾಕ್ಷತನದಿಂದ ಅವಳ ಕ್ರೂರ ಹಿಡಿತದಿಂದ ಪಾರಾಗುತ್ತಾರೆ. ಮುಂದೆ ಹಿಂಬಾಲಿಸಿ ಬಂದ ಮಾಟಗಾತಿಯನ್ನು ಹಲವು ವಿಧದಲ್ಲಿ ಆಟವಾಡಿಸಿ, ಕಡೆಗೆ ಅವಳಿಗೆ ಸಿಕ್ಕಿಬಿಡುತ್ತಾರೆ. ಚೆನ್ನ ಜಿಂಕೆಯಾಗುವುದು, ಮುಂದೆ ರಾಜಕುಮಾರನೊಬ್ಬ ಬಂದು ಮಾಟಗಾತಿಯನ್ನು ಕೊಲ್ಲುವುದು, ಚೆನ್ನ ಮೂಲರೂಪಕ್ಕೆ ಬರುವುದು, ಅನಂತರ ಚೆನ್ನಿಯನ್ನು ರಾಜಕುಮಾರ ಮದುವೆಯಾಗುವುದು–ಹೀಗೆ ಕಥೆ ಮುಕ್ತಾಯಗೊಳ್ಳುತ್ತದೆ. ಹೀಗೆ ಹೆಚ್ಚಿನ ಸಾಮ್ಯವಿರುವ ಇಂಥ ಇನ್ನೂ ಆನೇಕ ಉದಾಹರಣೆಗಳಿವೆ. ದಿ ಫ್ರಾಗ್ ಪ್ರಿನ್ಸ್ ಕಥೆಗೆ ನಾಗೇಂದ್ರನ ಕಥೆಯನ್ನು ಹೋಲಿಸಬಹುದು. ಪ್ರಾಣಿಯೊಂದು ರಾಜಕುಮಾರನ ರೂಪ ತಾಳುವ ಆಶಯವೇ ಇವೆರಡರದೂ. ಸಿಂಡ್ರೆಲ ತಾಯಿ ಸತ್ತ ತಬ್ಬಲಿಯಾಗಿದ್ದು, ಮಲತಾಯಿಯ ಕ್ರೂರ ಹಿಂಸೆಗೆ ಗುರಿಯಾಗಿ, ದೇವಲೋಕದಲ್ಲಿಯ ಅವಳ ತಾಯಿಯ ನೆರವಿನಲ್ಲಿ ಬೆಳೆಯುವ ಕಥೆಯೇ ಅಗಿದೆ. ಇದಕ್ಕೆ ಬೇಕಾದರೆ ಚಿಕ್ಕ ಹೊನ್ನಿ ದೊಡ್ಡ ಹೊನ್ನಿ ಕಥೆಯನ್ನೇ ಉದಾರಿಸಬಹುದು. ಹೀಗೆ ಕಟ್ಟುಕಥೆ ಒಂದು ಸಾರ್ವತ್ರಿಕ ಮಾದರಿಯಾಗಿ ಕಾಣಿಸಿಕೊಳ್ಳುತ್ತದೆ. **(ನೋಡಿ – ಗ್ರಿಮ್ ಸಹೋದರರು)**

(ಆರ್.ಜಿ.)

**ಕಟ್ಟುಪಟ್ಟಿಗಳು, ಪಟ್ಟಿಕಟ್ಟುವಿಕೆ :** ಹುಣ್ಣು, ಗಾಯಗಳಿಗಾಗಿ ಇಲ್ಲವೇ ಊನವಾದ ಅಂಗಗಳನ್ನು ಬಿಗಿದು ಕಟ್ಟಲು ಬರುವ ಬಟ್ಟೆಯ ಪಟ್ಟಿ ಇಲ್ಲವೇ ಚೂರುಪಟ್ಟಿಗಳಿವು (ಬ್ಯಾಂಡೇಜಸ್), ಗಾಯ ಕಟ್ಟುಗಳನ್ನೋ (ಡ್ರೆಸಿಂಗ್ಸ್) ದಬ್ಬೆ ಕಟ್ಟುಗಳನ್ನೋ (ಸ್ಪಿಂಟ್ಸ್) ಒಂದೆಡೆ ಇರಿಸಿದ್ದಂತೆ ಇರಿಸಲೋ, ಮೈಯ ಒಂದು ಭಾಗಕ್ಕೆ ಊರೆ ಕೊಡಲೋ ಅಲುಗಾಡದಂತೆ ಇರಿಸಲೋ ಕೋಶವನ್ನು ಮುಚ್ಚಿಹಾಕಲೋ ರಕ್ತ ಸುರಿವುದನ್ನು ನಿಲ್ಲಿಸಲೋ ಇಲ್ಲವೇ ತಡೆಗಟ್ಟಲು ಒತ್ತಿ ಹಿಡಿಯಲೋ ಕಟ್ಟುವುದುಂಟು. ಕಟ್ಟುಪಟ್ಟಿಗಳನ್ನು ಕಟ್ಟಿದ ಮೇಲೆ ತುದಿಗಳನ್ನು ಗಂಟು ಹಾಕುವಾಗ ಸಮಗಂಟನ್ನು (ರೀಫ್‍ನಾಟ್) ಹಾಕಿದರೆ ಭದ್ರವಾಗಿರುವುದು.

ಕಟ್ಟುಪಟ್ಟಿಗಳಲ್ಲಿ ಹಲವಾರು ಬಗೆಗಳಿವೆ: ತ್ರಿಕೋನದ್ದು ಸುರುಳಿ ಇಲ್ಲವೇ ನಿರಿಗಟ್ಟಿದ ಜಾಳರಿವೆ (ಗಾಜ), ನಾಲ್ಕು ಬಾಲದ್ದು, ಹಲವು ಬಾಲಗಳದ್ದು, ಹಿಗ್ಗಿ ಕುಗ್ಗುವಂತಹದು, ಅಂಟು ಕಟ್ಟುಪಟ್ಟಿ, ಗಚ್ಚುಗಿರಿ (ಪ್ಲಾಸ್ಟರ್) ಹಿಟ್ಟುಗಳನ್ನು ಹಾಕಿದ್ದು, ರಬ್ಬರಿನದು ಮುಂತಾದುವು. ವೈದ್ಯಚಿಕಿತ್ಸೆಯಲ್ಲಿ ಒಂದೊಂದು ತೆರನಾಗಿ ಕಟ್ಟಲೂ ಬೇರೆ ಬೇರೆ ಹೆಸರುಗಳಿವೆ. ಒಂದೊಂದು ಬೆರಳಿಗೂ ಕೈಗೂ ಸುರುಳಿ ಸುತ್ತಿದಂತೆ ಕಟ್ಟಲು ಕೈಸುತ್ತುಪಟ್ಟಿ ಎಂದಿದೆ.

ಕಟ್ಟುಪಟ್ಟಗಳನ್ನು ಹಲವಾರು ಕಟ್ಟಬೇಕಾದ ಎಲ್ಲ ತುರ್ತಿನ ಹೊತ್ತುಗಳಲ್ಲೂ ಚೆನ್ನಾಗಿ ನೆರವಾಗುವುದು ತ್ರಿಕೋನ ಕಟ್ಟುಪಟ್ಟಿ. ಇದನ್ನು ತಯಾರಿಸುವುದೂ ಕಟ್ಟುವುದೂ ಸುಲಭ. 90–100 ಸೆಂಮೀ ಉದ್ದದ ಅಂಚಿರುವ ಮಸ್ಲಿನ್, ತೆಳುಬಟ್ಟೆ, ಜಾಳರಿವೆಗಳ ಚೌಕವನ್ನು ಕೊಯ್ಮೂಲೆಯಾಗಿ ಕತ್ತರಿಸಿ ಎರಡು ತ್ರಿಕೋನ ಕಟ್ಟುಪಟ್ಟಗಳನ್ನು ಪಡೆಯಬಹುದು. ಕಟ್ಟಿದೆಡೆ ಇದು ಜಾರದಂತೆ ಉಳಿದಿರುತ್ತದೆ. ಮೈಯಲ್ಲಿ ಎಲ್ಲಿ ಬೇಕಾದರೂ ಕಟ್ಟಲು ಅನುಕೂಲಕರ. ಕಟ್ಟಿದ ಮೇಲೆ ರಕ್ತನಾಳಗಳನ್ನಾಗಲೀ ಮೆತ್ತನೆಯ ಭಾಗಗಳಿಂದಾಗಲೀ ಅಪಾಯವಿಲ್ಲ. ಮಡಿಸದ ತ್ರಿಕೋನ ಕಟ್ಟುಪಟ್ಟಿಯನ್ನು ತೋಳಿನ ತೂಗುಪಟ್ಟಿಯಾಗೂ (ಸ್ಲಿಂಗ್) ತಲೆ, ಕೈ, ಪಾದಗಳ ಮುಚ್ಚಿಗೆಯಾಗೂ ಕಟ್ಟಬಹುದು. ಮೈಯಲ್ಲಿ ಹಲವು ಭಾಗಗಳಲ್ಲಿ ಕಟ್ಟಲು ಬರುವಂತೆ ಇದನ್ನು ಬೇರೆ ಬೇರೆ ಅಗಲಕ್ಕೆ ಮಡಿಸಿಕೊಳ್ಳಬಹುದು. 3–4 ಬಾರಿ ಮಡಿಸಿದಾಗ ಆಗುವ ನೀಳಮಡಿಕೆ (ಕ್ರವಾಟ್) ಕಟ್ಟುಪಟ್ಟಿಯನ್ನು ತೂಗುಪಟ್ಟಿಯಾಗೂ ಕಣ್ಣು, ಕಿವಿ, ಅಂಗೈ ಅಂಗಾಲುಗಳ ಮುಚ್ಚಿಗೆಯಾಗೂ ಕಟ್ಟಬಹುದು, ಶಸ್ತ್ರವೈದ್ಯಕ್ಕೆ ತಕ್ಕನಾದ ಜಾಳರಿವೆಯಿಂದ ತಯಾರಾಗಿ ಜೀವಿಮಡಿಯಾಗಿದ್ದರೆ (ಸ್ಟರಿಲೈಸ್ಡ್) ಕಟ್ಟುಪಟ್ಟಿಯನ್ನು ಮದ್ದು, ದ್ರಾವಣ, ಮುಲಾಮುಗಳನ್ನು ಹಾಕಿಯೋ ಇಲ್ಲದೆಯೋ ನೇರವಾಗಿ ಗಾಯದ ಮೇಲೆ ಬಿಗಿಸಿ ಕಟ್ಟಬಹುದು. ಆಸ್ಪತ್ರೆಯಲ್ಲಿ ಸಾಮಾನ್ಯ ಬಳಕೆಯಲ್ಲಿ ಇರುವವು ಇವೇ. ಅರಳೆ ಇಲ್ಲವೇ ಮಸ್ಲಿನ್‍ನಿಂದಾದವು ಜಾಳರಿವೆಯಿಂದ ಮಾಡಿದವಕ್ಕಿಂತ ಬಲವಾಗಿರುದರಿಂದ ಒತ್ತಿ ಹಿಡಿಯಲೂ ಊರೆ ಕೊಡಲೂ ಒಳ್ಳೆಯವು.

ಆಸ್ಪತ್ರೆಗಳಲ್ಲಿ ಸಾಮಾನ್ಯವಾಗಿ ಬಳಸುವ ಸುರುಳಿ ಕಟ್ಟುಪಟ್ಟಿ ಸು. 3–15 ಸೆಂಮೀ ಅಗಲವೂ ಮೀಟರುಗಳ ಉದ್ದವೂ ಸುರುಳಿಯಾಗಿರುವುದು. ಇದನ್ನು ಮಸ್ಲಿನ್, ಫ್ಲಾನಲ್, ಜಾಳರಿವೆಗಳಿಂದ ಮಾಡಿರಬಹುದು. ಜಾಳರಿವೆಯವೇ ಹೆಚ್ಚು ಬಳಕೆಯಲ್ಲಿವೆ. ಸಾಮಾನ್ಯವಾಗಿ ಇವನ್ನು ಸುತ್ತ ಸುತ್ತಿ ಕಟ್ಟಬೇಕು. ಆಸ್ಪತ್ರೆಗಳಲ್ಲಿ ದಿನವೂ ಬಹಳ ಕಟ್ಟುಪಟ್ಟಿಗಳನ್ನು ತಯಾರಿಸಿ

1. ಹರವಿರುವ ಕಟ್ಟುಪಟ್ಟಿ, 2. ಒಂದು ಸಲ ಮಡಿಸಿರುವ ಪಟ್ಟಿ, 3. ಅಗಲ ಪಟ್ಟಿ, 4. ಕಿರಿದು ಪಟ್ಟಿ, 5. ಎದೆಗೆ ಕಟ್ಟುಪಟ್ಟಿ (ಮುಮ್ಮುಖ), 6. ಎದೆಗೆ ಕಟ್ಟುಪಟ್ಟಿ (ಹಿಮ್ಮುಖ), 7. ಸೇಂಟ್–ಜಾನ್–ತೂಗುಪಟ್ಟಿ (ಮೊದಲ ಹಂತ–ಮುಮ್ಮುಖ), 8. ಸೇಂಟ್–ಜಾನ್–ತೂಗುಪಟ್ಟಿ (ಕೊನೆಯ ಹಂತ–ಹಿಮ್ಮುಖ), 9. ರೊಂಡಿಪಟ್ಟಿ, 10. ಕೈ ಪಟ್ಟಿ, 11. ಮೊಣಕೈ ಪಟ್ಟಿ, 12. ಹೆಗಲುಪಟ್ಟಿ, 13. ಪಾದಪಟ್ಟಿ, 14. ಕಾಲು ಕತ್ತರಿಸಿದ ಮೋಟಿಗೆ ಪಟ್ಟಿ, 15. ಮೊಣಕಾಲು ಪಟ್ಟಿ, 16. ತಲೆ–ನೆತ್ತಿ ಪಟ್ಟಿ

# ಕಟ್ಟುಪಟ್ಟಿಗಳು, ಪಟ್ಟಿಕಟ್ಟುವಿಕೆ



A. ಕಟ್ಟುಪಟ್ಟಿ ಉರುಳೆ ಸುತ್ತುವ ಯಂತ್ರ, B. 'T' ಕಟ್ಟುಪಟ್ಟಿ, C. ಹಲಬಾಲ ಕಟ್ಟುಪಟ್ಟಿ, D. ಹಲಬಾಲದ ಒಡಲು ಬಿಗಿಪಟ್ಟೆ, E. ಹೆಗಲಿನ ತೆನೆಪಟ್ಟಿ, F. ಎದೆ ಕಟ್ಟು ಪಟ್ಟಿ, G. ಎದೆ ಎರಡೂ ಪಕ್ಕಗಳ ಕಟ್ಟುಪಟ್ಟಿ, H. ತಲೆ ಸುತ್ತು ಕಟ್ಟುಪಟ್ಟಿ, I. ಪಾದ ಕಟ್ಟುಪಟ್ಟಿ, J. ಗಜ್ಜಲಿನ ತೆನೆಪಟ್ಟಿ, K. ಹಲಬಾಲದ ಕಟ್ಟುಪಟ್ಟಿ, L. ಎರಡು ಬಾಲದ ಕಟ್ಟುಪಟ್ಟಿ, M. ಬಿಗಿಸಿಡುವ ಕಟ್ಟುಪಟ್ಟಿಗಳು, N. ಕೈಬೆರಳುಗಳ ಸುರುಳಿ ಕಟ್ಟುಪಟ್ಟಿ, O. ಇಡೀ ಕೈಸುರುಳಿ ಕಟ್ಟುಪಟ್ಟಿ, P. ಹೆಬ್ಬೆರಳಿನ ತೆನೆಪಟ್ಟಿ

ಸುರುಳಿ ಸುತ್ತಿಡಲು ಸುತ್ತುರುಳೆಯನ್ನು ಬಳಸುವುದುಂಟು, ಕಟ್ಟುಪಟ್ಟಿಯನ್ನು ಬಿಚ್ಚಿದ ಕೂಡಲೇ ಸುರಳಿ ಸುತ್ತಿಟ್ಟರೆ ಮತ್ತೆ ಬಳಸಲು ಅನುಕೂಲ. ಯಾವ ಅವಯವವನ್ನೇ ಆಗಲಿ ವೈದ್ಯ ಹೇಳಿದ ಹೊರತು ಕೆಳಗೆ ಇಳಿಬಿಟ್ಟು ಕಟ್ಟುಪಟ್ಟಿ ಸುತ್ತಬಾರದು. ಕೆಳದವಡೆ, ತಲೆ, ಮೊಣಕ್ಕೆ, ಮೊಣಕಾಲುಗಳ ಪೆಟ್ಟುಗಳಾದಾಗ 15–20 ಸೆಂಮೀ ಅಗಲ, 2–3 ಮೀ ಉದ್ದದ ಚೌಕನೆಯ ನಾಲ್ಕೂ ಬಾಲದ ಕಟ್ಟುಪಟ್ಟಿಯ ಕಟ್ಟಲು ಅನುಕೂಲ. ಹೀಗೇ ಹಲವು ಬಾಲಗಳ ಕಟ್ಟುಪಟ್ಟಿಯನ್ನು ಮುಖ್ಯವಾಗಿ ಹೊಟ್ಟೆ, ಬೆನ್ನುಗಳಿಗೆ ಕಟ್ಟಿ ಬಿಗಿಸಬಹುದು, ಹೆರಿಗೆಯಾದ ಮೇಲೆ ಬಾಣಂತಿಗೆ ಇಂಥದನ್ನು ಕಟ್ಟುವುದುಂಟು. ಹಲವು ತೆರನ ಉದ್ದೇಶಗಳಿಗಾಗಿ ಮೈಯಲ್ಲಿ ಹಲವೆಡೆ ಬಿಗಿಸುವ ಕಟ್ಟುಪಟ್ಟಿಗಳಿಗೆ ಬೇರೆ ಬೇರೆ ಹೆಸರುಗಳಿವೆ. ಉದಾಹರಣೆಗಳಿವು: 8 ಗುರುತಿನ ಎಸ್ಮಾರ್ಕನ ಕಟ್ಟುಪಟ್ಟಿ; ಒಂದು ಭಾಗದ ಸುತ್ತಲೂ ಸುತ್ತುವ ಸುತ್ತುಕಟ್ಟುಪಟ್ಟಿ ; ಕೈಸುತ್ತು ಪಟ್ಟಿ ; ಅರೆಕೈ ಸುತ್ತುಪಟ್ಟಿ, ಕೈ ಕಟ್ಟುಪಟ್ಟಿಗಳು ; ಮುರಿದ ಕೀಲಿಕ (ಕ್ಲಾವಿಕಲ್) ಮೂಳೆಗೆ ಒತ್ತಿಕಟ್ಟುವ ಡಿಸಾಲ್ಟನ ಕಟ್ಟುಪಟ್ಟಿ; ಕೋಸೆ, ಒತ್ತು, ತೂಗು, ಹಿಂದುಮುಂದು, ಸುರುಳಿ, ಹಿನ್‌ಸುರುಳಿ. ಕಟ್ಟುಪಟ್ಟಿಗಳು; T ಆಕಾರದ ಕಟ್ಟುಪಟ್ಟಿ; ತೋಳೋ ತೊಡೆಯೋ ಮೈಗೆ ಕೂಡುದವೆಡೆಯಲ್ಲಿ V ಆಕಾರದಲ್ಲಿ ಸುರುಳಿ ಮೇಲೆ ಸುರುಳಿ ಸುತ್ತುವ ತೆನೆಪಟ್ಟಿ (ಸ್ಪೈಕ). ಕೆಲವು ಗೊತ್ತಾದ ಕೆಲಸಗಳಿಗಾಗಿ ಕೆಲವು ಹೆಚ್ಚಿನ ವಸ್ತುಗಳನ್ನು ಒಳಸೇರಿಸಿದ ಕಟ್ಟುಪಟ್ಟಿ ತಯಾರಿಸುವುದುಂಟು. ಪ್ಯಾರಿಸ್ಸಿನ ಗಚ್ಚುಗಿರಿ ಹಾಕಿರುವ ಕ್ರಿನೋಲೀ ಸುರುಳಿ ಕಟ್ಟುಪಟ್ಟಿ; ರಟ್ಟಿನಂತೆ ಗಟ್ಟಿನಂತೆ ಗಟ್ಟಿಯಾಗಿರುವ ಸಿಲಿಕ, ಡೆಕ್ಸ್ಟ್ರಿನ್, ಗಂಜಿಯಲ್ಲಿ ಅದ್ದಿದ ಕಟ್ಟುಪಟ್ಟಿಗಳು; ಉದ್ದುದ್ದಕ್ಕಾಗಿ ರಬ್ಬರು ಎಳೆಗಳನ್ನು ನೇಯ್ದಿರುವ ಕೊಂಕುಸಿರಗಳನ್ನು (ವೆರಿಕೋಸ್ ವೇನ್ಸ್) ಅದುಮಿಡುವ ಕಟ್ಟುಪಟ್ಟಿಗಳೇ ಮುಂತಾದವು ಇಂಥವು. (ಪಿ.ಕೆ.ಆರ್.)

**ಕಟ್ಟುಬಂಧ ಚಿಕಿತ್ಸೆ :** ಬೆನ್ನುಗಂಬ, ಎದೆಗೂಡು, ಹೊಟ್ಟೆಕುಳಿ ಮತ್ತಿತರ ಅಂಗಾಂಗಗಳ ತಂತುಗಟ್ಟುಗಳು (ಲಿಗಮೆಂಟ್ಸ್). ಮುದುರಿಕೊಂಡೋ ಕುಗ್ಗಿಯೋ ಬಹಳಷ್ಟು ರೋಗಳು ಏಳುವುವೆಂಬ ತತ್ತ್ವದ ಮೇಲೆ, ಮದ್ದುಗಳನ್ನು ಕೊಡದೆಯೇ ಚಿಕಿತ್ಸೆಗಾಗಿ ಮಾಡುವ ಕೈಸರಿಪಡಿಗೆ (ನಕ್ಷಾಪ್ರತಿ) ಓಕ್ಲಿ ಸ್ಮಿತ್. (1907) ಈ ಚಿಕಿತ್ಸಾಕ್ರಮದ ಸ್ಥಾಪಕ. ಮುದುರಿ ಕುಗ್ಗಿ ಹಿಡಿದಿರುವ ಊತಕವನ್ನು ಹಿಗ್ಗಿಸಿ ಸಡಿಲಿಸುವುದರ ಮೂಲಕ ಸರಿಪಡಿಸುವುದೇ ಗುರಿ. ಮೈಯಲ್ಲಿ ಎಲ್ಲೆಲ್ಲಿ ಹೀಗೆ ಹಿಡಿದುಕೊಳ್ಳುತ್ತದೆ. ಅದನ್ನು ಹೇಗೆ ಬಿಡಿಸಬೇಕೆಂದು ತೋರುವ ಪಟಗಳು ಈ ಚಿಕಿತ್ಸೆಯಲ್ಲಿ ಮುಖ್ಯ. *

**ಕಟ್ಟುಮರ :** ಮರದ ಕೆಲವು ತುಂಡುಗಳನ್ನು ಒಟ್ಟಾಗಿ ಸೇರಿಸಿ ಕೊನೆಗಳನ್ನು ಚೂಪಾಗಿ ಮಾಡಿ ದೋಣಿಯ ಆಕಾರದಲ್ಲಿ ಕಟ್ಟಿದ ತೆಪ್ಪ. ಇದೇ ಶಬ್ದ ಇಂಗ್ಲಿಷಿನಲ್ಲಿ ಕ್ಯಾಟಮರಾನ್ (ಕಟ್ಟು+ಮರಂ) ಆಗಿದೆ. ಸಾಮಾನ್ಯವಾಗಿ ನಾಲ್ಕು ತುಂಡುಗಳನ್ನು ಬೋಲ್ಟ್ ಮತ್ತು ನಟ್ಟುಗಳಿಂದ ಜೋಡಿಸುವುದು ಈಚೆಗೆ ರೂಢಿಯಾಗಿದೆ. ನಡುವಿನ ಎರಡು ತುಂಡುಗಳು ಎರಡಕ್ಕಿಂತ ತಗ್ಗಾಗಿಯೂ ಉದ್ದವಾಗಿಯೂ ಇದ್ದು ಅದರ ಮೇಲೆ ಅಲೆಗಳು ಬಡಿದು ಏಳುವ ನೊರೆ ಹೆಚ್ಚಾಗಿರುವ ಸಮುದ್ರತೀರಗಳಲ್ಲಿ ಮೀನುಗಳನ್ನು ಹಿಡಿಯುವುದಕ್ಕೆ ಕಟ್ಟುಮರದಿಂದ ಬಹಳ ಅನುಕೂಲವಾಗುತ್ತದೆ. ಭದ್ರವಾಗಿರುವುದಕ್ಕಾಗಿ ಕೆಲವು ವೇಳೆ ಎರಡು ಕಟ್ಟುಮರಗಳನ್ನು ಜೋಡಿಸಿ ಹಗ್ಗಗಳಿಂದ ಬಿಗಿಯುತ್ತಾರೆ. ಸಾಮಾನ್ಯವಾಗಿ ಬೆಳಗಿನ ಜಾವ ಕಟ್ಟುಮರದ ಮೇಲೆ ಕುಳಿತು ಹೊರಟವರು ಸಾಯಂಕಾಲ ಮೀನುಗಳನ್ನು ಹೇರಿಕೊಂಡು ಬಂದು ಅವನ್ನು ಮಾರಿ ಅನ್ನಬಟ್ಟೆಗಳನ್ನು ಒದಗಿಸಿಕೊಳ್ಳುತ್ತಾರೆ. ಹಿಂತಿರುಗಿ ಬರುವಾಗ ಗಾಳಿಯ ಅನುಕೂಲವಿದ್ದರೆ ಒಂದು ಪಟವನ್ನು ಕಟ್ಟುತ್ತಾರೆ. ನಮ್ಮ ದೇಶದ ಸಮುದ್ರತೀರದ ಸಾವಿರಾರು ಸಂಸಾರಗಳಿಗೆ ಈ ಸಣ್ಣ ಉಪಕರಣದಿಂದ ಜೀವನೋಪಾಯ ನಡೆಯುತ್ತಿದೆ. (ಎಚ್.ಸಿ.ಕೆ., ಎಂ.ಜಿ.ಎಸ್.)

**ಕಟ್ಟುವಾರೆ :** ಮೈಯಲ್ಲಿ ಪ್ಯೂರೀನ್ ಜೀವವಸ್ತು ಕರಣದೋಷದಿಂದ ಜನ್ಮತಃ ಇರುವ ಮತ್ತು ಕಾಲಿನ ಹೆಬ್ಬೆರಳಿನ ಬುಡದಲ್ಲಿ ಮೊದಲು ಕೀಲುರಿತವಾಗಿ (ಆರ್ತ್ರೈಟಿಸ್) ಕಾಣಿಸಿಕೊಳ್ಳುವ ರೋಗ (ಗಾಟ್). ಇದು ಕೆಲವು ವಂಶಗಳಲ್ಲಿ ಅನುವಂಶಿಕವಾಗಿ ತೋರುವುದುಂಟು. ರಾತ್ರಿಹೊತ್ತು ನೋವು ವಿಪರೀತ. ಬೇರೂರಿದ ರಕ್ತಬೇನೆಯವರಲ್ಲಿ ಕಟ್ಟುವಾರೆ ಆಗುವುದುಂಟು. ಮೂತ್ರಪಿಂಡಗಳಲ್ಲು, ಮೂತ್ರದಲ್ಲಿ ಕೊಳೆ (ಅಲ್ಬುಮಿನ್), ಏರಿದ ರಕ್ತದೊತ್ತಡ ಇವು ಕಟ್ಟುವಾರೆಗೆ ಸಂಬಂಧಪಟ್ಟ ಬೇನೆಗಳೇ. ಕಟ್ಟುವಾರೆ ರೋಗಿಗಳ ರಕ್ತದಲ್ಲಿ ಮೂತ್ರಾಮ್ಲದ (ಯೂರಿಕ್ ಆಸಿಡ್) ಮಟ್ಟ ಏರಿರುತ್ತದೆ. ವೈದ್ಯಚರಿತ್ರೆಯಲ್ಲಿ ಈ ರೋಗವೂ ಇದರ ಮದ್ದು ಕಾಲ್ಚಿಸೀನೂ ಬಲು ಹಳೆಯವು. ರೋಗ ಕೆರಳಿದಾಗ ಜ್ವರ ಬಂದು ಬಿಳಿರಕ್ತಕಣಗಳು ಹೆಚ್ಚಿದರೂ ಉಳಿದ ದಿವಸಗಳಲ್ಲಿ ರೋಗದ ಲಕ್ಷಣಗಳೇ ತೋರವು. ಆದರೆ ಬರಬರುತ್ತ ಬೇರೂರಿ ಇನ್ನಷ್ಟು ಕೀಲುಗಳಿಗೂ ಹಬ್ಬುವುದು, ಯಾವುದಾದರೂ ಕೂರಾದ ಸೋಂಕು, ಮನೋದ್ವೇಗ, ಶಸ್ತ್ರಕ್ರಿಯೆ, ಗಾಯ ಪೆಟ್ಟುಗಳು, ಮಿತಿಮೀರಿದ ತಿನಿಸು, ಕುಡಿತ ಮತ್ತು ಕೆಲವು ಮದ್ದುಗಳಿಂದ ಕಟ್ಟುವಾರೆ ಲಕ್ಷಣಗಳು ಇದ್ದಕ್ಕಿದ್ದ ಹಾಗೆ ಕೆರಳುವುದು ಸಾಮಾನ್ಯ. ಚಿಕಿತ್ಸೆ ಇಲ್ಲವಾದರೆ ರೋಗ ದಿವಸಗಳೋ ವಾರಗಳೋ ಕಾಡುತ್ತದೆ. ರೋಗದ ಕೀಲು ಕೆಂಪಗೆ ಬೆಚ್ಚಗಾಗಿ ಉರಿ, ಚಳುಕಾಗಿ ನೋವಿಡುತ್ತಿರುವುದು. ಜ್ವರವೇರುತ್ತದೆ. ಕೆಲವರಲ್ಲಿ ಕೀಲುಗಳ ಒಳಗೂ ಸುತ್ತಲೂ ಸೋಡಿಯಂ ಬೈರೂರೇಟು ತುಂಬಿರುವ ಒಂಡುಗಲ್ಲುಗಳು (ಟೋಫೈ) ಏಳುತ್ತವೆ. ಸಾಮಾನ್ಯವಾಗಿ ಒಂಡುಗಲ್ಲುಗಳು ಕಿವಿಯಾಲೆಯ ಚರ್ಮದ ಅಡಿಯಲ್ಲೊ ಯಾವುದಾದರೂ ಕೀಲುಗಳ ಮೇಲೋ ಮುಖ್ಯವಾಗಿ ಕೈಬೆರಳುಗಳ ಗೆಣ್ಣುಗಳ ಮೇಲೋ ಎಷ್ಟೋ ವರ್ಷಗಳ ಮೇಲೆ ಕೆಲವರಲ್ಲಿ ಏಳುತ್ತವೆ. ಅವು ಒಡೆದುಕೊಂಡು ಹುಣ್ಣಾಗಿ ಸುಣ್ಣದಪುಡಿ ತೆರನ ರೋಸು ಸುರಿಯಬಹುದು. ಕೊನೆಗೆ ಈ ಒಂಡುಗಲ್ಲುಗಳು ಯಾವ ಕೀಲನ್ನಾದರೂ ಪೂರಾ ಹಾಳುಗೆಡವಬಹುದು. ಕಟ್ಟುವಾರೆ ಮತ್ತೆ ಮತ್ತೆ ಕೆರಳುತ್ತಿದ್ದರೆ ಒಂಡುಗಲ್ಲುಗಳು ಇರಲಿ ಇಲ್ಲವಾಗಲಿ ಮೂಳೆಗಳು ಸೊಟ್ಟಗಾಗುತ್ತವೆ. ಬಹುಪಾಲು ಇದು ಗಂಡಸರ ರೋಗವಾದರೂ ಹೆಂಗಸರಲ್ಲಿ ಮುಟ್ಟುತೀರುವ (ಮಿನೋಪಾಸ್) ಆದಾಗ ತೋರಬಹುದು. 30 ಮಂದಿ ಗಂಡಸರಲ್ಲಿ ಕಟ್ಟುವಾರೆ ತೋರಿದರೆ ಒಬ್ಬ ಹೆಂಗಸಲ್ಲಿ ಕಾಣಬಹುದು.

ಕಟ್ಟುವಾರೆ ಕೀಲುರಿತ ಕೆರಳಿದ ಕೂಡಲೇ ಸಾಕಷ್ಟು ಕಾಲ್ಚಿಸೀನ್ ಕೊಟ್ಟರೆ ಶಮನವಾಗುತ್ತದೆ. ಮತ್ತೆ ಹೀಗೆ ಕೆರಳುವುದನ್ನು ತಡೆಗಟ್ಟಲು ರಕ್ತದ ಮೂತ್ರಾಮ್ಲವನ್ನು ಸಾಕಷ್ಟು ಹೊರಹಾಕಿ ತಗ್ಗಿಸುವ ಪ್ರೊಬೆನಿಸಿಡ್ ಮಾತ್ರೆಗಳಿವೆ. ಇವನ್ನು ವರ್ಷಾನುಗಟ್ಟಲೆ ಕೊಡುತ್ತಿರಬೇಕಾಗುತ್ತದೆ. ಮೂತ್ರಾಮ್ಲವನ್ನು ಮೈಯಿಂದ ಕಳೆಯಲು ನೀರು ಕುಡಿದಷ್ಟೂ ಒಳ್ಳೆಯದು. ಜೊತೆಗೆ ಮಾಂಸಾಹಾರ ಬಿಟ್ಟುಬಿಡುವುದೊಳ್ಳೆಯದು, ಕೆಲವರು ಕಟ್ಟುವಾರೆ ರೋಗಿಗಳು ಮೂತ್ರಪಿಂಡ ರೋಗದಿಂದ ಸಾಯುವರಾದರೂ ಬಹುಮಂದಿ ಹೆಚ್ಚು ಕಾಲ ಬದುಕಿರುವರು. (ಬಿ.ಎಸ್.ಯು.ಬಿ.)

**ಕಟ್ಟುಸಿರು :** ಎಂದರೆ ಉಸಿರಾಟದ ನಿಲುಗಡೆ (ಏಪ್ನಿಯ), ಅಂಗಕ್ರಿಯಾ ವಿಜ್ಞಾನದಲ್ಲಿ ಕೊಂಚ ಹೊತ್ತು ಬೇಗಬೇಗನೆ ಉಸಿರೆಳೆದುಕೊಂಡು ಬಿಡುತ್ತಲೇ ಇದ್ದರೂ ಉಸಿರು ಕಟ್ಟಿದಂತಾಗುವುದು. ರಕ್ತದಲ್ಲಿ ಇಂಗಾಲಾಮ್ಲದ ಮಟ್ಟ ಎಂದಿಗಿಂತಲೂ ತೀರ ಕುಗ್ಗುವುದರಿಂದ ಮಿದುಳಿನಲ್ಲಿರುವ ಉಸಿರಾಟ ಕೇಂದ್ರಕ್ಕೆ ಇಂಗಾಲಾಮ್ಲದ ಚೋದನೆ ಇಲ್ಲವಾಗುವುದೇ ಮುಖ್ಯ ಕಾರಣ. ನೀರಲ್ಲಿ ಮುಳುಗುವಾಗ ಮಾಡುವಂತೆ, ಬೇಕೆಂದೇ ಉಸಿರು ಹಿಡಿದಾಗಲೂ ಚೆಯ್ನ್–ಸ್ಟೋಕ್ಸ್ ಉಸಿರಾಟದಲ್ಲೂ ಹೀಗಾಗುತ್ತದೆ. ಕೆಲವು ರೋಗಗಳಲ್ಲಿ ಇದು ಒಳ್ಳೆಯದಲ್ಲವಾದರೂ ಆರೋಗ್ಯವಾಗಿರುವ ಮಕ್ಕಳಲ್ಲೂ ಗಾಢನಿದ್ರೆಯಲ್ಲಿರುವ ವಯಸ್ಸಾದವರಲ್ಲಿ ಏನನ್ನಾದರೂ ನುಂಗುವಾಗ ತಿಂದಿದ್ದು ಉಸಿರ್ನಾಳದಲ್ಲಿ ಹೋಗದಂತೆ ತಡೆವಾಗ ಇದನ್ನು ಕಾಣಬಹುದು. ತಡೆಯಲಾಗದಷ್ಟು ವಿಪರೀತ ನೋವಾದಾಗಲೂ ಕಟ್ಟುಸಿರಾಗಬಹುದು. ಉಸಿರಾಟದ ಕೆಲವು ರೋಗಗಳಲ್ಲಿ ಬಿಟ್ಟು ಬಿಟ್ಟು ಉಸಿರುಕಟ್ಟಬಹುದು. (ಎಂ.ಬಿ.)

**ಕಟ್ಟುಹಾವು :** ಭಾರತದ ವಿಷಸರ್ಪಗಳಲ್ಲಿ ಒಂದು ಜಾತಿ (ಕ್ರೇಟ್). ಇದಕ್ಕೆ ಬಂಗರಸ್ ಎಂಬ ವೈಜ್ಞಾನಿಕ ಹೆಸರಿದೆ. ಸರೀಸೃಪ ವರ್ಗದ ಒಫೀಡಿಯ ಗಣದ ಇಲಾಪಿಡೀ ಕುಟುಂಬಕ್ಕೆ ಸೇರಿದೆ. ಈ ಜಾತಿಯಲ್ಲಿ ಸು. 12 ಪ್ರಭೇದಗಳಿವೆ. ಬಂಗರಸ್ ಸಿರೂಲಿಯಸ್ ಎಂಬ ಪ್ರಭೇದ ಭಾರತದಲ್ಲಿ ಎಲ್ಲೆಡೆ ಸಾಮಾನ್ಯವಾಗಿ ಕಂಡುಬರುತ್ತದೆ. ಸು. 2 ಮೀ ಉದ್ದವಿರುವ ಇದರ ಮೇಲುಮೈ ನೀಲಿಮಿಶ್ರಿತ ಕಪ್ಪು, ಹೊಟ್ಟೆಯ ಭಾಗ ಬಿಳುಪು. ಮೈಮೇಲೆ ಅಡ್ಡಡ್ಡಲಾಗಿ ಬಿಳಿಯ ಪಟ್ಟೆಗಳಿವೆ. ತಲೆಗೂ ಕತ್ತಿಗೂ ಗಾತ್ರದಲ್ಲಿ ವ್ಯತ್ಯಾಸವಿಲ್ಲ. ತಲೆಯ ಮೇಲೆ ಫಲಕಗಳಿವೆ (ಶೀಲ್ಡ್). ಬೆನ್ನುಹುರಿಯುದ್ದಕ್ಕೂ ಇರುವ ಹುರುಪೆಗಳು ಉಳಿದವಕ್ಕಿಂತ ದೊಡ್ಡವು. ಬಾಲದಲ್ಲಿರುವ ಉದರಭಾಗದ ಹುರುಪೆಗಳೂ ಒಂದೇ ಸಾಲಿನಲ್ಲಿ ಜೋಡಣೆಗೊಂಡಿವೆ. ಇದು ನಿಶಾಚರಿ, ಗೋಡೆಗಳ ಬಿರುಕುಗಳಲ್ಲಿ, ಕಲ್ಲುಗಳ ರಾಶಿಯ ನಡುವೆ ವಾಸಿಸುತ್ತದೆ. ಇಲಿ ಮತ್ತು ಇತರ ಹಾವುಗಳನ್ನು (ಇತರ ಕಟ್ಟುಹಾವುಗಳನ್ನೂ) ಕಬಳಿಸುತ್ತದೆ.

ಕಟ್ಟುಹಾವಿನ ವಿಷ ವಿಷಕಾರಿ ಹಾವುಗಳ ವಿಷದಲ್ಲಿಯೇ ತೀಕ್ಷ್ಣವಾದುದು; ನರಮಂಡಲವನ್ನೇ ನಿಶ್ಚೇತನಗೊಳಿಸಿ ಸಾವನ್ನು ತರುತ್ತದೆ. ಸಾವು ತರಲು ಕೇವಲ 2ಮಿಗ್ರಾಂ ವಿಷವಿದ್ದರೂ ಸಾಕು.

ಇನ್ನೊಂದು ಬಗೆಯಾದ ಪಟ್ಟೆ ಕಟ್ಟುಹಾವು ಬಂಗಾರಸ್ ಫೇಸಿಯೇಟಸ್ ಅಸ್ಸಾಮ್, ಮಧ್ಯಪ್ರದೇಶ, ಒರಿಸ್ಸ ಮತ್ತು ಉತ್ತರ ಪ್ರದೇಶದ ಕೆಲಭಾಗಗಳಲ್ಲಿ ವಾಸಿಸುತ್ತದೆ. ಇದು ಸಾಮಾನ್ಯ ಕಟ್ಟುಹಾವಿಗಿಂತ ದೊಡ್ಡದು. ಮೈಮೇಲೆ ಹಳದಿ ಮತ್ತು ಕಪ್ಪು ಬಣ್ಣದ ಅಡ್ಡಪಟ್ಟೆಗಳಿವೆ. ತಲೆ ಮತ್ತು ಕತ್ತಿನ ಮೇಲೆ ಕಪ್ಪು ಮಚ್ಚೆಗಳಿವೆ, ಬೇರೆ ಹಾವುಗಳನ್ನು ತಿಂದು ಜೀವಿಸುತ್ತದೆ. ಕಪ್ಪು ಕಟ್ಟುಹಾವು ಬಂಗರಸ್ ನೈಜರ್ ಎಂಬ ಮೂರನೆಯ ಬಗೆಯ ಕಟ್ಟುಹಾವು. ಅಸ್ಸಾಮ್ ಮತ್ತು ಡಾರ್ಜಿಲಿಂಗ್‌ಗಳಲ್ಲಿ ಕಾಣಬರುತ್ತದೆ. ಇದು ಉಳಿದೆರಡಕ್ಕಿಂತ ಚಿಕ್ಕದು. ದೇಹದ ಬಣ್ಣ ಕಪ್ಪು, ಬಿಳಿ ಪಟ್ಟೆಗಳಿಲ್ಲ; ಉದರಭಾಗ ಬಿಳುಪಾಗಿದ್ದು ಅಲ್ಲಲ್ಲಿ ಕಪ್ಪು ಮಚ್ಚೆಗಳಿವೆ. (ಎಂ.ಡಿ.ಪಿ., ಡಿ.ಆರ್.ಪಿ)

**ಕಟ್ಟೆ :** ನೀರಿನ ಹರಿವನ್ನು ನಿಯಂತ್ರಿಸುವ ಉದ್ದೇಶದಿಂದ ಒಂದು ನದಿಗೆ ಅಥವಾ ಹೊಳೆಗೆ ಅಥವಾ ತೋಡಿಗೆ ಅಡ್ಡವಾಗಿ ಕಟ್ಟಿದ ಕಟ್ಟಡ (ಡ್ಯಾಮ್). ಜಲಾಶಯದ ನಿರ್ಮಾಣ, ಕುಡಿಯುವ ನೀರಿನ ಪೂರೈಕೆ, ವ್ಯವಸಾಯ ಉದ್ಯಮಕ್ಕೆ ನೀರಿನ ಸರಬರಾಜು, ಜಲವಿದ್ಯುದುತ್ಪಾದನೆ, ಭೂಸವೆತ ನಿರೋಧ, ಅಂತರ್ದೇಶೀಯ ನೌಕಾಯಾನ, ಜಲವಿಹಾರ ಸ್ಥಾನಗಳ ನಿರ್ಮಾಣ–ಕಟ್ಟೆಯ ಉಪಯೋಗಗಳು. ಇವುಗಳಲ್ಲಿ ಒಂದು ಅಥವಾ ಹಲವಿರಬಹುದು. ಒಂದಕ್ಕಿಂತ ಹೆಚ್ಚು ಉಪಯೋಗಗಳಿರುವ ಕಟ್ಟೆಗಳಿಗೆ ವಿವಿಧೋದ್ದೇಶ ಕಟ್ಟೆಗಳೆಂದು ಹೆಸರು. ಪುರಾತನ ಈಜಿಪ್ಟಿನಲ್ಲಿ ನೈಲ್ ನದಿಗೂ ಮೆಸೊಪೊಟೇಮಿಯದಲ್ಲಿ ಟೈಗ್ರಿಸ್ ನದಿಗೂ ಅಡ್ಡಲಾಗಿ ನೀರಾವರಿಗಾಗಿ ಕಟ್ಟೆಗಳನ್ನು ಕಟ್ಟಿದ್ದರು. ಅಲ್ಲಿಂದೀಚೆಗೆ ರೋಮನ್ ಚಕ್ರಾಧಿಪತ್ಯದಲ್ಲಿ ಕಟ್ಟಿದ ಕಟ್ಟೆಗಳೂ ಕುಡಿಯುವ ನೀರಿನ ಮೇಲ್ಕಾಲುವೆಗಳೂ (ಆಕ್ವಿಡಕ್ಟ್ಸ್) ಪ್ರಸಿದ್ಧವಾಗಿವೆ.

**ಕಟ್ಟೆಯ ನಮೂನೆಗಳು :** ಕಟ್ಟೆಯನ್ನು ಕಟ್ಟುವ ಜಾಗದಲ್ಲಿ ಅಡಿಪಾಯದ ಲಕ್ಷಣ, ಅಲ್ಲಿ ದೊರೆಯುವ ಕಟ್ಟಡದ ಸಾಮಗ್ರಿಗಳು ಮತ್ತು ಆವಶ್ಯಕತೆಗಳಿಗೆ ಅನುಗುಣವಾಗಿ ಕಟ್ಟೆಯ ನಮೂನೆಗಳು ವ್ಯತ್ಯಾಸವಾಗುತ್ತದೆ. ನಮ್ಮ ದೇಶದಲ್ಲಿ ತಗ್ಗಾದ ಕಟ್ಟೆಗೆ ಅಣೆಕಟ್ಟು ಎಂದು ಹೆಸರು. ಗಂಗಾ, ಯಮುನಾ, ಗೋದಾವರಿ, ಕೃಷ್ಣಾ, ಕಾವೇರಿ–ಈ ಮಹಾನದಿಗಳ ಮೇಲೆ ಹಿಂದೆ ನೀರಾವರಿಗಾಗಿಯೂ ಜಲಯಾನಕ್ಕಾಗಿಯೂ ಕಟ್ಟಿದ ಅಣೆಕಟ್ಟುಗಳು ಈಗಲೂ ಉಪಯೋಗದಲ್ಲಿವೆ. ಮೇಲೆ ಎಲ್ಲೆಡೆಯೂ ನೀರನ್ನು ಹರಿಯಲು ಬಿಡದೆ ನಿರ್ದಿಷ್ಟ ಸ್ಥಳದಲ್ಲಿ ಹರಿಯಲು ಬಿಡುವ ಕೋಡಿ ಅಥವಾ ತೂಬುಗಳಿರುವ ಕಟ್ಟೆಗಳನ್ನು ಅಣೆಗಳೆನ್ನುವರು. ಅವನ್ನು ಕೆಳಗೆ ಕಂಡಂತೆ ವಿಂಗಡಿಸಬಹುದು; 1 ಕೆರೆಗಳ ಮಣ್ಣಿನ ಏರಿಗಳು ; 2 ಕಲ್ಲನ್ನು ತುಂಬಿದ ಏರಿಗಳು; 3 ಕಲ್ಲುಗಾರೆ ಇಲ್ಲವೆ ಕಾಂಕ್ರೀಟಿನ ಗುರುತ್ವ ಕಟ್ಟೆಗಳು; 4 ಊರೆಯ ಕಟ್ಟೆಗಳು; 5 ಪ್ರಬಲಿತ ಕಾಂಕ್ರೀಟಿನ ಹಲಗೆಯ ಪೆಟ್ಟಿಗೆಯ ಕಟ್ಟೆಗಳು; 6 ಕಮಾನಿನ ಕಟ್ಟೆಗಳು.

ಒಂದು ಯೋಜನೆಯ ಪೂರ್ವಭಾವಿ ಪರಿಶೀಲನೆಯಲ್ಲಿ ಆ ಜಾಗದಲ್ಲಿ ಒದಗುವ ನೀರು ಮತ್ತು ಸಾಗುವಳಿಯಾಗುವ ಭೂಮಿಯ ಮೋಜಣಿಯನ್ನು ಮಾಡಬೇಕು. ಇವು ಸುಮಾರಾಗಿ ಸಮರ್ಪಕವಾಗಿದ್ದರೆ ನದಿಯ ತಳದಲ್ಲಿ ಅಲ್ಲಲ್ಲಿ ಕೊರೆದು ತಳಪಾಯದ ಸ್ವಭಾವವನ್ನು ತಿಳಿಯಬೇಕು. ಈ ಕೆಲಸವನ್ನು ತೆಗೆದುಕೊಂಡರೆ ಅದರಿಂದ ಬಾಧಕವಾಗಬಹುದಾದ ರಸ್ತೆಗಳು, ರೈಲುದಾರಿಗಳು ಮತ್ತು ವಿದ್ಯುತ್ತಿನ ತಂತಿಸಾಲುಗಳನ್ನು ಗಮನಿಸಿ ತೀರ್ಮಾನಕ್ಕೆ ಬರಬಹುದು.

**1 ಮಣ್ಣಿನ ಏರಿಗಳು :** ಈ ನಮೂನೆ ಅನೇಕ ಶತಮಾನಗಳಿಂದಲೂ ನಮ್ಮ ದೇಶದಲ್ಲಿ ಬಳಕೆಯಲ್ಲಿದೆ. ಒಂದು ತೋಡಿಗೆ ಅಡ್ಡಲಾಗಿ ಇಳಿಜಾರಾದ ಪಕ್ಕಗಳುಳ್ಳ ಏರಿಯನ್ನು ಒಳ್ಳೆಯ ಮಣ್ಣಿನಿಂದ ಕಟ್ಟುತ್ತಾರೆ. ಆಗ ನೀರು ಅದರ ಹಿಂದೆ ನಿಂತು ಕೆರೆಯಾಗುತ್ತದೆ. ಕೆರೆಯ ನೀರನ್ನು ಏರಿಯ ಮೂಲಕ ತೂಬಿನಿಂದ ಸಾಗಿಸಿ ನಾಲೆಗಳ ಮೂಲಕ ಎರಡು ದಡಗಳಲ್ಲಿಯೂ ತಗ್ಗಿನ ಜಮೀನುಗಳಿಗೆ ಬಿಟ್ಟು ಬೆಳೆಯನ್ನು ತೆಗೆಯುತ್ತಾರೆ. ಕೆರೆ ಹಿಡಿಯುವುದಕ್ಕಿಂತ ಹೆಚ್ಚು ನೀರು ಮಳೆಯಿಂದ ಬಂದರೆ ಅದನ್ನು ದಡದಲ್ಲಿರುವ ಕೋಡಿಯ ಮೂಲಕ ಮತ್ತೆ ಕೆಳಗಡೆ ತೋಡಿಗೆ ಬಿಡುತ್ತಾರೆ. ಅಡಿಪಾಯದಲ್ಲಿ ಸಾಧಾರಣ ಮಣ್ಣಿರುವ ಜಾಗಗಳಲ್ಲಿ ಈ ನಮೂನೆಯನ್ನು ಉಪಯೋಗಿಸಬಹುದು. ಏರಿಯ ಪಾರ್ಶ್ವಚಿತ್ರದಲ್ಲಿ (ಪ್ರೊಫಾಯಿಲ್) ಮಣ್ಣನ್ನು ಮೂರು ವಿಧವಾಗಿ ತುಂಬಬಹುದು. (i) ಎಲ್ಲ ಕಡೆಗಳಲ್ಲಿಯೂ ಒಂದೇ ವಿಧವಾದ ಮಣ್ಣನ್ನು ತುಂಬುವುದು, (ii) ಒಳ್ಳೆಯ ಮಣ್ಣು ಸಾಕಷ್ಟು ದೊರೆಯದೆ ಇರುವ ಕಡೆ ಒಳಭಾಗದಲ್ಲಿ ಜಿಗಟಾದ ಮಣ್ಣನ್ನು ತುಂಬಿ ಎರಡು ಪಕ್ಕಗಳಲ್ಲಿಯೂ ನೀರು ಜಿನುಗಬಹುದಾದ ಹರಳುಮಣ್ಣನ್ನು ತುಂಬುವುದು. (iii) ಒಳಗಡೆ ಏರಿಯ ಮಧ್ಯದಲ್ಲಿ ಜೇಡಿಮಣ್ಣ ಕಲ್ಲುಗಾರೆ, ಇಲ್ಲವೆ ಕಾಂಕ್ರೀಟಿನ ಗೋಡೆಯನ್ನು (ಕೋರ್‌ವಾಲ್) ಕಟ್ಟಿ ಸುತ್ತಲೂ ಒಂದೇ ವಿಧವಾದ ಮಣ್ಣನ್ನು ತುಂಬುವುದು. ಮೈಸೂರು ರಾಜ್ಯದಲ್ಲಿ ಮದಗನ ಕೆರೆ, ಅಯ್ಯನಕೆರೆ, ಸೂಳೆಕೆರೆ, ಹೆಸರಘಟ್ಟದ ಕೆರೆ ಮೊದಲಾದ ನೂರಾರು ದೊಡ್ಡ ಕೆರೆಗಳಿವೆ.

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಮಿಸೌರಿ ಮಹಾನದಿಗೆ ಅಡ್ಡಲಾಗಿ ಮಾಂಟಾನ ರಾಜ್ಯದಲ್ಲಿ 1942ರಲ್ಲಿ ಕಟ್ಟಿ ಮುಗಿಸಿದ ಫೋರ್ಟ್ ಫೆಕ್ ಏರಿಯ ಗರಿಷ್ಠ ಎತ್ತರ 76.25 ಮೀ ಉದ್ದ 6.40 ಕಿಮೀ ಜಲಾಶಯದಲ್ಲಿ 19.5 ಮಿಲಿಯನ್ ಎಕರೆ ಅಡಿ ನೀರು ಹಿಡಿಯುತ್ತದೆ. ಇದರಲ್ಲಿ ಪ್ರಪಂಚದ ಮಣ್ಣಿನ ಏರಿಗಳಲ್ಲಿಯೇ ಅತ್ಯಂತ ಹೆಚ್ಚು ಮಣ್ಣು (128 ಮಿಲಿಯನ್ ಸಲೆ ಗಜ) ತುಂಬಿದೆ. ಈ ನದಿಯ ಮೇಲೆಯೇ 1954ರಲ್ಲಿ ದಕ್ಷಿಣ ಡಕೋಟದಲ್ಲಿ ಕಟ್ಟಿದೆ ಓಹೆ ಏರಿಯಲ್ಲಿ ತುಂಬಿರುವ ಮಣ್ಣು 91 ಮಿಲಿಯನ್ ಸಲೆ ಗ್. ಇದೇ ನದಿಗೆ ಅಡ್ಡಲಾಗಿ ಉತ್ತರ ಡಕೋಟದಲ್ಲಿ ಕಟ್ಟಿದ ಮತ್ತೊಂದು ಏರಿಯಲ್ಲಿ 75 ಮಿಲಿಯನ್ ಸಲೆ ಮೀ ಮಣ್ಣು ತುಂಬಿದೆ. ಭಾರತದ ಪೋನೇರಿ ಕೆರೆಯ ನೀರು ಹರಡು (ವಾಟರ್ ಸ್ಪ್ರೆಡ್) 206.4 ಚಕಿಮೀ ಕಟ್ಟೆಯ ಉದ್ದ 48 ಕಿಮೀ ಸಿಲೋನಿನ ಪಡವಿಲ್ ಸರೋವರದ ಏರಿಯ ಉದ್ದ 178 ಕಿಮೀ 21.35 ಮೀ ಮೇಲಿನ ಅಗಲ 2.15 ಮೀ ತಳದ ಅಗಲ 61 ಮೀ ಇದರಲ್ಲಿ 17 ಮಿಲಿಯನ್ ಸಲೆ ಅಡಿ ಮಣ್ಣುಸೇರಿದೆ.

ಪ್ರಪಂಚದಲ್ಲಿಯೇ ಅತ್ಯಂತ ಎತ್ತರವಾದ ಮಣ್ಣಿನ ಏರಿ ಇರುವುದು 164.1ಮೀ ಎತ್ತರದ ಕ್ಯಾಲಿಫೋರ್ನಿಯದ ಟ್ರಿನಿಟಿ ಕಟ್ಟೆಯಲ್ಲಿ. ಇದರ ಉದ್ದ 2,450'. ಎರಡನೆಯದು 1947ರಲ್ಲಿ ಅಮೆರಿಕದ ಇಡಾಹೊಸಂಸ್ಥಾನದಲ್ಲಿ ಕಟ್ಟಿದ ಆ್ಯಂಡರ್ಸನ್ ರ‍್ಯಾಂಚ್ ಏರಿ. ಇದರ ಎತ್ತರ 456'. ಉದ್ದ 1350'.



ತುಂಗಭದ್ರಾ ಕಟ್ಟೆಯ ವಿಹಂಗಮ ನೋಟ

**2 ಕಲ್ಲನ್ನು ತುಂಬಿದ ಏರಿಗಳು :** ಏರಿಗೆ ಒಳ್ಳೆಯ ಮಣ್ಣು ಸಿಕ್ಕದೆ, ಸಿಮೆಂಟ್ ಕಾಂಕ್ರೀಟಿನ ಕಟ್ಟೆಗೆ ಖರ್ಚು ಹೆಚ್ಚಾಗಿ, ಹತ್ತಿರದಲ್ಲಿ ಕಲ್ಲಿನ ಕ್ವಾರಿಗಳಿದ್ದು ಏರಿಯ ಅಡಿಪಾಯದಲ್ಲಿ ಗಟ್ಟಿ ಕಲ್ಲು ಸಿಕ್ಕದೆ ಹೋದ ಕಡೆಗಳಲ್ಲಿ ಈ ನಮೂನೆಯನ್ನು ಉಪಯೋಗಿಸಬಹುದು. ಇಳಿಕಲುಗಳು ಕಡಿದಾಗಿರುವುದರಿಂದ ಈ ಏರಿಗಳು ಅದೇ ಸನ್ನಿವೇಶದ ಮಣ್ಣಿನ ಏರಿಗಳಿಗಿಂತ ಗಾತ್ರದಲ್ಲಿ ಚಿಕ್ಕವಾಗಿರುತ್ತದೆ. ಏರಿಯನ್ನು ಆಳುಗಳು ಹೊರಬಹುದಾದ ಕಲ್ಲಿನ ಗೂಡುಗಳನ್ನು ಇಳಿಕಲುಗಳಲ್ಲಿ ಜೋಡಿಸಿ ಒಳಗಡೆಯೂ ತುಂಬುತ್ತಾರೆ. ಆಗಲೇ ಹೆಚ್ಚಾಗಿ ನೀರನ್ನು ಹೊಯ್ದು ಕುಗ್ಗುವಂತೆ ಮಾಡುತ್ತಾರೆ. ನೀರು ಒಳಕ್ಕೆ ಜಿನುಗದಂತೆ ಏರಿಯ ಮಧ್ಯದಲ್ಲಿ ಒಳ್ಳೆಯ ಮಣ್ಣಿನ ನಡುಗೋಡೆಯನ್ನು ಕಟ್ಟುತ್ತಾರೆ. ಕೆರೆಗೆ ಪ್ರತ್ಯೇಕವಾದ ಕೋಡಿಯನ್ನು ಕಟ್ಟಬೇಕಾಗುತ್ತದೆ. ಕಟ್ಟೆಯ ಅಡಿಪಾಯ ಮೇಲಿನ ಕಲ್ಲಿನ ಕೆಳಕ್ಕೆ ಇಳಿಯದ ಹಾಗಿರಬೇಕು. ಕ್ಯಾಲಿಫೋರ್ನಿಯದಲ್ಲಿ 1913ರಲ್ಲಿ ಮುಗಿಸಿದ ಸಾಲ್ಟ್‌ಸ್ಪ್ರಿಂಗ್ಸ್ ಕಟ್ಟೆ ಈ ನಮೂನೆಯಲ್ಲಿದೆ. ಇದರ ಎತ್ತರ 105ಮೀ ಒಳಗಡೆ 3,170,000 ಸಲೆ ಗಜ ಕಲ್ಲು ತುಂಬಿದೆ. ಮುಂದುಗಡೆಯ ಮುಖದಲ್ಲಿ ಕಲ್ಲುಗಳನ್ನು ಕೈಯಿಂದ ಜೋಡಿಸಿ ಅದಕ್ಕೂ ಮುಂದುಗಡೆ ಪ್ರಬಲಿತಕಾಂಕ್ರೀಟಿನ ಚಪ್ಪಡಿಗಳ ಪದರವನ್ನು ಇಟ್ಟಿದ್ದಾರೆ. ಈ ಚಪ್ಪಡಿಗಳ ದಪ್ಪ ತಳದಲ್ಲಿ 1ಮೀಗಳಿಂದ ಮೇಲುಗಡೆ 0.30ಮೀಗೆ ಇಳಿಯುತ್ತದೆ.

**3 ಗುರುತ್ವದ ಕಟ್ಟೆಗಳು :** ಇವು ನೀರನ್ನು ಶೇಖರಿಸುವುದಕ್ಕಾಗಿ ಹೊಳೆಗೆ ಅಡ್ಡಲಾಗಿ ಕಟ್ಟಿದ ತಡೆಗಳು, ಒಂದು ಜಾಗದಲ್ಲಿ ಯಾವ ನಮೂನೆಯನ್ನು ಕಟ್ಟಬೇಕು ಎನ್ನುವುದು ಮುಖ್ಯವಾಗಿ ಆಯಾ ನಮೂನೆಗೆ ತಗಲುವ ಖರ್ಚಿನ ಅಂದಾಜಿನ ಮೇಲೆ ಹೋಗುತ್ತದೆ. ಕಲ್ಲಿನ ಕಟ್ಟೆಗಳಿಗೆ ಗಟ್ಟಿಯಾದ ಕಲ್ಲಿನ ಅಡಿಪಾಯ ಬೇಕು. ಕಟ್ಟೆಯಲ್ಲಿ ಉಪಯೋಗಿಸುವ ಸಾಮಗ್ರಿಗಳು ಧಾರಾಳವಾಗಿ ದೊರೆಯಬೇಕು. ಕಟ್ಟೆಗಳನ್ನು ಕಟ್ಟಿ ನಿರ್ಮಿಸಿದ ಜಲಾಶಯಗಳ ನೀರನ್ನು ಈಗ ವಿವಿಧೋದ್ದೇಶಗಳಿಗಾಗಿ ಉಪಯೋಗಿಸುತ್ತಾರೆ. ಇವುಗಳಲ್ಲಿ ಮುಖ್ಯವಾದವು: (i) ಪಟ್ಟಣಗಳಿಗೂ ನಗರಗಳಿಗೂ ಕುಡಿಯುವ ನೀರನ್ನು ಒದಗಿಸುವುದು; (ii) ಪ್ರವಾಹ ನಿಯಂತ್ರಣ; (iii) ವಿದ್ಯುಚ್ಛಕ್ತಿಯ ಉತ್ಪಾದನೆ; (ii) ನೀರಾವರಿ; (iii) ಜಲಯಾನದ ಸೌಕರ್ಯ; (iv) ಕೈಗಾರಿಕೆಗಳು. (v) ಪ್ರವಾಸಿಗಳ ವಿಹಾರಕ್ಷೇತ್ರಗಳು.

ಮೈಸೂರಿನಲ್ಲಿ 1912ರಲ್ಲಿ ಪ್ರಾರಂಭವಾದ ಕೃಷ್ಣರಾಜಸಾಗರ ಕಟ್ಟೆ ಪ್ರಪಂಚದಲ್ಲಿ ಮೊದಲನೆಯ ವಿವಿಧೋದ್ದೇಶ ಯೋಜನೆ. ಇದನ್ನು ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯನವರು ಸಂವಿಧಾನ ಮಾಡಿದರು. ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ 1933ರಲ್ಲಿ ಪ್ರಾರಂಭಮಾಡಿ 1942ರಲ್ಲಿ ಮುಗಿಸಿದ ಟೆನೆಸ್ಸಿಯ ವಿವಿಧೋದ್ದೇಶ ಯೋಜನೆ ಐಕಮತ್ಯದಿಂದ ಮುಂದೆ ನಡೆದು ಆ ಕಣಿವೆಯ ಜನರಿಗೆ ಅಪಾರವಾದ ಅನುಕೂಲತೆಯನ್ನು ಒದಗಿಸಿದೆ. ಇಲ್ಲಿ ಟೆನೆಸ್ಸಿ ನದಿಗೆ ಅಡ್ಡಲಾಗಿ ಒಂದರ ಕೆಳಗೆ ಒಂದರಂತೆ ಒಂಬತ್ತು ಕಟ್ಟೆಗಳನ್ನು ಕಟ್ಟಿದ್ದೇ ಅಲ್ಲದೆ ಉಪನದಿಗಳ ಮೇಲೆ ಹದಿಮೂರು ಎತ್ತರವಾದ ಕಟ್ಟೆಗಳನ್ನು ಕಟ್ಟಿದ್ದಾರೆ. ಪ್ರಪಂಚದಲ್ಲಿಯೇ ಸಂಪೂರ್ಣವಾಗಿ ನಿಯಂತ್ರಿತವಾದ ನದಿ ಟೆನೆಸ್ಸಿ, ಉತ್ತರ

ಭಾರತದಲ್ಲಿ ಪ್ರತಿವರ್ಷವೂ ಪ್ರವಾಹಗಳಿಂದ ವಿಶೇಷ ನಷ್ಟವನ್ನುಂಟುಮಾಡುತ್ತಿದ್ದ ದಾಮೋದರ ನದಿಯ ಮೇಲೂ ಒಂದರ ಕೆಳಗೆ ಒಂದು ಕಾಂಕ್ರೀಟಿನ ಕಟ್ಟೆಗಳನ್ನು ಕಟ್ಟಿ ನೀರಾವರಿ, ಜಲಯಾನ, ವಿದ್ಯುದುತ್ಪಾದನೆ. ಕೈಗಾರಿಕೆಗಳು–ಈ ವಿವಧೋದ್ದೇಶಗಳಿಗಾಗಿ ನೀರನ್ನು ಬಳಸಿಕೊಂಡಿದ್ದಾರೆ.

ಸ್ವಂತ ತೂಕದ ಮೇಲೆ ನಿಂತಿರುವ ಕಟ್ಟೆಗಳಿಗೆ ಗುರುತ್ವದ ಕಟ್ಟಗಳೆನ್ನುತ್ತಾರೆ (ಗ್ರಾವಿಟಿ ಡ್ಯಾಮ್ಸ್). ಇವುಗಳಲ್ಲಿ (i) ಕಲ್ಲುಗಾರೆ ಕಟ್ಟೆಗಳೂ (ಮ್ಯಾಸನ್ರಿ ಡ್ಯಾಮ್ಸ್) (ii) ಕಾಂಕ್ರೀಟಿನ ಕಟ್ಟೆಗಳು–ಎಂದು ಎರಡು ವಿಭಾಗಳಿವೆ. ಕಲ್ಲುಗಾರೆಯ ಕಟ್ಟೆಯ ರಚನೆಯನ್ನು ಬೇರೆ ಕಡೆ ಹೇಳಿದೆ.

ಸಿಮೆಂಟ್ ಕಾಂಕ್ರೀಟಿನ ಕಟ್ಟೆಗೆ ಉದಾರಣೆಯಾಗಿ ಪೂರ್ವ ಪಂಚಾಬಿನಲ್ಲಿ ಶತದ್ರು ನದಿಗೆ (ಸಟ್ಲೆಜ್) ಅಡ್ಡಲಾಗಿ ಕಟ್ಟಿರುವ ಭಾಕ್ರ ಕಟ್ಟೆಯನ್ನು ತೆಗೆದು ಕೊಳ್ಳಬಹುದು. ಇದರ ಎತ್ತರ ತಳಪಾಯದ ಮೇಲೆ 224.46 ಮೀ ಸರೋವರ 102 ಕಿಮೀ ಮೇಲಿಗಳಷ್ಟು ಹರಡಿ 74 ಲಕ್ಷ ಎಕರೆ ಮೀ ನೀರನ್ನು ತುಂಬಿಕೊಂಡಿದೆ. ಕಟ್ಟೆ ನದಿಯ ಮರಳುಕಲ್ಲಿನ ತಳಪಾಯದ ಮೇಲೆ ನಿಂತಿದೆ. ಕಟ್ಟೆಯ ಉದ್ದ 490.49 ಮೀ. ತಳದ ಗರಿಷ್ಠ ಅಗಲ 217.18 ಮೀ ಮೇಲಿನ ಅಗಲ 11.83 ಮೀ ಕಟ್ಟೆಯಲ್ಲಿ 145 ಮಿಲಿಯನ್ ಸಲೆ ಮೀ ಕಾಂಕ್ರೀಟ್ ಇದೆ.

**ನಮೂನೆಗಳು :** ಗುರುತ್ವದ ಕಟ್ಟೆಗಳಲ್ಲಿ ಜಲಾಶಯದ ನೀರಿನ ಒತ್ತಡವೇ ಮೊದಲಾದ ಕಾರಣಗಳಿಂದ ಬರುವ ತ್ರಾಸವನ್ನು ಕಟ್ಟೆಯ ತೂಕವೊಂದೇ ತಡೆದು ನಿಲ್ಲಿಸುತ್ತದೆ. ಇದರ ಅಗಲವಾದ ತಳ ಅಡಿಪಾಯದ ಗಟ್ಟಿ ಬಂಡೆಯೊಳಕ್ಕೆ ಸೇರಿಕೊಂಡು ಕಟ್ಟೆ ಕೆಳಗಡೆ ಜಾರದಂತೆ ತಡೆಯುತ್ತದೆ. ಬಂಡೆಯಲ್ಲಿ ಪದರಗಳೇನಾದರೂ ಇದ್ದರೆ ಮುಂಭಾಗದಲ್ಲಿ ತೂತುಗಳನ್ನು ಕೊರೆದು ಒಳಕ್ಕೆ ಸಿಮೆಂಟಿನ ತಿಳಿಯನ್ನು ಒತ್ತಡದಲ್ಲಿ ಬಿಡುತ್ತಾರೆ. ಗುರುತ್ವದ ಕಟೆಗಳಲ್ಲಿ ಎರಡು ನಮೂನೆಗಳಿವೆ. ಒಂದರಲ್ಲಿ ಜಲಾಶಯದಲ್ಲಿ ಬಂದ ಪ್ರವಾಹವನ್ನು ಪ್ರತ್ಯೇಕವಾದ ಕೋಡಿಗಳಲ್ಲಿ ಬಿಟ್ಟು ಕಟ್ಟೆಯ ತಲೆಮಟ್ಟ ಯಾವಾಗಲೂ ಜಲಾಶಯದ ಗರಿಷ್ಠ ಮಟ್ಟಕ್ಕಿಂತ ಮೇಲೆ ಇರುವಂತೆ ಮಾಡಿರುತ್ತಾರೆ. ಉದಾಹರಣೆಗೆ ಕೃಷ್ಣರಾಜಸಾಗರ. ಇನ್ನೊಂದರಲ್ಲಿ ಜಲಾಶಯ ತುಂಬಿದಾಗ ನೀರು ಕಟ್ಟೆಯ ಹಿಂಭಾಗದಲ್ಲಿ ನಯವಾಗಿ ಹರಿದು. ಕೆಳಗಡೆ ಹೊಳೆಗೆ ಸೇರಿಕೊಳ್ಳುತ್ತದೆ. ಉದಾಹರಣೆಗೆ ಭಾಕ್ರ ಅಣೆಕಟ್ಟಿನ ಗೋವಿಂದಸಾಗರ.

ಒಂದು ಗುರುತ್ವದ ಕಟ್ಟೆಯ ಮೇಲೆ ಬೀಳುವ ಒತ್ತಡಗಳು ಈ ರೀತಿ ಇವೆ : (i) ಕಟ್ಟೆಯ ತೂಕ–ಇದು ಕೆಳಗಡೆ ಎಳೆಯುತ್ತದೆ; (ii) ಜಲಾಶಯದ ನೀರಿನ ಒತ್ತಡ–ಇದು ಮಟ್ಟಸವಾಗಿರುತ್ತದೆ; (iii) ತಳಪಾಯದೊಳಕ್ಕೆ ಜಿನುಗಬಹುದಾದ ನೀರಿನ ಒತ್ತಡ–ಇದು ಮೇಲು ಮುಖವಾಗಿದ್ದು ಕಟ್ಟೆಯನ್ನು ತೇಲಿಸುತ್ತದೆ; (iv)ಸರೋವರದ ನೀರಿನ ಮೇಲೆ ಬರುವ ಅಲೆಗಳ ಒತ್ತಡ; (v) ಭೂಕಂಪವಾಗುವ ಕಡೆ ಅವುಗಳ ಆವೇಗ. (vi) ಸರೋವರದ ಮೆಕ್ಕಲು ಮಣ್ಣಿನ ಒತ್ತಡ. ಈ ಒತ್ತಡಗಳನ್ನು ಸಂಘಟಿಸಿದಾಗ ಬರುವ ಪರಿಣಾಮ ಬಲದ ದಿಕ್ಕು ಕಟ್ಟೆಯ ತಳಕ್ಕೆ ಓರೆಯಾಗಿರುತ್ತದೆ. ಅದರ ಪ್ರಮಾಣವನ್ನು (R) ತಳದ ಸಮತಳದ ಅಗಲದಿಂದ (b) ಭಾಗಿಸಿದರೆ ಬರುವುದಕ್ಕಿಂತ ಹೆಚ್ಚಿನ ಸರಾಸರಿ ಒತ್ತಡ ಫಲಿತಬಲಕ್ಕೆ ಸಮಕೋನವಾದ ಮತ್ತೊಂದು ದಿಕ್ಕಿನಲ್ಲಿ ಬೀಳುತ್ತದೆ. ಫಲಿತಬಲ ಲಂಬರೇಖೆಗೆ ($a^0$) ಗಳಷ್ಟು ಓರೆಯಾಗಿದ್ದರೆ ಗರಿಷ್ಠ ಒತ್ತಡ R/b sec a ಆಗುತ್ತದೆ.

ಇದನ್ನು ಪ್ರಾಯೋಗಿಕವಾಗಿ ಬಳಸಿಕೊಂಡು Rನ ಬೆಲೆಕಂಡುಹಿಡಿಯುವುದು ಸಾಧ್ಯವಿದೆ. ಎತ್ತರವಾದ ಕಟ್ಟೆಗಳ ಸಂವಿಧಾನವನ್ನು ಎರಡು ಮಾರ್ಗಗಳಲ್ಲಿ ಮಾಡುತ್ತಾರೆ. (i) ವಿಶ್ಲೇಷಣ ಮಾರ್ಗ–ಇದರಲ್ಲಿ ಕಟ್ಟೆಯ ಮುಂಭಾಗದಲ್ಲಿ ತಳಕ್ಕೆ ಸು. 20' ದೂರದಲ್ಲಿ ಒಂದು ಲಂಬರೇಖೆಯನ್ನು ಅಕ್ಷವಾಗಿ ಇಟ್ಟುಕೊಂಡು ಅದರ ಸುತ್ತ ಪ್ರದಕ್ಷಿಣವಾಗಿಯೂ ಅಪ್ರದಕ್ಷಿಣವಾಗಿಯೂ ಕಟ್ಟೆಯ ಮೇಲಿನ ಬಲಗಳ ಭ್ರಮಣಾಂಕಗಳನ್ನು ತೆಗೆದುಕೊಂಡು ಪರಿಣಾಮದಲ್ಲಿ ಬರುವ ಭ್ರಮಣಾಂಕ ಶೂನ್ಯವಾಗುವಂತೆ ಮಾಡುತ್ತಾರೆ. (ii) ರೇಖಾಕೃತಿಗಳಿಂದ (ಗ್ರಾಫಿಕ್ ಸ್ಟ್ಯಾಟಿಕ್ಸ್) ಕಟ್ಟೆಯ ಸಮಸ್ಥಿತಿಯನ್ನು ತನಿಖೆ ಮಾಡುತ್ತಾರೆ. ಎರಡನೆಯ ಮಾರ್ಗ ಸುಲಭ–ಈಚೆಗೆ ಜಲಭಾರದ ಪ್ರಯೋಗಶಾಲೆಗಳಲ್ಲಿ ಮಾದರಿಗಳಿಂದ ಸಂವಿಧಾನವನ್ನು ಪರೀಕ್ಷೆ ಮಾಡುವ ಕ್ರಮ ಎಲ್ಲೆಲ್ಲಿಯೂ ಬಳಕೆಗೆ ಬರುತ್ತಿದೆ. ನಮ್ಮ ರಾಜ್ಯದ ಕೃಷ್ಣರಾಜಸಾಗರದಲ್ಲಿ ಇಂಥ ಒಂದು ಪ್ರಯೋಗಶಾಲೆಯಿದೆ.

**4 ಊರೆಯ ಕಟ್ಟೆಗಳು (ಬಟ್ರೆಸ್ ಡ್ಯಾಮ್ಸ್) :** ಗುರುತ್ವದ ಕಲ್ಲು ಗಾರೆಯ ಕಟ್ಟೆಯಲ್ಲಿ ಉಪಯೋಗಿಸುವ ಸಾಮಗ್ರಿ ಬಹಳ ಹೆಚ್ಚು ಅದಕ್ಕಾಗಿ ಕಮಾನಿನ ಕಟ್ಟೆಗಳು ಸಾಧ್ಯವಾಗದ ಕಡೆ ಊರೆಯ ಕಟ್ಟೆಗಳನ್ನು ಕಟ್ಟುತ್ತಾರೆ. ಇಲ್ಲಿ ತೂಕದ ಮತ್ತು ಕಮಾನಿನ ಕಟ್ಟೆಗಳ ತತ್ತ್ವಗಳನ್ನು ಸೇರಿಸಿರುತ್ತಾರೆ. ಹೊಳೆಯ ಅಗಲವನ್ನು ಊರೆಗಳಿಂದ ಅಂಕಣಗಳಾಗಿ ಭಾಗಿಸಿ ಮಧ್ಯೆ ನೀರನ್ನು ನಿಲ್ಲಿಸುವುದಕ್ಕೆ ಮಟ್ಟಸ ಕಮಾನುಗಳನ್ನೋ ಪ್ರಬಲಿತಕಾಂಕ್ರೀಟಿನ ತೊಲೆಚಪ್ಪಡಿಗಳನ್ನೋ ಉಕ್ಕಿನ ತೊಲೆತಗಡುಗಳನ್ನೋ ಜೋಡಿಸಿರುತ್ತಾರೆ. ಈ ಕಟ್ಟೆಯೂ ಕಮಾನಿನ ಕಟ್ಟೆಯ ಹಾಗೆ ಬಂಡಿಯ ಕಮಾನಿನ ಸೇತುವೆಯನ್ನು ಸಮಕೋನದಷ್ಟು ತಿರುಗಿಸಿ ಮಲಗಿಸಿದಂತೆ ಕಾಣುತ್ತದೆ. ತಮ್ಮ ತೂಕದ ಮೇಲೆ ನಿಂತಿರುವ ಊರೆಗಳು ಕಮಾನಗಳಿಗೆ ಗುದ್ದು ಕಂಬಗಳಂತೆ ಇರುತ್ತದೆ. ಅದಕೋಸ್ಕರ ಪ್ರತಿಯೊಂದು ಊರೆಗೂ ಒಳ್ಳೆಯ ಕಲ್ಲಿನ ತಳಪಾಯ ಬೇಕು.



ತುಂಗಭದ್ರಾ ಕಟ್ಟೆ – ನಿರ್ಮಾಣ ಹಂತದಲ್ಲಿ

ಚಪ್ಪಡಿಗಳನ್ನು ಜೋಡಿಸಿದಾಗ ನೀರಿನ ಕಡೆಯ ಮುಖ ಲಂಬಕ್ಕೆ $30^0$–$45^0$ ವರೆಗೆ ಓರೆಯಾಗಿರುತ್ತದೆ. ಈ ಚಪ್ಪಡಿಯ ತಳದಲ್ಲಿ ತಡೆಗೋಡೆಯೊಂದು (ಕಟ್ ಆಫ್ ವಾಲ್) ಬೇಕು. ಅಡಿಪಾಯದಲ್ಲಿ ನೀರು ನುಗ್ಗದ ಹಾಗೆ ಇರಬೇಕು. ಇಳಿಕಲು ಊರೆಯ ಕಮಾನಿನ ವಲಯದ ತೂಕದ ಒಂದು ಭಾಗ ಕಮಾನಿನ ಮೇಲೆ ಹರಿದು ಗುದ್ದುಗಂಬವನ್ನು ಸೇರುತ್ತದೆ. ಉಳಿದ ಭಾಗ ಮೇಲಿನ ವಲಯಗಳಿಂದ ಕೆಳಗಿನ ವಲಯಗಳ ಮೂಲಕ ಅಡಿಪಾಯವನ್ನು ಸೇರುತ್ತದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಅರಿಸೋನದಲ್ಲಿರುವ ಬಾರ್ಟ್‌ಲೆಟ್ ಕಟ್ಟೆ ಅನೇಕ ಕಮಾನುಗಳುಳ್ಳ ಊರೆಯ ಕಟ್ಟೆ. ಅದರ ಗರಿಷ್ಠ ಎತ್ತರ 87ಮೀ ತಲೆಯ ಮೇಲಿನ ಉದ್ದ 22ಮೀ ಇದರ ನೀರಿನ ಕಡೆಯ ಮುಖಮಟ್ಟಕ್ಕೆ $48^0$ ಕೋನದಲ್ಲಿದೆ. 2ಮೀ ಅಂತರದ ಊರೆಗಳ ನಡುವೆ ಪ್ರಬಲಿತ ಕಾಂಕ್ರೀಟಿನ ಕಮಾನುಗಳಿವೆ. ಕಮಾನಿನ ದಪ್ಪ ಮೇಲುಗಡೆ 0.60ಮೀ 101ಮಿಮೀ ಕೆಳಗಡೆ 2.12ಮೀ ಊರೆಗಳ ಗರಿಷ್ಠ ಅಗಲ 109.2 ಮೀ T ಅಥವಾ ಹೋರಿಯ ತಲೆಯ (ಬುಲ್ ಹೆಡ್) ಆಕಾರದ ಕಟ್ಟೆಯಲ್ಲಿಯೂ ಊರುಗಳನ್ನು ಉಪಯೋಗಿಸುತ್ತಾರೆ. ನಕ್ಷೆಯಲ್ಲಿ ನೋಡುವುದಕ್ಕೆ T ಯ ತಲೆಗೆರೆಗಳನ್ನು ಸೇರಿಸಿದ ಹಾಗೆ ಕಾಣುತ್ತದೆ. ಕೆಳಗಡೆಯೂ ರೇಖೆಗಳೇ ಊರೆಗಳು. ಈ ನಮೂನೆ ಸರ್ವತ್ರ ಬಳಕೆಗೆ ಬರುತ್ತಿದೆ. ಆ್ಯಂಬುರ್‌ಸನ್ ನಮೂನೆಯೂ ಹೋರಿಯ ತಲೆಯ ಹಾಗೆ ಅನೇಕ Tಗಳನ್ನು ಒಟ್ಟು ಸೇರಿಸಿದಂತೆ ಕಾಣುತ್ತದೆ. ಆದರೆ ನೀರಿನ ಕಡೆಯ ಮುಖ ಲಂಬವಾಗಿರದೆ ವಾಲಿರುತ್ತದೆ. ಅದರಿಂದ ನೀರಿನ ನೂಕು ಲಂಬವಾಗಿಯೂ ಇರುವುದಿಲ್ಲ. ಮಟ್ಟವಾಗಿಯೂ ಇರುವುದಿಲ್ಲ. ಮೆಕ್ಸಿಕೋದಲ್ಲಿರುವ ರಾಡ್ರೀಕ್ಸ್ ಕಟ್ಟೆಯ ನೀರಿನ ಕಡೆಯ ಮುಖ $45^0$ ಗಳಲ್ಲಿ ವಾಲಿದೆ. ಅದರ ಎತ್ತರ 73 ಮೀ.

**ಅನೇಕ ಊರೆಗಳ ಕಟ್ಟೆಗಳು:** ಕಲ್ಲಿನ ತಳದ ಮೇಲೆ ಅಗಲವಾದ ನದಿಗಳಲ್ಲಿ ತಗ್ಗಾದ ಕಟ್ಟೆಗಳನ್ನು ಕಂಬಗಳ ಮೇಲೋ (ಕಮಾನಿನ ಕಟ್ಟೆಯಾಗಲಿ ಕಲ್ಲುಗಾರೆಯ ಕಟ್ಟೆಯಾಗಲಿ ಸಾಧ್ಯವಾಗದೆ ಇರುವ ಕಡೆಗಳಲ್ಲಿ) ಕಟ್ಟುತ್ತಾರೆ. ಈ ಸಂವಿಧಾನದಲ್ಲಿ ಕೆಲವು ಗೋಡೆಗಳನ್ನೋ ಊರೆಗಳನ್ನೋ ಕಟ್ಟಿ ನಡುವಿನ ಅಂಕಣಗಳಲ್ಲಿ ಪ್ರಬಲಿತಕಾಂಕ್ರೀಟಿನ ಚಪ್ಪಡಿಗಳನ್ನೋ ಕಮಾನುಗಳನ್ನೋ ಕಟ್ಟುತ್ತಾರೆ. ಕಟ್ಟೆಯ ನೀರಿನ ಕಡೆಯ ಮುಖಮಟ್ಟಕ್ಕೆ $45^0$ ಇಳಿಕಲಿನಲ್ಲಿದ್ದು

ಮೇಲೆ ನಿಂತಿರುವ ನೀರಿನ ತೂಕದಿಂದ ಪ್ರಬಲಿತತೆಯನ್ನು ಪಡೆಯುತ್ತದೆ. ಅನೇಕ ಕಮಾನುಗಳ ಕಟ್ಟೆಗಳಲ್ಲಿ 15.16 ಮೀ ಅಂತರದಲ್ಲಿ ಊರೆಗಳಿಂದ ಬಲಪಡಿಸಿದ ತೆಳುವಾದ ಅರ್ಧಸಿಲಿಂಡರುಗಳಿರುತ್ತವೆ. ಈ ನಮೂನೆಯ ಕಲ್ಲಿನ ತಳಪಾಯದ ಮೇಲೆ ಅಗಲವಾದ ಹೊಳೆಗಳಿಗೆ ಅಡ್ಡಲಾಗಿ ತಗ್ಗಾದ ಕಟ್ಟೆಗಳನ್ನು ಕಟ್ಟಲು ಅನುಕೂಲವಾಗಿದೆ. ಅರ್ಧ ಉರುಳೆಗಳ ಕೆಳಗಿನ ಅಂಚನ್ನು ಕಲ್ಲಿನ ತಳಪಾಯದ ಮೇಲೆ ನಿಂತಿರುವ ಕಾಂಕ್ರೀಟಿನ ತಡೆಗೋಡೆಗೆ ಸೇರಿಸುತ್ತಾರೆ. ಅಮೆರಿಕದ ಅರಿ ಸೋನದಲ್ಲಿ ಕಟ್ಟಿರುವ 76 ಮೀ ಎತ್ತರವಾದ ಕೂಲಿಜ್ ಕಟ್ಟೆಯ ಕಮಾನುಗಳಿಗೆ ಗುಮ್ಮಟದ ಆಕಾರವನ್ನು ಕೊಟ್ಟಿದ್ದಾರೆ. ಹೀಗೆಯೇ ಇಳಿಜಾರಾದ ಕಂಬಗಳ ಅಥವಾ ಊರೆಗಳ ಮೇಲೆ ಪ್ರಬಲಿತಕಾಂಕ್ರೀಟಿನ ಚಪ್ಪಡಿಯ ಕಟ್ಟೆಯನ್ನು ಕಟ್ಟಬಹುದು. ಆಗ ಚಪ್ಪಡಿಗಳನ್ನು ಕಂಬಗಳ ಮೇಲೆ ಅವಿಚ್ಛಿನ್ನವಾಗಿರುವಂತೆ ವಿನ್ಯಾಸಮಾಡಿ ಕೆಳಗಡೆ ಒಂದು ತಡೆಗೋಡೆ ಸೇರಿಸಬೇಕು. ನದಿಯಲ್ಲಿ ಬರುವ ಮಹಾಪ್ರವಾಹದ ನೀರು ಅಣೆಕಟ್ಟಿನ ನೆತ್ತಿ ಮತ್ತು ಬೆನ್ನಿನ ಮೇಲೆ ನೈಸರ್ಗಿಕವಾಗಿ ಉರುಳುವ ಹಾಗೆ ಎತ್ತರವಾದ ಅಣೆಕಟ್ಟುಗಳ ಮೇಲುಭಾಗದ ಆಕಾರವನ್ನು ಪ್ರಯೋಗಶಾಲೆಗಳಲ್ಲಿ ನಿರ್ಧರಿಸುತ್ತಾರೆ. ನೀರು ಬಹಳ ಎತ್ತರದಿಂದ ಉರುಳುವ ಕಡೆ ನದಿಯ ತಳಕ್ಕೆ ರಕ್ಷಣೆಯನ್ನು ನಿಂತ ಅಲೆ ಅಥವಾ ನಿಂತನೀರಿನ ಕೊಳೆಗಳ ಮೂಲಕ ಒದಗಿಸುತ್ತಾರೆ.

**5. ಪ್ರಬಲಿತ ಕಾಂಕ್ರೀಟಿನ ಹಲಗೆಯ ಪೆಟ್ಟಿಗೆಯ ಕಟ್ಟೆಗಳು:** ಈಚೆಗೆ ಇಂಥ ಕಟ್ಟೆಗಳನ್ನು ಅಮೆರಿಕದಲ್ಲಿ ಕಟ್ಟುತ್ತಿದ್ದಾರೆ. ಹಾಗೆಯೇ ಮರದಿಂದಲೂ ಉಕ್ಕಿನಿಂದಲೂ ಕಟ್ಟೆಗಳು ನಿರ್ಮಾಣವಾಗುತ್ತಿವೆ.

**6. ಕಮಾನಿನ ಕಟ್ಟೆಗಳು:** ಸೇತುವೆಯ ಮೇಲಿನ ಇಟ್ಟಿಗೆಯ ಇಲ್ಲವೆ ಕಲ್ಲಿನ ಕಮಾನು ಮೇಲೆ ಬರುವ ತೂಕವನ್ನು ಕಂಬಗಳ ಮೂಲಕ ತಳಪಾಯಕ್ಕೆ ಸಾಗಿಸುತ್ತದೆ. ಈ ಸೇತುವೆಯನ್ನು ಒಂದು ಸಮಕೋನದಷ್ಟು ತಿರುಗಿಸಿ ಕಮಾನಿನ ಹೊರಭಾಗವನ್ನು (ಎಕ್ಸ್‌ಟ್ರೇಡಾಸ್) ಜಲಾಶಯದ ಕಡೆಗೆ ಇಟ್ಟರೆ ಕಮಾನಿನ ಕಟ್ಟೆಯ ಚಿತ್ರ ಬರುತ್ತದೆ. ಕಲ್ಲುಗಾರೆಯ ತೂಕಕ್ಕೆ ಬದಲಾಗಿ ಕಮಾನಿನ ಮೇಲೆ ಬರುವ ನೀರಿನ ಮಟ್ಟವಾದ ನೂಕು ಇರುತ್ತದೆ. ಇದು ಎರಡು ಕೊನೆಗಳಲ್ಲಿಯೂ ನೆಲಕ್ಕೆ ಸಾಗುತ್ತದೆ. ಅಗಲ ಚಿಕ್ಕದಾಗಿರುವ ಕಡೆ ಕಂಬಗಳ ಕೊನೆಗಳಲ್ಲಿ ಗಟ್ಟಿಯಾದ ಬಂಡೆಯಿದ್ದರೆ ಮಾತ್ರ ಈ ನಮೂನೆಯನ್ನು ಬಳಸಬಹುದು. ಕಮಾನಿನ ಕಟ್ಟೆ ತೂಕದ ಕಟ್ಟೆಯಷ್ಟು ತೂಕವಾಗಿರಬೇಕಾಗಿಲ್ಲ. ಇಟಲಿಯಲ್ಲಿರುವ ಒಂದು ಕಾಂಕ್ರೀಟಿನ ಕಮಾನಿನ ಕಟ್ಟೆಯ ಎತ್ತರ 449' ಗಳಾದರೆ ಅದರ ತಳದ ಅಗಲ 51'.



ನಾಗಾರ್ಜುನಸಾಗರ ಕಟ್ಟೆ

ಹೊಳೆಯ ದಡಗಳಿಗೆ ನಡುವೆ ಒಂದೇ ಕಮಾನಿದ್ದರೆ ಅದು ಮೂರು ವಿಧಗಳಲ್ಲಿ ಕಟ್ಟೆಯ ನೀರಿನ ಒತ್ತಡವನ್ನು ತಡೆಯುತ್ತದೆ: (i) ಅದರ ತೂಕ, (ii) ಮಟ್ಟವಾದ ಕಮಾನಿನ ಬಲ, (iii) ಮಟ್ಟವಾದ ಭಾಗದ ಚಾಚುತೊಲೆಯ (ಕ್ಯಾಂಟಿಲಿವರ್) ನಿರೋಧ. ಕಮಾನಿನ ಸೇತುವೆ ಮೇಲೆ ಬಿದ್ದ ತೂಕವನ್ನು ತಡೆಯುವಂತೆಯೇ ಕಮಾನಿನ ಕಟ್ಟೆಯೂ ತಡೆಯುತ್ತದೆ. ಸೇತುವೆಯನ್ನು ಹೊಳೆಯ ಕಡೆಗೆ ಒಂದು ಸಮಕೋನದಷ್ಟು ತಿರುಗಿಸಿ ಇಟ್ಟರೆ ಕಟ್ಟೆಯ ಚಿತ್ರ ಬರುತ್ತದೆ. ಸೇತುವೆಯ ಸಂವಿಧಾನದಲ್ಲಿ ಕಮಾನಿನ ಮತ್ತು ಗುರುತ್ವದ ತತ್ತ್ವಗಳನ್ನು ಬಳಸಿದರೆ ಖರ್ಚು ಕಡಿಮೆಯಾಗುವುದು. ಆದರೆ ಈ ತತ್ತ್ವವನ್ನು ಎಲ್ಲ ಕಡೆಗಳಲ್ಲಿಯೂ ಉಪಯೋಗಿಸಲಾಗುವುದಿಲ್ಲ. ನದಿಯ ಪಾತ್ರ ಕಿರಿದಾಗಿದ್ದು ಪಕ್ಕಗಳಲ್ಲಿ ಗಟ್ಟಿಯಾದ ಬಂಡೆಯ ದಡಗಳಿದ್ದರೆ ಅನುಕೂಲ. ಸಾಮಾನ್ಯವಾಗಿ ನದಿಯ ಪಾತ್ರಕ್ಕೆ ಅಡ್ಡಲಾಗಿ ತೆಳುವಾದ ಬಾಗಿದ ಕಾಂಕ್ರೀಟಿನ ಗೋಡೆಯನ್ನು ಕಟ್ಟಿ ಅದರ ಮೇಲೆ ಬೀಳುವ ನೀರಿನ ಒತ್ತಡವನ್ನು ಕಮಾನಿನ ಮೂಲಕ ಇಲ್ಲಿನ ದಡಗಳಿಗೆ ವರ್ಗಾಯಿಸುತ್ತಾರೆ. ಈ ಗೋಡೆ ತಳದಲ್ಲಿ ಬಂಡೆಗೆ ಕಚ್ಚಿಕೊಂಡಂತಿರುವುದರಿಂದ ಚಾಚುತೊಲೆಯ ರೀತಿಯಲ್ಲಿ ತೂಕವನ್ನು ಹೊರುತ್ತದೆ. ಆದ್ದರಿಂದ ಸಂವಿಧಾನ ತೊಡಕಾಗುತ್ತದೆ. ಕಮಾನಿನ ಕಟ್ಟೆಗಳ ಮೇಲೆ ಗರಿಷ್ಠ ಒತ್ತಡ 16 ಟನ್ನುಗಳವರೆಗೂ ಹೋಗಬಹುದು. ನೇರವಾದ ಕಣಿವೆಗಳಲ್ಲಿ ಕಮಾನಿನ ಕಟ್ಟೆಯ ಉಪಯೋಗ ಹೆಚ್ಚು. ಕಮಾನಿನ ತ್ರಿಜ್ಯ ಹೆಚ್ಚಾದರೆ ಈ ನಮೂನೆಯಲ್ಲಿ ಅನುಕೂಲ ಕಡಿಮೆ. ಆಗ ನೇರವಾದ ಕಟ್ಟೆಗೂ ಕಮಾನಿನ ಕಟ್ಟೆಗೂ ತಗಲುವ ಖರ್ಚಿನಲ್ಲಿ

ವಾಣಿವಿಲಾಸಸಾಗರ ಜಲಾಶಯ

ಹೆಚ್ಚು ವ್ಯತ್ಯಾಸವಿರುವುದಿಲ್ಲ. ಆದರೆ ಸನ್ನಿವೇಶ ಅನುಕೂಲವಾಗಿರುವ ಕಡೆ ಕಮಾನಿನ ಕಟ್ಟೆಗೆ ಖರ್ಚು ಇತರ ಎಲ್ಲ ಕಮಾನುಗಳಿಗಿಂತಲೂ ಕಡಿಮೆಯಾಗುತ್ತದೆ. ಕಮಾನಿನ ನಡುವಿನ ಕೋನವನ್ನು $135.5^0$ ಗಳಲ್ಲಿಯೂ ಅದರ ತ್ರಿಜ್ಯವನ್ನು ಕಮರಿಯ ಆಳದ 0.6 ರಷ್ಟೂ ಇಟ್ಟರೆ ಬಲ ಮತ್ತು ಮಿತವ್ಯಯಗಳು ಒಟ್ಟಿಗೆ ಸಾಧಿತವಾಗುತ್ತದೆ. ಕಮರಿ V–ಆಕಾರವಾಗಿರುವುದರಿಂದ ಕಟ್ಟೆಯ ಮೇಲುಭಾಗ ತಳಕ್ಕಿಂತ ಬಹಳ ಅಗಲವಾಗಿರುತ್ತದೆ. ಎಲ್ಲ ಮಟ್ಟದ ವರಸೆಗಳಿಗೂ ಒಂದೇ ತ್ರಿಜ್ಯವನ್ನಿಟ್ಟರೆ ಕೆಳಗಡೆಯ ಕಮಾನು ಬಹಳ ಚಪ್ಪಟೆ ಆಗುತ್ತದೆ. ಅದಕ್ಕಾಗಿ ಎಲ್ಲ ವರಸೆಗಳಿಗೂ ಒಂದೇ ಕೋನವನ್ನಿಟ್ಟು ವಿನ್ಯಾಸ ಮಾಡುತ್ತಾರೆ. ಆದರೆ ಇದರಿಂದ ಕಟ್ಟಡ ಕೊಂಚ ವಕ್ರವಾಗುತ್ತದೆ. ಅದಕ್ಕಾಗಿ ಕೆಲವರು ಒಂದೇ ತ್ರಿಜ್ಯಕ್ಕೂ ಒಂದೇ ಕೋನಕ್ಕೂ ಮಧ್ಯವರ್ತಿಯಾದ ಆಕೃತಿಯನ್ನು ಕೊಡುತ್ತಾರೆ. ಕಮಾನಿನ ಕಟ್ಟೆಯಲ್ಲಿ ಅದೇ ಕೆಲಸವನ್ನು ನಿರ್ವಹಿಸುವ ಗುರುತ್ವದ ಕಟ್ಟೆಗಿಂತ ನೂರಕ್ಕೆ 30–35 ರಷ್ಟು ಕಡಿಮೆ ಕಲ್ಲುಗಾರೆ ಅಥವಾ ಕಾಂಕ್ರೀಟ್ ಇರುತ್ತದೆ. ಕಮಾನುಗಳನ್ನು ಕಟ್ಟುವುದಕ್ಕೇನೋ ಹೆಚ್ಚು ಖರ್ಚು ತಗಲಿದರೂ ಒಟ್ಟಿನಲ್ಲಿ ಉಳಿತಾಯವಾಗುತ್ತದೆ.

ಫ್ರಾನ್ಸಿನಲ್ಲಿ ವಿದ್ಯುದುತ್ಪಾದನೆಗಾಗಿ ಡಾರ್ಡನ್ ನದಿಯ ಮೇಲೆ ಎರಡು ಆಧುನಿಕ ಕಮಾನಿನ ಕಟ್ಟೆಗಳನ್ನು ಕಟ್ಟಿದ್ದಾರೆ. ಇವುಗಳಲ್ಲಿ 1946ರಲ್ಲಿ ಮುಗಿದ ಮೇಲೆ ಕಟ್ಟೆಯ ಎತ್ತರ 88.57 ಮೀ ಮೇಲುಗಡೆ ಕಟ್ಟೆಯ ಉದ್ದ 74.32 ಮೀ ಕಟ್ಟೆಯ ಅಂಗವಾಗಿ ಒಂದು ವಿದ್ಯುತ್ಕೇಂದ್ರವನ್ನು ಕಟ್ಟಿದ್ದಾರೆ. ಅದರಲ್ಲಿ ಒಂದು ವಿಶೇಷವಿದೆ. ಕಟ್ಟೆಯ ಮೇಲಿನಿಂದ ಉರುಳುವ ಹೊಳೆಯ ಪ್ರವಾಹದ ನೀರನ್ನು ವಿದ್ಯುತ್ಕೇಂದ್ರದ ಮಾಡಿನ ಮೇಲುಗಡೆ ಎರಡು ವಕ್ರವಾದ ಕೋಡಿಗಳ ಮೂಲಕ ಕೆಳಗಡೆ ಮತ್ತೆ ಹೊಳೆಗೆ ಹಾಯಿಸಿದ್ದಾರೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕೊಲೆರಾಡೊ ನದಿಗೆ ಅಡ್ಡಲಾಗಿ ಕಟ್ಟಿರುವ ಗುರುತ್ವದ ಕಮಾನಿನ ಹೂವರ್ ಕಟ್ಟೆ ಆ ಕಾಲದಲ್ಲಿ ಪ್ರಪಂಚದಲ್ಲಿಯೇ ಅತ್ಯಂತ ಎತ್ತರವಾದ ಕಟ್ಟೆಯಾಗಿತ್ತು. ಇದರ ಎತ್ತರ 220.22 ಮೀ ಆಳವಾದ ಭಾಗದಲ್ಲಿ ಅಗಲ 202.2ಮೀ ಈ ಕಾಂಕ್ರೀಟಿನ ಕಟ್ಟೆಯಲ್ಲಿ ಅಲ್ಪೋಷ್ಣ ಸಿಮೆಂಟನ್ನು ಉಪಯೋಗಿಸಿದ್ದಾರೆ. ಏಕೆಂದರೆ ಸಿಮೆಂಟ್ ಗಟ್ಟಿಯಾಗುವಾಗ ಉತ್ಪತ್ತಿಯಾಗುವ ಶಾಖ ವಿಶೇಷವಾಗಿರುತ್ತದೆ. ಕಟ್ಟೆಯನ್ನು ಕಟ್ಟುವಾಗ ಹೊಳೆಯ ನೀರನ್ನು 15.17 ಮೀ ವ್ಯಾಸದ ನಾಲ್ಕು ಸುರಂಗಗಳಲ್ಲಿ ಹೊರಗೆ ಬಿಟ್ಟಿದ್ದರು. ಕೆಲಸ ಮುಗಿದ ಮೇಲೆ ಇವು ಕಟ್ಟೆ ತುಂಬಿದಾಗ ಕೋಡಿಯ ನೀರನ್ನು ಆಚೆಗೆ ಸಾಗಿಸುವಂತೆ ಮಾಡಿದ್ದಾರೆ. ಕಟ್ಟೆಯಲ್ಲಿ 3.28 ಮಿಲಿಯನ್ ಸಲೆ ಅಡಿ ಸಿಮೆಂಟ್ ಕಾಂಕ್ರೀಟನ್ನು ಉಪಯೋಗಿಸಿದ್ದಾರೆ. ಕಟ್ಟೆಯ ಹಿಂದುಗಡೆ ಇರುವ ಮೀಡ್ ಸರೋವರದಲ್ಲಿ ಒಂದೂಕಾಲು ಲಕ್ಷ ಕೋಟಿ ಸಲೆ ಮೀ ನೀರು ಹಿಡಿಯುತ್ತದೆ. ಇದಕ್ಕೆ ತಗಲಿದ ಖರ್ಚು 520 ಲಕ್ಷ ಡಾಲರ್. ಕಟ್ಟೆಯ ನೀರಿನಿಂದ 15 ಲಕ್ಷ ಅಶ್ವಸಾಮರ್ಥ್ಯದ ವಿದ್ಯುತ್ತು ಉತ್ಪತ್ತಿಯಾಗುತ್ತದೆ. 20 ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ನದಿಯಲ್ಲಿ ಕೆಳಗಡೆ ಪ್ರವಾಹಗಳ ಹಾವಳಿ ನಿಂತಿದೆ. ಜಲಯಾನಕ್ಕೆ ಅನುಕೂಲತೆಗಳು ಹೆಚ್ಚಾಗಿವೆ. ಪ್ರವಾಸಿಗಳಿಗೆ ಈ ಜಲಾಶಯ ಶ್ರೇಷ್ಠವಾದ ವಿಹಾರ ಕ್ಷೇತ್ರವಾಗಿದೆ.

**ಕಟ್ಟೆಯ ವಿನ್ಯಾಸ, ನಿರ್ಮಾಣ:** ಮಣ್ಣಿನ ಏರಿಯಿಂದ ಹಿಡಿದು ಆಧುನಿಕ ಸಂವಿಧಾನಗಳ ವರೆಗೆ ಎಲ್ಲ ಕಟ್ಟೆಗಳಲ್ಲಿಯೂ (i) ಹೊಳೆಯಲ್ಲಿ ಬಂದ ಪ್ರವಾಹವನ್ನು ಆಚೆಗೆ ಸಾಗಿಸಲು ಕೋಡಿ, (ii) ನೀರಾವರಿಗಾಗಿ ತೂಬು–ಇವು ಇರಲೇಬೇಕು. ಆದರೆ ಅವುಗಳ ವಿನ್ಯಾಸ ಬದಲಾಗುತ್ತದೆ. ದೊಡ್ಡ ಕಲ್ಲುಗಾರೆಯ ಕಟ್ಟೆಗಳಲ್ಲಿ ಮಳೆಗಾಲದಲ್ಲಿ ಬರುವ ಗೋಡುಮಣ್ಣನ್ನು (ಸಿಲ್ಟ್) ಸಾಗಿಸಲು ಅಡಿ ಬಚ್ಚಲುಗಳು ಹೊಳೆಯ ತಳಮಟ್ಟದ ಮೇಲೆ ಸು. 3.03 ಮೀಗಳ ಎತ್ತರದಲ್ಲಿ ಬೇಕಾಗುತ್ತವೆ. ಅವನ್ನೆಲ್ಲ ಕಟ್ಟೆಯಲ್ಲಿ ಅಳವಡಿಸಬೇಕು.

**1 ಕೋಡಿ:** ಇದರ ಸಂವಿಧಾನದಲ್ಲಿ ವಿಶೇಷ ವೈವಿಧ್ಯವಿದೆ. ಕೆರೆಗಳ ದಡದಲ್ಲಿಯೋ ಎರಡು ದಡಗಳಲ್ಲಿಯೋ ತಳಪಾಯದಲ್ಲಿ ಕಲ್ಲು ಇರುವ ತುಂಬು ನೀರಿನ ಮಟ್ಟದಲ್ಲಿ ಕಲ್ಲುಗಾರೆಯ ಕೋಡಿಯ ಗೋಡೆಯನ್ನು ಕಟ್ಟಿ ಅದರ ಮೇಲೆ ಹೆಚ್ಚಿನ ನೀರನ್ನು ಬಿಡುತ್ತಾರೆ. ನೀರು ಕೆಳಗೆ ಬಿದ್ದಾಗ ಕೋಡಿಯ ಹಳ್ಳ ಕೊರೆಯದ ಹಾಗೆ ಇಳಿಜಾರಾದ ಕಲ್ಲಿನ ನೆಲಹಾಸು ಅಥವಾ ನಿಂತ ನೀರಿನ ಕೊಳವನ್ನು ಕಟ್ಟುತ್ತಾರೆ. ಪ್ರವಾಹದ ನೀರು ನದಿಗೆ ಅಡ್ಡಲಾಗಿ ಕಟ್ಟಿದ ಅಣೆಕಟ್ಟಿನ ಮೇಲೆ ಉರುಳುತ್ತದೆ. ಆದರೆ ಕಟ್ಟೆಗಳ ಕೋಡಿಗಳ ಸಂವಿಧಾನದಲ್ಲಿ ಹಲವು ಬಗೆಗಳಿವೆ. ಒಂದರಲ್ಲಿ ಕಟ್ಟೆಯ ಒಂದು ಭಾಗದ ಮೇಲೆ ಅಣೆಕಟ್ಟಿನ ಮೇಲೆ ಉರುಳಿದ ಹಾಗೆ ಪ್ರವಾಹ ಉರುಳಿ ಕೆಳಗೆ ಹೊಳೆಯನ್ನು ಸೇರಿಕೊಳ್ಳುತ್ತದೆ. ಇನ್ನೊಂದರಲ್ಲಿ ನಡುಹೊಳೆಯಲ್ಲಿ ಕಟ್ಟೆಯ ಒಡಲಿನಲ್ಲಿ ಹಲವು ಕಿರಿದಾದ ಎತ್ತರವಾದ ಕಂಡಿಗಳನಿಟ್ಟು ಅವುಗಳೊಳಕ್ಕೆ ಬರುವ ನೀರನ್ನು ಸ್ಟೋನಿ ನಮೂನೆ ಮೊದಲಾದ ಬಾಗಿಲುಗಳ ಮೂಲಕ ನಿಯಂತ್ರಿಸುತ್ತಾರೆ. ಜೊತೆಗೆ ಕೃಷ್ಣರಾಜಸಾಗರದಲ್ಲಿರುವಂತೆ ಕೆಲವು ಸ್ವಯಂಚಾಲಿತ ಬಾಗಿಲುಗಳನ್ನೂ ಇಡಬಹುದು. ಕೆಲವು ಕಡೆ ತೆರೆದ ಕೋಡಿಗಳೂ ಇರುತ್ತವೆ. ತುಮಕೂರು ಜಿಲ್ಲೆಯ ಮಾರ್ಕೋನಹಳ್ಳಿ ಜಲಾಶಯದಲ್ಲಿ ಎರಡು ಗುಮ್ಮಟದ ಆಕಾರದ ಇಳಿಗೊಳವೆಗಳಿವೆ. ಕಟ್ಟೆಯ ಮೇಲಿನಿಂದ ಕೆಳಕ್ಕೆ ನೀರು ಉರುಳುವಾಗ ಕೆಳಗಡೆ ನೆಲವನ್ನು ಕೊರೆಯದಂತೆ ಸೂಕ್ತವಾದ ರಕ್ಷಣೆಯನ್ನು ಒದಗಿಸಬೇಕು. ಕಟ್ಟೆಯ ಹಿಂದುಗಡೆ ಅದರ ಅಗಲದ ಪೂರ್ತಿ ವಿದ್ಯುದ್ಯೋಜನೆಯ ಯಂತ್ರಾಗಾರವಿದ್ದರೆ ಕಟ್ಟೆಯ ಬೆನ್ನಿನಲ್ಲಿ ವಿದ್ಯುದಾಗಾರದ ತಲೆಯ ಮೇಲುಗಡೆ ನೀರನ್ನು ಇಳಿಜಾರಿನಲ್ಲಿ ಬಿಡುತ್ತಾರೆ. ಆಗ ಕೋಡಿಯ ನೀರು ಕಟ್ಟಡಕ್ಕೆ ಸಾಕಷ್ಟು ಕೆಳಗೆ ನದಿಯನ್ನು ಸೇರುತ್ತದೆ; ಕೋಡಿಯ ನೀರನ್ನು ಆಚೆಗೆ ಸಾಗಿರುವ ಇತರ ಕ್ರಮಗಳಲ್ಲಿ ಪಕ್ಕದಲ್ಲಿ ಬಳಸಿರುವ ಕೋಡಿ (ಸ್ಪಿಲ್ ವೇ ರೌಂಡ್ ದಿ ಡ್ಯಾಮ್) ಮತ್ತು ಪಕ್ಕದ ಬಂಡೆಯಲ್ಲಿ ಕೊರೆದ ಸುರಂಗ ಇವನ್ನು ಹೆಸರಿಸಬಹುದು. ಭಾರತದಲ್ಲಿ ಹೊಳೆಯ ತುಂಬು ಮಟ್ಟದಲ್ಲಿ ಕಟ್ಟೆಯ ತಲೆಗೆ ಓಗೀ ಆಕಾರವನ್ನು ಕೊಟ್ಟು ಹಿಂದುಗಡೆ ನೀರು ಹೊಳೆಗೆ ಉರುಳುವ ಹಾಗೆ ಮಾಡುವುದು ರೂಢಿಯಲ್ಲಿದೆ. ಈ ಕ್ರಮದಲ್ಲಿ ಅಷ್ಟು ಎತ್ತರದಿಂದ ಬೀಳುವ ನೀರು ನದಿಯ ತಳವನ್ನು ಕೊರೆಯದ ಹಾಗೆ ವಿಶೇಷ ರಕ್ಷಣೆಯನ್ನು ಪ್ರತಿಯೊಂದು ಸಂದರ್ಭಕ್ಕೂ ಹೊಂದುವಂತೆ ಪ್ರಯೋಗಶಾಲೆಯಲ್ಲಿ ಸಂವಿಧಾನ ಮಾಡಬೇಕಾಗುತ್ತದೆ. ದಕ್ಷಿಣ ಭಾರತದಲ್ಲಿ ಪೂನಾ ಮತ್ತು ಕೃಷ್ಣರಾಜಸಾಗರದಲ್ಲಿ ಇಂಥ ಕೇಂದ್ರಗಳಿವೆ. ಕೋಡಿಯ ಮೇಲೆ ಪ್ರವಾಹವನ್ನು ನಿಯಂತ್ರಿಸಲು ಅಗಲವಾದ ಕಣ್ಣಿನ ಅನೇಕ ಬಗೆಯ ಕವಾಟಗಳು ಬಳಕೆಯಲ್ಲಿವೆ. (i) ಸಮತೂಕವಾದ ಆರೀಯ ಬಾಗಿಲುಗಳು (ರೇಡಿಯಲ್ ಗೇಟ್ಸ್) ವಿದ್ಯುಚ್ಛಕ್ತಿಯಿಂದ ಚಲಿಸುತ್ತವೆ. (ii) ಮದ್ದಲೆಯ ಆಕಾರದ ಬಾಗಿಲುಗಳನ್ನು ಮಂಜು, ಕಸ ಮುಂತಾದವನ್ನು ಮೇಲಿನಿಂದ ಆಚೆಗೆ ಸಾಗಿಸಲು ಬಳಸುತ್ತಾರೆ. ಇವಕ್ಕೆ ಬೆಲೆ ಹೆಚ್ಚು. ಆದರೆ ಇವು ಸರೋವರದ ನೀರಿನ ಒತ್ತಡದಿಂದ ಚಲಿಸುತ್ತವೆ. ವಿದ್ಯುತ್ತು ಬೇಕಾಗಿಲ್ಲ. (iii) ಪ್ರಬಲಿತವಾದ ಚಕ್ರವಿರುವ ಇಲ್ಲವೆ ಸಿಲಿಂಡರಿನ ನಮೂನೆಯ ಮೇಲಕ್ಕೆ ಎತ್ತುವ ಬಾಗಿಲುಗಳನ್ನು ಹೊರಕ್ಕೆ ಹೋಗುವ ನೀರಿನ ನಿಯಂತ್ರಣಕ್ಕಾಗಿ ಉಪಯೋಗಿಸುತ್ತಾರೆ. (iv) ಆರೀಯ ವೃತ್ತಖಂಡದ ಬಾಗಿಲುಗಳು (ಸೆಕ್ಟರ ಗೇಟ್ಸ್) ಅಮೆರಿಕದಲ್ಲಿ ಹೆಚ್ಚಾಗಿ ಬಳಕೆಯಲ್ಲಿವೆ. ಆಳವಾದ ಕಣ್ಣುಗಳಿಗೆ ಹಿಂದೆ ನೋಡಿದ ಸ್ಟೋನೀ ಬಾಗಿಲು ಮತ್ತು ಟೈಂಟರ್ ಬಾಗಿಲುಗಳನ್ನು ಬಳಸಬಹುದು. ಅಮೆರಿಕದಲ್ಲಿ ಮಾರ್ನಿಂಗ್ ಗ್ಲೋರಿ ಎಂದು ಕರೆಯುವ ತೇಲುವ ಉಂಗುರದ ಆಕಾರದ ಬಾಗಿಲನ್ನು ಕೋಡಿಯಿಂದ ಬರುವ ನೀರನ್ನು ನಿಯಂತ್ರಿಸಲು ಉಪಯೋಗಿಸುತ್ತಾರೆ.

**2 ತೂಬುಗಳು (ಸ್ಲೂ):** ಜಲಾಶಯದಿಂದ ನೀರಾವರಿಗಾಗಿ ಬಿಡುವ ನೀರನ್ನು ಇವು ನಿಯಂತ್ರಿಸುತ್ತವೆ. ಹಿಂದಿನ ರಚನೆಗಳಲ್ಲಿ ಏರಿಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ನಿರ್ದಿಷ್ಟವಾದ ಮಟ್ಟದಲ್ಲಿ ಕಲ್ಲುಗಾರೆಯ ಸುರಂಗವನ್ನು ಕಟ್ಟಿ ಮೇಲುಗಡೆ ಚಪ್ಪಡಿಗಳಿಂದಲೋ ಕಮಾನುಗಳಿಂದಲೋ ಮುಚ್ಚುತ್ತಿದ್ದರು. ಈಗ ಭದ್ರಾವತಿಯಲ್ಲಿ ತಯಾರಾದ ತಾಂಡವಾಳದ ಕೊಳಾಯಿಗಳ್ನು ಉಪಯೋಗಿಸುತ್ತಾರೆ. ಇವುಗಳಲ್ಲಿ ಹರಿಯುವ ನೀರನ್ನು ಮುಂದುಗಡೆ ಇರುವ ಕವಾಟದಿಂದ ನಿಯಂತ್ರಣಮಾಡಬೇಕು. ದೊಡ್ಡ ಕಟ್ಟೆಗಳಲ್ಲಿ ಉಕ್ತವಾದ ಮಟ್ಟದಲ್ಲಿ ದೀರ್ಘ ಚತುರಸ್ರಾಕಾರವಾದ ಸುರಂಗವನ್ನು ಮಾಡಿ ಮೇಲುಗಡೆ ಕಲ್ಲಿನ ಕಮಾನುಗಳಿಂದ ಮುಚ್ಚುತ್ತಾರೆ. ಜಲಾಶಯದಿಂದ ನೀರು ಬರಲು ನಾಲೆಯೊಳಕ್ಕೆ ಬೀಳುತ್ತದೆ. ತೂಬುಗಳಲ್ಲಿ ಬರುವ ನೀರನ್ನು ನಿಯಂತ್ರಿಸಲು (i) ಒತ್ತಡದ ಜಾರುವ ಬಾಗಿಲುಗಳು, (ii) ಆರೀಯ ಟೆಂಟರ್ ಬಾಗಿಲುಗಳು, (iii) ಸೂಜಿಯ ಕವಾಟಗಳು, (iv) ಚಿಟ್ಟೆಯ ಆಕಾರದ ಬಾಗಿಲುಗಳು, (v) ಸಿಲಿಂಡರಿನ ಕವಾಟುಗಳು–ಇವನ್ನು ಉಪಯೋಗಿಸುತ್ತಾರೆ.

**3 ಅಡಿಬಚ್ಚಲುಗಳು (ಸ್ಕೋರಿಂಗ್ ಸ್ಲೂಸಸ್):** ಇವನ್ನು ಕೃಷ್ಣರಾಜಸಾಗರದಲ್ಲಿ ಹೊಳೆಯ ತಳದ ಮೇಲೆ 3.64 ಮೀ ಎತ್ತರದಲ್ಲಿ ಇಟ್ಟು ಸ್ಟೋನೀ ನಮೂನೆಯ ಬಾಗಿಲುಗಳಿಂದ ನಿಯಂತ್ರಣ ಮಾಡಿ ಪ್ರವಾಹ ಕಾಲದಲ್ಲಿ ಗೋಡು ತುಂಬಿದ ನೀರನ್ನು ಕೆಳಗೆ ಕಾವೇರಿ ನದಿಗೆ ಸಾಗಿಸುತ್ತಾರೆ.

**4 ಪೆನ್‌ಸ್ಟಾಕ್ ಕೊಳವೆಗಳು:** ವಿದ್ಯುದುತ್ಪಾದನೆಗಾಗಿ ನೀರನ್ನು ಹೊಳೆಯಿಂದ ಸೂಕ್ತವಾದ ಅಳತೆಯ ಮತ್ತು ಸಂಖ್ಯೆಯ ಪೆನ್‌ಸ್ಟಾಕ್ ಕೊಳವೆಗಳಿಂದ ಕಟ್ಟೆಯ ಹಿಂದುಗಡೆ ಇರುವ ವಿದ್ಯುಜ್ಜನಕಗಳಿಗೆ ಒಯ್ಯುತ್ತಾರೆ. ಪಂಜಾಬಿನ ಭಾಕ್ರ ಕಟ್ಟೆಯಲ್ಲಿ ಈ ಪೆನ್‌ಸ್ಟಾಕುಗಳ ವ್ಯಾಸ 4.55ಮೀ ವಿದ್ಯುಜ್ಜನಕಗಳಿಂದ ಹೊರಕ್ಕೆ ಬರುವ ನೀರು ಮತ್ತೆ ಹೊಳೆಯನ್ನು ಸೇರಿ ನೀರಾವರಿಗೆ ಉಪಯೋಗವಾಗುತ್ತವೆ. ಕಟ್ಟೆಗಳನ್ನು ಕಟ್ಟುವ ಜಾಗದ ಸ್ವಭಾವದ ಮೇಲೂ, ಕಟ್ಟಡದ ಸಾಮಗ್ರಿಯ ಮೇಲೂ ಅಡಿಪಾಯದ ಗುಣದ ಮೇಲೂ ಇಂದಿನ ಕಟ್ಟೆಗಳು ಬೇರೆ ಬೇರೆ ತತ್ತ್ವಗಳ ಮೇಲೆ ನಿರ್ಮಾಣವಾಗುತ್ತವೆ. ಹತ್ತಿರದಲ್ಲಿಯೇ ದೊರೆಯುವ ಮಣ್ಣು, ಕಲ್ಲು, ಕಾಂಕ್ರೀಟಿಗೆ ಮರಳು, ಸುಣ್ಣ ಇಲ್ಲವೆ ಸಿಮೆಂಟ್–ಇವನ್ನು ಸಾಗಣೆಯ ಖರ್ಚನ್ನು ಉಳಿಸಿ ಉಪಯೋಗಿಸಿಕೊಂಡು ಅವಕ್ಕೆ ಹೊಂದುವ ಸಂವಿಧಾನವನ್ನು ಮಾಡಬಹುದು. ಕಟ್ಟೆ ಒಳಗಿನಿಂದ ನೀರನ್ನು ಬಿಡದಂತೆ ಪ್ರಬಲಿತವಾಗಿರಬಹುದಾದರೂ ಕೆಳಗಿನಿಂದ ನೀರು ಜಿನುಗಿ ಅಡಿಪಾಯವನ್ನೇ ಕರಗಿಸಬಹುದು. ಈ ನೀರನ್ನು ಅಡಿಪಾಯದ ಮೇಲುಗಡೆ 3.03 ಮೀ ಎತ್ತರದಲ್ಲಿ ಕಟ್ಟೆಯೊಳಗೆ ಉದ್ದಕ್ಕೂ 1.52 ಮೀ ಅಗಲ, 212 ಮೀ ಎತ್ತರದ ಓಣಿಯ ಅಂಚಿನಲ್ಲಿ ಬಿಟ್ಟು ಅಲ್ಲಲ್ಲಿ ಒಟ್ಟುಗೂಡಿಸಿ ಪಂಪುಗಳಿಂದ ಎತ್ತಿ ಆಚೆಗೆ ಹಾಕಬಹುದು ಅಥವಾ ಮೇಲಿನಿಂದ ಧುಮುಕಿ ಕೆಳಭಾಗದಲ್ಲಿ ಆಸರೆಯಾಗಿರುವ ಮಣ್ಣನ್ನು ಆಚೆ ಸಾಗಿಸಬಹುದು. ಇಲ್ಲವೆ ದಡಗಳಲ್ಲಿ ಬೇರೆ ಒಂದು ದಾರಿಯನ್ನೇ ಮಾಡಿಕೊಂಡು ಬಿಡಬಹುದು. ಸಂವಿಧಾನದಲ್ಲಿ ಈ ವಿಚಾರಗಳನ್ನೆಲ್ಲ ಪರಿಶೀಲಿಸಬೇಕಾಗುತ್ತದೆ.

**ಪ್ರಪಂಚದ ಕೆಲವು ಪ್ರಮುಖ ಕಟ್ಟೆಗಳು**

ಅತಿ ಉದ್ದದ ಕಟ್ಟೆ : ಹೀರಾಕುಡ್ (ಭಾರತ) 26 ಕಿಮೀ

ಅತಿ ಎತ್ತರದ ಮೊದಲ ಹತ್ತು ಕಟ್ಟೆಗಳು (ಎತ್ತರ ಮೀಗಳಲ್ಲಿವೆ)

| | | |
|---|---|---|
| ನ್ಯೂರೆಕ್ (ರಷ್ಯ) | .... | 308.49 |
| ಇಂಗೌರಿ (ರಷ್ಯ) | .... | 299.69 |
| ಗ್ರಾಂಡ್ ಡಿಕ್ಸೆನ್ಸ್ (ಸ್ವಿಟ್ಜರ್‌ಲೆಂಡ್) | .... | 282.71 |
| ವೈಯಂಟ್ (ಇಟಲಿ) | .... | 260.60 |
| ಮೈಕ (ಕೊಲಂಬಿಯ) | .... | 242.67 |
| ಮೌವೊಸಿನ್ (ಸ್ವಿಟ್ಜರ್‌ಲೆಂಡ್) | .... | 235.99 |
| ಸಯಾನ್ಸ್ಕ (ರಷ್ಯ) | .... | 234.78 |
| ಚಿರ್ಕೆ (ರಷ್ಯ) | .... | 231.75 |
| ಆರೋವಿಲ್ (ಅಮೆರಿಕ) | .... | 230.53 |
| ಕಾಂಟ್ರ (ಸ್ವಿಟ್ಜರ್‌ಲೆಂಡ್) | .... | 228.71 |

**ಅತಿ ದೊಡ್ಡ (ಘನಗಾತ್ರ) ಮೊದಲ ಹತ್ತು ಕಟ್ಟೆಗಳು (ಘನಗಾತ್ರ ಘನಮೀಟರುಗಳಲ್ಲಿವೆ)**

| | | |
|---|---|---|
| ತಾರಾಬೆಲ್ಲ (ಪಾಕಿಸ್ತಾನ್) | .... | 14,46,90,000 |
| ಫೋರ್ಟ್ ಪೆಕ್ (ಅಮೆರಿಕ) | .... | 11,43,21,480 |
| ಮಂಗ್ಲಾ (ಪಾಕಿಸ್ತಾನ) | .... | 9,85,53,000 |
| ಒವಾಹೆ (ಅಮೆರಿಕ) | .... | 8,37,20,000 |
| ದಕ್ಷಿಣ ಸಸ್ಕಾಚಿವಾನ್ (ಕೆನಡ) | .... | 7,85,33,000 |
| ಆರೋವಿಲ್ (ಅಮೆರಿಕ) | .... | 7,30,73,000 |
| ಸಾನ್ ಲೂಯಿಸ್ (ಅಮೆರಿಕ) | .... | 7,09,80,000 |
| ನ್ಯೂರೆಕ್ (ರಷ್ಯ) | .... | 6,90,69,000 |
| ನಾಗಾರ್ಜುನಸಾಗರ (ಭಾರತ) | .... | 6,69,76,000 |
| ಗ್ಯಾರಿಸನ್ (ಅಮೆರಿಕ) | .... | 6,05,15,000 |

**ಭಾರತದ ಕೆಲವು ಪ್ರಮುಖ ಕಟ್ಟೆಗಳು (ಎತ್ತರ ಮೀಗಳಲ್ಲಿವೆ)**

| | | |
|---|---|---|
| ಭಾಕ್ರ (ಪಂಜಾಬ್) | .... | 224.47 |
| ನಾಗಾರ್ಜುನಸಾಗರ (ಆಂಧ್ರ) | .... | 100.1 |
| ರೈಹ್ಯಾಂಡ್ (ಬಿಹಾರ್) | .... | 82.203 |
| ಗಾಂಧಿ ಸಾಗರ (ಮಧ್ಯಪ್ರದೇಶ) | .... | 64.91 |
| ಮೆಟ್ಟೂರು (ತಮಿಳುನಾಡು) | .... | 64.91 |
| ಕೊಯ್ನ (ಮಹಾರಾಷ್ಟ್ರ) | .... | 62.79 |
| ಕೆಳಗಿನ ಭವಾನಿ (ತಮಿಳುನಾಡು) | .... | 61.88 |
| ಹೀರಾಕುಡ್ (ಒರಿಸ್ಸ) | .... | 60.66 |
| ಕೋನಾರ್ (ಬಿಹಾರ್) | .... | 59.45 |
| ಭದ್ರಾ (ಕರ್ನಾಟಕ) | .... | 58.84 |
| ಕಪಿಲಾ (ಕರ್ನಾಟಕ) | .... | 57.63 |
| ಪೆರಿಯಾರ್ (ತಮಿಳುನಾಡು) | .... | 53.38 |
| ಘಟಪ್ರಭಾ (ಕರ್ನಾಟಕ) | .... | 50.96 |
| ತುಂಗಭದ್ರಾ (ಕರ್ನಾಟಕ) | .... | 49.14 |
| ಮೈಥಾನ್ (ಬಿಹಾರ್) | .... | 49.14 |
| ನಿಜಾಮಸಾಗರ (ಆಂಧ್ರ) | .... | 47.62 |
| ಮಯೂರಾಕ್ಷಿ (ಪಶ್ಚಿಮ ಬಂಗಾಳ) | .... | 47.02 |
| ವಾಣೀವಿಲಾಸಸಾಗರ (ಕರ್ನಾಟಕ) | .... | 43.07 |
| ಕೃಷ್ಣರಾಜಸಾಗರ (ಕರ್ನಾಟಕ) | .... | 40.64 |
| ಪಂಚೆಟ್ ಗುಡ್ಡ (ಬಿಹಾರ) | .... | 40.64 |
| ಮಲಪ್ರಭಾ (ಕರ್ನಾಟಕ) | .... | 38.52 |
| ರಾಣಾಪ್ರತಾಪಸಾಗರ (ರಾಜಾಸ್ಥಾನ) | .... | 37.31 |
| ನುಗು (ಕರ್ನಾಟಕ) | .... | 34.58 |
| ತಿಲೈಯ (ಬಿಹಾರ್) | .... | 33.97 |

(ಎಚ್.ಸಿ.ಕೆ., ಎಂ.ಜಿ.ಎಸ್)

**ಕಠಿಣ ಚರ್ಮಿಗಳು :** ಅಕಶೇರುಕಗಳ ಗುಂಪಿನ ಸಂಧಿಪದಿಗಳ ವಂಶದ ಒಂದು ವರ್ಗ (ಕ್ರಸ್ಟೇಸಿಯ). ಏಡಿ, ನಳ್ಳಿ, ಸೀಗಡಿ, ಮುಂತಾದ ಪ್ರಾಣಿಗಳು ಈ ವರ್ಗಕ್ಕೆ ಸೇರುತ್ತವೆ. ಇವು ಹೆಚ್ಚಾಗಿ ಜಲವಾಸಿಗಳು. ಇವುಗಳ ದೇಹ ಇತರ ಸಂಧಿಪದಿಗಳಂತೆ ಶಿರ, ಎದೆ ಮತ್ತು ಉದರ ಎಂದು ಮೂರು ಭಾಗಗಳಾಗಿದ್ದರೂ, ಶಿರ ಮತ್ತು ಎದೆಯ ಭಾಗಗಳು ಬೆಳವಣಿಗೆಯಲ್ಲಿ ಕೂಡಿಕೊಂಡು ಒಂದೇ ಭಾಗವಾಗಿ ಕಾಣುತ್ತದೆ. ಇದನ್ನು ಸೆಫಲೊಥೊರ್ಯಾಕ್ಸ್ (ಶಿರೋವಕ್ಷ) ಎಂದು ಕರೆಯುತ್ತಾರೆ. ಪ್ರತಿ ಖಂಡಕ್ಕೂ ಊರ್ಧ್ವ ಭಾಗದಲ್ಲಿ ಇರಬೇಕಾದ ಟೆರ್ಗ ಎಂಬ ಬಾಹ್ಯ ಅಸ್ಥಿಪಂಜರದ ಭಾಗಗಳೆಲ್ಲವೂ ಕೂಡಿಕೊಂಡು ಕ್ಯಾರಪೇಸ್ ಎಂಬ ಒಂದು ಕವಚ ನಿರ್ಮಾಣವಾಗಿದೆ. ಇದು ಸೆಫಲೊಥೊರ್ಯಾಕ್ಸ್ ಭಾಗವನ್ನು ರಕ್ಷಿಸುತ್ತದೆ. ಖಂಡಭಾಗಗಳು ಕೂಡಿಕೊಂಡಿದ್ದರೂ ಪ್ರತಿ ಖಂಡದಿಂದ ಬೆಳೆಯುವ ಜೊತೆ ಉಪಾಂಗಗಳು ಬೇರೆಯಾಗಿಯೇ ಉಳಿದಿವೆ. ಈ ವರ್ಗದ ಪ್ರಾಣಿಗಳಲ್ಲಿ ಎರಡು ಜೊತೆ ಕುಡಿಮೀಸೆಗಳಿರುವುದು ವಿಶೇಷವಾದ ಲಕ್ಷಣ.

ಶಿರದ ಭಾಗದಲ್ಲಿ ಸಾಮಾನ್ಯವಾಗಿ ಚೆನ್ನಾಗಿ ರೂಪುಗೊಂಡ ಒಂದು ಜೊತೆ ಸಂಯುಕ್ತಾಕ್ಷಿಗಳಿವೆ. ಇವಕ್ಕೆ ಬೇಕಾದ ಹಾಗೆ ತಿರುಗಿಸಬಹುದಾದ ಒಂದೊಂದು ತೊಟ್ಟು ಇದೆ. ಶಿರದ ಭಾಗ ಐದು ಖಂಡ ಭಾಗಗಳಿಂದ ಕೂಡಿದೆ. ಇವನ್ನು ಪ್ರಬುದ್ಧಾವಸ್ಥೆಯಲ್ಲಿ ಪ್ರತ್ಯೇಕವಾಗಿ ಗುರುತಿಸುವುದು ಸಾಧ್ಯವಾಗದಿದ್ದರೂ ಅವುಗಳಲ್ಲಿರುವ ಐದು ಜೊತೆ ಉಪಾಂಗಗಳಿಂದ ಅವನ್ನು ಗುರುತಿಸಬಹುದು. ಎರಡು ಜೊತೆ ಕುಡಿ ಮೀಸೆಗಳು, ಒಂದು ಜೊತೆ ದವಡೆ, ಎರಡು ಜೊತೆ ದವಡೆ ಪಾದಗಳು ಇವೆ. ಇವಕ್ಕೆ ಕ್ರಮವಾಗಿ ಆಂಟೆನ್ಯೂಲ್, ಆಂಟೆನ, ಮ್ಯಾಂಡಿಬಲ್, ಮ್ಯಾಕ್ಸಿಲುಲೆ ಮತ್ತು ಮ್ಯಾಕ್ಸಿಲ ಎಂದು ಹೆಸರು. ಇವು ಮುಖ್ಯವಾಗಿ ಇಂದ್ರಿಯಾಂಗಗಳು ಮತ್ತು ಆಹಾರವನ್ನು ಅಗಿಯುವ ಅಂಗಗಳು ಆಗಿವೆ.

ಎದೆ ಮತ್ತು ಉದರಗಳನ್ನು ನಿರ್ದಿಷ್ಟವಾಗಿ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಈ ಹೆಸರುಗಳ ಉಪಯೋಗದಲ್ಲಿ ಅಸ್ಪಷ್ಟತೆ ಇದೆ. ಕಾಲುಗಳಿರುವ ಮತ್ತು ಕಾಲುಗಳಿಲ್ಲದ ಭಾಗಗಳನ್ನು ಅಥವಾ ಜನನರಂಧ್ರದ ಮುಂಭಾಗ ಮತ್ತು ಹಿಂಭಾಗಗಳನ್ನು ಸೂಚಿಸಲು ಈ ಹೆಸರುಗಳನ್ನು ಉಪಯೋಗಿಸಿದ್ದಾರೆ. ಆದರೆ ಅಭ್ಯಾಸದ ಅನುಕೂಲಕ್ಕಾಗಿ ಜನನರಂಧ್ರದ ಮುಂದಿರುವ ಭಾಗಗಳು ಎದೆಯ ಭಾಗವೆಂದೂ ಹಿಂದಿರುವುದು ಉದರಭಾಗವೆಂದೂ ಭಾವಿಸಿಕೊಳ್ಳಬಹುದು. ಅಂದರೆ ಜನನರಂಧ್ರವಿರುವ ಖಂಡವೇ ಎದೆಯ ಭಾಗದ ಕೊನೆಯ ಖಂಡವಾಗುತ್ತದೆ. ಪ್ರಭೇದಗಳಿಂದ ಪ್ರಭೇದಗಳಿಗೆ ಈ ಭಾಗದಲ್ಲಿನ ಖಂಡಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ.

ಸೆಫಲೊಥೊರ್ಯಾಕ್ಸಿನ ಊರ್ಧ್ವ ಭಾಗದಲ್ಲಿರುವ ಕ್ಯಾರಪೇಸ್ ಎಂಬ ದಪ್ಪ ಬಾಹ್ಯ ಅಸ್ಥಿಪಂಜರ ಈ ವರ್ಗದ ಪ್ರಾಣಿಗಳ ಪ್ರಮುಖ ಸಾಮಾನ್ಯ ಲಕ್ಷಣ. ಇದು ಊರ್ಧ್ವಭಾಗದ ಚರ್ಮದ ಮಡಿಕೆಯಿಂದ ಉದ್ಭವಿಸುತ್ತದೆ. ಮಾದರಿಯ (ಟಿಪಿಕಲ್) ಅವಸ್ಥೆಯಲ್ಲಿ ತಲೆ ಮತ್ತು ಎದೆಯ ಸ್ವಲ್ಪ ಭಾಗ ಬೆತ್ತಲೆಯಾಗಿರಬಹುದು. ಇನ್ನು ಕೆಲವದರಲ್ಲಿ ಇದು ಸಂಪೂರ್ಣ ನಶಿಸಿಹೋಗಿರುವುದೂ ಉಂಟು. ಅನೊಸ್ಟ್ರೇಕ ಮತ್ತು ಕೋಪಿಪೋಡಗಳಲ್ಲಿ ಬಹುಶಃ ಇಲ್ಲದೆಯೇ ಇರಬಹುದು. ರಚನೆಯಲ್ಲಿ ಚಪ್ಪಟೆ ಹಾಗೂ ಅಗಲವಾದ ಗುರಾಣಿಯಂತಿರಬಹುದು ಅಥವಾ ಆಸ್ಟ್ರಕೋಡದಲ್ಲಿರುವಂತೆ ದ್ವಿಭಾಗಿಯಾಗಿ ಊರ್ಧ್ವಭಾಗದಲ್ಲಿ ಚಿಲಕವೂ (ಹಿಂಜ್) ಇರಬಹುದು; ಸಿರ್ರಿಪೀಡಿಯದಲ್ಲಿ ಇದು ಪೂರ್ಣ ಪ್ರಾಣಿಯನ್ನೇ ಆವರಿಸುವ ಚಿಪ್ಪಾಗಿದೆ. ಇದು ಆವರಿಸಿರುವ ಕೋಣೆಯನ್ನು ಕಿವಿರುಕೋಣೆ, ಮ್ಯಾಂಟಲ್ ಕುಹರ ಮುಂತಾದ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಈ ಭಾಗ ಬೆಳೆಯುತ್ತಿರುವ ಮರಿಗಳಿಗೆ ರಕ್ಷಣೆಯನ್ನು ಒದಗಿಸಬಹುದೆಂದು ಹೇಳುತ್ತಾರೆ. ತಲೆಯ ಭಾಗದ ಟೆರ್ಗಗಳೆಲ್ಲ ಕೂಡಿ ಊರ್ಧ್ವ ಫಲಕವಾಗಿದೆ. ಊರ್ಧ್ವಫಲಕ ಮುಂಭಾಗದಲ್ಲಿ ಮೊನಚಾದ ರಾಸ್ಟ್ರಂ ಆಗಿ ಚಾಚಿಕೊಂಡಿದೆ.

ತಲೆಯ ಹಿಂದಿನ ತುದಿಯ ಊರ್ಧ್ವ ಭಾಗದಲ್ಲಿ ಊರ್ಧ್ವಾಂಗ ಎಂಬ ಒಂದು ರಚನೆ ಇದೆ. ಇದನ್ನು ಕತ್ತಿನ ಗ್ರಂಥಿ ಎಂದೂ ಕರೆಯುತ್ತಾರೆ. ಇದನ್ನು ಕೆಲವು ಕಠಿಣಚರ್ಮಿಗಳು (ಕ್ಲ್ಯಾಡೊಸೀರ ಮತ್ತು ಕಾಂಕೋಸ್ಟ್ರೇಕ) ಆಧಾರಗಳಿಗೆ ಅಂಟಿಕೊಳ್ಳಲು ಉಪಯೋಗಿಸುತ್ತವೆ. ಮಿಕ್ಕ ಪ್ರಾಣಿಗಳಲ್ಲಿ ಇದರ ಕಾರ್ಯ ಏನು ಎಂಬುದು ಇನ್ನೂ ಸರಿಯಾಗಿ ಗೊತ್ತಿಲ್ಲ.

**ಉಪಾಂಗಗಳು:** ಪ್ರತಿಯೊಂದು ಖಂಡದಲ್ಲೂ ಒಂದು ಜೊತೆ ಉಪಾಂಗಗಳಿವೆ. ಇವು ತಾವಿರುವ ಖಂಡ ಭಾಗ ಮತ್ತು ನಿರ್ವಹಿಸುವ ಕಾರ್ಯಗಳನ್ನನುಸರಿಸಿ ಮಾರ್ಪಟ್ಟಿವೆ. ಮೂಲತಃ ಉಪಾಂಗಗಳಲ್ಲಿ ಎರಡು ಕವಲುಗಳಿವೆ. ಆದ್ದರಿಂದ ಇವಕ್ಕೆ ಇಕ್ಕವಲು (ಬೈರೇಮಸ್) ಉಪಾಂಗಗಳೆಂದು ಹೆಸರು. ಒಂದು ಮಾದರಿಯ ಇಕ್ಕವಲು ಉಪಾಂಗದಲ್ಲಿ ಕೆಳಕಂಡ ಭಾಗಗಳಿವೆ: ಬುಡದಲ್ಲಿ ಪ್ರೋಟೊಪೊಡೈಟ್ ಎಂಬ ತೊಟ್ಟಿನಂಥ ರಚನೆಯಿದೆ. ಇದರ ಕೆಳಗೆ ಕಾಕ್ಸ ಮತ್ತು ತುದಿಯಲ್ಲಿ ಬೇಸಿಸ್ ಎಂಬ ಎರಡು ಅಂಗಗಳಿವೆ. ಪೋಡೊಮಿಯರ್ ಎಂಬುದರ ಸಹಾಯದಿಂದ ಉಪಾಂಗ ತನ್ನ ನಿರ್ದಿಷ್ಟ ಖಂಡಕ್ಕೆ ಅಂಟಿಕೊಂಡಿದೆ. ಬೇಸಿಸ್ ತನ್ನ ಬಿಡಿಯಾದ ತುದಿಯಲ್ಲಿ ಎರಡು ಎಲೆಯಂತೆ ಅಗಲವಾದ ಕವಲುಗಳನ್ನು ಹೊಂದಿದೆ. ಈ ಕವಲುಗಳಿಗೆ ಅವು ದೇಹದ ಒಳಭಾಗದ ಕಡೆಗಿವೆಯೋ ಅಥವಾ ಹೊರಭಾಗದ ಕಡೆಗಿವೆಯೋ ಎಂಬುದನ್ನು ಅನುಸರಿಸಿ ಕ್ರಮವಾಗಿ ಎಂಡೊಪೊಡೈಟ್ ಮತ್ತು ಎಕ್ಸೊಪೊಡೈಟ್ ಎಂಬ ಹೆಸರಿವೆ. ಈ ಉಪಾಂಗಗಳು ಎಲೆಯಂತೆ ಅಗಲವಾಗಿದ್ದರೆ ಅವನ್ನು ಫಿಲ್ಲೊಪೋಡಿಯಂ ಎಂದೂ ಉದ್ದವಾಗಿ ಕಡ್ಡಿಕಡ್ಡಿಗಳಂತೆ ಇದ್ದರೆ ಸ್ಟೆನೊಪೋಡಿಯಂ ಎಂದೂ ಕರೆಯುವರು.

ಕಠಿಣಚರ್ಮಿಗಳಲ್ಲಿ ಉಪಾಂಗಗಳ ಆಕಾರ, ರಚನೆ ಮತ್ತು ನಿರ್ವಹಿಸುವ ಕೆಲಸ ಇವುಗಳಲ್ಲಿ ಹೆಚ್ಚಿನ ವೈವಿಧ್ಯತೆ ಇದೆ. ಇದನ್ನು ಅರ್ಥಮಾಡಿಕೊಳ್ಳಲು ಸೀಗಡಿಯ ಉಪಾಂಗಗಳನ್ನು ಉದಾಹರಣೆಯಾಗಿ ಅಭ್ಯಾಸಮಾಡಿದರೆ ಸುಲಭವಾಗಬಹುದು. ಸೀಗಡಿ ಕಡಲು ಮತ್ತು ಸಿಹಿನೀರಿನ ನದಿಗಳಲ್ಲಿ ದೊರಕುತ್ತದೆ. ಇದರ ದೇಹದಲ್ಲಿ ಸೆಫಲೊಥೊರ್ಯಾಕ್ಸ್ ಮತ್ತು ಉದರಭಾಗಗಳಿವೆ. ಸೆಫಲೊಥೊರ್ಯಾಕ್ಸ್, ಶಿರ ಮತ್ತು ಎದೆಯ ಭಾಗಗಳು ಕೂಡಿಕೊಂಡು ಉಂಟಾಗಿದೆ. ಈ ಭಾಗದ ಖಂಡವಿಂಗಡಣೆ ಸುಲಭವಾಗಿ ಕಾಣುವುದಿಲ್ಲ. ಆದರೆ ಉದರಭಾಗದಲ್ಲಿ ಆರು ಖಂಡಗಳನ್ನು ಸುಲಭವಾಗಿ ಗುರುತಿಸಬಹುದು. ಇವು ಬಿಡಿ ಬಿಡಿಯಾಗಿವೆ. ಶಿರದ ಭಾಗದಲ್ಲಿ ಐದು ಜೊತೆ, ಎದೆಯ ಭಾಗದಲ್ಲಿ ಎಂಟು ಜೊತೆ ಮತ್ತು ಉದರ ಭಾಗದಲ್ಲಿ ಆರು ಜೊತೆ, ಒಟ್ಟು 19 ಜೊತೆ ಉಪಾಂಗಗಳಿವೆ. ಉಪಾಂಗಗಳನ್ನು ಖಂಡಗಳಿಗನುಸಾರವಾಗಿ ಕೆಳಗೆ ಕ್ರಮವಾಗಿ ವಿವರಿಸಿದೆ:

**1. ಆಂಟೆನ್ಯೂಲ್:** ಇದರ ತೊಟ್ಟಿನ ಭಾಗದಲ್ಲಿ ಪ್ರೀಕಾಕ್ಸ, ಕಾಕ್ಸ ಮತ್ತು ಬೇಸಿಸ್ ಎಂದು ಮೂರು ಭಾಗಗಳಿವೆ. ಬೇಸಿಸ್ ತನ್ನ ಮುಂದಿನ ತುದಿಯಲ್ಲಿ ಬಹುಖಂಡವುಳ್ಳ ತೆಳ್ಳಗೆ ಉದ್ದವಾದ ಕುಡಿಮೀಸೆಗಳನ್ನು ಹೊಂದಿದೆ. ಇವು ಸ್ಪರ್ಶಾಂಗಗಳು.

**2. ಆಂಟೆನ:** ಪ್ರೋಟೊಪೊಡೈಟ್ ಭಾಗ ತುಂಬ ಚಿಕ್ಕದು. ಒಂದು ಕವಲು ಅಗಲವಾಗಿ ಕಿವಿಯ ಆಲೆಯಂತೆ ಹರಡಿದೆ. ಇನ್ನೊಂದು ತುಂಬ ಉದ್ದವಾದ ಬಹುಖಂಡವುಳ್ಳ ಕುಡಿಮೀಸೆಯಾಗಿದೆ ಇದೂ ಕೂಡ ಸ್ಪರ್ಶಾಂಗವೇ. ಆಹಾರ ಮತ್ತು ತನ್ನ ಪರಿಸರವನ್ನು ಪರೀಕ್ಷಿಸುವ ಘ್ರಾಣೇಂದ್ರಿಯವೂ ಹೌದು.

**3. ಮ್ಯಾಂಡಿಬಲ್:** ಕವಲಗಳು ಕ್ಷೀಣವಾಗಿವೆ. ಬುಡದ ಪ್ರೊಟೊಪೊಡೈಟ್ ಬಲಯುತವಾಗಿ ಗದೆಯಾಕಾರದ ಮತ್ತು ಬಾಚಿಯಾಕಾರದ ರಚನೆಯಾಗಿದೆ. ಇದರ ಮೇಲೆ ದಂತಿಗಳಿದ್ದು (ಡೆಂಟಿಕಲ್) ಅವು ಆಹಾರವನ್ನು ಅಗಿಯಲು ಸಹಕರಿಸುತ್ತವೆ. ದವಡೆಗಳು ಬಲವಾಗಿವೆ.

**4. ಮ್ಯಾಕ್ಸಿಲುಲೆ:** ಇದು ಒಂದು ದವಡೆಪಾದ. ಇದರಲ್ಲಿ ಬಾಯಿಯ ಬಳಿಗೆ ನೀರು ಬರುವಂತೆ ಪ್ರವಾಹವನ್ನು ಉಂಟುಮಾಡುವ ಲೋಮಾಂಗಗಳಿವೆ. ಆದ್ದರಿಂದ ಇದು ಆಹಾರವನ್ನು ಬಾಯಿಯೆಡೆಗೆ ತರಲು ಸಹಕರಿಸುತ್ತದೆ.

**5. ಮ್ಯಾಕ್ಸಿಲ:** ಇದೂ ಕೂಡ ದವಡೆಪಾದ. ಆಹಾರವನ್ನು ಬಾಯಿ ಬಳಿಗೆ ತರುವಲ್ಲಿ ಸಹಕರಿಸುತ್ತದೆ.

**6,7,8–ಮಾಕ್ಸಿಲ್ಲಿಪೀಡ್:** ಇವುಗಳಲ್ಲಿ ಎಕ್ಸೊಪೊಡೈಟ್‌ಗಳು ಕ್ರಮೇಣ ಕ್ಷೀಣವಾಗಿ ಹೋಗುತ್ತವೆ. ಇವುಗಳ ಮೇಲೆ ಶ್ವಾಸಾಂಗವಾದ ಎಪಿಪೊಡೈಟುಗಳಿವೆ. ಇವು ಘ್ರಣೇಂದ್ರಿಯ ಗಳಾಗಿಯೂ ಸ್ಪರ್ಶಾಂಗಗಳಾಗಿಯೂ ಕೆಲಸ ಮಾಡುತ್ತವೆಯಲ್ಲದೆ ಆಹಾರವನ್ನು ಹಿಡಿದು ಪ್ರಾಣಿಗೆ ಒದಗಿಸುವುದರಲ್ಲಿ ಸಹಾಯ ಮಾಡುತ್ತವೆ.

9.ಮೊದಲನೆಯ
10.ಎರಡನೆಯ
11.ಮೂರನೆಯ } ನಡೆಪಾದಗಳು :
12.ನಾಲ್ಕನೆಯ
13.ಐದನೆಯ

ನಡಿಗೆಗೆ ಸಹಕಾರಿಯಾದ ಇವುಗಳಲ್ಲಿ ಎಕ್ಸೊಪೊಡೈಟ್ ಸಂಪೂರ್ಣವಾಗಿ ಮರೆಯಾಗಿದೆ. ಎಂಡೊಪೊಡೈಟಿನ ಖಂಡಗಳು ಉದ್ದವಾಗಿ ಬೆಳೆದು ಕಾಲುಗಳಾಗಿವೆ. ಮೊದಲನೆಯ ಎರಡು ಜೊತೆಯಲ್ಲಿ ತುದಿಯಲ್ಲಿ ಇಕ್ಕಳದ ರೀತಿಯ ರಚನೆಗಳಿವೆ. ಇವು ಆಹಾರವನ್ನು ಹಿಡಿಯಲು ಸಹಕರಿಸುತ್ತವೆ. ಒಂದೊಂದರ ಮೇಲೂ ಕಿವಿರುಗಳಿವೆ.

14. ಮೊದಲನೆಯ ಈಜುಪಾದ: ಗಂಡಿನಲ್ಲಿ ಇಕ್ಕವಲು ರಚನೆ. ಆದರೆ ಎಕ್ಸೊಪೊಡೈಟ್ ಮತ್ತು ಎಂಡೊಪೊಡೈಟ್‌ಗಳು ಕೂಡಿಕೊಂಡು ಸಂಭೋಗಕ್ರಿಯೆಗೆ ಸಹಕಾರಿಯಾಗಿವೆ. ಆದರೆ ಹೆಣ್ಣಿನಲ್ಲಿ ಇವು ನಶಿಸಿಹೋಗಿ ಹೆಸರಿಗೆ ಮಾತ್ರ ಇವೆ.

15 ಎರಡನೆಯ ಈಜುಪಾದ : ಇದೂ ಇಕ್ಕವಲು ರಚನೆ. ಗಂಡಿನಲ್ಲಿ ಸಂಭೋಗಕ್ಕೆ ಸಹಕಾರಿಯಾಗಿದೆ. ಹೆಣ್ಣಿನಲ್ಲಿ ಚಿಕ್ಕದ್ದು ಮತ್ತು ಉಪಯೋಗವಿಲ್ಲದ್ದು.

16 ಮೂರನೆಯ ಈಜುಪಾದ: ಕಿವಿರು ಕೋಣೆಯಲ್ಲಿ ಸದಾ ಹೊಸ ನೀರು ಇರುವಂತೆ ಪ್ರವಾಹವನ್ನು ಉಂಟುಮಾಡುತ್ತದೆ. ಹೆಣ್ಣಿನಲ್ಲಿ ಮೊಟ್ಟೆಗಳು ಅಂಟಿಕೊಳ್ಳಲು ಸಹಕಾರಿಯಾಗಿದೆ.

17–18 ಈಜುಪಾದಗಳು ಮೂರನೆಯದರಂತೆಯೇ ಇವೆ.

19 ಬಾಲಪಾದ: ಚಿಮ್ಮಿ ಹಿಂದಕ್ಕೆ ಈಜಲು ಸಹಕರಿಸುತ್ತದೆ.

ಪ್ರಬುದ್ಧಾವಸ್ಥೆಯಲ್ಲಿ ರಚನೆ ಮತ್ತು ಕಾರ್ಯಗಳಲ್ಲಿ ಭಿನ್ನತೆಗಳನ್ನು ಪ್ರದರ್ಶಿಸಿದರೂ ಇವು ಬೆಳವಣಿಗೆಯಿಂದ ಸಾದೃಶಾಂಗಗಳು. ಲಾಬ್‌ಸ್ಟರ್ ಮತ್ತು ಏಡಿಗಳಲ್ಲಿ ಮೊದಲನೆಯ ನಡೆಪಾದದ ತುದಿಯ ಇಕ್ಕಳಗಳು ದೊಡ್ಡವಾಗಿ ಬೆಳೆದು, ರಕ್ಷಣೆ ಮತ್ತು ಆಕ್ರಮಣದಲ್ಲಿ ಸಹಕಾರಿಯಾಗಿವೆ. ಒಂದು ಜಾತಿಯ ಏಡಿಯಲ್ಲಿ ಈ ನಡೆಪಾದಗಳು ಚಾಚಿಕೊಂಡಾಗ ಹನ್ನೆರಡು ಅಡಿ ಉದ್ದ ಇರುತ್ತವೆ. ಪಿಟೀಲು ಏಡಿಯಲ್ಲಿ ಈ ಕಾಲುಗಳು ಒಂದಕ್ಕೊಂದು ತಾಕಿದಾಗ ಒಂದು ರೀತಿಯ ನಾದ ಮೂಡುತ್ತದೆ. ಒಂದು ಜಾತಿಯ ಕಡಲುಏಡಿಯಲ್ಲಿ ಹೆಣ್ಣನ್ನು ಆಕರ್ಷಿಸುವ ಸಲುವಾಗಿ ಗಂಡಿನಲ್ಲಿ ಒಂದು ನಡೆಪಾದ ವಿಶೇಷವಾಗಿ ಬೆಳೆದಿದೆ. ಹೀಗೆ ಪ್ರಾಣಿಯ ಜೀವನಕ್ರಮ, ಅದು ವಾಸಿಸುವ ಸ್ಥಳ, ಆಹಾರ ಗಳಿಕೆಯ ಕ್ರಮಗಳನ್ನನುಸರಿಸಿ ಅಂಗಗಳು ವೈವಿಧ್ಯಮಯವಾಗಿ ಮಾರ್ಪಟ್ಟಿರುವುದನ್ನು ಈ ವರ್ಗದಲ್ಲಿ ಕಾಣಬಹುದು. ಕೆಲವು ಉಪಾಂಗಗಳು ಕೆಲವು ಪ್ರಾಣಿಗಳಲ್ಲಿ ಕಳೆದುಹೋಗಬಹುದು.

ಇವೇ ಅಲ್ಲದೆ ಕೆಲವು ಪ್ರಾಣಿಗಳಲ್ಲಿ ಆನುಷಂಗಿಕ ಉಪಾಂಗಗಳಿವೆ (ಅಕ್ಸೆಸರಿ, ಅಪೆಂಡೇಜಸ್). ಬಾಯಿಯ ಮುಂದಿನ ಮೇಲುತುಟಿ (ಲೇಬ್ರಂ) ಮತ್ತು ಮ್ಯಾಂಡಿಬಲ್‌ಗಳ ಹಿಂದಿನ ಕೆಳತುಟಿ (ಮೆಟಸ್ಟೋಮ್) ಮುಂತಾದುವು ಅನುಷಂಗಿಕ ಉಪಾಂಗಗಳಲ್ಲಿ ಮುಖ್ಯವಾದುವು. ಆಕಸ್ಮಿಕವಾಗಿ ಕಳೆದುಹೋದ ಅಥವಾ ಊನವಾದ ಉಪಾಂಗಗಳನ್ನು ಮುಂದಿನ ಪೊರೆ ಬಿಡುವಿಕೆಯ ಕಾಲದಲ್ಲಿ ಪುನರುತ್ಪಾದಿಸಿಕೊಳ್ಳುವ ಶಕ್ತಿಯೂ ಊನವಾಗಿ ಗಾಯವಾದ ಮತ್ತು ಶತ್ರುಗಳು ಹಿಡಿದ ಉಪಾಂಗಗಳನ್ನು ಕಳಚಿಕೊಂಡು ರಕ್ಷಿಸಿಕೊಳ್ಳುವ ಕ್ರಮವೂ ಕಠಿಣಚರ್ಮಿಗಳ ವಿಶಿಷ್ಟ ಲಕ್ಷಣ.

**ಒಳ ಅಸ್ಥಿಪಂಜರ :** ಹೊರ ಕ್ಯೂಟಿಕಲ್ ಒಳಕ್ಕೆ ಚಾಚಿಕೊಂಡು ಅಪೊಡಿಮ್‌ಗಳೆಂಬ ಒಳ ಅಸ್ಥಿಪಂಜರ ಆಗಿದೆ. ಇದು ಸ್ನಾಯುಗಳು ಅಂಟಿಕೊಳ್ಳಲು ಸಹಕಾರಿಯಾಗಿದೆ. ಇವು ಕೆಲವೊಮ್ಮೆ ಕೂಡಿಕೊಂಡು ಎಂಡೊಫ್ರಾಗ್ಮಲ್ ಅಸ್ಥಿಪಂಜರ ಮತ್ತು ಎಂಡೊಸ್ಟರ್ನೈಟ್ ಎಂಬ ಚೌಕಟ್ಟುಗಳಾಗಿ ರೂಪುಗೊಳ್ಳಬಹುದು.

**ನರಮಂಡಲ :** ಕಠಿಣಚರ್ಮಿಗಳ ನರಮಂಡಲ ಸಂಧಿಪದಿಗಳಲ್ಲಿನ ನರಮಂಡಲ ವಿಕಾಸದ ವಿವಿಧ ರೂಪಗಳನ್ನು ಪ್ರದರ್ಶಿಸುತ್ತದೆ. ಮಾದರಿಯ (ಆದರ್ಶ) ಸಂಧಿಪದಿ ಅವಸ್ಥೆಯಿಂದ ತೀವ್ರ ಸಂಕೀರ್ಣತೆಯ ರೂಪದವರೆಗೂ ಮಾರ್ಪಟ್ಟಿರಬಹುದು. ಬಹಳ ಪ್ರಾಚೀನವಾದ ಮತ್ತು ಹಿಂದುಳಿದ ರಚನೆಯನ್ನು ಬ್ರಾಂಕಿಯೊಪೋಡದಲ್ಲಿ ಕಾಣಬಹುದು. ಇದರಲ್ಲಿ ಬಾಯಿಯ ಹಿಂಭಾಗದಲ್ಲಿ ಕುಡಿಮೀಸೆಯ ನರಗ್ರಂಥಿಗಳು ಇವೆ. ಇದರ ಹಿಂದೆ ಪ್ರತಿ ಕಂಡಕ್ಕೂ ಒಂದೊಂದು ಜೊತೆ ನರಗ್ರಂಥಿಗಳುಂಟು. ವೆಂಟ್ರಲ್ ನರಹುರಿಗಳು ಬೇರೆ ಬೇರೆಯಾಗಿದ್ದು ಅಲ್ಲಲ್ಲಿ ಅವುಗಳ ನಡುವೆ ನರಸಂಬಂಧಗಳಿರುವುದರಿಂದ ಏಣಿಯಂತೆ ಕಾಣುತ್ತದೆ. ಮೆಲಕಾಸ್ಟ್ರೇಕ ಗಣದ ಕೆಳದರ್ಜೆಯ ಜೀವಿಗಳಲ್ಲಿ ಕುಡಿಮೀಸೆಯ ನರಗ್ರಂಥಿಗಳು ಮಿದುಳಿನೊಂದಿಗೆ ಸೇರಿ ಹೋಗಿವೆ. ಮತ್ತು ವೆಂಟ್ರಲ್ ನರಹುರಿಗಳು ಹತ್ತಿರ ಹತ್ತಿರವಾಗಿವೆ. ಇತರ ಕಠಿಣಚರ್ಮಿಗಳಲ್ಲಿ ವೆಂಟ್ರಲ್ ನರಹುರಿಗಳು ತುಂಬ ಮಾರ್ಪಟ್ಟಿವೆ. ಗಂಟಲು ಕೆಳಗಿನ ನರಗ್ರಂಥಿಗಳು ವದನಾಂಗಗಳ ಖಂಡಗಳಿಗಾಗಿ ರೂಪುಗೊಂಡು, ಏಡಿಗಳಲ್ಲಿ ಒಂದು ವೆಂಟ್ರಲ್ ನರಗ್ರಂಥಿಗಳ ಗುಂಫನ ಏರ್ಪಟ್ಟಿದೆ. ರೈಜೊಕೆಫಾಲದಲ್ಲಿ ಇರುವ ಒಂದೇ ಒಂದು ನರಗ್ರಂಥಿಯಿಂದ ಎಲ್ಲೆಡೆಗೂ ನರಗಳು ಹೊರಡುತ್ತವೆ. ಮುಂದುವರಿದ ಕಠಿಣ ಚರ್ಮಿಗಳಲ್ಲಿ ಗಂಟಲಿನ ಮೇಲೆ ಮಿದುಳು, ಕೆಳಗೆ ಸಬ್‌ಇಸಾಫಿಜಿಯಲ್ ನರಗ್ರಂಥಿಗಳು ಮತ್ತು ಗಂಟಲಿನ ಸುತ್ತಲು ಇವನ್ನು ಬಂಧಿಸುವ ನರಗಳೂ ಇದ್ದು ಇದರ ಹಿಂಭಾಗದಲ್ಲಿ ಕೊನೆಯ ಖಂಡದ ವರೆಗೂ ಹರಡಿರುವ ಜೋಡಿ ವೆಂಟ್ರಲ್ ನರಹುರಿಗಳು ಇವೆ. ಅಲ್ಲದೆ ಅನುವೇದನಾ (ಸಿಂಪತೆಟಿಕ್) ನರ ಮಂಡಲವೂ ಇವೆ.

**ಜ್ಞಾನೇಂದ್ರಿಯಗಳು:** ಸ್ವತಂತ್ರ ಜೀವನ ನಡೆಸುವ ಕಠಿಣಚರ್ಮಿಗಳಲ್ಲಿ ಜ್ಞಾನೇಂದ್ರಿಯಗಳು ಚೆನ್ನಾಗಿ ರೂಪುಗೊಂಡಿವೆ. ಮುಖ್ಯವಾದುವು ಎರಡು ರೀತಿಯ ಕಣ್ಣುಗಳು, ಸಂಯುಕ್ತಾಕ್ಷಿಗಳು ಮತ್ತು ಮಧ್ಯಾಕ್ಷಿಗಳು. ಕೋಪಿಪೋಡ ಮತ್ತು ಪ್ರಬುದ್ಧ ಸಿರ್ರಿಪೀಡಿಯಗಳನ್ನು ಬಿಟ್ಟರೆ ಮಿಕ್ಕೆಲವುಗಳಲ್ಲಿಯೂ ಒಂದೊಂದು ಜೊತೆ ಸಂಯುಕ್ತಾಕ್ಷಿಗಳಿವೆ. ಈ ಕಣ್ಣುಗಳಿಗೆ ತೊಟ್ಟುಗಳಿರಬಹುದು ಅಥವಾ ಇಲ್ಲದಿರಬಹುದು. ತೊಟ್ಟುಗಳಿರುವುದರಿಂದ ಇವೂ ಕೂಡ ಮಾರ್ಪಟ್ಟ ಉಪಾಂಗಗಳು ಎಂಬ ಭಾವನೆಗೆ ಎಡೆಕೊಟ್ಟಿವೆ. ಆದರೆ ಇವಕ್ಕೆ ಅನುವಾದ ಖಂಡ ಇಲ್ಲದಿರುವುದರಿಂದಲೂ ಬೆಳವಣಿಗೆಯ ಮೊದಲ ಹಂತಗಳಲ್ಲಿ ತೊಟ್ಟುಗಳು ಇಲ್ಲದಿರುವುರಿಂದಲೂ ಈ ಭಾವನೆಗೆ ಅಂಗೀಕಾರ ದೊರಕಿಲ್ಲ. ಮಧ್ಯಾಕ್ಷಿ ಸಾಮಾನ್ಯವಾಗಿ ನಾಪ್ಲಿಯಸ್ ಡಿಂಭದಲ್ಲಿ ಮಾತ್ರ ಇದೆ. ಇದು ಬಹುಪಾಲು ಪ್ರಬುದ್ಧ ಪ್ರಾಣಿಗಳಲ್ಲಿಯೂ ಉಳಿಯಬಹುದು. ಇದರಲ್ಲಿ ವರ್ಣದ್ರವ್ಯದ ಮೂರು ಬಟ್ಟಲುಗಳಿವೆ; ಮಧ್ಯದಲ್ಲಿ ಒಂದು, ಅಕ್ಕಪಕ್ಕಗಳಲ್ಲಿ ಎರಡು ರತಿಯೊಂದು ಬಟ್ಟಲೂ ರೆಟಿನಲ್ (ಅಕ್ಷಿಪಟಲದ) ಜೀವಕೋಶಗಳಿಂದ ತುಂಬಿದೆ. ಈ ಜೀವಕೋಶಗಳ ಹೊರತುದಿಗಳು ನರತಂತುಗಳಾಗಿ ಮುಂದುವರಿದಿವೆ. ಆದ್ದರಿಂದ ಕಶೇರುಕಗಳಲ್ಲಿರುವಂತೆಯೇ ಇಲ್ಲಿಯೂ ಇಂದ್ರಿಯ ಜೀವಕೋಶಗಳೂ ತಲೆಕೆಳಗಾಗಿವೆ. ಕೆಲವೊಮ್ಮೆ ಒಂದೊಂದು ಬಟ್ಟಲಿಗೂ ಒಂದೊಂದು ಮಸೂರವಿರುತ್ತದೆ. ಕೆಲವು ಕೋಪಿಪೋಡಗಳಲ್ಲಿ ಪಕ್ಕದ ಬಟ್ಟಲುಗಳೆರಡೂ ನಡುವಿನದರಿಂದ ಪ್ರತ್ಯೇಕವಾಗಿ ಪಾರ್ಶ್ವದ ಅಕ್ಷಿಗಳಾಗುತ್ತವೆ. ದೇಹದ ಮೇಲೆಲ್ಲ ಹರಡಿರುವ ಮುಳ್ಳುಗಳು ಇತರ ಜ್ಞಾನಾನುಭವಗಳ ಗ್ರಹಣೆಗೆ ಸಹಕರಿಸುತ್ತವೆ. ಅವುಗಳ ಜೀವರಸದಲ್ಲಿ ನರತಂತುಗಳಿರುತ್ತವೆ. ಈ ಮುಳ್ಳುಗಳಲ್ಲಿ ಬಹುಪಾಲು ಅನೇಕ ರೀತಿಯಲ್ಲಿ ಕವಲೊಡೆದಿರುತ್ತವೆ. ಡೆಕಪೊಡ ಮತ್ತು ಸಿಂಕಾರ್ಡಿಯ ಗುಂಪಿನ ಪ್ರಾಣಿಗಳಲ್ಲಿ ಆಂಟೆನ್ಯೂಲಿನ ಬುಡದಲ್ಲಿ ಮತ್ತು ಮೈಸಿಡೀ ಗುಂಪಿನವುಗಳಲ್ಲಿ ಉದರಭಾಗದ ಆರನೆಯ ಉಪಾಂಗದ ಎಂಡೊಪೊಡೈಟ್ ಮೇಲೆ ಸ್ಟ್ಯಾಟೊಸಿಸ್ಟುಗಳೆಂಬಕುಳಿಗಳಿವೆ. ಈ ಕುಳಿಯ ಭಿತ್ತಿಯಲ್ಲಿ ನವುರಾದ ರೋಮಗಳೂ ಅದರ ಒಳಗೆ ಮರಳಿನಕಣಗಳೂ ಇವೆ. ಸ್ಟ್ಯಾಟೊಸಿಸ್ಟುಗಳು ಸಮತೋಲನದ ಜ್ಞಾನೇಂದ್ರಿಯ ಗಳು. ಅನೇಕ ಆಂಟೆನ್ಯೂಲ್ ಮತ್ತು ಆಂಟೆನಗಳ ಮೇಲೆ ಈಸ್ಥೆಟ್ಯಾಸ್ಕ್ಸ್ ಎಂಬ ಘ್ರಾಣೇಂದ್ರಿಯ ರೋಮಗಳಿವೆ. ಅಲ್ಲದೆ ಅನೇಕ ಕಠಿಣಚರ್ಮಿಗಳ ಶಿರದ ಮುಂತುದಿಯಲ್ಲಿ ಹಣೆಯ ಅಂಗ (ಫ್ರಾಂಟಲ್ ಆರ್ಗನ್) ಎಂಬೊಂದು ರಚನೆ ಇದೆ. ಇದೂ ಕೂಡ ಜ್ಞಾನೇಂದ್ರಿಯ.

**ವರ್ಣ ವಿನ್ಯಾಸ:** ಕಠಿಣಚರ್ಮಿಗಳಿಗೆ ಒಂದಿಲ್ಲೊಂದು ರೀತಿಯ ಬಣ್ಣ ಉಂಟು. ಕೆಂಪು, ಕಿತ್ತಲೆ, ನೇರಳೆ, ಹಸಿರು, ನೀಲಿ, ಕಂದು, ಕಪ್ಪು ಮುಂತಾದ ಬಣ್ಣಗಳಿರುತ್ತವೆ. ಒಂದೇ ಪ್ರಭೇದದಲ್ಲಿ ಎಲ್ಲ ಬಣ್ಣಗಳೂ ಇಲ್ಲದಿರಬಹುದು, ಇವುಗಳಲ್ಲಿ ಹೆಚ್ಚು ಬಣ್ಣಗಳು ಲಿಪೊಕ್ರೋಮ್ ಎಂಬ ವಸ್ತುವಿನಿಂದಾದವು. ಕಂದು ಮತ್ತು ಕಪ್ಪು ಬಣ್ಣಗಳು ಮೆಲಾನಿನಿಂದಾದವು. ಇವುಗಳಲ್ಲಿ ಬಹುಪಾಲು ಕವಲೊಡೆದ ಜೀವಕೋಶಗಳಲ್ಲಿರುತ್ತವೆ (ಕ್ರೊಮ್ಯಾಟೊಫೋರ್). ಆದರೆ ನೀಲಿ ಮತ್ತು ಬಹುಶಃ ಕೆಲವು ಇತರ ಬಣ್ಣಗಳು ಅಂಗಾಂಶಗಳಲ್ಲಿ ಕರಗಿ ಹರಡಿರಬಹುದು. ಈ ಕ್ರೊಮ್ಯಾಟೊಪೋರುಗಳು ಎಪಿಡರ್ಮಲ್ ಪದರದಲ್ಲಿ, ಡರ್ಮಿಸ್‌ನಲ್ಲಿ ಅಥವಾ ಒಳಗಿನ ಅಂಗಗಳ ಸಂಯೋಜಕ ಅಂಗಾಂಶಗಳಲ್ಲಿ ಇರಬಹುದು. ಈ ಬಣ್ಣ ಕವಲುಗಳಿಗೆ ಹರಿಯುವುದರಿಂದ ಅಥವಾ ಅವುಗಳಿಂದ ವಾಪಸ್ಸು ಚಲಿಸುವುದರಿಂದ ವರ್ಣಕೋಶಗಳು ಸಂಕುಚಿಸುವ ಅಥವಾ ಹಿಗ್ಗುವ ಕ್ರಿಯೆಯನ್ನು ತೋರುತ್ತವೆ. ಈ ಕ್ರಿಯೆಗೆ ಬೆಳಕು ಮತ್ತು ಬೆಳಕಿನ ತೀವ್ರತೆ ಪ್ರಚೋದಕವಾಗಿ ವರ್ತಿಸುತ್ತವೆ. ಅಲ್ಲದೆ ಹಿನ್ನೆಲೆಯೂ ಪ್ರತಿಕ್ರಿಯೆಗೆ ಕಾರಣವಾಗಬಹುದು. ಅತಿ ತೀವ್ರವಾದ ಬೆಳಕಿನಲ್ಲಿ ಅಥವಾ ಬೆಳಕನ್ನು ಹೀರುವ ಹಿನ್ನೆಲೆಯಲ್ಲಿ ಈ ವರ್ಣಕೋಶಗಳು ವಿಸ್ತರಿಸುತ್ತವೆ. ಕಡಿಮೆ ತೀವ್ರತೆಯ ಬೆಳಕಿನಲ್ಲಿ ಅಥವಾ ಬೆಳಕನ್ನು ಹರಡುವ ಹಿನ್ನೆಲೆಯಲ್ಲಿ ಅವು ಸಂಕುಚಿತವಾಗುತ್ತವೆ. ಆದರೆ ಈ ಪ್ರಚೋದನ ಕ್ರಮದಲ್ಲಿ ಕಣ್ಣುಗಳು ನೇರವಾಗಿ ಭಾಗವಹಿಸುವುದಿಲ್ಲ. ಬೆಳಕಿನ ಪ್ರಚೋದನೆ ಕೆಲವು ಅಂತಸ್ರಾವಕ ಗ್ರಂಥಿಗಳ ಮೇಲೆ ಪರಿಣಾಮ ಬೀರಿ ಅವು ಹಾರ್ಮೋನು ಗಳನ್ನು ಉತ್ಪತ್ತಿ ಮಾಡುವಂತೆ ಮಾಡಿ, ಇದರಿಂದ ಮುಂದಿನ ಪ್ರತಿಕ್ರಿಯೆ ನಡೆಯುತ್ತದೆ.

**ಅನ್ನನಾಳ:** ಸಾಮಾನ್ಯವಾಗಿ ಇದು ನೇರವಾದ ಒಂದು ನಾಳ. ಇದರಲ್ಲಿ ಮುನ್ನಾಳ, ನಡುನಾಳ ಮತ್ತು ಹಿನ್ನಾಳಗಳೆಂಬ ಮೂರು ಭಾಗಗಳಿವೆ. ಮುನ್ನಾಳ ಮತ್ತು ಹಿನ್ನಾಳಗಳು (ಸ್ಟೊಮೋಡಿಯಂ ಮತ್ತು ಪ್ರೊಕ್ಟೋಡಿಯಂ) ಎಪಿಡರ್ಮಿಸಿನಿಂದ ಉದ್ಭವಿಸಿದ ಭಾಗಗಳು. ಇವಕ್ಕೆ ಕ್ಯೂಟಿಕಲಿನ ಅನುಲೇಪನವಿದೆ. ಮುನ್ನಾಳದ ಸ್ನಾಯುಗಳು ಬಲಯುತವಾಗಿದ್ದು ಕೆಲವೊಮ್ಮೆ ಹಲ್ಲು ಅಥವಾ ಮುಳ್ಳುಗಳನ್ನು ಬೆಳೆಸಿಕೊಂಡಿವೆ. ಮೆಲಕಾಸ್ಟ್ರೇಕ ಗುಂಪಿನ ಪ್ರಾಣಿಗಳಲ್ಲಿ ಈ ಅಂಶಗಳೂ ಸೇರಿ ಬಹಳ ಜಟಿಲವಾದ ಪ್ರೊವೆಂಟ್ರಿಕ್ಯುಲಸ್(ಜಠರ) ಆಗಿದೆ. ಇದರಲ್ಲಿ ಜಠರ "ಯಂತ್ರ"ವೂ (ಮಿಲ್) ಆಹಾರದ ರಸಗಳಿಂದ ಕಣಗಳನ್ನು ಶೋಧಿಸುವ, ಮುಳ್ಳುಗಳಿಂದಾದ ಒಂದು ಶೋಧಕಾಂಗವೂ ಇವೆ. ಈ "ಯಂತ್ರ" ಮತ್ತು ಶೋಧಕಾಂಗಗಳೂ ಪ್ರತ್ಯೇಕವಾದ ಕಾರ್ಡಿಯಾಕ್ ಮತ್ತು ಪೈಲಾರಿಕ್ ಕೋಣೆಗಳಲ್ಲಿವೆ. ನಡುನಾಳದ ಮುಂದಿನ ತುದಿಯಲ್ಲಿ ಒಂದು ಅಥವಾ ಹೆಚ್ಚು ಜೊತೆ ಅಪಸರಣಾಂಗಗಳು (ಹೆಪ್ಯಾಟಿಕ್ ಸೀಕೆ) ಇವೆ. ಇವು ಸ್ರಾವ ಮತ್ತು ಹೀರುವ ಕಾರ್ಯಗಳಲ್ಲಿ ಸಹಕರಿಸುತ್ತವೆ. ಕೆಲವೊಮ್ಮೆ ಇವು ಕವಲೊಡೆದು ಪಿತ್ತಜನಕಾಂಗವೂ ಆಗಬಹುದು. ಕಸೇರುಗುಗಳ ಪಿತ್ತಜನಕಾಂಗಕ್ಕೆ ವ್ಯತಿರಿಕ್ತವಾಗಿ ಇದು ಜೀರ್ಣಿಸಲು ಬೇಕಾದ ಎಲ್ಲ ಎಂಜೈಮುಗಳನ್ನು ಉತ್ಪತ್ತಿ ಮಾಡುತ್ತದೆಯಲ್ಲದೆ ಜೀರ್ಣವಾದ ಆಹಾರವನ್ನೂ ಹೀರಿಕೊಳ್ಳುತ್ತದೆ. ಹೆಚ್ಚಿನ ಓಷಕಾಂಶಗಳನ್ನು ಗ್ಲೈಕೋಜೆನ್ ಅಥವಾ ಕೊಬ್ಬಿನ ರೂಪದಲ್ಲಿ ಶೇಖರಿಸಿಡುವುದರಲ್ಲೂ ಇದು ಸಹಕಾರಿ. ಕೆಲವು ಜೀವಿಗಳಲ್ಲಿ ಹಿನ್ನಾಳ ಇಲ್ಲ. ನಡುನಾಳ ಬೇರಾವ ಸಂಬಂಧವನ್ನೂ ಕಲ್ಪಿಸದೆ ಹಠಾತ್ತನೆ ಕೊನೆಯಾಗುತ್ತದೆ. ರೈಜೊಕೆಫಾಲ ಮತ್ತು ಕೆಲವು ಕೋಪಿಪೋಡಗಳಲ್ಲಿ ಅನ್ನನಾಳ ಇಡೀ ಜೀವಿತ ಕಾಲದಲ್ಲಿ ಇರುವುದಿಲ್ಲ. ಇವು ಪರತಂತ್ರ ಜೀವನ ಕಾಲದಲ್ಲಿ, ಪೂರ್ತಿ ಜೀವಮಾನಕ್ಕೆ ಸಾಕಾಗುವಷ್ಟು ಆಹಾರವನ್ನು ಚರ್ಮದ ಮೂಲಕ ಹೀರಿಕೊಳ್ಳುತ್ತವೆ.

**ವಿಸರ್ಜನೆ :** ಆಂಟೆನಲ್ ಮತ್ತು ಮ್ಯಾಕ್ಸಿಲರಿ ಗ್ರಂಥಿಗಳೆಂಬ ಎರಡು ಜೊತೆ ಮುಖ್ಯ ಶುದ್ಧೀಕರಣಾಂಗಗಳಿವೆ. ಇವು ಅವುಗಳ ಹೆಸರು ಸೂಚಿಸುವಂತೆ ಆಯಾ ಉಪಾಂಗದ ಬುಡದಲ್ಲಿ ಹೊರಕ್ಕೆ ತೆರೆಯುತ್ತವೆ. ಸಾಮಾನ್ಯವಾಗಿ ಬೆಳವಣಿಗೆಯಲ್ಲಿ ಇವು ಒಂದಾದ ಮೇಲೊಂದರಂತೆ ಕಾಣಿಸಿಕೊಳ್ಳುತ್ತದೆ. ಎರಡೂ ಗ್ರಂಥಿಗಳು ಏಕಕಾಲದಲ್ಲಿಯೆ ಕಾರ್ಯನಿರ್ವಹಿಸುವುದು ಬಹಳ ಅಪೂರ್ವ, ಬ್ರಾಂಕಿಯೊಪೊಡದಲ್ಲಿ ಆಂಟೆನಲ್ ಗ್ರಂಥಿ ಡಿಂಭದ ಶುದ್ಧೀಕರಣಾಂಗ, ಮ್ಯಾಕ್ಸಿಲರಿ ಗ್ರಂಥಿ ವಯಸ್ಕ ಪ್ರಾಣಿಯ ಶುದ್ಧೀಕರಣಾಂಗ. ಆದರೆ ಡೆಕಪೊಡದಲ್ಲಿ ಆಂಟೆನಲ್ ಗ್ರಂಥಿಯೇ ವಯಸ್ಕ ಪ್ರಾಣಿಯ ಶುದ್ಧೀಕರಣಾಂಗ, ಪ್ರತಿಯೊಂದು ಗ್ರಂಥಿಯಲ್ಲಿಯೂ ಒಂದು ತುದಿಯ ಕೋಶ ಮತ್ತು ಒಂದು ನಾಳವಿದೆ. ಈ ನಾಳ ತುದಿಯ ಕೋಶದಿಂದ ಹೊರಟು ಹೊರಕ್ಕೆ ತೆರೆಯುತ್ತದೆ. ತುದಿಯ ಕೋಶ ಮತ್ತು ನಾಳಗಳು ಸಂದಿಸುವಲ್ಲಿ ಒಂದು ವಲಯ (ಸ್ಫಿಂಕ್ಟರ್) ಸ್ನಾಯುವಿದೆ. ಡೆಕಪೊಡಗಳ ಆಂಟಿನಲ್ ಗ್ರಂಥಿಗಳು ಬಲು ಜಟಿಲವಾಗಿದೆ.

**ಉಸಿರಾಟ:** ಪುಟ್ಟ ದೇಹವುಳ್ಳ ಕಠಿಣಚರ್ಮಿಗಳು, ಅದರಲ್ಲಿಯೂ ಕೋಪಿಪಾಡ್‌ಗಳು ದೇಹದ ಹೊರಮೈ ಮೂಲಕ ಉಸಿರಾಡುತ್ತವೆ. ಆದರೆ ದಪ್ಪ ಅಸ್ಥಿಪಂಜರವುಳ್ಳ ಪ್ರಾಣಿಗಳಲ್ಲಿ ಉಸಿರಾಟಕ್ಕೆ ಪ್ರತ್ಯೇಕವಾದ ಅಂಗಗಳಿವೆ. ಕ್ಯಾರಪೇಸಿನ ಒಳಚರ್ಮವೇ ಉಸಿರಾಟಕ್ಕೆ ಅನುವಾಗಬಹುದು. ಕೆಲವು ಮೆಲಕಾಸ್ಟ್ರೇಕಗಳಲ್ಲಿ ಉಪಾಂಗಗಳ ಪ್ರೊಟೊಪೊಡೈಟುಗಳ ಮೇಲೆ ಬೆಳೆಯುವ ಪ್ರವರ್ಧಗಳು ಮತ್ತು ಮಡಿಕೆ ಮಡಿಕೆಯಾಗಿರುವ ಅಥವಾ ಕವಲೊಡೆದ ಕಿವಿರುಗಳು ಇವೆ. ಅವು ಬೆಳೆಯುವ ಸ್ಥಳವನ್ನನುಸರಿಸಿ ಕಿವಿರುಗಳನ್ನು ವಿಂಗಡಿಸಿದ್ದಾರೆ: 1 ಆರ್ತ್ರೊಬ್ರಾಂಕ್; ಇವು ಹೊರ ಅಸ್ಥಿಪಂಜರವನ್ನು ದೇಹಕ್ಕೆ ಅಂಟಿಸುವ ಆರ್ತಾಯಿಡಲ್ ಪಟಲಕ್ಕೆ ಅಂಟಿಕೊಂಡಿವೆ. 2 ಪೋಡೋಬ್ರಾಂಕ್: ಇವು ಉಪಾಂಗಗಳ ಬುಡಕ್ಕೆ ಅಂಟಿಕೊಂಡಿವೆ. 3 ಪ್ಲೂರೊಬ್ರಾಂಕ್; ಮೇಲಿನ ಹೊರ ಅಸ್ಥಿಪಂಜರದ ಫಲಕ ಕೆಳಗಿನ ಫಲಕವನ್ನು ದಾಟಿ ಪಕ್ಕದಲ್ಲಿ ಚಾಚಿ ಪ್ಲೊರಾನ್ ಎಂಬೊಂದು ಅವಕಾಶವನ್ನು ರಚಿಸುತ್ತದೆ. ಕಿವಿರುಗಳು ಆ ಜಾಗದಲ್ಲಿ ಬೆಳಯುತ್ತವೆ. ಕಿವಿರುಗಳಿರುವ ಭಾಗಕ್ಕೆ ಸದಾ ಹೊಸನೀರಿನ ಪೂರೈಕೆ ಆಗುವಂತೆ ನೀರಿನ ಪ್ರವಾಹವನ್ನುಂಟುಮಾಡಲು ಕೆಲವು ಉಪಾಂಗಗಳೂ ಸಹಕರಿಸುತ್ತವೆ. ನೆಲದ ಮೇಲೆ ವಾಸಿಸುವ ಕಠಿಣಚರ್ಮಿಗಳಲ್ಲಿ ಗಾಳಿಯಲ್ಲಿ ಉಸಿರಾಡಲು ವಿಶೇಷ ಅಂಗಗಳಿಲ್ಲ. ಕಿವಿರುಕೋಣೆಯ ಗೋಡೆ ರಕ್ತನಾಳಗಳಿಂದ ಆವೃತವಾಗಿ ಶ್ವಾಸಕೋಶದಂಥ ರಚನೆ ರೂಪುಗೊಂಡಿದೆ.

**ರಕ್ತಪರಿಚಲನೆ:** ರಕ್ತಪರಿಚಲನೆಯ ಕ್ರಮದಲ್ಲೂ ಒಂದು ರೀತಿಯ ವಿಕಾಸವನ್ನು ಕಾಣಬಹುದು. ಕೆಲವು ಕಠಿಣಚರ್ಮಿಗಳಲ್ಲಿ ನಳಿಕೆಯಾಕಾರದ ಕೊಳವೆಯೊಂದು ಅನ್ನನಾಳದ ಮೇಲೆ ಹರಡಿದೆ. ಇದರ ಮುಂದಿನ ತುದಿಯಲ್ಲಿ ಒಂದು ಅಯೋರ್ಟ ಇದೆ. ಆದರೆ ಸರಿಯಾಗಿ ರೂಪುಗೊಂಡ ರಕ್ತನಾಳಗಳಿಲ್ಲ. ದೇಹದ ಅಂಗಾಂಶಗಳ ನಡುವೆ ಇರುವ ಬಿರುಕುಗಳಲ್ಲಿ ರಕ್ತ ಹರಿಯುತ್ತದೆ. ಈ ಬಿರುಕುಗಳನ್ನು ಹಿಮೋಸೀಲ್ ಎಂದು ಕರೆಯುತ್ತಾರೆ. ಇವುಗಳ ರಕ್ತಕ್ಕೆ ಬಣ್ಣವಿಲ್ಲ. ಬಹುತೇಕ ಪ್ರಾಣಿಗಳ ರಕ್ತದಲ್ಲಿ ಬಿಳಿಯ ರಕ್ತಕಣಗಳಿವೆ. ಮೆಲಕಾಸ್ಟ್ರೇಕ ಗುಂಪಿನ ಪ್ರಾಣಿಗಳ ರಕ್ತದಲ್ಲಿ ಹಿಮೋಸಯಾನಿನ್ ಎಂಬ ದ್ರವ್ಯವಿದೆ. ಕೆಲವು ಪ್ರಾಣಿಗಳಲ್ಲಿ ಹಿಮೋಗ್ಲಾಬಿನ್ ಕೂಡ ಇದೆ.

**ಜನನೇಂದ್ರಿಯಗಳು:** ಕೆಲವು ಪ್ರಾಣಿಗಳ ವಿನಾಹ (ತೊಟ್ಟಿಲ್ಲದ ಸಿರ್ರಿಪೀಡಿಯ, ಕೆಲವು ಐಸೊಪಾಡ್‌ಗಳು ಇತ್ಯಾದಿ,) ಮಿಕ್ಕೆಲ್ಲವೂ ಭಿನ್ನ ಲಿಂಗಿಗಳು, ಬ್ರಾಂಕಿಯೊಪೊಡ ಮತ್ತು ಆಸ್ಟ್ರಕೋಡಗಳಲ್ಲಿ ಪಿತೃರಹಿತ ಸಂತಾನಕ್ರಿಯೆ (ಪಾರ್ಥನೋಜೆನಿಸಿಸ್) ನಡೆಯುತ್ತದೆ. ಸಾಮಾನ್ಯವಾಗಿ ಗಂಡು ಹೆಣ್ಣಿಗಿಂತ ಚಿಕ್ಕದು. ಸಂಭೋಗ ಕಾಲದಲ್ಲಿ ಹೆಣ್ಣನ್ನು ತಬ್ಬಿ ಹಿಡಿಯಲು ಮತ್ತು ರೇತ್ರಾಣುಗಳನ್ನು ವರ್ಗಾಯಿಸಲು ಮಾರ್ಪಟ್ಟ ಉಪಾಂಗಗಳಿವೆ. ಜನನೇಂದ್ರಿಯಗಳು ಸಾಮಾನ್ಯವಾಗಿ ಜೊಳ್ಳಾದ ಅಂಗಗಳು. ಇವುಗಳಿಂದ ಹೊರಟ ನಾಳಗಳು ನೇರವಾಗಿ ಹೊರಕ್ಕೆ ತೆರೆಯುತ್ತವೆ.

**ಜೀವನ ಚರಿತ್ರೆ :** ಜೀವನ ಚರಿತ್ರೆ ನೇರವಾದುದಲ್ಲ. ಬೆಳವಣಿಗೆಯಲ್ಲಿ ಸಾಮಾನ್ಯವಾಗಿ ಅನೇಕ ಡಿಂಭಾವಸ್ಥೆಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಮೊಟ್ಟೆಯಿಂದ ನಾಪ್ಲಿಯಸ್ ಎಂಬ ಮೊಟ್ಟೆಯಾಕಾರದ ಡಿಂಭ ಹೊರಬರುತ್ತದೆ. ಮುಂದಿನ ತುದಿ ತುಂಬ ಅಗಲ, ಖಂಡ ವಿಂಗಡಣೆ ಇಲ್ಲ. ಮೂರು ಜೊತೆ ಉಪಾಂಗಗಳಿವೆ; ಒಕ್ಕವಲಿನ ಆಂಟೆನ್ಯೂಲ್‌ಗಳು, ಇಕ್ಕವಲಿನ ಆಂಟೆನಗಳು ಹಾಗೂ ಮ್ಯಾಂಡಿಬಲ್‌ಗಳು, ಮಧ್ಯದ ಅಕ್ಷಿ ಇರುತ್ತವೆ. ಒಂದು ದೊಡ್ಡ ಲೇಬ್ರಂ ಇದೆ. ಅನ್ನನಾಳದಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು. ಆಂಟೆನಲ್ ಗ್ರಂಥಿಗಳು ಇರಬಹುದು. ಕಠಿಣಚರ್ಮಿಗಳ ಪ್ರತಿಯೊಂದು ಗುಂಪಿನಲ್ಲಿಯೂ ಈ ಡಿಂಭಾವಸ್ಥೆ ಉಂಟು. ಕೆಲವು ಪ್ರಾಣಿಗಳ ಜೀವನ ಚರಿತ್ರೆಯಲ್ಲಿ ಈ ಡಿಂಭಾವಸ್ಥೆಯೂ ಭ್ರೂಣಾವಸ್ಥೆಯಲ್ಲಿ ಕಳೆದು ಮೆಟನಾಪ್ಲಿಯಸ್ ಅಥವಾ ಜೋಯಿಯ ಅವಸ್ಥೆ ಅಥವಾ ಪ್ರಬುದ್ಧಾವಸ್ಥೆಯ ಪ್ರಾಣಿಗಳೇ ಮೊಟ್ಟೆಗಳಿಂದ ಹೊರಬರಬಹುದು. ನಾಪ್ಲಿಯಸ್ ಡಿಂಭ ಪೊರೆ ಬಿಟ್ಟು ಪ್ರೊಟೊಜೋಇಯ ಆಗಿ ಬೆಳೆಯುತ್ತದೆ ಇದರಲ್ಲಿ ನಾಪ್ಲಿಯಸಿಗಿಂತಲೂ ಮೂರು ಜೊತೆ ಉಪಾಂಗಗಳು ಹೆಚ್ಚಾಗಿರುತ್ತವೆ ಮತ್ತು ಮೂರರಿಂದ ಎಂಟರವರೆಗಿನ ಖಂಡಗಳ ಅಂಕುರ ಕಾಣಿಸಿಕೊಳ್ಳುತ್ತವೆ. ಇದು ಜೋಯಿಯ ಆಗಿ ಬೆಳೆಯುತ್ತದೆ. ಈ ಡಿಂಭಾವಸ್ಥೆಯಲ್ಲಿ ಸೆಫಲೊಥೊರ್ಯಾಕ್ಸ್ ಮತ್ತು ಉದರಗಳು ನಿರ್ದಿಷ್ಟವಾಗಿ ರೂಪುಗೊಂಡಿರುತ್ತವೆ. ಒಂದರಿಂದ ಎಂಟು ಜೊತೆಗಳವರೆಗೆ ಉಪಾಂಗಗಳಿರುತ್ತವೆ. ಹಾಗೂ ಇನ್ನೂ ಆರು ಜೊತೆ ಬೆಳೆಯುತ್ತಿರುತ್ತವೆ, ಇದರ ಶಿರಸ್ಸಿನ ಭಾಗದಲ್ಲಿ ಮುಳ್ಳಿರುವುದು ಈ ಡಿಂಭದ ಮುಖ್ಯ ಲಕ್ಷಣ. ಜೋಯಿಯ ಡಿಂಭವು ಹೆಚ್ಚು ಕಡಿಮೆ ಪ್ರಬುದ್ಧ ಸೈಕ್ಲಾಪ್ಸುಗಳನ್ನೇ ಹೋಲುತ್ತದೆ. ಜೋಯಿಯ ಪೊರೆ ಕಳಚಿ ಪ್ರಬುದ್ಧ ಮೈಸಿಸ್ ಪ್ರಾಣಿಯನ್ನು ಹೋಲುವ ಮೈಸಿಸ್ ಅವಸ್ಥೆಯನ್ನು ತಲುಪುತ್ತದೆ. ಇದರ ಸೆಫಲೊಥೊರ್ಯಾಕ್ಸಿನಲ್ಲಿ ಎಂಟು ಜೊತೆ ಉಪಾಂಗಗಳಿದ್ದು ಒಂದೊಂದು ಉಪಾಂಗವೂ ತನ್ನ ನಿರ್ದಿಷ್ಟ ಕ್ರಿಯೆಯನ್ನು ನಿರ್ವಹಿಸಲು ತಕ್ಕಂತೆ ಮಾರ್ಪಟ್ಟಿರುತ್ತದೆ. ಸೀಗಡಿಗಳಲ್ಲಿ ಮೈಸಿಸ್ ಡಿಂಭ ನೇರವಾಗಿ ಪ್ರಬುದ್ಧ ಪ್ರಾಣಿಯಾಗಿ ಬೆಳೆಯುತ್ತದೆ.

ಆದ್ದರಿಂದ ಸೀಗಡಿಯು ತನ್ನ ವಿಕಾಸಕ್ಕೆ ಕಾರಣವಾದ ಪ್ರಾಣಿಗಳನ್ನು ತನ್ನ ಡಿಂಭಾವಸ್ಥೆಯ ವಿವಿಧಹಂತಗಳಲ್ಲಿ ನೆನೆಸಿಕೊಳ್ಳುತ್ತದೆ ಎಂದು ಪ್ರಾಣಿವಿಜ್ಞಾನಿಗಳು ಭಾವಿಸುತ್ತಾರೆ. ಲಾಬ್‌ಸ್ಟರ್ ಪ್ರಾಣಿಯ ಜೀವನಚರಿತ್ರೆಯಲ್ಲಿ ಮೈಸಿಸ್ ಅವಸ್ಥೆಯೊಂದರ ವಿನಹ ಮಿಕ್ಕ ಡಿಂಭಾವಸ್ಥೆಗಳಾವುವೂ ಇಲ್ಲ. ಆದರೆ ಏಡಿಗಳ ಬೆಳವಣಿಗೆಯಲ್ಲಿ ಮೈಸಿಸ್ ಬದಲು ಮೆಗಲೋಪ ಎಂಬೊಂದು ಡಿಂಭಾವಸ್ಥೆ ಇದೆ. ಇದರಲ್ಲಿ ಸೆಫಲೊಥೊರ್ಯಾಕ್ಸ್ ಭಾಗ ಪೂರ್ಣವಾಗಿ ರೂಪುಗೊಂಡಿದ್ದು ಕೇವಲ ಉದರ ಭಾಗ ಮಾತ್ರ ಅಪೂರ್ಣ ವಾಗಿರುತ್ತದೆ.

ಕೆಲವು ಸಾರಿ ನಾನಾ ರೀತಿಯ ಜೀವನಗಳಿಗೆ ಕಠಿಣಚರ್ಮಿಗಳೂ ಹೊಂದಿಕೊಂಡು ಅವುಗಳ ದೇಹ ಮಾರ್ಪಡುವುದರಿಂದ ಪ್ರಬುದ್ಧಾವಸ್ಥೆಯಲ್ಲಿ ಅವನ್ನು ಗುರುತಿಸುವುದು ಕಷ್ಟವಾಗುತ್ತದೆ. ಉದಾಹರಣೆಗೆ, ಲಿಪಾಸ್, ಬಾರ್ನಕಲ್ ಮತ್ತು ಸ್ಯಾಕ್ಯುಲೈನಗಳು. ಲಿಪಾಸ್ ಮತ್ತು ಬಾರ್ನಕಲ್‌ಗಳಲ್ಲಿ ದೇಹ ತುಂಬ ಕ್ಷೀಣವಾಗಿ ತಮ್ಮ ರಕ್ಷಣೆಗೆ ಹೊರಚಿಪ್ಪುಗಳನ್ನು ಬೆಳೆಸಿಕೊಂಡಿವೆ. ಮೊದಲು ನೋಡುವವರಿಗೆ ತಟ್ಟನೆ ಅವು ಮೃದ್ವಂಗಿಗಳ ವಂಶಕ್ಕೆ ಸೇರಿದ ಪ್ರಾಣಿಗಳಿರಬಹುದೆಂದು ತೋರುತ್ತದೆ. ಹಾಗೆಯೇ ಸ್ಯಾಕ್ಯುಲೈನದ ಪರತಂತ್ರ ಜೀವನದಿಂದಾಗಿ, ಅದರ ಅಂಗಾಂಗಗಳೆಲ್ಲವೂ ನಶಿಸಿ ಹೋಗಿ, ಅದು ಕೇವಲ ಮೊಟ್ಟೆಗಳನ್ನು ಉತ್ಪತ್ತಿ ಮಾಡುವ ಚೀಲದಂತೆ ಕಾಣುತ್ತದೆ. ಇವುಗಳ ಜೀವನ ಚರಿತ್ರೆಯನ್ನು ಅಭ್ಯಾಸ ಮಾಡಿದಾಗ ಮಾತ್ರ ವಿಶಿಷ್ಟವಾದ ಡಿಂಭಾವಸ್ಥೆಗಳನ್ನು ಕಂಡುಹಿಡಿದು ಇವು ಕಠಿಣಚರ್ಮಿಗಳ ವರ್ಗಕ್ಕೆ ಸೇರಿದ ಪ್ರಾಣಿಗಳು ಎಂದು ಗುರುತಿಸಬಹುದು. ಆದುದರಿಂದ ಡಿಂಭಗಳು ಈ ವರ್ಗದ ಪ್ರಾಣಿಗಳ ವಿಶೇಷ ಲಕ್ಷಣ ಅಂದರೆ ಅತಿಶಯೋಕ್ತಿಯಾಗಲಾರದು.

**ವರ್ಗೀಕರಣ:** ಈ ವರ್ಗವನ್ನು ಅನೇಕ ಗುಣಗಳ ಆಧಾರದ ಮೇಲೆ ವರ್ಗೀಕರಿಸಿದ್ದಾರೆ. ಹಿಂದೆ ಇವನ್ನು ಮೆಲಕಾಸ್ಟ್ರೇಕ ಮತ್ತು ಎಂಟಮಾಸ್ಟ್ರೇಕ ಎಂದು ಎರಡು ಮುಖ್ಯ ಉಪವರ್ಗಗಳಾಗಿ ವರ್ಗೀಕರಿಸುತ್ತಿದ್ದರು. ಆದರೆ ಈಗ ಇವುಗಳ ಬಗ್ಗೆ ಹೆಚ್ಚು ವಿಷಯಗಳು ತಿಳಿದುಬಂದಂತೆ ಹಿಂದೆ ಒಂದು ಗಣವೆಂದು ಗುರುತಿಸಿದ್ದ ಕೆಲವು ಗುಂಪುಗಳಿಗೆ ಉಪವರ್ಗದ ಸ್ಥಾನವನ್ನು ಕೊಟ್ಟು, ಎಂಟಮಾಸ್ಟ್ರೇಕ ಉಪವರ್ಗವನ್ನು ಕೈಬಿಟ್ಟಿದ್ದಾರೆ.

**ಉಪವರ್ಗ 1:** ಬ್ರ್ಯಾಂಕಿಯೊಪೋಡ : ಸ್ವತಂತ್ರ ಜೀವಿಗಳು, ಸಂಯುಕ್ತಾಕ್ಷಿಗಳಿವೆ. ಸಾಮಾನ್ಯವಾಗಿ ಕ್ಯಾರಪೇಸ್ ಇದೆ. ಕನಿಷ್ಠ ನಾಲ್ಕು ಜೊತೆ ಮುಂಡಭಾಗದ ಪಾದಗಳಾದರೂ ಇವೆ. ಕಠಿಣಚರ್ಮಿಗಳಲ್ಲಿಯೇ ಇವು ಬಹಳ ಕೆಳಮಟ್ಟದ ಪ್ರಾಣಿಗಳು.

**ಗಣ 1 : ಅನೊಸ್ಟ್ರೇಕ :** ಕ್ಯಾರಪೇಸ್ ಇಲ್ಲ. ಕಣ್ಣುಗಳಿಗೆ ತೊಟ್ಟುಗಳಿವೆ. ಒಕ್ಕವಲು ಅಂಟೆನಗಳಿವೆ. ಅನೇಕ ಜೊತೆ ಒಂದೇ ರೀತಿಯ ಮುಂಡಪಾದಗಳಿವೆ. ಉದಾ: ಕೈರೊಸಿಫ್ಯಾಲಸ್, ಆರ್ಟಿಮಿಯ.

**ಗಣ 2 : ಲಿಪೊಸ್ಟ್ರೇಕ :** ಈ ಗುಂಪಿನ ಪ್ರಾಣಿಗಳೆಲ್ಲ ಪಳೆಯುಳಿಕೆಗಳಾಗಿವೆ. ಉದಾ: ಲೆಪಿಡೊಕ್ಯಾರಿಸ್.

**ಗಣ 3 : ನೋಟೊಸ್ಟ್ರೇಕ :** ಮುಂಡದ ಮೇಲೆ ಬಹಳ ಅಗಲವಾದ ಕ್ಯಾರಪೇಸ್ ಇದೆ : ತೊಟ್ಟಿಲ್ಲದ ಕಣ್ಣುಗಳು ಒಂದಕ್ಕೊಂದು ಬಹಳ ಹತ್ತಿರದಲ್ಲಿವೆ. ಅನೇಕ ಮುಂಡಪಾದಗಳಿವೆ. ಇವುಗಳಲ್ಲಿ ಮೊದಲನೆಯ ಜೊತೆ ಮಿಕ್ಕೆಲ್ಲವಗಳಿಂದ ತುಂಬ ಭಿನ್ನ. ಉದಾ: ಏಪಸ್ ಮತ್ತು ಲೆಪಿಡ್ಯೂರಸ್.

**ಗಣ 4 : ಡಿಪ್ಲೊಸ್ಟ್ರೇಕ :** ಮುಂಡ ಮತ್ತು ಪಾದಗಳನ್ನು ಮುಚ್ಚುವ ಅಡಕವಾದ ಕ್ಯಾರಪೇಸ್ ಇದೆ. ತೊಟ್ಟಿಲ್ಲದ ಕಣ್ಣುಗಳೂ ದೊಡ್ಡ ಇಕ್ಕವಲಿನ ಅಂಟೆನಗಳೂ 4 ರಿಂದ 27 ಜೊತೆ ಮುಂಡಪಾದಗಳೂ ಇವೆ, ಉದಾ: ಇಸ್ತೀರಿಯ, ಡ್ಯಾಫ್ನಿಯ.

**ಉಪವರ್ಗ 2, ಆಸ್ಟ್ರಕೋಡ :** ಸ್ವತಂತ್ರ ಜೀವಿಗಳು, ಸಂಯುಕ್ತಾಕ್ಷಿಗಳು ಇರಬಹುದು ಅಥವಾ ಇಲ್ಲದಿರಬಹುದು. ದ್ವಿಭಾಗಿಯಾದ ಮತ್ತು ಅಡಕ್ಟರ್ ಸ್ನಾಯುವುಳ್ಳ ಕ್ಯಾರಪೇಸ್ ಇದೆ. ಎರಡಕ್ಕಿಂತ ಹೆಚ್ಚು ಮುಂಡಪಾದಗಳಿಲ್ಲ, ಇವುಗಳಲ್ಲಿ ಪಿತೃರಹಿತಸಂತಾನೋತ್ಪತ್ತಿ ಬಹಳ ಸಾಮಾನ್ಯ, ಕೆಲವು ಜಾತಿ ಪ್ರಾಣಿಗಳಲ್ಲಿ ಇದುವರೆಗೂ ಗಂಡುಗಳೇ ಸಿಕ್ಕಿಲ್ಲ, ಉದಾ: ಸೈಪ್ರಿಸ್ ಮತ್ತು ಸೈಪ್ರಿಡಿನ.

**ಉಪವರ್ಗ 3, ಕೋಪಿಪೋಡ :** ಸ್ವತಂತ್ರ ಜೀವಿಗಳೂ ಅಥವಾ ಪರತಂತ್ರ ಜೀವಿಗಳು, ಸಂಯುಕ್ತಾಕ್ಷಿಗಳಾಗಲೀ ಕ್ಯಾರಪೇಸ್ ಆಗಲೀ ಇಲ್ಲ. ಸಾಮಾನ್ಯವಾಗಿ ಆರು ಜೊತೆ ಎದೆಯ ಉಪಾಂಗ ಗಳಿವೆ. ಇದರಲ್ಲಿ ಮೊದಲನೆಯದು ಒಕ್ಕವಲು. ಉದರ ಭಾಗದಲ್ಲಿ ಉಪಾಂಗಗಳಿಲ್ಲ. ದೇಹ ಬುಗುರಿಯಾಕಾರ, ಅಥವಾ ಗದೆಯಾಕಾರ, ಖಂಡ ವಿಂಗಡಣೆಯಿಲ್ಲದಿರಬಹುದು. ದೇಹ ಗುಗುರಿ ಯಾಕಾರ, ಅಥವಾ ಗದೆಯಾಕಾರ, ಖಂಡ ವಿಂಗಡಣೆಯಿಲ್ಲದಿರಬಹುದು. ಖಂಡವಿಂಗಡಣೆ ಇರುವ ಪ್ರಾಣಿಗಳಲ್ಲಿ ಇರಬೇಕಾದ ಖಂಡ ಸಂಖ್ಯೆ ನಿರ್ದಿಷ್ಟ–16. ಉದಾ: ಸೈಕ್ಲಾಪ್ಸ್. (ಚಿತ್ರ 1).



**ಚಿತ್ರ 1 ಸೈಕ್ಲಾಪ್ಸ್**

**ಉಪವರ್ಗ 4, ಬ್ರಾಂಕಿಯೂರ:** ತಾತ್ಕಾಲಿಕವಾಗಿ ಮೀನುಗಳಲ್ಲಿ ಪರತಂತ್ರ ಜೀವಿಗಳಾಗಿರುತ್ತವೆ. ಸಂಯುಕ್ತಾಕ್ಷಿಗಳು, ಹೀರುಬಾಯಿ ಇವೆ, ಉದರ ಭಾಗದಲ್ಲಿ ಖಂಡ ವಿಂಗಡಣೆಯಾಗಲೀ ಪಾದಗಳಾಗಲೀ ಇಲ್ಲ, ಎದೆಯ ಭಾಗದಲ್ಲಿ ನಾಲ್ಕು ಜೊತೆ ಇಕ್ಕವಲು ಪಾದಗಳಿವೆ. ಇವುಗಳ ಎಕ್ಸೊಪೊಡೈಟ್‌ಗಳು ತುದಿಯಲ್ಲಿ ಹರಡಿವೆ. ಈ ಉಪವರ್ಗದ ಪ್ರಾಣಿಗಳೂ ಮೇಲೆ ನೋಡಲು ಕೋಪಿಪೋಡಗಳನ್ನೇ ಹೋಲುತ್ತವೆ. ಇವನ್ನು ಸಾಮಾನ್ಯವಾಗಿ ಕಾರ್ಪ್ ಮೀನಿನ ಹೇನು ಎಂದು ಕರೆಯುತ್ತಾರೆ. ಉದಾ: ಆರ್ಗ್ಯುಲಸ್. (ಚಿತ್ರ 2).



**ಚಿತ್ರ 2 ಆರ್ಗ್ಯುಲಸ್**

**ಉಪವರ್ಗ5, ಸಿರ್ರಿಪೀಡಿಯ :** ಇವು ಒಂದು ಜಾಗಕ್ಕೆ ಅಂಟಿಕೊಂಡು ಜೀವಿಸುತ್ತವೆ. ಬಹುತೇಕ ಉಭಯಲಿಂಗಿಗಳು. ಪ್ರಬುದ್ಧ ಪ್ರಾಣಿಯಲ್ಲಿ ಸಂಯುಕ್ತಾಕ್ಷಿಗಳಿಲ್ಲ. ಕ್ಯಾರಪೇಸ್ ಚಿಪ್ಪಿನಂತೆ ಪ್ರಾಣಿಯನ್ನು ಆವರಿಸುತ್ತದೆ. ಸಾಮಾನ್ಯವಾಗಿ ಆರು ಜೊತೆ ಇಕ್ಕವಲು ಎದೆಯ ಪಾದಗಳಿವೆ, ಇವನ್ನು ಪ್ರಬುದ್ಧಾವಸ್ಥೆಯಲ್ಲಿ ಕಠಿಣಚರ್ಮಿಗಳೆಂದು ಗುರುತಿಸುವುದು ಕಷ್ಟ.

**ಗಣ 1, ಥೊರ್‍ಯಾಸಿಕ :** ಅನ್ನನಾಳಗಳಿವೆ. ಆರು ಜೊತೆ ಎದೆಯ ಪಾದಗಳಿವೆ. ಉದರ ಭಾಗದಲ್ಲಿ ಖಂಡಗಳಿಲ್ಲ. ಇವು ಬಾಯಿಯ ಭಾಗದಿಂದ ಯಾವುದಾದರೂ ಆಧಾರಕ್ಕೆ ಸ್ಥಿರವಾಗಿ ಅಂಟಿಕೊಂಡಿರುತ್ತವೆ. ಉದಾ: ಲಿಪಾಸ್.



**ಚಿತ್ರ 3 ಏಡಿಯ ಕೆಳಭಾಗಕ್ಕೆ ಸ್ಯಾಕ್ಯುಲೈನ ಪ್ರಾಣಿ ಅಂಟಿರುವುದು**

**ಗಣ 2. ಆಕ್ರೊಥೊರ್‍ಯಾಸಿಕ:** ಭಿನ್ನ ಲಿಂಗಿಗಳು, ಅನ್ನನಾಳವಿದೆ. ಆರಕ್ಕಿಂತಲೂ ಕಡಿಮೆ ಜೊತೆ ಎದೆಯ ಪಾದಗಳಿವೆ. ಉದರ ಭಾಗದಲ್ಲಿ ಖಂಡಗಳಿಲ್ಲ. ಉದಾ: ಆಲ್ಸಿಪ್ಪಿ.

**ಗಣ 3. ಏಪೋಡ:** ಉಭಯ ಲಿಂಗಿಗಳು. ಚಿಪ್ಪು, ಎದೆಯ ಪಾದ, ಗುದದ್ವಾರ, ಯಾವುವೂ ಇಲ್ಲ, ಮಡಿಕೆಗಳಿಂದ ದೇಹವು ಉಂಗುರಗಳಾಗಿ ವಿಭಾಗವಾಗಿದೆ. ಉದಾ: ಪ್ರೋಟಿಯೊಲಿಪಾಸ್.

**ಗಣ 4: ರೈಜೊಕಿಫಾಲ:** ಡೆಕಪಾಡ್ ಕಠಿಣಚರ್ಮಿಗಳಲ್ಲಿ ಪರತಂತ್ರ ಜೀವಿಗಳಾಗಿ ವಾಸಿಸುತ್ತವೆ. ಅನ್ನನಾಳವಿಲ್ಲ. ಪ್ರಬುದ್ಧ ಪ್ರಾಣಿಯಲ್ಲಿ ಉಪಾಂಗಗಳಿಲ್ಲ. ಎಳೆಗಳಂಥ ಹೀರು ಬೇರುಗಳನ್ನು ಬೆಳೆಸಿಕೊಂಡು ಆಶ್ರಯದಾತ ಪ್ರಾಣಿಯ ದೇಹವನ್ನು ಆವರಿಸುತ್ತವೆ. ಉದಾ: ಸ್ಯಾಕ್ಯುಲೈನ. (ಚಿತ್ರ 3)

**ಗಣ 5: ಆಸ್ಕೊಥೊರ್‍ಯಾಸಿಕ :** ಪರತಂತ್ರ ಜೀವಿಗಳೂ. ಅನ್ನನಾಳವಿದೆ. ಆರು ಜೊತೆ ಎದೆಯ ಪಾದಗಳಿವೆ. ಉದಾ: ಲಾರಾ.

**ಉಪವರ್ಗ 6. ಮೆಲಕಾಸ್ಟ್ರೇಕ :** ಸಾಮಾನ್ಯವಾಗಿ ತೊಟ್ಟಿರುವ ಸಂಯುಕ್ತಾಕ್ಷಿಗಳಿವೆ. ಎದೆಯಲ್ಲಿ ಎಂಟು ಖಂಡಗಳಿವೆ. ಅದನ್ನು ಕ್ಯಾರಪೇಸ್ ಮುಚ್ಚಿದೆ. ಆರು ಖಂಡಗಳಿರುವ (ಅಪರೂಪವಾಗಿ ಏಳಿರುವ) ಉದರ ಭಾಗವಿದೆ. ಎಲ್ಲ ಖಂಡಗಳಿಗೂ ಉಪಾಂಗಗಳಿವೆ. ಈ ಉಪವರ್ಗದಲ್ಲಿ ವೈವಿಧ್ಯತೆಯನ್ನು ತೋರುವ ಹೇರಳ ಸಂಖ್ಯೆಯ ಪ್ರಭೇದಗಳಿವೆ.

**ಗಣ 1. ಲೆಪ್ಟೊಸ್ಟ್ರೇಕ :** ಏಳು ಉದರ ಖಂಡಗಳಿವೆ. ಪಾದಗಳು ಫಿಲ್ಲೊಪೋಡಿಯಂ ಮಾದರಿಯವು. ಎದೆಯ ಯಾವ ಖಂಡಕ್ಕೂ ಕೂಡಿಕೊಳ್ಳದ ಕ್ಯಾರಪೇಸ್ ಇದೆ. ಉದಾ: ನೆಬೇಲಿಯ.



**ಚಿತ್ರ 4 ಸ್ಕ್ವಿಲ್ಲ**

**ಗಣ 2. ಹಾಪ್ಲೊಕ್ಯಾರಿಡ :** ಮೂರು ಎದೆಯ ಖಂಡಗಳೊಂದಿಗೆ ಕೂಡಿದ ಕ್ಯಾರಪೇಸ್ ಇದೆ. ಉದಾ: ಸ್ಕ್ವಿಲ್ಲ. (ಚಿತ್ರ 4)

**ಗಣ 3. ಸಿನ್‌ಕ್ಯಾರಿಡ :** ಕ್ಯಾರಪೇಸ್ ಇಲ್ಲ. ಉದಾ: ಅನಾಸ್ಪಿಡಿಸ್.



**ಚಿತ್ರ 5 ಲಿಗಿಯ**

**ಗಣ 4. ಪೆರಕ್ಯಾರಿಡ :** ಕ್ಯಾರಪೇಸ್ ನಾಲ್ಕಕ್ಕಿಂತ ಹೆಚ್ಚಾಗಿ ಎದೆಯ ಖಂಡಗಳೊಂದಿಗೆ ಕೂಡಿಕೊಂಡಿಲ್ಲ. ಇದರ ಭಿನ್ನತೆಯೇ ಮುಂದಿನ ವರ್ಗೀಕರಣಕ್ಕೆ ಮೂಲ.

**ಉಪಗಣ 1. ಮೈಸಿಡೇಸಿಯ :** ಉದಾ : ಮೈಸಿಸ್.

**ಉಪಗಣ 2. ಕ್ಯುಮೇಸಿಯ :** ಉದಾ : ಡೈಯಾಸ್ಟೈಲಿಸ್.

**ಉಪಗಣ 3. ಟ್ಯಾನಾಯ್ಡೇಸಿಯ :** ಉದಾ : ಟ್ಯಾನಿಸ್

**ಉಪಗಣ 4. ಐಸೊಪೋಡ :** ಕ್ಯಾರಪೇಸ್ ಇಲ್ಲ. ದೇಹ ಕೆಳಗಿನಿಂದ ಪಕ್ಕಕ್ಕೆ ಚಪ್ಪಟೆಯಾಗಿದೆ. ಉದಾ : ಲಿಗಿಯ. ಚಿತ್ರ–5

**ಉಪಗಣ 5. ಆಂಫಿಪೋಡ :** ಕ್ಯಾರಪೇಸ್ ಇಲ್ಲ. ಪಕ್ಕದಿಂದ ಪಕ್ಕಕ್ಕೆ ದೇಹ ಚಪ್ಪಟೆಯಾಗಿದೆ. ಉದಾ: ಕ್ಯಾಪ್ರಿಲ್ಲ.

**ಗಣ 5. ಯೂಕ್ಯಾರಿಡ :** ಕ್ಯಾರಪೇಸ್ ಎದೆಯ ಎಲ್ಲ ಖಂಡಗಳೊಂದಿಗೆ ಕೂಡಿಕೊಂಡಿದೆ. ಉದಾ : ನಳ್ಳಿ, ಏಡಿ, ಸೀಗಡಿ ಇತ್ಯಾದಿ. (ಎಚ್.ಬಿ.ಡಿ.)

**ಕಠಿಣ ವ್ರತಗಳು :** ವೈದಿಕ ಧರ್ಮದ ಆಚರಣೆಯಲ್ಲಿ ಅಧ್ಯಯನ, ತಪಸ್ಸು, ಸಾಧನೆ ಮುಂತಾದುವನ್ನು ನಡೆಸುವಾಗ ತಿಳಿದೋ ತಿಳಿಯದೆಯೋ ನಡೆಯುವ ದೋಷಕ್ಕೆ ಪ್ರಾಯಶ್ಚಿತ್ತರೂಪದಲ್ಲಿ ಕೈಗೊಳ್ಳಬೇಕಾದ ವ್ರತಗಳು. ಹಿಂದು ಧರ್ಮಶಾಸ್ತ್ರ ಇವನ್ನು ಕೃಚ್ಛ್ರಗಳೆಂದು ಕರೆದಿದೆ. ಇವುಗಳ ವಿಚಾರ ಸ್ಮೃತಿ ಮತ್ತು ಪುರಾಣಗಳಲ್ಲಿ ಕಂಡು ಬರುತ್ತದೆ; ಋಗ್ವೇದಾದಿ ಶ್ರುತಿಗಳಲ್ಲೂ ಹೇಳಲ್ಪಟ್ಟಿದೆಯೆಂದು ಹಲವರ ಅಭಿಪ್ರಾಯ. ಶ್ರದ್ಧಾಳುವಿನ ಆಧ್ಯಾತ್ಮಿಕ ಅನ್ವೇಷಣೆಯಲ್ಲಾಗಲಿ, ಸಾಮಾನ್ಯ ಲೌಕಿಕನ ನಿತ್ಯಜೀವನದ ನಡೆವಳಿಕೆಯಲ್ಲಾಗಲಿ ಧರ್ಮದ ರೀತಿನೀತಿಗಳು ಉಲ್ಲಂಘನೆಗೊಳ್ಳುವ ಅನೇಕ ಸನ್ನಿವೇಶಗಳು ಒದಗಿಬರುತ್ತವೆ. ಅಂಥ ಧರ್ಮ ವಿರುದ್ಧವಾದ ಮಹಾಪಾತಕ ಮತ್ತು ಉಪಪಾತಕಗಳಿಗೆ ಪ್ರಾಯಶ್ಚಿತ್ತ ರೂಪದಲ್ಲಿ ಹಲವು ಸುಲಭ, ಹಲವು ಕಠಿಣ, ಹಲವು ಆಂತರಿಕ, ಹಲವು ಬಹಿರಂಗ ವ್ರತಗಳನ್ನು ಆಚರಿಸಿ, ಪಾಪ ಪರಿಹಾರವನ್ನು ಮಾಡಿಕೊಳ್ಳಬಹುದೆಂಬ ಆಶ್ವಾಸನ ನೀಡಬೇಕಾದುದು ಧರ್ಮದ ಸ್ಥಿರತೆಗೆ ಹೇಗೆ ಆವಶ್ಯಕವೋ ಧರ್ಮಾನುಯಾಯಿಗಳ ಮಾನಸಿಕ ಕ್ಷೋಭೆಯನ್ನು ನಿವಾರಿಸುವುದಕ್ಕೂ ಅಷ್ಟೇ ಆವಶ್ಯಕ. ನಿರಂತರ ಪಾಪಿಯೆನಿಸಿಕೊಂಡು ಆತ್ಮಹನನ ಮಾಡಿಕೊಳ್ಳುವುದಕ್ಕಿಂತ ಪಾಪನಿವಾರಣೆಯ ಮಾರ್ಗವನ್ನನುಸರಿಸಿ ಪಾಪವಿಮುಕ್ತರಾಗ ಬಹುದೆಂಬ ಅಭಯವನ್ನು ಧರ್ಮವೇ ನೀಡಬೇಕಿಲ್ಲದೆ ಬೇರಾವ ಶಕ್ತಿಯಿಂದಲೂ ಆಗದು.

ಅಷ್ಟಾದಶ ಪುರಾಣಗಳಲ್ಲಿ ಕಠಿಣವ್ರತಗಳ ಮೂಲಕ ಪ್ರಾಯಶ್ಚಿತ್ತವನ್ನು ಹೇಳಿದ್ದರೂ ವ್ರತಾಚರಣೆಯ ಲಕ್ಷಣ ಅಥವಾ ಕ್ರಮವನ್ನು ಧರ್ಮಶಾಸ್ತ್ರಗಳಿಂದ ತಿಳಿಯಬೇಕು. ವೈದಿಕ ಧರ್ಮ ಹಾಗೂ ಹಿಂದೂ ಸಮಾಜದ ಕಟ್ಟುನಿಟ್ಟುಗಳನ್ನು ಅನೇಕ ಧರ್ಮಸೂತ್ರ ಗ್ರಂಥಗಳು ವಿವರಿಸುತ್ತವೆ. ಅವುಗಳಲ್ಲಿ ಮುಖ್ಯವೆನಿಸಿದ ಹಲವು ಧರ್ಮಶಾಸ್ತ್ರ ಗ್ರಂಥಗಳು ಇವು : ಆಪಸ್ತಂಬಧರ್ಮ ಮತ್ತು ಗೃಹ್ಯಸೂತ್ರಗಳು; ಆಶ್ವಲಾಯನ ಗೃಹ್ಯ ಮತ್ತು ಶ್ರೌತಸೂತ್ರಗಳು, ಕಾತ್ಯಾಯನ ಶ್ರೌತಸೂತ್ರಗಳು, ಕಾತ್ಯಾಯನ ಶ್ರೌತಸೂತ್ರ, ಗೌತಮ ಧರ್ಮಸೂತ್ರ, ಪರಾಶರ ಸ್ಮೃತಿ, ಬೋಧಾಯನ-ಗೃಹ್ಯ-ಧರ್ಮ ಮತ್ತು-ಶ್ರೌತ ಸೂತ್ರಗಳು, ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ, ಶಾಂಖಾಯನ ಶ್ರೌತ ಸೂತ್ರ, ಹಾರಿತ ಸಂಹಿತೆ ಇತ್ಯಾದಿ.

ಇವೇ ಮೊದಲಾದ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಸು. 50ಕ್ಕೂ ಹೆಚ್ಚಿನ ಕೃಚ್ಛ್ರಗಳನ್ನು ವಿವರಿಸಿದ್ದಾರೆ. ಅಲ್ಲದೆ ಯಾವ ನಿರ್ದಿಷ್ಟವಾದ ಹೆಸರನ್ನೂ ನೀಡದೆಯೇ ಅನೇಕವಕ್ಕೆ ಆಚರಣಾ ವಿಧಿಗಳನ್ನು ಮಾತ್ರ ಹೇಳಿದ್ದಾರೆ. ಅಲ್ಲಿನ ಹಲವು ನಿರ್ದಿಷ್ಟ ಕೃಚ್ಛ್ರಗಳು ಇವು: ಅಘಮರ್ಷಣ, ಅತಿಕೃಚ್ಛ್ರ, ಅತಿಸಾಂತಪನ, ಅರ್ಧಕೃಚ್ಛ್ರ, ಅಶ್ವಮೇಧ, ಅವಭೃತ ಸ್ನಾನ, ಆಗ್ನೇಯ, ಋಷಿ ಚಾಂದ್ರಾಯಣ, ಏಕಭಕ್ತ, ಕೃಚ್ಛ್ರ, ಕೃಚ್ಛ್ರಾತಿಕೃಚ್ಛ್ರ, ಗೋಮೂತ್ರ, ಗೋವ್ರತ, ಚಾಂದ್ರಾಯಣ, ಜಲ, ತಪ್ತ, ತುಲಾಪುರುಷ, ದಧಿ, ದೇವ ದಂಡ, ನಿತ್ಯೋಪವಾಸ, ಪಂಚಗವ್ಯ, ಪತ್ರ, ಪರಾತ, ಪರ್ಣಕೂರ್ಚ, ಪರ್ಣಕೃಚ್ಛ್ರ, ಪಾದ, ಪಾದೋನ, ಪುಷ್ಪ, ಪ್ರಸೃತ-ಯಾವಕ, ಪ್ರಾಜಾಪತ್ಯ, ಫಲಕ, ಬಾಲಕೃಚ್ಛ್ರ, ಬೃಹತ್-ಯಾವಕ, ಬ್ರಹ್ಮಕೂರ್ಚ, ಬ್ರಹ್ಮ, ಮಹಾತಪ್ತ, ಮಹಾಸಾಂತಪನ, ಮಹೇಶ್ವರ, ಮೂಲ, ಮೈತ್ರ, ಯಜ್ಞ ಯತಿಚಾಂದ್ರಾಯಣ, ಯತಿ ಸಾಂತಪನ, ಯಾಮ್ಯ, ಯಾವಕ, ವಜ್ರ, ವಾಯವ್ಯ, ವೃದ್ಧ ಅಥವಾ ವೃದ್ಧಿ, ವ್ಯಾಸ, ಶಿಶು, ಶಿಶು ಚಾಂದ್ರಾಯಣ, ಶೀತ, ಶ್ರೀ, ಸಾಂತಪನ, ಸುರ ಚಾಂದ್ರಾಯಣ, ಸುವರ್ಣ, ಸೋಮಾಯನ, ಸೌಮ್ಯ-ಇತ್ಯಾದಿ.

ಈ ಮೇಲಿನವು ಹಲವು ಪ್ರಾಯಶ್ಚಿತ್ತ ರೂಪವಾದ ಕಠಿಣ ಅಥವಾ ಸೌಮ್ಯ ವ್ರತಗಳಾಗಿದ್ದು ಅವನ್ನು ಅನೇಕ ಬಗೆಯ ಪಾತಕ ನಿವಾರಣೆಗೆ ವಿಧಿಸಲಾಗಿದೆ. ಪಾತಕಗಳಲ್ಲಿ ನಿತ್ಯ, ನೈಮಿತ್ತಿಕ ಕರ್ಮಲೋಪದ ದೋಷದಿಂದ ಹಿಡಿದು ಬ್ರಹ್ಮಹತ್ಯೆ, ಶಿಶುಹತ್ಯೆ, ಗೋಹತ್ಯೆ, ಗುರುಪತ್ನೀಸಂಭೋಗ, ಸುವರ್ಣಚೌರ್ಯ, ಪ್ರಾಣಿಹತ್ಯೆ, ಸುರಾಪಾನ ಮುಂತಾದ ಅನೇಕ ಬಗೆಗಳಿವೆ. ಅವಕ್ಕೆ ತಕ್ಕಂತೆ ಪ್ರಾಯಶ್ಚಿತ್ತಗಳನ್ನು ಹೇಳಲಾಗಿದೆ. ಧರ್ಮಶಾಸ್ತ್ರಕಾರರು ಮುಖ್ಯವಾಗಿ ಪಾತಕಗಳನ್ನು 8 ಬಗೆಯಾಗಿ ವಿಂಗಡಿಸಿದ್ದಾರೆ: ಅತಿಪಾತಕ, ಮಹಾಪಾತಕ, ಅನುಪಾತಕ, ಉಪಪಾತಕ, ಜಾತಿಭ್ರಂಶಕರ, ಸಂಕರೀಕರಣ, ಅಪ್ರಾತೀಕರಣ ಮತ್ತು ಮಲಿನೀಕರಣ.

ಮನುಧರ್ಮಶಾಸ್ತ್ರದ ರೀತ್ಯಾ ಬ್ರಹ್ಮಹತ್ಯೆ, ಸುರಾಪಾನ, ಸುವರ್ಣಸ್ತೇಯ, ಗುರುಪತ್ನೀಗಮನ ಮುಂತಾದುವು ಮಹಾಪಾತಕಗಳು. ಗೋಹತ್ಯೆ, ಜಾತಿ ಮತ್ತು ಕರ್ಮದಿಂದ ದುಷ್ಟರಾದವರಿಂದ ಹೋಮ ಮಾಡಿಸುವುದು, ಪರಸ್ತ್ರೀ ಸಂಭೋಗ, ತನ್ನನ್ನೇ ತಾನು ಮಾರಿಕೊಳ್ಳುವುದು, ತಾಯಿ ತಂದೆ ಗುರುಗಳ ಸೇವೆ ಮಾಡದಿರುವುದು, ನಿತ್ಯ ಯಜ್ಞಾದಿಗಳಾದ ಬ್ರಹ್ಮಯಜ್ಞ ಮುಂತಾದವನ್ನು ಮಾಡದಿರುವುದು, ಸ್ಮೃತಿವಿಹಿತ ಔಪಾಸನಾದಿಗಳನ್ನು ಬಿಡುವುದು, ಪುತ್ರನನ್ನು ಬಿಡುವುದು, ಮೈನೆರೆದ ಕನ್ಯೆಯನ್ನು ಸಂಭೋಗದಿಂದಲ್ಲದೆ ಇತರ ರೀತಿಯಿಂದ ಕೆಡಿಸುವುದು, ಬಡ್ಡಿಯಿಂದ ಜೀವಿಸುವುದು, ಬ್ರಹ್ಮಚಾರಿಯಾದವ ತನ್ನ ವ್ರತವನ್ನು ಮರೆತು ಸ್ತ್ರೀಸಂಭೋಗ ಮಾಡುವುದು, ಕೆರೆ, ಹೂದೋಟ, ಪತ್ನೀ-ಪುತ್ರಾದಿಯಾದವರನ್ನು ಮಾರುವುದು, ಶಾಸ್ತ್ರೋಕ್ತ ಸಮಯದಲ್ಲಿ ಉಪನಯನವಿಲ್ಲದಿರುವುದು, ಹಿರಿಯ ಬಂಧುಗಳ ಮಾತನ್ನು ಕೇಳದಿರುವುದು, ದ್ರವ್ಯವನ್ನು ಪಡೆದು ವಿದ್ಯೆ ಹೇಳುವುದು, ವಿದ್ಯೆ ಕಲಿಯಲು ದ್ರವ್ಯವನ್ನು ನೀಡುವುದು, ಚಿನ್ನದ ಗಣಿಗಳಲ್ಲಿ ಅಧಿಕಾರ ವಹಿಸಿಕೊಳ್ಳುವುದು, ನೀರಿಗೆ ಅಣೆಕಟ್ಟನ್ನು ಹಾಕುವುದು, ಸಸ್ಯಗಳನ್ನು ವಿನಾಕಾರಣದಿಂದ ಕಡಿದುಹಾಕುವುದು, ಹೆಂಡತಿಯನ್ನು ವ್ಯಭಿಚಾರ ವೃತ್ತಿಗಿಳಿಸಿ ಅದರಿಂದ ಸಂಪಾದನೆ ಮಾಡುವುದು, ತಪ್ಪಿಲ್ಲದವರನ್ನು ಕೊಲ್ಲುವುದು, ಮಂತ್ರ, ಔಷಧಿಗಳಿಂದ ಜನರನ್ನು ವಶೀಕರಣ ಮಾಡಿಕೊಳ್ಳುವುದು, ಅಧಿಕಾರವಿದ್ದರೂ ಅಗ್ನಿಹೋತ್ರ ಮಾಡದಿರುವುದು, ದೇವ, ಋಷಿ, ಪಿತೃ ಋಣವನ್ನು ಪರಿಹರಿಸದಿರುವುದು, ವೇದಸ್ಮೃತಿಗಳಿಗೆ ವಿರುದ್ಧವಾದ ಶಾಸ್ತ್ರವನ್ನು ಕಲಿಯುವುದು, ಧಾನ್ಯ, ತಾಮ್ರ, ಕಬ್ಬಿಣ, ಪಶು ಇತ್ಯಾದಿಗಳನ್ನು ಕದಿಯುವುದು, ಸುರಪಾನ ಮಾಡುವ ಸ್ತ್ರೀಯೊಡನೆ ಸಂಭೋಗ ಮಾಡುವುದು, ಸ್ತ್ರೀ, ಶೂದ್ರ, ವೈಶ್ಯ ಮತ್ತು ಕ್ಷತ್ರಿಯರನ್ನು ಕೊಲ್ಲುವುದು, ನಾಸ್ತಿಕಮತದಲ್ಲಿ ಪ್ರವರ್ತಿಸುವುದು-ಇವೇ ಮುಂತಾದವು ಉಪಪಾತಕಗಳು. ಕೋಲಿನಿಂದಾಗಲಿ, ಆಯುಧದಿಂದಾಗಲಿ ಹೊಡೆದು ಬ್ರಾಹ್ಮಣನಿಗೆ ಪೀಡೆ ಕೊಡುವುದು, ಅತ್ಯಂತ ದುರ್ವಾಸನೆಯುಳ್ಳ ಬೆಳ್ಳುಳ್ಳಿ, ಮಲ, ಮುಂತಾದವನ್ನು ಮೂಸುವುದು, ಕುಟಿಲತನ, ಗಂಡಸಿನೊಡನೆ ಗಂಡಸು ಸಂಭೋಗ ಮಾಡುವುದು-ಇವೇ ಮುಂತಾದುವು ಜಾತಿಭ್ರಂಶಕರ ಪಾತಕಗಳು, ಕತ್ತೆ, ಕುದುರೆ, ಒಂಟೆ, ಜಿಂಕೆ, ಆನೆ, ಆಡು, ಕುರಿ, ಮೀನುಹಾವು, ಕೋಣ ಇವನ್ನು ಕೊಲ್ಲುವುದು ಸಂಕರೀಕರಣ ಪಾತಕಗಳು. ಯಾರಿಂದ ಪಡೆಯಬಾರದೋ ಅಂಥ ನೀಚ ಜನರಿಂದ ದ್ರವ್ಯವನ್ನು ಪಡೆಯುವುದು, ಕ್ರಯ ವಿಕ್ರಯ ವ್ಯಾಪಾರ, ಶೂದ್ರನನ್ನು ಸೇವಿಸುವುದು, ಸುಳ್ಳು ಹೇಳುವುದು ಇವೆಲ್ಲ ಅಪಾತ್ರೀಕರಣ ಪಾತಕಗಳು. ಹುಳು, ಕೀಟ, ಹಕ್ಕಿ, ಮುಂತಾದವನ್ನು ಕೊಲ್ಲುವುದು, ಮದ್ಯಪದಾರ್ಥದೊಂದಿಗೆ ತಂದ ಹಣ್ಣುಹಂಪಲನ್ನು ತಿನ್ನುವುದು, ಹಣ್ಣು, ಕಟ್ಟಿಗೆ, ಪುಷ್ಪಗಳನ್ನು ಕದಿಯುವುದು ಮುಂತಾದುವು ಮಲಿನೀಕರಣ ಪಾತಕಗಳು. ಹೀಗೆ ಅನೇಕ ಬಗೆಯ ಪಾತಕಗಳನ್ನು ಇತರ ಧರ್ಮಶಾಸ್ತ್ರಕಾರರೂ ಹೇಳುತ್ತಾರೆ.

ಇಂಥ ಧರ್ಮ ವಿರುದ್ಧವಾದ ಪಾತಕಗಳನ್ನು ಮಾಡಿದವರು ಜಾತಿ, ಆಯು ಮತ್ತು ಭೋಗ ಎಂಬ ಮೂರು ಬಗೆಯ ಕರ್ಮವಿಪಾಕವನ್ನು ಅನುಭವಿಸುತ್ತಾರೆಂದು ಪಾತಂಜಲಯೋಗ ಸೂತ್ರ ಹೇಳುತ್ತದೆ. ಮಾಡಿದ ಕರ್ಮಕ್ಕೆ ಅನುಗುಣವಾಗಿ ಒಬ್ಬ ಕ್ರಿಮಿ, ಕೀಟ ಮುಂತಾದ ಜಾತಿಯಲ್ಲಿ ಹುಟ್ಟಬಹುದು; ಅಲ್ಪ ಆಯಸ್ಸನ್ನು ಪಡೆಯಬಹುದು; ಅಥವಾ ನರಕದ ಯಾತನೆಯನ್ನು ಅನುಭವಿಸಬೇಕಾಗಬಹುದು. ಪಾತಕಿ ತನ್ನ ಕರ್ಮದ ಪಾಪವನ್ನು ಎರಡು ರೀತಿಯಲ್ಲಿ ನಿವಾರಿಸಿಕೊಳ್ಳಬಹುದೆಂದು ಮಹಾರ್ಣವ ಕರ್ಮವಿಪಾಕ ಎಂಬ ಗ್ರಂಥಕಾರನಾದ ಮಾಂಧಾತೃ ಹೇಳುತ್ತಾನೆ : ಒಂದು -ಪ್ರಾಯಶ್ಚಿತ್ತ ರೂಪವಾದ ಕೃಚ್ಛ್ರವನ್ನು ಆಚರಿಸುವುದು. ಮತ್ತೊಂದು-ವ್ಯಾಧಿ ವಿಪರ್ಯರೂಪನಾದ, ಆರೋಗ್ಯಕ್ಕೆ ಅಧಿದೇವತೆಯೆನಿಸಿದ ಸೂರ್ಯನ ಉಪಾಸನೆಯನ್ನು ಮಾಡುವುದು.

ಪ್ರಾಯಶ್ಚಿತ್ತ ರೂಪವಾದ ಕೃಚ್ಛ್ರಗಳು ಅನೇಕವಿದ್ದರೂ ಅವು ಯಾವ ಲಕ್ಷಣದಿಂದ ಇವೆ ಎಂಬುದನ್ನು ತಿಳಿಯುವ ಉದ್ದೇಶದಿಂದ ಹಲವು ಕೃಚ್ಛ್ರಗಳು ವಿಧಾನವನ್ನು ಮಾತ್ರ ಇಲ್ಲಿ ನಿರೂಪಿಸಿದೆ.

**ಕೃಚ್ಛ್ರ:** ಸಾಮಾನ್ಯವಾಗಿ ಎಲ್ಲ ಪ್ರಾಯಶ್ಚಿತ್ತ ಕರ್ಮಗಳಿಗೂ ಅನ್ವಯಿಸುವ ಹೆಸರಿದು. ಕೃಚ್ಛ್ರದ ಲಕ್ಷಣವನ್ನು ಸಾಮವಿಧಾನ ಬ್ರಾಹ್ಮಣ ಈ ರೀತಿ ಹೇಳುತ್ತದೆ. ಇದು 9 ದಿನಗಳು ನಡೆಯುವ ಕರ್ಮ. ಮೊದಲ ಮೂರು ದಿನಗಳು ಹಗಲಿನಲ್ಲೂ ಮುಂದಿನ ಮೂರು ದಿನಗಳಲ್ಲೂ ರಾತ್ರಿಯಲ್ಲೂ ಊಟ. ಅನಂತರದ ಮೂರು ದಿನಗಳಲ್ಲಿ ಸಂಪೂರ್ಣ ಉಪವಾಸ. ವ್ರತಕರ್ಮವನ್ನು ಬೇಗ ಪೂರ್ಣಗೊಳಿಸುವ ಆತುರ ಉಳ್ಳವ ಸದಾ ನಿಂತು ಕೊಂಡೇ ಹಗಲನ್ನೂ ಸದಾ ಕುಳಿತು ಕೊಂಡೇ ರಾತ್ರಿಯನ್ನೂ ಕಳೆಯಬೇಕು. ಆಪಸ್ತಂಬ ಧರ್ಮಸೂತ್ರ ಈ ವ್ರತವನ್ನು 12 ದಿನ ವಿಧಿಸಿದೆ. ಗೌತಮ ಧರ್ಮಸೂತ್ರ ಊಟ ಮಾಡುವ ವಿಧಿಗೆ ಪೂರಕವಾಗಿ ಇತರ ಹಲವು ವಿಧಿಗಳನ್ನು ಹೇಳಿದೆ. ವ್ರತದ ಕಾಲದಲ್ಲಿ ಸತ್ಯವನ್ನೇ ಹೇಳಬೇಕು. ಅನಾರ್ಯ ಸ್ತ್ರೀಪುರುಷರೊಂದಿಗೆ ಸಂಭಾಷಣೆ ಮಾಡಕೂಡದು. ರೌರವ ಮತ್ತು ಯೌಧಾಜಪ ಸಾಮಗಳನ್ನು ಯಾವಾಗಲೂ ಕೀರ್ತಿಸುತ್ತಿರಬೇಕು. ದಿನಕ್ಕೆ ಒಂಬತ್ತು ಸಲ, ಹೊತ್ತಿಗೆ ಮೂರು ಸಲದಂತೆ, ಬಾವಿಯಲ್ಲಿ ಮುಳುಗಬೇಕು. ಆಪೋಹಿಷ್ಠ ಮೊದಲಾದ, ಋಕ್ಕುಗಳಿಂದ ಪವಿತ್ರವತೀ ಮಂತ್ರಗಳಾದ ಪವಮಾನಃ ಸುವರ್ಜನಃ ಮುಂತಾದವನ್ನು ಹೇಳಬೇಕು. ತರ್ಪಣ ಬಿಡಬೇಕು. ಸೂರ್ಯೋಪಾಸನೆ ಮಾಡಬೇಕು. ತುಪ್ಪದಿಂದ ಹೋಮ ಮಾಡಬೇಕು. ಅಗ್ನಿ, ಸೋಮ, ಇಂದ್ರಾದಿಗಳಿಗೆ ಹವಿರ್ಭಾಗವನ್ನು ಅರ್ಪಿಸಬೇಕು. 13ನೆಯ ದಿನ ಬ್ರಾಹ್ಮಣ ಸಂತರ್ಪಣೆ ಮಾಡಬೇಕು.

ಕೃಚ್ಛ್ರವೆಂಬ ಈ ಪ್ರಾಯಶ್ಚಿತ್ತವನ್ನು ಮನುಸ್ಮೃತಿ ಈ ಕೆಳಗಿನ ಸಂದರ್ಭಗಳಲ್ಲಿ ವಿಧಿಸುತ್ತದೆ: ವ್ರಾತ್ಯರಾಗಿದ್ದವರಿಗೆ ಯಾಗ ಮಾಡಿಸುವುದು, ತಂದೆ ತಾಯಿ ಮೊದಲಾದವರಲ್ಲ ದವರಿಗೆ ಎಂದರೆ ಉತ್ತರಕ್ರಿಯೆ ಮಾಡಿಸಿಕೊಳ್ಳಲು ಅಯೋಗ್ಯರಾದವರಿಗೆ ಉತ್ತರಕ್ರಿಯೆ ಮಾಡುವುದು, ಮಾರಣ ಮಾಡಬಾರದವರಿಗೆ ಮಾರಣಮಾಡುವುದು, ಅಹೀನವೆಂಬ

ಯಜ್ಞವನ್ನು ಆಚರಿಸುವುದು ಮುಂತಾದ ಪಾತಕಗಳಿಗೆ ಮೂರು ಸಲ ಕೃಚ್ಛ್ರವನ್ನು ಆಚರಿಸಬೇಕು. ಅಲ್ಲದೆ ಬ್ರಾಹ್ಮಣವನ್ನು ಕೊಲ್ಲುವ ಉದ್ದೇಶದಿಂದ ಆಯುಧವನ್ನು ಎತ್ತಿದ ಮಾತ್ರಕ್ಕೇ ಕೃಚ್ಛ್ರವನ್ನು ಆಚರಿಸಬೇಕು.

**ಅತಿಕೃಚ್ಛ್ರ:** ಮನುವಿನ ಪ್ರಕಾರ ಈ ಪ್ರಾಯಶ್ಚಿತ್ತ 12 ದಿನಗಳ ವ್ರತ. ಮೊದಲ ಮೂರು ದಿನ ಹಗಲಲ್ಲಿ ಮಾತ್ರ ಊಟ; ಮುಂದಿನ ಮೂರು ದಿನ ರಾತ್ರಿಯ ಕಾಲದಲ್ಲಿ ಮಾತ್ರ. ಅನಂತರದ ಮೂರು ದಿನಗಳಲ್ಲಿ ಬೇರೆಯವರು ಉಪಯೋಗಿಸದ, ಹೆಚ್ಚಿನ ಅನ್ನಭಾಗವನ್ನು ಮಾತ್ರ ಉಣ್ಣಬೇಕು. ಕೊನೆಯ ಮೂರು ದಿನಗಳಲ್ಲಿ ಸಂಪೂರ್ಣ ಉಪವಾಸವನ್ನು ಮಾಡಬೇಕು. ಊಟಮಾಡುವ ದಿನಗಳಲ್ಲೂ ನಿಯಮಿತ ಪ್ರಮಾಣವನ್ನೇ ವಿಧಿಸಲಾಗಿದೆ. ಹಗಲು ಭೋಜನದ ದಿನಗಳಲ್ಲಿ ಕೋಳಿಮೊಟ್ಟೆ ಗಾತ್ರದ 26 ಗ್ರಾಸ, ರಾತ್ರಿಯ ಕಾಲದ ಊಟದ ವೇಳೆಯಲ್ಲಿ 32 ಗ್ರಾಸ, ಅನಂತರದ ಮೂರು ದಿನಗಳಲ್ಲಿ 24 ಗ್ರಾಸ. ಯಾಜ್ಞವಲ್ಕ್ಯ ಸ್ಮೃತಿಯಂತೂ ಎಲ್ಲ ಕಾಲದಲ್ಲೂ ಒಂದೇ ಮುಷ್ಠಿ ಮಾತ್ರದ ಪ್ರಮಾಣವನ್ನು ಅನುಮೋದಿಸಿದೆ.

ಮನುಸ್ಮೃತಿ ಮತ್ತು ವಿಷ್ಣುಧರ್ಮ ಸೂತ್ರಗಳ ಅಭಿಪ್ರಾಯದಲ್ಲಿ ಅತಿಕೃಚ್ಛ್ರ ಬ್ರಾಹ್ಮಣನನ್ನು ಕೋಲಿನಿಂದ ಅಥವಾ ಖಡ್ಗದಿಂದ ಹೊಡೆದು ಘಾಸಿಮಾಡಿದ ಪಾತಕಕ್ಕೆ ಪ್ರಾಯಶ್ಚಿತ್ತ. ಗೌತಮ ಧರ್ಮಶಾಸ್ತ್ರದ ರೀತ್ಯಾ ಈ ಪ್ರಾಯಶ್ಚಿತ್ತವನ್ನು ಮಹಾಪಾತಕಗಳನ್ನು ಬಿಟ್ಟು ಎಲ್ಲ ಪಾತಕಗಳ ನಿವಾರಣೆಗೂ ವಿಧಿಸಲಾಗಿದೆ.

**ಕೃಚ್ಛ್ರಾತಿ ಕೃಚ್ಛ್ರ :** ಗೌತಮ ಧರ್ಮಸೂತ್ರ, ಸಾಮವಿಧಾನ ಬ್ರಾಹ್ಮಣ, ವಸಿಷ್ಠ ಧರ್ಮಸೂತ್ರ– ಇವುಗಳ ಆಧಾರದ ಮೇಲೆ ಕೃಚ್ಛ್ರಾತಿಕೃಚ್ಛ್ರ ವ್ರತಕೃಚ್ಛ್ರದಂತೆಯೇ ಆಚರಿಸತಕ್ಕಂಥದು. ಆದರೆ ನಿರಶನ ವ್ರತದ ದಿನಗಳಲ್ಲಿ ನೀರನ್ನೂ ನಿಷೇಧಿಸಿದೆ. ಯಾಜ್ಞಾವಲ್ಕ್ಯ ಸ್ಮೃತಿ, ದೇವಲ ಸ್ಮೃತಿ ಮತ್ತು ಬ್ರಹ್ಮಪುರಾಣಗಳ ಅಭಿಪ್ರಾಯದಲ್ಲಿ ಈ ಪ್ರಾಯಶ್ಚಿತ್ತ ಕರ್ಮದಲ್ಲಿ ಕೇವಲ ನೀರನ್ನೇ ಕುಡಿದು 21 ದಿನ ಕಳೆಯಬೇಕೆಂದೂ ಇತರರ ಪ್ರಕಾರ 24 ದಿನಗಳವರೆಗೂ ಕಳೆಯಬೇಕೆಂದೂ ವಿದಿಸಿದೆ.

ಬ್ರಾಹ್ಮಣನನ್ನು ಆಯುಧದಿಂದ ಹೊಡೆದು ರಕ್ತಸ್ರಾವಗೊಳಿಸುವುದರ ಪ್ರಾಯಶ್ಚಿತ್ತವಾಗಿ ಈ ಕೃಚ್ಛ್ರವನ್ನು ಆಚರಿಸಬೇಕೆಂದು ಮನುಧರ್ಮ ಸೂತ್ರ ಹೇಳಿದೆ. ಆದರೆ ಗೌತಮ ಧರ್ಮಸೂತ್ರ ಸಾಮವಿಧಾನ ಬ್ರಾಹ್ಮಣಗಳ ಪ್ರಕಾರ ಸರ್ವಪಾಪಗಳ ಪರಿಹಾರ್ಥವಾಗಿ ಇದನ್ನು ಆಚರಿಸಬಹುದು.

**ಚಾಂದ್ರಾಯಣ :** ಚಂದ್ರನ ವೃದ್ಧಿ ಮತ್ತು ಕ್ಷಯದ ಕ್ರಮವನ್ನು ಅನುಸರಿಸುವ ಈ ಪ್ರಾಯಶ್ಚಿತ್ತಕರ್ಮಕ್ಕೆ ಚಾಂದ್ರಾಯಣವೆಂದು ಹೆಸರು. ಚಾಂದ್ರಾಯಣ ಎರಡು ವಿಧವೆಂದು ಮನುಸ್ಮೃತಿಯೂ ಬೌಧಾಯನ ಧರ್ಮಸೂತ್ರವೂ ತಿಳಿಸುತ್ತವೆ. ಮೊದಲನೆಯದು ಪಿಪೀಲಿಕ ಮಧ್ಯ ಚಾಂದ್ರಾಯಣ; ಎರಡನೆಯದು ಯಮಮಧ್ಯ ಚಾಂದ್ರಾಯಣ. ಮನುಸ್ಮೃತಿ ಪಿಪೀಲಿಕ ಮಧ್ಯ (ಇರುವೆಯ ಶರೀರದಂತೆ ಕೊನೆಗಳಲ್ಲಿ ಗಾತ್ರ ಹೆಚ್ಚಿದ್ದು ಮಧ್ಯದಲ್ಲಿ ಗಾತ್ರ ಸಣ್ಣ ಇರುವಂತೆ) ಚಾಂದ್ರಾಯಣವನ್ನು ಈ ರೀತಿ ವಿವರಿಸುತ್ತದೆ : ತ್ರಿಕಾಲಗಳಲ್ಲೂ ಸ್ನಾನಮಾಡುತ್ತ ಹುಣ್ಣಿಮೆ ದಿನ 15 ಗ್ರಾಸಗಳನ್ನುಂಡು ಮಾರನೆಯ ಪಾಡ್ಯದಿಂದ ದಿನ ದಿನಕ್ಕೂ ಒಂದೊಂದು ಗ್ರಾಸವನ್ನು ಕಡಿಮೆ ಮಾಡುತ್ತ ಚತುರ್ದಶಿಯ ದಿನ ಒಂದೇ ಗ್ರಾಸವನ್ನುಂಡು ಅಮಾವಸ್ಯೆಯ ದಿನ ಉಪವಾಸವಿದ್ದು, ಮಾರನೆಯ ಪಾಡ್ಯದಿಂದ ಒಂದೊಂದರಂತೆ ಗ್ರಾಸವನ್ನು ಹೆಚ್ಚು ಮಾಡುತ್ತ ಹುಣ್ಣಿಮೆ ದಿನಕ್ಕೆ 15 ಗ್ರಾಸಗಳನ್ನು ಭುಂಜಿಸತಕ್ಕದ್ದು. ಯಮಮಧ್ಯ ಚಾಂದ್ರಾಯಣದಲ್ಲಿ (ಬೀಜ ಕೊನೆಗಳಲ್ಲಿ ಸಣ್ಣ ಮತ್ತು ಮಧ್ಯದಲ್ಲಿ ದಪ್ಪ ಇರುವಂತೆ) ವ್ರತಾರಂಭದಲ್ಲಿ ನಿರಶನವನ್ನು ಪಾಲಿಸಿ ದಿನಕ್ಕೆ ಒಂದೊಂದು ಗ್ರಾಸವನ್ನು ಹೆಚ್ಚಿಸುತ್ತ ಹುಣ್ಣಿಮೆ ಕಳೆದ ಮೇಲೆ ದಿನ ದಿನಕ್ಕೆ ಒಂದೊಂದು ಗ್ರಾಸವನ್ನು ಕಡಿಮೆ ಮಾಡುತ್ತ ಹೋಗುವ ವಿಧಿ.

ಚಾಂದ್ರಾಯಣ ವ್ರತದ ಆಚರಣೆಯಿಂದ ಚಂದ್ರಲೋಕ ಪ್ರಾಪ್ತಿಯಾಗುವುದೆಂದು ಮನುವಿನ ಮತ. ಹಾಗೆಯೇ ಈ ವ್ರತವನ್ನು ಯಾರೂ ಯಾವಾಗಲೂ ಆಚರಿಸಬಹುದೆಂದು, ಇದರಿಂದ ಸರ್ವಪಾತಕಗಳೂ ನಾಶವಾಗಿ ಪುಣ್ಯಸಂಚಯವೂ ಆಗುವುದೆಂದು ಯಾಜ್ಞವಲ್ಕ್ಯನ ಅಭಿಪ್ರಾಯ. ಮನು ಈ ವ್ರತವನ್ನು ಗುರುತಲ್ಪಗಮನ ಅಥವಾ ಸಮಾನವಾದ ಇತರ ಪಾತಕಗಳ ಪರಿಹಾರಕ್ಕೂ ವಿಧಿಸುತ್ತಾನೆ. ಗೌತಮ ಧರ್ಮಸೂತ್ರದ ಪ್ರಕಾರ ಚಾಂದ್ರಾಯಣ ಎಲ್ಲ ಪಾತಕ ನಿವಾರಣೆಗೂ ಸಾಧನ.

**ಪ್ರಾಜಾಪತ್ಯ :** ಈ ಕೃಚ್ಛ್ರವನ್ನು ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ, ವಿಷ್ಣುಧರ್ಮಸೂತ್ರ, ಅತಿಸ್ಮೃತಿ, ಶಂಖ ಸ್ಮೃತಿ, ಬೌಧಾಯನ ಧರ್ಮಸೂತ್ರವೇ ಮೊದಲಾದ ಅನೇಕ ಧರ್ಮಶಾಸ್ತ್ರ ಗ್ರಂಥಗಳು ವಿಧಿಸುತ್ತವೆ.

ಮನು ಮತ್ತು ವಸಿಷ್ಠರ ಪ್ರಕಾರ ಈ ಕೃಚ್ಛ್ರ 12 ದಿನಗಳ ಪರ್ಯಂತ ನಡೆಸತಕ್ಕದ್ದು. ಮೊದಲ ಮೂರು ದಿನ ಹಗಲಿನ ಸಮಯದಲ್ಲೂ ಅನಂತರದ ಮೂರು ದಿನ ಸಾಯಂಕಾಲದ ಮೇಲೂ ಊಟ ಮಾಡತಕ್ಕದ್ದು. ಆಮೇಲೆ ಮೂರು ದಿನಗಳಲ್ಲಿ ಯಾರಿಗೂ ಬೇಡದೆ ಬಿಟ್ಟ ಪದಾರ್ಥಗಳನ್ನು ಊಟ ಮಾಡತಕ್ಕದ್ದು. ಕೊನೆಯ ಮೂರು ದಿನಗಳಲ್ಲಿ ಉಪವಾಸವಿರತಕ್ಕದ್ದು. ಈ ಪ್ರಾಜಾಪತ್ಯದಲ್ಲಿ ಅನುಲೋಮ, ಪ್ರತಿಲೋಮ ಎಂದು ಎರಡು ವಿಧವುಂಟು. ಪ್ರಾಜಾಪತ್ಯವನ್ನು ಮಹಾಪಾತಕವಾದ ಗುರುತಲ್ಪಗಮನಕ್ಕೆ ವಿಧಿಸಿದೆ. ಗುರುಪತ್ನೀಸಂಸರ್ಗ ಮಾಡಿದವ ಖಟ್ವಾಂಗವೆಂಬ ಆಯುಧವನ್ನು ಹೊತ್ತುಕೊಂಡು, ನಾರು ಬಟ್ಟೆಯನ್ನುಟ್ಟು, ಕ್ಷೌರವಿಲ್ಲದೆ ತಲೆ ಗಡ್ಡಗಳನ್ನು ಬೆಳೆಸಿಕೊಂಡು, ಜಿತೇಂದ್ರಿಯನಾಗಿ ನಿರ್ಜನ ಕಾಡಿನಲ್ಲಿ ಒಂದು ವರ್ಷಕಾಲವಿದ್ದು ವ್ರತನಿಷ್ಠನಾಗಿರಬೇಕೆಂದು ಮನುವಿನ ವಿಧಿ. ಹಾಗೆಯೆ ಜಾತಿಭ್ರಂಶಕರ ಪಾತಕಕ್ಕೂ ಸರ್ಪಾದಿಗಳ ಸಂಹರಣ ಪಾತಕಕ್ಕೂ ಬ್ರಹ್ಮಚಾರಿ ತಿಳಿಯದೆಯೇ ಮದ್ಯವನ್ನಾಗಲಿ ಮಾಂಸವನ್ನಾಗಲಿ ಸೇವಿಸಿದುದಕ್ಕೂ ಈ ವ್ರತವನ್ನು ಮನು ವಿಧಿಸಿದ್ದಾನೆ. ಇದನ್ನು ಸ್ತ್ರೀಯರೂ ಆಚರಿಸಬಹುದೆಂದು ಮನುವಿನ ಮತ. ಸ್ತ್ರೀ ಪರಪುರುಷನೊಡನೆ ಸಂಸರ್ಗ ಮಾಡಿದುದರ ಪ್ರಾಯಶ್ಚಿತ್ತಕ್ಕೆ ಈ ವ್ರತವನ್ನು ಆಚರಿಸಬೇಕೆಂದು ಆತ ಹೇಳುತ್ತಾನೆ.

**ಸಾಂತಪನ :** ಈ ಕೃಚ್ಛ್ರದಲ್ಲಿ ಮಹಾಸಾಂತಪನ ಅತಿಸಾಂತಪನವೆಂದು ಎರಡು ವಿಧ. ಮನುಸ್ಮೃತಿಯ ಪ್ರಕಾರ ಪಂಚಗವ್ಯ (ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ) ಮತ್ತು ದರ್ಭೆಯ ನೀರುಗಳನ್ನು ಮಿಶ್ರ ಮಾಡಿ ಒಂದು ದಿನ ಕುಡಿದು, ಬೇರೆ ಯಾವುದನ್ನೂ ಸೇವಿಸದೆ, ಮರುದಿನ ಉಪವಾಸವನ್ನು ಆಚರಿಸುವ ವ್ರತವೇ ಸಾಂತಪನ. ಯಾಜ್ಞವಲ್ಕ್ಯ ಸ್ಮೃತಿ ಮತ್ತು ಲೌಗಾಕ್ಷಿ ಗೃಹ್ಯ ಸೂತ್ರಗಳ ಪ್ರಕಾರ ಮಹಾಸಾಂತಪನವೆಂದರೆ 7 ದಿನಗಳ ವ್ರತ. ಮೊದಲ ಆರು ದಿನಗಳಲ್ಲಿ ಪ್ರತ್ಯೇಕವಾಗಿ ಪಂಚಗವ್ಯ ಮತ್ತು ದರ್ಭೆಯ ನೀರನ್ನು ಕುಡಿದು, 7ನೆಯ ದಿನ ಉಪವಾಸ ಮಾಡುವುದು. ಈ 7 ದಿನಗಳ ಕೃಚ್ಛ್ರವನ್ನು ದೇವಲ ಸ್ಮೃತಿ ಮತ್ತು ಅತ್ರಿ ಸ್ಮೃತಿಗಳೂ ಅನುಮೋದಿಸುತ್ತವೆ. ಆದರೆ ಬೌಧಾಯನ ಧರ್ಮಸೂತ್ರ ಮತ್ತು ಶಂಖ ಸ್ಮೃತಿಗಳು 21 ದಿನಗಳ ಪರ್ಯಂತ ಈ ವ್ರತವನ್ನು ಆಚರಿಸಬೇಕೆಂದು ಹೇಳುತ್ತವೆ. ಮನುಸ್ಮೃತಿ ಪಂಚಗವ್ಯವನ್ನು 3 ದಿನ ಆಹಾರವಾಗಿಯೇ ತೆಗೆದುಕೊಳ್ಳಬೇಕೆಂದು ನಿಯಮಿಸಿ, 15 ದಿನಗಳವರೆಗೂ ಮಹಾ ಸಾಂತಪನವನ್ನು ಆಚರಿಸಬೇಕೆಂದು ವಿಧಿಸುತ್ತದೆ.

ಈ ಕೃಚ್ಛ್ರವನ್ನು ಜಾತಿಭ್ರಂಶಕರ ಪಾತಕ ನಿವಾರಣೆಗೂ ಹೆಣ್ಣುಕುದುರೆ ಮುಂತಾದ ಪಶುಗಳನ್ನಾಗಲಿ, ಮುಟ್ಟಾದ ಸ್ತ್ರೀಯನ್ನಾಗಲಿ ಸಂಭೋಗ ಮಾಡಿದ ಪಾತಕಕ್ಕೂ ಸ್ತ್ರೀಯೋನಿಯಲ್ಲದೆ ಬೇರೆಲ್ಲಿಯಾದರೂ ರೇತಸ್ಸೇಚನ ಮಾಡಿದ ಪಾತಕಕ್ಕೂ ವಿಧಿಸಿದೆ.

**ತಪ್ತ ಕೃಚ್ಛ್ರ :** ಮನು ಧರ್ಮಶಾಸ್ತ್ರದಂತೆ ಈ ವ್ರತವನ್ನಾಚರಿಸುವ ಬ್ರಾಹ್ಮಣ ಮೂರು ದಿನ ಬಿಸಿ ನೀರನ್ನೂ ಮೂರು ದಿನ ಬಿಸಿ ಹಾಲನ್ನೂ ಮೂರು ದಿನ ತುಪ್ಪವನ್ನೂ ಮೂರು ದಿನ ಬಿಸಿ ಗಾಳಿಯನ್ನೂ ಸೇವಿಸುತ್ತ ದಿನಕ್ಕೆ ಒಂದು ಸ್ನಾನ ಮಾಡಬೇಕು. ಈ ವಸ್ತುಗಳ ಪ್ರಮಾಣವನ್ನು ಪರಾಶರ ಸ್ಮೃತಿ ವಿಧಿಸುತ್ತದೆ. ಇದನ್ನೇ ಅತ್ರಿ ಸ್ಮೃತಿಯೂ ಬ್ರಹ್ಮಪುರಾಣವೂ ಅನುಮೋದಿಸುತ್ತವೆ. ಈ ವ್ರತವನ್ನು 12 ದಿನಗಳವರೆಗೂ ದೀರ್ಘಗೊಳಿಸದೆ 4 ದಿನಗಳಲ್ಲೇ ಮುಗಿಸಬಹುದೆಂದು ಯಾಜ್ಞವಲ್ಕ್ಯ ಮತ್ತು ದೇವಲ ಸ್ಮೃತಿಗಳ ಅಭಿಪ್ರಾಯ.

ಹಸಿಮಾಂಸ ತಿನ್ನುವ ನಾಯಿ, ಕೋಳಿ, ಕಾಗೆ ಮತ್ತು ಕತ್ತೆಗಳ ಮಾಂಸವನ್ನು ತಿನ್ನುವ ಪಾತಕಕ್ಕೆ ತಪ್ತಕೃಚ್ಛ್ರವನ್ನು ಮನು ವಿಧಿಸಿದ್ದಾನೆ. ಪಂಚಗವ್ಯ ವಸ್ತುಗಳಲ್ಲೊಂದನ್ನು ಚೆನ್ನಾಗಿ ಕುದಿಸಿ ತನ್ನ ಪ್ರಾಣ ಹೋಗುವ ತನಕ ಕುಡಿಯಬೇಕೆಂದು ಮದ್ಯಪಾನ ಮಾಡಿದ ಬ್ರಾಹ್ಮಣನಿಗೆ ವಿಧಿಸಿದ್ದಾನೆ, ಮನು.

ಈ ರೀತಿಯಲ್ಲಿ ಅನೇಕ ಕೃಚ್ಛ್ರಗಳನ್ನು ಭಾರತೀಯ ಪ್ರಾಚೀನ ಧರ್ಮಶಾಸ್ತ್ರಕಾರರು ವಿಧಿಸಿದ್ದರೂ ಎಲ್ಲವನ್ನೂ ಇಲ್ಲಿ ಪರಿಶೀಲಿಸುವ ಉದ್ದೇಶವಿಲ್ಲ. ಕೃಚ್ಛ್ರಗಳ ಲಕ್ಷಣದ ಸೂಕ್ಷ್ಮ ಪರಿಚಯ ಮಾತ್ರ ಸದ್ಯದ ಗುರಿ. ಅನೇಕ ಬಗೆಯಾದ ಕಠಿಣ ವ್ರತಗಳನ್ನು ಪ್ರತ್ಯೇಕ ಹೆಸರಿನಿಂದಲೇ ಅಲ್ಲದೆ ಹಲವು ಇತರ ಪಾತಕಗಳಿಗೆ ವಿಧಿಸಿರುವುದನ್ನೂ ಧರ್ಮಶಾಸ್ತ್ರಗಳಲ್ಲಿ ಕಾಣಬಹುದು. ಉದಾಹರಣೆಗೆ ಗುರುತಲ್ಪಗಮನದ ಪ್ರಾಯಶ್ಚಿತ್ತಕ್ಕಾಗಿ ವಿಧಿಸಿದ ಈ ವಿಧಿಯನ್ನು ಗಮನಿಸಬಹುದು. ಪಾತಕಿ ತನ್ನ ದುಷ್ಕೃತಿಯನ್ನು ಪ್ರಕಟಿಸಿಕೊಂಡು ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದ ಮಂಚದ ಮೇಲೆ ಮಲಗಿ ಅಥವಾ ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದ ಸ್ತ್ರೀಪ್ರತಿಮೆಯನ್ನು ತಬ್ಬಿಕೊಂಡು ಸಾಯಬೇಕೆಂದೂ ಅಥವಾ ತಾನೇ ತನ್ನ ಲಿಂಗ, ವೃಷಣಗಳನ್ನು ಕೊಯ್ದುಕೊಂಡು ತನ್ನ ಬೊಗಸೆಯಲ್ಲಿಟ್ಟುಕೊಂಡು ತನ್ನ ದೇಹ ಬೀಳುವ ತನಕ ನೆಟ್ಟಗೆ ನಡೆಯುತ್ತ ನೈಋತ್ಯ ದಿಕ್ಕಿಗೆ ಹೋಗಿ ಸಾಯಬೇಕು ಎಂದು ಮನುಸ್ಮೃತಿ ಹೇಳುತ್ತದೆ. ಮಹಾಪಾತಕವೆಂಬ ಬ್ರಹ್ಮಹತ್ಯೆಗೆ ಈ ಪ್ರಾಯಶ್ಚಿತ್ತ ವಿಧಿಸಿದೆ: ಕೊಂದವ ಕಾಡಿನಲ್ಲಿ ವಾಸಿಸುತ್ತ ಕಪಾಲಧಾರಿಯಾಗಿ ಕಾಡಿನ ವಸತಿಗಳಲ್ಲಿಯೇ ಭಿಕ್ಷೆಯನ್ನು ಯಾಚಿಸುತ್ತ ಹನ್ನೆರಡು ವರ್ಷ ವನವಾಸ ಮಾಡಬೇಕು. ಅಥವಾ ಪ್ರಜ್ವಲಿಸುವ ಅಗ್ನಿಯಲ್ಲಿ ತಲೆಯನ್ನು ಬಗ್ಗಿಸಿಕೊಂಡು ಮೂರು ಸಲ ತನ್ನ ದೇಹವನ್ನು ಸಮರ್ಪಿಸಬೇಕು. ಇತ್ಯಾದಿಗಳು ಮನುವಿನಲ್ಲಿವೆ.

ಧರ್ಮಶಾಸ್ತ್ರಕಾರರು ಈ ಕೃಚ್ಛ್ರಗಳನ್ನು ಯಾವ ಆಧಾರದ ಮೇಲೆ ವಿಧಿಸಿದರು? ಪ್ರಾಯಶ್ಚಿತ್ತರೂಪವೆಂದು ಕೃಚ್ಛ್ರವನ್ನು ಆಚರಿಸಿದ ಮಾತ್ರಕ್ಕೆ ಗಳಿಸಿದ ಪಾಪ ಪರಿಹಾರವಾಗ ಬಲ್ಲುದೆ? ತಿಳಿಯದೆ ಮಾಡಿದ ಪಾಪಕ್ಕೆ ಪರಿಹಾರ ಸಿಗಬಹುದೆಂಬ ಭರವಸೆಯಿಟ್ಟು

ಕೊಂಡರೂ ತಿಳಿದು ತಿಳಿದೂ ಮಾಡುವ ಅನೇಕ ದುಷ್ಕರ್ಮಗಳಿಗೆ ಪರಿಹಾರ ಸಿಗುವುದೇ? ಪ್ರಾಯಶ್ಚಿತ್ತ ಕರ್ಮದಲ್ಲಿ ಅಂಥ ಪಾಪನಿವಾರಣಾ ಶಕ್ತಿ ಇದೆಯೇ? ಧರ್ಮಶಾಸ್ತ್ರಕಾರರ ವಚನಗಳಲ್ಲಿ ಶ್ರದ್ಧೆ ಕಡಿಮೆಯಾಗುತ್ತಿರುವ ಈ ಆಧುನಿಕ ಕಾಲದಲ್ಲಿ, ಇಂಥ ಸಂಶಯಗಳು ಉದ್ಭವಿಸುವುದು ಸಹಜ. ಈ ಪ್ರಶ್ನೆಗಳಿಗೆ ಧರ್ಮಶಾಸ್ತ್ರಕಾರರೇ ಏನಾದರೂ ಉತ್ತರ ನೀಡುವರೇ?

ಕೃಚ್ಛ್ರಗಳೆಂದರೆ ಮಾಡಿದ ಹೀನಕಾರ್ಯಗಳಿಗೆ ಪ್ರಾಯಶ್ಚಿತ್ತರೂಪವಾದ ಕೆಲವು ಶಿಕ್ಷೆಗಳು. ಒಂದು ಕರ್ಮಕ್ಕೆ ತಕ್ಕ ಫಲ ಕಾರಣಕಾರ್ಯ ಸಂಬಂಧದಿಂದ ಸಿದ್ಧವೆನ್ನುವುದು ಒಪ್ಪತಕ್ಕ ಮಾತು. ಇದನ್ನು ಯಾವುದಾದರರೊಂದು ಪ್ರಮಾಣ ಗ್ರಂಥದ ಆಧಾರದ ಮೇಲೆಯೇ ಸಿದ್ಧಮಾಡಬೇಕಾಗಿಲ್ಲ. ಆದರೂ ಧರ್ಮಶಾಸ್ತ್ರಕಾರರು ತಮ್ಮ ವಿಧಿಗಳನ್ನು ಶ್ರುತಿಯಾದ ವೇದದ ಆಧಾರದ ಮೇಲೆ ಹೇಳಿರುವಂತೆ ತೋರುತ್ತದೆ. ಗೌತಮ ಧರ್ಮಸೂತ್ರಗಳು ಅಂಥ ಆಧಾರವನ್ನು ತೋರಿಸಿಕೊಡುತ್ತವೆ. ಇದನ್ನು ವಸಿಷ್ಠ ಧರ್ಮಸೂತ್ರಗಳೂ ಅನುಮೋದಿಸುತ್ತವೆ. ಶ್ರುತಿ ನಿದರ್ಶನವನ್ನು ಮನುವೂ ಹೇಳುತ್ತಾನೆ. ಶ್ರುತ್ಯಾಧಾರ ಹೇಗಾದರೂ ಇರಲಿ, ನಮ್ಮ ಅನುಭವದಲ್ಲಿಯೇ ದುಷ್ಕರ್ಮಗಳಿಂದ ಅಹಿತವಾದುದನ್ನೂ ಸತ್ಕರ್ಮಗಳಿಂದ ಹಿತವಾದುದನ್ನೂ ನಾವೇ ಕಂಡಿರಬಹುದು. ಆದ್ದರಿಂದ ಪಾತಕ ಕರ್ಮಗಳಿಗೆ ಪ್ರಾಯಶ್ಚಿತ್ತಗಳನ್ನು ಒಪ್ಪಿಕೊಳ್ಳಬಹುದು. ಹೀಗೆ ಒಪ್ಪಿದಲ್ಲಿ ಬಾಳಿನಲ್ಲಿ ಸಂಕೀರ್ಣತೆ ಕಡಿಮೆಯಾಗಿ ಸರಳತೆ ಹೆಚ್ಚುವುದು. ಅಥವಾ ನಮ್ಮಲ್ಲಿ ವಿಮರ್ಶಾಬುದ್ಧಿಯ ಕೈಯೇ ಮೇಲಾದಲ್ಲಿ, ಪ್ರಾಯಶ್ಚಿತ್ತ ಕರ್ಮಗಳಿಗೆ ನಿಜವಾಗಿಯೂ ಪಾಪ ಪರಿಹಾರಕ ಶಕ್ತಿಯಿದೆಯೇ, ಎನ್ನುವ ಸಂಶಯ ನಮ್ಮನ್ನು ಎದುರಿಸಬಹುದು. ಅದಕ್ಕೆ ಧರ್ಮಶಾಸ್ತ್ರಕಾರರು ಇಬ್ಬಗೆಯ ಉತ್ತರವನ್ನು ಕೊಟ್ಟಿದ್ದಾರೆ. ಹಲವು ಧರ್ಮಶಾಸ್ತ್ರಕಾರರಂತೂ ನಿಷ್ಪಾಪಟ್ಯದಿಂದ ನೇರವಾದ ಉತ್ತರವನ್ನೇ ನೀಡಿದ್ದಾರೆ. ಗೌತಮ ಧರ್ಮಸೂತ್ರ, ವಸಿಷ್ಠ ಧರ್ಮಸೂತ್ರ, ಬೌಧಾಯನ ಸ್ಮೃತಿಗಳು ಹೇಳುವಂತೆ ಪ್ರಾಯಶ್ಚಿತ್ತಗಳು ಪಾತಕಗಳಿಗೆ ಪರಿಹಾರ ನೀಡಲಾರವು; ಅವನ್ನು ಅನುಭವಿಸಿಯೇ ತೀರಬೇಕು. ಯಜ್ಞವಲ್ಕ್ಯ ಹೇಳುವಂತೆ ಕಾಮತಃ ಎಂದರೆ ತಿಳಿದು ತಿಳಿದೂ ಮಾಡುವ ಪಾತಕಕ್ಕೆ ಪರಿಹಾರ ಎಂದಿಗೂ ಸಿಗಲಾರದು.

ಹಾಗಾದರೆ, ಇಷ್ಟೆಲ್ಲವನ್ನೂ ಬಲ್ಲ ಧರ್ಮಶಾಸ್ತ್ರಕಾರರು ಯಾವ ಅರ್ಥದಲ್ಲಿ ಅಥವಾ ಯಾವ ಉದ್ದೇಶದಿಂದ ಪ್ರಾಯಶ್ಚಿತ್ತ ಕೃಚ್ಛ್ರಗಳನ್ನು ವಿಧಿಸಿದರೆನ್ನುವುದು ಸಹಜವಾದ ಪ್ರಶ್ನೆ. ಈ ಪ್ರಶ್ನೆಗೆ ಮೂರು ತೆರನಾದ ಉತ್ತರ ನೀಡಿರುವುದು ಧರ್ಮಶಾಸ್ತ್ರಗಳಲ್ಲಿಯೇ ಕಂಡುಬರುತ್ತದೆ : 1 ಸಮಾಜದ ಸುಸ್ಥಿರತೆಗೆ. ಸಮಾಜದ ಸಹಜೀವನದಲ್ಲಿ ಹಲವು ನಿಯಮಗಳು ಅಗತ್ಯ. ಅಂಥ ನಿಯಮಗಳಿಗೆ ಒಳಪಟ್ಟವನಿಗೆ ಮಾತ್ರ ಸಮಾಜಜೀವನದ ಸೌಲಭ್ಯ. ಸೌಭಾಗ್ಯ. ಇದನ್ನು ಅಲ್ಲಗಳೆದವನಿಗೆ ಇವು ಹೇಗೆ ಲಭಿಸಬೇಕು? ಮಕ್ಕಳನ್ನು, ಮನುಷ್ಯರನ್ನು ಕೊಲ್ಲುವವನನ್ನು ಸಮಾಜದಿಂದ ಹೊರಗಿಡಿ–ಎಂದು ಮನು ಹೇಳುತ್ತಾನೆ. ಪ್ರಾಯಶ್ಚಿತ್ತದಿಂದ ಪಾಪವಿಮೋಚನೆ ಸಿಗದೆ ಹೋದರೂ ಸಮಾಜದಲ್ಲಿ ಪ್ರವೇಶ ಸಿಗುವ ಮಾರ್ಗವಿದೆ ಎಂದು ಯಾಜ್ಞವಲ್ಕ್ಯಸ್ಮೃತಿಯ ಟೀಕೆಯಾದ ಮಿತಾಕ್ಷರ ಹೇಳುತ್ತದೆ. 2. ಪಾತಕ ಮಾಡಿದವ ಪರಿತಪಿಸುವ ಅಂತಃಕರಣವುಳ್ಳವನಾದಲ್ಲಿ ಆತನ ಅಂತಶ್ಶುದ್ಧಿಗಾದರೂ ಪ್ರಾಯಶ್ಚಿತ್ತವನ್ನು ವಿಧಿಸಿರಬಹುದು. ಯಾಜ್ಞವಲ್ಕ್ಯ ಹೇಳುವಂತೆ ಪ್ರಾಯಶ್ಚಿತ್ತ ಒಬ್ಬನನ್ನು ತೃಪ್ತಿಪಡಿಸೀತು : ಅಥವಾ ಸಮಾಜವನ್ನು ತೃಪ್ತಿಪಡಿಸೀತು. ಅಥವಾ 3 ಎಲ್ಲಕ್ಕಿಂತ ಹೆಚ್ಚಾಗಿ ಪಾತಕಿಯ ಮಾನಸಿಕ ದುರ್ಭರತೆಯನ್ನು ಕಡಿಮೆ ಮಾಡುವ ಸಾಧನವಾಗಿ ಪ್ರಾಯಶ್ಚಿತ್ತವನ್ನು ವಿಧಿಸಿರಬಹುದು. ಈ ವಿಷಯದಲ್ಲಿ ಪರಾಶರ ಮಾಧವೀಯ ಎಂಬ ಗ್ರಂಥ ನೀಡುವ ಪ್ರಾಯಶ್ಚಿತ್ತದ ವಿವರಣೆ ಬಹಳ ಸೂಕ್ತವಾಗಿದೆ: ಪರಿತಪಿಸುವ ಪಾತಕಿಗಳ ಚಿತ್ತವನ್ನು ಪ್ರಾಯಶಃ ಹಗುರಗೊಳಿಸಿ ಮಾಸಿಕ ಸ್ವಾಸ್ಥ್ಯವನ್ನು ನೀಡಬಹುದಾದ್ದರಿಂದ ಅಂಥ ಕರ್ಮಕ್ಕೆ ಪ್ರಾಯಶ್ಚಿತ್ತ ಎಂಬ ಹೆಸರಿರಬಹುದು–ಪ್ರಾಯಶಶ್ಚ ಸಮಂ ಚಿತ್ತಂ ಚಾರಯಿತ್ವಾ ಪ್ರದೀಯತೇ. ಈ ವಿವರಣೆಯನ್ನು ನಾವು ಒಪ್ಪಬಹುದೆಂದು ನಮಗೆ ಅನಿಸುತ್ತದೆ. (ಕೆ.ಬಿ.ಆರ್.)

**ಕಠೋಪನಿಷತ್ತು :** ಕೃಷ್ಣಯಜುರ್ವೇದದ ಕಾಠಕ ಶಾಖೆಗೆ ಸೇರಿದ ಇದು ಅತ್ಯಂತ ಪ್ರಸಿದ್ಧವೂ ಆದರಣೀಯವೂ ಆಗಿದೆ. ಪಾಶ್ಚಾತ್ಯ ಪಂಡಿತರು ಭಾರತೀಯ ಅಧ್ಯಾತ್ಮರಹಸ್ಯವನ್ನು ವಿವರಿಸುವಾಗ ಕಠೋಪನಿಷತ್ತನ್ನು ಪರಮಾದರ್ಶವಾಗಿ ಉಲ್ಲೇಖಿಸಿರುತ್ತಾರೆ. ಇದು ಸಾಮವೇದಕ್ಕೆ ಸೇರಿದುದೆಂದೂ ಅಥರ್ವಣ ಉಪನಿಷತ್ತೆಂದೂ ಬೇರೆ ಬೇರೆ ಮತಗಳಿದ್ದರೂ ಮುಕ್ತಿಕೋಪನಿಷತ್ತಿನಲ್ಲಿ ಕೊಟ್ಟಿರುವ ಕೃಷ್ಣ ಯಜುರ್ವೇದೀಯ ಉಪನಿಷತ್ತುಗಳ ಪಟ್ಟಿಯಲ್ಲಿ ಇದಕ್ಕೆ ಪ್ರಥಮ ಸ್ಥಾನವಿದೆ. ಇದನ್ನು ಒಳಗೊಂಡಿರುವ ಸಾಮವೇದದ ಅಥವಾ ಅಥರ್ವ ವೇದದ ಭಾಗಗಳು ಸಿಕ್ಕಿಲ್ಲ. ತೈತ್ತಿರೀಯ ಬ್ರಾಹ್ಮಣದಲ್ಲಿ ಬರುವ ನಚಿಕೇತನ ಕಥೆಯನ್ನು ಈ ಉಪನಿಷತ್ತಿನಲ್ಲಿ ರೋಮಾಂಚಕಾರಿಯಾಗಿ ನಿರೂಪಿಸಲಾಗಿದೆ. ಈ ಕಥೆಯ ಕುರುಹನ್ನು ಋಗ್ವೇದದ ಹತ್ತನೆಯ ಮಂಡಲದ 135ನೆಯ ಸೂಕ್ತದಲ್ಲಿ ಕಾಣಬಹುದು. ಅಲ್ಲಿ ಉಲ್ಲೇಖಿತನಾಗಿರುವ ಕುಮರನೇ ನಚಿಕೇತನೆಂದು ಸಾಯಣಾಚಾರ್ಯರ ಅಭಿಪ್ರಾಯ.

ಈ ಉಪನಿಷತ್ತಿನಲ್ಲಿ ಮೂರು ಮೂರು ವಲ್ಲಿಗಳನ್ನೊಳಗೊಂಡ ಎರಡು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ತಂದೆಯ ಆಜ್ಞೆಯಂತೆ ನಚಿಕೇತ ಯಮನಲ್ಲಿಗೆ ಹೋಗಿ ಅವನಿಗಾಗಿ ಮೂರು ದಿನಗಳು ಉಪವಾಸ ಮಾಡಿ ಅವನಿಂದ ಮೂರು ವರಗಳನ್ನು ಪಡೆದನೆಂದು ನಿರೂಪಿಸಲಾಗಿದೆ. ನಚಿಕೇತ ಮೊದಲನೆಯ ವರವಾಗಿ ತನ್ನ ವಿಷಯದಲ್ಲಿ ತಂದೆಯ ಪ್ರಸನ್ನತೆಯನ್ನು ಕೇಳಿದ. ಎರಡನೆಯ ವರ ಸ್ವರ್ಗಕ್ಕೆ ಸಾಧನವಾದ ಅಗ್ನಿವಿದ್ಯೆ, ಮೂರನೆಯದು ಆತ್ಮತತ್ತ್ವಕ್ಕೆ ಸಂಬಂಧಪಟ್ಟದ್ದು. ನಚಿಕೇತ ಆತ್ಮತತ್ತ್ವವನ್ನು ತಿಳಿದುಕೊಳ್ಳಲು ಯೋಗ್ಯನೋ ಅಲ್ಲವೋ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಯಮ ನಾನಾ ವಿಧವಾದ ಭೋಗದ ಆಸೆಗಳಿಂದ ಪ್ರಲೋಭನಗಳನ್ನು ಒಡ್ಡಿದ. ಆದರೆ ನಚಿಕೇತ ಈ ಯಾವ ಸುಖಗಳನ್ನೂ ಬಯಸಲಿಲ್ಲ.

ಎರಡನೆಯ ವಲ್ಲಿಯಲ್ಲಿ ನಚಿಕೇತ ಬ್ರಹ್ಮವಿದ್ಯೆಗೆ ಅಧಿಕಾರಿಯೆಂದು ಅರಿತು ಯಮ ಆತನಿಗೆ ಉಪದೇಶಮಾಡುತ್ತಾನೆ. (ಇದನ್ನು ಉಪದೇಶ ಮಾಡಿದ ಗುರುವೂ ತಿಳಿದುಕೊಳ್ಳುವ ಶಿಷ್ಯನೂ ಅದ್ಭುತ ವ್ಯಕ್ತಿಗಳೇ ಆಗಿದ್ದಾರೆ.) ಬ್ರಹ್ಮದ ವಾಚಕವೂ ಪ್ರತೀಕವೂ ಆದ ಪ್ರಣವದ ಮೂಲಕ ಬ್ರಹ್ಮದ ಸ್ವರೂಪವನ್ನು ಯಮ ಉಪದೇಶ ಮಾಡುತ್ತಾನೆ. ಪ್ರೇಯಸ್ಸನ್ನು ಬಯಸಿ ಅವಿವೇಕಿ ಪುರುಷಾರ್ಥದಿಂದ ಚ್ಯುತನಾಗುತ್ತಾನೆ. ಧೀಮಂತ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಆಗ ಅವನಿಗೆ ಪರಮಾತ್ಮ ಪ್ರಾಪ್ತಿಯಾಗುತ್ತದೆ. ನಿಷ್ಕಾಮರಾಗಿ ಆತ್ಮನನ್ನೇ ಬಯಸುವವರಿಗೆ ಅವನು ಲಭಿಸುತ್ತಾನೆ. ಸದಾಚಾರ ಮತ್ತು ಇಂದ್ರಿಯನಿಗ್ರಹಗಳು ಆತ್ಮಪ್ರಾಪ್ತಿಗೆ ಆವಶ್ಯಕ–ಎಂಬ ಯಮನ ಉಪದೇಶದಿಂದ ವಲ್ಲಿ ಸಮಾಪ್ತವಾಗುತ್ತದೆ.

ಮೂರನೆಯ ವಲ್ಲಿಯಲ್ಲಿ ಶರೀರವೇ ರಥ, ಆತ್ಮನೇ ಒಡೆಯ ಅಂದರೆ ರಥಿ, ಬುದ್ಧಿ ಸಾರಥಿ, ಮನಸ್ಸು ಕಡಿವಾಣ, ಇಂದ್ರಿಯಗಳು ಕುದುರೆಗಳು, ಶಬ್ದಾದಿ ವಿಷಯಗಳು ಆ ಕುದುರೆಗಳು ಹೋಗುವ ರಸ್ತೆಗಳು ಎಂಬ ರೂಪಕ ಕಲ್ಪನೆಯಿಂದ ವಿವೇಕಿಗೆ ಮಾತ್ರ ಇಂದ್ರಿಯಗಳು ವಶವಾಗಿ ಆತ ಪರಮಪದವನ್ನು ಮುಟ್ಟುತ್ತಾನೆ–ಎಂದು ಹೇಳಲಾಗಿದೆ.

ಎರಡನೆಯ ಅಧ್ಯಾಯದ ಮೊದಲನೆಯ ವಲ್ಲಿಯಲ್ಲಿ ಅಂಗುಷ್ಠ ಮಾತ್ರ ಪ್ರಮಾಣದ ಪರಮಾತ್ಮನನ್ನು, ಅಮೃತತ್ತ್ವವನ್ನು ಬಯಸುವ ಯಾವನೋ ಒಬ್ಬ ಧೀರ ಸ್ವಭಾವತಃ ಹೊರಗೆ ಹೋಗುವ ಇಂದ್ರಿಯಗಳನ್ನು ಅಂತರ್ಯಕ್ಕೆ ಹಿಂತಿರುಗಿಸಿ ಶುದ್ಧವಾದ ನೀರಿನಲ್ಲಿ ಶುದ್ಧವಾದ ನೀರನ್ನು ಚೆಲ್ಲಿದರೆ ಹೇಗೋ ಹಾಗೆ ನೋಡುವನೆಂದು ಬೋಧಿಸಲಾಗಿದೆ.

ಎರಡನೆಯ ವಲ್ಲಿಯಲ್ಲಿ ಬ್ರಹ್ಮನ ಅಂತರ್ಯಾಮಿತ್ವವನ್ನು ವಿಸ್ತಾರವಾಗಿ ಉಪದೇಶಿಸಲಾಗಿದೆ. ಸರ್ವವ್ಯಾಪಕನಾದ ಆತ್ಮನನ್ನು ಯಾರೂ ಮೀರಲಾಗುವುದಿಲ್ಲವೆಂದೂ ಅವನನ್ನು ತಿಳಿದರೆ ಶೋಕದಿಂದ ಮುಕ್ತಿಯೆಂದೂ ಮರಣಾನಂತರ ಮಾನವರು ಕರ್ಮಕ್ಕೆ ಮತ್ತು ಜ್ಞಾನಕ್ಕೆ ಅನುಸಾರವಾಗಿ ಗತಿಯನ್ನು ಹೊಂದುತ್ತಾರೆಂದೂ ಉಪದೇಶಿಸಲಾಗಿದೆ.

ಮೂರನೆಯ ವಲ್ಲಿಯಲ್ಲಿ ಸಂಸಾರಸ್ವರೂಪವನ್ನು ನಿಶ್ಚಯಿಸುವುದರ ಮೂಲಕ ಬ್ರಹ್ಮಸ್ವರೂಪವನ್ನು ನಿರ್ಧರಿಸಲಾಗಿದೆ. ಈ ಸಂಸಾರ ಸನಾತನವಾದ ಒಂದು ಅಶ್ವತ್ಥವೃಕ್ಷ. ಇದರ ಬೇರುಗಳು ಮೇಲೆ, ಟೊಂಗೆಗಳು ಕೆಳಗೆ ಬೆಳೆದಿವೆ. ಇದೇ ಶುದ್ಧವಸ್ತು, ಇದೇ ಬ್ರಹ್ಮ. ಕಣ್ಣಿನಿಂದ ನೋಡಲಾಗದ ಬ್ರಹ್ಮನನ್ನು ಮನಸ್ಸನ್ನು ನಿಯಮಿಸುವ ಬುದ್ಧಿಯಿಂದ ಮನನರೂಪವಾದ ಸಮ್ಯಗ್ದರ್ಶನದಿಂದ ತಿಳಿದುಕೊಳ್ಳಬಹುದು. ಸ್ಥಿರವಾದ ಇಂದ್ರಿಯ ಧಾರಣೆಯೇ ಯೋಗ ಎಂಬ ಸಂದೇಶವಿದೆ. ಈ ಉಪನಿಷತ್ತಿನಲ್ಲಿ ಜನನ ಮರಣಗಳ ರಹಸ್ಯವನ್ನು ಬೋಧಿಸಿರುವುದರಿಂದ ಈ ಆಖ್ಯಾನವನ್ನು ಕೇಳಿದವರಿಗೆ ಹೇಳಿದವರಿಗೆ ನಚಿಕೇತ ಹೊಂದಿದ ಬ್ರಹ್ಮಲೋಕ ಪ್ರಾಪ್ತಿಯಾಗುವುದೆಂದು ಫಲಶ್ರುತಿ ಇದೆ. **(ನೋಡಿ– ಉಪನಿಷತ್ತುಗಳು)** (ಎಸ್.ಎಸ್.ಆರ್.)

**ಕಡಗೋಲ ಮುರುಗಲ :** ಗಟ್ಟಿಫೆರೀ ಕುಟುಂಬದ ಗಾರ್ಸಿನೀಯ ಇಂಡಿಕ ಎಂಬ ವೈಜ್ಞಾನಿಕ ಹೆಸರಿನ ನಿತ್ಯಹರಿದ್ವರ್ಣದ ಮಧ್ಯಮ ಮಟ್ಟದ ಮರ. ಕೊಂಕಣದಿಂದ ಕೊಡಗಿನ ವರೆಗೂ ಹರಡಿರುವ ಈ ಮರವನ್ನು ಮಹಾರಾಷ್ಟ್ರ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲೂ ಬೆಳೆಸಲಾಗುತ್ತಿದೆ. ನೀಲಗಿರಿ ಬೆಟ್ಟದ ಸಾಲುಗಳಲ್ಲಿ ಇದು ಸಮೃದ್ಧವಾಗಿ ಬೆಳೆಯುತ್ತದೆ. ಇದನ್ನು ಜಾಂಜಿಬಾರಿನಿಂದ ಭಾರತಕ್ಕೆ ತಂದು ಬೆಳೆಸಲಾಗಿದೆಯೆಂದು ಹೇಳುವರು. ಈ ಮರದ ಕೊಂಬೆಗಳು ಜೋಲಾಡುತ್ತಿರುತ್ತವೆ; ಎಲೆಗಳು ದೀರ್ಘವೃತ್ತ ಅಥವಾ ಆಯಾಕಾರವಾಗಿದ್ದು ತುದಿಯಲ್ಲಿ ಮೊನಚಾಗಿವೆ. 2.5"–3.5" ಉದ್ದವಾಗಿಯೂ 1"–1.5" ಅಗಲವಾಗಿಯೂ ಇರುವ ಈ ಎಲೆಗಳು ಮೇಲ್ಭಾಗದಲ್ಲಿ ಹಚ್ಚಹಸಿರಾಗಿಯೂ ತಳಭಾಗದಲ್ಲಿ ಮಾಸಲು ಬಣ್ಣದವಾಗಿಯೂ ಇರುತ್ತವೆ. ನವೆಂಬರಿನಿಂದ ಫೆಬ್ರುವರಿ ತಿಂಗಳುಗಳಲ್ಲಿ ಮರ ಹೂ ಬಿಡುತ್ತದೆ. ಏಪ್ರಿಲ್–ಮೇ ವೇಳೆಗೆ ಬಲಿತು ಮಾಗುವ ಇದರ ಹಣ್ಣು ಗುಂಡಾಗಿ 1"–1.5" ವ್ಯಾಸವುಳ್ಳದ್ದಾಗಿದೆ. ಒಳಗಡೆ 5–8 ಬೀಜಗಳಿವೆ.

ಹಿತಕರವಾದ ರುಚಿಯಿಂದ ಕೂಡಿರುವ ಮುರುಗಲ ಹಣ್ಣಿನ ತಿರುಳನ್ನು ಪ್ರತ್ಯೇಕಿಸಿ ಒಣಗಿಸಿ ಹುಣಿಸೆಯ ಹಣ್ಣಿನ ಹುಳಿಗೆ ಬದಲಾಗಿ ಬಳಸುವರು. ಇದರಲ್ಲಿ ಶೇ. 10ರಷ್ಟು ಮ್ಯಾಲಿಕ್ ಆಮ್ಲವೂ ಅಲ್ಪಸ್ವಲ್ಪ ಟಾರ್ಟಾರಿಕ್ ಮತ್ತು ಸಿಟ್ರಿಕ್ ಆಮ್ಲಗಳೂ ಇವೆ. ಬೇಸಗೆಯ ಪಾನೀಯಗಳನ್ನು ತಯಾರಿಸುವುದಕ್ಕೂ ಇದನ್ನು ಬಳಸುವರು.

ಮುರುಗಲ ಹಣ್ಣನ್ನು ಅನೇಕ ಔಷಧಿಗಳಲ್ಲಿ ಬಳಸುವರು. ಅದರಲ್ಲಿರುವ ಮೇಲೆ ಸೂಚಿಸಿದ ರಾಸಾಯನಿಕ ಅಂಶಗಳು ರೋಗಕಾರಕ ಹುಳುಗಳನ್ನು ನಾಶ ಮಾಡುವ ಶಕ್ತಿ ಹೊಂದಿವೆ. ಇದನ್ನು ಹೃತ್‌ಚೇತಕ (ಕಾರ್ಡಿಯೋಟೋನಿಕ್)ವಾಗಿಯೂ ಮೊಳೆರೋಗ, ಆಮಶಂಕೆ, ಕೆಲವು ರೀತಿಯ ಹೃದ್ರೋಗಗಳು–ಇವುಗಳಲ್ಲೂ ಬಳಸುವುದುಂಟು. ಬೀಜಗಳನ್ನು ಬೇಯಿಸಿದಾಗ ತೇಲುತ್ತ ಮೇಲಕ್ಕೆ ಬರುವ ತುಪ್ಪದಂಥ ವಸ್ತುವನ್ನು ಪ್ರತ್ಯೇಕಿಸಿ ಕೋಕಂ ಬೆಣ್ಣೆ ಎಂಬ ಜಿಡ್ಡನ್ನು ತಯಾರಿಸುವ ಉದ್ಯೋಗ ಒಂದು ಗೃಹಕೈಗಾರಿಕೆಯಾಗಿ ಪ್ರಚಾರದಲ್ಲಿದೆ. ಉಂಡೆ ಅಥವಾ ಬಿಲ್ಲೆಗಳಾಗಿ ಮಾರಾಟವಾಗುವ ಈ ಬೆಣ್ಣೆಯನ್ನು ಹಲವರು ಅಡಿಗೆಗೆ ಬಳಸುತ್ತಾರೆ. ಸಾಮಾನ್ಯವಾಗಿ ಇದು ಹಳದಿ ಬಣ್ಣದ್ದಾಗಿ ಜಿಡ್ಡುಜಿಡ್ಡಾಗಿದೆ. ಈಚೆಗೆ ಇದನ್ನು ಶುದ್ಧಗೊಳಿಸಿ ಬಿಳಿಯ ಬಣ್ಣದಲ್ಲಿ ಮಾರಾಟಕ್ಕೆ ಇಡಲಾಗುತ್ತಿದೆ. ಈ ನೂತನ ರೂಪದಲ್ಲಿ ಇದು ಇತರ ವನಸ್ಪತಿ ತೈಲಗಳಂತೆ ಬಳಕೆಗೆ ಬರುತ್ತಿದೆ.

ಕೋಕಂ ಬೆಣ್ಣೆಯಲ್ಲಿ ಸ್ಟಿಯರಿಕ್ ಮತ್ತು ಓಲಿಯಿಕ್ ಆಮ್ಲಗಳೂ ಕೆಲವು ರೀತಿಯ ಗ್ಲಿಸರೈಡುಗಳೂ ಇವೆ. ದ್ರವೀಕರಣ ಬಿಂದು ತೀರ ಕಡಿಮೆಯಿದ್ದು ತಕ್ಕಷ್ಟು ಸ್ನಿಗ್ಧವಾಗಿರುವುದರಿಂದ ಇದನ್ನು ಪೆಪ್ಪರ್‌ಮಿಂಟ್ ತಯಾರಿಕೆಯಲ್ಲೂ ಮೋಂಬತ್ತಿ ಮತ್ತು ಸಾಬೂನಿನ ಉದ್ಯೋಗದಲ್ಲೂ ಬಳಸುವುದುಂಟು. ಇದರಿಂದ ತಯಾರಿಸಿದ ಸರಿಯನ್ನು ಹತ್ತಿ ಮತ್ತು ಉಣ್ಣೆಯ ದಾರಗಳನ್ನು ಬಲಗೊಳಿಸಲು ಸವರುವುದುಂಟು. ಇದರಿಂದ ತಯಾರಿಸಿದ ತೈಲ ಒಳ್ಳೆಯ ಪೋಷಕಾಂಶಗಳನ್ನೂ ಕೆಲವು ಬೇನೆಗಳನ್ನು ಶಮನಗೊಳಿಸಬಲ್ಲ ಔಷಧಾಂಶಗಳನ್ನೂ ಒಳಗೊಂಡಿದೆ. ಇದನ್ನು ಚರ್ಮ ಹದಮಾಡುವ ಕೈಗಾರಿಕೆಯಲ್ಲೂ ಮುಲಾಮುಗಳ ತಯಾರಿಕೆಯಲ್ಲೂ ಬಳಸುವರು ; ಹುಣ್ಣುಗಳಿಗೂ ಚರ್ಮದ ಬಿರಿತಕ್ಕೂ ಹಚ್ಚುವರು. ಬೀಜದಿಂದ ತೈಲ ತೆಗೆದ ಮೇಲೆ ಉಳಿಯುವ ಹಿಂಡಿ ಗೊಬ್ಬರವಾಗುತ್ತದೆ. (ಎ.ಕೆ.ಎಸ್.)

**ಕಡತೋಕ :** ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಒಂದು ಧಾರ್ಮಿಕ ಸ್ಥಳ. ಹೊನ್ನಾವರದಿಂದ 14ಕಿಮೀ ದೂರದಲ್ಲಿದೆ. ಇಲ್ಲಿರುವ ಕೇಶವನಾರಾಯಣ, ನರಸಿಂಹ, ಏಳುಕೊಪ್ಪರಿಗೆಗುಡಿ ಪ್ರಮುಖವಾದವುಗಳು. ಕೇಶವನಾರಾಯಣ ಪುರಾತನ ದೇವಾಲಯ. ಮರದ ಚಾವಣಿ ಇದ್ದ ಈ ದೇವಾಲಯ ಇತ್ತೀಚಿಗೆ ಜೀರ್ಣೋದ್ಧಾರಗೊಂಡಿದೆ. ಇದನ್ನು ಆಳುತ್ತಿದ್ದ ಮಹಾಮಾತ್ಯ ಪ್ರಭು ಸರಬತಿಥ್ಯ ಎಂಬವನ ಪ್ರತಿಕೃತಿ ಇದೆ. ಭೋಗವೆಗ್ಗಡೆಯಿಂದ ಸ್ಥಾಪಿಸಲ್ಪಟ್ಟ ಸ್ವಯಂಭುವಿನ ದೇವಾಲಯವೂ ಇದೆ. ಇದಲ್ಲದೆ ಹವ್ಯಕ ಸಮುದಾಯದ ಪ್ರಾಚೀನ ಮಠವೊಂದಿದೆ. ಇದನ್ನು ಲಕ್ಷ್ಮೀನರಸಿಂಹ ಮಠ ಎಂದೂ ಕರೆಯಲಾಗುತ್ತದೆ. ಇಲ್ಲಿನ ಶಂಭುಲಿಂಗ ಮಂದಿರವನ್ನು ಗ್ರಾಮದೇವತೆ ಎಂದು ಪರಿಗಣಿಸಿ ಪೂಜಿಸಲಾಗುತ್ತದೆ. ಚೋಳ–ಗಂಗ ಮಾದರಿಯಲ್ಲಿ ಈ ಕಟ್ಟಡವಿದೆ. ಕನ್ನಡ ಶಾಸನವೊಂದು ಇಲ್ಲಿದೆ. ತ್ರ್ಯಂಬಕೇಶ್ವರ ವಿಷ್ಣುಮೂರ್ತಿ, ಮಕ್ಕಿನಾರಾಯಣ ಹಾಗೂ ವಿಷ್ಣು ಮೊದಲಾದ ದೇವಸ್ಥಾನಗಳೂ ಇಲ್ಲಿವೆ. ಇಲ್ಲಿಯ ಹಳೇಮಠದ ಹತ್ತಿರ ಉತ್ಕೃಷ್ಟವಾದ ವಿಷ್ಣುವಿನ ಮೂರ್ತಿಯೊಂದಿದೆ. ಕಡತೋಕದ ಭಾಗವಾಗಿರುವ ಮಾಡಗೇರಿಯಲ್ಲಿ ನಾರಾಯಣನ ಮಂದಿರ ಇದೆ. ಇಲ್ಲಿ ಏಪ್ರಿಲ್‌ನಲ್ಲಿ ಜಾತ್ರೆ ಜರುಗವುದು. ಆ ಸಂದರ್ಭದಲ್ಲಿ ಕೊಂಡ ಹಾಯುವ ಸಂಪ್ರದಾಯವಿದೆ. (ಎಸ್.ಎಚ್.ಇ.)

**ಕಡಪ :** ಆಂಧ್ರ ಪ್ರದೇಶದ ದಕ್ಷಿಣ ಭಾಗದಲ್ಲಿರುವ ಜಿಲ್ಲೆಗಳಲ್ಲೊಂದು. ಈ ಜಿಲ್ಲೆಯ ಮುಖ್ಯಪಟ್ಟಣಕ್ಕೂ ಇದೇ ಹೆಸರಿದೆ. ಉ.ಅ.13$^0$ 25' ನಿಂದ ಉ.ಅ.15$^0$ 14'ವರೆಗೆ ಮತ್ತು ಪೂ.ರೇ.77$^0$ 51' ನಿಂದ 79$^0$ 29' ವರೆಗೆ ಈ ಜಿಲ್ಲೆ ಹಬ್ಬಿದೆ. ಕಡಪ ಎಂದರೆ ತೆಲುಗು ಭಾಷೆಯಲ್ಲಿ ಹೆಬ್ಬಾಗಿಲು ಎಂದರ್ಥ. ಯಾತ್ರಾ ಸ್ಥಳವಾದ ತಿರುಪತಿಗೆ ಕಡಪ ನಗರವೇ ಉತ್ತರದ ಹೆಬ್ಬಾಗಿಲಿನಂತಿದೆ. ಈ ಜಿಲ್ಲೆಯ ಉತ್ತರಕ್ಕೆ ಕರ್ನೂಲು, ದಕ್ಷಿಣಕ್ಕೆ ಚಿತ್ತೂರು, ಪಶ್ಚಿಮಕ್ಕೆ ಅನಂತಪುರ ಮತ್ತು ಪೂರ್ವಕ್ಕೆ ನೆಲ್ಲೂರು ಜಿಲ್ಲೆಗಳಿವೆ. ದಖನ್ ಪ್ರಸ್ಥಭೂಮಿಯ ಮೇಲಿರುವ ಈ ಜಿಲ್ಲೆಯ ಸಾಮಾನ್ಯ ಎತ್ತರ ಸಮುದ್ರಮಟ್ಟಕ್ಕಿಂತ 1,500' ರಿಂದ 2,250'. ಜಿಲ್ಲೆಯ ದಕ್ಷಿಣ ಭಾಗದ ಮೈದಾನಗಳೂ ತಗ್ಗು ಪ್ರದೇಶಗಳೂ ಶೇಷಾಚಲಂ ಮತ್ತು ಪಾಲ್ಕೊಂಡ ಬೆಟ್ಟ ಸಾಲುಗಳಿಂದ ಪ್ರತ್ಯೇಕಗೊಂಡಿವೆ. ಈ ಜಿಲ್ಲೆಯ ಉತ್ತರ ಭಾಗದಲ್ಲಿ ಕೆಂಪುಮಣ್ಣಿನ ಭೂಮಿಯೂ ದಕ್ಷಿಣದಲ್ಲಿ ಫಲವತ್ತಾದ ಕಪ್ಪು ಮಣ್ಣಿನ ನೆಲವೂ ಇವೆ. ಕಡಪ ಜಿಲ್ಲೆಯಲ್ಲಿ ಹರಿಯುವ ಅತ್ಯಂತ ಮುಖ್ಯ ನದಿ. ಪೆನ್ನಾರ್ ಪಾಪಾಗ್ನಿ, ಚೆಯ್ಯರು, ಚಿತ್ರಾವತಿ ಮೊದಲಾದವು ಇದರ ಉಪನದಿಗಳು. ಮಳೆಗಾಲದಲ್ಲಿ ಇವು ತುಂಬಿ ಹರಿಯುತ್ತವೆ. ಕಡಪ ಕಲ್ಲುಗಳೆಂದು ಪ್ರಸಿದ್ಧವಾದ ಶಿಲೆಗಳು ಈ ಜಿಲ್ಲೆಯ ಉತ್ತರ ಭಾಗದಲ್ಲಿ ದೊರಕುತ್ತವೆ. ಇವನ್ನು ನೆಲಕ್ಕೆ ಹೆಂಚಿನಂತೆ ಹಾಸುವುದಕ್ಕೂ ಮೇಜುಗಳ ಮೇಲ್ಭಾಗಕ್ಕೂ ಉಪಯೋಗಿಸುತ್ತಾರೆ. ಕಡಪಶಿಲೆಗಳ ಅನೇಕ ಸಮಕಾಲೀನ ಶಿಲೆಗಳಲ್ಲಿ ವಜ್ರ ದೊರಕುತ್ತದೆ. ಪ್ರಸಿದ್ಧವಾದ ಗೋಲ್ಕೊಂಡ ವಜ್ರ ದೊರಕಿರುವುದು ಇಂಥ ಶಿಲಾಸ್ತರಗಳಿಂದಲೇ. ಕಡಪಶಿಲೆಗಳ ಈಶಾನ್ಯ ಭಾಗಕ್ಕೆ 49 ಕಿಮೀ ಗಳಷ್ಟು ಉದ್ದಕ್ಕೂ ಇರುವುವು ಕ್ವಾರ್ಟ್ಸೈಟ್ ಶಿಲೆಗಳು. ಈ ಜಿಲ್ಲೆಯ ಉನ್ನತ ಪ್ರದೇಶಗಳಲ್ಲಿ ದಟ್ಟವಾದ ಅರಣ್ಯಗಳುಂಟು. ಹುಲಿ ಚಿರತೆಗಳು ಇಲ್ಲಿಯ ವನ್ಯಮೃಗಗಳು. ಜಿಲ್ಲೆಯ ವಿಸ್ತೀರ್ಣ 15,346 ಚ.ಕಿಮೀ ಜನಸಂಖ್ಯೆ 13,42,015.

ಕಡಪ ಈ ಜಿಲ್ಲೆಯ ಮುಖ್ಯಪಟ್ಟಣ. ರೈಲುಮಾರ್ಗದಲ್ಲಿ ಚೆನ್ನೈಗೆ ವಾಯುವ್ಯದಲ್ಲಿ 259 ಕಿಮೀ ದೂರದಲ್ಲಿದೆ. ಸಮುದ್ರಮಟ್ಟಕ್ಕಿಂತ 183 ಮೀ ಎತ್ತರದಲ್ಲಿದೆ. ಪೆನ್ನಾರ್ ನದಿ ಇದಕ್ಕೆ ಉತ್ತರದಲ್ಲಿ 9 ಕಿಮೀ ದೂರದಲ್ಲಿ ಹರಿಯುತ್ತದೆ. ಪೂರ್ವ, ಉತ್ತರ ಮತ್ತು ದಕ್ಷಿಣಗಳಲ್ಲಿ ಬಂಡೆಗಲ್ಲುಗಳಿಂದ ತುಂಬಿದ ನಲ್ಲಮಲೈ ಮತ್ತು ಪಾಲ್ಕೊಂಡ ಬೆಟ್ಟಗಳಿರುವುದರಿಂದ ಬೇಸಗೆಯಲ್ಲಿ ಸೆಕೆ ವಿಪರೀತ. ಆಗ ಇಲ್ಲಿಯ ಉಷ್ಣತೆ 100ಲಿ ಫ್ಯಾ.ಗೂ ಹೆಚ್ಚಾಗಿರುತ್ತದೆ. (ಕೆ.ಎನ್.ಪಿ.)

**ಕಡಪ ಕಲ್ಲು :** ಕಡಪ ಜಿಲ್ಲೆಯ ಜಮ್ಮಲಮಡಗು ಮತ್ತು ಯರಗುಂಟಲ ತಾಲ್ಲೂಕುಗಳಲ್ಲಿಯೂ ಕರ್ನೂಲ್ ಜಿಲ್ಲೆಯ ಬೇಟಂಚರದಲ್ಲಿಯೂ ಹೇರಳವಾಗಿ ದೊರೆಯುವ ಕಪ್ಪು ಬೂದಿ ಬಣ್ಣದ ಮಟ್ಟಸ ಕಲ್ಲಿನ ಹಾಳೆ ಅಥವಾ ಚಪ್ಪಡಿ. ಇವನ್ನೂ ಸ್ಲೇಟ್ ಎಂದೂ ಕರೆಯುವುದುಂಟು. ಈ ಚಪ್ಪಡಿಗಳನ್ನು ಕಡಪ ರೈಲ್ವೆ ಸ್ಟೇಷನ್ನಿನಿಂದ ದೇಶದ ವಿವಿಧ ಭಾಗಗಳಿಗೆ ರವಾನಿಸುವುದರಿಂದ ಇವಕ್ಕೆ ಕಡಪ ಕಲ್ಲುಗಳೆಂದೇ ಹೆಸರಾಗಿದೆ. ನೆಲದ ಮತ್ತು ಮೇಜುಗಳ ಮೇಲೆ ಹಾಸಲು, ಕಟ್ಟಡದ ಮೇಲ್ಛಾವಣಿಗೆ ಮಾಡಾಗಿ ಹೊದಿಸಲು ಇವುಗಳ ಉಪಯೋಗ ಉಂಟು. ಇವು ಹೇರಳವಾಗಿ ದೊರೆಯುವುದರಿಂದಲೂ ಸುಲಭವಾಗಿ ಒಡೆದು ಎಳಕಿಸಬಹುದಾದ್ದರಿಂದಲೂ ಬಹಳ ಹೆಸರುವಾಸಿಯಾಗಿವೆ. 0.5" ಮತ್ತು 0.25" ತೆಳುವಾದ ಮತ್ತು 6'–8' ಚದರದ ದೊಡ್ಡ ಚಪ್ಪಡಿಗಳಾಗಿ ಇವನ್ನು ಎಳಕಿಸುತ್ತಾರೆ. ಈ ಕಲ್ಲು ಸುಣ್ಣಾಂಶವಿರುವ ಅಶುದ್ಧ ಜಾತಿಯ ಜೇಡುಶಿಲೆ. ಚಪ್ಪಡಿಗಳ ಮೇಲೆ ಕೆಲವು ವೇಳೆ ಅಲ್ಲಲ್ಲಿ ಹೊಂಬಣ್ಣದ ಪಿರೈಟಿಸಿನ ಹರಳುಗಳಿರುವುದೂ ಕಂಡುಬಂದಿದೆ. ಭಾರತದ ಭೂವಿಜ್ಞಾನದಲ್ಲಿ ಇದನ್ನು ಕರ್ನೂಲ್ ಗುಂಪಿಗೆ ಸೇರಿದ ಜಲಜಶಿಲೆಯೆಂದು ವರ್ಗೀಕರಿಸಲಾಗಿದೆ. (ಎಂ.ಆರ್.ಎಸ್.)

**ಕಡಪ ಶ್ರೇಣಿಗಳು :** ಭಾರತದ ಭೂ ಇತಿಹಾಸದಲ್ಲಿ ಆರ್ಷೇಯ ಕಲ್ಪವಾದ ಮೇಲೆ (ಎಂದರೆ 1,850 ದಶಲಕ್ಷ ವರ್ಷ ಪ್ರಾಚೀನ ಕಾಲ) ಈಗಿನ ಕಡಪ ಕರ್ನೂಲ್ ಜಿಲ್ಲಾ ಭಾಗಗಳು, ವಿಂಧ್ಯಪರ್ವತ ಪ್ರದೇಶ, ಬೆಳಗಾಂ, ಬಿಜಾಪುರ ಜಿಲ್ಲೆಗಳು ಮುಂತಾದ ಪ್ರದೇಶಗಳಲ್ಲಿ ಶಿಲಾನಿಕ್ಷೇಪಗಳು ಉಂಟಾದವು. ಈ ಕಾಲದ ಹೆಸರು ಪುರಾಣಕಲ್ಪ. ಇದರಲ್ಲಿ ಆದಿಪುರಾಣಕಲ್ಪ ಮತ್ತು ಅಂತ್ಯಪುರಾಣಕಲ್ಪವೆಂಬ ಎರಡು ವಿಭಾಗಗಳಿವೆ. ಆದಿಪುರಾಣಕಲ್ಪವೇ ಕಡಪಶ್ರೇಣಿಯೆಂದೂ ಹೆಸರುವಾಸಿಯಾಗಿದೆ. ಈ ಶಿಲಾಶ್ರೇಣಿಯನ್ನು ಮೊದಲು ಡಬ್ಲ್ಯು. ಕಿಂಗ್ ಎಂಬಾತ ಆಂಧ್ರಪ್ರದೇಶದಲ್ಲಿರುವ ಕಡಪ, ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಲ್ಲಿ ಪರಿಶೋಧಿಸಿದ. ಇದರ ವ್ಯಾಪ್ತಿ ಸು. 19884 ಚ ಕಿಮೀಗಳು. ಇದು ಅರ್ಧಚಂದ್ರಾಕಾರವಾಗಿ ಹಬ್ಬಿದೆ. ಉಬ್ಬಿರುವ ಭಾಗ ಪಶ್ಚಿಮದಲ್ಲಿದೆ. ಈ ಪ್ರದೇಶದ ಬಹುಭಾಗದಲ್ಲಿನ ಶಿಲಾಸಮುದಾಯ ಕಡಪಶ್ರೇಣಿಗಳ ಗುಂಪಿಗೆ ಸೇರಿದೆ.

***ಶಿಲಾಸಂಯೋಜನೆ* :** ಕಡಪ ಶಿಲಾಸಮುದಾಯ ಗಟ್ಟಿಯಾದ ಜೇಡುಶಿಲೆ ಸ್ಲೇಟುಗಳು ಮತ್ತು ಸುಣ್ಣಕಲ್ಲುಗಳಿಂದ ಕೂಡಿದೆ. ಜೇಡುಶಿಲೆ ರೂಪಾಂತರಗೊಂಡು ಪದರಪದರಗಳಾಗಿ ಸೀಳುಗಳನ್ನೊಳಗೊಂಡು ಸ್ಲೇಟು ಶಿಲೆಯಾಗಿದೆ. ಆದರೆ ಫಿಲ್ಲೈಟ್ ಮತ್ತು ಶಿಸ್ಟ್ ಕಲ್ಲುಗಳಷ್ಟು ರೂಪಾಂತರ ಪಡೆದಿಲ್ಲ. ಮರಳು ಶಿಲೆಗಳು ರೂಪಾಂತರಗೊಂಡು ಕ್ವಾರ್ಟ್ಸೈಟ್ ಶಿಲೆಗಳಾಗಿವೆ. ಇವುಗಳಲ್ಲದೆ ಜ್ವಾಲಾಮುಖಜ ಶಿಲೆಗಳೂ ಈ ಶಿಲಾಸಮುದಾಯಗಳ ಮಧ್ಯಭಾಗದಲ್ಲಿ ಅಲ್ಲಲ್ಲಿ ರೂಪುಗೊಂಡಿವೆ. ಕೆಳ ಕಡಪಶಿಲಾಸಮುದಾಯ ಧಾರವಾಡ ಶಿಲಾಸಮುದಾಯದ ಶಿಥಿಲೀಕರಣದಿಂದ ಬೇರ್ಪಟ್ಟು ಸಂಚಿತವಾದ ಜಾಸ್ಪರ್ ಮತ್ತು ಚರ್ಟ್‌ಗಳ ಉರುಟು ಕಲ್ಲುಗಳಿಂದಾಗಿದೆ. ಇದು ಹೆಚ್ಚಾಗಿ ಧಾರವಾಡ ಶಿಲೆಗಳನ್ನೇ ಹೋಲುತ್ತದೆ. ಇವುಗಳ ಮೇಲ್ಭಾಗದಲ್ಲಿ ರೂಪುಗೊಂಡಿರುವ ಜೇಡುಶಿಲೆ ಮತ್ತು ಸುಣ್ಣಶಿಲೆಗಳು ರೂಪಾಂತರದಿಂದ ವಿಂಧ್ಯ ಶಿಲೆಗಳನ್ನು ಹೋಲುತ್ತವೆ. ಪುರಾಣಕಲ್ಪದ ಅನಂತರ ಪರ್ಯಾಯ ದ್ವೀಪಭಾಗದಲ್ಲಿ ಯಾವ ರೀತಿಯ ಗಣನೀಯವಾದ ಭೂಚಲನೆಯೂ ಆಗಿಲ್ಲವಾದ್ದರಿಂದ ಕಡಪಶಿಲೆಗಳ ಇಳಿವೋರೆ ಬಲು ಕಡಿಮೆ. ಆದರೆ ಪೂರ್ವ ಭಾಗದಲ್ಲಿ ಪೂರ್ವಘಟ್ಟಗಳ ಭಾಗಗಳಿರುವುದರಿಂದ ಅಲ್ಲಿ ಶಿಲೆಗಳು ಚಲನೆಗಳಿಗೊಳಗಾದ ರಚನೆಗಳನ್ನು ತೋರಿಸುತ್ತವೆ.

ಈ ಅಗಾಧ ಶಿಲಾಸಮುದಾಯದಲ್ಲಿ ಎಲ್ಲೂ ಜೀವಾವಶೇಷದ ಕುರುಹೇ ಇಲ್ಲ. ಕಡಪಶಿಲಾಸಮುದಾಯ ನಿಜವಾದ ಜಲಜಶಿಲೆಗಳಾಗಿರುವುದರಿಂದ ಅವುಗಳಲ್ಲಿ ಸಮಾಧಿಗೊಂಡ ಅಥವಾ ಹೂತುಹೋದ ಜೀವರಾಶಿಗಳನ್ನು ರಕ್ಷಿಸಲು ಅವು ಯೋಗ್ಯವಾಗಿವೆ. ಅಲ್ಲದೇ ಹೀಗೆ ಸಮಾಧಿಗೊಂಡಿರಬಹುದಾದ ಜೀವಾವಶೇಷಗಳನ್ನು ನಾಶ ಮಾಡಿರುವ ಭೂಚಲನೆ ಅಥವಾ ರಾಸಾಯನಿಕ ಬದಲಾವಣೆಗಳಾವುವೂ ಇವುಗಳಲ್ಲಿ ಕಂಡುಬರುವುದಿಲ್ಲ. ಹೀಗಿದ್ದರೂ ಈ ಶಿಲಾಸಮುದಾಯದಲ್ಲಿ ಜೀವಾವಶೇಷಗಳೇ ಇಲ್ಲದಿರುವುದಕ್ಕೆ ಕಾರಣವನ್ನು ವಿವರಿಸುವುದು ಬಲು ಕಷ್ಟದ ಕೆಲಸ. ಈ ಕಲ್ಪದಲ್ಲಿ ಜೀವಾವಶೇಷಗಳೇ ಇರಲಿಲ್ಲವೆಂದು ಹೇಳೋಣವೆಂದರೆ ಇವುಗಳಾದ ಮೇಲೆ ಸಂಚಯನಗೊಂಡ ಕ್ಯಾಂಬ್ರಿಯನ್ ಕಲ್ಪದ ಶಿಲೆಗಳಲ್ಲಿ ಜೀವಾವಶೇಷಗಳು ಹೇರಳವಾಗಿ ದೊರೆಯುತ್ತವೆ; ಮತ್ತು ಇವು ಆದಿಜೀವರಾಶಿಯಂತೆ ಕಾಣುವುದಿಲ್ಲ.

**ಕಡಪ ಸಮುದಾಯದ ಆರ್ಥಿಕ ಖನಿಜ ನಿಕ್ಷೇಪಗಳು :** ಕಡಪ ಶಿಲಾಸಮುದಾಯದಲ್ಲಿ ಕೆಲವು ಉಪಯುಕ್ತ ಶಿಲೆಗಳೂ ಆರ್ಥಿಕ ಖನಿಜ ನಿಕ್ಷೇಪಗಳೂ ಇವೆ. ಕರ್ನೂಲ್ ಜಿಲ್ಲೆಯ ಮರ್ಕಾಪುರ ಎಂಬ ಸ್ಥಳದಲ್ಲಿ ಸ್ಲೇಟ್ ಕಲ್ಲುಗಳನ್ನು (ಕಡಪ ಕಲ್ಲು) ಒಡೆದು ತೆಗೆಯುತ್ತಾರೆ. ಮರಳುಶಿಲೆಗಳನ್ನು ಕಟ್ಟಡದ ಕಲ್ಲುಗಳಾಗಿ ಉಪಯೋಗಿಸುತ್ತಾರೆ. ಕೆಲವು ಕಡೆಗಳಲ್ಲಿ ಸುಣ್ಣದ ಶಿಲೆಯನ್ನು ಕಟ್ಟಡದ ಕಲ್ಲುಗಳಾಗಿ ಉಪಯೋಗಿಸುತ್ತಾರೆ. ವೇಮಪಲ್ಲಿ ಪ್ರದೇಶದಲ್ಲಿ ಸುಣ್ಣಶಿಲೆಯಲ್ಲಿ ಟ್ರ್ಯಾಪ್‌ಶಿಲೆ ಸರಣವಾಗಿರುವುದರಿಂದ ಕ್ರೈಸೋಟೈಲ್ ಜಾತಿಯ ಕಲ್ನಾರು ಉತ್ಪನ್ನವಾಗಿದೆ; ಮತ್ತು ಈ ಪ್ರದೇಶದಲ್ಲಿ ಬೆರೈಟೀಸ್ ಖನಿಜ ರೂಪುಗೊಂಡಿದೆ. ಇವೆರಡನ್ನೂ ಈ ಪ್ರದೇಶದಲ್ಲಿ ಗಣಿ ಕೆಲಸ ಮಾಡಿ ಹೊರತೆಗೆಯುತ್ತಿದ್ದಾರೆ. ಪುಲಿವೆಂದ್ಲ ಮತ್ತು ಅಗ್ನಿಗೊಂಡಲಗಳ ಹತ್ತಿರ ತಾಮ್ರದ ಅದಿರು ಪತ್ತೆಯಾಗಿದೆ. ಅಲ್ಲಿ ಇದು ತಕ್ಕಷ್ಟು ಪ್ರಮಾಣದಲ್ಲಿ ಸಿಗುವುದೆಂದು ತಿಳಿದುಬಂದಿದೆ. ಅಲ್ಲಲ್ಲಿ ಸ್ವಲ್ಪ ಸೀಸದ ಅದಿರೂ ದೊರೆಯುವುದು. (ಎಂ.ಆರ್.ಎಸ್.)

**ಕಡಬ :** ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ ಕಸಬೆಯಿಂದ ನೈಋತ್ಯಕ್ಕೆ 19 ಕಿಮೀ ದೂರದಲ್ಲಿ ಶಿಂಷಾನದಿಯ ಬಲದಂಡೆಯ ಮೇಲೆ ನಿಟ್ಟೂರು – ಮಾಯಸಂದ್ರ ಹಾದಿಯಲ್ಲಿರುವ ಗ್ರಾಮ. 1886ರವರೆಗೆ ಕಡಬ ಇದೇ ಹೆಸರಿನ ತಾಲ್ಲೂಕಿನ ಕೇಂದ್ರವಾಗಿತ್ತು. ಈಗ ಇದು ಹೋಬಳಿ ಕೇಂದ್ರ.

ದಶರಥರಾಮ ಚತುರ್ವೇದಿಮಂಗಲಂ ಎಂಬುದು ಇಲ್ಲಿನ ತಮಿಳುಶಾಸನಗಳಲ್ಲಿ ಕಂಡುಬರುವ ಈ ಊರಿನ ಪ್ರಾಚೀನ ಹೆಸರು. ಹೆಸರೇ ಸೂಚಿಸುವಂತೆ ಈ ಊರು ಒಂದು ಪ್ರಾಚೀನ ಅಗ್ರಹಾರ. ಇದು ಹೆಬ್ಬಾರ್ ಶ್ರೀವೈಷ್ಣವರ ಪಂಚಗ್ರಾಮಗಳಲ್ಲಿ ಒಂದು. ರಾಮಾನುಜಾ ಚಾರ್ಯರು ಇಲ್ಲಿ ನೆಲಸಿದ್ದಂತೆ ಪ್ರತೀತಿ ಇದೆ. ಕದಂಬ ಋಷಿ ಇಲ್ಲಿನ ಶಿಂಷುಪ (ಶಿಂಷಾ) ನದಿಯ ದಡದಲ್ಲಿ ತಪಸ್ಸು ಮಾಡುತ್ತಿದ್ದುದರಿಂದ ಊರಿಗೆ ಕಡಬ ಎಂದು ಹೆಸರಾಯಿತೆಂದೂ ರಾಮ ಲಂಕೆಯಿಂದ ಹಿಂದಿರುಗುವಾಗ ಸೀತೆಯ ಇಚ್ಛೆಯಂತೆ ಇಲ್ಲಿನ ತಟಾಕವನ್ನು ನಿರ್ಮಾಣ ಮಾಡಿದನೆಂದೂ ಸ್ಥಳಪುರಾಣ ತಿಳಿಸುತ್ತದೆ.

ಇಲ್ಲಿ ರಾಮ, ಕೈಲಾಸೇಶ್ವರ ಮತ್ತು ಹನುಮಾನ್ ದೇವಾಲಯಗಳಿವೆ. ರಾಮ ದೇವಾಲಯ ಒಂದೇ ಸಾಲಿನಲ್ಲಿ ಮೂರು ಗರ್ಭಗುಡಿಗಳಿರುವ ಕಣಶಿಲೆಯ ಕಟ್ಟಡ. ಹೆಸರು ರಾಮದೇವಾಲಯವಾದರೂ ಈಗ ಇಲ್ಲಿ ರಾಮವಿಗ್ರಹವಿಲ್ಲ. ಉತ್ತರದ ಗರ್ಭಗುಡಿಯಲ್ಲಿ ಯೋಗಾನರಸಿಂಹ, ಮಧ್ಯದಲ್ಲಿ ಜನಾರ್ದನ ದಕ್ಷಿಣದಲ್ಲಿ ವೇಣುಗೋಪಾಲ ವಿಗ್ರಹಗಳಿವೆ. ಯೋಗಾನರಸಿಂಹ ಹೊಯ್ಸಳ ಕಾಲದ ಶಿಲ್ಪ. ಉಳಿದೆರಡು ಪಾಳೆಯಗಾರರ ಕಾಲದ್ದು. ಕೆಲವು ತಮಿಳು ಶಾಸನಗಳ ತುಂಡುಗಳು ಕಟ್ಟಡದಲ್ಲಿ ಅಸ್ತವ್ಯಸ್ತವಾಗಿ ಸೇರಿಹೋಗಿದೆ. ಪ್ರಾಯಶಃ ಹೊಯ್ಸಳರ ಕಾಲದ ಮೂಲದೇವಾಲಯ ಪಾಳೆಯಗಾರರ ಕಾಲದಲ್ಲಿ ಪುನರ್ನಿರ್ಮಿತ ವಾಗಿರುವಂತೆ ತೋರುತ್ತದೆ. ದೇವಾಲಯದ ಮುಂದೆ ಸು.8ಮೀ ಎತ್ತರದ ಗರುಡಗಂಬವಿದೆ. ಗ್ರಾಮದ ಈಶಾನ್ಯದಲ್ಲಿ ಶಿಂಷಾ ಮತ್ತು ಕೆರೆಯ ಸಮೀಪದಲ್ಲಿ ಕೈಲಾಸೇಶ್ವರ ದೇವಾಲಯವಿದೆ. ಇದೂ ಕಣಶಿಲೆಯ ಸಾಮಾನ್ಯ ರೀತಿಯ ಚಿಕ್ಕ ಕಟ್ಟಡ. ಇದರ ಮುಂದೆಯೂ ಸು.6ಮೀ ಎತ್ತರದ ದೀಪದ ಕಂಬವಿದೆ. ಕೆರೆಯ ಪೂರ್ವದ ತೂಬಿನ ಬಳಿ ಹನುಮಾನ್ ಗುಡಿ ಇದೆ. ಇದರ ಬಳಿ ಇರುವ ಸು.5ಮೀ ಎತ್ತರದ ಉಯ್ಯಾಲೆ ಕಂಬ ಕೆತ್ತನೆಯ ಲತಾವಿನ್ಯಾಸಗಳಿಂದ ಸುಂದರವಾಗಿ ಅಲಂಕೃತವಾಗಿದೆ. (ಎಚ್.ವಿ.ಎಸ್.)

**ಕಡಲ ಆನೆ :** ಪಿನ್ನಿಪೀಡಿಯ ಗಣದ ಫೋಸಿಡೀ ಕುಟುಂಬದ ಒಂದು ಜಾತಿಯ ಸೀಲ್ ಪ್ರಾಣಿ (ಸೀ ಎಲಿಫೆಂಟ್). ವೈಜ್ಞಾನಿಕ ನಾಮ ಮಿರೂಂಗ. ಕಡಲ ಕರಡಿ, ಕಡಲ ಚಿರತೆ, ಕಡಲ ಸಿಂಹ ಮುಂತಾದುವುಗಳಿಗೆ ಇದು ಹತ್ತಿರ ಸಂಬಂಧಿ. ಅವುಗಳೆಲ್ಲಕ್ಕಿಂತ ಇದು ದೊಡ್ಡದೂ ಬಲಿಷ್ಠವಾದುದೂ ಆಗಿದೆ. ಮೂತಿ ಆನೆಯ ಸೊಂಡಿಲಿನಂತೆ ಕೊಂಚ ಮುಂದಕ್ಕೆ ಚಾಚಿರುವುದರಿಂದಲೂ ದೇಹ ದಪ್ಪನಾಗಿರುವುದರಿಂದಲೂ ಇದನ್ನು ಕಡಲ ಆನೆ ಎನ್ನಲಾಗಿದೆ. ಇದರಲ್ಲಿ ಮೆಕ್ಸಿಕೋ ಬಳಿಯ ಗಾಡಲೂಪೆ ದ್ವೀಪಗಳಲ್ಲಿ ಅಲ್ಲಲ್ಲಿ ಕಾಣಬರುವ ಮಿ. ಆಂಗಸ್ಟಿರಾಸ್ಟ್ರಿಸ್ ಎಂಬ ಪ್ರಭೇದವೂ ಫಾಕ್ಲೆಂಡ್, ಕೆರ್ಗುಯೆಲೆನ್ ಮತ್ತು ಮಕೇರಿ ದ್ವೀಪಗಳಲ್ಲಿ ಹಾಗೂ ನ್ಯೂಜಿಲೆಂಡಿಗೆ ಮುನ್ನೂರು ಮೈಲಿ ದಕ್ಷಿಣಕ್ಕಿರುವ ಕ್ಯಾಂಬೆಲ್ ದ್ವೀಪಗಳಲ್ಲಿ ವಾಸಿಸುವ ಮಿ. ಲಿಯೋನಿಯ ಎಂಬ ಪ್ರಭೇದವೂ ಇವೆ.

ಕಡಲ ಆನೆಗಳಲ್ಲಿ ಗಂಡು ಸು. 20' ಉದ್ದವಿದ್ದು ಸು. 5,000 ಪೌಂ. ತೂಗುತ್ತದೆ. ಹೆಣ್ಣು ಸು. 10' ಉದ್ದವಿರುತ್ತದೆ. ಚರ್ಮ ಒರಟಾಗಿ ಸುಕ್ಕು ಸುಕ್ಕಾಗಿದೆ. ಮೂತಿ ಒಂದು ಅಡಿ ಉದ್ದದ ಸೊಂಡಿಲಿನಂತೆ ಬಾಯ ಮೇಲೆ ಇಳಿ ಬಿದ್ದಿದೆ. ಉಸಿರೆಳೆದುಕೊಂಡಾಗ ಸೊಂಡಿಲು ಕುಣಿದೇಳುವುದೂ ದೊಡ್ಡ ಗೊರಕೆಯಂತೆ ಶಬ್ದವಾಗುವುದೂ ಕಡಲಾನೆಯ ವಿಚಿತ್ರ ಲಕ್ಷಣಗಳು. ಇದು ಸ್ವಭಾವತಃ ಮಂದ. ಕಡಲ ತೀರ ಅಥವಾ ಬಂಡೆಗಳ ಮೇಲೆ ಮಲಗಿಯೇ ಇರುತ್ತದೆ. ಬೇಟೆಯಾಡಲು ಮಾತ್ರ ನೀರಿಗಿಳಿಯುತ್ತದೆ. ನೀರಿನಲ್ಲಿ ವೇಗವಾಗಿ ಮತ್ತು ಗಂಭೀರ ಗತಿಯಲ್ಲಿ ಈಜಬಲ್ಲುದು. ಮೀನುಗಳು ಮತ್ತು ಸ್ಕ್ವಿಡ್ಡುಗಳು ಇದರ ಪ್ರಧಾನ ಆಹಾರ, ಹಕ್ಕಿಗಳಂತೆ ಕಲ್ಲುಗಳನ್ನು ನುಂಗಿ ಜಠರದಲ್ಲಿ ಶೇಖರಿಸಿಕೊಳ್ಳುತ್ತದೆ. ಆಹಾರವನ್ನು ಅರೆಯಲು ಇವನ್ನು ಉಪಯೋಗಿಸಿಕೊಳ್ಳುವುದೆಂದು ತೋರುತ್ತದೆ. ಋತುಕಾಲ ಬಂದಾಗ ಇತರ ಸೀಲ್ ಪ್ರಾಣಿಗಳಂತೆ ಸಮುದ್ರದಂಡೆಯ ಮೇಲೆ ಬೀಡು ಬಿಡುತ್ತದೆ. ಆನೆಯ ಇನ್ನೊಂದು ಸ್ವಭಾವವೂ ಕಡಲ ಆನೆಗುಂಟು. ಒಂದು ಗಂಡು ತನ್ನ ಹತ್ತಿರ ಹಲವು ಹೆಣ್ಣುಗಳನ್ನು ಇರಿಸಿಕೊಂಡು ಇತರ ಗಂಡುಗಳಿಂದ ರಕ್ಷಿಸುತ್ತದೆ.

ಹೆಣ್ಣುಗಳಿಗಾಗಿ ಕೆಲವೊಮ್ಮೆ ಭಯಂಕರ ಹೋರಾಟವೂ ನಡೆಯುವುದುಂಟು. ಹೆಣ್ಣು ಫೆಬ್ರವರಿ ಮತ್ತು ಜೂನ್ ತಿಂಗಳುಗಳ ನಡುವಣ ಕಾಲದಲ್ಲಿ ಮರಿ ಹಾಕುತ್ತದೆ. ಸಾಮಾನ್ಯವಾಗಿ ಒಂದು ಸಲಕ್ಕೆ ಒಂದು ಮರಿಯನ್ನು ಈಯುತ್ತದೆ.

ಹಿಂದೆ ಕೊಬ್ಬು ಮತ್ತು ಎಣ್ಣೆಗಳಿಗಾಗಿ ಜನ ಇವನ್ನು ಬೇಟೆಯಾಡಿದರಾಗಿ ಹೇರಳವಾಗಿದ್ದ ಕಡಲಾನೆಗಳು ಕಡಿಮೆಯಾಗುತ್ತ ಬಂದುವು. ಈಚೆಗೆ ಇವುಗಳ ಬೇಟೆಯನ್ನು ಸರ್ಕಾರಗಳು ಪ್ರತಿಬಂಧಿಸಿ ಇವುಗಳ ಪೀಳಿಗೆ ನಾಶವಾಗುವುದನ್ನು ತಪ್ಪಿಸಿವೆ. (ಬಿ.ಎನ್.ಬಿ.)

**ಕಡಲ ಇಲಿ :** ವಲಯವಂತ ವಂಶದ ಪಾಲಿಕೀಟ ಗಣಕ್ಕೆ ಸೇರಿದ ಅಫ್ರೋಡೈಟ್ ಜಾತಿಯ ಕಡಲುವಾಸಿ (ಸೀಮೌಸ್). ಉತ್ತರ ಅಮೆರಿಕ, ಆಸ್ಟ್ರೇಲಿಯ ಮತ್ತು ಐರೋಪ್ಯ ರಾಷ್ಟ್ರಗಳ ಕರಾವಳಿಯ ನಯವಾದ ಮಣ್ಣಿನ ಸಮುದ್ರ ತಳದಲ್ಲಿ ವಾಸಿಸುತ್ತದೆ. ಸಮುದ್ರತಳದಲ್ಲಿ ತೆವಳುವಾಗ ಇಲಿಯನ್ನು ಹೋಲುವುದರಿಂದ ಇದಕ್ಕೆ ಈ ಹೆಸರು. 40ಕ್ಕೂ ಮಿಗಿಲಾದ



ಖಂಡಗಳುಳ್ಳ ಈ ಮಂದಗಾಮಿಯ ಅಂಡಾಕಾರದ ದೇಹ 6"–7" ಉದ್ದ 3"–4" ಅಗಲ. ಪ್ರತಿ ಖಂಡದ ಇಕ್ಕಡೆಯಲ್ಲೂ ದ್ವಿಶಾಖಾರಚನೆಯುಳ್ಳ (ಬೈರೇಮಸ್) ಎರಡು ಪಾರ್ಶ್ವಪಾದ (ಪ್ಯಾರಪೋಡಿಯ)ಗಳಿವೆ. ಈ ಪಾರ್ಶ್ವಪಾದಗಳ ಬೆನ್ನಿನ ಸಿರಸ್ಸುಗಳಿಂದಾದ 15 ಜೊತೆ ಫಲಕಗಳು ಹೊರಮೈಯನ್ನು ಮುಚ್ಚಿರುತ್ತವೆ. ಆದರೆ ಅವುಗಳ ಮೇಲೆ ನಿಬಿಡವಾಗಿ ಹರಡಿರುವ ವರ್ಣರಂಜಿತ ಬಿರುಗೂದಲುಗಳ ಹೊದಿಕೆಯಿರುವುದರಿಂದ ಫಲಕಗಳು ಕಾಣುವುದಿಲ್ಲ. ಈ ರಕ್ಷಾಕವಚದ ಚಲನೆಯಿಂದ ಕಡಲ ಇಲಿಯ ಬಿಲದಲ್ಲಿ ಜಲಾಭಿಸರಣೆಯಾಗುತ್ತದೆ. ಸ್ನಾಯುಪುಷ್ಟಿತ ಸ್ಥೂಲ ಗಂಟಲಲ್ಲದೆ 18 ಜೊತೆ ಕರುಳು ಚೀಲ ಗಳಿರುವ ಜೀರ್ಣನಾಳ ಎಲ್ಲ ಜಾತಿಯಕಡಲು ಇಲಿ ಗಳಲ್ಲೂ ಕಂಡುಬರುತ್ತವೆ. ಇದರ ಜೀರ್ಣನಾಳದ ಮುಂತುದಿಯನ್ನು ಹಿಂದಿನವರು ಆಹಾರವಾಗಿ ಉಪಯೋಗಿಸುತ್ತಿದ್ದರೆಂದು ಪ್ರತೀತಿ. ಭಾರತದ ಸಮುದ್ರ ದಡಗಳಲ್ಲಿ ಇದರ ಕೆಲವು ಪ್ರಭೇದಗಳು ಕಂಡುಬರುತ್ತವೆ. ಅವುಗಳಲ್ಲಿ ತಮಿಳುನಾಡು ಮತ್ತು ಸಾಂತಾಪಲ್ಲಿಯಲ್ಲಿ ದೊರಕುವ ಅಫ್ರೋಡೈಟ್ ಅಕ್ಯುಲಿಯೇಟ, ಲಕಡೀವ್ ಮತ್ತು ಕ್ಯಾಮೊರಿನ್ ದ್ವೀಪಗಳಲ್ಲಿ ವಾಸಿಸುವ ಅ.ಆಸ್ಟ್ರಾಲಿಸ್ ಮತ್ತು ಅಂಡಮಾನ್, ಒರಿಸ್ಸ, ಕೇರಳ ಮತ್ತು ಬಂಗಾಲ ಕೊಲ್ಲಿಗಳಲ್ಲಿರುವ ಅ.ಟಾಲ್ಪಾಗಳು ಮುಖ್ಯವಾದುವು. (ಎಸ್.ಎಚ್.ಐ.)

**ಕಡಲ ಕರಡಿ :** ಪಿನ್ನಿಪೀಡಿಯ ಗಣದ ಓಟರೈಯಿಡೀ ಕುಟುಂಬಕ್ಕೆ ಸೇರಿದ ಸಮುದ್ರವಾಸಿ ಸ್ತನಿ (ಸೀ ಬೇರ್). ಫರ್ ಸೀಲ್ (ತುಪ್ಪುಳ ಸೀಲ್) ಎಂದೂ ಕರೆಯುತ್ತಾರೆ. ಇದು ಕಡಲ ಸಿಂಹದ ಹತ್ತಿರದ ನಂಟ. ಇದರಲ್ಲಿ ಕ್ಯಾಲೊರೈನಸ್ ಮತ್ತು ಆರ್ಕ್ಟೊಸಿಫ್ಯಾಲಸ್

ಎಂಬ ಎರಡು ಜಾತಿಗಳು ಬಹು ಮುಖ್ಯವಾದುವು. ಇವುಗಳಲ್ಲಿ ಮೊದಲನೆಯದು ಬೆರಿಂಗ್ ಸಮುದ್ರದ ದ್ವೀಪಗಳು, ಜಪಾನ್ ಮತ್ತು ಅಮೆರಿಕದ ಕೆಲವು ಭಾಗಗಳ ನಿವಾಸಿ. ಎರಡನೆಯದು ನ್ಯೂ ಜ಼ಿಲೆಂಡ್, ಆಸ್ಟ್ರೇಲಿಯ, ಟಾಸ್ಮೇನಿಯ, ಅಮೆರಿಕಗಳ ಸಮುದ್ರತೀರಗಳಲ್ಲಿ ವಾಸಿಸುತ್ತದೆ.

ಚೆನ್ನಾಗಿ ಬೆಳೆದ ಕ್ಯಾಲೊರೈನಸ್ ಜಾತಿಯ ಗಂಡು ಕಡಲ ಕರಡಿ ಸು. 6' ಉದ್ದವಿದ್ದು 500–700 ಪೌಂ. ತೂಗುತ್ತದೆ. ಹೆಣ್ಣು ಗಂಡಿಗಿಂತ ಚಿಕ್ಕದು. ಇತರ ಸೀಲ್ ಪ್ರಾಣಿಗಳಲ್ಲಿರುವಂತೆಯೇ ಇದರ ದೇಹವೂ ಜಲವಾಸಕ್ಕೆ ಅನುಕೂಲವಾಗಿದೆ. ಮೈಮೇಲೆ ರೇಷ್ಮೆಯಂಥ ಮೃದುವಾದ ಹಾಗೂ ದಟ್ಟವಾದ ಕೂದಲಿವೆ. ಬಣ್ಣ ಕಪ್ಪು ಮಿಶ್ರಿತ ಬೂದು ಅಥವಾ ಕಂದು. ಸಾಮಾನ್ಯವಾಗಿ ನೀರಿನಲ್ಲಿಯೇ ತಮ್ಮ ಜೀವಿತವನ್ನೆಲ್ಲ ಕಳೆಯುತ್ತವೆ. ತುಂಬ ಚೆನ್ನಾಗಿ ಈಜಬಲ್ಲುವು. ನೆಲದ ಮೇಲೆ ಇತರ ಸೀಲ್ ಪ್ರಾಣಿಗಳಿಗಿಂತ ಉತ್ತಮವಾಗಿ ನಡೆಯಬಲ್ಲವು. ಸಾಮಾನ್ಯವಾಗಿ ಕೆಮ್ಮುವುದು, ಬೊಗಳುವುದು, ಗರ್ಜಿಸುವುದು ಇವುಗಳ ವಾಡಿಕೆ. ಮೀನು, ಸ್ಕ್ವಿಡ್ಡುಗಳು ಮತ್ತಿತರ ಸಾಗರದ ಪ್ರಾಣಿಗಳನ್ನು ಹಿಡಿದು ತಿನ್ನುತ್ತವೆ.

ಉತ್ತರ ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ವಾಸಿಸುವ ಕಡಲ ಕರಡಿ

ಸಂತಾನೋತ್ಪತ್ತಿಯ ಕ್ರಮ, ಕಾಲ ಎಲ್ಲವೂ ಕಡಲ ಸಿಂಹಗಳಲ್ಲಿನಂತೆಯೇ. ಆದರೆ ತಮ್ಮ ಅಧೀನದ ಪ್ರದೇಶದ ಸ್ವಾಮ್ಯವನ್ನು ಮತ್ತು ಹೆಣ್ಣುಗಳ ಮೇಲಿನ ತಮ್ಮ ಅಧಿಕಾರವನ್ನು ಕಾಪಾಡಿಕೊಳ್ಳುವುದರಲ್ಲಿ ಕಡಲ ಸಿಂಹಗಳಿಗಿಂತ ಇವು ಹೆಚ್ಚಿನ ಆಸಕ್ತಿ ತೋರುವುವಲ್ಲದೆ ಹೋರಾಟವನ್ನೂ ನಡೆಸುತ್ತವೆ. ಕಡಲಸಿಂಹಗಳಲ್ಲಿರುವಂತೆ ಇವುಗಳಲ್ಲಿಯೂ ದಕ್ಷಿಣದ ಕಡೆಗೆ ವಲಸೆ ಹೋಗುವ ಕ್ರಮ ಇದೆ. ಹೀಗೆ ಹೋಗುವಾಗ ತಿಮಿಂಗಿಲಗಳಿಗೆ ತುತ್ತಾಗುವುದೂ ಉಂಟು.

ಆರ್ಕ್ಟೊಸಿಫ್ಯಾಲಸ್ ಜಾತಿಯ ಕಡಲ ಕರಡಿಗಳು ನೋಡುವುದಕ್ಕೆ ಕ್ಯಾಲೊರೈನಸ್ ಜಾತಿಯವುಗಳಂತಿದ್ದರೂ ಗಾತ್ರದಲ್ಲಿ ಚಿಕ್ಕವು. ಇವುಗಳ ಜೀವನಕ್ರಮವೂ ಅವುಗಳಂತೆಯೇ.

ಈ ಎರಡು ಜಾತಿಯ ಕಡಲ ಕರಡಿಗಳು ತಮ್ಮ ಬೆಲೆಬಾಳುವ ಚರ್ಮದಿಂದ (ಫರ್) ಬಹಳ ಹೆಸರಾಗಿವೆ. ಬಹಳ ಬೇಡಿಕೆಯಿರುವ ಈ ಚರ್ಮಕ್ಕಾಗಿ ಈ ಪ್ರಾಣಿಗಳನ್ನು ಸು. 300 ವರ್ಷಗಳಿಂದಲೂ ಬೇಟೆಯಾಡುತ್ತಿದ್ದಾರೆ. ಇದರಿಂದಾಗಿ ಪ್ರಪಂಚದ ಹಲವಾರು ಕಡೆಗಳಲ್ಲಿ ಇವುಗಳ ಸಂತತಿ ನಶಿಸಿಹೋಗಿದೆ. ಅಮೆರಿಕದ ಸಂಯುಕ್ತಸಂಸ್ಥಾನಗಳು, ರಷ್ಯ, ಕೆನಡ ಮತ್ತು ಜಪಾನ್ ದೇಶಗಳು ಕಡಲ ಕರಡಿಗಳ ಪ್ರಾಮುಖ್ಯವನ್ನು ಅರಿತು ಅವುಗಳ ಬೇಟೆಯನ್ನು ನಿಯಂತ್ರಿಸಲು ಒಪ್ಪಂದ ಮಾಡಿಕೊಂಡಿವೆ. ಹೀಗಾಗಿ ಅವುಗಳ ಸಂತತಿ ಕ್ರಮೇಣ ವರ್ಧಿಸುತ್ತ ಬಂದಿದೆ. (ಬಿ.ಎನ್.ಬಿ.)

**ಕಡಲ ಕುದುರೆ :** ಉಷ್ಣ ಮತ್ತು ಸಮಶೀತೋಷ್ಣವಲಯಗಳ ಸಮುದ್ರದ ತೀರಪ್ರದೇಶದಲ್ಲಿ ವಾಸಿಸುವ ಒಂದು ಅಸ್ಥಿಮೀನು. ಕೊಳವೆ ಮೀನುಗಳ (ಪೈಪ್‌ಫಿಷ್) ಸಂಬಂಧಿ. ಲೋಫೊಬ್ರಾಂಕಿಯ ಗಣದ ಸಿಂಗ್ನಾತಿಡೀ ಕುಟುಂಬಕ್ಕೆ ಸೇರಿದೆ; ವೈಜ್ಞಾನಿಕ ನಾಮ ಹಿಪ್ಪೊಕ್ಯಾಂಪಸ್. ಕುದುರೆಯ ತಲೆಯಂಥದೇ ತಲೆ ಮತ್ತು ಅದೇ ರೀತಿ ಬಾಗಿರುವ ಕುತ್ತಿಗೆಯಿರುವುದರಿಂದ ಈ ಪ್ರಾಣಿಗೆ ಕಡಲ ಕುದುರೆ ಎಂಬ ಹೆಸರು ಬಂದಿದೆ. ಇದು ಸಾಮಾನ್ಯವಾಗಿ ತೀರಪ್ರದೇಶದ ಉತ್ತಳ ನೀರಿನಲ್ಲಿ ಸಮುದ್ರಜೊಂಡಿನ ಮಧ್ಯೆ ಹೇರಳವಾಗಿ ಕಂಡುಬಂದರೂ ಕೆಲವು ಸಾರಿ ನದಿಮುಖಜ ಪ್ರದೇಶದಲ್ಲೂ ಕಾಣಬರುವುದುಂಟು.

ದೇಹ ತೆಳು, ನೀಳ ಹಾಗೂ ಸಣ್ಣದು. ಉದ್ದ ಸಾಮಾನ್ಯವಾಗಿ 7–12 ಸೆಂಮೀ ಅಮೆರಿಕದ ಪೆಸಿಫಿಕ್ ತೀರಪ್ರದೇಶದ ಹಿಪ್ಪೊಕ್ಯಾಂಪಸ್ ಇಂಜೆನ್ಸ್ ಎಂಬ ಪ್ರಭೇದ 30ಸೆಂಮೀ ವರೆಗೆ ಬೆಳೆದರೆ, ಫ್ಲಾರಿಡದ ಬಳಿ ವಾಸಿಸುವ ಹಿ.ಜೊಸ್ಟೆರ್ನೆ ಎಂಬುದು ಕೇವಲ 5 ಸೆಂಮೀ ಉದ್ದವಿದೆ. ದೇಹದ ಮೇಲೆ ಎಲುಬಿನ ಮೈಗಾಪು ಅಥವಾ ತಟ್ಟೆಗಳು ದಟ್ಟವಾಗಿ ಸುವ್ಯವಸ್ಥಿತ ರೀತಿಯಲ್ಲಿ ಜೋಡಣೆಗೊಂಡಿವೆ. ತಲೆಗೂ ದೇಹಕ್ಕೂ ನಡುವಿನ ಕುತ್ತಿಗೆಯ ಭಾಗ ಸುಸ್ಪಷ್ಟ ಕೊಳವೆಯಾಕಾರದ ಮೂತಿ ಎಲುಬುಗಳ ಕೂಡಣೆಯಿಂದಾಗಿದೆ. ಮೂತಿಯ ತುದಿಯಲ್ಲಿ ಹೀರುವಂಥ ದುಂಡಾದ ಪುಟ್ಟ ಬಾಯಿ ಇದೆ. ಕಿವಿರು ಮುಚ್ಚಳದ




ಕಡಲ ಕುದುರೆ : A: ಗಂಡು; A: ಹೆಣ್ಣು

ಅಂಚು ದೇಹದೊಡನೆ ಅಂಟಿಕೊಂಡು ಅದರ ಬಿರುಕು ಚಿಕ್ಕ ರಂಧ್ರದಂತೆ ಮೇಲ್ಭಾಗದಲ್ಲಿದೆ. ಒಂದೊಂದು ಕಣ್ಣೂ ಗೋಸುಂಬೆಯ ಕಣ್ಣಿನಂತೆ ಪ್ರತ್ಯೇಕವಾಗಿ ಚಲಿಸಬಲ್ಲುದು. ಬಾಲ ನೀಳವಾಗಿದ್ದು ತುದಿಯವರೆಗೂ ಕ್ರಮಕ್ರಮವಾಗಿ ಚೂಪಾಗುತ್ತದೆ. ಕಡಲ ಕುದುರೆ ತನ್ನ ಬಾಲದ ತುದಿಯಿಂದ ಜೊಂಡು ಮುಂತಾದವಕ್ಕೆ ತಗುಲಿಕೊಂಡು ನೆಟ್ಟಗೆ ವಿಚಿತ್ರ ಭಂಗಿಯಲ್ಲಿ ನಿಲ್ಲಬಲ್ಲುದು. ಇದಕ್ಕೆ ಬಾಲದ ಈಜುರೆಕ್ಕೆಗಳಾಗಲಿ ಶ್ರೋಣಿಯ ಈಜುರೆಕ್ಕೆಯಾಗಲೀ ಇಲ್ಲ. ಎದೆಯ ಭಾಗದಲ್ಲಿ ಒಂದು ಜೊತೆ ಬಲು ಚಿಕ್ಕವಾದ ಎದೆಯ (ಪೆಕ್ಟೊರಲ್) ಈಜುರೆಕ್ಕೆ ಮತ್ತು ಬೆನ್ನಿನ ಮೇಲೆ ಗುದ ಇರುವ ಮಟ್ಟದಲ್ಲಿ ಒಂದು ಬೆನ್ನಿನ ಈಜುರೆಕ್ಕೆ (ಡಾರ್ಸಲ್ ಫಿನ್) ಮಾತ್ರ ಇವೆ. ಬೆನ್ನಿನ ಈಜುರೆಕ್ಕೆಯೇ ಈಜಲು ನೆರವಾಗುವ ಪ್ರಧಾನಾಂಗ. ಇದು ಚಿಕ್ಕದಾಗಿರುವುದರಿಂದಲೂ ತೆಳುವಾಗಿ ಪಾರದರ್ಶಕವಾಗಿರುವುದರಿಂದಲೂ ಇದನ್ನು ಸುಲಭವಾಗಿ ನೋಡಲಾಗುವುದಿಲ್ಲ. ಕಡಲ ಕುದುರೆ ಮಂದಗತಿಯಲ್ಲಿ ಮುಂಚಲಿಸುವಾಗ ಬೆನ್ನಿನ ಈಜುರೆಕ್ಕೆಯ ಸುತ್ತ ನೀರಿನಲ್ಲಿ ಮೂಡುವ ತರಂಗಗಳು ತೀವ್ರಗತಿಯಲ್ಲಿರುವುದರಿಂದ ಈ ಈಜುರೆಕ್ಕೆ ಪ್ರೊಪೆಲರ್ ತರಹ ತಿರುಗುತ್ತಿರುವಂತೆ ಕಾಣುತ್ತದೆ.

ಹಿಪ್ಪೊಕ್ಯಾಂಪಸ್ ಜಾತಿಯ ಕಡಲ ಕುದುರೆಯಲ್ಲಿ ಹೆಣ್ಣುಗಂಡುಗಳ ದೇಹ ರಚನೆ ಸ್ವಲ್ಪ ಬೇರೆ ಬೇರೆ. ಗಂಡಿನಲ್ಲಿ ಉದರಭಾಗದ ತಳದಲ್ಲಿ ದೇಹಕ್ಕೆ ಅಂಟಿಕೊಂಡಂತೆ ಕಾಂಗರೂ ಪ್ರಾಣಿಗಳಿಗಿರುವಂತೆ ಒಂದು ಕಾಪುಗೂಡು ಸಂಚಿಯಿದೆ (ಬ್ರೂಡ್ ಪೌಚ್). ಈ ಸಂಚಿಯ ಮುಂಭಾಗದಲ್ಲಿ ಒಂದು ಚಿಕ್ಕ ರಂಧ್ರವಿದೆ. ಋತುಗಾಲ ಬಂದಾಗ ಹೆಣ್ಣು ಗಂಡನ್ನು ಹುಡುಕಿ ಬಂದು ಶೃಂಗಾರವಿಲಾಸವನ್ನು ಪ್ರಾರಂಭಿಸುತ್ತದೆ. ತನ್ನ ಜನನೇಂದ್ರಿಯದಿಂದ ಒಂದು ಅಂಡ ನಿಕ್ಷೇಪವನ್ನು ಬೆಳೆಸಿಕೊಂಡು ಗಂಡಿನ ಸಂಚಿಯಲ್ಲಿ ತನ್ನ ಅಂಡಾಣುಗಳನ್ನು ತುಂಬುತ್ತದೆ. ಅಂಡಾಣುಗಳು ಸಂಚಿಯನ್ನು ಸೇರುವಾಗ ಗಂಡಿನ ಶುಕ್ರಾಣುಗಳಿಂದ ಸೇಚನಗೊಳ್ಳುತ್ತವೆ. ಈ ಕ್ರಿಯೆ ಆದ ಮೇಲೆ ರಂಧ್ರ ಮುಚ್ಚಿಹೋಗುತ್ತದೆ. ಸಂಚಿಯ ಒಳಗೋಡೆಯ ಪೊರೆಯಲ್ಲಿ ಉತ್ಪತ್ತಿಯಾಗುವ ಸ್ರಾವ ಬೆಳೆಯುವ ಭ್ರೂಣಗಳಿಗೆ ಪೋಷಕಾಂಶವನ್ನು ಒದಗಿಸುತ್ತದೆ. ಗಂಡು ಪ್ರಾಣಿಯೇ ಅಂಡಾಣುಗಳನ್ನು ಸಂಚಿಯಲ್ಲಿ ಧರಿಸಿ ಪೋಷಣೆ ಕೊಟ್ಟು ಮರಿಗಳು ಬೆಳೆವವರೆಗೂ ದಾದಿತನ ಮಾಡುತ್ತದೆ. ಸಂಚಿಯಲ್ಲಿ 40–45 ದಿನಗಳ ಕಾಲ ಬೆಳೆದ ಮೇಲೆ ಮರಿಗಳು ಒಂದೊಂದಾಗಿ ಹೊರಬರುತ್ತವೆ. ಮರಿಗಳು ಹೊರಬರುವಾಗ ಗಂಡು ತನ್ನ ಹೊಟ್ಟೆಯನ್ನು ಬಂಡೆಗೊ ಅಥವಾ ಚಿಪ್ಪಿಗೊ ಉಜ್ಜುವುದನ್ನು ನೋಡಿದರೆ ಅದು ಪ್ರಸವವೇದನೆಯನ್ನು ಅನುಭವಿಸುತ್ತಿರುವಂತೆ ಕಾಣುತ್ತದೆ.

ದಕ್ಷಿಣ ಆಸ್ಟ್ರೇಲಿಯ ತೀರಪ್ರದೇಶಕ್ಕೆ ಸೀಮಿತವಾಗಿರುವ ಫಿಲ್ಲೋಟೆರಿಕ್ಸ್ ಈಕ್ವಸ್ ಎಂಬ ಜಾತಿಯನ್ನೂ ಕಡಲ ಕುದುರೆಯೆಂದು ಕರೆಯುವುದುಂಟು. ಇದರಲ್ಲಿ ದೇಹದ ಮೇಲಿನಿಂದ ಹೊರಚಾಚಿರುವ ಉಪಾಂಗಗಳು ಜೊಂಡಿನ ಬಣ್ಣ ರಚನೆಗಳಿಂದ ಕೂಡಿರುವುದರಿಂದ ಅವನ್ನು ಅವುಗಳ ಪರಿಸರದಲ್ಲಿ ಗುರುತಿಸುವುದು ಬಹಳ ಕಷ್ಟ. (ಬಿ.ಎನ್.ಬಿ.)

**ಕಡಲ ಗಿಣಿ :** ಕೆರಾಡ್ರಿಫಾರ್ಮಿಸ್ ಗಣದ ಆಲ್ಸಿಡೀ ಕುಟುಂಬಕ್ಕೆ ಸೇರಿದ ಹಕ್ಕಿ (ಪಫಿನ್). ಇದರ ಆಕಾರ ಗಿಣಿಯಂತಿದ್ದು ಕಡಲ ಸಮೀಪದಲ್ಲಿ ವಾಸಮಾಡುವುದರಿಂದ ಇದಕ್ಕೆ ಈ ಹೆಸರು. ಇದು ಸದಾ ನೀರಿನಲ್ಲಿ ಬೆಂಡಿನಂತೆ ತೇಲುತ್ತ–ಮುಳುಗುತ್ತ ಕಾಲ

ಕಳೆಯುತ್ತದೆ. ಉತ್ತರ ಮತ್ತು ದಕ್ಷಿಣ ಅಮೆರಿಕದ ಕೆಲವು ಪ್ರದೇಶದಲ್ಲಿ ಇದು ಸಾಮಾನ್ಯ. ಇದು ಆಕ್ ಹಕ್ಕಿಯ ಸಂಬಂಧಿ. ಇದರ ಕಾಲುಗಳು ಬಹಳ ಹಿಂದಕ್ಕಿರುವುದರಿಂದ ಭೂಮಿಯ ಮೇಲೆ ನಿಂತಾಗ ಕುಳಿತ ಮನುಷ್ಯನಂತೆ ಕಾಣುವುದು. ಹಕ್ಕಿ ದೊಡ್ಡ ಗಾತ್ರದ್ದು. ತಲೆಯೂ ಸಹ ಶರೀರಕ್ಕೆ ಹೋಲಿಸಿದರೆ ಮಿತಿಮೀರಿ ಬೆಳೆದಂತೆ ಕಾಣುತ್ತದೆ. ತಲೆಯ ಇಕ್ಕೆಡೆಗಳಲ್ಲಿ ಬಿಳಿಮಚ್ಚೆಯಿದೆ. ಕಣ್ಣಿನ ಹಿಂಭಾಗದಲ್ಲಿ ಬಂಗಾರದ ಬಣ್ಣದ ಪುಕ್ಕಗಳಿವೆ. ಕೊಕ್ಕು ತುಂಬ ದೊಡ್ಡದಾಗಿದ್ದು ಮುಖವಾಡದಂತೆ ಕಾಣುತ್ತದೆ. ಇದರಿಂದಾಗಿ ಹಕ್ಕಿ ಅಷ್ಟು ಆಕರ್ಷಕವಾಗಿಲ್ಲ. ಕೊಕ್ಕಿನ ವಿಚಿತ್ರವಾದ ರಚನೆಗೆ ಕಾರಣ ಗೊತ್ತಿಲ್ಲ. ಇದು ಸಮುದ್ರದಡದಲ್ಲಿ ಗೂಡನ್ನು ಕಟ್ಟಿ ಮೊಟ್ಟೆಯಿಡುತ್ತದೆ. ಸಮುದ್ರದಲ್ಲಿ ಸಿಗುವ ಮೀನು ಮುಂತಾದ ಪ್ರಾಣಿಗಳು ಇದರ ಆಹಾರ.

ಕಡಲ ಗಿಣಿಗಳು ಯಾವಾಗಲೂ ನೀರಲ್ಲಿ ವಾಸಮಾಡುವುದರಿಂದ ಈಜುವುದಕ್ಕೆ ಅನುಕೂಲಕರವಾದ ಅಂಗರಚನೆಗಳನ್ನು ಪಡೆದಿವೆ. ದೋಣಿಯಾಕಾರದ ದೇಹ, ಜಾಲಪಾದಗಳುಳ್ಳ ಕಾಲುಗಳು–ಇವು ಈಜಲು ಸಹಕಾರಿಯಾಗಿವೆ. ಮೈತುಂಬ ಪುಕ್ಕಗಳಿರುವುದಲ್ಲದೆ ಚರ್ಮದ ಅಡಿಯಲ್ಲಿ ಒಂದು ಪದರ ಕೊಬ್ಬು ಇರುವುದರಿಂದ ದೇಹದಲ್ಲಿ ಉಷ್ಣತೆಯನ್ನು ಕಾಪಾಡುವುದು ಸುಲಭ. ಅಲ್ಲದೆ ಇವು ಯಾವಾಗಲೂ ಈಜುತ್ತಲೇ ಇರುವುದರಿಂದ ರೆಕ್ಕೆಗಳು ಅನುಪಯುಕ್ತವಾಗಿ ಕ್ಷೀಣಗೊಂಡಿವೆ. (ಜಿ.ಎಂ.ಬಿ.)

**ಕಡಲ ಚಿಟ್ಟೆ :** ತೇಲುಜೀವನಕ್ಕೆ ಹೊಂದಿಕೊಂಡು ಸಾಗರದಲ್ಲಿ ಸ್ವೇಚ್ಛೆಯಾಗಿ ಈಜಾಡುವ ಹಲವಾರು ಜಾತಿಯ ಜಠರಪಾದಿ ಮೃದ್ವಂಗಿಗಳು (ಸೀ ಬಟರ್‌ಫ್ಲೈ). ಗ್ಯಾಸ್ಟ್ರಪೊಡ ವರ್ಗದ ಒಪಿಸ್ತೊಬ್ರಾಂಕಿಯ ಗಣದಲ್ಲಿನ ಟಿರಾಪೊಡ ಉಪಗಣಕ್ಕೆ ಸೇರಿವೆ. ಈ ಉಪಗಣ ಮೃದ್ವಂಗಿಗಳ ಗುಂಪಿನಿಂದ ಬೇರೆಯಾದುದೆಂದು ಒಂದು ಕಾಲದಲ್ಲಿ ಭಾವಿಸಲಾಗಿತ್ತು. ಆದರೆ ಕಡಲ ಚಿಟ್ಟೆಗಳಲ್ಲಿ ಮೃದ್ವಂಗಿ ವಂಶದ ಕೆಲವು ಲಕ್ಷಣಗಳನ್ನು ಕಂಡುಹಿಡಿದ ಮೇಲೆ ಇವನ್ನು ಒಪಿಸ್ತೊಬ್ರಾಂಕಿಯ ಗಣಕ್ಕೆ ಸೇರಿಸಲಾಯಿತು. ಅಲ್ಲದೆ ಇವಕ್ಕೂ ಕಡಲ ಮೊಲಗಳಿಗೂ (ನೋಡಿ) ಹಲವಾರು ಸಮಾನ ಗುಣಲಕ್ಷಣಗಳಿವೆ.




ಕಡಲ ಚಿಟ್ಟೆಯ ಎರಡು ಜಾತಿಗಳು : A: ಕ್ಯಾವೊಲಿನಿಯ, B: ಕ್ಲಿಯೋನ್

ಕಡಲ ಚಿಟ್ಟೆಗಳ ವಿಶಿಷ್ಟ ಲಕ್ಷಣವೆಂದರೆ ಅವುಗಳ ಬಾಯಿ ಮತ್ತು ಕುತ್ತಿಗೆಯ ಇಕ್ಕೆಡೆಗಳಲ್ಲಿ ಈಜುರೆಕ್ಕೆಗಳಾಗಿ ಮಾರ್ಪಾಟಾಗಿರುವ ಅಗಲವಾದ ಎರಡು ಪಾರ್ಶ್ವ ಪಾದಗಳು (ಪ್ಯಾರಪೋಡಿಯ). ಚಿಟ್ಟೆಯ ರೆಕ್ಕೆಯಂತಿರುವ ಇವುಗಳ ನೆರವಿನಿಂದ ಕಡಲ ಚಿಟ್ಟೆಗಳು ನೀರಿನಲ್ಲಿ ಸರಾಗವಾಗಿ ಈಜಬಲ್ಲವು. ಅಲ್ಲದೆ ಇವಕ್ಕೆ ಸುಂದರವಾದ ಬಣ್ಣವೂ ಇದೆ. ಈ ಕಾರಣಗಳಿಂದಾಗಿ ಇವಕ್ಕೆ ಕಡಲ ಚಿಟ್ಟೆಗಳೆಂಬ ಹೆಸರು ಬಂದಿದೆ. ಕಡಲ ಚಿಟ್ಟೆಗಳಿಗೆ ಸಾಗರದ ಸೂಕ್ಷ್ಮಜೀವಿಗಳೇ ಆಹಾರ.

ಈಜುರೆಕ್ಕೆಗಳ ಮೇಲಿರುವ ಸೂಕ್ಷ್ಮವಾದ ಕೂದಲುಗಳ (ಸಿಲಿಯ) ಚಲನೆಯಿಂದ ಆಹಾರವನ್ನು ತಮ್ಮ ಬಳಿಗೆ ಸೆಳೆದುಕೊಳ್ಳುತ್ತವೆ. ಕೆಲವು ಕಡಲ ಚಿಟ್ಟೆಗಳಲ್ಲಿ ತೆಳು ಹಾಗೂ ಪಾರದರ್ಶಕವಾದ ಚಿಪ್ಪಿದೆ. ಉಳಿದವುಗಳಲ್ಲಿ ಇಲ್ಲ. ಇದರ ಆಧಾರದ ಮೇಲೆ ಟಿರಾಪೊಡ ಉಪಗಣವನ್ನು ಎರಡು ವಿಭಾಗಗಳಾಗಿ ವಿಂಗಡಿಸಿದ್ದಾರೆ. 1 ಟಿರಾಪೊಡ ತೀಕೊಸೊಮ್ಯಾಟ ಮತ್ತು 2 ಟಿರಾಪೊಡ ಜಿಮ್ನೊಸೊಮ್ಯಾಟ.

ಟಿರಾಪೊಡ ತೀಕೊಸೊಮ್ಯಾಟದ ಪ್ರಾಣಿಗಳಲ್ಲಿ ಮ್ಯಾಂಟಲ್ ಕುಹರ, ಚಿಪ್ಪು ಮತ್ತು ಒಂದು ಜೊತೆ ಕ್ಷೀಣವಾದ ಕೋಡುಬಳ್ಳಿಗಳು (ಟೆಂಟಕಲ್ಸ್) ಇವೆ. ಆದರೆ ತಲೆಯಾಗಲಿ ಕಣ್ಣುಗಳಾಗಲಿ ಸ್ಪಷ್ಟವಾಗಿಲ್ಲ. ಈಜುರೆಕ್ಕೆಗಳ ಅಂಚು ದೇಹದ ಮುಂತುದಿಯಲ್ಲಿ ಪರಸ್ಪರ ಕೂಡಿಕೊಂಡಿವೆ. ಉಸಿರಾಟದ ಅಂಗವಾಗಿ ಒಂದೇ ಒಂದು ಟಿನಿಡಿಯಮ್ (ಅಥವಾ ಕಿವಿರು) ಇದೆ. ಗುದದ್ವಾರ ಮ್ಯಾಂಟಲ್ ಕುಹರದ ಬಲಭಾಗದಲ್ಲಿದೆ. ಈ ಗುಂಪಿನ ಪ್ರಾಣಿಗಳು ಮುಖ್ಯವಾಗಿ ಸಾಗರದ ಸೂಕ್ಷ್ಮ ಜೀವಿಗಳನ್ನು ತಿಂದು ಬದುಕುತ್ತವೆ. ಇವನ್ನು ಲಿಮಾನಿಸಿಡೀ, ಕ್ಯಾವೊಲಿನಿಡೀ ಮತ್ತು ಸಿಂಬುಲಿಡೀ ಎಂಬ ಮೂರು ಕುಟುಂಬಗಳಾಗಿ ವಿಂಗಡಿಸಿದ್ದಾರೆ. ಲಿಮಾನಿಸಿಡೀ ಕುಟುಂಬದ ಪ್ರಾಣಿಗಳಲ್ಲಿ ಚಿಪ್ಪು ಎಡಕ್ಕೆ ಸುರುಳಿ ಸುತ್ತಿಕೊಂಡಿರುವುದೂ ಅದಕ್ಕೆ ಮುಚ್ಚಳವಿರುವುದೂ ಮ್ಯಾಂಟಲ್ ಕುಹರ ದೇಹದ ಹಿಂಭಾಗದಲ್ಲಿರುವುದೂ ಮುಖ್ಯ ಲಕ್ಷಣಗಳು. ಉದಾಹರಣೆ : ಲಿಮಾಸಿನ. ಕ್ಯಾವೊಲಿನಿಡೀ ಕುಟುಂಬದ ಪ್ರಾಣಿಗಳ ಚಿಪ್ಪು ನೀಳವಾಗಿ ಎರಡು ತಟ್ಟೆಗಳಿಂದ ಕೂಡಿದೆ. ಉದಾಹರಣೆ: ಕ್ಯಾವೊಲಿನಿಯ. ಸಿಂಬುಲಿಡೀ ಕುಟುಂಬದಲ್ಲಿ ವಯಸ್ಕ ಪ್ರಾಣಿಗೆ ಚಿಪ್ಪು ಇಲ್ಲ. ಆದರೆ ಸಂಯೋಜಿ ಅಂಗಾಂಶ (ಕನೆಕ್ಟಿವ್ ಟಿಷ್ಯು :) ಚರ್ಮದ ತಳದಲ್ಲಿ ಗಟ್ಟಿಯಾಗಿ ಮಿಥ್ಯಶಂಖವಾಗಿ ಮಾರ್ಪಟ್ಟಿದೆ. ಉದಾಹರಣೆ: ಸಿಂಬುಲಿಯ.

ಟಿರಾಪೊಡದ ಎರಡನೆಯ ಗುಂಪಾದ ಟಿರಾಪೊಡ ಜಿಮ್ನೊಸೊಮ್ಯಾಟದಲ್ಲಿ ಮ್ಯಾಂಟಲ್ ಕುಹರ ಮತ್ತು ಚಿಪ್ಪು ಇಲ್ಲ. ತಲೆ ಸುಸ್ಪಷ್ಟವಾಗಿದೆ. ಅದರ ಮೇಲೆ ಎರಡು ಜೊತೆ ಕೋಡುಬಳ್ಳಿಗಳಿವೆ. ಈಜುರೆಕ್ಕೆಗಳಿಗೂ ತಲೆಗೂ ಸಂಬಂಧವಿಲ್ಲ. ಈ ಗುಂಪಿನ ಪ್ರಾಣಿಗಳು ಮುಖ್ಯವಾಗಿ ಮಾಂಸಾಹಾರಿಗಳು. ಈ ಗುಂಪಿನಲ್ಲಿ ನಾಲ್ಕು ಮುಖ್ಯ ಕುಟುಂಬಗಳಿವೆ: ನ್ಯೂಮೋಡರ್ಮಾಟಿಡೀ, ಕ್ಲಿಯೊಸೋಪ್ಸಿಡೀ, ನೋಟೊಬ್ರಾಂಕಿಡೀ ಮತ್ತು ಕ್ಲಿಯೋನಿಡೀ. ನ್ಯೂಮೋಡರ್ಮಾಟಿಡೀಯಲ್ಲಿ ಮೂಲಕಿವಿರು ಇಲ್ಲ. ಆದರೆ ದೇಹದ ಹಿಂಭಾಗದಲ್ಲಿ ಅನುಷಂಗಿಕ ಕಿವಿರು ಇವೆ. ಕ್ಲಿಯೋನಿಡೀ ಕುಟುಂಬದ ಪ್ರಾಣಿಗಳಲ್ಲಿ ಯಾವ ಬಗೆಯ ಕಿವಿರುಗಳೂ ಇಲ್ಲ. ಇವುಗಳ ಗಾತ್ರ ಸಾಮಾನ್ಯವಾಗಿ ಸಣ್ಣದು. ಕೆಲವನ್ನಂತೂ ಸೂಕ್ಷ್ಮದರ್ಶಕದಲ್ಲೇ ನೋಡಬೇಕು. ಉದಾಹರಣೆ : ನ್ಯೂಮೋಡರ್ಮ ಮತ್ತು ಕ್ಲಿಯೋನ್ ಇತ್ಯಾದಿ.

ಸಾಗರದ ಕೆಲವೆಡೆ ಕಡಲ ಚಿಟ್ಟೆಗಳು ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇಂಥಲ್ಲಿ ಇವು ರಾತ್ರಿಯ ವೇಳೆ ಮೇಲ್ಪದರದ ನೀರಿನಲ್ಲಿದ್ದು ಹಗಲು ಬಿಸಿಲಿದ್ದಾಗ ತಳಭಾಗಕ್ಕೆ ಸೇರುತ್ತವೆ. ಹೆರ್ರಿಂಗ್ ಮೀನುಗಳಿಗೆ ತಿಮಿಂಗಿಲಗಳಿಗೆ ಆಹಾರ ಇವು. ತೀಕೊಸೊಮ್ಯಾಟದ ಕಡಲ ಚಿಟ್ಟೆಗಳು ಅಸಂಖ್ಯಾತವಾಗಿರುವ ಕಡೆಗಳಲ್ಲಿ ಅವು ಸತ್ತು ಹೋದ ಮೇಲೆ ಅವುಗಳ ಚಿಪ್ಪುಗಳು ಸಾಗರದ ತಳಭಾಗದಲ್ಲಿ ಸಂಗ್ರಹವಾಗಿ ಟಿರಾಪೊಡ ಊಜ಼್ ಅಥವಾ ಕಡಲ ಚಿಟ್ಟೆಯ ದಿಣ್ಣೆಗಳಾಗಿ ಪರಿಣಮಿಸುತ್ತವೆ. (ಜಿ.ವಿ.ಎನ್.)

**ಕಡಲ ಚಿರತೆ :** ಹೈಡ್ರುರ್ಗ ಲೆಪ್ಟೋನಿಕ್ಸ್ ಎಂಬ ವೈಜ್ಞಾನಿಕ ನಾಮವುಳ್ಳ ಸಮುದ್ರವಾಸಿ ಸ್ತನಿ (ಸೀ ಲೆಪರ್ಡ್). ಸೀಲ್ ಪ್ರಾಣಿಗಳ ಕುಟುಂಬವಾದ ಫೋಸಿಡೀಗೆ ಸೇರಿದೆ (ಗಣ ಪಿನ್ನಿಪಿಡಿಯ). ಕಡಲ ಕರಡಿ, ಕಡಲ ಆನೆ, ಕಡಲ ಸಿಂಹ ಮುಂತಾದುವು ಇದರ ಸಂಬಂಧಿಗಳು. ಇದರ ತೌರು ದಕ್ಷಿಣಮೇರು ಪ್ರದೇಶ. ದಕ್ಷಿಣ ಮೇರುವಿನ ಸೀಲ್ ಎಂದೂ ಇದನ್ನು ಕರೆಯುತ್ತಾರೆ. ಮಿರಮಿರನೆ ಮಿರುಗುವ ಹಳದಿ ಬಣ್ಣದ ಕೂದಲಿರುವ ಚರ್ಮ. ಚಿರತೆಗಳಿಗಿರುವಂತೆ, ಮೈಮೇಲೆ ಅಸಂಖ್ಯಾತ ಕಪ್ಪು ಮಚ್ಚೆಗಳು ಮತ್ತು ಇದರ ಕ್ರೂರಸ್ವಭಾವ ಇವುಗಳಿಂದಾಗಿ ಇದಕ್ಕೆ ಕಡಲ ಚಿರತೆ ಎಂಬ ಹೆಸರು ಬಂದಿದೆ. ಇತರ ಸೀಲ್ ಪ್ರಾಣಿಗಳಲ್ಲಿರುವಂತೆ ಇದರ ಹಿಂಗಾಲುಗಳು ಹಿಂದಕ್ಕೆ ಬಾಗಿವೆ. ಅದರಿಂದ ಇದಕ್ಕೆ ನೆಲದ ಮೇಲೆ ನಡೆಯಲಾಗುವುದಿಲ್ಲ. ಎರಡು ಜೊತೆ ಕಾಲುಗಳಲ್ಲೂ ಜಾಲಪಾದವಿದೆ. ಮೂಗಿನ ಹೊಳ್ಳೆಗಳು ಮೂತಿಯ ತುದಿಯಲ್ಲಿರುವುದರ ಬದಲು ಮೊಸಳೆಗಳಲ್ಲಿರುವಂತೆ ಮೂತಿಯ ಮೇಲ್ಭಾಗದಲ್ಲಿವೆ. ಹೀಗಿರುವುದು ಈಜುತ್ತಿರುವಾಗ ಉಸಿರಾಡಲು ಸಹಾಯಕ. ಕಿವಿಗಳಿಗೆ ಆಲಿಕೆಗಳಿಲ್ಲ. ಮೀನು ಇದರ ಪ್ರಧಾನ ಆಹಾರ. ಅಲ್ಲದೆ ಪೆಂಗ್ವಿನ್ ಹಕ್ಕಿಗಳನ್ನೂ ಇದು ಬೇಟೆಯಾಡುವುದು. **(ನೋಡಿ : ಸೀಲ್)** (ಬಿ.ಎನ್.ಬಿ.)

**ಕಡಲ ತೋಳ :** ಉತ್ತರವಲಯ ಸಮುದ್ರದಲ್ಲಿ ವಾಸಿಸುವ ಬಹು ದೊಡ್ಡ ಮೀನು (ಸೀ ವುಲ್ಫ್). ವೈಜ್ಞಾನಿಕ ನಾಮ ಅನಾರಿಕಸ್. ದೇಹ 6 ಅಡಿ ಉದ್ದವಿದೆ. ಚರ್ಮ ಜಾರುವಂತೆ ನಯವಾಗಿದ್ದು ಅದರ ಮೇಲೆ ಅಪೂರ್ಣ ಪೊರೆಗಳಿವೆ. ಬೆನ್ನಿನ ಈಜುರೆಕ್ಕೆ ದೇಹದ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೂ ಬೆಳೆದಿದೆ. ಹೊಟ್ಟೆಯ ಈಜುರೆಕ್ಕೆ ಬಾಲದ ವರೆಗೂ ವಿಸ್ತರಿಸಿದೆ. ಎದೆಯ ಮುಂಭಾಗದ ಈಜುರೆಕ್ಕೆ ದೊಡ್ಡದಾಗಿ ಗುಂಡಾಗಿದೆ. ಎದೆಯ ಹಿಂದಿನ ಈಜುರೆಕ್ಕೆ ಇಲ್ಲ. ಬಾಯಿಯಲ್ಲಿ ಬಲವಾಗಿರುವ ಮತ್ತು ಬಾಗಿರುವ ಹಲ್ಲುಗಳೂ ಎರಡು ಸಾಲು ದೊಡ್ಡ ರವೆಗಂತಿಗಳುಳ್ಳ ದವಡೆ ಹಲ್ಲುಗಳೂ ಇವೆ. ಬಾಯಂಗಳದ ಮಧ್ಯೆ ಅದೇ ತೆರನಾದ 2 ಸಾಲು ಹಲ್ಲುಗಳಿವೆ. ಅತ್ಯಂತ ಕ್ರೂರವಾದ ಪ್ರಾಣಿ ಎಂದು ಪ್ರಖ್ಯಾತವಾಗಿರುವ ಇದು ತನ್ನ ಹಲ್ಲುಗಳ ಸಹಾಯದಿಂದ ವಲ್ಕವಂತ ಪ್ರಾಣಿ ಮತ್ತು ಮೃದ್ವಂಗಿಗಳ ಗಟ್ಟಿಯಾದ ಚಿಪ್ಪುಗಳನ್ನು ಒಡೆದು ತಿಂದುಹಾಕುತ್ತದೆ. ಆದ್ದರಿಂದಲೇ ಇದಕ್ಕೆ ಕಡಲ ತೋಳ ಎಂದು ಹೆಸರು. (ಎಸ್.ಎನ್.ಕೆ.ಯು.)

**ಕಡಲ ನಿಂಬೆ :** ಒಪಿಸ್ತೊಬ್ರಾಂಕಿಯ ಗಣದ ಡೋರಿಡೀ ಕುಟುಂಬಕ್ಕೆ ಸೇರಿದ ಜಠರಪಾದಿ ಮೃದ್ವಂಗಿಗಳ ಒಂದು ಜಾತಿ (ಸೀ ಲೆಮನ್). ವೈಜ್ಞಾನಿಕ ನಾಮ ಡೋರಿಸ್. ಕಡಲತೀರಗಳಲ್ಲಿ ಬಂಡೆಗಳ ಸಂದುಗಳಲ್ಲಿ ಮತ್ತು ಅವುಗಳ ಕೆಳಗೆ ವಾಸಿಸುತ್ತವೆ. ನಿಂಬೆಹಣ್ಣಿನ ಆಕಾರ ಹಾಗೂ ಬಣ್ಣದ ದೇಹವಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಇದರಲ್ಲಿ

ಜಠರಪಾದಿಗಳ ವಿಶಿಷ್ಟ ಲಕ್ಷಣವಾದ ಚಿಪ್ಪು ಸಂಪೂರ್ಣವಾಗಿ ನಶಿಸಿಹೋಗಿರುವುದರಿಂದ ಇದು ನಗ್ನದೇಹಿಯಾಗಿದೆ. ದೇಹದ ತುದಿಯಲ್ಲಿ ಒಂದು ಜೊತೆ ಚಿಕ್ಕ ಸ್ಪರ್ಶಕಗಳಿವೆ. ತಲೆಯ ಮೇಲೆ ಒಂದು ಜೊತೆ ಎಲೆಯ ರೂಪದ ಘ್ರಾಣೇಂದ್ರಿಯಗಳಿವೆ (ರೈನೋಫೋರು). ಗುದದ್ವಾರ ದೇಹದ ಬೆನ್ನಿನ ಭಾಗದಲ್ಲಿದೆ. ಇದರ ಸುತ್ತ ಎಲೆಯಾಕಾರದ ತೆಳುವಾದ ಕಿವಿರುಗಳಿವೆ. ಶ್ವಸನಕಾರ್ಯದಲ್ಲಿ ಸಹಕಾರಿಯಾಗಿರುವ ಇವನ್ನು ಗುದದ ಕಿವಿರುಗಳೆನ್ನುತ್ತಾರೆ. ಕಡಲ ನಿಂಬೆ ಮಾಂಸಾಹಾರಿ. ಕಠಿಣಚರ್ಮಿಗಳೇ ಇದರ ಮುಖ್ಯ ಆಹಾರ. ತನ್ನ ಮೊಟ್ಟೆಗಳನ್ನು ಒಂದು ಬಗೆಯ ಜಿಲಿಟಿನ್ನಿನಂಥ ವಸ್ತುವಿನಿಂದಾದ ಚೀಲದಲ್ಲಿ ತುಂಬಿ ಸಮುದ್ರದ ಜೊಂಡುಗಳಿಗೆ ಇದು ಅಂಟಿಸಿಡುತ್ತದೆ. ಒಂದೊಂದು ಚೀಲದಲ್ಲಿ ಸು. 6 ಲಕ್ಷ ಮೊಟ್ಟೆಗಳಿರಬಹುದೆಂದು ಚಾರ್ಲ್ಸ್ ಡಾರ್ವಿನ್ ಎಣಿಕೆ ಹಾಕಿದ್ದಾನೆ. (ಬಿ.ಎನ್.ಬಿ.)

**ಕಡಲ ಪಶು :** ಸೈರೀನಿಯ ಗಣಕ್ಕೆ ಸೇರಿದ ಸಸ್ಯಾಹಾರಿ ಸ್ತನಿ (ಸೀ ಕೌ). ಇದರಲ್ಲಿ 2 ಜಾತಿಗಳಿವೆ : ಡುಗಾಂಗ್ ಮತ್ತು ಮನಾಟಿ. ತಿಮಿಂಗಿಲದಂತೆಯೇ ಇದ್ದರೂ ಇವು ಆ ಜಾತಿಗೆ ಸೇರಿದವಲ್ಲ. ಇವಕ್ಕೂ ತಿಮಿಂಗಲದಂತೆ ಚಪ್ಪಟೆಯಾದ ಬಾಲವೂ ದೋಣಿ ಮೀಟುವ ಹುಟ್ಟಿನಂಥ ಮುಂಗಾಲೂ ಇವೆ. ತಿಮಿಂಗಿಲದಂತೆಯೇ ಹಿಂಗಾಲು ಇಲ್ಲ. ಇವು ಸಮುದ್ರದ ದಡದ ಸಮೀಪದಲ್ಲಿಯೇ ವಾಸಿಸುತ್ತವೆ. ಆಳ ನೀರಿಗೆ ಹೋಗುವುದೇ

ಚಿಕಾಗೊ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿ ಇಟ್ಟಿರುವ ಕಡಲ ಪಶು (ಮನಾಟಿ)

ಇಲ್ಲ. ಭಾರತ ಮತ್ತು ಆಸ್ಟ್ರೇಲಿಯ ಸಮುದ್ರತೀರದಲ್ಲಿ ಸಿಗುತ್ತವೆ. ಕಡಲ ಪಶುವೆಗೆ ಸಣ್ಣ ಕಣ್ಣು, ಚಿಕ್ಕ ಬಾಯಿ ಇದೆ. ಕಿವಿಗಳಿಗೆ ಆಲಿಕೆಗಳಿಲ್ಲ. ಸಣ್ಣ ತೂತು ಮಾತ್ರ ಇವೆ. ಸುಕ್ಕುಗಟ್ಟಿದ ಮರದ ತೊಗಟೆಯಂಥ ದಪ್ಪ ಚರ್ಮ, ಚರ್ಮದ ಕೆಳಗೆ ದಪ್ಪನಾದ ಕೊಬ್ಬಿನ ಬ್ಲಬರ್ ಇದೆ. ಕೆಲವು ವೇಳೆ ಚರ್ಮದ ಮೇಲೆ ವಿರಳವಾಗಿ ತೆಳುವಾದ ಕೂದಲು ಇರುತ್ತವೆ. ಜಡಸ್ವಭಾವದ ಸಾಧುಪ್ರಾಣಿ ಇದು. ಸಮುದ್ರಜೊಂಡೂ ಇತರ ಜಲಸಸ್ಯಗಳೂ ಇದರ ಆಹಾರ. ಒಂದು ಸಲಕ್ಕೆ ಒಂದು ಮರಿ ಹಾಕುತ್ತದೆ. ಮರಿಯನ್ನು ತಾಯಿ ತುಂಬ ಅಕ್ಕರೆಯಿಂದ ಸಾಕುತ್ತದೆ. ಹಾಲು ಕುಡಿಸುವಾಗ ಮರಿಯ ತಲೆಯನ್ನೂ ಎದೆಯನ್ನೂ ನೀರಿನಿಂದ ಮೇಲಕ್ಕೆತ್ತಿ ಮುಂಗಾಲುಗಳಿಂದ ಮನುಷ್ಯರಂತೆ ಹಿಡಿದುಕೊಳ್ಳುತ್ತದೆ. ಈ ಮಾನವಸದೃಶ ಗುಣವೇ ಹಿಂದೆ ಇವನ್ನು ಜಲಕನ್ಯೆ ಎಂದು ಕರೆಯಲು ಆಧಾರವಾಗಿರಬಹುದು. ಮನಾಟಿ ಉಷ್ಣದೇಶದ ನದಿಗಳಲ್ಲಿ ವಾಸಿಸುತ್ತದೆ. ಡುಗಾಂಗ್ ಮನಾಟಿಗಿಂತ ಚಿಕ್ಕದು. 1.5–2.1 ಮೀ ಗಳಷ್ಟು ಉದ್ದವಿದೆ. ಅರ್ಧಚಂದ್ರಾಕೃತಿಯ ಬಾಲವಿದೆ. ಕಾಲಿನಲ್ಲಿ ಬೆರಳುಗಳಿಲ್ಲ. ಹಿಂದಿನ ಕಾಲದಲ್ಲಿ ನೂರಾರು ಪ್ರಾಣಿಗಳುಳ್ಳ ದೊಡ್ಡ ಮಂದೆಗಳಾಗಿ ಸಮುದ್ರದಲ್ಲಿರುತ್ತಿದ್ದ ಇವು ಮನುಷ್ಯರನ್ನು ಕಂಡರೆ ಹೆದರುತ್ತಿರಲಿಲ್ಲ. ಆತ ಹತ್ತಿರ ಬಂದು ಮುಟ್ಟಿದರೂ ಸುಮ್ಮನಿರುತ್ತಿದ್ದುವು. ಆದರೆ ಈಗ ಅವುಗಳ ಸಂಖ್ಯೆ ತುಂಬ ಕಡಿಮೆಯಾಗಿದೆಯಲ್ಲದೆ ಅವಕ್ಕೆ ಮನುಷ್ಯನಲ್ಲಿದ್ದ ಸಲಿಗೆಯೂ ಹೋಗಿಬಿಟ್ಟಿದೆ. (ಎಸ್.ಎನ್.ಕೆ.ಯು.)

**ಕಡಲ ಬಾಣ :** ಲಾಲಿಗೊ ಜಾತಿಯ ಹಲವಾರು ಶಿರಪಾದಿ ಮೃದ್ವಂಗಿಗಳ ಸಾಮಾನ್ಯ ಹೆಸರು (ಸೀ ಆರೊ).

ಇದರಲ್ಲಿ ಲಾಲಿಗೊ ಪೀಲಿ ಮತ್ತು ಲಾಲಿಗೊ ಒಪಾಲೆಸೆನ್ಸ್ ಎಂಬೆರಡು ಮುಖ್ಯ ಪ್ರಭೇದಗಳಿವೆ. ಇವುಗಳಲ್ಲಿ ಮೊದಲನೆಯದು ಅಟ್ಲಾಂಟಿಕ್ ಸಾಗರ ತೀರಪ್ರದೇಶದ ನೋವ ಸ್ಕೋಷಿಯದಿಂದ ಹಿಡಿದು ಫ್ಲಾರಿಡದವರೆಗೆ ಹರಡಿದೆ. ದೇಹದ ಉದ್ದ ಸು. 8", ವ್ಯಾಸ ಸು. 2". ಎರಡನೆಯದು ಚೀನದ ಸಾಗರದಲ್ಲಿ ಕಂಡುಬರುತ್ತದೆ. ಇವೆರಡರಲ್ಲೂ ದೇಹದ ಮುಂತುದಿಯಲ್ಲಿರುವ ತಲೆಯಲ್ಲಿ ಎಂಟು ಬಾಹುಗಳೂ ಎರಡು ಪರಿಗ್ರಾಹಿ ಬಾಹುಗಳೂ ಇವೆ. ನೀರಿನಲ್ಲಿ ಈಜುವಾಗ ಬಾಹುಗಳು ಮುಂಚಾಚಿಕೊಳ್ಳುವುದರಿಂದ ಈ ಪ್ರಾಣಿ ಬಾಣವನ್ನು ಹೋಲುತ್ತದೆ. ಆದ್ದರಿಂದಲೇ ಈ ಪ್ರಾಣಿಗೆ ಈ ಹೆಸರು. ಲಾ. ಒಪಾಲೆಸೆನ್ಸ್ ಚೀನೀಯರಲ್ಲಿ ರುಚಿಕರ ಆಹಾರವೆನಿಸಿದೆ. (ಬಿ.ಎನ್.ಬಿ.)

**ಕಡಲ ಬೀಸಣಿಗೆ :** ಗೋರ್ಗೋನಿಯ (ಗೋರ್ಗೋನಿಯ ಫ್ಲಾಬೆಲಮ್) ಜಾತಿಯ ಒಂದು ಸೀಲೆಂಟರೇಟ್ ಪ್ರಾಣಿ (ಸೀ ಫ್ಯಾನ್). ಆಲ್ಸಿಯೊನೇರಿಯ ಗಣದ ಗೋರ್ಗೋನಿಡೀ ಕುಟುಂಬಕ್ಕೆ ಸೇರಿದೆ. ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಸಾಗರದ ಉತ್ತಳ ಭಾಗಗಳಲ್ಲಿ ಇದರ ವಾಸ. ಶಾಖೋಪಶಾಖೆಗಳಿಂದ ಕೂಡಿ ದಿಂಡೊಂದಕ್ಕೆ ಅಂಟಿರುವ ಇದರ ದೇಹ ನೆಟ್ಟಗೆ ನಿಂತ ಮರದಂತೆ ಅಥವಾ ಬಿಚ್ಚಿದ ಬೀಸಣಿಗೆಯಂತೆ ಕಾಣುತ್ತದೆ. ದೇಹದ ಮೇಲೆ ಅಸಂಖ್ಯಾತ ಸಣ್ಣ ಸಣ್ಣ ಪಾಲಿಪ್ ಜೀವಿಗಳ ಸಮುದಾಯವಿರುತ್ತದೆ. ಈ ಕೊಂಬೆರೆಂಬೆಗಳು ಸಾಮಾನ್ಯವಾಗಿ ಒಂದೇ ಮಟ್ಟದಲ್ಲಿರುತ್ತದೆ. ಇದು ಸ್ರವಿಸುವ ಅಂಕರ್‌ಕಂಕಾಲ (ಎಂಡೊಸ್ಕೆಲಿಟನ್) ಕ್ರಮೇಣ ಗಟ್ಟಿಗೊಂಡು ಕೊಂಬಿನ ರೂಪ ಪಡೆಯುತ್ತದೆ. ದೇಹ ಹಳದಿ ಅಥವಾ ಕೆಂಬಣ್ಣವಾಗಿದ್ದು 80 ಸೆಂಮೀ ಎತ್ತರ ಬೆಳೆಯಬಲ್ಲುದು. ಗೋ.ಫ್ಲಾಬೆಲಮ್‌ನಲ್ಲಿ ರೆಂಬೆಕೊಂಬೆಗಳನ್ನು ಅಸಂಖ್ಯಾತ ಅಡ್ಡರೆಂಬೆಗಳು ಬಂಧಿಸುವುದರಿಂದ ಜೀವಿ ಸಮುದಾಯ ಒಂದು ಚಪ್ಪಟೆಯಾದ ರಂಧ್ರಗಳಿಂದ ಕೂಡಿದ ಜರಡಿಯಂತೆ ಅಥವಾ ಬಲೆಯಂತೆ ಕಾಣುತ್ತದೆ. ಆದರೆ ಗೋ.ವೆರ್ರುಕೋಸದಲ್ಲಿ ನೆಟ್ಟಗೆ ಬೆಳೆಯುವ ರೆಂಬೆಗಳನ್ನು ಬಂಧಿಸುವ ಅಡ್ಡರೆಂಬೆಗಳಿರುವುದಿಲ್ಲ. ಸತ್ತ ಕಡಲ ಬೀಸಣಿಗೆಗಳ ಕಂಕಾಲಗಳನ್ನು ಜನ ಆಯ್ದು ಅಲಂಕಾರದ ವಸ್ತುಗಳಾಗಿ ಬಳಸುತ್ತಾರೆ. (ಬಿ.ಎನ್.ಬಿ.)

**ಕಡಲ ಮೊಲ :** ಒಪಿಸ್ಥೊಬ್ರಾಂಕಿಯ ಗಣ ಹಾಗೂ ಟೆಕ್ಟಿಬ್ರಾಂಕಿಯೇಟ ಉಪಗಣದ ಅಪ್ಲೀಸಿಡೀ ಕುಟುಂಬಕ್ಕೆ ಸೇರಿದ ಒಂದು ಜಠರಪಾದಿ ಮೃದ್ವಂಗಿ. ಅಪ್ಲೀಸಿಯ ಇದರ ವೈಜ್ಞಾನಿಕ ನಾಮ. ಸಾಮಾನ್ಯವಾಗಿ ಪ್ರಪಂಚದ ಎಲ್ಲ ಕಡಲುಗಳಲ್ಲೂ ಇದು ವಾಸಿಸುತ್ತದೆ. ಮುಖ್ಯವಾಗಿ ಮರಳು ಅಥವಾ ಮಣ್ಣಿನ ತೀರ ಪ್ರದೇಶ ಇದಕ್ಕೆ ಬಹು ಇಷ್ಟವಾದ ವಾಸಸ್ಥಳ. ಅಲ್ಲಿ ತನ್ನ ಆಹಾರವಸ್ತುವಾದ ಕಡಲ ಪಾಚಿಯ ಮೇಲೆ ಹರಿದಾಡುತ್ತಿರುತ್ತದೆ. ಇದು ಬಸವನ ಹುಳುವನ್ನು ಹೋಲುತ್ತದೆ. ತಲೆಯ ಮೇಲೆ ಎರಡು ಜೊತೆ ಕೋಡುಬಳ್ಳಿಗಳಿವೆ. ಮೊದಲ ಜೊತೆ ಅಗಲವಾಗಿದ್ದು ಮೊಲದ ಕಿವಿಗಳಂತೆ ಪ್ರಮುಖವಾಗಿ ಕಾಣುವುದರಿಂದ ಈ ಪ್ರಾಣಿಗೆ ಕಡಲ ಮೊಲ ಎಂದು ಹೆಸರು ಬಂದಿದೆ, ಹಿಂದಿನ ಎರಡನೆಯ ಜೊತೆ ಕೋಡುಬಳ್ಳಿಗಳು ಮೊನಚಾಗಿದ್ದು ಘ್ರಾಣೇಂದ್ರಿಯಗಳಾಗಿ ಕೆಲಸ

ಮಾಡುತ್ತವೆ. ಇವುಗಳ ಬುಡದ ಹೊರಪಾರ್ಶ್ವದಲ್ಲಿ ಒಂದು ಜೊತೆ ಕಣ್ಣುಗಳಿವೆ. ದೇಹದ ಪಾರ್ಶ್ವಭಾಗದಲ್ಲಿ ಸ್ನಾಯುಮಯವಾದ ಪಾದದ ಪಕ್ಕದಿಂದ ಮೇಲ್ಮುಖನಾಗಿರುವ ಪಾರ್ಶ್ವಪಾದ (ಪ್ಯಾರಪೋಡಿಯ) ಎಂಬ ಎರಡು ಮಡಿಕೆಗಳು ಮೇಲೆ ಚಾಚಿವೆ. ಇವನ್ನು ರೆಕ್ಕೆಯಂತೆ ಬಡಿಯುವುದರ ಮೂಲಕ ನೀರಿನಲ್ಲಿದ್ದು ಈಜುತ್ತದೆ. ದೇಹದ ಮೇಲಿರುವ ಮ್ಯಾಂಟಲ್ ಪದರ ಕೂಡ ದೇಹದ ಮೇಲೆ ಚಾಚಿಕೊಂಡು ಚಿಪ್ಪನ್ನು ಮುಚ್ಚಿಬಿಡುತ್ತದೆ. ಇದರ ಫಲವಾಗಿ ಚಿಪ್ಪು ಮಾರ್ಪಟ್ಟು ತೆಳುವಾಗಿ ಪಾರದರ್ಶಕವಾಗಿರುತ್ತದೆ. ಅಲ್ಲದೆ ಶ್ವಸನಕಾರ್ಯದಲ್ಲಿ ನೆರವಾಗುವ ಒಂದು ಕಿವಿರು ಅಥವಾ ಕ್ಲೋಮ ಮ್ಯಾಂಟಲ್ ಕುಹರದ ಬಲಭಾಗದಲ್ಲಿ ಹಿಂದಕ್ಕೆ ಚಾಚಿರುತ್ತದೆ. ಮ್ಯಾಂಟಲ್ ಕುಹರವನ್ನು ಆವರಿಸುವ ಗೋಡೆಯಲ್ಲಿ ಕೆನ್ನೀಲಿ ಬಣ್ಣವನ್ನು ಸ್ರವಿಸುವ ಏಕಕೋಶಿಕ ಗ್ರಂಥಿಗಳಿವೆ, ಕೆಣಕಿದಾಗ ಈ ಪ್ರಾಣಿ ಆತ್ಮರಕ್ಷಣೆಗಾಗಿ

ಈ ವರ್ಣಕಗಳನ್ನು ಹೊರಗೆಡವುತ್ತದೆ. ಇದು ಕಡಲ ಪಾಚಿಯನ್ನಲ್ಲದೆ, ವಲಯವಂತಹ ಹುಳುಗಳು, ಮೃದ್ವಂಗಿ ಮತ್ತು ಕಠಿಣ ಚರ್ಮಿಗಳನ್ನು ತಿನ್ನುತ್ತದೆ. ಬಾಯ ಬಳಿ ದಪ್ಪನಾದ ಸ್ನಾಯುಮಯವಾದ ಎರಡು ತುಟಿಗಳಿವೆ. ಜಠರ ಸಂಕೀರ್ಣವಾಗಿದ್ದು ಅದಕ್ಕೆ ಮೇತೆ (ಕ್ರಾಪ್), ಸ್ನಾಯುಮಯವಾದ ಗಿಜ಼ರ್ಡ್ ಮತ್ತು ಆನುಷಂಗಿಕ ಅಂಧನಾಳಗಳಿವೆ. ಕಡಲ ಮೊಲ ದ್ವಿಲಿಂಗ ಪ್ರಾಣಿ. ಗರ್ಭ ಕಟ್ಟಿದ ಮೊಟ್ಟೆಗಳನ್ನು ಸರದಂತೆ ಉದ್ದುದ್ದವಾಗಿ ಇಡುತ್ತದೆ. ಪೂರ್ವ ಕಾಲದಲ್ಲಿ ಜನ ಈ ಪ್ರಾಣಿಗಳು ವಿಷಪೂರಿತವಾದುವುವೆಂದು ಬಗೆದಿದ್ದರು. ಪ್ರ.ಶ. ಮೊದಲ ಶತಮಾನದ ಉತ್ತರಾರ್ಧದಲ್ಲಿ ಡೊಮಿಷೆನ್ ಎಂಬ ರೋಮ್ ದೇಶದ ಚಕ್ರವರ್ತಿ ತನ್ನ ಸೋದರ ಟೈಟಸ್ ಎಂಬ ಚಕ್ರವರ್ತಿಯನ್ನು ಅಪ್ಲೀಸಿಡೀ ಕುಟುಂಬದ ಪ್ರಾಣಿಗಳಿಂದ ಪಡೆದ ವಿಷವನ್ನು ಕೊಟ್ಟು ಸಾಯಿಸಿದನೆಂದು ಒಂದು ಉಲ್ಲೇಖವಿದೆ. ನೇಪಲ್ಸ್ ಕೊಲ್ಲಿಯಲ್ಲಿ ವಾಸಿಸುವ ಅಪ್ಲೀಸಿಯ ಲೆಪೋರಿನ ಎಂಬುದು ಮನುಷ್ಯನ ಚರ್ಮಕ್ಕೆ ತಾಕಿದರೆ ನೋವು ಮತ್ತು ಕಾಯಿಲೆ ಪ್ರಾಪ್ತವಾಗುವುದೆಂದು ಅಲ್ಲಿಯ ಬೆಸ್ತರು ನಂಬುತ್ತಾರೆ. ನಿಜವಾಗಿ ಹೇಳುವುದಾದರೆ ಇವು ಅಂಥ ಕ್ರೂರ ಪ್ರಾಣಿಗಳೂ ಅಲ್ಲ. ಇವುಗಳ ದೇಹದಲ್ಲಿ ವಿಷಸಂಬಂಧವಾದ ವಸ್ತುವೂ ಇಲ್ಲ. (ಜಿ.ವಿ.ಎನ್.)

**ಕಡಲ ಸರ್ಪ :** ಇದು ಒಂದು ಸರ್ಪರೂಪಿ ಸಾಗರದ ದೈತ್ಯ. ಪೌರಾಣಿಕ ಸಂಬಂಧವಾದದ್ದು; ಕಾಲ್ಪನಿಕವಾದದ್ದು. ವಿಶಾಲವಾದ ಸಾಗರಗಳಲ್ಲಿ ಯಾನ ಮಾಡಿದ ಹಿಂದಿನ ನಾವಿಕರು ತಾವು ನೋಡಿದುದಾಗಿ ಇದನ್ನು ವರ್ಣಿಸಿದ್ದಾರೆ. ಇದರ ಬಗ್ಗೆ ಅನೇಕ ದಂತಕಥೆಗಳನ್ನು ಕಟ್ಟಿರುವುದೂ ಉಂಟು. ಆದರೆ ವೈಜ್ಞಾನಿಕವಾಗಿ ಇದುವರೆವಿಗೂ ಈ ಬಗೆಯ ಕಡಲ ಸರ್ಪಗಳನ್ನು ಸರಿಯಾಗಿ ಕಂಡವರಿಲ್ಲ. ಅಂತು ಕಡಲ ಸರ್ಪದ ಭ್ರಮೆ ಹುಟ್ಟಿಸುವ ಹಲವು ಸಂದರ್ಭಗಳು ಕಂಡುಬರುವುದುಂಟು. ಅವುಗಳಲ್ಲಿ ಮುಖ್ಯವಾದವು ಇವು; ಹಲವು ಕಡಲ ಹಂದಿ ಅಥವಾ ಪಾರ್ಪಾಯಿಸ್‌ಗಳು ಸಾಗರದಲ್ಲಿ ಈಜುವಾಗ ಯಾವಾಗಲೂ ಒಂದರ ಹಿಂದೆ ಮತ್ತೊಂದು ಒಂದೇ ಸಾಲಿನಲ್ಲಿ ಈಜುವುದುಂಟು. ಅವು ನೀರಿನ ಮೇಲಾಯದಲ್ಲಿ ಈಜುವಾಗ ಗಾಳಿಸೇವನೆಗಾಗಿ ಆಗಾಗ್ಗೆ ಮೇಲೇಳುವುದೂ ಉಂಟು. ಇವುಗಳ ಬೆನ್ನಿನ ಮೇಲಿನ ಈಜುರೆಕ್ಕೆ ಅವುಗಳ ಗತಿಯನ್ನು ಕೂಡ ತೋರಿಸುತ್ತದೆ. ಈ ಕಡಲ ಹಂದಿಗಳ ಸಾಲು ನೀಳ ಹಾಗೂ ಡೊಂಕುಡೊಂಕಾಗಿರುವುದರಿಂದ ಅದು ಕಡಲ ಸರ್ಪವಿರಬೇಕೆಂದು ದೂರದಿಂದ ನೋಡಿದವರು ಭ್ರಮಿಸಿರಲಿಕ್ಕೂ ಸಾಕು. ಸೀಟೋರೈನಸ್ ಮಾಕ್ಸಿಮಸ್ ಎಂಬ ಷಾರ್ಕ್‌ಮೀನು ಸಾಧಾರಣವಾಗಿ ಒಂದರ ಹಿಂದೆ ಒಂದು ಜೊತೆಗೂಡಿ ಈಜುವುದು ಮತ್ತೊಂದು ನಿದರ್ಶನ. ಇದರ ಉದ್ದ ಸು. 18 ಮೀ ಇರುತ್ತದೆ. ರಿಗ್ಯಾಲಿಕಸ್ ಗ್ಲೆಸ್ನೆ ಎಂಬ ಮೀನು ಮತ್ತೊಂದು ಉದಾಹರಣೆಯಾಗಿದೆ. ಇದರ ದೇಹ ರಿಬ್ಬನ್ನಿನ ಆಕಾರ, 6 ಮೀ ಉದ್ದ, 60 ಪೌಂಡು ತೂಕ. ಈಜುವಾಗ ಸರ್ಪದಂತೆ ತನ್ನ ದೇಹವನ್ನು ಅಂಕುಡೊಂಕಾಗಿ ಮಾಡಿಕೊಳ್ಳುತ್ತದೆ. ಇದರ ಬೆನ್ನಿನ ಮೇಲಿನ ಈಜುರೆಕ್ಕೆ ದೇಹಾದ್ಯಂತ ಹರಡಿದೆ. ಇದರ ಮುಂದಿನ 10–15 ಈಜುರೆಕ್ಕೆಯ ದಿಂಡುಗಳು ಉದ್ದವಾಗಿದ್ದು ತಲೆಯ ಮೇಲೆ ಹರಡಿರುವುದುಂಟು. ಈ ಪ್ರಾಣಿಯನ್ನು ಕೆರಳಿಸಿದಾಗ ಈ ದಿಂಡುಗಳು ಎದ್ದು ನಿಂತು ಭಯಂಕರವಾಗಿ ಕಾಣುತ್ತವೆ. ದೇಹ ಬೆಳ್ಳಿಯಂತೆ ಬಿಳುಪು. ಈಜುರೆಕ್ಕೆ ಹವಳದಂತೆ ಕೆಂಪು. ಮೆಡಿಟರೇನಿಯನ್ ಸಮುದ್ರದಲ್ಲಿ ವಾಸಿಸುವ ನೆಮರ್ಟೀನಿಯ ಹುಳುಗಳು ಸು. 9 ಮೀ–13.7 ಮೀ ಉದ್ದ ಬೆಳೆಯುವುದರಿಂದ ಇವು ಕೂಡ ಕಡಲ ಸರ್ಪದ ಭ್ರಮೆ ಹುಟ್ಟಿಸಿವೆ. ಆರ್ಕಿತ್ಯೂತಿಸ್ ಜಾತಿಯ ದೈತ್ಯ ಸ್ಕ್ವಿಡ್ 15 ಮೀ ಬೆಳೆಯುವುದೇ ಅಲ್ಲದೆ ಅದರ ಬಾಹು ಸು. 9 ಮೀ–13.7 ಮೀ ಉದ್ದವಿದ್ದು ಹಾವಿನಂತೆ ಕಾಣಬರುತ್ತದೆ. ಪೆಸಿಫಿಕ್ ಸಾಗರದ ದೈತ್ಯಾಕಾರದ ಹಾವುಮೀನಿನಂತಿರುವ ಕ್ಲಾಮಿಡೊಸೆಲಕಿ ಜಾತಿಯ ಷಾರ್ಕ್ ಮೀನು ಕೂಡ ಕಡಲ ಸರ್ಪದ ಭ್ರಮೆ ಹುಟ್ಟಿಸಿರಬಹುದು. ಹೆಬ್ಬಾವು ರೂಪದ, ಚೂವು ತಲೆ, ತೊಳೆಗಾಲು ರೂಪದ ಬಾಹುಗಳಿಂದ ಕೂಡಿ ಸು. 18 ಮೀ–21 ಮೀ ಉದ್ದ ಬೆಳೆಯುತ್ತಿದ್ದ ಗತಕಾಲದ (ಕ್ರಿಟೇಷಸ್ ಕಾಲದ) ಸರೀಸೃಪಗಳು ಸಾಗರದಲ್ಲಿ ಇಂದೂ ಬದುಕಿದ್ದು ಆಗಾಗ್ಗೆ ಕಾಣಿಸಿಕೊಳ್ಳುತ್ತವೆಂದೂ ಮತ್ತೆ ಕೆಲವರ ಭ್ರಮೆ. (ಬಿ.ಎನ್.ಬಿ.)

**ಕಡಲ ಸಿಂಹ :** ಪಿನ್ನಿಪೀಡಿಯ ಗಣದ ಓಟರೈಯಿಡೀ ಕುಟುಂಬದ ಹಲವಾರು ಜಾತಿಯ ಪ್ರಾಣಿಗಳಿರುವ ಸಾಮಾನ್ಯ ಹೆಸರು (ಸೀ ಲಯನ್). ಇವೆಲ್ಲವುಗಳಲ್ಲೂ ಕಂಡುಬರುವ ನೀಳ ಹಾಗೂ ಸುಸ್ಪಷ್ಟವಾದ ಕತ್ತು, ಚಿಕ್ಕವಾದರೂ ಎದ್ದುಕಾಣುವ ಕಿವಿಗಳು, ಮೂತಿಯ ತುದಿಯಲ್ಲಿರುವ ಮೂಗಿನ ಹೊಳ್ಳೆಗಳು, ಎರಡು ಜೊತೆ ಕಾಲುಗಳಲ್ಲಿರುವ ಜಾಲಪಾದ, ಈಜುವಾಗ ಹಿಂದಕ್ಕೆ ಚಾಚುವ ಹಿಂಗಾಲುಗಳನ್ನು ನೆಲದ ಮೇಲೆ ಬಂದಾಗ ಮುಂದಕ್ಕೆ ತಿರುಗಿಸಿಕೊಳ್ಳುವ ಸಾಮರ್ಥ್ಯ ಮತ್ತು ನಶಿಸಿಹೋಗುವ ಹಂತದಲ್ಲಿರುವ ಚಿಕ್ಕ ಉಗುರುಗಳು–ಮುಂತಾದುವು ಇವುಗಳ ಮುಖ್ಯ ಲಕ್ಷಣಗಳು. ಪೆಸಿಫಿಕ್ ಸಾಗರದ ಉತ್ತರ ತೀರಪ್ರದೇಶದಲ್ಲಿ ಮೊಟ್ಟಮೊದಲ ಬಾರಿ ಯೂಮೆಟೊಪಿಯಸ್ ಜುಬೇಟ ಎಂಬ ಹೆಸರಿನ ಕಡಲ ಸಿಂಹವನ್ನು ನೋಡಿದ ಜರ್ಮನ್ ವಿಜ್ಞಾನಿ ಸ್ಟೆಲ್ಲರ್ ಎಂಬಾತ ಇದರ ದಪ್ಪ ಕುತ್ತಿಗೆಯ ಮೇಲಿನ ಕೇಸರ ಅಥವಾ ಆಯಾಲು ಮತ್ತು ಸಿಂಹದ ಕಣ್ಣಿನಂಥ ಕಣ್ಣುಗಳನ್ನು ನೋಡಿ ಇದನ್ನು ಕಡಲ ಸಿಂಹವೆಂದು ಕರೆದ. ಉಳಿದ ಕಡಲ ಸಿಂಹಗಳಲ್ಲಿ ಉತ್ತರ ಅಮೆರಿಕ ಮತ್ತು ಜಪಾನ್ ಸಮುದ್ರದ ದಕ್ಷಿಣ ಭಾಗದಲ್ಲಿರುವ ಜಲೋಪಸ್ ಎಂಬ ಜಾತಿಯದೂ ಆಸ್ಟ್ರೇಲಿಯ ವಾಸಿಯಾದ ನಿಯೋಫೋಕ ಜಾತಿಯದೂ ದಕ್ಷಿಣ ಅಮೆರಿಕದ ತೀರ ಪ್ರದೇಶಗಳಲ್ಲಿ ಹೇರಳವಾಗಿ ಕಾಣಬರುವ ಓಟರಿಯ ಎಂಬುದೂ ಮುಖ್ಯವಾದುವು. ಇವೆಲ್ಲವೂ ಕಡಲ ಕರಡಿಯ (ಫರ್ ಸೀಲ್) ಹತ್ತಿರ ಸಂಬಂಧಿಗಳು.



ಸಾಮಾನ್ಯವಾಗಿ 1.5 ಮೀ–3.1 ಮೀ ಉದ್ದದ ದೇಹವುಳ್ಳ ಇವು 100 ರಿಂದ 200 ಪೌಂ. ತೂಗುತ್ತವೆ. ಗಂಡು ಹೆಣ್ಣಿಗಿಂತ ಬಹಳ ದೊಡ್ಡದು. ಇವುಗಳಲ್ಲಿ ಚಿಕ್ಕದಾದರೂ ಸ್ಪಷ್ಟವಾದ ಬಾಲವಿದೆ. ಮೈಮೇಲೆ ನವುರಾದ ಕೂದಲಿನ ಹೊದಿಕೆಯಿದೆ. ಇವುಗಳ ಬಣ್ಣ ಕಂದು. ಸಾಧಾರಣವಾಗಿ ದೊಡ್ಡ ದೊಡ್ಡ ಮಂದೆಗಳಲ್ಲಿ ವಾಸಿಸುತ್ತವೆ. ಸಮುದ್ರದಲ್ಲಿ ಸುಲಭವಾಗಿ ದೊರಕುವ ಶಿರಪಾದಿಗಳು ಮತ್ತು ಕಠಿಣಚರ್ಮಿಗಳು ಇವುಗಳ ಆಹಾರ. ಕೆಲವು ಸಾರಿ ಪೆಂಗ್ವಿನ್ ಹಕ್ಕಿಗಳನ್ನು ತಿನ್ನುವುದೂ ಉಂಟು.

ಸಂತಾನೋತ್ಪತ್ತಿ ಕಾಲದಲ್ಲಿ ಇವು ನೀರಿನಿಂದ ಹೊರಬಂದು ದಡಗಳಲ್ಲಿ ಕಾಲ ಕಳೆಯತೊಡಗುತ್ತವೆ. ಮೊದಲು ದಡವನ್ನೇರುವ ಗಂಡು ಒಂದು ನಿರ್ದಿಷ್ಟ ಪ್ರದೇಶದ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿಕೊಂಡು ಹಿಂಬಾಲಿಸಿ ಬರುವ ಹಲವಾರು ಹೆಣ್ಣುಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುತ್ತದೆ. ಒಂದೊಂದು ಗಂಡಿನ ಬಳಿ 10–15 ಹೆಣ್ಣುಗಳಿರುವುದು ಸಾಮಾನ್ಯ. ಹೆಣ್ಣುಗಳು ದಡಕ್ಕೆ ಬಂದ ಸ್ವಲ್ಪ ದಿನಗಳಲ್ಲಿಯೇ ಒಂದೊಂದೇ ಮರಿಯನ್ನು ಈಯುತ್ತವೆ. ಮರಿ ಹಾಕಿದ ಕೆಲವು ಕಾಲಾನಂತರ ಗಂಡಿನೊಂದಿಗೆ ಕೂಡಿಕೊಂಡು ಮತ್ತೆ ಗರ್ಭ ಧರಿಸುವುದು ಇವುಗಳ ವೈಚಿತ್ರ್ಯ. ಮರಿಗಳ ರಕ್ಷಣೆಯನ್ನು ಸಾಮಾನ್ಯವಾಗಿ ತಾಯಿಯೇ ನೋಡಿಕೊಳ್ಳುತ್ತದೆ. ಮರಿಯ ಬಣ್ಣ ಅಚ್ಚನೀಲಿ. ನೆಲದ ಮೇಲೆ ತೆವಳಬಲ್ಲುದಾದರೂ ಈಜಲಾರದು. ಹುಟ್ಟಿದ ಎರಡು ವಾರಗಳಲ್ಲಿ ತಾಯಿಯಿಂದ ಈಜುವುದನ್ನು ಕಲಿತು ಸ್ವತಂತ್ರ ಜೀವನ ನಡೆಸಲಾರಂಭಿಸುತ್ತದೆ. ಮರಿ ದೊಡ್ಡದಾದ ಮೇಲೆ ಕಡಲ ಸಿಂಹಗಳೆಲ್ಲ ದಕ್ಷಿಣಾಭಿಮುಖವಾಗಿ ವಲಸೆ ಹೋಗುತ್ತವೆ.

ಕಡಲ ಸಿಂಹಗಳನ್ನು ಅವುಗಳ ಚರ್ಮಕ್ಕಾಗಿ ಚರ್ಮದ ತಳದಲ್ಲಿ ಸಂಗ್ರಹವಾಗಿರುವ ಬ್ಲಬರ್ ಎಂಬ ಕೊಬ್ಬಿಗಾಗಿ ಜನ ಬೇಟೆಯಾಡುತ್ತಿದ್ದರು. ಹೀಗಾಗಿ ಅವುಗಳ ವಂಶ ನಶಿಸಿಹೋಗುವ ಸಂಭವವೂ ಇತ್ತು. ಈಗೀಗ ಕಾನೂನಿನ ರಕ್ಷಣೆ ದೊರೆತು ಅದು ತಪ್ಪಿದೆ. ಕೆಲವು ಬಗೆಯ ಕಡಲ ಸಿಂಹಗಳನ್ನು ಪಳಗಿಸಿ ಪ್ರಾಣಿಸಂಗ್ರಹಾಲಯಗಳಲ್ಲಿ ಸರ್ಕಸ್ಸುಗಳಲ್ಲಿ ಇಡುವುದುಂಟು. ತಮ್ಮ ಚುರುಕುಬುದ್ಧಿ, ಕ್ರೀಡೆಗಳಲ್ಲಿ ಅಭಿರುಚಿಯಿಂದಾಗಿ ಇವು ಬಹು ಜನಪ್ರಿಯವಾಗಿವೆ. ತುತೂರಿಗಳನ್ನು ಊದುವುದರಿಂದ ಸಂಗೀತಕ್ಕೆ ಅನುಗುಣವಾಗಿ ಕುಣಿಯುವುದೂ ಎಸೆದ ಚೆಂಡನ್ನು ಮೂಗಿನ ತುದಿಯಲ್ಲಿ ಹಿಡಿದು ನಿಲ್ಲಿಸುವುದೂ ಇವಕ್ಕೆ ಪ್ರಿಯವೆನಿಸಿರುವ ಆಟಗಳು. (ಬಿ.ಎನ್.ಬಿ)

**ಕಡಲ ಸೌತೆ :** ಕಂಟಕ ಚರ್ಮಿವಂಶದ ಹೋಲೋತುರಾಯ್ಡಿಯ ವರ್ಗದ ಪ್ರಾಣಿಗಳಿಗಿರುವ ಜನಪ್ರಿಯ ಹೆಸರು (ಸೀ ಕುಕುಂಬರ್). ಇವುಗಳ ದೇಹ ಮೃದು, ನೀಳ ಹಾಗೂ ಸ್ನಾಯುಮಯವಾದದ್ದು ಆಕಾರ ಸೌತೆಕಾಯಿಯಂತೆ. ಹೆಚ್ಚು ಚಟುವಟಿಕೆಗಳನ್ನು ತೋರಿಸದೆ ಸಾಗರದ ತಳದಲ್ಲಿ ಜಡವಸ್ತುವಿನಂತೆ ಇದು ಬಿದ್ದಿರುತ್ತದೆ. ಮಣ್ಣಿನಲ್ಲಿ ಬಿಲ ತೋಡಿ ಹುದುಗಿರುವುದೂ ಉಂಟು. ಬಣ್ಣ ಸಾಮಾನ್ಯವಾಗಿ ಆಕರ್ಷಕವಲ್ಲದ ಕಪ್ಪು, ಬೂದು, ಕಂದು. ಅಪರೂಪಕ್ಕೆ ಉಜ್ವಲ ವರ್ಣದಿಂದ ಕೂಡಿರುವುದೂ ಉಂಟು. ದೇಹದ ಒಂದು ಕೊನೆಯಲ್ಲಿ ಬಾಯಿ, ಅದಕ್ಕೆ ಅಭಿಮುಖವಾಗಿ ಮತ್ತೊಂದು ಕೊನೆಯಲ್ಲಿ

ಗುದ. ಬಾಯಿ ಸುತ್ತ ಒಳಕ್ಕೆ ಎಳೆದುಕೊಳ್ಳಬಹುದಾದ ಕೋಡುಬಳ್ಳಿಗಳಿವೆ. ಈ ಬಳ್ಳಿಗಳು ಗಭೀರ ಸಾಗರದ ಅಡಿಯಲ್ಲಿ ವಾಸಿಸುವ ಎಲಾಸಿಪೋಡದ ಸರಳ ನಳಿಕೆ ಪಾದಗಳಂತಿವೆ. ಆದರೆ ಬೇರೆ ಕಡಲ ಸೌತೆಗಳಲ್ಲಿ ಅವು ಹೆಚ್ಚು ಕವಲುಗಳಿಂದ ಕೂಡಿರುತ್ತವೆ. ಕೋಡುಬಳ್ಳಿಗಳು ವಾಸ್ತವವಾಗಿ ಮಾರ್ಪಾಟಾದ ನಳಿಕೆ ಪಾದಗಳೇ. ದೇಹದ ಮೇಲೆ ಐದು ಜೊತೆ ನಳಿಕೆಪಾದಗಳು ಐದು ಸಾಲುಗಳಲ್ಲಿ ಒಂದು ಕೊನೆಯಿಂದ ಮತ್ತೊಂದು ಕೊನೆಯ ವರೆಗೆ ಹಬ್ಬಿರುತ್ತವೆ ಇವುಗಳೇ ಚಲನೆಯಲ್ಲಿ ನೆರವಾಗುವ ಅಂಗಗಳು. ದೇಹದ ಗೋಡೆ ಮೃದು, ಸ್ನಾಯುಮಯ. ಸ್ನಾಯುಗಳಲ್ಲಿ ಸಣ್ಣ ಸಣ್ಣ ಸೂಕ್ಷ್ಮದರ್ಶೀಯ ಸ್ಪಿಕ್ಯೂಲುಗಳು ಹುದುಗಿರುತ್ತವೆ. ಈ ಗುಂಪಿನ ವರ್ಗೀಕರಣದಲ್ಲಿ ಸ್ಪಿಕ್ಯೂಲುಗಳು ಹೆಚ್ಚು ಸಹಾಯಕಾರಿಯಾಗಿವೆ. ಸೀಲೋಮ್ ಎಂಬ ದೇಹಾವಕಾಶ ವಿಸ್ತಾರವಾಗಿದೆ. ರೆಕ್ಟಮಿನ ಗೋಡೆಯಿಂದ ಎರಡು ದೊಡ್ಡ ಶ್ವಾಸನವೃಕ್ಷಗಳು ಬೆಳೆದಿರುತ್ತವೆ. ಕಡಲ ಸೌತೆಗಳು ಆಹಾರ ಸೇವಿಸುವಾಗ ಪರಿಸರದ ಮಣ್ಣನ್ನು ನುಂಗುವುದರಿಂದ ಪಚನನಾಳದಲ್ಲಿ ಮಣ್ಣು ತುಂಬಿರುತ್ತದೆ.

ಚೀನ, ಮಲಯ, ಫಿಲಿಪೀನ್ಸ್, ಆಸ್ಟ್ರೇಲಿಯಗಳಲ್ಲಿ ಇವುಗಳಿಂದ ಖಾದ್ಯವಸ್ತುಗಳನ್ನು ಹೆಚ್ಚಾಗಿ ಸಾರನ್ನು ತಯಾರಿಸುತ್ತಾರೆ. ಸಾಮಾನ್ಯವಾಗಿ ಇವನ್ನು ಮೊದಲು ಹದಮಾಡಿ ಉಪ್ಪುನೀರಿನಲ್ಲಿ ಕುದಿಸಿ ಒಣಗಿಸಿಟ್ಟುಕೊಂಡಿದ್ದು ಊಟಕ್ಕೆ ಬಡಿಸುವ ಮುನ್ನ ಮತ್ತೆ ಬೇಯಿಸುತ್ತಾರೆ. (ಬಿ.ಎನ್.ಬಿ.)

**ಕಡಲ ಹಂದಿ :** ಸಿಟೇಸಿಯ ಗಣದ ಫೋಸೀನ ಜಾತಿಯ ಜಲವಾಸಿ ಸ್ತನಿ (ಸೀ ಹಾಗ್). ಇಂಗ್ಲಿಷಿನಲ್ಲಿ ಪಾರ್ಪಾಯಿಸ್ ಎನ್ನುತ್ತಾರೆ. ತಿಮಿಂಗಿಲ ಮತ್ತು ಡಾಲ್ಫಿನ್ನುಗಳ ಹತ್ತಿರ ಸಂಬಂಧಿ. ದೇಹದ ಆಕಾರ ಡಾಲ್ಫಿನಿನಂತೆಯೇ. ಆದರೆ ಅದರಂತೆ ಮೂತಿ ಚೂಪಾಗಿಲ್ಲ. ದೇಹದ ಉದ್ದ ಸು. 1.2–1.8 ಮೀ. ಬಣ್ಣ ಸಾಮಾನ್ಯವಾಗಿ ಕಪ್ಪು. ಹೊಟ್ಟೆಯ ಭಾಗ ಬಿಳಿ. ತಲೆ ಗುಂಡಗಿದೆ. ಬಾಯಿ ಅಗಲ. ಒಂದೊಂದು ದವಡೆಯಲ್ಲಿ 32–56 ಹಲ್ಲುಗಳಿವೆ. ಕುತ್ತಿಗೆಯ ಕಸೇರುಗಳು ಒಂದರೊಡನೊಂದು ಕೂಡಿಕೊಂಡಿವೆ. ಮುಂಗಾಲುಗಳು ಜಾಲಪಾದಗಳಾಗಿ ಮಾರ್ಪಟ್ಟು ಈಜಲು ನೆರವಾಗಿವೆ. ಬೆನ್ನಿನ ಮೇಲೆ ತ್ರಿಕೋಣಾಕಾರದ ಬೆನ್ನಿನ ಈಜುರೆಕ್ಕೆಯೊಂದಿದೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ತೀರಪ್ರದೇಶದಲ್ಲಿ ಕಾಣಬರುವ ಇದು ಸಾಮಾನ್ಯವಾಗಿ ದೊಡ್ಡ ದೊಡ್ಡ ಗುಂಪುಗಳಲ್ಲಿ ವಾಸಿಸುತ್ತದೆ. ಒಂದೊಂದು ಗುಂಪಿನಲ್ಲೂ 20–100 ಪ್ರಾಣಿಗಳಿರುತ್ತವೆ ಸಾಧಾರಣವಾಗಿ ಸಮುದ್ರದಲ್ಲೇ ವಾಸಿಸಿದರೂ ಕೆಲವೊಮ್ಮೆ ದೊಡ್ಡ ನದಿಗಳಿಗೆ ವಲಸೆ ಬರುವುದೂ ಉಂಟು. ಹೆರ್ರಿಂಗ್ ಮೀನು. ಬಂಗಡೆ, ಸ್ಕ್ವಿಡ್ ಮುಂತಾದುವು ಇದರ ಆಹಾರ. ಋತುಕಾಲ ಬೇಸಗೆ. ಹೆಣ್ಣು ಒಂದು ಸಲಕ್ಕೆ ಒಂದೇ ಮರಿಯನ್ನು ಈಯುತ್ತದೆ. ಗರ್ಭಧಾರಣೆ ಕಾಲ ಸು. 1 ವರ್ಷ. ತಾಯಿ ಒಂದು ಕಡೆ ವಾಲಿಕೊಂಡು ಈಜುತ್ತ ಮರಿಗೆ ಹಾಲುಣಿಸುವುದು ಇದರ ಸೋಜಿಗ. ಪ್ರಪಂಚದ ಹಲವೆಡೆ ಇದರ ಮಾಂಸವನ್ನು ತಿನ್ನುತ್ತಾರೆ. ಇಂಗ್ಲೆಂಡಿನ ರಾಜ ಎಂಟನೆಯ ಹೆನ್ರಿ ಕಾಲದಲ್ಲಿ ಇದರ ಮಾಂಸವನ್ನು ರಾಜಭೋಜನಕೂಟಗಳಲ್ಲಿ ಮಾತ್ರ ಉಪಯೋಗಿಸುತ್ತಿದ್ದರಂತೆ.

ಇದೇ ಗಣಕ್ಕೆ ಸೇರಿದ ಫೋಸಿನಾಯ್ಡಿಸ್ ಮತ್ತು ನಿಯೋಫೋಸೀನ ಎಂಬ ಜಾತಿಯ ಪ್ರಾಣಿಗಳನ್ನೂ ಕಡಲ ಹಂದಿಗಳೆಂದೇ ಕರೆಯುವುದುಂಟು. ಇವುಗಳಲ್ಲಿ ಮೊದಲನೆಯದು ಉತ್ತರ ಪೆಸಿಫಿಕ್ ಸಾಗರದ ಅಲ್ಯೂಷಿಯನ್ ದ್ವೀಪಗಳಲ್ಲಿ ವಾಸಿಸುತ್ತದೆ. ಎರಡನೆಯದು ಭಾರತ, ಬೋರ್ನಿಯೊ ಮತ್ತು ಜಪಾನಿನ ತೀರ ಪ್ರದೇಶಗಳಲ್ಲಿ ಕಾಣಬರುತ್ತದೆ. ಇದರ ಬಣ್ಣ ಕಪ್ಪು. ಬೆನ್ನಿನ ಈಜುರೆಕ್ಕೆ ಇಲ್ಲ. ಸಾಮಾನ್ಯವಾಗಿ ಸಮುದ್ರತೀರಗಳಲ್ಲಿ ವಾಸಿಸಿದರೂ ಕೆಲವೊಮ್ಮೆ ಇರವಾಡಿ ಮುಂತಾದ ಪೂರ್ವ ಏಷ್ಯದ ನದಿಗಳಲ್ಲಿ ನೂರಾರು ಮೈಲಿ ದೂರ ಒಳಕ್ಕೆ ಸಾಗಿ ಬರುವುದುಂಟು. (ಬಿ.ಎನ್.ಬಿ.)

**ಕಡಲ ಹಕ್ಕಿ :** ಪೆಲಿಕನಿಫಾರ್ಮಿಸ್ ಗಣದ ಸೂಲಿಡೀ ಕುಟುಂಬಕ್ಕೆ ಸೇರಿದ ಮೋರಸ್ ಎಂಬ ಒಂದು ಸಮುದ್ರವಾಸಿ ಪಕ್ಷಿಜಾತಿ. ರೂಢಿಯಲ್ಲಿವನ್ನು ಗ್ಯಾನೆಟ್ ಎನ್ನುತ್ತಾರೆ. ಈ ಜಾತಿಯಲ್ಲಿ ಮೂರು ಪ್ರಮುಖ ಪ್ರಭೇದಗಳಿವೆ. ಇವುಗಳಲ್ಲಿ ಮೋರ್‍ಯಸ್ ಬಸಾನಸ್ ಎಂಬ ಪ್ರಭೇದ ಮುಖ್ಯವಾದುದು. ಬ್ರಿಟನಿನ ಉತ್ತರ ಭಾಗ, ಐಸ್‌ಲೆಂಡ್, ಪೆರು ಮುಂತಾದಲ್ಲಿ ಇದು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುತ್ತದೆ. ಇದು ಗಾತ್ರದಲ್ಲಿ ಬಹು ದೊಡ್ಡದಾದ ಹಕ್ಕಿ. 0.9144 ಮೀ ಉದ್ದ ಇದೆ. ಬಲಿಷ್ಠವೂ ಹೌದು. ಬಣ್ಣ ಕಣ್ಣಿಗೆ ತಿವಿಯುವಷ್ಟು ಬಿಳುಪು. ರೆಕ್ಕೆ ಅಗಲಿಸಿದಾಗ ತುದಿಯಿಂದ ತುದಿಗೆ 1.8288 ಮೀ ಅಗಲ. ತಲೆಯ ಮೇಲ್ಭಾಗ ಹಳದಿ. ಕಂಠಪ್ರದೇಶ ಮತ್ತು ರೆಕ್ಕೆಗಳ ತುದಿಯಲ್ಲಿ ನೀಳಾಕೃತಿಯ ಮಚ್ಚೆಗಳಿವೆ. ಕೊಕ್ಕು ಉದ್ದವಾಗಿ, ಶಕ್ತಿಯುತವಾಗಿ ಈಟಿಯ ಮೊನೆಯಂತೆ ಹರಿತವಾಗಿದೆ. ಜಾಲ ಪಾದವಿರುವುದರಿಂದ ಹಕ್ಕಿ ಚೆನ್ನಾಗಿ ಈಜುತ್ತದೆ.

ಚಳಿಗಾಲದಲ್ಲಿ ದಕ್ಷಿಣದಿಂದ ಉತ್ತರ ಮತ್ತು ಪಶ್ಚಿಮ ಆಫ್ರಿಕಗಳ ಸಮುದ್ರ ಹಾಗೂ ಮೆಕ್ಸಿಕೊ ಕೊಲ್ಲಿಗಳತ್ತ ಇದು ಧಾವಿಸುವುದುಂಟು. ತನ್ನ ಹಾಗೂ ಮರಿಗಳ ವಾಸಕ್ಕಾಗಿ ಕಡಲಿನ ಜೊಂಡು, ಹಲ್ಲು ಮುಂತಾದುವುಗಳ ನೆರವಿನಿಂದ ಎತ್ತರವಾದ ಕಲ್ಲಿನ ಮೇಲೆ ಇದು ಗೂಡು ಕಟ್ಟುತ್ತದೆ. ಗೂಡಿನ ನಿರ್ಮಾಣ ಕಾರ್ಯದಲ್ಲಿ ಗಂಡು ಮತ್ತು ಹೆಣ್ಣುಗಳೆರಡೂ ಭಾಗವಹಿಸುತ್ತವೆ. ಕಡಲ ಹಕ್ಕಿ ಮಾಂಸಾಹಾರಿ. ಕಡಲಿನಲ್ಲಿ ದೊರೆಯುವ ಮೀನುಗಳೇ ಇದರ ಆಹಾರ. ಇದರ ದೃಷ್ಟಿ ಅತ್ಯಂತ ತೀಕ್ಷ್ಣವಾದುದು. ತೀರ ಎತ್ತರದಲ್ಲಿ ಹಾರುತ್ತಿರುವಾಗಲೇ ನೀರಿನಲ್ಲಿ ಸಂಚರಿಸುವ ಮೀನುಗಳನ್ನು ಗುರುತಿಸುತ್ತದೆ. ನೀರಿನಿಂದ ಸು. 30.48 ಮೀಗಳ ಎತ್ತರದಿಂದ, ರೆಕ್ಕೆಗಳನ್ನು ಅರೆಮುಚ್ಚಿ ಬಂದೂಕಿನ ಗುಂಡಿನಂತೆ ರಭಸದಿಂದ ನೇರವಾಗಿ ನುಗ್ಗಿ ಮೀನುಗಳನ್ನು ಹಿಡಿಯುವ ದೃಶ್ಯ ರಮಣೀಯವಾಗಿರುತ್ತದೆ. ಈ ಕ್ರಿಯೆಯಲ್ಲಿ ಇದು ಮೀಂಚುಳ್ಳಿಯನ್ನು (ಕಿಂಗ್ ಫಿಷರ್) ಹೋಲುತ್ತದೆ. ಆಹಾರಕ್ಕಾಗಿ ಇದು ತನ್ನ ನಿವಾಸಸ್ಥಾನದಿಂದ ಸು. 160.9344 ಕಿಮೀ ಗಳಷ್ಟು ದೂರ ಸಂಚರಿಸುತ್ತದೆ. ಇದರ ಹಾರಾಟದಲ್ಲಿ ರಾಜಗಾಂಭೀರ್ಯವಿದೆ. ಇದು ಸಾಮಾನ್ಯವಾಗಿ ಅಕ್ಟೋಬರ್ 10ನೆಯ ತಾರೀಖಿನ ಸುಮಾರಿಗೆ ವಲಸೆ ಹೋಗುತ್ತದೆ.



ಮೂರು ವರ್ಷ ತುಂಬಿದ ಹೆಣ್ಣುಹಕ್ಕಿ ಗರ್ಭ ಧರಿಸುತ್ತದೆ. ವಸಂತಮಾಸದ ಪ್ರಾರಂಭದಲ್ಲಿ ಒಂದು ಅಥವಾ ಎರಡು ತಿಳಿನೀಲಿ ಬಣ್ಣದ ಮೊಟ್ಟೆಗಳನ್ನಿಡುತ್ತದೆ. ಗಂಡು ಮತ್ತು ಹೆಣ್ಣು ಒಂದಾದ ಮೇಲೊಂದರಂತೆ 44 ದಿನಗಳ ಕಾಲ ಮೊಟ್ಟೆಗಳಿಗೆ ಕಾವು ಕೊಡುತ್ತವೆ. ತಂದೆತಾಯಿಗಳಿಗಿಂತ ಮರಿಹಕ್ಕಿಗೆ ವಲಸೆಹೋಗುವ ಗೀಳು ಹೆಚ್ಚು.

ಕಡಲ ಹಕ್ಕಿಯ ಇನ್ನೊಂದು ಬಗೆಯಾದ ಮೋರಸ್ ಕೆಪೆನ್ಸಿಸ್ ಎಂಬುದು ದಕ್ಷಿಣ ಅಮೆರಿಕದಲ್ಲಿ ವಾಸಿಸುತ್ತದೆ. ಇವಲ್ಲದೆ ಸೂಲಿಡೀ ಕುಟುಂಬದ ಸೂಲ ಜಾತಿಯ ಪ್ರಭೇದಗಳಿಗೂ ಕಡಲ ಹಕ್ಕಿ ಎನ್ನುವ ರೂಢಿಯಿದೆ. ಬೂಬಿಗಳೆಂದೂ ಕರೆಯಲಾಗುವ ಇವುಗಳಲ್ಲಿ ಸೂಲ ನೆಬುಕ್ಸಿಯೈ (ನೀಲಿ ಪಾದದ ಬೂಬಿ), ಸೂಲ ಲ್ಯೂಕೊಗ್ಯಾಸ್ಟರ್ (ಕಂದುಬೂಬಿ), ಸೂಲ ಸೂಲ (ಕೆಂಪು ಪಾದದ ಬೂಬಿ) ಮತ್ತು ಸೂಲ ಬೋಟಿ ಎಂಬುವು ಮುಖ್ಯವಾದುವು. ಇವುಗಳಲ್ಲಿ ಕೊನೆಯದು ಮೊಟ್ಟೆಯಿಡಲು ಹಿಂದೂ ಮಹಾಸಾಗರದ ಅಸಂಪ್ಷನ್ ಮತ್ತು ಕ್ರಿಸ್‌ಮಸ್ ದ್ವೀಪಗಳಿಗೆ ಹೋಗುತ್ತದೆ. (ಎನ್.ಎಂ.)

**ಕಡಲ ಹದ್ದು : (ನೋಡಿ– ಆಸ್ಪ್ರೆ)**

**ಕಡಲ ಹಾವುಗಳು :** ಉಷ್ಣ ಹಾಗೂ ಸಮಶೀತೋಷ್ಣವಲಯಗಳ ಸಮುದ್ರ ಪ್ರದೇಶದಲ್ಲಿ ವಾಸಿಸುವ ಅತ್ಯಂತ ವಿಷಪೂರಿತ ಬಗೆಯವು. ಇವು ನಾಗರಹಾವುಗಳ ಸಂಬಂಧಿ ಹೈಡ್ರೋಫಿಡೀ ಕುಟುಂಬಕ್ಕೆ ಸೇರಿದವು. ಏಷ್ಯ ಮತ್ತು ಆಸ್ಟ್ರೇಲಿಯಗಳ ತೀರಪ್ರದೇಶದಲ್ಲಿ ಇವುಗಳ ಸಂಖ್ಯೆ ಹೆಚ್ಚು. ಒಂದು ಜಾತಿಯ ಕಡಲ ಹಾವು ಆಫ್ರಿಕದ ಪೂರ್ವತೀರಪ್ರದೇಶದಲ್ಲೂ ಕಂಡುಬಂದಿದೆ. ಹಾಗೆಯೇ ಮತ್ತೊಂದು ಉತ್ತರ ಅಮೆರಿಕದ ಪಶ್ಚಿಮತೀರಪ್ರದೇಶದಲ್ಲಿ ಕಂಡುಬಂದಿದೆ. ಅಟ್ಲಾಂಟಿಕ್ ಸಾಗರದಲ್ಲಿ ಇವುಗಳ ಸುಳಿವಿಲ್ಲ.

ಇವು ಜಲಜೀವನಕ್ಕೆ ಅಚ್ಚುಕಟ್ಟಾಗಿ ಹೊಂದಿಕೊಂಡಿವೆ. ದೋಣಿಯ ಹುಟ್ಟಿನಂತೆ ಮಾರ್ಪಟ್ಟಿರುವ ಚಪ್ಪಟೆಯಾದ ಬಾಲ. ಕವಾಟಗಳಿಂದ ಕೂಡಿದ ಮೂಗಿನ ಹೊಳ್ಳೆಗಳು ಮತ್ತು ಮೊಂಡಾದ ನಾಲಗೆ–ಇವು ಜಲಜೀವನದ ಪರಿಹೊಂದಾಣಿಕೆಗಳು. ತಮ್ಮ ಉಪ್ಪು ನೀರಿನ ಪರಿಸರಕ್ಕೆ ಅನ್ವಯಿಸಿದಂತೆ ಇವುಗಳ ಮೂಗಿನಲ್ಲಿ ನಾಸಾ ಗ್ರಂಥಿ ಬೆಳೆದು ಹೆಚ್ಚಿನ ಉಪ್ಪನ್ನು ವಿಸರ್ಜಿಸುತ್ತದೆ. ಈಜುವುದರಲ್ಲಿ ಪ್ರಾವೀಣ್ಯ ಪಡೆದಿರುವ ಇವು ಭೂಮಿಯ ಮೇಲೆ ಹರಿದಾಡಲು ಅಸಮರ್ಥವಾಗಿವೆ. ನೀರಿನಲ್ಲಿದ್ದಾಗ ನೀರು ದೇಹವನ್ನು ಪ್ರವೇಶಿಸದಂತೆ ಮೂಗಿನ ಹೊಳ್ಳೆಗಳನ್ನು ಕವಾಟಗಳು ಮುಚ್ಚುತ್ತವೆ. ಸಾಮಾನ್ಯವಾಗಿ ತೀರಪ್ರದೇಶದಲ್ಲಿ ಹೆಚ್ಚಾಗಿ ಕಂಡುಬಂದರೂ ಇವು ದಡದಿಂದ ಬಹು ದೂರ ಈಜಿಹೋಗಬಲ್ಲುವು. ದಾಳಿಕಾರ ಪ್ರವೃತ್ತಿ ಇವುಗಳ ಹುಟ್ಟುಗುಣವಲ್ಲ. ಸಮುದ್ರತೀರದಲ್ಲಿ ಈಜಾಡುವವರಿಗೆ ಸಾಮಾನ್ಯವಾಗಿ ಇವು ಹಿಂಸೆ ಮಾಡುವುದಿಲ್ಲ. ಆಕಸ್ಮಾತ್ತಾಗಿ ಹಿಡಿದರೆ ಅಥವಾ ಥಿಕ್ಕಿ ಹೊಡೆದರೆ ಕಚ್ಚುವುದುಂಟು. ಇವಕ್ಕೆ ಪತಂಗಗಳಂತೆ ಬೆಳಕು ಬಲು ಇಷ್ಟ. ರಾತ್ರಿಯ

ವೇಳೆ ಕಡಲ ತೀರದಲ್ಲಿ ಲಾಂದ್ರವನ್ನಿಟ್ಟರೆ ಅದರ ಬೆಳಕಿಗೆ ಆಕರ್ಷಿತವಾಗಿ ದಡಕ್ಕೆ ಬರುತ್ತದೆ. ಇವನ್ನು ಹಿಡಿಯುವವರು ಈ ವಿಧಾನವನ್ನು ಅನುಸರಿಸುತ್ತಾರೆ. ನ್ಯೂ ಗಿನಿಯಲ್ಲಿ ಅಲ್ಲಿನ ಕಡಲ ಹಾವುಗಳು ದೊಡ್ಡ ದೊಡ್ಡ ನದಿಗಳನ್ನು ಪ್ರವೇಶಿಸುವುದುಂಟು. ಬೆಸ್ತರು ನದಿಗಳಲ್ಲಿ ಮೀನು ಹಿಡಿಯುವಾಗ ಅವರ ಬಲೆಗಳಿಗೆ ಇವು ಬಿದ್ದರೆ ಅವರು ಹೆದರಿಕೆಯಿಲ್ಲದೆ ಇವನ್ನು ಹಿಡಿದು ನದಿಗೆ ಎಸೆದು ಬಿಡುತ್ತಾರೆ. ಚೀನಾ ದೇಶದಲ್ಲಿ ಚೀನೀಯರು ಇವನ್ನು ತಿನ್ನುವುದುಂಟು. ಕಡಲ ಹಾವಿನ ವಿಷದ ನಂಜು ನರಗಳ ಮೇಲೆ ಪರಿಣಾಮಕಾರಿಯಾಗಿದೆ. ಮುಂಬೈಯ ಹಾಫ್ಕಿನ್ ಇನ್ಸ್ಟಿಟ್ಯೂಟಿನಲ್ಲಿ ಇದರ ನಂಜನ್ನು ಶಮನಗೊಳಿಸುವ ಆಂಟಿವೆನಿನ್ ಅಥವಾ ಪ್ರತಿವಿಷವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಈ ಕಡಲ ಹಾವುಗಳ ಕುಟುಂಬದಲ್ಲಿ ಎರಡು ಉಪಕುಟುಂಬಗಳಿವೆ. 1 ಹೈಡ್ರೋಫಿನೀ. 2 ಲಾಟಿಕಾನಿನೀ. ಮೊದಲನೆಯ ಗುಂಪಿನವು ಜಲಜೀವನಕ್ಕೆ ಸಂಪೂರ್ಣವಾಗಿ ಹೊಂದಿಕೊಂಡಿವೆ. ಅಲ್ಲದೆ ಅವು ತಮ್ಮ ಮೊಟ್ಟೆಗಳನ್ನು ಗರ್ಭಾಶಯದಲ್ಲಿಯೇ ಇಟ್ಟುಕೊಂಡು ಕಾವು ಕೊಟ್ಟು ಮರಿ ಮಾಡುತ್ತವೆ. ಆದರೆ ಎರಡನೆಯ ಗುಂಪಿನವು ಸಮುದ್ರದ ದಡಕ್ಕೆ ಬಂದು ಮೊಟ್ಟೆಗಳನ್ನಿಡುತ್ತವೆ. ಪೆಲಾಮಿಸ್ ಪ್ಲಾಟೂರಸ್ ಎಂಬ ಕಡಲ ಹಾವು ಹಿಂದೂ ಸಾಗರ ಮತ್ತು ಪೆಸಿಫಿಕ್ ಸಾಗರಗಳ ತೀರದಲ್ಲೆಲ್ಲ ಕಂಡುಬರುತ್ತದೆ. ಇದು ಸಾಮಾನ್ಯವಾಗಿ ಒಂದು ಮೀಟರು ಉದ್ದ ಬೆಳೆಯುತ್ತದೆ. ದೇಹ ಕಂದು ಅಥವಾ ಬೂದು ಬಣ್ಣವಾಗಿದ್ದು ಮೇಲೆ ಕಪ್ಪು ಪಟ್ಟೆಗಳಿರುತ್ತವೆ. ಭಾರತ ದೇಶದಲ್ಲಿ 8 ಜಾತಿ ಮತ್ತು 19 ಪ್ರಭೇದಗಳಿವೆ. ಕರಿಲಿಯ, ಲಾಟಿಕಾಡ, ಪ್ರೆಸ್ಕುಲೇಟ, ಎನ್‌ಹೈಡ್ರಿನ, ಹೈಡ್ರೋಫಿಸ್, ಲಪೆಮಿಸ್, ಮೈಕ್ರೋಸೆಫಾಲೋಫಿಸ್ ಮತ್ತು ಪೆಲಾಮಿಸ್ ಜಾತಿಯ ಕಡಲಹಾವುಗಳ ಪೈಕಿ ಕೊನೆಯ ಆರು ಜಾತಿಗಳು ಕನ್ನಡನಾಡಿನ ಕಡಲತೀರದಲ್ಲಿ ಕಾಣಬರುತ್ತವೆ. (ಬಿ.ಎನ್.ಬಿ., ಡಿ.ಆರ್.ಪಿ)

**ಕಡಲ ಹೂ :** ಕುಟುಕು ಕಣವಂತ (ಸೀಲೆಂಟರೇಟ) ವಂಶಕ್ಕೆ ಸೇರಿದ ಒಂದು ಸಮುದ್ರವಾಸಿ (ಸೀ ಆನಿಮೊನಿ). ಆಂಥೊಜೋವ ವರ್ಗಕ್ಕೂ ಹೆಕ್ಸಕೊರಾಲಿಯ ಉಪವರ್ಗಕ್ಕೂ ಸೇರಿದೆ. ಮಧ್ಯೆ ಬಾಯಿಯುಳ್ಳ ಒಂದು ತಟ್ಟೆಯ ಸುತ್ತ ಹೂದಳಗಳಂತೆ ಜೋಡಿಸಿರುವ ಕೋಡುಬಳ್ಳಿಗಳಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಸು.1,000 ಪ್ರಭೇದಗಳುಳ್ಳ ಇದರ ಬಳಗ ಸಮುದ್ರ ದಂಡೆಯಿಂದ 22,000"ಗಳ ಆಳದ ವರೆಗೂ ವಿಸ್ತರಿಸಿದೆ. ವೈವಿಧ್ಯಮಯ ವರ್ಣ ವಿನ್ಯಾಸಗಳಿಂದ ಕೂಡಿದ ಈ ಸಮುದ್ರಜೀವಿಗಳು ನೋಡಲು ಬಲು ಆಕರ್ಷಕ. ಇವುಗಳಲ್ಲಿ ಏಕಾಂತ ಜೀವಿಗಳೇ ಹೇರಳವಾಗಿದ್ದರೂ ಕೂಡುಜೀವಿ, ಸಹಜೀವಿ, ಸಾಮೂಹಿಕ ಜೀವಿ ಮತ್ತು ಪರತಂತ್ರಜೀವಿಗಳೂ ಇಲ್ಲದೇ ಇಲ್ಲ. ಸ್ವಾಭಾವಿಕವಾಗಿ ಇವು ಸ್ಥಾವರ ಜೀವಿಗಳು. ಕಡಲತಳ ದಲ್ಲಿರುವ ಶಂಖ, ಕಪ್ಪೆಚಿಪ್ಪು, ಕಲ್ಲು ಮುಂತಾದುವುಗಳಿಗೆ ಅಂಟಿಕೊಂಡಿರುತ್ತವೆ. ಆದರೆ ಕೆಲವು ಪ್ರಾಣಿಗಳು ಮಂದಗಾಮಿಗಳಂತೆ ತೆವಳುವುದೂ ಮತ್ತೆ ಕೆಲವು ಕೋಡುಬಳ್ಳಿಗಳ ಬಡಿತದಿಂದ ನಿಧಾನವಾಗಿ ಈಜುವುದೂ ಉಂಟು.

ಇವುಗಳ ದೇಹ ಕೊಳವೆಯಂತಿದೆ. ಆಧಾರಕ್ಕೆ ಅಂಟಿರುವ ಭಾಗವನ್ನು ಪಾದ ಅಥವಾ ಬುಡ (ಪೀಡಲ್ ಡಿಸ್ಕ್) ಎಂತಲೂ ಮೇಲ್ತುದಿಯ ಭಾಗವನ್ನು ಬಾಯ ತಟ್ಟೆ (ಓರಲ್ ಡಿಸ್ಕ್) ಎಂತಲೂ ಇವೆರಡರ ಮಧ್ಯೆ ಇರುವ ಭಾಗವನ್ನು ಕಂಬ (ಕಾಲಮ್) ಎಂತಲೂ ಇದರ ದೇಹವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಬಾಯ ತಟ್ಟೆಯ ಮಧ್ಯದಲ್ಲಿ ಸೀಳಿನಂಥ ಬಾಯೂ ಅಂಚಿನಲ್ಲಿ ಒಂದು ಅಥವಾ ಹಲವು ಸುತ್ತುಗಳಲ್ಲಿ ಜೋಡಿಸಿರುವ ಬೆರಳುಗಳಂಥ ಟೊಳ್ಳಾದ ಕೋಡುಬಳ್ಳಿಗಳೂ (ಟೆಂಟಿಕಲ್) ಇವೆ. ಎಲ್ಲ ಕಡಲಹೂಗಳಲ್ಲೂ ಕೋಡುಬಳ್ಳಿಗಳ ಸಂಖ್ಯೆ ಆರು ಅಥವಾ ಆರರ ಗುಣಕದಲ್ಲಿರುತ್ತದೆ. ಪ್ರತಿಯೊಂದು ಕೋಡುಬಳ್ಳಿಯಲ್ಲಿಯೂ ಅಸಂಖ್ಯಾತವಾದ ಕುಟುಕು ಕಣಗಳಿವೆ (ನಿಮ್ಯಾಟೊಸಿಸ್ಟ್). ಬಾಯಿಯಿಂದ ಹೊರಟ ಚಿಕ್ಕ ಗಂಟಲು ನಾಳ (ಗಲೆಟ್ ಅಥವಾ ಸ್ಟೊಮೋಡಿಯಂ) ಶರೀರಸ್ತಂಭವ ಒಳಭಾಗದಲ್ಲಿ ಜೋತು ಬಿದ್ದಿದೆ. ಇದರ ಇಕ್ಕಡೆಗಳಲ್ಲೂ ಒಂದು ಅಥವಾ ಎರಡು ನೀರ್ನಳಿಕೆಗಳಿವೆ (ಸೈಫನೊಗ್ಲಿಫ್). ಈ ನಳಿಕೆಗಳಲ್ಲಿರುವ ಶಿಲಕೆಗಳ ಬಡಿತದಿಂದ ಆವಶ್ಯಕಾಂಶಗಳನ್ನು ಹೊತ್ತ ನೀರಿನ ಪ್ರವಾಹ ಒಂದು ನಳಿಕೆಯ (ಸಲ್ಕಸ್) ಮೂಲಕ ಒಳಹೊಕ್ಕು ಮತ್ತೊಂದರ ಮೂಲಕ (ಸಲ್ಕ್ಯುಲಸ್) ತ್ಯಾಜ್ಯ ವಸ್ತುಗಳಿಂದ ಕೂಡಿ ಹೊರಬರುತ್ತದೆ. ಈ ಜಲಾಭಿಸರಣೆಯಿಂದ ಅನಿಲಗಳ ವಿನಿಮಯಕ್ಕೂ ಸಹಾಯವಾಗುವುದು.

ಕಡಲ ಹೂ ಇಪ್ಪದರಗಳ ಜೀವಿ. ಹೊರಚರ್ಮವೂ ಒಳಚರ್ಮವೂ ತನ್ಮಧ್ಯೆ ಮಂದವಾಗಿ ಬೆಳೆದಿರುವ ಮಿಸೋಗ್ಲಿಯವೂ ಶರೀರಸ್ತಂಭದ ಕೇಂದ್ರದಲ್ಲಿರುವ ಜಠರ ಸಂವಹನಿ ಡೊಗರನ್ನು (ಗಾಸ್ಟ್ರೊವ್ಯಾಸ್ಕ್ಯುಲರ್ ಕ್ಯಾವಿಟಿ) ಸುತ್ತುವರಿದಿವೆ. ಈ ಡೊಗರಿನಲ್ಲಿ ಜೋಲಾಡುತ್ತಿರುವ ಗಂಟಲ ನಾಳ 6 ಜೊತೆ ನಡುತಡಿಕೆಗಳಿಂದ ಶರೀರದ ಗೋಡೆಗೆ ಅಂಟಿರುತ್ತದೆ. ನಡುತಡಿಕೆಗಳು, ಕೋಡುಗಳಂತೆ, 6ರ ಆವರ್ತಗಳಲ್ಲಿ ಜೊತೆಜೊತೆಯಾಗಿ ಬೆಳೆದು ಡೊಗರನ್ನು ಅನೇಕ ಕೋಣೆಗಳಾಗಿ ವಿಭಾಗ ಮಾಡಿವೆ. ಆದರೆ ಇವುಗಳಲ್ಲಿರುವ ದ್ವಾರಗಳಿಂದ ಕೋಣೆಗಳ ಅಂತಸ್ಸಂಪರ್ಕಕ್ಕೆ ಅವಕಾಶ ಏರ್ಪಡುತ್ತದೆ. ನಡುತಡಿಕೆಗಳು ಪ್ರಥಮ, ದ್ವಿತೀಯ ತೃತೀಯ ಮತ್ತು ಚತುರ್ಥ ತಂಡಗಳಲ್ಲಿ ಬೆಳೆಯಬಹುದು. ಆದರೆ ಪ್ರತಿ ತಂಡದಲ್ಲೂ ಕೇವಲ 6 ಜೊತೆಗಳಿದ್ದು ಅವುಗಳ ಗಾತ್ರ ಮತ್ತು ಉಗಮಕಾಲ ಒಂದೇ ಆಗಿರುತ್ತವೆ. ನೀಳ ಹಾಗೂ ವರ್ತುಳ ಸ್ನಾಯುಗಳಿಂದ ಕೂಡಿದ ನಡುತಡಿಕೆಗಳ ಗೋಡೆಗೆ ಅಂಟಿರುವ ಜನನೇಂದ್ರಿಯಗಳು ಸಂತಾನೋತ್ಪತ್ತಿಯಲ್ಲಿ ಪಾತ್ರವಹಿಸುತ್ತವೆ. ನಡುತಡಿಕೆಗಳ ಅಂಚಿನಲ್ಲಿರುವ ಅಂತ್ರತಂತುಗಳು (ಅಕಾಂಟಿಯ) ದೇಹರಕ್ಷಣೆಯ ಕಾರ್ಯದಲ್ಲಿ ನೆರವಾಗುತ್ತವೆ. ಈ ಪ್ರಾಣಿಗಳಲ್ಲಿ ಲಿಂಗ ಮತ್ತು ನಿರ್ಲಿಂಗ ರೀತಿಯ ವಂಶಾಭಿವೃದ್ಧಿಗಳೆರಡನ್ನೂ ಕಾಣಬಹುದು. ಅಂಡಾಣುಗಳ ಸಂಯೋಗದಿಂದ ಉತ್ಪತ್ತಿಯಾಗುವ ಮರಿ ಕಡಲ ಹೂ ತಾಯಿಯ ಬಾಯ ಮೂಲಕ ಹೊರಬಂದು, ಯಾವುದಾದರೂ ಆಧಾರಕ್ಕೆ ಅಂಟಿಕೊಂಡು ಸ್ವತಂತ್ರ ಜೀವಿಯಾಗಲು ತೊಡಗುತ್ತದೆ.

ಎಲ್ಲ ಕಡಲು ಹೂಗಳೂ ಮಾಂಸಾಹಾರಿಗಳು. ಕುಟುಕು ಕಣಗಳಿಂದ ಕೂಡಿದ ಕೋಡುಬಳ್ಳಿಗಳ ನೆರವಿನಿಂದ ತಾವಿದ್ದಲ್ಲಿಗೆ ಬಂದ ಇತರ ಪ್ರಾಣಿಗಳನ್ನು ಇವು ಕೊಂದು ತಿನ್ನುತ್ತವೆ. ಕೆಲವು ಕಡಲ ಹೂಗಳಲ್ಲಿ ದೇಹದಿಂದ ಸ್ರವಿಸಲ್ಪಟ್ಟ ಅಂಟುದ್ರವಕ್ಕೆ ಮರಳು, ಕಪ್ಪೆಚಿಪ್ಪು ಮುಂತಾದ ಅನ್ಯ ವಸ್ತುಗಳು ಅಂಟಿಕೊಂಡು ಬಹಿರ್ಕವಚವೊಂದು ನಿರ್ಮಾಣವಾಗುವುದುಂಟು. (ಎಸ್.ಎಚ್.ಬಿ.)

**ಕಡಲಾಮೆಗಳು :** ಸರೀಸೃಪವರ್ಗದ ಕಿಲೋನಿಯ ಗಣಕ್ಕೆ (ಆಮೆಗಳ ಗುಂಪು) ಸೇರಿದ ಸಮುದ್ರವಾಸಿ ಪ್ರಾಣಿ (ಟರ್ಟಲ್). ಸಾಮಾನ್ಯವಾಗಿ ಸ್ಫಾರ್ಗಿಡೀ ಮತ್ತು ಕೀಲೊನ್ಯೆಯಿಡೀ ಕುಟುಂಬಗಳಿಗೆ ಸೇರಿದ ಪ್ರಾಣಿಗಳನ್ನು ಕಡಲಾಮೆಗಳೆನ್ನುತ್ತಾರೆ. ಇವುಗಳಲ್ಲಿ ಮೊದಲನೆಯ ಕುಟುಂಬಕ್ಕೆ ಸೇರಿದ ಡರ್ಮೋಕೆಲಿಸ್ ಕೋರಿಯೇಸಿಯ ಮತ್ತು ಎರಡನೆಯದಕ್ಕೆ ಸೇರಿದ ಕಿಲೋನೀ ಇಂಬ್ರಿಕೇಟ ಮತ್ತು ಕಿ. ಮೈಡಾಸ್ ಎಂಬುವು ಮುಖ್ಯವಾದ ಬಗೆಯ ಕಡಲಾಮೆಗಳು.



ತೊಗಲಾಮೆ (ಲೆಧರಿ ಟರ್ಟಲ್) ಎಂದೂ ಕರೆಯಲಾಗುವ ಡರ್ಮೋಕೆಲಿಸ್ ಕೋರಿಯೇಸಿಯ ಕಡಲಾಮೆ ಸಿಂಹಳದ ಕಡಲತೀರ ಪ್ರದೇಶಗಳಲ್ಲಿ ಹೇರಳವಾಗಿ ಕಾಣಬರುತ್ತದೆ. ಇದು ಗಾತ್ರದಲ್ಲಿ ಬಹುದೊಡ್ಡದು. ಸು. 9 ಮೀ ಉದ್ದ ಬೆಳೆಯುತ್ತದೆ. ಚೆನ್ನಾಗಿ ಬೆಳೆದ ಕಡಲಾಮೆ ಅರ್ಧ ಟನ್ ತೂಗುವುದುಂಟು. ಎಲ್ಲ ಆಮೆಗಳಲ್ಲಿರುವಂತೆ ಇದರಲ್ಲೂ ದೇಹವನ್ನು ಆವರಿಸಿದ ಒಂದು ಚಿಪ್ಪಿದೆ. ಚಿಪ್ಪಿನಲ್ಲಿ ಬೆನ್ನಿನ ಕಡೆ ಉಬ್ಬಿಕೊಂಡಿರುವ ಕ್ಯಾರಪೇಸ್ ಎಂಬ ಭಾಗವೂ ಹೊಟ್ಟೆಕಡೆ ಚಪ್ಪಟೆಯಾಗಿರುವ ಪ್ಲಾಸ್ಟ್ರಾನ್ ಎಂಬ ಭಾಗವೂ ಇವೆ. ಕ್ಯಾರಪೇಸಿನ ಮೇಲೆ ಮೃದುವಾದ ಚರ್ಮದ ಹೊದಿಕೆಯಿದೆ. ಅಲ್ಲದೆ ಅದು ಚಿಕ್ಕ ಚಿಕ್ಕ ಬಹುಭುಜಾಕೃತಿಯ ಅಸ್ಥಿಫಲಕಗಳಿಂದ ಕೂಡಿದೆ. ಇಂಥ ಫಲಕಗಳು ಇತರ ಆಮೆಗಳಲ್ಲಿ ಒಳಗಿನ ಪಕ್ಕೆಲುಬುಗಳಿಗೂ ಕಶೇರುಗಳಿಗೂ ಅಂಟಿಕೊಂಡಿರುತ್ತವೆ. ಆದರೆ ಇಲ್ಲಿ ಹಾಗಿಲ್ಲ. ಚಿಪ್ಪಿನಿಂದ ಹೊರಗೆ ಚಾಚಿಕೊಂಡಿರುವ ಎರಡು ಜೊತೆ ಕಾಲುಗಳು ದೋಣಿಯ ಹುಟ್ಟಿನಂತೆ ಮಾರ್ಪಾಟಾಗಿವೆ. ಇದರಿಂದ ಈಜಲು ಅನುಕೂಲ. ಕಾಲುಗಳ ಮೇಲೆಲ್ಲ ಹುರುಪೆಗಳ ಹೊದಿಕೆಯಿದೆ, ನಖಗಳಿಲ್ಲ. ದೇಹದ ಹಿಂತುದಿಯಲ್ಲಿ ಪುಟ್ಟ ಬಾಲವೊಂದಿದೆ. ಕಡಲಾಮೆ ಮಾಂಸಾಹಾರಿ. ಸೀಗಡಿ, ನಳ್ಳಿ, ಮೀನು ಮುಂತಾದವು ಇದರ ಆಹಾರ. ಮೊಟ್ಟೆಯಿಡಲು ಸಮುದ್ರದಂಡೆಗೆ ಬರುತ್ತದೆ. ಮೊಟ್ಟೆಯಿಡುವ ಕಾಲ ವಸಂತಋತು. ಮರಳಿನ ತೀರಕ್ಕೆ ಬಂದು ದೊಡ್ಡ ದೊಡ್ಡ ಗುಂಡಿಗಳನ್ನು ತೋಡಿ

ಅವುಗಳಲ್ಲಿ ಮೊಟ್ಟೆಯಿಟ್ಟು ಗುಂಡಿಗಳನ್ನು ಮುಚ್ಚಿ ನೀರಿಗೆ ಮರಳುತ್ತದೆ. ಬಿಸಿಲಿನ ಶಾಖದಿಂದಾಗಿ ಮೊಟ್ಟೆಗಳು ಒಡೆದು ಮರಿ ಆಮೆಗಳು ಹೊರಬರುತ್ತವೆ. ಇವು ನಿಧಾನವಾಗಿ ತೆವಳಿಕೊಂಡು ಹೋಗಿ ಸಮುದ್ರವನ್ನು ಸೇರಿ ತಮ್ಮ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. ಕೀಲೋನೈಯಿಡೀ ಕುಟುಂಬದ ಕಿಲೋನೀ ಜಾತಿಯ ಕಡಲಾಮೆಗಳು ವೆಸ್ಟ್ ಇಂಡೀಸ್, ಮಲೇಸಿಯ, ಪಶ್ಚಿಮ ಆಫ್ರಿಕ ಹಾಗೂ ಸಿಂಹಳ ದೇಶಗಳ ಸಮುದ್ರತೀರಗಳಲ್ಲಿ ಸಾಮಾನ್ಯ. ನೋಡುವುದಕ್ಕೆ ತೊಗಲಮೆಯಂತೆ ಕಂಡರೂ ಕೆಲವು ಲಕ್ಷಣಗಳಲ್ಲಿ ಅದಕ್ಕಿಂತ ಭಿನ್ನವಾಗಿವೆ. ಕಾಲುಗಳಲ್ಲಿ ಒಂದು ಅಥವಾ ಎರಡು ಉಗುರುಗಳಿರುವುದೂ ಕ್ಯಾರಪೇಸಿನ ಫಲಕಗಳು ಗಡುಸಾಗಿರುವುದೂ ಇವುಗಳ ಮುಖ್ಯ ಲಕ್ಷಣಗಳು. ಉಳಿದ ಜೀವನಕ್ರಮವೆಲ್ಲ ತೊಗಲಾಮೆ ಯಂತೆಯೇ. ಕಿಲೋನೀ ಇಂಬ್ರಿಕೇಟ ಎನ್ನುವ ಪ್ರಭೇದವನ್ನು ಸಾಮಾನ್ಯವಾಗಿ ಗರುಡಮೂಗಿನ ಆಮೆಯೆಂದು ಕರೆಯುತ್ತಾರೆ. ಇದು ಮಾಂಸಾಹಾರಿ. ಇದರ ಚಿಪ್ಪನ್ನು ಹಲವಾರು ಬಗೆಯ ವಸ್ತುಗಳನ್ನು ಮಾಡಲು ಉಪಯೋಗಿಸುತ್ತಾರೆ. ಕಿಲೋನೀ ಮೈಡಾಸ್ ಪ್ರಭೇದಕ್ಕೆ ಹಸಿರು ಆಮೆ ಎಂಬ ಸಾಮಾನ್ಯ ಹೆಸರಿದೆ. 3 ಮೀ ಉದ್ದ ಬೆಳೆಯುವ ಇದು ಸಸ್ಯಾಹಾರಿ ಇದರ ಕೊಬ್ಬು ಹಸಿರು ಬಣ್ಣಕ್ಕಿರುವುದರಿಂದ ಇದಕ್ಕೆ ಹಸಿರು ಆಮೆ ಎಂಬ ಹೆಸರು.

ಕಡಲಾಮೆಗಳು ತಾವು ಸಿಕ್ಕುವ ಸ್ಥಳಗಳ ನಿವಾಸಿಗಳಿಗೆ ಆಹಾರವಸ್ತುಗಳಾಗಿವೆ. ಇವುಗಳ ಮೊಟ್ಟೆಯನ್ನೂ ತಿನ್ನುತ್ತಾರೆ. ಹಸಿರು ಆಮೆಯ ಮಾಂಸದಿಂದ ಮಾಡಲಾಗುವ ಸಾರು (ಟರ್ಟಲ್ ಸೂಪ್) ಬಹು ಪ್ರಸಿದ್ಧವಾದ ಪೇಯವಸ್ತು. **(ನೋಡಿ–ಆಮೆ, ಆಮೆಯ–ಚಿಪ್ಪು, ನೀರಾಮೆ)** (ಬಿ.ಟಿ.ಎಸ್.)

**ಕಡಲುದರೋಡೆ :** ಸಾಮಾನ್ಯವಾಗಿ ಯಾವ ದೇಶದ ಹದ್ದಿಗೂ ಒಳಪಡದ ಸಮುದ್ರ ಪ್ರದೇಶದಲ್ಲಿ ಅನಧಿಕೃತವಾಗಿ ಹಡಗುಗಳ ಮೇಲೆ ನಡೆಸಿದ ದರೋಡೆ, ಹಿಂಸಾಕೃತ್ಯ (ಪೈರೆಸಿ).

ಕಡಲುದರೋಡೆಯ ಇತಿಹಾಸ ಸಮುದ್ರಯಾನದಷ್ಟೇ ದೀರ್ಘವಾದದ್ದು. ಮಾನವನ ಚರಿತ್ರೆಯ ನಾನಾ ಘಟ್ಟಗಳಲ್ಲಿ, ಬೇರೆ ಬೇರೆ ಪ್ರದೇಶಗಳಲ್ಲಿ, ಹೆಚ್ಚು ಕಡಿಮೆ ಪರಿಣಾಮಗಳಲ್ಲಿ ಇದರ ಹಾವಳಿ ಇದ್ದೇ ಇತ್ತು. ಗಗನಪಥದಲ್ಲಿ ಸಂಚರಿಸುತ್ತಿರುವ ವಿಮಾನದ ಚಾಲಕರಿಗೂ ಪ್ರಯಾಣಿಕರಿಗೂ ಬೆದರಿಕೆಯನ್ನೊಡ್ಡಿ ಅದರ ಉದ್ದಿಷ್ಟ ನೆಲೆ ತಪ್ಪಿಸಿ ಅದು ಬೇರೆಲ್ಲಿಗೋ ಹೋಗುವಂತೆ ಮಾಡುವ ವಿಮಾನಾಪಹರಣವೂ (ಹೈಜ್ಯಾಕಿಂಗ್) ಕಡಲು ದರೋಡೆಯ ಮಾದರಿಯೇ. ಆದರೆ ಅದರ ಉದ್ದೇಶ ಬೇರೆ ಇರಬಹುದು. ಕಡಲು ದರೋಡೆಗೆ ಇಂಗ್ಲಿಷ್ ಪರ್ಯಾಯ ಪದವಾದ ಪೈರೆಸಿಯೆಂಬುದರಲ್ಲಿ ವಿಮಾನಾಪಹರಣವೂ ಸೇರಿದೆ.

ಗ್ರೀಕ್ ಮತ್ತು ರೋಮನ್ ಆಧಿಪತ್ಯಗಳ ಕಾಲದಲ್ಲಿ ಮೆಡಿಟರೇಯನ್ ಸಮುದ್ರ ದರೋಡೆಯ ಕ್ಷೇತ್ರವಾಗಿತ್ತು. ಸಮುದ್ರವ್ಯಾಪಾರ ನಡೆಯುತ್ತಿದ್ದೆಡೆಯಲ್ಲೆಲ್ಲ ದರೋಡೆಯ ಅಂಜಿಕೆ ಆಗಿನ ಕಾಲದಲ್ಲಿ ಸಾಮಾನ್ಯವಾಗಿತ್ತು. ಹೋಮರನ ಒಡಿಸ್ಸಿಯಲ್ಲಿ ಕಡಲು ಸಂಚಾರಿಗಳ ಉಲ್ಲೇಖವಿದೆ. ಜ್ಯೂಲಿಯಸ್ ಸೀಸರ್ ಚಿಕ್ಕವನಿದ್ದಾಗ ದರೋಡೆಗಾರರಿಗೆ ಸೆರೆಸಿಕ್ಕಿದ್ದು, ಹಣ ಕೊಟ್ಟ ಮೇಲೆ ಅವನ ಬಿಡುಗಡೆಯಾಯಿತಂತೆ. ಅನಂತರ ಆತ ದಂಡೆತ್ತಿ ಹೋಗಿ ಆ ಹಡಗನ್ನಾಕ್ರಮಿಸಿಕೊಂಡು ಅದರ ಚಾಲಕರನ್ನೆಲ್ಲ ಸಿಲುಬೆಗೇರಿಸಿದನೆಂದು ಉಲ್ಲೇಖವಿದೆ. ಪ್ರಾಚೀನ ಭಾರತದ ಉತ್ಕರ್ಷೆಯ ಕಾಲದಲ್ಲಿ, ಅದು ನೆರೆಯ ಸಾಗರೋತ್ತರ ನಾಡುಗಳೊಡನೆ ವಾಣಿಜ್ಯಕ ಸಾಂಸ್ಕೃತಿಕ ಮತ್ತು ರಾಜಕೀಯ ಸಂಪರ್ಕ ಹೊಂದಿದ್ದಾಗಲೂ ಕಡಲ್ಗಳ್ಳರ ಹಾವಳಿ ಇದ್ದೇ ಇತ್ತು. ಮಧ್ಯಯುಗದಲ್ಲಿ ಯುರೋಪಿನ ಉತ್ತರದ ವೈಕಿಂಗರೂ ದಕ್ಷಿಣದ ಮೂರರೂ ಕಡಲುದರೋಡೆಯಲ್ಲಿ ನಿರತರಾಗಿದ್ದರು. ಪೌರಸ್ತ್ಯ ದೇಶಗಳಿಂದ ಕೊಂಡ ಸರಕುಗಳನ್ನು ಹೊತ್ತ ಹಡಗುಗಳು ದರೋಡೆಗೆ ಒಳಗಾಗುತ್ತಿದ್ದುದಂತೂ ಸಾಮಾನ್ಯವಾಗಿತ್ತು. 16ನೆಯ ಶತಮಾನದಲ್ಲಿ ವಾಣಿಜ್ಯವೂ ಕಡಲು ದರೋಡೆಯೂ ಒಟ್ಟೊಟ್ಟಿಗೇ ಬೆಳೆದು ಬಂದುವೆನ್ನಬಹುದು. ಅರಬೀಯರ ಕೈಯಲ್ಲಿದ್ದ ಈ ವ್ಯಾಪಾರವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಸಲುವಾಗಿಯೇ ಯುರೋಪಿನ ರಾಷ್ಟ್ರಗಳು ಧಾರ್ಮಿಕ ಯುದ್ಧದ ಹೆಸರಿನಲ್ಲಿ ದರೋಡೆ ನಡೆಸಿದುವೆಂಬುದಕ್ಕೆ ಅನೇಕ ಚಾರಿತ್ರಿಕ ಆಧಾರಗಳುಂಟು. ಐರೋಪ್ಯ ರಾಷ್ಟ್ರಗಳ ಕೈಗಾರಿಕಾ ಕ್ರಾಂತಿಯ ಯಶಸ್ಸಿಗೆ ಅನುವಾಗಿ ಬಂದ ಬಂಡವಾಳ ವಾದರೂ ಕೊಳ್ಳೆ. ಕಡಲುದರೋಡೆ ಮುಂತಾದವುಗಳಿಂದಲೇ ಹೆಚ್ಚಾಗಿ ಬೆಳೆಯಿತೆಂಬುದು ಇತಿಹಾಸದಲ್ಲಿ ಗುರುತಿಸಬಹುದಾದ ಸತ್ಯ.

ಪುನರುಜ್ಜೀವನ ಕಾಲದಲ್ಲೂ ಅನಂತರದಲ್ಲೂ ಯುರೋಪಿನಲ್ಲಿ ಪದೇ ಪದೇ ಸಂಭವಿಸುತ್ತಿದ್ದ ಯುದ್ಧಗಳಲ್ಲಿ ಹಲವು ಹಡಗುಗಳು ನಾಶವಾಗುತ್ತಿದ್ದುವು. ಇದರಿಂದ ಕೆಲಸ ಕಳೆದುಕೊಂಡ ನಾವಿಕರನ್ನು ದರೋಡೆಗಾರರು ತಮ್ಮತ್ತ ಸೆಳೆದುಕೊಳ್ಳುತ್ತಿದ್ದುದುಂಟು. ಅವರಿಗೆ ಸಂಬಳವಿರುತ್ತಿರಲಿಲ್ಲ. ಕೊಳ್ಳೆಗೆ ಒಳಗಾದ ಹಡಗಿನ ಸಂಪತ್ತಿನಲ್ಲಿ ಅವರಿಗೊಂದು ಭಾಗವಿರುತ್ತಿತ್ತು. ಪರಿಸ್ಥಿತಿಯ ಒತ್ತಡದಿಂದಲೋ ದರೋಡೆಗಾರರ ಕೈಯಿಂದ ಪ್ರಾಣವನ್ನುಳಿಸಿ ಕೊಳ್ಳುವುದಕ್ಕಾಗಿಯೋ ತಾವೂ ಈ ವೃತ್ತಿ ಅವಲಂಬಿಸಬೇಕಾಯಿತೆಂಬುದಾಗಿಯೇ ಅವರು ಸಿಕ್ಕಿಬಿದ್ದ ಸಂದರ್ಭದಲ್ಲಿ ಕೈಫಿಯತ್ತು ಕೊಟ್ಟಿರುವುದುಂಟು.

ಹಡಗಿನ ಪ್ರಯಾಣಿಕರಲ್ಲೇ ಕೆಲವರು ದಂಗೆಯೆದ್ದು, ವಿರೋಧಿಸುವ ಅಧಿಕಾರಿಗಳನ್ನೂ ಚಾಲಕ ಸಿಬ್ಬಂದಿಯನ್ನೂ ಕೊಂದು, ಅವರ ದೇಹಗಳನ್ನು ಕಡಲಿನ ಪಾಲು ಮಾಡಿ, ಹಡಗನ್ನು ಕೊಂಡೊಯ್ದು, ಸರಕುಗಳನ್ನೆಲ್ಲ ಕೊಳ್ಳೆ ಹೊಡೆದು ದೋಣಿಗಳಲ್ಲಿ ಪರಾರಿಯಾಗುತ್ತಿದ್ದುದೂ ಉಂಟು. ಇನ್ನೊಂದು ದೇಶದಿಂದಾದ ತಪ್ಪಿಗೆ ಮುಯ್ಯಾಗಿಯೋ ಶತ್ರುದೇಶಕ್ಕೆ ಪೆಟ್ಟು ತಾಗಿಸಲೋ ಸರ್ಕಾರವೇ ಖಾಸಗಿ ಒಡೆತನದ ಶಸ್ತ್ರಸಜ್ಜಿತ ಹಡಗಿಗೆ ಕಡಲುದರೋಡೆ ಮಾಡಲು ಅನುಜ್ಞೆ ಕೊಡುತ್ತಿದ್ದುದೂ ಸಾಮಾನ್ಯವಾಗಿತ್ತು. ಇದು ಬಲು ಲಾಭಪ್ರದ ಉದ್ಯಮವಾಗಿದ್ದುದರಿಂದ ಶಾಂತಿ ಕಾಲದಲ್ಲೂ ಮುಂದುವರಿಯುತ್ತಿತ್ತು. ರಾಣಿ ಎಲಿಜಬೆತಳ ಕಾಲದಲ್ಲಿ, ಬ್ರಿಟನಿಗೂ ಸ್ಪೇನಿಗೂ ಯುದ್ಧ ನಡೆಯುತ್ತಿದ್ದಾಗ, ಮೆಕ್ಸಿಕೊದಿಂದ ಕ್ಯಾರಿಬಿಯನ್ ಪ್ರದೇಶಕ್ಕೆ ಸಾಗುತ್ತಿದ್ದ ಸಂಪದ್ಭರಿತ ಸ್ಪೇನಿಷ್ ಹಡಗುಗಳನ್ನು ಕೊಳ್ಳೆ ಹೊಡೆಯಲಾಗುತ್ತಿತ್ತು. ಈ ಬಗೆಯ ಖಾಸಗಿ ಸಾಹಸಕ್ಕೂ ದರೋಡೆಗೂ ನಡುವೆ ಗೆರೆ ಎಳೆಯುವುದೇ ಕಷ್ಟವೆಂಬ ಪರಿಸ್ಥಿತಿ ಒದಗಿತು. ಶತ್ರುಹಡಗುಗಳನ್ನು ಕೊಳ್ಳೆ ಹೊಡೆದಾಗ ಅದರಲ್ಲೊಂದು ಭಾಗವನ್ನು ಬಹುಮಾನವಾಗಿ ನೌಕಾಪಡೆಯವರಿಗೆ ಕೊಡುವ ಪದ್ಧತಿಯಿಂದ ಆಗುತ್ತಿದ್ದ ಕೆಡುಕಂತೂ ಅಪಾರ. ವ್ಯಾಪಾರದ ಆಸೆಯಿಂದ ಪೂರ್ವಪ್ರದೇಶಗಳಿಗೆ ಬಂದು ರಾಜ್ಯಕಟ್ಟುವ ಕಾರ್ಯದಲ್ಲಿ ನಿರತವಾಗಿ ಪರಸ್ಪರ ಹೋರಾಟಗಳಲ್ಲಿ ತೊಡಗಿದ ಐರೋಪ್ಯ ವ್ಯಾಪಾರ ಸಂಸ್ಥೆಗಳಲ್ಲಿನ ಕೆಲಸಗಾರರಿಗೆ ಕಡಲು ದರೋಡೆಯೂ ಒಂದು ಲಾಭಕರ ಹವ್ಯಾಸವೇ ಆಗಿ ಪರಿಣಮಿಸಿತು. ಶತ್ರುಗಳಿಗೆ ಸೇರಿದ ಹಡಗುಗಳನ್ನು ಹಿಡಿದು, ಆ ಕೆಲಸ ಮಾಡಿದ್ದಕ್ಕಾಗಿ ಬಹುಮಾನ ಕೊಡಬೇಕೆಂದು ಕೇಳಿಕೆ ಮುಂದಿಡುವ ನೌಕಾಧಿಕಾರಿಗಳ ಅಭ್ಯಾಸದಿಂದ ಸರ್ಕಾರಗಳು ಪೇಚಿಗೆ ಸಿಗುತ್ತಿದ್ದುದರಿಂದ ಈ ಪದ್ಧತಿಯನ್ನು ತೊಡೆದು ಹಾಕುವ ಕ್ರಮಗಳು ಕಳೆದ ಶತಮಾನದಲ್ಲೂ ಈ ಶತಮಾನದಲ್ಲೂ ಅನೇಕ ಪಾಶ್ಚಾತ್ಯದೇಶಗಳಲ್ಲಿ ಜಾರಿಗೆ ಬಂದುವು.

ಕಡಲು ದರೋಡೆ ಒಂದು ಅಪಕೃತ್ಯವೆಂದು ಇಂದು ಪರಿಗಣಿಸಲಾಗಿದೆ. ಯಾವ ದೇಶದ ಸಾರ್ವಜನಿಕ ಹಡಗೇ ಆಗಿರಲಿ ದರೋಡೆ ಹಡಗೊಂದನ್ನು ಕಂಡಾಗ ಅದನ್ನು ಹಿಡಿದು, ಬಂದರಿಗೆ ಕರೆದೊಯ್ದು, ಅದರ ಸಿಬ್ಬಂದಿಯವರು ಯಾವ ರಾಷ್ಟ್ರದವರೇ ಆಗಿದ್ದರೂ ಅವರನ್ನು ವಿಚಾರಣೆಗೆ ಗುರಿಪಡಿಸಿ, ಅವರು ತಪ್ಪಿತಸ್ಥರೆಂದು ಕಂಡು ಬಂದರೆ ಶಿಕ್ಷಿಸಿ ಹಡಗನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ. ರಾಜಕೀಯ ದ್ವೇಷವಿಲ್ಲದೆ ಸ್ವಂತ ಲಾಭಕ್ಕಾಗಿ ದರೋಡೆ ಮಾಡುವವರು ಮಾನವ ಜನಾಂಗದ ಶತ್ರುಗಳೆಂದು ಭಾವಿಸಲಾಗಿದೆ. ಹಡಗು ದರೋಡೆಗೆ ಮರಣದಂಡನೆ ಅಥವಾ ಅಜೀವ ಕಾರಾಗೃಹ ಶಿಕ್ಷೆ ವಿಧಿಸುವ ಕಾನೂನುಗಳು ಅನೇಕ ರಾಷ್ಟ್ರಗಳಲ್ಲಿ ಜಾರಿಯಲ್ಲಿವೆ. ಕಾನೂನುಬಾಹಿರ ಯುದ್ಧ, ಬಂಡಾಯ, ಹಡಗು ದರೋಡೆ, ಗುಲಾಮ ವ್ಯಾಪಾರ ಇವೆಲ್ಲವೂ ಏಕರೀತಿಯ ಅಪರಾಧಗಳೆಂದು ವಿಶೇಷ ಅಂತಾರಾಷ್ಟ್ರೀಯ ಕೌಲುಗಳ ಮೂಲಕ ಪರಿಗಣಿಸಲಾಗಿದೆ. ಎಚ್ಚರಿಕೆ ನೀಡದೆ ವ್ಯಾಪಾರದ ಹಡಗುಗಳನ್ನು ಜಲಾಂತರ್ಗಾಮಿ ನೌಕೆಗಳಿಂದ ನಾಶಪಡಿಸುವುದು ಹಡಗುದರೋಡೆಯಂತೆಯೇ ಅಪರಾಧವೆಂದು ಪರಿಗಣಿಸಬೇಕೆಂದೂ ಅಂಥವನ್ನು ನಾಶಪಡಿಸಬೇಕೆಂದೂ ಒಡಂಬಡಿಕೆಯಿರುವುದಾದರೂ ಈ ಬಗ್ಗೆ ಸ್ಪಷ್ಟವಾಗಿ ಏನನ್ನೂ ಹೇಳುವುದು ಸಾಧ್ಯವಿಲ್ಲ. ಏಕೆಂದರೆ ಜಲಾಂತರ್ಗಾಮಿ ನೌಕೆಗಳು ಈ ಬಗೆಯ ಕಾರ್ಯದಲ್ಲಿ ತೊಡಗುವುದು ಸಾಮಾನ್ಯವಾಗಿ ಯುದ್ಧ ಸಂದರ್ಭಗಳಲ್ಲಿ; ಸರ್ಕಾರದ ಆದೇಶವಿದ್ದಾಗ ಮಾತ್ರ. (ಐ.ಆರ್.)

**ಕಡಲುನಕ್ಷತ್ರಗಳು : (ನೋಡಿ– ಆಸ್ಟೆರಾಯ್ಡಿಯ)**

**ಕಡಲೆ :** ಲೆಗ್ಯುಮಿನೋಸೀ ಕುಟುಂಬದ ಸೈಸರ್ ಆರಿಯಿಟಿನಮ್ ಎಂಬ ವೈಜ್ಞಾನಿಕ ಹೆಸರಿನ ವಾರ್ಷಿಕ ಸಸ್ಯ. ಬಹುಸಂಖ್ಯಾತ ಶಾಕಾಹಾರಿಗಳೇ ಇರುವ ಭಾರತದಲ್ಲಿ, ಜನರ ಸಸಾರಜನಕದ (ಪ್ರೋಟೀನ್) ಪೂರೈಕೆ ಮಾಡುವಲ್ಲಿ ದ್ವಿದಳ ಧಾನ್ಯಗಳಾದ ಕಡಲೆ ಮತ್ತು ತೊಗರಿಗಳ ಪಾತ್ರ ಬಹಳ ಹಿರಿದು. ಅತಿ ಪುರಾತನ ಕಾಲದಿಂದಲೂ ಬಳಕೆಯಲ್ಲಿರುವ ಕಡಲೆಯನ್ನು, ಏಷ್ಯ ಮತ್ತು ಯುರೋಪ್ ಖಂಡಗಳ ಹಲವಾರು ಭಾಗಗಳಲ್ಲಿ ಬೆಳೆಯುತ್ತಾರೆ. ಇದರ ಮೂಲಸ್ಥಾನ ಬಹುಶಃ ಮೆಡಿಟರೇನಿಯನ್ ಪ್ರದೇಶ.

ಮುಖ್ಯವಾಗಿ ಉತ್ತರ ಭಾರತದ ಬೆಳೆಯಾದ ಕಡಲೆಯನ್ನು ಭಾರತದ ಸು. 10 ದಶಲಕ್ಷ ಹೆಕ್ಟೇರುಗಳಷ್ಟು ಜಮೀನಿನಲ್ಲಿ ಬೆಳೆಯಲಾಗುತ್ತಿದೆ. 1967–68ನೆಯ ಸಾಲಿನಲ್ಲಿ 71,05,000 ಹೆಕ್ಟೇರುಗಳಷ್ಟು ಭೂಮಿಯಲ್ಲಿ ಬೆಳೆಯಲಾದ ಇದರ ಉತ್ಪನ್ನ ಸು. 43,09,000 ಟನ್ನುಗಳಷ್ಟಿತ್ತು. ಮೈಸೂರು ರಾಜ್ಯದಲ್ಲಿ ಕೂಡ ಕಡಲೆಗೆ ಸಾಕಷ್ಟು ಮಹತ್ತ್ವವಿದೆ. 1967–68ನೆಯ ಮೈಸೂರು ರಾಜ್ಯದಲ್ಲಿ ಕೂಡ ಕಡಲೆಯನ್ನು ಬೆಳೆದ ಪ್ರದೇಶ ಸು. 1,49,000 ಹೆಕ್ಟೇರುಗಳು ಮತ್ತು ಅದರ ಉತ್ಪನ್ನ 67,000 ಟನ್ನುಗಳು.

ದ್ವಿದಳ ಧಾನ್ಯಗಳ ಸಸ್ಯವರ್ಗಕ್ಕೆ ಸೇರಿದ ಕಡಲೆಯನ್ನು ಬೆಳೆಯಲು ಇಂಥದೇ ಮಣ್ಣು ಬೇಕೆಂಬ ಕಟ್ಟಳೆಯೇನೂ ಇಲ್ಲವಾದರೂ ನೀರನ್ನು ಹಿಡಿದಿಡುವ ಎರೆಭೂಮಿಯಲ್ಲಿ ಹೆಚ್ಚು ಉತ್ಪನ್ನ ತೆಗೆಯಬಹುದು ಎನ್ನುವುದು ಅನುಭವಸಿದ್ಧವಾದ ಮಾತು. ಉತ್ತರ ಭಾರತದಲ್ಲಿ ಮರಳುಮಿಶ್ರಿತ ಮೆಕ್ಕಲು ಮಣ್ಣಿನಲ್ಲಿ (ಅಲ್ಯೂವಿಯಲ್) ಬೆಳೆಯುತ್ತಾರೆ.

ಬಿತ್ತುವಕಾಲ ಅಕ್ಟೋಬರ್–ನವೆಂಬರ್ ತಿಂಗಳು. ಚಳಿಗಾಲದ ಬೆಳೆಯಾದ್ದರಿಂದ ಮುಖ್ಯ ಬೆಳೆಯಾಗಿಯೊ ಇಲ್ಲವೆ ಬತ್ತ ರಾಗಿಗಳ ಅನಂತರ ಎರಡನೆಯ ಬೆಳೆಯಾಗಿಯೋ ಬಿತ್ತಬಹುದು. ಮೈಸೂರು ರಾಜ್ಯದಲ್ಲಿ ಇದನ್ನು ಸಾಮಾನ್ಯವಾಗಿ ಉತ್ತರ ಕರ್ಣಾಟಕದ



ಕಡಲೆ ಗಿಡ

ಕಪ್ಪು ಮಣ್ಣಿನ ಎರೆಭೂಮಿಯಲ್ಲಿ ಮಾತ್ರ ಬಿತ್ತುತ್ತಾರೆ. ಸು. 30 ಸೆಂಮೀ ಅಂತರದಲ್ಲಿ ತೂರಿಣಿ ಅಥವಾ ಸಡ್ಡೆಯ ಮೂಲಕ ಸು. 3–5 ಸೆಂಮೀ ಆಳದಲ್ಲಿ ಬಿತ್ತಿದ ಈ ಬೆಳೆ 3–$3\frac{1}{2}$ ತಿಂಗಳ ಅನಂತರ ಕಟಾವಿಗೆ ಬರುತ್ತದೆ. ಒಂದು ಎಕರೆ ಭೂಮಿಯಲ್ಲಿ ಸಂಪೂರ್ಣವಾದ ಕಡಲೆ ಬೆಳೆಯನ್ನು ಬೆಳೆಯಲು ಸು. 20 ಕಿಗ್ರಾಂಗಳಷ್ಟು ಬೀಜ ಬೇಕಾಗುತ್ತದೆ. ಒಣಬೇಸಾಯಕ್ಕೆ

ಕಡಲೆಕಾಳುಗಳು

ಅನುಕೂಲವಾದ ಬೆಳೆಯಾದ್ದರಿಂದ ಇದನ್ನು ನೀರಾವರಿಯಲ್ಲಿ ಬೆಳೆಯುವುದು ಬಹಳ ಅಪರೂಪ. ಮೊಳೆಯುವ ಸಮಯದಲ್ಲಿ ಸಾಕಷ್ಟು ನೀರು ಇದ್ದರೆ, ಮೊಳೆತ ಅನಂತರ ಅದು ಹೇಗೋ ಬೆಳೆದುಕೊಳ್ಳುತ್ತದೆ. ಇದಕ್ಕೆ ನೆಲವನ್ನು ಉತ್ತಮವಾಗಿ ತಯಾರಿಸಬೇಕೆಂಬ ಅಗತ್ಯವೂ ಇಲ್ಲ. ಸುತ್ತಲೂ ಹರಡಿಕೊಂಡು ತೀವ್ರವಾಗಿ ಬೆಳೆಯುವ ಗುಣದಿಂದಾಗಿ ಕಳೆಯನ್ನು ತೆಗೆಯದಿದ್ದರೂ ತಾನೇ ಅದನ್ನು ಹತೋಟಿಯಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಆದ್ದರಿಂದ ಕಡಲೆಯ ಹೊಲಗಳಲ್ಲಿ ಕಳೆಗಳ ತೊಂದರೆ ಅಷ್ಟಾಗಿ ಕಂಡುಬರಲಾರದು. ಆದರೂ ಒಂದೆರಡು ಸಲ ಎಡೆ ಹೊಡೆಯುವುದರಿಂದ ಮಳೆಯ ನೀರನ್ನು ಸಂಗ್ರಹಿಸಿ, ಗಿಡಗಳಿಗೆ ಉಪಯೋಗವಾಗುವಂತೆ ಮಾಡಬಹುದು. ಸಾಮಾನ್ಯವಾಗಿ ಇದಕ್ಕೆ ಗೊಬ್ಬರದ ಅವಶ್ಯಕತೆ ಇಲ್ಲ. ಆದರೆ ರಂಜಕಯುಕ್ತ ಗೊಬ್ಬರಗಳನ್ನು ಹಾಕುವುದರಿಂದ ಉತ್ತಮವಾದ ಬೆಳೆ ತೆಗೆಯಬಹುದು ಎಂದು ಪ್ರಯೋಗಗಳು ತೋರಿಸಿವೆ.

ಕಡಲೆಯ ಗಿಡಗಳು 0.3048–0.6096 ಮೀ ಗಳಷ್ಟು ಎತ್ತರವಾಗಿ ಬೆಳೆಯುತ್ತಿದ್ದು, ಬಹಳ ಕವಲೊಡೆಯುವ ಸಾಮರ್ಥ್ಯ ಪಡೆದಿವೆ. ಎಲೆಗಳ ಬಣ್ಣ ನೀಲಿ ಹಸುರು. ಒಂದೇ ಪತ್ರಕಾಂಡದ ಮೇಲೆ, ಹಲವಾರು ಉಪಪತ್ರಗಳಿದ್ದು ಅವು ಅಂಡಾಕಾರವಾಗಿವೆ. ಎಲೆಗಳ ಅಂಚು ಗರಗಸದಂತೆ. ಪ್ರತಿಯೊಂದು ಉಪಪತ್ರದ ಅಳತೆ ಸು. 6 ಮಿಮೀ ಉದ್ದ ಮತ್ತು 4 ಮಿಮೀ ಅಗಲ ಇದೆ. ಎಲೆಗಳ ಕಂಕುಳಗಳಲ್ಲಿ ಕಂದು ಮತ್ತು ನೀಲಿ ಮಿಶ್ರಿತ ಬಣ್ಣದ ಒಂದೊಂದೇ ಹೂಗಳನ್ನು ಕಾಣಬಹುದು. ಕಾಯಿಗಳು ಸು. 1" ಉದ್ದವಿದ್ದು, ಒಂದು ಅಥವಾ ಎರಡು ಕಾಳುಗಳನ್ನು ಹೊಂದಿವೆ.

ತಾಯಿಬೇರಿನ ಪ್ರಕಾರಕ್ಕೆ ಸೇರಿದ ಈ ಗಿಡದ ಬೇರುಗಳ ಮೇಲೆ ಚಿಕ್ಕ ಚಿಕ್ಕ ಗಂಟುಗಳನ್ನು (ನಾಡ್ಯೂಲ್) ಕಾಣಬಹುದು. ಈ ಗಂಟುಗಳಲ್ಲಿ ಇರುವ ಏಕಾಣುಜೀವಿಗಳು (ಬ್ಯಾಕ್ಟೀರಿಯ) ಹವೆಯಲ್ಲಿರುವ ಸಾರಜನಕವನ್ನು ತೆಗೆದುಕೊಂಡು. ಅದನ್ನು ಸಸ್ಯಗಳು ಸುಲಭವಾಗಿ ಹೀರಿಕೊಳ್ಳುವಂತೆ ರೂಪಾಂತರಿಸುತ್ತವೆ. ಇದರಿಂದಾಗಿ, ಕಡಲೆ ಮತ್ತು ಇತರ ದ್ವಿದಳ ಧಾನ್ಯಗಳನ್ನು ಬೆಳೆದ ಮೇಲೆ ಭೂಮಿಯ ಫಲವತ್ತು ಹೆಚ್ಚುತ್ತದೆ. ಇದನ್ನು ಧಾನ್ಯಸಸ್ಯಗಳೊಡನೆ ಮಿಶ್ರ ಬೆಳೆಯಾಗಿ ಬೆಳೆದಾಗ, ಧಾನ್ಯಗಳ ಇಳುವರಿಯನ್ನೂ ಹೆಚ್ಚಿಸಬಹುದಾದ್ದರಿಂದ, ಉತ್ತರಭಾರತದಲ್ಲಿ ಕಡಲೆಯನ್ನು ಗೋದಿ ಮತ್ತು ಜವೆಗೋದಿಗಳೊಡನೆ ಪರ್ಯಾಯ ಬೆಳೆಯಾಗಿ ಬೆಳೆಯುವ ಪದ್ಧತಿಯಿದೆ.

ಕಡಲೆಯ ಗಿಡಗಳನ್ನು ಬೆಳಗಿನ ಹೊತ್ತಿನಲ್ಲಿ ಮುಟ್ಟಿದರೆ, ಕೈಗೆ ಒಂದು ರೀತಿಯ ಜಿಗುಟು ಹತ್ತುತ್ತದೆ. ಇದು ಈ ಗಿಡಗಳಿಂದ ಹೊರಬರುವ ಮ್ಯಾಲಿಕ್ ಮತ್ತು ಆಕ್ಸಾಲಿಕ್ ಆಮ್ಲಗಳಿಂದ ಉಂಟಾಗುವಂಥದು. ಗಿಡಗಳ ಮೇಲೆ ರಾತ್ರಿಯ ಹೊತ್ತು ಮಸ್ಲಿನ್‌ಬಟ್ಟೆಯನ್ನು ಹರವಿ ಇಟ್ಟರೆ, ಬೆಳಗ್ಗೆ ಆ ಬಟ್ಟೆಗೆ ಅಂಟಿಕೊಂಡ ಆಮ್ಲವನ್ನು ನೀರಿನಲ್ಲಿ ನೆನೆಸಿ ಬೇರ್ಪಡಿಸಬಹುದು. ಹೆಕ್ಟೇರಿಗೆ 4–$4^1/_2$ ಕಿಲೊಗ್ರಾಂಗಳಷ್ಟು ದೊರೆಯಬಹುದಾದ ಈ ಆಮ್ಲಗಳ ಮಿಶ್ರಣವನ್ನು ಅಜೀರ್ಣ ಮತ್ತಿತರ ಉದರರೋಗಗಳಿಗೆ ಉಪಯೋಗಿಸುತ್ತಾರೆ.



ಎಡಗಡೆಯದು : ಒಂದು ಕಾಳಿರುವ ಬುಡ್ಡು. ಮಧ್ಯದ್ದು: ಎರಡು ಕಾಳುಗಳಿರುವ ಬುಡ್ಡು, ಬಲಗಡೆಯದು: ಬುಡ್ಡಿನ ಹೊರನೋಟ

ಕಡಲೆಯ ಬೀಜಗಳ ಬಣ್ಣದ ಆಧಾರದ ಮೇಲೆ ನಾಲ್ಕು ಬೇರೆ ಬೇರೆ ಜಾತಿಗಳನ್ನು ಗುರುತಿಸಬಹುದು. ಕಂದು, ಹಳದಿ, ಕರಿ ಮತ್ತು ಬಿಳಿಯ ಬಣ್ಣದ ಕಡಲೆಗಳಲ್ಲಿ ಬಿಳಿಯ ಕಡಲೆಯ ಬೀಜಗಳು ದೊಡ್ಡವಾಗಿರುತ್ತವೆ. ಆದರೆ ಈ ಜಾತಿ ಎಲ್ಲ ಪ್ರದೇಶಗಳಲ್ಲಿಯೂ ಚೆನ್ನಾಗಿ ಬೆಳೆಯಲಾರದು. ನಮ್ಮ ದೇಶದ ಬೇರೆ ಬೇರೆ ಪ್ರದೇಶಗಳಿಗೆ ಅಲ್ಲಿಯ ಹವಾಗುಣ ಮತ್ತು ನೆಲದ ಗುಣಗಳನ್ನವಲಂಬಿಸಿ ಬೇರೆ ಬೇರೆ ಜಾತಿಯ ಕಡಲೆಗಳನ್ನು ಬಿತ್ತಲು ಶಿಫಾರಸು ಮಾಡಲಾಗುತ್ತದೆ. ಮಳೆಯನ್ನೇ ಸಂಪೂರ್ಣವಾಗಿ ಅವಲಂಬಿಸಿ ಬೆಳೆದ ಬೆಳೆಯಿಂದ ಪ್ರತಿ ಹೆಕ್ಟೇರಿಗೆ 500–600 ಕಿಗ್ರಾಂಗಳಷ್ಟು ಕಾಳು ಮತ್ತು 800–1000 ಕಿಗ್ರಾಂಗಳಷ್ಟು ಹೊಟ್ಟು ಬರುತ್ತದೆ. ನೀರಾವರಿಯಲ್ಲಿ ತೆಗೆದುಕೊಂಡಾಗ 1,500–2,000 ಕಿಗ್ರಾಂ ಕಾಳುಗಳನ್ನು ಉತ್ಪಾದಿಸಲು ಸಾಧ್ಯ.

ಕಡಲೆಯ ಗಿಡಗಳು ಸಿಡಿರೋಗ (ವಿಲ್ಟ್) ಎಂಬ ಒಂದು ರೋಗಕ್ಕೆ ತುತ್ತಾಗುವುದು ಬಹಳ. ನಮ್ಮ ರಾಜ್ಯದಲ್ಲಿ ಪ್ರಮುಖವಾಗಿ ಬೆಳೆಯುವ ಚಾಫಾ ಎಂಬ ಜಾತಿಯ ಕಡಲೆಗೆ ಈ ರೋಗವನ್ನು ತಡೆಯುವ ಸಾಮರ್ಥ್ಯವಿಲ್ಲ. ರೋಗ ನಿರೋಧ ಶಕ್ತಿಯಿರುವ ಜಾತಿಗಳನ್ನು

ಕಂಡುಹಿಡಿಯಲು ಸಸ್ಯಶಾಸ್ತ್ರಜ್ಞರು ಬಹುವಾಗಿ ಪ್ರಯತ್ನಿಸುತ್ತಿದ್ದು, ಈಗ ಮೈಸೂರು ರಾಜ್ಯದಲ್ಲಿ ಅಣ್ಣಿಗೇರಿ ಕಡಲೆ ಎಂಬ ಒಂದು ಜಾತಿಯನ್ನು ಬಿಡುಗಡೆ ಮಾಡಲಾಗಿದೆ. ಇದು ಪ್ರಚಲಿತವಾಗಿರುವ ಇತರ ಜಾತಿಗಳಿಗಿಂತ ಶೇ. 25 ಹೆಚ್ಚು ಇಳುವರಿ ಕೊಡುವುದಲ್ಲದೆ ಸಿಡಿರೋಗವನ್ನು ಸಾಕಷ್ಟು ಮಟ್ಟಿಗೆ ಪ್ರತಿರೋಧಿಸಬಲ್ಲರು.

ಕಡಲೆ ಬಹಳ ಪುಷ್ಟಿಕರವಾದ ಆಹಾರ. ಇದರಲ್ಲಿ 20% ರಷ್ಟು ಸಾರಜನಕ ಮತ್ತು ಶೇ. 61ರಷ್ಟು ಶರ್ಕರ ಪಿಷ್ಟಾದಿಗಳಿವೆ. ಖನಿಜ ಪದಾರ್ಥಗಳಾದ ಕ್ಯಾಲ್ಸಿಯಂ (149 ಮಿಗ್ರಾಂ/100 ಗ್ರಾಂ) ಮತ್ತು ಕಬ್ಬಿಣ (7.2 ಮಿಗ್ರಾಂ/100 ಗ್ರಾಂ)ಗಳಲ್ಲದೆ ಸಾಕಷ್ಟು ಪ್ರಮಾಣದಲ್ಲಿ ವಿಟಮಿನ್ ಎ ಕೂಡ ಇದೆ. ಈ ಕಾಳುಗಳಲ್ಲಿರುವ ಸಸಾರಜನಕದಲ್ಲಿ ಆವಶ್ಯಕವಾಗಿರುವ ಎಲ್ಲ ಅಮೈನೊ ಆಮ್ಲಗಳು ದೊರೆಯುತ್ತಿದ್ದರೂ ಟ್ರಿಪ್ಟೋಫೇನ್ ಮತ್ತು ಗಂಧಕಯುಕ್ತ ಅಮೈನೊ ಆಮ್ಲಗಳ ಪ್ರಮಾಣ ಮಾತ್ರ ಕಡಿಮೆಯಾಗಿದೆ.

ಕಡಲೆಯ ಉಪಯೋಗ ಬಹಳ. ಗಿಡಗಳು ಇನ್ನೂ ಚಿಕ್ಕವಾಗಿರುವಾಗಲೇ ಅವುಗಳ ಚಿಗುರನ್ನು ಮುರಿದು ತೊಪ್ಪಲು ಪಲ್ಲೆಯಾಗಿ ಇಲ್ಲವೆ ಹಾಗೆಯೇ ಒಣಗಿಸಿ ಬಿಟ್ಟು ಕೆಲವು ದಿನಗಳ ಅನಂತರ ಉಪಯೋಗಿಸುತ್ತಾರೆ. ಕಾಳುಗಳು ಇನ್ನೂ ಪೂರ್ತಿಯಾಗಿ ಬಲಿಯುವುದಕ್ಕೆ ಮೊದಲೇ ತಿಂದರೂ ರುಚಿಕರವಾಗಿರುವುದಲ್ಲದೇ ಪುಷ್ಟಿಕರವಾಗಿಯೂ ಇರುತ್ತವೆ. ಒಣಗಿದ ಬೀಜಗಳನ್ನು ನೆನೆಹಾಕಿ ತಿನ್ನುವುದು ಆರೋಗ್ಯಕರ ಎಂದು ಎಲ್ಲರಿಗೂ ತಿಳಿದ ಮಾತು. ಹುರಿದು, ಹುರಿಗಾಳನ್ನಾಗಿ ತಿನ್ನುವುದಲ್ಲದೆ ಬೇಳೆಮಾಡಿ ಅಡಿಗೆ ಮಾಡುವುದೂ ಸಾಮಾನ್ಯವಾಗಿದೆ. ಕಡಲೆಯ ಹಿಟ್ಟಿನಿಂದ ಹಲವಾರು ಬಗೆಯ ಸಿಹಿ ಹಾಗೂ ಖಾರದ ತಿಂಡಿಗಳನ್ನು ತಯಾರಿಸುತ್ತಾರೆ. ಕೇವಲ ಮನುಷ್ಯರಿಗಷ್ಟೇ ಅಲ್ಲದೆ, ಕಡಲೆಯನ್ನು ಕುದುರೆ ಮೊದಲಾದ ಪ್ರಾಣಿಗಳಿಗೆ ತಿನ್ನಿಸಲೂ ಉಪಯೋಗಿಸುತ್ತಾರೆ. ಇದರ ಹೊಟ್ಟಂತೂ ದನಗಳಿಗೆ ಒಳ್ಳೆಯ ಮೇವು. (ಬಿ.ಆರ್.ಎಚ್.; ಎಂ.ಬಿ.ಟಿ.)

**ಕಡಲೆಕಾಯಿ :** ಲೆಗ್ಯುಮಿನೋಸೀ ಕುಟುಂಬದ ಆರಕಿಸ್ ಹೈಪೊಜಿಯ ಎಂಬ ವೈಜ್ಞಾನಿಕ ಹೆಸರಿನ ವಾರ್ಷಿಕ ಸಸ್ಯ. ಇದಕ್ಕೆ ನೆಲಗಡಲೆ ಎಂಬ ಹೆಸರೂ ಉಂಟು. ಇದರ ಕಾಯಿಗಳು ಮಣ್ಣಿನಲ್ಲಿ ಇಳಿದು ಬೆಳೆಯುವುದರಿಂದ ಈ ಹೆಸರು. ಕೆಲವು ಭಾಗಗಳಲ್ಲಿ ಇದನ್ನು ಸೇಂಗಾ ಎಂದೂ ಕರೆಯುತ್ತಾರೆ. ಇದರ ಮೂಲ ಪ್ರದೇಶ ಯಾವುದು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ, ಅದು ದಕ್ಷಿಣ ಅಮೆರಿಕದ ಬ್ರೆಜಿಲ್ ಇರಬಹುದು ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ. ಅಮೆರಿಕದ ಹಲವಾರು ಭಾಗಗಳಲ್ಲಿ ಮತ್ತು ಆಫ್ರಿಕದಲ್ಲಿ ಇದೊಂದು ಪ್ರಾಮುಖ್ಯವಾದ ಬೆಳೆ. ಉಷ್ಣವಲಯದ ಬೆಳೆಯಾಗಿದ್ದರೂ ಸಮಶೀತೋಷ್ಣವಲಯದಲ್ಲಿ ಕೂಡ ಇದನ್ನು ಬೆಳೆಯಬಹುದು. ಸಾಮಾನ್ಯವಾಗಿ ಉತ್ತರ ಅಕ್ಷಾಂಶ $45^0$ ಯಿಂದ ದಕ್ಷಿಣ ಅಕ್ಷಾಂಶ $35^0$ ವರೆಗಿನ ಎಲ್ಲ ದೇಶಗಳಲ್ಲಿಯೂ ಇದನ್ನು ಬೆಳೆಯುತ್ತಾರೆ. ಭಾರತಕ್ಕೆ ಇದರ ಪ್ರವೇಶವಾದದ್ದು ವಾಸ್ಕೋಡಗಾಮಾ ಇಲ್ಲಿಗೆ ಬಂದ ಅನಂತರವೇ. ಆಗ ಕಡಲೆಕಾಯಿಗೆ ಇಂದಿನ ಮಹತ್ತ್ವವಿರಲಿಲ್ಲವಾದ್ದರಿಂದ ಅದನ್ನು ಬೆಳೆಯುವ ಕ್ಷೇತ್ರವೂ ಕಡಿಮೆಯೇ ಇತ್ತು. ಕ್ರಮೇಣ ಇದರ ಪ್ರಾಮುಖ್ಯ ಹೆಚ್ಚಿದಂತೆ ಅದನ್ನು ಬೆಳೆಯುವ ಕ್ಷೇತ್ರವೂ ಹೆಚ್ಚುತ್ತ ಹೋಯಿತು. ಈಗ ಭಾರತ ಇದರ ಬೆಳೆಯಲ್ಲಿ ಜಗತ್ತಿನಲ್ಲಿ ಮೊದಲನೆಯ ಸ್ಥಾನಪಡೆದಿದೆ. ಪ್ರಪಂಚದ ಒಟ್ಟು ನೆಲಗಡಲೆಯಲ್ಲಿ ಸು. ಶೇ. 40ರಷ್ಟು ಭಾರತದಲ್ಲಿಯೇ ಬೆಳೆಯುತ್ತದೆ; ಮತ್ತು 40ರಿಂದ 60ರಷ್ಟು ಭಾಗ ಭಾರತದಿಂದಲೇ ಹೊರ ದೇಶಗಳಿಗೆ ರಫ್ತಾಗುತ್ತದೆ. 1955–56ನೆಯ ಸಾಲಿನಲ್ಲಿ 51,34,000 ಹೆಕ್ಟೇರುಗಳಿಗೆ ಸೀಮಿತವಾಗಿದ್ದ ನೆಲಗಡಲೆ ಬೆಳೆಯ ಕ್ಷೇತ್ರ 1967–68ರ ಸಮಯಕ್ಕೆ 75,53,000 ಹೆಕ್ಟೇರುಗಳಷ್ಟಾಯಿತು. ಇಳುವರಿಯೂ 38,61,000 ಟನ್ನುಗಳಿಂದ 58,31,000 ಟನ್ನುಗಳಿಗೇರಿತು.

1967–68ರ ಸಮಯಕ್ಕೆ ಮೈಸೂರು ರಾಜ್ಯದಲ್ಲಿಯ ಸೇಂಗಾ ಬೆಳೆಯ ಕ್ಷೇತ್ರ 7,78,000 ಹೆಕ್ಟೇರುಗಳಷ್ಟಿದ್ದು, ಉತ್ಪನ್ನ 5,03,000 ಟನ್ನುಗಳಷ್ಟಿತ್ತು. ಇದರ ಎಣ್ಣೆಗೆ ಔದ್ಯೋಗಿಕವಾಗಿ ಮಹತ್ತ್ವವಿರುವದರಿಂದ ಪ್ರತಿ ವರ್ಷವೂ ಕಡಲೆಕಾಯಿಯ ಬೆಳೆಯ ಕ್ಷೇತ್ರ ವಿಸ್ತರಿಸುತ್ತಲೇ ಇದೆ.

ಕಡಲೆಕಾಯಿಯನ್ನು ಬೆಳೆಸಲು, ಉಷ್ಣ ಹವಾಮಾನ, ಉತ್ತಮವಾಗಿದ್ದರೂ ಸಮಶೀತೋಷ್ಣ ವಲಯದಲ್ಲಿ ಕೂಡ ಬೇಸಗೆಯ ಬೆಳೆಯಾಗಿ ಬೆಳೆಯಬಹುದು. ಕೇವಲ ಮಳೆಯನ್ನವಲಂಬಿಸಿಯೇ ಬೆಳೆಸುವುದಾದರೆ ಒಳ್ಳೆಯ ಬೆಳೆಗೆ ಸು. 76–86 ಸೆಂಮೀ ಅಂಗುಲಗಳಷ್ಟು ಮಳೆ ಬೇಕು. ಆದರೆ ಸು. 50–55 ಸೆಂಮೀ ಅಂಗುಲ ಮಳೆಯಾಗುವ ಪ್ರದೇಶಗಳಲ್ಲಿಯೂ ಇದನ್ನು ಬೆಳೆಸಬಹುದು. ಬೆಳೆಯ ಕಾಲಾವಧಿಯಲ್ಲಿ ಸು. 139–152 ಸೆಂಮೀ ಅಂಗುಲಗಳಿಗಿಂತ ಹೆಚ್ಚಿಗೆ ಮಳೆಯಾದರೆ ಅಷ್ಟೇನೂ ಹಿತಕರವಲ್ಲ.

ನೀರು ಬಸಿದು ಹೋಗುವ ಮರಳು ಮಿಶ್ರಿತ ಇಲ್ಲವೆ ಮಸಾರಿ ಮಣ್ಣು ಇದಕ್ಕೆ ಉತ್ತಮ. ಉತ್ತರ ಭಾರತದಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ನೆರೆಮಣ್ಣಿನಲ್ಲಿಯೂ ಉತ್ತಮವಾದ ಬೆಳೆಯನ್ನು ಪಡೆಯಲು ಸಾಧ್ಯ. ಆದರೆ ಈ ಬೆಳೆಗೆ ಇರುವ ಆರ್ಥಿಕ ಪ್ರಾಮುಖ್ಯದಿಂದಾಗಿ ಅಷ್ಟೊಂದು ಯೋಗ್ಯವಾಗಿಲ್ಲವಾದರೂ, ಎರೆಮಣ್ಣು ಮತ್ತು ಕೆಂಪುಮಣ್ಣಿನ ಪ್ರದೇಶಗಳಲ್ಲಿಯೂ ಇದನ್ನು ಬೆಳೆಸಲಾಗುತ್ತದೆ. ಅತಿ ಹುಳಿ, ಉಷ್ಣ ಇಲ್ಲವೇ ಸವಳು ಭೂಮಿಗಳನ್ನುಳಿದು ಇನ್ನೆಲ್ಲ ಮಣ್ಣುಗಳಲ್ಲಿಯೂ ಇದನ್ನು ಚೆನ್ನಾಗಿ ಬೆಳೆಸಬಹುದು.

ಇದು ದ್ವಿದಳಧಾನ್ಯಗಳ ಸಸ್ಯವರ್ಗಕ್ಕೆ ಸೇರಿದ ಬೆಳೆ. ಬಹಳ ಎತ್ತರವಾಗಿ ಬೆಳೆಯುವುದಿಲ್ಲ. ಆದರೆ ಹಲವಾರು ಟೊಂಗೆಗಳೊಡೆದು ನೆಲವನ್ನು 0.1858–0.2787 ಚಮೀ ಗಳಷ್ಟು ವಿಸ್ತಾರವಾಗಿ ಆಕ್ರಮಿಸಿಕೊಂಡಿರುತ್ತದೆ. ಎಲೆಗಳು ಸಂಯುಕ್ತ ಮಾದರಿಯವು. ಪ್ರತಿಯೊಂದು ಎಲೆಯಲ್ಲೂ ಅಂಡಾಕಾರದ 4 ಉಪಪತ್ರಗಳಿವೆ. ಪ್ರತಿಯೊಂದು ಉಪಪತ್ರದ ಉದ್ದ ಸು. ಒಂದು ಅಂಗುಲ, ಅಗಲ ಅರ್ಧ ಅಂಗುಲ. ಎಲೆಗಳ ಕಂಕುಳಗಳಲ್ಲಿ (ಆಕ್ಸಿಲ್) ಹಳದಿಯ ಬಣ್ಣದ ಹೂಗಳು ಗುಂಪುಗುಂಪಾಗಿ ಇಲ್ಲವೆ ಪ್ರತ್ಯೇಕವಾಗಿ ಇವೆ. ಗರ್ಭಧಾರಣೆಯ ಅನಂತರ ಉದ್ದವಾದ ದೇಟುಗಳ (ಗೈನೊಫೋರ್) ಮೇಲಿರುವ ಅಂಡಾಶಯಗಳು ನೆಲದೊಳಗೆ ಇಳಿದು ಬೆಳೆಯುತ್ತವೆ. ಹೀಗೆ ನೆಲದಲ್ಲಿಯೇ ಬಲಿತ ಕಾಯಿಗಳಲ್ಲಿ ನಸುಗೆಂಪು ಇಲ್ಲವೆ ದಟ್ಟ ಕೆಂಪು ಬಣ್ಣದ 2–3 ಬೀಜಗಳಿವೆ. ಕಡಲೆಕಾಯಿಯ ಬೇರು ತಾಯಿ ಬೇರಿನ ವರ್ಗಕ್ಕೆ ಸೇರಿದ್ದು. ಬೇರುಗಳ ಮೇಲೆ ಚಿಕ್ಕ ಚಿಕ್ಕ ಗಂಟು (ನಾಡ್ಯೂಲ್)ಗಳನ್ನು ಕಾಣಬಹುದು. ಇವುಗಳಲ್ಲಿರುವ ಏಕಾಣುಜೀವಿ (ಬ್ಯಾಕ್ಟೀರಿಯ)ಗಳಿಂದ ವಾತಾವರಣದ ಸಾರಜನಕ ಸಸ್ಯಗಳಿಗೆ ದೊರೆಯುವ ರೂಪಕ್ಕೆ ರೂಪಾಂತರಗೊಳ್ಳುತ್ತದೆ.



ಕಡಲೆಕಾಯಿ ಗಿಡ

ಕಡಲೆಕಾಯಿಯಲ್ಲಿ ಹಲವಾರು ಜಾತಿಗಳಿವೆ. ಇವನ್ನು ಮುಖ್ಯವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು. ಗೆಜ್ಜೆ ಸೇಂಗಾ ಮತ್ತು ಹಬ್ಬು ಸೇಂಗಾ. ಗೆಜ್ಜೆ ಸೇಂಗಾದಲ್ಲಿ ಕಾಯಿಗಳು ಗಿಡಕ್ಕೆ ಸಮೀಪವಾಗಿ ಗುಂಪುಗುಂಪಾಗಿ ಬೆಳೆದಿರುತ್ತವೆ. ಹಬ್ಬು ಸೇಂಗಾದಲ್ಲಿ, ಟೊಂಗೆಗಳು ಬಳ್ಳಿಯಂತೆ ನೆಲದ ಮೇಲೆ ಹರಡಿದ್ದು, ಅವುಗಳ ಗಿಣ್ಣುಗಳು (ನೋಡ್ಸ್) ನೆಲವನ್ನು ಮುಟ್ಟಿದಲ್ಲೆಲ್ಲ ಒಂದು ಅಥವಾ ಹೆಚ್ಚು ಕಾಯಿಗಳು ಬಿಡಬಹುದು. ಸಾಮಾನ್ಯವಾಗಿ ಗೆಜ್ಜೆ ಸೇಂಗಾ 100–110 ದಿನಗಳ ಬೆಳೆ. ಇದರ ಅನಂತರ ಜೋಳ, ಗೋದಿ, ಕಡಲೆ, ಕುಸುಬೆ ಮತ್ತು ಅಗಸೆಯಂಥ ಹಿಂಗಾರು ಬೆಳೆಗಳನ್ನು ಬೆಳೆಯಬಹುದು. ಕಡಲೆಕಾಯಿಗಳಲ್ಲಿ ಹಲವಾರು ಸುಧಾರಿಸಿದ ತಳಿಗಳಿವೆ. ಅವುಗಳಲ್ಲಿ ಸ್ಪ್ಯಾನಿಷ್ ಇಂಪ್ರೂವ್ಡ್, ಎಚ್.ಜಿ. –S. ಟಿ.ಎಂ.ವಿ.–2 ಮತ್ತು ಎಸ್ 206 ಎಂಬ ತಳಿಗಳು ಮುಖ್ಯವಾದುವು. ಹಬ್ಬು ಸೇಂಗಾದ ಕಾಲಾವಧಿ ಗೆಜ್ಜೆ ಸೇಂಗಾಕ್ಕಿಂತ ಹೆಚ್ಚಾಗಿರುತ್ತದೆ. ಅಂದರೆ ಸು. 150–160 ದಿನಗಳು. ಇದರಲ್ಲಿ ಎಚ್. ಜಿ.–7 ಮತ್ತು ಪಾಂಡಿಚೇರಿ–8 ಎಂಬ ತಳಿಗಳು ಮುಖ್ಯವಾಗಿವೆ. ಅಧಿಕ ಕಾಲಾವಧಿಯನ್ನು ತೆಗೆದುಕೊಳ್ಳುವ ಈ ಬೆಳೆಗಳ ಇಳುವರಿಯೂ ಹೆಚ್ಚು, ಸಂಪೂರ್ಣವಾಗಿ

ಮಳೆಯನ್ನವಲಂಬಿಸಿಯೇ ಬೆಳೆದ ಗೆಜ್ಜೆ ಸೇಂಗಾದಲ್ಲಿ ಪ್ರತಿ ಹೆಕ್ಟೇರಿಗೆ ಸು. 800–1,000 ಕಿಗ್ರಾಂಗಳಷ್ಟು ಕಾಯಿ ದೊರೆಯುತ್ತಿದ್ದರೆ ಹಬ್ಬು ಸೇಂಗಾದಿಂದ ಸು. 1,000–1,200 ಕಿಗ್ರಾಂ ಕಾಯಿ ದೊರೆಯುತ್ತವೆ. ಈ ಕಾಯಿಗಳನ್ನು ಒಡೆದಾಗ ದೊರೆಯುವ ಬೀಜದ ಪ್ರಮಾಣ ನೂರಕ್ಕೆ 70–75ರಷ್ಟು. ನೀರಾವರಿಯಿಂದ ಬೆಳೆದ ಬೆಳೆ, ಮಳೆ ಯನ್ನವಲಂಬಿಸಿದ ಬೆಳೆಗಿಂತ ಎರಡು ಮೂರು ಪಟ್ಟು ಅಧಿಕ ಉತ್ಪನ್ನವನ್ನು ಕೊಡುತ್ತದೆ.



**ಸಿಪ್ಪೆ ಸುಲಿಯದ ಮತ್ತು ಸಿಪ್ಪೆ ಸುಲಿದ ಕಡಲೆಕಾಯಿಗಳು**

ನೆಲಗಡಲೆಯ ಕಾಯಿಗಳು ನೆಲದಲ್ಲಿಯೇ ಇಳಿದು ಬೆಳೆಯುವುದರಿಂದ ನೆಲವನ್ನು 12.7–15.24 ಸೆಂಮೀ ಆಳದವರೆಗೂ ಚೆನ್ನಾಗಿ ಉಳುವುದು ಅಗತ್ಯ. ಹಿಂದಿನ ಬೆಳೆಯ ಕಟಾವು ಆದಕೂಡಲೆ ನೆಲವನ್ನು ಉತ್ತಿಟ್ಟು, ಮುಂಗಾರು ಮಳೆಯಾದೊಡನೆ ಎರಡು ಮೂರು ಸಲ ಕುಂಟೆಯನ್ನು ಹೊಡೆದು ನೆಲವನ್ನು ಹಸಿ ಮಾಡಬೇಕು. ಸು. 2 ಟನ್ನುಗಳಷ್ಟು ಹಟ್ಟಿಯ ಗೊಬ್ಬರವನ್ನು ಮಣ್ಣಿನೊಡನೆ ಮಿಶ್ರ ಮಾಡುವುದು ಸಾಮಾನ್ಯವಾದ ಕ್ರಮ. ಇತ್ತೀಚಿನ ಸಂಶೋಧನೆಗಳ ಮೇಲಿಂದ, ಬಿತ್ತುವುದಕ್ಕೆ ಮೊದಲು ರಾಸಾಯನಿಕ ಗೊಬ್ಬರಗಳನ್ನು ಭೂಮಿಗೆ ಸೇರಿಸುವುದು ಕೂಡ ಲಾಭದಾಯಕ ಎಂದು ಕಂಡುಬಂದಿದೆ. ಪ್ರತಿ ಹೆಕ್ಟೇರಿಗೆ 25 ಕಿಗ್ರಾಂ ಸಾರಜನಕ, 50 ಕಿಗ್ರಾಂ ರಂಜಕ ಮತ್ತು 37 ಕಿಗ್ರಾಂ ಪೊಟ್ಯಾಶ್ ಗೊಬ್ಬರಗಳನ್ನು ಮೈಸೂರು ರಾಜ್ಯದ ಎಲ್ಲ ಭಾಗಗಳಲ್ಲೂ ಬಳಸಬಹುದು. ಈ ಸೀಮೆ ಗೊಬ್ಬರಗಳನ್ನು ಭೂಮಿಯಲ್ಲಿ ಬೀಜಕ್ಕಿಂತ ಆಳವಾಗಿ ಹಾಕುವುದು ಉತ್ತಮ.

ಬಿತ್ತುವುದಕ್ಕೆ ಮೊದಲು ಬೀಜಗಳನ್ನು ಕಾಯಿಗಳಿಂದ ಹೊರತೆಗೆದು ಬೀಜೋಪಚಾರ ಮಾಡುವುದು ರೋಗಗಳ ಹತೋಟಿಯ ದೃಷ್ಟಿಯಿಂದ ಅತ್ಯಾವಶ್ಯಕ. ಅಗ್ರೊಸಾನ್ ಇಲ್ಲವೆ ಕ್ಯಾಪ್ಟಾನ್ ಎಂಬ ರಾಸಾಯನಿಕ ಪದಾರ್ಥಗಳನ್ನು ಪ್ರತಿ ಕಿಗ್ರಾಂಗೆ ಎರಡು ಗ್ರಾಂಗಳಂತೆ ಲೇಪಿಸಿ ಬಿತ್ತುವುದರಿಂದ ಸೋಂಕುರೋಗ ತಗಲಲಾರವು. ಪ್ರತಿ ಹೆಕ್ಟೇರಿಗೆ, ಗೆಜ್ಜೆ ಸೇಂಗವಾಗಿದ್ದರೆ 100 ಕಿಗ್ರಾಂ, ಹಬ್ಬು ಸೇಂಗವಾದರೆ 60 ಕಿಗ್ರಾಂಗಳಷ್ಟು ಬೀಜ ಬೇಕು. ಬೀಜಗಳನ್ನು ಕೈಯಿಂದ, ನೇಗಿಲ ಸಾಲಿನ ಹಿಂದೆ ಇಲ್ಲವೆ ಕೂರಿಗೆಗಳ ಮೂಲಕ ಬಿತ್ತಬಹುದು ಗೆಜ್ಜೆ ಸೇಂಗಾವನ್ನು ಸು. 30.48 ಸೆಂಮೀಗಳ ಅಂತರದ ಸಾಲುಗಳಲ್ಲಿಯೂ ಹಬ್ಬು ಸೇಂಗಾವನ್ನು 24" ಗಳ ಅಂತರದ ಸಾಲುಗಳಲ್ಲಿಯೂ ಸು. 2"–3" ಆಳವಾಗಿ ಬಿತ್ತಬೇಕು. ಬಿತ್ತುವ ಸಮಯದಲ್ಲಿ ನೆಲದಲ್ಲಿ ಸಾಕಷ್ಟು ತೇವವಿಲ್ಲದಿದ್ದರೆ ಬೀಜಗಳ ಮೊಳಕೆಯೊಡೆಯುವ ಪ್ರಮಾಣ ಬಹಳ ಕಡಿಮೆಯಾಗಿಬಿಡುತ್ತದೆ. ಬಿತ್ತಿದ 6–7 ದಿನಗಳಲ್ಲಿ ಸಸಿಗಳ ಸಾಲುಗಳನ್ನು ಕಾಣಬಹುದು.

ಸಾಮಾನ್ಯವಾಗಿ, ಮಳೆಯನ್ನವಲಂಬಿಸಿದ ಬೆಳೆಯನ್ನು ಜೂನ್ ತಿಂಗಳಲ್ಲಿ ಬಿತ್ತುತ್ತಾರೆ. ನೀರಾವರಿ ಇರುವಾಗ ಜನವರಿ–ಫೆಬ್ರುವರಿ ತಿಂಗಳಲ್ಲಿ ಕೂಡ ಬಿತ್ತಿ ಬೇಸಿಗೆಯ ಬೆಳೆಯನ್ನು ತೆಗೆದುಕೊಳ್ಳಬಹುದು. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಬತ್ತದ ಹೊಲಗಳಲ್ಲಿ, ಬತ್ತದ ಕೊಯಿಲಾದ ಅನಂತರ ಕಡಲೆ ಕಾಯಿಯನ್ನು ಬಿತ್ತುವ ಪದ್ಧತಿಯೂ ಉಂಟು. ಗೆಜ್ಜೆ ಸೇಂಗಾ ಬಿತ್ತಿದ 60 ದಿನಗಳ ಅನಂತರ ಹೂ ಬಿಡಲು ಪ್ರಾರಂಭಿಸಿದರೆ, ಹಬ್ಬು ಸೇಂಗಾ ಸು. 90–100 ದಿನಗಳನ್ನು ತೆಗೆದುಕೊಳ್ಳುತ್ತದೆ.

ಈ ಬೆಳೆಗೆ 2–3 ಸಲವಾದರೂ ಎಡೆ ಹೊಡೆಯುವುದು ಅತ್ಯಾವಶ್ಯಕ. ಇದರಿಂದ ಕಳೆ ನಾಶವಾಗುವುದಲ್ಲದೆ, ಮಣ್ಣು ಸಹ ಸಡಿಲವಾಗುವುದು. ಕಳೆ ನಾಶಮಾಡಲು ಇತ್ತೀಚೆಗೆ ಹಲವಾರು ಕಳೆ ನಾಶಕಗಳನ್ನು ಉಪಯೋಗಿಸಲಾಗುತ್ತಿದೆ. ಉದಾಹರಣೆಗೆ ಟೋಕ್–ಇ–25. ಕೊನೆಯ ಎಡೆಯನ್ನು ಅಂಡಾಶಯದ ಬೆಳೆವಣಿಗೆಯಾಗಿ ಅದು ಭೂಮಿ ಗಿಳಿಯುವುದಕ್ಕೆ ಮುಂಚಿತವಾಗಿಯೇ ಮುಗಿಸಿರಬೇಕು. ಇದರಿಂದ ಎಲ್ಲ ಕಾಯಿಗಳೂ ನೆಲದಲ್ಲಿ ಬೆಳೆಯುವುದಕ್ಕೆ ಸಹಾಯವಾಗುವುದು.

ಕಾಯಿಗಳು ಬಲಿತಾಗ ಗಿಡದ ಕೆಳಭಾಗದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರಲು ತೊಡಗುತ್ತವೆ. ಆ ಸಮಯದಲ್ಲಿ ಕಾಯಿಗಳನ್ನು ಒಡೆದು ನೋಡಿದರೆ, ಬೀಜಗಳ ಮೇಲಿನ ಹೊದಿಕೆ ನಸುಗೆಂಪು ಇಲ್ಲವೆ ಕೆಂಪು ವರ್ಣಕ್ಕೆ ತಿರುಗಿರುವುದು ಕಂಡುಬರುತ್ತದೆ. ಕೀಳುವುದಕ್ಕೆ ಮೊದಲು ಒಂದು ಮಳೆಯಾದರೆ ಕೆಲಸ ಸುಲಭವೂ ಪರಿಪೂರ್ಣವೂ ಆಗುತ್ತದೆ. ಅದಿಲ್ಲವಾದರೆ ಕಾಯಿಗಳನ್ನು ನೆಲದಿಂದ ಅಗೆದು ತೆಗೆಯುವುದು ಬಹಳ ಕಷ್ಟ. ಗೆಜ್ಜೆ ಸೇಂಗಾವನ್ನು ಕೈಯಿಂದಲೇ ಗಿಡಗಳನ್ನೆಳೆದು ಕೀಳಬಹುದು ಮತ್ತು ಹಬ್ಬು ಸೇಂಗಾವನ್ನು ಕೀಳಲು ನೇಗಿಲು ಇಲ್ಲವೆ ಸಯಾನ ಕುಂಟೆಗಳನ್ನು ಉಪಯೋಗಿಸಬಹುದು. ಇದರಿಂದ ಬಳ್ಳಿ ಕೀಳುವ ಖರ್ಚು ಉಳಿತಾಯವಾಗುವುದು. ಕಡಲೆಕಾಯಿಯನ್ನು ಕೀಳುವ ಸಮಯದಲ್ಲಿ ಅತಿಯಾಗಿ ಮಳೆಯಾದರೆ ಬೀಜಗಳು ನೆಲದಲ್ಲಿಯೇ ಮೊಳಕೆಯೊಡೆಯುವ ಸಂಭವವೂ ಉಂಟು. ಅನಂತರ ಗಿಡಗಳಿಂದ ಕಾಯಿಗಳನ್ನು ಬೇರ್ಪಡಿಸಿ, ಕಾಯಿಗಳು ಸಂಪೂರ್ಣವಾಗಿ ಒಣಗುವವರೆಗೂ ಬಿಸಿಲಿನಲ್ಲಿ ಒಣಗಿಸಬೇಕು. ಇದನ್ನು ಬಹಳ ದಿನಗಳವರೆಗೆ ಸಂಗ್ರಹಿಸಿಡುವ ಪ್ರಸಂಗವಿದ್ದಲ್ಲಿ ಕಾಯಿಗಳನ್ನು ಒಡೆಯದೇ ಹಾಗೆಯೇ ಇಡುವುದು ಸೂಕ್ತ. ಒಮ್ಮೊಮ್ಮೆ ಕಡಲೆಕಾಯಿ ಇಲ್ಲವೆ ಅದರ ಹಿಂಡಿಯನ್ನು ಸಂಗ್ರಹಿಸಿಟ್ಟಾಗ ಅದಕ್ಕೆ ಒಂದು ಜಾತಿಯ ಬೂಷ್ಟು (ಆಸ್ಪರ್ಜಿಲಸ್ ಫ್ಲೇವಸ್) ಬರುವ ಸಂಭವವುಂಟು. ಇದರಿಂದ ಒಂದು ಜಾತಿಯ ವಿಷಕಾರಿ ಪದಾರ್ಥ (ಅಫ್ಲೊಟಾಕ್ಸಿನ್) ಉತ್ಪತ್ತಿಯಾಗುತ್ತದೆ. ಅದರ ಸೇವನೆಯಿಂದ ಹಲವಾರು ಪ್ರಾಣಿಗಳು ರೋಗಕ್ಕೆ ತುತ್ತಾಗಿ ಮರಣ ಹೊಂದಬಹುದು. ಆದ್ದರಿಂದ ಇಂಥ ಬೂಷ್ಟು ಬರದಂತೆ ಕಡಲೆಕಾಯಿಯನ್ನು ಕಾಯ್ದಿಡುವುದು ಅವಶ್ಯ. ನೆಲಗಡಲೆಗೆ ಸಾರಜನಕವನ್ನು ರೂಪಾಂತರಿಸುವ ಗುಣ ಇದೆ. ಇದರಿಂದಾಗಿ, ಇದು ಬೆಳೆಗಳ ಸರದಿಯಲ್ಲಿ (ರೊಟೇಷನ್ ಆಫ್ ಕ್ರಾಪ್ಸ್) ಒಂದು ಅತಿ ಪ್ರಾಮುಖ್ಯವಾದ ಬೆಳೆಯಾಗಿರುತ್ತದೆ. ಗೋದಿ, ಜೋಳ, ಬತ್ತ, ಸಜ್ಜೆ, ಕಡಲೆ, ಔಡಲ, ಹತ್ತಿ ಮುಂತಾದ ಬೆಳೆಗಳ ಅನಂತರ ಸೇಂಗಾವನ್ನು ಸಾಮಾನ್ಯವಾಗಿ ಬೆಳೆಸುತ್ತಾರೆ. ಇದನ್ನು ಹತ್ತಿ, ತೊಗರಿ, ಜೌಡಲ ಜೋಳ, ಚೌಡಲ ಸಜ್ಜೆ ಮುಂತಾದ ಬೆಳೆಗಳೊಂದಿಗೆ ಮಿಶ್ರ ಬೆಳೆಯಾಗಿಯೂ ಬೆಳೆಸಬಹುದು.

ಕಡಲೆಕಾಯಿಗೆ ರೋಗ ಮತ್ತು ಹುಳುಗಳ ಬಾಧೆ ಕಡಿಮೆ. ಆದರೂ ಕೆಂಪುತಲೆ ಕಂಬಳಿಹುಳ, ಸುರುಳಿಹುಳು (ಲೀಫ್ ರೋಲರ್) ಮತ್ತು ಹೇನುಗಳ ಕಾಟ ಒಮ್ಮೊಮ್ಮೆ ಹೆಚ್ಚಾಗಬಹುದು. ಎಲೆಗಳ ಮೇಲಿನ ಚುಕ್ಕೆರೋಗ ಇದಕ್ಕೆ ಬರುವ ಅತಿ ಮುಖ್ಯ ರೋಗ. ಡೈಥೇನ್–Z–78 ಎಂಬ ರಾಸಾಯನಿಕ ಪದಾರ್ಥಗಳನ್ನು ಸೂಕ್ತ ಪ್ರಮಾಣದಲ್ಲಿ ಸಿಂಪಡಿಸುವುದರಿಂದ ಈ ರೋಗವನ್ನು ತಡೆಗಟ್ಟಲು ಸಾಧ್ಯ. ಕಾಯಿ ಬಲಿತ ಸಮಯದಲ್ಲಿ ಹಲವಾರು ಕಡೆಗಳಲ್ಲಿ ಕಾಡು ಹಂದಿಗಳ ಕಾಟ ಕಂಡುಬರಬಹುದು. ಮಂಗ, ಕಾಗೆ, ಮುಂತಾದ ಪ್ರಾಣಿಗಳೂ ಇದಕ್ಕೆ ಶತ್ರುಗಳು.

ಕಡಲೆಕಾಯಿಯಲ್ಲಿ ತಳಿಯನ್ನವಲಂಬಿಸಿ ಶೇ. 44–50ರಷ್ಟು ಎಣ್ಣೆಯಿರುತ್ತದೆ. ಈ ಎಣ್ಣೆಯನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ದಿನನಿತ್ಯದ ಅಡುಗೆಗೆ ಉಪಯೋಗಿಸುತ್ತಾರೆ. ಹೈಡ್ರಾಜನೀಕರಣ ಮಾಡಿ, ದ್ರವರೂಪದಲ್ಲಿರುವ ಎಣ್ಣೆಯನ್ನು ಘನೀಕರಿಸಿದಾಗ ಅದು ವನಸ್ಪತಿಯಾಗುತ್ತದೆ ಕಡಲೆಕಾಯಿ ಎಣ್ಣೆಯನ್ನು ಹಲವಾರು ಆಹಾರ ಪದಾರ್ಥಗಳನ್ನು ಕಾಯ್ದಿಡಲು ಉಪಯೋಗಿಸುವುದಲ್ಲದೆ, ಹಳ್ಳಿಗಳಲ್ಲಿ ಮನೆಗಳ ದೀಪವನ್ನು ಬೆಳಗಿಸಲು ಉಪಯೋಗಿಸುತ್ತಾರೆ. ಕಡಲೆಕಾಯಿಗಳನ್ನು ಹಸಿಯಾಗಿ ಹುರಿದು ಇಲ್ಲವೆ ಕರಿದು ತಿನ್ನುವುದು ಸಾಮಾನ್ಯವಾಗಿ ಬಳಕೆಯಲ್ಲಿದೆ. ಎಣ್ಣೆಯನ್ನು ತೆಗೆದಾದ ಮೇಲೆ ಉಳಿಯುವ ಹಿಂಡಿ ಅತ್ಯುತ್ತಮ ಗೊಬ್ಬರ. ಉತ್ತಮವಾದ ಪಶು ಆಹಾರವೂ ಅಹುದು. ಇದರ ಹೊಟ್ಟನ್ನು ಮಳೆಗೆ ತಾಗಿಸದೆ ಹಾಗೆಯೇ ಕಾಯ್ದಿಟ್ಟರೆ, ದನಗಳಿಗೆ ತಿನ್ನಿಸಲು ಉಪಯೋಗಿಸಬಹುದು. ಇದರಲ್ಲಿ ನೂರಕ್ಕೆ 15.5ರಷ್ಟು ಸಾರಜನಕವಿರುವುದಲ್ಲದೆ, 50ರಷ್ಟು ಶರ್ಕರ ಪಿಷ್ಟಗಳೂ ಇವೆ.

ಸಾಮಾನ್ಯವಾಗಿ ಬಳಕೆಯಲ್ಲಿರುವ ದ್ವಿದಳಧಾನ್ಯಗಳಲ್ಲಿ ಸೋಯಾಬೀನನ್ನು ಬಿಟ್ಟರೆ ಕಡಲೆಕಾಯಿಯಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಸಾರಜನಕವಿದೆ. ಇದರಲ್ಲಿರುವ ಸಾರಜನಕದಲ್ಲಿ ಎಲ್ಲ ಬಗೆಯ ಆವಶ್ಯಕವಾದ ಅಮೈನೋ ಆಮ್ಲಗಳಿದ್ದರೂ ಗಂಧಕಯುಕ್ತ ಅಮೈನೊ ಆಮ್ಲಗಳು ಮತ್ತು ಟ್ರಿಪ್ಟೋಫೇನ್‌ಗಳ ಪ್ರಮಾಣ ಮಾತ್ರ ಕಡಿಮೆಯಿದೆ. ಇದರಲ್ಲಿ ಸಾಕಷ್ಟು ಕ್ಯಾಲ್ಸಿಯಂ ಮತ್ತು ಕಬ್ಬಿಣದ ಅಂಶಗಳು ಇರುವುವಲ್ಲದೆ ಎ, ಬಿ ಮತ್ತು ಬಿ2 ಜೀವಾತುಗಳೂ ಸಾಮಾನ್ಯವಾಗಿರುತ್ತವೆ.

ಕಡಲೆಕಾಯಿಯನ್ನು ಇತ್ತೀಚೆಗೆ ಹಾಲು ಮೊಸರು ಮತ್ತು ಬೆಣ್ಣೆಗಳನ್ನು ಸಹ ಮಾಡಲು ಉಪಯೋಗಿಸತೊಡಗಿದ್ದಾರೆ. ಇದರ ಹಾಲನ್ನು ಮುಂದೆ ಹೇಳುವ ರೀತಿಯಲ್ಲಿ ತಯಾರಿಸಬಹುದು : ಮೊದಲು ಬೀಜಗಳನ್ನು $1\text{–}1^1/_2$ ತಾಸಿನವರೆಗೆ ನೆನೆಹಾಕಿ ಅದರ ಮೇಲಿರುವ ಸಿಪ್ಪೆಯನ್ನು ತೆಗೆಯಬೇಕು. ಅನಂತರ ಬೀಜಗಳನ್ನು ಸ್ವಲ್ಪವೇ ನೀರಿನೊಂದಿಗೆ ಬೆರೆಸಿ ನುಣ್ಣಗೆ ಅರೆದು ಮಸ್ಲಿನ್ ಬಟ್ಟೆಯ ಮೂಲಕ ಶೋಧಿಸಬೇಕು. ಬಟ್ಟೆಯ ಮೇಲೆ ಉಳಿದ ಭಾಗವನ್ನು, ಎರಡು–ಮೂರು ಸಾರಿ ಹೀಗೆಯೇ ಅರೆದು ಶೋಧಿಸಬಹುದು. ಬಿಳಿಯ

ಬಣ್ಣದ ಈ ಹಾಲಿಗೆ ಎಮ್ಮೆಯ ಇಲ್ಲವೆ ಹಸುವಿನ ಹಾಲನ್ನು ಸ್ವಲ್ಪ ಪ್ರಮಾಣದಲ್ಲಿ ಬೆರೆಸುವದರಿಂದ ಕಡಲೆಕಾಯಿ ವಾಸನೆ ಅಷ್ಟಾಗಿ ಉಳಿಯುವುದಿಲ್ಲ. ಇದನ್ನು ಕಾಯಿಸಿ ಹೆಪ್ಪು ಹಾಕಿ ತಯಾರಿಸಿದ ಮೊಸರು, ಸಾಮಾನ್ಯವಾಗಿ ಹಸುವಿನ ಹಾಲಿನ ಮೊಸರಿನಂತೆಯೇ ಇರುತ್ತದೆ.

ಕಡಲೆಕಾಯಿಯ ಹಿಂಡಿಯನ್ನು ಇತ್ತೀಚೆಗೆ ಮಕ್ಕಳ ಆಹಾರವನ್ನು ತಯಾರಿಸಲು ಉಪಯೋಗಿಸುವುದಲ್ಲದೆ, ಬಿಸ್ಕತ್ತುಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ. ಸಾರಜನಕದ ಕೊರತೆ ಅತಿಯಾಗಿರುವ ಭಾರತದಂಥ ದೇಶಗಳಲ್ಲಿ ಅದನ್ನು ನಿವಾರಿಸಲು ಕಡಲೆಕಾಯಿ ಹಿಂಡಿಯಿಂದ ತಯಾರಿಸಿದ ಹಿಟ್ಟಿನಿಂದ ಸಾಧ್ಯ ಎಂದು ತಜ್ಞರ ಅಭಿಪ್ರಾಯ. ಇದರ ಸಾರಜನಕವನ್ನುಪಯೋಗಿಸಿ ಆರ್ಡಿಲ್ ಎಂಬ ಕೃತಕ ರೇಷ್ಮೆ ಎಳೆಗಳನ್ನು ತಯಾರಿಸ ಬಹುದು ಎಂದು ಇತ್ತೀಚಿನ ಪ್ರಯೋಗಗಳು ತೋರಿಸಿವೆ. ಇದರಿಂದ ತಯಾರಾದ ಬಟ್ಟೆಗಳು ಅಷ್ಟೊಂದು ಉತ್ತಮದರ್ಜೆಯವಲ್ಲದಿದ್ದರೂ ಅವುಗಳಿಗೆ ಹುಳು ಹಿಡಿಯುವುದಿಲ್ಲ.

(ಬಿ.ಆರ್.ಎಚ್.)

**ಕಡವ ಶಂಭುಶರ್ಮ :** 1895–1964. ಕನ್ನಡ ಅರುಣೋದಯ ಕಾಲದ ಹಿರಿಯ ವಿದ್ವಾಂಸರು, ಸಾಹಿತಿ, ಆಯುರ್ವೇದ ವೈದ್ಯ, ಪ್ರಯೋಗಶೀಲ ಕೃಷಿಕ, ಗಾಂಧೀವಾದಿ. ಇವರು 1895 ಆಗಸ್ಟ್ 8ರಂದು ಜನಿಸಿದರು. ಇವರ ತಂದೆ ಕಡವ ಕೃಷ್ಣಭಟ್, ತಾಯಿ ಸತ್ಯವತಿ. ಶಂಭುಶರ್ಮರು ಔಪಚಾರಿಕ ವಿದ್ಯಾಭ್ಯಾಸವನ್ನು ಮಾಡದೇ ಮದರಾಸು ಸಂಸ್ಕೃತ ಕಾಲೇಜಿನಿಂದ ಅದ್ವೈತ ವೇದಾಂತ ಶಿರೋಮಣಿ ಪದವಿ ಪಡೆದು ಮುಂದೆ ಸ್ವಂತ ಪರಿಶ್ರಮದಿಂದ ಕನ್ನಡ ವಿದ್ವಾನ್ ಪದವಿ ಗಳಿಸಿಕೊಂಡರು. ಪುತ್ತೂರಿಗೆ ಬರುವ ಮೊದಲು ಕೆಲವು ಕಾಲ ಮದರಾಸಿನ ಪ್ರಾಚ್ಯವಿದ್ಯಾ ಸಂಸ್ಥೆಯಲ್ಲಿ ಕೆಲಸ ಮಾಡಿದರು. ಈ ಅವಧಿಯಲ್ಲಿ ಆಯುರ್ವೇದದ ಹಲವು ಕೃತಿಗಳನ್ನು ಅಧ್ಯಯನ ಮಾಡಿ ಸಿದ್ಧಿಯನ್ನು ಪಡೆದರು. ಅನಂತರ (1925) ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಉಗ್ರಾಣ ಮಂಗೇಶರಾಯರ ಸಹೋದ್ಯೋಗಿಯಾಗಿ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ಕನ್ನಡದ ಕಂಪು ಮತ್ತು ಇಂಪುಗಳನ್ನು ಉಣಬಡಿಸಿದರು.

ಅಧ್ಯಾಪಕರಾಗಿರುವಾಗಲೇ ಬಿಡುವಿನ ವೇಳೆಯ ಪ್ರವೃತ್ತಿಯಾಗಿ ಸಿದ್ಧರಸ ವೈದ್ಯಶಾಲಾ ಸಂಸ್ಥೆಯನ್ನು ಆರಂಭಿಸಿ ಆಯುರ್ವೇದದ ಚಿಕಿತ್ಸೆಯನ್ನು ನೀಡತೊಡಗಿದರು. ಮಲೇರಿಯಾ, ರಕ್ತಭೇಧಿ, ಆನೆಕಾಲು, ಪ್ಲೇಗ್ ರೋಗಕ್ಕೆ ಸ್ವಂತ ಪರಿಶ್ರಮದಿಂದ ಪರಿಣಾಮಕಾರಿ ಔಷಧಿಯನ್ನು ಶೋಧಿಸಿದ್ದರು. ಹೈನುಗಾರಿಕೆಯಲ್ಲಿ ಕ್ರಾಂತಿಕಾರಿ ಪ್ರಯೋಗ ಇವರದು. ಡೈರಿಯ ಕಲ್ಪನೆಯೇ ಇನ್ನೂ ಸರಿಯಾಗಿ ಮೊಳಕೆ ಯೊಡೆಯದಿದ್ದ ಕಾಲದಲ್ಲಿ ಕ್ಷೀರಸಾಗರ ಎಂಬ ಕೇಂದ್ರದ ಮೂಲಕ ಬಾಟಲಿಗಳಲ್ಲಿ ಹಾಲನ್ನು ಸರಬರಾಜು ಮಾಡಿದ್ದರು. ಇವರು ಸಿದ್ಧಪಡಿಸುತ್ತಿದ್ದ ಸುಗಂಧಾರ್ಕಮಧು ಅತ್ಯಂತ ಜನಪ್ರಿಯ ತಂಪು ಪಾನೀಯವಾಗಿತ್ತು. ತಮ್ಮ ಮನೆಯಲ್ಲಿಯೇ ಮಗ್ಗ, ಖಾದಿ ನೂಲನ್ನು ನೇಯಲು ವ್ಯವಸ್ಥೆ ಮಾಡಿ ಹತ್ತಾರು ಮಂದಿಗೆ ಜೀವನೋಪಾಯ ಕಲ್ಪಿಸಿಕೊಟ್ಟಿದ್ದರು. ದಲಿತರ ಮೇಲೆ ನಡೆಯುತ್ತಿದ್ದ ಶೋಷಣೆಯನ್ನು ಪ್ರತಿಭಟಿಸುವ ಸಲುವಾಗಿ 'ವಿಶ್ವಂಭರ ಸಂಘ'ದ ಸ್ಥಾಪನೆ ಮಾಡಿದ್ದರು. ಯಾವುದೋ ಒಂದು ಸಂದರ್ಭದಲ್ಲಿ ನಡೆದ ಅಪಘಾತದಲ್ಲಿ ಕಾಲನ್ನು ಕಳೆದುಕೊಂಡರು. ಊನತೆ ಬದುಕಿನ ದಾರಿಯನ್ನು ಬದಲಿಸಿತುದಿವರು ಬರೆವಣಿಗೆ, ಸಂಶೋಧನೆಯ ಕಡೆಗೆ ಹೆಚ್ಚು ಒಲವು ಮೂಡಿತು.

ಇವರಿಗೆ ಬರೆವಣಿಗೆ ಹೊಸದಾಗಿರಲಿಲ್ಲ. 22ರ ಹರಯಕ್ಕಾಗಲೇ ಸಂಸ್ಕೃತದಿಂದ ಭಾಸನ ಪ್ರತಿಮಾ ನಾಟಕ, ಶ್ರೀಹರ್ಷನ ನಾಗಾನಂದ ನಾಟಕವನ್ನು ಅನುವಾದಿಸಿದ್ದರು. ಅನಂತರ ಕಾಳಿದಾಸನ ರಘುವಂಶ, ಅಶ್ವಘೋಷನ ಸೌಂದರನಂದ, ಬುದ್ಧ ಚರಿತೆ ಹಾಗೂ ಶ್ರೀಮದ್ಭಗವದ್ಗೀತೆಯನ್ನು ಕನ್ನಡಕ್ಕೆ ಅನುವಾದಿಸಿದರು. ಇವರ ಅನುವಾದ ಮೂಲನಿಷ್ಠವಾದದ್ದು. ಇವರು ಮಾಡಿದ ಭಗವದ್ಗೀತೆಯ ಅನುವಾದಮೂ ವಿಶಿಷ್ಟವಾದುದು. ಕನ್ನಡದಲ್ಲಿ ಭಾಮಿನಿ, ವಾರ್ಧಕ ಮೊದಲಾದ ಬಂಧಗಳಲ್ಲಿ ಗೀತೆಯ ಹಲವು ಅನುವಾದಗಳು ಬಂದಿವೆ. ಆದರೆ ಶರ್ಮರದು ಭಗವದ್ಗೀತೆಯ ವೃತ್ತಾನುವೃತ್ತ ಅನುವಾದ. ಮೂಲದ ಛಂದಸ್ಸು ಮತ್ತು ಲಯ ಇಲ್ಲಿನದು. ಇಡೀ ಕೃತಿಯನ್ನು ಮೂಲನಿಷ್ಠವಾಗಿ ಅನುಷ್ಟುಪ್ ಛಂದಸ್ಸಿನಲ್ಲಿ ಮರುಸೃಷ್ಟಿ ಮಾಡಿದ್ದಾರೆ.

ಇವರು ಗಾಂಧೀಜಿಯವರ ಅಭಿಮಾನಿ, ಅನುಯಾಯಿ. ಗಾಂಧೀಜಿಯವರ ಬದುಕು, ಆದರ್ಶ, ಸಂದೇಶಕ್ಕೆಸಂಬಂಧಿಸಿದಂತೆ ಗಾಂಧೀಲಹರಿ, ಗಾಂಧೀಶತಕಂ, ಗಾಂಧೀನಿರ್ವಾಣಂ, ಗಾಂಧೀಸಂದೇಶ ಮತ್ತು ಗಾಂಧೀವಿಜಯಂ ಎಂಬ ಕಾವ್ಯಗಳನ್ನು ಬರೆದಿರುವರು. ಗಾಂಧೀಜಿಯ ಬಗೆಗೆ ಇಷ್ಟೊಂದು ಕಾವ್ಯವನ್ನು ಬರೆದವರು ಬಹುತೇಕ ಕನ್ನಡದಲ್ಲಿ ಮತ್ತೊಬ್ಬರಿಲ್ಲ. ಗಾಂಧೀವಿಜಯಂ ಏಳು ಆಶ್ವಾಸಗಳಿರುವ ಕಾವ್ಯ. ಗಾಂಧೀಜಿಯ ಹುಟ್ಟಿನಿಂದ ಮರಣದ ವರೆಗಿನ ಕಥೆ ಇಲ್ಲಿ ತೆರೆದುಕೊಳ್ಳುತ್ತದೆ. ಕಟ್ಟುಕತೆಯಲ್ಲ, ಪ್ರೇಮಕತೆಯಲ್ಲ, ಸತ್ಯಶೋಧನೆಯ ಕತೆಯಿದು ಎಂದು ಕೃತಿಯ ಆರಂಭದಲ್ಲಿ ಹೇಳಿದ್ದಾರೆ.

ತಿಮ್ಮಪ್ಪಯ್ಯ ಸ್ಮಾರಕಂ 62 ಕಂದಪದ್ಯಗಳಿರುವ ಕಾವ್ಯ. ಮುಳಿಯ ತಿಮ್ಮಪ್ಪಯ್ಯನವರಿಗೆ ಇಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಇವರ ಇನ್ನೊಂದು ಮಹತ್ವದ ಕೃತಿ 'ತುಳು ದೇಶಭಾಷಾ ವಿಚಾರವು'. 1955ರಷ್ಟು ಹಿಂದೆಯೇ ಬರೆದಿದ್ದ ಈ ಕೃತಿ ಪ್ರಕಟವಾದದ್ದು 1970ರಲ್ಲಿ. ತುಳು ದೇಶ, ಭಾಷೆ, ಪ್ರಾಚೀನತೆ, ನಾಥಪಂಥ ಮೊದಲಾದ ವಿಷಯದ ಬಗೆಗೆ ವಿಶೇಷ ಮಾಹಿತಿಯಿದೆ. ದೇಶೀಯ ಅಧ್ಯಯನ ಪರಂಪರೆಗೆ ಇದೊಂದು ಮಾದರಿ ಕೃತಿ. ಮದರಾಸು ಸರ್ಕಾರ ಈ ಪ್ರಬಂಧಕ್ಕೆ 1955ರಲ್ಲಿ ಬಹುಮಾನ ನೀಡಿ ಗೌರವಿಸಿದೆ.

ಮಂಗಳೂರು ನಾಥಪಂಥದ ಕೇಂದ್ರಗಳಲ್ಲಿ ಒಂದು. 10ನೆಯ ಶತಮಾನದ ಮಧ್ಯಭಾಗದಲ್ಲಿ ನಾಥಪಂಥ ಕರ್ನಾಟಕಕ್ಕೆ ಬಂತೆಂಬುದು ಸಂಶೋಧಕರ ಅಭಿಪ್ರಾಯ. ಆದರೆ ಶಂಭುಶರ್ಮರು ಇದಕ್ಕೆ ಸಹಮತವನ್ನು ವ್ಯಕ್ತಪಡಿಸುವುದಿಲ್ಲ. ನಾಥಪಂಥದ ಸ್ವಯಂಬೋಧ ಅಮನಸ್ಕಯೋಗ ಮತ್ತು ಆತ್ಮವಾದ, ಸಿದ್ಧಸಿದ್ಧಾಂತ ಪದ್ಧತಿ, ಚರ್ಪಟನಾಥ ಶತಕಂ, ನವನಾಥ ಕಥಾಚ ಮೊದಲಾದ ಕೃತಿಗಳನ್ನು ಇವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಹಠಯೋಗದ ಬಗೆಗೆ ಉಪನ್ಯಾಸ ಮಾಡುವಷ್ಟು ಪಾಂಡಿತ್ಯವನ್ನು ಇವರು ಪಡೆದಿದ್ದರು.

ಕಾವ್ಯದಲ್ಲಿ ಬಳಸುವ ಭಾಷೆಯ ಬಗೆಗೆ ಇವರದು ಖಚಿತವಾದ ನಿಲವು. ಯಾವುದೇ ನಿಯಮಗಳಿಲ್ಲದೆ ಕಾವ್ಯ ಬರೆಯುವುದನ್ನು ಇವರು ಒಪ್ಪುವುದಿಲ್ಲ. ಈ ದಿಸೆಯಲ್ಲಿ ಬಿ.ಎಂ.ಶ್ರೀಕಂಠಯ್ಯನವರ ನಿಲವುಗಳನ್ನೂ ಮುಲಾಜಿಲ್ಲದೆ ಟೀಕಿಸಿದ್ದರು. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ಸಂಸ್ಕೃತಕ್ಕೆ ಅನುವಾದಿಸಿದ ಪಾಂಡಿತ್ಯ ಇವರದು. ಇವರ ಸಮಗ್ರ ಅಪ್ರಕಟಿತ ಕೃತಿಗಳನ್ನು 'ಕಡವ ಶಂಭುಶರ್ಮ ಕೃತಿಸಂಚಯ' ಎಂಬ ಹೆಸರಿನಲ್ಲಿ ಎಚ್.ಜಿ. ಶ್ರೀಧರ್ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ (2003).

ಪುತ್ತೂರು ಕರ್ನಾಟಕ ಸಂಘದ ಸ್ಥಾಪಕ ಸದಸ್ಯರಲ್ಲಿ ಇವರೂ ಒಬ್ಬರು. ಶಿವರಾಮ ಕಾರಂತರು ನಡೆಸುತ್ತಿದ್ದ ನಾಡಹಬ್ಬದ ಕಾರ್ಯಕ್ರಮದಲ್ಲಿ ಇವರು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುತ್ತಿದ್ದರು. ಇವರ ವ್ಯಕ್ತಿತ್ವ ಆಳನಿರಾಳ ಕಾದಂಬರಿಯ ಒಂದು ಪಾತ್ರಕ್ಕೆ ಪ್ರೇರಣೆ ಎಂದು ಶಿವರಾಮಕಾರಂತರು ದಾಖಲಿಸಿದ್ದಾರೆ. ಇವರು 1964 ಮೇ 3ರಂದು ನಿಧನ ಹೊಂದಿದರು.

(ಎಚ್.ಎಸ್.ಜಿ.)

**ಕಡವಾಳ :** ರೂಬಿಯೇಸೀ ಕುಟುಂಬದ ಸ್ಟೆಫೆಗೈನ್ ಪಾರ್ವಿಫೋಲಿಯ ಎಂಬ ವೈಜ್ಞಾನಿಕ ಹೆಸರಿನ ದುಂಡು ಹಂದರದ ದೊಡ್ಡ ಪ್ರಮಾಣದ ಅಸ್ಥಿರ ಪರ್ಣವೃಕ್ಷ. ಕೊಂಬೆಗಳಿಂದೊಡಗೂಡಿದ ತುಂಡು ಕಾಂಡದ ಈ ಮರದ ತೊಗಟೆ ಬೂದು ಬಣ್ಣವಾಗಿರುತ್ತದೆ. ತೊಗಟೆ ಉದುರಿದಾಗ ಕಾಂಡದ ಮೇಲೆ ಸಣ್ಣ ಗುಣಿಗಳು ಕಾಣಿಸುವುವು.

ಹಿಮಾಲಯ ತಪ್ಪಲಿನ ನಾಲ್ಕು ಸಾವಿರ ಅಡಿಗಳ ಎತ್ತರದವರೆಗಿನಿಂದ ಹಿಡಿದು ಭಾರತದ ಅಸ್ಥಿರಪರ್ಣದ ಕಾಡುಗಳಲ್ಲಿ ಅಲ್ಲಲ್ಲಿ ಈ ಮರ ಬೆಳೆಯುತ್ತದೆಯಾದರೂ ಎಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬರುವುದಿಲ್ಲ.

ಫೆಬ್ರುವರಿ–ಮಾರ್ಚಿ ತಿಂಗಳುಗಳಲ್ಲಿ ಎಲೆ ಉದುರಿ, ಹೊಸ ಚಿಗುರು ಮೇ ತಿಂಗಳ ಸುಮಾರಿಗೆ ಬರುತ್ತದೆ. ಹೂಗಳು ಮೇ–ಜುಲೈನಲ್ಲಿ ಮೂಡುತ್ತವೆ. ಮರು ಏಪ್ರಿಲ್‌ನ ಹೊತ್ತಿಗೆ ಕಾಯಿಗಳು ಮಾಗುತ್ತವೆ. ಬೀಜ ಬಲು ಸಣ್ಣ. ಮೆಕ್ಕಲು ಮಣ್ಣಿನ ಭೂಮಿಯಲ್ಲಿ ಸ್ವಾಭಾವಿಕವಾಗಿ ಬೀಜಗಳು ಮೊಳೆತು ಹೊಸ ಗಿಡಗಳು ಕಾಣಿಸಿಕೊಳ್ಳುತ್ತವೆ.

ಇದರ ಚೌಬೀನೆ ಎಳೆಗೆಂಪು ಬಣ್ಣದ್ದು. ಮನೆಕಟ್ಟುವುದಕ್ಕೂ ಪೀಠೋಪಕರಣಗಳನ್ನು ವ್ಯವಸಾಯದ ಉಪಕರಣಗಳಿಗೂ ನೂಲಿನ ಗಿರಣಿಯ ಉರುಳೆ (ಬಾಬಿನ್) ತಯಾರಿಕೆಗೂ ಬಾಚಣಿಗೆ, ಮರದ ಚಮಚ, ಬಟ್ಟಲು ಹಾಗೂ ಕೆತ್ತನೆಯ ಮತ್ತು ಕಡೆತದ ಕೆಲಸಗಳಿಗೂ ಇದನ್ನು ಉಪಯೋಗಿಸುವರು.

(ಎ.ಕೆ.ಎಸ್.)

**ಕಡವೆ :** ಸರ್ವಸ್ (ರೂಸ) ಯೂನಿಕಲರ್ ಎಂಬ ವೈಜ್ಞಾನಿಕ ಹೆಸರಿನ ದೊಡ್ಡ ಜಿಂಕೆ. ಸ್ತನಿಕ ವರ್ಗ, ಆರ್ಟಿಯೋಡ್ಯಾಕ್ಟೈಲ ಉಪವರ್ಗ, ಹಾಗೂ ಸರ್ವಿಡೀ ಕುಟುಂಬಕ್ಕೆ ಸೇರಿದೆ. ಸಾಂಬರ್ ಎಂದೂ ಇದನ್ನು ಕರೆಯುತ್ತಾರೆ. ಭಾರತ ಮತ್ತು ಶ್ರೀಲಂಕಗಳ ದಟ್ಟ ಕಾಡುಗಳ ಬೆಟ್ಟ ಗುಡ್ಡಗಳೇ ಇದರ ಬೀಡು. ಭಾರತದಲ್ಲಿ ನೀಲಗಿರಿ ಮತ್ತು ಪಳನಿಬೆಟ್ಟಗಳಲ್ಲಿ ಹೇರಳವಾಗಿ ಕಾಣಬರುತ್ತದೆ. ಇದು ಸು. 5' ಗಿಂತ ಹೆಚ್ಚು ಎತ್ತರ ಮತ್ತು 500 ಪೌಂಡಿಗೂ ಮಿಗಿಲಾಗಿ ಭಾರವಿರುತ್ತದೆ. ದೇಹದ ಬಣ್ಣ ಹಳದಿ ಮಿಶ್ರಿತ ಕಂದು. ಮೈಮೇಲೆಲ್ಲ ಒರಟಾದ ಕೂದಲುಗಳಿವೆ. ಕುತ್ತಿಗೆಯ ಭಾಗದಲ್ಲಿ ಉದ್ದ ಕೂದಲುಗಳ ಅಯಾಲು (ಮೇನ್) ಇದೆ. ಮುದಿ ಕಡವೆಗಳು ಕಪ್ಪು ಬಣ್ಣಕ್ಕಿರುತ್ತವೆ. ಗಂಡು ಕಡವೆಯಲ್ಲಿ ಒರಟಾದ ಚರ್ಮದಿಂದ ಆವರಿಸಿದ ಕವಲೊಡೆದ ಕೊಂಬುಗಳಿವೆ. ಇವೂ ಪ್ರತಿವರ್ಷದ ಮಾರ್ಚಿ ತಿಂಗಳ ವೇಳೆಗೆ ಉದುರಿ ಹೋಗುತ್ತವೆ. ಮತ್ತೆ ಅವುಗಳ ಸ್ಥಳದಲ್ಲಿ ಕೊಂಬುಗಳು ಮೂಡುತ್ತವೆ. ಹೆಣ್ಣು ಕಡವೆಗಳಲ್ಲಿ ಕೊಂಬುಗಳಿಲ್ಲ. ಕಡವೆ ಸಾಮಾಜಿಕ ಜೀವಿ. ದೊಡ್ಡ ದೊಡ್ಡ ಗುಂಪುಗಳಲ್ಲಿ

ವಾಸಿಸುತ್ತದೆ. ಹುಲ್ಲು, ಎಳೆಚಿಗುರು, ಹಣ್ಣು ಹಂಪಲು ಇತ್ಯಾದಿ ಇದರ ಆಹಾರ. ಸಾಮಾನ್ಯವಾಗಿ ರಾತ್ರಿಯ ವೇಳೆ ಮಾತ್ರ ಆಹಾರಕ್ಕಾಗಿ ಅಲೆದಾಡುತ್ತದೆ. ಹಗಲು ದಟ್ಟವಾದ ಪೊದೆಗಳಲ್ಲಿ ಅಡಗಿ ಕಾಲ ಕಳೆಯುತ್ತದೆ. ನೀರನ್ನು ಕಂಡರೆ ಇಷ್ಟ, ತುಂಬ ಚೆನ್ನಾಗಿ ಈಜಲೂ ಬಲ್ಲುದು.

ನವೆಂಬರಿನಿಂದ ಡಿಸೆಂಬರಿನ ವರೆಗಿನ ಕಾಲ ಇದರ ಬೆದೆಗಾಲ. ಈ ಕಾಲದಲ್ಲಿ ಒಂದು ಗಂಡು 5–12 ಹೆಣ್ಣು ಕಡವೆಗಳೊಂದಿಗೆ ಗುಂಪುಗೂಡಿರುತ್ತದೆ. ಬೆದೆಗಾಲ ಮುಗಿದ ಬಳಿಕ ಗುಂಪು ಒಡೆದು ಹೋಗುವುದು ಸಾಮಾನ್ಯ.

ಕಡವೆ ಬಹಳ ಧೈರ್ಯಶಾಲಿ. ವೈರಿಗಳೊಂದಿಗೆ ಭಯಂಕರವಾಗಿ ಹೋರಾಡುತ್ತದೆ.

(ಎಸ್.ಎಚ್.ಒ.; ಪಿ.ಎಸ್.ಆರ್.)

**ಕಡಾರಂ : ನೋಡಿ– ಕಟಾಹ**

**ಕಡಿದಾಳ್ ಮಂಜಪ್ಪ :** 1910–92. ಕರ್ನಾಟಕದ ಮಾಜಿ ಮುಖ್ಯ ಮಂತ್ರಿ, ಸ್ವಾತಂತ್ರ್ಯ ಹೋರಾಟಗಾರ, ವಕೀಲ, ರಾಜಕೀಯ ಧುರೀಣ ಹಾಗೂ ಕಾದಂಬರಿಕಾರರು. ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರಾಗೊಳಿಗೆ ಗ್ರಾಮದಲ್ಲಿ. 1910ರಲ್ಲಿ ಬಡ ರೈತರೊಬ್ಬರ ಮಗನಾಗಿ ಹುಟ್ಟಿದ ಇವರು ಬಾಲ್ಯದಲ್ಲಿ ತುಂಬ ಕಷ್ಟಕಾರ್ಪಣ್ಯ ಗಳನ್ನು ಅನುಭವಿಸಿದರು. ದನಕುರಿಗಳನ್ನು ಕಾಯುವುದು, ಗೊಬ್ಬರಗೋಡು ಗಳನ್ನು ಹೊರುವುದು, ಗದ್ದೆ ಉಳುವುದು ಇವೇ ಮುಂತಾದ ಬಾಲ್ಯದ ಕೃಷಿಕ ಜೀವನದ ಅನುಭವ ಗಳು ಮತ್ತು ನಿಸರ್ಗ ರಮಣೀಯ ಮಲೆನಾಡಿನ ಪರಿಸರ ಇವರ ಬಾಳಿನ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿದುವು.



ಇವರ ವಿದ್ಯಾಭ್ಯಾಸ ಐಗಳ ಮಠದಲ್ಲಿ ಹರಡಿದ ಮರಳುರಾಶಿಯ ಮೇಲೆ ಅಕ್ಷರ ತಿದ್ದುವುದರಿಂದ ಆರಂಭವಾಯಿತು. ತೀರ್ಥಹಳ್ಳಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ಇವರು ಶಿವಮೊಗ್ಗದಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದರು. ಶಿವಮೊಗ್ಗ ಹಾಗೂ ಬೆಂಗಳೂರಿನಲ್ಲಿ ಇಂಟರ್ ಮಿಡಿಯೇಟ್ ಪರೀಕ್ಷೆ ಪೂರೈಸಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು (1932). ಪುಣೆಯ ಲಾ ಕಾಲೇಜಿನಲ್ಲಿ ಕಾನೂನು ಶಿಕ್ಷಣ ಪಡೆದು ಉತ್ತೀರ್ಣರಾದರು (1934).

ಅಲ್ಲಿಂದ ಶಿವಮೊಗ್ಗಕ್ಕೆ ಬಂದು 1935ರಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು. ಅದೇ ವರ್ಷ ಅಖಿಲ ಭಾರತ ಕಾಂಗ್ರೆಸ್ಸಿನ ಸದಸ್ಯರಾದರು. ಇವರು ಪ್ರೌಢಶಾಲೆಯಲ್ಲಿದ್ದಾಗ ಶಿವಮೊಗ್ಗಕ್ಕೆ ಬಂದ ಗಾಂಧೀಜಿಯವರ ದರ್ಶನದಿಂದಲೂ ಅವರು ಯಂಗ್‌ಇಂಡಿಯಾ ಪತ್ರಿಕೆಯಲ್ಲಿ ಬರೆಯುತ್ತಿದ್ದ ಲೇಖನ ಗಳಿಂದಲೂ ಪ್ರಭಾವಿತರಾಗಿ ಚಿಕ್ಕಂದಿನಲ್ಲೇ ಇವರಲ್ಲಿ ರಾಷ್ಟ್ರಭಕ್ತಿ ಮೂಡಿ ಇವರು ರಾಜಕೀಯರಂಗಕ್ಕೆದುಮುಕುವಂತೆ ಮಾಡಿತು. 1937ರಿಂದ ಸುಮಾರು ಮೂರು ವರ್ಷ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿಕೆಲಸ ಮಾಡಿದರು. 1942ರಲ್ಲಿ ಕ್ವಿಟ್‌ಇಂಡಿಯಾಚಳವಳಿಯಲ್ಲಿ ಭಾಗವಹಿಸಿ 9 ತಿಂಗಳು ಸೆರೆಮನೆಯಲ್ಲಿದ್ದರು. ಮೈಸೂರಿನ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಚಳವಳಿಯ ಸಂಬಂಧದಲ್ಲಿಯೂ ಕೆಲವು ತಿಂಗಳು ಸೆರೆಮನೆವಾಸ ಅನುಭವಿಸಿದರು.

1941–45ರ ಅವಧಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಸದಸ್ಯ ರಾಗಿಯೂ 1942–52ರ ಅವಧಿಯಲ್ಲಿ ಮೈಸೂರು ನ್ಯಾಯವಿಧಾಯಕ ಸಭೆ ಮತ್ತು ರಾಜ್ಯಾಂಗ ಸಭೆಗಳ ಕಾಂಗ್ರೆಸ್ ಸದಸ್ಯರಾಗಿಯೂ 1952–67ರ ಅವಧಿಯಲ್ಲಿ ಮೈಸೂರು ವಿಧಾನಸಭೆಯ ಕಾಂಗ್ರೆಸ್ ಸದಸ್ಯರಾಗಿಯೂ ಆಯ್ಕೆಯಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಮಂತ್ರಿಯಾಗಿಯೂ ಕೆಲವು ತಿಂಗಳುಗಳ ಕಾಲ ಮುಖ್ಯಮಂತ್ರಿಯಾಗಿಯೂ ಇದ್ದರು.

1962ರಲ್ಲಿ ಬೆಂಗಳೂರಿನಲ್ಲಿ ನೆಲಸಿ ಇವರು ವಕೀಲಿ ಆರಂಭಿಸಿದರು. ಮಂಜಪ್ಪನವರು ತಮ್ಮ ಖಾಸಗಿ ಹಾಗೂ ರಾಜಕೀಯ ಜೀವನದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠಾವಿವಂತಿಕೆ ಮೆರೆದವರು. ಒಳ್ಳೆಯ ವಿಚಾರವಂತರಾದ ಇವರು ಯೌವನದಲ್ಲಿ ನಾಸ್ತಿಕರಂತೆ ಕಂಡರೂ ವಯೋಧರ್ಮ ಹಾಗೂ ಜೀವನದ ಅನುಭವಗಳಿಂದ ಪೂರ್ಣ ಆಸ್ತಿಕರಾಗಿದ್ದರು. ಇವರು ಕಾದಂಬರಿಕಾರರಾಗಿ ಹೆಸರು ಗಳಿಸಿದರು. ಇವರು ಪಂಜರವಳ್ಳಿಯ ಪಂಜು (1963) ಎಂಬ ಕಾದಂಬರಿಯಲ್ಲಿ ಮಲೆನಾಡಿನ ನಿಸರ್ಗ ಸೌಂದರ್ಯವನ್ನೂ ಅಲ್ಲಿಯ ಜನಜೀವನವನ್ನೂ ಯಥಾವತ್ತಾಗಿ ಚಿತ್ರಿಸಿದ್ದಾರೆ. ಮೂರು ತಲೆಮಾರಿನ ಕಥೆ ತಿಳಿಸುವ ಈ ಕಾದಂಬರಿಯಲ್ಲಿ ರಾಜಕಾರಣದಲ್ಲಿ ಗಾಂಧೀತತ್ತ್ವಗಳ ಅನುಷ್ಠಾನದ ಅಗತ್ಯವೆಂದು ಹೇಳಿ ಕಾಂಗ್ರೆಸ್ಸಿನ ಧ್ಯೇಯ – ಧೋರಣೆ – ಸಾಧನೆಗಳನ್ನು ತಿಳಿಸಲಾಗಿದೆ. ಈ ಪುಸ್ತಕ ಇಂಗ್ಲಿಷ್ ಮತ್ತು ಮಲಯಾಳಂ ಭಾಷೆಗಳಿಗೆ ಅನುವಾದವಾಗಿದೆ. ನಾಳೆಯ ನೆಳಲು (1966) ಇವರ ಇನ್ನೊಂದು ಕಾದಂಬರಿ. ಸಾರ್ವಜನಿಕ ಜೀವನದ ಶುದ್ಧೀಕರಣ ಈ ಕಾದಂಬರಿಯ ಮುಖ್ಯ ಉದ್ದೇಶ. ಕ್ರಾಂತಿಕೂಟ (1974) ಇವರ ಮತ್ತೊಂದು ಕಾದಂಬರಿ. ನನಸಾಗದ ಕನಸು ಎಂಬುದು ಇವರ ಆತ್ಮಚರಿತ್ರೆ. ಕಾಯಕವೇ ಕೈಲಾಸ ಎಂಬ ತತ್ತ್ವಕ್ಕನುಗುಣವಾಗಿ ಇವರು ತಾವು ಸಕ್ರಿಯರಾಗಿರುವವರೆಗೂ ವಕೀಲವೃತ್ತಿ ನಡೆಸಿದರು. ಮಲೆನಾಡ ಗಾಂಧಿ ಎಂಬ ಅಭಿದಾನಕ್ಕೆ ಪಾತ್ರರಾಗಿದ್ದ ಇವರದು ಆದರ್ಶ ತುಂಬಿದ ಬದುಕು. ಸರ್.ಎಂ.ವಿಶ್ವೇಶ್ವರಯ್ಯನವರು ಇವರನ್ನು ತುಂಬಾ ಮೆಚ್ಚಿಕೊಂಡಿದ್ದರು. *

**ಕಡಿದು :** ಸಾಮಾನ್ಯವಾಗಿ ಒಂದೇ ದಿಕ್ಕಿನಲ್ಲಿ ಓಲಿರುವ ಶಿಲಾ ಪ್ರಸ್ತರಗಳಿಂದಾದ ಬೆಟ್ಟಗಳು ಪ್ರಸ್ತರಗಳ ಇಳಿವೋರೆಯ ದಿಕ್ಕಿನಲ್ಲಿ ಅಷ್ಟು ಉಬ್ಬುತಗ್ಗುಗಳಿಲ್ಲದ ಸುಗಮವಾದ ಮೇಲ್ಮೈಯನ್ನೂ ಅದರ ವಿರುದ್ಧ ದಿಕ್ಕಿನಲ್ಲಿ ಬಹು ಕಡಿದಾದ ಮೇಲ್ಮೈಯನ್ನೂ ಪ್ರದರ್ಶಿಸುತ್ತವೆ.




**ಬೆಟ್ಟದ ಶಿಲಾಸಮೂಹದ ವಿವಿಧ ಪ್ರಸ್ತರಗಳು : 1. ಪೆಂಟೆಶಿಲೆ, 2. ದಪ್ಪಮರಳುಶಿಲೆ, 3. ಮರಳುಶಿಲೆ, 4. ಜೇಡುಶಿಲೆ, 5. ಜಲಜ ಶಿಲಾಪ್ರಸ್ತರಗಳ ನಡುವೆ ಪ್ರವಹಿಸಿರುವ ಬೇಸಿಕ್ ಶಿಲೆ (ಅಗ್ನಿಶಿಲೆ), 6. ಸುಣ್ಣಶಿಲೆ**

ಇವನ್ನು ಅನುಕ್ರಮವಾಗಿ ಬೆಟ್ಟದ ಇಳಿಜಾರು ಮತ್ತು ಬೆಟ್ಟದ ಕಡಿದು ಎನ್ನಬಹುದು. ಹೆಚ್ಚು ಶ್ರಮವಿಲ್ಲದೆ, ಇಳಿಜಾರಿನ ಕಡೆ, ಬೆಟ್ಟವನ್ನು ಹತ್ತಿ ಇಳಿಯಬಹುದು. ಅಲ್ಲದೆ ಈ ಇಳಿಜಾರಿನುದ್ದಕ್ಕೂ ಶಿಲಾಸಮೂಹದ ಕೇವಲ ಒಂದೇ ಒಂದು ಪ್ರಸ್ತರ ಗೋಚರವಾಗುತ್ತವೆ. ಆದರೆ ಕಡಿದಾಗಿರುವ ಕಡೆ ಬೆಟ್ಟವನ್ನು ಹತ್ತುವುದೂ ಇಳಿಯುವುದೂ ಬಹು ಶ್ರಮವಾದ ಕೆಲಸ. ಈ ಪಾರ್ಶ್ವದಲ್ಲಿ ಹೆಚ್ಚಿನ ಏರುಪೇರುಗಳಿರುವುದೂ ಸಾಮಾನ್ಯ. ಅಲ್ಲದೆ ಇಲ್ಲಿ ಶಿಲಾ ಸಮೂಹದ ನಾನಾಬಗೆಯ ಪ್ರಸ್ತರಗಳನ್ನೂ ಗುರುತಿಸಬಹುದು. ವಿವೇಚಿಸುವುದಾದರೆ ಕಡಿದು ದೈಹಿಕವಾಗಿ ಶ್ರಮಸಾಧ್ಯವಾದರೂ ವೈಜ್ಞಾನಿಕವಾಗಿ ಭೂವಿಜ್ಞಾನಿಗೆ ನಿಸರ್ಗದ ವರವಿದ್ದಂತೆ. ಕಾರಣ, ಬೆಟ್ಟದ ಕಡಿದಾದ ಪಾರ್ಶ್ವದಲ್ಲಿ ವಿವಿಧ ಶಿಲಾ ಪ್ರಸ್ತರಗಳನ್ನು ಅಧ್ಯಯನ ಮಾಡಬಹುದು. ಕೆಲವು ಬೆಟ್ಟಗಳ ಕಡಿದಿನಲ್ಲಿ ಕಂಡುಬರುವ ಶಿಲಾಪ್ರಸ್ತರಗಳು ತಮ್ಮ ಸಂಯೋಜನೆ ಮತ್ತು ರಚನೆಯಲ್ಲಿ ಏಕರೀತಿಯವಾಗಿರದ ಕಾರಣ ಜಾಳಾದ ರಚನೆಯುಳ್ಳ ಪ್ರಸ್ತರಗಳು ಗಾಳಿಮಳೆಗಳ ಹಾವಳಿಗೆ ಸಿಕ್ಕಿ ಸುಲಭವಾಗಿ ನಶಿಸಿ ಹೋಗುತ್ತವೆ. ಆದರೆ ಗಡಸು ರಚನೆ ಮತ್ತು ಕ್ಲಿಷ್ಟ ಸಂಯೋಜನೆಯುಳ್ಳ ಶಿಲಾಪ್ರಸ್ತರಗಳು ಸುಲಭವಾಗಿ ಸವೆಯದೆ ಸವೆದ ಪ್ರಸ್ತರಗಳ ನಡುವೆ ಎದ್ದು ಕಾಣುತ್ತವೆ. ಹೀಗಾಗುವುದರಿಂದ ಬೆಟ್ಟದ ಕಡಿದು ಇನ್ನೂ

ಹೆಚ್ಚು ಕ್ಲಿಷ್ಟವಾಗಿ ಹತ್ತಿ ಇಳಿಯಲು ಎಂದಿಲ್ಲದ ಶ್ರಮ ವಹಿಸಬೇಕಾದೀತು. ಆಂಧ್ರ ಪ್ರದೇಶದ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿನ ಕಡಪ ಶಿಲಾಸ್ತೋಮಕ್ಕೆ ಸೇರಿದ ಅನೇಕ ಬೆಟ್ಟಗಳಲ್ಲಿ ಕಡಿದು ಮತ್ತು ಇಳಿಜಾರುಗಳನ್ನು ಸುಲಭವಾಗಿ ಗುರುತಿಸಬಹುದು. (ಬಿ.ವಿ.ಜಿ.)

**ಕಡಿರಿ ರಾಜ್ಯ :** 11ನೆಯ ಶತಮಾನದ ಆದಿಭಾಗದಲ್ಲಿ ಜಾವದಲ್ಲಾಳುತ್ತಿದ್ದ ಏರ್ಲಂಗದೊರೆ ತನ್ನ ಇಬ್ಬರು ಮಕ್ಕಳಿಗೆ ಹಂಚಿಕೊಟ್ಟ ರಾಜ್ಯದ ಎರಡು ಭಾಗಗಳಲ್ಲೊಂದು; ಪಶ್ಚಿಮಾರ್ಧ. ಪಂಜುಲು ಇದರ ಮುಂಚಿನ ಹೆಸರು; ರಾಜಧಾನಿ ಕಡಿರಿ. ಕಡಿರಿ ಎಂದೇ ಈ ರಾಜ್ಯ ಪ್ರಸಿದ್ಧವಾಯಿತಲ್ಲದೆ ಕ್ರಮೇಣ ಹೆಚ್ಚು ಪ್ರಬಲವಾಗಿ ಇನ್ನೊಂದು ಭಾಗವನ್ನೂ ವಶಪಡಿಸಿಕೊಂಡಿತು. ಪಶ್ಚಿಮ ಜಾವದಲ್ಲಿರುವ ಸುಣ್ಣ ಮತ್ತು ಸು–ಕಿ–ತಾನ್‌ಗಳನ್ನು ಬಿಟ್ಟು ಜಾವದ ಮಿಕ್ಕೆಲ್ಲ ನೆಲವೂ ಕಡಿರಿ ರಾಜ್ಯಕ್ಕೆ ಒಳಪಟ್ಟಿತ್ತೆಂದು ಚೌ ಜು–ಕ್ವ ಎಂಬ ಚೀನೀ ಅಧಿಕಾರಿಯೊಬ್ಬನ ಬರಹದಿಂದ ತಿಳಿದುಬರುತ್ತದೆ. ಆತ ಸ್ವತಃ ಕಡಿರಿಯನ್ನು ಕಂಡಿರಲಿಲ್ಲ. ಅಲ್ಲಿಗೆ ಹೋಗಿ ಬಂದವರಿಂದ ಕೇಳಿ ತಿಳಿದಿದ್ದನ್ನೆ ಬರೆದ. ಕಡಿರಿಯನ್ನಾತ ಪೊ–ಪೊ ಅಥವಾ ಯುವ ಎಂದು ಕರೆದಿದ್ದಾನೆ. ಜಾವದ ಒಳಗೂ ಹೊರಗೂ ಪೊ–ಪೊಗೆ ಅಧೀನವಾಗಿದ್ದ 15 ರಾಜ್ಯಗಳ ಪಟ್ಟಿಯೊಂದನ್ನೂ ಆತ ಕೊಟ್ಟಿದ್ದಾನೆ. ಇವುಗಳ ಪೈಕಿ ಬಲಿ ಮತ್ತು ನೈಋತ್ಯ ಬೋರ್ನಿಯೋಗಳು ಮುಖ್ಯವಾದವು.

12ನೆಯ ಶತಮಾನದಲ್ಲಿ ಅನೇಕ ರಾಜರು ಕಡಿರಿಯನ್ನಾಳಿದರು. ಅವರ ಪೈಕಿ ಜಯವರ್ಷ, ಕಾಮೇಶ್ವರ ಮತ್ತು ಜಯಭಯರು ಮುಖ್ಯ. ಆಯಾ ಕಾಲಗಳಲ್ಲಿ ಬರೆದ ಕಾವ್ಯಗಳಲ್ಲಿ ಇವರ ಹೆಸರುಗಳು ಚಿರಸ್ಥಾಯಿಯಾಗಿವೆ. ಜಯವರ್ಷನ ಆಶ್ರಯದಲ್ಲಿ ಕಣ್ವ ಕವಿ ಜಾವ ಭಾಷೆಯಲ್ಲಿ ಕೃಷ್ಣಾಯನವೆಂಬ ಕಾವ್ಯ ರಚಿಸಿದ್ದಾನೆ. ಇವನ ಅನಂತರ ಕಡಿರಿಯ ದೊರೆಯಾದ ಕಾಮೇಶ್ವರನ ಹೆಸರು ಸ್ಮರದಹನ ಕಾವ್ಯದಲ್ಲಿ ಉಲ್ಲೇಖಿತವಾಗಿದೆ. ಕಾಮೇಶ್ವರನ ಮಗನಾದ ಜಯಾಭಯನದು ನರಸಿಂಹ ಲಾಂಛನ. ಪ್ರಜೆಗಳು ಇವನನ್ನು ವಿಷ್ಣುವಿನ ಅವತಾರವೆಂದು ಗೌರವಿಸುತ್ತಿದ್ದರು. ಇವನ ಆಶ್ರಯದಲ್ಲಿ ಪನುಲುಹ್ ಕವಿ ಭಾರತಯುದ್ಧ ಕಾವ್ಯವನ್ನು ಪೂರ್ಣಗೊಳಿಸಿದ. ಹರಿವಂಶ ಮತ್ತು ಘಟೋತ್ಕಚ–ಇವು ಈ ಕವಿಯ ಇತರ ಎರಡು ಕಾವ್ಯಗಳು. ಜಯಭಯನ ಅನಂತರ ಬಂದ ರಾಜರ ವಿಚಾರವಾಗಿ ಅಷ್ಟೇನೂ ತಿಳಿಯದು. ಕಡಿರಿ ರಾಜ್ಯದ ಕೊನೆಯ ರಾಜನಾದ ಕೃತಜಯನ ವಿಚಾರವಾಗಿ ಪರರತನ್ ಎಂಬ ಗ್ರಂಥದಿಂದ ಅನೇಕ ವಿಷಯಗಳು ತಿಳಿಯುತ್ತವೆ. ಆದರೆ ಇದರಲ್ಲಿ ಕೊಟ್ಟಿರುವುದೆಲ್ಲ ವಾಸ್ತವವೆನ್ನಲಾಗುವುದಿಲ್ಲ. ಈ ದೊರೆ ತಾನೇ ದೇವರೆಂದು ಸಾರಿಕೊಂಡು, ಪುರೋಹಿತರೂ ತನಗೆ ನಮಸ್ಕಾರ ಮಾಡಬೇಕೆಂದು ಆಜ್ಞೆ ಮಾಡಿದನಂತೆ. ಇದರಿಂದ ಕೋಪಗೊಂಡ ಪುರೋಹಿತರು ನೆರೆ ಪ್ರದೇಶದ ಒಡೆಯನಾದ ಆಂಗ್ರೋಕನ ಆಶ್ರಯ ಪಡೆದರು. ಆಂಗ್ರೋಕ ಮೊದಲು ದರೋಡೆಗಾರನಾಗಿದ್ದ. ತನ್ನ ಯಜಮಾನನಾಗಿದ್ದ ತುಮಾಪೆಲಿನ ಗವರ್ನರನ್ನು ಕೊಂದು ಅವನ ಹೆಂಡತಿಯನ್ನು ಮದುವೆಯಾಗಿ ಕವಿಪರ್ವತದ ಪೂರ್ವ ಭಾಗವನ್ನಾಳುತ್ತಿದ್ದ. ದೊರೆಗೂ ಪುರೋಹಿತರಿಗೂ ನಡುವೆ ಸಂಭವಿಸಿದ್ದ ವಿರಸದ ದುರುಪಯೋಗ ಪಡೆದುಕೊಂಡು ಆತ ರಾಜಸನೆಂಬ ಬಿರುದು ತಳೆದು ತಾನೇ ದೊರೆಯೆಂದು ಘೋಷಿಸಿಕೊಂಡ. 1222ರಲ್ಲಿ ಎರಡು ಬಾರಿ ಕೃತಜಯನ ಮೇಲೆ ಯುದ್ಧ ನಡೆಯಿತು. ಕಡಿರಿ ಅವನ ವಶವಾಯಿತು.

ಜಾವ ಸಾಮ್ರಾಜ್ಯಕ್ಕೆ ನಿಜವಾದ ಅಸ್ತಿಭಾರ ಹಾಕಿದ ಕಡಿರಿ ರಾಜ್ಯದ ಸಾಹಿತ್ಯ ಮತ್ತು ಕಲೆಗಳು ಬಹಳ ಮಟ್ಟಿಗೆ ಬೆಳೆದುವು. ಜಾವದ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು. ಜಾವ ಭಾಷೆಯಲ್ಲಿ ಅನೇಕ ಕಾವ್ಯಗಳು ರಚಿತವಾದುವು. ಇವುಗಳಿಂದ ಸ್ಫೂರ್ತಿಗೊಂಡ ಶಿಲ್ಪಿಗಳು, ಮಹಾಭಾರತ ಕಥೆಗಳನ್ನು ದೇವಾಲಯಗಳ ಗೋಡೆಗಳ ಮೇಲೆ ಕೆತ್ತಿದರು. ಕಡಿರಿ ರಾಜರು ಅನೇಕ ಕವಿಗಳಿಗೆ ಪ್ರೋತ್ಸಾಹ ನೀಡಿದರು. ತ್ರಿಗುಣ ಕವಿಯ ಕೃಷ್ಣಾಯನ ಕಾವ್ಯದಲ್ಲಿ ಕೃಷ್ಣ–ರುಕ್ಮಿಣಿಯರ ಕಥೆ ಹೃದಯಂಗಮವಾಗಿ ಚಿತ್ರಿತವಾಗಿದೆ. ಭಾರತಯುದ್ಧ ಈ ಕಾಲದ ಅತ್ಯಂತ ಮುಖ್ಯಗ್ರಂಥ. ಮ್ಪುಸೆಡ ಕವಿಯಿಂದ ಪ್ರಾರಂಭವಾದ ಈ ಕಾವ್ಯವನ್ನು ಪುನಲುಹ್ ಕವಿ ಪೂರ್ಣಗೊಳಿಸಿದ. ಧಮ್ಜೀಯನ ಸ್ಮರದಹನವೂ ಒಂದು ಉತ್ತಮ ಕಾವ್ಯ. ಇದು ಕಾಳಿದಾಸನ ಕುಮಾರಸಂಭವದ ಆಧಾರದ ಮೇಲೆ ರಚಿತವಾದದ್ದು. ಜಾವದ ಚರಿತ್ರೆಯಲ್ಲಿ ಕಡಿರಿ ರಾಜ್ಯದ ಕಾಲದಲ್ಲಿ ಆದಷ್ಟು ಸಾಹಿತ್ಯನಿರ್ಮಾಣ ಮತ್ತೆ ಯಾವಾಗಲೂ ಆಗಲಿಲ್ಲವೆಂದು ಹೇಳಬಹುದು. ಅಷ್ಟೇ ಅಲ್ಲ. ಭಾರತೀಯ ಸಾಹಿತ್ಯದ ಪ್ರಭಾವ ಜಾವದಲ್ಲಿ ಎಷ್ಟೊಂದು ಗಾಢವಾಗಿದ್ದಿತೆಂಬುದೂ ಇದರಿಂದ ವ್ಯಕ್ತವಾಗುತ್ತದೆ. (ಎ.ವಿ.ಎನ್.)

**ಕಡೂರು :** ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಪೂರ್ವಭಾಗದಲ್ಲಿರುವ ಒಂದು ತಾಲ್ಲೂಕು ಕೇಂದ್ರ. ಪುರಸಭೆ ಇರುವ ಪಟ್ಟಣ. ಜನಸಂಖ್ಯೆ 200,802 (2001) ಹಾಗೂ ಪಟ್ಟಣದ ಜನಸಂಖ್ಯೆ 1,01,022 (2001). ಉ.ಅ. 13032' ಮತ್ತು ಪೂ.ರೇ. 7604'ನಲ್ಲಿರುವ ಈ ಪಟ್ಟಣದ ಮೂಲಕ ಬೆಂಗಳೂರು–ಪುಣೆ ರೈಲು ಮಾರ್ಗವೂ ಬೆಂಗಳೂರು–ಶಿವಮೊಗ್ಗ ರಸ್ತೆಯೂ ಹಾದುಹೋಗುತ್ತವೆ. ಜಿಲ್ಲೆಯ ಮುಖ್ಯ ಪಟ್ಟಣವಾದ ಚಿಕ್ಕಮಗಳೂರು ಇದಕ್ಕೆ ನೈಋತ್ಯದಲ್ಲಿ 40 ಕಿಮೀ ದೂರದಲ್ಲಿದೆ.

1863–65ರ ವರೆಗೆ ಇದು ಜಿಲ್ಲಾ ಮುಖ್ಯಪಟ್ಟಣವಾಗಿತ್ತು. ಆಗ ಕಡೂರೆಂದೇ ಈ ಜಿಲ್ಲೆಯ ಹೆಸರು. 1875ರ ವರೆಗೂ ಇದು ಕಡೂರು ತಾಲ್ಲೂಕಿನ ಕೇಂದ್ರವಾಗಿತ್ತು. ಆಗ ಇದು ಬಾಣಾವರ ತಾಲ್ಲೂಕಿನಲ್ಲಿ ಸೇರಿತ್ತು. ಮತ್ತೆ (1882) ಇದಕ್ಕೆ ತಾಲ್ಲೂಕು ಕೇಂದ್ರದ ಸ್ಥಾನ ಲಭ್ಯವಾಯಿತಲ್ಲದೆ, ಅನಂತರ (1886) ಇದರ ಹೆಸರೇ ಈ ತಾಲ್ಲೂಕಿಗೂ ಬಂತು.

ಪ್ರಾಚೀನಕಾಲದಲ್ಲಿ ಇದು ಜೈನರ ಕ್ಷೇತ್ರವಾಗಿದ್ದು ಗಂಗ ಸಾಮ್ರಾಜ್ಯಕ್ಕೆ ಅಧೀನವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಅನಂತರ ಇದು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. 14ನೆಯ ಶತಮಾನದಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಎಮ್ಮೆದೊಡ್ಡಿ ಗುಡ್ಡದ ಸುತ್ತಣ ಪ್ರದೇಶವನ್ನು ಮಾದನಾಯಕನೆಂಬ ಸಾಮಂತನಿಗೆ ಕೊಡಲಾಯಿತು. ಈಗಿನ ಕಡೂರು ಪಟ್ಟಣ ಇರುವ ಸ್ಥಳದಲ್ಲಿ ಆಗ ನಾರ್ಣಪುರ ಅಗ್ರಹಾರವಿತ್ತಂತೆ. ಮಾದನಾಯಕ ಒಮ್ಮೆ ಇತ್ತ ಮೃಗಾಯಾವಿಹಾರಕ್ಕಾಗಿ ಬಂದಿದ್ದಾಗ ಈ ಬಳಿಯಲ್ಲಿ ಕಡವೆಯೊಂದು ನಾಯಕನ ಬೇಟೆನಾಯಿಗಳನ್ನು ಅಟ್ಟಿಸಿಕೊಂಡು ಬಂತಂತೆ. ನಾಯಕ ಇಲ್ಲೊಂದು ಕೋಟೆ ಕಟ್ಟಿಸಿದ. ಈ ಊರಿಗೆ ಕಡವೆಯ ಊರು ಅಥವಾ ಕಡೂರು ಎಂಬ ಹೆಸರು ಬಂದದ್ದು ಹೀಗೆ.

ಕಡೂರಿನ ಕೋಟೆಯೊಳಗೆ ಕೊಳದ ಬಳಿ ಇರುವ ಆಂಜನೇಯ ದೇವಸ್ಥಾನ ಹಳೆಯದು. ಈ ದೇವಸ್ಥಾನದ ಮೊಗಸಾಲೆಯ ನಾಲ್ಕು ಕಂಬಗಳು ಬಲು ಸುಂದರವಾಗಿವೆ. ಇವು ಯಾವುದೋ ಹೊಯ್ಸಳ ದೇವಸ್ಥಾನದ ಭಾಗವಾಗಿದ್ದಿರಬೇಕು. ಪುರಾಣದ ದೃಶ್ಯಗಳನ್ನು ಕೆತ್ತಲಾಗಿರುವುದು ಈ ಕಂಬಗಳ ವೈಶಿಷ್ಟ್ಯ. ಇಂಥ ಕೆತ್ತನೆಗಳು ಸಾಮಾನ್ಯವಾಗಿ ಹೊಯ್ಸಳ ಶೈಲಿಯ ದುಂಡು ಕಂಬಗಳ ಮೇಲೆ ಇರುವುದಿಲ್ಲ. ಇವು ಸಾಮಾನ್ಯವಾಗಿ ದ್ರಾವಿಡ ದೇವಸ್ಥಾನಗಳ ಚಚ್ಚೌಕ ಕಂಬಗಳ ಮೇಲಿರುವುದುಂಟು.

ಕಡೂರು ರೈಲ್ವೆನಿಲ್ದಾಣ ಪುಟ್ಟದಾದರೂ ಪ್ರಾಮುಖ್ಯ ಪಡೆದಿದೆ. ಬೀರೂರು ರೈಲ್ವೆ ಜಂಕ್ಷನ್ ಇಲ್ಲಿಗೆ 7 ಕಿಮೀ ದೂರದಲ್ಲಿದೆ. ಮಂಗಳೂರು ಕಡೆಯಿಂದ ಮುಂಬಯಿಗೆ ಪ್ರಯಾಣ ಮಾಡುವವರು ಸಾಮಾನ್ಯವಾಗಿ ಈ ಮಾರ್ಗವಾಗಿ ಪ್ರಯಾಣ ಮಾಡುತ್ತಾರೆ. ಇಲ್ಲಿಂದ ರಾಜ್ಯದ ನಾನಾ ಭಾಗಗಳಿಗೆ ರಸ್ತೆಸಾರಿಗೆ ಸೌಕರ್ಯವಿದೆ.

ಕಡೂರಿನ ಸುತ್ತಮುತ್ತ ಇರುವ ಬಂಡೆಗಳಿಂದ ಚಪ್ಪಡಿ ತೆಗೆಯಲಾಗುತ್ತಿದೆ. ಇಲ್ಲೊಂದು ಹೆಂಚು ಕಾರ್ಖಾನೆ ಇದೆ. ಕಡೂರು ಈ ಜಿಲ್ಲೆಯ ಮಲೆನಾಡಿನ ಹೆಬ್ಬಾಗಿಲಿನಂತಿರುವುದರಿಂದ ಜಿಲ್ಲೆಯ ವ್ಯಾಪಾರದ ಒಂದು ಭಾಗ ನಡೆಯುವುದು ಇದರ ಮೂಲಕ.

**ತಾಲ್ಲೂಕು:** ಕಡೂರು ತಾಲ್ಲೂಕಿನ ವಿಸ್ತೀರ್ಣ 1414 ಚಕಿಮೀ. ಜನಸಂಖ್ಯೆ: 2,89,406 (2001) ಬಿದರೆ ಬೀರೂರು, ಹಿರೇನಲ್ಲೂರು, ಕಡೂರು, ಸಕ್ಕರೆಪಟ್ಟಣ, ಯಗಟಿ–ಇವು ಈ ತಾಲ್ಲೂಕಿನ ಹೋಬಳಿಗಳು. ಬೀರೂರು, ಕಡೂರು, ಸಕ್ಕರೆಪಟ್ಟಣ, ಹುಲಿಕೆರೆ, ನಿಡಗಟ್ಟ, ಬಿದರೆ, ಯರದಕೆರೆ, ಆಸಂದಿ ಮತ್ತು ಹಿರಿಯೂರು ದೊಡ್ಡ ಸ್ಥಳಗಳು. 64 ಪಂಚಾಯಿತಿಗಳೂ 104ಕ್ಕೂ ಹೆಚ್ಚು ಸಹಕಾರ ಸಂಘಗಳೂ ಇರುವ ತಾಲ್ಲೂಕಿನಲ್ಲಿ ಹರಿಜನ–ಗಿರಿಜನರಿಗಾಗಿ ಸ್ಥಾಪಿತವಾಗಿರುವ ಸಹಕಾರ ಸಂಘ ಉಲ್ಲೇಖಾರ್ಹವಾದದ್ದು.

ಕಡೂರು ತಾಲ್ಲೂಕು ಹಿಂದೆ ಆಗಿಂದಾಗ್ಗೆ ಬದಲಾವಣೆಗೆ ಒಳಪಟ್ಟಿತು. ಬಲು ಹಿಂದೆ ಕಡೂರು, ಯಗಟಿ, ಗರುಡನಗಿರಿ ಮತ್ತು ಬಾಣಾವರ ತಾಲ್ಲೂಕುಗಳಿದ್ದುವೆಂದೂ ಕಡೂರು ಯಗಟಿಗಳು ಇಕ್ಕೇರಿ ರಾಜ್ಯಕ್ಕೆ ಸೇರಿದ್ದುವೆಂದೂ ಹೇಳಲಾಗಿದೆ. ಇವನ್ನು ಮೈಸೂರು ದೊರೆಗಳು ವಶಪಡಿಸಿಕೊಂಡು ತರೀಕೆರೆಯ ಪಾಳೆಯಗಾರನಿಗೆ ಕೊಟ್ಟರು. ಹೈದರ್ ಇವನ್ನು ಮತ್ತೆ ಮೈಸೂರಿಗೆ ಸೇರಿಸಿಕೊಂಡ. 1835ರಲ್ಲಿ ಯಗಟಿಯನ್ನು ಕಡೂರಿಗೆ ಸೇರಿಸಲಾಯಿತು. 1876ರಲ್ಲಿ ಕಡೂರು ಬಾಣಾವರಗಳನ್ನು ಒಂದೇ ತಾಲ್ಲೂಕಾಗಿ ಮಾಡಿ ಅದನ್ನು ಬಾಣಾವರವೆಂದೇ ಕರೆಯಲಾಯಿತು; ಬಾಣಾವರವೇ ತಾಲ್ಲೂಕಿನ ಮುಖ್ಯಸ್ಥಳವೂ ಆಯಿತು. 1882ರಲ್ಲಿ ಮತ್ತೆ ಕಡೂರು ತಾಲ್ಲೂಕು ಕೇಂದ್ರವಾಯಿತು. 1886ರಲ್ಲಿ ಅರಸೀಕೆರೆ ತಾಲ್ಲೂಕು ಆದಾಗ ಕಡೂರು ತಾಲ್ಲೂಕನ್ನು ಪುನರ್ರಚಿಸಲಾಯಿತು. ಚಿಕ್ಕಮಗಳೂರು ತಾಲ್ಲೂಕಿನ ಸಕ್ಕರೆಪಟ್ಟಣವನ್ನು ಕಡೂರಿಗೆ ಸೇರಿಸಿ ಹಳೆಯ ಬಾಣಾವರ ತಾಲ್ಲೂಕಿನ ಭಾಗವನ್ನೂ ಬಾಣಾವರವನ್ನೂ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿಗೆ ವರ್ಗಾಯಿಸಲಾಯಿತು.

ಕಡೂರು ತಾಲ್ಲೂಕಿನ ಪಶ್ಚಿಮಕ್ಕೆ ಬಾಬಾಬುಡನ್ ಪರ್ವತಶ್ರೇಣಿಯ ಪೂರ್ವದ ಕವಲುಗಳು ಹರಡಿವೆ. ದಕ್ಷಿಣದಲ್ಲಿ ಜಾವಗಲ್ಲಿನಿಂದ ಗರುಡನಗಿರಿಯವರೆಗೆ ಇನ್ನೊಂದು ಶ್ರೇಣಿಯುಂಟು. ತೊಟ್ಟಿಲಿನಂತಿರುವ ಈ ತಾಲ್ಲೂಕಿನ ನಡುಭಾಗದಲ್ಲಿ ಈಶಾನ್ಯಾಭಿಮುಖವಾಗಿ ಹರಿಯುವ ನದಿಯೇ ವೇದಾವತಿ. ವೇದಾ ಮತ್ತು ಅವತಿ ನದಿಗಳಿಂದ ಕೂಡಿ ವೇದಾವತಿ ಯಾಗುವ ಈ ನದಿಯನ್ನು ಯಗಟಿಯ ಬಳಿ ಕೂಡುವ ಇನ್ನೊಂದು ತೊರೆಯ ಹೆಸರು ಜಾವಗಲ್ ಹಳ್ಳ. ವೇದಾ, ಅವತಿಗಳೆರಡೂ ಬಾಬಾಬುಡನ್ ಪರ್ವತದಲ್ಲಿ ಹುಟ್ಟುತ್ತವೆ. ವೇದಾನದಿ ಅಯ್ಯನಕೆರೆಯನ್ನೂ ಅವತಿ ನದಿ ಮದಗಕೆರೆಯನ್ನೂ ಕೂಡಿ ಮುಂದೆ ಸಾಗುತ್ತವೆ. ಈ ಎರಡೂ ವಿಷ್ಣು ಸಮುದ್ರವೂ ಈ ಸುತ್ತಿನ ಅತಿದೊಡ್ಡ ಕೆರೆಗಳು. ವೇದ ಮತ್ತು ಅವತಿ ನದಿಗಳಿಗೆ ಕಟ್ಟೆಗಳನ್ನು ಕಟ್ಟಿ, ತಾಲ್ಲೂಕಿನಲ್ಲಿ ನೀರಾವರಿಯ ಜಾಲವನ್ನು ವಿಸ್ತರಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಮಳೆ ಬೀಳುವ ಜಿಲ್ಲೆಯಾದ ಚಿಕ್ಕಮಗಳೂರಿನಲ್ಲಿ ಅತಿಕಡಿಮೆ ಮಳೆ ಪಡೆಯುವ ತಾಲ್ಲೂಕು ಕಡೂರು. ಇದರ ವಾರ್ಷಿಕ ಸರಾಸರಿ ಮಳೆ 583.7 ಮಿಮೀ (ಶೃಂಗೇರಿ ಅತಿ ಹೆಚ್ಚು : 3760.8 ಮಿಮೀ)

ತಾಲ್ಲೂಕಿನಲ್ಲಿ ಫಲವತ್ತಾದ ಕಪ್ಪುಮಣ್ಣಿನಿಂದ ಮರಳು ಮಣ್ಣಿನವರೆಗೆ ಹಲವು ಬಗೆಯ ನೆಲಗಳಿವೆ, ದಕ್ಷಿಣ ಪಶ್ಚಿಮಗಳಲ್ಲಿ ಒಳ್ಳೆಯ ಹೊಗೆಸೊಪ್ಪು ಬೆಳೆಯುತ್ತದೆ. ತಗ್ಗಿನ ಮರಳು ನೆಲದಲ್ಲಿ ತೆಂಗಿನ ಮರಗಳು ವಿಶೇಷ. ವಾಯವ್ಯ ಭಾಗದಲ್ಲಿರುವ ಹೊಗರಿ ಬೆಟ್ಟದಲ್ಲಿ ಕಬ್ಬಿಣದ ಅದುರು ಸಿಗುತ್ತದೆ.

ಕಡೂರು ತಾಲ್ಲೂಕಿನಲ್ಲಿ ತರಿ, ಖುಷ್ಕಿ ಮತ್ತು ಬಾಗಾಯತು – ಈ ಮೂರು ವಿಧದ ಬೆಳೆಗಳೂ ಇವೆ. ಹಲವೆಡೆ, ತೆಂಗು, ಬಾಳೆ, ಅಡಕೆ ಬೆಳೆಯುತ್ತಾರೆ. ಸಕ್ಕರೆಪಟ್ಟಣದ ಹಲಸು, ಬೀರೂರಿನ ಅಡಕೆ, ಅಣೆಗೆರೆಯ ಎಳನೀರು, ಎಮ್ಮೆ ದೊಡ್ಡಿಯ ಕಿತ್ತಳೆಹಣ್ಣು ಪ್ರಸಿದ್ಧವಾಗಿವೆ. ಕಡೂರು ಪಟ್ಟಣದ ಸುತ್ತಮುತ್ತ ಎಳ್ಳು, ಜೋಳ, ರಾಗಿ, ಮತ್ತು ಮೆಣಸಿನಕಾಯಿ ವಿಶೇಷವಾಗಿ ಬೆಳೆಯುತ್ತಾರೆ. ಮಿಕ್ಕ ಕಡೆ ಬೆಳೆಯುವ ಎಳ್ಳಿಗಿಂತ ಕಡೂರು ತಾಲ್ಲೂಕಿನಲ್ಲಿ ಬೆಳೆಯುವ ಎಳ್ಳಿನಲ್ಲಿ ಕೊಬ್ಬಿನ ಅಂಶ ಹೆಚ್ಚು. ಈ ತಾಲ್ಲೂಕಿನಲ್ಲಿ 1241 ಕಿಮೀ ಉದ್ದದ ರಸ್ತೆ ಮತ್ತು 51 ಕಿಮೀ ರೈಲುಮಾರ್ಗಗಳಿವೆ. ರಸ್ತೆಗಳಲ್ಲಿ ಶೇ45 ಭಾಗ ಸುಧಾರಿತ ಮಾರ್ಗಗಳು, 8081 ಟೆಲಿಫೋನ್ ಸಂಪರ್ಕಗಳು, 56 ಅಂಚೆ ಕಛೇರಿಗಳು, 59 ನೊಂದಾಯಿತ ಕಾರ್ಖಾನೆಗಳು ಮತ್ತು ನೂರಾರು ಸಣ್ಣ ಪ್ರಮಾಣದ ಘಟಕಗಳಿವೆ.

ಕಡೂರು ತಾಲ್ಲೂಕಿನಲ್ಲಿ ಒಟ್ಟು 8 ಗ್ರಾಮಾಂತರ ಪಶುವೈದ್ಯ ಶಾಲೆಗಳಿವೆ. ಇಲ್ಲಿಯ ಅಭಿವೃದ್ಧಿ ಮಂಡಲಿಯವರೇ 9 ಆಯುರ್ವೇದ ಮತ್ತು ಒಂದು ಅಲಾಪತಿ ಔಷಧಾಲಯಗಳನ್ನು ತೆರೆದಿರುವರು. ಇದಲ್ಲದೆ ಸಾಕಷ್ಟು ಸರ್ಕಾರಿ ಆಸ್ಪತ್ರೆಗಳನ್ನೂ ಈ ತಾಲ್ಲೂಕು ಪಡೆದಿದೆ. ಇಲ್ಲಿ 247 ಪ್ರಾಥಮಿಕ ಶಾಲೆಗಳೂ ಹತ್ತು ಪ್ರೌಢಶಾಲೆಗಳೂ ಇವೆ. ಈಚೆಗೆ ಕಡೂರು ಪಟ್ಟಣದಲ್ಲಿ ಒಂದು ಕಾಲೇಜೂ ಸ್ಥಾಪಿತವಾಗಿದೆ.

ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳು: ಈ ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳು ಅನೇಕ. ಕನ್ನಡ ಜೈಮಿನಿಭಾರತ ರಚಿಸಿದ ಮಹಾಕವಿ ಲಕ್ಷ್ಮೀಶನ ಜನ್ಮ ಸ್ಥಳವೆಂದು ಹೇಳಲಾಗಿರುವ ದೇವನೂರು ಕಡೂರು ಪಟ್ಟಣಕ್ಕೆ ಸು.17 ಕಿಮೀ ದೂರದಲ್ಲಿದೆ. ಲಕ್ಷ್ಮೀಶನೇ ಕಟ್ಟಿದನೆನ್ನಲಾದ ಕಾವ್ಯಮಂಟಪ, ಆತನದೆಂದು ಭಾವಿಸಲಾಗಿರುವ ಮನೆ, ಜೈಮಿನಭಾರತ ರಚಿಸಿದ ತಾಣ, ಆರಾಧ್ಯ ದೈವನಾದ–ಅವನೇ ಅರ್ಚಿಸಿದನೆಂಬ–ಶ್ರೀ ಲಕ್ಷ್ಮೀಕಾಂತಸ್ವಾಮಿಯ ಗುಡಿ –ಇವೆಲ್ಲವನ್ನೂ ಕಾಣಬಹುದು. ಜಗನ್ನಾಥವಿಜಯ ಗ್ರಂಥವನ್ನು ರಚಿಸಿದ ರುದ್ರಭಟ್ಟ ಮಹಾಕವಿಯೂ ಇಲ್ಲಿಯವನೇ. ಆತ ಪೂಜಿಸಿದ ಶ್ರೀ ಸಿದ್ಧೇಶ್ವರಸ್ವಾಮಿಯ ಗುಡಿ ಇಲ್ಲಿದೆ.

ಕಡೂರು ಪಟ್ಟಣದ ನೈಋತ್ಯಕ್ಕೆ ಸು. 17 ಕಿಮೀ ದೂರದಲ್ಲಿರುವ ಸಕ್ಕರೆಪಟ್ಟಣ ಇತಿಹಾಸ ಪ್ರಸಿದ್ಧ ಸ್ಥಳ. ಪ್ರತಿ ಶುಕ್ರವಾರವೂ ಸಂತೆ ನಡೆಯುವ ಈ ಊರಿನಲ್ಲಿ ವರ್ಷಕೊಮ್ಮೆ ವೈಶಾಕಮಾಸದಲ್ಲಿ ನಡೆಯುವ ರಂಗನಾಥನ ರಥೋತ್ಸವ ಈ ಸುತ್ತಿನಲ್ಲೆಲ್ಲ ಪ್ರಸಿದ್ಧವಾಗಿದೆ. ಇದು ಮಹಾಭಾರತದ ಕಾಲದಲ್ಲಿ ರುಕ್ಮಾಂಗದನ ರಾಜಧಾನಿಯಾಗಿತ್ತಂತೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇದು ಐಗೂರು ಪಾಳೆಯಗಾರರ ಅಧೀನದಲ್ಲಿತ್ತು. ಮುಂದೆ ಇದು ಇಕ್ಕೇರಿಯ ನಾಯಕರ ವಶವಾಯಿತು. ವಿಜಯನಗರದ ಪತನವಾದ ಮೇಲೆ ಇಕ್ಕೇರಿಯ ನಾಯಕನ ಆಶ್ರಯ ಪಡೆದ ಶ್ರೀರಂಗರಾಯ ಸಕ್ಕರೆಪಟ್ಟಣದಲ್ಲಿ ನೆಲೆಸಿದನೆಂದೂ ಗೊತ್ತಾಗುತ್ತದೆ. 1690ರಲ್ಲಿ ಈ ಊರು ಮೈಸೂರಿನ ವಶವಾಯಿತು. ಇಲ್ಲಿಯ ವೀರಬಲ್ಲಾಳ ಚೌಕಿ ಪ್ರಸಿದ್ಧವಾದದ್ದು. ಇದು ದೊರೆ ವೀರಬಲ್ಲಾಳನ ನ್ಯಾಯಪೀಠವಾಗಿತ್ತಂತೆ. ಸು. 3 ಮೀ ಉದ್ದಗಲದ ಚಚ್ಚೌಕನಾದ ಈ ಚಪ್ಪಟೆಕಲ್ಲನ್ನು ನಾಲ್ಕು ಕಂಬಗಳ ಮೇಲೆ ನಿಲ್ಲಿಸಲಾಗಿದೆ. ಹಳೆಯ ಫಿರಂಗಿ ಇನ್ನೊಂದು ಪ್ರೇಕ್ಷಣೀಯ ವಸ್ತು.

ಸಕ್ಕರೆಪಟ್ಟಣಕ್ಕೆ 6.4 ಕಿಮೀ ದೂರದಲ್ಲಿರುವ ಅಯ್ಯನಕೆರೆಯನ್ನು ರುಕ್ಮಾಂಗದ ರಾಜ ಕಟ್ಟಿಸಿದನೆಂದು ಪ್ರತೀತಿ. ಇದು ಜಿಲ್ಲೆಯ ಅತ್ಯಂತ ದೊಡ್ಡ ಕೆರೆ. ವೇದಾ ನದಿ ಹರಿಯುವುದು ಈ ಮೂಲಕ. ಈ ಕೆರೆಯ ಬಗ್ಗೆ ಒಂದು ದಂತ ಕಥೆಯುಂಟು. ಒಮ್ಮೆ ಕೆರೆಯ ದಂಡೆ ಒಡೆಯುವ ಅಪಾಯವಿದ್ದಾಗ ಇದರ ದೇವತೆಯಿಂದ ನೀರಗಂಟಿಗೆ ಮುನ್ಸೂಚನೆ ಬರಲಾಗಿ, ತಾನು ಊರಿಗೆ ಹೋಗಿ ಸುದ್ದಿ ಮುಟ್ಟಿಸಿ ಹಿಂದಿರುಗಿ ಬರುವವರೆಗೂ ಕೆರೆ ಒಡೆಯಕೂಡದೆಂದು ದೇವತೆಯಿಂದ ಮಾತು ಪಡೆದು ಆತ ಸಕ್ಕರೆಪಟ್ಟಣದ ದೊರೆಗೆ ಈ ವಿಷಯ ತಿಳಿಸಿದನೆಂದೂ ನೀರುಗಂಟಿ ಹಿಂದಿರುಗುವವರೆಗೂ ಕೆರೆ ಒಡೆಯುವುದಿಲ್ಲವೆಂಬ ಭರವಸೆ ಇದ್ದುದರಿಂದ ಆತ ಎಂದೆಂದೂ ಅಲ್ಲಿಗೆ ಹಿಂದಿರುಗದಂತೆ ದೊರೆ ಅವನನ್ನು ಕೊಲ್ಲಿಸಿದನೆಂದೂ ಕೊಟ್ಟ ಮಾತಿಗೆ ದೇವತೆ ತಪ್ಪಿ ನಡೆಯುವಂತಿಲ್ಲವಾದ್ದರಿಂದ ಆಕೆ ಇನ್ನೂ ಆ ನೀರಗಂಟಿಯ ಬರವಿಗಾಗಿ ಕಾದಿದ್ದಾಳೆಂದೂ ಪ್ರತೀತಿ.

ಜನಹಿತಕ್ಕಾಗಿ ಜೀವವನ್ನೆ ತೆತ್ತನೆನ್ನಲಾದ ನೀರಗಂಟಿ ಹೊನ್ನ–ಬಿಲ್ಲನ ಸ್ಮಾರಕ ಸಕ್ಕರೆಪಟ್ಟಣದಲ್ಲಿದೆ. ಈಗಲೂ ಜನ ಅದನ್ನು ಪೂಜಿಸುತ್ತಾರೆ. ಹೊಯ್ಸಳರ ಕಾಲದಲ್ಲಿ ಈ ಕೆರೆಗೆ ದುರಸ್ತಿಕಾರ್ಯ ನಡೆಯಿತು. ಇದರ ಬಳಿ ಇರುವ ಬಲ್ಲಾಳೇಶ್ವರನ ದೇವಾಲಯದ ಹತ್ತಿರದ ಶಾಸನ ವೀರನರಸಿಂಹನ ಕಾಲದ್ದು (13ನೆಯ ಶತಮಾನ). ಅಯ್ಯನಕೆರೆಗೆ ಮಲ್ಲಪ್ಪನ ಕಾಲುವೆ, ಬಸವನ ಕಾಲುವೆ, ಊರು ಕಾಲುವೆ ಎಂಬ ಮೂರು ಕಾಲುವೆ ಮತ್ತು ಕೆರೆ ಕಾಲುವೆ ಎಂಬ ನಾಲ್ಕು ಕಾಲುವೆಗಳಿವೆ.

ಅಯ್ಯನಕೆರೆಗೆ ಹತ್ತಿರದಲ್ಲಿ ಬಿಲ್ವಪತ್ರ ವನದ ನಡುವೆ ಇರುವ ಶ್ರೀ ಕಲ್ಲುಮರಡಿ ಒಂದು ಪುಣ್ಯಕ್ಷೇತ್ರ.

ದಕ್ಷಿಣಕಾಶಿ ಎಂದು ಪ್ರಸಿದ್ಧವಾಗಿರುವ ಹೇಮಗಿರಿ ಮಲ್ಲಿಕಾರ್ಜುನಸ್ವಾಮಿ ಬೆಟ್ಟ ಕಡೂರು ಪಟ್ಟಣದ ಹತ್ತಿರ ಇದೆ. ಪ್ರಕೃತಿ ಸೌಂದರ್ಯದ ಬೀಡಾದ ಇಲ್ಲಿ ವರ್ಷಕ್ಕೊಮ್ಮೆ ದನದ ಜಾತ್ರೆ ನಡೆಯುತ್ತದೆ.

ಕಡೂರು ಪಟ್ಟಣಕ್ಕೆ 21 ಕಿಮೀ ದೂರವಿರುವ ವೇದ ಮತ್ತು ಅವತಿ ನದಿಗಳ ಸಂಗಮ ಸ್ಥಳವೂ ಒಂದು ರಮಣೀಯ ದೃಶ್ಯ. ಇದು ಇರುವುದು ಯಗಟಿ ಗ್ರಾಮದ ಬಳಿಯಲ್ಲಿ.

ಬ್ರಹ್ಮ ವಿಷ್ಣು, ಮಹೇಶ್ವರರನ್ನು ಒಳಗೊಂಡು ಚೋಳರ ಕಾಲದಲ್ಲಿ ನಿರ್ಮಿತವಾದ ಪುರಾತನ ದೇವಸ್ಥಾನವಿರುವುದು ಕಡೂರು ತಾಲ್ಲೂಕಿನ ಹಿರೇನಲ್ಲೂರಿನಲ್ಲಿ. ಇದರ ಸುತ್ತಮುತ್ತ ಚೋಳರ ಕಲಾಪ್ರೌಢಿಮೆಗೆ ನಿದರ್ಶನಗಳಾದ ಅನೇಕ ದೇವಸ್ಥಾನಗಳುಂಟು.

ಮಹಾಭಾರತದ ಕಾಲದಲ್ಲಿ ಮತ್ಸ್ಯನಗರವೆಂದು ಖ್ಯಾತಿಗೊಂಡಿದ್ದ ಊರೇ ಇಂದು ಮಚ್ಚೇರಿ. ಪಾಂಡವರು ಕುಂತಿಯೊಂದಿಗೆ ಇಲ್ಲಿ ಕೊಂಚ ಕಾಲ ತಂಗಿದ್ದರೆಂಬುದು ಐತಿಹ್ಯ. ಕುಂತಿ ಅಂದು ಮಿಂದಳೆನ್ನಲಾದ ಹೊಳೆಗೆ ಕುಂತಿ ಹೊಳೆಯೆಂಬ ಹೆಸರಿದೆ. ಪವಾಡಪುರುಷರೆಂದು ಖ್ಯಾತಿ ಪಡೆದ ಶ್ರೀ ಸೋಮೇಶ್ವರ ಪ್ರಭುವರ್ಯರು ನಂದೀಶ್ವರರನ್ನು ಸಾಕ್ಷಾತ್ಕಾರ ಮಾಡಿಕೊಂಡ ಸ್ಥಳವಾದ ನಿರ್ವಾಣಸ್ವಾಮಿ ಬೆಟ್ಟ ಇನ್ನೊಂದು ಯಾತ್ರಾ ಸ್ಥಳ. ಕಡೂರು ತಾಲ್ಲೂಕಿನ ಆಸಂದಿ ಗ್ರಾಮ ಇತಿಹಾಸ ಪ್ರಸಿದ್ಧವಾದದ್ದು. ಗಂಗರ ಮತ್ತು ಹೊಯ್ಸಳರ ಕಾಲದಲ್ಲಿ ಇದು ಒಂದು ಮುಖ್ಯನಗರವಾಗಿತ್ತು. 8ನೆಯ ಶತಮಾನದಲ್ಲಿ ಇದನ್ನು ಶ್ರೀಪುರುಷನ ಮಗ ವಿಜಯಾದಿತ್ಯನೂ 12–13ನೆಯ ಶತಮಾನಗಳಲ್ಲಿ ಗಂಗಸಂತತಿಯ ಅರಸರೂ ಆಳುತ್ತಿದ್ದ ಈ ಸ್ಥಳದಲ್ಲಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ನೂರಾರು ಶಾಸನಗಳಿವೆ.

ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳು ವೀರಗಾಸೆ ಕುಣಿತ, ಕರಡಿಮಜಲು, ಕರಪಾಲ, ಕೀಲುಕುದುರೆ ನರ್ತನ–ಮುಂತಾದವಕ್ಕೆ ಹೆಸರಾಗಿವೆ. ಗಿರಿಯಾಪುರ, ಕಾವೇನಹಳ್ಳಿ ಮುಂತಾದ ಊರುಗಳ ಕಲಾವಿದರು ನೆರೆ ರಾಜ್ಯಗಳಲ್ಲಿ ಕೂಡ ತಮ್ಮ ಕಲಾ ಕೌಶಲವನ್ನು ಪ್ರದರ್ಶಿಸಿ ಮನ್ನಣೆ ಗಳಿಸಿದ್ದಾರೆ. (ಎಸ್.ಎಸ್.ಎ.)

**ಕಡೆಂಗೋಡ್ಲು ಶಂಕರಭಟ್ಟ :** 1904–68. ಕವಿ, ಕತೆಗಾರ ಮತ್ತು ಪತ್ರಿಕೋದ್ಯಮಿ. ಮಂಗಳೂರು ಬಳಿಯ ಪೆರುವಾಯಿಯಲ್ಲಿ 1904 ಆಗಸ್ಟ್ 9ರಂದು ಜನಿಸಿದರು. ತಂದೆ ಈಶ್ವರ ಭಟ್ಟ. ಹುಟ್ಟೂರಿನಲ್ಲಿ ಆರಂಭದ ಶಿಕ್ಷಣವನ್ನು ಮುಗಿಸಿ, ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗ, ಅಸಹಕಾರ ಚಳವಳಿಯ ಪ್ರಭಾವಕ್ಕೆ ಒಳಗಾಗಿ ಮಧ್ಯದಲ್ಲಿಯೇ ಶಾಲೆ ಬಿಟ್ಟರು. ಖಾದಿ ತೊಟ್ಟು ಸ್ವದೇಶಿ ವ್ರತಗಳನ್ನು ಕೈಗೊಂಡು ಮಂಗಳೂರಿನ ತಿಲಕ ವಿದ್ಯಾಲಯದಲ್ಲಿ ಸ್ವಲ್ಪ ಕಾಲ ಉಪಾಧ್ಯಾಯರಾಗಿದ್ದರು. ಇದೇ ಅವಧಿಯಲ್ಲಿ ಖಾಸಗಿಯಾಗಿ ವ್ಯಾಸಂಗ ಮಾಡಿ ಮದರಾಸು ವಿಶ್ವವಿದ್ಯಾಲಯದ ಪರೀಕ್ಷೆಗೆ ಕುಳಿತು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. 1927ರಲ್ಲಿ ಮಂಗಳೂರಿನ ಸೇಂಟ್ ಆಗ್ನೀಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿ 1964ರ ಆಗಸ್ಟ್‌ನಲ್ಲಿ ಆ ಹುದ್ದೆಯಿಂದ ನಿವೃತ್ತರಾದರು. ಪತ್ರಿಕಾ ಕ್ಷೇತ್ರದಲ್ಲಿ ಶಂಕರ ಭಟ್ಟರ ಸೇವೆ ಗಮನಾರ್ಹ. ನವಯುಗ ಪತ್ರಿಕಾಲಯದಲ್ಲಿ ಸ್ವಲ್ಪಕಾಲ ಕೆಲಸ ಮಾಡಿದರು. 1928–53ರ ವರೆಗೆ ರಾಷ್ಟ್ರ ಬಂಧು ಪತ್ರಿಕೆಗೆ ಸಂಪಾದಕರಾಗಿದ್ದರು. ರಾಷ್ಟ್ರಮತದ ಸಂಪಾದಕರಾಗಿ ಕೊನೆಯವರೆಗೂ ದುಡಿದರು. ಮುಳಿಯ ತಿಮ್ಮಪ್ಪಯ್ಯನವರು ಶಂಕರ ಭಟ್ಟರ ಸಮೀಪದ ಬಂಧುಗಳು. ಪಂಜೆಮಂಗೇಶರಾಯರಿಂದ ಇವರು ಪ್ರಭಾವಿತರಾಗಿದ್ದರು.

ಶಂಕರಭಟ್ಟರಿಗೆ ಕನ್ನಡದ ಜೊತೆಗೆ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ಅರಿವಿತ್ತು. ಇವರು 1927ರಲ್ಲಿ ಕಾಣಿಕೆ ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದರು. ಅದು ವಿದ್ವಾಂಸರ ಮನ್ನಣೆಯನ್ನು ಗಳಿಸಿತು. ಅನಂತರ ನಲ್ಮೆ ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದರು (1932). ಹೊನ್ನಿಯ ಮದುವೆ, ಮಾದ್ರಿಯ ಚಿತೆ ಮತ್ತು ಮುರಲೀನಾದ ಎಂಬ ಮೂರು ಪದ್ಯಗಳಿರುವ ಈ ಸಂಕಲನ ಶಂಕರಭಟ್ಟರಿಗೆ ಕನ್ನಡ ಕಾವ್ಯಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ತಂದು ಕೊಟ್ಟಿತು. ಅದೇ ವರ್ಷ ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು. ಹಣ್ಣು, ಕಾಯಿ, ಘೋಷಯಾತ್ರೆ ಇವು ಇವರ ಇತರ ಕವನ ಸಂಗ್ರಹಗಳು, ಘೋಷಯಾತ್ರೆ ರಾಜದ್ರೋಹ ಪೂರಿತವಾದುದೆಂದು ಅಂದಿನ ಸರ್ಕಾರ ಬಹಿಷ್ಕರಿಸಿತು. ಷಟ್ಪದಿ ಮತ್ತು ಚೌಪದಿಗಳಲ್ಲೂ ಇವರ ಕಾವ್ಯರಚನೆ ನಡೆದಿದೆ. ಧೂಮಕೇತು, ದೇವತಾ ಮನುಷ್ಯ ಮತ್ತು ಲೋಹದ ಕಣ್ಣು ಇವು ಇವರ ಕಾದಂಬರಿಗಳು, ಗುರುದಕ್ಷಿಣೆ, ಹಿಡಿಂಬೆ ಎಂಬ ಎರಡು ನಾಟಕಗಳನ್ನೂ ಗಾಜಿನ ಬಳೆ, ದುಡಿಯುವ ಮಕ್ಕಳು ಎಂಬ ಎರಡು ಕಥಾಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಸ್ವರಾಜ್ಯ ಯುದ್ಧ ಎಂಬುದು ಇವರ ಒಂದು ಅನುವಾದ ಕೃತಿ. ವಾಙ್ಮಯ ತಪಸ್ಸು ಇವರ ಹಲವು ಲೇಖನಗಳ ಸಂಗ್ರಹ. ಸುಸಂಸ್ಕೃತ ಪ್ರೌಢಶೈಲಿ ಇವರ ಕೃತಿಗಳಲ್ಲಿ ಎದ್ದು ಕಾಣುವ ಲಕ್ಷಣ.

ಶಂಕರಭಟ್ಟರು 1930ರಲ್ಲಿ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೂ 1955ರಲ್ಲಿ ಕಾರವಾರದಲ್ಲಿ ನಡೆದ 45ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಅಧ್ಯಕ್ಷರಾಗಿದ್ದರು. ಕಡೆಂಗೋಡ್ಲು ಶಂಕರಭಟ್ಟರ ಕಾವ್ಯ, ಕಾದಂಬರಿ, ನಾಟಕ, ಸಣ್ಣಕಥೆ ಮತ್ತು ಗದ್ಯ, ಪ್ರಬಂಧಗಳನ್ನು ಕಡೆಂಗೋಡ್ಲು ಸಮಗ್ರವಾಙ್ಮಯ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. (ಟಿ.ಜಿ.ಕೆ.ಬಿ.)

**ಕಡೆತದ ಯಂತ್ರ : ಪದಾರ್ಥವನ್ನು ಕಡೆಯಲು ಉಪಯೋಗಿಸುವ ಯಂತ್ರ :** ಸಂರೂಪಣ (ಶೇಪಿಂಗ್) ಬೈರಿಗೆ ಮುಂತಾದ ಇನ್ನೂ ಅನೇಕ ಕಾರ್ಯಗಳನ್ನು ಮಾಡಬಲ್ಲುದು (ಲೇದ್). ಚರಕಿಯಂತ್ರ ಪರ್ಯಾಯ ಪದ, ಸಾಮಾನ್ಯ ಯಂತ್ರವನ್ನು ಪುನರಾವೃತ್ತಿಯ (ರೆಪಿಟಿಷನ್) ಕಾರ್ಯಗಳಿಗೆ ಉಪಯೋಗಿಸುವುದಿಲ್ಲ. ವಸ್ತುವನ್ನು ಎರಡು ಕೇಂದ್ರಗಳ ನಡುವೆ ಹಿಡಿದು ಅನೇಕ ಸುತ್ತು ಬಿಗಿದ ಹುರಿಯ ಚಲನೆಯಿಂದ ತಿರುಗಿಸಿ ಆಯುಧವನ್ನು ವಸ್ತುವಿಗೆ ಹಿಡಿದು ಕಡೆಯುವ ಕ್ರಿಯೆಯನ್ನು ಮೊದಲ ಕಾಲದಲ್ಲಿ ಜರುಗಿಸುತ್ತಿದ್ದರು. ಕ್ರಮೇಣ ವಿದ್ಯುತ್ ಮೋಟಾರಿನ ಸಹಾಯದಿಂದ ಚಲನೆಯನ್ನು ಪಡೆಯುವುದು ವಾಡಿಕೆಯಾಯಿತು. ಆಯುಧಗಳನ್ನು ಕೈಯಲ್ಲಿ ಹಿಡಿದರೂ ಅವನ್ನು ಒರಗಿನ ಮೇಲೆ ಆನಿಸುವಂತೆ ಸೂಕ್ತ ಮಾರ್ಪಾಡಾಯಿತು; ಅನೇಕ ಜವಗಳನ್ನು (ಸ್ಪೀಡ್ಸ್) ಪಡೆಯಲು ಮೆಟ್ಟಿಲುರಾಟೆಗಳು ಬಂದುವು (ಸ್ಟೆಪ್ಡ್ ಪುಲ್ಲೀಸ್). ಹೀಗೆಯೇ ಮುಂದುವರಿದು ಸ್ಕ್ರೂ ಕಡೆಯಲು ಮತ್ತು ಇತರ ಕ್ರಿಯೆಗಳನ್ನು ನಡೆಸಲು ಸೂಕ್ತ ಮಾರ್ಪಾಡಾಯಿತು. ಒಂದೇ ರೀತಿಯ ವಸ್ತುವನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚು ಶೀಘ್ರವಾಗಿ ಹಾಗೂ ಕರಾರುವಾಕ್ಕಾಗಿ ತಯಾರಿಸಲು ಕ್ಯಾಪ್‍ಸ್ಟನ್, ಟರೆಟ್ ಶೀರ್ಷಿಕೆಗಳ ಜೋಡಣೆಯಾಯಿತು. ಅಂದರೆ ಕಡೆತ ಯಂತ್ರದ ವ್ಯಾಪ್ತಿ, ಅನುಕೂಲತೆ ಮತ್ತು ನಿಖರತೆ ಹೆಚ್ಚಿದಂತೆ ಅದರ ಸಂಕೀರ್ಣತೆಯೂ ಹೆಚ್ಚಿತು.

**ಕಡೆತಯಂತ್ರದ ವಿವರಗಳು :** ಕಡೆತಯಂತ್ರದ ಪೀಠವನ್ನು ಎರಕದ ಕಬ್ಬಿಣದಲ್ಲಿ ಹೊಯ್ದು ಅದರ ಮೇಲ್ಭಾಗವನ್ನು ನುಣುಪು ಮಾಡುತ್ತಾರೆ. ಪೀಠದ ಎಡಭಾಗದ




ಜಾರು ಪೃಷ್ಠಕ ಮತ್ತು ಸ್ಕ್ರೂ ಕತ್ತರಿಸುವ ಕಡೆತದ ಯಂತ್ರ :
1. ಮೆಟ್ಟಿಲು ರಾಟೆಗಳು, 2. ಹಲ್ಲಿನ ಚಕ್ರಗಳಿರುವ ಪೆಟ್ಟಿಗೆ, 3. ಅಚಲ ಶೀರ್ಷಕ, 4. ಚಲ ಕೇಂದ್ರಕ, 5. ಆಯುಧಪೀಠ, 6. ಜಾರುಪೀಠ, 7. ಆಯುಧದ ಜಾಗ, 8. ಹಲ್ಲಣ, 9. ಅಚಲಕೇಂದ್ರಕ, 10. ಸಡಿಲ ಶೀರ್ಷಕ (ಚಲ ಶೀರ್ಷಕ), 11. ಅಗ್ರತಾಸ್ಕ್ರೂ

ಕೊನೆಯಲ್ಲಿ ಅಚಲ ಶೀರ್ಷಕ ಮತ್ತು ಬಲತುದಿಯಲ್ಲಿ ಚಲಶೀರ್ಷಕವೆಂಬ ಭಾಗಗಳಿವೆ. ಇವುಗಳ ನಡುವೆ ಮುಂದೊಯ್ಯುವ ಸ್ಕ್ರೂವಿನ ಸಹಾಯದಿಂದ ಪೀಠದ ಉದ್ದಕ್ಕೂ ಚಲಿಸಬಲ್ಲ ಹಲ್ಲಣವೆಂಬ (ಸ್ಯಾಡಲ್) ಭಾಗವಿದೆ.

**ಅಚಲ ಶೀರ್ಷಕ :** ಇದರಲ್ಲಿ ಮೆಟ್ಟಿಲು ರಾಟೆಗಳು, ದಂಡ (ಸ್ಪಿಂಡಲ್) ಮುಂತಾದ ಭಾಗಗಳು ಇವೆ. ವಿದ್ಯುತ್ ಮೋಟಾರಿನಿಂದ ಬೆಲ್ಟಿನ ಮೂಲಕ ಮೆಟ್ಟಿಲುರಾಟೆ ಚಲನೆಯನ್ನು ಪಡೆದು ಅದನ್ನು ದಂಡಕ್ಕೆ ವರ್ಗಾಯಿಸುತ್ತದೆ. ಇದನ್ನು ಗ್ರಾಹಕ ತಟ್ಟೆ ಪಡೆದು, ದಂಡದ ಕೊನೆಗಿರುವ ಚಲಕೇಂದ್ರಕಕ್ಕೆ ಜೋಡಿಸಿರುವ ಕಾಯಕವಸ್ತುವನ್ನು ತಿರುಗಿಸುತ್ತದೆ. ಗ್ರಾಹಕ ತಟ್ಟೆಯ ಬದಲು ಚಕ್ಕನ್ನು ಉಪಯೋಗಿಸಬಹುದು.

**ಚಲ ಶೀರ್ಷಕ :** ಇದು ಪೀಠದ ಉದ್ದಕ್ಕೂ ಚಲಿಸಬಲ್ಲುದು. ಈ ಶೀರ್ಷಕ ಕಾಯಕ ವಸ್ತುವಿನ ಇನ್ನೊಂದು ತುದಿಯನ್ನು ಹಿಡಿದುಕೊಂಡರೂ ತಿರುಗುವಿಕೆಗೆ ಅಡ್ಡಿ ಮಾಡುವುದಿಲ್ಲ. ಕಡತ ಯಂತ್ರದಲ್ಲಿ ಚಲಶೀರ್ಷಕ ಕೈ ಬಿಡಲಾರದ ಭಾಗವೇನೂ ಅಲ್ಲ. ಇದರ ಅಕ್ಷವನ್ನು ಯಂತ್ರದ ಅಕ್ಷದಿಂದ ಸರಿಯುವಂತೆ ಮಾಡಿ ಸಂವಾಟ ಕಡೆಯುವಿಕೆಯನ್ನು ಮಾಡಬಹುದು.

**ಹಲ್ಲಣ:** ಜಾರು ಪೀಠ (ಕ್ರಾಸ್‍ಸ್ಲೈಡ್) ಮತ್ತು ಆಯುಧ ಪೀಠವನ್ನು ಒಳಗೊಂಡಿರುವ ಭಾಗ. ಜಾರುಪೀಠ ಯಂತ್ರ ಪೀಠಕ್ಕೆ ಅಡ್ಡಲಾಗಿ ಚಲಿಸಬಲ್ಲುದು. ಆಯುಧವನ್ನು ಅಗತ್ಯಕ್ಕೆ ತಕ್ಕಂತೆ ಕಾಯಕದ ಪದಾರ್ಥದೊಳಕ್ಕೆ ದಬ್ಬಲು ಅನುಕೂಲತೆ ಇದೆ. ಆಯುಧವನ್ನು ಯಾವುದೇ ಕೋನಕ್ಕಾದರೂ ಬದಲಾಯಿಸುವ ಏರ್ಪಾಡು ಉಂಟು.

ಸ್ಕ್ರೂಗಳನ್ನು ಕಡೆಯಲು ಹಲ್ಲಣದಲ್ಲಿರುವ ಕ್ಲಚ್ಚನ್ನು ಮುಂದೊಯ್ಯುವ ಸ್ಕ್ರೂಗೆ ಒತ್ತಿದಾಗ ಹಲ್ಲಣಕ್ಕೆ ಸ್ವಯಂಚಾಲಿತ ಚಲನೆ ದೊರೆಯುತ್ತದೆ. ಕಡೆಯಬೇಕಾಗಿರುವ ಸ್ಕ್ರೂನಲ್ಲಿರಬೇಕಾದ ಹುರಿಗಳ (ತ್ರೆಡ್) ಸಂಖ್ಯೆಗನುಗುಣವಾಗಿ ಸೂಕ್ತ ಗೇರುಗಳನ್ನು ಜೋಡಿಸಬೇಕು. ಇವುಗಳ ಜೋಡಣೆಯಿರುವ ಭಾಗಕ್ಕೆ ಗೇರುಗಳ ಪೆಟ್ಟಿಗೆ ಎಂದು ಹೆಸರು.

ಸಾಮಾನ್ಯ ಕಡತಯಂತ್ರದ ಕೆಲವು ಮುಖ್ಯ ಅಳತೆಗಳು ಎರಡು–1 ಕಡೆತಯಂತ್ರದ ಕೇಂದ್ರಗಳ ನಡುವೆ ಪಡೆಯಬಹುದಾದ ಗರಿಷ್ಠ ಅಂತರ, 2 ಕಡೆತ ಯಂತ್ರದ ಕೇಂದ್ರದಿಂದ ಪೀಠದ ಮೇಲ್ಭಾಗಕ್ಕಿರುವ ಅಂತರ, ಅಚಲ ಶೀರ್ಷಕದ ಕೆಳಗೆ ಪೀಠವನ್ನು ಕತ್ತರಿಸಿ ಇದನ್ನು ಹೆಚ್ಚಿಸಬಹುದು.




ಮರವನ್ನು ಕಡೆಯಲು ಉಪಯೋಗಿಸುವ ಯಂತ್ರ :
1. ಮೆಟ್ಟಿಲು ರಾಟೆ, 2. ಹಲ್ಲುಗಳಿರುವ ಚಲ ಕೇಂದ್ರಕ, 3. ಆಯುಧ ಹಿಡಿಯಲು ಆಧಾರ (ಒರಗು), 4. ಅಚಲ ಕೇಂದ್ರಕ

ವಿವಿಧ ಕಡೆತದ ಯಂತ್ರಗಳ ಹೆಸರುಗಳು ಹೀಗಿವೆ–ಮರ ಕಡಿಯುವ ಯಂತ್ರ; ಸಾಮಾನ್ಯ ಯಂತ್ರ; ಜಾರು, ಪೃಷ್ಠಕ ಮತ್ತು ಸ್ಕ್ರೂ ಕಡೆಯುವ ಯಂತ್ರ; ಸ್ವಯಂಚಾಲಿತ ಯಂತ್ರ; ಟರೆಟ್ ಯಂತ್ರ; ಕ್ಯಾಪ್‍ಸ್ಟನ್ ಯಂತ್ರ. (ಕೆ.ಆರ್.ಎಂ.ಒ.)

**ಕಡೆಯುವುದು :** ಅಚಲವಾಗಿರುವ ಆಯುಧದ (ಟೂಲ್) ಕರ್ತನಧಾರ (ಕಟಿಂಗ್ ಎಡ್ಜ್) ತಿರುಗುತ್ತಿರುವ ಒಂದು ವಸ್ತುವಿನ ಮೇಲೆ ಒತ್ತಡ ಹೇರಿದಾಗ ನಡೆಯುವ ಕ್ರಿಯೆ (ಟರ್ನಿಂಗ್). ಆದರೆ ತಿರುಗುತ್ತಿರುವ ಅನೇಕ ಆಯುಧಗಳ ಮೂಲಕ ತಿರುಗದೆ ಇರುವ ವೃತ್ತಾಕಾರದ ದಂಡವನ್ನೊಯ್ದು ನಡೆಸುವ ಅಕೇಂದ್ರಕ ಕಡೆಯುವಿಕೆ ಇದಕ್ಕೆ ಅಪವಾದವಾಗಿದೆ. ಕಡೆಯುವುದನ್ನು ಕಡೆಯುವ ಯಂತ್ರದ ನೆರವಿನಿಂದ ಒಂದು ವಸ್ತುವಿನ ಪ್ರಯಾಸವನ್ನು ತಗ್ಗಿಸುವ ಕ್ರಿಯೆ ಎಂದು ಸಹ ಹೇಳಬಹುದು. ಸಂರೂಪಣ (ಶೇಪಿಂಗ್), ಭ್ರಮಿಕರ್ತನ (ಮಿಲ್ಲಿಂಗ್) ಬೈರಿಗೆ ಕ್ರಿಯೆ (ಡ್ರಿಲ್ಲಿಂಗ್) ಮುಂತಾದವುಗಳಲ್ಲಿ ಚಲನೆ ಆವಶ್ಯಕ. ಸಮತಲನದಲ್ಲಿ (ಪ್ಲೇನಿಂಗ್) ಪರಿಭ್ರಮಣ ಚಲನೆಯಿಲ್ಲ. ಕಾಯಕ ವಸ್ತುವಿನ ಪರಿಭ್ರಮಣೆ ಕಡೆಯುವುದರಲ್ಲಿ ಮಾತ್ರ ಸಾಧ್ಯ. ಕಡೆಯುವುದು ಸಾಮಾನ್ಯವಾಗಿ ದಂಡ, ಕುಟ್ಟುವಸ್ತು (ಫೋರ್ಜಿಂಗ್ಸ್) ಅಥವಾ ಎರಕಗಳ ಹೊರವ್ಯಾಸದಲ್ಲಿ ನಡೆಸುವ ಕ್ರಿಯೆಯನ್ನು ಸೂಚಿಸುತ್ತದೆ. ಕಡೆಯಲು ಮುಖ್ಯವಾಗಿ ಕಾಯಕ ವಸ್ತುವನ್ನು ತಿರುಗಿಸಬಲ್ಲ ಮತ್ತು ಇದರ ಉದ್ದ ಹಾಗೂ ಅಡ್ಡಕ್ಕೆ ಚಲಿಸಬಲ್ಲ ಆಯುಧವನ್ನುಳ್ಳ ಸಾಧನಗಳು ಬೇಕು. ಕಡೆಯುವ ಕ್ರಿಯೆಯನ್ನು ನಡೆಸಲು ಕಾಯಕವಸ್ತುವಿನ ಕೊನೆಗಳೆರಡನ್ನೂ ಕೊರೆದು ಅವನ್ನು ಚಲ ಮತ್ತು ಅಚಲ ಕೇಂದ್ರಗಳೆಂಬ ಕಡೆಯುವ ಯಂತ್ರದ ಶಂಕ್ವಾಕೃತಿಯ ಭಾಗಗಳಿಗೆ ಜೋಡಿಸಬೇಕು. ವಿದ್ಯುತ್ ಮೋಟಾರಿನಿಂದ ಚಲಕೇಂದ್ರವನ್ನು ತಿರುಗಿಸಿದಾಗ ಅದಕ್ಕಂಟಿರುವ ಗ್ರಾಹಕತಟ್ಟೆ (ಕ್ಯಾಚ್ ಪ್ಲೇಟ್) ಸಹ ತಿರುಗಿ ಅದರ ಸಂಪರ್ಕಕ್ಕೆ ಬರುವ ವಾಹನವನ್ನೂ ತಿರುಗಿಸುತ್ತದೆ. ಈ ಯಂತ್ರಕ್ಕೆ ಜೋಡಿಸಿರುವ ಮೆಟ್ಟಿಲ ರಾಟೆಗಳು ಮತ್ತು ಜವ ತಗ್ಗಿಸುವ ಹಲ್ಲಿನ ಚಕ್ರಗಳಿಂದ (ಬ್ಯಾಕ್ ಗೇರ್ಸ್) ಕಾಯಕವಸ್ತುವನ್ನು ಇಚ್ಛಿತ ಜವದಲ್ಲಿ ತಿರುಗಿಸಬಹುದು. ಕಾಯಕವಸ್ತು ಬಹಳ ಉದ್ದವಾಗಿದ್ದರೆ ಆಯುಧದ ಒತ್ತಡ ಬಿದ್ದಾಗ ಬಗ್ಗುತ್ತದೆ. ಇದನ್ನು ತಪ್ಪಿಸಲು ಅಪರಿವರ್ತಿ ಆಧಾರವನ್ನು (ಸ್ಟೆಡಿ ರೆಸ್ಟ್) ಉಪಯೋಗಿಸಬೇಕು. ಇವುಗಳ ಬದಲು ಚಕ್ ಎಂಬ ಸಾಧನವನ್ನು ಉಪಯೋಗಿಸಿದರೆ ವಾಹಕ, ಅಚಲಕೇಂದ್ರಕ ಮುಂತಾದುವನ್ನು ಕೈಬಿಡಬಹುದು. ಕಡೆಯುವ ಯಂತ್ರದಲ್ಲಿ ಕಾಯಕವಸ್ತುವಿನ ಉದ್ದ ಮತ್ತು ಅಡ್ಡಕ್ಕೆ ಚಲಿಸಬಲ್ಲ ಆಯುಧ ಸ್ತಂಭವೆಂಬ (ಟೂಲ್ ಪೋಸ್ಟ್) ವ್ಯವಸ್ಥೆ ಇದೆ. ಇದರಲ್ಲಿ ಜೋಡಿಸಿರುವ ಆಯುಧವನ್ನು ಇಚ್ಛಿಸಿದ ಯಾವುದೇ ಕೋನಕ್ಕಾದರೂ ತಿರುಗಿಸಬಹುದು. ಕಾಯಕವಸ್ತುವನ್ನು ಕಡೆಯಬೇಕಾದರೆ ಆಯುಧ ಅದಕ್ಕಿಂತ ಗಟ್ಟಿ ಹಾಗೂ ದೃಢವಾಗಿ ಇರಬೇಕು. ಆದ್ದರಿಂದ ಆಯುಧವನ್ನು ವಿಶೇಷ ಉಕ್ಕುಗಳಿಂದ ತಯಾರಿಸುತ್ತಾರೆ. ಕಂಪನಗಳು ಮತ್ತು ಆಯುಧಸ್ತಂಭದ ಜಾರುವಿಕೆ ಇಲ್ಲದೆ ಆಯುಧದ ಕರ್ತನ ಕೋನಗಳೂ ಸರಿಯಾಗಿದ್ದರೆ ಅಧಿಕೋಷ್ಣತೆಯ ಉತ್ಪತ್ತಿಯನ್ನು ತಡೆಯಲು ಹಾಗೂ ಕಡೆಯುವುದರ ದಕ್ಷತೆಯನ್ನು ಹೆಚ್ಚಿಸಲು ಕೀಲೆಣ್ಣೆಯನ್ನು ಉಪಯೋಗಿಸುತ್ತಾರೆ. ಕೆಲವೊಮ್ಮೆ ವಸ್ತುಗಳ ಸಂವಾಟವು ಬೇಕಾಗುತ್ತದೆ. ಇದನ್ನು ಬಹುಪದತಾಣವೆಂಬ (ಕಾಂಪೌಂಡ್ ರೆಸ್ಟ್) ಸಾಧನವನ್ನು ಬೇಕಾದ ಕೋನಕ್ಕೆ ತಿರುಗಿಸಿ ಕಡೆಯುವುದರಿಂದ ಅಥವಾ ಅಚಲಕೇಂದ್ರಕವನ್ನು ಸ್ವಲ್ಪ ಪಕ್ಕಕ್ಕೆ ಜರುಗಿಸಿ ಕಡೆಯುವುದರಿಂದ ಅಥವಾ ರೂಪಿಸುವ ಆಯುಧದ ಉಪಯೋಗದಿಂದ ಅಥವಾ ಸಂವಾಟಕ್ಕೆಂದೇ ಇರುವ ಪ್ರತ್ಯೇಕವಾದ ಜೋಡಣೆಯಿಂದ ಪಡೆಯಬಹುದು. (ಕೆ.ಆರ್.ಎಂ.ಒ.)

**ಕಡ್ಡಲೂರು :** ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಕೇಂದ್ರ ಮತ್ತು ಪ್ರಮುಖ ಪಟ್ಟಣ, ಸಣ್ಣ ಬಂದರು. ಜನಸಂಖ್ಯೆ : 2,605,914 (2011). ಪಾಂಡಿಚೇರಿಯಿಂದ 24 ಕಿಮೀ ದೂರದಲ್ಲಿದೆ. ಉತ್ತರ ಅಕ್ಷಾಂಶ $11^{0}$.43’ ಮತ್ತು ಪೂರ್ವರೇಖಾಂಶ $79^{0}$.46’ಗಳಲ್ಲಿ ನೆಲಸಿದೆ. ಇದರ ಬಳಿ ಎರಡು ನದಿಗಳು ಕೂಡುವುದರಿಂದ ಈ ಪಟ್ಟಣಕ್ಕೆ ಕೂಡಲೂರು ಅಥವಾ ಕಡ್ಡಲೂರು ಎಂಬ ಹೆಸರು ಬಂದಿದೆ. ಈ ಪಟ್ಟಣವನ್ನು ಹೊಸ ಮತ್ತು ಹಳೆಯ ನಗರಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಸರ್ಕಾರಿ ಕಚೇರಿಗಳೂ ಅಧಿಕಾರಿಗಳ ಮನೆಗಳೂ ಸೇಂಟ್ ಡೇವಿಡ್‌ನ ಹಳೆಯ ಕೋಟೆ ಮತ್ತು ಪ್ರಾಚೀನ ಶಿವದೇವಾಲಯಗಳೂ ಹೊಸ ನಗರದಲ್ಲಿವೆ. ಪೇಟೆ ಮತ್ತು ಬಂದರುಗಳು ಹಳೆಯ ನಗರದಲ್ಲಿವೆ. ನೆಲಗಡಲೆ ಇಲ್ಲಿಂದ ರಫ್ತಾಗುವ ಮುಖ್ಯ ವಸ್ತು. ಬಣ್ಣದ ಬಟ್ಟೆಗಳ ನೇಯ್ಗೆ, ಕಡಲೆಕಾಯಿ ಎಣ್ಣೆಯ ಉತ್ಪಾದನೆ, ಹತ್ತಿ, ರೇಷ್ಮೆಬಟ್ಟೆಯ ತಯಾರಿಕೆ ಇವು ಮುಖ್ಯ ಕೈಗಾರಿಕೆಗಳು. ಮಲಯದೊಂದಿಗೆ ವ್ಯಾಪಾರಸಂಪರ್ಕ ಹೊಂದಿದೆ. ಇಲ್ಲಿಯ ಫ್ರೆಂಚ್ ರೋಮನ್ ಕೆಥೊಲಿಕ್ ಸಂಸ್ಥೆಯೊಂದು ದೊಡ್ಡ ಶಾಲೆಯೊಂದನ್ನು ನಡೆಸುತ್ತಿದೆ. ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ಆಗಮನದೊಂದಿಗೆ (1683) ಈ ಪಟ್ಟಣದ ಪ್ರಾಮುಖ್ಯ ಹೆಚ್ಚಿತೆನ್ನಬಹುದು. ಕಾರ್ಖಾನೆಗಳು ಕೋಠಿಗಳೂ ಬೆಳೆದವು. ಬ್ರಿಟಿಷರು ತಮ್ಮ ನೆಲೆಯನ್ನು ಭದ್ರಮಾಡಿಕೊಳ್ಳುವ ಉದ್ದೇಶದಿಂದ ಇಲ್ಲೊಂದು ಕೋಟೆ ಕಟ್ಟಿದರು. 1720ರಲ್ಲಿ ಇದು ವಿಸ್ತಾರಗೊಂಡಿತು. ರಾಬರ್ಟ್ ಕ್ಲೈವ್ (ನೋಡಿ–ಕ್ಲೈವ್,–ರಾಬರ್ಟ್) ಕಡ್ಡಲೂರಿನ ಗವರ್ನರ ನಾದದ್ದು 1756ರಲ್ಲಿ. ಸಾಮ್ರಾಜ್ಯದಾಹಿ ಇಂಗ್ಲಿಷ್ ಮತ್ತು ಫ್ರೆಂಚ್ ಕಂಪನಿಗಳ ಬಡಿದಾಟದಲ್ಲಿ ಕಡ್ಡಲೂರು ಅನುಭವಿಸಿದ ಬವಣೆ ಅಷ್ಟಿಷ್ಟಲ್ಲ. 1758ರಲ್ಲಿ ಫ್ರೆಂಚರು ಈ ಪಟ್ಟಣವನ್ನು ವಶಪಡಿಸಿಕೊಂಡರು. 1760ರಲ್ಲಿ ಇದು ಅವರ ಕೈಬಿಟ್ಟಿತು; 1782ರಲ್ಲಿ ಫ್ರೆಂಚರು ಮತ್ತೆ ಆಕ್ರಮಿಸಿಕೊಂಡರು; 1785ರಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಶಾಂತಿ ಒಪ್ಪಂದವಾದಾಗ ಮತ್ತೆ ಇಂಗ್ಲಿಷರ ಕೈಗೆ ಬಂತು. ಗವರ್ನರನ ನಿವಾಸವಾಗಿದ್ದ ಭವನವೀಗ ಕಲೆಕ್ಟರನ ಅಧಿಕೃತ ನಿವಾಸವಾಗಿದೆ. (ಎನ್.ಎ.)

**ಕಡ್ಡಲೂರು ಮರಳು ಶಿಲೆಗಳು :** ಭಾರತದ ಪೂರ್ವತೀರದ ಉದ್ದಕ್ಕೂ ಹೆಚ್ಚು ಕಡಿಮೆ ಒಂದೇ ಸಮನೆ, ದಕ್ಷಿಣದಲ್ಲಿ ರಾಮೇಶ್ವರದಿಂದ ಹಿಡಿದು, ಪುದುಕೋಟೆ, ತಂಜಾವೂರು, ಕಡಲೂರು, ಪಾಂಡಿಚೆರಿ, ಚೆನ್ನೈ ಮತ್ತು ನೆಲ್ಲೂರುಗಳ ಮೂಲಕ ರಾಜಮಹೇಂದ್ರಿಯವರೆಗೆ ವಿಸ್ತರಿಸಿರುವ ಮರಳು ಶಿಲಾಸ್ತರಗಳು (ಕಡಲೂರ್ ಸ್ಯಾಂಡ್ ಸ್ಟೋನ್ಸ್). ಇವು ದಕ್ಷಿಣ ಆರ್ಕಾಟು ಜಿಲ್ಲೆಯ ಕಡಲೂರಿನ ಬಳಿ ವಿಶೇಷವಾಗಿ ಹೊರ ಕಂಡು ಬರುವುದರಿಂದ ಈ ಹೆಸರು ಬಂದಿದೆ. ತೀರಪ್ರದೇಶದಲ್ಲಿ ಅಲ್ಲಲ್ಲಿ ಇವುಗಳ ಮೇಲೆ ಮರಳು ಮತ್ತು ಮೆಕ್ಕಲು ಮಣ್ಣು ಹರಡಿವೆ. ಕಡಲೂರು ಮರಳು ಸ್ತರಗಳು ಆರ್ಷೇಯ ಶಿಲೆಗಳ ಮೇಲೋ ಗೊಂಡ್ವಾನಸ್ತರಗಳ ಮೇಲೋ ಶೇಖರವಾಗಿವೆ. ಪಾಂಡಿಚೆರಿ, ತಂಜಾವೂರು ಮತ್ತು ಪುದುಕೋಟೆಯ ಬಳಿ ಕೆಳ ಟರ್ಷಿಯರಿ ಕಲ್ಪದ ಸ್ತರಗಳ ಮೇಲೆ ಇವು ಶೇಖರವಾಗಿವೆಯೆಂದು ನಂಬಲಾಗಿದೆ. ಈ ಸ್ತರಗಳು ಪೂರ್ವ ಮತ್ತು ಆಗ್ನೇಯ ದಿಕ್ಕಿನಲ್ಲಿ ಸಮುದ್ರದ ಕಡೆಗೆ $4^{0}$–$5^{0}$ ಗಳಷ್ಟು ಇಳಿವೋರೆಯಾಗಿವೆ.

ಕಡಲೂರು ಮರಳುಶಿಲೆಗಳ ಮುಖ್ಯ ಶಿಲಾ ವಿಭಾಗಗಳೆಂದರೆ ನಯವಾದ ಕೆಂಪು ಮತ್ತು ಹಳದಿ ಬಣ್ಣದ ಕಬ್ಬಿಣಾಂಶದಿಂದ ಕೂಡಿದ ಮರಳು ಶಿಲೆಗಳು, ಗ್ರಿಟ್ ಶಿಲೆ, ಮರಳಿನಿಂದ ಕೂಡಿದ ಜೇಡಿಮಣ್ಣು, ಮುಂತಾದುವು. ಶಿಲಾವಿಧಗಳ ಆಧಾರಗಳಿಂದ ಈ ಸ್ತರಗಳು ನದಿ–ಸಾಗರ ಸಂಗಮ ಪ್ರದೇಶದಲ್ಲಿ ಶೇಖರವಾಗಿರುವಂತೆ ಕಂಡುಬರುತ್ತವೆ. ಇದಕ್ಕೆ ಅನುಕೂಲವಾದ ಪರಿಸ್ಥಿತಿಗಳು ಮಯೊಸೀನ್ ಮತ್ತು ಪ್ಲಿಯೊಸೀನ್ ಯುಗದ ಹಿಂದೂ ಮಹಾಸಾಗರದ ಅತಿಕ್ರಮಣದಿಂದ ಉಂಟಾದುವೆಂದು ನಂಬಲಾಗಿದೆ.

ಕಡಲೂರು ಮರಳುಶಿಲೆಗಳಲ್ಲಿ ಜೀವಾವಶೇಷಗಳು ವಿಶೇಷವಾಗಿ ಕಂಡುಬಂದಿಲ್ಲವಾದರೂ ಎಂಜಿಯೋಸ್ಪರ್ಮ್ ವರ್ಗದ ಹೂಬಿಡುವ ಸಸ್ಯಾವಶೇಷಗಳು ಅಲ್ಲಲ್ಲಿ ಸಿಕ್ಕಿವೆ. ಪಾಂಡಿಚೆರಿ ಬಳಿಯಿರುವ ತಿರುವಕ್ಕಾರೈ ಎಂಬಲ್ಲಿ 20 ಮೀಗಳಿಗಿಂತಲೂ ಉದ್ದವಾದ ಅನೇಕ ಬಾರಿ ಶಿಲಾವೃಕ್ಷಗಳನ್ನು (ಫಾಸ್ಸಿಲ್ ವುಡ್) ಕಾಣಬಹುದು. ಮೊಲಸ್ಕ ಗುಂಪಿಗೆ ಸೇರಿದ ಪ್ರಾಣಿಗಳ ಅವಶೇಷಗಳೂ ಸಹ ಅಲ್ಲಲ್ಲಿ ಕಂಡು ಬಂದಿವೆ. ಸಸ್ಯಾವಶೇಷಗಳ ಆಧಾರದ ಮೇಲೆ ಈ ಸ್ತರಗಳು ಭೂಚರಿತ್ರೆಯ ಮಯೊಸೀನ್–ಪ್ಲಿಯೊಸೀನ್ ಕಾಲಕ್ಕೆ ಸೇರಿದವವೆಂದು ನಿರ್ಧರಿಸಲಾಗಿದೆ.

ಕಾರೈಕುಡಿ, ನೈವೇಲಿ, ಕಡಲೂರು ಮತ್ತು ಪಾಂಡಿಚೆರಿಗಳಲ್ಲಿನ ಈ ಸ್ತರಗಳಲ್ಲಿ ಆರ್ಟೀಸಿಯನ್ ಚಿಲುಮೆಗಳು ಕಂಡುಬಂದಿವೆ. ಅಲ್ಲದೆ ದಕ್ಷಿಣ ಆರ್ಕಾಟ್ ಮತ್ತು ಪಾಂಡಿಚೆರಿ ಬಳಿ ಮಂದವಾದ ಲಿಗ್ನೈಟ್ ಪದರಗಳೂ ಇವೆ. ನೈವೇಲಿಯಲ್ಲಿ 20 ಮೀ ಗಳಷ್ಟು ಮಂದದ ಲಿಗ್ನೈಟ್‌ಸ್ತರ ಸು. 250 ಚ.ಕಿಮೀಗಳ ಪ್ರದೇಶದಲ್ಲಿ ವಿಸ್ತರಿಸಿರುವುದಾಗಿ ಇತ್ತೀಚಿನ ಭೂವೈಜ್ಞಾನಿಕ ಸಂಶೋಧನೆಗಳಿಂದ ಕಂಡುಬಂದಿದೆ. ಇದರಿಂದ ಸು.200 ಕೋಟಿ ಟನ್ನುಗಳಷ್ಟು ಲಿಗ್ನೈಟ್ ಉತ್ಪತ್ತಿಯಾಗುವುದೆಂದು ನಿರ್ಧರಿಸಲಾಗಿದೆ. ಕಡಲೂರು ಸ್ತರಗಳ (ಕೆಳತೃತೀಯ) ಕಲ್ಪದ ಸ್ತರಗಳಲ್ಲಿ ಕಲ್ಲೆಣ್ಣೆ ಸಿಕ್ಕುವ ಸೂಚನೆಗಳು ಸಹ ಇವೆ. (ಎಂ.ವಿ.ಎ.ಎಸ್.)

**ಕಡ್ಡಾಯದ ಕೋರಿಕೆ :** ದೇಶರಕ್ಷಣೆಯಂಥ ಜರೂರು ಪರಿಸ್ಥಿತಿಯಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ತಮ್ಮ ಸಾರ್ವಜನಿಕ ಉಪಯೋಗಕ್ಕೆ ಅವಶ್ಯವೆನಿಸಿದ ಆಹಾರ ಪದಾರ್ಥ, ಕಚ್ಚಾ ಸಾಮಗ್ರಿ, ಶಸ್ತ್ರಾಸ್ತ್ರ, ಹಡಗು, ವಿಮಾನ ಮುಂತಾದ ಚರಸ್ಥಿರ ಸ್ವತ್ತುಗಳನ್ನು ವ್ಯಕ್ತಿ, ಸಂಘ ಅಥವಾ ಸಂಸ್ಥೆಗಳಿಂದ ಪಡೆದುಕೊಳ್ಳಲು ನೀಡಿದ ಬೇಡಿಕೆಯ ನಿರೂಪ, ಕಡ್ಡಾಯದ ಆದೇಶ (ರಿಕ್ವಿಸಿಷನ್). ಭಾರತ ಸಂವಿಧಾನದ ಪ್ರಕಾರ ವ್ಯಕ್ತಿಗೆ ನೀಡಲಾದ ಮೂಲಭೂತ ಹಕ್ಕುಗಳ ಪೈಕಿ ಸ್ವತ್ತನ್ನು ಸಂಪಾದಿಸುವ, ಇಟ್ಟುಕೊಳ್ಳುವ, ಮಾರುವ ಹಕ್ಕೂ ಒಂದು. ಕಡ್ಡಾಯ ಕೋರಿಕೆಯಿಂದ ಈ ಹಕ್ಕಿನ ಉಲ್ಲಂಘನೆಯಾಗುವುದಾದರೂ ಜರೂರು ಪರಿಸ್ಥಿತಿಯಲ್ಲಿ ಇದು ಕಾನೂನುಬದ್ಧವೆನಿಸುತ್ತದೆ. ಸ್ವತ್ತಿನ ಕಡ್ಡಾಯ ಕೋರಿಕೆಗೂ ವಶೀಕರಣಕ್ಕೂ (ಅಕ್ವಿಸಿಷನ್) ಒಂದು ವ್ಯತ್ಯಾಸವುಂಟು. ಕಡ್ಡಾಯದ ಕೋರಿಕೆಯಲ್ಲಿ ಸ್ವತ್ತಿನ ಒಡೆತನದ ಹಕ್ಕನ್ನು ಸರ್ಕಾರಕ್ಕೆ ಬಿಟ್ಟುಕೊಡದೆ ಆಸ್ತಿಯ ಸ್ವಾಧೀನ ಮತ್ತು ಅನುಭೋಗಗಳನ್ನು ಮಾತ್ರ ವರ್ಗಾಯಿಸಬಹುದು. ಆದರೆ ವಶೀಕರಣದಲ್ಲಿ ಪರಿಹಾರ ಧನವನ್ನು ಪಡೆದು ಸ್ವತ್ತಿನ ಸಕಲ ಹಕ್ಕುಗಳನ್ನೂ ಸರ್ಕಾರದ ಹೆಸರಿಗೆ ವರ್ಗಾಯಿಸಬೇಕಾಗುತ್ತದೆ. (ಬಿ.ಪಿ.ಯು.)

**ಕಡ್ಡಾಯ ಶಿಕ್ಷಣ :** ಒಂದು ನಿರ್ದಿಷ್ಟ ವಯೋವರ್ಗದ ಮಕ್ಕಳು ಶಾಲೆಗೆ ಹಾಜರಾಗುವ ಅಗತ್ಯವನ್ನು ರಾಜ್ಯಶಾಸನದ ಮೂಲಕ ಕಡ್ಡಾಯ ಮಾಡುವ ಒಂದು ವ್ಯವಸ್ಥೆ; ಹಾಗೆ ಮಕ್ಕಳು ಹಾಜರಾಗುವಂತೆ ಮಾಡುವ ಒಂದು ವ್ಯವಸ್ಥೆ; ಹಾಗೆ ಮಕ್ಕಳು ಹಾಜರಾಗುವಂತೆ ಮಾಡುವ ಹೊಣೆಗಾರಿಕೆ ಸಾಮಾನ್ಯವಾಗಿ ತಂದೆತಾಯಿಗಳಿಗೂ ಪೋಷಕರಿಗೂ ಸಲ್ಲುತ್ತದೆ. ಜೊತೆಗೆ ಆ ಪದ್ಧತಿಯನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರಲು ಶಿಕ್ಷಣಶಾಖೆ ಹಾಜರಾತಿ ಅಧಿಕಾರಿ ಮೊದಲಾದ ಅಗತ್ಯ ಸಿಬ್ಬಂದಿಯನ್ನು ಒದಗಿಸುತ್ತದೆ. ಶಾಲೆಗೆ ಹಾಜರಾಗಲಿ, ಆಗದಿರಲಿ, 12ನೆಯ ವರ್ಷದೊಳಗಾಗಿ ಮಕ್ಕಳಿಗೆ ಓದು ಬರೆಹ ಕಲಿಸಿರಬೇಕೆಂದು ಹಿಂದೆ ಸಮಾಜದಲ್ಲಿ ಪ್ರಚಾರದಲ್ಲಿದ್ದ ಒಂದು ಸಂಪ್ರದಾಯ; ಶಿಕ್ಷಣ ತನ್ನ ಹೊಣೆಗಾರಿಕೆಯಾಗಿರುವ ರಾಜ್ಯಸರ್ಕಾರ ನಿರ್ದಿಷ್ಟಗೊಳಿಸಿದ ವಯೋವರ್ಗದ ಮಕ್ಕಳಿಗೆಲ್ಲ ಶಿಕ್ಷಣಸೌಲಭ್ಯವನ್ನೊದಗಿಸಬೇಕೆಂಬ ರಾಜ್ಯಾಂಗ ರಚನೆ ಅಥವಾ ಕೇಂದ್ರ ಸರ್ಕಾರ ವಿಧಿಸಿರುವ ಒಂದು ಕಡ್ಡಾಯ ಕರ್ತವ್ಯ.

**ಕಡ್ಡಾಯ ಶಿಕ್ಷಣದ ಆವಶ್ಯಕತೆ :** ಒಂದು ದೇಶದ ಸಂಪತ್ತು ಅಲ್ಲಿನ ಧನಧಾನ್ಯವಲ್ಲ–ಆ ದೇಶದ ಮಕ್ಕಳು–ಅವರ ದೇಹ ಮತ್ತು ಮನಸ್ಸು. ಆದ್ದರಿಂದ ಒಂದು ದೇಶದ ಅಭಿವೃದ್ಧಿಗೆ ಅಲ್ಲಿನ ಮಕ್ಕಳ ಶಿಕ್ಷಣವೇ ಪ್ರಥಮ ಹಂತ. ಎಲ್ಲ ಮಕ್ಕಳಿಗೂ ಅಗತ್ಯವಾಗಿ ಶಿಕ್ಷಣ ದೊರೆತರೆ ಅವರಲ್ಲಿ ಹುದುಗಿರುವ ಶಕ್ತಿ ಸಾಮರ್ಥ್ಯಗಳು ಪೂರ್ಣವಾಗಿ ವಿಕಾಸಗೊಳ್ಳುತ್ತವೆ. ಆಗ ಅವರು ರಾಷ್ಟ್ರದ ಇನ್ನಿತರ ಸಂಪನ್ಮೂಲಗಳನ್ನು ಬಳಸಿಕೊಂಡು, ಜನಾಂಗದ ಸಂಸ್ಕೃತಿ ಸಂಪ್ರದಾಯಗಳನ್ನು ಅರಿತುಕೊಂಡು ಜೀವನ ಪ್ರಗತಿಯನ್ನು ಸಾಧಿಸಬಲ್ಲರು; ಎಲ್ಲರೂ ತಮ್ಮ ಹಕ್ಕುಬಾಧ್ಯತೆಗಳನ್ನು ಅರಿತುಕೊಂಡು ಪ್ರಜಾಪ್ರಭುತ್ವದಲ್ಲಿ ಯಶಸ್ವಿ ಪೌರರಾಗಿಯೊ ನಾಯಕರಾಗಿಯೊ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಶಕ್ತರಾಗುವರು. ಅಷ್ಟೇ ಅಲ್ಲ. ಅಂಥ ಶಿಕ್ಷಿತ ಜನತೆ ರಾಷ್ಟ್ರದ ಆರ್ಥಿಕ ಜೀವನದಲ್ಲಿ ಬುದ್ಧಿವಂತಿಕೆಯಿಂದ ಪಾತ್ರವಹಿಸುತ್ತ ರಾಷ್ಟ್ರದ ಐಕ್ಯ ಮತ್ತು ರಕ್ಷಣೆಗಳಿಗೂ ನೆರವಾಗಬಲ್ಲುದು. ಆದರೆ ಆ ಕಾರ್ಯಸಾಧನೆಗೆ ಪ್ರಥಮತಃ ಪ್ರತಿಯೊಬ್ಬನೂ ಪ್ರಾಥಮಿಕ ದರ್ಜೆಯ ಶಿಕ್ಷಣವನ್ನಾದರೂ ಮುಗಿಸಿರಬೇಕು. ಅದರ ಆಧಾರದ ಮೇಲೆ ಮುಂದೆ ವ್ಯಕ್ತಿ ಹೆಚ್ಚಿನ ಶಿಕ್ಷಣ ಸಾಧಿಸಿದಲ್ಲಿ ನಾಡು ಅಭಿವೃದ್ಧಿ ಮುಖದಲ್ಲಿ ಸಾಗುವಂತಾಗುತ್ತದೆ. ಪ್ರಾಥಮಿಕ ಶಿಕ್ಷಣದಿಂದ ಪಡೆದ ಅಕ್ಷರಜ್ಞಾನ ಮಾಸದೆ ಉಳಿದು ಫಲಕಾರಿಯಾಗಬೇಕಾದರೆ 4–5 ವರ್ಷಗಳವರೆಗಾದರೂ ಆ ಶಿಕ್ಷಣ ಎಲ್ಲರಿಗೂ ಕಡ್ಡಾಯವಾಗಿ ದೊರಕಬೇಕು. ಅಲ್ಲದೆ, ಅವರು ಮಧ್ಯೆ ಶಾಲೆಯನ್ನು ಬಿಟ್ಟರೆ ಕಲಿತದ್ದು ಮರೆತುಹೋಗಿ ಅವರೆಲ್ಲ ಮತ್ತೆ ಅನಕ್ಷರಸ್ಥರಾಗುವರು. ಶಿಕ್ಷಣಕ್ಕಾಗಿ ದುಡಿದ ಜನ, ಧನ ಎಲ್ಲ ವ್ಯರ್ಥವಾಗುವುದು. ಅದನ್ನು ತಪ್ಪಿಸಿ, ಮುಂದಿನ ಜನತೆ ಅಕ್ಷರಸ್ಥರೂ ವಿದ್ಯಾವಂತರೂ ಆಗಿದ್ದು ರಾಷ್ಟ್ರದ ಹಿತ ಮತ್ತು ಭದ್ರತೆಗೆ ನೆರವಾಗುವಂತೆ ನೋಡಿಕೊಳ್ಳಲೆಂದೇ ಕಡ್ಡಾಯ ಶಿಕ್ಷಣ ಆಚರಣೆಗೆ ಬರುತ್ತಿರುವುದು.

**ಕಡ್ಡಾಯ ಶಿಕ್ಷಣವನ್ನು ಮೊದಲು ಆಚರಣೆಗೆ ತಂದ ಜನಾಂಗಗಳು:** ದೇಶದ ಪ್ರಗತಿ ಮತ್ತು ರಕ್ಷಣೆ ಕಡ್ಡಾಯ ಶಿಕ್ಷಣವನ್ನು ಅವಲಂಬಿಸಿರುವ ಅಂಶವನ್ನು ಮೊಟ್ಟಮೊದಲು ಅರಿತುಕೊಂಡ ಕೀರ್ತಿ ಜರ್ಮನಿಗೆ ಸಲ್ಲುತ್ತದೆ. 1763ರಲ್ಲೇ ಅಲ್ಲಿನ (ಪ್ರಷ್ಯದ) ಸರ್ಕಾರ ಆ ತತ್ತ್ವದೃಷ್ಟಿಯನ್ನು ಒಪ್ಪಿಕೊಂಡು ಕಾಲಕ್ರಮದಲ್ಲಿ 14ನೆಯ ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೂ ಶಿಕ್ಷಣವನ್ನು ಕಡ್ಡಾಯ ಮಾಡಿತು. ಅನಂತರ ಅದನ್ನು 16ನೆಯ ವಯಸ್ಸಿನ ತನಕ ವಿಸ್ತರಿಸಿತಲ್ಲದೆ 18ನೆಯ ವಯಸ್ಸಿನವರೆಗೆ ಭಾಗಶಃ ಶಿಕ್ಷಣವನ್ನೂ ಕಡ್ಡಾಯ ಮಾಡಿತು. ಜರ್ಮನಿಯ ಮೇಲ್ಪಂಕ್ತಿಯನ್ನನುಸರಿಸಿ ಜಪಾನ್ 1872ರಲ್ಲಿ ರಾಜ್ಯದ ಎಲ್ಲ ಮಕ್ಕಳೂ 6 ವರ್ಷಗಳ ಕಡ್ಡಾಯ ಶಿಕ್ಷಣ ಪಡೆಯಬೇಕೆಂದು ಶಾಸನ ಮಾಡಿತು. 1945ರಲ್ಲಿ ಅದನ್ನು 9 ವರ್ಷಗಳ ಕಾಲಾವಧಿಗೆ ವಿಸ್ತರಿಸಿತು. ಈ ಶತಮಾನದ ಪ್ರಥಮಾರ್ಧದ ವೇಳೆಗೆ ಆ ವಯೋಮಾನದ ಮಕ್ಕಳಲ್ಲಿ ಶೇ. 99.5ರಷ್ಟು ಆ ಯೋಜನೆಯ ವ್ಯಾಪ್ತಿಗೆ ಬರುವಂತಾಯಿತು.

ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತಂದ ಜರ್ಮನಿ ಬಹುಬೇಗ ಅಭಿವೃದ್ಧಿ ಸಾಧಿಸಿದ್ದನ್ನು ಕಂಡು ಇತರ ಪಾಶ್ಚಾತ್ಯ ರಾಷ್ಟ್ರಗಳೂ ಆ ಮುಖವಾಗಿ ಹೆಜ್ಜೆಯಿಡಲಾರಂಭಿಸಿದುವು. ಇಂಗ್ಲೆಂಡ್ 1880ರಿಂದ 6 ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿತು. ಅನಂತರ ಆ ಯೋಜನೆಯನ್ನು 14ನೆಯ ಮಯಸ್ಸಿನವರೆಗೂ ವಿಸ್ತರಿಸಿತು. 1939ರಲ್ಲಿ ಅದನ್ನು 15ನೆಯ ವಯಸ್ಸಿಗೆ ಹೆಚ್ಚಿಸಲು ಯತ್ನಿಸಿತು. ಆ ವೇಳೆಗೆ ಯುದ್ಧ ಆರಂಭವಾಗಿ ಆ ಕಾರ್ಯವನ್ನು 1944ರವರೆಗೂ ಮುಂದೂಡಬೇಕಾಯಿತು. ಸದ್ಯದಲ್ಲಿ ಆ ವಯೋಮಿತಿಯನ್ನು 16ನೆಯ ವಯಸ್ಸಿಗೆ ವಿಸ್ತರಿಸುವ ಯತ್ನ ನಡೆದಿದೆ. ಫ್ರಾನ್ಸ್ 1882ರಲ್ಲಿ 6 ವರ್ಷ ಕಾಲದ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತಂದಿತು. 1936ರಲ್ಲಿ ಅದರ ಅವಧಿಯನ್ನು 14ನೆಯ ವರ್ಷದವರೆಗೆ ವಿಸ್ತರಿಸಿತು. 1959ರಲ್ಲಿ ಮತ್ತೆ ಅದನ್ನು 16ನೆಯ ವಯಸ್ಸಿನವರೆಗೆ ವಿಸ್ತರಿಸಿತು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕಳೆದ ಶತಮಾನದ ಕೊನೆ ಕೊನೆಯ ಹೊತ್ತಿಗೆ ಎಲ್ಲ ರಾಜ್ಯಗಳೂ 6 ವರ್ಷಗಳ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತಂದುವು. ಆ ಕಾಲಾವಧಿ ಈ ಶತಮಾನದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ವಯೋಮಿತಿಯವರೆಗೆ ಹೆಚ್ಚುತ್ತ ಬಂದಿದೆ.

ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವುದರಲ್ಲಿ ಜರ್ಮನಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಮೇಲ್ಪಂಕ್ತಿಯಾದಂತೆ ಪ್ರಾಚ್ಯದೇಶಗಳಿಗೆ ಜಪಾನ್ ಮೇಲ್ಪಂಕ್ತಿಯಾಯಿತು. ಕಮ್ಯೂನಿಸ್ಟ್ ಸರ್ಕಾರದ ನೇತೃತ್ವದಲ್ಲಿ ರಷ್ಯ ಒಂದು ಕಡೆ ಕಡ್ಡಾಯ ಶಿಕ್ಷಣವನ್ನೂ ಇನ್ನೊಂದು ಕಡೆ ವಯಸ್ಕರ ಶಿಕ್ಷಣವನ್ನೂ ಏಕಕಾಲದಲ್ಲಿ ಆರಂಭ ಮಾಡಿತು. 1954ರ ವೇಳೆಗೆ ರಾಷ್ಟ್ರಾದ್ಯಂತ 7–15 ವರ್ಷದವರೆಗಿನ ಎಂದರೆ 8 ವರ್ಷಗಳ ಕಾಲಾವಧಿಯ ಶಿಕ್ಷಣವನ್ನು ಕಡ್ಡಾಯ ಮಾಡಿತು. ಚೀನವೂ 1937ರಲ್ಲಿ ರಾಷ್ಟ್ರದ 6–11ರ ವಯೋಮಿತಿಯ ಮಕ್ಕಳಲ್ಲಿ ಸು. ಶೇ.45ರಷ್ಟನ್ನು ಶಾಲೆಗೆ ಸೇರುವಂತೆ ಮಾಡಿ ಕ್ರಮಕ್ರಮವಾಗಿ ಹೆಚ್ಚಿನ ಸಂಖ್ಯೆಯ ಮಕ್ಕಳನ್ನು ಕಡ್ಡಾಯ ಶಿಕ್ಷಣ ಯೋಜನೆಗೆ ಒಳಪಡಿಸಿದುದಲ್ಲದೆ ಅದರ ಅವಧಿಯನ್ನೂ ಹೆಚ್ಚಿಸುತ್ತ ಬಂದಿದೆ.

**ಭಾರತದಲ್ಲಿ ಕಡ್ಡಾಯ ಶಿಕ್ಷಣ:** 1947ರವರೆಗೂ ಇದ್ದ ಬ್ರಿಟಿಷ್ ಪ್ರಭುತ್ವ ಕಡ್ಡಾಯ ಶಿಕ್ಷಣದ ಕಡೆ ಗಮನ ಕೊಡಲಿಲ್ಲ. ಈ ಶತಮಾನದ ಆದಿಯಿಂದಲೂ ರಾಷ್ಟ್ರದ ನಾಯಕರು ಆ ಮುಖವಾಗಿ ಯತ್ನವನ್ನೇನೂ ನಡೆಸುತ್ತ ಬಂದಿದ್ದರು. ಗೋಖಲೆಯವರು 1911ರಲ್ಲಿ ಇಡೀ ಭಾರತದಲ್ಲಿ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರಬೇಕೆಂದು ಕೇಂದ್ರ ಶಾಸನಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿದ್ದರು. ಆರ್ಥಿಕ ಕಾರಣಗಳಿಂದಾಗಿ ಸರ್ಕಾರ ಅದನ್ನು ಅಂಗೀಕರಿಸಲಿಲ್ಲ. ಅನಂತರ 1937ರಲ್ಲಿ ರೂಪುಗೊಂಡ ಗಾಂಧೀಜಿಯವರ ವರ್ಧಾ ಶಿಕ್ಷಣ ಯೋಜನೆಯೂ 7–14 ವರ್ಷದವರೆಗಿನ ಎಲ್ಲ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿತು. ಅನಂತರ 1944ರಲ್ಲಿ ರಚಿಸಿದ ಸಾರ್ಜಂಟ್ ಸಮಿತಿಯೂ ರಾಷ್ಟ್ರಾದ್ಯಂತ 14ನೆಯ ವಯಸ್ಸಿನವರೆಗೂ ಸಾರ್ವತ್ರಿಕವಾಗಿ ಕಡ್ಡಾಯ ಶಿಕ್ಷಣವನ್ನು ಸಲಹೆ ಮಾಡಿ ಅದನ್ನು ಹಂತಹಂತಗಳಲ್ಲಿ ಆಚರಣೆಗೆ ತರಲು 40 ವರ್ಷಗಳ ಒಂದು ಯೋಜನೆಯನ್ನು ರೂಪಿಸಿತು. ರಾಷ್ಟ್ರದ ನಾಯಕರನೇಕರು ಅದು ಕೇವಲ ಕಣ್ಣೊರೆಸುವ ಯೋಜನೆಯೆಂದು ತಿರಸ್ಕರಿಸಿದರು. ಅನಂತರ ರಾಷ್ಟ್ರದ ಪ್ರಗತಿಗೆ ಕಡ್ಡಾಯ ಶಿಕ್ಷಣದ ಅಗತ್ಯವನ್ನು ಮನಗಂಡು ಸ್ವತಂತ್ರ ಭಾರತ ಅದನ್ನು ಆಚರಣೆಗೆ ತರಲು ಅಲ್ಲಲ್ಲಿ ಪ್ರಯತ್ನ ನಡೆಸಿತು. 1950ರಲ್ಲಿ ರೂಪುಗೊಂಡ ರಾಜ್ಯಾಂಗ ರಚನೆಯಲ್ಲಿ ಎಲ್ಲ ರಾಜ್ಯಗಳೂ ಹತ್ತು ವರ್ಷಗಳ ಅವಧಿಯಲ್ಲಿ 14ನೆಯ ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣದ ಸೌಲಭ್ಯವೊದಗಿಸಬೇಕೆಂದು ನಿರ್ದಿಷ್ಟ ಆದೇಶವನ್ನು (ಆರ್ಟಿಕಲ್ 45) ಅಳವಡಿಸಲಾಯಿತು. ಆ ಸುಮಾರಿಗೆ ಭಾರತ ದೇಶದ ವಿಭಜನೆಯ ಫಲವಾಗಿ ಉದ್ಭವಿಸಿದ ನಿರ್ವಸತಿಕರು, ಆಹಾರಾಭಾವ ಇತ್ಯಾದಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಜೊತೆಗೆ ಆಗ ತಾನೆ ಆರಂಭಿಸಲಾಗಿದ್ದ ಪಂಚವಾರ್ಷಿಕ ಯೋಜನೆಗೆ ಹಣ ಒದಗಿಸಬೇಕಾಯಿತು. ರಾಷ್ಟ್ರದ ಔದ್ಯೋಗೀಕರಣಕ್ಕೆ ಅಗತ್ಯವಾದ ತಾಂತ್ರಿಕ ಶಕ್ತಿಯನ್ನು ಹೆಚ್ಚಿಸಲು ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣದ ಕಡೆ ಗಮನ ಕೊಡಬೇಕಾಯಿತು. ಪರದೇಶಗಳಿಂದ ಯಂತ್ರೋಪಕರಣಗಳನ್ನು ಕೊಳ್ಳಲು ಅಗಾಧ ಪ್ರಮಾಣದಲ್ಲಿ ಹಣವನ್ನು ಹೂಡಬೇಕಾಗಿ ಬಂತು. ಇವೆಲ್ಲ ಕಾರಣಗಳಿಂದ ಕೇಂದ್ರ ಸರ್ಕಾರ ಕಡ್ಡಾಯ ಶಿಕ್ಷಣಕ್ಕಾಗಿ ತಕ್ಕಷ್ಟು ಹಣ ಒದಗಿಸಲಾರದಾಯಿತು. ರಾಜ್ಯಾಂಗ ರಚನೆ ತಮಗೆ ನಿರ್ದೇಶಿಸಿದ ಆ ಕಾರ್ಯವನ್ನು ನಿರ್ವಹಿಸಲು ತ್ರಿಕರಣಪೂರ್ವಕವಾಗಿ ರಾಜ್ಯಸರ್ಕಾರಗಳು ಯತ್ನಿಸಿದರೂ ಅದನ್ನು ಆಚರಣೆಗೆ ತರುವುದು ಅಸಾಧ್ಯವಾಯಿತು. ಸಾಲದ್ದಕ್ಕೆ ಜನಸಂಖ್ಯೆಯೂ ತೀವ್ರಗತಿಯಲ್ಲಿ ಹೆಚ್ಚಿ, ಕಡ್ಡಾಯ ಶಿಕ್ಷಣದ ವಯೋಮಿತಿಯ ಮಕ್ಕಳ ಸಂಖ್ಯೆ ಅಧಿಕವಾಗುತ್ತ ಬಂತು. ಅವರಿಗೆಲ್ಲ ಉಚಿತ ಪ್ರಾಥಮಿಕ ಶಿಕ್ಷಣ ದೊರಕಿಸಲು ಧನದ ಅಭಾವ, ಕಟ್ಟಡ ಮತ್ತು ಅಧ್ಯಾಪಕರ ಕೊರತೆ–ಇವೆಲ್ಲ ರಾಜ್ಯಗಳ ಯತ್ನಕ್ಕೆ ಅಡ್ಡಿಯಾಗಿ ನಿಂತುವು. ಅನಕ್ಷರಸ್ಥ ತಂದೆತಾಯಿಗಳಿಗೆ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಇದ್ದ ನಿರಾಸಕ್ತಿ, ಅವರ ಬಡತನ, ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸದ ಸಂಪ್ರದಾಯ–ಇವೆಲ್ಲ ಕಾರಣಗಳಿಂದ ಯೋಜನೆಯನ್ನು ಹಾಗೂ ಹೀಗೂ ಆಚರಣೆಗೆ ತಂದ ರಾಜ್ಯಗಳಲ್ಲೂ ತಕ್ಕಷ್ಟು ಯಶಸ್ಸು ಸಾಧಿಸಲಾಗಲಿಲ್ಲ. ರಾಜ್ಯಾಂಗದಲ್ಲಿ ಉಲ್ಲೇಖವಾಗಿದ್ದ ಆಶಯ ಈಡೇರಲಾರದಾಯಿತು. ಇದನ್ನು ಕಂಡ ರಾಷ್ಟ್ರ 1960ರಿಂದ ಮತ್ತೆ ಹೆಚ್ಚಿನ ದೃಢತೆಯಿಂದ ಆ ಕಾರ್ಯ ಸಾಧಿಸಲು ಯತ್ನಿಸಿತು. ಪ್ರತಿ ಜಿಲ್ಲೆಯಲ್ಲೂ ಬರುವ ವರ್ಷ ಶಾಲೆಗೆ ಸೇರಬೇಕಾದ ಮಕ್ಕಳ ಸಂಖ್ಯೆ, ಅದಕ್ಕಾಗಿ ಬೇಕಾಗುವ ಕಟ್ಟಡಗಳು, ಅಧ್ಯಾಪಕರು ಇತ್ಯಾದಿ ಅಂಶಗಳನ್ನೊಳಗೊಂಡಂತೆ ಎಲ್ಲ ರಾಜ್ಯಗಳಲ್ಲೂ ಸಮೀಕ್ಷೆ ನಡೆಸಲಾಯಿತು. ಅದಕ್ಕೆ ಅಗತ್ಯವಾದ ಧನಸಹಾಯವನ್ನು ಕೇಂದ್ರ ಸರ್ಕಾರ ಒದಗಿಸಿತು. 14ನೆಯ ವಯಸ್ಸಿನವರೆಗಿನ ಶಿಕ್ಷಣವನ್ನು ಅಂತಿಮವಾಗಿ ಕಡ್ಡಾಯ ಮಾಡುವ ಉದ್ದೇಶವನ್ನು ಮುಂದಿಟ್ಟುಕೊಂಡಿದ್ದರೂ ಸದ್ಯಕ್ಕೆ ಅನೇಕ ರಾಜ್ಯಗಳು 5 ಅಥವಾ 6–11ನೆಯ ವರ್ಷದ ವರೆಗಿನ ಶಿಕ್ಷಣವನ್ನು ಮಾತ್ರ ಕಡ್ಡಾಯ ಮಾಡಲು ಉಪಕ್ರಮಿಸಿದುವು.

**ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳು :** ರಾಷ್ಟ್ರಾದ್ಯಂತ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವಾಗ ಹಲವಾರು ಎಡರುತೊಡರುಗಳೂ ಸಮಸ್ಯೆಗಳೂ ಅಡ್ಡ ಬರುತ್ತವೆ. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ಪರಿಶೀಲಿಸಬಹುದು.

1. **ಕುಟುಂಬ ಜೀವನದ ಕಷ್ಟಕಾರ್ಪಣ್ಯಗಳು:** ತಂದೆತಾಯಿಗಳ ಆರ್ಥಿಕ ದುಸ್ಥಿತಿ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವಾಗ ಬರುವ ಮೊದಲ ಅಡಚಣೆ. ಗ್ರಾಮಾಂತರ ಪ್ರದೇಶಗಳಲ್ಲಿ ತಂದೆತಾಯಿಗಳು ಮನೆಗೆಲಸಕ್ಕೂ ಜೀವನೋಪಾಯದ ಕಸಬುಗಳಿಗೂ ಮಕ್ಕಳ ಸೇವೆಯನ್ನು ಬಳಸಿಕೊಳ್ಳುವುದು ಸ್ವಾಭಾವಿಕ. ಮಕ್ಕಳ ಹಿತದೃಷ್ಟಿಯಿಂದ ಇದು ಉಚಿತವಲ್ಲ. ಆ ಬಗ್ಗೆ ರಾಜ್ಯ ಶಾಸನ ಮಾಡಿದರೂ ಅದು ತಪ್ಪುವುದಿಲ್ಲ. ತಮಗೆ ಎಷ್ಟೇ ಕಷ್ಟಗಳಿದ್ದರೂ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕೆಂಬ ಪ್ರಜ್ಞೆ ತಂದೆತಾಯಿಗಳಲ್ಲಿ ಮೂಡಬೇಕು. ಆ ಬಗ್ಗೆ ಪ್ರಚಾರ, ಪ್ರೋತ್ಸಾಹ ಅನಿವಾರ್ಯವಾದಾಗ ದಂಡ, ಇವೆಲ್ಲ ಅಗತ್ಯವಾಗುತ್ತವೆ. ಆದರೂ ಮಕ್ಕಳನ್ನು ಶಾಲೆಗೆ ಕಳಿಸಲಾರದಂಥ ಆರ್ಥಿಕ ಅಥವಾ ಇನ್ನಿತರ ಕೌಟುಂಬಿಕ ಸ್ಥಿತಿ ಇರಬಹುದಾದ ಕೆಲವು ಸಂದರ್ಭಗಳಲ್ಲಿ ಅವರಿಗೆ ಅಲ್ಪಸ್ವಲ್ಪ ಧನಸಹಾಯ ಮಾಡುವುದರ ಮೂಲಕ ಮಕ್ಕಳು ಶಾಲೆಗೆ ಹಾಜರಾಗುವಂತೆ ಮಾಡುವುದೂ ಅಗತ್ಯ. ಕೆಲವು ರಾಷ್ಟ್ರಗಳಲ್ಲಿ ಈ ಪದ್ಧತಿ ಪ್ರಚಾರದಲ್ಲಿದೆ. ಕಡ್ಡಾಯ ಶಿಕ್ಷಣದ ವಯೋಮಿತಿಯಲ್ಲಿರುವ ಮಕ್ಕಳನ್ನು ಅಂಗಡಿ, ಕಾರ್ಖಾನೆ, ಕಚೇರಿ, ಹೋಟೆಲು ಮುಂತಾದೆಡೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಕೂಡದೆಂಬ ರಾಜ್ಯಶಾಸನವೂ ಅಗತ್ಯವಾಗಿ ಆಗಬೇಕು. ಬಹುತೇಕ ದೇಶಗಳಲ್ಲಿ ಇಂಥ ಶಾಸನವೇನೂ ಆಚರಣೆಯಲ್ಲಿದೆ.

2. **ಕಟ್ಟಡಗಳ ಅಭಾವ:** ಕಡ್ಡಾಯ ಶಿಕ್ಷಣವೆಂದರೆ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವುದೇ ಆಗಿರುತ್ತದೆ. ಅದಕ್ಕೆ ಇರತಕ್ಕ ಸದ್ಯದ ಕಟ್ಟಡಗಳ ಸೌಲಭ್ಯ ಗಣನೀಯವಾಗಿ ಹೆಚ್ಚಬೇಕಾಗುತ್ತದೆ. ಅದಕ್ಕಾಗಿ ಹಣವನ್ನು ಒದಗಿಸಿದರೂ ಕಟ್ಟಡಗಳು ಶೀಘ್ರವಾಗಿ ನಿರ್ಮಾಣವಾಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮುಖ್ಯವಾಗಿ ಅವನ್ನು ಕಟ್ಟಬೇಕಾಗಿರುವುದೂ ಆ ಕಾರ್ಯ ರಾಜ್ಯದ ಕಾಮಗಾರಿ ಇಲಾಖೆಯ ನೇತೃತ್ವದಲ್ಲಿ ನಡೆಯಬೇಕಾಗಿರುವುದೂ ಇದಕ್ಕೆ ಮುಖ್ಯ ಕಾರಣವೆನ್ನಬಹುದು. ಈ ತೊಂದರೆಯನ್ನು ನಿವಾರಿಸಲು ರಾಜ್ಯದ ಶಿಕ್ಷಣ ಶಾಖೆ ಅಥವಾ ಶಾಲಾಮಂಡಲಿ ತಾನೇ ಕಾಮಗಾರಿ ಇಲಾಖೆಯನ್ನು ಹೊಂದಿದ್ದು ಕಟ್ಟಡಗಳ ನಿರ್ಮಾಣ ಕಾರ್ಯವನ್ನು ತ್ವರಿತವಾಗಿ ಸಾಗಿಸುವುದು ಅಗತ್ಯ. ನಗರಗಳಲ್ಲಂತು ವರ್ಷ ವರ್ಷಕ್ಕೂ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಒಂದೇ ಸಮನೆ ಹೆಚ್ಚುತ್ತಿದ್ದರೂ ಅಲ್ಲಿನ ಶಾಲಾ ಕಟ್ಟಡಗಳನ್ನು ವಿಸ್ತರಿಸುವುದು ಸ್ಥಳಾಭಾವದಿಂದ ಅಸಾಧ್ಯವಾಗುತ್ತಿದೆ. ವಸತಿ ಸಮಸ್ಯೆ ತೀವ್ರವಾಗಿರುವ ಮೊಹಲ್ಲಗಳಲ್ಲಿ ಬಾಡಿಗೆ ಮನೆಗಳನ್ನು ದೊರಕಿಸಿಕೊಳ್ಳುವುದೂ ಸಾಧ್ಯವಾಗುತ್ತಿಲ್ಲ. ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಲ್ಲೂ ಸ್ಥಳಾಭಾವ ಇದ್ದೇ ಇದೆ. ಈ ತೊಂದರೆಯನ್ನು ತಪ್ಪಿಸಲು ಹೊಸದಾಗಿ ನಗರಗಳಲ್ಲಿ ಬಡಾವಣೆಗಳನ್ನು ನಿರ್ಮಿಸುವಾಗ ಶಾಲೆಗೆ ತಕ್ಕಷ್ಟು ನಿವೇಶನವನ್ನು ಬಿಡುವಂತೆ ಶಿಕ್ಷಣ ಶಾಖೆ ನೋಡಿಕೊಳ್ಳಬೇಕು. ತೀವ್ರ ಸ್ಥಳಾಭಾವವಿದ್ದು ತಕ್ಷಣಕ್ಕೆ ಪಕ್ಕಾ ಕಟ್ಟಡಗಳನ್ನು ರೂಪಿಸುವುದು ಅಸಾಧ್ಯವಾದೆಡೆ ಕಚ್ಚಾ ಕಟ್ಟಡಗಳನ್ನಾದರೂ ಕಟ್ಟಿಕೊಳ್ಳಬೇಕು.

3. **ಉಪಕರಣಗಳ ಕೊರತೆ:** ತೀವ್ರಗತಿಯಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಇರತಕ್ಕ ಶಾಲೆಗಳನ್ನು ವಿಸ್ತರಿಸುವಾಗ ಮತ್ತು ಹೊಸ ಶಾಲೆಗಳನ್ನು ತೆರೆಯುವಾಗ ಪೀಠೋಪಕರಣ, ಪಾಠೋಪಕರಣ, ಪುಸ್ತಕ ಇತ್ಯಾದಿಗಳನ್ನು ಒದಗಿಸುವುದು ಕಷ್ಟವಾಗುತ್ತದೆ. ಅದಕ್ಕಾಗಿ ಮೀಸಲಿಟ್ಟಿರುವ ಹಣವಿದ್ದರೂ ಕೊಳ್ಳಲು ಅವು ದೊರಕದಿರಬಹುದು. ಆದ್ದರಿಂದ ಶಾಲೆಗಳಿಗೆ ಅಗತ್ಯ ವಸ್ತುಗಳನ್ನು ಸಕಾಲದಲ್ಲಿ ಒದಗಿಸುವುದು ಸಾಧ್ಯವಾಗದೆ ಕಡ್ಡಾಯ ಶಿಕ್ಷಣದ ವಿಸ್ತರಣ ಕಾರ್ಯ ಮಂದಗತಿ ತಾಳುತ್ತದೆ. ಅದನ್ನು ತಪ್ಪಿಸಲು ಶಿಕ್ಷಣಶಾಖೆ ಅದಕ್ಕಾಗಿ ತಕ್ಕಷ್ಟು ಹಣವನ್ನು ಮೀಸಲಿಡುವುದರ ಜೊತೆಗೆ ಅವನ್ನು ತಯಾರಿಸುವವರು ಸಕಾಲದಲ್ಲಿ ಸರಬರಾಜು ಮಾಡುವಂತೆಯೂ ನೋಡಿಕೊಳ್ಳಬೇಕು. ಅದು ಸಾಧ್ಯವಾಗದಾಗ ಸರ್ಕಾರವೇ ಅದಕ್ಕಾಗಿ ಕಾರ್ಖಾನೆಗಳನ್ನು ಆರಂಭಿಸಬೇಕು.

**4. ಅಧ್ಯಾಪಕರ ಕೊರತೆ:** ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವಾಗ ಎಲ್ಲ ಕಡೆಯೂ ಅಧ್ಯಾಪಕರ ಕೊರತೆ ಕಂಡು ಬರುತ್ತದೆ. ಅದಕ್ಕಾಗಿ ಸದ್ಯದ ಅಧ್ಯಾಪಕ ಶಿಕ್ಷಣ ಸಂಸ್ಥೆಗಳನ್ನು ವಿಸ್ತರಿಸುವುದೂ ಹೊಸ ಸಂಸ್ಥೆಗಳನ್ನು ಆರಂಭಿಸುವುದೂ ನಡೆಯುತ್ತಿದೆ. ಆದರೂ ವೃತ್ತಿ ಶಿಕ್ಷಣ ಪಡೆದ ಅಧ್ಯಾಪಕರು ತಕ್ಕ ಸಂಖ್ಯೆಯಲ್ಲಿ ದೊರಕುತ್ತಿಲ್ಲ. ಈ ಸಮಸ್ಯೆಯನ್ನು ನಿವಾರಿಸಲು ಅಲ್ಪಾವಧಿಯ ವೃತ್ತಿ ಶಿಕ್ಷಣದ ಕಾರ್ಯಕ್ರಮವನ್ನು ಆಚರಣೆಗೆ ತರಬಹುದು. ವೃತ್ತಿಶಿಕ್ಷಣ ದೊರಕಿಸುವ (ಅಂಥವರನ್ನು ಸರ್ಕಾರವೇ ವೃತ್ತಿ ಶಿಕ್ಷಣಕ್ಕೆ ಕಳಿಸಿ ಅಥವಾ ಸಂಜೆಯ ಅಥವಾ ಅಂಚೆ ಶಿಕ್ಷಣಕ್ಕೆ ಪ್ರೋತ್ಸಾಹಿಸಿ) ವ್ಯವಸ್ಥೆ ಮಾಡಬಹುದು. ಪ್ರಾಥಮಿಕ ಶಾಲೆಗಳಲ್ಲಿ ಕೆಲಸಕ್ಕೆ ಸೇರಲು ಅನೇಕರು ಇಷ್ಟಪಡುವುದಿಲ್ಲ. ಇದಕ್ಕೆ ಬಹುಕಾಲದಿಂದಲೂ ಆ ದರ್ಜೆಯ ಅಧ್ಯಾಪಕರಿಗೆ ನೀಡುತ್ತಿದ್ದ ಕಡಿಮೆ ಶ್ರೇಣಿಯ ಸಂಬಳವೇ ಮುಖ್ಯ ಕಾರಣ. ಈಚೆಗೆ ಅಭ್ಯರ್ಥಿಗಳನ್ನು ಈ ಸೇವಾಕ್ಷೇತ್ರಕ್ಕೆ ಆಕರ್ಷಿಸಲು ತಕ್ಕಮಟ್ಟಿಗೆ ಅವರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸಲಾಗುತ್ತಿದೆ.

**5. ಹಣದ ಅಭಾವ:** ಎಲ್ಲ ದೇಶಗಳಲ್ಲೂ ಎಲ್ಲ ಕಾಲಗಳಲ್ಲೂ ಕಡ್ಡಾಯ ಶಿಕ್ಷಣಕ್ಕೆ ಅಡ್ಡಿ ಬರುತ್ತಿರುವ ಪ್ರಮುಖ ಅಂಶ ಆರ್ಥಿಕ ತೊಂದರೆ. ಅನೇಕ ದೇಶಗಳಲ್ಲಿ ಆದಾಯದ ಸು. $^{1}/_{8}$ ಭಾಗ ಕಡ್ಡಾಯ ಶಿಕ್ಷಣಕ್ಕಾಗಿ ವಿನಿಯೋಗವಾಗುತ್ತಿದೆ. ರಾಷ್ಟ್ರದ ಇತರ ಕ್ಷೇತ್ರಗಳಲ್ಲಿ ಹೂಡಿದ ಹಣದಂತೆ ಈ ಕ್ಷೇತ್ರದಲ್ಲಿ ಹೂಡುವ ಹಣದಿಂದ ಪ್ರತಿಫಲ ತಕ್ಷಣ ದೊರಕುವಂತಿಲ್ಲ. ಆದರೆ ರಾಷ್ಟ್ರದ ವಿವಿಧ ಉದ್ಯಮಗಳಿಗೆ ತಜ್ಞರನ್ನು ಒದಗಿಸಿ ಆರ್ಥಿಕ ಶಕ್ತಿಯನ್ನು ಉತ್ತಮಪಡಿಸುವ ಕಾರ್ಯದಲ್ಲಿ ಅದು ಖಂಡಿತವಾಗಿ ಪಾತ್ರವಹಿಸುತ್ತದೆ. ಆದ್ದರಿಂದ ತನ್ನ ಪುರೋಭಿವೃದ್ಧಿಯ ದೃಷ್ಟಿಯಿಂದಲೇ ರಾಷ್ಟ್ರ ಎಲ್ಲ ಸಂಪನ್ಮೂಲಗಳಿಂದಲೂ ಅದಕ್ಕಾಗಿ ಹಣ ಒದಗಿಸಿಕೊಳ್ಳುವುದು ಅಗತ್ಯವಾಗುತ್ತದೆ.

**6. ಕಡ್ಡಾಯ ಶಿಕ್ಷಣದಲ್ಲಿ ನಿಲುಗಡೆಯ ಸಮಸ್ಯೆ:** ಒಂದೇ ತರಗತಿಯಲ್ಲಿ ವಿದ್ಯಾರ್ಥಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಉಳಿಯುವುದನ್ನು ನಿಲುಗಡೆ ಅಥವಾ ಕುಂಟಿಕೆ ಎನ್ನುವರು. ಇದರ ಫಲವಾಗಿ ಶಿಕ್ಷಣ ಕ್ಷೇತ್ರಕ್ಕೆ ಅನಗತ್ಯವಾಗಿ ಅಧಿಕ ವ್ಯಯವಾಗುವುದಲ್ಲದೆ ನಿಯಮಿತಕಾಲಕ್ಕೆ ಶಾಲೆಯನ್ನು ಬಿಡತಕ್ಕವರು ಪ್ರಾಥಮಿಕ ಶಿಕ್ಷಣವನ್ನು ಪೂರ್ಣವಾಗಿ ಮುಗಿಸಲಾರದೆ ಮುಂದೆ ನಿರಕ್ಷರತೆಗೆ ಬೀಳುವರು. ಇದರಿಂದ ಕಡ್ಡಾಯ ಶಿಕ್ಷಣದ ಉದ್ದೇಶವೇ ವಿಫಲವಾಗುವುದು. ಭಾರತದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ನಿಲುಗಡೆಯ ಸಮಸ್ಯೆ ತೀವ್ರವಾಗಿದೆ.

**7. ಕಡ್ಡಾಯ ಶಿಕ್ಷಣದಲ್ಲಿ ವ್ಯರ್ಥವ್ಯಯ:** ಶಾಲೆಗೆ ಸೇರಿದ ಮಕ್ಕಳು ನಿಯತಕಾಲಾವಧಿಯವರೆಗೆ ಶಿಕ್ಷಣ ಪಡೆಯದೆ ಮಧ್ಯೆ ಶಾಲೆಯನ್ನು ಬಿಡುವುದರಿಂದ ಅವರು ಮರಳಿ ನಿರಕ್ಷರತೆಗೆ ಬೀಳುವರು. ಇದನ್ನು ಶಿಕ್ಷಣದಲ್ಲಾಗುವ ವ್ಯರ್ಥವ್ಯಯ (ಅಪವ್ಯಯ, ನಷ್ಟ, ವೇಸ್ಟೇಜ್) ಎನ್ನುವರು. ಕಡ್ಡಾಯ ಶಿಕ್ಷಣ ಆಚರಣೆಯಲ್ಲಿರುವೆಡೆ ಮಕ್ಕಳು ನಿಯಮಿತ ಕಾಲದ ಅನಂತರ ಶಾಲೆಯನ್ನು ಬಿಡುವ ಸಂದರ್ಭದಲ್ಲೂ ನಿಲುಗಡೆಯಿಂದ ಇಂಥ ವ್ಯರ್ಥ ವ್ಯಯ ಸಂಭವಿಸುವುದು. ಹೇಗೇ ಆಗಲಿ ಭಾರತದಲ್ಲಿ ನಿಲುಗಡೆಯಂತೆ ವ್ಯರ್ಥ ವ್ಯಯವೂ ಅಧಿಕವಾಗಿದೆ. ಈಚೆಗೆ ಮಹಾರಾಷ್ಟ್ರದಲ್ಲಿ ನಡೆದ ಒಂದು ಸಂಶೋಧನೆಯ ಪ್ರಕಾರ ಶಾಲೆಗೆ ಸೇರಿದ 1,000 ಮಂದಿಯಲ್ಲಿ ನಾಲ್ಕನೆಯ ತರಗತಿಯನ್ನೇ ಮುಗಿಸುವ ಮುನ್ನ 414 ಮಂದಿ ಶಾಲೆಯನ್ನು ಬಿಟ್ಟು ಬಿಟ್ಟಿದ್ದರು. ಇಡೀ ರಾಷ್ಟ್ರದಲ್ಲೇ ಇಷ್ಟೊ, ಇನ್ನೂ ಹೆಚ್ಚಿನ ಪ್ರಮಾಣದಲ್ಲೊ ಅಪವ್ಯಯ ನಡೆಯುತ್ತಿದೆ. ಭಾರತದ ಶಿಕ್ಷಣ ಕ್ಷೇತ್ರದಲ್ಲಾಗುತ್ತಿರುವ ನಷ್ಟದ ತೀವ್ರ ಸ್ವರೂಪವನ್ನು ಮೊದಲು ಹರ್ಟಾಗ್ ಸಮಿತಿ ಎತ್ತಿ ತೋರಿಸಿತು.

ನಿಲುಗಡೆ ಮತ್ತು ವ್ಯರ್ಥವ್ಯಯಗಳಿಗೆ ಮುಖ್ಯವಾಗಿ (1) ಮೊದಲನೆಯ ತರಗತಿಗೆ ಬೇರೆ ಬೇರೆ ವಯಸ್ಸಿನ ಮಕ್ಕಳನ್ನು ಸೇರಿಸುವುದು, (2) ವರ್ಷದ ಮಧ್ಯದಲ್ಲಿ ತರಗತಿಗೆ ಸೇರಿಸಿಕೊಳ್ಳುವುದು, (3) ತರಗತಿಗೆ ಮಕ್ಕಳು ಸರಿಯಾಗಿ ಹಾಜರಾಗದಿರುವುದು, (4) ಶಾಲೆಯಲ್ಲಿ ತಕ್ಕಷ್ಟು ಉಪಕರಣಾದಿಗಳು ಇಲ್ಲದಿರುವುದು, (5) ತರಗತಿಗೆ ಮಿತಿ ಮೀರಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು, (6) ಸಾಮಾನ್ಯ ಮಕ್ಕಳಿಗೆ ಆಕರ್ಷಣೀಯವಾಗಿರದ ಪಠ್ಯಕ್ರಮ, (7) ಅಧ್ಯಾಪಕರು ಅನುಸರಿಸುವ ಬೇಸರ ಹುಟ್ಟಿಸುವ ಬೋಧನ ಕ್ರಮ (8) ಅಧ್ಯಾಪಕರಿಗೆ ತಕ್ಕಷ್ಟು ಶಿಕ್ಷಣ ಸಂಸ್ಕಾರಗಳಿಲ್ಲದಿರುವಿಕೆ–ಇವು ಕಾರಣವೆನಿಸುತ್ತವೆ. ಕಡ್ಡಾಯ ಶಿಕ್ಷಣದ ಉದ್ದೇಶ ಈಡೇರಬೇಕಾದರೆ ಈ ನ್ಯೂನತೆಗಳನ್ನು ನಿವಾರಿಸುವುದರ ಜೊತೆಗೆ ಒಂದನೆಯ ತರಗತಿಯಲ್ಲಿ ಪರೀಕ್ಷೆ ನಡೆಸದೆ ಮುಂದಕ್ಕೆ ತೇರ್ಗಡೆ ಮಾಡಿಸುವುದೂ ಶಾಲೆಗೆ ಸೇರುವ ಒಂದು ವರ್ಷದ ಶಿಶುವಿಹಾರದಲ್ಲಿ ಶಿಕ್ಷಣ ನೀಡುವುದೂ ಅಗತ್ಯ.

ಪ್ರಾಥಮಿಕ ಮಟ್ಟದ ಶಿಕ್ಷಣದಲ್ಲಾಗುವ ನಿಲುಗಡೆಗೂ ಅದರ ಫಲವಾಗಿ ಉದ್ಭವಿಸುವ ಶಿಕ್ಷಣದ ಅಪವ್ಯಯಕ್ಕೂ ಜನತೆಯ ಬಡತನ ಪ್ರಮುಖ ಕಾರಣ. ಅದರ ಫಲವಾಗಿ ಶೇ.65ರಷ್ಟು ಅಪವ್ಯಯ ಸಂಭವಿಸುತ್ತಿದೆ. 9–10 ವರ್ಷದ ಮಕ್ಕಳು ಹೊಲಗದ್ದೆಗಳಲ್ಲೂ ಅಂಗಡಿಮುಂಗಟ್ಟುಗಳಲ್ಲೂ ತಂದೆತಾಯಿಗಳಿಗೆ ಜೀವನೋಪಾಯದ ಕಸಬಿನಲ್ಲಿ ನೆರವಾಗಲು ಶಾಲೆಗೆ ತಪ್ಪಿಸಿಕೊಳ್ಳುವರು. ತಂದೆತಾಯಿಗಳು ಅನಿವಾರ್ಯದ ಈ ಕಾರಣಕ್ಕಾಗಿ ಮಕ್ಕಳನ್ನು ಶಾಲೆಗೆ ಕಳಿಸದೆ ಉಳಿಸಿಕೊಳ್ಳುವರು. ಅಂಥ ಮಕ್ಕಳು ನಿರಕ್ಷರತೆಗೆ ಮರಳಿ, ಶಿಕ್ಷಣದಲ್ಲಿ ಅಧಿಕ ಪ್ರಮಾಣದಲ್ಲಿ ವ್ಯರ್ಥವ್ಯಯ ಸಂಭವಿಸುವುದು. ಅಂಥ ಮಕ್ಕಳಿಗೆ, ಅವರಿಗೆ ಅನುಕೂಲವಾಗುವ ವೇಳೆಯಲ್ಲಿ ಭಾಗಶಃ ಕಾಲದ ಶಿಕ್ಷಣ ಸೌಲಭ್ಯವನ್ನು ಒದಗಿಸುವುದರಿಂದ ಅದನ್ನು ಬಹುಮಟ್ಟಿಗೆ ನಿವಾರಿಸಬಹುದು. ಕಡ್ಡಾಯ ಶಿಕ್ಷಣದ ಅವಧಿಯ ಅನಂತರ ಅದನ್ನು ಪೂರ್ಣಾವಧಿಯವರೆಗೆ ಮುಗಿಸಿದವರಿಗೂ ಒಂದು ವರ್ಷದ ಭಾಗಶಃ ಕಾಲಕ ಶಿಕ್ಷಣವನ್ನು ಕಡ್ಡಾಯ ಮಾಡುವುದೂ ಅಗತ್ಯ. ಇಂಥ ತರಗತಿಗಳನ್ನು ನಡೆಸಲು ಅಷ್ಟಾಗಿ ಹಣ ಖರ್ಚಾಗದಿದ್ದರೂ ಅದರಿಂದಾಗುವ ಪ್ರತಿಫಲ ಗಣನೀಯವಾಗಿರುತ್ತದೆ. ಇತ್ತೀಚೆಗೆ ರಚನೆಯಾಗಿದ್ದ ಕೊಠಾರಿ ಶಿಕ್ಷಣ ಆಯೋಗವೂ ತನ್ನ ವರದಿಯಲ್ಲಿ ಇಂಥ ಸಲಹೆಯೊಂದನ್ನು ಸೇರಿಸಿದೆ. ಕೇವಲ ನಾಲ್ಕು ವರ್ಷಗಳ ಕಡ್ಡಾಯ ಶಿಕ್ಷಣವಿರುವ ದೇಶಗಳಲ್ಲಿ ಅದನ್ನು ಮುಗಿಸಿದ ಮೇಲೆ ಕೆಲಸಕ್ಕೆ ಸೇರಿಕೊಳ್ಳುವ ಮಕ್ಕಳು ಬಹುಬೇಗ ನಿರಕ್ಷರತೆಗೆ ತುತ್ತಾಗುವರು. ಅದು ತನಕ ಅವರು ಕಲಿತಿರುವುದನ್ನು ಮರೆಯದಿರಬೇಕಾದರೆ ಉದ್ಯೋಗ ನಿರತರಾದ ಮೇಲೂ ಅವರಿಗೆ ಕೆಲವು ವರ್ಷಗಳ ಭಾಗಶಃ ಶಿಕ್ಷಣವನ್ನು ಕಡ್ಡಾಯ ಮಾಡುವುದು ಅಗತ್ಯ. ಅಲ್ಲಿ ಅವರಿಗೆ ಅನುಕೂಲಿಸುವಂತೆ ಪಠ್ಯಕ್ರಮ, ಬೋಧನವಿಧಾನ, ಕಾರ್ಯಸೂಚಿ ಮುಂತಾದುವನ್ನು ರೂಪಿಸಿಕೊಳ್ಳಬಹುದು. ಅಪವ್ಯಯದ ಇನ್ನುಳಿದ ಶೇ. 35ರಷ್ಟು ಭಾಗ ಸಾಮಾಜಿಕ ಮತ್ತು ಶೈಕ್ಷಣಿಕ ಕಾರಣಗಳಿಂದ ಸಂಭವಿಸುವುದು. ಕೆಲವು ಹಳ್ಳಿಗಳ ಶಾಲೆಗಳಲ್ಲಿ ಮೊದಲು ಎರಡು ಮೂರು ತರಗತಿಗಳು ಮಾತ್ರವಿದ್ದು ಮೇಲಿನ ತರಗತಿಗಳು ಪಕ್ಕದ ಹಳ್ಳಿಯ ಶಾಲೆಯಲ್ಲಿರುವಾಗ ಮಕ್ಕಳು ಅಲ್ಲಿಗೆ ಹೋಗಲಾರದೆ ಶಿಕ್ಷಣವನ್ನು ಅಲ್ಲಿಗೇ ಮುಗಿಸುವರು; ಹೆಣ್ಣು ಮಕ್ಕಳನ್ನು ಅನೇಕ ಕಡೆ ಪ್ರಾಥಮಿಕ ಶಾಲೆಯ ಕೊನೆಯ ಹಂತದವರೆವಿಗೂ ಕಳಿಸಲು ತಂದೆತಾಯಿಗಳು ಆಶಿಸುವುದಿಲ್ಲ. ಈ ಎರಡು ಕಾರಣಗಳಿಂದಾಗುವ ಅಪವ್ಯಯವನ್ನು ನಿಲ್ಲಿಸಲು ಶಾಲೆಗಳ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದು ಗ್ರಾಮಾಂತರ ಪ್ರದೇಶಗಳ ಜನತೆಯಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಆವಶ್ಯಕತೆಯ ಬಗ್ಗೆ ಪ್ರಚಾರ ಮಾಡುವುದೂ ಅಗತ್ಯ.

ನಿಲುಗಡೆ ಮತ್ತು ಅಪವ್ಯಯ–ಇವೆರಡೂ ಅವಷ್ಟಕ್ಕೇ ತಲೆನೋವು ಜ್ವರಗಳಂತೆ ಬೇನೆಯಲ್ಲ–ಶಿಕ್ಷಣ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ಸೂಚಿಸುವ ಪರಿಣಾಮಗಳು ಮಾತ್ರ. ಆದ್ದರಿಂದ ಮೇಲೆ ಸೂಚಿಸಿರುವಂತೆ ಅವನ್ನು ಮೂಡಿಸುವ ಕಾರಣಗಳನ್ನು ನಿವಾರಿಸುವುದು ಅಗತ್ಯ.

**ಪಂಚವಾರ್ಷಿಕ ಯೋಜನೆಗಳಲ್ಲಿ ಕಡ್ಡಾಯ ಶಿಕ್ಷಣದ ಪ್ರಗತಿ:** ಇಡೀ ಭಾರತದಲ್ಲಿ ಪ್ರಾಥಮಿಕ 1–4 ತರಗತಿಗಳಲ್ಲಿ ಮೊದಲು ಮೂರು ಯೋಜನೆಗಳಲ್ಲಿ ಮಕ್ಕಳ ದಾಖಲಾತಿ ಶೀಘ್ರಗತಿಯಿಂದಲೇ ಸಾಗಿತು. 1950–51ರಲ್ಲಿ 1.4 ಕೋಟಿ ಮಕ್ಕಳ ಸಂಖ್ಯೆ 1965–66ರಲ್ಲಿ 3.7 ಕೋಟಿಗೇರಿತು. ಎಂದರೆ ರಾಜ್ಯಾಂಗ ರಚನೆಯಾದ 15 ವರ್ಷಗಳಲ್ಲಿ ದಾಖಲಾತಿ 3 ಪಟ್ಟು ಹೆಚ್ಚಿತು. ಮೊದಲ ಯೋಜನೆಯಲ್ಲಿ ಪ್ರತಿವರ್ಷವೂ ಆ ವಯೋಮಿತಿಯ ಮಕ್ಕಳಲ್ಲಿ ಸರಾಸರಿ ಶೇ. 4.9ರಷ್ಟು ಮಕ್ಕಳೂ ಎರಡನೆಯ ಯೋಜನೆಯಲ್ಲಿ ಪ್ರತಿವರ್ಷವೂ ಸರಾಸರಿ ಶೇ. 7.5ರಷ್ಟು ಮಕ್ಕಳೂ ಮೂರನೆಯ ಯೋಜನೆಯಲ್ಲಿ ಪ್ರತಿವರ್ಷವೂ ಸರಾಸರಿ ಶೇ. 8.2ರಷ್ಟು ಮಕ್ಕಳೂ ಹೆಚ್ಚಿಗೆ ಸೇರುತ್ತ ಹೋದರು. ನಾಲ್ಕನೆಯ ಯೋಜನೆಯಲ್ಲೂ ದಾಖಲಾತಿ ಇದೇ ವೇಗದಲ್ಲಿ ಮುಂದುವರಿದು 1970–71ರ ವೇಳೆಗೆ ಒಟ್ಟು ಮಕ್ಕಳ ಸಂಖ್ಯೆ 6 ಕೋಟಿಗೇರಿರುವುದು. ಎಂದರೆ ಆ ವಯೋಮಿತಿಯ ಮಕ್ಕಳಲ್ಲಿ ಶೇ. 84ರಷ್ಟು ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ.

ಪ್ರಾಥಮಿಕ 5–7ನೆಯ ತರಗತಿಗಳಲ್ಲಿ ದಾಖಲಾತಿ ಮೊದಲ ಯೋಜನೆಯಲ್ಲಿ ತೀವ್ರಗತಿಯಲ್ಲಿ ಸಾಗಿದರೂ ಅನಂತರದ ಯೋಜನೆಗಳಲ್ಲಿ ಮಂದಗತಿಯನ್ನು ತಾಳಿತು. 1950–51ರಲ್ಲಿದ್ದ 30 ಲಕ್ಷ ಮಕ್ಕಳ ಸಂಖ್ಯೆ 1965–66ರಲ್ಲಿ 130 ಲಕ್ಷಕ್ಕೇರಿತು. ಎಂದರೆ ಹದಿನೈದು ವರ್ಷಗಳಲ್ಲಿ ಮಕ್ಕಳ ಸೇರ್ಪಡೆ ನಾಲ್ವಡಿ ಹೆಚ್ಚಿತು. ಮೊದಲ ಯೋಜನೆಯಲ್ಲಿ ಪ್ರತಿ ವರ್ಷವೂ ಆ ವಯೋಮಿತಿಯ ಮಕ್ಕಳಲ್ಲಿ ಸರಾಸರಿ ಶೇ. 7.6ರಷ್ಟೂ ಎರಡನೆಯ ಯೋಜನೆಯಲ್ಲಿ ಪ್ರತಿವರ್ಷವೂ ಶೇ. 10.2ರಷ್ಟೂ ಮೂರನೆಯ ಯೋಜನೆಯಲ್ಲಿ ಶೇ.11.0ರಷ್ಟೂ ಮಕ್ಕಳು ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಹೊಸದಾಗಿ ಒಳಪಡುತ್ತ ಬಂದರು. ಇದೇ ಪ್ರಗತಿಯ ವೇಗ ನಾಲ್ಕನೆಯ ಯೋಜನೆಯಲ್ಲೂ ಮುಂದುವರಿದು 1970–71ರಲ್ಲಿ 200 ಲಕ್ಷ ಮಕ್ಕಳು ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. ಆದರೂ ಈ ವಯೋಮಿತಿಯ ಮಕ್ಕಳಲ್ಲಿ ಈಗ ಕೇವಲ ಸು. ಶೇ. 50ರಷ್ಟು ಮಾತ್ರ ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. ಕೆಲವು ರಾಜ್ಯಗಳಲ್ಲಿ ಕಡ್ಡಾಯ ಶಿಕ್ಷಣವನ್ನು 5–7ರ ವಯೋಮಿತಿಗೆ ಇನ್ನೂ ವಿಸ್ತರಿಸದಿರುವುದೇ ಇದಕ್ಕೆ ಕಾರಣ.

**ಕರ್ನಾಟಕದಲ್ಲಿ ಕಡ್ಡಾಯ ಶಿಕ್ಷಣದ ಪ್ರಗತಿ:** ಕರ್ನಾಟಕ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣದಲ್ಲಿ ಆಸಕ್ತಿ 1914ರಿಂದಲೇ ಆರಂಭವಾಯಿತು. ಆದರೆ ದ್ರವ್ಯಾಭಾವದಿಂದ ಅದನ್ನು ಆಚರಣೆಗೆ ತರಲಾಗಲಿಲ್ಲ. 1944ರಲ್ಲಿ ರಾಜ್ಯ ಸರ್ಕಾರ ಅದನ್ನು ಆಚರಣೆಗೆ ತರುವ ಉದ್ದೇಶದಿಂದ

ಶಾಸನವೊಂದನ್ನು ಮಾಡಿತು. ಅದರಂತೆ 6–10ರ ವಯೋಮಿತಿಯವರೆಗಿನ ಮಕ್ಕಳು ಶಾಲೆಗೆ ಹಾಜರಾಗುವುದು ಕಡ್ಡಾಯವಾಯಿತು. 1945–46ರಿಂದ ಜಿಲ್ಲೆಗೆ ಒಂದರಂತೆ 9 ತಾಲ್ಲೂಕುಗಳಲ್ಲಿ ಯೋಜನೆಯನ್ನು ಆಚರಣೆಗೆ ತರಲಾಯಿತು. ಅನಂತರ ಯೋಜನೆಯನ್ನು ಪ್ರತಿವರ್ಷವೂ ಒಂದೊಂದು ತಾಲ್ಲೂಕಿಗೆ ವಿಸ್ತರಿಸುವ ಯತ್ನ ನಡೆಯಿತು. ಕಡೆಗೆ 30 ತಾಲ್ಲೂಕುಗಳಿಗೆ ವಿಸ್ತರಿಸುವ ವೇಳೆಗೆ ಯೋಜನೆ ಕಾರ್ಯರೂಪದಲ್ಲಿ ಫಲಕಾರಿಯಾಗದಿರುವುದು ಕಂಡುಬಂತು. 1949ರ ಅನಂತರ ಅದನ್ನು ವಿಸ್ತರಿಸುವುದು ನಿಂತಿತು. ಮುಂದೆ ಈ ಯೋಜನೆ 1961ರ ವರೆಗೆ ಕೇವಲ 9 ಜಿಲ್ಲೆಗಳಲ್ಲಿ ಮಾತ್ರ ಆಚರಣೆಯಲ್ಲಿತ್ತು.

ಮುಂಬೈ ಕರ್ನಾಟಕದ ಜಿಲ್ಲೆಗಳಲ್ಲಿ 1947ರ ಮುಂಬೈ ಕಡ್ಡಾಯ ಶಿಕ್ಷಣ ಕಾಯಿದೆಯನ್ವಯ ಯೋಜನೆ ಆಗಲೇ ಜಾರಿಗೆ ಬಂದಿತ್ತು. 1,000 ಮತ್ತು ಅದಕ್ಕೂ ಹೆಚ್ಚಿನ ಜನಸಂಖ್ಯೆಯ ಊರುಗಳಿಗೆ ಮಾತ್ರ ಅದನ್ನು ಅನ್ವಯಿಸಲಾಗಿತ್ತು. ಮೊದಲ ವರ್ಷ 7–8 ವಯೋಮಿತಿಯ ಮಕ್ಕಳಿಗೂ ಎರಡನೆಯ ವರ್ಷ 8–9 ವಯೋಮಿತಿಯವರೆಗೂ...ಹೀಗೆ ವಿಸ್ತರಿಸುತ್ತ ನಾಲ್ಕು ವರ್ಷಗಳಲ್ಲಿ 7–11 ವಯೋಮಿತಿಯ ಮಕ್ಕಳನ್ನೆಲ್ಲ ಅದರ ವ್ಯಾಪ್ತಿಯಲ್ಲಿ ತರಲಾಯಿತು.

ಮದರಾಸು ಕರ್ನಾಟಕದ ಜಿಲ್ಲೆಗಳಲ್ಲಿ ಮದ್ರಾಸಿನ 1920ರ ಕಡ್ಡಾಯ ಶಿಕ್ಷಣ ಶಾಸನದನ್ವಯ ಯೋಜನೆಯನ್ನು ಆಯ್ದ ಕೆಲವು ಪ್ರದೇಶಗಳಲ್ಲಿ ಮಾತ್ರ ಆಚರಣೆಗೆ ತರಲಾಗಿತ್ತು. ಕಾರ್ಯರೂಪದಲ್ಲಿ ಅದೂ ಫಲಕಾರಿಯೆನಿಸಲಿಲ್ಲ.

ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ 1952ರ ಹೈದರಾಬಾದ್ ಕಡ್ಡಾಯ ಶಿಕ್ಷಣ ಯೋಜನೆ ಆಚರಣೆಗೆ ಬಂದಿತ್ತು. ಯೋಜನೆಯನ್ನು ಎಲ್ಲ ಜಿಲ್ಲೆಗಳಿಗೂ ಹಂತಹಂತವಾಗಿ ವಿಸ್ತರಿಸಲಾಗುತ್ತಿತ್ತು.

ಕೊಡಗು ಪ್ರಾಂತದಲ್ಲಿ 1961ಕ್ಕೆ ಹಿಂದೆ ಕಡ್ಡಾಯ ಶಿಕ್ಷಣ ಆಚರಣೆಯಲ್ಲಿರಲಿಲ್ಲ.

ವಿಶಾಲ ಮೈಸೂರಿನ ಎಲ್ಲ ಭಾಗಗಳಿಗೂ ಅನ್ವಯಿಸುವಂತೆ 1961ರಲ್ಲಿ ಕಡ್ಡಾಯ ಶಿಕ್ಷಣದ ರಾಜ್ಯ ಶಾಸನವಾಯಿತು. 1961–62ರಲ್ಲಿ 6–7 ವಯಸ್ಸಿನವರಿಗೂ 1962–63ರಲ್ಲಿ 6–8 ವಯಸ್ಸಿನವರಿಗೂ 1963–64ರಲ್ಲಿ 6–9 ವಯಸ್ಸಿನವರಿಗೂ 1964–65ರಲ್ಲಿ 6–10 ವಯಸ್ಸಿನವರಿಗೂ 1965–66ರಲ್ಲಿ 9–11 ವಯಸ್ಸಿನವರಿಗೂ ಈ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ಹೊತ್ತಿಗೆ 6–11 ವಯೋಮಿತಿಯ ಮಕ್ಕಳಿಗೆಲ್ಲ ಶಿಕ್ಷಣ ಕಡ್ಡಾಯವಾಯಿತು. ಈ ಶಾಸನದ ಪ್ರಕಾರ (1) ನಿಷ್ಕರ್ಷಿಸಿರುವ (6–14ರ) ವಯೋಮಿತಿಯ ಮಕ್ಕಳಿಗೆ ಶಿಕ್ಷಣ ಉಚಿತ; (2) ಆ ವಯೋಮಿತಿಯಲ್ಲಿರುವ ಮಕ್ಕಳೆಲ್ಲ ಶಾಲೆಗೆ ಸೇರಬೇಕು; (3) ವಯೋಮಿತಿಯ ಕೊನೆಯನ್ನು ಮುಟ್ಟುವವರೆಗೆ ಮಕ್ಕಳನ್ನು ತಂದೆತಾಯಿಗಳು ಶಾಲೆಯಿಂದ ಬಿಡಿಸಬಾರದು; (4) ಆ ವಯೋಮಿತಿಯ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡು ಯಾರೂ ಅವರ ಶಿಕ್ಷಣಕ್ಕೆ ಅಡ್ಡಿಯಾಗಬಾರದು. ಮೇಲಿನ 2, 3, 4ನೆಯ ಅಂಶಗಳನ್ನು ಉಲ್ಲಂಘಿಸಿದವರು ಶಿಕ್ಷಾರ್ಹರಾಗುವರು. ಮಕ್ಕಳ ವಾಸದ ಮನೆಗೆ ಒಂದು ಕಿಮೀ ಹತ್ತಿರದಲ್ಲಿ ಶಾಲೆಯಿಲ್ಲದಿದ್ದರೆ, ಒಂದು ಕಿಮೀ ಒಳಗಿರುವ ಶಾಲೆಯಲ್ಲಿ ತಂದೆತಾಯಿಗಳ ಧಾರ್ಮಿಕ ನಂಬಿಕೆಗೆ ವಿರುದ್ಧವಾದ ಧಾರ್ಮಿಕ ಶಿಕ್ಷಣ ಕಡ್ಡಾಯ ಮಾಡಿದ್ದರೆ, ಅಂಗೀಕರಿಸಿದ ಶಿಕ್ಷಕರಿಂದ ಮನೆಯಲ್ಲಿ ಪಾಠ ಮಾಡಲು ಏರ್ಪಾಡು ಮಾಡಿಕೊಂಡಿದ್ದರೆ, ಕಾಯಿಲೆ, ಸಾಂಕ್ರಾಮಿಕ ರೋಗ, ಗಲಭೆ, ನೈಸರ್ಗಿಕ ಕ್ಷೋಭೆ ಇತ್ಯಾದಿಗಳು ತಲೆದೋರಿದ್ದರೆ, ಮಕ್ಕಳಲ್ಲಿ ಮಾನಸಿಕ ಅಥವಾ ಹಾಜರಾಗದಿರಬಹುದಾದ ಬಗ್ಗೆ ವಿನಾಯಿತಿ ನೀಡಲು ಶಾಸನದಲ್ಲಿ ಅವಕಾಶ ಕಲ್ಪಿಸಿದೆ.

ಕರ್ನಾಟಕ ರಾಜ್ಯ 1968–69ರಲ್ಲಿ 6–11ರ ವಯೋಮಿತಿಯ ಮಕ್ಕಳಲ್ಲಿ ಶೇ.85ರಷ್ಟು ಮಕ್ಕಳನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಕಾರ್ಯದಲ್ಲಿ ಯಶಸ್ವಿಯಾಗಿದೆ. ಈ ಪ್ರಮಾಣ ನಗರಗಳಲ್ಲಿ ಸ್ವಲ್ಪ ಹೆಚ್ಚಾಗಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಲ್ಪ ಕಡಿಮೆಯಾಗಿಯೂ ಇದೆ. ಅಲ್ಲದೆ ಗಂಡುಮಕ್ಕಳ ಸೇರ್ಪಡೆಯ ಪ್ರಮಾಣ ಹೆಣ್ಣು ಮಕ್ಕಳ ಸೇರ್ಪಡೆಯ ಪ್ರಮಾಣಕ್ಕಿಂತ ಹೆಚ್ಚಾಗಿದೆ.

ಕಡ್ಡಾಯ ಶಿಕ್ಷಣದ ಯಶಸ್ಸು ಮೂರು ಅಂಶಗಳನ್ನು ಅವಲಂಬಿಸಿದೆ. ಮೊದಲನೆಯದಾಗಿ ಪ್ರತಿ ಮಗುವೂ ಹೋಗಿ ಬರಲು ಅನುಕೂಲವಾದಷ್ಟು ಹತ್ತಿರದಲ್ಲಿ ಶಾಲೆಯಿರಬೇಕು; ಎರಡನೆಯದಾಗಿ, ನಿಯಮಿತ ವಯೋಮಿತಿಯ ಮಕ್ಕಳೆಲ್ಲ ಶಾಲೆಗೆ ಸೇರುವಂತೆ ಪ್ರಚಾರ, ಒತ್ತಾಯ ಅಗತ್ಯವೆನಿಸಿದರೆ ಸಂಬಂಧಿಸಿದವರಿಗೆ ದಂಡ—ಈ ಎಲ್ಲ ವಿಧಾನಗಳನ್ನೂ ಅನುಸರಿಸುವುದರ ಮೂಲಕ ಪ್ರಯತ್ನಿಸಬೇಕು. ಕೊನೆಯದಾಗಿ, ಒಮ್ಮೆ ಶಾಲೆಗೆ ಸೇರಿದ ಮಕ್ಕಳು ನಿಗದಿ ಮಾಡಿರುವ ವಯಸ್ಸು ತುಂಬುವವರೆಗೆ ಕ್ರಮವಾಗಿ ಹಾಜರಾಗುತ್ತಿರುವಂತೆ ನೋಡಿಕೊಳ್ಳಬೇಕು. (ಎನ್.ಎಸ್.ವಿ.)

**ಕಡ್‌ಫೀಸಿಸ್ I :** ಪ್ರಾಚೀನ ಭಾರತವನ್ನಾಳುತ್ತಿದ್ದ ಕುಶಾನ ವಂಶದ ಮೊದಲನೆಯ ಪ್ರಖ್ಯಾತ ದೊರೆ. ಚೀನೀ ತುರ್ಕಿಸ್ತಾನದ ಭಾಗವಾದ ಕಾನ್‌ಸುವಿನಿಂದ ಯೂ–ಚಿ ಪಂಗಡದ ನಾಡಿನ ಐದು ಪ್ರಾಂತ್ಯಗಳಲ್ಲೊಂದಾದ ಕೀ–ಷ್ವಾಂಗ್ ಅಥವಾ ಕುಶಾನದ ಒಡೆಯನಾದ ಕೈಯೊಟ್ಸಿಯೊ–ಕಿಯೊವೇ ಉಳಿದ ನಾಲ್ಕು ಪ್ರಾಂತ್ಯಗಳನ್ನೂ ಹತ್ತಿಕ್ಕಿ ಐದಕ್ಕೂ ಒಡೆಯನಾದ. ಆತನ ಮಗನೇ ಯೆನ್–ಕಾವೊ–ಚೆನ್. ಈತ ಬಹುಶಃ ಈಗಿನ ಪಂಜಾಬ್ ಪ್ರದೇಶವಾದ ಟೀನ್–ಚೌವನ್ನು ಗೆದ್ದು ಅದನ್ನು ಆಳಲು ಅಧಿಕಾರಿಯೊಬ್ಬನನ್ನು ನೇಮಿಸಿದ. ಹೀಗೆ ಪ್ರಬಲವಾದ ಕುಶಾನವಂಶದ ಒಂದನೆಯ ಕಡ್‌ಫೀಸಿಸನಿಗೆ, ಕುಜುಲ ಕಡ್‌ಫೀಸಿಸ್, ಕುಜುಲಕರ ಕಡ್‌ಫೀಸಿಸ್ ಎಂಬ ಹೆಸರುಗಳೂ ಇದ್ದುವು. ಕುಜುಲ ಮತ್ತು ಕುಜುಲಕರ ಎಂಬವು ಈತನ ಬಿರುದುಗಳಿರಬೇಕೆಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಕೈಯೊಟ್ಸಿಯೊ–ಕಿಯೊವೇ ಒಂದನೆಯ ಕಡ್‌ಫೀಸಿಸ್ ಆಗಿದ್ದಿರಬೇಕೆಂಬ ಅಭಿಪ್ರಾಯವುಂಟು. ಈಚೆಗೆ ಈ ಅಭಿಪ್ರಾಯ ಮಾನ್ಯವಾಗಿಲ್ಲ. ಈತನ ಆಳ್ವಿಕೆಯ ಕಾಲದ ವಿಷಯವಾಗಿಯೂ ಭಿನ್ನಾಭಿಪ್ರಾಯಗಳಿವೆ. ಪ್ರಶ. 50ರ ವೇಳೆಗೆ ಈತನ ಆಳ್ವಿಕೆ ಕೊನೆಗೊಂಡಿತೆಂದು ಕೆಲಮಂದಿ ವಿದ್ವಾಂಸರ ಅಭಿಪ್ರಾಯ. ಪ್ರಶ. 15–65ರ ವರೆಗೆ ಆಳಿದನೆಂದೂ ಹೇಳಲಾಗಿದೆ. ಕುಜುಲ ಕಡ್‌ಫೀಸಿಸ್ ಪ್ರಾರಂಭದಲ್ಲಿ ಕಾಬೂಲಿನ ಕೊನೆಯ ಗ್ರೀಕ್ ದೊರೆಯಾದ ಹರ್ಮಿಯಸನ ಅಧೀನರಾಜನಾಗಿ ತನ್ನ ಆಳ್ವಿಕೆ ಪ್ರಾರಂಭಿಸಿದ್ದಿರಬೇಕು. ಹರ್ಮಿಯಸನ ಸಹೋದರಿಯನ್ನು ಕಡಫೀಸಿಸನ ಹಿರಿಯ ಸಂಬಂಧಿಯೊಬ್ಬ ವಿವಾಹವಾಗಿದ್ದನೆಂದು ತಿಳಿದುಬರುತ್ತದೆ. ಹರ್ಮಿಯಸನ ರಾಜ್ಯದ ಮೇಲೆ ಗೊಂಡೋಫರ್ನ್ನಿಸ್ ಎಂಬ ಪಾರ್ಥಿಯನ್ ಆಕ್ರಮಣ ನಡೆಸಿದಾಗ ಹರ್ಮಿಯಸನಿಗೆ ಕಡ್‌ಫೀಸಿಸ್ ಸಹಾಯ ಮಾಡಿದ್ದಿರಬಹುದು. ಆದರೂ ಹರ್ಮಿಯಸ್ ಸೋತನೆಂದು ಕಾಣುತ್ತದೆ. ಸ್ವಲ್ಪ ಕಾಲದ ಮೇಲೆ, ಬಹುಶಃ ಗೊಂಡೋಫರ್ನ್ನೀಸನ ಅನಂತರ, ಕಾಬೂಲ್ ಕಾಂದಹಾರಗಳೆರಡರಿಂದಲೂ ಪಾರ್ಥಿಯನ್ನರನ್ನು ಈತ ಹೊರದೂಡಿ ಅವುಗಳ ಮೇಲೆ ತನ್ನ ಪ್ರಭುತ್ವ ಸ್ಥಾಪಿಸಿದನೆನ್ನಬಹುದು. ಇವನ ರಾಜ್ಯ ಪರ್ಷಿಯ ಸಾಮ್ರಾಜ್ಯದ ಗಡಿಯಿಂದ ಭಾರತದವರೆಗೂ ವಿಸ್ತರಿಸಿತ್ತು. ಈತ ಅಚ್ಚು ಹಾಕಿಸಿದ ಬೆಳ್ಳಿ ಮತ್ತು ತಾಮ್ರಗಳ ನಾಣ್ಯಗಳ ಮೇಲೆ ಗ್ರೀಕ್ ಮತ್ತು ಖರೋಷ್ಠಿ ಲಿಪಿಗಳಲ್ಲಿ ಯವುಗ, ಕುಶಾನ, ಮಹಾರಾಜ, ರಾಜಾಧಿರಾಜ ಎಂಬ ಬಿರುದುಗಳನ್ನು ಕಾಣಬಹುದು. ಈತ ಹೊಸ ಧರ್ಮವೊಂದನ್ನು – ಬಹುಶಃ ಬೌದ್ಧಧರ್ಮವನ್ನು–ಅವಲಂಬಿಸಿದನೆಂಬುದಕ್ಕೆ ಕೆಲವು ನಾಣ್ಯಗಳಲ್ಲಿ ಸೂಚನೆ ದೊರಕುತ್ತದೆ. ಈತ 80ನೆಯ ವಯಸ್ಸಿನಲ್ಲಿ ಕಾಲವಾದ. (ಜಿ.ಆರ್.ಆರ್.)

**ಕಡ್‌ಫೀಸಿಸ್ II :** ಕುಶಾನ ದೊರೆ. ಒಂದನೆಯ ಕಡ್‌ಫೀಸಿಸನ ಮಗ. ಈತನನ್ನು ಯೆನ್–ಕಾವ್–ಚೆನ್ ಎಂದೂ ಕರೆಯಲಾಗಿದೆ. ನಾಣ್ಯಗಳ ಮೇಲೆ ಕಂಡುಬರುವ ವೆಮ (ಯೆನ್) ಕಡ್‌ಫೀಸಿಸ್ (ಕಾವ್–ಚೆನ್) ಈತನೇ ಎಂದು ಹೇಳಲಾಗಿದೆ. ಟಿಯೆನ್–ಚೌ ಅಥವಾ ನಿಜವಾದ ಭಾರತದ ನೆಲದ ಮೇಲೆ ತನ್ನ ಆಧಿಪತ್ಯ ವಿಸ್ತರಿಸಿದ ಪ್ರಥಮ ಕುಶಾನ ದೊರೆ ಈತನೇ ಎಂಬುದಾಗಿ ಚೀನೀ ಮಾಹಿತಿಗಳು ಹೇಳುತ್ತವೆ. ಟಿಯೆನ್–ಚೌ ಈಗ ಪಂಜಾಬ್ ಎನಿಸಿಕೊಂಡಿರುವ ಪ್ರದೇಶ. ತನ್ನ ತಂದೆಯ ಆಳ್ವಿಕೆಯ ಕಾಲದಲ್ಲಿ ಗಾಂಧಾರ ಪ್ರದೇಶದವರೆಗೂ ಈತ ದಂಡೆತ್ತಿ ಬಂದಿದ್ದ. ಸಿಂಹಾಸನವನ್ನೇರಿದ ಕೂಡಲೇ ಭಾರತದ ಗಡಿ ದಾಟಿ ಪಂಜಾಬ್ ಮತ್ತು ಸಿಂಧೂ ಪ್ರದೇಶಗಳನ್ನು ಗೆದ್ದು ಅಲ್ಲಿ ಆಡಳಿತ ನಡೆಸಲು ಒಬ್ಬ ಪ್ರಾಂತ್ಯಾಧಿಕಾರಿಯನ್ನು ನೇಮಿಸಿದ. ಇವನ ಅಧಿಕಾರ ಮಧ್ಯಭಾರತ ಮತ್ತು ವಾರಾಣಸಿಯವರೆಗೂ ವ್ಯಾಪಿಸಿತ್ತೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವನ ನಾಣ್ಯಗಳು ಈ ಹಲವು ಭಾಗಗಳಲ್ಲಿ ದೊರೆತಿದ್ದರೂ ಅಲ್ಲಿ ಇವನ ಆಡಳಿತ ಸ್ಥಾಪಿತವಾಗಿತ್ತೆಂದು ನಿರ್ಧರಿಸಲು ಸಾಕಷ್ಟು ಆಧಾರಗಳಿಲ್ಲ. ಕಡ್‌ಫೀಸಿಸನ ಅಧಿಕಾರ ಕಾಬೂಲ್, ಕಾಂದಹಾರ್, ಅಫ್ಘಾನಿಸ್ತಾನ, ಚೀನ, ತುರ್ಕಿಸ್ತಾನ, ಪಂಜಾಬ್ ಮತ್ತು ಸಿಂಧೂ ಪ್ರದೇಶಗಳ ಮೇಲೆ ಸ್ಥಾಪಿತವಾಗಿತ್ತು. ಈತನ ನಾಣ್ಯಗಳು ಮೇಲ್ಕಂಡ ಎಲ್ಲ ಪ್ರದೇಶಗಳಲ್ಲೂ ದೊರೆತಿವೆ.

ವೆಮ ಕಡ್‌ಫೀಸಿಸ್ ತನ್ನ ತಂದೆಯಂತೆ ನಾಣ್ಯಗಳ ಮೇಲೆ ಗ್ರೀಕ್ ಮತ್ತು ಖರೋಷ್ಠಿ ಭಾಷೆಯಲ್ಲಿ ತನ್ನ ಬಿರುದುಗಳನ್ನು ಕೆತ್ತಿಸಿದ್ದಾನೆ. ಇವನ ಅನಂತರದ ಕುಶಾನ ರಾಜರು ಬರೀ ಗ್ರೀಕ್ ಭಾಷೆಯನ್ನು ಮಾತ್ರ ನಾಣ್ಯಗಳಲ್ಲಿ ಬಳಸಿದ್ದಾರೆ. ಈತ ತಾಮ್ರ ಮತ್ತು ಕಂಚಿನ ನಾಣ್ಯಗಳ ಜೊತೆಗೆ ಚಿನ್ನದ ನಾಣ್ಯಗಳನ್ನೂ ಅಧಿಕ ಸಂಖ್ಯೆಯಲ್ಲಿ ಅಚ್ಚು ಹಾಕಿಸಿದ. ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದ ಪ್ರಥಮ ಕುಶಾನರಾಜ ಈತ. ಈತನ ನಾಣ್ಯಗಳ ಮೇಲೆ ರಾಜಾಧಿರಾಜ, ಇಡೀ ಪ್ರಪಂಚದ ಸ್ವಾಮಿ ಮೊದಲಾದ ತನ್ನ ಬಿರುದುಗಳನ್ನು ಕೆತ್ತಿಸಿಕೊಂಡಿದ್ದಾನೆ. ಕೆಲವು ನಾಣ್ಯಗಳ ಮೇಲೆ ತ್ರಿಶೂಲಧಾರಿ ಮಹೇಶ್ವರನ ಚಿತ್ರವಿದೆ. ಈತ ಶಿವೋಪಾಸಕ. ಮಹೇಶ್ವರ ಎಂದು ಈತನಿಗೆ ಬಿರುದಿತ್ತು. ಆ ಕಾಲದಲ್ಲಿ ರೋಮ್, ಚೀನ ಮತ್ತು ಕುಶಾನ ರಾಜ್ಯಗಳ ನಡುವೆ ವ್ಯಾಪಾರ ಚೆನ್ನಾಗಿ ಬೆಳೆದಿತ್ತು. ವೆಮನ ಆಳ್ವಿಕೆ ಪ್ರಶ. 78ರಲ್ಲಿ ಆರಂಭವಾಯಿತೆಂದೂ ಆಗಿನಿಂದ ಆಚರಣೆಗೆ ಬಂದ ಶಕೆಯನ್ನು ಸ್ಥಾಪಿಸಿದವನೀತನೇ ಎಂದೂ ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈತನ ನಾಣ್ಯಗಳ ಮೇಲಾಗಲಿ ಶಾಸನಗಳಲ್ಲಾಗಲಿ ಈ ಬಗ್ಗೆ ದೃಢವಾದ ಮಾಹಿತಿ ದೊರೆಯುವುದಿಲ್ಲ. ಅಲ್ಲದೆ ಈತನ ಆಳ್ವಿಕೆ ಆ ವೇಳೆಗಾಗಲೇ ಕೊನೆಗೊಂಡಿತ್ತೆಂದೂ ತಿಳಿದುಬರುತ್ತದೆ. ಎರಡನೆಯ ಕಡ್‌ಫೀಸಿಸನ ನಿಧನಾನಂತರ ಅಧಿಕಾರಕ್ಕೆ ಬಂದವನು ಕನಿಷ್ಕ. (ಜಿ.ಆರ್.ಆರ್.)

**ಕಡ್ಡುಕಾರಿ :** ಪ್ಯಾಸರಿಫಾರ್ಮಿಸ್ ಗಣದ ಟರ್ಡಿಡೀ ಕುಟುಂಬಕ್ಕೆ ಸೇರಿದ ಹಕ್ಕಿ (ರಾಬಿನ್). ಪ್ರಪಂಚದ ಬಹುಭಾಗಗಳಲ್ಲಿ ಇವು ಇವೆ. ಸಾಮಾನ್ಯ ಬಳಕೆಯಲ್ಲಿ ರಾಬಿನ್ ಎಂಬ ಹೆಸರು ಕುಟುಂಬದ ಹಲವಾರು ಜಾತಿಯ ಹಕ್ಕಿಗಳಿಗೆ ಅನ್ವಯವಾಗುತ್ತದೆ. ಉದಾಹರಣೆಗೆ ಅಮೆರಿಕದಲ್ಲಿ ಟರ್ಡಸ್ ಮೈಗ್ರಟೋರಿಯಸ್, ಯುರೋಪಿನಲ್ಲಿ ಎರಿತೇಕಸ್, ರೂಬಿಕ್ಯುಲ, ಭಾರತದಲ್ಲಿ ಥ್ಯಾಮ್ನೋಬಿಯ ಮುಂತಾದುವು. ಸಾಧಾರಣವಾಗಿ ಇವೆಲ್ಲ ಬಹಳ ಸಣ್ಣ ಗಾತ್ರದ ಹಕ್ಕಿಗಳು. ಇವುಗಳ ಎದೆ ಕೆಂಪು ಬಣ್ಣದ್ದು.

ಭಾರತದ ಕಡ್ಡುಕಾರಿಯ ಬಣ್ಣ ಬೂದು, ಕಂದು ಅಥವಾ ಬಿಳಿ ಮತ್ತು ಕಪ್ಪು ಮಿಶ್ರಿತ. ತಲೆ ಮತ್ತು ಎದೆಯ ಭಾಗದಲ್ಲಿ ಬಿಳಿಯ ಮತ್ತು ಕಪ್ಪು ಮಚ್ಚೆಗಳಿವೆ. ಕೆಲವು ಬಾರಿ ರೆಕ್ಕೆಗಳ ಮೇಲೂ ಮಚ್ಚೆಗಳಿರಬಹುದು. ಹೆಣ್ಣು ಮತ್ತು ಗಂಡುಗಳು ನೋಡಲು ಒಂದೇ ತೆರನಾಗಿದ್ದರೂ ಗಂಡಿಗಿಂತ ಹೆಣ್ಣು ಮಾಸಲು ಬಣ್ಣದ್ದು. ಇದರ ಆಹಾರ ಕೀಟಗಳು. ಸಾಮಾನ್ಯವಾಗಿ ಗೋಡೆಗಳಲ್ಲಿನ ಬಿರುಕುಗಳಲ್ಲಿ ಮರಗಳಲ್ಲಿ ಗೂಡು ಕಟ್ಟುತ್ತದೆ. ಹೆಣ್ಣು ಒಂದು ಸಾರಿಗೆ 5–6 ಮೊಟ್ಟೆಯಿಡುತ್ತದೆ. ಸದಾಕಾಲ ಹಾಡಿಕೊಂಡು ಕಾಲಕಳೆಯುವ ಈ ಹಕ್ಕಿ ತನ್ನ ಸ್ನೇಹಪರತೆಯಿಂದಾಗಿ ಮಾನವನ ಮೆಚ್ಚುಗೆ ಗಳಿಸಿದೆ. (ಎಲ್.ಎಸ್.ಜ.)

**ಕಣ :** ಅಭಿಜಾತ ಬಲವಿಜ್ಞಾನದಲ್ಲಿ ಆಯಾಮರಹಿತ ಆದರೆ ದ್ರವ್ಯರಾಶಿಯುತ ವಸ್ತು (ಪಾರ್ಟಿಕಲ್). ಆದ್ದರಿಂದ ಇದೊಂದು ಮಿತದ್ರವ್ಯರಾಶಿಯಿರುವ ಬಿಂದು. ಗಣಿತಶಾಸ್ತ್ರದ ಅಮೂರ್ತ ಗಣನೆಗಳನ್ನು ಮಾಡುವಾಗ ಇಂಥ ಒಂದು ಪರಿಕಲ್ಪನೆ ಬಹಳ ಉಪಯುಕ್ತವಾಗುತ್ತದೆ. ಕಣದ ಮೇಲೆ ಗುರುತ್ವಾಕರ್ಷಣ ಬಲ ಮತ್ತು ಇತರ ಬಲಗಳು ಪ್ರಯುಕ್ತವಾಗುವುವು. $m$ ದ್ರವ್ಯರಾಶಿ ಇರುವ ಕಣದ ತೂಕ $mg$; ಇದು ಕಣದಿಂದ ಕೆಳಮುಖ ಭೂಲಂಬವಾಗಿ ವರ್ತಿಸುತ್ತದೆ. ಒಂದು ಕಲ್ಲನ್ನು ಎಸೆದಾಗ ಅದು ಸಾಗುವ ಪಥವೇನು–ಇಂಥ ವಾಸ್ತವಿಕ ಪ್ರಶ್ನೆ ಎದುರಾದಾಗ ಇದನ್ನು ಒಂದು ಅಮೂರ್ತ ಗಣಿತ




ಸಮಸ್ಯೆ ಎಂದು ಭಾವಿಸಿ ಈ ಆದರ್ಶೀಕೃತ ಚೌಕಟ್ಟಿನಲ್ಲಿ ಮೊದಲು ಬಗೆಹರಿಸುವುದು ವಾಡಿಕೆ. ಇದರ ಪ್ರಕಾರ ಕಲ್ಲಿನ ಆಕಾರ ಹೇಗೆಯೇ ಇದ್ದರೂ ಅದು ಒಂದು ಕಣ; ಅದರ ದ್ರವ್ಯರಾಶಿ $m$; ಅದನ್ನು ಎಸೆದ ವೇಗ (ಆರಂಭವೇಗ) $u$; ಎಸೆದ ದಿಕ್ಕು ಕ್ಷಿತಿಜರೇಖೆಯೊಡನೆ $\alpha$ ಕೋನ ಉಂಟುಮಾಡುತ್ತದೆ. ಇಲ್ಲಿ $m, u, \alpha$ ಗಳು ನಿಜಕಲ್ಲನ್ನು ಕುರಿತು ದತ್ತವಾಗಿರುವ ಬೆಲೆಗಳೇ ಆಗಿವೆ. ಎಸೆಬಿಂದುವನ್ನು ಮೂಲಬಿಂದುವಾಗಿಯೂ ಅದರಿಂದ ಕ್ಷಿತಿಜೀಯ ಹಾಗೂ ಊರ್ಧ್ವವಾಗಿ ಎಳೆದ ರೇಖೆಗಳನ್ನು ಕ್ರಮವಾಗಿ $x$ ಮತ್ತು $y$ ಅಕ್ಷಗಳಾಗಿಯೂ ಆರಿಸಿ ಯಾವುದೇ ಕಾಲ $t$ ಯಲ್ಲಿ ಕಣದ ಸ್ಥಾನ $P(x, y)$ ಎಂದು ಭಾವಿಸಿದರೆ.

$$x = u\cos\alpha\, t$$

$$y = u\sin\alpha\, t - \frac{1}{2}gt^2$$

$$\frac{dx}{dt} = u\cos\alpha\,, \quad \frac{dy}{dt} = u\sin\alpha - gt$$

ಎಂಬ ಸಮೀಕರಣಗಳು ದೊರೆಯುತ್ತವೆ. ಇಲ್ಲಿ ಕಣ ನಿರ್ವಾತಪ್ರದೇಶದಲ್ಲಿ ಚಲಿಸುತ್ತಿದೆಯೆಂದೂ ಗುರುತ್ವಾಕರ್ಷಣ ಬಲದ ವಿನಾ ಬೇರಾವ ಬಾಹ್ಯಬಲವೂ ಅದರ ಮೇಲೆ ಪ್ರಯುಕ್ತವಾಗಿಲ್ಲವೆಂದೂ ಭಾವಿಸಿದ್ದೇವೆ. ಈ ಸಮೀಕರಣಗಳಿಂದ ಕಣದ ಪಥ

$$y = x\tan\alpha - \frac{gx^2}{2u^2\cos^2\alpha}$$

ಎಂಬ ಸಮೀಕರಣವೆಂದು ತಿಳಿಯುತ್ತದೆ. ಇದು ಒಂದು ವಿಶಿಷ್ಟವಾದ ಪ್ಯರಾಬೊಲ. ಈ ವಕ್ರ ರೇಖೆಯ ಸಮಸ್ತ ಗುಣಗಳನ್ನು ತಿಳಿಯುವುದು ಸಾಧ್ಯವಿದೆ. ಆದ್ದರಿಂದ ಇಂಥ ಒಂದು ಆದರ್ಶೀಕೃತ ಚೌಕಟ್ಟಿನಲ್ಲಿ ಕಣದ ವರ್ತನೆಯನ್ನು ಪೂರ್ಣವಾಗಿ ತಿಳಿದಂತಾಯಿತು. ಉದಾಹರಣಗೆ ಕಣದ ವೇಗದ ವರ್ಗ

$$\left(\frac{dx}{dt}\right)^2 + \left(\frac{dy}{dt}\right)^2 = u^2 + g^2t^2 - 2gut\,\mathbf{sin}\,\alpha$$

ಕ್ಷಿತಿಜೀಯವಾಗಿ ಕಣ ಸಾಗಿರುವ ದೂರ ಎಂದರೆ

ಅಡ್ಡದೂರ (ರೆಂಜ್), $OA = 2u^2\sin\alpha\ \cos\alpha / g$

ಕಣ ಏರಿದ ಗರಿಷ್ಠ ಎತ್ತರ, $BN = u^2\sin^2\alpha / 2g$

ಇಂಥ ತೀರ್ಮಾನಗಳಿಂದ ವಾಸ್ತವಿಕ ಸನ್ನಿವೇಶಗಳಿಗೆ ಮರಳುವುದು ಮುಂದಿನ ಹೆಜ್ಜೆ.

ಒಂದು ಕಣದ ಮೇಲೆ ಪ್ರಯುಕ್ತವಾಗುವ ಬಲಗಳೆಲ್ಲವೂ ಮೊತ್ತವಾಗಿ ಒಂದೇ ಫಲಿತ ಬಲವನ್ನು ನೀಡುವುವು. ಆದ್ದರಿಂದ ಕಣದ ಚಲನೆ ಸರಳರೇಖೆಯ ಮೇಲೆ ಮಾತ್ರವಿದೆ; ಎಂದರೆ ಅದಕ್ಕೆ ಆವರ್ತಚಲನೆ ಇಲ್ಲ. ಒಂದು ವಸ್ತುವನ್ನು ಅಸಂಖ್ಯಾತ ಕಣಗಳ ನಿಬಿಡಸಮೂಹ ಎಂದು ಪರಿಗಣಿಸುತ್ತೇವೆ. ಸರಳ ಚಲನೆ (ಟ್ರಾನ್ಸ್‌ಲೇಷನ್) ಮತ್ತು ಆವರ್ತಚಲನೆ (ರೊಟೇಷನ್) ಇವುಗಳಿಂದ ಒಂದು ವಸ್ತುವಿನ ಕಣಗಳ ಸಾಪೇಕ್ಷಸ್ಥಾನಗಳು ಬದಲಾಗದಿದ್ದರೆ ಅದನ್ನು ದೃಢವಸ್ತುವೆಂದು ಕರೆದು ಅದರ ಚಲನೆಯನ್ನು ಕುರಿತು ಗಣಿತದ ಪ್ರತ್ಯೇಕವಾದ ಅಮೂರ್ತಗಣನೆಗಳನ್ನು ಮಾಡುತ್ತಾರೆ. (**ನೋಡಿ–ಆಲಂಬರ್ಟನ–ತತ್ತ್ವ**) ಹೀಗೆ ಕಣ ಎಂಬ ಕಲ್ಪನೆ ಅಭಿಜಾತ ಬಲವಿಜ್ಞಾನದಲ್ಲಿ ವಾಸ್ತವಿಕತೆಗೂ ಗಣನೆಗೂ ನಡುವೆ ಇರುವ ಒಂದು ಕಾಲ್ಪನಿಕ ಸೇತು. ಭೌತವಿಜ್ಞಾನದಲ್ಲಿ ಮೂಲಕಣಗಳನ್ನು (ಎಲಿಮೆಂಟರಿ ಪಾರ್ಟಿಕಲ್ಸ್) ಕಣಗಳೆಂದೇ ಕರೆಯುವುದು ವಾಡಿಕೆ. ಇವುಗಳನ್ನು ಕುರಿತ ವಿವರಗಳಿಗೆ (**ನೋಡಿ–ಮೂಲಕಣಗಳು**). *

**ಕಣಕುಂಬಿ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರದಿಂದ 38ಕಿಮೀ ದೂರದಲ್ಲಿದೆ. ಇದು ದಟ್ಟವಾದ ಕಾಡಿನಲ್ಲಿರುವ ಸುಂದರ ಸ್ಥಳ. ಕುಲ್ಲಕ ಎಂಬ ಮುನಿ ಇಲ್ಲಿ ಧ್ಯಾನ ಮಾಡುತ್ತಿದ್ದಾಗ ಅವನ ಕುಂಭದಿಂದ ಪವಿತ್ರ ಜಲ ಹರಿದುದರಿಂದ ಈ ಊರ ಹೆಸರು ಕುಲಕುಂಭಿ ಎಂದಾಯಿತಂತೆ. ಸ್ಥಳೀಯರು ಈಗಲೂ ಇದನ್ನು ಕುಲಕುಂಭಿ ಎಂದೇ ಕರೆಯುವರು. ಈ ಊರ ಹೊರಗೆ ಮಲಪ್ರಭಾ ನದಿಯ ಉಗಮ ಸ್ಥಾನವಿದೆ. ಅಲ್ಲಿ ಮಹಾದೇವ ಮತ್ತು ರಾಮೇಶ್ವರ ದೇವಾಲಯಗಳಿವೆ. ಮಹಾದೇವ ಮಂದಿರ ಇತ್ತೀಚೆಗೆ ನಿರ್ಮಿಸಲ್ಪಟ್ಟದ್ದು, ಗರ್ಭಗೃಹ ವಿಶಾಲವಾದ ಪ್ರಾಂಗಣ ಮತ್ತು ಮುಖಮಂಟಪ ಗಳನ್ನೊಳಗೊಂಡಿದೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲೂ ಬೆಣಚುಕಲ್ಲಿನ ರಾಷ್ಟ್ರಕೂಟ ಶೈಲಿಯಲ್ಲಿರುವ ಕಂಬಗಳಿದ್ದು, ಅವುಗಳ ಮೇಲೆ ಕಲಶಗಳ ಕೆತ್ತನೆಯಿದೆ. ಅರ್ಧ ವರ್ತುಲಾಕಾರದ ನಕ್ಷೆ ಹೊಂದಿದ ಛಾವಣಿ ಈ ಪ್ರಾಂಗಣದಲ್ಲಿದೆ. ನವರಂಗದ ಕಂಬಗಳು ವರ್ತುಲಾಕಾರವಾಗಿದ್ದು, ಕೆಂಪು ಮುರುಳುಕಲ್ಲಿನಿಂದ ಕೂಡಿವೆ. ಗರ್ಭಗೃಹದ ಎಡಪ್ರವೇಶ ದ್ವಾರದಲ್ಲಿ ರೇವರಿತು ಖಂಡೋಬಾ, ಕಾಳಭೈರವ ಗಣಪತಿ ಮೂರ್ತಿಗಳಿವೆ. ಪ್ರದಕ್ಷಿಣಾ ಪಥದಲ್ಲಿರುವ ಮಾಡಿನಲ್ಲಿ ದೇವತೆಯ ಕಂಚಿನ ಮೂರ್ತಿ ಇದೆ. ಮುಖಮಂಟಪದ ಹೊರಗೆ ಕೆರೆಯ ಸಮೀಪ ತೆರೆದ ಮಂಟಪವಿದೆ. ಹೊಸದಾಗಿ ಹೆಂಚಿನ ಛಾವಣಿ ಮಾಡಿ ನಿರ್ಮಿಸಲಾಗಿರುವ ಶಾಂತೇರಿ ದೇವಾಲಯದ ಗರ್ಭಗೃಹದಲ್ಲಿ ಗಜಲಕ್ಷ್ಮಿ ಮೂರ್ತಿಯಿದೆ. ಈ ಗರ್ಭಗೃಹದಲ್ಲಿ ಮಹಿಷಮರ್ದಿನಿ, ದುರ್ಗಾಮೂರ್ತಿಗಳ ಎರಡು ವೀರಗಲ್ಲುಗಳೂ ಇವೆ. ಈ ದೇವಾಲಯದ ಮುಂದೆ ಒಂದು ಕೆರೆಯಿದ್ದು ಅದು ಮಲಪ್ರಭಾ ನದಿಯ ಮೂಲವೆಂದು ಪ್ರತೀತಿ. ಕೆರೆಯ ಮುಂದೆ ಗಣಪತಿಯ ದೇವಾಲಯವಿದೆ. ಈ ದೇವಾಲಯದ ಸ್ವಲ್ಪ ಅಂತರದಲ್ಲಿ ತೀರ್ಥವಿರುವ ಸ್ಥಳವಿದ್ದು, ಅಲ್ಲಿ ಚಿಕ್ಕ ಹಳ್ಳವಿದ್ದು ಅದರಲ್ಲಿ ಗುರುವು ಮಕರರಾಶಿ ಪ್ರವೇಶಿಸಿದ ಮುಹೂರ್ತದಲ್ಲಿ ನೀರು ಹಾಲಿನ ಬಣ್ಣದಲ್ಲಿರುವುದೆಂದು ಹೇಳಲಾಗಿದೆ. ಆಗ ಇಲ್ಲಿ ಜಾತ್ರೆ ನಡೆಯುವುದು. ಇಲ್ಲಿನ ನೀರಿನ ಹರಿವು ಅಂತರಗಾಮಿಯಾಗಿದೆ.

ಮಹಾದೇವ ದೇವಾಲಯದ ಹಿಂಬದಿಯಲ್ಲಿ ರಾಮೇಶ್ವರ ದೇವಾಲಯವಿದ್ದು, ಇದು ಮರಳುಗಲ್ಲಿನ ರಚನೆಯಾಗಿದೆ. ಗರ್ಭಗೃಹ ಮತ್ತು ವಿಶಾಲವಾದ ಅರ್ಧವರ್ತುಲಾಕಾರದ ಚಾವಣಿವುಳ್ಳ ಪ್ರಾಂಗಣವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇಲ್ಲಿಯ ಪ್ರವೇಶದ್ವಾರದ

ಬಲಬದಿಗೆ ಗಣಪತಿ ಮೂರ್ತಿ ಮತ್ತು ಮಹಾಸತಿ ಕಲ್ಲುಗಳಿವೆ. ಮಲ್ಲವ್ವಳು ಸತಿ ಹೋದ ಬಗ್ಗೆ ಮಾಹಿತಿ ಇದೆ. ಇದರ ಹಿಂದೆ ಸದ ಎಂಬ ಗ್ರಾಮ ಕಣಕುಂಬಿಯಿಂದ 5ಕಿಮೀ ದೂರದಲ್ಲಿದ್ದು ಖೋರ್ಲಾ ದಾರಿಯಲ್ಲಿದೆ. ಇದು ಅತ್ಯಂತ ಎತ್ತರ ಪ್ರದೇಶವಾಗಿದ್ದು, ಇಲ್ಲಿಯ ಕೋಟೆಯನ್ನು ಶಿವಾಜಿ ಕಟ್ಟಿಸಿದನೆಂದು ಪ್ರತೀತಿ. ಒಂದು ಹಳೆಯ ಫಿರಂಗಿ ತೋಪು ಕೋಟೆಯೊಳಗೆ ಕಂಡುಬರುತ್ತದೆ. ಇಲ್ಲಿ ಭಗವತಿ ದೇವಾಲಯವಿದೆ. ಇಲ್ಲಿರುವ ಮರಾಠರು ತಮ್ಮ ಕೆಲವು ಧಾರ್ಮಿಕ ಆಚರಣೆ ಮತ್ತು ಸಂಪ್ರದಾಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆಂದು ತಿಳಿದುಬರುತ್ತದೆ. (ಆರ್.ಐ.)

**ಕಣಗಿಲೆ :** ಕಣಗಿಲೆ ಅಪೋಸೈನೇಸೀ ಕುಟುಂಬದ ನೀರಿಯಮ್ ಓಲಿಯಂಡರ್ ಎಂಬ ವೈಜ್ಞಾನಿಕ ಹೆಸರಿನ ಸುಂದರವಾದ ಹೂ ಬಿಡುವ ಬಹುವಾರ್ಷಿಕ ಪೊದೆಸಸ್ಯ. ಇದನ್ನು ಉದ್ಯಾನವನ, ದೇವಸ್ಥಾನ ಮತ್ತು ಮನೆಗಳ ಪಕ್ಕದಲ್ಲಿ ಅಲಂಕಾರಸಸ್ಯವಾಗಿ ಬೆಳೆಸುತ್ತಾರೆ. ಕಣಗಿಲೆಹೂವನ್ನು ದೇವರ ಪೂಜೆಗೂ ಹಾರ ಮತ್ತು ಕಳಸದ ಅಲಂಕಾರಕ್ಕೂ ಉಪಯೋಗಿಸುತ್ತಾರೆ. ಅಲ್ಲದೆ ಈ ಸಸ್ಯದ ವಿವಿಧ ಭಾಗಗಳು ಅನೇಕ ಆಯುರ್ವೇದ ಔಷಧಗಳಲ್ಲಿ ಉಪಯೋಗದಲ್ಲಿವೆ. ಕರವೀರ, ಕಣಿಗಲು ಪರ್ಯಾಯ ನಾಮಗಳು.

ಒಂದೇ ಸುತ್ತಿನ ಹೂದಳಗಳುಳ್ಳ ಬಗೆ

ನೀರಿಯಮ್ ಜಾತಿಯಲ್ಲಿ ಮೂರು ಮುಖ್ಯ ಪ್ರಭೇದಗಳಿವೆ. ಇವು ಮೆಡಿಟರೇನಿಯನ್ ಪ್ರದೇಶದಿಂದ ಜಪಾನ್‌ದೇಶದವರೆಗೂ ಹರಡಿವೆ. ದುಂಡಗಿರುವ ಕಾಂಡದ ತುದಿಯಲ್ಲಿ ಚಿಕ್ಕ ತೊಟ್ಟಿರುವ ವೃತ್ತಜೋಡಣೆಯ ಎಲೆಗಳು ಇರುತ್ತವೆ. ತುದಿಯಲ್ಲಿ ಹೊಸ ಹೊಸ ಎಲೆಗಳು ಹೊರಬಂದಂತೆಲ್ಲ ಕೆಳಭಾಗದಲ್ಲಿರುವ ಹಳೆಯ ಎಲೆಗಳು ಉದುರಿ ಹೋಗುತ್ತವೆ.

ಬಹು ಸುತ್ತಿನ ಹೂದಳಗಳುಳ್ಳ ಬಗೆ

ಎಲೆಯ ತೊಟ್ಟುಗಳು ಕಾಂಡಕ್ಕೆ ಬಿಗಿಯಾಗಿ ಅಂಟಿಕೊಂಡಿದ್ದು, ಅನಂತರ, ಉದುರುವುದರಿಂದ ಕಾಂಡದ ಮೇಲೆ ಎಲೆಗಳು ಅಂಟಿಕೊಂಡಿದ್ದ ಕಲೆಗಳು ಉಳಿಯುತ್ತವೆ. ಭರ್ಜಿಯಾಕಾರ, ಚರ್ಮದಂತೆ, ಒರಟು, ಅತಿ ಹಸಿರಾದ ಮೇಲುಭಾಗ, ನಸುಹಸಿರು, ಬಣ್ಣದ ತಳಭಾಗ, ನಯ ಅಂಚು, ಮೊನಚು ತುದಿ ಇವು ಎಲೆಗಳ ಲಕ್ಷಣ. ಎಲೆಯ ನಡುದಿಂಡು ಮತ್ತು ನಾಳಗಳು ತಳಭಾಗದಲ್ಲಿ ಪ್ರಮುಖವಾಗಿ ಉಬ್ಬಿ ಕಾಣುತ್ತವೆ. ತುದಿಯ ಗೊಂಚಲಾಗಿ ಬಿಡುವ ಮಧ್ಯಾರಂಭಿ (ಸೈಮೋಸ್) ಹೂಗೊಂಚಲು ಆಕರ್ಷಕವಾಗಿ ಕಾಣುತ್ತದೆ. ಪುಷ್ಪಪತ್ರ ಸಾಮಾನ್ಯವಾಗಿ 5. ಇವುಗಳ ಬುಡದ ಒಳಭಾಗದಲ್ಲಿ ಗ್ರಂಥಿಗಳಿವೆ. ಹೂದಳ ಸಂಯುಕ್ತ ಮಾದರಿಯದು (ಗ್ಯಾಮೊಪೆಟಲಸ್). ಅದರಲ್ಲಿ 5 ಭಾಗಗಳಿವೆ. ಅದರ ಆಕಾರ ಆಲಿಕೆಯಂತೆ. ಹೂಗಂಟಲ ಮೇಲೆ ಅನುಬಂಧಿಕೆ (ಅಪೆಂಡೇಜ್) ಇರುತ್ತದೆ. ಚಿಕ್ಕ ತೊಟ್ಟಿರುವ 5 ಕೇಸರಗಳು ಹೂಗಂಟಲಿಗೆ ಅಂಟಿರುತ್ತವೆ. ಪರಾಗ ಕೋಶಗಳಲ್ಲಿ ಪ್ರಭೇದಕ್ಕೆ ಅನುಸಾರವಾಗಿ ವಿವಿಧ ಬಣ್ಣದ ಅನುಬಂಧಿಕೆಗಳಿವೆ. ಅಂಡಾಶಯ ಉಚ್ಚಸ್ಥಾನದ್ದು. ಎರಡು ಕಾರ್ಪೆಲುಗಳಿವೆ. ಫಲ ಫಾಲಿಕಲ್‌ಗಳ ಒಂದು ಜೋಡಿ. ಕಣಗಿಲೆಯ ಇನ್ನೊಂದು ಪ್ರಭೇದವಾದ ನೀ. ಓಡರೇಟಮಿನಲ್ಲಿ ಅನೇಕ ಆಕರ್ಷಕ ತಳಿಗಳಿವೆ. ಒಂದು ಸುತ್ತಿನ ಬಿಳುಪು ಬಣ್ಣದ ಹೂಬಿಡುವ ತಳಿ (ಆಲ್ಬೊಪ್ಲಿನಮ್). ಎರಡು ಸುತ್ತಿನ ಅತೀ ಕಡುಗೆಂಪು ಬಣ್ಣದ (ಬ್ಯಾಕ್‌ಪ್ಲಿನ್), ಎರಡು ಸುತ್ತಿನ ನಸುಗೆಂಪು ಬಣ್ಣದ ಹೂಬಿಡುವ ತಳಿ (ಪ್ಲೊರೊಪ್ಲಿನೊ), ಒಂದು ಸುತ್ತಿನ ಗುಲಾಬಿ ಬಣ್ಣದ ಹೂ ಬಿಡುವ ತಳಿ (ರೋಸಿಯ)–ಇವು ತೋಟಗಾರಿಕೆಯಲ್ಲಿ ಹೆಸರಾಗಿರುವ ತಳಿಗಳು.

ಕಣಗಿಲೆ ಸಸ್ಯವನ್ನು ಕಾಂಡದ ತುಂಡುಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಕಾಂಡದ ತುಂಡುಗಳನ್ನು ನಾಟಿಮಾಡಲು ಮಳೆಗಾಲ ಯೋಗ್ಯವಾದದ್ದು. ತುಂಡುಗಳನ್ನು ನಾಟಿಮಾಡಿದಮೇಲೆ ಅವು ಚಿಗುರಿ ಮೂರು ಅಡಿ ಎತ್ತರ ಬೆಳೆಯುವವರೆಗೆ ಕ್ರಮವಾಗಿ ನೀರು ಹಾಕಬೇಕು. ಸುತ್ತಲೂ ಬೇಲಿಹಾಕಿದರೆ ಉತ್ತಮ.

ಈ ಗಿಡದ ಬೇರು, ತೊಗಟೆ, ಬೀಜ ಮತ್ತು ಇತರ ಭಾಗಗಳೂ ವಿಷಕಾರಿಯಾದವು. ಅದರ ಹಾಲಿನಂಥ ದ್ರವದಲ್ಲಿರುವ ಗ್ಲೈಕೊಸೈಡ್ ಎಂಬ ವಸ್ತು ಹೃದಯ ಮತ್ತು ಬೆನ್ನುನರಗಳ ಮೇಲೆ ನಿಶ್ಚೇತನಗೊಳಿಸುವ ಪರಿಣಾಮವನ್ನು ಬೀರುವುದು. ಈ ಸಸ್ಯದ ಸುಟ್ಟಬೂದಿಯಲ್ಲಿ ಪೊಟ್ಯಾಸಿಯಂ ಲವಣಗಳು ಅಧಿಕವಾಗಿರುತ್ತವೆ. ಬೇರಿನ ತೊಗಟೆಯಿಂದ ಇಳಿಸುವ ಒಂದು ಜಾತಿಯ ತೈಲವನ್ನು ಚರ್ಮರೋಗಕ್ಕೆ ಔಷಧಿಯಾಗಿ ಬಳಸುವರು.

(ಬಿ.ಎ.ಸಿ.; ಡಿ.ಎಂ.; ಎಂ.ಎಸ್.ಎಸ್.ಆರ್.)

**ಕಣಗಿಲೆ ಗಿಡದ ಕುಟುಂಬ :** ಸಂಯುಕ್ತ ಹೂದಳಗಳನ್ನುಳ್ಳ ದ್ವಿದಳ ಸಸ್ಯವರ್ಗದ ಒಂದು ಕುಟುಂಬ (ಅಪೋಸೈನೇಸೀ). ಇದರಲ್ಲಿ ಸು. 1,400 ಪ್ರಭೇದಗಳನ್ನೊಳಗೊಂಡ 180 ಜಾತಿಯ ಗಿಡಗಳಿವೆ. ಬಹುಪಾಲು ಸಸ್ಯಗಳು ಉಷ್ಣವಲಯಗಳಲ್ಲಿ ಕಾಣಬರುವಂಥವು. ಸಮಶೀತೋಷ್ಣವಲಯದಲ್ಲೂ ಕೆಲವು ಪ್ರಭೇದಗಳಿವೆ. ಈ ಗಿಡಗಳಲ್ಲಿ ಹೆಚ್ಚಿನವು ಶಾಕಗಳು (ಮೂಲಿಕೆ). ಪೊದೆಸಸ್ಯಗಳೂ ಬಳ್ಳಿಗಳೂ ಉಂಟು.

ಈ ಕುಟುಂಬದ ವಿಶಿಷ್ಟ ಲಕ್ಷಣಗಳು ಇವು: ಕಾಂಡವನ್ನು ಅಡ್ಡಕೊಯ್ದು ಪರೀಕ್ಷಿಸಿದಾಗ ಕಾಣಬರುವ ವಿಶೇಷಬಗೆಯ ನಾಲ ಸಮೂಹಗಳು (ಇವುಗಳಲ್ಲಿ ಮಧ್ಯೆ ನೀರ್ನಾಳಗಳ ಗುಂಪೂ ಮೇಲೆ ಮತ್ತು ಕೆಳಗೆ ಆಹಾರನಾಳಗಳ ಗುಂಪೂ ಇದ್ದು ಅವನ್ನು ಬೈಕೊಲ್ಯಾಟರಲ್ ವ್ಯಾಸ್ಕುಲರ್ ಬಂಡಲ್ಸ್ ಎನ್ನುತ್ತಾರೆ); ಕಾಂಡ ಹಾಗೂ ಎಲೆಗಳಲ್ಲಿ ಬಿಳಿಯ ಅಥವಾ ಬಣ್ಣವಿಲ್ಲದ ಹಾಲ್ನೊರೆ (ಲೇಟೆಕ್ಸ್) ಇರುವುದು; ಸರಳ ಎಲೆಗಳು ಪರ್ಯಾಯ, ಅಭಿಮುಖ ಅಥವಾ ಸುತ್ತುಮಾದರಿಯಲ್ಲಿ ಜೋಡಣೆಗೊಂಡಿರುವುದು; ಸಂಕೀರ್ಣ ಮಾದರಿಯ ಅಥವಾ ಮಧ್ಯಾರಂಭಿ ಮಾದರಿಯ ಹೂಗೊಂಚಲುಗಳು; ಆರೀಯ ಸಮಾಂಗತೆಯುಳ್ಳ ದ್ವಿಲಿಂಗಿ ಹೂಗಳು; ಸಂಯುಕ್ತ ಮಾದರಿಯ ಪುಷ್ಪಪತ್ರ ಹಾಗೂ ಪುಷ್ಪದಳಗಳು; ದಳಗಳ ಬುಡದಲ್ಲಿ ಮಧುಗ್ರಂಥಿಗಳಿರುವುದು; ಹೂದಳಗಳಿಗೆ ಪರ್ಯಾಯವಾಗಿ ಜೋಡಿಸಿರುವ ಐದು ಕೇಸರಗಳು ಮತ್ತು ಬಾಣದ ಮೊನೆಯಂತಿರುವ ಪರಾಗಕೋಶಗಳು; ಸಂಪೂರ್ಣ ಅಥವಾ ಅರ್ಧಉಚ್ಚಸ್ಥಾನದ ಎರಡು ಕಾರ್ಪೆಲುಗಳಿಂದಾದ ಅಂಡಾಶಯ; ಅಂಡಾಶಯದ ಶಲಾಕೆ ಮತ್ತು ಶಲಾಕಾಗ್ರದ ಭಾಗಗಳು ಮಾತ್ರ ಕೂಡಿದ್ದು ಬುಡದಭಾಗ ಬಿಡಿಯಾಗಿ ಎರಡು ಅಂಡಕೋಶಗಳನ್ನು ಹೊಂದಿರುವುದು; ಅವುಗಳಲ್ಲಿ ಎರಡರಿಂದ ಹಲವಾರು ಅಂಡಕಗಳಿರುವುದು; ಡಮರು ಆಕಾರದ ಶಲಾಕಾಗ್ರ; ಫಲಜೋಡಿಯಾಗಿರುವ ಫಾಲಿಕಲ್‌ಗಳು; ಬೀಜಗಳಲ್ಲಿ ಅವುಗಳ ಪ್ರಸರಣ ಕ್ರಿಯೆಯಲ್ಲಿ ಸಹಕಾರಿಯಾಗುವ ಕೂದಲುಗಳಿರುವುದು.

ಕಣಗಿಲೆ ಕುಟುಂಬದ ಸಸ್ಯಗಳು ಹಿಂದಿನ ಕಾಲದಿಂದಲೂ ಹಲವಾರು ರೀತಿಯಿಂದ ಉಪಯುಕ್ತವೆನಿಸಿದೆ. ಕೆಲವನ್ನು ಅಲಂಕಾರ ಸಸ್ಯಗಳಾಗಿ ತೋಟಗಳಲ್ಲಿ, ಮನೆಗಳಲ್ಲಿ, ದೇವಸ್ಥಾನಗಳ ಬಳಿಯಲ್ಲಿ, ಬೆಳೆಸುತ್ತಾರೆ. ಉದಾಹರಣೆಗೆ ಕಣಗಿಲೆ (ನೀರಿಯಮ್) ದೇವಕಣಗಿಲೆ (ಪ್ಲೂಮೇರಿಯ), ಹಳದಿ ಹೂ ಗಿಡ (ಅಲಮಂಡ), ನಂದಿಬಟ್ಟಲು (ಎರ್ವಟಾಮಿಯ) ಮತ್ತು ಕಾಸಿಕಣಗಿಲೆ (ವಿಂಕ). ಲಾಂಡಾಲ್ಫಿಯ, ಫಂಟೂಮಿಯ, ಅರ್ಸಿಯೋಲ ಮತ್ತು ವಿಲ್ಲೋಗ್‌ಬಯ ಎಂಬುವುಗಳ ಹಾಲ್ನೊರೆಯಿಂದ ರಬ್ಬರ್ ತಯಾರಿಸುತ್ತಾರೆ. ಸರ್ಪಗಂಧಿ (ರಾವುಲ್ಫಿಯ), ಆಸ್ಪಿಡೋಸ್ಪರ್ಮ, ಸ್ಟ್ರೊಫ್ಯಾಂತೆಸ್, ಸಪ್ತಪರ್ಣ (ಆಲ್ಸ್ಟೋನಿಯ), ಅಲಮಂಡ, ಬೆಪ್ಪಾಲೆ (ರೈಟಿಯ) ಕೊರಸಿಗನ ಗಿಡ (ಹೋಲೇರಿನ) ಮುಂತಾದವು ಆಯುರ್ವೇದ ಔಷಧಿ ತಯಾರಿಕೆಯಲ್ಲಿ ಹೆಸರಾಗಿವೆ. ಕಬಳಿ (ಕ್ಯಾರಿಸ) ಗಿಡದಿಂದ ಮರದ ಗೊಂಬೆಗಳನ್ನು ತಯಾರುಮಾಡುತ್ತಾರೆ. ಅಲ್ಲದೆ ಇದರ ಕಾಯಿಯಿಂದ

ಉಪ್ಪಿನಕಾಯಿ ಮಾಡುವುದೂ ಉಂಟು. ಉಷ್ಣವಲಯದಲ್ಲಿ ಬೆಳೆಯುವ ಸರ್ಬೆರ, ಮಡಗಾಸ್ಕರಿನ ನಿವಾಸಿಯಾದ ಟಾಂಘೆನಿಯ ಮತ್ತು ದಕ್ಷಿಣ ಆಫ್ರಿಕದಲ್ಲಿ ಬೆಳೆಯುವ ಅಕೊಕ್ಯಾಂತೆರ ಎನ್ನುವ ಗಿಡಗಳು ವಿಷಪೂರಿತವಾಗಿವೆ. (ಎ.ಕೆ.ಕೆ.)

**ಕಣಜ :** ರೈತರಾಗಲಿ ಜಮೀನಿನ ಒಡೆಯರಾಗಲಿ ಇತರರಾಗಲಿ ಸ್ವಂತ ಉಪಯೋಗಕ್ಕೊ ಮಾರಾಟಕ್ಕಾಗಿಯೋ ದವಸಧಾನ್ಯವನ್ನು–ಮುಖ್ಯವಾಗಿ ಅದನ್ನು ಒಕ್ಕಿದ ಮೇಲೆ ಅಥವಾ ಅದರ ಸಿಪ್ಪೆ ತೆಗೆದ ಮೇಲೆ–ಸಂಗ್ರಹಿಸಿಡಲು (ಸಾಮಾನ್ಯವಾಗಿ ಖಾಸಗಿಯಾಗಿ) ನಿರ್ಮಿಸಿದ ಕಟ್ಟಡ (ಗ್ರ್ಯಾನರಿ). ಪಣತ ಎಂದೂ ಇದನ್ನು ಕರೆಯುವುದುಂಟು. ನೆಲದ ಅಡಿಯಲ್ಲಿ ಕಟ್ಟಲಾದ ಕಣಜವನ್ನು ಹಗೇವು ಎನ್ನುವುದು ವಾಡಿಕೆ. ಜೋಳವನ್ನು ಹಗೇವಿನಲ್ಲೂ ಬತ್ತವನ್ನು ಕಣಜದಲ್ಲೂ ಸಾಮಾನ್ಯವಾಗಿ ತುಂಬಿಡುತ್ತಾರೆ. ಹೀಗೆಯೇ ಕೆಲವು ಧಾನ್ಯಗಳನ್ನು ಕಣಜದಲ್ಲೂ ಇನ್ನು ಕೆಲವನ್ನು ಹಗೇವಿನಲ್ಲೂ ಸಂಗ್ರಹಿಸುವುದು ರೂಢಿಯಾಗಿ ಬಂದಿದೆ.

ಧಾನ್ಯಕ್ಕೆ ತೇವ ಹತ್ತದಂತೆಯೂ ಇಲಿ ಹೆಗ್ಗಣ ಪಕ್ಷಿಗಳೇ ಮುಂತಾದವು ತಿನ್ನದಂತೆಯೂ ಹುಳು ಬೀಳದಂತೆಯೂ ಅದನ್ನು ರಕ್ಷಿಸಿಡುವುದೇ ಕಣಜದ ಮುಖ್ಯ ಉದ್ದೇಶ. ಒಂದು ಕುಟುಂಬದ ಉಪಯೋಗಕ್ಕೆ ತಕ್ಕಷ್ಟು ಧಾನ್ಯ ಸಂಗ್ರಹಮಾಡಬಹುದಾದ ಸಣ್ಣ ಕಣಜದಿಂದ ಹಿಡಿದು ದೊಡ್ಡ ವ್ಯಾಪಾರಿಗಳ ಇಲ್ಲವೆ ಸಂಘ ಸಂಸ್ಥೆಗಳ ಒಡೆತನದಲ್ಲಿ ಇರುವ ಭಾರಿಯ ಕಣಜದವರೆಗೆ ಅಗತ್ಯಾನುಗುಣವಾಗಿ ಇದರ ಗಾತ್ರ ವ್ಯತ್ಯಾಸವಾಗುತ್ತದೆ. ಕಣಜಗಳು ಇಂದಿನ ಆರ್ಥಿಕ ಕ್ಷೇತ್ರದಲ್ಲಿ ಬಹಳ ಮಹತ್ತ್ವದ ಪಾತ್ರ ವಹಿಸಿರುತ್ತವೆ. ಆಧುನಿಕ ನಾಗರಿಕ ಜೀವನಕ್ಕೆ ಇವು ಬಹಳ ಆವಶ್ಯಕ. ಪ್ರಪಂಚದ ಬೇರೆ ಬೇರೆ ದೇಶಗಳು ಹೇರಳವಾಗಿ ಬೆಳೆಯುತ್ತಿರುವ ಕಾಳುಗಳನ್ನು ಸಂಗ್ರಹಿಸಿಟ್ಟುಕೊಂಡು ಕೊರತೆಯ ರಾಷ್ಟ್ರಗಳಿಗೆ ಆಹಾರ ಪೂರೈಸುವಂತೆ ಮಾಡುವುದರಲ್ಲಿ ಕಣಜಗಳು ಬಹಳ ಸಹಾಯಕ.

ಕಣಜದ ಗಾತ್ರ ಮತ್ತು ರಚನೆಗಳು ಅದರಲ್ಲಿ ಸಂಗ್ರಹಿಸಿಡಬೇಕಾದ ಧಾನ್ಯದ ಪ್ರಮಾಣವನ್ನು ಅವಲಂಬಿಸಿರುತ್ತವೆ. ಆಧುನಿಕ ಕಣಜಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು. (1) ತಾತ್ಕಾಲಿಕ ಕಣಜಗಳು, (2) ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ಒಯ್ಯಬಹುದಾದ ಕಣಜಗಳು ಮತ್ತು (3) ಶಾಶ್ವತವಾದ ಕಣಜಗಳು ಹಾಗೂ ಧಾನ್ಯವನ್ನು ಮೇಲೆ ಎತ್ತಿ ಸಂಗ್ರಹಿಸುವ ಕಟ್ಟಡಗಳು (ಎಲಿವೇಟರ್ ಬಿಲ್ಡಿಂಗ್ಸ್).

ತಾತ್ಕಾಲಿಕವಾಗಿ ಧಾನ್ಯ ಸಂಗ್ರಹಿಸಿಡಬೇಕಾದಾಗ ನೆಲದ ಮೇಲೆ ನೀರು ಅಂಟದಂಥ ಕಾಗದವನ್ನು ಹರವಿ ಅದರ ಮೇಲೆ ಧಾನ್ಯವನ್ನಿಡಬಹುದು. ಕಂಬಗಳನ್ನು ನೆಲದಲ್ಲಿ ಹುಗಿದು ಅದರ ಸುತ್ತಲೂ ಮರದ ಹಲಗೆಯನ್ನೋ ತಗಡುಗಳನ್ನೋ ಜೋಡಿಸಿ ಅಲ್ಲಿ ಧಾನ್ಯ ಸಂಗ್ರಹಿಸಬಹುದು. ಆದರೆ ಇಂಥ ವಿಧಾನದಿಂದ ಧಾನ್ಯಕ್ಕೆ ಸಾಕಷ್ಟು ಸಂರಕ್ಷಣೆ ದೊರೆಯಲಾರದು.

ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ಒಯ್ಯಬಹುದಾದ ಕಣಜವನ್ನು ಮರ ಅಥವಾ ತಗಡಿನಿಂದ ಮಾಡಿರುತ್ತಾರೆ. ಕಣಜದ ಕೆಳಭಾಗದಲ್ಲಿ ಮರದ ತುಂಡುಗಳಿದ್ದು ಅವುಗಳ ನೆರವಿನಿಂದ ಕಣಜವನ್ನು ಒಂದು ಕಡೆಯಿಂದ ಬೇರೊಂದು ಕಡೆಗೆ ಒಯ್ಯಬಹುದು. ಇಂಥ ಕಣಜದಲ್ಲಿ ಸು. 24,000 ದಿಂದ 72,000 ಲೀಟರುಗಳವರೆಗೆ ಕಾಳು ತುಂಬಬಹುದು.

ಸತುವು ಲೇಪಿತ (ಗ್ಯಾಲ್ವನೈಸ್ಡ್) ತಗಡಿನ ಕಣಜಗಳು ಕಾಳನ್ನು ಸಂಗ್ರಹಿಸಿಡಲು ಉಪಯುಕ್ತವಾಗಿವೆ. ಇವು ಸು.3 ಮೀಟರುಗಳಿಗಿಂತ ಕಡಿಮೆವ್ಯಾಸವುಳ್ಳವು. ಹವೆಯಿಂದ ಇವಕ್ಕೆ ಧಕ್ಕೆ ತಗಲದಂತೆ ಇವು ಸಾಕಷ್ಟು ಗಟ್ಟಿಯಾಗಿರುವಂತೆ ಮಾಡುವುದು ಒಳ್ಳೆಯದು. ತಗಡಿನ ಗುಣಕ್ಕೆ ತಕ್ಕಂತೆ ಕಣಜಗಳ ಬಾಳಿಕೆ. ಬಹಳ ದಿವಸಗಳವರೆಗೆ ಕಣಜ ಬಾಳಬೇಕಾದರೆ ತಗಡು ಅತಿ ಕಡಿಮೆಯೆಂದರೆ 20 ಗೇಜಿನದಾದರೂ ಇರಬೇಕು.

ಶಾಶ್ವತ ಕಣಜಗಳು ದೊಡ್ಡ ಕಟ್ಟಡಗಳು. ಬೃಹದ್ಗಾತ್ರದಲ್ಲಿ ಧಾನ್ಯೋತ್ಪಾದನೆ ಮಾಡುವ ಅಮೆರಿಕದಲ್ಲಿ ಇವು ವಿಶೇಷ. ಬೆಳೆದ ಧಾನ್ಯವನ್ನು ಅಲ್ಪವೆಚ್ಚದಲ್ಲಿ ಇಲ್ಲಿ ಸಂಗ್ರಹಿಸಿಡಬಹುದಲ್ಲದೆ ಧಾನ್ಯದ ಮೇಲೆ ಸಾಲವನ್ನೂ ಪಡೆಯಬಹುದು. ಅಮೆರಿಕದಲ್ಲಿ ಇವು ರೈತರ ಮನೆಗಳಲ್ಲೂ ಹಳ್ಳಿಪಟ್ಟಣಗಳಲ್ಲೂ ಧಾನ್ಯಪೇಟೆಗಳಲ್ಲೂ ಉಂಟು. ಧಾನ್ಯವನ್ನು ಮೇಲೆತ್ತಿ ಕಣಜಗಳಲ್ಲಿ ತುಂಬುವ ಸಾಧನಗಳನ್ನೂ ಜೋಡಿಸಲಾಗಿರುತ್ತದೆ. ಮೇಲೆತ್ತಿಗೆಗಳಲ್ಲಿ (ಎಲಿವೇಟರ್ಸ್) ಎರಡು ವಿಧ. ಮೊದಲನೆಯದು ಚಿಕ್ಕದು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ದು ಉಪಯೋಗಿಸುವಂಥದು. ಉಗ್ರಾಣದ ಭಾಗವಾಗಿಯೇ ಒಂದೇ ಸ್ಥಳದಲ್ಲಿ ಇರತಕ್ಕದ್ದು ಎರಡನೆಯ ಬಗೆ. ಮೇಲೆತ್ತಿಗೆ ಒಂದು ಪಟ್ಟಿ, ಇದಕ್ಕೆ ತುದಿ ಅಥವಾ ಕೊನೆ ಇರುವುದಿಲ್ಲ. ಈ ಪಟ್ಟಿಗೆ ಚೌಕವಾದ ಇಲ್ಲವೆ V ಆಕಾರದ ಬಕೆಟ್ಟುಗಳನ್ನು ಕೂಡಿಸಿರುತ್ತಾರೆ. ಗಾಲಿಗಳ ಮೇಲೆ ಇರುವ ಈ ಪಟ್ಟೆ ಕೆಳಗಿನಿಂದ ಮೇಲೆ ಸುತ್ತುತ್ತಿರುತ್ತದೆ. ಅದರ ಕೆಳಬದಿಯಲ್ಲಿ ಒಂದು ತಗ್ಗುಂಟು. ಧಾನ್ಯವನ್ನು ಅದರಲ್ಲಿ ಸುರಿಯುತ್ತಾರೆ. ಪಟ್ಟಿ ತಿರುಗುವಾಗ ಅದರ ಬಕೆಟ್ಟುಗಳು ಧಾನ್ಯವನ್ನು ತುಂಬಿಕೊಂಡು ಮೇಲೆ ಏರುತ್ತ ಉಗ್ರಾಣದ ಮೇಲ್ಬದಿಯಲ್ಲಿ ಅದನ್ನು ಸುರಿದು ಬೇರೊಂದು ಬದಿಯಿಂದ ಕೆಳಗೆ ಬರುತ್ತವೆ. ಇದು ವಿದ್ಯುತ್ತಿನ ಮೋಟಾರಿನ ಅಥವಾ ಸಣ್ಣ ಎಂಜಿನಿನ ಸಹಾಯದಿಂದ ತಿರುಗುತ್ತದೆ. ಸಣ್ಣ ಸಾಧನಗಳು 5–10 ಮೀ ಉದ್ದವಾಗಿರುತ್ತವೆ. ಇನ್ನೊಂದು ಬಗೆಯ ಮೇಲೆತ್ತಿಗೆ ಒಂದು ತಿರುಪು ಸಾಧನ. ಇದರ ಉದ್ದ 10 ಮೀ. ಕಣಜ 22–44 ಮೀ ಗಳವರೆಗೆ ಎತ್ತರವಾಗಿರುತ್ತದೆ.

ಕಣಜಗಳನ್ನು ಮರ, ಲೋಹ ಇಲ್ಲವೆ ಕಾಂಕ್ರೀಟಿನಿಂದ ಕಟ್ಟುತ್ತಾರೆ. ಮರದ ಕಣಜ ಹೆಚ್ಚು ಬಾಳಿಕೆ ಬರುವುದಿಲ್ಲ. ಆದ್ದರಿಂದ, ಕಾಂಕ್ರೀಟಿನ ಮತ್ತು ಲೋಹದ ಕಣಜಗಳೇ ಬಳಕೆಯಲ್ಲಿವೆ. ಗ್ರಾಮೀಣ ಪ್ರದೇಶದ ಕಣಜಗಳಲ್ಲಿ 50,000 ಲೀಟರಿನವರೆಗೂ ಧಾನ್ಯ ತುಂಬಬಹುದು. ರೈತ ಬೆಳೆಯುವ ಎಲ್ಲ ಧಾನ್ಯವೂ ಸಾಮಾನ್ಯವಾಗಿ ಮಾರಾಟಕ್ಕೆ ಮುಂಚೆ ಕಣಜಗಳಲ್ಲಿ ಸಂಗ್ರಹವಾಗಿರುತ್ತದೆ. ಧಾನ್ಯವನ್ನು ತೂಕ ಮಾಡಿ ಅದೇ ಮಾದರಿಯ ಧಾನ್ಯ ಇರುವಲ್ಲಿ ಅದನ್ನು ಸೇರಿಸುತ್ತಾರೆ. ಸಾಮಾನ್ಯವಾಗಿ ಕಣಜದ ಮಾಲೀಕರೆ ಅದನ್ನು ಕೊಳ್ಳುವುದುಂಟು. ಧಾನ್ಯಪೇಟೆಗಳಲ್ಲಿ ಇರುವ ಕಣಜಗಳು ಬಹಳದೊಡ್ಡವು, 480 ಲಕ್ಷ ಲೀಟರ್ ಕಾಳು ಹಿಡಿಯುತ್ತವೆ. ಅಮೆರಿಕದ ಮಿನಿಯಪೊಲಿಸ್‌ನ 69 ಕಣಜಗಳು 44,640 ಲಕ್ಷ ಲೀಟರ್ ಧಾನ್ಯವನ್ನು ತುಂಬುವಷ್ಟು ದೊಡ್ಡವಾಗಿವೆ.

**ಒಳ್ಳೆಯ ಕಣಜದ ಗುಣಗಳು :** ಕಣಜಗಳು ಗಟ್ಟಿಮುಟ್ಟಾಗಿ ಇರಬೇಕು. ಒಳಗಿರುವ ಧಾನ್ಯ ಕಣಜದ ಗೋಡೆಯನ್ನೂ ತಳವನ್ನೂ ತನ್ನ ಭಾರದಿಂದ ಒತ್ತುತ್ತದೆ. 4.2 ಮೀ ವ್ಯಾಸ ಹಾಗೂ 2.4 ಮೀ ಎತ್ತರವುಳ್ಳ ಕಣಜದಲ್ಲಿ ಮುಸುಕಿನ ಜೋಳವನ್ನು ಇಟ್ಟರೆ ಕಣಜದ ತಳದಲ್ಲಿ ಪ್ರತಿ ಚ. ಮೀಟರಿನ ಮೇಲೆ ಸು. 2,000 ಕಿಗ್ರಾಂ ಭಾರ ಬೀಳುತ್ತದೆ. ಗೋಡೆಯ ಕೆಳಭಾಗದಲ್ಲಿ ಪ್ರತಿ ಚ. ಮೀಟರಿನ ಮೇಲೆ 750 ಕಿಗ್ರಾಂ ಒತ್ತಡ ಉಂಟಾಗುತ್ತದೆ. ಧಾನ್ಯದ ಎತ್ತರ ಹೆಚ್ಚಾದಂತೆ ಈ ಒತ್ತಡ ಇನ್ನೂ ಹೆಚ್ಚು. ಆದ್ದರಿಂದ ಕಣಜದ ಕಟ್ಟಡ ಇದನ್ನು ತಡೆದು ನಿಲ್ಲುವಷ್ಟು ಗಟ್ಟಿಯಾಗಿರಬೇಕು.

ಕಣಜಗಳು ಹವೆಯಿಂದ ಬಾಧಿತವಾಗದಂತೆ ಇರಬೇಕು. ನೀರು ಇಲ್ಲವೆ ಆರ್ದ್ರತೆ ಒಳಗೆ ಸೇರದ ಹಾಗೆ ಅದನ್ನು ಕಟ್ಟಿರಬೇಕು. ಮಾಳಿಗೆ ಸೋರುವುದು, ಗೋಡೆ ಬಿರುಕು ಬಿಟ್ಟಿರುವುದು, ಬಾಗಿಲುಗಳ ಸಂದಿಯಿಂದ ನೀರು ಒಳಗೆ ಸೇರುವುದು, ನೆಲ ಹಸಿಯನ್ನು ಹೀರಿಕೊಳ್ಳುವಂಥದು, ನೆಲದ ಮೇಲೆ ಇರುವ ಕಾಳು ಹಸಿ ಇಂಗಿಸಿಕೊಳ್ಳುವುದು–ಇವೇ ಧಾನ್ಯ ಕೆಡಲು ಮುಖ್ಯ ಕಾರಣಗಳು. ಕಣಜದ ಸುತ್ತಲೂ ಬಿದ್ದ ನೀರು ದೂರ ಹರಿದು ಹೋಗುವಂತೆ ವ್ಯವಸ್ಥೆ ಇರಬೇಕು.

ಕಣಜದ ಧಾನ್ಯಕ್ಕೆ ಹುಳುಗಳು ಹತ್ತದಂತಿರಬೇಕು. ಧಾನ್ಯ ಹಸಿಯಾಗಿ ಅಥವಾ ಬೆಚ್ಚಗೆ ಇದ್ದರೆ ಹುಳು ತೀವ್ರ ಅಂಟಿಕೊಳ್ಳುತ್ತದೆ. ಗೋಡೆಗಳಲ್ಲಿ ಬಿರುಕು ಉಂಟಾಗಿದ್ದರೂ ಗೋಡೆಯ ಸ್ವಲ್ಪ ಭಾಗ ಒಳಗಡೆಗೆ ಹೆಚ್ಚು ಹಾಯ್ದಿದ್ದರೂ ಕಣಜದಿಂದ ಧಾನ್ಯ ತೆಗೆದಾಗ ಸ್ವಲ್ಪ ಭಾಗ ಇಂಥ ಸ್ಥಳಗಳಲ್ಲಿ ಉಳಿದುಕೊಳ್ಳುತ್ತದೆ. ಇದಕ್ಕೆ ಹುಳುಗಳು ಹತ್ತುತ್ತವೆ. ಇವು ಕಣಜದಲ್ಲಿಯೇ ಉಳಿದು ಬೆಳೆಯುತ್ತ ಹೋಗಿ ಕಣಜದಲ್ಲಿ ಹೊಸ ಧಾನ್ಯ ಹಾಕಿದಾಗ ಅದಕ್ಕೆ ಸುಲಭವಾಗಿ ಹತ್ತಿಬಿಡುತ್ತವೆ. ಕಣಜದ ಗೋಡೆಗಳು ಮತ್ತು ಕಣಜದಲ್ಲಿಯ ನೆಲ ಗಾಳಿ ಒಳಗೆ ಬರದಂತೆ ಭದ್ರವಾಗಿರುವುದು ಒಳ್ಳೆಯದು. ಇಲಿ, ಹೆಗ್ಗಣ, ಪಕ್ಷಿ ಮುಂತಾದವು ಒಳಗೆ ಪ್ರವೇಶಿಸದಂತೆ ಕಣಜಗಳನ್ನು ಕಟ್ಟಬೇಕು. ಇಂಥ ಪ್ರಾಣಿಗಳು ಬಾಗಿಲ ಮೂಲಕ ಪ್ರವೇಶಿಸುವುದು ಸಾಧ್ಯವಾಗದಂತಿರಬೇಕು.

ಸುತ್ತ ಇಳಿಜಾರು ಇದ್ದು ನೀರು ಅಲ್ಲಿಂದ ದೂರ ಹರಿದುಹೋಗುವಂಥ ಎತ್ತರದ ನೆಲವೇ ಕಣಜ ಕಟ್ಟಲು ಯೋಗ್ಯ ಸ್ಥಳ. ಕಣಜಗಳ ನಕ್ಷೆಗಳನ್ನು ತಯಾರಿಸುವಾಗ ಅದಕ್ಕೆ ಬೇಕಾಗುವ ಸ್ಥಳವನ್ನು ನಿರ್ದಿಷ್ಟಪಡಿಸಬೇಕಾಗುತ್ತದೆ. ಹೀಗೆ ನಿರ್ದಿಷ್ಟ ಪಡಿಸುವಾಗ ಧಾನ್ಯ ಸಂಗ್ರಹಕ್ಕೆ ಬೇಕಾಗುವ ಸ್ಥಳವನ್ನಷ್ಟೇ ಲಕ್ಷ್ಯದಲ್ಲಿಟ್ಟುಕೊಳ್ಳದೆ ಇತರ ಕೆಲಸಗಳಿಗೆ ಅಂದರೆ ಧಾನ್ಯವನ್ನು ಸ್ವಚ್ಛ ಮಾಡುವುದು, ವಿಂಗಡಿಸುವುದು, ಹುಳು ಹತ್ತದಂತೆ ಔಷಧಿ ಹೊಡೆಯುವುದು ಮೊದಲಾದ ಕಾರ್ಯಗಳಿಗೆ ಬೇಕಾಗುವ ಹೆಚ್ಚಿನ ಸ್ಥಳದ ವ್ಯವಸ್ಥೆಯನ್ನೂ ಯೋಚಿಸಬೇಕು. ಕಳ್ಳತನಕ್ಕೆ ಆಸ್ಪದವಿಲ್ಲದ ಹಾಗೆ ಕಣಜದ ವ್ಯವಸ್ಥೆ ಇರುವುದು ಒಳ್ಳೆಯದು.

ಕಣಜದಲ್ಲಿರುವ ಧಾನ್ಯಕ್ಕೆ ತೇವ ಹತ್ತದಂತೆ ಮಾಡಬೇಕಾದರೆ ಈ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕು: 1. ಗೋಡೆ, ಮಾಳಿಗೆ, ಬಾಗಿಲು ಹಾಗೂ ಕಿಟಕಿಗಳು ಬಿಗಿಯಾಗಿರಬೇಕು. 2. ನೆಲಕ್ಕೆ ತೇವ ಹತ್ತಬಾರದು. 3. ಗೋಡೆ ಮತ್ತು ಪಾಯಗಳ ನಡುವೆ ಗಟ್ಟಿಯಾದ ಟಾರು ಹಾಕಬೇಕು. ಇದರಿಂದ ನೆಲದ ತೇವ ಗೋಡೆಯೊಳಗಿಂದ ಮೇಲಕ್ಕೆ ಏರುವುದಿಲ್ಲ. 4. ಪಾಯದ ಗೋಡೆ ಕಟ್ಟಡದ ಹೊರಬದಿಗೆ ಹಾದಿರ ಬಾರದು. 5. ಕಟ್ಟಡದಿಂದ ನೀರು ದೂರ ಹರಿದು ಹೋಗಬೇಕು.

ಕಣಜದಲ್ಲಿ ಇಲಿಗಳು ಹಾಗೂ ಪಕ್ಷಿಗಳು ಪ್ರವೇಶಿಸದ ಹಾಗೆ ಇರಬೇಕಾದರೆ ಈ ಕ್ರಮಗಳನ್ನು ಕೈಗೊಳ್ಳಬೇಕು: 1. ಕಣಜದ ನೆಲ ಭೂಮಿಗಿಂತ ಸ್ವಲ್ಪ ಎತ್ತರದಲ್ಲಿ ಇರಬೇಕು, 2. ಕಣಜದೊಳಗಿನ ನೆಲ ಕಾಂಕ್ರೀಟಿನಿಂದಲೂ ಕಣಜದ ಪಾಯದ ಗೋಡೆಯನ್ನು ಗಟ್ಟಿಯಾಗಿಯೂ ಕಟ್ಟಿರಬೇಕು, 3. ಗೋಡೆಯಲ್ಲಿಯ ತೂತುಗಳನ್ನು ಸಣ್ಣ ಕಣ್ಣುಗಳುಳ್ಳ

ಜಾಳಿಗೆಯಿಂದ ಮುಚ್ಚಬೇಕು, 4. ಕಣಜದ ಮೇಲ್ಭಾಗದಲ್ಲಿ ಜಾಳಿಗೆಯನ್ನು ಇಲ್ಲವೆ ಕಬ್ಬಿಣದ ತಗಡನ್ನು ಹಾಕಬೇಕು, 5. ನೆಲದಿಂದ 60 ಸೆಂಟಿಮೀಟರುಗಳ ಮೇಲೆ ಕಟ್ಟಡದ ಸುತ್ತಲೂ ಹೊರಬದಿಗೆ 20 ಸೆಂಟಿಮೀಟರ್ ಅಗಲದ ಸತುಲೇಪಿತ ತಗಡನ್ನು ಹಾಕಬೇಕು, 6. ಬಾಗಿಲುಗಳನ್ನು ಇಲಿಗಳು ಕಡಿಯದಂತೆ ಅವುಗಳ ಸುತ್ತಲೂ ಕಬ್ಬಿಣದ ತಗಡನ್ನು ಹಾಕಬೇಕು.

ಎರಡನೆಯ ಮಹಾಯುದ್ಧದ ಕಾಲದಿಂದೀಚೆಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕಣಜದೊಳಗೆ ವಾತನಿಯಂತ್ರಿಸುವ ವ್ಯವಸ್ಥೆಯೂ ಹೆಚ್ಚಾಗಿ ಬಳಕೆಗೆ ಬಂದಿದೆ. (ಆರ್.ಎಫ್.ಪಿ.)

**ಕಣಜಗಳು :** ಕೀಟವರ್ಗದ ಹೈಮೆನಾಪ್ಟಿರ ಗಣಕ್ಕೆ ಸೇರಿದ ಕೀಟಗಳು. ಕಡಿಯಲು ಅಥವಾ ಹೀರಲು ಅನುವಾದ ವದನಾಂಗಗಳು, ನಾಲ್ಕು ನಯವಾದ ಪಾರದರ್ಶಕ ರೆಕ್ಕೆಗಳು, ಡಿಂಭಗಳಿಗೆ ಕಾಲುಗಳಿಲ್ಲದಿರುವುದು, 12–13 ಖಂಡಗಳುಳ್ಳ ಕುಡಿಮೀಸೆಗಳು, ಉದರಕ್ಕೂ ಎದೆಗೂ ನಡುವೆ ತೊಟ್ಟಿನಂತಿರುವ ನಡು–ಇವು ಈ ಗಣದ ಮುಖ್ಯ ಲಕ್ಷಣಗಳು. ಕಣಜಗಳು ಸಾಮಾನ್ಯವಾಗಿ ಮಾಂಸಾಹಾರಿಗಳು. ಕೆಲವು ಬಗೆಯವು ಪರಾವಲಂಬಿಗಳು. ಸು. 20,000ಕ್ಕೂ ಹೆಚ್ಚು ಪ್ರಭೇದಗಳಿವೆ. ಕಣಜಗಳಲ್ಲಿ ಮುಖ್ಯವಾಗಿ ಎರಡು ವಿಧ. ಒಂದು ಬಗೆಯವು ಸಂಘಜೀವನ ನಡೆಸುವಂಥವು (ಸೋಷಿಯಲ್ ವ್ಯಾಸ್ಪ್ಸ್). ಇವುಗಳಲ್ಲಿ ಜೇನುನೊಣಗಳಲ್ಲಿರುವಂತೆಯೇ ವ್ಯವಸ್ಥಿತ ಸಮಾಜವಿದೆ. ಅದರಲ್ಲಿ ರಾಣಿ, ಹಲವಾರು




ಕಣಜ : 1. ಗೂಡಿನ ಬಳಿಯಲ್ಲಿ ಕಣಜ; 2. ಗಂಡು; 3. ಕೆಲಸಗಾರ ಕಣಜ, 4. ರಾಣಿ

ಗಂಡುಗಳು ಮತ್ತು ಬಹುಸಂಖ್ಯೆಯಲ್ಲಿ ಕೆಲಸಗಾರ ಕಣಜಗಳು ಇರುತ್ತವೆ. ರಾಣಿಕಣಜ, ಗಂಡು ಮತ್ತು ಕೆಲಸಗಾರ ಕಣಜಗಳಿಗಿಂತ ಗಾತ್ರದಲ್ಲಿ ದೊಡ್ಡದು. ರಾಣಿ ಮತ್ತು ಕೆಲಸಗಾರ ಕಣಜಗಳ ಉದರದ ತುದಿಯಲ್ಲಿ ವಿಷದ ಕೋಶ ಮತ್ತು ಹಿಂದಕ್ಕೆಳೆದುಕೊಳ್ಳಬಹುದಾದ ಮುಳ್ಳು ಇವೆ. ಸಾಮಾನ್ಯವಾಗಿ ಈ ಬಗೆಯ ಕಣಜಗಳು ಕುಳಿತಾಗ ಅವುಗಳ ರೆಕ್ಕೆ ಉದ್ದುದ್ದನಾಗಿ ಮಡಿಸಿಕೊಳ್ಳುತ್ತವೆ. ಇನ್ನೊಂದು ಬಗೆಯ ಕಣಜಗಳು ಒಂಟಿಜೀವನ ನಡೆಸುವಂಥವು (ಸಾಲಿಟರಿ ವ್ಯಾಸ್ಪ್ಸ್). ಬಹುಪಾಲು ಕಣಜಗಳು ಈ ಬಗೆಯವು. ಕಣಜಗಳನ್ನು ಅವುಗಳ ಆಕಾರ, ಜೀವನ ಹಾಗೂ ಗೂಡುಕಟ್ಟುವ ರೀತಿಗಳ ಆಧಾರದ ಮೇಲೆ ಹಲವಾರು ಕುಟುಂಬಗಳಾಗಿ ವಿಂಗಡಿಸಿದ್ದಾರೆ. ಗುಂಪುಜೀವನ ನಡೆಸುವ ಕಣಜಗಳು ವೆಸ್ಪಿಡೀ ಕುಟುಂಬಕ್ಕೆ ಸೇರಿವೆ. ಉಳಿದುವು ವೆಸ್ಪಿಡೀ ಕುಟುಂಬವೊಂದೇ ಅಲ್ಲದೆ ಪಾಂಪಿಲಿಡೀ, ಸ್ಪೆಸಿಡೀ, ಯೂಮೆನಿಡೀ, ಮ್ಯೂಟಿಲಿಡೀ, ಟೈಫೈಯಿಡೀ, ಸ್ಕೋಲೈಯಿಡೀ ಇತ್ಯಾದಿ ಕುಟುಂಬಗಳಿಗೆ ಸೇರಿವೆ. ಕಣಜಗಳಲ್ಲಿ ಹಲವಾರು ಜಾತಿಗಳೂ ಉಂಟು; ವೆಸ್ಪ, ವೆಸ್ಪುಲ, ಪಾಲಿಸ್ಟಿಸ್, ಡಾಲಿಕೋವೆಸ್ಪುಲ, ಟೈಫಿಯ, ಬ್ರ್ಯಾಕಿಗಾಸ್ಟ್ರ ಮುಂತಾದುವು ಮುಖ್ಯ ಜಾತಿಗಳು. ಭಾರತದಲ್ಲಿ ಬಹಳ ಸಾಮಾನ್ಯವಾಗಿ ಕಾಣಬರುವ ಕಣಜವೆಂದರೆ ವೆಸ್ಪುಲ ಇಂಡಿಕಸ್ ಎಂಬ ಪ್ರಭೇಧ. ಸಂಘಜೀವನ ನಡೆಸುವ ಇದರಲ್ಲಿ ದೇಹದ ಬೆನ್ನು ಭಾಗದಲ್ಲಿ ಹಳದಿ ಮತ್ತು ಕಪ್ಪು ಪಟ್ಟಿಗಳಿವೆ. ಸಂಘಜೀವನ ನಡೆಸುವ ಕಣಜಗಳು ದೊಡ್ಡ ದೊಡ್ಡ ಗೂಡುಗಳನ್ನು ಕಟ್ಟಿ ವಾಸಿಸುತ್ತವೆ. ಮರ ಅಥವಾ ಎಲೆಗಳನ್ನು ಅಗಿದು ಜೊಲ್ಲಿನೊಡನೆ ಸೇರಿಸಿ ಅದರಿಂದ ಉಂಟಾಗುವ ಗಾರೆಯಂಥ ವಸ್ತುವನ್ನು ಗೂಡು ಕಟ್ಟಲು ಉಪಯೋಗಿಸುತ್ತವೆ. ಸಾಮಾನ್ಯವಾಗಿ ನೆಲದಲ್ಲೊ ಮರಗಳ ಪೊಟರೆಗಳಲ್ಲೊ, ಎಲೆ ಮತ್ತು ಕೊಂಬೆಗಳ ತುದಿಯಲ್ಲೊ ಗೂಡು ಕಟ್ಟುವುದು ವಾಡಿಕೆ. ಗೂಡುಗಳ ಆಕಾರವೂ ವಿವಿಧ ಬಗೆಯದು. ಗೂಡುಗಳಲ್ಲಿ ಜೇನುಗೂಡಿನಲ್ಲಿರುವಂತೆ ಹಲವಾರು ಷಡ್ಭುಜಾಕೃತಿಯ ಸಣ್ಣ ಸಣ್ಣ ಕೋಣೆಗಳಿವೆ. ಹಲವಾರು ಪದರಗಳಲ್ಲಿ ಜೋಡಿಸಲಾಗಿರುವ ಈ ಕೋಣೆಗಳ ಸುತ್ತ ಕಾಗದದಂಥ ತೆಳುವಾದ ಹೊದಿಕೆಯಿರುತ್ತದೆ. ಕೆಳಮೊಗನಾಗಿ ತೆರೆಯುವ ಬಾಗಿಲೂ ಇರುತ್ತದೆ. ರಾಣಿಕಣಜ ಕೋಣೆಗೊಂದರಂತೆ ಮೊಟ್ಟೆಯಿಡುತ್ತ ಹೋಗುತ್ತದೆ. ಮೊಟ್ಟೆಗಳನ್ನು ಅಂಟಿನಂಥ ದ್ರವದಿಂದ ಕೋಣೆಯ ಗೋಡೆಗೆ ಅಂಟಿಕೊಳ್ಳುವಂತೆ ಮಾಡುತ್ತದೆ. ಮೊಟ್ಟೆಯೊಡೆದು ಡಿಂಭಗಳು ಹೊರಬಂದಾಗ ಕೆಲಸಗಾರ ಕಣಜಗಳು ಅವಕ್ಕೆ ಹಲವಾರು ಬಗೆಯ ಆಹಾರವಸ್ತುಗಳನ್ನು (ಹೂಗಳು, ಹಣ್ಣುಗಳು, ಬೇರೆ ಕೀಟಗಳು) ಅಗಿದು ತಮ್ಮ ಜೊಲ್ಲಿನೊಂದಿಗೆ ಸೇರಿಸಿ ತಿನ್ನಿಸುತ್ತದೆ. ಬ್ರ್ಯಾಕಿಗ್ಯಾಸ್ಟ್ರ ಪ್ರಭೇದದ ಕಣಜ ಹೂಗಳಿಂದ ಮಧುವನ್ನು ಶೇಖರಿಸಿ ಡಿಂಭಗಳಿಗೆ ಆಹಾರವಾಗಿ ಒದಗಿಸುವುದೂ ಉಂಟು. ಸಾಮಾನ್ಯವಾಗಿ ಸಂಘಜೀವಿ ಕಣಜಗಳು ಚಳಿಗಾಲಕ್ಕೆಂದು ಆಹಾರ ಶೇಖರಣೆ ಮಾಡುವುದಿಲ್ಲವಾದ್ದರಿಂದ ಆ ಕಾಲದಲ್ಲಿ ಚಳಿ ತಡೆಯಲಾರದ ಗಂಡು ಹಾಗೂ ಕೆಲಸಗಾರ ಕಣಜಗಳು ಸತ್ತುಹೋಗುತ್ತವೆ. ಆದರೆ ರಾಣಿ ಮಾತ್ರ ಬೆಚ್ಚಗಿರುವ ಪೊಟರೆಗಳಲ್ಲಿ ಅಥವಾ ಬಿಲಗಳಲ್ಲಿ ಚಳಿಗಾಲವನ್ನು ಕಳೆದು ಬೇಸಗೆಯಲ್ಲಿ ಹೊಸದಾಗಿ ಗೂಡುಕಟ್ಟಿ ಸಂಘಜೀವನವನ್ನು ಪುನಃ ಆರಂಭಿಸುತ್ತದೆ. ಹಲವಾರು ಬಗೆಯ ಸಂಘ ಜೀವಿ ಕಣಜಗಳು ಪರಾವಲಂಬಿಗಳಾಗಿರುವುದೂ ಉಂಟು. ಇಂಥವುಗಳಲ್ಲಿ ಕೆಲಸಗಾರ ಕಣಜಗಳಿರುವುದಿಲ್ಲ.

ಒಂಟಿಜೀವನ ನಡೆಸುವ ಕಣಜಗಳಲ್ಲೂ ಗೂಡು ಕಟ್ಟುವ ಪದ್ಧತಿ ಇದೆ. ಅಲ್ಲದೆ ಗೂಡು ಕಟ್ಟುವ ವಿಧಾನವೂ ಹೆಚ್ಚು ವೈಶಿಷ್ಟ್ಯಪೂರ್ಣ. ಕೆಲವು ನೆಲದಲ್ಲಿ ಬಿಲತೋಡಿ ಗೂಡು ಮಾಡಿದರೆ (ಜೇಡ ಕಣಜ), ಇನ್ನು ಕೆಲವು ಮರಗಳಲ್ಲಿ, ಬೆಂಡುಗಿಡಗಳ ಕಾಂಡಗಳಲ್ಲಿ, ಗಿಡಮರಗಳ ರೆಂಬೆಗಳಲ್ಲಿ ತೂಗುತ್ತಿರುವಂತೆ ಗೂಡು ಕಟ್ಟುತ್ತವೆ. ಗೂಡುಕಟ್ಟಲು ಅವು ಉಪಯೋಗಿಸುವ ವಸ್ತುಗಳೂ ಅಷ್ಟೇ ವೈಶಿಷ್ಟ್ಯಪೂರ್ಣ. ಗಾರೆಕಣಜಗಳು (ಪಾಟರ್ ವ್ಯಾಸ್ಪ್) ಮಣ್ಣು ಮತ್ತು ಮರದ ಹೊಟ್ಟನ್ನು ತನ್ನ ಜೊಲ್ಲಿನೊಂದಿಗೆ ಮಿಶ್ರಮಾಡಿ ಗಾರೆಯಂಥ ವಸ್ತುವನ್ನು ತಯಾರಿಸಿ ಅದರಿಂದ ಹೂಜಿಯಾಕಾರದ ಗೂಡು ಕಟ್ಟುತ್ತವೆ. ಇನ್ನು ಕೆಲವು ಮರದ ಹೊಟ್ಟನಿಂದ ಒಂದು ರೀತಿಯ ಕಾಗದವನ್ನು ತಯಾರಿಸಿ ಉಪಯೋಗಿಸುತ್ತವೆ. ತಮ್ಮ ಗೂಡುಗಳಲ್ಲಿ ಅನೇಕ ಬಗೆಯ ಕೀಟ, ಕಂಬಳಿಹುಳು, ಜೇಡಗಳನ್ನು ಆಹಾರಕ್ಕಾಗಿ ಸಂಗ್ರಹಿಸುವುವು. ಸಾಧಾರಣವಾಗಿ ಗೂಡಿನಲ್ಲಿ ಮೊಟ್ಟೆಯಿಡುವ ಮುನ್ನ ಯಾವುದಾದರೊಂದು ಬಗೆಯ ಕೀಟ ಅಥವಾ ಕಂಬಳಿ ಹುಳುವನ್ನು ಹಿಡಿದು ತಂದು, ತಮ್ಮ ಬಲವಾದ ಮುಳ್ಳಿನಿಂದ ಕುಟುಕಿ ಅವನ್ನು ನಿಶ್ಚೇತನಗೊಳಿಸಿ ಗೂಡಿನೊಳಕ್ಕೆ ತುರುಕುತ್ತವೆ. ಆಮೇಲೆ ಮೊಟ್ಟೆಯಿಡುತ್ತವೆ. ಮೊಟ್ಟೆಯೊಡೆದು ಹೊರಬಂದ ಡಿಂಭ ಇವನ್ನು ತಿಂದು ಬೆಳೆಯುತ್ತದೆ.

ಗಾರೆ ಕಣಜ

ಒಂಟಿಜೀವನ ನಡೆಸುವ ಕೆಲವು ಬಗೆಯ ಕಣಜಗಳು ಪರತಂತ್ರ ಜೀವಿಗಳಾಗಿವೆ. ಇವು ಗೂಡು ಕಟ್ಟಲಾರವು. ಇವುಗಳಲ್ಲಿ ಕೋಗಿಲೆ ಕಣಜ (ಕಕೂ ವ್ಯಾಸ್ಪ್) ಮತ್ತು ಮಕಮಲ್ಲು ಇರುವೆ (ವೆಲ್ವೆಟ್ ಆಂಟ್) ಮುಖ್ಯವಾದುವು. ಮಿರುಗುವ ಹಸಿರು ಅಥವಾ ನೀಲಿ ಬಣ್ಣದ ಕೋಗಿಲೆ ಕಣಜ ಒಂಟಿಜೇನು ಅಥವಾ ಇತರ ಕಣಜಗಳ ಗೂಡಿನಲ್ಲಿ ತನ್ನ ಮೊಟ್ಟೆಗಳನ್ನಿಡುತ್ತದೆ. ಅದರಿಂದ ಬರುವ ಡಿಂಭಗಳು ಜೇನಿನ ಅಥವಾ ಇತರ ಕಣಜಗಳ ಮರಿಗಳನ್ನು ತಿಂದು ಇಲ್ಲವೆ ಆತಿಥೇಯ ಪ್ರಾಣಿ ತನ್ನ ಮರಿಗಳಿಗಾಗಿ ಸಂಗ್ರಹಿಸಿಟ್ಟ ಆಹಾರವನ್ನು ತಿಂದು ಬೆಳೆಯುತ್ತವೆ. ಮಕಮಲ್ಲು ಇರುವೆ ಎನ್ನುವ ಕಣಜದ ದೇಹದ ಮೇಲೆ ಉದ್ದವಾದ ಮತ್ತು ದಪ್ಪವಾದ ಕಪ್ಪು ಅಥವಾ ಕೆಂಪು ಕೂದಲುಗಳಿವೆ. (ಅದರಿಂದಲೇ ಈ ಹೆಸರು). ಹೆಣ್ಣುಗಳಲ್ಲಿ ರೆಕ್ಕೆಗಳಿಲ್ಲ. ಅವು ಇರುವೆಯಂತೆಯೇ ಕಾಣುತ್ತದೆ. ಗಂಡುಗಳಲ್ಲಿ ಮಾತ್ರ ರೆಕ್ಕೆಯಿದೆ. ಇವುಗಳಲ್ಲಿ ಹಲವಾರು ಪ್ರಭೇದಗಳಿದ್ದು, ಯುರೋಪಿನ ಒಂದು ಪ್ರಭೇದ ದುಂಬಿಯ ಮೇಲೂ ಆಫ್ರಿಕದ ಒಂದು ಪ್ರಭೇದ ಸೆಸೆ ನೊಣದ ಮೇಲೂ ಪರತಂತ್ರ ಜೀವಿಗಳಾಗಿ ಜೀವಿಸುತ್ತವೆ. ಟೈಫೈಯಿಡೀ ಮತ್ತು ಸ್ಕೋಲೈಯಿಡೀ ಕುಟುಂಬದ ಕಣಜಗಳು ಕೆಲವು ಬಗೆಯ ಜೀರುಂಡೆಗಳ ಮೇಲೆ ಪರಾವಲಂಬಿಯಾಗಿರುತ್ತವೆ. ಮೊಟ್ಟೆಗಳನ್ನೂ ಅವುಗಳ ಮೇಲೆಯೇ ಇಡುತ್ತವೆ. ಡಿಂಭಗಳು ಜೀರುಂಡೆಗಳನ್ನು ಭಕ್ಷಿಸಿ ಬೆಳೆಯುತ್ತವೆ.

ಈ ರೀತಿ ಬಹಳ ಸೋಜಿಗದ ಜೀವನ ಸಾಗಿಸುವ ಕಣಜಗಳು ಮಾನವನಿಗೆ ಉಪಕಾರಿಗಳೂ ಹೌದು. ಇತರ ಕೀಟಗಳನ್ನೂ ಡಿಂಭಗಳನ್ನೂ ತಿಂದು ಜೀವಿಸುವುದರಿಂದ ಹಿಂದೆ, ಅಮೆರಿಕದಲ್ಲಿ ಬೆಳೆಗಳನ್ನು ನಾಶಪಡಿಸುತ್ತಿದ್ದ ಜಪಾನೀ ಜೀರುಂಡೆಗಳನ್ನು ತಡೆಗಟ್ಟಲು ಟೈಫಿಯ ಎಂಬ ಕಣಜಗಳನ್ನು ಜೈವಿಕ ನಿಯಂತ್ರಣಕ್ಕಾಗಿ ಬಳಸಲಾಗಿತ್ತು.

(ಎಚ್.ಬಿ.ಡಿ.; ಎಸ್.ವಿ.ಆರ್.ಎ.)

**ಕಣವೇಗೋತ್ಕರ್ಷಗಳು :** ವಿದ್ಯುತ್ಕಣಗಳ (ಪ್ರೋಟಾನುಗಳು, ಎಲೆಕ್ಟ್ರಾನುಗಳು ಮತ್ತು ಇತರ ಜೀಜಾಣುಗಳು) ಚಲನಶಕ್ತಿಯನ್ನು ವೇಗೋತ್ಕರ್ಷಿಸುವ ಯಂತ್ರಗಳು (ಪಾರ್ಟಿಕಲ್ ಆಕ್ಸಿಲರೇಟರ್ಸ್). ಹೆಚ್ಚಿನ ವಿವರಗಳಿಗೆ (**ನೋಡಿ– ವೇಗೋತ್ಕರ್ಷಕಗಳು**).

**ಕಣಶಿಲೆಗಳು :** ಭೂತೊಗಟೆಯನ್ನು ರಚಿಸಿರುವ ಮೂರು ಪ್ರಧಾನ ಶಿಲಾವರ್ಗಗಳ ಪೈಕಿ ಒಂದು (ಸೆಡಿಮೆಂಟರಿ ರಾಕ್ಸ್). ಉಳಿದ ಎರಡು ಪ್ರಧಾನ ವರ್ಗಗಳು ಅಗ್ನಿಶಿಲೆಗಳು ಮತ್ತು ರೂಪಾಂತರಿತ ಶಿಲೆಗಳು. ಕಣಶಿಲೆಗಳನ್ನು ಅವಸಾದನ ಶಿಲೆ, ಪದರು ಶಿಲೆ, ಜಲಜ ಶಿಲೆ ಎಂಬುದಾಗಿಯೂ ಕರೆಯುವುದುಂಟು. ಹೆಚ್ಚಿನ ಕಣಶಿಲೆಗಳು ಪದರ ಪದರವಾಗಿವೆ. ವಾಸ್ತವವಾಗಿ ಪದರಗಳು (ಇಲ್ಲವೇ ಪ್ರಸ್ತರೀಕರಣ) ಕಣಶಿಲೆಗಳ ಒಂದು ಮುಖ್ಯಲಕ್ಷಣ. ಭೂತೊಗಟೆಯ ಸರಾಸರಿ ದಪ್ಪ ಸು. 16 ಮೀ. ಇದರಲ್ಲಿ ಕಣಶಿಲೆಗಳು ಕೇವಲ ಶೇ. 5 ಮಾತ್ರ ಇವೆಯಷ್ಟೆ ಆದರೆ ಮೇಲ್ಮೈಯ ತೆರೆದುಕೊಂಡಿರುವ ಪ್ರದೇಶದಲ್ಲಿನ ಶಿಲೆಗಳ ಪೈಕಿ ಶೇ. 75 ಕೂಡ ಕಣಶಿಲೆಗಳೇ. ಅಲ್ಲಿಗೆ ಭೂತೊಗಟೆಯ ತೀರ ಹೊರಕವಚದಲ್ಲಿ ಒಂದು ತೆಳು ಪದರವಾಗಿ ಕಣಶಿಲೆಗಳು ವ್ಯಾಪಿಸಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಪದರದ ವಿತರಣೆ ಏಕರೀತಿ ಆಗಿದೆ ಎಂದೇನೂ ಭಾವಿಸಬೇಕಾಗಿಲ್ಲ. ಭೂಇತಿಹಾಸದ ಬೇರೆ ಬೇರೆ ಪ್ರಮುಖ ದಾಖಲೆಗಳನ್ನು ಸೆರೆಹಿಡಿದಿಟ್ಟಿರುವ (ಹೆಚ್ಚಾಗಿ ಫಾಸಿಲುಗಳ ರೂಪದಲ್ಲಿ) ಕಣಶಿಲೆಗಳು ವಿಜ್ಞಾನಿಗಳಿಗೆ ಅತ್ಯಂತ ಕುತೂಹಲಭರಿತ ಭೂಗ್ರಂಥಗಳಾಗಿವೆ. ಪ್ರಸ್ತರಗಳ ರಚನಾಯುಗವನ್ನು ನಿರ್ಣಯಿಸುವುದು ಸಾಧ್ಯ. ಆದ್ದರಿಂದ ಅವುಗಳಲ್ಲಿ ಲಿಖಿತವಾಗಿರುವ ಪಳೆಯುಳಿಕೆಗಳ ವಯಸ್ಸು ವೇದ್ಯವಾಗುವುದು: ಹೀಗಾಗಿ ಯಾವ ಯಾವ ಯುಗಗಳಲ್ಲಿ ಏನೇನು ಘಟನೆಗಳು ಸಂಭವಿಸಿದುವು ಎಂಬುದನ್ನು ಓದುವುದು ಸುಲಭ.

ಶಿಲೆಗಳು ಸಾಮಾನ್ಯವಾಗಿ ನಿರಂತರ ಶಿಥಿಲೀಕರಣಕ್ಕೆ ಒಳಗಾಗುತ್ತಿರುತ್ತವೆ. ಶಿಥಿಲೀಕರಿಸಿದ ಪ್ರದೇಶಗಳಿಂದ ಮಾರುತ, ನದಿ ಮುಂತಾದ ಕರ್ತೃಗಳಿಂದ ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರಗೊಂಡು ಸರೋವರ–ಸಮುದ್ರಗಳ ತಳದಲ್ಲಿ ಅವು ಶೇಖರವಾಗುತ್ತವೆ. ನೀರಿನಲ್ಲಿ ವಿಲೀನಗೊಂಡ ಶಿಲಾಕಣ ಕ್ರಮೇಣ ಒಟ್ಟುಗೂಡಿ ಗಟ್ಟಿಯಾಗಿ ಹೊಸ ಶಿಲೆಗಳಾಗುತ್ತವೆ. ಇವೇ ಕಣಶಿಲೆಗಳು. ಇವನ್ನು ದ್ವಿತೀಯತೆ ಶಿಲೆಗಳು ಎಂದೂ ಕರೆಯುವುದುಂಟು. ಈ ಶಿಲಾವಸ್ತುಗಳು ಶೇಖರವಾದಾಗ ಕಣಗಳು ಬಿಡಿಯಾಗಿರುತ್ತವೆ. ಕಾಲಾನುಕ್ರಮದಲ್ಲಿ ಅವು ಸಂಘಟಿಸಿ ಗಟ್ಟಿಯಾಗುತ್ತವೆ. ಕಣಗಳ ಗಾತ್ರ ದಪ್ಪವಿದ್ದರೆ ಅವುಗಳ ಮಧ್ಯೆ ಬೇರೆ ವಸ್ತು ನಿಕ್ಷೇಪಿಸಿ, ಅವನ್ನೆಲ್ಲ ಬಂಧಿಸುತ್ತದೆ. ಶಿಲಾವಸ್ತುವು ನೀರಿನಲ್ಲಿ ವಿಲೀನವಾಗಿರುವ ಸಿಲಿಕ, ಸುಣ್ಣವಸ್ತು, ಮೆಗ್ನೀಸಿಯಮ್ ಮತ್ತು ಕೆಲವು ವೇಳೆ ಕಬ್ಬಿಣ ವಸ್ತು ಆಗಿರಬಹುದು. ಈ ರೀತಿ ರೂಪುಗೊಂಡ ಶಿಲೆಗಳಿಗೆ ಭೌತಕಣಶಿಲೆಗಳು ಎಂದು ಹೆಸರು. ಇವುಗಳಲ್ಲಿ ಪದರುರಚನೆ, ಪ್ರವಾಹ ಪದರು ರಚನೆ, ಅಲೆಗಳ ಗುರುತುಗಳು, ಒಣಗು ಬಿರುಕುಗಳು, ಪ್ರಾಣಿಗಳ ಜಾಡುಗಳು–ಈ ಮುಂತಾದ ಲಕ್ಷಣಗಳನ್ನು ಗುರುತಿಸಲಾಗಿದೆ.

ಕಣಗಾತ್ರವನ್ನು ಆಧಾರವಾಗಿಟ್ಟುಕೊಂಡು ಭೌತಕಣಶಿಲೆಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು.

1. ರುಡೇಸಿಯಸ್ : ಗುಂಡುಗಳು, ನೊರಜು, ಉರುಟು ಮತ್ತು ಉಂಡೆ ಕಲ್ಲುಗಳು ಪ್ರಧಾನವಾಗಿರುವ ಶಿಲೆಗಳು. ಇವು ಸಿಲಿಕ, ಜೇಡು, ಸುಣ್ಣ ಅಥವಾ ಕಬ್ಬಿಣ ವಸ್ತುಗಳಿಂದ ಬಂಧಿತವಾಗಿ ಪೆಂಟೆಶಿಲೆಗಳು ಮತ್ತು ನೊರಜು ಶಿಲೆಗಳಾಗುತ್ತವೆ.

2. ಮರಳುಮಯ ಶಿಲೆ : ಮರಳು ಯಾವುದಾದರೊಂದು ವಸ್ತುವಿನಿಂದ ಬಂಧಿತವಾಗಿ ಆಗುವ ಶಿಲೆಗಳು, ಗ್ರೀಟ್, ಅರ್ಕೋಸ್ ಮತ್ತು ಗ್ರೆವೇಕ್‌ಗಳು ಈ ವರ್ಗದ ಶಿಲೆಗಳು. ಮರಳುಶಿಲೆಯ ಕಣಗಳು ದಪ್ಪವಿದ್ದು, ಚೂಪಾದ ಮೂಲೆಗಳಿದ್ದರೆ, ಆ ಶಿಲೆಗೆ ಗ್ರಿಟ್ ಎಂದು ಹೆಸರು. ಕಪ್ಪು ಮರಳುಶಿಲೆಗೆ ಗ್ರೆಮೆಕ್ ಎಂದು ಹೆಸರು.

3. ಮೆಕ್ಕಲು ಶಿಲೆಗಳು : ಗುಂಡು, ಮೆಕ್ಕಲು ಮುಂತಾದ ಶಿಲೆಗಳು ಈ ವರ್ಗಕ್ಕೆ ಸೇರಿದವು. ಇವು ಮರಳುಮಯ ಮತ್ತು ಮೃಣ್ಮಯಶಿಲಾ ವರ್ಗಗಳ ಮಧ್ಯಂತರ ಶಿಲೆಗಳು.

4. ಮೃಣ್ಮಯಶಿಲೆ ಅಥವಾ ಜೇಡುಶಿಲೆಗಳು : ಶಿಲಾಪುಡಿಯಿಂದ ಈ ಶಿಲೆಗಳಾಗುತ್ತವೆ. ಧೂಳು, ಮಣ್ಣು ಮತ್ತು ಜೇಡು–ಈ ವಸ್ತುಗಳು ಗಟ್ಟಿಯಾದಾಗ ಜೇಡು ಶಿಲೆಗಳಾಗುತ್ತವೆ.

**ವಿಧಗಳು:** ಉತ್ಪತ್ತಿಯ ಆಧಾರದ ಮೇಲೆ ಕಣಶಿಲೆಗಳನ್ನು ಮೂರು ಪ್ರಮುಖ ವಿಧಗಳಾಗಿ ವಿಂಗಡಿಸಬಹುದು. 1. ಭೌತಿಕ ಕ್ರಿಯೆಯಿಂದಾದ ಶಿಲೆಗಳು, 2. ರಾಸಾಯನಿಕ ಕ್ರಿಯೆಯಿಂದಾದ ಶಿಲೆಗಳು, 3. ಜೈವಿಕಾಂಶಗಳಿಂದಾದ ಶಿಲೆಗಳು.

1. ಭೌತಿಕ ಕ್ರಿಯೆಯಿಂದಾದ ಶಿಲೆಗಳು: ಇವು ಯಾಂತ್ರಿಕ ಕ್ರಿಯೆಗಳ ಪರಿಣಾಮದಿಂದ ಉತ್ಪತ್ತಿಯಾದವು. ಭೂಮೇಲ್ಮೈನ ಶಿಲೆಗಳು ನೈಸರ್ಗಿಕ ಕರ್ತೃಗಳ ಪ್ರಕ್ರಿಯೆಗಳಿಂದ ಶಿಥಿಲಗೊಂಡು ಉತ್ಪತ್ತಿಯಾದ ಶಿಲಾಕಣಗಳು ಸುಣ್ಣ, ಸಿಲಿಕ ಮತ್ತು ಖನಿಜಾಂಶಗಳಿಂದ ಬಂಧಿಸಲ್ಪಡುವುದರಿಂದಲೂ ಹಾಗೂ ಮೇಲ್‌ಸ್ತರದ ಭಾರದಿಂದ ಶಿಲೆಗಳಾಗಿ ಪರಿಣಮಿಸುವವು. ರಾಸಾಯನಿಕ ಕ್ರಿಯೆಗೊಳಪಡದೇ ಭೌತಿಕ ಕ್ರಿಯೆಗಳಿಂದ ಉತ್ಪತ್ತಿಯಾಗುವುದರಿಂದ ಇವುಗಳನ್ನು ಭೌತಿಕ ಕ್ರಿಯೆಯಿಂದಾದ ಶಿಲೆಗಳೆನ್ನುವರು. ಇವುಗಳಲ್ಲಿ ಮೂರು ವಿಧಗಳಿವೆ: (ಅ) ಮರಳುಮಯ ಶಿಲೆಗಳು(ಅರೆನಾಷಿಯಸ್ ರಾಕ್ಸ್), (ಆ) ಮೃಣ್ಮಯ ಶಿಲೆಗಳು (ಆರ್ಜಿಲ್ಲಾಷಿಯಸ್ ರಾಕ್ಸ್), (ಇ) ರೂಡೇಷಸ್.

(ಅ) ಮರಳುಮಯ ಶಿಲೆಗಳು: ಮರಳು ಕಣಗಳು ಸಿಲಿಕೇಟ್ ಮತ್ತು ಸುಣ್ಣದಂತಹ ವಸ್ತುಗಳಿಂದ ಪರಸ್ಪರ ಬಂಧಿಸಲ್ಪಟ್ಟು ಗಟ್ಟಿಯಾಗಿ ಉತ್ಪತ್ತಿಯಾಗುವ ಶಿಲೆಗಳಿಗೆ ಮರಳುಮಯ ಶಿಲೆಗಳೆನ್ನುವರು. ಉದಾ: ಮರಳು ಶಿಲೆ. ಇವು ಪ್ರವೇಶ್ಯಶಿಲೆಗಳಾಗಿವೆ. ಇಂತಹ ಶಿಲೆಗಳು ಭಾರತದ ವಿಂಧ್ಯ ಮತ್ತು ಅರಾವಳಿ ಶ್ರೇಣಿಗಳಲ್ಲಿ ಹಾಗೂ ಒರಿಸ್ಸಾ, ಬಿಹಾರ ಮತ್ತು ಆಂಧ್ರ ಪ್ರದೇಶಗಳಲ್ಲಿ ಕಂಡುಬರುವವು.

(ಆ) ಮೃಣ್ಮಯ ಶಿಲೆಗಳು: ಸೂಕ್ಷ್ಮ ಮಣ್ಣಿನ ಕಣಗಳು ಹಾಗೂ ಖನಿಜ ವಸ್ತುಗಳಿಂದ ಉತ್ಪತ್ತಿಯಾದ ಶಿಲೆಗಳಿಗೆ ಮೃಣ್ಮಯ ಶಿಲೆಗಳೆನ್ನುವರು. ಉದಾ: ಜೇಡುಶಿಲೆ, ರೇವೆಗಲ್ಲು. ಇವು ಒತ್ತೊತ್ತಾದ ಕಣಗಳ ರಚನೆಯಿಂದ ಕೂಡಿದ್ದು ಅಪ್ರವೇಶ್ಯ ಶಿಲೆಗಳಾಗಿವೆ. ಇಂತಹ ಶಿಲೆಗಳು ಭಾರತದ ಬಿಹಾರ, ಪಶ್ಚಿಮ ಬಂಗಾಳ, ಕೇರಳ, ಒರಿಸ್ಸಾ, ಗುಜರಾತ್ ಹಾಗೂ ಕರ್ನಾಟಕಗಳಲ್ಲಿ ಕಂಡುಬರುತ್ತವೆ.

(ಇ) ರೂಡೇಷಸ್ ಶಿಲೆಗಳು: ಕಲ್ಲುಗುಂಡುಗಳು ಮತ್ತು ಕಲ್ಲುಹರಳುಗಳು ಪರಸ್ಪರ ಬಂಧಿಸುವಿಕೆ ಹಾಗೂ ಕ್ರೋಢಿಕರಣದಿಂದ ಉತ್ಪತ್ತಿಯಾದ ಶಿಲೆಗಳು. ಉದಾ: ಕಂಗ್ಲಾಮರೇಟ್ ಮತ್ತು ಬ್ರೇಸಿಯಾ. ವೃತ್ತಾಕಾರವುಳ್ಳ, ಗಾತ್ರದಲ್ಲಿ ದೊಡ್ಡದಾದ ಶಿಲಾಗುಂಡುಗಳು ಗಟ್ಟಿಯಾಗಿ ಬಂಧಿಸಲ್ಪಡುವುದರಿಂದ ಉತ್ಪತ್ತಿಯಾದ ಶಿಲೆಗಳನ್ನು ಕಂಗ್ಲಾಮರೇಟ್ ಎನ್ನುವರು. ಒರಟಾದ ಏಣುಗಳುಳ್ಳ ಶಿಲಾಚೂರುಗಳು ಪರಸ್ಪರ ಬಂಧಿಸಲ್ಪಟ್ಟು ಉತ್ಪತ್ತಿಯಾದ ಶಿಲೆಗಳಿಗೆ ಬ್ರೇಸಿಯಾ ಎನ್ನುವರು. ಇವು ಪ್ರವೇಶ್ಯ ಶಿಲೆಗಳಾಗಿರುತ್ತವೆ.

2. ರಾಸಾಯನಿಕ ಕ್ರಿಯೆಯಿಂದಾದ ಶಿಲೆಗಳು: ಸರೋವರ, ಸಮುದ್ರ–ಸಾಗರಗಳ ನೀರಿನಲ್ಲಿ ಹಲವು ದ್ರವ್ಯಗಳು ಕರಗುವವು. ಜಲಾಶಯಗಳು ಬತ್ತಿಹೋದ ಮೇಲೆ ಕರಗಿದ ವಸ್ತುಗಳು ತಳದಲ್ಲಿ ಸಂಚಯವಾಗುವವು. ಅವು ಕ್ರಮೇಣ ಶೇಖರಗೊಂಡು ಮರಳು ಮತ್ತು ರೇವೆ ಮಣ್ಣಿನ ಕಣಗಳ ಮಿಶ್ರಣವಾಗುವುದರೊಂದಿಗೆ ಶಿಲೆಗಳು ಉತ್ಪತ್ತಿಯಾಗುವವು. ಖನಿಜಾಂಶ ಮತ್ತು ಲವಣಯುಕ್ತ ಅಂತರ್ಜಲವು ಚಿಲುಮೆಯ ರೂಪದಲ್ಲಿ ಹೊರಬಂದು ಆವಿಯಾಗುವದರಿಂದಲೂ ಇಂತಹ ಶಿಲೆಗಳು ರಚನೆಯಾಗುವವು. ಉದಾ: ಉಪ್ಪು, ಜಿಪ್ಸಂ, ಡಾಲೋಮೈಟ್.

3. ಜೀವ್ಯಶೇಷಗಳಿಂದಾದ ಶಿಲೆಗಳು: ಪ್ರಾಣಿಗಳು ಮತ್ತು ಸಸ್ಯಗಳ ಅವಶೇಷಗಳಿಂದ ಉತ್ಪತ್ತಿಯಾದ ಶಿಲೆಗಳೇ ಜೀವ್ಯಶೇಷಗಳಿಂದಾದ ಶಿಲೆಗಳು. ಜೀವಿಗಳು ಅಳಿದ ನಂತರ ಅವುಗಳ ಅವಶೇಷಗಳು ಸಂಚಯನಗೊಳ್ಳುವವು. ಅವು ಕ್ರಮೇಣ, ಕ್ಯಾಲ್ಸಿಯಂ, ಸಿಲಿಕ, ಜೇಡಿ, ಮರಳು ಇತ್ಯಾದಿಗಳಿಂದ ಬಂಧಿಸಲ್ಪಟ್ಟು ಗಟ್ಟಿಯಾಗಿ ಶಿಲೆಗಳಾಗಿ ಪರಿಣಮಿಸುವವು. ಉದಾ: ಚಿಪ್ಪು, ಸುಣ್ಣ ಶಿಲೆ. ಸಂಯೋಜನೆಯನ್ನಾಧರಿಸಿ ಇವುಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. (ಅ) ಚೂರ್ಣಾಧಿಕ್ಯ ಶಿಲೆಗಳು (ಆ) ಇಂಗಾಲಾಧಿಕ್ಯ ಶಿಲೆಗಳು.

(ಅ) ಚೂರ್ಣಾಧಿಕ್ಯ ಶಿಲೆಗಳು: ಪ್ರಾಣಿಗಳ ಅವಶೇಷ ಮತ್ತು ರಾಸಾಯನಿಕ ಕ್ರಿಯೆಗಳ ಸಂಯೋಜನೆಯಿಂದ ಉತ್ಪತ್ತಿಯಾದವುಗಳಿಗೆ ಚೂರ್ಣಾಧಿಕ್ಯ ಶಿಲೆಗಳೆನ್ನುವರು. ಸಮುದ್ರ–ಸಾಗರಗಳಲ್ಲಿ ಜೀವಿಸುವ ಅಸಂಖ್ಯಾತ ಜಲಚರಗಳು ಲವಣಗಳನ್ನು ಸೇವಿಸಿ ತಮ್ಮ ಅಸ್ಥಿ ಮತ್ತು ಚಿಪ್ಪುಗಳನ್ನು ಬೆಳೆಸಿಕೊಂಡಿರುತ್ತವೆ. ಅವು ಅಳಿದ ಮೇಲೆ ಅಸ್ಥಿ ಮತ್ತು ಚಿಪ್ಪುಗಳು ಸಂಚಯನವಾಗಿ ಕ್ರಮೇಣ ಅವು ಅಂಟಿಕೊಂಡು ಶಿಲೆಗಳಾಗುತ್ತವೆ. ಇವುಗಳಲ್ಲಿ ಸುಣ್ಣದ ಅಂಶವು ಹೆಚ್ಚಾಗಿರುವ ಪ್ರಯುಕ್ತ ಚೂರ್ಣಾಧಿಕ್ಯ ಶಿಲೆಗಳೆನ್ನುವರು. ಉದಾ: ಸುಣ್ಣದ ಕಲ್ಲು ಮತ್ತು ಸೀಮೆಸುಣ್ಣ. ಇವು ಪ್ರವೇಶ್ಯ ಹಾಗೂ ಕರಗಬಲ್ಲ ಶಿಲೆಗಳು.

(ಆ) ಇಂಗಾಲಾಧಿಕ್ಯ ಶಿಲೆಗಳು: ಸಹಸ್ರಾರು ವರ್ಷಗಳ ಹಿಂದೆ ಗಿಡ–ಮರಗಳು ಭೂಮಿಯೊಳಗೆ ಹೂತು ಹೋಗಿದ್ದು, ಆಂತರಿಕ ಶಾಖ, ಒತ್ತಡ ಮತ್ತು ರಾಸಾಯನಿಕ ಕ್ರಿಯೆಗಳಿಂದ ಪರಿವರ್ತನೆಗೊಂಡು ಶಿಲೆಗಳಾಗಿ ಪರಿಣಮಿಸುವವು. ಅವುಗಳಲ್ಲಿ ಇಂಗಾಲಾಮ್ಲ ಹೆಚ್ಚಾಗಿರುತ್ತದೆ. ಆದ್ದರಿಂದ ಅವುಗಳನ್ನು ಇಂಗಾಲಾಧಿಕ್ಯ ಶಿಲೆ (ಕಾರ್ಬನೇಷಿಯಸ್ ರಾಕ್ಸ್) ಗಳೆಂದು ಕರೆಯುವರು. ಉದಾ: ಕಲ್ಲಿದ್ದಲು. ಭಾರತದ ದಾಮೋದರ, ಮಹಾನದಿ ಮತ್ತು ಗೋದಾವರಿ ನದಿ ಕಣಿವೆಗಳಲ್ಲಿ ಹಂಚಿಕೆಯಾಗಿವೆ. ಈ ಶಿಲೆಗಳು ಆರ್ಥಿಕವಾಗಿ ಬೆಲೆಯುಳ್ಳವು.

**ಗುಣ ಲಕ್ಷಣಗಳು:** ಈ ಶಿಲೆಗಳು ಭೂ ಮೇಲ್ಮೈಯಲ್ಲಿ ವ್ಯಾಪಕವಾಗಿ ಹರಡಿವೆ. ಸ್ಪಷ್ಟ ಪದರು ರಚನೆಯಿಂದ ಕೂಡಿದ್ದು, ಪಳೆಯುಳಿಕೆಗಳನ್ನು ಹೊಂದಿದೆ. ಇವು ಮೃದು ಮತ್ತು ಪ್ರವೇಶ್ಯ ಶಿಲೆಗಳಾಗಿವೆ. ಸುಲಭವಾಗಿ ಶಿಥಿಲೀಕರಣ ಹಾಗೂ ಸವೆತಕ್ಕೊಳಗಾಗುವವು.

ವಿವಿಧ ಖನಿಜ ನಿಕ್ಷೇಪಗಳನ್ನೊಳಗೊಂಡಿವೆ. ಉದಾ: ಕಲ್ಲಿದ್ದಲು, ಪೆಟ್ರೋಲಿಯಂ, ಡಾಲೋಮೈಟ್ ಇತ್ಯಾದಿ. ಕಣ ಶಿಲೆಗಳು ಭೂಮೇಲ್ಭಾಗದಲ್ಲಿ ವ್ಯಾಪಕವಾಗಿ (ಶೇ. 75) ಹಂಚಿಕೆಯಾಗಿವೆ.

**ಕರ್ನಾಟಕದಲ್ಲಿ ಕಣಶಿಲಾ ಹಂಚಿಕೆ :** ಧಾರವಾಡ ಪದರ ಶಿಲೆಗಳು ಕರ್ನಾಟಕದಲ್ಲಿ ಅತ್ಯಂತ ಹಿಂದಿನ ಅಂದರೆ ಆರ್ಷೇಯ ಕಲ್ಪದ ಕಣಶಿಲೆಗಳು. ಇವು ಹನ್ನೊಂದು ವಲಯಗಳಲ್ಲಿ ರೂಪುಗೊಂಡಿವೆ: 1. ಕ್ಯಾಸಲ್ ರಾಕ್; 2. ಧಾರವಾಡ–ಶಿವಮೊಗ್ಗ; 3. ಗದಗ–ಡಂಬಾಲ್ ಅಥವಾ ಚಿತ್ರದುರ್ಗ– ಚಿಕ್ಕನಾಯಕನಹಳ್ಳಿ ನಾಗಮಂಗಲ; 4. ಸಂಡೂರು; 5. ಬಳ್ಳಾರಿ ಕುಷ್ಟಗಿ; 6. ಪೆನ್ನೇರ್–ಹಗ್ಗರಿ; 7. ಮಸ್ಕಿ–ಹಟ್ಟಿ; 8. ಬೊಮ್ಮನಾಳ್; 9. ಕೋಲಾರ; 10. ರಾಯಚೂರು ಮತ್ತು 11. ಗದ್ವಾಲ್. ಆದಿಜೀವಕಲ್ಪದ ಶಿಲೆಗಳು ಬೆಳಗಾಂವಿ ಜಿಲ್ಲೆಯಲ್ಲಿ ಬೆಳಗಾಂವಿ ನಗರಕ್ಕೂ ಕಾಲಡ್ಗಿಗೂ ಮಧ್ಯೆ ಹೊರಕಂಡಿವೆ. ಇವಕ್ಕೆ ಕಾಲಡ್ಗಿ ಶಿಲಾಶ್ರೇಣಿ ಎಂದು ಹೆಸರು. ಈ ಕಲ್ಪದ ಉತ್ತರಾರ್ಧಕಾಲದ ಶಿಲೆಗಳು ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಭೀಮಾನದಿಯ ಪಾತ್ರದಲ್ಲಿ ಸು. 7770 ಚ.ಕಿಮೀ. ಪ್ರದೇಶದಲ್ಲಿ ಹೊರಕಂಡಿವೆ. ಇವಕ್ಕೆ ಭೀಮಾ ಶಿಲಾಶ್ರೇಣಿ ಎಂದು ಹೆಸರು. ಇದರಲ್ಲಿರುವ ಸುಣ್ಣಶಿಲೆಗಳನ್ನು ಷಾಹಬಾದ್ ಸಿಮೆಂಟ್ ಕಾರ್ಖಾನೆಯಲ್ಲಿ ಉಪಯೋಗಿಸಲಾಗುತ್ತಿದೆ.

**ಭಾರತ ಪರ್ಯಾಯ ದ್ವೀಪದ ಕಣಶಿಲೆಗಳ ಹಂಚಿಕೆ :** ಈ ಪರ್ಯಾಯ ದ್ವೀಪ ಆರ್ಷೇಯ ಕಲ್ಪದ ಅನಂತರ ಸ್ಥಿರಭೂಭಾಗವಾಯಿತು. ಆದಿಜೀವಕಲ್ಪದ ಪೂರ್ವಾರ್ಧದಲ್ಲಿ ಆಂಧ್ರಪ್ರದೇಶದ ಕಡಪ ಮತ್ತು ಕರ್ನೂಲ್ ಜಿಲ್ಲೆಗಳ ಪ್ರದೇಶ, ಒರಿಸ್ಸದ ಛತ್ತೀಸಗಢ ಪ್ರದೇಶ. ಕರ್ನಾಟಕದ ಬೆಳಗಾಂವಿ ಜಿಲ್ಲೆಯ ಕಾಲಡ್ಗಿ ಪ್ರದೇಶ ಮತ್ತು ದೆಹಲಿ ಪ್ರದೇಶಗಳನ್ನು ಸಮುದ್ರಗಳು ಆಕ್ರಮಿಸಿದ್ದುವು. ಈ ಪ್ರದೇಶಗಳಿಂದ ಸಮುದ್ರಗಳು ಹಿಂಜರಿದು ಉತ್ತರಾರ್ಧದಲ್ಲಿ ವಿಂಧ್ಯಪರ್ವತ ಪ್ರದೇಶ, ಕರ್ನೂಲ್ ಜಿಲ್ಲೆ ಮತ್ತು ಭೀಮಾ ನದಿಯ ಕಣಿವೆ ಪ್ರದೇಶಗಳನ್ನು ಪುನಃ ಆಕ್ರಮಿಸಿದುವು. ಈ ಪ್ರದೇಶಗಳಲ್ಲೆಲ್ಲ ಪಳೆಯುಳಿಕೆರಹಿತ ಕಣಶಿಲೆಗಳಿವೆ. ಪ್ರಾಚೀನ ಜೀವಕಲ್ಪವನ್ನು ಪ್ರತಿನಿಧಿಸುವ ಕಣಶಿಲೆಗಳು ಎಲ್ಲೂ ಸಂಚಯಿಸಿಲ್ಲ. ಮಧ್ಯ ಜೀವಕಲ್ಪದ ಜುರಾಸಿಕ್ ಯುಗದಲ್ಲಿ ಕಚ್ ಮುಂತಾದ ಪ್ರದೇಶಗಳು ಸಮುದ್ರಾಕ್ರಮಣಕ್ಕೊಳಗಾಗಿ ಅಲ್ಲಿ ಪಳೆಯುಳಿಕೆಗಳುಳ್ಳ ಕಣಶಿಲೆಗಳು ರೂಪುಗೊಂಡಿವೆ. ಕ್ರಿಟೇಷಸ್ ಯುಗದ ಮಧ್ಯಭಾಗದಲ್ಲಿ ಟೆತಿಸ್ ಸಾಗರ ನರ್ಮದಾ ಕಣಿವೆ ಪ್ರದೇಶದಲ್ಲೂ ದಕ್ಷಿಣ ಸಮುದ್ರ ತಿರುಚಿನಾಪಲ್ಲಿ, ವೃದ್ಧಾಚಲಮ್, ಪಾಂಡಿಚೇರಿ, ರಾಜ ಮಹೇಂದ್ರಿ ಮತ್ತು ಅಸ್ಸಾಮ್ ಪ್ರದೇಶಗಳಲ್ಲಿ ಆಕ್ರಮಣ ನಡೆಸಿದುವು. ಆಗ ಸಂಚಯಿಸಿದ ಶಿಲೆಗಳು ಆ ಪ್ರದೇಶಗಳಲ್ಲಿ ಕಂಡುಬರುತ್ತವೆ. ನವಜೀವಕಲ್ಪದ ಮಯೋಸೀನ್ ಯುಗದಲ್ಲಿ ಭಾರತ ಪರ್ಯಾಯದ್ವೀಪದ ಪೂರ್ವ ಮತ್ತು ಪಶ್ಚಿಮತೀರಗಳಲ್ಲಿ ಸಮುದ್ರಾಕ್ರಮಣವಾಗಿ ಮರಳುಶಿಲೆಗಳು ನಿಕ್ಷೇಪವಾಗಿವೆ. ಇವುಗಳಲ್ಲಿ ಕಡಲೂರು ಮರಳುಶಿಲೆಗಳು ಗಮನಾರ್ಹ, ಕಾರ್ಬಾನಿಫೆರಸ್ ಯುಗದ ಅಂತ್ಯದಿಂದ ಜುರಾಸಿಕ್ ಯುಗದ ಅಂತ್ಯದವರೆಗೆ ಸೋನ್‌ದಾಮೋದರ್ ಮಹಾನದಿ ಮತ್ತು ಗೋದಾವರಿ ನದಿ ಕಣಿವೆಗಳಲ್ಲೂ ಪೂರ್ವ ಮತ್ತು ಪಶ್ಚಿಮ ತೀರದ ಕೆಲವು ಸ್ಥಳಗಳಲ್ಲೂ ಸಿಹಿನೀರು ನಿಕ್ಷೇಪಗಳು ಸಂಚಯಿಸಿವೆ. ಇವಕ್ಕೆ ಗೊಂಡ್ವಾನ ಶಿಲಾಸಮುದಾಯ ಎಂದು ಹೆಸರು.

**ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಕಣಶಿಲೆಗಳ ಹಂಚಿಕೆ:** ಈ ಪ್ರದೇಶ ಇಯೊಸೀನ್ ಯುಗದ ಅಂತ್ಯದವರೆಗೆ ಟೆತಿಸ್ ಸಾಗರದ ಆಕ್ರಮಣಕ್ಕೊಳಗಾಗಿತ್ತು. ಆದ್ದರಿಂದ ಇಲ್ಲಿ ಶಿಲಾಪರಂಪರೆ ಸರಿಸುಮಾರು ಅಖಂಡವಾಗಿದೆ. ಸಿಂದ್–ಬಲೂಚಿಸ್ತಾನ್ ಪ್ರದೇಶ ಮತ್ತು ಅಸ್ಸಾಮ್ ಪ್ರದೇಶಗಳಲ್ಲಿ ಟೆತಿಸ್ ಸಾಗರ ಆಲಿಗೋಸೀನ್ ಯುಗದ ಅಂತ್ಯದವರೆಗೂ ಇದ್ದ ಕಾರಣ ಅಲ್ಲಿನ ಶಿಲಾಪರಂಪರೆ ಆಲಿಗೋಸೀನ್ ಯುಗವನ್ನೂ ಪ್ರತಿನಿಧಿಸುತ್ತದೆ. ಮಯೋಸೀನ್ ಯುಗದಿಂದ ವರ್ತಮಾನ ಕಾಲದವರೆಗೆ ಇಲ್ಲಿ ಸಿಹಿನೀರು ನಿಕ್ಷೇಪಗಳು ಸಂಚಯಿಸಿವೆ. ಶಿವಾಲಿಕ್ ಶಿಲಾಸಮುದಾಯ ಮತ್ತು ಸಿಂಧು–ಗಂಗ ಮೆಕ್ಕಲು–ಇವೇ ಈ ನಿಕ್ಷೇಪಗಳು. (ಕೆ.ಎನ್.ಯು.)

**ಕಣಶ್ಯ ಕವಿಗಳು :** ಕಣಶ್ಯನ್ ಎಂಬ ಕುಟುಂಬ ಸಂಜ್ಞೆಯನ್ನುಳ್ಳ ಮೂವರು ಕವಿಗಳನ್ನು ಈ ಹೆಸರಿನಿಂದ ಕರೆಯುತ್ತಾರೆ. ಇವರ ಕೃತಿಗಳನ್ನು ಕಣಶ್ಯ ಕೃತಿಗಳೆನ್ನುತ್ತಾರೆ. ದ್ರಾವಿಡ ಸಂಘಾತಾಕ್ಷರ ನಿಬದ್ಧವಾಗಿರತಕ್ಕುದೆಂದು ನಿರ್ದೇಶಿತವಾದ ಜಾನಪದ ಗೀತೆಗಳು ಮಣಿಪ್ರವಾಳದ ಬೆಳವಣಿಗೆಯ ಪರಿಣಾಮವಾಗಿ ಆ ನಿಯಮವನ್ನು ಸಂಪೂರ್ಣವಾಗಿ ಉಲ್ಲಂಘಿಸಿದುದಕ್ಕೆ ಈ ಕೃತಿಗಳು ಪ್ರತ್ಯಕ್ಷ ದೃಷ್ಟಾಂತಗಳಾಗಿವೆ. ಕಣಶ್ಯ ಕವಿಗಳು ಪಾಡ್ದನಗಳಿಗೆ ಮಣಿಪ್ರವಾಳದ ಸೊಬಗನ್ನು ಕೊಟ್ಟರು. ಅಲ್ಲದೆ ತಮ್ಮ ಕೃತಿಗಳಿಗೆ ವಸ್ತುವನ್ನು ತರಲು ಪುರಾಣಗಳ ಮೊರೆಹೊಕ್ಕರು. ಹಿಂದಿನ ಕಾಲದ ಮಣಿಪ್ರವಾಳ ಕವಿಗಳಿಗಿಂತಲೂ ಇವರು ಪ್ರೌಢಚಿತ್ತರೂ ತತ್ತ್ವಚಿಂತಕರೂ ಆಗಿದ್ದು ಮಹಾಭಾರತ, ಭಾಗವತ, ವಾಲ್ಮೀಕಿ ರಾಮಾಯಣ ಮೊದಲಾದ ಮಹತ್ತಾದ ಪುರಾಣಗ್ರಂಥಗಳನ್ನು ಉಪಜೀವಿಸಿ ಹಲವಾರು ಪ್ರೌಢ ಕೃತಿಗಳನ್ನು ರಚಿಸಿದ್ದಾರೆ.

ಇದುವರೆಗೆ ಸಿಕ್ಕಿರುವ ಕಣಶ್ಯ ಕೃತಿಗಳು ಮೂವರು ಕವಿಗಳಿಗೆ ಸೇರಿದವಾಗಿವೆ. ಅವರು ಮೂವರೂ ಒಂದೇ ಕುಟುಂಬದ ಸದಸ್ಯರೂ ಒಬ್ಬನೇ ತಂದೆಯ ಸಂತಾನ ಪರಂಪರೆಗೆ ಸೇರಿದವರೂ ಆಗಿದ್ದಾರೆ. ಇವರು ಜೀವಿಸಿದ್ದ ಕಾಲ ಹದಿನಾಲ್ಕನೆಯ ಶತಮಾನದ ಕೊನೆ ಹಾಗೂ ಹದಿನೈದನೆಯ ಶತಮಾನದ ಆದಿ ಎನ್ನಲಾಗಿದೆ. ಇವರಲ್ಲಿ ಮಾಧವ ಪಣಿಕ್ಕರ್ ಮತ್ತು ಶಂಕರ ಪಣಿಕ್ಕರ್ ಎಂಬುವರು ಮೂರನೆಯವನಾದ ರಾಮ ಪಣಿಕ್ಕರ್‌ನ ಸೋದರ ಮಾವಂದಿರೆಂದು, ರಾಮ ಪಣಿಕ್ಕರನ ಕೃತಿಗಳಲ್ಲಿ ಬರುವ ಕೆಲವು ಸೂಚನೆಗಳಿಂದ ಗೊತ್ತಾಗುತ್ತದೆ. ರಾಮ ಪಣಿಕ್ಕರನ ಮಾತಾಮಹನಾಗಿದ್ದು ಮಹಾಗುರುವರನಾಗಿ ಉಭಯಕವೀಶ್ವರನಾದ ಮಹಾತ್ಮನೆಂದು ಅವನಿಂದ ಪ್ರಕೀರ್ತಿತನಾದ ಕರುಣೇಶನ್ ಎಂಬ ಹಿರಿಯವನಿಂದಲೇ ಕಣಶ್ಯನ್ ಎಂಬ ಕುಟುಂಬ ಸಂಜ್ಞೆ ಬಂತೆಂದು ತಿಳಿಯಬಹುದು.

ಮಾಧವ ಪಣಿಕ್ಕರನ ಭಗವದ್ಗೀತೆ, ಶಂಕರ ಪಣಿಕ್ಕರನ ಭಾರತಮಾಲ, ರಾಮಪಣಿಕ್ಕರನ ರಾಮಾಯಣ, ಭಾರತ, ಭಾಗವತ, ಶಿವರಾತ್ರಿ ಮಹಾತ್ಮ್ಯಂ–ಎಂಬಿವೇ ಕಣಶ್ಯ ಕೃತಿಗಳಲ್ಲಿ ಪ್ರಮುಖವಾದುವು. ಭಾರತೀಯ ಭಾಷೆಗಳಲ್ಲಿ ಬಂದ ಭಗವದ್ಗೀತೆಯ ಮೊತ್ತ ಮೊದಲ ತರ್ಜುಮೆಗಳಲ್ಲಿ ಮಾಧವ ಪಣಿಕ್ಕರನದೂ ಒಂದೆಂಬುದನ್ನು ಗಮನಿಸಬೇಕು. ಈ ಕವಿತ್ರಯರಲ್ಲಿ ರಾಮ ಪಣಿಕ್ಕರ್ ಅತ್ಯಂತ ಶ್ರೇಷ್ಠ. ಆತ ರಚಿಸಿದ ರಾಮಾಯಣ ಮಲೆಯಾಳದ ಅತ್ಯುತ್ತಮ ಕೃತಿಗಳಲ್ಲಿ ಒಂದೆಂದು ಪರಿಗಣಿತವಾಗಿದೆ.

ಮಲೆಯಾಳದ ಆತ್ಮವನ್ನು ಚೆಂದಮಿಳ್ ಮತ್ತು ಸಂಸ್ಕೃತಗಳ ವಿಪರೀತ ಪರಿಣಾಮದಿಂದ ಬಿಡುಗಡೆಗೊಳಿಸಲು ಪ್ರಥಮ ದರ್ಜೆಯ ಪಂಡಿತ ಕವಿಗಳು ನಡೆಸಿದ ಬೋಧಪೂರ್ವಕ ಪ್ರಯತ್ನದ ಮತ್ತೊಂದು ನಿರ್ಣಾಯಕ ಸಾಧನೆಯೇ ಈ ಕಣಶ್ಯ ಕೃತಿಗಳಾದುದರಿಂದ ಇವುಗಳ ಪ್ರಾಮುಖ್ಯ ಸ್ವಯಂವೇದ್ಯವಾಗಿದೆ. (ಕೆ.ಕೆ.ಎಸ್.)

**ಕಣಸಂಸೂಚಕ :** ಉಚ್ಚವೇಗದಿಂದ ಚಲಿಸುವ ವಿದ್ಯುದಾವಿಷ್ಟ ಪರಮಾಣ್ವಿಕ ಅಥವಾ ನ್ಯೂಕ್ಲಿಯರ್ ಕಣಗಳ ಇರವನ್ನು ಗುರುತಿಸುವ ಉಪಕರಣ (ಪಾರ್ಟಿಕಲ್ ಡಿಟೆಕ್ಟರ್). ಪರಮಾಣು ಮತ್ತು ನ್ಯೂಕ್ಲಿಯಸ್ಸುಗಳಲ್ಲಿರುವ ಮೂಲಕಣಗಳನ್ನೂ ರೇಡಿಯೋ ವಿಕಿರಣ ಮತ್ತು ಕಾಸ್ಮಿಕ್ ಕಿರಣಗಳಲ್ಲಿ ಇರುವ ಮೂಲಕಣಗಳನ್ನೂ ಪತ್ತೆಹಚ್ಚಿ ಅವು ಎಂಥ ಕ್ರಿಯೆಗಳಲ್ಲಿ ಭಾಗವಹಿಸುತ್ತವೆಂದು ಸಂಶೋಧಿಸುವುದು ಆಧುನಿಕ ಭೌತವಿಜ್ಞಾನದಲ್ಲಿ ಮಹತ್ತ್ವದ ಕೆಲಸ. ಈ ಮೂಲಕಣಗಳು ವಿದ್ಯುದಾವಿಷ್ಟವಾಗಿರುವುದು ಅಥವಾ ವಿದ್ಯುದಾವಿಷ್ಟ ಕಣಗಳನ್ನು ತಮ್ಮ ಪಥದಲ್ಲಿ ನಿರ್ಮಿಸುತ್ತ ಹೋಗುವುದು ಅವುಗಳ ಶೋಧಕ್ಕೆ ಅನಿವಾರ್ಯ. ಶೋಧನೆಗೆ ಬಳಸಿದ ಉಪಕರಣಗಳನ್ನು ದಾಟಿಕೊಂಡು ಹೋಗುವಷ್ಟಾದರೂ ಶಕ್ತಿ ಅವುಗಳಿಗಿರಬೇಕು. ಆದ್ದರಿಂದ ಅವುಗಳ ವೇಗ ಅಧಿಕ. ಇಂಥ ಮೂಲಕಣಗಳ ಪಥಗಳನ್ನು ಗುರುತಿಸುವುದು, ಪ್ರತಿ ಸೆಕೆಂಡಿಗೆ ಅವು ಬರುತ್ತಿರುವ ಸಂಖ್ಯೆ ಎಣಿಸುವುದು, ಆ ಕಾಲಗಳನ್ನು ಗುರುತಿಸುವುದು, ಸಂವೇಗ (ಮೊಮೆಂಟಂ) ಮತ್ತು ಕಳೆದುಕೊಂಡ ಶಕ್ತಿ ಇತ್ಯಾದಿಗಳನ್ನು ನಿಖರವಾಗಿ ಅಳೆಯುವುದು ಸಾಧ್ಯವಿದೆ. ಕಣಸಂಸೂಚಕವು ಮೂಲಕಣಗಳ ಪತ್ತೆ ಹಚ್ಚಿ ಮೇಲಿನ ಒಂದು ಅಥವಾ ಹೆಚ್ಚು ಕಾರ್ಯ ಮಾಡಬಲ್ಲುದು.

ಒಂದು ವಿದ್ಯುದಾವಿಷ್ಟ ಕಣ ಅಧಿಕ ವೇಗದಿಂದ ಯಾವುದೇ ವಸ್ತುವಿನಲ್ಲಿ ಹಾಯುವಾಗ ಅದು ಧನ ಮತ್ತು ಋಣ ಅಯಾನುಗಳನ್ನು ನಿರ್ಮಿಸುತ್ತ ಹೋಗುತ್ತದೆ. ಇವು ಪರಸ್ಪರ ವಿದ್ಯುದಾಕರ್ಷಣೆಗೊಳಪಟ್ಟು ಮೊದಲಿನಂತೆ ವಿದ್ಯುತ್ ತಟಸ್ಥ ಕಣಗಳಾಗುತ್ತವೆ. ಕೆಲವನ್ನು ಬಿಟ್ಟರೆ ಎಲ್ಲ ಸಂಸೂಚಕಗಳೂ ಅಯಾನುಗಳನ್ನು ಬೇರ್ಪಡಿಸಲು ವಿದ್ಯುತ್‌ಕ್ಷೇತ್ರವನ್ನು ಉಪಯೋಗಿಸುತ್ತವೆ. ಹೀಗೆ ಅಯಾನುಗಳು ಬೇರ್ಪಟ್ಟಾಗ ಬಾಹ್ಯ ವಿದ್ಯುನ್ಮಂಡಲದಲ್ಲಿ ಒಂದು ವಿದ್ಯುತ್‌ಸಂಜ್ಞೆ ಕೊಡುವಂತೆ ಯೋಜಿಸಿರುತ್ತಾರೆ. ಅಯಾನುಗಳು ಹರಡಿದ ಪಥವೇ ಮೂಲಕಣ ಚಲಿಸಿಹೋದ ಪಥವೆಂದು ತಿಳಿಯಬಹುದು. ಇದನ್ನು ಬರಿಗಣ್ಣಿನಿಂದ ನೋಡಬಹುದು ಅಥವಾ ಇದರ ಫೋಟೋ ತೆಗೆಯಬಹುದು. ಬೇರೆ ಬೇರೆ ಮಾಹಿತಿ ಪಡೆಯಲು ವಿವಿಧ ಮಾದರಿಯ ಸಂಸೂಚಕಗಳೂ ಅವುಗಳಿಗೆ ಸಂಬಂಧಪಟ್ಟ ಸೂಕ್ತ ಎಲೆಕ್ಟ್ರಾನಿಕ್ ವಿದ್ಯುನ್ಮಂಡಲಗಳೂ ಇವೆ. ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಬೇರೆ ಬೇರೆ ಕಣಸಂಸೂಚಕಗಳನ್ನು ಉಪಯೋಗಿಸಬೇಕಾಗುತ್ತದೆ **(ನೋಡಿ– ಕಿಡಿಕೋಷ್ಠ)**.

**ಪ್ರಮುಖ ಕಣಸಂಸೂಚಕಗಳು:** ಮೇಘಮಂದಿರ, ಅಂತರ್ದಹನ ಮೇಘಮಂದಿರ, ಗುಳ್ಳೆಮಂದಿರ, ಗೀಗರ್‌ಮುಲ್ಲರ್ ಗುಣಕ, ಸಿಂಟಿಲೇಷನ್ ಅಥವಾ ಮಿಣುಕು ಗುಣಕ, ಕಿಡಿಕೋಷ್ಠ, ಅನುಪಾತೀಯ ಗುಣಕ, ಸೆರೆಂಕಾಫ್ ಕಣಸಂಸೂಚಕ, ಫೋಟೊಗ್ರಾಫಿಕ್ ಎಮಲ್ಷನ್ ತಂತ್ರದ ಕಣಸಂಸೂಚಕ, ಘನಸ್ಥಿತಿ ಸಂಸೂಚಕಗಳು ಇತ್ಯಾದಿ. ಸಿ.ಟಿ.ಆರ್. ವಿಲ್ಸನ್ 1912ರಲ್ಲಿ ಸಂಶೋಧಿಸಿ ಉಪಯೋಗಿಸಿದ ಮೇಘಮಂದಿರ ಇತಿಹಾಸಪ್ರಸಿದ್ಧವಾಗಿದೆ. ಸಂತೃಪ್ತ ಜಲಬಾಷ್ಪವನ್ನು ಕ್ಷಿಪ್ರವ್ಯಾಕೋಚನದಿಂದ ಶೀತಲಿಸಿ ಅಯಾನುಗಳ ಮೇಲೆ ನೀರಿನ ಹನಿಗಳಾಗಿ ದ್ರವೀಕರಿಸುವುದೇ ಇದರ ತತ್ತ್ವ. ಗೀಗರ್‌ಮುಲರ್, ಗೀಗರ್ ಅನುಪಾತೀಯ ಸಂಸೂಚಕಗಳಲ್ಲೆಲ್ಲ ಜಡಾನಿಲ ಮಿಶ್ರಣವೊಂದಿದ್ದು ಅಯಾನುಗಳನ್ನು ಬೇರ್ಪಡಿಸಲು ಸೂಕ್ತ ವೋಲ್ಟೇಜುಗಳಲ್ಲಿರುವ ಎಲೆಕ್ಟ್ರೋಡ್‌ಗಳಿವೆ.

ಆಲ್ಫ ಕಣಗಳಂಥ ವಿದ್ಯುತ್‌ಕಣಗಳು ಫಾಸ್ಫರ್ ಎಂಬ ವಿಶಿಷ್ಟ ಪದಾರ್ಥಗಳಲ್ಲಿ ಮಿಣುಕನ್ನು (ಸಿಂಟಿಲೇಷನ್) ಕೊಡುತ್ತವೆ. ಫೋಟೋ ಮಲ್ಟಿಪ್ಲಯರ್ ಟ್ಯೂಬ್ ಎಂಬ ಸಾಧನದಿಂದ ಈ ಮಿಣುಕುಗಳ ಸಂಜ್ಞೆಯನ್ನೇ ವರ್ಧಿಸಿ ಕಣಸಂಸೂಚನೆಗೆ ಉಪಯೋಗಿಸ ಬಹುದು. ಇಂಥ ಉಪಕರಣಕ್ಕೆ ಮಿಣುಕು ಗುಣಕ (ಸಿಂಟಿಲೇಷನ್ ಕೌಂಟರ್) ಎಂದು ಹೆಸರು. ಫೋಟೋಗ್ರಾಫಿಕ್ ಪ್ಲೇಟುಗಳ ವಿಶಿಷ್ಟ ರಾಸಾಯನಿಕಗಳ ಮೇಲೆ ಬೆಳಕು ಬಿದ್ದಾಗ ಅಲ್ಲಿ ರಾಸಾಯನಿಕ ಕ್ರಿಯೆಗಳಾಗಿ ಚಿತ್ರ ಮೂಡುತ್ತದೆ. ಕೆಲವು ವಿಶಿಷ್ಟ ರಸಾಯನಗಳನ್ನು ಲೇಪಿಸಿದ ಫಲಕಗಳು ಅತ್ಯಧಿಕ ವೇಗದ ವಿದ್ಯುತ್ ಕಣಗಳ ಪಥಗಳ ಚಿತ್ರಗಳನ್ನು ಮೂಡಿಸುತ್ತವೆ. ಈ ತಂತ್ರದಿಂದ ಕಣಗಳ ಪಥಗಳ ಫೋಟೋಗಳನ್ನು ಪಡೆಯಬಹುದು. ರಷ್ಯದ ಸೆರೆಂಕಾಫ್ ಎಂಬಾತ 1934ರಲ್ಲಿ ಶೋಧಿಸಿದ ತತ್ತ್ವದ ಮೇಲೆ ಸೆರೆಂಕಾಫ್ ಸಂಸೂಚಕ ಕೆಲಸ ಮಾಡುತ್ತದೆ. ಯಾವುದೇ ಕಣ ಒಂದು ಪಾರದರ್ಶಕ ಮಾಧ್ಯಮದಲ್ಲಿ ಬೆಳಕಿನ ವೇಗಕ್ಕಿಂತ ಹೆಚ್ಚಿನ ವೇಗದಿಂದ ಚಲಿಸಿದರೆ ಅದು ಸೆರೆಂಕಾಫ್ ವಿಕಿರಣವನ್ನು ಸೂಸುವುದು. ಈ ವಿಕಿರಣವನ್ನೇ ಮಿಣುಕು ಗುಣಕದಲ್ಲಿಯಂತೆ ವರ್ಧಿಸಬಹುದು.

ಕಣಸಂಸೂಚಕಗಳು ಎಲೆಕ್ಟ್ರಾನ್, ಪ್ರೋಟಾನ್, ಆಲ್ಫ ಕಣಗಳು, ಮೆಸಾನುಗಳು ಇತ್ಯಾದಿ ವಿದ್ಯುತ್ ಕಣಗಳನ್ನಲ್ಲದೆ ನ್ಯೂಟ್ರಾನ್, ಫೋಟಾನ್ ಇತ್ಯಾದಿ ವಿದ್ಯುದ್ರಹಿತ ಕಣಗಳನ್ನು ಶೋಧಿಸಬಲ್ಲವು. ಕಣಸಂಸೂಚಕಗಳನ್ನು ಆರಿಸುವಾಗ ನಮಗೆ ಕಣಗಳ ಬಗೆಗೆ ಬೇಕಾದ ಮಾಹಿತಿ ಗಮನಿಸಬೇಕು. ಇದನ್ನು ಅವಲಂಬಿಸಿ ಕಣಸಂಸೂಚಕಗಳಲ್ಲಿ ಮೂರು ಮುಖ್ಯ ವೈಶಿಷ್ಟ್ಯಗಳನ್ನು ಗುರುತಿಸುತ್ತಾರೆ.

1 **ವೇಗ:** ಪ್ರತಿ ಸೆಕೆಂಡಿಗೆ ಸಂಸೂಚಕವನ್ನು ಪ್ರವೇಶಿಸುವ ಕಣಗಳ ಸಂಖ್ಯೆಯ ಎಣಿಕೆ ಗರಿಷ್ಠವಾಗಿರಬೇಕಿದ್ದರೆ ಸಂಸೂಚಕ ತೋರಿಸುವ ವಿದ್ಯುತ್ ಅಲ್ಪತಮ ಕಾಲಾವಧಿಯದಾಗಿರಬೇಕಲ್ಲದೆ ಒಂದು ವಿದ್ಯುತ್ ಸಂಜ್ಞೆಯ ಪರಿಣಾಮವನ್ನು ನಿವಾರಿಸಿ ಮುಂದಿನ ಸಂಜ್ಞೆಯನ್ನು ಕೊಡಲು ಅದು ಅಣಿಯಾಗಿರಬೇಕು. ಉದಾಹರಣೆಗೆ ಮಿಣುಕು ಗುಣಕಗಳ ವೇಗ ಗರಿಷ್ಠವಾಗಿದೆ. ವಿದ್ಯುತ್ ಸಂಜ್ಞೆಯ $10^{-9}$ ಸೆಕೆಂಡಿನಷ್ಟು ಅಲ್ಪಕಾಲದ್ದಿರುವುದಲ್ಲದೆ, ಹೊಸ ಸಂಜ್ಞೆಗೆ ಅಣಿಯಾಗಲು ಮಧ್ಯೆ ಕಾಲವೇ ಬೇಕಾಗಿಲ್ಲ. ಮೇಘಮಂದಿರಗಳ ವೇಗ ತೀರ ಮಂದ. ಎರಡು ಸಂಕೇತಗಳ ನಡುವೆ ಚೇತರಿಸುವ ಕಾಲ (ಡೆಡ್ ಟೈಂ) ಒಂದು ಮಿನಿಟಿನಷ್ಟು ದೀರ್ಘ. ಉಳಿದ ಸಂಸೂಚಕಗಳ ವೇಗ ಇವೆರಡು ಮಿತಿಗಳ ನಡುವೆಯೇ ಇದೆ.

2 **ಅನುಪಾತೀಯತೆ (ಪ್ರಪೋರ್ಷನಾಲಿಟಿ):** ಸಂಸೂಚಕ ಕೊಡುವ ವಿದ್ಯುತ್ ಸಂಜ್ಞೆಗಳು ಕಣಗಳ ಶಕ್ತಿನಷ್ಟಕ್ಕೆ ಅನುಪಾತವಾಗಿದ್ದರೆ ಆ ಸಂಸೂಚಕ ಅನುಪಾತೀಯವಾಗಿದೆ ಎನ್ನುತ್ತಾರೆ. ಅನುಪಾತೀಯ ಗುಣಕ ಮತ್ತು ಮಿಣುಕು ಗುಣಕ ಇದಕ್ಕೆ ಉದಾಹರಣೆಗಳು. ಗೀಗರ್ ಮುಲರ್ ಗುಣಕಗಳು ಅನುಪಾತೀಯವಲ್ಲ.

3 **ಅಳೆಯಬಲ್ಲ ಭೌತ ಪರಿಣಾಮಗಳು:** ಸಂಸೂಚಕಗಳನ್ನು ವಿದ್ಯುತ್‌ಕ್ಷೇತ್ರ, ಕಾಂತಕ್ಷೇತ್ರ ಇತ್ಯಾದಿ ವಿವಿಧ ಪರಿಸರಗಳಲ್ಲಿಟ್ಟು ಕಣಗಳ ವ್ಯಾಪ್ತಿ (ರೇಂಜ್), ವೇಗ, ಶಕ್ತಿ, ವಿದ್ಯುದಾವೇಶ ಇತ್ಯಾದಿ ಭೌತ ಸಂಗತಿಗಳನ್ನು ಅಭ್ಯಸಿಸಬಹುದು. ನಾವು ಅಳೆಯಬೇಕೆಂದ ಭೌತ ಪರಿಣಾಮವನ್ನು ಗಮನಿಸಿ ಕಣ ಸಂಸೂಚಕವನ್ನು ಆಯ್ದುಕೊಳ್ಳಬೇಕಾಗುತ್ತದೆ. (ಆರ್.ಎಸ್.ಬಿ.)

**ಕಣಾದ :** ಷಡ್‌ದರ್ಶನಗಳಲ್ಲಿ ಒಂದಾದ ವೈಶೇಷಿಕ ದರ್ಶನವನ್ನು ಸಿದ್ಧಾಂತ ರೂಪದಲ್ಲಿ ರಚಿಸಿದ ಮಹರ್ಷಿ. ಕಶ್ಯಪ ಗೋತ್ರದ ಉಲೂಕ ಮಹರ್ಷಿಯ ಮಗ. ಆದ್ದರಿಂದ ಇವನ ಗ್ರಂಥಕ್ಕೆ ಔಲೂಕ್ಯ ದರ್ಶನವೆಂದೂ ಹೆಸರು. ಕಣ ಎಂದರೆ ಅಣು. ಅದ ಎಂದರೆ ಭಕ್ಷಿಸಿದವನು. ಆದ್ದರಿಂದ ಕಣಾದನೆಂದರೆ ಅಣುಭಕ್ಷಕ ಎಂದು ವಿಮರ್ಶಕರು ಅರ್ಥ ಕಲ್ಪಿಸುವುದುಂಟು. ಈತನಿಗೆ ಕಣಭುಕ್, ಕಣಭಕ್ಷ, ಅಕ್ಷಪಾದ, ಉಲೂಕ ಎಂದೂ ಹೆಸರುಗಳಿವೆ. ಇವೆಲ್ಲವೂ ಅನ್ವರ್ಥನಾಮಗಳು; ಈತನ ಸಾಧನೆ ಸಿದ್ಧಿಗಳ ದ್ಯೋತಕ. ಮೊದಲ ಬಾರಿಗೆ ನಿತ್ಯದ್ರವ್ಯಗಳ ವಿಶ್ಲೇಷಣೆ ಮತ್ತು ಸಂಶ್ಲೇಷಣೆಗಳನ್ನು ವಿವರಿಸಿ ಮಹದ್ರೂಪದಿಂದ ಅಣುರೂಪಕ್ಕೆ, ಮತ್ತೆ ಅಣುರೂಪದಿಂದ ಮಹದ್ರೂಪಕ್ಕೆ ದ್ರವ್ಯಗಳ ಸ್ಥಿತ್ಯಂತರವನ್ನು ಸಾಧಿಸಿ ತೋರಿದವನಿವನಾದ್ದರಿಂದ ಈತ ಅಣುಭಕ್ಷಕ. ದಿನವೆಲ್ಲ ಧ್ಯಾನಮಗ್ನನಾಗಿ ರಾತ್ರಿ ಜಾಗ್ರತನಾಗಿರುತ್ತಿದ್ದುದರಿಂದ ಉಲೂಕ. ಕಾಪೋತವೃತ್ತಿಯನ್ನು ಆಚರಿಸುತ್ತ ಬೀದಿಯಲ್ಲಿ ಬಿದ್ದಿದ್ದ ಅಕ್ಕಿಯ ಕಾಳುಗಳನ್ನು ಆಯ್ದು ತಿನ್ನುತ್ತಿದ್ದುದರಿಂದ ಇವನಿಗೆ ಕಣಭುಕ್, ಕಣಭಕ್ಷ ಎಂಬ ಹೆಸರು ಬಂದಿರಬಹುದೆಂದು ಇನ್ನೊಂದು ಮತ. ಈತನ ನಿಜವಾದ ಹೆಸರು ಕಾಶ್ಯಪನೆಂದು ಕಂಡುಬರುತ್ತದೆ.

ಈತನ ಜೀವನ, ಕಾಲ, ದೇಶಗಳ ವಿಷಯವಾಗಿ ನಿಖರವಾಗಿ ಏನೂ ತಿಳಿದು ಬಂದಿಲ್ಲ. ಆದರೆ ವೈಶೇಷಿಕ ದರ್ಶನ ಸಂಸ್ಕೃತ ಸಾಹಿತ್ಯದ ಒಂದು ಪ್ರಸಿದ್ಧ ಪ್ರಕಾರವಾದ ಸೂತ್ರ ರೂಪದಲ್ಲಿರುವುದರಿಂದ ಈತ ಪ್ರ.ಶ.ಪೂ. 3–4ನೆಯ ಶತಮಾನದವನೆಂದು ಊಹಿಸಬಹುದು.

ಕಣಾದನ ತತ್ತ್ವಶಾಸ್ತ್ರಕ್ಕೆ ಅಧ್ಯಾತ್ಮಶಾಸ್ತ್ರವೆಂದೂ ಹೆಸರಿದೆ.

ಸಪ್ತ ಪದಾರ್ಥಗಳ ಮತ್ತು ಅವುಗಳ ಒಳಭೇದಗಳ ಪರಸ್ಪರ ಸಾಮರ್ಥ್ಯ ವೈಧರ್ಮ್ಯಗಳ (ವಿಶೇಷ) ಸೂಕ್ಷ್ಮತೆಯನ್ನರಿಯುವುದೇ ತತ್ತ್ವಜ್ಞಾನದ ಉಪಲಬ್ಧಿಗೆ ಕಾರಣವಾಗುತ್ತದೆ ಎಂಬುದು ಕಣಾದನ ಮತ. ನಿತ್ಯವಸ್ತುಗಳ ಸಮ್ಯಕ್‌ಜ್ಞಾನದಿಂದ ಒಂದನ್ನು ಮತ್ತೊಂದನ್ನಾಗಿ ತಪ್ಪಾಗಿ ಕಲ್ಪಿಸಿಕೊಳ್ಳುವ ಭ್ರಮೆ ಹರಿದಾಗ ಪಮೆ (ಸಮ್ಯಕ್‌ಜ್ಞಾನ) ಸಿದ್ಧಿಸುತ್ತದೆ; ಅಖ್ಯಾತಿ, ಅನ್ಯಥಾ ಖ್ಯಾತಿ ಹರಿದು ಆ ಸ್ಥಾನದಲ್ಲಿ ಸಮ್ಯಕ್ ಖ್ಯಾತಿ ದೊರೆಕೊಳ್ಳುತ್ತದೆ. ತತ್ಫಲವಾಗಿ ಭ್ರಾಂತಿ ತೊಲಗಿ ತತ್ತ್ವಜ್ಞಾನ ಲಭಿಸಿ ತನ್ಮೂಲಕ ಮೋಕ್ಷ ಪ್ರಾಪ್ತಿಯಾಗುತ್ತದೆ–ಎಂಬುದೇ ಕಣಾದ ಮಹರ್ಷಿಯ ದರ್ಶನ.

ವೈಶೇಷಿಕ ಸೂತ್ರಗ್ರಂಥ ಈ ಮೊದಲು ಹೇಳಿದಂತೆ ಸೂತ್ರಾತ್ಮಕ ಗದ್ಯದಲ್ಲಿದೆ. ಹತ್ತು ಅಧ್ಯಾಯಗಳಿದ್ದು ಪ್ರತಿ ಅಧ್ಯಾಯದಲ್ಲೂ ಆಹ್ನಿಕಗಳೆಂಬ ಎರಡು ಭಾಗಗಳಿವೆ. ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ ಎಂಬುದು ಮೊದಲ ಸೂತ್ರ.

ಈ ಗ್ರಂಥದ ಮೇಲೆ ಸು. 4ನೆಯ ಶತಮಾನದಲ್ಲಿ ಪ್ರಶಸ್ತ ಪಾದನೆಂಬಾತ ಭಾಷ್ಯ ಬರೆದಿದ್ದಾನೆ. ಇದರ ಆಧಾರದ ಮೇಲೆ ಚಂದ್ರನೆಂಬಾತ ಚೀನಿ ಭಾಷೆಯಲ್ಲಿ ದಶಪದಾರ್ಥಶಾಸ್ತ್ರ ವೆಂಬುದನ್ನು ರಚಿಸಿದ್ದಾನೆ (ಏಳನೆಯ ಶತಮಾನ). ಶ್ರೀಧರನ ನ್ಯಾಯಕಂದಲಿ ಉದಯನಾಚಾರ್ಯನ ಕಿರಣಾವಲಿ (ಎರಡೂ ಹತ್ತನೆಯ ಶತಮಾನದವು) ಇತರ ಭಾಷ್ಯಗಳಲ್ಲಿ ಪ್ರಸಿದ್ಧವಾದುದು.

10ನೆಯ ಶತಮಾನದಿಂದೀಚೆಗೆ ನ್ಯಾಯ ಮತ್ತು ವೈಶೇಷಿಕ ದರ್ಶನಗಳನ್ನು ಒಂದಾಗಿ ಅಭ್ಯಸಿಸಿದ್ದರ ಫಲವಾಗಿ ಅನೇಕ ಗ್ರಂಥಗಳು ಹುಟ್ಟಿಕೊಂಡುವು. (**ನೋಡಿ – ಭಾರತೀಯ ತತ್ತ್ವಶಾಸ್ತ್ರ; ವೈಶೇಷಿಕ ದರ್ಶನ**) (ಸಿ.ಜಿ.ಪಿ.)

**ಕಣಿವೆ :** ವಿಸ್ತಾರವೂ ಕಡಿದೂ ಮುಮ್ಮೈ ಉಳ್ಳದ್ದೂ ಆದ ದಿಣ್ಣೆಗಳ ನಡುವೆಯೋ ಬೆಟ್ಟಗಳ ಅಥವಾ ಪರ್ವತಗಳ ಶ್ರೇಣಿಗಳ ನಡುವೆಯೋ ಇರುವ, ಸಾಮಾನ್ಯವಾಗಿ ಹೊರಕ್ಕೆ ತೆರೆದುಕೊಂಡಿರುವ, ಉದ್ದನೆಯ ತಗ್ಗು (ವ್ಯಾಲಿ). ಭೂಮಿಯ ಮೇಲ್ಪದರ ತಳಾಭಿಮುಖವಾಗಿ ಮಡಿಸಿಕೊಂಡು ಸಮಾನರೇಖೆಯ ಕಡೆಗೆ ಇಳಿವೋರೆಯಾಗಿ ಆದದ್ದು ಕೇಂದ್ರಮುಖಾವನತ (ಸಿನ್‌ಕ್ಲೈನಲ್) ಕಣಿವೆ. ಸ್ತರಭಂಗದಿಂದ ಅಥವಾ ಖನಿಜರೇಖೆಯ ವಿಚ್ಛಿತ್ತಿಯಿಂದ ಸಂಭವಿಸಿದ್ದು ಸೀಳು ಕಣಿವೆ. ಇವೆರಡೂ ಭೂರಚನೆಯ ವ್ಯತ್ಯಾಸದಿಂದ ಆದಂಥ ಕಣಿವೆಗಳು. ನದಿ ಅಥವಾ ಹಿಮಪ್ರವಾಹದಿಂದ, ಅದರ ಆಕ್ರಮಣಕ್ಕೆ ಪೂರ್ವಭಾವಿಯಾಗಿಯೋ ಅನುಗುಣ ವಾಗಿಯೋ ಸಂಭವಿಸುವ ನಾನಾ ಕ್ರಿಯೆಗಳಿಂದಾಗಿ, ಕಣಿವೆಗಳು ಸಂಭವಿಸುವುದೂ ಉಂಟು.



ಚಿತ್ರ 1 ಕೇಂದ್ರಮುಖಾವನತ ಕಣಿವೆ

**ಕೇಂದ್ರಮುಖಾವನತ ಕಣಿವೆಗಳು:** ಭೂವರ್ತುಲಕ್ಕೆ ಸ್ಪರ್ಶಕವಾಗಿಯೋ ಅದರ ಸಮತಲದಲ್ಲೋ ಎರಡು ಬಲಗಳು ಹೊರಟು ಒಂದೇ ಬಿಂದುವಿನ ಕಡೆಗೆ ಚಲಿಸಿದಾಗ ಅಥವಾ ಎರಡು ವಿರುದ್ಧ ದಿಕ್ಕುಗಳಿಂದ ಒಂದೇ ಸಮತಲದ ಕಡೆಗೆ ಚಲಿಸಿದಾಗ ನಡುವಣ ಶಿಲೆಗಳು ಸಂಕುಚಿತಗೊಳ್ಳುತ್ತವೆ. ಇದರ ಫಲವಾಗಿ ಮೂಲ ಶಿಲೆಗಳು ಮೊದಲು ಆಕ್ರಮಿಸಿಕೊಂಡಿದ್ದಕ್ಕಿಂತ ಕಡಿಮೆ ಪ್ರದೇಶವನ್ನಾಕ್ರಮಿಸಿಕೊಳ್ಳುವುದರಿಂದ ಈ ಬಗೆಯ ಕಣಿವೆಗಳು ಸಂಭವಿಸುತ್ತವೆ. ಈ ಕ್ರಿಯೆಗಳ ಫಲವಾಗಿ ನೆಲದ ಒಂದು ಭಾಗ ಉಬ್ಬಾಗಿಯೂ (ವಿಮುಖಾವನತ) ಇನ್ನೊಂದು ಭಾಗ ತಗ್ಗಾಗಿಯೂ (ಕೇಂದ್ರಮುಖಾವನತ)–ಸಮುದ್ರದ ಅಲೆಗಳಂತೆ–ಪರಿಣಮಿಸುತ್ತದೆ. ಹಿಮಾಲಯ, ಆರಾವಳಿ, ಆಲ್ಪ್ಸ್, ರಾಕಿ ಮುಂತಾದ ಪರ್ವತಶ್ರೇಣಿಗಳ ನಡುವಣ ಕಣಿವೆಗಳು ಈ ರೀತಿಯಾಗಿ ಸಂಭವಿಸಿದಂಥವು.

**ಸೀಳು ಕಣಿವೆ :** ಭೂಮಿಯ ಒಳಗಡೆ ಸಂಭವಿಸುವ ಬಲಗಳು ಬೇರೆ ಬೇರೆ ದಿಕ್ಕುಗಳ ಕಡೆಗೆ ಹರಿದಾಗ ಭೂಮಿಯ ಮೇಲಣ ಶಿಲೆಗಳು ಏರುಪೇರಾಗುತ್ತವೆ. ಒಂದು ಭಾಗ ಕುಸಿದು ಇನ್ನೊಂದು ಭಾಗ ಹಾಗೆಯೇ ಇರುತ್ತದೆ. ಒಂದು ರೇಖೆಯ ಉದ್ದಕ್ಕೂ

ಸ್ತರಭಂಗದಿಂದಾಗಿ ಭೂಚಿಪ್ಪಿನ ಒಂದು ಭಾಗ ಜಾರಿಕೊಂಡಾಗ ಗೋಡೆಯಂತೆ ಕಡಿದಾದ ಅಂಚುಗಳುಳ್ಳ ಸೀಳುಕಣಿವೆಯ ರಚನೆಯಾಗುತ್ತದೆ. ಸ್ಕಾಟ್ಲೆಂಡಿನ ಮಿಡ್‌ಲೆಂಡ್ ಕಣಿವೆ, ರೈನ್ ಕಣಿವೆ, ಮೃತಸರೋವರದ ಭಾಗ, ಜಾರ್ಡನ್ ಕಣಿವೆ, ಇವು ಕೆಲವು ಉದಾಹರಣೆಗಳು.



ಚಿತ್ರ 2 ಸೀಳುಕಣಿವೆ

ನರ್ಮದಾ ಮತ್ತು ತಪತೀ ನದೀ ಕಣಿವೆಗಳೂ ಈ ವರ್ಗಕ್ಕೆ ಸೇರಿದವೆಂದು ಕೆಲವು ಭೂಗೋಳವಿಜ್ಞಾನಿಗಳ ಮತ. ಕಲ್ಲಿದ್ದಲಿನ ನಿಕ್ಷೇಪವಿರುವ ದಾಮೋದರ ಕಣಿವೆಯೂ ಈ ತೆರನಾದದ್ದು.

**ನದೀಕಣಿವೆ:** ಎತ್ತರದ ನೆಲದ ಮೇಲೆ ಬಿದ್ದ ನೀರು ಕೋಟ್ಯಂತರ ವರ್ಷಗಳಿಂದ ಹರಿಯುತ್ತಿರುವುದರ ಪರಿಣಾಮವಾಗಿ ನೆಲದ ಮೃದುವಾದ ಭಾಗ ಕೊಚ್ಚಿಹೋಗಿ ಕಣಿವೆಗಳು ನಿರ್ಮಾಣವಾಗುತ್ತವೆ. ಇವು ನದಿಗಳ ಉಗಮಸ್ಥಾನಗಳೂ ಆಗಿರುತ್ತವೆ. ಒಮ್ಮೊಮ್ಮೆ ಇಂಥ ಕಣಿವೆಗಳು ಕಮರಿಗಳನ್ನು ನಿರ್ಮಿಸಿ ಪ್ರಕೃತಿಯ ರಮ್ಯಭೀಕರಣ ದೃಶ್ಯಗಳನ್ನೊದಗಿಸುತ್ತವೆ. ನದೀ ಪ್ರವಾಹದ ಮತ್ತು ಭೂಸವೆತದ ಪರಿಣಾಮವಾಗಿ ನದೀಬಯಲಿನಲ್ಲೂ ಕಣಿವೆಗಳು ನಿರ್ಮಾಣವಾಗುವುದುಂಟು.

ಚಿತ್ರ 3 ಬೆಟ್ಟಗಳ ನಡುವಿನ ಕಮರಿಯಲ್ಲಿ ಹರಿಯುತ್ತಿರುವ ನರ್ಮದಾ ನದಿ

ನದೀಕಣಿವೆಯನ್ನು ಮೇಲ್‌ಕಣಿವೆ, ಮಧ್ಯದ ಕಣಿವೆ, ಕೆಳಕಣಿವೆ ಎಂಬುದಾಗಿ ವಿಭಾಗಿಸಬಹುದು. ನದಿಯ ಪ್ರಾರಂಭದೆಸೆಯದು ಮೇಲ್‌ಕಣಿವೆ. ಇದು ಸಾಮಾನ್ಯವಾಗಿ ಪರ್ವತ ಪ್ರದೇಶಗಳಲ್ಲಿರುವುದರಿಂದ ನಗ್ನೀಕರಣಕಾರ್ಯ ಹೆಚ್ಚಾಗಿ, ಇಳಿಮುಖ ಕೊರೆತ ಹೆಚ್ಚಾಗಿರುತ್ತದೆ. ಇದರ ಪರಿಣಾಮವಾಗಿ ಕಡಿದಾದ ಪಕ್ಕಗಳುಳ್ಳ ಗಿ ಆಕಾರದ ಕಣಿವೆಗಳ ನಿರ್ಮಾಣವಾಗುತ್ತದೆ. ಕಡಿದಾದ ಪಕ್ಕಗಳು ಕಠಿಣಶಿಲಾಭಾಗಗಳಾಗಿದ್ದು, ಆಳವಾದ ಗೋಡೆಗಳಂತೆ ನಿಂತಿರುತ್ತವೆ. ಕಾಲೊರಾಡೋ ನದೀ ಕಣಿವೆಯಲ್ಲಿ ಶೃಂಗಲಂಬವಾದ ಪಕ್ಕಗಳುಳ್ಳ ಇಂಥ ಆಳವಾದ ಕಮರಿಗಳನ್ನು ಕಾಣಬಹುದು. ಇಂಥ ಪ್ರದೇಶಗಳಲ್ಲಿ ಇದ್ದಕ್ಕಿದ್ದಂತೆ ಭಿನ್ನಸ್ವರೂಪದ, ಕಠಿಣವಲ್ಲದ ಶಿಲಾಸ್ತರಗಳು ಕಂಡುಬಂದಾಗ ಭೂಸವೆತದ ಕಾರ್ಯ ತೀವ್ರವಾಗಿ ಜಲಪಾತಗಳು ನಿರ್ಮಾಣವಾಗುತ್ತವೆ. ನದಿಯ ಮಧ್ಯ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಆಳವಾದ ಕಣಿವೆಗಳು ಇರುವುದಿಲ್ಲ. ಇಲ್ಲಿ ಸರೋವರಗಳು ಸಂಭವಿಸುವುದು ಸಾಮಾನ್ಯ. ಕೆಳಕಣಿವೆಯಲ್ಲಿ ಯಾವ ರೀತಿಯ ವಿಶೇಷವೂ ಇರುವುದಿಲ್ಲ.

ನದೀಕಣಿವೆಗಳಲ್ಲಿ ಕೆಲವು ಶುಷ್ಕಕಣಿವೆಗಳೂ ಇರುವುದುಂಟು. ನೀರು ಬೇರೆ ಕಡೆ ಹರಿಯತೊಡಗುವುದರಿಂದ ಇಲ್ಲವೆ ಪಾತ್ರದ ನೆಲದಲ್ಲಿ ನೀರು ಇಂಗಿ ಹೋಗುವುದರಿಂದ ಈ ಬಗೆಯ ಕಣಿವೆಗಳು ನಿರ್ಮಾಣವಾಗುತ್ತದೆ. ಇವು ಮೃತಕಣಿವೆಗಳು.

ಕಣಿವೆಗಳು ಯುವಾವಸ್ಥೆಯಲ್ಲಿದ್ದಾಗ V ಆಕಾರದಲ್ಲಿದ್ದು ಕಡಿಮೆ ಉಪನದಿಗಳನ್ನು ಪಡೆದಿರುತ್ತವೆ. ವಿಕಾಸಗೊಂಡ ಕಣಿವೆಗಳು ವಿಶಾಲ. ಇಲ್ಲಿ ಉದ್ದುದ್ದನೆಯ ಉಪನದಿಗಳಿರುತ್ತವೆ. ಹಳೆಯ ಕಣಿವೆಗಳಿಗೆ ಇಳಿಜಾರು ಕಡಿಮೆ. ಪ್ರವಾಹಗಳು ವಿಶಾಲವಾಗಿರುತ್ತದೆ.

ಹಿಮರೇಖೆಗಿಂತ ಎತ್ತರವಾದ ಪರ್ವತಪ್ರದೇಶಗಳಲ್ಲಿರುವ ಹಿಮ ಪ್ರವಾಹಗಳು ಇಳಿಜಾರಾಗಿರುವ ಕಡೆ ಹರಿಯುತ್ತದೆ. ಇವು ಹರಿಯುವಾಗ ತಳಭಾಗವನ್ನು ಕೊರೆದು ಅಗಲ ಮಾಡಿ, ಅಡ್ಡಮುಖ ಸಮತಟ್ಟಾದ ತಳವನ್ನೂ ಕಡಿದಾದ ಪಕ್ಕಗಳನ್ನೂ ನಿರ್ಮಾಣ ಮಾಡುತ್ತವೆ. ಇಂಥವು ಬಾನೆ ಇಲ್ಲವೆ ಬೋಗುಣಿಯಾಕಾರದ U ಕಣಿವೆಗಳು.

ಹಿಮಪ್ರವಾಹಗಳು ಮುಖ್ಯವಾಗಿ ಹರಿಯುವಂಥವು ಮೂಲ ಕಣಿವೆಗಳು. ಇವನ್ನು ಸೇರುವ ಕಣಿವೆಗಳು ಉಪಕಣಿವೆಗಳು. ಮೂಲಕಣಿಗಳಲ್ಲಿ ಭೂಸವೆತ ಸಾಮಾನ್ಯವಾಗಿ ತೀವ್ರಗತಿಯಲ್ಲಿ ಆಗುವುದರಿಂದ ಅವು ಹೆಚ್ಚು ಆಳಕ್ಕೆ ಇಳಿಯುತ್ತವೆ. ಉಪಕಣಿವೆಗಳಲ್ಲಿ



ಚಿತ್ರ 4 ತೂಗುಕಣಿವೆ

ಭೂಸವೆತ ಕಡಿಮೆ. ಅವು ಮೂಲಕಣಿವೆಗಳ ಮೇಲ್ಭಾಗದಲ್ಲಿರುತ್ತವೆ. ಅವು ತೂಗುಕಣಿವೆಗಳು. ಹಿಮಪ್ರವಾಹಗಳು ಕಣ್ಮರೆಯಾಗಿ ನೀರು ಹರಿಯಲು ಪ್ರಾರಂಭವಾದಾಗ ಜಲಪಾತಗಳು ಸಂಭವಿಸುತ್ತವೆ.

U ಆಕಾರದ ಕಣಿವೆಗಳ ಮೂಲದಲ್ಲಿ ಅರ್ಧ ಚಂದ್ರಾಕಾರದ ಪಾತ್ರವಿರುತ್ತದೆ. ಇದಕ್ಕೆ ಲಂಬವಾಗಿರುವ ಹಿಂಬದಿ ಮತ್ತ ಪಕ್ಕಗಳುಂಟು. ನೋಡಲು ಇದು ಆರಾಮ



ಚಿತ್ರ 5 ರಂಗಕಣಿವೆ

ಕುರ್ಚಿಯಂತಿರುತ್ತದೆ. ಇದು ರಂಗಕಣಿವೆ. ಈ ಕಣಿವೆಯ ತಳದಲ್ಲಿರುವ ಕೆಲವು ತಗ್ಗುಗಳಲ್ಲಿ ನೀರು ತುಂಬಿ ಡೊಣೆಗಳಾಗುವುದುಂಟು.

ಸಮುದ್ರ ಮತ್ತು ಸಾಗರಗಳ ತಳಗಳಲ್ಲೂ ಅನೇಕ ಪರ್ವತಶ್ರೇಣಿಗಳಿವೆ. ಇವುಗಳ ನಡುವೆಯೂ ಅಲ್ಲಲ್ಲಿ ಕಣಿವೆಗಳುಂಟು. ಇವುಗಳಲ್ಲಿ ಕೆಲವು ಕೊಲೊರಾಡೋವಿನ ಕಮರಿಗಳಂತಿರುತ್ತವೆ. ಹಡ್ಸನ್ ನದಿ ಅಟ್ಲಾಂಟಿಕ್ ಸಾಗರದೊಳಗೆ ಮುಂದುವರಿಯುತ್ತದೆ. ಇದು ಹಡ್ಸನ್ ಕಮರಿ–ಸೀಳುಕಣಿವೆಯಿಂದ ಆದದ್ದು. (ಕೆ.ಆರ್.ಆರ್.)

**ಕಣೆ ರೋಗದ ನೊಣ :** ಬತ್ತದ ಪೈರಿಗೆ ಬರುವ ಕಣೆ, ಆನೆಕೊಂಬು ಅಥವಾ ಕೊಳವೆ ರೋಗಕ್ಕೆ ಕಾರಣವಾದ ಡಿಪ್ಟಿ ಗಣದ ಸೆಸಿಡೋಮೈಡಿ ಕುಟುಂಬಕ್ಕೆ ಸೇರಿದ ಪ್ಯಾಕಿಡಿಪ್ಲಾಸಿಸ್ ಒರೈಜೆ ಎಂಬ ನೊಣ. ಇದು ಸೊಳ್ಳೆಯಂತೆ ಉದ್ದನೆಯ ಕಾಲುಗಳುಳ್ಳ ಸೂಕ್ಷ್ಮವಾದ ಕೀಟ.

ಹೆಣ್ಣು ನೊಣ ಬತ್ತದ ಪೈರಿನ ಚಿಗುರು ಭಾಗಗಳ ಮೇಲೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯೊಡೆದು ಬರುವ ಕಾಲಿಲ್ಲದ ಬಿಳಿಬಣ್ಣದ ಮರಿಹುಳುಗಳು (ಮ್ಯಾಗಟ್) ಎಳೆಯ ಕಾಂಡವನ್ನು ಕೊರೆದು ಒಳಗೆ ಪ್ರವೇಶಿಸುತ್ತವೆ. ಇದರಿಂದ ಪ್ರಚೋದನೆಗೊಂಡ ಕಾಂಡದಿಂದ ತಿಳಿ ಬಿಳುಪು ಅಥವಾ ನಸು ನೀಲಿಬಣ್ಣದ ಟೊಳ್ಳು ಕೊಳವೆಗಳು ಉತ್ಪತ್ತಿಯಾಗುತ್ತವೆ. ಇವುಗಳನ್ನೇ ಬೆಳ್ಳಿ ಕೊಳವೆ (ಸಿಲ್ವರ್ ಶುಟ್) ಅಥವಾ ಆನೆಕೊಂಬು ಎಂದು ಕರೆಯುವುದು. ಹುಳು ಹತ್ತಿದ ಗಿಡಗಳಲ್ಲಿ ತೆನೆಯ ಉತ್ಪನ್ನವಿಲ್ಲ. ಕ್ರಮೇಣ ಕೊಳವೆಯೊಳಗೇ ಮರಿಹುಳುಗಳು ಕೋಶಾವಸ್ಥೆಗೆ ತಿರುಗಿ ಬಲಿತ ನೊಣವಾಗಿ ಹೊರಗೆ ಬರುತ್ತವೆ.

ಭಾರತದಲ್ಲಿ ಬತ್ತಕ್ಕೆ ಕಣೆಯ ಕಾಟ ಅತ್ಯಂತ ತೀವ್ರರೂಪದ್ದು; ಆಂಧ್ರಪ್ರದೇಶ, ಬಿಹಾರ, ಮಧ್ಯಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಮೈಸೂರು, ಒರಿಸ್ಸ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಇದರ ಹಾವಳಿ ಹೆಚ್ಚಾಗಿರುವುದು ಕಂಡುಬಂದಿದೆ. ಚಕ್ರಗತಿಯನ್ನನುಸರಿಸಿ ಒದಗುವ ಈ ಮಾರಿ ಸಾಂಕ್ರಾಮಿಕದಂತೆ ಬಹಳ ಬೇಗ ಹರಡುವುದು. ಸ್ಥಳೀಕವಾಗಿ ಕಾಣಿಸಿಕೊಳ್ಳುವ ಪ್ರದೇಶಗಳಲ್ಲಿ ಇದರಿಂದ ತೀವ್ರ ರೂಪದ ನಷ್ಟವುಂಟಾಗಿ ಶೇ. 50ಕ್ಕೂ ಮೀರಿದಷ್ಟು ಬೆಳೆ ಹಾಳಾಗಿ ಹೋಗಬಹುದು. ಮರಿಹುಳುವಿನ ಅವಧಿ 8–18 ದಿನಗಳು ಮತ್ತು ಕೋಶಾವಸ್ಥೆಯ ಕಾಲ 2–6 ದಿನಗಳು. ಜೀವಮಾನದ ಒಟ್ಟು ಅವಧಿ 2–3 ವಾರ. ವರ್ಷದಲ್ಲಿ 5 ರಿಂದ 8 ಸಂತತಿಗಳು. ಚಳಿಗಾಲವನ್ನು ಮರಿಹುಳು ಬತ್ತದಕೂಳು ಅಥವಾ ಅಕ್ಕಪಕ್ಕದ ಕಾಡುಹುಲ್ಲುಗಳಲ್ಲಿ ಕಳೆಯುವುದು. (ಡಿ.ಎಸ್.; ಎನ್.ಎಸ್.ಎಲ್.)

**ಕಣ್ಣಗಿ :** ಪ್ರ.ಶ. ಸು. 5ನೆಯ ಶತಮಾನದಲ್ಲಿ ಇದ್ದಿರಬಹುದಾದ ಇಳಂಗೋ ಅಡಿಗಳ್ (ನೋಡಿ– ಇಳಂಗೋ ಅಡಿಗಳ್) ಬರೆದ ಶಿಲಪ್ಪದಿಗಾರಂ ಎಂಬ ತಮಿಳು ಕಾವ್ಯದ ನಾಯಕಿ. ಪತ್ತಿನಿದೇವಿ ಎಂಬ ಹೆಸರಿನಿಂದ ಶ್ರೇಷ್ಠ ಪತಿವ್ರತೆಯೆಂದು ದಕ್ಷಿಣ ಭಾರತದಲ್ಲೂ ಸಿಂಹಳದಲ್ಲೂ ಪೂಜಿತಳಾಗಿದ್ದ ಓರ್ವ ದೈವೀಕ ಸ್ತ್ರೀ. ಕೋವಲನ್ ಮಾಧವಿ ಎಂಬ ವೇಶ್ಯೆಯಿಂದ ಆಕರ್ಷಿತನಾಗಿ ಅವಳ ಸಹವಾಸದಲ್ಲಿ ತನ್ನ ಸಂಪತ್ತನ್ನೆಲ್ಲ ಕಳೆದುಕೊಂಡ. ಕೊನೆಗೆ ಆಕೆಯಿಂದ ತಿರಸ್ಕೃತನಾದ ಪತಿಯನ್ನು ಕಣ್ಣಗಿ ಮನ್ನಿಸಿ, ಹೊಸಬಾಳ್ವೆ ನಡೆಸುವ ವಿಚಾರದಿಂದ ಅವನೊಡನೆ ಪಾಂಡ್ಯ ರಾಜಧಾನಿ ಮಧುರೆಗೆ ಬಂದಳು. ಅಲ್ಲಿ ಆತ ಕಳ್ಳತನದ ಅಪವಾದಕ್ಕೆ ಗುರಿಯಾಗಿ ಮರಣ ದಂಡನೆಗೆ ಗುರಿಯಾಗಲು ಪತಿವಿಯೋಗದಿಂದ ಶೋಕತಪ್ತಳಾಗಿ ಪಾಂಡ್ಯರಾಜನನ್ನೂ ಮಧುರೆಯನ್ನೂ ಶಪಿಸಿದಳು. ಮಧುರೆ ಸುಟ್ಟುಹೋಯಿತು. ಮುಂದೆ ಕಣ್ಣಗಿ ಪಶ್ಚಿಮ ಘಟ್ಟಗಳಿಗೆ ತೆರಳಿದಳೆಂದೂ ಅಲ್ಲಿ ದಿವ್ಯ ವಿಮಾನವನ್ನೇರಿ ಸ್ವರ್ಗದಲ್ಲಿದ್ದ ತನ್ನ ಪತಿಯನ್ನು ಸೇರಿದಳೆಂದೂ ಕಥೆ ಇದೆ. ಕಣ್ಣಗಿಯ ವಿಚಾರ ಕೇಳಿದ ಚೇರದೊರೆ ಶೆಂಗುತ್ತುವನ್ ಅವಳ ಸ್ಮಾರಕವಾಗಿ ದೇವಾಲಯ ಒಂದನ್ನು ಕಟ್ಟಿಸಿದ. ಇತರ ರಾಜರು ಅವನ ಉದಾಹರಣೆ ಅನುಸರಿಸಿದರು. (ಎಸ್.ಎಸ್.ಕೆ.ಎ.)

**ಕಣ್ಣಪ್ಪ :** ವೀರಶೈವರು ಆರಾಧಿಸುವ 63 ಪುರಾತನರಲ್ಲಿ ಪ್ರಸಿದ್ಧನಾದವ. ತನ್ನ ಮುಗ್ಧ ಭಕ್ತಿಯಿಂದ ಶಿವನಿಗೆ ತನ್ನ ಕಣ್ಣುಗಳನ್ನೇ ಅರ್ಪಿಸಿ ಶಿವಸಾನ್ನಿಧ್ಯವನ್ನು ಪಡೆದ ಶರಣ. ತಮಿಳಿನ ಪೆರಿಯಪುರಾಣದಲ್ಲೂ ಕನ್ನಡದಲ್ಲಿ ಹರಿಹರನ ರಗಳೆಗಳಲ್ಲೂ ಷಡಕ್ಷರಿಯ ವೃಷಭೇಂದ್ರ ವಿಜಯದಲ್ಲೂ ಈತನ ಕಥೆ ಬರುತ್ತದೆ. ಈ ಕಥೆಯನ್ನು ಆದರಿಸಿ ಚಲನಚಿತ್ರವೂ ಸಿದ್ಧವಾಗಿದೆ. ಕಣ್ಣಪ್ಪ ಬೇಡರ ಜಾತಿಯವನಾದುದರಿಂದ ಬೇಡರ ಕಣ್ಣಪ್ಪನೆಂದು ಪ್ರಸಿದ್ಧನಾಗಿದ್ದಾನೆ. ಜನಜನಿತವಾದ ಈತನ ಕಥೆ ಹೀಗಿದೆ:

ಚೋಳಮಂಡಲದ ತಿರುಕಾಲತ್ತಿ (ಶ್ರೀಕಾಳಹಸ್ತಿ) ಒಂದು ಶೈವಕ್ಷೇತ್ರ. ಆ ಬೆಟ್ಟದ ತಪ್ಪಲಲ್ಲಿ ಕಿರಾತರ ಗುಂಪೊಂದಿತ್ತು. ಅದರ ಒಡೆಯ ಕಣ್ಣಪ್ಪ ಒಂದು ಸಂಜೆ ಮರದಡಿಯಲ್ಲಿ ಮಲಗಿದ್ದಾಗ ಕಣ್ಣಪ್ಪನ ಕನಸಿನಲ್ಲಿ ಶಿವ ಬಂದು ಆ ಕಾಡಿನಲ್ಲಿ ಶಿವಲಿಂಗವಿರುವುದನ್ನು ತಿಳಿಸಿ ಅದನ್ನು ಅನುನಯದಿಂದ ಪೂಜಿಸಬೇಕೆಂದು ಹೇಳುತ್ತಾನೆ. ಕನಸು ನಿಜವೆನ್ನುವಂತೆ ದೂರದಲ್ಲಿ ಶಿವಲಿಂಗ ಕಾಣುತ್ತದೆ. ಅದನ್ನು ನೋಡಿದ ಕಣ್ಣಪ್ಪ ಆನಂದಭರಿತನಾಗಿ ಮುಗ್ಧಮನಸ್ಸಿನಿಂದ ಶಿವಲಿಂಗವನ್ನು ಅಪ್ಪಿ ಎಳೆಯ ಮಕ್ಕಳನ್ನು ಲಾಲಿಸುವಂತೆ ಮಾತನಾಡಿಸಿ ಪೂಜಾಕೈಂಕರ್ಯವನ್ನರ್ಪಿಸುತ್ತಾನೆ. ಶಿವನಿಗೆ ಆಹಾರವಾಗಿ ಜಿಂಕೆಯ ಮಾಂಸವನ್ನು ಬೇಯಿಸಿ ತಂದು, ನೆಕ್ಕಿ, ನೋಡಿ, ರುಚಿಯಾದ ಭಾಗವನ್ನು ಶಿವನ ಪಾದದಡಿಯಿಟ್ಟು ತಾನು ಮುಡಿದಿದ್ದ ಕಕ್ಕೆ ಮೊದಲಾದ ಹೂಗಳಿಂದಲೇ ಪೂಜಿಸಲು ಉದ್ಯುಕ್ತನಾಗುತ್ತಾನೆ. ಆ ಮೊದಲೇ ವಿಧ್ಯುಕ್ತವಾಗಿ ಪೂಜೆಗೊಂಡಿದ್ದ ಲಿಂಗದ ತಲೆಯ ಮೇಲಿದ್ದ ಹೂವುಗಳನ್ನು ತನ್ನ ಕೆರದ ಕಾಲಿನಿಂದ ಅತ್ತ ನೂಕಿ ತನ್ನ ಬಾಯಲ್ಲಿ ನೀರನ್ನು ತುಂಬಿ ತಂದು ಲಿಂಗಕ್ಕೆ ಅಭಿಷೇಕ ಮಾಡಿ ತಾನು ಮುಡಿದಿದ್ದ ಹೂಗಳನ್ನೇ ಸೂಡಿ ಮಾಂಸವನ್ನು ನೈವೇದ್ಯ ಮಾಡುತ್ತಾನೆ. ಅಕಳಂಕ ನಿಸ್ವಾರ್ಥ ಭಕ್ತಿಯಿಂದ ಮಾಡಿದ ಈ ಪೂಜೆಯಿಂದ ಶಿವ ಸಂಪ್ರೀತನಾಗುತ್ತಾನೆ.

ಹೀಗೆ ಪೂಜಾವಿಧಾನ ನಿತ್ಯವೂ ನಡೆಯುತ್ತಿರುತ್ತದೆ. ಶಿವದೇವಾಲಯದಲ್ಲಿ ನಿತ್ಯವೂ ಮಾಂಸ ಮೂಳೆಗಳಿರುವುದನ್ನು ಕಂಡು ಪೂಜಾರಿ ಭಯಗೊಂಡು ಪಾತಕಿಯನ್ನು ಪತ್ತೆಹಚ್ಚಲು ಒಂದು ದಿನ ಲಿಂಗದ ಹಿಂದೆ ಅವಿತು ಕುಳಿತು ಕಣ್ಣಪ್ಪ ಮಾಡುವ ವಿಚಿತ್ರ ಲಿಂಗಪೂಜೆಯನ್ನು ಕಂಡು ಕೆಂಡವಾಗುತ್ತಾನೆ. ಕಣ್ಣಪ್ಪನ ಪೂಜಾನಿಷ್ಠೆಯನ್ನು ಪೂಜಾರಿಗೂ ಆ ಮೂಲಕ ಲೋಕಕ್ಕೂ ಪ್ರಕಟಗೊಳಿಸಬೇಕೆಂದು ಬಗೆದ ಶಿವ ತನ್ನ ಕಣ್ಣಿನಿಂದ ನೀರು (ಬೇರೆ ಕಥೆಯಂತೆ ರಕ್ತ) ಹರಿಸುತ್ತಾನೆ. ಶಿವನ ದುಃಖಕ್ಕೆ ಕಾರಣವನ್ನು ತಿಳಿಯದ ಕಣ್ಣಪ್ಪ ಬಹಳವಾಗಿ ಪೇಚಾಡಿ ಇದು ಏನೋ ಕಣ್ಣಿನ ರೋಗವಿರಬೇಕೆಂದು ಬಗೆದು ತನ್ನ ನಿರ್ಮಲವಾದ ಕಣ್ಣನ್ನು ಬಾಣದ ಕೊನೆಯಿಂದ ಕಿತ್ತು ನೀರೊಸರುತ್ತಿದ್ದ ಶಿವನ ಕಣ್ಣಿದ್ದ ಕಡೆ ಇಡುತ್ತಾನೆ. ಕ್ಷಣದಲ್ಲಿ ಕಣ್ಣು ಒಸರುವುದು ನಿಲ್ಲುತ್ತದೆ. ಆದರೆ ಶಿವನ ಇನ್ನೊಂದು ಕಣ್ಣು ಜಿನುಗಲು ಪ್ರಾರಂಭವಾಗುತ್ತದೆ. ಆಗ ಕಣ್ಣಪ್ಪ ತನ್ನ ಕಾಲಿನ ಉಂಗುಷ್ಠವನ್ನು ಗುರುತಿಗಾಗಿ ಶಿವನ ಕಣ್ಣಿನ ಬಳಿಯಿಟ್ಟುಕೊಂಡು ತನ್ನ ಇನ್ನೊಂದು ಕಣ್ಣನ್ನೂ ಕೀಳಲು ಉದ್ಯುಕ್ತನಾಗುತ್ತಾನೆ. ಮುಗ್ಧ ಭಕ್ತನ ಅದ್ವಿತೀಯ ತ್ಯಾಗಕ್ಕೆ ಶಿವ ಪ್ರಸನ್ನನಾಗುತ್ತಾನೆ. ಕಣ್ಣಪ್ಪ ಕಳೆದುಕೊಂಡಿದ್ದ ಕಣ್ಣುಗಳನ್ನು ಪಡೆಯುತ್ತಾನೆ. ಲಿಂಗದ ಹಿಂದೆ ಅವಿತು ನಿಂತಿದ್ದ ಪೂಜಾರಿ ಪಶ್ಚಾತ್ತಾಪ ಪಟ್ಟು ಮುಂದೆ ಬಂದು ಕಣ್ಣಪ್ಪನನ್ನು ಹೃದಯ ತುಂಬಿ ಪ್ರೀತಿಸುತ್ತಾನೆ. ಅಂದಿನಿಂದ ಕಣ್ಣಪ್ಪನ ಕಥೆ ಲೋಕಪ್ರಸಿದ್ಧವಾಗುತ್ತದೆ. (ಎನ್.ಎಸ್.ಆರ್.ಬಿ.)

**ಕಣ್ಣಾನೂರು :** ಕೇರಳ ರಾಜ್ಯದ ಒಂದು ಜಿಲ್ಲೆ (ಸು. 7,099 ಚ.ಕಿಮೀ) ಹಾಗೂ ಮುಖ್ಯಪಟ್ಟಣ. ಪಟ್ಟಣ ದಕ್ಷಿಣ ರೈಲುಮಾರ್ಗದ ಪಶ್ಚಿಮ ತೀರಪ್ರದೇಶದಲ್ಲಿದ್ದು ಮಂಗಳೂರಿನ ದಕ್ಷಿಣಕ್ಕೆ ಸು. 131 ಚ. ಕಿಮೀ ದೂರದಲ್ಲಿದೆ. ಅರಬ್ಬೀ ಸಮುದ್ರ ದಂಡೆಯಲ್ಲಿರುವ ಈ ನಗರಕ್ಕೆ ಒಂದು ಸಣ್ಣ ಬಂದರಿದೆ. ಇಲ್ಲಿಂದ ಹೊರದೇಶಗಳಿಗೆ ಕೊಬ್ಬರಿ ಹಾಗೂ ತೆಂಗಿನ ನಾರು ರಫ್ತಾಗುತ್ತದೆ. ಇಲ್ಲಿ ನೇಯುವ, ನೂಲುವ ಹಾಗೂ ಉಡುಪುಗಳನ್ನು ತಯಾರಿಸುವ ದೊಡ್ಡ ದೊಡ್ಡ ಕಾರ್ಖಾನೆಗಳಿವೆ.

ಈ ನಗರ 12 ಮತ್ತು 13ನೆಯ ಶತಮಾನಗಳಲ್ಲಿ ಪರ್ಷಿಯ ಮತ್ತು ಅರೇಬಿಯ ದೇಶಗಳೊಡನೆ ವ್ಯಾಪಾರ ಸಂಪರ್ಕವಿಟ್ಟುಕೊಂಡಿದ್ದಂಥ ಪ್ರಮುಖ ವಾಣಿಜ್ಯ ಕೇಂದ್ರವೆನಿಸಿತ್ತು. ಅದುವರೆಗೂ ದಕ್ಷಿಣ ಭಾರತದ ಸ್ವತಂತ್ರ ನಾಡಿನಲ್ಲಿದ್ದ ಈ ಸ್ಥಳ 18ನೆಯ ಶತಮಾನದಲ್ಲಿ ಕಲ್ಲಿಕೋಟೆಯ ಕೊಲಾಟ್ಟರಿ ರಾಜನ ರಾಜಧಾನಿಯೆನಿಸಿತು. 1498ರಲ್ಲಿ ವ್ಯಾಸ್ಕೊ–ಡ–ಗ್ಯಾಮ ಇಲ್ಲಿಗೆ ಬಂದಿದ್ದ. 1505ರಲ್ಲಿ ಪೋರ್ಚುಗೀಸರು ಇಲ್ಲಿ ಒಂದು ಕೋಟೆಯನ್ನು ನಿರ್ಮಿಸಿದರು. ಈಗಿರುವ ಕೋಟೆ ಡಚ್ಚರಿಂದ ನಿರ್ಮಿತವಾಗಿದ್ದು 1771ರಲ್ಲಿ ಅದನ್ನು ಆಲಿ ರಾಜನಿಗೆ ಮಾರಲಾಯಿತು. 1783ರಲ್ಲಿ ಇದು ಬ್ರಿಟಿಷರ ವಶವಾಗಿ ಈಸ್ಟ್ ಇಂಡಿಯ ಕಂಪನಿಯ ಆಡಳಿತಕ್ಕೆ ಒಳಪಟ್ಟಿತು. ಅಲ್ಲಿಂದ 1887ರ ವರೆಗೂ ಬ್ರಿಟಿಷರ ಮಿಲಿಟರಿ ಠಾಣ್ಯವಾಗಿತ್ತು. *

**ಕಣ್ಣಾಯಾಸ :** ಕಣ್ಣಿನ ಓಸರಿಕೆಯ (ರಿಫ್ರಾಕ್ಷನ್) ತೊಡಕುಗಳು. ಕಣ್ಣಿನ ಹೊಂದುವಳಿ (ಅಕಾಮಡೇಷನ್) ಇಲ್ಲವೇ ಕಣ್ಣುಗುಡ್ಡೆಯ ಸ್ನಾಯುಗಳು ಇರ್ನೋಟ ಆಗದಂತೆ ತಡೆವಾಗಿನ ಸಮತೋಲಗೆಡಿಕೆಗಳಿಂದ ಕಣ್ಣುಗುಡ್ಡೆ ಸ್ನಾಯುಗಳಲ್ಲಿ ತೋರುವ ದಣಿವಿನ ಲಕ್ಷಣ (ಆಸ್ತೆನೋಪಿಯ). ಇದರಿಂದ ಕಣ್ಣುಗಳು ಬಲಗುಂದಿ ಸುಲಭವಾಗಿ ದಣಿಯುತ್ತವೆ. ಕಣ್ಣುನೋಟದ ಕಷ್ಟದ ಕೆಲಸದಲ್ಲಿ ಸೇರುವ ಯಾವ ಅಂಗದಲ್ಲಿ ತೊಡಕಾದರೂ ಹೀಗಾಗಬಹುದು. ಸಂಜೆ ಹೊತ್ತಿಗೆ ಕಣ್ಣಾಯಾಸ ಹೆಚ್ಚುವುದು ಸಾಮಾನ್ಯ. ತಲೆನೋವು, ಕಣ್ಣುರಿ, ನೋವು, ಸುಸ್ತು, ರೆಪ್ಪೆ ತುಯಿತ, ಕಣ್ಣೀರು ಸುರಿತ, ಕಣ್ಣುಕೆಂಪೇರಿಕೆ, ಕಣ್ಣು ಮಂಜೂ ಆಗುತ್ತವೆ. ಕೋರೈಸುವ ಬೆಳಕು, ಸಾಕಷ್ಟು ಬೆಳಕಿಲ್ಲದೆಡೆ ಓದು, ಬಲುಸಣ್ಣ ಲಿಪಿಯನ್ನು ಒಂದೇ ಸಮನಾಗಿ ಓದುತ್ತಲೇ ಇರುವುದು. ಕಣ್ಣಿನ ನೋಟ ಕೆಟ್ಟಿರುವುದು ಮುಖ್ಯ ಕಾರಣಗಳು. ಬೆಳಕು ಹಾಯುವ ಕಣ್ಣಿನ ಮಸೂರ ಇಲ್ಲವೇ ನಡುವರ್ತಿಗಳ (ಮೀಡಿಯ) ಮಸಕಿಂದಲೂ ಕಣ್ಣಿನ ನೋಟದ ಅಚ್ಚೊತ್ತುಗಳನ್ನು ಪಡೆವ ಕಣ್ಪಾಲದ (ರೆಟೀನ) ರೋಗಗಳಿಂದಲೂ ಕಣ್ಣಾಯಾಸ ಆಗಬಹುದು. (ನೋಡಿ– ಕಣ್ಣು–ಮಾನವನ) (ನೋಡಿ– ಕಣ್ಣು–ಶಾಸ್ತ್ರ) (ನೋಡಿ– ಕನ್ನಡಕಗಳು) (ಎಸ್.ಟಿ.ಪಿ.)

**ಕಣ್ಣು, ಮಾನವನ :** ಬೆಳಕಿನಿಂದ ನೋಟವೆಂಬ ಇಂದ್ರಿಯದ ಅರಿವು ಹುಟ್ಟಿಸುವ ಹೊರಗಣ ಅಂಗವೇ ಕಣ್ಣು. ಪಂಚೇಂದ್ರಿಯಗಳಲ್ಲೊಂದು. ಸರ್ವಾಂಗಾಣಾಂ ನಯನಂ ಪ್ರಧಾನಂ. ಕಣ್ಣು ಜ್ಞಾನಜ್ಯೋತಿಯ ಬಾಗಿಲು. ನಾಯಕ, ನೇತಾರ ಎಂಬ ಪದಗಳು ನಯನ, ನೇತ್ರ ಎಂಬ ಪದಗಳಿಂದ ಹುಟ್ಟಿವೆ. ಈ ಲೇಖನದಲ್ಲಿ ಮಾನವನ ಕಣ್ಣನ್ನು ಕುರಿತ ವಿವೇಚನೆ ಇದೆ.

**ಕಣ್ಣಿನ ರಚನೆ, ಕೆಲಸ :** ಮಾನವನೂ ಸೇರಿ ಎಲ್ಲ ಬೆನ್ನು ಮೂಳೆ ಪ್ರಾಣಿಗಳಲ್ಲಿ ಕಣ್ಣುಗುಡ್ಡೆ ಕತ್ತಲುಕೋಣೆ ಅಥವಾ ಕ್ಯಾಮರಾ ಮಾದರಿಯಲ್ಲಿದೆ. ಇದು ನಿಜವಾಗಿ 1" ವ್ಯಾಸದ ಗೋಳಕೋಶ. ಕಣ್ಣುಗುಡ್ಡೆ ಮುಂದಿರುವ ಕೋಡುಪೊರೆ (ಕಾರ್ನಿಯ) ಪಾರದರ್ಶಕ; ಬಿಳಿಗುಡ್ಡೆಯ ಗೋಡೆ ಬೆಳಕಿನ ಕಿರಣಗಳನ್ನು ತಡೆಯುತ್ತದೆ. ಪಾಪೆಯ ಹಿಂದೆ ಮಸೂರವಿದೆ. ಮಸೂರದ ಮುಂದಿರುವುದು ನೀರಿನ ದ್ರವರಸದ ಗೂಡು. ಇದು ಕೋಡುಪೊರೆಯ ಮೂಲಕ ಕಾಣಿಸುತ್ತದೆ. ಮಸೂರದ ಹಿಂದಿರುವುದು ಕಾಚೀದ್ರವ ಗೂಡು. ನೀರಿನ ದ್ರವರಸ ಗೂಡಿನಲ್ಲಿ ಕರಿಯಾಲಿಯ (ಐರಿಸ್) ಮುಂದಿರುವುದು ಮುಂದಣ ಗೂಡು. ಹಿಂದಿರುವುದು ಹಿಂದಣ ಗೂಡು.

ಈ ಎರಡು ಗೂಡುಗಳಲ್ಲೂ ದ್ರವರಸವಿದೆ. ಕಾಚೀದ್ರವ ರಸ ಗೂಡಿನಲ್ಲಿ ಕಾಚೀದ್ರವ ಇದೆ. ಇವೆರಡು ಗೂಡುಗಳ ನಡುವೆ ಮಸೂರವಿದೆ. ಇದನ್ನು ಹಲವು ನವಿರಾದ ಕೋಮ ಸ್ನಾಯು ತಂತುಗಳು (ಜಿನ್ನನ ಸ್ನಾಯು) ಎತ್ತಿ ಹಿಡಿದಿವೆ. ಈ ಸ್ನಾಯು ಮಸೂರದ ಸುತ್ತ ಉಂಗುರದಂತಿದ್ದು ಕಣ್ಣುಗುಡ್ಡೆಯ ಗೋಡೆಗೆ ಅಂಟಿಕೊಂಡಿದೆ. ಮಸೂರ ಪಾರದರ್ಶಕವಾಗಿ ಇಪ್ಪಕ್ಕಗಳಲ್ಲೂ ಉಬ್ಬಿದೆ. ರಿಫ್ರೇಕ್ಷಣಾಂಕ 1.4. ಈರುಳ್ಳಿಯ ಪದರಗಳಂತೆ ಇದರಲ್ಲಿ ಕೋಟ್ಯಂತರ ಜೀವಕಣಗಳ ಜೋಡಣೆಯಾಗಿದೆ. ಮಸೂರಕ್ಕೆ ದಿಂಬುಚೀಲದಂಥ ಹೊದಿಕೆಯಿದೆ. ಮಸೂರದ ನಡುಭಾಗ ಗಟ್ಟಿಯಾಗಿದೆ. ಅದಕ್ಕೆ ಹೆಚ್ಚು ರಿಫ್ರೇಕ್ಷಣ ಶಕ್ತಿ ಇದೆ. ಹೊರಭಾಗ ಮೆತ್ತಗಿರುವುದರಿಂದ ತುಸು ಸ್ನಾಯುಬಲದಿಂದಲೇ ಆಕಾರದಲ್ಲಿ ಬದಲಾಗಬಲ್ಲುದು. ಮಸೂರ ನುಣ್ಣಗಿದೆ.




**ಚಿತ್ರ 1: 1. ಕೂಡು ಪೊರೆ, 2. ಬಾಸೆಯ ದಿಂಡು, 3. ಕಣ್ಣುಗುಡ್ಡೆ ಸ್ನಾಯು, 4. ಕಣ್ಜಾಲ, 5. ಕಣ್ಣರಾಯು, 6. ಬಿಳ್ಪದರ, 7. ಕಣ್ಣಿನ ನರ, 8. ಕಣ್ಣಿನ ನತಿ, 9. ಹಿಂದಣ ಗೂಡು, 10. ಕೋಡು ಪೊರೆ, 11. ಕರಿಯಾರಿ, 12. ಮುಂದಣ ಗೂಡು, 13. ಮಸೂರ, 14. ಕಾಚೀದ್ರವರಸ**

**ಕಣ್ಣಿನ ರಿಫ್ರೇಕ್ಷಣ ತಂತ್ರ :** ಕಣ್ಣನ್ನು ಚಿತ್ರ ತೆಗೆವ ಕ್ಯಾಮರಾದೊಡನೆ ಹೋಲಿಸಬಹುದು. ಕ್ಯಾಮರಾದ ಮಸೂರಕ್ಕೆ ಕೋಡು ಪೊರೆ, ಕಣ ಮಸೂರಗಳು ಸಮ. ಕಣ್ಣು ಗುಡ್ಡೆ ಗೋಡೆಯ ತೀರ ಒಳಪದರವಾದ ಕಣ್ಜಾಲದ ಹಿಂಭಾಗಕ್ಕೆ ಕ್ಯಾಮರ ತಟ್ಟೆ ಸಮ. ಆಚೆಯಿಂದ ತೂರಿಬರುವ ಬೆಳಕಿನ ಕಿರಣಗಳು ಕಣ್ಣು ಗುಡ್ಡೆಯಲ್ಲಿ ಕಿರಣಶಾಸ್ತ್ರನಿಯಮಗಳ ಪ್ರಕಾರ ಬಾಗುತ್ತವೆ. ಮೊದಲು ಕೋಡುಪೊರೆಯನ್ನು ತುರುವಾಗ, ಅದು ಮುಂದಕ್ಕೆ ಉಬ್ಬಿರುವುದರಿಂದಲೂ ಅದರ ಸಾಂದ್ರತೆ ಗಾಳಿಯ ಸಾಂದ್ರತೆಗಿಂತ ಹೆಚ್ಚಿರುವುದರಿಂದಲೂ ಕಿರಣಗಳು ಸಂಗಮಿಸುವಂತೆ ಮಧ್ಯಕ್ಕೆ ಬಾಗುತ್ತವೆ. ಕೋಡುಪೊರೆಯ ರಿಫ್ರೇಕ್ಷಣಾಂಕ 1.3. ಜಲಚರಗಳಲ್ಲಿ ನೀರಿನ ಮತ್ತು ಕೋಡುಪೊರೆಯ ಸಾಂದ್ರತೆಗಳು ಹೆಚ್ಚು ಕಡಿಮೆ ಸಮವಾಗಿರುವುದರಿಂದ ಕಿರಣಗಳು ಮಸೂರದಲ್ಲಿ ಮಾತ್ರ ಹೆಚ್ಚು ಬಾಗುತ್ತವೆ. ನೀರಿನ ದ್ರವರಸ ಮತ್ತು ಕಾಚೀದ್ರವ ರಸಗಳ ಸಾಂದ್ರತೆಗಳಲ್ಲಿ ವ್ಯತ್ಯಾಸ ಹೆಚ್ಚಿಲ್ಲದ್ದರಿಂದ ಕಿರಣಗಳು ಬಾಗುವುದಿಲ್ಲ. ಹೀಗೆ ಸಂಗಮಿಸುವ ಕಿರಣಗಳು ಕಣ್ಣುಗುಡ್ಡೆಯ ಹಿಂಭಾಗದಲ್ಲಿ ಕಣ್ಜಾಲದ ಮೇಲೆ ಬಿದ್ದು ಸಣ್ಣ, ನಿಜ ಬಿಂಬ ತಲೆಕೆಳಗಾಗಿ ಬೀಳುತ್ತದೆ. ಕ್ಯಾಮರಾದಲ್ಲಿ ಈ ಬಗೆಯ ಬಿಂಬವನ್ನು ಚೆನ್ನಾಗಿ ನೋಡಬಹುದು. ಮೆದುಳಿನ ಅಂಕೆಯಲ್ಲಿ ಉಂಗುರದಂತೆ ಮಸೂರದ ಸುತ್ತ ಇರುವ ಬಾಸೆಯ (ಸಿಲಿಯರಿ) ಸ್ನಾಯು ಕುಗ್ಗುವುದರಿಂದ ಮಸೂರವನ್ನು ಹಿಡಿದಿರುವ ತಂತುಗಳು ಸಡಿಲವಾಗಿ ಮಸೂರ ಉಬ್ಬಿ ಹತ್ತಿರದ ವಸ್ತುಗಳು ಚೆನ್ನಾಗಿ ಕಾಣುತ್ತವೆ. ಆ ಸ್ನಾಯು ಹಿಗ್ಗುವುದರಿಂದ ಮಸೂರ ತೆಳುವಾಗಿ ದೂರದ ವಸ್ತುಗಳು ಚೆನ್ನಾಗಿ ಕಾಣುತ್ತವೆ. ಹತ್ತಿರ, ದೂರದ ನೋಟಗಳನ್ನು ಸರಿಹೊಂದಿಸುವ ಏರ್ಪಾಟು ಇದೇ.

**ಕಣ್ಣು ಗುಡ್ಡೆಯ ಗೋಡೆ :** ಇದರಲ್ಲಿ ಮೂರು ಪದರಗಳಿವೆ. ಹೊರಗಡೆ ನಾರಿನಂತೆ ಗಡುಸಾಗಿರುವುದು ಬಿಳಿಪದರ (ಸ್ಕ್ಲೀರ). ಇದರ ಹಿಂದಿನ 2/3 ಭಾಗ ಪಾರದರ್ಶಕವಲ್ಲದ ಬಿಳಿಗುಡ್ಡೆ, ಮುಂದಿನ 1/3 ಭಾಗ ಪಾರದರ್ಶಕವಾದ ಕೋಡುಪೊರೆ. ಕೋಡು ಪೊರೆ ಇನ್ನಷ್ಟು ಉಬ್ಬಿದೆ. ಇದರಮೂಲಕ ಒಳಗಿರುವ ಕರಿಯಾಲಿ ಮುಂತಾದ ಭಾಗಗಳು ಕಾಣುತ್ತವೆ. ಹೊರಪದರದ ದಪ್ಪ ಎಲ್ಲೆಡೆಗಳಲ್ಲೂ ಸಮವಾಗಿಲ್ಲ. ನಡುವಣ ಪದರ ಕರಿದ್ರಾಕ್ಷಿಯ ಸಿಪ್ಪೆಯಂತಿದೆ. ಕಾಚೀದ್ರವ ದ್ರಾಕ್ಷಿಯ ಒಳ ಭಾಗದಂತಿದೆ. ಇದರ ಹೆಚ್ಚಿನ ಹಿಂಭಾಗ ತೆಳುವಾಗಿ ಹಲವು ಸಣ್ಣ ರಕ್ತನಾಳಗಳ ಜಾಲದಿಂದಾಗಿರುವ ಕಣ್ಣರಾಯು (ಕೊರಾಯ್ಡ್) ಪದರ. ಇದರಲ್ಲಿ ಕಪ್ಪು ಬಣ್ಣದ ಜೀವ ಕಣಗಳಿವೆ. ಕಪ್ಪಗಿರುವುದರಿಂದ ಬೇಡದ ಬೆಳಕಿನ ಕಿರಣಗಳು ಹಿಂದಕ್ಕೆ ಪುಟಿಸುವುದರಿಂದ ಕಣ್ಣು ಮಂಜಾಗುವುದು ತಪ್ಪುತ್ತದೆ. ರಕ್ತನಾಳಗಳು ಕಣ್ಜಾಲದ ಕಿರಣ ಗ್ರಾಹಿ ಕಣಗಳಿಗೆ ಪುಷ್ಟಿಯನ್ನು ನೀಡುತ್ತವೆ. ಇದೇ ಪದರ ಮುಂದೆ ಮಂದವಾಗಿ ಬಾಸೆಯ ದಿಂಡು (ಸಿಲಿಯರಿ ಬಾಡಿ) ಆಗಿದೆ. ಸಸ್ತನಿಗಳಲ್ಲಿ ಇದರ ಮೇಲೆ ಚಿತ್ರದ ಸೂರ್ಯನ ಕಿರಣಗಳಂತಿರುವ ದಿಬ್ಬಗಳಿವೆ. ಇದರಲ್ಲಿ ರಕ್ತನಾಳಗಳೂ ಅನೈಚ್ಛಿಕ ಸ್ನಾಯುವೂ ಇವೆ. ಇದರ ಒಳಮೈಮೇಲೆ ಅಂಟಿರುವ ಒಳಪದರದ ತೆಳುಭಾಗದಿಂದ ನೀರಿನ ದ್ರವ ಒಸರುತ್ತದೆ. ಸ್ನಾಯುತಂತುಗಳಲ್ಲಿ ಅರ್ಧದಷ್ಟು ರೇಖಾಂಶಗಳಲ್ಲಿವೆ. ಮಿಕ್ಕವು ಅಕ್ಷಾಂಶಗಳಲ್ಲಿ ಗುಂಡಗೆ ಉಂಗುರದಂತಿವೆ. ಇವು ಕುಗ್ಗಿದಾಗ ಮಸೂರ ಸ್ನಾಯು ಸಡಿಲ ಬಿದ್ದು ಮಸೂರ ಉಬ್ಬುತ್ತದೆ.

ನಡುವಣ ಪದರದ ಮೂಂಭಾಗವೇ ಕರಿಯಾಲಿ (ಐರಿಸ್). ಇದರ ನಡುವಣ ಕಂಡಿಯೇ ಪಾಪೆ (ಪ್ಯೂಪಿಲ್). ಇದರ ಬಣ್ಣ ಕೋಡು ಪೊರೆಯ ಮೂಲಕ ಹೊರ ಕಾಣುತ್ತದೆ. ಕಾಚೀದ್ರವರಸ ಗೂಡು ಕತ್ತಲಾಗಿರುವುದರಿಂದ ಪಾಪೆ ಎಲ್ಲರಲ್ಲೂ ಕಪ್ಪಗೆ ಕಾಣುತ್ತದೆ. ಭಾರತೀಯರಲ್ಲಿ ಸಾಮಾನ್ಯವಾಗಿ ಕರಯಾಲಿ ಕಂದೊ ಕಪ್ಪೊ ಬಣ್ಣಕ್ಕಿರುವುದು. ಬಿಳಿಯರಲ್ಲಿ ಕಂದು, ನೀಲಿ ಇಲ್ಲವೇ ಹಸುರಾಗಿರುವುದು. ಪಾಪೆಯ ಅಂಚಿನಲ್ಲಿರುವ ಗುಂಡು ಸ್ನಾಯು ಕುಗ್ಗಿದಾಗ ಪಾಪೆ ಹೆಚ್ಚು ಬೆಳಕಿನಲ್ಲಿ ಕಿರಿದಾಗುತ್ತದೆ. ಆರೆಕಡ್ಡಿಗಳಂತಿರುವ ಸ್ನಾಯುತಂತುಗಳು ಕುಗ್ಗುವುದರಿಂದ ಪಾಪೆ ಮಂದ ಬೆಳಕಿನಲ್ಲಿ ಹಿರಿದಾಗುತ್ತದೆ. ಕಣ್ಣುಚಾಲಕ (ಅಕ್ಯುಲೋಮೊಬಾರ್‌ನರ್ವ್) ಎಂಬ ತಲೆಯ ನರ 3ನೆಯ ಗುಂಡುಸ್ನಾಯುವನ್ನು ನಿಯಂತ್ರಿಸುತ್ತದೆ. ಹಿರಿದಾಗಿಸುವ ಸ್ನಾಯು ಕತ್ತಿನ (ಅನುವೇದನಾ) ನರಗಳ ಹತೋಟಿಯಲ್ಲಿದೆ. ಹೆಚ್ಚು ಬೆಳಕಿನಲ್ಲಿ ಪಾಪೆ ಕಿರಿದಾಗುವುದರಿಂದ ಕಣ್ಜಾಲಕ್ಕೆ ಹೆಚ್ಚು ಬೆಳಕಿನಿಂದಾಗಬಹುದಾದ ಹಾನಿ ತಪ್ಪುತ್ತದೆ. ಕರಿಯಾಲಿ ಕ್ಯಾಮರಾದಲ್ಲಿ ಮುಚ್ಚಿ ತೆಗೆವ ಕಂಡಿ ಇದ್ದಂತಿದೆ. ಬೇಕೆಂದಾಗ ನಾವು ಪಾಪೆಯನ್ನು ಚಿಕ್ಕದಾಗಿ ಅಥವಾ ದೊಡ್ಡದಾಗಿ ಮಾಡಲಾರೆವು. ಅನೈಚ್ಛಿಕ ಕೇಂದ್ರಗಳು ಮೆದುಳು, ಬೆನ್ನುಹುರಿಗಳಲ್ಲಿವೆ.

ಒಳಪದರವೇ ನರಪಟಲ ಅಥವ ಕಣ್ಜಾಲ (ರೆಟೀನ). ಜಾಲದಂತಿರುವುದರಿಂದ ಈ ಹೆಸರು ಬಂದಿದೆ. ಇದು ಕಾಚೀದ್ರವರಸದ ಗೂಡಿನ ಗೋಡೆಯ ಬಹುಭಾಗದಲ್ಲಿದೆ. ಇದರ ಮುಂದಿನ ಅಂಚು ಗರಗಸದಂತಿದೆ. ಈ ಅಂಚಿನ ಹಿಂದಿರುವುದೇ ನೋಟಕ್ಕೆ ಕಾರಣವಾಗುವ ಭಾಗ–ಕಣ್ಜಾಲ. ಇದಕ್ಕೆ ಮುಂದಿನದು ತೆಳುವಾಗಿ ಕರಿಬಣ್ಣದ ಜೀವಕಣಗಳಿಂದಾಗಿ ಬಾಸೆಯ ದಿಂಡನ್ನೂ ಕರಿಯಾಲಿಯ ಹಿಂಭಾಗವನ್ನೂ ಪಾಪೆಯ ವರೆಗೂ ಮುಚ್ಚಿದೆ. ಕಣ್ಜಾಲ ಬಹು ಕೋಮಲವಾದುದು. ಇದರಲ್ಲಿ ಕಣ್ಣುನರದ ತಂತುಗಳ ಜಾಲವೂ ಹೇರಳವಾಗಿ ಸಣ್ಣ ರಕ್ತನಾಳಗಳೂ ಇವೆ. ಇವು ಕೇಂದ್ರ ಕಣ್ಜಾಲ ರಕ್ತನಾಳದ ಕವಲುಗಳು. ಇವಕ್ಕೂ ಕಣ್ಣುಗುಡ್ಡೆಯ ಇತರ ರಕ್ತನಾಳಗಳಿಗೂ ಸಂಬಂಧವಿಲ್ಲ.

ಪಾಪೆಯ ಮೂಲಕ ಬೆಳಕು ಬಿಟ್ಟು, ಕಣ್ಣು ದರ್ಶಕದಿಂದ (ರೆಟಿನಾಸ್ಕೋಪ್) ಕಣ್ಣೊಳಗೆ ನೋಡಿದರೆ ಒಳ ಮತ್ತು ನಡುಪದರಗಳ ರಕ್ತನಾಳ ಜಾಲಗಳಿಂದ ಕಣ್ಜಾಲ ಕೆಂಪಗೆ ಕಾಣುತ್ತದೆ. ಹೊಸದಾಗಿ ಕೊಯ್ದು ಹೊರತೆಗೆದ ಕಣ್ಜಾಲ ಪಾರದರ್ಶಕವಾಗಿದ್ದು ಸ್ವಲ್ಪ ಕಾಲದಲ್ಲೆ ಮಂಜುಮಂಜಾಗುತ್ತದೆ.

**ಕಣ್ಜಾಲದ ಪದರಗಳು :** ಬೆಳಕಿನ ಕಿರಣಗಳ ಭೌತಿಕ ಚೋದನೆಯಿಂದ ನೋಟದ ಅರಿವಿನ ಆರಂಭ ಕಣ್ಜಾಲದಲ್ಲಾಗುವುದು. ಕಣ್ಣಿನಲ್ಲಿ ನೋಟದ ಪ್ರಧಾನಾಂಗ ಇದೇ. ಕಣ್ಣುಗುಡ್ಡೆಯ ಇತರ ಭಾಗಗಳು ಇರುವುದು ಕಣ್ಜಾಲದ ಆಧಾರ, ಪುಷ್ಟಿಗಳಿಗೆ, ಕಿರಣಗಳನ್ನು ಬಾಗಿಸುವುದಕ್ಕೆ ಮಾತ್ರ. ಕಣ್ಜಾಲ ಮಿದುಳಿನ ಭಾಗವೆಂದು ಪಿಂಡ ವಿಕಾಸದ ತಿಳಿವಳಿಕೆಯಿಂದ ಗೊತ್ತಾಗುತ್ತದೆ. ಸೂಕ್ಷ್ಮ ರಚನೆಯಲ್ಲಿ ಇದಕ್ಕೆ ಕೇಂದ್ರದ ಮತ್ತು ಸುತ್ತಂಚಿನ (ಪೆರಿಫೆರಲ್) ನರಮಂಡಲಗಳ ಲಕ್ಷಣಗಳಿವೆ. ವಿಜ್ಞಾನಿಗಳು ಒಪ್ಪಿದಂತೆ ಕಣ್ಜಾಲದ ಸೂಕ್ಷ್ಮರಚನೆಯಲ್ಲಿ ಹತ್ತು ಪದರಗಳನ್ನು ಗುರುತಿಸಬಹುದು. 1 ಕಣ್ಜಾಲದ ಹೊರಪದರ ಕಣ್ಣರಾಯುವಿಗೆ ಅಂಟಿಕೊಂಡು ಕಾಚೀದ್ರವ ರಸ ತಾಕದಿರುವ ಕಡೆಯ ಒಂದು ಬಣ್ಣಕವಿರುವ ಜೀವ ಕಣ ಪೊರೆ.

ಇದು ಪಿಂಡದಲ್ಲಿ ಮೆದುಳಿನಿಂದ ಹೊರಟುಕೊಳ್ಳುವ ಕಣ್ಣಿನ ಬುಡ್ಡೆ. ಎರಡು ಪದರಗಳ ಬಟ್ಟಲಾದ ಮೇಲೆ ಹೊರಪದರದಿಂದಾದುದು. 2 ಸಲಾಕಿ (ರಾಡ್) ಶಂಕುಗಳ (ಕೋನ್ಸ್) ಪದರ, ಕೋಲುಗಳು ಕೋಲುಕಣಗಳ ಆಚೆಯ ಭಾಗಗಳು. ಶಂಕುಗಳು ಶಂಕುಕಣಗಳ ಆಚೆಯ ಭಾಗಗಳು. ಬೆಳಕಿನ ಕಿರಣ ಕ್ರೀಡಾಗುವುವು ಇವೇ. ಇವುಗಳಲ್ಲೇ ನೋಟಗೆಲಸ ಮೊದಲಾಗುವುದು. 3 ಹೊರೆಲ್ಲೆ ಪೊರೆ. ಇದು ಮುಲ್ಲರ್ ಆಧಾರ ತಂತುಗಳ ಮೇಲಿನ ಕೊನೆಗಳು ಒಂದುಗೂಡುವುದರಿಂದಾದುದು. 4. ಹೊರನಡುಬೀಜ

(ನ್ಯೂಕ್ಲಿಯಾರ್). ಇದರಲ್ಲಿ ಸಲಾಕಿ ಶಂಕುಕಣಗಳ ನಡುಬೀಜಗಳಿವೆ. 5 ಹೊರಜಾಲಪದರ. ಇದು ಸಲಾಕಿ ಶಂಕುಕಣಗಳ ಮತ್ತು 6ನೆಯ ಪದರದ ಜೀವಕಣಗಳ ಹೊರಪಾದಗಳಿಂದಾದುದು. 6 ಒಳನಡುಬೀಜ ಪದರ. ಇದರಲ್ಲಿ ಇಗ್ಗಣೆ (ಬೈಪೋಲಾರ್) ಕಣಗಳ ನಡುಬೀಜಗಳು ಚುಕ್ಕಿಗಳಂತೆ ಕಾಣುತ್ತವೆ. 7 ಒಳಜಾಲ ಪದರ. ಇದರಲ್ಲಿ ಇಗ್ಗಣೆ ಕಣಗಳ ಒಳಪಾದಗಳೂ ನರಗಂಟು (ಗಾಂಗ್ಲಿಯಾನ್) ಕಣಗಳ ಹೊರಪಾದಗಳೂ ಕೂಡಿವೆ.




**ಚಿತ್ರ 2: 1. ಬಣ್ಣಕ ಜೀವಕಣ ಮೇಲ್ಪೊರೆ, 2. ಸಲಾಕಿ, ಸಂಕಗಳ ಪದರ, 3. ಹೊರ ಮಿತಿಕ ಪೊರೆ, 4. ಹೊರ ನಡುಬೀಜ ಪೊರೆ, 5. ಹೊರ ಹೆಣಿಲು ರೂಪಿ ಪದರ, 6. ಒಳ ನಡುಬೀಜ ಪದರ, 7. ಒಳ ಹೆಣಿಲು ರೂಪಿ ಪದರ, 8. ನರಗಂಟು ನರಕಣಗಳ ಪದರ, 9. ಕಣ್ಣಿನ ನರತಂತುಗಳ ಪದರ, 10. ಒಳಮಿತಿಕ ಪೊರೆ**

8 ನರಗಂಟು ನರಕಣಗಳ ಪದರ. 9 ಕಣ್ಣಿನ ನರತಂತುಗಳ ಪದರ–ಇದು ನರಗಂಟು ಕಣಗಳ ತಂತುಗಳಿಂದಾದುದು. 10 ಒಳಎಲ್ಲೆ ಪೊರೆ. ಇದು ಮುಲ್ಲರ್ ತಂತುಗಳ ಒಳಕೊನೆಗಳಿಂದಾದುದು.

ಕಣ್ಣಾಲದ ನರಕಣಗಳು : 1 ಕಿರಣಗ್ರಾಹಿಗಳು ಸಲಾಕಿ ಶಂಕುಕಣಗಳು, 2. ಬೆಳಕು ಪಡೆಕಗಳು (ಫೋಟೊರಿಸೆಸ್ಟಾರ್ಸ್) ನಾಲ್ಕು ಐದು ಬಗೆಗಳ ಇಗ್ಗಣೆ ಕಣಗಳು ಮತ್ತು ಐದು ಆರು ಬಗೆಯ ನರಗಂಟು ಕಣಗಳು. ಇವು ಆವೇಗಗಳನ್ನು ಮೆದುಳಿಗೆ ತಲಪಿಸುತ್ತವೆ. 3 ಜೋಡಿಕಗಳು ಅಡ್ಡನರಕಣಗಳು ಮತ್ತು ತಂತುರಹಿತ (ಅಮೆಕ್ರೈನ್) ಕಣಗಳು. ಇವು ಬೆಳಕನ್ನು ಹಿಡಿವಾಗ ಕಣ್ಣಾಲದಲ್ಲಿ ಸಾಮರಸ್ಯ ತರುವುವು.

ನರಕಸೆಗಳು, ಕಣ್ಣಾಲಗಳ ನರಕಣಗಳ ದಿಸೆಗೆಲಸ, ಕಣ್ಣಾಲದ ನಿಜಗೆಲಸಗಳಿಗೆ ಮುಖ್ಯವಾದ ಜಟಿಲವಾದ ವ್ಯೂಹದಲ್ಲಿ ಬಗೆಬಗೆಯ ನರಕಣಗಳು ಜೋಡಣೆಯಾಗಿವೆ. ಒಂದೊಂದು ನರಕಣವೂ ಇತರ ಕಣಗಳೊಡನೆ ತಾಕಿಕೊಂಡು ಕೆಲಸ ಮಾಡುತ್ತದೆ. ತಂತುಗಳ ಕೊನೆಯ ಶಾಖೆಗಳ ಕೊನೆಗಳು ಗಂಟು ಕಟ್ಟಿವೆ. ಈ ಗಂಟುಕೊನೆಗಳು ನರಕಣಗಳ ನಡುಭಾಗಗಳೊಡನೆ ಅಥವಾ ಅವುಗಳ ಚಾಚುಗಳೊಡನೆ ಅಂಟಿವೆ. ಈ ಸಂಧಿಗಳೇ ನರಕಸೆಗಳು (ಸೈನಾಪ್ಸಸ್). ಆವೇಗಗಳು ಒಂದೇ ಕಡೆಗೆ ಹೋಗುವವನ್ನು ಸರಾಗವಾಗಿ ಬಿಡುತ್ತ ಎದುರಾಗಿ ಬರುವವನ್ನು ತಡೆಯುತ್ತವೆ. ಇದೇ ದಿಸೆಗೆಲಸದ ವ್ಯವಸ್ಥೆ. ಇದರಿಂದ ಆವೇಗಗಳು ಎಲ್ಲ ದಿಕ್ಕುಗಳಲ್ಲಿ ಕಕ್ಕಾಬಿಕ್ಕಿಯಾಗುವುದು ತಪ್ಪುತ್ತದೆ. ನರಕಣದ ಶಾಖೆಗಳು ಇತರ ಕರಣಗಳಿಂದ ಬರುವ ಸಮಾಚಾರಗಳನ್ನು ಹಿಡಿಯುತ್ತವೆ. ನರಕಣದ ತಂತು ಉದ್ದವಿದ್ದು ಇದರ ಶಾಖೆಗಳ ಮೂಲಕ ಸಮಾಚಾರಗಳು ಇತರ ನರಕಣಗಳನ್ನು ಸೇರುತ್ತವೆ. ಹೇಗೂ ಅವು ಹಿಂದಕ್ಕೆ ಹೋಗುವಂತಿಲ್ಲ.

**ಕಣ್ಣಾಲ ನರಕಣಗಳ ನರಕಸೆ ಬಂಧನಗಳು :** (ಅ) ಶಂಕು ಕಣಗಳ ಒಳಕೊನೆಗಳಿಗೂ ಇಗ್ಗಣೆ ಕಣಗಳ ಹೊರಕೊನೆಗಳಿಗೂ ಬಂಧನಗಳಿವೆ. (ಆ) ಸಲಾಕಿ ಕಣಗಳ ಒಳಗಂಟು ಕೊನೆಗಳಿಗೂ ಇಗ್ಗಣೆಗಳ ಹೊರಕೊನೆಗಳಿಗೂ ಬಂಧನಗಳಿವೆ. ಶಂಕು ಕಣಗಳ ಇಗ್ಗಣೆಗಳೂ ಸಲಾಕಿ ಕಣಗಳ ಇಗ್ಗಣೆಗಳೂ ಬೇರೆ ಬೇರೆ (ಇ) ಅಡ್ಡಕಣಗಳ ಶಾಖೆಗಳು ಶಂಕು ಕಣಗಳಿಗೆ ಮಾತ್ರ ಗಂಟುಬಿದ್ದಿವೆ, ಸಲಾಕಿ ಕಣಗಳಿಲ್ಲ. ಆದರೆ ಅಡ್ಡಕಣಗಳ ನರತಂತುಗಳು ಸಲಾಕಿ ಮತ್ತು ಶಂಕು ಕಣಗಳ ಒಳಕೊನೆಗಳಿಗೆ ಕೂಡಿಕೊಂಡಿವೆ. (ಈ) ಇಗ್ಗಣೆಗಳ ಒಳಕೊನೆಗಳಿಗೂ ನರಗಂಟು ಕಣಗಳ ಕವಲುಗಳಿಗೂ ಬಂಧನಗಳಿವೆ. ಕಣ್ಣಾಲದ ನಡುವೆ ಈ ನರಕಸೆ ಬಂಧನಗಳು ನಿರ್ದಿಷ್ಟವಾಗಿವೆ. ಆದರೆ ಸುತ್ತಲಿನ ಪ್ರದೇಶದಲ್ಲಿ ನರಕಸೆ ಬಂಧನಗಳು ಅನಿರ್ದಿಷ್ಟವಾಗಿರುವುದರಿಂದ ಈ ಭಾಗಗಳಲ್ಲಿ ನೋಟದ ಚುರುಕು ಕಡಿಮೆ.

ಕಣ್ಣಾಲದ ರಚನೆಗೂ ಅದರ ಕೆಲಸಗಳಿಗೂ ಇರುವ ಹೊಂದಾಣಿಕೆ ಲೆಕ್ಕವಿಲ್ಲದಷ್ಟು ನರಕಸೆಗಳಿಂದ, ಬೆಳಕುಪಡೆಕಗಳಿಂದ ಹೊರಟ ಆವೇಗ ದಾರಿಗಳಲ್ಲಿ ಹೋಗುವುದರಿಂದ ಹಲವು ರೀತಿಗಳಲ್ಲಿ ಆವೇಗ ಮಾರ್ಪಡುತ್ತದೆ. ಆಚೆಯಿಂದ ಬರುವ ಕಿರಣಗಳು ನಿಸರ್ಗನಿಯಮಗಳ ಪ್ರಕಾರ ಕೋಡು ಪೊರೆ ಮಸೂರಗಳಲ್ಲಿ ಬಾಗಿ ಕಾಚೀದ್ರವ ರಸ, ಕಣ್ಣಾಲಗಳನ್ನು ತೂರುತ್ತವೆ. ಇವುಗಳಿಂದ ಕಣ್ಣಾಲದ ಒಳಪದರಗಳ ಮೇಲೆ ಪರಿಣಾಮವಿಲ್ಲ. ಆಚೆಪದರದಲ್ಲಿ ಬೆಳಕುಪಡೆಕಗಳಾಗಿರುವ ಶಂಕು ಸಲಾಕಿ ಕಣಗಳನ್ನು ತಲಪಿದಾಗ ರಾಸಾಯನಿಕ ಕೆಲಸದಿಂದ ಆವೇಗಗಳು ಹುಟ್ಟುತ್ತವೆ. ಸಲಾಕಿಗಳಲ್ಲಿ ಕಿರಣಕ್ಕೀಡಾಗುವ ವಸ್ತುವಾದ ನೋಟಕೆನ್ನೀಲಿ (ರೊಡಾಪ್ಸಿನ್) ಇದೆ. ಬೆಳಕಿನಲ್ಲಿ ಈ ರಂಗು ಬಿಳಿಚಿಕೊಳ್ಳುತ್ತದೆ; ಕತ್ತಲಲ್ಲಿ ಊದಾ ಆಗುತ್ತದೆ. ಇದೇ ರೀತಿಯಲ್ಲಿ ಶಂಕುಗಳಲ್ಲೂ ಇಂಥದೇ ಆದರೆ ಬಣ್ಣವಿಲ್ಲದ, ರಾಸಾಯನಿಕವಿದೆಯೆಂದು ತಿಳಿಯಲಾಗಿದೆ. ಆದರೆ ಏಳು ಬಣ್ಣಗಳಲ್ಲಿರುವ ಕೆಲವು ಅಲೆಗಳಿಗೆ ಹೆಚ್ಚು ಸೂಕ್ಷ್ಮವಾಗಿದೆ. ಸಲಾಕಿಗಳ ಕೆಲಸ ಮುಖ್ಯವಾಗಿರುವುದು ಮಸಕು ಬೆಳಕಿನಲ್ಲಿ ಎಂದು ನಂಬಲಾಗಿದೆ. ಆದರೆ ಇವು ಬಣ್ಣಗಳನ್ನು ಗುರ್ತಿಸಲಾರವು. ಶಂಕುಗಳು ಸಾಕಷ್ಟು ಬೆಳಗುವ ಬೆಳಕಿನಲ್ಲೇ ಕೆಲಸ ಮಾಡುವುದು ; ಅವು ಬಣ್ಣಗಳನ್ನೂ ವಸ್ತುಗಳ ಸಣ್ಣ ವಿವರಗಳನ್ನೂ ಗುರುತಿಸಬಲ್ಲುವು. ಇದು ಹಗಲುನೋಟ. ಗೂಗೆಗಳಲ್ಲಿ ಶಂಕುಗಳಿಲ್ಲದೆ ಬರೀ ಸಲಾಕಿಗಳಿರುವುದರಿಂದ ಅವಕ್ಕಿ ಹಗಲುನೋಟವಿಲ್ಲ ; ಹೀಗೆ ಇತರ ನಿಶಾಚರಿಗಳ ಕಣ್ಣುಗಳಲ್ಲೂ ಶಂಕುಗಳಿಲ್ಲ. ಈ ವಿಷಯವಾಗಿ ಮಾನವ ದೃಷ್ಟಿಯಲ್ಲಿ ಎರಡು ಅಂಗಗಳಿವೆ ಎಂದು ಹೇಳಬಹುದು. ಒಂದು ಹಗಲುನೋಟಕ್ಕೆ, ಇನ್ನೊಂದು ರಾತ್ರಿನೋಟಕ್ಕೆ, ನೋಟಕೆನ್ನೀಲಿಗೂ ಎ ಜೀವಾತಿಗೂ ಸಂಬಂಧವಿದೆ. ಎ ಜೀವಾತು ಕೊರತೆಯಿಂದ ರಾತ್ರಿಕುರುಡು ಆಗುತ್ತದೆ.

ಕಣ್ಣಾಲದ ರಚನೆ ಬಣ್ಣನೋಟ : ಬಣ್ಣನೋಟಕ್ಕೆ ಬೇಕಾದುವು ರಾಸಾಯನಿಕ ಅಂಶಗಳೋ ರಚನಾಂಶಗಳೋ ಎಂಬುದನ್ನು ಹಲವು ರೀತಿ ತರ್ಕಿಸಲಾಗಿದೆ. ಥಾಮಸ್ ಯಂಗ್, ಆಮೇಲೆ ಹರ್ಮನ್ ಫಾನ್ ಹೆಲ್ಮ್ ಹೋಲ್ಟ್ ಮತ್ತಿತರರು ಮೂರು ರಚನಾಂಶಗಳು (ಮೂರು ಬಗೆಯ ಶಂಕುಗಳು, ನರತಂತುಗಳು) ಇತರ ಬಣ್ಣಗಳಿಗೆ ಈಡಾಗುವಂತಿದ್ದರೂ ಕಾಮನ ಬಿಲ್ಲಿನ ಕೆಂಪು, ಹಸುರು, ನೀಲಿಗಳಿಗೆ ಮಾತ್ರ ನೀಲಿ ಸುಲಭವಾಗಿ ಈಡಾಗುವುವು ಎಂದು ಊಹಿಸಿದರು. ಇದೇ ಬಣ್ಣನೋಟದ ಮೂರ್ಬಣ್ಣ ಸಿದ್ಧಾಂತ. ಕೆಂಪು ಮತ್ತು ಹಸುರು ಅಥವಾ ಹಸುರು ಮತ್ತು ಅಥವಾ ಸರಸ್ವತಿ ಬಣ್ಣದ ಎರಡು ನರತಂತುಗಳ ಚೋದನೆಯಾದರೆ ನಡು ಬಣ್ಣನೋಟ ಅಂದರೆ ಹಳದಿ ಅಥವಾ ನೀಲಿ ಹಸುರು ಕಾಣುತ್ತದೆ. ಮೂರುಬಗೆಯ ನರತಂತುಗಳ ಚೋದನೆಯಾದರೆ ಬಿಳಿಯ ಬಣ್ಣ ಕಾಣುತ್ತದೆ. ಎವಾಲ್ಡ್ ಹೆರಿಂಗ್ ಮೂರು ಎದುರೆದುರು ಜೋಡಿಗಳು ಕೆಂಪು ಹಸುರು, ಹಳದಿ ನೀಲಿ, ಮತ್ತು ಸರಸ್ವತಿ ಕಪ್ಪು ಬಿಳುಪು ಇವೆಯೆಂದು ನಂಬಿದ (ಎದುರೆದುರು ಬಣ್ಣಗಳ ಸಿದ್ಧಾಂತ).

ಇಂದಿನ ವಿದ್ಯುದಂಗಕ್ರಿಯಾವಿಜ್ಞಾನದ ಪ್ರಕಾರ ಬದುಕಿರುವ ಕಣ್ಣಾಲದಲ್ಲಿ ರಚನೆಯೂ ನಿಜಗೆಲಸವೂ ಹೆಚ್ಚು ತೊಡಕಾಗಿರುವುದು ತೋರುತ್ತದೆ. ಗ್ರಾನಿಟನ ಮೇಲುಗೈಯಾದ ಶಾಮಕ ಸಿದ್ಧಾಂತದ ಪ್ರಕಾರ ಕಣ್ಣಾಲದ ವೇದನ ತಂತ್ರದಲ್ಲಿ ಎರಡು ಮೂಲವಿಧಗಳಿವೆ. ಮೊದಲ ವರ್ಗ ಮೇಲುಗೈಯವು ಒಂದು ಹಗಲು ನೋಟಕ್ಕೆ ಮತ್ತೊಂದು ರಾತ್ರಿನೋಟಕ್ಕೆ ಏಳು ಬಣ್ಣಗಳಿಗೂ ಅನ್ವಯಿಸುತ್ತವೆ. ಮಂದ ಬೆಳಕಿನ ಹೊಳಪುಗಳಿಗೂ ಅನ್ವಯಿಸುತ್ತವೆ. ಶಾಮಕವರ್ಗಕ್ಕೂ ಮೇಲುಗೈವರ್ಗಕ್ಕೂ ಸಂಬಂಧವಿಲ್ಲ. ಶಾಮಕವರ್ಗದ ತಂತ್ರಗಳು ತಿದ್ದುವಂಥವು–ಒಂದೊಂದೂ ಕಾಮನಬಿಲ್ಲಿನ ಕೆಲವು ಭಾಗಗಳಲ್ಲಿ ಕೆಲಸಮಾಡುತ್ತದೆ. ಅಲೆ ಉದ್ದಗಳು ಹಾಗೂ ನೆರಳುಗಳನ್ನನುಸರಿಸಿ ಹಿಡಿಯಲು ನಡುವರ್ತಿಯಾಗುತ್ತದೆ. ಮುಖ್ಯವಾಗಿ ತಿದ್ದುವ ವ್ಯಾಪ್ತಿಗಳು ಮೂರಿವೆ: 1. 0.580–0.610, 2. 0.520–0.540 ಮತ್ತು 3. 0.404–0.470 ಮೈಕ್ರಾನ್‌ಗಳ ಉದ್ದಗಳಿರುವ ಕಿರಣತರಂಗಗಳು. ಈ ಅರ್ಥದಲ್ಲಿ ಗ್ರಾನಿಟನ ಸಿದ್ಧಾಂತ ಬಹು ವಿಜ್ಞಾನಿಗಳು ಒಪ್ಪುವ ತ್ರಿವರ್ಣ ಸಿದ್ಧಾಂತಕ್ಕೆ ಸರಿಹೊಂದುತ್ತದೆ. ಇರುವ ವ್ಯತ್ಯಾಸವೇನೆಂದರೆ ಗ್ರಾನಿಟನ ಸಿದ್ಧಾಂತದಲ್ಲಿ ಕಾಮನಬಿಲ್ಲಿನ ಸಣ್ಣ ಸಣ್ಣ ಭಾಗಕ್ಕೂ ಬೇರೆ ಬೇರೆ ಪ್ರತಿಕ್ರಿಯೆಗಳಾಗಿಸುವ ಹಲವು ತಿದ್ದುವ ತಂತ್ರಗಳಿವೆ. ಬಿಳುಪು ಅದರ ಹೊಳಪಿನ ಪ್ರಮಾಣ ಗೊತ್ತಾಗಲು ತನಿಯಾಗಿರುವ ತಂತ್ರ ಬಲವಾಗಿದೆ. ಈ ವಿಷಯದಲ್ಲಿ ಹೆನ್ರಿ ಪಯೆರಾನ್ ಒಪ್ಪಿದ್ದಾನೆ.

ಹೆಚ್ಚಾಗಿ ಮನೋವಿಜ್ಞಾನ, ಅಂಗಕ್ರಿಯಾಶಾಸ್ತ್ರಗಳ ಆಧಾರದ ಮೇಲೆ ಮಾಡಿದ ಕಣ್ಪಾಲದ ರಚನಾಂಶಗಳ ಅಧ್ಯಯನದಿಂದ ದೊರಕಿದ ಅಂಕಿ ಅಂಶಗಳನ್ನು ಗಮನಿಸಿದಾಗ, ಈ ಹಿಂದಿನ ಯತ್ನಗಳನ್ನು ಇನ್ನೂ ಚೆನ್ನಾಗಿ ವಿವರಿಸಬಹುದು. ಮೊದಲ ವಿಚಾರವೆಂದರೆ ಕಣ್ಪಾಲದ ಕಣ್ಣಿನ ನತಿಯಲ್ಲಿ ಸಲಾಕಿಗಳಿಲ್ಲದೆ ಬರೀ ಶಂಕುಗಳಿರುವುದು. ಎಲ್ಲ ಬಣ್ಣಗಳು ಇಲ್ಲ ಅರಿವಿಗೆ ಬರುವುದರಿಂದ ಖಚಿತ ಪ್ರಮಾಣದಲ್ಲಿ ಬಣ್ಣ ನೋಟಕ್ಕೆ ಸಲಾಕಿಗಳಲ್ಲದೆ ಶಂಕುಗಳೇ ಕಾರಣ. ಇನ್ನೊಂದಂಶವೆಂದರೆ, ಶಂಕುಗಳಲ್ಲಿ ಹಲವು ಬಗೆಗಳಿವೆ ಎಂಬ ಊಹೆಗೆ ಒಪ್ಪುವಷ್ಟು ಪುರಾವೆಯಿಲ್ಲದಿರುವುದು. ಅದರಲ್ಲೂ ಕಣ್ಣಿನ ನತಿಯಲ್ಲಿ ಅದರ ಸುತ್ತಲೂ ಎಲ್ಲ ಶಂಕುಗಳ ನರಕಸೆಗಳು ಒಂದೇ ರೀತಿಯಿದೆ. ಬಹುಶಃ ಅಕ್ಷಭಾಗದಲ್ಲಿ ಎಲ್ಲ ಶಂಕುಗಳಿಗೆ ಕಾರ್ಯಸಮತೆ ಇರುವ ಮತ್ತು ಎಲ್ಲ ಅಲೆ ಉದ್ದಗಳು ಅಥವಾ ಬಣ್ಣಛಾಯೆಗಳಿಂದ ಪ್ರತಿ ಶಂಕು ಚೋದಿತವಾಗುವ ಸಂಭವವಿದೆ. ರಾಸಾಯನಿಕ ರಚನೆ ಇನ್ನೂ ತಿಳಿಯದಿದ್ದರೂ ಮನಸ್ಸಿನಲ್ಲಿ ಕೊನೆಗೆ ಬಣ್ಣದ ಆವೇಗ ಒಂದೇ ರೀತಿಯ ಚೋದನೆ ಸರಣಿಗಳನ್ನು ಆರಂಭಿಸಲಿರುವ ತಂತ್ರ ಬಹುಶಃ ಶಂಕುಗಳಿಲ್ಲಿದೆ. ಶಂಕುಗಳ ಚೋದನೆಗಳನ್ನು ಬಳಸಿಕೊಳ್ಳುವುದು ಇಗ್ಗಣೆ ನರಗಂಟುಗಳಂಥ ಕಣ್ಪಾಲದ ಇತರ ರಚನಾಂಶಗಳ ಕರ್ತವ್ಯವೆಂದು ಕಾಣುತ್ತದೆ. ನಮಗೆ ತಿಳಿದಿರುವಂತೆ ಮೂಲ ಶಂಕುಚೋದನೆಗಳ ತಿದ್ದುಪಡಿಗಳು ಹಲವು ರೀತಿಯಲ್ಲಿ ನಡೆಯುತ್ತವೆ. ವಿಭಜನೆ ಅಥವಾ ಆಯ್ಕೆ, ಪುಷ್ಟೀಕರಣ, ಸಂಕಲನ, ನಿಯಂತ್ರಣ ಅಥವಾ ಎದುರಿಸಿಕೆ. ಹೀಗೆ ನೋಡಿದರೆ, ಕಣ್ಪಾಲ ಬಲು ಸೋಜಿಗದ, ವ್ಯವಸ್ಥೆಗೊಂಡ, ಬೇರ್ಪಡಿಸುವ ತಂತ್ರ. ಇದರಿಂದ ಬೆಳಕುಪಡೆಕಗಳಲ್ಲಿ ಹುಟ್ಟಿದ ಚೋದನಾ ಆವೇಗಗಳು ಸಲಾಕಿಗಳಿಂತ ಹೆಚ್ಚಾಗಿ ಶಂಕುಗಳಲ್ಲಿ ಮಾರ್ಪಟ್ಟು ಕೊನೆಯ ಅರಿವಿಗೆ ಮೆದುಳಿನ ಕೇಂದ್ರಗಳಿಗೆ ರವಾನೆಯಾಗುತ್ತವೆ.

ಕಣ್ಪಾಲದ ಪ್ರಾದೇಶಿಕ ವೈವಿಧ್ಯ ಮತ್ತು ನೋಟದ ಚುರುಕು ಒಟ್ಟಿನಲ್ಲಿ ಕಣ್ಪಾಲದ ಎಲ್ಲ ಭಾಗಗಳ ರಚನೆ ಒಂದೇ ರೀತಿಯಿದ್ದರೂ ಬೇರೆ ಬೇರೆ ಎಡೆಗಳಲ್ಲಿ ವ್ಯತ್ಯಾಸಗಳಿವೆ. ಬಹುಮುಖ್ಯವಾದುದು ನೋಟದ ಜಾಗ. ಹೊಸದಾಗಿ ಕಣ್ಪಾಲಗಳಲ್ಲಿ ಅಕ್ಷದಲ್ಲಿ ಹಳದಿ ಚುಕ್ಕೆ ಇರುತ್ತದೆ. ಈ ಕೇಂದ್ರದಲ್ಲಿ ನರಕಣಗಳ ಸಂಖ್ಯೆ ಹೆಚ್ಚಿರುವುದರಿಂದ ಇಲ್ಲಿ ಕಣ್ಪಾಲದ ದಪ್ಪ ಹೆಚ್ಚು. ಹಳದಿ ಚುಕ್ಕೆಯ ನಡುವೆ ಕಣ್ಪಾಲದ ಹೊರಪದರಗಳು ಪಕ್ಕಕ್ಕೆ ಸರಿದಿರುವುದರಿಂದ ಒಂದು ನತಿಯಿದೆ. ಈ ನತಿಯಲ್ಲಿ ಬೆಳಕುಪಡೆಕ ಕಣಗಳ ಪದರ ಮಾತ್ರ ಬಲು ದಪ್ಪಕ್ಕಿದೆ; ಇಲ್ಲಿ ಸಲಾಕಿಗಳಿಲ್ಲ. ಶಂಕುಗಳು ಉದ್ದವಾಗಿವೆ. ಈ ನತಿಯ ವ್ಯಾಸ 1.5 ಮಿಮೀ ಇಲ್ಲಿ ಕೇಂದ್ರಶಂಕುಗಳನ್ನು ತಲುಪುವ ಕಿರಣಗಳನ್ನು ತಡೆಯುವಂತೆ ರಕ್ತನಾಳಗಳಿಲ್ಲ. ಆದರೆ ಕೇಂದ್ರ ಶಂಕುಗಳ ಅಡ್ಡವ್ಯಾಸ 1 (1 ಮೈಕ್ರಾನ್=1/25000 ಅಂಗುಲ). ಇಷ್ಟು ಸಣಕಲ




ಚಿತ್ರ 3: 1. ಕಣ್ಣೀರಿನ ಗ್ರಂಥಿ, 2. ಕಣ್ಣೀರಿನ ಸಾಗುನಾಳ, 3. ಮೇಲಿನ ರೆಪ್ಪೆಪದರ, 4. ಕೆಳಗಿನ ರೆಪ್ಪೆಪದರ, 5. ಕಂಡಿಚುಕ್ಕೆ, 6. ಕಣ್ಣೀರು ಚೀಲ, 7. ಕಿರುಸಾಗಾಲುವೆ, 8. ಮೂಗಿನ ಸಾಗಾಲುವೆ

ಶಂಕುಗಳ ಸುತ್ತಮುತ್ತ ಇಲ್ಲ. ಈ ರಚನಾಂಶ ದೃಷ್ಟಿವ್ಯಾಪ್ತಿಯ ಕೇಂದ್ರದಲ್ಲಿರುವ ನೋಟದ ಚುರುಕಿಗೆ ಕಾರಣ. ಮೇಲೆ ನೋಡಿದರೆ ಒಂದೊಂದು ಶಂಕುವೂ ಆರು ಮೂಲೆ ಚೌಕವಾಗಿ ಕಾಣಿಸುತ್ತದೆ. ಈ ಆರು ಮೂಲೆಯವು ಒಂದನ್ನೊಂದು ದಾಟುವ ಸಾಲುಗಳಲ್ಲಿವೆ. ಈ ನತಿಯಿಂದ 3 ಮಿಮೀ ಒಳಗಡೆ ಕಣ್ಣುಬಟ್ಟು ಇದೆ. ಇದು ಸಲಾಕಿಶಂಕುಗಳಿಲ್ಲದ ಕುರುಡು ಚುಕ್ಕೆ. ಇದರ ಮೇಲೆ ಬಿದ್ದ ಕಿರಣಗಳು ಕಣ್ಣಿಗೆ ಕಾಣಬರುವುದಿಲ್ಲ. ಇಲ್ಲಿ ನರಗಂಟು ಕಣಗಳ ನರತಂತಗಳ ಕಣ್ಣುಗುಡ್ಡೆಯಿಂದ ಹೊರಟು ಕಣ್ಣು ನರವಾಗುತ್ತವೆ. ಕೇಂದ್ರಗುಳಿಯಲ್ಲಿ ಕಣ್ಪಾಲದ ರಚನೆ ಕ್ರಮವಾಗಿದ್ದು ಕೇಂದ್ರದಿಂದ ಕಣ್ಣು ನರವಾಗುತ್ತವೆ. ಕೇಂದ್ರಗುಳಿಯಲ್ಲಿ ಕಣ್ಪಾಲದ ರಚನೆ ಕ್ರಮವಾಗಿದ್ದು ಕೇಂದ್ರದಿಂದ ಆಚೆಗೆ ಹೋಗ ಹೋಗುತ್ತ, ಅದರಲ್ಲೂ ಹೆಚ್ಚಾಗಿ ಗರಗಸ ಅಂಚಿನಲ್ಲಿ, ಯದ್ವಾತದ್ವಾ ಆಗುತ್ತದೆ. ಇದಕ್ಕೆ ಸರಿಯಾಗಿ, ನೋಟದ ಚುರುಕೂ ಕಡಿಮೆಯಾಗುತ್ತ ಬರುತ್ತದೆ. ಕೇಂದ್ರದ ಸುತ್ತಲೂ ಒಂದೊಂದು ಇಗ್ಗಣೆಗೂ ನರಕಸೆ ಬಂಧನವಾದ ಸಲಾಕಿಶಂಕುಗಳ ಅಂಕಿಯೂ ಒಂದೊಂದು ನರಗಂಟು ಕಣಕ್ಕೆ ಬಂಧನವಾದ ಇಗ್ಗಣೆಗಳ ಅಂಕಿಯೂ ಹೆಚ್ಚಿ ಹೆಚ್ಚಿ ಅಂಚಿನಲ್ಲಿ ಅತ್ಯಲ್ಪಕಿರಣಗಳ ಚೋದನೆಗೂ ಹಾಗಾಗಿ ಚಲನಸಂಬಂಧವಾದ ಅರಿವಿಗೂ ಚುರುಕಾಗಿದೆ. ಈ ಮಟ್ಟದ ಚುರುಕು ಗರಗಸ ಅಂಚಿನಲ್ಲಿರುವಷ್ಟು ಅಕ್ಷಭಾಗದಲ್ಲಿಲ್ಲ.

**ಕಣ್ಣಿನ ಉಪಾಂಗಗಳು :** ಕಣ್ಣುಗುಡ್ಡೆಯೂ ಇದಕ್ಕೆ ಸಂಬಂಧಿಸಿದ 7 ಸ್ನಾಯುಗಳು, ರಕ್ತನಾಳಗಳು, ನರಗಳು, ಕಣ್ಣೀರುಗ್ರಂಥಿ, ಕಣ್ಣುಗುಳಿಯ ಕೊಬ್ಬೂ ಸೇರಿ ತಲೆಬುರುಡೆಯಲ್ಲಿರುವ ಕಣ್ಣುಗುಳಿಯಲ್ಲಿವೆ. ಲೋಳೆಪೊರೆ, ಚರ್ಮ, ರೆಪ್ಪೆಗಳು ರೆಪ್ಪೆ ಗೂದಲು, ಹುಬ್ಬು–ಇವೂ ಕಣ್ಣಿನ ಭಾಗಗಳು. ಗ್ರಂಥಿಯಿಂದ ಹೊರಟ ಕಣ್ಣೀರು ರೆಪ್ಪೆಗಳು ಹರಡಿ ತೆರೆದಿರುವ ಕಣ್ಣುಭಾಗಗಳ ಲೋಳೆಪೊರೆಯನ್ನು ತೊಳೆದು ಕೋಡುಪೊರೆಯನ್ನು ಚೊಕ್ಕವಾಗೂ ಪಾರದರ್ಶಕವಾಗೂ ಇಡುತ್ತದೆ. ಕಣ್ಣೀರು ಸದಾ ಸ್ವಲ್ಪಸ್ವಲ್ಪವಾಗಿ ಒಸರುತ್ತಿರುತ್ತದೆ. ರೆಪ್ಪೆಬಡಿತ ನಿಂತರೂ ಕೋಡು ಪೊರೆ ಒಣಗುವುದರಿಂದ ಕುರುಡಾಗುತ್ತದೆ. ಅಳುವಾಗ ಹೆಚ್ಚು ಸುರಿದ ನೀರು ಆಚೆ ಸುರಿದರೂ ಕೊಂಚಭಾಗ ಕುಣಿಕೆಯಲ್ಲಿರುವ ಸಣ್ಣ ನಾಳಗಳ ಮೂಲಕ ಕುಣಿಕೆ ಚೀಲವನ್ನು ಸೇರಿ ಅಲ್ಲಿಂದ ಕಣ್ಣು ಮೂಗುನಾಳದ ಮೂಲಕ ಮೂಗನ್ನು ಸೇರುತ್ತದೆ. ಅದಕ್ಕೇ ಅಳುವಾಗ ಮೂಗಿನಲ್ಲೂ ನೀರು ಬರುವುದು. ಸದಾ ನೀರಿನಲ್ಲಿರುವ ಪ್ರಾಣಿಗಳಿಗೆ ರೆಪ್ಪೆಗಳು ಮತ್ತು ಕಣ್ಣೀರು ಗ್ರಂಥಿ ಬೇಕಾಗಿಲ್ಲ.

***ಪಿಂಡದಲ್ಲಿ ಕಣ್ಣಿನ ವಿಕಾಸ* :** ಪಿಂಡದ ಮೆದುಳಿನ ಭಾಗವಾದ ನಡುಮೆದುಳಿನಿಂದ ಎರಡು ಪಕ್ಕಚಾಚುಗಳು ಬೆಳೆಯುತ್ತವೆ. ಒಂದೊಂದು ಚಾಚೂ ಸಣ್ಣ ಟೊಳ್ಳುಗದೆಯಂತಿದ್ದು, ದುಂಡುಕೊನೆಯಲ್ಲಿ ಗುಳಿಬಿದ್ದ ಇಪ್ಪದರಗಳಿರುವ ಬಟ್ಟಲಿನಂತಾಗುತ್ತದೆ. ಈ ಬಟ್ಟಲಿನ ಹೊರಪದರದಿಂದ ಹೊರ ಕರಿಬಣ್ಣದ ಕಣಪದರದಿಂದ ಒಳಪದರವೂ ಸಲಾಕಿ ಶಂಕುಗಳು ಇಗ್ಗಣೆ ಕಣಗಳು, ನರಗಂಟುಗಳೂ ಹುಟ್ಟಿಕೊಳ್ಳುತ್ತವೆ. ಕಣ್ಣುಬಟ್ಟಲನ್ನು ಮುಚ್ಚಿರುವ ಹೊರಚರ್ಮ ದಪ್ಪಾಗಿ ಮಡಚಿಕೊಂಡು ಮುಚ್ಚಿನ ಚೀಲವಾಗಿ ಮೇಲ್ಚರ್ಮದಿಂದ ಬೇರ್ಪಟ್ಟು ಮಸೂರವಾಗುತ್ತದೆ. ಇದೇ ಜಾಗದಲ್ಲಿ ಅದೇ ಕಾಲದಲ್ಲಾದ ಗುಳಿಯ ತುಟಿಗಳಿಂದ ರೆಪ್ಪೆಗಳೂ ಲೋಡುಪೊರೆಯೂ ಆಗುತ್ತವೆ. ನಡುಚರ್ಮದಿಂದ ಕೋಡು ಪೊರೆಯ ಲೋಳೆಪೊರೆಯಲ್ಲಾದ ಭಾಗವು ಕರಿಯಾಲಿ ಹೊರಪದರ, ನಡುಪದರಗಳೂ (ಬಾಸೆಯದಿಂಡು ಕೂಡಿ) ಆಗುತ್ತವೆ. (ಎಂ.ಡಿ.)

**ಕಣ್ಣಿನ ರೋಗಗಳು :** ಕಣ್ಣುಗುಡ್ಡೆ ಮತ್ತದರ ಹಲವು ಭಾಗಗಳಿಗೆ ಹತ್ತುವ ರೋಗಗಳು, ಗಾಯ ಪೆಟ್ಟುಗಳು, ವಿಷಮ ಗಂತಿಗಳನ್ನು (ಮೆಲಿಗ್ನೆಂಟ್ ಟ್ಯೂಮರ್ಸ್) ಇಲ್ಲಿ ವಿವರಿಸಿದೆ. ಕುರುಡುತನ, ನೋಟದ ಕುಂದುಗಳು, ಆಹಾರ ಪುಷ್ಟಿ ಸಾಲದೆ ಬರುವ ರೋಗಗಳನ್ನು ಬೇರೆಡೆ ಕೊಟ್ಟಿದೆ. (ನೋಡಿ– ಕಾಕುಪಾಲನೆ) (ನೋಡಿ– ಜೀವಾತುಗಳು) (ನೋಡಿ– ಕಣ್ಣಾಯಾಸ)

**ರೆಪ್ಪೆಗಳ ರೋಗಗಳು :** ಕಣ್ಣಿಗೆ ಸಣ್ಣ ಪೆಟ್ಟು, ಅಪಾಯಗಳು ತಾಕದಂತೆ ತಡೆವುದಲ್ಲದೆ ಕಣ್ಣುಗುಡ್ಡೆ ಮುಂಭಾಗ ತೇವವಿಲ್ಲದೆ ಒಣಗದಂತೆ ಇರಿಸುವವು ರೆಪ್ಪೆಗಳು. ರೆಪ್ಪೆ ಮುಚ್ಚಲು ಸುತ್ತುವರಿಕ (ಆರ್ಬಿಕ್ಯುಲಾರಿಸ್) ಸ್ನಾಯುಕುಗ್ಗುವುದೇ ಕಾರಣ. ರೆಪ್ಪೆ ತೆರೆಯಲು ಬಾಣ ಮೊನೆಯಂಥ ಸ್ನಾಯುವಿದೆ. ಸಾಮಾನ್ಯವಾಗಿ ರೆಪ್ಪೆಗಳು ಕಣ್ಣುಗುಡ್ಡೆಗೆ ಚೆನ್ನಾಗಿ ತಾಕಿಕೊಂಡಿರುವುವು. ಇವು ನಿದ್ರೆಯಲ್ಲಿ ಮುಚ್ಚಿರುತ್ತವೆ. ಸುತ್ತುವರಿಕ ಸ್ನಾಯು ಸೆಡೆತುಕೊಂಡಾಗ ರೆಪ್ಪೆ ಅಂಚು ಒಳತಿರುಗಿರುವುದಕ್ಕೆ ಒಳತಿರುವೆ (ಎಂಟ್ರೋಪಿಯಾನ್) ಎಂದಿದೆ. ಆಗ ರೆಪ್ಪೆ ಗೂದಲು (ಎವೆ) ಕಣ್ಣುಗುಡ್ಡೆಯನ್ನು ಗೀಚಿದಂತಾಗಿ ಹುಣ್ಣಾಗಬಹುದು. ಇದಕ್ಕೆದುರಾಗಿ, ರೆಪ್ಪೆಗೆ ಗಾಯವೋ ಹುಣ್ಣೋ ಆಗಿ ವಾಸಿಯಾದ ಮೇಲೆ ಕಲೆಗಟ್ಟಿದಾಗ ರೆಪ್ಪೆ ಅಂಚು ಹೊರಮಡಿಸಿಕೊಂಡಿರುವುದಕ್ಕೆ ಹೊರತಿರುವೆ (ಎಕ್ ಟ್ರೋಪಿಯಾನ್) ಎಂದಿದೆ. ಮುಪ್ಪಿನಲ್ಲಿ ಕೆಳರೆಪ್ಪೆಗಳಲ್ಲಿ ಬಲವಿಲ್ಲದೆ ಜೋಲು ಬೀಳಬಹುದು. ನಿತ್ರಾಣದಿಂದ ರೆಪ್ಪೆ ಜೋಲು (ಟೋಸಿಸ್) ಬಿದ್ದಿರಬಹುದು. ಇದರಿಂದ ನೋಟಕ್ಕೆ ಅಡ್ಡಿಯಾದರೆ ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು.

ತಲೆಯ 7ನೆಯ ನರವಾದ, ಮೊಗದ ನರದ ಅಂಕೆಯಲ್ಲಿರುವ ಸುತ್ತರಿಕ ಸ್ನಾಯುವೇ ರೆಪ್ಪೆಗಳಿಂದ ಕಣ್ಣು ಮುಚ್ಚಲು ಕಾರಣವಾದ್ದರಿಂದ ಈ ನರದ ಅರನಾರಿಯಲ್ಲಿ (ಪೆರಾಲಿಸಿಸ್) ಕಣ್ಣುಮಿಟುಕಣೆ, ಮುಚ್ಚಿಗೆ ಆಗದು. ಹೀಗೆ ಬಹಳ ಹೊತ್ತು ಮುಚ್ಚದಂತಾದರೆ ಕಣ್ಣುಗುಡ್ಡೆ ಮುಂದಿರುವ ತಿಳಿಪೊರೆಯಾದ ಕೋಡು ಪೊರೆ (ಕಾರ್ನಿಯ) ಒಣಗಿ ಹುಣ್ಣೇಳುತ್ತದೆ. ಆಗ ನಿದ್ರೆಹೊತ್ತಿನಲ್ಲಿ ತೇವವಿರುವಂತೆ ಏನಾದರೂ ಉಪಾಯ ಮಾಡಬೇಕಾಗುವುದು.

ರೆಪ್ಪೆಗಳಲ್ಲಿನ ಗ್ರಂಥಿಗಳಿಂದ ಸುರಿವ ಮೈಜಿಡ್ಡು (ಸೀಬಂ) ರೆಪ್ಪೆ ಅಂಚುಗಳು ಒಂದಕ್ಕೊಂದು ಅಂಟದಂತೆ ಇರಿಸುವುದಲ್ಲದೆ, ಎಂದಿನ ಕಣ್ಣೀರು ಹೊರಕ್ಕೆ ಹರಿದು ಹೋಗದೆ ಹಾಗೆ ತಡೆವುದು. ಈ ಮೈಜಿಡ್ಡು ಗ್ರಂಥಗಳಿಗೆ ಸೋಂಕುಹತ್ತಿ ಕೀವು ಗೂಡುವುದೇ ಕಣ್ಕುಟಿಕೆ. ಇದಕ್ಕೆ ಸೋಂಕುರೋಧಕ ಮದ್ದುಗಳನ್ನು ಹಚ್ಚಿ ಕಾವು ಕೊಡುವುದರಿಂದ ಗುಣಪಡಿಸಬಹುದು. ಈ ರೆಪ್ಪೆ ಗ್ರಂಥಿಗಳಲ್ಲಿ ಅಡಚಣೆಯಾಗಿ ಒಳರೆಪ್ಪೆಯಾಳದಲ್ಲಿ ಗಟ್ಟಿ ಕುರು ಏಳುವುದೇ ಕಣ್ಣುಜಿಟ್ಟೆ (ಕೆಲೇಜಿಯಾನ್). ಕೆಲವೇಳೆ ಇದು ಸುಲಭವಾಗಿ ವಾಸಿಯಾಗದ್ದರಿಂದ ಕೊಯ್ದು ಕೀವುಗಟ್ಟಿರುವುದನ್ನು ಹೊರಡಿಸದಿದ್ದರೆ ಗಟ್ಟಿಕಾಳಿನಂತೆ ಗಂಟು ಉಳಿವುದು.

ರೆಪ್ಪೆಯ ಅಂಚುಗಳಲ್ಲಿ ಕೂದಲ ಕೋಶಿಕಗಳಲ್ಲಿ (ಫಾಲಿಕಲ್ಸ್) ಸೋಂಕು ಹತ್ತಿ ರೆಪ್ಪೆಯುರಿತವಾಗಲು (ಬ್ಲೆಫರೈಟಿಸ್) ಚರ್ಮದ ಮೇಲೆ ಯಾವಾಗಲೂ ಇರುವ ಸಾಮಾನ್ಯ ಏಕಾಣುಜೀವಿಗಳೇ ಕಾರಣ. ಆಗ ರೆಪ್ಪೆಗೂದಲುಗಳ ಬುಡದಲ್ಲಿ ಪಿಸುರುಗಟ್ಟಿ ಹುರುಪೆ (ಸ್ಕೇಲ್) ಏಳುತ್ತದೆ. ಜೀವಿರೋಧಕ ಮದ್ದುಗಳಿಂದ ಇದನ್ನು ಗುಣಪಡಿಸಬಹುದು.

**ಕಣ್ಣೀರಿನ ಸಾಧನದ ರೋಗಗಳು :** ಕಣ್ಣುಗುಡ್ಡೆಯ ಮುಂಭಾಗದಮೇಲೆ ಯಾವಾಗಲೂ ಒಂದು ತೆಳುಪದರ ಉಳಿವಷ್ಟು ನೀರನ್ನು ಕಣ್ಣೀರು ಗ್ರಂಥಿಗಳು ಸುರಿಸುತ್ತಲೇ ಇರುತ್ತವೆ. ಕಣ್ಣೀರಿನ ತಯಾರಿಕೆ, ಕಣ್ಣೀರು ಆರಿಹೋಗುವಿಕೆ, ಕಣ್ಣೀರು ಕಾಲುವೆಗಳ ಮೂಲಕ ಹೊರಸಾಗಣೆಯ ವೇಗಗಳು ಯಾವಾಗಲೂ ಎಷ್ಟು ಚೆನ್ನಾಗಿ ಒಂದಕ್ಕೊಂದು ಹೊಂದಿಕೊಂಡಿರುವುವೆಂದರೆ ಸಾಧಾರಣವಾಗಿ ಕಣ್ಣೀರು ಹೊರಹರಿದು ಬೀಳದು. ಕಣ್ಣೀರಿನ ತೇವ ಕೂಡ ಯಾರ ಅರಿವಿಗೂ ಬರದಂತಿರುವುದು. ಕೆಲವು ಬೇನೆಗಳಲ್ಲಿ ಕಣ್ಣೀರು ಸುರಿತ ಏರುಪೇರಾಗುತ್ತದೆ. ಕಣ್ಣಿನಿಂದ ಮೂಗಿನೊಳಕ್ಕೆ ಸಾಗುವ ಕಾಲುವೆಗೆ ಅಡಚಣೆ ಆಗುವುದೇ ಕಣ್ಣೀರು ಹೆಚ್ಚಾಗಿ ಹೊರಬೀಳುವುದರ ಕಾರಣ. ಮೂಗಿನಲ್ಲಿ ಏನಾದರೂ ಬೆಳೆದಿದ್ದರೆ ಹೀಗಾಗುತ್ತದೆ. ಹಾಗೇ ಕೆಳರೆಪ್ಪೆಯ ವಿಕಾರ, ಕಣ್ಣೀರು ಕಾಲುವೆಯಲ್ಲಿ ಒತ್ತಳುವ ಸ್ನಾಯುವಿನ ದುರ್ಬಲತೆಗಳೂ ಕಾರಣವಾಗಬಹುದು. ಮುಪ್ಪಿನಲ್ಲಿ ಕೆಳರೆಪ್ಪೆ ಜೋಲು ಬೀಳುವುದರಿಂದ ನೀರುಗಣ್ಣು (ಎಪಿಫೋರ) ಆಗಿ ಕೊಂಚ ಕಣ್ಣೀರು ಹೊರಸುರಿವುದು. ಇವಲ್ಲಿ ಬಹುಪಾಲನ್ನು ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು. ಕಣ್ಣೀರು ಚೀಲಕ್ಕೂ ಮೂಗಿಗೂ ನಡುವಣ ಸಾಗಾಲುವೆ (ಡಕ್ಟ್) ಮುಚ್ಚಿಹೋಗಿದ್ದರೆ ಕಣ್ಣೀರು ಚೀಲದಲ್ಲಿ ಸೋಂಕು ಸೇರಿಕೊಳ್ಳುತ್ತದೆ. ಆಗ ಮುಚ್ಚಿಹೋದ ದಾರಿಯನ್ನು ಶಸ್ತ್ರಕ್ರಿಯೆಯಿಂದ ಬಿಡಿಸಿ ತೆರೆಯದಿದ್ದಲ್ಲಿ ಕೋಡು ಪೊರೆಗೆ ಅಪಾಯವಿದೆ.

ಕಣ್ಣೀರು ಸುರಿಕೆ ಸಾಲದಾದರೆ ಬಲು ತೊಂದರೆ, ಅಪಾಯ ಹೆಚ್ಚು. ಕಣ್ಣು ಒಣಗಿದಂತಾಗಿ ಕಣ್ಣಲ್ಲಿ ಏನೋ ಬಿದ್ದು ಕೆರೆಯುತ್ತಿರುವ ಹಾಗೆ ತೋಚುವುದು. ವಯಸ್ಸಾದ ಹೆಂಗಸರಲ್ಲಿ ಒಳಸುರಿಕೆಬೇನೆಯೊಂದರಲ್ಲಿ ಹೀಗಾಗುತ್ತದೆ. ಒಳಸುರಿಕ ಗ್ರಂಥಿ ಚಿಕಿತ್ಸೆ ನಡೆಸುವುದರೊಂದಿಗೆ, ಆಗಾಗ್ಗೆ ನೀರು ತೊಟ್ಟುಗಳನ್ನು ಹಾಕಿ ಕಣ್ಣೊಳಭಾಗವನ್ನು ತೋಯಿಸುತ್ತಿರುಬಹುದು. ಕಣ್ಣೀರು ಹರಿದು ಹೋಗದಂತೆ ಸಾಗುದಾರಿಗಳನ್ನು ಶಸ್ತ್ರಕ್ರಿಯೆಯಿಂದ ಮುಚ್ಚಿಹಾಕಬಹುದು. ಇನ್ನೇನೂ ಮಾಡಲಾಗದಿದ್ದರೆ, ಜೊಲ್ಲುಗ್ರಂಥಿ ನಾಳಗಳನ್ನು ಇಲ್ಲಿಗೆ ಜೋಡಿಸಿ ಹೊಲೆವುದುಂಟು.

**ಕೂಡು ಪೊರೆಯ ರೋಗಗಳು :** ಕಣ್ಣುರೆಪ್ಪೆಗಳ ಹಿಂಭಾಗದಲ್ಲೂ ಕಣ್ಣು ಗುಡ್ಡೆಯ ಮೇಲೂ ಹೊದಿಸಿದಂತಿರುವ ಕೂಡುಪೊರೆ (ಕಂಜಂಕ್ಟೈವ) ಹೊರಗಾಳಿಗೆ ಒಡ್ಡಿರುವುದರಿಂದ ಸುಲಭವಾಗಿ ಸೋಂಕುಗಳು, ಒಗ್ಗದಿಕೆಗಳು, ಕೆರಳಿಕೆ ವಸ್ತುಗಳು, ರಾಸಾಯನಿಕಗಳಿಗೆ ಈಡಾಗಿ ಕೂಡುಪೊರೆಯುರಿತ (ಕಂಜಂಕ್ಟಿವೈಟಿಸ್) ಆಗುತ್ತದೆ. ಕಣ್ಣಲ್ಲಿ ರಕ್ತಗಟ್ಟಿ ಕೆಂಪೇರಿ, ಕಣ್ಣೀರು ಹರಿಸುತ್ತ, ರೋಸೋ ಗೀಜೋ ಕೀವೋ ಸುರಿಯಬಹುದು. ರಾತ್ರಿ ಮಲಗಿದ್ದು ಬೆಳಗ್ಗೆ ಎದ್ದಾಗ ಕಣ್ಣುರೆಪ್ಪೆಗಳು ಗೀಜುಕಟ್ಟಿ ಮೆತ್ತಿಹಾಕಿಕೊಂಡಿರುತ್ತವೆ. ಕಡಿತ, ಉರಿ ಆಗಿ, ಕಣ್ಣು ಚುಚ್ಚುತ್ತಿರುವುದು. ಸಾಮಾನ್ಯವಾಗಿ ನೋವು ಅಷ್ಟಾಗಿರದು. ನೋಟಕ್ಕೂ ಅಡ್ಡಿಯಿಲ್ಲ. ಅಡ್ಡಿಯಾಗಿದ್ದರೆ ಕೂಡುಪೊರೆಗೂ ಸೊಂಕು ಹತ್ತಿರಬೇಕು. ಸೂರ್ಯನ ಬೆಳಕಿನ ದೀಪ ಬೆಸಗೆ ದೀಪಚಾಪ, ಕಣ್ಣು ಕೊರೈಸುವ ಬಿಸಿಲುಗಳಿಂದಲೂ ಕೂಡುಪೊರೆಯುರಿತ ಏಳಬಹುದು. ಬೆಳಕಿಗೆ ಕಣ್ಣು ಬಿಡದಂತಾಗುತ್ತದೆ.

ಕರಡಜ್ವರದೊಂದಿಗೆ (ಹೇ ಫೀವರ್) ಕೊಂಚವಾಗಿ ಒಗ್ಗದಿಕ ಕೂಡುಪೊರೆಯುರಿತ ಕಾಣಿಸಿಕೊಳ್ಳಬಹುದು. ಊತ, ಕೆಂಪೇರಿಕೆ, ಕೆರೆತ, ದದ್ದುಗಳೂ ಏಳಬಹುದು. ಮದ್ದುಹಾಕುವುದನ್ನು ನಿಲ್ಲಿಸಿದರೆ ಇವೆಲ್ಲ ಶಮನವಾಗುತ್ತವೆ. ಕಾರಣಕಾರಕಗೊತ್ತಿಲ್ಲವಾದರೂ ವಸಂತದ (ವರ್ನಲ್) ಕೂಡುಪೊರೆಯುರಿತವೂ ಒಗ್ಗದಿಕೆಯದೆಂಬ ಅಭಿಪ್ರಾಯವಿದೆ. ಮಕ್ಕಳಲ್ಲಿ ವಸಂತದಲ್ಲಿ ಕೆರಳುವುದು ಸಾಮಾನ್ಯ. ಕೆರೆತ ವಿಪರೀತವಾಗಿ ಕೂಡುಪೊರೆ ಮಂದವಾಗುತ್ತದೆ. ಸ್ಟಿರಾಯ್ಡ್ ಮದ್ದುಗಳಿಂದ ಕೆರೆತ ಇಳಿಯುತ್ತದೆ.

ಹೊರಗಾಳಿ, ದೂಳು, ಕಾವು, ಚಳಿಗಳಿಗೆ ತೆರೆದೊಡ್ಡಿರುವುದರಿಂದ ಕೂಡುಪೊರೆಗೆ ರೋಗಾಣುಗಳು ಸುಲಭವಾಗಿ ತಾಕುತ್ತಿರುವುವು. ಆದರೆ ಸೋಂಕು ಹತ್ತಿದರೆ ಜೀವಿರೋಧಕಗಳ ತೆರನ ಬಲವಾದ ಮದ್ದುಗಳಿಂದ ಚೆನ್ನಾಗಿ ತಡೆಯಬಹುದು, ಗುಣಪಡಿಸಬಹುದು. ದೊಡ್ಡವರ ಪರಮಾ (ಗೊನೋರಿಯ) ರೋಗ ಆಗ ಹುಟ್ಟಿದ ಹಸುಗೂಸುಗಳ ಕೂಡುಪೊರೆಗೆ ಹತ್ತಿ ಕುರುಡಾಗುತ್ತಿದ್ದ ಕಾಲ ಜೀವಿರೋಧಕ ಮದ್ದುಗಳು ಬಂದಾಗಿಂದ ಕಾಣದಾಗಿದೆ. ಬೇಸಗೆಯಲ್ಲಿ ಸಾಮಾನ್ಯವಾಗಿ ಬರುವ ಕಣ್ಣುನೋವು (ಕೆಂಗಣ್ಣು) ಇಂದಿನ ಗುಣಕಾರಿ ಮದ್ದುಗಳಿಗೆ ಮಣಿದಿದೆ. ಯಾವ ಸೋಂಕು ರೋಧಕ ಮದ್ದಿಗೂ ಜಗ್ಗದ ವಿಷಕಣಗಳಿಂದಾದ (ವೈರಸಸ್) ಕೂಡುಪೊರೆಯುರಿತ ಪ್ರಪಂಚದ ಎರಡನೆಯ ಯುದ್ಧ ಕಾಲದಲ್ಲಿ ಸಾಂಕ್ರಾಮಿಕವಾಗಿ ತಲೆದೋರಿತು. ಮುಖ್ಯವಾಗಿ ಹಡಗು ಕಟ್ಟೆಗಳಲ್ಲಿ ಇದರ ಹಾವಳಿ ಹೆಚ್ಚಾಗಿ ಬಹಳ ನಷ್ಟವಾಯಿತು. ಬಲು ಅಂಟುರೋಗವಾದ್ದರಿಂದ ಈಗಲೂ ಸಾಂಕ್ರಾಮಿಕವಾಗುವುದುಂಟು. 2–3 ತಿಂಗಳು ಕಾಡಿಸಿದರೂ ಕೊನೆಗೆ ಗುಣವಾಗುತ್ತದೆ.

ಈಜಿಪ್ಟ್ ಭಾರತದಲ್ಲಿ ಅಲ್ಲಲ್ಲಿ ಸಾಂಕ್ರಾಮಿಕದಂತೆ ಹಬ್ಬಿರುವ ಬೇರೂರಿದ ಅಂಟುರೋಗ ರವೆಗಣ್ಣೂ (ಟ್ರಾಕೋಮ) ಕೂಡುಪೊರೆಯುರಿತವೇ. ಹಿಂದುಳಿದ ನಾಡುಗಳಲ್ಲಿ ಇದು ಮುಖ್ಯವಾಗಿ ಶಾಲಾಮಕ್ಕಳಲ್ಲಿ ಹೆಚ್ಚಾಗಿ ಕಂಡುಬಂದು, ಚಿಕಿತ್ಸೆ ಇಲ್ಲವಾದರೆ ಕೂಡುಪೊರೆಯ ಮೇಲೆ ಕಲೆಗಟ್ಟಿ ಕುರುಡಾಗುತ್ತಿದ್ದರು. ವಿಶ್ವ ಆರೋಗ್ಯ ಸಂಸ್ಥೆ ಮತ್ತಿತರ ಸಂಘಗಳ ಸತತ ಯತ್ನ, ನೆರವಿನಿಂದ ಬಹಳ ಕಡೆ ಇದರ ಹಾವಳಿ ಇಳಿಯುತ್ತಿದೆ. ಈ ರೋಗಕ್ಕೆ ಕಾರಣವಾದ ವಿಷಕಣ ಕೆಲವು ಜೀವಿರೋಧಕಗಳಿಗೆ ಜಗ್ಗುತ್ತದೆ. ಗಂಡು, ಹೆಣ್ಣು ಈಜುಗಾರರ ಜನನಾಂಗಗಳಲ್ಲಿ ರೋಗ ತೋರದಿದ್ದರೂ ಅಲ್ಲಿರುವ ಒಂದು ವಿಷಕಣವೇ, ಕಣ್ಣಿಗೆ ತಾಕಿದರೆ ಈಜು ಕೊಳದ ಕೂಡುಪೊರೆಯುರಿತ ಆಗುವುದರ ಕಾರಣ ಸೋಂಕಿರುವ ಈಜುಕೊಳದಲ್ಲಿ ಇಳಿಯುವವರೆಲ್ಲರಿಗೂ ಹತ್ತುವುದು. ಎರಡು ಕಣ್ಣುಗಳಲ್ಲೂ ರೋಸು ಸುರಿಸುವ ಈ ಬೇನೆ ಸಲ್ಫೋನೆಮೈಡುಗಳಿಂದ ಗುಣವಾಗುತ್ತದೆ.

ಚರ್ಮ ಮತ್ತು ಲೋಳಪೊರೆಗಳ ಎಷ್ಟೋ ರೋಗಗಳು, ಅದರಲ್ಲೂ ಗಂಟಲಮಾರಿ (ಡಿಫ್ತೀರಿಯ), ದಡಾರ, ನಾಯಿ ಕೆಮ್ಮುಗಳಂಥ ಎಳೆತನದ ಕೂರಾದ ಸೋಂಕಿನ ಜ್ವರದ ರೋಗಗಳಲ್ಲಿ ಅಷ್ಟಿಷ್ಟು ಕೂಡುಪೊರೆಯುರಿತ ಕಾಣಿಸಿಕೊಳ್ಳುವುದು ಸಾಮಾನ್ಯ.

ಒಣಕಲ ನಾಡುಗಳಲ್ಲಿ ಕಂಡುಬರುವ ಉರಿತವೇಳಿಸದ ಕೂಡುಪೊರೆ ರೋಗ ಒಂದಿದೆ. ಮುಕ್ಕಪೊರೆ (ಟೆರಿಜಿಯಂ) ರೋಗದಲ್ಲಿ ಗಾಳಿ, ದೂಳುಗಳಿಗೊಡ್ಡಿದ ಕೂಡುಪೊರೆಯ ಭಾಗ ಮುದುರಿಕೊಳ್ಳುವುದಲ್ಲದೆ ಕೂಡುಪೊರೆಯ ಮೇಲೂ ತೆವಳುತ್ತದೆ. ಇದರಿಂದ ಕಣ್ಣುನೋಟಕ್ಕೆ ಆತಂಕವಾಗುವುದು. ಎಳೆಯದಾಗಿರುವಾಗ ಇದನ್ನು ನೋಡಲು ವಿಕಾರ. ಸಣ್ಣ ಶಸ್ತ್ರಕ್ರಿಯೆಯಿಂದ ಇದನ್ನು ಗುಣಪಡಿಸಿ ಮತ್ತೆ ಮರುಕಳಿಸದಂತೆ ತಡೆಗಟ್ಟಬಹುದು,

ಕೂಡು ಪೊರೆಯ ರೋಗಗಳು : ಕಣ್ಣೊಳಗೊಂದು ಮಸೂರವಿದ್ದರೂ ಕೂಡು ಪೊರೆಯೂ ಒಂದು ಕಣ್ಣುಗುಡ್ಡೆಯ ಮುಂಭಾಗದ ಗೋಡೆಯಾಗಿರುವ ಮಸೂರ ಎನ್ನಬಹುದು. ಇದು ತಿಳಿಯಾಗಿ ಆಚೆ ಕಾಣುವಂತಿದ್ದು ನುಣುಪಾಗಿರಲು ಮುಖ್ಯ ಕಾರಣ ಇದರ ಜೀವಕಣಗಳ ಪದರಗಳ ಕ್ರಮವಾದ ಜೋಡಣೆ. ಕೂಡು ಪೊರೆಗೆ ಗಾಯವೋ ಹುಣ್ಣೋ ಆದಮೇಲೆ ವಾಸಿಯಾಗಿ ಕಲೆಗಟ್ಟಿದರೆ ಆ ಜಾಗಗಳಲ್ಲೆಲ್ಲ ಮೊದಲಿನ ತಿಳಿಯಾಗಿ ಆಚೆಗಾಣಿಕ ಗುಣವನ್ನು ನೀಗುತ್ತದೆ. ಹೀಗೆ ಕಲೆಗಟ್ಟಿದಾಗ ಬೇರೆಯವರ ಕಣ್ಣಿನಿಂದ ತೆಗೆದು ತಂದುದನ್ನು ಕೆಟ್ಟಿರುವ ಭಾಗಕ್ಕೆ ನಾಟಿ ಹಾಕುವುದಕ್ಕೆ ನೇತ್ರದಾನ ಎನ್ನುವುದುಂಟು. ಕೆಲವೇಳೆ ಇದಕ್ಕಾಗಿ ಕನ್ನಡಕಗಳನ್ನು ಹಾಕಿಸಿ ಸರಿಪಡಿಸಬಹುದು.

ಗಾಳಿ, ದೂಳುಗಳಿಗೆ ತೆರೆದಿಟ್ಟಿರುವುದೂ ಇದರಲ್ಲಿ ರಕ್ತನಾಳಗಳೇ ಇಲ್ಲದ್ದೂ ಕೊಂಚ ಗಾಯವಾದರೂ ನೋಟಕ್ಕೆ ವಿಪರೀತ ಅಡ್ಡಿಯಾಗುವುದೂ ಕೂಡು ಪೊರೆ ಕೆಡುವ ಮುಖ್ಯ ಕಾರಣಗಳು. ಹೊರಗಿನ ಇಲ್ಲವೇ ಮೈಯೊಳಗೇ ಏಳುವ ಕಾರಣಗಳಿಂದ ಕೂಡು ಪೊರೆಯ ಸಾಮಾನ್ಯ ರೋಗಗಳು ಬರಬಹುದು. ಕೂಡು ಪೊರೆ ರೋಗಗಳಿಗೆ ಸೋಂಕು, ಜೀವವಸ್ತುಕರಣ (ಮೆಟಬಾಲಿಸಂ), ರಕ್ತಸುತ್ತಾಟ, ಒಗ್ಗದಿಕೆ, ಅನುವಳಿಕೆ (ಡೀಜನರೇಷನ್) ಕಾರಣಗಳಾಗಬಹುದು. ಮಾದರಿಯಾಗಿ ನಾಲ್ಕು ತೆರನ ರೋಗಗಳನ್ನು ವಿವರಿಸಿದೆ.

ಕೂಡು ಪೊರೆಯ ಹುಣ್ಣು : ಇದು ಹೊರಗಣ ಸೋಂಕು, ಗಾಯಪೆಟ್ಟುಗಳಿಂದ ಆಗುವುದು. ಬಹುಮಟ್ಟಿಗೆ ಕೇವಲ ಕೂಡು ಪೊರೆ ಮೇಲ್ಮೈ ಮೇಲಾಗುವ ಸಣ್ಣ ಗೀಚಲಿನ ಮೂಲಕ ರೋಗಾಣುಗಳು ಒಳಹೊಗುತ್ತವೆ. ಗೀಚಲೊಂದಿಗೇ ಏಕಾಣುಜೀವಿಗಳೂ ಒಳಸೇರಬಹುದು. ರೋಗಾಣುಗಳು ವಿಷಮತೆ ಸೋಂಕು ರೋಧಕ ಚಿಕಿತ್ಸೆಗೆ ತಕ್ಕಂತೆ ಅಕ್ಕಪಕ್ಕದ ಊತಕ ಹಾಳಾಗಿ ಹುಣ್ಣೇಳುತ್ತದೆ. ಬಹುಪಾಲು ಈ ಹುಣ್ಣುಗಳು ಚಿಕಿತ್ಸೆಗೆ ಮಣಿದು 2–3 ವಾರಗಳಲ್ಲಿ ವಾಸಿಯಾಗಿ, ಹಾಳಾದ ಭಾಗದಷ್ಟು ಆಕಾರದ ಆಳವಾದ ಕಲೆಗಟ್ಟೂ (ಸ್ಕಾರ್) ಉಳಿದುಬಿಡುತ್ತದೆ. ಚಿಕಿತ್ಸೆ ಕೈಗೂಡದಲ್ಲಿ ರೋಗಾಣು ಬಲು ಜೋರಾಗಿದ್ದರೆ ಹಾಳಾದ ಭಾಗಗಳಿಗೆ ತಕ್ಕಂತೆ ಹುಣ್ಣು ಆಳವಾಗೂ ಪಕ್ಕಗಳಲ್ಲಿ ಹರಡಿಕೊಂಡೂ ದೊಡ್ಡದಾಗುವುದು. ಆಳವಾಗಿ ಹರಡಿದರಂತೂ ಕೂಡು ಪೊರೆಯಲ್ಲಿ ತೂತು ಬಿದ್ದು ನೀರಿನ ದ್ರವರಸ (ಅಕ್ವಿಯಸ್ ಹ್ಯೂಮರ್) ಸುರಿದುಹೋಗಿ ಕೂಡು ಪೊರೆಗೆ ಕರಿಯಾಲಿ (ಐರಿಸ್) ತಾಕುವುದರಿಂದ ತೀರ ಅಪಾಯಕರ. ಕಣ್ಣುಗುಡ್ಡೆ ಗಾತ್ರ, ಆಕಾರಗಳು ಕುಸಿದುಬೀಳುತ್ತವೆ. ಸಾಮಾನ್ಯವಾಗಿ ಕರಿಯಾಲಿ ಆ ತೂತಿಗೆ ಅಡ್ಡಬಿದ್ದು ಮುಚ್ಚಿ ಕಣ್ಣುಗುಡ್ಡೆ ಮತ್ತೆ ಎಂದಿನ ಆಕಾರ ಗಾತ್ರಗಳಿಗೆ ಬರುತ್ತದೆ. ಆದರೆ ಕರಿಯಾಲಿ ಕೂಡು ಪೊರೆಗೆ ಅಂಟಿಕೊಂಡರೆ ಇನ್ನೂ ತೊಡಕೇ. ತೂತುಬಿದ್ದಮೇಲೆ ಕೂಡು ಪೊರೆ ಹುಣ್ಣು ಸಾಧಾರಣವಾಗಿ ವಾಸಿಯಾಗುವುದು.

**ಸರಳ ತದ್ದಿನ ಸೊಂಕು :** ಜ್ವರದ ಬೊಬ್ಬೆಯ ವಿಷಕರಣದಿಂದೇಳುವ ಸರಳತದ್ದು (ಹರ್ಪಿಸ್ ಸಿಂಪ್ಲೆಕ್ಸ್) ಕೂಡು ಪೊರೆಗೆ ತಾಕುವ ಇನ್ನೊಂದು ಸೋಂಕು. ಎಷ್ಟೋ ಮಂದಿಯ ಕೂಡುಪೊರೆ ಚೀಲಗಳಲ್ಲಿ ಈ ವಿಷಕಣಗಳಿದ್ದರೂ ಕೆಲವರಲ್ಲಿ ಮಾತ್ರ ಇವು ಒಳಹೊಕ್ಕು ಸೊಂಕೆಬ್ಬಿಸುವುದರ ನಿಜವಾದ ಕಾರಣ ಗೊತ್ತಿಲ್ಲ. ಹೀಗಾದಾಗ ಮೊದಲು ಮರದ

ಕೊಂಬೆಗಳ ಆಕಾರದ ಬೂದುಬಣ್ಣದ ಹುಣ್ಣಾಗಿ ಕಣ್ಣುರಿಯುತ್ತ ಕಣ್ಣೀರು ಸುರಿಯುತ್ತಿರುವುದು. ರೋಗ ತಡೆವ ಬಲ ಜೋರಾಗಿದ್ದರೆ ಕೆಲವೇ ದಿನಗಳಲ್ಲಿ ವಾಸಿಯಾಗುತ್ತದೆ. ಹಾಗಿಲ್ಲವಾದರೆ ಬಹಳ ಭಾಗ ಹಾಳಾಗುವುದು. ಇದನ್ನು ಎಳಸಿನಲ್ಲೇ ಗುರುತಿಸಿ ಮದ್ದುಗಳ ಚಿಕಿತ್ಸೆ ಒದಗಿಸಬೇಕು.

**ಊತಕಾಂತರದ ಕೂಡು ಪೊರೆಯುರಿತ :** ಹುಟ್ಟಿನಿಂದ ಬರುವ ಉಪದಂಶ (ಸಿಫಿಲಿಸ್) ರೋಗದಲ್ಲಿ ಕೇವಲ ಮೇಲ್ಮೈಯಲ್ಲಿ ಹುಣ್ಣಾಗದೆ ಒಳಗೂ ಹಬ್ಬುವ ಕೂಡು ಪೊರೆಯುರಿತವಿದು. (ಇಂಟರ್‌ಸ್ಟಿಷಿಯಲ್ ಕೆರಟೈಟಿಸ್). ಮಗುವಿನ 5–8ನೆಯ ವಯಸ್ಸಿನಲ್ಲಿ ಇದು ತಲೆದೋರುತ್ತದೆ. ಉಪದಂಶ ರೋಗ ತಾಯಿಯಿಂದ ಮಗುವಿಗೆ ಹತ್ತಿರುವ ಮೊಟ್ಟಮೊದಲ ಲಕ್ಷಣವಾಗಿರಬಹುದು. ಇಡೀ ಕೂಡು ಪೊರೆ ಮಸಕಾಗಿ ನೀಲಿಗೆಂಪೇರಿರುತ್ತದೆ. ಬೆಳಕಿಗೆ ಕಣ್ಣುಬಿಡಲಾಗದೆ ಕಣ್ಣೀರು ಸುರಿಯುತ್ತಿರುವುದು. ಕೆಲವು ತಿಂಗಳು ಕಾಡುವುದು. ಇನ್ನೊಂದು ಕಣ್ಣಿನಲ್ಲೂ ರೋಗ ತಲೆಹಾಕುವುದು. ಉಪದಂಶ ರೋಗದ ಚಿಕಿತ್ಸೆಯಿಂದ ರೋಗ ನಿಧಾನವಾಗಿ ಅಣಗುತ್ತದೆ. ಈ ರೋಗ ಬಾರದಂತೆ ತಡೆಯಲು ರೋಗಿತಾಯಿಗೆ ಹೆರಿಗೆಗೆ ಮುಂಚೆಯೇ ಪೆನಿಸಿಲಿನ್ ಚಿಕಿತ್ಸೆ ಕೊಡುವುದೇ ಚೆನ್ನಾದ ಉಪಾಯ.

**ಅನುವಳಿಕ ಬೇನೆಗಳು :** ತೀರ ಸಾಮಾನ್ಯವಾದ ಈ ಬೇನೆಗಳಿಂದ ಕೂಡು ಪೊರೆಗೆ ಆಗುವ ಅನಾಹುತಗಳು ತಿಳಿದಿವೆಯೇ ಹೊರತು ಕಾರಣವಾಗಲೀ ಚಿಕಿತ್ಸೆಯಾಗಲೀ ಏನೂ ಗೊತ್ತಿಲ್ಲ. ಯಾವ ನೋವೂ ಇರಸುಮುರಸೂ ಉರಿಯೂ ಇಲ್ಲದೆಯೇ ಕೂಡು ಪೊರೆ ಬರುಬರುತ್ತ ಮಸಕಾಗಿ, ನೋಟವೂ ಮಂದವಾಗುತ್ತದೆ. ಮಸಕು ಗೊಳಿಸುವ ಚುಕ್ಕೆಗಳು. ಗಂಟುಗಳು, ಕಲೆಗಳು, ಗೆರೆಗಳಂತೆ ಬಗೆಬಗೆಯಾಗಿರಬಹುದು. ಹೀಗೆ ಕೂಡುಪೊರೆ ನಿಧಾನವಾಗಿ ಬೀಳಾಗಲು ಬಾಳುವೆ ರೀತಿ, ಕಸಬು, ಹವ, ಬೇರೆ ಕಾಯಿಲೆಗಳು ಏನೇನೂ ಕಾರಣಗಳಲ್ಲ. ಬಹುಮಂದಿಯಲ್ಲಿ ತಲೆಮಾರಿನ ಪ್ರಭಾವ ಇರುವಂತೆ ತೋರುವುದು.

**ಬಿಳಿಪದರದ ರೋಗಗಳು :** ಕೂಡು ಪೊರೆಯವಕ್ಕಿಂತಲೂ ಬಿಳಿಪದರವು (ಸ್ಕ್ಲೀರ) ವಿರಳ. ಕೀಲುಗಳು, ಸ್ನಾಯುಗಳು, ಕಂಡರಗಳ ಉರಿತದೊಂದಿಗೇ ಬಿಳಿಪದರುರಿತ (ಸ್ಕ್ಲೀರೈಟಿಸ್) ತಲೆದೋರುವುದರಿಂದ ಇಡೀ ಮೈಗೆ ಹತ್ತುವ ರೋಗವಿದು. ಆಡ್ರಿನಲ್ ಗ್ರಂಥಿ ರಗಟೆಯ ಸ್ಟಿರಾಯ್ಡ್ ಮದ್ದುಗಳು ಗುಣಕಾರಿ.

**ನೀಲಿ ಪೊರೆಯ ರೋಗಗಳು :** ಕಣ್ಣುಗುಡ್ಡೆ ಗೋಡೆಯ 3 ಪದರಗಳಲ್ಲಿ ನಡುವಣ ಪದರವಾದ ನೀಲಿ ಪೊರೆಯಲ್ಲಿ (ಯೂವಿಯ) ಕರಿಯಾಲಿ, ಬಾಸೆಯ ದಿಂಡು (ಸಿಲಿಯರಿ ಬಾಡಿ), ಕಣ್ಣರಾಯ (ಕೊರಾಯ್ಡ್) ಇವೆ. ಕಣ್ಣಿನ ನೋಟ ಸಾಧನದಲ್ಲಿ, ಎರಡು ತೆರನ ಸ್ನಾಯುಗಳಿರುವ, ಪಾಪೆಯನ್ನು (ಪ್ಯೂಪಿಲ್) ಹಿಗ್ಗಿಕುಗ್ಗಿಸುವ ಕರಿಯಾಲಿ ವಪೆಯಂತೆ ವರ್ತಿಸುವುದು. ನೀರಿನ ದ್ರವರಸವನ್ನು (ಅಕ್ವಿಯಸ್ ಹ್ಯೂಮರ್) ಸುರಿಸುತ್ತ ಮಸೂರದ ಗಾತ್ರವನ್ನು ಹೆಚ್ಚುಕಡಿಮೆ ಮಾಡಿ ದೂರ ನೋಟವನ್ನು ಹತ್ತಿರದ ನೋಟವಾಗಿಸುತ್ತದೆ. ಒಳಪದರದಲ್ಲಿರುವ ಕಣ್ಣಾಲಕ್ಕೆ (ರೆಟೀನ) ಅಪಾರವಾಗಿ ರಕ್ತ ಒದಗಿಸುವ ರಕ್ತನಾಳಗಳು ಕಣ್ಣರಾಯುವಿನಲ್ಲಿವೆ.

ಇವು ಮೂರು ರಚನಾಂಗಗಳಿಗೂ ಹತ್ತುವ ಉರಿತ ರೋಗಗಳ ಕಾರಣವಾದ ಜೀವಾಣುಗಳು ಸಾಮಾನ್ಯವಾಗಿ ರಕ್ತಹರಿವಿನ ಮೂಲಕ ಬರುತ್ತವೆ. ಮೈ ಬೇನೆಗಳಲ್ಲಿ ಹಲವು ಕೂರಾಗೋ (ಅಕ್ಯೂಟ್) ಬೇರೂರಿಯೋ (ಕ್ರಾನಿಕ್) ಇವಕ್ಕೂ ಹರಡಿಕೊಂಡು ಮೈಬೇನೆ ಇಳಿದುಹೋದಾಗ ಇಲ್ಲೂ ವಾಸಿಯಾಗುವುದು.

ವಿಪರೀತ ನೋವು, ಕಣ್ಣಿನ ರಕ್ತಗಟ್ಟು, ಚುಮಗುಡಿಕೆ. ಮುಂದಣ ಗೂಡಿನಲ್ಲಿ (ಆ್ಯಂಟೀರಿಯರ್ ಚೇಂಬರ್) ರಸದ ಒಸರಿಕೆ, ಬಹುಪಾಲು ನೋಟಕ್ಕೆ ಪೂರಾ ಅಡಚಣೆ ಇವು ತೋರಿ ಇದ್ದಕ್ಕಿದ್ದ ಹಾಗೆ ಕೂರಾದ ಕರಿಯಾಲಿಯುರಿತವಾಗಿ (ಐರೈಟಿಸ್) ಕಾಣಿಸಿಕೊಳ್ಳುತ್ತವೆ. ಸರಿಯಾದ ಚಿಕಿತ್ಸೆಯಿಂದ ಅಷ್ಟೇಬೇಗನೆ ವಾಸಿಮಾಡಬಹುದು. ಕೆಲವೇಳೆ ಕೂರಾದ ಇಲ್ಲವೇ ಬೇರೂರಿದ ಕೀಲುರಿತದೊಂದಿಗೆ ಈ ಬೇನೆ ತಲೆದೋರುವುದು.

ಬೇರೂರಿದ ನೀಲಿ ಪೊರೆಯುರಿತದಲ್ಲಿ (ಯೂವಿಯೈಟಿಸ್) ರಕ್ತಗಟ್ಟು, ಚುಮಗುಡಿಕೆ, ನೋವೂ ಅಷ್ಟಾಗಿರವು. ಮುಂದಣ ಮತ್ತು ಕಾಚೀ (ವಿಟ್ರಿಯಸ್) ಗೂಡುಗಳೊಳಕ್ಕೆ ಒಸರಿದ ರಸದ ಪ್ರಮಾಣಕ್ಕೆ ತಕ್ಕಂತೆ ಕಣ್ಣು ನೋಟವೂ ಮಂದವಾಗುತ್ತದೆ. ಕಣ್ಣರಾಯುರಿತ (ಕೊರಾಯ್ಡೈಟಿಸ್) ಒಳಗಿನ ಕಣ್ಣಾಲಕ್ಕೆ ಹರಡಿ ಆ ಭಾಗದ ನೋಟದಲ್ಲಿ ಕುರುಡು ಚುಕ್ಕೆ ಏಳಿಸುತ್ತದೆ. ಮರುಕಳಿಕೆ ಜ್ವರ (ರೆಕರೆಂಟ್ ಫೀವರ್) ಹಂದಾಡ ಜ್ವರ (ಅಂಡ್ಯುಲೆಂಟ್ ಫೀವರ್), ಮಾಂಸಂದಬೇನೆ (ಸಾರ್ಕಾಯ್ಡೋಸಿಸ್) ಕ್ಷಯ, ಉಪದಂಶ ರೋಗಗಳಲ್ಲಿ ಬೇರೂರಿದ ನೀಲಿ ಪೊರೆಯುರಿತ ಏಳುತ್ತದೆ. ಎಷ್ಟೋ ವೇಳೆ ಮೈಯಲ್ಲಿ ಬೇರಾವ ಬೇನೆಗಳೂ ಹೊರಗಾಣದಿದ್ದರೂ ಹೀಗಾಗಬಹುದು. ಮೈಬೇನೆಗೆ ಚಿಕಿತ್ಸೆಯಾದರೆ ಇದೂ ಅಣಗುತ್ತದೆ. ಸ್ಟಿರಾಯ್ಡ್ ಮದ್ದುಗಳಿಂದ ರೋಗ ತಗ್ಗಿ ಚೆನ್ನಾಗಿ ವಾಸಿಯಾಗುತ್ತದೆ.

**ಕಣ್ಣಾಲದ ರೋಗಗಳು :** ಕಣ್ಣುಗುಡ್ಡೆಯ ಗೋಡೆಯಲ್ಲಿ ಎಲ್ಲಕ್ಕೂ ಒಳಗಿರುವ, ಬಲು ಕೋಮಲವಾಗಿರುವ ಪದರವೇ ಕಣ್ಣಾಲ. ಇದರ ಮೇಲೆ ಬಿದ್ದ ಬೆಳಕಿನ ಬಿಂಬವನ್ನು ನರದ ಆವೇಗಗಳಾಗಿ (ಇಂಪಲ್ಸಸ್) ಮಾರ್ಪಡಿಸಿ ಮಿದುಳಿನಲ್ಲಿ ನೋಟದ ಅರಿವುಂಟು ಮಾಡುವ ಹಲವು ಕೂಡಿಸುವ ಕೊಂಡಿಗಳಂತಿರುವ ಜೀವಕಣಗಳ ಹಲವು ಪದರಗಳು ಇದರಲ್ಲಿವೆ.

ಕಣ್ಣಾಲದ ರೋಗಗಳಲ್ಲಿ ಮೈಗೆ ಹತ್ತುವ ಧಮನಿ ಪೆಡಸಣೆ (ಆರ್ಟೀರಿಯೊ ಸ್ಕ್ಲೀರೋಸಿಸ್), ರಕ್ತ ಒತ್ತಡವೇರಿಕ ಗುಂಡಿಗೆ ರಕ್ತನಾಳಗಳ ಇಲ್ಲವೇ ಮೂತ್ರಪಿಂಡದ ರೋಗಗಳು, ಸಿಹಿಮೂತ್ರ, ಬಸಿರಿನ ರಕ್ತನಂಜು, ಮತ್ತಿತರ ರಕ್ತನಾಳಗಳ ಉರಿತದ ಒಗ್ಗದಿಕೆಯ ಅನುವಳಿಕ ರೋಗಗಳ ಒಂದಡೆಯ ತೋರಿಕೆಯವೇ ಹೆಚ್ಚು. ಕಣ್ಣು ದರ್ಶಕದಿಂದ (ಆಫ್ತಾಲ್ಮೊಸ್ಕೋಪ್) ಕಣ್ಣಾಲವನ್ನೂ ಅದರ ರಕ್ತನಾಳಗಳನ್ನೂ ನೇರವಾಗಿ ನೋಡಬಹುದಾದ್ದರಿಂದ, ಮೈಯಲ್ಲಿನ ರಕ್ತನಾಳಗಳ ರೋಗವನ್ನು ವೈದ್ಯ ಇಲ್ಲಿ ಚೆನ್ನಾಗಿ ಪತ್ತೆಹಚ್ಚುತ್ತಾನೆ.

ಕಣ್ಣಾಲದ ರೋಗಗಳಲ್ಲಿ ಬಹುಪಾಲು ಅನುವಳಿಕೆಗೆ ಸಂಬಂಧಿಸಿವೆ. ಬಣ್ಣಕದ (ಪಿಗ್ಮೆಂಟರಿ) ಅನುವಳಿಕೆಯಾಗಿರುವ ಬಣ್ಣಕದ ಕಣ್ಣಾಲುರಿತದಲ್ಲಿ (ರೆಟಿನೈಟಿಸ್ ಪಿಗ್ಮೆಂಟೋಸ) ಇರುಳ್ನೋಟವೂ ಅಂಚುಗಳಲ್ಲಿನ ನೋಟವೂ ಬರುಬರುತ್ತ ಮಂದವಾಗುತ್ತವೆ. ಕೆಲವೇಳೆ ಹೀಗಾಗಲು ಎಷ್ಟೋ ವರ್ಷಗಳೇ ಹಿಡಿಯಬಹುದು. ಇನ್ನೂ ಬೇಗನೆ ಹೀಗಾದರೆ ಮಕ್ಕಳಲ್ಲಿ ನೋಟ ಮಂದವಾಗಿ ವಿಪರೀತ ತೊಂದರೆಗಳಾಗುತ್ತವೆ. ಬಹುಮಟ್ಟಿಗೆ ಇದು ವಂಶಪರಂಪರೆಯಿಂದ ಬರುವುದು. ಈ ಬಗೆಯ ಇನ್ನೂ ಕೆಲವು ರೋಗಗಳಲ್ಲಿ ಕಣ್ಣಾಲದ ನಡುಭಾಗ ಹಾಳಾಗುವುದರಿಂದ, ಆಕಾರಗಳನ್ನು ಗುರುತಿಸುವುದೂ ಓದಿ ಬರೆಯುವುದೂ ಅಸಾಧ್ಯವಾಗುತ್ತದೆ. ಈ ರೋಗಗಳಿಗೆ ಪರಿಹಾರವೇ ಇನ್ನೂ ಗೊತ್ತಿಲ್ಲ.

ಮುಂದುವರಿದ ನಾಡುಗಳಲ್ಲಿ, ನವಮಾಸ ತುಂಬುವ ಮೊದಲೇ ಹುಟ್ಟುವ ಎಳೆಗೂಸುಗಳನ್ನು ಏನಾದರೂ ಮಾಡಿ ಉಳಿಸಿಕೊಳ್ಳಲು ಮೊದಲು ಕೆಲವು ವಾರಗಳ ತನಕ ಬಹಳ ಆಮ್ಲಜನಕವನ್ನು ಕೊಟ್ಟುದರಿಂದ ಮಸೂರದ ಹಿಂಭಾಗ ನಾರಿನಂತೆ ಗಡುಸಾಗಿ (ರಿಟ್ರೊಲೆಂಟಲ್ ಫೈಬ್ರೊಪ್ಲೇಸಿಯ) ಕುರುಡಾಗುವುದು ಕಂಡುಬಂದಿದೆ. ಆಮ್ಲಜನಕ ನೀಡುವ ಪ್ರಮಾಣವನ್ನು ಎಷ್ಟುಬೇಕೋ ಅಷ್ಟಕ್ಕೆ ಇಳಿಸುವುದರಿಂದ ಇದನ್ನು ತಪ್ಪಿಸಬಹುದು.

ಕಣ್ಣರಾಯುವಿನ ಉರಿತ ಅದರ ತಳದಲ್ಲಿರುವ ಕಣ್ಣಾಲಕ್ಕೂ ಹರಡಿಳಿದು ಒಂದಿಷ್ಟು ಹಾಳಾಗಬಹುದು. ಕಲೆಗಟ್ಟದೆಯೇ ಹಾಳಾದರೆ ಕಣ್ಣಾಲದಲ್ಲಿ ತೂತಾಗಿ ಇಲ್ಲವೇ ಬೆಂದು ಇಡೀ ಕಣ್ಣಾಲವೋ ಒಂದು ಭಾಗವೋ ಕಿತ್ತು ಕಳಚಿಕೊಂಡು (ಡಿಟ್ಯಾಚ್‌ಮೆಂಟ್) ಸುಕ್ಕುಗಟ್ಟಬಹುದು. ಕಾಚೀ ದ್ರವರಸ ಕುಗ್ಗಿ ಎಳೆದಂತಾದರೂ ಕಣ್ಣಾಲ ಕಿತ್ತು ಕಳಚಿಕೊಳ್ಳಬಹುದು. ಇವೆರಡನ್ನೂ ಈಗ ಶಸ್ತ್ರಕ್ರಿಯೆಯಿಂದಲೂ ಲೇಸರ್‌ನಿಂದಲೂ ಸರಿಪಡಿಸಬಹುದು.

**ಮಸೂರದ ರೋಗಗಳು :** ಕಣ್ಣು ನೋಟವನ್ನು ದೂರಕ್ಕೋ ಹತ್ತಿರಕ್ಕೋ ಹೊಂದಿಸುವ ಕೆಲಸ ಹರಳಂತಿರುವ ಕಣ್ಣಿನ ಮಸೂರದ್ದು. ಬಾಸೆಯ ದಿಂಡಲ್ಲಿರುವ ಹೊಂದುವಳಿಯ (ಅಕಾಮಡೇಷನ್) ಸ್ನಾಯು ಕುಗ್ಗಿ ಹಿಗ್ಗುವುದರಿಂದ ಮಸೂರದ ದಪ್ಪವನ್ನು ಹೆಚ್ಚೂಕಡಿಮೆ ಮಾಡಿ ಅದರ ಮೇಲ್ಮೈ ಕೊಂಕುಗಳನ್ನು ಬದಲಿಸುತ್ತದೆ. ಮಸೂರ ಮುಳುಗಿರುವ ನೀರಿನ ದ್ರವರಸದಿಂದ ಅದರ ಪುಷ್ಟಿ ಆಗಬೇಕೇ ಹೊರತು, ಮಸೂರದಲ್ಲಿ ಯಾವ ನರವೂ ರಕ್ತನಾಳವೂ ಇಲ್ಲ. ನಡುವೆ ಇರುವ ದಟ್ಟವಾದ ಹಳೆಯ ಪದರಗಳ ಮೇಲೆ ಎಳೆಯವು ಕೂಡುತ್ತ ಬಾಳಿನುದ್ದಕ್ಕೂ ಇದು ಬೆಳೆಯುತ್ತಲೇ ಇರುವುದು. ವಯಸ್ಸಾದ ಹಾಗೆಲ್ಲ ಈ ನಡುವಣ ಪಪ್ಪು ಹಿಗ್ಗಿ ಕುಗ್ಗದಂತಾಗುವುದರಿಂದಲೇ ಚಾಳೀಸ ಬಂದು ಹತ್ತಿರ ನೋಡಲು ಕನ್ನಡಕ ಹಾಕಿಕೊಳ್ಳಬೇಕಾಗುತ್ತದೆ. ಇದು ವಯಸ್ಸಿನ ಪರಿಣಾಮವೇ ಹೊರತು ರೋಗ ಎನಿಸದು.

ರೋಗ ಹತ್ತಿತೆಂದರೆ ತಿಳಿಯಾಗಿ ಆಚೆಗಾಣುವಂತಿರುವ ಮಸೂರ ಮಸಕಾಗಿ ಬಿಡುತ್ತದೆ. ಮಸಕಿನ ಕಲೆ, ಚುಕ್ಕೆಗಳು ಮಸೂರದ ಅಂಚಿನಲ್ಲಿದ್ದರೆ ನೋಟಕ್ಕೆ ಅಡ್ಡಿಬರವು. ಮಸೂರದ ನಡುವೆ ಇದ್ದರಂತೂ ನೋಟಕ್ಕೆ ತೀರ ಆತಂಕವಾಗುತ್ತದೆ. ಮನೆಯೊಳಗಿನ ಬೆಳಕಿನಲ್ಲಿ ಅಷ್ಟಿಷ್ಟು ಚೆನ್ನಾಗಿ ಕಂಡರೂ ಹೊರಗಡೆ ಕಣ್ಣು ತೀರ ಮಂಜು ಮಂಜಾಗಬಹುದು.

ಮೋತಿಬಿಂದು (ಕ್ಯಾಟರಾಕ್ಟ್) ಎಂದರೆ ಮಸೂರದಲ್ಲಿ ಕಾಣಬರುವ ಕಲೆ ಇಲ್ಲವೇ ದಟ್ಟ ಚುಕ್ಕೆ ಎನ್ನುವುದೇ ಸರಿಯಾದರೂ ಸಾಮಾನ್ಯವಾಗಿ ವಯಸ್ಸಾದವರಲ್ಲಿ ಬರುಬರುತ್ತ ನೋಟಕ್ಕೆ ಅಡ್ಡಿಯಾಗುವಂತೆ ಪೊರೆ ಬೆಳೆದಂತೆ ಕಾಣುವುದಕ್ಕೇ ಹೇಳುವುದುಂಟು. ಹಲವು ಕಾರಣಗಳಿಂದ ಮಸೂರಕ್ಕೆ ಪುಷ್ಟಿವಸ್ತುಗಳ ಸರಬರಾಜಿನ ಕೊರೆಯಾಗಿ ಅದರಲ್ಲಿ ಅಸಹಜ ಊತಕವೇಳುವುದೇ ಮೋತಿಬಿಂದು ಆಗುವ ಕಾರಣ. ಆಹಾರ ವಸ್ತುಗಳಲ್ಲಿ ಬಗೆಬಗೆಯ ಜೀವಾಳದ ಅಂಶಗಳ ಕೊರೆಯಿಂದ ಪ್ರಯೋಗಾಲಯದ ಪ್ರಾಣಿಗಳಲ್ಲಿ

ಮೋತಿಬಿಂದು ಆಗಿಸುವುದು ಸಾಧ್ಯವಾಗಿದೆ. ಉಪಗುರಾಣಿಕ (ಪ್ಯಾರತೈರಾಯ್ಡ್), ಮಾಂಸಲಿ (ಪ್ಯಾಂಕ್ರಿಯಾಸ್) ಗ್ರಂಥಿಗಳ ಬೇನೆಗಳಲ್ಲಿ ಮಾನವನ ಮೋತಿಬಿಂದು ಆಗುವುದು. ಆದರೆ ಮುಪ್ಪಿನಲ್ಲಿ ಆಗುವುದೇ ಸಾಮಾನ್ಯ.

ಎಳೆಮಕ್ಕಳಲ್ಲಿ ತಲೆಮಾರುಗಳಲ್ಲೂ ಮೋತಿಬಿಂದು ಆಗಬಹುದು. ಬಸುರಿನ ಮೊದಲ 3 ತಿಂಗಳಲ್ಲಿ ಸೀಮೆ ದಡಾರ (ಜರ್ಮನ್ ಮೀಸಲ್ಸ್) ಎದ್ದಿದ್ದರೂ ಹುಟ್ಟುವ ಕೂಸಿಗೆ ಹೀಗಾಗಬಹುದು. ಮೋತಿಬಿಂದು ಬೆಳೆಯುತ್ತಿರುವಾಗ, ಪಾಪೆಯಲ್ಲಿ ಬೂದು ಚುಕ್ಕೆಗಳಾಗೋ ಇಡೀ ಪಾಪೆ ಮಸಕಾಗೋ ತೋರಬಹುದು. ಕಣ್ಣಿನ ಉಳಿದೆಲ್ಲ ಭಾಗಗಳೂ ಆರೋಗ್ಯವಾಗಿದ್ದಲ್ಲಿ ಇಡೀ ಮಸೂರ ಮಸಕಾದರೂ ಪೂರ್ತಿ ಕುರುಡಾಗದು. ಬೆಳಕು, ಬಣ್ಣಗಳನ್ನಾದರೂ ಗುರುತಿಸಬಹುದು. ಬೆಳಕು ಬರುವ ದಿಕ್ಕನ್ನೂ ಕಂಡುಕೊಳ್ಳಬಹುದು. ಬರಬರುತ್ತ ನೋಟ ಕುಂದಿ ಎದುರಿಗೆ ಹಿಡಿದ ಬೆರಳುಗಳನ್ನು ಕೂಡ ಎಣಿಸದಂತಾಗಿ, ಎಂದಿನ ಕೆಲಸಗಳಿಗೆ ತೊಡಕೆನಿಸಿದಾಗ, ಬೆಳೆಯುತ್ತಿರುವ ಮೋತಿ ಬಿಂದುಗಳಿಗೆ ಇಡೀ ಮಸೂರವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕುವುದೊಂದೇ ಪರಿಣಾಮಕಾರ ಉಪಾಯ.

**ಕಾಚೀ ದಿಂಡಿನ ರೋಗಗಳು :** ಬದುಕಿರುವ ಯಾವ ಜೀವಕಣಗಳೂ ಬಹುಮಟ್ಟಿಗೆ ಇಲ್ಲದ, ಗಿಜಿಯಂತಿರುವ (ಜೆಲ್ಲಿ), ಬಣ್ಣವಿರದ ಗಾಜುಗೋಳದಂತಿರುವ ವಸ್ತು (ವಿಟ್ರಿಯಸ್ ಬಾಡಿ) ಕಣ್ಣುಗುಡ್ಡೆಯೊಳಗೆ ಹಿಂದಣ $\frac{2}{3}$ ರಷ್ಟು ಭಾಗವನ್ನು ತುಂಬಿರುವುದು. ಇದಕ್ಕೆ ರೋಗ ಹತ್ತಿದರೆ ಕೊಂಚ ಮಸಕಾಗುತ್ತದೆ. ತರತರದ ಆಕಾರ, ಗಾತ್ರಗಳ ದಾರ, ಚುಕ್ಕೆಗಳಾಗಿ ಕಣ್ಣುಮುಂದೆ ತೋರಿದಾಗ ರೋಗಿ ಗಾಬರಿಯಿಂದ ವೈದ್ಯನ ಸಲಹೆಗೆ ಓಡುವನು. ಹೀಗೆ ತೇಲುವಂತೆ ಕಾಣುವ ವಸ್ತುಗಳಿಂದ ಅಷ್ಟೇನೂ ಕೆಡುಕಾಗದು. ಕಾಚೀ ದಿಂಡಿನ ಸುತ್ತ ಇರುವ ಊತಕಗಳಲ್ಲಿ ಕೊಂಚ ಉರಿತವೆದ್ದರೆ ಹೀಗಾಗುವುದು. ಆದರೆ ಇವು ದೊಡ್ಡ ಆಕಾರಗಳಲ್ಲಿ ಕಣ್ಣು ಮುಂದೆ ತೇಲಿ ಹೋದಂತೆ. ತಲೆ ಆಡಿಸಿದರೆ ಓಡಾಡಿದಂತೆ ಕಾಣುವುದರಿಂದ ರೋಗಿ ಗಾಬರಿಯಾಗುತ್ತಾನೆ. ಕೊಂಚಕಾಲದಲ್ಲೇ ಇದು ವಾಸಿಯಾಗುತ್ತದೆ. ಕಾಚೀ ದಿಂಡಿನಲ್ಲಿ ಮಸಕಿನ ಚುಕ್ಕೆಗಳು ಕಾಣುವುದು ಹೆಚ್ಚುತ್ತಿದ್ದರೆ ಬಾಸೆಯ ದಿಂಡು, ಕಣ್ಪರಾಯು ಇಲ್ಲವೇ ಕಣ್ಪಾಲದ ರೋಗಸೂಚನೆ ಆಗಿರಬಹುದು.

**ಹತ್ತುಗಣ್ಣು :** ಕಾಚೀ ದಿಂಡಿನಿಂದ ತಯಾರಾಗುವ ನೀರಿನ ದ್ರವರಸವೇ ಕಣ್ಣಿನಲ್ಲಿನ ರಕ್ತನಾಳಗಳೇ ಇಲ್ಲದ ಮಸೂರಕ್ಕೂ ಕೋಡು ಪೊರೆಗೂ ಪುಷ್ಟಿ ಒದಗಿಸುತ್ತದೆ. ಇದು ಮುಂದಣ ಗೂಡಿನೊಳಕ್ಕೆ ಪಾಪೆಯ ಮೂಲಕ ಒಂದೇ ಸಮನೆ ಹರಿಯುತ್ತಲೇ ಇದ್ದು, ಬಿಳಿಪದರವೂ ಕೋಡು ಪೊರೆಯೂ ಕೂಡುವ ಮೂಲೆಯಲ್ಲಿ ಬಲುಕಿರಿದಾದ ಸಾಗಾಲುವೆಗಳ ಮೂಲಕ ಕಣ್ಣಿನಿಂದ ಹೊರಸಾಗುತ್ತದೆ. ಈ ದ್ರವರಸದ ತಯಾರಿಕೆ, ಹೊರಸಾಗಾಣಿಕೆಗಳ ವೇಗಗಳಿಂದ ಕಣ್ಣೊಳಗಿನ ಒತ್ತಡ ಹುಟ್ಟುವುದು. ಈ ಒತ್ತಡ ಇರುವುದರಿಂದಲೇ ಕಣ್ಣಿನ (ಉದ್ದ, ಅಗಲ, ದಪ್ಪ) ಆಕಾರ ಉಳಿಯುತ್ತದೆ. ಕಣ್ಣುಗುಡ್ಡೆ ಮೇಲೆ ಬಿಗುಪುಮಾಪಕವನ್ನು (ಟೋನೋಮೀಟರ್) ಒತ್ತಿರಿಸಿ ಕಣ್ಣೊಳಗಿನ ಒತ್ತಡವನ್ನು ಅಳೆಯಬಹುದು. ಸಾಮಾನ್ಯವಾಗಿ ಈ ಒತ್ತಡ 12–22 ಮಿಮೀ ಪಾದರಸದಷ್ಟಿರುವುದು. ಎಷ್ಟು ಬೇಕೋ ಅಷ್ಟಿದ್ದರೆ ಕಣ್ಣಿಗೆ ಆರೋಗ್ಯ. ಮಿತಿಮೀರಿದರೆ ಕಣ್ಣಿನ ಬಹುಪಾಲು ಎಲ್ಲ ಭಾಗಗಳಿಗೂ ಅಪಾಯಕರ.

ಕಣ್ಣೊಳಗಿನ ಒತ್ತಡ ಎಂದಿನ ಮಿತಿ ಮೀರಿ ಏರಿದ್ದರೆ, ಹತ್ತಗಣ್ಣು (ಗ್ಲಾಕೋಮ) ರೋಗವಾಗುತ್ತದೆ. ಈ ರೋಗದಲ್ಲಿ ದ್ರವರಸದ ತಯಾರಿಕೆಯ ವೇಗ ಎಂದಿನಂತೆ ಇದ್ದರೂ ಅದರ ಹೊರಸಾಗಣೆಗೆ ಎಲ್ಲಾದರೂ ಆತಂಕ ಆಗಿರುವುದು. ಕರಿಯಾಲಿ ದಿಂಡುರಿತದಲ್ಲಿ (ಐರಿಡೊಸೈಕ್ಲೈಟಿಸ್) ಪಾಪೆಯ ಅಂಚುಗಳು ಮಸೂರದ ಮುಂಭಾಗಕ್ಕೆ ರೋಸಿನಿಂದ ಅಂಟಿಕೊಳ್ಳುತ್ತವೆ. ಇದರಿಂದ ದೊಡ್ಡ ತಡೆ ಹಾಕಿದಂತಾಗಿ ಕರಿಯಾಲಿ ಹಿಂದುಗಡೆ ಕಣ್ಣೊಳಗಿನ ಒತ್ತಡ ಏರುತ್ತದೆ. ಹೀಗೇ ಮೋತಿ ಬಿಂದು ಆಗುವಾಗ ಹರಳಿನಂತಿರುವ ಮಸೂರ ಊದಿಕೊಂಡು ಕರಿಯಾಲಿಯನ್ನು ಕೋಡು ಪೊರೆಗೆ ತಳ್ಳುವುದರಿಂದಲೂ ದ್ರವರಸ ಹೊರಸಾಗಣೆಗೆ ಅಡ್ಡಿಯಾಗುವುದು. ಕಣ್ಣೊಳಗಿನ ಒತ್ತಡವೇರಿಕೆಯೇ ಇದರ ಪರಿಣಾಮ. ಕಣ್ಣಲ್ಲಿ ಬೇರೆಲ್ಲಾದರೂ ರೋಗವಾಗಿ ಆಮೇಲೆ ಕಾಣಬರುವುದಕ್ಕೆ ಮರುಚಲನ (ಸೆಂಕೆಡರಿ) ಹತ್ತಗಣ್ಣು ಎಂದಿದೆ. ಬೇರೆ ಯಾವ ಕಾರಣವೂ ಕಾಣದೆ ಕಂಡುಬರುವ ಬಗೆಯದು ಪ್ರಾಥಮಿಕ (ಪ್ರೈಮರಿ). ಏರಿದೊತ್ತಡದೊಂದಿಗೆ ಕೆಲವು ಗೊತ್ತಾದ ರೋಗ ಲಕ್ಷಣಗಳೂ ತೋರಬಹುದು. ಆಗಾಗ್ಗೆ ಕಣ್ಣು ಮಂಜಾಗುತ್ತದೆ. ದೀಪಗಳ ಸುತ್ತಲೂ ಬಣ್ಣದ ನೆರಿಗೆಗಳು ಕಾಣುವುದೂ ಕಣ್ಣೊಳಗೂ ಅದರ ಹಿಂದುಗಡೆಯೂ ಕೊಂಚವೋ ಜೋರಾಗೋ ನೋಯುವುದೂ ಸಾಮಾನ್ಯ. ಮೂಲೆ ಮುಚ್ಚಿಕೆಯಿಂದಾಗುವ ಈ ಹತ್ತಗಣ್ಣು ರೋಗಿ ಕಣ್ಣು ವಾಸಿಯಾಗದಷ್ಟು ಹಾಳಾಗುವ ಮುಂಚೆಯೇ ವೈದ್ಯನ ನೆರವು ಕೋರುವನು.

ಆದರೆ ರೋಗಿಗೆ ಕಣ್ಣು ಕೆಟ್ಟಿರುವುದು ಅರಿವಿಗೆ ಬರುವ ಮೊದಲೇ ಇನಿತೂ ನೋವಿಲ್ಲದೆ ಹಾಳಾಗಿಬಿಡುವ ಬೇರೂರಿದ ಹತ್ತಗಣ್ಣು ಗಲಾಟೆಯಿಲ್ಲದೆ ಆಗುವುದೂ ಉಂಟು. ಕಣ್ಣೊಳಗಿನ ಏರಿದೊತ್ತಡದಿಂದ, ಕಣ್ಣು ಗುಡ್ಡೆಯಿಂದ ಹಿಂದುಗಡೆ ನರತಂತುಗಳು ಹೊರಬೀಳುವ ಕಡೆಯ ಕಣ್ಪಾಲದ ರಕ್ತಪೂರೈಕೆಗೆ ಅಡ್ಡಿಯಾಗುತ್ತದೆ. ಹೀಗೇಕೆಲವು ದಿನಗಳಿದ್ದರೆ ಆ ನರಂತುಗಳು ಸತ್ತು ಆಭಾಗದ ಕಣ್ಪಾಲ ನೋಟದ ಕೆಲಸಕ್ಕೆ ಬಾರದಾಗುವುದು. ಮೊದಲಮೊದಲು ಕಣ್ಪಾಲದ (ಫೀಲ್ಡ್ ಆಫ್ ವಿಷನ್) ನಡುಭಾಗಗಳಲ್ಲಿ ಕಣ್ಣು ಕಾಣದಂತಾಗಿ, ಏರಿದೊತ್ತಡ ಹಾಗೇ ಇದ್ದಲ್ಲಿ ಏನೂ ಕಾಣದಂತಾಗುವುದು.

ಬೇರೂರಿದ ಹತ್ತಗಣ್ಣು ಸಾಮಾನ್ಯವಾಗಿ ಎರಡು ಕಣ್ಣುಗಳಲ್ಲೂ ಒಂದೇ ಬಾರಿ ಕಾಣಿಸಿಕೊಳ್ಳದ್ದೊಂದು ರೋಗಿಯ ದೊಡ್ಡ ಪುಣ್ಯ. ಎರಡು ಕಣ್ಣುಗಳ ನೋಟದ ನಡುವೆ ವ್ಯತ್ಯಾಸ ತೋರಿದಾಗ ರೋಗಿಯೇ ಕಣ್ಣು ವೈದ್ಯನ ಸಲಹೆ ಕೋರುವನು. ಅಂತೂ ರೋಗಿ ತನಗೆ ಏನಾಗಿದೆಯೆಂಬ ಅರಿವು ಬರುವುದರೊಳಗಾಗಿ ಬೇರೂರಿದ ಹತ್ತಗಣ್ಣು ವೈದ್ಯನ ಮಾಮೂಲು ಪರೀಕ್ಷೆಯಲ್ಲೇ ಗೊತ್ತಾಗುತ್ತದೆ. ಇದಕ್ಕೋಸ್ಕರವೇ ಮುಂಬಯಿ ಮುಂತಾದೆಡೆಗಳಲ್ಲಿ ವಯಸ್ಸಿನ ಇಡೀ ಜನರನ್ನು ಒಟ್ಟಾರೆ ಪರೀಕ್ಷಿಸುತ್ತ ಈ ಬೇರೂರಿದ ಹತ್ತಗಣ್ಣು ರೋಗವನ್ನು ಕಂಡುಕೊಂಡು ನಿವಾರಕ ಸೂಚನೆಗಳನ್ನು ನೀಡಿ ಕಣ್ಣು ಕಳೆದುಕೊಳ್ಳುವುದನ್ನು ತಪ್ಪಿಸುವುದುಂಟು.

ಹತ್ತಗಣ್ಣಿನ ಚಿಕಿತ್ಸೆಗೆ ಮದ್ದುಗಳೂ ಇವೆ, ಶಸ್ತ್ರಕ್ರಿಯೆಯೂ ಇದೆ. ಕಣ್ಣಿಗೆ ಹಾಕುವ ಹಲವು ಮದ್ದುಗಳ ಮುಲಾಮು, ತೊಟ್ಟುಗಳು ಕಣ್ಣೊಳಗಿನ ಒತ್ತಡವನ್ನು ಇಳಿಸುತ್ತವೆ. ನುಂಗುವ ಮದ್ದುಗಳೂ ಕೆಲವಿವೆ. ಶಸ್ತ್ರಕ್ರಿಯೆಯಿಂದ ದ್ರವರಸದ ಹೊರಸಾಗಣೆಯ ಅಡಚಣೆಯನ್ನು ತೆಗೆಯಬಹುದು ಇಲ್ಲವೇ ಹೊಸ ದಾರಿಗಳನ್ನು ಮಾಡಬಹುದು. ಮುಖ್ಯವಾಗಿ, ಕಣ್ಣು ಇನ್ನಷ್ಟು ಹಾಳಾಗದಿರಬೇಕಾದರೆ ತೀರ ಎಳಸಿನ ಹಂತದಲ್ಲಿ ಕರಿಯಾಲಿಯಲ್ಲಿ ಗುಂಡಿಕಾಜದ ತೆರನ ತೂತು ಮಾಡಿದರೆ ವಾಸಿಯಾಗುತ್ತದೆ.

**ಇಡೀ ಕಣ್ಣುಗುಡ್ಡೆಯ ರೋಗಗಳು :** ಹತ್ತೆನೋಟ (ಮೈಯೋಪಿಯ). ದೂರನೋಟ (ಹೈಪರೋಪಿಯ). ಅಸಮೋಸರಿಕೆ (ಅಸ್ಟಿಗ್ಮಾಟಿಸಂ) ಇವು ಕೇವಲ ಕಣ್ಣಿನ ಗಾತ್ರ, ಆಕಾರಗಳ ವ್ಯತ್ಯಾಸಗಳ ಪರಿಣಾಮವೇ ಹೊರತು ರೋಗಗಳಲ್ಲ. ಆದರೆ ಕಣ್ಣುಗುಡ್ಡೆ ಅಸಹಜವಾಗಿ ಉದ್ದ ಸಾಗಿದ್ದರಿಂದಲೋ ಬೆಳೆದುದರಿಂದಲೋ ಕಣ್ಪರಾಯವೂ ಕಣ್ಪಾಲವೂ ಹಾಳಾಗಿ ಏಳುವ ಅನುವಳಿಕ ಹತ್ತೆಗಣ್ಣೇ ಬೇರೆ, ಕಣ್ಣು ನೋಟ ಹಾಳಾಗುವುದನ್ನು ತಪ್ಪಿಸಲು ಕಣ್ಣುಗುಡ್ಡೆಯನ್ನು ಶಸ್ತ್ರವೈದ್ಯ ಮೋಟು ಮಾಡಬಹುದು.

**ಕಣ್ಣುಗುಳಿಯ ರೋಗಗಳು :** ಕಣ್ಣುಗುಳಿಯನ್ನು ಕಣ್ಣುಗುಡ್ಡೆಯೇ ಅಲ್ಲದೆ ಅದಕ್ಕೆ ಸಂಬಂಧಿಸಿದ ಸ್ನಾಯುಗಳು. ರಕ್ತನಾಳಗಳು, ನರಗಳು ಇವೆ. ಎರಡು ಕಣ್ಣುಗಳೂ ಮುಂಚಾಚಿಕೊಂಡು ಹೊರಗೆ ಎದ್ದು ಕಾಣುವುದಕ್ಕೆ ಮೆಡ್ಡಗಣ್ಣು (ಎಕ್ಸಾಫ್ತಾಲ್ಮೋಸ್) ಎಂದಿದೆ. ಗುರಾಣಿಕ (ತೈರಾಯ್ಡ್) ಗ್ರಂಥಿಯ ಮಿತಿಮೀರಿದ ಚಟುವಟಿಕೆಯಿಂದಾಗುವ ಒಳಸುರಿಕ ಗ್ರಂಥಿ ರೋಗವಾದ ಮೆಡ್ಡಗಣ್ಣಿನ ಗಳಗಂಡದ (ಗಾಯ್ಟರ್) ಲಕ್ಷಣವಿದು. (ನೋಡಿ– ಗುರಾಣಿಕ–ಗ್ರಂಥಿಯ–ರೋಗಗಳು). ಆ ಗ್ರಂಥಿ ರೋಗದ ಚಿಕಿತ್ಸೆಯೊಂದಿಗೆ ತೀರ ಹೊರಗೊಡ್ಡಿರುವ ಕಣ್ಣುಗುಡ್ಡೆಗೆ ಕಾಪನ್ನು ಒದಗಿಸಬೇಕಾಗುವುದು. ಒಂದೇ ಕಣ್ಣು ಹೀಗಾಗಿದ್ದರೆ ಆ ಕಣ್ಣುಗುಳಿಯಲ್ಲಿ ಏನೋ ಗಂತಿ ಬೆಳೆದಿರುವ ಸೂಚನೆಯಾಗಿರಬಹುದು.

ಕಣ್ಣಿನ ನರ, ನೋಟದರಿವಿನ ನರಗಳ ರೋಗಗಳು: ಕಣ್ಪಾಲದ ನರತಂತುಗಳು ಒಂದುಗೂಡಿ ಕಣ್ಣಿನ ದಪ್ಪ ನರವಾಗಿ ಕಣ್ಣುಗಡ್ಡೆ ಹಿಂದುಗಡೆ ಮೂಗಿನ ಕಡೆಯ ಪಕ್ಕದಲ್ಲಿ ಹೊರಬಿದ್ದು, ಕಣ್ಣುಗಳಿ ಹಿಂತುದಿಯಲ್ಲಿ ಹಾದು ಕಪಾಲದೊಳಗಡೆ ಮಿದುಳಿನ ನೊಸಲ ಹಾಲೆಯ (ಫ್ರಾಂಟಲ್ ಲೋಬ್) ಕೆಳಗಿರುವುದು. ಇನ್ನೂ ಹಿಂದುಗಡೆ ಇನ್ನೊಂದು ಕಣ್ಣಿನದರೊಂದಿಗೆ ಈ ನರವೂ ಸೇರಿ ಅಡ್ಡ ಹಾದು ನರತಂತುಗಳನ್ನು ಹಂಚಿಕೊಳ್ಳುವುದು. ಇಲ್ಲಿಂದ ಹಿಂದಕ್ಕೆ, ಎರಡೂ ಕಣ್ಣುಗಳ ಕಣ್ಪಾಲಗಳ ಬಲಗಡೆ ಅರ್ಧಭಾಗದ ನರತಂತುಗಳು ಬಲ ನಿಮ್ಮಿದುಳ ಅರೆಗೋಳದೊಳಕ್ಕೂ (ಸೆಂಟ್ರಲ್ ಹೆಮಿಸ್ಫಿಯರ್), ಎಡಗಡೆ ಅರ್ಧಭಾಗವು ಎಡ ಅರೆಗೋಳದೊಳಕ್ಕೂ ತೂರುತ್ತವೆ. ಮೆದುಳಲ್ಲಿರುವವು ನೋಟದರಿವಿನ ನರಗಳು.

ಕಣ್ಣಿನ ನರ, ನೋಟದರಿವಿನ ನರಗಳಿಗೆ ಉರಿತ, ವಿಷಮಗಂತಿ, ರಕ್ತನಾಳ ರೋಗಗಳು ಹತ್ತಬಹುದು. ನರಗಳಿಗೆ ಮಾತ್ರ ಹತ್ತುವ ಜೀವಾಣುಗಳು ವಿಷ ಕಣಗಳು ಕಣ್ಣಿನ ನರಕ್ಕೆ ತಾಗಿದಲ್ಲಿ ಒಂದು ಕಣ್ಣಲ್ಲಿ ಅಲ್ಲಲ್ಲಿ ಕುರುಡು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಮೆದುಳಲ್ಲಿನ ನೋಟದರಿವಿನ ನರಗಳಿಗೆ ತಾಕಿದರೆ, ಆಯಾ ಪಕ್ಕಗಳ ಅರೆಭಾಗದ ಕುರುಡಾಗಿ ಅರೆಗಣ್ಣೋಟ (ಹೆಮಿಯನಾಪ್ಸಿಯ) ಆಗುವುದು. ಕಪಾಲದಲ್ಲಿನ ರೋಗಗಳಲ್ಲಿ ಕಣ್ಣಿನ ನೋಟ ಕುಂದಿದ್ದರೆ ಪರೀಕ್ಷಿಸಿದಾಗ, ತಲೆ ಬುರಡೆಯಲ್ಲಿ ಎಲ್ಲಿ ಏನಾಗಿರಬಹುದೆಂದು ಊಹಿಸಬಹುದು.

**ಮೆಳ್ಳೆಗಣ್ಣು :** ಇಕ್ಕಣ್ಣಿನ (ಬೈನಾಕ್ಯುಲಾರ್) ನೋಟ ಚೆನ್ನಾಗಿರಬೇಕಾದರೆ ಎರಡು ಕಣ್ಣುಗಳ ಚಲನೆಯೂ ಒಂದಕ್ಕೊಂದು ಹೊಂದಿಕೊಂಡಿರಬೇಕು ಒಂದೊಂದು ಕಣ್ಣುಗುಡ್ಡೆ ಸುತ್ತ ಆರು ಸ್ನಾಯುಗಳೂ ಮಿದುಳಲ್ಲಿ ಅವಕ್ಕೆ ಸಂಬಂಧಿಸಿದ ಹೊಂದುಗೂಡಿಸುವ ನರಕೇಂದ್ರಗಳೂ ಇವೆ.

ವರ್ಷದ ಎಳೆಗೂಸು ತನ್ನ ಕಣ್ಣುಗಳ ಚಲನೆಯನ್ನು ಅಂಕೆಗೆ ತರುವುದನ್ನು ಕಲಿತುಕೊಳ್ಳುತ್ತದೆ. ಇದಕ್ಕೆ ಅಡ್ಡಿ ಬರುವ ಕಾರಣಗಳು ಕೆಲವಿದೆ. ಎರಡು ಕಣ್ಣುಗಳೂ ದೂರನೋಟದವೋ ಹತ್ತೆ ನೋಟದವೋ ಆಗಿರಬಹುದು, ಎರಡು ಕಣ್ಣುಗುಡ್ಡೆಗಳ

ಬೆಳವಣಿಗೆಯಲ್ಲಿ ವ್ಯತ್ಯಾಸವಿರಬಹುದು. ಕಣ್ಣು ಹೊರಗಿನ ಸ್ನಾಯುಗಳ ಬಲ ಒಂದೊಂದರಲ್ಲಿ ಒಂದೊಂದು ಮಟ್ಟಕ್ಕೆ ಇರಬಹುದು. ಮೆದುಳಲ್ಲಿ ಹತೋಟಿ ಕೇಂದ್ರಗಳ ವಿಕಾಸ ಕುಂದಿರಬಹುದು. ಹೀಗೆ ಯಾವ ಮಟ್ಟದಲ್ಲಿ ಕೆಟ್ಟಿದ್ದರೂ ಒಟ್ಟಾರೆ ಪರಿಣಾಮ ಮಾತ್ರ ಒಂದೇ. ಗಮನ ಸೆಳೆವ ವಸ್ತುವಿನಲ್ಲಿ ಒಂದು ಕಣ್ಣು ನೇರವಾಗಿ ನೆಟ್ಟಿದ್ದರೆ, ಇನ್ನೊಂದು ಕಣ್ಣು ಒಳಕ್ಕೋ ಹೊರಕ್ಕೋ ಮೇಲಕ್ಕೋ ಕೆಳಕ್ಕೋ ತಿರುಗಿರುತ್ತದೆ. ಇದಕ್ಕೆ ಮೆಳ್ಳೆಗಣ್ಣು (ಸ್ಕ್ವಿಂಟ್, ಸ್ಟ್ರಬೀಸ್ಮಸ್) ಎಂದಿದೆ. ಇದನ್ನು ವಿವರಿಸುವಾಗ ಯಾವ ದಿಕ್ಕಿನದೆಂದು ಸೂಚಿಸುವುದುಂಟು. ಒಂದೊಂದು ಬಾರಿ ಒಂದೊಂದು ಕಣ್ಣು ಹೀಗೆ ತಿರುಗುವುದೋ ಯಾವಾಗಲೂ ಇರುವುದೋ ಒಂದೊಂದು ಬಾರಿ ಬರುವುದೋ ಎಂಬುದನ್ನು ಗಮನಿಸಬೇಕು.

ಎಳೆಮಕ್ಕಳಲ್ಲಿ ಮೆಳ್ಳೆಗಣ್ಣು ಕೇವಲ ಮೊಗದ ಅಂದ ಕೆಡಿಸುವುದು ಮಾತ್ರವಲ್ಲ: ಮೆಳ್ಳೆಗಣ್ಣಾಗಿದ್ದರೆ ಎರಡೂ ಕಣ್ಣುಗಳ ನಡುವೆ ಎಂದಿನ ಹೊಂದಾಣಿಕೆ ಬೆಳೆಯದು, ಬೇರೆಡೆಗೆ ತಿರುಗುವ ಕಣ್ಣಿನ ನೋಟದ ಬಲ ಕುಗ್ಗುತ್ತ ಹೋಗುತ್ತದೆ. ಒಂದೇ ಕಣ್ಣಿನ ಮೆಳ್ಳೆಗಣ್ಣಾಗಿದ್ದರೆ ತುಂಬ ಕೆಡುಕಾದ್ದರಿಂದ ಕೂಡಲೇ ಕಣ್ಣುವೈದ್ಯರಿಗೆ ತೋರಿ ತಕ್ಕ ಚಿಕಿತ್ಸೆ ಮಾಡಿಸಬೇಕು.

ಕಣ್ಣುಗಳ ಚಲನೆಯ ಇನ್ನೊಂದು ಸಾಮಾನ್ಯ ಬೇನೆಯಿದೆ. ಇದರಲ್ಲಿ ಎರಡು ಕಣ್ಣುಗಳ ನೋಟವೂ ನೆಟ್ಟಗಿದ್ದು, ಬೇನೆ ಬಿದ್ದಾಗಲೂ ಬೇಸರದ ದಣಿವಾದಾಗಲೂ ಒಂದು ಕಣ್ಣು ಒಳಕ್ಕೋ ಹೊರಕ್ಕೋ ತಿರುಗುವುದು, ಉಳಿದ ಹೊತ್ತಿನಲ್ಲೆಲ್ಲ ಚೆನ್ನಾಗಿರುತ್ತದೆ. ಬಿಟ್ಟು ಬಿಟ್ಟು ತೋರುವ ಈ ಮೆಳ್ಳೆಗಣ್ಣಿನಲ್ಲಿ ಮೆದುಳಿನ ನರಕೇಂದ್ರದ ಹತೋಟಿ ಕೆಲವೇಳೆ ತಪ್ಪಿರುತ್ತದೆ.

ಬಿಟ್ಟು ಬಿಟ್ಟು ಬರುವ ಮೆಳ್ಳೆಗಣ್ಣಿಗೂ ಹೊರಗಾಣದ (ಲೇಟೆಂಟ್) ಬಗೆಯದಕ್ಕೂ ಸಂಬಂಧವಿದೆ. ಎರಡನೆಯದರಲ್ಲಿ ಒಂದು ಕಣ್ಣನ್ನು ಒಂದು ತೊಟ್ಟುಚೂರಿಂದ ಮುಚ್ಚಿದರೆ ಮೆಳ್ಳೆಗಣ್ಣು ಹೊರತೋರುವುದು. ಹೊರಗಾಣದ ಮೆಳ್ಳೆಗಣ್ಣಲ್ಲಿ ಕಣ್ಣು ತ್ರಾಸ ಇರುತ್ತದೆ.

**ಅದಿರುಗುಣ್ಣು :** ಎರಡು ಕಣ್ಣುಗಳೂ ತಾಳೆಗತಿಯಲ್ಲಿ ತಾವಾಗಿಯೇ ಅದಿರುವುದಕ್ಕೆ ಅದಿರುಗಣ್ಣು (ನಿಜ್ಟಾಗ್ಮಸ್) ಎಂದಿದೆ. ಗಾಡಿಯಲ್ಲಿ ಹೋಗುತ್ತಿರುವಾಗ, ಯಾರಾದರೂ ಆಚೆ ತಲೆಹಾಕಿ ಇಣಿಕಿ ನೋಡುತ್ತಿದ್ದರೆ ಅಡ್ಡಡ್ಡನೆಯ ಅದಿರುಗಣ್ಣು ತೋರುವುದು. ಹೀಗೇ ಮೇಲಕ್ಕೂ ಕೆಳಕ್ಕೂ ಆಡುವ ಎತ್ತುಗದಲ್ಲಿ (ಎಲಿವೇಟರ್) ಹೋಗುವಾಗ ಕಂಡಿಯಲ್ಲಿ ಇಣಿಕು ಹಾಕಿದರೆ ನೆಟ್ಟನೆಯ ಅದಿರಿಗಣ್ಣನ್ನು ಮಾತ್ರ ರೋಗ ಎನ್ನಬಹುದು. ಹುಟ್ಟಿದಾಗಲೋ ಹುಟ್ಟಿದ ಕೆಲವೇ ತಿಂಗಳಲ್ಲೋ ಅದಿರುಗಣ್ಣು ಕಾಣಿಸಿಕೊಂಡರೆ ಕಣ್ಜಾಲದ ನಡುವಣ ಭಾಗ ಸರಿಯಾಗಿ ವಿಕಾಸವಾಗಿಲ್ಲ ಎನ್ನಬಹುದು. ಆಗ ನೋಟ ಒಂದಿಷ್ಟು ಕುಂದಿರುವುದೇ ಹೊರತು ಕುರುಡಲ್ಲ. ವಯಸ್ಸಿಗೆ ಬಂದಮೇಲೆ ಅದಿರುಗಣ್ಣು ತೋರಿದರೆ ಕೇಂದ್ರದ ನರದ ಮಂಡಲದ ಬೇರೆ ಬೇರೆ ಭಾಗಗಳಿಗೆ ರೋಗ ಹತ್ತಿರುವ ಲಕ್ಷಣವದು. ಮೈಯ ಸಮತೋಲವನ್ನು ಉಳಿಸಿಕೊಳ್ಳುವುದರಲ್ಲಿ ಬಲು ಮುಖ್ಯವಾಗಿ ನೆರವಾಗುವ ನಡುವೆಯ ಸಾಧನ (ವೆಸ್ಟಿಬೂಲಾರ್ ಆಪರೇಟಸ್) ಅದಿರು ಗಣ್ಣಿನ ನರಬೇನೆಗಳಲ್ಲಿ ಕೆಟ್ಟಿರುವುದು ಸಾಮಾನ್ಯ.

ಕಣ್ಣಿನ ಚಲನೆಯ ಬೇನೆಗಳ ಚಿಕಿತ್ಸೆ ಮೂರು ಬಗೆಯದು. ಮುಖ್ಯವಾಗಿ ಚಿಕ್ಕ ಮಕ್ಕಳ ಮೆಳ್ಳೆಗಣ್ಣಿನ ಚಿಕಿತ್ಸೆಯಲ್ಲಿ ದುರ್ಬಲಕಣ್ಣಿನ ನೋಟವನ್ನು ಉತ್ತಮಗೊಳಿಸುವ ಎಲ್ಲ ಯತ್ನಗಳನ್ನೂ ಮಾಡಬೇಕು. ಕ್ರಮವಾಗಿ ಅಂಗಸಾಧನೆ, ಬಡವಾದ ಕಣ್ಣನ್ನು ಮುಚ್ಚಿರುವುದರಿಂದ ಅನುಕೂಲ. ಕಣ್ಣಿನ ಚಲನೆಗಳನ್ನು ನಿಧಾನವಾಗಿ ಮಾಡುತ್ತಿದ್ದರೆ ಮೆದುಳಿನ ಹತೋಟಿಯನ್ನು ಬರುಬರುತ್ತ ಪಡೆಯಬಹುದು. ಕಣ್ಣಿನ ಸ್ನಾಯುಗಳ ಸಮತೋಲ ವಿಪರೀತ ಏರುಪೇರಾಗಿದ್ದರೆ ಅವನ್ನು ಶಸ್ತ್ರಕ್ರಿಯೆಯಿಂದ ಸರಿಪಡಿಸಬೇಕು.

**ಕಣ್ಣುಹೊರಗಿನ ಸ್ನಾಯುಗಳ ಇತರ ರೋಗಗಳು :** ಒಂದು ಇಲ್ಲವೇ ಹಲವು ಸ್ನಾಯುಗಳ ಅರನಾರಿಯಾಗಿ ಕಣ್ಣುಗಳ ಚಲನೆ ಕೆಟ್ಟರೆ ಇನ್ನೋಟದಿಂದ (ಡಿಪ್ಲೋಪಿಯ) ಎಲ್ಲವೂ ಎರಡಾಗಿ ಕಾಣುವುದಲ್ಲದೆ ಅರನಾರಿಯಾದ ಸ್ನಾಯು ಇರುವ ಕಡೆಚಲನೆ ಇಲ್ಲವಾಗುತ್ತದೆ. ಇನ್ನೋಟದ ರೋಗಿಗೆ ನಿಜವಾದ ಬಿಂಬಕ್ಕೂ ಹುಸಿಬಿಂಬಕ್ಕೂ ವ್ಯತ್ಯಾಸಗಾಣದೆ ತಬ್ಬಿಬ್ಬಾಗಿ ತೊಡಕಾಗುತ್ತದೆ. ಕೇಂದ್ರ ನರದ ಮಂಡಲದಲ್ಲಿ ಕೆಟ್ಟಿರುವುದರಿಂದ ಸಾಮಾನ್ಯ ವೈದ್ಯನ ಕಣ್ಣು ವೈದ್ಯನಿಗೆ ಬೇಕಾಗುತ್ತದೆ.

**ಕಣ್ಣಿನ ಗಾಯ, ಪೆಟ್ಟುಗಳು :** ಸುಲಭವಾಗಿ ಕಟ್ಟುನಿಟ್ಟಿನ ಶಾಶ್ವತ ನೋಟಗುಂದಿಕ ಪೆಟ್ಟು, ಗಾಯಗಳಿಗೆ ಈಡಾಗುವಂತಿವೆ ಮಾನವಕಣ್ಣುಗಳು. ರೆಪ್ಪೆಗಳಂತೂ ಕಣ್ಣುಗಳಿಗೆ ಪೂರ್ತಿ ಕಾಪು ಒದಗಿಸಲಾರವು. ಕೆಲವರು ಕೆಲಸ ಮಾಡುವಾಗ ತಮ್ಮ ತಲೆ, ಕಣ್ಣುಗಳನ್ನೂ ತೀರ ಹತ್ತಿರ ತರುವುದರಿಂದ ಅಪಾಯ ಇನ್ನೂ ಹೆಚ್ಚುವುದು. ಕಣ್ಣು ಬಲು ಸುಲಭವಾಗಿ ಹಾಳಾಗುವುದು. ಕೇವಲ ಒಂದು ಉಕ್ಕಿನ ಚೂರು ಕಣ್ಣಲ್ಲಿ ಹೊಕ್ಕರೆ ಇಡೀ ಕಣ್ಣೇ ಹಾಳಾಗಬಹುದು. ಅದರಲ್ಲೂ ಹರಳಂತಿರುವ ಮಸೂರ, ಕಾಜೀ ದಿಂಡು, ಇಲ್ಲವೇ ಕಣ್ಜಾಲಕ್ಕೆ ಪೆಟ್ಟಾಯಿತೆಂದರೆ ಶಾಶ್ವತವಾಗಿ ನೋಟ ಕುಂದುತ್ತದೆ.

ಕಣ್ಣೊಳಗೆ ತೂರದ ಗಾಯಗಳು ತೂರುವವಷ್ಟು ಅಪಾಯಕರವಲ್ಲ. ಆದ್ದರಿಂದ ಕಣ್ಣುವೈದ್ಯ ಗಾಯಗಳಲ್ಲಿ ಮೊದಲು ಈ ವ್ಯತ್ಯಾಸವನ್ನು ಗುರುತಿಸಿ ಮುಂದುವರಿವನು. ತೂರುವುದೆಂದರೆ ಕಣ್ಣುಗುಡ್ಡೆಯ ಮೂರೂ ಪದರಗಳನ್ನು ತೂತಿಟ್ಟುಕೊಂಡು ಹಾಯ್ದು ಕಣ್ಣೊಳಗೇ ಉಳಿವುದು. ಇದರಿಂದ ಗಾಯವಾದ ಊತಕಕ್ಕಾದ ಅಪಾಯದೊಂದಿಗೆ ಸೋಂಕೂ ಒಳಸೇರಿ, ಹೊರ ವಸ್ತುವೊಂದು ಒಳಗೇ ಉಳಿದು ಬಿಡುತ್ತದೆ. ತೂರಿದ ಗಾಯದಿಂದ ಮೊದಮೊದಲು ಏನೂ ತೊಡಕು ಕಾಣದಿರಬಹುದು. ಏಕೆಂದರೆ ತೂತು ಮುಚ್ಚಿಹೋಗಿರಬಹುದು. ಆದ್ದರಿಂದ ಯಂತ್ರಗಳೊಂದಿಗೆ ಕೆಲಸ ಮಾಡುವವರು ಏನಾದರೂ ಚೂಪಾದ ಚೂರು ಹಾರಿ ತೂರಿತು ಎನಿಸಿದರೆ ಕೂಡಲೇ ಕಣ್ಣುವೈದ್ಯನನ್ನು ಕಾಣುವುದೊಳ್ಳೆಯದು. ತೂರಿದ ಗಾಯವಾದಾಗ, ಕೂಡಲೇ ಒಳಸೇರಿದ ಹೆರವಸ್ತುವನ್ನು ಕಂಡುಕೊಂಡು ತೆಗೆಯಬೇಕು. ತೂರಿ ತೂತಾಗಿರುವುದನ್ನು ಶಸ್ತ್ರಕ್ರಿಯೆಯಿಂದ ಮುಚ್ಚಬೇಕು. ಸೋಂಕುರೋಧಕ ಮದ್ದುಗಳನ್ನು ಬಳಸಬೇಕು.

ಒಂದು ಕಣ್ಣಿನ ತೂರುವ ಗಾಯದಿಂದೇಳುವ ಮಹಾಕೆಡುಕೆಂದರೆ ಚೆನ್ನಾಗಿರುವ ಕಣ್ಣಿಗೂ ಅಪಾಯ ತಾಕುವುದೇ. ವಿರಳವಾಗಿ, ವಿಪರೀತ ಗಾಯವಾಗಿ ಕರಿಯಾಲಿ, ಬಾಸೆಯ ದಿಂಡಿನ ಉರಿತ ಆಗಿಯೇ ಇದ್ದರೆ, ಗಾಯವಾದ ಕಣ್ಣಲ್ಲಿ ಹಾಳಾದ ಊತಕಗಳಿಗೆ ಎದುರಾಗಿ ಹುಟ್ಟಿದ ರೋಧವಸ್ತುಗಳಿಂದ (ಆಂಟಿಬಾಡೀಸ್) ಇನ್ನೊಂದು ಕಣ್ಣಿನ ಉರಿತವಾಗುವುದು. ಎಷ್ಟೊ ಬಾರಿ ಕೆಲವು ವರ್ಷಗಳು ಕಳೆದ ಮೇಲೆ ಹೀಗಾಗಬಹುದು. ಕೊನೆಗೆ ಆ ಕಣ್ಣೂ ಕುರುಡಾಗಿ ಕೆಲಸಕ್ಕೆ ಬಾರದಷ್ಟು ಹಾಳಾಗುತ್ತದೆ. ಈಗ ಸ್ಟಿರಾಯ್ಡ್ ಮದ್ದುಗಳಿಂದ ಇದನ್ನು ತಡೆಯಬಹುದು. ಪೆಟ್ಟುಬಿದ್ದು ಸರಿಪಡಿಸಲಾಗದ ಕಣ್ಣನ್ನು ತೆಗೆದು ಹಾಕಿದರೂ ಇನ್ನೊಂದು ಕಣ್ಣು ಉಳಿಯ ಬಹುದು.

ಕಣ್ಣಿನ ಸಾವಿರಾರು ತೆರನ ಗಾಯ, ಪೆಟ್ಟುಗಳಲ್ಲಿ ತಾಕುವ ವಸ್ತುವಿಗೆ ವೇಗವಿಲ್ಲದ್ದ ರಿಂದ ಕಣ್ಣುಗುಡ್ಡೆಯ ಒಳಹೊಗಲಾರದು. ಸಣ್ಣಪುಟ್ಟ ವಸ್ತುಗಳು ಕೇವಲ ಕೂಡುಪೊರೆ, ಕೂಡು ಪೊರೆಗಳಲ್ಲಿ ಹುದುಕಿಕೊಳ್ಳುತ್ತವೆ. ಆದ್ದರಿಂದ ಸುಲಭವಾಗಿ ತೆಗೆಯಬಹುದು. ಆದರೆ ಕೂಡ ಪೊರೆಯನ್ನು ಗೀಚಿದರೆ ದಿನವೆಲ್ಲ ನೋವಿರುತ್ತದೆ. ತಕ್ಕ ಚಿಕಿತ್ಸೆಯಾದರೆ, ಪೂರ್ತಿ ವಾಸಿಯಾಗುವುದು. ಆದರೆ ಆಮ್ಲಗಳೋ ಕ್ಷಾರವೋ ಕಣ್ಣಿಗೆ ಹಾರಿದರೆ ಕೂಡುಪೊರೆ, ಕೂಡುಪೊರೆಗಳ ಮೇಲಿನ ಪದರಗಳೇ ಹಾಳಾಗುತ್ತವೆ. ಇದರಿಂದ ಕಣ್ಣುಗುಡ್ಡೆ ಚಲನೆ ಮಿತಿಗೊಳ್ಳುವುದು. ಕೂಡಲೇ ಧಾರಾಳವಾಗಿ ಸಾಮಾನ್ಯ ನಲ್ಲಿ ನೀರಿನಿಂದ ಕಣ್ಣನ್ನು ಚೆನ್ನಾಗಿ ತೊಳೆದರೆ, ಮುಂದೆ ನಿಧಾನವಾಗಿ ಶಸ್ತ್ರವೈದ್ಯ ಗಮನಿಸುವುದಕ್ಕಿಂತ ಸಾವಿರ ಪಾಲು ಮೇಲು.

ಕಣ್ಣುಗುಡ್ಡೆಗೆ ಮೂಗಪೆಟ್ಟು ಬಿದ್ದರೆ ಕೆಲವೆಡೆ ಬಿರಿದು ಒಡೆಯಬಹುದು. ಇದರಿಂದ ಬಹಳ ಅಪಾಯವಿದೆ. ಮೊದಲು ರೆಪ್ಪೆಯಲ್ಲಿ ರಕ್ತ ಸುರಿದು ಕೆಂಪೇರಿರುವುದರಿಂದ ಒಳಗಿನ ನಾಳದ ಅಪಾಯ ಹೊರಗಾಣದೆ ಹೋಗುತ್ತದೆ.

ಕಣ್ಣಿನಲ್ಲಿ ಏಳುವ ವಿಷಯಗಂತಿಗಳು: ಕಣ್ಣಿನಲ್ಲಿ ಎರಡು ಬಗೆಗಳ ಏಡಿಗಂತಿಗಳು ಏಳುತ್ತವೆ. ಹಸುಗೂಸುಗಳ ಇಲ್ಲವೇ ಹಸುಳೆಗಳ ಕಣ್ಜಾಲದಲ್ಲಿ ಏಳುವ ಕಣ್ಜಾಲಮೊಳ್ಗಂತಿ (ರೆಟೀಸೊಬ್ಲಾಸ್ಟೋಮ) ಒಂದು; ನಡುವಯಸ್ಸಿಗರಲ್ಲಿ ನೀಲಿಪೊರೆಯಲ್ಲಿ ಏಳುವ ವಿಷಮ ಕರ್ವಣ್ಣಗಂತಿ (ಮೆಲಿಗ್ನೆಂಟ್ ಮೆಲನೋಮ) ಇನ್ನೊಂದು. ಅವುಗಳ ಕಾರಣಗೊತ್ತಿಲ್ಲ. ಆದರೆ ಕಣ್ಜಾಲಮೊಳ್ಗಂತಿ ಕೆಲವು ತಲೆಮಾರುಗಳಲ್ಲಿ ತಲೆಹಾಕುವಂತಿದೆ. ಎಳೆಯದರಲ್ಲೇ ಕಂಡುಹಿಡಿದು, ಗಂತಿಯನ್ನೋ ಕೆಲವೇಳೆ ಇಡೀ ಕಣ್ಣುಗುಡ್ಡೆಯನ್ನೊ ತೆಗೆದು ಹಾಕುವುದರಿಂದ ವಿಷಯ ಕರ್ವಣ್ಣಗಂತಿಯಿಂದ ರೋಗಿ ಸಾಯುವುದನ್ನು ತಪ್ಪಿಸಬಹುದು, ಕಣ್ಣಾಲಮೊಳ್ಗಂತಿ ಎರಡು ಕಣ್ಣುಗಳಲ್ಲೂ ಹಲವು ಗಂತಿಗಳು ಎದ್ದಹಾಗೆ ತೋರಬಹುದು. ಕಣ್ಜಾಲವೊಳ್ಗಂತಿ ಎರಡು ಕಣ್ಣುಗಳಲ್ಲೂ ಹಲವು ಗಂತಿಗಳು ಎದ್ದಹಾಗೆ ತೋರಬಹುದು. ವಿಕಿರಣ ಚಿಕಿತ್ಸೆ, ಏಡಿ ಗಂತಿಮಾರಕ ಮದ್ದುಗಳಿಂದಲೂ ಚಿಕಿತ್ಸೆ ನಡೆಸಬಹುದು. (ಎಸ್.ಟಿ.ಪಿ;ಕೆಎಸ್‌ಯು.;ಡಿ.ಎಸ್.ಎಸ್.)

**ಕಣ್ಣಿನ ಶಸ್ತ್ರವೈದ್ಯ :** ಸಣ್ಣದಾಗಿದ್ದರೂ ಜಟಿಲ ಇಂದ್ರಿಯವಾದ ಕಣ್ಣಿನ ಮೇಲೆ ನಡೆಸುವ ಶಸ್ತ್ರವೈದ್ಯ. ಬಲು ಸಣ್ಣ ಕೋಮಲವಾದ ರಚನಾಂಶಗಳ ಮೇಲೆ ಶಸ್ತ್ರಕ್ರಿಯೆ ಆಗಬೇಕಿರುವುದರಿಂದ ಇದನ್ನು ಮಿಲಿಮೀಟರು ಶಸ್ತ್ರವೈದ್ಯ ಎನ್ನುವುದುಂಟು. ಇದರಲ್ಲಿ ಕೈಗೊಂಡದ್ದು ಕೈಗೂಡುವುದಕ್ಕೂ ಅನಾಹುತಕ್ಕೂ ಅಷ್ಟೇನೂ ಅಂತರವಿಲ್ಲ. ಸಾಮಾನ್ಯ ಶಸ್ತ್ರವೈದ್ಯನಿಗೆ ಇರಬೇಕಾದ ಮನಸು, ಚುರುಕುತನ, ಕೈಚಳಕಗಳೊಂದಿಗೆ ಕಣ್ಣಿನ ಶಸ್ತ್ರವೈದ್ಯನ ಕಣ್ಣುಗಳ ನೋಟ ಚೆನ್ನಾಗಿರಬೇಕಲ್ಲದೆ ಇಕ್ಕಣ್ಣು (ಬೈನಾಕ್ಯುಲರ್) ನೋಟವೂ ಚೆನ್ನಾಗಿರಲೇಬೇಕು. ಕೈಗಳಲ್ಲಿ ಇನಿತೂ ನಡುಕವಿರಬಾರದು. ಶಸ್ತ್ರ ಕ್ರಿಯೆಯಲ್ಲಿ ಬಲಗೈಯಷ್ಟೇ ಸರಾಗವಾಗಿ ಎಡಗೈಯನ್ನೂ ಬಳಸುವಂತಿದ್ದರಂತೂ ಇನ್ನೂ ಅನುಕೂಲ. ಕಣ್ಣಿನ ಶಸ್ತ್ರಕ್ರಿಯೆ ಕಣ್ಣಿನೊಳಗೋ ಹೊರಗೋ ನಡೆಸಬಹುದು. ಕಣ್ಣುಗುಡ್ಡೆಯ ಮೇಲಿನವಲ್ಲದೆ ಕಣ್ಣಿಗೆ ಸಂಬಂಧಿಸಿದ ಗುಡ್ಡೆ. ಹೊರಗಿನ ಸ್ನಾಯುಗಳು, ಕಣ್ಣುಗುಳಿ, ರೆಪ್ಪೆಗಳು, ಕಣ್ಣೀರು ಗ್ರಂಥಿ ಚೀಲ ನಾಳಗಳ ಮೇಲೂ ಶಸ್ತ್ರಕ್ರಿಯೆ ಆಗುವುದು. ಕಣ್ಣುಗಳ ಮೇಲೆ ನಡೆವ ಶಸ್ತ್ರಕ್ರಿಯೆಯ ಉದ್ದೇಶಗಳು ಹಲವಾರಿವೆ.

ಮೊದಲಾಗಿ, ಕಣ್ಣಿಂದ ನೋಡುವಂತೆ ಮಾಡುವುದರಲ್ಲಿ ಕಣ್ಣಿನ ಪೊರೆ ತೆಗೆಯುವುದು ಸಾಮಾನ್ಯ. ಕಣ್ಣೊಳಗೆ ಮಸಕಾಗಿ ಗಟ್ಟಿಯಾಗಿರುವ ಮಸೂರವನ್ನು (ಪೊರೆ) ಶಸ್ತ್ರಕ್ರಿಯೆಯಿಂದ ಹೊರತೆಗೆಯಬೇಕು. ಕಣ್ಣಿನ ನೋಟದ ಅರಿವಿಗೆ ಮೂಲಕಾರಣವಾದ, ಕಣ್ಣುಗುಡ್ಡೆಯ ಒಳಪದರವಾಗಿರುವ ಕಣ್ಜಾಲ ಕಳಚಿಕೊಂಡರೆ (ರೆಟೀನಲ್ ಡಿಟ್ಯಾಚ್‌ಮೆಂಟ್) ಕುರುಡಾಗುತ್ತದೆ. ಇದನ್ನು ಮತ್ತೆ ಸರಿಗೂಡಿಸಲು ಶಸ್ತ್ರಕ್ರಿಯೆಯಿಂದಲೂ ಅಸಾಧ್ಯ ; ಇತ್ತೀಚೆಗೆ, ಲೇಸರ್ ಕಿರಣಗಳಿಂದ ಸರಿಪಡಿಸುವ ಯತ್ನಗಳೂ ಕೈಗೂಡಿವೆ. ಕಣ್ಣುಗುಡ್ಡೆ ಮುಂಭಾಗದಲ್ಲಿ ತಿಳಿಗಾಜಂತಿರುವ ಕೋಡು ಪೊರೆಯಲ್ಲಿ ಕಣ್ಣು ಹೂವಾಗಿ ಬಿಳಿ ಚುಕ್ಕೆಗಳಿಂದ ಕುರುಡಾಗುವುದರಿಂದ, ಕೋಡು ಪೊರೆಯನ್ನು ಮಾತ್ರ ತೆಗೆದುಹಾಕಿ, ಆ ಜಾಗದಲ್ಲಿ ಬೇರೆಯವರ ಕಣ್ಣಿಂದ ದಾನವಾಗಿ ತಂದುದನ್ನು ಜೋಡಿಸಿ ನಾಟಿ ಹಾಕುವುದು (ಕಾರ್ನಿಯೊಪ್ಲಾಸ್ಟಿ) ಇತ್ತೀಚೆಗೆ ಜನಪ್ರಿಯವಾಗಿ ಬಹಳ ಮಂದಿಗೆ ಕಣ್ಣುಬಂದಿದೆ. ಇದನ್ನೇ ನೇತ್ರದಾನ ಎನ್ನುವುದುಂಟು; ಇಲ್ಲಿ ಕೇವಲ ಅವರೆ ಕಾಳಗಲದ ತಿಳಿಪೊರೆಯನ್ನು ನಾಟಿಹಾಕಲಾಗುವುದೇ ಹೊರತು, ಇಡೀ ಕಣ್ಣುಗುಡ್ಡೆಯನ್ನು ಇನ್ನೊಬ್ಬರಿಗೆ ನಾಟಿಹಾಕಲು ಇಂದಿಗೂ ಸಾಧ್ಯವಾಗಿಲ್ಲ.

ಇರುವ ನೋಟವನ್ನು ಕಾಪಿಡುವುದು ಕಣ್ಣಿನ ಶಸ್ತ್ರವೈದ್ಯದ ಇನ್ನೊಂದು ಉದ್ದೇಶ. ಒಂದು ಕಣ್ಣು ಗುಡ್ಡೆಯಲ್ಲಿ ಏನೋ ಕಾರಣದಿಂದ ಇದಕ್ಕಿದ್ದ ಹಾಗೆ ಒಳಗಡೆ ಒತ್ತಡ ಏರಿ ಕಣ್ಣುಕಾಣದಂತೆ ಆಗುವುದಕ್ಕೆ ಹತ್ತಗಣ್ಣು (ಗ್ಲಾಕೋಮ) ಎಂದು ಹೆಸರು. ಮದ್ದುಗಳಿಗೆ ಜಗ್ಗದಂತಾದರೆ, ಕಣ್ಣುಗುಡ್ಡೆ ಶಾಶ್ವತವಾಗಿ ಹಾಳಾಗುವುದನ್ನು ತಪ್ಪಿಸಲು ಏರಿದ ಒತ್ತಡವನ್ನು ಶಸ್ತ್ರಕ್ರಿಯೆಯಿಂದ ಇಳಿಸುವುದೊಂದೇ ದಾರಿ.

ಕುರುಡಾಗುವುದನ್ನು ತಪ್ಪಿಸಲೂ ಕೆಲವು ಶಸ್ತ್ರಕ್ರಿಯೆಗಳನ್ನು ಕೈಗೊಳ್ಳುವುದುಂಟು. ಕೋಡು ಪೊರೆಗೆ ರೋಗಹತ್ತಿ ಹಾಳಾಗುವಂತಿದ್ದರೆ, ಕೆಲವೇಳೆ ಅದು ವಾಸಿಯಾಗುವ ತನಕ ಕಣ್ಣು ತೆರೆಯಲಾಗದಂತೆ ರೆಪ್ಪೆಗಳು ಮುಚ್ಚಿರುವಂತೆ ಹೊಲಿದಿರಬೇಕಾಗುತ್ತದೆ. ಹಾಗೇ ಕಣ್ಣುಗುಳಿಯಲ್ಲಿ ಬೆಳೆದ ಗಂತಿಯಿಂದಲೋ ಏರಿದ ಒತ್ತಡದಿಂದಲೋ ಕಣ್ಣಿನ ಹಿಂದಿರುವ ಮುಖ್ಯ ನರವೇ ಅಪಾಯಕ್ಕೊಳಗಾದಾಗ ಕೂಡಲೇ ಶಸ್ತ್ರಕ್ರಿಯೆಯಿಂದ ಹೋಗಲಾಡಿಸಬೇಕು.

ಕಣ್ಣಿನಲ್ಲಿ ಬೆಳೆವ ಏಡಿಗಂತಿ ತೆರನ ಮಾಂಸಗಂತಿ (ಸಾರ್ಕೋಮ) ಮುಂತಾದವು ಬೆಳೆದಾಗ ಶಸ್ತ್ರಕ್ರಿಯೆಯಿಂದ ಬುಡಮಟ್ಟ ತೆಗೆದು ಹಾಕಿ ರೋಗಿಯ ಸಾವನ್ನು ತಪ್ಪಿಸುವ ಸಂದರ್ಭಗಳೂ ಇವೆ. ಕೇವಲ ಮದ್ದುಗಳಿಂದ ಕಣ್ಣಲ್ಲಿನ ತಡೆಯಲಾಗದ ನೋವು, ಶೂಲೆಗಳನ್ನು ಕಳೆಯಲೂ ಶಸ್ತ್ರಕ್ರಿಯೆ ಆಗುವುದುಂಟು. ಕಣ್ಣೀರು ಒಂದೇ ಸಮನೆ ಸುರಿಯುತ್ತಿದ್ದಲ್ಲಿ, ಕಣ್ಣೀರು ಗ್ರಂಥಿ, ಚೀಲ, ನಾಳಗಳಲ್ಲಿನ ರೋಗದ ಪರಿಣಾಮವಾಗಿ ಅಡಚಣೆಯಾಗಿರುವುದನ್ನು ಕಳೆಯಲೂ ಸಾಮಾನ್ಯವಾಗಿ ಶಸ್ತ್ರಕ್ರಿಯೆ ಮಾಡಬೇಕಾಗುತ್ತದೆ.

ಕಣ್ಣಿನ ಅಂದ ಹೆಚ್ಚಿಸುವ ಶಸ್ತ್ರಕ್ರಿಯೆಗಳು ಕೆಲವಿವೆ. ಅಂಥವಲ್ಲಿ ಮೆಳ್ಳೆಗಣ್ಣಿನದೂ ಒಂದು. ಕಣ್ಣುಗುಡ್ಡೆ ಹೊರಮೈಮೇಲಿರುವ ಸ್ನಾಯುಗಳಲ್ಲಿ ಕೆಲವನ್ನು ಮೊಟಕುಗೊಳಿಸಿ ಇಲ್ಲವೇ ಉದ್ದ ನೀಟುವುದರಿಂದ ಇವನ್ನು ಸುಲಭವಾಗಿ ಚಿಕ್ಕಂದಿನಲ್ಲೇ ಸರಿಪಡಿಸಬಹುದು. ತೀರ ಏನೂ ಕಾಣದಂತಾಗಿ ವಿಕಾರವಾದ ಕಣ್ಣನ್ನು ಕಿತ್ತು ಹಾಕಿ ನಕಲಿ ಕಣ್ಣನ್ನು ತೋರಿಕೆಗಾಗಿ ಇಡಬಹುದು. ಕಣ್ಣು ರೆಪ್ಪೆಗಳು ಜೋಲು ಬೀಳುವುದು, ಒಳಕ್ಕೋ ಹೊರಕ್ಕೋ ಮಡಿಸಿ ಅಂಟಿರುವುದು ಮುಂತಾದುವನ್ನೂ ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು. (ಡಿ.ಸಿ.)

**ಕಣ್ಣುವಿಜ್ಞಾನ :** ಕಣ್ಣುಗಳ ರಚನೆ, ನಿಜಗೆಲಸ, ಊನ, ಕುಂದು, ರೋಗಗಳನ್ನು ವಿವರಿಸುವ ವಿಜ್ಞಾನ (ಆಫ್ತಾಲ್ಮೋಲಜಿ). ವೈದ್ಯವಿಜ್ಞಾನದಲ್ಲಿ ಒಂದು ಮುಖ್ಯ ಇಂದ್ರಿಯವಾದ ಕಣ್ಣನ್ನು ಇದು ವಿಶೇಷವಾಗಿ ಪರಿಶೀಲಿಸುತ್ತದೆ. ನರವಿಜ್ಞಾನ, ಒಳಾಂಗ ವೈದ್ಯವಿಜ್ಞಾನ, ರೋಗವಿಜ್ಞಾನ, ಶಸ್ತ್ರವೈದ್ಯ, ಔಷಧವಿಜ್ಞಾನ, ರೋಗನಿರೋಧಕ ವಿಜ್ಞಾನ, ಪಿಂಡವಿಜ್ಞಾನ ಮುಂತಾದವೆಲ್ಲ ಇದಕ್ಕೂ ಅನ್ವಯವಾಗುತ್ತವೆ.

ಕಣ್ಣಿನ ವಿಕಾಸದಲ್ಲಿ ಕುಂದು, ರೋಗ, ಗಾಯ, ಪೆಟ್ಟುಗಳು, ರಕ್ತನಂಟು, ಮುಪ್ಪಿಗೇಡು, ಅನುವಳಿಕೆ(ಡಿಜನರೇಷನ್) ಮುಪ್ಪು, ಒಸರಿಕೆ (ರಿಫ್ರಾಕ್ಷನ್) ಇವುಗಳಲ್ಲಿ ಯಾವುದರಿಂದ ನೋಟ ಕೆಟ್ಟರೂ ಅದನ್ನು ಸರಿಪಡಿಸುವ ಜವಾಬ್ದಾರಿ ಕಣ್ಣು ವೈದ್ಯನದು. ಈತ ದೇಹವನ್ನು ಪರೀಕ್ಷಿಸಿ ಮೈಗೋ ನರಗಳಿಗೋ ಹತ್ತಿದ ರೋಗಗಳನ್ನು ಕಂಡುಹಿಡಿಯುವಾಗ ನೋಟ ಮತ್ತು ಕಣ್ಣೊಳಗಿನ ಪರೀಕ್ಷೆಗಳನ್ನು ವಿಶೇಷವಾಗಿ ಮಾಡಿ ಮದ್ದುಗಳನ್ನೊ ನೋಟ ಸರಿಪಡಿಸಲು ಕನ್ನಡಕಗಳನ್ನೋ ಸಲಹೆ ಮಾಡಿ, ಬೇಕೆನಿಸಿದಾಗ ಶಸ್ತ್ರವೈದ್ಯವನ್ನೂ ಕೈಗೊಳ್ಳುವನು. ಕಣ್ಣು ವೈದ್ಯರ ತರಬೇತಿಗಾಗಿ ಬೇರೆ ಆಸ್ಪತ್ರೆಗಳೂ ಸಂಸ್ಥೆಗಳೂ ಸಂಶೋಧನಾಲಯಗಳೂ ಇವೆ. ಕಣ್ಣುವೈದ್ಯ ಪರಿಣತ ಮೊದಲು ಸಾಮಾನ್ಯ ವೈದ್ಯನಾಗಿರಬೇಕು ನಂತರ ವೈದ್ಯರ ಕಾಲೇಜುಗಳಲ್ಲೂ ಪದವೀಧರರಾಗುವವರಿಗೆ ಇದಕ್ಕಾಗಿ ಬೇರೆ ತರಬೇತಿ 2 ವರ್ಷ –ಡಿ.ಓ.ಎಂ.ಎಸ್ ಮತ್ತು 3 ವರ್ಷ ಎಂ.ಎಸ್. ಪದವಿ ಪಡೆಯಬೇಕು.

ಒಬ್ಬನ ಬಾಳುವೆಯಲ್ಲಿ ಕಣ್ಣಿನ ಮುಖ್ಯಪಾತ್ರ ನಮ್ಮ ಪೂರ್ವಿಕರಿಗೆ ಚೆನ್ನಾಗಿ ಮನದಟ್ಟಾಗಿತ್ತು. ಅವರಿಗೆ ಕೊಂಚಮಟ್ಟಿಗೆ ಕಣ್ಣಿನ ರಚನೆ ತಿಳಿದಿದ್ದರೂ 18ನೆಯ ಶತಮಾನಕ್ಕೂ ಹಿಂದೆ ಕಣ್ಣಿನ ನಿಜಗೆಲಸದ ಕಲ್ಪನೆ ಅಷ್ಟಾಗಿರಲಿಲ್ಲ. ಪುರಾತನ ಈಜಿಪ್ಟಿನರು ಕಣ್ಣುವಿಜ್ಞಾನವನ್ನು ವಿಶೇಷವಿಜ್ಞಾನವೆಂದು ಪರಿಗಣಿಸಿದ್ದರು. 17ನೆಯ ಶತಮಾನದ ಕೆಪ್ಲರ್ ಡೆಕಾರ್ಟೆ ಕಣ್ಣುವಿಜ್ಞಾನದ ಮೂಲ ಸೂತ್ರಗಳ ಅರಿವು ಇತ್ತೆಂದು ತೋರುತ್ತದೆ. ಕಣ್ಣಿನ ರೋಗಗಳನ್ನು ಕುರಿತು ಕೆಲವು ಪುಸ್ತಕಗಳಿದ್ದುವು: ಜಾರ್ಜ್ ಬಾರ್ಟಿಷನ ಜರ್ಮನ್ ಪುಸ್ತಕ (1583), ಕಣ್ಣಿನ ನೋಟದ ಕೆಡದಂತಿರಿಸಿಕೆ ಎಂಬ ರಿಚರ್ಡ್ ಬ್ಯಾನಿಸ್ಟರನ ಇಂಗ್ಲಿಷ್ ಪುಸ್ತಕ (1583). ಲೀಡನ್ನಿನಲ್ಲಿ ಹರ್ಮನ ಬೊಯೊರೇವ್ ಕಣ್ಣುವಿಜ್ಞಾನದ ಮೇಲೆ ಉಪನ್ಯಾಸಗಳನ್ನಿತ್ತ (1708) ಕಣ್ಣಿನ ಮೇಲೆ ಬಿಂದುವಿಗಾಗಿ (ಕ್ಯಾಟರಾಕ್ಟ್) ಕಣ್ಣಿನ ಮಸೂರವನ್ನು ತೆಗೆದುಹಾಕುವ ವಿಧಾನವನ್ನು ಮೊದಲು ಜಾರಿಗೆ ತಂದ ಜಾಕ್ವಿಸ್ ಡೇವಿಯಲ್(1752) ಕಣ್ಣು ನೋಟದ ಕುಂದುಗಳಲ್ಲಿ, ಹತ್ತ ಕಣ್ಣು (ಗ್ಲೊಕೋಮಾ) (1750). ರಾತ್ರಿ ಕುರುಡು (1767), ಬಣ್ಣ ಕುರುಡುತನ (1794), ಅಸಮನಿಟ್ಟು (ಅಸ್ಟಿಗ್ಮಾಟಿಸಂ) (1801) ಮೊದಲು ಗಮನಕ್ಕೆ ಬಂದುವು. ಕಣ್ಣೊಳಗಿನ ಹೊಂದುವಳಿ(ಅಕಾಮಡೇಷನ್) ಸ್ನಾಯುಗಳನ್ನು ಮಾರ್ಗಾಗ್ನಿ ವಿವರಿಸಿದ (1761). ತಾರಕೆಯ (ಐರಿಸ್) ಚಲನೆಗಳನ್ನು ಮೊದಲಾ ಫಾಂಟಾನ ಬಣ್ಣಿಸಿದ (1775). ಕಣ್ಣೊಳಗಿರುವ ಬಿಳಿ ಚುಕ್ಕೆಯನ್ನು (ಮ್ಯಾಕ್ಯುಲ ಲೂಟಿಯ) ಬುಝೆ ಬಣ್ಣಿಸಿದರೂ ಅದಕ್ಕೆ ಹೆಸರಿಟ್ಟವ ಸೊಮ್ಮರಿಂಗ್ (1791). ತಾಮಸ್ ಯಂಗ್‌ನ ಪ್ರಕಟಣೆಗಳಿಂದ (1800–1804) ದೃಗ್ವಿಜ್ಞಾನದ (ಆಪ್ಟಿಕ್ಸ್) ಯಾಂತ್ರಿಕತೆ, ಬೆಳಕಿನ ಅಲೆ ಸಿದ್ಧಾಂತ ಇವುಗಳಿಂದ ಕಣ್ಣುವಿಜ್ಞಾನ ಮುನ್ನಡೆಯಿತು. ಆದರೆ ಇಂದಿನ ಕಣ್ಣುವಿಜ್ಞಾನ ನಿಜವಾದ (1850) ವಿಜ್ಞಾನದ ಮಟ್ಟಕ್ಕೇರಿದ್ದು ಹರ್ಮನ್ ವಾನ್‌ಹೆಲ್ಮ್ ಹೋಲ್ಜ್ ಕಣ್ಣು ದರ್ಶಕವನ್ನು (ಆಫ್ತಾಲ್ಮೋಸ್ಕೋಪ್) ಕಂಡುಹಿಡಿದ ಮೇಲೆ ಮಾತ್ರ 19ನೆಯ ಶತಮಾನದ ಕೊನೆಯರ್ಧದಲ್ಲಿ ಆಲ್ಬೆಕ್ಟ್ ವಾನ್ ಗ್ರೀಫ್ (1828–70) ಮತ್ತು ಅವನ ಹಿಂಬಾಲಕರು ಕಣ್ಣಿನ ಓಸರಿಕೆ, ಹೊಂದುವಳಿಗಳನ್ನು ಅಭ್ಯಸಿಸಿ ಅವುಗಳ ರೋಗಗಳನ್ನು ಚೆನ್ನಾಗಿ ಚಿಕಿತ್ಸೆ ಮಾಡಿ ಶಸ್ತ್ರಕ್ರಿಯಾ ವಿಧಾನಗಳನ್ನೂ ಜಾರಿಗೆ ತಂದರು. ಕಣ್ಣಿನ ಶಸ್ತ್ರವೈದ್ಯದ ತಂದೆ ಗ್ರೀಫ್ ಎನ್ನಬಹುದು. ನೋಟದ ಕುಂದುಗಳನ್ನು ಕನ್ನಡಕಗಳಿಂದ ಸರಿಪಡಿಸುವ ಇಂದಿನ ವಿಧಾನಗಳನ್ನು ಜಾರಿಗೆ ತಂದವ ಫ್ರಾನ್ಸ್ ಕಾರ್ನೆಲಿಸ್ ಡಾಂಡರ್ಸ್ (1818–89). ಕಣ್ಣಲ್ಲಿ ಬೆಳಕಿನ ಗತಿಯನ್ನು ವಿವರಿಸಿ ನೊಬೆಲ್ ಬಹುಮಾನ (1911) ಪಡೆದವನು ಅಲ್ವಾರ್ ಗಲ್ ಸ್ಟ್ರಾಂಡ್ (1862–1930).

ಕಣ್ಣಿನ ಪೊರೆ ಶಸ್ತ್ರಕ್ರಿಯೆಯನ್ನು ಯೋಜನಾಬದ್ಧ ರೀತಿಯಲ್ಲಿ ಮಾಡಿದ ಕೀರ್ತಿ ಜಾಕ್ಸ್ ಡೇವಿಯಲ್(1696–1762)ಗೆ ಸಲ್ಲುತ್ತದೆ. 1748ರಲ್ಲಿ ಈತ ಇದನ್ನು ಮಾಡಿ ತೋರಿಸಿದ.

ಈತ ಕಾರ್ನಿಯಾದ ಕೆಳಭಾಗದಲ್ಲಿ ಉದ್ದನೆ ಗಾಯಮಾಡಿ, ಸೂಕ್ತ ಉಪಕರಣದಿಂದ ಅದನ್ನು ಎತ್ತಿ ಹಿಡಿದು ಮಸೂರದ ಹಿಂದೆ ಸೂಜಿಯನ್ನು ತೂರಿಸಿ ಮಸೂರ ಹೊರ ತೆಗೆಯುತ್ತಿದ್ದ. ಹಾಗೆ ಮಾಡುವಾಗ ಕೆಲವೊಮ್ಮೆ ವಿಟ್ರಿಯಸ್ ಹೊರಗೆ ಬರುತ್ತಿತ್ತು. 1756ರಲ್ಲಿ ಈತ 434 ಶಸ್ತ್ರಕ್ರಿಯೆ ಮಾಡಿದ್ದು, ಅದರಲ್ಲಿ 50ರಲ್ಲಿ ಮಾತ್ರ ಅಪಯಶಸ್ಸು ದೊರಕಿತ್ತು.

ಡೇವಿಯಲ್‌ನ ತಂತ್ರ ಕಷ್ಟವಾದ್ದರಿಂದ ಪರ್ಸಿವಲ್ ಪಾಟ್ ಎಂಬ ಬ್ರಿಟಿಷ್ ನೇತ್ರತಜ್ಞ, ಆಂಟೋನಿಯೋ ಸ್ಕಾರ್ಪ್ ಎಂಬ ಇಟಲಿಯ ವೈದ್ಯ ಡುಪಿಟ್ರಿನ್ ಎಂಬ ಫ್ರೆಂಚ್ ತಜ್ಞ– ಎಲ್ಲರೂ ಹಳೆಯ ಕೌಚಿಂಗ್ ಪದ್ಧತಿಯನ್ನೇ ಅನುಸರಿಸುತ್ತಿದ್ದರು. 1752ರಲ್ಲಿ ಜಾರ್ಜ್ ಡಿ.ಲ.ಫಾಯ್ ಎಂಬ ಫ್ರೆಂಚ್ ತಜ್ಞ ಡೇವಿಯಲ್‌ನ ತಂತ್ರವನ್ನು ತೀರ ಸುಲಭಗೊಳಿಸಿ, ಎರಡೇ ಉಪಕರಣಗಳಿಂದ ಪೊರೆ ತೆಗೆಯುವುದನ್ನು ಪ್ರಚಲಿತಗೊಳಿಸಿದ.

ಅನಂತರದ ಬೆಳೆವಣಿಗೆಯೆಂದರೆ 1759–84ರ ಮಧ್ಯೆ ಪಿಯರ್ ಫ್ರಾಂಕೋಯಿಸ್– ಬೆನಜೆಟ್ ಪಾಮಾರ್ಡ್ ತಂದ ಮೂರು ಬದಲಾವಣೆಗಳು, ರೋಗಿಯನ್ನು ಕೂರಿಸುವುದಕ್ಕಿಂತ ಮಲಗಿಸಿ ಶಸ್ತ್ರಕ್ರಿಯೆ ಮಾಡಿದರೆ ಒಳ್ಳೆಯದು ಎಂಬ ಅಂಶ. ಅನಂತರ ಶಸ್ತ್ರಕ್ರಿಯೆ ಮಾಡುವಾಗ ಕಣ್ಣು ಚಲಿಸದಂತೆ ಮಾಡಲು ಒಂದು ಉಪಕರಣವನ್ನು ಉಪಯೋಗಿಸಿದ. ಕಾರ್ನಿಯದ ಕೆಳಭಾಗಕ್ಕಿಂತ ಮೇಲ್ಭಾಗದಲ್ಲಿ ಗಾಯ ಮಾಡಿದರೆ ಹೆಚ್ಚು ಒಳ್ಳೆಯದು ಎಂಬುದನ್ನು ಕಂಡುಹಿಡಿದ.

ಮೊದಲಿನ ಗಾಯಗಳು ಕಾರ್ನಿಯದ ಮೇಲೆಯೇ ಇರುತ್ತಿದ್ದವು. 1863ರಲ್ಲಿ ಜೂಲಿಯಸ್ ಜೇಕವಸನ್ ಎಂಬಾತ ಲಿಂಬಸ್ ಭಾಗದಲ್ಲಿ ಗಾಯ ಮಾಡಲು ಆರಂಬಿಸಿದ ನಂತರ ತೊಡಕುಗಳು ಶೇ.3ಕ್ಕೆ ಇಳಿದವು. 1866ರಲ್ಲಿ ಅಲ್ಟ್ರೆಕ್ಟ್‌ವಾನ್ ಗ್ರೀಫೆ ಲೀನಿಯರ್ ಎಕ್ಸ್‌ಟ್ರಾಕ್ಷನ್ ಎಂಬ ಹೊಸ ಪದ್ಧತಿಯನ್ನು ಆರಂಭಿಸಿದ. ಐರಿಡೆಕ್ಟಮಿ ಮಾಡುವ ಪದ್ಧತಿ ಆಗಲೇ ಆರಂಭವಾಯಿತು. ಆದರೆ ತಾರಕೆಯ ಒಂದು ಬದಿಗೆ ಮಾತ್ರ ಮಾಡುವ ಫೆರಿಫರಲ್ ಐರಿಡೆಕ್ಟಮಿ 1895ರಲ್ಲಿ ಬಜಾರ್ಡ್ ಎಂಬಾತನಿಂದ ಆರಂಭವಾಯಿತಾದರೂ, 1911–12ರಲ್ಲಿ ಎಲ್ಷನಿಗ್‌ನಿಂದ ಜನಪ್ರಿಯವಾಯಿತು.

ಮಸೂರವನ್ನು ಅದರ ಪದರಗೂಡಲೇ ಇಡಿಯಾಗಿ ಹೊರಗೆ ತೆಗೆಯುವ ಪದ್ಧತಿ 1753ರಲ್ಲಿ ಸ್ಯಾಮುಯೆಲ್ ಷಾರ್ಪ್ ಲಂಡನ್‌ನಲ್ಲಿ ಆರಂಭಿಸಿದ. ಈತ ತನ್ನ ಹೆಬ್ಬೆರಳಿನ ಒತ್ತಡದಿಂದಲೇ ಮಸೂರವನ್ನು ಹೊರ ತೆಗೆಯುತ್ತಿದ್ದ. ಅನಂತರ ವಿವಿಧ ಉಪಕರಣಗಳಿಂದ

ಒತ್ತಡ ಕೊಟ್ಟು ಮಸೂರ ಹೊರ ತೆಗೆಯಲಾರಂಭಿಸಿದರು. ಅಮೃತಸರದ ಮಲ್ರೋನೆಜ್ ಎಂಬಾತ ಕಂಡು ಹಿಡಿದ ಪದ್ಧತಿಯನ್ನು ಕಲೋನೆಲ್ ಹೆನ್ರಿ ಸ್ಮಿತ್ (1900–26) ಎಂಬಾತ ಭಾರತದ ಬಹಳ ರೋಗಿಗಳಲ್ಲಿ ಪ್ರಯೋಗಿಸಿ ಶಸ್ತ್ರಕ್ರಿಯೆ ನಡೆಸಿದ. ಇದೇ ರೀತಿ ಲೂಪ್, ವೆಕ್ಟಿಸ್, ಸ್ಪೂನ್, ಮೊದಲಾದವುಗಳನ್ನು ಉಪಯೋಗಿಸಿ ಕಣ್ಣಿನ ಗುಡ್ಡೆಗೆ ಒತ್ತುಕೊಟ್ಟು ಮಸೂರ ಹೊರತೆಗೆಯುವ ಪದ್ಧತಿಯನ್ನು ಜಗತ್ತಿನಾದ್ಯಂತ ವಿವಿಧ ತಜ್ಞರುಗಳು ನಡೆಸತೊಡಗಿದರು. ಇದರಲ್ಲಿ ವಿಟ್ರಿಯಸ್ ಹೊರಗೆ ಬಂದು ವಿವಿಧ ತೊಂದರೆಗಳನ್ನು ಒಡ್ಡುವ ಅಪಾಯ ಇದ್ದೇ ಇತ್ತು. ಇದನ್ನು ಮನಗಂಡು ಇದಕ್ಕೆ ಬದಲಾಗಿ ಮಸೂರವನ್ನು ಚಿಮಟದಿಂದಲೇ ಹೊರ ತೆಗೆಯುವ ಪದ್ಧತಿಯನ್ನು 1870ರಲ್ಲಿ ಟೇರ್ಸನ್ ಎಂಬಾತ ಆರಂಭಿಸಿದ. ನಂತರ 1878ರಲ್ಲಿ ಲ್ಯಾಂಡ್ಸ್ ಬರ್ಗ್ ಎಂಬಾತ ಬೇರೆ ರೀತಿಯ ಉಪಕರಣದಿಂದ ಇದನ್ನು ಮಾಡಿದರೂ, ಯೂಜಿನ್‍ಕಾಲ್ಟ್ (1894–1925) ಎಂಬಾತ ಪ್ಯಾರಿಸ್‍ನಲ್ಲಿ, ಇದಕ್ಕಾಗಿಯೇ ಬೇರೆ ರೀತಿಯ ಚಿಮಟವನ್ನೇ (capsuleforceps) ಕಂಡು ಹಿಡಿದ. ಇದನ್ನು ಹಲವು ಬದಲಾವಣೆಗಳೊಂದಿಗೆ, ಬುಕಾರ್‍ಸ್ಟ್‍ನ ಸ್ಟಾನ್ ಕುಲೇನ್ (1912) ನ್ಯೂಯಾರ್ಕ್‍ನ ಅರ್ನಾಲ್ಡ್ ನ್ಯಾಸ್ (1914–47) ಪ್ರಾಗ್‍ನ ಆಂಟನ್ ಎಲ್ಷ್‍ನಿಗ್ (1922–32) ಎಡಿನ್‍ಬರೋದ ಆರ್ಥರ್ ಸಿನ್‍ಕ್ಲೇರ್–ಅವರುಗಳು ಜನಪ್ರಿಯಗೊಳಿಸಿದರು.

ಮಸೂರದ ತಂತುಗಳನ್ನು ನಾಶಗೊಳಿಸಿ (Zonulor distruction) ಹೊರ ತೆಗೆಯುವ ಪದ್ಧತಿ 1866ರಲ್ಲಿ ಡಿಲೂಕ ಎನ್ನುವಾತನಿಂದ ಆರಂಭಗೊಂಡರೂ–ಆಲ್ಫಾ-ಕ್ರೀಮೋಟ್ರಿಪ್ಸಿನ್ ಉಪಯೋಗಿಸಿ ಅದನ್ನು ಒಳ್ಳೆಯ ರೀತಿಯಿಂದ ಮಾಡಿದ ಕೀರ್ತಿ 1958ರಲ್ಲಿ ಜೆ.ಬರಾಕರ್‌ಗೆ ಸಲ್ಲುತ್ತದೆ.

**ಹೊಲಿಗೆಗಳು :** ಕಾರ್‍ನಿಯದ ಭಾಗದಲ್ಲಿ ಉಂಟಾದ ಗಾಯವನ್ನು ಹೊಲಿಗೆಯ ಮೂಲಕ ಮುಚ್ಚುವ ಪದ್ಧತಿ 1867ರಲ್ಲಿ ಹೆನ್ರಿ ವಿಲಿಯಮ್ಸ್‌ನಿಂದ ಆರಂಭಗೊಂಡರೂ 30 ವರ್ಷಗಳ ನಂತರ 1894ರಲ್ಲಿ ಕಾಲ್ಸ್‌ನಿಂದ ಜನಪ್ರಿಯಗೊಂಡಿತು. ಅದರ ಹಲವು ಬದಲಾವಣೆಗಳು ಉಪಯೋಗಕ್ಕೆ ಬಂದವು.

ಸ್ಥಳೀಯ ಅರಿವಳಿಕೆ ಉಪಯೋಗಿಸುವುದು ಮತ್ತು ವಿವಿಧ ಔಷಧಗಳನ್ನು ಉಪಯೋಗಿಸಿ ನೋವನ್ನು ಕಡಿಮೆಮಾಡುವುದು–ಇವು ಮುಂದಿನ ಬೆಳೆವಣಿಗೆಗಳಾದವು. ವಿಯನ್ನಾದ ಕಾರ್ಲ್ ಕೋಲರ್ ಎಂಬಾತ 1884ರಲ್ಲಿ ಕೋಕೇನ್ ಹನಿಗಳನ್ನು ಕಣ್ಣಿಗೆ ಬಿಟ್ಟು ಈ ಪದ್ಧತಿ ಆರಂಭಿಸಿದ. ರಿಟ್ರೋಬಲ್ಬಾರ್ ಇಂಜೆಕ್ಷನ್ ಉಪಯೋಗಿಸುವುದು ಆರಂಭಿಸಿದ್ದು 1928ರಲ್ಲಿ ಎಲ್ಷ್‍ನಿಗ್. ಫೇಶಿಯಲ್ ನರದ ಶಾಖೆಗಳಿಗೆ ಇಂಜೆಕ್ಷನ್ ಕೊಟ್ಟು ಅರಿವಳಿಕೆ ಉಂಟುಮಾಡುವ ಪದ್ಧತಿ ಆರಂಭಿಸಿದ್ದು ಬ್ರಸೆಲ್ಸ್‌ನ ವಾನ್‍ಲಿಂಟ್ 1914ರಲ್ಲಿ. ರೈಟ್ (1921–26) ಎಂಬ ಮದ್ರಾಸಿನ ತಜ್ಞ ಕಿವಿಗಿಂತ ಸ್ವಲ್ಪ ಮುಂಭಾಗದಲ್ಲಿ ಇಂಜೆಕ್ಷನ್ ಕೊಡುವ ರೀತಿಯಲ್ಲಿ ಬದಲಾಯಿಸಿದರೂ ಅದನ್ನು ತೀರ ಸರಳಗೊಳಿಸಿದವನು ಓಬ್ರೈನ್ ಎಂಬಾತ (1929).

ಕಣ್ಣಿನ ಪೊರೆ ಶಸ್ತ್ರಕ್ರಿಯೆಯ ಅನಂತರ ದಪ್ಪ ಕನ್ನಡಕ ಕೊಡುವ ಪದ್ಧತಿಯನ್ನು 1623ರಲ್ಲಿ ಬೆನಿಟೋ ಡಾಜಾ ಡಿ ವಾಲ್ಡಿಸ್ ಎಂಬಾತನು ಹೇಳಿದ್ದರೂ ಒಂದು ಶತಮಾನ ಕಳೆಯುವವರೆಗೂ, ಅಂದರೆ 18ನೇ ಶತಮಾನದವರೆಗೂ ಇದು ಜಾರಿಗೆ ಬಂದಿರಲಿಲ್ಲ.

(ಡಿ.ಎಸ್.ಎಸ್.; ಎಚ್.ಎಸ್.ಎಂ.)

**ಕಣ್ಣೇಗಾಲ ಕದನ :** ಹೊಯ್ಸಳ ವಿಷ್ಣುವರ್ಧನನಿಗೂ ಕಲ್ಯಾಣಿ ಚಾಳುಕ್ಯರಿಗೂ ಕರ್ನಾಟಕ ರಾಜ್ಯದ ಹಾಸನದ ಬಳಿಯ ಕಣ್ಣೇಗಾಲ ಗ್ರಾಮದ ಹತ್ತಿರದಲ್ಲಿ ಸು. 1118ರಲ್ಲಿ ನಡೆದ ಕದನ. ವಿಷ್ಣುವರ್ಧನ ಚೋಳರ ಮೇಲೆ ಯುದ್ಧ ಘೋಷಿಸಿ ಅವರನ್ನು ಸೋಲಿಸಿ ಗಂಗವಾಡಿಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡು ಪ್ರಬಲನಾಗಿ, ಚಾಳುಕ್ಯ ಮಾಂಡಲಿಕರಾದ ಕದಂಬರನ್ನೂ ಉಚ್ಚಂಗಿಯ ಪಾಂಡ್ಯರನ್ನೂ ಸೋಲಿಸಿ, ಹೊಯ್ಸಳ ರಾಜ್ಯದ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ. ತನ್ನ ಮಾಂಡಲಿಕನಾಗಿದ್ದ ವಿಷ್ಣುವರ್ಧನನ ಈ ಕೃತ್ಯಗಳಿಂದ ಚಾಳುಕ್ಯ ಸಾಮ್ರಾಟ ಆರನೆಯ ವಿಕ್ರಮಾದಿತ್ಯನಿಗೆ ಕೋಪ ಬಂತು. ಇತರ ಹನ್ನೆರಡು ಮಂದಿ ಸಾಮಂತರ ಸೈನ್ಯಗಳನ್ನೂ ಸೇರಿಸಿ ಸಿಂಧ ಸಾಮಂತರ ಆಚರಸನ ನಾಯಕತ್ವದಲ್ಲಿ ಹೊಯ್ಸಳ ರಾಜಧಾನಿಯಾದ ದ್ವಾರಸಮುದ್ರದ ಕಡೆಗೆ ಕಳುಹಿಸಿಕೊಟ್ಟ.

ವಿಷ್ಣುವರ್ಧನನ ಪ್ರಧಾನಾಮಾತ್ಯನೂ ಪ್ರಮುಖ ದಂಡನಾಯಕನೂ ಆದ ಗಂಗರಾಜನ ನೇತೃತ್ವದಲ್ಲಿ ಹೊಯ್ಸಳ ಸೈನ್ಯ ಆಚರಸನ ಸೈನ್ಯವನ್ನು ಹಾದಿಯಲ್ಲೆ ಕಣ್ಣೇಗಾಲದ ಬಳಿ ಎದುರಿಸಿತು. ಅನಿರೀಕ್ಷಿತವಾಗಿ ಮೇಲೆರಗಿದ ಹೊಯ್ಸಳ ಸೈನ್ಯದ ಪೆಟ್ಟಿಗೆ ತತ್ತರಿಸಿದ ಚಾಳುಕ್ಯ ಸೈನ್ಯ ಸೋತುಹೋಯಿತು. ಅದರಿಂದ ವಶಪಡಿಸಿಕೊಂಡ ಯುದ್ಧಸಾಮಗ್ರಿಯನ್ನು ಗಂಗರಾಜ ವಿಷ್ಣುವರ್ಧನನಿಗೆ ಒಪ್ಪಿಸಿದ. ಸಂಪ್ರೀತನಾದ ವಿಷ್ಣುವರ್ಧನ ಗಂಗರಾಜನಿಗೆ ಅನೇಕ ಗ್ರಾಮಗಳನ್ನು ಕೊಡುಗೆಯಾಗಿತ್ತ. ಪ್ರವರ್ಧಮಾನಕ್ಕೆ ಬರುತ್ತಿದ್ದ ಹೊಯ್ಸಳ ಸಾಮ್ರಾಜ್ಯದ ಆರಂಭ ಕಾಲದ ಒಂದು ಮುಖ್ಯ ಕದನವಿದು. (ಜಿ.ಆರ್.ಆರ್.)

**ಕಣ್ವ :** ಸಪ್ತರ್ಷಿಗಳಲ್ಲಿ ಒಬ್ಬ. ಋಗ್ವೇದದಲ್ಲಿ ಈತನನ್ನು ಕುರಿತ ಅನೇಕ ಸೂಕ್ತಿಗಳಿವೆ. ಸಮುದ್ರಮಥನ ನಡೆದಾಗ ಸೂರ್ಯನ ಹುಬ್ಬಿನಿಂದ ತೊಟ್ಟಿಕ್ಕಿದ ಬೆವರಿನ ಒಂದು ಹನಿಯಿಂದ (ಕಣ) ಈತ ಉದ್ಭವಿಸಿದನೆಂದು ಕಥೆ. ಈತ ಬಹಳ ಶಾಂತಸ್ವಭಾವದವನೂ ಕರುಣೆಯೂ ಆಗಿದ್ದ. ಈತನ ವಂಶಜರಿಗೆ ಕಾಣ್ವರು ಎಂದು ಹೆಸರು. ಇವರ ಪೈಕಿ ನಾರದ ಮಹರ್ಷಿ ಬಹಳ ಪ್ರಖ್ಯಾತನಾದವ.

ಶಕುಂತಲೆಯನ್ನು ಸಾಕಿದ ಕಣ್ವಋಷಿಯೂ ಇದೇ ವಂಶದವ. ಮಾಲಿನೀ ನದೀತೀರದಲ್ಲಿ ಇವನ ಆಶ್ರಮವಿತ್ತು. ಈತ ಮಹಾತಪಸ್ವಿ. ತನ್ನ ಆಶ್ರಮದಲ್ಲಿ ಹತ್ತುಸಾವಿರಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತ ಕುಲಪತಿಯೆಂಬ ಖ್ಯಾತಿಗೆ ಒಳಗಾದವನೆಂದು ಕಾಳಿದಾಸನ ಅಭಿಜ್ಞಾನ ಶಾಕುಂತಲದಿಂದ ತಿಳಿದುಬರುತ್ತದೆ. ಮಹಾಭಾರತದ ದುಷ್ಯಂತೋಪಾಖ್ಯಾನದಲ್ಲೂ ಇವನ ಬಗ್ಗೆ ಉಲ್ಲೇಖವಿದೆ. (ಎನ್.ಎನ್.ಆರ್.ಬಿ.)

**ಕಣ್ವ ಜಲಾಶಯ :** ಬೆಂಗಳೂರು ಜಿಲ್ಲೆಯ ಚನ್ನಪಟ್ಟ ತಾಲ್ಲೂಕಿನಲ್ಲಿ ಸದರಿ ಗ್ರಾಮದ ಉತ್ತರಕ್ಕೆ ಸು. 7 ಕಿಮೀ ದೂರದಲ್ಲಿ ಕಣ್ವ ನದಿಗೆ ಅಡ್ಡವಾಗಿ ಮಣ್ಣಿನ ಕಟ್ಟೆ ಏರಿಸಿ ನಿರ್ಮಿಸಿರುವ ಜಲಾಶಯ. ಇದರ ಉತ್ತರ ಅಕ್ಷಾಂಶ $12^{0}$ 47' ಮತ್ತು ಪೂರ್ವ ರೇಖಾಂಶ $77^{0}$ 12'. ಬೆಂಗಳೂರಿನಿಂದ ಈ ಜಲಾಶಯದ ದೂರ 58 ಕಿಮೀಗಳು.

ಕಣ್ವ ನದಿ ಮೈಸೂರು ಸೀಮೆಯ ಬೆಂಗಳೂರು ಜಿಲ್ಲೆಯ ಮಾಗಡಿ ಗ್ರಾಮಕ್ಕೆ ಸಮೀಪದಲ್ಲಿ ಹುಟ್ಟಿ ಮಾಗಡಿ, ರಾಮನಗರ, ಚನ್ನಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಪ್ರವಹಿಸಿ ಅಂತಿಮವಾಗಿ ಕಾವೇರಿ ನದಿಯ ಉಪನದಿಯಾದ ಶಿಂಷಾ ನದಿಯೊಡನೆ ಸಂಗಮವಾಗುತ್ತದೆ.

ಕಣ್ವ ಜಲಾಶಯದ ಯೋಜನೆಯ ಕಾಮಗಾರಿಗಳು 1940ನೆಯ ಇಸವಿಯಲ್ಲಿ ಪ್ರಾರಂಭವಾಗಿ 1946ರಲ್ಲಿ ಮುಕ್ತಾಯವಾದುವು. ನೀರಾವರಿ ಇದರ ಪ್ರಧಾನ ಉದ್ದೇಶ. ಕಟ್ಟೆಯ ಉದ್ದ 1,422 ಮೀ; ಅತ್ಯಂತ ಆಳವಾದ ಜಾಗದಲ್ಲಿ ಅದರ ಎತ್ತರ 17.98 ಮೀ ಜಲಾಶಯದ ವಿಸ್ತೀರ್ಣ (ಕೋಡಿ ಮಟ್ಟದಲ್ಲಿ) 1,190 ಎಕರೆ (4,815.6 ಚಕಿಮೀ). ಭೂಮಟ್ಟದಿಂದ ಕೋಡಿ ಮಟ್ಟದವರೆಗೆ ತುಂಬುವ ಜಲದ ಘನಗಾತ್ರ 3,902 ಯೂನಿಟ್ಟುಗಳು (ಯೂನಿಟ್ಟು ಎಂದರೆ ಸು. 2 1/2 ಲಕ್ಷ ಘನ ಅಡಿಗಳು). ಇದರಲ್ಲಿ ಸು. 400 ಯೂನಿಟ್ಟುಗಳಷ್ಟು ಜಲಭಾಗ ತೂಬಿನ ಮಟ್ಟದಿಂದ ಕೆಳಗೆ ಉಳಿಯುವುದರಿಂದ ನೀರಾವರಿಗೆ ಅದರ ಉಪಯೋಗವಿಲ್ಲ. ಅಂದರೆ ಜಲಾಶಯದ ನಿವ್ವಳ ಉಪಯುಕ್ತ ಜಲಭಾಗ ಸು. 3,502 ಯೂನಿಟ್ಟುಗಳಷ್ಟಾಯಿತು.

ಕಣ್ವ ಜಲಾಶಯದ ಒಂದು ನೋಟ

ಕಣ್ವ ಜಲಾಶಯದ ಜಲಾನಯನ ಪ್ರದೇಶ ವಿಸ್ತೀರ್ಣ 133 ಚ.ಕಿಮೀಗಳು. ಅದು ಒಂದು ವರ್ಷದಲ್ಲಿ ಒದಗಿಸುವ ನೀರಿನ ಸರಾಸರಿ 3,585 ಯೂನಿಟ್ಟುಗಳು. ಜಲಾಶಯ ಮತ್ತು ಅದರ ಮೇಲ್ಭಾಗದ ಕಣಿವೆಯಲ್ಲಿ ಒಂದು ವರ್ಷದ ಅವಧಿಯಲ್ಲಿ ಬೀಳುವ ಸರಾಸರಿ 32" ಮಳೆ ನೀರು ಇದಕ್ಕೆ ಆಧಾರ ಜಲಾಶಯ ಕಟ್ಟೆಯ ಅಡ್ಡಕೊಯ್ತ ವಿಷಮ ಸಮಾನಾಂತರ ಚತುರ್ಭುಜ (ಟ್ರ್ಯಾಪೆಜಾಯ್ಡಲ್) ಆಕಾರದಲ್ಲಿದೆ. ಏರಿಯ ಅಡ್ಡಕೊಯ್ತ ಪಕ್ಕದ ಚೌಕಟ್ಟಿನಲ್ಲಿದೆ. ನೀರು ತಾಕುವ ಕಡೆ ಏರಿಯ ಮೇಲುನದಿ ಭಾಗದ ಇಳಿಜಾರನ್ನು ದವಡೆ ಕಲ್ಲು (ರಿವೆಟ್‍ಮೆಂಟ್) ಗಳಿಂದ ಬಿಗಿದು ನೀರಲೆಗಳ ರಭಸದ ಹೊಡೆತ ಏರಿಯನ್ನು ಶಿಥಿಲಗೊಳಿಸದಂತೆ ರಕ್ಷಿಸಲಾಗಿದೆ. ಏರಿಯ ಮಧ್ಯಭಾಗದಲ್ಲಿ ಸು. 244 ಮೀ ಪರ್ಯಂತ ಕಲ್ಲುಗುಂಡುಗಳಿಂದ ತುಂಬಿದ ಗುಪ್ತ ಚರಂಡಿಗಳನ್ನು ಸಮಾನಾಂತರವಾಗಿ ರಚಿಸಿ ಏರಿಯ ಒಳಗಿನ ನೀರನ್ನು ಹೊರತೆಗೆಯಲು ಅನುಕೂಲ ಮಾಡಿದ್ದಾರೆ. ಇದರಿಂದಾಗಿ ಏರಿಯಲ್ಲಿ ಕಾರು ನೀರಿನ ಪ್ರಭಾವದಿಂದ ಒಡ್ಡು ಬೀಳುವ ಪ್ರಮೇಯ ಬಲುಮಟ್ಟಿಗೆ ಕಡಿಮೆಯಾಗಿದೆ.

ಪ್ರವಾಹ ಕಾಲದಲ್ಲಿ ನದಿಯಿಂದ ಬಂದು ಸೇರುವ ಹೆಚ್ಚು ನೀರನ್ನು ಜಲಾಶಯದಿಂದ ಕ್ಷಿಪ್ರವಾಗಿ ಹೊರತೆಗೆಯಲು ಎಡತುದಿಯಲ್ಲಿ ಇಳಿಗೊಳವೆಗಳನ್ನೊಳಗೊಂಡ ಕೋಡಿಯನ್ನು ರಚಿಸಲಾಗಿದೆ. ವಾಯುಮಂಡಲದ ಒತ್ತಡದ ಆಧಾರದ ಮೇಲೆ ನಡೆಯುವ ಈ ಇಳಿಗೊಳವೆಗಳು ಅಷ್ಟೇ ಬಾಯಗಲವಿರುವ ಸಾಧಾರಣ ಆಯಾಕಾರದ ಕೋಡಿಗಿಂತ ಹೆಚ್ಚು ರಭಸದಿಂದ ನೀರನ್ನು ಹೊರತೆಗೆಯುತ್ತವೆ. ಈ ಜಲಾಶಯದ ಕೋಡಿಯಲ್ಲಿ ಅಳವಡಿಸಿರುವ ಇಳಿಗೊಳವೆಗಳು ಎರಡು ಬಗೆಯವು. ಮೊದಲನೆಯವು ಹೆಡೆಯಾಕಾರದವು (ಹುಡ್ ಸೈಫನ್ಸ್). ಎರಡನೆಯವು ಶಂಖ ತಿರುಪಿನಾಕಾರದವು (ವಲ್ಯೂಟ್ ಸೈಫನ್ಸ್). ಜಲಾಶಯದಲ್ಲಿ ಮೊದಲನೆಯ ಮಾದರಿಯ ಐದು ಇಳಿಗೊಳವೆಗಳಿವೆ. ಸು. 2–5 ಮೀ ಗಳ ಈ ಕೊಳವೆಗಳು ನೀರೆಳೆಯುವ ಪ್ರಮುಖ ಕೊಳವೆಗಳಾಗಿ ಕೆಲಸ ಮಾಡುತ್ತವೆ. ಎರಡನೆಯ ತರಹ ಎಂದರೆ ಶಂಖ ತಿರುಪಿನ ಕೊಳವೆಗಳು ಎರಡು ಮಾತ್ರ ಇವೆ. ಅವು ಕೇವಲ ಸಹಾಯಕ ಕೊಳವೆಗಳಾಗಿ (ಎಂದರೆ ಮೊದಲಿನವನ್ನು ಕೆಲಸದಲ್ಲಿ ತೊಡಗಿಸಲು ಅನುವಾಗಿ) ವರ್ತಿಸುತ್ತವೆ. ಈ ಜಲಾಶಯದ ಕಟ್ಟೆಯಲ್ಲಿ ಪ್ರತ್ಯೇಕವಾಗಿ 180' ಅಗಲದ ಸಾಧಾರಣ ಕೋಡಿಯೂ ಇದೆ. ಇಳಿಗೊಳವೆಗಳೇನಾದರೂ ಕೆಲಸ ಮಾಡದೆ ನಿಂತಲ್ಲಿ ಇದು ನೆರವಿಗೆ ಬರುತ್ತದೆ.

ಜಲಾಶಯದಿಂದ ನೀರಾವರಿಗಾಗಿ ಜಲವನ್ನು ಹೊರದೂಡಿಸುವ ಸಲುವಾಗಿ ಕಟ್ಟೆಯ ಎಡ ತುದಿಯಲ್ಲಿ ದೊಡ್ಡದೊಂದು ತೂಬನ್ನೂ ಎಡಗಡೆ ಸಣ್ಣದೊಂದು ತೂಬನ್ನೂ ಅಳವಡಿಸಿ ಈ ಎರಡು ತೂಬುಗಳಿಂದಲೂ ಪ್ರತಿಕ್ಷಣದಲ್ಲಿಯೂ 30.1752 ಘನ ಮೀ ಗಳಷ್ಟು ನೀರನ್ನು ರವಾನಿಸುವ ಏರ್ಪಾಡು ಮಾಡಲಾಗಿದೆ. ಪ್ರಮುಖ ನಾಲೆಗಳು ಮತ್ತು ಇತರ ಶಾಖಾ ನಾಲೆಗಳೂ ಸೇರಿ 40.23 ಕಿಮೀ ದೂರ ನೀರನ್ನು ಸಾಗಿಸುತ್ತವೆ. ಈ ಎಲ್ಲ ನಾಲೆಗಳೂ ಒಟ್ಟುಗೂಡಿ 5,000 ಎಕರೆಗಳಷ್ಟು (2,709 ಹೆಕ್ಟೇರುಗಳು) ಜಮೀನಿಗೆ ನೀರು ಹಾಕಿಸಬಲ್ಲವು.

ಕಣ್ವ ಜಲಾಶಯದ ಯೋಜನೆಗೆ ಆದ ಒಟ್ಟು ಖರ್ಚು 40 ಲಕ್ಷ ರೂ. ಇದರ ನೀರಾವರಿ ಕ್ರಮದಿಂದ 30 ಗ್ರಾಮಗಳಿಗೆ ಪ್ರಯೋಜನವುಂಟಾಗಿದೆ. (ಕೆ.ಎಸ್.ಕೆ.)

**ಕತಾರ್ಸಿಸ್ :** ಭೇದಿ, ವಿರೇಚನೆ ಎಂಬ ಅರ್ಥವನ್ನುಳ್ಳ ಈ ಪ್ರಾಚೀನ ಗ್ರೀಕ್ ಪದ ವೈದ್ಯಕ್ಕೆ ಸೇರಿದುದು. ತತ್ತ್ವಜ್ಞರು ಕ್ರಮೇಣ ಇದನ್ನು ಕೆಲವು ಕಲೆಗಳು ಉಂಟುಮಾಡುವ ಪರಿಣಾಮಕ್ಕೆ ಅನ್ವಯಿಸಿದರು.

ರುದ್ರನಾಟಕದ (ಗಂಭೀರ ನಾಟಕ) ಮೇಲೆ ಪ್ಲೇಟೊ ಮಹಾಶಯನಿಗೆ ವಿಶೇಷ ಆಗ್ರಹ. ಅದರಿಂದ ಆಗುವ ಕೇಡನ್ನು ಆತ ಹೀಗೆ ಬಣ್ಣಿಸಿದ: ನಾಟಕಶಾಲೆಯಲ್ಲಿ ಅದನ್ನು ವೀಕ್ಷಿಸುತ್ತ ನೋಟಕರು ತಮ್ಮ ಮರುಕವನ್ನು ತಡೆದಿಡಲಾರದೆ ಎಲ್ಲರೆದುರಿಗೂ ಗಟ್ಟಿಯಾಗಿ ರೋದಿಸುತ್ತಾರೆ. ಆ ವರ್ತನೆಯಿಂದ ಅವರ ದಾರ್ಢ್ಯಕ್ಕೂ ಸಂಯಮಕ್ಕೂ ಹಾನಿ, ಅವರ ಪೌರುಷಕ್ಕೇ ಅಪಾಯ. ಆದ್ದರಿಂದ ಆದರ್ಶ ಗಣರಾಜ್ಯದಿಂದ ನಾಟಕಕರ್ತರನ್ನು ಗಡೀಪಾರು ಮಾಡತಕ್ಕದ್ದು.

ಪ್ಲೇಟೊವಿನ ಆಕ್ಷೇಪಕ್ಕೆ ಸೂಕ್ತ ಸಮಾಧಾನವನ್ನಿತ್ತು ರುದ್ರನಾಟಕವನ್ನು ಅರಿಸ್ಟಾಟಲ್ ಸಮರ್ಥಿಸಿದ. ಅವನ ವಿವರಣೆಯಂತೆ ರುದ್ರನಾಟಕ ಮೂರು ತೆರದಲ್ಲಿ ಪ್ರಯೋಜಕ. ಆದರೆ ಅವನ ಅಭಿಪ್ರಾಯಗಳು ವಿಶದವಾಗಿ ಪೋಷಿತವಾಗಿಲ್ಲ. ತನ್ನ ಪಾಲಿಟಿಕ್ಸ್ ಗ್ರಂಥದಲ್ಲಿ ಆತ ಸಂಗೀತ ಒದಗಿಸಿಕೊಡುವ ವಿರೇಚನವನ್ನು ಪ್ರಾಸಂಗಿಕವಾಗಿ ನಮೂದಿಸಿ, ಮುಂದೆ ಅದನ್ನು ತನ್ನ ಪೊಯಟಿಕ್ಸ್‌ನಲ್ಲಿ ಬಿಡಿಸಿ ಬಿಡಿಸಿ ತಿಳಿಯಪಡಿಸುವುದಾಗಿ ಭರವಸೆ ಕೊಟ್ಟ. ನಮಗೆ ಉಪಲಬ್ಧವಾಗಿರುವ ಪೊಯಟಿಕ್ಸ್‌ನ ಒಂದನೆಯ ಭಾಗದಲ್ಲಾದರೂ ಗಂಭೀರ ನಾಟಕದ ಕಾರ್ಯವನ್ನು ಹೇಳುವ ಸಂದರ್ಭದಲ್ಲಿ ಭಯ ಮರುಕಗಳ ಮೂಲಕ ಆ ಭಾವಗಳ ವಿರೇಚನವನ್ನು ಅದು ಎಸಗುತ್ತದೆ ಎಂಬ ಒಂದೇ ಒಂದು ಸಂದಿಗ್ಧ ವಾಕ್ಯವಿದೆ. ಮತ್ತಾವ ಕಡೆಯಲ್ಲೂ ಕತಾರ್ಸಿಸ್ ಪದದ ಯಾವ ವಿವರಣೆಯೂ ಸಿಕ್ಕುವುದಿಲ್ಲ. ಅವನ ನಿಜವಾದ ಅಭಿಪ್ರಾಯ ಏನಾಗಿತ್ತೆಂಬುದನ್ನು ನಿರ್ದಿಷ್ಟವಾಗಿ ತಿಳಿಯುವಂತಿಲ್ಲ. ಪಾಶ್ಚಾತ್ಯ ಪಂಡಿತರು ಅದಕ್ಕೆ ಅರವತ್ತು ವಿಧದ ಅರ್ಥಗಳನ್ನು ಊಹಿಸಿದ್ದಾರಂತೆ; ಹೀಗಿದ್ದರೂ ಅರಿಸ್ಟಾಟಲನ ಇಂಗಿತ ಏನಾಗಿದ್ದಿರಬಹುದೆಂದು ಹೆಚ್ಚು ಕಡಿಮೆ ಮನವೊಪ್ಪುವಂತೆ ಗೊತ್ತುಹಿಡಿಯಲು ಅವಕಾಶ ಇಲ್ಲದಿಲ್ಲ.

ರುದ್ರನಾಟಕ ನೋಟಕನ ಭಾವನೆಗಳನ್ನು ಕೆರಳಿಸಿ ಹೊರಗೆಳೆಯುವುದನ್ನು ಅರಿಸ್ಟಾಟಲ್ ಒಪ್ಪಿಕೊಂಡ. ಹಾಗಾಗುವದರಿಂದ ಕೆಡುಕಿಗೆ ಬದಲು ಒಳ್ಳೆಯದೇ ಆಗುವುದೆಂದು ಅವನ ಜವಾಬು. ಭಾವಗಳನ್ನು ಅಂತರ್ಯದೊಳಗೆ ಅದುಮಿಟ್ಟರೆ ಕಲ್ಮಷವನ್ನು ಒಳಗಿಟ್ಟುಕೊಂಡಂತೆ ಮಾನಸಿಕ ಆರೋಗ್ಯಕ್ಕೆ ಬಾಧೆ. ಯುಕ್ತ ರೀತಿಯಲ್ಲಿ ಅವನ್ನು ಆಗಾಗ ಹೊರಗೆಡವಿದರೆ ಚಿತ್ತ ತನ್ನ ಮೇಲಣ ಭಾರವನ್ನು ಕೊಡವಿಕೊಂಡು ಹಗುರವಾಗುತ್ತದೆ. ಜೀವನದ ಲವಲವಿಕೆ ದೃಢವಾಗುತ್ತದೆ. ಹೀಗೆ ರುದ್ರನಾಟಕ ಹೋಮಿಯೋಪತಿ ವೈದ್ಯದ ಔಷಧದಂತೆ ಚಿಕಿತ್ಸೆ ನಡೆಸುತ್ತದೆ.

ರುದ್ರನಾಟಕದ ಇನ್ನೆರಡು ಪ್ರಯೋಜನಗಳೂ ಅರಿಸ್ಟಾಟಲನ ಮನಸ್ಸಿಗೆ ಹೊಳೆದಿತ್ತೆಂಬುದು ವಿದ್ವಾಂಸರ ಅಭಿಮತ. ಅದು ತಂದೀಯುವ ಸಂತೋಷ ಪ್ರಾಪ್ತಿಯೇ ಎರಡನೆಯ ಪ್ರಯೋಜನ. ಯಾವ ಬಗೆಯ ಸಂತೋಷ ಅದು? ರುದ್ರ ನಾಟಕದ ನಾಯಕ ದುರುಳನಲ್ಲ. ಒಟ್ಟಿನಲ್ಲಿ ಅವನು ಸದ್ಗುಣಿ. ಯಾವುದೋ ಅಲ್ಪ ಅಜಾಗ್ರತೆಗೊ ಗುಣಾತಿಶಯಕ್ಕೋ ಪಕ್ಕಾಗಿ ಆತ ತಪ್ಪು ಮಾಡುತ್ತಾನೆ. ಅದರಿಂದ ಅವನಿಗೆ ಆಗುವ ತೊಂದರೆಯೂ ಸಂಕಟವೂ ವಿಪರೀತ. ಅದಷ್ಟಕ್ಕೂ ಅವನೆಂದಿಗೂ ಅರ್ಹನಲ್ಲ. ಕಾರಣ, ಅವನ ವಿಷಾದ ಚರಿತ್ರೆ ಪ್ರೇಕ್ಷಕರಲ್ಲಿ ಭೀತಿಯನ್ನೂ ಅನುಕಂಪವನ್ನೂ ಉತ್ಪಾದಿಸುತ್ತದೆ. ಪ್ರೇಕ್ಷಕರು ಸಾಮಾನ್ಯವಾಗಿ ತಮ್ಮ ತಮ್ಮ ಕ್ಷುಲ್ಲಕ ದಿನಚರಿ ಕಷ್ಟವ್ಯಸನಗಳಲ್ಲಿ ಲೀನರಾದ ಅತ್ಯಂತ ಸ್ವಾರ್ಥದ ಮಂದಿ. ನಾಟಕ ಮಂದಿರದಲ್ಲಿ ನಾಯಕನ ಭಾರಿ ಸಂತಾಪಗಳಿಗೆ ಮನಸೋತು ತಮ್ಮ ಸ್ವಂತ ಯೋಗಕ್ಷೇಮದ ಸಂಕೋಚದಿಂದ ವಿಮುಖರಾಗಿ ಕೊಂಚಕಾಲ ಮೇಲ್ಮಟ್ಟಕ್ಕೆ ಏರುತ್ತಾರೆ. ಹೀಗೆ ಮನಶ್ಶುದ್ಧಿಯನ್ನು ಆಗಗೊಳಿಸಿ ರುದ್ರನಾಟಕ ಆನಂದದಾಯಕವಾಗುತ್ತದೆ.

ಮೂರನೆಯದಾಗಿ, ಗಂಭೀರನಾಟಕದ ನಾಯಕ ಕೇವಲ ಒಬ್ಬ ಬಿಡಿ ವ್ಯಕ್ತಿಯಲ್ಲ. ಮಾನವಕೋಟಿಯ ಉದಾತ್ತ ಪ್ರತಿನಿಧಿ. ಅವನ ಆಗುಹೋಗುಗಳ ನಿಕಟ ಪರಿಚಯದಿಂದ ಮನುಷ್ಯ ಜೀವನದ ಆಳವೂ ವಿಶಾಲವೂ ಆದ ಸಾರ್ವತ್ರಿಕ ಅನುಭವ ನೋಟಕರಿಗೆ ದಕ್ಕುತ್ತದೆ. ತನ್ಮೂಲಕ ಅವರ ಬಾಳು ಎತ್ತರವಾಗಬಹುದು. ಲಲಿತಕಲೆಯ ಪಾಲಿಗೆ ನೇಮಕವಾಗಿರುವ ಕರ್ತವ್ಯವನ್ನು ರುದ್ರನಾಟಕ ಹೀಗೆ ಅತ್ಯುತ್ಕೃಷ್ಟವಾಗಿ, ಭಾಷೆಕೊಟ್ಟು ನೆರವೇರಿಸಬಲ್ಲುದು.

ಈ ಅಭಿಪ್ರಾಯಗಳು ಎಷ್ಟರ ಮಟ್ಟಿಗೆ ಅರಿಸ್ಟಾಟಲನದೊ ಹೇಳುವಂತಿಲ್ಲ. ಪಾಶ್ಚಾತ್ಯ ವಿಮರ್ಶೆಯಲ್ಲಿ ಕತಾರ್ಸಿಸ್ ಪದದಷ್ಟು ಚರ್ಚಿತವಾಗಿರುವ ಉಕ್ತಿ ಬೇರೊಂದಿಲ್ಲ.

ಹರ್ಷನಾಟಕವೂ ನಗುವಿನ ಮೂಲಕ ಇದೇ ರೀತಿ ಭಾವಶುದ್ಧಿಯನ್ನು ದೊರಕಿಸುತ್ತದೆ ಯೆಂದು ಪ್ರಾಯಶಃ ಅರಿಸ್ಟಾಟಲನ ಅಭಿಮತವಾಗಿತ್ತು. ಆದರೆ ಹರ್ಷನಾಟಕವನ್ನು ಕುರಿತ ಅವನ ಲೇಖನ ಕಣ್ಮರೆಯಾಗಿದೆಯಾಗಿ ಖಚಿತವಾಗಿ ಏನನ್ನೂ ಹೇಳುವಂತಿಲ್ಲ.

ಕತಾರ್ಸಿಸ್ ತತ್ತ್ವ ಅರಿಸ್ಟಾಟಲನ ಬಗೆಗೇ ರುದ್ರನಾಟಕದ ಬಗೆಗೇ ಮಿತಿಗೊಂಡಿಲ್ಲ. ಪಾಶ್ಚಾತ್ಯ ಕಲಾಮೀಮಾಂಸೆಯಲ್ಲಿ ಅದಕ್ಕೆ ಹೆಚ್ಚಿನ ವ್ಯಾಪ್ತಿ ಲಭಿಸಿದೆ. ಲಲಿತ ಕಲೆಯ ಸ್ವರೂಪದ ಮೇಲೆ ಕತಾರ್ಸಿಸ್ ಬೆಳಕು ಚೆಲ್ಲುತ್ತದೆಯೇ ಇದೊಂದು ಗಹನ ಪ್ರಶ್ನೆ. ಇಲ್ಲವೆಂದು ಅನೇಕರ ವಾದ. ಕಲೆಗೋಸ್ಕರ ಕಲೆ ಇರುವುದರಿಂದ ಅದಕ್ಕೆ ಪ್ರತ್ಯೇಕ ಉದ್ದೇಶವನ್ನು ಆರೋಪಿಸುವುದು ತಪ್ಪು. ನಾಟಕ ಒಂದು ವಿನೋದ ಅಷ್ಟೇ. ವಿನೋದ ಮುಖ್ಯವಲ್ಲ. ಅದರಿಂದ ಉಂಟಾಗಬಹುದಾದ ಭಾವಶುದ್ಧಿ ಇತ್ಯಾದಿಗಳು ಕೇವಲ ಗೌಣ–ಎಂದವರ ವಾದ. (ಎಸ್.ವಿ.ಆರ್.)

ಅರಿಸ್ಟಾಟಲ್ ಟ್ರ್ಯಾಜಿಡಿಯು ಭಯ ಇತ್ಯಾದಿಗಳನ್ನು ಪ್ರಚೋದಿಸಿ ಅವುಗಳ ಕೆತಾರ್ಸಿಸ್‌ಅನ್ನು ಸಾಧಿಸುತ್ತದೆ ಎಂದ. ಟ್ರ್ಯಾಜಿಡಿಯ ಕ್ರಿಯೆಯನ್ನು ವೀಕ್ಷಿಸಿ ಪ್ರೇಕ್ಷಕರು ಖಿನ್ನವಾಗುವುದಿಲ್ಲ, ಉದ್ವೇಗಗೊಳ್ಳುವುದಿಲ್ಲ, ಒಂದು ರೀತಿಯ ಬಿಡುಗಡೆಯನ್ನು ಅನುಭವಿಸುತ್ತಾರೆ ಎಂದು ಪ್ರತಿಪಾದಿಸಿದ. ಅನಾರೋಗ್ಯಕರವಾಗಬಹುದಾದ ಭಾವಗಳು ನಾಟಕದ ನಾಯಕನ ಬಗೆಗೆ ಸಹಾನುಭೂತಿಯಿಂದ ಬಹಿರ್ಮುಖಿಯಾಗುತ್ತವೆ, ಹೀಗೆ ಮಾನಸಿಕ ಸಾಮರಸ್ಯವಾಗುತ್ತದೆ ಎಂದು ಅರಿಸ್ಟಾಟಲನ ವಿವರಣೆ ಎಂಬುದು ಕೆಲವು ವಿಮರ್ಶಕರ ಅಭಿಪ್ರಾಯ. ಇದರಿಂದ ಬದುಕಿನ ನೋವಿನ ಮೇಲೆ ಪ್ರೇಕ್ಷಕನ ಮನಸ್ಸು ಪ್ರಭುತ್ವವನ್ನು ಸಾಧಿಸುತ್ತದೆ, ಟ್ರ್ಯಾಜಿಡಿಯು ಮನುಷ್ಯನ ನೈತಿಕ ಸ್ವಭಾವವನ್ನು ದುರ್ಬಲಗೊಳಿಸುವುದಿಲ್ಲ, ಇನ್ನೂ ಬಲಗೊಳಿಸುತ್ತದೆ ಎಂದು ವಿಮರ್ಶಕರು ವಿವರಿಸಿದ್ದಾರೆ. (ಎಲ್.ಎಸ್.ಎಸ್.)

**ಕತೆಗಾರ :** ಕಥಾಸಾಹಿತ್ಯ ವಿತರಣೆಗೆ ಸೊಂಟ ಕಟ್ಟಿ ನಿಂತ ಕನ್ನಡ ಮಾಸಪತ್ರಿಕೆ. 1920ರ ತರುವಾಯದ ಕಾಲ ಹೊಸಗನ್ನಡ ಸಾಹಿತ್ಯ ಸೃಷ್ಟಿಯ ಉತ್ಸಾಹದ ಕಾಲ. ಆಗ ಪ್ರಾಸ ಛಂದೋಮುಕ್ತವಾದ ಹೊಸ ಕವಿತೆ ಹಳೆಯ ಕಟ್ಟುಪಾಡುಗಳನ್ನು ಕಳಚಿ ಮೈಗೊಡವಿಕೊಂಡು ಮೇಲೆದ್ದಂತೆ ಸಣ್ಣಕಥೆಗಳ ಒಂದು ಹೊಸ ಯುಗವೂ ಆರಂಭವಾಯಿತೆನ್ನಬೇಕು. ಆಗ ಬಂದ ಆ ಬೆಳೆ ತುಂಬ ಹುಲುಸು. ಸಣ್ಣಕಥೆಯ ವ್ಯಾಪ್ತಿ ವೈವಿಧ್ಯಗಳನ್ನು ಮನಗಂಡ ತರುಣ ಬರಹಗಾರರು ಅದಕ್ಕೆ ಕೈಹಾಕಿದರು. ಸಂಕೀರ್ಣ ವಿಷಯಗಳನ್ನು ಪ್ರಕಟಿಸುತ್ತಿದ್ದ ವಾರಪತ್ರಿಕೆ ಮಾಸಪತ್ರಿಕೆಗಳ ಜೊತೆಗೆ ಸಣ್ಣ ಕಥೆಗಳಿಗಾಗಿಯೇ ಮೀಸಲಾದ ಪತ್ರಿಕೆಗಳು ತಲೆಯೆತ್ತಿದುವು.

ಈ ಪತ್ರಿಕೆಯ ಸ್ಥಾಪಕ–ಸಂಪಾದಕರು ಎಂ.ಎನ್. ನಾರಾಯಣರಾವ್. ಪತ್ರಿಕೆ ಹುಟ್ಟಿದ್ದು ಬೆಂಗಳೂರಿನಲ್ಲಿ; 1933 ಅಕ್ಟೋಬರ್ ತಿಂಗಳಲ್ಲಿ. ಕಿರೀಟ ಚತುರ್ಥಾಕಾರದ 38 ಪುಟಗಳ ಬಿಡಿ ಪತ್ರಿಕೆಗೆ ಆಗ ಎರಡೇ ಆಣೆ. ಸಣ್ಣ ಕಥೆಯ ಬರೆವಣಿಗೆಯಲ್ಲಿ ಈಗ ಪ್ರಸಿದ್ಧವಾಗಿರುವ ಹಲವು ಬರೆಹಗಾರರು ಕಥಾವಸ್ತು ನಿರೂಪಣೆ, ತಂತ್ರ ಇತ್ಯಾದಿಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದ ಕಾಲವದು. ಜನರೂ ಆ ಕಥೆಗಳನ್ನು ಅಷ್ಟೇ ಕುತೂಹಲಾಸಕ್ತಿಗಳಿಂದ ಓದುತ್ತಿದ್ದರು. ಹೀಗಾಗಿ ಈ ಸಾಹಿತ್ಯ ಪ್ರಕಾರ ಮನೋರಂಜನೆ

ಮನೋನ್ನತಿಗಳ ಸಾಧನವಾಗಿ ಬೇರೂರಿ ನಿಂತಿತ್ತು. ಕತೆಗಾರದ ಸಂಪಾದಕರು 1934ನೆಯ ಅಕ್ಟೋಬರ್ ಸಂಚಿಕೆಯಲ್ಲಿ ಬರೆದ ಸಂಪಾದಕೀಯ ಟಿಪ್ಪಣಿಯಲ್ಲಿ ಕಥೆಗಳನ್ನು ಆರಿಸುವುದರಲ್ಲಿ ಇನ್ನೂ ಹೆಚ್ಚು ವೈವಿಧ್ಯಕ್ಕೆ ಗಮನ ಕೊಡಲಾಗುವುದು. ಮುಖ್ಯವಾಗಿ ಇಂದು ವಾಚಕರಿಗೆ ನಾವೀನ್ಯ ಬೇಕು–ಕಥಾವಸ್ತುವಿನಲ್ಲಿ ನಾವೀನ್ಯ, ಕಥನ ರೀತಿಯಲ್ಲಿ ನಾವೀನ್ಯ–ಎಂದು ಹೇಳಿದ್ದಾರೆ. ಕಥಸಾಹಿತ್ಯದಲ್ಲಿ ಹೊಸತನ್ನು ಹುಡುಕುವ ದೃಷ್ಟಿ ಆಗಲೇ ಹೇಗೆ ಬೆಳೆದಿತ್ತೆನ್ನುವುದಕ್ಕೆ ಇದು ಸಾಕ್ಷಿ.

ಕತೆಗಾರ ಪತ್ರಿಕೆಯನ್ನು 1944ನೆಯ ಅಕ್ಟೋಬರ್‌ನಲ್ಲಿ ಜಿ.ಎ. ನರಸಿಂಹಮೂರ್ತಿಯವರು ವಹಿಸಿಕೊಂಡು ನಡೆಸತೊಡಗಿದರು. ಆಗ ಬಿಡಿಸಂಚಿಕೆಯ ಬೆಲೆ ನಾಲ್ಕಾಣೆ. ಪತ್ರಿಕೆಯ ಅಂದ ಅಚ್ಚುಕಟ್ಟು ತಿರುಳುಗಳಲ್ಲಿ ಹಲವು ಮಾರ್ಪಾಡುಗಳನ್ನು ಅವರು ಮಾಡಿದರು. ಅದರಲ್ಲಿ ಮುಖ್ಯವಾದದ್ದು ಕನ್ನಡ ಕಥಾವಾಹಿನಿ ಎಂಬ ಶೀರ್ಷಿಕೆ. ಆಗಿನ ಹೆಸರಾದಂತ ಕನ್ನಡ ಮಾಸಪತ್ರಿಕೆಗಳಲ್ಲಿ ಬರುತ್ತಿದ್ದ ಸಣ್ಣಕಥೆಗಳನ್ನು ವಿಮರ್ಶೆ ಮಾಡಿ ಜಳ್ಳು ಯಾವುದು, ಕಾಳು ಯಾವುದು, ಯಾವ ಕಥೆ ಯಾವ ಕಾರಣದಿಂದ ಮೇಲು, ಯಾವ ಕಾರಣದಿಂದ ಅಲ್ಲ ಎನ್ನುವ ಕೂಲಂಕಷ ವಿಮರ್ಶೆ ಈ ವಿಭಾಗದಲ್ಲಿ ಬರುತ್ತಿತ್ತು; ಇದು ಹೊಸದಾಗಿ ಕಥೆ ಬರೆಯುವವರಿಗೆ ಒಂದು ಮಾರ್ಗದರ್ಶಕವಾಗಿತ್ತು; ಕಥೆಗಳ ನೆಲೆಬೆಲೆಗಳನ್ನು ತಿಳಿದುಕೊಳ್ಳುವುದರಲ್ಲಿ ಓದುಗರಿಗೆ ಸಹಾಯಕವಾಗಿತ್ತು.

ಹೀಗೆ ಸಣ್ಣಕಥೆಗಳ ಬರಹಗಾರರ ಬಳಗವನ್ನು ಕಟ್ಟಿ, ಓದುಗರಲ್ಲಿ ಒಳ್ಳೆಯ ಮಟ್ಟದ ರುಚಿ ಬೆಳೆಸಿ, ಕನ್ನಡ ಕಥಸಾಹಿತ್ಯದ ಬೆಳವಣಿಗೆಗೆ ದೊಡ್ಡ ಪಾಲಿನ ಸೇವೆ ಸಲ್ಲಿಸಿದ ಕತೆಗಾರ ಪತ್ರಿಕೆ 1968ನೆಯ ಅಕ್ಟೋಬರ್‌ವರೆಗೂ ನಡೆಯಿತು. ಇದರ ಧ್ಯೇಯವಾಕ್ಯ: ಪ್ರಪಂಚದ ಸೊಗಸು ತೋದ್ದೋರೇ ನಮ್ಮ ಕಸಬು. (ಎ.ಇ.ಎಸ್.)

**ಕತ್ತರಿಸುವುದು :** ಗಿಯರು ಕತ್ತರಿಸುವುದು ಮತ್ತು ಮಾತೃಕೆಯನ್ನು (ಡೈ) ಕತ್ತರಿಸುವುದು ಎಂದು ಎರಡು ವಿಧಗಳಿವೆ (ಕಟಿಂಗ್).

**ಗಿಯರು ಕತ್ತರಿಸುವುದು :** ತಿರುಗುತ್ತಿರುವ ನಾಳಸಹಿತ (ಫ್ಲೂಟೆಡ್) ರೇಖೆಯ ಭ್ರಮಿಕರ್ತಕ (ಹಾಬ್) ನೇರ (ಸ್ಪರ್), ಕುಂಡಲಿನಿ (ಹೆಲಿಕಲ್) ಮತ್ತು ವರ್ಮ್ ಗಿಯರುಗಳನ್ನು ಕತ್ತರಿಸುವ ಕ್ರಿಯೆ. ಈ ವಿಧಾನದಲ್ಲಿ ಕಾಯಕ ಪದಾರ್ಥ (ಬ್ಲ್ಯಾಂಕ್) ಮತ್ತು ಕರ್ತಕಗಳು ಮಾಡುವ ತಲಾ ಒಂದೊಂದು ಪರಿಭ್ರಮಣ ಚಲನೆ ಹಾಗೂ ಅದೇ ಕಾಲದಲ್ಲಿ ಕರ್ತಕ ಮಾಡುವ ರೇಖೀಯ ಚಲನೆ–ಹೀಗೆ ಒಮ್ಮೆಗೇ ಮೂರು ಚಲನೆಗಳನ್ನು ಕಾಣಬಹುದು.



ಸ್ಪರ್ ಗಿಯರನ್ನು ಕತ್ತರಿಸುವುದು

ಕ್ರಿಯೆ : ಮುಂದೆ ಗಿಯರು ಯಾವ ಜವದಲ್ಲಿ (ಸ್ಪೀಡ್) ಓಡಬೇಕೋ ಅದೆ ಜವದಲ್ಲಿ ಈಗ ಕಾಯಕಪದಾರ್ಥವನ್ನು ತಿರುಗಿಸಬೇಕು. ಸೂಕ್ತ ಜವದಲ್ಲಿ ತಿರುಗುತ್ತಿರುವ ಕರ್ತಕವು ಕಾಯಕಪದಾರ್ಥವನ್ನು ಒತ್ತಿ ಹಲ್ಲುಗಳನ್ನು ಕತ್ತರಿಸುತ್ತದೆ. ಈ ವಿಧಾನದಲ್ಲಿ ಉಷ್ಣ ಯಾವ ಒಂದು ಭಾಗದಲ್ಲಿಯೂ ಕೇಂದ್ರೀಕೃತವಾಗದೆ ಸಮನಾಗಿ ಹಂಚಲ್ಪಡುತ್ತದೆ.

ಮಾತೃಕೆಯನ್ನು ಕತ್ತರಿಸುವುದು (ಡೈಹಾಬಿಂಗ್); ಗಡಸುಗೊಳಿಸಿದ ಉಕ್ಕಿನಲ್ಲಿ (ಹಾರ್ಡನ್ಡ್ ಸ್ಟೀಲ್) ನಮಗೆ ಬೇಕಾದ ಮಾತೃಕೆಯ ಪ್ರತಿಕೃತಿಯನ್ನು ಕೊರೆಯಬೇಕು. ಅನಂತರ ಇದನ್ನು ಪ್ರತಿಕೃತಿಗಿಂತಲೂ ಮೆದುವಾದ ಲೋಹದೊಳಗೆ ಅಧಿಕ ಒತ್ತಡದಲ್ಲಿ ದಬ್ಬಿದಾಗ, ಪ್ರತಿಕೃತಿಯು ಲೋಹವನ್ನು ಕತ್ತರಿಸಿಕೊಂಡು ಹೋಗುವುದರಿಂದ ಇಚ್ಛಿತ ಮಾತೃಕೆ ದೊರೆಯುತ್ತದೆ. (ಕೆ.ಆರ್.ಎಂ.ಒ.)

**ಕತ್ತರಿಹುಳುಗಳು :** ಕೀಟವರ್ಗದ ಲೆಪಿಡಾಪ್ಟಿರ ಗಣದ ಫ್ಯಾಲಿನಿಡೀ ಮತ್ತು ನಾಕ್ಟುಯಿಡೀ ಕುಟುಂಬಕ್ಕೆ ಸೇರಿದ ಪತಂಗಗಳ ಡಿಂಭಗಳು (ಕಟ್‌ವರ್ಮ್ಸ್). ಕೆಲವು ಬೆಳೆಗಳ ಸಸಿಗಳನ್ನು ಕತ್ತರಿಸಿ ತುಂಡುಮಾಡಿ ನಾಶಪಡಿಸುವುದರಿಂದ ಇವಕ್ಕೆ ಈ ಹೆಸರು. ಇವು ಉರುಳೆಯಾಕಾರದವು. ನುಣುಪಾದ ಮೈಯುಳ್ಳವು. ಅವುಗಳ ಬಣ್ಣ ಮಣ್ಣಿನಂತೆಯೇ, ಸಾಮಾನ್ಯವಾಗಿ ಇವುಗಳೆಲ್ಲ 5 ಜೊತೆ ಮುಂಗಾಲುಗಳಿವೆ (ಪ್ರೋ ಲೆಗ್ಸ್).

ಹಗಲಿನಲ್ಲಿ ಹೆಂಟೆ, ಕಲ್ಲು ಮತ್ತು ಹುಡಿಮಣ್ಣಿನ ಕೆಳಗೆ ಅಡಗಿಕೊಂಡಿದ್ದು ರಾತ್ರಿವೇಳೆ ತಮ್ಮ ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗುತ್ತವೆ. ಒಟ್ಲು ಪಾತಿಗಳಿಗೆ ಇವುಗಳಿಂದ ತೊಂದರೆ ಹೆಚ್ಚು. ಇವು ಹೆಚ್ಚಿನ ಸಂಖ್ಯೆಯಲ್ಲಿದ್ದಾಗ ಗುಂಪು ಗುಂಪಾಗಿ ಹೊಲದಿಂದ ಹೊಲಕ್ಕೆ ಸಾಗಿ ಸಾಕಷ್ಟು ನಷ್ಟ ಉಂಟುಮಾಡುತ್ತವೆ. ಇವು ಗಿಡಗಳ ಎಲೆ, ಬೇರು, ಕಾಂಡ ಮುಂತಾದುವನ್ನು ಕತ್ತರಿಸುವುದು ಸಾಮಾನ್ಯವಾದರೂ ಕೆಲವು ಬಗೆಯವು ಹಣ್ಣು ಮತ್ತು ಮರಗಳನ್ನು ಕೊರೆಯುವುದೂ ಉಂಟು. ಕೆಲವಂತೂ ಕೃಷಿ ಬೆಳೆಗಳಿಗೆ ತೀವ್ರ ಹಾನಿಯುಂಟು ಮಾಡುವ ಪಿಡುಗುಗಳಾಗಿವೆ. ಉದಾಹರಣೆಗೆ ಹೊಗೆಸೊಪ್ಪಿನ ಹುಳು (ಪ್ರೊಡೀನಿಯ), ರಾಗಿಯ ಹುಳು (ಲ್ಯಾಫಿಗ್ಮ), ದಂಡುಹುಳು (ಸಿರ್‌ಫಿಸ್), ಅಲೂಗಡ್ಡೆಯ ಕತ್ತರಿಹುಳು (ಯುಕ್ಸೋವ) ಮತ್ತು ಬತ್ತದ ಮುತ್ತುವ ಹುಳು (ಸ್ಪೋಡಾಪ್ಟಿರ) ಇವಲ್ಲದೆ ಕೋಸು, ಮೆಣಸಿನಕಾಯಿ, ಈರುಳ್ಳಿ, ಬದನೆ ಮುಂತಾದ ಬೆಳೆಗಳಿಗೆ ಹತ್ತುವ ಕತ್ತರಿಹುಳುಗಳೂ ಉಂಟು.

ವಿಷ ಬೆರೆತ ಆಕರ್ಷಕ ಆಹಾರವನ್ನು (ಬೇಯ್ಟ್) ನೆಲದಲ್ಲಿ ಹರಡಿ ಅವು ಸಾಯುವಂತೆ ಮಾಡುವುದೊಂದೇ ಇವುಗಳ ನಿವಾರಣೆಯ ಪರಿಣಾಮಕಾರಿ ಮಾರ್ಗ.

(ಡಿ.ಎಸ್.; ಎನ್.ಎಸ್.ಎಲ್.)

**ಕತ್ತಲೆ ಮುಸುಕು :** ಯುದ್ಧ ದಿವಸಗಳಂದು ರಾತ್ರಿ ವೇಳೆ ಸ್ವಂತನೆಲೆ ಶತ್ರುವಿಗೆ ಕಾಣದಂತೆ ಮಾಡಲು ವಿಧಿಸುವ ಆಜ್ಞೆ (ಬ್ಲ್ಯಾಕ್‌ಔಟ್). ಮುಖ್ಯ ಉದ್ದೇಶ ರಕ್ಷಣೆ. ಆಕಾಶದಲ್ಲಿ ಸುತ್ತುತ್ತಿರುವ, ನೆಲದ ಮೇಲೆ ಗಸ್ತುತಿರುಗುತ್ತಿರುವ, ಸಮುದ್ರದಲ್ಲಿ ಹೊಂಚುತ್ತಿರುವ ಶತ್ರುವಿನ ವಿರುದ್ಧ ಕತ್ತಲೆಮುಸುಕು ಅಪಾರ ಸ್ವರಕ್ಷಣೆ ಒದಗಿಸುತ್ತದೆ. ಎಲ್ಲೋ ಕಾಣಬರುವ ಒಂದೇ ಒಂದು ಬೆಳಕಿನ ಕಿರಣವೂ ಎದುರಾಳಿಯ ಇರುವಿಕೆಯ ಬಗ್ಗೆ ಅಪಾರ ಮಾಹಿತಿ ಕೊಡಬಲ್ಲುದು. ಆದ್ದರಿಂದ ಇನಿತೂ ತಿಳಿಯದಂತೆ ಎಚ್ಚರವಹಿಸ ಬೇಕಾದದ್ದು ಬಲು ಆವಶ್ಯಕ. ಕತ್ತಲೆ ಮುಸುಕು ಆಜ್ಞೆ ಜಾರಿಯಲ್ಲಿರುವಾಗ ಪಾಲಿಸುವ ಕೆಲವು ನಿಯಮಗಳು ಹೀಗಿವೆ; ಸೈನ್ಯಬಲಗಳ ಚಲನೆಯ ಕಾಲದಲ್ಲಿ (ಅನಿವಾರ್ಯವೆನ್ನಿಸಿದಾಗ ಮಾತ್ರ) ಮರೆಮಾಡಿರುವ ಮಿಣುಕು ದೀಪಗಳನ್ನು ಉಪಯೋಗಿಸಬೇಕು; ನಾಗರಿಕ ವಲಯಗಳಲ್ಲಿ ಬೀದಿಗಳ ಸಾಲುದೀಪಗಳು, ಶೃಂಗಾರದೀಪಗಳು ಯಾವುವೂ ಇರುವುದಿಲ್ಲ; ಮನೆಗಳ ಪಾರದರ್ಶಕ ವಸ್ತುಗಳನ್ನೆಲ್ಲ ಕಪ್ಪುಗವಸಿನಿಂದ ಮುಚ್ಚಿರಬೇಕು; ವಾಹನಗಳ ಮಾರ್ಗದರ್ಶಿ ದೀಪಗಳ ಮೇಲುಭಾಗವನ್ನು ಕಪ್ಪುಬಣ್ಣದಿಂದ ಮೆತ್ತಿರುವುದಲ್ಲದೇ ಅವುಗಳ ಬೆಳಕು ಬಲು ಮಂದವಾಗಿರಬೇಕು; ತೀವ್ರ ಪರಿಸ್ಥಿತಿಗಳಲ್ಲಿ ಇಂಥ ಚಲನೆಯನ್ನು ನಿಷೇಧಿಸಬಹುದು.

ಶತ್ರುವಿಗೆ ಉಪಯುಕ್ತವಾಗುವ ಯಾವುದೇ ಸಮಾಚಾರದ ಪ್ರಕಟಣೆಯನ್ನು ತಡೆಹಿಡಿಯುವುದು–ಎಂಬ ವ್ಯಾಪಕಾರ್ಥದಲ್ಲೂ ಬ್ಲ್ಯಾಕ್‌ಔಟ್ ಎಂಬ ಪದವನ್ನು ಬಳಸಲಾಗುತ್ತದೆ ಎಂದಿದೆ. (ಎ.ಎನ್.ಎಸ್.ಎಂ.)

**ಕತ್ತಾಳೆ :** ಏಕದಳ ಸಸ್ಯಗಳ ಗುಂಪಿನಲ್ಲಿನ ಅಮರಿಲ್ಲಿಡೇಸೀ ಕುಟುಂಬಕ್ಕೆ ಸೇರಿದ ಅಗೇವ್ ಎಂಬ ಶಾಸ್ತ್ರೀಯ ಹೆಸರಿನ ಒಂದು ಸಸ್ಯಜಾತಿ. ಭೂತಾಳೆ, ರಕ್ಕಸಪಟ್ಟೆ ಪರ್ಯಾಯನಾಮಗಳು. ಇದರಲ್ಲಿ ಸು. 275 ಪ್ರಭೇದಗಳಿವೆ. ಇವುಗಳಲ್ಲಿ ಅ. ಅಮೆರಿಕಾನ, ಅ. ಕಂತಾಲ, ಅ. ಅಂಗಸ್ಟಿಫೋಲಿಯ, ಅ. ಸಿಸಾಲಾನ, ಅ. ಫೋರ್‌ಕ್ರೋಯ ಮತ್ತು ಅ. ವೀರ–ಕ್ರುಜ್ ಎಂಬುವು ಮುಖ್ಯವಾದವು. ಕತ್ತಾಳೆ ಮೂಲತಃ ಮೆಕ್ಸಿಕೋದ ನಿವಾಸಿ. ಅಲ್ಲಿಂದ ಉಳಿದ ಎಲ್ಲ ಉಷ್ಣದೇಶಗಳಿಗೆ ಹರಡಿತೆಂದೂ ಪೋರ್ಚುಗೀಸರು ಸು. 15ನೆಯ ಶತಮಾನದಲ್ಲಿ ಇದನ್ನು ಭಾರತಕ್ಕೆ ತಂದರೆಂದೂ ಹೇಳಲಾಗಿದೆ.

ಎಲ್ಲ ಕಡೆಗಳಲ್ಲಿಯೂ ಕಾಣಬರುವ ಇದು ಸಾಮಾನ್ಯವಾಗಿ ಬಂಜರು ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದನ್ನು ತೋಟಗಳಲ್ಲಿ, ಹೊಲಗಳಲ್ಲಿ, ಬೇಲಿಯ ಸಾಲಿನಲ್ಲಿ ಬೆಳೆಸುವುದೂ ಉಂಟು. ಅಲ್ಲದೆ ಅಲಂಕಾರಕ್ಕಾಗಿ ಕುಂಡಗಳಲ್ಲಿ ಬೆಳೆಸುತ್ತಾರೆ. ಇದಕ್ಕೆ ಬಲು ಚಿಕ್ಕದಾದರೂ ಗಟ್ಟಿಯಾದ ಕಾಂಡವಿದೆ. ಕಾಂಡದ ಸುತ್ತ ಕಮಲದಳಗಳಂತೆ ಜೋಡಣೆಗೊಂಡಿರುವ ಸು. 1–2 ಮೀ ಉದ್ದ ಮತ್ತು 10–15 ಸೆಂಮೀ ಅಗಲವಿರುವ ಹಚ್ಚಹಸಿರುಬಣ್ಣದ ಅನೇಕ ಎಲೆಗಳಿವೆ. ಎಲೆಗಳು ಕತ್ತಿಯಂತಿವೆ, ಅವುಗಳ ತುದಿ ಮತ್ತು ಅಂಚುಗಳಲ್ಲಿ ಮುಳ್ಳುಗಳಿವೆ. ಅವು ಬುಡದಲ್ಲಿ ಸ್ವಲ್ಪದಪ್ಪನಾಗಿದ್ದು ಲೋಳೆಯಂಥ ರಸದಿಂದ ತುಂಬಿವೆ. ಗಿಡಕ್ಕೆ ಸು. 8–10 ವರ್ಷ ವಯಸ್ಸಾದಾಗ ಅದರ ಕೇಂದ್ರಭಾಗದಿಂದ ಒಂದು ದಿಂಡು ಹೊರಟು ಸು. 5–10 ಮೀ ಉದ್ದಕ್ಕೆ ಕಂಬದಂತೆ ಬೆಳೆಯುವುದು. ಇದೇ ಕತ್ತಾಳೆಯ

ವಿಶೇಷಬಗೆಯ ಹೂಗೊಂಚಲು. ಅದರ ತುದಿಯಲ್ಲಿ ಅನೇಕ ಕವಲುಗಳಿದ್ದು ಅವುಗಳಲ್ಲೆಲ್ಲ ಅಸಂಖ್ಯಾತವಾದ ಹೂಗಳಿವೆ. ಕೆಲವು ಮೊಗ್ಗುಗಳು ಹೂವಾಗಿ ಅರಳದೆ ಬಲ್ಬಿಲುಗಳೆಂಬ ವಿಶಿಷ್ಟ ಬಗೆಯ ರಚನೆಗಳಾಗಿ ಮಾರ್ಪಾಟಾಗುತ್ತವೆ. ಗೆಡ್ಡೆಗಳಂತಿರುವ ಇವು ಸಸ್ಯದ ಸಂತಾನಾಭಿವೃದ್ಧಿಯಲ್ಲಿ ಪ್ರಮುಖಪಾತ್ರವಹಿಸುತ್ತವೆ. ಪೂರ್ಣವಾಗಿ ಬಲಿತ ಬಲ್ಬಿಲುಗಳು

ಹೂ ದಿಂಡಿನಿಂದ ಉದುರಿ ನೆಲದ ಮೇಲೆ ಬಿದ್ದು ಪರಿಸ್ಥಿತಿ ಅನುಕೂಲವಾಗಿದ್ದಲ್ಲಿ ಮೊಳೆತು ಸಸಿಗಳಾಗುತ್ತದೆ. ಇದೊಂದು ಬಗೆಯಲ್ಲದೆ ಇನ್ನೊಂದು ರೀತಿಯಿಂದ ಕತ್ತಾಳೆಯ ಸಂತಾನಾಭಿವೃದ್ಧಿಯಾಗುವುದೂ ಉಂಟು. ಬೇರಿನಿಂದ ಕೆಲವು ಗೆಡ್ಡೆಗಳು (ಸಕರ್ಸ್) ಉತ್ಪತ್ತಿಯಾಗುತ್ತವೆ. ಇವೂ ಕೂಡ ಅನುಕೂಲ ಪರಿಸ್ಥಿತಿಯಲ್ಲಿ ಸಣ್ಣ ಸಸಿಗಳಾಗಿ ಬೆಳೆಯುವುದುಂಟು. ಕತ್ತಾಳೆಯಲ್ಲಿ ಬೀಜದ ಮುಖಾಂತರ ಸಂತಾನಾಭಿವೃದ್ಧಿಯಾಗುವುದು ವಿರಳ. ಕಾಯಿಗಳು ಬಲಿತಮೇಲೆ ಗಿಡ ಸತ್ತು ಹೋಗುತ್ತದೆ.

ಕತ್ತಾಳೆ ಅದರ ಎಲೆಗಳಿಂದ ತೆಗೆಯಲಾಗುವ ನಾರಿನಿಂದ ಬಹಳ ಪ್ರಸಿದ್ಧವಾಗಿದೆ. ಇದರ ಎಲೆ ಮತ್ತು ಹೂಗೊಂಚಲಿನ ದಿಂಡಿನಿಂದ ಒಂದು ರೀತಿಯ ರಸವನ್ನು ತೆಗೆದು ಅದನ್ನು ಹುಳಿಯಾಗಲು ಬಿಡುತ್ತಾರೆ. ಮೆಕ್ಸಿಕೋದಲ್ಲಿ ಈ ಹುಳಿಯಾದ ರಸವನ್ನು ಪಲ್ಕ್ ಎನ್ನುತ್ತಾರೆ. ಮಾದಕ ಗುಣವುಳ್ಳ ಇದನ್ನು ಅಲ್ಲಿನ ರಾಷ್ಟ್ರೀಯ ಪಾನೀಯವಾಗಿ ಪರಿಗಣಿಸುತ್ತಾರೆ. (ಬಿ.ಪಿ.)

**ಕತ್ತಾಳೆನಾರು :** ಕತ್ತಾಳೆ ಎಲೆಗಳಿಂದ ನಾರನ್ನು ಪ್ರತ್ಯೇಕಿಸುವುದಕ್ಕೆ ತೆಂಗಿನ ಕಾಯಿನ ಮೇಲಿನ ಮಟ್ಟೆಯಿಂದ ಜುಂಗನ್ನು ಬೇರ್ಪಡಿಸುವಂತೆ ಕೆಲವು ವಿಧಾನಗಳನ್ನು ಅನುಸರಿಸುವರು. ಪಾಶ್ಚಾತ್ಯ ದೇಶದಲ್ಲಿ ಅನುಸರಿಸುವ ರೀತಿಗೂ ಭಾರತದಲ್ಲಿನ ರೀತಿಗೂ ವ್ಯತ್ಯಾಸಗಳಿವೆ. ಎಲೆಗಳು ಚೆನ್ನಾಗಿ ಬಲಿತಮೇಲೆ ಹರಿತವಾದ ಚಾಕು, ಮಚ್ಚು ಅಥವಾ ಕುಡುಗೋಲಿನಿಂದ ಬುಡದಲ್ಲಿ ಅದನ್ನು ಒಂದೊಂದಾಗಿ ಕತ್ತರಿಸುವರು. ಹೀಗೆ ಕತ್ತರಿಸಿದ ಎಲೆಗಳಿಂದ ನಾರನ್ನು ತೆಗೆಯುವುದಕ್ಕೆ ಎರಡು ಪದ್ಧತಿಗಳಿರುವುವು. ಒಂದು ಪದ್ಧತಿಯಲ್ಲಿ ಕುಯ್ದ ಎಲೆಗಳ ಮೇಲ್ಭಾಗವನ್ನು ಹರಿತವಾದ ಚಾಕುವಿನಿಂದ ಹೆರೆದು ಹಾಕುವರು. ಇದರಿಂದ ನಾರಿನೊಂದಿಗೆ ಸೇರಿರುವ ಹಸಿರು ದಿಂಡು ಪದಾರ್ಥಗಳು ಪ್ರತ್ಯೇಕವಾಗಿ ನಾರು ಬಿಡಿಸಿದಂತಾಗುವುದು. ಅಲ್ಲದೆ ಎಲೆಗಳು ಸೀಳಿದಂತೆ ಆಗುವುದು. ಅನಂತರ ಇದನ್ನು 8–15 ದಿವಸ ನೀರಿನಲ್ಲಿ ಮುಳುಗಿಸಿಟ್ಟಿರುವರು. ಹೀಗೆ ನೀರಿನಲ್ಲಿ ಕೊಳೆಯುವುದರಿಂದ ನಾರು ಇತರ ಅಂಟು ಪದಾರ್ಥಗಳಿಂದ ಬೇರೆಯಾಗಲು ಸಹಾಯವಾಗುವುದು. ಅನಂತರ ನೀರಿನಿಂದ ತೆಗೆದು ಲಘುವಾಗಿ ಚಚ್ಚಿ ಪುನಃ ನೀರಿನಲ್ಲಿ ಜಾಲಾಡಿ ನಾರನ್ನು ಪ್ರತ್ಯೇಕಿಸುವರು. ಇದನ್ನು ಒಣಗಿಸಿದ ತರುವಾಯ ಹಳದಿ ಛಾಯೆ ಕೂಡಿದ ಬಿಳೀ ಬಣ್ಣದ ಶುಭ್ರವಾದ ನಾರು ಬರುವುದು. ಪಾಶ್ಚಾತ್ಯ ದೇಶಗಳಲ್ಲಿ ರಾಸ್ಪಡಾರ್ ತರಹದ ಯಂತ್ರಗಳ ಮೂಲಕ ಹೆರೆದು ನಾರನ್ನು ಪ್ರತ್ಯೇಕಿಸಿ ತೊಳೆದು ಶುಭ್ರಮಾಡಿ ಒಣಗಿಸಿ ಬೇಲುಗಳಾಗಿ ಪ್ಯಾಕ್ ಮಾಡಿ ರವಾನಿಸುವರು. ಎರಡನೆಯ ಪದ್ಧತಿಯಲ್ಲಿ–ಇದೇ ಹೆಚ್ಚಾಗಿ ಭಾರತದಲ್ಲಿನ ಪದ್ಧತಿ– ಕುಯ್ದ ಎಲೆಗಳನ್ನು ಉದ್ದವಾಗಿ ಪಟ್ಟಿಯಂತೆ ಮೊದಲು ಸೀಳಿ ಒಣಗಿಸುವರು. ಅನಂತರ ಅವುಗಳನ್ನು ನೀರಿನಲ್ಲಿ 10–15 ದಿವಸ ಮುಳುಗಿಸುವರು. ಇದರಿಂದ ದಿಂಡು ಮತ್ತಿತರ ಅಂಟು ಪದಾರ್ಥಗಳು ಮೆತ್ತಗಾಗಿ ನಾರಿನಿಂದ ಸಡಿಲವಾಗುವುವು. ಆಮೇಲೆ ಮರದ ತುಂಡುಗಳಿಂದ ಅವುಗಳನ್ನು ಬಡಿದು ನಾರನ್ನೂ ಇತರ ಪದಾರ್ಥಗಳನ್ನೂ ಪ್ರತ್ಯೇಕಿಸಿ ನೀರಿನಲ್ಲಿ ಚೆನ್ನಾಗಿ ತೊಳೆದು ಒಣಗಿಸುವರು. ಹೀಗೆ ಪ್ರತ್ಯೇಕಿಸಿದ ಕತ್ತಾಳೆ ನಾರು ಸ್ವಲ್ಪ ಕಂದುಬಣ್ಣವಾಗಿರುವುದು ಮತ್ತು ಇತರ ದೇಶದ ನಾರಿನಷ್ಟು ಬಿಳುಪಾಗಿರುವುದಿಲ್ಲ. ಕೆಲವು ವೇಳೆ ಎಲೆಗಳನ್ನು ನೀರಿನಲ್ಲಿ ಕುದಿಸಿ ಅನಂತರ ಬಡಿದು ಈ ನಾರನ್ನು ಪ್ರತ್ಯೇಕಿಸುವರು. ಬೆಳೆಯು ಹೆಚ್ಚಾಗಿದ್ದರೆ ವಿದ್ಯುತ್ತಿನಿಂದ ಅಥವಾ ಕೈಯಿಂದ ಚಲಾಯಿಸಲಾಗುವ ಡಿಕಾರ್ಟಿಕೇಟರ್ ಯಂತ್ರದಿಂದ ನಾರನ್ನು ಬೇರ್ಪಡಿಸುವರು. ಅನಂತರ ಈ ನಾರನ್ನು ತೊಳೆದು ಒಣಗಿಸುವರು. ಕೆಲವು ವೇಳೆ ಒಣಗಿದ ನಾರನ್ನು ಮರಳಿನ ಮೇಲೆ ಹರಡಿ ನೀರು ಚುಮಕಿಸಿ ಒಣಗಿಸುವರು. ಇದರಿಂದ ನಾರು ಶುಭ್ರವಾಗಿ ಬೆಳ್ಳಗಾಗುವುದು.

ಪ್ರಪಂಚದಲ್ಲಿ ವರ್ಷಂಪ್ರತಿ ಸು. 1,300 ಲಕ್ಷ ಪೌಂಡು ಕತ್ತಾಳೆ ನಾರು ಉತ್ಪನ್ನವಾಗುವುದು. ಇಂಡಿಯದಲ್ಲಿ ಒಂದು ಹೆಕ್ಟೇರಿಗೆ 600 ಕಿಗ್ರಾಂ ನಾರು ಬರುವುದು. ಅನ್ಯದೇಶದಲ್ಲಿ ಹೆಕ್ಟೇರಿಗೆ 2,000 ಕಿಗ್ರಾಂ ವರೆವಿಗೂ ಉತ್ಪತ್ತಿಯಾಗುವುದು. 600 ಕಿಗ್ರಾಂ ಎಲೆಗಳಿಗೆ ಸು. 32 ಕಿಗ್ರಾಂ ನಾರು ಬರುವುದು.

ಕತ್ತಾಳೆ ನಾರಿಗೆ ಬೆಂಕಿ ತಗಲಿದರೆ ಅದು ಹತ್ತಿಯಂತೆ ಭಗ್ಗನೆ ಹತ್ತಿ ಕೆಂಪು ಛಾಯೆಯ ಹಳದಿಬಣ್ಣದ ಬೆಳಕಿನಿಂದ ಉರಿಯುವುದು ಮತ್ತು ಕಾಗದ ಸುಟ್ಟಂತೆ ವಾಸನೆ ಬರುವುದು. ಬೂದಿಯು ಕೆದರದಿರುವುದು. ಕ್ಯೂಪ್ರಮೋನಿಯಂ ಹೈಡ್ರಾಕ್ಸೈಡ್ ದ್ರಾವಕದಲ್ಲಿ ಹತ್ತಿಯು ಕರಗುವುದು, ಆದರೆ ಕತ್ತಾಳೆ ನಾರು ಕರಗುವುದಿಲ್ಲ. ಪ್ರಬಲ ಸಲ್ಫ್ಯೂರಿಕ್ ಆಮ್ಲದಲ್ಲಿ ನಾರು ಸ್ವಲ್ಪ ಹಳದಿಬಣ್ಣಕ್ಕೆ ತಿರುಗಿ ಅಡ್ಡಗೀಟುಗಳು ಕಾಣಬರುವುವು. ಕತ್ತಾಳೆನಾರಿನಲ್ಲಿ ಶೇ. 77.2 ಭಾಗ ಸೆಲ್ಯುಲೋಸ್, ಶೇ. 6.2 ಭಾಗ ನೀರು, ಶೇ. 14.5 ಭಾಗ ಲಿಗ್ನಿನ್ ಮತ್ತು ಪೆಕ್ಟಿನ್ ಪದಾರ್ಥಗಳು ಮತ್ತು ಶೇ. 2.1 ಭಾಗ ಇತರ ವಸ್ತುಗಳು ಇರುವುವು. ಸೆಣಬಿನಂತೆ ಒಂದೊಂದು ಕತ್ತಾಳೆ ನಾರು ಕೂಡಾ ಅನೇಕ ಸೂಕ್ಷ್ಮ ಎಳೆಗಳಿಂದ ಕೂಡಿದ್ದಾಗಿದೆ. ಒಂದೊಂದು ಸೂಕ್ಷ್ಮ ಎಳೆಯೂ 1ರಿಂದ 5 ಮಿಮೀ ಉದ್ದವಿದ್ದು ಸು. 24 ಮೈಕ್ರಾನ್ ಅಗಲವಿರುತ್ತದೆ. ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಎಳೆಯ ಮಧ್ಯ ಭಾಗದಲ್ಲಿ ಖಾಲಿ ಪ್ರದೇಶವೂ (ಲೂಮೆನ್) ಅದರ ಸುತ್ತ ದಪ್ಪ ಗೋಡೆಯೂ (ಸೆಲ್‍ವಾಲ್) ಇರುವುದು ಕಾಣಿಸುತ್ತದೆ. ತುದಿ ಮೊಂಡಾಗಿಯೋ, ಚೂಪಾಗಿಯೊ, ಕವಲೊಡೆದಂತೆಯೊ ಇರುತ್ತದೆ. ಸಾಧಾರಣವಾಗಿ ಲೂಮೆನ್ನಿನ ಅಗಲ ಸುತ್ತು ಗೋಡೆಯ ದಪ್ಪಕ್ಕಿಂತ ಜಾಸ್ತಿಯಾಗಿರುವುದು. ಇಂಥ ಎಳೆಗಳು ಡಿನಿಯರ್ ಒಂದಕ್ಕೆ 5.30 ಗ್ರಾಂನಷ್ಟು ತೂಕ ಬಲ ಉಳ್ಳದ್ದಾಗಿಯೂ ಶೇಕಡ 2ರಷ್ಟು ಸ್ಥಿತಿಸ್ಥಾಪಕ ಶಕ್ತಿಯುಳ್ಳದ್ದಾಗಿರುವುದು.

ಕತ್ತಾಳೆ ನಾರು ಬಲವಾಗಿರುವುದಲ್ಲದೆ ಉಪ್ಪು ನೀರಿನಲ್ಲಿ ಹೆಚ್ಚು ಕೊಳೆಯುವುದಿಲ್ಲ. ಅದರ ಸಲುವಾಗಿ ನಾರುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಜೋಡಿಸಿ ಹೊಸೆದು ದಾರ, ಹಗ್ಗ ಮುಂತಾದುವನ್ನು ಮಾಡುವರು. ಅಲ್ಲದೆ ಚಾಪೆ, ಚೀಲ ಹಾಗೂ ಸೋಫಾ ಒಳಗೆ ತುಂಬುವುದಕ್ಕೂ ಬ್ರಷ್‍ಗಳನ್ನು ಮಾಡುವುದಕ್ಕೂ ಉಪಯೋಗಿಸುವರು. ಕತ್ತಾಳೆ ಎಲೆಯಿಂದ ನಾರನ್ನು ಪ್ರತ್ಯೇಕಿಸಿದ ಅನಂತರ ಉಳಿಯುವ ಪದಾರ್ಥಗಳಿಂದ ಅತ್ಯಂತ ಉಪಯುಕ್ತವಾದ ಕಾರ್ಟಿಸಾನ್ ಮತ್ತು ಸೆಕ್ಸ್ ಹಾರ್ಮೋನುಗಳನ್ನು ತಯಾರಿಸಲು ಬೇಕಾಗುವ ಹೆಕೋಜೆನಿನ್ ದ್ರಾವಕವನ್ನು ತಯಾರಿಸುವರು. (ಎಸ್.ಎನ್.ಬಿ.)

**ಕತ್ತಿಕಾಯಿಮರ :** ಡೆಲೋನಿಕ್ಸ್ ರೀಜಿಯ ಅಥವಾ ಪಾಯಿನ್‍ಸಿಯಾನಾ ರೀಜಿಯ ಎಂಬ ವೈಜ್ಞಾನಿಕ ಹೆಸರಿನ ಚೆಲುವಾದ ಹೂ ಬಿಡುವ ಮರ. ಲೆಗ್ಯುಮಿನೋಸೀ ಕುಟುಂಬದ ಸಿಸಾಲ್ಪಿನೀ ಉಪಕುಟುಂಬಕ್ಕೆ ಸೇರಿದೆ. ಮಡಗಾಸ್ಕರಿನ ಮೂಲವಾಸಿಯಾದ ಈ ಮರ

ಭಾರತಕ್ಕೆ ಸು. 100–125 ವರ್ಷಗಳ ಹಿಂದೆ ಬಂತೆಂದು ಹೇಳಲಾಗಿದೆ. ಹಿಂದಿ ಭಾಷೆಯಲ್ಲಿ ಗುಲ್ಮೊಹರ್ ಎನ್ನಲಾಗುವ ಇದಕ್ಕೆ ಸ್ಥಳೀಯವಾಗಿ ಸೀಮೆಸಂಕೇಶ್ವರ, ಕೆಂಪುತುರಾಯಿ, ದೊಡ್ಡ ರತ್ನಗಂಧಿ ಇತ್ಯಾದಿ ಹೆಸರುಗಳೂ ಇವೆ. ಇದು ಸು. 15 ರಿಂದ 18 ಮೀ ಎತ್ತರ

ಬೆಳೆಯುತ್ತದೆ. ಫಲವತ್ತಾದ ನೆಲ ಮತ್ತು ನೀರಿನ ಸೌಲಭ್ಯವಿದ್ದರೆ ಇನ್ನೂ ಎತ್ತರ ಬೆಳೆಯುವುದುಂಟು. ಮರದ ಆಕಾರ ಛತ್ರಿಯಂತೆ, ತೊಗಟೆ ಒರಟಾಗಿ ಅಲ್ಲಲ್ಲಿ ಗಂಟುಗಳಿಂದ ಕೂಡಿದೆ. ಬಣ್ಣ ಮಾಸಲು ಕಂದು. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ. ಅವು ಸಂಯುಕ್ತ ಮಾದರಿಯವು. ಒಂದೊಂದರಲ್ಲೂ ಒಂದು ಮುಖ್ಯ ಮಧ್ಯಶಾಖೆಯೂ ಅದರಿಂದ ಹೊರಟ ಹಲವಾರು ಕಿರುಶಾಖೆಗಳೂ ಇವೆ. ಪ್ರತಿಯೊಂದು ಕಿರುಶಾಖೆಯಲ್ಲಿ 15–20 ಜೋಡಿ ಪರ್ಣಿಕೆಗಳಿವೆ. ಹೂಗಳು ರೇಸಿಮ್ ಮಾದರಿಯ ಹೂಗೊಂಚಲುಗಳಲ್ಲಿ ಜೋಡಣೆಗೊಂಡಿವೆ. ಹೂಬಿಡುವ ಕಾಲ ಏಪ್ರಿಲ್–ಮೇ ತಿಂಗಳುಗಳು. ಹೂಬಿಡುವ ಮುನ್ನ ಎಲೆಗಳೆಲ್ಲ ಉದುರಿಹೋಗುತ್ತವೆ. ಹೂಗಳು ಸಾಕಷ್ಟು ದೊಡ್ಡವೂ ಕಿತ್ತಳೆಮಿಶ್ರಿತ ಕೆಂಪುಬಣ್ಣದಿಂದ ಹಿಡಿದು ಕಗ್ಗೆಂಪು ಬಣ್ಣದವೂ ಆಗಿ ಬಹು ಸುಂದರವಾಗಿವೆ. ಪುಷ್ಪಪತ್ರಗಳು ಐದು. ಅವುಗಳ ಹೊರಭಾಗ ಹಸಿರು, ಒಳಭಾಗ ಕೆಂಪು. ದಳಗಳು ಐದು. ಅವುಗಳಲ್ಲಿ ನಾಲ್ಕು ಒಂದೇ ಬಗೆಯವಾಗಿದ್ದು ಕೆಂಪುಬಣ್ಣದವಾಗಿವೆ. ಉಳಿದುದು ಕೊಂಚ ದೊಡ್ಡದೂ ಬಿಳಿ ಅಥವ ಹಳದಿ ಬಣ್ಣದ್ದೂ ಆಗಿದ್ದು ಅದರ ಮೇಲೆಲ್ಲ ಕೆಂಪು ಮಚ್ಚೆಗಳಿವೆ. ಎಲ್ಲ ದಳಗಳ ಅಂಚೂ ಕೊಂಚ ಮಡಿಸಿದಂತಿದೆ. ಕೇಸರಗಳು 10, ಬಿಡಿ ಬಿಡಿಯಾಗಿವೆ. ಅವುಗಳ ಬಣ್ಣವೂ ಕೆಂಪು. ಅಂಡಾಶಯ ಉಚ್ಚಸ್ಥಾನದ್ದು. ಒಂದೇ ಕಾರ್ಪೆಲನ್ನು ಹೊಂದಿದೆ. ಅದರೊಳಗೆ ಹಲವಾರು ಅಂಡಕಗಳಿವೆ. ಫಲ ಪಾಡ್ ಮಾದರಿಯದು. ಸು. 6096 ಮೀ ಉದ್ದವಾಗಿದ್ದು ಕತ್ತಿಯಂತಿರುತ್ತದೆ. ಬಹಳ ದಿನ ಮರದ ಮೇಲೆ ಕಾಯಿಗಳು ನೇತಾಡುತ್ತಿರುವುದನ್ನು ನೋಡಬಹುದು.

ಕತ್ತಿಕಾಯಿ ಮರವನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿಯೂ ನೆರಳಿನ ಮರವಾಗಿ ರಸ್ತೆಯ ಬದಿಗಳಲ್ಲೂ ಬೆಳೆಸುತ್ತಾರೆ. ಸಾಮಾನ್ಯವಾಗಿ ಇದನ್ನು ಬೀಜಗಳಿಂದ ವೃದ್ಧಿಮಾಡುತ್ತಾರೆ. ತುಂಡುಗಳಿಂದಲೂ ಬೆಳೆಸಬಹುದು. ಹೆಚ್ಚಾಗಿ ಅಲಂಕಾರ ಸಸ್ಯವೆಂದು ಹೆಸರಾಗಿರುವ ಇದರ ಕಾಯಿ ಮತ್ತು ಮರವನ್ನು ಸೌದೆಗಾಗಿ ಉಪಯೋಗಿಸುವುದೂ ಉಂಟು.

(ಎಂ.ಎಸ್.ಎಸ್.ಆರ್.; ಎಂ.ಎಚ್.ಎಂ.)

**ಕತ್ತಿ ಮೀನು :** ಕ್ಸಿಫಿಯಿಡೆ ಕುಟುಂಬದ ಕ್ಸಿಫಿಯಾಸ್ ಗ್ಲೇಡಿಯಸ್ ಎಂಬ ವೈಜ್ಞಾನಿಕ ಹೆಸರಿನ ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಸಮುದ್ರಗಳಲ್ಲಿ ವಾಸಿಸುವ ಮೀನು. ಉದ್ದವಾದ ಕತ್ತಿಯಾಕಾರದ ಮೂತಿಯೂ ಬೆನ್ನಿನ ಮೇಲಿರುವ ಎತ್ತರವಾದ ರೆಕ್ಕೆಯೂ ಹಲ್ಲುಗಳಿಲ್ಲದ ಬಾಯಿಯೂ ಮೈಮೇಲೆ ಹುರುಪೆಗಳಿಲ್ಲದಿರುವುದೂ ಈ



ಮೀನಿನ ವಿಶಿಷ್ಟ ಲಕ್ಷಣಗಳು. ಇದು ಉದ್ದದಲ್ಲಿ ಸು. 4.5 ಮೀ ಇದೆ. ತೂಕ 1,000 ಪೌಂಡ್ ಇರುವುದೂ ಉಂಟು. ಇದರ ಮೂತಿಯ ಉದ್ದ ಸು. ಕೆಲವೊಮ್ಮೆ ದೇಹದ ಉದ್ದದ ಮೂರನೇ ಒಂದು ಭಾಗ ಇರುತ್ತದೆ. ಬಹು ವೇಗವಾಗಿ ಈಜಬಲ್ಲ ಕತ್ತಿಮೀನು ಇತರ ಸಣ್ಣ ಮೀನುಗಳ ತಂಡದ ಮೇಲೆ ಹಟಾತ್ತನೆ ಧಾಳಿ ಮಾಡಿ ತನ್ನ ಕತ್ತಿಯಂತ ಮೂತಿಯಿಂದ ಅವನ್ನು ಊನಮಾಡಿ ಅನಂತರ ಒಂದೊಂದನ್ನಾಗಿ ನುಂಗುತ್ತದೆ. ನೀರಿನ ಮೇಲ್ಮೈಯಿಂದ ಹಿಡಿದು ಸು. 183 ಮೀ ಗಳಷ್ಟು ಆಳದಲ್ಲೂ ಆಹಾರಕ್ಕಾಗಿ ಬೇಟೆಯಾಡುತ್ತ ಸರಾಗವಾಗಿ ಈಜುತ್ತಿರುತ್ತದೆ. ಕೆಲವೊಮ್ಮೆ ಸಣ್ಣ ಹಡಗುಗಳ ತಳಭಾಗವನ್ನು ಮೂತಿಯಿಂದ ಹೊಡೆದು ಕತ್ತರಿಸುವುದೆಂದು ಹೇಳುತ್ತಾರೆ.

ಕತ್ತಿಮೀನು ಒಳ್ಳೆಯ ಆಹಾರದ ಮೀನೆಂದು ಹೆಸರಾಗಿದೆ. ಇದರ ಮಾಂಸದಲ್ಲಿ ಪ್ರೋಟೀನಿನ ಅಂಶ ಅಧಿಕವಾಗಿರುವುದರಿಂದ ಬಹು ಪುಷ್ಟಿಕರವಾದ ಆಹಾರವೆನಿಸಿದೆ. ಬೆಸ್ತರು ಹಿಡಿಯುವ ಹಲವಾರು ಬಗೆಯ ಮೀನುಗಳಲ್ಲಿ ಇದು ವಾಣಿಜ್ಯ ದೃಷ್ಟಿಯಿಂದ ಮುಖ್ಯವಾದುದು.

ಇವು ಬೇಸಿಗೆಯಲ್ಲಿ ಶೀತ ವಲಯದೆಡೆಗೆ ವಲಸೆಹೋಗುತ್ತವೆ ಹಾಗೂ ಛಳಿಗಾಲದಲ್ಲಿ ಮತ್ತೆ ಹಿಂತಿರುಗುತ್ತವೆ. ವಸಂತದಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ.

(ಆರ್.ಎಲ್.; ಎನ್.ಎಸ್.ಎಲ್.)

**ಕತ್ತಿವರಸೆ :** ಮೂಲತಃ ಆತ್ಮರಕ್ಷಣೆಗೂ ಶತ್ರುವಿನ ವಿರುದ್ಧ ಆಕ್ರಮಣೆಗೂ ಕತ್ತಿಯನ್ನು ಬಳಸುವ ಚಾಕಚಕ್ಯತೆ (ಫೆನ್ಸಿಂಗ್). ಕ್ರಮೇಣ ಇದು ಬದಲಾವಣೆಗೊಂಡು ಇಂದು ಒಂದು ಕುಶಲ ಕಲೆಯಾಗಿ ಮಾತ್ರ ಉಳಿದಿದೆ. ಪ್ರಾಚೀನ ಭಾರತೀಯ ಸಾಹಿತ್ಯದಲ್ಲೂ ಗ್ರೀಕ್ ಸಾಹಿತಿ ಹೋಮರನ ಇಲಿಯಡ್ ಗ್ರಂಥದಲ್ಲೂ ಕತ್ತಿವರಸೆಯ ಉಲ್ಲೇಖವಿದೆ. ಪ್ರಾಚೀನ ರೋಮಿನ ಖಡ್ಗಮಲ್ಲರೂ ಮಧ್ಯಯುಗದ ಅಶ್ವವೀರರೂ ಕತ್ತಿ ಕಾಳಗವಾಡುತ್ತಿದ್ದರು. ಬಂದೂಕು ಮದ್ದನ್ನು ಉಪಜ್ಞಿಸುವ (ಇನ್‌ವೆಂಟ್)ವರೆಗೂ ಕತ್ತಿಯುದ್ಧಗಳು ನಡೆಯುತ್ತಿದ್ದವು.



1 ಫಾಯಿಲ್ 2. ಏಪೇ 3. ಸೇಬರ್

ಬಂದೂಕು ಬಂದ ಅನಂತರ ಎದುರಾಳಿಯ ಯುದ್ಧಕವಚವನ್ನು ಕತ್ತಿ ಹೊಡೆತದಿಂದ ಸೀಳುವುದು ಉಪಯೋಗವಾಗಲಿಲ್ಲ. ಬದಲು, ಬಲಗೈಯಲ್ಲಿ ಕತ್ತಿಯಿಂದ ಎದುರಾಳಿಯ ಮೇಲೆ ಹಾಯುವುದೂ ಆತ್ಮರಕ್ಷಣೆಗೋಸ್ಕರ ಎಡಗೈಯಲ್ಲಿ ಗುರಾಣಿ, ಕಠಾರಿ, ಖೇಲಕಗಳನ್ನು ಹಿಡಿಯುವುದೂ ಆಚರಣೆಗೆ ಬಂತು.

ಮೊದಮೊದಲು ಖಡ್ಗಶಿಕ್ಷಕರು ರಹಸ್ಯ ವರಸೆಗಳನ್ನು ಇತರರಿಗೆ ಗೊತ್ತಾಗದಂತೆ ತಮ್ಮ ಶಿಷ್ಯರಿಗೆ ಮಾತ್ರ ಕಲಿಸುತ್ತಿದ್ದರು. ಕ್ರಮೇಣ ಅನೇಕ ಪ್ರವೀಣ ಶಿಕ್ಷಣ ಕೇಂದ್ರಗಳು ಸ್ಥಾಪಿತವಾದವು. ಖಡ್ಗನಿಪುಣರು ಗಣಿತವಿಜ್ಞಾನದ ನಿಯಮಗಳ ನ್ನೊಳಗೊಂಡ ಶಾಸ್ತ್ರೋಕ್ತ ಗ್ರಂಥಗಳನ್ನು ರಚಿಸಿದರು. ಇಂಗ್ಲೆಂಡಿನ ರಾಜ ಎಂಟನೆಯ ಹೆನ್ರಿಯೂ ಕತ್ತಿ ಸಾಧನಕ್ಕೆ ಉತ್ತೇಜನ ಕೊಟ್ಟ. ಅನೇಕ ದೇಶಗಳಲ್ಲಿ ದರೋಡೆಯವರ ಕಾಟ ಹೆಚ್ಚಾಗಲು ಆತ್ಮರಕ್ಷಣೆಗೆ ಜನರಿಗೆ ಕತ್ತಿಸಾಧನೆ ಅಗತ್ಯವಾಯಿತು. ಖಡ್ಗಚತುರರು ರಾಜಸ್ಥಾನಗಳಲ್ಲಿ ಅಂಗರಕ್ಷಕರಾಗಿಯೂ ಮಹಾ ವ್ಯಕ್ತಿಗಳ ಸಂಗಾತಿಗಳಾಗಿಯೂ ನೇಮಿಸಲ್ಪಡುತ್ತಿದ್ದರು. ಜರ್ಮನಿಯ ನ್ಯಾಯ ಸಂಸ್ಥೆಗಳಲ್ಲಿ ನ್ಯಾಯವನ್ನು ಕತ್ತಿಕಾಳಗಗಳಿಂದ ತೀರ್ಮಾನಿಸುವ ವ್ಯವಸ್ಥೆಯಿತ್ತು.

ವ್ಯಕ್ತಿಗಳ ಪರಸ್ಪರ ವಿವಾಹ, ವ್ಯಾಜ್ಯ, ಮಾನಾಪಮಾನ ಸಮಸ್ಯೆಗಳನ್ನು ಕತ್ತಿಯ ದ್ವಂದ್ವಯುದ್ಧದಿಂದ ನಿರ್ಣಯಿಸುವ ಸಂಪ್ರದಾಯ ಯುರೋಪ್, ಅಮೆರಿಕಗಳಲ್ಲಿ ಅನೇಕ ಶತಮಾನ ಕಾಲ ಪ್ರಬಲಿಸಿದ್ದು ಸಣ್ಣಪುಟ್ಟ ಕಲಹಗಳಿಗೂ ಕತ್ತಿಕಾಳಗದ ಹುಚ್ಚು ಜನರಿಗಿತ್ತು. ಇದಕ್ಕೂ ಕಟ್ಟುಕಟ್ಟಳೆ, ಶಿಷ್ಟಾಚಾರಗಳಿದ್ದವು. ಲಾರ್ಡ್‌ಬೈರನ್, ಚಾರ್ಲ್ಸ್ ಫಾಕ್ಸ್, ಷೆರಿಡನ್, ಜ್ಯೇಷ್ಠ ಪಿಟ್, ಕ್ಯಾನಿಂಗ್‌ನಂಥ ಹಿರಿಯರೂ ಕತ್ತಿಯ ದ್ವಂದ್ವಯುದ್ಧ ಮಾಡಬೇಕಾಯಿತು. ಅನೇಕರು ಕೊಲೆಯಾದ್ದರಿಂದ ಇದನ್ನು ನಿಷೇಧಿಸಲು 19ನೆಯ ಶತಮಾನದಲ್ಲಿ ಕಾನೂನಾಯಿತು. ಅನಂತರ ಖಡ್ಗ ವಿದ್ಯೆಯಲ್ಲಿ ಕಲಹ, ದ್ವೇಷ, ಕಚ್ಚಾಟಗಳು ಮಾಯವಾಗಿ, ಸ್ನೇಹಭಾವದ ವಿನೋದಪರ ಕ್ರೀಡಾಕಲೆ ರೂಪುಗೊಂಡಿತು. ಹಿಂದೆ ಆತ್ಮರಕ್ಷಣೆಗೂ ಕಾಳಗಕ್ಕೂ ನೆರವಾಗಿದ್ದದ್ದು ಮುಂದೆ ಜನಪ್ರಿಯ ವ್ಯಾಯಾಮ, ಕ್ರೀಡೆ, ಖಡ್ಗಚಾತುರ್ಯ ಪರೀಕ್ಷೆಯ ಸ್ಪರ್ಧೆಯಾಗಿ ಪರಿಣಮಿಸಿತು. ಶ್ರೀಮಂತರ ಸಂಸ್ಕೃತಿಯ ಸಂಕೇತವಾಯಿತು. ಗೌರವಸ್ಥ ಸ್ತ್ರೀಯರೂ ಕತ್ತಿವರಸೆಯನ್ನು ಕಲಿಯತೊಡಗಿದರು. ಇದರ ವೈಯಕ್ತಿಕ ಶಿಸ್ತು, ಶಿಕ್ಷಣ, ಮಾನಸಿಕ ಶಾರೀರಿಕ ಹೊಂದಾಣಿಕೆಗಳು ಮೋಹಕವಾದವು.

ಖಡ್ಗ ತಂತ್ರದಲ್ಲಿ ಕ್ರಾಂತಿಯಾಗಿ ಆಧುನಿಕ ರಚನೆ ಸ್ಥಾಪಿತವಾಯಿತು. ಹರಿತ, ಭಾರ, ನಿರ್ವಹಿಸಲಾಗದಷ್ಟು ತೊಡಕಾಗಿದ್ದ ಹಿಂದಿನ ಕತ್ತಿಗಳು ಹೋಗಿ ಸಮತೋಲನದ, ಚಿಕ್ಕ, ಹಗುರ, ಮೊಂಡ ಕತ್ತಿಗಳು ಉದ್ಭವಿಸಿದವು. ಹಿಂದಿನ ಕತ್ತಿವರಸೆಗೆ ದೇಹಶಕ್ತಿ ಪ್ರಾಧಾನ್ಯವಾಗಿತ್ತು. ಈಗ ಬೇಕಾದದ್ದು ಪಶುಶಕ್ತಿಯಲ್ಲ. ಶಾಸ್ತ್ರೀಯ ಸುಧಾರಣೆ; ಒರಟುತನ ದಾಂಡಿಗತನವಲ್ಲ, ಯುಕ್ತಿ ಚಾತುರ್ಯ ಕೈಚಳಕ. ಸ್ನಾಯುಗಳಿಗಿಂತಲೂ ಹೆಚ್ಚಾಗಿ ನರಗಳು, ಮಿದುಳು ಮುಖ್ಯ. ಮೈ ಹವಣಿಕೆ, ಮಾನಸಿಕ ಚಟುವಟಿಕೆ, ಖಚಿತ ಮತ್ತು ಸೂಕ್ಷ್ಮ ಸಂಚಲನೆ, ಶೀಘ್ರಗತಿ, ಚುರುಕು ಪಾದಗಳು ಅವಶ್ಯ. ಇದು ವ್ಯಾಯಾಮ ಮಾತ್ರವಲ್ಲ, ಕಲೆಯೂ ಆಗಿದೆ. ಚದುರಂಗದಂತೆ ಬಗೆ ಬಗೆ ತೊಡಕಾದ ಚಾಲನ ಶಕ್ತಿ, ಹಿಡಿತ, ಏಕಾಗ್ರತೆ ಬೇಕು. ಅಗ್ರೇಸರ ಕತ್ತಿವರಸೆಗಾರನೂ ತನ್ನ ಜೀವನಗತಿಯಲ್ಲಿ ನಿರಂತರ ಅಭ್ಯಾಸ ಮಾಡಬೇಕು.

ದೀರ್ಘಾವಧಿ ನಿಂತುಹೋಗಿದ್ದ ಒಲಿಂಪಿಕ್ ಪಂದ್ಯಾಟ 1896ರಲ್ಲಿ ಪುನರುಜ್ಜೀವಿತ ವಾದಾಗ ಕತ್ತಿವರಸೆಯೂ ಏಳಿಗೆಯಾಗಿ ಪ್ರಮುಖ ಆಟವಾಯಿತು. ಯುರೋಪ್, ಅಮೆರಿಕಗಳಲ್ಲಿ ಅನೇಕ ಖಡ್ಗಕೂಟಗಳು ಬೆಳೆದವು. ಅರವತ್ತು ರಾಷ್ಟ್ರಗಳು ಸ್ಪರ್ಧೆಗಳನ್ನೂ ಪೃಥ್ವಿಯ ಖಡ್ಗಾಸ್ತ್ರಣಿಗಳ ಪ್ರದರ್ಶನವನ್ನೂ ನಡೆಸುತ್ತವೆ. ನಾನಾ ಜನಾಂಗಗಳು ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳನ್ನೂ ಸೈನಿಕ ಮತ್ತು ಸರ್ವಶ್ರೇಷ್ಠರ ಪೋಟಾಪೋಟಿಗಳನ್ನೂ ನಿರ್ವಹಿಸುತ್ತವೆ. ಇಟಲಿಯ ವಿಶ್ವವಿಖ್ಯಾತ ಖಡ್ಗಪ್ರವೀಣ ಅಲ್ಡೋನಾಡಿ ಅಮೆರಿಕಕ್ಕೆ 1938ರಲ್ಲಿ ಹೋದ ಅನಂತರ ಅಲ್ಲಿ ಖಡ್ಗಕಲೆ ಅಗಾಧವಾಗಿ ಬೆಳೆಯಿತು. ಅಮೆರಿಕದ ಕಾಲೇಜುಗಳು ಪರಸ್ಪರ ನಡೆಸುವ ಅಗ್ರಣಿ ಕತ್ತಿ ಸ್ಪರ್ಧೆಗಳಿಗೆ ಹದಿನೈದು ವಿಶ್ವವಿದ್ಯಾನಿಲಯಗಳು ಸೇರಿವೆ.

ಆಧುನಿಕ ಕತ್ತಿವರಸೆಗಳಲ್ಲಿ ಮೂರು ವಿಧಗಳಿವೆ: 1 ಫಾಯಿಲ್ (ಫ್ರಾನ್ಸ್ ಮತ್ತು ಇಟಲಿಗಳ ಫಾಯಿಲ್‌ಗಳಲ್ಲಿ ಭಿನ್ನತೆ ಇದೆ); 2 ಏಪೇ; 3 ಕೊಂಕುಕತ್ತಿ. ಈ ವಿಧಗಳಲ್ಲಿ ಬಳಕೆಯಾಗುವ ಕತ್ತಿಗಳು ಬೇರೆ ಬೇರೆ ತರದವು. ಇವುಗಳಿಗೆ ಬೇರೆ ಬೇರೆ ನಿಯಮ, ಕಟ್ಟಳೆಗಳಿವೆ. ಪುರುಷರು ಮೂರು ವಿಧಗಳಲ್ಲೂ ಸಾಧನೆ ಮಾಡುತ್ತಾರೆ. ಸ್ತ್ರೀಯರ ಸಾಧನೆ ಫಾಯಿಲ್‌ನಲ್ಲಿ ಮಾತ್ರ. ಕತ್ತಿವರಸೆಗಾರ ತಲೆಯ ರಕ್ಷಣೆಗೆ ಬಲೆಯ ಕಣ್ಣುಗಳಿರುವ ಬಲವಾದ ಮುಖವಾಡವನ್ನು ಧರಿಸುತ್ತಾನೆ. ಅವನ ದೃಷ್ಟಿಗೆ ಇದರಿಂದ ಅಡಚಣೆಯಾಗುವುದಿಲ್ಲ. ಮೆತ್ತೆಯಿಂದ ತುಂಬಿದ ಬಿಳಿಯ ಕ್ಯಾನ್ವಾಸ್ ಅಥವಾ ಗ್ಯಾಬರ್ಡೀನ್‌ನ ಕವಚ; ಮೊಣಕಾಲುವರೆಗಿನ ಷರಾಯಿ; ಕತ್ತಿ ಹಿಡಿದ ಕೈಗೆ ತೊಗಲಿನ ಕೈಚೀಲ; ಕಾಲುಗಳಿಗೆ ದಪ್ಪ ಕಾಲುಚೀಲ ಮತ್ತು ಚಪ್ಪಟೆ ತಳದ ಜೋಡುಗಳು; ಇಟಲಿಯ ಫಾಯಿಲ್ ಆದಾಗ ಕೈಹರಡಿಗೆ ತೊಗಲಿನ ಬಾರು–ಇವು ಸ್ತ್ರೀಪುರುಷರಿಬ್ಬರಿಗೂ ಉಡುಪು. ಸ್ತ್ರೀಯರಿಗೆ ವಕ್ಷಸ್ಥಳದ ರಕ್ಷಣೆಯೂ ಬೇಕು. ಮನೆಯೊಳಗಾಗಲೀ ಅಥವಾ ಬೈಲಿನಲ್ಲಾಗಲೀ ಇರುವ ಸ್ಪರ್ಧಾರಂಗ ಕಡೇಪಕ್ಷ ಸು. 12 ಮೀ ಉದ್ದ ಸು. 1.8 ಮೀ ಅಗಲ ಇರುವುದು. ಅದನ್ನು ಲಿನೋಲಿಯಂ ತುಕಡಿ ಅಥವಾ ಕಾರ್ಕ್ ಮುಚ್ಚಿರುತ್ತದೆ. ಏಪೇಗೆ ತಾಮ್ರದ ಜಾಲ ಹಾಸಿರುತ್ತದೆ.

**ಫಾಯಿಲ್ :** ಇದು ನಾಲ್ಕು ಅಂಚುಗಳುಳ್ಳ ತೆಳುವಾದ ಜಾಲ ಹಾಸಿರುತ್ತದೆ. ಮಣಿಯುವ ಉಕ್ಕಿನ ಅಲಗಿನ ಇರಿಯುವ ಕತ್ತಿ. ತುದಿಗೆ ರಬ್ಬರ್ ಗುಂಡಿ ಹಾಕಿ ಮೊಂಡು ಮಾಡಿದೆ. ಕೈ ರಕ್ಷಣೆಗೆ ಗುಂಡಾದ ಕಾಪು ಇದೆ. ಇಟಲಿಯ ಫಾಯಿಲ್ ಇದಕ್ಕಿಂತ ಸ್ವಲ್ಪ ಹೆಚ್ಚು ಉದ್ದ; ಘಂಟೆ ಆಕಾರದ ಕಾಪು ಕೈಯನ್ನು ರಕ್ಷಿಸುತ್ತದೆ. ಈ ಕತ್ತಿವರಸೆ ಕೈ ಹರಡು ಕಣ್ಣುಗಳಿಗೆ ಮಾತ್ರವೇ ಅಲ್ಲ, ತಲೆಯಿಂದ ಹಿಮ್ಮಡಿಯವರೆಗೆ ಪ್ರತಿಯೊಂದು ಸ್ನಾಯು, ನರ, ಅಂಗಾಂಶಕ್ಕೂ ಕಸರತ್ತು ಕೊಡುತ್ತದೆ. ತಲೆಯನ್ನು ನೆಟ್ಟಗಿಡುತ್ತದೆ. ಭುಜಗಳನ್ನು ಬಿಗಿಸುತ್ತದೆ. ಕತ್ತಿವರಸೆಗೆ ಇದೇ ತಳಹದಿ. ಇದನ್ನು ಕಲಿತರೆ ಉಳಿದೆರಡೂ ಸುಲಭ. ಇದನ್ನು ಲಘುವಾಗಿ ಅಂಗೈ ಮತ್ತು ಬೆಟ್ಟುಗಳಿಂದ ಹಿಡಿದುಕೊಂಡು ಹೆಬ್ಬೆಟ್ಟನ್ನು ಹಿಡಿಕೆಯ ಮೇಲುಭಾಗದ ಮೇಲೆ ಅರಿತಿರಬೇಕು.

ಲಂಡನ್ನಿನ ಒಲಂಪಿಯದಲ್ಲಿನ ರಾಯಲ್ ಟೂರ್ನಮೆಂಟಿನಲ್ಲಿ ಸ್ಪರ್ಧಿಸುತ್ತಿರುವ ಇಬ್ಬರು ಮಹಿಳೆಯರು. ಈ ಮೊಂಡು ಕತ್ತಿಸ್ಪರ್ಧೆ (ಫಾಯಿಲ್ಸ್ ಕಾಂಪಿಟಿಷನ್) ಬಹು ಮಂದಿ ಪ್ರೇಕ್ಷಕರನ್ನು ಆಕರ್ಷಿಸಿತೆಂದು ಹೇಳಲಾಗಿದೆ

ಕತ್ತಿವರಸೆಗಾರರಿಬ್ಬರೂ ಹಿಮ್ಮಡಿಗಳನ್ನು ತಗಲಿಸಿಕೊಂಡು, ಪಾದಗಳನ್ನು ಸಮಕೋನದಲ್ಲಿಟ್ಟು, ಕಾಲುಗಳನ್ನು ಬಾಗಿಸಿ, ದೇಹದ ಭಾರವನ್ನು ಸಮವಾಗಿ ಹಂಚಿ, ಒಂದಕ್ಕೂ ಮುಂದಕ್ಕೂ ಸುಸೂತ್ರವಾಗಿ ಸಮತೋಲನದಲ್ಲಿ ಸರಳರೇಖೆಯಲ್ಲಿ ಚಲಿಸಲು ಅವಕಾಶವಾಗುವಂತೆ ಒಬ್ಬರನ್ನೊಬ್ಬರು ಅರ್ಧ ಎದುರಿಸಿ ನಿಲ್ಲಬೇಕು. ಅನಂತರ ಆಕ್ರಮಣ ಮಾಡುವವನು ಕೈ, ಕತ್ತಿ ಕೊನೆ, ಭುಜಗಳನ್ನು ಎದೆಯ ಎತ್ತರದಲ್ಲಿ ಒಂದೇ ಸರಳರೇಖೆಯಲ್ಲಿರುವಂತೆ ಬಲ ತೋಳನ್ನು ಚಾಚಿ, ಬಲಪಾದವನ್ನು ಮುಂದೂಡಬೇಕು. ಮೊಣಕಾಲು ಮಂಡಿಯನ್ನು ಚೆನ್ನಾಗಿ ಬಾಗಿಸಿ, ಹಿಂಗಾಲನ್ನು ನೆಟ್ಟಗಿಟ್ಟು, ಮೈ ಹವಣಿಕೆಗೆ ಎಡ ತೋಳನ್ನು ತಲೆಯ ಎತ್ತರದ ಮೇಲಿಡಬೇಕು. (ಕೊಂಕು ಕತ್ತಿವರಸೆಯಲ್ಲಿ ಎಡಗೈ ಸೊಂಟದ ಮೇಲಿರಬೇಕು.) ಈ ಶರೀರಸ್ಥಿತಿಗೆ ಲಂಜ್ ಎಂದು ಹೆಸರು.

ಮೇಲೆ ಬೀಳುವವನ ಗುರಿ ಎದುರಾಳಿಯ ದೇಹದ ಮುಂಡ ಮಾತ್ರ; ತಲೆ, ತೋಳು, ಕಾಲುಗಳಲ್ಲ. ಅವನು ಗುರಿಯನ್ನು ಕತ್ತಿಯಿಂದ ಒಂದು ಸಾರಿ ಮುಟ್ಟಿದರೆ ಒಂದು ಅಂಶ ಗೆದ್ದಂತೆ. ಐದು ಸಾರಿ ಮುಟ್ಟಿದರೆ ಒಂದು ಸುತ್ತು ಗೆದ್ದಂತೆ. ಹೆಂಗಸು ಒಂದು ಸುತ್ತನ್ನು ಗೆಲ್ಲಲು ನಾಲ್ಕು ಸಾರಿ ಮುಟ್ಟಿದರೆ ಸಾಕು. ಗುರಿಯ ಆಚೆ ಮುಟ್ಟಿದರೆ ಅದು ಲೆಕ್ಕಕ್ಕಿಲ್ಲ; ದಂಡನೆಯುಂಟು.

ಆಕ್ರಮಣಕಾರನಿಗೆ ಎದುರಾಳಿಯ ಮೇಲೆ ನುಗ್ಗಲು ಹಕ್ಕಿದೆ. (ರೈಟ್ ಆಫ್ ವೇ). ಆಗ ಎದುರಾಳಿ ಈ ಏಟನ್ನು ತಪ್ಪಿಸಿಕೊಂಡರೆ ಆಕ್ರಮಣದ ಹಕ್ಕು ಅವನಿಗೆ ಬರುತ್ತದೆ. ಹಕ್ಕು ಸರ್ತಿಯ ಪ್ರಕಾರ ಪರಸ್ಪರ ಬದಲಿಸುತ್ತದೆ. ಇಬ್ಬರೂ ಏಕಕಾಲದಲ್ಲಿ ಪರಸ್ಪರ ಮುಟ್ಟಿದರೆ ಹಕ್ಕುದಾರನ ಹೊಡೆತಕ್ಕೆ ಮಾತ್ರ ಲೆಕ್ಕ. ಆಕ್ರಮಣದಲ್ಲಿ ಗುರಿಯ ಬೇರೆ ಬೇರೆ ಭಾಗಗಳನ್ನು ಮುಟ್ಟಲು ನಾನಾ ವಿಧಗಳಿವೆ; ಎದುರಾಳಿಯ ಕತ್ತಿಯಿಲ್ಲದ ಗುರಿಯ ಕಡೆ ಕತ್ತಿ ಇರಿಯುವುದು; ತಿವಿತಕ್ಕೆ ದಾರಿ ಕೊಡದಂತೆ ಎದುರಾಳಿ ಕತ್ತಿ ಹಿಡಿದುಕೊಂಡಿದ್ದರೆ ಅದನ್ನು ಚುರುಕಾಗಿ ಬಡಿದು ಅಥವಾ ಅದುಮಿ ದಾರಿ ಮಾಡಿಕೊಂಡು ತಿವಿಯುವುದು; ಕತ್ತಿ ತುದಿಯನ್ನು ಎದುರಾಳಿಯ ಕಾಪಿನ ಸುತ್ತಲೂ ತಿರುಗಿಸಿ, ತಿವಿತಕ್ಕೆ ದಾರಿ ಮಾಡಿಕೊಳ್ಳುವುದು; ಕತ್ತಿಯಿಂದ ತಿವಿಯುವಂತೆ ನಟಿಸಿ ಅದನ್ನು ಬೇರೆ ಕಡೆ ತಿರುಗಿಸಿ ತಿವಿಯುವುದು; ಓಡುತ್ತ ಅಥವಾ ನೆಗೆಯುತ್ತ ಹೋಗಿ ತಿವಿಯುವುದು; ಎದುರಾಳಿಯ ಕತ್ತಿ ಕೊನೆಯ ಮೇಲೆ ತನ್ನ ಕತ್ತಿಯನ್ನು ನುಗ್ಗಿಸಿ ಬೇರೆ ದಿಕ್ಕಿನಿಂದ ಮುಟ್ಟುವುದು; ಇತ್ಯಾದಿ. ಎದುರಾಳಿ ತನ್ನ ಮೇಲೆ ಬೀಳುವ ಆಕ್ರಮಣದ ಏಟುಗಳನ್ನು ನಿವಾರಿಸಲೂ ಎಂಟು ವಿಧಗಳಿವೆ; ಆಕ್ರಮಣಕಾರಿಯ ಕತ್ತಿಯನ್ನು ಚುರುಕಾಗಿ ಬಡಿದು ಪಕ್ಕಕ್ಕೆ ತಿರುಗಿಸಿ ಮಾರ್ಗ ತಪ್ಪಿಸುವುದು; ತನ್ನ ಕತ್ತಿ ಕೊನೆಯನ್ನು ಆಕ್ರಮಣಕಾರಿಯ ಕತ್ತಿಯ ಸುತ್ತಲೂ ಸುತ್ತಿಸಿ ಅಲಗನ್ನು ಪಕ್ಕಕ್ಕೆ ತಿರುಗಿಸುವುದು; ಇತ್ಯಾದಿ. ಇವುಗಳಿಗೆಲ್ಲ ಖಡ್ಗಭಾಷೆಯಲ್ಲಿ ಬೇರೆ ಬೇರೆ ಹೆಸರುಗಳಿವೆ.

ಸ್ಪರ್ಧೆಯ ತೀರ್ಮಾನಕ್ಕೆ ನಾಲ್ಕು ಪಂಚಾಯತರೂ ಒಬ್ಬ ಅಧ್ಯಕ್ಷನೂ ಇರುತ್ತಾರೆ. ಸ್ವಯಂಚಾಲಕ ವಿದ್ಯುತ್ ಸಲಕರಣೆಯು ಗಂಟೆಶಬ್ದ, ದೀಪಗಳನ್ನುಂಟು ಮಾಡಿ ಪ್ರತಿಯೊಂದು ಇರಿತವನ್ನೂ ನಿಖರವಾಗಿ ತಿಳಿಸುತ್ತದೆ. ಇದಕ್ಕೆ ಒಬ್ಬನೇ ಸಾಕು.

**ಏಪೇ :** ಇದು ಹಿಂದಿನ ದ್ವಂದ್ವಯುದ್ಧ ಕತ್ತಿಯ ಪ್ರತಿರೂಪ. ಅಲಗಿನ ಕೊನೆಯಲ್ಲಿ ಚೂಪಾದ ಬಿಂದುವಿನ ಬದಲು ಚಪ್ಪಟೆ ಗುಂಡಿಯಂಥ ಮೊಳೆಯ ತಲೆ ಮೊಂಡು ಮಾಡಿದೆ. ಫಾಯಿಲ್‌ನಷ್ಟೇ ಉದ್ದ. ಅದಕ್ಕಿಂತ ಹೆಚ್ಚು ಭಾರ; 27 ಔನ್ಸ್. ತ್ರಿಕೋನಾಕಾರ. ಗಡುಸು. ಬಹು ದೊಡ್ಡ ಕಾಪು. ಫಾಯಿಲ್‌ನಂತೆ ತಿವಿಯುವ ಆಯುಧ; ಹಕ್ಕಿನ ಕ್ರಮವಿದೆ. ಕತ್ತಿ ತುದಿಗೆ ಸಿಕ್ಕಿಸಿದ ಮೂರು ಚಿಕ್ಕ ಮುಳ್ಳುಗೋಲುಗಳು ಬಟ್ಟೆಗೆ ಸಿಕ್ಕಿಕೊಂಡು ಕತ್ತಿ ತಗಲಿದ್ದನ್ನು ಸ್ಪಷ್ಟಪಡಿಸುತ್ತವೆ. ತಲೆಯಿಂದ ಕಾಲ್ಬೆರಳವರೆಗೆ ಇಡೀ ಶರೀರ ಗುರಿ. ಎಲ್ಲಿ ಮುಟ್ಟಿದರೂ ಎಣಿಕೆ, ಯಾರು ಮೊದಲು ಮುಟ್ಟುತ್ತಾರೋ ಅವರಿಗೆ ಎಣಿಕೆ. ಇಬ್ಬರೂ ಏಕಕಾಲದಲ್ಲಿ ಮುಟ್ಟಿದರೆ ಇಬ್ಬರಿಗೂ ಎಣಿಕೆ. ಫಲಿತಾಂಶನಿರ್ಣಯಕ್ಕೆ ಇದರಲ್ಲೂ ಐದು ಮಂದಿ. ವಿದ್ಯುತ್ ಸಲಕರಣೆಯಿಂದ ನಿರ್ಣಯಿಸುವ ಕ್ರಮವೂ ಬಂದಿದೆ.

**ಕೊಂಕು ಕತ್ತಿ :** ಇದು ಒಂದನೆಯ ಎಲಿಜಬೆತ್ ರಾಣಿಯ ಕಾಲದ ಕತ್ತಿಯಿಂದಲೂ ಅಶ್ವಪಡೆಯ ಭಾರದ ಕತ್ತಿಯಿಂದಲೂ ವಿಕಸಿತವಾಗಿದೆ. ಚಪ್ಪಟೆಯಾದ ಮಣಿಯುವ ಅಲಗಿದೆ. ಇದರಿಂದ ಕತ್ತರಿಸಲೂ, ತಿವಿಯಲೂ ಸಾಧ್ಯ. ಮುಂದಿನ ಅಂಚಿನಿಂದ ಪೂರ್ತಿಯಾಗಿಯೂ ಹಿಂದಿನ ಅಂಚಿನ 1/2ರಷ್ಟು ಭಾಗದಿಂದಲೂ ಅಥವಾ ತುದಿಯಿಂದಲೂ

ಟೋಕಿಯೋ ಒಲಿಂಪಿಕ್ ಪಂದ್ಯಗಳಲ್ಲಿ ಭಾಗವಹಿಸಿದ ಹಂಗರಿಯ ಕತ್ತಿವರಸೆ ಪಟುಗಳು

ಹೊಡೆಯಬಹುದು. ಅಲಗು ಮೊಂಡ; ಕೆಡಕು ಮಾಡುವುದಿಲ್ಲ. ತೆಳ್ಳಗಿದೆ. ಫಾಯಿಲ್‌ನಂತೆ V ಆಕಾರ. ಲೋಹದ ದೊಡ್ಡ ಕಾಪು ಕೈಯ ಹಿಂದಿನ ಸುತ್ತಲೂ ಬಾಗಿ ಕೈಗಣ್ಣುಗಳನ್ನೂ ತೋಳನ್ನೂ ರಕ್ಷಿಸುತ್ತದೆ. ಇದರಲ್ಲಿ ಹಕ್ಕಿನ ನಿಯಮವಿಲ್ಲ. ಸೊಂಟದ ಮೇಲಿನ ಎಲ್ಲ ಭಾಗವೂ ಗುರಿ; ಕಾಲುಗಳೂ ಪಾದಗಳೂ ಸೇರಿಲ್ಲ. ಇದು ರೋಮಾಂಚಕಾರಿ ಆಟ. ಹೆಂಗಸರಿಗೆ ಇದರಲ್ಲಿ ಪ್ರಧಾನತ್ವ ಬಂದಿದೆ.

(ಎಂ.ಜಿ.ಕೆ.ಎಂ.)

ಭಾರತದಲ್ಲಿ ಕತ್ತಿವರಸೆ ಬಹುಶಃ ಕುಸ್ತಿಯ ಜೊತೆಗೆ ಕೂಡಿಯೇ ಇರುತ್ತಿತ್ತು. ಗರಡಿ ಮನೆಯ ಅಖಾಡದಲ್ಲಿ ವಸ್ತಾದಿಗಳು ತಮ್ಮ ಶಿಷ್ಯರಿಗೆ ಕುಸ್ತಿಯೊಂದಿಗೆ ಕತ್ತಿ ವರಸೆ ಮುಂತಾದವನ್ನು ಕಲಿಸುತ್ತಿದ್ದರು. ಈ ದೇಶದ ಕೆಲ ಭಾಗಗಳಲ್ಲಿ ಈಗಲೂ ಮೆರವಣಿಗೆಗಳ ಅಂಗವಾಗಿ ಗದೆ, ಕೋಲು, ಬರ್ಜಿ, ಈಟಿ ಇವುಗಳ ಜೊತೆಗೆ ಕತ್ತಿ ವರಸೆಗಳನ್ನೂ ಪ್ರದರ್ಶಿಸುತ್ತಾರೆ. ಇಂಗ್ಲೆಂಡ್ ಮತ್ತು ಇತರ ದೇಶಗಳಲ್ಲಿ ಕೆಲವು ಕಾಲ ಬಳಕೆಯಲ್ಲಿದ್ದಂತೆ, ಕತ್ತಿವರಸೆಗೆ ಉದ್ದವಾದ ಕತ್ತಿಯೇ ಆಯುಧ. (ವಿ.ಎನ್.ಎಸ್.ಎಂ.)

**ಕತ್ತೆ :** ಸ್ತನಿಗಳ ಗುಂಪಿನ ಪಸೆರಿಸ್ಸೊಡಾಕ್ಟೈಲ ಗಣದ ಕುದುರೆ ಮತ್ತು ಜೀಬ್ರ ಪ್ರಾಣಿಗಳನ್ನೊಳಗೊಂಡ ಎಕ್ವಿಡೀ ಕುಟುಂಬಕ್ಕೆ ಸೇರಿದ ಪ್ರಾಣಿ. ಕತ್ತೆ, ಕುದುರೆ ಮತ್ತು ಜೀಬ್ರಗಳಂತೆಯೇ ಈಕ್ವಸ್ ಎನ್ನುವ ಜಾತಿಗೆ ಸೇರಿದೆ. ಕತ್ತೆಯಲ್ಲಿ ಮುಖ್ಯವಾದ ಎರಡು ಪ್ರಭೇದಗಳಿವೆ: ಈಕ್ವಸ್ ಅಸಿನಸ್ ಮತ್ತು ಈಕ್ವಸ್ ಹೆಮಿಯೋನಸ್. ಮೊದಲನೆಯದು ಈಶಾನ್ಯ ಆಫ್ರಿಕದಲ್ಲಿ (ಇಥಿಯೋಪಿಯ, ಸೋಮಾಲಿಲ್ಯಾಂಡ್) ಕಂಡುಬರುವ ಕಾಡುಕತ್ತೆ. ಸಾಕಿದ ಕತ್ತೆ ಈ ಕತ್ತೆಯಿಂದಲೇ ಬಂದುದೆಂದು ನಂಬಲಾಗಿದೆ. ಎರಡನೆಯ ಪ್ರಭೇದ ಏಷ್ಯದ ನಿವಾಸಿಯಾದ ಕಾಡುಕತ್ತೆ. ಇದನ್ನು ಐದು ಉಪಪ್ರಭೇದಗಳಾಗಿ ವಿಂಗಡಿಸುತ್ತಾರೆ. ಇವು: ಸಿರಿಯದ ಕಾಡುಕತ್ತೆ (ಈ. ಹೆ. ಹೆಮಿಪ್ಪಸ್). ಟರ್ಕಿ ಮತ್ತು ವಾಯವ್ಯ ಇರಾನಿನಲ್ಲಿರುವ ಆನಜರ್ ಎಂಬ ಕತ್ತೆ (ಈ.ಹೆ. ಆನಜರ್), ಭಾರತದ ಕಚ್ ಮತ್ತು ಲಡಖಿನಲ್ಲಿರುವ ಕಾಡುಕತ್ತೆ (ಈ.ಹೆ.ಖುರ್). ಟಿಬೆಟ್ಟಿನಲ್ಲಿ 4572 ಮೀ ಗೂ ಎತ್ತರದ ಪ್ರದೇಶದಲ್ಲಿ ಕಾಣಬರುವ ಕಿಯಾಂಗ್ ಎಂಬ ಕತ್ತೆ (ಈ.ಹೆ.ಕಿಯಂಗ್) ಮತ್ತು ಮಧ್ಯ ಮಂಗೋಲಿಯದ ನಿವಾಸಿಯಾದ ಕುಲಾನ್ ಎನ್ನಲಾಗುವ ಕಾಡುಕತ್ತೆ (ಈ.ಹೆ.ಹೆಮಿಯೋನಸ್).

ಕತ್ತೆಗಳ ದೇಹರಚನೆ ಕುದುರೆಯಂತೆಯೇ; ಆದರೆ ಗಾತ್ರ ಮತ್ತು ಎತ್ತರ ಕಡಿಮೆ, ಕಿವಿಗಳು ಉದ್ದ, ಗೊರಸು ಕುದುರೆಗಳವಕ್ಕಿಂತ ಚಿಕ್ಕವು, ಬಾಲದ ತುದಿ ಕುಚ್ಚಿನಂತಿದೆ. ಕತ್ತಿನ ಮೇಲೆ ಇಳಿಬಿದ್ದಿರುವ ಅಥವಾ ನೆಟ್ಟಗಿರುವ ಕೂದಲಿನ ಅಯಾಲಿದೆ. ಬೆನ್ನಿನ ಮಧ್ಯೆ ಬಾಲದವರೆಗೂ ಹಬ್ಬಿರುವ ಪಟ್ಟೆಯಿದೆ. ಒಂದು ಭುಜದಿಂದ ಮತ್ತೊಂದು ಭುಜಕ್ಕೆ ಅಡ್ಡವಾಗಿ ಹರಡುವ ಇನ್ನೊಂದು ಪಟ್ಟೆ ಇದೆ. ಕೆಲವೊಮ್ಮೆ ಕಾಲುಗಳ ಮೇಲೆ ಅಡ್ಡಡ್ಡನಾದ



ಮರಿಯೊಡನಿರುವ ಕತ್ತೆ

ಮಸಕಾದ ಪಟ್ಟೆಗಳಿರುವುದೂ ಉಂಟು. ದೀರ್ಘವಾಗಿ ಉಸಿರನ್ನು ಎಳೆದುಕೊಳ್ಳುವಾಗ ಮತ್ತು ಬಿಡುವಾಗ ಉಂಟಾಗುವ ಹೀ–ಹಾ ಎಂಬ ಇದರ ಕೂಗು ಕತ್ತೆಜಾತಿಗೇ ವಿಶಿಷ್ಟವಾದುದು ಮತ್ತು ಪ್ರಾಣಿ ಪ್ರಪಂಚದಲ್ಲೇ ಅತ್ಯಂತ ವಿಚಿತ್ರವಾದುದು. ಕಾಡುಕತ್ತೆಗಳು ಒಂಟಿಯಾಗಿಯೊ ಮಂದೆಗಳಲ್ಲಿಯೋ ಇರುತ್ತವೆ. ಮರಿ ಹಾಕುವ ಕಾಲದಲ್ಲಿ ಮಾತ್ರ ಮಂದೆಯಿಂದ ಬೇರೆಯಾಗುತ್ತವೆ. ಗಂಡು ಹೆಣ್ಣುಗಳ ಕೂಡುವಿಕೆ ಸಾಮಾನ್ಯವಾಗಿ ಆಗಸ್ಟ್–ಅಕ್ಟೋಬರ್ ತಿಂಗಳುಗಳಲ್ಲಿ. ಗರ್ಭಧಾರಣೆಯ ಅವಧಿ ಸು. 11–12 ತಿಂಗಳು. ಹೆಣ್ಣು ಸಾಮಾನ್ಯವಾಗಿ ಒಂದು ಸಲಕ್ಕೆ ಒಂದು ಮರಿಯನ್ನು ಈಯುತ್ತದೆ.

ಕತ್ತೆಯ ಬಗ್ಗೆ ಒಂದು ಸ್ವಾರಸ್ಯವಾದ ಕಥೆ ಇದೆ. ಒಂದು ಕಥೆಯಲ್ಲಾದರೂ ತನ್ನ ಜಾಣತನವನ್ನು ಕುರಿತು ಎರಡು ಒಳ್ಳೆಯ ಮಾತನ್ನು ಬರೆಯಬೇಕೆಂದು ಕತ್ತೆ ಈಸೋಪನನ್ನು ಕೇಳಿತಂತೆ. ಹಾಗೆ ಮಾಡಿದರೆ ಜನ ತನ್ನನ್ನೇ ಕತ್ತೆಯೆಂದು ಹೀಗಳೆಯುತ್ತಾರೆಂದು ಈಸೋಪ ಕತ್ತೆಗೆ ಹೇಳಿದನಂತೆ. ಕತ್ತೆ ಸಾಮಾನ್ಯವಾಗಿ ಎಲ್ಲರೂ ಭಾವಿಸಿರುವಷ್ಟು ಮೊಂಡು ಮತ್ತು ದಡ್ಡ ಪ್ರಾಣಿಯಲ್ಲ. ತನಗೆ ಇಷ್ಟಬಂದಾಗ ಮಾತ್ರ ಕೆಲಸ ಮಾಡುವುದರಿಂದ ಮತ್ತು ಉದ್ದೇಶ ಪೂರ್ವಕವಾಗಿಯೊ ಎಂಬಂತೆ ಮೊಂಡಾಟ ಹೂಡುವುದರಿಂದ ಕತ್ತೆಗೆ ಬುದ್ಧಿಶಕ್ತಿ ಮತ್ತು ವಿವೇಚನಾಶಕ್ತಿ ಇದೆ ಎನಿಸುತ್ತದೆ. ಜಗಳವಾಡುವಾಗ ಅಥವಾ ಆತ್ಮರಕ್ಷಣೆಯ ಅವಶ್ಯಕತೆ ಉಂಟಾದಾಗ ಕತ್ತೆ ತನ್ನ ಹಿಂಗಾಲುಗಳನ್ನು ಮೇಲಕ್ಕೆತ್ತಿ ಜಾಡಿಸಿ ಒದೆಯುತ್ತದೆ; ತನ್ನ ಬಾಚಿಹಲ್ಲುಗಳಿಂದ ಕಚ್ಚುವುದೂ ಉಂಟು, ಕತ್ತೆ ವೇಗವಾಗಿ (ಕುದುರೆಯಷ್ಟಲ್ಲದಿದ್ದರೂ) ಓಡಬಲ್ಲುದು; ಗಂಟೆಗೆ 57 ಕಿಮೀ ವೇಗವಾಗಿ ಓಡಿದ ದಾಖಲೆಗಳುಂಟು. ತೋಳ, ಕತ್ತೆಕಿರುಬಗಳು ಕತ್ತೆಯ ಸ್ವಾಭಾವಿಕ ಶತ್ರುಗಳು.

ಸು. 4,000 ವರ್ಷಗಳ ಹಿಂದೆ ಈಜಿಪ್ಟಿನವರು ಕಾಡುಕತ್ತೆಗಳನ್ನು ಹಿಡಿದು ಪಳಗಿಸಿದರೆಂದು ನಂಬಲಾಗಿದೆ. ಸಾಕಿದ ಕತ್ತೆಗಳೆಂಬ ಒಂದು ನಿರ್ದಿಷ್ಟ ಬಗೆಯ ತಳಿ ಅಂದಿನಿಂದ ಅಸ್ತಿತ್ವಕ್ಕೆ ಬಂದಿದೆ. ಸಾಕಿದ ಕತ್ತೆಗಳು ಕಾಡುಕತ್ತೆಗಳಿಗಿಂತ ಗಾತ್ರದಲ್ಲಿ ಚಿಕ್ಕವು ಮತ್ತು ಸ್ವಲ್ಪ ಮಾಸಲು ಬಣ್ಣದವು. ಕತ್ತೆಗಳನ್ನು ಸಾಕುವುದು ಬಹು ಸುಲಭ: ಏಕೆಂದರೆ ಅವುಗಳ ಆಹಾರ ಬಹಳ ಸರಳರೀತಿಯದು. ಎಂಥ ಆಹಾರವನ್ನಾದರೂ ತಿಂದು, ಹೆಚ್ಚುಕಾಲ ನೀರು ಕುಡಿಯದೇ ಇರಬಲ್ಲವು. ಆದರೆ ದುಡಿಮೆಯಲ್ಲಿ ಮಾತ್ರ ಬೇರಾವ ಪ್ರಾಣಿಗೂ ಕಡಿಮೆಯಿಲ್ಲ. ಬಿಸಿಲಿನ ತಾಪದಲ್ಲಿ, ಬಹಳ ಕಷ್ಟಕರವಾದ ಸ್ಥಿತಿಯಲ್ಲಿ, ಅತಿ ಕಡಿದಾದ ಪರ್ವತ ಪ್ರದೇಶದಲ್ಲಿ ಹೆಜ್ಜೆ ತಪ್ಪದೆ ಬಹಳ ಜಾಗರೂಕತೆಯಿಂದ ನಡೆಯುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಇವನ್ನು ಬೆಟ್ಟಗುಡ್ಡಗಳಲ್ಲಿ ಭಾರವಾದ ಸಾಮಾನು ಸಾಗಿಸಲು ಬಳಸುತ್ತಾರೆ.

ಕಾಡುಕತ್ತೆ

ಭಾರತದಲ್ಲಿ ಗುಜರಾತ್ ರಾಜ್ಯದ ಕಚ್ ಪ್ರದೇಶ ಮತ್ತು ಲಡಾಖಿನಲ್ಲಿರುವ ಕಾಡುಕತ್ತೆಗಳನ್ನು ಬಿಟ್ಟರೆ ಉಳಿದವೆಲ್ಲ ಕತ್ತೆಗಳೇ. ಕಾಡುಕತ್ತೆ ಕತ್ತೆಗಿಂತ ಗಾತ್ರದಲ್ಲಿ ದೊಡ್ಡದು (ಎತ್ತರ 0.93–1.21 ಮೀ) ಹಾಗೂ ಹೆಚ್ಚು ಮಾಟವಾದುದು. ಮೈಬಣ್ಣ ಹಳದಿ ಮರಳಿನಂತೆ. ಕಿವಿಗಳೂ ಕೊಂಚ ಚಿಕ್ಕವು. ಕೂಗು ಹೆಚ್ಚು ತೀವ್ರವಾದುದು. ಕಾಡುಕತ್ತೆ ಇತರ ಕತ್ತೆಗಳೊಂದಿಗಾಗಲಿ ಬೇರಾವ ಸಾಕು ಪ್ರಾಣಿಗಳೊಂದಿಗಾಗಲಿ ಸೇರುವುದೇ ಇಲ್ಲ. ಭಾರತದ ಕತ್ತೆಗಳಲ್ಲೂ ಎರಡು ಬಗೆಗಳಿವೆ. ಒಂದು ಬಗೆಯದು ಕೊಂಚ ಕುಳ್ಳು (ಎತ್ತರ 0.81 ಮೀ) ಮತ್ತು ಬೂದು ಬಣ್ಣದ್ದು. ಇದು ದೇಶದ ಎಲ್ಲ ಭಾಗಗಳಲ್ಲಿಯೂ ಸಾಮಾನ್ಯ. ಎರಡನೆಯ ಬಗೆಯದು ಎತ್ತರ (0.93 ಮೀ) ಮತ್ತು ಅದರ ಬಣ್ಣ ಬಿಳಿ ಅಥವಾ ತಿಳಿಬೂದಿ. ಇದು ಕಚ್ ಪ್ರದೇಶದಲ್ಲಿ ಕಾಣಬರುತ್ತದೆ. ಭಾರತದಲ್ಲಿ (1967) ಸು. 1,09,63,000 ಸಾಕಿದ ಕತ್ತೆಗಳಿದ್ದುವೆಂದು ಅಂದಾಜಿದೆ.

ಕಷ್ಟಸಹಿಷ್ಣುವೂ ಹೆಚ್ಚು ಭಾರವನ್ನು ಹೊರುವ ಸಾಮರ್ಥ್ಯವುಳ್ಳದ್ದೂ ಆದ ಕತ್ತೆಯ ಉಪಯುಕ್ತತೆಯನ್ನು ಕಂಡುಕೊಂಡು, ಇನ್ನೂ ಉತ್ತಮವಾದ ತಳಿಗಳನ್ನು ಪಡೆಯಲು ಭಾರತದಲ್ಲಿ ತಳೀಕರಣ ಪ್ರಯೋಗಗಳನ್ನು ನಡೆಸಿದ್ದಾರೆ, ಬೇರೆ ಬೇರೆ ದೇಶಗಳಿಂದ ಉತ್ತಮ ಬಗೆಯ ಗಂಡುಕತ್ತೆಗಳನ್ನು ತರಿಸಿ ಅಡ್ಡತಳಿಯೆಬ್ಬಿಕೆಯಲ್ಲಿ ಬಳಸುತ್ತಿದ್ದಾರೆ. ಅಲ್ಲದೆ ಗಂಡುಕತ್ತೆ ಮತ್ತು ಹೆಣ್ಣು ಕುದುರೆಗಳನ್ನು ಅಡ್ಡಹಾಯಿಸಿ ಪಡೆವ ಮಿಶ್ರತಳಿಯಾದ ಹೇಸರಗತ್ತೆ (ಮ್ಯೂಲ್) ಬಗ್ಗೆಯೂ ಸಾಕಷ್ಟು ಪ್ರಯೋಗಗಳು ನಡೆಯುತ್ತಿವೆ. ಹೇಸರಗತ್ತೆಗಳು ಗಾತ್ರ, ವೇಗ ಮತ್ತು ಶಕ್ತಿಸಾಮರ್ಥ್ಯಗಳಲ್ಲಿ ಕುದುರೆಯನ್ನೂ, ನೋಟ, ಕಷ್ಟಸಹಿಷ್ಣುತೆ, ಸಹನೆ, ಒರಟುತನ ಮುಂತಾದವುಗಳಲ್ಲಿ ಕತ್ತೆಯನ್ನೂ ಹೋಲುತ್ತವೆ. ಹೀಗಾಗಿ ಇವನ್ನು ಹಲವಾರು ಬಗೆಯ ಕಷ್ಟತರವಾದ ಕೆಲಸಗಳಿಗೆ ಬಳಸಲಾಗುತ್ತಿದೆ. ಸೈನ್ಯದಲ್ಲೂ ಪರ್ವತ ಪ್ರದೇಶಗಳಲ್ಲೂ ಇವುಗಳ ಬಳಕೆ ಹೆಚ್ಚು. (ಕೆ.ಎಂ.ಕೆ.; ಸಿ.ಎನ್.ಜಿ.)

**ಕತ್ತೆಕಾಲಂಬು :** ಆಸ್ಕ್ಲಿಪಿಯಡೇಸೀ (ಎಕ್ಕದ ಗಿಡದ ಕುಟುಂಬ) ಕುಟುಂಬಕ್ಕೆ ಸೇರಿದ ಟೈಲೋಫೋರ ಎಂಬ ಸಸ್ಯಜಾತಿ. ಇದು ತೆಳು ಹಾಗೂ ಸುತ್ತು ಬಳ್ಳಿಯಾಗಿ ದೀರ್ಘಕಾಲ ಬೆಳೆಯುವ ಒಂದು ಮೂಲಿಕೆ ಅಥವಾ ಚಿಕ್ಕಕಂಟಿ. ಇದರಲ್ಲಿ ಹಲವಾರು ಪ್ರಭೇದಗಳಿವೆ. ಅವುಗಳಲ್ಲಿ ಟೈ. ಫ್ಯಾಸಿಕ್ಯುಲೇಟ, ಟೈ ರೊಟಂಡಿಫೋಲಿಯ ಮತ್ತು ಟೈ.

ಅಸ್ತಮ್ಯಾಟಿಕ ಪ್ರಭೇದಗಳು ಮುಖ್ಯವಾದವು. ಭಾರತದಲ್ಲಿ ಎಲ್ಲ ಕಡೆಗಳಲ್ಲಿಯೂ ಬಂಜರು ಪ್ರದೇಶಗಳಲ್ಲಿ ಕಲ್ಲುಬಂಡೆಗಳ ನಡುವೆ ಬೆಳೆಯುತ್ತದೆ. ಈ ಗಿಡಕ್ಕೆ ಅನೇಕ ಬೇರುಗಳಿವೆ. ಅವು ದಪ್ಪನಾಗಿ ರಸಭರಿತವಾಗಿವೆ. ಕಾಂಡ ನೀಳ, ನುಣುಪು ಅಥವಾ ರೋಮಮಯ. ಎಲೆಗಳು ಸ್ವಲ್ಪ ಹೆಚ್ಚುಕಡಿಮೆ ಅಭಿಮುಖವಾಗಿ ಜೋಡಣೆಗೊಂಡಿವೆ. ಎಲೆಗಳು ಸು. 1.2 ಮೀ ಉದ್ದ ಸು. 1.6 ಮೀ ಅಗಲ ಇವೆ. ಅವುಗಳ ತಳಭಾಗ ರೋಮಮಯ. ಆಕಾರ ಕತ್ತಿಯಂತೆ ಅಥವಾ ಅಂಡಾಕಾರ. ತುದಿ ಚೂಪು. ಎಲೆಗಳ ಬುಡದಲ್ಲಿ ಸು. 1" ಉದ್ದದ ವೃಂತಪರ್ಣಗಳಿವೆ. ಹೂಗಳು ಸರಳ ರಸೀಮ್ ಮಾದರಿಯ ಅಥವಾ ಛತ್ರಿಯಾಕಾರದ ಕವಲೊಡೆದ ಸೈಮೋಸ್ ಹೂಗೊಂಚಲುಗಳಲ್ಲಿರುತ್ತವೆ. ಹೂಗಳು ಗಾತ್ರದಲ್ಲಿ ಚಿಕ್ಕವು ಮತ್ತು ಆರೀಯ ಸಮಾಂಗತೆಯುಳ್ಳವು. ಅವುಗಳ ಬಣ್ಣ ಹಳದಿಮಿಶ್ರಿತ ಕೆಂಪು. ಪುಷ್ಪಪಾತ್ರೆ ಅಂಡಾಕಾರದ ಐದು ವಿಭಾಗಗಳನ್ನೊಳಗೊಂಡಿದೆ. ಗಂಟೆಯಾಕಾರದ ಪುಷ್ಪದಳಸಮೂಹ 5 ಭಾಗಗಳಾಗಿ ವಿಭಾಗವಾಗಿದೆ. ಕೇಸರಗಳು ಐದು. ಒಂದರೊಡನೊಂದು ಕೂಡಿವೆ. ಕೇಸರಗಳಿಗೂ ದಳಗಳಿಗೂ ಮಧ್ಯೆ ದಳಗಳಿಂದ ಹೊರಟ ಮುಕುಟವಿದೆ. ಪರಾಗಕೋಶ ಚಿಕ್ಕವು ಮತ್ತು ಹೂವಿನ ಕೇಂದ್ರ ಭಾಗದೆಡೆ ಬಾಗಿವೆ. ಒಂದೊಂದು ಪರಾಗಕೋಶದಲ್ಲಿಯೂ ಒಂದೊಂದೇ ಪರಾಗರಾಶಿಯಿದೆ. ಅಂಡಾಶಯದಲ್ಲಿ ಎರಡು ಕಾರ್ಪೆಲುಗಳಿವೆ. ಕಾರ್ಪೆಲುಗಳು ಶಲಾಕೆ ಮತ್ತು ಶಲಾಕಾಗ್ರದ ಭಾಗದಲ್ಲಿ ಮಾತ್ರ ಕೂಡಿಕೊಂಡಿದ್ದು ಅವುಗಳ ಬುಡ ಬಿಡಿಯಾಗಿದೆ. ಶಲಾಕಾಗ್ರ 5 ಮೂಲೆಗಳ ಬಿಲ್ಲೆಯಂತಿದೆ. ಫಲ ಎರಡು ಫಾಲಿಕಲ್‌ಗಳ ಜೋಡಿ. ಕೆಲವೊಮ್ಮೆ ಒಂದರ ಬೆಳವಣಿಗೆ ಕುಂಠಿತಗೊಂಡು ಒಂದೇ ಫಲವಾಗುವುದೂ ಉಂಟು. ಫಲದ ತುದಿ ಚೂಪು, ಮೈ ನುಣುಪು. ಬೀಜಗಳು ಅನೇಕ, ಅವುಗಳಿಗೆ ಪ್ರಸರಣಕಾರ್ಯದಲ್ಲಿ ಸಹಕಾರಿಯಾಗುವ ಕೂದಲುಗಳಿವೆ.

ಔಷಧೀಯವಾಗಿ ಈ ಸಸ್ಯ ಪ್ರಾಮುಖ್ಯವಾಗಿದೆ. ಇದರ ಬೇರಿನ ರಸವನ್ನು ಹಾಲಿನೊಡನೆ ಕೂಡಿಸಿ ಶಕ್ತಿ ವರ್ಧಕವಾಗಿ ಬಳಸುವುದುಂಟು. ಎಲೆಗಳನ್ನು ಅರೆದು ವ್ರಣ, ಗಾಯಗಳಿಗೆ ಹಚ್ಚುತ್ತಾರೆ. ಗಿಡವನ್ನು ಇಲಿ, ಜಂತುಗಳಿಗೆ ವಿಷಕಾರಿಯಾಗಿ ಬಳಸಲಾಗುತ್ತದೆ. ಇದನ್ನು ದೇಶೀ ಇಪಿಕ್ಯಾಕುವಾನ ಎಂತಲೂ ಕರೆಯಲಾಗುವುದಲ್ಲದೆ ಅದರ ಔಷಧೀಯ ಉಪಯುಕ್ತತೆಗಳೆಲ್ಲ ಇದಕ್ಕೂ ಇವೆ. ಇದರಲ್ಲಿ ಟೈಲೊಫೋರಿನ್ ಮತ್ತು ಟೈಲೋರಿಫೋರಿನಿನ್ ಎಂಬ 2 ಬಗೆಯ ಕ್ಷಾರಗಳುಂಟು. ಈ ಬಳ್ಳಿಯ ಎಲೆ ಮತ್ತು ಬೇರು ಒಳ್ಳೆಯ ವಾಂತಿಕಾರಕ ಔಷಧವೆಂದು ಪರಿಗಣಿಸಲಾಗಿದೆ. ಒಳಗಿನ ಕಫವನ್ನು ಹೊರಗೆ ಹಾಕಬಲ್ಲುದು. ಹೆಚ್ಚು ಬೆವರು ಬರುವ ಹಾಗೆಯೂ ಮಾಡಬಲ್ಲುದು. ಅಲ್ಪಪ್ರಮಾಣದಲ್ಲಿ ಉದರವಾಯುವಿಗೆ ಪರಿಣಾಮಕಾರಿ. ಅತಿಸಾರ ಮತ್ತು ರಕ್ತಾತಿಸಾರಕ್ಕೆ ಆರಂಭದಲ್ಲಿ (ಜ್ವರವಿದ್ದರೂ) ಎಲೆಯ ಚೂರ್ಣವನ್ನು ಗೋಂದು (ಅಂಟು) ಮತ್ತು ಅಫೀಮಿನೊಡನೆ ಕೊಡುವುದುಂಟು. ಬೇರನ್ನು ಅರೆದು ತೆಗೆದುಕೊಂಡರೆ ಮಲಶುದ್ಧತೆಯಾಗುತ್ತದೆ. ದಿನಬಿಟ್ಟು ದಿನ ಬರುವ ಜ್ವರ ಅಥವಾ ಮಲೇರಿಯ ಜ್ವರ ಸಂಬಂಧದ ರಕ್ತಾತಿ ಸಾರಕ್ಕೆ ಎಲೆಗಳ ಚೂರ್ಣವನ್ನು ಕ್ವಿನೀನ್ (ಸಿಂಕೋನ) ಗಿಡದ ತೊಗಟೆಯ ಪುಡಿಯೊಡನೆ ಕೊಡುತ್ತಾರೆ. ಇದನ್ನು ವಿರೇಚಕವಾಗಿಯೂ ಸಿಡುಬುರೋಗಕ್ಕೂ ಆರ್ಸನಿಕ್ ಮತ್ತು ಸರ್ಪಗಳ ವಿಷಹಾರಿಯಾಗಿಯೂ ಬಳಸುವುದುಂಟು. ಇದರ ಬೇರನ್ನು ಸರಸಪರಿಲ್ಲ ಎಂಬ ಸಸ್ಯದ ಬೇರುಗಳಿಗೆ ಬದಲಾಗಿಯೂ ಬಳಸುವುದುಂಟು. ಅವು ಆಸ್ತಮಾ ಮತ್ತು ಶ್ವಾಸಕೋಶ ಸಂಬಂಧದ ರೋಗಗಳಿಗೆಲ್ಲ ಪರಿಣಾಮಕಾರಿ. (ಎಂ.ಎಸ್.ಎಸ್.ಆರ್.)

**ಕತ್ತೆ ಕಿರುಬ :** ಮಾಂಸಾಹಾರಿ ಸ್ತನಿಗಳ ಗುಂಪಿನ (ಕಾರ್ನಿವೊರ) ಹೈಯಿನಿಡೀ ಕುಟುಂಬಕ್ಕೆ ಸೇರಿದ ಕುರೂಪಿಯಾದ ವನ್ಯಪ್ರಾಣಿ. ಇದರ ವೈಜ್ಞಾನಿಕ ನಾಮ ಹೈಯೀನ. ಇದರಲ್ಲಿ ಎರಡು ಪ್ರಭೇದಗಳಿವೆ. ಒಂದು ಹೈ.ಸ್ಟ್ರ ಯೇಟ (ಪಟ್ಟೆಗಳಿರುವ ಕತ್ತೆಕಿರುಬ). ಇದು ಭಾರತ, ಪರ್ಷಿಯ, ಏಷ್ಯಮೈನರ್ ಮತ್ತು ಉತ್ತರ ಹಾಗೂ ಪೂರ್ವ ಆಫ್ರಿಕದ ಕಾಡುಗಳಲ್ಲಿ ಕಂಡುಬರುತ್ತದೆ. ಇನ್ನೊಂದು ಹೈ.ಬ್ರೂನಿಯ (ಕಂದು ಕತ್ತೆಕಿರುಬ) ಎಂಬುದು. ಇದು ದಕ್ಷಿಣ ಆಫ್ರಿಕದ ನಿವಾಸಿ. ನಾಯಿಗಳಲ್ಲಿರುವಂಥ ಹೆಜ್ಜೆ ಮತ್ತು ಕಾಲುಗಳು, ಬಹಳ ಬಲಿಷ್ಠವಾದ ಮತ್ತು ಉದ್ದವಾದ ಮುಂಗಾಲುಗಳು, ಮೋಟಾದ ಮತ್ತು ಒಂದಕ್ಕೊಂದು ತಾಕುವಂತಿರುವ ಹಿಂಗಾಲುಗಳು, ಚಿಕ್ಕದಾದ ಪೊದೆಯಂತಿರುವ ಬಾಲ. ಬಹುಬಲಿಷ್ಠವಾದ ದವಡೆಗಳು, ಹಿಂದಕ್ಕೆ ಸೆಳೆದುಕೊಳ್ಳಲಾಗದಂಥ ಉಗುರುಗಳು. ಇವು ಈ ಎರಡೂ ಬಗೆಯ ಕತ್ತೆಕಿರುಬಗಳ ಮುಖ್ಯಲಕ್ಷಣಗಳು.

ಭಾರತದಲ್ಲಿ ಕಾಣುವ ಕತ್ತೆಕಿರುಬ ಸು. ತೋಳದ ಗಾತ್ರದ್ದು. ಬೂದು ಮಿಶ್ರಿತ ಕಂದುಬಣ್ಣದ ಇದರ ದೇಹದ ಮೇಲೆ ಅಸ್ಪಷ್ಟವಾದ ಉದ್ದುದ್ದ ಪಟ್ಟೆಗಳಿವೆ. ಕುತ್ತಿಗೆ ಮತ್ತು ಬೆನ್ನಿನ ಉದ್ದಕ್ಕೂ ಕೇಸರಗಳ ಸಾಲಿವೆ. ಇದರ ಕೂಗು ಬಲು ವಿಚಿತ್ರವಾದುದು. ಅಟ್ಟಹಾಸದಿಂದ ಕೇಕೆಹಾಕಿ ನಗುವಂತಿರುತ್ತದೆ, ನಿಶಾಚರಿಯಾದ ಇದು ಸಾಮಾನ್ಯವಾಗಿ ಒಂಟಿಯಾಗಿಯೇ ಜೀವಿಸುತ್ತದೆ. ತನ್ನ ಆಹಾರವನ್ನು ವಾಸನೆಯಿಂದ ಪತ್ತೆಹಚ್ಚುತ್ತದೆ. ಬೇಟೆಯಾಡುವ ಪ್ರಾಣಿಯಲ್ಲದ್ದರಿಂದ ಇದರ ಆಹಾರದಲ್ಲಿ ವೈವಿಧ್ಯವಿಲ್ಲ. ಸತ್ತ ಪ್ರಾಣಿಗಳು ಇದರ ಮುಖ್ಯ ಆಹಾರ. ಹುಲಿ, ಚಿರತೆ ಮುಂತಾದ ಮಾಂಸಾಹಾರಿ ಪ್ರಾಣಿಗಳು ತಿಂದು ಮಿಗಿಸಿದುದು ಇದರ ಪಾಲಿಗೆ. ಕೆಲವೊಮ್ಮೆ ಕುರಿ, ಆಡು, ನಾಯಿ ಮುಂತಾದ ಸಾಕುಪ್ರಾಣಿಗಳನ್ನು ಕದ್ದೊಯ್ಯುವುದೂ ಉಂಟು. ಆದರೆ ಮನುಷ್ಯನನ್ನು ಕಂಡರೆ ಭಯಪಡುವ

ಆಫ್ರಿಕದ ಕತ್ತೆಕಿರುಬ

ಈ ಪ್ರಾಣಿ ಅವನು ವಾಸಿಸುವ ಸ್ಥಳಗಳಿಂದ ದೂರವೇ ಇರುತ್ತದೆ. ಇವುಗಳ ಸಾಂಸಾರಿಕ ಜೀವನದ ಬಗ್ಗೆ ಹೆಚ್ಚು ತಿಳಿಯದು. ಹೆಣ್ಣು ಕತ್ತೆಕಿರುಬ ಒಂದು ಬಾರಿಗೆ 2–4 ಮರಿಗಳನ್ನು ಈಯುತ್ತದೆ. ತಾಯಿಯೇ ಮರಿಗಳನ್ನು ಹಾಲೂಣಿಸಿ ಸಾಕುವುದು ಸಾಮಾನ್ಯವಾದರೂ ಕೆಲವೊಮ್ಮೆ ಗಂಡು ಹೆಣ್ಣುಗಳೆರಡೂ ಮರಿಗಳಿಗೆ ಮೊಲೆಯೂಣಿಸುತ್ತವೆ ಎಂದು ಹೇಳಲಾಗುತ್ತದೆ.

ಕತ್ತೆಕಿರುಬಗಳನ್ನು ಪಳಗಿಸುವುದೂ ಉಂಟು. ಸಾಕಿದ ಪ್ರಾಣಿಗಳು ಸಾಧುವಾಗಿಯೂ ನಂಬಿಕೆಗೆ ಅರ್ಹವಾಗಿಯೂ ಇರುತ್ತವೆ. (ಎ.)

**ಕತ್ಬರ್ಟ್‌ಸ್ಟನ್, ಜೇಮ್ಸ್ ಲಿಸ್ಟರ್ :** 1851–1910. ಸ್ಕಾಟ್ಲೆಂಡಿನ ಗ್ಲಾಸ್ಗೊ ನಗರದಲ್ಲಿ ಹುಟ್ಟಿ, ಕಾಲಾನುಕ್ರಮದಲ್ಲಿ ಗ್ಲೆನ್ ಆಮಂಡ್ ಕಾಲೇಜಿನಲ್ಲಿ ಓದಿದ. ಇಂಡಿಯನ್ ಸಿವಿಲ್ ಸರ್ವಿಸಿಗೆ ಅಭ್ಯರ್ಥಿಯಾಗಿದ್ದನಾದರೂ ನಿಯಮಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗದುದರಿಂದ ಭಾರತದಲ್ಲಿ ಕೆಲಸ ಮಾಡಲು ಆಗಲಿಲ್ಲ.

ಈತನ ತಂದೆ ಆಸ್ಟ್ರೇಲಿಯದ ಅಡಿಲೇಡ್ ನಗರದಲ್ಲಿ ದಕ್ಷಿಣ ಆಸ್ಟ್ರೇಲಿಯದ ಬ್ಯಾಂಕ್ ಮ್ಯಾನೇಜರ್ ಆಗಿದ್ದ. 1874ರಲ್ಲಿ ಕತ್ಬರ್ಟ್‌ಸ್ಟನ್ ಆಸ್ಟ್ರೇಲಿಯದ ಗೀಲಾಂಗ್ ಪ್ರಾಥಮಿಕ ಶಾಲೆಯಲ್ಲಿ ಲ್ಯಾಟಿನ್ ಮತ್ತು ಗ್ರೀಕ್ ಭಾಷಾಬೋಧಕನಾಗಿ ಸೇರಿದ. 1879ರಲ್ಲಿ ಗ್ರಾಮರ್ ಸ್ಕೂಲ್ ಪದ್ಯಗಳು ಎಂಬ ಇವನ ಕವನಸಂಕಲನ ಪ್ರಕಟವಾಯಿತು. ಈತನಿಗೆ ಆಸ್ಟ್ರೇಲಿಯದ ಮೇಲೆ ಮೋಹವಿದ್ದರೂ ಇಂಗ್ಲೆಂಡಿನ ಮೇಲೆ ಹೆಚ್ಚು ಮಮತೆ ಇತ್ತಾಗಿ 1882ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಬಿ.ಎ. ಪರೀಕ್ಷೆ ಮುಗಿಸಿದ (1885). ಪುನಃ ಆಸ್ಟ್ರೇಲಿಯಕ್ಕೆ ಬಂದು ಅದೇ ಹುದ್ದೆಗೆ ಸೇರಿದ. 1893ರಲ್ಲಿ ಪ್ರಕಟವಾದ ಬಾರವನ್ ಬ್ಯಾಲಡ್ಸ್ ಎಂಬ ಕವನಸಂಕಲನ ಈತನಿಗೆ ಕೀರ್ತಿ ತಂದಿತು.

ಈತನ ಪದ್ಯಗಳು ಹೆಚ್ಚಾಗಿ ಶಾಲಾಪದ್ಯಗಳು. ಈತನ ಶೈಲಿ ಪ್ರೌಢಪಾಂಡಿತ್ಯ ಪ್ರದರ್ಶಕವಾಗಿದ್ದು ಕವನಗಳಲ್ಲಿ ದೇಶಪ್ರೇಮ ಚೆನ್ನಾಗಿ ಅಭಿವ್ಯಕ್ತವಾಗಿದೆ. ಆಗೊಮ್ಮೆ ಈಗೊಮ್ಮೆ ಸತ್ತ್ವಯುತ ಕಾವ್ಯದ ಹೊಳಪು ಮೂಡಿರುವುದೂ ಉಂಟು. ಹಳೆಯ ಶಾಲೆಯ ಮೇಲಿನ ಮಮತೆ. ಪೊದೆಗಳು, ನದಿ, ಸಮುದ್ರತೀರ, ದೋಣಿಯಲ್ಲಿ ಕುಳಿತು ಹುಟ್ಟು ಹಾಕುವುದು ಮುಂತಾದವು ಆತನಿಗೆ ಭಾವೋದ್ರೇಕಕಾರಕ ವಸ್ತುಗಳು. ಉಳಿದ ಪದ್ಯಗಳಲ್ಲಿ ಸರಳ ವರ್ಣನೆ, ಲಯ ಇವೆ. ಆಸ್ಟ್ರೇಲಿಯನ್ ಸನ್‌ರೈಸ್, ದಿ ಬುಷ್, ದಿ ಉಡ್ ಮ್ಯೂಸಿಕ್– ಎಂಬ ಗ್ರಂಥಗಳು ಪ್ರಖ್ಯಾತವಿವೆ. ದಿ ರೇಸಿಂಗ್‌ಎಯ್ಟ್ ಎಂಬ ದೋಣಿಯ ಹಾಡು ಅಮರವೆನಿಸಿದೆ. (ಟಿ.ವಿ.ಎಸ್.)

**ಕಥಕ್ :** ಬಹು ಪ್ರಾಚೀನ ಕಾಲದಿಂದ ಭಾರತದಲ್ಲಿನ ದೇವಾಲಯಗಳಲ್ಲಿ ದೇವತಾಪ್ರೀತ್ಯರ್ಥವಾಗಿ ದೇವದಾಸಿಯರಿಂದ ನೆರವೇರುತ್ತಿದ್ದ ನೃತ್ಯಕ್ಕೆ ಕಥಕ್ ಎಂದೂ ಅಂಥ ನೃತ್ಯವನ್ನು ಕಲಿಸಿಕೊಡುತ್ತಿದ್ದ ಒಂದು ವರ್ಗದ ಬ್ರಾಹ್ಮಣ ಉಪಾಧ್ಯಾಯರಿಗೆ ಕಥಕ ಅಥವ ಕಥಿಕ ಎಂದೂ ಹೆಸರಿದೆ. ಉತ್ತರ ಹಿಂದೂಸ್ತಾನದಲ್ಲಿನ ಲಖ್ನೋ ಮತ್ತು ಜಯಪುರಗಳಲ್ಲಿ ಈ ನೃತ್ಯ ಕ್ರಮೇಣ ಅಭಿವೃದ್ಧಿಗೆ ಬಂದು ಪೂಜ್ಯಸ್ಥಾನವನ್ನು ಪಡೆಯಿತಲ್ಲದೆ ಒಂದು ವಿಶಿಷ್ಟ ಸಂಪ್ರದಾಯವಾಗಿ ಬೆಳೆಯಿತು.

ಉತ್ತರ ಹಿಂದೂಸ್ಥಾನದಲ್ಲಿ ಮುಸ್ಲಿಮರ ಆಡಳಿತ ಬಂದ ಮೇಲೆ ದೇವಾಲಯಗಳಲ್ಲಿ ನರ್ತಿಸುವ ದೇವದಾಸಿಯರು ಕಥಕ್ ನೃತ್ಯವನ್ನು ಅನುಮೋದಿಸದಿರುವಂಥ ಪರಿಸ್ಥಿತಿ ಒದಗಿ ಈ ಕಲೆಗೆ ಕಳಂಕ ಬಂತು. ಅಲ್ಲದೆ ಆಗಿನ ಕಾಲದಲ್ಲಿ ಸತತ ಯುದ್ಧ, ಹೋರಾಟಗಳಿದ್ದ ಕಾರಣ ಈ ಕಲೆ ಕ್ಷೀಣವಾಗುತ್ತ ಬಂತು. ಆದರೂ ಅಂದಿನ ಕಥಕರು ತಮ್ಮ ಕಲೆಯನ್ನು ಕಾಪಾಡಿಕೊಂಡು ಬರಲು ಬಹುವಾಗಿ ಶ್ರಮಿಸಿದರು. ಕ್ರಮೇಣ ಸುಖ ಸೌಂದರ್ಯ ವಿಲಾಸಿಗಳಾದ ನವಾಬರು, ದೊರೆಗಳು ಮತ್ತು ಶ್ರೀಮಂತರು, ತಮ್ಮ ವಿನೋದಕ್ಕಾಗಿಯೂ ತಮ್ಮ ಮನೆತನಗಳ ಶುಭ ಸಂತೋಷ ಸಮಾರಂಭಗಳಲ್ಲಿಯೂ ಈ ಕಥಕರನ್ನು ಆಹ್ವಾನಿಸಿ ನೃತ್ಯ ಕಾರ್ಯಕ್ರಮಗಳನ್ನು ಜರುಗಿಸಲು ಆರಂಭಿಸಿದರು. ಕಾಲ ಸರಿದಂತೆ ಕೆಲವು ಕಥಕರು ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ರಾಜರ, ನವಾಬರ ಆಸ್ಥಾನಗಳನ್ನು ಸೇರಿ, ಅಲ್ಲಿ ಅವರ ಆಸ್ಥಾನ ನರ್ತಕರಾಗಿ ನೇಮಕಗೊಂಡರು. ಈ ಕಾರಣದಿಂದ ಕಥಕ್ ಔಧ ದೇಶದ ನವಾಬರ ಮತ್ತು ರಾಜಸ್ಥಾನದ ರಾಜರ ಆಶ್ರಯ ಪಡೆಯಿತು. ಸುಪ್ರಸಿದ್ಧ ಕಥಕರಾದ ಪ್ರಕಾಶ್‌ಜೀ ಮತ್ತು ಕುಟುಂಬದವರು ನವಾಬ್ ಅಸಾಫ್–ಉದ್–ದೌಲನ ಆಡಳಿತದಲ್ಲಿ ಲಖ್ನೋವಿನಲ್ಲಿ ಬಂದು ನೆಲಸಿದರು. ಈ ಶ್ರೇಷ್ಠ ಕಲಾವಿದರ ಪೈಕಿ ಮಹಾರಾಜ ಬಿಂದಾದಿನ್ ಕಥಕ್ ನೃತ್ಯದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಗಳಿಸಿ ಇಡೀ ಭಾರತದಲ್ಲಿ ಪ್ರಖ್ಯಾತಿ ಪಡೆದು ಹೆಸರುವಾಸಿಯಾದ. ಮಹಾರಾಜ್ ಬಿಂದಾದಿನ್ ನವಾಬ್ ವಜೀದ್ ಅಲಿಷಹನ ಸಮಕಾಲೀನ. ಈತ ತನ್ನ ನೃತ್ಯದಲ್ಲಿ ಕಲಾಕೌಶಲವನ್ನೂ ಲಾಲಿತ್ಯವನ್ನೂ ಆಧ್ಯಾತ್ಮಿಕತೆಯ ತುತ್ತತುದಿ ಮುಟ್ಟುವ ಅಭಿನಯವನ್ನೂ ಪ್ರದರ್ಶಿಸುತ್ತಿದ್ದ. ಈ ಮಹಾಪುರುಷ ಪ್ರಶ. 1918ರಲ್ಲಿ ದೈವಾಧೀನನಾದ. ಅಂದಿನಿಂದ ಕಥಕ್ ನೃತ್ಯದ ಹೊಣೆಗಾರಿಕೆ ಬಿಂದಾದಿನನ ಸೋದರಳಿಯ ದಿವಂಗತ ಅಚ್ಚನ್ ಮಹಾರಾಜ್, ಲಚ್ಚು ಮಹಾರಾಜ್ ಮತ್ತು ಶಂಭು ಮಹಾರಾಜ್ ಹಾಗೂ ಬಿಂದಾದಿನನ ಪ್ರೀತಿಯ ಶಿಷ್ಯ ಜಯಪುರದ ದಿವಂಗತ ಪಂಡಿತ ಜಯಲಾಲ್‌ಜೀ ಮತ್ತು ಅವನ ಸೋದರ ಪಂಡಿತ್ ಸುಂದರ ಪ್ರಸಾದ್ ಇವರ ಪಾಲಿಗೆ ಸೇರಿತು. ಇಂಥ ಸಾಂಪ್ರದಾಯಿಕ ಕಲಾಕಾರರ ದುಡಿಮೆಯಿಂದಲೂ ಮತ್ತು ದಿವಂಗತೆ ಮೆಡಾಮ್ ಮೇನಕಾ, ದಿವಂಗತ ರಾಯಗಢದ ಮಹಾರಾಜ ಇವರಿಂದಲೂ ಕಥಕ್ ನೃತ್ಯ ಭಾರತದಲ್ಲಿ ಒಂದು ಅತಿ ಶ್ರೇಷ್ಠ ಶಾಸ್ತ್ರೀಯ ನೃತ್ಯವಾಗಿ ಪ್ರಖ್ಯಾತಿಗೆ ಬಂತು.

ಆಧುನಿಕ ಭಾರತದಲ್ಲಿ ಕಾಣುವ ಕಥಕ್ ಕಾರ್ಯಕ್ರಮಗಳು ಅನೇಕ ಕಲಾವಂತರ ಮತ್ತು ನಾಟ್ಯಾಚಾರ್ಯರ ವ್ಯಕ್ತಿತ್ವದಿಂದಲೂ ಕಲ್ಪನಾಶಕ್ತಿಯಿಂದಲೂ ಅನೇಕ ರೂಪಗಳನ್ನು ತಾಳಿವೆ. ದೇವಸ್ಥಾನಗಳಿಂದ ಹೊರ ಬಂದಿರುವ ಈ ಸಂಪ್ರದಾಯ ಮೂಲಶಾಸ್ತ್ರದಲ್ಲಿ ಒಂದೇ ಆಗಿದ್ದರೂ ಇಂಥವರ ವೈಶಿಷ್ಟ್ಯದಿಂದ ಮಾರ್ಪಾಡುಗಳನ್ನು ಹೊಂದಿ ಅತಿ ಆಕರ್ಷಣೀಯವಾಗಿ ಪ್ರಸಿದ್ಧವಾಗಿದೆ. ಪರಕೀಯರಾದ ಮುಸ್ಲಿಮರ ಮತ್ತು ಬ್ರಿಟಿಷರ ಆಡಳಿತದಿಂದಾಗಿ ವೇಷಭೂಷಣಗಳಲ್ಲಿ, ಪಾರಿಭಾಷಿಕ ಶಬ್ದಗಳಲ್ಲಿ ಮತ್ತು ಪ್ರಾಯೋಗಿಕ ಪದ್ಧತಿಗಳಲ್ಲಿ ಅನೇಕ ಬದಲಾವಣೆಗಳು ಆಗಿವೆ. ದೇಶದಲ್ಲಿ ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಘಟನೆಗಳಾಗಿದ್ದರೂ ಕಥಕ್ ನೃತ್ಯ ಅದರ ಸಂಪ್ರದಾಯವನ್ನು ಕಾಪಾಡಿಕೊಂಡು ಬಂದಿದೆ.

**ಪ್ರಯೋಗ :** ಭರತನಾಟ್ಯದಲ್ಲಿದ್ದಂತೆ ಕಥಕ್‌ನಲ್ಲಿಯೂ ನೃತ್ತ, ನೃತ್ಯ ಮತ್ತು ನಾಟ್ಯಗಳೆಂಬ ವಿಭಾಗಗಳಿವೆ.

ನೃತ್ತ : ಕಥಕ್‌ಕಾರ್ಯಕ್ರಮದಲ್ಲಿ ಮೊಟ್ಟ ಮೊದಲು ನೃತ್ತ ಬರುತ್ತದೆ. ನೃತ್ತವೆಂದರೆ ಭಾವರಹಿತವಾದ, ತಾಳಲಯ ವೈಚಿತ್ರ್ಯವನ್ನು ತೋರ್ಪಡಿಸುವ ಕ್ರಮ. ಭರತನಾಟ್ಯದ ಜತಿಗಳಂತೆ ಕಥಕ್‌ನಲ್ಲಿ ಬೋಲ್‌ಗಳೆಂಬ ನೃತ್ಯ ಕೃತಿಗಳಿವೆ. ಈ ಬೋಲುಗಳನ್ನು ಅವುಗಳ ರೂಪ ವೈಶಿಷ್ಟ್ಯಗಳ ಪ್ರಕಾರ ಹೀಗೆ ವಿಂಗಡಿಸಬಹುದು.

1. ಗಣೇಶವಂದನ : ಇದರಲ್ಲಿ ಬೋಲ್‌ಗಳೊಂದಿಗೆ ಶ್ರೀ ವಿಘ್ನೇಶ್ವರನ ಪ್ರಾರ್ಥನಾ ರೂಪದ ಶಬ್ದಗಳಿವೆ. ಈ ನೃತ್ಯವನ್ನು ಹಳೆಯ ಕಾಲದ ಕಥಕರು ಪ್ರಥಮ ಕಾರ್ಯಕ್ರಮವಾಗಿ ಪ್ರದರ್ಶಿಸುತ್ತಿದ್ದರು. ಈಗ ಇದು ಅಷ್ಟು ರೂಢಿಯಲ್ಲಿಲ್ಲ.

2. ಆಮದ್ : ಇದು ಪ್ರವೇಶ ಎಂಬ ಅರ್ಥವುಳ್ಳ ಉರ್ದು ಶಬ್ದ. ಇದರಲ್ಲಿ ನಟವರಿ ಬೋಲ್‌ಗಳನ್ನೂ ಕೆಲವು ಸಲ ಪಖಾವಜ್ ಅಥವಾ ಪರಿಮೇಲು ಬೋಲುಗಳನ್ನೂ ಸೇರಿಸಿ ನರ್ತಿಸುತ್ತಾರೆ. ಆಮದಿಗೆ ಬರಿ ತಬಲ ಇರಬೇಕೆಂದು ಕೆಲವರ ದೃಢ ಅಭಿಪ್ರಾಯ.

3. ಥಾಟ್ : ಸಹಜವಾಗಿ ಥಾಟ್ ಎಂಬುದು ಒಂದು ಅಲಂಕಾರ ಅಥವಾ ಮನೋಹರವಾದ ವಿನ್ಯಾಸ. ಇದನ್ನು ಮಾಡುವಾಗ ನರ್ತಕ ಮೊದಲು ತನ್ನ ಅವಯವಗಳನ್ನು ವಿಳಂಬ ಕಾಲದಲ್ಲಿ ತಾಳಬದ್ಧವಾಗಿ ಚಲಿಸುತ್ತಾನೆ. ಕಣ್ಣು, ಹುಬ್ಬು, ಕತ್ತು, ಭುಜ, ಕೈ, ಎದೆ, ಮಣಿಕಟ್ಟು ಮುಂತಾದ ಅವಯವಗಳು ಇಂಪಾದ ಲಲಿತವಾದ ಸಾಂಗತ್ಯದಿಂದ ಚಲಿಸುತ್ತವೆ. ನೋಡಲು ಇದು ಸರಳವಾಗಿ ಕಂಡು ಬಂದರೂ ನಿರ್ವಹಿಸಲು ಕಠಿಣ ಸಾಧನೆಯ ಅಗತ್ಯವಿದೆ.

4. ನಟವರಿ : ನಟವರ್ ಎಂಬ ಶಬ್ದ ಶ್ರೀ ಕೃಷ್ಣ ಪರಮಾತ್ಮನ ಒಂದು ಸಾರ್ಥಕ ನಾಮಧೇಯ; ಇದಕ್ಕೆ ನರ್ತಕರಲ್ಲಿ ಅತಿ ಶ್ರೇಷ್ಠನೆಂಬ ಅರ್ಥವಿದೆ. ಬಾಲಕೃಷ್ಣ ಕಾಳೀಯಸರ್ಪದ ತಲೆಯ ಮೇಲೆ ನರ್ತಿಸುವಾಗ ತಾ–ತೈ–ತತ್ ಎಂಬ ಶಬ್ದಗಳು ಬಂದುವೆಂದು ಕೆಲವರು ಹೇಳುತ್ತಾರೆ. ಅದೇ ಕಾರಣದಿಂದಲೋ ಏನೋ ಅನೇಕ ಕಥಕ ನಾಟ್ಯಾಚಾರ್ಯರು ತಾ ಥೈ ತತ್, ಧಿಗಿ, ಧಿಗಿ, ತ್ರಾಂ ತಿಗ್ದ ಮುಂತಾದ ಶಬ್ದಗಳಿರುವ ಬೋಲುಗಳನ್ನು ನಟವರಿ ಬೋಲುಗಳಿಂದ ಪ್ರಕಟಿಸಿದ್ದಾರೆ.

5. ಪರಮೇಲು : ಪರ ಎಂದರೆ ಇತರ ಮತ್ತು ಮೇಲ ಎಂದರೆ ಮಿಲನ. ಇವುಗಳಿಂದ ಉಂಟಾಗುವ ಶಬ್ದವೇ ಪರಮೇಲು. ಅಂದರೆ ಅನೇಕ ತಾಡನೆ ವಾದ್ಯಗಳಿಂದ ಬರುವ ಶಬ್ದಗಳ ಸಂಯೋಜನದಿಂದ ಉದ್ಭವಿಸುವ ನೃತ್ಯವೇ ಪರಮೇಲು. ಆದರೂ ಈ ಪರಮೇಲು ಬೋಲುಗಳಲ್ಲಿ ನಗ್ಗಿ, ತ್ತರಿ ಕುಶುರ್ಝುನಕ್, ಧಿಲ್ಲಾಂಗ, ಝುಗ–ಝುಗ, ದಿವಾಂಗ, ಝುಂಗರ, ಥುಡುಂಗ ಮುಂತಾದ ಸಾಂಪ್ರದಾಯಿಕವಾದ ಹಲವು ಶಬ್ದಗಳೂ ಉಪಯೋಗಿಸಲ್ಪಟ್ಟಿವೆ.

6. ಪರನ್ : ಪಖಾವಜ್ ಎಂಬ ತಾಡನ ವಾದ್ಯದಿಂದ ಉಂಟಾಗುವ ಬೋಲುಗಳಿಗೆ ಪರನ್ ಎಂದು ಹೆಸರು. ಪರನ್ ಶಬ್ದ ಪಥನ್ ಅಥವಾ ಪದಾಂತ (ಅಂದರೆ ಬಾಯಿಪಾಠದ ಕಥನವೆಂಬ ಅರ್ಥವುಳ್ಳ) ಶಬ್ದಗಳಿಂದ ಬಂದಿರಬಹುದು. ಅಸಂಖ್ಯಾತ ವಿಧದ ಪರನ್‌ಗಳು ಈಗಿನ ರೂಢಿಗೆ ಬಂದಿವೆ. ಇವುಗಳಲ್ಲಿ ಅತಿ ಸ್ವಾರಸ್ಯವಾದ ಪರನ್‌ಗಳೆಂದರೆ ಲಯ ವೈಚಿತ್ರ್ಯಗಳನ್ನು ಪ್ರಕಟಿಸುವ 5 ವಿಧವಾದ ಯತಿಗಳು : 1 ಸಮ ಅಂದರೆ ಸರಳ 2 ಗೋಪುಚ್ಛ ಅಂದರೆ ಗೋವಿನ ಬಾಲದ ಹಾಗೆ ಮೊದಲು ವಿಸ್ತಾರವಾಗಿ ವಿಳಂಬ ಕಾಲದಲ್ಲಿದ್ದು ಅನಂತರ ಬಾಲದ ಹಾಗೆ ನೀಳವಾಗಿ ತೀವ್ರ ಗತಿಯಿಂದ ಜಟಿಲ ಲಯದಲ್ಲಿ ಕೊನೆಗೊಳ್ಳುವುದು. 3 ಸ್ರೋತ್‌ಗತಯಿ ಅಂದರೆ ಮೊದಲು ಅತಿ ರಭಸದಿಂದ ಭೋರ್ಗರೆಯುತ್ತ ನದಿಯ ಹಾಗೆ ಆರಂಭವಾಗಿ ವಿಳಂಬವಾಗಿ ಶಾಂತವಾಗಿ ಕೊನೆಗಾಣುವುದು. 4 ಮೃದುಂಗ ಅಂದರೆ ಮೃದಂಗದಂತೆ ಎರಡು ಕೊನೆಗಳೂ ಚೂಪಾಗಿದ್ದು ಮಧ್ಯೆ ವಿಶಾಲವಾಗಿರುವುದು. 5 ಪಿಪೀಲಕ ಅಥವಾ ಡಮರು ಅಂದರೆ ಇರುವೆಯಂತೆ ಅಥವಾ ಡಮರಿನಂತೆ ಎರಡು ಕೊನೆಗಳಲ್ಲಿ ಅಗಲವಾಗಿದ್ದು ಮಧ್ಯೆ ಸೂಕ್ಷ್ಮ ಅಥವಾ ಅತಿ ಸಣ್ಣದಾಗಿರುವುದು.

7. ಕ್ರಮಾಲಯ : ಈ ನೃತ್ತದಲ್ಲಿ ನರ್ತಕರು ತಾಥೈ ಥೈ ತತ್ ಎಂಬ ಶಬ್ದಗಳಿಂದ ಕೂಡಿರುವ ತ್ರಿತಾಳಕ್ಕೆ ಸರಿಯಾಗಿ ಹೆಜ್ಜೆ ವಿನ್ಯಾಸದಿಂದ ತತ್‌ಕಾರಗಳನ್ನು ಮಾಡಿಸಿ ಬೇರೆ ಬೇರೆ ತಾಳಲಯ ವೈಚಿತ್ರ್ಯಗಳನ್ನು ತೋರಿ ಕೊನೆಗೆ ಅತಿ ವೇಗದಿಂದ ಹೆಜ್ಜೆ ವಿನ್ಯಾಸಗಳನ್ನು ಪ್ರದರ್ಶಿಸುತ್ತಾರೆ. ಇದು ನಟವರಿಯ ಒಂದು ವಿಭಾಗವೆಂಬುದರಲ್ಲಿ ಸಂದೇಹವಿಲ್ಲ.

8. ಸಂಗೀತ : ಈ ಪಾರಿಭಾಷಿಕ ಶಬ್ದದ ವಿಚಾರವಾಗಿ ಅನೇಕ ಅಭಿಪ್ರಾಯಗಳಿವೆ. ಆದರೆ ಸಾಧಾರಣವಾಗಿ ನಟವರಿ, ಪರಿಮೇಲು ಮತ್ತು ಪರನ್ ಬೋಲುಗಳನ್ನು ರಾಗ ಸ್ವರಗಳಿಂದ ಸಂಗೀತ ರೂಪದಲ್ಲಿ ಹೇಳಿದರೆ ಅದು ಸಂಗೀತ ಎನಿಸಿ ಕೊಳ್ಳುವುದು. ಬೋಲುಗಳನ್ನು ರಾಗವಾಗಿ ತಾಳ ಲಯಬದ್ಧವಾಗಿ ಹೇಳುವುದೇ ಕಥಕಿನ ಸಂಗೀತವಾಗುತ್ತದೆ.

9. ಕವಿತ : ಇದು ತಾಳಕ್ಕೆ ಸರಿಯಾಗಿ ಹಾಡುವ ಕವಿತೆ. ಇದಕ್ಕೆ ಸಾಮಾನ್ಯವಾಗಿ ನಟವರಿ ಬೋಲುಗಳನ್ನು ಜೋಡಿಸುತ್ತಾರೆ. ಕವಿತೆಯ ಅರ್ಥವನ್ನು ಹಲವಾರು ಹಸ್ತಮುದ್ರೆಗಳಿಂದ ಪ್ರದರ್ಶಿಸಿ ಕಾಲುಗಳಿಂದ ತಾಳಲಯಬದ್ಧವಾದ ಹೆಜ್ಜೆಗಳಿಂದ ಪ್ರಕಟಿಸುತ್ತಾರೆ. ಕವಿತದಲ್ಲಿ ಅಭಿನಯವಿದ್ದರೂ ಇದನ್ನು ನೃತ್ತದಲ್ಲಿ ಸೇರಿಸುತ್ತಾರೆ. ಕಾರಣ ಇದರಲ್ಲಿ ತಾಳ ವೈಶಿಷ್ಟ್ಯವೇ ಪ್ರಾಮುಖ್ಯ ಪಡೆದಿದೆ. ಅಂದರೆ ಇದು ನೃತ್ತಕ್ಕೂ ನೃತ್ಯಕ್ಕೂ ಇರುವ ಒಂದು ಸಂಕಲನ ಅಥವಾ ಸಂಬಂಧ ಎನ್ನಬಹುದು.

ನೃತ್ಯ : ಕಥಕ್‌ನ ಎರಡನೆಯ ಭಾಗವಾದ ನೃತ್ಯದಲ್ಲಿ ಎರಡು ವಿಭಾಗಗಳಿವೆ. ಮೊದಲನೆಯದಾಗಿ ಗತ್‌ಕರಿ ಮತ್ತು ಎರಡನೆಯದಾಗಿ ಅರ್ಥಭಾವ್ ಅಥವಾ ಭಾವ್‌ಬತಾನಾ. ಗತ್ ಎಂಬ ಶಬ್ದ ಗತಿ (ನಡೆ) ಎಂಬ ಅರ್ಥವುಳ್ಳ ಸಂಸ್ಕೃತ ಶಬ್ದದಿಂದ ಬಂದಿದೆ. ಗತ್‌ಕರಿಯಲ್ಲಿ ಭಾವವನ್ನು ಹಾಡಿಗೆ ಸರಿಯಾಗಿ ಅಥವಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರದರ್ಶಿಸುವುದಿಲ್ಲ. ಅಂದರೆ ಇದು ಒಂದು ಮೂಕಾಭಿನಯ. ಗತ್‌ಕರಿಯನ್ನು ನಾಲ್ಕು ವಿಧವಾಗಿ ವಿಂಗಡಿಸಿದ್ದಾರೆ :

1. ಗತ್‌ನಿಕಾಸ್. ಇದರಲ್ಲಿ ನೃತ್ತಕ್ಕೆ ಪ್ರಾಧಾನ್ಯವಿದ್ದುದರಿಂದ ತಾಳಲಯ ಅಧಿಕವಾದರೂ ಭಾವ ಸ್ವಲ್ಪಮಟ್ಟಿಗೆ ಪ್ರದರ್ಶಿತವಾಗುತ್ತದೆ. ಅಂತೆಯೇ ಇದನ್ನು ನೃತ್ಯ ರೂಪವೆನ್ನಬಹುದು. 2. ಗತ್ ಭಾವ್. ಈ ಗತ್‌ನಲ್ಲಿ ಯಾವುದಾದರೂ ಒಂದು ಭಾವ ಅಥವಾ ರಸ ಪ್ರದರ್ಶಿತವಾಗುತ್ತದೆ. 3. ಗತ್ ಪ್ರಸಂಗ ಅಥವಾ ಛೋಟಿ ಗತ್. ಇದರಲ್ಲಿ ಶ್ರೀ ಕೃಷ್ಣಪರಮಾತ್ಮನ ಲೀಲೆಗಳನ್ನು ಸಂಕ್ಷಿಪ್ತವಾಗಿ ಅಭಿನಯಿಸುತ್ತಾರೆ. 4. ಗತ್ ಲೀಲಾ ಅಥವಾ ಬಡೀ ಗತ್– ಇದರಲ್ಲಿ ಭಾರತೀಯ ಪುರಾಣಗಳಿಂದ ಆಯ್ದ ಪ್ರಸಂಗಗಳನ್ನು ವಿವರವಾಗಿ ಅಭಿನಯಿಸುತ್ತಾರೆ. ಎರಡನೆಯದಾದ ಅರ್ಥಭಾವ್ ಅಥವಾ ಭಾವಬತಾನಾವೇ ಕಥಕಿನ ಮುಖ್ಯ ಅಭಿನಯ. ಧ್ರುಪದ್, ಠುಮ್ರಿ, ಭಜನ್, ದಾದರಾ, ಅಥವಾ ಘಜ಼ಲ್ ಮುಂತಾದ ಕೃತಿಗಳನ್ನು ಹಾಡುವಾಗ ಅದರಲ್ಲಿರುವ ಅರ್ಥವನ್ನು ಸೂಕ್ಷ್ಮವಾಗಿಯೂ ಕೂಲಂಕಷವಾಗಿಯೂ

ಚಾತುರ್ಯದಿಂದಲೂ ಕಲಾಕಾರರು ಪ್ರಕಟಿಸುತ್ತಾರೆ. ಮಹಾರಾಜ್ ಬಿಂದಾದಿನ್ ಈ ಅಭಿನಯವಿದ್ಯೆಯಲ್ಲಿ ಅತಿ ನಿಪುಣನಾಗಿದ್ದ. ಪ್ರಸಿದ್ಧ ಕಲಾಕಾರರು ಈ ಭಾಷಾಭಿನಯದಲ್ಲಿ ತಮ್ಮನ್ನು ತಾವೇ ಮರೆತು ಅಭಿನಯ ವಿಷಯದಲ್ಲಿ ಲೀನರಾಗುತ್ತಾರೆ.

ದ್ರುಪದ್ ಕೃತಿಗಳು ಶಾಸ್ತ್ರೀಯ ಹಿಂದೂಸ್ತಾನೀ ಸಂಗೀತದ ಒಂದು ಮುಖ್ಯ ಅಂಶ. ಇವನ್ನು ಹಿಂದೆ ಅಭಿನಯಕ್ಕೆ ಅಳವಡಿಸಿಕೊಳ್ಳುತ್ತಿದ್ದರು. ಠುಮ್ರಿಗಳಲ್ಲಿ ಶೃಂಗಾರರಸಕ್ಕೆ ಪ್ರಾಧಾನ್ಯವಿದೆ. ಅಲ್ಲದೆ ಇದರ ಹಾಡುವಿಕೆಯಲ್ಲಿ ಪ್ರತ್ಯೇಕ ವೈಶಿಷ್ಟ್ಯವಿದೆ. ಈ ಶೈಲಿಯನ್ನು ಲಖ್ನೋದಲ್ಲಿ ನವಾಬನಾಗಿದ್ದ ವಜೀದ್ ಆಲಿಖಾನ್ ಕಲ್ಪಿಸಿದ. ಭಜನ್‌ಗಳನ್ನು ಭಾರತದ ಅನೇಕ ಭಕ್ತರು, ದಾಸರು ಕಲ್ಪಿಸಿದ ಕಾರಣ ಇವುಗಳಲ್ಲಿ ಭಕ್ತಿಭಾವವೇ ಮುಖ್ಯವಾಗಿದೆ. ಕೊನೆಯದಾಗಿ ಘಜ್ಲ್‌ಗಳು ಉರ್ದು ಭಾಷೆಯ ಬೇರೆ ಬೇರೆ ತಾಳಗಳಲ್ಲಿ ರಚಿಸಿದ ಕವನಗಳು.

ನಾಟ್ಯ (ನೃತ್ಯನಾಟಕ) : ಹಿಂದಿನ ಕಥಕ್ ಸಂಪ್ರದಾಯದಲ್ಲಿ ನಾಟ್ಯ ಇದ್ದಿರಬಹುದು. ನವಾಬ್ ವಜೀದ್ ಆಲಿಖಾನ್ ರಚಿಸಿದ ಇಂದ್ರಸಭೆಯನ್ನು ನೃತ್ಯ ನಾಟಕಗಳಿಗೆ ಉಪಯೋಗಿಸುತ್ತಿದ್ದ ವಿಷಯ ತಿಳಿದಿದೆ. ಈಗಲೂ ಪ್ರಚಲಿತವಿರುವ ಬೃಂದಾವನದ ರಾಸಲೀಲೆ ಒಂದು ಕಥಕ್ ರೂಪಿನ ನೃತ್ಯನಾಟಕ.

ಆಧುನಿಕ ಭಾರತದಲ್ಲಿ, ಮುಖ್ಯವಾಗಿ ಉತ್ತರ ಹಿಂದೂಸ್ಥಾನದಲ್ಲಿ ಕಥಕ್ ಸಂಪ್ರದಾಯಕ್ಕೆ ಬಹಳ ಉತ್ತೇಜನವಿದೆ. ಅನೇಕ ಕಲಾವಿದರು ಈ ಶಾಸ್ತ್ರೀಯ ನೃತ್ಯದಲ್ಲಿ ಕಲಾಪ್ರೌಢಿಮೆಯನ್ನು ಗಳಿಸಿ ಪ್ರಶಂಸೆ ಪಡೆದು ತಮಗೂ ಕಲೆಗೂ ದೇಶಕ್ಕೂ ಕೀರ್ತಿತಂದಿದ್ದಾರೆ. **(ಯು.ಎಸ್.ಕೆ.)**

**ಕಥಕಳಿ :** ಈಗಿನ ಕೇರಳ ಪ್ರದೇಶದಲ್ಲಿ ಬಹು ಹಿಂದಿನಿಂದಲೂ ಪ್ರಚಾರದಲ್ಲಿರುವ ಒಂದು ಬಗೆಯ ನಾಟಕ ಪದ್ಧತಿ. ಇದರಲ್ಲಿ ನೃತ್ಯ, ಸಂಗೀತ, ಅಭಿನಯಾದಿಗಳು ವಿಶಿಷ್ಟ ರೀತಿಯಲ್ಲಿ ಹೆಣೆದುಕೊಂಡಿರುತ್ತವೆ.

ಇಂದು ನಾವು ನೋಡುತ್ತಿರುವ ಕಥಕಳಿ 300–400 ವರ್ಷಗಳಿಂದ ನಡೆದು ಬಂದಿದ್ದರೂ ಅದರ ನಿಜವಾದ ಮೂಲ ಸು. 1,500 ವರ್ಷಗಳಷ್ಟು ಹಿಂದೆ ಹೋಗುತ್ತದೆ. ಕಥಕಳಿಯಲ್ಲಿ ಆರ್ಯ ದ್ರಾವಿಡ ಸಂಸ್ಕೃತಿಗಳೆರಡರ ಮಿಲನವನ್ನೂ ಕಾಣಬಹುದಷ್ಟೆ. ಈ ಎರಡು ಸಂಸ್ಕೃತಿಗಳ ನರ್ತನಗಳನ್ನೂ ನಾಟಕಗಳನ್ನೂ ಕರ್ಮನಿಷ್ಠ, ಸಾಮಾಜಿಕ

ಕಥಕಳಿ ಪಾತ್ರಧಾರಿ

ಪ್ರದರ್ಶನಗಳನ್ನೂ ಕೇರಳದ ಆಯಾ ಸ್ಥಳಗಳಿಂದ ಕಥಕಳಿ ಯಥೇಷ್ಟವಾಗಿ ಉಪಯೋಗಿಸಿ ಕೊಂಡಂತಿದೆ. ಕೇರಳದ ಈ ಸಂಸ್ಕೃತಿಯ ಸಮ್ಮಿಲನದಲ್ಲಿ ಉದ್ಭವಿಸಿದ ಚೌಕಿಯಾರ್ ಕೂತ್ತು, ಕುಡಿಯಾಟ್ಟಂ ಎಂಬ ವಿಶಿಷ್ಟ ನೃತ್ಯಗಳೂ ನಾಟಕಗಳೂ ಭಗವತಿಯ ಉಪಾಸನೆಗೆ ಸೇರಿದ ಧಾರ್ಮಿಕ ನೃತ್ಯಗಳಾದ ಮುಟಿಯೆಟ್ಟು, ತೀಯರ್ಾಟ್ಟಂ ಮತ್ತು ತೀಯಾಟ್ಟಂ, ಸಾಮಾಜಿಕ ಪದ್ಧತಿಗೆ ಸೇರಿದ ಶಸ್ತ್ರಕಳಿ ಮತ್ತು ಎಝುಮಟ್ಟು ಕಳಿ ಮುಂತಾದ ವೀರನೃತ್ಯಗಳೂ ಒರಟು ಜಾನಪದ ನಾಟಕಗಳಾದ ಕಂಸನಾಟಕಂ ಮತ್ತು ಮೀನಾಕ್ಷಿ ನಾಟಕಂಗಳಲ್ಲದೆ ಇತ್ತೀಚೆಗೆ ವಿಕಸಿತವಾಗಿ ಸಂಪ್ರದಾಯಕ್ಕೆ ಬಂದ ಕೃಷ್ಣಾಟ್ಟಂ ಮತು ರಾಮನಾಟ್ಯಂ ಎಂಬ ನೃತ್ಯನಾಟಕಗಳೂ ಕಥಕಳಿಯ ಮೇಲೆ ಒಂದಿಲ್ಲ ಒಂದು ರೀತಿಯಲ್ಲಿ ತಮ್ಮ ಪ್ರಭಾವವನ್ನು ಬೀರಿವೆ.

ಚೌಕಿಯಾರ್ ಕೂತ್ತು ಎಂಬುದು ಚೌಕಿಯಾರ್ ಕುಲದವರು ಮಾತ್ರ ಪ್ರದರ್ಶಿಸಬೇಕಾದ ನೃತ್ಯ. ಇದು ಬಹಳ ಧಾರ್ಮಿಕವೂ ಶಾಸ್ತ್ರಸಮ್ಮತವೂ ಆದ ಮನೋರಂಜನೆ. ದೇವಾಲಯಗಳಲ್ಲಿ ನೃತ್ಯಕ್ಕಾಗಿಯೇ ಮೀಸಲಾಗಿದ್ದ ಕೂತಂಬಳಂ ಎಂಬ ಚಿಕ್ಕ ರಂಗಸ್ಥಳದಲ್ಲಿ ಮಾತ್ರ ಈ ಪ್ರದರ್ಶನ ನಡೆಯುತ್ತಿತ್ತು. ಪ್ರದರ್ಶನಕಾರನಾದ ಚೌಕಿಯಾರ್ ಒಬ್ಬ ದೊಡ್ಡ ಕಥೆಗಾರ, ಚತುರ, ವಿವೇಕಿ, ರಸಿಕ, ಹಾಸ್ಯರಸದಿಂದ ಪ್ರೇಕ್ಷಕರನ್ನು ರಂಜಿಸಬಲ್ಲವ. ಅಖ್ಯಾನ ಮುಂದುವರಿದಂತೆ ಕಥೆಯಲ್ಲಿ ಬರುವ ಬೇರೆ ಬೇರೆ ಪಾತ್ರಗಳನ್ನು ಅನನ್ಯಭಾವದಿಂದ ಆತ ವಿಕಟವಾಗಿ ವಿನೋದವಾಗಿ ನಟಿಸುತ್ತಾನೆ. ನಂಬಿಯಾರ್ ಜಾತಿಗೆ ಸೇರಿದವನೊಬ್ಬ ಪ್ರದರ್ಶನದ ಮಧ್ಯೆ ಮಧ್ಯೆ, ಬೇಕಾದ ಸಮಯದಲ್ಲಿ ಮಿಝಾವು ಎಂಬ ಒಂದು ದೊಡ್ಡ ತಾಮ್ರದ ನಗಾರಿಯನ್ನೂ ತಾಳಗಳನ್ನೂ ಬಾರಿಸುತ್ತಾನೆ.

ಕುಡಿಯಾಟ್ಟಂ ಎಂಬುದು ಅದರ ಹೆಸರೇ ತಿಳಿಸುವಂತೆ ಅನೇಕರು ಸೇರಿ ಪ್ರದರ್ಶಿಸುವ ನೃತ್ಯನಾಟಕ. ಇದರಲ್ಲಿ ಪುರುಷರಲ್ಲದೆ ನಂಗಿಯಾರ್ ಸ್ತ್ರೀಯರೂ ಪಾತ್ರವಹಿಸುತ್ತಾರೆ. ಇಲ್ಲಿ ಅಭಿನಯ ಮುಖ್ಯವಾಗಿದ್ದು ಉನ್ನತ ಮಟ್ಟದಲ್ಲಿರುತ್ತದೆ. ಅನೇಕ ವರ್ಷಗಳ ಅನಂತರ ಪ್ರಚಾರಕ್ಕೆ ಬಂದ ಕಥಕಳಿ ಈ ಸಂಪ್ರದಾಯದಿಂದ ಮುಖಾಭಿನಯವನ್ನೂ ಹಸ್ತಾಭಿನಯವನ್ನೂ ರಾತ್ರಿಯೆಲ್ಲ ಪ್ರದರ್ಶಿಸುವ ರೂಢಿಯನ್ನೂ ಕಲಿತಿತು.

ಭಗವತಿಯ ಉಪಾಸನೆಗಾಗಿ ಮಾಡುವ ಧಾರ್ಮಿಕ, ಸಾಮಾಜಿಕ ನೃತ್ಯಗಳು ಕೇರಳದಲ್ಲಿ ಹೇರಳವಾಗಿವೆ. ಅವುಗಳಲ್ಲಿ ಮುಟಿಯೆಟ್ಟು, ತೀಯರ್ಾಟ್ಟಂ ಮತ್ತು ತೀಯಾಟ್ಟಂ ಎಂಬ ಕೆಲವು ನೃತ್ಯಗಳು ಮುಖ್ಯ. ಇಲ್ಲಿ ಭಗವತಿಯ ದಿವ್ಯಗುಣಗಳು ವರ್ಣಿತವಾಗಿರುತ್ತವೆ. ಈ ಪ್ರದರ್ಶನಗಳಲ್ಲಿ ದೇವಾಧಿದೇವತೆಗಳ ಪಾತ್ರಗಳನ್ನೂ ರಕ್ಕಸರಕ್ಕಸಿಯರ ಪಾತ್ರಗಳನ್ನೂ ಮಾಡುವವರು ಪಾತ್ರಕ್ಕನುಸಾರವಾಗಿ ದೇದೀಪ್ಯಮಾನವಾದ, ಸಕಲಾಭರಣಯುಕ್ತ ವೇಷಭೂಷಣಗಳನ್ನೂ ಇಲ್ಲವೆ ಭಯಂಕರವಾದ ಅಸಹ್ಯವಾದ ವೇಷಭೂಷಣಗಳನ್ನೂ ಧರಿಸುತ್ತಾರೆ. ಮುಖವಾಡಗಳ ಉಪಯೋಗ, ಮುಖಕ್ಕೆ ವಿಚಿತ್ರವಾಗಿ ಬಣ್ಣ ಬಳಿದುಕೊಳ್ಳುವುದು. ರಂಗು ರಂಗುಗಳಿಂದ ಕೂಡಿರುವ ಉಡುಪುಗಳು, ಹೊಳೆಯುವ ಕಿರೀಟಗಳು ಇವು ಈ ಕಲೆಯ ಗಮನಾರ್ಹ ವಿಷಯಗಳು. ಇವನ್ನೇ ಮುಂದಕ್ಕೆ ಕೃಷ್ಣಾಟ್ಟಂನಲ್ಲಿ ಅಳವಡಿಸಿಕೊಂಡರು.

ಮಧ್ಯಕಾಲದಲ್ಲಿ ಕಥಕಳಿ ಧಾರ್ಮಿಕ, ಸಾಮಾಜಿಕ ಮತ್ತು ವೀರನೃತ್ಯಗಳಿಂದ ಕೆಲವು ಅಂಶಗಳನ್ನು ಪಡೆಯಿತು. ಧಾರ್ಮಿಕ, ಸಾಮಾಜಿಕ ನೃತ್ಯಗಳಾದ ಯಾತ್ರಕಳಿ, ಶಸ್ತ್ರಕಳಿ, ಸಂಘಕಳಿ ಮತು ಎಝುಮತ್ತುಕಳಿ ಇವೆಲ್ಲವೂ ಒಂದಕ್ಕೆ ಇನ್ನೊಂದು ಸಂಬಂಧವಿರುವ ನೃತ್ಯಗಳು. ಇವನ್ನು ಸ್ವೇಚ್ಛೆಯಾಗಿ ಅರ್ಪಿಸುವುದೇ ರೂಢಿ. ಆದ್ದರಿಂದ ಅನೇಕ ಜನ ಒಟ್ಟುಗೂಡಿ ತಮ್ಮ ವಿನೋದಕ್ಕೋಸ್ಕರ ಖಡ್ಗ ಪ್ರಯೋಗ ಪ್ರದರ್ಶನದಲ್ಲೋ ಮೂಕನಾಟಕಗಳಲ್ಲೋ ಭಾಗವಹಿಸುತ್ತಾರೆ. ಇವು ಹಾಸ್ಯಯುಕ್ತವಾಗಿರುವಂತೆ ದುಃಖಮಯವಾಗಿಯೂ ಇರುತ್ತದೆ. ಜಾನಪದ ನೃತ್ಯಗಳಾದ ಕಂಸನಾಟಕಂ, ಮಿನಾಕ್ಷಿ ನಾಟಕಗಳಿಂದ ಕಥಕಳಿ ಕೆಲವು ಅಂಶಗಳನ್ನು ಪಡೆದಿದೆ. ಕೃಷ್ಣಾಟ್ಟಂ ಮತ್ತು ರಾಮನಾಟ್ಟಂ ಕಲೆಗಳ ಮುಂದೆ ಈ ವಿಧದ ನೃತ್ಯಗಳು ಪಾಲ್ಘಾಟಿನಲ್ಲೂ ಸುತ್ತುಮುತ್ತಲಿನ ತಾಲ್ಲೂಕುಗಳಲ್ಲೂ ಪ್ರಚಾರದಲ್ಲಿದ್ದುವು.

ಕೇರಳದಲ್ಲಿ ಜನಪ್ರಿಯವಾಗಿರುವ ಓಟಂ ತುಳ್ಳಲ್, ಪರಯನ್ ಮತ್ತು ಸೀತಂಕನ್‌ತುಳ್ಳಲ್‌ಗಳನ್ನು ಕುಂಜನ್ ನಂಬಿಯಾರಿ ಎಂಬ ಒಬ್ಬ ಮಹಾವ್ಯಕ್ತಿ ನಿರ್ಮಿಸಿದ. ಅಂಬಲಪುಝುದ ರಾಜನ ಆಡಳಿತದಲ್ಲಿದ್ದ ಈ ಕುಂಜನ್ ನಂಬಿಯಾರಿ ಒಬ್ಬ ದೊಡ್ಡ ಕವಿಯಾಗಿದ್ದು ಮಲಯಾಳಂ ಕವಿತಾ ಸಾಹಿತ್ಯದ ಮೇಲೆ ವಿಶೇಷ ಪ್ರಭಾವ ಬೀರಿದ. ಸರಳ ಮಲಯಾಳಿಯಲ್ಲಿ ಈತ ನಟಿಸಲೆಂದು ಬರೆದ ಸಾಹಿತ್ಯ ಅಂದಿನ ಧಾರ್ಮಿಕ, ಸಾಮಾಜಿಕ ಸಮಸ್ಯೆಗಳನ್ನು ಚೆನ್ನಾಗಿ ವಿಶ್ಲೇಷಿಸುತ್ತದೆ.

ತುಳ್ಳಲ್ ಏಕವ್ಯಕ್ತಿನೃತ್ಯವಾಗಿದ್ದು ದೇವಾಲಯಗಳಲ್ಲಿ ಮದುವೆ ಸಂದರ್ಭಗಳಲ್ಲಿ ಇಲ್ಲವೇ ಖಾಸಗಿ ಸಂದರ್ಭಗಳಲ್ಲಿ ಪ್ರದರ್ಶಿತವಾಗುತ್ತದೆ. ನೃತ್ಯಗಾರ ಅಪೂರ್ವ ಕಲ್ಪನಾಶಕ್ತಿಯುಳ್ಳವನೂ ಮನಸೂರೆಗೊಳ್ಳುವವನೂ ಆಗಿರುತ್ತಾನೆ. ವೇಷಭೂಷಣಗಳೂ ಮುಖಬಣ್ಣಗಳೂ ಕಥಕಳಿಯಿಂದ ಬೇರೆಯಾಗಿರುತ್ತವೆ. ಪಕ್ಕವಾದ್ಯಕ್ಕೆ ಒಂದು ಚಿಕ್ಕ ಮದ್ದಳೆಯೂ ಒಂದು ಜೊತೆ ತಾಳಗಳೂ ಇರುತ್ತವೆ. ನೃತ್ಯಗಾರ ಸಾಮಾನ್ಯವಾಗಿ ತಾನೇ ಹಾಡಿ ಕುಣಿಯುತ್ತಾನೆ. ಪ್ರದರ್ಶನದ ಮಧ್ಯೆ ನೃತ್ಯಗಾರ ಕೆಲವು ತೀವ್ರಗತಿಯ ಕಾಲ್ಚಲನೆಯನ್ನೂ ನೃತ್ಯವಿಧಾನಗಳನ್ನೂ ಮಾಡಿ ವಿರಾಮ ಪಡೆಯುತ್ತಾನೆ. ಪಕ್ಕವಾದ್ಯದವರು ಮಾತ್ರ ಸತತವಾಗಿ ಹಿನ್ನೆಲೆ ಸಂಗೀತ ಒದಗಿಸುತ್ತಾರೆ.

17ನೆಯ ಶತಮಾನದ ಮಧ್ಯದಲ್ಲಿ ಕಲ್ಲೀಕೋಟೆಯ ಸ್ಸಾಮೊರಿನ್ ಆದ ಮನವೇದ ನಿರ್ಮಿಸಿದ ಕೃಷ್ಣಾಟ್ಟಂ ಇಂದಿನತನಕ ತನ್ನ ಹಳೆಯ ರೂಪದಲ್ಲೇ ಉಳಿದುಬಂದಿದೆ. ಇದರ ಸಾಹಿತ್ಯ ಸಂಸ್ಕೃತ ಭಾಷೆಯಲ್ಲಿ ಕೃಷ್ಣಪದಿ ಅಥವಾ ಕೃಷ್ಣ ಗೀತೆಯೆಂಬ ಹೆಸರಿನಲ್ಲಿದೆ. ಇದು ಜಯದೇವನ ಗೀತಗೋವಿಂದದ ಚತುರ ಅನುಕರಣೆಯೆಂಬುದು ಸುಸ್ಪಷ್ಟವಾಗಿದೆ. ಕೃಷ್ಣಾಟ್ಟಂ ನಾಟಕ 8 ರಾತ್ರಿಗಳಲ್ಲಿ ಪ್ರದರ್ಶಿತವಾಗುತ್ತದೆ. ಈ ಪ್ರದರ್ಶನ ಶ್ರೀಕೃಷ್ಣಪರಮಾತ್ಮನ ಜನನದಿಂದ ಆರಂಭವಾಗಿ ಅವನ ಲೀಲಾಪ್ರಸಂಗಗಳನ್ನೆಲ್ಲ ಆವರಿಸಿಕೊಂಡು ಕೊನೆಗೆ ಸ್ವರ್ಗಾರೋಹಣದಲ್ಲಿ ಮುಕ್ತಾಯವಾಗುತ್ತದೆ. ಈ ನಾಟಕ ನೃತ್ಯನಾಟಕದ ರೂಪದಲ್ಲಿದ್ದು ಕಥಕಳಿಯ ವೇಷಭೂಷಣಗಳಿಗೂ ಬಣ್ಣ ವೈವಿಧ್ಯಕ್ಕೂ ಹೊಂದುತ್ತದೆ. ಕೆಲವು ಪಾತ್ರಗಳಿಗೆ ಬಣ್ಣ ಬಳಿದು ಮರದ ಮುಖವಾಡಗಳನ್ನು ಉಪಯೋಗಿಸುತ್ತಾರೆ. ಅಭಿನಯ ಮತ್ತು ಹಸ್ತವಿನ್ಯಾಸಗಳು ಕಥಕಳಿಯಲ್ಲಿನಷ್ಟು ವಿಕಾಸಗೊಂಡಿಲ್ಲ.

ರಾಮನಾಟ್ಟಂ ಎಂಬ ಇನ್ನೊಂದು ವಿಧದ ನೃತ್ಯನಾಟಕದ ನಿರ್ಮಾಣಕ್ಕೆ ಕೃಷ್ಣಾಟ್ಟಂ ಸ್ಫೂರ್ತಿಯಿತ್ತಿತು. 17ನೆಯ ಶತಮಾನದ ಕೊನೆಯಲ್ಲಿ ಕೊಟ್ಟರಕರ ಎಂಬ ಒಂದು ಚಿಕ್ಕ ಪ್ರದೇಶವನ್ನು ಆಳುತ್ತಿದ್ದ ತಂಪುರನ್ ಎಂಬಾತ ನೆರೆ ಪ್ರದೇಶವಾಗಿದ್ದ ಕಲ್ಲೀಕೋಟೆಯ ಸ್ಸಾಮೊರಿನ್ ಆದ ಮನವೇದನಲ್ಲಿ ಅವನ ಕೃಷ್ಣಾಟ್ಟಂ ನೃತ್ಯಗಾರನ ಪಂಗಡವನ್ನು ಅಪೇಕ್ಷಿಸಿ ಕರೆಕಳುಹಿಸಿದನಂತೆ. ಆದರೆ ಮನವೇದ ಇದಕ್ಕೆ ಒಪ್ಪಲಿಲ್ಲ. ಈ ಆಚರಣೆಯಿಂದ ಕುಪಿತನಾದ ತಂಪುರನ್ ಒಡನೆಯೇ ಆವೇಶ ಉತ್ಸಾಹಗಳಿಂದ ಹೊಸ ತರಹದ ನೃತ್ಯನಾಟಕವನ್ನು ನಿರ್ಮಿಸಲು ಅಣಿ ಮಾಡಿದ. ಕ್ರಮೇಣ ಆತ ಕಲ್ಪಿಸಿದ ಕಲೆ ರಾಮನಾಟ್ಟಂ ಎಂಬ ಹೆಸರಿನಿಂದ ಮೆರೆಯಿತು. ರಾಮಾಯಣವೇ ರಾಮನಾಟ್ಟಂ ನಾಟಕದ ಕಥಾವಸ್ತು. ದಶರಥ ಮಾಡಿದ ಯಾಗದಿಂದ ಆರಂಭವಾಗಿ, ಪುತ್ರೋತ್ಸವ ಮುಂತಾದ ಸನ್ನಿವೇಶಗಳಿಂದ ಸಾಗಿ ಕೊನೆಗೆ ಶ್ರೀರಾಮ ಲಂಕೆಯನ್ನು ಗೆಲ್ಲುವುದರಲ್ಲಿ ಕಥೆ ಮುಗಿಯುತ್ತದೆ. ರಾಮನಾಟ್ಟಂನಲ್ಲಿ ಮುಖಭಾವಗಳಿಗೂ ಹಸ್ತಮುದ್ರೆಗಳಿಗೂ ಹೆಚ್ಚಾದ ಪ್ರಾಧಾನ್ಯವಿದೆ. ಮುಖವಾಡಗಳನ್ನು ಬಿಟ್ಟು ಮುಖಕ್ಕೆ ಪರಿಷ್ಕಾರವಾದ ಬಣ್ಣವೈವಿಧ್ಯದ ಲೇಪನ ಮಾಡುವುದು ಇಲ್ಲಿ ಕಾಣಬಹುದು. ಉತ್ತಮ ಸಾಹಿತ್ಯವೇ ಈ ನೃತ್ಯನಾಟಕದ ವೈಶಿಷ್ಟ್ಯ. ಸಂಸ್ಕೃತ ಭಾಷೆಯ ಪ್ರಭಾವಕ್ಕೊಳಗಾಗಿದ್ದ ಮಲಯಾಳಂ ಭಾಷೆಯಲ್ಲಿಯೇ ಇದರ ಸಾಹಿತ್ಯ ನಿರ್ಮಾಣವಾಗಿದೆ.

ಕೃಷ್ಣಾಟ್ಟಂ ಕೃಷ್ಣಲೀಲೆಗಳನ್ನು ವಿವರಿಸುತ್ತಿತ್ತು. ರಾಮನಾಟ್ಯಂ ರಾಮಲೀಲೆಗಳನ್ನು ವಿವರಿಸುತ್ತಿತ್ತು. ಕಾಲ ಸರಿದಂತೆ ಅದೇ ವಿಧದ ಇನ್ನೂ ಇತರ ನಾಟಕಗಳು ಪ್ರಚಾರಕ್ಕೆ ಬಂದುವು. ನಿರೂಪಣೆಗೆ ಮಹಾಭಾರತದ ಕಥೆಗಳನ್ನೋ ಭಾಗವತದಲ್ಲಿನ ಪ್ರಸಂಗಗಳನ್ನೋ ಶಿವಪುರಾಣದ ಸಂದರ್ಭಗಳನ್ನೋ ಅಳವಡಿಸಿಕೊಂಡರು. ಈ ವ್ಯವಹಾರದ ಹಾದಿಯಲ್ಲಿ ರಾಮನಾಟ್ಯಂ ಕಲೆ ಬಹುಮುಖ್ಯವಾಗಿ ಅಭಿವೃದ್ಧಿಯಾಗಿ ಕಥಕಳಿಯ ಹುಟ್ಟನ್ನು ಕಂಡಿತು.

**ಕಥಕಳಿ ಸಾಹಿತ್ಯ :** ಕಥಕಳಿ ಶಾಸ್ತ್ರದ ವಿಚಾರವಾಗಿ ಮಲಯಾಳಿ ಭಾಷೆಯಲ್ಲಿ ಬರೆದ ಹಸ್ತಲಕ್ಷಣದೀಪಿಕಾ ಎಂಬ ಒಂದು ದೊಡ್ಡ ಗ್ರಂಥದಲ್ಲಿ ಮುದ್ರೆಗಳನ್ನೂ ಅವುಗಳ ಉಪಯೋಗಗಳನ್ನೂ ಕೂಲಂಕಷವಾಗಿ ವರ್ಣಿಸಲಾಗಿದೆ.

ಕಥಕಳಿ ನಾಟಕಗಳಲ್ಲಿ ಪ್ರಖ್ಯಾತವಾದ ಕೃತಿಗಳನ್ನು ಅರಸರು ಬರೆದರು. ಇವರಲ್ಲಿ ಕೆಲವು ಬರಹಗಾರರು ನೃತ್ಯಕಲಾ ಪ್ರವೀಣರಾಗಿದ್ದು ಕಥಕಳಿ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು. 1665–1743ರ ಅವಧಿಯಲ್ಲಿ ಆಳಿದ ಕೊಟ್ಟಾಯಂ ರಾಜನಾದ ತಂಪುರನ್ ಈ ಸಾಹಿತ್ಯ ನಿರ್ಮಾಪಕರಲ್ಲಿ ಮೊದಲಿಗ. ಸ್ವಯಂ ನಟನೂ ನೃತ್ಯಗಾರನೂ ಆದ ಈತ ಬಕವಧ, ಕಾಲ್ಕೇಯವಧ, ತ್ರಿಮಿರವಧ ಮತ್ತು ಕಲ್ಯಾಣ ಸೌಗಂಧಿಕಂ ಎಂಬ ನಾಲ್ಕು ಅಟ್ಟಕಥೆಗಳನ್ನು ಬರೆದ. ಇವೆಲ್ಲವೂ ಮಹಾಭಾರತದ ಸನ್ನಿವೇಶಗಳಿಗೆ ಸಂಬಂಧಿಸಿದವು. 1724–28ರಲ್ಲಿ ತಿರುವಾಂಕೂರಿನ ಮಹಾರಾಜನಾಗಿದ್ದ ಕಾರ್ತಿಕ ತಿರುನಾಳ್ ಇನ್ನೊಬ್ಬ ಕವಿ. ಹೆಸರಾಂತ ಯೋಧನೂ ಆಡಳಿತಗಾರನೂ ಆಗಿದ್ದಂತೆ ಈತ ಘನವಿದ್ವಾಂಸನೂ ಬರಹಗಾರನೂ ಆಗಿದ್ದ. ಈತನ ನಿಜವಾದ ಹೆಸರು ಬಲರಾಮ ವರ್ಮ. ಈ ಹೆಸರಿನಲ್ಲಿ ಈತ ಸಂಸ್ಕೃತ ಭಾಷೆಯಲ್ಲಿ ನಾಟ್ಯದ ಮೇಲೆ ಬಲರಾಮ ಭಾರತ ಎಂಬ ಒಂದು ದೊಡ್ಡ ಗ್ರಂಥವನ್ನು ಬರೆದ. ಅಲ್ಲದೆ ಸುಭದ್ರಾಹರಣ, ನರಕಾಸುರವಧ, ಗಂಧರ್ವವಿಜಯಂ, ರಾಜ ಸೂಯಂ, ಬಕವಧ, ಪಾಂಚಾಲಿ ಸ್ವಯಂವರಂ ಮತ್ತು ಕಲ್ಯಾಣಸೌಗಂಧಿಕಂ ಎಂಬ ಬೇರೆ 7 ನಾಟಕಗಳನ್ನೂ ಈತ ಬರೆದಿದ್ದಾನೆ. ಇವನ ಸಂಬಂಧಿಕನಾದ ರಾಜಕುಮಾರ ಅಸ್ವತೀ ತಿರುನಾಳನೂ ಅದ್ವಿತೀಯ ಕವಿ. ಈತ ಪೂತನ ಮೋಕ್ಷಂ, ಅಂಬರೀಷ ಚರಿತಂ, ಪುಂಡರೀಕವಧ ಮತ್ತು ರುಕ್ಮಿಣೀ ಸ್ವಯಂವರ ಎಂಬ ನಾಲ್ಕು ಕಥಕಳಿ ನಾಟಕಗಳನ್ನು ಬರೆದಿದ್ದಾನೆ. 1813–47ರ ಅವಧಿಯಲ್ಲಿ ಸ್ವಾತಿ ತಿರುನಾಳ್ ರಾಮವರ್ಮ ತಿರುವಾಂಕೂರಿನ ಮಾಹಾರಾಜನಾಗಿದ್ದ. ಈ ವ್ಯಕ್ತಿ ಸಂಗೀತಪ್ರಿಯನೂ ಕಲಾಪ್ರೇಮಿಯೂ ಆಗಿದ್ದು ತನ್ನ ಅರಮನೆಯ ಆಸ್ಥಾನಕ್ಕೆ ದೇಶದಾದ್ಯಂತದ ನೃತ್ಯಗಾರರನ್ನೂ ಸಂಗೀತ ವಿದ್ವಾಂಸರನ್ನೂ ಇತರ ಕಲಾವಿದರನ್ನೂ ಆಹ್ವಾನಿಸಿ, ಪ್ರೋತ್ಸಾಹಿಸಿ ಗೌರವಿಸುತ್ತಿದ್ದ. ಕಥಕಳಿ ಕಲೆಗೋಸ್ಕರ ಈತ ಸು. 75 ಹಾಡುಗಳನ್ನು ರಚಿಸಿದ್ದಾನೆ. ಈತನ ಕಾಲದಲ್ಲಿದ್ದ (1783–1863) ಇರಯಿಮ್ಮನ್ ತಂಪಿ ಎಂಬ ಇನ್ನೊಬ್ಬ ಶ್ರೇಷ್ಠ ಕವಿ ಕೀಚಕವಧ, ದಕ್ಷಯಾಗಂ ಮತ್ತು ಉತ್ತರಾ ಸ್ವಯಂವರಂ ಎಂಬ ಮೂರು ಅಮೋಘ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾನೆ.

ಇರಯಿಮ್ಮನ್ ತಂಪಿಯ ಮಗಳಾದ ತಂಕ್ಕಚೀಯಾ ತಂದೆಯ ಸಾಹಿತ್ಯಾಭಿರುಚಿಯನ್ನು ಪಡೆದು ಶ್ರೀಮತಿ ಸ್ವಯಂವರಂ, ಪಾರ್ವತೀ ಸ್ವಯಂವರಂ ಮತ್ತು ಮಿತ್ರಸಹ ಮೋಕ್ಷಂ ಎಂಬ ಮೂರು ನಾಟಕಗಳನ್ನು ರಚಿಸಿದ್ದಾಳೆ.

ಕೇರಳದ ಅರಸರ ಆಡಳಿತದಲ್ಲಿ ಮತ್ತು ಅವರ ಆಶ್ರಯದಲ್ಲಿ ಕಥಕಳಿ ಬೆಳೆದು ಅಭಿವೃದ್ಧಿ ಪಡೆಯಿತು. ಸು. 19ನೆಯ ಶತಮಾನದ ನಡುಗಾಲದವರೆಗೆ ಈ ಸಂಪ್ರದಾಯ ಉತ್ತಮ ಸ್ಥಿತಿಯಲ್ಲಿತ್ತು. ಅನಂತರ ಸಾಮಾನ್ಯವಾಗಿ ದೇಶೀಯ ಕಲೆಗಳಿಗಿದ್ದ ಪ್ರೋತ್ಸಾಹ ಕಡಿಮೆಯಾಯಿತಾಗಿ ಈ ಕಲೆಯೂ ಅವನತಿ ಹೊಂದಿತು.

ಸು. ಒಂದು ಶತಮಾನದವರೆಗೆ ಕಥಕಳಿ ಕಾತರತೆಯ ಸ್ಥಿತಿಯಲ್ಲಿ ಉಳಿದುಕೊಂಡು ಬಂದಿತೆನ್ನಬಹುದು. ಅಂದು ಯಾವ ಕಲಾವಿದನಿಗೂ ಯಾವ ಕಲಾ ಪೋಷಕನಿಗೂ ಭವಿಷ್ಯದಲ್ಲಿ ಭರವಸೆ ಇರಲಿಲ್ಲ. ಹೀಗೆ ಕಲೆ ಪೂರ್ಣ ಅಳಿಯುವ ಸ್ಥಿತಿಗೆ ಬಂದಾಗ ಮಹಾಕವಿ ವಲ್ಲತ್ತೋಳ್ ನಾರಾಯಣ ಮೇನನ್ ಎಂಬ ಧೀರ ಕಲೆಯ ರಕ್ಷಕನಾಗಿ ಮುಂದೆ ಬಂದ. ತನ್ನ ತಂದೆಗಿದ್ದ ಕಲಾಭಿರುಚಿಯ ದೆಸೆಯಿಂದಾಗಿ ವಲ್ಲತ್ತೋಳ್ ಕಥಕಳಿ ಕಲೆಯ ಅಂದವನ್ನು ಕಂಡ. ಯಾರನ್ನೂ ಸಹಾಯಕ್ಕಾಗಿ ಕೈಯೊಡ್ಡಿ ಬೇಡದೆ, ಲಾಟರಿ ಮೊದಲಾದವನ್ನು ನಡೆಸಿ ಸು. 75,000 ರೂಪಾಯಿಗಳನ್ನು ಶೇಖರಿಸಿ ಆ ನಿಧಿಯಿಂದ ಆತ ಕಥಕಳಿ ಕಲೆಗೆ ಕೇರಳ ಕಲಾಮಂಡಲಂ ಎಂಬ ಒಂದು ನೆಲೆಯನ್ನು ಸ್ಥಾಪಿಸಿದ (1930) ಅಳಿಯುತ್ತಿದ್ದ ಕಲೆಗಳ ಶೋಧನೆ ಮಾಡಿ ಅವಕ್ಕೆ ಹೊಸ ಜೀವಕೊಟ್ಟು ಅಭಿವೃದ್ಧಿ ಮಾಡುವುದೇ ಈ ಮಂಡಲದ ಧ್ಯೇಯ. ಈ ಧ್ಯೇಯ ಫಲಿಸಿ ಕಥಕಳಿ, ಮೋಹಿನೀ ಅಟ್ಟಂ, ಓಟಂ ತುಳ್ಳಲ್ ಮೊದಲಾದ ಸಂಪ್ರದಾಯಗಳು ಪುನರುಜ್ಜೀವಿತವಾಗಿ ಹೊಸ ಕಳೆಯನ್ನು ಪಡೆದುವು, ಕಥಕಳಿ ಕಲೆಯ ಶ್ರೇಷ್ಠ ಗುರುಗಳೆಲ್ಲರನ್ನೂ ಆಹ್ವಾನಿಸಿ ಅಧ್ಯಾಪಕರನ್ನಾಗಿ ಆರಿಸಲಾಯಿತು. ಇವರಲ್ಲಿ ತಕಾಝು ಕುಂಜು ಕುರುಪ್, ಕವಲಪ್ರನಾರಾಯಣ ನಾಯರ್ ಮತ್ತು ಪಟ್ಟಿಕಂತೋಟಿ ರಾವುಣ್ಣಿ ಮೇನನ್ ಇವರು ಪ್ರಖ್ಯಾತರು.

ಸ್ಥಾಪಿತವಾದ ದಿನದಿಂದ ಕೇರಳ ಕಲಾಮಂಡಲ ಕಥಕಳಿ ಕಲೆಗೆ ಹೇರಳವಾಗಿ ದುಡಿದು ಸೇವೆ ಸಲ್ಲಿಸುತ್ತಿದೆ. ಇವರ ಸತತ ಸೇವೆಯ ಫಲವಾಗಿ ಈ ಸಂಘಕ್ಕೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯಿಂದ ಧನಸಹಾಯ ಒದಗಿದೆ; ಅಲ್ಲದೆ ಪಂಡಿತ ಜವಹರಲಾಲ್ ನೆಹರು ಈ ಸಂಘದ ಯೋಗ್ಯತೆಯನ್ನು ಮನಗಂಡು 50,000 ರೂಪಾಯಿಗಳ ಧನಸಹಾಯವನ್ನು ನೀಡಿದ್ದರು.

**ಕಥಕಳಿ ಅಭ್ಯಾಸ :** ಕಥಕಳಿಯ ಸಾಧನೆ ಒಂದು ಯೋಗಾಭ್ಯಾಸವೇ. ಸುಂದರವಾದ ಹಾಗೂ ಜಟಿಲವಾದ ಈ ಕಲೆಯನ್ನು ಕರಗತ ಮಾಡಿಕೊಳ್ಳಬೇಕಾದರೆ ಒಬ್ಬ ವಿದ್ಯಾರ್ಥಿ ತನ್ನ ಸುಖ ದುಃಖಗಳನ್ನು ಮರೆತು, ಒಂದು ವಿಧದ ಹಠಯೋಗವನ್ನೇ ಮಾಡಬೇಕಾಗುತ್ತದೆ. ವಿದ್ಯಾರ್ಥಿಯೊಬ್ಬ ಸಾಮಾನ್ಯವಾಗಿ ತನ್ನ 7ನೆಯ ಅಥವಾ 8ನೆಯ ವಯಸ್ಸಿನಲ್ಲಿಯೇ ಗುರುಗಳೊಬ್ಬರಲ್ಲಿ ಪಾಠವನ್ನು ಆರಂಭಿಸುತ್ತಾನೆ. ಈ ಸಂಪ್ರದಾಯ ನಮಗೆ ಪ್ರಾಚೀನದ ಗುರುಕುಲವಾಸದ ನೆನಪನ್ನು ತರುತ್ತದೆ. ಇಲ್ಲಿ ಗುರುಗಳ ಅನುಗ್ರಹಕ್ಕೆ ಪಾತ್ರನಾಗಲು ವಿದ್ಯಾರ್ಥಿ ಎಲ್ಲ ವಿಧದಿಂದಲೂ ಅವರ ಸೇವೆಯನ್ನು ಮಾಡಬೇಕಾಗುತ್ತದೆ. ಗುರುಗಳ ಕಟಾಕ್ಷ ಬಿದ್ದು ಎಷ್ಟು ವಿದ್ಯೆಯನ್ನು ಅವರು ದಾನ ಮಾಡುವರೋ ಅಷ್ಟನ್ನು ಸ್ವೀಕರಿಸುವುದು ವಿದ್ಯಾರ್ಥಿಯ ಕರ್ತವ್ಯ.

**ಮೈಸಾಧಕರಂ :** ಕಥಕಳಿ ನೃತ್ಯಗಾರನಿಗೆ ಅವಯವಗಳೂ ಮೈಕಟ್ಟೂ ತುಂಬ ಮೆದುವಾಗಿರಬೇಕು. ಅದಕ್ಕಾಗಿ ಅವನು ಕಸರತ್ತು ಮಾಡಿ ಮೊದಲು ತನ್ನ ಮೈಯನ್ನು ಮೆದು ಮಾಡಿಕೊಳ್ಳುತ್ತಾನೆ. ಆಮೇಲೆ ಕಲೆಯ ಮೊದಲ ಭಂಗಿಯನ್ನೂ ಕಥಕಳಿಗೆ ಸೇರಿದ ಕೆಲವು ಕಸರತ್ತುಗಳನ್ನೂ ಕಲಿಯುತ್ತಾನೆ. ಅನಂತರ ಮುಖ್ಯವಾದ 5 ನಮಸ್ಕಾರಗಳ ಅಭ್ಯಾಸವಾಗುತ್ತದೆ. ಇಷ್ಟು ಮಾಡಿದಲ್ಲಿ ವಿದ್ಯಾರ್ಥಿಯ ಅಂಗಾಂಗಗಳು ಬೇಕಾದ ರೀತಿಯಲ್ಲಿ ಬಳುಕಿ ಬಾಗುವಂತಾಗುತ್ತದೆ. ಈಗ ಅವನ ಸೊಂಟಕ್ಕೆ ಒಲವೂ ಶಕ್ತಿಯೂ ಬರುವಂತೆ ಮತ್ತು ಕಥಕಳಿಯ ಮುಖ್ಯ ಸ್ಥಾನಕಗಳಿಗೆ ಅನುಕೂಲವಾಗುವಂತೆ ಒಂದು ವಿಶೇಷ ರೀತಿಯ ಅಂಗಮರ್ದನವನ್ನು ಮಾಡುತ್ತಾರೆ. ಈ ಮರ್ದನ ತುಂಬ ನೋವನ್ನುಂಟು ಮಾಡುತ್ತದಾದರೂ ಇದಿಲ್ಲದಿದ್ದರೆ ನೃತ್ಯಕ್ಕೆ ಬೇಕಾಗುವ ಬಳುಕು ಬಾಗುಗಳು ಬರುವುದು ಅಸಾಧ್ಯ. ಮೊದಲು ವಿದ್ಯಾರ್ಥಿಯನ್ನು ಕಪ್ಪೆಯಾಕಾರದಲ್ಲಿ ಮಲಗಿಸಿ ಅಂಗಮರ್ದಕ ಮೇಲೆ ಕಟ್ಟಿದ ಒಂದು ಅಡ್ಡ ಮರವನ್ನು ಕೈಗಳಿಂದ ಹಿಡಿದುಕೊಂಡು ತನ್ನ ಕಾಲಿನಿಂದ ವಿದ್ಯಾರ್ಥಿಯ ತೊಡೆಗಳನ್ನೂ ಕಾಲುಗಳನ್ನೂ ಮರ್ದಿಸುತ್ತಾನೆ. ಹೊತ್ತು ಹೋದಂತೆ ಮರ್ದನದ ಒತ್ತಡವನ್ನು ಹೆಚ್ಚಿಸುತ್ತಲೇ ಇರುತ್ತಾನೆ. ಈ ಮರ್ದನ ಬೆನ್ನಕಡೆಯಿಂದಲೂ ಎದೆಯ ಕಡೆಯಿಂದಲೂ ನಡೆಯುತ್ತದೆ. ಈ ಕ್ರಿಯೆ ಪೂರ್ಣವಾದಾಗ ವಿದ್ಯಾರ್ಥಿಯ ಅಂಗಾಂಗಗಳು ಸೊಂಟ ಮುಂತಾದವು ಹೇಳಿದಂತೆ ಬಾಗುತ್ತವೆ.

**ಕಾಲಸಾಧಕಂ :** ಈ ಮೈಸಾಧನೆ ಮುಗಿದ ಮೇಲೆ ಕಾಲ್ಚಲನೆಗಳ ಅಭ್ಯಾಸವನ್ನೂ ಜೊತೆಗೆ ಬೇರೆ ಬೇರೆ ವಿಧದ ಬಾಗುವಿಕೆಗಳನ್ನೂ ಹೇಳಿಕೊಡುತ್ತಾರೆ. ಈ ಕಾಲ್ಚಲನೆಗಳು ಮೊದಲಲ್ಲಿ ಒಂದನೆಯ ಕಾಲದಲ್ಲಿ ಆರಂಭವಾಗಿ ಕ್ರಮೇಣ 4ನೆಯ ಕಾಲದವರೆಗೆ ಸಾಗಿ ಪುನಃ ಒಂದನೆಯ ಕಾಲಕ್ಕೆ ಬರುತ್ತವೆ. ಈ ಅಭ್ಯಾಸದಿಂದ ವಿದ್ಯಾರ್ಥಿಗೆ ತಾಳ ಲಯಜ್ಞಾನ ಖಚಿತವಾಗುತ್ತದೆ. ಇದಾದ ಮೇಲೆ ಕಷ್ಟತರವಾದ ಕಾಲ್ಚಲನೆಗಳನ್ನೂ ಅವುಗಳ ಸಮ್ಮಿಲನವನ್ನೂ ಕಲಿಯಬೇಕು. ಇವಕ್ಕೆ ಕಲಾಶಂ ಎಂದು ಹೆಸರು. ಇದರಲ್ಲಿ ವಟ್ಟಮಿಟ್ಟ ಕಲಾಶಂ, ಅಷ್ಟಕಲಾಶಂ, ಎಡಕಲಾಶಂ, ಎರಟ್ಟಿಕಲಾಶಂ ಮತ್ತು ಎಡುತ್ತು ಕಲಾಶಂ ಎಂಬ ಕೆಲವು ವಿಧಗಳಿವೆ. ಇವು ಭರತನಾಟ್ಯದಲ್ಲಿನ ಜತಿಗಳಂತೆ. ಇಂಥ ಕಲಾಶಂಗಳನ್ನು ಕಾಳಗ ಸನ್ನಿವೇಶಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸುತ್ತಾರೆ.

**ಮುದ್ರಸಾಧಕಂ :** ಆಮೇಲೆ ಹಸ್ತಗಳ ಅಥವಾ ಮುದ್ರೆಗಳ ಅಭ್ಯಾಸ ನಡೆಯುತ್ತದೆ. ಈ ಹಸ್ತಗಳು ಭರತನಾಟ್ಯದ ಹಸ್ತ ಮುದ್ರೆಗಳಿಂದ ಬೇರೆಯಾಗಿವೆ. ಭರತನಾಟ್ಯ ಮುದ್ರೆಗಳ ಹೆಸರುಗಳಲ್ಲೇ ಕಥಕಳಿಯಲ್ಲಿ 24 ಮುದ್ರೆಗಳಿವೆ. ಈ 24 ಮುದ್ರೆಗಳಿಂದ ಒಂದು ಸಾಹಿತ್ಯವನ್ನೇ ಸೃಷ್ಟಿಸಬಹುದು. ಇವನ್ನು ಮತ್ತೆ ಮೂರು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. 1. ಪ್ರಾಕೃತಿಕ ಮುದ್ರೆಗಳು : ಕಲಾವಿದ ನಟಿಸುವಾಗ ಭಾವಪರವಶನಾಗಿ ತೋರುವ ಸಹಜ ರೀತಿಯವು. 2. ಪ್ರತಿರೂಪಿ ಮುದ್ರೆಗಳು : ಯಾವುದಾದರೂ ಒಂದು ವಸ್ತುವನ್ನು ತೋರಿಸಲು ಅಥವಾ ವ್ಯಕ್ತಪಡಿಸಲು ಉಪಯೋಗಿಸುವಂಥವು. 3. ಪ್ರಸಾರಿತ ಮುದ್ರೆಗಳು: ಧರ್ಮಾನುಸಾರವಾಗಿ ತಾಂತ್ರಿಕ ಸಂಜ್ಞೆಗಳಿಗೆ ಉಪಯೋಗಿಸುವ ವಿಶಿಷ್ಟ ಬಗೆಯವು. ಉದಾಹರಣೆಗೆ ಪೂಜೆ, ದಾನ, ವರದ ಮುಂತಾದುವನ್ನು ಅಭಿನಯಿಸಲು ಅನುಕೂಲವಾಗುವಂಥವು. ಚಲನೆಗಳನ್ನು ಹಸ್ತಮುದ್ರೆಗಳಿಂದಲೂ ತಲೆ, ಕತ್ತು, ಕಣ್ಣು ಹುಬ್ಬು, ಕಣ್ಣಾಲಿ, ತುಟಿ, ಮೂಗು, ಕದಪು ಮುಂತಾದುವುಗಳಿಂದಲೂ ಅಂಗಾಂಗಗಳಿಂದಲೂ ಅಭಿನಯಿಸಿ ತೋರಬೇಕಾಗುತ್ತದೆ.

**ಅಭಿನಯ ಸಾಧಕಂ :** 2–3 ವರ್ಷಗಳ ಅಭ್ಯಾಸ ಮುಗಿದ ಮೇಲೆ ವಿದ್ಯಾರ್ಥಿಗೆ ಕಣ್ಣು, ಕಣ್ಣಾಲಿ, ಹುಬ್ಬು ಕೆನ್ನೆ, ಕದಪುಗಳ ಚಲನೆಯ ಪಾಠವಾಗುತ್ತದೆ. ಇವೆಲ್ಲವನ್ನೂ ನಾಟ್ಯಶಾಸ್ತ್ರದಲ್ಲಿ ವರ್ಣಿಸಿದ್ದಾರೆ. ಈ ಪರಿಷ್ಕಾರವಾದ ಹಾಗೂ ಕಠಿಣವಾದ ಸಾಧನೆಯ ಫಲವಾಗಿ ಒಬ್ಬ ಕಥಕಳಿ ಕಲಾವಿದನ ಮುಖ ಭರತನಾಟ್ಯ ಕಲಾವಿದನ ಮುಖಕ್ಕಿಂತ ಹೆಚ್ಚು ಸೂಚಕವಾಗಿಯೂ ಭಾವಭರಿತವಾಗಿಯೂ ಚಂಚಲವಾಗಿಯೂ ಇರಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಕಣ್ಣಿನ ಸಾಧನೆ ಪ್ರಾತಃಕಾಲ 4 ಗಂಟೆಗೆ ಆರಂಭವಾಗುತ್ತದೆ. ಆ ಸಮಯದಲ್ಲಿ ಸುತ್ತುಮುತ್ತಲಿನ ವಾತಾವರಣ ರಾತ್ರಿಯ ಕತ್ತಲೆಯಲ್ಲಿ ಅಡಗಿರುತ್ತದೆ. ಆದ್ದರಿಂದ ಕಣ್ಣಿನ ದೃಷ್ಟಿಯನ್ನು ಏಕಾಗ್ರತೆಯಿಂದ ನೆಲೆ ನಿಲ್ಲಿಸಲು ಅನುಕೂಲವಾಗುತ್ತದೆ. 4 ರಿಂದ 6 $\frac{1}{2}$ ಗಂಟೆಗಳ ತನಕ ಗುರುವೂ ಶಿಷ್ಯನೂ ಪದ್ಮಾಸನದಲ್ಲಿರುತ್ತಾರೆ. ಇಬ್ಬರ ಮಧ್ಯ 7–8 ಅಡಿಗಳ ಅಂತರವಿರುತ್ತದೆ. ಗುರುಕೋಲಿನ ಆಧಾರದಿಂದ ಕಣ್ಣು ಚಲನೆಗಳ ರೀತಿಯನ್ನು ಹೇಳಿಕೊಡುತ್ತಾನೆ. ತೆರೆದ ಕಣ್ಣಿನಿಂದ ಶಿಷ್ಯ ಕೋಲಿನ ತುದಿಯನ್ನೇ ನೋಡಬೇಕು. ಗುರುಶಿಷ್ಯರ ಮಧ್ಯೆ ಒಂದು ಎಣ್ಣೆ ದೀಪವಿದ್ದು ಮಿಕ್ಕ ಕಡೆಯೆಲ್ಲ ಕಗ್ಗತ್ತಲೆ ಕವಿದಿರುತ್ತದೆ. ಈ ಕಗ್ಗತ್ತಲೆಯಿಂದಾಗಿ ಶಿಷ್ಯ ದಿಗಂತದವರೆಗೂ ದೃಷ್ಟಿಯನ್ನು ಬೀರಬಲ್ಲ. ಕಣ್ಣಿಗೆ ಉರಿಬಾರದಂತೆ ಹಸುವಿನ ತುಪ್ಪವನ್ನು ಹಚ್ಚಿಕೊಂಡು, ಬೆರಳುಗಳಿಂದ ಎರಡೂ ರೆಪ್ಪೆಗಳನ್ನು ಬಿಡಿಸಿ ಹಿಡಿದು, ನೆಟ್ಟ ದೃಷ್ಟಿಯಿಂದ ಕಣ್ಣು ಚಲನೆಗಳನ್ನು ಮಾಡುವುದು ಅತಿ ಕಠಿಣ ಸಾಧನೆ.

ಈ ಸಾಧನೆಯ ಜೊತೆಗೆ ನವರಸಗಳನ್ನು ತೋರಿಸುವ ಅಭಿನಯದ ಅಭ್ಯಾಸ ನಡೆಯುತ್ತದೆ. ರಸನಿರೂಪಣೆಯಲ್ಲಿ ವಿದ್ಯಾರ್ಥಿ ಸಿದ್ಧಹಸ್ತನಾಗುವವರೆಗೂ ಪಾಠ ನಡೆಯುತ್ತದೆ.

ಹೀಗೆ 4 ವಿಧವಾದ ಸಾಧನೆಗಳನ್ನು ಹಲವು ವರ್ಷ ಅಭ್ಯಾಸ ಮಾಡಿದ ಮೇಲೆ ಕಲಾವಿದ ಕಥಕಳಿ ಕಲೆಯಲ್ಲಿ ಸ್ವಲ್ಪಮಟ್ಟಿಗೆ ಪಾಂಡಿತ್ಯ ಪಡೆದು ರಂಗಸ್ಥಳದ ಮೇಲೆ ಬರಲು ಯೋಗ್ಯನಾಗುತ್ತಾನೆ. ತನ್ನ ತನ್ನ ಯೋಗ್ಯತೆ ಮತ್ತು ಅಭಿರುಚಿಗೆ ತಕ್ಕ ಪಾತ್ರವನ್ನು (ಸ್ತ್ರೀ, ನಾಯಕ, ಖಳ, ಉಗ್ರ, ಸೌಮ್ಯ–ಹೀಗೆ) ಆರಿಸಿಕೊಂಡು ಅಭ್ಯಾಸ ಮಾಡುವುದು ರೂಢಿ. ಕಥಕಳಿ ನೃತ್ಯನಾಟಕಗಳಲ್ಲಿ ಸಾಮಾನ್ಯವಾಗಿ ಸಾತ್ತ್ವಿಕ, ರಾಜಸ, ತಾಮಸ ಎಂಬ ಮೂರು ವಿಧದ ಪಾತ್ರಗಳೂ ಇರುತ್ತವೆ.

**ವೇಷಭೂಷಣಗಳು, ಬಣ್ಣಲೇಪನ :** ವೇಷಭೂಷಣಗಳೂ ಬಣ್ಣಗಳೂ ವಿಶಿಷ್ಟವಾಗಿರುವುದರಿಂದ ಈ ಕಲೆ ವಿಶ್ವದ ಗಮನವನ್ನು ಸೆಳೆದಿದೆ. ಇಲ್ಲಿನ ಬಣ್ಣಲೇಪನ ಒಂದು ಅಸಾಧಾರಣವಾದ ಕಲೆ. ಈ ವಿಷಯದಲ್ಲಿ ಯಕ್ಷಗಾನ ಕಲೆಗಾರರಿಗೂ ಕಥಕಳಿ ಕಲಾವಿದರಿಗೂ ಹೋಲಿಕೆಯಿದೆ. ಈ ವಿಶಿಷ್ಟ ಬಣ್ಣಲೇಪನದಿಂದಲೂ ವೇಷ ಭೂಷಣಗಳಿಂದಲೂ ಕಲಾವಿದ ತನ್ನ ವ್ಯಕ್ತಿತ್ವವನ್ನು ತಾನು ಅಭಿನಯಿಸುವ ಪಾತ್ರದಲ್ಲಿ ವಿಲೀನಗೊಳಿಸಬಲ್ಲ. ಪಾತ್ರಧಾರಿಗಳು ಉಡುವ ಅಗಲವಾದ ಬಿಳಿ ಲಂಗ ಪಾಶ್ಚಾತ್ಯರ ಪ್ರಭಾವದ ಫಲವಿರಬಹುದು ಎನಿಸುತ್ತದೆ. ಅಗಲವಾದ ಈ ಲಂಗವಲ್ಲದೆ ಅನೇಕ ಮಣಿಗಳ ಸರಗಳನ್ನೂ ಭುಜಕೀರ್ತಿಗಳನ್ನೂ ತಲೆಗೆ ಧರಿಸುವ ವಿಧವಿಧದ ದೊಡ್ಡ ಕಿರೀಟಗಳನ್ನೂ ಎದೆಕವಚಗಳನ್ನೂ ಉದ್ದವಾದ ಕೇಶರಾಶಿಯನ್ನೂ ಉಪಯೋಗಿಸಿ ನಟರು ಅಮಾನುಷ ವ್ಯಕ್ತಿಗಳಂತೆ ಕಾಣುತ್ತಾರೆ. ಬಣ್ಣಗಳಲ್ಲಿ ಹೆಚ್ಚಾಗಿ ಕೆಂಪು, ಹಸಿರು, ಹಳದಿ, ಕಪ್ಪು ಮತ್ತು ಬಿಳಿ ಬಣ್ಣಗಳನ್ನು ಉಪಯೋಗಿಸುತ್ತಾರೆ. ಈ ಪ್ರಮುಖ ಬಣ್ಣಲೇಪನಗಳು ಶೋಭೆ, ಕಾಂತಿ, ದೀಪ್ತಿ ಮತ್ತು ಮಾಧುರ್ಯಗಳ ದ್ಯೋತಕಗಳಾಗಿವೆ. ಪ್ರೇಕ್ಷಕ ಪಾತ್ರದ ವೇಷಭೂಷಣಗಳನ್ನು ಒಮ್ಮೆ ನೋಡಿದ ಮಾತ್ರಕ್ಕೆ ಕಲಾವಿದ ಕಥೆಯ ಯಾವ ಪಾತ್ರವನ್ನು ಧರಿಸಿರುವನೆಂದು ತಿಳಿಯಬಲ್ಲ. ಬಣ್ಣಲೇಪನದಲ್ಲಿ 5 ವಿಧಗಳಿವೆ : 1. ಮಿಣುಕ್ಕು : ಮುಖಕ್ಕೆ ಕೆಂಪು ಮತ್ತು ಹಳದಿ ಬಣ್ಣಗಳನ್ನು ಉಪಯೋಗಿಸುವುದು. ಈ ಪಾತ್ರಗಳು ಋಷಿಗಳನ್ನೂ ಬ್ರಾಹ್ಮಣರನ್ನೂ ಸ್ತ್ರೀಪಾತ್ರಗಳನ್ನೂ ತಿಳಿಸುತ್ತವೆ. 2. ಪಚ್ಚ : ಮುಖಕ್ಕೆ ಹಸಿರು, ಕೆಳದವಡೆಯ ಸುತ್ತಲೂ ಬಿಳಿ ಚುಟ್ಟಿ (ಅಕ್ಕಿ ಹಿಟ್ಟಿನ ಬಣ್ಣ) ಇರುತ್ತದೆ. ಕಣ್ಣುಗಳಿಗೂ ಕಣ್ಣು ರೆಪ್ಪೆಗಳಿಗೂ ಕಪ್ಪು ಬಳಿದು ತುಟಿಗಳನ್ನು ಕೆಂಪು ಮಾಡಿಕೊಳ್ಳುತ್ತಾರೆ. ಈ ವಿಧದ ಬಣ್ಣ ಲೇಪನ ಸಾತ್ತ್ವಿಕ ಪಾತ್ರಗಳನ್ನೂ ಗಂಭೀರ ಪಾತ್ರಗಳನ್ನೂ ಸೂಚಿಸುತ್ತದೆ. ಉದಾಹರಣೆಗೆ ರಾಮ, ಕೃಷ್ಣ, ಅರ್ಜುನ, ನಳ ಇಂದ್ರ. 3. ಕತ್ತಿ : ಇದು ಪಚ್ಚ ಲೇಪನಕ್ಕಿಂತ ಸ್ವಲ್ಪ ಹೆಚ್ಚು ಪರಿಷ್ಕಾರವಾದುದು. ಇದರಲ್ಲಿ ಕೆಂಪು, ಹಸಿರು ಬಣ್ಣಗಳನ್ನು ಚಾತುರ್ಯದಿಂದ ಸೇರಿಸುತ್ತಾರೆ. ಚುಟ್ಟಿ ಮೂಗಿನ ಸುತ್ತಲಿಂದ ಹಣೆಯವರೆಗೂ ಇರುತ್ತದೆ. ಈ ಲೇಪನವನ್ನು ರಾವಣ, ಕೀಚಕ, ದುಶ್ಶಾಸನ ಮುಂತಾದ ಮುಖ್ಯರ ಪಾತ್ರಗಳಿಗೆ ಉಪಯೋಗಿಸುತ್ತಾರೆ. 4. ದಾಡಿ: ಈ ಲೇಪನದಲ್ಲಿ ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳಿದ್ದು ಒಳ್ಳೆಯ ಹಾಗೂ ಕೆಟ್ಟ ಗುಣಗಳುಳ್ಳ ವ್ಯಕ್ತಿಗಳನ್ನು ಸೂಚಿಸುತ್ತವೆ. ಅವುಗಳಲ್ಲೂ ಹಲವು ವಿಧಗಳಿವೆ. i. ವೆಳುಪ್ಪು ದಾಡಿ : ಬಿಳೀ ಗಡ್ಡವಿದ್ದು ಕಣ್ಣು ಮೂಗುಗಳ ಸುತ್ತಲೂ ತೆಳ್ಳಗಿನ ಚುಟ್ಟಿ ಇರುತ್ತದೆ. ಮುಖಕ್ಕೆ ಕಪ್ಪು ಮೈಗೆ ಒಂದು ರೀತಿಯ ಅಂಗಿ. ಈ ಲೇಪನ ಹನುಮಂತನಂಥ ಪಾತ್ರಗಳಿಗೆ ತಕ್ಕುದು. ii. ಚೊಕ್ಕಣ್ಣ ದಾಡಿ : ಈ ಪಾತ್ರಕ್ಕೆ ಕೆಂಪು ಗಡ್ಡವೂ ಕೆಂಪು ಅಂಗಿಯೂ ಇರುತ್ತದೆ. ಮುಖದ ಮೇಲ್ಭಾಗ ಕಪ್ಪಾಗಿದ್ದು ಕೆಳಭಾಗ ಕೆಂಪಾಗಿರುತ್ತದೆ. ಸಾಮಾನ್ಯವಾಗಿ ಈ ಲೇಪನಗಳು ಭಯಂಕರ ಹಾಗೂ ಆಕ್ರಮಣಕಾರಿ ಪಾತ್ರಗಳನ್ನು ಸೂಚಿಸುತ್ತವೆ. ಉದಾ–ಕಾಲಕೇಯ. ವೀರಭದ್ರ ಮುಂತಾದುವು. iii ಕರುಪ್ಪುದಾಡಿ : ಇದಕ್ಕೆ ಕಪ್ಪು ಗಡ್ಡವೂ ಕಪ್ಪು ಅಂಗಿಯೂ ಇರುತ್ತದೆ. ಕಿರಾತನ ಪಾತ್ರದಲ್ಲಿ ಶಿವ ಈ ಬಣ್ಣವನ್ನು ಧರಿಸಬೇಕು. iv. ಕರಿ: ಈ ಲೇಪನದಲ್ಲಿ ಮುಖವೆಲ್ಲ ಕಪ್ಪಗಿದ್ದು ಉದ್ದವಾದ ದವಡೆಗಳೂ ಮುಂದಕ್ಕೆ ಚಾಚಿರುವ ಕಪ್ಪುಸ್ತನಗಳೂ ಇರುತ್ತವೆ. ಪೂತನಿ, ಶೂರ್ಪನಖಿ ಮುಂತಾದ ದುಷ್ಟ ಪಾತ್ರಗಳಿಗೆ ಇದು ತಕ್ಕ ವೇಷ.

ಒಟ್ಟಿನಲ್ಲಿ ಸಾತ್ತ್ವಿಕಕ್ಕೆ ಹಸಿರು, ರಾಜಸಕ್ಕೆ ಕೆಂಪು, ತಾಮಸಕ್ಕೆ ಕಪ್ಪು ಬಣ್ಣಗಳು; ಸಾತ್ತ್ವಿಕ ಮತ್ತು ರಾಜಸ ಗುಣಗಳೆರಡೂ ಇರುವಲ್ಲಿ ಹಳದಿ ಬಣ್ಣವಿರುತ್ತದೆ.

ಬಣ್ಣ ಲೇಪನದಲ್ಲಿ ಮಾತ್ರವಲ್ಲದೆ ವೇಷಧಾರಿಗಳು ಕಟ್ಟಿಕೊಳ್ಳುವ ಕಿರೀಟಗಳಲ್ಲಿಯೂ ಕರ್ಣಕುಂಡಲಗಳಲ್ಲಿಯೂ ಸೊಂಟದ ಪಟ್ಟಿಗಳಲ್ಲಿಯೂ ಪಾತ್ರಕ್ಕೆ ತಕ್ಕ ವಿಶಿಷ್ಟತೆ ಇರುತ್ತದೆ. ದೊಡ್ಡ ದೊಡ್ಡ ಕಿರೀಟಗಳನ್ನು ಧರಿಸಿಕೊಂಡು ವಿವಿಧ ಬಣ್ಣಗಳಿಂದ ಅಲಂಕೃತರಾದ ಈ ಪಾತ್ರಧಾರಿಗಳು ಪುರಾಣಗಳ ಕಾಲದಿಂದ ನೇರವಾಗಿ ರಂಗಸ್ಥಳಕ್ಕೆ ಇಳಿದು ಬಂದ ಮಹಾವ್ಯಕ್ತಿಗಳಂತೆ ಕಾಣುತ್ತಾರೆ. ಅವರ ವೇಷ ಮತ್ತು ಮಾತುಕಥೆಗಳಿಂದ ನಾಟಕದ ಸನ್ನಿವೇಶ ಸಹಜವಾಗಿ ಏರ್ಪಡುತ್ತದೆ.

**ಕಥಕಳಿಯ ಕಾರ್ಯಕ್ರಮ :** ರಾತ್ರಿಯೆಲ್ಲ ನಡೆಯುವ ಕಥಕಳಿ ಕಾರ್ಯಕ್ರಮವನ್ನು ನೋಡುವುದು ಒಂದು ಬಗೆಯ ಮರೆಯಲಾಗದಂಥ ಅನುಭವ. ಸಾಯಂಕಾಲವಾಗುತ್ತಿದ್ದಂತೆ ಭೂಮಂಡಲವನ್ನೆಲ್ಲ ಆವರಿಸಿ ಪ್ರತಿಧ್ವನಿಸುವ ಚಂಡೆ ಮತ್ತು ಶುದ್ಧಮದ್ದಲೆಗಳ ಬಡಿತ ಕಥಕಳಿ ಪ್ರದರ್ಶನಕ್ಕೆ ಕರೆಗೊಡುತ್ತದೆ. ಸಾಮಾನ್ಯವಾಗಿ ಚಂಡೆ ಬಾರಿಸುವವನಿಗೂ ಶುದ್ದ ಮದ್ದಲೆ ಬಾರಿಸುವವನಿಗೂ ಒಂದು ವಿಧದ ಪೈಪೋಟಿ ಇರುತ್ತದೆ. ಕತ್ತಲಾದ ಮೇಲೆ ಪ್ರದರ್ಶನ ಆರಂಭವಾಗುತ್ತದೆ. ಮೊದಲು ನಡೆಯುವ ತೋಡಯಂ ನೃತ್ಯ ರಂಗಪೂಜೆಯಾಗಿದ್ದು ಪ್ರಳಯವನ್ನೂ ಅನಂತರದ ಸೃಷ್ಟಿಯ ಮೂಲವನ್ನೂ ಸೂಚಿಸುತ್ತದೆ. ಚಪ್ಪರದ ಮೇಲ್ಭಾಗ ಆಕಾಶವನ್ನೂ ರಂಗಸ್ಥಳದ ನೆಲ ಭೂಮಿದೇವಿಯನ್ನೂ ಪರದೆಯ ಹಿಂದಿನ ಭಾಗ ಪ್ರಥಮ ಯುಗದ ಕರಾಳ ರಾತ್ರಿಯನ್ನೂ ಸೂಚಿಸುತ್ತವೆ. ಪರದೆಯ ಹಿಂದೆ ಇಬ್ಬರು ಸ್ತ್ರೀವೇಷಧಾರಿಗಳು ಸಂಗೀತಗಾರರ ಹಿಮ್ಮೇಳದ ಸಂಗೀತಕ್ಕೆ ಮತ್ತು ಶುದ್ಧಮದ್ದಳೆಯ ಹೆಚ್ಚುತ್ತಿರುವ ತಾಳಗತಿಗೆ ಸಮನಾಗಿ ಕುಣಿಯುತ್ತಾರೆ. ಈ ಎರಡು ಸ್ತ್ರೀ ಪಾತ್ರಗಳು ಮಾಯಾದೇವಿಯನ್ನೂ ಶಕ್ತಿದೇವಿಯನ್ನೂ ಪ್ರತಿನಿಧಿಸುತ್ತವೆ. ಚಂಪಟ, ಚಂಪ, ಅಡತಾಳಂ ಅಥವಾ ಅಡಂದ ಮತ್ತು ಪಂಚರಿ ಎಂಬ 4 ಮುಖ್ಯ ತಾಳಗಳಲ್ಲಿ ತೋಡಯಂ ಮುಗಿಯುತ್ತದೆ. ತೋಡಯಂ ಪರದೆಯ ಹಿಂದೆ ಮಾಡತಕ್ಕ ನೃತ್ಯ. ಆದ್ದರಿಂದ ಇದು ಸಭಿಕರಿಗೆ ಕಾಣದು. ಕಾರ್ಯಕ್ರಮದ ಎರಡನೆಯ ನರ್ತನವಾದ ಪುರುಪ್ಪಾಡ್ (ಹೊರಡುವಿಕೆ) ಎಂಬುದು ವಿಶ್ವದಲ್ಲಿ ಸಾತ್ತ್ವಿಕ ಭಾವದ ಆಗಮನವನ್ನು ಸೂಚಿಸುತ್ತದೆ. ಈ ನೃತ್ಯದಿಂದ

ಸಭಿಕರು ಪುರಾಣಗಳ ದೈವಿಕ ಮಹಾಪುರುಷರ ಸಾಹಸಕೃತ್ಯಗಳನ್ನೂ ಪರಾಕ್ರಮಗಳನ್ನೂ ನೋಡಲು ಉತ್ಸುಕರಾಗುತ್ತಾರೆ. ಕಥಾರಂಭಕ್ಕೆ ಸಿದ್ಧರಾಗುತ್ತಾರೆ. ಈ ನೃತ್ಯ ಪ್ರದರ್ಶನದ ಅನಂತರ ಸಂಗೀತಗಾರರಿಗೂ ಹಿಮ್ಮೇಳದವರಿಗೂ ತಮ್ಮ ವಿದ್ವತ್ತನ್ನು ಪ್ರಕಟಿಸಲು ಅವಕಾಶ ಏರ್ಪಡುತ್ತದೆ. ಇದಕ್ಕೆ ಮೇಲಪ್ಪಡಂ ಎಂಬ ಹೆಸರು ಇದೆ. ಪೊನ್ನಣಿ ಎಂದು ಕರೆಯಲ್ಪಡುವ ಮುಖ್ಯ ಹಾಡುಗಾರ ಪಾತ್ರಗಳ ಪರಿಚಯ ಮಾಡಿಕೊಡುತ್ತಿರುವಂತೆ ಕಥೆಯ ಪ್ರಮುಖ ವೇಷಧಾರಿಗಳು ಬಣ್ಣ ಬಣ್ಣದ ಪರದೆಯ ಹಿಂದಿನಿಂದ ಒಬ್ಬೊಬ್ಬರಾಗಿ ಬರುತ್ತಾರೆ. ಹಾಡುಗಾರ ಹಾಡಿನ ಸಾಹಿತ್ಯದಿಂದ ಕಥೆಯನ್ನು ನಿರೂಪಿಸುತ್ತಿರುವಂತೆ ಪಾತ್ರಗಳು ರಂಗಸ್ಥಳಕ್ಕೆ ಬಂದು ಕಥಕಳಿಯ ಹಸ್ತಾಭಿನಯದಿಂದಲೂ ಮುದ್ರೆಗಳ ಸಹಾಯದಿಂದಲೂ ಪುರಾಣಕಥೆಗಳನ್ನು ತಿಳಿಸಿ ಪ್ರಸಂಗವನ್ನು ಸಾಗಿಸುತ್ತಾರೆ. ಸತ್ಕಾರ್ಯಗಳಲ್ಲಿ ಪ್ರವೃತ್ತನಾಗಿ ದುಷ್ಟರನ್ನು ನಿಗ್ರಹಿಸಿದ ನಾಯಕ ತನಗೆ ಸಹಾಯವನ್ನೀಡಿದ ದೇವಾಧಿದೇವತೆಗಳನ್ನು ಕೃತಜ್ಞತೆಯಿಂದ ವಂದಿಸುವುದೇ ಪ್ರದರ್ಶನದ ಕೊನೆ. ಇಷ್ಟು ನಡೆಯುವಾಗ ರಾತ್ರಿಯೆಲ್ಲ ಕಳೆದು ಬೆಳಕು ಹರಿದು ಸೂರ್ಯೋದಯವಾಗಿರುತ್ತದೆ.

**ಕಥಕಳಿಯ ಸಂಗೀತ :** ಕಥಕಳಿಯದು ಸಾಮಾನ್ಯವಾಗಿ ಕೇರಳದ ದೇಶೀಯ ಅಥವಾ ಸ್ಥಳೀಯ ಸಂಗೀತ. ಆದರೂ ಅದು ಕರ್ನಾಟಕ ಸಂಗೀತಕ್ಕೆ ಹತ್ತಿರದ್ದಾಗಿದೆ. ಕಥಕಳಿಯಲ್ಲಿರುವ ಮುಖ್ಯವಾದ 4 ತಾಳಗಳಿಗೆ ಸಂವಾದಿಯಾದುವು ಕರ್ನಾಟಕ ಸಂಗೀತದಲ್ಲೂ ಇವೆ. ಸ್ವಾರಸ್ಯವಾದ ವಿಷಯವೇನೆಂದರೆ ಕಥಕಳಿಯಲ್ಲಿ ಉಪಯೋಗಿಸುವ ಕೆಲವು ರಾಗಗಳು ಕರ್ನಾಟಕ ಸಂಗೀತದಲ್ಲಿ ಕಂಡುಬರುವುದಿಲ್ಲ. ಕೇರಳದ ಸಂಗೀತ ಕೌಶಲ ಒಂದು ನಿಶ್ಚಿತವಾದ ಶೈಲಿಯಲ್ಲಿ ಬೆಳೆದುಕೊಂಡು ಬಂದಿದೆ. ಅದನ್ನು ಸೋಪಾನಶೈಲಿ ಎನ್ನುತ್ತಾರೆ. ಈ ಶೈಲಿ ಅಭಿನಯಕ್ಕೆ ಅನುಕೂಲವಾಗಿರುವ ನಿಧಾನ ಲಯ ಗತಿಗಳಲ್ಲೂ ತೀವ್ರಗತಿಗಳಲ್ಲೂ ಬಳಸಲು ಯೋಗ್ಯವಾಗಿದೆ. ಇದರಲ್ಲಿ ನೆರವಲ್ ಸ್ವರವಿಸ್ತಾರಗಳೂ ರಾಗಾಲಾಪನೆಗಳೂ ಇಲ್ಲ. ಮುಖ್ಯ ಹಾಡುಗಾರನಾದ ಪೊನ್ನಣಿ ಮತ್ತು ಅವನ ಪಕ್ಕದಲ್ಲಿ ಸಹಾಯಕನಾಗಿ ಹಾಡುವ ದ್ವಿತೀಯ ಹಾಡುಗಾರ ಸಿಂಕಿಡಿ ಒಬ್ಬರಿಗೊಬ್ಬರು ನೆರವು ನೀಡಿ ಸಂಗೀತವನ್ನು ಪೂರ್ಣಗೊಳಿಸುತ್ತಾರೆ.

ಸಂಗೀತಕ್ಕೆ ಒದಗುವ ಹಿಮ್ಮೇಳ ವಾದ್ಯಗಳು ವಿಚಿತ್ರವಾಗಿರುತ್ತವೆ. ಈ ವಾದ್ಯಗಳಲ್ಲಿ ತಂತಿ ವಾದ್ಯಗಳೂ ಊದುವ ವಾದ್ಯಗಳೂ ಇಲ್ಲದಿರುವುದನ್ನು ಗಮನಿಸಬಹುದು. ಅತಿ ಪ್ರಮುಖವಾಗಿರುವ ವಾದ್ಯಗಳು ಚಂಡೆ ಮತ್ತು ಶುದ್ದಮದ್ದಲೆ. ಒಂದೇ ಪಕ್ಕಕ್ಕೆ ಚರ್ಮವಿರುವ ದೊಡ್ಡ ವಾದ್ಯ ಚಂಡೆ. ಇದರ ಮೇಲೆ ಬಗ್ಗಿರುವ ತೆಳ್ಳನೆಯ ಕೋಲುಗಳಿಂದ ಹೊಡೆದರೆ ಗಂಭೀರವಾದ ಹಾಗೂ ಬಹು ದೂರಕ್ಕೂ ಕೇಳುವಂಥ ದೊಡ್ಡ ಶಬ್ದ ಹೊರಡುತ್ತದೆ. ಶುದ್ದಮದ್ದಳೆ ಕೂಡ ಕೇರಳದ ವಿಶಿಷ್ಟವಾದ್ಯ. ಈ ವಾದ್ಯಕ್ಕೆ ಎರಡೂ ಪಕ್ಕಗಳಿಗೆ ಚರ್ಮವಿದ್ದು ಇದನ್ನು ಕೈಗಳಿಂದ ಬಾರಿಸುತ್ತಾರೆ. ಪೊನ್ನಣಿ ಹಾಡುಗಾರ ಚೆಂಗಲ ಎಂಬ ಒಂದು ಲೋಹದ ಜಾಗಟೆಯ ಮೇಲೆ ಒಂದು ಚಿಕ್ಕ ಕೋಲಿನಿಂದ ತಾಳ ಹಿಡಿದು ಹಾಡುತ್ತಾನೆ. ಸಿಂಕಿಡಿ ಹಾಡುಗಾರ ಎಲತಾಳಂ ಎಂಬ ಒಂದು ಜೊತೆ ಲೋಹದ ತಾಳಗಳನ್ನು ಬಾರಿಸುತ್ತಾನೆ. ಎಡೈಕೆ, ತಮಿಲಾ ಮತ್ತು ಕುಡುಂತುಡಿ ಎಂಬ ವಾದ್ಯಗಳೂ ಪ್ರಚಾರದಲ್ಲಿದೆ.

ತಮಿಳುನಾಡಿನಲ್ಲಿ ಏಕವ್ಯಕ್ತಿ ನರ್ತಿಸುವ ಭರತನಾಟ್ಯ ಕಲೆ ಹೇಗೆ ಪ್ರಚಾರದಲ್ಲಿದೆಯೋ ಹಾಗೆಯೇ ಕೇರಳದಲ್ಲಿ ಮೋಹಿನಿ ಅಟ್ಟಂ ಎಂಬ ನೃತ್ಯಕಲೆ ಏಕವ್ಯಕ್ತಿ ಮಾಡುವ ವಿಶಿಷ್ಟ ಸಂಪ್ರದಾಯವಾಗಿದೆ. ಪ್ರಾಚೀನ ಕಾಲದಲ್ಲಿ ಪುರುಷರು ಈ ವಿಧದ ನೃತ್ಯವನ್ನು ಮಾಡುತ್ತಿದ್ದರಾದರೂ ಈಗ ಸಾಮಾನ್ಯವಾಗಿ ಈ ಕಲೆ ಕೇವಲ ಸ್ತ್ರೀಯರಿಗೇ ಮೀಸಲಾಗಿದೆ ಎನ್ನಬಹುದು. ಈ ನೃತ್ಯದಲ್ಲಿ ಹೆಚ್ಚಾಗಿ ಲಾಸ್ಯಭಾವವಿದ್ದು ಇಂದ್ರಿಯಗಳಿಗೆ ಹಿತವನ್ನುಂಟುಮಾಡುವುದರಿಂದ ಬಹುಶಃ ಇದನ್ನು ಮೋಹಿನಿ ಅಟ್ಟಂ ಎಂದು ಹೆಸರಿಸಿರಬಹುದು. ಭಸ್ಮಾಸುರನನ್ನು ತನ್ನ ನಾಟ್ಯದಿಂದ ಸಂಹರಿಸಿದ ಮೋಹಿನಿಯ ನೆನಪೂ ಈ ಹೆಸರಿನಲ್ಲಿರಬಹುದು.

ಈ ನೃತ್ಯಸಂಪ್ರದಾಯ ಸಾಮಾನ್ಯವಾಗಿ ಭರತನಾಟ್ಯದಲ್ಲಿದ್ದಂತೆಯೇ ಇದೆ. ಆದರೆ ಕಾಲ್ಚಲನೆ ಅಷ್ಟು ತೀವ್ರವಾಗಿಯೂ ಇಲ್ಲ; ಖಚಿತವಾಗಿಯೂ ಇಲ್ಲ. ಭರತನಾಟ್ಯದ ಹಸ್ತ ಲಕ್ಷಣಗಳೊಡನೆ ಕಥಕಳಿ ಅಭಿನಯ ಮುದ್ರೆಗಳ ಉಪಯೋಗವೂ ಇದೆ.

ಕಥಕಳಿ ನೃತ್ಯವನ್ನು ಕಲಿತು ಉಪದೇಶಿಸುತ್ತಿದ್ದ ಗುರುಗಳ ಪರಂಪರೆ ವಿಪುಲವಾಗಿದೆ. ಹಿಂದಿನವರಲ್ಲಿ ಅಂಬು ಪಣಿಕ್ಕರ್, ಶೇಖರ ಮೆನನ್, ಕೇಶವ ಕುರುಪ್ ಮುಂತಾದವರೂ ಇಂದಿನವರಲ್ಲಿ ಕುಂಜು ಕುರುಪ್, ಕೃಷ್ಣನ್ ಕುಟ್ಟಿ, ರಾಮನ್ ಪಿಳ್ಳೈ ಮೊದಲಾದವರೂ ಪ್ರಸಿದ್ಧರು. **(ಯು.ಎಸ್.ಕೆ.)**

**ಕಥಾಂಜಲಿ :** ಕನ್ನಡದಲ್ಲಿ ಸಣ್ಣಕಥೆಗಳಿಗೆ ಮೀಸಲಾದ ಈ ಪತ್ರಿಕೆ ಪ್ರಕಟವಾದದ್ದು 1929ನೆಯ ಜುಲೈ ತಿಂಗಳಿನಲ್ಲಿ. ಇದರ ಸಂಪಾದಕರು ಪ್ರಸಿದ್ಧ ಸಾಹಿತಿಗಳೂ ಸ್ವತಃ ಕಥೆಗಾರರೂ ಕಾದಂಬರಿಕಾರರೂ ಆಗಿದ್ದ ಅ.ನ.ಕೃಷ್ಣರಾಯರು. ಕೆಲವು ತಿಂಗಳುಗಳ ಅನಂತರ ಕೃಷ್ಣರಾಯರು ತಮ್ಮ ಈ ಪತ್ರಿಕೆಯ ಪ್ರಕಾಶನದ ಜವಾಬ್ದಾರಿಯನ್ನು ಬಿ.ಎನ್. ಗುಪ್ತರವರಿಗೆ ವಹಿಸಿಕೊಟ್ಟು, ಪತ್ರಿಕೆಗೆ ಹದಿನಾಲ್ಕು ತಿಂಗಳು ತುಂಬುವವರೆಗೆ ಸಂಪಾದಕರಾಗಿದ್ದರು. ಅನಂತರ ಸಂಪಾದನ ಕಾರ್ಯವನ್ನು ಮುಂದುವರಿಸಿಕೊಂಡು ಹೋದವರು–ಮಾ. ನಾ. ಚೌಡಪ್ಪ, ಶ್ರೀನಾಥ (ಎನ್.ಶ್ರೀನಿವಾಸರಾವ್), ಎಸ್. ವೆಂಕಟಾಚಲಪತಿ ಮತ್ತು ನಾಡಿಗೇರ ಕೃಷ್ಣರಾಯ–ಇವರು.

ಮೊದಲನೆಯ ಮಜಲಿನಲ್ಲಿ ಕಥಾಂಜಲಿ 1931ರ ಕೊನೆಯವರೆಗೆ ನಡೆದು ನಿಂತು ಹೋಯಿತು. ಅನಂತರ ಎರಡನೆಯ ಘಟ್ಟದಲ್ಲಿ 1937ರ ಮಧ್ಯಭಾಗದಿಂದ 1941ರ ಅಂತ್ಯದವರೆಗೆ ನಡೆಯಿತು. ಹೀಗೆ ಕಥಾಂಜಲಿ ಸು. ಏಳು ವರ್ಷಗಳ ಕಾಲ ಕನ್ನಡ ಸಾಹಿತ್ಯಕ್ಕೆ ತನ್ನ ಸೇವೆ ಸಲ್ಲಿಸಿತು.

ಕಥಾಂಜಲಿಯ ಸ್ಥಾಪನೆಯ ಉದ್ದೇಶವೇನು ಎಂಬುದನ್ನು ಸಂಸ್ಥಾಪಕ ಸಂಪಾದಕ ಅ.ನ. ಕೃಷ್ಣರಾಯರು ಪತ್ರಿಕೆಯ ಪ್ರಥಮ ಸಂಪಾದಕೀಯ ಲೇಖನದಲ್ಲಿ ಈ ರೀತಿ ಸ್ಪಷ್ಟಪಡಿಸಿದ್ದರು: ನಮ್ಮ ಕನ್ನಡನಾಡಿನಲ್ಲಿ...ಕೇವಲ ಸಣ್ಣಕಥೆಗಳಿಗಾಗಿಯೇ ಸಮರ್ಪಿಸಲ್ಪಟ್ಟು ಒಂದು ನಿಯುಕ್ತ ಆದರ್ಶವನ್ನಿಟ್ಟುಕೊಂಡು ಹೊರಟಿರುವ ಪತ್ರಿಕೆಯ ಕೊರತೆ ಬಹುಕಾಲದಿಂದಲೂ ಇದ್ದೇ ಇದ್ದಿತು...ನಮ್ಮಲ್ಲಿ ಸರ್ವತೋಮುಖವಾದ ಬೆಳೆ ಬೆಳೆದು ಕುಯಿಲಿಗೆ ಸಿದ್ಧವಾಗಿದ್ದರೂ ಅದನ್ನು ಕುಯ್ದು ನಾಡಿಗರಿಗೆ ಹಂಚುವವರಿಲ್ಲವಲ್ಲ ಎಂದು ಎನಿಸುತ್ತಲೇ ಇದ್ದಿತು. ಈ ಅಂತಸ್ತಾಪವನ್ನು ದೂರಮಾಡಿ, ಸನ್ಮಿತ್ರರ ಸಹಾಯ ಸ್ಫೂರ್ತಿಗಳಿಂದ ಹುರಿಗೊಂಡು ನಾವು ಈ ಕೆಲಸಕ್ಕೆ ಉದ್ಯುಕ್ತರಾಗಿರುವೆವು...ಸಣ್ಣಕಥೆಗಳಲ್ಲಿ ನಾನಾ ಬಗೆಗಳುಂಟು, ಸಂಪ್ರದಾಯಗಳುಂಟು, ಶೈಲಿಗಳುಂಟು. ನಾವು ಯಾವ ಒಂದು ಶೈಲಿ ಸಂಪ್ರದಾಯಕ್ಕೂ ತಾಳಿಕಟ್ಟುವುದಿಲ್ಲ. ಎಲ್ಲವುಗಳ ಪರಿಚಯಾನುಭವವನ್ನು ಕನ್ನಡಿಗರಿಗೆ ಮಾಡಿಸಿಕೊಡಬೇಕೆಂಬುದೇ ನಮ್ಮಿಚ್ಛೆ. ಸ್ವಕಪೋಲಕಲ್ಪಿತವಾದ ಕನ್ನಡಿಗರ ಕಥೆಗಳಿಗೆ ಪ್ರಾಧಾನ್ಯ ಕೊಟ್ಟು ಅನಂತರ ಇತರ ಭಾಷೆಗಳಲ್ಲಿನ ಕಥೆಗಳ ಪರಿಚಯವನ್ನು ಉಂಟು ಮಾಡಿಕೊಡುತ್ತೇವೆ.

ಒಟ್ಟಿನಲ್ಲಿ ಕಥಾಂಜಲಿ ತನ್ನ ಜೀವಿತಾವಧಿಯಲ್ಲಿ ಈ ಧ್ಯೇಯವನ್ನು ಚೆನ್ನಾಗಿ ಪರಿಪಾಲಿಸಿಕೊಂಡು ಬಂದಿತೆನ್ನಬಹುದು. ತಂತ್ರವೈವಿಧ್ಯವುಳ್ಳ ಹಲವಾರು ಉತ್ತಮ ಕನ್ನಡ ಸಣ್ಣಕಥೆಗಳನ್ನೂ ಕನ್ನಡೇತರ ಭಾಷೆಗಳ ಕಥೆಗಳ ಅನುವಾದವನ್ನೂ ಅದು ಪ್ರಕಟಿಸಿತು. ವೈಯಕ್ತಿಕ ಅನುಬಂಧಗಳನ್ನು ಗಣನೆಗೆ ತಾರದೆ, ವಸ್ತುನಿಷ್ಠವಾದ ಸಾಹಿತ್ಯ ಸಮೀಕ್ಷೆಯನ್ನೂ ನಡೆಸಿತು.

ಇವೆಲ್ಲಕ್ಕಿಂತಲೂ ಮುಖ್ಯವಾದ ಅಂಶವೆಂದರೆ–'1929ರಲ್ಲಿ ಆರಂಭಿಸಿದ ಕಥಾಂಜಲಿ ಮಾಸಪತ್ರಿಕೆ...ಹೊಸ ಲೇಖಕರ ವಿಕಾಸಕ್ಕೆ ನೆರವಾಯಿತು...ಸು. 50 ಜನ ಲೇಖಕರು ಕಥಾಂಜಲಿಯಿಂದ ಮುಂದಕ್ಕೆ ಬಂದರು. ಸಣ್ಣಕಥೆಗಳ ವಿಪುಲವಾದ ಸೃಷ್ಟಿಗೂ ಕಥನಕಲೆಯ ನವ ವಿಜ್ಞಾನದ ಉದಯಕ್ಕೂ ಕಥಾಂಜಲಿ ಬಹಳ ಹೆಣಗಿತು'–ಎಂದು ಅ.ನ. ಕೃಷ್ಣರಾಯರು, ಬೊಂಬಾಯಿನ ಆಲ್ ಇಂಡಿಯಾ ರೇಡಿಯೋ ಕೇಂದ್ರದಿಂದ ಕನ್ನಡ ಸಣ್ಣಕಥೆಗಳನ್ನು ಕುರಿತು ಮಾಡಿದ ಭಾಷಣದಲ್ಲಿ ಹೇಳಿದ ಮಾತುಗಳಲ್ಲಿ ಉತ್ಪ್ರೇಕ್ಷೆಯಿಲ್ಲ.

ಶ್ರೀನಾಥ, ಮಾ.ನಾ. ಚೌಡಪ್ಪ, ವಾಣಿ, ನಾಡಿಗೇರ ಕೃಷ್ಣರಾಯ–ಇವರು ಕನ್ನಡ ಸಾಹಿತ್ಯಲೋಕವನ್ನು ಪ್ರವೇಶಿಸಿದ್ದು ಕಥಾಂಜಲಿಯ ಮೂಲಕ; ಜಿ.ಪಿ.ರಾಜರತ್ನಂ, ಮ. ನ. ಮೂರ್ತಿ, ಕ್ಷೀರಸಾಗರ (ಸೀತಾರಾಮಶಾಸ್ತ್ರಿ), ರಾಘವ (ಎಂ. ವಿ. ಸೀತಾರಾಮಯ್ಯ), ಇ. ಎ. ಭಾಸ್ಕರರಾವ್, ರಾ.ಶಿ. (ಎಂ. ಶಿವರಾಮ್) ಮುಂತಾದವರ ಆರಂಭಕಾಲದ ಲೇಖನಗಳಲ್ಲಿ ಹಲವು ಬೆಳಕು ಕಂಡದ್ದು ಕಥಾಂಜಲಿಯಲ್ಲಿ. ಆನಂದ (ಎ. ಸೀತಾರಾಂ), ಕೆ. ಗೋಪಾಲಕೃಷ್ಣರಾಯ, ದೇವುಡು, ಕೃಷ್ಣಕುಮಾರ ಕಲ್ಲೂರ, ಶ್ರೀರಂಗ (ಆದ್ಯ ರಂಗಾಚಾರ್ಯರು), ಡಿ. ಕೆ. ಭಾರದ್ವಾಜ್, ಬೆಳ್ಳಾವೆ ನರಹರಿಶಾಸ್ತ್ರಿಗಳು ಮುಂತಾದ ಖ್ಯಾತ ಲೇಖಕರು ಕಥಾಂಜಲಿಯ ಲೇಖಕ ಬಳಗದಲ್ಲಿ ಸೇರಿದ್ದರು–ಎಂಬಿವು ಸ್ಮರಣೀಯ ಅಂಶಗಳು. **(ಎಂ.ಎಸ್.ಸಿ.ಎಚ್.)**

**ಕಥಾಕಾಲಕ್ಷೇಪ :** ಯಾವುದಾದರೊಂದು ಕಥೆಯನ್ನು ಸಂಗೀತಾಭಿನಯ ಉಪಕಥೆ; ಗಾದೆ ಮುಂತಾದುವುಗಳ ಮಿಶ್ರಣದಿಂದ ರಸವತ್ತಾಗಿ ತಿಳಿಯುತ್ತ ಕಾಲವನ್ನು ಕಳೆಯುವುದು ಕಥಾಕಾಲಕ್ಷೇಪ. ಈ ಪದ್ಧತಿ ಪ್ರಾರಂಭವಾದದ್ದು ಮಹಾರಾಷ್ಟ್ರದಲ್ಲಿ, ಕರ್ನಾಟಕದಲ್ಲಿ ಈ ಕಲೆ ಬಳಕೆಗೆ ಬರುವ ಮೊದಲು ಇಲ್ಲಿ ಪುರಾಣ ಪಠಣ, ಭಜನೆ ಮುಂತಾದುವುಗಳು ದೇವಾಲಯಗಳಲ್ಲಿ ನಡೆಯುತ್ತಿದ್ದುವು. ಇಲ್ಲಿ ಕೆಲವು ಕಾಲಾನಂತರ ಪುರಾಣ ಪಠಣವೇ ಕಥಾಕಾಲಕ್ಷೇಪವಾಗಿ ಪರಿವರ್ತಿತವಾಯಿತು.

ಕಥಾಕಾಲಕ್ಷೇಪವನ್ನು ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ಪ್ರಚುರಪಡಿಸಿದವರೆಂದರೆ ಮಹಾರಾಷ್ಟ್ರದ ಅನಂತಪದ್ಮನಾಭ ಗೋಸ್ವಾಮಿ. ಇವರ ಶಾರೀರಕ್ಕೆ ಮಾರುಹೋದ ಜನ ಇವರನ್ನು ಕೋಕಿಲಕಂಠ ಮೇರು ಸ್ವಾಮಿ ಎಂದೂ ಕರೆಯುತ್ತಿದ್ದರು. ಈ ಕಲೆಗೆ ಸರಿಯಾದ ಸ್ವರೂಪವನ್ನು ಕಲ್ಪಿಸಿ ಜನಪ್ರಿಯತೆಯೊಂದಿಗೆ ತುಂಬುಕಲೆಯಾಗಿ ಮಾರ್ಪಡಿಸಿದವರು ತಂಜಾವೂರಿನ ಕೃಷ್ಣ ಭಾಗವತರು ಮತ್ತು ಪಂಚಾ ಪಕೇಶ ಶಾಸ್ತ್ರಿಗಳು. ಇವರು ತೋರಿರುವ ಮಾರ್ಗವನ್ನೇ ಕರ್ನಾಟಕದ ಇಂದಿನ ಹರಿಕಥಾ ವಿದ್ವಾಂಸರೂ ಅನುಸರಿಸುತ್ತಿರುವುದು ಕಂಡುಬಂದಿದೆ.

ಕಥಾಕಾಲಕ್ಷೇಪದ ಮುಖ್ಯೋದ್ದೇಶ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಬೋಧಿಸುವುದು. ಅಲ್ಲದೆ ಇದು ಮುಕ್ತಿಗೆ ಒಂದು ಸುಲಭಸಾಧ್ಯವಾದ ಮಾರ್ಗವೆನಿಸಿದೆ. ಇದರಲ್ಲಿ ಸಂಗೀತವು ಕಥೆಯ ನಿರೂಪಣೆಗಾಗಿ ರಾಗ ತಾಳಮೇಳ ಹಾಗೂ ಉಪಕಥೆಗಳೊಡನೆ ಹಿತಮಿತವಾಗಿ ಸಮ್ಮಿಲನಗೊಂಡು ವಿಶಿಷ್ಟವಾಗಿರುತ್ತದೆ. ಜನರಲ್ಲಿ ಧರ್ಮನೀತಿಗಳನ್ನು ಸೌಂದರ್ಯ ಕಲೋಪಾಸನೆಯನ್ನೂ ಜಾಗೃತಗೊಳಿಸಿದ ಈ ಕಲೆ ಸಂಗೀತಕ್ಕಿಂತ ಹೆಚ್ಚು ಜನಪ್ರಿಯತೆ ಗಳಿಸಿದೆ. ಅನಂತರಾಮ ಭಾಗವತರು, ಮುತ್ತಯ್ಯ ಭಾಗವತರು, ವೇದಾಂತ ಭಾಗವತರು ಮೊದಲಾದ ಅನೇಕ ಸಂಗೀತ ವಿದ್ವಾಂಸರು ಕಥಾಕಾಲಾಕ್ಷೇಪ ಕಲೆಯನ್ನು ಕಲಿತು ತಮ್ಮ ಸಂಗೀತದ ವಿದ್ವತ್ತನ್ನು ಇದರ ಮೂಲಕ ಪ್ರದರ್ಶಿಸಿದರು.

ಕಥಾಕಾಲಕ್ಷೇಪಕ್ಕಾಗಿ ಮಹಾರಾಷ್ಟ್ರದಲ್ಲಿ ಸಖಿ,ದಂಡಿ, ಅಂಜನಗೀತ, ಸವಾಯ್, ಓವಿ, ಅಭಂಗ ಮುಂತಾದವುಗಳನ್ನು ಬಳಸುತ್ತಾರೆ. ದಕ್ಷಿಣ ಭಾರತದಲ್ಲಿ ಕಥಾ ಪ್ರಾರಂಭದಲ್ಲಿ ಪಂಚಮುಖಿಯನ್ನು ಹಾಡುವುದುಂಟು. ಜೊತೆಗೆ ಸಂಗೀತದ ವಾದ್ಯಗಳಾದ ಹಾರ್ಮೋನಿಯಂ, ತಬಲ ಪಿಟೀಲು, ಮೃದಂಗ ಮುಂತಾದವುಗಳನ್ನು ಹಿಮ್ಮೇಳಕ್ಕಾಗಿ ಬಳಸುತ್ತಾರೆ.

ಕಥಾಕಾಲಕ್ಷೇಪ ಮಾಡುವ ವಿದ್ವಾಂಸರನ್ನು ಭಾಗವತರೆಂದು ಕರೆಯುವುದು ರೂಢಿ. ಕಥೆ ಸಂತ ಮಹಾನುಭಾವರ ಅಥವಾ ಭಗವತ್ಸಿದ್ಧಾಂತಗಳನ್ನು ತೋರುವ ಯಾವುದೇ ವಿಷಯವನ್ನು ಕುರಿತದ್ದಾದರೂ ಅದನ್ನು ಕ್ರಮಬದ್ಧರೀತಿಯಲ್ಲಿ ವಿಭಾಗಿಸಿ ಸಂಗೀತರಚನೆಗಳನ್ನೂ ಉಪಕಥೆಗಳನ್ನೂ ಗಾದೆಗಳನ್ನೂ ಸಂದರ್ಭೋಚಿತವಾಗಿ ಮಾಡುವಾಗ ಭಾಗವತರ ಜವಾಬ್ದಾರಿ ಗುರುತರವಾಗಿರುತ್ತದೆ. ಕಥೆಯಲ್ಲಿ ಬರುವ ವಿವಿಧ ಪಾತ್ರಗಳೂ ತಾವೇ ಎಂಬಂತೆ ಏಕಪಾತ್ರಾಭಿನಯವನ್ನು ಮಾಡುವ ಸಾಮರ್ಥ್ಯದ ಜೊತೆಗೆ ಭಾಷಾಜ್ಞಾನ, ಜ್ಞಾಪಕಶಕ್ತಿ ಮತ್ತು ಸಂಗೀತದ ವಿಷಯದಲ್ಲಿನ ಅರಿವುಗಳು ಭಾಗವತರಿಗೆ ಅತ್ಯವಶ್ಯಕವಾಗಿರುತ್ತದೆ. ಚತುರರಾದ ಹರಿಕಥಾ ವಿದ್ವಾಂಸರು ರಸಭಾವಗಳಿಗೆ ತಕ್ಕಂತೆ ಅಭಿನಯ ಉಪಕಥೆ ಸಂಗೀತ ಮುಂತಾದವುಗಳ ಮಿಶ್ರಣದಿಂದ ಕ್ರಮಬದ್ಧರೀತಿಯಲ್ಲಿ ಮಾಡಿದ ಕಥಾಕಾಲಕ್ಷೇಪದ ಗುರಿ ಶ್ರಾವಕರ ಚಿತ್ತದಲ್ಲಿ ಚಿರಕಾಲ ಉಳಿಯುವುದರಲ್ಲಿ ಸಂಶಯವಿಲ್ಲ.

ಕನ್ನಡನಾಡಿನಲ್ಲಿ ಕಥಾಕಾಲಕ್ಷೇಪ ಹರಿಕಥೆ ಎಂಬ ಮತ್ತೊಂದು ಹೆಸರಿನಲ್ಲಿ ಬಳಕೆಯಲ್ಲಿದೆ. ಈ ಕಲೆಗೆ ದಾಸರ ಕೊಡುಗೆ ಅಪಾರವಾದುದು. 20ನೆಯ ಶತಮಾನದಲ್ಲಿ ಕೋಣನೂರು, ಸೀತಾರಾಮ ಶಾಸ್ತ್ರಿ, ಶ್ರೀಕಂಠಶಾಸ್ತ್ರಿ, ಭದ್ರಗಿರಿ ಕೇಶವದಾಸರು, ಭದ್ರಗಿರಿ ಅಚ್ಚುತದಾಸರು, ವೇಣು ಗೋಪಾಲದಾಸರು, ಕುರ್ತಕೋಟಿ ಶ್ರೀಪಾದಶಾಸ್ತ್ರಿ ಮುಂತಾದವರು ಹೆಸರಾಂತ ವಿದ್ವಾಂಸರೆನಿಸಿದ್ದಾರೆ. (ವಿ.ಆರ್.)

**ಕಥಾನಕ :** 12ನೆಯ ಶತಮಾನದ ಉತ್ತರಾರ್ಧ, 13ನೆಯ ಶತಮಾನ, 14ನೆಯ ಶತಮಾನದ ಪೂವಾರ್ಧ–ಈ ಅವಧಿಯಲ್ಲಿ ಫ್ರಾನ್ಸಿನಲ್ಲಿ ಬಳಕೆಗೆ ಬಂದ ವಿಶಿಷ್ಟವಾದೊಂದು ಬಗೆಯ ಚಿಕ್ಕ ಕಥೆ (ಫಾಬ್ಲಿಯೊ). ಬರಬರುತ್ತ ಅನೇಕ ಕವಿಗಳು ಅಂಥ ರಚನೆಯಲ್ಲಿ ತೊಡಗಿದರಾಗಿ ಆ ಬಗೆಯ ಸಾಹಿತ್ಯ ಬೆಳೆಯಿತು. ಆದರೆ ಆ ಕವಿಗಳಾರ ಹೆಸರೂ ಉಳಿದು ಬಂದಿಲ್ಲದಿರುವುದು ಸೋಜಿಗ. ರೂಟ್‌ಬೂಫ್ ಎಂಬ 13ನೆಯ ಶತಮಾನದ ಕವಿಯೂ ಕೆಲವು ಕಥಾನಕಗಳನ್ನು ಕಟ್ಟಿದ್ದನೆಂದು ಪ್ರತೀತಿಯಿದೆ. ಕಥಾನಕಗಳು ಅಷ್ಟೊಂದು ವಿಪುಲವಾಗಿ ನಿರ್ಮಾಣವಾದರೂ ನೈಜ ಕಥಾನಕವೆನ್ನಿಸಿಕೊಳ್ಳಬಲ್ಲವು ಕೇವಲ 150 ಮಾತ್ರ.

ಕಥಾನಕ ಸಾಮಾನ್ಯವಾಗಿ ಪದ್ಯದಲ್ಲಿ ಬರೆದ ಸಣ್ಣ ಕಥೆ. 300 ರಿಂದ 400ರವರೆಗೂ ಪದ್ಯಸಾಲುಗಳುಂಟು; 400ನ್ನು ಅದು ಮೀರಲಿಲ್ಲ. ಪ್ರತಿ ಸಾಲಿಗೂ ಎಂಟು ಉಚ್ಚಾರಾಂಶ. ಎರಡೆರಡು ಸಾಲು. ಅಂತ್ಯಪ್ರಾಸದಿಂದ ಕೂಡಿಕೊಂಡು ದ್ವಿಪದಿಯಾಗುತ್ತದೆ.

ಕಥಾನಕದ ಉದ್ದೇಶ ಲೇವಡಿ ಪ್ರಧಾನವಾದ ವಿಡಂಬನೆ, ಕಟುವಾದ ವಿಡಂಬನೆ. ನೀತಿಬೋಧೆಯಲ್ಲ, ಹೃದಯಾಹ್ಲಾದವಲ್ಲ. ಕೆಲವೊಮ್ಮೆ ಅದು ಬಿರುಸು ಅಪಹಾಸ್ಯವಾಗಿ ಅಸಭ್ಯತೆಯ ಗಡಿಯೊಳಕ್ಕೆ ನುಗ್ಗುತ್ತದೆ. ಆ ಕಾಲದಲ್ಲಿ ಉಚ್ಚ ವರ್ಗದವರು ಓದುತ್ತಿದ್ದ ಸಾಹಿತ್ಯ ರೊಮಾನ್ಸ್ ಎಂಬ ಅದ್ಭುತ ಕಥೆ; ಶೂರರ ಸಾಹಸಗಳೂ ಆದರ್ಶ ಸ್ತ್ರೀಯರನ್ನು ಕುರಿತ ಅವರ ಪ್ರಣಯವೂ ಅದರ ತಿರುಳು. ಅಂಥ ಕಥೆಗಳಿಂದ ರೋಸಿಹೋದ ಲೇಖಕವರ್ಗ ಮಧ್ಯಮವರ್ಗದ ಜನಜೀವನದ ಕಡೆಗೆ ತಿರುಗಿ, ಸಾಧಾರಣ ಘಟನಾವಳಿಯನ್ನು ಆರಿಸಿಕೊಂಡು, ಯಥಾವತ್ತಾಗಿ ಅವನ್ನು ನಿರೂಪಿಸುತ್ತ, ಕುಲೀನ ಪದ್ಧತಿಗಳನ್ನು, ಮುಖ್ಯವಾಗಿ ಶ್ರೀಮಂತ ಪ್ರಣಯವನ್ನು ಅವಹೇಳನಕ್ಕೆ ಈಡುಮಾಡಿ, ವಿನೋದ ತಂದು ಕೊಡಲಾರಂಭಿಸಿದರು. ಕ್ರೈಸ್ತ ಚರ್ಚಿನ ಮತ್ತು ಸಂನ್ಯಾಸಿಮಠಗಳ ಅಧಿಕಾರಿಗಳೂ ಅವರ ಗೇಲಿಗೆ ಗುರಿಯಾದರು. ಆ ಬೂಟಾಟಿಕೆಯವರಲ್ಲಿ ನುಡಿ ನಡೆಗಳಲ್ಲಿ ಭೇದ ಪ್ರತ್ಯಕ್ಷವಾಗಿ ಕಂಡುಬರುತ್ತಿತ್ತು. ಕಥಾನಕದ ನಾಯಕಿ ಒರಟಳೂ ಕೊಂಚ ಗಯ್ಯಾಳಿಯೂ ಆದ ದಿಟ್ಟ ಹೆಂಗಸು. ಗಂಡನನ್ನು ವಂಚಿಸುವುದಕ್ಕೂ ಅವಳು ಹೇಸದಂಥ ಚತುರೆ.

ಕಥಾನಕದ ಭಾಷೆ ಸರಳ ಸಾಮಾನ್ಯವಾದದ್ದು. ಅವಿನಯಕ್ಕೆ ಅಂಜದಂಥಾದ್ದು. ಚುಚ್ಚಿ ಕೊಕುವಂಥಾದ್ದು, ಹಾಗೂ ಬಲಿಷ್ಠವಾದದ್ದು. ಆದರ್ಶ ಮತ್ತು ಸಭ್ಯ ಸಂಪ್ರದಾಯಗಳನ್ನು ಎದುರಿಸಿ ವಾಸ್ತವತೆಯನ್ನು ಪೋಷಿಸುವುದೇ ಕಥಾನಕದ ತೀವ್ರ ಬಯಕೆ. ಕಥಾನಕವನ್ನು ಓದಿಗೀದೀರಿ ಎಂಬ ಧಾರ್ಮಿಕ ಉಪದೇಶ ಕಥಾನಕದ ಜನಪ್ರಿಯತೆಗೆ ಸಾಕ್ಷ್ಯ.

ಇತರ ದೇಶಗಳಲ್ಲೂ ಇತರ ಶತಕಗಳಲ್ಲೂ ಕಥಾನಕದ ಪ್ರಭಾವವನ್ನು ಕಾಣುತ್ತೇವೆ. ಇಂಗ್ಲೆಂಡಿನ ಶ್ರೇಷ್ಠ ಕವಿ ಚಾಸರ್ ಒಂದೆರಡನ್ನು ಬರೆದ. 17ನೆಯ ಶತಮಾನದ ಶ್ರೇಷ್ಠ ಸಾಹಿತಿ ಲ ಫಾಂಟೇನ್ ತನ್ನ ನೀತಿಕಥೆ (ಫೇಬಲ್)ಯೊಂದಿಗೆ ಕಥಾನಕದ ಲಕ್ಷಣಗಳನ್ನು ಜೋಡಿಸಿ ಕೆಲವು ಕಲಾತ್ಮಕ ಕೃತಿಗಳನ್ನು ರಚಿಸಿದ. 18ನೆಯ ಶತಮಾನದ ಸಿ.ಎಫ್. ಜೆಲರ್ಟ್ 19ನೆಯ ಶತಮಾನದ ಐ.ಎ. ಕ್ರಿಲೋವ್ ಮುಂತಾದವರು ಕಥಾನಕ ಸಾಹಿತಿಗಳು. 19ನೆಯ ಶತಮಾನದ ಕೊನೆಯಲ್ಲಿ ಕಥಾನಕ ಸಂಕಲನಗಳು ಹೊರಬಂದು ಮೆಚ್ಚಿಕೆ ಪಡೆದುವು.

ಕಥಾನಕ ಪದ್ಧತಿ ಫ್ರಾನ್ಸಿನಲ್ಲಿ ಇಂದಿಗೂ ಅಳಿಸಿಹೋಗಿಲ್ಲವೆಂದೇ ವಿದ್ವಾಂಸರ ಅಭಿಪ್ರಾಯ. (ಎಸ್.ವಿ.ಆರ್.)

**ಕಥಾರ್ :** ಇದು ಮಧ್ಯ ಪ್ರಾಚ್ಯದಲ್ಲಿದೆ, ಸೌದಿ ಅರೇಬಿಯಗೆ ಹೊಂದಿಕೊಂಡಂತಿರುವ ಪರ್ಯಾಯ ದ್ವೀಪವಾಗಿದೆ. ಪಶ್ಚಿಮದಲ್ಲಿ ಅರೇಬಿಯನ್ ಖಾರಿ (ಹಾವತ್ ಅಸ್ ಸಲ್ವ) ಮತ್ತು ಸೌದಿ ಅರೇಬಿಯ, ದಕ್ಷಿಣದಲ್ಲಿ ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್, ವಾಯುವ್ಯದಲ್ಲಿ ಬಹ್ರೇನ್ ಖಾರಿ ಮತ್ತು ಬಹ್ರೇನ್ ದ್ವೀಪ ಸಮುದಾಯ ಇದ್ದರೆ ಪೂರ್ವದಲ್ಲಿ ಮತ್ತು ಉತ್ತರದಲ್ಲಿ ಪರ್ಷಿಯನ್ ಖಾರಿ ಕಂಡುಬರುತ್ತದೆ. $25^0$ ಉ.ಅ. ಮತ್ತು $51^0$ ಪೂ. ರೇ. ದಲ್ಲಿದೆ.




**ಭೂಸ್ವರೂಪ:** ಮಟ್ಟಸವಾದ ಬಂಜರು ಮರುಭೂಮಿಯನ್ನು ಹೊಂದಿದ್ದು ಮರಳು ಮತ್ತು ನುರಜುಗಲ್ಲುಗಳನ್ನು ಅತ್ಯಧಿಕವಾಗಿ ಹೊಂದಿದೆ. ಇದರ ಒಟ್ಟು ವಿಸ್ತೀರ್ಣ 11,000 ಚ.ಕಿಮೀ. ಇದು 563 ಕಿಮೀ ಉದ್ದದ ತೀರ ಪ್ರದೇಶವನ್ನು ಹೊಂದಿದೆ. $24^o52'$ ಉ. ದಿಂದ $26^o12'$ ಉತ್ತರ ಅಕ್ಷಾಂಶದವರೆಗೂ, $50^o48'$ ದಿಂದ $51^o28'$ ಪೂರ್ವ ರೇಖಾಂಶದವರೆಗೆ ಹಬ್ಬಿದೆ. ಸಂಪೂರ್ಣವಾಗಿ ಮರುಭೂಮಿಯಾಗಿದೆ.

**ವಾಯುಗುಣ:** ಬೇಸಗೆಯು ಅತ್ಯಧಿಕ ಉಷ್ಣಾಂಶದಿಂದ ಕೂಡಿರುತ್ತದೆ. ಉಷ್ಣಾಂಶ $49^0$ಸೆ. ಗಿಂತಲೂ ಅತ್ಯಧಿಕವಾಗಿದ್ದು ದೂಳಿನಿಂದ ಕೂಡಿದ ಬಿರುಗಾಳಿ, ಮರಳು ದೂಳು, ಸುಂಟರಗಾಳಿಗಳು ಸರ್ವ ಸಾಧಾರಣವಾಗಿದೆ. ತೀರ ಪ್ರದೇಶದ ಸ್ವಲ್ಪ ಭಾಗ ಮಾತ್ರ ಸಮುದ್ರಗಾಳಿಗಳಿಂದಾಗಿ ಸಾಧಾರಣ ಉಷ್ಣಾಂಶವನ್ನು ಪಡೆಯುತ್ತದೆ. ಅತಿ ಕಡಿಮೆ ಮಳೆ 5–20 ಸೆಂಮೀ ಕಂಡುಬರುತ್ತದೆ. ಇದು ಉಷ್ಣ ವಲಯದ ಮರುಭೂಮಿ ವಾಯುಗುಣವನ್ನು ಹೊಂದಿದೆ.

**ಸ್ವಾಭಾವಿಕ ಸಸ್ಯವರ್ಗ:** ಅತಿ ಉಷ್ಣಾಂಶ ಹಾಗೂ ಮಳೆ ಇಲ್ಲದ ಕಾರಣ ಯಾವಬಗೆಯ ಸಸ್ಯವರ್ಗಗಳು ಕಂಡುಬರುವುದಿಲ್ಲ.

ಜನಸಂಖ್ಯೆ 8,63,051 (2002). ಪ್ರತಿ ಚ.ಕಿಮೀ ಗೆ 180 ಜನರು ಕಂಡುಬಂದು, ತೀರ ಪ್ರದೇಶದಲ್ಲಿ ಶೇ.89.9 ನಗರಗಳಲ್ಲಿ ವಾಸಿಸುತ್ತಿದ್ದಾರೆ.

**ಧರ್ಮ:** ಮುಸ್ಲಿಮರು ಶೇ. 95 ಕಂಡುಬರುತ್ತಾರೆ. ಇದರಲ್ಲೂ ಕಥಾರೀಸ್ ಜನಾಂಗದವರು ಹೆಚ್ಚಾಗಿದ್ದಾರೆ. ಅಲ್ಲದೆ ಸುನ್ನಿ ಮುಸ್ಲಿಮರು ಇದ್ದಾರೆ. ಹಿಂದು, ಕ್ರಿಶ್ಚಿಯನ್ ಧರ್ಮ ಅನುಯಾಯಿಗಳು ಇದ್ದಾರೆ.

**ಭಾಷೆ:** ಆಡಳಿತ ಭಾಷೆ ಅರೆಬಿಕ್, ಜೊತೆಗೆ ಇಂಗ್ಲಿಷ್ ಬಳಕೆಯಲ್ಲಿದೆ.

**ಉದ್ಯೋಗ:** ತೀರಪ್ರದೇಶಗಳಲ್ಲಿ ಸ್ವಲ್ಪ ವ್ಯವಸಾಯ ಕಂಡು ಬರುತ್ತದೆ.

**ಕಾಳುಗಳು:** ರೇ, ಬಾರ್ಲಿ, ಗೋದಿ, ಬಾದಾಮಿ, ಖರ್ಜೂರ, ಅಂಜೂರವನ್ನು ಬೆಳೆಯುತ್ತಾರೆ.

**ಪ್ರಾಣಿ ಸಾಕಾಣಿಕೆ:** ತೀರಪ್ರದೇಶದಲ್ಲಿ ಒಂಟೆ, ಕುದುರೆ, ಕತ್ತೆ, ಹೇಸರಗತ್ತೆಗಳನ್ನು, ಒಳನಾಡಿನಲ್ಲಿ ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ.

**ಗಣಿಗಾರಿಕೆ:** ಇಲ್ಲಿಯ ಜನರ ಮುಖ್ಯ ಉದ್ಯೋಗ ಗಣಿಗಾರಿಕೆ. ದೇಶದ ಆದಾಯವು ಗಣಿಗಾರಿಕೆಯನ್ನು ಅವಲಂಬಿಸಿದೆ. ಪೆಟ್ರೋಲಿಯಂ ಎಣ್ಣೆ, ಸ್ವಾಭಾವಿಕ ಅನಿಲಗಳ ನಿಕ್ಷೇಪವು ಅತ್ಯಧಿಕವಾಗಿದ್ದು ಹೊರ ತೆಗೆಯುವ ಕಾರ್ಯವು ಪ್ರಮುಖವಾಗಿದೆ.

**ಕೈಗಾರಿಕೆ:** ರಾಷ್ಟ್ರೀಯ ತಲಾವರಮಾನಗಳೆಲ್ಲವು ಕೈಗಾರಿಕೆಯನ್ನು ಅವಲಂಬಿಸಿದೆ. ಎಣ್ಣೆ ಶುದ್ಧೀಕರಣ (ಶೇ. 25.4), ರಾಸಾಯನಿಕಗಳು (ಶೇ. 24.4), ಗಿರಿಣಿ, ಸಿಮೆಂಟ್, ಪ್ಲಾಸ್ಟಿಕ್, ಜವಳಿ, ಚರ್ಮದ ಸಾಮಾನು ಪಾದರಕ್ಷೆ, ಪಿಂಗಾಣಿ ಸಾಮಾನು, ಬಣ್ಣ ಮುಂತಾದ ಕೈಗಾರಿಕೆಗಳು ಅಭಿವೃದ್ಧಿ ಹೊಂದಿದೆ.

**ವ್ಯಾಪಾರ:** ಕಥಾರ್ ಪ್ರಪಂಚದ ಮಾರುಕಟ್ಟೆಯಲ್ಲಿ ವ್ಯಾಪಾರ ಪ್ರಮುಖವಾಗಿದೆ. ಪೆಟ್ರೋಲಿಯಂ, ಸ್ವಾಭಾವಿಕ ಅನಿಲ, ಪಾದರಕ್ಷೆ, ರಾಸಾಯನಿಕ, ಪಿಂಗಾಣಿ ಸಾಮಾನು, ಬಣ್ಣ, ಪ್ಲಾಸ್ಟಿಕ್ ಮುಂತಾದವುಗಳನ್ನು ರಫ್ತುಮಾಡುತ್ತದೆ. ಆಮದು: ಆಹಾರ ಪದಾರ್ಥ, ಸಿದ್ಧ ಉಡುಪು, ಜವಳಿ, ಯಂತ್ರಗಳು, ಯಂತ್ರೋಪಕರಣ, ಔಷಧಿ, ಬೆಲೆಬಾಳುವ ಹರಳುಗಳು, ಎಲೆಕ್ಟ್ರಾನಿಕ್ಸ್ ಉಪಕರಣ, ರೇಡಿಯೋ, ಗಡಿಯಾರ, ದೂರದರ್ಶನ, ಟೆಲಿಫೋನ್ ಮುಂತಾದವುಗಳನ್ನು ಆಮದು ಮಾಡಿಕೊಳ್ಳುತ್ತದೆ. ಇಂದು ಕಥಾರ್‌ನ ಆರ್ಥಿಕತೆ ಸಂಪೂರ್ಣವಾಗಿ ಪೆಟ್ರೋಲಿಯಂ ಮತ್ತು ಸ್ವಾಭಾವಿಕ ಅನಿಲವನ್ನು ಅವಲಂಬಿಸಿದೆ.

**ರಾಜಕೀಯ:** ದೊಹಾ ರಾಜಧಾನಿ. ಜನಸಂಖ್ಯೆ 300,000 (2002). ಇದು ಸಂಪ್ರದಾಯ ನಿರಂಕುಶರಾಜರ ಮಾದರಿಯ ಸರಕಾರವನ್ನು ಹೊಂದಿದೆ. 1971 ಸೆಪ್ಟೆಂಬರ್ 3 ರಂದು ಇಂಗ್ಲೆಂಡ್ ಅಧೀನದಿಂದ ಸ್ವತಂತ್ರವಾಯಿತು. ಇದು 9 ಪುರಸಭೆಯನ್ನು ಹೊಂದಿದೆ. ಅವುಗಳೆಂದರೆ ಬಲಾಡಿಯಲ್, ಅಡ್ ಡಾವಾಯ್, ಅಲ್‌ಗುವಾಯುರಿಯ, ಅಲ್ ಜುಮಾಯಿಲ್‌ಯ, ಅಲ್‌ಕೌರಾ, ಅಲ್‌ರಯ್ಯಾನ್, ಅಲ್‌ವಕ್ರಾ, ಆಶ್ ಶಾಮಲ್, ಜರಾಯನ್, ಅಲ್ಬಟ್ನಾ, ಉಮಾ ಸಲಾಲ್ ಪ್ರದೇಶಗಳಾಗಿವೆ. ಉಮ್ಬಾಟ್, ದೊಹಾ, ಅಲ್‌ಕೌರಾ, ಅಲ್ ಜಮಾಲಿಯಾಗಳು ದೊಡ್ಡ ನಗರಗಳಾಗಿವೆ.

**ಸಾರಿಗೆ:** ಉತ್ತಮಸಾರಿಗೆ ವ್ಯವಸ್ಥೆಯನ್ನು ಹೊಂದಿದ್ದು ವಾಯು ಸಾರಿಗೆ ಅತ್ಯಂತ ಪ್ರಮುಖವಾಗಿದೆ. ರಸ್ತೆ ಸಾರಿಗೆಯಲ್ಲಿ ಒಂಟೆ, ಕುದುರೆ, ಕತ್ತೆಗಳು ಉಪಯೋಗದಲ್ಲಿವೆ.

(ಎಸ್.ಕೆ.)

**ಕಥಾವರ್ಗ :** ಜನಪದಕಥೆಗಳ ವರ್ಗೀಕರಣದಲ್ಲಿ ಆಶಯ (ಮೋಟೀಫ್) ಮತ್ತು ವರ್ಗಗಳು (ಟೇಲ್ ಟೈಪ್) ಮಹತ್ತ್ವದ ಪಾತ್ರ ವಹಿಸಿವೆ. ಜಾನಪದದಲ್ಲಿ ಇವೆರಡರ ಸಂಬಂಧ ಮತ್ತು ವ್ಯತ್ಯಾಸಗಳ ಅಧ್ಯಯನ ಹಲವು ರೀತಿಯಲ್ಲಿ ಸಹಾಯ ಮಾಡಿದೆ. ಅದರಲ್ಲಿಯೂ ಕಥನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದರಲ್ಲಂತು ಇದರಿಂದ ತುಂಬ ಉಪಕಾರವಾಗಿದೆ. ಹಾ. ಮಾ. ನಾಯಕರು ಹೇಳುವ ಹಾಗೆ ಸ್ಥೂಲವಾಗಿ ಆಶಯ ಕಥೆಯ ವಸ್ತುವನ್ನು ಕುರಿತದ್ದು, ಟೈಪ್ ಅದರ ತಾಂತ್ರಿಕ ಸ್ವರೂಪವನ್ನು ಕುರಿತದ್ದು. ಜನಪದ ಕಥೆಗಳನ್ನು ವರ್ಗ ಮತ್ತು ಆಶಯಗಳ ಆಧಾರದಿಂದ ವರ್ಗೀಕರಿಸುವ ವಿಧಾನವನ್ನು ಮೊಟ್ಟಮೊದಲು ಬಳಕೆಗೆ ತಂದವರೆಂದರೆ ಆಂಟಿ ಆರ್ನೆ (ನೋಡಿ– ಆರ್ನೆ,–ಆಂಟಿ) ಮತ್ತು ಸ್ಟಿತ್ ಥಾಂಸನ್ ಎಂಬ ವಿದ್ವಾಂಸರು.

ಸ್ವತಂತ್ರ ಅಸ್ತಿತ್ವವುಳ್ಳ ಯಾವುದೇ ಸಾಂಪ್ರದಾಯಿಕ ಕಥೆ ವರ್ಗ ಆಗಬಲ್ಲದು. ಅಂದರೆ ಒಂದು ಅಥವಾ ಹಲವು ಆಶಯಗಳನ್ನೊಳಗೊಂಡ ಸ್ವತಂತ್ರ ಕಥಾನಕವನ್ನು ವರ್ಗವೆಂದು ಗುರುತಿಸುತ್ತೇವೆ. ಇದನ್ನು ಕಥಾ ಸೂಚಕವೆಂದು ಕರೆಯುವುದುಂಟು. ಅಂತು ಯಾವುದೇ ಕಥೆ, ಅದು ಸಂಕೀರ್ಣವಾಗಿರಬಹುದು ಅಥವಾ ಸರಳವಾಗಿರಬಹುದು. ಸ್ವತಂತ್ರ ಕಥನವಾಗಿ ಹೇಳಲ್ಪಟ್ಟಿದರೆ ಸಾಕು. ಅದು ಅರ್ಥದಲ್ಲಿ ಬೇರೆ ಕಥೆಯನ್ನು ಅವಲಂಬಿಸಿದರೆ ತನಗೆ ತಾನೆ ಪೂರ್ಣವಾಗಿರಬೇಕು. ಕೆಲವು ವರ್ಗಗಳು ಹತ್ತಾರು ಆಶಯಗಳನ್ನೊಳಗೊಂಡಂತೆ ದೀರ್ಘವಾಗಿರಬಹುದು. ಇನ್ನು ಕೆಲವು ವರ್ಗಗಳು ಒಂದೇ ಆಶಯಗಳನ್ನೊಳಗೊಂಡ ಚಿಕ್ಕ ಕಥೆಯಾಗಿರಬಹುದು. ಆಶಯಕ್ಕೆ ತಕ್ಕಂಥ ಕಥೆ ಉದ್ದ ಅಥವಾ ಚಿಕ್ಕದಾಗಿರುವುದಂತೂ ಸತ್ಯವಾದ ಮಾತು. ಒಂದೇ ಆಶಯವಿದ್ದಾಗ ಕಥನ ಆಶಯಕ್ಕೂ ಕಥಾವರ್ಗಕ್ಕೂ ವ್ಯತ್ಯಾಸ ಕಂಡು ಬಂದಿರುವುದು ಇಲ್ಲಿನ ಒಂದು ಗಮನಾರ್ಹ ವಿಷಯ. ಪ್ರತಿ ವರ್ಗದಲ್ಲೂ ಆಶಯವಿದ್ದೇ ತೀರಬೇಕು; ಆದರೆ ಪ್ರತಿ ಆಶಯವೂ ವರ್ಗವಾಗಿರಬೇಕೆಂಬ ನಿಯಮವಿಲ್ಲ. ಕಥಾವರ್ಗವೊಂದರಲ್ಲಿ ಒಂದು ಆಶಯವಿದ್ದಾಗ ಮಾತ್ರ ಅದು ಸ್ವತಂತ್ರ ಕಥನವಾಗಿ, ಅಂದರೆ ಕಥಾವರ್ಗವಾಗಿ ನಿಂತುಕೊಳ್ಳುತ್ತದೆ. ಬಹುಸಂಖ್ಯಾತ ಸಾಂಪ್ರದಾಯಿಕ ವರ್ಗಗಳು ಈ ಏಕಾಶಯಗಳನ್ನು ಒಳಗೊಂಡಿರುವಂಥವೇ ಆಗಿವೆ.

ಗೊತ್ತಾದ ಕಥನವೊಂದು ನಿರ್ದಿಷ್ಟವರ್ಗಕ್ಕೆ ಸಂಬಂಧಪಟ್ಟದ್ದೇ ಅಲ್ಲವೇ ಎಂಬುದನ್ನು ಕೆಲವುಸಾರಿ ನಿರಾತಂಕವಾಗಿ ಹೇಳಬಹುದು. ಆದರೆ, ಕಥಾವರ್ಗಗಳ ನಡುವೆ ಗೊಂದಲವುಂಟಾದಾಗ ಅಥವಾ ಗೊತ್ತಾದ ವರ್ಗವೊಂದಕ್ಕೆ ಕಥನವೊಂದು ಸಾಕಷ್ಟು ಸಾದೃಶ್ಯಗಳನ್ನು ಒದಗಿಸದಿದ್ದಾಗ, ಸಹಜವಾಗಿಯೇ ಗಡಿಪ್ರಶ್ನೆಗಳು ಜನ್ಮತಾಳುತ್ತವೆ. ಕಥಾವರ್ಗದ ಈ ವ್ಯತ್ಯಯಗಳು ಕೆಲವು ವಿದ್ವಾಂಸರಲ್ಲಿ, ಅದರಲ್ಲಿಯೂ ಪೂರ್ವ ಯುರೋಪಿನವರಲ್ಲಿ, ವರ್ಗಗಳಿಂದ ಕಥೆಗಳನ್ನು ವರ್ಗೀಕರಿಸುವುದರ ಸಪ್ರಮಾಣತೆಯ ಬಗ್ಗೆ ಸಂದೇಹವಾದವನ್ನು ಎಬ್ಬಿಸಿದುವೆಂದು ಸ್ಟಿತ್‌ಥಾಂಸನ್ ಹೇಳುತ್ತಾನೆ. ಇದಕ್ಕೆ ಕಾರಣಗಳನ್ನು ಸೂಚಿಸುತ್ತ ಆತ, ಈ ಸಂದೇಹವಾದ ಪರಿಶೋಧಕನ ಆಸಕ್ತಿಯಲ್ಲಿನ ಭಿನ್ನತೆಗಳಿಂದ ಉದ್ಭವವಾದುದೆಂದು ಅಭಿಪ್ರಾಯ ಪಡುತ್ತಾನೆ. ಅಂಥ ವಿದ್ವಾಂಸರು ಕಥೆಗಳ ಸಾದೃಶ್ಯಗಳಿಗಿಂತ ಹೆಚ್ಚಾಗಿ ವ್ಯತ್ಯಯಗಳ ನಡುವಣ ಭಿನ್ನತೆಗಳಲ್ಲಿ ಮತ್ತು ನಿರ್ದಿಷ್ಟ ಕಥಾವಕ್ತೃಗಳ ವ್ಯಕ್ತಿತ್ವದಲ್ಲಿ ಆಸಕ್ತರಾಗಿದ್ದರೆಂದೂ ಆತ ಹೇಳುತ್ತಾನೆ. ಕಥಾವರ್ಗವೊಂದಕ್ಕೆ ದೊರೆಯುವ ಭಿನ್ನಪಾಠಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಸಾದೃಶ್ಯ ವೈದೃಶ್ಯಗಳ ಮೂಲಕ ನಿರ್ದಿಷ್ಟ ಸ್ವತಂತ್ರ ಕಥಾನಕದ ಮೂಲ ಪ್ರತಿಯನ್ನು ಕಂಡುಹಿಡಿಯುವ ಕೆಲಸ ಇಲ್ಲಾಗುತ್ತದೆ.

ಇಂಥ ಸ್ವತಂತ್ರ ಕಥನಗಳುಳ್ಳ ವರ್ಗಗಳು ಯಾವುದೇ ನಿರ್ದಿಷ್ಟ ಸಂಸ್ಕೃತಿಯಲ್ಲಿ ಪರಿಮಿತ ಸಂಖ್ಯೆಯಲ್ಲಿ ಇರುತ್ತವೆ. ಕಥೆಯ ಅಧ್ಯಯನಾಸಕ್ತಿಯನ್ನು ಜಗತ್ತಿನ ಎಲ್ಲ ಭಾಗಗಳಲ್ಲಿನ ವಿವಿಧ ಸಂಸ್ಕೃತಿಗಳಿಗೆ ವಿಸ್ತರಿಸಿದಾಗ ಆಶಯ ಮತ್ತು ವರ್ಗಗಳಿಗೆ ಇರುವ ಕೆಲವು ಸಂಬಂಧ ಮತ್ತು ವ್ಯತ್ಯಾಸಗಳು ಕಾಣಸಿಗುತ್ತವೆ. ಹಾಗೆ ನೋಡಿದಾಗ, ಆಶಯ ಅಂತಾರಾಷ್ಟ್ರೀಯ ಸಂಬಂಧವನ್ನು ಪಡೆದುಕೊಂಡಿರುವುದು ಕಂಡುಬಂದರೆ, ಕಥಾವರ್ಗಗಳು ಪರಿಮಿತ ಭೌಗೋಳಿಕ ಎಲ್ಲೆಯೊಂದಕ್ಕೆ ಮಿತಿ ಕಲ್ಪಿಸಿಕೊಂಡಿರುವ ಹಾಗೆ ಕಾಣಬರುತ್ತದೆ. ವರ್ಗ ಕಥನತಂತ್ರಕ್ಕೆ ಸಂಬಂಧಪಟ್ಟದ್ದರಿಂದ, ಕಥೆ ಹೇಳುವ ಪ್ರಾದೇಶಿಕ ಶೈಲಿ, ತಂತ್ರ, ರಚನಾದಿ ವಿಶಿಷ್ಟತೆಗಳಿಂದ ಕೂಡಿಕೊಂಡಿರಲಿಕ್ಕೂ ಸಾಕು. ಆದ್ದರಿಂದ ಕಥನ ಸಾದೃಶ್ಯಗಳು ವಸ್ತುವಿನ ದೃಷ್ಟಿಯಿಂದ ಜಗತ್ತಿನಾದ್ಯಂತ ಕಂಡುಬಂದರೂ ಅವುಗಳ ನಿರೂಪಣಾತಂತ್ರಗಳನ್ನು ಈ ಭೌಗೋಳಿಕ ಹಿನ್ನೆಲೆಯಲ್ಲಿ ಪರಿಭಾವಿಸಬೇಕಾಗುತ್ತದೆ. ಆಶಯಗಳ ತೌಲನಿಕ ಅಧ್ಯಯನದಿಂದ ಅವುಗಳಿಗೆ ಐತಿಹಾಸಿಕ ಸಂಬಂಧವಿಲ್ಲದಿರುವುದು ವ್ಯಕ್ತವಾಗುತ್ತದೆ. ಆದರೆ ಪೂರ್ಣಕಥಾವರ್ಗವೊಂದು ತನ್ನ ವ್ಯತ್ಯಯಗಳ ನಡುವೆ ಐತಿಹಾಸಿಕ ಸಂಬಂಧವೊಂದನ್ನು ಸ್ಥಾಪಿಸಿಕೊಂಡಿರುತ್ತದೆ. ಹೀಗಾಗಿ ಭೌಗೋಳಿಕ ಮತ್ತು ಐತಿಹಾಸಿಕ ದೃಷ್ಟಿಗಳಿಂದು ಕಥಾವರ್ಗದ ಲಕ್ಷಣಗಳೆರಡು ಎಂಬುದನ್ನೂ ಇವೇ ಆಶಯದಿಂದ ವರ್ಗವನ್ನು ಬೇರೆಯಾಗಿಸಿರುವುದೆಂಬುದನ್ನೂ ಮನಗಾಣಬಹುದು. ಈ ಹಿನ್ನೆಲೆಯಲ್ಲಿ ಕಥೆಗಳ ಭಿನ್ನಪಾಠಗಳಿಂದ ಮೂಲಪ್ರತಿಯನ್ನು ಕಂಡುಹಿಡಿಯಲು ಹೊರಟ ಭೌಗೋಳಿಕ–ಚಾರಿತ್ರಿಕ ವಿಧಾನ ನಿಂತಿದೆ.

ಹೀಗೆ ಕ್ರಮಬದ್ಧವಾಗಿ ಅಧ್ಯಯನ ಮಾಡಿದ ಮೇಲೆ ಪ್ರತಿ ಭಾಷೆಯಲ್ಲಿಯೂ ವರ್ಗ ಮತ್ತು ಆಶಯ ಸೂಚಿಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಈ ಸೂಚಿಗಳನ್ನು ಮೊದಲಬಾರಿಗೆ ಸಿದ್ಧಪಡಿಸಿದವರು ಪ್ರಖ್ಯಾತ ಜಾನಪದ ವಿದ್ವಾಂಸರಾದ ಆಂಟಿ ಆರ್ನೆ ಮತ್ತು ಸ್ಟಿತ್ ಥಾಂಸನ್ ಅವರು. ಅವರ ಈ ಅಧ್ಯಯನ ಕಥೆಯ ವರ್ಗೀಕರಣದಲ್ಲಿ ಹೊಸ ಅಧ್ಯಾಯವೊಂದನ್ನೇ ತೆರೆಯಿತು. ಅಲ್ಲದೆ, ಈಗ ಅವರ ಸೂಚಿಗಳು ಎಲ್ಲ ಕಡೆಯೂ ಜನಪ್ರಿಯವಾಗಿ ಬಳಕೆಯಾಗುತ್ತಿವೆ. ಇಂಥ ವ್ಯಾಪಕ ವರ್ಗೀಕರಣದ ಅವಶ್ಯಕತೆಯನ್ನು ಮೊದಲ ಬಾರಿಗೆ ಕಂಡುಕೊಂಡವರು ಕಾರ್ಲೆ ಕ್ರೊಹ್ನ. ಆತ ಇದರ ಪೂರ್ಣ ಜವಾಬ್ದಾರಿಯನ್ನು ಆಂಟಿ ಆರ್ನೆಗೆ ವಹಿಸಿದ. ಆರ್ನೆ ದೊರೆತಿರುವ ಎಲ್ಲ ಕಥೆಗಳ ಅಭ್ಯಾಸದಿಂದ ವರ್ಗಗಳನ್ನು ಪಟ್ಟಿಮಾಡಿದ. ಇದರಿಂದ ಕಥೆಗಳ ಮೂಲರೂಪವನ್ನು ನಿರ್ಧರಿಸಲು ಸಾಧ್ಯವಾಯಿತು. ಜನಪದ ಕಥೆಗಳು ಸಮಗ್ರವಾಗಿ ಸಿಕ್ಕುವ ವರೆಗೆ ವರ್ಗಸೂಚಿ (ಟೈಪ್ ಇಂಡೆಕ್ಸ್) ಬೆಳೆಯುತ್ತ ಹೋಗುತ್ತದೆ. ಹೊಸದು ಸಿಕ್ಕಿದಂತೆಲ್ಲ ಅದಕ್ಕೆ ಸೇರಿಸುತ್ತ ಹೋಗಬೇಕಾಗುತ್ತದೆ. ಆರ್ನೆ ಬಹಳವಾಗಿ ಶ್ರಮಿಸಿ ಇದನ್ನು ಒಂದು ನೆಲೆಗೆ ತಂದ. ಆದರೆ ಅದನ್ನು ಪ್ರಕಟಪಡಿಸುವ ಮೊದಲೆ, ಫಿನ್ಲೆಂಡಿನ ಈ ವಿದ್ವಾಂಸ 1923ರಲ್ಲಿ ತೀರಿಕೊಂಡ. ಆಮೇಲೆ ಈ ಕೆಲಸವನ್ನು ಸ್ಟಿತ್ ಥಾಂಸನ್‌ಗೆ ವಹಿಸಿಕೊಡಲಾಯಿತು. ಥಾಂಸನ್ ವರ್ಗಸೂಚಿಯನ್ನು ಇನ್ನಷ್ಟು ವಿಸ್ತರಿಸಿ 1928ರಲ್ಲಿ ದಿ ಟೈಪ್ಸ್ ಆಫ್ ದಿ ಪೋಕ್ ಟೇಲ್ ಎಂಬ ಹೆಸರಿನಲ್ಲಿ ಗ್ರಂಥವೊಂದು ಪ್ರಕಟವಾಗಲು ನೆರವಾದ.

ವರ್ಗಸೂಚಿಯಿಂದ ಹಲವು ರೀತಿಯ ಉಪಯೋಗಗಳಿವೆ. ಅಪಾರ ಜನಪದ ಕಥೆಗಳ ಉಗ್ರಾಣವಾಗಿರುವ ನಿಶ್ಚಿತ ಪ್ರದೇಶವೊಂದರ ಸಾಂಪ್ರದಾಯಿಕ ಕಥನ ಪರಿವೀಕ್ಷಣೆಗೆ ಅಡಿಪಾಯ ಹಾಕುವ ಉದ್ದೇಶದಲ್ಲಿ ವರ್ಗಸೂಚಿ ಅವಶ್ಯವಾಗುತ್ತದೆ. ವರ್ಗವೊಂದರ ಎಲ್ಲ ಪಾಠಾಂತರಗಳು ಅನುವಂಶೀಯ ಸಂಬಂಧವನ್ನು ಪಡೆದಿರುವುದನ್ನು ಇದು ಸೂಚಿಸುತ್ತದೆ. ಇದಲ್ಲದೆ ಮೂಲಭೂತವಾಗಿ ಕಥಾವರ್ಗಗಳು ಎಷ್ಟಿವೆ. ಯಾವ ರೀತಿಯಲ್ಲಿವೆ ಎಂಬೆಲ್ಲ ಅಂಶಗಳನ್ನು ಸಾಧಾರಪಡಿಸಲು ವರ್ಗ ಸೂಚಿಯಂಥ ಕೃತಿ ತೀರ ಉಪಯುಕ್ತವಾಗುತ್ತದೆ. ಮುಂದಿನ ಯಾವುದೇ ಅಧ್ಯಯನಕ್ಕೆ ಇದು ಮೂಲಸಾಮಗ್ರಿಗಳನ್ನು ಒದಗಿಸುವ ಆಕರ ಗ್ರಂಥವಾಗಿ ಉಳಿದುಕೊಳ್ಳುತ್ತದೆ.

(ಆರ್.ಜಿ.)

**ಕಥಾವಳಿ :** ಉತ್ತಮ ಕಥಾ ಸಾಹಿತ್ಯವನ್ನೊದಗಿಸಲು ಪ್ರಾರಂಭವಾದ ಮಾಸಪತ್ರಿಕೆ. ಓಲೇಟಿ ವಿ. ಗುಪ್ತರ ಒಡೆತನದಲ್ಲಿ ಡಿ.ಎಸ್. ರಾಮಕೃಷ್ಣರಾಯರ ಶ್ರದ್ಧೆ, ದುಡಿಮೆಗಳಿಂದ ಕಥಾವಳಿ ಸರ್ವಾಂಗ ಸುಂದರವಾಗಿ ಜುಲೈ 1938ರಲ್ಲಿ ಬೆಂಗಳೂರು ಅಕ್ಕಿಪೇಟೆಯ ಮೋಹನ್ ಪ್ರೆಸ್ ಎಂಬ ಸಣ್ಣ ಮುದ್ರಣಾಲಯದಲ್ಲಿ ಜನ್ಮತಾಳಿ, ಕೆಲವೇ ವರ್ಷಗಳಲ್ಲಿ ಕರ್ಣಾಟಕದ ಪ್ರಸಿದ್ಧ ಮಾಸಪತ್ರಿಕೆಯಾಯಿತು. ಅದು ಪ್ರಾರಂಭವಾದ ಕಾಲ ಅದರ ಪ್ರಗತಿಗೆ ಅನುಕೂಲವಾಗಿಯೇ ಇತ್ತು. ಸಿ.ಕೆ.ವೆಂಕಟರಾಮಯ್ಯ, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಆನಂದ ಮೊದಲಾದ ಪ್ರಸಿದ್ಧರು ಆಧುನಿಕ ಸಣ್ಣ ಕಥೆಗಳ ವೈಶಿಷ್ಟ್ಯವನ್ನು ಪರಿಚಯ ಮಾಡಿಕೊಟ್ಟು, ಜನತೆಯ ಆಸಕ್ತಿಯನ್ನು ಹೆಚ್ಚಿಸಿದ್ದರು. ಕೆಲವು ಕಾಲ ಅ.ನ. ಕೃಷ್ಣರಾಯರ ಸಂಪಾದಕತ್ವದಲ್ಲಿದ್ದ ಕಥಾಂಜಲಿ ಮಾಸಪತ್ರಿಕೆ ಪ್ರಜಾಮತ ಪತ್ರಿಕೆಯ ಬಿ.ಎನ್. ಗುಪ್ತರ ಮಾಲೀಕತ್ವದಲ್ಲಿ ಆಗತಾನೆ ಮತ್ತೆ ಬೆಳಕಿಗೆ ಬಂದಿತ್ತು.

ಕಥಾವಳಿ ಪ್ರಾರಂಭದಲ್ಲಿ ಕ್ರೌನ್ 1/4 ಆಕಾರದಲ್ಲಿದ್ದು 1943ರಿಂದ ಕ್ರೌನ್ 1/8 ಆಕಾರದಲ್ಲಿ ಪ್ರಕಟವಾಯಿತು. ಅದರ ಬಿಡಿ ಪ್ರತಿ 4 ಆಣೆಯಿಂದ 6 ಆಣೆಯವರೆಗೂ ಹೆಚ್ಚಾಗಿ, ವಾರ್ಷಿಕ ಚಂದಾ 5 ರೂಪಾಯಿಗಳಾದುವು. ಪ್ರಾರಂಭದಲ್ಲಿ ಪ್ರಕಟವಾಗುತ್ತಿದ್ದ ಪ್ರತಿಗಳ ಸಂಖ್ಯೆ 1,000; ಪತ್ರಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ (1951ರಲ್ಲಿ) ಪ್ರಕಟವಾಗುತ್ತಿದ್ದ ಪ್ರತಿಗಳು 7,000. ಮನೋರಂಜನೆಯೇ ಕಥಾವಳಿಯ ಮುಖ್ಯ ಗುರಿ. ಸಣ್ಣಕಥೆ, ಕವಿತೆ, ಹರಟೆ, ಏಕಾಂಕ ನಾಟಕ, ಹಾಸ್ಯ. ವ್ಯಕ್ತಿಚಿತ್ರಗಳಿಗೆ ಕಥಾವಳಿ ಮೀಸಲು. ಜೀವಿತದಲ್ಲಿನ ವಿನೋದ, ಸ್ವಾರಸ್ಯ ವಿಚಾರ, ವಿಚಿತ್ರ ಅನುಭವ, ವಿಶೇಷ ಪ್ರಸಂಗ ಇವುಗಳೆಲ್ಲ ಹಿತಮಿತವಾಗಿ, ಸಾಹಿತ್ಯ ರೂಪದಲ್ಲಿ ಈ ಪತ್ರಿಕೆಯ ಕಾರ್ಡಿನಲ್ಲಿ ಕಥೆಗಳು ಎಂಬ ವಿಭಾಗದಲ್ಲಿ ಬರುತ್ತಿದ್ದುವು. ಈ ಅಂಕಣ ಬೇಗ ಓದುಗರ ಮನ ಸೆಳೆದಿತ್ತು.

ಕಥಾವಳಿಯ ಸಂಪಾದಕ ಮಂಡಲಿಯಲ್ಲಿ ಜಿ. ವರದರಾಜರಾವ್ ಹಾಗೂ ನಗುವನಂದ ಮಾಸಪತ್ರಿಕೆಯಲ್ಲಿ 1933ರಿಂದ ಹಾಸ್ಯಲೇಖನಗಳನ್ನು ಬರೆಯುತ್ತಿದ್ದ ವಿ. ಜಿ. ಕೃಷ್ಣಮೂರ್ತಿ ಅವರು ಬಹುಕಾಲವಿದ್ದು ಅದರ ಪ್ರಕಟಣೆಯ ಬಗ್ಗೆ ಉಪಯುಕ್ತ ಸಲಹೆಗಳನ್ನು ಕೊಡುತ್ತಿದ್ದರು. ಕಥಾವಳಿ ಉಚ್ಚಸ್ಥಾನದಲ್ಲಿದ್ದಾಗ ಅದರಲ್ಲಿ ಸಣ್ಣ ಕಥೆಗಳಲ್ಲದೆ ಮಕ್ಕಳ ಬಳಗ, ವನಿತಾವಿಭಾಗ, ಸಂಶೋಧನ ಸಮಸ್ಯೆ, ಸಾಹಸವಾಹಿನಿ, ನಗೆಮಿಂಚು, ಸಾಹಿತ್ಯ ಭಂಡಾರ, ಚಲನಚಿತ್ರ, ರಾಶಿ ಭವಿಷ್ಯ ಮೊದಲಾದ ವಿಭಾಗಗಳಿದ್ದುವು. ಉಡುಪಿಯ ಗಿರಿಬಾಲೆ ವನಿತಾ ವಿಭಾಗವನ್ನು ನೋಡಿಕೊಳ್ಳುತ್ತಿದ್ದರು. ಮಕ್ಕಳ ಬಳಗ, ಬಿ. ಆರ್. ಎಂ. ಸ್ವಾಮಿಯವರ ನೆರವಿನಿಂದ ಮಕ್ಕಳಿಗೆ ಪ್ರಿಯವಾಗಿತ್ತು. ಕಥೆಗಳನ್ನು ಸಮಸ್ಯೆಯ ರೂಪದಲ್ಲಿ ಕೊಟ್ಟು, ಸಾರಸ್ಯವಾದ ಘಟ್ಟದಲ್ಲಿ ನಿಲ್ಲಿಸಿ, ಮುಂದಿನ ಸಂಚಿಕೆಗಾಗಿ ಕಾಯುವಂತೆ ವಾಚಕರ ಉತ್ಸಾಹವನ್ನು ಕೆರಳಿಸುವ ವಿಧಾನವನ್ನು ಕಥಾವಳಿ ಪ್ರಾರಂಭಿಸಿತು. ಇದಲ್ಲದೆ ಸಾಹಸವಾಹಿನಿ ವಿಭಾಗದಲ್ಲಿ ಸಾಹಸದ ಕಥೆಗಳು ಅವಿಚ್ಛಿನ್ನವಾಗಿ ಪ್ರಕಟವಾಗುತ್ತಿದ್ದುವು.

ಕಥಾವಳಿಯ ವಿಶೇಷ ಆಕರ್ಷಣೆ ಪ್ರತಿವರ್ಷ ಜುಲೈ ತಿಂಗಳಲ್ಲಿ ಹೊರಡುತ್ತಿದ್ದ ಅದರ ವಾರ್ಷಿಕ ಸಂಚಿಕೆ. 250 ಪುಟಗಳಿಗೂ ಮಿಕ್ಕಿದ್ದು, ಕ್ರೌನ್ 1/8 ಆಕಾರದಲ್ಲಿದ್ದ ಈ ವಾರ್ಷಿಕ ಸಂಚಿಕೆಯಲ್ಲಿ ವಾಚಕರ ಪ್ರಶ್ನೆಗಳಿಗೆ ಸ್ವಾರಸ್ಯವಾದ ಉತ್ತರಗಳು ಬರುತ್ತಿದ್ದುವು. ಈ ವಿಶೇಷ ಸಂಚಿಕೆಗಾಗಿ ಏರ್ಪಡಿಸುತ್ತಿದ್ದ ವಾರ್ಷಿಕ ಕಥಾಸ್ಪರ್ಧೆಯಲ್ಲಿ ಉತ್ತಮ ಕಥೆಗಳಿಗೆ ಬಹುಮಾನ ನೀಡುವ ಪದ್ಧತಿ ಇತ್ತು. ಕಥಾವಳಿಯ 12ನೆಯ ವಾರ್ಷಿಕ ಕಥಾಸ್ಪರ್ಧೆಯಲ್ಲಿ (1950) ಪ್ರಥಮ ಬಹುಮಾನ ಗಳಿಸಿದ ಸಣ್ಣ ಕಥೆ ಸಮಸ್ಯೆಯ ಮಗು ಅದರ ಲೇಖಕಿ ತ್ರಿವೇಣಿಯವರ ಕಾದಂಬರಿ ಕ್ಷೇತ್ರದಲ್ಲಿನ ಉಜ್ವಲ ಭವಿಷ್ಯವನ್ನು ಸಾರಿತು. ಕಥಾವಳಿಯ ಲೇಖಕವರ್ಗಕ್ಕೆ ಸೇರಿದ್ದವರೆಂದರೆ ಎಸ್.ವಿ. ಪರಮೇಶ್ವರಭಟ್ಟ, ಬಸವರಾಜ ಕಟ್ಟೀಮನಿ, ಗೋಪಾಲ ಕೃಷ್ಣ ಅಡಿಗ, ಜಿ.ಪಿ.ರಾಜರತ್ನಂ, ಜಿ. ವರದರಾಜರಾವ್, ಬಿ. ಪುಟ್ಟಸ್ವಾಮಯ್ಯ, ಎಂ.ವಿ. ಸೀತಾರಾಮಯ್ಯ, ಗೊರೂರು ರಾಮಸ್ವಾಮಿ ಐಯಂಗಾರ್, ವಿ.ಜಿ.ಕೃಷ್ಣಮೂರ್ತಿ, ಕೈವಾರ ರಾಜರಾವ್, ಕೃಷ್ಣಮೂರ್ತಿ ಪುರಾಣಿಕ, ಮತಿಘಟ್ಟ ಕೃಷ್ಣಮೂರ್ತಿ, ಇನಾಂದಾರ್, ಕಾಂತರಾಜಯ್ಯ, ಗಿರಿಬಾಲೆ, ಅಮ್ಮೆಂಬಳ ಶಂಕರ ನಾರಾಯಣ ನಾವಡ, ನವಗಿರಿನಂದ, ಕೆ. ಗೋಪಾಲಕೃಷ್ಣರಾವ್, ಎನ್. ಸೂರಪ್ಪ, ನಾಡಿಗೇರ ಕೃಷ್ಣರಾಯ, ಆರ್. ಎಸ್. ರಾಮರಾವ್ ಮೊದಲಾದ ನಾಡಿನ ಸುಪ್ರಸಿದ್ಧ ಸಾಹಿತಿಗಳು. ಅಚ್ಚುಮೊಳೆಗಳನ್ನು ಬಳಸಿ ಸಾಧಾರಣವಾದ ಟ್ರೆಡಲ್ ಮಂತ್ರದಲ್ಲಿ ಅಚ್ಚುಕಟ್ಟಾದ ಮುದ್ರಣ ಕಥಾವಳಿಯ ಒಂದು ವೈಶಿಷ್ಟ್ಯ.

ಸು. 20 ವರ್ಷ ಸೇವೆ ಸಲ್ಲಿಸಿದ ಕಥಾವಳಿ 1958ರವರೆಗೂ ಅಸ್ತಿತ್ವದಲ್ಲಿದ್ದು ತರವಾಯ ನಿಂತುಹೋಯಿತು. (ವಿ.ಜಿ.ಕೆ.)

**ಕಥಾಸರಿತ್ಸಾಗರ :** ಶಾತವಾಹನ ರಾಜನ ಆಸ್ಥಾನದಲ್ಲಿದ್ದ ಗುಣಾಢ್ಯ ಪೈಶಾಚೀ ಭಾಷೆಯಲ್ಲಿ ರಚಿಸಿದ ಬೃಹತ್ಕಥೆಯನ್ನು ಆದರಿಸಿ ಕಾಶ್ಮೀರ ದೇಶದ ಸೋಮದೇವನೆಂಬ ಪಂಡಿತ ಸು. 11ನೆಯ ಶತಮಾನದಲ್ಲಿ ಸಂಸ್ಕೃತದಲ್ಲಿ ರಚಿಸಿದ ಒಂದು ಕಥಾಸಂಕಲನ. ಕಥೆಗಳೆಂಬ ನದಿಗಳು ಬಂದು ಸೇರುವ ಸಾಗರ ಎಂದು ಈ ಶೀರ್ಷಿಕೆಯ ಅರ್ಥ.

ಬೃಹತ್ಕಥೆಯ ಸಂಸ್ಕೃತ ರೂಪವನ್ನು ಮೂರು ಗ್ರಂಥಗಳಲ್ಲಿ ನೋಡಬಹುದು. ಅವುಗಳಲ್ಲಿ ಅತಿಪ್ರಾಚೀನವಾದುದು ಬುಧಸ್ವಾಮಿಯದು. ಇದರಲ್ಲಿ 4,539 ಶ್ಲೋಕಗಳಿವೆ. ಆದರೆ ಈತ ಯಾವಾಗ ಎಲ್ಲಿ ಇದ್ದನೆಂಬುದು ತಿಳಿದುಬಂದಿಲ್ಲ. ಮಿಕ್ಕೆರಡು ಗ್ರಂಥಗಳು ಕಾಶ್ಮೀರದಲ್ಲಿದ್ದ ಸಮಕಾಲೀನ ಪಂಡಿತರಿಬ್ಬರು ರಚಿಸಿದುವು. ಅವರಲ್ಲಿ ಕ್ಷೇಮೇಂದ್ರ (ಪ್ರ.ಶ. 1025–75) ಒಬ್ಬ. ಈತ ಕವಿ ವಿಮರ್ಶಕ ಇವನ ಗ್ರಂಥ ಬೃಹತ್ಕಥಾಮಂಜರಿ. ಮತ್ತೊಬ್ಬ ಪ್ರಸ್ತುತ ಗ್ರಂಥದ ಕರ್ತೃ ಸೋಮದೇವ. ಇದರಲ್ಲಿ 125 ಅಧ್ಯಾಯಗಳಿದ್ದು 21,000 ಶ್ಲೋಕಗಳಿವೆ.

ಸ್ಪೇಯರ್ ಎಂಬ ಪಾಶ್ಚಾತ್ಯ ಪಂಡಿತ ಕಥಾಸರಿತ್ಸಾಗರದಲ್ಲಿ ಇಪ್ಪತ್ತೊಂದು ಸಾವಿರದ ಮೂನ್ನೂರೆಂಬತ್ತೆಂಟು (21,388) ಶ್ಲೋಕಗಳು ಇವೆಯೆಂದು ಅಭಿಪ್ರಾಯ ಪಟ್ಟಿದ್ದಾನೆ. ಬೂಲರ್ ಎಂಬ ಮತ್ತೊಬ್ಬ ಪಂಡಿತ ಸೋಮದೇವ ಕಥಾಸರಿತ್ಸಾಗರವನ್ನು ಅನಂತರಾಜನ ರಾಣಿಯೂ ಕಲಶನೆಂಬ ರಾಜನ ಮಾತೆಯೂ ಜಲಂಧರ ರಾಜಕುಮಾರಿಯೂ ಆದ ಸೂರ್ಯಮತಿಯ ಪ್ರೋತ್ಸಾಹದಿಂದ ವಿನೋದಕ್ಕಾಗಿ ರಚಿಸಿದನೆಂದು ಹೇಳಲಾಗಿದೆ. ಈ ಗ್ರಂಥವನ್ನು 1930ರಲ್ಲಿ ಮುಂಬಯಿ ನಗರದ ನಿರ್ಣಯಸಾಗರ ಮುದ್ರಣಾಲಯದ ಮಾಲೀಕರು ಮುದ್ರಿಸಿದ್ದಾರೆ. (ಪಿ.ಎಸ್.ಆರ್.ಎಸ್.)

ಇಲ್ಲಿಯ ಕಥೆಗಳು ಕ್ಷೇಮೇಂದ್ರನ ಗ್ರಂಥಕ್ಕಿಂತ ದೀರ್ಘವಾಗಿವೆ. ಕಥನಕಲೆ ಸೋಮದೇವನಿಗೆ ಚೆನ್ನಾಗಿ ಒಲಿದಿದೆ. ಅಲ್ಲಲ್ಲಿ ಕಾವ್ಯಪ್ರತಿಭೆ ಮಿಂಚಿದರೂ ಕಥನ ಕಲೆಗದು ಅಡ್ಡವಾಗಿಲ್ಲ. ಚಿತ್ರಗ್ರಾಹಿ ಉಪಮೆಗಳು, ವಿವೇಕದ್ಯೋತಕವಾದ ಅನುಭವಗಳು ಅಲ್ಲಲ್ಲಿ ನುಸುಳಿ ಕಥೆಗಳನ್ನು ಸ್ವಾರಸ್ಯಗೊಳಿಸಿವೆ. ಶೈಲಿ ಎಲ್ಲಿಯೂ ಅಲಂಕಾರಿಕವಾಗದೆ ಕಥೆಯ ಓಟ, ಓಘಗಳಲ್ಲಿ ಹಿಡಿತವಿದೆ.

ಈ ಗ್ರಂಥದಲ್ಲಿ ಉದಯನನ ಮಗನಾದ ನರವಾಹನದತ್ತನ ಪ್ರಣಯ ಸಾಹಸಗಳು, ಪರಿಣಯಗಳೇ ಹೇರಳವಾಗಿವೆ. ಮಾನಸವೇಗನೆಂಬ ವಿದ್ಯಾಧರ ನರವಾಹನದತ್ತನ ಕಾಂತೆ ಮದನಮಂಚುಕೆಯನ್ನು ಅಪಹರಿಸುವುದು; ಅವಳನ್ನು ಹುಡುಕಿಕೊಂಡು ಹೋಗುತ್ತ ನಾಯಕ ರೋಮಾಂಚಕಾರಿ ಸಾಹಸಗಳನ್ನು ಎಸಗಿ, ಅನೇಕ ಪ್ರಣಯ, ಪರಿಣಯಗಳನ್ನು ಮಾಡಿಕೊಂಡು, ಪ್ರಬಲ ಪ್ರಯತ್ನದಿಂದ ಕಾಂತೆಯನ್ನು ಪಡೆಯುವುದೇ ಆಗಿದೆ. ಇಂಥ ಕೆಲವು ಸ್ವತಂತ್ರವಾದ ಪ್ರಣಯಕಥೆಗಳಲ್ಲಿ ಅನೇಕ ಉಪಕಥೆಗಳೂ ಅವುಗಳೊಳಗೆ ಮತ್ತೆ ಉಪಕಥೆಗಳೂ ಬರುತ್ತವೆ. ಅವುಗಳಲ್ಲಿ ಕೆಲವು ಪ್ರಣಯ ಕಥೆಗಳು; ಕೆಲವು ಧೀರ ಗಂಭೀರ ಕಥೆಗಳು; ಮತ್ತೆ ಕೆಲವು ಬುದ್ಧಿವಂತಿಕೆಯ ಹಾಗೂ ವಿನೋದ ಕಥೆಗಳು. ಪಂಚತಂತ್ರದ ಮೃಗ ಕಥೆಗಳೂ ವಿಕ್ರಮರಾಜನ ಬೇತಾಳ ಕಥೆಗಳೂ ಇಲ್ಲಿವೆ. ಜೀವನ, ಮತಧರ್ಮ, ಸಂಗೀತ, ನಾಟ್ಯಕಲೆಗಳು, ವೈದ್ಯ ಎಲ್ಲವೂ ಇದ್ದು ಧೀರೋದಾತ್ತರಿಂದ ಹಿಡಿದು ಧೂರ್ತ ವಂಚಕರವರೆಗೂ ಕಾಣಸಿಗುವ ಮನುಷ್ಯ ಪ್ರಪಂಚವೆಲ್ಲ ಚಲನಚಿತ್ರದಂತೆ ಇಲ್ಲಿ ಚಿತ್ರಿತವಾಗಿದೆ. ಜಗತ್ತಿನ ಕಥಾಸಾಹಿತ್ಯದಲ್ಲಿ ಕಂಡುಬರುವ ಕಥಾವೃತ್ತಿಬೀಜಗಳೆಲ್ಲ ಒಂದಲ್ಲ ಒಂದು ರೂಪದಲ್ಲಿ ಇಲ್ಲಿ ಕಾಣುತ್ತವೆ. ಪ್ರಾಚೀನ ನಾಗರೀಕತೆಯ ಸೀಳು ನೋಟವನ್ನು ಈ ಕಥೆಗಳಲ್ಲಿ ಕಾಣಬಹುದು. ಟಾನಿ, ಪೆಂಜರ್ ಇವರುಗಳು ಮಾಡಿರುವ ಇಂಗ್ಲಿಷ್ ಭಾಷಾಂತರದಿಂದ ಈ ಕಥೆಗಳು ಜಗತ್ತಿನ ಜನಾದರಣೆಯನ್ನು ಪಡೆದಿವೆ.

ಕನ್ನಡದಲ್ಲಿ ಕಥಾಸರಿತ್ಸಾಗರದ ನೇರ, ಸಂಗ್ರಹ, ಸುಲಭಗ್ರಾಹ್ಯ ಅನುವಾದವೆಂದರೆ ಎ. ಆರ್. ಕೃಷ್ಣಶಾಸ್ತ್ರಿಗಳ ಕಥಾಮೃತ. *

**ಕಥಾಸಾಹಿತ್ಯ :** ಕಥಾತ್ಮಕವಾದ ಎಲ್ಲ ಸಾಹಿತ್ಯಕ್ಕೂ ಈ ಹೆಸರು ಸಲ್ಲುತ್ತದೆ. ಅಂದರೆ ಬಹುತೇಕ ಸಾಹಿತ್ಯವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಕಥಾತ್ಮಕವಾಗಿಯೇ ಇರುತ್ತದೆ. ಕಥೆ ಇಲ್ಲದ್ದು ಶಾಸ್ತ್ರವೋ ಪ್ರಬಂಧವೋ ಆಗಿರುತ್ತದೆ. ಉದಾಹರಣೆಗೆ, ಪ್ರಪಂಚದ ಮಹಾಕಾವ್ಯಗಳೆಲ್ಲ ಕಥೆಗಳೇ. ರಾಮಾಯಣ, ಮಹಾಭಾರತ, ಇಲಿಯಡ್, ಒಡಿಸ್ಸಿ, ಈನಿಯಡ್ ಮೊದಲಾದುವು ದೊಡ್ಡ ಕಥೆಗಳು. ಅನೇಕಾನೇಕ ವೀರಾಧಿವೀರರು ನಡೆಸಿದ ಸಾಹಸ ಕಾರ್ಯಗಳು, ಅವರ ಏಳು ಬೀಳುಗಳು, ಉತ್ಕರ್ಷಗಳು–ಇವುಗಳಿಂದಾಗಿ ಬಹು ಕಾಲ ಬಹು ಭಾಗಗಳಲ್ಲಿ ನಡೆದ ಅವರ ಚರಿತ್ರೆಗಳ ಹರಹನ್ನು ಇಲ್ಲಿ ನಾವು ಕಾಣಬಹುದು. ಈ ಬೃಹತ್ ಕಥೆಗಳಲ್ಲಿ ಸಣ್ಣ ಪುಟ್ಟ ಕಥಾನಕಗಳು, ಉಪಾಖ್ಯಾನಗಳು ದೃಷ್ಟಾಂತ ಕಥೆಗಳು ಬರುತ್ತವೆ. ಇವು ಪದ್ಯಾತ್ಮಕವಾಗಿಯೇ ಇರುವುದು ಇನ್ನೊಂದು ಸ್ವಾರಸ್ಯ ಕಥೆ ನಿಜವಾಗಿ ಗದ್ಯದಲ್ಲೂ ಇರಬಹುದು. ಮಹಾಕಾವ್ಯಗಳಂತೆ ಪುರಾಣಾದಿಗಳೂ ಕಥಾಸರಿತ್ಸಾಗರಗಳೇ ಆಗಿವೆ. ವ್ಯಕ್ತಿಚರಿತ್ರೆ, ಕ್ಷೇತ್ರಮಹಾತ್ಮ್ಯ–ಮೊದಲಾದ ಅನೇಕಾನೇಕ ವಿಷಯಗಳಿಂದ ಅವು ಪರಿಪುಷ್ಟವಾಗಿವೆ. ನೀತಿ, ತತ್ತ್ವ, ಮತಧರ್ಮಗಳ ಬೋಧನೆಗಾಗಿ ಅವು ಜನ್ಮ ತಾಳಿದುವು.

ಇವಲ್ಲದೆ ಕಥೆಗೆ ಇನ್ನೂ ಹಿಂದಿನ ಮೂಲವೆಂದರೆ ವೇದೋಪನಿಷತ್ತುಗಳು, ವೇದಗಳಲ್ಲಿಯೇ ಸಾಕಷ್ಟು ಕಥೆಗಳಿವೆ. ಉಪನಿಷತ್ತುಗಳಲ್ಲಿ ಕಥೆಗೆ ಅನಿವಾರ್ಯವಾದ ಪ್ರಾಶಸ್ತ್ಯ ಬಂದಿದೆ. ಉಜ್ಜ್ವಲವಾದ ಕಥಾನಕಗಳ ಪರಂಪರೆಯನ್ನು ನಾವು ಅಲ್ಲಿ ಕಾಣುತ್ತೇವೆ.

ಕಥೆಯ ಮೂಲ ಇನ್ನೂ ಹಿಂದಿನದೆಂದು ವಿದ್ವಾಂಸರ ಅಭಿಪ್ರಾಯ. ಮಾನವನ ಕಲಾಮೂಲವಾದ ಜಾನಪದದಲ್ಲಿ ವೈವಿಧ್ಯಮಯವಾದ ಕಥಾಸಾಹಿತ್ಯ ಅಡಗಿದೆ. ಪ್ರಕೃತಿಯ ವಿವಿಧ ವೈಚಿತ್ರ್ಯಗಳನ್ನು ವರ್ಣಿಸಲು, ಒಗಟುಗಳನ್ನು ಬಿಡಿಸಲು, ಅಂದಿನ ಸಾಮಾಜಿಕ, ಧಾರ್ಮಿಕ, ನೈತಿಕ ಶಿಷ್ಟಾಚಾರಗಳನ್ನು ಸ್ಪಷ್ಟಪಡಿಸಲು ವಿಧವಿಧವಾದ ಕಥೆಗಳು ಹುಟ್ಟಿವೆ. ನೀತಿಕಥೆ (ಫೇಬಲ್), ಅಜ್ಜಿಕಥೆ (ಫೋಕ್‍ಟೇಲ್), ಕಟ್ಟುಕಥೆ (ಮೆರ್ಖೆನ್), ಮೊದಲಾದ ಬಗೆಗಳು ಪದ್ಯಗದ್ಯಗಳೆರಡರಲ್ಲೂ ಸಿಗುತ್ತವೆ. ಈ ಬಗೆಯ ಸಾಹಿತ್ಯ ಎಲ್ಲ ಜನಾಂಗಗಳಲ್ಲೂ ಉಂಟು. ಎಷ್ಟೋ ವೇಳೆ ಎಲ್ಲ ಕಥೆಗಳೂ ಸ್ಥೂಲವಾಗಿ ಒಂದೇ ಮಾದರಿಯದಾಗಿ ಕಾಣಬಹುದಾದರೂ ವಿವರಗಳಲ್ಲಿ ಪ್ರಾದೇಶಿಕ ವೈವಿಧ್ಯವಿದ್ದೇ ಇರುತ್ತದೆ.

ಕಥೆ ಎಂಬ ಮಾತು ಒಂದು ಕಡೆ ಕಾದಂಬರಿಗೂ ಇನ್ನೊಂದು ಕಡೆ ಸಣ್ಣ ಕಥೆಗೂ ಈಚೆಗೆ ಬಳಕೆಗೆ ಬಂದಿದೆ. ಹಾಗೆ ನೋಡಿದರೆ ಮಹಾಕಾವ್ಯ ಕಥೆಯಾಗಬಹುದಾದರೆ ನಾಟಕವೂ ಕಥೆಯಾದೀತು. ಕಾದಂಬರಿಯ ಕ್ಷೇತ್ರ ವಿಶಾಲವಾದುದು. ಹತ್ತಾರು ಘಟನೆಗಳ, ಹತ್ತಾರು ವ್ಯಕ್ತಿಗಳ ಜೀವನ ಸಂಕೀರ್ಣತೆಯನ್ನಲ್ಲಿ ಕಾಣುತ್ತೇವೆ. ಕಾದಂಬರಿ ಕ್ಷೇತ್ರ ದಿನದಿನಕ್ಕೆ ವಿಶಾಲವಾಗುತ್ತಿದೆ. ಸಾಮಾಜಿಕ, ಚಾರಿತ್ರಿಕ, ವಿಡಂಬನಾತ್ಮಕ, ಪತ್ತೇದಾರಿ, ಅದ್ಭುತರಮ್ಯ, ತಾತ್ತ್ವಿಕ, ಸಾಕ್ಷ್ಯ-ಮಾದರಿಗಳಲ್ಲಿ ಬಹು ಉತ್ತಮ ಕೃತಿಗಳು ಅಲ್ಲಿ ಕಾಣಸಿಗುತ್ತವೆ. ಕಾದಂಬರಿ ಬಹು ಜನಪ್ರಿಯ ಪ್ರಕಾರವೂ ಹೌದು.

ಸಣ್ಣ ಕಥೆ ಅದರ ಹೆಸರೇ ತಿಳಿಸುವಂತೆ ಗಾತ್ರದಲ್ಲಿ ಚಿಕ್ಕದು. ಆದರೆ ಪ್ರಭಾವದಲ್ಲಿ ಭಾವಗೀತೆಯಷ್ಟು ತೀವ್ರವಾದುದು. ಬಿಸಿಬಿಸಿಯಾದ ಯಾವುದೋ ಒಂದು ಘಟನೆಯನ್ನದು ಎತ್ತಿಕೊಂಡು ನೇರವಾಗಿ ಸ್ವಲ್ಪದರಲ್ಲಿ ಹೇಳಿ ಮುಗಿಸುತ್ತದೆ. ಕಥೆ ಇಲ್ಲಿ ಪಂದ್ಯದ ಕುದುರೆಯಂತೆ. ನೇರ ಗುರಿ ಮುಟ್ಟುವುದೇ ಅದರ ಉದ್ದೇಶ.

ಇದು ಕಥಾಸಾಹಿತ್ಯದ ಸ್ಥೂಲ ವಿವರ. ಹೆಚ್ಚಿನ ವಿಷಯಗಳಿಗೆ-(ನೋಡಿ-ಅಜ್ಜಿಕಥೆ) (ನೋಡಿ-ಕಟ್ಟುಕಥೆ) (ನೋಡಿ-ಕಾದಂಬರಿ) (ನೋಡಿ-ಮಹಾಕಾವ್ಯ) (ನೋಡಿ-ಕನ್ನಡದಲ್ಲಿ-ಸಣ್ಣ-ಕಥೆಗಳು) ಇನ್ನೂ ಹೆಚ್ಚಿನ ಸಂಗತಿಗಳಿಗೆ ಆಯಾ ದೇಶಗಳ ಸಾಹಿತ್ಯ ವಿಭಾಗಗಳನ್ನು ನೋಡಿ.

ಪ್ರಕೃತ ಲೇಖನದಲ್ಲಿ ಭಾರತೀಯ ಕಥಾಸಾಹಿತ್ಯವನ್ನು ವಿವೇಚಿಸಲಾಗಿದೆ.

ಕಥೆಗಳನ್ನು ಕೇಳುವುದೆಂದರೆ ಮಕ್ಕಳು ಮೊದಲುಗೊಂಡು ಎಲ್ಲ ವಯಸ್ಸಿನವರಿಗೂ ಪ್ರೀತಿ ಎಂಬ ಮಾತು ಭರತಖಂಡದ ಜನರಿಗೆ ವಿಶೇಷವಾಗಿ ಅನ್ವಯಿಸುತ್ತದೆ. ಸಣ್ಣ ಮಕ್ಕಳು ಹಾಸಿಗೆಯಲ್ಲಿ ಸುಖವಾಗಿ ಮಲಗಿಕೊಂಡು ನಿದ್ರಿಸುವುದಕ್ಕಿಂತ ಮುಂಚೆ ಅಜ್ಜಿ ಹೇಳುತ್ತಿದ್ದ ಕಥೆಗಳನ್ನು ಕೇಳುತ್ತಿದ್ದವೆಂದು ಬಾಣಭಟ್ಟ ತನ್ನ ಹರ್ಷಚರಿತದ 2ನೆಯ ಉಚ್ಛ್ವಾಸದ ಅಂತ್ಯದಲ್ಲಿಯೂ ಶೂದ್ರಕರಾಜ ಆಗಾಗ್ಗೆ ಆಖ್ಯಾಯಿಕಾ ಇತಿಹಾಸ ಪುರಾಣಗಳನ್ನು ಕೇಳುತ್ತ ಕಾಲವನ್ನು ಕಳೆಯುತ್ತಿದ್ದನಲ್ಲದೆ ಮಹಾರಾಣಿ ವಿಲಾಸವತಿಯ ಬಳಿಯಲ್ಲಿ ಅನೇಕ ಕಥೆಗಳನ್ನು ತಿಳಿದಿದ್ದ ಮುದಿ ಸಂನ್ಯಾಸಿಗಳಿದ್ದು ಪುಣ್ಯಕಥೆಗಳನ್ನು ಹೇಳುತ್ತಿದ್ದರೆಂದು ತನ್ನ ಕಾದಂಬರೀ ಕಾವ್ಯದಲ್ಲಿಯೂ ಹೇಳಿದ್ದಾನೆ. ಅನೇಕ ಪುರಾಣಗಳೂ ಕಥೆಗಳೂ ನೈಮಿಶಾರಣ್ಯದಲ್ಲಿ ಯಾಗ ಮಾಡುತ್ತಿದ್ದ ಶೌನಕಾದಿ ಮಹರ್ಷಿಗಳ ಕೋರಿಕೆಯಂತೆ ಸೂತಪುರಾಣಿಕನಿಂದ ಹೇಳಲ್ಪಟ್ಟವೆಂದು ಆಯಾ ಗ್ರಂಥಗಳಲ್ಲಿ ನಿರೂಪಿತವಾಗಿದೆ. ಮನುಷ್ಯರಿಗೆ ಮಾತ್ರವಲ್ಲ, ದೇವತೆಗಳಿಗೂ ಮೃಗಪಕ್ಷಿಗಳಿಗೂ ಕಥೆಯನ್ನು ಕೇಳುವುದರಲ್ಲಿ ಪ್ರೀತಿಯೆಂದು ಬೃಹತ್ಕಥೆಯ ವಿಷಯದಲ್ಲಿ ಕಥಾಸರಿತ್ಸಾಗರದಲ್ಲಿನ ಸಂಗತಿಯೊಂದು ತಿಳಿಸುತ್ತದೆ. ಅದರ ಪ್ರಕಾರ ಪಾರ್ವತೀದೇವಿ ಹೊಸದಾದ ಕಥೆಯನ್ನು ಹೇಳು ಎಂದು ಪರಮೇಶ್ವರನನ್ನು ಕೇಳಿಕೊಳ್ಳಲು ಆತ ಹೇಳಿದ ದೊಡ್ಡ ಕಥೆಯಲ್ಲಿನ (ಇದನ್ನೇ ಗುಣಾಢ್ಯ ಪೈಶಾಚಿ ಭಾಷೆಯಲ್ಲಿ ಬರೆದನೆಂದು ಪ್ರತೀತಿ) ಆರು ಲಕ್ಷ ಗ್ರಂಥ ಪರಿಮಾಣವುಳ್ಳ ಆರು ಕಥೆಗಳನ್ನು ಒಳಗೊಂಡ ಪತ್ರಗಳನ್ನು ಕಾಡಿನಲ್ಲಿ ಅಗ್ನಿಕುಂಡದಲ್ಲಿ ಹಾಕುವುದಕ್ಕೆ ಮೊದಲು ಓದುತ್ತಿದ್ದಾಗ ಅಲ್ಲಿದ್ದ ಮೃಗಪಕ್ಷಿಗಳೆಲ್ಲವೂ ಅಲ್ಲಿಗೆ ಬಂದು ಆಹಾರದ ಮೇಲೆಯೂ ಲಕ್ಷ್ಯವಿಲ್ಲದೆ ಅತ್ಯಂತ ಆದರದಿಂದ ಕೇಳುತ್ತಿದ್ದವಂತೆ.

ಸಂಸ್ಕೃತ ವಾಙ್ಮಯದಲ್ಲಿ ಅತ್ಯಂತ ಪ್ರಾಚೀನವಾದ ಋಕ್ಸಂಹಿತೆಯ ಸೂಕ್ತಗಳಲ್ಲಿಯೂ ಕಥೆಗಳ ಪ್ರಸ್ತಾಪವಿದೆ. 1.179ನೆಯ ಸೂಕ್ತದಲ್ಲಿ ಅಗಸ್ತ್ಯ ಲೋಪಾಮುದ್ರೆಯರ ಸಂವಾದವೂ 10.95ನೆಯ ಸೂಕ್ತದಲ್ಲಿ ಊರ್ವಶೀ ಪುರೂರವರುಗಳ ಸಂವಾದವೂ ಪ್ರಸ್ತುತವಾಗಿದೆ. 7.71.5ನೆಯ ಮಂತ್ರದಲ್ಲಿಯೂ ಇನ್ನೂ ಕೆಲವು ಮಂತ್ರಗಳಲ್ಲಿಯೂ ಅಶ್ವಿನೀದೇವತೆಗಳು ಚ್ಯವನಋಷಿಯ ಜರೆಯನ್ನು ಹೋಗಲಾಡಿಸಿ ಅವನನ್ನು ತರುಣನನ್ನಾಗಿ ಮಾಡಿದ ಕಥೆಯ ಪ್ರಸ್ತಾಪವಿದೆ. ಈ ಕಥೆಗಳೆಲ್ಲವೂ ಮಹಾಭಾರತದಲ್ಲಿಯೂ ಪುರಾಣಗಳಲ್ಲಿಯೂ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ.

ಋಕ್ಸಂಹಿತೆಯ 4.19.9ನೆಯ ಮಂತ್ರದ ಉತ್ತರಾರ್ಧದಲ್ಲಿಯೂ 10.28.4ನೆಯ ಮಂತ್ರದ 3ನೆಯ ಪಾದದಲ್ಲಿಯೂ ಪ್ರಸ್ತುತವಾದುವು ಪೌರಾಣಿಕ ಕಥೆಗಳಲ್ಲ. ಈ ಮಂತ್ರಗಳಲ್ಲಿ (ಲಾಟೀಯ) ಪಂಚತಂತ್ರದಲ್ಲಿ ಹೇಳಲ್ಪಟ್ಟಿರುವ ಕುರುಡ, ಕುಬ್ಜ ಮತ್ತು ತ್ರಿಸ್ತನಿ ಮತ್ತು ನರಿಯೂ ಸಿಂಹವೂ ಮಾತನಾಡುವ ಬಿಲವೂ ಎಂಬ ಕಥೆಗಳ ಪ್ರಸ್ತಾಪವಿರುವುದೆಂದೂ ಊಹಿಸಲಾಗಿದೆ.

ಹೀಗೆಯೆ ಕೃಷ್ಣಯಜುಸ್ಸಂಹಿತೆಗಳಲ್ಲಿಯೂ ಬ್ರಾಹ್ಮಣಗಳಲ್ಲಿಯೂ ಅನೇಕ ಕಥೆಗಳಿವೆ. ಪುರಾಣಗಳೂ ಇತಿಹಾಸಗಳೂ ಕಥೆಗಳ ಸಮೂಹಗಳು. ಹೀಗೆಯೇ ಮಹಾತ್ಮ್ಯೆಗಳಲ್ಲಿಯೂ ಸ್ಥಳಪುರಾಣಗಳಲ್ಲಿಯೂ ಅನೇಕ ಕಥೆಗಳು ಇವೆ. ಕವಿ ಕಲ್ಪಿತವಾದ ಕಥೆಗಳು ಬಾಣನ ಕಾದಂಬರೀ, ಸುಬಂಧುವಿನ ವಾಸವದತ್ತಾ, ತಿಲಕಮಂಜರೀ ಮೊದಲಾದ ಗ್ರಂಥಗಳಲ್ಲಿವೆ. ಈ ಗ್ರಂಥಗಳಲ್ಲಿ ಆ ಹೆಸರಿನ ರಾಜಕುಮಾರಿಯರ ಕಥೆ ವರ್ಣಿತವಾಗಿದೆ. ಗ್ರಂಥಗಳು ಬಹಳ ಪ್ರೌಢಶೈಲಿಯಲ್ಲಿವೆ. ಪೌರಾಣಿಕ ಮತ್ತು ಕವಿಕಲ್ಪಿತವೆಂಬ ಎರಡು ಜಾತಿಯ ಕಥೆಗಳಲ್ಲದೆ ಜನಸಾಮಾನ್ಯರ ನಡತೆಯನ್ನು ನಿರೂಪಿಸುವ ಕಥೆಗಳೂ ಅನೇಕವುಂಟು. ಇವುಗಳನ್ನು ನಾಡಕಥೆಗಳು ಜಾನಪದ ಕಥೆಗಳು ಎನ್ನಬಹುದು. ಇಂಥ ಕಥೆಗಳ ಸಂಕಲನಗಳೆಂದರೆ-ಪಂಚತಂತ್ರ, ಬೃಹತ್ಕಥೆ (ಕಥಾಸರಿತ್ಸಾಗರ, ಬೃಹತ್ಕಥಾಮಂಜರೀ, ಬೃಹತ್ಕಥಾ ಶ್ಲೋಕ ಸಂಗ್ರಹ) ವೇತಾಲಪಂಚವಿಂಶತಿ, ಶುಕಸಪ್ತತಿ ಮೊದಲಾದುವು.

ಶುಕಸಪ್ತತಿಯ ಎರಡು ಪಾಠಗಳು (ಶುಕಸಪ್ತತಿ; ಶುಕಸಪ್ತತಿಯ ಬೃಹತ್ಪಾಠ) ಷ್ಮಿಟ್ ಮಹಾಶಯನಿಂದ ಜರ್ಮನಿಯಲ್ಲಿ ಪ್ರಕಾಶಗೊಂಡಿವೆ. ಮೂಲ ಶುಕಸಪ್ತತಿ ಮೂಲ ಪಂಚತಂತ್ರದಂತೆ ನಷ್ಟವಾಗಿದೆ. ಈ ಗ್ರಂಥ ಯಾವಾಗ ಯಾರಿಂದ ಬರೆಯಲ್ಪಟ್ಟಿತೆಂಬುದು ತಿಳಿಯದು. ಇದರ ಕಾಲ ಪ್ರಶ. 1165ಕ್ಕೂ ಹಿಂದಿನದೆಂದೂ ಕರ್ತೃ ಚಿಂತಾಮಣಿಭಟ್ಟನೆಂದೂ ಸದ್ಯಕ್ಕೆ ಹೇಳಬಹುದು.

ಹೆಸರಿಗೆ ಅನುಗುಣವಾಗಿ ಶುಕಸಪ್ತತಿಯಲ್ಲಿ 70 ಕಥೆಗಳಿವೆ. ಹರದತ್ತನೆಂಬ ವ್ಯಾಪಾರಿಗೆ ಪ್ರಭಾವತಿ ಎಂಬ ಹೆಂಡತಿಯಿರುವಳು. ಒಂದು ಬಾರಿ ಅವನು ವ್ಯಾಪಾರಕ್ಕಾಗಿ ಊರನ್ನು ಬಿಟ್ಟು ಹೋಗುವುದಕ್ಕಿಂತ ಮುಂಚೆ ತಾನು ಸಾಕಿದ ಒಂದು ಗಿಣಿಗೆ ಪ್ರಭಾವತಿ ದುರ್ನಡತೆಯವಳಾಗದಂತೆ ಜಾಗರೂಕತೆಯಿಂದ ನೋಡಿಕೊಳ್ಳಲು ಹೇಳಿ ಪ್ರಯಾಣ ಮಾಡುತ್ತಾನೆ. ಕೆಲವು ದಿನಗಳ ಮೇಲೆ ಪರಪುರುಷನ ಬಳಿಗೆ ಹೋಗಲು ಸಿದ್ಧವಾಗತೊಡಗುವ ಪ್ರಭಾವತಿಯನ್ನು ಕುರಿತು ಪಂಜರದ ಗಿಣಿ ರೂಪಿಣಿಯೆಂಬೊಬ್ಬಳಿಗೆ ಅಂಥದೇ ಸಂದರ್ಭದಲ್ಲಿ ಒದಗಿದ ವಿಪತ್ತಿನ ಕಥೆಯನ್ನು ಹೇಳಿ ಪ್ರಭಾವತಿ ತನಗೆ ಬರಬಹುದಾದ ವಿಪತ್ತನ್ನು ನಿವಾರಿಸುವ ಉಪಾಯವನ್ನು ಯೋಚಿಸಲು ಸಲಹೆ ಮಾಡುತ್ತದೆ. ಭ್ರಾಂತಳಾದ ಪ್ರಭಾವತಿಗೆ ಯಾವ ಉಪಾಯವೂ ಹೊಳೆಯುವುದಿಲ್ಲ. ಆಗ ಗಿಣಿ ಅವಳಿಗೆ ರೂಪಿಣಿ ಹೂಡಿದ ಉಪಾಯದ ಕಥೆಯನ್ನು ಹೇಳುತ್ತದೆ. ಅದು ಮುಗಿಯುವಲ್ಲಿ ಅಂದಿನ ರಾತ್ರಿ ಕಳೆದು ಹೋಗಿರುತ್ತದೆ. ಹೀಗೆಯೇ ಎಪ್ಪತ್ತು ಕಥೆಗಳನ್ನೂ ಹೇಳಿ ಮುಗಿಸುವಲ್ಲಿ 70 ದಿವಸಗಳು ಕಳೆದು ಪ್ರಭಾವತಿಯ ಪತಿ ಹಿಂತಿರುಗಿ ಬರುತ್ತಾನೆ.

ಶುಕಸಪ್ತತಿಯ ಬೃಹತ್ಪಾಠದಲ್ಲಿ ಶುಕಸಪ್ತತಿಯಲ್ಲಿ ಇಲ್ಲದ ಅನೇಕ ಕಥೆಗಳಿವೆ. ಪ್ರ.ಶ. 1329ರಲ್ಲಿ ನೆಕ್‍ಶೆಬಿ ಎಂಬವನು ಪಾರ್ಸಿ ಭಾಷೆಯಲ್ಲಿ ಮಾಡಿದ ಶುಕ ಸಪ್ತತಿಯ ಅನುವಾದದಲ್ಲಿಯೂ (ತೂತಿನಾಮೆ) ಮೇಲೆ ಹೇಳಿದ ಎರಡು ಶುಕ ಸಪ್ತತಿಗಳಲ್ಲಿಯೂ ಇಲ್ಲದ ಅನೇಕ ಕಥೆಗಳಿವೆ. ಇಂಥ ಕಥೆಗಳೆಲ್ಲವೂ ಈಗ ನಮಗೆ ದೊರೆತಿಲ್ಲದ ಶುಕಸಪ್ತತಿ ಪಾಠಾಂತರಗಳಲ್ಲಿ ಇದ್ದವೆಂದು ಊಹಿಸಲಾಗಿದೆ. ನೆಕ್‍ಶೆಬಿಯ ತೂತಿನಾಮೆ ಶಾ ಅಬ್ದುಲ್ಲಾ ಎಫೆಂಡಿ ಎಂಬುವನಿಂದ ತುರ್ಕಿ ಭಾಷೆಗೆ ಅನುವಾದಗೊಂಡಿದೆ. ಪ್ರ.ಶ. ಸು. 18ನೆಯ ಶತಮಾನದ ಅಂತ್ಯದಲ್ಲಿದು ಪಾರ್ಶಿಭಾಷೆಗೆ ತರ್ಜುಮೆಗೊಂಡಿದೆ. ಅಲ್ಲದೆ ಈಚೆಗೆ ಭರತಖಂಡದ ಅನೇಕ ಭಾಷೆಗಳಿಗೂ ಮಲಯ ಮತ್ತು ಜಾವಾ ದ್ವೀಪಗಳ ಭಾಷೆಗಳಿಗೂ ಅನುವಾದಗೊಂಡಿದೆ.

ಪಂಚತಂತ್ರದ ಕಥೆಗಳಂತೆ ಶುಕಸಪ್ತತಿಯ ಕೆಲವು ಕಥೆಗಳೂ ವಿಶ್ವದ ನಾನಾ ದೇಶಗಳಿಗೆ ಹರಡಿರುವುದನ್ನು ನೋಡಿದರೆ ಅದರ ಪ್ರಾಮುಖ್ಯ ಸ್ವಯಂ ವಿಧಿತವಾಗುತ್ತದೆ.

ಶ್ಲೋಕ ಛಂದಸ್ಸಿನಲ್ಲಿದ್ದು ಸದಾಚಾರವನ್ನು ಬೋಧಿಸುವ ದಿನಾಲಾಪನಿಕಾ ಶುಕಸಪ್ತತಿಯೆಂಬ ಗ್ರಂಥವೂ ಬಹಳ ಅರ್ವಾಚೀನವಾದುದು.

ಇನ್ನೊಂದು ಪ್ರಭಾವೀ ಕಥಾಗ್ರಂಥವೆಂದರೆ ವೇತಾಲಪಂಚವಿಂಶತಿ. ಅದರಲ್ಲಿ 25 ಕಥೆಗಳಿವೆ. ತ್ರಿವಿಕ್ರಮಸೇನನೆಂಬ ರಾಜ ತನ್ನನ್ನು ಬಹುಕಾಲ ಆಶ್ರಯಿಸಿದ ಒಬ್ಬ ಶ್ರಮಣನ ಕೋರಿಕೆಗನುಸಾರವಾಗಿ ಶ್ಮಶಾನದಲ್ಲಿ ಒಂದು ವೃಕ್ಷಕ್ಕೆ ನೇತು ಕೊಂಡಿದ್ದ ಶವವನ್ನು ತಂದುಕೊಡಲು ಒಪ್ಪಿಕೊಳ್ಳುತ್ತಾನೆ. ಶವವನ್ನು ಮರದಿಂದ ಇಳಿಸಿ ಬೆನ್ನಿನ ಮೇಲೆ ಹೊತ್ತುಕೊಂಡು ಹಿಂದಿರುಗುತ್ತಿರುವಾಗ ಒಂದು ಬೇತಾಳ ಶವದೊಳಕ್ಕೆ ಪ್ರವೇಶಿಸಿ ದಾರಿಸಾಗುವುದಕ್ಕಾಗಿ ರಾಜನಿಗೆ ಒಂದು ಕಥೆ ಹೇಳುತ್ತದೆ. ಮುಗಿದ ಅನಂತರ ಅದಕ್ಕೆ ಸಂಬಂಧಿಸಿದಂತೆ ರಾಜನಿಗೆ ಒಂದು ಪ್ರಶ್ನೆ ಹಾಕುತ್ತದೆ. ಅದಕ್ಕೆ ರಾಜ ಸಮಂಜಸವಾದ ಉತ್ತರ ಕೊಡಬೇಕು. ತಿಳಿದೂ ತಿಳಿದೂ ಉತ್ತರ ಕೊಡುತ್ತಾನೆ. ಬೇತಾಳ ಶವದೊಂದಿಗೆ ಮತ್ತೆ ಮರಹತ್ತಿ ಕೂಡುತ್ತದೆ. ಹೀಗೆ ಇಪ್ಪತ್ತು ನಾಲ್ಕು ಬಾರಿ ವಿಕ್ರಮಸೇನ ಶವವನ್ನು ಇಳಿಸಿ ತಂದು ಬೇತಾಳದ ಬಾಯಿಂದ ಇಪ್ಪತ್ತುನಾಲ್ಕು ಕಥೆ ಕೇಳಿ ಅದು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾನೆ. ಇಪ್ಪತ್ತೈದನೆಯ ಬಾರಿ ಮರುಕಗೊಂಡ ಬೇತಾಳ ವಿಕ್ರಮನಿಗೆ ಶ್ರಮಣಕ ಅವನನ್ನು ಕೊಲ್ಲಲು ಮಾಡಿದ ಒಳಸಂಚನ್ನು ತಿಳಿಸಿ, ತಾನು ಹೇಳಿದ ಹಾಗೆ ವರ್ತಿಸಿದಲ್ಲಿ ವಿಕ್ರಮನ ಸೇವಕನಾಗುವುದಾಗಿ ಭರವಸೆ ಕೊಡುತ್ತದೆ.

ವೇತಾಲಪಂಚವಿಂಶತಿ ಬೃಹತ್ಕಥಾಮಂಜರಿಯಲ್ಲಿಯೂ ಕಥಾಸರಿತ್ಸಾಗರದಲ್ಲಿಯೂ ಶ್ಲೋಕರೂಪದಲ್ಲಿ ಇದೆ. ಅಲ್ಲದೆ ಗದ್ಯ ರೂಪದಲ್ಲಿ ಜಂಭಲದತ್ತನಿಂದಲೂ ಶಿವದಾಸನಿಂದಲೂ ರಚಿತವಾಗಿದೆ. ಪಂಚತಂತ್ರದಲ್ಲಿರುವಂತೆ ಶಿವದಾಸನ ಗ್ರಂಥದಲ್ಲಿ ಅನೇಕ ಶ್ಲೋಕಗಳಿವೆ. ವೇತಾಲಪಂಚವಿಂಶತಿಯ ಕಥೆಗಳಲ್ಲಿ ಕೆಲವು ವಿಶ್ವದ ನಾನಾದೇಶಗಳಿಗೆ ಹರಡಿವೆ. ಈ ಗ್ರಂಥವೂ ಇಂಗ್ಲಿಷ್ ಜರ್ಮನ್ ಮೊದಲಾದ ಭಾಷೆಗಳಿಗೂ ಭರತಖಂಡದ ನಾನಾ ಭಾಷೆಗಳಿಗೂ ಅನುವಾದಗೊಂಡಿದೆ. ಇಂಥ ಕೆಲವು ಅನುವಾದಗಳಲ್ಲಿ ತ್ರಿವಿಕ್ರಮಸೇನ ಎಂಬ ಹೆಸರಿಗೆ ಬದಲು ವಿಕ್ರಮಾದಿತ್ಯ ಎಂದಿದೆ.

ವಿಕ್ರಮಾದಿತ್ಯನ ಸಂಬಂಧವಾದ ಕಥೆಗಳು ಸಿಂಹಾಸನ ದ್ವಾತ್ರಿಂಶಿಕಾ ಎಂಬ ಪುಸ್ತಕದಲ್ಲಿಯೂ ಸಂಕಲಿತವಾಗಿವೆ. ಈ ಗ್ರಂಥಕ್ಕೆ ವಿಕ್ರಮಚರಿತ, ವಿಕ್ರಮಾರ್ಕ ಚರಿತ ಎಂದೂ ಹೆಸರುಗಳಿವೆ. ಇದರಲ್ಲಿ ಅನೇಕ ಪಾಠಪ್ರಭೇದಗಳಿದ್ದು ಕೆಲವು ಬರೀ ಪದ್ಯದಲ್ಲಿ ಕೆಲವು ಬರೀ ಗದ್ಯದಲ್ಲಿ, ಇವೆ. ಇನ್ನು ಕೆಲವಲ್ಲಿ ಪದ್ಯಗದ್ಯಗಳೆರಡೂ ಇವೆ. ಗ್ರಂಥದ ಮುಖಕಥೆ ಅಥವ ಕಥಾಮುಖ ಹೀಗಿದೆ: ವಿಕ್ರಮಾದಿತ್ಯ ಕಾಲವಾದ ಅನಂತರ ದೇವೇಂದ್ರ ಅವನಿಗೆ ಕೊಟ್ಟಿದ್ದ ಸಿಂಹಾಸನ ಭೂಮಿಯಲ್ಲಿ ಹೂತು ಹೋಗಿ ಕಾಲಕ್ರಮದಲ್ಲಿ ಭೋಜರಾಜನ ಕೈಸೇರಿತು. ಈ ರಾಜ ಒಳ್ಳೆಯ ಮುಹೂರ್ತವನ್ನು ನೋಡಿ ಅದರಲ್ಲಿ ಹತ್ತಿ ಕುಳಿತುಕೊಳ್ಳಲು ಉದ್ಯುಕ್ತನಾದಾಗ ಆ ಸಿಂಹಾಸನದ ಮೆಟ್ಟಿಲುಗಳಲ್ಲಿದ್ದ 32 ಸಾಲಭಂಜಿಕೆಗಳಲ್ಲಿ ಮೊದಲನೆಯದು ಅವನನ್ನು ತಡೆದು ವಿಕ್ರಮಾದಿತ್ಯನಿಗೆ ಇದ್ದ ಶೌರ್ಯವೂ ಸಾಹಸವೂ ಔದಾರ್ಯವೂ ಇದ್ದವರೇ ಆ ಸಿಂಹಾಸನವನ್ನು ಹತ್ತುವದಕ್ಕೆ ಅರ್ಹರು ಎಂದು ಅಂದು ವಿಕ್ರಮಾದಿತ್ಯನ ಗುಣ ಕಥನರೂಪವಾದ ಒಂದು ಕಥೆಯನ್ನು ಹೇಳುತ್ತದೆ. ಹೀಗೆಯೇ ಉಳಿದ 31 ಸಾಲ ಭಂಜಿಕೆಗಳೂ ಒಂದೊಂದು ಕಥೆಯನ್ನು ಹೇಳುತ್ತವೆ. 32ನೆಯ ದಿನ ಸಾಲಭಂಜಿಕೆಗಳಾಗಿದ್ದ ಅಪ್ಸರಸ್ತ್ರೀಯರಿಗೆ ಶಾಪವಿಮೋಚನೆಯಾಗಿ ಸಿಂಹಾಸನವೂ ಅವರೂ ಸ್ವರ್ಗಕ್ಕೆ ಹೋಗುತ್ತಾರೆ.

ಈ ಗ್ರಂಥವು ಭರತಖಂಡದ ನಾನಾ ಭಾಷೆಗಳಿಗೂ ಇಂಗ್ಲಿಷ್, ಜರ್ಮನ್, ಫ್ರೆಂಚ್ ಭಾಷೆಗಳಿಗೂ ಸಯಾಂ ದೇಶದ ಥ್ಯಾಭಾಷೆಗೂ ಅನುವಾದಗೊಂಡಿದೆ. ಮಂಗೋಲಿಯ ಭಾಷೆಯಲ್ಲೂ ಇದರ ಒಂದು ಅನುವಾದ ದೊರೆತಿದೆ.

ವಿಕ್ರಮೋದಯ ಎಂಬ ಶ್ಲೋಕರೂಪದ ಗ್ರಂಥದಲ್ಲಿ ವಿಕ್ರಮಾದಿತ್ಯ ಗಿಣಿಯ ರೂಪವನ್ನು ತಾಳಿ ಹೇಳಿದ ಕಥೆಗಳು ಬಂದಿವೆ. ವಿಕ್ರಮಾದಿತ್ಯನಿಗೂ ಶಾಲಿವಾಹನನಿಗೂ ನಡೆದ ಯುದ್ಧದ ಕಥೆ ಅನಂತನಿಂದ ವಿರಚಿತವಾದ ವೀರಚರಿತ್ರಾ ಎಂಬ ಪದ್ಯಗ್ರಂಥದಲ್ಲಿಯೂ, ಶಿವದಾಸ ವಿರಚಿತವಾದ ಗದ್ಯಪದ್ಯಗಳನ್ನೊಳಗೊಂಡ ಶಾಲಿವಾಹನಕಥಾ ಎಂಬ ಪುಸ್ತಕದಲ್ಲಿಯೂ ಬಂದಿದೆ.

ದಂಡಿಯಿಂದ (ಪ್ರ.ಶ.ಪೂ. ಸು. 700 ಕ್ಕೂ ಹಿಂದೆ) ರಚಿತವಾದ ದಶಕುಮಾರ ಚರಿತದಲ್ಲಿ ಒಂದು ಪೂರ್ವ ಪೀಠಿಕೆಯೂ ಹತ್ತು ಕಥೆಗಳ ಒಂದು ಉತ್ತರ ಪೀಠಿಕೆಯೂ ಇದ್ದುವೆಂದು ತೋರುತ್ತದೆ. ಈಗ ಪ್ರಚಾರವಾಗಿರುವ ಪುಸ್ತಕದಲ್ಲಿರುವ ಕೊನೆಯ ಏಳು ಕಥೆಗಳು ಮಾತ್ರ ದಂಡಿಯ ಗ್ರಂಥದ್ದು, ಪೂರ್ವ ಪೀಠಿಕೆಯೂ ಮೊದಲ ಮೂರು ಕಥೆಗಳೂ ಬೇರೊಬ್ಬರಿಂದ ರಚಿತವಾದವು. ವಿನಾಯಕನಿಂದ ಶ್ಲೋಕರೂಪದಲ್ಲಿ ರಚಿತವಾಗಿರುವ ದಶಕುಮಾರಚರಿತ ಪೂರ್ವ ಪೀಠಿಕೆ. ಅಪ್ಪಯ್ಯ ಮಂತ್ರಿಯಿಂದ ರಚಿತವಾದ ದಶಕುಮಾರಚರಿತ ಕಥಾಸಾರ, ದೀಕ್ಷಿತ ಚಕ್ರಪಾಣಿಯಿಂದ ರಚಿತವಾದ ಐದು ಉಚ್ಛ್ವಾಸಗಳುಳ್ಳ ದಶಕಿಮಾರ ಕಥಾಶೇಷ–ಈ ಗ್ರಂಥಗಳಲ್ಲಿ ದಶಕುಮಾರಚರಿತದ ಕಥೆ ಪೂರೈಕೆಗೊಂಡಿದೆ.

ಭರಟಕದ್ವಾತ್ರಿಂಶಿಕಾ, ಪಂಚದಂಡ ಛತ್ರ ಪ್ರಬಂಧ, ಶಿವದಾಸ ವಿರಚಿತ ಕಥಾರ್ಣವ, ಹರಿಭದ್ರ ವಿರಚಿತ ಧೂರ್ತಕಲ್ಯಾಣ, ವಿದ್ಯಾಪತಿ ರಚಿತ ಪುರುಷ ಪರೀಕ್ಷಾ–ಇವೂ ಕಥಾಸಂಕಲನಗಳು.

ಬಲ್ಲಾಳನ ಭೋಜಪ್ರಬಂಧ, ಮೇರಾತುಂಗನ ಪ್ರಬಂಧ ಚಿಂತಾಮಣಿ ಮತ್ತು ರಾಜಶೇಖರನ ಪ್ರಬಂಧಕೋಶದಲ್ಲಿ ಕಾಳಿದಾಸನೇ ಮೊದಲಾದ ಕವಿಗಳ ಸಂಬಂಧದಲ್ಲಿ ಅನೇಕ ಕಥೆಗಳಿವೆ. ಇವುಗಳಲ್ಲಿ ಬಹುಪಾಲು ಕಲ್ಪಿತ ಕಥೆಗಳು.

ಜೈನವಾಙ್ಮಯದಲ್ಲಿಯೂ ಕಥೆಗಳೂ ಕಥಾ ಗ್ರಂಥಗಳೂ ವಿಪುಲವಾಗಿವೆ. ಅರ್ಧಮಾಗಧಿಯಲ್ಲಿರುವ ಶ್ವೇತಾಂಬರ ಜೈನರ ಆಗಮ ಅಥವ ಸಿದ್ಧಾಂತ ಗ್ರಂಥಗಳಲ್ಲಿ ಅನೇಕ ಕಥೆಗಳಿವೆ. ಈ ಎಲ್ಲ ಕಥೆಗಳಲ್ಲಿಯೂ ಪ್ರಾಯಿಕವಾಗಿ ಅಲ್ಲಿ ಕೀರ್ತಿತರಾದ ಜನರ ಪೂರ್ವಜನ್ಮದ ವಿಷಯವೂ ಅವರು ಜಿನಭಕ್ತರಾದ್ದರಿಂದ ಉಂಟಾದ ಶ್ರೇಯಸ್ಸೂ ವರ್ಣಿತವಾಗಿದೆ. ಅಲ್ಲಿನ ಒಂದು ಕಥೆ ಹೀಗಿದೆ: ಮಿಥಿಲೆಯ ರಾಜನ ಮಗಳಾದ ಮಲ್ಲಿಯನ್ನು ಮದುವೆಯಾಗಲು ಆರು ದೇಶದ ರಾಜಕುಮಾರರು ಪ್ರಯತ್ನಿಸುವರು. ಇವರಲ್ಲಿ ಯಾರೊಬ್ಬನಿಗೆ ಕೊಟ್ಟರೂ ಇತರರಿಗೆ ಅವಮಾನವಾಗುವುದರಿಂದ ತಂದೆ ಯಾರಿಗೂ ಮಗಳನ್ನು ಕೊಡುವುದಿಲ್ಲವೆಂದು ತಿಳಿಸುವನು. ಇದರಿಂದ ಕೋಪಗೊಂಡ ರಾಜಕುಮಾರರು ಒಂದಾಗಿ ಮಿಥಿಲೆಗೆ ಮುತ್ತಿಗೆ ಹಾಕುವರು. ಈ ವಿಷಯವೆಲ್ಲವನ್ನೂ ದಿವ್ಯಜ್ಞಾನದಿಂದ ಮುಂಚೆಯೇ ಅರಿತಿದ್ದ ರಾಜಕುಮಾರಿ ಊರಿನಲ್ಲಿ ಒಂದು ಮೋಹನ ಗೃಹವನ್ನು ಮಾಡಿಸಿ ಅದರಲ್ಲಿ ತನ್ನಂತೆಯೇ ಕಾಣುವ ಒಂದು ಬೊಂಬೆಯನ್ನು ಮಾಡಿಸಿ ಆ ಬೊಂಬೆಯ ತಲೆಯಲ್ಲಿರುವ ರಂಧ್ರದಿಂದ ನಿತ್ಯವೂ ತಾನು ತಿನ್ನುವ ಆಹಾರದಲ್ಲಿ ಒಂದು ತುತ್ತನ್ನು ಹಾಕುತ್ತ ಬರುತ್ತಿದ್ದಳು. ಮುತ್ತಿಗೆ ಹಾಕಿದ್ದ ರಾಜಕುಮಾರರನ್ನು ಉಪಾಯವಾಗಿ ಮಲ್ಲಿ ಮೋಹನ ಗೃಹದ ಒಳಗೆ ಬರಮಾಡಿದಳು. ಅಲ್ಲಿ ಮಲ್ಲಿಯಂತಿದ್ದ ಬೊಂಬೆಯನ್ನು ಅವರು ವಿಸ್ಮಯದಿಂದ ನೋಡುತ್ತಿರಲಾಗಿ ಮಲ್ಲಿ ಅಲ್ಲಿಗೆ ಬಂದು ಬೊಂಬೆಯ ತಲೆಯಲ್ಲಿನ ರಂಧ್ರವನ್ನು ಮುಚ್ಚಿದ್ದ ಕಮಲವನ್ನು ತೆಗೆದುಬಿಡಲಾಗಿ ಒಳಗೆ ಬಹು ಕಾಲದಿಂದ ಶೇಖರಣೆಗೊಂಡು ಕೊಳೆತುಹೋಗಿದ್ದ ಆಹಾರ ಪದಾರ್ಥಗಳಿಂದ ಅಸಹ್ಯವಾದ ದುರ್ಗಂಧ ಎದ್ದಿತು. ರಾಜಕುಮಾರರೆಲ್ಲರಿಗೂ ಜುಗುಪ್ಸೆಯಾಯಿತು. ಹೆಣ್ಣಿನ ಶರೀರ ನೋಡುವುದಕ್ಕೆ ಹೀಗಿದ್ದರೂ ಒಳಗೆ ಅಷ್ಟೇ ಅಸಹ್ಯಪೂರ್ಣವಾಗಿದೆ. ಆದ್ದರಿಂದ ಮೋಹ ಬೇಡ ಎಂದು ಮಲ್ಲಿ ಅವರಿಗೆ ತಿಳಿಯಹೇಳಿ ಅವರ ಪೂರ್ವಜನ್ಮದ ಕಥೆಯೆಲ್ಲವನ್ನೂ ವಿವರಿಸಿ ತಾನು ಜೈನ ದೀಕ್ಷೆಯನ್ನು ಸ್ವೀಕರಿಸಿ ಸಿದ್ಧಿಯನ್ನು ಹೊಂದಿದಳು.

ದಿಗಂಬರ ಜೈನರ ಪುರಾಣಗಳಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆದ ಅನೇಕ ಕಥೆಗಳಿವೆ. ಮಹಾಪುರಾಣಗಳಲ್ಲಿ (ಪ್ರ.ಶ. 8ನೆಯ ಶತಮಾನ) 24 ತೀರ್ಥಂಕರರು, 12 ಚಕ್ರವರ್ತಿಗಳು, 9 ವಾಸುದೇವರು, 9 ಪ್ರತಿವಾಸುದೇವರು, 9 ಬಲರಾಮರು–ಹೀಗೆ 63 ಮಹಾಪುರುಷರ ಕಥೆಗಳಿವೆ. ಮಹಾವೀರಚರಿತ, ಯಶೋಧರ ಚರಿತ, ಪಾರ್ಶ್ವನಾಥಚರಿತ, ನೇಮಿನಾಥಚರಿತ ಮೊದಲಾದ ಚರಿತಗಳಲ್ಲಿಯೂ ಆಯಾ ತೀರ್ಥಂಕರರ ಕಥಾನಕಗಳಿವೆ. ಹೇಮಚಂದ್ರ ರಚಿಸಿದ (ಪ್ರ.ಶ. 12ನೆಯ ಶತಮಾನ) ತ್ರಿಷಷ್ಟಿಶಲಾಕಾಪುರುಷಚರಿತದಲ್ಲಿ ಮೇಲೆ ಹೇಳಿದ 63 ಮಹಾಪುರುಷರ ಕಥೆಯೂ ಪರಿಶಿಷ್ಟ ಪರ್ವದಲ್ಲಿ ಇನ್ನೂ ಅನೇಕ ಕಥೆಗಳೂ ವರ್ಣಿತವಾಗಿವೆ.

ಜೈನರಿಂದ ಕಥಾಪುಸ್ತಕಗಳೂ ರಚಿತವಾಗಿವೆ. ಸೋಮಚಂದ್ರನ ಕಥಾಮಹೋದಧಿ (ಪ್ರ.ಶ. 1448), ಶುಭಶೀಲಗಣಿಯ ಪಂಚಶತೀಪ್ರಬೋಧ ಸಂಬಂಧ (ಪ್ರ.ಶ. 1464)ಗಳಲ್ಲಿನ ಕಥೆಗಳ ಸಂಖ್ಯೆ 400ನ್ನು ಮೀರಿದೆ. ಹೇಮವಿಜಯನ ಕಥಾರತ್ನಾಕರ (ಪ್ರ.ಶ. 1600) ಸಂಸ್ಕೃತ ಗದ್ಯದಲ್ಲಿದ್ದು 258 ಕತೆಗಳನ್ನೊಳಗೊಂಡಿದೆ. ಉದಯ ಧರ್ಮಿಯ ಧರ್ಮಕಲ್ಪದ್ರುಮ (ಪ್ರ.ಶ. 1450), ಅಮಿತಗತಿಯ ಧರ್ಮಪರೀಕ್ಷಾ (ಪ್ರ.ಶ. 1014) ಇವು ಸಂಸ್ಕೃತ ಪದ್ಯಗಳಲ್ಲಿವೆ.

ಸಮ್ಯಕ್ತ್ವ ಕೌಮುದೀ, ಕಥಾಕೋಶ–ಇವು ಸಂಸ್ಕೃತದಲ್ಲಿವೆ. ಕಥಾಕೋಶವೊಂದು ಶ್ರೀಚಂದ್ರನಿಂದ (ಪ್ರ.ಶ. 1200ಕ್ಕಿಂತ ಹಿಂದೆ) ಅಪಭ್ರಂಶದಲ್ಲಿ ರಚಿತವಾಯಿತು.

ಹರಿಭದ್ರನ ಸಮರಾಇಚ್ಚ ಕಥಾ, ಮಲಯಸುಂದರೀ ಕಥಾ, ಪಾದಲಿಪ್ತ ಸೂರಿ ಬರೆದ ತರಂಗವತೀ ಗ್ರಂಥದ ಸಂಕ್ಷೇಪವಾದ ತರಂಗಲೋಲಾ–ಇವು ಪ್ರಾಕೃತದಲ್ಲಿಯೂ ಧನಪಾಲನ ಭವಿಸ್ಸಕ್ತ ಕಹಾ ಅಪಭ್ರಂಶದಲ್ಲಿಯೂ ಬರೆಯಲ್ಪಟ್ಟಿವೆ. ಸಿದ್ಧರ್ಷಿ ಪ್ರ.ಶ. 906ರಲ್ಲಿ ಸಂಸ್ಕೃತದಲ್ಲಿ ಬರೆದ ಉಪಮಿತಿಭವ ಪ್ರಪಂಚಾ ಕಥಾ ಎಂಬ ದೊಡ್ಡ ಗದ್ಯಗ್ರಂಥದಲ್ಲಿ ಅನೇಕ ಒಳಕಥೆಗಳಿವೆ.

ದೊಡ್ಡ ಕಥೆಗಳಲ್ಲದೆ ಜೈನರಿಂದ ಸಂಸ್ಕೃತ ಶ್ಲೋಕರೂಪದಲ್ಲಿ ಕಥಾನಕಗಳು 100ಕ್ಕಿಂತ ಅಧಿಕವಾಗಿವೆ. ಜಿನಕೀರ್ತಿಯ ಚಂಪಕಶ್ರೇಷ್ಠಿ ಕಥಾನಕ (ಪ್ರ.ಶ. 1450), ಪಾಲಗೋಪಾಲ–ಕಥಾನಕ, ಉತ್ತಮಚರಿತ್ರ ಕಥಾನಕ, ಪಾಪಬುದ್ಧಿ ಧರ್ಮಬುದ್ಧಿ ಕಥಾನಕ—ಇವು ಈ ಜಾತಿಗೆ ಸೇರಿದುವು. ಕಾಲಕಾಚಾರ್ಯಕಥಾನಕ ಪ್ರಾಕೃತದಲ್ಲಿದೆ.

ಬೌದ್ಧ ಸಾಹಿತ್ಯದಲ್ಲಿಯೂ ಕಥೆಗಳೂ ಕಥಾಪುಸ್ತಕಗಳೂ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಹೀನಯಾನ ಆಗಮ ಗ್ರಂಥಗಳು ಪಾಲಿ ಭಾಷೆಯಲ್ಲಿವೆ. ಸುತ್ತಪಿಟಕದ ಖುದ್ದ ಕನಿಕಾಯದಲ್ಲಿರುವ ಜಾತಕತ್ಥ ವಣ್ಣಣಾ ಎಂಬ ಪುಸ್ತಕದಲ್ಲಿ ಗೌತಮ ಬುದ್ಧನ ಪೂರ್ವಜನ್ಮಗಳಿಗೆ ಸಂಬಂಧಿಸಿದ 547 ಕಥೆಗಳಿವೆ. ಇದೇ ಖುದ್ದ ಕನಿಕಾಯದಲ್ಲಿರುವ ವಿಮಾನವತ್ಥು, ಪೇತವತ್ಥು, ಚರಿಯಾಪಿಟಕ ಎಂಬ ಗ್ರಂಥಗಳಲ್ಲಿಯೂ ಥೇರಗಾಥಾ ಮತ್ತು ಥೇರಿಗಾಥಾ ಎಂಬ ಪುಸ್ತಕಗಳಲ್ಲಿಯೂ ಅನೇಕ ಕಥೆಗಳಿವೆ.

ಬುದ್ಧಘೋಷನಿಂದ ಪಾಲಿಭಾಷೆಯಲ್ಲಿ ಬರೆಯಲ್ಪಟ್ಟ ಧಮ್ಮಪದದ ವ್ಯಾಖ್ಯಾನದಲ್ಲಿಯೂ ಅನೇಕ ಕಥೆಗಳಿವೆ.

ಗೌತಮಬುದ್ಧನ ಪೂರ್ವಜನ್ಮದ ಕಥೆಗಳನ್ನು ವರ್ಣಿಸುವ ಹೀನಯಾನದ ಪಾಲಿ ಭಾಷೆಯ ಜಾತಕಕ್ಕೆ ಮಹಾಯಾನ ಬೌದ್ಧರಲ್ಲಿನ ಅವದಾನ ಸಂವಾದಿಯಾಗಿದೆ. ಮಹಾಯಾನ ಬೌದ್ಧರ ಇತರ ಗ್ರಂಥಗಳಂತೆ ಅವದಾನಗಳೂ ಅಶುದ್ಧ ಸಂಸ್ಕೃತದಲ್ಲಿ ಬರೆಯಲ್ಪಟ್ಟಿವೆ. ಮಹಾವಸ್ತು ಅವದಾನ ಇಂಥ ಗ್ರಂಥಗಳಲ್ಲಿ ಮುಖ್ಯವಾದುದೊಂದು. ಇದರಲ್ಲಿ ಬುದ್ಧನ ಪೂರ್ವಜನ್ಮದ ಕಥೆಗಳಲ್ಲದೆ ನೂರಾರು ಇತರ ಕಥೆಗಳೂ ಇವೆ. ಅವದಾನ ಶತಕದಲ್ಲಿ (ಪ್ರ.ಶ. 250ಕ್ಕೆ ಹಿಂದಿನದು) 100 ಅವದಾನಗಳಿವೆ. ಕಲ್ಪದ್ರುಮಾವದಾನಮಾಲ, ಅಶೋಕಾವದಾನಮಾಲ, ರತ್ನಾವದಾನಮಾಲ. ದ್ವಾವಿಂಶತ್ಯಾವದಾನ, ಭದ್ರಕಲ್ಪಾವದಾನ, ಕ್ಷೇಮೇಂದ್ರರಚಿತವಾದ ಅವದಾನ ಕಲ್ಪಲತಾ, ದಿವ್ಯಾವದಾನ, (ಪ್ರ.ಶ. 450ಕ್ಕೆ ಹಿಂದಿನದು),–ಆರ್ಯಶೂರನ ಜಾತಕ ಮಾಲ,–ಇವುಗಳಲ್ಲೆಲ್ಲ ಅನೇಕ ಕಥೆಗಳಿವೆ. ಇವುಗಳಲ್ಲಿ ಕೆಲವು ಪದ್ಯದಲ್ಲಿಯೂ ಕೆಲವು ಗದ್ಯದಲ್ಲಿಯೂ ಬರೆಯಲ್ಪಟ್ಟಿವೆ.

ಬುದ್ಧನ ಜನ್ಮಕಥೆ ಲಲಿತವಿಸ್ತಾರ ಎಂಬ ಗದ್ಯಗ್ರಂಥದಲ್ಲಿಯೂ (ಇದನ್ನು ಕಾವ್ಯವೆನ್ನಬಹುದು) ಅಶ್ವಘೋಷನ ಬುದ್ಧಚರಿತ ಕಾವ್ಯದಲ್ಲಿಯೂ (ಪ್ರಶ. 2ನೆಯ ಶತಮಾನ) ವರ್ಣಿತವಾಗಿದೆ. ಅಶ್ವಘೋಷನ ಸೌಂದರನಂದ ಕಾವ್ಯದಲ್ಲಿ ದೇವದತ್ತನ ಮತ್ತು ಸುಂದರಿಯ ಕಥೆ ಬಂದಿದೆ.

ಪಾಲಿ ಭಾಷೆಯಲ್ಲಿರುವ ಗ್ರಂಥಗಳನ್ನು ಕುರಿತು ಒಂದು ವಿಷಯವನ್ನು ಮನಸ್ಸಿನಲ್ಲಿಡಬೇಕು. ಆ ಗ್ರಂಥಗಳು ಸಿಂಹಳದ್ವೀಪದ ವಿಹಾರಗಳಲ್ಲಿ ಭಿಕ್ಷುಗಳಿಂದ ಬರೆಯಲ್ಪಟ್ಟುವು. ಆದ್ದರಿಂದ ಆ ಪಾಲಿ ಪುಸ್ತಕಗಳಲ್ಲಿರುವ ನಿರೂಪಣೆ ಭರತಖಂಡದ ವಸ್ತುಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸುತ್ತದೆ ಎಂದು ತಿಳಿಯಲಾಗದು.

1848ರಲ್ಲಿ ಬಾನ್ ನಗರದಲ್ಲಿ ಸಂಸ್ಕೃತ ಪಂಚತಂತ್ರ ಪ್ರಕಟವಾದಾಗ, ಬೆನ್‌ಫೆ ಎಂಬ ಪಂಡಿತ ಅದನ್ನು ಜರ್ಮನ್ ಭಾಷೆಗೆ ಪರಿವರ್ತಿಸಿ ಯುರೋಪ್ ಖಂಡದ ನಾನಾ ದೇಶಗಳಲ್ಲಿ ಪ್ರಚಲಿತವಾಗಿದ್ದ ಕಥೆಗಳಿಗೂ ಪಂಚತಂತ್ರ ಕಥೆಗಳಿಗೂ ಇರುವ ಸಾದೃಶ್ಯವನ್ನು ಕುರಿತು ಅನೇಕ ಲೇಖನಗಳನ್ನು ಬರೆದ. ಇವನ್ನು ಓದಿದ ಅನಂತರ ಎಲ್ಲ ವಿಧವಾದ ಕಥೆಗಳಿಗೂ ಭರತಖಂಡವೇ ತೌರುಮನೆಯೆಂಬ ಅಭಿಪ್ರಾಯ ಕೆಲವು ವಿದ್ವಾಂಸರಲ್ಲಿ ಮೂಡಿಬಂತು. ಇನ್ನು ಕೆಲವರಿಗಾದರೆ ಈ ಅಭಿಪ್ರಾಯ ಸಮ್ಮತವಾಗದೇ ಹೋದರೂ ಪಂಚತಂತ್ರದಲ್ಲಿರುವಂಥ, ಪ್ರಾಣಿಗಳು ಪರಸ್ಪರ ಮಾತನಾಡುವ ಕಥೆಗಳ (ಬೀಸ್ಟ್ ಫೇಬಲ್ಸ್) ವಿಷಯದಲ್ಲಿ ಮಾತ್ರ ಈ ಅಭಿಪ್ರಾಯ ಸಾಧ್ಯವಾದುದೆಂದು ಅವರು ವಾದಿಸಿದರು. ಇನ್ನು ಕೆಲವರಿಗಾದರೆ ಈ ವಿಧವಾದ ಎಲ್ಲ ಕಥೆಗಳ ವಿಷಯವಾಗಿಯೂ ಯಾವ ನಿರ್ಣಯವನ್ನು ಮಾಡುವುದೂ ತಪ್ಪೆಂದೂ ಒಂದೊಂದು ಕಥೆಯ ವಿಷಯವನ್ನೂ ಪರಿಶೀಲಿಸಿ ನೋಡಿ ಅದರ ಉತ್ಪತ್ತಿಸ್ಥಾನ ಭರತಖಂಡವೋ ಅಥವಾ ಗ್ರೀಸ್ ದೇಶವೋ ಎಂಬುದನ್ನು ನಿರ್ಣಯಿಸಬೇಕೆಂದೂ ಅಭಿಪ್ರಾಯಪಟ್ಟರು. ಮೇಲೆ ಹೇಳಿದಂತೆ ಋಕ್ಸಂಹಿತೆಯ 10,28,4ನೆಯ ಮಂತ್ರದ 3ನೆಯ ಪಾದದಲ್ಲಿ ನರಿಯೂ ಸಿಂಹವೂ ಮಾತನಾಡುವ ಬಿಲವೂ ಎಂಬ ಪಂಚತಂತ್ರದ ಕಥೆಯ ಪ್ರಸ್ತಾಪವಿರುವುದೆಂಬ ಊಹೆ ನಿಜವಾಗಿದ್ದಲ್ಲಿ ಪ್ರಾಣಿಗಳು ಪರಸ್ಪರ ಮಾತನಾಡುವ ಕಥೆಗಳಿಗೆ ಭರತಖಂಡವೇ ತೌರುಮನೆಯೆಂಬ ಅಭಿಪ್ರಾಯ ಸಾಧುವಾದುದೆಂದು ಎಲ್ಲರೂ ಒಪ್ಪಬಹುದು.

ಅರೇಬಿಯನ್ ನೈಟ್ಸ್ ಎಂಬ ಪ್ರಸಿದ್ಧ ಗ್ರಂಥದ ಕಥಾಮುಖಕ್ಕೆ ಭರತಖಂಡವೇ ತೌರೂರೆಂದು ಕಾಸ್ಕಿನ್ ಎಂಬ ಪಂಡಿತ ನಿರ್ಣಯಿಸಿದ್ದಾನೆ. ಇನ್ನು ಕೆಲವರು ಈ ಕಥಾಮುಖ ನೇರವಾಗಿ ಭರತಖಂಡದಿಂದ ಬಂದಿಲ್ಲ, ಇದು ಪಾರ್ಸಿ ದೇಶದ ಪಾಲಿ ಭಾಷೆಯ ಅನುವಾದದ ಮೂಲಕ ಅರಬ್ಬೀ ಗ್ರಂಥಕ್ಕೆ ಬಂದಿದೆ ಎಂದು ಹೇಳುತ್ತಾರೆ. ಆ ಗ್ರಂಥದಲ್ಲಿರುವ ಅನೇಕ ಕಥೆಗಳ ಹುಟ್ಟೂರು ಭರತಖಂಡವೆಂಬುದನ್ನು ಎಲ್ಲ ಪಂಡಿತರೂ ಒಪ್ಪಿದ್ದಾರೆ.

ಸಿಂದ್‌ಬಾದ್ ನಾಮೆ ಎಂಬುದು ಶುಕಸಪ್ತತಿಯಂತೆ ಒಂದು ಕಥಾಪುಸ್ತಕ; ಈ ಪಾರ್ಸೀ ಪುಸ್ತಕ ಸಿರಿಯಾಕ್, ಅರಬ್ಬೀ, ಹೀಬ್ರೂ, ಗ್ರೀಕ್ ಮೊದಲಾದ ಭಾಷೆಗಳಲ್ಲೂ ಇದೆ. ಇದು ಭರತಖಂಡದಿಂದ ಬಂದಿತೆಂದು ಮಸೂದಿ (ಪ್ರಶ. 956) ಎಂಬ ಅರಬ್ಬೀ ಲೇಖಕ ಹೇಳಿದ್ದಾನೆ. ಇದರ ಮೂಲ ಭರತಖಂಡದಲ್ಲಿ ದೊರೆತಿಲ್ಲ.

ಹೀಗೆ ಸಂಸ್ಕೃತ ಕಥಾಸಾಹಿತ್ಯ ಪ್ರಾಚೀನವೂ ವಿಪುಲವೂ ಆದ ಪರಂಪರೆಯನ್ನು ಹೊಂದಿದೆ. (ಎ.ವಿ.)

**ಕಥಾಸೂತ್ರ (ಜಾನಪದ) :** ಜನಪದ ಕಥೆಗಳ ಧಾಟಿಯಲ್ಲಿ ಅದರಲ್ಲೂ ಮುಖ್ಯವಾಗಿ ಕಥೆಗಳ ಪ್ರಾರಂಭ ಮತ್ತು ಮುಕ್ತಾಯಗಳಲ್ಲಿ ಕಂಡುಬರುವ ಕ್ರಮನಿಯಮಗಳನ್ನು ಇಲ್ಲಿ ಕಥಾಸೂತ್ರ (ಸ್ಟೋರಿ ಫಾರ್ಮುಲ) ಎನ್ನಲಾಗಿದೆ. ಜನಪದವಲ್ಲದ ಇತರ ಯಾವುದೇ ಕಥೆಯಲ್ಲಾದರೂ ಯುಕ್ತ ಪ್ರಾರಂಭ, ಬೆಳವಣಿಗೆ ಹಾಗೂ ಮುಕ್ತಾಯಗಳು ಇರಲೇಬೇಕು. ಆದರೆ ಅವುಗಳಲ್ಲಿ ಏಕರೂಪವಾದ ಕ್ರಮಬದ್ಧತೆಯೇನೂ ಇರಬೇಕಾದುದಿಲ್ಲ. ಏಕೆಂದರೆ ಕಥೆ ಅದನ್ನು ಹೇಳುವವನ ವೈಯಕ್ತಿಕ ಕೃತಿ. ಅದರ ನಿರೂಪಣೆ, ವೈಖರಿ, ವಿವರಣೆ, ಮುಕ್ತಾಯ ಎಲ್ಲ ಅವನ ಮನೋಧರ್ಮಕ್ಕೆ ಸೇರಿದ್ದು. ವೈವಿಧ್ಯ ಬೇಕೆನ್ನುವ ಪ್ರತಿಯೊಬ್ಬ ಕಥೆಗಾರನೂ ತಾನು ಹೇಳುವ ಕಥೆ ನೂತನವಾಗಿರಲೆಂಬ ಅಭಿಲಾಷೆಯಿಂದ ಹೊಸ ರೀತಿಯಲ್ಲದನ್ನು ಹೇಳಲು ಯತ್ನಿಸುತ್ತಾನೆ. ಜನಪದ ಕಥಾನಿರೂಪಣೆಯಲ್ಲೂ ಸ್ವಲ್ಪ ಮಟ್ಟಿಗೆ ಇಂಥ ಸ್ವಾತಂತ್ರ್ಯ ಉಂಟು: ಅಲ್ಲದೆ ಪ್ರಾದೇಶಿಕತೆಯಿಂದಾಗಿಯೂ ಸಹಜವಾಗಿ ವೈವಿಧ್ಯ ಏರ್ಪಡುತ್ತದೆ. ಆದರೂ ಬಹುತೇಕ ಕಥೆಗಳನ್ನು ಪರಿಶೀಲಿಸಿದಾಗ ಅವುಗಳ ಪ್ರಾರಂಭ ವಿವರಣೆ, ಮುಕ್ತಾಯಗಳಲ್ಲಿ ಸುಮಾರಾಗಿ ಏಕರೂಪತೆ ಇರುವಂತೆ ತೋರುತ್ತದೆ.

ಜಾನಪದ ಕಥೆಯಲ್ಲಿ ಮೊಟ್ಟಮೊದಲು ಗಮನಕ್ಕೆ ಬರುವ ಅಂಶವೆಂದರೆ ಅದರ ಆರಂಭ ಮತ್ತು ಮುಕ್ತಾಯಗಳೆರಡಕ್ಕೂ ಗೊತ್ತಾದ ಸೂತ್ರಗಳಿದ್ದು, ಈ ಸೂತ್ರಗಳು ವಿಶ್ವವ್ಯಾಪಕತೆಯನ್ನು ಪಡೆದಿರುತ್ತವೆ–ಎಂಬುದು. ಜಗತ್ತಿನ ಎಲ್ಲ ಕಥೆಗಾರರೂ ತಮ್ಮ ಕಥೆಗಳಲ್ಲಿ ಇಂಥ ಒಂದು ಕ್ರಮವನ್ನು ಅನುಸರಿಸಿದ್ದಾರೆ. ಆದರೆ ಇದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದಗಳಿರುವುದನ್ನೂ ಅಲ್ಲಗಳೆಯಲಾಗದು.

ಸಾಮಾನ್ಯವಾಗಿ ಜನಪದ ಕಥೆಗಳು ಆರಂಭವಾಗುವುದು–ಒಂದಾನೊಂದು ಕಾಲದಲ್ಲಿ ಎಂದು. ಅಷ್ಟಪಕ್ಕೆ ಒಂದು ಪಟ್ಟಣ, ಆ ಪಟ್ಟಣದಲ್ಲಿ ಒಬ್ಬ ರಾಜ. ಆ ರಾಜನಿಗೊಬ್ಬ ರಾಣಿ; ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರಿನಲ್ಲಿ ಒಬ್ಬ ದೊರೆಯಿದ್ದ; ಒಂದು ಊರು, ಆ ಊರಿನಲ್ಲಿ ಒಬ್ಬ ರಾಜ, ಅವನಿಗೆ ಮಕ್ಕಳಿರಲಿಲ್ಲ–ಇವು ಆರಂಭದ ಕೆಲವು ಸೂತ್ರಗಳು. ಕಥೆಯ ಆರಂಭದಲ್ಲಿ ರಾಜರಾಣಿಯರ ಪ್ರಸ್ತಾಪ ಬಂದು ಅವರಿಗೆ ಮಕ್ಕಳಿರಲಿಲ್ಲವೆಂದು ಹೇಳುವುದು ಜನಪದ ಕಥೆಗಳ ಒಂದು ಸಾಮಾನ್ಯ ಲಕ್ಷಣ. ಕೆಲವು ಸಾರಿ ವಿಸ್ತೃತ ಸೂತ್ರಗಳೂ ಕಾಣಬರುವುದುಂಟು. ಆರಂಭದ ಒಂದಾನೊಂದು ಕಾಲದಲ್ಲಿ ಎಂಬ ಭಾವನೆ ಇನ್ನೂ ಹೆಚ್ಚು ಬೆಳವಣಿಗೆಯನ್ನು ಪಡೆದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಇದಲ್ಲದೆ ವ್ಯಕ್ತಿಗಳ ಮತ್ತು ಅವರು ವಾಸಿಸುವ ಸ್ಥಳಗಳ ಹೆಸರುಗಳಿಂದಲೂ ಕಥೆಗಳು ಪ್ರಾರಂಭವಾಗುತ್ತವೆ. ಉದಾಹರಣೆಗಾಗಿ, ಚಂದ್ರಾವತಿ ಅನ್ನುವುದು ಒಂದು ಪಟ್ಟಣ. ಅಲ್ಲಿಗೆ ಚಂದ್ರಶೇಖರರಾಯ ಅನ್ನುವವನು ಒಬ್ಬ ದೊರೆ–ಎಂಬುದನ್ನು ನೋಡಬಹುದು. ಆರಂಭದ ಇಂಥ ನಮೂನೆ ದಕ್ಷಿಣ ಅಮೆರಿಕದ ಈಶಾನ್ಯ ತೀರಪ್ರದೇಶಗಳಲ್ಲಿ ಪ್ರಚಲಿತವಾಗಿರುವ ಪುರಾಣಕಥೆಗಳಲ್ಲಿಯೂ ಕಾಣಬರುವುದುಂಟು. ಆದರೆ ಒಂದು ಮಾತು ಮಾತ್ರ ಸತ್ಯ. ಉಲ್ಲೇಖಿತ ಹೆಸರುಗಳಿಂದ ಆರಂಭವಾಗುವುದು ಪುರಾಣಕಥೆಗಳಲ್ಲಿ ಸಹಜವಾದುದಾದರೂ ಶುದ್ಧ ಜನಪದಕಥೆಗಳಲ್ಲಿ ಅಲ್ಲವೆನಿಸುತ್ತದೆ. ಹೀಗೆ ಹೆಸರುಗಳು ಕಾಣಿಸಿಕೊಳ್ಳುವುದಕ್ಕೆ ಸಾಹಿತ್ಯಿಕ ಕಥೆಯ ಸಂಪರ್ಕ ಅಥವಾ ಪ್ರಭಾವವೇ ಕಾರಣವಾಗಿರಬೇಕು. ಆದ್ದರಿಂದ ಈ ಮಾದರಿಯ ಆರಂಭ ಶುದ್ಧ ಜನಪದಕಥೆಗಳ ಜಾಯಮಾನವಲ್ಲ ಎಂದು ಹೇಳಬಹುದು.

ಇನ್ನು ಕೆಲವು ಸಾರಿ ಕಥೆ ಹೇಳುವವರು ತಮ್ಮ ವೈಯಕ್ತಿಕ ಪರಿಸರಕ್ಕೆ ಕಥೆಯ ಆರಂಭವನ್ನು ಪಳಗಿಸಿಕೊಳ್ಳುವುದುಂಟು. ನಮ್ಮೂರಂತೋದು ಒಂದೂರು, ನನ್ನಂತೋಳು ಒಬ್ಬ ಬಡವೆ; ಸಂಜೀವ್ನೂ ಸಂಜೀವ್ನ ಹೆಂಡ್ತಿ ಸಿದ್ದಿಯೂ ಪೀಹಳ್ಳಿಯಲ್ಲಿ ಕೂಲಿ ಮಾಡ್ಕಂಡಿದ್ರು–ಇವು ಅಂಥ ಕೆಲವು ಉದಾಹರಣೆಗಳು. ಕಥಾವಕ್ತೃ ತನ್ನನ್ನೊ ತನ್ನ ಊರನ್ನೊ ಅಥವಾ ತನ್ನ ಸಮಕಾಲೀನರಾದ ಮತ್ತಾರನ್ನೊ ಬಳಸಿಕೊಂಡು ಹೇಳುವುದನ್ನು ಮೇಲಿನ ನಿದರ್ಶನಗಳಿಂದ ಗುರುತಿಸಬಹುದು. ಊರು, ರಾಜ, ರಾಣಿ ಮುಂತಾದ ಮಾತುಗಳು ಸಾರ್ವತ್ರಿಕ ಅರ್ಥದಲ್ಲಿ ಬಳಕೆಯಾಗುತ್ತಿದ್ದು ಅವುಗಳ ಬದಲು ಇನ್ನಾವ ಹೆಸರನ್ನೇ ಸೇರಿಸಿದರೂ ಒಟ್ಟು ಕಥಾರಚನೆಯಲ್ಲಿ ವ್ಯತ್ಯಾಸವೇನೂ ಕಾಣಬರದಿರುವುದು ಇದಕ್ಕೆ ಕಾರಣವಾಗಿದೆ. ಅಂತೂ ಕಥೆ ಹೇಳುವವರು ಕಥೆ ಹೇಳುವ ಧಾಟಿಯಲ್ಲಿ ಮಾಡಿಕೊಳ್ಳುವ ವ್ಯತ್ಯಾಸ ಇದು. ಇಂಥ ಸಂದರ್ಭಗಳು ತೀರ ಅಪರೂಪ. ಮೇಲಿನ ವಿವೇಚನೆಯಿಂದ, ಕಥೆಯ ಆರಂಭ ಕೆಲವು ಸೂತ್ರಗಳ ಮೂಲಕವೇ ಆಗುತ್ತದೆ ಎಂಬುದನ್ನು ಸ್ಥಿರಪಡಿಸಿದಂತಾಯಿತು.

ಕಥೆಗಳ ಸೂತ್ರಬದ್ಧ ಆರಂಭದಂತೆ ಸೂತ್ರಬದ್ಧ ಮುಕ್ತಾಯವೂ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಆರಂಭಕ್ಕಿಂತ ಮುಕ್ತಾಯ ಹೆಚ್ಚು ವೈವಿಧ್ಯವನ್ನು ತೋರಿಸುತ್ತಿದ್ದು, ವಿವರವಾದ ಅಧ್ಯಯನಕ್ಕೆ ವಸ್ತುವಾಗಿದೆ. ಆಮೇಲೆ ಅವರು ಸುಖವಾಗಿ ಬಾಳ್ತಾರೆ; ಹೀಗೆ ಅವರು ಬಹಳ ಕಾಲ ಸುಖದಿಂದಿದ್ದರು; ಅವರು ಅಲ್ಲಿ ಸುಖವಾಗಿದ್ದಾರೆ, ನಾವು ಇಲ್ಲಿದ್ದೇವೆ; ಅವ್ರು ಬಾಳ್ ಬಾಳ್ತಾ ಅಲ್ಲವ್ರೆ, ನಾವು ಬಳ್ಳೆಸೊಪ್ಪಿಗೆ ಬೆಳ್ಳುಳ್ಳಿ ಇಲ್ದೆ ಇಲ್ಲಿವಿ—ಇವು ಮುಕ್ತಾಯದ ಸೂತ್ರಗಳು. ಇಲ್ಲಿಗೆ ಕಥೆ ಮುಗಿಯಿತು—ಎಂಬುದು ಸಾಮಾನ್ಯವಾಗಿ ಸಾರ್ವತ್ರಿಕವಾದ ಮುಕ್ತಾಯದ ಸೂತ್ರವೆನಿಸುತ್ತದೆ. ಆದರೆ ಕೆಲವು ಸಾರಿ ಕಥೆ ಮುಗಿದ ಕೂಡಲೆ, ಬೇರೊಂದು ಕಥೆ ಹೇಳು ಎಂದು ಕೇಳುವುದರ ಮೂಲಕ ಕೇಳಿದವರ ಹೆಸರು, ಹೇಳಿದವರ ಹೆಸರು ಮುಂತಾದವುಗಳಿಂದ ಕಥೆ ಮುಂದೆ ಸಾಗುತ್ತದೆ. ಬೃಹತ್ ಕಥೆ, ಪಂಚತಂತ್ರ, ಬೇತಾಳಪಂಚವಿಂಶತಿ ಮೊದಲಾದ ಸಾಹಿತ್ಯಿಕ ಕಥೆಗಳಲ್ಲಿ ಇದನ್ನು ಕಾಣಬಹುದು. ಇವುಗಳ ಕಥಾತಂತ್ರವನ್ನೇ ಹಾಗೆ ನಿಯೋಜಿಸಲಾಗಿದೆ.

ಜನಪದ ಕಥೆಗಳ ಮುಕ್ತಾಯ ಸಾಮಾನ್ಯವಾಗಿ ಸುಖಾಂತ, ಅದರಲ್ಲೂ ಮದುವೆಯ ಉತ್ಸವದಲ್ಲಿ. ಆದ್ದರಿಂದ ವಿಶೇಷವಾಗಿ ನೆನೆಯಬಹುದಾದ ಕಥೆಯ ಮುಕ್ತಾಯದ ಸೂತ್ರವಿವರಣೆಯೆಂದರೆ ಮದುವೆಯ ಸಂಭ್ರಮದಲ್ಲಿ ಕಡೆಯಾಗುವುದೇ ಆಗಿದೆ. ಉದಾಹರಣೆಗೆ, ಕೊಟ್ಟಣ ಕುಟ್ಟಿಸಿ, ಪಟ್ಟಣ ಸಾರಿಸಿ, ಕಾಣದವರಿಗೆ ವಾಲೆ ಬರೆದು, ಕಂಡವರಿಗೆ ಕರಪತ್ರ ಕೊಟ್ಟು ಕಳಿಸಿ, ಉಘೇ ಅಂತ ಮದುವೆ ಮಾಡ್ಕೊಂಡು ಸುಖವಾಗಿದ್ದ—ಎಂಬ ವಿವರಣಾತ್ಮಕ ಸೂತ್ರವನ್ನು ನೋಡಿ. ಕೆಲವು ಸಾರಿ ಈ ಸಂಭ್ರಮದಲ್ಲಿ ಕಥಾವಕ್ತೃ ಕೂಡ ಪ್ರತಿನಿಧಿಯಾಗಿದ್ದನೊ ಎನ್ನಿಸುವಂತೆ ಸಾಕ್ಷಾತ್ತಾದ ಚಿತ್ರಣ ಮೈದುಂಬಿ ನಿಲ್ಲಬಹುದು. ಮುಕ್ತಾಯದಲ್ಲೂ ವಿಸ್ತೃತ ಸೂತ್ರಗಳು ಕಾಣಬರುವುದನ್ನು ಮೇಲಿನ ನಿದರ್ಶನದಿಂದ ಶ್ರುತಪಡಿಸಬಹುದು. ಈ ಸಂದರ್ಭದಲ್ಲಿ ಕಥೆಗಳು ಈ ಯಾವುದೇ ಸೂತ್ರಗಳಿಲ್ಲದೆ ಇದ್ದಕ್ಕಿದ್ದ ಹಾಗೆ ಮುಕ್ತಾಯವಾಗುವ ಕೆಲಮಟ್ಟಿನ ಸಾಧ್ಯತೆಯನ್ನೂ ನಿರಾಕರಿಸುವಂತಿಲ್ಲ. ಕೆಲವು ವೇಳೆ ಕಥಾವಕ್ತೃ ಕೇಳುಗನಲ್ಲಿ ಆಸಕ್ತಿಯನ್ನು ಕೆರಳಿಸುವುದಕ್ಕಾಗಿ ಕಥೆಯನ್ನು ಇದ್ದಕ್ಕಿದಂತೆ ನಿಲ್ಲಿಸುವುದುಂಟು. ಆಗ ಕೇಳುಗನ ಪ್ರಶ್ನೆ, ಅನಂತರ ವಕ್ತೃವಿನ

ಉತ್ತರ–ಹೀಗೆ ಕಥೆ ನಡೆಯುತ್ತದೆ. ಇಲ್ಲಿ ಕಥೆ ಅವಶ್ಯವಾಗಿ ಕ್ರೀಡೆಯಾಗಿ ಬಿಡುತ್ತದೆ. ಕಥೆಗಳ ಕಡೆಯಲ್ಲಿ ಶುಭಕಾಮನೆ, ಮತ್ತೊಂದು ಕಥೆ ಹೇಳುವಂತೆ ಪ್ರಾರ್ಥನೆ, ಕಥೆಯನ್ನು ಕಲಿತದ್ದೆಲ್ಲಿ ಎಂಬುದರ ವಿಚಾರಣೆ–ಇವುಗಳಿಂದ ಮುಕ್ತಾಯವಾಗುವುದು ಅಪರೂಪ.

ಈ ಸಮಯದಲ್ಲಿ ನೆನೆಯಬಹುದಾದ ಮತ್ತೊಂದು ವಿಷಯವೆಂದರೆ, ಕಥೆಯ ಮಧ್ಯದಲ್ಲಿ ಕಥಾವಕ್ತೃ ಆಸಕ್ತಿಯಿಂದ ಶ್ರೋತೃಗಳನ್ನು ಕುರಿತು ಕೇಳುವ ಪ್ರಶ್ನೆ; ಶ್ರೋತೃಗಳು ತಾವು ಕೇಳಿದ್ದನ್ನು ಖಾಯಂಗೊಳಿಸುವ ದೃಷ್ಟಿಯಿಂದ ಮಾಡುವ ಹೂಂಗುಟ್ಟುವಿಕೆ.

ಇನ್ನೊಂದು ವಿಚಾರ. ಸ್ಥಳಪುರಾಣದ ಕಥೆ ಆ ಸ್ಥಳದ, ಗ್ರಾಮದೇವತೆಯ ಹಾಗೂ ಇನ್ನಾರದೋ ಪ್ರಚಲಿತರ ಹೆಸರುಗಳಿಂದ ಆರಂಭವಾಗುತ್ತದೆ; ನಂಬಿ ಬಂದ ಆಚಾರವಿಚಾರಗಳ ಪದ್ಧತಿ ಸಂಪ್ರದಾಯಗಳ ವಿವರಣೆಯೊಡನೆ ಮುಕ್ತಾಯವಾಗುತ್ತದೆ. ಇದಲ್ಲದೆ, ನೀತಿಕಥೆಗಳು (ಕೆಲವು ಸಾರಿ ಪ್ರಾಣಿಕಥೆಗಳು) ಅಂತ್ಯದಲ್ಲಿ ಸೂತ್ರಬದ್ಧವಾದ ನೀತಿವಾಕ್ಯವೊಂದರಿಂದ ಮುಕ್ತಾಯವಾಗುವುದೂ ಸಹಜವಾಗಿದೆ. ಕಾಗೆಯನ್ನು ಮೋಸಮಾಡುವ ನರಿ, ಸಿಂಹವನ್ನು ಬಾವಿಗೆ ಕೆಡವಿದ ಮೊಲ—ಇಂಥ ಕಥೆಗಳನ್ನು ಉದಾಹರಿಸಬಹುದು.

ಹೀಗೆ ಜನಪದ ಕಥೆಯ ಆರಂಭ ಮತ್ತು ಮುಕ್ತಾಯ ಸೂತ್ರ ಬದ್ಧ ನೆಲಗಟ್ಟಿನ ಮೇಲೆ ರೂಪಿತವಾಗಿದೆ. ಕಥಾಸೂತ್ರವನ್ನು ಕುರಿತಾದ ಆಲೋಚನೆಯಲ್ಲಿ ಸೂತ್ರ ಕಥೆ ಮತ್ತು ಸಂಚಿತಕಥೆ ಎಂಬೆರಡು ಪ್ರಕಾರಗಳನ್ನು ಆಸಕ್ತಿಯಿಂದ ಅವಲೋಕಿಸಬಹುದು. ಒಂದೇ ಘಟನೆ, ಪದ್ಯ ಅಥವಾ ನುಡಿಗಟ್ಟುಗಳು ಪುನರಾವರ್ತನೆಗೊಳ್ಳುವ ಏಕರೀತಿಯ ಘಟನಾವಳಿಗಳನ್ನು ಚಿತ್ರಿಸುವ ಕಥೆ ಸೂತ್ರಕಥೆಯೆನಿಸುತ್ತದೆ. ಕಥೆಯಲ್ಲಿ ಏನು ನಡೆಯುತ್ತದೆ ಎಂಬುದು ಇಲ್ಲಿ ಮುಖ್ಯವಲ್ಲ. ಅದನ್ನು ಯಾವ ರೀತಿಯಲ್ಲಿ ಹೇಳಿದೆ ಎಂಬುದು ಇಲ್ಲಿ ಗಮನಾರ್ಹ. ಆದ್ದರಿಂದ ಚಮತ್ಕಾರವೇ ಇಲ್ಲಿ ಮುಖ್ಯವಾಗಿ ಬಿಡುತ್ತದೆ. ಇನ್ನೂ ಸ್ಪಷ್ಟವಾದ ಪ್ರಕಾರವೆಂದರೆ ಸಂಚಿತಕಥೆ. ಘಟನೆ ಅಥವಾ ನುಡಿಗಳ ಪುನರಾವರ್ತನೆಗಳ ಸಂಚಯವೇ ಇದು. ಈ ಘಟನಾಸರಣಿಗಳು ನಿಯತಸೂತ್ರದ ಮೇಲೆ ಬಂಧಿತವಾಗಿರುತ್ತವೆ. ಸಂಭಾಷಣೆಗಳ ಮೂಲಕ ವಿವರಗಳು ಬೆಳೆಯುತ್ತ ಹೋಗುತ್ತವೆ. ಪ್ರತಿಯೊಂದು ಘಟನೆಯೊಡನೆಯೂ ಈ ಸಂಚಯ ಕಾರ್ಯ ನಡೆಯುವುದಲ್ಲದೆ, ಪ್ರತಿ ಘಟನೆಯೂ ಹಿಂದಿನ ಘಟನೆಯನ್ನು ಅವಲಂಬಿಸಿರುತ್ತದೆ. ಕೆಲವು ಸಾರಿಯ ಇಂಥ ಅಸಂಬದ್ಧ ಸೇರಿಕೆ ಮನೋರಂಜನೆಯ ವಸ್ತುವಾಗುತ್ತದೆ.

ಸೂತ್ರಕಥೆ ಮತ್ತು ಸಂಚಿತ ಕಥೆಗಳೆರಡರಲ್ಲೂ ಕಾಣಬರುವ ಮೊದಲ ಗುಣವೆಂದರೆ ಪುನರಾವರ್ತನೆ; ಸಾಮಾನ್ಯವಾಗಿ ಇದು ನಿರಂತರ ಸಂಕಲನಗಳ ಮೂಲಕ ಆದುದು. ಇವೆರಡರಲ್ಲಿಯೂ ಕಥಾರೂಪವೇ ಪ್ರಧಾನವಾದುದು. ಬಹುಸಾರಿ ಇವುಗಳ ಕಥೆ ಕ್ರೀಡೆಯಾಗಿ ಬಿಡುತ್ತದೆ. ಹೀಗೆ ಸೂತ್ರಾತ್ಮಕವಾಗಿ ಸಾಗುವುದರಿಂದ ಇವನ್ನಿಲ್ಲಿ ನೆನೆಯಬಹುದು. (ಆರ್.ಜಿ.)

**ಕಥೆಯೊಳಗಣ ಕಥೆ :** ದೊಡ್ಡ ಕಥೆಯನ್ನು ಹೇಳುತ್ತಿರುವಾಗ ಮಧ್ಯೆ ಮಧ್ಯೆ ಬರುವ ಚಿಕ್ಕ ಕಥೆಗಳು. ಅಂತರ್ಗತ ಕಥಾವಳಿ ಎಂದೂ ಕರೆಯಬಹುದು. ಬಲು ಹಿಂದಿನಿಂದಲೂ ಇವು ಬಳಕೆಯಲ್ಲಿವೆ. ನೀತಿಯನ್ನು ಸಾರುತ್ತಲೋ ಹೇಳಿಕೆಗೆ ದೃಷ್ಟಾಂತವಾಗಿಯೋ ವಾದವೊಂದರ ಸಮರ್ಥನೆಗಾಗಿಯೋ ಖಂಡನಕ್ಕಾಗಿಯೋ ಇವು ಬಂದಿರಬಹುದು. ನಯಸೇನನ ಧರ್ಮಾಮೃತದಲ್ಲಿ ಇಂಥವಿವೆ. ಇವು ಸಾಧಾರಣವಾಗಿ ಚಿಕ್ಕವು. ಅದೇ ಬಾಣನ ಕಾದಂಬರಿಯಲ್ಲಿ ಬರುವ ಒಳಕಥೆಗಳು ಸುದೀರ್ಘವಾದುವು. ಪಾಶ್ಚಾತ್ಯರ ರೋಮಾನ್ಸ್ ಮತ್ತು ನಾವೆಲ್‌ಗಳಲ್ಲಿ ಕಾಣಬರುವಂತೆ ಅಷ್ಟು ದೊಡ್ಡವೂ ಅಷ್ಟು ಚಿಕ್ಕವೂ ಅಲ್ಲದ ಕಥೆಗಳೂ ಉಂಟು. 17 ಮತ್ತು 18ನೆಯ ಶತಮಾನದ ಫ್ರಾನ್ಸಿನಲ್ಲಿ ಅದ್ಭುತವಾಗಿ ಮಾರಾಟವಾಗುತ್ತಿದ್ದ ರೋಮಾನ್ಸುಗಳಲ್ಲಿ ಒಳ ಕಥೆಯ ಉಪಯೋಗ ಪ್ರಾರಂಭವಾಯಿತು. ಸ್ಕೂಡೆರಿ, ಮೆರಿವೊ ಮೊದಲಾದವರಿಗೆ ಅದು ಇಲ್ಲದಿದ್ದರೆ ಆಗುತ್ತಿರಲಿಲ್ಲ. ಅಷ್ಟೇ ಅಲ್ಲದೆ ಅವರಲ್ಲಿ ಕಥೆಯೊಳಗೆ ಬಂದ ಕಥೆಯೊಳಕ್ಕೆ ಇನ್ನೊಂದು ಕಥೆ ಬಂದು ಸೇರುವುದೂ ಉಂಟು. 18, 19ನೆಯ ಶತಮಾನಗಳ ಅನೇಕ ಕಾದಂಬರಿಕಾರರು ಒಳಕಥೆಯ ನೆರವನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಂಡಿದ್ದಾರೆ.

ಕಥೆಯೊಳಗೆ ಕಥೆಯನ್ನು ಕೂಡಿಸುವುದಕ್ಕೆ ಕಥೆಗಾರ ಕುಶಲನಾಗಿರಬೇಕು. (1) ಮೂಲಕಥೆಯ ಸರಣಿಗೆ ಒಳಕಥೆ ಆಂಗಿಕವಾಗಿ ಹೊಂದಿಕೊಂಡಿರಬೇಕು; ಆದ್ದರಿಂದ ಇದು ಸಹಜವಾಗಿ ತರ್ಕಸಮ್ಮತವಾಗಿ ಒಪ್ಪಾಗಿ ಎದ್ದು ಬಂದಂತಿರಬೇಕು. ಅಷ್ಟಾಗಿ ಇದು ಮುಖ್ಯವಲ್ಲ, ಗೌಣ ಎಂಬ ಸೂತ್ರವನ್ನು ಎಂದೂ ಉಲ್ಲಂಘಿಸಬಾರದು. (2) ಒಳಕಥೆಯನ್ನು ಓದುವಾಗ ಮೂಲಕಥೆಯ ನೆನಪು ಮಾಸಬಾರದು. (3) ಒಳಕಥೆ ತನ್ನ ಉದ್ದೇಶಸಾಧನೆಗೆ ಎಷ್ಟು ಬೇಕೋ ಅಷ್ಟೇ ಲಂಬವಾಗಿರಬೇಕು. ನಿಧಾನವಾದ ನಡೆಗಾಗಲಿ ವಿಳಂಬ ವರ್ಣನೆಗಾಗಲಿ ಇಳಿದು ಮೂಲಕಥೆಗೆ ಅಡಚಣೆಯಾಗಬಾರದು. (4) ಆದ್ದರಿಂದ ಸಾಕಷ್ಟು ವೈವಿಧ್ಯ ಉಂಟಾಗಿ ಚಿತ್ತಾಹ್ಲಾದ ಹೆಚ್ಚಬೇಕು. ಒಳಕಥೆಯನ್ನು ಹೇಳುವ ಪಾತ್ರಕ್ಕೂ ಸಮಯ ಸನ್ನಿವೇಶಕ್ಕೂ ಅದು ಸಮಂಜಸವಾಗಿ ಇದ್ದಲ್ಲಿ ಮೂಲಕಥೆಯ ಧಾಟಿಯಿಂದ ಸ್ವಲ್ಪ ಭಿನ್ನತೆ ಕಂಡು ಬಂದು ಒಟ್ಟು ರಚನೆ ರಂಜಕವಾಗುತ್ತದೆ. (5) ಒಳಕಥೆಯ ವಿಚಾರದಲ್ಲಿ ಮಿತಿ ಮತ್ತು ಔಚಿತ್ಯಗಳು ಹೊನ್ನ ನೇಮ.

ಕಥೆಯೊಳಗಿನ ಕಥೆಗೂ ಚೌಕಟ್ಟಿನೊಳಗಣ ಕಥೆಗೂ (ಸ್ಟೋರಿ ವಿದಿನ್ ಎ ಫ್ರೇಮ್; ಫ್ರೇಮ್–ಸ್ಟೋರಿ) ಸ್ಪಷ್ಟ ವ್ಯತ್ಯಾಸವಿದೆ. 1001 ರಾತ್ರಿಗಳು, ಬೇತಾಳ ಪಂಚವಿಂಶತಿ, ಚಾಸರನ ಕ್ಯಾಂಟರ್ಬರಿ ಟೇಲ್ಸ್, ಬೊಕ್ಯಾಚ್ಚಿಯೊವಿನ ಡೆಕಮೆರಾನ್, ದಶಕುಮಾರಚರಿತೆ ಮುಂತಾದವು ಒಂದು ಚೌಕಟ್ಟಿನೊಳಗೆ ಹಿಡಿದಿಟ್ಟಿರುವ ನಾನಾ ಕಥೆಗಳ ಸಂಕಲನ. ಕಥೆಗಳನ್ನು ಕೂಡಿಸಿರುವ ವಿಧಾನ ಚಮತ್ಕಾರವಾಗಿರಬಹುದು. ಆದರೂ ಆ ಕಥೆಗಳು ಬೇರೆ ಬೇರೆ. ತಮ್ಮ ತಮ್ಮ ಸ್ವಂತಿಕೆಯಿಂದಲೇ ಅವು ರುಚಿಕರ.

ಕಾದಂಬರಿಯ (ನಾವೆಲ್) ಇನ್ನೊಂದು ಪ್ರಕಾರದಿಂದಲೂ ಕಥೆಯೊಳಗಿನ ಕಥೆ ವಿಭಿನ್ನ. ಕೆಲವು ಕಾದಂಬರಿಗಳಲ್ಲಿ ಎರಡೊ ಮೂರೊ ಕಥಾವಸ್ತು (ಡಬಲ್ ಪ್ಲಾಟ್, ಟ್ರಿಬಲ್ ಪ್ಲಾಟ್) ಸಂಯೋಜಿತವಾಗುತ್ತವೆ. ಒಂದಕ್ಕೊಂದು ಸಾದೃಶ್ಯವಾಗಿಯೊ ವ್ಯತಿರಿಕ್ತವಾಗಿಯೊ ಇವು ಜರುಗಿ ಸಮಷ್ಟಿಯನ್ನು ಸಂಕೀರ್ಣಗೊಳಿಸುತ್ತವೆ. ಇವನ್ನು ಕಥೆಯೊಳಗಿನ ಕಥೆಯನ್ನಾಗಿ ಭಾವಿಸಲಾಗದು. (ಎಸ್.ವಿ.ಆರ್.)

**ಕಥೈಯೆನ್ ಗಣರಾಜ್ಯ :** ಅಲೆಕ್ಸಾಂಡರನ ಭಾರತ ದಂಡಯಾತ್ರೆಯ ಕಾಲದಲ್ಲಿ, ರಾಬಿ ನದಿಯ ಪೂರ್ವದಂಡೆಯ ಮೇಲೆ ಈಗಿನ ಲಾಹೋರ್ ಮತ್ತು ಅಮೃತಸರಗಳ ಹಲವು ಭಾಗಗಳಲ್ಲಿ ಇದ್ದ ಗಣರಾಜ್ಯ. ಆತನೊಂದಿಗೆ ಬಂದಿದ್ದ ಗ್ರೀಕ್ ಲೇಖಕರು ಈ ರಾಜ್ಯದ ಬಗ್ಗೆ ಅನೇಕ ವಿವರಗಳನ್ನು ನೀಡಿದ್ದಾರೆ. ಸಂಕಲ ಇದರ ರಾಜಧಾನಿ. ಇದು ಕೆಲಕಾಲ ಅತ್ಯಂತ ಪ್ರಬಲವಾಗಿತ್ತೆಂದೂ ಅಲೆಕ್ಸಾಂಡರನಿಂದ ಪರಾಜಿತವಾಗುವ ಮೊದಲು ಸುತ್ತುಮುತ್ತಿನ ಇತರ ಗಣರಾಜ್ಯಗಳನ್ನೂ ಪೂರ್ವ, ಅಭಿಸಾರ ಮೊದಲಾದ ರಾಜರನ್ನೂ ಯುದ್ಧಗಳಲ್ಲಿ ಸೋಲಿಸಿದ್ದುದಾಗಿಯೂ ಅರೆಯನ್ ವರ್ಣಿಸಿದ್ದಾನೆ. ಅಲೆಕ್ಸಾಂಡರನ ಆಕ್ರಮಣವನ್ನು ತಡೆಗಟ್ಟಲು ಈ ಗಣರಾಜ್ಯದ ಸೈನ್ಯ ಶಕಟವ್ಯೂಹವನ್ನು ರಚಿಸಿಕೊಂಡು ವೀರಾವೇಶದಿಂದ ಹೋರಾಡಿತು. ಆದರೆ ಅಲೆಕ್ಸಾಂಡರನ ಅಗಾಧ ಸೈನ್ಯವನ್ನು ಗೆಲ್ಲುವುದು ಇದರಿಂದಾಗಲಿಲ್ಲ.

ಈ ಜನರ ಅನೇಕ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಗಳನ್ನು ಗ್ರೀಕ್ ಲೇಖಕರಿಂದ ಅರಿಯಬಹುದಾಗಿದೆ. ಪರಾಕ್ರಮಿಯೂ ಸುಂದರನೂ ಆದವನನ್ನು ಇವರು ತಮ್ಮ ಗಣತಂತ್ರದ ಮುಖ್ಯನನ್ನಾಗಿ ಆರಿಸುತ್ತಿದ್ದರು. ವಿವಾಹಕ್ಕೆ ಜಾತಿಯ ಕಟ್ಟಿರಲಿಲ್ಲ. ವಧೂವರರ ವಿವಾಹಕ್ಕೆ ಪರಸ್ಪರರ ಸಮ್ಮತಿಯೇ ಮುಖ್ಯ. ಬಳುವಳಿ ಪದ್ಧತಿ ಇರಲಿಲ್ಲ. ಗಣರಾಜ್ಯದಲ್ಲಿ ಜನಿಸಿದ ಮಕ್ಕಳು ಪ್ರಥಮತಃ ರಾಷ್ಟ್ರೀಯರು; ಅನಂತರ ವ್ಯಕ್ತಿಗಳು. ಮಕ್ಕಳಿಗೆ ಎರಡು ತಿಂಗಳಾಗಿರುವಾಗ ಅವುಗಳ ಆರೋಗ್ಯವನ್ನು ಪರೀಕ್ಷಿಸಿ, ದುರ್ಬಲ ಮಕ್ಕಳನ್ನು ವಧಿಸಿ ಸುದೃಢವಾದವನ್ನು ಮಾತ್ರ ಉಳಿಸಿಕೊಂಡು ಪೋಷಿಸುವ ವ್ಯವಸ್ಥೆಯಿತ್ತು. ಗ್ರೀಸಿನ ಸ್ಪಾರ್ಟದಲ್ಲಿ ಕೂಡ ಇಂಥದೇ ಪದ್ಧತಿಯಿತ್ತೆಂಬುದನ್ನು ಇಲ್ಲಿ ನೆನೆಯಬಹುದು. ಕಥೈಯೆನ್ ಹೆಂಗಸರು ಸತೀ ಪದ್ಧತಿ ಅನುಸರಿಸುತ್ತಿದ್ದರು. ಗ್ರೀಕ್ ವಿದ್ವಾಂಸರು ಕಥೈಯೆನ್‌ಗಳ ಆಳವಾದ ತತ್ತ್ವಶಾಸ್ತ್ರಜ್ಞಾನವನ್ನೂ ಸೂಕ್ಷ್ಮಮತಿಯನ್ನೂ ಪ್ರಶಂಸಿದ್ದಾರೆ. ಕಠೋಪನಿಷತ್ತು ಮತ್ತು ಕಟಕ ಸಂಹಿತ ಕಥೈಯೆನ್ ವಿದ್ವಾಂಸರಿಂದ ರಚಿತವಾಗಿರಬೇಕೆಂದು ಕೆ.ಪಿ. ಜಯಸ್ವಾಲರ ಅಭಿಪ್ರಾಯ. (ಜಿ.ಆರ್.ಆರ್.)

**ಕದಂ, ಬಿ.ಪಿ. :** 1922–2010. ಸಂಸದೀಯ ಪಟು, ಸ್ವಾತಂತ್ರ್ಯ ಹೋರಾಟಗಾರ, ಸಾಮಾಜಿಕ ಕಾರ್ಯಕರ್ತ. ಇವರ ಪೂರ್ಣ ಹೆಸರು ಬಾಲಸು ಪುರುಷು ಕದಂ. ಉತ್ತರ ಕನ್ನಡ ಜಿಲ್ಲೆ ಕಾರವಾರದ ಸದಾಶಿವ ಗಡದಲ್ಲಿ 1922 ಡಿಸೆಂಬರ್ 2ರಂದು ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಕಾರವಾರದಲ್ಲಿ ಮುಗಿಸಿದರು. ಕೊಲ್ಹಾಪುರದ ರಾಜಾರಾಮ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಕೊಲ್ಹಾಪುರದ ಕಾಲೇಜುಗಳಲ್ಲಿ ಶಿಕ್ಷಣ ಮುಗಿಸಿದರು. ಕಾರವಾರದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿ (1948), ಅಪಾರ ಯಶಸ್ಸು ಗಳಿಸಿದರು. 1972ರ ವರೆಗೂ ಈ ವೃತ್ತಿಯನ್ನು ಮುಂದುವರಿಸಿದರು.

ತರುಣ ರಾಷ್ಟ್ರೀಯವಾದಿ ಕದಂ ಕೊಲ್ಹಾಪುರ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿ, ಎರಡು ತಿಂಗಳು ಭೂಗತರಾಗಿದ್ದರು. ಆಗ ಎರಡು ತಿಂಗಳು ಕಾಲೇಜಿನಲ್ಲಿ ಗೈರು ಹಾಜರಾಗಿದ್ದ ಬಗ್ಗೆ ಪ್ರಾಂಶುಪಾಲರಿಗೆ ತಮ್ಮ ಚತುರ ಮಾತಿನಿಂದ ಮನದಟ್ಟು ಮಾಡಿಕೊಟ್ಟು ಪರೀಕ್ಷೆಗೆ ಕುಳಿತು ತೇರ್ಗಡೆಯಾದರು. ವಕೀಲಿ ವೃತ್ತಿಯಲ್ಲಿದ್ದಾಗ ಬಡವರಿಗೆ, ರೈತರಿಗೆ, ಕಾರ್ಮಿಕರಿಗೆ ನೆರವಾದರು.

ರಾಜಕೀಯದಲ್ಲಿ ದುಮುಕಿದ ಇವರು ಮುಂಬಯಿಯ ವಿಧಾನಸಭೆಗೆ ಕಾಂಗ್ರೆಸ್‌ಪಕ್ಷದ ಶಾಸಕರಾಗಿ ಆಯ್ಕೆಯಾದರು (1952–57). ಕರ್ನಾಟಕ ವಿಧಾನಸಭೆಗೆ ಕಾರವಾರ ಕ್ಷೇತ್ರದಿಂದ ಆಯ್ಕೆಯಾಗಿ ಏಕಪ್ರಕಾರ ಮೂರು ಅವಧಿಗೆ ಶಾಸಕರಾಗಿ ಸೇವೆ ಸಲ್ಲಿಸಿದರು. ಅನಂತರ ವಿಧಾನ ಸಭೆಯ ಉಪಸಭಾಪತಿ ಸ್ಥಾನ ಪಡೆದು ಐದು ವರ್ಷ ಕಾರ್ಯನಿರ್ವಹಿಸಿದರು. ಲೋಕಸಭೆಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿ (1977–81) ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ದುಡಿದರು.

ಇವರು ಹಲವು ಸಂಘ ಸಂಸ್ಥೆಗಳಲ್ಲೂ ಸೇವೆಸಲ್ಲಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಸದಾಶಿವಗಡ ಶಿವಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ (1983–2002); ಕಾರವಾರ ಜಿಲ್ಲಾ ಸ್ಕೂಲ್ ಬೋರ್ಡ್ ಸಮಿತಿಯ ಉಪಾಧ್ಯಕ್ಷ (1950–53), ಕಾಳಿ ಪ್ರಾಜೆಕ್ಟ್ ಜಲಾಶಯ ಹಾಗೂ ನಿರಾಶ್ರಿತರ ಸಮಸ್ಯೆ ಸಮಿತಿ ಅಧ್ಯಕ್ಷ, ಪಾರ್ಲಿಮೆಂಟ್ ಕಾಯಿದೆ ಸಮಿತಿ ಸದಸ್ಯ ಇವು ಮುಖ್ಯವಾದುವು.

ಇವರಿಗೆ ಬೇಸಾಯದಲ್ಲಿ ವಿಶೇಷ ಆಸಕ್ತಿ. ಅಗಾಧ ಪುಸ್ತಕ ಪ್ರೇಮಿ, ಒಳ್ಳೆಯ ಭಾಷಣಕಾರರು, ಸಂಘಟನಾ ಚತುರರು. ಕನ್ನಡ, ಇಂಗ್ಲಿಷ್, ಮರಾಠಿ, ಕೊಂಕಣಿಯಲ್ಲಿ ಸುಲಲಿತವಾಗಿ ಮಾತನಾಡಬಲ್ಲರು. ಸಂಸದೀಯ ಹಾಗೂ ಸಂವಿಧಾನ ತಜ್ಞರಾಗಿ ಅನೇಕ ಸಮಿತಿಗಳಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ತಮಗೆ ದೊರೆತ ಅಧಿಕಾರವನ್ನು ನಿಷ್ಠೆ, ಶ್ರದ್ಧೆ, ತ್ಯಾಗ, ಸಮರ್ಪಣ ಭಾವಗಳಿಂದ ನಿರ್ವಹಿಸಿದ್ದಾರೆ. ಇವರ ಧರ್ಮಪತ್ನಿ ರಮಾಬಾಯಿ. (ಆರ್.ಜಿ.ಆರ್.)

**ಕದಂಬ :** ರೂಬಿಯೇಸೀ ಕುಟುಂಬಕ್ಕೆ ಸೇರಿದ ಸುಂದರವಾದ ಹೂ ಬಿಡುವ ಮರ. ಆಂಥೊಸೆಫಾಲಸ್ ಕದಂಬ ಇದರ ವೈಜ್ಞಾನಿಕ ನಾಮ. ಕಡವಳಮರ ಪರ್ಯಾಯನಾಮ. ಭಾರತದ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಈ ಮರವನ್ನು ಇದರ ಸುಂದರವಾದ ಹೂಗಳಿಗಾಗಿ ಉದ್ಯಾನವನಗಳಲ್ಲಿ, ರಸ್ತೆಗಳ ಪಕ್ಕಗಳಲ್ಲಿ ಬೆಳೆಸುತ್ತಾರೆ.

ಇದು ಸು. 9 ಮೀ ಎತ್ತರ ಬೆಳೆಯುವ ಮಧ್ಯಮ ಗಾತ್ರದ ಮರ. ತೊಗಟೆ ಬೂದು ಬಣ್ಣದ್ದಾಗಿದ್ದು ನಯವಾಗಿದೆ. ತೊಗಟೆಯ ಒಳಭಾಗದ ಬಣ್ಣ ಹಳದಿ ಮಿಶ್ರಿತ ಕಂದು. ವಯಸ್ಸಾದ ಮರದ ತೊಗಟೆ ಉದ್ದವಾಗಿ ಸೀಳಿ ಚಚ್ಚೌಕ ಬಿಲ್ಲೆಗಳಾಗಿ ಉದುರುತ್ತದೆ. ಎಲೆಗಳು ಅಭಿಮುಖವಾಗಿ ಜೋಡಣೆಗೊಂಡಿವೆ. ಅವುಗಳ ಆಕಾರ ಕರನೆಯಂತೆ, ಅಂಚು ನಯ ಮತ್ತು ತುದಿ ಮೊನಚು. ಹೂಗೊಂಚಲು ಮಧ್ಯಾರಂಭಿ (ಸೈಮೋಸ್) ಮಾದರಿಯದು. ಚೆಂಡಿನಂತೆ ಆಕಾರ ಹೂಗಳು ಕಿತ್ತಳೆ ಬಣ್ಣದವು. ಸುಗಂಧಪೂರಿತವೂ ಹೌದು. ಕ್ರಮೇಣ ಹೂಗಳು ಚಿನ್ನದ ಬಣ್ಣ ತಾಳುತ್ತವೆ. ಫಲ ಸಣ್ಣ ಸಣ್ಣ ಬೀಜಗಳನ್ನೊಳಗೊಂಡ ಸಂಪುಟ ಮಾದರಿಯದು. ಕದಂಬ ಮರವನ್ನು ಬೀಜಗಳಿಂದ ಸುಲಭವಾಗಿ ವೃದ್ಧಿ ಮಾಡಬಹುದು. ಇದರ ಹಣ್ಣುಗಳು ರುಚಿಯಾಗಿರುವುದರಿಂದ ಮನುಷ್ಯರೂ ಪ್ರಾಣಿ ಪಕ್ಷಿಗಳೂ ತಿನ್ನುವುದುಂಟು. ಕೆನೆ ಅಥವಾ ಮಾಸಲು ಬಿಳಿ ಬಣ್ಣದ ಇದರ ಚೌಬೀನೆ ಅಷ್ಟಾಗಿ ಬಾಳಿಕೆ ಬರುವುದಿಲ್ಲ. ಆದರೆ ಅದನ್ನು ಸುಲಭವಾಗಿ ಕೊಯ್ಯಬಹುದು, ಹದಮಾಡಬಹುದು. ಮೆದುವಾಗಿರುವುದರಿಂದ ಬೆಂಕಿಪೆಟ್ಟಿಗೆ, ಸಾಗಾಣಿಕೆ ಪೆಟ್ಟಿಗೆ ಮಾಡಲು ಉಪಯೋಗಿಸುತ್ತಾರೆ. ಇದರ ತೊಗಟೆಯನ್ನು ಕಣ್ಣುನೋವಿನ ನಿವಾರಣೆಗೂ ಬಾಯಿಹುಣ್ಣಿಗೂ ಬಳಸುತ್ತಾರೆ. (ಎ.ಕೆ.ಎಸ್.; ಎಚ್.ಕೆ.ಎಂ.; ಎಂ.ಎಚ್.ಎಂ.)

**ಕದಂಬ ಮನೆತನ :** ಪಶ್ಚಿಮ ಕರ್ನಾಟಕದಲ್ಲಿ ಪ್ರಶ. 4–7ನೆಯ ಶತಮಾನದವರೆಗೆ ಸ್ವತಂತ್ರರಾಗಿಯೂ 10–13ನೆಯ ಶತಮಾನದವರೆಗೆ ಹಾನುಗಲ್ಲು, ಗೋವ ಮುಂತಾದ ಕಡೆಗಳಲ್ಲಿ ಬಹುತೇಕ ಸಾಮಂತರು ಅಥವಾ ಮಾಂಡಲಿಕರಾಗಿಯೂ ಆಳಿದ ಒಂದು ರಾಜಮನೆತನ. ಈ ಮನೆತನದ ಅರಸರಿಗೆ ಸಂಬಂಧಿಸಿದ ಶಾಸನಗಳು ಮತ್ತು ದಿನಾಂಕಗಳನ್ನು ಆಯಾ ಅರಸರ ಆಳ್ವಿಕೆಯ ವರ್ಷ ಮಾಸ ಪಕ್ಷ ದಿನಗಳ ಎಣಿಕೆಯಲ್ಲಿ ನಿರೂಪಿಸಿರುವುದರಿಂದ ಇವಕ್ಕೆ ಸಮಾನವಾದ ತಾರೀಖುಗಳನ್ನು ನಿಷ್ಕರ್ಷಿಸುವುದು ಕಷ್ಟವೆಂದು ಹೇಳಲಾಗಿದೆ. ಆದರೂ ಸ್ಥೂಲವಾಗಿ ಇವರು ಮೇಲೆ ಸೂಚಿಸಿದ ಅವಧಿಯಲ್ಲಿ ಆಳ್ವಿಕೆ ನಡೆಸಿದರೆಂದು ಸ್ವೀಕರಿಸಬಹುದಾಗಿದೆ.

ಕದಂಬ ಮನೆತನದ ಉಗಮವಾದದ್ದು ಹೇಗೆಂಬ ಬಗ್ಗೆ ಅನೇಕ ಐತಿಹ್ಯಗಳಿವೆ. ತ್ರಿಲೋಚನ ಕದಂಬನೆಂಬವನು ಈ ಮನೆತನದ ಮೂಲಪುರುಷನೆಂಬುದು ಒಂದು ಕಥೆ. ಅವನಿಗೆ ನಾಲ್ಕು ಕೈ, ಮೂರು ಕಣ್ಣು. ಶಿವನ ಬೆವರು ಕದಂಬ ವೃಕ್ಷದ ಕೆಳಗೆ ಬಿದ್ದು ಆತ ಹುಟ್ಟಿದ. ಆದ್ದರಿಂದಲೇ ಅವನ ವಂಶಸ್ಥರಿಗೆ ಕದಂಬರೆಂದು ಹೆಸರಾಯಿತು. ಅವನ ಮಗ ಮಯೂರವರ್ಮ ಕದಂಬ ರಾಜ್ಯಸ್ಥಾಪಕ. ಮಯೂರವರ್ಮನೇ ಕದಂಬ ವೃಕ್ಷದ ಕೆಳಗೆ ಹುಟ್ಟಿದನೆಂದು ಇನ್ನೊಂದು ಐತಿಹ್ಯ ಸಾರುತ್ತದೆ. ಅವನಿಗೂ ಹಣೆಯ ಮೇಲೆ ಕಣ್ಣಿದ್ದುದರಿಂದ ಕಿರೀಟವನ್ನು ಮುಡಿಯ ಮೇಲೆ ಕಟ್ಟಬೇಕಾಯಿತಂತೆ. ಪರಶುರಾಮಕ್ಷೇತ್ರ ಸೃಷ್ಟಿಯಾದ ಮೇಲೆ ಶಿವ ಪಾರ್ವತಿಯರು ಸಹ್ಯಾದ್ರಿಯ ಸುಂದರ ಪ್ರದೇಶಕ್ಕೆ ಬಂದಿದ್ದರೆಂದೂ ಅಲ್ಲಿ ಇವರಿಗೆ ಹುಟ್ಟಿದ ಮಗುವೇ ಕದಂಬ ವಂಶದ ಆದ್ಯಪುರುಷನೆಂದೂ ಇನ್ನೊಂದು ಕಥೆಯಿದೆ. ಆದರೆ ಇಂಥ ಕಥೆಗಳೆಲ್ಲ ಕದಂಬರ ಆಡಳಿತ ಆರಂಭವಾದ ಅನೇಕ ವರ್ಷಗಳ ಮೇಲೆ ಹುಟ್ಟಿ ಕೊಂಡವಾದ್ದರಿಂದ ಇವಕ್ಕೆ ಹೆಚ್ಚಿನ ಬೆಲೆ ಕೊಡಬೇಕಾದುದಿಲ್ಲ. ಕದಂಬ ಪುಷ್ಪ ಪಾರ್ವತಿಗೆ ಪ್ರಿಯವಾದುದರಿಂದ ಶಿವಸಂಬಂಧವಾದ ಇಂಥ ಕಥೆಗಳು ಹುಟ್ಟಿ ಕೊಂಡಿರಬಹುದು ಎಂಬುದು ಇತಿಹಾಸಕಾರರ ಅಭಿಪ್ರಾಯ.

ಕಥೆಗಳು ಹೇಗಾದರೂ ಇರಲಿ. ಮಯೂರಶರ್ಮನೇ ಈ ರಾಜವಂಶದ ಸ್ಥಾಪಕನೆಂಬುದು ಶಾಂತಿವರ್ಮನ ತಾಳಗುಂದದ ಶಾಸನದಿಂದ ಗೊತ್ತಾಗುತ್ತದೆ. ಈತ ಮಾನವ್ಯಗೋತ್ರದ ಹಾರಿತೀವಂಶಸ್ಥ ಬ್ರಾಹ್ಮಣನೆಂದೂ ವೇದ ವಿದ್ಯಾಭ್ಯಾಸಕ್ಕಾಗಿ ಪಲ್ಲವರ ರಾಜಧಾನಿಯಾಗಿದ್ದ ಕಂಚಿಗೆ ಹೋಗಿದ್ದಾಗ ಅಲ್ಲಿಯ ರಾಜಭಟನೊಬ್ಬನಿಂದ ಅವಮಾನಕ್ಕೆ ಗುರಿಯಾದುದರ ಫಲವಾಗಿ ಅಸ್ತ್ರವಿದ್ಯೆ ಕಲಿತು ದಂಡುಕಟ್ಟಿ ದಾಳಿ ಮಾಡಿ ಗಡಿನೆಲವನ್ನಾಕ್ರಮಿಸಿ ಕೊಂಡನೆಂದೂ ಗೊತ್ತಾಗುತ್ತದೆ. ಮಗ್ಗುಲ ಮುಳ್ಳಾಗಿದ್ದ ಮಯೂರಶರ್ಮನ ವಿರೋಧ ಕಟ್ಟಿಕೊಳ್ಳಬಾರದೆಂಬ ಉದ್ದೇಶದಿಂದ ಪಲ್ಲವರು ಅವನಿಗಷ್ಟು ಪ್ರದೇಶ ಬಿಟ್ಟುಕೊಟ್ಟರು. ಆದರೆ ಸಾಮಂತನಾಗಿರುವುದು ಅವನಿಗೆ ಹಿಡಿಸಲಿಲ್ಲ. ಸ್ವಲ್ಪ ಕಾಲದಲ್ಲೇ ಆತ ಸ್ವಾತಂತ್ರ್ಯ ಘೋಷಿಸಿಕೊಂಡ. ಸು. 4ನೆಯ ಶತಮಾನದ ಚಂದ್ರವಳ್ಳಿಯ ಶಾಸನದ ಪ್ರಕಾರ



ರವಿವರ್ಮನ ಕಾಲದ ಕದಂಬ ಸಾಮ್ರಾಜ್ಯ

ಆತ ತ್ರೈಕೂಟಕ, ಅಭೀರ, ಪಲ್ಲವ, ಪಾರಿಯಾತ್ರಕ, ಶಕಸ್ಥಾನ, ಮೋಕರಿ, ಪುನ್ನಾಟ, ಸಾಯಿಂದಕ (ಸೇಂದ್ರಕ), ಪಾರಿಯಾತ್ರಕ ಮುಂತಾದ ರಾಜ್ಯಗಳನ್ನು ಸೋಲಿಸಿದ. ಆರಾವಳಿಯಿಂದ ವಿಂಧ್ಯದವರೆಗೆ ಇದ್ದದ್ದು ಸಾಯಿಂದಕರ ರಾಜ್ಯ. ಕಾವೇರಿ–ಕಪಿನಿಗಳ ನಡುವಣ ರಾಜ್ಯ ಪುನ್ನಾಟ. ಮೋಕರಿಗಳು ಆಳುತ್ತಿದ್ದ ಉಜ್ಜಯಿನಿ ಮತ್ತು ರಾಜಸ್ಥಾನಗಳ ವರೆಗೆ ಈತ ತನ್ನ ರಾಜ್ಯ ವಿಸ್ತರಿಸಿದನೇ ಎಂಬುದು ಸಂದೇಹಾಸ್ಪದ. ಅಂತೂ ಈ ನಾನಾ ರಾಜ್ಯಗಳ ಅರಸರೊಂದಿಗೆ ಈತ ಘರ್ಷಣೆ ನಡೆಸಿರಬಹುದೆಂಬುದಾಗಿ ಹೇಳಬಹುದಾಗಿದೆ.

ಕದಂಬರ ಮೊದಲ ದೊರೆ ಮಯೂರಶರ್ಮನಾದರೂ (325–45) ಅವನ ಅನಂತರ ಬಂದವರು ತಮ್ಮ ಹೆಸರುಗಳ ಕೊನೆಯ ಶಬ್ದವನ್ನು ವರ್ಮನೆಂದು ಬದಲಾಯಿಸಿಕೊಂಡು ತಮ್ಮದು ರಾಜವಂಶವೆಂದು ಸ್ಥಿರಪಡಿಸಿಕೊಂಡರು. ಈ ವಂಶದಲ್ಲಿ ಬಂದ ಅರಸರ ಪೈಕಿ ಕಾಕುತ್ಸ್ಥವರ್ಮ (ಸು. 405) ಪ್ರಸಿದ್ಧ. ಈತ ಪಲ್ಲವರೊಂದಿಗೆ ಯುದ್ಧ ಮಾಡಿ, ನೆರೆಯ ಅರಸರೊಂದಿಗೆ ವಿವಾಹಸಂಬಂಧ ಬೆಳೆಸಿ ಹೀಗೆ ನಾನಾ ಉಪಾಯಗಳಿಂದ ರಾಜ್ಯ ವಿಸ್ತರಿಸಿದ. ಇವನ ಮಗಳನ್ನು ಗುಪ್ತವಂಶದ ದೊರೆಯಾದ ಕುಮಾರಗುಪ್ತನ ಮಗನಿಗೆ ಕೊಟ್ಟು ಮದುವೆ ಮಾಡಿದನೆಂದು ಗೊತ್ತಾಗುತ್ತದೆ. ಇವನ ಮಗ ಶಾಂತಿವರ್ಮ (ಸು. 430) ಬನವಾಸಿಯಲ್ಲಿ ಆಳ್ವಿಕೆ ಮುಂದುವರಿಸಿದ. ಇನ್ನೊಬ್ಬ ಮಗ ಒಂದನೆಯ ಕೃಷ್ಣವರ್ಮ; ತ್ರಿಪರ್ವತದಲ್ಲಿ ರಾಜ್ಯವಾಳ ತೊಡಗಿದ. ಇವನ ವಂಶವೂ ಮುಂದುವರಿಯಿತು. ಶಾಂತಿವರ್ಮನ ಅನಂತರ ಬಂದ ಮೃಗೇಶ (ಸು. 455) ಪಲ್ಲವ

ರೊಂದಿಗೂ ಗಂಗರೊಂದಿಗೂ ಯುದ್ಧ ಮಾಡಿದ. ಸಾಮಾನ್ಯವಾಗಿ ಪ್ರತಿಯೊಬ್ಬ ಅರಸನೂ ಪಲ್ಲವರೊಂದಿಗೆ ಯುದ್ಧ ಮಾಡುತ್ತಲೆ ಇದ್ದನೆನ್ನಬಹುದು. ಮೃಗೇಶನ ಕಾಲದಲ್ಲಿ ಕದಂಬ ರಾಜ್ಯ ಇನ್ನೂ ವಿಸ್ತರಿಸಿತು. ಬನವಾಸಿಯ ಜೊತೆಗೆ ಪಲಾಶಿಕಾ ಎಂಬುದು (ಈಗಿನ ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿರುವ ಹಳ್ಳಿ) ಎರಡನೆಯ ರಾಜಧಾನಿಯಾಯಿತು.

ಮೃಗೇಶನ ಮಗ ರವಿವರ್ಮ. ಅವನ ಮಗ ಹರಿವರ್ಮ. ಶಾಂತಿವರ್ಮನ ವಂಶದಲ್ಲಿ ಹರಿವರ್ಮನೇ ಕೊನೆಯ ದೊರೆ. ಕ್ರಮೇಣ ಪ್ರಬಲರಾಗುತ್ತಿದ್ದ ಚಾಳುಕ್ಯರ ಒಂದನೇ ಪುಲಕೇಶಿ ಇವನನ್ನು ಸೋಲಿಸಿ ಆ ಪ್ರದೇಶಕ್ಕೆ ತಾನೇ ದೊರೆಯಾದ. ಕೃಷ್ಣವರ್ಮನ ವಂಶದ ರಾಜ್ಯವೂ ಚಾಳುಕ್ಯರ ಆಘಾತವನ್ನೆದುರಿಸಲಾರದೆ ಹೋಯಿತು.

ಆದ್ಯ ಕದಂಬರನ್ನು ಬಾದಾಮಿಯ ಚಾಳುಕ್ಯರು ರಾಜ್ಯಭ್ರಷ್ಟರನ್ನಾಗಿ ಮಾಡಿದಾಗ ಅವರಿಗೆ ಸಾಮಂತಿಕೆಗಿಂತಲೂ ಕೆಳಗಿನ ಸ್ಥಾನ ಸಿಕ್ಕಿತು. ಆದರೆ ಕ್ರಮೇಣ ಅವರ ಸಂತತಿಯವರು ಹಾನುಗಲ್ಲು ಮತ್ತು ಗೋವೆ ಪ್ರದೇಶಗಳಲ್ಲಿ ಸಾಮಂತ ಪದವಿಯನ್ನು ಗಳಿಸಿ ಮಹಾ ಮಂಡಲೇಶ್ವರರಾದರು. ಇಂದ್ರವರ್ಮ, ಆರ್ಯವರ್ಮ, ಅಜವರ್ಮ, ರವಿವರ್ಮ, ಬೊಪ್ಪವ್ವೆ




**ಹನ್ನೊಂದನೆಯ ಶತಮಾನದಲ್ಲಿದ್ದ ಕದಂಬರ ರಾಜ್ಯಗಳು :**
**1, 2. ಗೋವೆಯ ಕದಂಬರು. 3, 4. ಹಾನುಗಲ್ಲಿನ ಕದಂಬರು. 5. ಬೇಲೂರ ಕದಂಬರು.**
**6. ಬಯಲುನಾಡಿನ ಕದಂಬರು**

ಎಂಬ ಕದಂಬ ಅಧಿಕಾರಿಗಳು ಪ್ರ.ಶ. 855 ರಿಂದ 963ರವರೆಗೆ ಅನುಕ್ರಮವಾಗಿ ಬನವಾಸಿ ಪ್ರದೇಶದಲ್ಲಿ ಅಧಿಕಾರಿಗಳಾಗಿದ್ದರು. ಇಂದ್ರವರ್ಮನ ಅಧಿಕಾರ ಆರಂಭವಾದದ್ದು ರಾಷ್ಟ್ರಕೂಟ ನೃಪತುಂಗನ ಸಾರ್ವಭೌಮತ್ವದಲ್ಲಿ. ಕಿ.ಶ. 966ರಲ್ಲಿ ರಾಷ್ಟ್ರಕೂಟರು ದುರ್ಬಲರಾದುದರಿಂದ ಪುನಃ ಕದಂಬರು ತಲೆ ಎತ್ತಿದರು. ಕಲ್ಯಾಣದ ಚಾಳುಕ್ಯರ ಎರಡನೆಯ ತೈಲಪನಿಗೆ ಅಲ್ಪಕಾಲದಲ್ಲಿಯೇ ಅವರು ಸಾಮಂತರಾಗಬೇಕಾಯಿತು. ಅವರ ಸಾರ್ವಭೌಮತ್ವ 1163ರ ವರೆಗೆ ನಡೆಯಿತು. ಆಮೇಲೆ ಕಳಚುರ್ಯ ಬಿಜ್ಜಳ ಮತ್ತು ಅವನ ವಂಶಜರೂ ಬಳಿಕ 1181 ರಿಂದ 1200ರವರೆಗೆ ಪುನಃ ಕಲ್ಯಾಣ ಚಾಳುಕ್ಯ ನಾಲ್ಕನೆಯ ಸೋಮೇಶ್ವರನೂ ಸಾರ್ವಭೌಮರಾದರು. 1213 ರಿಂದ ದೇವಗಿರಿಯ ಸೇವುಣಯಾದವರ ಚಕ್ರವರ್ತಿತ್ವ ಕರ್ಣಾಟಕದ ಈ ಭಾಗದ ಮೇಲೆ ನಡೆಯಿತು. ಅವರ ಕೊನೆಗಾಲ 1294. ಆಮೇಲೆ ಕದಂಬರು ಸ್ವತಂತ್ರರಾದರು. ಆದರೆ 1347ರ ಹೊತ್ತಿಗೆ ವಿಜಯನಗರದ ಹರಿಹರ ದೊರೆಯ ತಮ್ಮ ಮಾರಪ್ಪ ಕದಂಬರ ಆಳ್ವಿಕೆಗೆ ಕೊನೆಯದಾಗಿ ಇತಿಶ್ರೀ ಬರೆದ.

ಹಾನುಗಲ್ಲಿಂದ ಆಳುತ್ತಿದ್ದ ಬನವಾಸಿಯ ಕದಂಬರಿಗೆ ಬನವಾಸಿ ಮಂಡಲದ 12,000, ಹಾನುಗಲ್ಲಿನ 500 ಮತ್ತು ಹೈವದ 500 ಗ್ರಾಮಗಳು ಸೇರಿದ್ದುವು. ಗೋವೆಯ ಕದಂಬರಿಗೆ 13,050 ಗ್ರಾಮಗಳ ರಾಜ್ಯವಿತ್ತು. 1,400 ಗ್ರಾಮಗಳ ಉತ್ತರ ಕೊಂಕಣದ ಮೇಲೂ ಅವರ ಪ್ರಭಾವ ಬಹಳ ಕಾಲ ಅಪ್ರತಿಭಟನೀಯವಾಗಿತ್ತು. ಹೈವದ ಮೇಲಿನ ಹಾನುಗಲ್ ಕದಂಬರ ಪ್ರಭುತ್ವ ಕೆಲಸಂದರ್ಭಗಳಲ್ಲಿ ಶಿಥಿಲವಾದದ್ದುಂಟು. ಆದರೂ ಒಟ್ಟಿನಲ್ಲಿ ಕದಂಬ ಸಂತಾನದ ಎರಡು ಪೀಳಿಗೆಗಳು ಆದ್ಯಕದಂಬ ಮಹಾರಾಜ್ಯದ ಮಲೆನಾಡು ಕರಾವಳಿ ಭಾಗಗಳನ್ನು ಹಂಚಿಕೊಂಡ ಹಾಗೆ ಸಾಮಂತಿಕೆಯಿಂದಾದರೂ ಸು. 400 ವರ್ಷಗಳ ಕಾಲ ಆಳಿದ್ದು ಸ್ಪಷ್ಟ. ಏಕಾವಧಿಯಲ್ಲಿ ಇಬ್ಬರು ಕದಂಬರಾಜರ ಹೆಸರುಗಳು ರಾಜ್ಯಭಾರದಲ್ಲಿ ಉಕ್ತವಾಗಿದ್ದರೆ ಅವರು ಸೋದರ ಸಮಾನಾಧಿಕಾರದಿಂದ ಪಿತ್ರಾರ್ಜಿತ ರಾಜ್ಯದ ಭಿನ್ನ ಭಾಗಗಳನ್ನು ಒಂದೇ ಅಥವಾ ಭಿನ್ನ ರಾಜಧಾನಿಗಳಿಂದ ಆಳುತ್ತಿದ್ದರೆಂದು ತಿಳಿಯಬೇಕು. ಈಗ ಬನವಾಸಿ ಊರು ಉತ್ತರ ಕನ್ನಡ ಜಿಲ್ಲೆಯಲ್ಲಿದೆ; ಹಾನುಗಲ್ಲು ಧಾರವಾಡ ಜಿಲ್ಲೆಯಲ್ಲಿದೆ. ಹಲಸಿ 1200ವನ್ನು ಒಳಗೊಂಡಿದ್ದ ಗೋವೆಯ ಕದಂಬ ರಾಜ್ಯಕ್ಕೆ ಇಂದಿನ ಬೆಳಗಾವಿ ಜಿಲ್ಲೆಯ ಬಹುಭಾಗ ಸೇರಿತ್ತು.

ಆದ್ಯಕದಂಬರಿಗೆ ಬಾಣ, ಸೇಂದ್ರಕ, ಭೋಜ, ಮಹಾರಥಿ, ಶಕಪಲ್ಲವ, ಪಾರಿಯಾತ್ರಕ, ತ್ರೈಕೂಟಾಭೀರ, ಕೇಕೆಯ, ಆಳುಪ ಮತ್ತು ಮೋಕರಿಗಳು ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ತಲಕಾಡಿನ ಗಂಗ ದೊರೆ ಅವಿನೀತ ಐದನೆಯ ಶತಮಾನದಲ್ಲಿ ಪುನ್ನಾಡಿನ ಕದಂಬರ ಅಳಿಯನಾದಾಗ ಪುನ್ನಾಟಕ ಮೇಲಿನ ದೊರೆತನವನ್ನು ಕದಂಬರಿಂದ ಪಡೆದ. ಇಂದಿನ ಮೈಸೂರು ಜಿಲ್ಲೆಯ ಪ್ರದೇಶ ಅಂದು ಬಯಲುನಾಡು 5300 ಅಥವಾ ಪುನ್ನಾಡು (ಪುನ್ನಾಟ) ಆಗಿತ್ತು. ಹೆಗ್ಗಡದೇವನಕೋಟೆ ತಾಲ್ಲೂಕಿನ ಕೀರ್ತಿಪುರ (ಕಿತ್ತೂರು) ಪುನ್ನಾಡ ಕದಂಬ ಶಾಖೆಯ ರಾಜಧಾನಿಯಾಗಿತ್ತು. ರಾಷ್ಟ್ರವರ್ಮ, ನಾಗದತ್ತ, ಭುಜಗ ಮತ್ತು ರವಿದತ್ತ ಈ ಕದಂಬರು ಪುನ್ನಾಡಿನ ಕದಂಬ ಶಾಖೆಯ ಮೊದಲ ದೊರೆಗಳು. ಪುನ್ನಾಟ ಕದಂಬ ಶಾಖೆಯ ಸ್ಕಂದವರ್ಮನಿಂದ ಗಂಗರಿಗೆ ಅಲ್ಲಿಯ ದೊರೆತನ ಹೋದರೂ ಪುನಃ ಆತನ ಪೀಳಿಗೆಯ ರವಿಯಮ್ಮರಸ ಮುಂತಾದ ಕದಂಬರು ಸು. 10–11ನೆಯ ಶತಮಾನಗಳ ನಡುವೆ ಪುನ್ನಾಡನ್ನು ಆಳತೊಡಗಿದ ಉಲ್ಲೇಖವಿದೆ. ಎರಡನೆಯ ಸ್ಕಂದವರ್ಮ ಕದಂಬ ಅಲ್ಲಿ 1079ರಲ್ಲಿ ಆಳುತ್ತಿದ್ದ. 1090ರಲ್ಲಿ ಅವನ ಮಗ ಕಾಂತಿವರ್ಮ ಕದಂಬ ಪಟ್ಟಕ್ಕೇರಿದ. ಮೈಸೂರು ಜಿಲ್ಲೆಯ ಕಿಕ್ಕಿನಾಡು ಅಥವಾ ಕಿಕಿರೆ ಮತ್ತು ಕೇರಳದ ತೆರುಮಂಗಳಗಳು ಅವನ ತಂದೆಯ ಕಾಲದಿಂದ ಉಪರಾಜಧಾನಿಗಳಾಗಿದ್ದುವು. ಇರಿವ ಚೆಲ್ಲಮ ಅವನ ಮಗ. 1138ರ ಶಾಸನ ಮುಕ್ಕಣ್ಣ ಕದಂಬನನ್ನು ಉಲ್ಲೇಖಿಸುತ್ತದೆ. 1393ರಲ್ಲಿ ಮಹಾರಾಜಾಧಿರಾಜ ಕದಂಬರಾಯ ಒಡೆಯ ಅಯ್ಯ ಅಲ್ಲಿ ವಿಜಯನಗರದ ಸಾಮಂತನಾಗಿ ದೊರೆತನ ಮಾಡುತ್ತಿದ್ದ. ಕೊಡಗಿನ ಆದ್ಯ ದೊರೆಗಳು ಕದಂಬರು. ಬೇಲೂರಿನಲ್ಲಿ ಹೊಯ್ಸಳರಿಗಿಂತ ಮೊದಲು ಕದಂಬ ಶಾಖೆ ಆಳುತ್ತಿತ್ತು. ಬಂಕಾಪುರ, ಉಚ್ಚಂಗಿ, ನಾಗರಖಂಡ, ರಾಯಚೂರು, ನೂರುಂಬಾಡ, ಚಂದಾವರಗಳಲ್ಲಲ್ಲದೆ ಕಳಿಂಗದ ಗಂಗರಸರ ಸಾಮಂತಿಕೆಯಲ್ಲಿ ಕೂಡ ಕದಂಬ ಉಪಮನೆತನವೊಂದು ರಾಜ್ಯಭಾರ ಮಾಡುತ್ತಿತ್ತು.

**ಆಡಳಿತ :** ಆದ್ಯ ಸಾರ್ವಭೌಮ ಕದಂಬರಲ್ಲಿ ಜಾತೀಯತೆ ಮತೀಯತೆಗಳ ಪೂರ್ವಗ್ರಹಗಳಿರಲಿಲ್ಲ. ಅವರ ಶಾಸನಗಳಲ್ಲಿ ತಮ್ಮ ವರ್ಣ, ಜಾತಿ, ಮತಗಳಿಗೆ ಸೇರದವರ ಮತಧಾರ್ಮಿಕ ಸಂಸ್ಥೆಗಳಿಗೆ ದತ್ತಿದಾನಗಳನ್ನು ಕೊಟ್ಟ ಉಲ್ಲೇಖವಿದೆ.

ಕದಂಬ ಕುಂತಳೇಶ್ವರರು ಧರ್ಮಶಾಸ್ತ್ರೋಕ್ತವಾದ ರಾಜಧರ್ಮ ಪರಂಪರೆಗೆ ಅಧೀನರಾಗಿ ರಾಜ್ಯಭಾರ ನಡೆಸುತ್ತಿದ್ದರಲ್ಲದೆ ನಿರಂಕುಶಪ್ರಭುಗಳಾಗಿರಲಿಲ್ಲ. ಜನಮತಕ್ಕೆ ಅವರು ಬಹಳ ಬೆಲೆ ಕೊಡುತ್ತಿದ್ದರೆಂಬುದು ಶಾಸನಸಿದ್ಧ. ಅವರು ಸ್ವತಃ ಸಾಮಾನ್ಯ ಪ್ರಜೆ ಪಾಲಿಸಬೇಕಾದ ಎಲ್ಲ ನೀತಿನಿಯಮಗಳಿಗೂ ಬದ್ಧರಾಗಿದ್ದರು. ವಿದ್ಯೆ, ವಿವೇಕ, ಶೌರ್ಯ, ಔದಾರ್ಯ, ದಾನ, ಧರ್ಮ, ಸತ್ಯ, ನ್ಯಾಯನಿಷ್ಠೆ ಮುಂತಾದ ಸದ್ಗುಣಗಳಿಂದ ಅವರು ಜನಪ್ರಿಯರಾಗಿದ್ದರು. ಭಗೀರಥ, ರಘು, ಕಾಕುತ್ಸ್ಥ ಹೆಸರುಗಳು ಸೂಚಿಸುವಂತೆ ರಾಮರಾಜ್ಯದ ಆದರ್ಶವನ್ನು ಅವರು ತಮ್ಮೆದುರಿಟ್ಟುಕೊಂಡು ಪ್ರಜಾಪಾಲನೆ ಮಾಡುತ್ತಿದ್ದರು.

ಕದಂಬರ ಮಂತ್ರಿಗಳು ವಯೋವೃದ್ಧರೂ ಜ್ಞಾನವೃದ್ಧರೂ ಅನುಭವಸ್ಥರೂ ಪ್ರಜಾಹಿತೈಷಿಗಳೂ ಆಗಿದ್ದರು. ಹರಿವರ್ಮ ಮತ್ತು ಶಿವಚಿತ್ತದ ಶಾಸನಗಳು ಈ ಮಾತಿಗೆ ಪ್ರಮಾಣಗಳಾಗಿವೆ. ಕೆರೆ, ಕಾಲುವೆ, ರಸ್ತೆ, ಸಾಲುಮರ, ಅರವಟ್ಟಿಗೆ, ಧರ್ಮಛತ್ರ, ಮಠ, ದೇವಾಲಯಗಳ ರಚನೆಯಲ್ಲಿ ಕದಂಬರಾಜರಾಣಿಯರು ಉತ್ಸುಕರಾಗಿದ್ದರು. ಆದುದರಿಂದ ಪ್ರಜೆಗಳೂ ಅಧಿಕಾರಿಗಳೂ ಹೆಚ್ಚಿನ ರಾಜನಿಷ್ಠೆಯುಳ್ಳವರಾಗಿದ್ದರು. ಆದ್ಯಕದಂಬ ಮಹಾರಾಜರ ಆಸ್ಥಾನದಲ್ಲಿ ಸಾಮಂತರು, ಮಂತ್ರಿಗಳು, ಸಾಮಾಜಿಕ ಮುಖಂಡರು, ಪ್ರಾಧಿಕಾರಿಗಳು,

ಪುರೋಹಿತ (ರಾಜಗುರುಗಳು), ಪಂಡಿತರು ಮತ್ತು ಕಲಾವಿದರು ವಿರಾಜಿಸುತ್ತಿದ್ದರು. ಕರ್ಣಾಟಕಸಾರ್ವಭೌಮರ ದರ್ಬಾರಿನ ಮಾದರಿಗಳ ಮೂಲವಿರುವುದು ಆದ್ಯಕದಂಬರ ಸಾರ್ವಭೌಮ ಆಸ್ಥಾನದಲ್ಲಿ.

ರಾಜಸಭೆಯಲ್ಲಿ ಸಾರ್ವಭೌಮರೂ ಸಾಮಂತರೂ ರಾಜಕೀಯ, ಔದ್ಯಮಿಕ, ಕಾಯಿದೆ ಸುವ್ಯವಸ್ಥೆಗಳ ಬಗೆಗಿನ ಸಮಸ್ಯೆಗಳನ್ನು ಚರ್ಚಿಸಿ ನಿರ್ಣಯಕ್ಕೆ ಬಂದ ಕೂಡಲೇ ಅದರಂತೆ ಆಚರಿಸಲು ಪ್ರಾಧಿಕಾರಿಗಳಿಗೆ ಆಜ್ಞೆ ಮಾಡಲಾಗುತ್ತಿತ್ತು; ಅಂಥ ದೊಡ್ಡ ಸಮಸ್ಯೆಗಳಿಲ್ಲದಾಗ ತತ್ತ್ವ ಸಾಹಿತ್ಯ ವಿಮರ್ಶೆಗಳಿಗೆ ಸಂಬಂಧಿಸಿದ ಚರ್ಚೆಗಳು ನಡೆಯುತ್ತಿದ್ದವು; ಶಾಸ್ತ್ರಜ್ಞರು ಅವುಗಳಲ್ಲಿ ಭಾಗವಹಿಸುತ್ತಿದ್ದರು. ವಿದ್ವಾಂಸರಿಗೆ ಭೂದಾನ, ಧನದಾನ, ಕರಮುಕ್ತತೆಗಳನ್ನು ನೀಡಲಾಗುತ್ತಿತ್ತು. ರಾಜ್ಯಕ್ಕೆ ಸಂಬಂಧಿಸಿದ ದೈನಂದಿನ ವಿಷಯಗಳ ವ್ಯವಹಾರದಲ್ಲಿ ಐವರು ಸದಸ್ಯರ ಮಂತ್ರಿಸಂಪುಟವೊಂದು ಮಹಾರಾಜನಿಗೆ ನೆರವೀಯುತ್ತಿತ್ತು. ಮನೆವೆರ್ಗಡೆ, ತಂತ್ರಪಾಲ, ಪ್ರಧಾನ, ಕ್ರಮುಕಪಾಲ, ಸಭಾಕಾರ್ಯ ಸಚಿವ ಎಂಬವು ಅವರ ಪದಾಭಿಧಾನಗಳು. ಅವರ ಸಲಹೆಗಳನ್ನು ಮಹಾರಾಜ ಹೆಚ್ಚಾಗಿ ಒಪ್ಪಿ ನಿರ್ಣಯಕ್ಕೆ ಬರುತ್ತಿದ್ದ. ಏಕೆಂದರೆ ಅವರ ಆಯ್ಕೆ ಹಿರಿಯರಿಂದ ಅತ್ಯಂತ ಸಪರೀಕ್ಷಿತವಾಗಿ ನಡೆದದ್ದಾಗಿರುತ್ತಿತ್ತು.

ಕದಂಬರ ಮಂತ್ರಿಗಳು ಶಾಸನಗಳು ಹೇಳುವಂತೆ ಪ್ರಶಾಸನಪಂಡಿತರೂ ನೀತಿಬದ್ಧರೂ ವ್ಯಕ್ತಿತ್ವಸಂಪನ್ನರೂ ಬಹುಮುಖ ಪ್ರತಿಭಾವಂತರೂ ಸುಸಂಸ್ಕೃತರೂ ಮಹಾಮನರೂ ಆಗಿರುತ್ತಿದ್ದರು. ನ್ಯಾಯದರ್ಶನ, ಅಲಂಕಾರಶಾಸ್ತ್ರ (ಸಾಹಿತ್ಯ ವಿಮರ್ಶೆ) ಮತ್ತು ರಾಜನೀತಿಶಾಸ್ತ್ರ ಗಳಲ್ಲಿ ಅವರು ವಿಶೇಷಜ್ಞರಾಗಿರುತ್ತಿದ್ದರು. ನಾಗರಿಕ ಸೈನಿಕ ಆಡಳಿತಗಳೆರಡರಲ್ಲೂ ಅವರು ತಜ್ಞರು. ಮಹಾರಾಜನೊಡನೆ ಎಷ್ಟೋ ಸಲ ಮಂತ್ರಿಗಳೂ ಯುದ್ಧಕಾಲದಲ್ಲಿ ರಣರಂಗಕ್ಕೆ ಹೋಗಿ ಸೈನ್ಯ ವಿಭಾಗಗಳ ನೇತೃತ್ವ ವಹಿಸುತ್ತಿದ್ದುದುಂಟು.

ಆದ್ಯಕದಂಬ ಸಚಿವಾಲಯದಲ್ಲಿ ರಹಸ್ಯಾಧಿಕೃತರೆಂಬ ಖಾಸಗಿ ಕಾರ್ಯದರ್ಶಿ ಗಳಿರುತ್ತಿದ್ದರು ಎಂಬುದನ್ನು ಮಾಂಧಾತೃವರ್ಮನ ಶಾಸನವೊಂದು ತಿಳಿಸುತ್ತದೆ. ಖಾಸಗಿ ಕಾರ್ಯದರ್ಶಿ ಮುಖ್ಯಕಾರ್ಯದರ್ಶಿಗೂ ಮುಖ್ಯಕಾರ್ಯದರ್ಶಿ ಕಂದಾಯ ಶಾಖೆಯ ಪ್ರಾಧಿಕಾರಿಗಳಿಗೂ ರಾಜಾಜ್ಞೆಯನ್ನು ಕೂಡಲೇ ಜಾರಿಗೆ ತರಲೆಂದು ಮುಟ್ಟಿಸುತ್ತಿದ್ದರು. ಆಮೇಲೆ ಪ್ರಾಧಿಕಾರಿಗಳು ಅದನ್ನು ಜಾರಿಗೆ ತರುವ ಮೊದಲು ಲೆಕ್ಕಿಗರ (ಗುಮಾಸ್ತರ) ವರ್ಗಕ್ಕೆ ತಿಳಿಸಿ ಅವರ ಮೂಲಕ ದಾಖಲೆ ಮಾಡಿಸುತ್ತಿದ್ದರು.

ರಾಜ್ಯಾಂಗ ಶಾಸಕಾಂಗಗಳು ಧರ್ಮಶಾಸ್ತ್ರಾಧೀನವಾಗಿದ್ದುದರಿಂದ ಅವುಗಳ ಪ್ರಕಾರ ರಾಜಾಜ್ಞೆ (ಸರಕಾರಿ ಆಜ್ಞೆ) ಹೊರಡಿಸುವುದು ಮತ್ತು ಕಾರ್ಯಾಂಗ ಅದನ್ನು ಜಾರಿಗೆ ತರುವುದು ಸಂಪ್ರದಾಯ. ನ್ಯಾಯಾಧಿಕರಣಗಳದು ಕೋರ್ಟುಗಳ ಸ್ಥಾನ. ರಾಜಸಭೆ ಅತ್ಯುಚ್ಚನ್ಯಾಯಾಧಿಕರಣ. ಕೆಳಗಿನ ನ್ಯಾಯ (ಧರ್ಮ) ಅಧಿಕರಣಗಳಿಂದ ಕಳಿಸಲಾದ ಮಹತ್ವದ ಪ್ರಕರಣಗಳನ್ನು ಮಾತ್ರ ಅದು ನಿರ್ಣಯಕ್ಕೆ ತೆಗೆದುಕೊಳ್ಳುತ್ತಿತ್ತು. ಪ್ರಕರಣ ಜಾತಿಗಳ ಪ್ರಕಾರ ನ್ಯಾಯಾಧಿಕರಣಗಳ ವಿಶಿಷ್ಟವರ್ಗಗಳಿದ್ದುವು. ಹೊಡೆದವನಿಗೆ ಮೂರು (ಬಂಗಾರದ) ಗದ್ಯಾಣಗಳ ದಂಡ. ಕೊಲೆಗಡುಕನಾದಾತ ಸರ್ಕಾರಕ್ಕೆ 50 ಗದ್ಯಾಣಗಳನ್ನೂ ಹತನ ಕುಟುಂಬಕ್ಕೆ 100 ಗದ್ಯಾಣಗಳನ್ನೂ ತೆರಬೇಕಾಗಿತ್ತು. ಶಠಾಪರಾಧಿಗಳನ್ನು ಅಗ್ನಿಪರೀಕ್ಷೆಗೂ ಅಪೂರ್ವವಾಗಿ ಗುರಿಪಡಿಸಲಾಗುತ್ತಿತ್ತು.

ಸಾಮ್ರಾಜ್ಯ, ಪ್ರಾಂತ್ಯಗಳು, ರಾಜ್ಯಗಳು, ವಿಷಯಗಳು, ಗ್ರಾಮಗಳು ಮತ್ತು ಕುಲಗಳು ರಾಜಕೀಯ ವಿಭಾಗಗಳಾಗಿದ್ದುವು. ಸಾಮಂತ ಕದಂಬರು ತಮ್ಮ ವಿಷಯ (ಜಿಲ್ಲೆ)ಗಳನ್ನು ಕಂಪಣಗಳನ್ನಾಗಿಯೂ ಕಂಪಣಗಳನ್ನು ಗ್ರಾಮಗಳನ್ನಾಗಿಯೂ ವಿಂಗಡಿಸಿಕೊಂಡಿದ್ದರು; ಮನ್ನೆಯನೇ ಕಂಪಣಾಧಿಪತಿ. ಸಾಮ್ರಾಜ್ಯಕ್ಕೆ ಪೂರ್ವ ಪಶ್ಚಿಮ ದಕ್ಷಿಣ ಉತ್ತರಗಳೆಂಬ ನಾಲ್ಕು ಪ್ರಾಂತ್ಯಗಳು. ಸಾರ್ವಭೌಮನ ನಿಕಟ ಸಂಬಂಧಿಕರು ಅವುಗಳ ರಾಜಪ್ರತಿನಿಧಿಗಳು. ವಿಷಯ ಮತ್ತು ಗ್ರಾಮಗಳ ಗಡಿಗಳಿಗೆ ಸ್ಥಿರತೆ ಹೆಚ್ಚಾಗಿತ್ತು. ರಾಜ್ಯವೊಂದು ನಾಡು ಅಥವಾ ಮಂಡಲ.

ಸಾಮಂತ ಕದಂಬರಿಗೂ ಚಕ್ರವರ್ತಿಗಳಿಗೂ ನಡುವೆ ಕೆಲವೊಮ್ಮೆ ರಾಜ ಪ್ರತಿನಿಧಿಗಳು ಮತ್ತು ಹೆಚ್ಚಾಗಿ ರಾಜ್ಯಪಾಲರು ಇರುತ್ತಿದ್ದರು. ಪೆರ್ಜುಂಕ, ವಡ್ಡರಾವುಳ, ಕಿರುಕುಳ, ಬಿಳ್ಕೊಡೆ ಮತ್ತು ಪನ್ನಯ ಎಂಬ ಪಂಚವಿಧ ತೆರಿಗೆಗಳನ್ನು ರಾಜ್ಯಪಾಲ ವಸೂಲು ಮಾಡಿ ಚಕ್ರವರ್ತಿಯ ಬೊಕ್ಕಸಕ್ಕೆ ಮುಟ್ಟಿಸುತ್ತಿದ್ದ. ಸಾಮಂತ ಕದಂಬರೂ ಬೇಕಾದಾಗ ರಾಜ್ಯಪಾಲರನ್ನು ಒಳ ಆಡಳಿತಕ್ಕಾಗಿ ನಿಯಮಿಸಿಕೊಳ್ಳುತ್ತಿದ್ದರು. ಅವರ ಮಹಾಮಂಡಲದ ಒಳ ಆಡಳಿತದಲ್ಲೂ ನೆರೆಹೊರೆಯ ಸಾಮಂತರೊಡನೆ ವ್ಯವಹರಿಸುವುದರಲ್ಲೂ ಅವರು ಸಂಪೂರ್ಣ ಸ್ವತಂತ್ರರಾಗಿದ್ದರು. ಗ್ರಾಮದ ಉತ್ಪನ್ನದಲ್ಲಿ ಆರನೆಯ ಒಂದಂಶ ರಾಜನಿಗೆ ಸಲ್ಲುತ್ತಿದ್ದ ಕಂದಾಯ. ವ್ಯಾಪಾರ ಮುಂತಾದ ವೃತ್ತಿಗಳಲ್ಲಿದ್ದವರು ಕರ ಕೊಡಬೇಕಾಗಿತ್ತು. ಅವರವರ ವೃತ್ತಿಸ್ವಾತಂತ್ರ್ಯವನ್ನು ಕಾಪಾಡುವುದು ರಾಜನ ಮುಖ್ಯ ಕರ್ತವ್ಯವಾಗಿತ್ತು.

**ಸಂಸ್ಕೃತಿ ಮತ್ತು ಧರ್ಮ :** ಮಯೂರಶರ್ಮನ ಕಾಲದಲ್ಲಿ ಪ್ರಾಕೃತವೇ ಅಧಿಕೃತ ಭಾಷೆಯಾಗಿತ್ತು. ಅನಂತರ ಕಾಕುತ್ಸ್ಥವರ್ಮನ ಕಾಲದವರೆಗೆ ಸಂಸ್ಕೃತ ಆ ಸ್ಥಾನವನ್ನು ಪಡೆದಿತ್ತು. ಮೊದಲ ಬಾರಿಗೆ ಕನ್ನಡ ಅಧಿಕೃತ ರಾಜ್ಯಭಾಷೆಯಾದದ್ದು ಕಾಕುತ್ಸ್ಥವರ್ಮನ ಕಾಲದಲ್ಲಿ. ಕಾಳಿದಾಸನೆಂಬ ಕವಿ ಕುಂತಳೇಶ್ವರ ದೌತ್ಯವೆಂಬ ಕಾವ್ಯವನ್ನು ರಚಿಸಿದ್ದು ರಘು ಚಕ್ರವರ್ತಿಯ ಸಾಂಸ್ಕೃತಿಕ ಔನ್ನತ್ಯವನ್ನು ನೋಡಿ ಹೋದ ಮೇಲೆ. ಆರಂಕುಶವಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ ಎಂದು ಪ್ರ.ಶ. 941ರ ಸುಮಾರಿಗೆ ಮಹಾಕವಿ ಪಂಪ ಹೇಳಿದ್ದು ಬನವಾಸಿ ಪನ್ನಿರ್ಛಾಸಿರದ ಬನವಾಸಿ ರಾಜಧಾನಿಯಲ್ಲಿ ಅಜವರ್ಮಕದಂಬ ನೆಂಬ ದುರ್ಬಲ ದೊರೆ ಅಧಿಕಾರ ನಡೆಸುತ್ತಿದ್ದ ಅವಧಿಯನ್ನು ಸೂಚಿಸುತ್ತದೆ. ಅಂದು ರಾಷ್ಟ್ರಕೂಟರು (753–971) ಈ ಪ್ರದೇಶದ ಸಮ್ರಾಟರಾಗಿದ್ದರು. ಆದರೂ ಬನವಾಸಿ ಮಂಡಲದ ಪುಲಿಗೆರೆಯ ತಿರುಳ್ಗನ್ನಡ ಪಂಪನಿಗೆ ಅನುಕರಣೀಯವಾಯಿತು. ಅವನ ಮಹಾಕಾವ್ಯಗಳು ಪ್ರದರ್ಶಿಸುವುದು ಕದಂಬಗನ್ನಡವನ್ನು.

ತನ್ನ ವಂಶದಲ್ಲಿ ಪ್ರಖ್ಯಾತನಾಗಿದ್ದ ರಘುವರ್ಮನಂತೆ ಹಾನಿಗಲ್ ಪೀಳಿಗೆಯ ಕೀರ್ತಿವರ್ಮ ತನ್ನ ಅಪಾರ ಪಾಂಡಿತ್ಯದಿಂದ ಸರ್ವಜ್ಞನೆನಿಸಿಕೊಂಡಿದ್ದ. ಗೋವೆಯ ಕದಂಬ ವಿಜಯಾದಿತ್ಯನಿಗೆ ಸರಸ್ವತೀಭೂಷಣ ಎಂಬ ಬಿರುದಿತ್ತು. ಬನವಾಸಿ ರಾಜಧಾನಿಯಿಂದ ಆಳುತ್ತಿದ್ದ ಕೀರ್ತಿವರ್ಮನ ಕಾಲದಲ್ಲಿ ರಾಜ್ಯಪಾಲನಾಗಿದ್ದ ಲಕ್ಷ್ಮನೃಪನ ಬನವಾಸಿ ಕೋಶಾಧಿಕಾರಿ ಶಾಂತಿನಾಥ ಸುಕುಮಾರಚರಿತವನ್ನು ಬರೆದ. ಬನವಾಸಿಯ ರಾಜ್ಯಪಾಲ ನಾಗಿದ್ದ ಉದಯಾದಿತ್ಯಗಂಗ (1070–76) ಸಂಧಿ ವಿಗ್ರಹಕನಾಗಿ ಬನವಾಸಿ ಮಂಡಲದಲ್ಲಿದ್ದ ನಾಗವರ್ಮಾಚಾರ್ಯ ಚಂದ್ರಚೂಡಾಮಣಿ ಎಂಬ ಕೃತಿಯನ್ನು ರಚಿಸಿದ. ಹಾನುಗಲ್ಲಿನ ಕೀರ್ತಿದೇವಕದಂಬನ ದರ್ಬಾರಿನಲ್ಲಿ ಹರಿವರ್ಮ ಆಸ್ಥಾನ ಕವಿಯಾಗಿದ್ದ. ಹಾವೇರಿಯ ಒಂದು ಶಾಸನದ ಪ್ರಕಾರ ನಾರಾಯಣದೇವ ಒಬ್ಬ ಪ್ರಸಿದ್ಧ ಕವಿ. ಹಾನುಗಲ್ಲಿನ ಕಾಮದೇವನ ಆಸ್ಥಾನದಲ್ಲಿದ್ದ ಕವಿ ರಾಜನೆಂಬ ವಿದ್ವಾಂಸ ರಾಘವ ಪಾಂಡವೀಯಂ ಎಂಬ ದ್ವ್ಯಾಶ್ರಯ ಕಾವ್ಯ ರಚಿಸಿದ.

ಮಠ, ದೇವಾಲಯ, ಬ್ರಹ್ಮಪುರಿ, ಅಗ್ರಹಾರಗಳು, ವಿದ್ಯಾಪೀಠಗಳು ಮುಂತಾದವುಗಳಿಂದ ಕೂಡಿದ್ದ ಬನವಾಸಿ, ತಾಳಗುಂದ, ಕುಪ್ಪಟೂರು (ಕುಂತಳನಗರ), ಬಳ್ಳಿಗಾಮಿ ಮುಂತಾದ ನಗರಗಳು ಆದಿಯಿಂದಲೂ ಹೆಸರಾಗಿದ್ದುವು. ಬ್ರಹ್ಮಪುರಿಗಳು ಸ್ನಾತಕೋತ್ತರ ಶಿಕ್ಷಣಕೇಂದ್ರಗಳು. ಈ ವಿದ್ಯಾಪೀಠಗಳಲ್ಲಿ ವೇದ, ಶಾಸ್ತ್ರ, ಪುರಾಣ, ಶಿಲ್ಪ, ತತ್ತ್ವ ಜ್ಞಾನ, ಯೋಗ, ಧರ್ಮ ಮುಂತಾದ ವಿಷಯಗಳನ್ನು ಪಾತ್ರಾಪಾತ್ರವಿವೇಕದ ನಿಷ್ಪಕ್ಷಪಾತ ನಿಯಮದಂತೆ ಸ್ವದೇಶ ವಿದೇಶಗಳಿಂದ ಬಂದ ಜಿಜ್ಞಾಸುಗಳಿಗೆ ಕಲಿಸಲಾಗುತ್ತಿತ್ತು. ರಾಜಮಹಾರಾಜರೂ ಮಹಾವಣಿಗ್ಜನರೂ ಇವುಗಳ ಪೋಷಕರು; ಅಷ್ಟಾಂಗಯೋಗದ ಆಚರಣೆಯನ್ನಿಟ್ಟುಕೊಂಡಿದ್ದ ಶರಶಕ್ತಿಸಂಪನ್ನರಾದ ಮಹಾಜನರು ಇವುಗಳ ಆಡಳಿತಗಾರರು. ಪ್ರಾಧ್ಯಾಪಕರೂ ಶಿಕ್ಷಕರೂ ಅವರಿಂದ ಪೋಷಿತರು. ಆದರೆ ಶಿಷ್ಯವರಣದಲ್ಲಿ ಮತ್ತು ಶಿಕ್ಷಣಕ್ರಮದಲ್ಲಿ ಸಂಪೂರ್ಣ ಸ್ವತಂತ್ರರು. ಅವರ ಸದಾಚಾರ ಸರ್ವವಂದ್ಯವಾಗಿತ್ತು. ವಿದ್ಯಾರ್ಥಿಗಳು ಗುರುಗಳ ಅಂತೇವಾಸಿಗಳು; ವಿದ್ಯೆ ಶುಲ್ಕರಹಿತ.

ಕದಂಬರು ವೈದಿಕ ಸ್ಮಾರ್ತರು. ಅವರು ಬನವಾಸಿಯಿಂದ ಆಳತೊಡಗುವ ಮೊದಲೇ ಬೌದ್ಧಮತ ಪ್ರಚಾರ ಅಲ್ಲಿ ಬೇಕಾದಷ್ಟು ನಡೆದಿತ್ತು. ಅನಂತರ ಜೈನ ಗುರುಗಳೂ ದಯಮಾಡಿದರು. ಪ್ರ.ಶ. 7ನೆಯ ಶತಮಾನದಲ್ಲಿ ಬೌದ್ಧಮತ ಅನವತೀಗೀಡಾಯಿತು. ಅನಂತರ ವೈದಿಕ, ಜೈನಧರ್ಮಗಳೇ ಸತತವಾಗಿ ಮುಂಬರಿದವು. ಪಾಶುಪತ, ಶಾಕ್ತ, ಪಾಂಚರಾತ್ರ, ಕಾಳಾಮುಖ, ಕಾಪಾಲಿಕ ಪಂಥಗಳು ಆಮೇಲೆ ಇಲ್ಲಿ ತಲೆಹಾಕಿದರೂ ಬಹಳ ಕಾಲ ಪ್ರಭಾವಿಗಳಾಗಿ ಉಳಿಯಲಿಲ್ಲ. ಲಕುಲೀಶ ಪಾಶುಪತ ಮತ್ತು ಕಾಳಾಮುಖ ಪಂಥಗಳ ಗುರುಗಳಲ್ಲಿ ಅನೇಕರು ನಿಗಮ ವಿಮುಖರಾಗಿ, ಕೇವಲಾಗಮಿಗಳಾಗಿ, ಸು. 13ನೆಯ ಶತಮಾನದಲ್ಲಿ ಕ್ರಮೇಣ ವೀರಶೈವ ಗುರುಗಳ ಪರಂಪರೆಯ ಜನಕರಾದರೆಂಬುದು ಕೆಲವಿದ್ವಾಂಸರ ಊಹೆ. ವೀರಶೈವೋದಯ ಕ್ರಮಶಃ ಜೈನಾಸ್ತವನ್ನು ಮುಂದೆ ತೀವ್ರಗೊಳಿಸಿತು.

ಹ್ಯೂಎನ್ ತ್ಸಾಂಗ್ ಬಣ್ಣಿಸಿದ ಕೊಂಕಣಪುರದ (ಬನವಾಸಿ)ಉತ್ಖನನವಾದರೆ ಬೌದ್ಧ ವಿಹಾರಗಳ ಅವಶೇಷಗಳನ್ನು ಬಹುಶಃ ತೋರಿಸೀತು. ಜೈನ ಬಸದಿಗಳನ್ನು ಬನವಾಸಿ ಪನ್ನಿರ್ಛಾಸಿರದಲ್ಲಿ ಈಗಲೂ ಕಾಣಬಹುದು. ಅಲ್ಲಿ ಇಲ್ಲಿ ವಿರಳವಾಗಿ ಭೈರವ ಪೂಜಾಸ್ಥಾನಗಳಿವೆ. ಇವು ಕಾಪಾಲಿಕ ಪಂಥದ ಅವಶೇಷ. ಹಾಗೇ ವೀರಭದ್ರ ದೇವಾಲಯಗಳು ವೀರಶೈವ ಪಂಥದ ಗುರುತುಗಳೆನ್ನಬಹುದು. ಸೋದೆಯಲ್ಲಿರುವ ಜೈನಮಠ ಸು. 7ನೆಯ ಶತಮಾನದಲ್ಲಿ ಅಕಳಂಕ ಗುರು ಪರಂಪರೆಯನ್ನು ಸ್ಥಾಪಿಸಿದ ದೊಡ್ಡ ಜೈನ ವಿದ್ವದ್ವ್ಯಕ್ತಿಯಾದ ಆದ್ಯ ಅಕಳಂಕನ ಕುರುಹಾಗಿದೆ. ತತ್ಸಮಕಾಲೀನವಾದ ವೈದಿಕ ಸ್ಮಾರ್ತ ಮಠಗಳು ಈಗಲೂ ಜೀವಂತವಾಗಿವೆ. ತಾಳಗುಂದದ ಸಮೀಪದಲ್ಲಿರುವ ಬಳ್ಳಿಗಾಮಿಯ ಅವಶೇಷಗಳು ಉಕ್ತ ವಿವಿಧ ಮಠಗಳ ಮತ್ತು ಪಂಥಗಳ ಕುರುಹುಗಳನ್ನು ತೋರಿಸುತ್ತದೆ. ಅವುಗಳಲ್ಲಿ ಹಲವು 12ನೆಯ ಶತಮಾನದ ಮತ್ತು ಅದಕ್ಕೂ ಹಿಂದಿನವು. ಅಲ್ಲದೆ ಅವು ಪರಮತಸಹಿಷ್ಣುತೆಯ ಪರಮಪ್ರಮಾಣಗಳಾಗಿವೆ. (ಬಿ.ಎಚ್.ಎಸ್.)

**ಕದಂಬರ ವಾಸ್ತು, ಶಿಲ್ಪ, ಶಾಸನಗಳು ಮತ್ತು ನಾಣ್ಯಗಳು :** ಆದ್ಯಕದಂಬರೂ ಅನಂತರ ಬಂದವರೂ ಕರ್ಣಾಟಕದ ವಾಸ್ತುಶಿಲ್ಪಕ್ಕೆ ತಮ್ಮವೇ ಆದ ಕೊಡುಗೆಗಳನ್ನಿತ್ತಿದ್ದಾರೆಂಬ ವಿಷಯ ಅವರ ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ಕಾಕುತ್ಸ್ಥವರ್ಮನ ತಾಳಗುಂದ ಶಾಸನದಲ್ಲಿ (ಪ್ರಶ. ಸು. 450) ಆ ಊರಿನ ಮಹಾದೇವ ದೇವಾಲಯದ ಉಲ್ಲೇಖವಿದೆ.

**ಕದಂಬ ವಂಶಾವಳಿ**




ಕಾಕುತ್ಸ್ಥನ ಮೊಮ್ಮಗನಾದ ಮೃಗೇಶ ಪಲಾಸಿಕ ಎಂಬಲ್ಲಿ ಒಂದು ಜೈನಬಸದಿ ಕಟ್ಟಿಸಿದನೆಂದು ಅವನ ಒಂದು ತಾಮ್ರಶಾಸನ ತಿಳಿಸುತ್ತದೆ. ಅನಂತರದ ಕದಂಬ ಅರಸರ ಆಳ್ವಿಕೆಯ ಕಾಲದಲ್ಲಿ ದೇಗಾಂವೆ, ಕದರೋಲಿ, ಹಾನುಗಲ್ಲು ಮುಂತಾದ ಊರುಗಳಲ್ಲಿ ದೇವಾಲಯಗಳು ನಿರ್ಮಿತವಾದುವೆಂಬ ವಿಷಯ ಸಮಕಾಲೀನ ಶಾಸನಗಳಲ್ಲಿ ಉಕ್ತವಾಗಿವೆ.

ಆದರೆ ಮೊದಲ ಕದಂಬ ಅರಸರ ಕಾಲಕ್ಕೆ ಖಚಿತವಾಗಿ ಸೇರಿದ ಕಟ್ಟಡಗಳನ್ನು ಗುರುತಿಸಿಲ್ಲವಾದ್ದರಿಂದ, ಅಂದಿನ ದೇವಾಲಯಗಳ ಸ್ವರೂಪವೇನು, ಭಾರತೀಯ ವಾಸ್ತುಶಿಲ್ಪ ಪರಂಪರೆಯಲ್ಲಿ ಅವುಗಳ ಸ್ಥಾನವೇನು ಎಂಬ ಮುಖ್ಯ ವಿಷಯಗಳು ತಿಳಿಯುವಂತಿಲ್ಲ. ದಕ್ಷಿಣ ಭಾರತದಲ್ಲಿ ಶಿಲಾದೇವಾಲಯಗಳ ರಚನಾ ಸಂಪ್ರದಾಯ ಪ್ರ.ಶ. ಸು. 5–6ನೆಯ ಶತಮಾನಗಳಲ್ಲಿ ಬಾದಾಮಿಯ ಚಾಳುಕ್ಯ ಮತ್ತು ಕಂಚಿಯ ಪಲ್ಲವ ಅರಸರ ಆಶ್ರಯದಲ್ಲಿ ವಿಶೇಷವಾಗಿ ಬೆಳೆಯಿತೆಂದು ಎಲ್ಲ ವಿದ್ವಾಂಸರೂ ಹೇಳುತ್ತಾರೆ. ಹಾಗಿದ್ದಲ್ಲಿ ಬನವಾಸಿಯ ಕದಂಬರ ಕಾಲದ ದೇವಾಲಯಗಳು ಮರ ಅಥವಾ ಇಟ್ಟಿಗೆಯಲ್ಲಿ ಕಟ್ಟಿದವುಗಳಾಗಿರಬೇಕು. ಶಿಲಾದೇವಾಲಯಗಳಿದ್ದುದೇ ಆದರೆ, ಚಾಳುಕ್ಯ ಮತ್ತು ಪ್ರಾಯಶಃ ಪಲ್ಲವ ಶೈಲಿಗೆ ಕೂಡ ಮೂಲ ಮಾದರಿಗಳನ್ನು ಇವು ಒದಗಿಸಿರಬಹುದು. ಈಗ ತಾಳಗುಂದದಲ್ಲಿ ಕದಂಬ ಶಾಸನಗಳಲ್ಲಿ ಹೆಸರಿಸಿರುವ ಪ್ರಣವೇಶ್ವರ ದೇವಾಲಯವೆಂಬುದೊಂದಿದ್ದರೂ ಅದು ಇತ್ತೀಚೆಗೆ ಬಹುವಾಗಿ ನವೀಕರಿಸಲ್ಪಟ್ಟಿದ್ದು, ಸ್ಪಷ್ಟಪ್ರಾಚೀನ ಅಂಶಗಳನ್ನೇನನ್ನೂ ಉಳಿಸಿ ಕೊಂಡಿಲ್ಲ. ಮೊದಲ ಕದಂಬರ ರಾಜಧಾನಿಯಾದ ಬನವಾಸಿಯಲ್ಲಿ ಅವರ ಕುಲದೈವ ಮಧುಕೇಶ್ವರನ ಗುಡಿ ಇದೆ. ಈಗ ಇರುವ ಕಟ್ಟಡದ ಮುಂಭಾಗವೆಲ್ಲಾ 12ನೆಯ ಶತಮಾನದ್ದು. ಮೂಲ ದೇವಾಲಯ, ಅಂದರೆ ಗರ್ಭಗುಡಿ, ಸುತ್ತಿರುವ ಪ್ರದಕ್ಷಿಣಪಥ ಮತ್ತು ಒಳಮಂಟಪ ಹಳೆಯವು. ಆದರೆ ಇವುಗಳ ವಾಸ್ತು ವಿನ್ಯಾಸ ಮತ್ತು ಕಂಭಗಳ ರಚನೆಗಳು ಪಟ್ಟದಕಲ್ಲಿನ ವಿರೂಪಾಕ್ಷದೇವಾಲಯವೇ ಮುಂತಾದ 8ನೆಯ ಶತಮಾನದ ಕಟ್ಟಡಗಳ ಮಾದರಿ ಯಲ್ಲಿರುವುದರಿಂದ, ಈ ಗುಡಿಯೂ ಅದೇ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಮೊದಲ ಕದಂಬ ಅರಸರ ಆಳ್ವಿಕೆ ಪೂರ್ಣವಾಗಿ ಕೊನೆಗೊಂಡಿದ್ದು ಆ ಕಾಲದಲ್ಲಿ. ಬನವಾಸಿ ಪ್ರಾಂತ್ಯ ಚಾಳುಕ್ಯರ ಅಧೀನದಲ್ಲಿತ್ತಾದ್ದರಿಂದ ಈಗಿನ ಬನವಾಸಿಯ ಮೂಲಗುಡಿ ಸಹ ಕದಂಬರ ಕೊಡುಗೆಯೆಂದು ಹೇಳುವುದು ಕಷ್ಟ.

ಧಾರವಾಡ ಜಿಲ್ಲೆಯ ಹಲ್ಸಿಯಲ್ಲಿ ಕೆಲವು ಪ್ರಾಚೀನ ದೇವಾಲಯಗಳಿವೆ. ಶೈಲಿಯ ದೃಷ್ಟಿಯಿಂದ ನೋಡುವುದಾದರೆ ಇಲ್ಲಿಯ ಜೈನಬಸದಿ ಅತ್ಯಂತ ಹಳೆಯದು. ಇದರಲ್ಲಿ ಗರ್ಭಗೃಹ ಮತ್ತು ಸುಖನಾಸಿ ಮಾತ್ರ ಇವೆ. ಸುಖನಾಸಿ ಗರ್ಭಗೃಹಕ್ಕಿಂತ ದೊಡ್ಡದು. ದೊಡ್ಡ ದೊಡ್ಡ ಒರಳುಕಲ್ಲುಗಳನ್ನು ಪೇರಿ ಗೋಡೆಗಳನ್ನು ಏರಿಸಲಾಗಿದೆ. ದೇವಾಲಯದಲ್ಲಿ ಯಾವ ರೀತಿಯ ಅಲಂಕರಣವೂ ಇಲ್ಲ. ನಯನಾಜೂಕಿಲ್ಲದೆ ಕಟ್ಟಿರುವ ಈ ಕಟ್ಟಡ ಪ್ರಾಯಶಃ ದಕ್ಷಿಣ ಭಾರತದ ಶಿಲಾಕಟ್ಟಡಗಳ ರಚನೆಯಲ್ಲಿ ಪ್ರಾರಂಭಿಕ ಘಟ್ಟದ್ದೆಂದು ಹೇಳಬಹುದು. ಇಲ್ಲಿ ಯಾವ ಶಾಸನಗಳೂ ದೊರಕಿಲ್ಲವಾದ್ದರಿಂದ ಇದರ ಕಾಲನಿರ್ದೇಶ ಕಷ್ಟ. ಆದರೆ ಮೃಗೇಶವರ್ಮನ ತಾಮ್ರಪಟದಲ್ಲಿ ಉಲ್ಲೇಖಿಸಿರುವ ಜೈನಬಸದಿ ಇದೇ ಆದರೆ ಇದು ಅವನ ಕಾಲದ್ದೆಂದು ಹೇಳಬಹುದು. ಹಾಗಿದ್ದಲ್ಲಿ ಈ ದೇವಾಲಯವೇ ಕರ್ನಾಟಕದಲ್ಲಿ ಉಳಿದು ಬಂದಿರುವ ಅತ್ಯಂತ ಪ್ರಾಚೀನ ಶಿಲಾಕಟ್ಟಡವಾಗುತ್ತದೆ.

ಕರ್ನಾಟಕದ ವಾಸ್ತುಶಿಲ್ಪ ಪರಂಪರೆಯಲ್ಲಿ ಕದಂಬಶೈಲಿಯೂ ಒಂದಿತ್ತೇ ಎಂಬುದು ಸಂದೇಹಾಸ್ಪದ. ಆನಂತರದ ಕದಂಬ ಅರಸರ ಆಳ್ವಿಕೆಯಲ್ಲಿ ಅನೇಕ ಕಟ್ಟಡಗಳು ನಿರ್ಮಿತವಾಗಿದ್ದರೂ ಅವುಗಳಲ್ಲಿ ಬಹುತೇಕ ಸಮಕಾಲೀನ ಹೊಯ್ಸಳ ಚಾಳುಕ್ಯ ಶೈಲಿಯ ಪ್ರಭಾವವೇ ಕಾಣುತ್ತದೆ. ಆದರೆ ಕದಂಬ ಕಟ್ಟಡಗಳಲ್ಲಿ ಅವುಗಳದೇ ಆದ ವೈಶಿಷ್ಟ್ಯಗಳಿವೆ. ಆದ್ದರಿಂದ ವಾಸ್ತುಶಿಲ್ಪ ಪರಂಪರೆಯಲ್ಲಿ ಕದಂಬ ಶೈಲಿ ಎಂಬ ಪ್ರಕಾರವನ್ನು ಗುರುತಿಸಬೇಕು ಎಂಬುದು ಮೋರೇಸ್ ಅಭಿಪ್ರಾಯ. ಸುಖನಾಸಿ ಗರ್ಭಗುಡಿಗಿಂತ ಅಗಲವಾಗಿರುವುದು, ವಿವಿಧರೀತಿಯ ಜಾಲಂದ್ರಗಳ ಅಳವಡಿಕೆ, ಚಾವಣಿಯ ಸುತ್ತ ಚಪ್ಪಡಿಗಳನ್ನು ಇಳಿಜಾರಾಗಿ ಜೋಡಿಸಿ ಮಾಡಿದ ಕಪೋತ ಮತ್ತು ಕದಂಬನಾಗರವೆಂಬ ಶಿಖರರೀತಿ–ಇವು ಮೋರೇಸ್ ಪ್ರಕಾರ ಕದಂಬಶೈಲಿಯ ವೈಶಿಷ್ಟ್ಯಗಳು. ಚತುರಸ್ರಾಕಾರದ ಗೋಡೆಯ ಮೇಲೆ ಕದಂಬ ನಾಗರಶಿಖರ ಪಿರಮಿಡ್ಡಿನಾಕೃತಿಯಲ್ಲಿ ಮೆಟ್ಟಲು ಮೆಟ್ಟಲಾಗಿ ಮೇಲೆ ಹೋದಂತೆ ಚಿಕ್ಕದಾಗುವ ಚಪ್ಪಟೆ ಸ್ತರಗಳಿಂದ ಎತ್ತಲ್ಪಟ್ಟಿದ್ದು ಮೇಲೆ ಕಳಶ ಹೊಂದಿರುತ್ತದೆ. ಶಿಖರದ ಮೇಲೆ ಯಾವ ರೀತಿಯ ಶಿಲ್ಪಗಳೂ ಇರುವುದಿಲ್ಲ. ಎಲ್ಲೋ ಕೆಲವು ಸಲ ಅಂಚುಗಳನ್ನು

ಹಲ್ಲಿನಾಕೃತಿಯಲ್ಲಿ ಬಿಡಿಸಿರುವುದಷ್ಟೇ ಈ ಶಿಖರ ರೀತಿಯ ಅಲಂಕರಣ. ಕದಂಬ ವಾಸ್ತುಶಿಲ್ಪ ಶೈಲಿಯ ಬೆಳೆವಣಿಗೆಯನ್ನು ಕ್ರಮವಾಗಿ ಹಲ್ಸಿಯ ಜೈನಬಸ್ತಿ, ಮಲಪ್ರಭಾ ದಂಡೆಯ ಕದರೋಲಿಯ ಗುಡಿ, ಹಲ್ಸಿಯ ಹತ್ತಿಕೇಶ್ವರ, ಕಲ್ಲೇಶ್ವರ, ಸುವರ್ಣೇಶ್ವರ ಮತ್ತು ರಾಮೇಶ್ವರ ದೇವಾಲಯಗಳು, ಅನಂತರ ಯಲವತ್ತಿಯ ಹಿಂದೂ ಮತ್ತು ಜೈನಗುಡಿಗಳಲ್ಲಿಯೂ ಈ ಶೈಲಿಯ ಪರಮೋಚ್ಚ ಕೃತಿಯನ್ನು ಬೆಳಗಾಂ ಜಿಲ್ಲೆಯ ದೇಗಾಂವೆಯ ಕಮಲಾನಾರಾಯಣ ದೇವಾಲಯದಲ್ಲಿ ಕಾಣಬಹುದೆಂದೂ ಮೋರೇಸ್ ಬರವಣಿಗೆಯಿಂದ ತಿಳಿದುಬರುತ್ತದೆ.

ಕದಂಬ ಶಿವಚಿತ್ತನ (1148–81) ಪತ್ನಿ ಕಮಲಾದೇವಿಯ ಆಜ್ಞೆಯಿಂದ ತಿಪ್ಪೋಜನೆಂಬುವನು ದೇಗಾಂವೆಯ ಕಮಲಾನಾರಾಯಣ ದೇವಾಲಯವನ್ನು ಕಟ್ಟಿದನೆಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಈ ದೇವಾಲಯ ಒಂದು ತ್ರಿಕೂಟಾಚಲ. ಮೂರು

ಕದಂಬ ಶೈಲಿಯದೆನ್ನಲಾದ ಒಂದು ದೇಗುಲ : ಕಲ್ಲಗುಡಿ

ದಿಕ್ಕುಗಳಲ್ಲಿ ದೇವಗೃಹಗಳು ಮತ್ತು ಇನ್ನೊಂದೆಡೆ ದ್ವಾರ ಇದ್ದು, ಇವೆಲ್ಲ ಮಧ್ಯದ ಮಂಟಪಕ್ಕೆ ತೆರೆದಂತಿವೆ. ದೇವಗೃಹಗಳಲ್ಲೊಂದೊಂದರಲ್ಲೂ ಒಂದು ಗರ್ಭಗೃಹ ಮತ್ತು ಸುಖನಾಸಿ ಇವೆ. ಸುಖನಾಸಿ ಮತ್ತು ಗರ್ಭಗೃಹದ ಬಾಗಿಲ ವಾಡಗಳು ಬಲು ನಾಜೂಕಾಗಿ ಶಿಲ್ಪಿತವಾಗಿವೆ. ಸುಖನಾಸಿಯ ಬಾಗಿಲುಗಳನ್ನು ಕಲಾತ್ಮಕವಾಗಿ ಕೆತ್ತಿದ ಜಾಲಂದ್ರಗಳ ಚೌಕಟ್ಟಿನ ಮಧ್ಯದಲ್ಲಿರಿಸಲಾಗಿದೆ. ದೇವಾಲಯದ ಹೊರಗೋಡೆಯ ಮೇಲೆ ಕದಂಬ ನಾಗರರೀತಿಯ ಶಿಖರವನ್ನು ಹೊತ್ತಿರುವ ಜೋಡಿ ಅರೆಗಂಬಗಳ ಅಲಂಕರಣವಿದೆ. ಮೇಲಿನ ಕೈಪಿಡಿಯಲ್ಲಿ ಶಿಖರಗಳನ್ನು ಹೊತ್ತು ಸೆಟೆದುನಿಂತ ಸಿಂಹಗಳೂ ಅವುಗಳ ಮಧ್ಯೆ ನೃತ್ಯಬಾಲಿಕೆಯರ ವಿಗ್ರಹಗಳೂ ಇವೆ. ಅಲಂಕರಣ, ಸ್ತಂಭರೀತಿ ಮುಂತಾದವುಗಳಲ್ಲಿ ಸಮಕಾಲೀನ ಚಾಳುಕ್ಯ–ಹೊಯ್ಸಳ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ಒಟ್ಟಿನಲ್ಲಿ ಶೈಲಿ ಯಾವುದಾದರೂ ಇರಲಿ

ದೇಗಾಂವೆಯ ಕಮಲಾನಾರಾಯಣ ದೇವಸ್ಥಾನ

ದೇಗಾಂವೆಯ ಕಮಲಾನಾರಾಯಣ ಗುಡಿ ಕರ್ನಾಟಕದ ಸುಂದರ ದೇವಾಲಯಗಳಲ್ಲೊಂದೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ, ಕದಂಬ ವಾಸ್ತುಶಿಲ್ಪ ಶೈಲಿಯ ಬೆಳೆವಣಿಗೆಯ ಕೊನೆಯ ಘಟ್ಟವನ್ನೂ ಈ ಗುಡಿ ಸೂಚಿಸುತ್ತದೆ. ಅನಂತರ ಅನತಿ ಕಾಲದಲ್ಲಿಯೇ ಕದಂಬರಾಜ್ಯವೂ ಹಾಗೆಯೇ ಕದಂಬ ಶೈಲಿಯೂ ಕೊನೆಗೊಂಡುವು. ಆದರೆ ಹೊಯ್ಸಳ ಮತ್ತು ವಿಜಯನಗರದ ಅರಸರ ಕಾಲದ ಕಟ್ಟಡಗಳಲ್ಲೂ ಒಮ್ಮೊಮ್ಮೆ ಅಪರೂಪವಾಗಿ ಕದಂಬ ವಾಸ್ತುಶಿಲ್ಪದ ಕೆಲವು ಅಂಶಗಳು ಕಂಡುಬರುವುದುಂಟು.

**ಶಿಲ್ಪ :** ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕು ಜಂಬೆಹಳ್ಳಿಯಲ್ಲಿರುವ ದುರ್ಗಾವಿಗ್ರಹ ಇದುವರೆಗೆ ದೊರಕಿರುವ ಕದಂಬ ಶಿಲ್ಪಗಳಲ್ಲಿ ಅತ್ಯಂತ ಪ್ರಾಚೀನವಾದದ್ದು. ಜಂಬೆಹಳ್ಳಿಯ ದೇವಾಲಯದ ಮುಂದಿರುವ ಶಾಸನವೊಂದರಿಂದ ಆ ಗುಡಿ ಕದಂಬ ಶಾಂತಿವರ್ಮನ ಕಾಲದಲ್ಲಿ ಕನ್ನಮ್ಮ ಕಟ್ಟಿಸಿದ್ದೆಂದು ತಿಳಿಯುತ್ತದೆ. ಈಗ ದೇವಾಲಯ ಹಾಳಾಗಿದ್ದರೂ

ಜಂಬೆಹಳ್ಳಿಯ ದುರ್ಗಾ ವಿಗ್ರಹ

ಅಲ್ಲಿಯ ಮೂರ್ತಿಶಿಲ್ಪ ಕದಂಬರ ಕಾಲದ್ದೆಂದೇ ಹೇಳಬಹುದು. ಈ ಶಿಲ್ಪದಲ್ಲಿರುವ ಚತುರ್ಭುಜ ಮಹಿಷಮರ್ದಿನಿ ಪ್ರಾಣಿಯಾಕೃತಿಯಲ್ಲಿರುವ ಅಸುರನನ್ನು ಮೆಟ್ಟಿ ಎಡಗೈಯಲ್ಲಿ ಎಮ್ಮೆಯ ಕಾಲೊಂದನ್ನು ಹಿಡಿದೆತ್ತಿದ್ದಾಳೆ. ಇತರ ಕೈಗಳಲ್ಲಿ ಶಂಖ, ಕತ್ತಿ, ತ್ರಿಶೂಲಗಳಿವೆ.

ಕದಂಬ ಶೈಲಿಯ ಒಂದು ದೇಗುಲ : ಕಲ್ಲಗುಡಿ

ದೇವಿಯ ಸುಂದರ ಮುಖ, ಆಯುಧಗಳನ್ನು ಹಿಡಿದಿರುವ ರೀತಿ, ನಿರಾಯಾಸವಾಗಿ ಅಸುರನನ್ನು ಮೆಟ್ಟಿ ಕೊಲ್ಲುತ್ತಿರುವ ಭಾವ ಮುಂತಾದವು ಸ್ಫುಟವಾಗಿ ವ್ಯಕ್ತವಾಗಿವೆ. ಇದು ಒಂದು ಉತ್ತಮ ಕಲಾಕೃತಿ. ಆನಂತರದ ಕದಂಬರ ಕಾಲದ ಇತರ ಶಿಲ್ಪಗಳು ಹಲ್ಸಿ, ದೇಗಾಂವೆ ಮತ್ತು ಹಾನುಗಲ್ಲುಗಳಲ್ಲಿವೆ. ಇವುಗಳೆಲ್ಲದರಲ್ಲೂ ಚೂಪು ತಲೆಯ ಪ್ರಭಾವಳಿ

ಸಾಮಾನ್ಯವಾಗಿರುತ್ತದೆ. ಹಲ್ಸಿಯ ಲಕ್ಷ್ಮೀನಾರಾಯಣನ ವಿಗ್ರಹದಲ್ಲಿ ಲಕ್ಷ್ಮಿ ವಿಷ್ಣುವಿನ ತೊಡೆಯ ಮೇಲೆ ಕುಳಿತಿದ್ದಾಳೆ. ಪ್ರಭಾವಳಿಯಲ್ಲಿ ದಶಾವತಾರಗಳನ್ನು ಕೆತ್ತಲಾಗಿದೆ. ಸು. 1147ರಲ್ಲಿ ರಚಿತವಾದ ಹಾನುಗಲ್ಲಿನ ಮಾಧವ ದೇವಾಲಯದಲ್ಲಿರುವ ಒಂದು ವಿಷ್ಣು

ಕಲ್ಲ ಗುಡಿ : ಹಜಾರದ ಗೋಪುರದ ಚಿತ್ರಕೆಲಸ

ವಿಗ್ರಹ ಬಲುಮೋಹಕ ಶಿಲ್ಪ. ಬೆಳಗಾಮಿ ಗಂಡಭೇರುಂಡ (1047) ಮತ್ತು ಅದರ ಬಳಿಯೇ ಇರುವ ಶೂಲ ಬ್ರಹ್ಮ (1060) ಶಿಲ್ಪಗಳು ಮೇಲ್ಮಟ್ಟದ ಕಲಾಕೃತಿಗಳು.

ಕಲ್ಲ ಗುಡಿಯ ಉತ್ತರಬಾಗಿಲು

**ಶಾಸನಗಳು :** ಮೊದಲ ಕದಂಬ ವಂಶಕ್ಕೆ ಸೇರಿದ ಶಾಸನಗಳಲ್ಲಿ ಹೆಚ್ಚಿನವು ತಾಮ್ರಪಟಗಳು. ಇವು ಮೈಸೂರು, ಹಾಸನ, ಕಡೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ದೊರಕಿವೆ. ಕದಂಬರ ತಾಮ್ರಪಟಗಳಲ್ಲಿ, ಓಲೆಗರಿಯ ರೀತಿಯ ತೆಳುವಾದ ಆಯಾಕಾರದ ತಾಮ್ರದ ಹಲಗೆಗಳ ಮೇಲೆ ಬರಹವಿದ್ದು, ಎರಡು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ಹಲಗೆಗಳು ಅವುಗಳ ಒಂದು ಕೊನೆಯಲ್ಲಿರುವ ದುಂಡು ತೂತಿನ ಮೂಲಕ ತಾಮ್ರದ ಉಂಗುರದಿಂದ ಪೋಣಿಸಲ್ಪಟ್ಟಿರುತ್ತವೆ. ತಾಮ್ರದ ಉಂಗುರದ ಮೇಲೆ ಕದಂಬರ ರಾಜಚಿಹ್ನೆಯಾದ ಸಿಂಹಮುದ್ರೆ ಇರುತ್ತದೆ. ಇವುಗಳಲ್ಲಿರುವ ಲಿಪಿ ಬಹುತೇಕ ಪೆಟ್ಟಿಗೆಯ ತಲೆಯ ಬ್ರಾಹ್ಮಿ, ಭಾಷೆ ಸಂಸ್ಕೃತ ಗದ್ಯ. ಈ ತಾಮ್ರಪಟಗಳೆಲ್ಲ ದಾನಶಾಸನಗಳು. ಅದರೂ, ದಾನಕೊಡುವ ರಾಜನ ಮತ್ತು ಅವನ ವಂಶದ ವಿವರಣೆ ಇವುಗಳಲ್ಲಿರುವುದರಿಂದ ಇವು ಅಮೂಲ್ಯ ಚಾರಿತ್ರಿಕ ದಾಖಲೆಗಳು. ಇದುವರೆಗೆ ಮೊದಲ ಕದಂಬರಲ್ಲಿ ಮೃಗೇಶ ವರ್ಮ ಮತ್ತು ಅವನ ಅನಂತರದ ಅರಸರ ತಾಮ್ರಶಾಸನಗಳು ಮಾತ್ರ ದೊರಕಿವೆ.

ಕಲ್ಲ ಗುಡಿಯ ಒಳಾಂಗಣ

ಈ ಕಾಲದ ಶಿಲಾಶಾಸನಗಳು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಶಿವಮೊಗ್ಗ ಜಿಲ್ಲೆಯ ಮಳವಳ್ಳಿ ಮತ್ತು ತಾಳಗುಂದ, ಉತ್ತರ ಕನ್ನಡ ಜಿಲ್ಲೆಯ ಹಲ್ಮಿಡಿ, ಬನವಾಸಿ ಮುಂತಾದೆಡೆಗಳಲ್ಲಿ ಬೆಳಕಿಗೆ ಬಂದಿವೆ. ಇವುಗಳ ಲಿಪಿಯೂ ಬ್ರಾಹ್ಮಿಯೇ. ಮಳವಳ್ಳಿ ಮತ್ತು ಚಂದ್ರವಳ್ಳಿ ಶಾಸನಗಳ ಭಾಷೆ ಪ್ರಾಕೃತ. ತಾಳಗುಂದ ಶಾಸನ ಸಂಸ್ಕೃತದಲ್ಲಿ ಪದ್ಯರೂಪದಲ್ಲಿದೆ. ಹಲ್ಮಿಡಿ ಶಾಸನ ಕನ್ನಡದಲ್ಲಿ ಗದ್ಯರೂಪದಲ್ಲಿದೆ. ಈ ಶಿಲಾಶಾಸನಗಳ ಉದ್ದೇಶ ಬೇರೆಬೇರೆಯಾದವು. ಚಂದ್ರವಳ್ಳಿ ಮತ್ತು ತಾಳಗುಂದ ಶಾಸನಗಳು ತಟಾಕ ನಿರ್ಮಾಣವನ್ನು ಹೇಳಿದರೆ, ಹಲ್ಮಿಡಿ ಶಾಸನ ದಾನವನ್ನು ನಿರೂಪಿಸುತ್ತದೆ. ತಾಮ್ರಶಾಸನಗಳಂತೆ ಈ ಶಿಲಾಶಾಸನಗಳೂ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಅಲ್ಲದೆ ಹಲವು ಶಾಸನಗಳು ಭಾಷಾ ಸಾಹಿತ್ಯ ದೃಷ್ಟಿಯಿಂದಲೂ ಮುಖ್ಯವಾದವು. ಚಂದವಳ್ಳಿ ಮತ್ತು ಮಳವಳ್ಳಿ ಶಾಸನಗಳು ಕರ್ನಾಟಕದಲ್ಲಿ ಪ್ರಚಲಿತವಿದ್ದ ಪ್ರಾಕೃತಭಾಷೆಯನ್ನು ಪರಿಚಯ ಮಾಡಿಕೊಟ್ಟರೆ, ಹಲ್ಮಿಡಿ ಶಾಸನ ಪ್ರ.ಶ. 5ನೆಯ ಶತಮಾನದಲ್ಲಿ ರೂಢವಾಗಿದ್ದ ಕನ್ನಡ ಭಾಷೆಯ ಸ್ವರೂಪವನ್ನು ತೋರಿಸಿ ಕೊಡುತ್ತದೆ. ಈಗ ಗೊತ್ತಿರುವವುಗಳಲ್ಲಿ ಇದೇ ಅತ್ಯಂತ ಪ್ರಾಚೀನ ಕನ್ನಡ ಶಾಸನ. ಹಾಗೆಯೇ ತಾಳಗುಂದ ಶಾಸನವೂ ಕರ್ನಾಟಕದ ಅತ್ಯಂತ ಪ್ರಾಚೀನ ಸಂಸ್ಕೃತ ಶಾಸನವಾಗಿದೆ. ಅಲ್ಲದೆ ಆ ಶಾಸನದಲ್ಲಿ, ಅದನ್ನು ರಚಿಸಿದ ಕವಿ ಕುಬ್ಜನ ಹೆಸರೂ ಇದೆ. ಕುಬ್ಜನೇ ಈಗ ಗೊತ್ತಿರುವಂತೆ ಕರ್ನಾಟಕದ ಕವಿಗಳಲ್ಲಿ ಅತ್ಯಂತ ಪ್ರಾಚೀನ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ವ ಇಲಾಖೆಯವರು ಬನವಾಸಿಯಲ್ಲಿ ಪತ್ತೆ ಹಚ್ಚಿದ ಮೃಗೇಶವರ್ಮನ ಶಾಸನವೇ ಕದಂಬರ ರಾಜಧಾನಿಯಲ್ಲಿ ದೊರಕಿರುವ ಮೊಟ್ಟ ಮೊದಲನೆಯ ಶಾಸನ. ಪೆಟ್ಟಿಗೆ ತಲೆಯ ದಾಕ್ಷಿಣಾತ್ಮ ಲಿಪಿಯಲ್ಲಿರುವ ಈ ಶಾಸನವನ್ನು ಬಲು ಸುಂದರವಾದ ಚತುರ್ಮುಖ ಶಿಲಾಸ್ತಂಭದ ಮೇಲೆ ಕೆತ್ತಲಾಗಿದೆ.

ಹಾನುಗಲ್ಲು, ಗೋವ ಮುಂತಾದೆಡೆಗಳಲ್ಲಿ ಆಳಿದ ಅನಂತರದ ಕದಂಬ ಶಾಖೆಗಳ ಅರಸರ ಶಿಲಾ ಮತ್ತು ತಾಮ್ರಶಾಸನಗಳು ಕರ್ನಾಟಕದ ಶಿವಮೊಗ್ಗ–ಚಿತ್ರದುರ್ಗ, ಉತ್ತರ ಕನ್ನಡ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲೂ ಗೋವದಲ್ಲೂ ಮಹಾರಾಷ್ಟ್ರದ ಸತಾರ, ರತ್ನಗಿರಿ ಮತ್ತು ಠಾಣಾ ಜಿಲ್ಲೆಗಳಲ್ಲೂ ದೊರಕಿವೆ. ಆದರೆ ಕದಂಬ ರಾಜ್ಯದಲ್ಲಿ ಉತ್ತರಕ್ಕೆ ಹೋದಂತೆ ನಾಗರೀಲಿಪಿಯ ಸಂಸ್ಕೃತ ಶಾಸನಗಳೂ ದೊರಕುವುದುಂಟು. ಈ ಶಾಸನಗಳೆಲ್ಲ ಹೆಚ್ಚಾಗಿ ದಾನಶಾಸನಗಳೋ ವೀರಗಲ್ಲುಗಳೋ ಆಗಿರುತ್ತವೆ. ಇವು ಸಮಕಾಲೀನ ರಾಜಕೀಯ ಸಾಮಾಜಿಕ ಧಾರ್ಮಿಕ ಆರ್ಥಿಕ ಆಗುಹೋಗುಗಳ ಬಗ್ಗೆ ಬಹಳ ಬೆಳಕು ಚೆಲ್ಲುತ್ತವೆ. ಕೆಲವು ಶಾಸನಗಳನ್ನು ಉತ್ತಮ ಕಾವ್ಯ ರಚನೆಗಳೆಂದೂ ಕರೆಯಬಹುದು.

ಕದಂಬ ವಾಸ್ತು ಪದ್ಧತಿಯದೆನ್ನಲಾದ ಬನವಾಸಿಯ ಶಿತಿಕಂಠೇಶ್ವರ ದೇವಾಲಯದ ವಿಮಾನ

**ನಾಣ್ಯಗಳು :** ಮೊದಲ ಕದಂಬ ಅರಸರ ಕಾಲಕ್ಕೆ ಖಚಿತವಾಗಿ ಸೇರುವ ನಾಣ್ಯಗಳು ಇದುವರೆಗೆ ದೊರಕಿಲ್ಲ. ಆದರೆ ಪುಟ್ಟ ಬಟ್ಟಲಾಕಾರದ ಕೆಲವು ಚಿನ್ನದ ನಾಣ್ಯಗಳು ಈ ಕಾಲದವೆಂದು ಕೆಲವರ ಅಭಿಪ್ರಾಯ. ಇವನ್ನು ಪದ್ಮಟಂಕ ಎಂದು ಕರೆಯುತ್ತಾರೆ. ದುಂಡಗಿರುವ ಈ ನಾಣ್ಯಗಳು 0.6"–0.8" ವ್ಯಾಸವಿದ್ದು, 52–70 ಗ್ರೇನ್ ತೂಗುತ್ತವೆ. ಸಾಮಾನ್ಯವಾಗಿ 52 ಮತ್ತು 66 ಗ್ರೇನ್‌ಗಳವೇ ಹೆಚ್ಚು. ಇವುಗಳ ತಗ್ಗಿನ ಕಡೆಯಲ್ಲಿ ಅಂಕನ ಮಾಡಿದ ಪದ್ಮದ ಚಿತ್ರವೂ ಸುತ್ತಲೂ ನಾಲ್ಕು ಸಣ್ಣ ಚಿಹ್ನೆಗಳೂ ಇರುತ್ತವೆ. ಮೊದಮೊದಲು ಎರಡು ಶ್ರೀಕಾರಗಳು, ಶಂಖ ಮತ್ತು ಬಿಲ್ಲು ಇವೇ ಆ ಸಣ್ಣ ಚಿಹ್ನೆಗಳಾಗಿರುತ್ತಿದ್ದುವು. ಅನಂತರದ ಪದ್ಮಟಂಕಗಳಲ್ಲಿ ಇವುಗಳ ಬದಲು ನಾಲ್ಕು ಸಣ್ಣ ಸಿಂಹಗಳು ಕಾಣುತ್ತವೆ. ಹಿಂಭಾಗದಲ್ಲಿ ಯಾವ ಚಿಹ್ನೆಗಳೂ ಇರುವುದಿಲ್ಲ. ಇವುಗಳ ಮೇಲೆ ಯಾವ ಬರೆಹಗಳೂ ಇಲ್ಲದಿರುವುದರಿಂದ, ಇವು ಕದಂಬರೇ ಹೊರಡಿಸಿದವೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆನಂತರದ ಕದಂಬ ಕುಲಗಳ ಅನೇಕ ಚಿನ್ನದ ನಾಣ್ಯಗಳು ಉತ್ತರ ಕರ್ನಾಟಕ ಮತ್ತು ಗೋವ ಪ್ರದೇಶಗಳಲ್ಲಿ ದೊರಕಿವೆ. ಇವೂ ದುಂಡಗೆ ಸು. 0.8 ಅಥವಾ 0.9 ಅಂಗುಲ ಅಗಲವಿದ್ದು ತೂಕದಲ್ಲಿ ಸು. 66 ಗ್ರೇನ್‌ಗಳಿರುತ್ತವೆ. ಪದ್ಮಟಂಕಗಳಂತೆ ಇವುಗಳಲ್ಲಿ ಅಂಕನ ಚಿಹ್ನೆಗಳಿರದೆ ನಾಣ್ಯಗಳು ಪೂರ್ತವಾಗಿ ಅಚ್ಚು ಹೊಯ್ದವುಗಳಾಗಿರುತ್ತವೆ. ಬಹುನಾಜೂಕಾಗಿ ಮಾಡಿರುವ ಈ ನಾಣ್ಯಗಳಲ್ಲಿ ಮುಂಭಾಗದಲ್ಲಿ ಸಿಂಹದ ಚಿತ್ರವೂ ನಾಣ್ಯವನ್ನು ಹೊರಡಿಸಿದ ಸಂವತ್ಸರದ ಹೆಸರೂ ಹಿಂಬದಿಯಲ್ಲಿ ಬಿರುದಾವಳಿಸಹಿತವಾದ ರಾಜನ ಹೆಸರೂ (ನಾಗರೀ ಲಿಪಿಯಲ್ಲಿ ಇವೆ. ಉದಾಹರಣೆಗೆ ಕದಂಬ ಜಯಕೇಶಿಯ ಒಂದು ನಾಣ್ಯದಲ್ಲಿ ಮುಂಭಾಗದ ಸಿಂಹದ ಚಿತ್ರದ ಪಕ್ಕದಲ್ಲಿ ಪ್ರಮೋದ ಎಂದೂ ಹಿಂಭಾಗದಲ್ಲಿ ನಾಲ್ಕು ಸಾಲುಗಳಲ್ಲಿ ಶ್ರೀ ಸಪ್ತಕೋಟೀಶ್ವರ ಲಬ್ಧ ವರ ವೀರ ಜಯಕೇಶಿದೇವ ಮೇವರ ಮಾರಿ ಎಂದೂ ಇರುವುದನ್ನು ಚಿತ್ರದಲ್ಲಿ ನೋಡಬಹುದು. (ಎಸ್.ಎನ್.)

**ಕದಂಬ ಶಿಲೆ :** ನೀರಿನ ಸೆಳವಿನಲ್ಲಿ ಬಲುದೂರ ಕೊಚ್ಚಿಕೊಂಡು ಹೋಗಿ ತಿಕ್ಕಾಟದಿಂದ ಸರಿಸುಮಾರು ಗುಂಡಗಿನ ಆಕಾರ ಪಡೆದ, 2 ಮಿಮೀ ಗಿಂತ ಹೆಚ್ಚಿನ ವ್ಯಾಸವಿರುವ, ಕಲ್ಲುಗಳು ಒಂದುಗೂಡಿ ಆಗಿರುವ ಸಮುದಾಯ (ಕಂಗ್ಲಾಮೆರೇಟ್). ಬಿಡಿಗಲ್ಲುಗಳು ಚೂಪಾಗಿಯೂ ಗಾತ್ರ 10–100 ಮಿಮೀವರೆಗೂ ಇರುವ ಸಮುದಾಯದ ಹೆಸರು ಬ್ರೆಕ್ಷ (Breccia). ಮಳೆಗಾಲದಲ್ಲಿ ನೀರಿನ ಪ್ರವಾಹ ಹಲವಾರು ಭಿನ್ನ ಗಾತ್ರಗಳ ಕಲ್ಲುಗಳನ್ನು ಕೊಚ್ಚಿಕೊಂಡು ಸಾಗುತ್ತದೆ. ನೀರಿನ ಆಳ, ಪ್ರವಾಹದ ಸೆಳೆತ, ಕಲ್ಲಿನ ಗಾತ್ರ ಇವನ್ನು ಅವಲಂಬಿಸಿ ಒಂದೊಂದು ಗಾತ್ರದ ಕಲ್ಲು ಒಂದೊಂದು ಕಡೆ ಶೇಖರಿತವಾಗುವುದು. ದಪ್ಪಕಲ್ಲುಗಳು ದಡದಲ್ಲಿಯೂ ಮರಳಿನ ಕಣಗಳು ಕೊಂಚ ದೂರ ಸರಿದ ಮೇಲೆಯೂ ನಿಕ್ಷೇಪಿತವಾಗುತ್ತವೆ. ಕಿರಿಯ ಮಣ್ಣಿನ ಕಣಗಳು ಮತ್ತು ರಾಸಾಯನಿಕ ವಸ್ತುಗಳು ಆಳವಾದ ನೀರಿನಲ್ಲಿ ನಿಧಾನವಾಗಿ ಸಂಚಿತವಾಗುವುವು. ಕಾಲಕ್ರಮೇಣ ಇವುಗಳ ಸಂದುಗಳಲ್ಲಿ ಮಣ್ಣು, ಮರಳು, ಸುಣ್ಣದಕಲ್ಲು ಕಬ್ಬಿಣದ ಆಕ್ಸೈಡುಗಳೇ ಮೊದಲಾದ ಖನಿಜಗಳಿರುವ ಲೇಪ, ಗಾರೆ ಮುಂತಾದ ಬಂಧಕವಸ್ತುಗಳು ಸೇರಿ ಕದಂಬ ಶಿಲೆ ಉಂಟಾಗುತ್ತದೆ.

ಸಂಚಿತ ಬಿಡಿಕಲ್ಲುಗಳ ಗಾತ್ರಾನುಸಾರ ಕದಂಬ ಶಿಲೆಯನ್ನು ವರ್ಗೀಕರಿಸುವುದುಂಟು– ಮಣಿ (ಪೆವಲ್) ಅಥವಾ ಸೂಕ್ಷ್ಮ ಕದಂಬಶಿಲೆ, ಗುಂಡು (ಕಾಬಲ್) ಅಥವಾ ಮಧ್ಯಮ ಕದಂಬಶಿಲೆ ಮತ್ತು ಬಂಡೆ (ಬೌಲ್ಡರ್) ಅಥವಾ ಒರಟು ಕದಂಬ ಶಿಲೆ. ಇವೆಲ್ಲ ವರ್ಗಗಳ ನಡುವೆಯೂ ಸಾಮಾನ್ಯವಾಗಿ ಬೆರೆತು ಎರಕಗೊಳ್ಳುವ ಸೂಕ್ಷ್ಮ ಮರಳುಕಣಗಳು ಇವುಗಳಲ್ಲಿ ಇನ್ನಷ್ಟು ಪ್ರಭೇದಗಳನ್ನು ಉಂಟು ಮಾಡುವುವು.

ಸಂಸ್ತರ ಶಿಲೆಗಳನ್ನು (ಸ್ಟ್ರಾಟಿಫೈಡ್ ರಾಕ್ಸ್) ಭೂ ಚರಿತ್ರೆಯ ಪುಟಗಳೆಂದು ಕರೆಯುವುದು ವಾಡಿಕೆ. ಇವುಗಳ ಅಡಿಯಲ್ಲಿ ಸಾಮಾನ್ಯವಾಗಿ ಗೋಚರವಾಗುವ ಕದಂಬ ಶಿಲೆಗಳು ಕಡಲತಡಿಯನ್ನೂ ಭೂ ಸಾಮೀಪ್ಯವನ್ನೂ ಸೂಚಿಸುತ್ತವೆ. ಆಳವಾದ ನೀರಿನಲ್ಲಿ ಉತ್ಪನ್ನವಾದ ಶಿಲೆಗಳ ಸಮೀಪದಲ್ಲಿ ಇವು ಸಿಕ್ಕಿದರೆ ಭಾರೀ ಚಲನವಲನಗಳು ಆ ಪ್ರದೇಶದ ಮೇಲ್ಮೈಯಲ್ಲಿ ಆಗಿರುವುವೆಂದು ತಿಳಿಯಬಹುದು. ಕದಂಬಶಿಲೆಯಲ್ಲಿರುವ ಕಣಗಳ ಸೂಕ್ಷ್ಮ ಪರಿಶೀಲನೆಯಿಂದ ಅವು ಎಲ್ಲಿಂದ ಬಂದವೆಂಬುದನ್ನೂ ಪ್ರಾಚೀನ ಕಾಲದ ನದೀವೇಗವನ್ನೂ ವಾಯುಗುಣವನ್ನೂ ನಿರ್ಧರಿಸಬಹುದು. ಭೂ ಚರಿತ್ರೆಯ ದಾಖಲೆ ಪರಿಪೂರ್ಣವಾಗಿಲ್ಲ. ಸಂಸ್ತರ ಶಿಲಾನಿಕ್ಷೇಪ ಸತತವಾಗಿ ಮುಂದುವರಿದಿದ್ದರೂ ಒಂದೆಡೆ ಅವೆಲ್ಲವೂ ಗೋಚರವಾಗಿಲ್ಲ. ಕದಂಬ ಶಿಲೆಗಳು ಸೂಚಿಸುವ ಅನುರೂಪತೆಗಳ ಆಧಾರದಿಂದ ಭೂ ಚರಿತ್ರೆಯ ವಿಭಾಗಗಳನ್ನೂ ಮಾಡಲಾಗಿದೆ. ಹೀಗೆ ಭೂಮಂಡಲದ ಇತಿಹಾಸ ನಿರೂಪಣೆಯಲ್ಲಿ ಕದಂಬಶಿಲೆಗಳಿಗೆ ಪ್ರಧಾನ ಸ್ಥಾನ ಉಂಟು. (ಎ.ಎನ್.ಎಸ್.ಐ.)

**ಕದಳಿ :** ಈ ಸಂಸ್ಕೃತ ಪದಕ್ಕೆ ಬಾಳೆಯಗಿಡ, ಜಿಂಕೆ ಮುಂತಾದ ಅರ್ಥಗಳಿವೆ. ಕನ್ನಡದಲ್ಲಿ, ವಿಶೇಷತಃ ವಚನ ವಾಙ್ಮಯದಲ್ಲಿ, ಕದಳಿ ಅನೇಕ ಅರ್ಥಗಳಲ್ಲಿ ಬಳಕೆಯಲ್ಲಿರುವುದು ಕಂಡುಬರುತ್ತದೆ. ಶಿವಶರಣರು ಜೀವನದ ಪರಮಾದರ್ಶವನ್ನು, ಬಾಳಿನ ಬೆಳಕನ್ನು ಕದಳಿ ಎಂಬ ಪದದಿಂದ ಸೂಚಿಸಿದ್ದಾರೆ. ಅಕ್ಕಮಹಾದೇವಿ, ಲಿಂಗಮ್ಮ, ಸಿದ್ಧರಾಮೇಶ್ವರ, ಅಲ್ಲಮಪ್ರಭು ಮುಂತಾದವರ ವಚನಗಳಲ್ಲಿ ಕದಳಿ ಎಂಬ ಪದ ತಕ್ಕಷ್ಟು ಪ್ರಯುಕ್ತವಾಗಿದೆ.

ಕದಳಿಯೆಂಬುದು ತನು, ಕದಳಿಯೆಂಬುದು ಮನ,
ಕದಳಿಯೆಂಬುದು ವಿಷಯಂಗಳು;
ಕದಳಿಯೆಂಬುದು ಘನ ಘೋರಾರಣ್ಯ;
ಕದಳಿಯೆಂಬುದ ಗೆದ್ದು ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು,
ಭವಗೆಟ್ಟು ಬಂದೆಯಾ ಮಗಳೆ–ಎಂದು
ಕರುಣದಿಂದ ತೆಗೆದು ಬಿಗಿಯಪ್ಪಿದಡೆ,
ಚೆನ್ನ ಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು

– ಎಂಬ ಅಕ್ಕನ ವಚನದಲ್ಲಿ ಬಾಳೆ, ಬಾಳು, ಹೃದಯಕಮಲ, ಭವಾರಣ್ಯ, ಅರಣ್ಯಮಧ್ಯೆ ಮುಂತಾದ ಅರ್ಥಗಳಲ್ಲಿ ಕದಳಿ ಪದವನ್ನು ಬಳಸಿರುವುದು ಕಂಡುಬರುತ್ತದೆ.

ಕರ್ಮವೆಂಬ ಕದಳಿ ಎನಗೆ,
ಕಾಯವೆಂಬ ಕದಳಿ ನಿನಗೆ,
ಮಾಟವೆಂಬ ಕದಳಿ ಬಸವಣ್ಣಂಗೆ–
ಬಂದ ಭಾವ ಸಲೆ ಸಂದಿತ್ತು,
ಎನ್ನಂಗದವಸಾನ (ವ) ಹೇಳಾ !
ಚೆನ್ನಮಲ್ಲಿಕಾರ್ಜುನಯ್ಯ

– ಎಂಬ ಅಕ್ಕನ ಇನ್ನೊಂದು ವಚನದಲ್ಲಿ ಕಾಣುವ ಕದಳಿ ಪದದ ಅಥವ್ಯಾಪ್ತಿ ವಸ್ತುಪರ ಎಂಬುದಕ್ಕಿಂತ ಭಾವಪರ ಎಂದು ಭಾವಿಸುವುದು ಸೂಕ್ತ. (ಎಂ.ಜಿ.ಎನ್.)

**ಕದಳಿಯ ವನ :** ಶ್ರೀಶೈಲದ ಪರ್ವತಾವಳಿಯಲ್ಲಿರುವ ಒಂದು ಜಾಗ. ಪ್ರಕೃತಿ ಸೌಂದರ್ಯಗಳಿಂದ ಕಂಗೊಳಿಸುತ್ತಿದ್ದು ತಪಸ್ವಿಗಳಿಗೆ ಅನುಕೂಲವಾದ ಗುಪ್ತಸ್ಥಳ. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದಿಂದ ಹರಳಯ್ಯನ ಮಿಟ್ಟಿಯನ್ನು ಹಾದು ಚುಕ್ಕಲ ಪರ್ವತವನ್ನು ದಾಟಿ, ಕೃಷ್ಣಾನದಿಯನ್ನು ಅಡ್ಡಹಾಯ್ದು ಮುಂದೆ ಹೋದರೆ ಅಲ್ಲಿ ಮಹದೇವಿಯಕ್ಕನ ಗವಿ ಮತ್ತು ಕದಳಿ ವನಗಳು ಸಿಕ್ಕುತ್ತವೆ. ಕದಳಿಯ ವನವನ್ನು ಗುಪ್ತ ಕದಳಿ ಎಂದು ವಚನಕಾರರು ಕರೆದಿದ್ದಾರೆ. ಕದಳಿಯ ವನವನ್ನು ಸೇರುವುದು ಎಂದರೆ ಮೋಕ್ಷವನ್ನು ಪಡೆಯುವುದು ಎಂಬ ಅರ್ಥ ಇರುವಂತೆ ತೋರುತ್ತದೆ. (ಬಿ.ಎಸ್.)

**ಕದಿರುಗಿಣಿ :** ನೆಕ್ಟರಿನೈಯಿಡೀ ಕುಟುಂಬಕ್ಕೆ ಸೇರಿದ ಹಕ್ಕಿ (ಸನ್‌ಬರ್ಡ್). ಈ ಕುಟುಂಬದಲ್ಲಿ ಸು. 104 ಪ್ರಭೇದಗಳಿದ್ದು ಎಲ್ಲಕ್ಕೂ ಸನ್‌ಬರ್ಡ್ ಎಂಬ ಹೆಸರೇ ಅನ್ವಯಿಸುತ್ತದೆ. ಇವೆಲ್ಲ ಹೆಚ್ಚಾಗಿ ಉಷ್ಣವಲಯಗಳಲ್ಲಿ ವಾಸಿಸುತ್ತವೆ. ಆಫ್ರಿಕಾದಲ್ಲಿ ಹೆಚ್ಚು. ದಕ್ಷಿಣ ಏಷ್ಯ ಮತ್ತು ಹತ್ತಿರದ ದ್ವೀಪಗಳಲ್ಲಿಯೂ ಹಲವು ಪ್ರಭೇದಗಳು ದೊರೆಯುತ್ತವೆ. ಆಸ್ಟ್ರೇಲಿಯ ಖಂಡದಲ್ಲೂ ಒಂದು ಪ್ರಭೇದವಿದೆ. ಇವು ಕಾಡುಗಳಲ್ಲಿ ಅಥವಾ ತೋಟಗಳಲ್ಲಿ ಆಹಾರ ಹುಡುಕುತ್ತ ಕಾಲಕಳೆಯುತ್ತವೆ. ಇವುಗಳಲ್ಲಿ ಗಂಡುಗಳಿಗೆ ಮಿರುಗುವ ವರ್ಣರಂಜಿತ ಗರಿಗಳಿವೆ.



ಹಳದಿ, ಕೆಂಪು ಹಾಗೂ ಕಪ್ಪು ಚುಕ್ಕಿಗಳಿರುವ ಹೊಳೆಯುವ ನೀಲಿ, ಕೆನ್ನೀಲಿ, ಹಸಿರು ಬಣ್ಣಗಳು ಬಹಳ ಸಾಮಾನ್ಯ. ಹೆಣ್ಣುಗಳ ಬಣ್ಣ ಮಾಸಲು, ಹೂವುಗಳ ಬಳಿ ಕುಳಿತು, ಹೂವಿನೊಳಗಿನ ಮಧುವಿಗಾಗಿ ಮತ್ತು ಅಲ್ಲಿಗೆ ಬರುವ ಚಿಕ್ಕಪುಟ್ಟ ಕೀಟಗಳಿಗಾಗಿ ಇವು ಹುಡುಕುತ್ತಿರುವುದು ಬಹಳ ಸಾಮಾನ್ಯ ದೃಶ್ಯ. ಇದಕ್ಕಾಗಿ ಇವಕ್ಕೆ ಬಾಗಿದ ಕೊಕ್ಕು, ಉದ್ದಕ್ಕೆ ಚಾಚಬಹುದಾದ, ಹೆಚ್ಚು ಕಡಿಮೆ ಕೊಳವೆಯಾಕರದ ನಾಲಗೆಯಿದೆ. ಮರದ ರೆಂಬೆಗಳಲ್ಲಿ ಅಂಡಾಕಾರದ ಹುಲ್ಲಿನ ಗೂಡುಗಳನ್ನಿವು ಕಟ್ಟುತ್ತವೆ. ಗೂಡಿಗೆ ತುದಿಯ ಪಕ್ಕದಲ್ಲಿ ಬಾಗಿಲೊಂದಿದ್ದು ಅದರ ಮೇಲೆ ಮುಚ್ಚಳವಿರುತ್ತದೆ. ಹೆಣ್ಣು ಚುಕ್ಕಿಗಳಿರುವ ಎರಡು ಮೊಟ್ಟೆಗಳನ್ನಿಡುತ್ತದೆ. ಮೈಸೂರಿನಲ್ಲಿ ಕಾಣಬರುವ ಕದಿರು ಗಿಣಿಗಳಲ್ಲಿ ಕೆನ್ನೀಲಿ ಕದಿರುಗಿಣಿ ಮತ್ತು ಕೆನ್ನಿಲಿ ಕೆದರು ಕದಿರುಗಿಣಿಗಳು ಮುಖ್ಯವಾದವು. (ಎಚ್.ಬಿ.ಡಿ.)

**ಕದ್ರು :** ದೇವಯುಗದಲ್ಲಿ ಬ್ರಹ್ಮಪುತ್ರಿಯರಾದ ಇಬ್ಬರಲ್ಲಿ ಒಬ್ಬಳು. ಇನ್ನೊಬ್ಬಳು ವಿನತೆ. ಸ್ಫುರದ್ರೂಪಿಗಳಾದ ಈ ಇಬ್ಬರೂ ಕಶ್ಯಪನ ಮಡದಿಯರು. ಇವರ ವೃತ್ತಾಂತ ಮಹಾಭಾರತದ ಆದಿಪರ್ವದಲ್ಲಿದೆ. ಕಶ್ಯಪ ಒಮ್ಮೆ ತನ್ನ ಪತ್ನಿಯರಿಗೆ ಉತ್ತಮ ವರಗಳನ್ನು ಕೊಡುವುದಾಗಿ ಪ್ರಕಟಿಸಿದಾಗ ಸಂತುಷ್ಟಾಂತಃಕರಣೆಯರಾದ ಇಬ್ಬರು ಹೆಂಡಿರೂ ತಮತಮಗೆ ಪ್ರಿಯವಾದ ವರಗಳನ್ನು ಬೇಡಿದರು. ಕದ್ರು ಸಮಾನ ತೇಜಸ್ವಿಗಳಾದ ಒಂದು ಸಾವಿರ ನಾಗಗಳನ್ನು (ಸರ್ಪ) ಪುತ್ರರಾಗಿ ಪಡೆಯಲಿಚ್ಚಿಸಿದಳು. ವಿನತೆಯಾದರೋ ಕದ್ರುವಿನ ಮಕ್ಕಳಿಗಿಂತಲೂ ಅಧಿಕವಾದ ಬಲಸಂಪತ್ತಿನಿಂದ ಕೂಡಿದ ಇಬ್ಬರು ಮಕ್ಕಳನ್ನು ಮಾತ್ರ ಬೇಡಿದಳು. ಅವರವರ ಅಪೇಕ್ಷೆಯಂತೆ ಕಶ್ಯಪ ವರವಿತ್ತು ತಪಸ್ಸಿಗೆ ತೆರಳಿದ. ಬಹುಕಾಲ ಕಳೆದ ಮೇಲೆ ಕದ್ರು ಒಂದು ಸಾವಿರ ಅಂಡಗಳನ್ನೂ ವಿನತೆ ಎರಡು ಅಂಡಗಳನ್ನೂ ಪಡೆದರು. ಹೀಗೆ ಪಡೆದ ಅಂಡಗಳನ್ನು ಪರಿಚಾರಿಕೆಯರು ಸ್ನೇಹಪೂರ್ಣ ಕುಂಡಗಳಲ್ಲಿ ಇಟ್ಟು ಐದು ನೂರು ವರ್ಷಗಳವರೆಗೆ ರಕ್ಷಿಸಿದರು. ಅನಂತರ ಕದ್ರುಪುತ್ರರು ಹೊರಬಿದ್ದರು. ವಿನತಾಪುತ್ರರು ಮಾತ್ರ ಹೊರಬೀಳದ ಕಾರಣ ಲಜ್ಜಿತಳಾದ ವಿನತೆ ಒಂದು ಅಂಡವನ್ನು ಒಡೆದಳು. ಅಲ್ಲಿ ಶಿಶು ಪೂರ್ಣಾಂಗವಾಗಿ ಇರಲಿಲ್ಲವಾದ ಕಾರಣ ಅದು ತನ್ನ ತಾಯಿಗೆ ಶಾಪ ಕೊಟ್ಟಿತು–ನೀನು ಐದು ನೂರು ವರ್ಷಗಳ ಕಾಲ ನಿನ್ನ ಪ್ರತಿಸ್ಪರ್ಧಿಗೆ ದಾಸಿಯಾಗುವೆ–ಎಂದು. ಈ ಶಾಪ ಮುಂದುವರಿದು ಒಮ್ಮೆ ಕದ್ರುವಿನಲ್ಲಿ ಒಂದು ಬಗೆಯ ಬುದ್ಧಿವಿಕಾರವುಂಟಾಯಿತು. ಕದ್ರು ಒಮ್ಮೆ ವಿನತೆಯನ್ನು ಕುರಿತು ಉಚ್ಚೈಶ್ರವಸ್ಸಿನ ಬಣ್ಣವಾವುದೆಂದು ಕೇಳಿದಳು. ಇಂದ್ರನ ಪಟ್ಟದ ಕುದುರೆಯಾದ ಉಚ್ಚೈಶ್ರವಸ್ಸಿನ ಬಣ್ಣ ಬಿಳುಪೆಂಬ ವಿಷಯ ಸರ್ವವಿದಿತವಾದ್ದರಿಂದ ವಿನತೆ ಹಾಗೆಂದು ಉತ್ತರವಿತ್ತಳು. ಅಲ್ಲದೆ ಅದರ ಬಣ್ಣ ಬೇರೆಯಾಗಿದೆಯೆ ಎಂದು ಕದ್ರುವನ್ನು ಆಕೆ ಮರುಪ್ರಶ್ನಿಸಿದಳು. ಅದಕ್ಕೆ ಕದ್ರು ಅದರ ಬಾಲ ಮಾತ್ರ ಕಪ್ಪಾಗಿದೆಯೆಂದು ಹೇಳಿ ಇಬ್ಬರೂ ಹೋಗಿ ಕುದುರೆಯ ಬಣ್ಣವನ್ನು ಪರೀಕ್ಷಿಸಬೇಕೆಂದೂ ಯಾರ ಹೇಳಿಕೆ ನಿಜವಾಗುತ್ತದೋ ಅವರಿಗೆ ಸೋತವರು ದಾಸಿಯಾಗಬೇಕೆಂದೂ ಪಣವೊಡ್ಡಿದಳು. ತನ್ನ ಪುತ್ರರಾದ ನಾಗರು ಕುದುರೆಯ ಬಾಲಕ್ಕೆ ಅಂಟಿಕೊಂಡು ಅದನ್ನು ಕಪ್ಪಾಗಿಸತಕ್ಕದ್ದೆಂದು ಕದ್ರು ಗುಟ್ಟಾಗಿ ಸಂಚು ನಡೆಸಿದಳಾಗಿ ಇಬ್ಬರು ಸೋದರಿಯರೂ ಹೋಗಿ ನೋಡಿದಾಗ ಕುದುರೆ ಹಾಲು ಗಲ್ಲಿನಂತೆ ಬೆಳ್ಳಗೆ ಕಂಡರೂ ಬಾಲ ಮಾತ್ರ ಹಾಲಾಹಲದಂತೆ ಕಪ್ಪಾಗಿಯೇ ತೋರಿತು. ಅಂತೂ ಕದ್ರುವೇ ಗೆದ್ದಳು. ಪಣದಂತೆ ವಿನತೆ ಕದ್ರುವಿನ ದಾಸಿಯಾದಳು. ಬಹುಕಾಲ ಸಂದಮೇಲೆ ವಿನತಾಪುತ್ರನಾದ ಗರುಡ ತಾಯ ಸೆರೆಯನ್ನು ಬಿಡಿಸಿದ. (ನೋಡಿ–ಗರುಡ) (ಎನ್.ಎಸ್.ಆರ್.ಬಿ.)

**ಕನಕಗಿರಿ :** ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಒಂದು ಗ್ರಾಮ. ಗಂಗಾವತಿಗೆ ಸು. 21 ಕಿಮೀ ಉತ್ತರದಲ್ಲಿ ಲಿಂಗಸುಗೂರು ಮಾರ್ಗದಲ್ಲಿದೆ. ಈ ಗ್ರಾಮದ ಮೂರು ದಿಕ್ಕುಗಳನ್ನು ಇಲ್ಲಿ ಹರಿಯುವ ಎರಡು ತೊರೆಗಳು ಸುತ್ತುವರಿದಿವೆ. ಕಣ್ಣಿದ್ದವರು ಕನಕಗಿರಿ ನೋಡಬೇಕೆಂಬುದು ಆ ಭಾಗದಲ್ಲಿನ ಜನವಾಣಿ. ಇದು ಈ ಊರಿನ ದೇವಾಲಯಗಳ ಪ್ರೇಕ್ಷಣೀಯತೆಯನ್ನು ಸೂಚಿಸುತ್ತದೆ. ಇಲ್ಲಿಯ ಕನಕಾಚಲಸ್ವಾಮಿಯ ದೇವಸ್ಥಾನದಲ್ಲಿ ಹಳೆಯ ಕಾಲದಿಂದಲೂ ಜಾತ್ರೆಯ ಮೂರು ದಿನಗಳಲ್ಲಿ ಹರಿಜನರನ್ನು ದೇವರ ದರ್ಶನಕ್ಕೆ ಬಿಡುವ ಪರಂಪರೆಯಿತ್ತು. ಹರಿಜನರಿಗಾಗಿಯೇ ಈ ದೇವರು ಇಲ್ಲಿ ನೆಲಸಿದನೆಂಬ ಪ್ರತೀತಿ ಇದೆ. ಇಲ್ಲಿನ ರಥೋತ್ಸವ ಪ್ರತಿವರ್ಷ ಫಾಲ್ಗುಣ ಬಹುಳ ಸಪ್ತಮಿಯಂದು ನಡೆಯುತ್ತದೆ.

ಕನಕನೆಂಬ ಮುನಿ ಇಲ್ಲಿ ತಪಸ್ಸು ಮಾಡಿದನೆಂದು ಹೇಳುವರು. ವಿಜಯದಾಸರು ಕ್ಷೇತ್ರ ಸುಳಾದಿಯಲ್ಲಿಯೂ ಈ ವಿಚಾರ ಹೇಳಿದ್ದಾರೆ. ಕನಕಗಿರಿಯ ಉತ್ತರ ದಕ್ಷಿಣ ಪ್ರದೇಶದಲ್ಲಿ (ಮಸ್ಕಿ, ಕೊಪ್ಪಳ) ಅಶೋಕನ ಶಾಸನಗಳು ದೊರೆತಿದ್ದು ಮತ್ತು ಕನಕಗಿರಿ ವ್ಯಾಪಾರೀ ಮಾರ್ಗದಲ್ಲಿ ಇರುವುದನ್ನು ನೋಡಿದರೆ ಈ ಊರೇ ಅಶೋಕನ ದಕ್ಷಿಣದ ಕಾರ್ಯಕೇಂದ್ರವಾಗಿದ್ದ ಸುವರ್ಣಗಿರಿ ಎಂಬ ಊಹೆಗೆ ಅವಕಾಶ ಮಾಡಿಕೊಡುತ್ತದೆ. ಎರಡನೆಯ ಶತಮಾನದ ಟಾಲೆಮಿಯ ಭೂಗೋಳದಲ್ಲಿ ಭೀಮಾನದಿ ಹಾಗೂ ಬನವಾಸಿಗಳ ನಡುವಣ ಮಾರ್ಗದಲ್ಲಿ ಬರುವ ಊರುಗಳನ್ನು ಹೆಸರಿಸುವಲ್ಲಿ ಹೇಳಿರುವ 'ಕಲ್ಲಿಗೇರಿಸ್' ಕನಕಗಿರಿ ಇರಬಹುದೆಂದು ಊಹಿಸಲಾಗಿದೆ. 15–17ನೆಯ ಶತಮಾನಗಳ ಅವಧಿಯಲ್ಲಿ ಈ ಊರು ಒಂದು ಪಾಳೆಯಪಟ್ಟಿನ ಕೇಂದ್ರವಾಗಿತ್ತು.

**ಕನಕಗಿರಿಯ ಪಾಳೆಯಗಾರರು:** ಇವರ ಇತಿಹಾಸ 15ನೆಯ ಶತಮಾನದ ಮಧ್ಯದಲ್ಲಿ ಆರಂಭವಾಗುತ್ತದೆ. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ 12 ಗ್ರಾಮಗಳನ್ನು ಉಂಬಳಿಯಾಗಿ ಪಡೆದ ಗುಜ್ಜಲ ವಂಶದ ಪರಸಪ್ಪನಾಯಕ ಇಲ್ಲಿನ ಕನಕಾಚಲ ಲಕ್ಷ್ಮೀನರಸಿಂಹ ದೇವರ ಗರ್ಭಾಲಯವನ್ನು ಕಟ್ಟಿಸಿ ಹೊಸ ಊರಿನ ಸ್ಥಾಪನೆಗೆ ಕಾರಣನಾದ. ಇವನ ವಂಶದ ನಾಯಕರು ಮುಂದೆ ಪ್ರಬಲರಾಗಿ 40ಲಕ್ಷ ವರಹಗಳ ಆದಾಯದ ಪ್ರಾಂತ್ಯವನ್ನು ಗಳಿಸಿಕೊಂಡು ವಿಜಯನಗರದ ನರಪತಿಗಳ ಬಲಪಾರ್ಶ್ವದ ಮರ್ಯಾದೆಗಳನ್ನು ಹೊಂದಿದ ಪಾಳೆಯಗಾರರಾಗಿದ್ದರು. ಕೃಷ್ಣ ದೇವರಾಯನ ಆಮುಕ್ತಮಾಲ್ಯದ ಗ್ರಂಥದಲ್ಲಿ ಕನಕಗಿರಿಯ ಪ್ರಸ್ತಾಪವಿದೆ. ವಿಜಯನಗರ ನಾಶವಾದ ಅನಂತರ ಈ ನಾಯಕರಲ್ಲಿ ಕೆಲವರು ಬಿಜಾಪುರದ ಪರವಾಗಿಯೂ ಹೋರಾಡಿದಂತೆ ದಾಖಲೆಗಳಿವೆ. ವಿಜಯನಗರದ ಅರಸರಾದ ಸಾಳುವ ನರಸಿಂಹ, ಕೃಷ್ಣದೇವರಾಯ, ಅಚ್ಯುತರಾಯ ಇವರೆಲ್ಲ ಕನಕಗಿರಿಯ ದೇವಸ್ಥಾನಕ್ಕೆ ಗ್ರಾಮಗಳನ್ನು ದತ್ತಿ ಕೊಟ್ಟದ್ದಕ್ಕೆ ಕನಕಾಚಲ ದೇವಸ್ಥಾನದಲ್ಲಿ ಶಿಲಾಶಾಸನಗಳಿವೆ. ಶ್ರೀಮತ್ ಸ್ವರ್ಣಗಿರೀಶಸ್ಯ ನಾರಸಿಂಹಸ್ಯ ಶಾಸನಂ ಎಂಬುದು ಈ ಶಾಸನಗಳ ಪ್ರಾರಂಭ ಶ್ಲೋಕಭಾಗ.

ಪರಸಪ್ಪನಾಯಕನ ಮಗ ನವಾಬ ಉಡಿಚಿನಾಯಕ ಪ್ರಭಾವಶಾಲಿ ದೊರೆಯಾಗಿದ್ದ. ಏಳು ಗ್ರಾಮಗಳನ್ನು ಸೇರಿಸಿ ಕನಕಗಿರಿಯನ್ನು ಈತ ವಿಸ್ತರಿಸಿದ. ಗಂಗಾವತಿ ಹತ್ತಿರವಿರುವ ಎಮ್ಮಿಗುಡ್ಡದಲ್ಲಿ ಈತ ಕೋಟೆ ಕಟ್ಟಿಸಿದ. ಕನಕಗಿರಿಯಲ್ಲೇ ಮುನ್ನೂರಕ್ಕಿಂತ ಹೆಚ್ಚು ದೇವಾಲಯಗಳನ್ನು ಕಟ್ಟಿಸಿದನಂತೆ. ಇಲ್ಲಿನ ಮುಖ್ಯ ದೇವಾಲಯದ ಪ್ರಾಕಾರ, ಗೋಪುರಗಳನ್ನೆಲ್ಲ ಈತನೇ ಕಟ್ಟಿಸಿದ. ಈ ದೇವಾಲಯದಲ್ಲಿರುವ ಮಧ್ಯರಂಗ ಶಿಲ್ಪಕಲೆಯ ಒಂದು ಅದ್ಭುತ. ಇದು 54' ಉದ್ದ ಹಾಗೂ 36' ಅಗಲವಿರುವ ಒಂದು ನಾಟ್ಯ ಶಾಲೆ. ಮಧ್ಯ ಯಾವ ಆಧಾರಮೂ ಇಲ್ಲದೆ ಪಕ್ಕದ ಸಿಂಹಸ್ತಂಭಗಳ ಮೇಲೆ ನಿಂತಿದೆ. ನವಾಬ ಉಡಿಚಿನಾಯಕನ ಮಗ ಕೆಲವಡಿ ಉಡಿಚಿನಾಯಕ ಹಾಗೂ ಅವನ ರಾಣಿಯರು ದೇವಸ್ಥಾನಗಳಲ್ಲೆಲ್ಲ ಸುಂದರವಾದ ಪೌರಾಣಿಕ ಪ್ರತಿಮೆಗಳನ್ನು ಮಾಡಿಸಿದರು. ಅನಂತರ ಬಂದ ಕನಕಯ್ಯ ಉಡಿಚಿನಾಯಕ ಊರಿನ ಎರಡು ಬದಿಯಲ್ಲಿ ವಿಶಾಲವಾದ ಪುಷ್ಕರಣಿಗಳನ್ನೂ ಅವನ ತಮ್ಮನಾದ ವೆಂಕಟಪ್ಪನಾಯಕ ಜಲಕ್ರೀಡಾ ಮಹಲನ್ನೂ (ವೆಂಕಟಪತಿ ಬಾವಿ) ಕಟ್ಟಿಸಿದ. ಹಂಪೆಯ ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಗೋಪುರ ಕನಕಗಿರಿಯ ನಾಯಕರು ಕಟ್ಟಿಸಿದ್ದು.

ಅನಂತರ ಬಂದ ಹಿರೇ ರಂಗಪ್ಪನಾಯಕ ಕವಿಗಳಿಗೂ ಪಂಡಿತರಿಗೂ ಆಶ್ರಯವಿತ್ತಿದ್ದ. ಕನ್ನಡದಲ್ಲಿ ಛಟ್ಟಂಗಿ ದಂಡಕಗಳನ್ನು ರಚಿಸಿರುವ ಹಾಗೂ ಘಳಿಗೆಯಲ್ಲಿ ನೂರು ಶ್ಲೋಕ ರಚಿಸಬಲ್ಲನೆಂಬ ಖ್ಯಾತಿಯಿದ್ದ ಜಯವೆಂಕಟಾಚಾರ್ಯ, ಶ್ರೀಕೃಷ್ಣಪಾರಿಜಾತ ನಾಟಕ ರಚಿಸಿದ ಅಪರಾಳ ತಮ್ಮಣ್ಣ, ಚಿದಾನಂದ ಅವಧೂತ ಇವರು ಈ ಪಾಳೆಗಾರನ ಆಶ್ರಯದಲ್ಲಿದ್ದವರು.

ಕೊನೆಯ ಪಾಳೆಯಗಾರ ಹಿರೇನಾಯಕನ ಕಾಲದಲ್ಲಿ ಕನಕಗಿರಿ ರಾಜ್ಯ ಹರಿಹರ ದಾವಣಗೆರೆಯವರೆಗೆ ಬೆಳೆದಿತ್ತು. ಆದರೆ ಸುತ್ತಲಿನ ಶತ್ರುಗಳ ಬಗ್ಗೆ ಇವನಿಗೆ ಎಚ್ಚರವಿರಲಿಲ್ಲ. ಹೈದರಾಬಾದಿನ ನಿಜಾಮ ಕನಕಗಿರಿಯ ನಾಯಕನ ಬಂಧುವೇ ಆದ ಸುರಪುರದ ಪಾಮನಾಯಕನ ಮೂಲಕ ಕನಕಗಿರಿಯ ಮೇಲೆ ದಾಳಿ ಮಾಡಿಸಿ ನಾಯಕನನ್ನು ಸೆರೆಹಿಡಿಸಿ ಹೈದರಾಬಾದಿನಲ್ಲಿ ಕೊಲ್ಲಿಸಿದ. ನಾಯಕನ ಮನೆತನಕ್ಕೆ 16 ಹಳ್ಳಿಗಳನ್ನು ಮಾತ್ರ

ಕೊಡಲಾಯಿತು. ಸುರಪುರದ ಪಾಮನಾಯಕನಿಗೆ ಕನಕಗಿರಿಯನ್ನು ದಮನ ಮಾಡಿದುದಕ್ಕಾಗಿ ರುಸೂಮು, ಜಾಗೀರಿಗಳು ಸಿಕ್ಕವು. ಆದರೆ ಅನತಿ ಕಾಲದಲ್ಲೇ ಸುರಪುರದ ಗತಿಯೂ ಕನಕಗಿರಿಯಂತೆಯೇ ಆಯಿತು.

ಕನಕಗಿರಿಯ ಮೇಲೆ ಟಿಪ್ಪುವಿನ ದಾಳಿಯೂ ಒಮ್ಮೆ ಆದಂತೆ, ಅಲ್ಲದೆ ಈ ನಾಯಕರು ಮರಾಠರನ್ನೂ ಎದುರಿಸಿದಂತೆ ದಾಖಲೆಗಳಿವೆ. (ಜಿ.ಆರ್.ಪಿ.)

**ಕನಕ ಚಂದ್ರ :** ಒಬ್ಬ ಜೈನಯತಿ. ಕಾಲ ಸು. 1300. ಕೊಂಡ ಕುಂದಾಚಾರ್ಯನ ಮೋಕ್ಷಪ್ರಾಭೃತ ಅಥವಾ ಸಹಜಾತಪ್ರಕಾಶ ಎಂಬ ಗ್ರಂಥಕ್ಕೆ ಕನ್ನಡ ವ್ಯಾಖ್ಯಾನ ಬರೆದಿದ್ದಾನೆ. ಇವನೊಬ್ಬ ಕವಿಯೂ ಇರಬಹುದೆಂದು ತೋರುತ್ತದೆ. ಇವನ ಯಾವ ಸ್ವತಂತ್ರ ಕಾವ್ಯಗಳೂ ಇದುವರೆಗೆ ಸಿಕ್ಕಿಲ್ಲ. ಈತ ಬರೆದ ವ್ಯಾಖ್ಯಾನ ಗ್ರಂಥ ಮೂಡಬಿದಿರೆಯ ಜೈನಮತದ ಪುಸ್ತಕಭಂಡಾರದಲ್ಲಿದೆ. (ಎಚ್.ಕೆ.ಆರ್.ಜಿ.)

**ಕನಕದಾಸ :** 1509–1607. ಕನ್ನಡ ಹರಿದಾಸರಲ್ಲಿ ಒಬ್ಬ. ಪುರಂದರದಾಸನಷ್ಟೇ ಪ್ರಸಿದ್ಧ. ಇವರಿಬ್ಬರೂ ಸಮಕಾಲೀನರಾಗಿದ್ದುದಲ್ಲದೆ ವ್ಯಾಸರಾಯನ ನೇತೃತ್ವದಲ್ಲಿ ಹರಿದಾಸ ಪಂಥದಲ್ಲಿ ಸಂತತವಾಗಿ ಶ್ರಮಿಸಿದವರಾಗಿರುತ್ತಾರೆ. ಪುರಂದರದಾಸ ತನ್ನ ಒಂದು ಕೀರ್ತನೆಯಲ್ಲಿ ಕನಕದಾಸನ ಮೇಲೆ ದಯೆ ಮಾಡಲು ವ್ಯಾಸ ಮುನಿಯ ಮಠದವರೆಲ್ಲ ದೂರಿಕೊಳ್ಳುವರು–ಎಂದು ಹೇಳಿರುವುದನ್ನು ನೋಡಿದರೆ ವ್ಯಾಸರಾಯ ಕನಕದಾಸನಿಗೆ ತನ್ನಲ್ಲಿ ಆಶ್ರಯವಿತ್ತುದನ್ನು ಅನೇಕರು ಸಹಿಸಲಿಲ್ಲವೆಂಬುದು ಸೂಚಿತವಾಗುತ್ತದೆ. ಕನಕದಾಸ ಜನ್ಮತಃ ಬ್ರಾಹ್ಮಣನಲ್ಲವೆಂಬುದೇ ಇದಕ್ಕೆ ಕಾರಣವಿರಬಹುದು. ಕನಕದಾಸ ಕಾಗಿನೆಲೆಯ ಸಮೀಪದಲ್ಲಿ ಇಂದಿಗೂ ವಾಸಿಸುತ್ತಿರುವ ದಾಸರೆಂಬ ಒಂದು ಬುಡಕಟ್ಟಿಗೆ ಸೇರಿದವನಿರಬಹುದೆಂದು ಕೆಲವರ ಅಭಿಪ್ರಾಯ. ಈ ಮತೀಯರು ರಾಮಾನುಜ ಪಂಥಕ್ಕೆ ಸೇರಿದ ಆನೆಗೊಂದಿಯ ಸಮಯಾಚಾರಿಗಳ ಅನುಯಾಯಿಗಳು. ಕನಕದಾಸ ತನ್ನ ಮೋಹನತರಂಗಿಣಿಯಲ್ಲಿ ರಾಮಾನುಜಾಚಾರ್ಯರನ್ನೂ ತಾತಾಚಾರ್ಯರನ್ನೂ ಸ್ತುತಿಸಿರುವುದನ್ನು ಗಮನಿಸಿದರೆ ಈತನ ಶ್ರೀವೈಷ್ಣವಭಕ್ತಿಗೆ ಕಾರಣವೇನೆಂಬುದು ಧ್ವನಿತವಾಗುತ್ತದೆ. ಆದರೆ ಕನಕದಾಸ ತನ್ನ ಕೀರ್ತನೆಯಲ್ಲಿ ಬೀರೇದೇವರನ್ನು ಕೊಂಡಾಡಿರುವುದನ್ನು ಲಕ್ಷಿಸಿ ಆತ ಕುರುಬನೆಂದೂ ಇಲ್ಲವೇ ಬೇಡರ ಬುಡಕಟ್ಟಿನ ನಾಯಕ ಪಂಥದವನೆಂದೂ ಹೇಳುವವರೂ ಇದ್ದಾರೆ. ಈ ವಿಚಾರಗಳು ಹೇಗೆಯೇ ಇರಲಿ, ಕನಕದಾಸ ಕನ್ನಡ ನಾಡಿನ ಹರಿಭಕ್ತವರೇಣ್ಯರಲ್ಲಿ ಒಬ್ಬನೆನ್ನಲು ಯಾವ ಸಂದೇಹವೂ ಇಲ್ಲ. ಈತ ಕಾಗಿನೆಲೆಯಲ್ಲಿ ಹುಟ್ಟಿ, ಬೆಳೆದು, ಬಾಡವೆಂಬ ಪ್ರದೇಶದಲ್ಲಿ ನಾಯಕನಾಗಿ ಆಡಳಿತ ನಡೆಸಿ, ಯಾವುದೋ ಒಂದು ಕಾಳಗದಲ್ಲಿ ಸೋಲಾಗಲು, ಪರಮಾತ್ಮನ ಅನುಗ್ರಹದಿಂದ ಚೇತರಿಸಿಕೊಂಡು, ಹರಿದಾಸನಾದಂತೆ ಆತನ ಮಾತುಗಳಿಂದಲೇ ತಿಳಿದು ಬರುತ್ತದೆ. ಈ ರೀತಿ ಕನಕನಾಯಕ ಕತ್ತಿಯನ್ನು ಬಿಸುಟು ತಾಳ ತಂಬೂರಿಗಳನ್ನು ಹಿಡಿದು ಹೊರಡುವ ಪರಿವರ್ತನೆ ತುಂಬ ವಿಸ್ಮಯಕಾರಿಯಾದುದೇ ಸರಿ. ಈತನ ಆರಾಧ್ಯದೇವತೆ ಆದಿಕೇಶವ.



ಮೈಸೂರಿನ ಶಿಲ್ಪಿ ಡಿ. ಬಸವಣ್ಣನವರು ಕಂಡರಿಸಿದ ಕನಕದಾಸನ ಶಿಲಾಶಿಲ್ಪ

ಕನಕದಾಸ ಭಾವಪೂರ್ಣವಾದ ಅನೇಕ ಕೀರ್ತನೆಗಳನ್ನು ರಚಿಸಿರುವನಲ್ಲದೆ, ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ರಾಮಧಾನ್ಯಚರಿತೆ ಮತ್ತು ನೃಸಿಂಹಸ್ತವ ಎಂಬ ಕೃತಿಗಳನ್ನೂ ಬರೆದಿದ್ದಾನೆ. ಆದ್ದರಿಂದ ಕನ್ನಡ ಹರಿದಾಸರಲ್ಲಿ ಕನಕದಾಸನ ಸ್ಥಾನ ತುಂಬ ವಿಶಿಷ್ಟವಾದುದು.

ಕನಕದಾಸನ ಕೀರ್ತನೆಗಳು ಸಂಖ್ಯಾದೃಷ್ಟಿಯಿಂದ ಕಡಿಮೆಯೆನ್ನಿಸಿದರೂ ಗುಣದ ದೃಷ್ಟಿಯಿಂದ ಮಿಗಿಲಾಗಿವೆ. ಈತನ ಮುದ್ರಿಕೆ ಕಾಗಿನೆಲೆಯ ಆದಿಕೇಶವನ ಹೆಸರಿನದಾಗಿದೆ. ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ–ಎಂಬ ಸುಪ್ರಸಿದ್ಧವಾದ ಕೀರ್ತನೆಯನ್ನು ಗಮನಿಸಿದರೆ ಕನಕ ಎಂಥ ಆಶಾವಾದಿಯೆಂಬುದು ಸ್ಪಷ್ಟವಾಗುತ್ತದೆ. ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರ–ಎಂಬ ಮತ್ತೊಂದು ಕೀರ್ತನೆಯ ಧಾಟಿಯಲ್ಲಿ ಕನಕನ ಜನ್ಮವೃತ್ತಾಂತವೇ ಪ್ರತಿಬಿಂಬಿಸಿದ್ದು, ಸಂಪ್ರದಾಯವಾದಿಗಳನ್ನು ಕುರಿತ ಎಚ್ಚರಿಕೆಯ ಮಾತಿನ ಚುಚ್ಚು ಎದ್ದುಕಾಣುತ್ತದೆ. ಕೀರ್ತನೆಗಳಲ್ಲಿ ಅನೇಕ ಕಡೆ ಕಂಡುಬರುವ ಇಂಥ ಕೆಚ್ಚಿನ ನುಡಿಗಳು ಗಮನಾರ್ಹವಾದುವು. ದೈವಭಕ್ತಿ, ಜೀವನದರ್ಶನ, ಸಮಾಜವಿಮರ್ಶೆ, ಲೋಕಾನುಭವ ಗಳೆಲ್ಲವೂ ಈ ಕೀರ್ತನೆಗಳಲ್ಲಿ ತುಂಬಿ ತುಳುಕುತ್ತವೆ. ವಚನಸಾಹಿತ್ಯದಲ್ಲಿ ಕಂಡುಬರುವ ಬೆಡಗಿನ ವಚನಗಳಂತೆ ಕನಕದಾಸನ ಮುಂಡಿಗೆಗಳು ಇಂದಿಗೂ ಬಿಡಿಸಲಾರದ ಕಗ್ಗಂಟಿನಂತಿವೆ.

ಕನಕದಾಸನು ಬರೆದಿರುವ ಕಾವ್ಯಗಳೂ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಗಳಾಗಿವೆ. 42 ಸಂಧಿಗಳುಳ್ಳ ಸಾಂಗತ್ಯ ಕೃತಿಯಾದ ಮೋಹನತರಂಗಿಣಿಯಲ್ಲಿ ಶಂಬರಾಸುರ ಮತ್ತು ಬಾಣಾಸುರರ ವಧೆಗಳು ನಿರೂಪಿತವಾಗಿವೆ. ಈ ಎರಡು ಪ್ರಸಂಗಗಳನ್ನೂ ಒಂದೇ ಕಾವ್ಯದಲ್ಲಿ ಅಳವಡಿಸಿರುವ ಕನಕದಾಸನ ಕೌಶಲ ಮೆಚ್ಚುವಂಥದು. ಕಾವ್ಯದ ಪೂರ್ವಾರ್ಧದಲ್ಲಿ ಪ್ರದ್ಯುಮ್ನ ಪ್ರಧಾನ ಪಾತ್ರ ವಹಿಸಿದರೆ ಉತ್ತರಾರ್ಧದಲ್ಲಿ ಶ್ರೀಕೃಷ್ಣನ ಪ್ರಭಾವ ಮಿಗಿಲಾಗಿ ಕಾಣುತ್ತದೆ. ಉಷಾ–ಅನಿರುದ್ಧರ ಪ್ರಣಯವೃತ್ತಾಂತ ಇಲ್ಲಿನ ಬಿರುಸು ಕಾಳಗಗಳ ಮಧ್ಯೆ ಒಂದು ರಮಣೀಯ ಪ್ರಪಂಚವನ್ನೇ ಸೃಷ್ಟಿಸುತ್ತದೆ. ಕನಕದಾಸನ ಯುದ್ಧಾನುಭವ ಮತ್ತು ಸಾಹಿತ್ಯ ಪರಿಶ್ರಮಗಳು ಈ ಕೃತಿಯಲ್ಲಿ ಮೂರ್ತಿಭವಿಸಿವೆ. ಹರಿಭಕ್ತಿಯ ಹಿರಿಮೆಯನ್ನೂ ಹರಿಭಕ್ತಿಯ ನಿಲುವನ್ನೂ ಇಲ್ಲಿ ಸಂದರ್ಭೋಚಿತವಾಗಿ ಕಾಣಬಹುದು. ಇಲ್ಲಿನ ಅನೇಕ ವರ್ಣನೆಗಳಲ್ಲಿ ಸಮಕಾಲೀನ ಜೀವನದ ಪ್ರತಿಬಿಂಬಗಳಿವೆ. ಒಟ್ಟಿನಲ್ಲಿ ಈ ಸಾಂಗತ್ಯಕೃತಿ ಕನಕದಾಸನೇ ಹೇಳಿಕೊಂಡಿರುವಂತೆ 'ಹರಿಶರಣರಚ್ಚು' ಬುಧ ಜನರಿಗೆ ಪೆಚ್ಚು, ದುರಿತವನಕೆ ಕಾಳ್ಕಿಚ್ಚು, ವಿರಹಿಗಳಿಗೆ ಮೆಚ್ಚು, ವೀರರ್ಗೆ ನುಚ್ಚು, ಕೇಳ್ವರಿಗಿದು ತನಿಬೆಲ್ಲದಚ್ಚು.

ಹರಿಭಕ್ತಿಸಾರದಲ್ಲಿ ಕನಕನ ಹರಿಭಕ್ತಿಯ ತುಂಬುಪೊನಲನ್ನು ಕಾಣಬಹುದು. ರಕ್ಷಿಸು ನಮ್ಮನನವರತ–ಎಂದು ಪ್ರತಿ ಪದ್ಯದಲ್ಲಿಯೂ ಬರುವ ಈ ಚರಣವಂತೂ ಕನ್ನಡಿಗರಿಗೆ ಚಿರಪರಿಚಿತವಾದ ನುಡಿಯಾಗಿದೆ. ಇದನ್ನು ಒಂದು ರೀತಿಯಲ್ಲಿ ಶತಕವೆನ್ನಬಹುದು (ಒಟ್ಟು 110 ಪದ್ಯಗಳಿವೆ). ಭಾಮಿನೀಷಟ್ಪದಿಯ ಧಾಟಿಯಲ್ಲಿ ಬರೆದಿರುವ ಇಲ್ಲಿನ ಅನೇಕ ಪದ್ಯಗಳು ಪಂಡಿತ, ಪಾಮರರ ಆದರಕ್ಕೆ ಪಾತ್ರವಾಗಿವೆ. ಭಕ್ತಿಸಾರದ ಚರಿತೆಯನು ಹರಿಭಕ್ತರಾಲಿಸುವಂತೆ ರಚಿಸುವೆ–ಎಂದು ಕನಕದಾಸ ಸ್ಪಷ್ಟಪಡಿಸಿ ಭಕ್ತಿಯ ಮಹಿಮಾತಿಶಯಗಳನ್ನು ನಾನಾ ತೆರನಾಗಿ ಇದರಲ್ಲಿ ಚಿತ್ರಿಸಿದ್ದಾನೆ. ಕನಕನ ತತ್ತ್ವಜ್ಞಾನ, ಜೀವನಾದರ್ಶ, ಲೋಕನೀತಿಗಳು ಇಲ್ಲಿ ತಿಳಿಯಾದ ಕನ್ನಡ ನುಡಿಗಳಲ್ಲಿ ಸರ್ವರಿಗೂ ಸುಲಭಗ್ರಾಹ್ಯವಾಗುವಂತೆ ಪ್ರತಿಪಾದಿತವಾಗಿವೆ.

ನಳಚರಿತ್ರೆಯಂತೂ ಆಬಾಲವೃದ್ಧರಿಗೆ ಆಪ್ಯಾಯಮಾನವೆನ್ನಿಸಿದೆ. ಮಹಾಭಾರತದಲ್ಲಿ ಉಕ್ತವಾಗಿರುವ ನಲೋಪಾಖ್ಯಾನವನ್ನು ಕವಿ ಭಾಮಿನೀಷಟ್ಪದಿಯಲ್ಲಿ ಬಹಳ ಮನಕರಗುವಂತೆ ನಿರೂಪಿಸಿದ್ದಾನೆ. ಕೇವಲ ಒಂಬತ್ತು ಸಂಧಿಗಳಲ್ಲಿ ನಳನ ಕಥೆಯನ್ನು ಲಲಿತವಾಗಿ ಹೇಳಿರುವ ಕನಕನ ಜಾಣ್ಮೆ ಮೆಚ್ಚತಕ್ಕದ್ದಾಗಿದೆ. ರಾಜನಾದರೂ ನಳನಷ್ಟು ನರಳಿದವರು ವಿರಳ. ಇದಕ್ಕೆ ವಿಧಿಯೇ ಕಾರಣ. ಕನಕ ತನ್ನ ಕೀರ್ತನೆಗಳಲ್ಲಿ ದೈವಬಲವನ್ನು ಕುರಿತು ಬಗೆಬಗೆಯಾಗಿ ಬಣ್ಣಿಸಿದ್ದಾನೆ. ಅದಕ್ಕೆ ತಕ್ಕ ನಿದರ್ಶನವೋ ಎಂಬಂತಿದೆ–ಈ ನಳನ ಕಥೆ. ನಳಮಹಾರಾಜನ ವೈಭವದ ಹಿನ್ನೆಲೆಯಲ್ಲಿ ಅವನಿಗೆ ಕಲಿಪುರುಷನಿಂದ ಪ್ರಾಪ್ತವಾದ ದುರ್ದೆಸೆಯನ್ನು ಕಂಡರೆ ಎಂಥವರಿಗಾದರೂ ತಲ್ಲಣಿಸುವಂತಾಗುತ್ತದೆ. ಕಾಡಿನಲ್ಲಿ ಏಕಾಂಗಿಯಾಗಿ ಅಲೆದಾಡುವ ದಮಯಂತಿಯನ್ನು ವರ್ಣಿಸುವ ಸಂದರ್ಭವಾಗಲಿ, ಕಾರ್ಕೋಟಕನ ಕಡಿತದಿಂದ ಕುರೂಪಿಯಾಗುವ ನಳನನ್ನು ಚಿತ್ರಿಸುವ ಸನ್ನಿವೇಶವಾಗಲಿ ಹೃದಯವಿದ್ರಾವಕವಾದುದು. ಕಟ್ಟಕಡೆಯಲ್ಲಿ ನಳನ ನಿಷ್ಠೆ ಅವನನ್ನು ಕಾಪಾಡಿದಂತೆ, ದಮಯಂತಿಯ ಪತಿಭಕ್ತಿ, ಆಕೆಯ ಜೀವನವನ್ನು ಸಂರಕ್ಷಿಸುತ್ತದೆ. ನಳ–ದಮಯಂತಿಯರ ಚಿರಂತನಪ್ರೇಮ ಕಾವ್ಯದ ಪ್ರಮುಖಶಕ್ತಿಗಳಲ್ಲಿ ಒಂದಾಗಿ ನಿಂತು ಇಡೀ ಪ್ರಸಂಗ ಪ್ರಶಂಸಾರ್ಹವೆನ್ನಿಸುತ್ತದೆ. ಸುಲಭ ಶೈಲಿ, ಘನವಾದ ವಸ್ತು, ಹೃದಯಸ್ಪರ್ಶಿಯಾದ ಚಿತ್ರಣಗಳಿಂದ ನಳಚರಿತ್ರೆ ಕನ್ನಡಕ್ಕೆ ಅಪೂರ್ವ ಕೊಡುಗೆಯಾಗಿದೆ.

ರಾಮಧಾನ್ಯಚರಿತ್ರೆ ಎಂಬ ಇನ್ನೊಂದು ಕೃತಿ, ಗಾತ್ರದಲ್ಲಿ ಕಿರಿದಾದರೂ ಗುಣದಲ್ಲಿ ಅದ್ವಿತೀಯವೆನ್ನಿಸಿದೆ. ರಾಗಿ ಮತ್ತು ಅಕ್ಕಿಗಳ ಕಲಹವೇ ಈ ಕೃತಿಯ ವಸ್ತುವಾದರೂ ಕವಿ ಇದಕ್ಕೆ ಒಂದು ಪೌರಾಣಿಕ ಹಿನ್ನೆಲೆಯನ್ನು ಕಲ್ಪಿಸಿರುವುದು ನವೀನವಾಗಿದೆ. ಶ್ರೀರಾಮನ ಸಾನ್ನಿಧ್ಯದಲ್ಲಿ ರಾಗಿ–ಅಕ್ಕಿಗಳಲ್ಲಿ (ನರೆದಲೆಗ ಮತ್ತು ವ್ರೀಹಿ) ಯಾರು ಮೇಲು ಎಂಬ ವಾಗ್ವಾದವುಂಟಾಗಲು ರಾಮ ಅಯೋಧ್ಯೆಗೆ ಹಿಂತಿರುಗಿದ ಮೇಲೆ, ಕಾಲಾನಂತರದಲ್ಲಿ

ಸೆರೆಯಲ್ಲಿದ್ದ ಈ ಧಾನ್ಯಗಳನ್ನು ಕರೆತರಿಸಲು, ಅಕ್ಕಿ ಮುಗ್ಗಿ ಹೋಗಿರುವುದನ್ನು ರಾಗಿ ದೃಢವಾಗಿರುವುದನ್ನೂ ಕಂಡು, ದೇವಾನು ದೇವತೆಗಳ ಸಮ್ಮುಖದಲ್ಲಿ ರಾಗಿಗೆ ರಾಘವಧಾನ್ಯ ಎಂಬ ಹೆಸರನ್ನಿತ್ತು ಗೌರವಿಸುತ್ತಾನೆ. ಇಷ್ಟೇ ಇಲ್ಲಿನ ತಿರುಳು. ಆದರೆ ಕುಶಲ ಕವಿಯಾದ ಕನಕದಾಸ ಈ ಪ್ರಸಂಗವನ್ನು ಬಹು ಸ್ವಾರಸ್ಯವಾಗಿ ಚಿತ್ರಿಸಿದ್ದಾನೆ. ಬಡವರ ಆಧಾರವಾದ ರಾಗಿಗೂ ಭಾಗ್ಯವಂತರ ಬಂಧುವಾದ ಅಕ್ಕಿಗೂ ಇರುವ ತಾರತಮ್ಯವನ್ನು ನಿರೂಪಿಸುವಲ್ಲಿ, ಇಂದಿನಂತೆಯೇ ಅಂದಿನ ಸಮಾಜದಲ್ಲಿಯೂ ನೆಲೆಸಿದ್ದ ದೀನ ಧನಿಕರ ಅಂತರವನ್ನು ಬಹಳ ಅರ್ಥವತ್ತಾಗಿ ಎತ್ತಿ ತೋರಿಸಿದ್ದಾನೆ. ಇದೊಂದು ವ್ಯಂಗ್ಯ ಕಾವ್ಯ. ಕನ್ನಡದಲ್ಲಿ ಅಂದಿಗೆ ಇಂಥ ಪ್ರಯತ್ನ ತುಂಬ ಅಪೂರ್ವವಾದುದು. ಈ ಕಥೆಗೆ ಆಧಾರವೇನೋ ತಿಳಿಯದು. ಬಹುಶಃ ಕನಕದಾಸ ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಜಾನಪದ ಕಥೆಯೊಂದನ್ನು ಅವಲಂಬಿಸಿ, ಈ ಕೃತಿಯನ್ನು ಬರೆದಿರಬೇಕೆನ್ನಿಸುತ್ತದೆ. ಎಂದಿನಂತೆಯೇ ಭಾಮಿನೀಷಟ್ಪದಿಯ ಲಯ, ರಾಗಿ ಮತ್ತು ಅಕ್ಕಿಗಳ ಮಧ್ಯೆ ನಡೆಯುವ ಸಂವಾದ ಶೈಲಿ, ನಿಷ್ಪಕ್ಷಪಾತಿಯಾದ ಶ್ರೀರಾಮನ ವರ್ತನೆಗಳು ಮನನೀಯವಾಗಿವೆ. ಕುಲದ ಬಗ್ಗೆ ಕನಕದಾಸ ಪರೋಕ್ಷವಾಗಿ ತನ್ನ ನಿಲುವನ್ನು ಈ ಕೃತಿಯಲ್ಲಿ ಹೇಗೆ ಸಾಂಕೇತಿಕವಾಗಿ ವ್ಯಕ್ತಪಡಿಸಿದ್ದಾನೆಂಬುದನ್ನು ಮನಗಂಡರೆ ಈ ರಚನೆಯ ಸ್ವಾರಸ್ಯ ಮತ್ತಷ್ಟು ಮಿಗಿಲಾಗುತ್ತದೆ.

ನೃಸಿಂಹಸ್ತವ ಎಂಬ ಮತ್ತೊಂದು ಕೃತಿಯನ್ನು ಕವಿಚರಿತೆಕಾರರು ಪ್ರಸ್ತಾಪಿಸಿದ್ದಾರೆ. ಅದು ಒಂದು ಸಾಂಗತ್ಯಕೃತಿಯೆಂದು ತಿಳಿದುಬರುತ್ತದೆ. ಗ್ರಂಥ ಉಪಲಬ್ಧವಿಲ್ಲ. ಕನ್ನಡಿಗರಿಗೆ ಚಿರಪರಿಚಿತವಾದ ತಿರುಕನ ಕನಸು ಎಂಬ ಸಣ್ಣ ಕೃತಿ ಕನಕದಾಸನದೆಂದು ಕೆಲವರೂ ಮುಪ್ಪಿನ ಷಡಕ್ಷರಿಯದೆಂದು ಇತರರೂ ಹೇಳುವುದುಂಟು. ಹಳೆಯ ಹಸ್ತಪ್ರತಿಗಳು ದೊರೆತಲ್ಲಿ ಈ ಅಂಕಿತಪಲ್ಲಟ ಹೇಗಾಯಿತೆಂಬುದನ್ನು ನಿರ್ಣಯಿಸಬಹುದು. ತಿರುಕನ ಕನಸಿನ ಕಥೆ ಸರ್ವರಿಗೂ ತಿಳಿದುದೇ ಆಗಿದೆ. ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡ ಎಂಬ ಗಾದೆಯಂತೆ ಈ ಕೃತಿಯಲ್ಲಿ ಬಡವನ ವಿಡಂಬನೆಯಿದೆ. ಈ ರಚನೆಯ ಕರ್ತೃವಿನ ವಿಚಾರದಲ್ಲಿ ಸಂದೇಹ ತಲೆದೋರಿರುವುದರಿಂದ ಇದನ್ನು ಪ್ರತ್ಯೇಕವಾಗಿಯೇ ಪರಿಶೀಲಿಸುವುದು ಸೂಕ್ತವೆನ್ನಿಸುತ್ತದೆ.

ಒಟ್ಟಿನಲ್ಲಿ, ಕನಕದಾಸ ತನ್ನ ಕೃತಿಗಳಲ್ಲಿ ವ್ಯಕ್ತಪಡಿಸಿರುವ ರಾಮಾಯಣ, ಮಹಾಭಾರತ ಮತ್ತು ಭಾಗವತಗಳ ಜ್ಞಾನ, ಕೀರ್ತನೆಗಳಲ್ಲಿ ನಿರೂಪಿಸಿರುವ ಭಕ್ತಿ, ಜ್ಞಾನ, ವೈರಾಗ್ಯಗಳ ಪ್ರಜ್ಞೆ, ತಿಳಿಗನ್ನಡದ ಒಲವು-ಇವೇ ಮೊದಲಾದುವು ಹರಿದಾಸ ಪ್ರಪಂಚದಲ್ಲಿ ಮತ್ತು ಕನ್ನಡ ಕಾವ್ಯಕ್ಷೇತ್ರದಲ್ಲಿ ಆತನ ಸ್ಥಾನವೆಷ್ಟು ಹಿರಿದಾದುದು ಎಂಬುದನ್ನು ದೃಢಪಡಿಸುತ್ತವೆ. (ವಿ.ಜಿ.)

**ಕನಕಪುರ :** ಕರ್ನಾಟಕದ ಹೊಸಜಿಲ್ಲೆ ರಾಮನಗರಕ್ಕೆ ಸೇರಿದ ಒಂದು ಪಟ್ಟಣ. ಇದೇ ಹೆಸರಿನ ತಾಲ್ಲೂಕಿನ ಆಡಳಿತ ಕೇಂದ್ರ. ಹಿಂದೆ ಬೆಂಗಳೂರು ಜಿಲ್ಲೆಗೆ ಸೇರಿತ್ತು. 23.08.07ರಿಂದ ರಾಮನಗರ ಜಿಲ್ಲೆಗೆ ಸೇರಿತು. ಉ.ಅ. 12° 33' ಮತ್ತು ಪೂ.ರೇ. 77° 29' ನಲ್ಲಿ ಅರ್ಕಾವತಿ ನದಿಯ ಬಲದಂಡೆಯ ಮೇಲೆ, ಉತ್ತರ ದಕ್ಷಿಣವಾಗಿ ಹಬ್ಬಿದೆ. ಬೆಂಗಳೂರು-ಮಳವಳ್ಳಿ ರಸ್ತೆಯಲ್ಲಿರುವ ಈ ಪಟ್ಟಣ ಬೆಂಗಳೂರಿನ ದಕ್ಷಿಣಕ್ಕೆ 58 ಕಿಮೀ ದೂರದಲ್ಲಿದೆ. ರಾಮನಗರಂ ರೈಲ್ವೆ ನಿಲ್ದಾಣಕ್ಕೆ ಇಲ್ಲಿಂದ 27 ಕಿಮೀ ಅಂತರವಿದೆ. ಪಟ್ಟಣದ ಜನಸಂಖ್ಯೆ 47,047 (2001).

1974ರ ವರೆಗೂ ಇದಕ್ಕೆ ಕಾನಕಾನಹಳ್ಳಿ ಎಂಬ ಹೆಸರಿತ್ತು. ಕಾನಕಾನನೆಂಬವ ಇಲ್ಲಿ ಒಂದು ಸಣ್ಣ ಕೋಟೆ ಕಟ್ಟಿಕೊಂಡಿದ್ದರಿಂದ ಇದಕ್ಕೆ ಈ ಹೆಸರು ಬಂತೆಂದು ಹೇಳಲಾಗಿದೆ. ಕಾನಿಕಾರ್ನ ಹಳ್ಳಿ ಎಂಬುದು ಮೂಲನಾಮವೆಂದೂ ಕಾಣಿಕಾರ್ (ನೆಲದೊಡೆಯ) ಎಂಬುದರಿಂದ ಈ ಹೆಸರು ಬಂತೆಂದೂ ಇಲ್ಲಿಯ ಜನ ತಿಳಿದು ಕೊಂಡಿದ್ದಾರೆಂದೂ ಆದರೆ ವಾಸ್ತವವಾಗಿ ಇದು ಕನ್ಯಾ-ಕರ್ಣ (ಭವಾನಿಯ ಕಿವಿ) ಎಂದಿರಬೇಕೆಂದೂ ಬುಕಾನನ್ ಅಭಿಪ್ರಾಯಪಟ್ಟಿದ್ದಾನೆ. 13ನೆಯ ಶತಮಾನದ ಶಾಸನವೊಂದರಲ್ಲಿ ಇದರ ಹೆಸರು ಕಾಣಿಕಾರಹಳ್ಳಿ. ಈಗ ಇದರ ಹೆಸರು ಕನಕಪುರ ಎಂದಿರುವುದರಿಂದ ಹಳೆಯ ಹೆಸರನ್ನು ಕುರಿತ ವಾದ ಅಷ್ಟಾಗಿ ಮುಖ್ಯವಲ್ಲ.

ಕನಕಪುರದಲ್ಲಿರುವ ಕೋಟೆಯನ್ನು ಕಟ್ಟಿಸಿದಾತ ಚನ್ನಪಟ್ಟಣದ ಪಾಳೆಗಾರನಾಗಿದ್ದ ಜಗದೇವರಾಯ ಎಂದು ಹೇಳಲಾಗಿದೆ. ಆತ ಇಲ್ಲಿದ್ದ ಸಣ್ಣ ಕೋಟೆಯ ಸ್ಥಳದಲ್ಲಿ ಇದನ್ನು ಕಟ್ಟಿಸಿದ. 1630ರಲ್ಲಿ ಇದನ್ನು ಮೈಸೂರಿನ ಚಾಮರಾಜ ಗೆದ್ದುಕೊಂಡ. ಇಲ್ಲಿ ಜೀರ್ಣವಾದ ರಂಗನಾಥ ದೇವಾಲಯವಿದೆ. ಶ್ರೀರಂಗಪಟ್ಟಣದ ಕಡೆಗೆ ನುಗ್ಗಿಬರುತ್ತಿದ್ದ ಬ್ರಿಟಿಷ್ ಸೇನೆಗೆ ಠಾವು ದೊರೆಯದಿರಲೆಂಬ ಉದ್ದೇಶದಿಂದ ಟಿಪ್ಪುಸುಲ್ತಾನ ಎರಡು ಸಾರಿ ಈ ಪಟ್ಟಣವನ್ನು ಹಾಳುಗೆಡವಿದ. ಅನಂತರ ಬಹುಕಾಲ ಕೋಟೆಯೊಳಗಡೆಯಲ್ಲಿ ಹುಲಿಯೇ ಮುಂತಾದ ದುಷ್ಟಮೃಗಗಳು ಸೇರಿಕೊಂಡು ಮನುಷ್ಯರನ್ನೂ ದನಕರುಗಳನ್ನೂ ಎತ್ತಿಕೊಂಡು ಹೋಗುತ್ತಿದ್ದುವು.

ಹಸಿರು ಹೊದೆದ ಬೆಟ್ಟಗಳ ನಡುವೆ ಮಲಗಿರುವ ಕನಕಪುರ ಒಂದು ರಮ್ಯಪ್ರದೇಶ. ಅರ್ಕಾವತಿಯ ದಂಡೆಯ ಮೇಲೆ ಹಬ್ಬಿದ ತೆಂಗಿನ ಮರಗಳ ಸಾಲು ಈ ಪಟ್ಟಣಕ್ಕೆ ಹಸುರು ಕುಚ್ಚಿನ ಅಂಚು ಕಟ್ಟಿದಂತಿದೆ. ಶಿವಸಮುದ್ರ ಮತ್ತು ಶಿಂಷಾಗಳಿಂದ ಬರುವ ವಿದ್ಯುತ್ ಕನಕಪುರದಿಂದ ಮುಂದೆ ರಾಮನಗರಂ, ಬೆಂಗಳೂರು, ಕೋಲಾರದ ಚಿನ್ನದ ಗಣಿ ಮುಂತಾದ ಎಡೆಗಳಿಗೆ ಸಾಗುತ್ತದೆ. ರೇಷ್ಮೆ ಬಿತ್ತನೆ ಕೋಠಿಗಳೂ ರೇಷ್ಮೆಗೂಡಿನಿಂದ ನೂಲು ಸುತ್ತುವ ಕಾರ್ಖಾನೆಯೂ (ಫಿಲೇಚರ್ಸ್) ಇಲ್ಲುಂಟು. ಶಾಲಾ ಕಾಲೇಜೂ ಇವೆ. ಪ್ರತಿ ಗುರುವಾರವೂ ಇಲ್ಲಿ ನಡೆಯುವ ಸಂತೆ ಸುತ್ತೆಲ್ಲ ಪ್ರಸಿದ್ಧ.

ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆಯ ಅತ್ಯಂತ ದಕ್ಷಿಣದಲ್ಲಿದೆ. ಎಲೆಯಾಕಾರದ, ಕಾವೇರಿ ಜಲಾನಯನ ಭೂಮಿಯ ಪೂರ್ವಭಾಗದಲ್ಲಿರುವ ಈ ತಾಲ್ಲೂಕಿನ ಪೂರ್ವದಲ್ಲಿ ತಮಿಳುನಾಡಿನ ಸೇಲಂ ಜಿಲ್ಲೆ, ಈಶಾನ್ಯದಲ್ಲಿ ಆನೇಕಲ್ ತಾಲ್ಲೂಕು, ಉತ್ತರದಲ್ಲಿ ದಕ್ಷಿಣ ಬೆಂಗಳೂರು ತಾಲ್ಲೂಕು, ವಾಯವ್ಯದಲ್ಲಿ ರಾಮನಗರ ತಾಲ್ಲೂಕು, ಪಶ್ಚಿಮದಲ್ಲಿ ಚನ್ನಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕುಗಳು, ದಕ್ಷಿಣದಲ್ಲಿ ಕಾವೇರಿ ನದಿ, ಅದರ ಬೆನ್ನಿಗೇ ಕೊಳ್ಳೆಗಾಲ ತಾಲ್ಲೂಕು ಇವೆ. ವಿಸ್ತೀರ್ಣ 161,460 ಚ ಕಿಮೀ. ಇದು ಇಡೀ ಜಿಲ್ಲೆಯಲ್ಲೇ ಅತ್ಯಂತ ದೊಡ್ಡ ತಾಲ್ಲೂಕು.

ನೆಲಮಂಗಲದ ಪಶ್ಚಿಮದ ಕಡೆಯಿಂದ ಬರುವ ಶಿಲಾಬೆಟ್ಟಗಳು ಮಾಗಡಿ, ರಾಮನಗರ ತಾಲೂಕುಗಳನ್ನು ಹಾಯ್ದು, ಈ ತಾಲ್ಲೂಕನ್ನು ಉತ್ತರಭಾಗದಿಂದ ಪ್ರವೇಶಿಸಿ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಅಂಚಿನಲ್ಲಿ ಕವಚದಂತೆ ಒತ್ತಾಗಿ ಹಬ್ಬಿವೆ. ಉತ್ತರದಿಂದ ದಕ್ಷಿಣದ ಕಾವೇರಿ ಕಣಿವೆಯ ಕಡೆಗೆ ನೆಲ ಇಳಿಜಾರಾಗಿದೆ. ಪಶ್ಚಿಮದಲ್ಲಿ ಬಾಣಂತಿ ಮಾರಿಬೆಟ್ಟ (104 ಕಿಮೀ), ಭೀಮಕಂಡಿ, ಕಡಕಲ್, ಮುದವಾಡ ಮತ್ತು ನರಸಿಂಹದೇವರ ಬೆಟ್ಟಗಳೂ ಆಗ್ನೇಯದಲ್ಲಿ ದೇವರಬೆಟ್ಟ, ಕೊಪ್ಪಬೆಟ್ಟ (860 ಮೀ), ಬರೀಕಲ್ಲು ಬೆಟ್ಟಗಳೂ ಪೂರ್ವದಲ್ಲಿ ಬಿಳಿಕಲ್ಲು ಬೆಟ್ಟ, ಗುಲಕಲ್ ಬೆಟ್ಟಗಳೂ ನೈರುತ್ಯದಲ್ಲಿ ಪತ್ರಧಾರಿದೇವ ಇತ್ಯಾದಿ ಬೆಟ್ಟಗಳೂ ಉತ್ತರದಲ್ಲಿ ಗಂಗಾಧರನ ಬೆಟ್ಟವೂ ಇವೆ.

ತಾಲ್ಲೂಕಿನ ನೈರುತ್ಯ ಭಾಗದಲ್ಲಿ ಚಾರ್ನಕೈಟ್ ಶಿಲಾಪದರಗಳಿವೆ. ಉಳಿದ ಕಡೆಗಳಲ್ಲಿರುವುದು ಬೆಣಚುಕಲ್ಲಿನ ಶಿಲೆಗಳು. ರಾಮನಗರದ ಕಣಶಿಲಾ (ಗ್ರಾನೈಟ್) ಸಮುದಾಯ ಕನಕಪುರದಿಂದ ಪ್ರಾರಂಭವಾಗಿ ಉತ್ತರದಲ್ಲಿ ರಾಮನಗರದ ಕಡೆಗೆ ಹರಡಿದೆ. ಈ ಶಿಲೆಗಳದು ಗೋಳಾಕೃತಿ. ಚಾರ್ನಕೈಟ್‌ನಂತಿರುವ ಡೈಕ್ ಮತ್ತು ಹಾರ್ನ್‌ಬ್ಲೆಂಡ್ ಶಿಲೆಗಳು ಹಾರೋಹಳ್ಳಿಗೆ ವಾಯವ್ಯದಲ್ಲಿವೆ. ಸಾಲಹುಣಿಸೆ ಮತ್ತು ಮರಳವಾಡಿ ಬಳಿ ಪದ್ಮರಾಗ ಶಿಲೆ ಉಂಟು.

ತಾಲ್ಲೂಕಿನ ದಕ್ಷಿಣದಲ್ಲಿ ತ್ರಿಭುಜಾಕೃತಿಯ ಪ್ರದೇಶದಲ್ಲಿರುವುದು ಎರೆಮಣ್ಣು, ಉಳಿದ ಕಡೆಗಳಲ್ಲಿ ಅಗ್ನಿಶಿಲೆಯಿಂದಾದ, ಹಗುರ ರಚನೆಯುಳ್ಳ ಕೆಂಪು ಮಣ್ಣಿದೆ.

ಕಾವೇರಿಯ ಉಪನದಿಯಾದ ಅರ್ಕಾವತಿ ವಾಯವ್ಯದಿಂದ ಪ್ರವೇಶಿಸಿ, ತಾಲ್ಲೂಕಿನ ಮಧ್ಯದಲ್ಲಿ ಉತ್ತರ-ದಕ್ಷಿಣವಾಗಿ ಹರಿದು, ಸಂಗಮದ ಬಳಿ ಕಾವೇರಿಯನ್ನು ಸೇರುತ್ತದೆ. ಅರ್ಕಾವತಿಗೆ ಎರಡೂ ಕಡೆಗಳಿಂದ ಬಂದು ಸೇರುವ ನದಿಗಳೂ ಹೊಳೆಗಳೂ ಅನೇಕ. ವೃಷಭಾವತಿ ನದಿ ಈ ತಾಲ್ಲೂಕನ್ನು ಪ್ರವೇಶಿಸುವಾಗಲೇ ಮುದುವಾಡಿಯ ಬಳಿ ಅರ್ಕಾವತಿಯನ್ನು ಸೇರುತ್ತದೆ. ಈಶಾನ್ಯದ ಕಡೆಯಿಂದ ಹರಿದು ಬರುವ ಅಂತರಗಂಗೆ, ಬಸವನ ಹೊಳೆ, ಕೂಟ್ಲೆ ಹೊಳೆಗಳು ಒಂದುಗೂಡಿ ಅರ್ಕಾವತಿಯನ್ನು ಸೇರುವುದು ಕನಕಪುರದ ಬಳಿ. ಆಗ್ನೇಯ ಎಲ್ಲೆಯವರೆಗೂ ದೊಡ್ಡ ಹೊಳೆ ಹರಿದು ಬಂದು ಸಂಗಮದ ಎದುರು ದಂಡೆಯಲ್ಲಿ ಮಾಹಳ್ಳಿಯ ಬಳಿ ಅರ್ಕಾವತಿಯನ್ನು ಕೂಡಿಕೊಳ್ಳುತ್ತದೆ. ಪಶ್ಚಿಮದ ಕಡೆಯಿಂದ ಉಯ್ಯಂ ಬಳ್ಳಿ-ಕಬ್ಬಾಳ ರಸ್ತೆಗೆ ಸಮಾನಾಂತರವಾಗಿ ಹರಿದು ಅರ್ಕಾವತಿಯನ್ನು ಸೇರುವುದೇ ಬಂಡಿಹಳ್ಳ.

ಮೇಯಿಂದ ನವೆಂಬರ್‌ವರೆಗೆ ನೈರುತ್ಯ ಮಾರುತಗಳಿಂದ ಇಲ್ಲಿ 70-75 ಸೆಂಮೀ ಮಳೆಯಾಗುತ್ತದೆ. (ಕನಕಪುರ 75 ಸೆಂಮೀ, ಕೋಡಿಹಳ್ಳಿ 71 ಸೆಂಮೀ, ಸಾತನೂರು 75 ಸೆಂಮೀ). ಬೆಂಗಳೂರು ಜಿಲ್ಲೆಯಲ್ಲಿ ಒಂದೇ ದಿನದಲ್ಲಿ ಅತ್ಯಂತ ಹೆಚ್ಚಿನ ಮಳೆ ಆದದ್ದೆಂದರೆ ಕನಕಪುರದಲ್ಲಿ-1897ರ ಸೆಪ್ಟೆಂಬರ್ 22ರಂದು (22.5 ಸೆಂಮೀ).

ಬೆಟ್ಟದ ಕಾಡುಗಳಿಂದ ಕೂಡಿದ ಈ ತಾಲ್ಲೂಕಿನಲ್ಲಿ ಸರ್ಕಾರಸಂರಕ್ಷಿತ ಅರಣ್ಯಗಳು ಅನೇಕ ಉಂಟು. ದಕ್ಷಿಣದಲ್ಲಿ ಚಿಲಂದವಾಡಿ, ಆಗ್ನೇಯದಲ್ಲಿ ಮೂಗೂರು, ಪಶ್ಚಿಮದಲ್ಲಿ ಕಬ್ಬಾಳ. ತಲ್ಲೂರು ಮತ್ತು ಬಾಣಂತಿಮಾರಿ, ಪೂರ್ವದಲ್ಲಿ ಬಿಳಿಕೆರೆ ಮತ್ತು ಈಶಾನ್ಯದಲ್ಲಿ ರಾಗಿಹಳ್ಳಿಗಳಲ್ಲಿ ಸಂರಕ್ಷಿತ ಕಾಡುಗಳಿವೆ. ಕನಕಪುರದ ಸುತ್ತಮುತ್ತ ತೇಗ, ಹೊನ್ನೆ, ಬೀಟೆ, ಕಮ್ಮಾರ ಮುಂತಾದ ಮರಗಳುಂಟು. ಶ್ರೀಗಂಧದ ಮರಗಳೂ ತಕ್ಕಮಟ್ಟಿಗೆ ಬೆಳೆಯುತ್ತವೆ.

ಉತ್ತರ ಮತ್ತು ಮಧ್ಯಭಾಗಗಳಲ್ಲಿ ನದಿ-ಹೊಳೆಗಳ ದಡಗಳಲ್ಲಿ ವ್ಯವಸಾಯ ಸಾಧ್ಯ. ಅರ್ಕಾವತಿ ನದೀಬಯಲು ಮುಖ್ಯವಾದದ್ದು.ಒಟ್ಟು ಬೇಸಾಯದ ನೆಲ 70,106 ಹೆ. ಜಿಲ್ಲೆಯಲ್ಲಿ ಬೇಸಾಯಕ್ಕೊಳಗಾಗಿರುವ ನೆಲದಲ್ಲಿ $^1/_6$ ಭಾಗ ಇಲ್ಲಿದೆ. ಆಹಾರ ಧಾನ್ಯಗಳನ್ನು ಬೆಳೆಯುವ ಪ್ರದೇಶ 45,622 ಹೆ. (61.72%), ತೋಟಗಾರಿಕೆ ಪ್ರದೇಶ (1,88 ಹೆ (2.54%), ವಾಣಿಜ್ಯ ಬೆಳೆ ಬೆಳೆಯುವ ಪ್ರದೇಶ 25,256 ಹೆ. (34.17%), ನೀರಾವರಿಗೊಳಪಟ್ಟ ಪ್ರದೇಶ 10,828 ಹೆ. (15.45%), ಬತ್ತ, ರಾಗಿ, ಹಿಪ್ಪನೇರಳೆ, ಅವರೆ, ತೆಂಗು, ಹರಳು,

ಹುಣಿಸೆ, ಕುಂಬಳಕಾಯಿ ಇತರ ಮುಖ್ಯ ಬೆಳಸುಗಳು. ನೀರಾವರಿ ಅನುಕೂಲವಿದ್ದರೆ ಈ ತಾಲ್ಲೂಕಿನಲ್ಲಿ ಇನ್ನೂ ಹೆಚ್ಚು ಫಸಲು ತೆಗೆಯಬಹುದು. ಕನಕಪುರದ ದಕ್ಷಿಣಕ್ಕೆ 12 ಕಿಮೀ ಮೈಲಿ ದೂರದಲ್ಲಿರುವ 25 ಲಕ್ಷ ರೂ ವೆಚ್ಚದ ಸಾತನೂರು ಯೋಜನೆ ಮಧ್ಯಮ ತರಗತಿಯ ನೀರಾವರಿ ಯೋಜನೆಗಳಲ್ಲೊಂದು. ಇದರ ಆಯಕಟ್ಟಿನಿಂದ 4047 ಹೆ. ನೆಲ ನೀರಾವರಿಗೆ ಒಳಪಡುತ್ತದೆ. ಮೇಕೆದಾಟು ವಿದ್ಯುತ್ ಯೋಜನೆಯೂ ಪರಿಶೀಲನೆಯಲ್ಲಿದೆ. ಈ ತಾಲ್ಲೂಕಿನಲ್ಲಿ ನೂರಕ್ಕೂ ಹೆಚ್ಚು ಕೆರೆಗಳಿವೆ. ಇವು ಬಹುತೇಕ ಸಣ್ಣವು.

ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಪದ್ಮರಾಗವೂ ಹಾರೋಶಿವರದ ಪಶ್ಚಿಮದಲ್ಲಿ ಕಬ್ಬಿಣದ ಅದಿರೂ ದೊರೆಯುತ್ತವೆ.

ರೈಲುಮಾರ್ಗವಿಲ್ಲದ ಈ ತಾಲ್ಲೂಕಿನಲ್ಲಿ ರಸ್ತೆಗಳು ತಕ್ಕಮಟ್ಟಿಗೆ ಅಭಿವೃದ್ಧಿ ಹೊಂದಿವೆಯೆನ್ನಬಹುದು. ಒಟ್ಟು ರಸ್ತೆ ಉದ್ದ 748 ಕಿಮೀ ಸುಧಾರಿತ ರಸ್ತೆಗಳೆ ಹೆಚ್ಚು. ಕನಕಪುರ ಪಟ್ಟಣ ಇವುಗಳ ಕೇಂದ್ರ. ಬೆಂಗಳೂರು–ಮಳವಳ್ಳಿ–ಮೈಸೂರು ರಸ್ತೆ ಇದರ ಮುಖಾಂತರ ಹಾದುಹೋಗುತ್ತದೆ. ಹಲಗೂರು–ಕನಕಪುರ, ಚನ್ನಪಟ್ಟಣ–ಹಸನಹಳ್ಳಿ, ರಾಮನಗರ–ಕನಕಪುರ, ಚನ್ನಪಟ್ಟಣ–ಕನಕಪುರ ಇವು ಇತರ ರಸ್ತೆಗಳು. ಸು. 7291 ಟೆಲಿಫೋನ್ ಸಂಪರ್ಕ ಹಾಗೂ 58 ಅಂಚೆ ಕಛೇರಿಗಳಿವೆ.

ಹಾರೋಹಳ್ಳಿ, ಕನಕಪುರ, ಮರಳವಾಡಿ, ಕೋಡಿಹಳ್ಳಿ, ಸಾತನೂರು, ಉಯ್ಯಂಬಳ್ಳಿ– ಇವು ಈ ತಾಲ್ಲೂಕಿನ ಹೋಬಳಿಗಳು. ಒಟ್ಟು ಹಳ್ಳಿಗಳ ಸಂಖ್ಯೆ 229, ಜನಸಂಖ್ಯೆ 1951ರಲ್ಲಿ 1,68,789 ಇದ್ದುದು 1961ರಲ್ಲಿ 1,98,053 ಆಯಿತು. ತಾಲ್ಲೂಕಿನ ಜನಸಂಖ್ಯೆ 3,37,208 (2001). ಸರಾಸರಿ ಸಾಕ್ಷರತೆ ಶೇ. 50, ನಗರ ಜನಸಂಖ್ಯೆ : 47,060. (ಕೆ.ಆರ್.ಆರ್.)

**ಕನಕಮುನಿ :** ಶಾಕ್ಯಮುನಿಬುದ್ಧನೂ ಸೇರಿ ಏರ್ಪಡುವ ಇಪ್ಪತ್ತನಾಲ್ಕು ಮಂದಿ ಬುದ್ಧರಲ್ಲಿ ಇಪ್ಪತ್ತಮೂರನೆಯವ. ಪಾಳಿಯಲ್ಲಿ ಇವನಿಗೆ ಕೋಣಾಗಮನ ಎಂಬ ಹೆಸರಿದೆ. ಅಶೋಕ ಕನಕಮುನಿಯ ಸ್ತೂಪವನ್ನು ಸಂದರ್ಶಿಸಿ ಶಿಥಿಲವಾಗಿದ್ದ ಆ ಸ್ತೂಪವನ್ನು ಪುನರ್ನಿರ್ಮಾಣ ಮಾಡಿಸಿದನೆಂದು ಶಿಲಾಶಾಸನವೊಂದು ಹೇಳುತ್ತದೆ. ಎಂದಮೇಲೆ ಕನಕಮುನಿ ಐತಿಹಾಸಿಕ ವ್ಯಕ್ತಿಯಾಗಿದ್ದನೆಂದು ತಿಳಿಯಬಹುದು. ಬುದ್ಧವಂಶದಲ್ಲಿ ಉಲ್ಲೇಖಿತವಾಗಿರುವ ಇಪ್ಪತ್ತನಾಲ್ಕು ಬುದ್ಧರಲ್ಲಿ ಬಹುಶಃ ಬಹುಮಂದಿ ಚಾರಿತ್ರಿಕ ವ್ಯಕ್ತಿಗಳಲ್ಲ. (ಎಸ್.ಕೆ.ಆರ್.)

**ಕನಕಾಂಬರ :** ಅಕ್ಯಾನ್ತೇಸೀ ಕುಟುಂಬಕ್ಕೆ ಸೇರಿದ ಕ್ರಾಸ್ಯಾಂಡ್ರ ಎಂಬ ಸಸ್ಯವಿಜ್ಞಾನ ಹೆಸರಿನ ಚಿಕ್ಕ ಪೊದೆಸಸ್ಯ. ಈ ಜಾತಿಯಲ್ಲಿ ಸು. 40 ಪ್ರಭೇದಗಳಿವೆ. ಭಾರತದ ಮೂಲ

ನಿವಾಸಿಗಳಾದ ಇವು ಏಷ್ಯದ ಇತರ ಭಾಗಗಳಲ್ಲೂ ಮಡಗಾಸ್ಕರ್ ದ್ವೀಪಗಳಲ್ಲೂ ಆಫ್ರಿಕದಲ್ಲೂ ಕಂಡುಬರುತ್ತವೆ. ಇವುಗಳಲ್ಲಿ ಕ್ರಾ.ಅನ್‌ಡುಲಿಫೋಲಿಯ, ಕ್ರಾ.ಆಕ್ಸಿಲ್ಯಾರಿಸ್, ಕ್ರಾ.ನಿಲೋಟಿಕ ಮತ್ತು ಕ್ರಾ. ಇನ್‌ಫಂಡಿಬ್ಯೂಲಿಫ಼ರ್‌ಮಿಸ್ ಎಂಬ ಪ್ರಭೇದಗಳು ಮುಖ್ಯವಾದುವು. ಕನಕಾಂಬರವನ್ನು ತೋಟಗಳಲ್ಲಿ ಮತ್ತು ದೇವಸ್ಥಾನದ ಆವರಣಗಳಲ್ಲಿ ಅಲಂಕಾರಕ್ಕೂ ಹೂವಿಗಾಗಿಯೂ ಬೆಳೆಸುತ್ತಾರೆ. ಈಚೆಗೆ ಇದನ್ನು ಮನೆಮನೆಗಳಲ್ಲೂ ಬೆಳೆಸುತ್ತಿದ್ದಾರೆ. ಸಾಮಾನ್ಯವಾಗಿ ಬೀಜದಿಂದ ಮತ್ತು ಕಾಂಡದ ತುಂಡುಗಳಿಂದ ವೃದ್ಧಿಮಾಡುತ್ತಾರೆ.

ಕನಕಾಂಬರದ ಕಾಂಡ ಎಳೆಯದಾಗಿದ್ದಾಗ ಹಸಿರು ಬಣ್ಣದ್ದೂ ಬಲಿದಾಗ ಕಂದು ಬಣ್ಣದ್ದೂ ಆಗಿದೆ. ಅದರ ಮೇಲ್ಮೈನುಣುಪು. ಗಿಣ್ಣುಗಳು ಉಬ್ಬಿಕೊಂಡಿವೆ. ಕಾಂಡದಮೇಲೆ ಅಭಿಮುಖವಾಗಿ ಜೋಡಿಸಿರುವ ಸರಳ ಎಲೆಗಳಿವೆ. ಅವುಗಳ ಉದ್ದ ಸು. 6", ಅಗಲ ಸು. 2",ಆಕಾರ ಈಟಿಯಂತೆ, ಅಂಚು ಅಲೆಯಂತೆ, ತುದಿ ಮೊನಚು. ಎಲೆಗಳಿಗೆ ವೃಂತಪರ್ಣಗಳಿಲ್ಲ. ಹೂಗಳು ಕದಿರು ಗೊಂಚಲಿನಲ್ಲಿ (ಸ್ಪೈಕ್) ಜೋಡಣೆಗೊಂಡಿವೆ. ಬಹಳ ಸುಂದರವಾದ ಅವುಗಳಲ್ಲಿ ಕೇಸರಿ, ಕಿತ್ತಳೆ ಮಿಶ್ರಿತ ಹಳದಿ, ನಸುನೀಲಿ ಹಾಗೂ ಅಚ್ಚಹಳದಿ ವರ್ಣವೈವಿಧ್ಯವಿದೆ. ಕೇಸರಿ ಬಣ್ಣದವಕ್ಕೆ ಒಳ್ಳೆಯ ಬೇಡಿಕೆ ಇದೆ. ಹೂಗಳಿಗೆ ಬ್ರ್ಯಾಕ್ಟು ಮತ್ತು ಬ್ರ್ಯಾಕ್ಟಿಯೋಲುಗಳಿವೆ. ದ್ವಿಲಿಂಗಿಗಳಾದ ಅವು ಉಭಯ ಪಾರ್ಶ್ವ ಸಮಾಂಗತೆಯುಳ್ಳವು. ಪುಷ್ಪಪಾತ್ರೆಯಲ್ಲಿ ಬುಡಭಾಗದಲ್ಲಿ ಕೂಡಿಕೊಂಡಿವೆ. ಕೇಸರಗಳು ನಾಲ್ಕು, ಹೂದಳಗಳಿಗೆ ಅಂಟಿಕೊಂಡಿವೆ. ಎರಡು ಕೇಸರಗಳು ಉಳಿದೆರಡಕ್ಕಿಂತ ಹೆಚ್ಚು ಉದ್ದವಾಗಿವೆ. ಪರಾಗಕೋಶಗಳಲ್ಲಿ ಒಂದೇ ಕೋಣೆಯಿದೆ. ಅಂಡಾಶಯ ಉಚ್ಚಸ್ಥಾನದ್ದು. ಎರಡು ಕಾರ್ಪೆಲುಗಳಿಂದ ಕೂಡಿದೆ. ಇವೆರಡೂ ಸಂಯುಕ್ತವಾಗಿದ್ದು ಎರಡಕ್ಕೂ ಸೇರಿಕೊಂಡಂತೆ ಎರಡು ಕೋಣೆಗಳಿವೆ. ಅಂಡಕಗಳ ಸಂಖ್ಯೆ 4. ಫಲ ಆಯತಾಕಾರದ ಚೂಪು ತುದಿಯ ಕ್ಯಾಪ್ಸ್ಯೂಲ್. ಬೀಜಗಳು ಚಪ್ಪಟೆಯಾಗಿದೆ. ಅವು ಕಾಯಿಯಿಂದ ಹೊರಸಿಡಿಯಲು ಅನುಕೂಲವಾಗುವಂತೆ ಅವುಗಳ ಬುಡದಲ್ಲಿ ಕೊಕ್ಕೆ ಆಕಾರದ ರಚನೆಗಳಿವೆ (ರೆಟಿನ್ಯಾಕ್ಯುಲ). (ಟಿ.ಪಿ.)

**ಕನತ್ ನೀರಾವರಿ ವ್ಯವಸ್ಥೆ :** ಮರುಭೂಮಿ ಪ್ರದೇಶಗಳಲ್ಲಿ ನೆಲದಡಿಯ ನೀರನಾಳಗಳನ್ನು ತಲುಪಿ ಅವುಗಳ ಜಾಡನ್ನು ಅನುಸರಿಸಿ ಸುರಂಗಗಳನ್ನು ಕೊರೆದು ನೀರನ್ನು ಸಂಗ್ರಹಿಸಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವ ವಿಧಾನ. ಮೊದಲು ಮೂಲ ಬಾವಿ ತೋಡಿ ನೀರನಾಳವನ್ನು ತಲುಪುತ್ತಾರೆ. ಅಲ್ಲಿಂದ ನೀರು ಬೇಕಾಗಿರುವ ಸ್ಥಳಕ್ಕೆ (ವ್ಯವಸಾಯ ಪ್ರದೇಶ ಇಲ್ಲವೇ ಜನವಸತಿ) ಭೂಮಿಯ ಒಳಗಡೆಯಿಂದಲೇ ಸಮಾನಾಂತರ ಸುರಂಗಗಳನ್ನು ಇಳಿಜಾರಾಗಿರುವಂತೆ ನಿರ್ಮಿಸಿ ನೀರನ್ನು ಬೇಕಾದೆಡೆಗೆ ಹರಿಸುತ್ತಾರೆ. ಇಂಥ ಸುರಂಗಗಳ ಉದ್ದ 25–30 ಕಿಮೀಗಳ ವರೆಗೂ ಇರುವುದುಂಟು. ಇವೇ ನೀರುಸಾಗಾಣಿಕೆಯ ಕಾಲುವೆಗಳಾಗುತ್ತವೆ. ಜಿನುಗುವ ನೀರು ಸಹ ಇವುಗಳಲ್ಲಿ ಸಂಗ್ರಹವಾಗುವುದು. ಸುರಂಗಗಳಿಗೆ ಸಮಾನಾಂತರ ಬಾವಿಗಳೆಂದೂ ಹೆಸರಿದೆ. ಇವುಗಳಿಂದ ನೆಲಮಟ್ಟ ತಲುಪಲು ಸಾಲಾಗಿ ಲಂಬವಾಗಿರುವ ಕೊಳವೆಗಂಬಗಳು ಅಥವಾ ತೋಡುದಾರಿಗಳನ್ನು ನಿರ್ಮಿಸುತ್ತಾರೆ. ಇವುಗಳ ಮುಖಾಂತರ ಒಳಗೆ ಅಗೆದ ಮಣ್ಣನ್ನು ಹೊರಕ್ಕೆ ಸಾಗಿಸಬಹುದು ಮತ್ತು ಆಗಾಗ ಕೆಲಸಗಾರರು ಒಳಗೆ ಇಳಿದು ಕಾಲುವೆಗಳನ್ನು ಶುದ್ಧೀಕರಿಸಬಹುದು. ಸುರಂಗಗಳನ್ನು ಕೊರೆಯುವಾಗ ಪೊಳ್ಳುಗುಹೆಗಳು ಸಿಕ್ಕಿದಲ್ಲಿ ಕನತ್ ನೀರಾವರಿ ವ್ಯವಸ್ಥೆಯೇ ನಾಶವಾಗುತ್ತದೆ. ಅನೇಕ ಕಡೆಗಳಲ್ಲಿ ಹಾಗೆ ಆದದ್ದೂ ಉಂಟು. ಮೂಲಬಾವಿಯ ಕೆಳಭಾಗದಲ್ಲಿ ಸೋಸುವ ಕಂಬದ ಸಾಲುಹಾದಿಯ ವೇದಿಕೆಗಳಿವೆ (ಇನ್‌ಫಿಲ್ಟ್ರೇಷನ್ ಗ್ಯಾಲರಿ)–ಇವು ಜಿನುಗುವ ನೀರನ್ನು ಶುದ್ಧೀಕರಿಸುತ್ತವೆ.

ಕನತ್ ನೀರಾವರಿ ವ್ಯವಸ್ಥೆ ಇರಾನಿನಲ್ಲಿ ಬಲು ಹೆಚ್ಚಾಗಿ ಬಳಕೆಯಲ್ಲಿವೆ. ಇವುಗಳ ನಿರ್ಮಾಣ. ಮೇಲ್ವಿಚಾರಣೆ ಮತ್ತು ವ್ಯವಸ್ಥೆಗಳು ಹೆಚ್ಚು ಖರ್ಚಿನವಾದ್ದರಿಂದ ಸಾಮಾನ್ಯ ರೈತರಿಗೆ ಇವು ಸೂಕ್ತವಲ್ಲ. ಆ ದೇಶದ ಸಿರಿವಂತ ಜಮೀನುದಾರರು ಮಾತ್ರ ಈ ನೀರಾವರಿ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದ್ದಾರೆ. ದಕ್ಷಿಣ ಅಮೆರಿಕ ಮತ್ತು ಉತ್ತರ ಆಫ್ರಿಕಗಳಲ್ಲಿಯೂ ಕನತ್ ನೀರಾವರಿ ವ್ಯವಸ್ಥೆ ಇದೆ. ಮರ್ರಕೊಚ್ ಓಯಸಿಸುಗಳಲ್ಲಿ ಇವು ಮೂಲಭೂತ ಪ್ರಾಮುಖ್ಯ ಪಡೆದಿವೆ. ಅಲ್ಲಿ ನಗರಗಳಿಗೆ ನೀರಿನ ಸರಬರಾಜನ್ನು ಇದೇ ರೀತಿಯ ನೀರಾವರಿ ವ್ಯವಸ್ಥೆಯಿಂದ ಮಾಡುತ್ತಿದ್ದಾರೆ. (ಕೆ.ಆರ್.ಆರ್.)

**ಕನಸು ಮತ್ತು ಹಗಲುಗನಸು :** ನಿದ್ರೆಯ ಸಮಯದಲ್ಲಿ ಉದ್ಭವಿಸುವ ಭಾವರೂಪ ರಾಗಸರಣಿಯೇ, ನಿದ್ರಿಸುವ ವ್ಯಕ್ತಿಗೆ ನಿಜವೆಂಬಂತೆ ಭಾಸವಾಗುವ ಮಾನಸಿಕ ಪ್ರಕ್ರಿಯೆಯೇ ಕನಸು; ಸ್ವಪ್ನ (ಡ್ರೀಂ). ಎಚ್ಚರವಾಗಿರುವಾಗಲೇ ಹಲವರು ಕಟ್ಟಿಕೊಳ್ಳುವ ಆಪ್ಯಾಯಕರವೂ ಹಲವೊಮ್ಮೆ ಭ್ರಾಂತಿಮಯವೂ ಆದ ಕಲ್ಪನಾವಿಲಾಸವೇ ಹಗಲುಗನಸು (ಡೇ ಡ್ರೀಂ). ಕನಸು ಕಾಣುವುದು ಮನಸ್ಸಿನ ಮುಖ್ಯ ಲಕ್ಷಣಗಳಲ್ಲೊಂದು. ಇದರ ಇತಿಹಾಸ ಮಾನವನ ಅವತರಣಿಕೆಯಷ್ಟೇ ಪ್ರಾಚೀನವಾದದ್ದು. ಜಾಗೃತ, ಸ್ವಪ್ನ ಮತ್ತು ಸುಷುಪ್ತ ಎಂಬುದಾಗಿ ಮನಸ್ಸಿಗೆ ಮೂರು ಅವಸ್ಥಾವಿಶೇಷಗಳಿವೆ. ಸ್ವಪ್ನಾವಸ್ಥೆಯಲ್ಲಿನ ಮಾನಸಿಕ ಕ್ರಿಯೆಯೇ ಕನಸು. ಬಹಳ ಹಿಂದೆಯೇ ಭಾರತೀಯ ದಾರ್ಶನಿಕರೂ ಋಷಿಗಳೂ ಕನಸಿನ ರಚನೆಯನ್ನು, ಅರ್ಥವನ್ನು ಉದ್ದೇಶವನ್ನು ಹಾಗೂ ಮನುಷ್ಯನ ಜೀವನದಲ್ಲಿ ಅದಕ್ಕಿರುವ ಪ್ರಾಮುಖ್ಯವನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ. ಹಿಂದೂ, ಜೈನ ಮತ್ತು ಬೌದ್ಧ ದಾರ್ಶನಿಕರೂ ತಮ್ಮ

ವಿಶೇಷ ಜ್ಞಾನದ ಸಹಾಯದಿಂದ ಹಾಗೂ ನಿಷ್ಠೆಯಿಂದ ಕೂಡಿದ ಅವಿರತ ಪರಿಶ್ರಮದಿಂದ ಮನಸ್ಸಿನ ರಚನೆಯನ್ನು ವಿವರಿಸುವುದಕ್ಕೂ ಇದರ ಆಧಾರದ ಮೇಲೆ ಕನಸನ್ನು ಸಮರ್ಪಕವಾಗಿ ವಿಶ್ಲೇಷಿಸುವುದಕ್ಕೂ ಶಕ್ತರಾಗಿದ್ದರು. ಆದರೆ ಇಂದು ಯಾವುದೂ ಮನೋವಿಜ್ಞಾನವೆನಿಸಿಕೊಂಡಿದೆಯೋ ಅದು ಪೂರ್ಣವಾಗಿ ಪಾಶ್ಚಾತ್ಯರದಾಗಿದ್ದು ಕೇವಲ ಒಂದು ಶತಮಾನದ ಕಿರಿಯ ವಿಜ್ಞಾನವಾಗಿದೆ. ಕನಸಿನ ಬಗ್ಗೆ ಬಹಳ ಹಿಂದೆಯೇ ಮೂಡಿದ್ದ ಅಭಿಪ್ರಾಯಗಳನ್ನು ಆಧುನಿಕ ವಿಜ್ಞಾನದ ವಿಚಾರಧಾರೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ ಪ್ರಯತ್ನ ಅತಿಶಯವಾದ ಉಪಯುಕ್ತತೆಯಿಂದ ಕೂಡಿದೆ.

ಕನಸು ಕಾಣುವುದೂ ನಿದ್ರೆ ಎಚ್ಚರಗಳಷ್ಟೇ ಸ್ವಾಭಾವಿಕವಾದ ಮಾನಸಿಕ ಕ್ರಿಯೆ. ಆದರೆ, ಮಾನವ ಇನ್ನೂ ಅನಾಗರಿಕ ದೆಸೆಯಲ್ಲಿದ್ದಾಗ, ಅವನಲ್ಲಿನ್ನೂ ಯೋಚನಾಶಕ್ತಿ ಬೆಳೆದಿರಲಿಲ್ಲವಾಗಿ ಕನಸಿನಲ್ಲಿ ನಡೆದ ಅನುಭವಗಳನ್ನು ನಿಜವೆಂದೇ ಆತ ಭ್ರಮಿಸುತ್ತಿದ್ದನಲ್ಲದೆ, ಕನಸಿಗೂ ನೈಜತೆಗೂ ನಡುವಣ ವ್ಯತ್ಯಾಸವನ್ನು ಅರಿತುಕೊಳ್ಳಲು ಅಸಮರ್ಥನಾಗಿದ್ದ. ತನ್ನ ಆದಿವಾಸಿ ಸಹಚರನೊಬ್ಬ ವಿಲಕ್ಷಣವಾಗಿ ನಡೆದುಕೊಂಡಿದ್ದನ್ನು ಹ್ಯಾಟ್‌ಕ್ಲಿಫ್ ಎಂಬ ಮನೋವಿಜ್ಞಾನಿ ವಿವರಿಸಿದ್ದಾನೆ. ಆ ಆದಿವಾಸಿ ಹಿಂದಿನ ರಾತ್ರಿ ಕಂಡಿದ್ದ ಕನಸೇ ಆತನ ವಿಲಕ್ಷಣ ನಡತೆಗೆ ಕಾರಣವಾಗಿತ್ತು. ಅದೊಂದು ಕನಸು ಎಂಬ ಭಾವನೆಯೇ ಅವನಲ್ಲಿ ಮೂಡಿರಲಿಲ್ಲ. ಆದರೆ ಕಾಲ ಕ್ರಮದಲ್ಲಿ ಕನಸೇ ಬೇರೆ, ನಮ್ಮ ನಿಜಜೀವನದಲ್ಲಿನ ಅನುಭವಗಳೇ ಬೇರೆ ಎಂಬ ಸತ್ಯ ಮಾನವನಿಗೆ ಗೋಚರವಾಯಿತು. ಕನಸು ಒಂದು ರೀತಿಯ, ಪರಲೋಕದಿಂದ ಬರುವ, ಅಮಾನುಷ ಸಂದೇಶವೆಂದೇ ಆಗಿನವರ ಭಾವನೆಯಾಗಿತ್ತು. ಅವರ ಅಭಿಪ್ರಾಯದಲ್ಲಿ ಭಯಾನಕ ಸ್ವಪ್ನಗಳು ಭೂತಪ್ರೇರಿತವೂ ಸುಖಸ್ವಪ್ನಗಳು ದೈವಪ್ರೇರಿತವೂ ಆಗಿದ್ದವು. ಅಂದಿನ ಮಾನವ ತನ್ನ ಕನಸುಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದನಲ್ಲದೆ ಅದರ ಮೂಲಕ ಬರುವ ಸಂದೇಶಗಳನ್ನು ಎಳ್ಳಷ್ಟೂ ತಪ್ಪದೆ ಪಾಲಿಸಬೇಕೆಂದು ತಿಳಿದಿದ್ದ. ಇಂದಿಗೂ ಅನೇಕ ಹಳ್ಳಿಗಾಡು ಜನರಲ್ಲಿ ಇಂಥ ಮೂಢನಂಬಿಕೆಗಳು ಪ್ರಬಲವಾಗಿ ಮನೆಮಾಡಿರುವುದನ್ನು ಕಾಣಬಹುದು.

ಮನುಷ್ಯನಲ್ಲಿ ಆಲೋಚನಾಶಕ್ತಿ ಕುದುರಿದಂತೆ ಹಾಗೂ ನಾಗರಿಕತೆ ಬೆಳೆದಂತೆ, ಆತ ಕನಸಿನ ಮೂಲದ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿದ. ಅನೇಕ ಪಾಶ್ಚಾತ್ಯ ದಾರ್ಶನಿಕರು ಮನಸ್ಸಿನ ಅಗಾಧ ಆಳವನ್ನು ಹೊಕ್ಕು ಮನಸ್ಸಿನ ವಿಶೇಷ ಕ್ರಿಯೆಯಾದ ಕನಸಿನ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಇವು ಯಾವುವೂ ಪ್ರಯೋಗಗಳ ಮೇಲೆ ನಿರ್ಧರಿಸಿದವಲ್ಲ.

ಕನಸಿನ ಕ್ರಮಬದ್ಧ ಹಾಗೂ ವೈಜ್ಞಾನಿಕ ಪರಿಶೀಲನ ಸಿಗ್ಮಂಡ್ ಫ್ರಾಯ್ಡನ ನೇತೃತ್ವದಲ್ಲಿ ಮನೋವಿಶ್ಲೇಷಣ ಸಿದ್ಧಾಂತದ ಒಂದು ಭಾಗವಾಗಿ ಆರಂಭವಾಯಿತು. ಫ್ರಾಯ್ಡ್ ತನ್ನ ದಿಗ್ಭ್ರಮೆಗೊಳಿಸುವಂಥ ಸಂಶೋಧನೆಗಳಿಂದ ವಿಜ್ಞಾನ ಕ್ಷೇತ್ರದಲ್ಲೇ ದೊಡ್ಡ ವಿಚಾರಕ್ರಾಂತಿ ಯೊಂದನ್ನು ಎಬ್ಬಿಸಿದ. ಇದು ಡಾರ್ವಿನ್‌ನ ವಿಕಾಸವಾದಕ್ಕೆ ಸರಿದೊರೆಯಾಗಿತ್ತು. ಫ್ರಾಯ್ಡನ ಮನೋವಿಶ್ಲೇಷಣ ಸಿದ್ಧಾಂತದಿಂದ ಧರ್ಮ ಗುರುಗಳೂ ಪುರೋಹಿತವರ್ಗದವರೂ ಮನುಷ್ಯನ ಮತ್ತು ಅವನ ಸ್ವಭಾವದ ಬಗ್ಗೆ ಮೂಡಿಸಿದ್ದ ಸಾತ್ವಿಕ ಮತ್ತು ದೈವಿಕ ಭಾವನೆಗಳ ವಿರುದ್ಧವಾಗಿ ಅಭಿಪ್ರಾಯದ ದಂಗೆಯನ್ನೆ ಎಬ್ಬಿಸಿದಂತಾಯಿತು. ಕನಸಿನ ಮೂಲವನ್ನೂ ಅದರ ಆವಿರ್ಭಾವದ ವಿವಿಧ ಹಂತಗಳನ್ನೂ ವಿವರಿಸಿದ್ದು ಫ್ರಾಯ್ಡನ ಮಹತ್ತರ ಸಾಧನೆಗಳಲ್ಲೊಂದು. 20ನೆಯ ಶತಮಾನದ ಆದಿಯಲ್ಲಿ ಫ್ರಾಯ್ಡ್ ಪ್ರಕಟಿಸಿದ ಡ್ರೀಮ್ ಇಂಟರ್‌ಪ್ರಿಟೇಷನ್ (ಸ್ವಪ್ನದ ಅರ್ಥವಿವರಣೆ) ಎಂಬ ವೈಜ್ಞಾನಿಕ ಗ್ರಂಥ ವಿಶ್ವಪ್ರಸಿದ್ಧವಾಗಿದೆ.

ಫ್ರಾಯ್ಡ್ ವಿಶಾಲಾರ್ಥದಲ್ಲಿ ಎರಡು ಮುಖ್ಯ ಮೂಲಪ್ರವೃತ್ತಿಗಳನ್ನು (ಇನ್‌ಸ್ಟಿಂಕ್ಟ್) ಗುರುತಿಸಿದ. ಮೊದಲನೆಯದು ಲೈಂಗಿಕ ಪ್ರವೃತ್ತಿ, ಎರಡನೆಯದು ನಾಶಾತ್ಮಕ ಪ್ರವೃತ್ತಿ. ಫ್ರಾಯ್ಡನ ಮತದಲ್ಲಿ ಈ ಎರಡು ಮೂಲಪ್ರವೃತ್ತಿಗಳು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇದ್ದೇ ಇವೆ. ವ್ಯಕ್ತಿಯ ಎಲ್ಲ ಹೋರಾಟವೂ ನಡವಳಿಕೆಯೂ ಸುಖಾಪೇಕ್ಷೆಯನ್ನು ಕುರಿತಂಥವೇ. ಕನಸಿಗೆ ಸಂಬಂಧಿಸಿದಂತೆಯೂ ಈ ವಿಚಾರಗಳು ಬಹಳ ಮಟ್ಟಿಗೆ ಹೊಂದಿಕೊಳ್ಳುತ್ತವೆ.

ಶೈಶವಾವಸ್ಥೆಯಲ್ಲಿ ಹಸಿವು, ಭಯ, ಉತ್ಸುಕತೆ ಮುಂತಾದ ಅನೇಕ ಮೂಲ ಪ್ರವೃತ್ತಿಗಳೊಂದಿಗೆ ಬೆರೆತು ಲೈಂಗಿಕ ಪ್ರವೃತ್ತಿ ರೂಪವನ್ನು ತಳೆದು ಕ್ರಿಯಾಶೀಲವಾಗಿರುತ್ತದೆ. ಇದು ಮುಂದೆ ಶಿಶುವಿನಲ್ಲಿ ಅದರ ದೇಹಕ್ಕೂ ಮನಸ್ಸಿಗೂ ತೃಪ್ತಿಯನ್ನುಂಟುಮಾಡುವ ರೀತಿಯಲ್ಲಿ ದೇಹದ ವಿವಿಧ ಭಾಗಗಳಲ್ಲಿ ಕೇಂದ್ರೀಕೃತವಾಗುತ್ತದೆ. ಉದಾಹರಣೆಗೆ ತುಟಿ, ಸ್ತನಾಗ್ರ, ಕೆನ್ನೆ, ತೊಡೆ ಮುಂತಾದುವೆಲ್ಲ ಶಿಶುವಿನ ಲೈಂಗಿಕ ಪ್ರವೃತ್ತಿಯನ್ನು ಪೂರೈಸುವ ಸಾಧನೆಗಳಾಗುತ್ತವೆ. ವಯಸ್ಕರ ದೃಷ್ಟಿ ಕೋನದಿಂದ ನೋಡುವುದಾದರೆ ಶಿಶುವನ್ನು ನೀಚ, ಅನೀತಿಯುತ ಗುಣಗಳಿಂದ ಕೂಡಿದ ಬಹುರೂಪಿ ವಕ್ರ (ಪಾಲಿಮಾರ್ಫಸ್ ಪರ್ವರ್ಸ್) ಎನ್ನಬೇಕಾಗುತ್ತದೆ.

ಕಾಲಕ್ರಮದಲ್ಲಿ ಶಿಶು ಬೆಳೆದಂತೆ ಅದು ಸಮಾಜದ ಪ್ರಭಾವಕ್ಕೊಳಪಟ್ಟು ಅದರಲ್ಲಿ ಅಹಂ ರೂಪುಗೊಳ್ಳುತ್ತದೆ. ಹೊಸದಾಗಿ ಮೂಡಿದ ಅಹಮಿಗೂ ಹಿಂದಿನಿಂದ ಬಂದ ಲೈಂಗಿಕ ಪ್ರವೃತ್ತಿಗೂ ಘರ್ಷಣೆ ಅನಿವಾರ್ಯ. ಇದರಲ್ಲಿ ಅಹಮಿಗೇ ಗೆಲುವಾಗುತ್ತದೆ. ಲೈಂಗಿಕ ಪ್ರವೃತ್ತಿಗಳು ಪ್ರಕಟಗೊಳ್ಳಲು ಅಹಂ ಅವಕಾಶ ಕೊಡುವುದಿಲ್ಲ. ಅವುಗಳನ್ನು ಅದುಮಿಡುತ್ತವೆ. ಇದು ಸು. 6ನೆಯ ವರ್ಷದ ವೇಳೆಗೆ ಪೂರ್ಣವಾಗಿ ನಾಶವಾಗಿ ಹೋದಂತೆ ತೋರುತ್ತದೆ. ಆದರೆ ನಿಜವಾಗಿಯೂ ಇದು ನಾಶವಾಗುವುದಿಲ್ಲ. ಇದರ ಅಲ್ಪಾಂಶ, ಪ್ರೀತಿ, ಕೋಮಲ ಸ್ವಭಾವ ಮುಂತಾದ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುತ್ತದೆ.

ವ್ಯಕ್ತಿ ತಾರುಣ್ಯಾವಸ್ಥೆಯನ್ನು ಪ್ರವೇಶಿಸುತ್ತಲೆ, ಹುದುಗಿದ್ದ ಲೈಂಗಿಕ ಪ್ರವೃತ್ತಿ ಪುನಃ ಕ್ರಿಯಾಶೀಲವಾಗುತ್ತದೆ. ಆದರೆ ಲೈಂಗಿಕ ಪ್ರವೃತ್ತಿ ಪ್ರಕಟಗೊಳ್ಳದಿರುವಂತೆ ಅಹಂ ನಿರ್ಬಂಧಿಸುತ್ತದೆ. ಹೀಗೆ ಅಹಂನಿಂದ ನಿರ್ಬಂಧಿಸಲ್ಪಟ್ಟಿದ್ದರೂ ಕ್ರಿಯಾಶೀಲವಾಗಿರುವ ಈ ಲೈಂಗಿಕ ಪ್ರವೃತ್ತಿಯೆ ಸುಪ್ತಚೇತನ ರೂಪಗೊಳ್ಳುವುದಕ್ಕೆ ಕಾರಣ. ಹೀಗೆ ಶೈಶವಾವಸ್ಥೆಯಲ್ಲಿನ ಲೈಂಗಿಕ ಪ್ರವೃತ್ತಿ ದಮಿಸಲ್ಪಡುವುದೇ ಸುಪ್ತಚೇತನದ ಆವಿರ್ಭಾವಕ್ಕೆ ಕಾರಣ. ಹೀಗೆ ಶುರುವಾದ ಸುಪ್ತಚೇತನ ಕ್ರಮೇಣ ಘರ್ಷಣೆಗಳ ಪರಿಣಾಮದಿಂದ ವೃದ್ಧಿಗೊಳ್ಳುತ್ತ ಹೋಗುತ್ತದೆ.

ದಮಿಸಲ್ಪಟ್ಟ ಇಂಥ ಅನೇಕ ಮಾನಸಿಕ ಚಟುವಟಿಕೆಗಳಲ್ಲಿ ಈಡಿಪಸ್ ಕಾಂಪ್ಲೆಕ್ಸ್ (ನೋಡಿ– ಈಡಿಪಸ್–ಕಾಂಪ್ಲೆಕ್ಸ್) ಒಂದು. ಇದು ಶಿಶುವಿನಲ್ಲಿ ಅದು ಮೊಲೆಯುಣ್ಣುವ ವಯಸ್ಸಿನಲ್ಲೆ ತನ್ನ ತಾಯಿಯ ಬಗ್ಗೆ ಮೂಡಿಬರುತ್ತದೆ. ಈ ಭಾವನೆ ವ್ಯಕ್ತಿಯ ತಾರುಣ್ಯಾವಸ್ಥೆಯಲ್ಲಿ ವಿಶೇಷವಾಗಿದ್ದು, ತನ್ನ ತಾಯನ್ನೇ ಕಾಮಿಸುವ ಸುಪ್ತಚೇತನದ ಇಚ್ಛೆಯ ರೂಪದಲ್ಲಿ ಪ್ರಕಟಗೊಳ್ಳುತ್ತದೆ.

**ಫ್ರಾಯ್ಡನ ಸಿದ್ಧಾಂತದ ಮುಖ್ಯಾಂಶಗಳು ಕೆಳಕಂಡಂತಿದೆ : 1. ಸುಪ್ತಚೇತನ;** ವ್ಯಕ್ತಿಯ ಮನಸ್ಸಿನ ಹೆಚ್ಚು ಭಾಗ ಸುಪ್ತಚೇತನದಲ್ಲಡಗಿರುವುದಲ್ಲದೆ, ಪ್ರಮುಖ ನಿರ್ಧಾರಗಳು ಸಹ ಸುಪ್ತಚೇತನದಿಂದಲೇ ನಿರ್ದೇಶಿಸಲ್ಪಟ್ಟಿರುತ್ತವೆ. ನಮ್ಮ ನಿಜವಾದ ವ್ಯಕ್ತಿತ್ವ ನಮ್ಮ ಸುಪ್ತಚೇತನದಲ್ಲೇ ಅಡಕವಾಗಿರುತ್ತದೆ. ನಮ್ಮ ಚೇತನಾವಸ್ಥೆ ಇಡೀ ಮನಸ್ಸಿನ ಎಲ್ಲೋ ಒಂದು ಅಲ್ಪಾಂಶ. ಸಮಾಜ ಮತ್ತು ನೈತಿಕತೆಯ ದೃಷ್ಟಿಯಿಂದ ನೋಡಿದಾಗ ಸುಪ್ತಚೇತನದಲ್ಲಿ ತುಂಬಿರುವ ವಿಚಾರಗಳು ನಿಂದಾತ್ಮಕವಾಗಿವೆ. ಏಕೆಂದರೆ ವ್ಯಕ್ತಿ ಹುಟ್ಟುತ್ತಲೇ ಪಾಶವೀ ಗುಣಗಳಿಂದ ಕೂಡಿರುತ್ತಾನೆ. ಮುಂದೆ ಅನೇಕ ಕಹಿ ಅನುಭವಗಳು ಸೇರುತ್ತ ಹೋಗುತ್ತವೆ. ಇಡೀ ಮನಸ್ಸಿನ ಯಾವ ಒಂದು ಭಾಗವನ್ನು ಚೇತನದ ಸಹಾಯದಿಂದ ಗುರುತಿಸಲು ಸಾಧ್ಯವೋ ಆ ಭಾಗವೇ ಅಹಂ. ಸುಪ್ತಚೇತನದಲ್ಲಿ ಅಡಗಿರುವ ಲೈಂಗಿಕ ಪ್ರವೃತ್ತಿಯೂ ದುಷ್ಟ. ಅನೈತಿಕ, ಅಸಾಮಾಜಿಕ ವಿಚಾರಗಳೂ ಅಹಂಗೆ ಭಯಂಕರವಾಗಿ ಕಾಣುತ್ತವೆ.

**2. ರೋಧಕ (ಸೆನ್ಸರ್):** ಅನಾರೋಗ್ಯಕಾರಿ ಅಥವಾ ಅಸೌಖ್ಯಕಾರಿ ಇಚ್ಛೆಗಳು ರೋಧಕದ ನಿರ್ಬಂಧಕ್ಕೊಳಪಟ್ಟು ಸುಪ್ತಚೇತನದಲ್ಲಿ ಬಂಧಿತವಾಗಿರುತ್ತವೆ. ವ್ಯಕ್ತಿ ಎಚ್ಚರವಾಗಿರುವಾಗ ರೋಧಕದ ಕ್ರಿಯೆ ಎಷ್ಟು ದಕ್ಷತೆಯಿಂದ ಕೂಡಿರುತ್ತದೆಂದರೆ, ಸುಪ್ತಚೇತನದಲ್ಲಿರುವ ಯಾವ ವಿಷಯವನ್ನೂ ಅದು ಚೇತನಕ್ಕೆ ಬಿಡುವುದಿಲ್ಲ. ಸುಪ್ತಚೇತನದಲ್ಲಿರುವ ವಿಷಯದ ಬಗ್ಗೆ ವ್ಯಕ್ತಿಗೆ ಏನೂ ತಿಳಿದಿರುವುದಿಲ್ಲ. ಆದರೂ ದಮಿಸಲ್ಪಟ್ಟ ಹಾಗೂ ಗುಪ್ತವಾಗಿರುವ ಸುಪ್ತಚೇತನದ ವಿಷಯಗಳು ಮಾತಾಡುವಾಗಲೂ ಬರೆವಣಿಗೆಯಲ್ಲೂ ಹಗಲುಗನಸುಗಳೇ ಮುಂತಾದ ಅನೇಕ ರೂಪಗಳಲ್ಲಿ ಸಂದರ್ಭಾನುಸಾರ, ಸುಪ್ತಚೇತನದಿಂದ ಚೇತನಕ್ಕೆ ನುಸುಳಿಕೊಂಡು ಬಂದುಬಿಡುತ್ತವೆ.

ಚೇತನ ಅನೇಕ ವೇಳೆ ನಿರ್ವಿಕಾರವಾಗಿರುತ್ತದೆ. ಪ್ರಬಲಶಕ್ತಿಗಳಿಂದ ಸುಪ್ತಚೇತನ ಮತ್ತು ರೋಧಕಗಳ ನಡುವಣ ಘರ್ಷಣೆಗೆ ಚೇತನ ಬಲಿಯಾಗಿ ಅನೇಕ ಬಾರಿ ಕಷ್ಟಗಳಿಗೂ ಗುರಿಯಾಗುತ್ತದೆ. ಸುಪ್ತಚೇತನದಲ್ಲಿನ ವಿಷಯ ಪ್ರಕಟಗೊಳ್ಳಲು ಪ್ರಯತ್ನಿಸಿದರೆ ರೋಧಕ ಅಡ್ಡಿಬರುತ್ತದೆ.

ಆದರೆ ನಿದ್ರಾವಸ್ಥೆ ರೋಧಕದ ಸಮರ್ಪಕತೆಯನ್ನೂ ಎಚ್ಚರಿಕೆಯನ್ನೂ ಕುಗ್ಗಿಸಿ ಸುಪ್ತಚೇತನದ ವಿಷಯಗಳು ಚೇತನವನ್ನು ನಿರಾತಂಕವಾಗಿ ಪ್ರವೇಶಿಸಲು ಅನುಕೂಲ ಮಾಡಿಕೊಡುತ್ತದೆ. ಆದರೂ ಸ್ವಪ್ನದಲ್ಲೂ ರೋಧಕದ ದಕ್ಷತೆಯನ್ನು ಕಾಣಬಹುದು.

ಸುಪ್ತಚೇತನದಲ್ಲಿರುವ ಲೈಂಗಿಕ ಆಸೆಗಳು ಅಸಮರ್ಪಕ ರೋಧಕವನ್ನು ಸುಲಭವಾಗಿ ಮೋಸಗೊಳಿಸಿ ಚೇತನವನ್ನು ಪ್ರವೇಶಿಸುತ್ತವೆ. ಸುಪ್ತಚೇತನದಲ್ಲಿನ ನಿಂದಾತ್ಮಕ ಅವ್ಯಕ್ತವಿಷಯ (ಲೇಟೆಂಟ್ ಕಂಟೆಂಟ್) ಆಗ ಚಿತ್ರಗಳ ರೂಪದಲ್ಲಿ ವ್ಯಕ್ತವಿಷಯವಾಗಿ (ಮ್ಯಾನಿಫೆಸ್ಟ್ ಕಂಟೆಂಟ್) ಕಾಣಿಸಿಕೊಳ್ಳುತ್ತದೆ. ಅಸಮರ್ಪಕ ರೋಧಕವನ್ನು ಮೋಸಗೊಳಿಸುವುದಕ್ಕಾಗಿಯೇ ಅದು ಈ ವೇಷ ತಳೆಯುತ್ತದೆ. ಹೀಗೆ ಚಿತ್ರರೂಪದಲ್ಲಿ ಕಾಣಿಸಿಕೊಳ್ಳುವ ವ್ಯಕ್ತವಿಷಯ (ಸ್ವಪ್ನ) ಎಷ್ಟು ಸಂಕೀರ್ಣವಾಗಿರುತ್ತದೆ ಎಂದರೆ, ರೋಧಕಕ್ಕೆ ಅದರ ಹಿಂದಿರುವ ಅರ್ಥ ತತ್‌ಕ್ಷಣ ಹೊಳೆಯುವುದಿಲ್ಲ. ಆದ್ದರಿಂದ ಯಾವುದು ಕನಸು ಎನಿಸಿಕೊಳ್ಳುತ್ತದೋ ಅದು ಸುಪ್ತಚೇತನಕ್ಕೂ ರೋಧಕಕ್ಕೂ ನಡುವಣ ಸಮನ್ವಯ.

ಸ್ವಪ್ನದ ರಚನೆಯಲ್ಲಿ ಚೇತನವೂ ತನಗರಿವಿಲ್ಲದೆಯೇ ತನ್ನ ನೆರವು ನೀಡುತ್ತಿರುತ್ತದೆ. ಹೇಗೆಂದರೆ ಸುಪ್ತಚೇತನದ ವಿಷಯಗಳು ಪ್ರಕಟಗೊಳ್ಳಲು, ಚೇತನಾವಸ್ಥೆಯಲ್ಲಿ ಗ್ರಹಿಸಿದ್ದ ಅನುಭವಗಳೇ ಸಾಧನಗಳಾಗುತ್ತವೆ. ಶೈಶವದ ಬಹುರೂಪಿ ವಕ್ರಗಾಮಿಗಳಾದ ಅನೈತಿಕ ಲೈಂಗಿಕ ಸಂಬಂಧ, ಸಮೀಪವರ್ತಿಗಳ ಮರಣ ಮುಂತಾದ ಇಚ್ಛೆಗಳು ನಿದ್ರಿತವ್ಯಕ್ತಿಯಲ್ಲಿ

ನೇರವಾಗಿಯೇ ಕಾಣಿಸಿಕೊಂಡರೆ ಅದು ಅವನ ನಿದ್ರೆಯನ್ನು ಭಂಗಗೊಳಿಸಬಹುದು ಅಥವಾ ಅವನ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರಬಹುದು. ವ್ಯಕ್ತಿಯನ್ನು ಇದರಿಂದ ತಪ್ಪಿಸುವುದಕ್ಕಾಗಿ, ಸುಪ್ತಚೇತನದ ವಿಷಯಗಳು ಚೇತನಕ್ಕೆ ಒಪ್ಪಿಗೆಯಾಗುವ ಮಾರ್ಗದಲ್ಲಿ ವೇಷ ಮರೆಸಿಕೊಂಡು ಕಾಣಿಸಿಕೊಳ್ಳುತ್ತವೆ. ಹೀಗೆ ಸುಪ್ತಚೇತನದ ಯಾವ ವಿಷಯ ಚೇತನಕ್ಕೆ ಬರಲು ಹೋರಾಟ ನಡೆಸಿರುವುದೋ ಅದನ್ನೆ ಫ್ರಾಯ್ಡ್ ಇಚ್ಛೆ ಎಂದು ಕರೆದಿದ್ದಾನೆ. ವ್ಯಕ್ತಿ ಎಚ್ಚರವಾಗಿರುವಾಗ ರೋಧಕ ಎಷ್ಟು ಪ್ರಬಲವಾಗಿರುತ್ತದೆಂದರೆ, ಸುಪ್ತಚೇತನದ ಇಚ್ಛೆಗಳ ಅರಿವು ಆತನಿಗೆ ಸ್ವಲ್ಪವೂ ಇರುವುದಿಲ್ಲ. ಆದರೆ ನಿದ್ರಾವಸ್ಥೆಯಲ್ಲಿ ಸುಪ್ತಚೇತನದ ವಿಷಯಗಳು ಚೇತನದ ರಂಗವನ್ನು ಪ್ರವೇಶಿಸುತ್ತವೆ. ಆದರೆ ರೋಧಕ ಆಗಲೂ ಸಾಕಷ್ಟು ಎಚ್ಚರವಾಗಿರುವುದರಿಂದ ಕನಸುಗಳು ವಿಕೃತಗೊಂಡು ಕಾಣಿಸಿಕೊಳ್ಳುತ್ತವೆ.

ಯಾವುದು ಕನಸೋ ಅದನ್ನು ವ್ಯಕ್ತವಿಷಯ ಎಂದು ಕರೆಯಲಾಗಿದೆ. ವ್ಯಕ್ತವಿಷಯ ಯಾವುದರಿಂದ ಪ್ರೇರೇಪಿತವಾಗಿಯೋ, ವ್ಯಕ್ತವಿಷಯದಲ್ಲಿ ಯಾವುದು ಸ್ಪಷ್ಟವಾಗಿ ಕಂಡುಬರುವುದಿಲ್ಲವೋ ಅದು ಅವ್ಯಕ್ತವಿಷಯ. ಆದ್ದರಿಂದ ವ್ಯಕ್ತ ವಿಷಯದ ಆಧಾರದ ಮೇಲೆ ಅವ್ಯಕ್ತವಿಷಯವನ್ನು ತಿಳಿಯುವುದೇ ಸ್ವಪ್ನವಿಶ್ಲೇಷಣೆ. ವ್ಯಕ್ತವಿಷಯಕ್ಕೂ ಅವ್ಯಕ್ತವಿಷಯಕ್ಕೂ ನಡುವೆ ಇರಬಹುದಾದ ತರ್ಕಬದ್ಧ ಸಂಬಂಧವನ್ನು ಹುಡುಕುವುದರ ಜೊತೆಗೆ ಸ್ವಪ್ನಿಯ ಮನಸ್ಸಿನಲ್ಲಿ ಆತನ ಸ್ವಪ್ನಕ್ಕೆ ಸಂಬಂಧಿಸಿದಂತೆ ಅಡಗಿರುವ ಇತರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದೂ ವಿಶ್ಲೇಷಣೆಯ ಉದ್ದೇಶ. ಫ್ರಾಯ್ಡ್‌ನ ಪ್ರಕಾರ ಸ್ವಪ್ನದಲ್ಲಿ ಮುಖ್ಯವಾದ ಭಾವನೆ ವಿಲಕ್ಷಣವಾಗಿಯೂ ಅನಪೇಕ್ಷಿತ ರೀತಿಯಲ್ಲೂ ಅಲ್ಲದೆ ತರ್ಕವಿರುದ್ಧವಾಗಿಯೂ ಇರುತ್ತದೆ.

ನಿದ್ರಾವಸ್ಥೆಯಲ್ಲಿ ಹೊರಗಿನಿಂದ ಬರುವ ಪ್ರಚೋದನೆಗಳಿಗೆ ಮನಸ್ಸು ತೋರುವ ಪ್ರತಿಕ್ರಿಯೆಯೇ ಕನಸು. ಆದರೆ ಈ ಪ್ರತಿಕ್ರಿಯೆ ಇಡೀ ಸ್ವಪ್ನದಲ್ಲಿ ಎಲ್ಲೋ ಸ್ವಲ್ಪ ಭಾಗ ಮಾತ್ರ. ಕೇವಲ ಪ್ರಚೋದನೆಯನ್ನೇ ಯಥಾವತ್ ಪ್ರತಿನಿಧಿಸುವುದೇ ಕನಸಲ್ಲ. ಅದಕ್ಕೆ ಬದಲಾಗಿ ಅದು ಪ್ರಚೋದನೆಯ ಸುತ್ತ ಒಂದು ಕಥೆಯನ್ನು ಹೆಣೆಯುತ್ತದೆ. ಆ ಕಥೆಯಲ್ಲಿ ಮೂಲಪ್ರಚೋದನೆ ಸ್ಪಷ್ಟವಾಗಿ ಕಾಣಿಸಿಕೊಳ್ಳಬಹುದು; ಅಥವಾ ಕಾಣಿಸಿಕೊಳ್ಳದಿರಬಹುದು. ಪ್ರಚೋದನೆಗಿಂತ, ಪ್ರಚೋದನೆ ಉಂಟು ಮಾಡುವ ಸಂಗತಿಗಳು ಸ್ವಪ್ನದ ವ್ಯಕ್ತವಿಷಯದಲ್ಲಿ ಪ್ರಧಾನ ಪಾತ್ರವಹಿಸುತ್ತವೆ.

ಅವ್ಯಕ್ತವಿಷಯ ವ್ಯಕ್ತವಿಷಯವಾಗಿ ರೂಪುಗೊಳ್ಳುವ ವಿಧಾನದಲ್ಲಿ ಅನೇಕ ಹಂತಗಳುಂಟು. ಇವನ್ನು ಫ್ರಾಯ್ಡ್ ಸ್ವಪ್ನರಚನೆ (ಡ್ರೀಂವರ್ಕ್) ಎಂದು ಕರೆದಿದ್ದಾನೆ.

**3. ಸಂಕ್ಷೇಪಣೆ:** ಅವ್ಯಕ್ತವಿಷಯದಲ್ಲಿ ಅನೇಕ ವಿಷಯಗಳಿರುತ್ತವೆ. ಆದರೆ ಅಷ್ಟೂ ವ್ಯಕ್ತವಿಷಯದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಮುಖ್ಯವಾದ ಕೆಲವು ಅಂಶಗಳು ಮಾತ್ರ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ನಾವು ಕಾಣುವ ಕನಸು ಅದರ ಹಿಂದಿರುವ ಅವ್ಯಕ್ತವಿಷಯದ ಒಂದು ಸಂಕ್ಷಿಪ್ತ ವಿವರಣೆ. ಈ ಸಂಕ್ಷೇಪಣೆಯ ಕಾರ್ಯ ಅನೇಕ ರೀತಿಗಳಲ್ಲಿ ನಡೆಯುತ್ತದೆ. ಅವುಗಳಲ್ಲಿ ಮುಖ್ಯವಾದವು ಇವು:

ಎ. ಅವ್ಯಕ್ತವಿಷಯದಲ್ಲಿನ ಕೆಲವು ಅಮುಖ್ಯ ಸಂಗತಿಗಳು ವ್ಯಕ್ತವಿಷಯದಲ್ಲಿ ಬಿಟ್ಟುಹೋಗುತ್ತವೆ.

ಬಿ. ಅವ್ಯಕ್ತವಿಷಯದಲ್ಲಿ ಬೇರೆ ಬೇರೆ ಅಂಶಗಳಿರುತ್ತವೆ. ಆದರೆ ಆ ಎಲ್ಲ ಅವ್ಯಕ್ತ ವಿಷಯಗಳ ಸ್ವಲ್ಪ ಭಾಗಗಳು ಮಾತ್ರ ವ್ಯಕ್ತವಿಷಯದಲ್ಲಿ ಕಾಣಿಸಿಕೊಳ್ಳುತ್ತವೆ.

ಸಿ. ಸಮಾನ ಅಂಶಗಳಿಂದ ಕೂಡಿದ ಅನೇಕ ಅವ್ಯಕ್ತವಿಷಯಗಳು ಪರಸ್ಪರ ಮಿಶ್ರಗೊಂಡು ವ್ಯಕ್ತವಿಷಯದಲ್ಲಿ ಒಂದೇ ಕಥೆಯ ರೂಪದಲ್ಲಿ ವ್ಯಕ್ತಗೊಳ್ಳುತ್ತವೆ.

ಡಿ. ಕೊನೆಯದಾಗಿ ಯಾವುದಾದರೊಂದು ಪ್ರಧಾನ ಇಚ್ಛೆಯ ಸುತ್ತ ಅನೇಕ ಬೇರೆ ಬೇರೆ ಅವ್ಯಕ್ತವಿಷಯಗಳು ಹೆಣೆದುಕೊಂಡಿರುತ್ತವೆ. ಆದ್ದರಿಂದ ಒಂದು ಕನಸನ್ನು ವಿಶ್ಲೇಷಿಸಿದಾಗ ಅದರಲ್ಲಿ ಇನ್ನೂ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಸುಪ್ತಚೇತನದಲ್ಲಿ ಅಡಗಿರುವ ವಿಷಯಗಳನ್ನು ಕಾಣಬಹುದು.

ಆಧುನಿಕ ಕಲಾಕಾರ ಚಿತ್ರವನ್ನು ಬಿಡಿಸುವಾಗ ಎಲ್ಲ ಸೂಕ್ಷ್ಮ ಭಾಗಗಳನ್ನೂ ವಿವರವಾಗಿ ಚಿತ್ರಿಸಲು ಹೋಗುವುದಿಲ್ಲ. ಅವು ವೀಕ್ಷಕನ ಕಲ್ಪನೆಗೆ ಸೇರಿದ್ದು. ಇದೇ ರೀತಿಯಲ್ಲಿ ಸ್ವಪ್ನಗಳಲ್ಲೂ ಅವ್ಯಕ್ತವಿಷಯಗಳು ಸೂಚ್ಯವಾಗಿಯೂ ವಿವರವಾಗಿಯೂ ಇರುವುದಿಲ್ಲ.

ಅವ್ಯಕ್ತವಿಷಯದಲ್ಲಿ ಪ್ರಧಾನವಾಗಿರುವ ಇಚ್ಛೆ ವ್ಯಕ್ತವಿಷಯದಲ್ಲಿ ಗೌಣವಾಗಿರುತ್ತದೆ; ಅವ್ಯಕ್ತವಿಷಯದಲ್ಲಿ ಗೌಣವಾಗಿರುವ ಇಚ್ಛೆ ವ್ಯಕ್ತವಿಷಯದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ವಿಷಯಪಲ್ಲಟನೆ ಎಂದು ಹೆಸರು.

**4. ನಾಟಕೀಕರಣ (ಡ್ರಾಮಟೈಸೇಷನ್):** ಅವ್ಯಕ್ತವಿಷಯದಲ್ಲಿರುವ ಆಲೋಚನೆಗಳು ವ್ಯಕ್ತವಿಷಯದಲ್ಲಿ ಚಿತ್ರಗಳ ರೂಪದಲ್ಲಿ ಪರಿವರ್ತಿಸಲ್ಪಡುವುದೇ ನಾಟಕೀಕರಣ. ಇದು ಸ್ವಪ್ನರಚನೆಯ ಮೂರನೆಯ ಲಕ್ಷಣ. ಕನಸಿಗೆ ತನ್ನಲ್ಲಿರುವ ಅಭಿಪ್ರಾಯವನ್ನು ತರ್ಕಬದ್ಧವಾಗಿ ವ್ಯಕ್ತಪಡಿಸಲು ಸರಿಯಾದ ಯಾವ ಸಾಧನವೂ ಇಲ್ಲ. ಆದ್ದರಿಂದ ಅವ್ಯಕ್ತಭಾವನೆಗಳು ಚಿತ್ರಗಳ ರೂಪದಲ್ಲಿ ಪ್ರಕಟಗೊಳ್ಳುತ್ತವೆ.

5. ಸಂಕೇತನಿರ್ಮಾಣ (ಸಿಂಬಲೈಸೇಷನ್) ಮತ್ತೊಂದು ಮುಖ್ಯ ಲಕ್ಷಣ. ಸ್ವಪ್ನಾಲೋಚನೆಯೆಲ್ಲವೂ ಸಂಕೇತಗಳ ಮೂಲಕವೇ ಪ್ರಕಟಗೊಳ್ಳುತ್ತದೆ. ಅದರಲ್ಲೂ ವಿಶೇಷವಾಗಿ ಸುಪ್ತಚೇತನದಲ್ಲಿ ಅಡಕವಾಗಿರುವ ಲೈಂಗಿಕ ಭಾವನೆಗಳು ಸಾಂಕೇತಿಕವಾಗಿಯೇ ಪ್ರಕಟಗೊಳ್ಳುತ್ತವೆ. ಮಕ್ಕಳನ್ನು ಪಡೆಯಬೇಕು. ಅವನ್ನು ಪಾಲಿಸಬೇಕು ಎಂಬ ಬಂಜೆಯ ಆಸೆಗಳು ಸ್ವಪ್ನದಲ್ಲಿ ಆಕೆ ಮುದ್ದು ಹಾಗೂ ಸಾಕುಪ್ರಾಣಿಗಳೊಂದಿಗಿರುವಂತೆ ಕಂಡು ಬರಬಹುದು. ತಂದೆ ತಾಯಿ, ಸಹೋದರ ಸಹೋದರಿ, ಜನನ ಮರಣ ಮುಂತಾದ ಅನೇಕ ವಿಷಯಗಳೂ ಸಂಕೇತಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಇಂಥ ಅನೇಕ ಸಂಕೇತಗಳನ್ನು ಫ್ರಾಯ್ಡ್ ವಿವರಿಸಿದ್ದಾನೆ. ಕೆಲವು ಉದಾಹರಣೆಗಳು ಇವು: ಮನೆ ಮಾನವನ ಆಕೃತಿ ಸೂಚಕ; ನುಣುಪುಗೋಡೆ ಪುರುಷಸೂಚಕ; ಮನೆಗೆ ಉಪ್ಪರಿಗೆಯ ಮೊಗಸಾಲೆ ಯಿದ್ದರೆ ಅದು ಸ್ತ್ರೀ ಸೂಚಕ; ನೀರು ಜನನಕ್ಕೆ ಸಂಬಂಧಪಟ್ಟ ಭಾವನೆಗಳ ಪ್ರತೀಕ: ಮನೆಯ ಮುಂದಿನ ಮೆಟ್ಟಲುಗಳನ್ನು ಇಳಿಯುತ್ತಿರುವಂತೆ ಕಂಡರೆ ಅದು ಸಾವಿನ ಸೂಚನೆ; ಸವಾರಿಯೂ ಬೆಟ್ಟದ ಪ್ರದಕ್ಷಿಣೆಯೂ ಕನಸುಗಾರನ ಮಹತ್ವಾಕಾಂಕ್ಷೆಯ ದ್ಯೋತಕ.

ಬಹಳ ಹೆಚ್ಚಿನ ಸಂಕೇತಗಳು ಲೈಂಗಿಕತೆಯತ್ತಲೇ ಬೆಟ್ಟು ಮಾಡುತ್ತವೆ. ಉದಾಹರಣೆಗೆ ಮರಗಳು, ಸೀಸದ ಕಡ್ಡಿ, ಕತ್ತಿ, ಭರ್ಜಿ, ಚಾಕು, ಛತ್ರಿ, ಹಾವು ಮುಂತಾದವೆಲ್ಲ ಪುರುಷರ ಲಿಂಗದ ಸಂಕೇತ. ಹಣ್ಣು, ಪೆಟ್ಟಿಗೆ, ಚೀಲ, ಖಾಲಿಸೀಸೆ, ಮೇಜಿನ ಡ್ರಾಯರು, ಅಲಮಾರು ಮುಂತಾದವೆಲ್ಲ ಯೋನಿಯ ಸಂಕೇತ. ರೈಲಿನಲ್ಲಿ (ವಾಹನದಲ್ಲಿ) ಪ್ರಯಾಣ, ಗೋಡೆಯ ಮೇಲೆ ಕುಳಿತ ಭಂಗಿ, ಕುದುರೆ ಅಥವಾ ಸೈಕಲ್ ಸವಾರಿ, ಶಿಲುಬೆಯ ದೃಶ್ಯ–ಇವು ಸಂಭೋಗ ಕ್ರಿಯೆಯ ಸೂಚನೆ. ಎತ್ತು, ಕುದುರೆ, ನಾಯಿ ಮತ್ತು ಕೆಲವು ಧಾರ್ಮಿಕ ಸಂಕೇತಗಳೂ ಲೈಂಗಿಕ ಭಾವನೆಗಳನ್ನೇ ಸಂಕೇತಿಸುತ್ತವೆ. ಯಾರೋ ಕೈಯಲ್ಲಿ ಚಾಕು ಹಿಡಿದು ತಿವಿಯಲು ಬಂದಂತೆ ಹೆಣ್ಣುಮಕ್ಕಳು ಕಾಣುವ ವ್ಯಾಕುಲಪೂರ್ಣ ಸ್ವಪ್ನಗಳೂ ಲೈಂಗಿಕ ಇಚ್ಛೆಯ ಪ್ರತೀಕವೇ. ವಯಸ್ಸಾದ ಹೆಂಗಸನ್ನು ಸಮೀಪಿಸುತ್ತಿರುವಂತೆ ಕಂಡರೆ ಅದು ಸ್ವಪ್ನಿಯ ಈಡಿಪಸ್ ಕಾಂಪ್ಲೆಕ್ಸನ್ನು ಸೂಚಿಸುತ್ತದೆ.

ಹೀಗೆ ಅಸಂಖ್ಯ ಸಂಕೇತಗಳ ಮೂಲಕ ವ್ಯಕ್ತಿಯ ಅಸಭ್ಯ, ದುಷ್ಟ ಹಾಗೂ ಅನೈತಿಕ ಭಾವನೆಗಳು ಸ್ವಪ್ನದಲ್ಲಿ ಪರೋಕ್ಷವಾಗಿ ಪ್ರಕಟಗೊಳ್ಳುತ್ತವೆ.

6. ಪುನರ್ನಿರ್ಮಾಣ (ಸೆಕಂಡರಿ ಇಲ್ಯಾಬೊರೇಷನ್) ಸ್ವಪ್ನ ರಚನೆಯ ಇನ್ನೊಂದು ಕ್ರಿಯೆ. ಸುಪ್ತಚೇತನದಲ್ಲಿ ಅಡಕವಾಗಿರುವ ಅನಾರೋಗ್ಯಕಾರಿ ಇಚ್ಛೆಗಳು ಚೇತನಕ್ಕೂ ಬಂದು, ಚೇತನದ ಸಮತೋಲವನ್ನು ಕೆಡಿಸದಂತೆ ನೋಡಿಕೊಳ್ಳುವುದು ರೋಧಕದ ಮುಖ್ಯ ಕರ್ತವ್ಯ. ಕನಸುಗಳು ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಚಿತ್ರಗಳಾದರೂ ಈ ಚಿತ್ರಗಳು ತರ್ಕಬದ್ಧವಾಗಿಯಾಗಲಿ, ಕ್ರಮಬದ್ಧವಾಗಿಯಾಗಲಿ ಜೋಡಿಸಲ್ಪಟ್ಟಿರುವುದಿಲ್ಲ. ಈ ಜೋಡಣೆಯ ಮತ್ತು ಸಂಪಾದನೆ (ಎಡಿಟಿಂಗ್) ಕೆಲಸವನ್ನು ಸ್ವಪ್ನದ ಪುನರ್ನಿರ್ಮಾಣ ಕ್ರಿಯೆ ನಿರ್ವಹಿಸುತ್ತದೆ. ಇದು ನಿರ್ವಹಿಸುವ ಮತ್ತೊಂದು ಕರ್ತವ್ಯವೆಂದರೆ, ಅವ್ಯಕ್ತ ವಿಷಯಗಳೆಲ್ಲವನ್ನೂ ಈ ರೀತಿ ಕಥೆಯ ರೂಪಕ್ಕೆ ಒಳಪಡಿಸುವ ಕ್ರಿಯೆ ಅನುಚೇತನದ ಹಂತದಲ್ಲಿ ನಡೆಯುತ್ತದೆ. ಇದೇ ಪುನರ್ನಿರ್ಮಾಣಕ್ರಿಯೆ. ಕನಸನ್ನು ವಾಲ್ಟ್ ಡಿಸ್ನಿಯ ವ್ಯಂಗ್ಯಚಿತ್ರಗಳಿಗೆ ಹೋಲಿಸಬಹುದು. ಇಲ್ಲಿ ಚಿತ್ರಕ್ಕಿಂತ ಅದರ ಹಿಂದೆ ಅಡಗಿರುವ ಅರ್ಥ ಮುಖ್ಯ. ಆದ್ದರಿಂದಲೇ ವಿಶ್ಲೇಷಕನಿಗೆ ವ್ಯಕ್ತವಿಷಯ ಗೌಣ. ಅವನ ದೃಷ್ಟಿ ಯಾವಾಗಲೂ ಅವ್ಯಕ್ತವಿಷಯದ ಕಡೆಗೇ ಇರುತ್ತದೆ.

ಹೀಗೆ ಕನಸು ಅವ್ಯಕ್ತವಿಷಯದ ಅಸ್ಪಷ್ಟ ಹಾಗೂ ವಿಕೃತರೂಪ. ಈ ದೃಶ್ಯಗಳನ್ನು ವಿಭಜಿಸಿ ಅದರ ಹಿಂದೆ ಅಡಕವಾಗಿರುವ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದೇ ವಿಶ್ಲೇಷಕನ ಕೆಲಸ.

ಕನಸುಗಳು ಭೌತಿಕ ಹಾಗೂ ಮಾನಸಿಕ ಪ್ರಚೋದನೆಗಳೆರಡರಿಂದಲೂ ಉಂಟಾಗುತ್ತವೆ. ಭೌತಿಕ ಪ್ರಚೋದನೆಗಳು ವ್ಯಕ್ತಿ ನಿದ್ರಿಸುತ್ತಿರುವಾಗ ಅವನ ಇಂದ್ರಿಯಗಳೊಂದಿಗೆ ಸಂಪರ್ಕವೇರ್ಪಡಿಸಿಕೊಂಡಾಗ ಆತನಲ್ಲಿ ಕನಸನ್ನುಂಟು ಮಾಡುತ್ತವೆ. ನಿದ್ರಿಸುತ್ತಿರುವ ವ್ಯಕ್ತಿಯ ಕಿವಿಯ ಬಳಿ ನೊಣ ಗುಯ್ ಗುಟ್ಟುತ್ತ ಹಾರಾಡುತ್ತಿದ್ದರೆ ಅದು ಅವನಲ್ಲಿ ಜಲಪಾತದ ಸ್ವಪ್ನವನ್ನೊ ಬಿರುಗಾಳಿಯ ಸ್ವಪ್ನವನ್ನೊ ಉಂಟು ಮಾಡಬಹುದು. ಒಬ್ಬ ವಿದ್ಯಾರ್ಥಿ ಚಲನಚಿತ್ರದ ಎರಡನೆಯ ಪ್ರದರ್ಶನ ನೋಡಿ ಕೊಠಡಿಗೆ ಹಿಂದಿರುಗಿದ. ಆ ವೇಳೆಗೆ ಆತನ ಸ್ನೇಹಿತ ಕೊಠಡಿಯ ಬಾಗಿಲು ಮುಚ್ಚಿ ಮಲಗಿದ್ದ. ವಿದ್ಯಾರ್ಥಿ ಎರಡು ಮೂರು ಬಾರಿ ಬಾಗಿಲನ್ನು ಮೆತ್ತಗೆ ತಟ್ಟಿದರೂ ಸ್ನೇಹಿತನಿಗೆ ಎಚ್ಚರವಾಗಲಿಲ್ಲ. ಅನಂತರ ಕಿಟಕಿಯ ಬಳಿ ಬಂದು, ಮಲಗಿದ್ದ ಸ್ನೇಹಿತನ ಮುಖದ ಮೇಲೆ ಕೈಲಿದ್ದ ಟಾರ್ಚಿನಿಂದ ಬೆಳಕು ಬೀರಿ, ಕಿಟಕಿಯ ಬಾಗಿಲುಗಳನ್ನು ಜೋರಾಗಿ ಬಡಿದ. ಇದರಿಂದ ಮಲಗಿದ್ದ ಸ್ನೇಹಿತ ಗಾಬರಿಗೊಂಡವನಾಗಿಯೂ ದಿಗ್ಭ್ರಾಂತನಾಗಿಯೂ ಎದ್ದುಕೂತ. ಒಂದು ಕ್ಷಣ ಆತನಿಗೆ ಏನೂ ತೋಚಲಿಲ್ಲ. ಅನಂತರ ಎದ್ದು ಬಾಗಿಲು ತೆರೆದ. ಭಯಂಕರವಾದ ಗುಡುಗು, ಮಿಂಚು, ಬಿರುಗಾಳಿಗಳಿಂದ ಕೂಡಿದ ಮಳೆಗೆ ಸಿಕ್ಕಿಕೊಂಡಿದ್ದಂತೆ ತನಗೊಂದು

ಕನಸಾಯಿತೆಂದು ಆತ ಸ್ವಲ್ಪ ಹೊತ್ತಿನ ಅನಂತರ ವಿವರಿಸಿದ. ಬಾಗಿಲು ಬಡಿತದ ಸದ್ದು, ಟಾರ್ಚ್ ಬೆಳಕು–ಈ ಬಾಹ್ಯ ಪ್ರಚೋದನೆಯಿಂದಾಗಿ ಆತನಿಗೆ ಈ ಬಗೆಯ ಕನಸಾಯಿತು. ಇದೇ ರೀತಿಯಲ್ಲಿ ಅಜೀರ್ಣ, ಮಲಬದ್ಧತೆ, ದೇಹದ ಅಂಗಾಂಗಗಳಲ್ಲಿನ ಅಸೌಖ್ಯ, ಸುತ್ತಮುತ್ತ ನಡೆಯುತ್ತಿರುವ ಸದ್ದುಗದ್ದಲ ಮುಂತಾದ ಅನೇಕ ಬಾಹ್ಯ ಪ್ರಚೋದನೆಗಳು ನಿದ್ರಿಸುವ ವ್ಯಕ್ತಿಯಲ್ಲಿ ಕನಸುಗಳನ್ನುಂಟುಮಾಡುತ್ತವೆ.

ಆದರೂ, ಬಹು ಹೆಚ್ಚಿನ ಕನಸುಗಳು ಭೌತಿಕ ಪ್ರಚೋದನೆಗಳಿಗಿಂತ ಮಾನಸಿಕ ಪ್ರಚೋದನೆಗಳಿಂದಲೇ ಉತ್ಪನ್ನವಾಗುತ್ತವೆ. ಉದಾಹರಣೆಗೆ, ಈಡೇರದ ಬಯಕೆಗಳು, ಭಯ, ಉದ್ವಿಗ್ನತೆ, ವಿರೋಧ, ತುಮುಲತೆ ಮುಂತಾದವೆಲ್ಲ ಕನಸುಗಳಿಗೆ ಕಾರಣವಾದ ಮಾನಸಿಕ ಪ್ರಚೋದನೆಗಳು. ಇವುಗಳಿಂದ ಉತ್ಪನ್ನವಾಗುವ ಕನಸುಗಳಲ್ಲಿ ಹಲವು ವಿಧಗಳಿವೆ. ಮುಖ್ಯವಾದ ಕೆಲವನ್ನು ಮುಂದೆ ಸೂಚಿಸಿದೆ:

(i) ವ್ಯಕ್ತಿ ಎಚ್ಚರವಾಗಿದ್ದಾಗ ಏನನ್ನು ಕುರಿತು ಯೋಚಿಸುತ್ತಿದ್ದನೋ ಅದರ ಬಗ್ಗೆ ನಿರ್ಣಯಕ್ಕೆ ಬಂದಿರುವಂತೆ ಅಥವಾ ಸಮಸ್ಯೆಗೆ ಪರಿಹಾರ ದೊರಕಿದಂತೆ ಕೆಲವು ಬಾರಿ ಕನಸುಗಳಾಗುತ್ತವೆ. ಇವು ಸಮಸ್ಯೆ ಪರಿಹಾರ ಸ್ವಪ್ನಗಳು.

(ii) ಆತ್ಮವಿಮರ್ಶೆ ಅಥವಾ ಆತ್ಮಕಥೆಯಿಂದ ಕೂಡಿದ ಸ್ವಪ್ನಗಳು.

(iii) ವರ್ಣಸ್ವಪ್ನಗಳು: ಸಾಮಾನ್ಯವಾಗಿ ಹೆಚ್ಚಿನ ಸ್ವಪ್ನಗಳು ಕಪ್ಪು–ಬಿಳುಪು ಚಿತ್ರಗಳಿಂದ ಮಾತ್ರ ಕೂಡಿರುತ್ತವೆ. ಅಪುರೂಪಕ್ಕೆ ಸ್ವಪ್ನಗಳು ವರ್ಣರಂಜಿತವಾಗಿರುವುದೂ ಉಂಟು.

(iv) ವಿವರಣಾತ್ಮಕ ಸ್ವಪ್ನಗಳು: ಇಂಥ ಸ್ವಪ್ನಗಳು ದೊಡ್ಡವಾಗಿದ್ದು ವೈವಿಧ್ಯದಿಂದಲೂ ವಿಶೇಷವಾದ ವಿವರದಿಂದಲೂ ಕೂಡಿರುವುವಲ್ಲದೆ ಪರಿಚ್ಛೇದ ಮತ್ತು ಅಂಕಗಳಲ್ಲಿ ವಿಭಜಿತವಾಗಿರುತ್ತವೆ.

(v) ಶಬ್ದಚಮತ್ಕಾರದ ಮೇಲೆ ಆಧಾರಿತವಾಗಿರುವ ಕನಸುಗಳು.

(vi) ಉದ್ದಿಶ್ಯಪೂರ್ಣ ಸ್ವಪ್ನಗಳು.

(vii) ಭವಿಷ್ಯಸೂಚಕ ಸ್ವಪ್ನಗಳು: ತನ್ನ ಗಂಡ ಸೆನೇಟಿನಲ್ಲಿ ಕೊಲೆಯಾದಂತೆ ಸೀಸರನ ಪತ್ನಿ ಕಂಡಳೆಂದು ಹೇಳಲಾದ ಸ್ವಪ್ನವೊಂದು ಉದಾಹರಣೆ. ಆಕೆ ತಡೆದರೂ ಕೇಳದೆ ಸೀಸರ್ ಸೆನೇಟಿಗೆ ಹೋದ. ಕನಸು ನಿಜವಾಯಿತು.

(viii) ಸಮಕಾರಕ (ಕಾಂಪೆನ್ಸೇಟರಿ) ಸ್ವಪ್ನಗಳು: ವ್ಯಕ್ತಿಗಳು ವಾಸ್ತವ ಜೀವನದಲ್ಲಿ ದೋಷಗಳನ್ನೂ ನೈಚ್ಯಭಾವ ಸಂಕೀರ್ಣವನ್ನೂ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್) ಪಡೆದಿರುತ್ತಾರೆ. ಆದರೆ ಕನಸುಗಳಲ್ಲಿ ಇವೆಲ್ಲವನ್ನೂ ಜಯಿಸಿರುತ್ತಾರೆ. ಉದಾಹರಣೆಗೆ ತೊದಲುವ ದೋಷದಿಂದ ಕೂಡಿರುವಾತ ಕನಸಿನಲ್ಲಿ ಸರಾಗವಾಗಿ ಭಾಷಣ ಮಾಡುತ್ತಿರುವಂತೆ ಕಾಣಬಹುದು.

(ix) ಸೈನಿಕರ ಯುದ್ಧಸ್ವಪ್ನಗಳು: ಎಚ್ಚರವಾಗಿದ್ದಾಗ ಪಡೆದ ಅನುಭವ ಸನ್ನಿವೇಶಗಳೇ ಕನಸಿನಲ್ಲೂ ಕಾಣಿಸಿಕೊಳ್ಳುತ್ತವೆ.

(x) ಉದ್ವಿಗ್ನತಾಪೂರ್ಣ ಸ್ವಪ್ನಗಳು: ಸಾಂಸಾರಿಕ ಸಾಮಾಜಿಕ ಭಯಗಳು, ಲೈಂಗಿಕ ಜೀವನದ ಅತೃಪ್ತಿ ಮುಂತಾದ ಭಯಗಳು ಉದ್ವಿಗ್ನತಾಪೂರ್ಣ ಸ್ವಪ್ನಗಳನ್ನು ಉಂಟುಮಾಡುತ್ತವೆ. ತಾರುಣ್ಯಾವಸ್ಥೆಯಲ್ಲಿರುವ ಹೆಂಗಸರ ಮತ್ತು ಗಂಡಸರ ಹೆಚ್ಚಿನ ಸ್ವಪ್ನಗಳ ಹಿನ್ನೆಲೆಯಲ್ಲಿ ಇದನ್ನು ಕಾಣಬಹುದು. ಉದ್ವಿಗ್ನತೆ ಕಾಣಿಸಿಕೊಳ್ಳುವ ರೀತಿ ಅನೇಕ ವಿಧ. ಉದಾಹರಣೆಗೆ, ಪರೀಕ್ಷೆಗೆ ಕುಳಿತಿರುವಂತೆ, ಪ್ರಶ್ನೆ ಪತ್ರಿಕೆಗಳು ಬಹಳ ಕಠಿಣವಾಗಿರುವಂತೆ ಕಂಡುಬಂದು ಅದರಿಂದ ಮನಸ್ಸು ಉದ್ವಿಗ್ನವಾಗಬಹುದು; ಅಥವಾ ಕೊಲೆಯಾದಂತೆ, ಇಲ್ಲವೆ ಕೊಲೆ ಮಾಡಿದಂತೆ ಕಂಡುಬಂದು ಭಯಕಾರಕವಾಗಬಹುದು. ವ್ಯಕ್ತಿಯಲ್ಲಿ ಗುಪ್ತವಾಗಿರುವ ಹೆದರಿಕೆಗಳೂ ಅಧಿಕ ಪ್ರಮಾಣದ ಭಯಗಳೂ ನಿದ್ರಿಸುವ ವ್ಯಕ್ತಿಯಲ್ಲಿ ಭಯಂಕರ ಸ್ವಪ್ನಗಳನ್ನು (ನೈಟ್ ಮೇರ್) ಉಂಟುಮಾಡುತ್ತವೆ. ಮಗು ಎಲ್ಲಿ ಸತ್ತುಹೋಗುತ್ತದೋ ಎಂಬ ತಾಯಿಯ ಅತಿ ಭಯದಿಂದಾಗಿ ಅವಳಿಗೆ ಮಗು ಸತ್ತುಹೋಗಿರುವಂತೆಯೇ ಸ್ವಪ್ನವಾಗಬಹುದು. ಇಲ್ಲಿ ಅದು ಅವಳ ಇಚ್ಛೆಯನ್ನು ತೋರಿಸುವುದಿಲ್ಲ. ಅದಕ್ಕೆ ಬದಲು ಅವಳಲ್ಲಿ ಅಡಗಿರುವ ಭಯವನ್ನು, ಉದ್ವಿಗ್ನತೆಯನ್ನು ಸೂಚಿಸುತ್ತದೆ.

(xi) ಈಡೇರದೆ ಉಳಿದುಕೊಂಡ ಬಯಕೆಗಳೂ ಕನಸಿನಲ್ಲಿ ಪೂರೈಸಬಹುದು.

(xii) ನಿದ್ರಾರಕ್ಷಕ ಸ್ವಪ್ನಗಳು: ಹಲವು ಕನಸುಗಳು ನಿದ್ರಾರಕ್ಷಕಗಳು. ಉದಾಹರಣೆಗೆ, ನಿದ್ರೆಯಲ್ಲಿರುವಾಗ ವ್ಯಕ್ತಿಗೆ ಬಾಯಾರಿಕೆಯಾಗಬಹುದು; ಅಥವಾ ಮೂತ್ರಕೋಶ ತುಂಬಿದ್ದು, ಮೂತ್ರವಿಸರ್ಜನೆ ಮಾಡಬೇಕೆನಿಸಬಹುದು. ಆದರೂ ನಿದ್ರೆಯಿಂದ ಎಚ್ಚರಗೊಂಡು ಅಡುಗೆಮನೆಗೋ ಬಚ್ಚಲುಮನೆಗೋ ಎದ್ದುಹೋಗಲು ಮನಸ್ಸು ಒಪ್ಪುವುದಿಲ್ಲ. ಅಂಥ ಸಂದರ್ಭಗಳಲ್ಲಿ ಆ ಇಚ್ಛೆ ಕನಸಿನ ರೂಪದಲ್ಲಿ ಕಾಣಿಸಿಕೊಂಡು ಅದರಲ್ಲಿ ಪೂರೈಕೆಯಾಗಿರುತ್ತದೆ. ಉದಾಹರಣೆಗೆ, ಹೇರಳವಾಗಿ ನೀರು ಕುಡಿಯುತ್ತಿರುವಂತೆ ಅಥವಾ ಮೂತ್ರವಿಸರ್ಜನೆ ಮಾಡುತ್ತಿರುವಂತೆ ಕನಸಿನಲ್ಲಿ ಕಂಡುಬರುತ್ತದೆ. ಇದರಿಂದಾಗಿ ನಿದ್ರಿತ ವ್ಯಕ್ತಿಯ ತತ್‌ಕ್ಷಣದ ಆಸೆ ಪೂರೈಸಿದಂತಾಗುವುದರಿಂದ ಆತ ನಿದ್ರೆಯಿಂದ ಎಚ್ಚರಗೊಳ್ಳಬೇಕಾದ ಅವಶ್ಯಕತೆ ಯಿರುವುದಿಲ್ಲ.

(xii) ಕೆಲವು ಸಮಯಗಳಲ್ಲಿ ಒಂದೇ ಕನಸು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಆಗಾಗ್ಗೆ ಕಾಣಿಸಿಕೊಳ್ಳುತ್ತಿರುತ್ತದೆ. ಸ್ವಪ್ನಿ ಯಾವುದೋ ಸಮಸ್ಯೆಗೆ ಪರಿಹಾರ ದೊರಕದೆ ತೊಳಲಾಡುತ್ತಿರುವುದಕ್ಕೆ ಇದು ಸೂಚನೆ.

(xiv) ವ್ಯಕ್ತಿ ಒಮ್ಮೊಮ್ಮೆ ಕನಸಿನಲ್ಲಿ ಕೂಗಲು ಪ್ರಯತ್ನಿಸಬಹುದು. ಆದರೆ ಧ್ವನಿಯೇ ಹೊರಡುವುದಿಲ್ಲ. ಓಡಿಹೋಗಲು ಪ್ರಯತ್ನಿಸಿದಲ್ಲೂ ಕಾಲುಗಳು ನೆಲಕ್ಕೆ ಅಂಟಿಕೊಳ್ಳುತ್ತವೆ. ಉಸಿರು ಕಟ್ಟಿದಂತಾಗುತ್ತದೆ. ಹೀಗೆ ಅನೇಕ ರೀತಿಯಲ್ಲಿ ಸ್ವಪ್ನದಲ್ಲಿ ಚಟುವಟಿಕೆಗಳಿಗೆ ತಡೆಯೊದಗುತ್ತದೆ. ಇಂಥ ಸ್ವಪ್ನಗಳು ಸ್ವಪ್ನಿಯಲ್ಲಿರುವ ಇಡ್ ಮತ್ತು ಆದಿಅಹಂಗಳ ನಡುವಿನ ಘರ್ಷಣೆಯನ್ನು ಸೂಚಿಸುತ್ತವೆ.

(xv) ಕೊನೆಯದಾಗಿ ಕೆಲವು ಸಾಧಾರಣ ಸ್ವಪ್ನಗಳನ್ನು ಉದಾಹರಿಸಬಹುದು: ಹಾರಾಡುತ್ತಿರುವಂತೆ, ಈಜುತ್ತಿರುವಂತೆ, ಬೀಳುತ್ತಿರುವಂತೆ, ಸವಾರಿ ಮಾಡುತ್ತಿರುವಂತೆ, ಹತ್ತುತ್ತಿರುವಂತೆ, ಪ್ರಯಾಣ ಮಾಡುತ್ತಿರುವಂತೆ, ರೈಲು ಬಸ್ಸು ತಪ್ಪಿದಂತೆ, ಬೆತ್ತಲೆಯಾಗಿರುವಂತೆ, ಪ್ರಣಯಕ್ರೀಡೆಯಲ್ಲಿರುವಂತೆ, ಸಾಹಸಕೃತ್ಯಗಳನ್ನು ಮಾಡುತ್ತಿರುವಂತೆ. ಇವೆಲ್ಲ ಸಾಧಾರಣವಾಗಿ ಎಲ್ಲರಲ್ಲೂ ಹೆಚ್ಚು ಪ್ರಮಾಣದಲ್ಲಿ ಕಂಡುಬರುವ ಸ್ವಪ್ನಗಳಾಗಿವೆ.

ಕನಸಿನ ಕೆಲವು ಸಾಮಾನ್ಯ ಲಕ್ಷಣಗಳಿವು:

ಎಚ್ಚರವಾಗಿರುವಾಗ ವ್ಯಕ್ತಿ ಹೊರವಿಶ್ವವನ್ನು ಹೇಗೆ ಜ್ಞಾನೇಂದ್ರಿಯಗಳ ಮೂಲಕ ತಿಳಿಯುತ್ತಾನೆಯೋ ಹಾಗೆಯೇ ಕನಸನ್ನೂ ಆ ಮೂಲಕವೇ ತಿಳಿಯತ್ತಾನೆ. ಸ್ವಪ್ನಗಳು ಹೆಚ್ಚಾಗಿ ತಿಳಿಯಬರುವುದು ದೃಶ್ಯೇಂದ್ರಿಯದ ಮೂಲಕವೇ. ಶ್ರವಣೇಂದ್ರಿಯದ ಮೂಲಕ (ಅಂದರೆ ಕನಸಿನಲ್ಲಿ ದೃಶ್ಯಭಾಗವಿರದೆ ಕೇವಲ ಶಬ್ದಗಳು ಮಾತ್ರ ಕೇಳಿಬರುತ್ತವೆ) ತಿಳಿಯಬರುವ ಸ್ವಪ್ನಗಳೂ ಸಾಕಷ್ಟು ಸಂಖ್ಯೆಯಲ್ಲಿರುತ್ತವೆ. ಇದೇ ರೀತಿಯಲ್ಲಿ ಕೇವಲ ಘ್ರಾಣೇಂದ್ರಿಯದ ಮೂಲಕವೂ ಕನಸುಗಳನ್ನು ಅನುಭವಿಸಬಹುದು. ಅಂದರೆ ಕೇವಲ ವಾಸನೆಗಳು ತಿಳಿದುಬರುತ್ತವೆಯೇ ವಿನಾ ಶಬ್ದಭಾಗವಾಗಲಿ, ದೃಶ್ಯಭಾಗವಾಗಲಿ ಇರುವುದಿಲ್ಲ. ಇಂಥ ಕನಸುಗಳು ಬಹಳ ವಿರಳ. ಮಕ್ಕಳು ತಮ್ಮ ಐದನೆಯ ವರ್ಷದ ಒಳಗೆ ಅಂಧರಾದರೆ ಮುಂದೆ ಅವರ ಕನಸುಗಳಲ್ಲಿ ದೃಶ್ಯಭಾಗ ಮಾಯವಾಗಿದ್ದು ಅವು ಶಬ್ದ ಮತ್ತು ವಾಸನೆಗಳಿಂದ ಮಾತ್ರ ಕೂಡಿರುತ್ತವೆ.

**ಹಗಲುಗನಸು:** ಹಗಲುಗನಸಿಗೂ ಕನಸಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಹಗಲುಗನಸಿನಲ್ಲಿ ದೃಶ್ಯಭಾಗಗಳಿರುವುದಿಲ್ಲ. ಅಲ್ಲದೆ, ಆಸೆಗಳೂ ಆಕಾಂಕ್ಷೆಗಳೂ ಅವುಗಳ ನೇರರೂಪದಲ್ಲಿ ಹೆಚ್ಚು ಸ್ಪಷ್ಟತೆಯಿಂದ ಪ್ರಕಟಗೊಳ್ಳುತ್ತವೆ. ಚಾರ್ಲ್ಸ್‌ಲ್ಯಾಂಬನ ಡ್ರೀಂ ಚಿಲ್ಡ್ರನ್ ಎಂಬ ಕೃತಿ ಹಗಲುಗನಸಿನ ಕೊಡುಗೆ. ಕನ್ನಡ ಪ್ರಬಂಧಕಾರ ಎ.ಎನ್. ಮೂರ್ತಿರಾಯರು ಹಗಲುಗನಸುಗಳು ಎಂಬ ಅಭಿದಾನದಲ್ಲಿ ಒಂದು ಪ್ರಬಂಧವನ್ನೇ ನೇಯ್ದಿದ್ದಾರೆ. ಹಗಲುಗನಸಿನಲ್ಲಿ ಆಶಾವಾದವೂ ದೃಢಭಾವನೆಗಳೂ ಭಗ್ನಮನೋರಥಗಳೂ ನಿರಾಶೆಗಳೂ ಸ್ಪಷ್ಟವಾಗಿ ಪ್ರತಿಫಲಿಸುತ್ತವೆ. ನಿತ್ಯದ ಅನೇಕ ತೊಂದರೆಗಳೂ ಅಸಹಾಯಕತೆಗಳೂ ವ್ಯಕ್ತಿಯನ್ನು ದುಃಖಿತನನ್ನಾಗಿಯೂ ನಿರಾಶನನ್ನಾಗಿಯೂ ಮಾಡುತ್ತವೆ. ಇದೇ ಭಾವನೆಯೆ ಅವನಲ್ಲಿ ಬಹಳ ಕಾಲ ಉಳಿದರೆ, ಅದು ಅವನ ಮಾನಸಿಕ ಸಮತೋಲವನ್ನು ಕೆಡಿಸಬಹುದು. ಇದರಿಂದ ತಪ್ಪಿಸಿಕೊಳ್ಳಲು ಹಾಗೂ ವಾಸ್ತವಿಕತೆ ಯಲ್ಲಿರುವ ಅಸಮರ್ಪಕತೆಯಿಂದ ತಪ್ಪಿಸಿಕೊಂಡು ತನ್ನ ಈಡೇರದ ಬಯಕೆಗಳನ್ನು ಪೂರೈಸಿಕೊಳ್ಳಲು ಹಗಲುಗನಸಿನ ಮರೆಹೋಗುತ್ತಾನೆ. ಹಗಲುಗನಸುಗಳೆಲ್ಲ ವ್ಯಕ್ತಿಯ ಸುತ್ತಲೇ ಹೆಣೆಯಲ್ಪಟ್ಟಿದ್ದು ವ್ಯಕ್ತಿಯೇ ಅದರ ಪ್ರಧಾನ ಪಾತ್ರಧಾರಿ.

ಪ್ರತಿಯೊಂದು ಮಗುವಿನಲ್ಲೂ ಉತ್ಸಾಹವೂ ಸಾಹಸಪ್ರಿಯತೆಯೂ ಎಲ್ಲರ ಮುಂದೆಯೂ ತನ್ನ ಪ್ರಭಾವವನ್ನು ತೋರಿಸಿಕೊಳ್ಳಬೇಕೆಂಬ ಆಸೆಯೂ ಇರುತ್ತವೆ. ಇಂಥ ಮನೋಭಾವಗಳಲ್ಲಿ ಕೆಲವಂಶಗಳು ಹಗಲುಗನಸುಗಳಲ್ಲಿ ಸಾರ್ಥಕ ಹೊಂದುತ್ತವೆ. ತಿರುಕನ ಕನಸು ಒಂದು ಉದಾಹರಣೆ. ಜನರನ್ನು ಆಕರ್ಷಿಸಲು ಅಶಕ್ತಳಾಗಿರುವ ಕುರೂಪಿ ಹೆಂಗಸು ತನ್ನ ಹಗಲುಗನಸಿನಲ್ಲಿ ತನ್ನನ್ನು ಸುರಸುಂದರಿಯಂತೆ ಚಿತ್ರಿಸಿಕೊಂಡು, ಸುತ್ತಮುತ್ತ ಹತ್ತಾರು ಆರಾಧಕರು ಅಂಗಲಾಚುತ್ತಿರುವಂತೆ ಕಲ್ಪಿಸಿಕೊಳ್ಳಬಹುದು.

ಹಗಲುಗನಸುಗಳು ಎಲ್ಲ ವಯಸ್ಸಿನವರಲ್ಲೂ ಕಂಡುಬರುತ್ತವೆ. ಆದರೆ ತಾರುಣ್ಯಾವಸ್ಥೆ ಯಲ್ಲಿ ವಿಶೇಷ. ಆಗಿನ ಹೆಚ್ಚಿನ ಹಗಲುಗನಸುಗಳೆಲ್ಲ ವ್ಯಕ್ತಿಯ ಭವಿಷ್ಯತ್ತು, ಸಾಹಸ, ಪ್ರಣಯ, ಸುಖದ ನಿರೀಕ್ಷೆ, ಗತವೈಭವ ಮುಂತಾದವನ್ನು ವಿಶೇಷವಾಗಿ ಒಳಗೊಂಡಿರುತ್ತವೆ. ಹಗಲುಗನಸು ವಾಸ್ತವಿಕತೆ ಹಾಗೂ ನೈಜತೆಯ ನಿರ್ಬಂಧದಿಂದ ಪೂರ್ಣವಾಗಿ ಮುಕ್ತವಾಗಿರುತ್ತದೆ. ಹಗಲುಗನಸಿನಲ್ಲಿ ವ್ಯಕ್ತಿಯ ಕಲ್ಪನೆಗಳು ಮೇರೆಯಿಲ್ಲದೆ ಮೈದಾನದಲ್ಲಿ ಅನಂತ ರೂಪಗಳಲ್ಲಿ ಪ್ರಕಟಗೊಳ್ಳುತ್ತವೆ.

ಕಾದಂಬರಿಗಳನ್ನು ಓದುವಾಗಲೂ ಇದನ್ನು ಗಮನಿಸಬಹುದು. ಅನೇಕ ವೇಳೆ ಓದುಗ ತನ್ನ ವ್ಯಕ್ತಿತ್ವವನ್ನು ಮರೆತು, ಕಾದಂಬರಿಯ ನಾಯಕ ನಾಯಕಿಯರಲ್ಲಿ ಒಂದಾಗಿರುತ್ತಾನೆ. ಆದ್ದರಿಂದಲೇ ಕಥೆ ಚಲನಚಿತ್ರಗಳು ವಿಶೇಷ ಪ್ರೀತಿಗೆ ಪಾತ್ರವಾಗಿವೆ.

ಹಗಲುಗನಸಿಗೂ ಒಂದು ಮಿತಿ ಇರಬೇಕು; ಆಗ ಮಾತ್ರ ಅದು ವ್ಯಕ್ತಿಯ ಜೀವನದಲ್ಲಿ ಉಪಯುಕ್ತ ಪಾತ್ರವಹಿಸುತ್ತದೆ. ಹಗಲುಗನಸು ಒಂದು ರೀತಿಯ ಮನೋವಿಹಾರ. ಒಂದು ರೀತಿಯ ಅವ್ಯಕ್ತ ಹಾಗೂ ಅವರ್ಣನೀಯವಾದ–ಅದರೆ ತೋರಿಕೆಯ–ಉತ್ಸಾಹ, ಶಕ್ತಿ, ಆಶಾಭಾವನೆ ಮತ್ತು ಭಾವೋದ್ರೇಕಗಳಿಂದ ಕೂಡಿರುತ್ತದೆ. ಈ ರೀತಿಯ ಶಕ್ತಿಸಂಚಯನದಿಂದ ವ್ಯಕ್ತಿಯ ನಿತ್ಯಜೀವನದಲ್ಲಿಯ ಚಟುವಟಿಕೆಗಳಿಗೆ ಒಂದು ರೀತಿಯ ಉತ್ತೇಜನ ದೊರಕುತ್ತದೆ. ಅವನ ಧ್ಯೇಯ ಸಾಧನೆಗೆ ಇದು ಸಹಕಾರಿಯಾಗುತ್ತದೆ.

ಇಷ್ಟಾದರೂ ಹಗಲುಗನಸು ಕಾಣುವುದು ಒಂದು ದೃಷ್ಟಿಯಿಂದ ದೋಷಪೂರಿತ. ವ್ಯಕ್ತಿ ವಾಸ್ತವಿಕತೆಯನ್ನು ಎದುರಿಸಲು ಅಶಕ್ತನಾದಾಗಲೆಲ್ಲ ಹಗಲುಗನಸಿನ ಮರೆಹೊಕ್ಕರೆ, ಹಗಲುಗನಸಿನಲ್ಲೇ ತನ್ನೆಲ್ಲ ಹೆಚ್ಚಿನ ಸಮಯವನ್ನೂ ವ್ಯಯ ಮಾಡುತ್ತ ಹೋದರೆ ಮುಂದೆ ಆತ ವಾಸ್ತವಿಕ ಪ್ರಪಂಚದಲ್ಲಿ ಸಮರ್ಪಕವಾಗಿ ಹೊಂದಿಕೊಂಡು ಬಾಳು ನಡೆಸಲಾರ. ಕಲ್ಪನಾಶಕ್ತಿ ವ್ಯಕ್ತಿಯ ಜೀವನವನ್ನು ರೂಪಿಸುವುದರಲ್ಲಿ ಸಹಾಯಕವಾಗಿರಬೇಕೇ ವಿನಾ ಅವನ ನಿತ್ಯಜೀವನಕ್ಕೆ ಅಡ್ಡಿಯಾಗಬಾರದು.

ಹಗಲುಗನಸು ಅತಿರೇಕಾವಸ್ಥೆಯನ್ನು ಮುಟ್ಟಿದಾಗ ವ್ಯಕ್ತಿಗೆ ಕಲ್ಪನಾಲೋಕವೇ ಹೆಚ್ಚು ವಾಸ್ತವಿಕವಾಗಿ ಕಂಡುಬರುತ್ತದೆ. ನೈಜತೆ ಮತ್ತು ಅನ್ಯೆಜತೆಗಳ ನಡುವಿನ ವ್ಯತ್ಯಾಸವನ್ನು ಗುರ್ತಿಸುವುದರಲ್ಲಿ ಆತ ಅಶಕ್ತನಾಗಿರುತ್ತಾನೆ. ಈ ಅವಸ್ಥೆಯೇ ಮತ್ತಷ್ಟು ಮುಂದುವರಿದಾಗ ಆ ವ್ಯಕ್ತಿಗೆ ಸರಾಗವಾಗಿ ಮಾತಾಡಲೂ ಸಾಧ್ಯವಾಗುವುದಿಲ್ಲ. ಆತ ತನ್ನ ಸುತ್ತಮುತ್ತಲಿನವ ರೊಂದಿಗೆ ಹೊಂದಿಕೊಳ್ಳಲಾರ. ಕೊನೆಗೆ ಸ್ವಪ್ನಲೋಕದಲ್ಲೇ ಬಂದಿಯಾಗಿ ಮನೋವಿದಳನ ದಲ್ಲಿ (ಸ್ಕಿಜ಼ೋಫ್ರೇನಿಯ) ಪರ್ಯವಸಾನ ಹೊಂದಬಹುದು. ಇಂಥವ ಹೊರಜಗತ್ತಿನೊಂದಿಗೆ ಸಂಪೂರ್ಣವಾಗಿ ಸಂಪರ್ಕ ಕಳೆದುಕೊಂಡಿದ್ದರೂ ಇವನ ಕಲ್ಪನಾಶಕ್ತಿ ಮಾತ್ರ ಅಗಾಧ ವಾಗಿರುತ್ತದೆ. ತಲೆದಿಂಬನ್ನೇ ತಬ್ಬಿಕೊಂಡು, ತನ್ನ ಗತಿಸಿದ ಪುತ್ರ ಮರಳಿ ಬಂದಂತೆ ಭಾವಿಸಿಕೊಂಡು, ಅದರೊಂದಿಗೆ ಮಾತಾಡುವ, ಮುದ್ದಿಸುವ ಅನೇಕ ರೋಗಿಗಳು ಕಂಡುಬಂದಿದ್ದಾರೆ.

ಈ ರೀತಿಯ ಅತಿರೇಕದ ಅಪಾಯದಿಂದ ಮಕ್ಕಳನ್ನು ತಪ್ಪಿಸಬೇಕಾದರೆ, ಅವರನ್ನು ಕ್ರೂರವಾಗಿ ಶಿಕ್ಷಿಸುವುದರಿಂದಾಗಲಿ ವಾಸ್ತವಿಕತೆಯ ಪರಿಚಯವನ್ನು ಒಮ್ಮೆಲೇ ಮಾಡಿಸುವುದರಿಂದಾಗಲಿ ಪ್ರಯೋಜನವಾಗುವುದಿಲ್ಲ. ಅದಕ್ಕೆ ಬದಲು ಸಾವಕಾಶವಾಗಿ, ತಾಳ್ಮೆಯಿಂದ ಅವರನ್ನು ಪರಿವರ್ತಿಸಬೇಕು. ಹಗಲುಗನಸಿನಲ್ಲಿ ಸಿಗುವ ಸುಖಕ್ಕಿಂತ ವಾಸ್ತವಿಕವಾಗಿ ನಡೆದುಕೊಳ್ಳುವುದರಲ್ಲಿ ಹೆಚ್ಚಿನ ಸುಖವಿರುವುದನ್ನು ಮನವರಿಕೆ ಮಾಡಿಕೊಡಬೇಕು. ವಾಸ್ತವಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅದರೊಂದಿಗೆ ಹೋರಾಡಿ ಜಯ ಗಳಿಸುವ ಹುಮ್ಮಸ್ಸನ್ನು ಅವರಲ್ಲಿ ತುಂಬಬೇಕು. (ಎಲ್.ಎನ್.ಪಿ.)

**ಕನಿಂಗ್‌ಹ್ಯಾಂ, ಆಲನ್ :** 1784–1842. ಕವಿ, ಲೇಖಕ. ಡಮ್‌ಫ್ರಿಷೈರಿನ ಡಾಲ್‌ವಿಂಗ್‌ಟನ್‌ನಲ್ಲಿ ಹುಟ್ಟಿದ. ಇವನ ತಂದೆಗೂ ರಾಬರ್ಟ್ ಬರ್ನ್ಸ್ ಕವಿಗೂ ಗೆಳೆತನವಿತ್ತಾದ ಕಾರಣ ಕನಿಂಗ್‌ಹ್ಯಾಮನಿಗೆ ಬಾಲ್ಯದಲ್ಲಿ ಆ ಕವಿಮಹಾಶಯನ ಪರಿಚಯ ಲಾಭವಾಯಿತು. ಕಲ್ಲುಕೆಲಸ ಮಾಡುತ್ತಿದ್ದ ತನ್ನ ಅಣ್ಣನೊಡನೆ ಈತ ಕೆಲಸ ಕಲಿಯಲು ಸೇರಿದನಾದರೂ ಬಿಡುವು ದೊರೆತಾಗಲೆಲ್ಲ ವ್ಯಾಸಂಗ, ಲಾವಣಿರಚನೆಗಳಲ್ಲಿ ಆಸಕ್ತನಾಗಿರುತ್ತಿದ್ದ. ಕ್ರೋಮೆಕ್ ಸಂಪಾದಿಸಿರುವ ರಿಮೇನ್ಸ್ ಆಫ್ ನಿತ್‌ಸ್‌ಡೇಲ್ ಅಂಡ್ ಗ್ಯಾಲೊವೆ ಸಾಂಗ್ (1810) ಎಂಬುದರಲ್ಲಿ ಕನಿಂಗ್‌ಹ್ಯಾಂನ ಕವನಗಳನ್ನು ಕಾಣಬಹುದು. ತನ್ನ ಕವನಗಳಿಂದಾಗಿ ಈತನಿಗೆ ಸ್ಕಾಟ್ ಮತ್ತು ಹಾಗ್‌ರ ಗೆಳೆತನದ ಲಾಭವಾಯಿತು. ಹೀಗಾಗಿ ಈತ ಲಂಡನ್‌ಗೆ ಹೋಗಿ ಅಲ್ಲಿ ಸಂಸತ್ತಿನ ವರದಿಗಾರನಾಗಿಯೂ ಶಿಲ್ಪಿ ಚಾಂಟ್ರೆಯ ಸಹಾಯಕನಾಗಿಯೂ ಕೆಲಸಮಾಡುತ್ತ ತನ್ನ ಸಾಹಿತ್ಯಚಟುವಟಿಕೆಗಳನ್ನು ಮುಂದುವರಿಸಿದ. ಈತನ ಪ್ರಸಿದ್ಧ ಕೃತಿಗಳೆಂದರೆ ಟ್ರೆಡಿಷನಲ್ ಟೇಲ್ಸ್ ಆಫ್ ದಿ ಇಂಗ್ಲಿಷ್ ಅಂಡ್ ಸ್ಕಾಟಿಷ್ ಪೆಸೆಂಟ್ರಿ (1822), ದಿ ಸಾಂಗ್ಸ್ ಆಫ್ ಸ್ಕಾಟ್ಲೆಂಡ್, ಏನ್ಷಂಟ್ ಅಂಡ್ ಮಾಡರ್ನ್ (1825), ಲೈವ್ಸ್ ಆಫ್ ದಿ ಮೋಸ್ಟ್ ಎಮಿನೆಂಟ್ ಬ್ರಿಟಿಷ್ ಪೇಂಟರ್ಸ್, ಸ್ಕಲ್ಪ್ಚರ್ಸ್ ಅಂಡ್ ಆರ್ಕಿಟೆಕ್ಟ್ಸ್ (1829–33). ಲೈಫ್ ಆಫ್ ಸರ್ ಡೇವಿಡ್ ವಿಲ್ಕಿ (1843). ಈತನ ಪ್ರಸಿದ್ಧ ಕವನ ಎ ವೆಟ್ ಷೀಟ್ ಅಂಡ್ ಎ ಫ್ಲೋಯಿಂಗ್ ಸಿ ಎನ್ನುವುದು ಮೇಲೆ ಹೇಳಿದ ಎರಡನೆಯ ಗ್ರಂಥದಲ್ಲಿ ಸೇರಿದೆ. ಇಷ್ಟಲ್ಲದೆ ಈತ ರಾಬರ್ಟ್ ಬರ್ನ್ಸನ ಕೃತಿಗಳನ್ನು ಸಂಪಾದಿಸಿದ್ದಾನೆ ಹಾಗೂ ಮೂರು ಕಾದಂಬರಿಗಳನ್ನು ಬರೆದಿದ್ದಾನೆ. (ಎನ್.ಎಸ್.ಎಲ್.)

**ಕನಿಂಗ್‌ಹ್ಯಾಂ, ಸರ್ ಅಲೆಕ್ಸಾಂಡರ್ :** 1814–93. ಭಾರತೀಯ ಪುರಾತತ್ತ್ವಶಾಸ್ತ್ರದ ಜನಕ. ಸ್ಕಾಟಿಷ್ ಕವಿ ಆಲನ್ ಕನಿಂಗ್‌ಹ್ಯಾಮನ ಎರಡನೆಯ ಮಗ. ಲಂಡನ್, ಅಡಿಸ್‌ಕೂಂಬ್ ಮತ್ತು ಛಾಥಾಮ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿ ಆರ್.ಇ.ಪದವಿ ಗಳಿಸಿದ. 1831ರಲ್ಲಿ ಬೆಂಗಾಲ್ ಎಂಜಿನಿಯರ್ಸ್ ವಿಭಾಗದಲ್ಲಿ ಸೆಕೆಂಡ್ ಲೆಫ್ಟನೆಂಟ್ ಆಗಿ ನೇಮಕಗೊಂಡು ಲೋಕೋಪಯೋಗಿ ಇಲಾಖೆಯಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿ, ಭಾರತದ ಗವರ್ನರ್–ಜನರಲ್ ಲಾರ್ಡ್ ಆಕ್‌ಲ್ಯಾಂಡನ ಎ.ಡಿ.ಸಿ. ಆದ. ಒಂದನೆಯ ಮತ್ತು ಎರಡನೆಯ ಸಿಖ್ ಯುದ್ಧಗಳಲ್ಲಿ ಕ್ಷೇತ್ರ ಎಂಜಿನಿಯರ್ ಆಗಿದ್ದನಲ್ಲದೆ ಅನಂತರ ಬರ್ಮ ಮತ್ತು ವಾಯವ್ಯ ಪ್ರಾಂತ್ಯಗಳಲ್ಲಿ ಮುಖ್ಯ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿದ. ಜೇಮ್ಸ್ ಪ್ರಿನ್ಸೆಪ್‌ನ ಸ್ನೇಹದಿಂದಾಗಿ ಈತನಿಗೆ ಭಾರತೀಯ ಪುರಾತತ್ತ್ವದಲ್ಲಿ ಆಸಕ್ತಿ ಬೆಳೆಯಿತು.

ಆತನ ಪ್ರಾಚ್ಯಸಂಶೋಧನ ಕಾರ್ಯದಲ್ಲಿ ಕನಿಂಗ್‌ಹ್ಯಾಂವ್ ನೆರವು ನೀಡಿದ. ಆಗಿನಿಂದ ಈತ ತನ್ನ ವಿರಾಮ ವೇಳೆಯನ್ನು ಇದರ ಅಭ್ಯಾಸಕ್ಕಾಗಿ ವಿನಿಯೋಗ ಮಾಡಲಾರಂಭಿಸಿದ. ಈತ ಸಾರನಾಥ ಸ್ತೂಪದ ವಿಷಯವಾದ ಸಂಶೋಧನೆಗಳನ್ನು ಆರಂಭಿಸಿದ್ದು 1834–35ರಲ್ಲಿ. ಇದೇ ಸಮಯದಲ್ಲಿ ಮಾರ್ಕ್ಹ್ಯಾಂ ಕಿಟೋ, ಎಡ್ವರ್ಡ್ ಥಾಮಸ್, ಸರ್ ವಾಲ್ಟರ್ ಎಲಿಯಟ್, ಜೆ. ಸ್ಟೀವನ್‌ಸನ್ ಮತ್ತು ಭೌದಾಜಿ ಇವರು ದೇಶದ ವಿವಿಧ ಭಾಗಗಳಲ್ಲಿ ಪ್ರಾಕ್ತನ ಅವಶೇಷಗಳ ಅಭ್ಯಾಸದಲ್ಲಿ ನಿರತರಾದರು. ಪ್ರಿನ್ಸೆಪ್‌ನ ನಿಧನದ (1840) ಅನಂತರ ಕೆಲಕಾಲ ಸ್ಥಗಿತವಾಗಿದ್ದ ಈ ಕಾರ್ಯವನ್ನು ಕನಿಂಗ್‌ಹ್ಯಾಂ ಮುಂದುವರಿಸಬೇಕಾಯಿತು. 1847ರಲ್ಲಿ ಕನಿಂಗ್‌ಹ್ಯಾಂ ಅಧ್ಯಕ್ಷತೆಯಲ್ಲಿದ್ದ ಸಮಿತಿಯೊಂದು ಲಡಾಕ್–ಟಿಬೆಟ್ ಗಡಿಯ ಸಮಸ್ಯೆಗಳನ್ನು ಪರಿಶೀಲಿಸುತ್ತಿದ್ದಾಗ ಈತ ಕಾಶ್ಮೀರದ ದೇವಾಲಯಗಳ ಮೇಲೊಂದು ಮತ್ತು ಲಡಾಕ್‌ನ ಭೌಗೋಳಿಕ ಮತ್ತು ಐತಿಹಾಸಿಕ ಮಾಹಿತಿಗಳ ಮೇಲೊಂದು ಹೀಗೆ ಎರಡು ಗ್ರಂಥಗಳನ್ನು ಪ್ರಕಟಿಸಿದ. 1851ರಲ್ಲಿ ಮಧ್ಯ ಭಾರತದ ಬೌದ್ಧ ಅವಶೇಷಗಳನ್ನು ಅಭ್ಯಾಸ ಮಾಡಿದುದರ ಫಲವಾಗಿ (1854) ಭಿಲ್ಸಾ ತೋಪೆಗಳು ಎಂಬ ಗ್ರಂಥ ಪ್ರಕಟವಾಯಿತು.

ಪ್ರಾಕ್ತನ ಸರ್ವೇಕ್ಷಣ ವಿಭಾಗವನ್ನು ಸ್ಥಾಪಿಸಬೇಕೆಂದು 1848ರಲ್ಲೇ ಈತ ಭಾರತ ಸರ್ಕಾರಕ್ಕೆ ಸಲಹೆ ಮಾಡಿದ್ದ. ಆದರೆ ಇದಕ್ಕೆ ಪುರಸ್ಕಾರ ದೊರಕಿರಲಿಲ್ಲ. 1861ರಲ್ಲಿ ಈ ಸಲಹೆಯನ್ನು ಪುನಃ ಮಂಡಿಸಿದ. ಆ ವರ್ಷ ಸೈನ್ಯ ಇಲಾಖೆಯಿಂದ ನಿವೃತ್ತಿ ಹೊಂದಿದ್ದ. ಆಗ ಗವರ್ನರ್–ಜನರಲ್ ಲಾರ್ಡ್ ಕ್ಯಾನಿಂಗನಿಗೆ ಈ ಸಲಹೆಯಲ್ಲಿ ಆಸಕ್ತಿ ಹುಟ್ಟಿತು. ಪ್ರಾಕ್ತನ ಅವಶೇಷಗಳಲ್ಲಿ ಸಂರಕ್ಷಣೆಗೆ ಯೋಗ್ಯವಾದವುಗಳ ನಕಾಶೆ, ಛಾಯಾಚಿತ್ರ, ಪರಿಮಾಣಗಳ ಅಳತೆ ಮತ್ತು ಶಾಸನಗಳ ಪ್ರತಿಕೃತಿಗಳನ್ನು ತಯಾರಿಸಲು 1861ರಲ್ಲಿ ಕನಿಂಗ್‌ಹ್ಯಾಂ ಸರ್ವೇಯರ್ ಆಗಿ 450 ರೂ.ಗಳ ಮಾಸಿಕ ವೇತನದ ಮೇಲೆ ನೇಮಕವಾದ. ಅಲೆಕ್ಸಾಂಡರನ ದಂಡಯಾತ್ರೆಯ ಮತ್ತು ಚೀನಾಪ್ರವಾಸಿ ಹ್ಯೂಯೆನ್ ತ್ಸಾಂಗನ ಪ್ರವಾಸದ ಮಾರ್ಗಗಳ ವಿಷಯವಾಗಿ ಕನಿಂಗ್‌ಹ್ಯಾಂ ಸಂಶೋಧನೆಗಳ ಫಲವಾದ ದಿ ಏನ್‌ಷಂಟ್ ಜಿಯೋಗ್ರಫಿ ಆಫ್ ಇಂಡಿಯಾ (ಭಾರತದ ಪುರಾತನ ಭೂವಿವರಣೆ) ಎಂಬ ಗ್ರಂಥ ಪ್ರಕಟವಾದದ್ದು 1871ರಲ್ಲಿ. (ಈಗಲೂ ಅದು ಒಂದು ಮುಖ್ಯ ಆಧಾರ ಗ್ರಂಥವಾಗಿದೆ. ಭಾರತದಲ್ಲಿ ಸಂಶೋಧನಾಧಿಕಾರಿಯಾಗಿದ್ದ ಕಾಲದಲ್ಲಿ ಬಿಹಾರ ಮತ್ತು ವಾರಾಣಸಿ ಪ್ರದೇಶಗಳಲ್ಲಿ ಅಶೋಕ ನಿರ್ಮಿತವಾದ ಬರಾಬರ್ ಗುಹೆಗಳು, ಬುದ್ಧಗಯೆ ಮುಂತಾದ 24 ನಿವೇಶನಗಳ ಅವಶೇಷಗಳನ್ನೂ, ಫತೇಪುರ್, ಕನೌಜ್, ರೂರ್ಕಿ, ಕಾಲ್ಸಿ, ಮಥುರಾ ಮತ್ತು ದೆಹಲಿಗಳ ಅವಶೇಷಗಳನ್ನೂ ಸಂಕಿಸ್ಸವೆಂಬ ಬೌದ್ಧನಿವೇಶನವನ್ನೂ ಪಂಜಾಬಿನಲ್ಲಿ ಅಲೆಕ್ಸಾಂಡರನ ದಾಳಿಯ ಮಾರ್ಗಗಳನ್ನೂ ಜಮಾಲ್‌ಘರೀ, ಯೂಸಫ್‌ಜಾಹಿ, ತಕ್ಷಶಿಲಾ, ಮಾಣಿಖ್ಯಾಲ, ಸರ್‌ಹಿಂದ್ ಮತ್ತು ಥಾನೇಶ್ವರ್ ನೆಲೆಗಳನ್ನೂ ಪರಿಶೋಧಿಸಿದ.

ಪ್ರಾಕ್ತನ ಸಂಶೋಧನೆಗಳನ್ನು ಅಲಕ್ಷಿಸುವುದು ತಪ್ಪೆಂಬುದು ನಾಲ್ಕು ವರ್ಷಗಳ ಅನಂತರ ಭಾರತ ಸರಕಾರಕ್ಕೆ ಮತ್ತೆ ಮನವರಿಕೆಯಾಯಿತು. ಸರ್ವೇಕ್ಷಣ ವಿಭಾಗವನ್ನು ಪುನರುಜ್ಜೀವನಗೊಳಿಸಿ 1871ರ ಫೆಬ್ರುವರಿಯಲ್ಲಿ ಕನಿಂಗ್‌ಹ್ಯಾಂನನ್ನು ಆ ವಿಭಾಗದ ಮುಖ್ಯನಿರ್ದೇಶಕನನ್ನಾಗಿ (ಡೈರೆಕ್ಟರ್–ಜನರಲ್) 2,000 ರೂ. ಮಾಸಿಕ ವೇತನದ ಮೇಲೆ ನೇಮಿಸಲಾಯಿತು. ಮುಂದೆ 14 ವರ್ಷಗಳ ಕಾಲ ದೆಹಲಿ, ಆಗ್ರ, ರಾಜಪುಟಾಣ, ಬುಂದೇಲಖಂಡ, ಮಥುರಾ, ಪಂಜಾಬ್, ಮಧ್ಯಪ್ರದೇಶ, ಮಾಳವ, ಬುದ್ಧಗಯೆ ಮುಂತಾದ ಕಡೆಗಳಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿ ಭಾರತದಲ್ಲಿ ಪ್ರಾಕ್ತನಶಾಸ್ತ್ರದ ತಳಹದಿಯನ್ನು ಸುಭದ್ರವಾಗಿ ಈತ ಸ್ಥಾಪಿಸಿದ. ಈ ಕಾಲದಲ್ಲಿ ಈತ ಬೆಳಕಿಗೆ ತಂದ ಐತಿಹಾಸಿಕ ಅವಶೇಷಗಳಲ್ಲಿ ಪ್ರ.ಶ.ಪೂ 2ನೆಯ ಶತಮಾನದ ಭಾರ್ಹುತ್‌ಸ್ತೂಪ, ಮಧ್ಯಪ್ರದೇಶದಲ್ಲಿ ಗುಪ್ತರ ಕಾಲಕ್ಕೆ ಸೇರಿದ ಹಲವಾರು ದೇವಾಲಯಗಳು, ಅನೇಕ ಗಾಂಧಾರ ಶೈಲಿಯ ಕಲಾಕೃತಿಗಳು,

ಹಲವಾರು ಅಶೋಕಸ್ತಂಭಗಳು ಮತ್ತು ಮೌರ್ಯ, ಗುಪ್ತ ಮತ್ತು ಪಾಲವಂಶದ ಅನೇಕ ಶಾಸನಗಳು ಮುಖ್ಯವಾದವು. ಪುರಾಣ ಇತಿಹಾಸಗಳಲ್ಲಿ ಪ್ರಸಿದ್ಧವಾದ ತಕ್ಷಶಿಲಾ, ಸಂಕಿಸ್ಸ, ಅಹಿಚ್ಛತ್ರ, ಶ್ರಾವಸ್ತಿ, ಕೌಶಾಂಬಿ, ವೈಶಾಲಿ ಮತ್ತು ನಲಂದ ನಗರಗಳ ಅವಶೇಷಗಳನ್ನೂ ಗುರ್ತಿಸಲಾಯಿತು. ಈ ಸಂಶೋಧನೆಗಳನ್ನು ಪ್ರಾಕ್ತನ ಸರ್ವೇಕ್ಷಣ ಇಲಾಖೆಯ ವಾರ್ಷಿಕ ವರದಿಗಳ ರೂಪದಲ್ಲಿ ಪ್ರಕಟಿಸಲಾಗಿದೆ. ಸರ್ಕಾರಕ್ಕೆ ಈತ ಕಳುಹಿಸುತ್ತಿದ್ದ ವರದಿಗಳನ್ನು ರಾಷ್ಟ್ರೀಯ ಐತಿಹಾಸಿಕ ದಾಖಲೆಗಳ ಗ್ರಂಥಾಲಯದಲ್ಲಿ ಸಂರಕ್ಷಿಸಿಡಲಾಗಿದೆ.

ಕನಿಂಗ್‌ಹ್ಯಾಂನಿಗೆ ಶಾಸನಶಾಸ್ತ್ರ ವಿಭಾಗದಲ್ಲೂ ಹೆಚ್ಚಿನ ಆಸಕ್ತಿಯಿತ್ತು. ನೂರಾರು ಶಾಸನಗಳನ್ನು ಬೆಳಕಿಗೆ ತಂದು ಪ್ರಚುರಗೊಳಿಸಿದುದಲ್ಲದೆ ಆಯಾ ರಾಜ ಮನೆತನಗಳಿಗೆ ಸೇರಿದ ಶಾಸನಗಳನ್ನು ಒಂದೊಂದು ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ ಹಾಕಿ, ಅದರಂತೆ ಅಶೋಕ ಮೌರ್ಯ ಮತ್ತು ಅವನ ಮೊಮ್ಮಗ ದಶರಥನ ಶಾಸನಗಳನ್ನು 1877ರಲ್ಲಿ ಕಾರ್ಪಸ್ ಇನ್‌ಸ್ಕ್ರಿಪ್ಷನಂ ಇಂಡಿಕ್ಯಾರಂ ಎಂಬ ಗ್ರಂಥಮಾಲೆಯ ಮೊದಲ ಸಂಪುಟದಲ್ಲಿ ಪ್ರಕಟಿಸಿದ. ಶಾಸನಗಳ ಅಭ್ಯಾಸಕ್ಕೆ ಪ್ರತ್ಯೇಕ ಶಾಖೆಯೊಂದನ್ನು ಏರ್ಪಡಿಸಿ 1883ರಲ್ಲಿ ಜೆ. ಎಫ್. ಫ್ಲೀಟನನ್ನು ಅದರ ಮುಖ್ಯಾಧಿಕಾರಿಯನ್ನಾಗಿ ನೇಮಿಸಲು ಈತನೇ ಕಾರಣ. ಪುರಾತನ ಕಟ್ಟಡಗಳ ಜೀರ್ಣೋದ್ಧಾರ ಮತ್ತು ರಕ್ಷಣೆಯ ವಿಷಯದಲ್ಲೂ ಆಸಕ್ತಿವಹಿಸಿ ಅಂತಹ ರಿಪೇರಿಗಳನ್ನು ಪ್ರಾಕ್ತನ ಶಾಸ್ತ್ರಜ್ಞರ ನೇತೃತ್ವದಲ್ಲೇ ನಡೆಸಬೇಕೆಂದು ಸರ್ಕಾರದೊಡನೆ ವಾದಿಸಿದ. ಸರ್ಕಾರ ಈ ವಿಷಯವಾಗಿ ನಿರ್ಧಾರ ಕೈಗೊಳ್ಳುವಷ್ಟರಲ್ಲಿ ಸ್ವಂತ ಇಚ್ಛೆಯಿಂದ 1885ರ ಅಕ್ಟೋಬರ್ 1ರಂದು ನಿವೃತ್ತಿಹೊಂದಿ ಇಂಗ್ಲೆಂಡಿಗೆ ವಾಪಸಾದ. ಈತನ ಸೂಚನೆಯಂತೆ ಡೈರೆಕ್ಟರ್–ಜನರಲ್‌ನ ಹುದ್ದೆಯನ್ನು ರದ್ದುಗೊಳಿಸಲಾಯಿತು. ಅದರ ಬದಲು ಮೂವರು ಸರ್ವೇಯರುಗಳನ್ನು ಉತ್ತರ ಭಾರತದ ಮೂರು ಕೇಂದ್ರಗಳಲ್ಲಿ ನೇಮಿಸಲಾಯಿತು. ದಕ್ಷಿಣ ಮತ್ತು ಪಶ್ಚಿಮ ಭಾರತದಲ್ಲಿ ಮೊದಲಿನಂತೆ ಜೇಮ್ಸ್ ಬರ್ಜೆಸ್ ಮುಂದುವರಿದ.

ನಿವೃತ್ತಿಗೊಂಡ ಅನಂತರವೂ ಕನಿಂಗ್ ಹ್ಯಾಮ್ ಈ ಕ್ಷೇತ್ರದಲ್ಲಿ ತನ್ನ ಆಸಕ್ತಿಯನ್ನು ಮುಂದುವರಿಸಿದ. ಪ್ರಾಚೀನ ಭಾರತದ ನಾಣ್ಯಗಳು, ಬುದ್ಧಗಯೆಯ ದೇವಾಲಯ, ಇಂಡೋಸ್ಕಿಥಿಯನರ ಸಕರ ಮತ್ತು ಕುಶಾನರ ನಾಣ್ಯಗಳು, ಮಧ್ಯ ಕಾಲೀನ ಭಾರತದ ನಾಣ್ಯಗಳು ಮತ್ತು ಉತ್ತರಕಾಲೀನ ಇಂಡೋಸ್ಕಿಥಿಯನ್ನರ ನಾಣ್ಯಗಳು ಎಂಬ ಐದು ಗ್ರಂಥಗಳನ್ನೂ ಹಲವಾರು ಬೃಹತ್ ಲೇಖನಗಳನ್ನೂ 1893ರಲ್ಲಿ ಪ್ರಕಟಿಸಿದ. ಅದೇ ವರ್ಷ ಈತ ನಿಧನ ಹೊಂದಿದ.

ಪುರಾತತ್ತ್ವ ಕ್ಷೇತ್ರದಲ್ಲಿ ಇಷ್ಟೊಂದು ಕೆಲಸ ಮಾಡಿದ ಕನಿಂಗ್‌ಹ್ಯಾಂನನ್ನು ಭಾರತದ ಪ್ರಾಕ್ತನಶಾಸ್ತ್ರ ಇಲಾಖೆಯ ಜನ್ಮದಾತನೆಂದು ಪರಿಗಣಿಸಿರುವುದು ಸಾಧುವಾಗಿದೆ. ಆದರೂ ಈತನ ವಿರುದ್ಧ ಹಲವಾರು ಟೀಕೆಗಳು ಕೇಳಿಬಂದುವು. ಈತ ಚಾರಿತ್ರಿಕ ಅವಶೇಷಗಳ ಮೇಲೆ ತನ್ನ ಗಮನವಿಟ್ಟಿದ್ದು, ಇತಿಹಾಸಪೂರ್ವ ಸಂಸ್ಕೃತಿಗಳತ್ತ ಗಮನ ಕೊಡಲಿಲ್ಲವೆಂಬುದೂ ಹರಪ್ಪ ಸಂಸ್ಕೃತಿಯ ಅವಶೇಷಗಳನ್ನು ಮೊತ್ತ ಮೊದಲಿಗೆ ಈತ ಬೆಳಕಿಗೆ ತಂದನಾದರೂ ಅವನ್ನು ಸರಿಯಾಗಿ ಅಭ್ಯಾಸ ಮಾಡದೆ ಅಲಕ್ಷಿಸಿದನೆಂಬುದೂ ಇತರ ದೇಶಗಳಲ್ಲಿ ಸಮಕಾಲೀನ ಪ್ರಾಕ್ತನಶಾಸ್ತ್ರಜ್ಞರು ಅನುಸರಿಸುತ್ತಿದ್ದ ಸುಧಾರಿತ ವಿಧಾನಗಳನ್ನು ಈತ ಬಳಸುತ್ತಿರಲಿಲ್ಲವೆಂಬುದೂ ಈ ಟೀಕೆಗಳಲ್ಲಿ ಪ್ರಮುಖವಾದವು. (ಜ.ಬಿ.ಆರ್.; ಪಿ.ಎಂ.ಎ.)

**ಕನಿಷ್ಕ I :** ಉತ್ತರ ಭಾರತದಲ್ಲಿ ರಾಜ್ಯವಾಳಿದ ಕುಶಾಣ ವಂಶದ ಚಕ್ರವರ್ತಿಗಳಲ್ಲಿ ಅತ್ಯಂತ ಶ್ರೇಷ್ಠ, ಪ್ರಸಿದ್ಧ. ಪ್ರಾಚೀನ ಭಾರತದ ಪ್ರದೇಶಗಳಾದ ಮಧ್ಯ ದೇಶ, ಉತ್ತರಾಪಥ ಮತ್ತು ಅಪರಾಂತಗಳು ಇವನ ಆಳ್ವಿಕೆಗೆ ಒಳಪಟ್ಟಿದ್ದುವು. ಪೂರ್ವ–ಪಶ್ಚಿಮವಾಗಿ ಬಿಹಾರದಿಂದ ಖೊರಾಸಾನದವರೆಗೂ ಉತ್ತರ–ದಕ್ಷಿಣವಾಗಿ ಖೋತಾನದಿಂದ ಕೊಂಕಣದವರೆಗೂ ಈತನ ಚಕ್ರಾಧಿಪತ್ಯ ಹಬ್ಬಿತ್ತೆಂದು ಹೇಳಲಾಗಿದೆ. ಈತನ ಕಾಲ ಯಾವುದೆಂದು ನಿಶ್ಚಿತವಾಗಿ ಹೇಳುವುದು ಸಾಧ್ಯವಿಲ್ಲ: ಎರಡನೆಯ ಕಡ್‌ಫೀಸಿಸನ ಅನಂತರ ಈತ ಇದ್ದಿರಬೇಕೆಂದು ಕಾಣುತ್ತದೆ. (ನೋಡಿ– ಕಡ್‌ಫೀಸಿಸ್–2) ಎರಡನೆಯ ಕಡ್‌ಫೀಸಿಸನ ಕಾಲ ಪ್ರ.ಶ. ಸು. 65–75 ಎನ್ನುವುದಾದರೆ, ಕನಿಷ್ಕ ಪ್ರ.ಶ. 1ನೆಯ ಶತಮಾನದ ಕೊನೆಯ ಭಾಗದಲ್ಲಿ ಆಳಿದನೆಂದು ಹೇಳಬಹುದಾಗಿದೆ. ಈತನೊಬ್ಬ ಶಕಸ್ಥಾಪಕ. ಇವನ ಆಳ್ವಿಕೆಯ ವರ್ಷಗಳ ಎಣಿಕೆಯೇ ಅನಂತರವೂ ಮುಂದುವರಿದಿದ್ದಿರಬಹುದು. ಪ್ರ.ಶ. 78ರಲ್ಲಿ ಆರಂಭವಾದ ಶಕೆಯೇ ಇವನದೆಂದು ಊಹಿಸಲಾಗಿದೆ. ಇದನ್ನೊಪ್ಪುವುದಾದರೆ ಈತ ಪ್ರ.ಶ. 101 ಅಥವಾ 102ರವರೆಗೆ ಆಳಿದನೆಂದು ಹೇಳಬಹುದು. ಕನಿಷ್ಕನ ಆಳ್ವಿಕೆ ಪ್ರ.ಶ. 130ರಿಂದ ಆರಂಭವಾಯಿತೆಂದು ಕೆಲವು ಭಾರತಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಟಿಬೆಟನ್ ಮತ್ತು ಚೀನೀ ದಾಖಲೆಗಳು ಆಧಾರ. ಈತ ಒಂದನೆಯ ಮತ್ತು ಎರಡನೆಯ ಕಡ್‌ಫೀಸಿಸರಿಗಿಂತಲೂ ಹಿಂದಿನವನೆಂದೂ ಪ್ರ.ಶ.ಪೂ 58ರಲ್ಲಿ ಆರಂಭವಾದ ವಿಕ್ರಮಶಕಪುರಷನೀತನೆಂದೂ ಇನ್ನು ಕೆಲವು ವಿದ್ವಾಂಸರ ವಾದ. ಈತ ಪ್ರ.ಶ. 248ರಲ್ಲಿ ಸಿಂಹಾಸನಾರೋಹಣ ಮಾಡಿದನೆಂದೂ ತ್ರೈಕೂಟಕ ಮತ್ತು ಇತರ ವಂಶಗಳ ಅರಸರು ಅನುಸರಿಸುವ ಶಕೆಯನ್ನು ಈತ ಆರಂಭಿಸಿದನೆಂದೂ ಒಂದು ಅಭಿಪ್ರಾಯವುಂಟು. ಆದರೆ ಇದು ಇತಿಹಾಸಕಾರರಿಂದ ಅಷ್ಟೇನೂ ಪುರಸ್ಕೃತವಾಗಿಲ್ಲ.

ಬೌದ್ಧ ಸಂಪ್ರದಾಯಗಳಲ್ಲಿ ಕನಿಷ್ಕನ ಹೆಸರು ಬಹಳ ಪ್ರಸಿದ್ಧವಾಗಿದೆ. ಕನಿಷ್ಠ ಎಂಬುದು ಇವನ ಹೆಸರಿನ ಸಂಸ್ಕೃತರೂಪ. ಈತ ಪಾರ್ಥಿಯನರ ವಿರುದ್ಧ ದಂಡಯಾತ್ರೆ ನಡೆಸಿದನೆಂದು ಹೇಳಲಾಗಿದೆ. ಸಾಕೇತ ಮತ್ತು ಪಾಟಲಿಪುತ್ರಗಳನ್ನು ಈತ ಗೆದ್ದ ವಿಚಾರವನ್ನು ಟಿಬೆಟಿನ ಲೇಖಕರು ಉಲ್ಲೇಖಿಸಿದ್ದಾರೆ. ಬಂಗಾಲ ಒರಿಸ್ಸಗಳಲ್ಲೂ ಇವನ ನಾಣ್ಯಗಳು ದೊರೆತಿವೆ. ನೇಪಾಳದ ಲಿಚ್ಛವಿಗಳು ಕನಿಷ್ಕನ ಶಕೆಯನ್ನೇ ಅನುಸರಿಸಿದ್ದಾರೆ. ಹೀಗೆಂದ ಮಾತ್ರಕ್ಕೆ ಈ ಪ್ರದೇಶಗಳೆಲ್ಲ ಕನಿಷ್ಕನಿಗೆ ಅಧೀನವಾಗಿದ್ದುವೆಂದು ಹೇಳಲಾಗುವುದಿಲ್ಲ. ಕಾಶ್ಮೀರದಲ್ಲಿ ಕನಿಷ್ಕನ ಆಳ್ವಿಕೆ ನಡೆಸಿದ ಬಗ್ಗೆ ಕಲ್ಹಣನ ರಾಜತರಂಗಿಣಿಯಲ್ಲಿ ಉಲ್ಲೇಖವಿದೆ. ಗಾಂಧಾರ ರಾಜ್ಯ ಇವನ ಅಧೀನದಲ್ಲಿತ್ತೆಂದು ಹ್ಯುಯೆನ್ ತ್ಸಾಂಗ್ ಹೇಳಿದ್ದಾನೆ. ಪುರುಷಪುರ ಪೂರ್ವದ ಪ್ರದೇಶವನ್ನೂ ಈತ ಗೆದ್ದಿದ್ದನೆಂದು ಗೊತ್ತಾಗುತ್ತದೆ.

ಮುಪ್ಪು ಸಂಭವಿಸಿದಾಗಲೂ ಕನಿಷ್ಕನಿಗೆ ರಾಜ್ಯ ಗೆಲ್ಲುವ ಆಸೆ ಹೋಗಿರಲಿಲ್ಲವೆಂದು ಕಾಣುತ್ತದೆ. ಮಧ್ಯ ಏಷ್ಯದಲ್ಲಿದ್ದ ಚೀನೀಯರ ವಿರುದ್ಧ ಈತನೊಂದು ವಿಫಲ ದಂಡಯಾತ್ರೆ ನಡೆಸಿದ. ಮೂರು ರಾಜ್ಯಗಳನ್ನು ಗೆದ್ದರೂ ಉತ್ತರದ ನೆಲ ಮಾತ್ರ ತನಗೆ ದಕ್ಕಲಿಲ್ಲವೆಂದು ಈತ ಕೊರಗುತ್ತಲೇ ಪ್ರಾಣ ಬಿಟ್ಟನಂತೆ. ಚೀನೀ ದಂಡನಾಯಕ ಪಾನ್–ಚೋ ಅಗ ಅನೇಕ ಪ್ರದೇಶಗಳನ್ನು ಜಯಿಸಿ ಕ್ಯಾಸ್ಪಿಯನ್ ಸಮುದ್ರದವರೆಗೂ ಚೀನೀ ಪ್ರಭಾವ ವಿಸ್ತರಿಸಿದ್ದ. ಚೀನೀಯರ ವಿಜಯದಿಂದ ಕನಿಷ್ಕನಿಗೂ ಹುರುಪು ತುಂಬಿ, ತಾನೂ ಚೀನೀ ಚಕ್ರವರ್ತಿಗೆ ಸಮನೆಂಬುದನ್ನು ಸ್ಥಾಪಿಸುವ ಉದ್ದೇಶದಿಂದ ಅತ ಚೀನೀ ಚಕ್ರವರ್ತಿಕುಮಾರಿಯ ಕೈಬೇಡಿದ. ಪಾನ್–ಚೋ ಇದಕ್ಕೆ ಒಪ್ಪಲಿಲ್ಲ. ಇದು ತನ್ನ ಚಕ್ರವರ್ತಿಗೆ ಮಾಡಿದ ಅಪಮಾನವೆಂಬುದು ಅವನ ಭಾವನೆಯಾಗಿತ್ತು. ಕನಿಷ್ಕನಿಗೆ ಕೋಪ ಬಂತು. 70,000 ಮಂದಿ ಅಶ್ವಸವಾರರ ಸೈನ್ಯವನ್ನು ಯುದ್ಧಕ್ಕೆ ಕಳಿಸಿದ. ಈ ಸೈನ್ಯ ಹಿಮಾಲಯ ಪರ್ವತಗಳನ್ನು ದಾಟಿ ಚೀನೀ ನೆಲವನ್ನು ಮುತ್ತಿಗೆ ಹಾಕುವ ವೇಳೆಗೆ ಜರ್ಝರಿತವಾಗಿತ್ತು. ಕನಿಷ್ಕನ ಕಂಗೆಟ್ಟ ಸೇನೆಯನ್ನು ಪಾನ್–ಚೋ ನಿರ್ದಯೆಯಿಂದ ಒರೆಸಿ ಹಾಕಿದ. ಕನಿಷ್ಕನ ಮಹತ್ವಾಕಾಂಕ್ಷೆ ಹೀಗೆ ಮುರಿದು ಬಿತ್ತು.–ಎಂದು ಹೇಳಲಾಗಿದೆ.

ಕನಿಷ್ಕ ಬೌದ್ಧನಾಗಿದ್ದನೆಂಬುದಕ್ಕೆ ಅನೇಕ ಶಾಸನಗಳ ಮತ್ತು ನಾಣ್ಯಗಳ ಆಧಾರಗಳುಂಟು. ಈತ ಪೆಷಾವರಿನಲ್ಲಿ ಕಟ್ಟಿಸಿದ ಪ್ರಸಿದ್ಧ ವಿಹಾರದ ಬಗ್ಗೆ ಹಬ್ಬಿದ್ದ ದಂತಕಥೆಗಳನ್ನು ಹ್ಯುಯೆನ್ ತ್ಸಾಂಗನೂ ಅಲ್ಬೆರೂನಿಯಾ ಉಲ್ಲೇಖಿಸಿದ್ದಾರೆ. ಇದು ಬೌದ್ಧ ಸಂಸ್ಕೃತಿಯ ಕೇಂದ್ರವಾಗಿತ್ತು. ಪಾರ್ಶ್ವ ಮತ್ತು ಪಾರ್ಶ್ವಿಕರೆಂಬವರ ಸಲಹೆಯ ಮೇರೆಗೆ ಈತ ಒಂದ ಬೌದ್ಧ ಧರ್ಮಸಭೆಯನ್ನು ಕೂಡಿಸಿದನಂತೆ. ಇದು ಕಾಶ್ಮೀರದಲ್ಲಿ ಸೇರಿತ್ತೆಂಬುದು ಒಂದು ಮತವಾದರೆ, ಗಾಂಧಾರ ಅಥವಾ ಜಲಂಧರದಲ್ಲಿ ನಡೆಯಿತೆಂಬುದು ಇನ್ನೊಂದು ಮತ. ಕುಂಡಲವನ ವಿಹಾರದಲ್ಲಿ ಸೇರಿದ್ದ ಈ ಸಭೆಯ ಅಧ್ಯಕ್ಷನಾಗಿದ್ದವನು ವಸುಮಿತ್ರ. ಪ್ರಸಿದ್ಧ ಸಂಸ್ಕೃತ ಕವಿ ಅಶ್ವಘೋಷ ಇದರ ಉಪಾಧ್ಯಕ್ಷ. ಈತನನ್ನು ಕನಿಷ್ಕನೇ ಪಾಟಲಿಪುತ್ರದಿಂದ ಹಾರಿಸಿಕೊಂಡು ಬಂದನಂತೆ ಬೌದ್ಧ ಧರ್ಮ ಕುರಿತ ಅನೇಕ ಧರ್ಮಸೂತ್ರಗಳು ಅಲ್ಲಿ ರಚಿತವಾದುವು. ಆ ಸಭೆಯಲ್ಲಿ ಪ್ರಮುಖವಾಗಿ ಭಾಗವಹಿಸಿದ್ದವರು ಹೀನಯಾನ ಪಂಥದವರು. ಆದರೆ ಆ ವೇಳೆಗೆ ಮಹಾಯಾನ ಬಹಳ ಮಟ್ಟಿಗೆ ಅಭಿವೃದ್ಧಿ ಹೊಂದಿತ್ತು. ಅಶ್ವಘೋಷ, ವಸುಮಿತ್ರ ಮುಂತಾದವರೆಲ್ಲ ಮಹಾಯಾನ ಪಂಥದವರು. ಇವರೆಲ್ಲ ರಾಜಮನ್ನಣೆ ದೊರಕಿಸಿಕೊಂಡಿದ್ದವರು.

ಕನಿಷ್ಕನ ಆಳ್ವಿಕೆಯ ಕಾಲದಲ್ಲಿ ಅನೇಕ ಕವಿಗಳಿಗೂ ವಿದ್ವಾಂಸರಿಗೂ ಪ್ರೋತ್ಸಾಹ ದೊರಕಿತೆಂಬುದಂತೂ ನಿಜ. ಮೇಲೆ ಹೇಳಿದ ಬೌದ್ಧ ಕವಿಗಳಲ್ಲದೆ ವಿದ್ವಾಂಸರೂ ಅಲ್ಲದೆ ಸಂಘರ್ಷಕನೆಂಬ ಪಂಡಿತನೂ ಕನಿಷ್ಕನ ಆಸ್ಥಾನದಲ್ಲಿದ್ದ. ಮಹಾಯಾನ ಬೌದ್ಧಪಂಥದ ಶ್ರೇಷ್ಠ ಪ್ರತಿಪಾದಕನಾದ ನಾಗಾರ್ಜುನ, ಸುಪ್ರಸಿದ್ಧ ಆಯುರ್ವೇದಜ್ಞನಾದ ಚರಕ–ಇವರೂ ಬಹುಶಃ ಕನಿಷ್ಕನ ಆಸ್ಥಾನದಲ್ಲಿದ್ದರು. ಮಾಠರನೆಂಬವನು ಕನಿಷ್ಕನ ಮಂತ್ರಿ. ಇವನೊಬ್ಬ ಮಹಾ ರಾಜನೀತಿಜ್ಞ. ಗ್ರೀಕ್ ವಾಸ್ತು ಶಿಲ್ಪಿ ಅಜೆಸಿಲೇಯಸ್ ಕೂಡ ಇಲ್ಲಿದ್ದನೆನ್ನಲಾಗಿದೆ. ಅಂತೂ ಇವರೆಲ್ಲ ಈ ಕನಿಷ್ಕನ ಕಾಲದಲ್ಲೇ ಇದ್ದರೇ ಅಥವಾ ಇದೇ ಹೆಸರಿನ ಇತರರ ಕಾಲದಲ್ಲಿ ಇದ್ದರೇ ಎಂಬುದು ಸದ್ಯಕ್ಕೆ ಬಿಡಿಸಲಾರದ ಒಗಟಾಗಿದೆ.

ಕನಿಷ್ಕ ಬೌದ್ಧಧರ್ಮೀಯನಾಗಿದ್ದರೂ ಇವನ ನಾಣ್ಯಗಳ ಹಿಂಬದಿಯಲ್ಲಿ ಗ್ರೀಕ್, ಸುಮೇರಿಯನ್, ಎಲಮೈಟ್, ಪರ್ಷಿಯನ್ ಮತ್ತು ಭಾರತೀಯ ದೇವರುಗಳ ಚಿತ್ರಗಳಿವೆ. ಶಿವ, ಶಾಕ್ಯಮುನಿ, ಬುದ್ಧ, ವಾಯು, ಅಗ್ನಿ, ಚಂದ್ರ, ಸೂರ್ಯ, ಮಿತ್ರ–ಮುಂತಾದವರ ಚಿತ್ರಗಳು ಕೆಲವು ಉದಾಹರಣೆಗಳು. ನಾನಾ ಧರ್ಮಗಳ ದೇವತೆಗಳ ಚಿತ್ರಗಳು ಕನಿಷ್ಕನ ಉದಾರದೃಷ್ಟಿಯನ್ನೂ ಈತನ ರಾಜ್ಯದಲ್ಲಿ ನಾನಾ ಧರ್ಮಗಳು ಸಹಬಾಳ್ವೆ ನಡೆಸುತ್ತಿದ್ದುವೆಂಬುದನ್ನೂ ತೋರಿಸುತ್ತವೆಯೆನ್ನಲಾಗಿದೆ. ಅದುವರೆಗೂ ಚಲಾವಣೆಗೆ ಕೊಡಲಾಗುತ್ತಿದ್ದ ನಾಣ್ಯಗಳಲ್ಲಿದ್ದಂತೆ ಇವುಗಳ ಹಿಂಬದಿಯಲ್ಲಿ ಖರೋಷ್ಠಿ ಲಿಪಿಯಿಲ್ಲ.

ಕನಿಷ್ಕನಿಗೆ ವಾಸ್ತುಶಿಲ್ಪ ಮತ್ತು ಇತರ ಕಲೆಗಳಲ್ಲೂ ಆಸಕ್ತಿಯಿತ್ತು. ಪೆಷಾವರಿನ ಬುದ್ಧನ ಸ್ಮಾರಕದ ಮೇಲೆ 122 ಮೀ ಎತ್ತರದ ಗೋಪುರವನ್ನು ಈತ ಕಟ್ಟಿಸಿದ. ತಕ್ಷಶಿಲೆಯನ್ನು ವಿಸ್ತರಿಸಿದ. ಕಾಶ್ಮೀರದಲ್ಲಿ ತನ್ನ ಹೆಸರಿನಲ್ಲೊಂದು ನಗರ ನಿರ್ಮಿಸಿದ. ಮಥುರಾದಲ್ಲಿ ಅನೇಕ ಸುಂದರ ಭವನಗಳನ್ನು ಇವನೇ ಕಟ್ಟಿಸಿದನೆಂದು ಹೇಳಲಾಗಿದೆ. ಗಾಂಧಾರ ಶೈಲಿಯ ಪ್ರವರ್ತಕನೀತನೇ ಆಗಿರಬಹುದು. ಸಾರನಾಥ ಮಥುರಾಗಳಲ್ಲಿಯ ಇತರ ಶೈಲಿಗಳೂ ಇವನ ಪ್ರೋತ್ಸಾಹದಿಂದ ವಿಕಾಸ ಹೊಂದಿದುವು. ಕನಿಷ್ಕನದು ಹೊರನಾಡಿನಿಂದ ಬಂದವರ ವಂಶವಾದರೂ ಭಾರತದ ನಾನಾ ಭಾಗಗಳ ಮೇಲೆ ಇವನ ಪ್ರಭಾವ ಅಗಾಧವಾದದ್ದು. ಆದ್ದರಿಂದಲೇ ಈತ ಪ್ರಾಚೀನ ಭಾರತದ ಶ್ರೇಷ್ಠ ದೊರೆಗಳಲ್ಲೊಬ್ಬನೆಂದು ಪ್ರಸಿದ್ಧನಾಗಿದ್ದಾನೆ. (ಆರ್.ಆರ್.ಎ.)

**ಕನಿಷ್ಕ$^{II}$ :** 119. ಕುಷಾಣ ವಂಶದ ಪ್ರಸಿದ್ಧದೊರೆ. ಒಂದನೆಯ ಕನಿಷ್ಕನ ಅನಂತರ ತನ್ನ ತಮ್ಮನಾದ ಹುವಿಷ್ಕನೊಡನೆ ರಾಜ್ಯವಾಳಿದ ವಾಸಿಷ್ಕನ ಮಗ. ಇವನೂ ಇವನ ತಂದೆಯಂತೆ ಚಿಕ್ಕಪ್ಪನಾದ ಹುವಿಷ್ಕನೊಡನೆ ದೀರ್ಘಕಾಲ ಸಹರಾಜ್ಯಭಾರ ಮಾಡಿ ಅನಂತರ ಇವನೊಬ್ಬನೇ ರಾಜ್ಯವಾಳಿದ. ಅದನ್ನು ಹುವಿಷ್ಕನ ಆಡಳಿತದ ಕಾಲವೆಂದೇ ಜನರು ಪರಿಗಣಿಸುತ್ತಿದ್ದುದರಿಂದ ಇವನ ಆಳ್ವಿಕೆಯ ಕಾಲ ಬಹಳ ಕಡಿಮೆಯೆಂಬುದಾಗಿ ದಾಖಲೆಗಳಿಂದ ತಿಳಿದುಬರುತ್ತದೆ. ಈತನ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಕನಿಷ್ಕ ಶಕೆಯ 40ನೆಯ ವರ್ಷದ ಅರಾಶಾಸನದಲ್ಲಿ ಈತನನ್ನು ಹೆಸರಿಸಲಾಗಿದೆ. ತನ್ನ ಕಾಲದ ರೋಮನ್ ಚಕ್ರವರ್ತಿಗಳ ಮಾದರಿಯಲ್ಲಿ ಈತ ಕೈಸರ್ (ಸೀಸರ್) ಎಂಬ ಬಿರುದು ಧರಿಸಿದ್ದ. *

**ಕನಿಷ್ಠ ಎಣಿಕೆ :** ಮಾಪಕಯಂತ್ರಗಳಿಗೆ ಜೋಡಿಸಿರುವ ಅಳತೆಪಟ್ಟಿಗಳ ಮೇಲಿನ ಸಮಾಂತರ ಗೆರೆಗಳ ನಡುವಿನ ಅಂತರ (ಲೀಸ್ಟ್‌ಕೌಂಟ್). ಇದು ಕಡಿಮೆಯಾಗಿದ್ದಷ್ಟೂ ಅಳತೆಯ ನಿಖರತೆ ಹೆಚ್ಚು. ಮುಖ್ಯ ಅಳತೆಪಟ್ಟಿಯ (ಮೇನ್‌ಸ್ಕೇಲ್) ಭಾಗಗಳನ್ನು




ಹೆಚ್ಚುವರಿಸಿ ಅದರೊಂದಿಗೆ ಭಾಗಮಾಡಿರುವ ಮತ್ತೊಂದು ಚಲಮಾಪಕ ಪಟ್ಟಿಯನ್ನು (ವರ್ನಿಯರ್) ಜೋಡಿಸಿ ಓದುವುದರ ಮೂಲಕ ಕನಿಷ್ಠ ಎಣಿಕೆಯನ್ನು ಇನ್ನಷ್ಟು ಹೆಚ್ಚು ಸೂಕ್ಷ್ಮಗೊಳಿಸಬಹುದು. ಈ ಸೂಕ್ಷ್ಮತೆ ಚಲಮಾಪಕ ಪಟ್ಟಿಯ ಕನಿಷ್ಠ ಎಣಿಕೆಯನ್ನು ಅವಲಂಬಿಸಿದೆ. (ಕೆ.ಎಸ್.ಕೆ.)

ಚಿತ್ರದಲ್ಲಿ AB ಮುಖ್ಯ ಅಳತೆಪಟ್ಟಿಯ ಒಂದು ಭಾಗ. CD ಚಲಮಾಪಕ ಪಟ್ಟಿ. OC ಒಂದು ವಸ್ತು. OCಯ ಉದ್ದವನ್ನು ದಶಕಸ್ಥಾನದಷ್ಟು ನಿಖರವಾಗಿ ಆಳೆಯಲು ಅಳಾಯ ಉದ್ದವನ್ನು ಮುಖ್ಯ ಅಳತೆಪಟ್ಟಿಯ 9 ಅಂಶಗಳಿಗೆ ಸಮನಾಗಿರುವಂತೆ ಮಾಡಿ ಅದನ್ನು ಮತ್ತೆ 10 ಸಮ ಅಂಶಗಳನ್ನಾಗಿ ವಿಭಾಗಿಸಿದೆ. ಚಲಮಾಪಕದ ಒಂದು ಅಂಶ ಮುಖ್ಯ ಅಳತೆಪಟ್ಟಿಯ ಒಂದು ಅಂಶದ 9/10ಕ್ಕೆ ಸಮ. ಆದ್ದರಿಂದ ಚಲಮಾಪಕದ ಒಂದು ಅಂಶಕ್ಕೂ ಮುಖ್ಯ ಅಳತೆ ಪಟ್ಟಿಯ ಒಂದು ಅಂಶಕ್ಕೂ ಇರುವ ವ್ಯತ್ಯಾಸ ಮುಖ್ಯ ಅಳತೆಪಟ್ಟಿಯ ಅಂಶವೊಂದರ 1/10 ಕ್ಕೆ ಸಮನಿರುತ್ತದೆ. ಈ ವ್ಯತ್ಯಾಸವೇ ಚಲಮಾಪಕದ ಕನಿಷ್ಠ ಎಣಿಕೆ.

ಚಲಮಾಪಕದ 3ನೆಯ ಗೆರೆ ಮುಖ್ಯ ಅಳತೆಪಟ್ಟಿಯ 8ನೆಯ ಗೆರೆಯ ಮೇಲೆ ಇದೆ. ಮುಖ್ಯ ಅಳತೆಪಟ್ಟಿಯ 5ನೆಯ ಗೆರೆ ಮತ್ತು ಚಲಮಾಪಕದ ಸೊನ್ನೆಗೂ ಇರುವ ಅಂತರ ಮುಖ್ಯ ಅಳತೆಪಟ್ಟಿಯ ಅಂಶವೊಂದರ 3/10ರಷ್ಟಿದೆ. ಆದ್ದರಿಂದ OCಯ ಸರಿಯಾದ ಉದ್ದ 5 ಮುಖ್ಯ ಅಳತೆಪಟ್ಟಿಯ ಅಂಶಗಳು + ಮುಖ್ಯ ಅಳತೆಪಟ್ಟಿಯ ಅಂಶವೊಂದರ 3/10ರಷ್ಟು, ಅಂದರೆ 5.3 ಮುಖ್ಯ ಅಳತೆಪಟ್ಟಿಯ ಅಂಶದಷ್ಟು. *

**ಕನಿಷ್ಠ – ಗರಿಷ್ಠ ತತ್ತ್ವ :** ಸಂಖ್ಯಾಶಾಸ್ತ್ರದಲ್ಲಿ ಬರುವ ಒಂದು ಪರಿಕಲ್ಪನೆ; ಒಂದು ಉದ್ದೇಶಸಿದ್ಧಿಗೋಸ್ಕರ ದಾರಿಗಳನ್ನು ಆಯುವಾಗ ಗರಿಷ್ಠ ನಷ್ಟವನ್ನು ಕನಿಷ್ಠಗೊಳಿಸಿ ತನ್ಮೂಲಕ ಕನಿಷ್ಠಲಾಭವನ್ನು ಗರಿಷ್ಠಗೊಳಿಸಲು ಅನುಸರಿಸುವ ತತ್ತ್ವ (ಮಿನಿಮ್ಯಾಕ್ಸ್ ಪ್ರಿನ್ಸಿಪಲ್) ದೈನಂದಿನ ಜೀವನದಲ್ಲಿ ನಾವು ಅನೇಕ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ. ಭವಿಷ್ಯದ ಮೇಲೆ ನಮಗೆ ಹತೋಟಿಯಿರುವುದಿಲ್ಲವಾದ ಕಾರಣ ಇವುಗಳಲ್ಲಿ ಕೆಲವು ಯೋಗ್ಯವಾಗಿಯೂ ಕೆಲವು ತಪ್ಪಾಗಿಯೂ ಪರಿಣಮಿಸಬಹುದು. ಹೀಗೆ ಯಾವುದೇ ಒಂದು ನಿರ್ಧಾರವನ್ನು ನಾವು ಕೈಗೊಂಡರೂ ಭವಿಷ್ಯ ಅನುಕೂಲ ಅಥವಾ ಪ್ರತಿಕೂಲವಾದಂತೆ ಲಾಭ ಅಥವಾ ನಷ್ಟ ಉಂಟಾಗಬಹುದು.

ಒಂದು ಸಂಸ್ಥೆಯ ಆಡಳಿತಾಧಿಕಾರಿ ಅಥವಾ ಮಾಲೀಕ ಎಷ್ಟು ದೊಡ್ಡ ಗಾತ್ರದ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬುದರ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿದೆ ಎಂದು ಭಾವಿಸೋಣ. ಅತಿ ದೊಡ್ಡದನ್ನು ಸ್ಥಾಪಿಸಿ ಸಾಕಷ್ಟು ಬೇಡಿಕೆ ಬರದಿದ್ದಲ್ಲಿ ನಷ್ಟವುಂಟಾಗಬಹುದು; ಅತಿ ಸಣ್ಣದನ್ನು ಸ್ಥಾಪಿಸಿದಲ್ಲಿ ಲಾಭದ ಪ್ರಮಾಣ ಕಡಿಮೆಯಾಗಿ ನಷ್ಟ ಸಂಭವಿಸುವ ಸಾಧ್ಯತೆ ಉಂಟು. ಈ ಬೇಡಿಕೆಯ ಅಂದಾಜು ಒಂದು ಸಂಭವಚರ (ರ‍್ಯಾಂಡಂ ವೇರಿಯೆಬಲ್). ಇದರ ವಿತರಣೆ $\theta$ಎಂಬ ಪ್ರಾಚಲವನ್ನು (ಪ್ಯಾರಾಮೀಟರ್) ಅವಲಂಬಿಸಿದೆ ಎಂದು ತಿಳಿಯೋಣ. $\theta$ದ ಬೆಲೆ ನಮಗೆ ತಿಳಿದಿದ್ದಲ್ಲಿ, ಅಂದಾಜಿನ ವಿತರಣೆ ತಿಳಿದಿದ್ದು, ಕಾರ್ಖಾನೆಯ ಗಾತ್ರದ ಬಗ್ಗೆ ತಳೆದ ನಿರ್ಧಾರದಿಂದಾಗುವ ಸರಾಸರಿ ನಷ್ಟವನ್ನು ನಾವು ಗಣಿಸಬಹುದು. ಈ ಸರಾಸರಿ ನಷ್ಟ ಕಡಿಮೆಯಾಗುವಂತೆ ಕಾರ್ಖಾನೆಯ ಗಾತ್ರವನ್ನು ನಿರ್ಧರಿಸಬಹುದು. ಆದರೆ $\theta$ದ ಬೆಲೆ ನಮಗೆ ತಿಳಿಯದಿದ್ದ ಕಾರಣ ನಷ್ಟದ ಬೆಲೆಯೂ ತಿಳಿದಿರುವುದಿಲ್ಲ. $\theta$ದ ಬೆಲೆ ವ್ಯತ್ಯಾಸವಾದಂತೆ ನಷ್ಟವೂ ವ್ಯತ್ಯಾಸವಾಗುವುದು.

$\delta$ ಎಂಬುದು $\theta$ ದ ಅಂದಾಜಿಕವಾಗಿರಲಿ. $\delta(x)=d$ ಎಂಬುದು ಅದರ ಬೆಲೆಯಾಗಿರಲಿ. ಇದು ನಾವು ಸಂಗ್ರಹಿಸಿದ ಮಾಹಿತಿಯ $(x)$ ಮೇಲೆ ಅವಲಂಬಿಸಿದೆ. ನಿಜವಾದ ಬೆಲೆ $\theta$ ಇರುವಾಗ $d$ ಯನ್ನು ಅದರ ಬೆಲೆ ಎಂದು ಗ್ರಹಿಸುವುದರಿಂದಾಗುವ ನಷ್ಟವನ್ನು $L(\theta,d)$ ಎಂದು ಕರೆಯೋಣ. ಕೆಲವೊಂದು ಸಲ $L(\theta,d) = K(\theta-d)^2$ ಎಂಬುದಾಗಿ ಭಾವಿಸುತ್ತಾರೆ. ಇದರ ಹೆಸರು ವ್ಯತ್ಯಾಸವರ್ಗನಷ್ಟ ಉತ್ಪನ್ನ (ಸ್ಕ್ವೇರ್ಡ್ ಎರ‍್ರರ್ ಲಾಸ್ ಫಂಕ್ಷನ್). ನಾವು ಸಂಗ್ರಹಿಸಿದ ಮಾಹಿತಿ ಒಂದು ಸಂಭವಚರ. ಇದರ ವಿತರಣೆ $\theta$ವನ್ನು ಅವಲಂಬಿಸಿದೆ. ಈ ವಿತರಣೆಯ ಪ್ರಕಾರ ನಷ್ಟದ ಸರಾಸರಿಯನ್ನು ಎಣಿಸಿ ನಾವು ಅಪಾಯ ಉತ್ಪನ್ನವನ್ನು (ರಿಸ್ಕ್ ಫಂಕ್ಷನ್) ಪಡೆಯುತ್ತೇವೆ–

$$R(\theta,\delta) = E\,L(\theta,d)$$

ಇದು $\theta$ ಮತ್ತು $\delta$ದ ಮೇಲೆ ಅವಲಂಬಿಸಿದೆ. ಈ $R(\theta,\delta)$ ದ ಮೇಲಿಂದ ವಿವಿಧ ಅಂದಾಜಿಕ ($\delta$)ಗಳ ತಾರತಮ್ಯವನ್ನು ನಿರ್ಧರಿಸುತ್ತೇವೆ.

ಎರಡು ನಿರ್ಧಾರಗಳಲ್ಲಿ ($\delta_1,\delta_2$) ಒಂದರಿಂದಾಗುವ ನಷ್ಟ ಮತ್ತೊಂದರಿಂದ ಆಗುವ ನಷ್ಟಕ್ಕಿಂತ ಯಾವಾಗಲೂ ಕಡಿಮೆಯಾಗಿದ್ದರೆ ಮೊದಲನೆಯ ನಿರ್ಧಾರ ಎರಡನೆಯದಕ್ಕಿಂತ ಉತ್ತಮವೆಂದು ಹೇಳಬಹುದು. ಆದರೆ $\theta$ ದ ಕೆಲವೊಂದು ಬೆಲೆಗಳಿಗೆ $\delta_1$ ಉತ್ತಮವಾಗಿಯೂ ಬೇರೆ ಕೆಲವು ಬೆಲೆಗಳಿಗೆ $\delta_2$ ಉತ್ತಮವಾಗಿಯೂ ಇದ್ದರೆ ನಮಗೆ ಒಂದು ಇನ್ನೊಂದರಿಂದ ಉತ್ತಮ ಎಂದು ಸಾರ್ವತ್ರಿಕವಾಗಿ ಹೇಳಲು ಸಾಧ್ಯವಿಲ್ಲ. ಹಾಗೆ ಹೇಳಬೇಕಾದರೆ ನಾವು ಯಾವುದಾದರೂ ಒಂದು ರೀತಿಯ ತತ್ತ್ವವನ್ನು ಅನುಸರಿಸಬೇಕಾಗುವುದು. ಉದಾಹರಣೆಗೆ, $R(\theta\,\delta_1)$ರ ಅತ್ಯಂತ ಗರಿಷ್ಠ ಬೆಲೆಯನ್ನು $\delta_1$ ನಿರ್ಧಾರದ ನಷ್ಟದ ಮಾಪನವೆಂದು ತಿಳಿಯಬಹುದು. ಈ ಧೋರಣೆಯ ಪ್ರಕಾರ

$$\underset{\theta}{\text{ಗರಿಷ್ಠ}}\; R(\theta,\delta_1) \leq \underset{\theta}{\text{ಗರಿಷ್ಠ}}\; R(\theta,\delta_2)$$

ಆಗಿದ್ದರೆ $\delta_2$ ಕ್ಕಿಂತ $\delta_1$ ಉತ್ತಮವೆನಿಸುವುದು. ಇದೇ ಕನಿಷ್ಠ– ಗರಿಷ್ಠ ತತ್ತ್ವ: ಗರಿಷ್ಠನಷ್ಟವನ್ನು ಕನಿಷ್ಠಗೊಳಿಸುವ ನಿರ್ಧಾರ. ಈ ಸಂದರ್ಭದಲ್ಲಿ ನಷ್ಟದ ಬದಲು ನಾವು ಲಾಭವನ್ನು ಗಣನೆಗೆ ತೆಗೆದುಕೊಳ್ಳಬಹುದು. ಋಣನಷ್ಟವೇ ಲಾಭವಾದುದರಿಂದ ನಷ್ಟ ಗರಿಷ್ಠವಾಗುವಾಗ ಲಾಭ ಕನಿಷ್ಠವಾಗುವುದು. ಹೀಗೆ ಗರಿಷ್ಠನಷ್ಟವನ್ನು ಕನಿಷ್ಠಗೊಳಿಸುವ ನಿರ್ಧಾರ ಕನಿಷ್ಠಲಾಭವನ್ನು ಗರಿಷ್ಠಗೊಳಿಸುವುದು.

$\theta$ದ ಬೆಲೆಯ ಬಗ್ಗೆ ನಮಗೆ ಏನೇನೂ ತಿಳಿಯದಿರುವಾಗ ಹೀಗೆ ಕನಿಷ್ಠ– ಗರಿಷ್ಠ ಧೋರಣೆಯನ್ನು ಅನುಸರಿಸುವುದರಲ್ಲಿ ತಪ್ಪೇನೂ ಆಗಲಾರದು. ಅದರೆ $\theta$ದ ಬೆಲೆಯ ಬಗ್ಗೆ ನಮಗೆ ಅಲ್ಪಸ್ವಲ್ಪ ಸಾಂಭವಿಕ ಪರಿಜ್ಞಾನವಿದ್ದಲ್ಲಿ ಬೇಯಸನ ತತ್ತ್ವವನ್ನು ಅನುಸರಿಸಬಹುದು. $\theta$ ಒಂದು ಸಂಭವಚರವೆಂದು ಎಣಿಸೋಣ– ಅದರ ವಿತರಣೆ $\xi(\theta)$ ಅಗಿರಲಿ. ಈ $\xi(\theta)$ ನಮಗೆ $\theta$ದ ವಿವಿಧ ಬೆಲೆಗಳ ಮೇಲಿರುವ ವಿಶ್ವಾಸದ ಪ್ರತೀಕವಾಗಿ, ಕರ್ತೃ ಸಂಬಂಧಿಕವಾಗಿರುವುದು (ಸಬ್ಜೆಕ್ಟಿವ್). $\xi(\theta)$ದ ಆಧಾರದ ಮೇಲಿಂದ $R(\theta,\delta)$ದ ಸರಾಸರಿಯನ್ನು ಎಣಿಸಿ $R(\xi,\delta)$ ವನ್ನು ಪಡೆಯುತ್ತವೆ.

$$R(\xi,\delta_1) < R(\xi,\delta_2)$$

ಆಗಿದ್ದರೆ $\delta_2$ ಕ್ಕಿಂತ $\delta_1$ ಉತ್ತಮವೆಂದು ಹೇಳುತ್ತೇವೆ. $R(\xi,\delta)$ವನ್ನು ಕನಿಷ್ಠ ಗೊಳಿಸುವಂತೆ ನಿರ್ಧಾರ ಕೈಗೊಳ್ಳುವ ತತ್ತ್ವಕ್ಕೆ ಬೇಯಸನ ತತ್ತ್ವ ಎಂದು ಹೆಸರು. ಅಂಥ ನಿರ್ಧಾರದ ಹೆಸರು ಬೇಯಸನ ನಿರ್ಧಾರ.

ಕನಿಷ್ಠ–ಗರಿಷ್ಠ ತತ್ತ್ವ, ಬೇಯಸನ ತತ್ತ್ವ–ಇವೇ ಅಲ್ಲದೆ ಬೇರೆ ತತ್ತ್ವವನ್ನು ಸಹ ರೂಪಿಸಲು ಸಾಧ್ಯವಿದೆ. $\theta$ ದ ಎಲ್ಲ ಬೆಲೆಗಳಿಗೂ $R(\theta,\delta)$ ವನ್ನು ಕನಿಷ್ಠಗೊಳಿಸುವ ನಿರ್ಧಾರ ಇಲ್ಲದಿದ್ದರೂ, $\theta$ ದ ಬೆಲೆ $\theta_0$ ಎಂದು ತಿಳಿದಿದ್ದರೆ $R(\theta_0,\delta)$ವನ್ನು ಕನಿಷ್ಠಗೊಳಿಸುವ ನಿರ್ಧಾರ $\delta(\theta_0)$ ಇದ್ದೇ ಇರುವುದು.

$$R(\theta_0\text{-}\delta) - R(\theta_{0,}\delta(\theta_0)]$$

$\theta$ ವ್ಯತ್ಯಾಸವಾದಂತೆ ವ್ಯತ್ಯಾಸವಾಗುವುದು.

ಇದರ ಗರಿಷ್ಠಬೆಲೆ ಕನಿಷ್ಠವಾಗುವಂತೆ $\delta$ ವನ್ನು ಆರಿಸಿದರೆ ಆ $\delta$ವನ್ನು ತೀಕ್ಷ್ಣತಮ (ಮೋಸ್ಟ್‌ಸ್ಟ್ರಿಂಜೆಂಟ್) ನಿರ್ಧಾರವೆಂದು ಕರೆಯುವರು. ಕೆಲವು ಸಂದರ್ಭಗಳಲ್ಲಿ ಕನಿಷ್ಠ–ಗರಿಷ್ಠ ನಿರ್ಧಾರ ಸಿಗದಿದ್ದರೂ ತೀಕ್ಷ್ಣತಮ ನಿರ್ಧಾರ ಸಿಗುವುದು.

ಕನಿಷ್ಠ–ಗರಿಷ್ಠ ತತ್ತ್ವವನ್ನು ಇಸ್ಪೀಟು ಮೊದಲಾದ ಆಟಗಳ ವೈಜ್ಞಾನಿಕ ವಿಶ್ಲೇಷಣೆಗಾಗಿ ಮೊತ್ತಮೊದಲು ಉಪಯೋಗಿಸಲಾಯಿತು. A ಮತ್ತು B ಇವರು ಈ ಕೆಳಗಿನ ಆಟವನ್ನು ಆಡುವರೆನ್ನೋಣ. A ಯು $x_1, x_2, \ldots, x_m$ ಗಳಲ್ಲಿ ಯಾವುದಾದರೂ ಒಂದು ಯುಕ್ತಿಯನ್ನು (ಸ್ಟ್ರೇಟಜಿ) ಆರಿಸುವನು. Bಯು $y_1, y_2, \ldots, y_n$ ಗಳಲ್ಲಿ ಯಾವುದಾದರೊಂದು ಯುಕ್ತಿಯನ್ನು ಅದೇ ಸಮಯದಲ್ಲಿ ಆರಿಸುವನು. Aಯು $x_i$ಯನ್ನು ಮತ್ತು B ಯು $y_j$ಯನ್ನು ಆರಿಸಿದ್ದರೆ $a_{ij}$ ಮೊಬಲಗನ್ನು Bಯು Aಗೆ ಕೊಡುವನು. $(a_{ij})$ ಮಾತೃಕೆಯನ್ನು (ಮ್ಯಾಟ್ರಿಕ್ಸ್) ಲಾಭಮಾತೃಕೆ ಎಂದು ಕರೆಯುವರು. ಈ ಮಾತೃಕೆಯ $j$ ಸ್ತಂಭ Bಯು $yj$ ಯುಕ್ತಿಯನ್ನು ಬಳಸುವುದರಿಂದ ಆಗುವ ಪರಿಣಾಮವನ್ನೂ $i$ ಶ್ರೇಣಿ A ಯು $x_i$ ಯುಕ್ತಿಯನ್ನು ಬಳಸುವುದರಿಂದ ಆಗುವ ಪರಿಣಾಮವನ್ನೂ ವಿವರಿಸುತ್ತವೆ. $j$ ಸ್ತಂಭದ ಗರಿಷ್ಠ ಸಂಖ್ಯೆ Bಯು $y_j$ ಯನ್ನು ಉಪಯೋಗಿಸುವುದರಿಂದ ಆಗುವ ಗರಿಷ್ಠನಷ್ಟವನ್ನು ನಮೂದಿಸುವುದು. ಈ ಗರಿಷ್ಠ ನಷ್ಟವನ್ನು ಕನಿಷ್ಠಗೊಳಿಸುವಂತೆ ಅವನು ತನ್ನ ಯುಕ್ತಿಯನ್ನು ಆರಿಸಬಹುದು. ಇದೇ ಕನಿಷ್ಠ–ಗರಿಷ್ಠ ಧೋರಣೆ. ಈ ಧೋರಣೆಯನ್ನು Aಯೂ ಅನುಸರಿಸಬಹುದು. ಹೀಗೆ ಇಬ್ಬರೂ ಇದೇ ಧೋರಣೆಯನ್ನು ಅನುಸರಿಸಿದರೆ ಮಾತ್ರವಲ್ಲದೆ ಈ ಸಂಗತಿ ಅವರಿಬ್ಬರಿಗೂ ತಿಳಿದಿದ್ದರೆ, ಅದರಿಂದ ಆಟಗಾರರಿಗೆ ಹೆಚ್ಚು ನಷ್ಟ ತಗಲುವ ಸಂಭವವಿದೆಯೇ ಎಂಬಿತ್ಯಾದಿ ವಿಚಾರಗಳನ್ನು ಕ್ರೀಡಾಸಿದ್ಧಾಂತದಲ್ಲಿ (ಗೇಮ್ಸ್ ಥಿಯೊರಿ) ವಿವೇಚಿಸಿರುವರು (**ನೋಡಿ– ಕ್ರೀಡಾಸಿದ್ಧಾಂತ**).

ಭವಿಷ್ಯದಲ್ಲಿ ತನಗೆ ಅತ್ಯಂತ ಪ್ರತಿಕೂಲವಾತಾವರಣ ಬಂದೊದಗಬಹುದೆಂದು ತಿಳಿದು ಅಥವಾ ಎದುರಾಳಿ ತನ್ನ ಮರ್ಮಸ್ಥಾನಕ್ಕೇನೇ ಪೆಟ್ಟುಕೊಡುವನೆಂದು ಕಲ್ಪಿಸಿ, ತನಗಾಗುವ ಅತ್ಯಂತ ಹೆಚ್ಚಿನ ನಷ್ಟವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಕನಿಷ್ಠ–ಗರಿಷ್ಠ ತತ್ತ್ವವನ್ನು ರೂಪಿಸಿದುದಾಗಿದೆ. ಆದ್ದರಿಂದ ಈ ತತ್ತ್ವವನ್ನು ನಿತ್ಯಜೀವನದಲ್ಲಿ ಯಾವಾಗಲೂ ಉಪಯೋಗಿಸುವವರನ್ನು ನಿರಾಶಾವಾದಿಗಳೆಂದು ಕಡೆಗಣಿಸಲು ಸಾಧ್ಯವಿದೆ. ಆದರೂ ಕನಿಷ್ಠ–ಗರಿಷ್ಠ ನಿರ್ಧಾರಗಳ ಸಮೂಹಕ್ಕೆ ಅನೇಕ ವಿಶೇಷ ಗುಣಗಳಿವೆ. ಎಲ್ಲ ಒಳ್ಳೆಯ ನಿರ್ಧಾರಗಳೂ ಈ ಸಮೂಹದಲ್ಲಿ ಸೇರಿವೆ. ಆದ್ದರಿಂದ ಅತ್ಯುತ್ತಮ ನಿರ್ಧಾರವನ್ನು ಹುಡುಕುವಾಗ ಈ ಸಮೂಹವನ್ನು ಬಿಟ್ಟು ಹೊರಗೆ ಹುಡುಕಬೇಕಾಗಿಲ್ಲ.

ಸಂಖ್ಯಾವಿಜ್ಞಾನದಲ್ಲಿ ಯೋಗ್ಯ ಅಂದಾಜಿಕವನ್ನು ಕಂಡುಹಿಡಿಯುವುದಕ್ಕೂ ಆಧಾರ ಕಲ್ಪನೆಯನ್ನು ಸಮರ್ಥಿಸುವುದಕ್ಕೂ ಈ ತತ್ತ್ವವನ್ನು ಅನೇಕರು ಅನುಸರಿಸುವರು. ಉದಾಹರಣೆಗೆ ಒಂದು ಯಂತ್ರದಿಂದ ತಯಾರಾಗುವ ವಸ್ತುಗಳಲ್ಲಿ ಶಿಷ್ಟವಲ್ಲದ ವಸ್ತುಗಳ ಪ್ರಮಾಣ $p$ ಆಗಿರಲಿ, $p$ ಯ ಅಂದಾಜಿಕ $p'$ ಆಗಿರಲಿ ಮತ್ತು ನಷ್ಟಫಲ $K(p\text{-}p')^2$ ಆಗಿರಲಿ. $N$ ವಸ್ತುಗಳನ್ನು ಪರಿಶೀಲಿಸಿದಾಗ $x$ ವಸ್ತುಗಳು ಶಿಷ್ಟವಲ್ಲದವುಗಳಾದರೆ, $\theta$ದ ಕನಿಷ್ಠ–ಗರಿಷ್ಠ ಅಂದಾಜಿಕ

$$P^* = \frac{1}{1+\sqrt{N}}\left(\frac{1}{\sqrt{N}}x + \frac{1}{2}\right)$$

ಆಗಿರುವುದೆಂದೂ ಇದು ಏಕೈಕ ಅಂದಾಜಿಕವೆಂದೂ ತೋರಿಸಬಹುದು.

**ಬೇಯಸನ ತತ್ತ್ವ:** ಈ ಮೊದಲೇ ಹೇಳಿದಂತೆ ಭವಿಷ್ಯದ ಬಗ್ಗೆ ಅಥವಾ $\theta$ದ ಬಗ್ಗೆ ನಮಗೆ ಸ್ವಲ್ಪ ಪರಿಜ್ಞಾನವಿದ್ದಾಗ, ಈ ನಮ್ಮ ಜ್ಞಾನವನ್ನು $\xi(\theta)$ ಎಂಬ ಪೂರ್ವಭಾವಿ ವಿತರಣೆಯ ಮುಖಾಂತರ ವ್ಯಕ್ತಮಾಡಬಹುದು. ಇದನ್ನು ಉಪಯೋಗಿಸಿ $R(\xi,\delta)$ವನ್ನು ಎಣಿಸಿ $R(\xi,\delta)$ ಕನಿಷ್ಠವಾಗುವಂತೆ $\delta$ವನ್ನು ಉಪಯೋಗಿಸಿದರೆ ಆ $\delta$ವನ್ನು ಬೇಯಸನ ನಿರ್ಧಾರವೆನ್ನುತ್ತಾರೆ. ಇಂಥ ಪೂರ್ವಭಾವೀ ವಿತರಣೆಯಿಲ್ಲದಿರುವಾಗಲೂ ಬೇಯಸನ ತತ್ತ್ವವನ್ನು ಉಪಯೋಗಿಸುವರು. ಏಕೆಂದರೆ ಬೇಯಸನ ನಿರ್ಧಾರಗಳ ಸಮೂಹಕ್ಕೂ ಅನೇಕ ವಿಶೇಷ ಗುಣಗಳಿವೆ.

ಬೇಯಸನ ನಿರ್ಧಾರಗಳಿಗೂ ಕನಿಷ್ಠ–ಗರಿಷ್ಠ ನಿರ್ಧಾರಗಳಿಗೂ ನಿಕಟ ಸಂಬಂಧವಿದೆ. ಎಲ್ಲ $\xi(\theta)$ಗಳಿಗೂ

$$\underset{\delta}{\text{ಕನಿಷ್ಠ}}\ R(\xi_0,\delta) \geq \underset{\delta}{\text{ಕನಿಷ್ಠ}}\ R(\xi,\delta)$$

ಆದರೆ, $\xi_0$ಯನ್ನು ಅತ್ಯಂತ ಪ್ರತಿಕೂಲ ವಿತರಣೆ ಎಂದು ಕರೆಯುತ್ತಾರೆ. $\theta$ ದ ಪೂರ್ವಭಾವಿ ವಿತರಣೆ ಅತ್ಯಂತ ಪ್ರತಿಕೂಲವಿದ್ದಾಗ ಅದರ ಮೇಲೆ ಹೊಂದಿಕೊಂಡಿರುವ ಬೇಯಸನ ನಿರ್ಧಾರವೇ ಕನಿಷ್ಠ–ಗರಿಷ್ಠ ನಿರ್ಧಾರ. ಮಾತ್ರವಲ್ಲದೆ ನಷ್ಟಫಲವೂ ನಿರ್ಧಾರಗಳ ಸಮೂಹಗಳೂ ಕೆಲವೊಂದು ನಿರ್ಬಂಧಕ್ಕೊಳಗಾಗಿರುವಾಗ ಎಲ್ಲ ಒಳ್ಳೆಯ ನಿರ್ಧಾರಗಳೂ ಕನಿಷ್ಠ–ಗರಿಷ್ಠ ನಿರ್ಧಾರ ಸಮೂಹಕ್ಕೆ ಸೇರಿರುವುವು. ಹೀಗಾಗಿ ಎಲ್ಲ ಒಳ್ಳೆಯ ನಿರ್ಧಾರಗಳೂ ಬೇಯಸನ ನಿರ್ಧಾರ ಸಮೂಹಕ್ಕೂ ಸೇರಿರುವುವು. ಕೆಲವೊಂದು ಸಲ ಬೇಯಸನ ನಿರ್ಧಾರದ ಮುಖಾಂತರ ಕನಿಷ್ಠ–ಗರಿಷ್ಠ ನಿರ್ಧಾರವನ್ನು ಕಂಡುಹಿಡಿಯಲು ಸಾಧ್ಯವಾಗುವುದು.

ಸಂಖ್ಯಾವಿಜ್ಞಾನದಲ್ಲಿ ಆಧಾರಕಲ್ಪನೆಯ ಪರೀಕ್ಷೆಯ ವಿಧಾನಗಳಲ್ಲಿ ಅನೇಕವು, ಕೆಲವೊಂದು ವಿಶಿಷ್ಟ ನಷ್ಟ ಫಲಗಳನ್ನು ಉಪಯೋಗಿಸಿ ಬರುವ ಬೇಯಸನ ನಿರ್ಧಾರಗಳೆಂದು ಸಾಧಿಸಿರುವರು. ಉದಾಹರಣೆಗೆ $H_0$ ಎಂಬ ಆಧಾರಕಲ್ಪನೆ ಸರಿಯೇ ಅಥವಾ $H_1$ ಸರಿಯೇ ಎಂಬುದನ್ನು ಶ್ರೇಣಿಕವಾಗಿ ಪರೀಕ್ಷಿಸಬೇಕೆಂದು ತಿಳಿಯೋಣ. $H_0$ ಸರಿಯಿರುವಾಗ $H_1$ ಸರಿಯೆಂದು ನಿರ್ಧರಿಸುವುದರಿಂದುಂಟಾಗುವ ನಷ್ಟ $\omega_1$ ಆಗಿರಲಿ ಮತ್ತು $H_1$ ಸರಿಯಿರುವಾಗ $H_0$ ಸರಿಯೆಂದು ನಿರ್ಧರಿಸುವ ನಷ್ಟ $\omega_2$ ಆಗಿರಲಿ. ಪ್ರತಿಯೊಂದು ವಸ್ತುವನ್ನೂ ಪರೀಕ್ಷಿಸಲು ತಗಲುವ ಖರ್ಚು C ಅಗಿರಲಿ. ಹೀಗೆ ಇರುವಾಗ $H_0$ ಯ ಪೂರ್ವಭಾವೀಸಂಭವ $\xi$ ಮತ್ತು $H_1$ರ ಪೂರ್ವಭಾವೀಸಂಭವ $1–\xi$ ಇದ್ದರೆ, ಅದಕ್ಕೆ ಅನುಗುಣವಾದ ಬೇಯಸನ ನಿರ್ಧಾರವೆಂದರೆ ವಾಲ್ಡನ ಶ್ರೇಣಿಕಸಂಭವನಿಷ್ಪತ್ತಿಪರೀಕ್ಷಣ (ಸೀಕ್ವೆನ್ಷಿಯಲ್ ಪ್ರಾಬೆಬಿಲಿಟಿ ರೇಷಿಯೋ ಟೆಸ್ಟ್) ಎಂದು ಕಂಡುಹಿಡಿದಿರುವರು.



ಬೇಯಸನ ನಿರ್ಧಾರ ಬೇಯಸನ ಸಿದ್ಧಾಂತದ ಮೇಲೆ ಅವಲಂಬಿಸಿದ್ದು ಅದನ್ನು ಉಪಯೋಗಿಸುವುದು ತಪ್ಪು. ಅದು ಕರ್ತೃಸಂಬಂಧಿತವಾಗಿದೆ ಎಂಬಿತ್ಯಾದಿ ಕಾರಣಗಳಿಂದ ಬೇಯಸನ ತತ್ತ್ವಕ್ಕೆ ಕೆಲ ಸಮಯ ಮಂಜು ಕವಿದಿತ್ತು. ಆದರೆ ಇತ್ತೀಚೆಗೆ ಸಾವ್ಹೆಜ್, ವಾಲ್ಡ್ ಮೊದಲಾದವರ ಪರಿಶ್ರಮದಿಂದ ಆ ಮಂಜು ಕರಗುತ್ತ, ಈ ತತ್ತ್ವ ಜನಪ್ರಿಯವಾಗತೊಡಗಿದೆ.

ತೀಕ್ಷ್ಣತಮ ನಿರ್ಧಾರ ಮೇಲೆ ವಿವರಿಸಿದ ತತ್ತ್ವಗಳಂತೆ ವಿಶೇಷ ಗುಣಗಳನ್ನು ಪಡೆದಿಲ್ಲ. ಈ ಧೋರಣೆಗಳಲ್ಲದೆ ಅಚರತ್ವ ತತ್ತ್ವ (ಇನ್‌ವೇರಿಯನ್ಸ್ ಪ್ರಿನ್ಸಿಪಲ್) ನಿಷ್ಪಕ್ಷಪಾತತತ್ತ್ವ (ಪ್ರಿನ್ಸಿಪಲ್ ಆಫ್ ಅನ್‌ಬಯಸ್ಡ್‌ನೆಸ್) ಮುಂತಾದವುಗಳನ್ನೂ ಸಂಖ್ಯಾವಿಜ್ಞಾನದಲ್ಲಿ ಬಳಸುವರು. ಒಂದು ಆಧಾರಕಲ್ಪನೆ ಅಥವಾ ನಿರ್ಧಾರದ ಸಮಸ್ಯೆ ಕೆಲವೊಂದು ಮಾರ್ಪಾಡುಗಳಿಂದ ಅಚರವಿದ್ದಾಗ ನಾವು ಬಳಸುವ ನಿರ್ಧಾರಗಳೂ ಇವೇ ಮಾರ್ಪಾಡುಗಳಿಂದ ಅಪಾಯ ಉತ್ಪನ್ನವನ್ನು ಅಚರಗೊಳಿಸುವಂಥವಿರಬೇಕು; ಇದೇ ಅಚರತತ್ತ್ವ. ಈ ವಿಶಿಷ್ಟಗುಣಗಳು ಇರುವ ನಿರ್ಧಾರಗಳಲ್ಲಿ ಅತ್ಯುತ್ತಮವಾದುದನ್ನು ನಮಗೆ ಪಡೆಯಲು ಸಾಧ್ಯವಿರುವುದು. $\theta$ ದ ಬೆಲೆ ಯಾವುದೇ ಇರಲಿ, ನಾವು ಸರಿಯಾದ ನಿರ್ಧಾರವನ್ನು ಕೈಗೊಳ್ಳುವುದರಿಂದಾಗುವ ನಷ್ಟ ತಪ್ಪಾದ ನಿರ್ಧಾರದಿಂದ ಉಂಟಾಗುವ ನಷ್ಟಕ್ಕಿಂತ ಕಡಿಮೆ ಇದ್ದರೆ, ಅ ನಿರ್ಧಾರಕ್ಕೆ ನಿಷ್ಪಕ್ಷಪಾತ ನಿರ್ಧಾರ ಎನ್ನುವರು. ನಿಷ್ಪಕ್ಷಪಾತ ನಿರ್ಧಾರಗಳಲ್ಲಿಯೇ ಅತ್ಯುತ್ತಮ ನಿರ್ಧಾರವನ್ನು ಕೈಗೊಂಡರೆ ನಾವು ನಿಷ್ಪಕ್ಷಪಾತ ತತ್ತ್ವವನ್ನು ಅನುಸರಿಸಿದಂತಾಗುವುದು. ಈ ತತ್ತ್ವಗಳಲ್ಲಿ ಎರಡು ಅಥವಾ ಹೆಚ್ಚು ತತ್ತ್ವಗಳನ್ನು ಏಕಕಾಲದಲ್ಲಿ ಬಳಸುವವರೂ ಇರುವರು.

ಒಬ್ಬ ವಿವೇಕಿ ಅಥವಾ ಸುವಿಚಾರಿ ವ್ಯಕ್ತಿ ಯಾವ ತತ್ತ್ವದ ಮೇರೆಗೆ ತನ್ನ ನಿರ್ಧಾರವನ್ನು ಕೈಗೊಳ್ಳುತ್ತಾನೆ ಎಂಬುದರ ಬಗ್ಗೆ ಅರ್ಥಶಾಸ್ತ್ರಜ್ಞರೂ ವಿವೇಚಿಸಿರುವರು. ಅವರು ಅದನ್ನು ಉಪಯುಕ್ತತಾ ಸಿದ್ಧಾಂತ (ಥಿಯೊರಿ ಆಫ್ ಯುಟಿಲಿಟಿ) ಎಂದು ಕರೆದಿದ್ದಾರೆ. (ಬಿ.ಆರ್.ಬಿ.)

**ಕನಿಷ್ಠತಮ ವರ್ಗತತ್ತ್ವ : ಅನಿಶ್ಚಿತ ಅಳತೆ:** ಅನೇಕ ಪ್ರಯೋಗಗಳಲ್ಲಿ ಉದ್ದ, ತೂಕ, ವೇಗ ಇತ್ಯಾದಿ ಪರಿಮಾಣಗಳನ್ನು ಅಳೆಯಬೇಕಾಗುವುದು. ಅಳತೆಯ ಉಪಕರಣದಿಂದಲೂ ಪ್ರಯೋಗಕಾರನ ಅಥವಾ ವೀಕ್ಷಕನ ದೋಷಗಳಿಂದಲೂ ಅಳತೆಯಲ್ಲಿ ಲೋಪ ಉಂಟಾಗುವುದು. ಒಂದೇ ಪರಿಮಾಣವನ್ನು ಪದೇ ಪದೇ ಅಳೆದಾಗ ದೊರೆವ ಬೆಲೆಗಳು ಇಂಥ ಲೋಪಕ್ಕೊಳಗಾಗಿ ವಾಸ್ತವಿಕ ಬೆಲೆಯಿಂದ ವ್ಯತ್ಯಾಸವಾಗಿರುವುವು. ಇಂಥ ಸಂದರ್ಭದಲ್ಲಿ ವಾಸ್ತವಿಕವಾದ ಬೆಲೆ ಏನೆಂದು ಪರಿಗಣಿಸೋಣ ? ಶತಮಾನಗಳ ಹಿಂದೆಯೇ ಆಕಾಶಕಾಯಗಳ ಸ್ಥಾನವನ್ನು ದೂರದರ್ಶಕ ಮುಂತಾದ ಉಪಕರಣಗಳಿಂದ ವೀಕ್ಷಿಸುವಲ್ಲಿ ಖಗೋಳವಿಜ್ಞಾನಿಗಳ ಮುಂದೆ ಈ ಪ್ರಶ್ನೆ ತಲೆದೋರಿತು. ಇದನ್ನು ಬಿಡಿಸಲು ಕನಿಷ್ಠತಮ ವರ್ಗತತ್ತ್ವ (ಪ್ರಿನ್ಸಿಪಲ್ ಅಫ್ ಲೀಸ್ಟ್ ಸ್ಕ್ವೇರ್) ರೂಪುಗೊಂಡಿತು. $n$ ಅವೇಕ್ಷಣೆಗಳನ್ನು $x_1, x_2, \ldots\ldots, xn$ ಎಂದು ಸೂಚಿಸೋಣ. ಈ ಅಳತೆಗಳ ಆಧಾರದ ಮೇಲೆ xನ ವಾಸ್ತವಿಕ ಬೆಲೆಯನ್ನು ಅಂದಾಜುಮಾಡಬೇಕಾಗಿದೆ. ಅಂದಾಜು ಬೆಲೆಯನ್ನು n ಎಂದಿಟ್ಟುಕೊಂಡರೆ $x_1$-a, $x_2$-a,........, xn-a ಇವುಗಳಿಗೆ n ಯಿಂದ $x_1, x_2, \ldots\ldots$,xn ಗಳ ವಿಚಲನೆಗಳು ಎಂದು ಹೆಸರು. ಇವುಗಳ ವರ್ಗಸಂಕಲನ ಕನಿಷ್ಠತಮವಾಗುವಂತೆ ಆಯ್ದುಕೊಂಡ aಯ ಬೆಲೆಯೇ ಉತ್ತಮವಾದ ಅಂದಾಜಾಗುವುದು ಎಂಬುದೇ ಕನಿಷ್ಠತಮ ವರ್ಗತತ್ತ್ವ.

ಮೇಲೆ ಹೇಳಿದ ವಿಚಲನೆಗಳ ವರ್ಗಸಂಕಲನ $S=\sum_{i=1}^{n}(xi-a)^2$ ಆಗುವುದು.

ಇದರ ಕನಿಷ್ಠತಮ ಬೆಲೆಯನ್ನು ಪಡೆಯಲು aಯನ್ನು ಕುರಿತ ಇದರ ನಿಷ್ಪನ್ನವನ್ನು (ಡಿರೈವೆಟಿವ್) ಶೂನ್ಯಕ್ಕೆ ಸಮೀಕರಿಸಿ ಬರುವ ಸಮೀಕರಣದಿಂದ aಯನ್ನು ಬಿಡಿಸಬೇಕು; ಅಂದರೆ

$$\frac{\mathrm{dS}}{\mathrm{d}a}=0$$

ನಿಷ್ಪನ್ನವನ್ನು ಗಣಿಸಿ ಸರಳೀಕರಿಸಲು, ಈ ಸಮೀಕರಣ

$\Sigma$

$(x_1-a)+(x_2-a)+\ldots\ldots+(x_n-a)=0$ ಎಂಬ ರೂಪವನ್ನು ತಳೆಯುವುದು. ಬಿಡಿಸಲು $a=\frac{1}{n}(x_1+x_2+\ldots\ldots+z_n)=\frac{1}{n}\sum_{i=1}^{n}x_i$

ಅಂದರೆ ಕನಿಷ್ಠತಮ ವರ್ಗತತ್ತ್ವಕ್ಕನುಸಾರವಾಗಿ $x_1, x_2, \ldots\ldots, x_n$ ಗಳ ಸರಾಸರಿ ಅಥವಾ ಸಮಾಂತರ ಮಧ್ಯಕ ಉತ್ತಮ ಅಂದಾಜುಬೆಲೆ ಆಗುವುದು.

**ಎರಡು ಚರಗಳ ಪರಸ್ಪರ ಸಂಬಂಧ :** ಅನೇಕ ಸಂದರ್ಭಗಳಲ್ಲಿ x,y ಎಂಬ ಎರಡು ಚರಗಳ ಕೆಲವು ಅಳತೆಗಳಿಂದ ಅವೆರಡರ ನಡುವೆ ಇರುವ ಗಣಿತ ಸಂಬಂಧವನ್ನು ಗೊತ್ತು ಹಚ್ಚಬೇಕಾದೀತು. ಈ ಚರಗಳ ಸಂವಾದೀ ಅವೇಕ್ಷಣೆಗಳು ದೊರೆತಿವೆ ಎಂದಿಟ್ಟುಕೊಳ್ಳೋಣ. ಇವು ಅಳತೆಯ ಲೋಪ ದೋಷಗಳಿಗೆ ಈಡಾಗಿರುವುದರಿಂದ ಚರಗಳಿಗಿರುವ ಸಂಬಂಧವನ್ನು ಇವುಗಳಿಂದ ನೇರವಾಗಿ ಗೊತ್ತು ಹಚ್ಚಲು ಸಾಧ್ಯವಿಲ್ಲ. ಇದಕ್ಕೆ ತಕ್ಕ ಪ್ರಯೋಗತಂತ್ರವನ್ನು ಕೈಗೊಳ್ಳಬೇಕಾಗುವುದು. ಚರಗಳ ಅವೇಕ್ಷಣೆಗಳು $(x_1,y_1)(x_2,y_2),\ldots\ldots\ldots\ldots$(xn,yn) ಆಗಿರಲಿ. ಇವನ್ನು ಬಿಂದುಗಳ ಅವೇಕ್ಷಣಗಳೆಂದು ಭಾವಿಸಿ ಆ ಬಿಂದುಗಳನ್ನು ಒಂದು ನಕ್ಷೆಯಲ್ಲಿ ಗುರುತಿಸಿದರೆ ದೊರೆವ ಚಿತ್ರಕ್ಕೆ ಚದರಾವಣಿ ಚಿತ್ರ (ಸ್ಕ್ಯಾಟರ್ ಡಯಾಗ್ರಂ) ಎಂದು ಹೆಸರು. ಚಿತ್ರದ ಪರಿಶೀಲನೆಯಿಂದ x,yಗಳಿಗೆ ಯಾವ ವಿಧವಾದ ಸಂಬಂಧವಿದೆಯೆಂದು ಊಹಿಸಬಹುದು. ಉದಾಹರಣೆಗೆ y=a+bx ಎಂಬ ಸಂಬಂಧವಿದೆಯೆಂದು ಭಾವಿಸೋಣ. ಇದನ್ನು ಪ್ರತಿನಿಧಿಸುವ ಸರಳರೇಖೆಯನ್ನು ಎಳೆಯುವುದೆಂತು, ಅಲ್ಲದೆ ಅಂಥ ಹಲವಾರು ಸರಳರೇಖೆಗಳನ್ನು ಎಳೆಯಬಹುದಲ್ಲವೆ, ಯಾವ ಸರಳರೇಖೆಯನ್ನು ಹೆಚ್ಚುಸೂಕ್ತವಾಗಿರುವುದೆಂದು ತೆಗೆದುಕೊಳ್ಳುವುದು–ಇವನ್ನು ನಿರ್ಧರಿಸಲು ಕನಿಷ್ಠತಮವರ್ಗತತ್ತ್ವವನ್ನು ಬಳಸುತ್ತೇವೆ.




y=a+bx ಎಂಬುದು ರೇಖೀಯ ಸಂಬಂಧವಾದರೆ, ಉಕ್ತರೇಖೆಯನ್ನು ದತ್ತ ಅವೇಕ್ಷಣೆಗಳಿಗೆ ಹಾಳಿತವಾಗಿ ಪೊರ್ದಿಸಬೇಕು (ಫಿಟ್). xನ ಬೆಲೆ $x_i$ ಅದಾಗ yಯ ಬೆಲೆ a+$bx_i$ ಆಗಬೇಕು. yಯ ಅವೇಕ್ಷಿತ ಬೆಲೆ yi ಆಗಿದ್ದರೆ ವ್ಯತ್ಯಾಸ ಅಥವಾ ವಿಚಲನೆ yi –(a+$bx_i$) ಆಗುವುದು. ಕನಿಷ್ಠತಮ ವರ್ಗತತ್ತ್ವದ ಮೇರೆಗೆ $S=\sum_{i=1}^{n}(y_i-a-bx_i)^2$ ಕನಿಷ್ಠತಮವಾಗಬೇಕು, ಅಂದರೆ a,b ಗಳನ್ನು ಕುರಿತು Sನ ಆಂಶಿಕ ನಿಷ್ಪನ್ನಗಳು (ಪಾರ್ಷಲ್ ಡಿರೈವೆಟಿವ್ಸ್) ಶೂನ್ಯವಾಗಬೇಕು: ಅಂದರೆ $\frac{\partial s}{\partial a}=0, \frac{\partial s}{\partial b}=0$. ಇವುಗಳಿಂದ

$$\sum y-\sum a=b\sum x=0 \qquad \ldots (1)$$

$$\sum xy-a\sum x-b\sum x^2=0 \qquad \ldots (2)$$

ಎಂಬ ಸಮೀಕರಣಗಳು ದೊರೆಯುವುವು. ಇವಕ್ಕೆ ಪ್ರಸಾಮಾನ್ಯ (ನಾರ್ಮಲ್) ಸಮೀಕರಣಗಳೆಂದು ಹೆಸರು. ಇವನ್ನು ಬಿಡಿಸಲಾಗಿ ದೊರೆವ a ಮತ್ತು b ಗಳ ಬೆಲೆಗಳನ್ನು ಕನಿಷ್ಠತಮವರ್ಗ ಬೆಲೆಗಳು ಎನ್ನುತ್ತೇವೆ. (1)ನೆಯ ಸಮೀಕರಣವನ್ನು n ನಿಂದ ಭಾಗಿಸಿದಾಗ

$$y'=a+bx' \qquad \ldots\ldots\ldots\ldots(3)$$

ಎಂಬ ಸಮೀಕರಣ ದೊರೆಯುವುದು. ಇಲ್ಲಿ x′,y′ಗಳು x,y ಗಳ ಸಮಾಂತರ ಮಧ್ಯಕಗಳು. ಅಂದರೆ x,y ಗಳ ಸಂಬಂಧವನ್ನು ನೀಡುವ ಸರಳರೇಖೆ (x′,y′) ಬಿಂದುವಿನ ಮೂಲಕ ಹಾದುಹೋಗುತ್ತದೆ: ಮತ್ತು a=y′-bx′ ಆಗುವುದು. ಆದ್ದರಿಂದ

$$y-y'=b(x-x') \quad a$$

ಎಂದು ಬರೆಯಬಹುದು. ಹಾಗೂ xನ ಬೆಲೆ ದತ್ತವಾದಾಗ ಈ ಸಮೀಕರಣದಿಂದ yಯ ಬೆಲೆಯನ್ನು ಅಂದಾಜು ಮಾಡಬಹುದು. ಹಾಗೆ ಈ ಸಮೀಕರಣದಿಂದ ಗಣಿಸಿದ ಬೆಲೆಗೂ yನ ಅವೇಕ್ಷಿತ ಬೆಲೆಗೂ ಇರುವ ವಿಚಲನೆಯನ್ನು y-y′=-b(x-x′) ಎಂದು ನಿರೂಪಿಸಬಹುದು. ಹೀಗಾಗಿ ವಿಚಲನೆಗಳ ವರ್ಗಸಂಕಲನ

$$S=\sum[(y-y')-b(x-x')]^2$$

ಆಗುವುದು. ಆದ್ದರಿಂದ ಕನಿಷ್ಠತಮ ವರ್ಗತತ್ತ್ವವನ್ನು ಪ್ರಯುಕ್ತಿಸಿದರೆ xಗೆ ಪ್ರಸಾಮಾನ್ಯ ಸಮೀಕರಣ

$$\sum[(y-y')_-b(x-x')]=0$$

ಎಂದಾಗುವುದು. ಇದನ್ನು ಬಿಡಿಸಲು

$$b=\frac{\sum(x-x')(y-y)}{\sum(x-x')^2}$$

ಅಂಶವನ್ನೂ ಛೇದವನ್ನೂ ಪ್ರತ್ಯೇಕವಾಗಿ nನಿಂದ ಭಾಗಿಸಿದರೆ x, y ಗಳ ಸಹಚರತ್ವ (ಕೋವೇರಿಯನ್ಸ್) $\sigma_{xy}$ ಮತ್ತು ಚರತ್ವ (ವೇರಿಯನ್ಸ್) $\sigma_x^2$ ದೊರೆಯುವುವು. ಅಗ ಮೇಲಿನ ಸಾಮ್ಯ $b=\frac{\sigma_{xy}}{\sigma x_2}$ ಎಂಬ ರೂಪಕ್ಕಿಳಿಯುವುದು.

ಒಂದು ಉದಾಹರಣೆಯಿಂದ ಈ ಕ್ರಮವನ್ನು ಸ್ಪಷ್ಟಪಡಿಸಬಹುದು. ಗದ್ದೆಗಳಿಗೆ ಹಾಕಿದ ರಾಸಾಯನಿಕ ಗೊಬ್ಬರ x ಚೀಲಗಳು ಮತ್ತು ಬೆಳೆಯುವ ಪ್ರಮಾಣ y ಮಣಗಳು ಎಂದು ಸೂಚಿಸಿ ಇವುಗಳ ಸಂವಾದಿ ಬೆಲೆಗಳನ್ನು ಪಟ್ಟಿಮಾಡಿಸಲಾಗಿದೆ. ಹಾಳಿತವಾದ ಸರಳ ರೇಖೆಯನ್ನು ಪೊರ್ದಿಸಿ y ಯನ್ನು x ನ ಉತ್ಪನ್ನವಾಗಿ ನಿರೂಪಿಸಬೇಕು.

*x*: 10 12 10 11 15 14 15 13

*y:* 85 93 90 94 95 92 100 95

ಲೆಕ್ಕಾಚಾರವನ್ನು ಸುಗಮವಾಗಿಸಲು X=*x*-10, ಮತ್ತು Y=*y*-90 ಎಂದಿಟ್ಟುಕೊಂಡರೆ X, Yಗಳ ಸಂವಾದಿ ಬೆಲೆಗಳು ಹೀಗಿರುವುವು–

X : 0 2 0 1 5 4 5 3

Y: -5 3 0 4 5 2 10 5

Y=a+b*X* ಎಂಬ ಸಂಬಂಧವನ್ನು ಕಲ್ಪಿಸಿಕೊಂಡರೆ ಕನಿಷ್ಠತಮವರ್ಗ ತತ್ತ್ವದ ಮೇರೆಗೆ a,b ಗಳ ಕೆಳಕಾಣಿಸಿದ ಪ್ರಸಾಮಾನ್ಯ ಸಮೀಕರಣಗಳು ದೊರೆಯುವುವು:

8a+20b=24, 28a+80b=112

ಈ ಸಮೀಕರಣವನ್ನು ಬಿಡಿಸಲಾಗಿ $a=-\frac{4}{3}, b=\frac{26}{15}$.

ಕನಿಷ್ಠತಮವರ್ಗತತ್ತ್ವದ ಮೇರೆಗೆ ಪೊರ್ದಿಸಿದ ಸರಳರೇಖೆಯ ಸಮೀಕರಣ

$$Y=-\frac{4}{3}+\frac{26}{15}X$$

ಆಗುವುದು. ಇದನ್ನೇ x,y ಗಳ ಮೂಲಕ ನಿರೂಪಿಸಿದರೆ

$$y-90=-\frac{4}{3}+\tfrac{26}{15}(x-10)$$

ಆಗುವುದು. ಅಂದರೆ, $y=71\frac{1}{3}+1\frac{11}{15}x$

ಈ ಸಮೀಕರಣದ ಅಧಾರದ ಮೇಲೆ ನಿರ್ದಿಷ್ಟ ಪರಿಮಾಣದ ಗೊಬ್ಬರವನ್ನು ಹಾಕಿದಾಗ ಎಷ್ಟು ಬೆಳೆಯನ್ನು ನಿರೀಕ್ಷಿಸಬಹುದು ಎಂಬ ಅಂದಾಜು ಸಹ ಸಿಗುವುದು. ಈಗ 12½ ಚೀಲದಷ್ಟು ಗೊಬ್ಬರವನ್ನು ಹಾಕಿದರೆ ನಿರೀಕ್ಷಿಸಬಹುದಾದ ಬೆಳೆ

$$y=71\tfrac{1}{3}+\frac{26}{15}\text{X}12\tfrac{1}{2}=93$$

ಅಂದರೆ 93 ಚೀಲಗಳಷ್ಟು ಬೆಳೆ ಸಿಗುವ ನಿರೀಕ್ಷೆ ಇದೆ.

**ಕಾಲಸರಣಿಯ ಪೊರ್ದಿಕೆ:** ಕಾಲಸರಣಿಯ ಅವೇಕ್ಷಣೆಗಳಿಗೆ ಬೀಜಗಣಿತ ರೀತಿಯಲ್ಲಿ ಬಹುಪದಿಗಳನ್ನು ಪೊರ್ದಿಸಲು ಕನಿಷ್ಠತಮ ವರ್ಗತತ್ತ್ವವನ್ನು ಬಳಸುತ್ತೇವೆ. ಆ ಸಂದರ್ಭದಲ್ಲಿ ಕೆಲವು ಸರಳೋಪಾಯಗಳನ್ನು ಕೈಗೊಳ್ಳಬಹುದು. ಒಂದು ಉದಾಹರಣೆಯಿಂದ ಇದನ್ನು ವಿಶದಪಡಿಸಬಹುದು. ಭಾರತದೇಶದಲ್ಲಿ ಚಹ ಎಲೆಯ ಉತ್ಪತ್ತಿಯ ಕೋಷ್ಟಕವನ್ನು ಇಲ್ಲಿ ಕೊಡಲಾಗಿದೆ.

ವರ್ಷಸಂಖ್ಯೆಯನ್ನು x ಎಂದು ಸೂಚಿಸಿ ಉತ್ಪತ್ತಿಯನ್ನು (ಕೋಟಿ ಪೌಂಡುಗಳಲ್ಲಿ) y ಎಂದು ಸೂಚಿಸಿದರೆ y=a+bx ಎಂಬ ಸರಳರೇಖೆಯನ್ನು ದತ್ತ ಅವೇಕ್ಷಣೆಗಳಿಗೆ ಹಾಳಿತವಾಗಿ ಪೊರ್ದಿಸಬೇಕು. 1957ನೆಯ ಇಸವಿಯನ್ನು ಕಾಲ ಮಾನದ ಮೂಲಬಿಂದುವಾಗಿಟ್ಟುಕೊಂಡರೆ $\sum$x ಸೊನ್ನೆಯಾಗುವುದು ಮತ್ತು $\sum$x2 ಇದರ ಬೆಲೆಯನ್ನು ಇದರ ಬೆಲೆಯನ್ನು $1^2+2^2+...+r^2=\frac{r}{6}(r+1)(2r+1)$ ಎಂಬ ಬೀಜಸೂತ್ರದಿಂದ ಸುಲಭವಾಗಿ ಕಂಡುಹಿಡಿಯಬಹುದು. ಹೇಗೆಂದರೆ, $1^2+2^2+...+5^2=55.x$ ನ ಋಣ ಬೆಲೆಗಳನ್ನು ತೆಗೆದುಕೊಂಡರೆ ಸಹ 55 ದೊರೆಯುವುದು. ಆದ್ದರಿಂದ $\sum x^2=110$ ಆಗುವುದು.

ಕೋಷ್ಟಕ 1. ಭಾರತ ದೇಶದಲ್ಲಿ ಚಹಾ ಎಲೆಯ ಉತ್ಪತ್ತಿ (ಕೋಟಿ ಪೌಂಡುಗಳಲ್ಲಿ)

| *x* | *X* | *y* | *Xy* | $X^2y$ | *y'* | *y-y'* |
|---|---|---|---|---|---|---|
| 1 | 2 | 3 | 4 | 5 | 6 | 7 |
| 1952 | −5 | 61.4 | −307.0 | 1535.0 | 61.610 | −0.210 |
| 1953 | −4 | 61.5 | −246.0 | 984.0 | 63.116 | −1.616 |
| 1954 | −3 | 65.2 | −195.6 | 586.8 | 64.622 | 0.578 |
| 1955 | −2 | 67.8 | −135.6 | 271.2 | 66.128 | 1.672 |
| 1956 | −1 | 68.1 | −68.1 | 68.1 | 67.634 | 0.466 |
| 1957 | 0 | 68.5 | . . . | . . . | 69.140 | −0.640 |
| 1958 | 1 | 71.7 | 71.7 | 71.7 | 70.646 | 1.054 |
| 1959 | 2 | 71.9 | 143.8 | 287.6 | 72.152 | −0.252 |
| 1960 | 3 | 70.8 | 212.4 | 637.2 | 73.658 | −2858 |
| 1961 | 4 | 77.9 | 311.6 | 1246.4 | 75.164 | 2.736 |
| 1962 | 5 | 75.7 | 378.5 | 1892.5 | 76.670 | −0.970 |
| ಮೊತ್ತ | 0 | 760.5 | 165.7 | 7580.5 | 760.540 | 0.040 |

ಕನಿಷ್ಠತಮ ವರ್ಗತತ್ತ್ವದಂತೆ a,b ಗಳನ್ನು ಪಡೆಯುವ ಪ್ರಸಾಮಾನ್ಯ ಸಮೀಕರಣಗಳು ಹೀಗಿರುತ್ತವೆ.

11a=760.5 ಮತ್ತು 110b=165.71

ಇವು ಬೇರೆ ಬೇರೆಯಾದ ಎರಡು ಸರಳ ಸಮೀಕರಣಗಳು ಎಂಬುದನ್ನು ಗಮನಿಸಿ ಅವನ್ನು ಬಿಡಿಸಲಾಗಿ, *a*=69.136, *b*=1.506 ಆಗುತ್ತವೆ. ಆದ್ದರಿಂದ ಹಾಳಿತವಾಗಿ ಪೊರ್ದಿದ ಸರಳರೇಖೆ *y*=69.136+1.506*X*. ಇದರಲ್ಲಿ X ಎಂಬುದು 1957ರಿಂದ ಎಣಿಸಿ ಬಂದ ವರ್ಷಗಳನ್ನು ಸೂಚಿಸುತ್ತದೆ. ಈ ಸಮೀಕರಣದ ಅಧಾರದ ಮೇಲೆ ಪ್ರತಿವರ್ಷಕ್ಕೂ ಒಂದೊಂದು ಬೆಲೆ ದೊರೆಯುವುದು. yಯ ಈ ಬೆಲೆಗಳಿಗೆ ಅಳವಡಿಸಿದ ಬೆಲೆಗಳು ಎಂದು ಹೆಸರು. ಇವನ್ನು y' ಎಂದು ಸೂಚಿಸಿ ಕೋಷ್ಟಕದ 6ನೇ ಸ್ತಂಭದಲ್ಲಿ ಬರೆಯಲಾಗಿದೆ. ಈ ಸಮೀಕರಣದ ಆಧಾರದಮೇಲೆ 1963ನೆಯ ಇಸವಿಯಲ್ಲಿ ಉತ್ಪತ್ತಿಯ ಅಂದಾಜು ಬೆಲೆ 78.176 ಕೋಟಿ ಪೌಂಡುಗಳಾಗುವುವು.

**ಸಮಸಂಖ್ಯೆಯ ಅವೇಕ್ಷಣೆಗಳು:** ಕ್ರಮಾಗತವಾಗಿ ಎಲ್ಲ ವರ್ಷಗಳಿಗೂ ಅವೇಕ್ಷಣೆಗಳು ದತ್ತವಾದಾಗ ಈ ಕ್ರಮವನ್ನು ಅನುಸರಿಸಬಹುದು. ಮಧ್ಯೆ ಯಾವುದಾದರೂ ತೆರಪಿದ್ದರೆ ಪ್ರಸಾಮಾನ್ಯ ಸಮೀಕರಣಗಳು ಹೀಗೆ ಬೇರ್ಪಡುವುದಿಲ್ಲ.

ಅವೇಕ್ಷಣೆಗಳ ಸಂಖ್ಯೆ ಬೆಸವಲ್ಲದೆ ಸಮವಾಗಿದ್ದರೆ ಮೇಲಿನ ಕ್ರಮದಲ್ಲಿ ಸ್ವಲ್ಪ ಮಾರ್ಪಾಡು ಮಾಡಬೇಕಾದೀತು. 1953ರಿಂದ 1962ರ ವರೆಗಿನ 10 ಅವೇಕ್ಷಣೆಗಳು ಮಾತ್ರ ದತ್ತವಾದಾಗ ಮೂಲಬಿಂದುವನ್ನು 1957 ಮತ್ತು 1958ರ ಮಧ್ಯೆ ತೆಗೆದುಕೊಳ್ಳಬೇಕು ಮತ್ತು ಅರ್ಧ ವರ್ಷವನ್ನು ಏಕಮಾನವಾಗಿಟ್ಟುಕೊಂಡು ಗಣನೆ ಮಾಡಬಹುದು. ಮಾರ್ಪಡಿಸಿದ ಈ ಅಳತೆಯನ್ನು X ಎಂದು ಸೂಚಿಸಿ ರೇಖೀಯ ಸಂಬಂಧವನ್ನು *y=c+dX* ಎಂದಿಟ್ಟುಕೊಂಡರೆ 10*a*=699.1 ಮತ್ತು 330*b*=246.3 ಎಂಬ ಪ್ರಸಾಮಾನ್ಯ ಸಮೀಕರಣಗಳು ದೊರೆಯುತ್ತವೆ.

ಕೋಷ್ಟಕ 2. ಭಾರತದಲ್ಲಿ ಚಹಾ ಎಲೆಯ ಉತ್ಪತ್ತಿ
(ಕೋಟಿ ಪೌಂಡುಗಳಲ್ಲಿ)

| ವರ್ಷ x | X | y | Xy |
|---|---|---|---|
| 1 | 2 | 3 | 4 |
| 1953 | –9 | 61.5 | –553.5 |
| 1954 | –7 | 65.2 | –456.4 |
| 1955 | –5 | 67.8 | –339.0 |
| 1956 | –3 | 68.1 | –204.3 |
| 1957 | –1 | 68.5 | –68.5 |
| 1958 | 1 | 71.7 | 71.7 |
| 1959 | 3 | 71.9 | 215.7 |
| 1960 | 5 | 70.8 | 354.0 |
| 1961 | 7 | 77.9 | 545.3 |
| 1962 | 9 | 75.7 | 681.3 |
| ಮೊತ್ತ | 0 | 699.1 | 246.3 |

ಈ ಸಮೀಕರಣವನ್ನು ಬಿಡಿಸಲು $c$=69.91 ಮತ್ತು $d$=0.747. ಆದ್ದರಿಂದ ಪೊರ್ದಿಸಿದ ರೇಖೆಯ ಸಮೀಕರಣ $y$=69.91+0.747$X$ ($X$ಅರ್ಧ ವರ್ಷಗಳು) ಪೂರ್ಣ ವರ್ಷದ ಮಾನದಲ್ಲಿ ಇದನ್ನೇ x ಎಂದು ಪರಿವರ್ತಿಸಿ ಬರೆದರೆ $y$=69.91+1.494$x$ ಎಂದಾಗುವುದು. ಈ ಸಮೀಕರಣದ ಆಧಾರದ ಮೇಲೆ 1963ರಲ್ಲಿ ಚಹಾ ಎಲೆಯ ಉತ್ಪತ್ತಿ 78.127 ಕೋಟೀ ಪೌಂಡುಗಳೆಂದು ಅಂದಾಜು ಮಾಡಬಹುದು.

**ಪ್ಯರಾಬೊಲದ ಪೊರ್ದಿಕೆ:** ಕೆಲವು ಸಂದರ್ಭಗಳಲ್ಲಿ ಇನ್ನೂ ಸ್ವಲ್ಪ ಒತ್ತಾಗಿ ಪೊರ್ದಿಸಬೇಕಾಗುವುದು. $x,y$ಗಳ ಸಂಬಂಧ $y=a+bx+cx^2$ ಎಂಬ ಪ್ಯರಾಬೊಲೀಯ ಉತ್ಪನ್ನದಿಂದ ಸೂಚಿಸಲಾಗುವುದೆಂದಿಟ್ಟುಕೊಳ್ಳೋಣ. ಮೇಲೆ ಹೇಳಿದ ಕ್ರಮವನ್ನೇ ಅನುಸರಿಸಿ ಕನಿಷ್ಠತಮ ವರ್ಗತತ್ತ್ವದ ಮೇರೆಗೆ

$$\sum a + b\sum x + c\sum x^2 = \sum y$$

$$a\sum x + b\sum x^2 + c\sum x^3 = \sum xy$$

$$a\sum x^2 + b\sum x^3 = \sum x^2 y$$

ಎಂಬ ಮೂರು ಪ್ರಸಾಮಾನ್ಯ ಸಮೀಕರಣಗಳು ದೊರೆಯುವುವು. ಈ ಸಮೀಕರಣಗಳನ್ನು ಬಿಡಿಸಿ a, b, c ಗಳ ಬೆಲೆಗಳನ್ನು ಪಡೆಯಬಹುದು.

ಚಹಾ ಎಲೆಯ ಉತ್ಪತ್ತಿಯ ಅಂಕಿ ಅಂಶಗಳನ್ನೇ ತೆಗೆದುಕೊಳ್ಳಿ. a, b, c ಗಳಿಗೆ ಈ ಪ್ರಸಾಮಾನ್ಯ ಸಮೀಕರಣಗಳು ದೊರೆಯುತ್ತವೆ. (ಕೋಷ್ಟಕ1)

$$11a+110c=760.5$$

$$110b=165.7$$

$$110a+19.58c=7580.5$$

ಆದ್ದರಿಂದ, $a$=68.85, $c$=-0.2856; ಮತ್ತು ಹಿಂದಿನಂತೆಯೇ $b$=1.506. ಕಾಲಾಮಾನದ ಮೂಲಬಿಂದುವಿನ ಆಯ್ಕೆಯ ಫಲವಾಗಿ $y=a+bc$ ಎಂಬ ಸರಳ ರೇಖೆಯನ್ನು ಪೊರ್ದಿಸುವಾಗ ಭ ಯನ್ನು ಬಿಡಿಸಲು ದೊರೆತ 110$b$=165.7 ಎಂಬ ಸರಳ ಸಮೀಕರಣವೇ ಈಗಲೂ ದೊರೆಯುವುದೆಂಬುದನ್ನು ಗಮನಿಸಿ. ಇದರಿಂದಾಗಿ $b$ ಬೆಲೆಯಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಕನಿಷ್ಠತಮ ವರ್ಗ ತತ್ತ್ವದಂತೆ ಪೊರ್ದಿಸಿದ ಪ್ಯರಾಬೊಲದ ಸಮೀಕರಣ $y$=68.85+1.506$x$-0.0286$x^2$ ಎಂದಾಗುವುದು. ಇದರ ಪ್ರಕಾರ 1963ರಲ್ಲಿ ಚಹಾ ಎಲೆಯ ಉತ್ಪತ್ತಿಯ ಅಂದಾಜು 76.856 ಕೋಟಿ ಪೌಂಡುಗಳು.

**ಪೊರ್ದಿಕೆಯ ಹಾಳಿತ (ಗುಡ್‍ನೆಸ್ ಆಫ್ ಫಿಟ್) :** ಬೀಜಗಣಿತ ಕ್ರಮದಲ್ಲಿ ಈ ವಿಧವಾಗಿ ಗಣನೆ ಮಾಡಿ ಪೊರ್ದಿದ ರೇಖೆ ದತ್ತ ಅವೇಕ್ಷಣೆಗಳಿಗೆ ಹಾಳಿತವಾಗಿದೆಯೇ ಎಂಬ ಪ್ರಶ್ನೆ ಹೇಳಬಹುದು. $x^2$ ಬೆಲೆಯನ್ನು ಕಂಡು ಹಿಡಿಯುವುದರ ಮೂಲಕ ಇದಕ್ಕೆ ಉತ್ತರವನ್ನು ನೀಡಬಹುದು. ದತ್ತ ಬೆಲೆ y ಇದ್ದು ಗುಣಿಸಿ ಬಂದ ಅಂದಾಜಿನ ಬೆಲೆ y′ ಇದ್ದರೆ $x^2 = \sum (y - y')y^2 /'$ ಆಗುವುದು. ಇದಕ್ಕೆ ಕೈ ವರ್ಗ ($X^2$) ಎಂದು ಹೆಸರು. ಪೊರ್ದಿಕೆಯ ಹಾಳಿತದ ಕೋಷ್ಟಕದಿಂದ ಈ ಬೆಲೆಯ ಸಂಭವತೆಯನ್ನು ಕಂಡುಹಿಡಿಯಬಹುದು. ಒಟ್ಟು ಅವೇಕ್ಷಣೆಗಳು n ಇದ್ದರೆ, ಸ್ವತಂತ್ರತೆಯ ದರ್ಜೆ (ಡಿಗ್ರೀಸ್ ಅಫ್ ಫ್ರೀಡಂ) n–1 ಆಗುವುದು. ಇದಕ್ಕೆ ತಕ್ಕಂತೆ ಕೋಷ್ಟಕದಲ್ಲಿ $X^2$ ನ ಸಂಭವತೆ ಕೊಡಲಾಗಿದೆ. ಇದರ ಬೆಲೆ 1ಕ್ಕೆ ಸಮೀಪವಾಗಿದ್ದರೆ ಪೊರ್ದಿಕೆ ಹಾಳಿತವಾಗಿದೆ ಎಂದರ್ಥ. ಪ್ರಸಕ್ತ ∑ ಉದಾಹರಣೆಯಲ್ಲಿ $X^2$=0.3390; ಮತ್ತು ಸ್ವತಂತ್ರತೆಯ ದರ್ಜೆ 9. ಇದಕ್ಕೆ ಸಂವಾದಿಯಾದ P (ಸಂಭವತೆ)=0.9994. ಇದರಿಂದ ಸರಳರೇಖೆಯನ್ನು ಪೊರ್ದಿಸಿರುವುದು ಸಮರ್ಪಕವಾಗಿದೆ.

**ಘಾತೀಯ ಉತ್ಪನ್ನದ ಪೊರ್ದಿಕೆ** (ಎಕ್ಸ್ಪೊನೆನ್ಷಿಯಲ್ ಫಿಟ್). ಕೆಲವು ಪರಿಸ್ಥಿತಿಗಳಲ್ಲಿ–ಮುಖ್ಯವಾಗಿ ಬೆಳೆವಣಿಗೆಯ ಸ್ಥಿತಿಯಲ್ಲಿ -$y$ ಚರ $x$ನ ಘಾತೀಯ ಉತ್ಪನ್ನವಾಗಿರಬಹುದು. ಕನಿಷ್ಠತಮವರ್ಗತತ್ತ್ವವನ್ನು ಇಂಥ ಉತ್ಪನ್ನಕ್ಕೆ ನೇರವಾಗಿ ಪ್ರಯೋಗಿಸಲಾಗುವುದಿಲ್ಲ. ಆದರೆ ಪ್ರತಿಘಾತಗಳನ್ನು (ಲಾಗರಿತಂಸ್) ತೆಗೆದುಕೊಂಡರೆ ರೇಖೀಯ ಅಥವಾ ಹೈಪರ್ಬೋಲೀಯ ಸಂಬಂಧ ಸಿದ್ಧಿಸುವುದು. ಹೇಗೆಂದರೆ $y=ab^x$ ಎಂಬ ಸಂಬಂಧವಿದ್ದಾಗ ಪ್ರತಿಘಾಗಳನ್ನು ತೆಗೆದರೆ $log\, y=log\, a+x+x\, log\, b$ ಎಂಬ ಸಂಬಂಧ ಒದಗುವುದು. ಆಗ $Y=log\, y$, $B=log\, b$, $A=log\, a$ ಎಂದು ಆದೇಶಿಸಿದರೆ $Y=A+Bx$ ಎಂಬ ಸಂಬಂಧ ಪ್ರಾಪ್ತವಾಗುವುದು. ಕನಿಷತಮ ವರ್ಗ ತತ್ವಕ್ಕೆ ಅನುಸಾರವಾಗಿ $A,B$ ಗಳ ಬೆಲೆಗಳನ್ನು ಕಂಡು ಹಿಡಿಯಬಹುದು. ತರುವಾಯ $a, b$ ಗಳನ್ನು ಲೆಕ್ಕ ಮಾಡಬಹುದು.

ಕೋಷ್ಟಕ 3. ದೇಶದ ಜನಸಂಖ್ಯೆಯ ಬೆಳೆವಣಿಗೆ

| ವರ್ಷ x | 1931ರಿಂದ ದಶಕಗಳಲ್ಲಿ X | ಆನಸಂಖ್ಯೆ (ಕೋಟಿ) y | Log $y$ =Y | XY |
|---|---|---|---|---|
| 1 | 2 | 3 | 4 | 5 |
| 1901 | –3 | 3.8 | 0.5911 | –1.7733 |
| 1911–2 | 5.3 | 0.7243 | –1.4486 | |
| 1921 | –1 | 7.3 | 0.8633 | –0.8633 |
| 1931 | 0 | 9.6 | 0.9823 | ...... |
| 1941 | 1 | 12.9 | 1.1106 | 1.1106 |
| 1951 | 2 | 17.1 | 1.2330 | 2.4660 |
| 1961 | 3 | 23.2 | 1.3655 | 4.0965 |
| ಮೊತ್ತ | 0 | | 6.8901 | 3.5879 |

ಉದಾಹರಣೆಗೆ, ಒಂದು ದೇಶದ ಜನಸಂಖ್ಯೆಯ 3ನೆಯ ಕೋಷ್ಟಕದಲ್ಲಿ ಕೊಟ್ಟಿರುವಂತಿದೆ ಎನ್ನೋಣ. ಕಾಲಮಾನವನ್ನು $x$ ಎಂದು ಸೂಚಿಸಿ, ಜನಸಂಖ್ಯೆಯನ್ನು $y$ ಎಂದು ಸೂಚಿಸಿ ಅವುಗಳ ಸಂಬಂಧವನ್ನು $y=ab^x$ ಎಂದು ಕಲ್ಪಿಸಿಕೊಂಡಾಗ $a$, $b$ಗಳನ್ನು ಕಂಡು ಹಿಡಿಯುವ ವಿಧಾನವನ್ನು ಕೋಷ್ಟಕದಲ್ಲಿ ಲೆಕ್ಕಮಾಡಿ ತೋರಿಸಲಾಗಿದೆ. 1931ನೆಯ ಇಸವಿಯನ್ನು ಮೂಲವಾಗಿಟ್ಟುಕೊಂಡು ದಶಕವನ್ನು ಏಕಮಾನವಾಗಿಟ್ಟುಕೊಂಡು ಅಳೆಯುವ ಕಾಲ ಪರಿಣಾಮವನ್ನು $X$ ಎನ್ನುವ ಸಂಕೇತದಿಂದ ಸೂಚಿಸಿದರೆ $X = \frac{x-1931}{10}$.

$A, B$ ಗಳ ಪ್ರಸಾಮಾನ್ಯ ಸಮೀಕರಣಗಳು ಇಂತಿವೆ: 7$A$=6.8701; 28$B$=3.5879. ಬಿಡಿಸಲು $A$=0.9814; $B$=0.12814 ಆದ್ದರಿಂದ $a$=9.581 ಮತ್ತು $b$=1.343 ಪೊರ್ದಿದ ಘಾತಚಲನ $y = 9.581X(1.343)^x$. ಇಲ್ಲಿ x ನ್ನು 1931ರಿಂದ

ದಶಕಗಳಲ್ಲಿ ಅಳೆಯ ತಕ್ಕದ್ದು. ಈ ಸಮೀಕರಣದ ಆಧಾರದ ಮೇಲೆ ಅಂದಾಜು ಮಾಡಿದ ಜನಸಂಖ್ಯೆ $9.581 \times (1.343)^4$ ಅಥವಾ 31.18 ಕೋಟಿ. ಇದೇ ಪ್ರಕಾರವಾಗಿ $y=ax^b$ ಎಂಬ ಸಮೀಕರಣವನ್ನು ಬಳಸಿ ಅಂದಾಜು ಮಾಡಬಹುದು. ಈಚೆಗೆ ಕನಿಷ್ಠತಮವರ್ಗತತ್ತ್ವದಲ್ಲಿ ಕೆಲವು ವಿಸ್ತರಣಗಳನ್ನು ಮಾಡಲಾಗಿದೆ. (ಎಂ.ಪಿ.ಜಿ.)

**ಕನೆಕ್ಟಿಕಟ್ :** ಅಮೆರಿಕ ಸಂಯುಕ್ತಸಂಸ್ಥಾನದ ರಾಜ್ಯಗಳಲ್ಲೊಂದು. ಉತ್ತರದಲ್ಲಿ ಮ್ಯಾಸಚೂಸೆಟ್ಸ್, ಪೂರ್ವದಲ್ಲಿ ರೋಡ್ ಐಲೆಂಡ್, ದಕ್ಷಿಣದಲ್ಲಿ ಲಾಂಗ್ ಐಲೆಂಡ್ ಜಲಸಂಧಿ, ಪಶ್ಚಿಮದಲ್ಲಿ ನ್ಯೂ ಯಾರ್ಕ್–ಇವು ಇದರ ಮೇರೆಗಳು. ವಿಸ್ತೀರ್ಣದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ 48ನೆಯ ರಾಜ್ಯ. ರೋಡ್ ಐಲೆಂಡ್ ಮತ್ತು ಡೆಲವೇರ್ ರಾಜ್ಯಗಳು ಮಾತ್ರ ಇದಕ್ಕಿಂತ ಚಿಕ್ಕವು. ವಿಸ್ತೀರ್ಣ 12973.2599 ಚಕಿಮೀ ಜನಸಂಖ್ಯೆ 35,96,080 (2013). ರಾಜಧಾನಿ ಹಾರ್ಟ್‌ಫರ್ಡ್.




ಈ ರಾಜ್ಯದ ಪಶ್ಚಿಮ ಭಾಗ ಪೂರ್ವಕ್ಕಿಂತ ಎತ್ತರವಾಗಿದ್ದು, ಮಧ್ಯದಲ್ಲಿರುವ ಕನೆಕ್ಟಿಕಟ್ ನದೀಕಣಿವೆಯ ಕಡೆಗೆ ಇಳಿಜಾರಾಗಿದೆ. ತೀರ ಡೊಂಕಾಗಿರುವುದರಿಂದ ಬಂದರುಗಳಿಗೆ ಅನುಕೂಲಕಾರಿ. ರಾಜ್ಯದ ಚಳಿಗಾಲದ ಸರಾಸರಿ ಉಷ್ಣತೆ 25$^o$ ಫ್ಯಾ. ಮತ್ತು 30$^o$ ಫ್ಯಾ. ನಡುವೆಯೂ ಬೇಸಗೆಕಾಲದ ಸರಾಸರಿ ಉಷ್ಣತೆ 65$^o$ ಫ್ಯಾ. ಮತ್ತು 70$^o$ ಫ್ಯಾ. ನಡುವೆಯೂ ಇರುತ್ತವೆ. ವಾರ್ಷಿಕ ಸರಾಸರಿ ಅವಪಾತದ್ರವ (ಪ್ರೆಸಿಪಿಟೇಷನ್) 45″. ಇದು ವರ್ಷವಿಡೀ ಸಮನಾಗಿ ಹಂಚಿಕೆಯಾಗಿದೆ. ಇದರಲ್ಲಿ ಬಹುಭಾಗ ಹಿಮ. , ಚೆಸ್‌ನಟ್, ಚೆಸ್‌ನಟ್ ಓಕ್ ಮತ್ತು ಪೀತ ಪಾಪ್ಲರ್‌ಗಳ ಕಾಡೇ ಕನೆಕ್ಟಿಕಟಿನ ಸ್ವಾಭಾವಿಕ ಸಸ್ಯ. ಈಶಾನ್ಯದಲ್ಲಿ ಈ ಮರಗಳ ಜೊತೆಗೆ ಮೇಪಲ್, ಹೆಮ್ಲಾಕ್, ಬೀಚ್ ಮತ್ತು ಬರ್ಚ್‌ಗಳೂ ಇದ್ದುವು. ಈಗ ಕಾಡುಗಳು ಬಲು ಕಡಿಮೆ.

ಕನೆಕ್ಟಿಕಟಿನಲ್ಲಿ ಕೈಗಾರಿಯೇ ಪ್ರಧಾನವಾದರೂ ವ್ಯವಸಾಯವೂ ತಕ್ಕಮಟ್ಟಿಗೆ ನಡೆಯುತ್ತದೆ. ಒಳ್ಳೆಯ ನೆಲಕ್ಕೆ ಮಾತ್ರ ಕೃಷಿಕಾರ್ಯ ಸೀಮಿತ. ಹಸಿಮೇವು, ಒಣಹುಲ್ಲು, ಓಟ್ಸ್, ಮುಸುಕಿನಜೋಳ. ಹಗೇವುಮೇವು. ಅಲೂಗೆಡ್ಡೆ, ಹೈನು ಮುಖ್ಯ ಉತ್ಪನ್ನ. ಕೆಲವು ಸುಂದರ ಹೊಲಗಳು ನಿಸರ್ಗಸೌಂದರ್ಯದ ಬೀಡುಗಳು; ಇವನ್ನು ನೋಡಲು ಬೇಸುಗೆಯ ದಿನಗಳಲ್ಲಿ ವಿಹಾರಾರ್ಥಿಗಳು ತಂಡತಂಡವಾಗಿ ಬರುತ್ತಾರೆ. ಕನೆಕ್ಟಿಕಟ್ ನದಿಯ ಮೇಲಣ ಸೋಪಾನನೆಲದ ಕೃಷಿಕ್ಷೇತ್ರಗಳು ಬಲು ಉತ್ಕೃಷ್ಟ. ಹೊಗೆಸೊಪ್ಪು, ಚುಟ್ಟಾ ಎಲೆ–ಇವು ಇಲ್ಲಿಯ ವಿಶಿಷ್ಟ ಉತ್ಪನ್ನಗಳು.

ಈ ರಾಜ್ಯದಲ್ಲಿ ಕೈಗಾರಿಕೆಗಳು ವಿಶೇಷವಾಗಿ ಬೆಳೆದಿವೆ. ಇವಕ್ಕಾಗಿ ಕಚ್ಚಾ ಸಾಮಾಗ್ರಿ ಹೆಚ್ಚಾಗಿ ಆಮದಾಗುತ್ತದೆ. ಪರಂಪರೆಯಾಗಿ ಬಂದ ತಂತ್ರಕೌಶಲ ಅಗತ್ಯವಾದ ಕೈಗಾರಿಕೆಗಳು ಇಲ್ಲಿ ಬೆಳೆದಿವೆ. ಜವಳಿ, ಕಬ್ಬಿಣದ ಸಾಮಾನು. ಗಡಿಯಾರ, ಒಡವೆ, ಅಗ್ನ್ಯಸ್ತ್ರ–ಇವು ಇಲ್ಲಿಯ ಕೆಲವು ಮುಖ್ಯ ಉತ್ಪನ್ನಗಳು. ಮುಖ್ಯವಾದ ನಗರಗಳಿವು : ಹಾರ್ಟ್‌ಫರ್ಡ್, ನ್ಯೂ ಹೇವನ್, ಬ್ರಿಜ್‌ಪೋರ್ಟ್, ವಾಟರ್‌ಬೆರಿ ಮತ್ತು ಸ್ಟ್ಯಾಂಫರ್ಡ್. (ಸಿ.ಎಂ.)

**ಕನೋಪನಿಕ್, ಮರ್ಯ :** 1842–1910. ಪೋಲೆಂಡಿನ ಕವಯಿತ್ರಿ ಮತ್ತು ಕತೆಗಾರ್ತಿ. ತಾರುಣ್ಯದಲ್ಲಿ ರೈತರ ಹಾಗೂ ನಗರವಾಸಿ ಕಾರ್ಮಿಕರ ಕಷ್ಟಕಾರ್ಪಣ್ಯಗಳನ್ನು ಚಿತ್ರಿಸಿ ಪದ್ಯಗಳನ್ನು ಬರೆದಳು. ನಾನಾ ರೀತಿಯ ಸನ್ನಿವೇಶಗಳಿಗೆ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಕವನಗಳನ್ನು ವಿವಿಧ ಶೈಲಿಗಳಲ್ಲೂ ಛಂದಸ್ಸುಗಳಲ್ಲೂ ರಚಿಸಿದಳು. ಅವಳ ಕೃತಿಗಳಲ್ಲಿ ಇಟಾಲಿಯ ಕಾವ್ಯವೃತ್ತ ಎಂಬ ಹೆಸರಿನ ಪ್ರೇಮಗೀತಗಳು ಸುಂದರವಾಗಿವೆ. ವರ್ಣನೆಯ ಕಲೆ ಇವಳಿಗೆ ಸಿದ್ಧಿಸಿತ್ತು. ಇವಳ ಪದ್ಯಗಳಲ್ಲಿ ಚಿತ್ತೈಕಾಗ್ರತೆ, ಆತ್ಮಸಂಯಮ ಸಾಲದು. ಆದರೆ ಇವಳ ಸಣ್ಣಕಥೆಗಳು– ಜರ್ಮನರು, ನಮ್ಮ ನಾಗ್, ಪಟ್ಟಣಿಗರು ಮುಂತಾದುವು ಈ ಅಪವಾದಕ್ಕೆ ಹೊರತಾಗಿವೆ. ಬ್ರೆಜಿಲ್ ದೇಶಕ್ಕೆ ಪೋಲೆಂಡಿನಿಂದ ವಲಸೆ ಹೋದವರು ಅಲ್ಲಿನ ಕಾಡುಮೇಡುಗಳಲ್ಲಿ ಅನುಭವಿಸಿದ ಕಷ್ಟನಷ್ಟಗಳನ್ನೇ ಪ್ರಧಾನ ವಸ್ತುವಾಗಿಟ್ಟುಕೊಂಡು ಬ್ರೆಜಿಲ್‌ನಲ್ಲಿ ಪಾನ್ ಬಾಲ್ಟರ್ ಎಂಬ ಮಹಾಕಾವ್ಯವನ್ನು 1910ರಲ್ಲಿ ರಚಿಸಿದಳು. ಜನತೆಯ ಸಾಮಾಜಿಕ ಹಕ್ಕುಗಳಿಗಾಗಿ ಹೊಡೆದಾಡಿದ ಈಕೆಯ ಬರಹಗಳಲ್ಲಿ ಸಾಮಾಜಿಕ ನ್ಯಾಯವೇ ಪ್ರಧಾನ ಗುಣ. (ಎಲ್.ಎಸ್.ಎಸ್.; ಟಿ.ವಿ.ಎಸ್.)

**ಕನೌಜ್ :** ಉತ್ತರಪ್ರದೇಶದ ಫರೂಖಾಬಾದ್ ಜಿಲ್ಲೆಯಲ್ಲಿ ಗಂಗಾನದಿಯ ಬಲದಂಡೆಯ ಮೇಲಿರುವ ಒಂದು ಪ್ರಾಚೀನ ಪಟ್ಟಣ; ತಹಸೀಲು ಕಾನ್‌ಪುರದ ವಾಯವ್ಯಕ್ಕೆ ಅದರಿಂದ 85 ಕಿಮೀ ದೂರದಲ್ಲಿ, ದೆಹಲಿಯ ಹೆದ್ದಾರಿಯಲ್ಲಿದೆ. 1961ರಲ್ಲಿದ್ದಂತೆ ಈ ಪಟ್ಟಣದ ಜನಸಂಖ್ಯೆ 24.648. ತಹಸೀಲಿನ ವಿಸ್ತೀರ್ಣ 1017.86606 ಚಕಿಮೀ; ಜನಸಂಖ್ಯೆ 84,862 (2001).

ಕನೌಜ್ ಬಲು ಪುರಾತನ ಪಟ್ಟಣ. ಪ್ರಾಚೀನಕಾಲದಲ್ಲಿ ಇದಕ್ಕೆ ಕಾನ್ಯಕುಬ್ಜ, ಕನ್ಯಾಕುಬ್ಜ ಅಥವಾ ಕನ್ಯಕುಬ್ಜ ಎಂಬ ಹೆಸರಿತ್ತು. ಇತಿಹಾಸದ ಉದ್ದಕ್ಕೂ ಗ್ರಂಥಗಳಲ್ಲಿ ಈ ಹೆಸರನ್ನು ಬಳಸಿರುವುದು ಕಂಡುಬರುತ್ತದೆ. ಮಹೋದಯ (ಮಹೋದಯಾ) ಎಂಬ ಹೆಸರೂ ಇದಕ್ಕಿತ್ತು. ಕಾನ್ಯಕುಬ್ಜ ಮಹೋದಯಗಳೆರಡೂ ಒಂದೇ ಪಟ್ಟಣದ ಹೆಸರುಗಳೆನ್ನಲು ಹಲವು ಕೋಶಗಳಲ್ಲಿ ಉಲ್ಲೇಖಗಳಿವೆ. ಕುಶಸ್ಥಲವೆಂಬ ಹೆಸರೂ ಇದಕ್ಕಿತ್ತು. ಕುಶ ಅಥವಾ ದರ್ಭೆಯ ಹುಲ್ಲಿರುವ ಸ್ಥಳ ಎಂಬ ಕಾರಣದಿಂದ, ಇಲ್ಲವೇ ಕುಶನೆಂಬ ದೊರೆಯ ವಾಸಸ್ಥಳವಾದ್ದರಿಂದ ಇದಕ್ಕೆ ಈ ಹೆಸರು ಬಂದಿರಬೇಕು. ಈ ನಗರವನ್ನು ಕುಸುಮಪುರವೆಂದು ಕರೆಯಲಾಗುತ್ತಿತ್ತೆಂದೂ ಕಾನ್ಯಕುಬ್ಜವೆಂಬ ಹೆಸರು ಆಮೇಲೆ ಬಂದಿತೆಂದೂ ಯುವಾನ್ ಚ್ವಾಂಗ್ ಹೇಳುತ್ತಾನೆ.

ಕಾನ್ಯಕುಬ್ಜವೆಂಬ ಹೆಸರು ಬಂದುದೇಕೆಂಬ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲಿ ಸ್ವಾರಸ್ಯವಾದ ಕಥೆಯೊಂದಿದೆ. ಕುಶನೆಂಬ ದೊರೆಯೊಬ್ಬ ವಿದರ್ಭದ ದೊರೆಯ ಮಗಳನ್ನು ಮದುವೆಯಾಗಿದ್ದ. ಅವನಿಗೆ ಕುಶನಾಭ, ಕುಶಾಂಭ, ಅಸೂರ್ತರಾಜ ಮತ್ತು ವಸು ಎಂಬ ನಾಲ್ವರು ಮಕ್ಕಳಿದ್ದರು. ದೊರೆಯ ಇಚ್ಛೆಯಂತೆ ಈ ನಾಲ್ವರೂ ನಾಲ್ಕು ಪಟ್ಟಣಗಳನ್ನು ನಿರ್ಮಿಸಿದರು. ಕುಶನಾಭ ನಿರ್ಮಿಸಿದ ಪಟ್ಟಣದ ಹೆಸರು ಮಹೋದಯ. ಕುಶನಾಭನಿಗೆ ಪತ್ನಿ ಘೃತಾಚಿಯಲ್ಲಿ ನೂರು ಮಂದಿ ಹೆಣ್ಣುಮಕ್ಕಳಾದರು. ವಾಯು ಅವರ ಸೌಂದರ್ಯಕ್ಕೆ ಮಾರುಹೋಗಿ ಅವರನ್ನೆಲ್ಲ ವಿವಾಹವಾಗ ಬಯಸಿದ. ಇದಕ್ಕೆ ಸಮ್ಮತಿ ದೊರಕದ್ದರಿಂದ ವಾಯು ಕುಪಿತಗೊಂಡು ಅವರನ್ನೆಲ್ಲ ಕುಬ್ಜೆಯರನ್ನಾಗಿ ಮಾಡಿದ. ಆದ್ದರಿಂದಲೇ ಆ ಪಟ್ಟಣಕ್ಕೆ ಕಾನ್ಯಕುಬ್ಜವೆಂಬ ಹೆಸರು ಬಂತು. ಈ ಕಥೆ ನಿಜವಲ್ಲವಾದರೂ ಪಟ್ಟಣದ ಆರ್ಷೇಯತೆಯನ್ನು ಇದು ಸ್ಥಾಪಿಸುತ್ತದೆ. ಅನಂತರ ಕಾನ್ಯಕುಬ್ಜದಲ್ಲಿ ಆಳಿದ ಅನೇಕ ಅರಸರ ಹೆಸರುಗಳನ್ನು ನಾನಾ ಪುರಾಣಗಳಿಂದಲೂ ರಾಮಾಯಣ ಮಹಾಭಾರತಗಳಿಂದಲೂ ಸಂಗ್ರಹಿಸಬಹುದು. ಹೈಹಯರ ದೊರೆ ಅರ್ಜುನನ ಕಾಲದಲ್ಲಿ ಭೂಮಿಯ ಮೇಲೆ–ಕಾನ್ಯಕುಬ್ಜ ಸೀಮೆಯಲ್ಲಿ–ಒಬ್ಬ ಶೂರನಾದ ದೊರೆ ಆಳುತ್ತಿದ್ದನೆಂದೂ ಅವನ ಸೈನ್ಯಶಕ್ತಿ ಅಗಾಧವಾಗಿತ್ತೆಂದೂ ಅವನ ಹೆಸರು ಗಾಧಿಯೆಂದೂ ಹೇಳಲಾಗಿದೆ. ಅವನ ಮಗನೇ ವಿಶ್ವಾಮಿತ್ರ. ಈತನೂ ಕಾನ್ಯಕುಬ್ಜವನ್ನಾಳಿದ. ಪಾಂಡವರಿಗೆ ಅರ್ಧ ರಾಜ್ಯವಿಲ್ಲದಿದ್ದರೂ ಐದು ಊರುಗಳನ್ನಾದರೂ ಕೊಡಬೇಕೆಂದು ಧರ್ಮರಾಯ ದುರ್ಯೋಧನನನ್ನು ಕೇಳಿದಾಗ ಅವುಗಳಲ್ಲಿ ಕುಶಸ್ಥಲವನ್ನೂ ಹೆಸರಿಸಿದ್ದ. ಬುದ್ಧ ತ್ರಯಸ್ತ್ರಿಂಶ ಸ್ವರ್ಗವನ್ನಡರಿದ ಮೇಲೆ ಭೂಮಿಯಲ್ಲಿ ಮತ್ತೆ ಅವತಾರಮಾಡಿದ್ದು ಕಾನ್ಯಕುಬ್ಜದಲ್ಲಿ ಎನ್ನಲಾಗಿದೆ. ಜೀವನದ ದುಃಖ ನಶ್ವರಗಳ ಬಗ್ಗೆ ಅಲ್ಲಿ ಅನಂತರ ಉಪದೇಶ ಮಾಡಿದನಂತೆ.

ಮೌರ್ಯದ ಕಾಲದಲ್ಲಿ ಕನೌಜ್ ಕೂಡ ಅವರ ಆಳ್ವಿಕೆಯ ಪರಿಧಿಯೊಳಕ್ಕೆ ಸೇರಿದ್ದಿರಬೇಕು. ಅಶೋಕನ ಅನಂತರ ಮೌರ್ಯಸಾಮ್ರಾಜ್ಯ ಅವನ ಮಕ್ಕಳಲ್ಲಿ ಹರಿದು ಹಂಚಿಹೋಯಿತು. ಅವರ ಪೈಕಿ ಒಬ್ಬನಾದ ಜಲೌಕ. ಪೂರ್ವದಲ್ಲಿ ಕಾನ್ಯಕುಬ್ಜದವರೆಗೂ ರಾಜ್ಯವಿಸ್ತರಿಸಿದನೆಂದು ಹೇಳಲಾಗಿದೆ.

ಮುಂದೆ ಪತಂಜಲಿಯ (ನೋಡಿ– ಪತಂಜಲಿ) ಮಹಾಭಾಷ್ಯದಲ್ಲಿ ಕಾನ್ಯಕುಬ್ಜದ ಹೆಸರು ಬರುತ್ತದೆ. ಅಹಿಚ್ಛತ್ರದಲ್ಲಿ ಹುಟ್ಟಿದವಳು ಅಹಿಚ್ಛತ್ರಿ, ಕಾನ್ಯಕುಬ್ಜದಲ್ಲಿ ಹುಟ್ಟಿದವಳು ಕಾನ್ಯಕುಬ್ಜಿ–ಎಂದು ಆತ ಹೇಳುತ್ತಾನೆ. ಎಂದರೆ ಪ್ರ.ಶ.ಪೂ2ನೆಯ ಶತಮಾನದಲ್ಲಿ ಕಾನ್ಯಕುಬ್ಜ ಬಹಳ ಪ್ರಸಿದ್ಧವಾಗಿದ್ದಿರಬೇಕು. ಟಾಲೆಮಿಯ ಭೂವಿವರಣೆಯಲ್ಲಿ (ಪ್ರ.ಶ.ಸು.140) ಹೇಳಿರುವ ಕನಗೋಕ, ಕನೋಗಿಜ ಎಂಬ ಸ್ಥಳ ಕಾನ್ಯಕುಬ್ಜವೇ ಅಗಿರಬೇಕೆಂಬುದು ಒಂದು ಊಹೆ.

ಕಾನ್ಯಕುಬ್ಜದ ಬಗ್ಗೆ ಇಷ್ಟಷ್ಟು ಖಚಿತ ಐತಿಹಾಸಿಕ ಮಾಹಿತಿ ದೊರಕುವುದು ಪ್ರ.ಶ 5ನೆಯ ಶತಮಾನದಲ್ಲಿ–ಫಾಹಿಯಾನದ ಬರೆವಣಿಗೆಯಿಂದ. ಆತ ಇದನ್ನು ಕಿ–ಜೌ–ಯಿ (ಕನೌಜ್) ಎಂದು ಕರೆದಿದ್ದಾನೆ. ಗಂಗಾನದಿಯ ಮೇಲಿದ್ದ ಈ ಪಟ್ಟಣದಲ್ಲಿ ಎರಡು ಸಂಘಾರಾಮಗಳಿದ್ದುವು. ಇದಕ್ಕೆ ಪಶ್ಚಿಮದಲ್ಲೇ ಬುದ್ಧ ಬೋಧಿಸಿದ ಸ್ಥಳ. ಆಗ (ಗುಪ್ತರ ಕಾಲದಲ್ಲಿ) ಇದು ಅಂಥ ದೊಡ್ಡ ಸ್ಥಳವೇನೂ ಆಗಿರಲಿಲ್ಲ.

ಆದರೆ ಪ್ರ.ಶ. 636ರಲ್ಲಿ ಹ್ಯುಯೆನ್ ತ್ಸಾಂಗ್ ಇಲ್ಲಿಗೆ ಭೇಟಿ ಕೊಡುವ ವೇಳೆಗೆ ಇದು ಅಗಾಧವಾಗಿ ಬೆಳೆದಿತ್ತು. ಇಲ್ಲಿ ಜನಸಂದಣಿ ಅಧಿಕವಾಗಿತ್ತು. ನೂರಾರು ಹಿಂದೂ ಮತ್ತು ಬೌದ್ಧ ದೇವಾಲಯಗಳೂ ವಿಹಾರಗಳೂ ಇದ್ದುವು. ಗಂಗೆಯ ಬಲತಡಿಯ ಮೇಲೆ 7 ಕಿಮೀ ಹಬ್ಬಿದ್ದ ಈ ನಗರ ರಮ್ಯ ಉದ್ಯಾನಗಳಿಂದಲೂ ಸುಂದರ ಸರೋವರಗಳಿಂದಲೂ ಶೋಭಿತವಾಗಿತ್ತಲ್ಲದೆ ಇದನ್ನು ರಕ್ಷಿಸಲು ಭದ್ರವಾದ ಕೋಟೆಯ ನಿರ್ಮಾಣವಾಗಿತ್ತು. ಈ ಮಹತ್ತರ ಬದಲಾವಣೆಗೆ ಕಾರಣನಾದವ ಚಕ್ರವರ್ತಿ ಹರ್ಷವರ್ಧನ (605–47). ಆತ ಇದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಹ್ಯುಯೆನ್‌ತ್ಸಾಂಗ್ ಇಲ್ಲಿ ಏಳು ದಿನಗಳ ಕಾಲ ತಂಗಿದ್ದ. ಆ ಸಮಯದಲ್ಲಿ ಹರ್ಷ ಇಲ್ಲೊಂದು ಧರ್ಮಸಮ್ಮೇಳನ ನಡೆಸಿ ಹಲವರು ಸಾಮಂತರನ್ನೂ ಮಾಂಡಲಿಕರನ್ನೂ ಕರೆಸಿದ್ದ.

ಹೀಗೆ ಕಾನ್ಯಕುಬ್ಜ ಆಗ ವೈಭವದಿಂದ ಮೆರೆಯಿತು. ಮಹೋದಯ ಶ್ರೀ ಎಂಬುದಾಗಿ ಇದು ಹೆಸರು ಗಳಿಸಿತ್ತು. ಹರ್ಷವರ್ಧನನ (ನೋಡಿ– ಹರ್ಷವರ್ಧನ) ಅನಂತರ ಹಲವು ಹಿಂದೂ ಅರಸರು ಇದನ್ನು ವಶಪಡಿಸಿಕೊಳ್ಳಲು ಹಾತೊರೆಯುತ್ತಿದ್ದರು. ಆ ಕಾಲದಲ್ಲಿ ಈ ನಗರ ಹಲವಾರು ಏರಿಳಿತಗಳಿಗೆ ಒಳಗಾಯಿತು. ಪ್ರ.ಶ. 816ರಿಂದ 1090ರವರೆಗೆ ಆಳಿದ ಪ್ರತೀಹಾರ ದೊರೆಗಳಿಗೂ ಇದು ರಾಜಧಾನಿಯಾಗಿತ್ತು. ಉತ್ತರ ಭಾರತದ ಮುಖ್ಯನಗರಗಳಲ್ಲೊಂದೆನಿಸಿತು. ಬಂಗಾಳದ ದೊರೆ ಧರ್ಮಪಾಲ (ನೋಡಿ– ಧರ್ಮಪಾಲ–3) ಸ್ವಲ್ಪಕಾಲ ಇದನ್ನು ಗೆದ್ದುಕೊಂಡಿದ್ದ. ಇದು ತನ್ನ ವಶವಾಗಿತ್ತೆಂದು ಅವನಿಗೆ ಬಹಳ ಹೆಮ್ಮೆಯಾಗಿತ್ತು.

ಕನೌಜಿಗೆ ಅತ್ಯಂತ ದುರ್ದಶೆ ಬರಲಾರಂಭಿಸಿದ್ದು 1018ರಲ್ಲಿ–ಸುಲ್ತಾನ್ ಮಹಮದ್ ಘಸ್ನಿ ಇದರ ಮೇಲೆ ದಾಳಿ ಮಾಡಿ ನಗರವನ್ನು ಲೂಟಿ ಮಾಡಿದಾಗ ಆ ಸಮಯದಲ್ಲಿ ಇಲ್ಲಿ ಆಳುತ್ತಿದ್ದ ಪ್ರತೀಹಾರ ದೊರೆ ರಾಜಧಾನಿಯನ್ನು ಕನೌಜಿನಿಂದ ಗಂಗಾನದಿಯ ಆಚೆ ದಂಡೆಗೆ ಬದಲಾಯಿಸಿದ. ಪ್ರತೀಹಾರರ ಕೊನೆಯ ದೊರೆ ರಾಜ್ಯಪಾಲ. ನೆರೆರಾಜ್ಯದ ದೊರೆ ಗಂಡ ಇವನನ್ನು ಪದಚ್ಯುತನನ್ನಾಗಿ ಮಾಡಿದ. ಕನೌಜ್ 12ನೆಯ ಶತಮಾನದಲ್ಲಿ ಗಹರವಾಡ್ ರಜಪೂತರಾದ ರಾಥೋಡರ ಆಳ್ವಿಕೆಗೆ ಒಳಪಟ್ಟಿತು. ಕನೌಜಿನ ಕೊನೆಯ ರಾಥೋಡ್ ದೊರೆ ಜಯಚಂದ. ಇವನನ್ನು ಷಿಹಾಬುದ್ದೀನ್ ಮಹಮ್ಮದ್ ಗೋರಿ 1194ರಲ್ಲಿ ಸೋಲಿಸಿ ಕೊಂದ. ಅಲ್ಲಿಂದೀಚೆಗೆ ಕನೌಜಿನ ಪ್ರಾಮುಖ್ಯ ನಶಿಸಿ ಹೋಯಿತು. ಮೊಗಲ್ ಚಕ್ರವರ್ತಿ ಹುಮಾಯೂನನಿಗೂ ಷೇರ್ ಷಾಹನಿಗೂ ಯುದ್ಧ ನಡೆದದ್ದು (1540) ಕನೌಜಿನ ಬಳಿಯಲ್ಲೇ. ಆ ಯುದ್ಧದಲ್ಲಿ ಹುಮಾಯೂನ್ ಸೋತ. ಷೇರ್ ಷಾಹ ಈ ನಗರವನ್ನು ನಾಶಮಾಡಿದ. ಆ ಪುರಾತನ ನಗರವಿದ್ದ ಎಡೆಯಲ್ಲಿ ಈಗ ಹಳೆಯುಳಿಕೆಯ ರಾಶಿಗಳುಂಟು. ಇವು ಸು. 7 ಕಿಮೀ ವ್ಯಾಸದ ಅರ್ಧವೃತ್ತಾಕಾರ ಪ್ರದೇಶದಲ್ಲಿ ಹರಡಿವೆ.

ಅಜಯಪಾಲರಾಜ ಕಟ್ಟಿದ ಕಟ್ಟಡ ಭಗ್ನಾವಶೇಷಗಳಲ್ಲಿ ಮುಖ್ಯವಾದದ್ದು. ಜಯಪಾಲ ಇದನ್ನು ಕಟ್ಟಿದಂತೆ ತೋರುತ್ತದೆ. ಆದರೆ ಮಹಮ್ಮದ್ ಘಸ್ನಿ ಈ ಕಟ್ಟಡವನ್ನು ಕೈವಶ ಮಾಡಿಕೊಂಡ. ಜುಮ್ಮಾಮಸೀದಿಯ ಕಡೆಗೆ ದೃಷ್ಟಿ ಬೀರಿದಾಗ, ಅಲ್ಲಿಯ ಕಂಬಗಳ ಕೆತ್ತನೆಯ ಕೆಲಸ ಕಣ್ಣಿಗೆ ಬೀಳದಿರಲಾರದು. ಪ್ರ.ಶ.ಸು. 1400ರಲ್ಲಿ ಜಾನ್‌ಪುರದ ಇಬ್ರಾಹಿಮ್ ಷಾಹ ಈ ಕಟ್ಟಡವನ್ನು ಮಸೀದಿಯನ್ನಾಗಿ ಪರಿವರ್ತಿಸಿದನೆಂದು ಪ್ರತೀತಿ. ಈ ಊರಿನ ವಾಯವ್ಯ ಭಾಗದಲ್ಲಿ ಬಾಲಾ ಪೀರ ಮತ್ತು ಅವನ ಮಗನಾದ ಷೇಕ್ ಮೆಹಂದಿಯ ಗೋರಿಗಳಿವೆ. ಉಳಿದ ಮಸೀದಿಗಳು ಸುತ್ತಲಿನ ಹೊಲಗಳಲ್ಲಿವೆ.

ಕನೌಜ್ ಈಗ ಹೊಗೆಸೊಪ್ಪಿನ ಮತ್ತು ಸುಗಂಧ ದ್ರವ್ಯಗಳ ತಯಾರಿಕಾ ಕೇಂದ್ರ. ಗುಡ್ಡಗಾಡಿನ ನಡುವೆ ಇರುವ ಈ ಪಟ್ಟಣದ ರಸ್ತೆಗಳು ಇಳಿಜಾರಾಗಿವೆ. (ಆರ್.ಆರ್.ಎ.)

**ಕನ್‌ಫ್ಯೂಷಿಯಸ್ :** ಪ್ರ.ಶ.ಪೂ. 551–479. ಚೀನ ದೇಶದ ಪ್ರಸಿದ್ಧ ತತ್ತ್ವಜ್ಞಾನಿ. ರಾಜಕೀಯ ಮತ್ತು ನಿತ್ಯಜೀವನದ ಆಚಾರ ವ್ಯವಹಾರಗಳಲ್ಲಿ ಉನ್ನತಮಟ್ಟ ಸಾಧಿಸಿದ ಮಹಾಪುರುಷ. ಈತ ಬೋಧಿಸಿದ ಸಾರ್ವಜನಿಕ, ರಾಜಕೀಯ ನೀತಿಬೋಧೆಯ ಆಧಾರದ ಮೇಲೆ ಮುಂದೆ ಕನ್‌ಫ್ಯೂಷಿಯನಿಸಂ ಎಂಬ ಪಂಥವೊಂದು ತಲೆಯೆತ್ತಿ ಪ್ರಸಿದ್ಧವಾಯಿತು. ಕೂಂಗ್ ಫೂ ಟ್ಸು (ಕಾಂಗ್ ಕ್ಯೂ) ಎಂಬುದು ಇವನ ಹೆಸರಿನ ಚೀನೀ ರೂಪ. ಪ್ರ.ಶ.ಪೂ. 551ರಲ್ಲಿ ಷಾಂಟುಂಗ್ ಪ್ರಾಂತ್ಯದ ಲು ಎಂಬಲ್ಲಿ ಜನ್ಮವೆತ್ತಿದ. ಇವನು ಷಾಂಗ್ ರಾಜ ವಂಶಕ್ಕೆ ಸೇರಿದವನಾದರೂ ಬಡತನ ದಲ್ಲಿ ಬೆಳೆದ. ಈತ ಹುಟ್ಟಿದಾಗ 70 ವರ್ಷಗಳ ವೃದ್ಧ ತಂದೆ ಸೈನ್ಯದಲ್ಲಿ ಸಣ್ಣ ಅಧಿಕಾರಿಯಾಗಿದ್ದ. ಮೂರು ವರ್ಷಗಳ ಅನಂತರ ತಂದೆ ಮೃತನಾಗಲು ತಾಯಿ ಬಹು ಕಾರ್ಪಣ್ಯದಿಂದ ಈತನನ್ನು ಸಾಕಿದಳು. ಒಳ್ಳೆ ಶಿಕ್ಷಣ ದೊರಕಿ 17 ನೆಯ ವಯಸ್ಸಿನಲ್ಲೇ ಇವನಿಗೆ ಸರ್ಕಾರಿ ನೌಕರಿಯೂ ಸಿಕ್ಕಿತು. 18ನೆಯ ವಯಸ್ಸಿನಲ್ಲಿ ವಿವಾಹ ನಡೆದು ಒಬ್ಬ ಮಗ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ತರುವಾಯ ಉಪಾಧ್ಯಾಯವೃತ್ತಿಗೆ ಕೈಹಾಕಿದ. ಪ್ರ.ಶ.ಪೂ. 517ರಲ್ಲಿ ರಾಜಧಾನಿಗೆ ಹೋದಾಗ ಟಾಓಯಿಸಂ ಪಂಥದ ಸ್ಥಾಪನಾಚಾರ್ಯ ಲಾವೊತ್ಸೆಯೊಡನೆ ಭೇಟಿ ಯಾಯಿತು. ಇಬ್ಬರಲ್ಲಿ ನಿಕಟ ಪರಿಚಯ ಬೆಳೆಯಿತು. ಕೆಲಕಾಲ ತನ್ನ ಹಿಂಬಾಲಕರೊಂದಿಗೆ ತನ್ನ ತತ್ತ್ವ ಪ್ರಚಾರಕಾರ್ಯದಲ್ಲಿ ತೊಡಗಿದ್ದ. 52ನೆಯ ವಯಸ್ಸಿನಲ್ಲಿ ಚುಂಗ್‌ಟೂವಿನ ನ್ಯಾಯಮೂರ್ತಿಯಾಗಿ ನೇಮಕಗೊಂಡ. ಈ ಕ್ಷೇತ್ರದಲ್ಲಿ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ದುಡಿದು ಪರಿಣಾಮಕಾರಿಯಾದ ಸುಧಾರಣೆಗಳನ್ನು ಜಾರಿಗೆ ತಂದ. ಕ್ರಮೇಣ ಮಂತ್ರಿ ಪದವಿಗೂ ಏರಿದ. ಇಬ್ಬರು ಬುದ್ಧಿವಂತರಾದ ಶಿಷ್ಯರ ಸಹಾಯದಿಂದ ಪ್ರಾಂತವನ್ನು ಸಂಪತ್ಸಮೃದ್ಧಿಗಳೆಡೆಗೆ ಕೊಂಡೊಯ್ದ. ಆ ವೇಳೆಗೆ ಇವನ ಆಶ್ರಯದಾತನಾದ ಪ್ರಾಂತ್ಯಾಧಿಕಾರಿ ಮೃತನಾಗಿ, ತರುವಾಯ ಬಂದ ಪ್ರಮುಖಾಧಿಕಾರಿ ದುರ್ನೀತಿಗೆ ಇಳಿದದ್ದು ಇವನಿಗೆ ಸರಿ ಎನಿಸಲಿಲ್ಲ. ತನ್ನ ತತ್ತ್ವಗಳನ್ನು ಪಾಲಿಸುವ ಅಧಿಕಾರಿ ಬೇರೆಲ್ಲಿಯಾದರೂ ಸಿಕ್ಕಬಹುದೆಂಬ ಆಶೆಯಿಂದ 13 ವರ್ಷಕಾಲ ಅನೇಕ ಕಡೆ ಅಲೆದಾಡಿದ. ಅಂಥವರಾರೂ ಸಿಗದಾಗ ನಿರಾಶನಾಗಿ ಪುನಃ ಲು ಪ್ರಾಂತ್ಯಕ್ಕೆ ಹಿಂತಿರುಗಿದ (ಪ್ರ.ಶ.ಪೂ. 483). ಆದರೆ ಅಧಿಕಾರವನ್ನು ಮಾತ್ರ ಸ್ವೀಕರಿಸಲಿಲ್ಲ. ಅನಂತರದ 5 ವರ್ಷಗಳನ್ನು ವಿಶ್ರಾಂತಿಯಲ್ಲಿ ಕಳೆದು ತನ್ನ 72ನೆಯ ವಯಸ್ಸಿನಲ್ಲಿ ನಿಧನ ಹೊಂದಿದ. ಮರಣಸಮಯದಲ್ಲಿ ಇವನ ತತ್ತ್ವಗಳಿಂದ ಆಕರ್ಷಿತರಾಗಿದ್ದ ಯುವಕರ ತಂಡವೊಂದು ಇವನ ಸುತ್ತ ಸೇರಿದ್ದು, ಈತನ ತತ್ತ್ವಗಳ ಪ್ರಚಾರಕ್ಕೆ ಸಿದ್ಧರಾಗಿದ್ದರು. ಗುರುವಿನ ಪ್ರಭಾವದಿಂದ ಆ ಶಿಷ್ಯರು ಸರ್ಕಾರದ ಉನ್ನತ ಪದವಿಗಳನ್ನು ದೊರಕಿಸಿಕೊಂಡರಾದರೂ ಯಾರೂ ಬಹುಕಾಲ ಸಾಕಷ್ಟು ತತ್ತ್ವನಿಷ್ಠರಾಗಿ ಉಳಿಯಲಿಲ್ಲ.

ಇವನ ಗುಣಗಳು ಅಪಾರ. ಸಾಧುಸ್ವಭಾವ, ಗೌರವ ವರ್ತನೆಗಳಿಗೆ ಇವನು ಹೆಸರಾಗಿದ್ದ. ನಿಸ್ಸ್ವಾರ್ಥ, ಪ್ರಾಮಾಣಿಕ ಹಾಗೂ ಶೀಲವಂತ ವ್ಯಕ್ತಿ. ಈ ಗುಣಗಳಿಂದ ಅಂದಿನ ಸಮಾಜ ಜೀವನದಲ್ಲಿ ಗಣ್ಯಸ್ಥಾನಗಳಿಸಿದರೂ ತಾನೊಬ್ಬ ಸುಧಾರಕನೇ ವಿನಾ ಪ್ರವಾದಿಯಲ್ಲ ಎಂದು ಹೇಳಿಕೊಂಡುದು ಈತನ ಘನತೆಗೊಂದು ನಿದರ್ಶನ. ಚೀನದ ಜನತೆಗೆ ವ್ಯಾವಹಾರಿಕ ಸಾಮಾಜಿಕ ಜೀವನದಲ್ಲಿ ಸಾತ್ತ್ವಿಕ ಹಾಗೂ ಸರಳಮಾರ್ಗದ ತತ್ತ್ವಗಳನ್ನು ಬೋಧಿಸಿದವರಲ್ಲಿ ಇವನು ಮೊದಲಿಗ. ಉಪದೇಶವನ್ನು ಮನೋಜ್ಞವಾಗಿ ಮಾಡಲು ಈತ ಇತಿಹಾಸ ಕಾವ್ಯ ಮತ್ತು ಸಂಗೀತ ಮಾಧ್ಯಮಗಳನ್ನು ಬಳಸಿಕೊಂಡು ಮೊದಲು ತಾತ್ತ್ವಿಕವಾಗಿಯೂ ತರುವಾಯ ಪ್ರಯೋಗಾತ್ಮಕವಾಗಿಯೂ ಬೋಧಿಸುತ್ತಿದ್ದ; ಔದ್ಧತ್ಯದಿಂದ ಅಥವಾ ಅಧಿಕಾರಪೂರ್ವಕವಾಗಿ ಒತ್ತಾಯಿಸದೇ ಸ್ವಂತ ಆಚರಣೆಯಿಂದ ಶಿಷ್ಯರಿಗೆ ಮಾದರಿಯಾಗಿರುತ್ತಿದ್ದುದೇ ಈತನ ವೈಶಿಷ್ಟ್ಯ. ಅಂಧಾನುಕರಣೆ ಮಾಡದೆ ಸ್ವತಃ ಯೋಚಿಸಿ ತಮ್ಮ ಕಾರ್ಯಗಳ ರೀತಿಯನ್ನು ನಿರ್ಧರಿಸಲು ಶಿಷ್ಯವರ್ಗಕ್ಕೆ ಉತ್ತೇಜನ ನೀಡುತ್ತಿದ್ದ. ತನ್ನ ಶಿಷ್ಯರನ್ನು ಆರಿಸುವುದರಲ್ಲೂ ಸಮತಾಭಾವ ತೋರಿ ಬಡವ ಬಲ್ಲಿದರೆಂಬ ಭೇದಗಳಿಗೆ ಅವಕಾಶ ನೀಡದೆ ಅವರ ಸಚ್ಚಾರಿತ್ರ್ಯ ಮತ್ತು ಬೌದ್ಧಿಕ ಸಾಮರ್ಥ್ಯಗಳಿಗೆ ಪ್ರಾಶಸ್ತ್ಯ ನೀಡುತ್ತಿದ್ದ. ಇವನನ್ನು ಬೋಧಕನೆನ್ನುವುದಕ್ಕಿಂತಲೂ ಸುಧಾರಕನೆನ್ನುವುದು ಹೆಚ್ಚು ಉಚಿತ. ವಿದ್ವಾಂಸನೆಂಬುದು ನಿಜವಾದರೂ ಈತನ ಕೃತಿಗಳೆಂದು ಹೇಳಬಹುದಾದ ಗ್ರಂಥಗಳಾವುವೂ ಕಾಣಬರುವುದಿಲ್ಲ.

ಇವನ ಜೀವಿತಕಾಲ ಚೀನದ ಇತಿಹಾಸದಲ್ಲಿ ಸ್ವಾರಸ್ಯವಾದುದು. ಚೌವಂಶ ಇಳಿಗತಿಯಲ್ಲಿತ್ತು. ದೇಶದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ತುಂಬಾ ಏರುಪೇರುಗಳಾಗಿದ್ದುವು. ಅಧಿಕಾರಕ್ಕಾಗಿ ಪ್ರಾಂತಗಳಲ್ಲಿ ತಿಕ್ಕಾಟಗಳಿದ್ದವು. ಜನರು ರಾಜಪ್ರಭುತ್ವವನ್ನೇ ಬಯಸುತ್ತಿದ್ದರೂ ದೇಶ ಒಗ್ಗಟ್ಟಿನಿಂದಲೂ ಶಿಸ್ತುಸಂಯಮದಿಂದಲೂ ಬಾಳ್ವೆ ನಡೆಸಬೇಕೆಂಬುದನ್ನು ಮನಗಂಡಿದ್ದರು. ಇದಕ್ಕಾಗಿ ನಿರ್ದಿಷ್ಟವಾದ ಧ್ಯೇಯಧೋರಣೆಗಳನ್ನು ಪ್ರತಿಪಾದಿಸಬಲ್ಲ ಒಬ್ಬ ಮೇಧಾವಿ, ಸುಧಾರಕ ಅತ್ಯಗತ್ಯ ಎಂದು ತಿಳಿದಿದ್ದರು. ಆ ಕಾಲದಲ್ಲಿದ್ದ ಪ್ರಭಾವಿ ವ್ಯಕ್ತಿಗಳೂ ಕೂಡ ರಾಜಕೀಯದ ಕಟ್ಟುಪಾಡಿಗಿಂತ ನೈತಿಕ ಧ್ಯೇಯಗಳೇ ಶ್ರೇಷ್ಠವಾದುವು.

ಎಂದು ಅವುಗಳ ಆಚರಣೆಗಾಗಿ ತವಕಗೊಂಡಿದ್ದರು. ಇಂಥ ಸಮಯದಲ್ಲೇ ಇವನು ತನ್ನ ನೀತಿಪ್ರಧಾನ ಮಾರ್ಗವನ್ನು ಪ್ರಚಾರ ಮಾಡಲಾರಂಭಿಸಿದ್ದು. ಇವನು ಗೌತಮ ಬುದ್ಧನ ಸಮಕಾಲೀನ. ಪ್ರ.ಶ.ಪೂ. 5–4ನೆಯ ಶತಮಾನಗಳಲ್ಲಿದ್ದ ಗ್ರೀಕ್ ತತ್ತ್ವವೇತ್ತರ ವಿಚಾರಗಳಿಗೆ ಇವನ ತತ್ತ್ವಗಳು ಸರಿಹೋಲುತ್ತವೆ.

ಈತನ ತತ್ತ್ವಗಳು ಮತೀಯವಲ್ಲ; ನಿತ್ಯ ಜೀವನದಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮಗಳವು; ತನ್ಮೂಲಕ ಸಮಾಜ ಮತ್ತು ರಾಜ್ಯದ ಉದ್ಧಾರಕ್ಕೆ ಸಾಧಕವೆನಿಸತಕ್ಕವು. ಸ್ವಂತ ಮತ್ತು ಸಾಮೂಹಿಕ ಸಂಬಂಧಗಳಲ್ಲಿ ವ್ಯಕ್ತಿ ಯಾವ ರೀತಿ ವರ್ತಿಸಬೇಕು ಎಂಬುದೇ ಆ ತತ್ತ್ವಗಳ ಸಾರಾಂಶ. ಇವನ ಮತ ಹೀಗಿದೆ: ವಿಶ್ವದಲ್ಲಿ ನಿರೂಪಕ ಶಕ್ತಿಯುಳ್ಳದ್ದು ಸ್ವರ್ಗವೊಂದೇ. ಸಂಸಾರದಲ್ಲಿ ತಂದೆಗೆ ಆ ಅಧಿಕಾರವುಂಟು. ರಾಜ್ಯದಲ್ಲಿ ರಾಜನ ಸ್ಥಾನಮಾನ ವಿಶ್ವದಲ್ಲಿನ ಸ್ವರ್ಗದಂತೆ, ಸಂಸಾರದಲ್ಲಿನ ತಂದೆಯಂತೆ; ಅವನೇ ರಾಜ್ಯದ ನಿರೂಪಕ ಶಕ್ತಿ. ಸಂಸಾರದ ಮುಖ್ಯಸ್ಥನಿಗೆ ವಿಧೇಯನಾಗಿರುವುದು, ಅನೂಚಾನವಾಗಿ ಬಂದ ಪೂಜ್ಯತೆ ತೋರುವುದು–ಇವೆರಡೂ ಸಂಸಾರ ಮತ್ತು ರಾಜಕೀಯ ಜೀವನಕ್ಕೆ ಅಸ್ತಿಭಾರವಿದ್ದಂತೆ. ಇದರಂತೆ ಜನ ನಡೆದುಕೊಂಡರೆ ಸೌಹಾರ್ದ ಏರ್ಪಡುತ್ತದೆ. ಜನತೆಯ ಅತಿಶಯವಾದ ಸುಖಕ್ಕೆ ಶ್ರಮಿಸಿ ಮಾನವಸ್ವಭಾವಕ್ಕನುಗುಣವಾದ ರೀತಿಯಲ್ಲಿ ಮತ್ತು ಕಾಲದೇಶದ ಸ್ಥಿತಿಗತಿಗ ನುಸಾರವಾಗಿ ರೀತಿನೀತಿಗಳನ್ನು ರೂಪಿಸುವುದು ಆದರ್ಶ ಆಡಳಿತದ ಗುರಿ. ಅದಕ್ಕಾಗಿ ಶ್ರಮಿಸಿದ ಮಾನವ ಪ್ರೀತಿಯೇ ಸದ್ಗುಣ. ಮಾನವ ಪ್ರಕೃತಿಯನ್ನು ತಿಳಿಯುವುದೇ ಬುದ್ಧಿವಂತಿಕೆ. ಇಡೀ ಮಾನವಕುಲ ಒಂದು ಸಂಸಾರ. ತನ್ನ ಪ್ರಗತಿಯನ್ನು, ಸ್ಥಾನಮಾನಗಳನ್ನು ಅಪೇಕ್ಷಿಸುವವ ಇತರರ ಪ್ರಗತಿ, ಸ್ಥಾನಮಾನಗಳ ಸಾಧನೆಗೆ ಶ್ರಮಿಸುವುದೇ ಒಳ್ಳೆಯ ಮಾರ್ಗ. ಆದುದರಿಂದ ಪ್ರಭುತ್ವ ಜನತೆಯ ಸಹಕಾರೀ ಸಂಸ್ಥೆಯಾಗಿರಬೇಕು. ಜನತೆಯ ಸುಖಸಂಪತ್ತುಗಳ ಸಾಧನೆ ಮಾಡಬಲ್ಲವರೇ ಆಡಳಿತದಲ್ಲಿರಲು ಅರ್ಹರು. ಆದುದರಿಂದ ಆನುವಂಶಿಕ ರಾಜರು ಅರ್ಹರೂ ಸನ್ಮಾರ್ಗಿಗಳು ಆದ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಆಡಳಿತವನ್ನು ವಹಿಸುವುದೊಳ್ಳೆಯದು.

ಈ ತತ್ತ್ವಗಳಿಗೂ ಅನಂತರ ಕಾಲದಲ್ಲಿ ಇವನ ತತ್ತ್ವದ ಆಚರಣೆಗಳಿಗೂ ಹಲವಾರು ಪ್ರಮುಖ ವ್ಯತ್ಯಾಸಗಳು ಕಂಡುಬರುತ್ತವೆ. ಮಹಾಪುರುಷರ ಬೋಧನೆಗಳು ಕಾಲಕ್ರಮೇಣದಲ್ಲಿ ವಿಕೃತಗೊಳ್ಳುವುದು ಸಾಮಾನ್ಯ. ಆದರೂ ಅನಂತರದ ಕಾಲದಲ್ಲಿ–ಉದಾ: ಹ್ಯಾನ್ ವಂಶದ ಕಾಲ ಪ್ರ.ಶ.ಪೂ. 202 ರಿಂದ ಪ್ರ.ಶ. 221ರವರೆಗೆ ಈತನ ಅನೇಕ ಬೋಧನೆಗಳು ಕಾರ್ಯಗತವಾದುವು. ಸಮಾಜದ ಕೆಳವರ್ಗದಲ್ಲಿ ಹುಟ್ಟಿದವರು ಸಹ ತಮ್ಮ ಸದ್ಗುಣ ದಕ್ಷತೆಗಳಿಂದ ಮಂತ್ರಿಗಳಾಗಬಹುದಿತ್ತು. ದೇಶದ ಆಗುಹೋಗುಗಳನ್ನು ನಿರ್ಧರಿಸುವ ಅಧಿಕಾರ ಅವರವರೆಗೂ ಬರುತ್ತಿತ್ತು. ಒಂದಲ್ಲ ಒಂದು ವಿಧದಲ್ಲಿ ಈತನ ತತ್ತ್ವಗಳು ಚೀನ ಮಾತ್ರವಲ್ಲದೆ ಇಡೀ ಆಗ್ನೇಯ ಏಷ್ಯದ ಸಂಸ್ಕೃತಿ, ಇತಿಹಾಸಗಳ ಮೇಲೆ ಪ್ರಭಾವ ಬೀರಿವೆ. **(ಕೆ.ಜೆ.;ಎಂ.ವೈ.;ಎಸ್.ಬಿ.ಕೆ.)**

**ಕನ್ನಂಬಾಡಿ :** ಈಗ ಕೃಷ್ಣರಾಜಸಾಗರವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಸ್ಥಳ. ಪ್ರಾಚೀನ ಕಾಲದಿಂದಲೂ ಇದು ಸಾಕಷ್ಟು ಪ್ರಾಶಸ್ತ್ಯ ಪಡೆದಿತ್ತು. ಸ್ಥಳ ಪುರಾಣಗಳ ಪ್ರಕಾರ, ಕಣ್ವಮುನಿ ಇಲ್ಲಿ ವಾಸವಾಗಿದ್ದು ಕಣ್ವೇಶ್ವರ ಲಿಂಗವನ್ನು ಇಲ್ಲಿ ಸ್ಥಾಪಿಸಿದ್ದರಿಂದ ಇದಕ್ಕೆ ಕಣ್ವಪುರಿ ಎಂಬ ಹೆಸರೂ ಬಂದಿದೆ. ಹೆಚ್ಚು ಕಡಿಮೆ ರಾಷ್ಟ್ರಕೂಟ ಕಾಲದಿಂದ ಈ ಊರಿನ ಬಗೆಗೆ ಮಾಹಿತಿಗಳು ದೊರೆಯುತ್ತವೆ. ಇಲ್ಲಿ ಕಣ್ವೇಶ್ವರ, ಗೋಪಾಲಕೃಷ್ಣ ಮತ್ತು ಲಕ್ಷ್ಮೀದೇವಿ ದೇವಾಲಯಗಳಿವೆ. ಇವುಗಳಲ್ಲಿ ಕಣ್ವೇಶ್ವರ ದೇವಾಲಯ ಬಹು ಪ್ರಾಚೀನವಾದುದು. ಇದು ಪ್ರ.ಶ. ಸು. 812ರಲ್ಲಿ ರಾಷ್ಟ್ರಕೂಟ ಮೊದಲನೆಯ ಕೃಷ್ಣನಿಂದ ನಿರ್ಮಿತವಾಗಿದ್ದಿರಬಹುದು, ಗರ್ಭಗೃಹ, ನವರಂಗ, ಸುಕನಾಸಿಗಳುಳ್ಳ ಈ ದೇವಾಲಯದಲ್ಲಿ ಗಣಪತಿ, ಉಮಾಮಹೇಶ್ವರ, ಮಹಿಷಾಸುರಮರ್ದಿನಿ, ಕುಮಾರ ಮೊದಲಾದ ದೇವತೆಗಳ ಶಿಲ್ಪಗಳಿವೆ. ವಿವಿಧ ಕಾಲಗಳಿಗೆ ಸೇರಿದ ನಾಲ್ಕು ಶಾಸನಗಳೂ ಇವೆ. ಗೋಪಾಲ ಕೃಷ್ಣ ದೇವಾಲಯ ದ್ರಾವಿಡ ಮತ್ತು ಚಾಳುಕ್ಯ ವಾಸ್ತುಶೈಲಿಗಳ ಮಿಶ್ರ ಕಟ್ಟಡ. ವಾಸ್ತುಶಿಲ್ಪ ದೃಷ್ಟಿಯಿಂದ ಇದೊಂದು ಸುಂದರ ದೇವಾಲಯ. ವಿಷ್ಣುವಿನ ದಶಾವತಾರಗಳು, ಬ್ರಹ್ಮ, ಸರಸ್ವತಿ, ಹರಿಹರ, ಹಯಗ್ರೀವ ಮುಂತಾದ ದೇವತೆಗಳ ಶಿಲ್ಪಗಳು ನಯನಮನೋಹರ ವಾಗಿವೆ. ಕೆಲವು ವಿಗ್ರಹಗಳ ಮೇಲ್ಭಾಗದಲ್ಲಿ, ಹೊಯ್ಸಳ ಕಾಲದ ಕನ್ನಡ ಲಿಪಿಯಲ್ಲಿ ಬರೆಯಲಾದ ದೇವತೆಗಳ ಹೆಸರುಗಳಿವೆ. ಗರ್ಭಗೃಹ, ಸುಕನಾಸಿ, ನವರಂಗ, ಮತ್ತು ಮುಖಮಂಡಪವನ್ನುಳ್ಳ ಈ ದೇವಾಲಯದ ಆರು ಅಡಿ ಎತ್ತರದ ಗೋಪಾಲಕೃಷ್ಣ ಮೂರ್ತಿ ಬಹು ಮುದ್ದಾಗಿದೆ. ಇಲ್ಲಿನ ಶಾಸನವೊಂದು ಹೊಯ್ಸಳ ಮೂರನೆಯ ಬಲ್ಲಾಳನ ಕಾಲಕ್ಕೆ ಸೇರಿದ್ದುದರಿಂದ, ಈ ದೇವಾಲಯ ಪ್ರ.ಶ. 1300ಕ್ಕಿಂತಲೂ ಮುಂಚೆಯೇ ನಿರ್ಮಾಣವಾಗಿರಬೇಕೆಂದು ಗೊತ್ತಾಗುತ್ತದೆ. ಪ್ರ.ಶ. 1606ರಲ್ಲಿ ಈ ಸ್ಥಳವನ್ನು ದೊಡ್ಡಯ್ಯ ಪ್ರಭು ಎಂಬುವನಿಂದ ರಾಜ ಒಡೆಯರು ಗೆದ್ದುಕೊಂಡರು. ಅವರ ಮಗನಾದ ನರಸರಾಜ ಒಡೆಯರು ಈ ದೇವಾಲಯದ ಜೀರ್ಣೋದ್ಧಾರ ಕಾರ್ಯ ಮಾಡಿದರು. ಇಲ್ಲಿರುವ ಮೂರನೆಯ ದೇವಾಲಯ ಲಕ್ಷ್ಮೀದೇವಿ ದೇಗುಲ. ಇದು ಇತ್ತೀಚಿನದಾಗಿದ್ದು ಪ್ರ.ಶ.1818ರಲ್ಲಿ ನಿರ್ಮಿತವಾಯಿತು. ಉಜ್ಜಯಿನಿಯ ಮಹಾಕಾಳಿ ದೇವಾಲಯದ ಮಾದರಿಯಲ್ಲಿ ಈ ದೇವಾಲಯ ನಿರ್ಮಿತವಾಯಿತು ಎಂದು ಶಾಸನವೊಂದು ತಿಳಿಸುತ್ತದೆ. ಈ ಮೂರು ದೇವಾಲಯಗಳೂ ಈಗ ಕಾವೇರಿಯ ನೀರಿನಲ್ಲಿ ಮುಳುಗಿ ಹೋಗಿವೆ.

ಇಲ್ಲಿರುವ ಪಾರಸಿ ಭಾಷೆಯ ಶಾಸನವೊಂದರಿಂದ. ಪ್ರ.ಶ. 1794ರಲ್ಲಿ ಟಿಪ್ಪೂಸುಲ್ತಾನ ಕಾವೇರಿ ನದಿಗೆ 22 ಮೀ ಎತ್ತರದ ಕಟ್ಟೆಯನ್ನು ಇಲ್ಲಿ ನಿರ್ಮಿಸಿದನೆಂದು ತಿಳಿಯುತ್ತದೆ. ಈಗಿನ ಕೃಷ್ಣರಾಜಸಾಗರ ಕಟ್ಟೆ, ಟಿಪ್ಪೂಸುಲ್ತಾನ ನಿರ್ಮಿಸಿದ್ದ ಕಟ್ಟೆಯ ಸ್ಥಳದಲ್ಲಿಯೇ ಇರುವುದು ಗಮನಿಸಬೇಕಾದ ಅಂಶ **(ನೋಡಿ– ಕೃಷ್ಣರಾಜಸಾಗರ)**. **(ಎ.ಪಿ.ಎನ್.)**

**ಕನ್ನಡ ಅಭಿವೃದ್ಧಿ ಪ್ರಾಧಿಕಾರ :** ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಹಾಗೂ ಕರ್ನಾಟಕದ ಸಮಸ್ತ ಮಾಹಿತಿಗಳನ್ನು ದಾಖಲುಗೊಳಿಸುವ ಉದ್ದೇಶ ಹೊಂದಿದೆ. ಸರ್ಕಾರದ ಒಂದು ಕಾರ್ಯ ಯೋಜನೆಯ ಅಂಗವಾಗಿ ಸ್ಥಾಪಿತವಾದ. ಸಂಸ್ಥೆ. ಕನ್ನಡ ಭಾಷೆಯನ್ನು ಆಡಳಿತದಲ್ಲಿ ಜಾರಿಗೆ ತರಲು ಸೂಕ್ತ ಮಾರ್ಗದರ್ಶನ, ಸಲಹೆ, ಸೂಚನೆಗಳನ್ನು ನೀಡುವ ಉದ್ದೇಶದ ಹಿನ್ನೆಲೆಯಲ್ಲಿ 1983 ಜೂನ್ 23ರಂದು ಕನ್ನಡ ಕಾವಲು ಸಮಿತಿಯನ್ನು ರಚಿಸಲಾಯಿತು. ಕರ್ನಾಟಕದ ಗಡಿ ಸಮಸ್ಯೆಯನ್ನೂ ಈ ಸಮಿತಿಯ ವ್ಯಾಪ್ತಿಗೆ ಸೇರಿಸಿದ ತರುವಾಯ 1984 ಏಪ್ರಿಲ್ 18ರಂದು ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಎಂದು ಪುನರ್ ನಾಮಕರಣ ಮಾಡಲಾಯಿತು. ಅನಂತರ 1990 ಅಕ್ಟೋಬರ್ 14ರಂದು ಸಮಿತಿಯ ಉದ್ದೇಶಗಳನ್ನೂ ಅಧಿಕಾರ ವ್ಯಾಪ್ತಿಗಳನ್ನೂ ಹಿಗ್ಗಿಸಿ ಕನ್ನಡ ಅಭಿವೃದ್ಧಿ ಮಂಡಳಿ ಎಂದು ಮರುನಾಮಕರಣ ಮಾಡಲಾಯಿತು. ಆಡಳಿತದ ಎಲ್ಲ ಹಂತದಲ್ಲಿ ಕನ್ನಡವನ್ನು ಬಳಸುವಂತೆ ಚಾಲನೆ ನೀಡುವುದು, ಪರಿಶೀಲಿಸುವುದು, ಕನ್ನಡವನ್ನು ಬಳಸದೇ ಹೋದ ಸಂದರ್ಭದಲ್ಲಿ ಶಿಸ್ತು ಕ್ರಮದ ಜಾರಿ ಮುಂತಾದ ಅಧಿಕಾರಗಳನ್ನು ಶಾಸನಬದ್ಧಗೊಳಿಸಿ 1992 ಫೆಬ್ರವರಿ 6ರಂದು ಈ ಮಂಡಳಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂಬ ಹೆಸರಿನಲ್ಲಿ ಉನ್ನತೀಕರಿಸಲಾಯಿತು. ಈ ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರವನ್ನು ನೀಡಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ ಕಾಯಿದೆ ಜಾರಿಗೊಳಿಸಲಾಗಿದೆ (1995).

ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ರಕ್ಷಣೆಯಲ್ಲಿ ಜನತೆಯ ಆಶೋತ್ತರಗಳನ್ನು ರಚನಾತ್ಮಕವಾಗಿ ಕಾರ್ಯರೂಪಕ್ಕೆ ತರುವುದು ಪ್ರಾಧಿಕಾರದ ಮುಖ್ಯ ಧ್ಯೇಯ. ಆಡಳಿತದಲ್ಲಿ ಕನ್ನಡದ ಬಳಕೆ ಮತ್ತು ಸರೋಜಿನಿ ಮಹಿಷಿ ವರದಿಯ ಅನುಷ್ಠಾನಗಳು ಪ್ರಾಧಿಕಾರದ ಮುಖ್ಯ ಜವಾಬ್ದಾರಿಗಳಾಗಿವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ 1 ರಿಂದ 10ನೆಯ ತರಗತಿಯವರೆಗೆ

ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ವೃತ್ತಿಪರ ಶಿಕ್ಷಣದಲ್ಲಿ ಮೀಸಲಾತಿ ನೀಡುವಂತೆ ಪ್ರಾಧಿಕಾರ ಚಾರಿತ್ರಿಕ ಮಹತ್ವದ ವರದಿಯನ್ನು ಸಲ್ಲಿಸಿದೆ. ರಾಜ್ಯದಲ್ಲಿರುವವರೆಲ್ಲ ಕನ್ನಡ ಕಲಿಯಬೇಕೆಂಬ ಆಶಯದಿಂದ ಅಲ್ಪಸಂಖ್ಯಾತರಿಗೆ ಕನ್ನಡ ಕಲಿಸುವ ಯೋಜನೆ ಹಾಕಿಕೊಂಡಿದೆ.

ಪ್ರಾಧಿಕಾರದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಸರ್ಕಾರ ನೇಮಿಸಿದ ಒಬ್ಬ ಅಧ್ಯಕ್ಷರಿರುತ್ತಾರೆ. ಇವರ ಅಧಿಕಾರಾವಧಿ ಮೂರು ವರ್ಷ. ಪ್ರಾಧಿಕಾರಕ್ಕೆ ಏಳು ಜನ ಅಧಿಕಾರೇತರ ಸದಸ್ಯರನ್ನು ಸರ್ಕಾರ ನಾಮನಿರ್ದೇಶನ ಮಾಡುತ್ತದೆ. ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಗೂ ಕಾರ್ಯದರ್ಶಿಗಳು ಇದರ ಪದನಿಮಿತ್ತ ಸದಸ್ಯರು. ಜಿಲ್ಲಾಧಿಕಾರಿ ದರ್ಜೆಯ ಒಬ್ಬ ಅಧಿಕಾರಿಯನ್ನು ಸರ್ಕಾರ ಕಾರ್ಯದರ್ಶಿಯಾಗಿ ನೇಮಿಸುವುದು. ಈ ತನಕ ಸಿದ್ಧರಾಮಯ್ಯ, ಜಿ.ನಾರಾಯಣ, ಎಚ್.ನರಸಿಂಹಯ್ಯ, ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ ಇದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಈಗಿನ ಅಧ್ಯಕ್ಷರು ಮುಖ್ಯಮಂತ್ರಿ ಚಂದ್ರು. ಮಾಹಿತಿ ತಂತ್ರಜ್ಞಾನದ ಪ್ರವಾಹದಲ್ಲಿ ಅನ್ಯಭಾಷೆಗಳಿಂದ ಅದರಲ್ಲೂ ಇಂಗ್ಲಿಷಿನಿಂದ ಕನ್ನಡವನ್ನು ರಕ್ಷಿಸುವ ಕೆಲಸ ಪ್ರಾಧಿಕಾರದ ಮುಂದಿರುವ ಬಹು ದೊಡ್ಡ ಸವಾಲಾಗಿದೆ. (ಎಸ್.ಬಿಎಚ್.ಎ.)

**ಕನ್ನಡ ಅರಸು ಮನೆತನಗಳು–ಹೊರನಾಡಿನಲ್ಲಿ :** ಭವ್ಯವೂ ಸ್ಫೂರ್ತಿಪ್ರದವೂ ಆದ ಚರಿತ್ರೆಯನ್ನೂ ಪರಂಪರೆಗಳನ್ನೂ ಸೃಷ್ಟಿಸಿರುವ ಕನ್ನಡ ನಾಡಿನ ಅರಸುಮನೆತನಗಳ ಕೆಲವರು ಕರ್ನಾಟಕದ ಹೊರಗಣ ಪ್ರಾಂತ್ಯಗಳಲ್ಲೂ ನೆಲೆಸಿ ರಾಜ್ಯಗಳನ್ನು ಕಟ್ಟಿ ಸಾಹಸಗಳನ್ನು ಮೆರೆದದ್ದೂ ಉಂಟು. ಇಂಥ ಅನೇಕ ನಾಯಕರ, ರಾಜವಂಶಗಳ ವೃತ್ತಾಂತಗಳಲ್ಲಿ ಮುಖ್ಯವಾದ ಕೆಲವನ್ನು ಮುಂದೆ ಕೊಡಲಾಗಿದೆ:

**ಕಳಿಂಗ ನಾಡಿನ ಗಂಗರು :** ಗಂಗ ವಂಶದ ಅರಸರು ಮೈಸೂರು ಭಾಗದಲ್ಲಿ ಆಳಿದರು. ಇವರನ್ನು ಇತಿಹಾಸಕಾರರು ಪಶ್ಚಿಮ ಗಂಗರು ಎಂದು ಕರೆದಿದ್ದಾರೆ. ಈ ರಾಜವಂಶಕ್ಕೆ ಸಂಬಂಧಿಸಿದವರಾದ ಗಂಗ ಅರಸರು ಕಳಿಂಗ ನಾಡಿನಲ್ಲಿ ಎಂದರೆ ಒರಿಸ್ಸದಲ್ಲಿಯೂ ರಾಜ್ಯಭಾರ ಮಾಡಿದರು. ಇವರನ್ನು ಪೂರ್ವದ ಗಂಗರು ಎಂದು ಕರೆಯಲಾಗಿದೆ. ಇವರಲ್ಲಿ ಮೂರು ಮನೆತನಗಳನ್ನು ಗುರುತಿಸಲಾಗಿದೆ. ಒಂದನೆಯದು ಕಳಿಂಗದ ಗಂಗರದು, ಎರಡನೆಯದು ಶ್ವೇತಕ ಗಂಗರದು, ಮೂರನೆಯದು ಉತ್ತರಕಾಲೀನ ಸಮ್ರಾಟ ಗಂಗರ ಮನೆತನ.

ಒಂದನೆಯ ಗಂಗರು ಪ್ರಾಚೀನರು. ಪ್ರ.ಶ.ಸು. ಐದನೆಯ ಶತಮಾನದ ಅಂತ್ಯಭಾಗದಿಂದ ಆಳಿದರು. ಇವರ ಕುಲ ಇಕ್ಷ್ವಾಕು. ಇವರ ರಾಜಧಾನಿ ಕಳಿಂಗನಗರ–ಗಂಜಾಂ ಜಿಲ್ಲೆಯಲ್ಲಿರುವ ಇಂದಿನ ಮುಖಲಿಂಗಂಪಟ್ಟಣ. ಮಹೇಂದ್ರಗಿರಿಯ ಶಿಖರದ ಮೇಲೆ ಪ್ರತಿಷ್ಠಿತನಾದ ಗೋಕರ್ಣೇಶ್ವರ ಶಿವ ಇವರ ಕುಲದೈವ. ಈ ವಂಶದ ಸಂಸ್ಥಾಪಕ ಮಹಾರಾಜ ಇಂದ್ರವರ್ಮ. ಈತ ತ್ರಿಕಲಿಂಗಾಧಿಪತಿ ಎಂಬ ಪ್ರಶಸ್ತಿ ಪಡೆದಿದ್ದ. ಈ ಅರಸರ ಮೂಲಕ ಒಂದು ಕಾಲಗಣನೆ ಪ್ರಚುರವಾಯಿತು. ಅದೇ ಗಂಗಶಕ. ಇದರ ಆರಂಭಕಾಲ ಪ್ರ.ಶ. ಸು. 496. ಹೊರನಾಡುಗಳಲ್ಲಿ ಆಳಿದ ಕನ್ನಡ ಅರಸು ಮನೆತನಗಳಲ್ಲಿ ಈ ಗಂಗ ರಾಜವಂಶ ಅತಿ ಪ್ರಾಚೀನವಾದುದು. ಈ ರಾಜರಿಗೆ ಸಾಮಂತರಾಗಿದ್ದ, ಅದೇ ಗಂಗಕುಲದಶಾಖಾವಂಶದ ಅರಸರು ಆ ಭಾಗದಲ್ಲಿ ಆಳಿದರು. ಅವರಲ್ಲಿ ಪೂರ್ವಿಕನಾದಾತ ಮಹಾರಾಜ ಜಯವರ್ಮ. ಈತನ ಕಾಲ 6ನೆಯ ಶತಮಾನ. ಇವನ ರಾಜಧಾನಿ ಶ್ವೇತಕಪುರ. ಈತನ ಮುಂದಿನ ಕೆಲವು ಅರಸರು ಪ್ರಾಮುಖ್ಯಗಳಿಸಿದ್ದಾರೆ.

ಸಾಮ್ರಾಟ ಗಂಗರು ಕಳಿಂಗ ಗಂಗರ ವಂಶಿಕರು. ಇವರು ತಮ್ಮ ಮೂಲಸ್ಥಳ ಕೋಲಾಹಲಪುರ (ಮೈಸೂರು ರಾಜ್ಯದಲ್ಲಿನ ಕೋಲಾರ) ಎಂದು ಹೇಳಿರುವುದರಿಂದ ಇವರು ಕರ್ನಾಟಕ ಮೂಲದವರೆಂಬುದರಲ್ಲಿ ಸಂಶಯವಿಲ್ಲ. 11ನೆಯ ಶತಮಾನದಲ್ಲಿ ವಜ್ರಹಸ್ತ ಅನಂತವರ್ಮ ಈ ವಂಶವನ್ನು ಊರ್ಜಿತಗೊಳಿಸಿದ (1038). ತ್ರಿಕಲಿಂಗಾಧಿಪತಿ ಎಂಬ ಪ್ರಶಸ್ತಿಪಡೆದಿದ್ದ ಈತನ ರಾಜಧಾನಿ ಕಳಿಂಗ ನಗರ. ವಜ್ರಹಸ್ತನ ಮೊಮ್ಮಗ ಅನಂತವರ್ಮ ಚೋಡ ಗಂಗನೇ ಈ ಪರಾಕ್ರಮಶಾಲಿ ನರೇಂದ್ರ. ಈಗಿನ ಆಳ್ವಿಕೆಯಲ್ಲಿ (1078–1150) ಗಂಗ ಸಾಮ್ರಾಜ್ಯ ಪೂರ್ವಭಾಗದಲ್ಲಿ ಗಂಗೆಯಿಂದ ಗೋದಾವರಿಯವರೆಗೆ ವಿಸ್ತಾರ ಹೊಂದಿತು. ಈ ಅರಸರ ಆಳ್ವಿಕೆ ಮುಂದೆ ಒಂದೂವರೆ ಶತಮಾನದವರೆಗೆ ಮುಂದುವರಿಯಿತು. ಹದಿಮೂರನೆಯ ಶತಮಾನದ ಉತ್ತರಾರ್ಧದಲ್ಲಿ ಮಧ್ವಾಚಾರ್ಯರ ವೈಷ್ಣವಮತ ಈ ರಾಜರ ಮೇಲೂ ಈ ನಾಡಿನಲ್ಲೂ ತನ್ನ ಪ್ರಭಾವ ಬೀರಿತು.

**ಪೂರ್ವದ ಕದಂಬರು :** ಕದಂಬ ಕುಲದ ಹಲವು ರಾಜವಂಶಗಳ ಅರಸರು ಕನ್ನಡ ನಾಡಿನ ಅನೇಕ ಪ್ರದೇಶಗಳಲ್ಲಿ ಆಳಿದರು. ಕದಂಬರ ಒಂದು ಶಾಖೆಯವರು ಒರಿಸ್ಸ ಪ್ರಾಂತ್ಯದಲ್ಲಿಯೂ ಆಳಿದ ವಿಷಯ ಶಾಸನಗಳಿಂದ ತಿಳಿದುಬಂದಿದೆ. ಇವರು ಆಳಿದ ನೆಲ ಗಂಜಾಂ ಜಿಲ್ಲೆಯ ಭಾಗ; ಕಾಲ 10–11ನೆಯ ಶತಮಾನ. ಇವರ ರಾಜಧಾನಿ ಜಯಂತ್ಯಾಪುರ. ಕರ್ನಾಟಕದಲ್ಲಿ ಆಳಿದ ಮೂಲ ಕದಂಬರ ರಾಜಧಾನಿ ಬನವಾಸಿಯಾಗಿದ್ದು, ಅದಕ್ಕೆ ಜಯಂತೀಪುರ ಎಂಬ ನಾಮಾಂತರವಿತ್ತೆಂಬುದು ಗಮನಾರ್ಹ.

**ಚಾಳುಕ್ಯ ವಂಶದ ಶಾಖೆಗಳು :** ಚಾಳುಕ್ಯ ವಂಶದ ಅರಸರು ಕರ್ನಾಟಕದಲ್ಲಿ ಸಾಮ್ರಾಜ್ಯ ಸ್ಥಾಪಿಸಿ ಬಾದಾಮಿಯಿಂದ ಆಳಿದ ವಿಷಯ ಸುವಿದಿತವಾದುದು. ಚಾಳುಕ್ಯ ಕುಲದ ಹಲವು ಶಾಖೆಗಳ ಅರಸರು ಕರ್ನಾಟಕದ ಹೊರಗೂ ಆಳಿದರು. ಅವರಲ್ಲಿ ಪೂರ್ವದ ಅಥವಾ ವೇಂಗಿಯ ಚಾಳುಕ್ಯರು ಪ್ರಖ್ಯಾತರು. ಇವರು ಗೋದಾವರಿ, ಕೃಷ್ಣಾ, ನದಿಗಳ ಆಂಧ್ರ ಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದರು. ಈ ರಾಜವಂಶವನ್ನು ಇಮ್ಮಡಿ ಪುಲಕೇಶಿಯ ತಮ್ಮನಾದ ವಿಷ್ಣುವರ್ಧನ ಪ್ರ.ಶ.ಸು 630ರಲ್ಲಿ ಸ್ಥಾಪಿಸಿದ. ಈತನನ್ನು ಬಿಟ್ಟರಸನೆಂದೂ ಕರೆಯಲಾಗಿದೆ. ಈ ವಂಶದ ಆಳ್ವಿಕೆ ನಾಲ್ಕು ಶತಮಾನಕ್ಕೂ ಮಿಕ್ಕಿ ಮುಂದುವರೆಯಿತು. ಅನಂತರ 11ನೆಯ ಶತಮಾನದಲ್ಲಿ ಈ ರಾಜ್ಯ ಚೋಳರ ಸಾಮ್ರಾಜ್ಯದಲ್ಲಿ ವಿಲೀನವಾಯಿತು.

ನಾಸಿಕದ ಪ್ರದೇಶದಲ್ಲಿ ಇಮ್ಮಡಿ ಪುಲಕೇಶಿಯ ಇನ್ನೊಬ್ಬ ತಮ್ಮ ಧರಾಶ್ರಯ ಜಯಸಿಂಹವರ್ಮ ಮತ್ತು ಆತನ ಮಗ ಪ್ರಾಂತ್ಯಾಧಿಕಾರಿಗಳಾಗಿ ರಾಜ್ಯವಾಳಿದರು. ಇಮ್ಮಡಿ ಪುಲಕೇಶಿಗೆ ಧರಾಶ್ರಯ ಜಯಸಿಂಹವರ್ಮನೆಂಬ ಮಗನೂ ಇದ್ದ. ಈತ ಗುಜರಾತಿನಲ್ಲಿ ಸುರತದ ನೆರೆಯ ನವಸಾರೀ ಪ್ರದೇಶದಲ್ಲಿ ರಾಜಪ್ರತಿನಿಧಿಯಾಗಿ ಪ್ರಾಂತ್ಯಾಧಿಕಾರ ನಡೆಯಿಸಿದ. ಪಲ್ಲವರೊಡನೆ ನಡೆದ ಸಮರಗಳಲ್ಲಿ ಈತ ಚಾಳುಕ್ಯರಿಗೆ ಸಹಾಯ ಸಲ್ಲಿಸಿದ. ವಲ್ಲಭಿಯ ಮೈತ್ರಕ ವಂಶದ ವಜ್ಜಡನನ್ನು (ಮುಮ್ಮಡಿ ಶೀಲಾದಿತ್ಯ) ಸೋಲಿಸಿದ. ಈತನ ವಂಶಿಕನಾದ ಅವನಿಜನಾಶ್ರಯ ಪುಲಕೇಶಿ ಗುಜರಾತಿನಲ್ಲಿ ನುಗ್ಗಿದ್ದ ಅರಬರ ದಾಳಿಯನ್ನು ಹಿಂದೂಡಿ (ಪ್ರ.ಶ.ಸು. 740) ಇಮ್ಮಡಿ ವಿಕ್ರಮಾದಿತ್ಯನ ಗೌರವ ಪ್ರಶಸ್ತಿಗೆ ಪಾತ್ರನಾದ. ಅನಂತರ ಈ ಚಾಳುಕ್ಯ ಮಂಡಲ ರಾಜ್ಯ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಸಮಾವೇಶಗೊಂಡಿತು.

ಚಾಳುಕ್ಯ ಶಾಖೆಯ ಇನ್ನೊಂದು ಸಾಮಂತ ವಂಶದ ಅರಸರು ಆಂಧ್ರಪ್ರಾಂತ್ಯದ ಕರೀಮನಗರ ಜಿಲ್ಲೆಯ ವೇಮುಲವಾಡ ಪ್ರದೇಶದಲ್ಲಿ ಎಂಟರಿಂದ 10ನೆಯ ಶತಮಾನ ಕಾಲದಲ್ಲಿ ಆಳಿದರು. ಇವರು ರಾಷ್ಟ್ರಕೂಟರಿಗೆ ಮಾಂಡಲಿಕರಾಗಿದ್ದರು. ವಿನಯಾದಿತ್ಯ ಯುದ್ಧಮಲ್ಲ ಈ ವಂಶದ ಸಂಸ್ಥಾಪಕ. ಮುಂದೆ ಈತನ ವಂಶಿಕನಾದ ಇಮ್ಮಡಿ ಅರಿಕೇಸರಿ ಖ್ಯಾತಿವೆತ್ತ ನರೇಂದ್ರ. ಕನ್ನಡಕವಿ ಆದಿಪಂಪ (ಪ್ರ.ಶ. 941) ಈತನ ಆಸ್ಥಾನದಲ್ಲಿದ್ದ. ಮೂರನೆಯ ಅಮೋಘವರ್ಷ ರಾಜ ರಾಷ್ಟ್ರಕೂಟ ಸಿಂಹಾಸನವನ್ನು ಪಡೆಯಲು ಅರಿಕೇಸರಿ ಸಹಾಯ ಮಾಡಿದ.

**ರಾಷ್ಟ್ರಕೂಟ ರಾಜವಂಶಗಳು :** ರಾಷ್ಟ್ರ ಎಂಬುದು ಪ್ರಾಂತ್ಯವಾಚಕ ಪದ. ಈ ಅರ್ಥದಲ್ಲಿ ಇದು ಅಶೋಕನ ಕಾಲದಿಂದ ರಾಜಕೀಯ ವ್ಯವಹಾರದಲ್ಲಿ ಬಳಕೆಯಾಯಿತು. ಅನಂತರ ಪ್ರಾಂತ್ಯಾಧಿಕಾರಿ ಎಂಬ ಅಭಿಪ್ರಾಯದಲ್ಲಿ ರಾಷ್ಟ್ರಕೂಟ ಎಂಬ ಪದವಿಸೂಚಕ ವಿಶಿಷ್ಟ ಪದ ಪ್ರಯೋಗವಾಗತೊಡಗಿತು. ಇಂಥ ಪ್ರಾಂತ್ಯಾಧಿಕಾರಿಗಳ ವಂಶದವರು ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಊರ್ಜಿತರಾದರು.

ಸಮಸ್ತ ಭಾರತದಲ್ಲಿ ಖ್ಯಾತಿವೆತ್ತು ಭವ್ಯ ಪರಂಪರೆಯಿಂದ ಆಳಿದವರು ಮಳಖೇಡದ ರಾಷ್ಟ್ರಕೂಟರು. ಇವರ ಮೂಲಸ್ಥಳ ಹಿಂದೆ ಪ್ರಾಚೀನ ಕರ್ನಾಟಕದಲ್ಲಿ ಸಮಾವೇಶಗೊಂಡಿದ್ದು, ಅನಂತರ ಮಹಾರಾಷ್ಟ್ರದಲ್ಲಿ ಸೇರ್ಪಡೆಯಾದ ಲತ್ತನೂರು ಎಂದರೆ ಲಾತೂರು ಎಂಬ ಪಟ್ಟಣ. ರಾಷ್ಟ್ರಕೂಟ ಎಂಬ ಹೆಸರುವೆತ್ತ ಹಲವು ಅರಸು ಮನೆತನಗಳು ಭಾರತದ ನಾನಾ ಪ್ರದೇಶಗಳಲ್ಲಿ ಆಳಿದುವು. ಅವೆಲ್ಲ ಕರ್ನಾಟಕ ಮೂಲದವೇ ಆಗಿದ್ದುವು ಎಂಬುದು ಕೆಲವು ಇತಿಹಾಸ ಲೇಖಕರ ಅಭಿಪ್ರಾಯ.

ಮಳಖೇಡದ ರಾಷ್ಟ್ರಕೂಟ ರಾಜನಾದ ಧ್ರುವನ (ಪ್ರ.ಶ. ಸು. 380–93) ಮಗ ಇಂದ್ರ. ಈತ ಗುಜರಾತ್ ಮತ್ತು ಮಾಳವ ಪ್ರದೇಶಗಳ ಮೇಲೆ ಪ್ರಾಂತ್ಯಾಧಿಪತ್ಯ ವಹಿಸಿದ. ಈತನ ವಂಶಿಕರು ಗುಜರಾತ್ ಪ್ರಾಂತ್ಯದ ಅಧಿಕಾರ ಪಡೆದು ಸು. 790 ರಿಂದ 890 ವರೆಗೆ ಸು. ಒಂದು ಶತಮಾನ ಕಾಲ ರಾಜ್ಯಭಾರ ಮಾಡಿದರು. ಧ್ರುವನ ಮಗ ಸುವರ್ಣವರ್ಷ ಕರ್ಕ ಒಂದನೆಯ ಅಮೋಘವರ್ಷ ನೃಪತುಂಗರಾಜ ಮಳಖೇಡದ ಸಿಂಹಾಸನವೇರಿದಾಗ (814) ಅಲ್ಪವಯಸ್ಸಿನವನಿದ್ದುದರಿಂದ ಆತ ಪ್ರಬುದ್ಧನಾಗುವವರೆಗೆ ರಾಜಪ್ರತಿನಿಧಿಯಾಗಿ ಸಾಮ್ರಾಜ್ಯದ ಕಾರ್ಯನಿರ್ವಹಣೆ ಮಾಡಿದ.

ಮಾನಪುರದ ರಾಷ್ಟ್ರಕೂಟರು ಪ್ರಾಂತೀಯ ಅರಸರಾಗಿ 5ನೆಯ ಶತಮಾನದಿಂದ 7ನೆಯ ಶತಮಾನದವರೆಗೆ ಬಾಳಿದರು. ಮಾನಾಂಕ ಈ ವಂಶದ ಸ್ಥಾಪಕ. ಇವರ ಮೂಲಸ್ಥಳ ಮಾನ. ಇದು ಜಿಲ್ಲೆಯಲ್ಲಿರುವ ಗ್ರಾಮ. ಇವರ ರಾಜ್ಯ ಇಂದಿನ ಕೊಲ್ಹಾಪುರ ಪರಿಸರದ ಪ್ರದೇಶಕ್ಕೆ ಸೀಮಿತವಾಗಿತ್ತು.

ರಾಷ್ಟ್ರಕೂಟರ ಒಂದು ಶಾಖೆಯ ಮಾಂಡಲಿಕ ಅರಸರು ಒರಿಸ್ಸ ರಾಜ್ಯದ ಸಂಬಲಪುರ ಪ್ರದೇಶದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಬಾಳಿದ್ದರು. ತಮ್ಮ ಮೂಲಸ್ಥಳ ಲತಲೋರ (ಲಾತೂರು) ನಗರವೆಂದು ಇವರು ಹೇಳಿಕೊಂಡಿದ್ದಾರೆ. ಚಮರ ವಿಗ್ರಹ. ಆತನ ಮಗ ಧಂಸಕ. ಅವನ ಮಗ ಪರಚಕ್ರಶಲ್ಯ (ಪ್ರ.ಶ. 1132)–ಇವು ಈ ವಂಶದ ಮೂವರು ರಾಜರ ಹೆಸರುಗಳು.

ಮಧ್ಯಭಾರತದ ಭಿಲ್ಸದ ಪಕ್ಕದಲ್ಲಿ ರಾಷ್ಟ್ರಕೂಟರ ಒಂದು ವಂಶ ಬಾಳಿತು (ಸು. 8–9ನೆಯ ಶತಮಾನ). ರಾಷ್ಟ್ರಕೂಟ ವಂಶದ ಅರಸರು ಕನೌಜ್ ಪ್ರಾಂತ್ಯದಲ್ಲಿ 11,12ನೆಯ ಶತಮಾನಗಳಲ್ಲಿ ಊರ್ಜಿತರಾದರು. ರಾಜಸ್ಥಾನದ ಜೋಧಪುರ, ಉದೇಪುರ ಪ್ರದೇಶಗಳಲ್ಲಿ 11–13ನೆಯ ಶತಮಾನಗಳಲ್ಲಿ ರಾಷ್ಟ್ರಕೂಟರು ಉದಯ ಹೊಂದಿದರು.

8–9ನೆಯ ಶತಮಾನಗಳಲ್ಲಿ ರಾಷ್ಟ್ರಕೂಟ ಕುಲದ ಕೆಲವು ನಾಯಕರು ದಂಡಯಾತ್ರೆಯ ನಿಮಿತ್ತದಿಂದ ಭಾರತದ ಉತ್ತರ–ಪೂರ್ವ ಪ್ರಾಂತ್ಯಗಳಿಗೆ ಪ್ರಯಾಣ ಮಾಡಿ ಅಲ್ಲಿ ನೆಲಸಿ ರಾಜಕೀಯ ಪ್ರತಿಷ್ಠೆ ಗಳಿಸಿಕೊಂಡರು. ಇಂಥವರಲ್ಲಿ ಕೆಲವರ ವಿಷಯ ತಿಳಿದುಬಂದಿದೆ. ಬಂಗಾಳದ ಧರ್ಮಪಾಲ ರಾಜನ (ಸು. 220–810) ರಾಣಿ ರನ್ನದೇವಿ ರಾಷ್ಟ್ರಕೂಟ ಪರಬಲನೆಂಬ ನಾಯಕನ ಪುತ್ರಿ. ಅದೇ ವಂಶದ ರಾಜ್ಯಪಾಲ (ಸು. 911–35) ರಾಷ್ಟ್ರಕೂಟ ತುಂಗನ ಪುತ್ರಿ ಭಾಗ್ಯ ದೇವಿಯನ್ನು ವಿವಾಹವಾಗಿದ್ದ. ಬಳಿಕ 3ನೆಯ ವಿಗ್ರಹಪಾಲ (ಸು. 1055–81) ಪೂರ್ವ ಬಿಹಾರದ ರಾಷ್ಟ್ರಕೂಟ ಮಥನನ ಸೋದರಿಯನ್ನು ಮದುವೆಯಾಗಿದ್ದ. ಇಂಥ ಸಂಬಂಧಗಳ ಫಲವಾಗಿ ಕನ್ನಡ ನಾಡಿನ ಶೂರ ಸೈನಿಕರು ಬಂಗಾಳದ ಸೈನ್ಯದಲ್ಲಿ ಪ್ರವೇಶ ಹೊಂದಿದರು. ಈ ಸೈನಿಕರನ್ನು ಕುರಿತು ಬಂಗಾಳದ ಶಾಸನಗಳಲ್ಲಿ ವಿಪುಲ ನಿರ್ದೇಶನಗಳು ದೊರಕುತ್ತವೆ.

**ಚಿತ್ರಕೂಟದ ಸಿಂದರು :** ರಾಷ್ಟ್ರಕೂಟರ ಅನಂತರ ಕರ್ನಾಟಕದಲ್ಲಿ ಕಲ್ಯಾಣದ ಚಾಳುಕ್ಯರು ಪ್ರಬಲರಾದರು. ಇವರಲ್ಲಿ ಒಂದನೆಯ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯ ಇವರ ಮಹದಾಕಾಂಕ್ಷೆಯ ಆಳ್ವಿಕೆಯಲ್ಲಿ (11–12ನೆಯ ಶತಮಾನಗಳು) ಉತ್ತರ ಮತ್ತು ಪೂರ್ವ ಭಾರತದಲ್ಲಿ ಹಲವು ದಂಡಯಾತ್ರೆಗಳು ನಡೆದವು. ಅವುಗಳ ಸಂಚಾಲನೆಯಲ್ಲಿ ಭಾಗವಹಿಸಿದ ವೀರಯೋಧರೂ ಸಾಹಸಶೀಲ ಸೇನಾನಾಯಕರೂ ಮಧ್ಯ–ಉತ್ತರ–ಪೂರ್ವಭಾರತ ಪ್ರದೇಶಗಳಲ್ಲಿ ಕಾಲೂರಿ ತಮ್ಮ ಮನೆತನಗಳನ್ನು ಸ್ಥಾಪಿಸಿ ರಾಜ್ಯವಾಳಿದರು.

ಇಂಥವರಲ್ಲಿ ಒಂದು ಮನೆತನ ಚಕ್ರಕೂಟದ ಸಿಂದರದು. ಈ ವಂಶದಲ್ಲಿ 1060ರ ಆಚೆಯಿಂದ 1111ರ ಈಚೆಗೆ ಧಾರಾವರ್ಷ, ಸೋಮೇಶ್ವರ, ಕನ್ನರ–ಈ ಮೂವರು ರಾಜ್ಯಪಾಲರಾದರು. ಚಕ್ರಕೂಟದ ಎಂದರೆ ಬಸ್ತರದ ಪ್ರದೇಶದಲ್ಲಿ ಮೊದಲು ನೆಲೆಸಿದ್ದ ಇವರ ರಾಜ್ಯ ಕ್ರಮೇಣ ದಕ್ಷಿಣ ಕೋಸಲದವರೆಗೂ ವಿಸ್ತಾರ ಹೊಂದಿತು. ಫಿಂದಕ ನಾಗರೆಂದು ಖ್ಯಾತರಾದ ಈ ಮಹೀಶರು ಕನ್ನಡ ನಾಡಿನ ಸಿಂದರ ವಂಶಿಕರು. ತಮ್ಮ ನಾಗವಂಶೀಯರೆಂದು, ಭೋಗಾವತೀಪುರದ ಒಡೆಯರೆಂದು ಹೇಳಿಕೊಂಡಿದ್ದಾರೆ.

**ತೈಲಪ ವಂಶಿ :** ಒರಿಸ್ಸದ ಗಂಜಾಂ ಭಾಗದಲ್ಲಿ ರಾಣಕರಾಮದೇವನೆಂಬ ಸಾಮಂತರಾಜ ಸು. 11–12ನೆಯ ಶತಮಾನದಲ್ಲಿ ಆಳುತ್ತಿದ್ದ. ಈತನನ್ನು ತೈಲಪವಂಶಿಯೆಂದು ವರ್ಣಿಸಿದೆ. ಕಲ್ಯಾಣದ ಆರನೆಯ ವಿಕ್ರಮಾದಿತ್ಯನಿಗೆ ತೈಲಪನೆಂಬ ಮಗನಿದ್ದು, ಆತ ಆಂಧ್ರರಾಜ್ಯದ ಕರೀಮನಗರ ಪ್ರದೇಶದಲ್ಲಿ ಕೊಳ್ಳಿಪಾಕೆಯ ಪ್ರಾಂತ್ಯಾಧಿಕಾರಿ ಆಗಿದ್ದ. ರಾಣಕರಾಮದೇವ ಈ ತೈಲಪನ ವಂಶಿಕನಾಗಿರಬಹುದು.

**ಬಂಗಾಳದ ಸೇನರು :** ಸೇನ ಎಂಬ ವಂಶನಾಮ ಹೊಂದಿದ್ದ ಅರಸರು ಬಂಗಾಳದಲ್ಲಿ ಪ್ರಬಲರಾಗಿ ರಾಜ್ಯವಾಳಿದರು. ಈ ವಂಶದ ಪೂರ್ವಿಕ ವೀರಸೇನ, ಈತನ ವಂಶಿಕನಾದ ಸಾಮಂತಸೇನ ಗಂಗಾತೀರ ಪ್ರದೇಶದಲ್ಲಿ ನೆಲಸಿ, ಬಂಗಾಳದ ರಾಢಾ ಎಂಬ ನೈಋತ್ಯ ಭಾಗದಲ್ಲಿ ತನ್ನ ರಾಜ್ಯ ಸ್ಥಾಪಿಸಿದ. ಈ ವಂಶದ ರಾಜರು ತಾವು ದಾಕ್ಷಿಣಾತ್ಯರೆಂದು, ಕರ್ಣಾಟ ಕ್ಷತ್ರಿಯ ಕುಲದವರೆಂದು ಹೇಳಿಕೊಂಡಿದ್ದಾರೆ. ಸಾಮಂತಸೇನನ ಮಗ ಹೇಮಂತಸೇನ. ಈತನ ಮಗ ವಿಜಯಸೇನ (ಸು. 1095–1158). ಪರಾಕ್ರಮಶಾಲಿಯಾದ ಈತ ಆ ಹಿಂದಿನಿಂದ ಆಳಿದ್ದ ಪಾಲರೆಂಬ ರಾಜರನ್ನು ನಿರ್ಮೂಲ ಮಾಡಿ ಬಂಗಾಲ ಪ್ರಾಂತ್ಯದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದ. ಈತನ ಪ್ರಭಾವ ನೆರೆಯ ಪ್ರದೇಶಗಳಿಗೂ ವ್ಯಾಪಿಸಿತು. ಈತನ ಮಗ ಬಲ್ಲಾಳಸೇನ (1158–1178), ತಂದೆ ಕಟ್ಟಿದ ಸಾಮ್ರಾಜ್ಯವನ್ನು ಸಂರಕ್ಷಿಸಿ ಅದರ ಮೇರೆಯನ್ನು ಬಿಹಾರ ಪ್ರಾಂತ್ಯದಲ್ಲೂ ಬೆಳೆಸಿದ. ಅನಂತರ ಪಟ್ಟವೇರಿದ ಲಕ್ಷ್ಮಣಸೇನನ ಆಳ್ವಿಕೆಯಲ್ಲಿ (ಪ್ರಶ. ಸು. 1178–1205) ಮುಸಲ್ಮಾನರ ಆಕ್ರಮಣದಿಂದಾಗಿ ಸೇನರ ರಾಜ್ಯಬಲ ಕುಗ್ಗಿತು.

ಸೇನರು ಪಾಲ ಅರಸರ ಪುರಸ್ಕಾರದಿಂದ ಅಭಿವೃದ್ಧಿ ಹೊಂದಿದ್ದ ಬೌದ್ಧಮತವನ್ನು ಹಿಂದೂಡಿ ಹಿಂದೂಧರ್ಮದ ಪುನರುಜ್ಜೀವನ ಮಾಡಿದರು. ಇವರ ಸಮರ್ಥ ಶಾಸನದ ಫಲವಾಗಿ ಬಂಗಾಳದಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಗೊಂಡುವು. ಇವರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದರು. ಬಲ್ಲಾಳಸೇನ ಮತ್ತು ಲಕ್ಷ್ಮಣಸೇನರು ವಿದ್ವಾಂಸರೂ ಗ್ರಂಥಕರ್ತರೂ ಆಗಿದ್ದರು. ಗೀತಗೋವಿಂದದ ಕವಿ ಜಯದೇವ ಮತ್ತು ಹಲಾಯುಧರು ಲಕ್ಷ್ಮಣಸೇನನ ಆಸ್ಥಾನವನ್ನು ಅಲಂಕರಿಸಿದ್ದರು. ಸೇನರಲ್ಲಿ ಬಲ್ಲಾಳ ಎಂಬ ಹೆಸರು ಕರ್ನಾಟಕದ ಹೊಯ್ಸಳರ ಮೂಲದಿಂದ ಬಂದುದು. ಕರ್ನಾಟಕದಲ್ಲಿ ಪ್ರಚುರವಾಗಿದ್ದ ಶಕಕಾಲ ಗಣನೆಯನ್ನು ಸೇನರು ಬಂಗಾಳದಲ್ಲಿ ರೂಢಿಗೆ ತಂದರು.

**ಮಿಥಿಲೆಯ ಕರ್ಣಾಟಕ ಅರಸರು :** ಪುರಾಣಪ್ರಸಿದ್ಧ ಮಿಥಿಲೆಯಲ್ಲೂ–ಎಂದರೆ ಉತ್ತರ ಬಿಹಾರದಲ್ಲಿ–ಕನ್ನಡ ಅರಸರು ರಾಜ್ಯವಾಳಿದ್ದಾರೆ. ಮಿಥಿಲೆ ಈಚೆಯ ಕಾಲದಲ್ಲಿ ತೀರಭುಕ್ತಿ, ತಿರಹತ್ ಎಂದು ನಾಮಕರಣ ಪಡೆದಿದೆ. ಬಂಗಾಳದ ಪಾಲರಾಜರ ದಂಡಿನಲ್ಲಿ ಪ್ರವೇಶ ಪಡೆದಿದ್ದ ಅನೇಕ ಕನ್ನಡ ಯೋಧರ, ನಾಯಕರ ಪೈಕಿ ನಾನ್ಯದೇವನೆಂಬ ಸಾಹಸಿ ವೀರನಾಯಕ ಮುಂದುವರಿದು ಸು. 1097ರಲ್ಲಿ ಮಿಥಿಲೆಯಲ್ಲಿ ರಾಜ್ಯ ಸ್ಥಾಪಿಸಿದ. ಈತನ ಮನೆತನ ಮಿಥಿಲೆಯ ಕರ್ಣಾಟ ರಾಜವಂಶವೆಂದು ಖ್ಯಾತಿಪಡೆದಿದೆ. ನನ್ನಿಯದೇವ, ನನ್ನಿಗದೇವ ಎಂಬ ರೀತಿಯಲ್ಲಿ ನಾನ್ಯದೇವ ಎಂಬ ಹೆಸರು ಕನ್ನಡ ಮೂಲದಿಂದ ಬಂದಿರಬಹುದು. ಈ ರಾಜ್ಯದ ರಾಜಧಾನಿ ಸೀಮರರಾಮಪುರ, ಇಂದಿನ ಸಿಮಾರಾಂ. ಇದು ಚಂಪಾರನ್ ಜಿಲ್ಲೆಯ ಉತ್ತರಕ್ಕೆ ನೇಪಾಳ ರಾಜ್ಯದಲ್ಲಿದೆ.

ಗೌಡ ಮತ್ತು ವಂಗದೇಶಗಳ ರಾಜರೊಡನೆ ನಾನ್ಯದೇವ ಹೋರಾಡಿದ. ನೇಪಾಲದೇಶವನ್ನೂ ಗೆದ್ದನೆಂದು ಹೇಳಲಾಗಿದೆ. ಈತ ಸು. 50 ವರ್ಷ ರಾಜನಾಗಿದ್ದ. ಇವನ ತರುವಾಯ ಈ ವಂಶದಲ್ಲಿ ಗಂಗದೇವ ಮೊದಲಾದ ಐದು ಜನ ಅರಸರು ರಾಜ್ಯಭಾರ ಮಾಡಿದರು. ಈ ವಂಶದ ಕೊನೆಯ ರಾಜನಾದ ಹರಿಸಿಂಹ ಅಥವಾ ಹರಸಿಂಹ (ಸು. 1285–1324) ಮುಸಲ್ಮಾನರ ಆಕ್ರಮಣದಿಂದ ಮಿಥಿಲೆಯ ರಾಜ್ಯವನ್ನು ಕಳೆದುಕೊಂಡ. ಮುಂದೆ ನೇಪಾಳದಲ್ಲಿ ರಾಜ್ಯ ಸಂಪಾದಿಸಿ ಅಲ್ಲಿ ತನ್ನ ಆಳ್ವಿಕೆಯನ್ನು ಮುಂದುವರಿಸಿದ. ಖ್ಯಾತ ಸ್ಮೃತಿಕಾರನಾದ ಚಂಡೇಶ್ವರ ಹರಿಸಿಂಹನ ಮಂತ್ರಿಯೂ ಸೇನಾಪತಿಯೂ ಆಗಿದ್ದ. ಈತ ನೇಪಾಳದ ರಾಜ್ಯಸಂಪಾದನೆಯಲ್ಲಿ ತನ್ನ ದೊರೆಗೆ ಸಹಾಯ ನೀಡಿದ. ಹರಿಸಿಂಹ ನೇಪಾಳದಲ್ಲಿ ಸ್ವಲ್ಪಕಾಲ ಆಳಿದ ಅನಂತರ ಆತನ ವಂಶಿಕರು ಅಲ್ಲಿ ಕೆಲಕಾಲ ಅರಸರಾದರು. (ಪಿ.ಬಿ.ಡಿ.)

**ಕನ್ನಡಕಗಳು :** ಕಣ್ಣಿನ ನೋಟದ ಕುಂದುಗಳಿಗೂ ಚಾಳೀಸಕ್ಕೂ ರೋಗಿ ಬಳಸುವಂತೆ ಕಣ್ಣಿನ ವೈದ್ಯರು ನಿಯಮಿಸುವ ನೋಟದ ಸಾಧನಗಳು. ಮೂರು ಬಗೆಗಳ ನೋಟದ ಕುಂದುಗಳಲ್ಲಿ, ದೂರ ನೋಟವನ್ನು ಉಬ್ಬು (ಕಾನ್‌ವೆಕ್ಸ್) ಮಸೂರದಿಂದಲೂ ಹತ್ತಿರ

ತಂಪು ಕನ್ನಡಕಗಳು

ನೋಟವನ್ನು ತಗ್ಗು (ಕಾನ್‌ಕೇವ್) ಮಸೂರದಿಂದಲೂ ಅಸಮನಿಟ್ಟು ದೃಷ್ಟಿದೋಷವನ್ನು (ಅಸ್ಟಿಗ್ಮಾಟಿಸಂ) ಉರಳೆಯಕಾರದ ಮಸೂರದಿಂದಲೂ ಸರಿಯಾಗಿ ಕಾಣುವಂತೆ ಮಾಡಬಹುದು. 40 ವರ್ಷ ದಾಟಿದವರಲ್ಲಿ ಬರುವ ಚಾಳೀಸದಲ್ಲಿ ಹತ್ತಿರದಲ್ಲಿರುವುವು ಕಾಣುವ ಹಾಗೆ ಉಬ್ಬು ಮಸೂರವನ್ನು ಕೊಡಲಾಗುತ್ತದೆ.

ಕನ್ನಡಕಗಳ ಮಸೂರಗಳನ್ನು ತಯಾರಿಸುವ ಗಾಜು ವಿಶೇಷ ಬಗೆಯದು. ರಿಫ್ರಾಕ್ಟಿವ್ ಇಂಡೆಕ್ಸ್ 1.523 ಇರುವ ಕ್ರೌನ್ ಗಾಜಿನದು. ಹಾಗೇ ಅವನ್ನು ಹಿಡಿದಿರುವ ಚೌಕಟ್ಟುಗಳು ಉಕ್ಕು, ಪ್ಲಾಸ್ಟಿಕ್, ಬೆಳ್ಳಿ ಅಥವಾ ಚಿನ್ನದವಾಗಿರಬಹುದು.

ಕನ್ನಡಕಗಳ ಮಸೂರಗಳ ಆಕಾರ ಗುಂಡು, ಅಂಡಾಕಾರ, ಅಂಡಾಕಾರದ್ದರ ಮೇಲಿನರ್ಧ ಕತ್ತರಿಸಿದ್ದು, ಉಬ್ಬುಗೋಳ–ಹೀಗೆ ಬಗೆ ಬಗೆಯಾಗಿರಬಹುದು ಅಲ್ಲದೆ ಕನ್ನಡಕದ ಮೇಲ್ಭಾಗವೂ ಕೆಳಗಿನದೂ ಬೇರೆ ಬೇರೆ ಮಸೂರಗಳಿಂದಾಗಿರಬಹುದು.



ಕಣ್ಣಿನ ದೃಷ್ಟಿಪರೀಕ್ಷೆ ಯಂತ್ರ

ಅಡ್ಡಕೊಯ್ಯದಲ್ಲಿ ಮಸೂರಗಳು ಒಂದೊಂದು ಕಡೆಯೂ ಉಬ್ಬೋ ತಗ್ಗೋ ಚಪ್ಪಟೆಯಾಗೋ ಇರಬಹುದು. ಕನ್ನಡಕಗಳ ಮಸೂರಗಳ ಬಾಗು ಕಣ್ಣುಗುಡ್ಡೆಯದಕ್ಕೆ



ಕಣ್ಣಿನ ಪರೀಕ್ಷೆಯ ವಿವಿಧ ಮಸೂರಗಳ ಪೆಟ್ಟಿಗೆ

ಸಮಾನಾಂತರವಾಗಿದ್ದರೇ ಚೆನ್ನು. ಹೊರಗಡೆ ಕಿವಿಗಳಿಗೋ ಮೂಗಿಗೋ ತಗಲಿಕೊಳ್ಳುವ ಕನ್ನಡಕಗಳ ಬದಲಾಗಿ, ಚೌಕಟ್ಟು ಇಲ್ಲದೆಯೇ ತೆಳುವಾದ ಮಸೂರ ಬಿಲ್ಲೆಗಳನ್ನು ಕಣ್ಣುರೆಪ್ಪೆಗಳೊಳಗೆ ನೇರವಾಗಿ ಕಣ್ಣುಗುಡ್ಡೆಯ ಮೇಲೆ ಇರಿಸುವ ಸಂಪರ್ಕ ಮಸೂರಗಳು (ಕಾಂಟಾಕ್ಟ್ ಲೆನ್ಸಸ್) ಇತ್ತೀಚೆಗೆ ಬರುತ್ತಿವೆ. ಈ ಮಸೂರಗಳನ್ನು ವಿಶೇಷ ರೀತಿಯ ಪ್ಲಾಸ್ಟಿಕ್ (ಪಿ.ಎಂ.ಎ.ಪಿ) ನಿಂದ ತಯಾರಿಸಲಾಗುತ್ತದೆ. ಕಣ್ಣೀರಿನಿಂದ ಕಣ್ಣು ಗುಡ್ಡೆಗೇ ಅಂಟಿರುವುದರಿಂದ ಕಣ್ಣುಗುಡ್ಡೆ ಎತ್ತತ್ತಿರುಗಿದರೆ ಅತ್ತ ತಿರುಗುವುದು ವಿಶೇಷ ಅನುಕೂಲ.



ನವೀನ ಮಾದರಿಯ ಕನ್ನಡಕಗಳು

ನೋಟಕ್ಕೆ ಯಾವ ಅಡ್ಡಿಯೂ ಇರದು. ಕಣ್ಣುಗುಡ್ಡೆಯ ಮುಂದುಗಡೆ ಇರುವ ಪಾರದರ್ಶಕ ಪಟಲ ಕಾರ್ನಿಯಾದ ಮೇಲೆಯೇ ಇರಿಸುವುದರಿಂದ ಅದರ ಅಸ್ತಿತ್ವವೇ ಬೇರೆಯವರಿಗೆ ಗೊತ್ತಾಗುವುದಿಲ್ಲ. ಸ್ಪರ್ಷಮಸೂರಗಳು ಉಪಯೋಗವಾಗುವ ಮುಖ್ಯ ಸಂದರ್ಭಗಳೆಂದರೆ– ಕಾರ್ನಿಯದ ಮೇಲೆ ಆದ ವಿವಿಧ ಗಾಯಗಳು (ಸುಟ್ಟ ಗಾಯಗಳು ಮತ್ತು ಬೇರೆ ಗಾಯಗಳು). ವಿವಿಧ ದೃಷ್ಟಿದೋಷಗಳು, ಒಂದು ಕಣ್ಣಿನಲ್ಲಿ ಮಾತ್ರ ಕಣ್ಣಿನಪೊರೆ ಶಸ್ತ್ರಕ್ರಿಯೆಯಾಗಿ ಮತ್ತೊಂದು ಕಣ್ಣು ಸಾಮಾನ್ಯ ದೃಷ್ಟಿ ಹೊಂದಿದ್ದಾಗ, ಕಾರ್ನಿಯಾದ ಕಾಯಿಲೆಗಳಾದ–ಕೆರಟೋ ಕೋನಸ್, ಕೆರಟೋಗ್ಲೋಬಸ್ ಕಾಯಿಲೆಗಳಲ್ಲಿ.



ಪ್ರಾಚೀನ ಮಾದರಿಯ ಕನ್ನಡಕಗಳು

ಕೋರೈಸುವ ಬೆಳಕು, ವಿಕಿರಣತೆ, ಕಿಡಿ, ಲೋಹ ಚೂರುಗಳು ಹಾರುವುದನ್ನು ತಡೆಯಲೂ ಕಾಪಿನ ಕನ್ನಡಕಗಳು ಬಳಕೆಯಲ್ಲಿವೆ. ಬೆಳಕಿನ ಹೊಳಪನ್ನು ಬಣ್ಣದ ಗಾಜುಗಳಿಂದ ತಗ್ಗಿಸಬಹುದು. ಬೇಡದ ವಿಕಿರಣಗಳನ್ನು ವಿಶೇಷ ಗಾಜುಗಳಿಂದ ತಡೆಯಬಹುದು. ಸಾಮಾನ್ಯವಾಗಿ ಇಂಥ ಕನ್ನಡಕಗಳಿಗೆ ಪಕ್ಕಗಳಲ್ಲೂ ತಡೆಗಳಿರುತ್ತವೆ. ಒಡೆದರೂ ಚೂರು ಚೂರುಗಳಾಗಿ ಹಾರಿಬೀಳದ ಎರಡು ಮೂರು ಗಾಜು ಪದರಗಳ ಕನ್ನಡಕಗಳು ಏಟು ಬಿದ್ದರೂ ಕಣ್ಣಿಗೆ ಚೂರುಗಳು ಹಾರದಂತೆ ತಡೆಯುತ್ತವೆ.

ವಿಶೇಷ ಉದ್ದೇಶಗಳಿಗಾಗಿ ಕೆಲವು ಬಗೆಗಳ ಕನ್ನಡಕಗಳಿವೆ. ನೋಟ ತೀರ ಕುಂದಿದವರಿಗಾಗಿ ದೂರದರ್ಶಕ ಮಸೂರಗಳಿರುವುವು. ಈಜುವಾಗ ನೀರಲ್ಲೂ ಕಾಣುವಂತೆ ಅನುಕೂಲಿಸುವವು. ಹಾಸಿಗೆ ಹಿಡಿದ ರೋಗಿ ಮಲಗಿಕೊಂಡೇ ಓದುವಂಥವು, ಗಡಿಯಾರ



ಮಹಿಳೆಯರ ಕನ್ನಡಕಗಳು

ರಿಪೇರಿ ಮುಂತಾದ ಕೆಲಸಗಳಲ್ಲಿ ಬಲು ಹತ್ತಿರದಲ್ಲಿ ಸಣ್ಣ ಸಾಮಾನುಗಳನ್ನು ಜೋಡಿಸಲು ಕಣ್ಣುಗಳಿಗೆ ಸಿಕ್ಕಿಸಿಕೊಳ್ಳುವವು. ಅರೆಗಣ್ಣೋಟದಲ್ಲಿ (ಹಮಿಯನೋಪಿಯ) ಚೆನ್ನಾಗಿ ಕಾಣುವ ಕಣ್ಣುಭಾಗಕ್ಕೆ ಮಾತ್ರ ಅಳವಡಿಸಿದ್ದು, ಜೋಲುಬಿದ್ದ ರೆಪ್ಪೆಗಳನ್ನು ಎತ್ತಿಹಿಡಿವ ಕನ್ನಡಕಗಳೂ ಇವೆ. (ಡಿ.ಸಿ.)

**ಕನ್ನಡ ಕೇಸರಿ :** ಧಾರವಾಡದಲ್ಲಿ ಬಿಂದೂರಾವ್ ಮುತಾಲಿಕ ದೇಸಾಯಿ ಎಂಬವರು 1902ರಲ್ಲಿ ಪ್ರಾರಂಭಿಸಿದ ಒಂದು ಪತ್ರಿಕೆ. ಇದು ಲೋಕ ಮಾನ್ಯ ತಿಲಕರ ಪ್ರಸಿದ್ಧ ಮರಾಠಿ ಪತ್ರಿಕೆ ಕೇಸರಿಯ ಕನ್ನಡ ಅವತರಣ. ಬಂಗಾಳ ವಿಭಜನೆಯಂಥ ಘಟನೆಗಳು ಮತ್ತು ಮಹಾರಾಷ್ಟ್ರದಲ್ಲಿ ತಿಲಕರು ಪಾರ್ರಂಭಿಸಿದ ರಾಷ್ಟ್ರೀಯ ಆಂದೋಳನಗಳ ಪ್ರಭಾವ ಉತ್ತರ ಕರ್ನಾಟಕದಲ್ಲಿ ಎಷ್ಟು ತೀವ್ರವಾಗಿತ್ತೆನ್ನುವುದಕ್ಕೆ ಕನ್ನಡ ಕೇಸರಿಯಂಥ ಪತ್ರಿಕೆಗಳ ಉಗಮ ಪ್ರಬಲ ನಿದರ್ಶನವಾಗಿದೆ.

ಪ್ರತಿವಾರವೂ ಮರಾಠಿ ಕೇಸರಿಯ ಲೇಖನಗಳನ್ನು ಕನ್ನಡದಲ್ಲಿ ಅನುವಾದಿಸಿ ಕನ್ನಡ ಕೇಸರಿಯಲ್ಲಿ ಪ್ರಕಟಿಸಲಾಗುತ್ತಿತ್ತು. ಪತ್ರಿಕೆಯ ಮುದ್ರಣದ ಕಾರ್ಯ ನಡೆಯುತ್ತಿದ್ದುದು ಹುಬ್ಬಳಿಯಲ್ಲಿ. ಸತ್ಯಾಗ್ರಹ ಯೋಧ ಹಾಗೂ ಸೇವಾದಳದ ಸಂಸ್ಥಾಪಕರಾದ ನಾ. ಸು. ಹರ್ಡೀಕರ್ ಅವರು ಈ ಕಾರ್ಯದಲ್ಲಿ ನೆರವಾಗಲು ಮುಂದಾದರು. ಮುದ್ರಣದ ಮೇಲ್ವಿಚಾರಣೆಯ ಜೊತೆಗೆ ಅವರು ಮರಾಠಿಯ ಮೂಲ ಲೇಖನಗಳ ಕನ್ನಡ ಅನುವಾದ ಕಾರ್ಯವನ್ನೂ ನೆರವೇರಿಸುತ್ತಿದ್ದರು. ಲೇಖನಗಳ ಜೊತೆಗೆ ಹಲವಾರು ಸಾಂದರ್ಭಿಕ ಚಿತ್ರಗಳನ್ನೂ ಪ್ರಕಟಿಸಲಾಗಿತ್ತು. ಇಂದು ಸಂದರ್ಭದಲ್ಲಿ ಹರ್ಡೀಕರರು ಬರೆದ ಟಿಪ್ಪಣಿಯ ಭಾಷೆ ಎಷ್ಟು ತೀಕ್ಷ್ಣವಾಗಿತ್ತೆಂದರೆ ಸಂಪಾದಕರಾದ ಬಿಂದೂರಾಯರು ಕೊನೆಗಳಿಗೆಯಲ್ಲಿ ಅದನ್ನು ಗಮನಿಸಿ ಅಂಚೆಗೆ ಹೋದ ಪತ್ರಿಕೆಯನ್ನು ಮರಳಿ ತರಿಸಿಕೊಂಡು ಹರ್ಡೀಕರರ ಮಾತಿನ ಬಿಸಿಯನ್ನು ತಗ್ಗಿಸಿ ಬೇರೆ ಬೇರೆ ಟಿಪ್ಪಣಿ ಬರೆದರು. ಇಲ್ಲವಾದರೆ ಪತ್ರಿಕೆಗೆ ದುರ್ಭರವಾದ ಪ್ರಸಂಗವೊದಗುತ್ತಿತ್ತು. ಲೋಕಮಾನ್ಯ ತಿಲಕರ ವಿಚಾರಗಳನ್ನೂ ರಾಷ್ಟ್ರೀಯ ಹೋರಾಟದ ಸ್ವರೂಪವನ್ನೂ ಜನತೆಗೆ ತಿಳಿಸುವಲ್ಲಿ ಯಶಸ್ವಿಯಾದ ಈ ಪತ್ರಿಕೆ ಆಕಾಲದಲ್ಲಿ ತುಂಬ ಜನಪ್ರಿಯವಾಗಿತ್ತು. (ಎಸ್.ವಿ.ಪಿ.ಎ.)

**ಕನ್ನಡ ಕೋಗಿಲೆ :** ಮುಳಿಯ ತಿಮ್ಮಪ್ಪಯ್ಯನವರ ಸಂಪಾದಕತ್ವದಲ್ಲಿ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. 1916ರ ಏಪ್ರಿಲ್‌ನಲ್ಲಿ ಪ್ರಾರಂಭವಾಗಿ, ನಾಲ್ಕೂವರೆ ವರ್ಷ ನಡೆಯಿತು. ಮಂಗಳೂರಿನ ಶಾರದಾ ಮುದ್ರಣಾಲಯದಲ್ಲಿ ಮುದ್ರಿತವಾಗುತ್ತಿದ್ದ ಈ ಪತ್ರಿಕೆ ಧರ್ಮ, ಅರ್ಥ, ಸಮಾಜ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದ ಪ್ರೌಢ ಲೇಖನ ಗಳನ್ನು ಪ್ರಕಟಿಸುತ್ತಿತ್ತು. ಪ್ರಸಿದ್ಧ ಕವಿಗಳ ಕವನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಖ್ಯಾತ ಲೇಖಕರಾಗಿದ್ದ ಪಿ.ಭೋಜರಾವ್ ಸಂಪಾದಕ ವರ್ಗದಲ್ಲಿದ್ದರು. ಉಗ್ರಾಣ ಮಂಗೇಶರಾವ್, ಮುಳಿಯ ಶಂಕರಭಟ್ಟ ಮೊದಲಾದವರು ಲೇಖಕ ವರ್ಗದಲ್ಲಿದ್ದರು. ಕನ್ನಡ ಕೋಗಿಲೆ ಸದ್ವಿಷಯದ ಪತ್ರಿಕೆಯೆಂದು ಹೆಸರು ಪಡೆದಿತ್ತು. (ಎಸ್.ವಿ.ಪಿ.)

**ಕನ್ನಡ ಚಂಪೂಸಾಹಿತ್ಯ :** ಸಂಸ್ಕೃತ ಕನ್ನಡಗಳಲ್ಲಿಯೂ ಇತರ ಕೆಲವು ಭಾರತೀಯ ಭಾಷೆಗಳಲ್ಲಿಯೂ ಚಂಪೂ (ಚಂಪು) ಎಂಬುದು ಪ್ರಾಚೀನವೂ ಪ್ರಸಿದ್ಧವೂ ಆದ ಒಂದು ಸಾಹಿತ್ಯಪ್ರಕಾರ. ಸಾವಿರ ವರ್ಷಗಳಿಗೆ ಮೇಲ್ಪಟ್ಟ ಇತಿಹಾಸ ಇದಕ್ಕಿದೆ. ಆಯಾ ಭಾಷೆಯಲ್ಲಿ ಬಹುಕಾಲ ನಿಲ್ಲುವ ಉತ್ಕೃಷ್ಟವಾದ ಸಾಹಿತ್ಯ ಈ ಪ್ರಕಾರದಲ್ಲಿ ನಿರ್ಮಿತವಾಗಿದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಮೊದಮೊದಲಿನ ಶ್ರೇಷ್ಠಕವಿಗಳು ಈ ಪ್ರಕಾರವನ್ನು ಯಶಸ್ವಿಯಾಗಿ ಬಳಸಿಕೊಂಡು ಉತ್ತಮ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದು, ಮುಂದೆ ಅದು ವಿಶೇಷವಾಗಿ ಪ್ರಬಲಿಸಿ ಕನ್ನಡ ಸಾಹಿತ್ಯದಲ್ಲಿ ಗಣ್ಯವೂ ಸುಸ್ಥಿರವೂ ಆದ ನೆಲೆಯನ್ನು ಗಳಿಸಿ ಕೊಳ್ಳುವಂತಾಯಿತು.

ಚಂಪೂವಿನ ಲಕ್ಷಣವನ್ನು ದಂಡಿಯ (ಸು.650) ಕಾವ್ಯಾದರ್ಶವೆಂಬ ಸಂಸ್ಕೃತ ಭಾಷೆಯ ಲಕ್ಷಣಗ್ರಂಥದಲ್ಲಿ ಮೊದಲು ನಿರೂಪಿಸಿದೆ. ಅನಂತರದಲ್ಲಿ ಹೇಮಚಂದ್ರ (1088–1172), ವಿಶ್ವನಾಥ (14ನೆಯ ಶ.), ವಿದ್ಯಾನಾಥ (14ನೆಯ ಶ.) ಮುಂತಾದವರು ತಮ್ಮ ಅಲಂಕಾರ ಗ್ರಂಥಗಳಲ್ಲಿ ಹೇಳಿದ್ದಾರೆ. ಹಾಗೆಯೇ ಕನ್ನಡದಲ್ಲಿಯೂ ನಾಗವರ್ಮ II, ಉದಯಾದಿತ್ಯ ಇವರ ಅಲಂಕಾರಗ್ರಂಥಗಳಲ್ಲಿ ಆ ವಿಷಯದ ಉಲ್ಲೇಖವಿದೆ. ದಂಡಿ ಚಂಪೂವಿನ ಲಕ್ಷಣವನ್ನು ಗದ್ಯಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ ಎಂದು ಹೇಳಿದ್ದಾನೆ. ಚಂಪೂ ಪ್ರಧಾನವಾಗಿ ಗದ್ಯಪದ್ಯಮಯಿಯಾದದ್ದು ಎಂಬುದು ಇಲ್ಲಿ ಸ್ಫುರಿಸಿರುವ ಅದರ ಲಕ್ಷಣ, ಹೆಚ್ಚಿನ ವಿವರಗಳಾಗಲಿ ವ್ಯತ್ಯಾಸವಾಗಲಿ ಇಲ್ಲದೆ ಇದೇ ಲಕ್ಷಣವನ್ನು ಈಚಿನವರು ಅನುವಾದ ಮಾಡಿದ್ದಾರೆ.

ಚಂಪೂ ಎಂಬ ಪದದ ಮೂಲ ಅನಿರ್ದಿಷ್ಟವಾದುದು. ಅದರ ನಿಷ್ಪತ್ತಿಯನ್ನು ಬೇರೆ ಬೇರೆ ರೀತಿಯಲ್ಲಿ ವಿದ್ವಾಂಸರು ವಿವರಿಸಿದ್ದಾರೆ. ಈ ಸಾಹಿತ್ಯ ಪ್ರಕಾರ ಸಂಸ್ಕೃತ ಮೂಲವಾದುದು ಎಂದು ಗ್ರಹಿಸುವವರು ಒಂದು ರೀತಿಯಾಗಿಯೂ ಕನ್ನಡ ಮೂಲವಾದುದು ಎಂದು ಗ್ರಹಿಸುವವರು ಇನ್ನೊಂದು ರೀತಿಯಾಗಿಯೂ ಹೇಳುವುದು ಕಾಣುತ್ತದೆ. ಈ ಬಗೆಗೆ ವಿಚಾರಮಾಡುವುದು ಪ್ರಕೃತ ಲೇಖನದ ಉದ್ದೇಶವಲ್ಲ. ಚಂಪೂ ಮಾತೂ ರೀತಿಯೂ ಕನ್ನಡದ್ದೇ ಎಂದು ಹೇಳುವವರ ವಾದವನ್ನು ಮಾತ್ರ ಸಂಗ್ರಹವಾಗಿ ತಿಳಿಸಿ ಕನ್ನಡ ಚಂಪೂಸಾಹಿತ್ಯದ ಪರಿಚಯವನ್ನು ಇಲ್ಲಿ ನಿವೇದಿಸಲಾಗುತ್ತದೆ. ಚಂಪೂವಿನ ಎಲ್ಲ ವಿವರಗಳಿಗೆ (ನೋಡಿ– ಚಂಪೂ).

ಚಂಪೂವಿಗೆ ಕನ್ನಡ ಮೂಲವನ್ನು ಹೇಳುವವರ ಅಭಿಪ್ರಾಯ ಹೀಗೆ : ಪ್ರಾಚೀನವಾದ ಸಂಸ್ಕೃತ ವಾಙ್ಮಯದಲ್ಲಿ ಚಂಪೂ ಸಾಹಿತ್ಯಪ್ರಕಾರ ಅಷ್ಟೇನೂ ಪ್ರಾಚೀನವಾದುದಲ್ಲ. ಈಚೆಗೆ ಕಾಣಿಸಿಕೊಂಡದ್ದು, ಆ ಭಾಷೆಯಲ್ಲಿ ಆ ರೀತಿಯ ಸಾಹಿತ್ಯ ಕಣ್ಣಿಗೆ ಬೀಳುವುದು ಪ್ರ.ಶ.10ನೆಯ ಶತಮಾನದಿಂದ. ತ್ರಿವಿಕ್ರಮಭಟ್ಟನ (ಪ್ರ.ಶ. ಸು.915) ದಮಯಂತೀ ಕಥೆ ಅಥವಾ ನಳಚಂಪೂ ಮತ್ತು ಸೋಮದೇವನ ಯಶಸ್ತಿಲಕ ಚಂಪೂ (ಪ್ರ.ಶ.959)–ಇವು ಈಗ ತಿಳಿದಮಟ್ಟಿಗೆ ಆ ಭಾಷೆಯಲ್ಲಿಯ ಆದ್ಯ ಚಂಪೂ ಕೃತಿಗಳು. ಇವು ರಚನೆಯಾದದ್ದು ಕರ್ನಾಟಕದಲ್ಲಿ ಹಾಗೂ ಕನ್ನಡ ರಾಜರ ಆಶ್ರಯ ಪಡೆದ ಕವಿಗಳಿಂದ. ಇವರು ಆ ವೇಳೆಗಾಗಲೇ ಕನ್ನಡ ನಾಡಿನ ಕನ್ನಡ ಜೈನಕವಿಗಳು ಕಲ್ಪಿಸಿ ರೂಢಿಸಿದ್ದ ಚಂಪೂ ಮಾರ್ಗವನ್ನು ಅನುಸರಿಸಿದರೆಂದು ತೋರುತ್ತದೆ. ಕನ್ನಡದಲ್ಲಿ ಚಂಪೂಗ್ರಂಥಗಳು 8–9ನೆಯ ಶತಮಾನಗಳಲ್ಲಿಯೇ ಕಾಣಿಸಿಕೊಂಡಿದ್ದವೆಂದು ತಿಳಿಯುವುದಕ್ಕೆ ಆಧಾರಗಳಿವೆ. ಆದರೆ ಪ್ರ.ಶ.ಸು. 7ನೆಯ ಶತಮಾನದ ದಂಡಿ ಚಂಪೂವಿನ ಲಕ್ಷಣವನ್ನು ಹೇಳಿದ್ದಾನಲ್ಲದೆ, ಆತನ ಕಾಲದಲ್ಲಿಯೂ ಅದಕ್ಕೆ ಮೊದಲಲ್ಲಿಯೂ ಸಂಸ್ಕೃತ ಚಂಪೂಗ್ರಂಥಗಳು ಇಲ್ಲದೆ ಹೀಗೆ ಹೇಳಿರುವುದು ಸಾಧ್ಯವೇ–ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ದಂಡಿಗೆ ಪರಿಚಿತವಾಗಿದ್ದ ಚಂಪೂಸಾಹಿತ್ಯ ಪೂರ್ತಿಯಾಗಿ ನಷ್ಟವಾಗಿದೆ ಎಂಬುದು ತೃಪ್ತಿಕರವಾದ ಉತ್ತರವಲ್ಲ. ಆತ ದಾಕ್ಷಿಣಾತ್ಯನಾದುದರಿಂದ, ಆ ಕಾಲಕ್ಕೆ ದಕ್ಷಿಣದಲ್ಲಿ ಪ್ರಚಲಿತವಾಗಿದ್ದ

ಕನ್ನಡ, ತಮಿಳು ಭಾಷೆಗಳಲ್ಲಿಯ ಚಂಪೂಕೃತಿಗಳನ್ನು ನೋಡಿದ್ದಿರಬಹುದು. ಒಂದು ಪಕ್ಷ ಚಂಪೂ ಮೂಲತಃ ಸಂಸ್ಕೃತದ್ದೆಂದು ತೀಳಿದರೂ ಅದು ಕನ್ನಡ ಸಾಹಿತ್ಯದಲ್ಲಿ ಪಡೆದ ರೂಪ ಸಂಸ್ಕೃತದ ಅನುಕರಣೆಯ ಫಲವಲ್ಲ, ಅದಕ್ಕೆ ಅದರದೇ ಆದ ಒಂದು ವೈಶಿಷ್ಟ್ಯವಿದೆ. –ಇದಿಷ್ಟೂ ಒಟ್ಟಿನಲ್ಲಿ ಒಬ್ಬ ವಿದ್ವಾಂಸರ ವಿಚಾರಸರಣಿ.

ಇನ್ನೊಬ್ಬ ವಿದ್ವಾಂಸರು ಹೀಗೆಯೇ, ಸಂಸ್ಕೃತ ಸಾಹಿತ್ಯದಲ್ಲಿ ಚಂಪೂಸಾಹಿತ್ಯದ ಅರ್ವಾಚೀನತೆ, ಸಂಸ್ಕೃತದ ಪ್ರಾಚೀನ ಲಾಕ್ಷಣಿಕರಲ್ಲಿ ದಾಕ್ಷಿಣಾತ್ಯನಾದ ದಂಡಿಯೊಬ್ಬನೇ ಅದನ್ನು ಹೆಸರಿಸಿರತಕ್ಕವನು ಎಂಬ ಸಾಕ್ಷ್ಯ, ಚಂಪೂ ಶಬ್ದಕ್ಕೆ ಸಂಸ್ಕೃತದಲ್ಲಿ ಸ್ವರಸವಾದ ರೂಪನಿಷ್ಪತ್ತಿಯನ್ನು ಹೇಳುವುದರ ಅಶಕ್ಯತೆ, ತಮಿಳು ಭಾಷೆಯ ಪ್ರಾಚೀನ ಕಾವ್ಯವಾದ ಶಿಲಪ್ಪದಿಕಾರದ ಅನೇಕ ಸರ್ಗಗಳು ಗದ್ಯಪದ್ಯಾತ್ಮಕಗಳಾಗಿರುವುದು–ಇವನ್ನು ಗಮನಿಸಿ ಚಂಪೂಕಾವ್ಯರೂಪ ಭಾರತೀಯ ಸಾಹಿತ್ಯಕ್ಕೆ ದಕ್ಷಿಣ ಭಾರತದ ಕೊಡುಗೆಯಾಗಿರಬೇಕೆಂದು ಭಾವಿಸಬಹುದು–ಎಂದಿದ್ದಾರೆ. ಅಲ್ಲದೆ ಕನ್ನಡದ ಮಟ್ಟಿಗೆ ಹೇಳುವುದಾದರೆ, ಹಿಂದಿನಿಂದ ಪ್ರಚುರವಾಗಿದ್ದ ಚತ್ತಾಣದಲ್ಲಿ ಗದ್ಯಖಂಡಗಳು (ವಚನಗಳು) ನಡುನಡುವೆ ಸೇರಿ ಚಂಪೂ ತಲೆಯೆತ್ತಿರಬಹುದು–ಎಂಬುದಾಗಿ ಕನ್ನಡದಲ್ಲಿ ಚಂಪುವಿನ ಉಗಮವನ್ನು ಗುರುತಿಸಲು ಯತ್ನಿಸಿದ್ದಾರೆ, (ಚೆತ್ತಾಣ ಎಂಬುದರ ಸ್ವರೂಪವನ್ನು ಅವರು ಹೀಗೆ ಹೇಳಿದ್ದಾರೆ : ಕವಿರಾಜ ಮಾರ್ಗದಲ್ಲಿ ಉಕ್ತವಾದ, ಅದಕ್ಕೆ ಹಿಂದಿನ ಕಾಲದಿಂದಲೂ ಕನ್ನಡದಲ್ಲಿ ಪ್ರಚಲಿತವಾಗಿದ್ದ ಕಾವ್ಯರೂಪ. ಇದು ಬಾಜನೆ ಗಬ್ಬ, ವಾಚಿಸತಕ್ಕದ್ದು, ಇದರಲ್ಲಿ ಕಂದ, ಹಲವು ಬಗೆಯ ಸಂಸ್ಕೃತ ವೃತ್ತಗಳು, ದೇಶೀಯ ಪದ್ಯಜಾತಿಗಳು–ಇವೆಲ್ಲ ಬರುತ್ತವೆ ; ಪದ್ದಳಿಯೂ ಬರಬಹುದು, ಇದು ಅಖಿಲ ವರ್ಣನೆಗಳಿಂದ ಕೂಡಿದ ಕಾವ್ಯ; ಆದ ಕಾರಣವೇ ಬಹುಶಃ ದೀರ್ಘವಾಗಿರುತ್ತದೆ.)

ಅಂತೂ ಚಂಪೂವಿನ ಉಗಮದ ವಿಷಯದಲ್ಲಿ ಭಿನ್ನಮತವಿರುವುದೂ ಅನಿರ್ದಿಷ್ಟತೆಯಿರುವುದೂ ಇದರಿಂದ ಸ್ಪಷ್ಟವಾಗಿ ತೋರುತ್ತದೆ. ಸಂಶೋಧನೆಯಿಂದ ಹೊಸ ಸಂಗತಿಗಳು ಬೆಳಕಿಗೆ ಬಂದ ಹೊರತು ಈ ವಿಷಯದಲ್ಲಿ ಯಾವ ನಿರ್ಣಯಕ್ಕೂ ಬರುವುದು ಸಾಧ್ಯವಿಲ್ಲ.

ಕನ್ನಡದಲ್ಲಿ ಚಂಪೂಸಾಹಿತ್ಯವನ್ನು ಗಮನಿಸುವ ಮೊದಲು ಕನ್ನಡ ಚಂಪೂವಿನ ಸಾಮಾನ್ಯ ಚೌಕಟ್ಟನ್ನು ಸ್ವಲ್ಪ ಗಮನಿಸಬೇಕು. ಕನ್ನಡ ಚಂಪೂವನ್ನು ರೂಢಿಯಲ್ಲಿ ವಸ್ತುಕ, ಓದುಗಬ್ಬ, ಮಾರ್ಗ ಕವಿತ್ವ ಎಂದು ಹೇಳುವುದುಂಟು. ಅದರಲ್ಲಿ ಪ್ರತಿಪಾದಿತವಾಗುವ ವಸ್ತು ಲೌಕಿಕ, ಧಾರ್ಮಿಕ ಅಥವಾ ಐತಿಹಾಸಿಕವಾಗಿರುತ್ತದೆ. ರಾಮಾಯಣ ಭಾರತಗಳು, ವೈದಿಕ ಜೈನಪುರಾಣಗಳು, ಕಲ್ಪಿತ ಕಥಾವಸ್ತುವುಳ್ಳ ಕಾವ್ಯಗಳು, ಐತಿಹಾಸಿಕ ವೃತ್ತಾಂತಗಳು–ಇವು ವಸ್ತುವಿಗೆ ಪ್ರಮುಖವಾದ ಆಕರಗಳು. ಪ್ರಾಚೀನ ಸಂಸ್ಕೃತ ಕಾವ್ಯಪರಂಪರೆಯಲ್ಲಿ ಕಾಣುವಂತೆ, ಉದಾತ್ತ ನಾಯಕನ ಮಹಿಮಾತಿಶಯ ನಿರೂಪಣೆ, ನಾಯಕ ಪ್ರತಿನಾಯಕ ಸಂಘರ್ಷ, ಇಷ್ಟದೈವ, ದೈವಭಕ್ತ, ಧಾರ್ಮಿಕ ಕ್ಷೇತ್ರಾದಿಗಳ ಉತ್ಕರ್ಷ ಸಾಧನೆ ಮತ್ತು ಮಹಿಮೆ ಮುಂತಾದವುಗಳ ಕಥನ, ಮತಪ್ರಸಾರ, ತತ್ತ್ವಪ್ರಸಾರ, ಮನೋರಂಜನೆ–ಇವು ಇಲ್ಲಿಯೂ ಕಾಣುತ್ತವೆ. ಸಂಸ್ಕೃತ ಸಾಹಿತ್ಯದ ಪ್ರೌಢಕವಿಗಳ ರೀತಿಯಲ್ಲಿ ಇರುವಂತೆಯೇ ವಿವಿಧ ಸಾಂಪ್ರದಾಯಿಕ ವರ್ಣನೆಗಳ ಪ್ರಾಚುರ್ಯ, ಅಲಂಕಾರಪ್ರಿಯತೆ, ವಿಭಿನ್ನ ರಸದೃಷ್ಟಿ–ಇವು ಎದ್ದುಕಾಣುವಂತಿರುತ್ತವೆ. ಸಾಮಾನ್ಯವಾಗಿ ಕಥೆಗಿಂತಲೂ ಕವಿ ಸಮಯಕ್ಕೆ ಹೆಚ್ಚು ಅವಕಾಶ ದೊರೆತಿರುತ್ತದೆ. ದೇಸೀಯವಾದ ಮಾತುಗಾರಿಕೆ, ಮತ್ತು ಸಂಸ್ಕೃತಭೂಯಿಷ್ಠವಾದ ಆಲಂಕಾರಿಕ ಪದರಚನೆ–ಇವುಗಳಲ್ಲಿ ಒಮ್ಮೆ ಅದು ಒಮ್ಮೆ ಇದು ಮೇಲುಗೈಯಾಗಿರುತ್ತದೆ. ವಿಶೇಷವಾಗಿ ಎರಡನೆಯದರ ಪ್ರಾಬಲ್ಯವೇ ಹೆಚ್ಚು, ಒಮ್ಮೊಮ್ಮೆ ಆಯೆರಡರ ಹಿತಮಿತವಾದ ಮಿಶ್ರಣವಿರುತ್ತದೆ.

ಕನ್ನಡ ಚಂಪೂವಿನಲ್ಲಿ, ಲಕ್ಷಣಾನುಸಾರವಾಗಿ, ಗದ್ಯಪದ್ಯಗಳ ಸಮಪ್ರಾಚುರ್ಯ ಸಾಮಾನ್ಯವಾಗಿರುತ್ತದೆ. ಆದರೆ ಪದ್ಯ ಗದ್ಯಕ್ಕಿಂತ ಹೆಚ್ಚಾಗಿ ಬರುವುದೇ ಸಾಮಾನ್ಯ ಗದ್ಯಪದ್ಯಗಳು. ಇಷ್ಟೇ ಪ್ರಮಾಣದಲ್ಲಿ ಇಂಥದೇ ವಿಷಯಕ್ಕಾಗಿ, ಹೀಗೆಯೇ ಯೋಜನೆಗೊಂಡಿರಬೇಕೆಂಬ ನಿಶ್ಚಿತವಾದ ನಿಯಮವೇನಿಲ್ಲ. ಆದರೆ ವರ್ಣನೆಗಳು, ಇತಿ ವೃತ್ತಾತ್ಮಕ ವಿವರಣೆಗಳು ಸಂಬಂಧ ಸೂಚನೆಗಳು ಗದ್ಯದಲ್ಲಿರುವುದುಂಟು. ಕೃತಿ ಸಾಮಾನ್ಯವಾಗಿ ಆಶ್ವಾಸಗಳಾಗಿ ವಿಭಾಗವಾಗಿರುತ್ತದೆ; ಆಶ್ವಾಸ ಸಂಖ್ಯೆ 14 ಅಥವಾ 16 ಇರಬಹುದು; ಮುಂದೆ ಮುಂದೆ ಈ ಸಂಖ್ಯೆಯಲ್ಲಿ ಹೆಚ್ಚುಕಡಿಮೆಗಳಾಗಿವೆ. ಅವುಗಳ ಆದ್ಯಂತಗಳಲ್ಲಿ ಒಂದು ಗೊತ್ತಾದ ರೀತಿಯ ಪದ್ಯಬಂಧ ಮತ್ತು ಗದ್ಯಬಂಧಗಳಿರುತ್ತವೆ. ಕೃತಿಯ ಉಪಕ್ರಮದಲ್ಲಿ ಇಷ್ಟದೇವತಾಸ್ತುತಿ, ಕೃತಿ ಕರ್ತೃವಿನ, ಪೋಷಕನ ವಿಚಾರ–ಇತ್ಯಾದಿ ಸಾಂಪ್ರದಾಯಿಕ ಸರಣಿಯ ವಿವರಗಳೂ ಉಪಸಂಹಾರದಲ್ಲಿ ಫಲಶ್ರುತಿಯೂ ಬರುತ್ತವೆ. ಛಂದಸ್ಸಿನ ದೃಷ್ಟಿಯಿಂದ, ಕಂದಪದ್ಯಗಳೂ ಅವಕ್ಕೆ ಸ್ವಲ್ಪ ಕಡಿಮೆಯಾಗಿ ಖ್ಯಾತ ಕರ್ಣಾಟಕಗಳೆಂದು ರೂಢಿಯಾಗಿರುವ ಆರು ವರ್ಣವೃತ್ತಗಳೂ ಹೆಚ್ಚು ಸಂಖ್ಯೆಯಲ್ಲಿರುತ್ತವೆ. ಇವಲ್ಲದೆ ವಿರಳವಾಗಿ ತರಳ, ಮಲ್ಲಿಕಾಮಾಲೆ ಮುಂತಾದ ಇನ್ನೂ ಕೆಲವು ವರ್ಣವೃತ್ತಗಳೂ ಪ್ರಾಕೃತ ಪ್ರಭಾವದ ರಗಳೆಯ ಪ್ರಭೇದಗಳೂ ದೇಶೀಯಗಳಾದ ಅಕ್ಕರ ತ್ರಿಪದಿ ಮುಂತಾದವೂ ಕೃತಿಯ ಮೈಯಲ್ಲಿ ಅಲ್ಲಲ್ಲಿ ಸೇರಿಕೊಂಡಿರುತ್ತವೆ. ಒಟ್ಟಿನಲ್ಲಿ ಕಂದವೃತ್ತಗಳು ವಿರಳವಾಗಿ ಇತರ ಪದ್ಯಜಾತಿಗಳೂ ನಡುನಡುವೆ ಗದ್ಯವೂ ಹಾಸುಹೊಕ್ಕಾಗಿ ಸೇರಿಕೊಂಡು ಕೃತಿಯ ರೂಪದಲ್ಲಿ ನಾದಗಳಲ್ಲಿ ವೈವಿಧ್ಯ ಸಾಧಿತವಾಗಿರುತ್ತದೆ. ಕೃತಿವಸ್ತು ಇವುಗಳಲ್ಲಿ ಅನುಸ್ಯೂತವಾಗಿ ಹರಿದುಕೊಂಡು ಹೋಗುತ್ತದೆ. ಒಮ್ಮೊಮ್ಮೆ ಒಂದೇ ಪದ್ಯದಲ್ಲಿ ಅಥವಾ ಗದ್ಯಭಾಗದಲ್ಲಿ ಮುಗಿಯದ ಒಂದು ಸಂಗತಿಯೋ ಭಾವವೋ ಮುಂದಿನ ಪದ್ಯಕ್ಕೋ ಗದ್ಯಕ್ಕೋ ಮುಂದುವರಿಯುವುದುಂಟು. ಕೃತಿಯ ಛಂದಸ್ಸಿನ ವೈವಿಧ್ಯ ಒಂದೇ ಬಗೆಯ ಛಂದಸ್ಸಿನ ಬಳಕೆಯಿಂದುಂಟಾಗುವ ಗತಾನುಗತಿಕತೆಯನ್ನೂ ನಿಷ್ಠುರ ನಿಯಮ ಬದ್ಧತೆಯನ್ನೂ ನಿವಾರಿಸುವುದಲ್ಲದೆ, ಕವಿಗೆ ಹೆಚ್ಚಿನ ರಚನಾಸ್ವಾತಂತ್ರ್ಯವೂ ಸೌಲಭ್ಯವೂ ಇದರಿಂದ ದೊರೆಯುವಂತಾಗಿದೆ. ರಚನೆಯ ಸೌಕರ್ಯಕ್ಕೆ ಹಾಗೂ ರಸಭಾವಗಳ ವೈವಿಧ್ಯಕ್ಕೆ ತಕ್ಕಂತೆ ಹೀಗೆ ವಿವಿಧ ಪದ್ಯಜಾತಿಗಳನ್ನೂ ಗದ್ಯವನ್ನೂ ಬಳಸುವುದು ಕಾವ್ಯಪುಷ್ಟಿಗೆ ಅನುಕೂಲವೇ ಆಗಿದೆ.

ಕನ್ನಡದಲ್ಲಿ ಚಂಪೂ ಸಾಹಿತ್ಯಪದ್ಧತಿಗೆ ಮೊದಲು, ಚತ್ತಾಣ ಮತ್ತು ಬೆದಂಡೆ ಎಂಬ ಪ್ರಕಾರದ ಕಾವ್ಯಗಳು ಪ್ರಸಿದ್ಧವಾಗಿದ್ದವೆಂದು ಕವಿರಾಜಮಾರ್ಗದ ಉಲ್ಲೇಖದಿಂದ ತಿಳಿಯುತ್ತದೆ. ಆ ಗ್ರಂಥದಲ್ಲಿ ಉಕ್ತರಾದ ಪದ್ಯಕವಿಗಳು ಕೆಲವರಾದರೂ ಅಂಥ ಕಾವ್ಯಗಳನ್ನು ರಚಿಸಿರಬೇಕೆಂದು ತಿಳಿಯುವುದಕ್ಕೆ ಅಲ್ಲಿಯೇ ಅವಕಾಶವಿದೆ. ಆ ಕಾವ್ಯ ಪ್ರಕಾರಗಳ ಸ್ವರೂಪವನ್ನು ಅಲ್ಲಿ ವಿವರಿಸಿದೆ. ಆ ಲಕ್ಷಣಗ್ರಂಥ ಮುಖ್ಯವಾಗಿ ದಂಡಿಯ ಕಾವ್ಯಾದರ್ಶವನ್ನು ಅನುಸರಿಸಿಯೂ ಚಂಪೂವಿನ ಹೆಸರನ್ನೆತ್ತದಿರುವುದುನ್ನು ಗಮನಿಸಿದರೆ, ಆತನಿಗೆ ಪೂರ್ವದಲ್ಲಿಯೂ ಆತನ ಕಾಲದಲ್ಲಿಯೂ ಈ ಚತ್ತಾಣ, ಬೆದಂಡೆಗಳ ರೂಪದಲ್ಲಿ ಕೃತಿರಚನೆ ನಡೆಯುತ್ತಿದ್ದಿರಬೇಕೆಂಬ ಭಾವನೆಯುಂಟಾಗುತ್ತದೆ. ಕವಿರಾಜಮಾರ್ಗದ ಕಾಲದಿಂದೀಚೆಗೆ ಚತ್ತಾಣದಲ್ಲಿ ನಡುನಡುವೆ ಗದ್ಯಭಾಗಗಳು ಕೂಡಿ ಚಂಪೂ ರೀತಿ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿರಬಹುದು.

ಕನ್ನಡ ಚಂಪೂಸಾಹಿತ್ಯಕ್ಕೆ ಉಜ್ಜ್ವಲವೂ ಸುದೀರ್ಘವೂ ಆದ ಇತಿಹಾಸವಿದೆ. ಉಳಿದ ಕಾವ್ಯಪದ್ಧತಿಗಳಿಗಿಂತ ಅದು ಕವಿಜನರಿಗೆ ಹೆಚ್ಚು ಆದರಣೀಯವೂ ವಿದ್ವನ್ಮಾನ್ಯವೂ ಆಗಿದ್ದುದು ಅದರಿಂದ ತಿಳಿಯುತ್ತದೆ. ಚಂಪೂಸಾಹಿತ್ಯ ಕನ್ನಡದಲ್ಲಿ ಎಂದಿನಿಂದ ರಚನೆಯಾಗುತ್ತ ಬಂದಿದೆ, ಆರಂಭಕಾಲದ ಚಂಪೂಕೃತಿಗಳು ಯಾವುವು ಎಂಬ ವಿಷಯಗಳು ನಮಗೆ ತಿಳಿದಿಲ್ಲ. ದೊರೆತವುಗಳಲ್ಲಿ ಪಂಪಕವಿಯ (ಪ್ರ.ಶ. 941) ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯಗಳೇ ಅತ್ಯಂತ ಪ್ರಾಚೀನವಾದವು. ಅವುಗಳ ಚೌಕಟ್ಟನ್ನು ಪರಿಶೀಲಿಸಿದರೆ ಅವು ಆ ಪದ್ಧತಿಯ ಪರಿಣತ ರಚನೆಗಳೇ ಆಗಿರುವಂತೆ ತೋರುತ್ತವೆ. ಶ್ರೇಷ್ಠ ಕವಿಯಾದ ಪಂಪ ಚಂಪೂ ರೀತಿಯನ್ನು ಕೌಶಲದಿಂದಲೂ ಸಾಮರ್ಥ್ಯದಿಂದಲೂ ನಿರ್ವಹಿಸಿದ್ದಾನೆ. ಆ ಪದ್ಧತಿ ಆತನಿಗೆ ಸ್ವಲ್ಪ ಹಿಂದಿನಿಂದಲೂ ಬೆಳೆದುಕೊಂಡು ಬಂದಿದ್ದು ಆ ಸಿದ್ಧರೂಪಕ್ಕೆ ಬಂದಿರುವುದು ಸಾಧ್ಯ. ಪಂಪ ಪೂರ್ವಕಾಲದ ಕವಿ ಒಂದನೆಯ ಗುಣವರ್ಮ (ಪ್ರ.ಶ. ಸು. 900) ಬರೆದಿದ್ದಂತೆ ತಿಳಿದಿರುವ ಎರಡು ಕೃತಿಗಳಲ್ಲಿ ಶೂದ್ರಕ ಎಂಬುದು ಒಂದು ಚಂಪೂ ಕಾವ್ಯವಾಗಿರಬೇಕು; ಆ ಕಾವ್ಯದ ಕೆಲವು ಪದ್ಯಗಳ ಜೊತೆಗೆ ಒಂದು ಗದ್ಯಭಾಗವೂ ಅಭಿನವವಾದಿ ವಿದ್ಯಾನಂದನ ಕಾವ್ಯಸಾರದಲ್ಲಿ ದೊರೆಯುತ್ತಿರುವುದು ಅದಕ್ಕೆ ಸಾಕ್ಷಿ. ಪಂಪ, ರನ್ನ ಮೊದಲಾದ ಜೈನಕವಿಗಳ ಉತ್ತರಕಾಲೀನ ಕಾವ್ಯಸಂಪ್ರದಾಯವನ್ನು ಗಮನಿಸಿ, ಗುಣವರ್ಮನ ಲೌಕಿಕ ಕಾವ್ಯ ಚಂಪೂ ಆಗಿದ್ದಂತೆ, ಆತನ ಧಾರ್ಮಿಕ ಕಾವ್ಯ ಹರಿವಂಶ ಕೂಡ ಚಂಪೂ ಆಗಿದ್ದಿರಬೇಕು ಎಂದು ತಿಳಿದರೆ ತಪ್ಪಾಗಲಾರದು. ಈಚೆಗೆ 3ನೆಯ ಮಂಗರಸ (1508) ತನ್ನ ನೇಮಿಜಿನೇಶ ಸಂಗತಿಯಲ್ಲಿ ಶ್ರೀವಿಜಯನೆಂಬ ಕವಿ ಚಂದ್ರಪ್ರಭ ಪುರಾಣವನ್ನು ಚಂಪೂರೂಪವಾಗಿ ರಚಿಸಿದ್ದಂತೆ ಹೇಳಿದ್ದಾನೆ. ಈ ಸಂಗತಿಯನ್ನು ಗಮನಿಸಿ ಕವಿರಾಜಮಾರ್ಗದಲ್ಲಿ ಉಲ್ಲೇಖವಾಗಿರುವ ಪ್ರಾಚೀನ ಪದ್ಯಕವಿಗಳಲ್ಲಿ ಒಬ್ಬನಾದ ಶ್ರೀವಿಜಯನೇ (ಸು. 850) ಆ ಪುರಾಣಕರ್ತೃ ಎಂಬುದಾಗಿ ಕೆಲವರು ಭಾವಿಸಿದ್ದಾರೆ. ಇದು ನಿಜವಾದರೆ ಕನ್ನಡ ಚಂಪೂಸಾಹಿತ್ಯದ ಇತಿಹಾಸವನ್ನು 9ನೆಯ ಶತಮಾನದ ಪೂರ್ವ ಅಥವಾ ಮಧ್ಯಭಾಗದಿಂದಲೇ ಮೊದಲು ಮಾಡಲು ಸಾಧ್ಯವಾಗುತ್ತದೆ. ಆದರೆ ಕವಿರಾಜಮಾರ್ಗದಲ್ಲಿ ಉಕ್ತನಾಗಿರುವ ಶ್ರೀವಿಜಯನೇ ಚಂದ್ರಪ್ರಭಪುರಾಣಕರ್ತೃ ಎನ್ನುವುದಕ್ಕೆ ಪ್ರಬಲವಾದ ಆಧಾರಗಳಿಲ್ಲ. ಕವಿರಾಜಮಾರ್ಗದಲ್ಲಿ ಉಕ್ತರಾದ ಇತರ ಕವಿಗಳ ಕೃತಿವಿಚಾರ ನಮಗೆ ಸರಿಯಾಗಿ ಏನೂ ತಿಳಿಯದು. ಇನ್ನು ಅಸಗ ಕವಿ (853) ಕನ್ನಡದಲ್ಲಿ ಕರ್ಣಾಟ ಕುಮಾರಸಂಭವ ಕಾವ್ಯವನ್ನು ರಚಿಸಿದ್ದಂತೆ ನಿಶ್ಚಯವಾಗಿ ತಿಳಿದಿದೆಯಾದರೂ ಅದು ಯಾವ ರೂಪದಲ್ಲಿತ್ತು ಎಂಬುದನ್ನು ತಿಳಿಯಲು ನಮಗೆ ಆ ಗ್ರಂಥ ದೊರೆತಿಲ್ಲ. ಚಂಪೂ ಆಗಿದ್ದಿರುವುದು ಅಸಂಭವವೇನಲ್ಲ.

ಅಂತೂ ಕನ್ನಡದಲ್ಲಿ ಚಂಪೂವಿನ ಇತಿಹಾಸ, ಈಗ ತಿಳಿದಮಟ್ಟಿಗೆ, ಒಂದನೆಯ ಗುಣವರ್ಮನಿಂದ (ಪ್ರ.ಶ. ಸು. 900) ಆರಂಭವಾದಂತೆ ಇಟ್ಟುಕೊಳ್ಳುವುದು ಸೂಕ್ತ. ಸು. 10ನೆಯ ಶತಮಾನದಿಂದ 12ನೆಯ ಶತಮಾನದ ಮಧ್ಯಭಾಗದವರೆಗೆ ಕನ್ನಡದಲ್ಲಿ

ಚಂಪೂಸಾಹಿತ್ಯ ವಿಶೇಷವಾಗಿ ರಚನೆಯಾಗಿದೆ. ಈ ಕಾಲವನ್ನು ಚಂಪೂಯುಗ ಎನ್ನುವುದುಂಟು. 10ನೆಯ ಶತಮಾನವಂತೂ ಆ ಕಾಲದ ಉತ್ಕೃಷ್ಟ ಚಂಪೂ ಕಾವ್ಯಗಳ ರಚನೆಯಿಂದಾಗಿ ಕನ್ನಡ ಸಾಹಿತ್ಯದ ಸ್ವರ್ಣಯುಗವೆಂದು ಖ್ಯಾತವಾಗಿದೆ. ಈ ಅವಧಿಯ (10–12 ಶ.) ಚಂಪೂ ಸಾಹಿತ್ಯದ ಒಂದು ಸಾಮಾನ್ಯ ಸಮೀಕ್ಷೆಯನ್ನು ಈಗ ನೋಡಬಹುದು.

ಚಂಪೂ ಸಾಹಿತ್ಯಕ್ಕೆ ಭದ್ರವಾದ ನೆಲೆಗಟ್ಟು ಹಾಕಿದವ ಪಂಪಕವಿ. ಆತನ ಎರಡು ಕೃತಿಗಳು ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯ. ಅವುಗಳಲ್ಲಿ ಚಂಪೂಮಾರ್ಗದ ಸಿದ್ಧರೂಪ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ; ಅದರ ಗಾಂಭೀರ್ಯ, ಸೊಗಸು ಸೌಲಭ್ಯಗಳು ಮನವರಿಕೆಯಾಗುತ್ತವೆ. ವಸ್ತು ಮತ್ತು ರೀತಿ ಎರಡು ದೃಷ್ಟಿಗಳಿಂದಲೂ ಆತನ ಚಂಪೂ ಕಾವ್ಯಗಳು ಉತ್ತರಕಾಲೀನ ಚಂಪೂ ಕವಿಗಳಿಗೆ ಅನುಕರಣೀಯವಾದ ಆದರ್ಶವಾಗಿಯೂ ಮಾದರಿಯಾಗಿಯೂ ಪರಿಣಮಿಸಿದುವು. ಪಂಪನನ್ನು ಗೌರವದಿಂದ ನೆನೆಯುವ, ಆತನ ವಸ್ತುವನ್ನೂ ಭಾವವನ್ನೂ ಉಕ್ತಿಯನ್ನೂ ನಿರೂಪಣ ವಿಧಾನವನ್ನೂ ಕೊಳ್ಳುವ, ಕವಿಗಳ ಚರ್ಯೆಯನ್ನು ಪರಿಶೀಲಿಸಿದರೆ ಈ ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ. ಮುಂದಿನ ಕವಿಗಳು ಅನುಸರಿಸುವ ಚಂಪೂವಿನ ಚೌಕಟ್ಟು ಒಟ್ಟಿನಲ್ಲಿ ಪಂಪನ ಚಂಪೂವಿನ ಚೌಕಟ್ಟನ್ನೇ ಹೋಲುತ್ತದೆ. ಕವಿಯ ದೃಷ್ಟಿವಿಶೇಷಕ್ಕೆ ಅನುಸಾರವಾಗಿ, ಕಾಲಧರ್ಮಕ್ಕೆ ಅನುಸಾರವಾಗಿ ಆಗಾಗ ಕೆಲವು ವೈಲಕ್ಷಣ್ಯಗಳು ಹೊಸದಾಗಿ ತೋರಿರುವುದೂ ಉಂಟು.

ಪಂಪನ ಆದಿಪುರಾಣ ಆದಿತೀರ್ಥಂಕರನ ಚರಿತೆ; ವಿಕ್ರಮಾರ್ಜುನವಿಜಯ (ಪಂಪಭಾರತ) ಮಹಾಭಾರತದ ಕಥೆಯನ್ನು ಒಳಗೊಂಡದ್ದು. ಪೊನ್ನನ (ಪ್ರ.ಶ. ಸು. 950) ಶಾಂತಿಪುರಾಣ 16ನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆ. ಆತನ ಅನುಪಲಬ್ಧವಾದ ಭುವನೈಕರಾಮಾಭ್ಯುದಯ ಪ್ರಾಯಃ ರಾಮಾಯಣ ಕಥಾವಸ್ತುವನ್ನುಳ್ಳ ಚಂಪೂ. 1ನೆಯ ನಾಗವರ್ಮನ (ಸು. 990) ಕರ್ಣಾಟಕ ಕಾದಂಬರಿ ಕಲ್ಪಿತ ಕಥಾವಸ್ತುವನ್ನುಳ್ಳ ಬಾಣನ ಕಾದಂಬರಿಯ ಚಂಪೂ ರೂಪ. ರನ್ನನ (ಪ್ರ.ಶ. 993) ಅಜಿತಪುರಾಣ 2ನೆಯ ತೀರ್ಥಂಕರನಾದ ಅಜಿತನಾಥನ ಚರಿತೆ; ಸಾಹಸಭೀಮವಿಜಯ (ಗದಾಯುದ್ಧ) ಗದಾಸೌಪ್ತಿಕ ಪರ್ವಗಳ ಭಾರತದ ಕಥೆ; ಪಂಪಭಾರತದ 13–14ನೆಯ ಆಶ್ವಾಸಗಳಿಂದ ಪ್ರಭಾವಿತವಾದ್ದು. ದುರ್ಗಸಿಂಹನ (ಪ್ರ.ಶ. 1031) ಪಂಚತಂತ್ರ ವಸುಭಾಗಭಟ್ಟನ ಪಂಚತಂತ್ರವನ್ನು ಅನುಸರಿಸಿದ ನೀತಿಕಾವ್ಯ. ಶ್ರೀಧರಾಚಾರ್ಯನ (ಪ್ರ.ಶ. 1049) ಅನುಪಲಬ್ಧವಾದ ಚಂದ್ರಪ್ರಭಚರಿತೆ 8ನೆಯ ತೀರ್ಥಂಕರ ಚಂದ್ರಪ್ರಭನ ಚರಿತೆಯನ್ನೊಳಗೊಂಡ ಚಂಪುವಾಗಿರಬೇಕು. ಶಾಂತಿನಾಥನ (ಪ್ರ.ಶ. 1068) ಸುಕುಮಾರ ಚರಿತೆ ಜೈನ ಮಹಾಪುರುಷರಲ್ಲಿ ಉಪಸರ್ಗ ಕೇವಲಿಯೊಬ್ಬನ ಚರಿತೆ. ನಯಸೇನನ (ಪ್ರ.ಶ. 1112) ಧರ್ಮಾಮೃತ ಕಥಾರೂಪವಾಗಿ ಜೈನತತ್ತ್ವಗಳನ್ನು ಪ್ರತಿಪಾದಿಸಿರುವ ಕೃತಿ. ನಾಗಚಂದ್ರನ (ಪ್ರ.ಶ. ಸು. 1140) ಮಲ್ಲಿನಾಥಪುರಾಣ 19ನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತೆ ; ರಾಮಚಂದ್ರಚರಿತಪುರಾಣ (ಪಂಪರಾಮಾಯಣ) ವಿಮಲಸೂರಿ–ರವಿಷೇಣರ ಸಂಪ್ರದಾಯದ ಜೈನರಾಮಾಯಣ. ಕರ್ಣಪಾರ್ಯನ (ಪ್ರ.ಶ. ಸು. 1160–70) ನೇಮಿನಾಥಪುರಾಣ 22ನೆಯ ತೀರ್ಥಂಕರನಾದ ನೇಮಿನಾಥನ ಚರಿತೆ. ನೇಮಿಚಂದ್ರನ (ಪ್ರ.ಶ. ಸು. 1180) ನೇಮಿನಾಥಪುರಾಣ (ಅರ್ಧನೇಮಿಪುರಾಣ) ಅದೇ ವಸ್ತುವನ್ನುಳ್ಳದ್ದು. ಆತನ ಲೀಲಾವತಿ ಕಲ್ಪಿತಕಥಾಕಾವ್ಯ. ರುದ್ರಭಟ್ಟನ (ಪ್ರ.ಶ.ಸು. 1185) ಜಗನ್ನಾಥ ವಿಜಯ ಮುಖ್ಯವಾಗಿ ವಿಷ್ಣುಪುರಾಣದ ಆಧಾರದ ಮೇಲೆ ರಚಿತವಾಗಿರುವ ಕೃಷ್ಣಕಥೆ. ಅಗ್ಗಳನ (ಪ್ರ.ಶ. ಸು. 1189) ಚಂದ್ರಪ್ರಭಪುರಾಣ ಆ ತೀರ್ಥಂಕರನ ಕಥೆ. ಆಚಣ್ಣನ (ಪ್ರ.ಶ. 1189–1205) ವರ್ಧಮಾನಪುರಾಣ 24ನೆಯ ತೀರ್ಥಂಕರನಾದ ವರ್ಧಮಾನನ ಚರಿತೆ.

ಈ ಅವಧಿಯಲ್ಲಿ ಇನ್ನೂ ಕೆಲವು ಚಂಪೂಕೃತಿಗಳು ರಚಿತವಾಗಿರುವ ಹಾಗೆ ತೋರುತ್ತದೆ. ಆದರೆ ಇವು ಯಾವುವೂ ಈವರೆಗೆ ನಮಗೆ ದೊರೆತಿಲ್ಲ. ವಿವರಗಳೂ ಸರಿಯಾಗಿ ತಿಳಿದಿಲ್ಲ. ಹೀಗೆ 10 ರಿಂದ 12ನೆಯ ಶತಮಾನದವರೆಗೆ, ವೀರಶೈವ ವಚನಕಾರರೂ ಕವಿಗಳೂ ಕಾಣಿಸಿಕೊಂಡು ವಚನಗಳನ್ನೂ ರಗಳೆ ಷಟ್ಪದಿ ಮೊದಲಾದ ಛಂದಸ್ಸುಗಳಲ್ಲಿ ಕಾವ್ಯಗಳನ್ನೂ ರಚಿಸಲು ಆರಂಭಿಸುವವರೆಗೆ, ಚಂಪೂಸಾಹಿತ್ಯ ರಚನೆ ಉತ್ಕರ್ಷದಲ್ಲಿತ್ತು. ಈ ಕಾಲದ ಚಂಪೂವಿನ ಕೆಲವು ವೈಲಕ್ಷಣ್ಯಗಳನ್ನು ಈಗ ನೋಡಬಹುದು.

ಕನ್ನಡ ಸಾಹಿತ್ಯದಲ್ಲಿ ಚಂಪೂವಿನ ಪ್ರಥಮ ಪುರಸ್ಕರ್ತರು ಜೈನಕವಿಗಳು. ಅವರಲ್ಲಿ ಆದ್ಯರೂ ಅನಂತರದವರೂ ಸಂಸ್ಕೃತ (ಮತ್ತು ಪ್ರಾಕೃತ) ಭಾಷೆಯಲ್ಲಿ ರಚಿತವಾಗಿರುತ್ತಿದ್ದ ಪೂರ್ವಾಚಾರ್ಯರ ಪದ್ಯರೂಪದ ಜೈನ ಮಹಾಪುರಾಣ, ಹರಿವಂಶಪುರಾಣ ಮೊದಲಾದವನ್ನು ಅಥವಾ ಅವುಗಳ ಭಾಗಗಳನ್ನು ಯಥೋಚಿತವಾಗಿ ಸಂಗ್ರಹಿಸಿ ಅಥವಾ ವಿಸ್ತರಿಸಿ ಚಂಪೂರೂಪದಲ್ಲಿ ತಮ್ಮ ಜೈನ ಪುರಾಣಗಳನ್ನು ರಚಿಸಿದರು. ಹಾಗೆಯೇ ಅವರು ರಚಿಸಿದ ಲೌಕಿಕ ಕಾವ್ಯಗಳು ಕೂಡ ಪದ್ಯರೂಪದ ಸಂಸ್ಕೃತ (ಮತ್ತು ಪ್ರಾಕೃತ) ಭಾರತ ರಾಮಾಯಣಗಳ ಚಂಪೂರೂಪಗಳಾಗಿದ್ದು, ಅವುಗಳಲ್ಲಿಯೇ ಸಂಸ್ಕೃತ ನಾಟಕಗಳ ಹಾಗೂ ಕಾವ್ಯಸಾಹಿತ್ಯದ ವಸ್ತು ಶೈಲಿಗಳೂ ಅಳವಟ್ಟಿರುವುದು ಕಂಡುಬರುತ್ತದೆ. ಕಾಳಿದಾಸಾದ್ಯರ ಸಂಸ್ಕೃತ ಮಹಾಕಾವ್ಯಗಳ ಸಾಂಪ್ರದಾಯಿಕ ಲಕ್ಷಣಗಳು, ವರ್ಣನೆಗಳು, ಅಲಂಕಾರ, ನಿರೂಪಣ ವಿಧಾನ, ಕಥಾಂಶ, ನಾಯಕವ್ಯಕ್ತಿ–ಇತ್ಯಾದಿ ಆ ಕಾವ್ಯಗಳಲ್ಲಿ ಗರ್ಭೀಕೃತವಾಗಿವೆ. ತೀರ್ಥಂಕರ ಚರಿತೆಗಳಲ್ಲಿ ಆಯಾ ತೀರ್ಥಂಕರನ (ಮತ್ತು ಸಹಚರ ಜೀವರ) ಪೂರ್ವಭವಾವಳಿಗಳು ಮತ್ತು ಪಂಚಕಲ್ಯಾಣದ ವಿವರಗಳು ಬರುತ್ತವೆ; ಲೌಕಿಕ ಕಾವ್ಯಗಳಲ್ಲಿ ಪೌರಾಣಿಕ ಮತ್ತು ತತ್ಕಾಲೀನ ಚಾರಿತ್ರಿಕ ವ್ಯಕ್ತಿಗಳ ಸಮೀಕರಣ ಮೂಲಕವಾದ ವಸ್ತುಕಥನವಿರುತ್ತದೆ. ಇನ್ನು ಕಲ್ಪಿತಕಥಾವಸ್ತುವಿನ ಸಂಸ್ಕೃತ ಗದ್ಯಕಾವ್ಯಗಳನ್ನು ಕನ್ನಡಕ್ಕೆ ತಂದುಕೊಳ್ಳುವಾಗ, ಚಂಪೂ ಪದ್ಧತಿಗೆ ಅಳವಡಿಸಿಕೊಂಡು ನಿರೂಪಿಸುವ ಸಂಪ್ರದಾಯವನ್ನು ಮೊದಲು ಹೂಡಿದ ಕವಿ ನಾಗವರ್ಮ 1. ಆತ ತನ್ನ ಕೃತಿ ಕರ್ಣಾಟಕ ಕಾದಂಬರಿಯಲ್ಲಿ, ಕಲ್ಪಿತಕಥೆಯನ್ನು ಕಾವ್ಯವಸ್ತುವನ್ನಾಗಿ ಮಾಡಿಕೊಂಡದ್ದು ಹಾಗೂ ಗದ್ಯರೂಪದ ಕೃತಿಯನ್ನು ಚಂಪೂರೂಪಕ್ಕೆ ತಿರುಗಿಸಿದ್ದು ಒಂದು ವೈಶಿಷ್ಟ್ಯಪೂರ್ಣವಾದ ಸಾಹಸ. ಈ ಪರಂಪರೆ ಮುಂದೆ ನೇಮಿಚಂದ್ರ, ದೇವಕವಿ ಮತ್ತು ಚೌಂಡರಸರ ಕೈಯಲ್ಲಿ ಮುಂದುವರಿಯಿತು. ಮೂಲ ಶುದ್ಧವಾಗಿ ಪದ್ಯದಲ್ಲಿರಲಿ ಅಥವಾ ಗದ್ಯದಲ್ಲಿರಲಿ, ಅದನ್ನು ಚಂಪೂವಿಗೆ ತಿರುಗಿಸುವ ಈ ಪ್ರಯತ್ನ ಕನ್ನಡ ಸಾಹಿತ್ಯದಲ್ಲಿ ಚಂಪೂವಿನ ಪ್ರಾಬಲ್ಯವನ್ನೂ ಕನ್ನಡ ಕವಿಗಳ ಒಲವು, ಸಂಪ್ರದಾಯ ಶ್ರದ್ಧೆಗಳನ್ನೂ ಎತ್ತಿ ತೋರಿಸುತ್ತದೆ.

ಒಂದನೆಯ ನಾಗವರ್ಮನ ಕರ್ಣಾಟಕ ಕಾದಂಬರಿ ಅಖಂಡವಾದ ಕಥಾಸೂತ್ರವುಳ್ಳ ಚಂಪೂವಾದರೆ, ದುರ್ಗಸಿಂಹನ ಪಂಚತಂತ್ರ ಹಲವು ಕಥೆಗಳ ಚಂಪೂ. ದೇಸಿ ಮಾರ್ಗಗಳೆರಡರಲ್ಲಿಯೂ ನಡೆಯುವ ಗದ್ಯಪದ್ಯಗಳು, ದೀರ್ಘತರ ಸಮಾಸ ರಚನೆ, ಶಬ್ದಾಲಂಕಾರಪ್ರಿಯತೆ–ಈತನ ಪ್ರೌಢಶೈಲಿಯ ಚಂಪೂವಿನ ವೈಶಿಷ್ಟ್ಯಗಳು. ಕಥಾಸಂಬಂಧಿಯಾದ ಚಂಪೂಗದ್ಯದ ಸ್ವರೂಪ ಹೇಗಿರಬಹುದೆಂದು ತಿಳಿಯುವುದಕ್ಕೆ ಇಲ್ಲಿ ಅವಕಾಶವಿದೆ. ಹಲವು ಕಥೆಗಳ ಚಂಪೂವಿನ ಈ ಪದ್ಧತಿ ಮುಂದೆ ನಯಸೇನ ಮೊದಲಾದವರ ಕೈಯಲ್ಲಿ ಪ್ರಬಲಿಸಿತು. ಶಾಂತಿನಾಥನ ಸುಕುಮಾರಚರಿತೆ ಪದ್ಧತಿಯಂತೆ ತೀರ್ಥಂಕರ ಚರಿತೆಯಾಗಿರದೆ ಉಪಸರ್ಗ ಕೇವಲಿಯೊಬ್ಬನ ಕಥೆಯಾಗಿರುವುದು ವಸ್ತುವಿನ ದೃಷ್ಟಿಯಿಂದ ಒಂದು ವಿಶೇಷ. ಆತನ ಚಂಪೂವಿನ ಚೌಕಟ್ಟಿನಲ್ಲಿ ರಗಳೆ ಮತ್ತು ದೇಸಿ ಛಂದಸ್ಸಿನ ಪ್ರಭೇದಗಳನ್ನು ಮನಸೆಳೆಯುವಂತೆ ಬಳಸಿದೆ.

ಈವರೆಗೆ ಬೆಳೆದು ಬಂದ ಪ್ರೌಢ ಚಂಪೂ ಮಾರ್ಗ ನಯಸೇನನ ಕಾಲದಲ್ಲಿ, ಆತ ದೇಸಿಗೆ ಕೊಟ್ಟ ಮಹತ್ತ್ವದಿಂದ, ಸುಧಾರಣೆಗೊಂಡು ಸರಳವಾದ ರೂಪರೇಷೆಗಳನ್ನು ಪಡೆದುಕೊಂಡಿತು. ಸ್ವಲ್ಪಮಟ್ಟಿಗೆ ದುರ್ಗಸಿಂಹನ ಕೃತಿಯಲ್ಲಿಯೇ ಇದನ್ನು ಗುರುತಿಸಬಹುದು. ಚಂಪೂವಿನ ವಸ್ತು, ಭಾಷೆ ಮತ್ತು ಶೈಲಿ ಜನಸಾಮಾನ್ಯನ ಹೃದಯಕ್ಕೆ ಮೆಚ್ಚಾಗುವಂತೆ ಆಕರ್ಷಕವೂ ಅರ್ಥಯುಕ್ತವೂ ಆಯಿತು. ವ್ಯಾಪಕವಾದ ಜನಜೀವನದ ಸಂಸ್ಕೃತಿಯನ್ನೂ ಭಾಷೆಯನ್ನೂ ಹೃದಯಂಗಮವಾಗಿ ಪ್ರತಿಬಿಂಬಿಸಿರುವ ಈ ಚಂಪೂ ಕೃತಿಯ ಶೈಲಿ ವಿಶಿಷ್ಟವಾದುದು. ನಾಗಚಂದ್ರನ ಚಂಪೂಕೃತಿಗಳ ಮುಖ್ಯ ಲಕ್ಷಣಗಳು ಎಂದರೆ ಸಾಂಪ್ರದಾಯಿಕ ವರ್ಣನೆಗಳ ಪ್ರಾಚುರ್ಯ ಮತ್ತು ಶೈಲಿಯ ಸೌಕುಮಾರ್ಯ. ಇದಕ್ಕೆ ಪ್ರತಿಯಾಗಿ ಎನ್ನುವಂತೆ ಕರ್ಣಪಾರ್ಯನ ಕೃತಿ ಅದರ ವಿಶಾಲವಾದ ಕಥಾಭಿತ್ತಿಯಿಂದಾಗಿ ಸಾಂಪ್ರದಾಯಿಕ ವರ್ಣನೆಗಳ ಗೋಜುಗೊಂದಲವಿಲ್ಲದೆ ರಚಿತವಾಗಿರುವ ಒಂದು ಸರಳಶೈಲಿಯ ಚಂಪೂಕಾವ್ಯ. ನೇಮಿಚಂದ್ರನ ಕೃತಿಗಳು ಕಥೆಗಿಂತ ವರ್ಣನೆಗಳಿಗೆ, ಚಮತ್ಕಾರವಾದ ಕಲ್ಪನೆಯ ಚಿತ್ರಗಳಿಗೆ, ಅಲಂಕಾರವೈಖರಿಗೆ ಗಮನ ಕೊಟ್ಟಿರತಕ್ಕವು. ರುದ್ರಭಟ್ಟನಲ್ಲಿಯೂ ಈ ಗುಣಗಳನ್ನು ಕಾಣಬಹುದು. ಆಚಣ್ಣ ತನ್ನ ಕೃತಿ ವರ್ಧಮಾನಪುರಾಣದಲ್ಲಿ ಚಂಪೂವಿನ ಸಾಂಪ್ರದಾಯಿಕ ಲಕ್ಷಣಗಳೊಡನೆ ಚಿತ್ರಕವಿತ್ವದ ವೈಲಕ್ಷಣ್ಯಗಳನ್ನೂ ಜೊತೆಗೂಡಿಸಿದ್ದಾನೆ.

12ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯ ಹೊಸ ತಿರುವನ್ನು ಪಡೆದುಕೊಂಡಿತು. ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ಹೆಚ್ಚು ಹೆಚ್ಚು ಜನಸಮ್ಮುಖವಾಗತೊಡಗಿತು. ವಚನ ಸಾಹಿತ್ಯದ ಕಾಲದಿಂದೀಚೆಗೆ ದೇಶ್ಯಛಂದಸ್ಸುಗಳು ಹುರುಪುಗೊಂಡು ಕಾವ್ಯವಾಹಕಗಳಾದುವು. ಅವುಗಳಿಗೆ ಜೊತೆಜೊತೆಯಾಗಿ ಚಂಪೂಪದ್ಧತಿ ಮುನ್ನಡೆಯಿತಲ್ಲದೆ ಕ್ಷೀಣಿಸಲಿಲ್ಲ. ವಸ್ತು ಮತ್ತು ಶೈಲಿಯಲ್ಲಿ ಕಾಲಧರ್ಮಕ್ಕೆ ಅನುಸಾರವಾಗಿ ಸರಳತೆ ತಲೆದೋರಿತು. ಆದರೆ ಸಂಪ್ರದಾಯ ಶ್ರದ್ಧೆಯಿಂದ ಹುಟ್ಟಿದ ಪ್ರೌಢ ಚಂಪೂವಿನ ರಚನೆಯೇನೂ ನಿಲ್ಲಲಿಲ್ಲ. ನಯಸೇನನ ಮಾರ್ಗಕ್ಕಿಂತ ನೇಮಿಚಂದ್ರ ರುದ್ರಭಟ್ಟರ ಮಾರ್ಗವೇ ಚಂಪೂ ಕವಿಗಳಿಗೆ ಹೆಚ್ಚು ಮೆಚ್ಚಾಯಿತು. 12ರಿಂದ 15ನೆಯ ಶತಮಾನದ ವರೆಗಿನ ಚಂಪೂ ಸಾಹಿತ್ಯ ಅದರ ಇತಿಹಾಸದಲ್ಲಿ ಎರಡನೆಯ ಘಟ್ಟ. ಈ ಅವಧಿಯ ಕೃತಿಗಳ ಒಂದು ಸಾಮಾನ್ಯ ಸಮೀಕ್ಷೆಯನ್ನು ಈಗ ನೋಡಬಹುದು.

ಬಂಧುವರ್ಮನ (ಪ್ರ.ಶ. ಸು. 1200) ಹರಿವಂಶಾಭ್ಯುದಯ ಮುಖ್ಯವಾಗಿ ನೇಮಿನಾಥ ಚರಿತ್ರೆ. ಆತನ ಜೀವಸಂಬೋಧನೆ ಜೈನಮತದ ದ್ವಾದಶಾನುಪ್ರೇಕ್ಷೆಗಳನ್ನು ಕಥಾರೂಪವಾಗಿ ಪ್ರತಿಪಾದಿಸುವ ಕೃತಿ. ದೇವಕವಿಯ (ಪ್ರ.ಶ. ಸು.1200) ಕುಸುಮಾವಳಿ ಒಂದು

ಕಲ್ಪಿತಕಥಾಕಾವ್ಯ. ಹರಿಹರನ ಗಿರಿಜಾಕಲ್ಯಾಣ (ಪ್ರ.ಶ. ಸು.1200) ಶಿವಪಾರ್ವತಿಯರ ವಿವಾಹವನ್ನು ಕುರಿತದ್ದು. ಪಾರ್ಶ್ವಪಂಡಿತನ ಪಾರ್ಶ್ವನಾಥಪುರಾಣ (ಪ್ರ.ಶ. ಸು. 1222) 23ನೆಯ ತೀರ್ಥಂಕರನಾದ ಪಾರ್ಶ್ವನಾಥನ ಚರಿತೆಯನ್ನು ಒಳಗೊಂಡದ್ದು. ಸೋಮರಾಜನ ಉದ್ಭಟಕಾವ್ಯ (ಪ್ರ.ಶ. 1222 ?) ಉದ್ಭಟದೇವನೆಂಬ ಶಿವಭಕ್ತನ ಕಥೆ. ಜನ್ನನ ಅನಂತನಾಥಪುರಾಣ (ಪ್ರ.ಶ. 1230) 14ನೆಯ ತೀರ್ಥಂಕರನಾದ ಅನಂತನಾಥನ ಚರಿತೆ. ಕಮಲಭವನ ಶಾಂತೀಶ್ವರ ಪುರಾಣ (ಪ್ರ.ಶ. ಸು. 1235) 16ನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆ. ಆಂಡಯ್ಯನ ಕಬ್ಬಿಗರ ಕಾವ್ಯ (ಪ್ರ.ಶ. ಸು. 1235) ವೈದಿಕ ಕಥಾಮೂಲದ ಶಿವಮನ್ಮಥರ ವಿರಸವೃತ್ತಾಂತ. 2ನೆಯ ಗುಣವರ್ಮನ (ಪ್ರ.ಶ. 1255) ಪುಷ್ಪದಂತ ಪುರಾಣ 9ನೆಯ ತೀರ್ಥಂಕರನಾದ ಪುಷ್ಪದಂತನ ಚರಿತೆ. ಮಹಾಬಲನ ನೇಮಿನಾಥ ಪುರಾಣ (ಪ್ರ.ಶ. 1254) ನೇಮಿತೀರ್ಥಂಕರನ ಚರಿತೆ. ಚೌಂಡರಸನ (ಪ್ರ.ಶ. ಸು. 1300) ಅಭಿನವ ದಶಕುಮಾರ ಚರಿತೆ ಕಲ್ಪಿತ ಕಥಾಕಾವ್ಯ. ನಾಗರಾಜನ ಪುಣ್ಯಾಸ್ರವ ಚಂಪೂ (ಪ್ರ.ಶ. 1331) ಜೈನತತ್ತ್ವಗಳನ್ನು ಕಥಾರೂಪದಲ್ಲಿ ಪ್ರತಿಪಾದಿಸುವ ಕೃತಿ. ವೃತ್ತ ವಿಲಾಸನ (ಸು. 1350) ಧರ್ಮಪರೀಕ್ಷೆ ಜೈನಮತೋತ್ಕರ್ಷವನ್ನು ಕಥಾರೂಪದಲ್ಲಿ ನಿರೂಪಿಸುವ ಕೃತಿ. ಬಾಹುಬಲಿ ಪಂಡಿತನ ಧರ್ಮನಾಥ ಪುರಾಣ (ಪ್ರ.ಶ. 1352) ಮತ್ತು ಮಧುರನ (ಪ್ರ.ಶ. ಸು. 1400) ಧರ್ಮನಾಥ ಪುರಾಣ 15ನೆಯ ತೀರ್ಥಂಕರನಾದ ಧರ್ಮನಾಥನ ಚರಿತೆಗಳಾಗಿವೆ. ಆಯತವರ್ಮನ (ಕ್ರಿ.. ಸು. 1400) ಕನ್ನಡ ರತ್ನಕರಂಡಕ ಜೈನಮತದ ರತ್ನತ್ರಯಗಳನ್ನು ಕುರಿತ ಕೃತಿ. ಕವಿಮಲ್ಲನೆಂಬುವನ (ಪ್ರ.ಶ. ಸು. 1400) ಮನ್ಮಥವಿಜಯವೆಂಬ ಕೃತಿ ಪ್ರಾಯಃ ಶೃಂಗಾರಪ್ರತಿಪಾದಕವಾದುದು.

ಈ ಕಾಲದ ಚಂಪೂವಿನ ಕೆಲವು ವೈಲಕ್ಷಣ್ಯಗಳು ಹೀಗಿವೆ : ಬಂಧುವರ್ಮ, ಪಾರ್ಶ್ವಪಂಡಿತ, ಜನ್ನ, ಕಮಲಭವ, 2ನೆಯ ಗುಣವರ್ಮ, ಮಹಾಬಲ, ಬಾಹುಬಲಿ ಪಂಡಿತ ಮತ್ತು ಮಧುರ ಈ ಜೈನಕವಿಗಳು ತೀರ್ಥಂಕರ ಚರಿತೆಗಳನ್ನು ಚಂಪೂ ರೂಪದಲ್ಲಿ ರಚಿಸಿದ್ದಾರೆ. ಇವು ಈ ಮೊದಲೇ ಸಂಪ್ರದಾಯಸಿದ್ಧವಾಗಿ ರಚಿತವಾಗುತ್ತ ಬಂದಿದ್ದ ತೀರ್ಥಂಕರಚರಿತೆಗಳ ಮಾದರಿಯಲ್ಲೇ ಬಲುಮಟ್ಟಿಗೆ ರಚಿತವಾಗಿರತಕ್ಕವು. ಕಥೆಗಿಂತ ವರ್ಣನೆಗಳು, ಸರಳತೆಗಿಂತ ಪ್ರೌಢಿಮೆ, ದೇಸಿಗಿಂತ ಮಾರ್ಗ–ಇವುಗಳ ಕಡೆಗೆ ಕವಿಗಳ ಒಲವು ಕಾಣುತ್ತದೆ. ಪ್ರಾಯಃ ಒಂದೆರಡನ್ನು ಬಿಟ್ಟರೆ, ಉಳಿದ ತೀರ್ಥಂಕರರ ಚರಿತೆಗಳಲ್ಲಿ ಕಥಾಭಿತ್ತಿಯೇ ಅಲ್ಪವಾಗಿದ್ದು ಸಾಂಪ್ರದಾಯಿಕವಾದ ಕಾವ್ಯಾಂಗಗಳ ವರ್ಣನೆಗಳಿಂದಲೂ ಪುರಾಣಲಕ್ಷಣಗಳಿಂದಲೂ ಅದನ್ನು ಹಿಗ್ಗಿಸಿರುವುದು ಕಾಣುತ್ತದೆ. ಪಾಂಡಿತ್ಯ ಪ್ರದರ್ಶನದ ಕಾಂಕ್ಷೆ ತಲೆದೋರಿದೆ. ಹರಿಹರ ಮತ್ತು ಸೋಮರಾಜ ವೀರಶೈವ ಚಂಪೂ ಕೃತಿಗಳೂ ಬಲು ಮಟ್ಟಿಗೆ ಅವೇ ವೈಲಕ್ಷಣ್ಯಗಳನ್ನು ಒಳಗೊಂಡಿವೆ. ಆದರೆ ವೀರಶೈವ ಚಂಪೂಗಳಲ್ಲಿ ಹರಿಹರನ ಗಿರಿಜಾಕಲ್ಯಾಣ ಉತ್ಕೃಷ್ಟವಾದುದಾಗಿ, ಅನಂತರದ ಕವಿಗಳು ಆತನಿಂದ ಪ್ರಭಾವಿತವಾದುದು ಕಾಣುತ್ತದೆ. ಸೋಮರಾಜನ ಕೃತಿ ವಸ್ತುವಿನ ಆಯ್ಕೆಯ ದೃಷ್ಟಿಯಿಂದಲೂ ಅದರಲ್ಲಿಯ ಛಂದೋವೈವಿಧ್ಯದ ದೃಷ್ಟಿಯಿಂದಲೂ ಗಮನಿಸತಕ್ಕದ್ದಾಗಿದೆ.

ಗದ್ಯರೂಪವಾಗಿರುವ ಕಲ್ಪಿತಕಥಾಕಾವ್ಯವನ್ನು ಚಂಪೂವಿಗೆ ತಿರುಗಿಸುವ ನಾಗವರ್ಮನ ಕಾವ್ಯಪದ್ಧತಿ ದೇವಕವಿ, ಚೌಂಡರಸರ ಮೂಲಕ ಮುಂದುವರಿದಿದೆ. ದೇವಕವಿಯ ಕುಸುಮಾವಳಿ ಕಾವ್ಯ ಸುಬಂಧು, ಬಾಣರ ಗದ್ಯಕಾವ್ಯಗಳ ಪ್ರಭಾವದಿಂದಾದುದು; ಚೌಂಡರಸನ ಅಭಿನವ ದಶಕುಮಾರಚರಿತೆ ದಂಡಿಯ ಗದ್ಯಕಾವ್ಯ ದಶಕುಮಾರಚರಿತೆಯ ಪರಿವರ್ತನೆ. ಇಲ್ಲಿಯೂ ಕಥೆಗಾರಿಕೆ, ರಸದೃಷ್ಟಿಗಳಿಗಿಂತ ವರ್ಣನೆಯ ದೃಷ್ಟಿ ಪ್ರಬಲವಾಗಿದೆ. ಇನ್ನು ಜೈನಮತ ತತ್ತ್ವಗಳನ್ನು ಕಥೆಗಳ ರೂಪದಲ್ಲಿ ಪ್ರತಿಪಾದಿಸುವ ನಯಸೇನನ ಕಾವ್ಯಪದ್ಧತಿ ಬಂಧುವರ್ಮ, ನಾಗರಾಜ, ವೃತ್ತ ವಿಲಾಸ ಇವರ ಕೈಯಲ್ಲಿ ಮುಂದುವರಿಯಿತು. ಬಂಧುವರ್ಮನ ಜೀವಸಂಬೋಧನೆಯ ಚಂಪೂವಿನ ಚೌಕಟ್ಟು ಸ್ವಾರಸ್ಯಕರವಾದುದು.

ಆಂಡಯ್ಯನ ಕಬ್ಬಿಗರ ಕಾವ ದೇಶ್ಯ ಮತ್ತು ತದ್ಭವ ಶಬ್ದಗಳನ್ನು ಮಾತ್ರ ಬಳಸಿದ ಹಾಗೂ ಪರಿಮಾಣದಲ್ಲಿ ಚಿಕ್ಕದಾಗಿರುವ ಚಂಪೂ. ಆಯತವರ್ಮನ ಕನ್ನಡ ರತ್ನಕರಂಡಕ ಕೇವಲ ತಾತ್ತ್ವಿಕ ವಿಷಯವನ್ನುಳ್ಳ ಚಂಪೂ. ಹೀಗೆ ಈ ಅವಧಿಯ ಚಂಪೂ ರೂಪದಲ್ಲಿ ಪೌರಾಣಿಕ ವ್ಯಕ್ತಿಚರಿತ್ರೆ, ಕಥೆ, ತತ್ತ್ವ – ಇವು ಅವಕಾಶ ಪಡೆದಿವೆ.

15ರಿಂದ 17ನೆಯ ಶತಮಾನದವರೆಗಿನ ಕಾಲ ಚಂಪೂ ಸಾಹಿತ್ಯದ ಇತಿಹಾಸದಲ್ಲಿ ಇಳಿಗಾಲ. ಈ ಅವಧಿಯಲ್ಲಿ ಷಟ್ಪದಿ ಸಾಂಗತ್ಯ ಮೊದಲಾದ ಛಂದಸ್ಸುಗಳಲ್ಲಿ ರಚಿತವಾದ ಕಾವ್ಯಗಳು ಹೆಚ್ಚಾಗಿ ಬಂದವು. ಅವುಗಳ ಕರ್ತೃಗಳು ಆ ಕಾವ್ಯಗಳಲ್ಲಿಯೇ ಹಿಂದಿನ ಚಂಪೂಕಾವ್ಯಗಳ ವಸ್ತು ಮತ್ತು ಶೈಲಿಗಳ ಕೆಲವು ಲಕ್ಷಣಗಳನ್ನು ಅಳವಡಿಸಿದರು. ಚಂಪೂಕಾವ್ಯ ಪದ್ಧತಿಯ ಉತ್ತಮವಾದ ಮಾದರಿಗಳು ಸು. 10–12ನೆಯ ಶತಮಾನದಲ್ಲಿಯೇ ಬಂದು ಹೋಗಿದ್ದು, ಈಚಿನವು ಹೆಚ್ಚಿನ ಮಟ್ಟಿಗೆ ಅವುಗಳ ಶುಷ್ಕ ಅನುಕರಣಗಳಾಗಿ ತೋರುತ್ತವೆ. ಮಧುರ ಕವಿಯ (1377–1404) ಧರ್ಮನಾಥಪುರಾಣ ಚಂಪೂಶೈಲಿಯ ಅವಸಾನದ ಹಂಸಗೀತೆ.

ಚಂದ್ರಕವಿಯ (ಸು. 1430) ಪಂಪಾಸ್ಥಾನವರ್ಣನ ಹಂಪೆಯ ವಿರೂಪಾಕ್ಷ ದೇವರ ಆಸ್ಥಾನ ವರ್ಣನೆಯನ್ನು ಕುರಿತಿದೆ. ಸುರಂಗಕವಿಯ (ಸು. 1500) ತ್ರಿಷಷ್ಟಿ ಪುರಾತನಚರಿತ್ರ ತಮಿಳುನಾಡಿನ 63 ಶಿವಭಕ್ತರ ಕಥೆಗಳನ್ನೊಳಗೊಂಡಿದೆ. ಕಥೆಯ ಒಂದು ಎಳೆಗೂ ಎಡೆಯಿಲ್ಲದಂತೆ ಕೇವಲ ವರ್ಣನೆಗಳಿಂದಲೇ ಕಾವ್ಯವನ್ನು ಕಟ್ಟಿರುವ ಚಂದ್ರಕವಿಯ ಕೌಶಲ ಕುತೂಹಲಕರವಾದುದು; ಈವರೆಗಿನ ಚಂಪೂ ಪದ್ಧತಿಯಲ್ಲಿ ನವೀನವಾದುದು. ಕನ್ನಡದ ಅತಿ ಪುಟ್ಟ ಚಂಪೂಕಾವ್ಯಗಳಲ್ಲಿ ಒಂದಾದ ಈ ಕೃತಿಯಲ್ಲಿ, ಇರುವ ಅಲ್ಪಾವಕಾಶದಲ್ಲಿಯೇ ಸಾಂಪ್ರದಾಯಿಕ ವರ್ಣನೆಗಳು ಯಥೋಚಿತವಾಗಿ ಎಡೆ ಪಡೆದಿವೆ. ಸುರಂಗಕವಿಯ ಕೃತಿ, ಅದಕ್ಕೆ ಪ್ರತಿಯಾಗಿ ಎನ್ನುವಂತೆ, ಕನ್ನಡದ ಅತಿ ದೊಡ್ಡ ಚಂಪೂ ಕಾವ್ಯಗಳಲ್ಲಿ ಒಂದಾಗಿದ್ದು, ಹರಿಹರನ ಕಥಾಮೂಲವನ್ನೂ ಚಂಪೂಮಾರ್ಗವನ್ನೂ ಬಲುಮಟ್ಟಿಗೆ ಅನುಸರಿಸಿದ್ದು ಹರಿಹರನ ಅನಂತರದ ವೀರಶೈವ ಚಂಪೂಗ್ರಂಥಗಳಲ್ಲಿ ಗಣ್ಯವಾದದ್ದಾಗಿದೆ.

ಕಳೆದೆರಡು ಶತಮಾನಗಳಲ್ಲಿ ಸ್ಥಗಿತಗೊಂಡಿದ್ದ ಚಂಪೂಸಾಹಿತ್ಯರಚನೆ 17 ರಿಂದ 19ನೆಯ ಶತಮಾನದ ಅವಧಿಯಲ್ಲಿ ಪುನರುಜ್ಜೀವನಗೊಂಡಿತು. ಈ ಅವಧಿಯಲ್ಲಿ ವೀರಶೈವ ಕವಿಗಳೇ ಅಧಿಕ ಸಂಖ್ಯೆಯಲ್ಲಿ ಚಂಪೂಕೃತಿಗಳನ್ನು ರಚಿಸಿದರು. ಜೈನ ಕವಿಗಳು ಕಾರಣಾಂತರಗಳಿಂದ ಚಂಪೂಪದ್ಧತಿಯನ್ನು ಬಿಟ್ಟು ದೇಸಿ ಕಾವ್ಯಗಳ ರಚನೆಗೆ ತೊಡಗಿದರು. ಈ ಅವಧಿಯ ಚಂಪೂ ಸಾಹಿತ್ಯದ ಒಂದು ಸಾಮಾನ್ಯವಾದ ಸಮೀಕ್ಷೆ ಹೀಗಿದೆ :

ಪ್ರಭುಗನ (ಪ್ರ.ಶ. ಸು. 1520) ಚೂಡನಾಸ್ಥಾನ ಮತ್ತು ವೈಭೋಗರಾಜಾಸ್ಥಾನಗಳು ಈಶ್ವರನ ಆಸ್ಥಾನದ ವರ್ಣನೆಯನ್ನು ಒಳಗೊಂಡಂಥವು. ವೀರಭದ್ರರಾಜನ (ಪ್ರ.ಶ. ಸು. 1530) ವೀರಭದ್ರವಿಜಯ ವೀರೇಶನ ಚರಿತೆ. ಸದಾಶಿವಯೋಗಿಯ ರಾಮನಾಥವಿಲಾಸ (ಪ್ರ.ಶ. 1554) ವೀರಶೈವ ಮತೋತ್ಕರ್ಷವನ್ನು ಮಾಡಿದ ರಾಮನಾಥಚಾರ್ಯನ ಚರಿತ್ರೆ. ಮುರಿಗೆ ದೇಶಿಕೇಂದ್ರನ (ಸು. 1560) ಹಮ್ಮೀರ ಕಾವ್ಯ ಶಿವಭಕ್ತನಾದ ಹಮ್ಮೀರರಾಜನ ಚರಿತೆ. ಸಿದ್ಧಲಿಂಗ ಶಿವಯೋಗಿಯ (ಸು. 1600) ಭೈರವೇಶ್ವರಪುರಾಣ ಶಿವಭಕ್ತನಾದ ಭೈರವರಾಜನ ಕಥೆ. ಶಾಂತವೀರ ದೇಶಿಕನ (ಸು. 1650) ನನ್ನಯ್ಯಗಳ ಚರಿತ್ರೆ ಶಿವಭಕ್ತನಾದ ನನ್ನಯ್ಯನ ಚರಿತೆ. ಷಡಕ್ಷರಿಯ ರಾಜಶೇಖರವಿಲಾಸ (ಪ್ರ.ಶ. 1655) ಸತ್ಯೇಂದ್ರ ಚೋಳನ ಮಗನಾದ ರಾಜಶೇಖರನ ಕಥೆ; ಬಸವರಾಜ ವಿಜಯ ಅಥವಾ ವೃಷಭೇಂದ್ರ ವಿಜಯ (ಪ್ರ.ಶ. 1677) ಬಸವಣ್ಣನವರ ಚರಿತ್ರೆ, ಶಬರಶಂಕರವಿಲಾಸ ಮಹಾಭಾರತದ ಕಿರಾತಾರ್ಜುನೀಯ ಪ್ರಸಂಗವನ್ನು ಕುರಿತದ್ದು.

16–17ನೆಯ ಶತಮಾನದ ವೀರಶೈವ ಕವಿಗಳ ಈ ಚಂಪೂಸಾಹಿತ್ಯ ಮುಖ್ಯವಾಗಿ ಶಿವನನ್ನೂ ಶಿವಭಕ್ತರ ಪುಣ್ಯಕಥೆಗಳನ್ನೂ ಆಧಾರವಾಗಿಟ್ಟುಕೊಂಡು ರಚಿತವಾಗಿದೆ. ವಸ್ತು, ಶೈಲಿ ಮತ್ತು ಉದ್ದೇಶಗಳಲ್ಲಿ ಹರಿಹರನ ಕಾವ್ಯಮಾರ್ಗದ ಪ್ರಭಾವ ಇದರಲ್ಲಿ ಕಾಣುತ್ತದೆ. ಎಂದಿನಂತೆ ಇಲ್ಲಿಯೂ ವರ್ಣನೆ, ಅಲಂಕಾರ, ಕವಿಸಮಯಗಳಲ್ಲಿ ಕನ್ನಡ ಚಂಪೂಕಾವ್ಯ ಪರಂಪರೆ ಮುನ್ನಡೆದಿದೆ. ಪ್ರಭುಗನ ಶಿವಾಸ್ಥಾನ ವರ್ಣನೆಯ ಚಿಕ್ಕ ಚಂಪೂಗ್ರಂಥಗಳು ಒಂದೊಂದೂ 101 ಪದ್ಯಗಳನ್ನು ಒಳಗೊಂಡಿರುವುದರಿಂದ ಪ್ರಾಯಃ ಶತಕ ಚಂಪೂ ಆಕೃತಿಯನ್ನು ತಳೆದಂತೆ ಭಾವನೆಯುಂಟಾಗುತ್ತದೆ. ಅಲ್ಲದೆ ಇಲ್ಲಿ ಚಂದ್ರಕವಿಯ ಸಂಪ್ರದಾಯ ಮುನ್ನಡೆದಿದೆ. ವೀರಭದ್ರನ ಕೃತಿ ವರ್ಣನಾಭಾಗ ಹೆಚ್ಚಾಗಿರುವ ಚಂಪೂ. ಸದಾಶಿವಯೋಗಿಯ ಕೃತಿಯಲ್ಲಿ ಷಟ್ಪದಿಗಳು ಬಳಕೆಯಾಗಿವೆ. ಇನ್ನು ವೀರಶೈವ ಚಂಪೂ ಕಾವ್ಯಕರ್ತೃಗಳ ಪರಂಪರೆಯಲ್ಲಿ ಬಹು ಸಮರ್ಥನಾದವನೆಂದರೆ ಷಡಕ್ಷರಿ. ಒಳ್ಳೆಯ ಕವಿತ್ವಶಕ್ತಿಯೊಡನೆ ಪಾಂಡಿತ್ಯ ದೃಷ್ಟಿಯೂ ಸಂಪ್ರದಾಯ ನಿಷ್ಠೆಯೂ ಈತನಲ್ಲಿ ವಿಶೇಷವಾಗಿತ್ತು. ಈತನ ಚಂಪೂಕೃತಿಗಳಲ್ಲಿ ಪ್ರಾಚೀನ ಕಾಲದ ಪ್ರೌಢ ಚಂಪೂಕಾವ್ಯಗಳ ಗುಣಲಕ್ಷಣಗಳು ಪ್ರತಿಬಿಂಬಿತವಾಗಿವೆ. ಚಂಪೂಶೈಲಿಯ ಆಕರ್ಷಣೆ ಬಿಟ್ಟೂ ಬಿಡದಂತೆ ಕನ್ನಡ ಕವಿಗಳ ಮನಸ್ಸನ್ನು ಸೆರೆ ಹಿಡಿದಿದ್ದು, ಅವರ ಪ್ರತಿಭೆ ಪಾಂಡಿತ್ಯಗಳ ಪರೀಕ್ಷೆಗೆ ಒಳ್ಳೆಯ ನಿಕಷವಾಗಿತ್ತು. ಷಡಕ್ಷರಿಯಂಥ ಕವಿ ಆ ಪರೀಕ್ಷೆಯಲ್ಲಿ ಹೆಮ್ಮೆಯಿಂದ ಪಾಲುಗೊಂಡು, ಯಶಸ್ವಿಯಾಗಿರುವುದು ಕಾಣುತ್ತದೆ. ಕಥೆಯನ್ನು ನಿಮಿತ್ತವಾಗಿ ಮಾಡಿಕೊಂಡು, ಮುಖ್ಯವಾಗಿ ವರ್ಣನ ವೈಚಿತ್ರ್ಯಗಳನ್ನೂ ಕಲ್ಪನಾಚಾತುರ್ಯ ಮತ್ತು ಅಲಂಕಾರ ವೈಖರಿಗಳನ್ನೂ ತನ್ನ ಕೃತಿಗಳಲ್ಲಿ ಈತ ಮೆರೆದಿದ್ದಾನೆ.

17ನೆಯ ಶತಮಾನದ ಉತ್ತರಾರ್ಧದಲ್ಲಿ, ಮೈಸೂರರಸರಲ್ಲಿ ಪ್ರಖ್ಯಾತನಾದ ಚಿಕ್ಕದೇವರಾಯನ (ಪ್ರ.ಶ. 1672–1704) ಆಶ್ರಯದಲ್ಲಿ ಕೆಲವರು ಬ್ರಾಹ್ಮಣ ಕವಿಗಳು ಚಂಪೂಸಾಹಿತ್ಯದ ಬೆಳವಣಿಗೆಗೆ ತುಂಬ ನೆರವಾದರು. ಚಿಕ್ಕದೇವರಾಜನ ಕಾಲದ ಹಾಗೂ ಅವನ ಪೋಷಣೆ ಪಡೆದ ಕವಿಸಮೂಹದಲ್ಲಿ ತಿರುಮಲಾರ್ಯ, ಚಿಕುಪಾಧ್ಯಾಯ, ತಿಮ್ಮಕವಿ, ಮಲ್ಲಿಕಾರ್ಜುನ, ಮಲ್ಲರಸ–ಇವರು ಚಂಪೂಕೃತಿಗಳನ್ನು ರಚಿಸಿದರು. ಇವರಲ್ಲಿ ಕೆಲವರ ಕಾವ್ಯಮಾರ್ಗದ ಮೇಲೆ ಷಡಕ್ಷರಿಯ ಪ್ರಭಾವವಾಗಿರುವುದು ಸಾಧ್ಯ. ತಿರುಮಲಾರ್ಯ (1645–1706) ಚಿಕದೇವರಾಜವಿಜಯ ಆ ದೊರೆಯ ಪೂರ್ವಜರ ವಿಷಯವನ್ನೂ ಆತನ ಜನನ ಬಾಲ್ಯಾದಿಗಳನ್ನೂ ಕುರಿತಿದೆ. ಚಿಕುಪಾಧ್ಯಾಯನ (1672) ಹಸ್ತಿಗಿರಿಮಾಹಾತ್ಮ್ಯ (1679) ಬ್ರಹ್ಮಾಂಡಪುರಾಣದ ತೀರ್ಥಕಾಂಡಕಾಲಿದ್ದ ಉಕ್ತವಾದ ಕಂಚಿಯ ಮಾಹಾತ್ಮ್ಯವನ್ನು

ಕುರಿತದ್ದು. ಕಮಲಾಚಲ ಮಾಹಾತ್ಮ್ಯ (1680) ಭವಿಷ್ಯೋತ್ತರ ಪುರಾಣದ ತೀರ್ಥಕಾಂಡದಲ್ಲಿ ಉಕ್ತವಾದ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಾಹಾತ್ಮ್ಯವನ್ನು ಕುರಿತದ್ದು. ರುಕ್ಮಾಂಗದ ಚರಿತೆ (1681) ಏಕಾದಶೀವ್ರತದ ಮಹಿಮೆಯನ್ನು ಹೇಳುತ್ತದೆ. ವಿಷ್ಣುಪುರಾಣ ಸಂಸ್ಕೃತ ವಿಷ್ಣುಪುರಾಣದ ಪರಿವರ್ತನೆ. ದಿವ್ಯಸೂರಿಚರಿತೆ 12 ಮಂದಿ ಆಳ್ವಾರರ ಚರಿತ್ರೆ. ಸಾತ್ತ್ವಿಕಬಹ್ಮವಿದ್ಯಾವಿಲಾಸ ಮತ್ತು ಅರ್ಥಪಂಚಕಗಳು ವಿಶಿಷ್ಟಾದ್ವೈತ ಮತಸಿದ್ಧಾಂತ ಗ್ರಂಥಗಳು. ತಿಮ್ಮಕವಿಯ (1677) ಯಾದವಗಿರಿ ಮಾಹಾತ್ಮ್ಯವನ್ನು (1677) ನಾರದೀಯ ಪುರಾಣೋಕ್ತವಾದ ಯಾದವಗಿರಿಯ (ಮೇಲುಕೋಟೆಯ) ಮಾಹಾತ್ಮ್ಯವನ್ನು ಕುರಿತದ್ದು. ಪಶ್ಚಿಮ ರಂಗಮಾಹಾತ್ಮ್ಯ ಶ್ರೀರಂಗಪಟ್ಟಣದ ಮಾಹಾತ್ಮ್ಯವನ್ನು ಕುರಿತದ್ದು. ವೆಂಕಟಗಿರಿಮಾಹಾತ್ಮ್ಯ (1679) ತಿರುಪತಿಯ ಮಾಹಾತ್ಮ್ಯವನ್ನು ಹೇಳುತ್ತದೆ. ಮಲ್ಲಿಕಾರ್ಜುನನ (ಪ್ರ.ಶ. 1678) ಶ್ರೀರಂಗ ಮಾಹಾತ್ಮ್ಯ ಬ್ರಹ್ಮಾಂಡಪುರಾಣದಲ್ಲಿನ ಶ್ರೀರಂಗಕ್ಷೇತ್ರದ ಮಾಹಾತ್ಮ್ಯವನ್ನು ಕುರಿತದ್ದು. ಮಲ್ಲರಸನ (ಪ್ರ.ಶ. ಸು. 1680) ದಶಾವತಾರ ಚರಿತೆಯಲ್ಲಿ ವಿಷ್ಣುವಿನ ಹತ್ತು ಅವತಾರಗಳ ಕಥನವಿದೆ. ಕೃಷ್ಣಶರ್ಮನ (ಸು. 1700) ಸರಜಾ ಹನುಮೇಂದ್ರಚರಿತೆ ತರೀಕೆರೆ ಪ್ರಭು ಸರಜಾ ಹನುಮೇಂದ್ರನ ಚರಿತ್ರೆಯಾಗಿದೆ.

ಚಿಕ್ಕದೇವರಾಯನ ಕಾಲದಿಂದೀಚೆಗೆ ಕೂಡ ಕೆಲವು ಚಂಪೂಕೃತಿಗಳು ರಚಿತವಾಗಿವೆ. ಅವುಗಳ ಒಂದು ಸಾಮಾನ್ಯ ಸಮೀಕ್ಷೆ ಹೀಗಿದೆ : ಇಮ್ಮಡಿ ಮುರಿಗೆಯ ಸ್ವಾಮಿಯ ಹಾಲಾಸ್ಯಪುರಾಣ (ಪ್ರ.ಶ. 1720) ಮಧುರೆಯ ಸುಂದರೇಶ್ವರ 64 ಲೀಲೆಗಳನ್ನು ನಟಿಸಿದ ಕಥಾವೃತ್ತಾಂತವನ್ನು ಕುರಿತಿದೆ. ವೆಂಕಟೇಶನ (ಸು. 1740) ಹಾಲಾಸ್ಯ ಮಾಹಾತ್ಮ್ಯವೂ ಶಿವಲೀಲಾಪರವಾದುದು. ಲಿಂಗಣ್ಣನ (ಸು. 1750) ಕೆಳದಿ ನೃಪವಿಜಯ ಕೆಳದಿಯ ಅರಸರ ಚರಿತ್ರೆ. ವೆಂಕಾಮಾತ್ಯನ (ಸು. 1770) ರಮಾಭ್ಯುದಯ ಕಾವ್ಯ ಲಕ್ಷ್ಮೀದೇವಿಯ ಅವತಾರವೇ ಮೊದಲಾದ ಪೌರಾಣಿಕ ಕಥೆಗಳನ್ನು ಒಳಗೊಂಡದ್ದು. ದೇವಚಂದ್ರನ ರಾಮಕಥಾವತಾರದಲ್ಲಿ (ಪ್ರ.ಶ. 1797) ಜೈನ ಸಂಪ್ರದಾಯದ ರಾಮಾಯಣ ಕಥೆ ಬಂದಿದೆ. ಚಾರುಕೀರ್ತಿ ಪಂಡಿತನ (ಚಂದ್ರಸಾಗರ ವರ್ಣಿಯ?) ಭವ್ಯಜನಚಿಂತಾಮಣಿ (1815) ಜಿನಪೂಜಾಮಹಿಮೆಯಿಂದ ಸದ್ಗತಿ ಪಡೆದವರ ಕಥೆಗಳನ್ನು ಒಳಗೊಂಡಿದೆ. ತಮ್ಮಯ ಕವಿಯ ರಾಜವಂಶರತ್ನಪ್ರಭೆ (ಪ್ರ.ಶ. 1834) ಮೈಸೂರು ಅರಸರ ಚರಿತ್ರೆ. ಅಳಿಯ ಲಿಂಗರಾಜನ ನಳಕೂಬರ ವಿಲಾಸ (ಪ್ರ.ಶ. 1851) ಪೌರಾಣಿಕ ವ್ಯಕ್ತಿಯಾದ ನಳಕೂಬರನ ಕಥೆ. ನರಪತಿಚರಿತ ಅಲಂಕಾರಗ್ರಂಥ. ವೆಂಕಟರಮಣಯ್ಯನ ಗಯೋಪಾಖ್ಯಾನ (1857) ಕೃಷ್ಣಾರ್ಜುನರ ಸಂಗ್ರಾಮದ ಪೌರಾಣಿಕ ಕಥೆ. ಹಿರಣ್ಯಗರ್ಭನ (ಸು. 1860) ಸರಸ್ವತೀ ಪ್ರಬಂಧ ಶ್ರೀ ಸರಸ್ವತೀದೇವೀ ಕಥೆಯೆಂಬ ಪೂರ್ವಕಥೆ. ಬಸವಪ್ಪಶಾಸ್ತ್ರಿಗಳ (19ನೆಯ ಶ.) ದಮಯಂತೀಸ್ವಯಂವರ ಮಹಾಭಾರತದ ನಳೋಪಾಖ್ಯಾನವನ್ನು ಕುರಿತದ್ದು.

17 ರಿಂದ 19ನೆಯ ಶತಮಾನದವರೆಗೆ ರಚಿತವಾಗಿರುವ ಈ ಚಂಪೂಸಾಹಿತ್ಯದ ವೈಲಕ್ಷಣ್ಯಗಳನ್ನು ಈಗ ಗಮನಿಸಬಹುದು; ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಆತನ ಪ್ರೇರಣೆಯಂತೆ ಆತನ ಪೋಷಣೆಯ ಹಲವರು ಕವಿಗಳೂ ಆ ಕವಿಗಳ ಪ್ರಚೋದನೆಯಿಂದ ಇತರ ಕೆಲವರೂ ಕೆಲವು ಚಂಪೂಕೃತಿಗಳನ್ನು ರಚಿಸಿದರು. ಹಲವು ಗ್ರಂಥಗಳ ಕರ್ತೃ ಚಿಕುಪಾಧ್ಯಾಯ ಸ್ವತಃ ಆರೇಳು ಚಂಪೂಕೃತಿಗಳನ್ನು ಬರೆದುದಲ್ಲದೆ ತಿಮ್ಮಕವಿ, ಮಲ್ಲಿಕಾರ್ಜುನ ಮೊದಲಾದವರ ಕೃತಿರಚನೆಗೆ ಪ್ರೇರಕನಾದ. ತಿರುಮಲಾರ್ಯ ಶುದ್ಧವಾದ ಐತಿಹಾಸಿಕ ವಸ್ತುವನ್ನು ಆಧರಿಸಿ ಮೊದಲ ಬಾರಿಗೆ ಚಂಪೂಗ್ರಂಥವನ್ನು ಬರೆದ ಮೇಲೆ, ಆ ಸಂಪ್ರದಾಯ ವೇಣುಗೋಪಾಲ ವರಪ್ರಸಾದಿ, ಕೃಷ್ಣಶರ್ಮ, ಲಿಂಗಣ್ಣ, ತಮ್ಮಯ ಕವಿ–ಇವರ ಮೂಲಕವಾಗಿ ಮುಂದುವರಿಯಿತು. ತಿರುಮಲಾರ್ಯನ ಕೃತಿಯಲ್ಲಿ ತ್ರಿಪದಿಗಳ ಜೊತೆಗೆ ಸಾಂಗತ್ಯಗಳೂ ಹಾಡುಗಳೂ ಸೇರಿವೆಯೆಂಬುದು ಒಂದು ವಿಶೇಷ. ಚಿಕುಪಾಧ್ಯಾಯ ಪುರಾಣೋಕ್ತವಾದ ಕ್ಷೇತ್ರಮಾಹಾತ್ಮ್ಯಗಳನ್ನು ಚಂಪೂ ರೂಪದಲ್ಲಿ ಅಳವಡಿಸಿ, ತಿಮ್ಮಕವಿ, ಮಲ್ಲಿಕಾರ್ಜುನ ಮೊದಲಾದವರಿಗೆ ಮಾರ್ಗದರ್ಶಕನಾದ. ಆತನ ಚಂಪೂಕೃತಿಗಳಲ್ಲಿ ಕ್ಷೇತ್ರಮಾಹಾತ್ಮ್ಯ, ಪೌರಾಣಿಕ ಕಥೆ, ಪುರಾಣಾನುವಾದ, ಆಚಾರ್ಯರ ಚರಿತ್ರೆ, ಹಾಗೂ ಮತಸಿದ್ಧಾಂತ–ಈ ವಸ್ತುವೈವಿಧ್ಯ ಅಳವಟ್ಟಿದೆ. ಈ ಚಂಪೂಕಾಲದ ಚಂಪೂಪದ್ಧತಿಯ ಪುನರುಜ್ಜೀವನಕರ್ತರಲ್ಲಿ ಈತ ಪ್ರಮುಖನಾಗಿದ್ದಾನೆ. ಈತನ ದಿವ್ಯಸೂರಿಚರಿತೆ ಮತ್ತು ಅರ್ಥಪಂಚಕಗಳು ತಮಿಳು ಮೂಲದ ಗ್ರಂಥಗಳನ್ನು ಅನುಸರಿಸಿರುವಂತೆ ತಿಳಿಯುತ್ತದೆ. ಕೃಷ್ಣಶರ್ಮನ ಕೃತಿಯಲ್ಲಿ ಅಲ್ಲಲ್ಲಿ ಸಾಂಗತ್ಯಗಳನ್ನೂ ಷಟ್ಪದಿಗಳನ್ನೂ ಬಳಸಿದೆಯಲ್ಲದೆ ವರ್ಣನೆಗೆ ಪ್ರಾಶಸ್ತ್ಯವಿದೆ. ಲಿಂಗಣ್ಣನ ಕೆಳದಿನೃಪವಿಜಯದಲ್ಲಿ ಗದ್ಯದ ಪ್ರಾಚುರ್ಯ ಕಾಣುತ್ತದೆ. ತಮ್ಮಯ ಕವಿಯ ಕೃತಿ ರುಚಿಪ್ರಚಾರ ಎಂಬ ಐದು ವಿಭಾಗಗಳನ್ನು ಒಳಗೊಂಡಿರುವುದಲ್ಲದೆ, ಅದರಲ್ಲಿ ಕೆಲವು ಸೀಸಪದ್ಯಗಳೂ ಇವೆ. ಅಳಿಯ ಲಿಂಗರಾಜನ ನರಪತಿಚರಿತ ಲಕ್ಷಣಗ್ರಂಥ ವಾಗಿದ್ದರೂ ಚಂಪೂವಿನಲ್ಲಿದೆ. ವೆಂಕಟರಮಣಯ್ಯನ ಗಯೋಪಾಖ್ಯಾನದಲ್ಲಿ ಕೆಲವು ಷಟ್ಪದಿಗಳನ್ನು ಬಳಸಿದೆ. ಹೀಗೆ ಈ ಅವಧಿಯ ಚಂಪೂಕೃತಿಗಳು ವಸ್ತುವಿನಲ್ಲಿಯೂ ರೂಪದಲ್ಲಿಯೂ ಕೆಲಮಟ್ಟಿಗೆ ಹೊಸತಾಗಿದ್ದರೂ ಒಟ್ಟಿನಲ್ಲಿ ತನ್ನ ಸಾಂಪ್ರದಾಯಿಕ ಸ್ವರೂಪದಲ್ಲಿಯೇ ಮುನ್ನಡೆದಿರುವುದೂ ಮಾರ್ಗಕವಿತ್ವವನ್ನೂ ಹಳಗನ್ನಡ ಭಾಷೆಯನ್ನೂ ಜೀವಂತವಾಗಿಡಲು ಪ್ರಯತ್ನಿಸಿರುವುದೂ ಸ್ಪಷ್ಟವಾಗಿ ಗೋಚರಿಸುತ್ತದೆ. 19ನೆಯ ಶತಮಾನವನ್ನು ದಾಟಿಬಂದಿರುವ ಈ ಕಾಲದಲ್ಲಿಯೂ ಚಂಪೂರೂಪದಲ್ಲಿ ಕೃತಿರಚನೆ ಮಾಡುವ ಪ್ರಯತ್ನ ಕ್ವಚಿತ್ತಾಗಿ ನಡೆಯುತ್ತಿದೆ. ಇದು ಆ ಸಾಹಿತ್ಯ ಪ್ರಕಾರದ ಪ್ರಭಾವವನ್ನೂ ಅದರಲ್ಲಿ ಕವಿಗಳಿಗಿರುವ ಅಭಿಮಾನವನ್ನೂ ಎತ್ತಿ ತೋರಿಸತಕ್ಕದ್ದಾಗಿದೆ.

20ನೆಯ ಶತಮಾನದಲ್ಲಿ ಚಂಪೂ ರೀತಿಯ ಭವಿಷ್ಯವೇನು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಸಾಂಪ್ರದಾಯಿಕ ರೀತಿಯಲ್ಲಿ ರಚಿತವಾದ ಚಂಪೂಕಾವ್ಯಗಳು ಕೇವಲ ಅಲ್ಲೊಂದು ಇಲ್ಲೊಂದು ಹೊರಬಂದಿರುವುದುಂಟು. ಸೋಸಲೆ ಅಯ್ಯಶಾಸ್ತ್ರಿಗಳು ಈ ಶತಮಾನದ ಆದಿಯಲ್ಲಿ ಮಹೀಶೂರ ಮಹಾರಾಜ ಚರಿತಂ ಎಂಬೊಂದು ಗ್ರಂಥವನ್ನು ರಚಿಸಿದ್ದಾರೆ. ಅನಂತರ 1950 ರಿಂದ ಈಚೆಗೆ ಟಿ. ಕೇಶವಭಟ್ಟರು ಸತ್ತ್ವಾವಲೋಕನಂ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇದು ಶ್ರೀಕೃಷ್ಣನನ್ನು ಕುರಿತ ಕಥೆ. ಇಲ್ಲಿ ಅಗತ್ಯವಾಗಿ ಸೂಚಿಸಬೇಕಾಗಿರುವ ಇನ್ನೆರಡು ಗ್ರಂಥಗಳೆಂದರೆ ವಿನಾಯಕರಚಿತ ತ್ರಿವಿಕ್ರಮರ ಆಕಾಶಗಂಗೆ ಮತ್ತು ಇಂದಲ್ಲ ನಾಳೆ. ಮೊದಲ ಕೃತಿ ಆತ್ಮಚರಿತ್ರರೂಪವಾದುದು. ಆದರೂ ಆತ್ಮವಿಕಾಸವನ್ನೇ ಪ್ರಧಾನವಾಗಿ ಚಿತ್ರಿಸುವಂಥದು. ಎರಡನೆಯದು ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿ ಮತ್ತು ಜೀವನ ಕ್ರಮಗಳ ಸಮೀಕ್ಷಾರೂಪವಾದುದು. ಎರಡರಲ್ಲಿಯೂ ಹೊಸಗನ್ನಡ ಛಂದಸ್ಸಿನ ಪದ್ಯದೊಂದಿಗೆ ಹೊಸಗನ್ನಡ ಗದ್ಯ ಹಾಸುಹೊಕ್ಕಾಗಿ ಬರುತ್ತದೆ. ಇಲ್ಲಿನ ಚಂಪೂ ಶೈಲಿಯ ಪ್ರಯೋಗ ಗಮನಾರ್ಹವಾದದು. (ಟಿ.ವಿ.ವಿ.; ಎಚ್.ಪಿ.ಎನ್.)

**ಕನ್ನಡ ಚಲನಚಿತ್ರೋದ್ಯಮ :** ಮೂಕಿಯಿಂದ ಟಾಕಿಯವರೆಗೆ: ಮುಂಬೈನ ವಾಟ್ಸನ್ ಹೋಟೆಲಿನಲ್ಲಿ 1896 ಜುಲೈ 7ರಂದು ಒಂದು ಅಪೂರ್ವ ಪ್ರದರ್ಶನ ನಡೆಯಿತು. 'ಈ ಶತಮಾನದ ಪವಾಡ ವಿಸ್ಮಯ. ಅಳೆತ್ತರದ ಜೀವಂತ ಚಿತ್ರಗಳ ಪ್ರದರ್ಶನ'. ಲ್ಯುಮಿಯೇರ್ ಸೋದರರ ಆವಿಷ್ಕಾರವಾದ 'ಸಿನಿಮಾಟೊಗ್ರಾಫಿಯ' ಆರು ಕಿರುಚಿತ್ರಗಳು. ಮನರಂಜನೆಯ ಹೊಸ ಮಾಧ್ಯಮವನ್ನು ಅನಾವರಣಗೊಳಿಸಿದವು. ಈ ಮಾಧ್ಯಮದ ಜನಪ್ರಿಯತೆಯಿಂದ ಅದರಲ್ಲಿ ಮೊದಲು ಆಸಕ್ತಿ ತೋರಿದ್ದು ಸಾಕ್ಷ್ಯ, ಸುದ್ದಿಚಿತ್ರಗಾರು. ಅನಂತರ ಪ್ರದರ್ಶನಕಾರರು, ಅವರನ್ನು ಹಿಂಬಾಲಿಸಿ ಚಿತ್ರ ತಯಾರಕ ಪ್ರದರ್ಶಕರ ನಡುವಣ ಮಧ್ಯವರ್ತಿಗಳೆನಿಸಿದ ಹಂಚಿಕೆದಾರರು.

ಪ್ರೀಮಿಯರ್ ಸ್ಟೂಡಿಯೋ – ಮೈಸೂರು

ಆಮದಾದ ಚಿತ್ರರೂಪಕಗಳ ಪ್ರದರ್ಶನಕ್ಕೆ ಚಿತ್ರಮಂದಿರಗಳು ಸಿದ್ಧವಾದವು. ಭಾರತದಲ್ಲಿ ಮೂಕ ಚಿತ್ರಗಳ ಪ್ರದರ್ಶನವಾದ ಒಂಬತ್ತು ವರ್ಷಗಳ ನಂತರ ಬೆಂಗಳೂರಿನಲ್ಲಿ ಸ್ಥಳೀಯ ಉದ್ಯಮಿಗಳು ಬಂಡವಾಳ ಹೂಡಿ ಆರಂಭಿಸಿದ ಮೊದಲ ಚಿತ್ರಮಂದಿರ 'ಪ್ಯಾರಾಮೌಂಟ್'. ಬೆಂಗಳೂರು ಕೃಷ್ಣರಾಜೇಂದ್ರ ಮಾರುಕಟ್ಟೆಯ ಎದುರಿನಲ್ಲೇ ಇದ್ದ ಎಸ್.ಎಲ್.ಎನ್. ಛಾರಿಟೀಸ್‌ನ ವಿದ್ಯಾ ಸಂಸ್ಥೆಗೆ ಸೇರಿದ ದೊಡ್ಡಣ್ಣ ಹಾಲ್‌ನ ಒಂದು ಭಾಗದಲ್ಲಿ ಪ್ರ.ಶ. 1905ರಲ್ಲಿ ಆರಂಭವಾದ ಪ್ಯಾರಾಮೌಂಟ್ ಟಾಕೀಸ್, ಚಿತ್ರೋದ್ಯಮದೊಡನೆ ಬೆಳೆದ ಮೊದಲ ಬಾಂಧವ್ಯ. 70 ವರ್ಷಕಾಲ ಅಸ್ತಿತ್ವದಲ್ಲಿತ್ತು. ಅಲ್ಲಿ ಈಗ ಅವಳಿ ಚಿತ್ರಮಂದಿರಗಳು ತಲೆ ಎತ್ತಿವೆ. ಕನ್ನಡದ ಮೊದಲ ವಾಕ್ಚಿತ್ರ ತೆರೆಕಂಡದ್ದೂ ಇದೇ ಚಿತ್ರಮಂದಿರದಲ್ಲಿ.

ಗುಬ್ಬಿ ನಾಟಕ ಕಂಪನಿ ಮಾಲಿಕರಾದ ಜಿ.ಎಚ್.ವೀರಣ್ಣನವರು ಪ್ರಯೋಗಶೀಲರು. ಸಿನಿಮಾಕ್ಕೆ ಇದ್ದ ಜನಪ್ರಿಯತೆಯನ್ನು ಮನಗಂಡು ತಾವು ಅಭಿನಯಿಸುತ್ತಿದ್ದ 'ಭಕ್ತ ಕಬೀರ್' ನಾಟಕವನ್ನೇ ಚಿತ್ರಿಸಲು ಸಿದ್ಧತೆ ನಡೆಸಿದರು. 1924ರಲ್ಲಿ ತರೀಕೆರೆಯಲ್ಲಿ ಕಂಪನಿ

ವಾಸ್ತವ್ಯಹೂಡಿದ್ದಾಗ ನಾಟಕದ ಚಿತ್ರಣ ನಡೆಸಲು ವ್ಯವಸ್ಥೆ ಮಾಡಿದರು. ನಾಟಕದಲ್ಲಿ ಅಭಿನಯಿಸುತ್ತಿದ್ದ ನಟರೇ ಚಿತ್ರದಲ್ಲೂ ಅಭಿನಯಿಸುವ ಏರ್ಪಾಟು. ಕಬೀರ ದಾಸನ ಪಾತ್ರವನ್ನು ಖ್ಯಾತರಂಗ ನಟ ಸಿ.ಬಿ.ಮಲ್ಲಪ್ಪ ಅಭಿನಯಿಸುತ್ತಿದ್ದರು. ಹಗಲು ಹೊತ್ತಿನಲ್ಲಿ ಹೊರಾಂಗಣದಲ್ಲಿ ಚಿತ್ರಣ. ಸಂಜೆ ಥಿಯೇಟರಿನಲ್ಲಿ ನಾಟಕ. ಭಾರಿ ಮಳೆ ಬಿದ್ದು ರಂಗಮಂದಿರ ಕೊಚ್ಚಿ ಹೋಯಿತು. ಚಿತ್ರೀಕರಣವಾದ ಫಿಲ್ಮ್ ಕೂಡ ನೀರು ಪಾಲಾಯಿತು. ಅಲ್ಲಿಗೆ ಚಿತ್ರೀಕರಣ ಯತ್ನ ನಿಷ್ಫಲವಾಯಿತು.



ಬೆಂಗಳೂರಿನ ಕಂಠೀರವ ಸ್ಟೂಡಿಯೊದಲ್ಲಿ ಚಿತ್ರೀಕರಣದ ಒಂದು ದೃಶ್ಯ

ಹೊರದೇಶಗಳಿಂದ ಬಂದ ಮೂಕಿ ಚಿತ್ರಗಳ ಜೊತೆಗೆ ಮುಂಬೈ, ಪುಣೆ, ಕೊಲ್ಹಾಪುರ, ಕಲ್ಕತ್ತೆ ಮೊದಲಾದ ಕಡೆಗಳಲ್ಲಿ ಮೂಕ ಚಿತ್ರಗಳ ತಯಾರಿಕೆ ಚುರುಕುಗೊಂಡಾಗ ಬೆಂಗಳೂರಿನಲ್ಲಿ ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ವಾಣಿಜ್ಯ ಚಟುವಟಿಕೆಗಳೂ ಚುರುಕುಗೊಂಡವು. ಚಲನಚಿತ್ರಗಳ ವಿತರಣೆಯಲ್ಲಿ ದಕ್ಷಿಣ ಭಾರತಕ್ಕೆ ಕೇಂದ್ರವಾಗಿ ಬೆಂಗಳೂರು ಬೆಳೆಯ ತೊಡಗಿತು. ಮದರಾಸು, ವಿಜಯವಾಡ, ತಿರುಚಿನಾಪಳ್ಳಿ ಮುಂತಾದ ಪ್ರದೇಶಗಳಲ್ಲದೆ, ಸಿಂಹಳಕ್ಕೆ ಕೂಡ ಬೆಂಗಳೂರಿನಿಂದಲೇ ಚಲನಚಿತ್ರಗಳನ್ನು ಪೂರೈಸಲಾಗುತ್ತಿತ್ತು. ಈ ಚಲನಚಿತ್ರ ವಿತರಣ ಸಂಸ್ಥೆಗಳಲ್ಲಿ ಹಣ ಹೂಡಿದವರು, ಮುಂಬೈ ಗುಜರಾತಿನ ಮೂಲದ ಪಟೇಲರು, ದೇಸಾಯಿಗಳು.

ಮುಂಬೈನ ಲಕ್ಷ್ಮೀ ಫಿಲಂ ಕಂಪನಿಯ ಪಾಲುದಾರರಾಗಿದ್ದ ಹರಿಭಾಯಿ ದೇಸಾಯಿ ಮತ್ತು ಗೆಳೆಯರು ಬೆಂಗಳೂರಿಗೆ ಬಂದಿದ್ದಾಗ, ಇಲ್ಲಿನ ಹಿತಕರವಾದ ಹವಾಮಾನ ಹಾಗೂ ನಿಸರ್ಗ ಸೌಂದರ್ಯದಿಂದ ಆಕರ್ಷಿತರಾದರು. ಬೆಂಗಳೂರಿನ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿದ್ದ ದಿವಾನ್ ಮಿರ್ಜಾರವರಿಗೆ ಸೇರಿದ ಬಂಗಲೆಯಲ್ಲಿ ಸ್ಟುಡಿಯೋ ಆರಂಭಿಸಿ, 1929ರಿಂದ 1931ರವರೆಗೆ 39 ಮೂಕ ಚಿತ್ರಗಳನ್ನು ನಿರ್ಮಿಸಿದರು. ವಿದೇಶದಲ್ಲಿ ತರಬೇತಿ ಪಡೆದು ಬಂದಿದ್ದ ಹರಿಭಾಯಿ ದೇಸಾಯಿಯವರ ಸೂರ್ಯ ಫಿಲಂ ಕಂಪನಿ ಇತರ ಕಂಪೆನಿಗಳಿಗಿಂತ ವ್ಯವಸ್ಥಿತವಾಗಿತ್ತು. ಉತ್ತಮ ತಂತ್ರಜ್ಞರಿಂದ ಕೂಡಿತ್ತು. ಚಿತ್ರಗಳ ಗುಣಮಟ್ಟವೂ ಉತ್ತಮವಾಗಿತ್ತು. ಬೇಡಿಕೆ ಕೂಡ ಇತ್ತು. ಮುಂಬೈನಿಂದ ಕರೆಸಿಕೊಂಡಿದ್ದ ಕಲಾವಿದರ ಜೊತೆಗೆ ಸ್ಥಳೀಯ ಪ್ರತಿಭೆಗಳಿಗೂ ಅವಕಾಶ ನೀಡಿದರು. ಹಾಗೆ ತಾರಾ ಪಟ್ಟಕ್ಕೇರಿದವರು, ಲಕ್ಷ್ಮೀಬಾಯಿ, ಕಮಲಾಬಾಯಿ, ಅನ್ನಪೂರ್ಣಮ್ಮ, ಸುಂದರರಾವ್ ನಾಡಕರ್ಣಿ ಮೊದಲಾದವರು.

ಬೆಂಗಳೂರಿನಲ್ಲಿ ಸಿನಿಮಾ ಚಟುವಟಿಕೆ ಆರಂಭವಾದಾಗ ಗುಬ್ಬಿವೀರಣ್ಣನವರೂ ಉತ್ಸಾಹಿತರಾದರು. ದೇವುಡು ನರಸಿಂಹಶಾಸ್ತ್ರಿ, ಓರಿಯಂಟಲ್ ಬ್ಯಾಂಕ್‌ನ ಶ್ರೀನಿವಾಸಮೂರ್ತಿ ಅವರ ಜೊತೆಗೂಡಿ ಕರ್ನಾಟಕ ಫಿಲ್ಮ್ಸ್ ಕಾರ್ಪೊರೇಷನ್ ಎಂಬ ಕೂಡುಬಂಡವಾಳ ಸಂಸ್ಥೆ ಆರಂಭಿಸಿ, ತಾವೇ ಮೊದಲಿಗೆ ರೂ.2500 ಹಣ ಹೂಡಿದರು. ತಮ್ಮ ಪ್ರಭಾವ ಬೀರಿ ಕಾಫಿಪ್ಲ್ಯಾಂಟರುಗಳು ಮತ್ತಿತರರಿಂದ ರೂ. 40,000 ಷೇರು ಧನ ಸಂಗ್ರಹಿಸಿದರು. ಮುಂಬೈ ಮೊದಲಾದ ಕಡೆಗಳಿಂದ ಅಗತ್ಯವಾದ ಹಳೆಯ ಯಂತ್ರಗಳನ್ನು ಕೊಂಡು ತಂದು, ಮಲ್ಲೇಶ್ವರದಲ್ಲಿ ಸ್ಟುಡಿಯೋ ಆರಂಭಿಸಿದರು. 1930–32ರ ಅವಧಿಯಲ್ಲಿ ದೇವುಡು ಅವರ ಪ್ರಕಟಿತ 'ಕಳ್ಳರ ಕೂಟ' ಕಥೆ ಆಧಾರಿತ ಹಿಸ್ ಲವ್ ಅಫೇರ್ಸ್, ಸಾಂಗ್ ಆಫ್ ಲೈಫ್, ಹರಿಮಾಯ ಎಂಬ ಮೂರು ಮೂಕ ಚಿತ್ರ ನಿರ್ಮಿಸಿದರು. ವೀರಣ್ಣನವರು ನಾಟಕ ಕಂಪನಿಯ ಜೊತೆ ಪ್ರವಾಸದಲ್ಲಿರುತ್ತಿದ್ದರಿಂದ, ಸ್ಟುಡಿಯೋ ಆಡಳಿತದ ಮೇಲ್ವಿಚಾರಣೆ ತಮ್ಮ ಮಿತ್ರರ ವಶಕ್ಕೆ ಕೊಟ್ಟಿದ್ದರು. ದಕ್ಷ ಆಡಳಿತದ ಕೊರತೆಯಿಂದ ಸ್ಟುಡಿಯೋ ನಷ್ಟಕ್ಕೆ ಒಳಗಾಯಿತು. ಸಾಲಕೊಟ್ಟವರ ವರಾತ. ವೀರಣ್ಣನವರ ಕಂಪನಿ ನಗೆಪಾಟಲಾಯಿತು. ತಮ್ಮ ಜವಾಬ್ದಾರಿ ಪ್ರತಿಷ್ಠೆ ಉಳಿಸಿಕೊಳ್ಳಲು ವೀರಣ್ಣನವರು, ತಮ್ಮ ಮೆಡಲುಗಳನ್ನು ಅಡವಿಟ್ಟರು. ಮನೆಮಂದಿಯ ಒಡವೆಗಳನ್ನು ಮಾರಿ ಹೊಣೆಗಾರಿಕೆ ತೀರಿಸಿದ ಮೇಲೂ, ಒಂದು ಲಕ್ಷ ರೂಪಾಯಿ ನಷ್ಟು ಸಾಲದ ಹೊರೆ ತಮ್ಮ ಮೇಲೆ ಬಿದ್ದಿತೆಂದು ಆತ್ಮಕತೆಯಲ್ಲಿ ಹೇಳಿಕೊಂಡಿದ್ದಾರೆ. ಚಿತ್ರ ತಯಾರಿಕೆ ವೀರಣ್ಣನವರ ಪಾಲಿಗೆ ಕೆಟ್ಟ ಕನಸಾಯಿತು. ಅಷ್ಟರಲ್ಲಿ ವಾಕ್ಚಲನ ಚಿತ್ರಗಳು ಯುಗಾರಂಭವಾಯಿತು. ಮುಂದೆ ತಡವಾಗಿಯಾದರೂ ನಾಟಕದ ಜೊತೆಯಲ್ಲೇ ಚಿತ್ರಂಗದಲ್ಲೂ ಕೃಷಿ ಮಾಡಿ ಆರ್ಥಿಕ ಯಶಸ್ಸು, ಕೀರ್ತಿಗಳಿಸಿದರು.

ಬುದ್ಧಿ ಜೀವಿಗಳು ಚಲನ ಚಿತ್ರ ಮಾಧ್ಯಮದಲ್ಲಿ ಆರಂಭ ಕಾಲದಿಂದಲೇ ಆಸಕ್ತಿ ತೋರಿದ್ದಾರೆ. ಕೆ. ಶಿವರಾಮಕಾರಂತರಿಗೆ ಮನರಂಜನೆ ಮೂಲಕ ಅರಿವು ಮೂಡಿಸುವ ಮಾಧ್ಯಮವಾಗಿ ಚಿತ್ರರಂಗದಲ್ಲಿ ಆಸಕ್ತಿ. ರಷ್ಯಾದಿಂದ ಚಲನ ಚಿತ್ರಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ತರಿಸಿ ಅಧ್ಯಯನ ಮಾಡಿದರು. ಫಿಲ್ಮ್ ಸಂಸ್ಕರಣಾಲಯಕ್ಕೆ ಹೋಗಿ ಫಿಲ್ಮ್ ಸಂಸ್ಕರಣಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಮನನ ಮಾಡಿಕೊಂಡರು. ಕ್ಯಾಮರಾ ಕೊಂಡು ತಾವೇ ಚಿತ್ರೀಕರಣ ನಡೆಸಿದರು. 'ಭೂತ ರಾಜ್ಯ' (1932) ಸಿದ್ಧವಾಯಿತು. ಆ ವೇಳೆಗೆ ಮೊದಲ ವಾಕ್ಚಿತ್ರ 'ಆಲಂ ಆರಾ' ತೆರೆ ಕಂಡಿತ್ತು. ಮೂಕ ಚಿತ್ರಗಳಿಗೆ ಬೇಡಿಕೆ ಕಡಿಮೆಯಾಯಿತು. ಪೌರಾಣಿಕ ಚಿತ್ರಗಳಿಗೆ ಒಗ್ಗಿದ್ದ ಜನ, ಈ ಸಾಮಾಜಿಕ ಚಿತ್ರದಲ್ಲಿ ಆಸಕ್ತಿ ತೋರಲಿಲ್ಲ. ಪ್ರದರ್ಶನಕ್ಕೆ ವ್ಯವಸ್ಥೆ ಮಾಡುವುದಾಗಿ ಮುಂದೆ ಬಂದ ಮಿತ್ರರಿಂದಲೂ ಕಾರಂತರ ಶೋಷಣೆ ನಡೆಯಿತು.

ಕನ್ನಡ ನಾಡಿನ ಮೂಕ ಚಿತ್ರಗಳ ಇತಿಹಾಸದಲ್ಲಿ ಗಣನೀಯವಾದ ಪ್ರಯತ್ನ 'ವಸಂತ ಸೇನಾ'. ಮುಂಬೈನ ಮೋಹನ್ ಭವನಾನಿ ಸದಭಿರುಚಿಯ ನಿರ್ಮಾಪಕ. ಜರ್ಮನಿಯಲ್ಲಿ ತರಬೇತಿ ಕೂಡ ಪಡೆದಿದ್ದರು. ಮೈಸೂರು ದಸರಾ ಉತ್ಸವ ಹಾಗೂ ಆನೆಗಳನ್ನು ಹಿಡಿವ

ಕಂಠೀರವ ಸ್ಟೂಡಿಯೊ – ಬೆಂಗಳೂರು

ಖೆಡ್ಡಾ ಕಾರ್ಯಕ್ರಮದ ಸಾಕ್ಷ್ಯ ಚಿತ್ರಗಳನ್ನು ಚಿತ್ರಿಸಿದ್ದರು. ಕೈಲಾಸಂರ ಪರಿಚಯ 'ಮೃಚ್ಛಕಟಿಕಾ' ಚಿತ್ರಣಕ್ಕೆ ಪ್ರೇರಣೆ. ಕೈಲಾಸಂ ಕೈ ಜೋಡಿಸಿದ್ದರು. ಬುದ್ಧಿ ಜೀವಿಗಳನ್ನು ಕಲೆ ಹಾಕಿದರು. ಬೆಂಗಳೂರು, ಮೈಸೂರು, ಶ್ರೀರಂಗಪಟ್ಟಣ, ಅಜಂತಾ ಮೊದಲಾದ ಕಡೆ ಚಿತ್ರಣವಾಯಿತು.

ಏಣಾಕ್ಷಿ ರಾಮರಾವ್ (ವಸಂತಸೇನೆ) ಜಿ.ಕೆ. ನಂದಾ (ಚಾರುದತ್ತಾ) ಕೈಲಾಸಂ (ಶಕಾರ) ಮನಶಾಸ್ತ್ರ ಪ್ರಾಧ್ಯಾಪಕ. ಡಾ. ಎನ್.ಎಸ್.ನಾರಾಯಣ ಶಾಸ್ತ್ರೀ (ಪಾಲಕ) ಕಮಲಾದೇವಿ ಚಟ್ಟೋಪಾಧ್ಯಾಯ ಡಿ.ಕೆ.ಭಾರದ್ವಾಜ್, ಬಿ. ಕೃಷ್ಣ ಮೊದಲಾದವರೆಲ್ಲ ಮುಖ್ಯ ಪಾತ್ರಗಳಲ್ಲಿದ್ದರು. ಜಟ್ಟಿ ತಾಯಮ್ಮ ನೃತ್ಯ ನಿರ್ದೇಶಕರಾಗಿದ್ದರು. ಪ್ರೊ.ವಿ. ಸೀತಾರಾಮಯ್ಯ, ಕವಿ ಜೇಮ್ಸ್ ಕಸಿನ್ಸ್, ಜಿ. ವೆಂಕಟಾಚಲಂ ಸಲಹೆಗಾರರಾಗಿದ್ದರು. ಸು. ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ತಯಾರಾದ ಚಿತ್ರ ಐದುಲಕ್ಷ ರೂಪಾಯಿಗಳಿಸಿತೆಂದು ಹೇಳಲಾಗಿದೆ. ವಿದೇಶದಲ್ಲೂ ಈ ಚಿತ್ರ ಪ್ರದರ್ಶಿತವಾಯಿತು. ಭಾರತೀಯ ಮೂಕಿ ಚಿತ್ರರಂಗದ ಇತಿಹಾಸದಲ್ಲಿ ಈ ಚಿತ್ರ ಒಂದು ಸುವರ್ಣ ಅಧ್ಯಾಯವೆನಿಸಿತು.

ಭಾರತದ ಮೊದಲ ವಾಕ್ಚಲನ ಚಿತ್ರ 'ಆಲಂ ಆರಾ' (ಮಾರ್ಚ್ 14, 1931) ತೆರೆ ಕಂಡ ಮೇಲೆ ಮೂಕ ಚಿತ್ರಗಳ ನಿರ್ಮಾಣ ಇಳಿಮುಖವಾಯಿತು. ಸೂರ್ಯ ಫಿಲಂ ಕಂಪನಿಯೂ ಅದೇ ಜಾಡು ಹಿಡಿಯಿತು. ಹರಿಭಾಯಿ ದೇಸಾಯಿ ಮುಂಬೈಗೆ ಮರಳಿದರು. ಬೆಂಗಳೂರಿನಲ್ಲಿ ಚಿತ್ರ ಹಂಚಿಕೆದಾರರು, ಚಿತ್ರ ಹಂಚಿಕೆ ಕೆಲಸವನ್ನು ಇಲ್ಲೇ ಮುಂದುವರಿಸಿದರು. ತಮ್ಮ ಮಾತೃಭಾಷೆಗಳಲ್ಲಿನ ಚಿತ್ರ ತಯಾರಿಕೆಯನ್ನು ಮುಂಬೈನಲ್ಲಿ ಮುಂದುವರೆಸಿದರು. 'ಆಲಂ ಆರಾ' ತೆರೆ ಕಂಡ ವರ್ಷವೇ ತೆಲುಗು (ಭಕ್ತ ಪ್ರಹ್ಲಾದ) ತಮಿಳು (ಕಾಳಿದಾಸ) ತೆರೆ ಕಂಡವು. ಪ್ರಥಮ ತೆಲುಗು ಚಿತ್ರದ ನಿರ್ದೇಶಕರು ಬೆಂಗಳೂರಿನ ಎಚ್.ಎಂ.ರೆಡ್ಡಿ, ಕನ್ನಡಿಗರು.

ಹರಿಭಾಯ್ ನಿರ್ಗಮಿಸುವ ವೇಳೆಗೆ ಸ್ಥಳೀಯ ಉದ್ಯಮಗಳಿಗೆ ಸಿನಿಮಾ ಆಕರ್ಷಣೀಯವೆನಿಸಲಿಲ್ಲ. ಆಸಕ್ತಿ ಇದ್ದ ವೀರಣ್ಣನವರೂ ಅದೇ ತಾನೆ ಕೈ ಸುಟ್ಟು ಕೊಂಡಿದ್ದರು. ಬೆಂಗಳೂರಿನಲ್ಲಿ ನೆಲೆಸಿದ್ದ ಹಿಂದಿ ಗುಜರಾತಿ ಪಂಚಿಕೆದಾರರು, ತಮ್ಮ ಮಾತೃಭಾಷೆಯ ಚಿತ್ರಗಳನ್ನು ತಯಾರಿಸಲು ಆದ್ಯತೆ ನೀಡಿದರು. ಆ ಕಾರ್ಯಕ್ಕೆ ಮುಂಬೈಯನ್ನೇ ಆರಿಸಿಕೊಂಡರು. ಕನ್ನಡಿಗರೇ ಆಗಿದ್ದ ಎಚ್.ಎಂ.ರೆಡ್ಡಿ. ಕೂಡ ಮದರಾಸು ಇಲ್ಲವೆ ಕೊಲ್ಕತ್ತಾ ನಿರ್ಮಾಣ ಕೇಂದ್ರಗಳ ನೆರವನ್ನು ಪಡೆದರು. ತೆಲುಗು, ತಮಿಳು ಚಿತ್ರಗಳ ತಯಾರಿಕೆಯಲ್ಲಿ ಆಸಕ್ತರಾದರು.

ಆದರೆ ಕನ್ನಡ ಭಾಷೆಯ ವಾಕ್ಚಲನ ಚಿತ್ರ ನೋಡಲು ಮೂರುವರ್ಷ ಕಾಯಬೇಕಾಯಿತು. 'ಪಾರಿಜಾತಹರಣಂ', 'ಕೋವಲನ್' ಮೊದಲಾದ ತಮಿಳು ಚಿತ್ರಗಳಲ್ಲಿ ಅಭಿನಯಿಸಿದ್ದ ನಾಗೇಂದ್ರರಾಯರು, ಕನ್ನಡ ಭಾಷೆಯ ಚಿತ್ರ ತಯಾರಿಸಲು 'ಆಲಂ ಆರಾ' ನಿರ್ಮಿಸಿದ ಆರ್ದೇಶಿರ್ ಇರಾನಿಯವರ ಮನವೊಲಿಸುವ ಪ್ರಯತ್ನ ವಿಫಲವಾಯಿತು. ಎಂ.ವಿ. ಸುಬ್ಬಯ್ಯ ನಾಯ್ಡು ಅವರ ಜೊತೆಯಲ್ಲಿ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ರೂಪಿಸುವ ವೇಳೆಗೆ ಅವರಿಗೆ ಅನೀರಿಕ್ಷಿತವಾಗಿ ಒಂದು ಅವಕಾಶ ಒದಗಿ ಬಂತು. ಬೆಂಗಳೂರಿನ ಚಿಕ್ಕ ಪೇಟೆಯಲ್ಲಿ ಪಾತ್ರೆ ವ್ಯಾಪಾರಿಗಳಾಗಿದ್ದ ಷಾ ಚಮನ್‌ಲಾಲ್ ಡುಂಗಾಜಿ ಮತ್ತು ಷಾ ಭೂರ್ ಮಲ್ ಚಮನ್‌ಲಾಲ್‌ಜಿ, ರಾಜಸ್ಥಾನದ ಮೂಲದವರು. ಕನ್ನಡ ಭಾಷಾ ಚಲನಚಿತ್ರ ನಿರ್ಮಾಣದಲ್ಲಿ ಆಸಕ್ತರಾದರು. ನಾಗೇಂದ್ರರಾಯರನ್ನು ಸಂಪರ್ಕಿಸಿದರು. ಕೊಲ್ಹಾಪುರದ ಛತ್ರಪತಿ ಸಿನಿಟೋನ್‌ನಲ್ಲಿನ ಚಿತ್ರಿಸಲಾದ 'ಸತಿ ಸುಲೋಚನಾ' 1934ರ ಮಾರ್ಚ್ 3ರಂದು ಬೆಂಗಳೂರಿನಲ್ಲಿ ತೆರೆಕಂಡ 173 ನಿಮಿಷಗಳ ವಾಕ್ಚಿತ್ರ. 40,000ರೂ. ವೆಚ್ಚದ ಈ ನಿರ್ಮಾಣದಲ್ಲಿ ಎಂ.ವಿ.ಸುಬ್ಬಯ್ಯನಾಯುಡು, ನಾಗೇಂದ್ರರಾವ್, ತ್ರಿಪುರಾಂಬ, ಲಕ್ಷ್ಮೀಬಾಯಿ ಮೊದಲಾದವರು ಅಭಿನಯಿಸಿದ್ದರು. ವೈ.ವಿ.ರಾವ್ ಪಾತ್ರವಹಿಸುವುದರ ಜೊತೆಗೆ ನಿರ್ದೇಶಕರೂ ಆಗಿದ್ದರು. ಹಳ್ಳಿಗಳಿಂದ ಜನ ಗಾಡಿ ಕಟ್ಟಿಕೊಂಡು ಬಂದು ಕನ್ನಡ ಚಿತ್ರವನ್ನು ನೋಡಿ ಸಂತೋಷಪಟ್ಟರು. ಸತಿ ಸುಲೋಚನ ಬಿಡುಗಡೆಯಾದ ಕೆಲವೇ ದಿನಗಳ ನಂತರ ತೆರೆಕಂಡ ಚಿತ್ರ. 'ಭಕ್ತಧ್ರುವ' ಅಥವ 'ಧ್ರುವಕುಮಾರ'. ವರದಾಚಾರ್ಯರ ಸೊಸೆ ಟಿ.ಕನಕಲಕ್ಷ್ಮಮ್ಮ ಅವರಿಗೆ ಆಚಾರ್ಯರಿಗಾಗಿ ಸ್ಮಾರಕ ನಿರ್ಮಿಸುವ ಹಂಬಲ. ನಿಧಿ ಕೂಡಿಸಲು ಚಲನಚಿತ್ರ ನಿರ್ಮಾಣದ ಕಲ್ಪನೆ. ಮದರಾಸಿನಲ್ಲಿ ಆಚಾರ್ಯರ ಅಭಿಮಾನಿಗಳಾದ ನಾರಾಯಣರಾಯರು, ಶ್ರೀನಿವಾಸರಾಯರ ಪ್ರೋತ್ಸಾಹ. ಆಚಾರ್ಯರ ಸೊಸೆ ಕನಕಲಕ್ಷ್ಮಮ್ಮ (ಸುನೀತಿ) ಆಚಾರ್ಯರ ಮೊಮ್ಮಗ ಮಾಸ್ಟರ್ ಮುತ್ತು (ಧ್ರುವ) ಸೌಂಡ್ ಇಂಜಿನಿಯರ್ ಟಿ. ದ್ವಾರಕನಾಥ್ (ನಾರದ) ಆಚಾರ್ಯರ ಶಿಷ್ಯರಾದ ಜಿ. ನಾಗೇಶರಾವ್ (ಉತ್ತಾನಪಾದ) ಎಂ.ಜಿ.ಮರಿರಾವ್, ದೇವುಡು ನರಸಿಂಹಶಾಸ್ತ್ರೀ ಸೀತಾರಾಮ್, ಎಚ್.ಎಸ್.ಕೃಷ್ಣಸ್ವಾಮಿ ಇವರೆಲ್ಲಾ ಈ ಉದ್ಯಮದಲ್ಲಿ ಕೈ ಜೋಡಿಸಿದರು. ವೃತ್ತಿಪರ ಹಾಗೂ ಹವ್ಯಾಸಿ ರಂಗಭೂಮಿಯ ಸಂಗಮ. ನಿರ್ದೇಶಕ, ಪಾರ್ಶ್ವನಾಥ ಅಲ್ಟೇಕರ್ ಅವರಿಗೂ ರಂಗಭೂಮಿ ಹಿನ್ನಲೆ. ಮೋಹನ್ ಭವನಾನಿ ಅವರ ಅಜಂತಾ ಸ್ಟುಡಿಯೋದಲ್ಲಿ ಚಿತ್ರಣ. ಮೂರು ತಿಂಗಳಲ್ಲಿ ಸಿದ್ಧ; ಚಿತ್ರ ಯಶಸ್ವಿ. ಭಕ್ತಧ್ರುವದ ಚಿತ್ರಪ್ರತಿ ಅಲಭ್ಯ. ಚಿತ್ರಣದಲ್ಲಿ ಭಾಗವಹಿಸಿದ ಇಡೀ ತಂಡ ಮದರಾಸಿಗೆ ಹೋಗಿ ಕೋಲಂಬಿಯಾ ಗ್ರಾಮಾಫೋನ್ ಕಂಪನಿಯಲ್ಲಿ ಚಿತ್ರದ ಮಾತು, ಹಾಡುಗಳ ಧ್ವನಿಮುದ್ರಿಕೆ ಮಾಡಿಸಿತು. ಆ ಗ್ರಾಮಾಫೋನ್ ಮುದ್ರಿಕೆಗಳು ಮಾತ್ರ ಈಗ ಲಭ್ಯ.

ಮೂಕಿ ಚಿತ್ರಗಳ ಕಾಲದಲ್ಲೇ ಚಿತ್ರರಂಗಕ್ಕೆ ಇಳಿದಿದ್ದ ಗುಬ್ಬಿ ವೀರಣ್ಣನವರಿಗೆ ವಾಕ್ಚಿತ್ರಗಳ ಆಕರ್ಷಣೆಯಿಂದ ದೂರ ಉಳಿಯಲಾಗಲಿಲ್ಲ. ಆ ದಿನಗಳಲ್ಲಿ ಗುಬ್ಬಿ ಕಂಪನಿಯ ಪ್ರಸಿದ್ಧವಾದ ನಾಟಕ ಸದಾರಮೆ. ಆ ನಾಟಕವನ್ನೇ ಚಿತ್ರಿಸಲು ಮುಂದಾದರು. ಕೋಯಿಮತ್ತೂರಿನ ಷಣ್ಮುಗಂ ಚೆಟ್ಟಿಯಾರ್ ನೆರವಿನಿಂದ ತಯಾರಾದ ಚಿತ್ರ ಸದಾರಮೆ. ಗುಬ್ಬಿ ವೀರಣ್ಣ ತಾವು ನಾಟಕದಲ್ಲಿ ಅಭಿನಯಿಸುತ್ತಿದ್ದ ಆದಿಮೂರ್ತಿ ಹಾಗೂ ಕಳ್ಳನ ಪಾತ್ರಗಳನ್ನೇ ಅಭಿನಯಿಸಿದರು. ದಕ್ಷಿಣದ ಪ್ರಸಿದ್ಧ ಗಾಯಕಿ ಅಶ್ವತ್ಥಮ್ಮ ಸದಾರಮೆ ಪಾತ್ರ ವಹಿಸಿದರು. 1935ರಲ್ಲಿ ತೆರೆ ಕಂಡ ಸದಾರಮೆ ನಾಟಕದ ಪಡಿಅಚ್ಚು. ನಾಟಕದಂತೆ ಚಿತ್ರವೂ ಜನಪ್ರಿಯವಾಯಿತು. ಎಲ್ಲ ಬಗೆಯ ಪ್ರೇಕ್ಷಕರನ್ನು ರಂಜಿಸುವ ಈ ನಾಟಕವನ್ನು ವೀರಣ್ಣನವರು 1956ರಲ್ಲಿ ಮತ್ತೆ ನಿರ್ಮಿಸಿದರು. ಆಗಲೂ ಅದು ಅತ್ಯಂತ ಯಶಸ್ವಿ ಚಿತ್ರವಾಯಿತು.

1936ರಲ್ಲಿ ತೆರೆಕಂಡ ಎಚ್.ಎಲ್.ಎನ್. ಸಿಂಹ ನಿರ್ದೇಶನದ 'ಸಂಸಾರ ನೌಕ' ದಕ್ಷಿಣದ ಪ್ರಥಮ ಸಾಮಾಜಿಕ. ಈ ಚಿತ್ರವೂ ಅದೇ ಹೆಸರಿನ ಜನಪ್ರಿಯ ನಾಟಕದ ರೂಪಾಂತರ. ನಾಟಕದಲ್ಲಿ ಜನಪ್ರಿಯತೆಗಳಿಸಿದ್ದ ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ, ಡಿಕ್ಕಿ ಮಾಧವರಾವ್ ಮೊದಲಾದವರಿಂದ ಕೂಡಿದ ಈ ಚಲನಚಿತ್ರ ದಕ್ಷಿಣದ ಪ್ರಥಮ ಸಾಮಾಜಿಕವೆನಿಸಿತು.

ಇದುವರೆಗೆ ವರ್ಷಕ್ಕೆ ಒಂದೇ ಕನ್ನಡ ಚಿತ್ರ ತೆರೆ ಕಾಣುತ್ತಿತ್ತು. ಆದರೆ 1937ರಲ್ಲಿ ಮೂರು ಚಿತ್ರಗಳು ತೆರೆ ಕಂಡವು. ಸಂಸಾರನೌಕ ನಿರ್ಮಿಸಿದ ದೇವಿ ಫಿಲಿಂಸ್‌ನವರು ಕನ್ನಡಾಭಿಮಾನದಿಂದ ತಯಾರಿಸಿದ 'ಪುರಂದರ ದಾಸ' ಯಶಸ್ವಿಯಾಗಲಿಲ್ಲ. ಈ ಸೋಲಿನಿಂದ ಸಹೃದಯಿ ಕನ್ನಡ ನಿರ್ಮಾಪಕನನ್ನು ಕನ್ನಡ ಚಿತ್ರರಂಗ ಕಳೆದುಕೊಂಡಿತು.

ಉದ್ಯಮಿ ವಿ. ತಿಮ್ಮಯ್ಯ 1936 ಜೂನ್‌ನಲ್ಲಿ ಬೆಂಗಳೂರಿನಲ್ಲಿ ಮೈಸೂರು ಸೌಂಡ್ ಸ್ಟುಡಿಯೋ ಆರಂಭಿಸಿದರು. ಟಿ.ದ್ವಾರಕನಾಥ್, ಎಂ.ವಿ.ರಾಮನ್ ಬೊಮನ್ ಇರಾನಿ ಮೊದಲಾದ ತಂತ್ರಜ್ಞರ ನೆರವನ್ನು ಪಡೆದು ತಮ್ಮ ಸ್ವಂತ ಸ್ಟುಡಿಯೋದಲ್ಲಿ ತಯಾರಿಸಿದ ಚಿತ್ರ ರಾಜಸೂಯಯಾಗ ಹಣಗಳಿಸಿತು.

ಆರಂಭ ಕಾಲದ ಚಿತ್ರಗಳಿಗೆಲ್ಲಾ ರಂಗಭೂಮಿ ಹಿನ್ನಲೆ. ಅವೆಲ್ಲ ರಂಗಭೂಮಿಯ ತದ್ರೂಪು. ಈ ಮಾತು ಕನ್ನಡಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಅನ್ಯಭಾಷಾ ಚಿತ್ರಗಳಿಗೂ ರಂಗಭೂಮಿಯ ನಂಟು, ಬಿಡಲಾಗದ ಪರಿಸ್ಥಿತಿ. ಕನ್ನಡದ ಐದನೆ ಚಿತ್ರ ಚಿರಂಜೀವಿ (1937) ಉತ್ತರ ಕರ್ನಾಟಕದವರ ಮೊದಲ ಪ್ರಯತ್ನ. ಚಿತ್ರ ಪ್ರದರ್ಶಕರಾದ ವಿ.ಎ.ಮುಧೋಳ್ಕರ್‌ರ ಕ್ಯಾನರೀಸ್ ಟಾಕೀಸ್ ನಿರ್ಮಾಣದ ಈ ಚಿತ್ರಕ್ಕೆ ಚಿತ್ರಕಥೆ, ಸಾಹಿತ್ಯ ನೀಡಿದ ದೇವುಡು ನರಸಿಂಹ ಶಾಸ್ತ್ರಿಗಳೇ ಮೃಕಂಡು ಮುನಿ ಪಾತ್ರವಹಿಸಿದ್ದರು. ಮಳವಳ್ಳಿ ಸುಂದರಮ್ಮ (ಮರುದ್ವತಿ), ಬಸವರಾಜಮನ್ಸೂರ್ (ನಾರದ) ಅಮೀರ್ ಬಾಯಿ ಕರ್ನಾಟಕಿ, ಶಾರದಾ, ನಾರಾಯಣ (ಮಾರ್ಕಂಡೇಯ) ಸಂಗೀತ ನೀಡಿದ ಹಾರ್ಮೋನಿಯಂ ಶೇಷಗಿರಿ ರಾಯರು ಇವರಿಗೆಲ್ಲಾ ನಾಟಕದ ಹಿನ್ನಲೆ. ಪುಣೆಯ ಸರಸ್ವತಿ ಸಿನಿಟೋನ್‌ನಲ್ಲಿ ಸಿದ್ಧವಾದ ಈ ಚಿತ್ರಕ್ಕೆ ಕೆ.ಪಿ.ಭಾವೆ ನಿರ್ದೇಶಕರು. ನಿಮಾಪಕ ಚಿತ್ರಪ್ರದರ್ಶಕರಾದ ವಿ.ಎ.ಮುಧೋಳ್ಕರರ ವೈಯಕ್ತಿಯ ಆಸಕ್ತಿಯ ಫಲವಾಗಿ ಆರಂಭಕಾಲದ ಈ ಚಿತ್ರದ ಪ್ರತಿಯೊಂದು ಮಾತ್ರ ಈಗ ಲಭ್ಯ. ಚಿತ್ರಕಥೆಯ ನಿರೂಪಣಾ ಶೈಲಿ (ನೋಡಿ) ಪಾತ್ರಾಧಾರಿಗಳ ಗಾನ ಲಹರಿ, ಇಂದ್ರ ಸಭೆಯ ನೃತ್ಯ, ಮಾರ್ಕಂಡೇಯನ ತಪಸ್ಸಿನಿಂದ ತಲ್ಲಣಗೊಳ್ಳುವ ಇಂದ್ರನ ಸಿಂಹಾಸನ, ಸಂತಾನಾಪೇಕ್ಷೆಗಳಾದ ಋಷಿದಂಪತಿಗಳ ಮೊರೆ ಕೈಲಾಸ ಮುಟ್ಟುವ ತಂತ್ರ ವೈಭವ, ಇವೆಲ್ಲ ಕನ್ನಡ ಚಿತ್ರರಂಗದ ಮೊದಲ ನುಡಿ, ನಡೆ. (ನೋಡಿ)

ಈ ಅವಧಿಯಲ್ಲಿ ಜಾಗತಿಕ ಸಿನಿಮಾ ವಲಯದಲ್ಲಿ ಅಷ್ಟೇಕೆ, ಭಾರತೀಯ ಸಿನಿಮಾ ಕ್ಷೇತ್ರದಲ್ಲಿ ಅತ್ಯುತ್ತಮ ಚಲನ ಚಿತ್ರಗಳು ತೆರೆ ಕಂಡಿದ್ದವು. ಪುಣೆಯ ಪ್ರಭಾತ್ ಸಂಸ್ಥೆಯವರ 'ಅಮರ ಜ್ಯೋತಿ' ಬಾಂಬೆ ಟಾಕೀಸನವರ ಅಛೂತ್ ಕನ್ಯಾ, ಇಂಗ್ಲಿಷ್‌ನಲ್ಲಿ ಬಂದ ಮಿಡ್ ಸಮ್ಮರ್ಸ್ ನೈಟ್ಸ್ ಡ್ರೀಂ, ಚಾರ್ಲಿ ಚಾಪ್ಲಿನ್ನನ ಮಾಡರ್ನ್ ಟೈಮ್ಸ್ ಮೊದಲಾದವು ತಂತ್ರಜ್ಞಾನ ದೃಷ್ಟಿಯಿಂದ, ನಿರೂಪಣಾ ಶೈಲಿ, ಕಥಾವಸ್ತುವಿನಿಂದ ಈ ಚಿತ್ರಗಳು ಇಂದಿಗೂ ಸರ್ವಶ್ರೇಷ್ಠ ಚಿತ್ರಗಳ ಸಾಲಿಗೆ ಸೇರಿವೆ. ಕನ್ನಡ ನಿರ್ಮಾಪಕರ ದೃಷ್ಟಿಗೆ ಇವು ಯಾವುದೂ ಬೀಳಲಿಲ್ಲ ಎನ್ನುವುದು ವಿಷಾದದ ಸಂಗತಿ.

ಜಾಗತಿಕ ಯುದ್ಧ ಆರಂಭವಾಯಿತು. ಕನ್ನಡ ಚಿತ್ರಗಳ ನಿರ್ಮಾಣ ಹೆಚ್ಚಬಹುದೆಂಬ ನಿರೀಕ್ಷೆಗೆ ಕಲ್ಲು ಬಿತ್ತು. ಕಚ್ಚಾಫಿಲಂ ಆಮದಿನ ಮೇಲಿನ ನಿಯಂತ್ರಣದ ಬಿಸಿ ತಾಗಿದ್ದು ಕನ್ನಡ ಚಿತ್ರರಂಗದ ಮೇಲೆ. 1938ರಿಂದ 1940ರವರೆಗೆ ಯಾವುದೇ ಚಿತ್ರ ತೆರೆ ಕಾಣಲಿಲ್ಲ. ನಿರ್ಮಾಪಕರೆಂದು ಗುರುತಿಸಲಾಗಿದ್ದವರಿಗೆ ಆದ್ಯತೆ ಮೇಲೆ ಕಚ್ಚಾಫಿಲಂ ಹಂಚಿಕೆ ಮಾಡುವ ನೀತಿ. ಈ ಮೊದಲೇ ಚಿತ್ರ ನಿರ್ಮಾಪಕರಾಗಿದ್ದ ಗುಬ್ಬಿವೀರಣ್ಣನವರಿಗೆ ಕಚ್ಚಾಫಿಲಂ ದೊರೆತು ತಯಾರಿಸಿದ ಚಿತ್ರ ಸುಭದ್ರ (1941). ಹೊನ್ನಪ್ಪ ಭಾಗವತರ್, ಬಿ. ಜಯಮ್ಮ, ವೀರಣ್ಣ ಮುಖ್ಯ ಪಾತ್ರಗಳಲ್ಲಿದ್ದ ಚಿತ್ರ, ವ್ಯಾಪಾರಿ ದೃಷ್ಟಿಯಿಂದ ಯಶಸ್ವಿ. ಈ ಚಿತ್ರದಿಂದಾಗಿ

ಬಿ. ಜಯಮ್ಮ ಅವರಿಗೆ ತಮಿಳು, ತೆಲುಗು, ಚಿತ್ರಗಳಲ್ಲಿ ಅವಕಾಶ ಲಭ್ಯವಾಯಿತು. 1940–50ರ ದಶಕದಲ್ಲಿ ಜೀವನ ನಾಟಕ, ಹೇಮರೆಡ್ಡಿ ಮಲ್ಲಮ್ಮ, ಗುಬ್ಬಿವೀರಣ್ಣನವರ ಗಮನಾರ್ಹ ನಿರ್ಮಾಣಗಳು ಜೀವನ ನಾಟಕ ಚಿತ್ರಕ್ಕೆ ಅ.ನ. ಕೃಷ್ಣರಾಯರ ಸಾಹಿತ್ಯ ರಚಿಸಿದ್ದರು.

'ಹರಿಶ್ಚಂದ್ರ' (1943) ಚಿತ್ರದ ಮೂಲಕ ನಾಗೇಂದ್ರರಾಯರು ಸ್ವತಂತ್ರ ನಿರ್ದೇಶಕರೂ ಚಿತ್ರ ಸಾಹಿತಿಯೂ ಆದರೂ, ಹರಿಶ್ಚಂದ್ರ ಯಶಸ್ವಿಯಾಗಿ ಅದು ತಮಿಳು ಭಾಷೆಗೂ ಡಬ್ ಆಯಿತು. ಇದಕ್ಕೂ ಮುನ್ನ ನಾಗೇಂದ್ರರಾಯರು ನೇತೃತ್ವದಲ್ಲಿ ರೂಪಗೊಂಡ ಚಿತ್ರ 'ವಸಂತ ಸೇನಾ' ಅದೇ ವರ್ಷ ತೆರೆಕಂಡ ಹಿಂದಿ 'ವಸಂತ ಸೇನೆ'ಗಿಂತ ಉತ್ತಮವಾಗಿ ಮೂಡಿ ಬಂದಿತು. ಈ ಎರಡೂ ಚಿತ್ರಗಳಲ್ಲಿ ಸಾಹಿತ್ಯ ಸಾಮ್ರಾಜ್ಯ ನಾಟಕ ಸಂಸ್ಥೆಯ, ಎಂ.ವಿ.ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ ಮೊದಲಾದ ಕಲಾವಿದರೇ ಅಭಿನಯಿಸಿದ್ದಾರೆ.

'ರಾಧಾ ರಮಣ' (1944) ಚಿತ್ರದ ಮೂಲಕ ಎಮ್.ವಿ.ರಾಜಮ್ಮ ಕನ್ನಡದ ಮೊದಲ ನಿರ್ಮಾಪಕಿ ಆದರು. ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವ ಪಡೆದ ಚಿತ್ರ 'ವಾಣಿ'. ಕೆ ಹಿರಣ್ಣಯ್ಯ, ಟಿ ಚೌಡಯ್ಯ ಜಿ ಆರ್‌ರಾಮಯ್ಯ ಮಿತ್ರರು ಸೇರಿ ನಿರ್ಮಿಸಿದ ಚಿತ್ರ. ಪಿಟೀಲು ವಿದ್ವಾಂಸ ಟಿ. ಚೌಡಯ್ಯ, ಚೆಂಬೈ ವೈದ್ಯನಾಥ ಭಾಗವತರ್ ಮೊದಲಾದ ಸಂಗೀತ ದಿಗ್ಗಜರ ಕಛೇರಿ ಇದ್ದ ಈ ಚಿತ್ರ ವೈಶಿಷ್ಟ್ಯಪೂರ್ಣ. ಇದು ಪಂಢರಿಬಾಯಿಯವರ ಮೊದಲ ಚಿತ್ರ. ಸಾರಿಗೆ ಉದ್ಯಮಿ ಜಿ.ಆರ್ ರಾಮಯ್ಯ 1944ರಲ್ಲಿ ಸ್ಥಾಪಿಸಿದ ನವಜ್ಯೋತಿ ಸ್ಟುಡಿಯೋ ಕನ್ನಡದಲ್ಲಿ ಕನ್ನಡ ಚಿತ್ರ ನಿರ್ಮಾಣ ಚಟುವಟಿಕೆಗೆ ಚಾಲನೆ ನೀಡಿತು. ಕಚ್ಚಾಫಿಲಂ ಅಭಾವ, ಪಡಿತರದ ಮೇಲೆ ಫಿಲಂ ಹಂಚಿಕೆ. ಸ್ಟುಡಿಯೋ ನಿರ್ಮಾಣಗಳಿಗೆ ಆದ್ಯತೆ. ಹೊಸ ನಿರ್ಮಾತೃಗಳು ಸರದಿ ಮೇಲೆ ಫಿಲಂ ಪಡೆವ ಪರಿಸ್ಥಿತಿ. ಸ್ಟುಡಿಯೋ ಪ್ರಗತಿಗೆ ಪೂರಕವಾಗಿರಲಿಲ್ಲ.

ಅರಸೀಕೆರೆಯಲ್ಲಿ ಟೂರಿಂಗ್ ಟಾಕೀಸ್ ನಡೆಸುತ್ತಿದ್ದ ಡಿ.ಶಂಕರ್‌ಸಿಂಗ್ ಮತ್ತು ವಿಠಲಾಚಾರ್ಯರು ಮೈಸೂರಿಗೆ ಬಂದು ಚಿತ್ರ ನಿರ್ಮಾಣದಲ್ಲಿ ತೊಡಗಿಕೊಂಡರು. ನವಜ್ಯೋತಿ ಸ್ಟುಡಿಯೋದಲ್ಲಿ ಈಗಾಗಲೇ ನಿರ್ಮಾಣ ಪ್ರಾರಂಭವಾಗಿದ್ದ 'ಕೃಷ್ಣಲೀಲಾ' ಚಿತ್ರವನ್ನು ಮಹಾತ್ಮ ಸಂಸ್ಥೆ ಆಶ್ರಯದಲ್ಲಿ ನಿರ್ಮಾಣ ಮುಂದುವರೆಸಿ ತೆರೆ ಕಾಣಿಸಿದರು. ಮುಂದೆ ಮಹಾತ್ಮ ಸಂಸ್ಥೆ ನಿರ್ಮಿಸಿದ 'ನಾಗಕನ್ನಿಕಾ' 'ಜಗನ್ಮೋಹಿನಿ' ಅಪೂರ್ವ ವ್ಯಾಪಾರಿ ಯಶಸ್ಸು ಗಳಿಸಿದವು. ವಿಠಲಾಚಾರ್ಯ ಮತ್ತು ಡಿ.ಶಂಕರ್‌ಸಿಂಗ್ ಜೋಡಿ ಮುಂದೆ ಪ್ರತ್ಯೇಕವಾಗಿ ಚಿತ್ರ ನಿರ್ಮಾಣಕ್ಕೆ ಇಳಿದರು. ಹಳೆಯ ಜಾಡಿನಲ್ಲೇ ಮುನ್ನಡೆದರು. ಶಂಕರ್‌ಸಿಂಗ್ ಅವರ ಮಹಾತ್ಮಪಿಕ್ಚರ್ಸ್ ಮತ್ತು ಸಹ ಸಂಸ್ಥೆಗಳು ವಜ್ರಮಹೋತ್ಸವ ಆಚರಿಸಲಿವೆ. ಇದುವರೆಗೆ ಆ ಸಂಸ್ಥೆಗಳು 40ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿವೆ.

ಉದ್ಯಮದ ವಿಕಾಸ: ಕನ್ನಡ ಚಲನಚಿತ್ರೋದ್ಯಮಕ್ಕೆ ಆಧಾರ ಶಿಲೆ ಇಟ್ಟವರು ಗುಬ್ಬಿ ವೀರಣ್ಣನವರು. ಸ್ಟುಡಿಯೋ ಸ್ಥಾಪಿಸಿ ಮೂಕ ಚಿತ್ರಗಳನ್ನು ನಿರ್ಮಿಸಿದರು. ರಂಗಭೂಮಿಯಲ್ಲಿ ಗಳಿಸಿದ್ದನ್ನು ಚಿತ್ರರಂಗದಲ್ಲಿ ಕಳೆದರು. ಆದರೂ ಧೃತಿಗೆಡದೆ ಆರಂಭದ ದಿನಗಳಲ್ಲಿ ಉತ್ತಮ ಕನ್ನಡ ವಾಕ್ಚಿತ್ರಗಳನ್ನು ನಿರ್ಮಿಸಿದರು. ಬೆಂಗಳೂರು, ತುಮಕೂರು, ತಿಪಟೂರುಗಳಲ್ಲಿ ಚಿತ್ರಮಂದಿರಗಳನ್ನು ನಿರ್ಮಿಸಿದರು. ಹಲವಾರು ನಟರನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ಅವರು ಆರಂಭಿಸಿದ ಚಲನಚಿತ್ರ ನಿರ್ಮಾಣ, ವಿತರಣೆಗಾಗಿ ಸ್ಥಾಪಿಸಿದ ಕರ್ನಾಟಕ ಫಿಲ್ಮ್ಸ್ ಲಿಮಿಟೆಡ್ ಕಂಪನಿ ಇಂದಿಗೂ ಚಿರಂಜೀವಿ.

ಕನ್ನಡ ಚಿತ್ರಗಳ ತಯಾರಿಕೆಯೇ ಇಲ್ಲದಂತಹ ಪರಿಸ್ಥಿತಿ. ಮಾರುಕಟ್ಟೆಯಲ್ಲಿ ಸಮೃದ್ಧವಾಗಿ ಲಭ್ಯವಿದ್ದ ಹಿಂದಿ, ತಮಿಳು, ತೆಲುಗು, ಚಿತ್ರಗಳನ್ನೇ ಕನ್ನಡ ಪ್ರೇಕ್ಷಕ ನೋಡಬೇಕಾದ ಅನಿವಾರ್ಯ ಸನ್ನಿವೇಶ. ಸತತವಾಗಿ 30ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿ ಕನ್ನಡ ಪ್ರೇಕ್ಷಕರನ್ನು ಹಿಡಿದಿಟ್ಟವರು. ಕನ್ನಡ ಚಿತ್ರಗಳ ನೋಡಬೇಕೆನ್ನುವ ಅಭಿರುಚಿ ಬೆಳೆಸಿದವರು ಮಹಾತ್ಮಾ ಪಿಕ್ಚರ್ಸ್‌ನ ಶಂಕರ್‌ಸಿಂಗ್. ಕನ್ನಡ ಚಿತ್ರೋದ್ಯಮಕ್ಕೆ ಸ್ಥಿರತೆಯನ್ನು ತಂದುಕೊಟ್ಟರು.

ಕನ್ನಡದ ಸಂಸ್ಕೃತಿಯ ಕೇಂದ್ರವಾಗಿ ಬೆಳೆದವರು ರಾಜಕುಮಾರ್. ತಮ್ಮ ಈ ವರ್ಚಸ್ಸಿಗೆ ಚ್ಯುತಿ ಬಾರದಂಥ ಪಾತ್ರಗಳನ್ನೇ ನಿರ್ವಹಿಸಿದರು. ಮುಂದೆ ಅವರ ಕುಟುಂಬದ ಸಂಸ್ಥೆಗಳು ನಿರ್ಮಿಸಿದ ಚಿತ್ರಗಳು ಉತ್ತಮ ನಿರ್ಮಾಣ ಅಂಶಗಳಿಂದ ಕೂಡಿದ್ದು, ಸುಕುಟುಂಬ ಪರಿವಾರ ಸಮೇತ ಮುಜುಗರವಿಲ್ಲದೆ ನೋಡಬಹುದಾದ ಚಿತ್ರಗಳು. ರಾಜಕುಮಾರ್ ಕನ್ನಡ ಚಿತ್ರಗಳಿಗೆ ಘನತೆ ಸ್ಥಿರತೆಯನ್ನು ತಂದಿತ್ತರು. (ಎಂ.ಬಿ.ಎಸ್)

ಏಕೀಕರಣದ ಅನಂತರ : 1956ರಲ್ಲಿ ಕರ್ನಾಟಕ ಏಕೀಕರಣದಿಂದಾಗಿ, ಹೈದರಾಬಾದು, ಮುಂಬಯಿ, ಹಾಗೂ ಮದರಾಸು ಪ್ರಾಂತ್ಯಗಳಿಂದ, ಕನ್ನಡ ಭಾಷೆಯೇ ಪ್ರಚಲಿತದಲ್ಲಿದ್ದ ಭಾಗಗಳು ಹಳೆಯ ಮೈಸೂರಿನೊಂದಿಗೆ ವಿಲೀನವಾಗಿ ಕರ್ನಾಟಕ ರಾಜ್ಯವಾಯಿತು. ಕನ್ನಡಿಗರ ಬಹುದಿನದ ಆಸೆ ಇದರಿಂದಾಗಿ ನನಸಾಯಿತಾದರೂ, ಅನೇಕ ಕಾರಣಗಳಿಂದಾಗಿ ಭಾವನಾತ್ಮಕವಾಗಿ ಕನ್ನಡಿಗರ ಮನಸ್ಸುಗಳು, ರಾಜಕೀಯ, ಶಿಕ್ಷಣ, ವಾಣಿಜ್ಯ, ವ್ಯವಹಾರ, ಸಾಹಿತ್ಯ, ಸಂಸ್ಕೃತಿ, ಹಾಗೂ ಇತರ ಕ್ಷೇತ್ರಗಳಲ್ಲಿ ವಿಲೀನವಾಗಲು ಸಾಕಷ್ಟು ಸಮಯ ಬೇಕಾಯಿತು. ಚಲನಚಿತ್ರರಂಗವೂ ಇದಕ್ಕೆ ಹೊರತೇನಲ್ಲ. ಆದರೆ, ಸಾಹಿತ್ಯ, ಕಲೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಚಲನಚಿತ್ರ ಮಾಧ್ಯಮದ ಮೂಲಕ, ಸಮಗ್ರ ಕನ್ನಡಿಗರಲ್ಲಿ, ಅಂದರೆ, ಹಳೇ ಮೈಸೂರಿನವರ ಹಾಗೂ ಹೊಸದಾಗಿ ವಿಲೀನಗೊಂಡಿರುವ ಉತ್ತರಕರ್ನಾಟಕದ ಪ್ರದೇಶದ ಜನರ ಮಧ್ಯೆ, ಆರ್ಥಿಕ ಹಾಗೂ ಸಾಮಾಜಿಕ ಅಂತರಗಳನ್ನು ಬದಿಗಿಟ್ಟು, ಭಾವೈಕ್ಯತೆಯನ್ನು ವೃದ್ಧಿಗೊಳಿಸಲು ಸಾಧ್ಯವಾಯಿತು. ಭಾರತದಲ್ಲಿ, ಜನಸಾಮಾನ್ಯರ ಮೇಲೆ ಚಲನಚಿತ್ರದ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂಬುದು ಇದರಿಂದ ಅರಿವಾಗುತ್ತದೆ. ನೆರೆ ರಾಜ್ಯಗಳಲ್ಲಿ ಕೂಡ ಚಲನಚಿತ್ರರಂಗ ರಾಜಕೀಯ ಕ್ಷೇತ್ರದಲ್ಲಿ ಕೂಡ ಹಲವಾರು ವರ್ಷಗಳಿಂದ ತನ್ನ ಪ್ರಭಾವವನ್ನು ಬೀರುತ್ತಲೇ ಬಂದಿದೆ.

1950ರ ದಶಕ ಪ್ರಾರಂಭವಾಗುವ ವೇಳೆಗೆ, ಕನ್ನಡ ಚಲನಚಿತ್ರರಂಗ ತನ್ನದೇ ಆದ ಬುನಾದಿಯಮೇಲೆ ತನ್ನ ಅಸ್ತಿತ್ವವನ್ನು ಕಟ್ಟಿ ಬೆಳೆಸಿಕೊಂಡಿರಲಿಲ್ಲ. ಎಲ್ಲವೂ ಪಕ್ಕದ ರಾಜ್ಯ ಮದರಾಸಿನಲ್ಲೇ ಆಗಬೇಕಾಗಿತ್ತು. ಇದುವರೆಗೆ ತಯಾರಾದ ಚಿತ್ರಗಳ ಸಂಖ್ಯೆ ಕೂಡ ಬಹು ಕಮ್ಮಿ. 1934 ರಿಂದ 1950ರವರೆಗೆ ತಯಾರಾದ ವಾಕ್ಚಿತ್ರಗಳ ಸಂಖ್ಯೆ ಕೇವಲ 28 ಮಾತ್ರ. ತಮಿಳು ಹಾಗೂ ತೆಲುಗು ಚಿತ್ರಗಳ ತಯಾರಿಕೆಗೆ ಕೇಂದ್ರವಾಗಿದ್ದ ಮದರಾಸಿನಲ್ಲಿ ಚಲನಚಿತ್ರ ನಿರ್ಮಾಣ ಚಟುವಟಿಕೆಗಳು ಬಿರುಸಿನಿಂದ ನಡೆಯತಿತ್ತು. ಅವುಗಳ ಭರಾಟೆಯ ಮಧ್ಯದಲ್ಲಿ ನುಸುಳಿಕೊಂಡು, ಆಗೊಂದು, ಈಗೊಂದು, ಕನ್ನಡ ಚಿತ್ರಗಳು ಹೊರಬರುತ್ತಿದ್ದವು. ಕನ್ನಡಿಗರು ಇಷ್ಟಕ್ಕೇ ತೃಪ್ತಿ ಪಟ್ಟುಕೊಳ್ಳಬೇಕಿತ್ತು. 1950ರ ದಶಕ ಈ ಒಂದು ಜಡತ್ವದಿಂದ ಪ್ರಾರಂಭವಾದರೂ, ಮೊದಲ ವರ್ಷದಲ್ಲೇ, ಅಂದರೆ 1951ರಲ್ಲಿಯೇ, ಎರಡು ಚಿತ್ರಗಳು, ರಾಜಾ ವಿಕ್ರಮ, ಮತ್ತು ಜಗನ್ಮೋಹಿನಿ, ತೆರೆಕಂಡು ಕನ್ನಡಿಗರ ಮನಸ್ಸನ್ನು ಸೂರೆಗೊಂಡದ್ದೇ ಅಲ್ಲದೆ, ಚಲನಚಿತ್ರರಂಗದಲ್ಲಿ ಹೊಸ ಹುರುಪನ್ನು ಮೂಡಿಸಿತು.

ಕೆಂಪರಾಜ ಅರಸರು ತಯಾರಿಸಿದ, ರಾಜಾ ವಿಕ್ರಮ, ಕನ್ನಡ ಚಿತ್ರರಂಗದಲ್ಲಿ ಒಂದು ಮೈಲಿಗಲ್ಲು. ಅದುವರೆಗೆ ತಯಾರಾದ ಯಾವಚಿತ್ರವೂ ಗಳಿಸದಷ್ಟು ಯಶಸ್ಸನ್ನು ಗಳಿಸಿ ಹೊಸ ದಾಖಲೆ ನಿರ್ಮಿಸಿ, ಕನ್ನಡ ಚಿತ್ರಗಳ ನಿರ್ಮಾಣದಲ್ಲಿ ಹಣತೊಡಗಿಸಲು ಹಿಂಜರಿಯತ್ತಿದ್ದ ಅನೇಕ ನಿರ್ಮಾಪಕರಲ್ಲಿ ಮನೆಮಾಡಿದ್ದ ಅನಿಶ್ಚತೆಯನ್ನು ಹೋಗಲಾಡಿಸಿ ಹೊಸ ಲವಲವಿಕೆ ಉಂಟು ಮಾಡಲು ಕಾರಣವಾಯಿತು. ರಾಜಾವಿಕ್ರಮದ ಕಥಾವಸ್ತುವೇನು ಹೊಸದಲ್ಲ. ಅನೇಕ ಬಾರಿ ನಮ್ಮ ಹಳ್ಳಿಗಳಲ್ಲಿ ನಡೆಯುತ್ತಿದ್ದ ಬಯಲು ನಾಟಕಗಳಲ್ಲಿ, ಹಾಗೂ ವೃತ್ತಿಪರ ರಂಗಭೂಮಿಗಳಲ್ಲಿ ಪ್ರತಿವರ್ಷವೂ ತಪ್ಪದೇ ಆಡುತ್ತಿದ್ದ ಶನಿಮಹಾತ್ಮೆ ಪೌರಾಣಿಕ ನಾಟಕದ ಕಥೆಯೇ ಇದರ ಮೂಲ ಕೂಡ. ನಮಗೆ ಗೊತ್ತಿದ್ದಂತೆ, ನಮ್ಮ ಹಳ್ಳಿಗಳಲ್ಲಿ ಅಂದಿನ ದಿನಗಳಲ್ಲಿ ಶನಿಯ ಕಾಟಗಳನ್ನು ಅನುಭವಿಸಿದ ರಾಜಾವಿಕ್ರಮ ಹಾಗೂ ವಿಶ್ವಾಮಿತ್ರನ ಕಾಟಗಳನ್ನು ಅನುಭವಿಸಿದ ಹರಿಶ್ಚಂದ್ರ, ಈ ಇಬ್ಬರ ಬಗ್ಗೆ ಹಳ್ಳಿಯ ಜನರಲ್ಲಿ ಅಪಾರ ಭಕ್ತಿ. ಇವರ ಕಥೆಗಳನ್ನು ಕೇಳಿದರೆ, ಪುಣ್ಯ ಸಿಗುವುದೆಂಬುದು ಜನರಲ್ಲಿ ಇದ್ದ ಗಾಢನಂಬಿಕೆ. ಈ ಕಥೆ ಬೆಳ್ಳಿತೆರೆಯಮೇಲೆ ಬಂದದ್ದೇ ತಡ ಜನರಿಗೆ ಸುಗ್ಗಿ ಬಂದ ಹಾಗಾಯಿತು. ಟೆಂಟ್ ಚಿತ್ರ ಮಂದಿರಗಳಲ್ಲಿ ಚಿತ್ರ ಪ್ರಾರಂಭಕ್ಕೆ ಮುಂಚೆ ಅನೇಕರು ತೆಂಗಿನಕಾಯಿ ಒಡೆದು ಮಂಗಳಾರತಿ ಮಾಡುತ್ತಿದ್ದರು. ಒಬ್ಬರಿಂದೊಬ್ಬರಿಗೆ ಈ ಚಿತ್ರದ ಬಗ್ಗೆ ಮಾಹಿತಿಗಳು ಜನರಿಗೆ ತಲುಪಿ ಹಳ್ಳಿಗಳಿಂದ ತಮ್ಮ ಕುಟುಂಬಗಳೊಂದಿಗೆ, ಎತ್ತಿನಗಾಡಿಗಳಲ್ಲಿ, ಅನೇಕರು ಪಟ್ಟಣಗಳಿಗೆ ಬಂದು ಚಿತ್ರವನ್ನು ನೋಡುತ್ತಿದ್ದರು. ಗಲ್ಲಾಪೆಟ್ಟಿಗೆ ಹಿಂದೆಂದೂ ತುಂಬದಷ್ಟು ತುಂಬಿತು. ರಾಜಾವಿಕ್ರಮನ ಪಾತ್ರದಲ್ಲಿ ಮಿಂಚಿದ ಕೆಂಪರಾಜ ಅರಸರು, ತಾವೇ ನಿರ್ದೇಶನದ ಹೊಣೆಯನ್ನೂ ಹೊತ್ತಿದ್ದರು.

ಇದೇ ಸಮಯದಲ್ಲಿ, ಅಂದರೆ 1951ರಲ್ಲಿ, ಮತ್ತೊಂದು ಯಶಸ್ವಿ ಚಿತ್ರ ಜಗನ್ಮೋಹಿನಿ ಕೂಡ ತೆರೆ ಕಂಡಿತು. ಶಂಕರಸಿಂಗ್, ವಿಠಲಾಚಾರ್ಯ, ಹುಣಸೂರು ಕೃಷ್ಣಮೂರ್ತಿ, ಪಿ. ಶಾಮಣ್ಣ ಮುಂತಾದವರು ಕೈಗೂಡಿಸಿ ತಯಾರಿಸಿದ ಈ ಚಿತ್ರ ಅನೇಕ ಕಡೆ, 25 ವಾರಗಳ ಪ್ರದರ್ಶನಗೊಂಡು ರಜತೋತ್ಸವ ಆಚರಿಸಿತು. ಶಂಕರ ಸಿಂಗ್ ಮತ್ತು ವಿಠಲಾಚಾರ್ಯರ ಜೋಡಿ ಮಹಾತ್ಮ ಪಿಕ್ಚರ್ಸ್ ಲಾಂಛನದಲ್ಲಿ 1952ರಲ್ಲಿ ಶ್ರೀನಿವಾಸಕಲ್ಯಾಣ, ಚಂಚಲಕುಮಾರಿ, ಮತ್ತು ಸಾಮಾಜಿಕ ಚಿತ್ರ ದಳ್ಳಾಳಿ, ಈ ಮೂರು ಚಿತ್ರಗಳನ್ನು ತಯಾರಿಸಿ ಕನ್ನಡ ಚಿತ್ರ ರಂಗಕ್ಕೆ ತನ್ನದೇ ಆದ ಸ್ಥಾನವನ್ನು ಗಳಿಸಿಕೊಡುವಲ್ಲಿ ಮಹತ್ತರ ಸಾಧನೆ ಮಾಡಿದರು. ಇವರ ಆಶ್ರಯದಿಂದಾಗಿ, ಹರಿಣಿ, ಪ್ರತಿಮಾ ದೇವಿ, ಜಯಶ್ರಿ, ಲಕ್ಷ್ಮಿದೇವಿ, ವೀರಭದ್ರಪ್ಪ, ಮರಿರಾವ್, ಬಾಲಕೃಷ್ಣ, ಮಹಾಬಲರಾವ್ ಮುಂತಾದ ಅನೇಕ ಕಲಾವಿದರು ಹೆಚ್ಚಾಗಿ ರಂಗಭೂಮಿಯಿಂದ ಬೆಳ್ಳಿ ತೆರೆಗೆ ಪದಾರ್ಪಣ ಮಾಡುವ ಅವಕಾಶ ದೊರಕಿತು. ಪಿ. ಶಾಮಣ್ಣ ಸಂಗೀತ ನಿರ್ದೇಶಕರಾಗಿ, ಎಮ್.ಎಸ್. ಮಣಿ ಮತ್ತು ಜಿ. ದೊರೈ ಛಾಯಾಗ್ರಾಹಕರಾಗಿ, ಹುಣಸೂರು ಕೃಷ್ಣ ಮೂರ್ತಿಗಳು ಚಿತ್ರಕಥಾಕಾರರಾಗಿ ಚಲನಚಿತ್ರ ಜಗತ್ತಿಗೆ ಪ್ರವೇಶ ಮಾಡಿ ಮುಂದಿನ ದಿನಗಳಲ್ಲಿ ದೊಡ್ಡಹೆಸರು ಮಾಡಿದ ವ್ಯಕ್ತಿಗಳಾದರು. ದಳ್ಳಾಳಿ ಚಿತ್ರವು, ಬಡ್ಡಿ ಗೋಪಾಲರಾಯರ ಹಗರಣವನ್ನು ಆಧರಿಸಿ, ಹುಣಸೂರು ಕೃಷ್ಣಮೂರ್ತಿಯವರು ರಚಿಸಿದ ಧರ್ಮರತ್ನಾಕರ ಜನಪ್ರಿಯ ಸಾಮಾಜಿಕ ನಾಟಕಕ್ಕೆ ಮಾಡಿದ ಸ್ವಲ್ಪ ಬದಲಾವಣೆಗಳೊಂದಿಗೆ ತೆರೆಕಂಡಿತು. ಅಂದಿನ ಕಾಲದಲ್ಲಿ ಇದೊಂದು ನವ್ಯ ಪ್ರಯೋಗವೆಂದೇ ಹೇಳಬೇಕು. ಈ ಚಿತ್ರ ಕೂಡ ಅಪಾರ ಯಶಸ್ಸು ಗಳಿಸಿತು.

ಈ ಒಂದು ಆಶಾದಾಯಕ ಬೆಳವಣಿಗೆಯಿಂದ, ಅನೇಕರು ಸ್ಫೂರ್ತಿಗೊಂಡರು. ಪ್ರಮುಖವಾಗಿ ಕನ್ನಡ ರಂಗಭೂಮಿಯಲ್ಲಿ ಹಾಗೂ ಮದರಾಸಿನಲ್ಲಿ ತಮಿಳು ಚಿತ್ರ ರಂಗದ ಘಟಾನುಘಟಿಗಳೊಂದಿಗೆ ಕೆಲಸ ಮಾಡಿ ನುರಿತಿದ್ದ ಆರ್. ನಾಗೇಂದ್ರರಾಯರು, ತಾವೇ ನಿರ್ಮಾಪಕರಾಗಿ, ಆರ್.ಎನ್.ಆರ್.ಪಿಕ್ಚರ್ಸ್ ಲಾಂಛನದಲ್ಲಿ ಸಾಮಾಜಿಕ, ಹಾಸ್ಯಪ್ರಧಾನವಾದ ಜಾತಕಫಲ ಚಿತ್ರವನ್ನು ಕನ್ನಡ, ತಮಿಳು ಮತ್ತು ತೆಲುಗು, ಮೂರುಭಾಷೆಗಳಲ್ಲಿ ತಯಾರಿಸಿದರು. ಇದರಿಂದಾಗಿ ಸೂರ್ಯಕಲಾ, ಕಮಲಾಬಾಯಿ, ಟಿ.ಕೆ. ಬಾಲಚಂದ್ರನ್ ಮುಂತಾದ ಅನೇಕ ಹೊಸ ನಟ ನಟಿಯರು, ಪಿ.ಬಿ.ಶ್ರೀನಿವಾಸ್, ಜಿ.ಕೆ.ವೆಂಕಟೇಶ್ ಹಿನ್ನೆಲೆ ಗಾಯಕರಾಗಿ ಕನ್ನಡ ಚಿತ್ರರಂಗಕ್ಕೆ ಪ್ರವೇಶಮಾಡಿದರು. ಈ ಚಿತ್ರವನ್ನು ರಾಯರು ಎ.ವಿ.ಎಂ ಸ್ಟುಡಿಯೋದಲ್ಲಿ ತಯಾರಿಸಿದರು.ಈ ದಶಕದಲ್ಲಿ, 1953ರಲ್ಲಿ ತೆರೆಕಂಡ ಬಿ.ವಿಠಲಾಚಾರ್ಯರ ಸೌಭಾಗ್ಯಲಕ್ಷ್ಮಿ ಚಿತ್ರದ ಮೂಲಕ ಕನ್ನಡಚಿತ್ರ ರಂಗದಲ್ಲಿ ಅಪಾರ ಯಶಸ್ಸುಗಳಿಸಿದ ರಾಜನ್–ನಾಗೇಂದ್ರ ಸೋದರರು ಸಂಗೀತ ನಿರ್ದೇಶಕರಾಗಿ ತಮ್ಮ ಕಲಾ ಪ್ರತಿಭೆಯುನ್ನು ಚಿತ್ರ ಪ್ರೇಮಿಗಳಿಗೆ ಮೊದಲ ಬಾರಿಗೆ ಪರಿಚಯಮಾಡಿಕೊಟ್ಟರು. ಇದೇ ಸಮಯದಲ್ಲಿ, ಗುಬ್ಬಿ ವೀರಣ್ಣನವರು ತಮ್ಮ ಹಿಂದಿನ ಸಂಸ್ಥೆಯಾದ ಕರ್ನಾಟಕ ಫಿಲಂಸ್ ಸಂಸ್ಥೆಯನ್ನು ಗುಬ್ಬಿ ಕರ್ನಾಟಕ ಫಿಲಂಸ್ ಎಂದು ಮರು ನಾಮಕರಣ ಮಾಡಿ, ಮತ್ತೆ ಚಿತ್ರರಂಗಕ್ಕೆ ಹೆಚ್ಚು ಉತ್ಸಾಹದಿಂದ ಧುಮುಕಿ ಗುಣಸಾಗರಿ ಚಿತ್ರವನ್ನು ತಯಾರಿಸಿದರು. ಹಿಂದೆ ಸಂಸಾರ ನೌಕ ಚಿತ್ರ ನಿರ್ದೇಶಿಸಿದ್ದ ಹೆಚ್.ಎಲ್.ಎನ್.ಸಿಂಹರವರು ಈ ಚಿತ್ರವನ್ನು ನಿರ್ದೇಶಿಸಿದರು. ಹೊನ್ನಪ್ಪ ಭಾಗವತರು, ಗುಬ್ಬಿ ವೀರಣ್ಣನವರು, ಬಿ.ಜಯಮ್ಮ, ಟಿ.ಎಸ್.ಕರಿಬಸವಯ್ಯ, ಪಂಢರಿಬಾಯಿ, ಕೃಷ್ಣಕುಮಾರಿ, ಮುಂತಾದವರು ತಾರಾಗಣದಲ್ಲಿದ್ದರು. 1954ರಲ್ಲಿ ನಡೆದ ಸಂತಸದ ಸಂಗತಿಯೆಂದರೆ ಸುಬ್ಬಯ್ಯನಾಯ್ಡು ಅವರ ನಾಟಕ ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದ ಯುವಕ ಎಸ್.ಪಿ.ಮುತ್ತುರಾಜ್ ಎಂಬುವರನ್ನು ಗುಬ್ಬಿ ವೀರಣ್ಣನವರ ಮುಂದಿನ ಚಿತ್ರ ಬೇಡರಕಣ್ಣಪ್ಪ ಚಿತ್ರದಲ್ಲಿ ಕಣ್ಣಪ್ಪನ ಪ್ರಮುಖ ಪಾತ್ರದಲ್ಲಿ ನಟಿಸಲು ಆಯ್ಕೆಯಾದದ್ದು. ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರ ಪುತ್ರರಾದ ಈ ವ್ಯಕ್ತಿಯೇ ಮುಂದೆ ರಾಜಕುಮಾರ್ ಹೆಸರಿನಿಂದ ಕನ್ನಡಿಗರ ಹೆಮ್ಮೆಯ, ಪ್ರೀತಿಯ ಡಾ॥ ರಾಜಕುಮಾರ್ ಆಗಿ ರಾರಾಜಿಸಿದರು. ಇದೇ ಹೆಸರಿನ ನಾಟಕದಲ್ಲಿ ಪಾತ್ರವಹಿಸುತ್ತಿದ್ದ ಜಿ.ವಿ.ಅಯ್ಯರ್, ನರಸಿಂಹರಾಜು ಅವರು ಚಿತ್ರದಲ್ಲಿಯೂ ಅದೇ ಪಾತ್ರಗಳನ್ನು ವಹಿಸಿದರು. ಬೇಡರ ಕಣ್ಣಪ್ಪ ಚಿತ್ರ ಚಿತ್ರಮಂದಿರಗಳಲ್ಲಿ ತೆರೆಕಂಡ ಮೇಲೆ, ಕನ್ನಡನಾಡಿನ ಎಲ್ಲ ಭಾಗಗಳಿಂದ ಪ್ರಶಂಸೆಗಳ ಸುರಿಮಳೆ ಧಾರಾಕಾರವಾಗಿ ಬರಲಾರಂಭಿಸಿತು. ಎಲ್ಲರ ಬಾಯಿಯಲ್ಲೂ ಚಿತ್ರದ ಗೀತೆಗಳೇ. ಗೀತೆಗಳಿಗೆ ರಾಗ ಸಂಯೋಜನೆ ಮಾಡಿದ ಸುದರ್ಶನ್‌ರವರು, ನಾಟಕ ರಂಗದಿಂದ ಚಿತ್ರ ರಂಗಕ್ಕೆ ಪ್ರವೇಶ ಮಾಡಿ ವಿಜೃಂಭಿಸಿದ ಮುತ್ತುರಾಜ್, ಜಿ.ವಿ.ಅಯ್ಯರ್ ಮತ್ತು ನರಸಿಂಹರಾಜು, ನಿರ್ದೇಶಕರಾಗಿ ಹೆಚ್.ಎಲ್.ಎನ್.ಸಿಂಹರವರು, ನಿರ್ಮಾಪಕರಾಗಿ ಗುಬ್ಬಿ ವೀರಣ್ಣನವರು ಈ ಚಿತ್ರದ ಮೂಲಕ ಕನ್ನಡಿಗರು ಹೆಮ್ಮೆ ಪಟ್ಟುಕೊಳ್ಳಬಹುದಾದಂತಹ ಕಾರ್ಯ ಮಾಡಿದರು. ಅಪಾರ ಯಶಸ್ಸುಗಳಿಸಿದ್ದೇ ಅಲ್ಲದೆ, ರಾಷ್ಟ್ರಮಟ್ಟದಲ್ಲಿ ಅರ್ಹತಾ ಪತ್ರ ಗಳಿಸುವ ಮೂಲಕ ರಾಷ್ಟ್ರಪ್ರಶಸ್ತಿಗೆ ಪಾತ್ರವಾದ ಮೊದಲ ಕನ್ನಡ ಚಿತ್ರವಾಯಿತು. 1954ರಲ್ಲಿ ತೆರೆಕಂಡ ಇತರ ಚಿತ್ರಗಳಲ್ಲಿ, ಬಿ. ವಿಠಲಾಚಾರ್ಯರು ತಮ್ಮದೇ ಆದ ವಿಠಲ್ ಪ್ರೊಡಕ್ಷನ್ ಲಾಂಛನದಲ್ಲಿ ಮಾಡಿದ ಕನ್ಯಾದಾನ. ಕಪ್ಪು ಬಣ್ಣದ ಹೆಣ್ಣು ಮಗಳ ಮದುವೆಯ ವಸ್ತುವನ್ನು ಅಧಾರಮಾಡಿಕೊಂಡು ತಯಾರಿಸಿದ ಈ ಚಿತ್ರ ಅತ್ಯಂತ ಯಶಸ್ವಿಯಾಗಿ, ಈ ಚಿತ್ರದಲ್ಲಿ ಅತ್ಯಂತ ಪ್ರಮುಖ ಪಾತ್ರವಾದ ದಳ್ಳಾಳಿ ಸೀತಾರಾಮಯ್ಯನ ಪಾತ್ರದಲ್ಲಿ ಟಿ.ಎನ್. ಬಾಲಕೃಷ್ಣ ರವರು ಒಳ್ಳೆಯ ಅಭಿನಯ ನೀಡಿ ಕನ್ನಡ ಚಿತ್ರಪ್ರೇಮಿಗಳ ಹೃದಯದಲ್ಲಿ ತಮ್ಮ ಸ್ಥಾನವನ್ನು ದಾಖಲಿಸಿದರು. ಮತ್ತೊಂದು ವಿಶೇಷವೆಂದರೆ, ಇದೇ ವರ್ಷದಲ್ಲಿ ನಟಶೇಖರ ಚಿತ್ರದ ಮೂಲಕ ಚೊಕ್ಕಣ್ಣ ಎಂಬ ಯುವಕನ ನಟನೆ ಜನಪ್ರಿಯತೆಗಳಿಸಿದ್ದು. ಇದೇ ಚೊಕ್ಕಣ್ಣ ಮುಂದೆ ತನ್ನ ಹೆಸರನ್ನು ಕಲ್ಯಾಣ್ ಕುಮಾರ್ ಎಂದು ಬದಲಾವಣೆ ಮಾಡಿಕೊಂಡು, ಕನ್ನಡ ಹಾಗೂ ತಮಿಳು ಚಿತ್ರಗಳಲ್ಲಿ ಖ್ಯಾತ ನಟನಾಗಿ ಹೆಸರು ಮಾಡಿದರು.

1955ರಲ್ಲಿ, ಇದುವರೆಗೆ ಚಿತ್ರಗಳಲ್ಲಿ ಅಭಿನಯ, ಸಂಗೀತ, ಹಾಗೂ ತಮ್ಮ ಸುಶ್ರಾವ್ಯ ಗಾಯನಗಳ ಮೂಲಕ ಪರಿಚಿತರಾಗಿದ್ದ ಹೊನ್ನಪ್ಪಭಾಗವತರು, ಲಲಿತಕಲಾ ಫಿಲಂ ಸಂಸ್ಥೆಯನ್ನು ಸ್ಥಾಪಿಸಿ ಮಹಾಕವಿ ಕಾಳಿದಾಸ ಚಿತ್ರವನ್ನು ಕನ್ನಡದಲ್ಲಿ ತಯಾರಿಸಿದರು. ವಿಶೇಷವೆಂದರೆ, ಹೆಸರಾಂತ ನಟಿ ಸರೋಜಾದೇವಿ ಈ ಚಿತ್ರದಲ್ಲಿ ಮೊದಲಬಾರಿಗೆ ಮುಖ್ಯ ಪಾತ್ರವಹಿಸಿದ್ದು. ಇಷ್ಟು ಹೊತ್ತಿಗಾಗಲೇ ಕೆಲವು ಚಿತ್ರಗಳಿಗೆ ಸಾಹಿತ್ಯ ಒದಗಿಸಿದ್ದ ಕು.ರಾ.ಸೀತಾರಾಮಶಾಸ್ತ್ರೀಯವರು ಈ ಚಿತ್ರಕ್ಕೆ ಸಾಹಿತ್ಯ ಹಾಗೂ ನಿರ್ದೇಶನದ ಜವಾಬ್ದಾರಿಯನ್ನು ನಿರ್ವಹಿಸಿದರು. ಜನಪ್ರಿಯವಾದ ಹಾಡುಗಳಿಂದ, ಹಾಗೂ ರಾಷ್ಟ್ರಪತಿಗಳಿಂದ ಅರ್ಹತಾಪತ್ರ ಗಳಿಸಿದ ಖ್ಯಾತಿಯಿಂದ ಈ ಚಿತ್ರ ಒಂದು ಮಹತ್ವದ ಚಿತ್ರವಾಯಿತು.

ಈ ದಶಕದಲ್ಲಿ ಸುದ್ದಿಗೆ ಗ್ರಾಸವಾದ ಮತ್ತೊಂದು ಚಿತ್ರ ಮೊದಲತೇದಿ. 1955ರಲ್ಲಿ, ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ, ಬಿ.ಆರ್.ಪಂತುಲು ಅವರು, ಪಿ.ನೀಲಕಂಠನ್ ನಿರ್ದೇಶನದಲ್ಲಿ ತಯಾರಿಸಿದ ಈ ಚಿತ್ರದಲ್ಲಿ, ಪಂತುಲು ಮತ್ತು ರಾಜಮ್ಮ ನವರು ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡು, ಮುಂಬರುವ ಈ ತಂಡದ ಚಿತ್ರಗಳಿಗೆ ಈ ಜೋಡಿಯು ನಾಂದಿಯಾಯಿತು. ಈ ಚಿತ್ರದ ಸಂಗೀತ ನಿರ್ದೇಶಕರಾದ ಟಿ.ಜಿ.ಲಿಂಗಪ್ಪನವರು ಮುಂದಿನ ಅನೇಕ ಪಂತುಲು ತಂಡದ ಚಿತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು ಮತ್ತು ಕನ್ನಡ ಚಿತ್ರ ರಂಗದಲ್ಲಿ ಅಸಂಖ್ಯಾತ ಜನಪ್ರಿಯ ಹಾಡುಗಳನ್ನು ಸಂಯೋಜಿಸಿ ಖ್ಯಾತಿಗಳಿಸಿದರು. ಪಂಢರೀಬಾಯಿಯವರ ಸಂತಸಖಿ, ಟಿ.ವಿ.ಸಿಂಗ್ ಠಾಕೂರ್ ಮತ್ತು ಜಿ.ಕೆ.ವಿಶ್ವನಾಥ ಶೆಟ್ಟಿ ತಯಾರಿಸಿದ ಸೋದರಿ, ಮೈಸೂರಿನಲ್ಲಿ ಪ್ರೀಮಿಯರ್ ಸ್ಟುಡಿಯೊ ಸ್ಥಾಪಿಸಿದ ಎಂ.ಎನ್. ಬಸವರಾಜಯ್ಯನವರು ತಮ್ಮ ಸ್ಟುಡಿಯೊದಲ್ಲಿ ತಾವೇ ತಯಾರಿಸಿದ ಚೊಚ್ಚಲ ಚಿತ್ರ ಸ್ತ್ರೀರತ್ನ, ಶಂಕರ ಸಿಂಗ್ ಮತ್ತು ಬಿ.ಆರ್.ಪಂತುಲು ಅವರು ಪ್ರತ್ಯೇಕವಾಗಿ ನಿರ್ಮಿಸಿದ, ಒಂದೇ ಕಥಾವಸ್ತುವಿನ ಶಿವಶರಣೆ ನಂಬಿಯಕ್ಕ, ಬಿ.ಆರ್. ಕೃಷ್ಣಮೂರ್ತಿ ಅವರ ಶ್ರೀ ರಾಮ ಪೂಜ, ಎಸ್. ಎಸ್. ವೈದ್ಯ ಅವರ ವಿಚಿತ್ರ ಪ್ರಪಂಚ ಈ ಚಿತ್ರಗಳು 1955ರಲ್ಲಿ ಕನ್ನಡಿಗರನ್ನು ತಲುಪಿದ ಉಳಿದ ಚಿತ್ರಗಳು. ಸ್ತ್ರೀರತ್ನ ಚಿತ್ರದ ಮೂಲಕ ಕನ್ನಡ ಚಿತ್ರರಂಗದಲ್ಲಿ ಹೆಸರಾಂತ ನಟನಾಗಿ ಅನೇಕ ವರ್ಷಗಳ ಸೇವೆ ಸಲ್ಲಿಸಿರುವ ಕೆ.ಎಸ್.ಅಶ್ವತ್ ಅವರು ಮೊದಲಬಾರಿಗೆ ತೆರೆಯಮೇಲೆ ಕಾಣಿಸಿಕೊಂಡದ್ದು ವಿಶೇಷ ಸಂಗತಿ. ಸ್ತ್ರೀರತ್ನ ಭಾಗಶಃ ವರ್ಣದಲ್ಲಿ ತಯಾರಾದ ಚಿತ್ರ. 1950 ರದಶಕದ ಪ್ರಾರಂಭದವರೆಗೆ, ಕನ್ನಡ ಚಿತ್ರರಂಗ ಮಂದಗತಿಯಲ್ಲೇ ಚಲಿಸುತ್ತ ಬಂದರೂ, 1956ರಲ್ಲಿ ಕರ್ನಾಟಕ ಏಕೀಕರಣವಾಗುವ ಹೊತ್ತಿಗೆ, ಈ ಐದು ವರ್ಷಗಳ ಅವಧಿಯಲ್ಲಿ ಹಲವಾರು ಆರೋಗ್ಯಕರ ಬೆಳವಣಿಗೆಗಳಿಂದ ಆಶಾದಾಯಕ ಸ್ಥಿತಿ ತಲುಪಿತ್ತು.

1956 ರ ಒಳ್ಳೆಯ ಸುದ್ದಿಯೆಂದರೆ, ಅರೂರು ಪಟ್ಟಾಭಿ ನಿರ್ದೇಶನದಲ್ಲಿ ತಯಾರಾದ ಹರಿಭಕ್ತ ಚಿತ್ರಕ್ಕೆ ಅರ್ಹತಾ ಪತ್ರದ ಮೂಲಕ ರಾಷ್ಟ್ರ ಪ್ರಶಸ್ತಿ ಲಭಿಸಿತು. 1957ರಲ್ಲಿ ಆರ್.ಎನ್.ಆರ್. ಲಾಂಛನದಲ್ಲಿ, ಆರ್.ನಾಗೇಂದ್ರ ರಾಯರ ನಿರ್ದೇಶನದಲ್ಲಿ ರೂಪುಗೊಂಡ ಚಿತ್ರ ಪ್ರೇಮದಪುತ್ರಿ, ವಿಮರ್ಶಕರಿಂದ, ಚಿತ್ರಪ್ರೇಮಿಗಳಿಂದ, ಹಾಗೂ ರಾಷ್ಟ್ರ ಮಟ್ಟದಲ್ಲಿ ರಜತ ಪದಕ ಗಳಿಸಿ, ಒಂದು ಉತ್ತಮ ಚಿತ್ರವೆನಿಸಿಕೊಂಡಿತು. ರಾಯರ ಪುತ್ರ ಆರ್.ಎನ್. ಜಯಗೋಪಾಲ್ ಈ ಚಿತ್ರದಲ್ಲಿ ಸಾಹಿತಿಯಾಗಿ, ಮತ್ತು ಎಸ್.ಜೆ.ಪಾಲಿಟೆಕ್ನಿಕ್‌ನಲ್ಲಿ ಛಾಯಾಗ್ರಹಣದಲ್ಲಿ ಪದವಿ ಪಡೆದಿದ್ದ ಮತ್ತೊಬ್ಬ ಪುತ್ರ ಆರ್.ಎನ್. ಕೃಷ್ಣಪ್ರಸಾದ್ ರವರು ಛಾಯಾಗ್ರಾಹಕರಾಗಿ ಕೆಲಸ ಮಾಡಿದರು. ಅಂದಿನ ದಿನಗಳ ಹಿಂದಿ, ತಮಿಳು, ತೆಲುಗು ಚಿತ್ರಗಳ ಪ್ರಭಾವ ಕನ್ನಡಿಗರ ಮೇಲೆ ಹೆಚ್ಚಾಗಿ ಪರಿಣಾಮ ಬೀರುತ್ತಿದ್ದ ಕಾಲ. ಅನೇಕ ಹಾಡುಗಳು ಇತರ ಭಾಷೆಗಳ ಜನಪ್ರಿಯ ಹಾಡುಗಳ ಅನುಕರಣೆಯಾಗುತ್ತಿದ್ದವು. ತಮಿಳಿನಲ್ಲಿ ಮಲೈಕಳ್ಳನ್, ಹಿಂದಿಯಲ್ಲಿ ಆಜಾದ್, ಹೆಸರಿನಲ್ಲಿ ಪಕ್ಷಿರಾಜ ಸ್ಟುಡಿಯೊ ಮಾಲೀಕರಾದ ಎಸ್.ಎಂ.ಎಸ್ ನಾಯ್ಡು ಅವರು ಚಿತ್ರಗಳನ್ನು ತಯಾರು ಮಾಡಿ ಅಪಾರ ಯಶಸ್ಸು ಗಳಿಸಿದ್ದರು. 1957ರಲ್ಲಿ ಅವರು ಅದೇ ಚಿತ್ರವನ್ನು ಕನ್ನಡದಲ್ಲಿ ಬೆಟ್ಟದ ಕಳ್ಳ ಹೆಸರಿನಲ್ಲಿ ಮತ್ತೆ ಮಾಡಿದರು. ಈ ಚಿತ್ರದಲ್ಲಿ ತಾರಾಪಟ್ಟವೇರಿದ ಕಲ್ಯಾಣ್ ಕುಮಾರ್ ರವರು ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡರು, ಮತ್ತು ಚಿತ್ರ ಒಳ್ಳೆಯ ಲಾಭಗಳಿಸಿತು. ಅದೇ ವರ್ಷದಲ್ಲಿ ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ, ಪಂತುಲು ರವರ ನಿರ್ದೇಶನದಲ್ಲಿ ಕನ್ನಡ ಮತ್ತು ತಮಿಳು ಎರಡೂ ಭಾಷೆಗಳಲ್ಲಿ ತಯಾರಾದ ಚಿತ್ರ ರತ್ನಗಿರಿ ರಹಸ್ಯ. ಉದಯಕುಮಾರ್, ಸಾಹುಕಾರ್ ಜಾನಕಿ, ಜಮುನಾ, ಎಂ.ವಿ. ರಾಜಮ್ಮ, ಡಿಕ್ಕಿ ಮಾಧವ ರಾವ್ ಮುಂತಾದವರು ನಟಿಸಿದ ಈ ಚಿತ್ರ ಜಾನಪದ ಕಥೆಯ ಆಧಾರದಮೇಲೆ ರಚನೆಗೊಂಡು, ಸಾಹಸಮಯ ದೃಶ್ಯಗಳನ್ನು ಅದ್ದೂರಿಯಾಗಿ ಚಿತ್ರಿಸಿದ ಚಿತ್ರ. ಕಣಗಾಲ್ ಪ್ರಭಾಕರ ಶಾಸ್ತ್ರಿಯವರ ಲೇಖನಿ ಹಾಗೂ ಟಿ.ಜಿ.ಲಿಂಗಪ್ಪ ನವರ ರಾಗ ಸಂಯೋಜನೆಯ ಫಲವಾಗಿ ಮೂಡಿಬಂದ ಸುಂದರ ಹಾಡುಗಳಿಂದ, ಮನಮೋಹಕ ನೃತ್ಯಗಳಿಂದ, ಜನಪ್ರಿಯವಾಯಿತು. ಪಂಢರಿಬಾಯಿಯವರು ತಯಾರಿಸಿದ ರಾಯರಸೊಸೆ ಚಿತ್ರದಲ್ಲಿ ರಾಜ್‌ಕುಮಾರ್ ರವರು ಪ್ರಥಮಬಾರಿಗೆ ಸಾಮಾಜಿಕ ಚಿತ್ರದಲ್ಲಿ ಅಭಿನಯಿಸುವಂತಾಯಿತು.

1958ರ ಮತ್ತೊಂದು ವಿಶೇಷ: ಸ್ಕೂಲ್ ಮಾಸ್ಟರ್ ಚಿತ್ರದ ಆಗಮನ. ರತ್ನಗಿರಿ ರಹಸ್ಯ ಚಿತ್ರದ ಯಶಸ್ಸಿನಿಂದ ಸ್ಫೂರ್ತಿ ಗೊಂಡ ಪಂತುಲು ಈ ಚಿತ್ರವನ್ನು ಕಲಾತ್ಮಕವಾಗಿ ನಿರ್ದೇಶಿಸಿದರು. ತಾವೇ ಸ್ವತಃ ಮುಖ್ಯ ಪಾತ್ರವಾದ ಸ್ಕೂಲ್ ಮಾಸ್ಟರ್ ಆಗಿ ಅಭಿನಯ ನೀಡಿ ಕನ್ನಡದ ಮನೆ ಮಂದಿಗಳಿಗೆ ಆದರ್ಶ ವ್ಯಕ್ತಿಯಾದರು. ಈ ಸಾಮಾಜಿಕ ಚಿತ್ರ 25 ವಾರಗಳು ಸತತವಾಗಿ ಪ್ರದರ್ಶನಗೊಂಡು ಒಂದು ದಾಖಲೆಯನ್ನೇ ಸ್ಥಾಪಿಸಿತು. ಎಲ್ಲ ವರ್ಗದ ಜನರಿಂದ ನೋಡಲ್ಪಟ್ಟು, ಅತಿಶಯವಾದ ಮೆಚ್ಚುಗೆಯನ್ನು ಪಡೆಯಿತು. ಎಲ್ಲಕ್ಕಿಂತ ಹೆಚ್ಚಾಗಿ ರಾಷ್ಟ್ರಪತಿಗಳ ರಜತಪದಕ ಹಾಗೂ ಅರ್ಹತಾ ಪತ್ರ ಎರಡೂ ಲಭಿಸಿದವು. 1950ರ ದಶಕದಲ್ಲಿ, ಕನ್ನಡ ಚಿತ್ರ ರಂಗದಲ್ಲಿ ಜರುಗಿದ ಪ್ರಗತಿಪಥದಲ್ಲಿ, ಇದು ಮಹತ್ವದ

ಸಾಧನೆ. ಎ.ವಿ.ಎಂ ಪ್ರೊಡಕ್ಷನ್ ಲಾಂಛನದಲ್ಲಿ, ದುಬಾರಿಯ ವೆಚ್ಚದಲ್ಲಿ ತಯಾರಾದ ಭೂಕೈಲಾಸ, ಸುಬ್ಬಯ್ಯನಾಯ್ದು ಅವರ ಭಕ್ತ ಪ್ರಹ್ಲಾದ, ಗಿರಿಜಾ ಪ್ರೊಡಕ್ಷನ್ ಆಶ್ರಯದಲ್ಲಿ ತಯಾರಾದ ಅಣ್ಣ ತಂಗಿ, ಬಿ.ಎಸ್.ರಂಗಾ ಅವರ ಮಹಿಷಾಸುರಮರ್ದಿನಿ, ಎಮ್.ವಿ.ರಾಜಮ್ಮ ಅವರ ಮಕ್ಕಳ ರಾಜ್ಯ, ಡಿ.ಆರ್.ನಾಯ್ದು ಅವರ ಭಕ್ತ ಕನಕದಾಸ, ಶಶಿಕಲಾಚಿತ್ರ ರವರ ಜಗಜ್ಯೋತಿ ಬಸವೇಶ್ವರ ಮತ್ತು ಕನ್ನಡ ಚಲನಚಿತ್ರ ಕಲಾವಿದರ ಸಂಘದಿಂದ ತಯಾರಾದ ರಣಧೀರ ಕಂಠೀರವ, ಈ ಚಿತ್ರಗಳು ಈ ದಶಕದ ಇತರ ಪ್ರಮುಖ ಚಿತ್ರಗಳೆಂದು ಪರಿಗಣಿಸಬಹುದು. ಭಕ್ತ ಕನಕದಾಸ ಮತ್ತು ಜಗಜ್ಯೋತಿ ಬಸವೇಶ್ವರ ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿಯೂ ಲಭಿಸಿತು.

ಕು.ರಾ.ಸೀತಾರಾಮಶಾಸ್ತ್ರೀಯವರು ನಿರ್ದೇಶಿಸಿದ ಅಣ್ಣತಂಗಿ ಚಿತ್ರಕ್ಕೆ ಅವರೇ ಸಾಹಿತ್ಯವನ್ನೂ ಬರೆದರು. ಈ ಚಿತ್ರದಲ್ಲಿ ರಾಜಕುಮಾರ್ ಮತ್ತು ಸರೋಜಾದೇವಿಯವರ ಅಭಿನಯ ಕನ್ನಡಿಗರ ಮನಸ್ಸಿನಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ಹಳ್ಳಿಯಲ್ಲಿ ಬಳಸುವ ಅಚ್ಚ ಗ್ರಾಮೀಣ ಭಾಷೆಯ ಸಂಭಾಷಣೆ, ನಿಷ್ಕಲ್ಮಷವಾದ, ಮುಗ್ಧತೆಯ ಹೃದಯಗಳು, ಮರೆಯಲಾಗದಂತಹ ಹಾಡುಗಳು ಈ ಚಿತ್ರದ ಆಕರ್ಷಣೆ. ಇಂದಿಗೂ ನೋಡಿ ಆನಂದಿಸಬಹುದಾದಂತಹ ಚಿತ್ರ. ಭಕ್ತ ಕನಕದಾಸ ಚಿತ್ರದ ಮುಖ್ಯ ಪಾತ್ರದಲ್ಲಿ ರಾಜಕುಮಾರ್ ಅವರ ಅಚ್ಚುಕಟ್ಟಾದ ಅಭಿನಯ, ಪಂತುಲು ನಿರ್ದೇಶನದ ಮಕ್ಕಳರಾಜ್ಯ ದಲ್ಲಿ ಮೊದಲಬಾರಿಗೆ ಮಕ್ಕಳಿಂದಲೇ ಅಭಿನಯ, ಇವು ಸ್ಮರಿಸುವಂತಹ ವಿಶೇಷಗಳು. ರಣಧೀರ ಕಂಠೀರವ ಚಿತ್ರದ ಪ್ರಮುಖ ಪಾತ್ರದಲ್ಲಿ ರಾಜಕುಮಾರ್ ರವರು ಅತ್ಯದ್ಭುತವಾದ ಅಭಿನಯನೀಡಿ, ತಮ್ಮ ಚಿತ್ರ ರಂಗದಲ್ಲಿನ ಕೇವಲ ಆರು ವರ್ಷಗಳ ಅನುಭವದಲ್ಲಿ 18 ಚಿತ್ರಗಳಲ್ಲಿ ಅಭಿನಯಿಸಿ, ಕರ್ನಾಟಕದ ಅತ್ಯಂತ ಜನಪ್ರಿಯ ನಟರಾದರು.

1950 ರದಶಕದಲ್ಲಿ ತಯಾರಾದ ಒಟ್ಟು ಕನ್ನಡ ಚಿತ್ರಗಳ ಸಂಖ್ಯೆ ಸು. 75, ವಾಕ್ಚಿತ್ರಗಳ ಯುಗ ಪ್ರಾರಂಭವಾದ ವರ್ಷ 1934 ರಿಂದ 1950ರವರೆಗೆ ತಯಾರಾದ ಕೇವಲ 30 ಚಿತ್ರಗಳಿಗೆ ಹೋಲಿಸಿದಾಗ ಇದೊಂದು ದೊಡ್ಡ ಸಾಧನೆ ಎನ್ನಲೇ ಬೇಕು. ಕೇವಲ ಸಂಖ್ಯೆಯಲ್ಲಿ ಮಾತ್ರವಲ್ಲ, ಕನ್ನಡಚಿತ್ರಗಳ ನಿರ್ಮಾಣದಲ್ಲಿ ತೊಡಗಿದ್ದ ನಿರ್ಮಾಪಕರುಗಳು, ನಿರ್ದೇಶಕರುಗಳು, ತಾಂತ್ರಿಕವರ್ಗದವರುಗಳು, ವಿತರಕರು, ಪ್ರದರ್ಶಕರು, ಹಾಗೂ ವೀಕ್ಷಕರಲ್ಲಿ ಕೂಡ ಕನ್ನಡಚಿತ್ರಗಳ ಬಗ್ಗೆ, ಕನ್ನಡದ ಬಗ್ಗೆ, ಅಭಿಮಾನ, ಸ್ವಾಭಿಮಾನ, ಬೆಳೆಸಿಕೊಳ್ಳಬೇಕೆಂಬ ಒಂದು ಜಾಗೃತಿ ಈ ದಶಕದಲ್ಲಿ ಅಂಕುರವಾಯಿತು ಎಂಬುದು ಎಲ್ಲರಿಗೂ ಮನವರಿಕೆಯಾದ ಅಂಶ. ಬೇಡರ ಕಣ್ಣಪ್ಪ, ಮಹಾಕವಿ ಕಾಳಿದಾಸ, ಭಕ್ತ ವಿಜಯ, ಪ್ರೇಮದ ಪುತ್ರಿ, ಸ್ಕೂಲ್ ಮಾಸ್ಟರ್, ಜಗಜ್ಯೋತಿ ಬಸವೇಶ್ವರ, ಮತ್ತು ಭಕ್ತ ಕನಕದಾಸ ಈ ಚಿತ್ರಗಳಿಗೆ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳೂ ದೊರಕಿದವು. ಎಲ್ಲಕ್ಕಿಂತ ಹೆಚ್ಚಾಗಿ, ಶಂಕರ್ ಸಿಂಗ್, ವಿಠಲಾಚಾರ್ಯ, ಕೆಂಪರಾಜ ಅರಸ್, ಆರ್. ನಾಗೇಂದ್ರ ರಾವ್, ಗುಬ್ಬಿ ವೀರಣ್ಣ, ಬಿ.ಆರ್. ಪಂತುಲು ಹೆಚ್.ಎಲ್.ಎನ್.ಸಿಂಹ, ಹೊನ್ನಪ್ಪ ಭಾಗವತರ್, ಬಿ.ಎಸ್.ರಂಗಾ, ಎಂ.ಎನ್.ಬಸವರಾಜಯ್ಯ, ಸುಬ್ಬಯ್ಯ ನಾಯ್ಡು, ಮುಂತಾದವರು ಕನ್ನಡ ಚಿತ್ರಗಳ ನಿರ್ಮಾಣಕ್ಕೆ ಕೈಹಾಕಿದ್ದು, ಚಿತ್ರೋದ್ಯಮಕ್ಕೆ ಭದ್ರವಾದ ಅಸ್ತಿಭಾರವಾಯಿತು, ಮತ್ತು ಹೊಸ ಹುರುಪು ಕೊಟ್ಟಿತು.

1960ರ ದಶಕಕ್ಕೆ ಪದಾರ್ಪಣೆ ಮಾಡುವ ಸಮಯದಲ್ಲಿ ಕನ್ನಡ ಚಿತ್ರರಂಗ, ಅನೇಕ ಸಮಸ್ಯೆಗಳನ್ನು ಎದುರಿಸಬೇಕಿತ್ತು. ಕನ್ನಡಚಿತ್ರರಂಗಕ್ಕೆ ತನ್ನದೇ ಆದ ನೆಲೆಯನ್ನು ಕಂಡುಕೊಳ್ಳಬೇಕು, ಇದಾಗಬೇಕಾದರೆ ಚಿತ್ರಗಳನ್ನು ನಿರ್ಮಿಸಲು ಬೇಕಾದ ಸ್ಟುಡಿಯೋಗಳು, ಮತ್ತು ಇತರ ಸಲಕರಣೆಗಳನ್ನು ನಮ್ಮ ರಾಜ್ಯದಲ್ಲಿಯೇ ಸಜ್ಜುಗೊಳಿಸಬೇಕು. ತಯಾರಾದ ಚಿತ್ರಗಳನ್ನು ವಿತರಣೆಮಾಡುವುದು ಮತ್ತೊಂದು ಸಮಸ್ಯೆ. ಕನ್ನಡ ಚಿತ್ರಗಳಿಗೆ ಪ್ರದರ್ಶನಾವಕಾಶ ಸಿಗುವುದೇ ಕಷ್ಟವಿದ್ದಕಾಲವಾದ್ದರಿಂದ ವಿತರಕರು ಚಿತ್ರಗಳನ್ನು ಕೊಳ್ಳಲು ಹಿಂಜರಿಯುತ್ತಿದ್ದರು. ರಾಜಧಾನಿಯಾದ ಬೆಂಗಳೂರಿನಲ್ಲಿ ಹಾಗೂ ಮತ್ತಿತರ ಕಡೆಗಳಲ್ಲೂ ಅನ್ಯಭಾಷಾಚಿತ್ರಗಳಿಗೇ ಹೆಚ್ಚು ಅವಕಾಶಸಿಕ್ಕುತ್ತಿದ್ದ ಕಾಲ ಅದು, ಇದರ ಜೊತೆಗೆ ಡಬ್ಬಿಂಗ್ ಚಿತ್ರಗಳ ಹಾವಳಿ ಬೇರೆ. ಅನಂತರದ ಸಮಸ್ಯೆಯೆಂದರೆ, ಇಂತಹ ಪರಿಸ್ಥಿತಿಯಲ್ಲಿ ಚಿತ್ರತಯಾರಿಕೆಯಲ್ಲಿ ಹಣತೊಡಗಿಸಿ, ಕನ್ನಡ ಚಿತ್ರಮಾಡಬೇಕೆಂಬ ಮೊಂಡುಧೈರ್ಯ ಉಳ್ಳ ನಿರ್ಮಾಪಕರು ಮುಂದೆಬರುವುದೂ ದುರ್ಲಭವಾಗಿತ್ತು. ಕನ್ನಡ ಚಿತ್ರದ ನಟ ನಟಿಯರು, ತಾಂತ್ರಿಕವರ್ಗದವರು ಮತ್ತು ನಿರ್ಮಾಪಕರು ಕೂಡ ಆಗಿನ ದಿನಗಳಲ್ಲಿ ಮದರಾಸಿನಲ್ಲೇ ನೆಲೆಸಿದ್ದರು. ಕೆಲವರನ್ನು ಬಿಟ್ಟರೆ, ಕನ್ನಡದ ಕಲಾವಿದರ ಆರ್ಥಿಕ ಪರಿಸ್ಥಿತಿ ಕೂಡ ಚಿಂತಾಜನಕವಾಗಿಯೇ ಇತ್ತು. ಇಂತಹ ಸಮಸ್ಯೆಗಳ ಹಂದರದಲ್ಲಿಯೇ ಮುಳುಗಿದ್ದರೂ, ಕನ್ನಡಿಗರ ಚೇತನಶಕ್ತಿಯನ್ನು ಬಡಿದೆಬ್ಬಿಸಿ ಜಾಗೃತಗೊಳಿಸಬೇಕೆಂಬ ಹಂಬಲ ಮತ್ತು ಆ ದಿಶೆಯಲ್ಲಿ ಕಾರ್ಯೋನ್ಮುಖ ವಾಗಬೇಕೆಂಬ ದಿಟ್ಟತನ ಅನೇಕರಲ್ಲಿ ಉದ್ಭವವಾಗಿತ್ತು. ಇಂತಹ ಅವಕಾಶ ಈ ದಶಕದಲ್ಲಿ ಒದಗಿಬಂದದ್ದು ಕರ್ನಾಟಕದ ಒಂದು ಸುಯೋಗ.

1960–70ರ ದಶಕದ, ಪ್ರಾರಂಭದ ದಿವಸಗಳಲ್ಲಿ ಕೆಲವು ಘಟನೆಗಳು ನಡೆದವು. ಕನ್ನಡ ಚಿತ್ರಕಲಾವಿದರುಗಳು ಅನೇಕರು ವೃತ್ತಿರಂಗ ಭೂಮಿಯಿಂದ ಬಂದವರಾದ್ದರಿಂದ, ಚಿತ್ರತಯಾರಿಕೆಯ ಅಭಾವದಿಂದಾಗಿ ಅವರುಗಳಿಗೆ ಜೀವನ ನಡೆಸುವುದೇ ದುರ್ಭರ ವಾಗಿದ್ದರಿಂದ, ಚಲನಚಿತ್ರ ಕಲಾವಿದರ ಸಂಘ ಮಾಡಿಕೊಂಡು ಕರ್ನಾಟಕದಾದ್ಯಂತ ನಾಟಕಗಳನ್ನು ಪ್ರದರ್ಶಿಸಿ ಬಂದ ಹಣದಿಂದ ಕಲಾವಿದರಿಗೆ ರಕ್ಷಣೆಕೊಡಬೇಕೆಂಬ ಒಂದು ಯೋಜನೆಹಾಕಿಕೊಂಡು ಕಾರ್ಯೋನ್ಮುಖರಾದರು. ಈ ಪ್ರಯತ್ನ ಯಶಸ್ವಿಯೂ ಆಗಿ ಕನ್ನಡದಕಲಾವಿದರು ಸ್ವಲ್ಪ ಉಸಿರಾಡುವಂತಾಯಿತು, ಮತ್ತು ಸ್ವಲ್ಪ ಹಣವೂ ಉಳಿಯಿತು. ಉಳಿದ ಹಣದಿಂದ ಕಲಾವಿದರ ಸಂಘದವತಿಯಿಂದ ತಯಾರಾದ ರಣಧೀರ ಕಂಠೀರವ ಚಿತ್ರವನ್ನು ತಯಾರುಮಾಡಿದರು. ಕನ್ನಡಿಗರ ದೌರ್ಭಾಗ್ಯವೆಂದರೆ, ಈ ಚಿತ್ರವನ್ನು ಪ್ರದರ್ಶನಮಾಡಲು ಚಿತ್ರಮಂದಿರಗಳೇ ಸಿಗದೆ, ಡಬ್ಬದಲ್ಲಿಟ್ಟುಕೊಂಡು ಪರದಾಡಬೇಕಾಗಿ ಬಂದ ಶೋಚನೀಯ ಪರಿಸ್ಥಿತಿ. ಇಂತಹ ದುಸ್ಥಿತಿ ಬಂದದ್ದನ್ನು ಅರಿತ ಅನೇಕ ಕನ್ನಡಿಗರು ನಾವು ಎಚ್ಚತ್ತು ಕೊಳ್ಳದಿದ್ದರೆ ನಮಗೆ ನಮ್ಮ ರಾಜ್ಯದಲ್ಲಿಯೇ ಉಳಿಗಾಲವಿಲ್ಲವೆಂಬ ಸತ್ಯ ಮನವರಿಕೆಯಾಯಿತು.

ಇದೇ ಸಮಯದಲ್ಲಿ ರಾಜ್ಯದಲ್ಲಿ ನಾನಾಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಬೇಕೆಂದು ಖ್ಯಾತ ಕನ್ನಡ ಸಾಹಿತಿಗಳು, ಬುದ್ಧಿಜೀವಿಗಳು, ಜನಸಾಮಾನ್ಯರು, ಯುವಕರು ಎಲ್ಲರೂ ಅರಿತುಕೊಂಡರು. ಈ ಪ್ರತಿಭಟನೆಯನ್ನು ಚಳವಳಿ ರೂಪಕ್ಕೆ ತರಬೇಕೆಂದು ಮನಸ್ಸು ಮಾಡಿ ಮುಖಂಡತ್ವವನ್ನು ಕನ್ನಡದ ಖ್ಯಾತ ಲೇಖಕರಾಗಿದ್ದ, ಹಾಗೂ ಧೀಮಂತ ವ್ಯಕ್ತಿಯಾಗಿದ್ದ, ಅ.ನ.ಕೃಷ್ಣರಾಯರು ವಹಿಸಿಕೊಂಡದ್ದು ಒಂದು ಸುದೈವ. ಅಂದು ಅವರು, ಮ.ರಾಮಮೂರ್ತಿ, ಮತ್ತು ಅವರ ಸಂಗಡಿಗರುಗಳು ಬೆಂಗಳೂರಿನ ಬೀದಿಬೀದಿಗಳಲ್ಲಿ ಮಾಡಿದ ಭಾಷಣಗಳಿಗೆ ಜನ ಕಿಕ್ಕಿರಿದು ಪ್ರಚಂಡ ಕರತಾಡನಗಳೊಂದಿಗೆ ಪ್ರೋತ್ಸಾಹಿಸುತ್ತಿದ್ದದ್ದನ್ನು ನೆನೆಸಿಕೊಂಡರೆ ಇಂದಿಗೂ ರೋಮಾಂಚನವಾಗುತ್ತದೆ. ಈ ಒಂದು ಕನ್ನಡ ಚಳವಳಿಯನ್ನು ಪ್ರಾರಂಭಿಸಿದವರು ಅ.ನ.ಕೃ. ಅವರಾದರೂ, ಕೆಲವೇ ದಿನಗಳಲ್ಲಿ ಕಾರಣಾಂತರಗಳಿಂದ ಅವರು ಅದರಿಂದ ದೂರ ಸರಿದರು. ಅನಂತರದ ದಿನಗಳಲ್ಲಿ ಇದನ್ನು ಅನೇಕ ರೀತಿಗಳಲ್ಲಿ ಮುಂದುವರೆಸಿಕೊಂಡು ಬಂದವರು ವಾಟಾಳ್ ನಾಗರಾಜ್ ಮತ್ತು ಸಂಗಡಿಗರು. ಈ ಒಂದು ಚಳುವಳಿಯು ಕನ್ನಡ ಚಲನಚಿತ್ರಗಳ ಮೇಲೂ ತನ್ನ ಪ್ರಭಾವ ಬೀರಿತು.

ಈ ಘಟನೆಗಳ ಜೊತೆಗೆ, 1950ರಲ್ಲಿ ಭೀಕರ ಪ್ರವಾಹದಿಂದಾಗಿ ನಷ್ಟ ಅನುಭವಿಸಿದ ರಾಜ್ಯದ ಲಕ್ಷಾಂತರ ಜನರಿಗೆ ನೆರವು ನೀಡುವ ಸಲುವಾಗಿ ಚಿತ್ರಕಲಾವಿದರು ರಾಜ್ಯದಾದ್ಯಂತ ಕನ್ನಡ ಪತ್ರಿಕೆಗಳ ನೆರವಿನಿಂದ ಮತ್ತು ಪ್ರವಾಸ ಕೈಕೊಂಡು, ನಿಧಿಸಂಗ್ರಹಿಸಿಕೊಟ್ಟದ್ದು, ಕನ್ನಡ ಚಲನಚಿತ್ರಕ್ಕೆ ಒಂದು ವರಪ್ರದಾನವಾದ ಸಂಗತಿಯಾಯಿತು. ಇದರಿಂದಾಗಿ ಕನ್ನಡದ ಚಲನಚಿತ್ರಕಲಾವಿದರು, ಹಾಗೂ ಉದ್ಯಮಕ್ಕೆ ಸಂಬಂಧಪಟ್ಟ ಅನೇಕ ಗಣ್ಯರುಗಳು, ಕನ್ನಡಿಗರ ಅಭಿಮಾನವನ್ನು ಸಂಪಾದಿಸುವಲ್ಲಿ ಯಶಸ್ಸುಗಳಿಸಿದರು. ಈ ಒಂದು ಯಾತ್ರೆಯಲ್ಲಿ ಕನ್ನಡಿಗರ ಮಮತೆಯನ್ನು ಅಚ್ಚಳಿಯದೆ ಗಳಿಸಿ ಅವರ ಮನಸ್ಸಿನಲ್ಲಿ ತಮ್ಮ ಛಾಯೆಯನ್ನು ಖಾಯಂ ಆಗಿ ನೋಂದಣಿಸಿದ ವ್ಯಕ್ತಿ ರಾಜಕುಮಾರ್. ಕನ್ನಡ ಚಲನಚಿತ್ರರಂಗದ ಅನೇಕ ಗಣ್ಯರ ಪ್ರಕಾರ ಈ ಒಂದು ಯಾತ್ರೆ ಮರೆಯಲಾಗದ ಅನುಭವ ಎಂದು ಜ್ಞಾಪಿಸಿಕೊಳ್ಳುತ್ತಾರೆ.

ಈ ಎಲ್ಲ ಸಂಗತಿಗಳು 1960–70ರ ದಶಕದ ಆದಿಯಲ್ಲಿ ನಡೆದದ್ದರಿಂದ, ಕನ್ನಡಿಗರಲ್ಲಿ, ಹಾಗೂ ಚಲನಚಿತ್ರರಂಗದಲ್ಲಿ ಒಂದು ಹೊಸ ಜಾಗೃತಿ ಮೂಡಲು ಕಾರಣವಾಯಿತು.

ಈ ದಶಕದ ಮತ್ತೊಂದು ಶ್ಲಾಘನೀಯ ಸಂಗತಿಯೆಂದರೆ, ಚಲನಚಿತ್ರಗಳು ನಿರ್ಮಾಣಗೊಂಡ ಸಂಖ್ಯೆಯಲ್ಲಿ ಕೂಡ ಸಾಕಷ್ಟು ಪ್ರಗತಿ ಹೊಂದಿ, ಪ್ರತಿಭಾವಂತ ನಿರ್ದೇಶಕರುಗಳಿಂದ ತಯಾರಾದ ನೂತನ ಶೈಲಿಯ ಉತ್ತಮಚಿತ್ರಗಳು ತೆರೆ ಕಂಡು ಹೊಸ ಮೈಲುಗಲ್ಲುಗಳನ್ನು ಸ್ಥಾಪಿಸಿದ್ದು. ಕನ್ನಡ ಚಲನಚಿತ್ರಗಳನ್ನು ತಯಾರುಮಾಡಲು ಬೇಕಾದ ಎಲ್ಲ ಸೌಕರ್ಯಗಳನ್ನೂ ನಮ್ಮ ರಾಜ್ಯದಲ್ಲಿಯೇ ಸ್ಥಾಪಿಸಲು ನೆರವಾಗಲು ಸರ್ಕಾರ ಯೋಜಿಸಿದೆ ಎಂಬ ತನ್ನ ಇಂಗಿತವನ್ನು ಸರ್ಕಾರವೂ ಬಹಿರಂಗಪಡಿಸಿತು. ಇದರಿಂದಾಗಿ ಚಿತ್ರರಂಗದಲ್ಲಿ ಅನೇಕ ಸಮಸ್ಯೆಗಳಿದ್ದರೂ, ಅವುಗಳನ್ನು ಪರಿಹರಿಸಲು ಕಾರ್ಯೋನ್ಮುಖರಾಗಬೇಕೆಂಬ ಆಶಯ ಎಲ್ಲ ವರ್ತುಲಗಳಿಂದ ಬಂದದ್ದು ಒಂದು ಆಶಾದಾಯಕ ಬೆಳವಣಿಗೆ ಎನ್ನಬಹುದು.

ಈ ಒಂದು ಅವಧಿಯಲ್ಲಿ ತಯಾರಾದ ಚಿತ್ರಗಳಲ್ಲಿ ಸಾಕಷ್ಟು ಹೆಸರು ಮಾಡಿ ವಿವಾದಗಳನ್ನೂ ಸೃಷ್ಟಿಸಿದ ಚಿತ್ರವೆಂದರೆ ನಂತರದ ದಿನಗಳಲ್ಲಿ ಖ್ಯಾತ ನಿರ್ದೇಶಕರಾಗಿ ಜನಪ್ರಿಯರಾದ ಎನ್.ಲಕ್ಷ್ಮೀನಾರಾಯಣ್‌ರವರ ನಾಂದಿ ಚಿತ್ರ. ಈ ಚಿತ್ರ ಅನೇಕ ಕಾರಣಗಳಿಗಾಗಿ ಒಂದು ಮೈಲುಗಲ್ಲು ಚಿತ್ರವಾಯಿತು. ಈ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಸಿಗದೆ ಇದ್ದದ್ದು ಒಂದು ದೊಡ್ಡ ವಿವಾದವೇ ಆಯಿತು. ಆದರೂ ಗುಣಮಟ್ಟದವತಿಯಿಂದ ಈ

ಚಿತ್ರಕ್ಕೆ ಹೆಸರಾಂತ ವಿಮರ್ಶಕರಿಂದ ಒಳ್ಳೆಯ ಪ್ರಶಂಸೆ ಸಿಕ್ಕಿತು. ಈ ಚಿತ್ರದ ವಸ್ತುವೂ ಕೂಡ ಹೊಸಹಾದಿಯನ್ನೇ ಹಿಡಿದಿತ್ತು. ಕಿವುಡು ಮತ್ತು ಮೂಕ ವ್ಯಕ್ತಿಗಳ ಬಾಳಿಗೆ ಬೆಳಕು ತರುವ ಉದ್ದೇಶವನ್ನು ವಸ್ತುವನ್ನಾಗಿ ಬಳಸಿಕೊಂಡು ಮಾಡಿದ ಚಿತ್ರ ನಾಂದಿ. ಇಂತಹ ಪ್ರಾಯೋಗಿಕ ಚಿತ್ರಕ್ಕೆ ಸರಿಯಾದ ಪುರಸ್ಕಾರ ಸಿಗಲಿಲ್ಲವೆಂಬ ಕೊರಗು ಇಂದಿಗೂ ಅನೇಕರಲ್ಲಿ ಹಾಗಿಯೇ ಮಾಯದೆ ಉಳಿದಿದೆ. ನಾಂದಿ ಚಿತ್ರಕ್ಕೆ ಪ್ರಶಸ್ತಿ ಸಿಕ್ಕಲಿಲ್ಲವೆಂಬ ಅಸಮಾಧಾನವಿದ್ದರೂ ಈ ಚಿತ್ರ ಕನ್ನಡ ಚಲನಚಿತ್ರ ರಂಗಕ್ಕೆ ಸಂಭಾವಿತ ಕೊಡುಗೆಯಾಗಿ ಉಳಿಯಿತು. ರಾಜಕುಮಾರರ ಮನಮುಟ್ಟುವ ಅಭಿನಯ, ನಟ ಬಾಲಕೃಷ್ಣರವರ ಹಾಸ್ಯಪಾತ್ರಾಭಿನಯ, ವಿಜಯಭಾಸ್ಕರ್ ರವರ ಸಂಗೀತವಂತೂ ಮಧುರತೆಯಲ್ಲಿ ಮಿಂದು ತೇಲಿಸುವಂತಹ ಅನುಭವವನ್ನು ಕೊಟ್ಟಿತು. ಈ ಚಿತ್ರದ ಎಲ್ಲ ಹಾಡುಗಳೂ, ಅವುಗಳ ಅರ್ಥಪೂರ್ಣ ಸಾಹಿತ್ಯ ಮತ್ತು ಅಪೂರ್ವ ರಾಗ ಸಂಯೋಜನೆಗಳಿಂದಾಗಿ ಇಂದಿಗೂ ಎಲ್ಲರ ಮನೆಗಳಲ್ಲಿ ಜನ ಕೂತು ಕೇಳುವಂತಹ ಕೃತಿಗಳಾಗಿ ರಾರಾಜಿಸುತ್ತಿವೆ. ಹರಿಣಿ ಅವರು ಅನೇಕ ಚಿತ್ರಗಳಲ್ಲಿ ನಟಿಸಿ ನುರಿತ ಅನುಭವವಿದ್ದದ್ದರಿಂದ, ಮೂಕಿಯಾಗಿ ಅಭಿನಯಿಸಬೇಕಾದ ಕ್ಲಿಷ್ಟಕರ ಪಾತ್ರವನ್ನು ಮನೋಜ್ಞಕರ ರೀತಿಯಲ್ಲಿ ಅಭಿನಯಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಎನ್.ಲಕ್ಷ್ಮೀನಾರಾಯಣ್ ರವರು ಕಲ್ಪನಾರವರ ಪ್ರತಿಭೆಯನ್ನು ಜನರಿಗೆ ಈ ಚಿತ್ರದ ಮೂಲಕ ಪರಿಚಯ ಮಾಡಿಕೊಟ್ಟರು. ಲಂಡನ್ನಿನ ನ್ಯಾಷನಲ್ ಫಿಲಂಥಿಯೇಟರಿನಲ್ಲಿ ಪ್ರದರ್ಶನಾವಕಾಶ ಸಿಕ್ಕಿ ವಿದೇಶದಲ್ಲಿ ಪ್ರದರ್ಶಿತಗೊಂಡ ಪ್ರಥಮ ಕನ್ನಡ ಚಿತ್ರವಾಯಿತು. ನಾಂದಿ ಕನ್ನಡದಲ್ಲಿ ಸದಭಿರುಚಿ ಬೆಳಸುವಂತಹ ಚಿತ್ರಗಳಿಗೆ ನಾಂದಿಯಾಯಿತು. ವಾದಿರಾಜ್–ಜವಾಹರ್ ಜೊತೆಗೂಡಿ ನಿರ್ಮಾಪಕರಾಗಿ ಸಾಹಸ ಮಾಡಿದ ಸಫಲ ಪ್ರಯತ್ನವಿದು.

1961ರಲ್ಲಿ ತೆರೆಕಂಡ ಕಿತ್ತೂರು ಚೆನ್ನಮ್ಮ ಕನ್ನಡಿಗರು ಕನ್ನಡದ ಬಗ್ಗೆ ಚಳವಳಿ ಮಾಡುತ್ತಿದ್ದ ವೇಳೆಯಲ್ಲಿ ಮತ್ತಷ್ಟು ಸ್ಫೂರ್ತಿ ಕೊಡುವ ಚಿತ್ರವಾಯಿತು. ಕನ್ನಡಚಿತ್ರರಂಗದಲ್ಲಿ ಯಶಸ್ವಿಚಿತ್ರಗಳನ್ನು ನಿರ್ಮಿಸಿ ಮನೆಮಂದಿಗೆಲ್ಲಾ ಪರಿಚಿತ ವ್ಯಕಿಯಾಗಿದ್ದ ಅನುಭವಿ ನಿರ್ದೇಶಕರಾದ ಪಂತುಲುರವರು, ಬ್ರಿಟಿಷರ ವಿರುದ್ಧ ಏಕಾಂಗಿಯಾಗಿ ಹೋರಾಡಿ ಮಡಿದ ವೀರ ವನಿತೆಯ ಐತಿಹಾಸಿಕ ಕಥೆಯನ್ನು ಚಿತ್ರೀಕರಣ ಮಾಡಿ, ಕನ್ನಡಿಗರಿಗೆ ಚರಿತ್ರೆಯ ಆ ಯುಗದ ಘಟನೆಗಳನ್ನು ಜ್ಞಾಪಿಸಿಕೊಟ್ಟ ಬಳುವಳಿ ಈ ಚಿತ್ರ. ಅಂದಿನ ದಿನಗಳಲ್ಲಿ ಬರುತ್ತಿದ್ದ ಚಿತ್ರಗಳಿಗೆ ಹೋಲಿಸಿದಾಗ ಇದೊಂದು ಅದ್ಭುತ ಮತ್ತು ಅದ್ದೂರಿ ಚಿತ್ರ. ಸಾಹಸಮಯ ಸನ್ನಿವೇಶಗಳು, ರೋಮಾಂಚನಗೊಳಿಸುವ ಸಂಭಾಷಣೆಗಳು, ಕಿತ್ತೂರು ಚೆನ್ನಮ್ಮನ ಪಾತ್ರದಲ್ಲಿ ಬಿ.ಸರೋಜಾದೇವಿಯವರು ನೀಡಿದ ಉತ್ತಮ ಅಭಿನಯ, ಅಂದಿನಕಾಲಕ್ಕೆ ಅತಿ ಭವ್ಯ ಎನಿಸಿಕೊಂಡ ಅಪೂರ್ವ ಯುದ್ಧ ದೃಶ್ಯಗಳು, ವಚನ ಸಾಹಿತ್ಯದಲ್ಲಿನ ಶ್ರೀಮಂತಿಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ರೀತಿ, ಇವೆಲ್ಲ ಗುಣಗಳಿಂದ ಕಿತ್ತೂರು ಚೆನ್ನಮ್ಮ ಕನ್ನಡಿಗರಿಗೆ ಹರ್ಷತಂದದ್ದೇ ಅಲ್ಲದ್ದೆ ಈ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಸಿಕ್ಕಿದ್ದು ಮತ್ತೊಂದು ಸಂತೋಷದ ಸಂಗತಿ.

ಕಿತ್ತೂರು ಚೆನ್ನಮ್ಮ ತೆರೆಕಂಡ ವರ್ಷದಲ್ಲಿಯೇ, ಕನ್ನಡದ ಇತಿಹಾಸದ ಬಗ್ಗೆ ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಮತ್ತೊಂದು, ಚಿತ್ರವನ್ನು ತಯಾರಿಸುವ ಸಾಹಸಮಾಡಿದವರು ಆರ್. ನಾಗೇಂದ್ರ ರಾಯರು ಮತ್ತು ಅವರ ಮಕ್ಕಳು. ನಾಗೇಂದ್ರ ರಾಯರು, ಅಂದಿನ ಕಾಲಕ್ಕೆ ರಂಗ ಭೂಮಿ ಹಾಗೂ ಚಲನಚಿತ್ರ ಕ್ಷೇತ್ರಗಳಲ್ಲಿ ಸಾಕಷ್ಟು ಅನುಭವ ಪಡೆದು ನುರಿತ ಕಲಾವಿದರಾಗಿದ್ದರು. ಕನ್ನಡದ ಇತಿಹಾಸದಲ್ಲಿ ಕೃಷ್ಣದೇವರಾಯ ದೊರೆಯ ರಾಜ್ಯಭಾರಕ್ಕೆ ಹೆಚ್ಚು ಪ್ರಶಂಸೆ ಸಿಕ್ಕಿದೆ. ಅದೊಂದು ಸ್ವರ್ಣಯುಗವೆಂದೂ ಕರೆಯುತ್ತಾರೆ. ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ನಡೆದ ಘಟನೆ ಆಧರಿಸಿ 'ವಿಜಯನಗರದ ವೀರಪುತ್ರ' ಚಿತ್ರಿಸಲು ರಾಯರು ಮನಸ್ಸುಮಾಡಿದ್ದು ಒಂದು ಸಾಹಸವೇ ಸರಿ. ಐತಿಹಾಸಿಕ ಚಿತ್ರಗಳನ್ನು ಮಾಡಿ ಸೈ ಎನಿಸಿಕೊಳ್ಳುವಂತಹ ಆರ್ಥಿಕ ಚೈತನ್ಯ ರಾಯರಲ್ಲಿರಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದರೂ ಅವರು ಚಿತ್ರೀಕರಣ ಪ್ರಾರಂಭಿಸಿಯೇ ಬಿಟ್ಟರು. ನಿರೀಕ್ಷಿಸಿದಂತೆ ಹಣಕಾಸಿನ ಮುಗ್ಗಟ್ಟಿನಿಂದ ಚಿತ್ರೀಕರಣ ನಿಂತುಹೋಯಿತು. ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾಗಿ ಜಾರಿಗೆ ಬಂದಿದ್ದ ಫಿಲಂ ಫೈನಾನ್ಸ್ ಕಾರ್ಪೊರೇಷನ್ ಸಂಸ್ಥೆಯು ಮುಂದೆ ಬಂದು ಆರ್ಥಿಕ ಸಹಾಯ ನೀಡಿದ್ದರಿಂದ ಚಿತ್ರ ಪೂರ್ಣವಾಗಿ ತೆರೆಕಾಣಲು ಸಾಧ್ಯವಾಯಿತು. ಆದರೆ ರಾಯರ ದುರದೃಷ್ಟವೋ ಏನೋ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ದಯನೀಯ ಸೋಲನ್ನಪ್ಪಿತು. ಈ ಚಿತ್ರದ ವಿಶೇಷವೆಂದರೆ, ನಾಗೇಂದ್ರರಾಯರು ನಿರ್ದೇಶಿಸಿದ್ದಲ್ಲದೆ, ಅವರೇ ಒಂದು ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದು ಮತ್ತು ಅವರಿಗೆ ಸಹಾಯಕ ನಿರ್ದೇಶಕರಾಗಿ ಎನ್.ಲಕ್ಷ್ಮೀನಾರಾಯಣ್ ಕೆಲಸಮಾಡಿದ್ದು, ಇಷ್ಟಲ್ಲದೆ ಆವರ ಮಕ್ಕಳಾದ ಆರ್.ಎನ್.ಕೃಷ್ಣಪ್ರಸಾದ್‌ರವರು ಛಾಯಾಗ್ರಾಹಕರಾಗಿ, ಆರ್.ಎನ್.ಜಯಗೋಪಾಲ್ ರವರು ಚಿತ್ರಕಥೆ ಮತ್ತು ಸಂಭಾಷಣೆಗಳನ್ನು ಬರೆದು, ಮತ್ತು ಮತ್ತೊಬ್ಬ ಮಗ ಆರ್.ಎನ್. ಸುದರ್ಶನ್ ನಾಯಕನಟನಾಗಿ ಪಾತ್ರವಹಿಸಿದ್ದು ಒಂದು ವಿಶೇಷವೆನ್ನಬೇಕು.

ಸುದ್ದಿಮಾಡಿದ ಮತ್ತೊಂದು ಚಿತ್ರವೆಂದರೆ ನಂದಾದೀಪ. ಕನ್ನಡ ಚಿತ್ರ ರಂಗದಲ್ಲಿ ಉತ್ತಮ ಚಿತ್ರಗಳನ್ನು ಮಾಡಬೇಕೆಂಬ ಹಂಬಲದಿಂದ ನಿರ್ಮಾಪಕರಾಗಿ ಜೊತೆಗೂಡಿದ ವಾದಿರಾಜ್ ಮತ್ತು ಜವಾಹರ್ ರವರು, ಎಂ. ಆರ್. ವಿಠಲ್‌ರವರ ನಿರ್ದೇಶನದಲ್ಲಿ ತಯಾರುಮಾಡಿದ ಈ ಚಿತ್ರಕ್ಕೂ ರಾಷ್ಟ್ರಪ್ರಶಸ್ತಿ ಲಭಿಸಿತು. ಈ ಚಿತ್ರದ ಕಥೆಯಲ್ಲಿ ಎದ್ದುಕಾಣುವಂತಹ ಹೊಸದೇನೂ ಇಲ್ಲದಿದ್ದರೂ, ಚಿತ್ರೀಕರಣ ನೈಜತೆಗೆ ತೀರ ಸಮೀಪವಾಗಿ, ಸಾಕಷ್ಟು ಹಾಸ್ಯವನ್ನು ಅಳವಡಿಸಿ ಮಕ್ಕಳೊಂದಿಗೆ ತಂದೆ ತಾಯಿಗಳು, ಚಿತ್ರಮಂದಿರದಲ್ಲಿ ಕೂತು, ಇಂಪಾದ ಹಾಡುಗಳು, ಆಚ್ಚುಕಟ್ಟಾದ ಸಂಭಾಷಣೆ, ಉತ್ತಮ ಅಭಿನಯ ಇವುಗಳನ್ನು ಸವಿದು ತೃಪ್ತಿಯಿಂದ ಮನೆಗೆ ಬರಬಹುದಾದಂತಹ ಚಿತ್ರ. ಆದರೂ ನಾಂದಿ ಚಿತ್ರದಂತೆ ಈ ಚಿತ್ರ ಕೂಡ ಜನಸಾಮಾನ್ಯರಿಗೆ ತಲುಪುವಲ್ಲಿ ವಿಫಲಗೊಂಡಿತು.

ನಂದಾದೀಪಕ್ಕೆ (1963) ಸಿಕ್ಕಿದ ರಾಷ್ಟ್ರ ಪ್ರಶಸ್ತಿ ಪುರಸ್ಕಾರದಿಂದ ಪಡೆದ ಯಶಸ್ಸನ್ನು ಹಿಂಬಾಲಿಸಿ, ಈ ನಿರ್ಮಾಪಕ ದ್ವಯರಾದ, ವಾದಿರಾಜ್ ಮತ್ತು ಜವಾಹರ್ ರವರು ನವಜೀವನ ಎಂಬ ಮತ್ತೊಂದು ಉತ್ತಮ ಚಿತ್ರವನ್ನು ಕನ್ನಡ ಚಿತ್ರಪ್ರೇಮಿಗಳಿಗೆ ಅರ್ಪಿಸಿದರು. ಅಂದಿಗೆ ಇದೊಂದು ವಿನೂತನ ಶೈಲಿಯಚಿತ್ರವೆನ್ನಬಹುದು. ಬಸ್ಸಿನಲ್ಲಿ ಪ್ರಯಾಣಮಾಡುತ್ತಿದ್ದ ಅಪರಿಚಿತ ಪ್ರಯಾಣಿಕರು, ಕಾರಣಾಂತರದಿಂದ ಒಂದು ಅತಿಥಿಗೃಹದಲ್ಲಿ ಸೇರಿದಾಗ, ಪರಸ್ಪರ ಸಹಾನುಭೂತಿಯಿಂದ ವಿವಿಧ ಮತಸ್ಥರು ಒಂದುಕುಟುಂದವರಂತೆ ಬೆರೆತದ್ದು ಈ ಚಿತ್ರದ ಕಥಾ ವಸ್ತು. ಭಾವೈಕ್ಯತೆಯನ್ನು ಸಾರಿದ ಹೆಗ್ಗಳಿಕೆಯ ಕನ್ನಡ ಚಿತ್ರ ಇದಾಯಿತು.

ಈ ದಶಕದಲ್ಲಿ ಚಿತ್ರ ನಿರ್ಮಾಪಕರು, ಹೆಚ್ಚು ಹೆಚ್ಚು ಸಾಮಾಜಿಕ ಕಥಾವಸ್ತುಗಳನ್ನು ಆರಿಸಿಕೊಂಡದ್ದು ಒಂದು ವಿಶೇಷ. ಕೆಲವರು ಹೆಸರಾಂತ ಸಾಹಿತಿಗಳ ಕಾದಂಬರಿಗಳನ್ನೂ ಚಿತ್ರರೂಪಕ್ಕೆ ಇಳಿಸಿದರು. ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ ಆಧಾರಿತ ಕರುಣೆಯೇ ಕುಟುಂಬದ ಕಣ್ಣು, ತ.ರಾ.ಸು ಅವರ ಚಂದವಳ್ಳಿಯ ತೋಟ, ಚಕ್ರತೀರ್ಥ, ಅ.ನ.ಕೃ.ರವರ ಸಂಧ್ಯಾ ರಾಗ, ಕೊರಟಿ ಶ್ರೀನಿವಾಸರಾಯರ ಮಿಸ್. ಲೀಲಾವತಿ, ಎ.ಎನ್.ಮೂರ್ತಿರಾಯರ ನಾಟಕ ಆಶಾಢಭೂತಿ ಆಧರಿಸಿದ ಸುಬ್ಬಾಶಾಸ್ತ್ರೀ, ತ್ರಿವೇಣಿಯವರ, ಬೆಳ್ಳಿಮೋಡ, ಹಣ್ಣೆಲೆ ಚಿಗುರಿದಾಗ, ಚದುರಂಗರ ಸರ್ವ ಮಂಗಳಾ ಮತ್ತು ಉಯ್ಯಾಲೆ, ಮತ್ತು ಎಂ.ಕೆ ಇಂದಿರಾ ರವರ ಗೆಜ್ಜೆಪೂಜೆ, ಹೀಗೆ ಅನೇಕ ಚಿತ್ರಗಳು ಕನ್ನಡ ಕಾದಂಬರಿಗಳನ್ನು ಆಧರಿಸಿ ಚಿತ್ರಿತಗೊಂಡವು. ಇದೊಂದು ಉತ್ತಮ ಬೆಳವಣಿಗೆ. ಇದಕ್ಕೆ ಕಾರಣವೂ ಇತ್ತು. ಕನ್ನಡದ ಬಗ್ಗೆ ಅಭಿಮಾನ ಮೂಡಿಸಲು ಚಲನೆಯಲ್ಲಿದ್ದ ಚಳುವಳಿ ಕೂಡ ಇದಕ್ಕೆ ಉತ್ತೇಜಕಕಾರಿ ಯಾಗಿತ್ತು. ಈ ದಶಕದ ಮತ್ತೊಂದು ಬೆಳವಣಿಗೆಯೆಂದರೆ ಸಂಗೀತ ನಿರ್ದೇಶಕರುಗಳು, ಕನ್ನಡದ ಖ್ಯಾತ ಕವಿಗಳಾದ ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ, ಮುಂತಾದವರುಗಳ ಕವನಗಳನ್ನು ಅಳವಡಿಸಿಕೊಂಡು ಹಾಡುಗಳಿಗೆ ರಾಗ ಸಂಯೋಜನೆ ಮಾಡಿ ಕನ್ನಡದ ಅಭಿಮಾನಿಗಳ ಮನಸ್ಸಿಗೆ ತೃಪ್ತಿ ಕೊಟ್ಟದ್ದು. ಗೌರಿ ಚಿತ್ರದಲ್ಲಿ ಕುವೆಂಪು ರವರ ಯಾವ ಜನ್ಮದ ಮೈತ್ರಿ, ನರಸಿಂಹ ಸ್ವಾಮಿಯವರ ಇವಳು ಯಾರು ಬಲ್ಲೆಯೇನೊ ಗೀತೆಗಳನ್ನು ಅಳವಡಿಸಿ ಹಾಡುಗಳನ್ನು ರಚಿಸಲಾಗಿದೆ. ಈ ದಶಕದಲ್ಲಿನ ಮತ್ತೊಂದು ಪ್ರಗತಿಪರ ಹೆಜ್ಜೆಯೆಂದರೆ ಕನ್ನಡದಲ್ಲಿ ಮೊದಲಬಾರಿಗೆ ಬಣ್ಣದ (ಕಲರ್) ಚಿತ್ರವನ್ನು ತಯಾರಿಸಿದ್ದು. ಬಿ.ಸ್.ರಂಗಾರವರು ತಯಾರಿಸಿದ ಚಿತ್ರ ಅಮರಶಿಲ್ಪಿ ಜಕಣಾಚಾರಿ ಚಿತ್ರದಲ್ಲಿ ಕಲ್ಯಾಣ್‌ಕುಮಾರ್ ಹಾಗೂ ಸರೋಜಾ ದೇವಿಯವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡರು.

ಈ ದಶಕದಲ್ಲಿ ತಯಾರಾದ ಸಾಕಷ್ಟು ಚಿತ್ರಗಳಲ್ಲಿ, ಆ ಚಿತ್ರದ ವಸ್ತು ಸಾಮಾಜಿಕವಾಗಿರಲಿ, ಪೌರಾಣಿಕವಾಗಿರಲಿ, ಸಂತರ ಕಥೆ ಯಾಗಿರಲಿ, ಅಥವಾ ಜೇಡರ ಬಲೆ, ಆಪರೇಷನ್ ಜಾಕ್‌ಪಾಟ್ ಅಂತಹ ಬಾಂಡ್ ಮಾದರಿಯ ಸ್ಟಂಟ್‌ಗಳಾಗಲಿ, ಎಲ್ಲ ಚಿತ್ರಗಳಲ್ಲಿ ಅಭಿನಯಿಸಿ ಕನ್ನಡಿಗರ ಹೃದಯವನ್ನು ಗೆದ್ದ, ಅಚ್ಚು ಮೆಚ್ಚಿನ ವ್ಯಕ್ತಿಯೆಂದರೆ ರಾಜಕುಮಾರ್ ರವರು. 1963ರಲ್ಲಿ ತಯಾರಾದ ಚಿತ್ರ ಸಂತ ತುಕಾರಾಂ ನಲ್ಲಿ ರಾಜಕುಮಾರ್‌ರವರ ಅದ್ಭುತ ಅಭಿನಯದ ಪ್ರಾಧಾನ್ಯತೆಯಿಂದಲೇ ಆ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಲಭಿಸಿತು. ಅಂದಿನ ಕನ್ನಡ ಚಿತ್ರ ರಂಗದಲ್ಲಿ ಜನಪ್ರಿಯರಾಗಿದ್ದ ರಾಜಕುಮಾರ್, ಕಲ್ಯಾಣಕುಮಾರ್, ಹಾಗೂ ಉದಯಕುಮಾರ್ ಮೂವರುಗಳು ಜಿ.ವಿ.ಅಯ್ಯರ್‌ರವರ ಭೂದಾನ ಚಿತ್ರದಲ್ಲಿ ಒಟ್ಟಿಗೆ ಅಭಿನಯಿಸಿದ್ದು ಒಂದು ವಿಶೇಷ ಸಂಗತಿ. ಇದೇ ದಶಕದಲ್ಲಿ, 1968ರಲ್ಲಿ ರವಿ ಅವರ ನಿರ್ದೇಶನದಲ್ಲಿ ತಯಾರಾದ ಭಾಗ್ಯದಬಾಗಿಲು ಚಿತ್ರ ರಾಜಕುಮಾರ್ ರವರು ಅಭಿನಯಿಸಿದ ನೂರನೇ ಚಿತ್ರವಾಯಿತು. ಈ ಒಂದು ಘಟನೆಯನ್ನು ಸಂತೋಷ ಸಮಾರಂಭವಾಗಿ ಆಚರಿಸಲು, ಕಂಠೀರವ ಸ್ಟೇಡಿಯಂನಲ್ಲಿ ಅವರ ಸಹಸ್ರಾರು ಅಭಿಮಾನಿಗಳು ಅದ್ದೂರಿಯ ಸನ್ಮಾನವನ್ನು ನೀಡಿದರು.

ಹಿಂದಿನ ದಿನಗಳಲ್ಲಿ ಬಿ.ಆರ್. ಪಂತುಲು ಅವರಿಗೆ ಸಹಾಯಕ ನಿರ್ದೇಶಕರಾಗಿ ಚಲನಚಿತ್ರ ನಿರ್ಮಾಣದಲ್ಲಿ ಅನುಭವ ಪಡೆದಿದ್ದ ಪುಟ್ಟಣ್ಣ ರವರು 1967ರಲ್ಲಿ ತ್ರಿವೇಣಿ ಅವರ ಕಾದಂಬರಿ ಆಧಾರಿತ ಚಿತ್ರ ಬೆಳ್ಳಿಮೋಡ ಚಿತ್ರವನ್ನು ತಾವೇ ನಿರ್ದೇಶನದ ಪೂರ್ಣ

ಜವಾಬ್ದಾರಿಯನ್ನು ಹೊತ್ತು ನಿರ್ಮಿಸಿದರು. ಈ ಚಿತ್ರದೊಂದಿಗೆ ಪುಟ್ಟಣ್ಣ ಕಣಗಾಲ್ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದರು. ಪುಟ್ಟಣ್ಣ ಕಣಗಾಲ್ ರವರು ಚಿತ್ರನಿರ್ದೇಶನದ ಕುಶಲತೆಯನ್ನು ಕರತಲಾಮಲಕವಾಗಿ ಜೀರ್ಣಿಸಿಕೊಂಡಿದ್ದ ವ್ಯಕ್ತಿ. ಜನರಿಗೆ ಏನನ್ನು ಉಣಿಸಿದರೆ ಅವರಿಗೆ ತೃಪ್ತಿ ಸಿಗುತ್ತದೆ ಎಂಬ ಅಂಶವನ್ನು ಸಂಪೂರ್ಣವಾಗಿ ಮನದಟ್ಟು ಮಾಡಿಕೊಂಡಿದ್ದ ಚಾಣಾಕ್ಷ ಅವರು. ಅಂದಿನ ದಿನಗಳಲ್ಲಿ ಚಿತ್ರಮಂದಿರಗಳಿಗೆ ಪ್ರಯಾಣ ಬೆಳೆಸಿ, ಸಮಾಧಾನವಾಗಿ ಕೂತು ಚಿತ್ರಗಳನ್ನು ನೋಡುವ ಪರಿಪಾಠ ಹೆಚ್ಚಾಗಿ ಗೃಹಿಣಿಯರಿಗಿರುತ್ತದೆ ಎಂಬ ಅಂಶವನ್ನು ಅವರು ಅರಿತಿದ್ದರು. ನಮ್ಮ ಸಮಾಜದಲ್ಲಿನ ಸ್ತ್ರೀಯರು ಅನುಭವಿಸುವ ಕಷ್ಟ ಪರಂಪರೆಗಳನ್ನು, ಮನ ತಟ್ಟುವ ಹರಿತ ಸಂಭಾಷಣೆಗಳಿಂದ, ಕಂಬನಿತರಿಸುವ ಸನ್ನಿವೇಶಗಳನ್ನು ಸೃಷ್ಟಿಸಿ, ಸ್ತ್ರೀ ಪಾತ್ರಗಳಿಗೆ ಹೆಚ್ಚು ಪ್ರಾಧಾನ್ಯತೆ ಸಿಗುವಂತಹ ಕಥೆಗಳನ್ನು ಆಧರಿಸಿ ಅವರು ಚಿತ್ರಗಳನ್ನು ತಯಾರಿಸುತ್ತಿದ್ದರು. ಈ ಒಂದು ಹೊಸ ಪರಂಪರೆಯ ಚಿತ್ರಗಳಲ್ಲಿ ಬೆಳ್ಳಿಮೋಡ ಅವರ ಚೊಚ್ಚಲು ಕಾಣಿಕೆ. ತ್ರಿವೇಣಿಯವರ ಕಾದಂಬರಿಯಲ್ಲಿ, ಪುರುಷ ಪ್ರಾಬಲ್ಯವಿರುವ ಸಮಾಜದಲ್ಲಿ ಸ್ತ್ರೀ ಅನುಭವಿಸುವ ಯಾತನೆಗಳನ್ನು, ಪುರಷರ ಸ್ವಾರ್ಥ ಹಾಗೂ ಸಂಕುಚಿತ ಮನೋಭಾವಗಳು, ಎದ್ದು ಕಾಣುವಂತಹ ಕಥೆಯನ್ನು ಬಿತ್ತರಿಸಿದ್ದಾರೆ. ಸಾಮಾನ್ಯವಾಗಿ ಎಲ್ಲ ಚಿತ್ರಗಳಲ್ಲಿ ಪುರುಷ ಪಾತ್ರಗಳೇ ಕಥಾನಾಯಕನಾಗಿ ಮಿಂಚುತ್ತಿದ್ದ ಮಾದರಿಯನ್ನು ಬದಲಿಸಿ, ಕಥಾನಾಯಕಿಗೆ ಪ್ರಧಾನ ಪಟ್ಟವನ್ನು ಕಟ್ಟಿ ನೂತನ ಶೈಲಿಯನ್ನು ಅಳವಡಿಸಿದ ಹೆಗ್ಗಳಿಕೆಗೆ ಪಾತ್ರರಾದವರು ಪುಟ್ಟಣ್ಣ. ಇದು ಒಂದು ಯಶಸ್ವಿ ಪ್ರಯೋಗವೇ ಆಯಿತು. ಪುಟ್ಟಣ್ಣನವರ ಅನೇಕ ಚಿತ್ರಗಳಲ್ಲಿ ಕಥಾನಾಯಕಿಯ ಮುಂದೆ ಪುರುಷ ಪಾತ್ರಗಳು ಹಿಂದೆ ಸರಿದು ನಿಲ್ಲಬೇಕಾಯಿತು.

ಚಿತ್ರಪ್ರೇಮಿಗಳಿಗೆ ಬೆಳ್ಳಿ ಮೋಡದ ಮೂಲಕ ಹೊಸ ಶೈಲಿಯ ಚಿತ್ರಕೊಟ್ಟ ಪುಟ್ಟಣ್ಣನವರು, 1970ರಲ್ಲಿ ಗೆಜ್ಜೆ ಪೂಜೆ ಎಂಬ ಅತಿಸುಂದರ ಚಿತ್ರವನ್ನು ನಿರ್ಮಿಸಿದರು. ಎಂ.ಕೆ. ಇಂದಿರಾ ರವರ ಕಾದಂಬರಿ ಆಧಾರಿತವಾದ ಈ ಚಿತ್ರವು, ಅಂದು ನೋಡಿದ ಅನೇಕ ವೀಕ್ಷಕರ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದೆ ನಿಂತಿದೆ. ಚಿತ್ರದಲ್ಲಿ ಹಾಡುಗಳನ್ನು ಪರಿಣಾಮಕಾರಿಯಾಗಿ ಬಳಸುವ ವಿಧಾನ, ಹಾಡುಗಳ ಸಾಹಿತ್ಯ, ರಾಗಸಂಯೋಜನೆ, ಹೊರಾಂಗಣ ದೃಶ್ಯಗಳ ಚಿತ್ರೀಕರಣ, ಹರಿತವಾದ ಸಂಭಾಷಣೆ, ಕಪ್ಪು ಬಿಳುಪು ಛಾಯಾಗ್ರಹಣದಲ್ಲಿ ನವ್ಯತೆ, ಎಲ್ಲದರಲ್ಲಿಯೂ ಪುಟ್ಟಣ್ಣನವರು ತಮ್ಮ ಛಾಪನ್ನು ಮುದ್ರಿಸುತ್ತಿದ್ದರು. ಬೆಳ್ಳಿಮೋಡ, ಹಾಗೂ ಗೆಜ್ಜೆಪೂಜೆ ಎರಡೂ ಚಿತ್ರಗಳಿಗೆ ರಾಷ್ಟ್ರಪ್ರಶಸ್ತಿ ಲಭಿಸಿತು. ಅವರು ತಯಾರಿಸಿದ ಮತ್ತೊಂದು ಚಿತ್ರ ಕಪ್ಪು ಬಿಳುಪು (1969) ಕೂಡ ಜನಪ್ರಿಯತೆಯಲ್ಲಿ ಯಶಸ್ಸುಗಳಿಸಿತು.

ಈ ದಶಕದಲ್ಲಿ ರಾಷ್ಟ್ರ ಪ್ರಶಸ್ತಿ ಗಳಿಸಿದ ಚಿತ್ರಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ದಾಖಲು ಮಾಡಿಕೊಂಡು ಪ್ರಶಂಸೆ ಪಡೆದ ಚಿತ್ರಗಳೆಂದರೆ: ಬಿ.ಆರ್. ಪಂತುಲು ನಿರ್ದೇಶನದ ಕಿತ್ತೂರು ಚೆನ್ನಮ್ಮ (1961), ವೈ.ಆರ್. ಸ್ವಾಮಿ ನಿರ್ದೇಶನದ ಭಕ್ತ ಕನಕದಾಸ, ಸುಂದರ ರಾವ್ ನಾಡಕರ್ಣಿ ನಿರ್ದೇಶನದ ಸಂತ ತುಕಾರಾಮ್, ಎಮ್.ಆರ್.ವಿಠ್ಠಲ್ ರವರ ನಿರ್ದೇಶನದ ಮಂಗಳಮುಹೂರ್ತ, ಟಿ.ವಿ.ಸಿಂಗ್ ಠಾಕೂರ್ ನಿರ್ದೇಶನದ ಚಂದವಳ್ಳಿಯ ತೋಟ, ಎಸ್.ಕೆ.ಎ.ಚಾರಿ ನಿರ್ದೇಶನದ ಮನೆಅಳಿಯ, ಹುಣಸೂರು ಕೃಷ್ಣಮೂರ್ತಿ ನಿರ್ದೇಶನದ ಸತ್ಯ ಹರಿಶ್ಚಂದ್ರ, ಎಂ.ಆರ್. ವಿಠ್ಠಲ್‌ರವರ ಮಿಸ್.ಲೀಲಾವತಿ, ಎ.ಸಿ.ನರಸಿಂಹ ಮೂರ್ತಿರವರ ಸಂಧ್ಯಾರಾಗ, ಬಿ.ಎ. ಅರಸಕುಮಾರ್ ರವರ ಬಂಗಾರದ ಹೂವು, ಗೀತಪ್ರಿಯ ಅವರ ಮಣ್ಣಿನ ಮಗ, ಮತ್ತು ಪುಟ್ಟಣ್ಣ ಕಣಗಾಲ್ ಅವರ ಗೆಜ್ಜೆ ಪೂಜೆ. ಈ ಪಟ್ಟಿಯನ್ನು ಗಮನಿಸಿದಾಗ ನಮಗೆ ಮುಖ್ಯವಾಗಿ ಅರಿವಾಗುವ ವಿಷಯವೆಂದರೆ, ಸಾಮಾಜಿಕ ಕಥೆಗಳನ್ನುಳ್ಳ ಹಾಗೂ ಕನ್ನಡದ ಕಾದಂಬರಿಗಳನ್ನು ಆಧಾರಿತಗೊಂಡು ತಯಾರಾದ ಚಿತ್ರಗಳು ಹೆಚ್ಚು ಹೆಚ್ಚು ಪ್ರಾಧಾನ್ಯತೆ ಪಡೆದು ಗೊಂಡಿರುವುದು. ಇದೊಂದು ಉತ್ತಮ ಬೆಳವಣಿಗೆ ಎನ್ನಬಹುದು. ಮಣ್ಣಿನ ಮಗ ಚಿತ್ರದೊಂದಿಗೆ ಕನ್ನಡ ಚಲನಚಿತ್ರರಂಗಕ್ಕೆ ಪ್ರವೇಶಮಾಡಿದ ಗೀತಪ್ರಿಯರವರು ಚಿತ್ರಾಸಕ್ತರ ಮೆಚ್ಚುಗೆಗಳಿಸಿ ಮುಂದೆ ಅನೇಕ ಚಿತ್ರಗಳನ್ನು ನಿರ್ದೇಶಿಸಿ ಹೆಸರು ಮಾಡಿದ ವ್ಯಕ್ತಿಯಾದರು.

ಬೇರೆ ಉದ್ಯಮಗಳಿಗೆ ಕೊಡುವಂತೆ ಕನ್ನಡ ಚಲನಚಿತ್ರ ಉದ್ಯಮಕ್ಕೆ ಸರ್ಕಾರದಿಂದ ಸಹಾಯ ಧನ, ತೆರಿಗೆ ವಿನಾಯಿತಿ, ಉತ್ತಮ ಚಿತ್ರಗಳಿಗೆ ಪ್ರಶಸ್ತಿಗಳು, ಮತ್ತು ಇತರ ಸೌಕರ್ಯಗಳನ್ನು ಒದಗಿಸಿಬೇಕೆಂಬ ನಿರಂತರ ಬೇಡಿಕೆಗಳನ್ನು, ಚಿತ್ರರಂಗದ ಅನೇಕ ಗಣ್ಯರುಗಳು ಮಾಡುತ್ತಲೇ ಬಂದಿದ್ದರು. ಚಿತ್ರನಿರ್ಮಾಣಕ್ಕಾಗಿ ಮದರಾಸಿಗೆ ಹೋಗಬೇಕಾದ ಪ್ರಮೇಯವನ್ನು ತಪ್ಪಿಸಿ ಇಲ್ಲಿಯೇ ಸ್ಟುಡಿಯೋ ಮತ್ತು ಲ್ಯಾಬೊರೆಟರಿ ಸೌಕರ್ಯಗಳನ್ನು ಒದಗಿಸಿಕೊಂಡು ನಮ್ಮಕಾಲಿನ ಮೇಲೆ ನಾವು ನಿಲ್ಲಬೇಕು ಎಂಬ ಮಹದಾಶಯ ಚಿತ್ರರಂಗದ ಎಲ್ಲರಲ್ಲಿಯೂ ಉದ್ಭವಿಸಿದ್ದು ಈ ದಶಕದ ಅತ್ಯಂತ ಹೆಮ್ಮೆಯ ಬೆಳವಣಿಗೆ. ಚಿತ್ರಪ್ರೇಮಿಗಳ ಬಯಕೆಗೆ ಸ್ಪಂದಿಸಿ, ಇಂತಹ ಒಂದು ನಿಟ್ಟಿನಲ್ಲಿ ಅಂದಿನ ಸರ್ಕಾರ ಕಾರ್ಯೋನ್ಮುಖವಾದದ್ದು ಕೂಡ ಒಂದು ಒಳ್ಳೆಯ ಬೆಳವಣಿಗೆ. ಕನ್ನಡ ಚಿತ್ರಗಳಿಗೆ ರೂ.50,000 /– ಸಬ್ಸಿಡಿ, ಉತ್ತಮ ಕನ್ನಡ ಚಿತ್ರಗಳಿಗೆ ಪ್ರಶಸ್ತಿ, ನಗರದ ಹೊರವಲಯದಲ್ಲಿ ನಿರ್ಮಿಸಿಲಾದ ಕಂಠೀರವ ಸ್ಟುಡಿಯೊ, ಆಸ್ತಿತ್ವಕ್ಕೆ ಬಂದ ಕರ್ನಾಟಕ ರಾಜ್ಯ ಚಲನಚಿತ್ರ ಅಭಿವೃದ್ಧಿ ನಿಗಮ, ಇವುಗಳು ಸರ್ಕಾರದಿಂದ ದೊರೆತ ಪ್ರೋತ್ಸಾಹ. ಈ ದಶಕದಲ್ಲಿ ಒಟ್ಟು 229 ಕನ್ನಡ ಚಿತ್ರಗಳು ತಯಾರಾಗಿ ಅವುಗಳಲ್ಲಿ ಸಾಕಷ್ಟು ಚಿತ್ರಗಳು ಮೈಸೂರಿನ ಪ್ರೀಮಿಯರ್ ಹಾಗೂ ನವಜ್ಯೋತಿ ಸ್ಟುಡಿಯೋಗಳಲ್ಲಿ ತಯಾರಾದದ್ದು ಮೆಚ್ಚುವಂತಹ ಸಂಗತಿಯೆ.

ಉತ್ತಮ ಚಿತ್ರಗಳಿಗೆ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳನ್ನು ವಿತರಣೆ ಮಾಡಲು ಪ್ರಾರಂಭಿಸಿದ ವರ್ಷ 1954. 1966–67ರ ವರ್ಷದಿಂದ ಉತ್ತಮ ಕನ್ನಡ ಚಿತ್ರಗಳಿಗೆ ರಾಜ್ಯಪ್ರಶಸ್ತಿಗಳನ್ನು ಕೊಡುವ ಸಂಪ್ರದಾಯಕ್ಕೆ ರಾಜ್ಯಸರ್ಕಾರ ಚಾಲನೆ ನೀಡಿತು.

1970ರಲ್ಲಿ, ಕನ್ನಡದ ಅನೇಕ ಪ್ರತಿಭಾವಂತ ವ್ಯಕ್ತಿಗಳು, ಕೈಗೂಡಿಸಿ ನಿರ್ಮಿಸಿದ ಚಿತ್ರ, ಸಂಸ್ಕಾರ, ಕನ್ನಡದಲ್ಲಿ ವಾಸ್ತವವಾಗಿ ಒಂದು ಹೊಸ ಆಯಾಮ ಕೊಟ್ಟಂತಹ ಚಿತ್ರವಾಯಿತು. ತಲೆ ತಲಾಂತರದಿಂದ ಆಚರಣೆಯಲ್ಲಿದ್ದ ಮೂಢನಂಬಿಕೆಗಳ ಪ್ರಸ್ತುತತೆಯನ್ನು ಪ್ರಶ್ನಿಸುವಂತಹ ವಸ್ತುವನ್ನುಳ್ಳ, ಯು.ಆರ್.ಅನಂತಮೂರ್ತಿಯವರ ಕಥೆಯನ್ನು ಚಿತ್ರರೂಪಕ್ಕೆ ಅಳವಡಿಸಿಕೊಂಡು ಮಾಡಿದ ನವ್ಯ ಪ್ರಯೋಗ ಸಂಸ್ಕಾರ. ಮಾಮೂಲಿನಂತೆ ಅನೇಕ ಹಾಡುಗಳು, ಅಸಂಬದ್ಧ ನೃತ್ಯಗಳು, ಉದ್ಯಾನವನಗಳಲ್ಲಿ ನಾಯಕಿಯ ಹಿಂದೆ ನಾಯಕ ಓಡುವ ದೃಶ್ಯಗಳು, ಅನವಶ್ಯಕ ಹೊಡೆದಾಟಗಳು, ಕೊನೆಯಲ್ಲಿ ಎಲ್ಲವೂ ಸೌಖ್ಯ ಎಂಬ ಅಂತ್ಯ ಇವುಗಳಿಂದ ಪೂರ್ಣ ಮುಕ್ತಗೊಂಡು ಹೊಸ ಹಾದಿಯಲ್ಲಿ ಮಾಡಿದ ಕನ್ನಡದ ಮೊದಲ ಚಿತ್ರವಿದು. ಮೂಲತಃ ಆಂಧ್ರದವರಾಗಿ, ತೆಲುಗು ಸಾಹಿತ್ಯದಲ್ಲಿ ಹೆಸರು ಮಾಡಿದ್ದ ಪಟ್ಟಾಭಿರಾಮ ರೆಡ್ಡಿ ಯವರು, ಕನ್ನಡದಲ್ಲಿ ಚಲನಚಿತ್ರ ಮಾಡಬೇಕೆಂಬ ಅಭಿಲಾಷೆಯಿಂದ ಸಾಹಸ ಮಾಡಿ, ಗಿರೀಶ್ ಕಾರ್ನಾಡ್, ಪಿ.ಲಂಕೇಶ್, ಮತ್ತು ಹವ್ಯಾಸಿ ರಂಗ ಭೂಮಿಯಲ್ಲಿನ ಅನೇಕರ ಸಹಕಾರದಿಂದ ಮಾಡಿದ ಈ ಚಿತ್ರ ಸೆನ್ಸಾರ್‌ನಿಂದ ಬಿಡುಗಡೆಯಾಗಲು ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದರೂ, ಕೊನೆಗೆ ರಾಷ್ಟ್ರಮಟ್ಟದಲ್ಲಿ ರಾಷ್ಟ್ರಾಧ್ಯಕ್ಷರ ಸ್ವರ್ಣಪದಕವನ್ನು ಪಡೆದು ಕನ್ನಡಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರಗಳಿಗೆ ನಾಂದಿಯಾಯಿತು. ಕನ್ನಡಚಿತ್ರರಂಗದಲ್ಲಿ ಸಂಸ್ಕಾರ ಸ್ವರ್ಣಪದಕಗಳಿಸಿದ ಮೊದಲ ಚಿತ್ರ, ಮತ್ತು ವಿದೇಶಗಳಲ್ಲಿ ಕೂಡ ಅನೇಕ ಚಿತ್ರೋತ್ಸವಗಳಲ್ಲಿ ಭಾಗವಹಿಸಿ ಪ್ರಶಂಸೆಗಳಿಸಿತು.

ಹಿಂದಿನ ದಶಕದಲ್ಲಿ ಸರ್ಕಾರ ಪ್ರಾರಂಭಿಸಿದ ವಿಶೇಷ ಯೋಜನೆಗಳಿಂದಾಗಿ, ಅದರಲ್ಲೂ ಸಹಾಯಧನ ಮತ್ತು ಪ್ರಶಸ್ತಿಗಳ ಆಕರ್ಷಣೆಯಿಂದ ಪ್ರೇರಣೆಗೊಂಡ ಅನೇಕರು ಚಿತ್ರ ನಿರ್ಮಾಣದ ಉದ್ಯಮಕ್ಕೆ ಧಾವಿಸಿದ್ದು 1970–80ರ ದಶಕದ ವಿಶೇಷ. ಬೆಂಗಳೂರಿನಲ್ಲಿ ಸ್ಟುಡಿಯೋಗಳ ಸ್ಥಾಪನೆ, ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ಹೆಚ್ಚು ಚಟುವಟಿಕೆಗಳು, ಮದರಾಸಿನಿಂದ ಬೆಂಗಳೂರಿಗೆ ಚಿತ್ರೋದ್ಯಮದ ಚಟುವಟಿಕೆಗಳ ವರ್ಗಾವಣೆ, ಹೊಸ ಅಲೆ ಚಿತ್ರಗಳನ್ನು ಮಾಡಬೇಕೆಂಬ ಹಂಬಲದಿಂದ ಚಿತ್ರ ನಿರ್ಮಾಣಕ್ಕೆ ಕೈಹಾಕಿದ ಅನೇಕ ಹೊಸಬರು, ಈ ಬೆಳವಣಿಗೆಗಳಿಂದಾಗಿ ಕನ್ನಡಚಿತ್ರಗಳು ತಯಾರಾಗುವ ಸಂಖ್ಯೆ ಈ ದಶಕದಲ್ಲಿ 350 ಕ್ಕೂ ಮೇಲೇರಿತು. ಪ್ರಶಸ್ತಿಗಳ ಬಗ್ಗೆ, ಸಹಾಯಧನದ ಬಗ್ಗೆ, ರೀಮೇಕ್ ಚಿತ್ರಗಳ ಬಗ್ಗೆ, ಹೀಗೆ ಅನೇಕ ವಿಷಯಗಳಲ್ಲಿ ಚಿತ್ರ ರಂಗದಲ್ಲಿ ಯಾವುದಾದರೊಂದು ವಿವಾದ ಸದಾಕಾಲ ಇದ್ದೇ ಇದೆ. ಅದು ಇಂದಿಗೂ ಇದೆ. ಸರ್ಕಾರ ಪ್ರಾರಂಭಿಸಿದ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮವಂತೂ ಸದಾಕಾಲ ವಿವಾದದಲ್ಲಿ ಮುಳುಗಿ, ನಿಶ್ಚಿತ ಧ್ಯೇಯೋದ್ದೇಶಗಳ ಕೊರತೆಯಿಂದಾಗಿ ಏನನ್ನೂ ಸಾಧಿಸದೆ ಕೇವಲ ಉಸಿರಾಡಿಕೊಂಡು ಉಳಿಯಿತು.

ಬೆಳ್ಳಿಮೋಡ ಹಾಗೂ ಗೆಜ್ಜೆ ಪೂಜೆ ಚಿತ್ರಗಳ ಮೂಲಕ ತನ್ನ ಸೃಜನಶೀಲತೆ, ಹಾಗೂ ನವ್ಯತೆಗಳನ್ನು ಚಿತ್ರಪ್ರೇಮಿಗಳಿಗೆ ಪರಿಚಯಮಾಡಿಕೊಟ್ಟ. ಪುಟ್ಟಣ್ಣನವರು ಅದೇ ಜಾಡಿನ ಮತ್ತೊಂದು ಯಶಸ್ವೀ ಚಿತ್ರ, ತ್ರಿವೇಣಿ ಕಾದಂಬರಿ ಆಧಾರಿತ ಶರಪಂಜರವನ್ನು ನಿರ್ದೇಶಿಸಿ, ಚಿತ್ರನಟಿ ಕಲ್ಪನಾರವರನ್ನು ಅಂದಿನ ಜನಪ್ರಿಯ ತಾರೆಯಾಗುವಂತೆ ಮಾಡಿದರು. ಈ ಚಿತ್ರಕ್ಕೆ ರಾಜ್ಯ ಹಾಗೂ ರಾಷ್ಟ್ರ ಎರಡೂ ಪ್ರಶಸ್ತಿಗಳು ಲಭಿಸಿದವು. ಪುಟ್ಟಣ್ಣನವರ ಶೈಲಿ ಹೊಸ ಅಲೆಚಿತ್ರಗಳ ಜಾಡನ್ನು ಬಳಸಿಕೊಳ್ಳಲಿಲ್ಲ. ಅವುಗಳಂತೆ ಮಂದಗತಿಯಲ್ಲಿ ಚಲಿಸಲಿಲ್ಲ. ಬದಲಾಗಿ ಹಾಡುಗಳನ್ನು ಅರ್ಥಪೂರ್ಣವಾಗಿ ಬಳಸಿದರು. ಸಾಕಷ್ಟು ಹಾಸ್ಯವನ್ನೂ ಅಳವಡಿಸುತ್ತಿದ್ದರು, ಆದರೆ ಗುಣಮಟ್ಟದಲ್ಲಿ ಯಾವ ಹೊಸ ಅಲೆ ಚಿತ್ರಕ್ಕೂ ಕಮ್ಮಿ ಎನಿಸಿಕೊಳ್ಳದಂತೆ ಕೌಶಲ್ಯ ತೋರಿಸಿ, ಮೈ ನವಿರೇಳಿಸುವ ಸನ್ನವೇಶಗಳನ್ನು ಸೃಷ್ಟಿಸಿ ಜನರನ್ನು ಆಕರ್ಷಿಸುತ್ತಿದ್ದರು. ಅವರ ಚಿತ್ರಗಳಿಗೆ ಜನ ಕಾದು ನಿರೀಕ್ಷಿಸುವಂತೆ ಮಾಡಿದರು. ತ.ರಾ.ಸು ರವರ ಕಾದಂಬರಿ ಆಧಾರಿತವಾಗಿ ಮಾಡಿದ ನಾಗರಹಾವು ಚಿತ್ರದಲ್ಲಿ ವಿಷ್ಣುವರ್ಧನ್ ಅವರನ್ನು ಕನ್ನಡಚಿತ್ರರಂಗಕ್ಕೆ ನಾಯಕನ ಪಾತ್ರದಲ್ಲಿ ಪರಿಚಯ ಮಾಡಿಸಿ, ಮುಂದೆ ಆತ ತಾರಾ ಪಟ್ಟಕ್ಕೇರಲು ನೆರವು ಮಾಡಿಕೊಟ್ಟರು.

ಉತ್ತಮ ಚಿತ್ರಗಳಿಗೆ ಪ್ರಶಸ್ತಿಗಳು ದೊರಕಬೇಕು, ಪ್ರೋತ್ಸಾಹ ಸಿಗಬೇಕು, ಜನ ಅವುಗಳನ್ನು ನೋಡಬೇಕು ಎಂಬ ಕಾತರವುಳ್ಳ ಮತ್ತು ಕಾಳಜಿಯಿದ್ದ ಅನೇಕ ಪತ್ರಕರ್ತರು ಚಿತ್ರಗಳ ಬಗ್ಗೆ ಉತ್ತಮ ಲೇಖನಗಳನ್ನು ಬರೆಯುತ್ತಿದ್ದರು. ಇದಕ್ಕೆ ಪೂರಕವಾಗಿ ಚಲನಚಿತ್ರ

ಸಮಾಜಗಳೂ ಹುಟ್ಟಿಕೊಂಡವು. ಸಾಮಾನ್ಯವಾಗಿ ಸಾರ್ವಜನಿಕ ಚಿತ್ರಮಂದಿರಗಳಲ್ಲಿ ಪ್ರದರ್ಶನಾವಕಾಶ ಸಿಕ್ಕದ ಅನೇಕ ಪ್ರಶಸ್ತಿವಿಜೇತ ಚಿತ್ರಗಳನ್ನು ಫಿಲಂ ಸೊಸೈಟಿಗಳು ಕಿಕ್ಕಿರಿದ ಸದಸ್ಯ ಪ್ರೇಕ್ಷಕರಿಗೆ ಪ್ರದರ್ಶನಮಾಡುತ್ತಿದ್ದರು. ಚಿತ್ರಗಳಲ್ಲಿ ಹೊಸತನ್ನು ಕಾಣುವ ಹಂಬಲ, ಗಂಭೀರ ವಿಷಯಗಳನ್ನು ಗಂಭೀರವಾಗಿ ಚಿತ್ರೀಕರಣ ಮಾಡುವುದನ್ನು ನಿರೀಕ್ಷಿಸುವುದು, ಈ ರೀತಿಯ ಪ್ರಜ್ಞೆಗಳನ್ನು ಜನರಲ್ಲಿ ಮೂಡಿಸುವ ಪ್ರಯತ್ನಗಳು ವ್ಯಾಪಕವಾಗಿ ಬೆಳೆಯಿತು. ಈ ಒಂದು ಪ್ರಗತಿಶೀಲ ಬೆಳೆವಣಿಗೆಯಿಂದಾಗಿ ಕರ್ನಾಟಕದಲ್ಲಿ ಒಂದು ಹೊಸ ಅಧ್ಯಾಯಯವೇ ಚಲನೆಗೊಂಡಿತು ಎನ್ನಬಹುದು.

ಹೊಸ ಅಲೆಯ ಜಾಡನ್ನು ಅನುಸರಿಸಿ, ಎಸ್.ಎಲ್, ಭೈರಪ್ಪನವರ ಕಾದಂಬರಿ ವಂಶವೃಕ್ಷವನ್ನು ಚಿತ್ರೀಕರಿಸಬೇಕೆಂದು ನಿರ್ದೇಶನದ ಹೊಣೆಯನ್ನು ಜಿ.ವಿ.ಅಯ್ಯರ್ ರವರು, ಬಿ.ವಿ.ಕಾರಂತ್ ಮತ್ತು ಗಿರೀಶ್ ಕಾರ್ನಾಡ್ ಜೋಡಿಗೆ ವಹಿಸಿದರು. ವಂಶವೃಕ್ಷದಂತಹ ಬೃಹದಾಕಾರದ ಗ್ರಂಥವನ್ನು ಚಲನಚಿತ್ರಕ್ಕೆ ತರ್ಜುಮೆ ಮಾಡುವುದು ಒಂದು ಸಾಹಸವೇ. ಈ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ ಈ ನಿರ್ದೇಶಕ ಜೋಡಿ ಉತ್ತಮ ನಿರ್ದೇಶನಕ್ಕೆ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳಿಸಿದರು. ಈ ಚಿತ್ರದಲ್ಲಿ ಒಂದು ಪುಟ್ಟ ಪಾತ್ರದಲ್ಲಿ ಮೊದಲ ಬಾರಿಗೆ ವಿಷ್ಣುವರ್ಧನ್ ರವರು ಚಲನಚಿತ್ರದಲ್ಲಿ ಪದಾರ್ಪಣೆ ಮಾಡಿದರು. ಈ ಚಿತ್ರ 25 ವಾರಗಳು ನಡೆದು ಜನಪ್ರಿಯತೆಯನ್ನೂ ಗಳಿಸಿತು.

1972ರಲ್ಲಿ, ಜನಪ್ರಿಯತೆಯಲ್ಲಿ ದಾಖಲೆ ಮಾಡಿದ ಚಿತ್ರವೆಂದರೆ ಬಂಗಾರದ ಮನುಷ್ಯ. ಟಿ.ಕೆ.ರಾಮರಾಯರ ಕಾದಂಬರಿ ಆಧಾರಮಾಡಿಕೊಂದು ಚಿತ್ರ ನಿರ್ದೇಶಿಸಿದವರು ಸಿದ್ದಲಿಂಗಯ್ಯನವರು. ಹಳ್ಳಿಯ ಕುಟಂಬದಲ್ಲಿ ಹುಟ್ಟಿ, ಮನೆತನದ ಗೌರವಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಿದ ಆದರ್ಶಪ್ರಾಯ ವ್ಯಕ್ತಿಯಾಗಿ ಮಾಡಿದ ರಾಜಕುಮಾರ್‌ರವರ ಅಭಿನಯ ಈ ಚಿತ್ರದ ವೈಶಿಷ್ಟ್ಯತೆ. ಈ ಚಿತ್ರ ಬೆಂಗಳೂರಿನ ಒಂದು ಚಿತ್ರ ಮಂದಿರದಲ್ಲಿ ಸು. 100 ವಾರಗಳಿಗೂ ಹೆಚ್ಚು ನಡೆದು ಹೆಸರು ಮಾಡಿತು. ಹಳ್ಳಿಯ ಚಿತ್ರಗಳನ್ನು ಮನಮುಟ್ಟುವಂತೆ ಚಿತ್ರಿಸುವಲ್ಲಿ ನಿಷ್ಣಾತರಾದ ಸಿದ್ದಲಿಂಗಯ್ಯನವರು, 1974ರಲ್ಲಿ ಖ್ಯಾತ ಸಾಹಿತಿ ಗೊರೂರು ರಾಮಸ್ವಾಮಿ ಐಯಂಗಾರ್‌ರವರ ಒಂದು ಕಿರು ಕಥೆಯನ್ನು ಅಳವಡಿಸಿಕೊಂಡು ಮಾಡಿದ ಬೂತಯ್ಯನ ಮಗ ಅಯ್ಯು ಚಿತ್ರ ಕೂಡ ಅಪಾರ ಜನಪ್ರಿಯತೆ ಗಳಿಸಿತಲ್ಲದೆ ರಾಜ್ಯ ಮಟ್ಟದಲ್ಲಿ ಪ್ರಥಮ ಅತ್ಯುತ್ತಮ ಚಿತ್ರ ಪ್ರಶಸ್ತಿ ಕೂಡ ದಕ್ಕಿಸಿಕೊಂಡಿತು.

ಹೊಸ ಅಲೆಯ ಚಿತ್ರಗಳಲ್ಲಿ ಆಸಕ್ತಿ ತೋರಿಸಿ ಒಳ್ಳೆಯ ಚಿತ್ರಗಳನ್ನು ತಯಾರಿಸಬೇಕೆಂಬ ಉದ್ದೇಶದಿಂದ ಲಕ್ಷ್ಮೀಪತಿ ಮತ್ತು ನಾರಾಯಣ್, ಇಬ್ಬರೂ ಜೊತೆಗೂಡಿ ಕೆಲವು ಚಿತ್ರಗಳನ್ನು ನಿರ್ಮಿಸಿದರು. ಅವುಗಳಲ್ಲಿ ಗಿರೀಶ್‌ಕಾರ್ನಾಡ್ ಅವರಿಂದ ನಿರ್ದೇಶನಗೊಂಡ ಕಾಡು ಮೊದಲನೆಯದು ಮತ್ತು ಹಲವಾರು ಪ್ರಶಸ್ತಿಗಳಿಸಿದ ಕನ್ನಡ ಚಿತ್ರ. ಈ ಚಿತ್ರ ಅನೇಕ ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಭಾಗವಹಿಸಿತು. ರಾಷ್ಟ್ರಮಟ್ಟದಲ್ಲಿ ದ್ವಿತೀಯ ಸ್ಥಾನಗಳಿಸಿತು ಮತ್ತು ನಟಿ ನಂದಿನಿ ಅವರಿಗೆ ಶ್ರೇಷ್ಠ ಅಭಿನಯಕ್ಕಾಗಿ ಊರ್ವಶಿ ಪ್ರಶಸ್ತಿಯೂ ಲಭಿಸಿತು. ಕಾಡು, ಶ್ರೀ ಕೃಷ್ಣ ಆಲನಹಳ್ಳಿ ಅವರ ಕಥೆಯನ್ನು ಆಧಾರಿಸಿ ಮಾಡಿದ ಚಿತ್ರ. ಮತ್ತೊಮ್ಮೆ ಗ್ರಾಮೀಣ ಪ್ರದೇಶದ ಕಥೆ, ಎರಡುಹಳ್ಳಿಗಳ ಕ್ಷುಲ್ಲಕ ರಾಜಕೀಯದಲ್ಲಿ ನಡೆಯುವ ಘಟನೆಗಳನ್ನು ಒಬ್ಬಬಾಲಕನ ಕಣ್ಣಿನ ದೃಷ್ಟಿಯ ಮೂಲಕ ತೋರಿಸುವ ಈ ಚಿತ್ರ ವಿಷಯ ನಿರೂಪಣೆಯಲ್ಲಿ ವಿನೂತನ ಶೈಲಿಯನ್ನು ಅನುಸರಿಸಿತು. ಕಪ್ಪು ಬಿಳುಪು ಛಾಯಾಗ್ರಹಣ ಅತ್ಯಂತ ಪರಿಣಾಮಕಾರಿಯಾಗಿ ಹಳ್ಳಿಯ ವಾತಾವರಣ, ಕಾಡಿನ ಪರಿಸರ ಎಲ್ಲವನ್ನೂ ಸೆರೆ ಹಿಡಿಯಿತು. ಕನ್ನಡ ಚಿತ್ರ ರಂಗದಲ್ಲಿ ಇದೊಂದು ಪ್ರಮುಖ ಚಿತ್ರವೆನ್ನಬಹುದು.

ನಾಂದಿ, ಉಯ್ಯಾಲೆ, ಮುಕ್ತಿ ಚಿತ್ರಗಳನ್ನು ನಿರ್ದೇಶಿಸಿ ಉತ್ತಮಶ್ರೇಣಿಯ ನಿರ್ದೇಶಕರು ಎಂದು ಖ್ಯಾತಿ ಪಡೆದಿದ್ದ ಎನ್. ಲಕ್ಷ್ಮೀನಾರಾಯಣ್‌ರವರು ಅಬಚೂರಿನ ಪೋಸ್ಟ್ ಆಫೀಸು ಚಿತ್ರವನ್ನು ನಿರ್ದೇಶಿಸಿ, ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಗಳಿಸಿದರು. ಲಕ್ಷ್ಮೀನಾರಾಯಣ್ ರವರು ಅಬಚೂರಿನ ಪೋಸ್ಟ್ ಆಫೀಸು (1973), ಮುಯ್ಯಿ (1979) ಚಿತ್ರಗಳನ್ನು ಹೊಸ ಅಲೆಯ ಮಾದರಿಯಲ್ಲೇ ಮಾಡಿದರೂ, ಅವುಗಳು ನಿರೀಕ್ಷಿಸಿದಷ್ಟು ಪರಿಣಾಮ ಬೀರಲಿಲ್ಲ.

ಸಂಸ್ಕಾರ, ವಂಶವೃಕ್ಷ, ಕಾಡು ಚಿತ್ರಗಳಿಗೆ ದೊರಕಿದ ಉತ್ತಮ ವಿಮರ್ಶೆ ಮತ್ತು ಪ್ರಶಸ್ತಿಗಳ ಸುರಿಮಳೆಗಳಿಂದ ಸ್ಫೂರ್ತಿಗೊಂಡ ಅನೇಕರು,ಹವ್ಯಾಸಿ ರಂಗಕರ್ಮಿಗಳು, ಸಾಹಿತಿಗಳು, ಅಧ್ಯಾಪಕವೃತ್ತಿಯಲ್ಲಿದ್ದವರು, ಮತ್ತು ಚಿತ್ರೋದ್ಯಮದಲ್ಲಿದ್ದವರೂ ಕೂಡ ಹೊಸ ಅಲೆಯ ಚಿತ್ರಗಳನ್ನು ನಿರ್ಮಿಸಲು ಹುರುಪಿನಿಂದ ಉದ್ಯುಕ್ತರಾದರು.

1973ರಲ್ಲಿ ಪಿ.ವಿ. ನಂಜರಾಜ ಅರಸ್‌ರವರು ನಿರ್ದೇಶಿಸಿದ ಸಂಕಲ್ಪ, ಕೆ.ಎಮ್. ಶಂಕರಪ್ಪನವರ ಮಾಡಿ ಮಡಿದವರು, ಮಯೂರ ಫಿಲಂಸ್‌ರವರ ಕಂಕಣ, ಬಿ.ವಿ.ಕಾರಂತರ ಚೋಮನ ದುಡಿ ಜಿ.ವಿ.ಅಯ್ಯರ್ ರವರ ಹಂಸ ಗೀತೆ, ಪಿ.ಲಂಕೇಶ್ ರವರ ಪಲ್ಲವಿ, ಸಿ.ಆರ್.ಸಿಂಹ ರವರ ಕಾಕನ ಕೋಟೆ, ವಿ.ಆರ್.ಕೆ.ಪ್ರಸಾದ್ ರವರ ಋಷ್ಯಶೃಂಗ, ಎಮ್.ಎಸ್. ಸತ್ಯು ಅವರ ಕನ್ನೇಶ್ವರ ರಾಮ, ಗಿರೀಶ್ ಕಾರ್ನಾಡ್ ಮತ್ತು ಬಿ.ವಿ.ಕಾರಂತರ ತಬ್ಬಲಿಯು ನೀನಾದೆ ಮಗನೆ, ಗಿರೀಶ್ ಕಾಸರವಳ್ಳಿಯವರ ಘಟಶ್ರಾದ್ಧ, ಟಿ.ಎಸ್. ರಂಗಾರವರ ಗೀಜಗನಗೂಡು, ಎಮ್.ಎಸ್.ಸತ್ಯು ಅವರ ಚಿತೆಗೂ ಚಿಂತೆ, ಟಿ.ಎಸ್.ನಾಗಾಭರಣ ಅವರ ಗ್ರಹಣ, ಪಿ.ಲಂಕೇಶ್ ರವರ ಖಂಡವಿದೆಕೊ ಮಾಂಸವಿದೆಕೊ, ಕಟ್ಟೆ ರಾಮಚಂದ್ರ ಅವರ ಅರಿವು, ಗಿರೀಶ್ ಕಾಸರವಳ್ಳಿ ಅವರ ಆಕ್ರಮಣ, ಪಿ.ಲಂಕೇಶ್ ರವರ ಎಲ್ಲಿಂದಲೋ ಬಂದವರು, ಟಿ.ಎಸ್. ರಂಗಾರವರ ಸಾವಿತ್ರಿ, ಈ ಚಿತ್ರಗಳು ಈ ಹೊಸ ಅಲೆಯ ಪ್ರವಾಹದಲ್ಲಿ ತಯಾರಾದ ಪ್ರಮುಖ ಚಿತ್ರಗಳು. ಗಲ್ಲಾಪೆಟ್ಟಿಗೆಯ ದೃಷ್ಟಿಯಿಂದ ಈ ಚಿತ್ರಗಳಲ್ಲಿ ಅನೇಕವು ಸೋಲನ್ನು ಅನುಭವಿಸಿದರೂ ಪ್ರಶಸ್ತಿಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ದಾಖಲಿಸಿದವು.

1976ರಲ್ಲಿ ಚೋಮನದುಡಿ ಚಿತ್ರ, ರಾಷ್ಟ್ರ ಮಟ್ಟದಲ್ಲಿ ಅತ್ಯತ್ತಮ ಚಿತ್ರಕ್ಕಾಗಿ ಸ್ವರ್ಣಕಮಲ ಪಡೆಯಿತು. ಕನ್ನಡ ಚಿತ್ರಕ್ಕೆ ಸಂದ ಈ ಗೌರವ ಸಂಸ್ಕಾರದ ನಂತರ ಎರಡನೇಬಾರಿ. ಶಿವರಾಮ ಕಾರಂತರ ಕಾದಂಬರಿಯನ್ನು ಆಧರಿಸಿ, ಬಿ.ವಿ.ಕಾರಂತರು ಸ್ವಂತವಾಗಿ ನಿರ್ದೇಶಿಸಿದ ಈ ಚಿತ್ರದಲ್ಲಿ ಮುಖ್ಯ ಪಾತ್ರ ಚೋಮನಪಾತ್ರದಲ್ಲಿ ನಟಿಸಿದ ಎಂ.ವಿ.ವಾಸುದೇವರಾವ್ ರವರಿಗೆ ರಾಷ್ಟ್ರಮಟ್ಟದಲ್ಲಿ ಶ್ರೇಷ್ಠ ನಟ ಪ್ರಶಸ್ತಿ ಲಭಿಸಿತು. ಎಂ.ವಿ.ವಾಸುದೇವರಾವ್ ಅವರು ಮುಂದೆ ಅನೇಕ ಚಿತ್ರಗಳಲ್ಲಿ ನಟಿಸಿದರು, ಖ್ಯಾತ ಬಂಗಾಳಿ ಚಿತ್ರ ನಿರ್ದೇಶಕರಾದ ಮೃಣಾಲ್‌ಸೇನ್‌ರವರ ಚಿತ್ರದಲ್ಲಿಯೂ ಅವರಿಗೆ ಅವಕಾಶ ಸಿಕ್ಕಿತು. ಆದರೆ ಚೋಮನದುಡಿಯಲ್ಲಿನ ಅವರ ಅಭಿನಯಕ್ಕೆ ಯಾವುದೂ ಸರಿಗಟ್ಟಲಿಲ್ಲ.

ಈ ದಶಕದಲ್ಲಿನ ಮತ್ತೊಂದು ಅಪೂರ್ವ ಕೊಡುಗೆಯೆಂದರೆ, ಜಿ.ವಿ.ಅಯ್ಯರ್‌ರವರ ಹಂಸಗೀತೆ (1975). ಹಂಸಗೀತೆ ತ.ರಾ.ಸು.ರವರ ಪ್ರಖ್ಯಾತ ಕಾದಂಬರಿ. ಅನೇಕ ರೋಮಾಂಚನಕರ ಸನ್ನಿವೇಶಗಳನ್ನೊಳಗೊಂಡು, ಪರಿಶುದ್ಧ ಕನ್ನಡದಲ್ಲಿ ಲಿಖಿತಗೊಂಡ ಸಾಹಿತ್ಯ ರತ್ನ ಹಂಸಗೀತೆ. ಜಿ.ವಿ. ಅಯ್ಯರ್‌ರವರು ಈ ಕಾದಂಬರಿಯಲ್ಲಿನ ಎಲ್ಲ ಸಂಭಾಷಣೆಗಳನ್ನೂ ವಿಸರ್ಜಿಸಿ ಒಂದು ಹೊಸ ಶೈಲಿಯಲ್ಲಿ ಈ ಚಿತ್ರವನ್ನು ನಿರ್ದೇಶಿಸಿದರು. ಇಡೀ ಚಿತ್ರದಲ್ಲಿ ಕೇವಲ 18 ನಿಮಿಷಗಳಷ್ಟು ಮಾತ್ರ ಸಂಭಾಷಣೆ. ಕಥಾ ನಿರೂಪಣೆಯನ್ನು, ಸಂಗೀತ ಪ್ರಾಧಾನ್ಯಚಿತ್ರವಾದ್ದರಿಂದ, ಬಿ.ವಿ.ಕಾರಂತ್, ಬಾಲಮುರಳಿಕೃಷ್ಣ ಹಾಗೂ ಟಿ.ಜಿ.ಲಿಂಗಪ್ಪ ನವರ ಸಂಗೀತ ಸಂಯೋಜನೆಯಿಂದ ರೂಪುಗೊಂಡ ಸಂಗೀತದ ಮೂಲಕ ಮತ್ತು ಸಾಂಕೇತಿಕವಾದ ದೃಶ್ಯಗಳನ್ನು ಛಾಯಾ ಗ್ರಾಹಕ ನಿಮಾಯ್ ಘೋಷ್ ರವರ ಕಲೆಗಾರಿಕೆಯಿಂದ, ಕಲಾನಿರ್ದೇಶಕ ಕೃಷ್ಣ ಮೂರ್ತಿಯವರ ಸೃಜನಶೀಲತೆಯಿಂದ ಪ್ರೇಕಕ್ಷರಿಗೆ ಮನವರಿಕೆಮಾಡಿಕೊಟ್ಟು ಯಶಸ್ವಿಯಾದರು.

ಈ ದಶಕದಲ್ಲಿ ಪುಟ್ಟಣ್ಣ ಕಣಗಾಲ್ ರವರು ಸಾಕಷ್ಟು ಚಿತ್ರಗಳನ್ನು ನಿರ್ದೇಶಿಸಿದ್ದಾಗ್ಯೂ, ಅವುಗಳಲ್ಲಿ ಹೊಸತನ್ನು ತೋರಿಸಿದ ಚಿತ್ರವೆಂದರೆ ಕಥಾಸಂಗಮ. ಕಥಾಸಂಗಮದ ಹಿರಿಮೆಯೆಂದರೆ, ಮೂರು ಕಥೆಗಳನ್ನು ಆಧರಿಸಿ, ಹಂಗು, ಮುನಿತಾಯಿ ಮತ್ತು ಅತಿಥಿ, ಈ ಮೂರು ಕಿರು ಚಿತ್ರಗಳನ್ನು ಒಂದಾದಮೇಲೊಂದರಂತೆ ಚಿತ್ರೀಕರಿಸಿ ಕಥಾಸಂಗಮ ಎಂಬ ನಾಮಾಂಕಿತದಿಂದ ತೆರೆಕಾಣಿಸಿದರು. ಕನ್ನಡದಲ್ಲಿ ಇದೊಂದು ಅಪೂರ್ವ ಪ್ರಯೋಗವಾಯಿತು. ಪುಟ್ಟಣ್ಣನವರು ಈ ಚಿತ್ರದಲ್ಲಿ ತೆರೆಯಮೇಲೆ ಕಾಣಿಸಿಕೊಂಡು ಚಿತ್ರದ ಬಗ್ಗೆ ಪರಿಚಯ ಮಾಡಿಕೊಡುವ ದೃಶ್ಯವೂ ಇದೆ. ಮೂರು ಪ್ರಸಂಗಗಳೂ ಪುಟ್ಟಣ್ಣನವರ ಜಾಣ್ಮೆಯಿಂದ ಪರಿಪಕ್ವತೆಯನ್ನು ಪಡೆದಿದ್ದರೂ, ಮುನಿತಾಯಿ ಪ್ರಸಂಗ ಇಂದಿಗೂ ಎಲ್ಲರ ಮನಸ್ಸಿನಲ್ಲಿ ಅಳಿಯದೆ ಉಳಿದಿದೆ.

ಈ ಒಂದು ದಶಕದಲ್ಲಿ ಅನೇಕ ಹವ್ಯಾಸಿ ರಂಗ ಕಲಾವಿದರ ತಂಡಗಳು ಕೂಡ ಲವಲವಿಕೆಯಿಂದ ಉತ್ತಮ ನಾಟಕಗಳನ್ನು ಕಿಕ್ಕಿರಿದ ಜನಸ್ತೋಮಕ್ಕೆ ಅಭಿನಯಿಸಿ ಚಟುವಟಿಕೆಯಿಂದ ಕಾರ್ಯನಿರತವಾಗಿದ್ದದ್ದು ಸಂತಸಕರ ಸಂಗತಿ. ಅಂದಿನ ದಿನಗಳಲ್ಲಿ ನಾಟಕಗಳಿಗೆ ಪ್ರವೇಶಸಿಕ್ಕುವುದೇ ಕಷ್ಟವಾಗಿತ್ತು. ಮಾಸ್ತಿವೆಂಕಟೇಶ ಅಯ್ಯಂಗಾರ್‌ರವರ ಕಾಕನಕೋಟೆ ನಾಟಕ ಒಂದು ಯಶಸ್ವಿ ಪ್ರಯೋಗವಾಗಿತ್ತು. ಈ ನಾಟಕವನ್ನೇ ರಂಗಭೂಮಿ ಹಿನ್ನಲೆಯ ವಾದಿರಾಜ್ ಮತ್ತು ಅವರ ಸೋದರರು ಕಾಕನಕೋಟೆ ನಾಟಕ ಅಭಿನಯಿಸುತ್ತಿದ್ದ ನಟರಂಗದ ನಟರನ್ನೇ ಬಳಸಿ ಸಿ.ಆರ್.ಸಿಂಹ ರವರ ನಿರ್ದೇಶನದಲ್ಲಿ ಚಲನಚಿತ್ರವನ್ನಾಗಿ ಮಾಡಿದ್ದು ಒಂದು ಗಮನಾರ್ಹ ವಿಷಯ.

1977ರಲ್ಲಿ ತಯಾರಾದ ಚಿತ್ರಗಳಲ್ಲಿ ಯು.ಆರ್.ಅನಂತಮೂರ್ತಿ ಅವರ ಕಥೆ ಆಧಾರಿತ ಘಟಶ್ರಾದ್ಧ ಕನ್ನಡ ಚಲನಚಿತ್ರರಂಗಕ್ಕೆ ಒಂದು ಹೊಸ ಪ್ರತಿಭೆಯನ್ನು ಕೊಟ್ಟಂತಹ ಚಿತ್ರ. ಈ ಚಿತ್ರದ ಮೂಲಕ ಅದರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿಯವರು ಕನ್ನಡದಲ್ಲಿ ತಮ್ಮ ಪ್ರಥಮ ಚಿತ್ರವನ್ನು ನಿರ್ದೇಶಿಸಿ, ರಾಷ್ಟ್ರಮಟ್ಟದಲ್ಲಿ ಶ್ರೇಷ್ಠ ಚಿತ್ರಕ್ಕಾಗಿ ಸ್ವರ್ಣಕಮಲವನ್ನು ಗಳಿಸಿದ ಹೆಮ್ಮೆಗೆ ಪಾತ್ರರಾದರು. ಕನ್ನಡ ಚಿತ್ರರಂಗಕ್ಕೆ ಈ ಗೌರವ ಲಭಿಸಿದ್ದು ಇದು ಮೂರನೆಯ ಬಾರಿ. ಎಲ್ಲಕ್ಕಿಂತ ಅತಿಶಯವಾದ ಸಂಗತಿಯೆಂದರೆ, ಪುಣೆ ಫಿಲಂ ಇನ್ಸ್‌ಟ್ಯೂಟ್ ನಲ್ಲಿ ಪದವಿ ಪಡೆದು ಅಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಅವಶೇಶ್ ಎಂಬ ಕಿರುಚಿತ್ರಮಾಡಿ ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದ ಗಿರೀಶ್‌ರವರು ಕನ್ನಡ ಚಿತ್ರ ರಂಗಕ್ಕೆ ಪ್ರವೇಶಮಾಡಿದ್ದು ಮುಂದೆ ಕನ್ನಡಕ್ಕೆ ಕೀರ್ತಿ ತರುವಂತಹ ಚಿತ್ರಗಳನ್ನು ಮಾಡುವ ಶುಭ ಸಂಕೇತವಾಗಿ ಪರಿಣಮಿಸಿತು. ಇದಕ್ಕೆ ಮುಂಚೆ ಅನೇಕ ಹೊಸ ಅಲೆಯ

ಚಿತ್ರಗಳು ಬಂದಿದ್ದಾಗ್ಯೂ ಈ ಚಿತ್ರದಲ್ಲಿ ಒಬ್ಬ ಕಲಾಕಾರನ ಅನುಕರಣವಲ್ಲದ ಸ್ವಂತ ಪ್ರತಿಭೆಯ ಎಲ್ಲ ಲಕ್ಷಣಗಳೂ ಮೈಗೂಡಿಕೊಂಡು ಕಾಣಿಸಿಕೊಂಡದ್ದು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನೂ ಹಾಗೂ ಹೆಸರಾಂತ ವಿಮರ್ಶಕರಿಂದ ಪ್ರಶಂಸೆಗಳನ್ನೂ ಗಳಿಸಿದ್ದು ಸ್ತುತ್ಯರ್ಹವಾದ ಸಂಗತಿ.

1978ರಲ್ಲಿ ತಯಾರಾದ ಚಿತ್ರಗಳಲ್ಲಿ ಕನ್ನಡಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದ ಚಿತ್ರವೆಂದರೆ ಒಂದಾನೊಂದು ಕಾಲದಲ್ಲಿ. ಗಿರೀಶ್ ಕಾರ್ನಾಡ್ ನಿರ್ದೇಶಿಸಿದ ಈ ಚಿತ್ರ ಶೈಲಿಯಲ್ಲಿ ಜಪಾನಿನ ಸಮುರಾಯ್ ಚಿತ್ರಗಳಿಂದ ಪ್ರೇರಿತವಾಗಿ, ಇಲ್ಲಿನ ಜಾನಪದ ಕಥೆಯನ್ನು ಅಳವಡಿಸಿಕೊಂಡು ಹೊಸ ಅಲೆಯ ಮಾದರಿಯಲ್ಲಿ ನಿರ್ಮಿಸಿದ ಚಿತ್ರ. 1979ರ ದೆಹಲಿಯ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಚಿತ್ರದಲ್ಲಿ ನಾಯಕನ ಪಾತ್ರದಲ್ಲಿ ಅಭಿನಯಿಸಿದ್ದ ಶಂಕರ್ ನಾಗ್‌ರವರಿಗೆ ಅತ್ಯತ್ತಮನಟ ಪ್ರಶಸ್ತಿ ಲಭಿಸಿ, ಭಾರತದಲ್ಲಿ ಮೊದಲಬಾರಿಗೆ ಇಂತಹ ಗೌರವಕ್ಕೆ ಪಾತ್ರರಾದ ವ್ಯಕ್ತಿಯಾದರು.

ಈ ದಶಕದ ಅಂತ್ಯದಲ್ಲಿ, 1980–ರಲ್ಲಿ, ಪ್ರಥಮಬಾರಿಗೆ ಬೆಂಗಳೂರಿನಲ್ಲಿ ಫಿಲ್ಮೋತ್ಸವ, ಅಂದರೆ ರಾಷ್ಟ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಿಂದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಜರುಗಿತು. ದೇಶ ವಿದೇಶಗಳಿಂದ ತರಿಸಿದ್ದ ಸು. ನೂರ ಐವತ್ತು ಚಿತ್ರಗಳನ್ನು, ಅಂದಿನ ದಿನಗಳಲ್ಲಿ ಚಾಲನೆಯಲ್ಲಿದ್ದ ಅದ್ದೂರಿ ಚಿತ್ರ ಮಂದಿರಗಳಲ್ಲಿ ಪ್ರದರ್ಶಿಸಲಾಯಿತು. ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಪ್ರತಿನಿಧಿಗಳು ಬೆಂಗಳೂರಿನ ಚಿತ್ರೋತ್ಸವನ್ನು ಮೆಚ್ಚಿ ಬಗೆಬಗೆಯಾಗಿ ವರ್ಣಿಸಿದರು. ವಿಶ್ವವಿಖ್ಯಾತ ಚಿತ್ರನಿರ್ದೇಶಕರಾದ ಸತ್ಯಜಿತ್ ರೇ ಅವರ ಸಮಗ್ರ ಚಿತ್ರಗಳ ಪ್ರದರ್ಶನ ಈ ಉತ್ಸವದ ವಿಶೇಷ. ಸುಚಿತ್ರದ ಸಂಸ್ಥಾಪಕ ಕಾರ್ಯದರ್ಶಿ ಹೆಚ್.ಎನ್.ನರಹರಿರಾವ್ ರವರು ರೇ ಅವರನ್ನು ಒಪ್ಪಿಸಿ, ಈ ಚಿತ್ರೋತ್ಸವದಲ್ಲಿ ಭಾಗವಹಿಸಲು ಬಂದಾಗ್ಗೆ ನಗರದ ಖ್ಯಾತ ಸುಚಿತ್ರಾ ಫಿಲಂ ಸೊಸೈಟಿಯ ಸಭಾಂಗಣದ ಶಂಖು ಸ್ಥಾಪನೆಯನ್ನು ಅವರ ಹಸ್ತದಿಂದ ನೆರವೇರಿಸಿದರು. ನಂತರದ ದಿನಗಳಲ್ಲಿ ಸುಚಿತ್ರದ ಪದಾಧಿಕಾರಿಗಳ ಪರಿಶ್ರಮದಿಂದ ಬನಶಂಕರಿ 2ನೇ ಹಂತದಲ್ಲಿ ಒಂದು ಚಿತ್ರಮಂದಿರ ಅಸ್ತಿತ್ವಕ್ಕೆ ಬಂದು ಇಂದಿಗೂ ಸಕ್ರಿಯವಾಗಿ ಉತ್ತಮ ಚಿತ್ರಗಳ ವೀಕ್ಷಣೆಗೆ ಅವಕಾಶಮಾಡಿಕೊಟ್ಟಿದೆ.

1971ರಲ್ಲಿ 35, 1972ರಲ್ಲಿ 24, 1973ರಲ್ಲಿ 23, 1974ರಲ್ಲಿ 23, 1975ರಲ್ಲಿ 30, 1976ರಲ್ಲಿ 35, 1977ರಲ್ಲಿ 51, 1978ರಲ್ಲಿ 48, 1979ರಲ್ಲಿ 42 ಮತ್ತು 1980ರಲ್ಲಿ 56, ಹೀಗೆ ಈ ದಶಕದಲ್ಲಿ ಒಟ್ಟು ತಯಾರಾದ ಚಿತ್ರಗಳ ಸಂಖ್ಯೆ 367. ಅಂದರೆ ಹಿಂದಿನ ದಶಕಕ್ಕಿಂತ 138 ಚಿತ್ರಗಳು ಹೆಚ್ಚು. ಸಂಖ್ಯೆಯ ದೃಷ್ಟಿಯಿಂದ ಇದೊಂದು ಉತ್ತಮ ಪ್ರಗತಿಯೆನ್ನಬೇಕು.

ಒಟ್ಟಿನಲ್ಲಿ ಹೇಳುವುದಾದರೆ, 1971 ರಿಂದ 80ನರವರೆಗಿನ ದಶಕ ಕನ್ನಡಚಿತ್ರರಂಗದಲ್ಲಿ ಒಂದು ಸ್ವರ್ಣ ಯುಗವೆನ್ನಬಹುದು. ಮೈಸೂರಿನ ಸ್ಟುಡಿಯೋಗಳಲ್ಲಿ ಬಿರುಸಿನ ಚಟುವಟಿಕೆ, ಬೆಂಗಳೂರಿನಲ್ಲಿ ಹೊಸ ಸ್ಟುಡಿಯೋಗಳ ಪ್ರಾರಂಭ, ಚಿತ್ರ ನಿರ್ಮಾಣ ಬಹುತೇಕ ಮದರಾಸಿನಿಂದ ಬೆಂಗಳೂರಿಗೆ ವರ್ಗಾವಣೆ, ಹಿಂದಿನ ದಶಕದಲ್ಲಿ ತಯಾರಾದ 229 ಚಿತ್ರಗಳಿಂದ ಈ ದಶಕದಲ್ಲಿ ಒಟ್ಟು 367 ಚಿತ್ರಗಳಿಗೆ ಏರಿದ್ದು ಇವು ಪ್ರಗತಿ ಪಥದ ಶುಭಸೂಚನೆಯಾಯಿತು. ಗುಣ ಮಟ್ಟದಲ್ಲಿ ಕೂಡ ಕನ್ನಡ ಚಿತ್ರಗಳು ಉನ್ನತ ಶ್ರೇಣಿಯಲ್ಲಿ ಮಿಂಚಿದವು. ಅನೇಕ ಹೊಸ ಅಲೆಯ ಚಿತ್ರಗಳು, ರಾಷ್ಟ್ರಮಟ್ಟದಲ್ಲಿ ಇದೇ ದಶಕದಲ್ಲಿ ಮೂರುಬಾರಿ ಅತ್ಯುತ್ತಮ ಚಿತ್ರಕ್ಕಾಗಿ ಸ್ವರ್ಣ ಪದಕ, ಇದಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡ ಪ್ರಶಂಸೆ, ಹೀಗೆ ಸಾಕಷ್ಟು ಮಿಂಚಿದವು. ಉತ್ತಮ ಮಟ್ಟದ ಮನರಂಜನೆಯ ವಿಭಾಗದಲ್ಲಿ ಕೂಡ, ಗೀತಪ್ರಿಯ, ದೊರೆ–ಭಗವಾನ್, ಕೆ.ಎಸ್.ಎಲ್. ಸ್ವಾಮಿ (ರವಿ), ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಟಿ.ವಿ.ಸಿಂಗ್ ಠಾಕೂರ್, ಮತ್ತು ಇನ್ನೂ ಅನೇಕ ಮಹನೀಯರುಗಳು ಕನ್ನಡ ಚಿತ್ರಗಳಿಗೆ ಶ್ರೀಮಂತಿಕೆಯನ್ನು ತಂದರು.

ಅನಂತರದ ದಶಕ ಅಂದರೆ 1981–90ರ ವರೆಗಿನ ವರ್ಷಗಳಲ್ಲಿ ಕನ್ನಡ ಚಿತ್ರರಂಗ ಸಂಖ್ಯಾ ದೃಷ್ಟಿಯಿಂದ ನೋಡಿದಾಗ ಮತ್ತಷ್ಟು ಪ್ರಗತಿಸಾಧಿಸಿತು. ಮತ್ತಿತರ ಪ್ರಾದೇಶಿಕ ಭಾಷೆಗಳಂತೆಯೇ ಅನೇಕ ಚಿತ್ರಗಳನ್ನು ಉತ್ಪಾದನೆ ಮಾಡುವ ಚೈತನ್ಯವನ್ನು ಬೆಳೆಸಿಕೊಂಡಿತು ಎನ್ನಬಹುದು ಮತ್ತು ಬರುತ್ತಿದ್ದ ಎಲ್ಲ ಚಿತ್ರಗಳೂ ಬಣ್ಣದಲ್ಲಿಯೇ ತಯಾರಾಗುತ್ತಿದ್ದವು. ಆದರೆ ಗುಣಮಟ್ಟದಲ್ಲಿ ಮಾತ್ರ ಹಿಂದಿನ ದಶಕದಲ್ಲಿ ವ್ಯಕ್ತಪಡಿಸಿದ್ದ ವಿಶ್ವಾಸವನ್ನು ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಉಳಿಸಿಕೊಳ್ಳಲು ಸಫಲತೆಯನ್ನು ಪಡೆಯಲಿಲ್ಲವೆನ್ನಬಹುದು. ಸಾಮಾನ್ಯವಾಗಿ ಬಹುತೇಕ ಚಿತ್ರಗಳು ವ್ಯಾಪಾರೀ ದೃಷ್ಟಿಯಿಂದಲೇ ತಯಾರಾಗುತ್ತಿದ್ದರಿಂದ ಗುಣಮಟ್ಟ ಕುಂದುತ್ತಾ ಬಂದಿತು.

ಪುಟ್ಟಣ್ಣ ಕಣಗಾಲ್ ರಂಗ ಕಲಾವಿದರುಗಳ ಬಗ್ಗೆ ಅಶ್ವತ್ಥ್ ಅವರ ಕಾದಂಬರಿ ಆಧರಿಸಿ ನಿರ್ಮಿಸಿದ ಚಿತ್ರ ರಂಗನಾಯಕಿ. ವೃತ್ತಿ ರಂಗಭೂಮಿಯ ಒಳಹೊಕ್ಕು, ಅಲ್ಲಿನ ಆಗುಹೋಗುಗಳನ್ನು, ನಟರು ಮತ್ತು ವ್ಯವಸ್ಥಾಪಕ ವರ್ಗದವರುಗಳ ಅನುಭವಗಳು, ರಂಗದ ಮೇಲೆ ಮತ್ತು ಪರದೆಯ ಹಿಂದೆ ಅವರು ಪಡುತ್ತಿದ್ದ ಬವಣೆಗಳನ್ನು, 1981ರಲ್ಲಿ ನಿರ್ಮಿಸಿದ ಚಿತ್ರ ರಂಗನಾಯಕಿಯ ಮೂಲಕ ಜನರಿಗೆ ಪರಿಚಯ ಮಾಡಿಕೊಟ್ಟರು. ಚಿತ್ರ ನಿರ್ಮಾಣದಲ್ಲಿ ಅಪಾರವಾದ ಹಣ ವ್ಯಯವಾಗಿದ್ದರಿಂದ ಚಿತ್ರ ನಿರೀಕ್ಷಿಸಿದಷ್ಟು ಯಶಸ್ಸುಗಳಿಸಲಿಲ್ಲ. ಆದಾಗ್ಯೂ ವೃತ್ತಿ ರಂಗಭೂಮಿಯ ಬಗ್ಗೆ ಇದೊಂದು ಒಳ್ಳೆಯ ದಾಖಲೆ. ವೃತ್ತಿರಂಗಭೂಮಿಯ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ಕಲಾತ್ಮಕವಾಗಿ ಬಣ್ಣಿಸಿ ಚಿತ್ರೀಕರಣ ಮಾಡಲು, ಅಪಾರ ಪರಿಶ್ರಮದಿಂದ ಮಾಡಿದ ಸಫಲ ಪ್ರಯತ್ನವನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರ ಈ ಚಿತ್ರಕ್ಕೆ ಸಂಪೂರ್ಣ ಮನೋರಂಜನ ತೆರಿಗೆ ವಿನಾಯಿತಿಯನ್ನು ಮಂಜೂರು ಮಾಡಿತ್ತು. ಈ ಚಿತ್ರ ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯೂ ಸೇರಿ ಅನೇಕ ಪ್ರಶಸ್ತಿಗಳನ್ನು ಕೂಡ ಪಡೆಯಿತು.

ಗ್ರೀಸ್ ದೇಶದ ಚಿತ್ರ ನಿರ್ದೇಶಕ ಕಾಸ್ಟಾ ಗವರಾಸ್ ಎಂಬ ವ್ಯಕ್ತಿ ತಯಾರಿಸಿದ ಜಡ್ (ಜ಼) ಎಂಬ ಒಂದು ವಿಶ್ವವಿಖ್ಯಾತ ಚಿತ್ರ ಭಾರತದಲ್ಲೂ 70ರ ದಶಕದಲ್ಲಿ ಹಲವಾರು ಚಿತ್ರೋತ್ಸವಗಳಲ್ಲಿ ತೆರೆ ಕಂಡಿತು. ಈ ಚಿತ್ರ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ರಾಜಕೀಯ ಚಿತ್ರ ನಿರ್ಮಾಣದಲ್ಲಿ ಒಂದು ಹೊಸ ಶೈಲಿಯನ್ನು ಹುಟ್ಟಿಹಾಕಿತು. ಈ ಶೈಲಿ ಭಾರತದಲ್ಲಿ, ಹಾಗೂ ಕನ್ನಡದಲ್ಲಿ ಕೂಡ ಪ್ರವೇಶಗೊಂಡಿತು. ಅಧಿಕಾರದಲ್ಲಿರುವ ವ್ಯಕ್ತಿಗಳು ತಮ್ಮ ರಾಜಕೀಯ ಪ್ರತಿಸ್ಪರ್ಧಿಗಳನ್ನು ಮುಗಿಸಿಬಿಡುವ ಸಲುವಾಗಿ, ಅಧಿಕಾರ ದುರುಪಯೋಗ ಮಾಡಿಕೊಂಡು ಅವರ ಮೇಲೆ ಮಾಡುವ ಹಿಂಸೆ, ಹಲ್ಲೆಗಳನ್ನು ಚಿತ್ರೀಕರಿಸುವ ಶೈಲಿ ಇಂದಿಗೂ ರೂಢಿಯಲ್ಲಿದೆ. ಇದೇ ರೀತಿಯ ಕಥಾವಸ್ತುವನ್ನು ಆಧರಿಸಿ ಮಾಡಿದ ಮೊದಲ ಕನ್ನಡ ಚಿತ್ರ ಅಂತ 1981ರಲ್ಲಿ ಸಾಕಷ್ಟು ವಿವಾದವನ್ನು ಎಬ್ಬಿಸಿತು. ಈ ಚಿತ್ರದ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರು ಚಿತ್ರಗಳಲ್ಲಿ ಹಿಂದೆಂದೂ ಕಾಣದಷ್ಟು ಅತ್ಯಾಚಾರ, ವಿಕೃತ ಹಿಂಸೆಯನ್ನು ಅಳವಡಿಸಿ, ಚಿತ್ರವನ್ನು ಸೆನ್ಸಾರ್ ನಿಂದ ಬಿಡುಗಡೆ ಹೊಂದಲು ಸಾಕಷ್ಟು ತಾಪತ್ರಯಗಳನ್ನು ಅನುಭವಿಸಬೇಕಾಯಿತು. ಈ ಚಿತ್ರ ಕೇವಲ ಕನ್ನಡದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಒಂದು ಹೊಸ ಶೈಲಿಯನ್ನು ಹುಟ್ಟುಹಾಕಿತು.

1982ರಲ್ಲಿ ಎಂ.ಎಸ್.ಸತ್ಯು ಅವರು ನಿರ್ದೇಶಿಸಿದ ಬರ ಎಂಬ ಚಿತ್ರ ಕೂಡ ರಾಜಕೀಯ ಚಿತ್ರವಾದರೂ, ವ್ಯವಸ್ಥೆಯೊಳಗಿನ ಸ್ವಾರ್ಥತೆ, ಹುಳುಕುಗಳಿಂದ ಜನರಿಗೆ ಆಗುವ ತೊಂದರೆಗಳನ್ನು ಕಲಾತ್ಮಕವಾಗಿ ನಿರೂಪಿಸುವ ಚಿತ್ರವಾಯಿತು. 70ರ ದಶಕದಲ್ಲಿ ಲವಲವಿಕೆಯಿಂದ ಪ್ರಾರಂಭಗೊಂಡ ಹೊಸ ಅಲೆಯ ಚಿತ್ರಗಳ ಪ್ರವಾಹ ಈ ದಶಕದಲ್ಲಿ ಕ್ಷೀಣಿಸುತ್ತಾ ಬಂದಿತು. ಅದರೂ ಅಲ್ಲೊಂದು, ಇಲ್ಲೊಂದು ಎಂಬಂತೆ ಕಾಣಿಸಿಕೊಳ್ಳುತ್ತಿದ್ದವು. ನಾಗಾಭರಣರ ಗ್ರಹಣ ಚಿತ್ರ ತೆರೆ ಕಂಡದ್ದು ಈ ದಶಕದಲ್ಲಿಯೇ. ನಾಗಾಭರಣ ಮತ್ತು ಟಿ.ಎಸ್.ರಂಗಾ ಅವರುಗಳ ಚಿತ್ರ ಕಥೆಯ ಮೂಲಕ ಕರ್ನಾಟಕದಲ್ಲಿ ಸಂಪ್ರದಾಯಿಕವಾಗಿ ಅನುಷ್ಠಾನದಲ್ಲಿದ್ದ ಧಾರ್ಮಿಕ ವಿಧಿ ನಿಯಮಗಳನ್ನು ಯಶಸ್ವಿಯಾಗಿ ದಾಖಲೆ ಮಾಡಿದ ಪ್ರಶಸ್ತಿ ವಿಜೇತ ಚಿತ್ರವಾಯಿತು. ಗಿರೀಶ್ ಕಾಸರವಳ್ಳಿಯವರ ಮೂರುದಾರಿಗಳು 1981ರಲ್ಲಿ ತೆರೆ ಕಂಡು ಹಲವು ಪ್ರಶಸ್ತಿಗಳನ್ನು ಗಳಿಸಿತು.

ದೊರೆ ಭಗವಾನ್ ರವರು ಮುನಿಯನ ಮಾದರಿ (1981), ಸಿಂಗೀತಂ ಶ್ರೀನಿವಾಸರಾವ್ ರವರು ಹಾಲು ಜೇನು, ಕೆ.ವಿ ಜಯರಾಮ್ ರವರು ಬಾಡದ ಹೂವು, ಮತ್ತು ಹೊಸನೀರು, ಜಿ.ವಿ.ಅಯ್ಯರ್‌ರವರು ಮಧ್ವಾಚಾರ್ಯ, ಸುರೇಶ್ ಹೆಬ್ಳೀಕರ್ ರವರು ಕಾಡಿನ ಬೆಂಕಿ ಮತ್ತು ಪ್ರಥಮ ಉಷಾಕಿರಣ, ಸದಾನಂದ ಸುವರ್ಣರು ಕುಬಿ ಮತ್ತು ಇಯಾಲ, ನಾಗಾಭರಣರು ಆನ್ವೇಷಣೆ, ಆಸ್ಫೋಟ, ಬ್ಯಾಂಕರ್ ಮಾರ್ಗಯ್ಯ ಮತ್ತು ಸಂತ ಶಿಶುನಾಳ ಶರೀಫ, ಶಂಕರ್‌ನಾಗ್ ರವರು ಆಕ್ಸಿಡೆಂಟ್ ಮತ್ತು ನೋಡಿ ಸ್ವಾಮಿ ನಾವಿರೋದೆ ಹೀಗೆ, ಕೃಷ್ಣ ಮಾಸಡಿ ಅವರು ಅವಸ್ಥೆ, ಪ್ರೇಮಾ ಕಾರಂತರು ಫಣಿಯಮ್ಮ, ಇಂತಹ ಉತ್ತಮ ಚಿತ್ರಗಳನ್ನು ನಿರ್ದೇಶಿಸಿ ಪ್ರಶಸ್ತಿಗಳನ್ನು, ಜನಪ್ರಿಯತೆಯನ್ನೂ ಗಳಿಸಿ, ಗುಣಮಟ್ಟದ ಬಗ್ಗೆ ಕಾಳಜಿ ವಹಿಸುವ ನಿರ್ದೇಶಕರುಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ದಾಖಲಿಸಿದರು. ಬರಗೂರು ರಾಮಚಂದ್ರಪ್ಪನವರ ಬೆಂಕಿ ಮತ್ತು ಸೂರ್ಯ ಚಿತ್ರಗಳೂ ಪ್ರಶಸ್ತಿಗಳಿಸಿದ ಚಿತ್ರಗಳು.

ಉದ್ಯಮದ ಬೆಳೆವಣಿಗೆಯ ದೃಷ್ಟಿಯಿಂದ ನೋಡಿದಾಗ ಈ ದಶಕದಲ್ಲಿ ಹಲವಾರು ಪರಿಣಾಮಕಾರಿ ಬದಲಾವಣೆಗಳು ಕೂಡ ಜರುಗಿತು. ಅಂದಿನ ದಿನಗಳಲ್ಲಿ ಬೆಂಗಳೂರಿನ ಚಿತ್ರಮಂದಿರಗಳು ಇಡೀ ದೇಶದಲ್ಲಿಯೇ ಹೆಸರುವಾಸಿಯಾಗಿದ್ದವು. ಬೆಂಗಳೂರಿಗೆ ಬರುತ್ತಿದ್ದ ಪ್ರವಾಸಿಗರು ಚಿತ್ರಮಂದಿರಗಳ ಭವ್ಯತೆಯನ್ನು ನೋಡುವ ಸಲುವಾಗಿಯೇ ಚಿತ್ರಗಳನ್ನು ವೀಕ್ಷಿಸುತ್ತಿದ್ದರು. ಇಂತಹ ಚಿತ್ರಮಂದಿರಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರುಗಳು ಕೂಡ ತಮ್ಮ ಕುಂದು ಕೊರತೆಗಳನ್ನು, ಬೇಡಿಕೆಗಳನ್ನು ಆಡಳಿತವರ್ಗಕ್ಕೆ ಮನವರಿಕೆ ಮಾಡಿ ನಿವಾರಿಸಿಕೊಳ್ಳಲು ಸಂಘಟನೆ ಮಾಡಿಕೊಂಡು, ಮುಷ್ಕರ ಮಾಡುವ ಪ್ರವೃತ್ತಿಯೂ ಪ್ರಾರಂಭವಾಯಿತು. ಸರ್ಕಾರವೂ ಈ ಬೆಳೆವಣಿಗೆಯನ್ನು ಗಮನಕ್ಕೆ ತೆಗೆದುಕೊಂಡಿದ್ದರ ಪರಿಣಾಮವಾಗಿ, ಅವರ ವೇತನಗಳೂ ಪರಿಷ್ಕೃತ ಗೊಂಡವು. ನಗರದಲ್ಲಿ ಸಾಕಷ್ಟು

ಚಿತ್ರಮಂದಿರಗಳಿದ್ದರೂ ಕನ್ನಡ ಚಿತ್ರಗಳಿಗೆ ಕೆಂಪೇಗೌಡ ರಸ್ತೆಯಲ್ಲಿದ್ದ ಭವ್ಯ ಚಿತ್ರ ಮಂದಿರಗಳಲ್ಲಿ ಪ್ರದರ್ಶನಾವಕಾಶ ದೊರೆಯುತ್ತಿರಲಿಲ್ಲ. ಅನೇಕ ಚಿತ್ರಮಂದಿರಗಳು ಹಿಂದಿ ಹಾಗೂ ಪರಭಾಷಾ ಚಿತ್ರಗಳಿಗೇ ಸೀಮಿತಗೊಂಡಿದ್ದವು. ಈ ಒಂದು ಪದ್ಧತಿಯನ್ನು ಸಡಲಿಸಿ ಕನ್ನಡಕ್ಕೆ ಪ್ರಾಧಾನ್ಯತೆ ಗಳಿಸಲು ಸಾಕಷ್ಟು ಹೊರಾಟವನ್ನೇ ನಡೆಸಬೇಕಾಯಿತು. ನಂತರದ ದಿನಗಳಲ್ಲಿ ಚಿತ್ರಮಂದಿರಗಳನ್ನು ಕೆಡವಿ ಆ ನಿವೇಶನಗಳಲ್ಲಿ ಮಳಿಗೆ ಸಂಕೀರ್ಣಗಳನ್ನು ಕಟ್ಟುವ ಪ್ರಕ್ರಿಯೆಯೂ ಈ ದಶಕದಲ್ಲಿಯೇ ಪ್ರಾರಂಭವಾಯಿತು, ಹಲವಾರು ಚಿತ್ರಮಂದಿರಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು ಮತ್ತು ಇಂದಿಗೂ ಕಳೆದುಕೊಳ್ಳುತ್ತಿವೆ.

1981ರಲ್ಲಿ, ಭಾರತೀಯ ವಾಕ್ಚಿತ್ರದ ಸುವರ್ಣ ಮಹೋತ್ಸವದ ಪ್ರಯುಕ್ತ ದೇಶದ ನಾನಾಕಡೆಗಳಲ್ಲಿ ಸಮಾರಂಭಗಳು ಜರುಗಿದವು. ಇದರ ಅಂಗವಾಗಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಗುಂಡೂರಾಯರ ನೇತೃತ್ವದಲ್ಲಿ ನಡೆದ ಸಮಾರಂಭದಲ್ಲಿ ಕನ್ನಡ ಚಿತ್ರ ರಂಗದ ಅನೇಕ ಹಿರಿಯರನ್ನು ಸನ್ಮಾನಿಸಲಾಯಿತು. ಮತ್ತೆ 1984ರಲ್ಲಿ ಕನ್ನಡ ವಾಕ್ಚಿತ್ರದ ಸುವರ್ಣ ಮಹೋತ್ಸವವೂ ಜರುಗಿತು. ಇದರ ಅಂಗವಾಗಿ 1984ರ ನವೆಂಬರ್, 25 ರಂದು ನಗರದ ಕಂಠೀರವ ಸ್ಟೇಡಿಯಮ್‌ನಲ್ಲಿ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಹಾಗೂ ಪ್ರಖ್ಯಾತ ಚಿತ್ರನಿರ್ದೇಶಕ ವಿ.ಶಾಂತಾರಾಂ ರವರ ಉಪಸ್ಥಿತಿಯಲ್ಲಿ ಸಹಸ್ರಾರು ಮಂದಿ ಪ್ರೇಕ್ಷಕರ ಮಧ್ಯೆ ಸಂಭ್ರಮದಿಂದ ಆಚರಿಸಲಾಯಿತು. ರಾಜ್ಯಾದ್ಯಂತ ಅನೇಕ ಸ್ಥಳಗಳಲ್ಲಿ ಕನ್ನಡ ಚಿತ್ರಗಳ ಉತ್ಸವಗಳೂ ನಡೆದವು.

ಈ ದಶಕದಲ್ಲಿ ನಡೆದ ಘಟನೆಗಳಲ್ಲಿ ದಾಖಲೆಮಾಡಲು ಉಚಿತವಾದಂತಹವುಗಳಲ್ಲಿ ಗೋಕಾಕ್ ಚಳವಳಿಯೂ ಒಂದು.ಈ ಒಂದು ಚಳವಳಿ ರಾಜಕೀಯವಾಗಿ ಎಷ್ಟು ಪರಿಣಾಮಕಾರಿಯಾಯಿತೋ ಅಷ್ಟೇ ಪರಿಣಾಮಕಾರಿಯಾಗಿ ಕನ್ನಡಚಿತ್ರರಂಗದಲ್ಲಿಯೂ ಪ್ರಭಾವ ಬೀರಿತು. ಗೋಕಾಕ್‌ರವರು ಇತ್ತಿದ್ದ ವರದಿಯ ಸಂಪೂರ್ಣ ಅನುಷ್ಠಾನಕ್ಕಾಗಿ ಈ ಚಳವಳಿ ಪ್ರಾರಂಭವಾದದ್ದು 1982ರ ಆದಿ ಭಾಗದಲ್ಲಿ. ಅನೇಕ ಕ್ಷೇತ್ರಗಳಲ್ಲಿ ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯದ ಬಗ್ಗೆ ಪ್ರತಿಭಟನೆ ಮಾಡಲು ಪ್ರಾರಂಭವಾದ ಈ ಚಳವಳಿ ಚಿತ್ರ ರಂಗವನ್ನೂ ಪ್ರವೇಶಿಸಿತು. ಸಾಹಿತಿಗಳು, ಕನ್ನಡಾಭಿಮಾನಿಗಳು ಆರಂಭಿಸಿದ ಈ ಚಳವಳಿಯಲ್ಲಿ ಚಿತ್ರೋದ್ಯಮದ ಗಣ್ಯರು ಹಾಗೂ ಚಿತ್ರ ಕಲಾವಿದರ ಸೇರ್ಪಡೆಯಾದ ಮೇಲೆ ಅದು ಸಾಕಷ್ಟು ಕಾವೇರಿತು. ರಾಜಕೀಯವಾಗಿ ಇದರ ಪರಿಣಾಮ ಏನಾಯಿತು ಎಂಬುದು ಇತಿಹಾಸ. ಆದರೆ ಚಿತ್ರ ರಂಗದಲ್ಲಿ ಆದರಿಂದ ಉದ್ಭವಿಸಿದ ಬಿಸಿ ಇಂದಿಗೂ ಆರದೆ ಮತ್ತೆ ಮತ್ತೆ ವಿವಿಧ ರೂಪಗಳಲ್ಲಿ ತಲೆಯೆತ್ತುತ್ತಿದೆ. ಇತ್ತೀಚೆಗೆ ಅಂದರೆ 2004–05ರಲ್ಲಿ ನಡೆದ ಘಟನೆಗಳೇ ಅದಕ್ಕೆ ಸಾಕ್ಷಿ. ಕನ್ನಡದ ಚಿತ್ರ ರಂಗ ಬೆಳೆಯುತ್ತಾ ಬೆಳೆಯುತ್ತಾ ಸಮಸ್ಯೆಗಳೂ ಬೆಳೆಯುತ್ತಾ ಬಂದಿದೆ. ಈ ಕಾರಣಕ್ಕಾಗಿಯೇ ಈ ದಶಕದಲ್ಲಿ, ಕರ್ನಾಟಕ ವಾಣಿಜ್ಯ ಚಲನಚಿತ್ರ ಮಂಡಲಿಯು ಉದ್ಯಮದ ಸಮಗ್ರ ಹಿತಾಸಕ್ತಿಗಳನ್ನು ಕಾಪಾಡಲು ಅಸ್ತಿತ್ವದಲ್ಲಿದ್ದಾಗ್ಯೂ ಪ್ರತ್ಯೇಕವಾಗಿ ಚಿತ್ರ ನಿರ್ಮಾಪಕರ ಸಂಘ, ಚಿತ್ರ ನಿರ್ದೇಶಕರ ಸಂಘ, ಚಲನಚಿತ್ರ ಕಲಾವಿದರ ಸಂಘ, ಹೀಗೆ ಅನೇಕ ಸಂಸ್ಥೆಗಳು ಹುಟ್ಟಿಕೊಂಡವು. ಅನೇಕ ಕಾರಣಗಳಿಂದಾಗಿ ಈ ಬೆಳವಣಿಗೆ ಅನಿವಾರ್ಯ ಎಂಬುದು ಈಗ ಮನವರಿಕೆಯಾಗಿದೆ.

ಕನ್ನಡ ಚಿತ್ರಗಳು ವಿಪರೀತವಾದ ವ್ಯಾಪಾರೀ ದೃಷ್ಟಿಯಿಂದ ನಿರ್ಮಾಣಗೊಳ್ಳುತ್ತಿರುವುದ ರಿಂದ ಅವುಗಳಲ್ಲಿ ಗುಣಮಟ್ಟ ಇಳಿಯುತ್ತಿದೆ ಎಂಬ ವ್ಯಾಪಕ ಜನಾಭಿಪ್ರಾಯಗಳು ವೃತ್ತಪತ್ರಿಕೆಗಳಲ್ಲೂ ಬರಲು ಪ್ರಾರಂಭವಾಯಿತು. ಈ ಒಂದು ದೃಷ್ಟಿಯಲ್ಲಿ, ಹಿಂದಿನ ದಶಕಕ್ಕೆ ಹೋಲಿಸಿ ನೋಡಿದಾಗ ಈ ಅಭಿಪ್ರಾಯದಲ್ಲಿ ಹುರುಳಿದೆ ಎಂಬುದನ್ನು ಅನೇಕ ಅನುಭವಿ ಚಿತ್ರ ವಿಮರ್ಶಕರೂ ಒಪ್ಪಿಕೊಂಡಿದ್ದರು. ಒಟ್ಟಿನಲ್ಲಿ ಚಿತ್ರರಂಗದ ಬೆಳವಣಿಗೆ ಸಂಖ್ಯಾಬಲದಲ್ಲಿ ವೃದ್ಧಿಗೊಂಡಿದ್ದರೂ ಕನ್ನಡಚಿತ್ರ ರಂಗಕ್ಕೆ ಹೆಸರು ತರುವಂತಹ ಚಿತ್ರಗಳು ಬೆರಳೆಣಿಸುವಷ್ಟೂ ಇಲ್ಲವಲ್ಲ ಎಂಬ ಕೊರಗು ಅನೇಕರ ನೊಂದ ಮನಸ್ಸಿನಿಂದ ಹೊರ ಹೊಮ್ಮುತ್ತಿತ್ತು. ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಕೂಡ ಆಗೊಂದು ಈಗೊಂದು ಒಳ್ಳೆಯ ಪ್ರಯತ್ನಗಳು ನಡೆಯುತ್ತಿತ್ತು. 1983ರಲ್ಲಿ ಖ್ಯಾತ ನಿರ್ದೇಶಕ ನಾಗಾಭರಣರು ಆನ್ವೇಷಣೆ ಎಂಬ ಉತ್ತಮ ಚಿತ್ರವನ್ನು ತಯಾರಿಸಿ ಅನೇಕರ ಮನಸ್ಸಿಗೆ ಸ್ವಲ್ಪ ಸಮಾಧಾನ ತಂದು ಕೊಟ್ಟರು. ಈ ಚಿತ್ರದಲ್ಲಿ ಗಿರೀಶ್ ಕಾರ್ನಾಡ್, ಸ್ಮಿತಾ ಪಾಟೀಲ್, ಮತ್ತು ಅನಂತನಾಗ್ ಉತ್ತಮ ಅಭಿನಯ ನೀಡಿ, ಚಿತ್ರ ಅತ್ಯುತ್ತಮ ಚಿತ್ರವೆಂದು ರಾಜ್ಯ ಪ್ರಶಸ್ತಿಗಳಿಸಿತು. ನಾಗಾಭರಣರು ತಮ್ಮ ಪ್ರಯತ್ನವನ್ನು ಈ ನಿಟ್ಟಿನಲ್ಲಿ ಶ್ರದ್ಧೆಯಿಂದ ಮುಂದುವರೆಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದ ಸಾಹಿತಿ ಆರ್.ಕೆ. ನಾರಾಯಣ್‌ರವರ ಫೈನಾನ್ಸಿಯಲ್ ಎಕ್ಸ್‌ಪರ್ಟ್ ಎಂಬ ಕಾದಂಬರಿಯನ್ನು ಆಧರಿಸಿ ನಿರ್ಮಿಸಿದ ಬ್ಯಾಂಕರ್ ಮಾರ್ಗಯ್ಯ ಚಿತ್ರ ಕನ್ನಡ ಚಿತ್ರರಂಗ ಹಾಗೂ ನಾಗಾಭರಣ ರಾಷ್ಟ್ರಮಟ್ಟದಲ್ಲಿ ಮೆಚ್ಚುಗೆ ಗಳಿಸುವಂತಾಯಿತು.

ಸಾಮಾಜಿಕ ಕಥೆಗಳನ್ನು ಆಧರಿಸಿ ತಯಾರಿಸುತ್ತಿದ್ದ ಕನ್ನಡ ಚಿತ್ರಗಳಲ್ಲಿ ಅನೇಕ ಬಾರಿ ರಾಜಕೀಯ ವಸ್ತುಗಳನ್ನು ಒಳಗೊಂಡ ಘಟನೆಗಳನ್ನು ಚಿತ್ರೀಕರಣ ಮಾಡುವುದು ಸರ್ವೇಸಾಮಾನ್ಯವಾಯಿತು. ಬಹುತೇಕ ಚಿತ್ರಗಳಲ್ಲಿ ಹಿಂಸೆ, ಅಶ್ಲೀಲತೆ, ದ್ವಂದ್ವಾರ್ಥಗಳನ್ನು ಕಲ್ಪಿಸುವಂತಹ ಸಂಭಾಷಣೆಗಳು, ಹಾಡುಗಳು, ಅತಿಲೈಂಗಿಕತೆಯ ನೃತ್ಯಗಳು ಚಿತ್ರಗಳಲ್ಲಿ ವಿಪರೀತವಾಗಿವೆ ಎಂಬ ಕೂಗು ಜನರಿಂದ ಬರಲು ಪ್ರಾರಂಭವಾಯಿತು. ಅನೇಕ ಕನ್ನಡ ಚಿತ್ರಗಳು ಇಂತಹ ವಿವಾದಗಳಿಗೊಳಗಾಗಿ ಸೆನ್ಸಾರ್ ಮಂಡಳಿಯಿಂದ ಮುಕ್ತಿಹೊಂದಿ ಬಿಡುಗಡೆಯಾಗಲು ಕಷ್ಟವಾಗುತ್ತಿತ್ತು. ಸೆನ್ಸಾರ್ ಕಛೇರಿ ಅಂದಿನ ದಿನಗಳಲ್ಲಿ ಮದರಾಸಿನಲ್ಲಿದ್ದಿದ್ದರಿಂದ ಅಲ್ಲಿನ ಮಂಡಳಿ ಸದಸ್ಯರಿಗೆ ಕನ್ನಡ ಭಾಷೆಯ ಹಾಗೂ ಸಂಸ್ಕೃತಿಯ ಪರಿಣತೆ ಸಾಕಷ್ಟು ಇಲ್ಲದೆ ಇರುವುದರಿಂದ ಈ ವಿವಾದಗಳು ಹೆಚ್ಚುತ್ತಿವೆ ಎಂಬ ವರದಿಗಳೂ ಸರ್ಕಾರದ ಗಮನಕ್ಕೆ ಬಂದಿತು. ಕನ್ನಡ ಚಿತ್ರ ರಂಗದ ಬಹುದಿನದ ಬೇಡಿಕೆಗೆ ಭಾರತ ಸರ್ಕಾರ ಸ್ಪಂದಿಸಿ 1984ರ ಏಪ್ರಿಲ್‌ನಲ್ಲಿ, ಸೆನ್ಸಾರ್ ಮಂಡಳಿಯ ಬೆಂಗಳೂರಿನ ಘಟಕವನ್ನು ಪ್ರಾರಂಭಿಸಲಾಯಿತು. ಕನ್ನಡ ಚಿತ್ರೋದ್ಯಮದಲ್ಲಿ ಇದೊಂದು ಮುಖ್ಯ ಘಟನೆ. ಇದೇ ವರ್ಷದಲ್ಲಿ ಇದುವರೆಗೆ ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸೆನ್ಸಾರ್ ಎಂಬ ನಾಮಾಂಕಿತದಲ್ಲಿ ಕಾರ್ಯ ಮಾಡುತ್ತಿದ್ದ ಸಂಸ್ಥೆಯ ಹೆಸರನ್ನು ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್ ಎಂಬುದಾಗಿ ಪರಿವರ್ತನೆಗೊಂಡಿತು. ಪ್ರಪಂಚದ ಮುಂದುವರಿದ ರಾಷ್ಟ್ರಗಳಲ್ಲಿ ಕೂಡ ಇದೇ ರೀತಿಯ ನಾಮಕರಣವಿರುವುದರಿಂದ ಈ ರೀತಿ ಬದಲಾವಣೆ ಮಾಡಲಾಯಿತು.

ಈ ದಶಕದಲ್ಲಿ ಮತ್ತೊಂದು ಗಂಭೀರ ಸಮಸ್ಯೆ ಉದ್ಭವಿಸಿತು. ಇದು ಕೇವಲ ಕರ್ನಾಟಕಕ್ಕೆ ಸೀಮಿತವಾದದ್ದಲ್ಲ. ಎಲ್ಲೆಡೆಯೂ ಪ್ರಸರಿಸಿದ ಸಮಸ್ಯೆಯಿದು. ತಾಂತ್ರಿಕ ಬೆಳವಣಿಗೆಗಳಿಂದಾಗಿ ಚಿತ್ರಗಳನ್ನು ವಿಡಿಯೋ ಟೇಪುಗಳಲ್ಲಿ ನಕಲು ಮಾಡಿ ಅವುಗಳನ್ನು ಟಿ.ವಿ ಗಳಲ್ಲಿ ಖಾಸಗಿಯಾಗಿ ಹಾಗೂ ಮನೆಗಳಲ್ಲಿ ನೋಡುವ ಸಾಧನೆ ಜನಸಾಮಾನ್ಯರಿಗೆ ಸುಲಭವಾಗಿ ತಲುಪುವಂತಹ ಬೆಳವಣಿಗೆ ವ್ಯಾಪಕವಾಗಿ ಹರಡಲು ಪ್ರಾರಂಭವಾಯಿತು. ಅನೇಕ ವಿಡಿಯೋ ಪಾರ್ಲರ್‌ಗಳೂ ಚಾಲನೆಗೆ ಬಂದವು. ಇದರಿಂದಾಗಿ ಚಿತ್ರಮಂದಿರಗಳಿಗೆ ಬರುವವರ ಸಂಖ್ಯೆಯಲ್ಲೂ ಕುಂಠಿತವಾಯಿತು. ಈ ಸಮಸ್ಯೆ ಇಂದಿಗೂ ಕಾಡುತ್ತಿರುವ ಸಮಸ್ಯೆಯಾಗಿಯೇ ಇದೆ. ಇಂದಿನ ದಿನಗಳಲ್ಲಿ ವಿಡಿಯೊ ಟೇಪಿನಿಂದ ಡಿವಿಡಿಗಳಿಗೆ ಪರಿವರ್ತನೆಗೊಂಡು ಈ ಕಾರ್ಯಾಚರಣೆ ವ್ಯಾಪಕವಾಗಿ ಹರಡುತ್ತಿದೆ. ಎಲೆಕ್ಟ್ರಾನಿಕ್ ತಾಂತ್ರಿಕತೆ ದಿನೇದಿನೇ ಬೆಳೆಯುತ್ತಾಯಿರುವುದರಿಂದ ಚಿತ್ರಗಳನ್ನು ನಕಲು ಮಾಡುವ ವಿಧಾನ ಅತಿ ಸುಲಭವಾಗಿಹೋಗಿದೆ. ಲಕ್ಷಾಂತರ ಡಿವಿಡಿಗಳು ಇಂದು ಮಾರುಕಟ್ಟೆಯಲ್ಲಿ ಅತಿ ಸುಲಭವಾದ ಬೆಲೆಯಲ್ಲಿ ದೊರಕುವುದರಿಂದ ಯಾವುದು ಕದ್ದದ್ದೋ, ಯಾವುದು ಅಧಿಕೃತವೋ ಎಂಬದನ್ನು ಕಂಡುಹಿಡಿಯುವುದೇ ಕಷ್ಟವಾಗಿಹೋಗಿದೆ. ಈ ಪಿಡುಗಿನಿಂದ ಚಿತ್ರೋದ್ಯಮಿಗಳಿಗೆ ಅಪಾರ ನಷ್ಟವಾಗುತ್ತಿದೆ ಎಂಬುದಂತೂ ಕಟುಸತ್ಯ ಸಂಗತಿ. ಇದಕ್ಕೆ ಕಾನೂನಿನ ಮೂಲಕ ಹೇಗೆ ಪರಿಹಾರ ಕಂಡುಹಿಡಿಯುವುದು ಎಂಬುದು ಕಗ್ಗಟ್ಟಿನ ಸಮಸ್ಯೆಯಾಗಿದೆ.

1984ರಲ್ಲಿ ರಾಜೇಂದ್ರಸಿಂಗ್ ಬಾಬು ನಿರ್ದೇಶಿಸಿದ ಬಂಧನ ಚಿತ್ರ ಅಪಾರ ಯಶಸ್ಸು ಗಳಿಸಿದ ಚಿತ್ರವಾಯಿತು. ಈ ಚಿತ್ರ ಉತ್ತಮ ಕಥೆ, ವಿಷ್ಣುವರ್ಧನ್‌ರವರ ಶ್ರೇಷ್ಠ ಅಭಿನಯದಿಂದಾಗಿ ಅದರ ಜನಪ್ರಿಯತೆ ಕನ್ನಡಿಗರ ಮನೆಮಾತಾಯಿತು. ವಿಷ್ಣುವರ್ಧನ್ ಮೇರುನಟರಾಗಿ ಮಿಂಚಿ ರಾಜ್ಯಪ್ರಶಸ್ತಿ ಗಳಿಸಿದರು. ಇದೇ ವರ್ಷದಲ್ಲಿ ಶಂಕರ್‌ನಾಗ್ ನಿರ್ದೇಶನದಲ್ಲಿ ತಯಾರಾದ ಆಕ್ಸಿಡೆಂಟ್ ಚಿತ್ರ ಕೂಡ ಮಾದಕದ್ರವ್ಯದ ಅಮಲಿನಿಂದ ಮತ್ತು ನಿರ್ಭೀತ, ಸ್ವೇಚ್ಛ ವರ್ತನೆಗಳಿಂದ ಆಗಬಹುದಾದಂತಹ ದುಷ್ಪರಿಣಾಮಗಳನ್ನು, ಅದ್ಭುತ ದೃಶ್ಯಗಳನ್ನು ಸೆರೆಹಿಡಿಯುವುದರ ಮೂಲಕ ಪರಿಣಾಮಕಾರಿಯಾಗಿ ಜನರ ಮನಸ್ಸಿಗೆ ಮುಟ್ಟಿಸುವಲ್ಲಿ ಶಂಕರ್ ನಾಗ್, ಮತ್ತು ಅನಂತ ನಾಗ್ ಯಶಸ್ವಿಯಾದರು. ಈ ಚಿತ್ರ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳನ್ನು ಗಳಿಸಿತು.

ಶಂಕರ್‌ನಾಗ್ ಪಾದರಸದಂತಹ ವ್ಯಕ್ತಿಯಾಗಿದ್ದರು. ಸದಾ ಕೆಲಸದಲ್ಲಿ ತೊಡಗಿಸಿಕೊಂಡು ಏನಾದರೊಂದು ಹೊಸತನ್ನು ರಂಗಭೂಮಿಯಲ್ಲಿ ಹಾಗೂ ಚಿತ್ರರಂಗದಲ್ಲಿ ಮಾಡಬೇಕೆಂಬ ಹಂಬಲದಿಂದ ದುಡಿಯುತ್ತಿದ್ದರು. ಇವರ ಸಾಹಸದಿಂದಾಗಿ 1985ರಲ್ಲಿ ಸಂಕೇತ್ ಸ್ಟುಡಿಯೋ ಕೂಡ ನಿರ್ಮಾಣವಾಯಿತು. ಎಲೆಕ್ಟ್ರಾನಿಕ್ ತಾಂತ್ರಿಕತೆಯಿಂದ ಧ್ವನಿ ಮುದ್ರಣ, ಸಂಕಲನ, ಡಬ್ಬಿಂಗ್ ಮುಂತಾದ ಕಾರ್ಯಗಳನ್ನು ಮಾಡಬಹುದಾದಂತಹ ಸುಸಜ್ಜಿತವಾದ ಕಾರ್ಯಾಗಾರ ಇದಾಯಿತು. ಇದೇ ವರ್ಷದಲ್ಲಿ ಭಾರತದ ಖ್ಯಾತ ಚಿತ್ರೋದ್ಯಮಿ ಎಲ್.ವಿ.ಪ್ರಸಾದ್‌ರವರು ತಮ್ಮ ಕಾರ್ಯಕ್ಷೇತ್ರವನ್ನು ಬೆಂಗಳೂರಿಗೂ ವಿಸ್ತರಿಸಿದರು. 16 ಎಂ.ಎಂ. ಹಾಗೂ 35 ಎಂ.ಎಂ. ಚಿತ್ರಗಳನ್ನು ಪ್ರೋಸೆಸ್ಸಿಂಗ್ ಮಾಡಬಹುದಾದಂತಹ ಒಂದು ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಈ ಬೆಳವಣಿಗೆಗಳು ಕನ್ನಡ ಚಿತ್ರರಂಗಕ್ಕೆ ಸ್ವಾವಲಂಬನೆ ಪಡೆಯುವ ದಿಟ್ಟಿನಲ್ಲಿ ಒಂದು ಮಹತ್ತರ ಹೆಜ್ಜೆಯಾಯಿತು.

ಎನ್. ಲಕ್ಷ್ಮೀನಾರಾಯಣ್ ನಿರ್ದೇಶಿಸಿದ ಬೆಟ್ಟದಹೂವು ರಾಷ್ಟ್ರಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿಗಳನ್ನು ಗಳಿಸಿ, ಭಾರತೀಯ ಪನೋರಮಾದಲ್ಲಿಯೂ ಭಾಗವಹಿಸಿ ಹೆಸರು ಮಾಡಿತು. ಸುಂದರ ಕಥೆ, ಬಾಲಕ ಪುನೀತ್‌ನ ಶ್ರೇಷ್ಠ ಅಭಿನಯಕ್ಕೆ ಪ್ರಶಸ್ತಿ, ಹಾಗೂ

ರಷ್ಯಾ, ಇರಾನ್ ಮತ್ತಿತರ ದೇಶಗಳ ಚಿತ್ರೋತ್ಸವಗಳಲ್ಲಿ ಭಾಗವಹಿಸಿತು. ಪುಷ್ಪಕ ವಿಮಾನ ಹಾಗೂ ಪ್ರೇಮಲೋಕ ಈ ದಶಕದಲ್ಲಿ ಹೊಸಜಾಡನ್ನು ಸೃಷ್ಟಿಸಿ ಅಪಾರ ಜನಪ್ರಿಯಯತೆ ಗಳಿಸಿದ ಎರಡು ಚಿತ್ರಗಳು. ಪುಷ್ಪಕ ವಿಮಾನ, ಸಿಂಗೀತಂ ಶ್ರೀನಿವಾಸರಾವ್ ರವರು ನಿರ್ದೇಶಿಸಿದ ಮಾತಿಲ್ಲದ ಮೂಕ ಚಿತ್ರ ಕಮಲಹಾಸನ್ ರವರ ಮನೋಜ್ಞ ಅಭಿನಯದಿಂದಾಗಿ, ರಾಷ್ಟ್ರದ ಪ್ರಾಯಶಃ ಎಲ್ಲ ರಾಜ್ಯಗಳಲ್ಲಿ ತೆರೆಕಂಡು ಅಪಾರ ಯಶಸ್ಸು ಗಳಿಸಿತು. ವಿದೇಶಗಳಲ್ಲಿ ಕೂಡ ಈ ಚಿತ್ರಕ್ಕೆ ಧನಲಾಭ ದೊರಕಿತು. ಪ್ರೇಮಲೋಕ ಮನೋರಂಜನೆಯಲ್ಲಿ ಒಂದು ಹೊಸ ಆಯಾಮವನ್ನು ಸೃಷ್ಟಿಸಿದ ಚಿತ್ರ. ವೈವಿಧ್ಯಮಯ ದೃಶ್ಯಗಳು, ನೂತನ ಶೈಲಿಯ ಗೀತೆಗಳು, ರಾಗ ಮತ್ತು ಸಾಹಿತ್ಯಗಳ ಮಧುರ ಸಮಾಗಮ, ಯುವ ಪೀಳಿಗೆಯನ್ನು ಹುಚ್ಚೆಬ್ಬಿಸಿ ಆಕರ್ಷಿಸುವಂತಹ ಹೊಸತುತನ ಈ ಚಿತ್ರದಲ್ಲಿ ಕಾಣಿಸಿಕೊಂಡಿತು. ಇದಕ್ಕೆ ಕಾರಣರಾದವರು ಸಂಗೀತ ನಿರ್ದೇಶಕ ಹಂಸಲೇಖ ಹಾಗೂ ನಟ, ನಿರ್ದೇಶಕ ರವಿಚಂದ್ರನ್ ರವರು. ಇದೇ ದಶಕದಲ್ಲಿ ಸಿಂಗೀತಂ ಶ್ರೀನಿವಾಸರಾವ್ ರವರು ನಿರ್ದೇಶಿಸಿದ ಆನಂದ್ (1986) ಚಿತ್ರದ ಮೂಲಕ ರಾಜಕುಮಾರ್ ರವರ ಪುತ್ರ ಶಿವರಾಜ ಕುಮಾರ್ ಕೂಡ ಜನಪ್ರಿಯತೆ ಗಳಿಸಿದರು.

ಅಂದಿನ ದಿನಗಳಲ್ಲಿ ಮನಸ್ಸಿಗೆ ನೆಮ್ಮದಿ ತಂದ ಸುದ್ದಿಯೆಂದರೆ ಗಿರೀಶ್ ಕಾಸರವಳ್ಳಿ ನಿರ್ದೇಶನದ ತಬರನ ಕಥೆ ಚಿತ್ರಕ್ಕೆ 1987ರ ಅತ್ಯುತ್ತಮ ಚಿತ್ರವೆಂದು ಸ್ವರ್ಣಕಮಲ ಲಭಿಸಿದ್ದು. ಇದರೊಂದಿಗೆ ರಾಜ್ಯದಲ್ಲಿ ಪ್ರಥಮ ಅತ್ಯುತ್ತಮ ಚಿತ್ರ, ಅತ್ಯುತ್ತಮ ನಟ ಚಾರುಹಾಸನ್, ಉತ್ತಮ ಕಥೆ ಮತ್ತು ಸಂಭಾಷಣೆಗಾಗಿ ಪೂರ್ಣಚಂದ್ರತೇಜಸ್ವಿ, ಉತ್ತಮ ಸಂಕಲನ ಎಂ.ಎನ್.ಸ್ವಾಮಿ, ಬಾಲ ನಟ ಸಂತೋಷ್ ಇವರುಗಳಿಗೂ ಪ್ರಶಸ್ತಿ ಲಭ್ಯವಾಯಿತು. ಒಬ್ಬ ಸರ್ಕಾರಿ ನೌಕರ ತನ್ನ ಪಿಂಚಣಿಯನ್ನು ಪಡೆಯಲು ಪಡುವ ಬವಣೆಯನ್ನು ಅರ್ಥಪೂರ್ಣವಾಗಿ ಚಿತ್ರೀಕರಿಸಿದ್ದ ಈ ಚಿತ್ರದಲ್ಲಿ ಚಾರುಹಾಸನ್‌ರವರು ತಬರನ ಪಾತ್ರದಲ್ಲಿ ಮನಮುಟ್ಟುವಂತೆ ಅಭಿನಯಿಸಿದರು.

ಸುರೇಶ್ ಹೆಬ್ಳೀಕರ್ ರವರ ಪ್ರಥಮ ಉಷಾಕಿರಣ, ರಾಜೇಂದ್ರಸಿಂಗ್ ಬಾಬು ರವರ ಅಪಾರವೆಚ್ಚದ ಯುದ್ಧದ ದುಷ್ಪರಿಣಾಮವನ್ನು ನಿರೂಪಿಸುವ ಚಿತ್ರ ಮುತ್ತಿನ ಹಾರ, ನಾಗಾಭರಣರ ಸಂತ ಶಿಶುನಾಳ ಶರೀಫ, ಪಿ.ಹೆಚ್. ವಿಶ್ವನಾಥ್ ರವರ ಪಂಚಮವೇದ, ಕೋಡ್ಲು ರಾಮಕೃಷ್ಣ ರವರ ಉದ್ಭವ, ಅಸ್ರಾರ್ ಅಬೀದ್ ರವರ ಕ್ರಮ, ಭಾರ್ಗವ ಅವರ ಕರುಣಾಮಯಿ, ಈ ಚಿತ್ರಗಳು ಗುಣಮಟ್ಟದಲ್ಲಿ ಪ್ರೇಕ್ಷಕರ ಮನ ಸೆಳೆದ ಚಿತ್ರಗಳೆನ್ನಬಹುದು. ಫಣಿರಾಮಚಂದ್ರರವರ ಹಾಸ್ಯಪ್ರಧಾನವಾದ ಸಂಭಾಷಣೆಗಳೊಂದಿಗೆ, ತಯಾರಿಸಿದ ಹೊಸ ಶೈಲಿಯ ಗಣೇಶನ ಮದುವೆ, ಗಣೇಶನ ಗಲಾಟೆ, ಮುಂತಾದ ಚಿತ್ರಗಳು ಮನೆಮಂದಿಗೆ ಮನರಂಜನೆ ಕೊಟ್ಟು ಸಾಕಷ್ಟು ಜನಪ್ರಿಯತೆ ಗಳಿಸಿದವು.

ಈ ದಶಕದಲ್ಲಿ ತಯಾರಾದ ಕನ್ನಡ ಚಿತ್ರಗಳ ಸಂಖ್ಯೆಯನ್ನು ಗಮನಿಸಿದಾಗ, 1981ಲ್ಲಿ 64, 1982ರಲ್ಲಿ 52. 1983ರಲ್ಲಿ 61, 1984ರಲ್ಲಿ 81, 1985ರಲ್ಲಿ 62, 1986ರಲ್ಲಿ 59, 1987ರಲ್ಲಿ 61, 1988ರಲ್ಲಿ 56, 1989ರಲ್ಲಿ 68, ಮತ್ತು 1990ರಲ್ಲಿ 69, ಒಟ್ಟು 633 ಚಿತ್ರಗಳು. ಹಿಂದಿನ ದಶಕದಲ್ಲಿನ 367 ಚಿತ್ರಗಳಿಗೆ ಹೋಲಿಸಿದಾಗ ಇದು ಉತ್ತಮ ಪ್ರಗತಿ ಎನ್ನಬಹುದು. ಆದರೆ ಗಮನಿಸಬೇಕಾದ ಅಂಶವೆಂದರೆ ಗುಣಮಟ್ಟದಲ್ಲಿ ಪ್ರಗತಿ ಸಾಕಷ್ಟು ಕುಂಠಿತವಾಯಿತೆನ್ನಬಹುದು.

1991–2000 ರ ದಶಕ : ಸಂಖ್ಯಾ ದೃಷ್ಟಿಯಿಂದ ಈ ದಶಕದಲ್ಲಿ ಚಿತ್ರಗಳು ಹಿಂದಿನಂತೆಯೇ ವೃದ್ಧಿಗೊಳ್ಳುತ್ತಲೇ ಬಂದಿತು. ಆದರೆ ಗುಣಮಟ್ಟದ ದೃಷ್ಟಿಯಿಂದ ಅಷ್ಟೇನೂ ಪ್ರಗತಿಕಾಣಲಿಲ್ಲ. ದಶಕದ ಪ್ರಾರಂಭದಲ್ಲಿ, ಅಂದರೆ 1992ರ ಜನವರಿಯಲ್ಲಿ ಬೆಂಗಳೂರಿನಲ್ಲಿ ಮತ್ತೊಮ್ಮೆ ಅಂತಾರಾಷ್ಟ್ರೀಯ ಚಿತ್ರೋತ್ಸವ ಜರುಗಿತು. ಕಾವೇರಿ ನೀರಿನ ವಿವಾದದಿಂದ ಉಂಟಾದ ಪ್ರಕ್ಷುಬ್ಧ ವಾತಾವರಣದ ಮಧ್ಯೆಯಲ್ಲಿಯೂ ಚಿತ್ರೋತ್ಸವ ಯಶಸ್ವಿಯಾಗಿಯೇ ನಡೆಯಿತು. ವಿದೇಶಗಳಿಂದ ಬಂದ ಅನೇಕ ಉತ್ತಮಚಿತ್ರಗಳು, ಹಾಗೂ ಭಾರತದಲ್ಲಿನ ಪ್ರಾದೇಶಿಕ ಭಾಷಾಚಿತ್ರಗಳು, ಅಪಾರಸಂಖ್ಯೆಯಲ್ಲಿ ಪ್ರದರ್ಶಿತಗೊಂಡು, ಸಹಸ್ರಾರು ಸಂಖ್ಯೆಯಲ್ಲಿ ದೇಶ ವಿದೇಶದಿಂದ ಆಗಮಿಸಿ, ನೆರೆದಿದ್ದ ಪ್ರತಿನಿಧಿಗಳನ್ನು ಬೆಂಗಳೂರು ಉತ್ಸವ ತೃಪ್ತಿಗೊಳಿಸಿತು.

ಕನ್ನಡದಲ್ಲಿನ ಉತ್ತಮ ಸಾಹಿತ್ಯ, ಉತ್ತಮ ಕಾದಂಬರಿಗಳನ್ನು ಆಧರಿಸಿ ತಯಾರಾಗುತ್ತಿದ್ದ ಒಂದು ಸಂಪ್ರದಾಯ ಕ್ರಮೇಣ ಕಮ್ಮಿಯಾಗುತ್ತಾ ಬಂದಿತು. ಚಿತ್ರ ವಿಚಿತ್ರ ಹೆಸರುಗಳಿಂದ, ದ್ವಂದ್ವಾರ್ಥ ಬರುವ ಅಶ್ಲೀಲ ಪದಗಳ ನಾಮಾಂಕಿತದ ಚಿತ್ರಗಳು ಒಂದರಮೇಲೊಂದರಂತೆ ಬರಲು ಪ್ರಾರಂಭವಾಯಿತು. ಚಿತ್ರಗಳಲ್ಲಿನ ಸಂಭಾಷಣೆಗಳೂ ಕೂಡ ಅಶ್ಲೀಲ ಪದಗಳಿಂದ, ದ್ವಂದ್ವಾರ್ಥ ಗಳಿಂದ ತುಂಬಿ ತುಳುಕಾಡುವಂತಹ ಪರಿಸ್ಥಿತಿ ಬಂದೊದಗಿತು. ಪತ್ರಿಕೆಗಳಲ್ಲಿ ಹಿರಿಯ ಪತ್ರಕರ್ತರುಗಳು, ಹಾಗೂ ಅನೇಕ ಸಾರ್ವಜನಿಕ ಕ್ಷೇತ್ರಗಳಿಂದ, ಮತ್ತು ಸರ್ಕಾರದ ವತಿಯಿಂದಲೂ ಇಂತಹ ಚಿತ್ರಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಲೇಖನಗಳು ಬರತೊಡಗಿದವು. ಕನ್ನಡ ಚಿತ್ರಗಳ ಹಾಡುಗಳಂತೂ ಅಸಂಬದ್ಧ ಸಾಹಿತ್ಯಗಳಿಂದ ತುಂಬಿ ಗಾಂಭೀರ್ಯದ ಎಲ್ಲೆ ಮೀರಿತ್ತು. ವಿಧಾನ ಸಭೆ ಹಾಗೂ ವಿಧಾನ ಮಂಡಲಿಗಳಲ್ಲಿ ಕೂಡ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಆದರೆ ಚಿತ್ರ ನಿರ್ಮಾಪಕರು ಮಾತ್ರ ಜನರಿಗೆ ಇಂತಹ ಚಿತ್ರಗಳೇ ಬೇಕಾಗಿರುವುದರಿಂದ ನಮಗೆ ಬೇರೆ ವಿಧಿಯಿಲ್ಲವೆಂದು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಿದ್ದರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೂಡ 1991–92ರಲ್ಲಿ ಲೋಕೇಶ್‌ರವರ ಭುಜಂಗಯ್ಯನ ದಶಾವತಾರ, ಪ್ರೇಮಾಕಾರಂತರ ನಕ್ಕಳಾರಾಜಕುಮಾರಿ, ಗಿರೀಶ್ ಕಾಸರವಳ್ಳಿಯವರ ಮನೆ, ನಾಗಾಭರಣರ ಮೈಸೂರು ಮಲ್ಲಿಗೆ, ಸದಾನಂದ ಸುವರ್ಣರ ಕುಬಿ ಮತ್ತು ಇಯಾಲ, ರವಿ ಅವರ ಹರಕೆಯ ಕುರಿ, ಸುಂದರ ಕೃಷ್ಣ ಅರಸು ಅವರ ಸಂಗ್ಯಾ ಬಾಳ್ಯಾ, ಈ ಚಿತ್ರಗಳು ಮೆಚ್ಚಿಕೊಳ್ಳುವಂತಹ ಪ್ರಯತ್ನದಿಂದಾಗಿ ಉತ್ತಮಚಿತ್ರಗಳಾಗಿ ತೆರೆ ಕಂಡವು. ಆದರೆ ಈ ಎಲ್ಲ ಚಿತ್ರಗಳೂ ಆರ್ಥಿಕವಾಗಿ ಯಶಸ್ಸು ಗಳಿಸಲು ವಿಫಲಗೊಂಡವು. ಕನ್ನಡ ಚಿತ್ರೋದ್ಯಮದಲ್ಲಿ ಅತಿಯಾದ ನಿರೀಕ್ಷೆ ಹುಟ್ಟಿಸಿ ಹಿಂದೆಂದೂ, ಯಾರೂ ವ್ಯಯಮಾಡದಷ್ಟು ಅಪಾರ ಹಣವನ್ನು ತೊಡಗಿಸಿ ರವಿಚಂದ್ರನ್‌ರವರು ನಿರ್ಮಿಸಿದ ಶಾಂತಿ ಕ್ರಾಂತಿ ಚಿತ್ರ ಯಶಸ್ಸು ಗಳಿಸದೆ ನಷ್ಟ ಅನುಭವಿಸಿದ್ದು ಒಂದು ಗಂಭೀರ ಸುದ್ದಿಯಾಯಿತು. 1992ರಲ್ಲಿ ತಯಾರಾದ ಚಿತ್ರಗಳ ಸಂಖ್ಯೆ 90ನ್ನು ಮುಟ್ಟಿದ್ದು ಗಮನಾರ್ಹ ಸುದ್ದಿ.

ಈ ದಶಕದ ಮತ್ತೊಂದು ಪರಿಣಾಮಕಾರಿ ಬೆಳೆವಣಿಗೆಯೆಂದರೆ ವರ್ಣ ಟಿ.ವಿ. ಮತ್ತು ದೂರದರ್ಶನದ ಜೊತೆಗೆ ಖಾಸಗಿ ಚಾನೆಲ್‌ಗಳು ಹುಟ್ಟಿಕೊಂಡು, ಟಿ.ವಿ.ಮೂಲಕ ಚಿತ್ರಗಳನ್ನು ಪ್ರದರ್ಶನಮಾಡಲು ಪ್ರಾರಂಭವಾದದ್ದು. ಈ ಒಂದು ಬೆಳವಣಿಗೆ ಚಿತ್ರಮಂದಿರಗಳ ಮೇಲೆ ಸಾಕಷ್ಟುಪ್ರಭಾವ ಬೀರಿತು. ಇದರ ದುಷ್ಪರಿಣಾಮ ಎಷ್ಟರಮಟ್ಟಿಗೆ ಆಯಿತೆಂದರೆ, ಇಂದಿಗೂ ಚಿತ್ರೋದ್ಯಮ ಅದರಿಂದ ಚೇತರಿಸಿಕೊಳ್ಳಲು ದುಸ್ಸಾಧ್ಯವಾಗಿದೆ. ಸಾರ್ವಜನಿಕ ಚಿತ್ರಮಂದಿರಗಳ ಗತಿಯೇ ಬದಲಾಗಿ ಹೋಯಿತು. ಅನೇಕ ಚಿತ್ರಮಂದಿರಗಳು ಚೇತರಿಸಿಕೊಳ್ಳಲಾಗದೆ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಮಳಿಗೆ ಸಂಕೀರ್ಣಗಳಾಗಿ ಪರಿವರ್ತನೆಗೊಂಡವು.

ತಿಳಿಹಾಸ್ಯದ ಸಂಭಾಷಣೆಗಳೊಂದಿಗೆ, ಜನಸಾಮಾನ್ಯರ ಆಸೆ, ಆಕಾಂಕ್ಷೆಗಳನ್ನು ವಸ್ತುವಾಗಿ ಬಳಸಿಕೊಂಡು ಉತ್ತಮ ನಿರ್ದೇಶನ, ಹಾಗೂ ಪ್ರತಿಭಾವಂತ ಕಲಾವಿದರುಗಳ ಅಭಿನಯದೊಂದಿಗೆ ಕೋಡ್ಲು ರಾಮಕೃಷ್ಣ ರವರು ಯಾರಿಗೂ ಹೇಳ್ಬೇಡಿ ಚಿತ್ರವನ್ನು ನಿರ್ದೇಶಿಸುವ ಮೂಲಕ, ಅಶ್ಲೀಲತೆಯಿಲ್ಲದೆ, ವಿನಾಕಾರಣ ಕ್ರೌರ್ಯತೆಯಿಲ್ಲದೆ, ಜನರ ಮನರಂಜಿಸಬಹುದು ಮತ್ತು ಪ್ರಶಂಸೆ, ಯಶಸ್ಸು, ಪ್ರಶಸ್ತಿಗಳನ್ನೂ ಗಳಿಸಬಹುದು ಎಂಬುದನ್ನು ಚಿತ್ರ ಜಗತ್ತಿಗೆ ತೋರಿಸಿಕೊಟ್ಟರು.

1993ರಲ್ಲಿ, ಕನ್ನಡ ವಾಕ್ಚಿತ್ರಕ್ಕೆ 60 ವರ್ಷ ತುಂಬಿದ ಹುಟ್ಟು ಹಬ್ಬವನ್ನು, ಕರ್ನಾಟಕ ಚಲನಚಿತ್ರ ಪತ್ರಕರ್ತರ ವೇದಿಕೆ ಸಂಭ್ರಮದಿಂದ ಆಚರಿಸಿತು. ಈ ಆಚರಣೆ ಸತತವಾಗಿ ಒಂದು ವರ್ಷದವರೆಗೆ ಅನೇಕ ಸಮಾರಂಭಗಳಿಗೆ ಎಡೆ ಮಾಡಿಕೊಟ್ಟು ಚಿತ್ರ ರಂಗದ ಅನೇಕ ಹಿರಿಯರು, ಗಣ್ಯರು ಸಕ್ರಿಯವಾಗಿ ಭಾಗವಹಿಸಿ ಚಿತ್ರರಂಗದಲ್ಲಿನ ಅನೇಕ ಸಮಸ್ಯೆಗಳನ್ನು ಸರ್ಕಾರದ ಅವಗಾಹನೆಗೆ ಮನವರಿಕೆ ಮಾಡಿಕೊಟ್ಟರು. ಇದಕ್ಕೆ ಪರಿಹಾರ ಕಂಡಕೊಳ್ಳುವ ಸಲುವಾಗಿ, ಕರ್ನಾಟಕ ಸರ್ಕಾರ ಸ್ಪಂದಿಸಿ, ಹಿರಿಯ ಪತ್ರಕರ್ತರೂ ಮತ್ತು ಚಿತ್ರರಂಗದ ಆಗುಹೋಗುಗಳ ಬಗ್ಗೆ ಸಾಕಷ್ಟು ಅನುಭವ ಹೊಂದಿರುವ ವಿ.ಎನ್. ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿತು. ಚಿತ್ರ ರಂಗದ ಎಲ್ಲ ಕ್ಷೇತ್ರಗಳಿಂದ ಪ್ರತಿನಿಧಿಸಿದ್ದ ಗಣ್ಯವ್ಯಕ್ತಿಗಳ ಈ ಸಮಿತಿ, ಕನ್ನಡಚಿತ್ರರಂಗದ ಸಮಗ್ರ ಸಮಸ್ಯೆಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ತನ್ನ ವರದಿಯನ್ನು ಎಂಟು ತಿಂಗಳ ಅವಧಿಯಲ್ಲಿ ಸರ್ಕಾರಕ್ಕೆ ಮಂಡಿಸಿತು. ಚಲನಚಿತ್ರ ಪ್ರಶಸ್ತಿಗಳಿಗೆ ನೀಡುತ್ತಿರುವ ಹಣದ ಮೌಲ್ಯ ವನ್ನು ಹೆಚ್ಚಿಸುವುದು, ಸಹಾಯಧನವನ್ನು ಜಾಗ್ರತೆಯಾಗಿ ನೀಡುವುದು, ಚಿತ್ರನಗರಿಯ ನಿರ್ಮಾಣ, ಚಲನಚಿತ್ರ ಅಕಾಡೆಮಿಯನ್ನು ಸ್ಥಾಪಿಸುವುದು, ಮನರಂಜನೆ ತೆರಿಗೆಯನ್ನು ಮಾರ್ಪಡಿಸಿ ಸ್ಲ್ಯಾಬ್ ವ್ಯವಸ್ಥೆಗೆ ಪ್ರಾಯೋಗಿಕವಾಗಿ ಜಾರಿಗೆ ತರುವುದು, ಇವು ವರದಿಯ ಮುಖ್ಯ ಅಂಶಗಳು. ಸರ್ಕಾರ ಈ ವರದಿಯಲ್ಲಿದ್ದ ಕೆಲವು ಭಾಗಗಳನ್ನು ತಕ್ಷಣದಲ್ಲಿ ಜಾರಿಗೆ ತಂದಿತು. ಆದರೆ ತೆರಿಗೆಯ ಬಗ್ಗೆ ಅನೇಕ ಪ್ರತಿಭಟನೆಗಳು ನಿರ್ಮಾಪಕರಿಂದ ಬರಲು ಪ್ರಾರಂಭವಾಯಿತು. ಕನ್ನಡ ಚಿತ್ರಗಳು, ಕನ್ನಡೇತರ ಚಿತ್ರಗಳ ಬಗ್ಗೆ ಸಮಾಧಾನಕರವಾದ ತೆರಿಗೆ ನೀತಿಯನ್ನು ಜಾರಿಗೆ ತರುವುದು ಕಗ್ಗಂಟಿನ ಪ್ರಶ್ನೆಯಾಯಿತು. ಇಂದಿಗೂ ಈ ಸಮಸ್ಯೆಯು ಒಂದಲ್ಲ ಒಂದು ರೀತಿಯಲ್ಲಿ, ನಿರ್ಮಾಪಕರ ಕಡೆಯಿಂದ, ಇಲ್ಲವೇ ಪ್ರದರ್ಶಕರ ಕಡೆಯಿಂದ ಅತೃಪ್ತಿಯ ಹೊಗೆಯನ್ನು ಎಬ್ಬಿಸುತ್ತಲೇ ಇದೆ. ಕೇರಳದ ಮಾದರಿಯಲ್ಲಿ ಚಲನಚಿತ್ರ ಅಕಾಡೆಮಿ ಸ್ಥಾಪಿಸುವ ಕಾರ್ಯ ಕೂಡ ಮುಗಿಯದೆ ಹಾಗೆಯೇ ಉಳಿದಿದೆ. ಈಗ ಅಂದರೆ 2005–06ರಲ್ಲಿ ಸರ್ಕಾರ ಅದನ್ನು ಕಾರ್ಯಗತಮಾಡುವ ವರದಿಗಳು ಪತ್ರಿಕೆಗಳಲ್ಲಿ ಬರುತ್ತಿದೆ. ಕನ್ನಡ ಭಾಷೆ ಚಿತ್ರಗಳಿಗೆ ಪೂರ್ಣ ತೆರಿಗೆ ವಿನಾಯಿತಿಯಂತೂ ಒದಗಿತು.

1994ರಲ್ಲಿ ಮೇ ತಿಂಗಳಿನಲ್ಲಿ ಕೆ.ಎಸ್. ಅಶ್ವತ್ಥ್‌ರವರು, ಚಿತ್ರಗಳು ತೀರ ಅಶಿಸ್ತು, ಅಸಡ್ಡೆಯಿಂದ ತಯಾರಾಗುತ್ತಿರುವ ವಿಧಾನದಿಂದ ಬೇಸತ್ತು, ಇಂತಹ ಚಿತ್ರಗಳಲ್ಲಿ ನಟಿಸುವುದು ಮನಸ್ಸಿಗೆ ನೋವುಂಟುಮಾಡುವ ಪರಿಸ್ಥಿತಿ ಒದಗಿರುವುದರಿಂದ ತಾವು ನಟನೆಯಿಂದ ನಿವೃತ್ತಿ ಹೊಂದುವುದಾಗಿ ಪ್ರಕಟಿಸಿದರು. ಅವರ ನೊಂದ ಮನಸ್ಸಿನಿಂದ ಉಂಟಾದ ದುಗುಡ, ಅವರ ಕಳಕಳಿಯ ಅಭಿಪ್ರಾಯದಿಂದ ಕನ್ನಡದ ಚಿತ್ರ ನಿರ್ಮಾಣದಲ್ಲಿನ ದುಸ್ಥಿತಿ ಜನರಿಗೆ ಮನವರಿಕೆಯಾಯಿತು.

ಅನಂತರದ ದಿನಗಳಲ್ಲಿ ಕನ್ನಡ ಚಿತ್ರಗಳ ಗುಣಮಟ್ಟದ ಬಗ್ಗೆ ವ್ಯಾಪಕ ವಾದ ಚರ್ಚೆಗಳು ಎಲ್ಲ ವೇದಿಕೆಗಳಲ್ಲಿ, ಸಮಾರಂಭಗಳಲ್ಲಿ, ನಡೆಯುತ್ತಿದ್ದದ್ದು ಸಾಮಾನ್ಯವಾದ ವಿಷಯವಾಗಿತ್ತು. ಅಂದಿನ ವಾರ್ತಾ ಸಚಿವರು, ವಿಧಾನಸಭಾಧ್ಯಕ್ಷರು, ಹಿರಿಯ ಪತ್ರಕರ್ತರು ಅನೇಕ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಅನೇಕ ಹೊಸ ಪ್ರತಿಭೆಗಳು ಬರುತ್ತಿದ್ದರು. ಆದರೆ ಹೊಸತು ತನವಾಗಲಿ, ಸೃಜನತೆಯಾಗಲಿ ಹುಡುಕಿದರೂ ಸಿಗುತ್ತಿರಲಿಲ್ಲ. ಈ ಕಾರಣದಿಂದಾಗಿ ಎಲ್ಲ ಕನ್ನಡ ಚಿತ್ರಗಳಿಗೂ ಸರ್ಕಾರ ಕೊಡುತ್ತಿದ್ದ ಧನಸಹಾಯವನ್ನು ರದ್ದು ಗೊಳಿಸಿ ಉತ್ತಮ ಚಿತ್ರಗಳಿಗೆ ಮಾತ್ರ 10ಲಕ್ಷ ರೂ. ಸಹಾಯ ಕೊಡುವ ಪದ್ಧತಿ 1993 ರಿಂದ ಜಾರಿಗೆ ಬಂತು.

ಇಂತಹ ಪರಿಸ್ಥಿತಿಯಲ್ಲಿ ನಾಗತಿಹಳ್ಳಿ ಚಂದ್ರಶೇಖರ್‌ರವರ ಕೊಟ್ರೇಶಿ ಕನಸು ಚಿತ್ರ ತಯಾರಾದದ್ದು ಒಂದು ಸಮಾಧಾನ ಕೊಡುವಂತಹ ವಿಷಯವಾಯಿತು. ಈ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ದೊರಕಿದ್ದಲ್ಲದೆ, ಈ ಚಿತ್ರದಲ್ಲಿ ದಲಿತ ಬಾಲಕನ ಪಾತ್ರದಲ್ಲಿ ಅಭಿನಯಿಸಿದ ವಿಜಯ ರಾಘವೇಂದ್ರ, ಪ್ರಶಸ್ತಿಯನ್ನು ಗಳಿಸಿ, ಮತ್ತೂ ಕೆಲವು ಚಿತ್ರಗಳಲ್ಲಿ ಅಭಿನಯಿಸಿ ಮೆಚ್ಚುಗೆ ಪಡೆದ ಬಾಲನಟನಾದದ್ದು ಒಂದು ಹೇಳಿಕೊಳ್ಳಬಹುದಾದಂತಹ ಸುದ್ದಿಯಾಯಿತು. ನಿಷ್ಕರ್ಷ, ಆಕಸ್ಮಿಕ, ಶ್, ಚಿನ್ನಾರಿ ಮುತ್ತ, ಸಂಗೀತ ಸಾಗರ ಗಾನಯೋಗಿ ಪಂಚಾಕ್ಷರಿ ಗವಾಯಿ, ಕ್ರೌರ್ಯ, ಬೆಳದಿಂಗಳ ಬಾಲೆ, ಅರಗಿಣಿ, ಯಾರಿಗೂ ಹೇಳ್ಬೇಡಿ, ಗಳಿಗೆ, ಈ ಚಿತ್ರಗಳು ಗುಣಮಟ್ಟದ ದೃಷ್ಟಿಯಿಂದ ನೋಡಿದಾಗ ಉತ್ತಮ ಚಿತ್ರಗಳಾಗಿ, ಪ್ರಶಸ್ತಿಗಳನ್ನೂ ಗಳಿಸಿದವು. ವಸಂತ ಮೊಕಾಶಿ ಅವರು ನಿರ್ದೇಶಿಸಿದ ಗಂಗವ್ವ ಗಂಗಾಮಾಯಿ ಮೊಕಾಶಿ ಅವರ ಕನ್ನಡದ ಕಾದಂಬರಿ ಆಧಾರಿತ ಚಿತ್ರ, ಶ್ರೇಷ್ಠ ಚಿತ್ರವೆಂಬ ಪುರಸ್ಕಾರವೂ ಲಭಿಸಿತು, ಚಿತ್ರವಿಮರ್ಶಕರಿಂದ ಒಳ್ಳೆಯ ಪ್ರಶಂಸೆ ಗಳಿಸಿತು. ಆದರೆ ಅಂತಹ ಚಿತ್ರಕ್ಕೆ ಪ್ರದರ್ಶನಾವಕಾಶವೇ ಸಿಕ್ಕಲಿಲ್ಲವೆಂಬುದು ಶೋಚನೀಯ ಸಂಗತಿ.

ಬೆಳದಿಂಗಳ ಬಾಲೆಯಲ್ಲಿ, ಯುವತಿಯನ್ನು ತೋರಿಸದೆಯೇ ಕೇವಲ ದೂರವಾಣಿ ಮೂಲಕ ಪ್ರೀತಿಯನ್ನು ವ್ಯಕ್ತಪಡಿಸುವ ಒಂದು ನವೀನ ಶೈಲಿಯಲ್ಲಿ ಚಿತ್ರ ನಿರ್ದೇಶಿಸಿದ ವ್ಯಕ್ತಿ ಸುನಿಲ್ ಕುಮಾರ್ ದೇಸಾಯಿ. ಈ ಚಿತ್ರ ಆರ್ಥಿಕವಾಗಿಯೂ ಯಶಸ್ಸು ಗಳಿಸಿತು. ಗಾನಯೋಗಿ ಪಂಚಾಕ್ಷರ ಗವಾಯಿಯಲ್ಲಿ ಲೋಕೇಶ್‌ರವರ ಅಭಿನಯ, ಬಾಲ ಗವಾಯಿಯ ಪಾತ್ರದಲ್ಲಿ ವಿಜಯ ರಾಘವೇಂದ್ರನ ಪಾತ್ರ, ಇವು ಮನಸ್ಸನಲ್ಲಿ ಅಳಿಯದೆ ಉಳಿಯುವಂತಹ ಅಭಿನಯಗಳು. ಕ್ರೌರ್ಯ, ಗಿರೀಶ್ ಕಾಸರವಳ್ಳಿಯವರ ಚಿತ್ರ, ಭಾರತೀಯ ಪನೋರಮಾದಲ್ಲಿ ಭಾಗವಹಿಸಿತು, ಉತ್ತಮ ಚಿತ್ರವೆಂಬ ಅಭಿಪ್ರಾಯವನ್ನು ಎಲ್ಲರಿಂದಲೂ ಪಡೆಯಿತು, ಆದರೆ ಪ್ರದರ್ಶನಾವಕಾಶ ಸಿಗುವುದೇ ಒಂದು ಭಗೀರಥ ಪ್ರಯತ್ನವಾಯಿತು, ಸಿಕ್ಕ ಮೇಲೆ ಯಶಸ್ಸುಗಳಿಸಲು ವಿಫಲಗೊಂಡಿತು.

1995–96ರಲ್ಲಿ, ಚಿಂದೋಡಿ ಬಂಗಾರೇಶ್‌ರವರ ಅತ್ಯಂತ ಪರಿಶ್ರಮದ ಚಿತ್ರ ಪಂಚಾಕ್ಷರಿ ಗವಾಯಿ. ಹೃದಯವನ್ನು ತಟ್ಟುವ ಹಂಸಲೇಖಾ ಸಂಗೀತ, ಮನಮುಟ್ಟುವ ಅಭಿನಯ, ಧ್ಯಾನ ಮತ್ತು ನಿರ್ಮಲ ಭಕ್ತಿ ಇವುಗಳ ಗಂಭೀರ ಚಿತ್ರಣ, ಗಿರೀಶ ಕಾಸರವಳ್ಳಿಯವರ ಸದಭಿರುಚಿ ಚಿತ್ರ ಕ್ರೌರ್ಯ, ಸುನಿಲ್ ಕುಮಾರ ದೇಸಾಯಿಯವರ ನೂತನ ಶೈಲಿಯ ಬೆಳದಿಂಗಳ ಬಾಲೆ, ಈ ಚಿತ್ರಗಳು ಪ್ರಶಸ್ತಿಗಳಿಸಿ, ಕನ್ನಡ ಚಿತ್ರ ರಂಗದ ನಿರಾಶಾವಾದಿ ವಾತಾವಾರಣವನ್ನು ಆಶಾದಾಯಕವನ್ನಾಗಿ ಮಾಡುವಲ್ಲಿ ಸಕ್ರಿಯ ಪ್ರಯತ್ನಗಳಾದವು. ಈ ದಶಕದಲ್ಲಿ ಪ್ರೇಕ್ಷಕರಿಂದ ಅಪಾರ ಯಶಸ್ಸುಗಳಿಸಿದ ಚಿತ್ರಗಳೆಂದರೆ ಜನುಮದ ಜೋಡಿ, ನಮ್ಮೂರ ಮಂದಾರ ಹೂವೆ ಮತ್ತು ಬೆಳದಿಂಗಳ ಬಾಲೆ, ಜನುಮದ ಜೋಡಿ ಪಡೆದ ಜನಪ್ರಿಯತೆ ಒಂದು ಹೊಸ ದಾಖಲೆಯೇ ಆಯಿತು. ಈ ಚಿತ್ರಕ್ಕೆ ಅತ್ಯುತ್ತಮ ನಟಿ, ಉತ್ತಮ ಸಂಭಾಷಣೆ, ಉತ್ತಮ ಸಂಗೀತ, ಉತ್ತಮ ಗೀತ ರಚನೆ, ಉತ್ತಮ ಹಿನ್ನೆಲೆ ಗಾಯನ, ಮತ್ತು ಸಾಮಾಜಿಕವಾಗಿ ಪ್ರಭಾವ ಬೀರುವ ಚಿತ್ರ ಎಂಬ ವಿಶೇಷ ಬಹುಮಾನ, ಹೀಗೆ ಆರು ರಾಜ್ಯ ಪ್ರಶಸ್ತಿಗಳು ಲಭಿಸಿ ಉತ್ತಮ ಚಿತ್ರಗಳಿಗೆ ಜನರು ಸ್ಪಂದಿಸುತ್ತಾರೆ ಎಂಬುದನ್ನು ಈ ಚಿತ್ರ ಮನವರಿಕೆ ಮಾಡಿಕೊಟ್ಟಿತು. ಇದೊಂದು ಅಪೂರ್ವ ದಾಖಲೆ.

ಕೊಟ್ರೇಶಿ ಕನಸು ಚಿತ್ರದಲ್ಲಿ ತಮ್ಮ ಪ್ರತಿಭೆಯನ್ನು ಪರಿಚಯಮಾಡಿ ಕೊಟ್ಟಿದ್ದ ನಾಗತಿಹಳ್ಳಿ ಚಂದ್ರಶೇಖರ್ ರವರು, ಅಮೆರಿಕಾ, ಅಮೆರಿಕಾ ಚಿತ್ರವನ್ನು, ಅಮೆರಿಕಾದಲ್ಲಿ ಚಿತ್ರೀಕರಿಸಿ, ತಮ್ಮ ಚುರುಕಾದ ಸಂಭಾಷಣೆಗಳನ್ನು ಫಲಪ್ರದವಾಗಿ ರಚಿಸಿ, ಕನ್ನಡ ಚಿತ್ರರಂಗದಲ್ಲಿ ಖ್ಯಾತ ನಿರ್ದೇಶಕರುಗಳ ಪಟ್ಟಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿದರು. ಈ ಚಿತ್ರಕ್ಕೆ ಪ್ರಶಸ್ತಿಗಳೂ ಬಂದಿತಲ್ಲದೆ, ಜನಪ್ರಿಯತೆಯೂ ದೊರೆಯಿತು. ನಾಗಾಭರಣರ ಮತ್ತೊಂದು ಯಶಸ್ವಿ ಚಿತ್ರ ನಾಗಮಂಡಲವೂ ಇದೇ ಸಮಯದಲ್ಲಿ ತೆರೆ ಕಂಡು, ರಾಜ್ಯ ಮಟ್ಟದಲ್ಲಿ ಪ್ರಶಸ್ತಿಗಳಿಸಿತು. ಗಿರೀಶ ಕಾರ್ನಾಡರಿಂದ ರಚಿತವಾದ ಈ ಕೃತಿ ಶಂಕರ್ ನಾಗ್ ರವರ ತಂಡದಿಂದ ಅನೇಕ ಬಾರಿ ರಂಗದಮೇಲೆ ಪ್ರದರ್ಶಿಸಲಾಗಿತ್ತು. ನಾಗಾಭರಣರು ಇದಕ್ಕೆ ತಮ್ಮದೇ ಆದ ವಿಭಿನ್ನ ರೀತಿಯ ಜಾನಪದ ಲೇಪನವನ್ನು ಕೊಟ್ಟು ತೆರೆಗೆ ತಂದು ಮೆಚ್ಚುಗೆ ಪಡೆದರು. ಈ ಚಿತ್ರದ ಛಾಯಾಗ್ರಹಕ ಜಿ.ಎಸ್. ಭಾಸ್ಕರ್, ಕಲಾನಿರ್ದೇಶಕ ಶಶಿಧರ್ ಅಡಪ, ಮತ್ತು ಪೋಷಕನಟ ಮಂಡ್ಯ ರಮೇಶ್, ಪೋಷಕನಟಿ ಜಯಶ್ರೀ, ಇವರುಗಳಿಗೂ ರಾಜ್ಯ ಪ್ರಶಸ್ತಿಗಳು ಲಭಿಸಿದವು. ಪ್ರಶಸ್ತಿ ಪಡೆದ ಮತ್ತೊಂದು ಚಿತ್ರವೆಂದರೆ ವೈ. ನಂಜುಂಡಪ್ಪ ಅವರ ನಿರ್ದೇಶನದ ನಾಗರಿಕ.

1998ರ ಆಕರ್ಷಣೆಯೆಂದರೆ, ಕನ್ನಡ ಚಿತ್ರ ಮತ್ತೊಮ್ಮೆ ರಾಷ್ಟ್ರಮಟ್ಟದಲ್ಲಿ ಸ್ವರ್ಣ ಪದಕ ಪಡೆದದ್ದು. ಗಿರೀಶ ಕಾಸರವಳ್ಳಿಯವರ ಅತ್ಯಂತ ಶ್ರೇಷ್ಠ ಮಟ್ಟದ ನಿರ್ದೇಶನದ ಮೂಲಕ ತೆರೆ ಕಂಡ ಚಿತ್ರ ತಾಯಿಸಾಹೇಬ. ಕನ್ನಡ ಚಿತ್ರರಂಗದಲ್ಲಿ ಒಂದು ಮೇರು ಕೃತಿ, ಎಲ್ಲ ರೀತಿಯಲ್ಲೂ ಅದು ಎದ್ದು ನಿಲ್ಲವಂತಹ ಚಿತ್ರ. ಗಹನವಾದ, ಗಂಭೀರವಾದ, ವಿಷಯಗಳನ್ನು ತೆರೆಯಮೇಲೆ ಸೃಜನ ಶೀಲತೆಯಿಂದ ಪ್ರತಿಪಾದಿಸಿ, ಅನೇಕ ಚಿಂತನೆಗಳಿಗೆ ಗ್ರಾಸವಾಗುವ ಸನ್ನಿವೇಶಗಳನ್ನು ಸೃಷ್ಟಿಸಿ, ಮನಸ್ಸಿಗೆ ತೃಪ್ತಿಕೊಟ್ಟಂತಹ ಚಿತ್ರ. ಭಾರತಕ್ಕೆ ಸ್ವಾತಂತ್ರ್ಯ ಬಂದ ವರ್ಷಗಳ ಸಮಯದಲ್ಲಿನ ಕಥೆ, ಸ್ವಾತಂತ್ರ್ಯದ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೈಲುವಾಸ ಅನುಭವಿಸುವ ವ್ಯಕ್ತಿ, ತನ್ನ ಎಲ್ಲ ಜೀವಿತವನ್ನೂ ಮನೆಯಂಗಳದಲ್ಲಿ ಸವೆಸುವ ಆತನ ಪತ್ನಿ ತಾಯಿಸಾಹೇಬ. ಸ್ವಾತಂತ್ರ್ಯವೆಂದರೇನು, ಯಾವುದು ಸ್ವಾತಂತ್ರ್ಯ, ದೇಶಕ್ಕೆ ಸ್ವಾತಂತ್ರ್ಯ ಬಂದರೆ ವ್ಯಕ್ತಿಗಳಿಗೆ ಸ್ವಾತಂತ್ರ್ಯ ಬಂದಂತೆಯೇ? ಈ ಪ್ರಶ್ನೆಗಳನ್ನು ಹುಟ್ಟಿಸಿ ಮನ ಕಲಕುವಂತೆ ಮಾಡುವ ಒಂದು ಅಮೋಘ ಚಿತ್ರ. ರಾಜ್ಯ ಮಟ್ಟದಲ್ಲಿ ಕೂಡ ಅತ್ಯುತ್ತಮ ಚಿತ್ರ, ಅತ್ಯುತ್ತಮ ನಟಿಯಾಗಿ ಜಯಮಾಲ ಅವರಿಗೆ, ಅತ್ಯುತ್ತಮ ಪೋಷಕ ನಟನೆಗೆ ಶಿವರಾಂರಿಗೆ, ಅತ್ಯತ್ತಮ ಛಾಯಾಗ್ರಹಣಕ್ಕಾಗಿ ಹೆಚ್.ಎಂ. ರಾಮಚಂದ್ರರವರಿಗೆ, ಅತ್ಯುತ್ತಮ ಕಥಾ ಲೇಖನಕ್ಕಾಗಿ ರಂ.ಶಾ., ಅತ್ಯುತ್ತಮ ಕಲಾ ನಿರ್ದೇಶನಕ್ಕಾಗಿ ರಮೇಶ್ ದೇಸಾಯಿ ಹೀಗೆ ಪ್ರಶಸ್ತಿಗಳ ಸುರಿಮಳೆಯೇ ಆಯಿತೆನ್ನಬಹುದು. ಇದೇ ವರ್ಷದಲ್ಲಿ ಅಮೆರಿಕಾ, ಅಮೆರಿಕಾ ಚಿತ್ರದ ಯಶಸ್ಸಿನ ಹಿನ್ನೆಲೆಯಲ್ಲಿಯೇ ನಾಗತಿಹಳ್ಳಿ ಹೂಮಳೆ ಚಿತ್ರ ನಿರ್ದೇಶಿಸಿದರು. ಉಗ್ರಗಾಮಿಗಳ ಕಾರ್ಯಾಚರಣೆಯಿಂದ ಉಂಟಾಗುವ ಪರಿಸ್ಥಿತಿ ಜನ ಸಾಮಾನ್ಯರ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಸಾಕಷ್ಟು ನೈಜ ಪರಿಸರದಲ್ಲಿ ಚಿತ್ರಿಸಲು, ಈ ಚಿತ್ರವನ್ನು ಅಸ್ಸಾಂನಲ್ಲಿ ಚಿತ್ರೀಕರಿಸಲಾಯಿತು, ಚಿತ್ರಕ್ಕೆ ಪ್ರಶಸ್ತಿಗಳು ಲಭಿಸಿದವು. ರಾಜೇಂದ್ರಸಿಂಗ್ ಬಾಬುರವರ ಮುಂಗಾರಿನ ಮಿಂಚು ರಾಷ್ಟ್ರಮಟ್ಟದಲ್ಲಿ (1997) ಅತ್ಯುತ್ತಮ ಪ್ರಾದೇಶಿಕ ಚಿತ್ರ ಹಾಗೂ ಭೂಮಿಗೀತ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಚಿತ್ರವೆಂದು ವಿಶೇಷ ಬಹುಮಾನ ಪಡೆದವು.

ವರಕವಿ ಕುವೆಂಪು ರವರ ಜನಪ್ರಿಯ ಬೃಹತ್ ಕಾದಂಬರಿ ಕಾನೂರು ಹೆಗ್ಗಡತಿ ಯನ್ನು ತೆರೆಯಮೇಲೆ ಮೂಡಿಸಬೇಕೆಂಬ ಹಲವಾರು ಚಿತ್ರ ನಿರ್ದೇಶಕರ ಬಯಕೆ, ಮತ್ತು ಅದನ್ನು ತೆರೆಯ ಮೇಲೆ ನೋಡಬೇಕೆಂಬ ಕನ್ನಡಿಗರ ಆಸೆ ಬಹುದಿನಗಳಿಂದ ಮರುಕಳಿಸುತ್ತಲೇ ಬಂದಿತ್ತು. ಜ್ಞಾನಪೀಠ ಪ್ರಶಸ್ತಿ ವಿಜೇತ ಗಿರೀಶ್ ಕಾರ್ನಾಡರು ನಿರ್ದೇಶನದ ಹೊಣೆಯನ್ನು ಹೊತ್ತಮೇಲಂತೂ ಕನ್ನಡ ಪ್ರೇಮಿಗಳ ಕುತೂಹಲ ಇಮ್ಮಡಿಸಿತು. ಚಿತ್ರ ತೆರೆಯನ್ನು ಕಂಡಿತು, ಆದರೆ ಚಿತ್ರ ನಿರೀಕ್ಷಿಸಿದ್ದ ಮಟ್ಟವನ್ನು ಏರಲಿಲ್ಲ ಎಂಬ ಅಭಿಪ್ರಾಯವನ್ನು ಬಹು ಮಂದಿ ಖ್ಯಾತ ವಿಮರ್ಶಕರು ವ್ಯಕ್ತ ಪಡಿಸಿದರು. ರಾಜ್ಯ ಮಟ್ಟದಲ್ಲಿ ದ್ವಿತೀಯ ಅತ್ಯುತ್ತಮ ಚಿತ್ರ, ರಾಷ್ಟ್ರ ಮಟ್ಟದಲ್ಲಿ ಉತ್ತಮ ಪ್ರಾದೇಶಿಕ ಚಿತ್ರ, ಭಾರತೀಯ ಪನೋರಮದಲ್ಲಿ ಆಯ್ಕೆ, ಈ ಪುರಸ್ಕಾರಗಳಿಂದ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಇದೇ ವರ್ಷದ ಮತ್ತೊಂದು ಚಿತ್ರ ಚೈತ್ರದ ಚಿಗುರು ಪ್ರಥಮ ಅತ್ಯುತ್ತಮ ಚಿತ್ರ ಪ್ರಶಸ್ತಿ ದೊರಕಿದ್ದನ್ನು ಇಲ್ಲಿ ಸ್ಮರಿಸಬಹುದು. ತೃತೀಯ ಅತ್ಯುತ್ತಮ ಚಿತ್ರವಾಗಿ ದೋಣಿಸಾಗಲಿ ಚಿತ್ರ ಆಯ್ಕೆಯಾಯಿತು.

ಜನರ ಮನಸ್ಸಿನಲ್ಲಿ ಹೊಸ ಪ್ರತಿಭೆಗಳು ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಬೇಕೆಂಬ ತೀವ್ರ ವಾದ ಹಂಬಲ ಬೆಳೆಯುತ್ತಲೇ ಬಂದಿತ್ತು, ಅದು ಇಂದಿಗೂ ಇದೆ. ಇಂತಹ ನಿರೀಕ್ಷಣೆಯಲ್ಲಿದ್ದಾಗ, ಕವಿತಾ ಲಂಕೇಶ್ ರವರು ತಮ್ಮ ಚೊಚ್ಚಲ ಕಾಣಿಕೆ ದೇವೀರಿ ಚಿತ್ರದ ಮೂಲಕ ಕನ್ನಡ ಚಿತ್ರ ರಂಗಕ್ಕೆ ಪದಾರ್ಪಣೇ ಮಾಡಿದ್ದೇ ಅಲ್ಲದೆ, ಮೊದಲ ಪ್ರಯತ್ನದಲ್ಲಿಯೇ ಪ್ರಥಮ ಅತ್ಯುತ್ತಮ ಚಿತ್ರ ಪ್ರಶಸ್ತಿಗಳಿಸಿದ್ದು ಒಂದು ಗಮನಾರ್ಹ ಸಂಗತಿಯಾಯಿತು. ಈ ಚಿತ್ರ ಲಂಡನ್ ಚಿತ್ರೋತ್ಸವದಲ್ಲಿ ಕೂಡ ಪ್ರದರ್ಶಿತವಾಯಿತು. ಖ್ಯಾತ ಬರಹಗಾರ ಲಂಕೇಶರ ಕಾದಂಬರಿ ಆಧರಿಸಿ ತಯಾರಾದ ಈ ಚಿತ್ರದಲ್ಲಿ, ಹಳ್ಳಿಯಿಂದ ಪಟ್ಟಣಕ್ಕೆ ಬಂದು ಶೋಷಣೆಗೊಳಗಾಗುವ ಸೋದರ ಸೋದರಿಯರ ಅನುಭವ, ಅವರುಗಳಲ್ಲಾಗುವ ಪರಿವರ್ತನೆ, ಮತ್ತು ಅನೇಕ ಸಾಮಾಜಿಕ ಸಮಸ್ಯೆಗಳನ್ನು ಒಮ್ಮೆಲೇ ತೆರೆಯಮೇಲೆ ತರುವ ಕುತೂಹಲ, ಇವುಗಳನ್ನೊಳಗೊಂಡ ಹೊಸತನದ ಚಿತ್ರವಾಯಿತು. ತೃತೀಯ ಅತ್ಯುತ್ತಮ ಚಿತ್ರವಾಗಿ ಚಂದ್ರಮುಖಿ ಪ್ರಾಣಸಖಿ ಪ್ರಶಸ್ತಿ ಗಳಿಸಿತು.

ಈ ದಶಕದ ಅಂತ್ಯದಲ್ಲಿ, ಅಂದರೆ, 2000 ದಲ್ಲಿ ವಿಷ್ಣುವರ್ಧನ್ ಒಬ್ಬ ತ್ಯಾಗಮಯಿ ವ್ಯಕ್ತಿಯ ಪಾತ್ರದಲ್ಲಿ ನಟಿಸಿದ ಚಿತ್ರ ಯಜಮಾನ ಅಪಾರ ಯಶಸ್ಸು ಗಳಿಸಿತು. ಇದೇ ಸಮಯದಲ್ಲಿ, ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಹೊಸ ಪ್ರತಿಭೆ ಪಿ.ಶೇಷಾದ್ರಿ, ತಮ್ಮ ಮೊದಲ ಚಿತ್ರ ಮುನ್ನುಡಿ ಯೊಂದಿಗೆ ಕಾಲಿರಿಸಿದರು. ಸದಭಿರುಚಿ ಚಿತ್ರಗಳನ್ನು ಮಾಡಬೇಕೆಂಬ ಉದ್ದೇಶದಿಂದ, ತಮ್ಮ ಹವ್ಯಾಸಿ ಕಲಾವಿದರ ಮಿತ್ರರೊಂದಿಗೆ ಕೈಜೋಡಿಸಿ, ಮುನ್ನುಡಿ (2000), ಅತಿಥಿ (2001). ಬೇರು (2004), ಚಿತ್ರಗಳನ್ನು ತಯಾರುಮಾಡಿ, ಈ ಮೂರು ಚಿತ್ರಗಳೂ ಭಾರತೀಯ ಪನೋರಮಾದಲ್ಲಿ ಆಯ್ಕೆಗೊಂಡು, ಕನ್ನಡ ಚಿತ್ರ ರಂಗಕ್ಕೆ ಆಶಾಭಾವನೆ ಮೂಡಿಸಿರುವ ವ್ಯಕ್ತಿ ಪಿ.ಶೇಷಾದ್ರಿ. ಇವರಿಂದ ಬರುವ ದಿನಗಳಲ್ಲಿ ಉತ್ತಮ ಚಿತ್ರಗಳನ್ನು ನಿರೀಕ್ಷಿಸಬಹುದು. ಪಿ. ರಾಮದಾಸ ನಾಯ್ಡು ಅವರು ನಿರ್ದೇಶಿಸಿದ ಮುಸ್ಸಂಜೆ ಚಿತ್ರಕ್ಕೆ ಪ್ರಥಮ ಅತ್ಯುತ್ತಮ ಚಿತ್ರ ಪ್ರಶಸ್ತಿ (2000–01) ಲಭಿಸಿತಲ್ಲದೆ, ಭಾರತೀಯ ಪನೋರಮಕ್ಕೂ ಆಯ್ಕೆಯಾಯಿತು. ರಾಮದಾಸ ನಾಯ್ಡು ಅವರ ಮತ್ತೊಂದು ಚಿತ್ರ ಪ್ರವಾಹ 2004ರ ಗೋವದಲ್ಲಿ ನಡೆದ ಚಿತ್ರೋತ್ಸವದಲ್ಲಿ ಭಾರತೀಯ ಪನೋರಮದಲ್ಲಿ ಪ್ರದರ್ಶನಗೊಂಡಿತು. ಕಿರುತೆರೆಯ ಮೇಲೆ ಶ್ರೇಷ್ಠಮಟ್ಟದ, ಅತ್ಯಂತ ಜನಪ್ರಿಯ ಧಾರಾವಾಹಿಗಳನ್ನು ಕನ್ನಡಿಗರಿಗೆ ಕೊಡುವಲ್ಲಿ ಸಿದ್ಧಹಸ್ತದ ವ್ಯಕ್ತಿ ಎಂದು ಜನಾನುರಾಗಿ ಯಾಗಿರುವ ಟಿ.ಎನ್.ಸೀತಾರಾಂ ರವರು, ಎಸ್.ಎಲ್.ಭೈರಪ್ಪನವರ ಕಾದಂಬರಿ ಆಧರಿಸಿ ನಿರ್ದೇಶಿಸಿದ ಚಿತ್ರ ಮತದಾನ ಕೂಡ ಭಾರತೀಯ ಪನೋರಮದಲ್ಲಿ ಭಾಗವಹಿಸಿತು. 2000 – 01 ರ ವರ್ಷದಲ್ಲಿ ಶಾಪ ಮತ್ತು ಕುರಿಗಳು ಸಾರ್ ಕುರಿಗಳು ಚಿತ್ರಗಳಿಗೆ ದ್ವಿತೀಯ ಹಾಗೂ ತೃತೀಯ ಅತ್ಯುತ್ತಮ ಚಿತ್ರಗಳ ಸ್ಥಾನ ರಾಜ್ಯಮಟ್ಟದಲ್ಲಿ ದೊರಕಿತು.

1991 ರಿಂದ 2000 ದವರೆಗಿನ ದಶಕದಲ್ಲಿ ನಿರ್ಮಾಣಗೊಂಡ ಚಿತ್ರಗಳ ಸಂಖ್ಯೆಯ ಬಗ್ಗೆ ವೀಕ್ಷಿಸಿದಾಗ :

1991ರಲ್ಲಿ 75, 1992ರಲ್ಲಿ 90, 1993ರಲ್ಲಿ 88, 1994ರಲ್ಲಿ 63, 1995ರಲ್ಲಿ 75, 1996ರಲ್ಲಿ 69, 1997ರಲ್ಲಿ 72, 1998ರಲ್ಲಿ 63, 1999ರಲ್ಲಿ 58, 2000ರಲ್ಲಿ 58 ಹೀಗೆ ಒಟ್ಟು 711 ಕನ್ನಡ ಚಿತ್ರಗಳು ತಯಾರಾದವು. ಸಂಖ್ಯೆಯ ದೃಷ್ಟಿಯಿಂದ ಇದೊಂದು ಉತ್ತಮ ಬೆಳವಣಿಗೆಯೇ ಎನ್ನಬಹುದು.

2001 ರಿಂದ ಈಚಿನ ಪರಿಸ್ಥಿತಿ : ನೂತನ ಸಹಸ್ರವರ್ಷದಲ್ಲಿ, 2001ರ ದಶಕದ ಆದಿಭಾಗದ ವರ್ಷಗಳಲ್ಲಿ, ಕನ್ನಡ ಚಿತ್ರ ರಂಗ, 2005 ರವರೆಗೂ, ಸರಾಸರಿ, ವರ್ಷದಲ್ಲಿ ಸು. 80 ಚಿತ್ರಗಳನ್ನು ತಯಾರು ಮಾಡುತ್ತಿದೆ. ಬೆಳವಣಿಗೆಯ ದೃಷ್ಟಿಯಿಂದ ನೋಡಿದಾಗ ಇತ್ತೀಚಿನ ವರ್ಷಗಳಲ್ಲಿ ಕನ್ನಡ ಚಿತ್ರಗಳು ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಂಡು, ಸಾಮಾನ್ಯವಾಗಿ ಎಲ್ಲ ಚಿತ್ರಗಳೂ ಆದ್ದೂರಿಯಾಗಿ, ಶ್ರೀಮತಿಕೆಯಿಂದ ತಯಾರಾಗಿ ಪರದೆಯೇರುತ್ತಿವೆ. ಒಂದು ಶುಭ ಸಂಕೇತವೆಂದರೆ 2004 ಮತ್ತು 2005ರಿಂದೀಚೆಗೆ ತಯಾರಾದ ಕನ್ನಡಚಿತ್ರಗಳು ಸಾಕಷ್ಟು ಹಣವನ್ನೂ ಗಳಿಸುತ್ತಿವೆ. ಆಪ್ತಮಿತ್ರ, ಜೋಗಿ ಮುಂತಾದ ಹಲವಾರು ಚಿತ್ರಗಳು ಜನಪ್ರಿಯತೆಯಲ್ಲಿ ಅಪಾರ ಯಶಸ್ಸುಗಳಿಸಿ ಹೊಸ ವಿಕ್ರಮವನ್ನೇ ಸಾಧಿಸಿವೆ.

ಗಿರೀಶ್ ಕಾಸರವಳ್ಳಿಯವರ ದ್ವೀಪ ಚಿತ್ರಕ್ಕೆ ರಾಷ್ಟ್ರ ಮಟ್ಟದಲ್ಲಿ, ಅತ್ಯುತ್ತಮ ಚಿತ್ರವಾಗಿ (2001) ಸ್ವರ್ಣ ಕಮಲ ಪುರಸ್ಕಾರ ದೊರಕಿತು. ಈ ಒಂದು ಪ್ರಶಸ್ತಿ ಅವರಿಗೆ ನಾಲ್ಕನೇ ಬಾರಿ ಲಭಿಸಿದ್ದು ಒಂದು ಹೆಮ್ಮೆಯ ವಿಷಯ. ದೇವೀರಿ ಚಿತ್ರದಿಂದ ಖ್ಯಾತಿ ಗಳಿಸಿದ ಕವಿತಾ ಲಂಕೇಶ್ ರವರು ಪ್ರೀತಿ ಪ್ರೇಮ ಪ್ರಣಯ ಚಿತ್ರ (1903) ಎಂಬ, ಮಾನವನ ಬಯಕೆ ಮತ್ತು ಚಾಪಲ್ಯಗಳನ್ನು ರಸವತ್ತಾಗಿ, ಮಧುರ, ತಿಳಿಹಾಸ್ಯಗಳೊಂದಿಗೆ ಚಿತ್ರೀಕರಿಸುವುದರ ಮೂಲಕ ಈ ಬಾರಿ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳಿಸಿದರು. ಯು.ಆರ್.ಅನಂತಮೂರ್ತಿಯವರ ಕಥೆ ಅಧರಿಸಿ, ಕನ್ನಡದ ಮತ್ತೊಬ್ಬ ಯುವ ಪ್ರತಿಭೆ ಬಿ.ಎಸ್.ಲಿಂಗದೇವರು ಅವರು ತಯಾರಿಸಿದ ಚಿತ್ರ ಮೌನಿ, ಭಾರತೀಯ ಪನೋರಮಕ್ಕೆ (1903) ಆಯ್ಕೆಯಾಯಿತು. ಗಿರೀಶ್ ಕಾಸರವಳ್ಳಿ ಅವರ ತಾಯಿಸಾಹೇಬ, ದ್ವೀಪ ಮತ್ತು ಹಸೀನ, ಟಿ.ಎಸ್.ನಾಗಾಭರಣ ಅವರ ನೀಲ ಮತ್ತು ಸಿಂಗಾರವ್ವ, ಪಿ.ಶೇಷಾದ್ರಿ ಅವರ ಮುನ್ನುಡಿ, ಆಥಿತಿ ಮತ್ತು ಬೇರು, ರಾಮದಾಸ ನಾಯ್ಡು ಅವರ ಮುಸ್ಸಂಜೆ ಮತ್ತು ಪ್ರವಾಹ, ಈ ಚಿತ್ರಗಳು ಭಾರತೀಯ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಭಾಗವಹಿಸಿ ಕನ್ನಡ ಚಲನಚಿತ್ರರಂಗಕ್ಕೆ ಪ್ರಶಂಸೆಗಳಿಸಿಕೊಟ್ಟಿವೆ.

ಈ ಮೇಲ್ಕಂಡ ಬಹುತೇಕ ಚಿತ್ರಗಳಿಗೆ ಪ್ರಮುಖವಾಗಿ, ಹೆಚ್.ಜಿ.ದತ್ತಾತ್ರೇಯ ಅವರು ತಮ್ಮ ಮನಮುಟ್ಟುವ, ಗಂಭೀರ ಅಭಿನಯದಿಂದ ಶ್ರೀಮಂತಿಕೆ ತಂದು ಕೊಟ್ಟಿದ್ದಾರೆ.

ಇತ್ತೀಚಿನ ಮತ್ತೊಂದು ಬೆಳವಣಿಗೆಯೆಂದರೆ, ಸುದೀಪ್, ಸುನಿಲ್, ದರ್ಶನ್, ಮುರಳಿ, ಪುನೀತ್ ಮುಂತಾದ, ಹೊಸ ಪೀಳಿಗೆಯ ಅನೇಕ ತರುಣ ನಟರು, ಕನ್ನಡ ಚಿತ್ರಗಳಲ್ಲಿ ನಾಯಕನ ಪಾತ್ರಗಳಲ್ಲಿ ಅಭಿನಯಿಸಿ, ಚಿತ್ರರಂಗಕ್ಕೆ ಹೊಸ ಮೆರುಗನ್ನು ಲೇಪಿಸಿದ್ದಾರೆ. ಬೆಂಗಳೂರಿನಲ್ಲಿ ಈಗ ಮಲ್ಟಿಪ್ಲೆಕ್ಸ್ ಸಂಸ್ಕೃತಿ ಬಂದು, ಕನ್ನಡ ಚಿತ್ರಗಳಿಗೆ ಪ್ರದರ್ಶನಾವಕಾಶ ಸಿಕ್ಕಿ, ಎಲ್ಲ ಉತ್ತಮ ಚಿತ್ರಗಳೂ ಯಶಸ್ಸು ಗಳಿಸುವ ಸೂಚನೆಗಳಿವೆ ಎಂಬುದು ಕನ್ನಡ ಚಲನಚಿತ್ರ ರಂಗದ ತಜ್ಞರ ಆಶಾದಾಯಕ ಭಾವನೆ.

(ಎಚ್.ಎನ್.ಎನ್.ಆರ್)

**ನವಪ್ರತಿಭೆ :** ಕನ್ನಡ ಚಿತ್ರರಂಗ ಬೆಳವಣಿಗೆಯ ಗತಿಯಲ್ಲಿ ಹಲವಾರು ಮಜಲುಗಳನ್ನು ಏರಿ ಇಳಿದಿದೆ. ಹೊಸದಕ್ಕೆ ಮೈ ಒಡ್ಡಿಕೊಂಡಿದೆ. ಬದಲಾವಣೆಯ ಗಾಳಿಯಲ್ಲಿ ತೇಲಿ ಹೋಗಿದೆ. ಇದು ಇಡೀ ಭಾರತೀಯ ಚಿತ್ರಂಗದ ಒಂದು ನೋಟ. ಇಡೀ ಚಿತ್ರರಂಗವೇ ಹೊಸಬರಿಗೆ ದಾರಿ ಮಾಡಿಕೊಟ್ಟು ಹಳಬರು ದೂರ ಸರಿಯುವ ನಿರಂತರ ಕ್ರಿಯೆ ಇದೇ ಮೊದಲೇನಲ್ಲ. ಕಾಲಕ್ಕೆ ತಕ್ಕಂತೆ ಪರಿವರ್ತನೆ ಅನಿವಾರ್ಯ. ಚಿತ್ರರಂಗದ ಆರಂಭದ ಹಂತದಲ್ಲಿ ಸುಬ್ಬಯ್ಯನಾಯ್ಡು, ಕೆಂಪರಾಜ್, ಇಂದುಶೇಖರ್, ಹೊನ್ನಪ್ಪಭಾಗವತರ್ ನಾಯಕನಟರಾಗಿದ್ದ ಕಾಲ. 1954ರ ಚಿತ್ರರಂಗದಲ್ಲಿ ಹೊಸ ನಟನಟಿಯರ ಕಾಲ. ರಾಜ್‌ಕುಮಾರ್, ಕಲ್ಯಾಣಕುಮಾರ್, ಉದಯಕುಮಾರ್ ಕುಮಾರತ್ರಯರು ಉದಯಿಸಿ ಚಿತ್ರರಂಗದಲ್ಲಿ ಹೊಸತನವನ್ನು ತಂದರು. ಹೊಸ ಪ್ರೇಕ್ಷಕರನ್ನು ಸೃಷ್ಟಿಸಿಕೊಂಡರು. ನಂತರದ ದಿನಗಳಲ್ಲಿ ಗಂಗಾಧರ್, ರಾಜೇಶ್, ರಮೇಶ್ ಕಾಣಿಸಿಕೊಂಡರು. ಕಾಲಕ್ರಮೇಣ ವಿಷ್ಣುವರ್ಧನ್, ಶ್ರೀನಾಥ್, ಲೋಕೇಶ್, ಅನಂತನಾಗ್, ಅಂಬರೀಷ್, ಶಂಕರನಾಗ್, ಪ್ರಭಾಕರ್ ತೆರೆಯ ಮೇಲೆ ಹೊಸ ನಾಯಕರಾಗಿ ಮೂಡಿ ಬಂದರು. 1985ರ ನಂತರ ಶಿವರಾಜ್‌ಕುಮಾರ್, ರವಿಚಂದ್ರನ್, ರಮೇಶ್, ದೇವರಾಜ್, ಶಶಿಕುಮಾರ್, ಸಾಯಿಕುಮಾರ್, ರಾಮ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಶ್ರೀಧರ್, ವಿನೋದ್‌ರಾಜ್, ಕುಮಾರ್ ಬಂಗಾರಪ್ಪ, ಅಭಿಜಿತ್ ಮೊದಲಾದವರು ಚಿತ್ರರಂಗದ ಹೊಸ ಪೀಳಿಗೆಯಾಗಿ ಕಾಣಿಸಿಕೊಂಡರು. ಮತ್ತೆ 2000 ಇಸವಿಯ ನಂತರ ಇತಿಹಾಸ ಚಕ್ರ ತಿರುಗಿದೆ. ಚಿತ್ರರಂಗದಲ್ಲಿ ಬದಲಾವಣೆಯ ಗಾಳಿ ಬೀಸಲಾರಂಭಿಸಿದ್ದೇ ಈ ವರ್ಷ ಎನ್ನಬಹುದು. ಮತ್ತೊಂದು ಹೊಸ ಪೀಳಿಗೆ ಕನ್ನಡ ಚಿತ್ರಂಗದಲ್ಲಿ ನೆಲೆಯೂರಿದೆ. ಕಾಲನ ಪ್ರಕ್ರಿಯೆಯಲ್ಲಿ ತಾರಾವರ್ಚಸ್ಸು ನಿಧಾನವಾಗಿ ಮಾಯವಾಗಿ ಕಥೆ, ತಂತ್ರಜ್ಞಾನ, ಗ್ರಾಫಿಕ್ಸ್, ಸಂಗೀತ ಇವೆಲ್ಲಾ ಚಿತ್ರಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ.

ಕನ್ನಡದಲ್ಲಿ ಈ ಬೆಳವಣಿಗೆಯಾಗುವ ಮುನ್ನವೇ ನೆರೆ ರಾಜ್ಯದ ತಮಿಳು, ತೆಲುಗು ಚಿತ್ರರಂಗದಲ್ಲಿ ಅದಾಗಲೇ ಹೊಸ ಮುಖಗಳು ಚಿತ್ರರಂಗಕ್ಕೆ ಅವ್ಯಾಹತವಾಗಿ ಲಗ್ಗೆ ಇಟ್ಟಿದ್ದವು. ತಾಂತ್ರಿಕವಾಗಿ ಶ್ರೀಮಂತಿಕೆ ಮೆರೆಯುತ್ತಿದ್ದ ಚಿತ್ರಗಳು ಜನರಿಗೆ ಪ್ರಿಯವಾಗಿದ್ದವು. ದಕ್ಷಿಣ ಭಾರತದಾದ್ಯಂತ ಚಿತ್ರರಂಗದಲ್ಲಿ ಅದೇ ಹೊಸಗಾಳಿ ಬೀಸಲಾರಂಭಿಸಿದಾಗ ಕನ್ನಡ ಚಿತ್ರರಂಗವೂ ಅದಕ್ಕೆ ಮೈಯೊಡ್ಡಿತು. ಅದಕ್ಕೆ ಮುನ್ನವೇ ಉಪೇಂದ್ರ ಅವರಂತಹ ನಟ, ನಿರ್ದೇಶಕ, ಗುರುಕಿರಣ್, ಮನೋಹರ್ ಅವರಂತಹ ಸಂಗೀತ ನಿರ್ದೇಶಕರು ಕನ್ನಡ ಚಿತ್ರರಂಗದಲ್ಲಿ ಹೊಸತನದ ಸ್ಪರ್ಶ ನೀಡುತ್ತಿದ್ದರು. “ಓಂ”, “ಸ್ವಸ್ತಿಕ್”, “ಎ”, “ಉಪೇಂದ್ರ” ಮೊದಲಾದ ಚಿತ್ರಗಳು ಕನ್ನಡ ಚಿತ್ರರಂಗಕ್ಕೆ ಹೊಸ ದಿಕ್ಕನ್ನು ನೀಡಿತು. ಹೂವು ಚೆಲ್ಲಿದ ಹಾದಿಯಲ್ಲಿ ನಡೆಯುತ್ತಿದ್ದ ಚಿತ್ರರಂಗದಲ್ಲಿ ರಕ್ತದ ಓಕುಳಿಯಾಟ ಆರಂಭವಾಯಿತು. ಈ ಸಿನಿಮಾಗಳ ವಸ್ತುವಿನ ಬಗ್ಗೆ ಎಷ್ಟೇ ವಿವಾದವಿದ್ದರೂ ಹೊಸ ಪೀಳಿಗೆಯನ್ನು ಆಕರ್ಷಿಸಲು ಇದು ನೆರವಾಯಿತು ಎಂಬುದನ್ನು ಅಲ್ಲಗಳೆಯಲಾಗದು. ಈ ತುಡಿತ ಮತ್ತಷ್ಟು ಕೆನೆಗಟ್ಟಿದ್ದು 2000ರಲ್ಲಿ ಬಿಡುಗಡೆಯಾದ “ಪ್ರೀತ್ಸೆ” ಎಂಬ ಚಿತ್ರದಲ್ಲಿ ಶಿವರಾಜ್‌ಕುಮಾರ್ ಹಾಗೂ ಉಪೇಂದ್ರ ಇಬ್ಬರೂ ನಾಯಕರಾಗಿ ಅಭಿನಯಿಸಿದರು. ಚಿತ್ರ ಯಶಸ್ಸು, ಉಪೇಂದ್ರ ಅವರಿಗೆ ಜನಪ್ರಿಯತೆ ತಂದುಕೊಟ್ಟಿತು. ಹೊಸಬರ ಪ್ರವೇಶಕ್ಕೆ ಇದೇ ದಾರಿಯಾಯಿತು. ಅದುವರೆಗೆ ತಾಂಡವವಾಡುತ್ತಿದ್ದ ತಾರಾವರ್ಚಸ್ಸು ಇಳಿಮುಖವಾಯಿತು ಎಂಬುದು ಈ ಘಟ್ಟದ ಹೊಸ ಬೆಳವಣಿಗೆ.

ಚಿತ್ರರಂಗಕ್ಕೆ ಯುವ ನಟ–ನಟಿಯರೇ ಅಲ್ಲದೆ ನಿರ್ದೇಶಕರು, ಸಂಗೀತ ನಿರ್ದೇಶಕರು, ಯುವ ಸಾಹಿತಿಗಳ ಪ್ರವೇಶ ಈ ಹಂತದಲ್ಲಿ ಅವ್ಯಾಹತವಾಗಿ ನಡೆಯಿತು. “ದೇವೀರಿ” ಚಿತ್ರ ಮೂಲಕ ಕವಿತಾ ಲಂಕೇಶ್ ಯಶಸ್ವಿ ನಿರ್ದೇಶಕಿಯಾಗಿ ಮೂಡಿಬಂದರು. ಅನಂತರದ ವರ್ಷಗಳಲ್ಲಿ ಅವರು ನಿರ್ದೇಶಿಸಿದ “ಬಿಂಬ”, “ಪ್ರೀತಿ ಪ್ರೇಮ ಪ್ರಣಯ” ಚಿತ್ರಗಳೂ ಕೂಡ ಗಮನ ಸೆಳೆಯುವಂತೆಯೇ ಇದ್ದು, ಸದಭಿರುಚಿಯ ಚಿತ್ರ ನಿರ್ದೇಶಕಿಯಾಗಿದ್ದಾರೆ. ಇದೇ ವರ್ಷ “ಮುನ್ನುಡಿ” ಚಿತ್ರದ ಮೂಲಕ ಮತ್ತೊಬ್ಬ ಪ್ರತಿಭಾವಂತ ನಿರ್ದೇಶಕ ಪಿ. ಶೇಷಾದ್ರಿ ಅವರು ಚಲನಚಿತ್ರರಂಗ ಪ್ರವೇಶಿಸದರು. ಅತಿಥಿ, ಬೇರು, ಜಯಮಾಲಾ ಅವರ ತುತ್ತೂರಿ ಚಿತ್ರಗಳ ಮೂಲಕ ಅವರೂ ಗಮನ ಸೆಳೆದರು. ‘ಸ್ಪರ್ಶ’ ಚಿತ್ರದ ಮತ್ತೊಬ್ಬ ಯುವ ನಟ ಸುದೀಪ್, ರೇಖಾ ಬೆಳಕಿಗೆ ಬಂದರು. ಉತ್ತರಧ್ರುವದಿಂ. . ದಕ್ಷಿಣ ಧ್ರುವಕೂ . . ಚಿತ್ರ ಮೂಲಕ ಯೋಗೇಶ್ವರ್ ಬೆಳಕಿಗೆ ಬಂದರು.

ಕನ್ನಡ ಚಿತ್ರರಂಗದಲ್ಲಿ ಈ ರೀತಿಯ ಹೊಸ ಮುಖಗಳ ಅನಾವರಣಗೊಳಿಸುವ ಪರಂಪರೆ ಆರಂಭವಾದದ್ದು ನಾಗತಿಹಳ್ಳಿ ಚಂದ್ರಶೇಖರ್ ಅವರು ಹೊಸಮುಖಗಳನ್ನು ಹುಡುಕಿ ತೆಗೆದು, ನಿರ್ದೇಶಿಸಿದ “ನನ್ನ ಪ್ರೀತಿಯ ಹುಡುಗಿ” ಚಿತ್ರದಿಂದ ಎನ್ನಬಹುದು.

ಯುವಜೋಡಿಗಳ ಈ ಪ್ರೇಮಕತೆಯಲ್ಲಿ ನವನಟ ಧ್ಯಾನ್, ದೀಪಾಲಿ ಗಮನ ಸೆಳೆಯುವ ಅಭಿನಯದ ಮೂಲಕ ಚಿತ್ರದ ಯಶಸ್ವಿಗೆ ಕಾರಣರಾದರು. ಚಿತ್ರಕ್ಕೆ ಮೊದಲಬಾರಿಗೆ ಸಂಗೀತ ನೀಡಿದ ಮನೋಮೂರ್ತಿ ಕೂಡ ಜನಪ್ರಿಯ ಹಾಡುಗಳ ಮೂಲಕ ಚಿತ್ರದ ಯಶಸ್ವಿಗೆ ಕಾರಣರಾದರು. ಈ ಮಾರ್ಗ ಸೂಚಿಯನ್ನು ಅನುಸರಿಸಿ ಕನ್ನಡ ಚಿತ್ರರಂಗದಲ್ಲಿ ಪ್ರೇಮಕತೆಗಳ ಪೂರವೇ ಹರಿದು ಬಂತು. “ನಿನಗಾಗಿ”, “ಅಪ್ಪು” ಹಾಗೂ ತೆಲುಗಿನ “ಟ್ರೆಂಡ್ ಸೆಟ್ಟರ್” ಎನ್ನಲಾದ “ಚಿತ್ರಂ” ಚಿತ್ರದ ಅದೇ ಹೆಸರಿನ “ಚಿತ್ರ”(2002) ಚಿತ್ರಗಳು ಕನ್ನಡ ಚಿತ್ರರಂಗದ ಹೊಸ ಪ್ರವೃತ್ತಿ ಆದವು. “ನಿನಗಾಗಿ” ಮೂಲಕ ವಿಜಯ್‌ರಾಘವೇಂದ್ರ, “ಅಪ್ಪು” ಮೂಲಕ ಪುನೀತ್ ರಾಜ್‌ಕುಮಾರ್ ನವನಟರಾಗಿ ಮೂಡಿ ಬಂದರು. “ಚಿತ್ರ”ದಲ್ಲಿ ನಾಗೇಂದ್ರ ಪ್ರಸಾದ್, ರೇಖಾ ಗಮನ ಸೆಳೆದರು. ಅಪ್ಪು ನಂತರ ಪುನೀತ್ ಅಭಿನಯಿಸಿದ ಅಭಿ, ವೀರ ಕನ್ನಡಿಗ, ಮೌರ್ಯ, ಆಕಾಶ್, ನಮ್ಮ ಬಸವ ಎಲ್ಲ ಚಿತ್ರಗಳು ವ್ಯಾಪಾರಿ ದೃಷ್ಟಿಯಿಂದ ಯಶಸ್ವಿಯಾಗಿವೆ. ಇದೇ ಚಿತ್ರದಲ್ಲಿ ನಾಯಕಿಯಾಗಿ ಬೆಳಕಿಗೆ ಬಂದ ರಕ್ಷಿತಾ ಯಶಸ್ವಿ ನಾಯಕಿ ನಟಿ. 2002ರಲ್ಲೇ ಬೆಳ್ಳಿತೆರೆಗೆ ಪದಾರ್ಪಣ ಮಾಡಿದ ದರ್ಶನ್ ಕೂಡ ಜನಪ್ರಿಯ ನಟರಾಗಿದ್ದಾರೆ. ವಿಜಯ್ ರಾಘವೇಂದ್ರ ಹಾಗೂ ರಾಧಿಕಾ ಜೋಡಿ ಜನಪ್ರಿಯಗೊಂಡಿತು. ಇವರಿಬ್ಬರೂ ಸತತವಾಗಿ ಮೂರು ಚಿತ್ರಗಳಲ್ಲಿ ಅಭಿನಯಿಸಿದರು. “ನಿನಗಾಗಿ” ಮೂಲಕ ಆರಂಭವಾದ ಈ ಜೋಡಿ, ಒಂದೇ ವರ್ಷದಲ್ಲಿ ಪ್ರೇಮ ಖೈದಿ, ರೋಮಿಯೋ ಜ್ಯೂಲಿಯೆಟ್ ಚಿತ್ರಗಳಲ್ಲೂ ನಾಯಕ–ನಾಯಕಿಯಾದರು. ಒಂದೇ ವರ್ಷ ಐದು ಚಿತ್ರಗಳಲ್ಲಿ ಅಭಿನಯಿಸುವ ಮೂಲಕ ರಾಧಿಕಾ ಜನಪ್ರಿಯ ನಟಿಯಾದರು. ಪುನೀತ್ ರಾಜ್‌ಕುಮಾರ್ ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಅವರ ಪುತ್ರ. ರಾಜ್‌ಕುಮಾರ್ ಚಿತ್ರರಂಗದ ಬೆಳವಣಿಗೆಯ ಉದ್ದಕ್ಕೂ ತಮ್ಮ ಛಾಪು ಮೂಡಿಸಿಕೊಂಡೇ ಬಂದಿದ್ದಾರೆ. ರಾಜ್‌ಕುಮಾರ್ ಅವರ ಮೂವರು ಪುತ್ರರೂ ಚಿತ್ರರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶಿವರಾಜ್‌ಕುಮಾರ್ ಅವರಂತೂ ಈಗ ಜನಪ್ರಿಯ ನಟ. ಯುವ ಪೀಳಿಗೆಯ ನಾಯಕರಾಗಿ ಪುನೀತ್ ಜನಪ್ರಿಯರಾಗಿದ್ದಾರೆ. ಬೆಟ್ಟದ ಜೀವ, ಭಕ್ತ ಪ್ರಹ್ಲಾದ, ಎರಡು ನಕ್ಷತ್ರಗಳು, ಭಾಗ್ಯವಂತರು ಮೊದಲಾದ ಚಿತ್ರಗಳಲ್ಲಿ ಬಾಲನಟನಾಗಿಯೂ ಅಭಿನಯಿಸಿರುವ ಪುನೀತ್, ಅತ್ಯುತ್ತಮ ಬಾಲನಟನೆಂದು ರಾಷ್ಟ್ರೀಯ ಪ್ರಶಸ್ತಿ ಕೂಡ ಪಡೆದಿದ್ದಾರೆ.

ಪುನೀತ್ ಅವರಂತೆಯೇ ಬಾಲನಟನಾಗಿದ್ದ ನಂತರದ ದಿನಗಳಲ್ಲಿ ನಾಯಕನಾಗಿ ಮಿಂಚಿದ ಪ್ರತಿಭೆ ವಿಜಯ್‌ರಾಘವೇಂದ್ರ. “ಚಿನ್ನಾರಿ ಮುತ್ತು”, “ಕೊಟ್ರೇಶಿ ಕನಸು”, ಚಿತ್ರಗಳ ಅಭಿನಯಕ್ಕಾಗಿ ಅತ್ಯುತ್ತಮ ಬಾಲನಟ ಪ್ರಶಸ್ತಿಯನ್ನೂ ಪಡೆದಿರುವ ವಿಜಯ್‌ರಾಘವೇಂದ್ರ, “ಶ್ರೀ” ಚಿತ್ರದವರೆಗೆ ಯಶಸ್ಸಿನ ನಡೆಯಲ್ಲೇ ಇದ್ದಾರೆ.

ಪುನೀತ್ ರಾಜ್‌ಕುಮಾರ್ ಹಾಗೂ ವಿಜಯ್‌ರಾಘವೇಂದ್ರ ಅವರು ಪ್ರೇಮಕಥಾನಕಗಳ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರೆ, ಪೋಷಕನಟರಾಗಿದ್ದ ತೂಗುದೀಪ ಶ್ರೀನಿವಾಸ್ ಅವರ ಪುತ್ರ ದರ್ಶನ್ ಅವರು ಆ್ಯಕ್ಷನ್ ಚಿತ್ರಗಳ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು. ಪಿ. ಎನ್. ಸತ್ಯ ಅವರು ನಿರ್ದೇಶಿಸಿದ “ಮೆಜೆಸ್ಟಿಕ್” ಚಿತ್ರ ಅಪಾರ ಯಶಸ್ಸಾದದ್ದು, ಬದಲಾದ ಪ್ರೇಕ್ಷಕರ ಅಭಿರುಚಿಗೆ ಸಾಕ್ಷಿಯಾಗಿತ್ತು. ಒಂದೇ ವರ್ಷದಲ್ಲಿ ದರ್ಶನ್ ನಾಲ್ಕು ಚಿತ್ರಗಳಲ್ಲಿ ನಾಯಕರಾದದ್ದು ಅವರನ್ನು ಖಾಯಂ ನಾಯಕ ಸ್ಥಾನಕ್ಕೆ ದೂಡಿತು. “ಧ್ರುವ”(2002) ಚಿತ್ರದ ಮೂಲಕ ಮತ್ತಷ್ಟು ಗಟ್ಟಿಯಾಗಿ, ನಿನಗೋಸ್ಕರ, ನನ್ನ ಪ್ರೀತಿಯ ರಾಮು, ಕಿಟ್ಟಿ, ಕರಿಯ, ಲಂಕೇಶ್ ಪತ್ರಿಕೆ, ಲಾಲಿಹಾಡು, ಸುಂಟರಗಾಳಿ, ಅಯ್ಯ, ಶಾಸ್ತ್ರಿ ಮೊದಲಾದ ಚಿತ್ರಗಳ ಮೂಲಕ ‘ಆ್ಯಕ್ಷನ್ ಹೀರೋ’ ಆದರು.

ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ “ಸ್ಪರ್ಶ” ಚಿತ್ರದ ಮೂಲಕ ಬೆಳಕಿಗೆ ಬಂದ ಸುದೀಪ್, “ಹುಚ್ಚ” ಚಿತ್ರದ ಭಾರೀ ಯಶಸ್ಸಿನ ಮೂಲಕ ಕನ್ನಡದ ಹೊಸ ಯುವ ನಟರಾಗಿ ನೆಲೆ ನಿಂತರು. ನಂತರದ ದಿನಗಳಲ್ಲಿ ವಾಲಿ, ಚಂದು, ಧಮ್, ನಮ್ಮಣ್ಣ, ಸ್ವಾತಿಮುತ್ತು, ಮೈ ಆಟೋಗ್ರಾಫ್ ಚಿತ್ರಗಳ ಮೂಲಕ ಪ್ರತಿಭಾವಂತ ನಟರಾಗಿ ಗಮನ ಸೆಳೆಯುತ್ತಿದ್ದಾರೆ.

ನಾಟಯಕನಟರಾಗಿ ತೆರೆಗೆ ಬಂದು ಅದೃಷ್ಟ ಪರೀಕ್ಷಿಸುತ್ತಿರುವವರ ಸಂಖ್ಯೆ ಅಪಾರವಾಗಿದೆ. ಸೌರವ್ (ಬೂತಯ್ಯನ ಮಕ್ಕಳು), ರೇಖಾ, ಅನಿರುದ್ಧ (ಚಿತ್ರ), ಛಾಯಾಸಿಂಗ್(ಚಿಟ್ಟೆ), ನವೀನ್ ಮಯೂರ್ (ನಿನಗೋಸ್ಕರ), ಸಂದೀಪ್ (ಕಾರ್ಮುಗಿಲು, ರಮ್ಯಚೈತ್ರಕಾಲ), ವಿನೋದ್‌ಪ್ರಭಾಕರ್ (ದಿಲ್), ಶಿವಧ್ವಜ್(ನೀಲಾ), ಅಜಯ್, ಸುನಿಲ್‌ರಾವ್(ಎಕ್ಸ್‌ಕ್ಯೂಸ್‌ಮಿ), ಆದಿತ್ಯ (ಲವ್, ಆದಿ, ಡೆಡ್ಲಿ ಸೋಮ), ಬಾಲಾಜಿ (ತುಂಟಾಟ), ಮಯೂರ್‌ಪಟೇಲ್(ಗುನ್ನ, ಲವ್‌ಸ್ಟೋರಿ) ವಿಶಾಲ್‌ಹೆಗಡೆ, ಹರೀಶ್ ಪ್ರೇಮ್ (ನೆನಪಿರಲಿ), ದೀಪಕ್ (ಶಿಷ್ಯ) ಮೊದಲಾದವರು ನಾಯಕರಾಗಿ ಅದೃಷ್ಟ ಪರೀಕ್ಷೆ ಮಾಡುತ್ತಿದ್ದಾರೆ. “ಚಂದ್ರ ಚಕೋರಿ” ಚಿತ್ರದ ಮೂಲಕ ತೆರೆಗೆ ಬಂದ ಮುರಳಿ ಮತ್ತೊಬ್ಬ ಆ್ಯಕ್ಷನ್ ಹೀರೋ. ಶಂಭು, ಯಶವಂತ್, ಸಿದ್ದು, ಗೋಪಿ ಚಿತ್ರಗಳ ಮೂಲಕ ಅವರು ಭರವಸೆಯ ನಟರೆನಿಸಿದ್ದಾರೆ.

ನಿರ್ದೇಶಕರಾಗಿದ್ದ ಎಸ್. ನಾರಾಯಣ್, ಶಿವಮಣಿ, ಓಂಪ್ರಕಾಶ್‌ರಾವ್ ನಾಯಕರಾದರು. “ತುಂಟಾಟ” ಚಿತ್ರದ ಮೂಲಕ ಇಂದ್ರಜಿತ್ ನಿರ್ದೇಶಕರಾಗಿ ಸಿನಿಮಾ ರಂಗ ಪ್ರವೇಶಿಸಿದರು. ಅವರು ನಿರ್ದೇಶಿಸಿದ “ಮೊನಾಲಿಸಾ” ಕೂಡಾ ಯುವ ಪೀಳಿಗೆಯ ಸಿನಿಮಾವಾಗಿಯೇ ಗುರುತಿಸಲ್ಪಟ್ಟಿದೆ.

“ಕರಿಯ” ಚಿತ್ರ ಮೂಲಕ ಗಮನ ಸೆಳೆಯುವ ನಿರ್ದೇಶಕರಾಗಿ ಕಾಣಿಸಿಕೊಂಡ ಪ್ರೇಮ್, ಅವರ ಪ್ರತಿಭೆ ಮುಂದೆ “ಎಕ್ಸ್‌ಕ್ಯೂಸ್‌ಮಿ” ಚಿತ್ರದಲ್ಲಿ ಮತ್ತಷ್ಟು ಬೆಳೆಯಿತು. “ಜೋಗಿ”(2005) ಚಿತ್ರದ ಮೂಲಕ ಅವರೊಬ್ಬ ಪ್ರತಿಭಾವಂತ ನಿರ್ದೇಶಕರಾಗಿಯೇ ಕಾಣಿಸಿಕೊಂಡರು. “ಖುಷಿ”ಯ ಮೂಲಕ ಗಮನಾರ್ಹ ಸಾಧನೆ ಮಾಡಿದ ಪ್ರಕಾಶ್ ಅವರ “ರಿಷಿ” ಕೂಡಾ ಪ್ರತಿಭಾವಂತ ನಿರ್ದೇಶನ ಕಾಣಿಕೆಯಾಗಿದೆ. “ಉಲ್ಟಾಪಲ್ಟಾ”, “ರಾಂಗ್‌ನಂಬರ್” ಚಿತ್ರಗಳ ಮೂಲಕ ಎನ್.ಎಸ್. ಶಂಕರ್ ಗಮನ ಸೆಳೆಯುವ ನಿರ್ದೇಶಕರಾಗಿದ್ದಾರೆ. “ನಲ್ಲ” ಚಿತ್ರದ ಮೂಲಕ ಚಿತ್ರ ಸಾಹಿತಿ ನಾಗೇಂದ್ರಪ್ರಸಾದ್ ಅವರು ನಿರ್ದೇಶಕರಾದರು. ಶಂಭು ಚಿತ್ರದ ನಿರ್ದೇಶಕರಾಗಿ ದ್ವಾರಕಿ ಗಮನ ಸೆಳೆವ ನಿರ್ದೇಶಕ. ಓಕೆ ಸಾರ್ ಓಕೆ ಮೂಲಕ ನಿರ್ದೇಶಕರಾದ ದಯಾಳ್ ಯಶವಂತ್, ಬಾ ಬಾರೋ ರಸಿಕ, ಮಸಾಲ ಚಿತ್ರಗಳ ಮೂಲಕ ಗಮನ ಸೆಳೆದರು. ಕನ್ನಡ ಚಿತ್ರರಂಗ ಇಂದು ಹೊಸ ಪ್ರತಿಭೆಗಳನ್ನೇ ನಂಬಿಕೊಂಡಿದೆ. ಗುರುಕಿರಣ್ ಅವರು ಯಶಸ್ವಿ ಸಂಗೀತ ನಿರ್ದೇಶಕರಾಗಿದ್ದಾರೆ. ರಾಜೇಶ್ ರಾಮನಾಥನ್, ಕೋಕಿಲ ಸಾಧು, ಕೃಪಾಕರ್ ಅವರೂ ಕೂಡ ಸಂಗೀತ ನಿರ್ದೇಶಕರಾಗಿ ಹೆಸರಾಗಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಒಂದು ಕಾಲದಲ್ಲಿ ಬಿ. ಜಯಮ್ಮ, ಜಯಂತಿ, ಬಿ. ಸರೋಜಾದೇವಿ, ಭಾರತಿ, ಲೀಲಾವತಿ ಅವರೆಲ್ಲಾ ಅಚ್ಚ ಕನ್ನಡತಿಯರಾಗಿ ಮೆರೆದವರು. ಪಂಚಭಾಷಾ ತಾರೆಯರಾಗಿಯೂ ಇವರ ಖ್ಯಾತಿ ವಿಸ್ತರಿಸಿದೆ. ಇತರ ಭಾಷಾ ಚಿತ್ರಗಳಿಗೆ ನಟಿಯರು ಬೇಕಾದಾಗಲೆಲ್ಲಾ ಕನ್ನಡ ಚಿತ್ರರಂಗದತ್ತ ಎಲ್ಲರೂ ನೋಡುತ್ತಿದ್ದ ದಿನಗಳು ಅವು. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗಕ್ಕೆ ಪರಭಾಷಾ ತಾರೆಯರೇ ಆಕ್ರಮಿಸಿಕೊಂಡಿದ್ದಾರೆ. ಹಿಂದಿ ತಮಿಳು, ತೆಲುಗು ಭಾಷಾ ನಟಿಯರು ಆಮದಾಗುತ್ತಿದ್ದಾರೆ. ಆದರೂ ಕನ್ನಡದ ಪ್ರತಿಭೆಗಳು ಸ್ಪರ್ಧೆಯಲ್ಲಿ ಎದ್ದು ಬರುತ್ತಿವೆ. ಅಂತಹ ಕನ್ನಡದ ಪ್ರತಿಭೆಗಳ ಪೈಕಿ ಅನುಪ್ರಭಾಕರ್, ಭಾವನಾ, ಪ್ರೇಮ, ರಾಧಿಕಾ, ಶೃತಿ, ಸುಧಾರಾಣಿ, ತಾರಾ, ರಕ್ಷಿತಾ, ರಮ್ಯ ಗಟ್ಟಿಯಾಗಿ ಕನ್ನಡದ ಚಿತ್ರರಂಗದಲ್ಲಿ ಉಳಿದರು. ಹೊರನಾಡಿನಿಂದ ಬಂದ ತಾರೆಯರ ನಡುವೆಯೂ ರಮ್ಯ, ರಕ್ಷಿತಾ ಕನ್ನಡ ಚಿತ್ರರಂಗದಲ್ಲಿ ಮುಂಚೂಣಿಯಲ್ಲಿ ಮಿಂಚುತ್ತಿದ್ದಾರೆ. ಜಯಮಲಾ, ಆರತಿ, ತಾರಾ ಅವರು ನಿರ್ಮಾಪಕಿಯರಾಗಿಯೂ ಹೆಸರು ಗಳಿಸಿದ್ದಾರೆ. ತಾರಾ ಅವರು ನಿರ್ಮಿಸಿದ “ಹಸೀನಾ” ದ ಅಭಿನಯಕ್ಕಾಗಿ ಅವರು ರಾಷ್ಟ್ರೀಯ ಮಟ್ಟದ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದರು. ಆದರೂ ನಾಯಕಿಯರಾಗಲು ಇನ್ನೂ ಹಲವು ನಟಿಯರು ಶ್ರಮಿಸುತ್ತಲೇ ಇದ್ದಾರೆ. ಚೈತ್ರಾ ಹಳ್ಳಿಕೇರಿ, ದಾಮಿನಿ, ಆಶಿತಾ, ಡೈಸಿಬೋಪಣ್ಣ, ಅಶ್ವಿನಿ, ರಶ್ಮಿ ಕುಲಕರ್ಣಿ, ಶಿಲ್ಪಾ, ನೀತೂ ಹಲವಾರು ಚಿತ್ರಗಳಲ್ಲಿ ಅಭಿನಯಿಸಿಯೂ ಯಶಸ್ಸಿಗಾಗಿ ಶ್ರಮಿಸುತ್ತಿದ್ದಾರೆ.

ವಾಣಿಜ್ಯಾತ್ಮಕ ಚಿತ್ರಗಳ ಭರಾಟೆಯ ನಡುವೆಯೂ ಹೊಸ ಅಲೆಯ ಚಿತ್ರಗಳು ಕನ್ನಡ ಚಿತ್ರರಂಗದ ಅಸ್ತಿತ್ವವನ್ನು ರಾಷ್ಟ್ರಮಟ್ಟದಲ್ಲಿ ಉಳಿಸಿವೆ. ಗಿರೀಶ್‌ಕಾಸರವಳ್ಳಿ, ಶೇಷಾದ್ರಿ, ನಾಗಾಭರಣ, ರಾಮದಾಸ್‌ನಾಯ್ಡು, ಬರಗೂರು ರಾಮಚಂದ್ರಪ್ಪ ಮೊದಲಾದವರು ಕಲಾತ್ಮಕ ಚಿತ್ರಗಳನ್ನು ತಯಾರಿಸುವ ಮೂಲಕ ಕನ್ನಡ ಚಿತ್ರರಂಗದ ಸಿನಿಮಾ ತುಡಿತವನ್ನು ಹಂಚಿಕೊಳ್ಳುತ್ತಿದ್ದಾರೆ. ಗಿರೀಶ್ ಕಾಸರವಳ್ಳಿ ಅವರ ದ್ವೀಪ, ಹಸೀನಾ ಚಿತ್ರಗಳು ರಾಷ್ಟ್ರಮಟ್ಟದಲ್ಲಿ ಕಲಾತ್ಮಕ ಚಿತ್ರಗಳ ನಿರ್ಮಾಣದಲ್ಲಿ ಕನ್ನಡ ಚಿತ್ರಗಳು ಹಿಂದೆ ಬಿದ್ದಿಲ್ಲ ಎಂಬುದನ್ನು ಎತ್ತಿ ಹಿಡಿಯುತ್ತಿವೆ. ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿದ “ಶಾಂತಿ” ಏಕಪಾತ್ರದ ಕಥಾ ಚಿತ್ರವಾಗಿ ಭಯೋತ್ಪಾದನೆಯ ವಿರುದ್ಧ ಎತ್ತಿದ ದನಿಯಾಗಿ ಗಮನ ಸೆಳೆಯಿತು. ಈ ರೀತಿಯ ಪ್ರಯತ್ನ ಕನ್ನಡದ ಮಟ್ಟಿಗೆ ಹೊಸದು. ಈ ಚಿತ್ರ ಗಿನ್ನೆಸ್ ದಾಖಲೆಯನ್ನೂ ಪ್ರವೇಶಿಸಿದೆ. ಹೊಸಗಾಳಿ, ಪರಿವರ್ತನೆಯ ಗಾಳಿ ಚಿತ್ರರಂಗದಲ್ಲಿ ಗಮನಾರ್ಹ ಸಾಧನೆಯತ್ತ ಹೆಜ್ಜೆಯನ್ನಿಟ್ಟಿದೆ.

(ಜಿ.ಎಮ್)

**ಕನ್ನಡ ಚಿತ್ರರಂಗದಲ್ಲಿ ಸಂಗೀತ, ಗೀತೆ ಮತ್ತು ಗಾಯನ :** ಚಲನಚಿತ್ರಗಳಲ್ಲಿ, ಚಿತ್ರಗಳಿಗೆ ಧ್ವನಿ ಅಳವಡಿಸುವುದಕ್ಕೆ ಮುಂಚೆಯಿಂದಲೂ, ಅಂದರೆ ಮೂಕ ಚಿತ್ರಗಳ ಕಾಲದಿಂದಲೂ ಸಂಗೀತ ವನ್ನು, ಪಾಶ್ಚಾತ್ಯ ದೇಶಗಳಲ್ಲಿ ಚಿತ್ರ ಪ್ರದರ್ಶನವಾಗುತ್ತಿರುವಾಗಲೇ, ಚಿತ್ರ ಮಂದಿರದಲ್ಲಿ ವಾದ್ಯಗಳನ್ನು ನುಡಿಸುವುದರ ಮೂಲಕ ಹಿನ್ನೆಲೆ ಸಂಗೀತವನ್ನು ಒದಗಿಸುತ್ತಿದ್ದರು. ಅಂದ ಮೇಲೆ, ಮೊದಲಿನಿಂದಲೂ ಸಂಗೀತ ಸಿನಿಮಾದ ಅವಿಭಾಜ್ಯ ಅಂಗವಾಗಿ ಹೋಗಿದೆ. ಚಲನಚಿತ್ರಕ್ಕೆ ಧ್ವನಿ ಮತ್ತು ಮಾತು ಬಂದ ಮೇಲೆ, ನಮ್ಮ ಅಂದಿನ ನಾಟಕಗಳಲ್ಲಿ ಜನಪ್ರಿಯವಾಗಿದ್ದ ವಾದ್ಯಗಳು, ಗಾಯಕರು, ಅವುಗಳೇ ನಮ್ಮ ಚಿತ್ರಗಳಲ್ಲೂ ಮರುಕಳಿಸಲು ಪ್ರಾರಂಭವಾಯಿತು. ಚಿತ್ರ ಸಂಗೀತವೆಂದರೆ ಲೋಕಸಮ್ಮತವಾಗಿ ವಾಡಿಕೆಯಲ್ಲಿರುವುದು ಹಿನ್ನೆಲೆ ಸಂಗೀತ. ಆದರೆ ನಮ್ಮಲ್ಲಿ ಹೆಚ್ಚು ಮಂದಿಗೆ ಚಿತ್ರ ಸಂಗೀತವೆಂದರೆ ಚಿತ್ರಗಳಲ್ಲಿ

ಬರುವ ಹಾಡುಗಳು. ಹಾಡುಗಳಿಲ್ಲದೆ ಚಿತ್ರ ನಿರ್ಮಾಣವಾಗುವುದೇ ಇಲ್ಲ. ಅದರೆ ಸಾಮನ್ಯವಾಗಿ ಪಾಶ್ಚಾತ್ಯ ದೇಶಗಳಲ್ಲಿ ಚಿತ್ರದ ಕಥೆಯಲ್ಲಿ ಹಾಡಿನ ಅವಶ್ಯಕತೆ ಇದ್ದರೆ ಮಾತ್ರ ಹಾಡುಗಳನ್ನು ಬಳಸಲಾಗುತ್ತದೆ. ಇಲ್ಲವಾದರೆ ಅದು ಇಲ್ಲ. ಭಾರತದಲ್ಲಿ ಎಲ್ಲ ಭಾಷೆಗಳ ಚಿತ್ರಗಳಲ್ಲಿ, ಯಾವ ದೃಶ್ಯದಲ್ಲಿಯಾಗಲಿ, ಯಾವ ಪಾತ್ರವೇ ಆಗಿರಲಿ ನಾವು ಹಾಡುಗಳನ್ನು ನಿರೀಕ್ಷಿಸಬಹುದು. ಇದನ್ನು ಸಾಮಾನ್ಯವಾಗಿ ನಮ್ಮ ಚಿತ್ರಪ್ರೇಮಿಗಳು ಒಪ್ಪಿಕೊಂಡಿರುವ ಅಂಶ. ನಮ್ಮ ಕನ್ನಡ ಚಿತ್ರಗಳಲ್ಲಿಯೂ ಹಾಗೆಯೇ, ನಾವೇನೂ ಅದಕ್ಕೆ ಹೊರತೇನಲ್ಲ.

ಕನ್ನಡದಲ್ಲಿ ವಾಕ್ಚಿತ್ರಗಳು ಬಂದ ಪ್ರಾರಂಭದ ದಿನಗಳಲ್ಲಿ, ಅಂದರೆ 1930ರ ದಶಕದಲ್ಲಿ, ಕಲಾವಿದರು ಸ್ವತಃ ತಾವೇ ಹಾಡಿಕೊಂಡು ಅಭಿನಯಿಸಬೇಕಿತ್ತು ಮತ್ತು ಅವರ ಜೊತೆಯಲ್ಲಿ ಪಕ್ಕವಾದ್ಯದವರು ತಮ್ಮ ವಾದ್ಯಗಳನ್ನು ಸ್ವಲ್ಪ ದೂರದಲ್ಲಿ ನುಡಿಸಿಕೊಂಡು ಅವರನ್ನು ಹಿಂಬಾಲಿಸಬೇಕಿತ್ತು. ಇವರುಗಳನ್ನು ಹಿಂಬಾಲಿಸಿ ಮೈಕ್ ಹಿಡಿದುಕೊಂಡು, ತಂತ್ರಜ್ಞರು ಧ್ವನಿಯನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದ್ದರು. ಮೊಟ್ಟ ಮೊದಲ ಚಿತ್ರ ಸತಿಸುಲೋಚನ (1934)ಗೆ ಆರ್. ನಾಗೇಂದ್ರ ರಾಯರು ಸಂಗೀತ ನಿರ್ದೇಶನ ಮಾಡಿದರು. ಅನಂತರದಲ್ಲಿ ಬಂದ ಚಿತ್ರಗಳಿಗೆ ಎಚ್ ಕೆ. ಶೇಷಗಿರಿ ರಾಯರು (ಭಕ್ತ ಧ್ರುವ–1934), ವೆಂಕಟರಾಮಯ್ಯ ನವರು (ಸದಾರಮೆ–1935), ಎಂ. ನಾಗರಾಜ್ (ಸಂಸಾರ ನೌಕ–1936), ಪದ್ಮನಾಭ ಶಾಸ್ತ್ರೀಗಳು (ಸುಭದ್ರಾ–1941), ಮತ್ತು ಮತ್ತಿತರ ಚಿತ್ರಗಳಲ್ಲಿ, ಬಿ.ದೇವೇಂದ್ರಪ್ಪನವರು, ಮಲ್ಲಿಕಾರ್ಜುನ ಮನ್ಸೂರ್‌ರವರು, ಪಿ.ಕಾಳಿಂಗರಾವ್‌ರವರು ಹೀಗೆ ಅನೇಕ ವಿದ್ವಾಂಸರುಗಳು ಕಾರ್ಯ ನಿರ್ವಹಿಸಿದರು. ಗೀತರಚನೆಯನ್ನು, ಬೆಳ್ಳಾವೆ ನರಹರಿ ಶಾಸ್ತ್ರಿಗಳು, ಗಮಕಿ ರಾಮಕೃಷ್ಣ ಶಾಸ್ತ್ರಿಗಳು, ಬಿ. ಪುಟ್ಟಸ್ವಾಮಯ್ಯ ನವರು, ಕು.ರಾ.ಸೀತಾರಾಮಶಾಸ್ತ್ರಿಗಳು, ಮತ್ತು ರಂಗಭೂಮಿಯಲ್ಲಿ ನುರಿತ ಅನೇಕರು ರಚಿಸುತ್ತಿದ್ದರು. ಗಾಯನದಲ್ಲಿ ಕೂಡ, ರಂಗಭೂಮಿಯ ಕಲಾವಿದರುಗಳಾದ ಪಾತ್ರಧಾರಿಗಳು, ಮಳವಳ್ಳಿ ಸುಂದರಮ್ಮ, ಬಳ್ಳಾರಿ ಅಶ್ವತ್ತಮ್ಮ ನವರು, ಬಿ.ಎಸ್ ರಾಜಯ್ಯಂಗಾರ್‌ರವರು, ಆರ್.ನಾಗೇಂದ್ರರಾಯರು, ಬಸವರಾಜ್ ಮನ್ಸೂರ್, ಪಿ.ಕಾಳಿಂಗರಾಯರು, ಎಂ.ವಿ.ರಾಜಮ್ಮ, ಹೊನ್ನಪ್ಪ ಭಾಗವತರು, ನೀಲಮ್ಮ ಕಡಾಂಬಿ, ಬಿ.ಜಯಮ್ಮ, ಮೋಹನ್ ಕುಮಾರಿ, ಅಮೀರಬಾಯಿ ಕರ್ನಾಟಕಿ ಹೀಗೆ ಅನೇಕ ಕಲಾವಿದರುಗಳು ಹಾಡುತ್ತಿದ್ದರು.

ಅನೇಕ ದಾಖಲೆಗಳ ಪ್ರಕಾರ ಕನ್ನಡದಲ್ಲಿ ಮೊದಲ ಬಾರಿಗೆ ಆರ್ಕೆಸ್ಟ್ರಾ ದೊಂದಿಗೆ ಸಂಗೀತ ನೀಡಿ, ಹಾಡುಗಳನ್ನು ರಚಿಸಿ, ಚಿತ್ರಗಳಲ್ಲಿ ಅಳವಡಿಸಿದವರು ಪಿ. ಕಾಳಿಂಗರಾಯರು. ಜಗನ್ಮೋಹಿನಿ ಚಿತ್ರ ಕನ್ನಡದಲ್ಲಿ ಒಂದು ಯಶಸ್ವಿ ಚಿತ್ರ, ಅದರಲ್ಲಿನ ಸಂಗೀತ ಮತ್ತು ಗೀತೆಗಳೂ ಅದರ ಯಶಸ್ಸಿಗೆ ಕಾರಣವಾದವು. ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ ವ್ಯಕ್ತಿ ಪಿ.ಶಾಮಣ್ಣನವರು, ಸು. ಮೂವತ್ತಕ್ಕೂ ಹೆಚ್ಚು ಕನ್ನಡ ಚಿತ್ರಗಳಿಗೆ ಸಂಗೀತ ನೀಡಿ, ಮುಂದಿನ ಪೀಳಿಗೆಗೆ ಅನೇಕ ಪ್ರತಿಭಾವಂತರನ್ನೂ ತಯಾರುಮಾಡಿದ ಖ್ಯಾತಿಯನ್ನೂ ಸಂಪಾದಿಸಿದರು. 1950 ದಶಕದಲ್ಲಿ ಕನ್ನಡ ಚಲನಚಿತ್ರ ರಂಗದಲ್ಲಿ ಸಂಗೀತ ನಿರ್ದೇಶಕರಾಗಿ ಪ್ರವೇಶಿಸಿದ, ವಿಜಯ ಭಾಸ್ಕರ್, ರಾಜನ್–ನಾಗೇಂದ್ರ, ಜಿ.ಕೆ.ವೆಂಕಟೇಶ್, ಟಿ.ಜಿ.ಲಿಂಗಪ್ಪ ಇವರುಗಳು ಸು. ವರ್ಷಗಳು ಅತ್ಯಂತ ಪ್ರತಿಭಾವಂತರಾಗಿ ಸೇವೆ ಸಲ್ಲಿಸಿದರು. ವಿಜಯ ಭಾಸ್ಕರ್ ರವರು ಸು. 500 ಕ್ಕೂ ಹೆಚ್ಚು ವಿವಿಧ ಭಾಷಾಚಿತ್ರಗಳಿಗೆ ಸಂಗೀತವನ್ನಿತ್ತು, ಸಹಸ್ರಾರು ಕನ್ನಡ ಗೀತೆಗಳನ್ನು ಸಂಯೋಜಿಸಿ, ಅನೇಕ ಬಾರಿ ಪ್ರಶಸ್ತಿಗಳ ಸುರಿಮಳೆಯನ್ನೇ ಅನುಭವಿಸಿದ ವ್ಯಕ್ತಿಯಾದರು. ಬೆಳ್ಳಿಮೋಡ, ಯಾವ ಜನ್ಮದ ಮೈತ್ರಿ, ನಾಂದಿ, ಸಂಕಲ್ಪ, ಗೆಜ್ಜೆ ಪೂಜೆ, ಶರಪಂಜರ, ಶುಭಮಂಗಳ, ನಾಗರಹಾವು, ಅಮೃತ ಘಳಿಗೆ, ಮುಂತಾದ ಅನೇಕ ಚಿತ್ರಗಳಲ್ಲಿನ ಸುಮಧುರ ಹಾಡುಗಳು ಇಂದಿಗೂ ಜನರ ಮನದಲ್ಲಿ ಹಸಿರಾಗಿ ಉಳಿದಿವೆ.

ರಾಜನ್–ನಾಗೇಂದ್ರ ಅವರ ಜೋಡಿ, 1953ರಲ್ಲಿ ಸೌಭಾಗ್ಯಲಕ್ಷ್ಮಿ ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟು, ರಾಜಲಕ್ಷ್ಮಿ, ಕನ್ಯಾದಾನ, ಮುತ್ತೈದೆ ಭಾಗ್ಯ, ಮಹಾತ್ಯಾಗ, ಅಪರಾಜಿತ, ಪಾತಾಳಮೋಹಿನಿ, ವೀರ ಸಂಕಲ್ಪ, ಮಂತ್ರಾಲಯ ಮಹಾತ್ಮೆ, ಇನ್ನೂ ಮುಂತಾದ ಅನೇಕ ಚಿತ್ರಗಳಲ್ಲಿ ಜನಪ್ರಿಯ ಹಾಡುಗಳನ್ನು ಸಂಯೋಜಿಸಿ, ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮೊದಲ ತೇದಿ (1955) ಚಿತ್ರದಲ್ಲಿ ಮೊದಲ ಬಾರಿಗೆ ಸಂಗೀತ ನೀಡಿದ ಟಿ.ಜಿ. ಲಿಂಗಪ್ಪನವರು, ರತ್ನಗಿರಿರಹಸ್ಯ, ಸ್ಕೂಲ್ ಮಾಸ್ಟರ್, ಸತಿ ಶಕ್ತಿ, ಶ್ರೀಕೃಷ್ಣ ದೇವರಾಯ, ಕಿತ್ತೂರು ಚೆನ್ನಮ್ಮ, ಚಕ್ರತೀರ್ಥ ಮುಂತಾದ ಅನೇಕ ಚಿತ್ರಗಳಿಗೆ ಸಂಗೀತ ನೀಡಿ ಹೆಸರು ಮಾಡಿದ್ದಾರೆ. ಇದೇ ಸಮಯದಲ್ಲಿ ಜಿ.ಕೆ. ವೆಂಕಟೇಶ್ ರವರು ಕೂಡ ತಮ್ಮ ಅಮೂಲ್ಯ ಸೇವೆಯನ್ನು ಕನ್ನಡಚಿತ್ರಗಳಲ್ಲಿ ಪ್ರಾರಂಭಿಸಿ, ಗೌರಿ, ಸಂಧ್ಯಾರಾಗ, ಭೂದಾನ, ಸನಾದಿ ಅಪ್ಪಣ್ಣ, ಮುಂತಾದ ಅನೇಕ ಚಿತ್ರಗಳಲ್ಲಿ ಸಂಗೀತ ಇತ್ತು ಜನರ ಮೆಚ್ಚುಗೆಗಳಿಸಿದ ವ್ಯಕ್ತಿ. ಇದೇ ಜಾಡಿನಲ್ಲಿ ಬೆಳಕಿಗೆ ಬಂದ ಎಂ. ರಂಗರಾವ್ ರವರು, ನಕ್ಕರೆ ಅದೇ ಸ್ವರ್ಗ, ಹಣ್ಣೆಲೆ ಚಿಗುರಿದಾಗ, ಕರುಳಿನ ಕರೆ, ಸಾಕ್ಷಾತ್ಕಾರ, ಎಡಕಲ್ಲು ಗುಡ್ಡದಮೇಲೆ ಮುಂತಾದ ಅನೇಕ ಚಿತ್ರಗಳಿಗೆ ಸಂಗೀತ ಒದಗಿಸಿ, ಪ್ರಶಸ್ತಿಗಳಿಸಿದ್ದಾರೆ.

ಅನಂತರದ ದಿನಗಳಲ್ಲಿ, ಹಲವಾರು ಚಿತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ ಸಂಗೀತ ನಿರ್ದೇಶಕರುಗಳೆಂದರೆ, ಎಂ.ವೆಂಕಟರಾಜು, ಆರ್. ರತ್ನ, ಉಪೇಂದ್ರಕುಮಾರ್. ರಾಜೀವ್ ತಾರಾನಾಥ್, ಬಿ.ವಿ.ಕಾರಂತ್, ಎಲ್.ವೈದ್ಯನಾಥನ್, ಸಿ. ಅಶ್ವತ್, ಅವರುಗಳು, ಸಾಮಾನ್ಯವಾಗಿ ಹೊಸ ಶೈಲಿಯಲ್ಲಿ ಹೊಸ ಅಲೆಯ ಚಿತ್ರಗಳೊಂದಿಗೆ ಗುರುತಿಸಿ ಕೊಂಡ ಪ್ರತಿಭೆಗಳು. ಕನ್ನಡಕ್ಕೆ ಸಂಪೂರ್ಣ ಹೊಸತನ್ನು ನೀಡಬೇಕೆಂದು, ನವ್ಯ ಸಾಹಿತ್ಯದೊಂದಿಗೆ ನವ್ಯ ಶೈಲಿಯ ಹಾಡುಗಳನ್ನು ಸಂಯೋಜಿಸಿ ಅತ್ಯಂತ ಜನ ಪ್ರಿಯತೆಗಳಿಸಿರುವ ವ್ಯಕ್ತಿ ಹಂಸಲೇಖ. ಕಳೆದ ಒಂದು ದಶಕದಲ್ಲಿ ಅವರು ಅಸಂಖ್ಯಾತ ಚಿತ್ರಗಳಿಗೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ವಿ.ಮನೋಹರ್, ರಾಜೇಶ್ ರಾಮನಾಥ್, ಗುರುಕಿರಣ್, ಕೆ.ಕಲ್ಯಾಣ್, ಎಸ್.ಗೋವರ್ಧನ್ ಮುಂತಾದವರು ಬೆಳಕಿಗೆ ಬಂದಿದ್ದಾರೆ. ಮಲ್ಲಿಕಾರ್ಜುನ ಮನ್ಸೂರವರು ಚಂದ್ರಹಾಸ ಸೇರಿದಂತೆ ಕೆಲವು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ.

ಕನ್ನಡಚಿತ್ರಗಳಿಗೆ ಹಿನ್ನೆಲೆ ಗಾಯನದಲ್ಲಿ ಪಿ.ಸುಶೀಲ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬಾಲಮುರಳಿ ಕೃಷ್ಣ, ಎಸ್.ಪಿ, ಬಾಲಸುಬ್ರಹ್ಮಣ್ಯಂ, ಭೀಮಸೇನಜೋಶಿ, ಡಾ.ರಾಜಕುಮಾರ್, ಕಸ್ತೂರಿ ಶಂಕರ್, ವಾಣಿ ಜಯರಾಂ, ಜೇಸುದಾಸ್, ಸಿ.ಅಶ್ವತ್, ಎಲ್. ಆರ್.ಈಶ್ವರಿ, ರಾಜಕುಮಾರ್ ಭಾರತಿ, ಶಿವಮೊಗ್ಗ ಸುಬ್ಬಣ್ಣ, ಮಂಜುಳಾ ಗುರುರಾಜ್, ಬಿ.ಕೆ.ಸುಮಿತ್ರ, ಬಿ.ಆರ್.ಛಾಯಾ, ಬಿ.ಜಯಶ್ರೀ, ಕಸ್ತೂರಿ ಶಂಕರ್ ಮತ್ತು ಇನ್ನೂ ಅನೇಕರು ತಮ್ಮ ಕಂಠದಾನವಿತ್ತು ಚಿತ್ರಸಂಗೀತ ವನ್ನು ಇಂಪುಗೊಳಿಸಿದ್ದಾರೆ.

**ಫಿಲ್ಮ್ ಸ್ಟುಡಿಯೋಗಳು :** ಮುಂಚಿನ ದಿನಗಳಲ್ಲಿ, ಸಾಮಾನ್ಯವಾಗಿ ಕನ್ನಡ ಚಿತ್ರಗಳನ್ನು ನಿರ್ಮಿಸಲು, ಸ್ಟುಡಿಯೋ ಸೌಲಭ್ಯಬೇಕಿದ್ದಲ್ಲಿ ಹೊರರಾಜ್ಯಗಳಿಗೆ, ಹೆಚ್ಚಾಗಿ ಮದ್ರಾಸಿಗೆ ಹೋಗಬೇಕಾಗಿತ್ತು. ಮೂಕ ಚಿತ್ರಗಳ ಕಾಲದಲ್ಲಿ 1930ರಲ್ಲಿ ಅಸ್ತಿತ್ವಕ್ಕೆ ಬಂದ ಸೂರ್ಯ ಫಿಲಂ ಕಂಪೆನಿ ಸು. 30–40 ಮೂಕ ಚಿತ್ರಗಳನ್ನು ತಯಾರಿಸಿ ವಾಕ್ಚಿತ್ರಗಳು ಬಂದ ಮೇಲೆ, ಅವುಗಳಿಗೆ ಬೇಕಾದ ಸಲಕರಣೆಗಳನ್ನು ಹೊಂದಿಸಲಾಗದೆ 1935ರ ಹೊತ್ತಿಗೆ ಮುಚ್ಚಬೇಕಾಯಿತು. ಭಾರತದ ಚಲನಚಿತ್ರ ಇತಿಹಾಸಕಾರರು ದಾಖಲೆ ಮಾಡಿರುವ ಎಲ್ಲ ಪುಸ್ತಕಗಳಲ್ಲಿ ಸೂರ್ಯ ಫಿಲಂ ಕಂಪೆನಿಯ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. 1936ರಲ್ಲಿ, ವಿ.ಆರ್.ತಿಮ್ಮಯ್ಯ, ಎಂಬ ಉದ್ದಿಮೆದಾರರು ಮೈಸೂರು ಸೌಂಡ್ ಸ್ಟುಡಿಯೊ ಎಂಬ ಹೆಸರಿನಲ್ಲಿ ಚಿತ್ರ ನಿರ್ಮಾಣಕ್ಕಾಗಿ ಬೆಂಗಳೂರಿನಲ್ಲಿ ಸ್ಟುಡಿಯೊ ಸ್ಥಾಪಿಸಿದರು. ಕೇವಲ ಎರಡು, ಮೂರು ಚಿತ್ರಗಳು ತಯಾರು ಮಾಡಲು ಚಟುವಟಿಕೆಗಳು ನಡೆದವು. ರಾಜಸೂಯಯಾಗ ಎಂಬ ಚಿತ್ರವು ಸಂಪೂರ್ಣವಾಗಿ ಮೊಟ್ಟಮೊದಲ ಬಾರಿಗೆ ಕರ್ನಾಟಕದಲ್ಲಿ ಇದೇ ಸ್ಟುಡಿಯೊದಲ್ಲಿ ತಯಾರಾದ ಚಿತ್ರವಾಯಿತು. ಕಾರಣಾಂತರಗಳಿಂದ ಈ ಸ್ಟುಡಿಯೊ ಕೂಡ ಬಹು ಬೇಗ ಮುಚ್ಚಿಹೋಯಿತು. ಮತ್ತೊಂದು ಸ್ಟುಡಿಯೊ ಮೈಸೂರು ಮೂವಿಟೋನ್, ಹೆಸರಿನಲ್ಲಿ 1942ರಲ್ಲಿ ಮತ್ತೆ ಮೈಸೂರಿನಲ್ಲಿ ಪ್ರಾರಂಭವಾಗಿ ಯಾವ ಚಿತ್ರವೂ ನಿರ್ಮಾಣವಾಗದೆ ಬಹುಬೇಗ ಸ್ಥಗಿತಗೊಂಡಿತು. ಮೈಸೂರಿನಲ್ಲಿ ಸ್ಟುಡಿಯೊ ಸ್ಥಾಪಿಸುವ ಈ ಸಾಹಸವನ್ನು ಮುಂದುವರಿಸಿದವರು ಜಿ.ಆರ್.ರಾಮಯ್ಯನವರು. ಸ್ವತಃ ಯಶಸ್ವಿ ವಾಣಿಜ್ಯೋದ್ಯಮಿಗಳಾಗಿದ್ದ, ವಾಣಿಚಿತ್ರ ನಿರ್ಮಾಣದ ತಂಡದಲ್ಲಿ ಒಬ್ಬರಾಗಿದ್ದ ರಾಮಯ್ಯನವರು 1946ರಲ್ಲಿ ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೊ ಸ್ಥಾಪಿಸಿದರು. ಕರ್ನಾಟಕದಲ್ಲಿ ಮೊದಲ ಬಾರಿಗೆ ಚಟವಟಿಕೆಯಿಂದ ಕಾರ್ಯನಿರತವಾಗಿ, ಸುಪ್ರಸಿದ್ಧ ಮಹಾತ್ಮಾ ಸಂಸ್ಥೆಯವರ ಕೃಷ್ಣ ಲೀಲಾ, ಭಾರತಿ, ಜಗನ್ಮೋಹಿನಿ, ನಾಗಕನ್ನಿಕಾ, ದಳ್ಳಾಳಿ, ಕನ್ಯಾದಾನ ಮುಂತಾದ ಚಿತ್ರಗಳೂ ಸೇರಿದಂತೆ ಮೂವತ್ತಕ್ಕೂ ಹೆಚ್ಚು ಚಿತ್ರಗಳು ಈ ಸ್ಟುಡಿಯೊದಲ್ಲಿ ತಯಾರಾದವು. ಸ್ಟುಡಿಯೊ ಆಡಳಿತವರ್ಗದಲ್ಲಿನ ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಸ್ಟುಡಿಯೊ 1953ರ ಹೊತ್ತಿಗೆ ನಿಷ್ಕ್ರಿಯವಾಗಿ, 1960ರ ಹೊತ್ತಿಗೆ ಸಂಪೂರ್ಣವಾಗಿ ಸ್ಥಗಿತವಾಯಿತು. ಇದೇ ಸಮಯದಲ್ಲಿ ಅಂದರೆ 1954ರ ಹೊತ್ತಿಗೆ ಮೈಸೂರಿನಲ್ಲಿ ಎಂ.ಎನ್.ಬಸವರಾಜಯ್ಯನವರು ಪ್ರೀಮಿಯರ್ ಸ್ಟುಡಿಯೊ ಪ್ರಾರಂಭಿಸಿದರು. ಒಂದು ಫ್ಲೋರಿನ ಅಂತಸ್ತಿನಲ್ಲಿ ಪ್ರಾರಂಭವಾದ ಈ ಸ್ಟುಡಿಯೊ ಕ್ರಮೇಣ ಬೆಳೆಯತೊಡಗಿತು. 1966–67ರಲ್ಲಿ ಕರ್ನಾಟಕದಲ್ಲಿ ತಯರಾಗುವ ಚಿತ್ರಗಳಿಗೆ ಸರ್ಕಾರದಿಂದ ಸಹಾಯ ಧನದ ಯೋಜನೆ ಜಾರಿಗೆ ಬಂತು. ಈ ಪ್ರೋತ್ಸಾಹದಿಂದ ಉತ್ತೇಜಿತಗೊಂಡ ಹಲವಾರು ನಿರ್ಮಾಪಕರು ಚಿತ್ರನಿರ್ಮಾಣದಲ್ಲಿ ತೊಡಗಿಸಿಕೊಂಡರು ಮತ್ತು ಬಸವರಾಜಯ್ಯ ಅವರು ಕೂಡ ಮುಂಗಡ ಹಣ ಕೇಳದೆ ಸರ್ಕಾರದ ಸಹಾಯಧನ ಬರುವವರೆಗೂ ಕಾಯಲು ಒಪ್ಪಿ, ಸ್ಟುಡಿಯೊದಲ್ಲಿ ಚಿತ್ರವನ್ನು ಷೂಟಿಂಗ್ ಮಾಡಲು ಅವಕಾಶ ಮಾಡಿಕೊಡುತ್ತಿದ್ದರು. ಇಷ್ಟೊಂದು ಸೌಲಭ್ಯಗಳು ಚಿತ್ರ ನಿರ್ಮಾಪಕರಿಗೆ ಹಿಂದೆಂದೂ ಸಿಕ್ಕಿರಲಿಲ್ಲವಾಗಿ, ಪ್ರೀಮಿಯರ್ ಸ್ಟುಡಿಯೋದಲ್ಲಿ ಬಿಡುವಿಲ್ಲದಂತೆ ಕನ್ನಡ ಹಾಗೂ ಪರಭಾಷಾ ಚಿತ್ರಗಳು ತಯಾರಾಗುವುದು ಸಾಮಾನ್ಯವಾದ ಸಂಗತಿಯಾಗಿ ಹೋಯಿತು. ಒಂದರಿಂದ ಎರಡು, ಮೂರು, ನಾಲ್ಕು, ಐದು ಮತ್ತು ಆರನೇ ಫ್ಲೋರ್ ಕೂಡ ಕಟ್ಟಲಾಯಿತು. 1980ರಲ್ಲಿ ಸರ್ಕಾರ ಸಹಾಯಧನವನ್ನು ಕನ್ನಡ ಚಿತ್ರಗಳಿಗೆ ಮಾತ್ರ ಸೀಮಿತಗೊಳಿಸಿತು ಮತ್ತು ಚಿತ್ರಗಳು ಹೆಚ್ಚಾಗಿ ವರ್ಣದಲ್ಲಿ

ಬರಲು ಪ್ರಾರಂಭವಾಯಿತು. ಈ ಕಾರಣಗಳಿಂದಾಗಿ ಪ್ರೀಮಿಯರ್ ಸ್ಟುಡಿಯೊದಲ್ಲಿ ಚಿತ್ರೋತ್ಪಾದನೆ ಕ್ರಮೇಣ ಕಡಿಮೆಯಾಗತೊಡಗಿತು. ಇದರ ಜೊತೆಗೆ 1989ರಲ್ಲಿ ಒಂದು ಭಾರೀ ಬೆಂಕಿ ಅನಾಹುತವೂ ಜರುಗಿತು. ಪ್ರೀಮಿಯರ್ ಸ್ಟುಡಿಯೊ ಮುಂಚಿನ ವಿಜೃಂಭಣೆಯನ್ನು ಕಳೆದುಕೊಂಡಿತು. ಕರ್ನಾಟಕದಲ್ಲಿ ಮೊದಲಬಾರಿಗೆ ಸತತವಾಗಿ ಸು. ಮುನ್ನೂರು ಚಿತ್ರಗಳನ್ನು ನಿರ್ಮಾಣಮಾಡಲು ಅವಕಾಶಮಾಡಿಕೊಟ್ಟ ಖ್ಯಾತಿ ಪ್ರೀಮಿಯರ್ ಸ್ಟುಡಿಯೊಗೆ ಸೇರಬೇಕು.

ಬೆಂಗಳೂರಿನಲ್ಲಿ ಸ್ಟುಡಿಯೊ ಸ್ಥಾಪಿಸಬೇಕೆಂಬ ಹಂಬಲ ಬಹು ಮಂದಿಗೆ ಮೊದಲಿನಿಂದಲೂ ಇತ್ತು, 1958ರಲ್ಲಿ ಈ ನಿಟ್ಟಿನಲ್ಲಿ ಡಾ.ಎಂ.ರಾಮದಾಸ್ ಎಂಬುವರು ಪ್ರಯತ್ನಮಾಡಿ 40 ಎಕರೆ ಜಮೀನಿನಲ್ಲಿ ಓಂಕಾರ್ ಸ್ಟುಡಿಯೊ ಸ್ಥಾಪಿಸಿ, ಹಲವು ಚಿತ್ರಗಳ ಷೂಟಿಂಗ್ ಕೂಡ ನಡೆದ ಮೇಲೆ ಮುಚ್ಚಬೇಕಾಯಿತು. 1966, ಮಾರ್ಚ್‌ನಲ್ಲಿ ಶ್ರೀ ಕಂಠೀರವ ಸ್ಟುಡಿಯೊ ಸ್ಥಾಪಿತವಾಯಿತು. ಎರಡು ಫ್ಲೋರ್‌ಗಳಿದ್ದ ಈ ಸಂಸ್ಥೆಯಲ್ಲಿ ಕರ್ನಾಟಕ ಸರ್ಕಾರ ಕೂಡ ಷೇರುಗಳಲ್ಲಿ ತನ್ನ ಬಂಡವಾಳವನ್ನು ಹೂಡಿತ್ತು. 1974ರ ಹೊತ್ತಿಗೆ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ಅಸ್ತಿತ್ವಕ್ಕೆ ಬಂದಿದ್ದರಿಂದ ಕಂಠೀರವ ಸ್ಟುಡಿಯೊವಿನ ವಿಕಾಸಕ್ಕೆ ಹೆಚ್ಚು ಮುತುವರ್ಜಿ ವಹಿಸಿತು. 1980ರಲ್ಲಿ ಸರ್ಕಾರ ಈ ಸ್ಟುಡಿಯೊವಿನ ಸಂಪೂರ್ಣ ಅಧಿಕಾರವನ್ನು ವಹಿಸಿಕೊಂಡಿತು. ಅಲ್ಲಿಂದೀಚೆಗೆ ಈ ಸ್ಟುಡಿಯೊ ಸರ್ಕಾರದ ಆಡಳಿತದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

1969ರಲ್ಲಿ ಸ್ಥಾಪಿತವಾದ ಚಾಮುಂಡೇಶ್ವರಿ ಸ್ಟುಡಿಯೊ ಇಂದಿಗೂ ಕೆಲಸಮಾಡುತ್ತಿದೆ. ಮುಂಚಿನ ದಿನಗಳಲ್ಲಿ ಚಿತ್ರೀಕರಣವೂ ನಡೆಯುತ್ತಿತ್ತು. ಈಗ ಡಬ್ಬಿಂಗ್, ರೆಕಾರ್ಡಿಂಗ್, ರಿ-ರೆಕಾರ್ಡಿಂಗ್, ಸಂಸ್ಕರಣ, ಹವಾನಿಯಂತ್ರಿತ ಉಗ್ರಾಣ, ಈ ಸೌಲಭ್ಯಗಳನ್ನು ಒದಗಿಸಿ ಅಚ್ಚುಕಟ್ಟಾದ ಸೇವೆ ಕೊಡುತ್ತಾ ಬಂದಿದೆ. ತನ್ನ ಜೀವನದ ಗುರಿ, ಎಂದು ಸಾಹಸ ಮಾಡಿ, ಕನ್ನಡ ಚಿತ್ರರಂಗದ ಜನಪ್ರಿಯ ಹಾಸ್ಯ ನಟ ಟಿ.ಎನ್. ಬಾಲಕೃಷ್ಣರವರು ಕೆಂಗೇರಿಯ ಬಳಿ 1965ರಲ್ಲಿ ಪ್ರಾರಂಭಿಸಿದ ಅಭಿಮಾನ್ ಸ್ಟುಡಿಯೊ, ಹಲವಾರು ಕಾರಣಗಳಿಗೆ, ಆಗಾಗ್ಗೆ ಸುದ್ದಿ ಮಾಡಿ, ಇಂದಿಗೂ ಅಸ್ತಿತ್ವದಲ್ಲಿದೆ. ಈ ಮಧ್ಯೆ, ಸಾಗರ್ ಸುಜಾತಾ ಸ್ಟುಡಿಯೊ, ಬೆಂಗಳೂರು ಫಿಲಂ ಲ್ಯಾಬೊರೆಟರಿ, ಮಧು ಆರ್ಟ್ ಸ್ಟುಡಿಯೊ, ಇವುಗಳು ಅಸ್ತಿತ್ವಕ್ಕೆ ಬಂದು ಕೆಲಸ ಮಾಡಿದವು .

ವಸಂತ್ ಕಲರ್ ಲ್ಯಾಬ್, ಸಂಕೇತ್ ಎಲೆಕ್ಟ್ರಾನಿಕ್ಸ್, ಆಕಾಶ್ ಸ್ಟುಡಿಯೊ, ವಿಜಯ ಆಡಿಯೋಸ್ ಡಿಜಿಟಲ್ ರೆಕಾರ್ಡಿಂಗ್ ಸೆಂಟರ್, ರಾವ್‌ಕೊ ಎಫೆಕ್ಟ್ಸ್ ಸರ್ವೀಸ್ ಲ್ಯಾಬೊರೆಟರಿ, ಅರುಣ ಡಿಜಿ ಆಡಿಯೊ, ಅರವಿಂದ್ ಸ್ಟುಡಿಯೊ, ಬಿ.ಸಿ.ಆರ್.ಸಿ. ಡಬ್ಬಿಂಗ್ ಥಿಯೇಟರ್, ಲಕ್ಷ್ಮಿ ಎಡಿಟಿಂಗ್ ರೂಂ, ಈ ಸಂಸ್ಥೆಗಳು ಸಂಕಲನ, ಧ್ವನಿ ಮುದ್ರಣ, ಸಂಸ್ಕರಣ ಮುಂತಾದ ಕಾರ್ಯಗಳಲ್ಲಿ ತೊಡಗಿಸಿಕೊಂಡು ಮಾಡಿರುವ, ಮತ್ತು ಹಲವು ಮಾಡುತ್ತಿರುವ ಸಂಸ್ಥೆಗಳು. ಸಂಕೇತ್ ಎಲೆಕ್ಟ್ರಾನಿಕ್ಸ್ ಈಗ ಸ್ಥಗಿತವಾಗಿದೆ.

ಪ್ರಸಾದ್ ಫಿಲಂ ಲ್ಯಾಬೊರೆಟರಿ, ಬೆಂಗಳೂರಿನಲ್ಲಿ ಸ್ಥಾಪನೆಯಾದ ಮೇಲೆ, 16,35, 70 ಎಂ.ಎಂ. ಚಿತ್ರಗಳ ಸಂಸ್ಕರಣ, ಸಂಕಲನ, ವಿಡಿಯೊ ಚಿತ್ರಗಳ ನಿರ್ಮಾಣಕ್ಕೆ ಬೇಕಾದ ಎಲ್ಲ ಸುಸಜ್ಜಿತ ಸೌಕರ್ಯ, ಧ್ವನಿಗ್ರಹಣ, ಈ ಎಲ್ಲ ಕ್ಷೇತ್ರಗಳಲ್ಲೂ ಅತ್ಯಾಧುನಿಕ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಪ್ರಸಾದ್ ಲ್ಯಾಬ್ ಒಂದು ಉತ್ತಮ ಸಂಸ್ಥೆ ಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಕರ್ನಾಟಕದಲ್ಲಿ ಫಿಲಂ ಸೊಸೈಟಿಗಳು : ಉತ್ತಮ ಗುಣಮಟ್ಟದ, ಕಲಾತ್ಮಕ, ಸದಭಿರುಚಿ ಚಿತ್ರಗಳನ್ನು, ಪ್ರಪಂಚದ ಎಲ್ಲ ಭಾಗಗಳಿಂದ, ಫೆಡರೇಶನ್ ಆಫ್ ಫಿಲಂ ಸೊಸೈಟೀಸ್ ಆಫ್ ಇಂಡಿಯದ ಸಹಾಯದಿಂದ ಪಡೆದು ಸದಸ್ಯರುಗಳಿಗೆ ಪ್ರದರ್ಶಿಸುವುದು ಫಿಲಂ ಸೊಸೈಟಿಗಳ ಉದ್ದೇಶ.

ಭಾರತದಲ್ಲಿ ಚಲನಚಿತ್ರ ಸಮಾಜಗಳ ಹಿತಾಸಕ್ತಿಗಳನ್ನು ನೋಡಿಕೊಳ್ಳುವ ಸಂಸ್ಥೆಯಾದ ಫೆಡರೇಷನ್ ಆಫ್ ಫಿಲ್ಮ್ ಸೊಸೈಟೀಸ್ ಆಫ್ ಇಂಡಿಯಾ, 1959ರಲ್ಲಿ, ಖ್ಯಾತ ಚಿತ್ರನಿರ್ದೇಶಕ ಸತ್ಯಜಿತ್ ರಾಯ್ ರವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು. ಕಲ್ಕತ್ತ, ದೆಹಲಿ, ಮುಂಬೈ, ಮದರಾಸುಗಳಲ್ಲಿ 1950 ದಶಕದಲ್ಲಿಯೇ ಫಿಲಂಸೊಸೈಟಿಗಳು ಚಟುವಟಿಕೆಗಳನ್ನು ಪ್ರಾರಂಭಿಸಿದ್ದವು. ಆದರೆ ಕರ್ನಾಟಕಕ್ಕೆ ಈ ಒಂದು ಚಟುವಟಿಕೆ ಬಂದದ್ದು ಸ್ವಲ್ಪ ತಡವಾಯಿತು. 1964ರಲ್ಲಿ ಬೆಂಗಳೂರಿನಲ್ಲಿ ಫಿಲಂ ಸೊಸೈಟಿ ಆಫ್ ಬೆಂಗಳೂರು, ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂತು. ವಿ.ಎನ್, ಸುಬ್ಬರಾವ್ ಮತ್ತು ಎಂ.ವಿ.ಕೃಷ್ಣಸ್ವಾಮಿ ಅವರು ಈ ಸಂಸ್ಥೆಯ ಕಾರ್ಯದರ್ಶಿಗಳಾಗಿದ್ದರು. ಈ ಸಂಸ್ಥೆಯ ಉದ್ಘಾಟನೆ ಸಂದರ್ಭದಲ್ಲಿ ಪತ್ರಕರ್ತ ಎಂ.ಬಿ.ಸಿಂಗ್ ಕನ್ನಡ ಹಾಗೂ ಭಾರತೀಯ ಚಲನಚಿತ್ರ ಇತಿಹಾಸ ನಿರೂಪಿಸುವ ಛಾಯಾಚಿತ್ರಗಳ ಪ್ರದರ್ಶನ ವ್ಯವಸ್ಥೆಗೊಳಿಸಿದ್ದರು. ಒಂದು ವರ್ಷದಲ್ಲಿ ಈ ಸಂಸ್ಥೆ ಸ್ಥಗಿತವಾಗಿ, ಮತ್ತೆ 1969ರಲ್ಲಿ ಮಯೂರ ಫಿಲಂ ಸೊಸೈಟಿ ಸ್ಥಾಪಿತವಾಯಿತು. ಕರ್ನಾಟಕದಲ್ಲಿ ಮೊದಲ ಬಾರಿಗೆ ಅತ್ಯಂತ ಉತ್ಸಾಹದಿಂದ ಚಟುವಟಿಕೆಗಳನ್ನು ನಿರ್ವಹಿಸಿದ ಈ ಸಂಸ್ಥೆ ಪ್ರಪಂಚದ ಅನೇಕ ದೇಶಗಳ ಚಿತ್ರಗಳನ್ನು ತನ್ನ ಸದಸ್ಯರಿಗೆ ಪ್ರದರ್ಶನ ಮಾಡಿ, ಹೆಸರು ಮಾಡಿತು. ಕರ್ನಾಟಕದಲ್ಲಿ ಚಲನಚಿತ್ರ ಸಮಾಜಗಳ ಬೆಳವಣಿಗೆಗೆ ಭದ್ರವಾದ ಬುನಾದಿ ಹಾಕಿದ ಹಿರಿಮೆ ಈ ಸೊಸೈಟಿಗೆ ಸೇರಬೇಕು. ಐದು ವರ್ಷಗಳು ಸತತವಾಗಿ ಕೆಲಸ ಮಾಡಿ ಕಾರಣಾಂತರಗಳಿಂದ ನಿಷ್ಕ್ರಿಯವಾಯಿತು. ಈ ಸಂಸ್ಥೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ ವ್ಯಕ್ತಿಗಳು, ಡಾ. ಎಂ.ಎನ್.ಶ್ರೀನಿವಾಸ್, ಎಂ.ಬಿ.ಎಸ್.ಪ್ರಸಾದ್, ಎಸ್.ರಾಮಮೂರ್ತಿ ಮತ್ತಿತರರು.

1971ರಲ್ಲಿ, ಹೆಚ್.ಎನ್.ನರಹರಿರಾವ್, ಮತ್ತು ಎಸ್.ರಾಘವೇಂದ್ರರಾವ್ ಎಂಬುವರು, ಬೆಂಗಳೂರಿನ ಚಾಮರಾಜಪೇಟೆಯ ಒಂದು ಕೊಠಡಿಯಲ್ಲಿ, ಬಿ.ಎನ್.ನಾರಾಯಣ್ (ಮೇಕಪ್ ನಾಣಿ) ರವರ ಅಧ್ಯಕ್ಷತೆಯಲ್ಲಿ ಸುಚಿತ್ರ ಫಿಲಂ ಸೊಸೈಟಿಯನ್ನು ಸ್ಥಾಪಿಸಿದರು. ಈ ಸಂಸ್ಥೆ, ವರ್ಷ ವರ್ಷಕ್ಕೆ ತನ್ನ ಚಟುವಟಿಕೆಗಳನ್ನು ವೃದ್ಧಿಸಿಕೊಂಡು ಭಾರತದಲ್ಲಿಯೇ ಒಂದು ಮಾದರಿ ಫಿಲಂ ಸೊಸೈಟಿಯಾಗಿ ಬೆಳೆಯಿತು. ಮೂವತ್ತೈದು ವರ್ಷಗಳು ಸತತವಾಗಿ ಸೇವೆ ಸಲ್ಲಿಸಿ, ಬೆಂಗಳೂರಿನಲ್ಲಿ, ಬನಶಂಕರಿ 2ನೇ ಹಂತದಲ್ಲಿ, ಸರ್ಕಾರ ಕೊಟ್ಟಿರುವ ನಿವೇಶನದಲ್ಲಿ ತನ್ನದೇ ಆದ ಕಿರು ಚಿತ್ರಮಂದಿರವನ್ನು ಕಟ್ಟಿ ಇಂದಿಗೂ ಒಂದು ಮಾದರಿ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಮೂವತ್ತು ವರ್ಷಗಳು, ಸತತವಾಗಿ, ಮೊದಲು ಕಾರ್ಯದರ್ಶಿಯಾಗಿ, ನಂತರ ಉಪಾಧ್ಯಕ್ಷರಾಗಿ, ಮತ್ತು ಅಧ್ಯಕ್ಷರೂ ಆಗಿ, ಕಾರ್ಯ ನಿರ್ವಹಿಸಿ, ಈ ಸಂಸ್ಥೆಯ ಬೆಳವಣಿಗೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಹೆಚ್. ಎನ್. ನರಹರಿರಾವ್ ರವರು ಇಂದು ಫೆಡರೇಶನ್ ಆಫ್ ಫಿಲಂ ಸೊಸೈಟೀಸ್ ಆಫ್ ಇಂಡಿಯಾದ ದಕ್ಷಿಣ ವಿಭಾಗದ ಉಪಾಧ್ಯಕ್ಷರಾಗಿ, 2002 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂದು ಭಾರತದಲ್ಲಿ ಫಿಲಂಸೊಸೈಟಿ ಕ್ಷೇತ್ರದಲ್ಲಿ ಅಪಾರ ಅನುಭವವುಳ್ಳ ಅತ್ಯಂತ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರಾಗಿ ಇಂದಿಗೂ ಕಾರ್ಯ ನಿರತರಾಗಿದ್ದಾರೆ. ಫಿಲಂ ಸೊಸೈಟಿ ಕೈಪಿಡಿ (Film Society Handbook), My Days with the Film Society Movement, A glimpse of Kannada cinema (ಎಂ.ವಿ.ರಾಮಕೃಷ್ಣಯ್ಯನವರ ಸಹಯೋಗದೊಂದಿಗೆ), ಪುಸ್ತಕಗಳನ್ನು ರಚಿಸಿ, ಚಿತ್ರ ವಿಮರ್ಶಕರಾಗಿ, ಭಾರತೀಯ ಪನೋರಮ, ಮುಂಬೈ, ಪೂಸಾನ್ (ಕೊರಿಯ), ಬ್ಯಾಂಕಾಕ್ (ಥಾಯ್‌ಲೆಂಡ್), ಕಾರ್ಲೋವಿವಾರಿ (ಚೆಕ್), ಓಬರ್ ಹಾಸನ್ (ಜರ್ಮನಿ) ಅಂತರ ರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ತೀರ್ಪುಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರಿನಲ್ಲಿ ಎರಡು ದಶಕಗಳಿಗೂ ಮೀರಿ ಕೆಲಸಮಾಡುತ್ತಿರುವ ಮತ್ತೊಂದು ಸೊಸೈಟಿ ಬೆಂಗಳೂರು ಫಿಲಂ ಸೊಸೈಟಿ.

1970 ಮತ್ತು 80ರ ದಶಕಗಳಲ್ಲಿ, ಕರ್ನಾಟಕದಲ್ಲಿ ಸು. 25 ಸೊಸೈಟಿಗಳು ಕಾರ್ಯನಿರತವಾಗಿದ್ದವು. ಕಾರಣಾಂತರಗಳಿಂದ ಕೆಲವನ್ನು ಬಿಟ್ಟು ಮಿಕ್ಕೆಲ್ಲವೂ ನಿಷ್ಕ್ರಿಯವಾದುವು. ಬೆಂಗಳೂರಿನಲ್ಲಿ ಹಲವಾರು ವರ್ಷಗಳು ಕೆಲಸ ಮಾಡಿ ಸ್ಥಗಿತಗೊಂಡ ಸೊಸೈಟಿಗಳೆಂದರೆ, ವೀಕ್ಷಕ, ಚೈತ್ರ, ಚಿತ್ರ ಸಮುದಾಯ, ಆರಾಧನ, ರಾಮನ್ ಇನ್ಸಿಟ್ಯೂಟ್ ಫಿಲಂ ಕ್ಲಬ್ ಮುಂತಾದವು. ಚಿತ್ರ ಫಿಲಂ ಸೊಸೈಟಿ ಧಾರವಾಡ, ಹಾಗೂ ಸಿ.ಎಫ್.ಟಿ.ಆರ್.ಐ. ಮೈಸೂರು ಫಿಲಂ ಸೊಸೈಟಿ, ಮೈಸೂರು, ಈ ಎರಡು ಸೊಸೈಟಿಗಳು 1970ರ ದಶಕದ ಆದಿಯಲ್ಲೇ ಪ್ರಾರಂಭವಾದವು. ಚಿತ್ರ ಫಿಲಂ ಸೊಸೈಟಿ ಕೆಲವು ವರ್ಷಗಳು ಸ್ಥಗಿತಗೊಂಡು, ಈಗ ಮತ್ತೆ ಕಾರ್ಯನಿರತವಾಗಿದೆ. ನೀನಾಸಂ ಚಿತ್ರ ಸಮಾಜ, ಹೆಗ್ಗೋಡು, ಪ್ರತಿಮಾ ಚಿತ್ರಕೂಟ, ದಾವಣಗೆರೆ, ಈ ಸೊಸೈಟಿಗಳು ಕೂಡ ಉತ್ತಮ ಸೇವೆ ಸಲ್ಲಿಸಿವೆ.

ಹಾಲಿ ಇಂದು, 2006ರಲ್ಲಿ, ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಸೊಸೈಟಿಗಳೆಂದರೆ, ಸುಚಿತ್ರ, ಬೆಂಗಳೂರು, ಬೆಂಗಳೂರು ಫಿಲಂ ಸೊಸೈಟಿ, ಬೆಂಗಳೂರು, ಕಲೆಕ್ಟಿವ್ ಖೆವೋಸ್, ಬೆಂಗಳೂರು, ಚಿತ್ರಾ, ಧಾರವಾಡ, ಅಜಂತಾ, ಬೆಳಗಾವಿ, ಮತ್ತು ಮೈಸೂರು ಫಿಲಂ ಸೊಸೈಟಿ, ಮೈಸೂರು. ಬೆಂಗಳೂರಿನಲ್ಲಿ ಎರಡು ವರ್ಷಗಳಿಂದ ಕಾರ್ಯನಿರ್ವಹಿಸುತ್ತರುವ, ಕಲೆಕ್ಟಿವ್ ಖೆವೋಸ್ ಸೊಸೈಟಿ, ಉತ್ತಮ ಚಿತ್ರಗಳ ಬಗ್ಗೆ ಅಪಾರ ಆಸಕ್ತಿ ಉಳ್ಳ ಯುವಕರುಗಳು ಹೊಸ ಮಾದರಿಯಲ್ಲಿ ನಡೆಸುತ್ತಿರುವ ಒಂದು ಮೆಚ್ಚಿಕೊಳ್ಳುವಂತಹ ಪ್ರಯೋಗ. ಡಿವಿಡಿ (ಆಗಿಆ), ವಿನ್ಯಾಸದಲ್ಲಿ ಬರುವ ಚಿತ್ರಗಳನ್ನು ಆಯ್ದು ಅವುಗಳನ್ನು ಪುಟ್ಟ ಎಲ್.ಸಿ.ಡಿ ಪ್ರೊಜೆಕ್ಟರುಗಳಲ್ಲಿ ದೊಡ್ಡ ಗಾತ್ರದ ಬಿಂಬಗಳನ್ನು ಪ್ರದರ್ಶಿಸುವ ಮೂಲಕ ಈ ಸೊಸೈಟಿ ಹೊಸ ಪೀಳಿಗೆಯ ಯುವಕರನ್ನು ಆಕರ್ಷಿಸಿ ಫಿಲಂ ಸೊಸೈಟಿ ಚಟುವಟಿಕೆಗೆ ಒಂದು ಹೊಸ ಆಯಾಮವನ್ನು ಕೊಡುವಲ್ಲಿ ಯಶಸ್ಸು ಗಳಿಸಿದ್ದಾರೆ.

**ಚಲನಚಿತ್ರದಲ್ಲಿ ತರಬೇತಿ :** ಕರ್ನಾಟಕದಲ್ಲಿ ಚಲನಚಿತ್ರದ ಬಗ್ಗೆ ತರಬೇತಿ ಪಡೆಯಲು ಕೆಲವು ಸೌಕರ್ಯಗಳಿವೆ. ಕರ್ನಾಟಕದಲ್ಲಿ 1940ರ ದಶಕದಲ್ಲಿ ವೃತ್ತಿಶಿಕ್ಷಣ ತರಬೇತಿಗಾಗಿ, ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಸಂಸ್ಥೆ (polytechnic) ಪ್ರಾರಂಭವಾಯಿತು. 1944-45ರಲ್ಲಿ ಅನೇಕ ವೃತ್ತಿಗಳ ಜೊತೆ ಧ್ವನಿಗ್ರಹಣ ಮತ್ತು ಸಿನಿಮಟೊಗ್ರಫಿ ವಿಭಾಗಗಳನ್ನು ಸೇರಿಸಲಾಯಿತು. ಅಂದಿನ ದಿನಗಳಲ್ಲಿ ಸರ್ಕಾರದ ಆಡಳಿತದಲ್ಲಿದ್ದವರಿಗೆ ಎಷ್ಟರಮಟ್ಟಿಗೆ ದೂರದೃಷ್ಟಿ ಇತ್ತು ಎಂಬುದು ಅರಿವಾಗುತ್ತದೆ. ಈ ಒಂದು ಶಿಕ್ಷಣ ಸಂಸ್ಥೆಯಿಂದ ಇದುವರೆಗೆ

ಅನೇಕರು ತರಬೇತಿ ಪಡೆದು ತಮ್ಮ ವೃತ್ತಿ ಜೀವನದಲ್ಲಿ ಹೆಸರು ಮಾಡಿದ್ದಾರೆ. ಇವರುಗಳಲ್ಲಿ ಪ್ರತಿಭಾವಂತರಾಗಿ ಚಲನ ಚಿತ್ರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವ್ಯಕ್ತಿಗಳಲ್ಲಿ ಆರ್.ಎನ್.ಕೃಷ್ಣಪ್ರಸಾದ್, ಆರ್.ಎನ್.ಜಯಗೋಪಾಲ್, ಛಾಯಾಗ್ರಾಹಕರುಗಳಾದ ಲೋಕೇಶ್, ಬಿ.ಎಸ್. ಬಸವಾರಾಜು, ಕುಣಿಗಲ್ ನಾಗಭೂಷಣ್, ಬಿ.ಸಿ.ಗೌರಿಶಂಕರ್, ವಿ.ಕೆ.ಮೂರ್ತಿ, ಹೆಚ್.ಎಂ.ಕೆ.ಮೂರ್ತಿ, ಎಂ.ಬಿ.ಎಸ್.ಪ್ರಸಾದ್ ಮತ್ತು ಇನ್ನೂ ಅನೇಕರು. 1996ರಲ್ಲಿ ಈ ಸಂಸ್ಥೆ ವಿಶ್ವಬ್ಯಾಂಕ್‌ನ ಆರ್ಥಿಕ ನೆರವಿನೊಂದಿಗೆ, ಹೆಸರು ಘಟ್ಟದ ಬಳಿ ವಿಶಾಲವಾದ ಭೂಮಿಯಲ್ಲಿ ಗೌರ್‍ನಮೆಂಟ್ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಎಂಬ ಹೆಸರಿನಲ್ಲಿ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ನಿಂದ ಬೇರ್ಪಟ್ಟು, ಮರು ಸ್ಥಾಪಿತಗೊಂಡಿತು. ಈಗ ಈ ಸಂಸ್ಥೆ ಫಿಲಂ ಮತ್ತು ಟೆಲಿವಿಷನ್ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ತಾಂತ್ರಿಕ ತರಬೇತಿ ನೀಡಲಾಗುತ್ತಿದೆ.

ಖಾಸಗಿ ಕ್ಷೇತ್ರದಲ್ಲಿ, 1973ರಲ್ಲಿ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್ ಶಿಕ್ಷಣ ಸಂಸ್ಥೆ, ಚಲನಚಿತ್ರ ಅಭಿನಯ, ಹಿನ್ನೆಲೆ ಗಾಯನ, ಚಲನಚಿತ್ರ ನೃತ್ಯ ಇವುಗಳನ್ನು ಕುರಿತು ತರಬೇತಿ ಕೊಡುವ ಸಂಸ್ಥೆಯಾಗಿ ಸ್ಥಾಪಿಸಲಾಯಿತು. ಈ ಸಂಸ್ಥೆಯ ಸಂಸ್ಥಾಪಕರಾಗಿ ಬಿ.ಪಿ.ಆರ್. ಸ್ವಾಮಿ ಯವರು ಅಪಾರ ಸೇವೆಸಲ್ಲಿಸಿದ್ದಾರೆ. ಚಲನಚಿತ್ರ ನಿರ್ಮಾಣ ಕ್ಷೇತ್ರದಲ್ಲಿ ಚಿತ್ರ ತಯಾರಿಕೆಯಲ್ಲಿ ತೊಡಗಿಸಿಕೊಂಡು ಪ್ರತಿಭಾವಂತರಾದ ನಿರ್ದೇಶಕರುಗಳೇ ಈ ಸಂಸ್ಥೆಯಲ್ಲಿ ಪ್ರಾಂಶುಪಾಲರಾಗಿ ಇದುವರೆಗೆ ಸೇವೆಸಲ್ಲಿಸಿದ್ದಾರೆ. ಅನೇಕ ನುರಿತ ಪರಿಣಿತರು ತರಬೇತುದಾರರಾಗಿ ಕೆಲಸ ಮಾಡಿದ್ದಾರೆ. ಇಂದು ಈ ಸಂಸ್ಥೆ ಹೆಸರಘಟ್ಟದ ಬಳಿ ತನ್ನದೇ ಆದ ಜಮೀನಿನಲ್ಲಿ ಸ್ವಂತ ಕಟ್ಟಡವನ್ನು ಕಟ್ಟಿಸಿ, ಅಭಿನಯ, ಹಿನ್ನೆಲೆ ಗಾಯನ, ಶಾಸ್ತ್ರೀಯ ನೃತ್ಯ, ಚಲನಚಿತ್ರ ನೃತ್ಯ, ಈ ಕ್ಷೇತ್ರಗಳಲ್ಲಿ ತರಬೇತಿ ಕೊಡುತ್ತಿದೆ. ರಾಜ್ಯ ಸರ್ಕಾರದಿಂದ ಈ ಸಂಸ್ಥೆಗೆ ಅನುದಾನ ಸಿಗುತ್ತಿದೆ.

**ರಾಜ್ಯದಲ್ಲಿ ಚಿತ್ರಮಂದಿರಗಳು :** ಕರ್ನಾಟಕದಲ್ಲಿ ಖಾಯಂ ಚಿತ್ರಮಂದಿರಗಳು 1905 ರಿಂದ, ಸಂಚಾರಿ ಚಿತ್ರ ಮಂದಿರಗಳು 1930 ದಶಕದಿಂದಲೇ ಅಸ್ತಿತ್ವಕ್ಕೆ ಬಂದವು. 2000ದ ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ ಒಟ್ಟು 700 ಕ್ಕೂ ಹೆಚ್ಚು ಖಾಯಂ ಚಿತ್ರ ಮಂದಿರಗಳಿವೆ. ಅವುಗಳಲ್ಲಿ ಬೆಂಗಳೂರಿನಲ್ಲಿ ಸು. 130, ಮೈಸೂರಿನಲ್ಲಿ 60, ಧಾರವಾಡದಲ್ಲಿ 54, ಮಿಕ್ಕ ಜಿಲ್ಲಾ ಕೇಂದ್ರಗಳಲ್ಲಿ ಸರಾಸರಿ 20 ರಿಂದ 35 ರವರೆಗೆ ಇವೆ. ರಾಜ್ಯದಲ್ಲಿ ಒಟ್ಟು 750 ಕ್ಕೂ ಹೆಚ್ಚು ಸಂಚಾರಿ ಚಿತ್ರ ಮಂದಿರಗಳಿವೆ. ಬೆಂಗಳೂರಿನಲ್ಲಿ ಅನೇಕ ಚಿತ್ರ ಮಂದಿರಗಳು ಮುಚ್ಚಿಹೋಗಿವೆ. ಇಂದಿನ ದಿನಗಳಲ್ಲಿ ಅಂದರೆ, 2005–06 ವರ್ಷಗಳಲ್ಲಿ, ಭಾರತದ ಇನ್ನಿತರ ಮಹಾನಗರಗಳಲ್ಲಿ ಪರಿವರ್ತನೆಯಾಗುತ್ತಿರುವಂತೆ ಬೆಂಗಳೂರಿನಲ್ಲಿ, ಒಂದೇ ಮಳಿಗೆ ಸಂಕೀರ್ಣಗಳಲ್ಲಿ 4–5 ಚಿತ್ರಮಂದಿರಗಳಿರುವ ಮಲ್ಟಿಪ್ಲೆಕ್ಸ್ ಕಟ್ಟಡಗಳು ಅಸ್ತಿತ್ವಕ್ಕೆ ಬರುತ್ತಿವೆ.

**ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಲಿ :** ಚಲನಚಿತ್ರಗಳ ನಿರ್ಮಾಣವನ್ನು ಉದ್ಯಮದಂತೆ ಪರಿಗಣಿಸಿ ಕಾರ್ಖಾನೆಗಳಲ್ಲಿನ ಉತ್ಪಾದನೆಯಂತೆ, ತಯಾರುಮಾಡುವ ಪ್ರಕ್ರಿಯೆಯನ್ನು ಚಾಲತಿಗೆ ತಂದದ್ದು ಅಮೆರಿಕದ ಹಾಲಿವುಡ್. ಉದ್ಯಮವೆಂದಮೇಲೆ ಅದರಲ್ಲಿ ತೊಡಗಿರುವವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೆ ಒಂದು ಸಂಸ್ಥೆ ಇರುವುದು ಸ್ವಾಭಾವಿಕ. ಕರ್ನಾಟಕದಲ್ಲಿ ಕೂಡ, ಚಲನ ಚಿತ್ರಗಳ ನಿರ್ಮಾಣ, ವಿತರಣೆ, ಮತ್ತು ಪ್ರದರ್ಶನ, ಈ ಕ್ಷೇತ್ರಗಳ ಹೊಂದಾಣಿಕೆ, ಅವರ ಕುಂದು ಕೊರತೆಗಳು, ಸಮಸ್ಯೆಗಳ ನಿವಾರಣೆ, ಸರ್ಕಾರದೊಂದಿಗೆ ಸಂಧಾನ, ಮುಂತಾದ ವಿಷಯಗಳಿಗೆ ಗಮನ ಕೊಟ್ಟು ಬೆಂಬಲಿಸುವ ಸಲುವಾಗಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿ, 1944ರಲ್ಲಿ ಸ್ಥಾಪಿತವಾಯಿತು. ಎಲ್ಲ ಸಂಸ್ಥೆಗಳಲ್ಲಿಯಂತೆ, ಈ ಸಂಸ್ಥೆಯಲ್ಲಿಯೂ, ಸದಸ್ಯತ್ವ ಶುಲ್ಕ ಕೊಟ್ಟು ಸದಸ್ಯತ್ವ ಪಡೆದು, ನಿಯಮಿತ ಕಾಲದಲ್ಲಿ ಚುನಾವಣೆಗಳನ್ನು ನಡೆಸಿ, ಪದಾಧಿಕಾರಗಳನ್ನು ಚುನಾಯಿಸಿ, ಆಯ್ಕೆಯಾದ ಪ್ರತಿನಿಧಿಗಳಿಂದ ಆಡಳಿತ ನಿರ್ವಹಣೆ ನಡೆಸುತ್ತದೆ. ಸರ್ಕಾರದಿಂದ ಲಭಿಸುವ ಸಹಾಯಧನ, ಪ್ರಶಸ್ತಿ ವಿತರಣೆ, ಚಿತ್ರೋತ್ಸವಗಳು, ಮುಂತಾದ ಕಾರ್ಯಗಳಲ್ಲಿ ಸರ್ಕಾರದೊಂದಿಗೆ ಸಹಕರಿಸುತ್ತದೆ.

**ರಾಜ್ಯಸರ್ಕಾರದ ಪ್ರೋತ್ಸಾಹ :** ಕರ್ನಾಟಕ ಸರ್ಕಾರಕ್ಕೆ ಮನರಂಜನೆ ತೆರಿಗೆಯಮೂಲಕ ವರಮಾನವೂ ಉಂಟು. ಅಲ್ಲದೆ ಚಲನಚಿತ್ರ ಜನರ ಮೇಲೆ ಅಪಾರ ಪ್ರಭಾವ ಬೀರುವ ಸಂಪರ್ಕ ಮಾಧ್ಯಮ ಕೂಡ. ಇದರಿಂದಾಗಿ ಸರ್ಕಾರವೂ ಕೂಡ ಚಲನಚಿತ್ರದ ಉದ್ಯಮಕ್ಕೆ ಸಹಾನುಭೂತಿಯಿಂದ ಆನೇಕ ಸೌಲಭ್ಯಗಳನ್ನು ಕೊಡುತ್ತಾ ಬಂದಿದೆ. 1954 ರಿಂದ ರಾಷ್ಟ್ರ ಪ್ರಶಸ್ತಿ, 1966–67 ರಿಂದ ರಾಜ್ಯ ಪ್ರಶಸ್ತಿ ಗಳನ್ನು ಉತ್ತಮ ಚಲನಚಿತ್ರಗಳಿಗೆ ಕೊಡುತ್ತಿವೆ. ರಾಜ್ಯ ಪ್ರಶಸ್ತಿಗಳು ಚಲನಚಿತ್ರದ ವಿವಿಧ ಭಾಗಗಳಿಗೆ ಕೊಡಲ್ಪಡುತ್ತದೆ. ಮೂರು ಉತ್ತಮ ಚಿತ್ರಗಳು, ಶ್ರೇಷ್ಠ ನಟ, ನಟಿ, ಪೋಷಕ ವರ್ಗ, ತಾಂತ್ರಿಕ ವರ್ಗ, ಸಾಹಿತ್ಯ, ಕಥೆ, ಸಂಗೀತ, ಗಾಯಕ, ಗಾಯಕಿ, ಹೀಗೆ ಎಲ್ಲ ಭಾಗಗಳ ತಜ್ಞರಿಗೆ, ಪ್ರಶಸ್ತಿಗಳನ್ನು, ನಗದು ಬಹುಮಾನದೊಂದಿಗೆ ಕೊಟ್ಟು ಗೌರವಿಸುತ್ತದೆ. ಪ್ರಶಸ್ತಿಗಳನ್ನು ಪ್ರಾದೇಶಿಕ ಭಾಷೆಗಳಾದ ತುಳು, ಕೊಡವ ಮತ್ತು ಕೊಂಕಣಿ ಭಾಷೆಗಳ ಚಿತ್ರಗಳಿಗೂ ಕೊಡಲಾಗುತ್ತಿದೆ.

**ಪ್ರಶಸ್ತಿಗಳ ವಿವರ :** ಡಾ. ರಾಜಕುಮಾರ್ ಪ್ರಶಸ್ತಿ: ರೂ. ಒಂದು ಲಕ್ಷ, ನಗದು ಬಹುಮಾನ ಮತ್ತು ಪದಕ. ಕನ್ನಡ ಚಿತ್ರೋದ್ಯಮದ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾದ ಮಹನೀಯರಿಗೆ ಈ ಪ್ರಶಸ್ತಿಯನ್ನು ಕೊಡಲಾಗುತ್ತಿದೆ.

ಪುಟ್ಟಣ್ಣಕಣಗಾಲ್ ಪ್ರಶಸ್ತಿ: ರೂ. ಒಂದು ಲಕ್ಷ ನಗದು ಬಹುಮಾನ ಮತ್ತು ಪದಕ. ಕನ್ನಡದ ಪ್ರತಿಭಾವಂತ ನಿರ್ದೇಶಕರೊಬ್ಬರಿಗೆ ಈ ಪ್ರಶಸ್ತಿಯನ್ನು ಕೊಡಲಾಗುತ್ತಿದೆ.

ಚಲನಚಿತ್ರ ರಂಗಕ್ಕೆ ಜೀವನಾದ್ಯಂತ ವಿಶಿಷ್ಟ ಕೊಡುಗೆ ಪ್ರಶಸ್ತಿ : ರೂ.50,000 ಮತ್ತು ಪದಕ,

ಅತ್ಯುತ್ತಮ ಚಿತ್ರಗಳಿಗೆ : ಪ್ರಥಮ : ರೂ. ಒಂದು ಲಕ್ಷ ಮತ್ತು ಪದಕ, ನಿರ್ದೇಶಕರಿಗೆ : ರೂ. 20,000 ಮತ್ತು ಪದಕ.

ದ್ವಿತೀಯ : ರೂ. 75,000 ಮತ್ತು ಪದಕ. ನಿರ್ದೇಶಕರಿಗೆ : ರೂ.15,000 ಮತ್ತು ಪದಕ.

ತೃತೀಯ : ರೂ. 50,000 ಮತ್ತು ಪದಕ, ನಿರ್ದೇಶಕರಿಗೆ : ರೂ. 10,000, ಮತ್ತು ಪದಕ

ವಿಶೇಷ ಸಾಮಾಜಿಕ ಪರಿಣಾಮ ಬೀರುವ ಚಿತ್ರಗಳಿಗೆ ರೂ. 75,000 ಮತ್ತು ಪದಕ, ನಿರ್ದೇಶಕರಿಗೆ : ರೂ. 10,000 ಮತ್ತು ಪದಕ.

ಅತ್ಯುತ್ತಮ ಮಕ್ಕಳ ಚಿತ್ರ : ರೂ.50,000 ಮತ್ತು ಪದಕ. ನಿರ್ದೇಶಕರಿಗೆ : ರೂ: 10,000.

ಅತ್ಯುತ್ತಮ ನಟ (ಸುಬ್ಬಯ್ಯ ನಾಯ್ಡು ಪ್ರಶಸ್ತಿ) ರೂ. 20,000 ಮತ್ತು ಪದಕ. ಅತ್ಯುತ್ತಮ ನಟಿ : ರೂ. 20,000 ಮತ್ತು ಪದಕ.

ಮಿಕ್ಕೆಲ್ಲ ಕ್ಷೇತ್ರಗಳಿಗೆ ರೂ. 10,000 ದಿಂದ ರೂ 5,000 ವರೆಗೆ ನಗದು ಬಹುಮಾನ ವಿತರಿಸಲ್ಪಡುತ್ತದೆ.

ರಾಜ್ಯ ಸರ್ಕಾರ, ರಾಷ್ಟ್ರ ಪ್ರಶಸ್ತಿಗಳಿಸಿದ ಚಿತ್ರಗಳಿಗೆ ಕೂಡ ಪ್ರೋತ್ಸಾಹ ಧನವನ್ನು ಕೊಟ್ಟು ಪುರಸ್ಕರಿಸುತ್ತಿದೆ. ಸ್ವರ್ಣ ಕಮಲ ಗಳಿಸಿದ ಅತ್ಯುತ್ತಮ ಚಿತ್ರಕ್ಕೆ ರೂ. 15 ಲಕ್ಷ, ಅತ್ಯುತ್ತಮ ಪ್ರಾದೇಶಿಕ ಚಿತ್ರಕ್ಕೆ ರೂ. 2.5 ಲಕ್ಷ, ವಿಶೇಷ ಪ್ರಶಸ್ತಿಗಳಿಸಿದ ಚಿತ್ರಗಳಿಗೆ ರೂ. 3 ಲಕ್ಷ ವಿತರಿಸಲ್ಪಡುತ್ತಿದೆ.

ರಾಜ್ಯ ಸರ್ಕಾರ 1966–67 ರಿಂದ ಕನ್ನಡ ಚಿತ್ರಗಳಿಗೆ ಸಹಾಯ ಧನ, ಕನ್ನಡ ಚಿತ್ರಗಳಿಗೆ ಪೂರ್ಣ ತೆರಿಗೆ ವಿನಾಯಿತಿ ಹೀಗೆ ಅನೇಕ ರೀತಿಯ ಸೌಲಭ್ಯಗಳನ್ನು ಕೊಡುತ್ತಿದೆ. ಈಗ ಹಾಲಿ ಕೊಡುತ್ತಿರುವ ಸಹಾಯ ಧನ, ವರ್ಷದಲ್ಲಿ, 20 ಆಯ್ದ ಉತ್ತಮ ಚಿತ್ರಗಳಿಗೆ ತಲಾ ಹತ್ತು ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತಿದೆ. ಮಕ್ಕಳ ಚಿತ್ರಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ವರ್ಷದಲ್ಲಿ ಎರಡು ಚಿತ್ರಗಳಿಗೆ ರೂ.25 ಲಕ್ಷ ಸಹಾಯ ಧನವನ್ನು ಕೊಡಲಾಗುತ್ತಿದೆ. ಸದ್ಯಕ್ಕೆ ರೀಮೇಕ್ ಚಿತ್ರಗಳಿಗೆ ಧನ ಸಹಾಯ ಕೊಡುತ್ತಿಲ್ಲ. ಆದರೆ ರೀಮೇಕ್ ಚಿತ್ರಗಳಿಗೆ ಕೊಡಬೇಕೊ, ಬೇಡವೋ ಎಂಬ ವಾದ, ವಿವಾದಗಳು ಇಂದಿಗೂ ನಡೆಯುತ್ತಲೇ ಇದೆ.

ಕನ್ನಡ ಚಲನಚಿತ್ರೋದ್ಯಮವನ್ನು ಅಭಿವೃದ್ಧಿಗೊಳಿಸಲು, ಕರ್ನಾಟಕ ಫಿಲಂ ಇಂಡಸ್ಟ್ರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಸಂಸ್ಥೆಯನ್ನು ಸರ್ಕಾರ 1968ರಲ್ಲಿ ಸ್ಥಾಪಿಸಿದೆ. ಇದರ ಪೂರ್ಣ ಸ್ವಾಮ್ಯವನ್ನು ಸರ್ಕಾರವೇ ವಹಿಸಿಕೊಂಡು ಹಲವಾರು ಕ್ಷೇತ್ರಗಳಲ್ಲಿ, ಕಂಠೀರವ ಸ್ಟುಡಿಯೊವಿನ ಕಾರ್ಯನಿರ್ವಹಣೆ, ಆಧುನಿಕ ಉಪಕರಣಗಳನ್ನು ಚಲನಚಿತ್ರಗಳ ನಿರ್ಮಾಣಕ್ಕೆ ಬಾಡಿಗೆಗೆ ಕೊಡುವುದು, ಚಿತ್ರ ಮಂದಿರಗಳ ನಿರ್ಮಾಣಕ್ಕೆ ಸಹಕಾರ, ಸಹಾಯ ಧನ, ಮತ್ತು ಪ್ರೋತ್ಸಾಹ, ಹೀಗೆ ಹಲವಾರು ಕ್ಷೇತ್ರಗಳಲ್ಲಿ ಪ್ರೋತ್ಸಾಹ ನೀಡುತ್ತಿದೆ. ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ ಅನೇಕ ಸಾಕ್ಷ ಚಿತ್ರಗಳನ್ನು ಕೂಡ ಮಾಡಿದೆ. ಪ್ರಸಿದ್ಧ ಸಾಹಿತಿಗಳು, ಗಣ್ಯವ್ಯಕ್ತಿಗಳು, ಹಲವಾರು ಚಾರಿತ್ರಿಕ ಸ್ಥಳಗಳು, ಪುಣ್ಯಕ್ಷೇತ್ರಗಳು, ಇವುಗಳನ್ನು ಕುರಿತು ಇದುವರೆಗೆ ಅನೇಕ ಉತ್ತಮ ಸಾಕ್ಷ್ಯ ಚಿತ್ರಗಳು ನಿರ್ಮಾಣವಾಗಿವೆ.

ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಒಂದು ಕನ್ನಡ ಫಿಲಂ ಆರ್ಕಿವ್ ಕೂಡ ಅಸ್ತಿತ್ವದಲ್ಲಿದೆ. ಈ ಸಂರಕ್ಷಣಾಗಾರದಲ್ಲಿ ನೂರ ಇಪ್ಪತ್ತಕ್ಕೂ ಹೆಚ್ಚು ಪ್ರಶಸ್ತಿ ಪಡೆದ ಹಾಗೂ ಪ್ರಮುಖವಾದ ಕನ್ನಡ ಚಿತ್ರಗಳು, ಮತ್ತು ಸಾಕ್ಷ್ಯ ಚಿತ್ರಗಳನ್ನು ಶೇಖರಿಸಲಾಗಿದೆ. ಹಲವು ವರ್ಷಗಳಿಂದೀಚೆಗೆ ಪ್ರಶಸ್ತಿ ವಿಜೇತ ಚಿತ್ರಗಳ ಮತ್ತು ಸಹಾಯಧನ ಸ್ವೀಕೃತ ಚಿತ್ರಗಳ ಸಿ.ಡಿ (ಅಅ) ಗಳನ್ನು ಪಡೆದು, ಸು. 300 ಕ್ಕೂ ಹೆಚ್ಚು ಚಿತ್ರಗಳ ಸಿ.ಡಿ.ಗಳನ್ನು ಶೇಖರಿಸಿದೆ. ಇದು ಕರ್ನಾಟಕ ಸರ್ಕಾರದ ಮೆಚ್ಚುವಂತಹ ಸಾಧನೆ.

ಕೇಂದ್ರ ಸರ್ಕಾರದ ಇಲಾಖೆಗಳಾದ, ಫಿಲಂಸ್ ಡಿವಿಷನ್ ಶಾಖೆ, ಫಿಲ್ಮ್ ಆರ್ಕೈವ್ಸ್ ಶಾಖೆ, ಮತ್ತು ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್ ಶಾಖೆಗಳು ಕೂಡ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿವೆ. ವಾರ್ತಾ ಮತ್ತು ಸಾಕ್ಷ್ಯ ಚಿತ್ರಗಳ ನಿರ್ಮಾಣ ಹಾಗೂ ಹಂಚಿಕೆಗಳನ್ನು ರಾಜ್ಯದಲ್ಲಿ ಮಾಡುವ ಕಾರ್ಯವನ್ನು ಫಿಲಂ ಡಿವಿಷನ್ ಮಾಡುತ್ತದೆ.

ಫಿಲಂ ಆರ್ಕೆವ್ 16 ಎಂ.ಎಂ. ಹಾಗೂ 35 ಎಂ.ಎಂ.ಚಿತ್ರಗಳ ಲೈಬ್ರರಿ ಯಲ್ಲಿ ನೂರಕ್ಕೂ ಹೆಚ್ಚು ಚಿತ್ರಗಳನ್ನು ಶೇಖರಿಸಿ ಫಿಲಂ ಸೊಸೈಟಿ ಹಾಗೂ ಮತ್ತಿತರ ಶಿಕ್ಷಣ ಸಂಸ್ಥೆಗಳಿಗೆ ಅಧ್ಯಯನಕ್ಕಾಗಿ ಎರವಲು ನೀಡುತ್ತದೆ. ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್ ಶಾಖೆ, ಚಲನಚಿತ್ರಗಳನ್ನು ತನ್ನ ಮಂಡಳಿಯ ಸದಸ್ಯರಿಂದ ಸೆನ್ಸಾರ್ ಮಾಡಲು ಸೌಲಭ್ಯ ಕಲ್ಪಿಸುತ್ತದೆ. (ಎಚ್.ಎಸ್.ಎಸ್.ಆರ್)

**ಕನ್ನಡ ಚಳವಳಿಗಳು :** ಏಕೀಕರಣೋತ್ತರ ಕರ್ನಾಟಕವನ್ನು ಪ್ರಗತಿ ಪರವಾಗಿ ರೂಪಿಸಲು ಬೌದ್ಧಿಕ ಹಾಗೂ ಭೌತಿಕ ಈ ಎರಡು ನೆಲೆಗಳಲ್ಲೂ ನಡೆಸಿದ ಚಳವಳಿಗಳನ್ನು ಕನ್ನಡ ಚಳವಳಿ ಎಂದು ಗುರುತಿಸಲಾಗುತ್ತದೆ. ಬೌದ್ಧಿಕವಾಗಿ ಅಥವಾ ಸೈದ್ಧಾಂತಿಕವಾಗಿ ಕರ್ನಾಟಕವನ್ನು ರೂಪಿಸುವ ಕಾರ್ಯದಲ್ಲಿ ಪ್ರಧಾನವಾದ ಪಾತ್ರವೆಂದರೆ, ಛಿದ್ರಗೊಂಡಿದ್ದ ಕನ್ನಡ ಪ್ರದೇಶಗಳಲ್ಲಿನ ಸೃಜನಶೀಲದ ಸಾಹಿತ್ಯಕ ಸೃಷ್ಟಿ. ಇದು ಕನ್ನಡದ ಸಂವೇದನೆಯನ್ನು ಕಾಯ್ದುಕೊಂಡು ಬಂದ ಸಾಂಸ್ಕೃತಿಕ ಪ್ರಕ್ರಿಯೆ. ಈ ಪ್ರಕ್ರಿಯೆ ಕವಿರಾಜಮಾರ್ಗಕಾರನಿಂದ ಮೊದಲ್ಗೊಂಡು ಬೇಂದ್ರೆ, ಕುವೆಂಪು ಅವರನ್ನು ಒಳಗೊಂಡಂತೆ ಇತ್ತೀಚಿನ ಸಾಹಿತ್ಯ ಸೃಷ್ಟಿಯವರೆಗೂ ಮುಂದುವರಿದಿದೆ. ಅಂದರೆ ನಾಡು, ನುಡಿ ಮತ್ತು ಕನ್ನಡಿಗರನ್ನು ಕುರಿತಂತೆ ಸಂಸ್ಕೃತ, ಇಂಗ್ಲಿಷ್ ಇನ್ನಿತರ ಭಾಷೆಗಳನ್ನು ಎದುರುಗೊಳ್ಳುವುದರೊಂದಿಗೆ ಕನ್ನಡದ ಅನನ್ಯತೆಯನ್ನು ಉಳಿಸಿಕೊಳ್ಳಲು ನಡೆಸಿದ ಪ್ರಯತ್ನ. 12ನೆಯ ಶತಮಾನದ ಎಲ್ಲ ವರ್ಗಗಳ ವಚನಕಾರರು ಕನ್ನಡ ಸಂವೇದನೆಯನ್ನು ಮೆರೆದದ್ದು ಮಹತ್ವಪೂರ್ಣವಾದುದು. ಎಲ್ಲ ರೀತಿಯ ಸಂವಹನ, ಅನುಸಂಧಾನಗಳಿಗೆ ಕನ್ನಡ ಭಾಷೆಯೊಂದನ್ನೇ ಮಾಧ್ಯಮವನ್ನಾಗಿಸಿದ್ದು ವಚನಗಳ, ವಚನಕಾರರ ಹೆಗ್ಗಳಿಕೆ. ಈ ದಿಸೆಯಲ್ಲಿ ವಚನಕಾರರನ್ನು ಮೊದಲ ಭಾಷಿಕ (ಕನ್ನಡ) ಹರಿಕಾರರು ಎನ್ನಬಹುದು. ಅನಂತರದ ನವೋದಯ, ಪ್ರಗತಿಶೀಲರ ಸಾಹಿತ್ಯ ಸೃಷ್ಟಿ, ಭಾರತದ ಸ್ವಾತಂತ್ರ್ಯ ಏಕೀಕರಣದ ಪ್ರಕ್ರಿಯೆ ಇವುಗಳು ಈ ಕನ್ನಡ ಚಳವಳಿಗಳಿಗೆ ಪ್ರೇರಣೆ ನೀಡಿದವು. ಇಂಥ ಪ್ರೇರಣೆ, ಪ್ರಯತ್ನಗಳಿಂದಾಗಿ ವಸಾಹತು ಕಾಲದಲ್ಲಿ ತುಂಡಾಗಿದ್ದ ಕನ್ನಡ ಭೂ ಪ್ರದೇಶಗಳು ಒಂದುಗೂಡಿದವು. ಹೀಗೆ ಒಂದಾದದ್ದೂ ಕನ್ನಡ ಚಳವಳಿಯೇ ಆಗಿದೆ. ಆದರೂ ಭಿನ್ನ ಸ್ವರೂಪದ ಚಳವಳಿಯ ಪ್ರಕ್ರಿಯೆಗಳು ಕಾಣಿಸಿಕೊಂಡದ್ದು ಏಕೀಕರಣದ ಅನಂತರವೇ.

ಸಾಂಸ್ಕೃತಿಕವಾಗಿ ದತ್ತವಾದ ಕನ್ನಡದ ಸಂವೇದನೆಗಳನ್ನು ತನ್ನದಾಗಿಸಿಕೊಂಡಿದ್ದ ರಾಜಕಾರಣ ಸೋಲನ್ನು ಅನುಭವಿಸತೊಡಗಿದ್ದು ಏಕೀಕರಣದ ಅನಂತರವೇ. ಆಡಳಿತದ ದೃಷ್ಟಿಯಿಂದ ಒಂದುಗೂಡಿದ ವಿಭಿನ್ನ ಪ್ರದೇಶಗಳ ಕನ್ನಡಿಗರ ಅಭಿರುಚಿ, ಸಂಸ್ಕೃತಿಗಳು ಭಿನ್ನವಾಗಿದ್ದುದರಿಂದ, ಇದನ್ನು ಅರಿಯಲು ಹಾಗೂ ಅರಿತು ಕನ್ನಡಿಗರ ಸಮಸ್ಯೆಗಳನ್ನು ಬಗೆಹರಿಸಲು ರಾಜಕಾರಣಿಗಳು ಸೋತರು. ಇದರ ಪರಿಣಾಮವಾಗಿಯೇ ಕನ್ನಡ ಚಳವಳಿ ಭಿನ್ನ ರೀತಿಯಲ್ಲಿ ಕಾಣಿಸಿಕೊಂಡಿತು. 1960ರ ದಶಕದಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಆಶೋತ್ತರಗಳ ಈಡೇರಿಕೆಗಾಗಿ ಕನ್ನಡಿಗರು ಮತ್ತೆ ಸಂಘಟಿತರಾಗುವ ಅನಿವಾರ್ಯತೆ ಹುಟ್ಟಿಕೊಂಡಿತು. ಏಕೀಕೃತ ಕರ್ನಾಟಕ ಎಲ್ಲ ಕನ್ನಡ ಪ್ರದೇಶಗಳನ್ನು ಒಂದೇ ಆಡಳಿತದ ತೆಕ್ಕೆಗೆ ಪೂರ್ತಿಯಾಗಿ ತೆಗೆದುಕೊಂಡಿರಲಿಲ್ಲ. ಜತ್, ಅಕ್ಕಲಕೋಟೆ, ಸೊಲ್ಲಾಪುರ, ಕಾಸರಗೋಡು, ಆಲೂರು, ಆದವಾನಿ, ರಾಯದುರ್ಗ, ಮಡಕಶಿರ, ಗೂಳ್ಯಂ, ಕೌತಾಳ್, ಬದನೆಹಾಳ್, ಹೊಸೂರು, ತಾಳವಾಡಿ, ನೀಲಗಿರಿ ಮೊದಲಾದವು ಕನ್ನಡ ರಾಜ್ಯಕ್ಕೆ ಸೇರಲಿಲ್ಲ. ಬದಲಾಗಿ, ತೆಲುಗು, ತಮಿಳು, ಮಲೆಯಾಳ, ಮರಾಠಿ ಮೊದಲಾದ ಭಾಷಿಕರೊಂದಿಗೆ ಆಯಾ ರಾಜ್ಯ ಸರ್ಕಾರಗಳ ಒತ್ತಡಗಳಿಗೆ ಮಣಿಯುವಂತೆ ಆಗಿತ್ತು. ಏಕೀಕರಣ ಸ್ಥಳೀಯ ಗಡಿಭಾಗಗಳ ಕನ್ನಡಿಗರನ್ನು ಭಾಷಿಕ ಕೀಳರಿಮೆಗೆ ಒಳಗಾಗುವಂತೆ ಮಾಡಿತು. ಈ ಕುರಿತ ಸಮಸ್ಯೆಗಳು ಕರ್ನಾಟಕ ಸರ್ಕಾರದ ಆಡಳಿತ ನೀತಿಗೆ ಸವಾಲಾಗಿ ಪರಿಣಮಿಸಿದವು. ನಾಡಿನ ರಾಜಧಾನಿಯೂ ಆಡಳಿತ ವ್ಯವಸ್ಥೆಯ ಕೇಂದ್ರವೂ ಆಗಿದ್ದ ಬೆಂಗಳೂರು ನಗರ ಕನ್ನಡೇತರರ ಪ್ರಾಬಲ್ಯದ ಕೇಂದ್ರವಾಯಿತು. ಹಳೆಯ ಮೈಸೂರು, ಮುಂಬಯಿ, ಹೈದರಾಬಾದ್, ಮದರಾಸು ಹಾಗೂ ಕೊಡಗು ಪ್ರದೇಶಗಳಲ್ಲಿ ಕನ್ನಡಿಗರ ಮನೋಗತವನ್ನು ಅರಿಯುವಲ್ಲಿ ರಾಜಕಾರಣ ವಿಫಲವಾಯಿತು. ಸಾಂಸ್ಕೃತಿಕವಾಗಿ ಒಪ್ಪುತ್ತಿದ್ದ ಕರ್ನಾಟಕ ಎಂಬ ಹೆಸರಿಗೆ ಬದಲಾಗಿ ವಿಶಾಲ ಮೈಸೂರು ರಾಜ್ಯವೆಂಬ ಹೆಸರಿನಿಂದ ಏಕೀಕರಣವನ್ನು ಸಾಧಿಸಿದ್ದು ಕನ್ನಡಿಗರಲ್ಲಿ ಆಘಾತವನ್ನುಂಟುಮಾಡಿತ್ತು. ಇದಕ್ಕೆ ಮುಂಬಯಿ ಕರ್ನಾಟಕದ (ಉತ್ತರದ) ಕನ್ನಡಿಗರು ತೀವ್ರವಾಗಿ ಪ್ರತಿಕ್ರಿಯಿಸಿದ್ದೂ ಉಂಟು. ಇಂಥ ಹಲವು ಕಾರಣಗಳಿಂದಾಗಿ ನಾಡಿನ ಏಕೀಕರಣ ಸಮಾಧಾನವನ್ನುಂಟು ಮಾಡಿರಲಿಲ್ಲ. ಇದರ ಪರಿಣಾಮವೇ ಬೆಂಗಳೂರಿನ ಪರಿಸರದಲ್ಲಿ ಕನ್ನಡ ಚಳವಳಿ ಸಂಘಟಿತ ರೂಪ ಪಡೆದು, ನಾಡಿನ ಉಳಿದೆಡೆಗಳಿಗೆ ಅದು ಕ್ರಮೇಣ ಪಸರಿಸಿತು. ಆದರೆ ಇದರಲ್ಲಿ ಬೆಂಗಳೂರು ಕೇಂದ್ರಿತ ಕನ್ನಡ ಚಳವಳಿಗಳ ಪಾಲು ದೊಡ್ಡದು.

**ಬೆಂಗಳೂರಿನ ಕನ್ನಡ ಪರಿಸರ:** ಮೈಸೂರು ಸಂಸ್ಥಾನದ ಆಡಳಿತ ಕೇಂದ್ರವಾಗಿದ್ದ ಬೆಂಗಳೂರು ಏಕೀಕರಣದ ಅನಂತರ ರಾಜ್ಯದ ರಾಜಧಾನಿಯಾಗಿ ಮುಂದುವರಿಯಿತು. ಅದರಿಂದ ನಗರದ ಬೆಳವಣಿಗೆಯೂ ಸಾಧಿಸಿತು. ಆದರೆ ನಾಡು, ನುಡಿ, ಸಂಸ್ಕೃತಿಗಳ ಕೇಂದ್ರಸ್ಥಾನವಾಗಿ ಅದು ತನ್ನನ್ನು ಗುರುತಿಸಿಕೊಳ್ಳಲಿಲ್ಲ. ಕನ್ನಡಿಗರಿಗೆ ಭರವಸೆ ಮೂಡಿಸುವ ಹಾಗೂ ಕನಸುಗಳನ್ನು ನನಸಾಗಿಸುವ ನಿಟ್ಟಿನಲ್ಲಿ ಬೆಂಗಳೂರು ವಿಫಲವಾಯಿತು. ಇದಕ್ಕೆ ಕಾರಣವೆಂದರೆ ಅಲ್ಲಿ ನೆಲೆಸಿದ್ದ ಕನ್ನಡೇತರರ ಪ್ರಾಬಲ್ಯ, ಹಿಂದಿನ ಕಮೀಷನರು, ದಿವಾನರುಗಳ ಆಡಳಿತದಿಂದಲೂ ಶಿಕ್ಷಣ, ಉದ್ಯೋಗಗಳನ್ನರಸಿ ಬರುವ ಕನ್ನಡೇತರರಿಗೆ ಪ್ರೇರಣೆ ನೀಡಿತ್ತು. ದೇಶದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದ ಅನಂತರವೂ ಅನೇಕ ಉದ್ದಿಮೆಗಳು ಬೆಂಗಳೂರಿನಿಂದ ಆಕರ್ಷಿತವಾದವು. ಇವುಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಬಹುಪಾಲು ಪಕ್ಕದ ತಮಿಳುನಾಡಿನ ತಮಿಳುಭಾಷಿಕರೇ ಆಗಿದ್ದರು. ಜೊತೆಗೆ ಇತರ ಭಾಷಿಕರೂ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದರು. ಕೇಂದ್ರ ಸರ್ಕಾರಿ ಉದ್ಯಮಗಳಲ್ಲೂ ಇವರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಾಗಿತ್ತು. ಬೆಂಗಳೂರಿನಲ್ಲಿದ್ದ ಐ.ಟಿ.ಐ., ಬಿ.ಇ.ಎಲ್., ಎಚ್.ಎಂ.ಟಿ., ಮೈಕೋ ಮೊದಲಾದ ಕಾರ್ಖಾನೆಗಳಲ್ಲಿ ಕನ್ನಡಿಗರ ಸಂಖ್ಯೆ ತೀರ ಕಡಿಮೆ. ಸ್ಥಳೀಯ ಕನ್ನಡಿಗರಿಗೆ ಸೇಕಡ 50ರಷ್ಟು ಪ್ರಾತಿನಿಧ್ಯ ಕೊಡಬೇಕೆಂಬ ನಿಯಮವನ್ನು ಕೇಂದ್ರ ಸರ್ಕಾರಿ ಸಂಘ ಸಂಸ್ಥೆಗಳು ಮುರಿದಿದ್ದವು. ಅಂಚೆ, ತಂತಿ, ರೈಲ್ವೆ ಮೊದಲಾದ ಇಲಾಖೆಗಳಲ್ಲಿ ಕನ್ನಡ ಮಾತನಾಡುವವರೇ ಇರಲಿಲ್ಲ. ಸಾರಿಗೆ, ಪೋಲೀಸು ಇಲಾಖೆಗಳಂಥ ರಾಜ್ಯ ಸರ್ಕಾರಿ ನೌಕರಿಗಳಲ್ಲೂ ತಮಿಳರು ಉದ್ಯೋಗಗಳನ್ನು ಪಡೆದಿದ್ದರು.

ಬೆಂಗಳೂರಿನ ಜನನಿಬಿಡ ಪ್ರದೇಶಗಳಾದ ರೈಲ್ವೆ ನಿಲ್ದಾಣ, ಕೆಂಪೇಗೌಡ ಬಸ್ ನಿಲ್ದಾಣ (ಇಂದಿನ ಮೆಜೆಸ್ಟಿಕ್ ಪ್ರದೇಶ), ಗಾಂಧಿನಗರ ಮೊದಲಾದ ಕಡೆಗಳಲ್ಲಿ ತಮಿಳು ಮಾತನಾಡುವವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕನ್ನಡದ ನಾಮಫಲಕಗಳು ಕಾಣುತ್ತಿರಲಿಲ್ಲ. ಬದಲಾಗಿ ತಮಿಳು ಹಾಗೂ ಇಂಗ್ಲಿಷನವೆ ಹೆಚ್ಚು. ಕನ್ನಡಿಗರನ್ನು ಸ್ವಾಗತಿಸುತ್ತಿದ್ದ ಕೂಲಿ ಆಳುಗಳು, ರಿಕ್ಷಾ ಚಾಲಕರು ತಮಿಳರೇ ಆಗಿದ್ದರು. ತೆಲುಗು, ಮಲೆಯಾಳ, ಹಿಂದಿ, ಮರಾಠಿ ಭಾಷೆಗಳನ್ನು ಆಡುವವರನ್ನೂ ನೋಡಬಹುದಿತ್ತು. ದೂರದ ಊರುಗಳಿಂದ ಬೆಂಗಳೂರಿಗೆ ಬರುತ್ತಿದ್ದ ಕನ್ನಡಿಗರು ಕನ್ನಡೇತರರಿಂದ ಅವಮಾನ, ಕೀಟಲೆಗಳನ್ನು ಅನುಭವಿಸುವ ಪರಿಸ್ಥಿತಿ ಉದ್ಭವವಾಗಿತ್ತು. ಆಗ ಇದನ್ನು ಪ್ರತಿಭಟಿಸುವ ಯಾವುದೇ ಸಂಘಟಿತ ಮಾರ್ಗಗಳು ಕನ್ನಡಿಗರಿಗೆ ಇರಲಿಲ್ಲ. ಇಂಥ ವೇದಿಕೆಗಳನ್ನು ನಿರ್ಮಿಸಿಕೊಂಡು ಕನ್ನಡತನವನ್ನು ಮೂಡಿಸಲು ಮುಂದೆ ಬಂದವರು ಬೆರಳೆಣಿಕೆಯಷ್ಟು ಸಂಖ್ಯೆಯ ಮಂದಿ ಮಾತ್ರ. ಅ.ನ.ಕೃಷ್ಣರಾವ್, ಕೋಣಂದೂರು ಲಿಂಗಪ್ಪ, ಮ.ರಾಮಮೂರ್ತಿ, ನಾಡಿಗೇರ ಕೃಷ್ಣರಾವ್, ಮೈ.ಸು.ನಟರಾಜ, ಮೈ.ಸು.ಶೇಷಗಿರಿರಾವ್, ಕರ್ಲಮಂಗಲಂ ಶ್ರೀಕಂಠಯ್ಯ, ಬಿ.ನಿ.ಈಶ್ವರಪ್ಪ, ತಿ.ತಾ.ಶರ್ಮ, ಎಂ.ವಿ.ಸುಬ್ಬರಾವ್ ಮೊದಲಾದವರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಇವರೆಲ್ಲ 1960ರ ದಶಕದ ಆರಂಭಿಕ ವರ್ಷಗಳಲ್ಲಿ ಕನ್ನಡದ ಚಳವಳಿಗಾಗಿ ತಮ್ಮನ್ನು ತೊಡಗಿಸಿಕೊಂಡವರು. ಆದರೆ ಇವರನ್ನು ಒಂದು ವೇದಿಕೆಯಡಿಗೆ ತಂದ ಕೋಣಂದೂರು ಲಿಂಗಪ್ಪ ಅವರ ಪ್ರಯತ್ನಗಳು ಪ್ರಧಾನವಾದವು. ಕನ್ನಡ ಚಳವಳಿಗೆ ಆರಂಭಿಕ ನೆಲೆಗಟ್ಟನ್ನು ಹಾಕಿಕೊಟ್ಟ ಕೀರ್ತಿ ಅವರಿಗೂ ಇತರ ಆದ್ಯ ಹೋರಾಟಗಾರರಿಗೂ ಸಲ್ಲುತ್ತದೆ.

**ಚಳವಳಿಯ ಮೊದಲ ಘಟ್ಟ:** ರಾಮಮನೋಹರ ಲೋಹಿಯ ಅವರ ಭಾಷಿಕ ಸಿದ್ಧಾಂತಗಳಿಂದ ಪ್ರೇರಿತರಾಗಿದ್ದ ಶಾಂತವೇರಿ ಗೋಪಾಲಗೌಡರು ತಮ್ಮದೇ ಆದ ರೀತಿಯಲ್ಲಿ ಕನ್ನಡಕ್ಕಾಗಿ ಚಿಂತನೆ ನಡೆಸಿದ್ದರು. ರಾಜಕಾರಣದಲ್ಲಿ ಇವರು ಪ್ರಯತ್ನ ನಡೆಸಿದ್ದಂತೆ ಇದೇ ದಿಕ್ಕಿನಲ್ಲಿ ಸಾಹಿತ್ಯಕವಾಗಿ ಕುವೆಂಪು ಮೊದಲಾದವರು ಚಿಂತನೆ ನಡೆಸಿದ್ದರು. ಪ್ರಗತಿಶೀಲದ ವಲಯದಲ್ಲಿ ಅ.ನ.ಕೃ. ಆದಿಯಾಗಿ ಅನೇಕರು ಈ ಕುರಿತು ತಾತ್ತ್ವಿಕ ತಳಹದಿಯನ್ನು ರೂಪಿಸಲು ಪ್ರಯತ್ನಗಳನ್ನು ಮಾಡಿದ್ದು ಗಮನಾರ್ಹ. ಶಾಂತವೇರಿಯವರ ಶಿಷ್ಯರಾಗಿದ್ದ ಕೋಣಂದೂರು ಲಿಂಗಪ್ಪ ಬೆಂಗಳೂರಿಗೆ (ವಿದ್ಯಾರ್ಥಿ ದೆಸೆಯಲ್ಲಿ) ಬಂದಾಗ ತಮಿಳರಿಂದ ಅಪಮಾನಕ್ಕೆ ಒಳಗಾದರು. ಈ ಅಪಮಾನದ ಪರಿಣಾಮವಾಗಿ ಅವರು ಕರ್ನಾಟಕ (ಕನ್ನಡ) ಯುವಜನ ಸಭಾವನ್ನು ಹುಟ್ಟುಹಾಕಿದರು. 1957ರ ವೇಳೆಗೆ ಲೋಹಿಯ ಕರೆಯನ್ನು ಅನುಸರಿಸಿ ಅಂಗ್ರೇಜಿ (ಇಂಗ್ಲಿಷ್) ಹಠಾವೋ ಚಳವಳಿ ಆರಂಭಗೊಂಡಿತ್ತು. ಮೈಸೂರಿನಲ್ಲಿ ಕುವೆಂಪು ಅವರು ಸಹ ಈ ಕರೆಗೆ ಸ್ಪಂದಿಸಿದರು. ಇಂಗ್ಲಿಷ್ ಪ್ರಾಧ್ಯಾಪಕರ ರಾಷ್ಟ್ರೀಯ ಸಭೆಯೊಂದು ಮೈಸೂರಿನಲ್ಲಿ ನಡೆಯಿತು. ಇದಕ್ಕೆ ಪ್ರತಿಕ್ರಿಯಿಸಲು ಕೋಣಂದೂರು ಲಿಂಗಪ್ಪ, ಪೂರ್ಣಚಂದ್ರತೇಜಸ್ವಿ, ಕೆ.ಎಚ್. ಶ್ರೀನಿವಾಸ, ಕಡಿದಾಳ್ ಶಾಮಣ್ಣ ಮೊದಲಾದ ವಿದ್ಯಾರ್ಥಿಗಳಿಗೆ ಕುವೆಂಪು ಪ್ರೇರಣೆ ನೀಡಿದ್ದರು. ಈ ಪ್ರತಿಕ್ರಿಯೆಗೆ ಇಂಗ್ಲಿಷಿನಲ್ಲಿಯೇ ಪ್ರತಿಭಟನಾ ಕರಪತ್ರಗಳನ್ನು ರಚಿಸುವುದು ಅನಿವಾರ್ಯವಾಯಿತು. ಆಗ ಇಂಗ್ಲಿಷ್ ವಿರುದ್ಧ ಇಂಗ್ಲಿಷಿನಲ್ಲಿಯೇ ಕರಪತ್ರವೊಂದನ್ನು ಬರೆದುಕೊಟ್ಟವರು ಯು.ಆರ್.ಅನಂತಮೂರ್ತಿ, ಇಂಗ್ಲಿಷ್ ಪ್ರಾಧ್ಯಾಪಕರ ಸಭೆಯಲ್ಲಿ ಕನ್ನಡದ ಯುವಕರು ಈ ಕರಪತ್ರಗಳನ್ನು ಹಂಚುವುದರ ಮುಖೇನ ಕನ್ನಡದ ಪ್ರಾಶಸ್ತ್ಯದ ಕಡೆಗೆ ಗಮನ ಸೆಳೆದಿದ್ದರು. ಇಂಥ ಚಟುವಟಿಕೆಗಳನ್ನು ಹುಟ್ಟುಹಾಕಿದ ಮೊತ್ತಮೊದಲ ಯುವ ಸಂಘಟನೆಯೇ ಕನ್ನಡ ಯುವಜನ ಸಭಾ. ಇದು ಮೈಸೂರಿನ ಇಂದಿನ ದಾಸ್

ಪ್ರಕಾಶ್ ಹೋಟೇಲ್ ಬಳಿ ತನ್ನ ಮೊದಲ ಸಭೆ ಸೇರಿ ಕನ್ನಡದ ಅಳಿವು ಉಳಿವಿನ ಬಗ್ಗೆ ಚಿಂತನೆ ನಡೆಸಿತ್ತು. ಇದು ಕನ್ನಡ ಚಳವಳಿಯ ಚರಿತ್ರೆಯಲ್ಲಿಯೇ ಮೊದಲ ಸಂಘಟನೆಯಾಗಿತ್ತು. ಬೆಂಗಳೂರಿನಲ್ಲಿ ಕನ್ನಡತನವನ್ನು ಮೂಡಿಸುವುದಕ್ಕೆ ಕನ್ನಡ ಯುವಜನ ಸಭಾದ ವೇದಿಕೆಯನ್ನು ಬಳಸಿಕೊಳ್ಳಲಾಯಿತು. ಬೆಂಗಳೂರಿನಲ್ಲಿ ಚಳವಳಿ ಹೂಡುವುದಕ್ಕೆ ಮೊದಲು ನಾಡಿನ ಇತರ ಜಿಲ್ಲೆ, ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ 120ಕ್ಕೂ ಹೆಚ್ಚಿನ ಸಭಾದ ಶಾಖೆಗಳನ್ನು ತೆರೆದು ಸಂಘಟಿಸಿದ್ದು ಗಮನಾರ್ಹ ಸಂಗತಿ. 1959ರ ವೇಳೆಗೆ ಕನ್ನಡದ ಸ್ಥಿತಿಗತಿಗಳ ಸುಧಾರಣೆಗಾಗಿ ಕನ್ನಡಿಗರು ಸಂಘಟಿತರಾಗುವುದು ಅನಿವಾರ್ಯ ಎಂಬ ವಾತಾವರಣವನ್ನು ಮೂಡಿಸಲಾಗಿತ್ತು. ಇದಕ್ಕೆ ಸಾಹಿತಿ ಅ.ನ.ಕೃ. ಅವರ ಪ್ರಯತ್ನ, ಪ್ರವಾಸ ಕಾರ್ಯಕ್ರಮಗಳು ಹೆಚ್ಚಿನ ಹುರುಪನ್ನು ತಂದಿದ್ದವು. ಅ.ನ.ಕೃ. ಅವರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಂದು ಪರಿಷತ್ತು (ಕ.ಸಾ.ಪ.) ಈ ವೇಳೆಗಾಗಲೇ ಘೋಷಿಸಿತ್ತು. ಅ.ನ.ಕೃ. ಅವರು ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ (ಮಣಿಪಾಲ, 1960), ಕನ್ನಡದ ಬಂಟರ ಆವಶ್ಯಕತೆಯನ್ನು ಒತ್ತಿ ಹೇಳಿದ್ದರು. ಸಮ್ಮೇಳನದಲ್ಲಿದ್ದ ಈ ಕನ್ನಡ ಯುವಜನ ಸಭಾದ ಯುವಕರು ಕನ್ನಡ ಯುವಜನ ಸಭೆಯನ್ನು ವರಕವಿ ಬೇಂದ್ರೆ ಅವರಿಂದ ವಿಧ್ಯುಕ್ತವಾಗಿ ಉದ್ಘಾಟನೆ (28–12–1960) ಮಾಡಿಸಿದ್ದು ಒಂದು ದಾಖಲೆ. ಲಿಂಗಪ್ಪನವರು ಸಭಾದ ಸಂಚಾಲಕರಾಗಿ ನಾಡಿನ ವಿವಿಧ ಕಡೆಗಳಲ್ಲಿ ಅ.ನ.ಕೃ. ಅವರಿಂದ ಭಾಷಣ ಮಾಡಿಸಿ ಜಾಗೃತಿ ಮೂಡಿಸಿದರು. ಮುಂದೆ ಬೆಂಗಳೂರಿನಲ್ಲಿ ಸಭೆ ಸೇರಿ ಎಂ.ವಿ.ಸುಬ್ಬರಾಯರ ಸಾಹಿತ್ಯ ಕುಟೀರದ ಅಡಿಯಲ್ಲಿ ಕನ್ನಡ ಕೆಲಸದ ರೂಪ ರೇಷೆಗಳನ್ನು ಸಿದ್ಧಪಡಿಸಲಾಯಿತು. ಇದರಲ್ಲಿ ಬಹುಪಾಲು ಹಿರಿಯ ಸಾಹಿತಿ, ಕಲಾವಿದರು ಭಾಗವಹಿಸಿದ್ದರು. ಸಭಾದವರು ಹಿರಿಯರ ಸಹಕಾರ ಪಡೆದು ಆಲೂರ ವೆಂಕಟರಾಯರ ಕರೆಗೆ ಓಗೊಟ್ಟು ನವೆಂಬರ್ ತಿಂಗಳಿನಲ್ಲಿ ರಾಜ್ಯೋತ್ಸವವನ್ನು (1961) ಆಚರಿಸಿದ್ದು ಗಮನಾರ್ಹ. ಅಲ್ಲದೆ ಬೆಂಗಳೂರಿನಲ್ಲಿ ಕನ್ನಡಿಗರನ್ನು ಸಂಘಟಿಸಿ ಪ್ರತಿಕ್ರಿಯಿಸುವಂತೆ ಮಾಡಲು ಸಭಾದ ಯುವಕರು ಕನ್ನಡ ದಿನವನ್ನು ಆಚರಿಸಲು ಕರೆಕೊಟ್ಟರು. ಅದರಂತೆ 23–11–1961ರಂದು ನಾಡು ನುಡಿಗಳ ಬಗ್ಗೆ ಅರಿವು ಮೂಡಿಸಲಾಯಿತು. ಇದಾದ ಅನಂತರ ದಾವಣಗೆರೆಯಲ್ಲಿ ಬೃಹತ್ ಸಮಾವೇಶವೊಂದನ್ನು ನಡೆಸಲು ಸಿದ್ಧತೆಗಳನ್ನು ಮಾಡಲಾಯಿತು. ಬೆಂಗಳೂರಿನಲ್ಲಿ ಸಭಾದ ಮೊದಲ ಬೃಹತ್ ಅಧಿವೇಶನ ನಡೆಯಿತು. ಕನ್ನಡ ಭುವನೇಶ್ವರಿ ಬಾವುಟವನ್ನು ಹಾರಿಸುವುದರೊಂದಿಗೆ (4–12–1962) ಉದ್ಘಾಟನೆಗೊಂಡ ಈ ಬೃಹತ್ ಅಧಿವೇಶನ ಕನ್ನಡ ಚಳವಳಿಯ ಚರಿತ್ರೆಯಲ್ಲಿ ಮುಖ್ಯವಾದುದು. ಇಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕಗಳಿಗೆ ಸಂಬಂಧಿಸಿದಂತೆ 15 ನಿರ್ಣಯಗಳನ್ನು ಮಂಡಿಸಿ ಸ್ವೀಕರಿಸಲಾಯಿತು. ನಾಡಿನ ಗಡಿಗಳು, ರೈಲ್ವೆ, ಪ್ರಶಸ್ತಿ, ಕನ್ನಡ ಬೆರಳಚ್ಚುಯಂತ್ರ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮಾಧ್ಯಮ, ಕನ್ನಡ ಕಲಾವಿದರಿಗೆ ಆದ್ಯತೆ, ಕನ್ನಡ ಚಲನಚಿತ್ರಗಳಿಗೆ ಪ್ರೋತ್ಸಾಹ, ಆರ್ಥಿಕ, ಅಭಿವೃದ್ಧಿ ಮೊದಲಾದ ಎಲ್ಲ ವಿಚಾರಗಳೂ ನಿರ್ಣಯಗಳಲ್ಲಿ ಸೇರಿದ್ದವು. ಈ ನಿರ್ಣಯಗಳನ್ನು ನಾಡಿನ ಎಲ್ಲ ಕನ್ನಡಪರವಾದ ಸಂಘಟನೆಗಳಿಗೂ ಕಳುಹಿಸಿಕೊಡಲಾಯಿತು. ಆದರೆ ಬೆಂಗಳೂರಿನ ಚಾಮರಾಜಪೇಟೆಯ ರಾಮಸೇವಾ ಮಂಡಲಿಯವರು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕನ್ನಡ ಕಲಾವಿದರನ್ನು ಕರೆಸದೆ ಸಭೆಯ ನಿರ್ಣಯಗಳನ್ನು ಮುರಿದರು. ಮದರಾಸಿನಿಂದ ಎಂ.ಎಸ್. ಸುಬ್ಬುಲಕ್ಷ್ಮಿಯವರನ್ನು ಕರೆಸಿ ಸಂಗೀತ ಕಛೇರಿಯನ್ನು ನಡೆಸಿದ್ದು ಕನ್ನಡ ಕಾರ್ಯಕರ್ತರ ಪ್ರತಿಭಟನೆಗೆ ಗುರಿಯಾಗುವಂತೆ ಮಾಡಿತು. ಶಾಂತ ರೀತಿಯಲ್ಲಿ ಕನ್ನಡದ ಕಳಕಳಿಯನ್ನು ಪ್ರದರ್ಶಿಸಲು ಹಾತೊರೆದಿದ್ದ ಕಾರ್ಯಕರ್ತರನ್ನು ಕಿಡಿಗೇಡಿಗಳು ಕೆಣಕಿದರು. ಪರಿಸ್ಥಿತಿ ಹಿಂಸಾತ್ಮಕ ರೂಪ ಪಡೆದು, ಪೊಲೀಸರಿಂದ ಲಾಠಿ ಪ್ರಹಾರ ಆಯಿತು. ತಮಿಳು ಪತ್ರಿಕೆಗಳು ಇದನ್ನು ಭಾಷಿಕ ದ್ವೇಷವೆಂದು ತಿರುಚಿ ಬರೆದವು. ಕನ್ನಡಿಗರಿಗೆ ಸಂಕುಚಿತರೆಂಬ ಪಟ್ಟ ಕಟ್ಟಲು ಪ್ರಯತ್ನಿಸಿದ ಈ ಘಟನೆ ಕನ್ನಡ ಚಳವಳಿಯನ್ನು ಭಿನ್ನ ಸ್ವರೂಪದಲ್ಲಿ ಗ್ರಹಿಸಲು ಎಡೆಮಾಡಿಕೊಟ್ಟಿತು.

**ಕನ್ನಡ ಜಾಗೃತ ಪರಿಷತ್ ಹಾಗೂ ಸಂಯುಕ್ತ ರಂಗ:** ಬೆಂಗಳೂರಿನಲ್ಲಿ ಅ.ನ.ಕೃ., ಮ. ರಾಮಮೂರ್ತಿ ಮೊದಲಾದ ಚಳವಳಿ ನಾಯಕರು ಕನ್ನಡಪರವಾದ ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳಲು ಕರೆ ನೀಡಿದ್ದರು. ತಮಿಳರ ಸಂಘಟನೆಗಳು ವಿಪರೀತವಾಗತೊಡಗಿದ್ದವು. ಅದರಲ್ಲೂ ಡಿ.ಎಂ.ಕೆ. (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷದವರ ಕಪ್ಪು ಮತ್ತು ಕೆಂಪು ಬಣ್ಣದ ಬಾವುಟಗಳ ಹಾರಾಟ ಹೆಚ್ಚಾಯಿತು. ಕನ್ನಡಿಗರಿಗೆ ನಿರ್ದಿಷ್ಟ ಕನ್ನಡ ಬಾವುಟ ಇರಲಿಲ್ಲ. ಭುವನೇಶ್ವರಿ, ಕರ್ನಾಟಕ ಭೂಪಟ, ಗಂಡಭೇರುಂಡ, ಚಿತ್ರಗಳಿರುವ ಬಾವುಟಗಳನ್ನೇ ಬಳಸುತ್ತಿದ್ದರು. ಹೀಗಾಗಿ ಕನ್ನಡದ ಈ ಸಂಘಟನೆಗಳು ಬಾವುಟದ ಕೊರತೆಯನ್ನು ಮನಗಂಡು ಕ್ರಿಯಾಶೀಲವಾಗಿದ್ದವು. ಕನ್ನಡಿಗರಲ್ಲಿ, ಸಂಘ ಸಂಸ್ಥೆಗಳಲ್ಲಿ ಅಭಿಮಾನವನ್ನು ಮೂಡಿಸಲು ಕನ್ನಡ ಜಾಗೃತ ಪರಿಷತ್ ಎಂಬ ಸಂಘಟನೆ ಹುಟ್ಟಿಕೊಂಡಿತು. ಕನ್ನಡದ ಅಭಿಮಾನಕ್ಕಾಗಿ, ಚಳವಳಿಯ ರೂಪರೇಷೆಗಳಿಗಾಗಿ ಈ ಸಂಘಟನೆ ಹೊರಡಿಸಿದ ಪತ್ರಿಕೆಯೇ 'ಕನ್ನಡ ಜಾಗೃತ ಪತ್ರ'. ಇದು ತ್ರೈಮಾಸಿಕವಾಗಿತ್ತು. ಕೆಲವೇ ದಿನಗಳಲ್ಲಿ ಇದೇ ಆಶಯಕ್ಕಾಗಿ ಧ್ರುವ ಎಂಬ ಮಾಸಿಕ ಹೊರಬಂತು. ಎಂ.ನಾಗರಾಜ್ ಅವರು ಇವೆರಡರ ಸಂಪಾದಕರಾಗಿದ್ದರು. ಪತ್ರಿಕೆ ನಡೆಸಿ, ನಷ್ಟ ಅನುಭವಿಸಿ ಆತ್ಮಹತ್ಯೆ ಮಾಡಿಕೊಂಡರು. ಈ ದುರಂತ ಘಟನೆ ಕನ್ನಡ ಯುವಜನ ಸಭಾದವರಿಗೆ ಮತ್ತಷ್ಟು ಕೆಚ್ಚು, ಹುಮ್ಮಸ್ಸುಗಳನ್ನು ತುಂಬಿತು. ಸಭಾದವರು ಚಳವಳಿಗಳಿಗಾಗಿಯೇ 'ಕನ್ನಡ ಯುವಜನ' ಎಂಬ ಪತ್ರಿಕೆಯನ್ನು ಹೊರಡಿಸಲಾರಂಭಿಸಿದರು. ಇದರ ಸಂಪಾದಕರಾಗಿದ್ದವರು ಚಳವಳಿಗಾರ ಮ. ರಾಮಮೂರ್ತಿ. ಅ.ನ.ಕೃ. ಮತ್ತು ಮ.ರಾಮಮೂರ್ತಿ ಅವರು ಜನ ಕರೆದೆಡೆಗೆ ಹೋಗಿ ಕನ್ನಡಿಗರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಸಲಹೆ ನೀಡಿ ಸಂಘಟಿಸತೊಡಗಿದರು. ಇದರ ಪರಿಣಾಮವಾಗಿ ಹುಟ್ಟಿಕೊಂಡಿದ್ದೇ ಕರ್ನಾಟಕ ಸಂಯುಕ್ತ ರಂಗ. ಕನ್ನಡದ ಎಲ್ಲ ಸಂಸ್ಥೆಗಳನ್ನು ಒಂದೇ ವೇದಿಕೆಯಡಿಗೆ ತರುವುದು ಇದರ ಆಶಯವಾಗಿತ್ತು. 1962ರಲ್ಲಿ ಅಸ್ತಿತ್ವಕ್ಕೆ ಬಂದ ಈ ರಂಗದ ಅಧ್ಯಕ್ಷರು ಅ.ನ.ಕೃ., ಕಾರ್ಯದರ್ಶಿ ಮ. ರಾಮಮೂರ್ತಿ. ಇವರೊಂದಿಗೆ ತ.ರಾ.ಸು., ಅ.ನ.ಸುಬ್ಬರಾವ್, ಬೀಚಿ, ವೀರಕೇಸರಿ ಸೀತಾರಾಮಶಾಸ್ತ್ರೀ, ನಾ.ಕೃ. ಸತ್ಯನಾರಾಯಣ, ಭಾರತೀಂದ್ರಸ್ವಾಮಿ, ಸುಬ್ಬರಾವ್ ಮೊದಲಾದವರು ಸೇರಿಕೊಂಡಿದ್ದರು. ಸಂಯುಕ್ತ ರಂಗದಿಂದಾಗಿ ಪ್ರಧಾನ ಧಾರೆಗೆ ಸಭಾವು ಬರಲಾಗದಿದ್ದರೂ ತನ್ನದೇ ಆದ ಮಿತಿಗಳ ನಡುವೆಯೇ ಕನ್ನಡದ ಚಟುವಟಿಕೆಗಳನ್ನು ಚಾಲ್ತಿಯಲ್ಲಿ ಇಟ್ಟಿತ್ತು.

ಕನ್ನಡ ನಾಡು ಏಕೀಕೃತವಾಗಿ 1963ರ ವೇಳೆಗೆ ಏಳು ವರುಷಗಳಾಗಿದ್ದವು. ಆದರೆ ಕನ್ನಡಿಗರ ಆಶಯಗಳು ಈಡೇರಿರಲಿಲ್ಲ. ಈ ಕುರಿತು ಜಾಗೃತಿ ಮೂಡಿಸಲು ಆ ವರ್ಷದ ನವೆಂಬರ್ ಒಂದರಂದು ಸ್ವಾತಂತ್ರ್ಯೋತ್ಸವದ ರೀತಿಯಲ್ಲಿ ರಾಜ್ಯೋತ್ಸವವನ್ನು ಆಚರಿಸಲು ಸಂಯುಕ್ತ ರಂಗ ಯೋಜಿಸಿತು. ಅದರಂತೆ 1963ರ ನವೆಂಬರ್ 1ದನ್ನು ರಾಜ್ಯೋತ್ಸವ ದಿನವನ್ನಾಗಿ ಅದ್ದೂರಿಯಾಗಿ ಆಚರಿಸಲಾಯಿತು. ನಾಡಿನ ಎಲ್ಲ ಕನ್ನಡಪರ ಸಂಘಟನೆಗಳನ್ನೂ ಬೆಂಗಳೂರಿನ ಧರ್ಮಾಂಬುಧಿ ಕೆರೆಯ (ಸುಭಾಶ್ ನಗರ, ಈಗಿನ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ನಿಲ್ದಾಣವಿರುವ ಪ್ರದೇಶ) ಮೈದಾನದಲ್ಲಿ ಸೇರುವಂತೆ ಮಾಡಿತು. ಕನ್ನಡ ಚಳವಳಿ ಚರಿತ್ರೆಯಲ್ಲಿ ಇದೇ ಪ್ರಥಮಬಾರಿ ರಾಜ್ಯೋತ್ಸವ ನಡೆಯಿತು. ಅನಂತರ ಪ್ರತಿ ವರ್ಷವೂ ಈ ಆಚರಣೆ ಜಾರಿಗೆ ಬಂತು. ಕನ್ನಡಕ್ಕಾಗಿ ದುಡಿದ ರಾಮಮೂರ್ತಿ ಅವರ ಉತ್ಸಾಹ, ಅಭಿಮಾನಗಳನ್ನು ಕಂಡು ಅವರನ್ನು ಕನ್ನಡ ಸೇನಾನಿ ಎಂದು ಕರೆಯಲಾಯಿತು. ಏಕೆಂದರೆ ಕನ್ನಡ ಕಾರ್ಯಕರ್ತರ ಮೊಕದ್ದಮೆಗಳಲ್ಲಿ ಇವರೇ ಜಾಮೀನುದಾರರು. ಕನ್ನಡದ ಕಾರಣಕ್ಕಾಗಿ ಇವರು ಅನೇಕ ಮೊಕದ್ದಮೆಗಳನ್ನು ಎದುರಿಸಿದರು.

**ಚಲನಚಿತ್ರ ಮತ್ತು ಕನ್ನಡ ಚಳವಳಿ:** ಇದೇ ವೇಳೆಗೆ ಕನ್ನಡ ಚಲನಚಿತ್ರ ರಂಗದಲ್ಲಿಯೂ ಕನ್ನಡತನ ಬಡವಾಗಿತ್ತು. ಕನ್ನಡ ಕಲಾವಿದರಿಗೆ ನಿರ್ಮಾಪಕ ನಿರ್ದೇಶಕರಿಗೆ ಕನ್ನಡನಾಡಿನಲ್ಲಿ ಪ್ರಾತಿನಿಧ್ಯವಿರಲಿಲ್ಲ. ಹೆಚ್ಚಾಗಿ ಪರಭಾಷೆಯ ಚಿತ್ರಗಳು ಓಡುತ್ತಿದ್ದವು. ಕನ್ನಡ ಚಿತ್ರಗಳಿಗೆ ಎರಡು ಅಥವಾ ಮೂರನೆಯ ಸ್ಥಾನ ಮೀಸಲಾಗಿತ್ತು. ಕನ್ನಡದ ಕಲಾವಿದರಲ್ಲಿ ಕೆಲವರು ಅನ್ಯಭಾಷೆಗಳಲ್ಲಿ ನೆಲೆನಿಂತು ಅಭಿಮಾನಶೂನ್ಯರಾಗಿದ್ದರು. ಕನ್ನಡಿಗರಿಗೆ ಥಿಯೇಟರ್, ಸ್ಟುಡಿಯೋ ಸಮಸ್ಯೆಗಳ ಜೊತೆಗೆ ಡಬ್ಬಿಂಗ್ ಹಾವಳಿಯೂ ಆವರಿಸಿಕೊಂಡಿತ್ತು. ಬೇರೆ ಭಾಷೆಗಳಲ್ಲಿನ ಚಿತ್ರಗಳು ಕನ್ನಡ ಭಾಷೆಗೆ ಡಬ್ ಆಗಿ ಕನ್ನಡತನವಿಲ್ಲದಂತೆ ಮಾಡಿದ್ದವು. ಕರ್ನಾಟಕ ಸರ್ಕಾರದಿಂದಲೂ ಕನ್ನಡ ಚಲನಚಿತ್ರೋದ್ಯಮಕ್ಕೆ ಆದ್ಯತೆ ದೊರೆತಿರಲಿಲ್ಲ. ಇಂಥ ಸಮಸ್ಯೆಗಳನ್ನು ಕನ್ನಡ ಚಳವಳಿಗಾರರು ಕೈಗೆತ್ತಿಕೊಂಡರು. ಮ.ರಾಮಮೂರ್ತಿ, ಅ.ನ.ಕೃ. ಮೊದಲಾದವರು ಪ್ರತಿಭಟನೆಯ ಹಾದಿ ಹಿಡಿದರು. ಈ ಸಂದರ್ಭದಲ್ಲಿ ವಾಟಾಳ್ ನಾಗರಾಜರಂಥ ಯುವಕರು ಚಳವಳಿಗೆ ಧುಮುಕಿದರು. ಕನ್ನಡದ ಮೇರು ನಟ ರಾಜಕುಮಾರ್ ಅವರನ್ನೂ ಒಳಗೊಂಡಂತೆ ಜಿ.ವಿ. ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಸೇರಿ ಕನ್ನಡ ಚಲನಚಿತ್ರ ಕಲಾವಿದರ ಸಂಘವನ್ನು ರಚಿಸಲಾಯಿತು. ಈ ಸಂಘಟನೆಯ ಅಡಿಯಲ್ಲಿ ಅನೇಕ ಕನ್ನಡ ಚಿತ್ರಗಳನ್ನು ನಿರ್ಮಿಸುವ ಪ್ರಯತ್ನಗಳು ನಡೆದವು. ಇಂಥ ಚಿತ್ರಗಳನ್ನು ಸಿನಿಮಾ ಮಂದಿರದ ಮಾಲೀಕರು ಕಡ್ಡಾಯವಾಗಿ ಪ್ರದರ್ಶಿಸಲು ಒತ್ತಾಯಿಸಲಾಯಿತು. ಖಾಸಗಿ ಉದ್ಯಮಗಳ, ಸಂಘಸಂಸ್ಥೆಗಳ ಯುವಕರೂ ಈ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹೀಗಾಗಿ ಕನ್ನಡದ ನಿರ್ಮಾಪಕರುಗಳಿಗೆ, ಕನ್ನಡ ಚಿತ್ರಗಳಿಗೆ ಭರವಸೆಯ ವಾತಾವರಣ ಮೂಡುವಂತಾಯಿತು.

ಮದರಾಸಿನಲ್ಲಿ ಚಲನಚಿತ್ರದ ಉದ್ಯಮ ಪ್ರಗತಿಪರವಾಗಿತ್ತು. ಇದಕ್ಕೆ ಅಲ್ಲಿನ ಕಲಾವಿದರ, ರಾಜಕಾರಣಿಗಳ ಸ್ವಭಾವಿಕ ಪ್ರೇಮವೇ ಕಾರಣವಾಗಿತ್ತು. ತಮಿಳು ಚಿತ್ರರಂಗಕ್ಕೆ ಎಂ.ಜಿ.ಆರ್.(ಎಂ.ಜಿ.ರಾಮಚಂದ್ರನ್), ಎಂ.ಕರುಣಾನಿಧಿ ಅವರು ನೀಡಿದ ಪ್ರೋತ್ಸಾಹ ಬಹು ದೊಡ್ಡದು. ಬೆಂಗಳೂರಿನ ಡಿ.ಎಂ.ಕೆ. ಪಕ್ಷದ ಕಾರ್ಯಕರ್ತರು ಇತರೆ ತಮಿಳು ಸಂಘಟನೆಗಳೊಂದಿಗೆ ಸೇರಿಕೊಂಡು ತಮಿಳು ಚಲನಚಿತ್ರಗಳಿಗೆ ಅತಿಯಾಗಿ

ಪ್ರೋತ್ಸಾಹಿಸುತ್ತಿದ್ದರು. 1964ರ ವೇಳೆಗೆ ಎಂ.ಜಿ.ಆರ್. ನಟಿಸುತ್ತಿದ್ದ ಚಲನಚಿತ್ರಗಳು ಬೆಂಗಳೂರಿನ ತಮಿಳರನ್ನು ಅತಿಯಾಗಿ ವರ್ತಿಸುವಂತೆ ಮಾಡಿದ್ದವು. ಇದರ ಪರಿಣಾಮವಾಗಿ 'ಕಾಂಚಿ ತಲೈವನ್' ಚಲನಚಿತ್ರದ ವಿರುದ್ಧ ಕನ್ನಡ ಚಳವಳಿ ತೀವ್ರ ಸ್ವರೂಪ ಪಡೆದುಕೊಂಡಿತು.

'ಕಾಂಚಿ ತಲೈವನ್' ಚಲನಚಿತ್ರ (1964) ಕಂಚಿಯ ಪಲ್ಲವರ ದೊರೆ 1ನೆಯ ನರಸಿಂಹವರ್ಮ ಬಾದಾಮಿ ಚಳುಕ್ಯ ದೊರೆ ಇಮ್ಮಡಿ ಪುಲಕೇಶಿಯನ್ನು ಸೋಲಿಸಿದ ಕಥೆಯನ್ನೊಳಗೊಂಡಿದೆ. ಕನ್ನಡಿಗರನ್ನು ಅವಮಾನಿಸಲೋ ಎಂಬಂತೆ ತಮಿಳು ದೊರೆ ಕರ್ನಾಟಕದ ಬಾವುಟವನ್ನು ಕಾಲಿನಲ್ಲಿ ತುಳಿಯುವ ದೃಶ್ಯಗಳನ್ನು ಆ ಚಿತ್ರದಲ್ಲಿ ಚಿತ್ರೀಕರಿಸಲಾಗಿತ್ತು. ಚರಿತ್ರೆಯ ಸೂಕ್ಷ್ಮ ಸಂಗತಿಗಳನ್ನು ಭಾಷಿಕ ನೆಲೆಯಲ್ಲಿ ವೈಯಕ್ತಿಕವಾಗಿ ತೆಗೆದುಕೊಂಡ ಸಂದರ್ಭ ಇದಾಗಿತ್ತು. ತಮಿಳರ ಈ ವರ್ತನೆ ಕನ್ನಡಿಗರನ್ನು ಕೆರಳಿಸಿತು. ಚಳವಳಿಗಾರರು, ಇತಿಹಾಸ ತಜ್ಞರು, ವಿದ್ವಾಂಸರು, ಕನ್ನಡಾಭಿಮಾನಿಗಳು ಚಲನಚಿತ್ರದ ಕೆಲವು ಭಾಗಗಳನ್ನು ತೆಗೆದುಹಾಕಲು ಒತ್ತಾಯಿಸಿ ಪ್ರತಿಭಟಿಸಿದರು. ಆದರೂ ಆಕ್ಷೇಪಾರ್ಹ ಭಾಗಗಳನ್ನು ತೆಗೆಯದೆ ಚಿತ್ರವನ್ನು ಪ್ರದರ್ಶಿಸತೊಡಗಿದ್ದು ಕನ್ನಡಿಗರ ಸ್ವಾಭಿಮಾನವನ್ನು ಕೆರಳಿಸಿತು. ಈ ಘಟನೆ ಹಿಂಸಾರೂಪಕ್ಕೆ ತಿರುಗಿತು. ಈ ಘಟನೆಯೇ ಅ.ನ.ಕೃ. ಹಾಗೂ ರಾಮಮೂರ್ತಿಯವರಲ್ಲಿ ಭಿನ್ನಾಭಿಪ್ರಾಯಗಳಿಗೆ ಕಾರಣವಾಯಿತು. ಭಾವೋದ್ವೇಗ ಬಿಟ್ಟು ಚರಿತ್ರೆಯನ್ನು ನೋಡಬೇಕೆಂಬ ವಿಚಾರ ಅ.ನ.ಕೃ. ಅವರದು. ಭಾವನೆಯೂ ಚರಿತ್ರೆಯ ಭಾಗ ಎಂಬುದು ರಾಮಮೂರ್ತಿಯವರ ನಿಲವು. ಇಂಥ ತಾತ್ವಿಕ ಭಿನ್ನಾಭಿಪ್ರಾಯದಿಂದಾಗಿ ಕಡೆಗೆ ಅ.ನ.ಕೃ. ಕನ್ನಡ ಚಳವಳಿಯಿಂದ ಹಿಂದಕ್ಕೆ ಸರಿದರು. ಆದರೆ ನಾಡಿನ ಬೇರೆಡೆಗಳಲ್ಲೂ ಈ ಚಲನಚಿತ್ರ ಪ್ರದರ್ಶಿತವಾಗದಂತೆ ಮ.ರಾಮಮೂರ್ತಿ ಚಳವಳಿ ಹೂಡಿದರು. ಭದ್ರಾವತಿ, ಹಾಸನ ಮೊದಲಾದೆಡೆಗಳಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಚಳವಳಿಗಾರರ ಮೇಲೆ ಪೋಲೀಸರು ಮೊಕದ್ದಮೆಗಳನ್ನು ದಾಖಲು ಮಾಡಿದ್ದೂ ಇದೆ. ಇವೆಲ್ಲ ಕಾರಣಗಳಿಂದ ತಮಿಳರ ಹಾಗೂ ಕನ್ನಡಿಗರ ಮಧ್ಯೆ ಭಾಷಿಕ ವೈಷಮ್ಯ ವೃದ್ಧಿಸಿತು. ಇದರಿಂದಾಗಿ ಚಳವಳಿ ಹಾಗೂ ಪ್ರತಿಭಟನೆಗಳ ಮೂಲಕ ಕನ್ನಡ ಚಲನಚಿತ್ರರಂಗ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬರುವಂತಾಯಿತು.

**ಮ. ರಾಮಮೂರ್ತಿ ಮತ್ತು ಕನ್ನಡ ಚಳವಳಿ:** ಅ.ನ.ಕೃ. ಅವರು ದೂರ ಸರಿದರೂ ಮ.ರಾಮಮೂರ್ತಿ ಅವರು ಏಕಾಂಗಿಯಾಗಿ ಸಂಯುಕ್ತ ರಂಗವನ್ನು ಮುನ್ನಡೆಸಿದರು. ತಮಿಳರು ಡಿ.ಎಂ.ಕೆ. ಪಕ್ಷದವರ ಸಹಕಾರದಿಂದ ತಾವು ವಾಸಿಸುವ ಕಡೆಗಳಲ್ಲಿ ತಮಿಳು ಬಾವುಟಗಳನ್ನು ಹಾರಾಡಿಸಿದರು. ಈ ಸಂಗತಿ ಕನ್ನಡ ಕಾರ್ಯಕರ್ತರನ್ನು ಪ್ರಚೋದಿಸಿತು. ಕನ್ನಡದ ಪ್ರದೇಶಗಳಲ್ಲಿ ಕನ್ನಡದ ಬಾವುಟಕ್ಕೆ ಪ್ರಾಶಸ್ತ್ಯವೆಂದು ರಾಮಮೂರ್ತಿ ಚಳವಳಿ ಹೂಡಿದರು. ಇದರ ಪರಿಣಾಮವಾಗಿ ಹಿಂಸಾಕೃತ್ಯಗಳೂ ಜರುಗಿದವು. ತಮಿಳರ ಸಂಖ್ಯೆ ಹೆಚ್ಚಿದ್ದ ಕಡೆಗಳಲ್ಲಿ ಅಲ್ಪಸಂಖ್ಯಾತ ಕನ್ನಡಿಗರ ಮೇಲೆ ದೌರ್ಜನ್ಯಗಳು ನಡೆದವು. ಬೆಂಗಳೂರಿನಲ್ಲಿ ತಮಿಳರೇ ಹೆಚ್ಚಾಗಿದ್ದ ಶ್ರೀರಾಮಪುರ, ಜೋಗುಪಾಳ್ಯ, ನಾಗಪ್ಪ ಬ್ಲಾಕ್, ಕಾಕ್ಸ್ ಟೌನ್, ಫ್ರೇಜರ್ ಟೌನ್, ದಂಡು ಪ್ರದೇಶ ಮೊದಲಾದ ಕಡೆಗಳಲ್ಲಿ ಕನ್ನಡ ಚಳವಳಿ ಹಾಗೂ ಕನ್ನಡದ ಸಂಘಟನೆ ತೀವ್ರಗೊಂಡಿತು. ತಮಿಳರೇ ಹೆಚ್ಚಾಗಿದ್ದ ಕೆಲವು ಕಾರ್ಖಾನೆಗಳಲ್ಲಿ ಕನ್ನಡ ಕಾರ್ಮಿಕರು ಹಿಂಸೆ ಹಾಗೂ ಹಲ್ಲೆಗೆ ಒಳಗಾದರು. ಇದಕ್ಕೆ ಕೆಲವೊಮ್ಮೆ ಡಿ.ಎಂ.ಕೆಯಂಥ ರಾಜಕೀಯ ಪಕ್ಷದ ಬೆಂಬಲವೂ ಕೆಲವು ತಮಿಳುಪರ ಪತ್ರಿಕೆಗಳ ಬರೆವಣಿಗೆಯ ಬೆಂಬಲವೂ ಇತ್ತು.

ಸ್ಥಳೀಯ ಸಂಸ್ಥೆಗಳಿಗೆ ನಡೆಯುತ್ತಿದ್ದ ಚುನಾವಣೆಗಳಿಗೆ ತಮಿಳರೂ ಸ್ಪರ್ಧಿಸುವ ಮಟ್ಟಿಗೆ ಬಲಾಢ್ಯರಾದರು. ಹಿರಿಯೂರಿನಲ್ಲಿ ತಮಿಳರೇ ಹೆಚ್ಚು ಸಂಖ್ಯೆಯಲ್ಲಿದ್ದರು. ಇವರು ತಮ್ಮ ಕ್ಷೇತ್ರದಲ್ಲಿ ಡಿ.ಎಂ.ಕೆ. ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವುದರೊಂದಿಗೆ ಪ್ರಾತಿನಿಧ್ಯ ಪಡೆದದ್ದು ಗಮನಾರ್ಹ ಸಂಗತಿ. ಹಿರಿಯೂರಿನ ವೃತ್ತದಲ್ಲಿ ಡಿ.ಎಂ.ಕೆ. ಪಕ್ಷದ ಬಾವುಟವನ್ನೂ ಪ್ರದರ್ಶಿಸಲಾಗಿತ್ತು. ಇದಕ್ಕೆ ಸ್ಥಳೀಯ ಕನ್ನಡಿಗರು ಪ್ರತಿಭಟಿಸಿದ್ದು ಪ್ರಯೋಜನಕ್ಕೆ ಬರಲಿಲ್ಲ. ಕೊನೆಗೆ ರಾಮಮೂರ್ತಿ ಅವರು ತಮ್ಮ ಕಾರ್ಯಕರ್ತರೊಂದಿಗೆ ಖುದ್ದಾಗಿ ಬಂದು ಡಿ.ಎಂ.ಕೆ. ಬಾವುಟವನ್ನು ತೆಗೆಸಿ ಕನ್ನಡಿಗರನ್ನು ಹುರಿದುಂಬಿಸಿದರು. ಈ ಎಲ್ಲ ಪ್ರಯತ್ನಗಳೂ ಕನ್ನಡಿಗರನ್ನು ಸಂಘಟಿಸುವುದರ ಜೊತೆಗೆ ಕನ್ನಡ ಬಾವುಟದ ಅನಿವಾರ್ಯತೆ ರಾಜಕಾರಣಿಗಳ ನಿರಭಿಮಾನವನ್ನು ಸಾಬೀತುಪಡಿಸಿದ್ದವು. ಇದರ ಪರಿಣಾಮವಾಗಿ ಚಳವಳಿಯಲ್ಲಿ ಜಾತೀಯತೆ, ರಾಜಕಾರಣದ ಸ್ವಾರ್ಥ ಚಿಂತನೆಗಳು ನುಸುಳುವಂತೆ ಆಯಿತು. ಕನ್ನಡೇತರರ ಮತಗಳನ್ನು ತಮ್ಮ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದ ಕೆಲವು ರಾಷ್ಟ್ರೀಯ ಪಕ್ಷಗಳು ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಲು ಹಿಂಜರಿದವು. ಹೀಗಾಗಿ ಕನ್ನಡಿಗರ ಆಶೋತ್ತರಗಳಿಗಾಗಿ ಪ್ರಾದೇಶಿಕವಾದ ರಾಜಕೀಯ ಪಕ್ಷವೊಂದರ ಅಗತ್ಯತೆ ಕಾರ್ಯಕರ್ತರನ್ನು ಕಾಡಿತು. ಈ ನಿಟ್ಟಿನಲ್ಲಿ ಆಲೋಚಿಸುವುದಕ್ಕೆ ಮೊದಲೇ ಕನ್ನಡ ಚಳವಳಿಯಲ್ಲಿ ಜಾತೀಯವಾದ ತಲೆದೋರಿತು. ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರೆಂಬ ಎರಡು ಗುಂಪುಗಳು ಹುಟ್ಟಿಕೊಂಡವು. ಸಂಯುಕ್ತ ರಂಗದ ಚಳವಳಿ ನಾಯಕರನ್ನು (ರಾಮಮೂರ್ತಿ ಅವರನ್ನೂ ಒಳಗೊಂಡಂತೆ) ಬ್ರಾಹ್ಮಣರ ಗುಂಪಿಗೆ ಸೇರಿಸಲಾಗಿತ್ತು. ಚಳವಳಿಯನ್ನು ಭಿನ್ನ ರೀತಿಯಾಗಿ ನಡೆಸುವಲ್ಲಿ, ಉತ್ಸಾಹ ತೋರಿದ್ದ ವಾಟಾಳ್ ನಾಗರಾಜರ ನೇತೃತ್ವದ ಗುಂಪು ಬ್ರಾಹ್ಮಣೇತರರೆಂದು ಗುರುತಿಸಿಕೊಳ್ಳುವಂತೆ ಆಯಿತು. ಆ.ಸಂಜೀವಪ್ಪ, ಸಾ.ಕೃ.ಸಂಪಂಗಿ, ಜಿ.ನಾರಾಯಣ ಕುಮಾರ್ ಮೊದಲಾದವರು ವಾಟಾಳರೊಂದಿಗೆ ಸೇರಿದರು. ಸೈದ್ಧಾಂತಿಕ ಒಡಕಿನಿಂದಾಗಿ ವಾಟಾಳ್ ನಾಗರಾಜರ ನೇತೃತ್ವದ ಕಾರ್ಯಕರ್ತರು ಸಂಯುಕ್ತ ರಂಗದಿಂದ ಹೊರಬಂದಿದ್ದರು. ವಾಟಾಳರು ಆಟೋ ಚಾಲಕರು, ಹೋಟೆಲು ಕಾರ್ಮಿಕರು, ಸಾರಿಗೆ ಸಿಬ್ಬಂದಿ ಮೊದಲಾದವರು ಕನ್ನಡ ಚಳವಳಿಯನ್ನು ತೀವ್ರ ಸ್ವರೂಪದಲ್ಲಿ ಗುರುತಿಸಿಕೊಳ್ಳುವಂತೆ ಸಾಹಿತಿ ಕಲಾವಿದರಿಗಿಂತ ಹೆಚ್ಚಾಗಿ ಜನಸಾಮಾನ್ಯ ಕನ್ನಡಿಗರು ಈ ವಿಚಾರದಲ್ಲಿ ಒಗ್ಗೂಡುವಂತೆ ತಂತ್ರ ರೂಪಿಸಿದರು. ಈ ಘಟ್ಟದಿಂದ ಕನ್ನಡ ಚಳವಳಿ ಛಿದ್ರವಾಗುತ್ತಾ ಹೋಯಿತು.

**ಮಹಾಜನ್ ಆಯೋಗ ಮತ್ತು ಚಳವಳಿಗಾರರು:** 1965ರ ವೇಳೆಗೆ ಬೆಂಗಳೂರಿನಲ್ಲಿ ರಾಜ್ಯೋತ್ಸವವನ್ನು ಎರಡು ಸ್ಥಳಗಳಲ್ಲಿ ನಡೆಸಲು ಆರಂಭವಾಯಿತು. ಆದರೂ ಮ. ರಾಮಮೂರ್ತಿ ಹಾಗೂ ವಾಟಾಳರು ಬೆಂಗಳೂರಿನಲ್ಲಿ ಕನ್ನಡ ಬಾವುಟದ ವಿಚಾರಕ್ಕಾಗಿ ಒಂದೆಡೆ ಸೇರಿದ್ದು ಗಮನಾರ್ಹ. ಅಲ್ಲದೆ ಈ ವೇಳೆಗೆ (1966) ಮರಾಠಿಗರ ಆಕ್ರಮಣಕಾರಿ ಭಾಷಿಕ ಪ್ರವೃತ್ತಿ ಹೆಚ್ಚಾಗತೊಡಗಿದ್ದವು. ಶಿವಸೇನೆಯ ಬಾಳಠಾಕ್ರೆ ಮೊದಲಾದವರಿಂದ ಕನ್ನಡಿಗರಿಗೆ (ಮುಂಬಯಿಯಲ್ಲಿ) ಕಿರುಕುಳ ಆರಂಭವಾಗಿತ್ತು. ಇದೇ ವೇಳೆಗೆ ಮಹಾರಾಷ್ಟ್ರ, ಕೇರಳ ಹಾಗೂ ಕರ್ನಾಟಕದ ಗಡಿಗಳಿಗೆ ಸಂಬಂಧಿಸಿದ ವಿವಾದಗಳ ಇತ್ಯರ್ಥಕ್ಕೆ ಮಹಾಜನ್ ಆಯೋಗ ನೇಮಕ ಆಗಿತ್ತು. ಈ ಆಯೋಗದ ಮೇಲೆ ಹಾಗೂ ಕೇಂದ್ರ ಸರ್ಕಾರದ ಮೇಲೆ ಮರಾಠಿಗರು ಒತ್ತಡ ಹೇರತೊಡಗಿದ್ದರು. ಇದಕ್ಕೆ ಕನ್ನಡಿಗರಿಂದ ಎಲ್ಲೆಡೆ ಪ್ರತಿರೋಧಗಳು ಕಾಣಿಸಿಕೊಂಡವು. ಬೆಳಗಾಂವಿ ಕರ್ನಾಟಕದ ಅವಿಭಾಜ್ಯ ಅಂಗವೆಂಬುದನ್ನು ಸಾಬೀತುಪಡಿಸುವುದು ಚಳವಳಿಗಾರರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ಸಭಾದವರು 29–7–1966ರಂದು ನಡೆಸಿದ ಸಂಪೂರ್ಣ ಕರ್ನಾಟಕ ಸರ್ವಪಕ್ಷ ಸಮ್ಮೇಳನ ಪ್ರಧಾನವಾದುದು. ಹೀಗಾಗಿ ನಾಡಿನ ಎಲ್ಲೆಡೆ ಮಹಾಜನ್ ಆಯೋಗದ ವಿರುದ್ಧ ತೀವ್ರವಾದ ಪ್ರತಿಭಟನೆಗಳು ನಡೆದವು. ರಸ್ತೆ ತಡೆ, ರೈಲು ತಡೆ, ಮೆರವಣಿಗೆ, ಪ್ರದರ್ಶನಗಳು, ಬಂದ್ ಆಚರಣೆ ಇತ್ಯಾದಿಗಳು ಚಳವಳಿಕಾರರನ್ನು ಇನ್ನಷ್ಟು ಹುರಿದುಂಬಿಸಿದ್ದವು.

ಮಹಾಜನ್ ಆಯೋಗದ ವರದಿ ಜತ್, ಅಕ್ಕಲಕೋಟೆ, ಕಾಸರಗೋಡುಗಳನ್ನು ಕರ್ನಾಟಕಕ್ಕೂ ನಿಪ್ಪಾಣಿ, ಖಾನಾಪುರ, ಹಳಿಯಾಳಗಳನ್ನು ಮಹಾರಾಷ್ಟ್ರಕ್ಕೂ ಸೇರಿಸಬೇಕೆಂದು ಶಿಫಾರಸು ಮಾಡಿತ್ತು. ಅಲ್ಲದೆ ಕನ್ನಡ ನೆಲವಾದ ಬೆಳಗಾಂವಿಯನ್ನು ಕರ್ನಾಟಕದಲ್ಲಿಯೇ ಉಳಿಸಬೇಕೆಂದೂ ಶಿಫಾರಸ್ಸು ಮಾಡಿತ್ತು. ಈ ಆಯೋಗದ ವರದಿಗೆ ಒಪ್ಪಿಕೊಳ್ಳುವುದಾಗಿ ಹೇಳಿದ್ದ ಮರಾಠಿಗರು ಮಾತು ಮುರಿದು ಪ್ರತಿಕ್ರಿಯಿಸಿದರು. ಈ ವಿಚಾರ 1970 ರಲ್ಲಿ ದೆಹಲಿಯ ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ಚರ್ಚೆಗೆ ಬಂತು. ಮರಾಠಿಗರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾರಂಭಿಸಿದ್ದರು. ಇದರಿಂದ ಕನ್ನಡಿಗರ ಪ್ರತಿಭಟನೆಗಳು ತೀವ್ರಸ್ವರೂಪ ಪಡೆದವು. ಈ ಘಟ್ಟದಲ್ಲಿ ಕೆಲವರು ಕನ್ನಡ ಚಳವಳಿಗಾರರು ಕರ್ನಾಟಕ ಎಕ್ಸ್‌ಪ್ರೆಸ್ ರೈಲನ್ನು ತಡೆಯಲು ಮುಂದಾದರು. ಈ ಪ್ರಯತ್ನದಲ್ಲಿ ಮು. ಗೋವಿಂದರಾಜು ಎಂಬ ಕಾರ್ಯಕರ್ತರು ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಈ ಘಟನೆ (13–12–1970) ತಾತ್ಕಾಲಿಕವಾಗಿ ಮಹಾಜನ್ ವರದಿಯ ಅನುಷ್ಠಾನವನ್ನು ತಡೆಹಿಡಿಯಿತು. ಅಂದಿನಿಂದಲೂ ಇದುವರೆಗೂ ಕರ್ನಾಟಕಕ್ಕೆ ಸೇರಬೇಕಾದ ಕನ್ನಡದ ಭೂಪ್ರದೇಶಗಳು ಕರ್ನಾಟಕದ ಹೊರಗೇ ಉಳಿದಿವೆ.

**ಕನ್ನಡ ಬಾವುಟದ ಚರಿತ್ರೆ:** 1966ರ ವರೆಗೂ ಕನ್ನಡದ ಕಾರ್ಯಕರ್ತರಿಗೆ ಯಾವುದೇ ನಿರ್ದಿಷ್ಟ ಕನ್ನಡ ಬಾವುಟವೆಂಬುದು ಇರಲಿಲ್ಲ. ಕನ್ನಡ ಬಾವುಟದ ಕೊರತೆಯನ್ನು ನೀಗಲು ರಾಮಮೂರ್ತಿ ಹಾಗೂ ವಾಟಾಳರು ಬೆಂಗಳೂರಿನಲ್ಲಿ ಕನ್ನಡ ಸಂಘಟನೆಗಳ ಸಭೆ ಸೇರಿಸಿದರು. ಇಲ್ಲಿ ಪರಿಚಯಿಸಿದ ಬಾವುಟ ಕರ್ನಾಟಕದ ನಕಾಶೆಯನ್ನು ಹೊಂದಿತ್ತು. ನಕಾಶೆಯ ಮಧ್ಯೆ ಬೆಳೆಯುತ್ತಿರುವ ಪೈರಿನ ಚಿತ್ರಣವಿತ್ತು. ಈ ಬಾವುಟ ಕರ್ನಾಟಕಕ್ಕೆ ಸೇರಬೇಕಾದ ಗಡಿಭಾಗಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಿಕೆ ನೀಡಲಾಯಿತು. ಎಲ್ಲರೂ ಈ ಬಾವುಟವನ್ನು ಒಪ್ಪಿದ್ದರು. ಆದರೆ ರಾಮಮೂರ್ತಿಯವರು ಬಾವುಟವನ್ನು ಬದಲಾಯಿಸಿದ್ದು (ನವೆಂಬರ್ 1969) ಕಾರ್ಯಕರ್ತರಲ್ಲಿ ಅಸಮಾಧಾನಕ್ಕೆ ಎಡೆಮಾಡಿಕೊಟ್ಟಿತು.

ಬಾವುಟದ ಬದಲಾವಣೆಯ ಪ್ರಕ್ರಿಯೆಗೆ ಅಂದಿನ ರಾಜಕಾರಣವೇ ಪ್ರಮುಖ ಕಾರಣ. ಮ. ರಾಮಮೂರ್ತಿ ಹಾಗೂ ವಾಟಾಳ್ ಇವರಿಬ್ಬರ ತಾತ್ವಿಕ ಭಿನ್ನಾಭಿಪ್ರಾಯಗಳು ಎರಡು ಪ್ರಾದೇಶಿಕ ಪಕ್ಷಗಳ ಹುಟ್ಟಿಗೆ ಕಾರಣವಾದವು. ರಾಮಮೂರ್ತಿ ಅವರ ಕನ್ನಡ ಪಕ್ಷ 1966ರ ನಗರಸಭಾ ಹಾಗೂ 1969ರ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿತು. ವಾಟಾಳರ ಚಳವಳಿ ಪಕ್ಷ ಕೊಂಚ ರಾಜಕೀಯ ಶಕ್ತಿಯನ್ನು ಪಡೆಯಿತು. ಜೊತೆಗೆ

ಬ್ರಾಹ್ಮಣೇತರ ಚಳವಳಿಗಾರರ ಗುಂಪಾಗಿ ಗುರುತಿಸಿಕೊಂಡಿತ್ತು. ವಾಟಾಳರು ತಮ್ಮ ಪಕ್ಷದ ಚಿಹ್ನೆಯಾಗಿ ನಕಾಶೆಯಿರುವ ಬಾವುಟವನ್ನೇ ಬಳಸಿದ್ದರು. ಇದರಿಂದ ರಾಮಮೂರ್ತಿ ಅವರು ತಮ್ಮ ಕನ್ನಡ ಪಕ್ಷಕ್ಕಾಗಿ ಹೊಸ ಬಾವುಟವನ್ನು ಪರಿಚಯಿಸುವುದು ಅನಿವಾರ್ಯವಾಯಿತು.

ಮ. ರಾಮಮೂರ್ತಿ 1968ರ ವೇಳೆಗೆ ಸಂಯುಕ್ತ ರಂಗದ ಕಾರ್ಯಕರ್ತರ ಸಭೆ ಕರೆದು ಹೊಸ ಬಾವುಟವನ್ನು ಪರಿಚಯಿಸಿದರು. ಕರ್ನಾಟಕ ಮಿತ್ರ ಮಂಡಲಿಯ ಬಿ.ನಿ. ಈಶ್ವರಪ್ಪನವರು ಸೂಚಿಸಿದ ಬಾವುಟವನ್ನು ರಾಮಮೂರ್ತಿ ಒಪ್ಪಿದ್ದರು. ಕಾಟನ್‌ಪೇಟೆಯಲ್ಲಿ ನಡೆದ ಸಭೆಯಲ್ಲಿ ನಾಲ್ಕು ಮೂಲೆಗಳ ಹಳದಿ ಕೆಂಪು ಬಣ್ಣಗಳಿದ್ದ ಬಾವುಟವನ್ನು ಸರ್ವರೂ ಒಪ್ಪಿದ್ದರು. ಆದರೆ ಇದರಲ್ಲಿ ಕರ್ನಾಟಕದ ನಕಾಶೆ ಇರಲಿಲ್ಲ. ಬದಲಾಗಿ ಹಳದಿ ಕೆಂಪು ಬಣ್ಣಗಳನ್ನು ಶಾಂತಿ, ಸಹನೆ, ಕ್ರಾಂತಿಗಳ ಸಂಕೇತವೆಂದೂ ಅರಿಸಿನ ಕುಂಕುಮಗಳು ಮುತ್ತೈದೆತನದ ಸಂಕೇತವೆಂದೂ ವಿವರಣೆ ನೀಡಲಾಗಿತ್ತು. ಮ.ರಾಮಮೂರ್ತಿ ಅವರು ಕನ್ನಡ, ಕನ್ನಡಿಗ, ಕರ್ನಾಟಕಗಳನ್ನು ಪ್ರತಿನಿಧಿಸುವ ಯಾವುದೇ ಸಭೆ, ಸಮಾರಂಭಗಳಿಗೆ ಈ ಹೊಸ ಬಾವುಟವನ್ನೇ ಬಳಸಲು ಕರೆಯಿತ್ತರು. ತಮ್ಮ ಕನ್ನಡ ಪಕ್ಷಕ್ಕೂ ಇದೇ ಬಾವುಟವನ್ನೇ ಬಳಸಿದ್ದರು. ಹೀಗಾಗಿ ಇಂದಿಗೂ ಹಳದಿ ಕೆಂಪು ಬಣ್ಣದ ಬಾವುಟಗಳೂ ಕನ್ನಡದ ಸಂಕೇತವಾಗಿ ಬಳಕೆಯಾಗುತ್ತಿವೆ.

**ವಾಟಾಳ್ ನಾಗರಾಜ್ ಮತ್ತು ಕನ್ನಡ ಚಳವಳಿ:** 1970ರ ದಶಕ ಬಹುಪಾಲು ವಾಟಾಳ್ ನೇತೃತ್ವದ ಕನ್ನಡ ಚಳವಳಿಯಾಗಿ ಪರಿಣಮಿಸಿತು. ಸಂಯುಕ್ತ ರಂಗದ ಅಧ್ಯಕ್ಷರಾಗಿದ್ದ ರಾಮಮೂರ್ತಿ ಅವರು ಆಕಸ್ಮಿಕ ಮರಣಕ್ಕೀಡಾದರು (25–12–1967). ತ.ರಾ.ಸು. ಅವರು ಕನ್ನಡ ಪಕ್ಷದ ಚುಕ್ಕಾಣಿ ಹಿಡಿದಿದ್ದರು. ಆದರೆ ವಾಟಾಳರ ಜನಪ್ರಿಯತೆಯ ಮುಂದೆ ಇನ್ನಾವುದೇ ನಾಯಕನೂ ಚಳವಳಿಯ ನೇತಾರನಾಗಲಿಲ್ಲ. ವಾಟಾಳರ ಹಿಂದೆ ಬೆಂಬಲಕ್ಕಿದ್ದವರೆಂದರೆ ಅ.ಸಂಜೀವಪ್ಪ, ಸಾ.ಕೃ.ಸಂಪಗಿ, ಜಿ.ನಾರಾಯಣ ಕುಮಾರ್, ಪ್ರಭಾಕರ್ ರೆಡ್ಡಿ ಮೊದಲಾದ ಚಳವಳಿಗಾರರು. ಇವರೆಲ್ಲರ ಬೆಂಬಲದಿಂದ ಕನ್ನಡ ಚಳವಳಿ ಪಕ್ಷ ರಾಜಕಾರಣದ ಬಲವನ್ನೂ ಪಡೆದಿತ್ತು. ಕನ್ನಡಿಗರ ಸಮಸ್ಯೆಗಳಿಗೆ ಇಂಥ ಪ್ರಾದೇಶಿಕ ಪಕ್ಷವೊಂದು ಸ್ಪಂದಿಸುವುದು ಎಲ್ಲರ ಗಮನ ಸೆಳೆಯಿತು. ಆದರೆ ವಾಟಾಳರ ಒಡನಾಡಿಗಳು ಭಿನ್ನಾಭಿಪ್ರಾಯಗಳನ್ನು ತಳೆದದ್ದು ಮತ್ತೆ ಕನ್ನಡ ಚಳವಳಿಯಲ್ಲಿ ಬಿರುಕನ್ನುಂಟುಮಾಡಿತು. 1980ರಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷ ಎಂದು ಹೊಸ ಹೆಸರು ಪಡೆಯುವವರೆಗೂ ವಾಟಾಳರು ನಾಡಿನ ಸಮಸ್ಯೆಗಳನ್ನು ಕುರಿತಂತೆ ಚಳವಳಿಗಳನ್ನು ಹೂಡುತ್ತಲೇ ಇದ್ದರು. ಅಂಥವುಗಳಲ್ಲಿ ತಾಳವಾಡಿ ಮುತ್ತಿಗೆ (1967) ಚಳವಳಿಯೂ ಒಂದು. ಕರ್ನಾಟಕಕ್ಕೆ ಸೇರಬೇಕಿದ್ದ ಹೊಸೂರು, ತಾಳವಾಡಿಗಳನ್ನು ತಮಿಳುನಾಡಿಗೆ ಸೇರಿಸಲಾಗಿತ್ತು. ಇವುಗಳನ್ನು ಪಡೆಯಲು ತಾಳವಾಡಿ ಮುತ್ತಿಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಇದರಲ್ಲಿ ಭಾಗವಹಿಸಿದ್ದ ವಾಟಾಳರನ್ನು ಅಂದಿನ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕರುಣಾನಿಧಿ ಬಂಧಿಸಲು ಆದೇಶಿಸಿದ್ದರು. ಬಂಧನಕ್ಕೊಳಗಾದ ವಾಟಾಳರ ಬಿಡುಗಡೆಗಾಗಿ ಒತ್ತಾಯಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ, ಹಿಂಸಾಚಾರಗಳು ನಡೆದವು. ತಮಿಳರ ವಿರುದ್ಧ ಕನ್ನಡಿಗರು ಉಗ್ರ ರೂಪದಲ್ಲಿ ಪ್ರತಿಭಟನೆಗಳನ್ನು ಸಾರಿದರು. ಕನ್ನಡೇತರರ ಮತಗಳಿಗಾಗಿ ಕಾದಿದ್ದ ಕನ್ನಡದ ರಾಜಕಾರಣಿಗಳು ಈ ಘಟನೆಗೆ ಸ್ಪಂದಿಸದೆ ಇದ್ದದ್ದು ಕನ್ನಡಿಗರನ್ನು ಕೆರಳಿಸದಿರಲಿಲ್ಲ. ಅದೇ ರೀತಿ 1968ರಲ್ಲಿ ಸಿ.ರಾಜಗೋಪಾಲಾಚಾರಿ (ರಾಜಾಜಿ) ಅವರು ಕನ್ನಡಕ್ಕೆ ಅಪಮಾನವಾಗುವ ಮಾತುಗಳನ್ನು ಆಡಿದಾಗ ವಾಟಾಳ್ ನಾಗರಾಜ್ ಮತ್ತು ಇತರ ಚಳವಳಿಗಾರರು ಪ್ರತಿಕ್ರಿಯಿಸಿರಲಿಲ್ಲ. ಅಂತೆಯೇ ಕನ್ನಡ ಸಾಹಿತ್ಯ ಪರಿಷತ್ತೂ ಸಹ. ಇಂಥ ವಿರೋಧಾಭಾಸಗಳೂ ಕನ್ನಡ ಚಳವಳಿಯ ಚರಿತ್ರೆಯಲ್ಲಿ ಕಪ್ಪುಚುಕ್ಕೆಯಾಗಿ ಉಳಿದುಬಿಟ್ಟವು.

**ಗೋಕಾಕ್ ಚಳವಳಿ:** ಹಿಂದಿನ ಅವೈಜ್ಞಾನಿಕ ಶಿಕ್ಷಣ ನೀತಿಯೊಂದು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ತೊಡಕಾಗಿ ಪರಿಣಮಿಸಿತ್ತು. ಇದನ್ನು ಸರಿಪಡಿಸಲು ವ್ಯಾಪಕವಾದ ಭಾಷಿಕ ಚಳವಳಿಯನ್ನೇ ಕನ್ನಡಿಗರು ಹೂಡಿದ್ದು ಗಮನಾರ್ಹ ಸಂಗತಿ. ಸಂಸ್ಕೃತ ಭಾಷೆಯನ್ನು ಮಾತೃಭಾಷೆಗೆ ಸರಿಸಮವೆಂದು ಕರ್ನಾಟಕ ಸರಕಾರದ ಶಿಕ್ಷಣ ನೀತಿ ಪರಿಗಣಿಸಿದ್ದು ಚಳವಳಿಗಳಿಗೆ ಕಾರಣವಾಗಿತ್ತು. ಅಂದರೆ ಕೇವಲ ಪ್ರೌಢಶಾಲೆಯಲ್ಲಿ ಶಿಕ್ಷಣ ಕ್ರಮ ಆರಂಭಿಸಲಾಗುವ ಸಂಸ್ಕೃತ ಹಿಂದಿನ ಏಳು ವರ್ಷಗಳಲ್ಲಿ ವಿದ್ಯಾರ್ಥಿಗಳು ಓದಿದ ಭಾಷೆಯೊಂದಕ್ಕೆ ಸಮವೆನಿಸಿತ್ತು. ಸಂಸ್ಕೃತ ಅಧ್ಯಾಪಕರ ಉದಾರ ಪ್ರೋತ್ಸಾಹ ಮತ್ತು ಹೆಚ್ಚು ಅಂಕ ನೀಡುವ ಪ್ರವೃತ್ತಿಯಿಂದ ಕನ್ನಡದ ವಿದ್ಯಾರ್ಥಿಗಳೂ ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯಾಗಿ ಓದಲು ಆರಂಭಿಸಿದ್ದರು. ಇದರಿಂದ ರ‍್ಯಾಂಕ್ ಗಳಿಕೆ ಸುಲಭವಾಗಿತ್ತು. ಇಲ್ಲಿ ಇನ್ನೊಂದು ಅನುಕೂಲವೂ ಇತ್ತು. ಅದು ಈ ಭಾಷೆಯ ಪ್ರಶ್ನೆ ಪತ್ರಿಕೆಯನ್ನು ಕನ್ನಡ ಅಥವಾ ಇಂಗ್ಲಿಷಿನಲ್ಲಿ ಉತ್ತರಿಸುವುದು. ಈ ಬಗೆಯ ನೀತಿಯಿಂದ ಕನ್ನಡಕ್ಕೆ ಹೆಚ್ಚಿನ ಪ್ರಾಧಾನ್ಯ ದಕ್ಕಿರಲಿಲ್ಲ. ಹೀಗಾಗಿ ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ತೆಗೆದು ಮೂರನೆಯ ಸ್ಥಾನಕ್ಕೆ ಇಳಿಸುವ ಸರ್ಕಾರದ ಆಜ್ಞೆಗೆ (1969 ರ ಅಕ್ಟೋಬರ್) ಸಂಸ್ಕೃತವಾದಿಗಳಿಂದ ವಿರೋಧಗಳು ವ್ಯಕ್ತವಾದವು. ಇದಕ್ಕೆ ವಿರುದ್ಧವಾಗಿ ಕನ್ನಡ ಪರವಾದಿಗಳು ಸಹ ವಿರೋಧಿಸಲಾರಂಭಿಸಿದ್ದರು. ಕೊನೆಗೆ ಯಾವುದೇ ನಿರ್ಧಾರವನ್ನು ಕೈಗೊಳ್ಳಲಾಗದೆ ಸರ್ಕಾರ ವಿ.ಕೃ. ಗೋಕಾಕ್ ಅಧ್ಯಕ್ಷತೆಯಲ್ಲಿ ಭಾಷಾತಜ್ಞರ ಸಮಿತಿಯೊಂದನ್ನು ರಚಿಸಿತು (1980). ಈ ಸಮಿತಿಯಲ್ಲಿದ್ದ ಬಹುಪಾಲು ಸದಸ್ಯರು ಸಂಸ್ಕೃತದ ವಾದಿಗಳೆಂದೇ ಕನ್ನಡದ ವಾದಿಗಳು ಆರಂಭದಲ್ಲಿ ಶಂಕಿಸಿದ್ದರು. ಹೀಗಾಗಿ ಸಮಿತಿಯ ವಿರುದ್ಧವೇ ಮೊದಲ ಪ್ರತಿಭಟನೆಗಳು ಆರಂಭಗೊಂಡವು. ಈ ಸಮಿತಿ ವರದಿಯ ಸಿದ್ಧತೆಗೆ ನಾಡಿನಾದ್ಯಂತ ಕೈಗೊಂಡ ಪ್ರವಾಸಕ್ಕೆ ಆಗ ಪ್ರತಿರೋಧಗಳು ಕಂಡುಬಂದವು. ಆದರೆ ವರದಿ ಕನ್ನಡ ಪರವಾಗಿದ್ದು ಅಂಥ ಶಂಕೆ ಸಂದೇಹ ನಿವಾರಿಸಿತು. ಅಂತೆಯೆ ವರದಿಯನ್ನು ಅನುಷ್ಠಾನಗೊಳಿಸುವಲ್ಲಿ ಚಳವಳಿಗಾರರು ತೀವ್ರತರವಾದ ಹೋರಾಟಕ್ಕೆ ಇಳಿದಿದ್ದರು. ಗೋಕಾಕ್ ವರದಿ ಕುರಿತು ನಡೆದ ಚಳವಳಿ ಕನ್ನಡ ಚಳವಳಿಯೇ ಆಗಿ ಗೋಕಾಕ್ ಚಳವಳಿ ಎಂದೇ ಪ್ರಚಾರಕ್ಕೆ ಬಂತು.

ಗೋಕಾಕ ಚಳವಳಿಗೆ ಧಾರವಾಡದಿಂದ ಆರಂಭಿಕ ಚಾಲನೆ ದೊರೆತು ನಾಡಿನಾದ್ಯಂತ ವಿಭಿನ್ನ ಘಟ್ಟಗಳಲ್ಲಿ ಚಳವಳಿ ನಡೆಯಿತು. ಚಂದ್ರಶೇಖರ ಪಾಟೀಲ, ಎಂ.ಎಂ.ಕಲಬುರ್ಗಿ, ಬಸವರಾಜ ಕಟ್ಟೀಮನಿ, ಚನ್ನವೀರ ಕಣವಿ ಪಾಟೀಲ ಪುಟ್ಟಪ್ಪ ಮೊದಲಾದ ಸಾಹಿತಿಗಳು ಹಾಗೂ ಕಲಾವಿದರು, ಮಾಠಾಧೀಶರು ಉತ್ತರ ಕರ್ನಾಟಕದಲ್ಲಿ ಪ್ರತಿಕ್ರಿಯಿಸಲಾರಂಭಿಸಿದರು. ಅಂತೆಯೇ ಹಳೆಯ ಮೈಸೂರಿನ ಜಿಲ್ಲೆಗಳಿಂದ, ಬೆಂಗಳೂರನ್ನು ಕೇಂದ್ರವಾಗಿಸಿಕೊಂಡು ಚಳವಳಿ ಆರಂಭಗೊಂಡಿತು. ಇದರಲ್ಲಿ ಪಿ.ಲಂಕೇಶ್, ಜಿ.ಎಸ್.ಶಿವರುದ್ರಪ್ಪ, ಗೊರೂರು, ಸಿದ್ಧಯ್ಯಪುರಾಣಿಕ್, ಎಂ.ಚಿದಾನಂದಮೂರ್ತಿ, ಹಾ.ಮಾ.ನಾಯಕ, ಕೋ.ಚೆನ್ನಬಸಪ್ಪ, ಮಳಗಿ, ತ.ರಾ.ಸು., ಸತ್ಯು, ಪೂರ್ಣಚಂದ್ರತೇಜಸ್ವಿ ಮೊದಲಾದ ಸಾಹಿತಿಗಳು, ಕಲಾವಿದರು ಭಾಗವಹಿಸಿದ್ದರು. ಸಾಹಿತಿಗಳ, ಕಲಾವಿದರ ಬಳಗ ಹುಟ್ಟಿಕೊಂಡದ್ದು ಇದೇ ಸಂದರ್ಭದಲ್ಲಿಯೇ. ಚಳವಳಿಗಾರ ರಹಮಾನ್ ಖಾನ್, ಜಿ.ನಾರಾಯಣಕುಮಾರ್, ಕೆ.ಪ್ರಭಾಕರ ರೆಡ್ಡಿ ಮೊದಲಾದವರು ತೀವ್ರವಾಗಿ ಪ್ರತಿಕ್ರಿಯಿಸಿದರು. ಈ ಚಳವಳಿಗೆ ಕೇಂದ್ರ ಹಾಗೂ ಸ್ಥಳೀಯ ಕನ್ನಡ ಕ್ರಿಯಾ ಸಮಿತಿಗಳು, ಕನ್ನಡ ಸಂರಕ್ಷಣಾ ಸಮಿತಿ, ಕನ್ನಡ ಸಂಘರ್ಷ ಸಮಿತಿ, ಕನ್ನಡ ಪಕ್ಷ, ಮೈಸೂರಿನ ಚೇತನ ಕನ್ನಡ ಸಂಘ ಮೊದಲಾದ ಸಂಘಟನೆಗಳು ತಮ್ಮನ್ನು ತೊಡಗಿಸಿಕೊಂಡಿದ್ದವು. ಕರ್ನಾಟಕದ ಬಹುಪಾಲು ಎಲ್ಲ ಹಿರಿಕಿರಿಯ ಸಾಹಿತಿ ಕಲಾವಿದರೂ ಗೋಕಾಕ ಚಳವಳಿಯ ಸಂದರ್ಭದಲ್ಲಿ ಭಾಗವಹಿಸಿದ್ದು ಇಲ್ಲಿ ಉಲ್ಲೇಖನೀಯ. ಈ ಸಂದರ್ಭದಲ್ಲಿ ಪರ ವಿರೋಧದ ಧ್ವನಿಗಳೂ ಹುಟ್ಟಿಕೊಂಡಿದುಂಟು. ಸರ್ಕಾರ ಕನ್ನಡವನ್ನು ಒಂದು ಹಂತದಲ್ಲಿ ಕಡ್ಡಾಯವಾಗಿ ಪ್ರೌಢಶಾಲಾ ಹಂತದಲ್ಲಿ ಜಾರಿಗೊಳಿಸುವ ಸೂತ್ರ ಮುಂದಿಟ್ಟಿತು. ಆಗ ಅದನ್ನು ಒಪ್ಪಿ ಹಾ.ಮಾ.ನಾ., ಹಂಪನಾ, ವಿ.ಎಚ್.ಗೌಡ ಮೊದಲಾದವರು ಸ್ವಾಗತಿಸಿದರು. ಆದರೆ ಇದಕ್ಕೊಪ್ಪದವರು ಚಿದಾನಂದಮೂರ್ತಿಗಳು ಮತ್ತು ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಚಳವಳಿಯನ್ನು ಮುಂದುವರಿಸಿ ಪ್ರಾಥಮಿಕ ಹಂತದಿಂದ ಕನ್ನಡ ಕಡ್ಡಾಯಮಾಡಲು ಆಗ್ರಹಿಸಿದರು. ಸರ್ಕಾರ ಗೋಕಾಕ್ ಭಾಷಾ ಸೂತ್ರವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ಹಿಂದೇಟು ಹಾಕಿದಾಗ ಚಳವಳಿ ವ್ಯಾಪಕವೂ ಹಿಂಸಾತ್ಮಕವೂ ಆಯಿತು. ಖ್ಯಾತ ನಟ ರಾಜಕುಮಾರ್ ಅವರು ಜಾಥಾದ ಮುಂದಾಳತ್ವವನ್ನು ವಹಿಸಿದ ಮೇಲೆ ಚಳವಳಿಗೆ ಇನ್ನಷ್ಟು ಚುರುಕು, ಬಿರುಸು ಪ್ರಾಪ್ತವಾಯ್ತು. ಮೆರವಣಿಗೆ, ಬಂದ್, ರಸ್ತೆ ರೈಲು ತಡೆ, ಜೈಲು ತುಂಬುವ ಚಳವಳಿ, ಪೋಲೀಸರ ಗೋಲಿಬಾರ್ ಸಾಮಾನ್ಯವಾದವು. ಅರಸಪ್ಪ ಎಂಬ ಕಾರ್ಯಕರ್ತರೊಬ್ಬರು ಪೊಲೀಸರು ಗುಂಡಿಗೆ ಬಲಿಯಾದರು. ಪರಿಸ್ಥಿತಿಗೆ ಮಣಿದ ಸರ್ಕಾರ ಸರ್ವಸಮ್ಮತ ಭಾಷಾಸೂತ್ರವನ್ನು ಪ್ರಕಟಿಸಿತು. ನಾಲ್ಕು ತಿಂಗಳ ಕಾಲ ನಡೆದ ಚಳವಳಿ ಅಂತ್ಯಗೊಂಡಿತು. ಆದರೆ ಕನ್ನಡೇತರರು, ಸಂಸ್ಕೃತಪರ ವಾದಿಗಳು ಅಲ್ಪಸಂಖ್ಯಾತರು ಕೋರ್ಟಿನಲ್ಲಿ ಕಟ್ಲೆಗಳನ್ನು ಹಾಕಿದ್ದರಿಂದ ವರದಿ ಜಾರಿಗೆ ಬರಲಿಲ್ಲ. 1984 ಜನವರಿ 24ರಂದು ಸರ್ಕಾರ ಈ ಎಲ್ಲ ಕಟ್ಲೆಗಳ ವಿಲೇವಾರಿ ಮಾಡಿ ಭಾಷಾಸೂತ್ರವನ್ನು ಜಾರಿಗೆ ತಂದಿತು. ಆದರೆ ವರದಿಯ ಸಂಪೂರ್ಣ ಅನುಷ್ಠಾನದ ಬಗ್ಗೆ ಇನ್ನೂ ಯಾವುದೇ ರೀತಿಯ ನಿರೀಕ್ಷಿತ ಫಲಿತಾಂಶ ಕಂಡುಬಂದಿಲ್ಲ.

**ಕನ್ನಡ ದೇಶ ಮತ್ತು ಕರ್ನಾಟಕ ಪ್ರಗತಿರಂಗ:** ಗೋಕಾಕ್ ಚಳವಳಿ ಅಂತ್ಯವಾಗುವ ವೇಳೆಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತ ಕೊನೆಗೊಂಡಿತು. ರೈತ (1983), ದಲಿತ ಹಾಗೂ ಭಾಷಾ ಚಳವಳಿಗಳ ಆಶೋತ್ತರಗಳನ್ನು ಈಡೇರಿಸುವ ಭರವಸೆಯನ್ನು ನೀಡಿ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಆದರೆ ಬಹಳ ಬೇಗ ಈ ಸರ್ಕಾರವೂ ಕನ್ನಡಿಗರ ಅಸಹನೆಗೆ ಗುರಿಯಾಯಿತು. ಈ ಸಂದರ್ಭದಲ್ಲಿ ಸ್ಥಳೀಯವಾದ ರಾಜ್ಯಪಕ್ಷವೊಂದರ ಅಗತ್ಯ ಕಂಡುಬಂತು. ಆಗ ಹೊಸ ರಾಜಕೀಯ ಪಕ್ಷವೊಂದರ ತುರ್ತು ಕನ್ನಡಿಗರಲ್ಲಿ ಕಾಣಿಸಿಕೊಂಡಿತು. ಇದರ ಪರಿಣಾಮವಾಗಿ ಹುಟ್ಟಿಕೊಂಡದ್ದೇ ಕನ್ನಡ ದೇಶ ಹಾಗೂ ಕರ್ನಾಟಕ ಪ್ರಗತಿರಂಗ ಎಂಬ ಪಕ್ಷಗಳು.

ವಾಟಾಳರ ಚಳವಳಿಪಕ್ಷ ಪ್ರಾದೇಶಿಕವಾಗಿ ಗುರುತಿಸಿಕೊಂಡಿದ್ದರೂ ಅದು ರಾಜ್ಯವ್ಯಾಪಿ ಪಕ್ಷವಾಗಿ ವಿಸ್ತೃತಗೊಂಡಿರಲಿಲ್ಲ. ಹೀಗಾಗಿ 1987ರಲ್ಲಿ ಕನ್ನಡ ದೇಶ ಪಕ್ಷ ಕವಿ ಕುವೆಂಪು ಅವರ ಪ್ರೇರಣೆಯಿಂದ ಅಸ್ತಿತ್ವಕ್ಕೆ ಬಂತು. ಈ ಪಕ್ಷದ ನೇತೃತ್ವವನ್ನು ವಹಿಸಿದ್ದವರು ರೈತ ಸಂಘದ ಎಂ.ಡಿ.ನಂಜುಂಡಸ್ವಾಮಿ ಅವರು. ಕನ್ನಡ ದೇಶ ಪಕ್ಷ ಕನ್ನಡಿಗರ ಅಶೋತ್ತರಗಳ ಈಡೇರಿಕೆಗೆ ದುಡಿಯುವ ಮುನ್ನವೇ ಸೋಲನ್ನು ಕಂಡಿತು. ಈ ಘಟ್ಟದಲ್ಲಿ ಎ.ಕೆ.ಸುಬ್ಬಯ್ಯನವರ ಕನ್ನಡಪರ ಪ್ರಯತ್ನಗಳೂ ಗಮನಾರ್ಹವೆನಿಸಿವೆ.

ಪ್ರಗತಿಪರ ಮನಸ್ಸುಳ್ಳ ವ್ಯಕ್ತಿಗಳು ಅದುವರೆಗಿನ ಎಲ್ಲ ಕೊರತೆಗಳನ್ನು ಪರಿಶೀಲಿಸಿ 1988ರಲ್ಲಿ ಕರ್ನಾಟಕ ಪ್ರಗತಿರಂಗ ಎಂಬ ರಾಜಕೀಯ ಪಕ್ಷವನ್ನು ರೂಪಿಸಿದರು. ಈ ರಂಗಕ್ಕೆ ಲಂಕೇಶ್ ಪತ್ರಿಕೆಯ ಮೂಲಕ ರೂಪಿಸಲಾದ ಹಿನ್ನೆಲೆ ಮತ್ತು ಸಿದ್ಧಾಂತಗಳಿದ್ದವು. ಕಾಂಗ್ರೆಸ್ ಮತ್ತು ಜನತಾ ಪಕ್ಷಗಳಿಗೆ ಪರ್ಯಾಯವಾಗಿ ಹುಟ್ಟಿಕೊಂಡ ಪಕ್ಷವಿದು. ಇದರ ನೇತೃತ್ವ ಪಿ.ಲಂಕೇಶ್ ಅವರದು. ಕನ್ನಡ, ಕನ್ನಡಿಗ, ಕರ್ನಾಟಕಗಳ ಬಗೆಗಿನ ಕಾಳಜಿಯಿಂದ ರಚನೆಗೊಂಡ ಈ ಪಕ್ಷಕ್ಕೆ ಕನ್ನಡಿಗರಿಂದ ನಿರೀಕ್ಷಿಸಲಾಗಿದ್ದ ಬೆಂಬಲ, ಪ್ರೋತ್ಸಾಹಗಳು ದೊರೆಯಲಿಲ್ಲ. ಈ ಪಕ್ಷವೂ ಸಂಘಟನಾ ಹಂತದಲ್ಲೇ ಕ್ಷೀಣಿಸಿತು. ಕನ್ನಡ ಚಳವಳಿಯ ಚರಿತ್ರೆಯಲ್ಲಿ ಈ ರಾಜಕೀಯ ಪಕ್ಷಗಳಿಗೆ ದೊರೆಯದೆ ಹೋದ ಬೆಂಬಲಗಳು ಕನ್ನಡಿಗರಿಂದ ಮತ್ತೆ ರಾಷ್ಟ್ರೀಯ ಪಕ್ಷಗಳಿಗೆ ದೊರೆತವು.

ಗೋಕಾಕ್ ಚಳವಳಿಯ ಅನಂತರ ಸಂಭವಿಸಿದ ರಾಜಕೀಯ ಬದಲಾವಣೆಗಳು ಚಳವಳಿಯ ಸ್ವರೂಪ ಬಹುಮುಖಿ ನೆಲೆಗಳನ್ನು ಕಂಡುಕೊಳ್ಳುವಂತೆ ಮಾಡಿತು. ಇದಕ್ಕೆ ಪ್ರಾತಿನಿಧ್ಯ, ಆಮಿಷ, ಅಗ್ಗದ ಪ್ರಚಾರ ಪ್ರಿಯತೆ, ಕನ್ನಡದ ಹೆಸರಿನಲ್ಲಿ ಲೂಟಿ, ಹಿಂಸೆಗಳು, ಜಾತಿ ಮುಖಂಡರ, ರಾಜಕಾರಣಿಗಳ ಭ್ರಷ್ಟಾಚಾರಗಳು ಎಲ್ಲವೂ ಕಾರಣ. 1980 ಹಾಗೂ 1990ರ ದಶಕದಲ್ಲಾದ ಈ ವೈಪರೀತ್ಯಗಳು ಕನ್ನಡ ಚಳವಳಿಯನ್ನು ಭಿನ್ನ ರೀತಿಯಲ್ಲಿ ಗ್ರಹಿಸಲು ಎಡೆಮಾಡಿಕೊಟ್ಟವು. ಆದರೆ ಇವೆಲ್ಲವುಗಳನ್ನೂ ಹೊರತುಪಡಿಸಿ ನಾಡು, ನುಡಿ, ಸಂಸ್ಕೃತಿಯ ನೆಲೆಗಳಲ್ಲಿ ಕಾರ್ಯನಿರ್ವಹಿಸಿದ ನಿಸ್ವಾರ್ಥ ಕನ್ನಡ ಚಳವಳಿಗಾರರನ್ನು, ಸಂಘಟನೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

**ಕನ್ನಡ ಶಕ್ತಿ ಕೇಂದ್ರ ಮತ್ತು ಇತರ ಸಂಘಟನೆಗಳು:** ಚಳವಳಿಗಳಿಗೆ ಸಂಬಂಧಿಸಿದ ಮಾರ್ಗದರ್ಶನಗಳನ್ನು ನೀಡಿ ನಡೆಸಿಕೊಂಡು ಹೋಗಲು ಸಾಹಿತಿ, ಕಲಾವಿದರ ಬಳಗ ಹುಟ್ಟು ಹಾಕಿದ ಸಂಸ್ಥೆಯೇ ಕನ್ನಡ ಶಕ್ತಿ ಕೇಂದ್ರ. 1988ರಲ್ಲಿ ಅಸ್ತಿತ್ವಕ್ಕೆ ಬಂದ ಈ ಕೇಂದ್ರ ಎಂ. ಚಿದಾನಂದಮೂರ್ತಿಯವರ ನೇತೃತ್ವದಲ್ಲಿ ಮುನ್ನಡೆದಿದೆ. ಇದು ಗೋಕಾಕ್ ಚಳವಳಿಯ ಅನಂತರ ಕನ್ನಡದ ಹೋರಾಟವನ್ನು ಇತರೆ ಸಮಸ್ಯೆಗಳ ಕಡೆಗೂ ಕೇಂದ್ರೀಕರಿಸುವಂತೆ ಮಾಡಿತು.

ಕನ್ನಡ ಶಕ್ತಿ ಕೇಂದ್ರ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವ ಸರೋಜಿನಿ ಮಹಿಷಿ ವರದಿಯ ಅನುಷ್ಠಾನಕ್ಕಾಗಿ ಒತ್ತಾಯಿಸಿತು. ಅಲ್ಲದೆ ನೈರುತ್ಯ ರೈಲ್ವೆ ವಲಯದ ಕೇಂದ್ರವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವವರೆಗೂ ಅನೇಕ ರೀತಿಯಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕಗಳ ಬೇಡಿಕೆಗಳಿಗೆ ಸ್ಪಂದಿಸುತ್ತಿದೆ. ರಾಜ್ಯ ಲೋಕಸೇವಾ ಆಯೋಗದಲ್ಲಿ ಕನ್ನಡಕ್ಕೆ ಆದ್ಯತೆ, ದೂರದರ್ಶನದ ಕನ್ನಡೀಕರಣ, ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ, ಉರ್ದು ವಾರ್ತಾಪ್ರಸಾರ ತಡೆ, ಕಾವೇರಿ ಜಲವಿವಾದ ಚಳವಳಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರಗಳ ಸ್ಥಾಪನೆ, ಬೆಳಗಾಂವಿಯಲ್ಲಿ ತಾಂತ್ರಿಕ ವಿಶ್ವವಿದ್ಯಾಲಯದ ಸ್ಥಾಪನೆ ಇತ್ಯಾದಿ ಕನ್ನಡ ಪರವಾದ ಸಾಧನೆಗಳಿಗಾಗಿ ಇದು ಶ್ರಮಿಸಿದೆ. ಕೆ.ಜಿ.ಎಫ್.ನಲ್ಲಿ ತಮಿಳರ ದೌರ್ಜನ್ಯ, ಬೀದರ್‌ನಲ್ಲಿ ಸಿಖ್ಖರಿಂದ ಆಗುತ್ತಿರುವ ಅತ್ಯಾಚಾರಗಳು, ಹಂಪಿ ಮತ್ತು ಗೋಕರ್ಣಗಳಲ್ಲಿನ ಹಿಪ್ಪಿಗಳ ಸ್ವೇಚ್ಛಾಚಾರ, ಬೆಳಗಾಂವಿಯಲ್ಲಿ ಎಂ.ಇ.ಎಸ್. ಪಕ್ಷದವರ ಕನ್ನಡ ವಿರೋಧಿ ಕಾರ್ಯಕ್ರಮಗಳ ವಿರುದ್ಧವೂ ಕನ್ನಡ ಶಕ್ತಿ ಕೇಂದ್ರ ಚಳವಳಿ ಮಾಡಿದೆ. ವಲಸಿಗರ ತಡೆ, ಅಂಚೆ ತಂತಿ ರೈಲ್ವೆ ಆಡಿಟರ್ ಕಚೇರಿಗಳಲ್ಲಿ ಕನ್ನಡೇತರರ ನೇಮಕಗಳ ಬಗೆಗೂ ಕನ್ನಡಪರವಾದ ಸಂಘಟನೆಗಳು ಪ್ರಯತ್ನಿಸುತ್ತಿವೆ. ಶಕ್ತಿ ಕೇಂದ್ರದ ಜೊತೆಗೆ ಕನ್ನಡ ಸಂಘರ್ಷ ಸಮಿತಿ, ಕನ್ನಡ ಸೇನೆ, ಕನ್ನಡ ಸಂರಕ್ಷಣಾ ವೇದಿಕೆ, ಕರ್ನಾಟಕ ರಕ್ಷಣಾ ವೇದಿಕೆ ಮೊದಲಾದ ಸಂಘಟನೆಗಳೂ ಸೇರಿಕೊಂಡಿವೆ. ಸಾರಿಗೆ, ಹೋಟೆಲು, ಚಿತ್ರಮಂದಿರ, ಆಟೋರಿಕ್ಷಾ, ಬ್ಯಾಂಕುಗಳು, ಉದ್ಯಮಗಳು ಮೊದಲಾದ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಘ ಸಂಸ್ಥೆಗಳಲ್ಲಿನ ಕನ್ನಡ ಸಂಘಟನೆಗಳು ಗಮನಾರ್ಹವಾಗಿ ಕಾರ್ಯ ನಿರತವಾಗಿವೆ. ಅಂತೆಯೇ ಕರ್ನಾಟಕ ಕೆಥೊಲಿಕ್ ಕ್ರೈಸ್ತರ ಕನ್ನಡ ಸಂಘಗಳು ಕ್ರೈಸ್ತ ಮಂದಿರಗಳಲ್ಲಿ ಕನ್ನಡದಲ್ಲಿ ಕಲಾಪಗಳನ್ನು ನಡೆಸಲು ಚಳವಳಿ ಹೂಡಿವೆ.

ಕನ್ನಡ ಚಳವಳಿಗಳು ಕನ್ನಡ ಹೋರಾಟಗಳಾದದ್ದು 1990ರ ದಶಕದಿಂದೀಚೆಗೆ. ಕರ್ನಾಟಕದಲ್ಲೂ ರಾಜಕಾರಣಿಗಳ ಆಸೆ, ಆಮಿಷಗಳಿಂದಾಗಿ ಕೋಮುವಾದಿ ಬೀಜಗಳ ಬಿತ್ತನೆ ಆಯಿತು. ಭ್ರಷ್ಟಾಚಾರ ಮನೋವೃತ್ತಿಯ ರಾಜಕಾರಣಿಗಳು ಜನಸಾಮಾನ್ಯರನ್ನು ಶೋಷಿಸಲು ಕನ್ನಡ ಚಳವಳಿಗಳಿಗೆ ಹಿಂಸಾತ್ಮಕ ರೂಪ ಕೊಟ್ಟರು ಎಂಬುದೊಂದು ಗುರುತರ ಆರೋಪ. ಕನ್ನಡಿಗರ ಭಾಷಿಕ ಭಾವೋದ್ವೇಗಗಳು ಜಾತಿ, ಧರ್ಮ, ಕೋಮು, ಜನಾಂಗ, ಪ್ರದೇಶ, ನೀರು ಮೊದಲಾದ ಸೂಕ್ಷ್ಮ ಸಂವೇದನೆಗಳಿಗೆ ಬಂಡವಾಳವಾಗುವಂತೆ ಆಯಿತು. ಕನ್ನಡದ ಹೆಸರಿನಲ್ಲಿ ಕಿಡಿಗೇಡಿಗಳು ತಮಿಳು, ಮುಸ್ಲಿಮ್ ಸಹೋದರರ ಜೊತೆಗೆ ಕನ್ನಡಿಗರೂ ಪ್ರಾಣಗಳನ್ನು ತೆರುವಂತೆ ಮಾಡಿದರು. ಇಂಥ ಸನ್ನಿವೇಶಗಳಲ್ಲಿಯೇ ಕನ್ನಡ ಚಳವಳಿಗಳು ಕನ್ನಡ ಹೋರಾಟಗಳು ಎಂಬ ಭಿತ್ತಿಯನ್ನು ಅನಾವರಣಗೊಳಿಸಿದ್ದು.

ಕೇಂದ್ರ ಸರ್ಕಾರದ ಧೋರಣೆಗಳಿಂದಾಗಿ ಕರ್ನಾಟಕದಂಥ ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ಬರಿದುಮಾಡಿಕೊಳ್ಳುತ್ತಿವೆ. ಜಪಾನ್ ಕೈಗಾರಿಕಾ ವಸಾಹತು, ಸಿಂಗಪೂರ್ ಟೌನ್‌ಷಿಪ್, ಗ್ಯಾಟ್ ಒಪ್ಪಂದಗಳು, ಗಂಗಡಿಕಲ್ಲು ಅದಿರು ಯೋಜನೆ, ತುಂಗಾ ಮೂಲ ನಾಶ, ಪರಿಸರ ಮಾಲಿನ್ಯ ಹೀಗೆ ಕನ್ನಡಿಗರು ಶೋಷಣೆಗೆ ಒಳಗಾಗುತ್ತಿದ್ದುದ್ದನ್ನು ಕನ್ನಡ ಚಳವಳಿಗಾರರು ಪ್ರತಿಭಟಿಸಿದರು. ಈ ನಿಟ್ಟಿನಲ್ಲಿ ಕರ್ನಾಟಕ ವಿಮೋಚನಾರಂಗ, ಪ್ರಜಾತಾಂತ್ರಿಕ ಜನರ ವೇದಿಕೆ, ತುಂಗಾಮೂಲ ಉಳಿಸಿ ಸಂಘಗಳಂಥ ಸಂಘಟನೆಗಳ ಹೋರಾಟಗಾರರ ಪಾತ್ರ ದೊಡ್ಡದು.

ಒಟ್ಟಾರೆ ಕನ್ನಡ ಚಳವಳಿಗಳ ಕಳೆದ ಎರಡು ದಶಕಗಳ ಚರಿತ್ರೆಯನ್ನು ಪರಿಶೀಲಿಸಿದರೆ ರಾಜಕಾರಣದ ಆಮಿಷ, ಪ್ರಚಾರಪ್ರಿಯತೆ, ಅಸಂಖ್ಯ ಪೋಷಿತ ಹಾಗೂ ಘೋಷಿತ ನಾಯಕರ ಸಂಘಟನೆಗಳು ಗೋಚರವಾಗುತ್ತವೆ. ಕನ್ನಡದ ರಾಜಕಾರಣಿಗಳು ಕನ್ನಡೇತರ ರಾಜಕೀಯ ಪಕ್ಷಗಳೊಂದಿಗೆ ಡಿ.ಎಂ.ಕೆ., ಅಣ್ಣಾ ಡಿ.ಎಂ.ಕೆ. ಇತ್ಯಾದಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸ್ಪರ್ಧಿಸುವುದೂ ಕಂಡುಬಂದಿದೆ. ಕನ್ನಡ, ಕನ್ನಡಿಗ, ಕರ್ನಾಟಕ ಪರವಾದ ಪ್ರಾದೇಶಿಕ ರಾಜಕೀಯ ಪಕ್ಷವೊಂದನ್ನು ರಚಿಸಿ ಅಧಿಕಾರಕ್ಕೆ ತರಲಾಗದ ಕನ್ನಡಿಗರ ಅಸಹಾಯಕತೆಯ ಸ್ಥಿತಿಯನ್ನು ಇದು ಸಂಕೇತಿಸುತ್ತದೆ. ಸಂಕುಚಿತ, ಭಾಷಿಕ ಭಾವೋದ್ವೇಗಗಳಿಂದ, ಅತಿರೇಕದ ಭಾಷಾಭಿಮಾನದಿಂದ ಕನ್ನಡ ಚಳವಳಿ ಮತ್ತು ಚಿಂತನೆಗಳು ಕೆಲವೊಮ್ಮೆ ಸೋತಿವೆಯೆನಿಸುತ್ತದೆ. ಕನ್ನಡದ ಅಧಿಕಾರಿಗಳೂ ನೌಕರರೂ ಕನ್ನಡವನ್ನು ಆಡಳಿತದಲ್ಲಿ ಬಳಸುವಲ್ಲಿ ಹೆಚ್ಚು ಉತ್ಸುಕರಾಗದಿರುವುದು ಕಂಡುಬಂದಿದೆ. ಆದ್ದರಿಂದಲೇ ಇಂದಿಗೂ ಶಿಕ್ಷಣ ರಂಗದಲ್ಲಿ ಕನ್ನಡ ಮಾಧ್ಯಮವಾಗಲಿ, ಸರೋಜಿನಿ ಮಹಿಷಿ ವರದಿಯ ಅನುಷ್ಠಾನವಾಗಲಿ, ಆಡಳಿತ ಭಾಷೆ ಕನ್ನಡವಾಗಲಿ ಪೂರ್ಣವಾಗಿ ಸಾಧ್ಯವಾಗಿಲ್ಲ. ಇತ್ತೀಚಿನ ಕೆಲವು ಪ್ರಕರಣಗಳು ಕನ್ನಡಿಗರನ್ನು ಭಿನ್ನವಾಗಿ ಆಲೋಚಿಸುವಂತೆ ಮಾಡಿವೆ. ಕಾಡುಗಳ್ಳ ವೀರಪ್ಪನ್‌ನಿಂದ ಆದ ನಟ ರಾಜಕುಮಾರ್ ಅಪಹರಣ, ಅಂತೆಯೇ ಸಚಿವ ನಾಗಪ್ಪ ಅವರ ಅಪಹರಣಗಳು ಹಾಗೂ ಅವರ ಸಾವು ಕನ್ನಡಿಗರ ತಾಳ್ಮೆಯನ್ನು ಪರೀಕ್ಷಿಸುವಂತೆ ಮಾಡಿವೆ. ಜೊತೆಗೆ ಕಾವೇರಿ ನದಿಯ ನೀರಿನ ವಿವಾದ, ಹೋರಾಟಗಳು ಉಗ್ರರೂಪ ತಳೆದು ರಾಜಕಾರಣದ ಸ್ವಾರ್ಥ, ಅಸಹಾಯಕತೆಗಳನ್ನು ಅನಾವರಣಗೊಳಿಸಿವೆ. ನಿಷ್ಠಾವಂತ ಕನ್ನಡಿಗರಿಂದ ಹಾಗೂ ಕರ್ನಾಟಕ ಸರ್ಕಾರದ ಪ್ರಗತಿಪರ ಸ್ವಾಭಿಮಾನ ಪೂರಿತ ಪ್ರಯತ್ನಗಳಿಂದ ಮುಂದೆ ಕರ್ನಾಟಕದ ಹಿತಗಳನ್ನು ಕಾಯ್ದುಕೊಳ್ಳುವುದು ಸಾಧ್ಯವಾಗಬಹುದೆಂದು ಆಶಿಸಬಹುದು. (ಸಿ.ಆರ್.ಜಿ.)

**ಕನ್ನಡ ಛಂದಸ್ಸು :** ಕನ್ನಡ ಭಾಷೆಯ ಪದ್ಯಸಾಹಿತ್ಯದಲ್ಲಿ ಬಹಳ ಹಿಂದಿನಿಂದಲೂ ವಾಡಿಕೆಯಾಗಿ ಬಳಕೆಯಾಗುತ್ತ ಬಂದಿರುವ ಸಂಸ್ಕೃತ ಮತ್ತು ಪ್ರಾಕೃತ ಪ್ರಭಾವದ ಪದ್ಯಜಾತಿಗಳನ್ನೂ ವಿಶೇಷವಾಗಿ ಅಚ್ಚಕನ್ನಡ ಮಟ್ಟುಗಳೆನಿಸಿದ ತ್ರಿಪದಿ ಷಟ್ಪದಿ ಮೊದಲಾದ ಪದ್ಯಜಾತಿಗಳು ಮತ್ತು ಹೊಸಗನ್ನಡ ಕವಿತೆಯ ಮಟ್ಟುಗಳನ್ನೂ ಕನ್ನಡ ಛಂದಸ್ಸು ಎಂಬ ಮಾತು ಒಳಗೊಳ್ಳುತ್ತದೆ.

**ಕನ್ನಡ ಛಂದಸ್ಸನ್ನು ಕುರಿತ ಗ್ರಂಥಗಳು:** ಕಾವ್ಯಲಕ್ಷಣ ಗ್ರಂಥವಾದ ಕವಿರಾಜಮಾರ್ಗದಲ್ಲಿಯೇ (ಪ್ರ.ಶ.ಸು. 850) ಕನ್ನಡ ಛಂದಸ್ಸಿಗೆ ಸಂಬಂಧಿಸಿದ ವಿಷಯಗಳಾದ ಯತಿ, ಛಂದೋಭಂಗ, ಗುರುಲಘುದೋಷಗಳು, ಪ್ರಾಸ–ಇವುಗಳ ಪ್ರಸ್ತಾಪವಿದೆ. ಕನ್ನಡ ಕವಿಗಳು ಮುಖ್ಯವಾಗಿ ಸಂಸ್ಕೃತ ಛಂದಸ್ಸಿನಲ್ಲಿ ಸ್ವಾತಂತ್ರ್ಯವಹಿಸಿ ಮಾಡಿಕೊಂಡ ಮಾರ್ಪಾಡುಗಳು, ಅವುಗಳಿಂದಾದ ಪರಿಣಾಮಗಳು–ಇವುಗಳ ಸ್ವರೂಪ ಸ್ವಲ್ಪಮಟ್ಟಿಗೆ ಆ ವಿಷಯಗಳಿಂದ ತಿಳಿಯುತ್ತದೆ. ತಮಿಳು ಭಾಷೆಯ ಯಾಪ್ಪರುಂಗಲಕ್ಕಾರಿಹೈ ಎಂಬ ಪ್ರಾಚೀನ ಛಂದೋಗ್ರಂಥದ ವ್ಯಾಖ್ಯಾನದಲ್ಲಿ ಗುಣಗಾಂಕಿಯಂ ಎಂಬ ಕನ್ನಡ ಛಂದೋಗ್ರಂಥದ ಉಲ್ಲೇಖವಿದೆ. ಇದು ಈವರೆಗೆ ದೊರೆತಿಲ್ಲ. ಅಲ್ಲದೆ ಈ ಗ್ರಂಥದ ಅಸ್ತಿತ್ವ, ಕರ್ತೃತ್ವ, ಕಾಲ ಎಲ್ಲವೂ ತೀರ ಅನಿಶ್ಚಿತವೂ ವಿವಾದಾಸ್ಪದವೂ ಆಗಿವೆ. ಮೂರನೆಯ ವಿಜಯಾದಿತ್ಯನೆಂಬ ಪೂರ್ವಚಾಳುಕ್ಯ ರಾಜನಿಗೆ ಅಂಕಿತ ಮಾಡಿರಬಹುದಾದ, ಸು. 9ನೆಯ ಶತಮಾನದ ಕೃತಿಯಿದು ಎಂಬುದಾಗಿ ಊಹಿಸಲಾಗಿದೆ. 1ನೆಯ ನಾಗವರ್ಮನ (ಪ್ರ.ಶ.ಸು. 990) ಛಂದೋಂಬುಧಿ ಉಪಲಬ್ಧವಾದ ಕನ್ನಡ ಛಂದೋಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುದು; ಪ್ರಮಾಣಭೂತವೂ ಪ್ರಸಿದ್ಧವೂ ಆದುದು. ಇದರಲ್ಲಿ ಕನ್ನಡ ಛಂದಸ್ಸಿಗೆ ಸಂಬಂಧಿಸಿದ ನಾನಾ ವಿಷಯಗಳು ಸ್ವತಂತ್ರವಾಗಿಯೂ ತಕ್ಕಮಟ್ಟಿಗೆ ವಿಸ್ತಾರವಾಗಿಯೂ ಪ್ರತಿಪಾದಿತವಾಗಿವೆ. ಈ ಗ್ರಂಥದಲ್ಲಿ ಆರು ಅಧಿಕಾರಿಗಳಿದ್ದು, ಅವುಗಳಲ್ಲಿ

ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಛಂದಸ್ಸುಗಳಲ್ಲಿ ಕನ್ನಡ ಕಾವ್ಯಾಭ್ಯಾಸಿಗಳು ತಿಳಿಯಬೇಕಾಗಿರುವ ಅತ್ಯಗತ್ಯವಾದ ಎಲ್ಲ ಅಂಶಗಳೂ ಸಂಗ್ರಹಿತವಾಗಿವೆ. ಐದನೆಯ ಅಧಿಕಾರ ಅಚ್ಚ ಕನ್ನಡ ಛಂದಸ್ಸಿಗೆ ಮೀಸಲಾಗಿದ್ದು, ಅದು ಆ ವಿಷಯದ ವಿವೇಚನೆಗೆ ಬಹು ಉಪಯುಕ್ತವಾದ ಮೂಲಭೂತವಾದ ಸಾಮಗ್ರಿಯನ್ನೊದಗಿಸುತ್ತದೆ.

ಪ್ರಸಿದ್ಧ ಶಾಸ್ತ್ರಜ್ಞನಾದ ಇಮ್ಮಡಿ ನಾಗವರ್ಮ (ಸು. 1145) ಛಂದೋವಿಚಿತಿ ಎಂಬೊಂದು ಗ್ರಂಥವನ್ನು ಅಥವಾ ಛಂದಶ್ಶಾಸ್ತ್ರವನ್ನು ಕುರಿತ ಗ್ರಂಥವೊಂದನ್ನು ಬರೆದಿದ್ದಂತೆ ಕಾವ್ಯಾವಲೋಕದಲ್ಲಿ ದೊರೆಯುವ ಒಂದು ಆಧಾರದಿಂದ ತಿಳಿಯುತ್ತದೆ. ಇದು ಈವರೆಗೆ ದೊರೆತಿಲ್ಲ. ಈಶ್ವರ ಕವಿಯ (ಪ್ರ.ಶ. ಸು. 1500) ಕವಿಜಿಹ್ವಾಬಂಧನಂ ಒಂದು ರೀತಿಯ ಸಮ್ಮಿಶ್ರ ಗ್ರಂಥವಾದರೂ ಮುಖ್ಯವಾಗಿ ಛಂದಶ್ಶಾಸ್ತ್ರವನ್ನು ಕುರಿತದ್ದು. ಈ ಗ್ರಂಥದ ಮೊದಲ ಮೂರು ಆಶ್ವಾಸಗಳಲ್ಲಿ ಪ್ರಧಾನವಾಗಿ ಛಂದಶ್ಶಾಸ್ತ್ರದ ಸಂಜ್ಞಾಪ್ರಕರಣಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ಮಾತ್ರ ಬಂದಿವೆ. ಅಲ್ಲಲ್ಲಿ ತೆಲುಗು ಛಂದೋಗ್ರಂಥಗಳ ಪ್ರತಿಪಾದನ ರೀತಿಯನ್ನೂ ವಿಷಯಗಳನ್ನೂ ಒಳಗೊಂಡಿರುವುದು ಈ ಕೃತಿಯ ವೈಶಿಷ್ಟ್ಯ. ಛಂದೋಂಬುಧಿಯ ತರುವಾಯದಲ್ಲಿ ತಕ್ಕಮಟ್ಟಿಗೆ ಗಣ್ಯವಾದ ಛಂದೋಗ್ರಂಥವೆಂದರೆ ಗುಣಚಂದ್ರನೆಂಬ ಜೈನಕವಿಯ (ಪ್ರ.ಶ. ಸು. 1650) ಛಂದಸ್ಸಾರ. ಇದರಲ್ಲಿ ಐದು ಅಧಿಕಾರಗಳಿದ್ದು, ಸಂಸ್ಕೃತ ಛಂದಸ್ಸಿನ ವಿಷಯಕ್ಕೆ ಪ್ರಮುಖವೆನಿಸಿದೆ. ಮಾತ್ರಾಷಟ್ಪದಿಗಳು, ತಾಳಗಳು, ರಗಳೆಯ ಪ್ರಭೇದಗಳು ಈ ಮುಂತಾದವನ್ನು ಪ್ರಾಯಶಃ ಇಲ್ಲಿ ಮೊದಲ ಬಾರಿಗೆ ಪ್ರಸ್ತಾಪ ಮಾಡಿರುವುದು ಗಮನಾರ್ಹವಾಗಿದೆ. ಆದರೆ ಅಂಶವೃತ್ತಗಳ ವಿಚಾರವೇ ಇಲ್ಲದಿರುವುದು ಆಶ್ಚರ್ಯಕರವಾಗಿದೆ. ಶಾಲ್ಯದ ಕೃಷ್ಣರಾಜನ (ಪ್ರ.ಶ. 1748) ಷಟ್ಪ್ರತ್ಯಯವೆಂಬುದು ಪ್ರಸ್ತಾರ ಮೊದಲಾದ ಆರು ಪ್ರತ್ಯಯಗಳನ್ನು ವಿವರಿಸುವ ಛಂದೋಗ್ರಂಥ. ಕೇದಾರಭಟ್ಟನ ವೃತ್ತಿರತ್ನಾಕರದ ಅಜ್ಞಾತ ಕರ್ತೃಕವಾದ ಕನ್ನಡ ವೃತ್ತಿಯೊಂದು ಸು. ಇದೇ ಕಾಲಕ್ಕೆ (ಸು. 1775) ರಚಿತವಾದಂತೆ ತೋರುತ್ತದೆ. ಇವಕ್ಕೆ ಈಚಿನದಾದ ನಂದಿ ಛಂದಸ್ಸು (ಸು. 19ನೆಯ ಶ.) ಕರ್ತೃ ನಿಶ್ಚಿತವಾಗಿ ತಿಳಿಯದ, ಈಗ ವರ್ಣವೃತ್ತಗಳ ಭಾಗವಷ್ಟೇ ಉಳಿದಿರುವ ಒಂದು ಅಸಮಗ್ರ ಛಂದೋಗ್ರಂಥ.

ಕನ್ನಡ ಛಂದಸ್ಸಿನ ಗಣಸ್ವರೂಪವನ್ನು ಪ್ರಸಿದ್ಧವಾದ ಪದ್ಯಜಾತಿಗಳನ್ನೂ ಕೆಲವು ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಕೂಡ ಪ್ರಾಸಂಗಿಕವಾಗಿ ವಿವೇಚಿಸಿರುವುದು ಕಂಡುಬರುತ್ತದೆ. ಜಯಕೀರ್ತಿಯ (ಸು. 1050) ಛಂದೋನುಶಾಸನಮ್ ಎಂಬ ಗ್ರಂಥದಲ್ಲಿ ಅಲ್ಲಲ್ಲಿ ಕನ್ನಡ ಛಂದಸ್ಸಿನ ಸಂಗತಿಗಳು ಕ್ವಚಿತ್ತಾಗಿ ಉಕ್ತವಾಗಿರುವುದಲ್ಲದೆ, ಕರ್ಣಾಟಕ ವಿಷಯಭಾಷಾಜಾತ್ಯಧಿಕಾರವೆಂಬ 6ನೆಯ ಅಧಿಕಾರದಲ್ಲಿ ಪೂರ್ತಿಯಾಗಿ ಕನ್ನಡ ಛಂದಸ್ಸಿನ ವಿವೇಚನೆ ಲಕ್ಷಣ-ಲಕ್ಷ್ಯ ಸಮನ್ವಿತವಾಗಿ ಬಂದಿದೆ. ಈ ಗ್ರಂಥದಲ್ಲಿ ನಾಗವರ್ಮನ ಛಂದೋಂಬುಧಿಯ ಪ್ರಭಾವವನ್ನು ಕಾಣಬಹುದಾಗಿದೆ. 3ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ (ಪ್ರ.ಶ. 1129), ಅದರ ಚತುರ್ವಿಂಶತಿಯ 16ನೆಯ ಅಧ್ಯಾಯದಲ್ಲಿ, ಕನ್ನಡ ಛಂದಸ್ಸಿಗೆ ಸಂಬಂಧಪಟ್ಟಂತೆ, ಅಂಶಗಣಗಳ ಸ್ವರೂಪವನ್ನೂ ತ್ರಿಪದಿ ಷಟ್ಪದಿ ಹಾಗೂ ಕಂದಪದ್ಯ ಇವುಗಳ ಸ್ವರೂಪವನ್ನೂ ಲಕ್ಷಣ-ಲಕ್ಷ್ಯಗಳೊಂದಿಗೆ ವಿವರಿಸಿದೆ. ಶಾರ್ಙ್ಗದೇವನ ಸಂಗೀತರತ್ನಾಕರವೆಂಬ ಗ್ರಂಥದಲ್ಲಿ, ಅದರ 4ನೆಯ ಪ್ರಬಂಧಾಧ್ಯಾಯದಲ್ಲಿ, ಕನ್ನಡ ಛಂದಸ್ಸಿನ ಏಳೆ, ತ್ರಿಪದಿ ಮತ್ತು ಷಟ್ಪದಿಗಳ ಲಕ್ಷಣವನ್ನು ನಿರೂಪಿಸಿದೆ. ಕನ್ನಡ ಭಾಷಾಸಾಹಿತ್ಯಗಳ ಪರಿಚಯವಿದ್ದಂತೆ ತೋರುವ ಈ ಲಾಕ್ಷಣಿಕರ ವಿವರಣೆಗಳಿಂದ ಕನ್ನಡ ಛಂದಸ್ಸಿನ ಸ್ವರೂಪ ಜ್ಞಾನಕ್ಕೆ ತುಂಬ ಉಪಕಾರವಾಗಿದೆ.

**ಕನ್ನಡ ಛಂದಸ್ಸಿನ ವಿವಿಧ ಗಣಸ್ವರೂಪ :** ಕನ್ನಡದಲ್ಲಿ ಪ್ರಚಲಿತವಾಗಿರುವ ಪದ್ಯಜಾತಿಗಳು ಮೂರು ವಿಧ : ವರ್ಣವೃತ್ತಗಳು, ಮಾತ್ರಾವೃತ್ತಗಳು ಮತ್ತು ಅಂಶವೃತ್ತಗಳು. ವರ್ಣವೃತ್ತಗಳಲ್ಲಿ, ಪ್ರತಿಪಾದದಲ್ಲಿಯೂ ನಿರ್ದಿಷ್ಟವಾದ ಅಕ್ಷರ ಸಂಖ್ಯೆಯಿದ್ದು ಲಘುವೋ ಗುರುವೋ ಆಗಿರುವ ಅಯಕ್ಷರಗಳ ವಿನ್ಯಾಸವೂ ನಿರ್ದಿಷ್ಟವಾಗಿರುತ್ತದೆ. ಮಯರಸತಜಭನ ಎಂಬುದಾಗಿ ಸಂಜ್ಞೆಗಳನ್ನು ಮಾಡಿಕೊಂಡು, ಪದ್ಯಪಾದವನ್ನು 3-3 ಅಕ್ಷರಗಳ ಗಣಗಳನ್ನಾಗಿ ವಿಭಜಿಸಿ ವೃತ್ತಗಳ ಲಕ್ಷಣವನ್ನು ತಿಳಿಯಲಾಗುತ್ತದೆ. ಮಾತ್ರಾವೃತ್ತಗಳಲ್ಲಿ, ಪ್ರತಿಪಾದದಲ್ಲಿಯೂ ಇಷ್ಟಿಷ್ಟು ಮಾತ್ರೆಗಳ ಇಷ್ಟಿಷ್ಟು ಗಣಗಳೆಂದಿದ್ದು, ಮಾತ್ರಾಸಂಖ್ಯೆಗೆ ಅನುಗುಣವಾಗಿ ಕೆಲವು ಸಂದರ್ಭಗಳಲ್ಲಿ ಕೆಲವು ವಿಶಿಷ್ಟ ಗಣನಿಯಮಗಳನ್ನನುಸರಿಸಿ, ಗಣಭಾಗವಿರುತ್ತದೆ. ಅಂಶವೃತ್ತಗಳಲ್ಲಿ, ಪ್ರತಿಪಾದದಲ್ಲಿಯೂ ವಾಚನದ ಅಥವಾ ಗಾಯನದ ಗತಿಯನ್ನನುಸರಿಸಿ, ತಾಳಲಯಗಳು ಸರಿಯಾಗಿ ಹೊಂದಿಕೊಳ್ಳಲು ಲಘುಗುರುಗಳ ಮಾತ್ರಾಪರಿಮಾಣವೂ ಹಿಗ್ಗಿ ಅಥವಾ ಕುಗ್ಗಿ ಹೊಂದಿಕೆಗೆ ಅನುವಾಗುವ ಅಕ್ಷರ (ಅಂಶ)ಗಳಿಂದ ಕಟ್ಟಿದ ಗಣಗಳು ಬಂದಿರುತ್ತವೆ; ಎಂದರೆ ಹಾಗೆ ಅಕ್ಷರಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಕ್ರಮವಾಗಿ 2, 3 ಮತ್ತು 4 ಅಂಶಗಳ ಗಣಗಳಿಗೆ ಬ್ರಹ್ಮ, ವಿಷ್ಣು ಮತ್ತು ರುದ್ರ ಎಂಬ ಸಂಕೇತಗಳನ್ನು ಕನ್ನಡದಲ್ಲಿ ಕೊಟ್ಟಿದೆ. ಅಚ್ಚಕನ್ನಡ ಮಟ್ಟುಗಳು ಅಂಶವೃತ್ತಗಳು.

**ಸಂಸ್ಕೃತ ಛಂದಸ್ಸಿನ ಮೂಲದ ವರ್ಣವೃತ್ತಗಳು :** ಪ್ರಾಚೀನ ಕನ್ನಡ ಸಾಹಿತ್ಯದ ಕಾವ್ಯಗಳೂ ಪುರಾಣಗಳೂ ವಿಶೇಷವಾಗಿ ಚಂಪೂ ಪದ್ಧತಿಯಲ್ಲಿ ರಚಿತವಾಗಿವೆ. ಚಂಪೂ ಪದ್ಧತಿಯ ಚೌಕಟ್ಟು ಮುಖ್ಯವಾಗಿ ಗದ್ಯ ಹಾಗೂ ಕಂದ, ವೃತ್ತಗಳಿಂದಾದುದು.

**ವೃತ್ತಗಳು, ವರ್ಣವೃತ್ತಗಳು :** ಸಮ, ಅರ್ಧಸಮ ಮತ್ತು ವಿಷಮ-ಎಂಬ ಅವುಗಳ ಮೂರು ಪ್ರಕಾರಗಳಲ್ಲಿ ಮೊದಲನೆಯದೇ ವಿಶೇಷವಾಗಿ ಬಳಕೆಯಾಗಿರತಕ್ಕದ್ದು, ಉಳಿದವು ತೀರ ಕ್ವಚಿತ್ತಾಗಿ ಬಂದಿರತಕ್ಕವು. ವರ್ಣವೃತ್ತಗಳಲ್ಲಿ ಕೆಲವನ್ನು ಸಂಸ್ಕೃತ ಛಂದಸ್ಸಿನಿಂದ ಕನ್ನಡಕ್ಕೆ ನೇರವಾಗಿ ತೆಗೆದುಕೊಂಡಿದೆ. ಉದಾಹರಣೆಗೆ ಶಾರ್ದೂಲವಿಕ್ರೀಡಿತ, ಸ್ರಗ್ಧರೆ ಇತ್ಯಾದಿ; ಇನ್ನು ಕೆಲವನ್ನು ಆ ಮಾದರಿಗಳಲ್ಲಿ ಹೊಸದಾಗಿ ರಚಿಸಿಕೊಂಡಿದೆ. ಉದಾ. ಮತ್ತೇಭವಿಕ್ರೀಡಿತ, ಮಹಾಸ್ರಗ್ಧರೆ ಇತ್ಯಾದಿ. ಜೊತೆಗೆ ಕೆಲವು ವ್ಯತ್ಯಾಸಗಳನ್ನೂ ಕನ್ನಡ ಕವಿಗಳು ಮಾಡಿಕೊಂಡರು. ಸಂಸ್ಕೃತದಲ್ಲಿಯ ನಿಯತಯತಿಯನ್ನು ಐಚ್ಛಿಕವಾಗಿ ಭಾವಿಸಿದ್ದು, ಸಂಸ್ಕೃತದಲ್ಲಿಲ್ಲದ ದ್ವಿತೀಯಾಕ್ಷರ ಪ್ರಾಸವನ್ನು ಪಾಲಿಸಿದ್ದು, ಸಂಸ್ಕೃತದಲ್ಲಿರುವಂತೆ ಪಾದಾಂತದಲ್ಲಿ ನಿಲುಗಡೆಯನ್ನು ಕಡ್ಡಾಯವಾಗಿಟ್ಟುಕೊಳ್ಳದೆ ಪಾದ ಮುಂದಕ್ಕೆ ಓಡುವಂತೆ ಮಾಡಿಕೊಂಡದ್ದು-ಇವು ಗಮನಿಸತಕ್ಕ ವ್ಯತ್ಯಾಸಗಳು. ಸಂಸ್ಕೃತ ವರ್ಣವೃತ್ತಗಳ ಧಾಟಿ ಘೋಷಗಳನ್ನು ಪಾಲಿಸುವುದಕ್ಕಾಗಿ ಕನ್ನಡದಲ್ಲಿ ಬಳಸಿದ ಅಂಥ ವರ್ಣವೃತ್ತಗಳಲ್ಲಿಯೂ ಸಂಸ್ಕೃತ ಶಬ್ದಗಳೂ ಹೆಚ್ಚುಹೆಚ್ಚಾಗಿ ಬಳಕೆಗೆ ಬಂದು ಕನ್ನಡ ನುಡಿಗಳು ತಮ್ಮ ಸ್ವರಗಳೊಡನೆ ಎದ್ದುನಿಂತು ಕಾಣದಂತಾಯಿತು-ಎಂಬುದು ನಿಜ.

ಕನ್ನಡ ಪದ್ಯಸಾಹಿತ್ಯದಲ್ಲಿ ಬಹು ಪ್ರಚಲಿತವಾಗಿರತಕ್ಕ ವರ್ಣವೃತ್ತಗಳು ಎಂದರೆ ಖ್ಯಾತಕರ್ಣಾಟಕಗಳು ಎಂಬ ಹೆಸರಿನಲ್ಲಿ ರೂಢಿಯಾಗಿರುವ ಈ ಆರು ವೃತ್ತಗಳು : ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೆ, ಇವು ಸರಿಸುಮಾರು ಪ್ರ.ಶ. 700 ರಿಂದ ಕನ್ನಡ ಶಾಸನಗಳಲ್ಲಿಯೂ ಕಾವ್ಯಗಳಲ್ಲಿಯೂ ಹೆಚ್ಚಾಗಿ ಬಳಕೆಯಲ್ಲಿವೆ. ಇವುಗಳ ಲಕ್ಷಣವನ್ನು ರೂಢಿಯ ಸಂಜ್ಞೆಗಳನ್ನು ಬಳಸಿದ ಪ್ರಸ್ತಾರ ನಿಯಮಕ್ಕೆ ಅನುಗುಣವಾಗಿ ಈ ಸೂತ್ರಗಳಿಂದ ನೆನಪಿಟ್ಟುಕೊಳ್ಳಬಹುದು; (1) ಶಾರ್ದೂಲವಿಕ್ರೀಡಿತ : ಕಣ್ಗೊಪ್ಪಲ್ । ಮಸಜಂ । ಸತಂತ । ಗಮುಮಾ । ಶಾರ್ದೂಲ । ವಿಕ್ರೀಡಿತಂ. । (2) ಮತ್ತೇಭವಿಕ್ರೀಡಿತ : ಸಭರಂ । ನಂಮಯ । ಲಂಗಮುಂ । ಬಗೆಗೊಳಲ್ । ಮತ್ತೇ । ಭವಿಕ್ರೀ । ಡಿತಂ । (3) ಉತ್ಪಲಮಾಲೆ : ಉತ್ಪಲ । ಮಾಲೆಯ । ಪ್ಪುದಭರಂನಭ । ಭಂರಲ । ಗಂ ನೆಗ । ಳ್ದಿರೆಲ್ । (4) ಚಂಪಕಮಾಲೆ : ನಜಭ । ಜಜಂಜ । ರಂ ಬಗೆ । ಗೊಳುತ್ತಿ । ರೆ ಚಂಪ । ಕಮಾಲೆ । ಯೆಂದಪರ್॥ (5) ಸ್ರಗ್ಧರೆ: ತೋರಲ್ ಮಂ । ರಂಭನಂ । ಮೂಯಗ । ಣಮುಮ । ದೆ ತಾಂ ಸ್ರ । ಗ್ಧರಾವೃ । ತ್ತ ಮಕ್ಕುಂ । (6) ಮಹಾಸ್ರಗ್ಧರೆ : ಸತತಂ । ನಂಸಂ ರ । ರಂಗಂ ನೆ । ರೆದೆಸೆ । ಯೆ ಮಹಾ । ಸ್ರಗ್ಧರಾ । ವೃತ್ತಮ । ಕ್ಕು ೦ ॥ ಇಲ್ಲಿಯ ಪ್ರಸ್ತಾರ ಕ್ರಮವನ್ನು ಪರಿಶೀಲಿಸಿ ಧಾಟಿಯನ್ನರಿತುಕೊಂಡರೆ, ಶಾರ್ದೂಲವಿಕ್ರೀಡಿತ, ಉತ್ಪಲಮಾಲೆ ಮತ್ತು ಸ್ರಗ್ಧರೆಗಳ ಪಾದಾದಿಯ ಗುರುವಿಗೆ ಎರಡು ಲಘುಗಳನ್ನಿಟ್ಟು ಕ್ರಮವಾಗಿ ಮತ್ತೇಭವಿಕ್ರೀಡಿತ, ಚಂಪಕಮಾಲೆ ಮತ್ತು ಮಹಾಸ್ರಗ್ಧರೆಗಳನ್ನು ಕನ್ನಡ ಕವಿಗಳು ಮಾಡಿಕೊಂಡಂತೆ ತೋರುವುದು (ಉತ್ಪಲಮಾಲೆ-ಚಂಪಕಮಾಲೆ ಈ ಜೋಡಿಯ ವಿಷಯದಲ್ಲಿ ಮಾತ್ರ, ಚಂಪಕಮಾಲೆಯ ಆದಿ ದ್ವಿಲಘುವಿಗೆ ಒಂದು ಗುರುವನ್ನಿಟ್ಟುಕೊಂಡು ಉತ್ಪಲಮಾಲೆಯನ್ನು ಮಾಡಿಕೊಂಡಿರುವ ಸಾಧ್ಯತೆಯಿದೆ). ಸಂಸ್ಕೃತದಲ್ಲಿ ಪೂರ್ವೋಕ್ತವಾದ ಶಾರ್ದೂಲಾದಿಗಳು ಪ್ರಸಿದ್ಧವಾಗಿರುವುದೂ ಮತ್ತೇಭಾದಿಗಳು ಏನೂ ಪ್ರಸಿದ್ಧವಾಗಿಲ್ಲದಿರುವುದೂ ಹೀಗೆ ತಿಳಿಯುವುದಕ್ಕೆ ಎಡೆ ಕೊಟ್ಟಿದೆ.

ಹಳಗನ್ನಡ ಸಾಹಿತ್ಯದಲ್ಲಿ ಖ್ಯಾತ ಕರ್ಣಾಟಕಗಳು (ನೋಡಿ- ಖ್ಯಾತ-ಕರ್ಣಾಟಕಗಳು) ಜೊತೆಗೆ ಅಲ್ಲಲ್ಲಿ ವಿರಳವಾಗಿ ಬಳಸಿರುವ ಇನ್ನೂ ಕೆಲವು ವರ್ಣವೃತ್ತಗಳುಂಟು. ಮಾಲಿನಿ, ಹರಿಣಿ, ಪೃಥ್ವಿ, ಮಲ್ಲಿಕಾಮಾಲೆ, ತರಳ ಮೊದಲಾದವು ಹೀಗೆ ಬಳಕೆಯಾಗಿರತಕ್ಕವು. ಕವಿಯ ಕೌಶಲವನ್ನು ಎತ್ತಿ ತೋರುವುದಕ್ಕಾಗಿಯೋ ರಚನೆಯಲ್ಲಿ ವೈವಿಧ್ಯವನ್ನು ತರುವುದಕ್ಕಾಗಿಯೋ ಒಂದೊಂದು ಕೃತಿಯಲ್ಲಿ ಅಲ್ಲಲ್ಲಿ 1-2 ರಂತೆ ಅಥವಾ ಬೆರಳೆಣಿಕೆಗೆ ಸಿಗುವಷ್ಟು ಮಾತ್ರ ಇವು ಬಂದಿವೆ. ಇಲ್ಲಿಯೂ ಕೆಲವು ಸಂಸ್ಕೃತದಿಂದ ನೇರವಾಗಿ ಪಡೆದಂಥವು, ಕೆಲವು ಸ್ವತಃ ಮಾಡಿಕೊಂಡವು. ಈ ಎರಡು ಬಗೆಗಳೂ ಕಾವ್ಯ ಗ್ರಂಥಗಳಿಗಿಂತ ಶಾಸ್ತ್ರಗ್ರಂಥಗಳಲ್ಲಿ ಕಾಣುವುದೇ ಹೆಚ್ಚು. ಉದಾಹರಣೆಗೆ, ಚಂದ್ರ ರಾಜನ ಮದನ ತಿಲಕ, ಜನ್ನನ ಅನುಭವಮುಕುರ, ಇತ್ಯಾದಿಗಳನ್ನು ನೋಡಬಹುದು. ಇಂಥ ವೃತ್ತಗಳಲ್ಲಿ ಪ್ರಸಿದ್ಧವಾದವುಗಳ ಲಕ್ಷಣಗಳನ್ನು ಪಿಂಗಲ, ಜಯದೇವಾದರ ಸಂಸ್ಕೃತ ಛಂದೋಗ್ರಂಥಗಳಲ್ಲಿಯೂ ನಾಗವರ್ಮ, ಗುಣಚಂದ್ರಾದ್ಯರ ಕನ್ನಡ ಛಂದೋಗ್ರಂಥಗಳಲ್ಲಿಯೂ ಹೇಳಿದೆ.

ಹಳಗನ್ನಡ ಪದ್ಯಗ್ರಂಥಗಳಲ್ಲಿ ಸಮವೃತ್ತಗಳ ಹಾಗೆ ಅಧಿಕ ಸಂಖ್ಯೆಯಲ್ಲಿ, ಅರ್ಧಸಮ ಮತ್ತು ವಿಷಮವೃತ್ತಗಳೂ ಹಾಗೆಯೇ ಉತ್ಕೃತಿಯಿಂದಾಚೆಯ ಮಾಲಾವೃತ್ತಗಳು ಮತ್ತು ದಂಡಕಗಳೂ ಕಂಡುಬರುವುದಿಲ್ಲ. ಕವಿರಾಜಮಾರ್ಗ (ಸು. 850). ಕಾವ್ಯಾವಲೋಕನ (ಸು. 1145), ಚಿಕದೇವರಾಜವಿಜಯ (ಸು. 1700) ಇವುಗಳಲ್ಲಿ ಕ್ರಮವಾಗಿ ಪುಷ್ಪಿತಾಗ್ರ,

ನಾಗ, ವಿಯೋಗಿನಿ ಮತ್ತು ವಸಂತಮಾಲಿಕೆ ಈ ಅರ್ಧ ಸಮವೃತ್ತಗಳು ಬಳಕೆಯಾಗಿವೆ. ಮದನತಿಲಕದಲ್ಲಿ ತ್ರಿಪದೋನ್ನತಿಯೆಂಬ ವಿಷಮ ವೃತ್ತಿವಿದೆ. ಗದಾಯುದ್ಧ, ಪಂಪರಾಮಾಯಣ ಮುಂತಾದ ಕೆಲವು ಕಾವ್ಯಗಳಲ್ಲಿ ಲಲಿತವೃತ್ತರವೆಂಬ ಪ್ರಸಿದ್ಧವಾದ ಮಾಲಾವೃತ್ತವನ್ನು ಬಳಸಿದೆ. ಲಲಿತವೃತ್ತವೇ ಲಯಗ್ರಾಹಿಯಾಗಿ ಮುಂದೆ ಚಿಕದೇವರಾಜಬಿನ್ನಪ ಮುಂತಾದ ಕೃತಿಗಳಲ್ಲಿ ಬಂದಿದೆ. ಲೀಲಾವತಿಯಲ್ಲಿ ಮಾತ್ರವರ್ಣ ಮಿಶ್ರ ಚತುಷ್ಪದಿಯಾದ (ಮಾತ್ರಾವೃತ್ತ) ಲಯೋತ್ತರವೆಂಬ ಒಂದು ವೃತ್ತವಿದೆ. ಹೀಗೆಯೇ ಇಂಥ ವೃತ್ತಗಳು ಇನ್ನೂ ಕೆಲವು ಬೇರೆ ಬೇರೆ ಕಾವ್ಯಗಳಲ್ಲಿರಬಹುದು.

ಸಂಸ್ಕೃತ ಕಾವ್ಯಗಳ ಶಾಸ್ತ್ರಗಳ ಸುಪ್ರಸಿದ್ಧವಾದ ಶ್ಲೋಕ ಛಂದಸ್ಸು ಕನ್ನಡದಲ್ಲಿ ಕ್ವಚಿತ್ತಾಗಿ ಮಾತ್ರ ಕಾಣುತ್ತದೆ. ಕವಿರಾಜಮಾರ್ಗದಲ್ಲಿ ನಿಯಮಬದ್ಧವಾದ ಕೆಲವು ಶ್ಲೋಕಗಳಿವೆ. ಕಾವ್ಯಾವಲೋಕನದಲ್ಲಿಯೂ ಒಂದು ಶ್ಲೋಕವಿದೆ. ಆದರೆ ಇದರ ಬಳಕೆ ಮುಂದೆ ಹೆಚ್ಚಾಗಿ ಆಗಲಿಲ್ಲ. ಕವಿರಾಜಮಾರ್ಗದಿಂದ ಒಂದು ಉದಾಹರಣೆಯನ್ನು ನೋಡಬಹುದು:

**ತಾರಾ** ಜಾನಕಿಯಂ ಪೋಗಿ ।
**ತಾರಾ** ತರಳ ನೇತ್ರೆಯಂ ।
**ತಾರಾ**ಧಿಪತಿ ತೇಜಸ್ವಿ ।
**ತಾರಾ**ಧಿ ವಿಜಯೋದಯಾ ॥

ಇಲ್ಲಿಯ 4 ಪಾದಗಳಲ್ಲಿ, ಪ್ರತಿ ಪಾದದಲ್ಲಿಯೂ 5ನೆಯ ಅಕ್ಷರ ಲಘುವಾಗಿಯೂ 6ನೆಯದು ಗುರುವಾಗಿಯೂ ಇದ್ದು, 7ನೆಯ ಅಕ್ಷರ 1, 3ನೆಯ ಪಾದಗಳಲ್ಲಿ ಗುರುವಾಗಿಯೂ 2, 4ನೆಯ ಪಾದಗಳಲ್ಲಿ ಲಘುವಾಗಿಯೂ ಇರುವುದು ಕಾಣುತ್ತದೆ ; ಕನ್ನಡ ಪದ್ಯಗಳಿಗೆ ಸಹಜವಾದ ಆದಿಪ್ರಾಸವನ್ನಿಟ್ಟುಕೊಂಡಿದೆ.

**ಸಂಸ್ಕೃತ–ಪ್ರಾಕೃತ ಪ್ರಭಾವದಿಂದ ಹುಟ್ಟಿದ ಮಾತ್ರ ವೃತ್ತಗಳು :** ಕನ್ನಡ ಸಾಹಿತ್ಯದ ಕಾವ್ಯಶಾಸ್ತ್ರಾದಿಗ್ರಂಥಗಳಲ್ಲಿ ವಿಶೇಷವಾಗಿ ಬಳಕೆಯಾಗಿರುವ ಕಂದಪದ್ಯವೂ ಅಲ್ಲಿಯೇ ವಿರಳವಾಗಿ ಬಳಕೆಯಾಗಿರುವ ರಗಳೆಯೂ ಈ ಗುಂಪಿನ ಗಣ್ಯವೃತ್ತಗಳಾಗಿವೆ. ಈ ಪದ್ಯಜಾತಿಗಳನ್ನೇ ತನಿಯಾಗಿ ಬಳಸಿ ಕೃತಿರಚನೆ ಮಾಡಿರುವುದೂ ಉಂಟು. ಲಕ್ಷಣಗ್ರಂಥಗಳ ರಚನೆಗೆ ಕಂದಪದ್ಯವನ್ನು ಹೆಚ್ಚಾಗಿ ಬಳಸಿದೆ. ಜನ್ನನ ಯಶೋಧರ ಚರಿತೆ ಕಾವ್ಯವಾಗಿಯೂ ಸಮಗ್ರವಾಗಿ ಕಂದದಲ್ಲಿ ರಚಿತವಾಗಿದೆ. ಹರಿಹರ ಮತ್ತು ಅವನಿಗೆ ಈಚಿನ ಕೆಲವು ಕವಿಗಳು ಬರೆದಿರುವ ಶೈವಪರವಾದ ಕೃತಿಗಳು ರಗಳೆಯಲ್ಲಿ ಬರೆದವಾಗಿವೆ.

ಸಂಸ್ಕೃತದ ಆರ್ಯಾವೃತ್ತವರ್ಗದ ಆರ್ಯಾಗೀತೆಯೇ ಪ್ರಾಕೃತದಲ್ಲಿ ಸ್ಕಂಧಕ (ಖಂಧಅ) ಎನ್ನಿಸಿ ಆ ಮೂಲಕವಾಗಿ ಕನ್ನಡಕ್ಕೆ ಬಂದು ಕಂದ ಎಂಬ ಹೆಸರಿನಲ್ಲಿ ರೂಢಿಯಾಗಿರಬೇಕೆಂದು ತೋರುತ್ತದೆ. ಇದರ ಸಾಮಾನ್ಯ ಲಕ್ಷಣ ಹೀಗೆ : 4 ಪಾದಗಳು; ಇವುಗಳಲ್ಲಿ 1, 2ನೆಯ ಪಾದಗಳಂತೆಯೇ 3, 4ನೆಯ ಪಾದಗಳಿರುತ್ತವೆ. 1, 2ನೆಯ ಪಾದಗಳಲ್ಲಿ ಕ್ರಮವಾಗಿ 3, 5ರ ಹಾಗೆ ಒಟ್ಟು 8 ಚತುರ್ಮಾತ್ರಾಗಣಗಳು (12+20=32); 3, 4ನೆಯ ಪಾದಗಳಲ್ಲಿಯೂ ಹೀಗೆಯೇ. ಚತುರ್ಮಾತ್ರಾಗಣಗಳ ಕಟ್ಟು ಕೆಡಬಾರದು. ಪ್ರಥಮಾರ್ಧದ ಹಾಗೂ ದ್ವಿತೀಯಾರ್ಧದ 8ನೆಯ ಗಣಸ್ಥಾನದ ಅಂತ್ಯದಲ್ಲಿ ಗುರು ತಪ್ಪದೆ ಬಂದಿರಬೇಕು. ಈ ಎರಡೂ ಅರ್ಧಗಳ ವಿಷಮ ಸ್ಥಾನಗಳಲ್ಲಿ ಮಧ್ಯಗುರುವಿನ (U-U) ಗಣ ಬರಬಾರದು. ಆದರೆ ಅವುಗಳ 6ನೆಯ ಗಣಸ್ಥಾನಗಳಲ್ಲಿ ಮಧ್ಯಗುರುವಿನ ಗಣವಾಗಲಿ ಸರ್ವಲಘು (UUUU)ವಿನ ಗಣವಾಗಲಿ ತಪ್ಪದೆ ಬಂದಿರಬೇಕು. ಸರ್ವಲಘುವಿನ ಗಣವಾಗಿದ್ದ ಪಕ್ಷದಲ್ಲಿ, ಹಾಗೆಯೇ ಮಧ್ಯಗುರುವಿನ ಗಣ ಎಂದರೆ ಜಗಣವಾಗಿದ್ದ ಪಕ್ಷದಲ್ಲಿಯೂ ಮೊದಲನೆಯ ಹ್ರಸ್ವದ ಮುಂದೆ ಯಂಯಿರಬೇಕು. 7ನೆಯ ಗಣ ಸರ್ವಲಘುವಿನ ಗಣವಾಗಿದ್ದಲ್ಲಿ ಮೊದಲನೆಯ ಹ್ರಸ್ವದಿಂದಲೇ ಹೊಸ ಪದ ಮೊದಲಾಗಬೇಕು. ಲಕ್ಷಣಾನ್ವಿತವಾದ ಕಂದಕ್ಕೆ ಉದಾಹರಣೆ:

ಕಾವೇ।ರಿಯಿಂದ।ಮಾ ಗೋ।
ದಾವರಿ।ವರಮಿರ್ಪ. ನಾಡದಾ ಕನ್ನಡದೊಳ್
ಭಾವಿಸಿ।ದ ಜನಪ।ದಂ ವಸು।
ಧಾವಳ।ಯ ವಿಲೀನ ವಿಶದ।ವಿಷಯವಿಶೇಷಂ

(ಕವಿರಾಜಮಾರ್ಗ)

ಎರಡನೆಯದು ರಗಳೆ (ನೋಡಿ– ರಗಳೆ). ರಗಳೆ ಮತ್ತು ರಘಟಾ–ಇವು ಸಮಾನಾರ್ಥಕ ಶಬ್ದಗಳು. ಈ ಪದಗಳ ಮೂಲ ಯಾವುದು, ನಿಷ್ಪತ್ತಿಯೇನು ಸರಿಯಾಗಿ ತಿಳಿಯದು. ನಾಗವರ್ಮನೂ, ಜಯಕೀರ್ತಿಯೂ ರಗಳೆ ಛಂದಸ್ಸಿನ ಲಕ್ಷಣವನ್ನು ಹೇಳಿದವರಲ್ಲಿ ಮುಖ್ಯರು. ಮಂದಾನಿಲ, ಲಲಿತ ಮತ್ತು ಉತ್ಸಾಹ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿರುವ ರಗಳೆಯ ಮೂರು ಪ್ರಭೇದಗಳು ಹರಿಹರನ ರಗಳೆಯ ಕಾವ್ಯಗಳಲ್ಲಿ ಮತ್ತು ಈಚೆಗೆ ಹೆಚ್ಚು ಸ್ಪಷ್ಟವಾದ ರೂಪದಲ್ಲಿ ಗೋಚರಿಸುತ್ತವೆ. ಆದರೆ ಇದಕ್ಕೆ ಮೊದಲೇ ಇವನ್ನು ಹೋಲುವ ಕೆಲವು ನಿದರ್ಶನಗಳು ಪಂಪ ರನ್ನ ಮೊದಲಾದ ಪ್ರಾಚೀನ ಕನ್ನಡ ಕವಿಗಳ ಚಂಪೂಕಾವ್ಯಗಳಲ್ಲಿ ಕ್ವಚಿತ್ತಾಗಿ ಕಂಡುಬರುತ್ತವೆ. ಇವುಗಳಲ್ಲಿ ಮಂದಾನಿಲ ರಗಳೆಯನ್ನು ಹೋಲುವ 16, 32 ಮುಂತಾಗಿ ಪಾದ ಪ್ರಮಾಣವನ್ನುಳ್ಳ ನಿದರ್ಶನಗಳೇ ಪ್ರಮುಖವಾದವು. ಇವುಗಳ ಲಕ್ಷಣವನ್ನು ಪರಿಶೀಲಿಸಿದಾಗ, ಇವು ಅಪಭ್ರಂಶ ಕಾವ್ಯ ಪ್ರಚಲಿತಗಳಾದ ಪಜ್ಝಟಿಕಾ ಛಂದಸ್ಸನ್ನು ಬಳಸಿ ಕಟ್ಟಿರುವ ಷೋಡಶವಾದ ಪ್ರಮಾಣದ ಕಡವಕಗಳ, ಅನುಕರಣದಿಂದಾಗಿ ಹುಟ್ಟಿರಬೇಕೆಂಬ ಸಂಗತಿ ತಿಳಿದುಬಂದಿದೆ. ಜಯಕೀರ್ತಿಯ ರಘಟಾ ಲಕ್ಷಣದ ಪದ್ಯದಲ್ಲಿ ದೊರೆಯುವ ಒಂದು ಸೂಚನೆಯಿಂದಲೂ ಅಲ್ಲಲ್ಲಿ ಇಂಥ ಪದ್ಯಗಳಿಗೆ ಪದ್ಧತಿ (ಪಜ್ಝಟಿಕೆ) ಎಂಬುದರ ಪ್ರತಿಶಬ್ದವಾಗಿ ಪದ್ದಳಿ, ಪಡ್ಡಳಿ ಎಂಬ ರೂಪಗಳು ಮಾತೃಕೆಗಳಲ್ಲಿ ಕಂಡುಬರುವುದರಿಂದಲೂ ಈ ವಿಷಯ ದೃಢಪಟ್ಟಿದೆ. ಕನ್ನಡದ ಪಡ್ಡಳಿಯ ರಗಳೆ ಅಪಭ್ರಂಶದ ಪಜ್ಝಟಿಕೆಯ ಕಡವಕಗಳ ಹಾಗೆ. ಹೀಗೆ ಪ್ರಾಕೃತಮೂಲವನ್ನು ಅನುಸರಿಸಿದಾಗ ಸ್ವತಂತ್ರಿಸಿ ಕೆಲವು ವ್ಯತ್ಯಾಸಗಳನ್ನು ಕನ್ನಡದಲ್ಲಿ ಮಾಡಿಕೊಂಡಿದೆ.

I ಪಜ್ಝಟಿಕೆಯ ಛಂದಸ್ಸಿನ ಕಡವಕದ ಒಂದು ಪಾದಯುಗ್ಮ :

ಉತ್ತುಂ । ಗಸಿಹರು । ಸುರಗಿರಿ । ಸಮಾಣು
ಆಸ।ಣ್ಣು ಗಂಪಿ । ಮಣಹರು । ನಿಮಾಣು

(ಣಾಯಕುಮಾರಚರಿಉ)

ಅದೇ ಛಂದಸ್ಸಿನ (ಪದ್ದಳಿ, ಪಡ್ಡಳಿ) ರಗಳೆಯ ಒಂದು ಪಾದಯುಗ್ಮ ;

ಸ್ಫುರಿತೇಂದ್ರನೀಲಮಣಿಖಚಿತಭೂಮಿ ।
ಚೆಲುವಿಂಗಿದು ನೆಟ್ಟನೆ ಜನ್ಮಭೂಮಿ ॥

(ಆದಿಪುರಾಣ)

II ಹೀಗೆಯೇ 4 ತ್ರಿಮಾತ್ರಗಣಗಳಿಂದಾದ ಕಡವಕದ ಒಂದು ಪಾದ ಯುಗ್ಮ :

ಕಾಣ।ಕುಂಟ।ಪಿಂಗ।ಲಾಹ।
ಅಂಧ।ಮೂಯ।ಪಂಗು।ಲಾಹ॥

(ಪುಷ್ಪದಂತನ ಮಹಾಪುರಾಣ)

ಅದನ್ನು ಹೋಲುವ ರಗಳೆಯ ಒಂದು ಪಾದಯುಗ್ಮ :

ಅದರ।ಬಳಸಿ।ದುಪವ।ನಂಗ।
ಉದಿತ।ಕೋಕಿ।ಲಸ್ವ।ನಂಗ।

(ಅಜಿತಪುರಾಣ)

III ಹೀಗೆಯೇ 4 ಪಂಚಮಾತ್ರಾಗಣಗಳಿಂದಾದ ಕಡವಕದ ಒಂದು ಪಾದಯುಗ್ಮ;

ಪರದರಣೆ । ಪರತರುಣಿ । ಪರದವಿಣ । ಕಂಖಾಎ
ಮರಿಹೀಸಿ । ದುಚ್ಚಾರ । ಖಲಚೋರ । ಸಿಕ್ಖಾಎ ॥

ಅದನ್ನು ಹೋಲುವ ರಗಳೆಯ ಒಂದು ಪಾದಯುಗ್ಮ :

ಶ್ರೀಗೆ ಕುಲ।ಸದನಮೆನೆ ತೊಳಪ। ಮಣಿ । ಭವನದೊಳ್
ರಾಗರಸ।ಮೊದವೆ ಸರ।ಸಿರುಹ ಸಮ । ವದನದೊಳ್ ॥

(ಆದಿಪುರಾಣ)

ಚಂಪೂ ಕಾವ್ಯ ಪ್ರಚಲಿತಗಳಾದ, ಕ್ವಚಿತ್ತಾಗಿ ಶಾಸನಗಳಲ್ಲಿಯೂ ಕಾಣುವ ಈ ಮೂರು ಬಗೆಯ ರಗಳೆಗಳಿಗೂ ಅಪಭ್ರಂಶ ಛಂದಸ್ಸಿನಲ್ಲಿ ಕ್ರಮವಾಗಿ ತ್ರಿಕಲ, ಚತುಷ್ಕಲ ಮತ್ತು ಪಂಚಕಲಗಳ ಮೂರು ಬಗೆಯ ಛಂದಸ್ಸುಗಳಿಂದ ಕಟ್ಟಿದ ಕಡವಕಗಳೇ ಪ್ರಾಯಃ ಮೂಲ ಮತ್ತು ಪ್ರೇರಕ ಎಂಬುದು ಇದರಿಂದ ವಿಶದಪಡುತ್ತದೆ. ಇವುಗಳಿಗೆ ರಗಳೆಯೆಂಬ ಸಾಮಾನ್ಯವಾಚಕವಿದ್ದುದು ಸ್ಪಷ್ಟ; ಆದರೆ ಪ್ರಭೇದಗಳಿಗೆ ಪ್ರತ್ಯೇಕವಾಗಿ ಗೊತ್ತಾದ ಹೆಸರುಗಳಿದ್ದಂತೆ ತೋರುವುದಿಲ್ಲ, 3, 4 ಮತ್ತು 5 ಮಾತ್ರೆಗಳ ಈ ರಗಳೆಗಳಲ್ಲಿ ಪಾದಸಂಖ್ಯೆ, ಪ್ರಾಸವಿನ್ಯಾಸ, ಅಂತ್ಯಗಣ ನಿಯಮ ಮೊದಲಾದವುಗಳಲ್ಲಿ ಪ್ರಾಚೀನ ಕನ್ನಡ ಕವಿಗಳು ಅಪಭ್ರಂಶ ಕವಿಗಳ ಹಾಗೆಯೇ ತಾವೂ ವ್ಯತ್ಯಾಸಗಳನ್ನೂ ವೈವಿಧ್ಯಗಳನ್ನೂ ಕಾಣಿಸಿದ್ದಾರೆ, ಇವು 12ನೆಯ ಶತಮಾನದಲ್ಲಿ ಹರಿಹರನ ಕೈಯಲ್ಲಿ ಬಲುಮಟ್ಟಿಗೆ ಒಂದು ಸ್ಥಾಯಿಯಾದ ರೂಪವನ್ನು ಪಡೆದುಕೊಂಡು ಉತ್ಸಾಹ, ಮಂದಾನಿಲ ಮತ್ತು ಲಲಿತವೆಂಬ ಹೆಸರಿಂದ ಮುನ್ನೆಲೆಗೆ ಬಂದುವು. ವರ್ಣನೆ ಕಥನಗಳಿಗೆ ಚೆನ್ನಾಗಿ ಒಗ್ಗುವ ಈ ಛಂದಸ್ಸುಗಳನ್ನು ಕಾವ್ಯರಚನೆಗೆ ಪ್ರಮುಖವಾದ ಛಂದಸ್ಸಾಗಿ ಆತ ಯೋಜಿಸಿ ಅವಕ್ಕೆ ಮಹತ್ತ್ವವನ್ನು ತಂದುಕೊಟ್ಟ, ಬಲುಮಟ್ಟಿಗೆ ನಿಯತ ಇಲ್ಲವೆ ಅಲ್ಪಸಂಖ್ಯೆಯ ಪಾದ ಪ್ರಮಾಣ, ಅಂತ್ಯಪ್ರಾಸನಿಬದ್ಧತೆ, ಹೊಂದಾಣಿಕೆಯ ಮಾತ್ರಾಲಯ, ಪಾದಾಂತದಲ್ಲಿ ಪದ ಮುಗಿಯದೆ ಮುಂದಿನ ಪದಕ್ಕೋಡುವುದು, ಅಂತ್ಯಗಣ ನಿಯಮಬದ್ಧತೆ, ಇವುಗಳ ಸ್ಥಾನದಲ್ಲಿ ಅನಿಯತ ಹಾಗೂ ಅಧಿಕಸಂಖ್ಯೆಯ ಪಾದಪ್ರಮಾಣ, ಆದ್ಯಂತ ಪ್ರಾಸಬದ್ಧತೆ, ಖಚಿತವಾದ ಮಾತ್ರಾಲಯ, ತಾಳಗತಿಗೆ ಅಡ್ಡಿಯಾಗದಂತೆ ಗಣೋಪಸಂಹಾರ–ಇವು ಹರಿಹರಾದ್ಯರು ಬಳಸಿದ ಉತ್ಸಾಹಾದಿ ರಗಳೆಗಳ ಸಾಮಾನ್ಯ ಲಕ್ಷಣಗಳಾದುವು.

ಉತ್ಸಾಹದ ಸಾಮಾನ್ಯ ಲಕ್ಷಣ : ಒಂದು ರೀತಿ 4 ತ್ರಿಮಾತ್ರಾಗಣಗಳಂತೆ ಪಾದಕ್ಕೆ 12 ಮಾತ್ರೆಗಳು :

ಕುಳಿರ್ವ।ಪೊಗೊ।ಳಂಗಳಲ್ಲಿ
ತಳಿರ।ಕಾವಣ।ಂಗಳಲ್ಲಿ

(ಕಬ್ಬಿಗರ ಕಾವ)

ಇನ್ನೊಂದು ರೀತಿ 8 ತ್ರಿಮಾತ್ರಾಗಣಗಳಂತೆ ಪಾದಕ್ಕೆ 24 ಮಾತ್ರೆಗಳು :

ಮಗನ। ಕರೆಯ।ಲಂದು। ಶಂಕೆ।ಯಿಲ್ಲ।ದಿರ್ದ।ಳೆಲ್ದು। ಪೋಗಿ
ಮಗನೆ। ಮಗನೆ। ಬಾರೆ। ನುತ್ತ। ತಂದೆ। ಕರೆದು। ನೋಡಿ । ಬೇಗಿ॥

(ಸಿರಿಯಾಳನ ರಗಳೆ)

ಮಂದಾನಿಲದ ಸಾಮಾನ್ಯಲಕ್ಷಣ : 4 ಚತುರ್ಮಾತ್ರಾಗಣಗಳಂತೆ ಪಾದಕ್ಕೆ 16 ಮಾತ್ರೆಗಳು :

ಪಂಕಜ।ದಂತಿರೆ।ಪುಟ್ಟಿದ।ಳೊಲವಿಂ।
ಪಂಕವ।ನೆಂದುಂ।ಪೊರ್ದದೆ।ನಲವಿಂ॥

(ಆದಯ್ಯನ ರಗಳೆ)

ಲಲಿತದ ಸಾಮಾನ್ಯ ಲಕ್ಷಣ : 4 ಪಂಚಮಾತ್ರಾಗಣಗಳಂತೆ ಪಾದಕ್ಕೆ 20 ಮಾತ್ರೆಗಳು:

ಸೊಂಪಿನಿಂ। ಕಂಪಿಡುವ। ಸಂಪಗೆಗ। ಳಂ ಕೊಂಡು
ಹೊಂಪೆಸೆವ। ಹೊಂಗೇದ। ಗೆಯ ಹೂಗ। ಳಂ ಕೊಂಡು।

(ಬಸವರಾಜದೇವರ ರಗಳೆ)

**ಅಚ್ಚ ಕನ್ನಡ ಛಂದಸ್ಸಿನ ಮಟ್ಟುಗಳು :** ಇದನ್ನು ನಾಗವರ್ಮ ಕರ್ಣಾಟಕ ವಿಷಯಜಾತಿವೃತ್ತ ಎಂದೂ ಜಯಕೀರ್ತಿ ಕರ್ಣಾಟ ವಿಷಯಭಾಷಾಜಾತಿ ಎಂದೂ ಕರೆದಿದ್ದಾರೆ. ಕನ್ನಡನಾಡಿನ ಅಥವಾ ಕನ್ನಡನಾಡಿನ ಭಾಷೆಯಲ್ಲಿರುವ ಜಾತಿವೃತ್ತ (ಜಾತಿ)ಗಳು ಎಂದರೆ ಸಂಸ್ಕೃತೇತರವಾದ ವೃತ್ತಗಳು ಎಂದು ಇದರ ಅರ್ಥ. ಅಕ್ಕರ, ತ್ರಿಪದಿ, ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ, ಉತ್ಸಾಹ, ಷಟ್ಪದಿ–ಈ ಹತ್ತು ಮುಖ್ಯವಾಗಿ ಮಟ್ಟುಗಳನ್ನು ನಾಗವರ್ಮ ಹೇಳಿದ್ದಾನೆ. ಜಯಕೀರ್ತಿಯೂ ಇವನ್ನು ಹೇಳಿದ್ದಾನೆ. ಉತ್ಸಾಹವೆಂಬೊಂದು ಬಗೆಯನ್ನು ಮಾತ್ರ ಈತ ಮಿಶ್ರಾಧಿಕಾರದಲ್ಲಿ ಕೊಟ್ಟಿದ್ದಾನೆ. 3ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ತ್ರಿಪದಿ ಷಟ್ಪದಿಗಳ ಉಲ್ಲೇಖವಿದೆ. ಶಾರ್ಙ್ಗದೇವನ ಸಂಗೀತರತ್ನಾಕರದಲ್ಲಿ ಆ ಎರಡನ್ನೂ ಒಳಕೊಂಡು ಏಳೆಯ ವಿಚಾರ ಬಂದಿದೆ. ಈ ಮಟ್ಟಗಳಲ್ಲಿ ಕೆಲವು ಮಾತ್ರ ಪ್ರಾಚೀನ ಶಾಸನಗಳಲ್ಲಿಯೂ ಕಾವ್ಯಗಳಲ್ಲಿಯೂ ಬಳಕೆಯಾಗಿವೆ. ಕೆಲವಕ್ಕೆ ನಿದರ್ಶನಗಳು ದೊರೆತಿಲ್ಲ. ಏಳೆ–ತ್ರಿಪದಿಗಳಿಗೂ ಪಿರಿಯಕ್ಕರ–ಅಕ್ಕರಭೇದಗಳಿಗೂ ಒಂದಕ್ಕೊಂದು ಸಂಬಂಧವಿರುವಂತೆ ತೋರುತ್ತದೆ. ಉಳಿದವುಗಳು ಅಂಶಗಣದ ಜಾಯಮಾನವನ್ನನುಸರಿಸಿ ಬೇರೆ ಬೇರೆಯಾಗಿಯೇ ಹುಟ್ಟಿರಬಹುದು.

**ಅಕ್ಕರ :** ಇದರಲ್ಲಿ ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರು, ಎಡೆಯಕ್ಕರ ಮತ್ತು ಕಿರಿಯಕ್ಕರ ಎಂದು ಐದು ಪ್ರಭೇದಗಳಿವೆ. ಸಂಸ್ಕೃತದಲ್ಲಿ ಇವಕ್ಕೆ ಕ್ರಮವಾಗಿ ಮಹಾಕ್ಷರ, ಸಮಾನಾಕ್ಷರ, ಮಧ್ಯಾಕ್ಷರ, ಅಂತರಾಕ್ಷರ ಮತ್ತು ಅಲ್ಪಾಕ್ಷರ–ಎಂಬುವು ಪ್ರತಿನಾಮಗಳು. ಹಾಗೆಯೇ ತೆಲುಗಿನಲ್ಲಿ ಕ್ರಮವಾಗಿ ಮಹಾಕ್ಕರ, ಮಧ್ಯಾಕ್ಕರ, ಮಧುರಾಕ್ಕರ, ಅಂತರಾಕ್ಕರ, ಅಲ್ಪಾಕ್ಕರ ಎಂಬ ಹೆಸರುಗಳನ್ನು ಹೇಳಿದ.

**(i) ಪಿರಿಯಕ್ಕರ :** ಅಕ್ಕರ ಭೇದಗಳಲ್ಲಿ ಪ್ರಸಿದ್ಧವಾದುದು, ದೊಡ್ಡದು, ಪ್ರಾಚೀನ ಶಾಸನಗಳಲ್ಲೂ ಕಾವ್ಯಗಳಲ್ಲೂ ಕಂಡುಬಂದಿದೆ. ಸಾಮಾನ್ಯಲಕ್ಷಣ: 4 ಪಾದಗಳು, ಪ್ರತಿಪಾದದಲ್ಲಿ 1 ಬ್ರ, 5ವಿ, 1 ರು–ಹೀಗೆ 7 ಗಣಗಳು. ಆದರೆ ಕರ್ತೃವಿನಿಷ್ಟವನ್ನನುಸರಿಸಿ ಯಾವುದೇ ಪಾದದಲ್ಲಿ 2ನೆಯ ಮತ್ತು 4ನೆಯ ಗಣ ವಿಷ್ಣುವಿಗೆ ಬದಲಾಗಿ ಬ್ರಹ್ಮವಾಗಿರುವುದು. ಇದು ಲಾಕ್ಷಣಿಕರು ಕೊಡುವ ಸಾಮಾನ್ಯ ನಿಯಮ. ಆದರೆ ಹಾಡಿಗೆ ಹೊಂದಿ ಪರ್ಯಾಯ ಗಣಗಳು ಯಾವುದೇ ಗಣಸ್ಥಾನದಲ್ಲಿ ಬರುವುದು ಸಾಧ್ಯ. ನಿದರ್ಶನಗಳಿಗೆ ನೋಡಿ – ಆದಿಪು. 2–44; 6–27; ಪಂಪಭಾ. 5–26, 42; 7–28; ಶಾಂತಿಪು. 10–9) ಉದಾಹರಣೆಗೆ ಒಂದು ಸಾಲು:

ಬೀರ।ದಳವಿಯನನ್ನಿ।ಯ।ಚಾಗದ ।ಶಾಸನಂ। ಚಂದ್ರಾರ್ಕ। ತಾರಂಬರಂ

(ಪಂಪಭಾರತ)

**(ii) ದೊರೆಯಕ್ಕರ :** ಸಮಸಂಖ್ಯೆಯ (ಅಥವಾ ಸಮಾನ ಯೋಜನೆಯ ಗಣಗಳು ಬರುವುದು ಸಾಮಾನ್ಯಲಕ್ಷಣ : 4 ಪಾದಗಳು; ಪ್ರತಿಪಾದದಲ್ಲಿ 2 ವಿ, 1 ಬ್ರ, 2 ವಿ, 1ಬ್ರ–ಹೀಗೆ 6 ಗಣಗಳು, ಇಲ್ಲಿಯೂ ಯಾವುದೇ ಗಣಸ್ಥಾನದಲ್ಲಿ ಪರ್ಯಾಯ ಗಣಗಳು ಬರುವುದು ಸಾಧ್ಯ. ಅಸಗ ಕವಿಯ ಕರ್ಣಾಟಕುಮಾರಸಂಭವ ಕಾವ್ಯದಲ್ಲಿ ಇದನ್ನು ಬಳಸಿದೆಯೆಂದು ಜಯಕೀರ್ತಿ ತಿಳಿಸಿದ್ದಾನೆ. ಆದರೆ ಆ ಕಾವ್ಯ ದೊರೆತಿಲ್ಲ. ಅನ್ಯತ್ರ ಇದರ ಉದಾಹರಣೆಯಿಲ್ಲ.

ನಿದರ್ಶನಕ್ಕೆ ಲಕ್ಷಣಪದ್ಯದ ಒಂದು ಸಾಲು:

ಸರಸಿಜೋದರ ಗಣ।ಮೆರಡ।ಜನುಮಲ್ಲಿ। ನರೆದಿರ್ಕೆ। ಮತ್ತಂ

(ಛಂದೋಂಬುಧಿ)

**(iii) ನಡುವಕ್ಕರ :** ಗಣಸಂಖ್ಯೆಯ ದೃಷ್ಟಿಯಿಂದ ಅಕ್ಕರಭೇದಗಳಲ್ಲಿ ಮಧ್ಯೆ ಇದು ನಿಲ್ಲುವುದು. ಸಾಮಾನ್ಯಲಕ್ಷಣ: 4 ಪಾದಗಳು; ಪ್ರತಿಪಾದದಲ್ಲಿ 1 ಬ್ರ, 3 ವಿ, 1ರು–ಹೀಗೆ 5 ಗಣಗಳು. ಇಲ್ಲಿಯೂ ಪರ್ಯಾಯ ಗಣಗಳು ಬರುವುದು ಸಾಧ್ಯ. ಕರ್ಣಾಟ ಮಾಲತೀಮಾಧವವೆಂಬ ಕಾವ್ಯದಲ್ಲಿ ಇದನ್ನು ಬಳಸಿದೆಯೆಂದು ಜಯಕೀರ್ತಿ ತಿಳಿಸಿದ್ದಾನೆ. ಆದರೆ ಆ ಕಾವ್ಯ ದೊರೆತಿಲ್ಲ. ಚಂದ್ರರಾಜನ ಮದನತಿಲಕದಲ್ಲಿ ಒಂದು ಪದ್ಯವಿದೆ.

ನಿದರ್ಶನಕ್ಕೆ ಒಂದು ಸಾಲು :

ನುಡಿಗು।ಮೋಪನ।ಪಡೆಮಾತ।ನಾತನಿ।ರ್ದಡೆಗೆ ವಕ್ಕುಂ।

(ಮದನತಿಲಕ)

**(iv) ಎಡೆಯಕ್ಕರ :** ಸಾಮಾನ್ಯಲಕ್ಷಣ : 4 ಪಾದಗಳು; ಪ್ರತಿಪಾದದಲ್ಲಿ 1 ಬ್ರ 2 ವಿ, 1 ರು–ಹೀಗೆ ನಾಲ್ಕು ಗಣಗಳು. ಇಲ್ಲಿಯೂ ಪರ್ಯಾಯಗಳು ಬರುವುದು ಸಾಧ್ಯ. ಕರ್ಣಾಟೇಶ್ವರಕಥಾ ಮತ್ತು ಇತರ ಜೈನಕೃತಿಗಳಲ್ಲಿ ಇದರ ಬಳಕೆಯಾಗಿದೆಯೆಂದು ಜಯಕೀರ್ತಿ ತಿಳಿಸಿದ್ದಾನೆ. ಆದರೆ ಅವು ಯಾವುವೂ ನಮಗೆ ದೊರೆತಿಲ್ಲ. ಚಂದ್ರರಾಜನ ಮದನತಿಲಕದಲ್ಲಿ ಒಂದು ಪದ್ಯವಿದೆ.

ನಿದರ್ಶನಕ್ಕೆ ಒಂದು ಸಾಲು :

ಕರಜ।ಮೆರಡರಿಂ।ಬೆಕ್ಕು ಪಾ। (ಯ್ವಾ)ಪಾಂಗಿನಿಂ।

(ಮದನತಿಲಕ)

**(v) ಕಿರಿಯಕ್ಕರ :** ಅಕ್ಕರಭೇದಗಳಲ್ಲಿ ಎಲ್ಲಕ್ಕಿಂತ ಚಿಕ್ಕದು, ಸಾಮಾನ್ಯಲಕ್ಷಣ: 4 ಪಾದಗಳು; ಪ್ರತಿಪಾದದಲ್ಲಿ 2ವಿ, 1ರು–ಹೀಗೆ 3 ಗಣಗಳು. ಪರ್ಯಾಯ ಗಣಗಳು ಬರಬಹುದು. ಉದಾಹರಣೆ ದೊರೆಯುವುದು ಎಂದು ಜಯಕೀರ್ತಿ ತಿಳಿಸುವ ಶೃಂಗಾರಪಿಂಡದಂಥ ಕನ್ನಡ ಕಾವ್ಯಗಳು ಈಗ ದೊರೆಯುವುದಿಲ್ಲ. ನಿದರ್ಶನಕ್ಕೆ ಲಕ್ಷಣಪದ್ಯದ ಒಂದು ಸಾಲು :

ಪೊಡೆಯಲ।ರವರಿರ್ವರ್।ಮೊದಲೊಳಿರ್ಕೆ।

(ಛಂದೋಂಬುಧಿ)

**ತ್ರಿಪದಿ :** ಪ್ರಾಚೀನ ಶಾಸನಗಳಲ್ಲಿ ಮತ್ತು ಕಾವ್ಯಗಳಲ್ಲಿ ವಿರಳವಾಗಿಯೂ ಜಾನಪದ ಸಾಹಿತ್ಯದಲ್ಲಿ ಹೇರಳವಾಗಿಯೂ ಕಂಡುಬರುವ ಜನಪ್ರಿಯವಾದ ಅಚ್ಚಕನ್ನಡ ಮಟ್ಟು. ನಡುಗನ್ನಡ ಕಾಲದಲ್ಲಿಯೂ ಈಚೆಗೆ ಹೊಸಗನ್ನಡ ಕಾಲದಲ್ಲಿಯೂ ಈ ಮಟ್ಟಿನಲ್ಲಿಯೇ ಕೆಲವು ಸ್ವತಂತ್ರವಾದ ಕೃತಿಗಳು ಕೂಡ ಹುಟ್ಟಿವೆ. ಪ್ರಸಿದ್ಧವಾಗಿರುವ ಸರ್ವಜ್ಞನ ಪದಗಳು ತ್ರಿಪದಿಯ ಛಂದಸ್ಸಿನಲ್ಲಿಯೇ ಕಟ್ಟಿದವಾಗಿವೆ.

ತ್ರಿಪದಿಸಾಹಿತ್ಯದ ಇತಿಹಾಸವನ್ನು ಪರಿಶೀಲಿಸಿದಾಗ, ಅದರಲ್ಲಿ ಎರಡು ಘಟ್ಟಗಳು ತೋರುತ್ತವೆ. ಮೊದಲನೆಯದು ಅಂಶಗಣಾತ್ಮಕವಾದುದು. ಎರಡನೆಯದು ಮಾತ್ರಾಗಣಾತ್ಮಕವಾದುದು. ಪ್ರಾಚೀನ ಕನ್ನಡ ಶಾಸನಗಳ, ಕಾವ್ಯಗಳ ಹಾಗೂ ಜನಪದ ಸಾಹಿತ್ಯದ ತ್ರಿಪದಿಗಳು ಬಲುಮಟ್ಟಿಗೆ ಅಂಶಗಣಾತ್ಮಕವಾಗಿವೆ. ಸು. 12ನೆಯ ಶತಮಾನದಿಂದೀಚೆಗೆ ಕೆಲವು ವೀರಶೈವ ವಚನಕಾರರ ರಚನೆಗಳಾಗಿ ತ್ರಿವಿಧಿ ಎಂಬ ಹೆಸರನ್ನೊಳಗೊಂಡು ಬಂದಿರುವ ಕೆಲವು ಕೃತಿಗಳೂ ಕ್ವಚಿತ್ತಾಗಿ ನಡುಗನ್ನಡ ಕಾಲದ ಇನ್ನೂ ಕೆಲವು ಕೃತಿಗಳೂ ಬಲುಮಟ್ಟಿಗೆ ಮಾತ್ರಾಗಣಾತ್ಮಕವಾದವಾಗಿವೆ. ಮೊದಲು ಅಂಶಗಣಾತ್ಮಕವಾಗಿದ್ದ ತ್ರಿಪದಿಯೇ ಕಾಲಕ್ರಮದಲ್ಲಿ ತನ್ನ ಮೂಲ ಸ್ವರೂಪದ ಜೊತೆಗೆ ಮಾತ್ರಾಗಣಾತ್ಮಕವಾಗಿಯೂ ಮಾರ್ಪಟ್ಟಿತೆಂದು ತಿಳಿಯುತ್ತದೆ. ಇದರಿಂದ ತ್ರಿಪದಿಗೆ ಎರಡು ರೀತಿಯ ಲಕ್ಷಣ ಏರ್ಪಟ್ಟಿತು.

**ಅಂಶಗಣಾತ್ಮಕವಾದ ತ್ರಿಪದಿ :** ನಾಗವರ್ಮಾದಿಗಳ ಕಾಲಕ್ಕೆ ತ್ರಿಪದಿ ಶುದ್ಧವಾಗಿ ಅಂಶಗಣಾತ್ಮಕವಾಗಿಯೇ ಇದ್ದಿತು. ನಾಗವರ್ಮ, ಜಯಕೀರ್ತಿ, ಸೋಮೇಶ್ವರ, ಶಾರ್ಙ್ಗದೇವ ಇವರು ಸಮಾನವಾಗಿ ಇದರ ಲಕ್ಷಣವನ್ನು ನಿರೂಪಿಸಿದ್ದಾನೆ. ಇವರ ನಿರೂಪಣೆಗಳಲ್ಲಿ ತ್ರಿಪದಿಯ ಎಲ್ಲ ಲಕ್ಷಣಾಂಶಗಳೂ ಪೂರ್ತಿಯಾಗಿ ಬಂದಿಲ್ಲ. ಲಾಕ್ಷಣಿಕರು ಕೊಡುವ ಅಂಶಗಣದ ಮಟ್ಟುಗಳೆಲ್ಲೆಲ್ಲ ಇದು ಸಹಜ. ನಾಗವರ್ಮನೂ ಜಯ ಕೀರ್ತಿ ಮತ್ತು ಇತರ ಸಂಸ್ಕೃತ ಲಾಕ್ಷಣಿಕರೂ ಕೊಡುವ ಲಕ್ಷಣಾಂಶಗಳನ್ನೆಲ್ಲ ಒಗ್ಗೂಡಿಸಿ ಶಾಸನಗಳಲ್ಲಿ ಕಾವ್ಯಗಳಲ್ಲಿ ಹಾಗೂ ಜಾನಪದ ಸಾಹಿತ್ಯದಲ್ಲಿ ದೊರೆಯುವ ನಿದರ್ಶನಗಳನ್ನು ನೇರವಾಗಿ ಪರಿಶೀಲಿಸಿ, ಸಮನ್ವಯ ಮಾಡಿದಾಗ ಅಂಶಗಣದ ತ್ರಿಪದಿಯ ಸಾಮಾನ್ಯಲಕ್ಷಣವನ್ನು ಹೀಗೆ ಹೇಳಬಹುದು: 3 ಪಾದಗಳು; ಅವುಗಳಲ್ಲಿ ಅನುಕ್ರಮವಾಗಿ 4, 4, 3 ಹೀಗೆ ಒಟ್ಟು 11 ಗಣಗಳು : ಇವುಗಳಲ್ಲಿ 6, 10ನೆಯದು ಬ್ರಹ್ಮ, ಉಳಿದವು ವಿಷ್ಣು; ಮೊದಲನೆಯ ಪಾದದಲ್ಲಿ 2ನೆಯ ಗಣವಾದ ಮೇಲೆ ಯತಿ, 3ನೆಯ ಗಣದಲ್ಲಿ ದ್ವಿತೀಯಾಕ್ಷರ ಪ್ರಾಸದ ಆವೃತ್ತಿ (ಒಳಪ್ರಾಸ); ಎರಡನೆಯ ಪಾದದಲ್ಲಿ ಮೊದಲ 3 ಗಣಗಳನ್ನು ಹೇಳಿ, ನಿಲ್ಲಿಸಿ, ಈಗ ಮತ್ತೆ ಹಿಂದಕ್ಕೆ ಬಂದು ಆ ಪಾದದ ಆ 3 ಗಣಗಳನ್ನೂ 4ನೆಯ ಗಣವನ್ನೂ ಒಟ್ಟಿಗೆ ಹೇಳಿ, ಬಳಿಕ 3ನೆಯ ಪಾದವನ್ನು ಮುಗಿಸಬೇಕು.

ಇಷ್ಟನ್ನು ಸಾಮಾನ್ಯವಾಗಿ ಹೇಳಿದರೂ ಅಂಶಗಣದ ಜಾಯಮಾನಕ್ಕೆ ತಕ್ಕಂತೆ ಎಲ್ಲ ತ್ರಿಪದಿಗಳೂ ಈ ನಿಯಮವನ್ನು ಅನುಸರಿಸಿರುವುದಿಲ್ಲ. ಹಾಡಿನ ಗತಿಗೆ ಹೊಂದಿ, ವಿಷ್ಣುಗಳ ಸ್ಥಾನದಲ್ಲಿ ಸಾಮಾನ್ಯವಾಗಿ ಬ್ರಹ್ಮವೋ ರುದ್ರವೋ ಬರಬಹುದು, 6, 10ನೆಯ ಬ್ರಹ್ಮಗಳ ಸ್ಥಾನ ಬಲುಮಟ್ಟಿಗೆ ನಿಯತವಾದದ್ದಾದರೂ ಅಲ್ಲಿಯೂ ವಿರಳವಾಗಿ ವಿಷ್ಣುವೂ ರುದ್ರವೂ ಬರುವುದು ಸಾಧ್ಯ. ದ್ವಿತೀಯಾಕ್ಷರಪ್ರಾಸ ಒಳಪ್ರಾಸ ತಪ್ಪದೆ ಪಾಲಿತವಾಗಿದ್ದೂ ವಿರಳವಾಗಿ ಪಾಲಿತವಾಗದೆ ಇರುವುದೂ ಉಂಟು. ಪುನರಾವರ್ತನೆಯ ಪದ್ಧತಿಯಲ್ಲಿಯೂ ಒಟ್ಟಿನಲ್ಲಿ ತ್ರಿಪದಿಯ ಹಾಡಿಕೆಯಲ್ಲಿಯೂ ಬೇರೆ ಬೇರೆ ಧಾಟಿಗಳುಂಟು. ಪೂರ್ವೋಕ್ತವಾದ ಗಣನಿಯಮ ಪ್ರಾಸನಿಯಮಗಳು ಗ್ರಾಂಥಿಕ ತ್ರಿಪದಿಗಳಲ್ಲಿ ಸಾಮಾನ್ಯವಾಗಿ ವಿರಳವಾದ ಅಪವಾದಗಳೊಡನೆ ನಿಶ್ಚಿತವಾಗಿ ಪಾಲಿತವಾಗಿರುತ್ತವೆ ; ಜಾನಪದ ತ್ರಿಪದಿಗಳಲ್ಲಿ ಹಾಗಿಲ್ಲ; ಸ್ವಾತಂತ್ರ್ಯ ಮೂಲವಾದ ಶೈಥಿಲ್ಯ ಹೆಚ್ಚು.

ತ್ರಿಪದಿ ಹೇಗೆ ಹುಟ್ಟಿತು? ಹಾಡಿಕೆಯಲ್ಲಿ ಏಳೆಯ 2ನೆಯ ಪಾದದ ಪುನರಾವರ್ತನೆ ಕಾರಣವಾಗಿ, ಒಂದು ಗಣ ಕೂಡಿ ಇಡಿಯ ಏಳೆಯೇ ಮತ್ತೆ ಮಗುಚಿ ಬಂದಂತಾಗಿ ಪ್ರಾಯಃ ತ್ರಿಪದಿ ಕಾಣಿಸಿಕೊಂಡಿರುವುದು ಸಾಧ್ಯ. 2ನೆಯ ಪಾದದ 3 ಗಣಗಳ ಪುನರಾವೃತ್ತಿಯನ್ನು ಬಿಟ್ಟರೆ 2 ಪಾದಗಳ ಸಾಹಿತ್ಯ ಉಳಿಯುತ್ತವೆ. ಇಲ್ಲವೆ ಹಾಡಿಕೆಯಲ್ಲಿ ಏಳೆಯ 2ನೆಯ ಪಾದದ 3 ಗಣಗಳನ್ನು ಹೇಳಿ ಮುಗಿಸುತ್ತಿದ್ದಂತೆ ಮೀಟಿಗೆ ಇನ್ನೊಂದು ಗಣ ಕೂಡಿ, ಅದೇ ಪಾದದ ಮೊದಲ ಮೂರು ಗಣಗಳು ಇನ್ನೊಮ್ಮೆ ಆವೃತ್ತಿಗೊಂಡು ತ್ರಿಪದಿಯಾಗಿರುವುದು ಸಾಧ್ಯ.

ಸಾಮಾನ್ಯಲಕ್ಷಣಕ್ಕೆ ಒಪ್ಪುವ ಒಂದು ಉದಾಹರಣೆ :

ಎಂಟೆಲೆ । ಮಾವಿನ । ದಂಟಿನ।ಲ್ಲಿರುವೋಳೆ
ಘಂಟೆಯ । ಗತಿಗೆ । ನಲಿಯೋಳೆ । ಸರಸಾತಿ
ಗಂಟಲ । ತೊಡರ । ಬಿಡಿಸವ್ವ ।

(ಜನಪದ ಗೀತೆ)

**ಮಾತ್ರಾಗಣಾತ್ಮಕವಾದ ತ್ರಿಪದಿ :** ಇದರ ಲಕ್ಷಣವನ್ನು ಪ್ರಾಚೀನರಾರೂ ಹೇಳಿಲ್ಲ. 12ನೆಯ ಶತಮಾನದ ವಚನಕಾರರ ತ್ರಿವಿಧಿಗಳಿಂದ, ಕೆಲಮಟ್ಟಿಗೆ ಸರ್ವಜ್ಞನ ತ್ರಿಪದಿಗಳಿಂದ ಕ್ವಚಿತ್ತಾಗಿ ಜನಪದಸಾಹಿತ್ಯ ಮತ್ತು ಕಾವ್ಯದ ನಿದರ್ಶನಗಳಿಂದ ಇದರ ಸ್ವರೂಪವನ್ನು ತಿಳಿಯಬೇಕಾಗುತ್ತದೆ. ವಿಷ್ಣುಗಣಗಳು ಸಾರ್ವತ್ರಿಕವಾಗಿ (6, 10ನೆಯ ಸ್ಥಾನ ಬಿಟ್ಟು ಅಥವಾ ಸೇರಿ) ಪಂಚಮಾತ್ರಾಗಣಗಳಾಗಿದ್ದಾಗ, ವಿಷ್ಣುಗಳ ಸ್ಥಾನದಲ್ಲಿ ವಿಶೇಷವಾಗಿ 4 ಅಥವಾ 5 ಅಕ್ಷರಗಳ ಪಂಚಮಾತ್ರಾಗಣಗಳು ಬಂದಾಗ, ಹೇಳುವ ಧಾಟಿ ವಾಚ್ಯವಾಗಿ, ಮಾತ್ರಾತ್ರಿಪದಿಯ ಗುರುತು ಹತ್ತುತ್ತದೆ. ಸಾಮಾನ್ಯಲಕ್ಷಣ : 3 ಪಾದಗಳು; ಅವುಗಳಲ್ಲಿ ಅನುಕ್ರಮವಾಗಿ 4, 4, 3–ಹೀಗೆ ಒಟ್ಟು 11 ಗಣಗಳು; ಇವುಗಳಲ್ಲಿ 6 ಮತ್ತು 10ನೆಯವು 3 ಮಾತ್ರೆಯ ಗಣ (ಕೆಲವರು ಇದನ್ನು ಬ್ರಹ್ಮಗಣ ಎಂದು ಗ್ರಹಿಸುವುದೂ ಉಂಟು); ಉಳಿದವು 5 ಮಾತ್ರೆಯ ಗಣಗಳು. ಮೊದಲನೆಯ ಪಾದದಲ್ಲಿ 2ನೆಯ ಗಣವಾದ ಮೇಲೆ ಯತಿ 3ನೆಯ ಗಣದಲ್ಲಿ ದ್ವಿತೀಯಾಕ್ಷರ ಪ್ರಾಸದ ಆವೃತ್ತಿ (ಒಳಪ್ರಾಸ). 6–10ನೆಯ ಗಣಸ್ಥಾನಗಳಲ್ಲಿ 4 ಅಥವಾ 5 ಮಾತ್ರೆಗಳ ಗಣಗಳು ಬರುವುದೂ ಉಂಟು. ಅಂಶತ್ರಿಪದಿಯ ಉಳಿದ ಲಕ್ಷಣಗಳು ಎಷ್ಟರಮಟ್ಟಿಗೆ ಅನ್ವಯಿಸುತ್ತವೆಯೆಂದು ಹೇಳುವುದು ಕಷ್ಟ. ಅಂಶ ತ್ರಿಪದಿಯ ಸೌಲಭ್ಯ ಸೊಗಸು ಇವುಗಳಲ್ಲಿ ಅಷ್ಟರಮಟ್ಟಿಗಿರುವುದಿಲ್ಲ.

ಸಾಮಾನ್ಯ ಲಕ್ಷಣಕ್ಕೆ ಒಪ್ಪುವ ಒಂದು ಉದಾಹರಣೆ:

ಆರುಮುಖ । ಮುತ್ತನ್ನು । ನೀರೊಳಗೆ। ಇರಿಸಲಿಕೆ।
ನೀರಳಿದು । ಮುತ್ತು । ಉಳಿಯಿತ್ತು । ಆಮುತ್ತ।
ಸೆರಿಸೀವೆ । ಎನ್ನ । ಉರದಲ್ಲಿ ।

(ಅಕ್ಕಮಹದೇವಿಯ ಯೋಗಾಂಗತ್ರಿವಿಧಿ)

**ಏಳೆ :** ಇದರ ಲಕ್ಷಣವನ್ನು ನಾಗವರ್ಮನೂ ಜಯಕೀರ್ತಿ ಶಾರ್ಙ್ಗದೇವರೂ ಹೇಳಿದ್ದಾರೆ. ಸಾಮಾನ್ಯಲಕ್ಷಣ: 2 ಪಾದಗಳು : ಅವುಗಳಲ್ಲಿ ಕ್ರಮವಾಗಿ 4.3 ಹೀಗೆ 7 ಗಣಗಳು. ಇವುಗಳಲ್ಲಿ 6ನೆಯದು ಬ್ರಹ್ಮ, ಉಳಿದವು ವಿಷ್ಣು; ಮೊದಲನೆಯ ಪಾದದಲ್ಲಿ 2ನೆಯ ಗಣವಾದ ಮೇಲೆ ಯತಿ 3ನೆಯ ಗಣದಲ್ಲಿ ದ್ವಿತೀಯಾಕ್ಷರ ಪ್ರಾಸದ ಆವೃತ್ತಿ (ಒಳಪ್ರಾಸ). ತ್ರಿಪದಿಯ ವಿಷಯದಲ್ಲಿ ನೋಡಿದಂತೆಯೇ ಇಲ್ಲಿಯೂ ವಿಷ್ಣುಗಳ ಸ್ಥಾನದಲ್ಲಿ ಸಾಮಾನ್ಯವಾಗಿ ಬ್ರಹ್ಮವೋ ರುದ್ರವೋ 6ನೆಯ ಬ್ರಹ್ಮದ ಸ್ಥಾನದಲ್ಲಿ ವಿರಳವಾಗಿ ವಿಷ್ಣುವೋ ರುದ್ರವೋ ಬರುವುದು ಸಾಧ್ಯ. ಏಳೆಗೆ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನಿದರ್ಶನಗಳಿಲ್ಲ. ಜನಪದ ಸಾಹಿತ್ಯದಲ್ಲಿಯೂ ಈಚೆಗೆ ವಿರಳವಾಗಿ ಹೊಸಗನ್ನಡ ಕಾವ್ಯದಲ್ಲಿಯೂ ನಿದರ್ಶನಗಳು ದೊರೆಯುತ್ತವೆ.

ಸಾಮಾನ್ಯ ಲಕ್ಷಣಕ್ಕೆ ಒಪ್ಪುವ ಒಂದು ನಿದರ್ಶನ:

ಹಡೆದ ತಾ।ಯಿಗೆ ಬನ್ನಿ। ಹಡೆದ ತಂ। ದೆಗೆ ಬನ್ನಿ।
ಪಡೆದ ಗಂ।ಡನಿಗೆ ನಮ ಬನ್ನಿ ॥

**ಚೌಪದಿ :** ಇದು ಅಂಶಗಣಾತ್ಮಕ ಮತ್ತು ಮಾತ್ರಾಗಣಾತ್ಮಕ ಎಂಬುದಾಗಿ ಎರಡು ಬಗೆ. ಅಂಶ ಚೌಪದಿಯ ಲಕ್ಷಣ : 4 ಪಾದಗಳು; ಪ್ರತಿಪಾದದಲ್ಲಿ 1ವಿ, 1ರು,–ಹೀಗೆ 2 ಗಣಗಳು. ಚೂಡಾಮಣೀ ಕಾವ್ಯದಲ್ಲಿ ಇದು ಬಳಕೆಯಾಗಿರುವುದಾಗಿ ಜಯಕೀರ್ತಿ ತಿಳಿಸಿದ್ದಾನೆ. ಆ ಕಾವ್ಯ ದೊರೆತಿಲ್ಲ. ಮದನ ತಿಲಕದಲ್ಲಿ ಒಂದು ಪದ್ಯವಿದೆ. ನಿದರ್ಶನಕ್ಕೆ ಒಂದು ಸಾಲು : ರತಿಹೀನಂ । ಪೆಳವಂ ಕುಬ್ಜಂ । (ಮದನತಿಲಕ 8–34). ಮಾತ್ರಾಚೌಪದಿ: 4 ಪಾದಗಳು; 3 ಪಂಚಮಾತ್ರಾಗಣಗಳು, 1 ತ್ರಿಮಾತ್ರ ಗಣ–ಹೀಗೆ ಒಟ್ಟು 4 ಗಣಗಳು. ನಡುಗನ್ನಡ ಕಾಲದಲ್ಲಿ ಇದು ಪ್ರಚಲಿತವಾಯಿತು. ಉದಾಹರಣೆಗೆ ಮಾನೌಮಿಯ ಚೌಪದ ಮುಂತಾದವು.

**ಛಂದೋವತಂಸ :** ಇದರ ಸಾಮಾನ್ಯಲಕ್ಷಣ ನಾಗವರ್ಮನ ಪ್ರಕಾರ 4 ಪಾದಗಳು; ಪ್ರತಿಪಾದದಲ್ಲಿ 3 ವಿ, 1 ಬ್ರ–ಹೀಗೆ 4 ಗಣಗಳು; ಜಯಕೀರ್ತಿಯ ಪ್ರಕಾರ 4 ಪಾದಗಳು, ಪ್ರತಿಪಾದದಲ್ಲಿ 1 ವಿ,4 ಬ್ರ–ಹೀಗೆ 5 ಗಣಗಳು (ಪರ್ಯಾಯ ಗಣಗಳು ಬರುವುದಕ್ಕೆ ಅವಕಾಶವಿದ್ದೇ ಇದೆ). ಈ ವ್ಯತ್ಯಾಸಕ್ಕೆ ಕಾರಣ ಸ್ಪಷ್ಟವಾಗಿ ತಿಳಿಯದು. ಜಯಕೀರ್ತಿ ತಾನು ಲಕ್ಷಣಿಸಿರುವ ಛಂದೋವತಂಸವನ್ನು ಆದಿವರಾಹವೆಂಬುದಾಗಿ ಕರೆದಿರುವುದು ಗಮನಾರ್ಹವಾಗಿದೆ. ಈ ಪದ್ಯ ಜಾತಿಯನ್ನು ಕರ್ಣಾಟಕುಮಾರಸಂಭವ ಮೊದಲಾದ ಕಾವ್ಯಗಳಲ್ಲಿ ಬಳಸಿದೆಯೆಂಬುದಾಗಿ ಆತ ಹೇಳಿದ್ದಾನೆ. ಅವು ಯಾವುವೂ ನಮಗೆ ದೊರೆತಿಲ್ಲ. ಜನಪದ ಸಾಹಿತ್ಯದಲ್ಲಿಯೂ ಹರಿದಾಸರ ಪದಗಳಲ್ಲಿಯೂ ನಾಗವರ್ಮನ ಛಂದೋವತಂಸದ ಲಕ್ಷಣವನ್ನು ಹೋಲುವ ಮಟ್ಟುಗಳುಂಟು. ಆದರೆ ಇವನ್ನು ವಿಶದವಾಗಿ ಪರಿಶೀಲಿಸುವುದು ಅಗತ್ಯ. ನಿದರ್ಶನಕ್ಕೆ ನಾಗವರ್ಮನ ಲಕ್ಷಣ ಪದ್ಯದ ಒಂದು ಸಾಲು:

ಮಂದರ। ಧರಗಣ। ಮೆಸೆದಿರೆ। ಮೊದಲೊಳ್।

**ಅಕ್ಕರಿಕೆ :** ಇದರ ಸಾಮಾನ್ಯಲಕ್ಷಣ ನಾಗವರ್ಮನ ಪ್ರಕಾರ 4 ಪಾದಗಳು. ಪ್ರತಿಪಾದದಲ್ಲಿ ವಿ, ಬ್ರ, ವಿ, ಬ್ರ, ವಿ,ರು–ಹೀಗೆ 6 ಗಣಗಳು. 6ನೆಯ ಅಕ್ಷರಕ್ಕೆ 2 ಸಾರಿ ಯತಿ, ಜಯಕೀರ್ತಿಯ ಪ್ರಕಾರ; ವಿ, ಬ್ರ, ವಿ, ಬ್ರ, ವಿ, ವಿ, +ಗುರು ಹೀಗೆ ಗಣವಿನ್ಯಾಸ; ಪ್ರತಿಪಾದದಲ್ಲಿಯೂ 26 ಮಾತ್ರೆಗಳಂತೂ ಇರಬೇಕು: 4 ಪಾದಗಳಲ್ಲಿ ಒಟ್ಟುಮಾತ್ರಾಸಂಖ್ಯೆ 104; 8–8 ಮಾತ್ರೆಗಳಿಗೊಮ್ಮೆ 2 ಸಾರಿಯತಿ. ಅಥವಾ ಅಂಶಗಣದ ಬದಲು ಜಗಣವಲ್ಲದ 6 ಚತುರ್ಮಾತ್ರಾಗಣಗಳು+ಗುರು ಕೂಡ ಬರಬಹುದು. ಈ ನಿರೂಪಣೆ ಪರಸ್ಪರವಾಗಿ ಭಿನ್ನವೆಂದು ತೋರಿದರೂ ಲಕ್ಷಣ ಒಟ್ಟಿನಲ್ಲಿ ಒಂದೇ. ಇದು ಅಂಶವೃತ್ತವಾದರೂ ಮಾತ್ರಾವೃತ್ತವಾಗಿ ಪರಿಣಮಿಸಿದೆ. ಷಡಕ್ಷರಿಯ ರಾಜಶೇಖರವಿಳಾಸದಲ್ಲಿ ಒಂದು ಪದ್ಯವಿದೆ. ನಿದರ್ಶನಕ್ಕೆ ಒಂದು ಸಾಲು:

ಸುರನುತ । ಚರಣೇ। ವರಗುಣಾ।ಭರಣೇ।ಖರರುಚಿ । ಬಿಂಬಗತೇ।

(ರಾಜಶೇಖರವಿಳಾಸ)

**ಮದನವತಿ :** ಇದರ ಸಾಮಾನ್ಯಲಕ್ಷಣ ನಾಗವರ್ಮನ ಪ್ರಕಾರ 3 ರೀತಿಯಾಗಿ ಇರುವಂತೆ ತೋರುತ್ತದೆ : 4 ಪಾದಗಳು; ಪ್ರತಿಪಾದದಲ್ಲಿ 5ವಿ + 1 ಗುರು ಅಥವಾ 4ವಿ + 1ರು ಅಥವಾ 3ರು + 1ವಿ. ಇವುಗಳಲ್ಲಿ ಮೊದಲನೆಯ ಎರಡರ ನಡುವೆ ವಾಸ್ತವವಾಗಿ ಭೇದವೇನಿಲ್ಲ. ಅವೆರಡೂ ಪೂರ್ತಿಪದ್ಯಕ್ಕೆ ಹೊಂದುತ್ತದೆ; ಕೊನೆಯದು ಹೊಂದುವುದಿಲ್ಲ. ಆತನ ಲಕ್ಷಣಪದ್ಯದಲ್ಲಿ ಚತುರ್ಮಾತ್ರಕವಾದ (ವಿಷ್ಣು)ಗಣಗಳ ವಿನ್ಯಾಸವೇ ಸ್ಪಷ್ಟವಾಗಿ ಕೇಳಿಸುವುದರಿಂದ ಆತನ ಪದ್ಯದ ಮಟ್ಟಿಗೆ 5ವಿ + 1ಗುರು ಎಂದಿಟ್ಟುಕೊಳ್ಳಬಹುದು, ಜಯಕೀರ್ತಿ ಮೊದಲ ಸಾಲಿಗೆ 20 ಲಘು+1 ಗುರು; ಉಳಿದ ಸಾಲುಗಳಲ್ಲಿ 4ವಿ+1ಬ್ರ; ಒಟ್ಟಿನಲ್ಲಿ ಪ್ರತಿಪಾದದಲ್ಲಿಯೂ 22 ಮಾತ್ರೆಗಳು ಯತಿಯೊಡಗೂಡಿ ಬಂದಿರಬೇಕು–ಎಂದಿದ್ದಾನೆ, ಆತನ ವಿವರಣೆಯಲ್ಲಿ ಅಂಶ ಮತ್ತು ಮಾತ್ರಾಗಣಗಳ ಸಮ್ಮಿಶ್ರ ನಿರೂಪಣೆಯಲ್ಲಿ ಬಂದಿರುವುದಕ್ಕೆ ಕಾರಣ ಇದು ಕೂಡ ಅಂಶವೃತ್ತವಾಗಿಯೂ ಧಾಟಿಯಲ್ಲಿ ಮಾತ್ರಾ ವೃತ್ತವಾಗಿ ಪರಿಣಮಿಸಿರುವುದೇ ಆಗಿದೆ. ಆದರೆ ಲಕ್ಷಣ ನಿರೂಪಣೆಯಲ್ಲಿ ಮಾತ್ರಾ ಸಾಮ್ಯವನೊಪ್ಪಿಯೂ ಗಣವಿನ್ಯಾಸವನ್ನು ಬೇರೆಯಾಗಿ ಹೇಳಿರುವುದಕ್ಕೆ ಕಾರಣವೇನೋ ತಿಳಿಯದು. ಪ್ರಾಚೀನ ಸಾಹಿತ್ಯದಲ್ಲಿ ಇದು ಎಲ್ಲಿ ಬಳಕೆಯಾಗಿದೆ ಯೆಂಬುದು ಗೊತ್ತಾಗಿಲ್ಲ. ನಿದರ್ಶನಕ್ಕೆ ನಾಗವರ್ಮನ ಲಕ್ಷಣ ಪದ್ಯದ ಒಂದು ಸಾಲು:

ಮದನನ। ತಂದೆಯ। ಗಣಮವು। ವಿಷಯದೊಳಿರೆ ಗುರು।ಮುಂ

**ಗೀತಿಕೆ :** ನಾಗವರ್ಮ ಜಯಕೀರ್ತಿಗಳು ಹೇಳಿರುವ ಇದರ ಲಕ್ಷಣಾಂಶಗಳನ್ನು ಸಮನ್ವಯ ಮಾಡಿ ಸಾಮಾನ್ಯಲಕ್ಷಣವನ್ನು ಹೀಗೆ ಹೇಳಬಹುದು: ನಾಲ್ಕು ಪಾದಗಳು; 2–2 ಪಾದಗಳಿಗೆ 2 ಅರ್ಧಗಳು; ಪೂರ್ವಾರ್ಧ 1 ಮತ್ತು 2ನೆಯ ಪಾದಗಳಲ್ಲಿ ಕ್ರಮವಾಗಿ 3 ಮತ್ತು 4 ಗಣಗಳು ಬರುವಂತೆ ಒಟ್ಟು 7 ಗಣಗಳು. ಇವುಗಳಲ್ಲಿ 2,6ನೆಯವು ಬ್ರಹ್ಮ, ಉಳಿದವು ವಿಷ್ಣು ಅಥವಾ ರುದ್ರ. ಉತ್ತರಾರ್ಧದ 3 ಮತ್ತು 4ನೆಯ ಪಾದಗಳಲ್ಲಿಯೂ ಹೀಗೆಯೇ. ಪ್ರಭುಸೇನನ ಅನುಯಾಯಿಗಳು (?) ಅಲಂಕಾರದಲ್ಲಿ ಗೀತಿಕೆಯನ್ನು ವರ್ಣಿಸಿರುವುದಾಗಿ ಜಯಕೀರ್ತಿ ಹೇಳಿದ್ದಾನೆ. ಆದರೆ ಆ ಗ್ರಂಥ

ಯಾವುದೆಂಬುದು ನಮಗೆ ಸರಿಯಾಗಿ ತಿಳಿಯದು. ಕವಿರಾಜಮಾರ್ಗದಲ್ಲಿ ಈ ಗೀತಿಕೆಯನ್ನು ಹೋಲುವ ಹಲವು ಪದ್ಯಗಳಿವೆ. ಆದರೆ ಅವು ನಾಗವರ್ಮ, ಜಯಕೀರ್ತಿಗಳು ಹೇಳಿರುವ ಲಕ್ಷಣಕ್ಕೆ ಸಮರ್ಪಕವಾಗಿ ಹೊಂದಿಕೊಳ್ಳುವುದಿಲ್ಲ. ನಿದರ್ಶನಕ್ಕೆ ನಾಗವರ್ಮನ ಲಕ್ಷಣಪದ್ಯದ ಎರಡು ಸಾಲು :

ಎರಡಜಓಳಾ। ಜಿಂಬ। ಸಂಖ್ಯೆಯೊಳ್
ಬರೆ ಪದ್ಮ । ಭವನುಜಿದುವು ಮ । ಚ್ಚುವ ತೆಜದಿಂ।

**ಉತ್ಸಾಹ :** ನಾಗವರ್ಮನ ಪ್ರಕಾರ ಇದರ ಸಾಮಾನ್ಯ ಲಕ್ಷಣ; 4 ಪಾದಗಳು, ಪ್ರತಿ ಪಾದದಲ್ಲಿ 7 ಬ್ರ + 1ಗುರು. ಕೊನೆಯ ಗುರು ಲಯಗ್ರಾಹಿಯಾಗಿ ಮುನ್ನಡೆಯುತ್ತದೆ. ಪದ್ಯದಲ್ಲಿ ಎದ್ದುತೋರುವ ಮಾತ್ರಾಲಯದ ಧಾಟಿಯೇ ಕಂಡುಬರುತ್ತಿರುವುದರಿಂದ, ಅಕ್ಕರಿಕೆ ಮದನವತಿಗಳ ಹಾಗೆಯೇ ಇದೂ ಮಾತ್ರಾ ವೃತ್ತವಾಗಿ ಪರಿಣಮಿಸಿದೆಯೆಂದು ಹೇಳಬಹುದು. ಉತ್ಸಾಹಪೂರ್ಣವಾದ ಲಯಗತಿಗೆ ಅನುಸಾರವಾಗಿ ವೃತ್ತದ ಹೆಸರು ಉತ್ಸಾಹ ಎಂದಿರುವುದು ಉಚಿತವೇ ಆಗಿದೆ. ಜಯಕೀರ್ತಿ ಈ ಪದ್ಯಜಾತಿಯನ್ನು ಮಿಶ್ರಾಧಿಕಾರದಲ್ಲಿ ಸೇರಿಸಿ ಮಾತ್ರಾ ವೃತ್ತವೆನ್ನುವಂತೆ ಹೀಗೆ ಲಕ್ಷಣವನ್ನು ಹೇಳಿದ್ದಾನೆ: 7 ಗುರುಲಘುಗಳ ಜೋಡಿ + 1 ಗುರು. ಯಾವುದೇ ಗುರು ಲಘುವಿನ ಜೋಡಿಯ ಸ್ಥಾನದಲ್ಲಿ ನಗಣ (ಎಂದರೆ 3 ಲಘುಗಳು) ಕೂಡ ಬರಬಹುದು. ನಾಗವರ್ಮನ ಲಕ್ಷಣಪದ್ಯದಲ್ಲಿಯ ಮಾತ್ರಾ ಗತಿಯನ್ನು ನೋಡಿಯೇ ಜಯಕೀರ್ತಿ ಹೀಗೇ ಮಾತ್ರಾತ್ತವನ್ನಾಗಿ ಹೇಳಿದ್ದಾನೆಂದು ಊಹಿಸಬಹುದು. ಅಗ್ಗಳನ ಚಂದ್ರಪ್ರಭಪುರಾಣದಲ್ಲಿ (ಪ್ರ.ಶ. 1189) ಇದು ಬಂದಿದೆ. ಆದರೆ ಇದಕ್ಕೂ ಮೊದಲಲ್ಲಿ, ಜಯಸಿಂಹನ ತಲಂಗೆರೆ ಶಾಸನದಲ್ಲಿಯೂ (ಸು. 10ನೆಯ.ಶ.) ಒಂದು ನಿದರ್ಶನವಿದೆ. ಅದರ ಒಂದು ಸಾಲು :

ಊರ। ಕಡೆಯ। ತೊರೆಯ। ತಡಿಯ। ಕರೆಯ। ಕಲ್ಲ। ಮೋಜ। ದಿಮ್
(ಎಂ.ಇಂ. 29–ಪು. 205–6)

(ಈ ಪದ್ಯದ 2ನೆಯ ಪಾದದ 1ನೆಯದು ವಿಷ್ಣುಗಣವಾಗಿದೆ).

**ಷಟ್ಪದಿ :** ಅಚ್ಚಕನ್ನಡ ಛಂದಸ್ಸಿನ ಮಟ್ಟುಗಳಲ್ಲಿ ಷಟ್ಪದಿ (ನೋಡಿ- ಷಟ್ಪದಿ) ತ್ರಿಪದಿಯಂತೆಯೇ ಗಮನಾರ್ಹವಾದುದು. ಮೊದಲಲ್ಲಿ ಅಂಶಗಣಗಳಿಂದ ಕಟ್ಟಿದ ಒಂದು ಬಗೆಯ ಷಟ್ಪದಿ ಕಾಣಿಸಿಕೊಂಡಿತು. ಅನಂತರದಲ್ಲಿ ಸು. 12–13ನೆಯ ಶತಮಾನದಿಂದೀಚೆಗೆ ಮಾತ್ರಾ ಗಣಗಳಿಂದ ಕಟ್ಟಿದ ಆರು ಬಗೆಯ ಷಟ್ಪದಿಗಳು ಮುಖ್ಯವಾಗಿ ಕಾಣಿಸಿಕೊಂಡು ಪ್ರಬಲಿಸಿ ಪ್ರಸಿದ್ಧಿಗೆ ಬಂದುವು. ಆಗ ಮೊದಲನೆಯದು ಬಲು ಮಟ್ಟಿಗೆ ಕಣ್ಮರೆಯಾಯಿತು. ಷಟ್ಪದಿ ಸಾಹಿತ್ಯದ ಇತಿಹಾಸವನ್ನು ಪರಿಶೀಲಿಸಿದರೆ ಇದು ತಿಳಿಯುತ್ತದೆ.

**ಅಂಶಗಣಾತ್ಮಕ ಷಟ್ಪದಿ :** ನಾಗವರ್ಮನೂ ಜಯಕೀರ್ತಿ, ಸೋಮೇಶ್ವರ ಮತ್ತು ಶಾರ್ಙ್ಗದೇವ ಈ ಮೂವರು ಇದರ ಲಕ್ಷಣವನ್ನು ಸಮಾನವಾಗಿ ಹೇಳಿದ್ದಾರೆ. ಲಕ್ಷಣ–ಲಕ್ಷ್ಯಗಳನ್ನು ಸಮನ್ವಯಿಸಿಕೊಂಡು ಸಾಮಾನ್ಯಲಕ್ಷಣವನ್ನು ಹೀಗೆ ಹೇಳಬಹುದು. 3–3 ಪಾದಗಳ 2 ಸಮಾರ್ಧಗಳನ್ನುಳ್ಳ 6 ಪಾದಗಳು; ಪೂರ್ವಾರ್ಧದಲ್ಲಿ 1, 2 ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ 2ವಿ, 2ವಿ ಮತ್ತು 2ವಿ+1ರು–ಹೀಗೆ ಬರುವಂತೆ 7 ಗಣಗಳು (ವಿ+ವಿ। ವಿ+ವಿ। ವಿ+ವಿ+ರು); ಉತ್ತರಾರ್ಧದಲ್ಲಿಯೂ ಹೀಗೆಯೇ. ವಿಷ್ಣು ಮತ್ತು ರುದ್ರಗಣಗಳ ಸ್ಥಾನಗಳಲ್ಲಿ ವಿರಳವಾಗಿ ಪರ್ಯಾಯ ಗಣಗಳು ಬರುವುದುಂಟು.

ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಈ ಷಟ್ಪದಿ ಕನ್ನಡಭಾಷೆಗೆ ಸೇರಿದ್ದೆಂದೂ ಆ ಭಾಷೆಯಲ್ಲಿ ಅದು ಹಾಡತಕ್ಕದ್ದೆಂದೂ ಈ ಕಥೆಯನ್ನು ಅದು ಒಳಗೊಂಡಿರುತ್ತದೆಂದೂ ಮುಂತಾಗಿ ಕೆಲವು ಸಂಗತಿಗಳನ್ನು ಹೇಳಿದೆ. ಸು. 12ನೆಯ ಶತಮಾನದ ಆದಿಭಾಗದಲ್ಲಿಯೇ (1126–39) ಷಟ್ಪದಿನಿಬದ್ಧವಾದ ಕಾವ್ಯಗಳು ಹುಟ್ಟಿದ್ದವೆಂದು ತಿಳಿಯುವುದಕ್ಕೆ ಈ ಗ್ರಂಥದಲ್ಲಿ ಕೆಲವು ಸೂಚನೆಗಳಿವೆ. ಆದರೆ ಅಂಥ ಕಾವ್ಯಗಳಾವುವೂ ದೊರೆತಿಲ್ಲ. ಇಂಥ ಷಟ್ಪದಿಗಳು ಈವರೆಗೆ ಕೆಲವೇ ದೊರೆತಿವೆ. ಚಂದ್ರರಾಜನ ಮದನ ತಿಲಕ (ಪ್ರ.ಶ. ಸು. 1030), ಶಾಂತಿನಾಥನ (ಪ್ರ.ಶ. 1068) ಸುಕುಮಾರಚರಿತ್ರೆ, ಇವುಗಳಲ್ಲಿ ಒಂದೊಂದು, ಮಾನಸೋಲ್ಲಾಸದಲ್ಲಿಯ ಲಕ್ಷ್ಯ ಪದ್ಯವೊಂದು–ಈ ಮೂರನ್ನು ಬಿಟ್ಟರೆ ಉಳಿದವೆಲ್ಲ ಶಾಸನಗಳಲ್ಲಿ ಕಾಣಿಸಿಕೊಂಡಿರತಕ್ಕವಾಗಿದೆ. ಅವು ಚಿತ್ರದುರ್ಗದ 47ನೆಯ ಶಾಸನ (1067), ಬಿಜಾಪುರಜಿಲ್ಲೆಯ ಇಂಡಿ ತಾಲ್ಲೂಕಿನ ಚಡಚಣದ ಶಾಸನ (1067), ಅಮ್ಮಿನ ಭಾವಿನ ಶಾಸನ (1071), ಮತ್ತು ಮೆಹಬೂಬ್‌ನಗರ ಜಿಲ್ಲೆಯ ಗಂಗಾಪುರದ ಶಾಸನ (ಸು. 1,100–40).

ನಿದರ್ಶನಕ್ಕೆ ಕಾವ್ಯದಿಂದ ಒಂದು ಪೂರ್ವಾರ್ಧ :

ಅದು ಪರ । ಮಾಸ್ಪದ ।
ಮದು ಪುಣ್ಯ । ಸಂಪದ ।
ಮದು ಮಹಾ । ಭ್ಯುದಯ ವಿ । ಲಾಸಾವಾಸಂ ॥
(ಸುಕುಮಾರಚರಿತ...)

**ಮಾತ್ರಾಗಣಾತ್ಮಕ ಷಟ್ಪದಿಗಳು :** ಇವು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ–ಎಂಬುದಾಗಿ 6 ಬಗೆಯವು. ಇವುಗಳ ಜೊತೆಗೆ ಉದ್ದಂಡ ಎಂಬೊಂದು ಬಗೆ ಕೂಡ ಉಂಟು. ಮೊದಲು ಅಂಶ–ಷಟ್ಪದಿಗೆ ಸಮೀಪವಾದ ಶರ, ಕುಸುಮಷಟ್ಪದಿಗಳೂ ಆಮೇಲೆ ಷಟ್ಪದಿಯ ಮೂಲ ಚೌಕಟ್ಟಿಗೆ ಹೊಂದುವಂತೆ 2–2 ಮಾತ್ರೆಗಳ ಪ್ರಮಾಣವನ್ನು ವರ್ಧಿಸುವುದರ ಮೂಲಕವಾಗಿ ಭೋಗದಿಂದ ವಾರ್ಧಕದವರೆಗೆ ಉಳಿದ ಪ್ರಭೇದಗಳೂ ಹುಟ್ಟಿಕೊಂಡಿರಬೇಕೆಂದು ತೋರುತ್ತದೆ. ಇನ್ನು ಉದ್ದಂಡ ಎಂಬುದು ಒಟ್ಟಿನಲ್ಲಿ ವಾರ್ಧಕವನ್ನೇ ಹೋಲುವ ಒಂದು ಬಗೆ. ಈ ಎಲ್ಲ ಬಗೆಗಳಲ್ಲಿಯೂ ಸ್ವತಂತ್ರವಾಗಿ ಕೃತಿರಚನೆಯಾಗಿವೆ. ರಾಘವಾಂಕ, ಚಾಮರಸ, ಕುಮಾರವ್ಯಾಸ, ಲಕ್ಷ್ಮೀಶ–ಮುಂತಾದವರು ಷಟ್ಪದಿಗಳಲ್ಲಿ ರಚಿಸಿರುವ ಕಾವ್ಯಗಳು ಪ್ರಸಿದ್ಧವಾಗಿವೆ.

**ಇವುಗಳ ಸಾಮಾನ್ಯ ಲಕ್ಷಣ : (i) ಶರ ಷಟ್ಪದಿ :** ಪೂರ್ವಾರ್ಧದಲ್ಲಿ 1, 2 ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ಚತುರ್ಮಾತ್ರಾ ಗಣಗಳು 2, 2 ಮತ್ತು 3 + 1 ಗುರು; ಉತ್ತರಾರ್ಧದಲ್ಲಿಯೂ ಹೀಗೆಯೇ.

ನಿದರ್ಶನಕ್ಕೆ ಪೂರ್ವಾರ್ಧ :

ಈಶನ । ಕರುಣೆಯ
ನಾಶಿಸು । ವಿನಯದಿ ।
ದಾಸನ । ಹಾಗೆಯೇ । ನೀ ಮನ । ವೇ ॥
(ಪದ್ಯಸಾರ)

**(ii) ಕುಸುಮ ಷಟ್ಪದಿ :** ಪೂರ್ವಾರ್ಧದಲ್ಲಿ 1, 2, ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ಪಂಚಮಾತ್ರಾ ಗಣಗಳು. 2, 2, ಮತ್ತು 3 + 1 ಗುರು ; ಉತ್ತರಾರ್ಧದಲ್ಲಿಯೂ ಹೀಗೆಯೇ

ನಿದರ್ಶನಕ್ಕೆ ಪೂರ್ವಾರ್ಧ :

ನಾಡು ಮನ । ಸಿಜ ನೊಲವಿ ।
ನಾಡುವೆಡೆ । ಸಂತತಂ ।
ಬೀಡು ರತಿ । ಪತಿಗೆ ಸತ । ತನಿಧಾನ । ವು
(ಕುಮುದೇಂದು ರಾಮಾಯಣ)

**(iii) ಭೋಗ :** ಷಟ್ಪದಿ ಪೂರ್ವಾರ್ಧದಲ್ಲಿ 1, 2 ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ತ್ರಿಮಾತ್ರಾಗಣಗಳು 4, 4 ಮತ್ತು 6 + 1 ಗುರು ; ಉತ್ತರಾರ್ಧದಲ್ಲಿಯೂ ಹೀಗೆಯೇ.

ನಿದರ್ಶನಕ್ಕೆ ಪೂರ್ವಾರ್ಧ :

ಮೆರೆಯು । ತಿದ್ದ । ಭಾಗ್ಯ । ವೆಲ್ಲ
ಹರಿದು । ಹೋಯಿ । ತೆನುತ । ತಿರುಕ ।
ಮರಳಿ । ನಾಚಿ । ಪೋಗು । ತಿದ್ದ । ಮರುಳ । ನಂತೆಯೇ
(ಮುಪ್ಪಿನ ಷಡಕ್ಷರಿ)

**(iv) ಭಾಮಿನಿ ಷಟ್ಪದಿ :** ಪೂರ್ವಾರ್ಧದಲ್ಲಿ 1, 2, ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ 3, 4ರ ಹಾಗೆ ಬರುವ ಗಣಗಳು 2, 2 ಮತ್ತು 3 + 1 ಗುರು ; ಉತ್ತರಾರ್ಧದಲ್ಲಿಯೂ ಹೀಗೆಯೇ.

ನಿದರ್ಶನಕ್ಕೆ ಪೂರ್ವಾರ್ಧ :

ವೀರ । ನಾರಾ । ಯಣನೆ । ಕವಿ ಲಿಪಿ ।
ಕಾರ । ಕುವರ । ವ್ಯಾಸ । ಕೇಳುವ ।
ಸೂರಿ । ಗಳು ಸನ । ಕಾದಿ । ಗಳು ಜಂ ।
ಗಮಜ । ನಾರ್ದನ । ರು ॥
(ಕುಮಾರವ್ಯಾಸ ಭಾರತ)

**(v) ಪರಿವರ್ಧಿನಿ ಷಟ್ಪದಿ :** ಪೂರ್ವಾರ್ಧದಲ್ಲಿ 1, 2, ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ಚತುರ್ಮಾತ್ರಾಗಣಗಳು 4, 4 ಮತ್ತು 6 + 1 ಗುರು ; ಉತ್ತರಾರ್ಧದಲ್ಲಿಯೂ ಹೀಗೆಯೇ.

ನಿದರ್ಶನಕ್ಕೆ ಪೂರ್ವಾರ್ಧ :

ದುರಿತವ । ನಂ ಬೆಳೆ । ವುದಕೆ ಪೊ । ಲಂ ಕೊಲೆ ।
ಪರಕಲಿ । ಸಿದ ನವ । ದೋಹಳ । ಮನ್ಮತಂ
ಪರಿಕಾ । ಲುದುಕಮ । ದಕೆ ಕಳ । ವನ್ಯ । ಸ್ತ್ರೀ ಸಂ । ಗಮೆ ಗೆ । ಯ್ಮ ॥
(ಜಯನೃಪಕಾವ್ಯ)

**(vi) ವಾರ್ಧಕ ಷಟ್ಪದಿ :** ಪೂರ್ವಾರ್ಧದಲ್ಲಿ 1, 2, ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ಪಂಚಮಾತ್ರಾ ಗಣಗಳು 4, 4 ಮತ್ತು 6 + 1 ಗುರು ; ಉತ್ತರಾರ್ಧದಲ್ಲಿಯೂ ಹೀಗೆಯೇ.

ನಿದರ್ಶನಕ್ಕೆ ಪೂರ್ವಾರ್ಧ :

ಶ್ರೀವಧುವಿ । ನಂಬಕ ಚ । ಕೋರಕಂ । ಪೊರೆಯ ಭ ।
ಕ್ತಾವಳಿಯ । ಹೃತ್ಕುಮುದ । ಕೋರಕಂ । ಬಿರಿಯೆ ಜಗ ।
ತೀವಳಿಯ । ದಮಲ ಸೌ । ಭಾಗ್ಯ ರ । ತ್ನಾಕರಂ । ಪೆರ್ಚಿನಿಂ ।
ಮೇರೆವರಿ । ಯೆ ॥ (ಜೈಮಿನಿ ಭಾರತ)

**(vii) ಉದ್ದಂಡ ಷಟ್ಪದಿ :** ಪೂರ್ವಾರ್ಧದಲ್ಲಿ 1, 2, ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ಚತುರ್ಮಾತ್ರಾಗಣಗಳು 5, 5 ಮತ್ತು 8 ; ಉತ್ತರಾರ್ಧದಲ್ಲಿಯೂ ಹೀಗೆಯೇ.

ನಿದರ್ಶನಕ್ಕೆ ಪೂರ್ವಾರ್ಧ :

ಪರಿಕಿಪೊಡೀಕೃತಿ । ಗಾವುದು । ಮೊದಲೆನೆ । ಹಳಚುವ ।
ತೆರೆಯೊಳು । ತಿರುಗುವ । ಕರಿಮಕ । ರಂಗಳ । ಪುಚ್ಛೋ ।
ತ್ಕರಹತಿ । ಯಿಂ ಚೆ । ಲ್ಲಿದ ಮಣಿ । ಗಳ ಬೆಳ । ಗಿಂ ಶ್ವೇ । ತದ್ವೀ ।
ಪವನಣ । ಕಿಸುತ ॥

ಈ ಮೇಲೆ ವಿವರಿಸಿದ ಷಟ್ಪದಿಭೇದಗಳಲ್ಲಿ ಗಮನಿಸತಕ್ಕ ಕೆಲವು ಸಾಮಾನ್ಯ ಸಂಗತಿಗಳೆಂದರೆ ಇವು. ಆದಿಪ್ರಸವಿರತಕ್ಕದ್ದು ; U– ಎಂಬ ರೀತಿಯ ಗಣ ಬರತಕ್ಕದ್ದಲ್ಲ; 3–6ನೆಯ ಪಾದಾಂತ್ಯದಲ್ಲಿ ಲಘುವಿದ್ದಾಗ ಎಣಿಕೆಗೆ ಗುರುವೆಂದಿಟ್ಟುಕೊಳ್ಳಬೇಕು.

**ಸಾಂಗತ್ಯ :** ಅಚ್ಚಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಸು. 14–15ನೆಯ ಶತಮಾನಗಳಲ್ಲಿ ರೂಪಗೊಂಡ ಮಟ್ಟು ಇದು. (ನೋಡಿ– ಸಾಂಗತ್ಯ) ಅಲ್ಲಿಂದೀಚೆಗೆ ಕನ್ನಡಕವಿಗಳು ಈ ಛಂದಸ್ಸಿನಲ್ಲಿ ವಿಪುಲವಾಗಿ ಕೃತಿರಚನೆ ಮಾಡಿದ್ದಾರೆ. ರತ್ನಾಕರ ವರ್ಣಿ, ನಂಜುಂಡಕವಿ ಮೊದಲಾದವರು ರಚಿಸಿರುವ ಪ್ರಸಿದ್ಧ ಕಾವ್ಯಗಳು ಈ ಛಂದಸ್ಸಿನಲ್ಲಿಯೇ ಇವೆ. ಇದರ ಬೆಳೆವಣಿಗೆಯಲ್ಲಿ ಎರಡು ಮುಖ್ಯವಾದ ಘಟ್ಟಗಳಿವೆ. ಸು. 1410ರಲ್ಲಿದ್ದ ದೇಪರಾಜನ ಸೊಬಗಿನ ಸೋನೆ ಮತ್ತು ಈಚೆಗೆ ಸೊಬಗಿನ ಸೋನೆ ಎಂಬ ಮಾತಿನ ಜೊತೆಗೆ ಸೇರಿಕೊಂಡು ಬಂದಿರುವ ತತ್ತ್ವದ ಸೊಬಗಿನ ಸೋನೆ, ಮದನ ಮೋಹಿನೀ ಕಥೆ, ಸೊಬಗಿನ ಸೋನೆ ವರ್ಣ–ಇಂಥ ಕೆಲವು ಕೃತಿಗಳಲ್ಲಿ ತೋರುವ ಲಕ್ಷಣ ಒಂದು ರೀತಿಯಾಗಿಯೂ ರತ್ನಾಕರವರ್ಣಿಯ ಭರತೇಶ ವೈಭವ, ಹೊನ್ನಮ್ಮನ ಹದಿಬದೆಯಧರ್ಮ ಇಂಥ ಕೃತಿಗಳಲ್ಲಿ ತೋರುವ ಲಕ್ಷಣ ಇನ್ನೊಂದು ರೀತಿಯಾಗಿಯೂ ಇದೆ. ಸೊಬಗಿನ ಸೋನೆಯ ಧಾಟಿಯ ಛಂದಸ್ಸನ್ನು ಸಾಮಾನ್ಯವಾಗಿ ಸಾಂಗತ್ಯವೆಂದೇ ತಿಳಿಯಲಾಗಿದೆ. ಆದರೆ ಅದನ್ನು ಸೊಬಗಿನ ಸೋನೆಯ ಛಂದಸ್ಸು (ವರ್ಣ) ಎಂದು ಬೇರೆಯಾಗಿಟ್ಟುಕೊಳ್ಳುವುದೇ ಸೂಕ್ತ. ಹಿಂದೆಯೇ ಇದನ್ನು ಸೊಬಗಿನ ಸೋನೆಯ ವರ್ಣ ಎಂದು ಪ್ರತ್ಯೇಕವಾಗಿ ಕರೆದಿರುವುದುಂಟು. ಮುಂದೆ ಇದರಲ್ಲಿ ಮಾರ್ಪಾಟು ತಲೆದೋರಿ ಸ್ಪಷ್ಟರೂಪಕ್ಕೆ ಬಂದು ಸಾಂಗತ್ಯವಾಗಿರಬಹುದೆಂದೂ ಊಹಿಸಬಹುದು.

**ಸೊಬಗಿನ ಸೋನೆಯ ಛಂದಸ್ಸಿನ ಸಾಮಾನ್ಯಲಕ್ಷಣ :** ಎರಡು ಸಮಾರ್ಧಗಳನ್ನುಳ್ಳ 4 ಪಾದಗಳು. ಪೂರ್ವಾರ್ಧದ 1, 2ನೆಯ ಪಾದಗಳಲ್ಲಿ ಕ್ರಮವಾಗಿ 4 ಮತ್ತು 3 ವಿಷ್ಣು ಗಣಗಳು ; ಉತ್ತರಾರ್ಧದಲ್ಲಿಯೂ ಹೀಗೆಯೇ. ವಿಷ್ಣುಗಳಿಗೆ ಪರ್ಯಾಯವಾಗಿ ಬ್ರಹ್ಮವೋ ರುದ್ರವೋ ಬರಬಹುದು.

ನಿದರ್ಶನಕ್ಕೆ ಪೂರ್ವಾರ್ಧ :

ಎಲೆ ಪ್ರಿಯೆ । ಕೇಳು ತೊ । ಳದ ಮುತ್ತು । ಕರತಳಾ
ಮಳಕವೀ । ಕಥೆ ಸೊಬ । ಗಿನ ಸೋನೆ ॥

(ಸೊಬಗಿನ ಸೋನೆ, 1–21)

**ಸಾಂಗತ್ಯಛಂದಸ್ಸಿನ ಸಾಮಾನ್ಯ ಲಕ್ಷಣ :** ಎರಡು ಸಮಾರ್ಧಗಳನ್ನುಳ್ಳ 4 ಪಾದಗಳು: ಪೂರ್ವಾರ್ಧದ 1, 2ನೆಯ ಪಾದಗಳಲ್ಲಿ ಕ್ರಮವಾಗಿ 4 ವಿ. ಮತ್ತು 2ವಿ + 1 ಬ್ರ ; ಉತ್ತರಾರ್ಧದಲ್ಲಿಯೂ ಹೀಗೆಯೇ. ಆದರೆ ವಿಷ್ಣು ಮತ್ತು ಬ್ರಹ್ಮಗಳ ಸ್ಥಾನದಲ್ಲಿ ಪರ್ಯಾಯಗಣಗಳು ಬರಬಹುದು. ನಿದರ್ಶನಕ್ಕೆ ಪೂರ್ವಾರ್ಧ :

ಪರಮ ಪ । ರಂಜ್ಯೋತಿ । ಕೋಟಿ ಚಂ । ದ್ರಾದಿತ್ಯ
ಕಿರಣ ಸು । ಜ್ಞಾನ ಪ್ರ । ಕಾಶ ॥

(ಭರತೇಶವೈಭವ).

ಪಿರಿಯಕ್ಕರ, ಗೀತಿಕೆ, ತ್ರಿಪದಿ, ಏಳೆ ಈ ಅಂಶವೃತ್ತಗಳಲ್ಲಿ ಯಾವುದಾದರೊಂದು ಮೂಲಕವಾಗಿ ಸಾಂಗತ್ಯ ಹುಟ್ಟಿರಬೇಕೆಂದು ವಿದ್ವಾಂಸರು ವಿಚಾರ ಮಾಡಿದ್ದಾರೆ. ಆದರೆ ವಾಸ್ತವವಾಗಿ ಯಾವುದೇ ಕನ್ನಡ ಛಂದಸ್ಸಿನ ಮೂಲದಿಂದ ಸಾಂಗತ್ಯದ ರೂಪಸಿದ್ಧಿಯನ್ನು ತೃಪ್ತಿಕರವಾಗಿ ಸಾಧಿಸುವುದು ಕಷ್ಟ ಜನಪ್ರಿಯವಾದ ತ್ರಿಪದಿಯ ಧಾಟಿ ಅದರ ಅವಿರ್ಭಾವದಲ್ಲಿ ಕೆಲಮಟ್ಟಿಗೆ ಪ್ರೇರಣೆ ಕೊಟ್ಟಿರಬಹುದು. ಸೊಬಗಿನ ಸೋನೆಯ ಮಟ್ಟಿನಲ್ಲಿ ಪ್ರತಿಯರ್ಧದ ಕೊನೆಗೆ ಬರುವ ವಿಷ್ಣುಗಣ ಕಾಲಕ್ರಮದಲ್ಲಿ ಆಲಾಪದ ಆವಶ್ಯಕತೆಗಾಗಿ ಬ್ರಹ್ಮಗಣವಾಗಿ ಮಾರ್ಪಟ್ಟು ಸ್ಥಿರಗೊಂಡು ಸಾಂಗತ್ಯವಾಗಿರಬಹುದೇನೋ.

ಅಚ್ಚಕನ್ನಡ ಛಂದಸ್ಸಿನ ಮಟ್ಟುಗಳಲ್ಲಿ ಈ ಮೇಲೆ ವಿವರಿಸಿದ ಪ್ರಸಿದ್ಧವೂ ಲಾಕ್ಷಣಿಕೋಕ್ತವೂ ಆದ ಕೆಲವು ಮಟ್ಟುಗಳು ಮಾತ್ರವಲ್ಲದೆ, ಜನಪದ ಸಾಹಿತ್ಯ ಹಾಗೂ ಯಕ್ಷಗಾನಾದಿಗಳಲ್ಲಿ ಇನ್ನೂ ಕೆಲವು ಮಟ್ಟುಗಳು–ತ್ಯಾಗಮಾನ, ಯಾಲಪದ ಮೊದಲಾದ ಹೆಸರಿನಲ್ಲಿ–ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಅಂಶಗಣಗಳ ಕಟ್ಟಿನಲ್ಲಿ ನಡೆದರೆ ಇನ್ನು ಕೆಲವು ಮಾತ್ರಗಣಗಳ ಕಟ್ಟಿನಲ್ಲಿವೆ. ಈ ಬಗೆಯ ಸಾಹಿತ್ಯ ಸಂಗ್ರಹ ಸಮಗ್ರವಾಗಿ ನಡೆದು, ಅವುಗಳ ಛಂದಸ್ಸಿನ ಶಾಸ್ತ್ರೀಯ ಸಮಾಲೋಚನೆ ಇನ್ನೂ ನಡೆಯಬೇಕಾಗಿದೆ.

**ಹೊಸಗನ್ನಡ ಛಂದಸ್ಸು :** ಕನ್ನಡದಲ್ಲಿ ಛಂದಸ್ಸು ನಡೆದು ಬಂದ ದಾರಿಯನ್ನು ಗುರುತಿಸಲು ಹೊರಟರೆ 19ನೆಯ ಶತಮಾನದವರೆಗೆ ಅದು ಸಂಪ್ರದಾಯದ ಜಾಡಿನಲ್ಲಿಯೇ ನಡೆಯುತ್ತ, ಆಗಾಗ ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತ, ಅವನ್ನು ಬೆಳೆಸುತ್ತ, ಬಲಿಸುತ್ತ, ಹಳೆಯದನ್ನು ಆವರ್ತಗೊಳಿಸುತ್ತ, ಬಿಡುತ್ತ ಬಂದುದು ಕಾಣುತ್ತದೆ. 20ನೆಯ ಶತಮಾನದಲ್ಲಿ ಕಾಲಿಡುತ್ತಿದ್ದಂತೆ ಕನ್ನಡ ಕವಿತ್ವದ ಮೇಲೆ ಇಂಗ್ಲಿಷ್ ಕವಿತ್ವದ ಪ್ರಭಾವ ಹೊಸದಾಗಿ ಬಿದ್ದು ಹಲವು ಹೊಸರೀತಿಯ ಪ್ರಯೋಗಗಳೂ ಹಳೆಯದರ ಹೊಸ ರೂಪಗಳೂ ಅನುವಾದಗಳ ಮತ್ತು ಸ್ವತಂತ್ರ ಕೃತಿಗಳ ಮೂಲಕ ನಡೆಯಲಾರಂಭಿಸಿದುವು. ಭಾವದ ನಾನಾಸ್ಥಿತಿಗಳನ್ನು ಅವುಗಳ ಏರಿಳಿತಗಳಿಗೆ ತಕ್ಕಂತೆ ಸಮರ್ಥವಾಗಿ ಪ್ರತಿಬಿಂಬಿಸುವ ಬಗೆಬಗೆಯ ಧಾಟಿಗಳು ಹುಟ್ಟಿಕೊಂಡುವು. ಹೊಸಗನ್ನಡದ ಲಲಿತವಾದ ಮಾತುಗಾರಿಕೆಯನ್ನು ಬಳಸಿ, ವಿಶೇಷವಾಗಿ 3, 4 ಮತ್ತು 5 ಮಾತ್ರೆಗಳ ಗಣಗಳನ್ನು ಹೂಡಿ ನವೀನರೀತಿಯ ಚತುಷ್ಪದಿಗಳನ್ನೂ ಇತರ ಮಟ್ಟುಗಳನ್ನೂ ಕಟ್ಟುವುದು ರೂಢಿಗೆ ಬಂದಿತು. ತ್ರಿಪದಿ, ಷಟ್ಪದಿ, ಅಕ್ಕರ, ರಗಳೆ, ಸಾಂಗತ್ಯ–ಮುಂತಾದ ಹಳೆಯ ಛಂದಸ್ಸುಗಳು ಹೊಸ ರೂಪದಲ್ಲಿ ಕಾಣಿಸಿಕೊಂಡುವು. ಇಂಗ್ಲಿಷಿನ ಸಾನೆಟ್, ಬ್ಲ್ಯಾಂಕ್‌ವರ್ಸ್, ಓಡ್ ಮುಂತಾದವು ಅಷ್ಟಷಟ್ಪದಿ, ಸರಳರಗಳೆ, ಪ್ರಗಾಥಾ ಮುಂತಾದ ಆವಿಷ್ಕಾರಗಳನ್ನು ಪಡೆದುವು. ಬಿ. ಎಂ. ಶ್ರೀಕಂಠಯ್ಯನವರ ಇಂಗ್ಲಿಷ್ ಗೀತೆಗಳು, ಹಟ್ಟಿಯಂಗಡಿ ನಾರಾಯಣರಾಯರ ಆಂಗ್ಲಕವಿತಾಸಾರ, ಪಂಜೆ ಮಂಗೇಶರಾಯ ಮತ್ತು ಗೋವಿಂದ ಪೈ ಅವರ ಕವಿತೆಗಳು ಆರಂಭಕಾಲದ ಹೊಸ ಪ್ರಯೋಗಗಳನ್ನು ತೋರಿಸುತ್ತವೆ. ನುಡಿಗಳು, ಗಣಗಳು, ಪ್ರಾಸಯೋಜನೆ ಮೊದಲಾದವುಗಳಲ್ಲಿ ಸ್ವಯಂಚಾಲಿತವಾದ ಸ್ವಾತಂತ್ರ್ಯವಿದ್ದೂ ಕ್ರಮಬದ್ಧತೆಯೂ ಇವುಗಳಲ್ಲಿ ಕಾಣುತ್ತದೆ. ಮುಖ್ಯವಾಗಿ ಇವು ಮಾತ್ರಾವೃತ್ತಗಳು ; ಆದರೆ ಉಚಿತಕ್ಕೆ ತಕ್ಕಂತೆ ಮಾತ್ರಾಪ್ರಮಾಣವನ್ನು ಹಿಗ್ಗಿಸುವುದು ಕುಗ್ಗಿಸುವುದು ಪಾದಾಂತ್ಯದಲ್ಲಿ ಒಂದು ಅಕ್ಷರವನ್ನೋ (ಮುಡಿ) ಎರಡು ಅಥವಾ ಮೂರು ಅಕ್ಷರಗಳನ್ನೊ (ಪದ್ಮಗಣ) ನಿಲ್ಲಿಸುವುದು–ಈ ಕೆಲವು ವೈಲಕ್ಷಣ್ಯಗಳು ಇಲ್ಲಿ ಕಾಣುತ್ತವೆ. ಇವುಗಳ ಬೇರುಗಳನ್ನು ಕೆಲಮಟ್ಟಿಗೆ ಹಳೆಯ ಛಂದಸ್ಸಿನಲ್ಲಿಯೇ ಗುರುತಿಸುವುದು ಸಾಧ್ಯ. ಹೀಗೆ ಸಂಪ್ರದಾಯ ಮತ್ತು ಪ್ರಗತಿ ಎರಡನ್ನೂ ಮೈಗೂಡಿಸಿಕೊಂಡು ಹೊಸಗನ್ನಡ ಛಂದಸ್ಸು ಮುನ್ನಡೆದಿದೆ.

ಈಗ ಸು. ಎರಡು ದಶಕಗಳಿಂದ ಹೊಸಗನ್ನಡ ಛಂದಸ್ಸು, ಎಲಿಯಟ್, ಡ್ರೈಡನ್ ಮೊದಲಾದ ಪಾಶ್ಚಾತ್ಯ ಕವಿಗಳ ಸ್ವಚ್ಛಂದ ಛಂದೋವಿಲಾಸದ ರೀತಿನೀತಿಗಳನ್ನು ರೂಢಿಸಿಕೊಂಡು ಇನ್ನೂ ಹೆಚ್ಚು ಹೆಚ್ಚಾಗಿ ಹೊಸ ರೂಪರೇಖೆಗಳನ್ನು ಪಡೆದುಕೊಳ್ಳುತ್ತಿದೆ. ಪಾದ ಸಂಖ್ಯೆ, ಲಯಗತಿ, ಗಣನಿಯಮ, ಪ್ರಾಸಯೋಜನೆ ಇವು ಮೊದಲಿಗಿಂತ ಹೆಚ್ಚು ಸಡಿಲುತ್ತ ಬದಲುತ್ತ ಬಂದಿವೆ. ರಸದೃಷ್ಟಿಯನ್ನುಳ್ಳ, ಲಯನಿಷ್ಠೆಯನ್ನು ಬಯಸುವ, ಶ್ರುತಿಮಧುರವೂ ಭಾವಗಮ್ಯವೂ ಆದ ತಾಳಮಾನತೆ, ಗೇಯಗೀತೆಗಳಿಗಿಂತ, ಚಿಂತನ ದೃಷ್ಟಿಯನ್ನುಳ್ಳ ವಚೋನಿಷ್ಠೆಯನ್ನು ಬಯಸುವ ಬುದ್ಧಿಗಮ್ಯವಾದ ವಾಚ್ಯತೆ, ನವೋನವವಾದ ಪ್ರಯೋಗಾಕಾಂಕ್ಷೆ–ಇವು ಈಚಿನ ಕನ್ನಡ ಕವಿತೆಯ ಛಂದಸ್ಸಿನಲ್ಲಿ ಕಾಣುತ್ತದೆ. ಇದಕ್ಕೆ ಹಿಂದಿನ ಛಂದಸ್ಸು ಕೂಡ ಇದರ ಜೊತೆಯಲ್ಲಿ ಸಾಗುತ್ತಿದೆ. ಬಿ. ಎಂ. ಶ್ರೀ. ಕೆ. ಎಸ್. ನ, ಪುತಿನ, ಕುವೆಂಪು ಮೊದಲಾದವರು ಅನೇಕ ಬಗೆಯ ಗೇಯಗೀತೆಗಳಲ್ಲಿ ವೈವಿಧ್ಯವನ್ನು ಕೊಟ್ಟಿದ್ದಾರೆ. ಕುವೆಂಪು ಅವರಂತೂ ಸರಳರಗಳೆಯನ್ನು ಯುಕ್ತವಾಗಿ ಮಾರ್ಪಡಿಸಿಕೊಂಡು ತಮ್ಮ ರಾಮಾಯಣದರ್ಶನ ಮಹಾಕಾವ್ಯದಲ್ಲಿ ಮಹಾಛಂದಸ್ಸನ್ನಾಗಿಸಿದ್ದಾರೆ. ಗೋಪಾಲಕೃಷ್ಣ ಅಡಿಗರು, ಚೆನ್ನವೀರ ಕಣವಿ, ಎ. ಕೆ. ರಾಮಾನುಜನ್, ಚಂದ್ರಶೇಖರ ಕಂಬಾರ, ಲಂಕೇಶ ಮೊದಲಾದವರು ಛಂದಸ್ಸಿನ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಇದ್ದಾರೆ. ಗೋಕಾಕರಿಂದ ಪ್ರಾರಂಭವಾದ ಮುಕ್ತಛಂದಸ್ಸಿನ ವೈವಿಧ್ಯಗಳನ್ನು ಒಂದು ಕಡೆ ಬೆಳೆಸಲಾಗುತ್ತಿದೆ.

**ಹೊಸಗನ್ನಡ ಛಂದಸ್ಸಿನ ಒಂದು ನುಡಿ,**

ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ ಮಾತದಾವುದು–
ನಲ್ಲೆಯೊಲವ ತೆರೆದು ತಂದ ಮಾತದಾವುದು–

(ಶ್ರೀ–ಕಾಣಿಕೆ)

**ಸ್ವಚ್ಛಂದ ಛಂದಸ್ಸಿನಲ್ಲಿಯ ಕವನದ ಮೊದಲ ಎಂಟು ಸಾಲುಗಳು :**

ಹೊಗೆ, ಬೆಂಕಿ,
–ಅಯ್ಯೋ ಹಾಳಾಗ–
ಉರಿ, ಶೆಖೆ, ತಾಪ ;
ಹೊರಗೆ ರಣರಣ ಬಿಸಿಲು, ಒಳಗೆ ಮಾರಣ ಬೆಂಕಿ.
ಮಲಗಿತ್ತು ಮನ ಚಿತೆಯ ಮೇಲೆ ಆಫೀಸಿನಲಿ,
ಭೂತಗನ್ನಡಿ ಬಿಸಿಲುಮಚ್ಚು ಚುಚ್ಚಿತು ತಲೆಯ ;
ಮಿದುಳು–ಬಚ್ಚಲ ಹಂಡೆಯಲ್ಲಿ ಬೇಯುವ ಆಮೆ–
ಎದ್ದೆದ್ದು ಬಿದ್ದು ಒದ್ದಾಡುತ್ತಿತ್ತು.

('ಹಿಮಗಿರಿಯ ಕಂದರ ' – ಎಂ. ಗೋಪಾಲಕೃಷ್ಣ ಅಡಿಗ)

ಅಂತೂ ಕನ್ನಡ ಛಂದಸ್ಸು ನಿಂತ ನೀರಾಗಿರದೆ ಹೊಸ ಹೊಸ ಆವಿಷ್ಕಾರಗಳನ್ನು ಪಡೆಯುತ್ತ ನಡೆಯುತ್ತಿರುವ ಒಂದು ಜೀವಂತ ಭಾವವಾಹಕ ಶಕ್ತಿಯಾಗಿದೆಯೆಂದು ತಿಳಿಯಬಹುದು. (ಟಿ.ವಿ.ವಿ.; ಡಿ.ಎಸ್.ಕೆ.)

**ಕನ್ನಡ ಜಾನಪದ :** ಪಾಶ್ಚಾತ್ಯ ದೇಶಗಳಲ್ಲಿ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳ ಬಗ್ಗೆ 19ನೆಯ ಶತಮಾನದಲ್ಲಿ ವಿಶೇಷವಾದ ಆಸಕ್ತಿ ಮೂಡಿ ಆ ನಿಟ್ಟಿನಲ್ಲಿ ಉತ್ತಮ ಸಾಧನೆಯನ್ನು ಅಲ್ಲಿಯ ವಿದ್ವಾಂಸರು ಮೆರೆದರು. ಜಾನಪದ ಸಂಬಂಧವಾದ ವಿಷಯಗಳಿಗೆ ಪ್ರಚಲಿತವಾಗಿದ್ದ ಪಾಪ್ಯುಲರ್ ಆಂಟಿಕ್ವಿಟೀಸ್ ಎಂಬ ಹೆಸರಿಗೆ ಬದಲಾಗಿ ಈಗ ಅತ್ಯಂತ ಜನಪ್ರಿಯತೆಯನ್ನು ಸಾಧಿಸಿಕೊಂಡಿರುವ ಫೋಕ್‌ಲೋರ್ (ಜಾನಪದ) ಎಂಬ ಪದವನ್ನು 1846ರಲ್ಲಿ ಡಬ್ಲ್ಯೂ. ಜೆ. ಥಾಮ್ಸ್ ಬಳಕೆಗೆ ತಂದ ಎರಡು ದಶಕಗಳಲ್ಲೇ ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಫೋಕ್‌ಲೋರ್ ಸೊಸೈಟಿ ಸ್ಥಾಪಿತವಾಗಿ ವಿಶ್ವದಾದ್ಯಂತ ಜಾನಪದ ಅಧ್ಯಯನಕ್ಕೆ ಒಂದು ಹೊಸ ತಿರುವನ್ನು ಕೊಟ್ಟಿತು. ಅನೇಕ ಪ್ರಸಿದ್ಧ ವಿದ್ವಾಂಸರು ಆ ಕ್ಷೇತ್ರವನ್ನು ಪ್ರವೇಶಿಸಿ ಶಾಸ್ತ್ರೀಯ ತಳಹದಿಯ ಮೇಲೆ ಜಾನಪದ ಸಂಶೋಧನೆಯನ್ನು ರೂಪಿಸಿದರು. ವಿಶ್ವದ ನಾನಾ ಕಡೆಗಳಲ್ಲಿ ಸಂಗ್ರಹಕಾರ್ಯ ವ್ಯವಸ್ಥಿತವಾಗಿ ನಡೆಯತೊಡಗಿ ಅಪಾರ ಸಾಹಿತ್ಯರಾಶಿ 19ನೆಯ ಶತಮಾನದ ಅಂತ್ಯದ ವೇಳೆಗೇ ವಿದ್ವಾಂಸರಿಗೆ ಲಭ್ಯವಾಯಿತು.

ಭಾರತದಲ್ಲಿಯೂ ಜಾನಪದ ಸಂಗ್ರಹಕಾರ್ಯ ಕಳೆದ ಶತಮಾನದಲ್ಲಿಯೇ ಆರಂಭವಾಯಿತು. ಪಾಶ್ಚಾತ್ಯ ವಿದ್ವಾಂಸರೂ ಅಧಿಕಾರಿಗಳೂ ಭಾರತೀಯ ವಿದ್ವಾಂಸರೂ ಭಾರತದ ನಾನಾ ಕಡೆಗಳಲ್ಲಿ ಜನಪದ ಕಥೆಗಳನ್ನೂ ಗಾದೆಗಳನ್ನೂ ಲಾವಣಿಗಳನ್ನೂ ಸಂಪ್ರದಾಯ, ನಂಬಿಕೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯವನ್ನೂ ಅಲ್ಲಲ್ಲಿ ಸಂಗ್ರಹಿಸಿದರು. ಈ ಎಲ್ಲ ಸಾಹಿತ್ಯವೂ ಇಂಗ್ಲಿಷಿಗೆ ಅನುವಾದಿತವಾಗಿ ಪ್ರಕಟವಾದುದರಿಂದ ವಿಶ್ವಮಟ್ಟದಲ್ಲಿ ಭಾರತೀಯ ಜಾನಪದದ ಕಡೆ ಪ್ರಸಿದ್ಧ ವಿದ್ವಾಂಸರ ದೃಷ್ಟಿ ಹರಿಯಲು ಕಾರಣವಾಯಿತು.

ಕಳೆದ ಶತಮಾನದಲ್ಲಿ ನಡೆದ ಸಂಗ್ರಹಕಾರ್ಯ ಬಹುಮಟ್ಟಿಗೆ ಉತ್ತರ ಭಾರತಕ್ಕೆ ಸೀಮಿತವಾಯಿತು. ದಕ್ಷಿಣ ಭಾರತದಲ್ಲಿ ಕನ್ನಡ, ತಮಿಳು, ತೆಲುಗು ಹಾಗೂ ಮಲೆಯಾಳ ಭಾಷೆಗಳಿಗೆ ಸಂಬಂಧಿಸಿದಂತೆ ವ್ಯಾಪಕವಾದ ಸಂಗ್ರಹಕಾರ್ಯ ನಡೆಯಲಿಲ್ಲ. ಗಾದೆಗಳು, ಕಥೆಗಳು ಮತ್ತು ಲಾವಣಿಗಳಿಗೆ ಸಂಬಂಧಿಸಿದಂತೆ ಅಷ್ಟಿಷ್ಟು ಸಂಗ್ರಹ ಕಾರ್ಯ ನಡೆಯದಿದ್ದರೂ ಅದು ಅಸಮಗ್ರವಾದುದು. ಕನ್ನಡದಲ್ಲಿಯೂ ಇದೇ ಸ್ಥಿತಿಯಾಯಿತು. ಇತರ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಕೆಲವು ಪಾಶ್ಚಾತ್ಯ ವಿದ್ವಾಂಸರು ಜಾನಪದ ಸಂಗ್ರಹ ಕಾರ್ಯವನ್ನು ಸ್ವಲ್ಪಮಟ್ಟಿಗೆ ನಡೆಸಿದ್ದರೂ ಅಷ್ಟೇನೂ ಗಣನೀಯ ಪ್ರಮಾಣದಲ್ಲಿ ಆ ಕಾರ್ಯ ನಡೆಯಲಿಲ್ಲ ಎಂದೇ ಹೇಳಬೇಕು.

ಕನ್ನಡದಲ್ಲಿ ಜಾನಪದ ಸಂಗ್ರಹದ ಪ್ರಥಮ ಪ್ರಯತ್ನವನ್ನು 1816ರ ವೇಳೆಗೇ ಗುರುತಿಸಬಹುದು. ಈ ಅವಧಿಯಲ್ಲಿ ಪ್ರಕಟವಾದ ಅಬ್ಬೆಡುಬ್ಯೊಸನ ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಅಂಡ್ ಸೆರೆಮೊನೀಸ್ ಎಂಬ ಗ್ರಂಥದಲ್ಲಿ ಕನ್ನಡ ಜನಪದ ಕಥೆಗಳ ಕೆಲವು ಭಿನ್ನರೂಪಗಳನ್ನು (ವೇರಿಯಂಟ್ಸ್) ಕಾಣಬಹುದು. ಮತಪ್ರಚಾರಕನಾಗಿ ಕನ್ನಡನಾಡಿನ ಕೆಲವು ಭಾಗಗಳಲ್ಲಿ ಸಂಚಾರ ಮಾಡಿದ ಈ ಫ್ರೆಂಚ್ ಮಹಾಶಯ ಅನೇಕ ಜಾನಪದ ಸಂಪ್ರದಾಯಗಳನ್ನು ತನ್ನ ಗ್ರಂಥದಲ್ಲಿ ಗುರುತಿಸಿದ್ದಾನೆ. ದೊಡ್ಡ ಸ್ವಾಮಿ ಎಂದು ಜನಪ್ರಿಯನಾಗಿದ್ದ ಈತ ಜನಜೀವನದೊಡನೆ ಅತ್ಯಂತ ಹತ್ತಿರದ ಸಂಬಂಧವನ್ನು ಇಟ್ಟುಕೊಂಡು ಸ್ವಾರಸ್ಯವಾದ ರೀತಿಯಲ್ಲಿ ಅನೇಕ ವಿಷಯಗಳನ್ನು ನಿರೂಪಿಸಿದ್ದಾನೆ.

ಕನ್ನಡ ಜಾನಪದ ಸಂಗ್ರಹದ ಇತಿಹಾಸದಲ್ಲಿ ಚಾರಲ್ಸ್ ಇ. ಗೋವರನ ಹೆಸರು ಅತ್ಯಂತ ಗಮನಾರ್ಹವಾದುದು. ಕಳೆದ ಶತಮಾನದ ಮಧ್ಯಭಾಗದಲ್ಲಿ ಪ್ರಕಟವಾದ ಫೋಕ್ ಸಾಂಗ್ಸ್ ಆಫ್ ಸದರನ್ ಇಂಡಿಯ ಎಂಬ ತನ್ನ ಗ್ರಂಥದಲ್ಲಿ ಈತ ಭಾರತದ ಪ್ರಮುಖ ಭಾಷೆಗಳ ಜನಪದಗೀತೆಗಳನ್ನು ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿದ್ದಾನೆ. ಈತನ ಕೃತಿಯಲ್ಲಿ ಕನ್ನಡ ಜನಪದ ಗೀತೆಗಳಿಗೇ ಆದ್ಯತೆ ಇದ್ದು 28 ಹಾಡುಗಳು ಪ್ರಥಮಭಾಗದಲ್ಲಿ ಪ್ರಕಟವಾಗಿದ್ದರೂ ಅವುಗಳಲ್ಲಿ ಬಹುಪಾಲು ದಾಸರ ಕೀರ್ತನೆಗಳ ಅನುವಾದಗಳಾಗಿವೆ. ದಾಸಪರಂಪರೆಯ ಹಾಡುಗಾರರಿಂದ ಇವನ್ನು ಸಂಗ್ರಹಿಸಿದ ಇಬ್ಬರು ಮಿಷನರಿಗಳು (ಎ. ಜೆ. ಲೈಲೆ ಹಾಗೂ ಎಸ್. ಡಾಲ್‌ಜೆಲ್) ದಾಸರ ಪದಗಳು ಎಂಬ ಶೀರ್ಷಿಕೆಯಲ್ಲಿ ಅವನ್ನು ಗೋವರನಿಗೆ ನೀಡಿದ್ದಾರೆ. ಅವರೇ ಅನುವಾದಿಸಿ ಕೊಟ್ಟ ಈ ಕೀರ್ತನೆಗಳನ್ನು ಗೋವರ್ ಕನ್ನಡ ಹಾಡುಗಳು ಎಂದು ಕರೆದು ಅವುಗಳ ಬಗ್ಗೆ ವಿವರವಾದ ವ್ಯಾಖ್ಯೆ ಮಾಡಿದ್ದಾನೆ. ಆದರೆ ಶುದ್ಧ ಜನಪದ ಗೀತೆಗಳಾವು ಗೋವರನ ಗಮನಕ್ಕೆ ಬಂದಂತೆ ತೋರುವುದಿಲ್ಲ. ಗೋವರನಿಗೂ ಮೊದಲೇ 24 ಹಾಡುಗಳನ್ನು ಪ್ರಕಟಿಸಿದ್ದ ಮೊಗ್‌ಲಿಂಗ್‌ನ ಕೃತಿಯನ್ನೂ ಈ ದೃಷ್ಟಿಯಿಂದಲೇ ಪರಿಶೀಲಿಸಬೇಕಾಗಿದೆ.

ಗೋವರನ ಸಂಕಲನದಲ್ಲಿ ಕೆಲವು ಬಡಗ ಜನಪದಗೀತೆಗಳು ಹಾಗೂ ಕೊಡಗಿನ ಜನಪದಗೀತೆಗಳು ಲಭ್ಯವಾಗುತ್ತವೆ. ಕೊಡಗಿನ ಹುತ್ತರಿಹಾಡು, ಮದುವೆಯ ಹಾಡುಗಳು, ಸಂಸ್ಕಾರ ಗೀತೆಗಳು, ಶಿಶುಪ್ರಾಸಗಳು ಇಲ್ಲಿ ಗಮನಾರ್ಹವಾಗಿವೆ.

ಗೋವರನ ಅನಂತರ ಪ್ರಸಿದ್ಧ ಪ್ರಾಕ್ತನ ಸಂಶೋಧಕನಾದ ಜೆ. ಎಫ್. ಫ್ಲೀಟ್ ಜಾನಪದ ಸಂಬಂಧವಾದ ಆಂಟಿಕ್ವೆರಿಯ ಸಂಪುಟಗಳಲ್ಲಿ 1885ರ ವೇಳೆಗೆ ಈತ ಪ್ರಕಟಿಸಿದ ಲಾವಣಿಗಳು ಈತನ ಸಂಗ್ರಹಾಸಕ್ತಿಗೂ ಸಂಶೋಧನ ನಿಷ್ಠೆಗೂ ಸಂಪಾದನೆ ವೈಶಿಷ್ಟ್ಯಕ್ಕೂ ಉತ್ತಮ ನಿದರ್ಶನವಾಗಿವೆ. ಕಿತ್ತೂರಿನ ಈರವ್ವ, ಸಂಗೊಳ್ಳಿ ರಾಯಣ್ಣ, ಬಾದಾಮಿಯ ರಾಣಮಂಡಲ ಕೋಟೆಯ ಮುತ್ತಿಗೆ, ನರಗುಂದದ ವಿಜಯ, ಆದಾಯ ತೆರಿಗೆಯ ಜಾರಿ, ಹಲಗಲಿಯ ಬೇಡರು, ಹಳ್ಳಿಯ ಜಮೀನ್ದಾರ, ಆಂಗ್ಲರಾಷ್ಟ್ರ ವೈಭವದ ಹಾಡು– ಮುಂತಾದವನ್ನು ಗಮನಿಸಿದಾಗ ಫ್ಲೀಟನ ದೃಷ್ಟಿ ವಿಶೇಷವಾಗಿ ಜಾನಪದದ ಒಂದು ಸೀಮಿತ ಹಿನ್ನಲೆಗೆ ಮಾತ್ರ ಮೀಸಲಾಗಿತ್ತು.–ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಆತ ಸಂಗ್ರಹಿಸಿದ ಲಾವಣಿಗಳು ಆಂಗ್ಲ ಪ್ರಭುತ್ವ ಹಾಗೂ ಅದರ ಬಗ್ಗೆ ಜನಸಾಮಾನ್ಯರ ಪ್ರತಿಕ್ರಿಯೆಗಳನ್ನು ಮಾತ್ರ ಪ್ರತಿಬಿಂಬಿಸುತ್ತವೆ. ಕಿತ್ತೂರಿನ ಪತನವಾದ ಮೇಲೆ ಹುಟ್ಟಿಕೊಂಡ ಲಾವಣಿಗಳಾದುದರಿಂದ ಕನ್ನಡಿಗರು ಆಂಗ್ಲರ ದಾಳಿ ಹಾಗೂ ದಬ್ಬಾಳಿಕೆಗಳನ್ನು ಹೇಗೆ ಕಂಡಿದ್ದಾರು ಎಂಬುದಕ್ಕವು ಸಾಕ್ಷಿಗಳಾಗಿವೆ. ಸಾಹಿತ್ಯಕ ದೃಷ್ಟಿಯಿಂದಲೂ ಐತಿಹಾಸಿಕ ದೃಷ್ಟಿಯಿಂದಲೂ ಈ ಲಾವಣಿಗಳು ಅತ್ಯಂತ ಮಹತ್ತ್ವದ ಕಾಣಿಕೆಗಳಾಗಿವೆ. ಆದರೆ ಫ್ಲೀಟನಂಥ ವಿದ್ವಾಂಸನ ದೃಷ್ಟಿ ಜಾನಪದ ಕ್ಷೇತ್ರಕ್ಕೆ ಹೊರಳಿಯೂ ಮಿಕ್ಕ ಅದರ ಅನಂತ ಪ್ರಕಾರಗಳನ್ನು ಗುರುತಿಸದೆ ಹೋದುದು ಆಶ್ಚರ್ಯಕರವಾಗಿದೆ. ಉತ್ತರ ಕರ್ಣಾಟಕದ ಈ ಲಾವಣಿಗಳಿಗೆ ಕನ್ನಡ ಮೂಲ, ಇಂಗ್ಲಿಷ್ ಅನುವಾದ, ಅದಕ್ಕೆ ಸಂಬಂಧಿಸಿದ ಟಿಪ್ಪಣಿಗಳು ಮುಂತಾದವನ್ನು ಫ್ಲೀಟ್ ಅತ್ಯಂತ ಪಾಂಕ್ತವಾಗಿ ಒದಗಿಸಿ ಉಪಕರಿಸಿದ್ದಾನೆ. ಇಷ್ಟು ಸರ್ವಸಮರ್ಪಕ ಸಂಪಾದನಾ ದೃಷ್ಟಿಯಿಂದ ಕೂಡಿದ ಕನ್ನಡ ಜಾನಪದ ಸಂಕಲನಗಳು ವಿರಳವೆಂದೇ ಹೇಳಬೇಕು.

ಕನ್ನಡ ವಿದ್ವತ್ತಿನ ಬೆಳೆವಣಿಗೆಗೆ ರೆ. ಎಫ್. ಕಿಟ್ಟೆಲನ ಕೊಡುಗೆ ಶ್ರೇಷ್ಠ ಮಟ್ಟದ್ದಾಗಿದೆ. ಜರ್ಮನಿಯ ಈ ವಿದ್ವಾಂಸ ಕ್ರೈಸ್ತಮತ ಪ್ರಚಾರಕ್ಕಾಗಿ ಭಾರತಕ್ಕೆ ಬಂದು ಮಂಗಳೂರಿನಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿಕೊಂಡ. ಮತಪ್ರಸಾರಕ್ಕಿಂತಲೂ ಕನ್ನಡದ ಉದ್ಧಾರಕ್ಕಾಗಿ ಕಿಟ್ಟೆಲ್ ಕೈಗೊಂಡ ಕಾರ್ಯಗಳು ದೊಡ್ಡ ಐತಿಹಾಸಿಕ ದಾಖಲೆಗಳಾಗಿ ಉಳಿದಿವೆ. ಆತನ ಕನ್ನಡ ಶಬ್ದಕೋಶ ಇಂದಿಗೂ ಒಂದು ಅಮೂಲ್ಯ ಅರ್ಥಕೋಶವಾಗಿಯೇ ಉಳಿದಿದೆ. ತನ್ನ ಶಬ್ದಕೋಶದಲ್ಲಿ ಆತ ನಾಡಿನ ನಾನಾಕಡೆಯ ಜನಪ್ರಿಯ ಗಾದೆಗಳನ್ನು ಸಂಗ್ರಹಿಸಿ ನೀಡಿರುವುದು ಜಾನಪದ ಕ್ಷೇತ್ರಕ್ಕೆ ಆತ ಸಲ್ಲಿಸಿದ ದೊಡ್ಡ ಸೇವೆಯಾಗಿದೆ. ನಾಲ್ಕು ಸಾವಿರಕ್ಕೂ ಹೆಚ್ಚು ಗಾದೆಗಳು 1894ರಲ್ಲಿ ಪ್ರಕಟವಾದ ಈ ಶಬ್ದಕೋಶದಲ್ಲಿ ಸೇರಿವೆ. ಇಷ್ಟು ಅಪಾರ ಸಂಖ್ಯೆಯಲ್ಲಿ ಕಳೆದ ಶತಮಾನದಲ್ಲಿಯೇ ಕನ್ನಡ ಗಾದೆಗಳು ಸಂಕಲಿತವಾಗಿ ಪ್ರಸಿದ್ಧ ಅರ್ಥಕೋಶವೊಂದರಲ್ಲಿ ಸಂರಕ್ಷಿತವಾಗಿರುವುದು ಕಿಟ್ಟೆಲನ ಸಾಹಸಕ್ಕೆ ದ್ಯೋತಕವಾಗಿದೆ. ಕಂಠಸ್ಥ ಸಂಪ್ರದಾಯದ ಈ ಗಾದೆಗಳ ಜೊತೆಗೆ ಆಡುಮಾತಿನ ಸೊಗಡನ್ನೂ ಸವಿಯನ್ನೂ ಕನ್ನಡಿಗರ ಪರವಾಗಿ ಜೀವಾನುಭವದ ಶ್ರೀಮಂತಿಕೆಯನ್ನು ವೈವಿಧ್ಯವನ್ನು ಪರಿಚಯ ಮಾಡಿಕೊಡಲು ಸಮರ್ಥವಾಗಲಿಲ್ಲ. 20ನೆಯ ಶತಮಾನದ ಆದಿಭಾಗದಲ್ಲಿಯೂ ಈ ಕೆಲಸ ಸಮರ್ಪಕವಾಗಿ ನಡೆಯಲಿಲ್ಲ. 1912ರ ಸುಮಾರಿಗೆ ಪ್ರಕಟವಾದ ಬಾಸೆಲ್ ಮಿಷನ್ ಪ್ರೆಸ್ಸಿನವರ ಗಾದೆಗಳ ಸಂಕಲನಗಳನ್ನು ಬಿಟ್ಟರೆ ಮತ್ತಾವ ಜಾನಪದ ಪ್ರಕಾರದಲ್ಲೂ ಸಂಕಲನಗಳು ಹೊರಬರಲಿಲ್ಲ. 1930ರವರೆಗೆ ಕನ್ನಡ ಜಾನಪದ ಕ್ಷೇತ್ರ ಅಜ್ಞಾತವಾಗಿಯೇ ಉಳಿದು ಹೋಯಿತು. ಕಳೆದ ನಾಲ್ಕು ದಶಕಗಳ ಸಂಗ್ರಹ ಹಾಗೂ ಅಧ್ಯಯನಗಳು ಕನ್ನಡ ಜಾನಪದ ಭಂಡಾರವನ್ನು ತಕ್ಕಮಟ್ಟಿಗಾದರೂ ತುಂಬಿವೆ. ಸು. ಎಂಟುನೂರಕ್ಕೂ ಹೆಚ್ಚು ಜಾನಪದ ಕೃತಿಗಳು ಪ್ರಕಟವಾಗಿವೆ. ಉತ್ತಮ ಸಂಗ್ರಾಹಕರೂ ವಿದ್ವಾಂಸರೂ ಆ ಕ್ಷೇತ್ರದಲ್ಲಿ ದುಡಿದು ಜಾನಪದ ವಿದ್ವತ್ತನ್ನು ಬೆಳೆಸುತ್ತಿದ್ದಾರೆ. ಜಾನಪದ ಸಂಗ್ರಹ ಹಾಗೂ ಅಧ್ಯಯನದ ಕೆಲವು ಮೈಲಿಗಲ್ಲುಗಳನ್ನು ಇಲ್ಲಿ ಪರಿಶೀಲಿಸಬಹುದು.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನವೋದಯ ಕ್ರಾಂತಿಯ ಜೊತೆಯಲ್ಲಿಯೇ ಜಾನಪದ ನವೋದಯವೂ ಆಯಿತು. ಎನ್ನಬಹುದು. 1925ಕ್ಕೂ ಮುಂಚೆಯೇ ಪ್ರಕಟವಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಲೇಖನ ಕನ್ನಡ ಲಾವಣಿ ಸಾಂಗತ್ಯ–ಎಂಬುದು ಕನ್ನಡ ಜನಪದ ಸಾಹಿತ್ಯದ ನಾನಾ ಮುಖಗಳನ್ನು ಪರಿಚಯ ಮಾಡಿಕೊಟ್ಟು, ಆ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಸಂಗ್ರಹ ಕಾರ್ಯಕ್ಕೆ ಒಂದು ರೀತಿಯ ಪ್ರೇರಣೆಯನ್ನು ನೀಡಿತು. ಮಾಸ್ತಿ ಆ ಲೇಖನದಲ್ಲಿ ಕನ್ನಡ ಜನಪದಗೀತೆಗಳ ಅನೇಕ ಪ್ರಮುಖ ಸಂಪ್ರದಾಯಗಳನ್ನು ಪರಿಚಯ ಮಾಡಿಕೊಟ್ಟು, ತಮ್ಮ ಅಧಿಕಾರಾವಧಿಯ ಪ್ರವಾಸ ಕಾಲದಲ್ಲಿ ಟಿಪ್ಪಣಿ ಮಾಡಿಕೊಂಡ ವಿಷಯಗಳನ್ನು ಗೀತಭಾಗಗಳನ್ನೂ ಉಲ್ಲೇಖಿಸಿ ಅವುಗಳ ಸ್ವಾರಸ್ಯವನ್ನು ಕುರಿತು ಚರ್ಚೆ ಮಾಡಿದ್ದಾರೆ. ಸರ್ಜಪ್ಪ ನಾಯಕನ ಲಾವಣಿ, ಅರ್ಜುನ ಜೋಗಿ ಹಾಡು ಮುಂತಾದ ಪ್ರಸಿದ್ಧ ಜನಪದ ರಚನೆಗಳ ಕಡೆ ನಾಡಿನ ವಿದ್ವಾಂಸರ ದೃಷ್ಟಿಯನ್ನು ಸೆಳೆದಿದ್ದಾರೆ. ಮರೆತು ಹೋಗುತ್ತಿರುವ ಅನೇಕ ಹಾಡುಗಳ ಪ್ರಸ್ತಾಪ ಮಾಡಿ ಜಾನಪದ ಸಂಗ್ರಹ ಕಾರ್ಯದ ಬಗ್ಗೆ ಗಮನಾರ್ಹವಾದ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ.

ಮಾಸ್ತಿಯವರ ಈ ಪ್ರಮುಖ ಲೇಖನದ ಅನಂತರ ಜಯಕರ್ನಾಟಕ, ಪ್ರಬುದ್ಧ ಕರ್ಣಾಟಕ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಸಂಗ್ರಹಗಳು ಮತ್ತು ಲೇಖನಗಳನ್ನು ಅನಂತರ ಕನ್ನಡದಲ್ಲಿ ಪ್ರಕಟಗೊಂಡ ಜಾನಪದ ಸಂಕಲನಗಳು ಮತ್ತು ವಿಮರ್ಶಾಗ್ರಂಥಗಳನ್ನು ಐದು ಪ್ರಮುಖ ಅಂಗಗಳಲ್ಲಿ ವಿಭಜಿಸಿಕೊಳ್ಳಬಹುದು.

1 ಜನಪದ ಗೀತೆ, ಲಾವಣಿಗಳು
2 ಜನಪದ ಗದ್ಯ ಕಥನಗಳು
3 ಜನಪದ ಗಾದೆ, ಒಗಟುಗಳು
4 ಜನಪದ ಕಲೆಗಳು
5 ಜಾನಪದ ವಿಚಾರ ವಿಮರ್ಶೆ

ಜಾನಪದದ ಸಮಗ್ರ ಕಲ್ಪನೆ ಕನ್ನಡದಲ್ಲಿ ಬಂದದ್ದು ತೀರ ಇತ್ತೀಚೆಗೆ, ಸಾಹಿತ್ಯಕ ಬಗೆ, ಭಾಷಿಕ ಬಗೆ, ಕ್ರಿಯಾತ್ಮಕ ಬಗೆ, ವೈಜ್ಞಾನಿಕ ಬಗೆಗಳಲ್ಲಿ ಅನೇಕ ವಿಷಯಗಳು ಒಳಪಡುತ್ತವೆ. ಪರಂಪರಾನುಗತವಾಗಿ ಕಂಠಸ್ಥ ಸಂಪ್ರದಾಯ ಹಾಗೂ ಅನುಕರಣೆಯ ಮೂಲಕ ಸಾಗಿಬರುವ ಎಲ್ಲ ಬಗೆಯ ಜ್ಞಾನವೂ ಜಾನಪದ. ಗ್ರಂಥಸ್ಥ ಮೂಲವನ್ನು ಅವಲಂಬಿಸದೆ ತಲೆಮಾರಿನಿಂದ ತಲೆಮಾರಿಗೆ ಹೀಗೆ ಒಯ್ಯಲ್ಪಡುವ ಜಾನಪದದಲ್ಲಿ ಕಥೆ, ಗೀತೆ, ಲಾವಣಿ, ಗಾದೆ, ಒಗಟು, ಮಾತು, ನೃತ್ಯ, ನಾಟಕ, ಚಿತ್ರ, ಶಿಲ್ಪ, ಆಚಾರ, ನಂಬಿಕೆ, ಸಂಪ್ರದಾಯ, ಅಡುಗೆ, ವೈದ್ಯ, ಕ್ರೀಡೆ, ಮಾಟ ಮಂತ್ರ, ಸಂಜ್ಞೆ ಹೀಗೆ ಹತ್ತಾರು ಪ್ರಕಾರಗಳನ್ನು ಗುರುತಿಸಲಾಗುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎಲ್ಲ ಶಾಖೆಗಳಿಗೂ ಸಂಬಂಧಪಟ್ಟಂತೆ ಅತ್ಯುತ್ತಮ ಸಂಗ್ರಹಕಾರ್ಯ ನಡೆದಿದೆ. ಕನ್ನಡದಲ್ಲಿ ಮೂರು ನಾಲ್ಕು ಪ್ರಕಾರಗಳನ್ನೂ ಗುರುತಿಸುವಷ್ಟು ಸಂಗ್ರಹಕಾರ್ಯ ನಡೆದಿದ್ದರೂ ಅವುಗಳಲ್ಲಿಯೂ ಸಮಗ್ರತೆ, ಶಾಸ್ತ್ರೀಯತೆ ಕಂಡು ಬರದೆ ಇನ್ನೂ ವೈಜ್ಞಾನಿಕ ಸಂಗ್ರಹಕಾರ್ಯ ನಡೆಯಬೇಕಾದ ಅಗತ್ಯ ಇದೆ.

**ಗೀತೆ, ಲಾವಣಿ :** ಕನ್ನಡದಲ್ಲಿ ಜಾನಪದ ಆಸಕ್ತಿ ಮೂಡಿದುದು ಸಾಹಿತ್ಯಕ ದೃಷ್ಟಿಯಿಂದಲೇ ಎನ್ನಬೇಕು. ಈ ಕ್ಷೇತ್ರವನ್ನು ಪ್ರವೇಶಿಸಿದವರು ಬಹುಮಟ್ಟಿಗೆ ಸಾಹಿತಿಗಳು. ನವೋದಯ ಕಾವ್ಯದ ಪ್ರಭಾವದಿಂದ ಭಾವಗೀತೆಯ ಪ್ರಕಾರವನ್ನು ಜಾನಪದ ಮೂಲದಲ್ಲಿಯೂ ಕಾಣುವ ದೃಷ್ಟಿ ಪ್ರಖರವಾಗಿ, ಆ ನಿಟ್ಟಿನಲ್ಲಿ ಸಂಗ್ರಹಕಾರ್ಯ ಆರಂಭವಾಯಿತು. ಕನ್ನಡದ ಮೊಟ್ಟ ಮೊದಲ ಜನಪದ ಭಾವಗೀತೆಗಳ ಸಂಕಲನವನ್ನು ಹೊರತಂದವರು ಹಲಸಂಗಿ ಸೋದರರಾದ ಕಾಪಸೆ ರೇವಪ್ಪ, ಮಧುರಚೆನ್ನ, ಸಿಂಪಿ ಲಿಂಗಣ್ಣ ಈ ಮೂವರು. ಬಿಜಾಪುರ ಜಿಲ್ಲೆಯ ತದ್ದೆವಾಡ ನಾಡಿನ ಎಂಟನೂರು ತ್ರಿಪದಿಗಳು ಈ ಸಂಕಲನದಲ್ಲಿ ಸೇರಿವೆ. ಕನ್ನಡ ಗರತಿಹಾಡಿನ ಉನ್ನತ ಕಾವ್ಯ ಮೌಲ್ಯವನ್ನು ಈ ತ್ರಿಪದಿಗಳಲ್ಲಿ ಕಾಣಬಹುದು. ಸಂಪಾದಕರು ಶ್ರಮವಹಿಸಿ ಕಾವ್ಯದೃಷ್ಟಿಯಿಂದ ಅತ್ಯಮೂಲ್ಯವಾದ ಪದ್ಯಗಳನ್ನೇ ಇಲ್ಲಿ ಆಯ್ಕೆ ಮಾಡಿದ್ದಾರೆ.

ಸಿಂಪಿ ಲಿಂಗಣ್ಣ

ಜನಪದ ಗೀತೆಗಳ ಬಹುಸತ್ತ್ವಯುತವಾದ ಭಾಗ ಈ ಸಂಕಲನದ ಮೂಲಕ ಲಭ್ಯವಾಗುವಂತೆ ಸಂಪಾದಕರು ಶ್ರಮಿಸಿದ್ದಾರೆ. ಬೀಸುವ ಪದಗಳು, ದೈವಸ್ತುತಿ ಪ್ರಧಾನಗೀತೆಗಳು, ತೌರ ಪದಗಳು, ಲಾಲಿಯ ಪದಗಳು–ಹೀಗೆ ಪ್ರಮುಖವಾದ ವಿಭಾಗಗಳಲ್ಲಿ ಗರತಿಯ ಹಾಡಿನಲ್ಲಿ ದೊರೆಯುವ ತ್ರಿಪದಿಗಳು ಕನ್ನಡ ಜನಪದ ಕಾವ್ಯದ ಶ್ರೇಷ್ಠ ಮಾದರಿಗಳು. ಗರತಿಯ ಹಾಡು ಕನ್ನಡನಾಡಿನ ಸ್ತ್ರೀಜೀವನದ ಒಳಗನ್ನಡಿ ; ಅದು ಇಲ್ಲಿಯ ಹೆಣ್ಣುಮಕ್ಕಳ ಹೃದಯದ ಪಡಿಗನ್ನಡಿ. ಅದರಲ್ಲಿ ಮಮತೆಯ ಮಾಧುರ್ಯ ಮೈವೆತ್ತಿದೆ. ಪ್ರೇಮದ ಸತ್ಯ ಅಳವಟ್ಟಿದೆ–ಎಂದು ಸಂಪಾದಕರಲ್ಲೊಬ್ಬರಾದ ಸಿಂಪಿ ಲಿಂಗಣ್ಣನವರು ಹೇಳಿರುವ ಮಾತು ಎಲ್ಲ ದೃಷ್ಟಿಯಿಂದಲೂ ಗರತಿಯ ಹಾಡಿಗೆ ಒಪ್ಪುತ್ತದೆ. ಕಾಲದ ದೃಷ್ಟಿಯಿಂದಲೂ ಸಾಹಿತ್ಯಕ ಮೌಲ್ಯದೃಷ್ಟಿಯಿಂದಲೂ ಗರತಿಯ ಹಾಡಿಗೆ ಆದ್ಯಸ್ಥಾನ ಲಭ್ಯವಾಗುತ್ತದೆ. ಪ್ರಕೃತ ಸಂಕಲನಕ್ಕೆ ಬಿ.ಎಂ.ಶ್ರೀ. ಬೇಂದ್ರೆ, ಮಾಸ್ತಿ, ಮೊದಲಾದ ಸಾಹಿತ್ಯಶಿಲ್ಪಿಗಳ ಮಾರ್ಗದರ್ಶನವೂ ದೊರೆತಿರುವುದು ಆ ಕೃತಿಯ ಶ್ರೇಷ್ಠತೆಗೆ ಕಳಶವಿಟ್ಟಿದೆ.

ಗೆಳೆಯರ ಗುಂಪಿನ ರೇವಪ್ಪನವರು ಸಂಗ್ರಹಿಸಿದ ಮಲ್ಲಿಗೆ ದಂಡೆ (1935) ಜಾನಪದ ಸಂಕಲನಗಳ ಸಾಲಿನಲ್ಲಿ ಉತ್ತಮ ಕೃತಿ. ವಿವಿಧ ಧಾಟಿಗಳ, ವಿವಿಧ ಛಂದಸ್ಸುಗಳ ವೈವಿಧ್ಯಮಯ ಗೀತೆಗಳನ್ನು ಈ ಸಂಕಲನದಲ್ಲಿ ಕಾಣಬಹುದು. ದೇವರ ಸ್ತುತಿ, ಪ್ರಣಯ, ಭಾವಗೀತೆ, ಕಥನಗೀತೆ, ಮದುವೆ ಹಾಡು, ಸೋಬಾನದ ಹಾಡುಗಳು, ಹಾಸ್ಯಗೀತೆಗಳು–ಹೀಗೆ ಜನಪದಗೀತೆಗಳ ಎಲ್ಲ ಸೋಬಾನದ ಪರಿಚಯ ಮಾಡಿಕೊಡುವ ಅದ್ವಿತೀಯ ಮಾದರಿಗಳು ಇಲ್ಲಿವೆ.

ಹಲಸಂಗಿ ಸೋದರರಲ್ಲೊಬ್ಬರಾದ ಸಿಂಪಿ ಲಿಂಗಣ್ಣನವರು ಧೂಲಾಸಾಹೇಬರೊಡನೆ ಕಲೆತು ಹೊರತಂದ ಜೀವನಸಂಗೀತ ಕನ್ನಡ ಜನಪದ ಸಾಹಿತ್ಯದ ಒಂದು ಶ್ರೇಷ್ಠ ಪರಂಪರೆಯನ್ನು ಪರಿಚಯ ಮಾಡಿಕೊಡುತ್ತದೆ. ಅಲ್ಲದೆ ಅತ್ಯುತ್ತಮ ಲಾವಣಿಗಳನ್ನು ಪ್ರಥಮ ಬಾರಿಗೆ ಇಲ್ಲಿ ಕಾಣಬಹುದಾಗಿದೆ. ಕಲ್ಕಿ–ತುರಾಯಿ ಅಥವಾ ಹರಿದೇಶಿ–ನಾಗೇಶಿ ಸಂಪ್ರದಾಯದ ಈ ಲಾವಣಿಗಳು ಉತ್ತರ ಕರ್ಣಾಟಕದಲ್ಲಿ ಪ್ರಚಲಿತವಾಗಿರುವ ಲಾವಣಿಗಳ ಶಕ್ತಿವತ್ತಾದ ಶೈಲಿ, ನಿರೂಪಣಾ ಕೌಶಲ ಮತ್ತು ಅದ್ಭುತ ಕಲ್ಪನೆಗಳಿಗೆ ಉತ್ತಮ ಮಾದರಿಯಾಗಿವೆ. ಹಳೆಯ ಪರಂಪರೆಯ ಲಾವಣಿಗಳು ಮರೆತುಹೋಗುತ್ತಿರುವುದರ ಜೊತೆಯಲ್ಲೇ, ಸತ್ತ್ವಹೀನವಾದ ಹೊಸ ಲಾವಣಿಗಳು ಕಾಣಿಸಿಕೊಳ್ಳುತ್ತಿರುವುದನ್ನು ಸಂಪಾದಕರು ಗುರುತಿಸಿದ್ದಾರೆ.

ಉತ್ತರ ಕರ್ಣಾಟಕದ ಪ್ರಾತಿನಿಧಿಕ ಸಂಕಲನಗಳಾಗಿ ಹೊರಬಂದ ಈ ಮೂರು ಗ್ರಂಥಗಳು ನಾಡಿನಾದ್ಯಂತ ಜನಪದ ಸಾಹಿತ್ಯದ ಬಗ್ಗೆ ವಿಶೇಷವಾದ ಗೌರವ, ಆದರಗಳು ಮೂಡಲು ಪ್ರೇರಕವಾದುವು. ಇಂಥ ಗೀತೆಗಳ ಸತ್ತ್ವವನ್ನು ಹೀರಿ ಬೆಳೆದ ಬೇಂದ್ರೆಯವರಂಥ ಕವಿಗಳೇ ಈ ಗೀತೆಗಳ ದೊಡ್ಡ ಪ್ರಸಾರಕರಾಗಿ ತಮ್ಮ ಕವಿತೆಗಳಿಗೂ ಜಾನಪದ ಚೈತನ್ಯವನ್ನೇ ತುಂಬಿ ಕನ್ನಡ ಕಾವ್ಯಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ಎಸಗಿದರು.

1933ರ ಅವಧಿಯಲ್ಲೇ ಪ್ರಕಟವಾದ ವಿಠೋಬ ವೆಂಕಟನಾಯಕ ತೊರ್ಕೆಯವರ ಹಳ್ಳಿಯ ಹಾಡುಗಳು ಕಿರುಹೊತ್ತಗೆ ಕಾಲದೃಷ್ಟಿಯಿಂದ ಹಾಗೂ ಪ್ರಾದೇಶಿಕ ದೃಷ್ಟಿಯಿಂದ ಗಮನಾರ್ಹವಾಗಿದೆ. ಉತ್ತರ ಕನ್ನಡ ಜಿಲ್ಲೆಯ ನೂರೈವತ್ತು ತ್ರಿಪದಿಗಳನ್ನು ಈ ಸಂಕಲನ ದೊರಕಿಸಿ ಕೊಡುತ್ತದೆ.

ಉತ್ತರ ಕರ್ನಾಟಕದಲ್ಲಿ ಹಲಸಂಗಿ ಸೋದರರು ಜನಪದಗೀತೆ, ಲಾವಣಿಗಳ ಶ್ರೇಷ್ಠ ಮಟ್ಟದ ಸಂಕಲನಗಳನ್ನು ಹೊರತರುತ್ತಿರುವಾಗ ಹಳೆಯ ಮೈಸೂರು ಭಾಗದಲ್ಲಿಯೂ ಈ ಯಾವ ಪ್ರಭಾವಕ್ಕೂ ಒಳಗಾಗದೆ ಜಾನಪದ ಸಂಗ್ರಹಕಾರ್ಯ ನಡೆಯುತ್ತಿತ್ತು. 1933ರಲ್ಲೇ ಪ್ರಕಟವಾದ ಅರ್ಚಕ ಬಿ. ರಂಗಸ್ವಾಮಿಯವರ ಹುಟ್ಟಿದ ಹಳ್ಳಿ–ಹಳ್ಳಿಯ ಹಾಡು ಅನೇಕ ದೃಷ್ಟಿಗಳಿಂದ ಕನ್ನಡದ ಇತರ ಸಂಕಲನಗಳಿಗಿಂತ ಮೇಲಾದ ಕೃತಿಯೆನಿಸುತ್ತದೆ. ಜಾನಪದದ ಯಾವ ಸ್ಪಷ್ಟ ಕಲ್ಪನೆಯೂ ಇಲ್ಲದೆ, ಆದರೂ ತಮ್ಮ ಹುಟ್ಟೂರಿನ ಜೀವಂತ ಸಂಸ್ಕೃತಿಗೆ ಮಾರುಹೋಗಿ, ವಿಶ್ವಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನವೊಂದರಿಂದ ಪ್ರಭಾವಿತರಾಗಿ ಅರ್ಚಕ ರಂಗಸ್ವಾಮಿಯವರು ಹುಟ್ಟಿದ ಹಳ್ಳಿಯ ಸಮಸ್ತ ವಿವರಗಳನ್ನೂ ತಮ್ಮ ಕೃತಿಯಲ್ಲಿ ಸಂಗ್ರಹಿಸಿ ನೀಡಿದ್ದಾರೆ. ಜಾನಪದದ ಎಲ್ಲ ಅಂಗಗಳೂ ಈ ಕೃತಿಯಲ್ಲಿ ಅಳವಟ್ಟಿವೆ. ಊರಿನ ವಿವರ, ಜನ ಜೀವನ ಅಲ್ಲಿಯ ಐತಿಹ್ಯಗಳು, ಪುರಾಣಗಳು, ಕಥೆಗಳು, ಗೀತೆಗಳು, ಲಾವಣಿಗಳು, ಮಾತಿನ ರೀತಿ, ಗಾದೆಗಳ ವೈಖರಿ, ಸಂಪ್ರದಾಯ, ಆಚಾರ, ನಡೆ, ನುಡಿ, ನಾಟಕ, ನೃತ್ಯ ಹೀಗೆ ಯಾವ ವಿವರವನ್ನೂ ಬಿಡದೆ ಒಂದು ಊರಿನ ಆತ್ಮಕಥೆಯನ್ನೇ ಈ ಕೃತಿಯಲ್ಲಿ ನೀಡಿದ್ದಾರೆ. ಅತ್ಯುನ್ನತ ಸಾಂಸ್ಕೃತಿಕ ಆವರಣದಲ್ಲಿ ಆದರ್ಶಜೀವನವನ್ನು ನಡೆಸುತ್ತ ನ್ಯಾಯ, ನಿಷ್ಠೆ, ಸತ್ಯ, ಧರ್ಮಗಳ ತಳಹದಿಯ ಮೇಲೆ ಗ್ರಾಮಾಂತರ ಜೀವನ ಎಂಥ ನೆಮ್ಮದಿ, ಎಂಥ ಸಂತೃಪ್ತಿಯನ್ನು ಕಂಡಿತ್ತು ಎಂಬುದರ ಹೃದಯಂಗಮ ಚಿತ್ರಣವನ್ನು ರಂಗಸ್ವಾಮಿಯವರು ತಮ್ಮ ಕೃತಿಯಲ್ಲಿ ನೀಡಿದ್ದಾರೆ. ಅಪಾರ ಸಂಖ್ಯೆಯ ದೇವರ ಪದಗಳೂ ಕೋಲಾಟದ ಪದಗಳೂ ಲಾವಣಿಗಳೂ ಗಾದೆಗಳೂ ಈ ಕೃತಿಯಲ್ಲಿ ಸಂಕಲಿತವಾಗಿವೆ. ಇಷ್ಟಿದ್ದರೂ ಈ ಕೃತಿ ಹಲವು ಕಾರಣಗಳಿಂದ ಸಾಕಷ್ಟು ಪ್ರಚಾರವನ್ನು ಪಡೆಯದೆ ಅಜ್ಞಾತವಾಗಿ ಉಳಿದುಹೋಯಿತು. ಇದರ ಮಾದರಿಯನ್ನನುಸರಿಸಿ ಮುಂದಿನ ಸಂಗ್ರಾಹಕರು ತಮ್ಮ ಸಂಗ್ರಹಗಳ ವ್ಯಾಪಕತೆಯನ್ನು ಹೆಚ್ಚಿಸಿಕೊಂಡು ಇನ್ನೂ ಸಾರ್ಥಕ ಕೃತಿಗಳನ್ನು ಹೊರತರುವ ಸಾಧ್ಯತೆ ತಪ್ಪಿಹೋಯಿತು.

1930–40ರ ಅವಧಿಯಲ್ಲಿ ಜನಪದ ಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ಕೆಲಸಮಾಡಿದ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಬಿ. ಎನ್. ರಂಗಸ್ವಾಮಿಯವರೂ ಒಂದೊಂದು ಉತ್ತಮ ಸಂಕಲನಗಳನ್ನೂ ಹೊರತಂದಿದ್ದಾರೆ. ಗೋರೂರರ ಹಳ್ಳಿ ಹಾಡುಗಳು (1938), ರಂಗಸ್ವಾಮಿಯವರ ಹಳ್ಳಿಯ ಪದಗಳು (1940) ಗರತಿಯ ಮಾಡಿನ ಮಾದರಿಯಲ್ಲೇ ಹೊರಬಂದ ಕೃತಿಗಳು. ಹಳ್ಳಿಯ ಹಾಡುಗಳು ಹೆಚ್ಚು ವಿಸ್ತಾರವಾದ, ವೈವಿಧ್ಯಪೂರ್ಣವಾದ ಕೃತಿ. ಹಾಸನ, ಮೈಸೂರು, ಮಂಡ್ಯ ಹಾಗೂ ಕೋಲಾರ ಜಿಲ್ಲೆಗಳ ಸಾಹಿತ್ಯ ಈ ಕೃತಿಗಳಲ್ಲಿ ಲಭ್ಯವಾಗುತ್ತದೆ.

ಮಾನವಮಿ ಸಂಪ್ರದಾಯಕ್ಕೆ ಸೇರಿದ ಚೌಪದಗಳ ಸಂಕಲವೊಂದನ್ನು ಇಲ್ಲಿ ಹೆಸರಿಸಬಹುದು. ಹರಕೆ ಪದಗಳನ್ನು ಹೇಳಿಕೊಂಡು ಶಾಲೆಯ ಮಕ್ಕಳು ತಮ್ಮ ಅಯ್ಯಗಳ ಜೊತೆ ಮಾನವಮಿಯ ಕಾಲದಲ್ಲಿ ಊರಾಡಲು ಹೋಗುತ್ತಿದ್ದ ಸಂಪ್ರದಾಯ ಕನ್ನಡ ನಾಡಿನಲ್ಲೆಲ್ಲ ಪ್ರಚಾರದಲ್ಲಿತ್ತು. ಆ ಸಂಪ್ರದಾಯಕ್ಕೆ ಸೇರಿದ ಹಾಡುಗಳು ಹೆಚ್ಚಾಗಿ ಕಂಠಸ್ಥ ಸಂಪ್ರದಾಯದಲ್ಲೆ ಲಭ್ಯವಾಗುತ್ತವೆ. ಯಾರೋ ಪ್ರೌಢಕವಿಯೊಬ್ಬ ಈ ಹಾಡುಗಳನ್ನು ಕಲೆಹಾಕಿ, ಸಂಸ್ಕರಿಸಿ, ವಿಸ್ತರಿಸಿ ರಚಿಸಿದ ಗ್ರಂಥವೊಂದನ್ನು ಎನ್. ಅನಂತರಂಗಾಚಾರ್ಯರು ಮಾನವಮಿಯ ಚೌಪದ (1940) ಎಂಬ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವ ಜಾನಪದ ಸಂಗ್ರಹಗಳಲ್ಲಿ ಮತಿಘಟ್ಟ ಸೋದರರ ನಾಡಪದಗಳು ಎಂಬ ಸಂಕಲನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಗಾತ್ರದ ದೃಷ್ಟಿಯಿಂದಲೂ ವೈವಿಧ್ಯದ ದೃಷ್ಟಿಯಿಂದಲೂ ಸಂಪಾದನೆಯ ದೃಷ್ಟಿಯಿಂದಲೂ ಈ ಸಂಕಲನ ಇತರ ಸಂಗ್ರಹಗಳಿಗಿಂತ ಮೇಲೆ ನಿಲ್ಲುತ್ತದೆ. ಬಯಲುನಾಡಿನ, ಮಲೆನಾಡು ಸೆರಗಿನ ಗೀತೆಗಳನ್ನು ಇಲ್ಲಿ ಕ್ರಮಬದ್ಧವಾಗಿ ಅಳವಡಿಸಲಾಗಿದೆ. ಜನಪದಗೀತೆ ಸಂಪ್ರದಾಯಗಳನ್ನೆಲ್ಲ ಗುರುತಿಸಿ, ಆ ಹಿನ್ನಲೆಯಲ್ಲಿ ಸಂಗ್ರಹಿಸಿದ ಹಾಡುಗಳನ್ನು ಸೂಕ್ತವಾಗಿ ವಿಭಜಿಸಿ, ಸಾಕಷ್ಟು ವಿವರವಾಗಿ ಟಿಪ್ಪಣಿಗಳನ್ನೂ ಒದಗಿಸಲಾಗಿದೆ. ಜನಪದ ಗೀತೆಗಳ ಮೂಲಮಟ್ಟುಗಳನ್ನು ಕಾಪಾಡಿಕೊಳ್ಳುವ ವೈಜ್ಞಾನಿಕ ದೃಷ್ಟಿಯನ್ನು ಈ ಸಂಕಲನದಲ್ಲಿ ಮಾತ್ರ ಕಾಣಬಹುದು. ಕೋಲಾಟದ ಪದಗಳು, ಉತ್ತರದೇವಿ ಹಾಗೂ ಇತರ ಕಥೆಗಳು, ತಿಂಗಳ ಮಾನವ ಪದಗಳು ಈ ಸಂಕಲನದ ಕೆಲವು ಉತ್ಕೃಷ್ಟ ಗೀತೆಗಳು. ಬ್ರಾಹ್ಮಣ ಸಮಾಜದ ಕಂಠಸ್ಥ ಸಂಪ್ರದಾಯದ ಹಾಡುಗಳನ್ನು ಈ ಕೃತಿಯಲ್ಲಿ ಸೇರಿಸಿರುವುದು ಗಮನಾರ್ಹವಾಗಿದೆ. ಇಲ್ಲಿ ಬರುವ ಹಾಡುಗಳಲ್ಲಿ ಶಿಷ್ಟ ಹಾಗೂ ಜನಪದ ಕಾವ್ಯಸಂಪ್ರದಾಯಗಳ ಸೊಗಸಾದ ಸಾಮರಸ್ಯವನ್ನು ವಿಶೇಷವಾಗಿ ಗುರುತಿಸಬಹುದು. ಈ ಎರಡು ಕಾವ್ಯಸಂಪ್ರದಾಯಗಳ ನಡುವೆ, ಎರಡೂ ಕಡೆಯ ಉತ್ತಮ ಅಂಶಗಳನ್ನೂ ಸ್ವೀಕರಿಸಿ ಸಂಪ್ರದಾಯದ ಹಾಡುಗಳು ರೂಪುಗೊಂಡಿವೆ. ಇಂಥ ಹಾಡುಗಳ ಸಂಗ್ರಹದ ಕಡೆಗೆ ಈ ಕೃತಿ ಬೆಳಕು ಚೆಲ್ಲುತ್ತದೆ.

ನಾಡಪದಗಳು ಪ್ರಕಟಣೆಯೊಡನೆ ಕನ್ನಡ ಜನಪದ ಗೀತೆಗಳ ಸಂಗ್ರಹ ಒಂದು ಘಟ್ಟವನ್ನು ಮುಟ್ಟಿ ಅತ್ಯುತ್ತಮ ಗೀತಸಾಹಿತ್ಯ ಸ್ವಾತಂತ್ರ್ಯ ಪೂರ್ವ ಸಂಕಲನಗಳಲ್ಲಿ ಲಭ್ಯವಾಗುವಂತಾದುದರ ಜೊತೆಗೆ, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕಗಳ ಜನಪದಗೀತೆಗಳ ಸಾಮಾನ್ಯ ಸ್ವರೂಪದ ಪರಿಚಯವೂ ಅಭ್ಯಾಸಿಗಳ ಪಾಲಿಗೆ ಒದಗುವಂತಾಯಿತು. ಸ್ತ್ರೀಯರ ಹಾಡುಗಳೇ ಈ ಸಂಕಲನಗಳಲ್ಲಿ ಹೆಚ್ಚಾಗಿ ಕಂಡರೂ ಕೋಲಾಟ ಹಾಗೂ ಲಾವಣಿಸಂಪ್ರದಾಯ ಮುಂತಾದ ಕಡೆಗಳಲ್ಲಿ ಪುರುಷರ ಸಾಹಿತ್ಯವನ್ನೂ ಗುರುತಿಸಬಹುದು. ಉತ್ತಮ ವಿದ್ವಾಂಸರೂ ಪ್ರತಿಭಾವಂತ ಸಾಹಿತಿಗಳೂ ಸಂಪಾದನ ಕಾರ್ಯದಲ್ಲಿ ಆಸಕ್ತಿಯನ್ನು ತೋರಿದುದರಿಂದ ಬಹುಮಟ್ಟಿಗೆ ಎಲ್ಲ ಸಂಕಲನಗಳೂ ಉತ್ತಮವಾಗಿಯೇ ಪ್ರಕಟವಾಗಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮತಿಘಟ್ಟ ಕೃಷ್ಣಮೂರ್ತಿಗಳನ್ನು ಹೊರತು ಉಳಿದವರಾರೂ ಸಂಪೂರ್ಣವಾಗಿ ಜಾನಪದ ಕ್ಷೇತ್ರಕ್ಕೆ ತಮ್ಮ ಪೂರ್ಣ ಕಾಲವನ್ನು ವಿನಿಯೋಗಿಸಿದವರಲ್ಲ. ಹೀಗಾಗಿ ಒಬ್ಬೊಬ್ಬರು ಒಂದೊಂದೇ ಸಂಕಲನವನ್ನು ಪ್ರಕಟಿಸಿ ಹಿಂದೆ ಸರಿದರು. ಆದರೆ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ, ಅಧ್ಯಯನಗಳಿಗೆ ತಮ್ಮ ಸಮಗ್ರ ಬದುಕನ್ನೇ ಮೀಸಲಿಟ್ಟು ಶ್ರಮಿಸುವ ನಿಷ್ಠೆಯನ್ನು ಮೆರೆದ ಕೆಲವರನ್ನಾದರೂ ಗುರುತಿಸಬಹುದು. ಗದ್ಗೀಮಠ ಅವರು ಇಂಥವರಲ್ಲಿ ಅಗ್ರಗಣ್ಯರು.

1950ರ ಈಚೆಗೆ ಗದ್ಗೀಮಠರ ಸಾಹಸದ ಫಲವಾಗಿ ಉತ್ತರ ಕರ್ನಾಟಕದ ಹೊಸ ಹೊಸ ಜನಪದ ಗೀತಸಂಪ್ರದಾಯಗಳು ಪರಿಚಯವಾಗತೊಡಗಿದವು. ಕ್ಷೇತ್ರಕಾರ್ಯದಲ್ಲಿ ಅಪಾರ ಉತ್ಸಾಹವನ್ನು ತೋರಿದ ಶ್ರೀಯುತರು ಹತ್ತಾರು ವರ್ಷಗಳ ತಮ್ಮ ಸಂಗ್ರಹಯಾತ್ರೆಯ ಫಲವಾಗಿ ಅಪಾರ ಸಾಹಿತ್ಯ ರಾಶಿಯನ್ನು ಕಲೆಹಾಕಿದರು. ಜನಪದ ಸಂಪ್ರದಾಯಗಳ ಹತ್ತಿರದ ಪರಿಚಯ ಪಡೆದುಕೊಂಡರು. ಜನಪದ ಗೀತೆಗಳನ್ನು ಹಾಡುವುದರಲ್ಲಿ ಹೆಸರಾದ ಮನೆತನದಲ್ಲೇ ಬಂದವರಾದ್ದರಿಂದ ಅವರು ಸಹಜವಾಗಿ ಜನಪದ ಸಾಹಿತ್ಯದ ಪ್ರಾದೇಶಿಕ ಹಿನ್ನೆಲೆಯನ್ನು ಸಮರ್ಥವಾಗಿ ಪರಿಚಯ ಮಾಡಿಕೊಡಲು ಶಕ್ತರಾದರು. ಅವರ ಪ್ರೌಢಪ್ರಬಂಧ ಕನ್ನಡ ಜಾನಪದ ಗೀತೆಗಳು ಉತ್ತರ ಕರ್ನಾಟಕದ ಎಷ್ಟೋ ಅಜ್ಞಾತ ಗೀತಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲುತ್ತದೆ. ತಮ್ಮ ಪ್ರಬಂಧದ ಉದ್ದಕ್ಕೂ ಅವರು ಉಲ್ಲೇಖಿಸಿರುವ ಅಪಾರ ಸಾಹಿತ್ಯದ ಪರಿಶೀಲನೆಯಿಂದ ಶ್ರೀಯುತರ ಸಂಗ್ರಹ ಕಾರ್ಯದ ವ್ಯಾಪಕತೆಯನ್ನು ಅರಿಯಬಹುದಾಗಿದೆ. ಅತ್ಯಂತ ವಿಸ್ತಾರವಾದ ಲಾವಣಿಗಳನ್ನು ಸಂಗ್ರಹಿಸಿದವರಲ್ಲಿ ಗದ್ಗೀಮಠ ಅವರು ಮೊದಲಿಗರು. ಶಿವಶರಣರಿಗೆ ಸಂಬಂಧಿಸಿದ ಕಥೆಗಳೂ ಅರ್ಜುನ ಜೋಗಿಯ ಹಾಡಗಬ್ಬ ಮುಂತಾದವೂ ಕನ್ನಡ ಜನಪದ ಖಂಡಕಾವ್ಯಗಳ ಶ್ರೇಷ್ಠ ಪರಂಪರೆಯ ಕಡೆ ನಮ್ಮ ಆಸಕ್ತಿಯನ್ನು ಸೆಳೆಯುತ್ತವೆ.

1952ರಲ್ಲಿ ಪ್ರಕಟವಾದ ಗದ್ಗೀಮಠ ಅವರ ನಾಲ್ಕು ನಾಡಪದಗಳು ಉತ್ತರ ಕರ್ನಾಟಕದ ಹಂತಿಯ ಪದಗಳ ಒಂದು ಶ್ರೇಷ್ಠ ಸಂಕಲನ. ಜಿಜ್ಜಮಹಾದೇವಿ. ಬೇಡರ ಕನ್ನಯ್ಯ, ಕೋಳೂರು ಕೊಡಗೂಸು, ಗೊಲ್ಲಾಳ ಮುಂತಾದವರ ಕಥೆಗಳನ್ನು ನಿರೂಪಿಸುವ ಈ ಜನಪದ ಖಂಡಕಾವ್ಯಗಳು ಜನಪದ ಸಂಪ್ರದಾಯದಲ್ಲಿ ಶಿವಶರಣರ ಕಥೆಗಳ ಒಂದು ಉನ್ನತ ಪರಂಪರೆಯ ಕಡೆ ಬೆರಳುಮಾಡಿ ತೋರುತ್ತವೆ. ಶಿಷ್ಟಸಂಪ್ರದಾಯದ ಹಾಗೂ ಜನಪದ ಸಂಪ್ರದಾಯದ ಇಂಥ ಕಥಾಸಾಹಿತ್ಯದ ತೌಲನಿಕ ಅಧ್ಯಯನಕ್ಕೆ ಗದ್ಗೀಮಠರ ಸಂಗ್ರಹಗಳು ಉತ್ತಮ ಸಾಮಗ್ರಿಯನ್ನು ದೊರಕಿಸಿ ಕೊಡುತ್ತವೆ.

ಕಂಥಿಯ ಪದಗಳು ಗದ್ಗೀಮಠ ಅವರ ಜನಪದ ಭಕ್ತಿಗೀತೆಗಳ ಸಾಲಿನಲ್ಲಿ ಗುರುತಿಸಿದ ಹೊಸ ಸಂಪ್ರದಾಯವನ್ನೂ ಆ ಸಂಬಂಧವಾದ ಗೀತೆಗಳನ್ನೂ ಒಳಗೊಂಡಿದೆ. ಜನತಾಗೀತೆಗಳು ಸ್ವಾತಂತ್ರ್ಯ ಪೂರ್ವ ಜನಪದ ಗೀತೆಸಂಕಲನಗಳ ನೆನಪನ್ನು ತರುವ ಒಂದು ಉತ್ತಮ ಬಿಡಿಹಾಡುಗಳ ಸಂಕಲನ. ಇದರಲ್ಲಿಯೂ ಗದ್ಗೀಮಠ ಹಾಡುವ ಸಂಪ್ರದಾಯದ ಹಿನ್ನಲೆಯಲ್ಲಿಯೇ ಅವನ್ನು ನೀಡಿದ್ದಾರೆ.

ಲೋಕಗೀತೆಗಳು ಗದ್ಗೀಮಠ ಸಂಕಲನಗಳಲ್ಲಿ ಅತ್ಯಂತ ಗಮನಾರ್ಹ ಸಂಕಲನ. ಕೋಲಾಟ ಹಾಗೂ ವಿವಾಹಸಂಬಂಧ ಗೀತೆಗಳನ್ನು ಈ ದೊಡ್ಡ ಸಂಕಲನದಲ್ಲಿ ನೀಡಿರುವ ಶ್ರೀಯುತರು ಆ ಸಂಪ್ರದಾಯಗಳ ಉತ್ತಮ ಪರಿಚಯವನ್ನು ಒದಗಿಸಿದ್ದಾರೆ.

ಕುಮಾರರಾಮನ ದುಂದುಮೆ ಐತಿಹಾಸಿಕ ವಸ್ತುವನ್ನೊಳಗೊಂಡ ಒಂದು ಉತ್ತಮ ಜನಪದ ಖಂಡಕಾವ್ಯ.

ಗದ್ಗೀಮಠ ಅನಿರೀಕ್ಷಿತ ಮರಣದಿಂದಾಗಿ ಕನ್ನಡ ಜಾನಪದ ಕ್ಷೇತ್ರ ತುಂಬ ನಷ್ಟವನ್ನನುಭವಿಸಿತು. ಅವರಲ್ಲಿದ್ದ ಅಪಾರ ಅಪ್ರಕಟಿತ ಸಾಹಿತ್ಯ ಬೆಳಕು ಕಾಣದೆಯೇ ಉಳಿದುಹೋಯಿತು. ಆ ಸಾಹಿತ್ಯ ಪ್ರಕಟವಾಗುವ ಅವಕಾಶ ಬಂದರೂ ಅದನ್ನು ಉತ್ತಮ ರೀತಿಯಲ್ಲಿ ಸಂಪಾದಿಸುವ ಸಾಮರ್ಥ್ಯ ಅನೇಕ ವರ್ಷಗಳ ಕ್ಷೇತ್ರ ಕಾರ್ಯದ ಅನುಭವದಿಂದ ದಕ್ಕಬೇಕಾದುದು.

1955ರಲ್ಲಿ ಉತ್ತರ ಕರ್ನಾಟಕದ ಮತ್ತೊಂದು ಪ್ರಾತಿನಿಧಿಕ ಕೃತಿ ಗರತಿಯರ ಮನೆಯಿಂದ–ಎಂಬುದು ಪ್ರಕಟವಾಯಿತು. ಇದರ ಸಂಪಾದಕರಾದ ಈಶ್ವರಚಂದ್ರ ಚಿಂತಾಮಣಿ ಬಿಜಾಪುರ ಜಿಲ್ಲೆಯ ಗರತಿಯರ ಪದಗಳನ್ನೂ ಶಿಶುಪ್ರಾಸಗಳನ್ನೂ ಒಗಟುಗಳನ್ನೂ ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಪ್ರಥಮ ಬಾರಿಗೆ ಶಿಶುಪ್ರಾಸಗಳನ್ನು ಇಲ್ಲಿ ಕಾಣಬಹುದು. 1953ರಲ್ಲಿ ಪ್ರಕಟವಾದ ಕರ್ನಾಟಕ ಜಾನಪದ ಗೀತೆಗಳು ಆರ್. ಎಸ್. ಪಂಚಮುಖಿಯವರ ಸಂಪಾದಕತ್ವದಲ್ಲಿ ಹೊರಬಂದ ಮತ್ತೊಂದು ಶ್ರೇಷ್ಠ ಸಂಕಲನ. ಉತ್ತರ ಕರ್ನಾಟಕ ಹಾಗೂ ಕಾರವಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ಸಂಗ್ರಹಿಸಿದ ಹಾಡುಗಳು ಇಲ್ಲಿ ಸಂಕಲಿತವಾಗಿವೆ. ಜನಪದ ಗೀತೆಗಳ ಪ್ರಕಟಣೆಯಲ್ಲಿ ಯಾವ ಆಯ್ಕೆಯನ್ನೂ ಮಾಡದೆ, ಬೇರೆ ಬೇರೆ ಅಭ್ಯಾಸ ದೃಷ್ಟಿಗೆ ಪೂರಕವಾಗುವಂತೆ ಈ ಸಂಕಲನದಲ್ಲಿ ಹಾಡುಗಳನ್ನು ನೀಡಿರುವ ಕ್ರಮ ಅಭಿನಂದನೀಯ. ಜಾನಪದ ಸಂಶೋಧಕರಿಗೆ ಇಂಥ ಸಂಕಲನಗಳಲ್ಲಿ ಲಭ್ಯವಾಗುವ ಸಾಹಿತ್ಯ ಹೆಚ್ಚು ಅಧಿಕೃತವಾದುದು ಎಂಬ ವಿಶ್ವಾಸ ಮೂಡುತ್ತದೆ. ಸ್ತುತಿಪದಗಳು, ಡೊಳ್ಳಿನ ಪದಗಳು, ಹಂತಿಯ ಪದಗಳು, ಬೀಸುವ ಪದಗಳು ಮುಂತಾದ ಶೀರ್ಷಿಕೆಯ ಕೆಳಗೆ ಲಭ್ಯವಾಗುವ ಹಾಡುಗಳ ಜೊತೆಗೆ ಅನೇಕ ಲಾವಣಿಗಳು ಕೂಡಿಕೊಂಡು ಬರುತ್ತವೆ. ಆಯಾ ಪ್ರಾದೇಶಿಕ ಹಿನ್ನೆಲೆಯಲ್ಲಿ ಹಾಡುಗಳನ್ನು ನೀಡಿರುವ ಕ್ರಮವೂ ಉಚಿತವಾಗಿ ತೋರುತ್ತದೆ. ಮೊದಲ ಬಾರಿಗೆ ಹಲವು ಮಂದಿ ಸಂಶೋಧಕರು ಕೈಗೊಂಡ ಸಂಗ್ರಹದ ಒಂದು ವಿಶಿಷ್ಟ ಸಂಕಲನವನ್ನು ಇಲ್ಲಿ ಕಾಣಬಹುದಾಗಿದೆ.

ಉತ್ತರ ಕರ್ನಾಟಕದ ಸಂಕಲನಗಳಲ್ಲಿ ವಿಶೇಷ ಮನ್ನಣೆಗೆ ಪಾತ್ರವಾದ ಮತ್ತೊಂದು ಕೃತಿ ದೊಡ್ಡ ಭಾವೆಪ್ಪ ಮೂಗಿಯವರ ಕಿತ್ತೂರು ಕಾಳಗ, ಕಿತ್ತೂರಿಗೆ ಸಂಬಂಧಿಸಿದ ಸಂಶೋಧನೆಯಲ್ಲಿ ಉತ್ತಮ ಸಾಧನೆಯನ್ನು ತೋರಿರುವ ಮೂಗಿಯವರು ಆ ಸಂಬಂಧವಾದ ಲಾವಣಿಗಳನ್ನೂ ಒಂದೆಡೆ ಕಲೆಹಾಕಿರುವುದು ಅವರ ಜಾನಪದ ಪ್ರೇಮಕ್ಕೆ ದ್ಯೋತಕವಾಗಿದೆ. ಐತಿಹಾಸಿಕ ಸಂಶೋಧನೆಯ ಸಮಗ್ರತೆಗೆ ಇಂಥ ಲಾವಣಿಗಳೂ ಪೂರಕವಾಗಬಲ್ಲವು ಎಂಬ ಅವರ ವಿವೇಚನಾಪರತೆಯೂ ಗಮನಾರ್ಹವಾದುದೇ. ಕನ್ನಡ ಐತಿಹಾಸಿಕ ಲಾವಣಿಗಳ ಸಾಲಿನಲ್ಲಿ ಮೂಗಿಯವರ ಈ ಸಂಕಲನಕ್ಕೆ ಒಂದು ವಿಶೇಷವಾದ ಸ್ಥಾನವಿದೆ.

ಫ್ಲೀಟರ ಅನಂತರ ಇಂಥ ವಿಶಿಷ್ಟ ಲಾವಣಿಗಳನ್ನು ಕಲೆಹಾಕಿದವರು ಇವರೊಬ್ಬರೇ ಎನ್ನಬಹುದು.

ಹಳೆಯ ಮೈಸೂರು ಭಾಗವನ್ನು ದಕ್ಷಿಣ ಕರ್ನಾಟಕವೆಂದು ಜಾನಪದ ದೃಷ್ಟಿಯಿಂದ ವಿಭಜನೆ ಮಾಡಿಕೊಂಡು ಈ ಪ್ರದೇಶದ ಸಂಕಲನಗಳನ್ನು ಪರಿಶೀಲಿಸಬಹುದು. 1950–60ರ ಅವಧಿಯಲ್ಲಿ ಮತಿಘಟ್ಟ ಕೃಷ್ಣಮೂರ್ತಿಯವರ ಅನಂತರ ಈ ಕ್ಷೇತ್ರದಲ್ಲಿ ಕರಾಕೃ. ಗೊ.ರು. ಚೆನ್ನಬಸಪ್ಪ, ಕರೀಂಖಾನ್, ಸ. ಚ. ಮಹಾದೇವ ನಾಯಕ, ಕೆ.ವಿ. ಲಿಂಗಪ್ಪ, ಚಂದ್ರಶೇಖರನಾಥ್, ಕೆ.ವಿ. ಸುಬ್ಬಣ್ಣ, ಶೇಷಭಟ್ಟ ಹಾಗೂ ಸುಂದರೇಶ್ವರ ಮುಂತಾದ ಹೆಸರುಗಳು ಮುಖ್ಯವಾದುವು. ಇವರಲ್ಲಿ ಹತ್ತಾರು ಸಂಕಲನಗಳನ್ನು ಹೊರತಂದವರೂ ಒಂದೊಂದೇ ಸಂಕಲನವನ್ನು ಪ್ರಕಟಿಸಿದವರೂ ಇದ್ದಾರೆ. ಪ್ರಾದೇಶಿಕ ಹಿನ್ನೆಲೆಯ ದೃಷ್ಟಿಯಿಂದ ಈ ಎಲ್ಲ ಸಂಕಲನಗಳನ್ನೂ ಮುಖ್ಯವೆನಿಸುತ್ತವೆ.

ಕೆ. ವಿ. ಲಿಂಗಪ್ಪನವರು ಮಲೆನಾಡಿನ ಜನಪದಗೀತೆಗಳನ್ನು ಸಂಗ್ರಹಿಸಿ ಎರಡು ಸಣ್ಣ ಸಂಕಲಗಳನ್ನು ಪ್ರಕಟಿಸಿದ್ದಾರೆ. ಅವರ ಸಂಕಲನದ ಉತ್ತರದೇವಿ ಈವರೆಗೆ ದೊರೆತ ಪಾಠಗಳಲ್ಲೆಲ್ಲ ಶ್ರೇಷ್ಠವಾಗಿರುವುದಲ್ಲದೆ ವಸ್ತುದೃಷ್ಟಿಯಿಂದ ಮೂಲಕಥೆಯ ಕಡೆ ಬೆರಳು ತೋರುವಂತಿದೆ. ಗೊ.ರು. ಚೆನ್ನಬಸಪ್ಪನವರು ಚಿಕ್ಕಮಗಳೂರು ಜಿಲ್ಲೆಯ ಬಯಲು ಪ್ರದೇಶದ ಹಾಡುಗಳನ್ನು ಸಂಕಲಿಸಿ ಮೂರು ಕೃತಿಗಳನ್ನು ಹೊರ ತಂದಿದ್ದಾರೆ. ಮೈದುನ ರಾಮಯ್ಯನ ಕಂಠಸ್ಥಸಂಪ್ರದಾಯದ ವಿಸ್ತಾರ ಖಂಡ ಕಾವ್ಯವನ್ನು ಮೊದಲ ಬಾರಿಗೆ ಪ್ರಕಟಿಸಿದ ಕೀರ್ತಿ ಇವರದು. ಕ.ಮ.ಶಿ. ಚಂದ್ರಶೇಖರಯ್ಯನವರು ಚೆನ್ನಗಿರಿಯ ಸುತ್ತಿನಲ್ಲಿ ಸಂಗ್ರಹಕಾರ್ಯವನ್ನು ನಡೆಸಿ ಹೊಸ ಪ್ರದೇಶವೊಂದರ ಹಾಡುಗಳನ್ನು ದೊರಕಿಸಿದ್ದಾರೆ. ಕರೀಂಖಾನರು ಹಾಸನ, ಕೊಡಗು, ತುಮಕೂರು ಜಿಲ್ಲೆಗಳ ಸಾಹಿತ್ಯವನ್ನು ಸಂಗ್ರಹಿಸಿ ಉತ್ತಮ ಸಂಕಲನಗಳನ್ನು ಹೊರತಂದಿದ್ದಾರೆ. ಜನಪದ ಗೀತೆಗಳ ಜನಪ್ರಿಯತೆಗೆ ದುಡಿದವರಲ್ಲಿ ಅವರು ಅಲ್ಲಲ್ಲಿ ಪ್ರಸಾರಕಾರ್ಯ ಕೈಗೊಂಡು ಗೀತೆಗಳನ್ನು ಮನಮುಟ್ಟುವಂತೆ ಹಾಡಿದ್ದಾರೆ ; ವ್ಯಾಖ್ಯಾನಿಸಿದ್ದಾರೆ. ಕೆ.ಆರ್. ಲಿಂಗಪ್ಪನವರ ಹೆಸರೂ ಕನ್ನಡ ನಾಡಿನ ಜನಪದ ಸಾಹಿತ್ಯ ಪ್ರಸಾರಕರ ಸಾಲಿನಲ್ಲಿ ಉಲ್ಲೇಖಾರ್ಹವಾದುದು. ಉತ್ತಮ ವಾಗ್ಮಿಗಳಾದ ಅವರು ಆಕರ್ಷಕ ರೀತಿಯಲ್ಲಿ ಜನಪದ ತ್ರಿಪದಿಗಳ ಅರ್ಥ ವೈಶಾಲ್ಯವನ್ನು, ಭಾವೋನ್ನತಿಯನ್ನು ನಿರೂಪಿಸಿ ಅಷ್ಟೇ ಮಧುರವಾಗಿ ಹಾಡಿತೋರಿಸುವ ಚಮತ್ಕಾರವನ್ನೂ ಪಡೆದವರು. ಅವರ ಮಾನವಮಿ ಪದಗಳು, ಕಂಠಸ್ಥಸಂಪ್ರದಾಯದ ಕೃತಿಯಾದುದರಿಂದ ಗಮನಾರ್ಹವಾಗಿದೆ.

ಕೆ. ವಿ. ಸುಬ್ಬಣ್ಣನವರ ಅವರು ನೀಡಿದ ದೀಪ–ಎಂಬ ಪುಸ್ತಕ ಜನಪದ ಗೀತೆಗಳನ್ನು ಲಾವಣಿಗಳನ್ನು ಕಾವ್ಯಾತ್ಮಕ ಗದ್ಯಚಿತ್ರಗಳ ಮೂಲಕ ಎಷ್ಟು ಸಮರ್ಥವಾಗಿ ಜನಪ್ರಿಯಗೊಳಿಸಬಹುದು ಎಂಬುದಕ್ಕೆ ಉತ್ತಮ ನಿದರ್ಶನವಾಗಿದೆ. ಅಲ್ಲದೆ ಮಲೆನಾಡಿನ ಅಂಟಿಕೆ ಪಂಟಿಕೆ ಸಂಪ್ರದಾಯದ ವಿಶೇಷ ಪರಿಚಯವನ್ನು ಈ ಕೃತಿ ಒದಗಿಸುತ್ತದೆ. ಎಲ್ಲದಕ್ಕಿಂತ ಮಿಗಿಲಾಗಿ ಸುಂದರ ಕಥನಗೀತೆಗಳನ್ನೂ ಬಿಡಿಹಾಡುಗಳನ್ನೂ ಶ್ರೀಯುತರು ಈ ಕೃತಿಗಳಲ್ಲಿ ಅಳವಡಿಸಿ ಸಂಕಲನ ದೃಷ್ಟಿಯಿಂದಲೂ ವಿಶೇಷ ಮನ್ನಣೆಗೆ ಪಾತ್ರರಾಗಿದ್ದಾರೆ. ಚಂದ್ರಶೇಖರನಾಥ ಸ್ವಾಮೀಜಿಯವರ ಶ್ರೀ ಆದಿ ಚುಂಚನಗಿರಿ ಜನಪದ ಗೀತೆಗಳು ಕನ್ನಡದ ಕೆಲವೇ ಶ್ರೇಷ್ಠ ಸಂಕಲನಗಳಲ್ಲಿ ಒಂದಾಗಿದೆ. ಒಂದು ಪುಣ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಲಭ್ಯವಾಗಬಹುದಾದ ಸಾಹಿತ್ಯವನ್ನೆಲ್ಲ ಕಲೆಹಾಕಿ, ಉತ್ತಮ ರೀತಿಯಲ್ಲಿ ವಿಭಜಿಸಿ, ಇಲ್ಲಿ ಹೊರತರಲಾಗಿದೆ. ಕನ್ನಡ ಜನಪದ ಗೀತೆಗಳಲ್ಲಿ ಭಕ್ತಿಗೀತೆಗಳು ಅತ್ಯುತ್ಕೃಷ್ಟ ಭಾವಗೀತೆಗಳಾಗಿ ಹೇಗೆ ಸತ್ತ್ವಯುತವಾಗಿವೆ ಎಂಬುದನ್ನು ಈ ಗ್ರಂಥ ಸಮರ್ಥವಾಗಿ ಪರಿಚಯಿಸುತ್ತದೆ.

ಸ. ಚ. ಮಹಾದೇವ ನಾಯಕರು ಮೈಸೂರು ಜಿಲ್ಲೆಯ ದಕ್ಷಿಣ ಹಾಗೂ ಪಶ್ಚಿಮ ಭಾಗದಲ್ಲಿ ಸಂಗ್ರಹ ಕಾರ್ಯವನ್ನು ಕೈಗೊಂಡು ಹಳ್ಳಿಯ ಹಾಡುಗಳು, ಜಾನಪದ ರಸಗಂಗೆ, ಸಂಪಿಗೆ ಅರಳಾವೆ–ಎಂಬ ಮೂರು ಕೃತಿಗಳನ್ನು ಹೊರತಂದಿದ್ದಾರೆ. ಕನ್ನಡನಾಡಿನ ದಕ್ಷಿಣ ಗಡಿಯ ವಿಶಿಷ್ಟ ಸಾಹಿತ್ಯದ ಸೊಗಸಾದ ಮಾದರಿಗಳನ್ನು ಈ ಕೃತಿಗಳಲ್ಲಿ ಕಾಣಬಹುದು. ಕೆಲವು ಹಾಡುಗಳು ಅಪೂರ್ಣವಾಗಿದ್ದರೂ ಸಂಪಾದನೆಯ ದೃಷ್ಟಿಯಿಂದ ಕೆಲವು ನ್ಯೂನತೆಗಳು ಕಂಡುಬಂದರೂ ಜಿಲ್ಲೆಯ ಅನೇಕ ಗೀತ ಸಂಪ್ರದಾಯಗಳ ಪ್ರಥಮ ಪರಿಚಯವನ್ನು ಒದಗಿಸುವುದರ ಮೂಲಕ ಮುಂದಿನ ಸಂಗ್ರಾಹಕರಿಗೆ ಈ ಕೃತಿಯ ಒಳ್ಳೆಯ ಮಾರ್ಗದರ್ಶನ ನೀಡುತ್ತವೆ.

ದಕ್ಷಿಣ ಕರ್ನಾಟಕದ ಜನಪದ ಗೀತೆಗಳ ಲಾವಣಿಗಳ ಪ್ರಮುಖ ಸಂಗ್ರಾಹಕರಲ್ಲಿ ಕರಾಕೃ ಅವರೂ ಒಬ್ಬರು. ಮಂಡ್ಯ, ಬೆಂಗಳೂರು, ಮೈಸೂರು, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಇವರು ಸಂಗ್ರಹಕಾರ್ಯವನ್ನು ನಡೆಸಿದ್ದರೂ ಚಿತ್ರದುರ್ಗ ಜಿಲ್ಲೆಯ ಸಂಗ್ರಹ ಗಣನೀಯವಾಗಿದೆ. ಇವರೂ ಪಿ.ಆರ್. ತಿಪ್ಪೇಸ್ವಾಮಿಯವರೂ ಜಿಲ್ಲೆಯಲ್ಲಿ ಅನೇಕ ಬಾರಿ ಪ್ರವಾಸ ಮಾಡಿ ಉತ್ತಮ ಸಾಹಿತ್ಯವನ್ನು ಸಂಗ್ರಹಿಸಿದ್ದಾರೆ. ಸಂಗ್ರಹಕಾರ್ಯದಲ್ಲಿ, ಸಂಪಾದನಾ ಸಾಮರ್ಥ್ಯದಲ್ಲಿ ಅ ಶಾಸ್ತ್ರೀಯತೆ ಪ್ರಧಾನವಾಗಿ ಕಂಡುಬಂದರೂ ಜನಪದ ಸಾಹಿತ್ಯ ಅಕಾಡೆಮಿಯ ಸಂಕಲನಗಳು ಬಾಹುಳ್ಯ ಮತ್ತು ವೈವಿಧ್ಯದ ದೃಷ್ಟಿಯಿಂದ ಕನ್ನಡ ಜಾನಪದ ಕ್ಷೇತ್ರದಲ್ಲಿ ಒಂದು ದಾಖಲೆಯಾಗಿ ಉಳಿಯುತ್ತವೆ. ಈ ಅಕಾಡೆಮಿಯ ಇಪ್ಪತ್ತೈದು ಸಂಕಲನಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದರೆ ಕೃತಿಯಿಂದ ಕೃತಿಗೆ ಆವೃತ್ತಿಯಿಂದ ಆವೃತ್ತಿಗೆ ಅನೇಕ ದೋಷಗಳು ತಲೆಹಾಕಿರುವುದು ಕಾಣಬರುತ್ತದೆ. ಬೇರೆಯವರ ಹಿಂದಿನ ಸಂಕಲನಗಳಲ್ಲಿ ಪ್ರಕಟವಾದ ಗೀತೆಗಳು ಯಥಾವತ್ತಾಗಿ ಇಲ್ಲಿ ಕಾಣಿಸಿಕೊಳ್ಳುವುದು, ಒಂದು ಸಂಕಲನದ ಹಾಡುಗಳು ಮತ್ತೊಂದು ಸಂಕಲನದಲ್ಲೂ ನುಸುಳಿಕೊಳ್ಳುವುದು, ಮೊದಲ ಆವೃತ್ತಿಗೂ ಎರಡನೆಯ ಆವೃತ್ತಿಗೂ ಶೀರ್ಷಿಕೆಯನ್ನುಳಿದು ಯಾವ ಸಂಬಂಧವೂ ಇಲ್ಲದಂತಾಗುವುದು. ಇಂಥ ಕೆಲವು ಪ್ರಮುಖ ದೋಷಗಳು ಆರಂಭದ ಸಂಕಲನಗಳಲ್ಲಿ ಕಾಣಿಸಿಕೊಂಡರೂ ಮುಂದಿನ ಸಂಕಲನಗಳು ಸಾಕಷ್ಟು ಉತ್ತಮಗೊಳ್ಳುತ್ತ ಹೋಗಿರುವುದನ್ನು ನೋಡಬಹುದು. ಜನಪದಸಾಹಿತ್ಯ ಅಕಾಡೆಮಿಯ ಸಂಕಲನಗಳನ್ನು ಐದು ಪ್ರಮುಖ ವಿಭಾಗಗಳಲ್ಲಿ ಹೆಸರಿಸಬಹುದು : 1 ಲಾವಣಿಗಳು, 2 ಸ್ಥಳಗೀತೆಗಳು, 3 ಕೋಲುಪದಗಳು, 4 ಮದುವೆಯ ಪದಗಳು, 5. ಇತರ ಹಾಡುಗಳು.

ಲಾವಣಿಗಳ ಸಂಕಲನಗಳಲ್ಲಿ ಜಾನಪದ ಕಥನಗೀತೆಗಳು ಎಂಬುದು ಗಣನೀಯ ಕೃತಿಯಾಗಿದೆ. ಮೂವತ್ತಕ್ಕೂ ಹೆಚ್ಚು ಲಾವಣಿಗಳನ್ನು ಒಳಗೊಂಡ ಈ ಕೃತಿ ಲಾವಣಿಗಳಿಗಾಗಿಯೇ ಮೀಸಲಾದ ಈ ಬಗೆಯ ಕೃತಿಗಳಲ್ಲಿ ವಿಸ್ತಾರವಾದದು. ಅನೇಕ ಕಡೆಯ ಹಾಡುಗಾರರಿಂದ ಸಂಗ್ರಹಿಸಿದ ಉತ್ತಮ ರಚನೆಗಳು ಇಲ್ಲಿ ಲಭ್ಯವಾಗುತ್ತವೆ. ಮಳೆರಾಯ ಮಾರ್ಥಣ್ಣು, ಹೊಂಗೇಲಿ ಈರಣ್ಣ ಮಡಿದ್ಹೋದ, ಬಾಲನಾಗಮ್ಮ, ಕೃಷ್ಣಕೊರವಂಜಿ–ಮುಂತಾದವು ಕೆಲವು ಶ್ರೇಷ್ಠ ಮಾದರಿಗಳು, ಕಾಳಿಂಗರಾಯ, ಹಾಡಿನಲ್ಲಿ ನಾಡಕಥೆಗಳು, ಮೈಲಾರಲಿಂಗ ಈರಬಡಪ್ಪ–ಮುಂತಾದ ಕೃತಿಗಳಲ್ಲಿಯೂ ಕೆಲವು ಉತ್ತಮ ಲಾವಣಿಗಳು ಕಾಣಸಿಗುತ್ತವೆ.

ಚೆನ್ನಿಗ ಚೆಲುವಯ್ಯ, ಶ್ರೀ ಆದಿಚುಂಚನಗಿರಿ ಎಂಬ ಎರಡು ಕೃತಿಗಳು ಸ್ಥಳಗೀತೆಗಳ ಸಂಕಲನಗಳಾಗಿವೆ. ಕೋಲುಮಲ್ಲಿಗೆ ಕೋಲೆ, ಹೆಣ್ಣು ಕೊಟ್ಟೇವು–ಈ ಎರಡು ಸಂಕಲನಗಳು ಪ್ರತ್ಯೇಕವಾಗಿ ಒಂದೊಂದು ವರ್ಗದ ಸಾಹಿತ್ಯವನ್ನೊಳಗೊಂಡ ಸುಂದರ ಸಂಕಲನಗಳು. ಒಂದೊಂದು ಸಂಪ್ರದಾಯದ ಸಮಗ್ರ ಗೀತೆಗಳನ್ನು ಒಂದೆಡೆ ಸಂಕಲ್ಪಿಸಿಕೊಡುವ ಉತ್ತಮ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಮಲ್ಲಿಗೆ ನಗುತಾವೆ, ಸಂಪಿಗೆ ಅರಳ್ಯಾವೆ–ಮುಂತಾದ ಇನ್ನೂ ಕೆಲವು ಉತ್ತಮ ಸಂಕಲನಗಳು ಈ ಮಾಲೆಯಲ್ಲಿ ಹೊರಬಂದಿವೆ.

ಜನಪದ ಸಾಹಿತ್ಯ ಅಕಾಡೆಮಿಯ ಸಂಕಲನಗಳು ಕನ್ನಡ ಜನಪದಗೀತೆಗಳ ವಿಸ್ತಾರವಾದ ಪ್ರಪಂಚವನ್ನು ಪರಿಚಯ ಮಾಡಿಕೊಡುವಂತಿದ್ದರೂ ಹಿನ್ನಲೆಯ ಸಂಪ್ರದಾಯಗಳ ವಿವೇಚನೆ ಹಾಗೂ ಟಿಪ್ಪಣಿಗಳಲ್ಲಿ, ಪಾಠ್ಯಾಂತರಗಳ ಆಯ್ಕೆಯಲ್ಲಿ ಶಾಸ್ತ್ರೀಯ ದೃಷ್ಟಿಯಿಲ್ಲದ್ದರಿಂದ ಅವುಗಳ ಪ್ರಯೋಜನ ಅಷ್ಟೂ ಅಷ್ಟು ಕಡಿಮೆಯಾಗಿದೆ. ಹಲಸಂಗಿ ಸೋದರರು, ಗೊರೂರರು, ಮತಘಟ್ಟ ಸೋದರರು ಗದ್ಗಿಮಠ–ಮುಂತಾದವರ ಕೃತಿಗಳ ಸಾಲಿನಲ್ಲಿ ಈ ಕೃತಿಗಳನ್ನು ಪರಿಶೀಲಿಸಿದಾಗ ಜಾನಪದದ ಸ್ಪಷ್ಟ ಕಲ್ಪನೆಯಿಲ್ಲದೆ, ಜನಪದ ಜೀವನದ ನಿಖರವಾದ ಅನುಭವ ವಿಸ್ತಾರವಿಲ್ಲದೆ, ಸಾಕಷ್ಟು ಪಾಂಡಿತ್ಯವಿಲ್ಲದೆ ಸಂಪಾದಿಸಿ, ಹೊರತಂದ ಯಾವ ಕೃತಿಯೂ ಉತ್ತಮ ಕಾಣಿಕೆಯಾಗಲಾರದು ಎಂಬ ಅಂಶ ಸ್ಪಷ್ಟವಾಗುತ್ತದೆ. ಆದರೂ ಇಲ್ಲಿರುವ ಅಪಾರ ಸಾಮಗ್ರಿ ಕೃತಿರೂಪದಲ್ಲಿ ದೊರೆಯುವಂತಾದುದರಿಂದ ಮುಂದಿನ ಸಂಪಾದನೆ ಹಾಗೂ ಸಂಶೋಧನೆಗಳಿಗೆ ತಕ್ಕಮಟ್ಟಿಗಾದರೂ ನೆರವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಅವರ ನೆನೆದೇವು (1960), ಜನಪದ ಖಂಡಕಾವ್ಯಗಳು (1967)–ಇವು ಜೀಶಂಪ ಅವರ ಗೀತ ಹಾಗೂ ಲಾವಣಿಗಳ ಎರಡು ಸಂಕಲನಗಳು. ಅವರ ನೆನೆದೇವು ಎಂಬುದು ಜನಪದ ಭಕ್ತಿಗೀತೆಗಳನ್ನೊಳಗೊಂಡ ಕೃತಿ. ತಿರುಪತಿ ತಿಮ್ಮಪ್ಪ ಮೇಲುಕೋಟೆ ಚೆಲುವರಾಯ, ಚುಂಚನಗಿರಿ ಭೈರವ ಮುಂತಾದ ಪ್ರಸಿದ್ಧ ದೈವಗಳ ಬಗೆಗೂ ಅನೇಕ ಗ್ರಾಮದೇವತೆಗಳ ಬಗೆಗೂ ಉತ್ತಮ ಗೀತೆಗಳು ಈ ಕೃತಿಯಲ್ಲಿ ಸಂಕಲಿತವಾಗಿವೆ. ಜನಪದ ಖಂಡಕಾವ್ಯಗಳು ಎಂಬುದು ಮಂಡ್ಯ, ತುಮಕೂರು ಜಿಲ್ಲೆಗಳಲ್ಲಿ ಸಂಗ್ರಹಿಸಿದ ಹಾಡ್ಗತೆಗಳ ಸಂಗ್ರಹ, ಹುಳಿಯಾರು ಕೆಂಚಮ್ಮ, ಈರೋಬಿ ಹಿರಿದಿಮ್ಮಿ–ಮುಂತಾದ ಉತ್ತಮ ಕಥನಗೀತೆಗಳು ಈ ಸಂಕಲನದಲ್ಲಿವೆ. ಇದರ ಜೊತೆಗೆ ಕರ್ನಾಟಕದ ಲಾವಣಿಕಾರರ ಹಾಡುಗಾರಿಕೆಯ ಸಂಪ್ರದಾಯಗಳನ್ನೆಲ್ಲ ಗುರುತಿಸಿ ಆಯಾ ಸಂಪ್ರದಾಯದ ಸಾಹಿತ್ಯವನ್ನೆಲ್ಲ ಇವರು ಸಂಗ್ರಹಿಸಿದ್ದಾರೆ.

1960–70ರ ಅವಧಿಯಲ್ಲಿ ಅಪಾರ ಸಂಖ್ಯೆಯ ಜನಪದ ಗೀತ ಸಂಕಲನಗಳು ಪ್ರಕಟವಾಗಿವೆ. ಅನೇಕ ಉತ್ಸಾಹಿ ತರುಣ ಸಂಗ್ರಾಹಕರು ಈ ಕ್ಷೇತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಜ್ಯೋತಿ ಹೊಸೂರ ಅವರ ಬೆರಸಿ ಇಟ್ಟೀನಬೆಲ್ಲ ನೆನಗಡಲಿ, ಕೆ. ನಾರಾಯಣ ಲಕ್ಷ್ಮೀ ನಾರಾಯಣ ಅವರ ತುಂಬೆ ಹೂವಿಟ್ಟು ಶರಣೆನ್ನಿ, ಚಂದ್ರಶೇಖರ ಐತಾಳರ ಕೈಲಿಯ ಕರೆದ ನೊರೆಹಾಲು, ಕೆ. ವಿರೂಪಾಕ್ಷಗೌಡ, ಕಲ್ಲೇಶ ಹಾಲೇಶ ಇಟಗಿ, ಪಿ. ಕರಿ ವೀರನಗೌಡರ ಹೊಲಮನಿ ಪದಗಳು, ಕೆ. ವಿರೂಪಾಕ್ಷಗೌಡ ಮತ್ತು ಮುದೇನೂರು ಸಂಗಣ್ಣನವರ ಹಳ್ಳಿಯ ಪದಗಳು, ಜಿ. ಎಸ್. ಭಟ್ಟ ಉಬರಡ್ಕ ಅವರ ಸಿರಿಗಂಧ ಸೂಸ್ಯಾವೆ, ಮುದೇನೂರು ಸಂಗಣ್ಣನವರ ನವಿಲು ಕುಣಿದಾವ. ಎಂ. ಸಿ. ವಸಂತ ಕುಮಾರ ಅವರ ಮಳಲಿ ಗಿಡ್ಡಮ್ಮ, ಕೋಲುಪದಗಳು, ಎಲ್. ಆರ್. ಹೆಗಡೆ ಅವರ ತಿಮ್ಮಕ್ಕನ ಪದಗಳು, ಡಿ. ಲಿಂಗಯ್ಯನವರ ಕೊಂತಿಪೂಜೆ, ಚಂದ್ರಶೇಖರ ಕಂಬಾರರ ಬಣ್ಣಿಸಿ ಹಾಡವ್ವ ನನ್ನ ಬಳಗ, ಕ್ಯಾತನಹಳ್ಳಿ ರಾಮಣ್ಣ ಅವರ ಐದು ಜನಪದ ಕಥನಗೀತೆಗಳು– ಇವು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರಕಟವಾಗಿರುವ ಕೆಲವು ಗಮನಾರ್ಹ ಸಂಕಲನಗಳಾಗಿವೆ.

ಬೆಳಗಾಂವಿ ಜಿಲ್ಲೆಯ ರಾಯಭಾಗ ಪ್ರದೇಶದ ಸಾಹಿತ್ಯವನ್ನು ಜ್ಯೋತಿ ಹೊಸೂರೂ ಬೆಳಗಾವಿ ಜಿಲ್ಲೆಯ ಅಕ್ಕತಂಗಿಯರಹಾಳ, ಘೋಡಗೇರಿ, ಗೋಕಾಕ ಮೊದಲಾದ ಕಡೆಗಳಲ್ಲಿ ಪ್ರಚಲಿತವಿರುವ ಕೆಲವು ಸುಂದರ ತ್ರಿಪದಿಗಳನ್ನು ಕಂಬಾರರೂ ಸಂಕಲಸಿ ಪ್ರಕಟಿಸಿದ್ದಾರೆ.

ಎಂ.ಸಿ. ವಸಂತಕುಮಾರ್ ಅವರು ಹಾಸನ ಸುತ್ತಿನಲ್ಲಿ ಸಂಗ್ರಹಕಾರ್ಯವನ್ನು ನಡೆಸುತ್ತಿದ್ದಾರೆ. ಅವರ ಮಳಲಿ ಗಿಡ್ಡಮ್ಮ ಎಂಬುದು ಗ್ರಾಮದೇವತೆಯೊಂದಕ್ಕೆ ಸಂಬಂಧಿಸಿದ ಗೀತೆಗಳನ್ನೊಳಗೊಂಡ ಒಂದು ಉತ್ತಮ ಸಂಕಲನ. ಅವರ ಕೋಲು ಪದಗಳು ಎಂಬುದರಲ್ಲಿ ಅಪೂರ್ವವಾದ ಕೋಲಾಟದ ಪದಗಳಿವೆ. ಜಿ. ಎಸ್. ಭಟ್ಟರ ಸಿರಿ ಗಂಧಸೂಸ್ಯಾವೆ ಎಂಬುದು ಕಿಕ್ಕೇರಿ ಕಡೆಯ ಗೀತೆಗಳ ಒಂದು ಒಳ್ಳೆಯ ಸಂಕಲನ. ಸಕಲೇಶಪುರದ ಕಾಫಿಯ ತೋಟದ ಕೂಲಿಯಾಳುಗಳಿಂದ ಈ ಹಾಡುಗಳನ್ನು ಸಂಗ್ರಹಿಸಲಾಗಿದೆ. ಬಳ್ಳಾರಿ ಕಡೆಯ ಹಾಡುಗಳು ವಿರೂಪಾಕ್ಷಗೌಡ ಹಾಗೂ ಮುದೇನೂರು ಸಂಗಣ್ಣನವರ ಸಂಕಲನಗಳಲ್ಲಿ ಬೆಳಕು ಕಂಡಿವೆ. ಎಲ್. ಆರ್. ಹೆಗಡೆಯವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಅಪಾರ ಸಂಗ್ರಹಕಾರ್ಯ ನಡೆಸುತ್ತಿದ್ದಾರೆ. ಅವರ ತಿಮ್ಮಕ್ಕನ ಪದಗಳು ಕನ್ನಡ ಲಾವಣಿ ಸಾಹಿತ್ಯ ಕೃತಿಗಳ ಸಾಲಿನಲ್ಲಿ ಒಂದು ಮೈಲಿಗಲ್ಲು. ಹಾಲಕ್ಕಿ ಗೌಡತಿ ತಿಮ್ಮಕ್ಕ ಮೂವತ್ತಕ್ಕೂ ಹೆಚ್ಚು ಕಥನಗೀತೆಗಳನ್ನು ತಾನೊಬ್ಬಳೇ ಇಲ್ಲಿ ಹಾಡಿದ್ದಾಳೆ.

ಕ್ಯಾತನಹಳ್ಳಿ ರಾಮಣ್ಣ ಅವರ ಐದು ಜನಪದ ಕಥನಗೀತೆಗಳು ಪಾಂಡವಪುರದ ಸಮೀಪದ ಕ್ಯಾತನಹಳ್ಳಿಯ ಒಬ್ಬ ಹಾಡುಗಾರ್ತಿಯಿಂದ ಸಂಗ್ರಹಿಸಿದುವು. ರಾಮಣ್ಣನವರು ಇನ್ನೂ ಅನೇಕ ಕಥನಗೀತೆಗಳನ್ನು ಇತರ ಹಾಡುಗಳನ್ನೂ ಸಂಗ್ರಹಿಸಿದ್ದಾರೆ.

ಕೇವಲ ಗೀತಪ್ರಕಾರದಿಂದ ಆರಂಭವಾದ ಕನ್ನಡ ಜಾನಪದ ಸಂಗ್ರಹಕಾರ್ಯ ಈಗ ಸಮಗ್ರ ಜನಪದದತ್ತ ಎಲ್ಲ ಶಾಖೆಗಳ ಮೇಲೂ ಸಂಗ್ರಾಹಕರ ದೃಷ್ಟಿ ಹರಿಯುತ್ತಿರುವುದು ಅಭಿನಂದನೀಯವಾಗಿದೆ. ನಾಡಿನ ಎಲ್ಲ ಕಡೆಗಳಲ್ಲೂ ತುಂಬಿ ತುಳುಕುತ್ತಿರುವ ಜಾನಪದ ಸುಂಬಂಧವಾದ ಉತ್ಸಾಹ, ಹುಮ್ಮಸ್ಸುಗಳೇ ಮುಂದಿನ ಉತ್ತಮ ಸಾಧನೆಯ ಹೆಜ್ಜೆಗುರುತುಗಳಾಗಿವೆ.

ಜನಪದ ಗದ್ಯಕಥನಗಳಲ್ಲಿ ಪುರಾಣ (ಮಿತ್), ಐತಿಹ್ಯ (ಲೆಜೆಂಡ್) ಹಾಗೂ ಕಟ್ಟು ಕಥೆ (ಮೆರ್ಖನ್)–ಇವು ಮುಖ್ಯವಾದುವು. ಈ ಮೂರರಲ್ಲಿ ಕಟ್ಟು ಕಥೆಗಳ ಅತ್ಯುತ್ತಮ ಸಂಗ್ರಹಗಳು ಇತ್ತೀಚೆಗೆ ಪ್ರಕಟವಾಗಿವೆ.

ಕನ್ನಡದಲ್ಲಿ ಜನಪದ ಕಥೆಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ವರ್ಗೀಕರಿಸಿ ಕೃತಿಗಳನ್ನು ಹೊರತಂದಿರುವ ಪ್ರಯತ್ನಗಳನ್ನು ಕಾಣಬಹುದು. ಜೀಶಂಪ ಅವರ ಕನ್ನಡ ಜನಪದ ಕಥೆಗಳು. ಅವರೇ ಸಂಪಾದಿಸಿರುವ ಬೇರೆ ಬೇರೆ ಸಂಗ್ರಾಹಕರ ಆಯ್ದ ಜನಪದ ಕಥೆಗಳು, ರಾಗೌ ಅವರ ಕರ್ನಾಟಕ ಜನಪದ ಕಥೆಗಳು–ಮುಂತಾದುವು ಗಾತ್ರದ ದೃಷ್ಟಿಯಿಂದಲೂ ವೈವಿಧ್ಯದ ದೃಷ್ಟಿಯಿಂದಲೂ ಪ್ರಾದೇಶಿಕತೆಯ ದೃಷ್ಟಿಯಿಂದಲೂ ಉತ್ತಮ ಸಂಪಾದನೆಯ ದೃಷ್ಟಿಯಿಂದಲೂ ಪ್ರಮುಖವೆನಿಸಿವೆ. ಆಧುನಿಕ ವೈಜ್ಞಾನಿಕ ಸೂತ್ರಗಳನ್ನನುಸರಿಸಿ ಆಶಯಗಳನ್ನೂ (ಮೋಟಿವ್ಸ್), ವರ್ಗಗಳನ್ನೂ (ಟೈಪ್ಸ್) ಭಿನ್ನರೂಪಗಳನ್ನೂ (ವೇರಿಯಂಟ್ಸ್) ಗುರುತಿಸುವ ಪ್ರಯತ್ನಗಳು ಇತ್ತೀಚಿನ ಸಂಕಲನಗಳಲ್ಲಿ ಕಂಡುಬಂದಿದೆ. ಈ ಕೃತಿಗಳ ಪ್ರಕಟನೆಯ ಮೂಲಕ ಕನ್ನಡದ ಜಾನಪದ ಸಂಗ್ರಹ ಒಂದು ಹೊಸ ತಿರುವನ್ನು ಪಡೆದಿದೆ. ಇವುಗಳಲ್ಲಿನ ವಿಸ್ತಾರವಾದ ಪ್ರಸ್ತಾವನೆಗಳು ಜನಪದ ಕಥಾಭ್ಯಾಸಿಗಳಿಗೆ ಉಪಯುಕ್ತವಾಗಿವೆ.

ಈ ದಶಕಗಳಲ್ಲಿ ಪ್ರಕಟವಾದ ಕಥಾಸಂಕಲನಗಳಲ್ಲಿ ಮತಿಘಟ್ಟ ಕೃಷ್ಣಮೂರ್ತಿಗಳ ಸರಹದ ಹಕ್ಕಿ ಮತ್ತು ಇತರ ಜನಪದ ಕಥೆಗಳು, ಡಿ. ಲಿಂಗಯ್ಯನವರ ಮಣ್ಣಿನ ಮಿಡಿತ, ಧವಳಶ್ರೀಯವರ ಜಾನಪದ ಕಥಾಮೃತ, ಜಿ.ವಿ. ದಾಸೇಗೌಡರ ಹಾವಾಗಿ ಹರಿದ ಅಣ್ಣಯ್ಯ– ಮುಂತಾದುವು ಮುಖ್ಯವಾದುವು. ಮತಿಘಟ್ಟ ಕೃಷ್ಣಮೂರ್ತಿಗಳ ಸಂಕಲನದಲ್ಲಿ ಶುದ್ಧ ಜನಪದ ಕಥೆಗಳ ಆಯ್ಕೆಗೆ ಅವಕಾಶವಿತ್ತಾದರೂ ಕಥನಗೀತೆಗಳನ್ನೂ ಕ್ಷೇತ್ರಮಾಹಾತ್ಮ್ಯಗಳನ್ನೂ ಐತಿಹ್ಯಗಳನ್ನೂ ಕಥೆಗಳ ಸಾಲಿನಲ್ಲಿಯೇ ಸೇರಿಸುವುದು ಅಷ್ಟು ಉಚಿತವಲ್ಲ. ಜಾನಪದ ಜಾಯಮಾನಕ್ಕೆ ಒಗ್ಗದ ಶಿಷ್ಟ ಸಂಪ್ರದಾಯದ ಕೆಲವು ಕಥೆಗಳೂ ಇಲ್ಲಿವೆ. ಭಲ್ಲೂಕಪುರದ ಅಪ್ಪಾಜಿಭಟ್ಟ ಜನಪದ ಕಥೆಯೆನಿಸುವುದಿಲ್ಲ. ಅದೊಂದು ಐತಿಹಾಸಿಕ ಕಥೆಯಾಗಬಹುದು. ಇಲ್ಲಿ ನಾಲ್ಕಾರು ಒಳ್ಳೆಯ ಜನಪದ ಕಥೆಗಳು ಇವೆ.

ಡಿ. ಲಿಂಗಯ್ಯನವರ ಮಣ್ಣಿನ ಮಿಡಿತ ಇಪ್ಪತ್ತೆರಡು ಕಥೆಗಳನ್ನೊಳಗೊಂಡಿದೆ. ಇಲ್ಲಿನ ಧಾಟಿಯನ್ನು ಗಮನಿಸಿದರೆ ಮೂಲ ಕಥೆಗಾರನ ಶೈಲಿ ಯಥಾವತ್ತಾಗಿ ಮೂಡಿ ಬಂದಿಲ್ಲವೆನಿಸುತ್ತದೆ.

ಜನಪದ ಕಥೆಗಳ ಎರಡು ಒಳ್ಳೆಯ ಸಂಕಲನಗಳನ್ನು ಧವಳಶ್ರೀಯವರು ಪ್ರಕಟಿಸಿದ್ದಾರೆ. ಮೂಲನಿರೂಪಣೆಯನ್ನು ಕಾಯ್ದುಕೊಳ್ಳುವಲ್ಲಿ ಇವರಲ್ಲಿಯೂ ಕೆಲವು ಅತಿರೇಕಗಳು ಕಾಣಬರುತ್ತವೆ. ಆದರೆ ಕೆಲವು ವಿಶಿಷ್ಟ ಜನಪದ ನುಡಿಕಟ್ಟುಗಳನ್ನು ಉಳಿಸಿಕೊಳ್ಳುವುದರಲ್ಲಿ ಸಂಗ್ರಾಹಕರು ಯಶಸ್ವಿಯಾಗಿದ್ದಾರೆ. ಜಿ. ವಿ. ದಾಸೇಗೌಡರ ಹಾವಾಗಿ ಹರಿದ ಅಣ್ಣಯ್ಯ ಎಂಬುದು ಮಂಡ್ಯದ ಸುತ್ತಿನ ಕಥೆಗಳನ್ನು ಒಳಗೊಂಡಿದೆ. ಜನಪದ ಕಥೆಗಾರನ ಮೂಲಶೈಲಿಯನ್ನು ದಾಸೇಗೌಡರು ಬಳಸಿಕೊಳ್ಳಲು ಮಾಡಿರುವ ಪ್ರಯತ್ನ ಅನುಕರಣೀಯವಾದುದು.

ಗಾದೆಗಳ ಸಂಗ್ರಹದಲ್ಲಿ ಅಚ್ಚಪ್ಪ, ವೆಂಕಟರಮಣಯ್ಯ, ಜೀಶಂಪ, ರಾಗೌ, ಸುಧಾಕರ– ಇವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ರಾಗೌ ಅವರ ನಮ್ಮ ಗಾದೆಗಳ ಕ್ಷೇತ್ರದಲ್ಲಿ ಒಂದು ಪ್ರಮುಖ ಕೃತಿಯಾಗಿದೆ. ಎರಡು ಸಾವಿರಕ್ಕೂ ಹೆಚ್ಚು ಸಂಖ್ಯೆಯ ಗಾದೆಗಳನ್ನು ಅವರು ಈ ಸಂಕಲನದಲ್ಲಿ ಒದಗಿಸಿರುವುದು ಗಣನೀಯ ಅಂಶವಾಗಿದೆ. ಅತ್ಯಂತ ವಿಸ್ತಾರವಾದ ಇಲ್ಲಿನ ಪ್ರಸ್ತಾವನೆ ಗಾದೆಗಳ ವಿವರವಾದ ಅಭ್ಯಾಸಕ್ಕೆ ಸಹಾಯಕವಾಗಿದೆ. ತೀರ ಅಶ್ಲೀಲ ಎಂದು ತೋರುವ ಯಾವ ಗಾದೆಯನ್ನು ಕೈಬಿಡದೆ ಅವರು ಈ ಸಂಕಲನದಲ್ಲಿ ಹೊರತಂದಿದ್ದಾರೆ. ಜಾನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವವರಿಗೆ ಇಂಥ ಕೃತಿಗಳು ಹೆಚ್ಚು ಉಪಯುಕ್ತವಾಗುತ್ತವೆ. ರಾಗೌ ಅವರ ಕಿಟ್ಟೆಲ್ ಕೋಶದ ಗಾದೆಗಳು ಎಂಬುದು ಕಿಟ್ಟೆಲರ ಅರ್ಥಕೋಶದಲ್ಲಿ ಅಳವಡಿಸಿದ ನಾಲ್ಕು ಸಾವಿರಕ್ಕೂ ಹೆಚ್ಚು ಗಾದೆಗಳನ್ನು ಒಂದೆಡೆ ಸಂಕಲಿಸಿಕೊಡುವ ಒಳ್ಳೆಯ ಪ್ರಯತ್ನವಾಗಿದೆ.

ಜಾನಪದ ಭಾಷಿಕ ಬಗೆಗಳಲ್ಲಿ ಗಾದೆಗಳಷ್ಟೇ ಪ್ರಮುಖವಾದುವು ಒಗಟುಗಳು. ಕನ್ನಡದಲ್ಲಿ ಒಗಟುಗಳ ಸಂಗ್ರಹ 1946ರ ಸುಮಾರಿಗೆ ಆರಂಭವಾಯಿತು. ಶಂ. ಬಾ. ಜೋಶಿಯವರ ಮಕ್ಕಳ ಉಡುಪುಗಳು ಕನ್ನಡದ ಒಗಟುಗಳ ಸಂಗ್ರಹದಲ್ಲಿ ಮೊದಲನೆಯದು. ಅನೇಕ ಅತ್ಯುತ್ತಮ ಒಗಟುಗಳನ್ನು ಈ ಸಂಕಲನದಲ್ಲಿ ಕಾಣಬಹುದು. ಈಶ್ವರಚಂದ್ರ ಚಿಂತಾಮಣಿಯವರ ಗರತಿಯರ ಮನೆಯಿಂದ ಎಂಬ ಸಂಕಲನದಲ್ಲಿಯೂ ಕೆಲವು ಒಳ್ಳೆಯ ಒಗಟುಗಳಿವೆ. ಕಳೆದ ಮೂರು ವರ್ಷಗಳಲ್ಲಿ ಒಗಟುಗಳಿಗೆ ಸಂಬಂಧಿಸಿದಂತೆಯೇ ಉತ್ತಮ ಸಂಗ್ರಹಕಾರ್ಯ ನಡೆದು ಶ್ರೇಷ್ಠ ಸಂಕಲನಗಳು ಹೊರಬಂದಿವೆ. ಜೀಶಂಪ ಅವರ ಕನ್ನಡ ಒಗಟುಗಳು ಈ ಅಭ್ಯಾಸದ ಕಡೆ ಜಾನಪದ ವಿದ್ವಾಂಸರ ದೃಷ್ಟಿಯನ್ನು ಸೆಳೆದ ಕೃತಿ. ಇದಾದ ಮೇಲೆ ಸಂಕಲನಗಳನ್ನು ಪ್ರಕಟಿಸಿದ ಕೀರ್ತಿ ಚಕ್ಕಲೂರು ಚನ್ನಪ್ಪ, ಸುಧಾಕರ ಹಾಗೂ ರಾಗೌ ಅವರಿಗೆ ಸಲ್ಲಬೇಕು.

ಸುಧಾಕರ ಅವರ ಜನಪದ ಬೆಡಗಿನ ವಚನಗಳು ಒಂದು ಪ್ರಶಂಸನೀಯ ಕೃತಿ. ಐನೂರಕ್ಕೂ ಹೆಚ್ಚು ಒಗಟುಗಳನ್ನು ಬೆಂಗಳೂರು ಮೈಸೂರು ಜಿಲ್ಲೆಗಳಿಂದ ಆಯ್ದು ಈ ಸಂಕಲನದಲ್ಲಿ ಸೇರಿಸಲಾಗಿದೆ. ವಿದ್ವತ್ಪೂರ್ಣವಾದ ಅವರ ಪ್ರಸ್ತಾವನೆ ಒಗಟುಗಳ ವಿವೇಚನೆಯ ಹೊಸ ದೃಷ್ಟಿಯನ್ನು ಮೂಡಿಸುತ್ತದೆ. ಪ್ರಕೃತ ಸಂಕಲನದಲ್ಲಿ ಜನಪದ ಒಗಟುಗಳನ್ನೂ ಪರಸ್ಪರ ಪರಿಣಾಮವನ್ನೂ ಚರ್ಚಿಸಿರುವುದು ವಿದ್ವಾಂಸರ ಆಸಕ್ತಿಯನ್ನು ಕೆರಳಿಸುತ್ತದೆ.

ರಾಗೌ ಅವರ ನಮ್ಮ ಒಗಟುಗಳು ಮತ್ತೊಂದು ಉತ್ತಮ ಸಂಕಲನ. ಐನೂರಕ್ಕೂ ಹೆಚ್ಚು ಸಂಖ್ಯೆಯ ಒಗಟುಗಳು ಸಂಕಲನದಲ್ಲಿವೆ. ಇಲ್ಲಿನ ವಿಸ್ತಾರವಾದ ಪ್ರಸ್ತಾವನೆ ಅತ್ಯಂತ ಉಪಯುಕ್ತವಾದುದಾಗಿದೆ.

ವೆಂಕಟರಮಣಯ್ಯನವರ ಕನ್ನಡ ಗಾದೆಗಳ ಕೋಶ, ಪಡೆನುಡಿಗಳ ಕೋಶ, ಅಚ್ಚಪ್ಪನವರ ಗ್ರಂಥಸ್ಥ ಗಾದೆಗಳು–ಇವೂ ಗಮನಾರ್ಹ ಸಂಕಲನಗಳು. ಪಡೆ ನುಡಿಗಳ ಕೋಶ ಜಾನಪದ ಒಂದು ಹೊಸ ಪ್ರಕಾರದ ಮೇಲೆ ಬೆಳಕು ಚೆಲ್ಲುವ ಕೃತಿಯಾಗಿದೆ. ಜನಪದ ಭಾಷೆಯ ಸತ್ತ್ವಸೌಂದರ್ಯಗಳನ್ನು ಅರಿಯಲು ಕನ್ನಡ ನುಡಿಗಟ್ಟುಗಳ ಈ ಸಂಗ್ರಹ ಸಹಾಯಕವಾಗುತ್ತದೆ. ಪ್ರಚಲಿತ ಗಾದೆಗಳ ಐತಿಹಾಸಿಕ ರೂಪಗಳನ್ನು ಪ್ರಾಚೀನ ಕಾವ್ಯಗಳಲ್ಲಿ ಗುರುತಿಸಿ ಅವನ್ನೆಲ್ಲ ಒಂದೆಡೆ ಕಲೆಹಾಕಿ ಗ್ರಂಥಸ್ಥಗಾದೆಗಳು ಎಂಬ ಬೃಹತ್ಸಂಕಲನವನ್ನು ಅಚ್ಚಪ್ಪನವರು ಹೊರತಂದಿದ್ದಾರೆ. ಕೆಲವು ನ್ಯೂನತೆಗಳಿದ್ದರೂ ಈ ದಶಕದ ಜಾನಪದ ಕ್ಷೇತ್ರದ ದೊಡ್ಡ ಸಾಧನೆಗಳಲ್ಲಿ ಒಂದಾಗಿ ಅಚ್ಚಪ್ಪನವರ ಕೃತಿ ನಿಲ್ಲುತ್ತದೆ.

ಕನ್ನಡದಲ್ಲಿ ಪ್ರಕಟವಾಗಿರುವ ಜಾನಪದ ಸಂಗ್ರಹಗಳ ಜೊತೆಯಲ್ಲಿಯೇ ಅಂಥ ಸಾಹಿತ್ಯವನ್ನು ಕುರಿತ ವಿಶ್ಲೇಷಣೆ, ವಿವೇಚನೆಯೂ ತಕ್ಕಮಟ್ಟಿಗೆ ನಡೆಯುತ್ತ ಬಂದಿದೆ. ನಾಲ್ಕು ಭಾಗವಾಗಿ ಇಂಥ ಬರಹವನ್ನು ವಿಂಗಡಿಸಿಕೊಳ್ಳಬಹುದು : 1 ಜಾನಪದದ

ನಾನಾ ಮುಖಗಳನ್ನು ಕುರಿತ ಕೃತಿಗಳು, 2 ಜಾನಪದದ ಹಲವು ವಿಷಯಗಳನ್ನು ಆಧರಿಸಿದ ಬಿಡಿಲೇಖನಗಳು, 3 ಗ್ರಂಥಗಳ ಪ್ರಸ್ತಾವನೆ ಹಾಗೂ ಮುನ್ನುಡಿಗಳು, 4 ಜಾನಪದ ಕೃತಿಗಳ ಉತ್ತಮ ವಿಮರ್ಶೆಗಳು.

ಜಾನಪದವನ್ನು ಕುರಿತ ವಿಮರ್ಶಾಗ್ರಂಥಗಳ ಸಾಲಿನಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳ ಕರ್ನಾಟಕ ಸಂಸ್ಕೃತಿ 1946ರ ವೇಳೆಗೇ ಪ್ರಕಟವಾದ ಒಂದು ಅತ್ಯುತ್ತಮ ಕೃತಿಯಾಗಿದೆ. ಕನ್ನಡದಲ್ಲಿ ಸಮಗ್ರ ಜಾನಪದದ ಪ್ರಸ್ತಾಪ ಮೊಟ್ಟಮೊದಲ ಬಾರಿಗೆ ದೇವುಡು ಅವರ ಕೃತಿಯಲ್ಲಿ ಕಾಣಿಸಿಕೊಂಡಿದೆ. ಜಾನಪದವನ್ನು ಜನತೆಯ ಸಂಸ್ಕೃತಿ ಎಂದು ಕರೆದು ಆ ಕುರಿತಾದ ಪ್ರಸಿದ್ಧ ವಿವರಣೆಗಳನ್ನೆಲ್ಲ ದೇವುಡು ಅವರು ವಿವೇಚಿಸಿ, ನಾಡಿನ ಸಂಸ್ಕೃತಿಯನ್ನು ಅರಿಯಲು ಜಾನಪದದ ನಾನಾ ಶಾಖೆಗಳನ್ನು ಅವಲಂಬಿಸಿ ಅವರು ಮಾಡಿರುವ ಪ್ರಯತ್ನ ಸ್ತುತ್ಯವಾದುದು. ಜಾನಪದದ ಒಂದು ಶಾಸ್ತ್ರೀಯವಾದ ಅಧ್ಯಯನದ ಮೊದಲ ಹೆಜ್ಜೆಯನ್ನು ನಾವು ಇಲ್ಲಿ ಕಾಣಬಹುದು. ಗಂಡಸರ ಹಾಡು, ಹೆಂಗಸರ ಹಾಡು, ಗಾದೆ, ಒಗಟು, ಕಥೆ, ಲಾವಣಿ, ನಡೆನುಡಿ ಮುಂತಾದ ಅನೇಕ ಶಾಖೆಗಳ ಆಧಾರದ ಮೇಲೆ ಜನತೆಯ ಸಂಸ್ಕೃತಿಯ ನಿರ್ಧಾರಕ್ಕೆ ತೊಡಗಿ ಜಾನಪದವನ್ನು ಎಷ್ಟು ಸಾರ್ಥಕ ರೀತಿಯಲ್ಲಿ ಸಂಶೋಧನೆಗೆ ಬಳಸಿಕೊಳ್ಳಬಹುದು ಎಂಬುದನ್ನು ದೇವುಡು ತಮ್ಮ ಕೃತಿಯ ಮೂಲಕ ತೋರಿದ್ದಾರೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರ ಹಳ್ಳಿಯ ಬಾಳು ಜನಪದ ಸಾಹಿತ್ಯದ ಮೂಲಕ ಗ್ರಾಮಾಂತರ ಜೀವನವನ್ನು ವ್ಯಾಖ್ಯಾನಿಸಲು ಮಾಡಿದ ಒಂದು ಉತ್ತಮ ಪ್ರಯತ್ನ. ಜನಪದಸಾಹಿತ್ಯ, ರೈತನೊಡನೆ ಅದರ ನಿಕಟಸಂಬಂಧ, ಆ ಸಾಹಿತ್ಯದ ಹಿರಿಮೆ ಮುಂತಾದುವನ್ನು ಕುರಿತು ಗೊರೂರರು ತಮ್ಮ ಕೃತಿಯಲ್ಲಿ ಹೃದಯಂಗಮವಾಗಿ ಚರ್ಚಿಸಿದ್ದಾರೆ. ತಮ್ಮ ಈ ಚರ್ಚೆಗೆ ಅವರು ಅಪಾರ ಜನಪದಸಾಹಿತ್ಯವನ್ನು ಬಳಸಿಕೊಂಡು ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ.

1954ರಲ್ಲಿ ಸಿಂಪಿ ಲಿಂಗಣ್ಣನವರ ಗರತಿಯ ಬಾಳು–ಪ್ರಕಟವಾಯಿತು. ಗರತಿಯ ಸಾಹಿತ್ಯದ ಸೊಗಸು, ಜೀವನ ಸಂದೇಶ, ಸ್ತ್ರೀ ಜೀವನದ ದಿವ್ಯ ಸಂಸ್ಕೃತಿ ಮುಂತಾದವನ್ನು ಕುರಿತ ಸುಂದರ ವಿವೇಚನೆಯನ್ನು ಈ ಕೃತಿಯಲ್ಲಿ ಕಾಣಬಹುದು. 1960ರಲ್ಲಿ ಪ್ರಕಟವಾದ ಇದೇ ಲೇಖಕರ ಜನಾಂಗದ ಜೀವಾಳವೆಂಬುದು ಜಾನಪದದ ವಿವಿಧ ಮುಖಗಳ ಮೇಲೆ ಬೆಳಕು ಚೆಲ್ಲುವ ಪ್ರಬಂಧಗಳನ್ನೊಳಗೊಂಡಿದೆ. ಜನಪದ ಗೀತೆಗಳ ಅನೇಕ ಹೊಸ ಪ್ರಕಾರಗಳನ್ನು ಕುರಿತು ಸಿಂಪಿಯವರು ವಿವರವಾಗಿ ಚರ್ಚೆ ನಡೆಸಿದ್ದಾರೆ. ಬಯಲಾಟದ ಪದಗಳು, ಲಾವಣಿ ಹಾಡುಗಳು, ಜನಪದ ಸಾಹಿತ್ಯದಲ್ಲಿ ಅದ್ಭುತ ಕಥೆಗಳ ಪ್ರಾಶಸ್ತ್ಯ, ಮಕ್ಕಳನ್ನು ಆಡಿಸುವ ಹಾಡು, ಮದುವೆಯ ಹಾಡು–ಹೀಗೆ ಅನೇಕ ಆಸಕ್ತಿದಾಯಕ ವಿಷಯಗಳ ಮೇಲೆ ಅವರು ಸಂಶೋಧಕರ ದೃಷ್ಟಿಯನ್ನು ಸೆಳೆದಿದ್ದಾರೆ.

ಮಾಸ್ತಿಯವರ ಕರ್ನಾಟಕದ ಜನಪದ ಸಾಹಿತ್ಯ ಕನ್ನಡ ಜನಪದ ಸಾಹಿತ್ಯದ ಸೌಂದರ್ಯ, ಸಾಂಸ್ಕೃತಿಕ ಮೌಲ್ಯಗಳನ್ನು ಕುರಿತ ಮತ್ತೊಂದು ಗಮನಾರ್ಹ ಕೃತಿ. ಇದು ಪ್ರಕಟವಾದುದು 1950ರಲ್ಲಿ.

ಗದ್ದಿಗೆಮಠರ ಮಹಾಪ್ರಬಂಧ ಕನ್ನಡ ಜಾನಪದ ಗೀತೆಗಳು, 1963ರಲ್ಲಿ ಪ್ರಕಟವಾಯಿತು. ಉತ್ತರ ಕರ್ನಾಟಕದ ಎಲ್ಲ ಬಗೆಯ ಜನಪದ ಗೀತ ಸಂಪ್ರದಾಯಗಳನ್ನು ವಿಸ್ತಾರವಾಗಿ ಪರಿಚಯ ಮಾಡಿಕೊಡುವ ಈ ಕೃತಿ ಕನ್ನಡ ಜನಪದ ಗೀತೆಗಳ ವಿಶ್ಲೇಷಣೆಯನ್ನು ಕುರಿತ ಒಂದು ಶ್ರೇಷ್ಠ ಗ್ರಂಥ. ಸ್ತುತಿಪದಗಳು, ಹಳ್ಳಿಯ ಪದಗಳು, ಹಳ್ಳಿಯ ಕುಣಿತಗಳು, ಮಕ್ಕಳ ಆಟದ ಹಾಡುಗಳು, ಹಾಸ್ಯದ ಹಾಡುಗಳು, ಸುಗ್ಗಿಯ ಸಂಪ್ರದಾಯ, ಹಳ್ಳಿಯ ಹಬ್ಬಗಳು, ಹಂತಿಯ ಹಾಡುಗಳು–ಹೀಗೆ ಅತ್ಯಂತ ವ್ಯಾಪಕವಾಗಿ ಈ ಕೃತಿಯಲ್ಲಿ ಜನಪದ ಗೀತೆಗಳ ಒಂದು ದೊಡ್ಡ ವಿಶ್ವವನ್ನೇ ಗದ್ದಿಗೆಮಠರು ತೆರೆದು ತೋರಿಸಿದ್ದಾರೆ.

ಈ ಕೃತಿಗಳ ಸಾಲಿನಲ್ಲಿ ಮತ್ತೊಂದು ಗಮನಾರ್ಹ ವಿಮರ್ಶಾಗ್ರಂಥ ಶಿವರಾಮ ಕಾರಂತರ ಜಾನಪದ ಗೀತೆಗಳು. 1966ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಕಾರಂತರು ಜನಪದ ಗೀತೆಗಳ ವಸ್ತುಪ್ರಕಾರಗಳನ್ನು ಕುರಿತು ಸೊಗಸಾದ ವಿವೇಚನೆಯನ್ನು ನಡೆಸಿದ್ದಾರಲ್ಲದೆ ಪಾಡ್ದನಗಳು, ಕೊಡಗಿನ ಜನಪದ ಗೀತೆಗಳು, ಅನೇಕ ಕನ್ನಡ ತ್ರಿಪದಿ ಹಾಗೂ ಲಾವಣಿಗಳನ್ನು ಉಲ್ಲೇಖಿಸಿ ಅವುಗಳ ವಿಶ್ಲೇಷಣೆ ಮಾಡಿದ್ದಾರೆ.

ಜೀಶಂಪ ಅವರ ಜನಪದ ಸಾಹಿತ್ಯ ಸಮೀಕ್ಷೆ ಅನೇಕ ಸಂಶೋಧನಾತ್ಮಕ ಹಾಗೂ ಪರಿಚಯಾತ್ಮಕ ಪ್ರಬಂಧಗಳನ್ನೊಳಗೊಂಡ ಕೃತಿ. ಕರಪಾಲ ಮೇಳ, ಕಂಸಾಳೆ ಸಾಹಿತ್ಯ, ಐತಿಹ್ಯಗಳು, ಗಾದೆಗಳು, ಹಬ್ಬಹರಿದಿನಗಳು–ಮುಂತಾದ ಅನೇಕ ವಿಷಯಗಳ ಮೇಲೆ ಇಲ್ಲಿನ ಪ್ರಬಂಧಗಳು ವೈವಿಧ್ಯವನ್ನು ಸಾಧಿಸಿಕೊಂಡಿರುವುದರ ಜೊತೆಗೆ ಕನ್ನಡ ಜಾನಪದ ಕ್ಷೇತ್ರದಲ್ಲಿ ನಿರ್ಲಕ್ಷಿತವಾಗಿರುವ ಇತರ ಕ್ಷೇತ್ರಗಳ ಕಡೆಯೂ ವಿದ್ವಾಂಸರ ದೃಷ್ಟಿಯನ್ನು ಸೆಳೆಯಲು ಸಹಾಯಕವಾಗಿವೆ.

ಸಿ.ಪಿ. ಕೃಷ್ಣಕುಮಾರರು ಜನಪದಸಾಹಿತ್ಯದ ರಸವಿಮರ್ಶೆಗೆ ಹೆಸರಾದವರು. ಪ್ರೌಢಸಾಹಿತ್ಯದಂತೆಯೇ ಜನಪದ ಸಾಹಿತ್ಯದಲ್ಲಿಯೂ ಉತ್ತಮ ಜೀವನದರ್ಶನ, ಅನುಭವದ ಎತ್ತರಗಳನ್ನು ಗುರುತಿಸಲು ಸಾಧ್ಯ ಎಂಬುದನ್ನು ತಮ್ಮ ಅನೇಕ ಪ್ರಬಂಧಗಳಲ್ಲಿ ಅವರು ತೋರಿದ್ದಾರೆ. ಜನಪದ ಗೀತೆಗಳ ಕಾವ್ಯವಿಮರ್ಶೆಯ ಸೂತ್ರಗಳಲ್ಲಿ ಶಾಸ್ತ್ರೀಯ ವಿಮೋಚನೆಗೆ ಒಳಪಡಿಸಿ ವಿಶ್ಲೇಷಿಸಿ ಪ್ರತಿಭಾಪೂರ್ಣ ಪ್ರಯತ್ನಗಳನ್ನು ಸಿ.ಪಿ.ಕೆ. ಅವರ ಪ್ರಬಂಧಗಳಲ್ಲಿ ಕಾಣಬಹುದು. ಅವರ ಜಾನಪದ ಪ್ರತಿಭೆ ಈ ದೃಷ್ಟಿಯಿಂದ ಅತ್ಯಂತ ಉತ್ಕೃಷ್ಟ ಕೃತಿಯಾಗಿದೆ.

ಇತ್ತೀಚೆಗೆ ಪ್ರಕಟವಾದ ನಂ. ತಪಸ್ವೀಕುಮಾರರ ಜನಪದ ಸಂಸ್ಕೃತಿ, ಡಿ.ಕೆ. ರಾಜೇಂದ್ರರ ಜಾನಪದ ಸಮೀಕ್ಷೆಗಳು ಜಾನಪದ ವಿಶ್ಲೇಷಣೆಯಲ್ಲಿ ಹೊಸ ದೃಷ್ಟಿಯನ್ನು ಬೀರಿರುವ ಕೃತಿಗಳು. ರಾಜೇಂದ್ರರು ಕನ್ನಡದಲ್ಲಿ ನಡೆದ ಜಾನಪದ ಸಂಶೋಧನೆ, ಕನ್ನಡದಲ್ಲಿ ಜಾನಪದ ಕಲ್ಪನೆ, ಯಕ್ಷಗಾನ, ಮೂಡಲಪಾಯ ಸಂಪ್ರದಾಯ ಮುಂತಾದುವನ್ನು ಕುರಿತು ವಿವೇಚಿಸುವಲ್ಲಿ ಉತ್ತಮ ಸಂಶೋಧನ ದೃಷ್ಟಿಯನ್ನು ಮೆರೆದಿದ್ದಾರೆ. ತಪಸ್ವೀಕುಮಾರರ ಕೃತಿ ಜಾನಪದದ ಕೆಲವು ಹೊಸ ಪ್ರಕಾರಗಳಲ್ಲಿನ ಅಧ್ಯಯನವನ್ನು ಒಳಗೊಂಡು ವಿಚಾರಾತ್ಮಕವಾಗಿದೆ. ತೊಗಲು ಗೊಂಬೆಯವರ ಸಂಪ್ರದಾಯ, ಗಾದೆಗಳ ವಿಶ್ಲೇಷಣೆ, ಬೈಗುಳಗಳ ಬನಿ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಮುಂತಾದವಲ್ಲಿ ಶ್ರೀಯುತರು ತೋರಿರುವ ಹೊಸ ಮೌಲ್ಯ ಕುತೂಹಲಕಾರಿಯಾಗಿದೆ.

ಜನಪದ ಸಾಹಿತ್ಯ ಸಂಬಂಧವಾದ ಅನೇಕ ವಿಚಾರಗೋಷ್ಠಿಗಳೂ ಸಮ್ಮೇಳನಗಳೂ ಆಗಾಗ ನಡೆದು ನಾಡಿನ ವಿದ್ವಾಂಸರು ಅನೇಕ ಉತ್ತಮ ಪತ್ರಿಕೆಗಳನ್ನು ಮಂಡಿಸಿರುವುದು ವಿಚಾರಾರ್ಹ ವಿಷಯವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ 1966ರಲ್ಲಿ ನಡೆದ ಲೇಖಕರ ಗೋಷ್ಠಿಯಲ್ಲಿ ನಡೆದ ಜನಪದ ಸಾಹಿತ್ಯಗೋಷ್ಠಿ. ಕನ್ನಡ ಜಾನಪದ ಅಧ್ಯಯನದ ಇತಿಹಾಸದಲ್ಲಿ ಅತ್ಯಂತ ಮಹತ್ತ್ವದ ಅಂಶವಾಗಿದೆ. ಇದಕ್ಕೆ ಮುಖ್ಯ ಕಾರಣ, ಜಾನಪದವನ್ನೇ ಕುರಿತ ಒಂದು ಪೂರ್ಣಸ್ವರೂಪದ ಗೋಷ್ಠಿ ಏರ್ಪಟ್ಟದ್ದು ಹಾಗೂ ಹಾ. ಮಾ. ನಾಯಕರು ಮಂಡಿಸಿದ ಜನಪದಸಾಹಿತ್ಯ ಮತ್ತು ಅದರ ಸ್ವರೂಪ ಎಂಬ ಹೊಸ ಬೆಳಕನ್ನು ಚೆಲ್ಲಿದ ಅತ್ಯುತ್ತಮ ಪ್ರಬಂಧ. ಕನ್ನಡದಲ್ಲಿ ಜಾನಪದದ ಪೂರ್ಣ ಕಲ್ಪನೆಯೇ ಇಲ್ಲದೆ ಸಂಗ್ರಹ, ಅಧ್ಯಯನಗಳು ಕೇವಲ ಗೀತಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿ ಉಳಿದ ಶಾಖೆಗಳು ಒಳಗಾಗಿದ್ದು, ಅಲ್ಲಿ ಕ್ರಾಂತಿಕಾರಕವಾದ ಬದಲಾವಣೆಯೊಂದು ಆಗಬೇಕಾಗಿದ್ದುದು ಅಗತ್ಯವಾಗಿತ್ತು. ಪಾಶ್ಚಾತ್ಯ ರಾಷ್ಟ್ರಗಳ ವ್ಯಾಪಕವಾದ ಜಾನಪದ ಕಲ್ಪನೆ ಕಳೆದ ಶತಮಾನದಿಂದಲೂ ಉನ್ನತ ಸಾಧನೆಯನ್ನು ಈ ಕ್ಷೇತ್ರದಲ್ಲಿ ತೋರಿದ್ದರೂ ಕರ್ನಾಟಕದಲ್ಲಿ ಆ ಬಗ್ಗೆ ಯಾರ ಲಕ್ಷ್ಯವೂ ಹರಿಯದೆ ಜಾನಪದ ಕ್ಷೇತ್ರ ತುಂಬ ನಷ್ಟವನ್ನು ಅನುಭವಿಸಿದ್ದ ಸಂದರ್ಭದಲ್ಲಿ, ಜಾನಪದ ಎಂದರೇನು, ಕಲಾದೃಷ್ಟಿ ಹಾಗೂ ವೈಜ್ಞಾನಿಕ ದೃಷ್ಟಿಗಳ ಹಿನ್ನೆಲೆಯಲ್ಲಿ ಅದರ ವ್ಯಾಪಕತೆಯೆಷ್ಟು, ನಮ್ಮ ಜಾನಪದ ಕಲ್ಪನೆಯ ದಿಗಂತ ಹೇಗೆ ವಿಸ್ತಾರಗೊಳ್ಳಬೇಕು, ಯಾವ ವೈಜ್ಞಾನಿಕ ತಳಹದಿಯ ಮೇಲೆ ಮುಂದಿನ ಅಧ್ಯಯನ ರೂಪುಗೊಳ್ಳಬೇಕು ಎಂಬ ಅನೇಕ ಪ್ರಮುಖ ವಿಷಯಗಳನ್ನು ಚರ್ಚಿಸಿ, ಮುಂದಿನ ಸಂಶೋಧನೆಗೆ ಒಂದು ಹೊಸ ತಿರುವನ್ನು ಕೊಟ್ಟರು. ಫೋಕ್‌ಲೋರ್ ಪದಕ್ಕೆ ಕನ್ನಡದಲ್ಲಿ ಜಾನಪದ ಎಂಬ ಹೆಸರು ಸೂಚಿಸಿದವರೂ ಅವರೇ. ಜಾನಪದದ ಇತರ ಪ್ರಕಾರಗಳಿಗೂ ಉತ್ತಮ ಹೆಸರುಗಳನ್ನು ನೀಡಿ ಆಯಾ ವಿಷಯಗಳ ವ್ಯಾಪ್ತಿಯನ್ನು ಪ್ರಕೃತ ಲೇಖನದಲ್ಲಿ ಸವಿವರವಾಗಿ ಅವರು ಪರಿಚಯ ಮಾಡಿಕೊಟ್ಟಿದ್ದಾರೆ.

ಈ ಗೋಷ್ಠಿಯ ಅಂಗವಾಗಿ ಪ್ರಕಟವಾದ ಸುವರ್ಣಸಂಚಯ, ಜಾನಪದದ ಮೇಲೆ ಇನ್ನೂ ಕೆಲವು ವಿದ್ವಾಂಸರ ಉತ್ತಮ ಪ್ರಬಂಧಗಳನ್ನೊಳಗೊಂಡಿದೆ.

1967ರಲ್ಲಿ ತರೀಕೆರೆಯಲ್ಲಿ ನಡೆದ ಪ್ರಥಮ ಜಾನಪದ ಸಮ್ಮೇಳನ ನಾಡಿನಾದ್ಯಂತ ಜಾನಪದದ ಬಗ್ಗೆ ವಿಶೇಷ ಸ್ಫೂರ್ತಿಯನ್ನು ತುಂಬಿತು. ಸಮ್ಮೇಳನದ ಅಂಗವಾಗಿ ಪ್ರಕಟವಾದ ಹೊನ್ನಬಿತ್ತೇವು ಹೊಲಕೆಲ್ಲ ಎಂಬುದು ಕನ್ನಡ ಜಾನಪದದ ಒಂದು ವಿಶ್ವಕೋಶ ವೆಂದರಾಗುತ್ತದೆ. ಸಮಗ್ರ ಕನ್ನಡನಾಡಿನ ಜಾನಪದದ ಕ್ರಮಬದ್ಧವಾದ ಪರಿವೀಕ್ಷಣೆ ಜಾನಪದ ಪ್ರಕಾರಗಳನ್ನು ಕುರಿತ ಲೇಖನಗಳು ವಿಮರ್ಶೆಗಳು ಈ ಮಹಾಗ್ರಂಥದಲ್ಲಿ ಬೆಳಕು ಕಂಡು ಕನ್ನಡದಲ್ಲಿ ಅವರೆಗೆ ನಡೆದ ಜಾನಪದ ಕಾರ್ಯಚಟುವಟಿಕೆಗಳ ಒಂದು ಒಳ್ಳೆಯ ಸಮೀಕ್ಷೆ ಒಂದೆಡೆ ಲಭ್ಯವಾಗುವಂಥ ಒಂದು ವ್ಯವಸ್ಥಿತ ಯೋಜನೆಯ ಹಿನ್ನೆಲೆಯಲ್ಲಿ ಇದು ಸಂಪಾದನೆಗೊಂಡಿದೆ. ಜಾನಪದದ ಬಗೆಗೆ ನಾಡಿನ ಗಣ್ಯ ವಿದ್ವಾಂಸರೆಲ್ಲರೂ ಬರೆದ ಪ್ರಬಂಧಗಳಿಲ್ಲಿವೆ.

ಜಾನಪದ ಸಂಶೋಧನೆ, ವಿಮರ್ಶೆ, ವಿವೇಚನೆಗಳಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಕೃತಿಗಳಷ್ಟೇ ಮಹತ್ತ್ವವನ್ನು ಕೆಲವು ಜಾನಪದ ಗ್ರಂಥಗಳಲ್ಲಿ ಪ್ರಕಟವಾಗಿರುವ ಪ್ರಸ್ತಾವನೆಗಳಿಗೂ ಮುನ್ನುಡಿಗಳಿಗೂ ನೀಡಬೇಕಾಗುತ್ತದೆ. ದೇಜಗೌ ಅವರ ಜನಪದ ಸಾಹಿತ್ಯದ ಸಮೀಕ್ಷೆಯ ಮುನ್ನುಡಿ, ಸಿ. ಪಿ. ಕೆ. ಅವರ ನಮ್ಮ ಒಗಟುಗಳು, ಸಂಕಲನದ ಹಿನ್ನುಡಿ, ಎಚ್. ಎಲ್. ನಾಗೇಗೌಡರ ನಮ್ಮ ಜನಪದಸಾಹಿತ್ಯದ ಹಿನ್ನುಡಿ, ರಾಗೌ ಅವರ ನಮ್ಮ ಗಾದೆಗಳು, ಕರ್ನಾಟಕ ಜನಪದ ಕತೆಗಳು, ನಮ್ಮ ಒಗಟುಗಳು ಮುಂತಾದ ಕೃತಿಗಳ ಪ್ರಸ್ತಾವನೆ, ಜೀಶಂಪ ಅವರ ಕನ್ನಡ ಜನಪದ ಕಥೆಗಳು, ಆಯ್ದ ಕಥೆಗಳು ಸಂಕಲನಗಳ ಪ್ರಸ್ತಾವನೆಗಳು, ಸುಧಾಕರ ಅವರ ಬೆಡಗಿನ ವಚನಗಳು ಸಂಕಲನದ ಪ್ರಸ್ತಾವನೆ–ಮುಂತಾದುವು ಮಾನ

ಪರಿವೃಷ್ಟಿಯಿಂದಲೂ ಉತ್ತಮ ಸಂಶೋಧನ ದೃಷ್ಟಿಯಿಂದಲೂ ಜಾನಪದದ ವೈಜ್ಞಾನಿಕ ಹಿನ್ನೆಲೆಯಿಂದಲೂ ಜಾನಪದದ ವಿವಿಧ ಪ್ರಕಾರಗಳ ಮೇಲೆ ಹೆಚ್ಚಾಗಿ ಬೆಳಕು ಚೆಲ್ಲುವಂಥ ಅತ್ಯಂತ ಉಪಯುಕ್ತ ಲೇಖನಗಳಾಗಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿದವರು ಪ್ರಾಧ್ಯಾಪಕ ದೇಜಗೌ ಅವರು ಜಾನಪದ ತನ್ನ ಎಲ್ಲ ಅಂಗಗಳಲ್ಲೂ ಉನ್ನತ ಸ್ಥಾನವನ್ನು ಪಡೆದುಕೊಳ್ಳುವಂತೆ ಜನಪದ ವಸ್ತುಸಂಗ್ರಹಾಲಯದ ಕನಸನ್ನು ನನಸುಮಾಡಿದವರೂ ಅವರೇ. ಬಹು ಚಿಕ್ಕದಾಗಿ ಪ್ರಾರಂಭವಾದ ಈ ವಸ್ತುಸಂಗ್ರಹಾಲಯ ಈಗ ಬೃಹತ್ಪ್ರಮಾಣದಲ್ಲಿ ಬೆಳೆದಿದ್ದು ಕಣ್ಣಿಗೊಂದು ಹಬ್ಬವೆನಿಸಿದೆ. ಸಂಶೋಧನೆಗೊಂದು ಮೂಲವಸ್ತುವಾಗಿ ಪರಿಣಮಿಸಿದೆ. ಜಾನಪದದ ಬಗ್ಗೆ ಅವರಿಗಿರುವ ಆಳವಾದ ನಿಷ್ಠೆ, ಅಪಾರ ಅನುಭವ, ವಿದ್ವತ್ತುಗಳು ಅವರು ಜನಪದ ಸಾಹಿತ್ಯ ಸಮೀಕ್ಷೆಗೆ ಬರೆದ ಮುನ್ನುಡಿಯಲ್ಲಿ ವ್ಯಕ್ತವಾಗಿವೆ.

ಕನ್ನಡದ ಜನಪ್ರಿಯ ಜನಪದ ಕಲೆ ಯಕ್ಷಗಾನ ಬಯಲಾಟವನ್ನು ಕುರಿತು ಅನೇಕ ಸಂಶೋಧನಾತ್ಮಕ ಗ್ರಂಥಗಳು ಪ್ರಕಟವಾಗಿ ವಿಶೇಷವಾಗಿ ಎಲ್ಲವೂ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಪ್ರಸಿದ್ಧ ಸಂಪ್ರದಾಯಗಳಿಗೆ ಸಂಬಂಧಪಡುತ್ತವೆ. ಶಿವರಾಮ ಕಾರಂತರ ಯಕ್ಷಗಾನ ಬಯಲಾಟ ನಮ್ಮ ಯಕ್ಷಗಾನ ಕಲೆಯ ಬಗ್ಗೆ ಒಂದು ಉತ್ತಮ ಸಂಶೋಧನ ಗ್ರಂಥ. ಸಮಗ್ರ ಕನ್ನಡ ನಾಡಿನ ಯಕ್ಷಗಾನ ಬಗೆಗಳನ್ನು ಏಕೆ, ದಕ್ಷಿಣ ಕನ್ನಡ ಜಿಲ್ಲೆಯ ತೆಂಕತಿಟ್ಟಿನ ಕೆಲವು ವೈಶಿಷ್ಟ್ಯಗಳನ್ನು ಕುರಿತು ಕಾರಂತರು ಹೆಚ್ಚಾಗಿ ವಿಚಾರ ಮಾಡದಿದ್ದರೂ ಯಕ್ಷಗಾನದ ಸಾಮಾನ್ಯ ಸ್ವರೂಪದ ಬಗ್ಗೆ ಅಪಾರ ಸಾಮಗ್ರಿಯನ್ನು ಕಲೆಹಾಕಿ ಪ್ರೌಢರೀತಿಯ ವಿವೇಚನೆ ನಡೆಸಿದ್ದಾರೆ. ಕರ್ನಾಟಕದ ಸೂತ್ರದ ಬೊಂಬೆಯಾಟ, ತೊಗಲುಬೊಂಬೆಯಾಟಗಳ ಬಗೆಗೂ, ಮೂಡಲ-ಪಾಯ, ದೊಡ್ಡಾಟಗಳ ಬಗೆಗೂ ಇನ್ನೂ ಸಾಕಷ್ಟು ವಿವೇಚನೆ ನಡೆಯಬೇಕಾಗಿದೆ.

ಕನ್ನಡ ಜಾನಪದದ ಬಗ್ಗೆ ಶಾಸ್ತ್ರೀಯವಾದ ಸಂಶೋಧನೆ, ಸಮರ್ಪಕವಾದ ಕೃತಿ ಸಂಗ್ರಹ-ಇವು ಈಚೆಗೆ ವಿಶೇಷ ಆಸಕ್ತಿಯಿಂದ ಜರುಗುತ್ತಿವೆ. ಎಚ್.ಎಲ್. ನಾಗೇಗೌಡರು, ರಾಮಾರಾಧ್ಯರು ಮುಂತಾದವರು ಸಂಗ್ರಹ ಕಾರ್ಯದಲ್ಲಿ ನಿರತರಾಗಿ ಗಣನೀಯ ಕಾರ್ಯ ಮಾಡಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತಿನ ಅಂಗಪತ್ರಿಕೆಯಾದ ಜಾನಪದ ಉತ್ತಮ ವಿಷಯಗಳನ್ನು ಹೊರತರುತ್ತಿದೆ. ಕಾಲಿಕವಾಗಿ ನಡೆಯುವ ಜಾನಪದ ಉತ್ಸವಗಳು, ಮೇಳಗಳು, ಗೋಷ್ಠಿಗಳು, ಸಮ್ಮೇಳನಗಳು, ಪ್ರದರ್ಶನಗಳು ಜನತೆಯಲ್ಲಿ ಆ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಕುದುರಿಸುತ್ತಿವೆ. (ಜಿ.ಎಸ್.ಪಿ.)

**ಕನ್ನಡದ ಉಪಭಾಷೆಗಳು :** ಕನ್ನಡ ಭಾಷಾ ಪ್ರದೇಶವನ್ನು ಗಮನಿಸಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರಲ್ಲಿ ಅನೇಕ ಬಗೆಯ ಭಾಷಾ ಪ್ರಭೇದಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಮುಖ್ಯವಾಗಿ ಮೈಸೂರು ಕನ್ನಡ, ಕರಾವಳಿಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗ ಕನ್ನಡ- ಎಂಬ ನಾಲ್ಕು ಉಪಭಾಷಾ ಪ್ರಭೇದಗಳನ್ನು ಗುರುತಿಸಬಹುದು. ಈ ಪ್ರಭೇದಗಳನ್ನು ಪ್ರಾದೇಶಿಕವಾಗಿ ಹಾಗೂ ಸಾಮಾಜಿಕವಾಗಿ ಪರಿಶೀಲಿಸಲು ಹೊರಟಾಗ ಇವುಗಳಲ್ಲೇ ಎಷ್ಟೋ ಬಗೆಯ ಒಳ ಪ್ರಭೇದಗಳು ಇರುವುದು ಕಂಡುಬರುತ್ತದೆ.

**ಮೈಸೂರು ಕನ್ನಡ:** ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಮತ್ತು ಚಿಕ್ಕಮಗಳೂರು- ಈ ಜಿಲ್ಲೆಗಳಲ್ಲಿ ಆಡುವ ಕನ್ನಡಭಾಷೆಯನ್ನು ಮೈಸೂರುಕನ್ನಡ ಎಂದು ಕರೆಯುವುದು ವಾಡಿಕೆ.

ಈ ಕನ್ನಡದಲ್ಲಿ ಸಾಮಾನ್ಯವಾಗಿ ಸಂಧ್ಯಕ್ಷರಗಳು ಗೋಚರಿಸುವುದಿಲ್ಲ. ವಿದ್ಯಾವಂತರ ಕನ್ನಡದಲ್ಲಿ ಅ, ಆ, ಇ, ಈ, ಉ, ಊ, ಎ, ಏ, ಒ, ಓ, ಎಂಬ ಹತ್ತು ಸ್ವರ ಧ್ವನಿಮಾಗಳಿವೆ. ಅವಿದ್ಯಾವಂತರ ಕನ್ನಡದಲ್ಲಿ ಈ ಹತ್ತು ಸ್ವರ ಧ್ವನಿಮಾಗಳ ಜೊತೆಗೆ ಆ, ಆ್ಯ ಮತ್ತು ಒ ಎಂಬ ಮೂರು ಸ್ವರ ಧ್ವನಿಮಾಗಳು ಸೇರಿ ಒಟ್ಟು 13 ಕ್ಕೂ ಹೆಚ್ಚು ಸ್ವರ ಧ್ವನಿಮಾಗಳು ಗೋಚರವಾಗುತ್ತವೆ; ಮಹಾ ಪ್ರಾಣಾಕ್ಷರಗಳು ಕಂಡುಬರುವುದಿಲ್ಲ. ಅವಿದ್ಯಾವಂತರ ಭಾಷೆಯಲ್ಲಿ ವಿಶೇಷವಾಗಿ ಮಂಡ್ಯ ಪ್ರಾಂತದಲ್ಲಿ ಹ ಕಾರ ಲೋಪವಾಗಿ ಹಾಲು ಎಂಬುದನ್ನು ಆಲು ಎಂತಲೂ ಹಲ್ಲು ಎಂಬುದನ್ನು ಅಲ್ಲು ಎಂತಲೂ ಹೇಳುವುದೂ ರೂಢಿ. ಹಾಗೆಯೇ ಅ ಮತ್ತು ಆ ಕಾರಗಳ ಸ್ಥಳದಲ್ಲಿ ಹ ಮತ್ತು ಹಾ ಕಾರಗಳು ನುಸುಳುವುದುಂಟು. ವಿದ್ಯಾವಂತ ಹಾಗೂ ಅವಿದ್ಯಾವಂತರಿಬ್ಬರಲ್ಲೂ ಙ, ಞ ಎಂಬ ಅನುನಾಸಿಕ ಧ್ವನಿಗಳು ನ ಅನುನಾಸಿಕ ಧ್ವನಿಮಾದ ಉಪಧ್ವನಿಗಳಾಗಿ ಕಂಡುಬರುತ್ತವೆ. ಅವಿದ್ಯಾವಂತರ ಕನ್ನಡದಲ್ಲಿ ಶ,ಷ,ಸ, ಎಂಬ ಊಷ್ಮ ಧ್ವನಿಗಳು ಕಂಡುಬರುತ್ತವೆಯಾದರೂ ಅವು ಬೇರೆ ಬೇರೆ ಧ್ವನಿಮಾಗಳಾಗಿರದೆ ಶ ಮತ್ತು ಷ ಧ್ವನಿಗಳು ಸ ಧ್ವನಿಯ ಉಪಧ್ವನಿಯಾಗಿ ಕಂಡಬರುತ್ತವೆ. ಇಂಗ್ಲಿಷಿನ ಕೆಲವು ಸ್ವೀಕೃತ ಪದಗಳಲ್ಲಿ ಫ (ಜಿ) ಜ (ದ), ಇತ್ಯಾದಿ ಧ್ವನಿಗಳು ಕಂಡುಬರುತ್ತವೆ. ಆದರೂ ಅವುಗಳನ್ನು ಅವಿದ್ಯಾವಂತರು ಪ (ಕಾಫಿ > ಕಾಪಿ) ಮತ್ತು (ಡಜನ್ > ಡಜನ್) ಎಂದೇ ಉಚ್ಚರಿಸುತ್ತಾರೆ. ಪದದ ಆದಿಯಲ್ಲಿ ಬರುವ ಎ ಮತ್ತು ಒ ಸ್ವರಗಳು 'ಯೆ' ಮತ್ತು 'ವೊ' ಎಂದು ಉಚ್ಚಾರವಾಗುತ್ತವೆ. ಈ ಬಗೆಯ ಭಾಷಾ ವ್ಯತ್ಯಾಸ ಒಂದೇ ವರ್ಗದ ಅವಿದ್ಯಾವಂತರಿಗೆ ಮಾತ್ರ ಸೀಮಿತವಾಗಿರದೆ ಎಲ್ಲಾ ಜಾತಿ,ಸಂಸ್ಕೃತಿಯ ಜನರಿಗೂ ಅನ್ವಯಿಸುತ್ತದೆ. ನಿಮ್ನವರ್ಗದ ಜನರ ಆಡುಭಾಷೆಯನ್ನು ಗಮನಿಸಿದರೆ, ಅವರು 'ಏ' ಕಾರವನ್ನು 'ಯಾ' ಎಂತಲೂ ಮತ್ತೆ ಕೆಲವು ವಿದ್ಯಾವಂತರೂ ಕೂಡ ಈ ಬಗೆಯಲ್ಲಿಯೇ 'ಬೇಡ' ಎಂಬುದನ್ನು 'ಬ್ಯಾಡ' ಎಂತಲೂ ಪೇಟೆ ಎಂಬುದನ್ನು ಪ್ಯಾಟೆ ಎಂತಲೂ ಬೇಟೆ ಎಂಬುದನ್ನು ಬ್ಯಾಟೆ ಎಂತಲೂ ಉಚ್ಚರಿಸುವುದನ್ನು ಕಾಣಬಹುದು. ಹಾಸನ ಪ್ರಾಂತದ ಕೆಲವು ಕಡೆ ಅವಿದ್ಯಾವಂತರಲ್ಲಿ 'ಕ' ಕಾರ ಚಕಾರವಾಗಿ ಉಚ್ಚಾರವಾಗುತ್ತದೆ ಉದಾ: ಕೆಂಡ > ಚೆಂಡ, ಕೆರೆ > ಚೆರೆ, ಕೆಲ > ಚೆಲ. ಕೆಲವರು ಚ ಕಾರವನ್ನು ಸ ಕಾರವನ್ನಾಗಿ (ಚಾಪೆ > ಸಾಪೆ) ಉಚ್ಚರಿಸುವುದೂ ಉಂಟು. ಹಾಗೆಯೇ ಕಾಗದ > ಕಾದಗ, ಕಾಜಗ ಎಂದು ಉಚ್ಚರಿಸುವುದನ್ನು ಅಲ್ಲಲ್ಲಿ ಕಾಣಬಹುದು.

ಮೈಸೂರು ಕನ್ನಡದ ವಿದ್ಯಾವಂತ ಹಾಗೂ ಅವಿದ್ಯಾವಂತರ ಭಾಷೆಗಳ ನಡುವೆ ವ್ಯಾಕರಣ ವಿಚಾರಗಳಲ್ಲಿ ಕೇವಲ ಸ್ವಲ್ಪ ಅಂತರ ಕಂಡುಬರುತ್ತದೆ. ಅವನು ಎಂಬುದನ್ನು ಅವ್ನು, ಅವ ಎಂತಲೂ ಕೆಲವು ರೂಪಗಳು ವ್ಯತ್ಯಾಸಗೊಂಡು ಬಳಕೆಯಲ್ಲಿರುವುದನ್ನು ಗಮನಿಸಬಹುದು. ಹಾಗೆಯೇ ಮಾಡುತ್ತೇನೆ, ಮಾಡ್ತೇನೆ, ಮಾಡ್ತಿನಿ, ನೋಡುತ್ತೇನೆ, ನೋಡ್ತೇನೆ, ನೋಡುವ, ಮಾಡೋಣ, ಮಾಡುವ ಎಂಬ ವಿಧ್ಯರ್ಥಕ ರೂಪಗಳೂ ವಿದ್ಯಾವಂತ ಹಾಗೂ ಅವಿದ್ಯಾವಂತರ ನಡುವೆ ವ್ಯತ್ಯಸ್ತಗೊಂಡು ಉಚ್ಚಾರಗೊಳ್ಳುವುದನ್ನು ಕಾಣಬಹುದು. (ಕೆ.ಕೆ.ಜಿ.)

**ಕರಾವಳಿ ಕನ್ನಡ:** ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎರಡು ರೀತಿಯ ಕನ್ನಡ ಬಳಕೆಯಲ್ಲಿದೆ. ತುಳು, ಕೊಂಕಣಿ, ಮರಾಠಿ, ಮಲೆಯಾಳಂ ಮೊದಲಾದ ಭಾಷೆಗಳನ್ನು ಮನೆಮಾತಾಗಿ ಬಳಸುವ ಜನರು ಪರಸ್ಪರ ಸಾಧನೆಗಾಗಿ ಬಳಸುವ ಕನ್ನಡ ಒಂದು ರೀತಿಯದಾದರೆ, ಹವ್ಯಕ, ಗೌಡ, ಕೋಟ, ಕುಂಬಾರ, ಬೈರ ಮೊದಲಾದ ಸಮಾಜಗಳಿಗೆ ಸೇರಿದ ಜನ ತಮ್ಮತಮ್ಮೊಳಗೆ ಬಳಸುವ ಕನ್ನಡ ಇನ್ನೊಂದು ರೀತಿಯದು. ಇವುಗಳಲ್ಲಿ ಮೊದಲಿನದನ್ನು ಸಾಂಪರ್ಕಿಕ ಕನ್ನಡವೆಂದು ಎರಡನೆಯದನ್ನು ತಾಯಿನುಡಿ ಕನ್ನಡವೆಂದೂ ಪ್ರತ್ಯೇಕಿಸಿ ಹೇಳಬಹುದು.

ಹೊರಗಿನಿಂದ ಬಂದವರಿಗೆ ಈ ಜಿಲ್ಲೆಯಲ್ಲಿ ಮೊದಲಿಗೆ ಕೇಳಿಸುವುದು ಸಾಂಪರ್ಕಿಕ ಕನ್ನಡ. ಇದನ್ನು ಆಡುವವರು ಬೇರೆ ಬೇರೆ ಭಾಷೆಗಳನ್ನು ಮನೆಮಾತಾಗಿ ಬಳಸುವವರಾದ್ದರಿಂದ, ಈ ನುಡಿಯಲ್ಲಿ ತುಳು, ಕೊಂಕಣಿ ಮೊದಲಾದ ಭಾಷೆಗಳ ಪ್ರಭಾವ ಹೆಚ್ಚು ಕಾಣಿಸುತ್ತದೆ. ಅಲ್ಲದೆ, ಈ ಕನ್ನಡವನ್ನು ಬಹುಮಂದಿ ಶಾಲೆ, ಕಾಲೇಜು, ಪುಸ್ತಕ, ಪತ್ರಿಕೆ ಇವುಗಳ ಮೂಲಕ ಮತ್ತು ಸಭೆ, ನಾಟಕಗಳ ಮೂಲಕ ಪಡೆದಿರುವವರಾದ್ದರಿಂದ ಇದು ಆಡುನುಡಿಗಿಂತಲೂ ಬರೆಹದ ಕನ್ನಡವನ್ನೇ ಹೆಚ್ಚು ಹೋಲುತ್ತದೆ. ಸಾಂಪರ್ಕಿಕ ಕನ್ನಡ ಯಾವ ರೀತಿಯಲ್ಲಿ ಬೆಳೆದುಬಂದಿದೆ. ಅದರ ಬೆಳವಣಿಗೆಗೂ ಆಡುನುಡಿಯ ಬೆಳವಣಿಗೆಗೂ ಏನು ಭೇದವಿದೆ. ಅದರಲ್ಲಿ ಬೇರೆ ಬೇರೆ ಸಮಾಜಗಳಿಗೆ ಮತ್ತು ಆ ಸಮಾಜದವರ ಮಾತೃಭಾಷೆಗಳಿಗೆ ಅನುಗುಣವಾಗಿ ಹೇಗೆ ಪ್ರಭೇದಗಳು ಮೂಡಿಬಂದಿವೆ. ಅದರ ಮೇಲೆ ವಿದ್ಯಾಭ್ಯಾಸದ ಪ್ರಭಾವ ಎಂಥದ್ದು ಇತ್ಯಾದಿ ಪ್ರಶ್ನೆಗಳನ್ನು ಉತ್ತರಿಸಲು ಇನ್ನೂ ಬಹಳಷ್ಟು ಸಂಶೋಧನೆಗಳನ್ನು ನಡೆಸುವ ಆವಶ್ಯಕತೆಯಿದೆ.

ಕನ್ನಡ ಭಾಷೆಯ ಚರಿತ್ರೆಯ ದೃಷ್ಟಿಯಿಂದ ನೋಡುವುದಾದರೆ, ಈ ಸಾಂಪರ್ಕಿಕ ಪ್ರಭೇದಕ್ಕಿಂತಲೂ ಹವ್ಯಕ, ಕೋಟ, ಗೌಡ, ಕುಂಬಾರ ಮೊದಲಾದ ಸಮಾಜಗಳವರು ಮನೆಮಾತಾಗಿ ಬಳಸುವ ಆಡುನುಡಿ ಕನ್ನಡ ಹೆಚ್ಚು ಪ್ರಮುಖವಾದುದೆಂದು ಹೇಳಬಹುದು. ಪಶ್ಚಿಮ ಘಟ್ಟಗಳ ಪಶ್ಚಿಮಕ್ಕಿರುವ ಕರಾವಳಿ ಪ್ರದೇಶದಲ್ಲೆಲ್ಲಾ ಪ್ರಚಾರದಲ್ಲಿರುವ ಕನ್ನಡ ಇತರ ಒಳನಾಡ ಕನ್ನಡದ ಪ್ರಭೇದಗಳಿಂದ ಬೇರೆಯಾಗಿ ಸುಮಾರು ಒಂದೂವರೆ ಸಾವಿರ ವರ್ಷಗಳಾದರೂ ಕಳೆದಿರಬಹುದು. ಕನ್ನಡದ ಆಧುನಿಕ ಪ್ರಭೇದಗಳನ್ನೆಲ್ಲ ತೌಲನಿಕವಾಗಿ ಅಭ್ಯಾಸಮಾಡಿದಾಗ, ಕರಾವಳಿ ಮತ್ತು ಒಳನಾಡ ಕನ್ನಡಗಳೊಳಗೆ ನಡೆದ ಪೂರ್ವ ಪಶ್ಚಿಮ ವಿಭಜನೆ ಕನ್ನಡದ ಮಟ್ಟಿಗೆ ಅತ್ಯಂತ ಪ್ರಾಚೀನವಾದುದೆಂದು ತಿಳಿದುಬಂದಿದೆ. ಈ ವಿಭಜನೆ ಹಳಗನ್ನಡದ ಕಾಲಕ್ಕಿಂತಲೂ ಹಿಂದಿನದೆಂಬುದಕ್ಕೆ ಸ್ಪಷ್ಟವಾದ ಆಧಾರಗಳಿವೆ.

ಉದಾಹರಣೆಗಾಗಿ, ಹಳಗನ್ನಡದ ಕಾಲಕ್ಕಿಂತ ಮೊದಲು ಎಂದರೆ, ಆರು ಏಳನೆಯ ಶತಮಾನದಲ್ಲಿ ನಡೆದ ಮಧ್ಯಸ್ವರ ಉಚ್ಚಸ್ವರದೆದುರು ಉಚ್ಚವಾಗಿರುವ ಬದಲಾವಣೆಯನ್ನು ಗಮನಿಸಬಹುದು. ಈ ಬದಲಾವಣೆಯ ಫಲವಾಗಿ ಹಿಂದಿದ್ದ ಬೆಳಿ > ಬಿಳಿ, ಕೆವಿ > ಕಿವಿ, ಬೆಸಿ > ಬಿಸಿ, ಒಳಿ > ಉಳಿ, ತೊದಿ > ತುದಿ, ತೊಳಿ > ತುಳಿ ಇತ್ಯಾದಿಯಾಗಿ ಬದಲಾವಣೆ ಹೊಂದಿತು. ಐದೂ ಆರನೆಯ ಶತಮಾನಗಳ ಶಾಸನಗಳಲ್ಲಿ ಈ ಬದಲಾವಣೆಯಾದಂತೆ ಕಾಣಿಸುವುದಿಲ್ಲ. ಅಲ್ಲದೆ ಇಂದಿನ ಕರಾವಳಿಯ ಆಡುನುಡಿ ಕನ್ನಡದಲ್ಲೂ ಇದು ಕಾಣಿಸುತ್ತಿಲ್ಲ. ಈ ಪರಿಸ್ಥಿತಿಯ ಅರ್ಥವೇನೆಂದರೆ, ಐದು ಆರನೆಯ ಶತಮಾನಗಳು ಈ ಬದಲಾವಣೆ ನಡೆದ ಕಾಲಕ್ಕಿಂತ ಹಿಂದಿನವಾಗಿರಬೇಕು ಮತ್ತು ಕರಾವಳಿಯ ಆಡುನುಡಿ ಕನ್ನಡ ಈ ಬದಲಾವಣೆ ನಡೆದ ಕಾಲಕ್ಕಿಂತ ಹಿಂದೆಯೆ ಒಳನಾಡ ಕನ್ನಡದಿಂದ ಒಡೆದು ಬೇರಾಗಿ ಬಂದಿರಬೇಕು. ಮತ್ತು ಒಳನಾಡಿನಲ್ಲಿ ಮಾತ್ರವೆ ನಡೆದ ಈ ಬದಲಾವಣೆ ಇದಕ್ಕೆ ಒಳಪಡದೆ ಇದ್ದಿರಬೇಕು.

ಕರಾವಳಿಯ ಆಡುನುಡಿ ಕನ್ನಡವನ್ನು ಒಳನಾಡಿನ ಆಡುನುಡಿ ಕನ್ನಡದಿಂದ ಬೇರ್ಪಡಿಸುವ ಅಂಶಗಳು ಇನ್ನೂ ಹಲವಾರಿವೆ. ಉದಾಹರಣೆಗೆ ಒಳನಾಡಿನ ಆಡುನುಡಿ ಕನ್ನಡದ ಪ್ರಭೇದಗಳಲ್ಲೆಲ್ಲ ಮೂರಕ್ಷರದ ಪದಗಳಲ್ಲಿ ಬರುವ ಎರಡನೆಯ ಸ್ವರ ಲೋಪಗೊಂಡಿದೆ (ಹಗಲು– ಹಗ್ಲು, ಅಡಕೆ– ಅಡ್ಕೆ, ಅಂಗಡಿ– ಅಂಗ್ಡಿ, ಬಾಗಿಲು– ಬಾಗ್ಲು ಇತ್ಯಾದಿ.) ಆದರೆ ಈ ಬದಲಾವಣೆ ಕರಾವಳಿಯ ಆಡು ನುಡಿಯಲ್ಲಾಗಿಲ್ಲ. ಹಾಗೆಯೆ ದೀರ್ಘ ಸ್ವರದ ಅನಂತರ ಇಲ್ಲವೆ ಮೂರಕ್ಷರದ ಪದಗಳಲ್ಲಿ ಎರಡನೆಯ ಸ್ವರಕ್ಕೆ ಪರವಾಗಿ ಬರುವ ಅನುನಾಸಿಕಗಳು ಸಮಾನಸ್ಥಾನಿಯಾದ ವ್ಯಂಜನ ಪರವಾದಾಗ ಲೋಪಗೊಂಡಿರುವುದನ್ನು ಒಳನಾಡಿನ ಕನ್ನಡದಲ್ಲಿ ಕಾಣಬಹುದು (ನಾಂಟು– ನಾಟು, ನೂಂಕು– ನೂಕು, ಮುರುಂಟು– ಮುರುಟು, ಕಲಂಕು– ಕಲಕು ಇತ್ಯಾದಿ). ಕರಾವಳಿಯ ದಕ್ಷಿಣ ಭಾಗದಲ್ಲಿ ಈ ಲೋಪ ಸಂಭವಿಸಿಲ್ಲ.

ಈ ಪ್ರಭೇದಗಳ ವ್ಯಾಕರಣವನ್ನು ಗಮನಿಸಿದರೆ, ಕರಾವಳಿಯ ಪ್ರಭೇದಗಳು ಹಳಗನ್ನಡದಲ್ಲಿ ತೋರಿಬರುವ ನಿಷೇಧ ಕ್ರಿಯಾರೂಪ (ಕೇಳೆಂ, ಪೇಳೆಂ ಇತ್ಯಾದಿ) ಮತ್ತು ಭವಿಷ್ಯದ್ರೂಪ (ಕೇಳ್ವೆಂ, ಪೇಳ್ವೆಂ ಇತ್ಯಾದಿ) ಇವುಗಳನ್ನು ಉಳಿಸಿಕೊಂಡು ಬಂದಿರುವುದೂ ಒಳನಾಡಿನ ಪ್ರಭೇದಗಳು ಇವೆರಡನ್ನೂ ಕಳೆದುಕೊಂಡಿರುವುದ ಸ್ಪಷ್ಟವಾಗುತ್ತದೆ. ಅಲ್ಲದೆ ಹಳಗನ್ನಡದಲ್ಲಿ ಕಾಣಿಸದೆ ಇರುವ ಪೂರ್ಣ ವರ್ತಮಾನ ರೂಪಮೊಂದು (ಕುಡ್ದೀನಿ, ಮಾಡ್ದೀನಿ, ಇತ್ಯಾದಿ) ಹೊಸತಾಗಿ ಈ ಒಳನಾಡಿನ ಪ್ರಭೇಧಗಳಲ್ಲಿ ಮೂಡಿಬಂದಿದೆಯೆಂಬ ವಿಷಯಮೂ ತಿಳಿಯುತ್ತದೆ.

ಕರಾವಳಿಯ ಪ್ರಭೇದಗಳಲ್ಲಿ ಬರುವ ಪುರುಷವಾಚಕ ಪ್ರತ್ಯಯಗಳಿಗೆ ಎಲ್ಲಾ ಕಾಲವಾಚಕ ಕ್ರಿಯಾರೂಪಗಳಲ್ಲೂ ಒಂದೇ ರೂಪವಿದೆಯಾದರೆ, ಒಳನಾಡಿನ ಪ್ರಭೇದಗಳಲ್ಲೆಲ್ಲ ಇವಕ್ಕೆ ಭೂತ ಪ್ರತ್ಯಯದೆದುರು ಹ್ರಸ್ವರೂಪವಿದೆ ಮತ್ತು ಇತರೆಡೆಗಳಲ್ಲಿ ದೀರ್ಘರೂಪವಿದೆ (ಕುಡ್ದೆ– ಕುಡಿತೀನಿ. ಮಾಡ್ದೆ– ಮಾಡ್ತೀನಿ ಇತ್ಯಾದಿ).

ಕರಾವಳಿಯಲ್ಲೂ ಕೂಡ ದಕ್ಷಿಣ ಕನ್ನಡ ಉಡುಪಿಜಿಲ್ಲೆಗಳಲ್ಲಿ ಕಾಣಿಸುವ ಆಡುನುಡಿ ಕನ್ನಡ ಒಂದು ತೆರನಾದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಣಿಸುವ ಆಡುನುಡಿ ಕನ್ನಡ ಇನ್ನೊಂದು ತೆರ. ಸಾಮಾನ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ಪ್ರಭೇದಗಳ ಮೇಲೆ ಒಳನಾಡ ಕನ್ನಡದ ಪ್ರಭಾವ ಸ್ಪಷ್ಟವಾಗಿಯೆ ಕಾಣಿಸುತ್ತಿದೆಯೆನ್ನಬಹುದು. ತುಳು– ಮಲೆಯಾಳಂಗಳ ಸಂಪರ್ಕವಿದ್ದುದರಿಂದಾಗಿ ಮತ್ತು ಕಳೆದ ನೂರು– ನೂರೈವತ್ತು ವರ್ಷಗಳಲ್ಲಿ ಕೇರಳ ಮತ್ತು ತಮಿಳುನಾಡುಗಳೊಡನೆ ಆಡಳಿತದ ಮಟ್ಟಿಗೂ ಹತ್ತಿರದ ಸಂಪರ್ಕವಿದ್ದುದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಆಡುನುಡಿ ಕನ್ನಡ ತನ್ನದೇ ಆದ ವಿಶಿಷ್ಟ ರೂಪವನ್ನು ಪಡೆದಿದೆ.

ಕನ್ನಡ ಭಾಷೆಯ ಸ್ವರೂಪವನ್ನು ಮತ್ತು ಅದು ಬೆಳೆದು ಬಂದ ರೀತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಎಂತೆಂತಹ ಪ್ರಭೇದಗಳು ಪ್ರಚಾರದಲ್ಲಿವೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳುವುದು ಆವಶ್ಯ. ಮುದ್ದಣನ ಊರಾದ ದಕ್ಷಿಣ ಕನ್ನಡ ಜಿಲ್ಲೆ ಈ ಮಟ್ಟಿಗೆ ಹಲವಾರು ವಿಶಿಷ್ಟವಾದ ಪ್ರಭೇದಗಳನ್ನು ಪಂಡಿತರ ಕೈಗೆ ಕೊಡಬಲ್ಲುದು. ಭೌಗೋಳಿಕ ಮತ್ತು ರಾಜಕೀಯ ಕಾರಣಗಳಿಂದಾಗಿ ಈ ಭಾಗ ಕರ್ನಾಟಕದ ಇತರ ಭಾಗಗಳಿಂದ 1956ರವರೆಗೂ ಬೇರಾಗಿಯೆ ಉಳಿದಿತ್ತು. ಇದರಿಂದಾಗಿ ಇಲ್ಲಿನ ಆಡುನುಡಿಗಳು ಕನ್ನಡದ ಇತರ ಆಡುನುಡಿಗಳಿಂದ ಬೇರೆಯಾಗಿದ್ದು, ತಮ್ಮವೇ ಆದ ದಿಕ್ಕಿನಲ್ಲಿ ಬೆಳೆದು ಬಂದಿವೆ. ಕೆಲವು ವಿಷಯಗಳಲ್ಲಿ ಇವು ಹೊಸ ಹಾದಿ ಹಿಡಿದಿವೆಯಾದರೆ ಇನ್ನು ಕೆಲವು ವಿಷಯಗಳಲ್ಲಿ ಇವು ಹಳೆಯ ಪ್ರಕಾರಗಳನ್ನು ಹಾಗೆಯೆ ಉಳಿಸಿಕೊಂಡು ಬಂದಿವೆ. (ಡಿ.ಎನ್.ಎಸ್.)

**ಧಾರವಾಡ ಕನ್ನಡ:** ಇದು ಕನ್ನಡದ ಪ್ರಾದೇಶಿಕ ಉಪಭಾಷೆಗಳಲ್ಲಿ ಪ್ರಮುಖ ಉಪಭಾಷಾಪ್ರಭೇದ. ಇದರಲ್ಲಿ ಧಾರವಾಡ, ಬಿಜಾಪುರ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಭಾಷಾರೂಪಗಳು ಸಮಾವೇಶಗೊಳ್ಳುತ್ತವೆ. ಜಿಲ್ಲೆ ಜಿಲ್ಲೆಗೆ, ತಾಲ್ಲೂಕು ತಾಲ್ಲೂಕಿಗೆ, ಮತ್ತೆ ಒಳಭೇದಗಳು ಕಂಡುಬಂದರೂ ಈ ಪ್ರದೇಶದ ವಿಶಿಷ್ಟ ರೂಪಗಳೆನ್ನಲು ಬರುವಂಥ ಪ್ರಯೋಗಗಳಿವೆ. ಈ ಪ್ರಯೋಗಗಳನ್ನು ಇತರ ಉಪಭಾಷಾ ಪ್ರಭೇದಗಳಲ್ಲಿ ಕಂಡುಬರುವ ರೂಪಗಳೊಡನೆ ಹೋಲಿಸಿ ನೋಡಿದಾಗ ಧಾರವಾಡ ಕನ್ನಡದ ವೈಶಿಷ್ಟ್ಯಗಳು ವಿಶಿಷ್ಟವಾಗಿ ಕಂಡುಬಂದು, ಅದಕ್ಕೆ ಒಂದು ಭಿನ್ನಸ್ಥಾನ ಒದಗಿಸಿಕೊಡುತ್ತವೆ.

ಗ್ರಂಥಸ್ಥ ಭಾಷೆಯಲ್ಲಿ (ಅದೇ ರೀತಿ, ಮೈಸೂರು ಮುಂತಾದ ಪ್ರಭೇದಗಳಲ್ಲಿ) ಎ ಕಾರದಲ್ಲಿ ಕೊನೆಗೊಳ್ಳುವ ಶಬ್ದಗಳು ಇಲ್ಲಿ ಇ ಕಾರಾಂತವಾಗುತ್ತವೆ. ಉದಾ ಮನೆ– ಮನಿ,ತೆನೆ–ತೆನಿ, ತಲೆ –ತಲಿ, ಬರೆ–ಬರಿ ಇತ್ಯಾದಿ.

ಶಬ್ದಮಧ್ಯದ ಒ ಸ್ವರ ಇಲ್ಲಿ ಆ್ಯ ಆಗುತ್ತದೆ. ಉದಾ ಕೋಟೆ– ಕ್ವಾಟೆ, ದೋಸೆ– ದ್ವಾಸಿ, ಗೋಡೆ– ಗ್ವಾಡಿ ಕೊರೆ – ಕ್ವಾರಿ ಇತ್ಯಾದಿ

ಶಬ್ದಮಧ್ಯದ ಎ ಇಲ್ಲಿ ಆ್ಯ ಆಗಿದೆ. ಉದಾ ಮೇಲೆ – ಮ್ಯಾಲೆ ಕೆರೆ – ಕ್ಯಾರಿ ಮೆರೆ – ಮ್ಯಾರಿ ಇತ್ಯಾದಿ

ಮಹಾಪ್ರಾಣದ ಉಚ್ಛಾರ ಮೈಸೂರು ಕನ್ನಡದಲ್ಲಿ ಕಂಡುಬರುವುದಕ್ಕಿಂತ ಇಲ್ಲಿ ಹೆಚ್ಚು ಸ್ಪಷ್ಟವಾಗಿದೆ. ಉದಾ ಭಾಸೆ –(ಮೈ ಬಾಸಿ–) ವಿದ್ಯಾರ್ಥಿ –(ಮೈ ವಿದ್ಯಾರ್ತಿ–), ಭೆಟ್ಟಿ –(ಮೈ ಬೆಟ್ಟಿ–) ಇತ್ಯಾದಿ

ಇಲ್ಲಿ ಕಂಡುಬರುವ ಸಂಸ್ಕೃತ ಪದಗಳ ಉಚ್ಚಾರಣೆ (ಅನುಸ್ವಾರದ ಉಚ್ಚಾರ) ಮೈಸೂರು ಕನ್ನಡಕ್ಕಿಂತ ಭಿನ್ನವಾಗಿದೆ. ಉದಾ ಸಂಸಾರ (ಮೈ. ಸಮ್‌ಸಾರ,) ಸಿಂಹ (ಮೈ. ಸಿಮ್ಮ) ಇತ್ಯಾದಿ.

ಇಲ್ಲಿ ಬಳಕೆಯಾಗುವ ಇಂಗ್ಲಿಷ್ ಪದಗಳ ಉಚ್ಚಾರ ಮೈಸೂರು ಕನ್ನಡಕ್ಕಿಂತ ಭಿನ್ನವಾಗಿದೆ. ಉದಾ: ರೇಲು (ಮೈ.ರೈಲು), ಜಜ್ (ಮೈ.ಜಡ್ಜ್), ಜಾಯಿಂಟ್ (ಮೈ.ಜಂಟಿ), ರಜಿಸ್ಟಾರ್ (ಮೈ.ರಿಜಿಸ್ಟ್ರಾರ್) ಇತ್ಯಾದಿ.

ಕ್ರಿಯಾರೂಪಗಳಲ್ಲಿಯ ಶಬ್ದಾಂತ್ಯ– ಎ ಕಾರ ಇಲ್ಲಿ ಇ ಕಾರಾಂತವಾಗಿದೆ. ಉದಾ: ಹೋಗ್ತೀನಿ (ಹೋಗ್ತೇನಿ), ಬರ್ತೀನಿ (ಬರ್ತೆನೆ), ಕೊಡತೀನಿ (ಕೊಡತೇನೆ) ಇತ್ಯಾದಿ.

ಕ್ರಿಯಾರೂಪಗಳಲ್ಲಿಸಮರೂಪಧಾರಣೆ ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉದಾ: ತಿನ್ನಿ (ತಿಂದೆ), ಬಾನ್ನಿ (ಬಂದೆ) ಮಲಕೊನ್ನಿ (ಮಲಗಿಕೊಂಡೆ), ತಾನ್ನಿ (ತಂದೆ) ಇತ್ಯಾದಿ.

ಕ್ರಿಯಾರೂಪಗಳಲ್ಲಿ ಇನ್ನೊಂದು ರೀತಿಯ ವೈಶಿಷ್ಟ್ಯಮೂ ಇದೆ. ಉದಾ: ಬರತತಿ (ಮೈ. ಬರುತ್ತೆ), ಹೋಗತತಿ (ಮೈ. ಹೋಗತ್ತೆ), ತಿಂತತಿ (ಮೈ. ತಿನ್ನುತ್ತೆ) ಇತ್ಯಾದಿ.

ಧಾರವಾಡ ಕನ್ನಡಕ್ಕೆ ವಿಶಿಷ್ಟವೆನಿಸುವ ಕೆಲಪದಪ್ರಯೋಗಗಳಿವೆ. ಉದಾ ತಿನಸು (ಮೈ. ತಿಂಡಿ), ಗಿಡ (ಮೈ. ಮರ), ಆಯೆರೀ (ಮೈ. ಉಡುಗೊರೆ), ತೊಪ್ಪಲು (ಮೈ. ಸೊಪ್ಪು), ಚಲೂ (ಮೈ. ಚನ್ನಾಗಿ, ಚನ್ನಾದು, ಅಮ್ಮ (ಮೈ. ಅಜ್ಜಿ), ಸಿರಾ (ಮೈ. ಕೇಸರಿಭಾತ್), ತಿಂದು (ಮೈ. ತಿಂದ್ಕೂಂಡು), ಹಾಲು ಹಿಂಡು (ಮೈ. ಹಾಲುಕರಿ), ಚಲೂ ಐತಿ (ಮೈ. ಚನ್ನಾಗಿದೆ). ದಂಡಿ ಮುಟ್ಟಬೇಕು (ಮೈ. ದಡ ಸೇರಬೇಕು) ಇತ್ಯಾದಿ.

ಇಲ್ಲಿಯ ಭೌಗೋಳಿಕ ಪರಿಸರ ಮತ್ತು ಐತಿಹಾಸಿಕ ಕಾರಣಗಳಿಂದ ಧಾರವಾಡ ಕನ್ನಡದ ಮೇಲೆ ಮರಾಠಿಯ ಪ್ರಭಾವ ಕಂಡುಬರುತ್ತದೆ. ಉದಾಹರಣೆಗೆ ಶಂಬರ್ (ನೂರು), ಸವ್ವಾಸೇರು (ಒಂದೂಕಾಲು ಸೇರು), ಪೋನೆ ಏಳು (6 ಮುಕ್ಕಾಲು), ಛತ್ತೀಸ್ (36, ಆಢ್ಯ ಮನುಷ್ಯ), ತಿರಸಟ್ಟಿ (63, ಎಡವಟ್ಟ ಮನುಷ್ಯ), ಟಕ್ಕೆ (ಪ್ರಮಾಣ), ಮಿಸಳ್ (ಒಂದು ತಿಂಡಿ), ಭಾಮಟ್ಯಾ (ಒಂದು ಬೈಗಳು), ಮುಂತಾದ ಪ್ರಯೋಗಗಳ ಬಹುಸಂಖ್ಯೆಯಲ್ಲಿ ಬಳಕೆಯಲ್ಲಿವೆ. ಮೈಸೂರು ಕನ್ನಡ ಗ್ರಂಥಸ್ಥ ಭಾಷೆಗೆ ಸಮೀಪವಾಗಿದ್ದರೆ ಧಾರವಾಡ ಕನ್ನಡ ಗ್ರಂಥಸ್ಥ ಭಾಷೆಗೆ ಬಲು ದೂರವಾಗಿದೆ. (ಜಿ.ಎಸ್.ಕೆ)

**ಗುಲ್ಬರ್ಗ ಕನ್ನಡ:** ಗುಲ್ಬರ್ಗ, ಬಿದರೆ, ರಾಯಚೂರು ಜಿಲ್ಲೆಗಳ ಕನ್ನಡವನ್ನು ಹೈದರಾಬಾದ್ ಕರ್ನಾಟಕ ಕನ್ನಡ ಎಂದೂ ಕರೆಯುವುದುಂಟು. ಈ ಉಪಭಾಷೆಯ ಮೇಲೆ ಮರಾಠಿ, ಉರ್ದು, ಸಂಸ್ಕೃತಗಳ ಪ್ರಭಾವ ತೀವ್ರತರವಾಗಿ ಆಗಿದೆ. ಮೊದಲಿಗೆ ಈ ಉಪಭಾಷೆಯನ್ನಾಡುವ ಪ್ರದೇಶ ಹೈದರಾಬಾದ್ ನಿಜಾಮರ ಆಳಿಕೆಗೆ ಒಳಗಾಗಿತ್ತಾದ ಕಾರಣ ಉರ್ದು ಈ ಭಾಷೆಯ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. ಈ ಉಪಭಾಷೆಯಲ್ಲೂ ಉಳಿದ ಕನ್ನಡದ ಉಪ ಭಾಷೆಗಳಲ್ಲಿ ಕಂಡುಬರುವಂತೆ ಆ ಧ್ವನಿಮಾ ಆ್ಯ ಮತ್ತು ಆ ಎಂಬ ಎರಡು ಧ್ವನಿಮಾ ಆಗಿ ರೂಪ ತಾಳಿದೆ. ಚ ಮತ್ತು ಜ ಎಂಬ ಈಷತ್ ಸ್ಪರ್ಶ ವ್ಯಂಜನ ಧ್ವನಿಮಾಗಳು ಈ ಕನ್ನಡದಲ್ಲಿ ಕಂಡುಬರುತ್ತವೆ. ಇವುಗಳ ಜೊತೆಗೆ ಚ ಜ ಎಂಬ ತಾಲವ್ಯ ಸ್ಪರ್ಶವ್ಯಂಜನ ಧ್ವನಿಮಾಗಳೂ ಬಳಕೆಯಲ್ಲಿವೆ. ಎಷ್ಟೋ ವೇಳೆ ಉರ್ದುವಿನ ಪ್ರಭಾವದಿಂದ ಕನ್ನಡದ ಜ ವ್ಯಂಜನ ಧ್ವನಿಮಾಕ್ಕೆ ಬದಲು ಜ ಬಳಕೆಯಾಗುತ್ತದೆ ಉದಾ: ಬೀಜ > ಬೀಜ, ಶಿಷ್ಟ ಕನ್ನಡದ ವಕಾರಾಂತ ಶಬ್ದಗಳು ವ್ಯಂಜನಾಂತವಾಗಿವೆ. ಹೆಚ್ಚಿನ ಬದಲಾವಣೆ ವ್ಯಾಕರಣ ಪ್ರಕ್ರಿಯೆಗಳಿಗಿಂತ ಪದಕೋಶಕ್ಕೆ ಸೀಮಿತವಾಗಿದೆ. ಕೆಲಮೊಮ್ಮೆ ಊರುಗಳ ಹೆಸರುಗಳು ಗುರುತು ಸಿಗದಷ್ಟು ರೂಪಾಂತರ ಹೊಂದಿವೆ. ಗುಲ್ಬರ್ಗದ ಮೂಲ ಹೆಸರು ಕಲುಬುರುಗೆ ಎಂದಿದ್ದಿತಾದರೂ ಈಗಿನ ಹೆಸರಿನಲ್ಲಿ ಅದರ ಸುಳಿಮೂ ಸಿಗುವುದಿಲ್ಲ. ಇಂಥ ಬದಲಾವಣೆಗಳು ಕೆಲಮೊಮ್ಮೆ ಸ್ವಾಭಾವಿಕವಾಗಿಯೇ ಆಗಿರದೆ ಆಡಳಿತಗಾರರ ಬಲಾತ್ಕಾರದ ಹೇರಿಕೆಯಿಂದಲೂ ಆಗಿರುವುದುಂಟು. ಬಿಜಾಪುರ ಕನ್ನಡವನ್ನು ಕೆಲಮೊಮ್ಮೆ ಗುಲ್ಬರ್ಗ ಕನ್ನಡದಲ್ಲೆ ಸೇರಿಸುವುದುಂಟು. ಈ ಎರಡೂ ಪ್ರಭೇದಗಳ ನಡುವೆ ಅಂತರ ಹೆಚ್ಚಾಗಿ ಕಂಡುಬರುವುದಿಲ್ಲ. ವ್ಯಾಕರಣಾಂಶಗಳಲ್ಲಿಯೂ ಬಿಜಾಪುರ ಕನ್ನಡ ಗುಲ್ಬರ್ಗ ಕನ್ನಡದೊಂದಿಗೆ ಸಾಮ್ಯ ಹೊಂದಿದೆ. ಈ ಎರಡು ಭಾಷಾರೂಪಗಳಲ್ಲಿ ಕೆಲಮೊಮ್ಮೆ ಆಕಾರಾಂತ ಸಂಬಂಧಸೂಚಕ ಸರ್ವನಾಮಗಳು ಯಕಾರಾದಿಯಾಗುತ್ತವೆ. ಉದಾ: ಅಪ್ಪ > ಯಪ್ಪ, ಅವ್ವ > ಯವ್ವ. ಈ ಭಾಷಾ ಪ್ರಭೇದಗಳಲ್ಲಿ ಅನ್ಯರನ್ನು ಕುರಿತು ಸಂಬೋಧಿಸುವಾಗ 'ರಿ' ಎಂಬ ಪ್ರತ್ಯಯ ಹೆಚ್ಚಾಗಿ ಬಳಕೆಯಾಗುತ್ತದೆ. ವಿದ್ಯಾವಂತರ ಭಾಷೆಯಲ್ಲಿ ಮಾತ್ರ ಮಹಾಪ್ರಾಣಾಕ್ಷರಗಳು ಉಳಿದಿವೆ. ಅಲ್ಪಪ್ರಾಣವನ್ನೇ ಮಹಾಪ್ರಾಣವಾಗಿ ಉಚ್ಚರಿಸುವ ಪ್ರವೃತ್ತಿ ಅನ್ಯಭಾಷೆಯನ್ನಾಡುವವರಲ್ಲಿ ಕಂಡುಬರುತ್ತದೆ. ಅವಿದ್ಯಾವಂತರಲ್ಲಿ ಹಾಗೂ ಕೆಳವರ್ಗದವರಲ್ಲಿ ಹ ಕಾರ ಲೋಪವಾಗುತ್ತದೆ. ಉಕಾರಾಂತ ಪದಗಳ ವಿದ್ಯಾವಂತರ

ನುಡಿಯಲ್ಲಿ ಅಕಾರಾಂತವಾಗುವುದುಂಟು (ಆಕಳು > ಆಕಳ). ಈ ಭಾಷೆಯಲ್ಲಿ ಬಳಕೆಯಾಗುವ ಬಹಳಷ್ಟು ಸಂಖ್ಯಾವಾಚಕಗಳು ಉರ್ದು ಇಲ್ಲವೇ ಮರಾಠಿ ಭಾಷೆಗಳಿಂದ ಎರವಲು ತಂದವಾಗಿವೆ. ತೀಸ್, ಅಡೀಚ್, ದೀಡು, ಶಂಭರ್ ಇತ್ಯಾದಿ. ತಿನ್ನದೆ, ಮಾಡದೆ ಎಂಬ ನಿಷೇಧಾರ್ಥಕ ರೂಪಗಳು ತಿನ್ಲಾರದೆ, ಮಾಡ್ಲಾರದೆ ಎಂಬ ರೂಪತಾಳಿ ಲಾರದೆ ಎಂಬ ಪ್ರತ್ಯಯಗಳನ್ನು ಹೊಂದುತ್ತವೆ. ರಾಯಚೂರು ಕನ್ನಡ ಕೂಡ ಗುಲ್ಬರ್ಗ ಕನ್ನಡವನ್ನೇ ಹೋಲುವುದಾದರೂ ಕೆಲವು ಸಾಮಾನ್ಯ ಬದಲಾವಣೆಗಳೂ ಕಂಡುಬರುತ್ತವೆ. ಈ ಪ್ರಭೇದದಲ್ಲಿ ಅವ, ಇವ, ಮಾವ, ಕಿವುಡ, ಕಿವಿ, ಸೋವಿ ಮುಂತಾದ ಪದಗಳಲ್ಲಿ ವಕಾರ ಅನುನಾಸಿಕವಾಗಿ ಉಚ್ಚಾರಗೊಳ್ಳುತ್ತದೆ.

ಉಪಭಾಷೆಗಳಲ್ಲಿ ಮೇಲೆ ಚರ್ಚಿಸಲಾದ ಪ್ರಾದೇಶಿಕ ಉಪಭಾಷೆಗಳ ಜೊತೆಗೆ ಆಯಾ ವಿಶಿಷ್ಟ ಸಮುದಾಯಕ್ಕೆ ಸೇರಿದ ಉಪಭಾಷೆಗಳೂ ಇವೆ. ಸೋಲಿಗ, ಬಡಗ, ಹವ್ಯಕ, ಕುರುಬ (ಕುರುಂಬ) ಇತ್ಯಾದಿ ಭಾಷೆಗಳು ಈ ಗುಂಪಿಗೆ ಸೇರುತ್ತವೆ. *

**ಸೋಲಿಗ:** ಚಾಮರಾಜನಗರ ಜಿಲ್ಲೆ ಬಿಳಿಗಿರಿರಂಗನ ಬೆಟ್ಟ, ಮಹದೇಶ್ವರ ಬೆಟ್ಟ, ಮೈಸೂರು ಜಿಲ್ಲೆಯ, ಹೆಗ್ಗಡದೇವನಕೋಟೆ, ಕಾಕನಕೋಟೆ ಹಾಗೂ ಬೆಂಗಳೂರು, ಮಂಡ್ಯ, ತುಮಕೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಾಸವಾಗಿರುವ ಸೋಲಿಗ (ಶೋಲಿಗ) ಎಂಬ ಆದಿವಾಸಿ ಜನಾಂಗದವರ ಆಡು ಭಾಷೆ.

ಸೋಲಿಗ ಭಾಷೆಯನ್ನು ಸಾಮಾನ್ಯವಾಗಿ ಸೋಲಿಗ ಕನ್ನಡ ಎಂದು ಕರೆಯುವುದು ರೂಢಿ. ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ಮತ್ತು ಚಾಮರಾಜನಗರದ ಸುತ್ತಮುತ್ತಲ ಪ್ರದೇಶದ ಕನ್ನಡ ಭಾಷೆಯಲ್ಲಿ. ಸೋಲಿಗಕನ್ನಡದಲ್ಲಿ ಕಂಡುಬರುವ ಕೆಲವು ವೈಶಿಷ್ಟಗಳನ್ನು ಕಾಣಬಹುದು. ಉದಾಹರಣೆಗೆ ಕರೆ > ಕರಿ, ಮರೆ > ಮರಿ, ಬರೆ > ಬರಿ, ತೆರೆ > ತೆರಿ, ಇತ್ಯಾದಿ. ಮಗು, ಮಕ್ಕಳು ಎಂಬ ಪದ ಈ ಸುತ್ತಮುತ್ತಲ ಪ್ರದೇಶಗಳಲ್ಲಿಯ ಕನ್ನಡದಲ್ಲಿ ಮಕ್ಕ, ಮಕ್ಕಗ ಎಂದು ಬಳಕೆಯಲ್ಲಿದೆ. ನಾಸಿಕತ್ವ ಈ ಭಾಷೆಯಲ್ಲಿ ಅರ್ಥವ್ಯತ್ಯಾಸವನ್ನುಂಟುಮಾಡುವ ಸಾಮರ್ಥ್ಯವನ್ನು ಪಡೆದಿದೆ. ಉದಾಹರಣೆಗೆ ಆವ > ಅವನು, ಬನ್ನೆ > ಬಂದೆ, ಮಾದ > ಮಾದ ಇತ್ಯಾದಿ.

ಸೋಲಿಗರ ಕನ್ನಡಕ್ಕೂ ಹಾಗೂ ಶಿಷ್ಟ ಕನ್ನಡಕ್ಕೂ ಇರುವ ಕೆಲವು ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು. ಸೋಲಿಗ ಕನ್ನಡದಲ್ಲಿ ಶಕಟರೇಫ ಸ್ವತಂತ್ರ ವರ್ಣವಾಗಿಯೂ ವಿ ಕಾರ ಒಂದು ಧ್ವನಿಪ್ರಭೇದವಾಗಿಯೂ ಬಳಕೆಯಲ್ಲಿವೆ.

| ಉದಾಹರಣೆಗೆ: | **ಸೋ. ಕನ್ನಡ** | **ಶಿ. ಕನ್ನಡ** |
|---|---|---|
| | ಅಱೆ | ಅರೆಬಂಡೆ |
| | ಮುಱು | ಮುರಿ |
| | ಕೆಱೆ | ಕೆರೆ |
| | ಕೋಳಿ | ಕೋಳಿ |
| | ಉಱು ಉಳು | ಉಳು |
| | ಮಳೆ | ಮಳೆ |

ಶಿಷ್ಟ ಕನ್ನಡದಲ್ಲಿ ನಪುಂಸಕಲಿಂಗಗಳಿಗೆ ಹತ್ತುವ ಬಹುವಚನ ಪ್ರತ್ಯಯ ಸೋಲಿಗ ಕನ್ನಡದಲ್ಲಿ ಗ ಆಗಿದೆ.

| ಉದಾಹರಣೆಗೆ: | **ಸೋ. ಕನ್ನಡ** | **ಶಿ. ಕನ್ನಡ** |
|---|---|---|
| | ಮರಗ | ಮರಗಳು |
| | ಆನೆಗ | ಆನೆಗಳು |
| | ಕುರಿಗ | ಕುರಿಗಳು |
| | ಎತ್ತುಗ | ಎತ್ತುಗಳು |

ಚತುರ್ಥಿವಿಭಕ್ತಿ ಪ್ರತ್ಯಯಗಳಲ್ಲೂ ಸೋಲಿಗ ಕನ್ನಡ ಶಿಷ್ಟ ಕನ್ನಡದಿಂದ ಬೇರೆಯಾಗಿದೆ.

| ಉದಾಹರಣೆಗೆ : | **ಸೋ. ಕನ್ನಡ** | **ಶಿ. ಕನ್ನಡ** |
|---|---|---|
| | ಕಾಡಿಗ | ಕಾಡಿಗೆ |
| | ಕರುವಿಗ | ಕರುವಿಗೆ |
| | ನನಗ | ನನಗೆ |
| | ಹುಲಿಕ | ಹುಲಿಗೆ |
| | ಮನೆಕ | ಮನೆಗೆ |
| | ಮರಕ | ಮರಕ್ಕೆ |
| | ಅದಕ | ಅದಕ್ಕೆ |

ಭೂತಕಾಲ ಪ್ರತ್ಯಯವಾದ ನ್ ಕನ್ನಡದ ಬೇರೆ ಯಾವ ಉಪಭಾಷೆಗಳಲ್ಲೂ ಕಂಡುಬರುವುದಿಲ್ಲ, ಸೋಲಿಗ ಭಾಷೆಯಲ್ಲಿ ಕಂಡುಬರುತ್ತದೆ. ಈ ಭೂತಕಾಲ ಪ್ರತ್ಯಯ ಕೇವಲ ಉತ್ತಮಪುರುಷ ಏಕವಚನ ಬಹುವಚನಗಳಲ್ಲೂ ಹಾಗೂ ಪ್ರಥಮ ಪುರುಷ ಏಕವಚನದಲ್ಲೂ ಬರುತ್ತದೆ.

| **ಸೋ. ಕನ್ನಡ** | **ಶಿ. ಕನ್ನಡ** |
|---|---|
| ಹೋನೆ | ಹೋದೆ |
| ಹೋನೊ | ಹೋದೆವು |
| ಹೋನ | ಹೋದ (ಹೋದನು) |

ಈಗ ಸೋಲಿಗರು ಕನ್ನಡದ ಇತರ ಉಪಭಾಷೆಗಳನ್ನಾಡುವ ಜನರ ಸಂಪರ್ಕವನ್ನು ಹೊಂದುತ್ತಿರುವುದರಿಂದ, ಕಾಲಕ್ರಮೇಣ ಇವರ ಕನ್ನಡದಲ್ಲಿಯ ವೈಶಿಷ್ಟಗಳು ಮರೆಯಾಗಬಹುದು. ಆದ್ದರಿಂದ ಈ ಉಪಭಾಷೆಯಲ್ಲಿ ದೊರೆಯುವ ಜನಪದ ಸಾಹಿತ್ಯವನ್ನು ಆದಷ್ಟು ಬೇಗ ಸಂಗ್ರಹಿಸುವ ಅವಶ್ಯಕತೆ ಇದೆ. (ಕೆ.ಎಸ್.ಜಿ.)

**ಬಡಗ ಭಾಷೆ:** ಈ ಭಾಷೆಯನ್ನು ಇತ್ತೀಚೆಗೆ ಕೆಲವು ವಿದ್ವಾಂಸರು ಒಂದು ಸ್ವತಂತ್ರ ದ್ರಾವಿಡ ಭಾಷೆ ಎಂದು ಪರಿಗಣಿಸಿದ್ದಾರೆ. ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವೆ ಸಾಲಾಗಿ ಹಬ್ಬಿರುವ ಮಧುಮಲ್ಯೆ ಮತ್ತು ನೀಲಗಿರಿಬೆಟ್ಟಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ವಾಸವಾಗಿರುವ ಸು.ಒಂದು ಲಕ್ಷಕ್ಕೂ ಹೆಚ್ಚು ಬಡಗರು ಈ ಭಾಷೆಯನ್ನಾಡುವರು. ಬಡಗ ಭಾಷೆಯಲ್ಲಿ ಹತ್ತು ಸ್ವರಧ್ವನಿಮಾಗಳು, 19 ವ್ಯಂಜನ ಧ್ವನಿಮಾಗಳು ಪ್ರಧಾನವಾಗಿ ಕಂಡುಬರುತ್ತವೆ. ಕನ್ನಡದಲ್ಲಿ ಪ ಕಾರ ಹ ಕಾರವಾಗಿ ಪರಿವರ್ತನೆಗೊಂಡಿರುವಂತೆ ಬಡಗದಲ್ಲಿ ಈ ಪರಿವರ್ತನೆ ಕಂಡುಬರುವುದಿಲ್ಲ. ಅನೇಕ ವ್ಯಾಕರಣಾಂಶಗಳಲ್ಲಿ ಬಡಗಭಾಷೆ ಕನ್ನಡ ಭಾಷೆಯನ್ನೇ ಹೆಚ್ಚು ಹೋಲುತ್ತದೆ. ಹಳಗನ್ನಡದ ಎಷ್ಟೋ ಧ್ವನಿಗಳೂ ಧ್ವನಿಮಾಗಳು, ಪದಗಳು ಮತ್ತು ವ್ಯಾಕರಣ ವೈಶಿಷ್ಟ್ಯಗಳು ಈ ಭಾಷೆಯಲ್ಲಿ ಕಂಡುಬರುತ್ತವೆ. ಬಡಗ ಭಾಷೆಯ ಮೇಲೆ ತಮಿಳು ಮತ್ತು ಮಲೆಯಾಳಂ ಭಾಷೆಗಳ ಪ್ರಭಾವ ತೀವ್ರತರವಾಗಿ ಕಂಡುಬಂದರೂ ಇದನ್ನು ತಮಿಳು ಭಾಷೆಯ ಅಥವಾ ಮಲೆಯಾಳಂ ಭಾಷೆಯ ಉಪಭಾಷೆ ಎಂದು ಹೇಳಲು ಬರುವುದಿಲ್ಲ.

ಭಾರತೀಯ ಭಾಷೆಗಳ ಸರ್ವೇಕ್ಷಣಾ ಕಾರ್ಯವನ್ನು ಕೈಗೊಂಡಿದ್ದ ಜಾರ್ಜ್ ಗ್ರಿಯರ್‌ಸನ್ ಬಡಗ ಭಾಷೆಯನ್ನು ಕನ್ನಡದ ಉಪಭಾಷೆ ಎಂದು ಪರಿಗಣಿಸಿ, ಈ ಕಾರಣದಿಂದಲೇ ಇದರ ಪ್ರಸ್ತಾಪವನ್ನು ಕನ್ನಡ ಭಾಷೆಯೊಂದಿಗೆ ಕೈಗೊಂಡಿದ್ದಾನೆ.

**ಹವ್ಯಕ:** ಹೆಚ್ಚಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನೆಲಸಿರುವ ಹವ್ಯಕರ ಆಡುಭಾಷೆ. ಇದನ್ನು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಆಡುವವರಿದ್ದಾರೆ. ಇದು ಕನ್ನಡದ ಉಪಭಾಷೆಯಾಗಿದ್ದರೂ ಇದನ್ನಾಡುವ ಜನ ಹವ್ಯಕ ಕನ್ನಡ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಭಾಷೆಗೆ ತನ್ನದೇ ಆದ ಲಿಪಿ ಸೌಲಭ್ಯವಿಲ್ಲ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಕುಮಟ ಮುಂತಾದ ಕಡೆ ಆಡುವ ಹವ್ಯಕ ಭಾಷೆಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸುಳ್ಯ, ಪುತ್ತೂರು, ಮೂಡಬಿದರೆ, ಬಂಟ್ವಾಳ, ಮಂಗಳೂರು, ಉಡುಪಿ ಮುಂತಾದ ಕಡೆ ಆಡುವ ಭಾಷೆಗೂ ತುಂಬ ಅಂತರ ಕಂಡುಬರುತ್ತದೆ. ಈ ಅಂತರ ಅನುನಾಸಿಕತೆ, ತಾಲವ್ಯೀಕರಣ, ಓಷ್ಠ್ಯೀಕರಣ ಇತ್ಯಾದಿ ಧ್ವನಿಲಕ್ಷಣಗಳಲ್ಲಿ ಹೆಚ್ಚು. ಹಾಗೆಯೇ ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಆಡುವ ಹವ್ಯಕ ಭಾಷೆಯಲ್ಲೂ ಈ ವ್ಯತ್ಯಾಸಗಳಿವೆ. ಇದಕ್ಕೆ ಕಾರಣ ಕೆಲವು ಕಡೆ ತುಳು ಮಲೆಯಾಳಂ ಭಾಷೆಗಳ, ಮತ್ತೆ ಕೆಲವು ಕಡೆ ಕನ್ನಡ ಕೊಡಗು ಮತ್ತು ಕೊಂಕಣಿ ಭಾಷೆಗಳ ಪ್ರಭಾವವೆನ್ನಬಹುದು.

ಹವ್ಯಕ ಭಾಷೆಯಲ್ಲಿ ಸಂಸ್ಕೃತ ಪದಗಳು ಹೆಚ್ಚು. ಉಚ್ಚಾರದಲ್ಲಿ ಕೆಲವು ಸಂಸ್ಕೃತ ಪದಗಳು ವಿಕೃತಗೊಂಡಿವೆ; ಕೆಲವು ವ್ಯತ್ಯಾಸಗೊಂಡಿವೆ: ಮತ್ತೆ ಕೆಲವು ಹಾಗೆಯೇ ಉಳಿದುಕೊಂಡಿವೆ. ಈ ಭಾಷೆಯ ಧ್ವನಿಮಾ ಆಕೃತಿಮಾ ವಾಕ್ಯರಚನಾ ವ್ಯವಸ್ಥೆಗಳನ್ನು ಗಮನಿಸಿದಾಗ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಅಂಶಗಳು ಕಂಡುಬರುತ್ತವೆ. ಅದರಲ್ಲೂ ಪೂರ್ವದ ಹಳಗನ್ನಡ ರೂಪಗಳು ಹೇರಳವಾಗಿ ಕಂಡುಬರುತ್ತವೆ. ವ್ಯಾಕರಣಾಂಶಗಳಲ್ಲಿ ಈ ಭಾಷೆ ನಡುಗನ್ನಡವನ್ನೇ ಹೆಚ್ಚು ಹೋಲುತ್ತದೆ. ಅಭಿವ್ಯಾಪಕ, ವ್ಯಾವರ್ತಕ, ಪ್ರಥಮಪುರುಷ ಬಹುವಚನಗಳಲ್ಲಿನ ವ್ಯತ್ಯಾಸ ಹಳಗನ್ನಡ, ನಡುಗನ್ನಡಗಳಲ್ಲಿರುವಂತೆಯೇ ಇದೆ.

**ಕುರುಬ:** (ಕುರುಂಬ): ಕೇರಳದ ವೈನಾಡು (ಮಲಬಾರು), ತಮಿಳು ನಾಡಿನ ನೀಲಗಿರಿ, ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಕುರುಬ ಎಂಬ ಆದಿವಾಸಿ ಜನಾಂಗದವರು ಈ ಭಾಷೆಯನ್ನಾಡುತ್ತಾರೆ. ಕುರುಬರಲ್ಲಿ ಪ್ರಮುಖವಾಗಿ ಊರುಕುರುಬ,ಕಾಡುಕುರುಬ ಎಂಬ ಎರಡು ಪಂಗಡಗಳಿವೆ. ಈ ಪಂಗಡಗಳಲ್ಲಿಯೂ ಹಲವಾರು ಒಳಪಂಗಡಗಳಿವೆ. ಇವರು ಆಡುವ ಭಾಷೆಯನ್ನು ಕುರುಬಕನ್ನಡ ಎಂದು ಕರೆಯುತ್ತಾರೆ. ಕನ್ನಡ ಭಾಷೆಯಲ್ಲಿ ಕಂಡುಬರುವ ಕೆಲವು ಸ್ವರ ಮತ್ತು ವ್ಯಂಜನ ಧ್ವನಿಮಾಗಳು ಈ ಭಾಷೆಯಲ್ಲೂ ಕಂಡುಬರುತ್ತವೆ. ಕಾಡುಕುರುಬರ ಭಾಷೆಯಲ್ಲಿ ಹಳಗನ್ನಡದ ಭಾಷಾಂಶಗಳು ಹೆಚ್ಚು. ಈ ಭಾಷೆಯ ಮೇಲೆ ತಮಿಳು ಮತ್ತು

ಮಲೆಯಾಳಂ ಭಾಷೆಗಳು ಪ್ರಭಾವ ಬೀರಿದ್ದು ಕೆಲವರು ಭಾಷಾತಜ್ಞರು ಕುರುಬ ಭಾಷೆಯನ್ನು ಕನ್ನಡದ ಉಪಭಾಷೆ ಎಂದೂ ಮತ್ತೆ ಕೆಲವರು ತಮಿಳಿನ ಉಪಭಾಷೆ ಎಂದೂ ಅನುಮಾನಿಸಿದ್ದಾರೆ. (ಕೆ.ಕೆ.ಜಿ.)

**ಕನ್ನಡದಲ್ಲಿ ಅಷ್ಟಕಗಳು :** ಸಾಮಾನ್ಯವಾಗಿ ಎಂಟು ಪದ್ಯಗಳ ಒಂದು ಗುಚ್ಛವನ್ನು ಅಷ್ಟಕವೆಂದು ಕರೆಯುವುದು ವಾಡಿಕೆ. ಈ ಪದ್ಯಗಳು ವೃತ್ತ ಷಟ್ಪದಿಗಳಾಗಿರಬಹುದು ಅಥವಾ ಮತ್ತೆ ಯಾವುದೇ ಛಂದೋರೂಪದಲ್ಲಿರಬಹುದು. ಎಲ್ಲ ಅಷ್ಟಕಗಳಲ್ಲಿಯೂ ಎಂಟು ಪದ್ಯಗಳೆ ಇರಬೇಕೆಂಬ ನಿಯಮ ನಿಯತವೇನೂ ಅಲ್ಲ. ಅನೇಕ ಅಷ್ಟಕಗಳಲ್ಲಿ ಈ ಸಂಖ್ಯೆ ಒಂಬತ್ತಾಗಬಹುದು, ಹತ್ತಾಗಬಹುದು, ಹನ್ನೊಂದಾಗಬಹುದು. ಅದು ಅನಿರ್ದಿಷ್ಟವಾಗಿ ಬೆಳೆದುಕೊಂಡು ಹೋಗಿರುವುದೂ ಉಂಟು. ಉದಾಹರಣೆಗೆ ಲಿಂಗಾಷ್ಟಕದಲ್ಲಿ ಎರಡೆರಡು ಪಂಕ್ತಿಯ ಪದ್ಯಗಳು ಐವತ್ತು ಇರುವುದು ಕಂಡುಬರುತ್ತದೆ. ಒಟ್ಟಾರೆ ನೋಡಿದಾಗ ಒಂಬತ್ತು ಪದ್ಯಗಳನ್ನೊಳಗೊಂಡಿರುವ ಅಷ್ಟಕಗಳೇ ಸಂಖ್ಯೆಯಲ್ಲಿ ಹೆಚ್ಚು ಕಂಡುಬರುತ್ತವೆ.

ಅಷ್ಟಕಗಳು ಇತರ ಪಂಚಕ, ಷಟ್ಕ, ದಶಕ, ಶತಕಗಳಂತೆ ಸ್ತೋತ್ರಸಾಹಿತ್ಯದ ಸಾಲಿನಲ್ಲಿ ಬರುತ್ತವೆ. ಇವುಗಳ ಪ್ರಧಾನ ವಿಷಯ ಭಕ್ತಿ ಮತ್ತು ವೈರಾಗ್ಯ, ಪ್ರತಿಯೊಂದು ಅಷ್ಟಕವೂ ಸಾಮಾನ್ಯವಾಗಿ ಇಷ್ಟದೈವವನ್ನು ಕುರಿತ ಸ್ತುತಿರೂಪವಾದ ಭಕ್ತಿಗೀತೆಯಾಗಿರುತ್ತವೆ. ಆ ಇಷ್ಟದೈವ ಜಿನನಾಗಬಹುದು. ಶಿವನಾಗಬಹುದು. ಹರಿಯಾಗಬಹುದು. ಅಥವಾ ಮತ್ತೆ ಯಾರಾದರೂ ಆಗಿರಬಹುದು. ಚಂದ್ರನಾಥಾಷ್ಟಕ, ಪಾರ್ಶ್ವನಾಥಾಷ್ಟಕ, ಹರ್ಯಷ್ಟಕ, ಲಿಂಗಾಷ್ಟಕ, ಶಂಕರಾಷ್ಟಕ, ವಿನಾಯಕಾಷ್ಟಕ, ಹೀಗೆ ವಿರಳವಾಗಿ ಅಷ್ಟಕಗಳಲ್ಲಿ ರಾಜನನ್ನು ಸ್ತುತಿಸಿರುವುದೂ ಉಂಟು. ದೇವರಾಜ ವಲ್ಲಭಾಷ್ಟಕ ಇದಕ್ಕೆ ನಿದರ್ಶನವಾಗಿದೆ. ವೈರಾಗ್ಯ, ತತ್ತ್ವಪ್ರತಿಪಾದನೆ ಮತ್ತು ಆತ್ಮನಿವೇದನೆಗಳೂ ಅಷ್ಟಕಗಳಲ್ಲಿ ವಿರಳವಾಗಿ ಕಂಡುಬರುತ್ತವೆ. ಪಂಚಪದಾಷ್ಟಕ ಮತ್ತು ತತ್ತ್ವಭೇದಾಷ್ಟಕಗಳು ವೈರಾಗ್ಯ ಮತ್ತು ತತ್ತ್ವಪ್ರತಿಪಾದನೆಯನ್ನು ಕುರಿತವಾಗಿವೆ. ಅಷ್ಟಕದ ಒಂದು ಸಾಮಾನ್ಯ ಲಕ್ಷಣವೆಂದರೆ ಅದರ ಪ್ರತಿಯೊಂದು ಪದ್ಯದ ಕೊನೆಯಲ್ಲೂ ಇಷ್ಟದೈವದ ಸಂಭೋದನೆಯಿರುತ್ತದೆ. ಚಂದ್ರನಾಥಾಷ್ಟಕದಲ್ಲಿ ಚಂದ್ರನಾಥಾ ಎಂಬ ಸಂಬೋಧನೆ ಪ್ರತಿಪದ್ಯದ ಕೊನೆಯಲ್ಲೂ ಬರುತ್ತದೆ. ಕೆಲವು ವೇಳೆ ಮೊದಲ ಪದ್ಯದ ಕೊನೆಯ ಸಾಲು ಪ್ರತಿಪದ್ಯದಲ್ಲಿಯೂ ಪುನರುಕ್ತವಾಗುತ್ತದೆ. ಷಡಕ್ಷರದೇವ ಸಂಸ್ಕೃತದಲ್ಲಿ ರಚಿಸಿರುವ ಸಿದ್ಧಲಿಂಗಾಷ್ಟಕದಲ್ಲಿ ಪ್ರತಿ ಪದ್ಯವೂ ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ಎಂಬುದರಿಂದ ಕೊನೆಯಾಗುತ್ತದೆ. *

**ಕನ್ನಡದಲ್ಲಿ ಆತ್ಮಕಥೆಗಳು :** ವ್ಯಕ್ತಿ ತನ್ನ ಜೀವನ ವಿಚಾರಗಳನ್ನು ತಾನೇ ಬರೆದಲ್ಲಿ ಆತ್ಮಕಥೆ ಎನಿಸಿಕೊಳ್ಳುತ್ತದೆ. ಅದನ್ನೇ ಇತರರು ಬರೆದಾಗ ಜೀವನ ಚರಿತ್ರೆಯಾಗುತ್ತದೆ. ಆತ್ಮಕಥೆ ಜೀವನ ಚರಿತ್ರೆಯೆಂಬ ಸಾಹಿತ್ಯ ಪ್ರಕಾರದ ಒಂದು ಭಾಗ. ಆತ್ಮಕಥೆ ವ್ಯಕ್ತಿಯೊಬ್ಬನ ಚರಿತ್ರೆಯಾಗಿರುವಂತೆ ಆತನ ಪರಿಸರದ ಚರಿತ್ರೆಯೂ ಆಗಿರುತ್ತದೆ. ಕಥಾನಾಯಕ ತನ್ನ ಮತ್ತು ತನ್ನ ಸುತ್ತುಮುತ್ತಿನ ಜೀವನವನ್ನು ತಾನು ಕಂಡಂತೆ ಇಲ್ಲಿ ವರ್ಣಿಸಿರುತ್ತಾನೆ. ಬರೆಯುವಷ್ಟು ಶಕ್ತಿ ಮತ್ತು ತಾಳ್ಮೆ ಇದ್ದಲ್ಲಿ ಪ್ರತಿಯೊಬ್ಬನೂ ತನ್ನ ಆತ್ಮಕಥೆಯನ್ನು ಬರೆಯಬಹುದು. ಒಂದೊಂದೊಂದಕ್ಕೂ ಪ್ರಾಮುಖ್ಯ ಇದ್ದೇ ಇದೆ. ಬರೆದಾತ ಸಮಾಜದಲ್ಲಿ ಗಣ್ಯವ್ಯಕ್ತಿಯಾದಾಗಲಂತೂ ಆತ ಬರೆದ ಆತ್ಮಕಥೆಗೆ ಹೆಚ್ಚಿನ ಪ್ರಾಧಾನ್ಯ ಒದಗುತ್ತದೆ.

ಕನ್ನಡದಲ್ಲಿ ಆತ್ಮಕಥಾಸಾಹಿತ್ಯ ಹೆಚ್ಚು ಬೆಳೆದಿಲ್ಲವೆನ್ನಬೇಕು. ಈಗ ಬಂದಿರುವ ಜೀವನಚರಿತ್ರೆಗಳಲ್ಲಿ ಅರ್ಧದಷ್ಟೂ ಆತ್ಮಕಥೆಗಳಿಲ್ಲ. ಬಂದಿರುವಂಥವು ಅರ್ಧ ಸ್ವತಂತ್ರ ಆತ್ಮಕಥೆಗಳಾದರೆ ಉಳಿದವು ಅನುವಾದಗಳು. ಅವು ರಾಷ್ಟ್ರನಾಯಕರು, ಅನ್ಯರಾಷ್ಟ್ರನಾಯಕರು, ಸಾಹಿತಿಗಳು ಮತ್ತು ವಿಜ್ಞಾನಿಗಳನ್ನು ಕುರಿತವಾಗಿವೆ. ಸ್ವತಂತ್ರ ಆತ್ಮಕಥೆಯಲ್ಲಿ 50ಕ್ಕೂ ಹೆಚ್ಚು ಜನ ಸಾಹಿತಿಗಳ ಮತ್ತು ಕಲಾವಿದರ ಆತ್ಮವೃತ್ತಾಂತಗಳನ್ನು ಕಾಣಬಹುದು. 1350 ಪುಟಗಳಷ್ಟು ವ್ಯಾಪ್ತಿವುಳ್ಳ ಕೆಲವು ಸಂಪುಟಗಳಲ್ಲಿ ಪ್ರಕಟವಾಗಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಭಾವ (1968–69) ಕನ್ನಡದ ಆತ್ಮಚರಿತ್ರೆಗಳಲ್ಲಿ ಒಂದು ದೊಡ್ಡ ಹೆಜ್ಜೆ. ಗಾತ್ರದಲ್ಲಿಯೂ ಪಾತ್ರದಲ್ಲಿಯೂ ಹಿರಿದಾದ ಸ್ಥಾನವನ್ನು ಪಡೆದಿರುವ ಈ ಗ್ರಂಥ ಅವರ ಸಾರ್ಥಕ ಬಾಳಿನ ಅರ್ಧಶತಮಾನವನ್ನು ಬಿಂಬಿಸಿದೆ. ಮೊದಲ ಭಾಗದಲ್ಲಿ ತಮ್ಮ ಊರಿಗೆ ಮಾಸ್ತಿ ಎಂದು ಹೆಸರು ಬರಲು ಕಾರಣ, ತಮ್ಮ ಬಾಲ್ಯ, ವಿದ್ಯಾಭ್ಯಾಸ, ಆಗಿನ ಕಾಲದ ಸಂಪ್ರದಾಯ ಮೊದಲಾದವುಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಎರಡನೆಯ ಭಾಗದಲ್ಲಿ ಅವರ ಅಧಿಕಾರಾವಧಿಯ ಏಕಮುಖ ಚಿತ್ರವಿದೆ. ಮೂರನೆಯ ಭಾಗದಲ್ಲಿ ವಿಶ್ರಾಂತಿ ಕಾಲದ ಬದುಕಿದೆ. ಮಾಸ್ತಿಯವರ ಸಮಕಾಲೀನರಾಗಿ ಕನ್ನಡಕ್ಕಾಗಿ ಬಹುವಿಧವಾಗಿ ದುಡಿದ ಕೆಲವು ಹಿರಿಯ ಚೇತನಗಳ ವಿಷಯಗಳೂ ಹಾಸುಹೊಕ್ಕಾಗಿ ಈ ಗ್ರಂಥದಲ್ಲಿ ಬಂದಿವೆ. ಒಂದು ದೃಷ್ಟಿಯಿಂದ ಇದು ಸುಮಾರು ಆರು ದಶಕಗಳ ಕನ್ನಡನಾಡಿನ ಚಿತ್ರವನ್ನೂ ಕನ್ನಡ ನಿಧಾನವಾಗಿಯಾದರೂ ಸುಪುಷ್ಟವಾಗಿ ತಲೆಯೆತ್ತಿದ ಬಗೆಯನ್ನೂ ಪ್ರತಿಬಿಂಬಿಸುತ್ತದೆ.

ಹುಚ್ಚು ಮನಸ್ಸಿನ ಹತ್ತು ಮುಖಗಳು (1948) ಕೆ. ಶಿವರಾಮ ಕಾರಂತರ ಕಾಲುಶತಮಾನದ ಬಾಳಿನ ಕಥೆ. ಈ ಕೃತಿ ಕಾರಂತರ ಸಮೃದ್ಧಾನುಭವಕ್ಕೂ ಬಹುಮುಖ ಪ್ರತಿಭೆಗೂ ಜ್ವಲಂತ ಸಾಕ್ಷಿಯಾಗಿದೆ. ಗುರುವಿಲ್ಲದೆ, ಗುರಿಯಿಲ್ಲದೆ ಹುಚ್ಚು ಮನಸ್ಸು ತೋರಿದ ದಿಕ್ಕಿನಲ್ಲಿ ನಡೆದು ಇವರ ಸಾಧನೆ ಅದ್ಭುತ. ವಿಷ್ಣುವಿಗೆ ಬರಿಯ ಹತ್ತು ಅವತಾರಗಳಾದರೆ, ತನ್ನ ಧ್ಯೇಯಗಳು ಹದಿನಾರು ಅವತಾರಗಳನ್ನು ತಳೆಯು ವಂತಾಯಿತೆಂದು ಲೇಖಕರೇ ಹೇಳಿಕೊಂಡಿದ್ದಾರೆ. ರಾಷ್ಟ್ರಭಕ್ತಿ, ಸ್ವದೇಶಿಚಳವಳಿ, ವ್ಯಾಪಾರ, ಪತ್ರಿಕೋದ್ಯಮ, ಅಧ್ಯಾತ್ಮಸಾಧನೆ, ಕಲೆಯ ಭಿನ್ನ ಭಿನ್ನ ಮುಖಗಳು, ಫೋಟೋಗ್ರಫಿ, ನಾಟಕ, ನೃತ್ಯ, ಚಿತ್ರ, ವಾಸ್ತು, ಸಂಗೀತ, ಚಲನಚಿತ್ರ, ಸಮಾಜಸುಧಾರಣೆ, ಗ್ರಾಮೋದ್ಧಾರ, ಶಿಕ್ಷಣ ವಲಯದಲ್ಲಿ ಪ್ರಯೋಗಗಳು, ಉದ್ಯೋಗ ಇವೆಲ್ಲ ಅವತಾರಗಳೂ ಅವಾಂತರಗಳೂ ಕಾರಂತರ ಜೀವನದಲ್ಲಿ ಆಗಿಹೋಗಿವೆ. ಸ್ವತಂತ್ರ ಜೀವನದಿಂದ ಸನ್ಯಾಸಿ ಜೀವನದ ಮೂಲಕ ಹಾದು ಸಂಸಾರಿಯಾಗಿಯೂ ಸಾಗಿದ್ದೇನೆ ಎಂದು ಅವರೇ ಹೇಳಿಕೊಂಡಿದ್ದಾರೆ. ಪ್ರಚಲಿತ ವಿಷಯಗಳ ಬಗ್ಗೆ ಆಳವಾಗಿ ಆಲೋಚನೆ ಮಾಡಿ, ಅಸಾಧ್ಯ ಸಾಹಸಗಳಿಗೆ ಕೈಹಾಕಿ ಜಯಿಸಿದ ಕೀರ್ತಿ ಕಾರಂತರದು. ಇಷ್ಟೊಂದು ವ್ಯಾಪಕ ಹವ್ಯಾಸಗಳನ್ನುಳ್ಳ ಬೇರೊಬ್ಬ ಕನ್ನಡ ಸಾಹಿತಿಯನ್ನು ಹೆಸರಿಸುವುದು ಕಷ್ಟ. ಸ್ಮೃತಿಪಟಲದಿಂದ (1977–78 ಮೂರು ಭಾಗಗಳು) ಎಂಬ ಕೃತಿ ಕಾರಂತರ ಆತ್ಮಕಥೆಯ ಮುಂದುವರಿದ ಭಾಗ.

ಹೋರಾಟದ ಬದುಕು (1968) ದೇ.ಜ.ಗೌ. ಅವರ ಆತ್ಮಕಥೆ. ಇದು ಅಚ್ಚಕನ್ನಡದ ಧೀಮಂತ ಯೋಧನ ಹೋರಾಟದ ಬದುಕನ್ನು ಒಳಗೊಂಡಿದೆ. ಬಡಕುಟುಂಬದಲ್ಲಿ ಗುಡಿಸಲಿನಲ್ಲಿ ಜನಿಸಿ, ಅಡಿಗಡಿಗೆ ನಾನಾ ಎಡರುತೊಡರುಗಳನ್ನು ಎದುರಿಸಿ, ಗೊತ್ತುಗುರಿಯಿಲ್ಲದೆ ಬೆಳೆದು, ಗುರು ಕುವೆಂಪು ಅವರ ಕೃಪಾಕಟಾಕ್ಷಕ್ಕೆ ಪಾತ್ರವಾಗಿ, ಅವರ ಆಶೀರ್ವಾದದ ಮಹಾರಕ್ಷೆಯಲ್ಲಿ ಕನ್ನಡದ ದೀಕ್ಷೆಯನ್ನು ಪಡೆದು, ಕನ್ನಡಕ್ಕಾಗಿ ದುಡಿದು, ಕನ್ನಡದಿಂದ ಕೀರ್ತಿ, ಯಶಸ್ಸುಗಳನ್ನು ಪಡೆದು, ಕನ್ನಡಕ್ಕಾಗಿಯೇ ತನು, ಮನ, ಧನಗಳನ್ನು ಸಮರ್ಪಿಸಿಕೊಂಡ ಮಹಾಚೇತನವೊಂದರ ಆತ್ಮವೃತ್ತಾಂತವಿದು. ಗುಡಿಸಲಿನಿಂದ ಗಂಗೋತ್ರಿಯವರೆಗೆ ನಡೆದ ಜೀವನಾವಧಿಯಲ್ಲಿ ನಾನಾ ಕಾರಣಗಳಿಂದ, ನಾನಾ ರೀತಿಯಲ್ಲಿ ಲೇಖಕರು ನಡೆಸಿದ ಹೋರಾಟಗಳ ವೃತ್ತಾಂತವನ್ನೊಳಗೊಂಡಿರುವ ಈ ಕೃತಿಗೆ ಹೋರಾಟದ ಬದುಕು ಎಂಬ ಹೆಸರು ಉಚಿತವಾಗಿದೆ. ಆರಂಭದಲ್ಲಿ ಬಡತನದೊಂದಿಗೆ, ಜಾತೀಯತೆಯೊಂದಿಗೆ ಹೋರಾಟ ನಡೆದಿರುವುದು ಕಂಡುಬಂದರೂ ಪ್ರಮುಖವಾದ ಹೋರಾಟ ಕನ್ನಡಕ್ಕೆ ಸಂಬಂಧಿಸಿದುದಾಗಿದೆ. ಈ ಕೃತಿ ಆತ್ಮಕಥಾಸಾಹಿತ್ಯಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ. ಇಲ್ಲಿನ ಗದ್ಯದ ಗತ್ತು ಮತ್ತು ಗ್ರಾಮೀಣ ಭಾಷಾ ಬಳಕೆಯ ಸೊಗಡು ಹೆಚ್ಚು ಆಕರ್ಷಣೀಯವೂ ಮನೋಜ್ಞವೂ ಆಗಿದ್ದು ಶೈಲಿಯ ಹೊಸದೊಂದು ಮಾದರಿಗೆ ಬುನಾದಿಯಾಗಿದೆ. ಕನ್ನಡದ ಮುನ್ನಡೆಗೆ ಇರಬಹುದಾದ ತೊಡಕುಗಳು, ಅಡ್ಡಬಂದ ವ್ಯಕ್ತಿಗಳು, ಸನ್ನಿವೇಶಗಳು, ಕನ್ನಡ ಪ್ರಗತಿಯ ಹಲವಾರು ಮಾರ್ಗಗಳು, ಕನ್ನಡ ನಾಡಿನಲ್ಲಿ ನಡೆದ ಹೋರಾಟದ ವಿವರ ಇಲ್ಲಿ ಚಿತ್ರಿತವಾಗಿರುವುದರಿಂದ ಕನ್ನಡ ನುಡಿ ಮತ್ತು ಸಾಹಿತ್ಯದ ಬಗೆಗಿನ ಮೂಲ ವಸ್ತುವನ್ನೊದಗಿಸುವುದರಲ್ಲಿ ಈ ಕೃತಿಗೆ ಸಾರ್ಥಕತೆ ಲಭಿಸಿದೆ.

ಹತ್ತು ವರುಷ (1939) ಜಿ.ಪಿ.ರಾಜರತ್ನಂ ಅವರ ಆತ್ಮಕಥೆ. 152 ಪುಟಗಳ ಈ ಕೃತಿಯಲ್ಲಿ ಲೇಖಕರ ಹತ್ತು ವರ್ಷಗಳ ಜೀವನ ಕಥೆಯಿದೆ. ಇದರಲ್ಲಿ ರಾಜರತ್ನಂ ಅಯ್ಯಂಗಾರ್ ರಾಜರತ್ನಂ ಆದುದು, ನಮ್ಮ ನಮ್ಮವರು ಕೃತಿ ಅಚ್ಚಾದುದು ಈ ಎರಡು ಭಾಗಗಳು ತುಂಬ ಸ್ವಾರಸ್ಯವಾಗಿವೆ. ರತ್ನನ ತಂದೆ ತೀರಿಕೊಂಡಾಗ ನಂಟರಾರೂ ಸಹಕರಿಸದೆ ಶವವನ್ನು ಜಟಕಾ ಗಾಡಿಯಲ್ಲಿ ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಿದ್ದನ್ನು ಓದಿದಾಗ ಎಂಥವರ ಎದೆಯೂ ಕರಗುತ್ತದೆ. ಸತಿಯನ್ನು ಕ್ಷಯದ ಆಸ್ಪತ್ರೆಗೆ ಸೇರಿಸಿ ಹಿಂತಿರುಗಿ ಬರುವಾಗ ದಾರಿಯಲ್ಲಿ ಕಂಡ ಹೆಂಡದಂಗಡಿಯ ಅನುಭವವೇ ಅವರ ರತ್ನನ ಪದಗಳು ಸೃಷ್ಟಿಯಾಗಲು ಕಾರಣವಾಯಿತೆಂದು ಓದಿದಾಗ ಕುತೂಹಲವೂ ಆಶ್ಚರ್ಯಮೂ ಉಂಟಾಗುತ್ತದೆ.

ಮಿಂಚಿನ ಬಳ್ಳಿ ಕಾರ್ಯಾಲಯದಿಂದ ಪ್ರಕಟವಾದ ಸಾಹಿತ್ಯಜ್ಞರ ಆತ್ಮಕಥನ (1946) ಇನ್ನೊಂದು ವಿಶಿಷ್ಟ ಕೃತಿ. ಈ ಕೃತಿಯಲ್ಲಿ ಹನ್ನೊಂದು ಪ್ರಸಿದ್ಧ ಸಾಹಿತಿಗಳ ಭಿನ್ನಾನುಭವಗಳ ವೈವಿಧ್ಯಮಯಮೂ ಸ್ವಾರಸ್ಯಪೂರ್ಣವೂ ಆದ ಪರಿಚಯವನ್ನು ಅವರವರ ಮಾತಿನಲ್ಲಿಯೇ ಕಾಣಬಹುದು. ಗೋವಿಂದ ಪೈ, ಆರ್.ವಿ.ಜಾಗೀರದಾರ್, ದೇವುಡು ನರಸಿಂಹಶಾಸ್ತ್ರೀ, ರಂ.ಶ್ರೀ.ಮುಗಳಿ, ಸಿ.ಕೆ.ವೆಂಕಟರಾಮಯ್ಯ, ವಿ.ಕೃ.ಗೋಕಾಕ, ಶಂ.ಬಾ.ಜೋಶಿ, ಚನಪ್ಪ ಉತ್ತಂಗಿ, ಬೆಟಗೇರಿ ಕೃಷ್ಣಶರ್ಮ, ಎ.ಆರ್.ಕೃಷ್ಣಶಾಸ್ತ್ರೀ, ದ.ರಾ.ಬೇಂದ್ರೆ, ಇವರುಗಳೇ ಅಲ್ಲಿನ ಸಾಹಿತಿಗಳು.

ನಾಟ್ಯನೆನಪುಗಳು ಎಂಬ ಕೃತಿಯಲ್ಲಿ ಶ್ರೀರಂಗರು ರಂಗಭೂಮಿಗೂ ತಮಗೂ ಇರುವ ನಂಟನ್ನು ಹೇಳಿಕೊಂಡಿದ್ದಾರೆ. ನಡೆದು ಬಂದ ದಾರಿಯ ಮೂರನೆಯ ಸಂಪುಟದಲ್ಲಿ (1961) ಬೇಂದ್ರೆ ಅವರು ಚತುರ್ಮುಖ ಎಂಬ ಶೀರ್ಷಿಕೆಯಲ್ಲಿ ತಮ್ಮ ಆತ್ಮವೃತ್ತಾಂತವನ್ನು ಬರೆದಿದ್ದಾರೆ. ಮನ್ವಂತರದ ಒಂದನೆಯ ಸಂಪುಟದಲ್ಲಿಯೂ ಅವರು ತಮ್ಮ ಕಾವ್ಯಜೀವನದ ಹಿನ್ನೆಲೆಯನ್ನು ವಿವರಿಸಿದ್ದಾರೆ. ಸಿಂ.ಪಿ.ಲಿಂಗಣ್ಣನವರು ಮೂವತ್ತೈದು ವರ್ಷಗಳು ಎಂಬ ಕೃತಿಯಲ್ಲಿ ತಾವು ಕಂಡುಂಡ ಸಿಹಿಕಹಿಗಳ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಆಲೂರು ವೆಂಕಟರಾಯರ ಜೀವನ ಸ್ಮರಣೆ ಎಂಬ ಗ್ರಂಥದಲ್ಲಿ ಕರ್ನಾಟಕದ ಹೊಸ ಪ್ರಜ್ಞೆಯ ಬೆಳವಣಿಗೆಯನ್ನು ಕಾಣಬಹುದು.

ನವರತ್ನ ರಾಮರಾಯರ ಕೆಲವು ನೆನಪುಗಳು, ವಾಸುದೇವಾಚಾರ್ಯರ ನೆನಪುಗಳು, ಡೂನು ಅವರ ಕಾಡಿನಲ್ಲಿ ಕಳೆದ ದಿನಗಳು, ದಿವಾಕರರ ಸೆರೆಮನೆ ಇವು ಅತ್ಯುತ್ತಮ ನೆನಪುಗಳಾಗಿವೆ. ಗುಬ್ಬಿ ವೀರಣ್ಣನವರ ಕಲೆಯೇ ಕಾಯಕ (1967) ಕಲಾವಿದನೊಬ್ಬನ ಹಲವು ಹನ್ನೆರಡು ಬವಣೆಗಳ, ನೂರಾರು ಸಮಸ್ಯೆಗಳ ಪ್ರಾತಿನಿಧಿಕ ಗ್ರಂಥದಂತಿದೆ. ಕನ್ನಡ ರಂಗಭೂಮಿಗೆ ಗುಬ್ಬಿ ವೀರಣ್ಣನವರು ಸಲ್ಲಿಸಿದ ಬಹುಮುಖ ಸೇವೆಯನ್ನೂ ಅವರ ಸಾಧನೆ ಸಿದ್ಧಿಗಳನ್ನೂ ಇಲ್ಲಿ ಕಾಣಬಹುದು.

ಸುಧಾ, ಕರ್ಮವೀರ ಮೊದಲಾದ ವಾರಪತ್ರಿಕೆಗಳಲ್ಲಿಯೂ ಪ್ರಜಾವಾಣಿ ದಿನಪತ್ರಿಕೆಯಲ್ಲಿಯೂ ಅನೇಕರ ಆತ್ಮಕಥೆಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಕರ್ಣನ ಪಾತ್ರಕ್ಕೆ ಅತ್ಯಂತ ಹೆಸರುವಾಸಿಯಾದ ಕೊಟ್ಟೂರಪ್ಪ ಮತ್ತು ಭೀಮನ ಪಾತ್ರದ ಮೂಲಕ ಹೆಸರು ಪಡೆದ ಸ್ತ್ರೀ ನಾಟಕ ಮಂಡಳಿಯ ನಾಗರತ್ನಮ್ಮ ಇವರ ಆತ್ಮಚರಿತ್ರೆಗಳು ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗಿವೆ.

ಕನ್ನಡದ ಅತ್ಯಂತ ಜನಪ್ರಿಯ ನಾಯಕ ನಟ ರಾಜಕುಮಾರ್ ಅವರ ಹೃದ್ಯವಾದ ಆತ್ಮಕಥೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು (1970). ಮಣ್ಣಿನ ಮಗನೊಬ್ಬ ತನಗೆ ರಕ್ತಗತವಾಗಿ ಬಂದ ಕಲೆಯನ್ನು ಭಯ ಭಕ್ತಿ ಶ್ರದ್ಧೆ ಗೌರವಗಳಿಂದ ಆರಾಧಿಸಿ, ಸಾಧಿಸಿ, ಅತ್ಯುನ್ನತ ಮಟ್ಟಕ್ಕೇರಿದ ಚಿತ್ರವನ್ನಿಲ್ಲಿ ಕಾಣಬಹುದು. ಸಾಧನೆಯ ಸಮಯದಲ್ಲಿ ಆತ ಪಟ್ಟ ಪಾಡು, ತೊಟ್ಟ ನಿಷ್ಠೆ, ಕನ್ನಡ ಪ್ರೇಮ ಎಂಥವರಿಗೂ ಮೆಚ್ಚಿಗೆ ತರುವಂಥವು.

ಆತ್ಮಕತೆ ನಿವೇದಿಸಿದವರಲ್ಲಿ ಹೆಸರಾಂತ ಲೇಖಕರು, ಕಲಾವಿದರು, ಕ್ರೀಡಾಪಟುಗಳು, ಚಲನಚಿತ್ರ ಮತ್ತು ರಂಗಭೂಮಿಯ ನಟನಟಿಯರು ಸೇರಿದ್ದಾರೆ. ವ್ಯಕ್ತಿಗಳಿಗೆ ಸಮರ್ಪಿಸಿದ ಅಭಿನಂದನ ಗ್ರಂಥಗಳಲ್ಲಿ ಅವುಗಳ ಪ್ರಾರಂಭದ ಪುಟಗಳಲ್ಲಿ ಆಯಾ ವ್ಯಕ್ತಿಗಳು ತಮ್ಮ ಜೀವನ ವೃತ್ತಾಂತವನ್ನು ನಿರೂಪಿಸಿದ್ದಾರೆ. ಕನ್ನಡದಲ್ಲಿ ಅಭಿನಂದನ ಗ್ರಂಥಗಳ ಒಂದು ಪರಂಪರೆಯೇ ಇರುವುದನ್ನು ನಾವು ಮರೆಯುವಂತಿಲ್ಲ. ಕನ್ನಡದ ಕೆಲವು ಮುಖ್ಯ ಆತ್ಮಕಥೆಗಳನ್ನು ಈ ಮುಂದೆ ಹೆಸರಿಸಲಾಗಿದೆ. ರಾವ್ ಬಹುದ್ದೂರರ ಮರೆಯದ ನೆನಪುಗಳು (1959), ಡಿವಿಜಿಯವರ ಜ್ಞಾಪಕ ಚಿತ್ರಶಾಲೆ (1967–74), ರಾಜಕುಮಾರ್ ಅವರ ನಟಸಾರ್ವಭೌಮ (1970), ವಿ.ಸೀತಾರಾಮಯ್ಯನವರ ಕಾಲೇಜು ದಿನಗಳು (1971) ಮತ್ತು ಮುಂಬಯಿ ವಾಸದ ನೆನಪುಗಳು (1976), ಅನಕೃ ಅವರ ಬರೆಹಗಾರನ ಬದುಕು (1972), ಅಲೂರು ವೆಂಕಟರಾಯರ ನನ್ನ ಜೀವನ ಸ್ಮೃತಿಗಳು (1973), ಕೋ.ಚೆನ್ನಬಸಪ್ಪನವರ ನನ್ನ ಮನಸ್ಸು ನನ್ನ ನಂಬುಗೆ (1973), ಎಚ್.ಕೆ.ವೀರಣ್ಣಗೌಡರ ಬದುಕು–ಮೆಲುಕು (1974), ಆರ್.ನಾಗೇಂದ್ರರಾವ್ ಅವರ ಇದು ನನ್ನ ಕಥೆ (1974), ಮಳವಳ್ಳಿ ಸುಂದರಮ್ಮನವರ ಅಭಿನಯಶಾರದೆ (1975), ಬಸವರಾಜ ಕಟ್ಟೀಮನಿ ಅವರ ಕುಂದರನಾಡಿನ ಕಂದ (1976) ಮತ್ತು ಕಾದಂಬರಿಕಾರನ ಕಥೆ (1981), ಬೀಚಿಯವರ ನನ್ನ ಬಯಾಗ್ರಫಿ (1976), ಶಾರದ ವಿ.ಗೋಕಾಕ್ ಅವರ ಒಲವೆ ನನ್ನ ಬದುಕು (1977), ಶ್ರೀರಂಗರಾಜು ಅವರ ನಾನು ತುಳಿದ ಹಾದಿ (1978), ಇ.ಎ.ಎಸ್.ಪ್ರಸನ್ನರ ಪ್ರಸನ್ನ ಜೀವನ ಒಂದು ಆತ್ಮಕಥೆ (1978), ಕೆದಂಬಾಡಿ ಜತ್ತಪ್ಪ ರೈ ಅವರ ಬೇಟೆಯ ನೆನಪುಗಳು (1978–79), ಬಿ.ಜಿ.ಎಲ್.ಸ್ವಾಮಿ ಅವರ ಪ್ರಾಧ್ಯಾಪಕನ ಪೀಠದಲ್ಲಿ (1979), ಬಿ.ಜಯಮ್ಮನವರ ಅಭಿನೇತ್ರಿ (1979), ಡಿ.ಕೆಂಪರಾಜ ಅರಸ್ ಅವರ ಅರವತ್ತು ವರ್ಷಗಳು (1980), ಕುವೆಂಪು ಅವರ ನೆನಪಿನ ದೋಣಿಯಲ್ಲಿ (1980), ಶೇ.ಗೋ.ಕುಲಕರ್ಣಿ ಅವರ ನಾನು ಕಂಡ ಗೆಳೆಯರ ಗುಂಪು (1980), ರಂ.ಶ್ರೀ.ಮುಗಳಿಯವರ ಜೀವನ ರಸಿಕ (1982), ಮಲ್ಲಿಕಾರ್ಜುನ ಮನ್ಸೂರರ ನನ್ನ ರಸಯಾತ್ರೆ (1983), ಎನ್ಕೆ ಕುಲಕರ್ಣಿಯವರ ನಾನ್ನಯ ನೆನಪುಗಳು (1983), ಚಿ.ನ.ಮಂಗಳಾ ಅವರ ಅಧ್ಯಾಪಕಿಯಾಗಿ ಇಪ್ಪತ್ತೈದು ವರ್ಷ ಮತ್ತು ಸ್ನೇಹಸಿಂಧು (1985), ಅನುಪಮಾ ನಿರಂಜನರ ನೆನಪು ಸಿಹಿ ಕಹಿ (1985) ಮತ್ತು ಬರೆಹಗಾರ್ತಿಯ ಬದುಕು (1990), ಜಿ.ಎಸ್.ಶಿವರುದ್ರಪ್ಪ ಅವರ ಚದುರಂಗ (1986), ತ.ಸು.ಶಾಮರಾಯರ ಮೂರುತಲೆಮಾರು (1987), ಸ.ಸ.ಮಾಳವಾಡರ ದಾರಿ ಸಾಗಿದೆ (1989). ಅಂಬುಜಾ ತ.ರಾ.ಸು. ಅವರ ಹಿಂತಿರುಗಿ ನೋಡಿದಾಗ (1990), ಎ.ಎನ್.ಮೂರ್ತಿರಾವ್ ಅವರ ಸಂಜೆಗಣ್ಣಿನ ಹಿನ್ನೋಟ (1990), ಬಿ.ಡಿ.ಜತ್ತಿ ಅವರ ನನಗೆ ನಾನೇ ಮಾದರಿ (1990), ಸಮೇತನಹಳ್ಳಿ ರಾಮರಾಯರ ಕೋಟು ಕೊಟ್ಟಮನೆ (1991), ತ.ಸು.ಶಾಮರಾಯರ ನೆನಪಿನ ಅಲೆಗಳು (1991), ಉತ್ತಂಗಿ ಚನ್ನಪ್ಪನವರ ಆತ್ಮಚರಿತ್ರೆ (1991), ಕು.ಶಿ.ಹರಿದಾಸಭಟ್ಟರ ನಿವೇದನೆ (1992), ಎಸ್.ಆರ್.ಗುಂಜಾಳ ಅವರ ನಾನು (1992), ನಂಜುಂಡಸ್ವಾಮಿಯವರ ಅಜ್ಞಾತ ಅಧ್ಯಾಪಕನ ಆತ್ಮಚರಿತ್ರೆ (1994), ಪೆರ್ಲ ಕೃಷ್ಣಭಟ್ಟರ ಬದುಕಿ ಫಲವೇನು (1994), ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ (1994), ಪಿ.ಲಂಕೇಶರ ಹುಳಿಮಾವು (1997), ಆರ್.ಸಿ.ಹಿರೇಮಠ ಅವರ ಉರಿ ಬರಲಿ ಸಿರಿ ಬರಲಿ (1995), ಎಚ್.ನರಸಿಂಹಯ್ಯನವರ ಹೋರಾಟದ ಹಾದಿ (1995), ಜಿ.ಎಂ.ಪಾಟೀಲರ ನೆನಪಿನಂಗಳದಲ್ಲಿ (1995), ಕೆರೆಮನೆ ಶಿವರಾಮ ಹೆಗಡೆಯವರ ನೆನಪಿನ ರಂಗಸ್ಥಳ (1996), ಕಯ್ಯಾರಕಿಞ್ಞಣ್ಣರೈ ಅವರ ದುಡಿಮೆಯೇ ನನ್ನ ದೇವರು (1996), ಸೇಡಿಯಾಪು ಕೃಷ್ಣಭಟ್ಟರ ಈಶ್ವರ ಸಂಕಲ್ಪ ಅಥವಾ ದೈವಲೀಲೆ (1996), ಸಿದ್ಧಲಿಂಗಯ್ಯನವರ ಊರು ಕೇರಿ (1996), ಎಸ್.ಎಲ್.ಭೈರಪ್ಪನವರ ಭಿತ್ತಿ (1996), ಎಚ್.ಎಲ್. ನಾಗೇಗೌಡರ ನಾಗಸಿರಿ (1996 ನಾಲ್ಕು ಸಂಪುಟಗಳು) ಪಿ.ಲಂಕೇಶರ ಹುಳಿಮಾವಿನ ಮರ (1998), ಕೆ.ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ (2001), ಸಿ.ಜಿ.ಕೃಷ್ಣಸ್ವಾಮಿ ಅವರ ಕತ್ತಾಲೆ ಬೆಳದಿಂಗಳೊಳಗೆ (2002), ಹಿರಿಯಡಕ ಗೋಪಾಲರಾಯರ, ಮದ್ದಳೆಯ ಮಾಯಾಲೋಕ, ಬಿ.ವಿ.ಕಾರಂತರ ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ (2003), ಎಚ್.ಎಸ್.ಶಿವಪ್ರಕಾಶ್ ಅವರ ಬತ್ತೀಸರಾಗ (2003), ಸ.ಜ.ನಾಗಲೋಟಿಮಠ ಅವರ ಬಿಚ್ಚಿದ ಜೋಳಿಗೆ (2003), ಇಂಥ ಸ್ವತಂತ್ರ ಕೃತಿಗಳಲ್ಲದೆ ಕನ್ನಡಕ್ಕೆ ಅನೇಕ ಆತ್ಮಕಥೆಗಳು ಅನುವಾದಗೊಂಡಿವೆ. ಇವುಗಳಲ್ಲಿ ಹೆಚ್ಚಿನವು ಭಾರತೀಯ ಮತ್ತು ವಿದೇಶೀಯ ರಾಷ್ಟ್ರನಾಯಕರ, ವಿಜ್ಞಾನಿಗಳ ಮತ್ತು ಸಾಹಿತಿಗಳ ಆತ್ಮಕಥೆಗಳಾಗಿವೆ. ಸತ್ಯಶೋಧನ ಪ್ರಕಟಣ ಮಂದಿರದವರ ಸತ್ಯಶೋಧನೆ ಅಥವಾ ಗಾಂಧೀಜಿ ಅವರ ಆತ್ಮಕಥೆ ಮತ್ತು ಸಿದ್ಧವನಹಳ್ಳಿ ಕೃಷ್ಣಶರ್ಮರ ಗಾಂಧೀಜಿ ಆತ್ಮಕಥೆ (ಸಂಕ್ಷಿಪ್ತ) ಪ್ರಕಟವಾಗಿವೆ. ಜವಾಹರಲಾಲ್ ನೆಹರೂ ಅವರ ಆತ್ಮಕಥೆಯನ್ನು ಗುರುನಾಥ ಜೋಶಿ ಅವರು ನನ್ನ ಕಥೆ ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ (1958). ಗಾಂಧಿ ಮತ್ತು ನೆಹರೂ ಅವರ ಆತ್ಮಕಥೆಗಳು ಅಂತಾರಾಷ್ಟ್ರೀಯ ಮನ್ನಣೆಯನ್ನು ಪಡೆದಿರುವುದು ಮಾತ್ರವಲ್ಲದೆ ಅನೇಕರು ತಮ್ಮ ಆತ್ಮಕಥೆಯನ್ನು ಬರೆಯಲು ಪ್ರೇರಣೆಯನ್ನುಂಟುಮಾಡಿವೆ. ಕೃಷ್ಣ ಹಠೀಸಿಂಗ್ ಅವರ ವಿತ್ ನೋ ರಿಗ್ರೆಟ್ಸ್ ಎಂಬ ಆತ್ಮಕಥೆಯನ್ನು ದೇ.ಜ.ಗೌ. ಅವರು ನೆನಪು ಕಹಿಯಲ್ಲ ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇದು ನೆಹರೂ ತಂಗಿಯ ಆತ್ಮಕಥೆಯಾದರೂ ಇಲ್ಲಿ ಸಮಸ್ತ ನೆಹರೂ ಮನೆತನದ ಅರ್ಧ ಶತಮಾನದ ತ್ಯಾಗಭೋಗಗಳ ಜೀವನದ ಕಥೆಯಿದೆ. ಸಿದ್ಧವನಹಳ್ಳಿ ಕೃಷ್ಣಶರ್ಮರು ಬಾಬು ರಾಜೇಂದ್ರ ಪ್ರಸಾದರ ಸ್ವವೃತ್ತಾಂತವನ್ನು ರಾಜೇಂದ್ರ ಪ್ರಸಾದ್ ಆತ್ಮಕಥೆ ಎಂಬ ನಾಮಾಂಕಿತದಲ್ಲಿ ಕನ್ನಡಕ್ಕೆ ತಂದಿದ್ದಾರೆ (1959). ಸ್ವಾತಂತ್ರ್ಯಯೋಧ ದೇಶಭಕ್ತನ ರೋಮಾಂಚಕಾರಿಯಾದ ಈ ಕಥೆ 866 ಪುಟಗಳಲ್ಲಿ ಹೊರಬಂದಿರುವ ಬೃಹತ್ ಗ್ರಂಥ. ಗೌರೀಶಂಕರದ ತುತ್ತತುದಿಗೇರಿ ಹೊಸ ದಾಖಲೆಯೊಂದನ್ನು ಸ್ಥಾಪಿಸಿದ ತೇನ್‌ಸಿಂಗನ ಆತ್ಮಕಥೆಯನ್ನು ಎವರೆಸ್ಟ್ ವೀರ ಎಂಬ ಹೆಸರಿನಲ್ಲಿ ಕೂಡಲಿ ಚಿದಂಬರಂ ಮತ್ತು ಜನಾರ್ದನ ಗುರ್ಕಾರ್ ಅವರು ಸುಂದರವಾಗಿ ಅನುವಾದಿಸಿದ್ದಾರೆ (1957). ಟಾಲ್‌ಸ್ಟಾಯ್ ಅವರ ಸುಪ್ರಸಿದ್ಧ ಆತ್ಮಚರಿತ್ರೆಯನ್ನು ಲಿಯೊ ಟಾಲ್‌ಸ್ಟಾಯ್ ಎಂಬ ಶೀರ್ಷಿಕೆಯಲ್ಲಿ ಆನಂದರು ಕನ್ನಡಕ್ಕೆ ತಂದಿದ್ದಾರೆ (1958). 388 ಪುಟಗಳ ಈ ಕೃತಿಯಲ್ಲಿ ಟಾಲ್‌ಸ್ಟಾಯ್ ಅವರ ಬಾಲ್ಯ ಮತ್ತು ಯೌವನಗಳ ಜೀವನಪರಿಚಯವಿದೆ.

ಲೋಕವಿಖ್ಯಾತ ವಿಜ್ಞಾನಿ ಚಾರಲ್ಸ್ ಡಾರ್ವಿನ್ನರ ಆತ್ಮಕಥೆಯನ್ನು ಶ್ರೀಮತಿ ಜೀಮೂಬಾಯಿ ಲಕ್ಷ್ಮಣರಾವ್ ಅವರು ಚಾರಲ್ಸ್ ಡಾರ್ವಿನ್ನನ ಆತ್ಮಕಥೆ ಎಂಬ ಹೆಸರಿನಲ್ಲಿ ಅನುವಾದಿಸಿದ್ದರು (1969). ಸುಪ್ರಸಿದ್ಧ ರಾಜಕಾರಣಿ ಬೆಂಜಮಿನ್ ಫ್ರಾಂಕ್ಲಿನ್ ಆತ್ಮಕಥೆ ಅದೇ ಹೆಸರಿನಿಂದ ಜನಾರ್ದನ ಗುರ್ಕಾರ್ ಅವರಿಂದ ಕನ್ನಡಕ್ಕೆ ಬಂದಿದೆ (1958). ಪ್ರಖ್ಯಾತ ಮಹಿಳೆ ಹೆಲನ್ ಕೆಲ್ಲರಳ ಆತ್ಮಕಥೆಯನ್ನು ಚಿ.ನ. ಮಂಗಳ ಅನುವಾದಿಸಿದ್ದಾರೆ. ಅಮೆರಿಕದ ಅಧ್ಯಕ್ಷರಾಗಿದ್ದ ರೂಸ್ವೆಲ್ಟ್ ಅವರ ಪತ್ನಿ ಎಲೀನರ್ ರೂಸ್‌ವೆಲ್ಟ್ ಅವರ ಆತ್ಮಕಥೆ ಸವಿನೆನಪು ಎಂಬ ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ. ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ ಎಚ್.ಎಲ್. ನಾಗೇಗೌಡರಿಂದ ಅನುವಾದಿತವಾಗಿರುವ ಇನ್ನೊಂದು ಆತ್ಮಕಥಾಗ್ರಂಥ ಮರಾಠಿಯಿಂದ ಅನೇಕ ದಲಿತ ಆತ್ಮಕಥೆಗಳು ಕನ್ನಡಕ್ಕೆ ಅನುವಾದಗೊಂಡು ಕನ್ನಡ ದಲಿತ ಸಂವೇದನೆಗಳನ್ನು ಈ ನೆಲೆಯಲ್ಲಿ ಉನ್ಮೀಲನಗೊಳಿಸಿ ಹೊಸ ಬಗೆಯ ಬರೆವಣಿಗೆಗೆ ಹಾದಿ ಮಾಡಿಕೊಟ್ಟಿವೆ. ಅಕ್ರಮಸಂತಾನ, ಉಚಲ್ಯಾ (ಅನು: ದು.ನಿಂ. ಬೆಳಗಲಿ), ಇವು ದಲಿತ ಬದುಕಿನ ಭೀಕರವಾದ ಹಾಗೂ ಬೆರಗಿನ ಲೋಕವನ್ನು

ತೆರೆದಿಟ್ಟಿವೆ. ಪಂಜಾಬಿ ಲೇಖಕಿ ಅಜಿತ್ ಕೌರ್ ಅವರ ಆತ್ಮಚರಿತ್ರೆ ಲವ್‌ಲೀನ್ ಜಾಲಿ (2003). ಅಲೆಮಾರಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಗೊಂಡಿದೆ. (ಅನು: ವಿಜಯಲಕ್ಷ್ಮೀಅರಸ್) ಕನ್ನಡ ಆತ್ಮಕಥಾ ಸಾಹಿತ್ಯ ಅನುವಾದಗಳೂ ಸೇರಿದಂತೆ ಶ್ರೀಮಂತವಾಗುತ್ತಿದೆ. *

**ಕನ್ನಡದಲ್ಲಿ ಕಾದಂಬರಿಸಾಹಿತ್ಯ :** ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಪ್ರಭಾವಶಾಲಿಯೂ ಜನಪ್ರಿಯವೂ ಆಗಿದೆ. 19ನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಹೊಸಗನ್ನಡದಲ್ಲಿ ಸಣ್ಣಕಥೆ, ಪ್ರಬಂಧ, ಭಾವಗೀತೆ, ಜೀವನಚರಿತ್ರೆ ಮೊದಲಾದ ಹೊಸ ಪ್ರಕಾರಗಳು ಹುಟ್ಟಿದಂತೆ ನಾವೆಲ್ ಎಂಬ ಪ್ರಕಾರ ಕಾದಂಬರಿ ಎಂಬ ಹೆಸರಿನಿಂದ ಪ್ರಚುರವಾಯಿತು. ಕಾದಂಬರಿ ಎಂಬ ಹೆಸರು ಹೇಗೆ ಬಂದಿತೆಂಬ ವಿಷಯ ಕುತೂಹಲ ಹುಟ್ಟಿಸುವಂಥದ್ದು. ಸಂಸ್ಕೃತದಲ್ಲಿ ಬಾಣಭಟ್ಟ ರಚಿಸಿದ ಗದ್ಯಕಾವ್ಯ ಕಾದಂಬರಿ ಹೆಸರಿನಿಂದ ಪ್ರಸಿದ್ಧವಾಗಿದೆ. ಇದೇ ಉತ್ತರ ಕರ್ನಾಟಕದಲ್ಲಿ ತುರಮರಿಯವರಿಂದ ಕಾದಂಬರೀ ಕಾವ್ಯದ ಹೊಸಗನ್ನಡ ಗದ್ಯರೂಪ ಎಂಬ ಹೆಸರಿನಿಂದ ಪ್ರಕಟವಾಗಿ (1875) ಜನರ ಮನಸ್ಸನ್ನು ಸೂರೆಗೊಂಡಿತು. ಜೆ.ವೈ.ಕೃಷ್ಣಾಚಾರ್ಯರ ಕಾದಂಬರಿ ಕನ್ನಡ ಗದ್ಯಕಥೆಯ ಸವಿ ದಕ್ಷಿಣ ಕರ್ನಾಟಕದ ಮೈಸೂರು ಸಂಸ್ಥಾನದ ಜನರಿಗೆ ಉಂಟಾಗಿತ್ತು. ಕಾದಂಬರೀ ಕಾವ್ಯದ ಸೊಗಸು ನಾಗವರ್ಮನ ಕೃತಿಯ ಮೂಲಕ ಕನ್ನಡಿಗರಿಗೆ ಹಿಂದಿನಿಂದಲೂ ಪರಿಚಯವಾಗಿತ್ತು. ಕಥೆ, ಶೈಲಿ, ನಿರೂಪಣೆ, ವರ್ಣನೆಯ ಚಮತ್ಕೃತಿ, ರಸ ಮೊದಲಾದ ದೃಷ್ಟಿಗಳಿಂದ ಕಾದಂಬರೀ ಕಾವ್ಯ ಜನಮನವನ್ನು ಸೂರೆಗೊಂಡಿತು. ಆದುದರಿಂದ ಸಂಸ್ಕೃತದ ಕಾದಂಬರೀ ಕಾವ್ಯದಂತೆ ರಮ್ಯವಾದ ಎಲ್ಲ ಕೃತಿಗಳನ್ನೂ ಕಾದಂಬರಿ ಎಂಬ ಹೆಸರಿನಿಂದಲೇ ಕರೆಯುವ ವಾಡಿಕೆ ಏರ್ಪಟ್ಟಿತು. ಹೀಗಾಗಿ ನಾವೆಲ್ ಜಾತಿಗೆ ಕಾದಂಬರಿ ಎಂದು ಕನ್ನಡಿಗರು ಕೊಟ್ಟ ಹೆಸರು ಸಾರ್ಥಕವಾಗಿ ಸ್ಥಿರವಾಗಿ ಉಳಿಯಿತು.

ಕನ್ನಡ ಸಾಹಿತ್ಯದಲ್ಲಿ ನಾಗವರ್ಮನ ಕಾದಂಬರಿ, ದುರ್ಗಸಿಂಹನ ಪಂಚತಂತ್ರ, ನೇಮಿಚಂದ್ರನ ಲೀಲಾವತಿ ಪ್ರಬಂಧ, ಚೌಂಡರಸನ ಅಭಿನವದಶಕುಮಾರಚರಿತೆ, ದೇವಕವಿಯ ಕುಸುಮಾವಳಿ ಮೊದಲಾದುವು ಕುತೂಹಲಕರವಾದ ಕಥೆಗಳನ್ನುಳ್ಳ ಪದ್ಯಕಾವ್ಯಗಳು. ಗದ್ಯಕಥೆಗಳೂ ಕನ್ನಡ ಸಾಹಿತ್ಯದಲ್ಲಿ ಇಲ್ಲದಿಲ್ಲ. ಪ್ರಾಚೀನ ಗದ್ಯಗ್ರಂಥವಾದ ವಡ್ಡಾರಾಧನೆ ಹಲವು ಉತ್ತಮ ಕಥೆಗಳ ಸಂಗ್ರಹ. ಮುದ್ದಣನ ರಾಮಾಶ್ವಮೇಧ ಈಚಿನ ಗದ್ಯ ಕಥೆ. ಆದರೆ ಇವು ಯಾವುವೂ ಕಾದಂಬರಿ ಎಂಬ ಸಾಹಿತ್ಯ ಪ್ರಕಾರಕ್ಕೆ ಸೇರುವುದಿಲ್ಲ. ಏಕೆಂದರೆ ಇವುಗಳಲ್ಲಿ ಮೊದಲನೆಯದು ಕೇವಲ ಕಥೆಗಳ ಗುಂಪು. ಎರಡನೆಯದು ಕಾವ್ಯ. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ಕೆಂಪುನಾರಾಯಣನ (ಸು.1823) ಮುದ್ರಾ ಮಂಜೂಷವೆಂಬ ಗದ್ಯಕೃತಿಯಲ್ಲಿ ಕನ್ನಡ ಕಾದಂಬರಿಯ ರೂಪರೇಷೆಗಳನ್ನು ಗುರುತಿಸಬಹುದಾಗಿದೆ. ಮುದ್ದಣ 'ಗೋದಾವರಿ' ಎಂಬ ಒಂದು ಕಾದಂಬರಿಯನ್ನು ಬರೆದು ಮುಗಿಸುವಷ್ಟರಲ್ಲಿಯೇ ತೀರಿಕೊಂಡನೆಂದು ಹೇಳುತ್ತಾರೆ. ಕನ್ನಡಿಗರಿಗೆ ಕಾದಂಬರಿಗಳ ಮೊದಲ ಪರಿಚಯ ಕನ್ನಡದ ಮೂಲಕ ಆದುದು ಬಿ.ವೆಂಕಟಾಚಾರ್ಯರು ಮಾಡಿದ ಬಂಗಾಳಿ ಕಾದಂಬರಿಗಳ ಭಾಷಾಂತರದಿಂದ. ಬಂಕಿಮಚಂದ್ರರ ಕಾದಂಬರಿ ದುರ್ಗೇಶನಂದಿನಿಯನ್ನು ಬಂಗಾಳಿ ಭಾಷೆಯಿಂದ ಕನ್ನಡಕ್ಕೆ 1865ರಲ್ಲಿ ಭಾಷಾಂತರಿಸಲಾಯಿತು. ಆಚಾರ್ಯರು ಮೊದಲು ಭಾಷಾಂತರ ಮಾಡಿದ ಕೃತಿ ಭ್ರಾಂತಿವಿಲಾಸ. ಇದೇ ಕನ್ನಡದಲ್ಲಿ ಕಾದಂಬರಿಗಳ ಆರಂಭಕ್ಕೆ ನಾಂದಿ ಎಂದು ಹೇಳಬಹುದು. ಅಂದಿನಿಂದ ಇಂದಿನವರೆಗಿನ ಕಾದಂಬರಿಗಳ ಬೆಳವಣಿಗೆ ಮತ್ತು ವಿಲಾಸಗಳನ್ನು ಕಾಲಮಾನ ರೀತಿಯಿಂದ ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಆರಂಭ ಕಾಲ. 19ನೆಯ ಶತಮಾನದ ಉತ್ತರಾರ್ಧದಿಂದ 20ನೆಯ ಶತಮಾನದ ಕಾಲು ಶತಕದವರೆಗೆ. ಎರಡನೆಯದು ನಿರ್ಮಾಣಶೀಲ ಯುಗ 1925 ಅಥವಾ 30ರಿಂದ ಸ್ವಾತಂತ್ರ್ಯೋದಯದವರೆಗೆ. ಮೂರನೆಯದು ಸ್ವಾತಂತ್ರ್ಯೋದಯದ ಯುಗ: ಸ್ವಾತಂತ್ರ್ಯೋದಯದ ಕಾಲದಿಂದ ಇಲ್ಲಿಯವರೆಗೆ.

ಮೈಲಾಪುರದಲ್ಲಿ ಹೈಕೋರ್ಟಿನ ವಕೀಲರಾಗಿದ್ದ ರೆಂಟ್ಲ ವೆಂಕಟಸುಬ್ಬರಾವ್ ಅವರಿಂದ ರಚಿತವಾಗಿ ಮದರಾಸಿನಲ್ಲಿ ಪ್ರಕಟವಾದ ಕೇಸರಿವಿಲಾಸ (1895) ಕಾದಂಬರಿಯ ವಿಶಿಷ್ಟ ಲಕ್ಷಣಗಳನ್ನುಳ್ಳ ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿ ಎಂಬುದು ಗೋವಿಂದ ಪೈ ಅವರ ಅಭಿಪ್ರಾಯ. ದಕ್ಷಿಣ ಕನ್ನಡ ಜಿಲ್ಲೆಯ ಗುಲ್ವಾಡಿ ವೆಂಕಟರಾಯರು ಬರೆದ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ (1899) ಎರಡನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ. 250 ಪುಟಗಳ ಈ ಕಾದಂಬರಿಯಲ್ಲಿ ಅಂದಿನ ಸಾರಸ್ವತ ಸಮಾಜದ ವಾಸ್ತವಿಕ ಚಿತ್ರವಿದೆ. ಭಾಗೀರಥಿ, ಸೀಮಂತಿನಿ ಇವು ಇವರ ಇನ್ನೆರಡು ಕಾದಂಬರಿಗಳು. ಗಳಗನಾಥರ ಹೆಸರು ಕಾದಂಬರಿ ಸಾಹಿತ್ಯದ ಬೆಳವಣಿಗೆಯಲ್ಲಿ ಗುರುತಿಸುವಂಥದು. ಪದ್ಮನಯನೆ ಇವರ ಪ್ರಥಮ ಕಾಲ್ಪನಿಕ ಕಾದಂಬರಿ (1898). ಮಂಗಳೂರಿನ ಬೋಳಾರ ಬಾಬುರಾಯರ ಸ್ವತಂತ್ರ ಕಾದಂಬರಿ ವಾಗ್ದೇವಿ (1905). ಇದು ಸುಮಾರು 308 ಪುಟಗಳಿದ್ದು ಈ ಕಾದಂಬರಿಯ ವಸ್ತುವಿಗೆ ಆಗಿನ ಕಾಲದಲ್ಲಿ ನಡೆದ ಕೆಲವೊಂದು ಘಟನೆಗಳೇ ಆಧಾರ ಎಂಬುದಾಗಿ ತಿಳಿದವರು ಹೇಳುತ್ತಾರೆ. ಅಂದಿನ ಸಾಮಾಜಿಕ ಜೀವನದಲ್ಲಿ ಮಠಗಳ ಪಾತ್ರ, ನ್ಯಾಯ ವಿತರಣೆಯ ರೀತಿನೀತಿ, ಅಧಿಕಾರಿಗಳು ಸಾಮಾಜಿಕ ಜೀವನದಲ್ಲಿ ನಡೆಸುತ್ತಿದ್ದ ಕೃತ್ರಿಮ ಕೈವಾಡ ಇವೇ ಮೊದಲಾದ ವಾಸ್ತವ ಚಿತ್ರಗಳು ಈ ಕಾದಂಬರಿಯಲ್ಲಿ ಮೂಡಿಬಂದಿವೆ. ವಾಸ್ತವಿಕ ಘಟನೆಗಳ ಆಧಾರದ ಮೇಲೆ ಅಂದಿನ ಸಮಾಜದ ಕೆಲವೊಂದು ಲೋಪದೋಷಗಳನ್ನು ಎತ್ತಿ ತೋರಿಸುವ ಇಂಥ ಒಂದು ಕಾದಂಬರಿಯನ್ನು ರಚಿಸಿದುದು ಅಂದಿನ ಕಾಲಕ್ಕೆ ಒಂದು ದಿಟ್ಟತನವೆಂದೇ ಹೇಳಬಹುದು. 1906ರಲ್ಲಿ ಅಣ್ಣಾಜಿರಾವ್ ಗುಲ್ವಾಡಿ ಎಂಬುವರು ರಚಿಸಿದ 'ರೋಹಿಣಿ ಇಲ್ಲವೇ ಸಾರಸ್ವತ ಮಂಡಲ '232 ಪುಟಗಳನ್ನೊಳಗೊಂಡ ಒಂದು ಸಾಮಾಜಿಕ ಕಾದಂಬರಿ. ಉತ್ತರ ಕರ್ನಾಟಕದ ಕೆರೂರ ವಾಸುದೇವಚಾರ್ಯರು ರಚಿಸಿದ (1908) ಇಂದಿರೆ ಎಂಬ ಕಾದಂಬರಿ ಸ್ವತಂತ್ರ ಕಾದಂಬರಿಗಳ ಮಾಲೆಯಲ್ಲಿ ಒಂದು ಗಮನಾರ್ಹ ಕೃತಿ. ಉತ್ತರ ಕರ್ನಾಟಕ ಭಾಷೆಯನ್ನು ಕಾದಂಬರಿಯ ಗದ್ಯಕ್ಕೆ ಅಳವಡಿಕೊಳ್ಳಲು ಕಾದಂಬರಿಕಾರ ಮಾಡಿರುವ ಪ್ರಯತ್ನ ಇಲ್ಲಿ ಸ್ಮರಿಸುವಂಥದ್ದು. ಅಂದು ವಿಶೇಷವಾಗಿ ಚರ್ಚೆಗೆ ಒಳಗಾಗಿದ್ದ ವಿಧವಾವಿವಾಹ, ಸ್ತ್ರೀ ಶಿಕ್ಷಣ ಮತ್ತು ಸ್ತ್ರೀ ಸ್ವಾತಂತ್ರ್ಯದಂಥ ವಿಷಯಗಳು ಈ ಕಾದಂಬರಿಯಲ್ಲಿ ಬರುತ್ತವೆ. ಇಂದಿರೆಯನ್ನು ಆದರ್ಶ ಮಹಿಳೆಯನ್ನಾಗಿ ಚಿತ್ರಿಸಿ ಉತ್ತಮ ಸ್ತ್ರೀ ಶಿಕ್ಷಣದ ಬಗೆಗೆ ಒಳ್ಳೆಯ ನಿದರ್ಶನವನ್ನು ಒದಗಿಸಲಾಗಿದೆ. ಇಲ್ಲಿ ಗಮನಾರ್ಹವಾದ ಮತ್ತೊಂದು ಸಂಗತಿ ಕಾದಂಬರಿಯ ಸೌಂದರ್ಯವನ್ನು ಹೆಚ್ಚಿಸಲು ಉಪಯೋಗಿಸಿರುವ ಮೋಹಕ ವರ್ಣನೆಗಳು. ಔರಂಗಜೇಬ ಎಂಬುದು ಇತಿಹಾಸವನ್ನು ವಸ್ತುವಾಗುಳ್ಳ ಇವರ ಇನ್ನೊಂದು ಕಾದಂಬರಿ.

ಕಾದಂಬರಿಗಳ ಆರಂಭಕಾಲದ ಮೊದಲಿನಲ್ಲಿ ಕೃತಿಗಳನ್ನು ರಚಿಸಿದ ಕೆಲವರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ರಚಿಸಿದ ಚೋರಗ್ರಹಣತಂತ್ರ ಕನ್ನಡದ ಪ್ರಥಮ ಪತ್ತೇದಾರಿ ಕಾದಂಬರಿ. ಎಂ.ಎಲ್.ಶ್ರೀಕಂಠೇಶಗೌಡ ಅವರ ಕನ್ಯಾವಿತಂತು 1895ರಲ್ಲಿ ಪ್ರಕಟವಾಯಿತು. ತೆಲುಗಿನಲ್ಲಿ ವೀರೇಶಲಿಂಗ ಪಂತುಲು ಅವರು ರಚಿಸಿದ ನೂತನ ರೀತಿಯ ಕಲ್ಪನಾ ಕಥೆಗಳಾದ ರಾಜಶೇಖರ ಚರಿತ್ರೆ, ಸತ್ಯವತೀ ಚರಿತ್ರೆ ಮತ್ತು ಸತ್ಯರಾಜಾ, ಪೂರ್ವದೇಶದ ಯಾತ್ರೆಗಳು ಎಂಬ ಮೂರು ಕೃತಿಗಳನ್ನು ಬೆನಗಲ್ ರಾಮರಾಯರು 1899ರ ಹೊತ್ತಿಗೆ ಕನ್ನಡಕ್ಕೆ ಭಾಷಾಂತರಿಸಿದ್ದರು. ಗೋಡೆ ಜೀವಣರಾಯರು ಜಾನ್‌ಸನ್ನನ ಕಾದಂಬರಿ ರಾಸೆಲಾಸನ್ನು ಕನ್ನಡಿಸಿದರು.

ಅಂದಿಗೆ ಕಾದಂಬರಿಗಳನ್ನು ಓದಬೇಕೆಂದು ಹಾತೊರೆಯುವ ಪ್ರವೃತ್ತಿಯುಂಟುಮಾಡಿ ಕನ್ನಡ ಜನತೆಯ ಹಂಬಲವನ್ನು ತುಂಬಿಕೊಟ್ಟವರು ವೆಂಕಟಾಚಾರ್ಯರು. ಅಂದು ಬಂಗಾಳಿ ಭಾಷೆಯಲ್ಲಿ ಕೃತಿರಚನೆ ಮಾಡಿ ನವಚೇತನವನ್ನು ನಾಡಿನ ಜೀವನದಲ್ಲಿ ತುಂಬಿದ್ದ ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮಚಂದ್ರ, ರಮೇಶಚಂದ್ರದತ್ತ– ಇವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿಕೊಟ್ಟ ಕೀರ್ತಿ ಆಚಾರ್ಯರದು. ಇವರ ಕೃತಿರಚನೆ ಸುಮಾರು ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಅವ್ಯಾಹತವಾಗಿ ನಡೆಯಿತು. ದೇಶಾಭಿಮಾನ, ಸಾಹಸ, ಭಕ್ತಿ ಮೊದಲಾದ ಗುಣಗಳಿಂದ ಮೆರೆಯುವ ಸ್ವತಂತ್ರ, ಐತಿಹಾಸಿಕ ಹಾಗೂ ಸಾಮಾಜಿಕ ಕಾದಂಬರಿಗಳನ್ನು ಬಂಗಾಳಿಯಲ್ಲಿ ರಚಿಸಿದ ಕೀರ್ತಿ ಬಂಕಿಮಚಂದ್ರರದು. ಆನಂದಮಠ, ದೇವಿಚೌಧುರಾಣಿ, ವಿಷವೃಕ್ಷ ಮೊದಲಾದ ಕಾದಂಬರಿಗಳನ್ನು ಇಂದಿಗೂ ಜನ ಓದಿ ಆನಂದಿಸಬಲ್ಲವರಾಗಿದ್ದಾರೆ. ಆ ಕಾಲಕ್ಕೆ ಇಂಗ್ಲಿಷಿನಲ್ಲಿ ಸರ್ ವಾಲ್ಟರ್ ಸ್ಕಾಟ್ ರಚಿಸಿದ ಐತಿಹಾಸಿಕ ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿದ್ದುವು. ಬಂಕಿಮಚಂದ್ರರು ಸರ್ ವಾಲ್ಟರ್ ಸ್ಕಾಟ್ ಮತ್ತು ಸರ್ ವಿಲ್ಕಿ ಕಾಲಿನ್ಸರ ಕಾದಂಬರಿಗಳಿಂದ ಸ್ಫೂರ್ತಿ ಪಡೆದು ಭಾರತ ದೇಶದ ಚಾರಿತ್ರಿಕ ಘಟನೆಗಳ ಆಧಾರದ ಮೇಲೆ ಕಾದಂಬರಿಗಳನ್ನು ಬರೆದರು. ಅವರ ಸಾಮಾಜಿಕ ಕಾದಂಬರಿಗಳಲ್ಲಿ ವಿಧವಾ ವಿವಾಹ, ಸ್ತ್ರೀ ಶಿಕ್ಷಣ ಮೊದಲಾದ ಅಂದಿನ ಪ್ರಮುಖ ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣವಿದೆ. ಸಜೀವ ಕಲ್ಪನೆ, ನಾಟಕೀಯ ಶಕ್ತಿ, ಪರಿಶುದ್ಧ ಧ್ಯೇಯ– ಇವು ಬಂಕಿಮಚಂದ್ರರ ಕಾದಂಬರಿಗಳ ವೈಶಿಷ್ಟ್ಯ. ಸಂಸ್ಕೃತ ಭೂಯಿಷ್ಠವಿವಾದ ಶುದ್ಧಗ್ರಾಂಥಿಕ ಶೈಲಿ ಬಂಗಾಳಿ ಕಾದಂಬರಿಗಳದು. ಇದೇ ಶೈಲಿ ವೆಂಕಟಾಚಾರ್ಯರ ಅನುವಾದ ಕೃತಿಗಳಲ್ಲಿಯೂ ಹಾಸು ಹೊಕ್ಕಾಯಿತು.

ಗಳಗನಾಥರು ವೆಂಕಟಾಚಾರ್ಯರಂತೆಯೇ ಪ್ರಮುಖ ಕಾದಂಬರಿ ಕಾರರು. ಇವರು ಮರಾಠಿಯಿಂದ ಕನ್ನಡಕ್ಕೆ ಅನುವಾದ ಮಾಡಿರುವಂತೆ ಸ್ವಂತ ಕೃತಿಗಳನ್ನೂ ರಚಿಸಿದ್ದಾರೆ. ಅಂದಿಗೆ ಮರಾಠಿ ಕಾದಂಬರಿಕಾರರಲ್ಲಿ ಸತ್ತ್ವಶಾಲಿ ಕೃತಿಕಾರರಾಗಿದ್ದ ಹರಿನಾರಾಯಣ ಅಪ್ಟೆಯವರ ಗಢ ಆಲಾಪಣ ಸಿಂಹಗೇಲಾ ಎಂಬ ಕಾದಂಬರಿಯನ್ನು ಇವರು ಕಮಲಕುಮಾರಿ ಎಂಬ ಹೆಸರಿನಿಂದ ಕನ್ನಡಿಸಿದ್ದಾರೆ. ಉಳಿದ ಹಲವು

ಕಾದಂಬರಿಗಳಿಗೆ ಮರಾಠಿಯಿಂದ ವಸ್ತುವನ್ನು ಒದಗಿಸಿಕೊಂಡು ತಮಗೆ ಸರಿಕಂಡ ಹಾಗೆ ತಿದ್ದಿ, ವಿಸ್ತರಿಸಿ, ಮೊಟಕುಮಾಡಿ ತಮ್ಮದೇ ಆದ ಒಂದು ರೀತಿಯಲ್ಲಿ ಕನ್ನಡಕ್ಕೆ ನೀಡಿದ್ದಾರೆ. ಸದ್ಬೋಧ ಚಂದ್ರಿಕೆ ಮತ್ತು ಸದ್ಗುರು ಎಂಬ ಪತ್ರಿಕೆಗಳಲ್ಲಿ ಭಾಗಭಾಗವಾಗಿ ಇವರ ಕಾದಂಬರಿಗಳು ಸಹೃದಯರಿಗೆ ದೊರಕಿದವು. ಮಾಧವಕರುಣಾವಿಲಾಸ (1923) ವಿಜಯನಗರದ ಇತಿಹಾಸವನ್ನು ವಸ್ತುವಾಗುಳ್ಳ ಗಳಗನಾಥರ ಸ್ವತಂತ್ರ ಮೇರುಕೃತಿ. ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ವಿಷಯ ಕುಮುದಿನಿಯಲ್ಲಿಯೂ ಬರುತ್ತದೆ. 'ಕನ್ನಡಿಗರ ಕರ್ಮಕಥೆ' ತಾಳೀ ಕೋಟೆಯ ಕಾಳಗದ ವಿಷಯವನ್ನೊಳಗೊಂಡ ಐತಿಹಾಸಿಕ ಕಾದಂಬರಿ. ಇವರ ಉಳಿದ ಬಹುತೇಕ ಕಾದಂಬರಿಗಳು ಮರಾಠರ ಮತ್ತು ರಜಪೂತರ ಚರಿತ್ರೆಗಳಿಗೆ ಸಂಬಂಧಪಟ್ಟುವು. ಈಶ್ವರೀಸೂತ್ರ, ಧಾರ್ಮಿಕ ತೇಜ, ಕ್ಷಾತ್ರತೇಜ, ಶಿವಪ್ರಭುವಿನ ಪುಣ್ಯ– ಇವೇ ಮೊದಲಾದ 22 ಕೃತಿಗಳನ್ನು ಇವರು ರಚಿಸಿದ್ದಾರೆ. ಇವರ ರಚನೆಯಲ್ಲಿ ಹೆಚ್ಚಿನವು ಐತಿಹಾಸಿಕ ಕಾದಂಬರಿಗಳು. ಇವರ ಕಾದಂಬರಿಗಳು ಕ್ಷಾತ್ರತೇಜಸ್ಸು, ಧಾರ್ಮಿಕ ಪ್ರಭಾವ ಮತ್ತು ದೇಶಪ್ರೇಮದಿಂದ ತುಂಬಿ ತುಳುಕುತ್ತಿವೆ. ಉತ್ತರ ಕರ್ನಾಟಕದ ಆಡುಭಾಷೆಯನ್ನು ಯಶಸ್ವಿಯಾಗಿ ಬಳಸಿರುವುದು ಇವರ ಕೃತಿಗಳಲ್ಲಿ ಕಾಣಬರುತ್ತದೆ. ಆದರೂ ಗಳಗನಾಥರ ಭಾಷೆಯ ಬಳಕೆ ಒಮ್ಮುಖವಾದುದೇ ಹೊರತು ವೈವಿಧ್ಯಮಯವಲ್ಲ.

ವೆಂಕಟಾಚಾರ್ಯರ ಮತ್ತು ಗಳಗನಾಥರ ಕಾದಂಬರಿಗಳು ಕೇವಲ ಓದುಗರ ಮೇಲೆಯೇ ಅಲ್ಲದೆ ಬರೆಯುವವರ ಮೇಲೆಯೂ ಸಾಕಷ್ಟು ಪ್ರಭಾವವನ್ನು ಬೀರಿದುವು. ವೀರಶೌರ್ಯೋದಾರ್ಯಾದಿ ಗುಣಗಳುಳ್ಳ ನಾಯಕ ನಾಯಕಿಯರಿಂದ ಕೂಡಿದ ಅದ್ಭುತ, ರಮ್ಯ, ಐತಿಹಾಸಿಕ ಸಾಮಾಜಿಕ ಕಾದಂಬರಿಗಳ ಪ್ರವಾಹ ಇಪ್ಪತ್ತನೆಯ ಶತಮಾನದ ಮೊದಲ ಮೂರು ದಶಕಗಳವರೆಗೆ ವ್ಯಾಪಕವಾಗಿಯೂ ಅನಂತರ ಕಿಂಚಿತ್ತಾಗಿಯೂ ಹರಿಯಿತು. ಹಲವಾರು ಕಾದಂಬರಿಗಳನ್ನು ರಚಿಸಿದ ಭಿ.ಪ.ಕಾಳೆ ಮತ್ತು ನಾಗೇಶ ಇವರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನಾಗೇಶರ ಈಶಸಂಕಲ್ಪ ಮತ್ತು ಎಚ್ಚಮನಾಯಕ ಕಾದಂಬರಿಗಳು ಕನ್ನಡನಾಡಿನ ಚರಿತ್ರೆಯ ಮೇಲೆ ಆಧಾರಿತವಾದವು. ಕನ್ನಡ ಗರಡಿಯಾಳು ಎಂಬುವರ ಕರ್ಮಫಲ ಅಥವಾ ಪ್ರೇಮಫಲ, ಬಿ.ಕೃಷ್ಣಪ್ಪನವರ ರಾಯಚೂರು ವಿಜಯ, ಡಿ.ಶ್ರೀನಿವಾಸ ಶರ್ಮರ ನೀಲವಸನಾ ಸುಂದರಿ ಇವು ಈ ಕಾಲದಲ್ಲಿ ರಚಿತವಾದ ಕೆಲವು ಕಾದಂಬರಿಗಳು.



ಗಳಗನಾಥ

ಈ ಕಾಲದಲ್ಲೇ ಪತ್ತೇದಾರಿ ಕಾದಂಬರಿಗಳೂ ಹುಟ್ಟಿದುವು. ಬಾಲ ಸರಸ್ವತಿ, ಭಿ.ಪ.ಕಾಳೆ, ನಾಗೇಶ ಮೊದಲಾದವರು ಪತ್ತೇದಾರಿ ಕಾದಂಬರಿಗಳನ್ನು ಕೊಟ್ಟವರಲ್ಲಿ ಮುಖ್ಯರು. ಬಾಲಸರಸ್ವತಿಯವರು ಕೆಲವು ಬಂಗಾಳಿ ಕಾದಂಬರಿಗಳನ್ನು ಕನ್ನಡಿಸಿದರು. ಪಾಂಚಕೊಡಿ ಡೇ ಅವರ ಹತ್ಯಾಕಾರಿ ಎಂಬ ಬಂಗಾಳಿ ಕಾದಂಬರಿಯ ಕಥೆಯನ್ನು ಅವಲಂಬಿಸಿ ಕುಮುದಿನಿ ರಚಿತವಾಯಿತು. (1911) ಚಿತ್ರಗುಪ್ತನ ದಫ್ತರಗಳು, ಗುರುತು ಕಂಡ ಕಳ್ಳ, ನರಬಲಿ– ಇವು ಬಾಲಸರಸ್ವತಿಯವರ ಪತ್ತೇದಾರಿ ಕಾದಂಬರಿಗಳು, ಕಂಠಾಭರಣ, ರಾಣೀ ಚೌಧುರಾಣಿ, ಕುಮಾರಕಂಠೀರವ ಮೊದಲಾದ ಸಾಮಾಜಿಕ ಹಾಗೂ ಸಾಂಸಾರಿಕ ಕಾದಂಬರಿಗಳನ್ನೂ ಇವರು ಬರೆದಿದ್ದಾರೆ.

ಕನ್ನಡ ಕಾದಂಬರಿಗಳ ಆರಂಭಕಾಲದಲ್ಲಿ ಸ್ತ್ರೀಯರೂ ಕೃತಿರಚನೆ ಮಾಡಿದ್ದಾರೆ. ಎಂಬುದಕ್ಕೆ ಸತೀಹಿತೈಷಿಣೀ ಗ್ರಂಥಮಾಲೆಯ ತಿರುಮಲಾಂಬಾ ನಿದರ್ಶನವಾಗಿದ್ದಾರೆ. ವಿರಾಗಿಣಿ, ವಿದ್ಯುಲ್ಲತಾ, ನಭ, ಪೂರ್ಣಕಲಾ– ಇವೇ ಮೊದಲಾದುವು ಇವರ ಕೃತಿಗಳು. ವಿಶೇಷವಾಗಿ ಸ್ತ್ರೀಯರಿಗೂ ಅವರ ಸಾಮಾಜಿಕ ಸ್ಥಾನಮಾನಗಳಿಗೂ ಸಂಬಂಧಿಸಿದ ವಿಷಯ ಇವರ ಕೃತಿಗಳ ವೈಶಿಷ್ಟ್ಯ. ಸಾಹಿತ್ಯಗುಣ ಅಷ್ಟೊಂದಾಗಿ ಇಂಥ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. ಮಾಸ್ತಿಯವರು ಇವರ ಕೃತಿಗಳನ್ನು ನಾಟಕರೂಪದ ನಾವೆಲುಗಳೆಂದು ಕರೆದಿದ್ದಾರೆ.

ಇದೇ ಕಾಲದಲ್ಲಿ ಎ.ಎ.ಶ್ರೀನಿವಾಸಾಚಾರ್ಯ, ಉಲ್ಲಾಳ ಮಂಗೇಶರಾಯರು ಮುಂತಾದವರು ಇಂಗ್ಲಿಷಿನಿಂದ ಹಲವಾರು ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು.

ಕಾದಂಬರಿಗಳ ಬೆಳವಣಿಗೆಯಲ್ಲಿ ಕ್ರಮೇಣ ನವೀನತೆ ಮತ್ತು ಆಧುನಿಕತೆಗಳು ತಲೆಹಾಕಲಾರಂಭಿಸಿದುವು. ಅಲ್ಲಲ್ಲಿ ಒಂದೊಂದು ಕೃತಿ ವಾಸ್ತವಿಕತೆಯ ಕಡೆಗೆ ತಿರುಗುತ್ತಿದ್ದುದು ಕಂಡುಬರುತ್ತಿತ್ತು. ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ (1914) ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದುದೆಂದು ಹೇಳಲಾದ ಹಲಕೆಲವು ಸಂಗತಿಗಳ ಆಧಾರದಿಂದ ರಚಿತವಾದೊಂದು ಗಮನಾರ್ಹ ಕೃತಿ. ಇವರು ಕಥೆ ಕಟ್ಟುವ ವೈಖರಿ, ಸನ್ನಿವೇಶಗಳನ್ನು ಸೃಷ್ಟಿಸುವ ಚಮತ್ಕಾರ, ಸ್ಥಳೀಯ ವಾತಾವರಣವನ್ನು ತರುವಲ್ಲಿ ಬಳಸಿರುವ ಭಾಷೆಯ ಪ್ರಾದೇಶಿಕತೆ, ಅಂದಿನ ಸಾಮಾಜಿಕ ಹಾಗೂ ರಾಜಕೀಯ ವಾಸನೆಯನ್ನು ಸಹಜವಾಗಿಸುವಂತೆ ಬಳಸುವ ಶಬ್ದಭಂಡಾರ – ಇವು ಎಂಥವರನ್ನೂ ಬೆರಗುಗೊಳಿಸುತ್ತವೆ. ಅಂದಿನ ಕಾಲದ ಜನಜೀವನಕ್ಕೆ ಇವರ ಕಾದಂಬರಿಗಳು ನಿಕಟವಾದವು. ಮುಸುಕು ತೆಗೆಯೆ ಮಾಯಾಂಗನೆ ಇವರ ಇನ್ನೊಂದು ಕೃತಿ. ಕಾದಂಬರಿಯ ಕ್ಷೇತ್ರದಲ್ಲಿ ಪುಟ್ಟಣ್ಣನವರದು ಮರೆಯಲಾಗದ ಹೆಸರು.

20ನೆಯ ಶತಮಾನದ ಮೂರನೆಯ ದಶಕದಿಂದ ಮುಂದಕ್ಕೆ ಆಧುನಿಕ ಪ್ರವೃತ್ತಿಯ ಕಾದಂಬರಿಗಳ ನಿರ್ಮಾಣವನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ವಸ್ತು, ನಿರೂಪಣೆ, ಶೈಲಿ, ತಂತ್ರಗಳಲ್ಲಿ ಆಧುನಿಕತೆ ಈ ಕಾದಂಬರಿಗಳ ನಿರ್ಮಾಣದ ಮುಖ್ಯತತ್ತ್ವಗಳು. ಆದುದರಿಂದ ಈ ಕಾಲಕ್ಕೆ ನಿರ್ಮಾಣಶೀಲಯುಗವೆಂದು ಹೆಸರಿಡಲಾಗಿದೆ. ಆನಂದಕಂದರ (ಬೆಟಗೇರಿ ಕೃಷ್ಣಶರ್ಮ) ಸುದರ್ಶನ (1933) ಹಾಗೂ ಮಗಳ ಮದುವೆ; ರಂ.ಶ್ರೀ. ಮುಗಳಿಯವರ ಬಾಳುರಿ, ಅನ್ನ, ಕಾರಣ ಪುರುಷ; ಜಡಭರತರ ಧರ್ಮಸೆರೆ ಮುಂತಾದ ಕಾದಂಬರಿಗಳು ಆದರ್ಶವಾದವನ್ನು ದೃಷ್ಟಿಯಲ್ಲಿಟ್ಟುಕೊಂಡು ಸೃಷ್ಟಿಯಾದವು. ಕಾರಂತರ ಚೋಮನ ದುಡಿ 1933ರಲ್ಲಿ ಪ್ರಕಟವಾಯಿತು. ಅ.ನ.ಕೃ. ಅವರ ಉದಯರಾಗ ಮತ್ತು ಜೀವನಯಾತ್ರೆ, ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ 1934ರಲ್ಲಿ ಬೆಳಕುಕಂಡವು. 1935ನೆಯ ಸಂವತ್ಸರದಲ್ಲಿ ಆನಂದಕಂದರ ರಾಜಯೋಗಿ ಮತ್ತು ಅಶಾಂತಿಪರ್ವಗಳೆಂಬ ಎರಡು ಐತಿಹಾಸಿಕ ಕಾದಂಬರಿಗಳೂ ವಿನಾಯಕರ ಇಜ್ಜೋಡು, ಅ.ನ.ಕೃ. ಅವರ ಸಂಧ್ಯಾರಾಗ ಮತ್ತು ಜಡಭರತರ ಧರ್ಮಸೆರೆ ಕನ್ನಡಿಗರ ಕೈಸೇರಿದುವು. 1936ರಲ್ಲಿ ಕುವೆಂಪು ಅವರ ಬೃಹತ್ ಕಾದಂಬರಿ ಕಾನೂರು ಸುಬ್ಬಮ್ಮ ಹೆಗ್ಗಡತಿ ಹೊರಬಂತು.

ನಿರ್ಮಾಣಶೀಲಯುಗದ ಪ್ರಮುಖ ಕಾದಂಬರಿಕಾರರೆಂದರೆ ಕುವೆಂಪು, ಶಿವರಾಮ ಕಾರಂತ, ಅ.ನ.ಕೃ. ಆನಂದಕಂದ, ರಂ.ಶ್ರೀ.ಮುಗಳಿ, ಕಡೆಂಗೋಡ್ಲು ಶಂಕರ ಭಟ್ಟ, ಶ್ರೀರಂಗ, ಮಿರ್ಜಿ ಅಣ್ಣಾರಾಯ, ದೇವುಡು ಮೊದಲಾದವರು. ಇವರೆಲ್ಲ ಆಧುನಿಕ ವಿದ್ಯಾಭ್ಯಾಸವನ್ನು ಪಡೆದವರೂ ವಿಚಾರಶೀಲರೂ ಆಗಿದ್ದಾರೆ. ಶ್ರೀನಿವಾಸರ ಸುಬ್ಬಣ್ಣವನ್ನು ಕಾದಂಬರಿಯೆಂದು ಹೇಳಲಾಗದು. ಆದರೆ ಇದು ಕಾದಂಬರಿಯ ಘನತೆಯುಳ್ಳ ನೀಳ್ಗತೆಯಾಗಿ ವಸ್ತು, ಶೈಲಿಗಳ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಕೃತಿಯೆಂಬುದರಲ್ಲಿ ಸಂಶಯವಿಲ್ಲ. ಇದರಲ್ಲಿ ಸಂಗೀತಗಾರ ನೊಬ್ಬನ ಜೀವನಚಿತ್ರಣ, ಮಾಸ್ತಿಯವರ ಮನೋಧರ್ಮ, ಬದುಕಿನ ಬಗ್ಗೆ ಇವರಿ ಗಿರುವ ನೈಜ ತಿಳುವಳಿಕೆ ಇವುಗಳಿಂದ ಮೈತುಂಬಿಕೊಂಡಿದೆ. ಶಿವರಾಮ ಕಾರಂತರು ಮೂವತ್ತನಾಲ್ಕು ಕಾದಂಬರಿ ಗಳನ್ನು (1974) ರಚಿಸಿದ್ದಾರೆ. ಇವು ಗಳಲ್ಲಿ ಸ್ವಾತಂತ್ರ್ಯಾನಂತರ ಬರೆದ ಕಾದಂಬರಿಗಳೂ ಸೇರಿವೆ. ಕಾರಂತರ ಮೊದಲ ಕಾದಂಬರಿ ಚೋಮನ ದುಡಿ ವಸ್ತು ಶೈಲಿ ಒಟ್ಟಿನ ಪರಿಣಾಮಗಳ ದೃಷ್ಟಿಯಿಂದ ನಿಜವಾಗಿಯೂ ಮೊದಲ ಬಾರಿಗೆ ವೈಶಿಷ್ಟ ಸ್ಥಾಪಿಸಿತು. ಶೂದ್ರ ನೊಬ್ಬನ ಬದುಕು ಹೇಗೆ ತುಳಿತಕ್ಕೆ ಒಳಗಾಗಿ ನಾಶವಾಯಿತು ಎಂಬುದನ್ನು ಈ ಕಾದಂಬರಿಯು ಜೀವಂತವಾಗಿ ಚಿತ್ರಿಸುತ್ತದೆ. ಇವರ ಮರಳಿಮಣ್ಣಿಗೆ ಕನ್ನಡದ ಮಹಾಕಾದಂಬರಿಗಳಲ್ಲೊಂದು. ಈ ಕೃತಿಯಲ್ಲಿ ಕರಾವಳಿ ಪ್ರದೇಶದ ಮೂರು ತಲೆಮಾರುಗಳ ಜೀವನ ದರ್ಶನ ಅರಳಿದೆ. ಬೆಟ್ಟದ ಜೀವ, ಔದಾರ್ಯದ ಉರುಳಲ್ಲಿ, ಮುಗಿದ ಯುದ್ಧ, ಕುಡಿಯರ ಕೂಸು ಕಾರಂತರ ಕಾದಂಬರಿಗಳಲ್ಲಿ ವೈಶಿಷ್ಟ್ಯಪೂರ್ಣವಾದುವು. ಇವರ ಇನ್ನೊಂದು ಕಾದಂಬರಿ ಅಳಿದ ಮೇಲೆ ತಂತ್ರ, ವಸ್ತು, ಆಲೋಚನೆಗಳಲ್ಲಿ ಒಂದು ಮಹತ್ತ್ವಪೂರ್ಣ ಕೃತಿಯಾಗಿದೆ. ಕಾರಂತರ ವಿಚಾರಶೀಲ ವ್ಯಕ್ತಿತ್ವ ಇದರಲ್ಲಿ ವಿಕಾಸಗೊಂಡಿದೆ. ಮೈಮನಗಳಸುಳಿಯಲ್ಲಿ,



ಎಂ.ಎಸ್. ಪುಟ್ಟಣ್ಣ

ಮೂಕಜ್ಜಿಯ ಕನಸು ಹೊಸ ದೃಷ್ಟಿಯಿಂದ ಅಷ್ಟೇ ಮಹತ್ತ್ವಪೂರ್ಣ ಕೃತಿಗಳಾಗಿವೆ. ಇವರ ಇನ್ನೊಂದು ಮಹತ್ತ್ವದ ಕಾದಂಬರಿ ಧರ್ಮರಾಯನ ಸಂಸಾರ (1972). ಒಟ್ಟಿನಲ್ಲಿ ಇವರ ಕಾದಂಬರಿಗಳಲ್ಲಿ ಆಳವಾದ ಜೀವನಾನುಭವ, ಬದುಕನ್ನು ಸಮಗ್ರವಾಗಿ ಅದರ ಒಳಿತು ಕೆಡುಕುಗಳೊಂದಿಗೆ ನೋಡುವ ಸೂಕ್ಷ್ಮದೃಷ್ಟಿ. ಜೀವಂತ ಪಾತ್ರಗಳು, ಸಹಜ ಶೈಲಿ, ವೈಜ್ಞಾನಿಕನಿಗೊಪ್ಪುವ ಪ್ರಾಮಾಣಿಕತನ, ಯಾವ ಸಂಪ್ರದಾಯಕ್ಕೂ ಸೇರದ ಸ್ವತಂತ್ರ ಮನೋವೃತ್ತಿ ಇವು ಮುಖ್ಯವಾಗಿ ಕಂಡುಬರುತ್ತವೆ. ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕನ್ನಡದ ಎರಡು ಮಹಾ ಕಾದಂಬರಿಗಳು ಎಂಬ ಪ್ರಖ್ಯಾತಿ ಪಡೆದಿವೆ. ಶ್ರೀ ರಾಮಾಯಣದರ್ಶನಂ ಇವರ ಪದ್ಯಕಾವ್ಯವಾದರೆ, ಕಾದಂಬರಿಗಳೆರಡೂ ಇವರ ಗದ್ಯಕಾವ್ಯಗಳು. ಇಲ್ಲಿ ಬಳಕೆಯಾಗಿರುವ ಭಾಷೆ ಕನ್ನಡ ಗದ್ಯಶೈಲಿಯ ಶ್ರೀಮಂತ ಪ್ರತಿನಿಧಿಯಾಗಿದೆ. ಮಲೆನಾಡಿನ ಜೀವನಚಿತ್ರವನ್ನು ಅದರ ಹಿನ್ನೆಲೆ, ವಿಸ್ತಾರ, ಆಳ, ವರ್ಣವಿನ್ಯಾಸಗಳೊಂದಿಗೆ ಚಿತ್ರಿಸಿರುವ ರೀತಿ ಅನ್ಯಾದೃಶವಾದುದು. ಕುವೆಂಪುರವರ ತಂತ್ರ, ರೀತಿ, ಶೈಲಿಗಳ ಮಾರ್ಗದಲ್ಲಿ ನಡೆದು ಚಿತ್ರವತ್ತಾಗಿ ಸನ್ನಿವೇಶಗಳನ್ನು ಜೋಡಿಸಿ, ಬೃಹತ್ತಾಗಿ ಪಾತ್ರಗಳನ್ನು ಸೃಷ್ಟಿಸುವ ಇನ್ನೊಂದು ಉದಾಹರಣೆ ಕಾಣ ಬರುತ್ತಿಲ್ಲ. ಒಂದು ಜನಾಂಗದ ಜೀವನ ಸಮಗ್ರವಾಗಿ ಅದರ ಆಳ ಅಗಲಗಳಲ್ಲಿ ನಿರೂಪಿತವಾಗಿರುವುದು ಇದೇ ಮೊದಲು. ಕಾದಂಬರಿ ಕರತಲ ರಂಗಭೂಮಿ ಎಂಬ ಅವರ ವಿಮರ್ಶಕ ನುಡಿಗೆ ಅವರ ಕಾದಂಬರಿಗಳೇ ಉದಾಹರಣೆಗಳಾಗಿವೆ. ಗೋಕಾಕರ ಇಜ್ಜೋಡು ಮೊದಲು ಎರಡು ಭಾಗಗಳಿಂದ ಪೂರ್ಣಗೊಂಡು ಸಮರಸವೇ ಜೀವನ ಎಂಬ ಹೆಸರಿನಲ್ಲಿ 1300 ಪುಟಗಳ ಬೃಹತ್ ಕಾದಂಬರಿಯಾಗಿ ಹೊರಬಂದಿದೆ. ಇಪ್ಪತ್ತೈದು ವರ್ಷಗಳಲ್ಲಿನ ಜೀವನದ ಸಾಮಾಜಿಕ ಸಮಸ್ಯೆಗಳು, ಸೋಲುಗೆಲುವು, ಹೊಯ್ದಾಟ ಹೋರಾಟಗಳ ಚಿತ್ರ ಈ ಕಾದಂಬರಿಯಲ್ಲಿ ಮೂಡಿಬಂದಿದೆ. ಸಮರಸವೇ ಜೀವನ ಹಲವು ದೃಷ್ಟಿಗಳಿಂದ ಮಹತ್ತ್ವದ ಸ್ಥಾನ ಪಡೆದುಕೊಂಡಿದೆ. ಅ.ನ.ಕೃ. ಕನ್ನಡದಲ್ಲೆಲ್ಲ ಹೆಚ್ಚು ಕಾದಂಬರಿಗಳನ್ನು ರಚಿಸಿದವರೆಂದು ಖ್ಯಾತರಾಗಿದ್ದಾರೆ. ಸುಮಾರು ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ ಸಮಾಜದ ಹಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಇವರು ಸಂಧ್ಯಾರಾಗದಿಂದ ಕಾದಂಬರಿಕಾರರೆಂದು ಪ್ರಸಿದ್ಧಿಪಡೆದರು. ನಟಸಾರ್ವಭೌಮ ಎಂಬ ದೊಡ್ಡ ಕಾದಂಬರಿಯಲ್ಲಿ ಕಲಾವಿದನ ಬಾಳಿನ ಏಳು ಬೀಳುಗಳ ಹೊಯ್ದಾಟ ತುಯ್ದಾಟಗಳ ಚಿತ್ರವಿದೆ. ಮಂಗಳಸೂತ್ರ, ಕಣ್ಣೀರು ಉತ್ತಮ ಕಾದಂಬರಿಗಳು. ಇವರ ಸರಳವಾದ ಚಿತ್ತಾಕರ್ಷಕ ಶೈಲಿ, ನಿರೂಪಣಾವಿಧಾನ, ಕನ್ನಡದ ಬಗ್ಗೆ ಇವರಿಗಿರುವ ಅಭಿಮಾನ, ಸಮಾಜದ ಲೋಪದೋಷಗಳನ್ನು ಎತ್ತಿ ಆಡುವಲ್ಲಿ ಕಾಣುವ ಉತ್ಸಾಹ, ಕಲಾವಿದರ ಬಗ್ಗೆ ಇವರಿಗಿರುವ ಸಹಾನುಭೂತಿ, ಸಹಜ ಸಂಭಾಷಣೆಗಳನ್ನು ಹೆಣೆವಲ್ಲಿ ಕಾಣಬರುವ ಜಾಣ್ಮೆ ಈ ಗುಣಗಳಿಂದ ಅ.ನ.ಕೃ. ಜನಪ್ರಿಯ ಲೇಖಕರಾದರು. ಇವರ ಕಾದಂಬರಿಗಳಲ್ಲಿ ಆಳವಾದ ಅನುಭವವಿಲ್ಲ. ಪಾತ್ರಗಳಿಗೆ ಗುರಿಯಿಲ್ಲ. ಕಲೆ ಗಂಭೀರವಾಗಿ ನಿರೂಪಿತ ವಾಗುವುದೂ ಇಲ್ಲ. ವಿಚಾರಗಳು ಬಂದರೂ ಅವು ಕಡೆಗೆ ಭಾವನಾವಶತೆಯಲ್ಲಿ ತೇಲಿಬಿಡುತ್ತವೆ. ಸಂಖ್ಯೆ ದೊಡ್ಡದಾಗಿ ಬೆಳೆದರೂ ಗುಣದ ದೃಷ್ಟಿಯಿಂದ ಇವರ ಕಾದಂಬರಿಗಳು ದೊಡ್ಡವಾಗಲಿಲ್ಲ.

ಅ.ನ. ಕೃಷ್ಣರಾಯ

ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ, ಪುರುಷಾರ್ಥ, ಒದುಗರ ಗಮನ ಸೆಳೆದ ಎರಡು ಕಾದಂಬರಿಗಳು. ವಿಶ್ವಾಮಿತ್ರ ಸೃಷ್ಟಿಯಲ್ಲಿ ಪ್ರಜ್ಞಾಪ್ರವಾಹ ತಂತ್ರವನ್ನು ಬಳಕೆಮಾಡಿದ್ದಾರೆ. ಬುದ್ಧಿಯ ವಿಲಾಸ ಇಂಥ ಕಾದಂಬರಿಗಳಲ್ಲಿ ಕಂಡುಬರುವ ಪ್ರಮುಖ ಅಂಶ. ಸ್ವಾತಂತ್ರ್ಯಾನಂತರಮೂ ಇವರು ಕೆಲವು ಕಾದಂಬರಿಗಳನ್ನು ಕೊಟ್ಟಿದ್ದಾರೆ. ದೇವುಡು ಅವರ ಮಯೂರ ಮೊದಲ ಐತಿಹಾಸಿಕ ಕಾದಂಬರಿ. ಇವರ ಅಂತರಂಗ ಒಂದು ವಿಶಿಷ್ಟ ಕೃತಿ. ಇದು ಮನಸ್ಸಿನ ಹೊಯ್ದಾಟ ತುಯ್ದಾಟಗಳನ್ನು ಮಾರ್ಮಿಕವಾಗಿ ಬಣ್ಣಿಸಲೆಳಸಿದ ಪ್ರಥಮ ಕಾದಂಬರಿ. ಇವರು ರಚಿಸಿರುವ ಹಲವು ಕಾದಂಬರಿಗಳಲ್ಲಿ ಮಹಾಬ್ರಾಹ್ಮಣ ಒಂದು ಶ್ರೇಷ್ಠ ಕೃತಿ. ವೇದಕಾಲದ ವಿಶ್ವಾಮಿತ್ರನ ಕಥೆ ಇದರಲ್ಲಿ ಸತ್ತ್ವಯುಕ್ತವಾಗಿ ಅರಳಿದೆ. ಮಿರ್ಜಿ ಅಣ್ಣಾರಾಯರ ನಿಸರ್ಗ ಕನ್ನಡ ಕಾದಂಬರಿಗಳ ಸಾಲಿನಲ್ಲಿ ಉತ್ತಮ ಸ್ಥಾನವನ್ನು ಗಳಿಸಿಕೊಂಡಿದೆ. ಒಲಿದ ಹೆಣ್ಣುಗಂಡುಗಳ ವಿಫಲ ಪ್ರಣಯದಿಂದಾದ ದುರಂತ ಆಡುನುಡಿಯ ಜೀವಂತ ಭಾಷೆಯಲ್ಲಿ ಸುಂದರ ಕಲಾಕೃತಿಯಾಗಿ ಮೂಡಿಬಂದಿದೆ. ರಾಷ್ಟ್ರಪುರುಷ, ಪ್ರತಿಸರಕಾರ, ಭಸ್ಮಾಸುರ, ಅಶೋಕಚಕ್ರ ಮೊದಲಾದುವು ಇವರ ಸಾಮಾನ್ಯ ದರ್ಜೆಯ ಕಾದಂಬರಿಗಳು. ಕಡೆಂಗೋಡ್ಲು ಶಂಕರಭಟ್ಟರ ಧೂಮಕೇತು, ದೇವತಾಮನುಷ್ಯ ಮತ್ತು ಲೋಕದ ಕಣ್ಣು ಸಾಮಾಜಿಕ ಕಾದಂಬರಿಗಳು, ಬಾ.ಕೃ.ಲಕ್ಷ್ಮೀಶ್ವರರ ಗ್ರಾಮ ಪಂಚಾನನ ಕಾದಂಬರಿಯಲ್ಲಿ ಮೊದಲ ಬಾರಿಗೆ ಹಳ್ಳಿಯ ಜನರ ಜೀವನಚಿತ್ರ ಬಂದಿರುವುದನ್ನು ಕಾಣಬಹುದು. ನಾ.ಕಸ್ತೂರಿಯವರ ಗಾಳಿಗೋಪುರ, ಚಕ್ರದೃಷ್ಟಿ, ಶಂಖವಾದ್ಯ, ಚಂಗೂಲಿ ಚಲುವ ಇವುಗಳನ್ನು ಕಾದಂಬರಿ ಎಂದು ಕರೆಯಲು ಆಕ್ಷೇಪಿಸಬಹುದಾದರೂ ಈ ಕಾದಂಬರಿಗಳಲ್ಲಿನ ತಂತ್ರ ಮತ್ತು ವಿಡಂಬನೆಗಳು ಗಮನಾರ್ಹ. ಭಗ್ನಮಂದಿರ ಈ ಕಾಲದ ಒಂದು ಮುಖ್ಯ ಸಾಮಾಜಿಕ ಕಾದಂಬರಿ.

ಸ್ವಾತಂತ್ರ್ಯ ಬಂದ ಅನಂತರದ ಇಪ್ಪತ್ತೈದು ವರ್ಷಗಳಲ್ಲಿ ಕಾದಂಬರಿಗಳ ರಚನೆ ವಿಪುಲವಾಗಿ ಮುಂದೆ ಸಾಗಿದೆ. ಸ್ವಾತಂತ್ರ್ಯ ಪೂರ್ವಕಾಲದ ಹಲವು ಜನ ಪ್ರಮುಖ ಕಾದಂಬರಿಕಾರರು ಸ್ವಾತಂತ್ರ್ಯ ನಂತರಮೂ ಸತ್ತ್ವಶಾಲಿ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಹಲವು ಜನ ಹೊಸ ಕಾದಂಬರಿಕಾರರೂ ಮುಂದೆ ಬಂದಿದ್ದಾರೆ. ಅವರಲ್ಲಿ ಕೆಲವರು ಬಹುಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿದವರಿದ್ದಾರೆ. ಕಾದಂಬರಿಗಳ ಹರಹು ಕೂಡ ವಿಸ್ತಾರವಾಗಿದೆ. 1953ನೆಯ ಇಸವಿಯಲ್ಲಿ ಸುಲಭ ಬೆಲೆಯ ಕೈ ಹೊತ್ತಿಗೆಗಳು ಆರಂಭವಾದಮೇಲೆ ಕಾದಂಬರಿಗಳನ್ನು ಕೊಳ್ಳುವ ಓದುವ ಕನ್ನಡಿಗರ ಸಂಖ್ಯೆ ಬೆಳೆಯಿತು. ಹಿರಿಯ ಹಾಗೂ ತರುಣ ಕಾದಂಬರಿಕಾರರಿಗೆ ಉತ್ತೇಜನ ದೊರಕಿತು. ಹಳೆಯ ಜಾಡಿನಲ್ಲಿಯೇ ಕಾದಂಬರಿಯ ರಚನೆಯಾಗಿರುವಂತೆ, ಹೊಸ ಜಾಡನ್ನು ಹಿಡಿದ ಹೊಸರೀತಿಯ ಕಾದಂಬರಿಗಳೂ ಪ್ರಕಟಗೊಂಡಿವೆ. ವಸ್ತು, ಶೈಲಿ, ನಿರೂಪಣೆ, ತಂತ್ರ ಮೊದಲಾದುವುಗಳಲ್ಲಿ ವೈವಿಧ್ಯ ಮೂಡಿದೆ. ಸಾಮಾಜಿಕ ಕಾದಂಬರಿಗಳೇ ವಿಪುಲವಾಗಿದ್ದರೂ ಕೆಲವು ಐತಿಹಾಸಿಕ, ಪೌರಾಣಿಕ ಮತ್ತು ಪತ್ತೇದಾರಿ ಕಾದಂಬರಿಗಳೂ ಬಂದಿವೆ.

ಭಾರತ ದೇಶದಲ್ಲಿ ನಡೆದ ರಾಜಕೀಯ ಹೋರಾಟ ಮತ್ತು ಸ್ವಾತಂತ್ರ್ಯ ಚಳವಳಿಗಳನ್ನು ವಸ್ತುವಾಗಿ ಉಳ್ಳ ಕೆಲವು ಕಾದಂಬರಿಗಳು ಕನ್ನಡದಲ್ಲಿ ಬಂದಿವೆ. ಶಿವರಾಮ ಕಾರಂತರ ಔದಾರ್ಯದ ಉರುಳಲ್ಲಿ ಭಾರತದ ರಾಜಕೀಯ ಹಾಗೂ ಶೈಕ್ಷಣಿಕ ರಂಗದಲ್ಲಿ ನಡೆದ ಪ್ರಯೋಗಗಳ, ಸೋಲುಗೆಲುವುಗಳ ಮಾರ್ಮಿಕ ಚಿತ್ರವಿದೆ. ಮಿರ್ಜಿ ಅಣ್ಣಾರಾಯರ ಪ್ರತಿಸರಕಾರ, ರಾಷ್ಟ್ರಪುರುಷ; ಬಸವರಾಜ ಕಟ್ಟೀಮನಿಯವರ ಸ್ವಾತಂತ್ರ್ಯದೆಡೆಗೆ ಮತ್ತು ಮಾಡಿಮಡಿದವರು, ತ.ರಾ.ಸು.ರವರ ರಕ್ತತರ್ಪಣ, ಕೋ. ಚೆನ್ನಬಸಪ್ಪನವರ ರಕ್ತತರ್ಪಣ, ಪ.ಸು.ಭಟ್ಟರ ಆತ್ಮಾರ್ಪಣೆ, ನಿರಂಜನರ ಚಿರಸ್ಮರಣೆ ಮೊದಲಾದವು ಸ್ವಾತಂತ್ರ್ಯಕ್ಕಾಗಿ ನಡೆದ ಚಳವಳಿಯನ್ನು ನೇರವಾಗಿ ನಿರೂಪಿಸುತ್ತವೆ. 1942ರ ಆಗಸ್ಟ್ ತಿಂಗಳು ಮುಂಬಯಿಯಲ್ಲಿ ನಡೆದ ಚಳವಳಿಯ ಹಿನ್ನೆಲೆಯಲ್ಲಿ ರಚಿತವಾದ ವಸ್ತು ವಿ.ಎಂ. ಇನಾಮದಾರರ ಮೂರಾಬಟ್ಟೆಯಲ್ಲಿ ಬರುತ್ತದೆ. ಅ.ನ.ಕೃ. ರವರ ಅಮರ ಆಗಸ್ಟ್, ಶ್ರೀರಂಗರ ಪುರುಷಾರ್ಥ ಮತ್ತು ಕುಮಾರಸಂಭವ ಇವೇ ಮೊದಲಾದ ಕಾದಂಬರಿಗಳಲ್ಲಿ ವಿಶಿಷ್ಟ ತಂತ್ರಗಳನ್ನು ಅಳವಡಿಸಿಕೊಂಡು ರಾಜಕೀಯ ಹೋರಾಟದ ಮತ್ತು ಜೀವನದ ಚಿತ್ರಗಳನ್ನು ಕೊಡಲಾಗಿದೆ. ಕಡಿದಾಳು ಮಂಜಪ್ಪನವರ ಪಂಜರವಳ್ಳಿಯ ಪಂಜು ಇತ್ತೀಚಿನ ರಾಜಕೀಯಕ್ಕೆ ಸಂಬಂಧಿಸಿದ ಒಂದು ಕಾದಂಬರಿ.

ಬಿ.ವೆಂಕಟಾಚಾರ್ಯರು ಹಾಗೂ ಗಳಗನಾಥರು ಆಗಿಹೋದ ಮೇಲೆ ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳ ರಚನೆ ಅಷ್ಟೊಂದು ವಿಪುಲವಾಗಿ ನಡೆಯಲಿಲ್ಲ ಎನ್ನಬಹುದು. ಆದರೂ ಹಲವಾರು ಕಾದಂಬರಿಕಾರರು ಇತಿಹಾಸಕ್ಕೆ ವಾಸ್ತವಿಕತೆಯ ರಕ್ತದಾನ ಮಾಡಿ ಕೃತಿಗಳನ್ನು ರಚನೆ ಮಾಡಿದರು. ಇಂಥ ಕಾದಂಬರಿಗಳಲ್ಲಿ ಶ್ರೀನಿವಾಸರ ಚನ್ನಬಸವನಾಯಕ ಒಂದು ಮೈಲುಗಲ್ಲು. ಕೆಳದಿಯ ರಾಜ್ಯದ ಕೊನೆಯ ನಾಯಕರ ಸ್ಥಿತಿಯನ್ನು ಚಿತ್ರಿಸಿ ಹೈದರನ ಕುತಂತ್ರದ ಫಲವಾಗಿ ಆ ರಾಜ್ಯ ಮತ್ತು ರಾಜಧಾನಿ ಹೇಗೆ ಅವನ ವಶವಾಯಿತು ಎಂಬುದನ್ನು ನಿರೂಪಿಸಲಾಗಿದೆ. ಇಷ್ಟೇ ಗಮನಾರ್ಹವಾದ ಇವರ ಇನ್ನೊಂದು ಐತಿಹಾಸಿಕ ಕಾದಂಬರಿ ಚಿಕ್ಕವೀರರಾಜೇಂದ್ರ. ತ.ರಾ.ಸು. ಅವರ ಹಂಸಗೀತೆ. ಚಿತ್ರದುರ್ಗದ ಇತಿಹಾಸದ ಹಿನ್ನೆಲೆಯಲ್ಲಿ ರಚಿತವಾದ ಒಂದು ಉತ್ತಮ ಕೃತಿ. ಚಿತ್ರದುರ್ಗದ ಇತಿಹಾಸವನ್ನೇ ಆಧರಿಸಿ ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ, ಹೊಸ ಹಗಲು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಈ ಕಾದಂಬರಿಗಳ ಪಾತ್ರರಚನೆ ವರ್ಣನೆ ಇವುಗಳಲ್ಲಿ ವೀರರಸ ಮಡುಗಟ್ಟಿದೆ. ಇವರ ಶಿಲ್ಪಶ್ರೀ, ಚಾವುಂಡರಾಯನ ಜೀವನದ ಆಧಾರದ ಮೇಲೆ ರಚಿತವಾದ ಇತ್ತೀಚಿನ ಕೃತಿ. ಅ.ನ.ಕೃ. ಕೂಡ ವಿಜಯನಗರದ ಇತಿಹಾಸದ ಮೇಲೆ ಕಾದಂಬರಿಗಳನ್ನು ರಚಿಸಿದ್ದಾರೆ. ಐತಿಹಾಸಿಕ ಕಾದಂಬರಿಗಳಲ್ಲಿ ನಮ್ಮ ಮನಸ್ಸನ್ನು ಮುತ್ತುವ ಇನ್ನೊಂದು ಕಾದಂಬರಿ ಕೆ.ವಿ.ಅಯ್ಯರ್ ಅವರ ಶಾಂತಲಾ. ಹೊಯ್ಸಳ ವಿಷ್ಣುವರ್ಧನನ ಶಾಂತಲಾ ದೇವಿಯ ಜೀವನ ಚಿತ್ರಣ ಕಾದಂಬರಿಯ ವಸ್ತು. ಬರೆವಣಿಗೆ ಸುಂದರವಾಗಿದೆ. ವೀರಕೇಸರಿ ಸೀತಾರಾಮಶಾಸ್ತ್ರಿಗಳು ಟಿಪ್ಪುಸುಲ್ತಾನನ ಕಾಲದ ಚರಿತ್ರೆಯನ್ನು ವಸ್ತುವಾಗಿ ಉಳ್ಳ ದೌಲತ್

ಎಂಬ ವೀರ ಶೃಂಗಾರಗಳಿಂದ ಕೂಡಿದ ಮೂರು ಭಾಗಗಳ ಬೃಹತ್ ಕಾದಂಬರಿಯನ್ನು ಬರೆದಿದ್ದಾರೆ. ಶ್ರೀನಿವಾಸರಾವ್ ಕೊರಟಿ ಕನ್ನಡದಲ್ಲಿ ಬಹುಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿದ್ದು ಇವರ ಪರಮೇಶ್ವರ ಪುಲಿಕೇಶಿ ಖ್ಯಾತಿಪಡೆದ ಕಾದಂಬರಿಯಾಗಿದೆ. ಬಿ.ಪುಟ್ಟಸ್ವಾಮಯ್ಯ ನೂರ್ಮಡಿ ತೈಲಪನನ್ನೂ ವಿಜಯನಗರದ ಇತಿಹಾಸವನ್ನು ಕುರಿತಂತೆ ಹಲವಾರು ಕಾದಂಬರಿಗಳನ್ನೂ ಬರೆದಿದ್ದಾರೆ. ಇವರ ಕ್ರಾಂತಿಕಲ್ಯಾಣ 12ನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಕ್ರಾಂತಿಯನ್ನು ಚಿತ್ರಿಸುತ್ತದೆ. ಸಮೇತನಹಳ್ಳಿ ರಾಮರಾಯರ ಸವತಿ ಗಂಧವಾರಣೆ ವಿಷ್ಣುವರ್ಧನನ ರಾಣಿ ಶಾಂತಲಾದೇವಿಗೆ ಸಂಬಂಧಿಸಿದ ಒಂದು ಉತ್ತಮ ಕೃತಿ.

ಪೌರಾಣಿಕ ಕಾದಂಬರಿಗಳಲ್ಲಿ ಹೊಸ ಜಾಡನ್ನು ತುಳಿದು ಉತ್ತಮ ಕೃತಿಗಳನ್ನು ಕನ್ನಡಕ್ಕೆ ಕೊಟ್ಟವರಲ್ಲಿ ದೇವುಡು ಪ್ರಮುಖರು. ಇವರ ಮಹಾಬ್ರಾಹ್ಮಣ ಹಾಗೂ ಮಹಾಕ್ಷತ್ರಿಯ ಎರಡು ಉತ್ತಮ ಕಾದಂಬರಿಗಳು. ಪುರಾಣವಸ್ತು ದೇವುಡು ಅವರ ಕೈಯಲ್ಲಿ ಹೊಸತನದೊಂದಿಗೆ ನಿರೂಪಿತವಾಗುತ್ತದೆ. ಅಲ್ಲಿಯ ಪಾತ್ರಗಳು ಪುರಾಣಕ್ಕೆ ಸಂಬಂಧಿಸಿದವಾದರೂ ನಮಗೆ ಹೆಚ್ಚು ಹತ್ತಿರವಾಗುತ್ತವೆ. ಇತ್ತೀಚೆಗೆ ಹೊರಬಂದ ಜನಾರ್ಧನ ಗುರ್ಕಾರರ ಚೂಡಾಲ ಒಂದು ಉತ್ತಮ ಕೃತಿ. ತ.ರಾ.ಸು. ಅವರ ಬೆಳಕು ತಂದ ಬಾಲಕ ಪುರಾಣ ವಸ್ತುವನ್ನು ಬಳಸಿಯೂ ಹೇಗೆ ಉತ್ತಮವಾಗಿ ಕಾದಂಬರಿ ಬರೆಯಬಹುದೆಂಬುದಕ್ಕೆ ಒಂದು ನಿದರ್ಶನವಾಗಿದೆ. ಇತಿಹಾಸವನ್ನೊಳಗೊಂಡಿದ್ದೂ ಆಧ್ಯಾತ್ಮಿಕ ಸ್ತರದಲ್ಲಿ ನಡೆಯುವ ಕಾದಂಬರಿಗಳಲ್ಲಿ ಎಚ್.ತಿಪ್ಪೇರುದ್ರಸ್ವಾಮಿಯವರ ಕದಳಿಯ ಕರ್ಪೂರ, ಜ್ಯೋತಿ ಬೆಳಗುತ್ತಿದೆ, ಪರಿಪೂರ್ಣದೆಡೆಗೆ, ತ.ರಾ.ಸು. ಅವರ ಅಗ್ನಿರಥ ಮುಕ್ತಪಥ ಇವುಗಳನ್ನು ಹೆಸರಿಸಬಹುದು.

ಕಾದಂಬರಿಕಾರರ ದೃಷ್ಟಿ ಹಳ್ಳಿಗಳ ಕಡೆ ಹರಿದು, ಹಳ್ಳಿಗಳ ಜೀವನದ ಬಗ್ಗೆ ಕೆಲವು ಒಳ್ಳೆಯ ಕಾದಂಬರಿಗಳು ಬಂದಿರುವುದು ಗಮನಾರ್ಹ. ಎಚ್.ದೇವೀರಪ್ಪನವರ ಬೆಳವಲದ ಮಡಿಲಲ್ಲಿ, ಕೃಷ್ಣಮೂರ್ತಿ ಪುರಾಣಿಕರ ಹಬ್ಬಿದ ಬಳ್ಳಿ, ಬಸವರಾಜ ಕಟ್ಟೀಮನಿಯವರ ಮಣ್ಣು ಮತ್ತು ಹೆಣ್ಣು, ಚದುರಂಗರ ಸರ್ವಮಂಗಳಾ, ತ.ರಾ.ಸು. ಅವರ ಚಂದವಳ್ಳಿಯ ತೋಟ ಇವೇ ಮೊದಲಾದ ಕಾದಂಬರಿಗಳಲ್ಲಿ ಹಳ್ಳಿಗಳ ಸರಳ ಸುಂದರ ಜೀವನದ ಹಾಗೂ ಬದಲಾಗುತ್ತಿರುವ ಹಳ್ಳಿಗಳ ಜೀವನದ ವಾಸ್ತವಿಕ ಚಿತ್ರಣಗಳನ್ನು ಕಾಣ ಬಹುದು. ಹಳ್ಳಿಯ ಜೀವನವನ್ನು ಕುರಿತ ರಾವಬಹದ್ದೂರ ಅವರ ಗ್ರಾಮಾಯಣ ಈ ಕಾಲದ ವೈಶಿಷ್ಟ್ಯ ಪೂರ್ಣವಾದ ಉತ್ಕೃಷ್ಟಕಾದಂಬರಿ. ಹಳ್ಳಿಯ ಸರಳವಾದ ಚೊಕ್ಕ ಜೀವನ ವನ್ನು ಚಿತ್ರಿಸುತ್ತಿರುವಂತೆಯೆ ಬದ ಲಾಗುತ್ತಿರುವ ಹಳ್ಳಿಯ ಜೀವನದ ಲೋಪದೋಷಗಳನ್ನು ಇಷ್ಟೊಂದು ಮಾರ್ಮಿಕವಾಗಿ ಚಿತ್ರಿಸಿದವರು ವಿರಳ, ವೃಂದಾವನ, ಬಿತ್ತಿ ಬೆಳೆದವರು ಧೂಮಕೇತು ಇವರ ಈಚಿನ ಕಾದಂಬರಿಗಳು.



ರಾವ್ ಬಹದ್ದೂರ್

ಹರಿಜನರ ಸಮಸ್ಯೆಯ ಬಗ್ಗೆ ಬಂದ ಕಾದಂಬರಿಗಳು ಕಡಿಮೆ. ಕೆ.ಎ.ಎನ್.ರಾವ್ ಅವರ ಮುನಿಯನ ಮಾದರಿ, ಎಂ.ವಿ.ಸೀತಾರಾಮಯ್ಯ ನವರ ಮಾದನ ಮಗಳು, ಕಟ್ಟೀಮನಿಯವರ ನೀ ನನ್ನ ಮುಟ್ಟಬೇಡ ಇವುಗಳನ್ನು ಉದಾಹರಣೆಗಾಗಿ ಉಲ್ಲೇಖಿಸಬಹುದಾಗಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾದಂಬರಿಗಳನ್ನು ರಚಿಸಿದ ಕೆಲವು ಕಾದಂಬರಿಕಾರರನ್ನು ಹೆಸರಿಸಬಹುದು. ಶಿವರಾಮ ಕಾರಾಂತ, ಕುವೆಂಪು, ರಾವಬಹಾದ್ದೂರ, ದೇವುಡು (ಅಂತರಂಗ, ಮಲ್ಲಿ, ಎರಡನೆಯ ಜನ್ಮ), ಬಿ.ಪುಟ್ಟಸ್ವಾಮಯ್ಯ, ಶ್ರೀನಿವಾಸ, ಎಂ.ಆರ್.ಶ್ರೀನಿವಾಸಮೂರ್ತಿ, ಅ.ನ.ಕೃ.,ಶ್ರೀರಂಗ, ಗೋಕಾಕ್, ಕೆ.ವಿ.ಅಯ್ಯರ್ ಮಿರ್ಜಿ ಅಣ್ಣಾರಾಯ, ತ.ರಾ.ಸು. (ಚಂದನದ ಬೊಂಬೆ, ಮಸಣದ ಹೂವು, ನಾಗರಹಾವು), ಬಸವರಾಜ ಕಟ್ಟೀಮನಿ (ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಖಾನಾವಳಿಯ ನೀಲಾ), ವಿ.ಎಂ.ಇನಾಂದಾರ್ (ಶಾಪ, ಈ ಪರಿಯ ಸೊಬಗು, ಮುಗಿಯದ ಕತೆ), ನಿರಂಜನ (ಅಭಯಾಶ್ರಮ, ಚಿರಸ್ಮರಣೆ), ಚದುರಂಗ (ಉಯ್ಯಾಲೆ), ಆನಂದಕಂದ (ಸುದರ್ಶನ, ಮಗಳ ಮದುವೆ), ಎಸ್.ಅನಂತನಾರಾಯಣ, (ಅತ್ತಿಗೆ), ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಹೇಮಾವತಿ, ಊರ್ವಶಿ), ವ್ಯಾಸರಾಯ ಬಲ್ಲಾಳ (ಹೇಮಂತಗಾನ, ವಾತ್ಸಲ್ಯಪಥ, ಚಿರವಿರಹಿ), ಬೀಚಿ (ದಾಸಕೂಟ), ಕೃಷ್ಣಮೂರ್ತಿ ಪುರಾಣಿಕ (ಮುಗಿಲ ಮಲ್ಲಿಗೆ, ಮನೆ ತುಂಬಿದ ಹೆಣ್ಣು, ಮಣ್ಣಿನ ಮಗಳು, ತಂಪುನೆಳಲು), ರಾಮಚಂದ್ರ, ಕೊಟ್ಟಲಗಿ (ದೀಪ ಹತ್ತಿತ್ತು), ಭಾರತೀಸುತ (ಎಡಕಲ್ಲು ಗುಡ್ಡದ ಮೇಲೆ), ಎಸ್.ಎಲ್.ಭೈರಪ್ಪ (ವಂಶವೃಕ್ಷ, ಗೃಹಭಂಗ, ಗ್ರಹಣ, ದಾಟು). ವಿಶುಕುಮಾರ್ (ಕರಾವಳಿ, ಮದರ್), 'ಎನ್ನೆ ಸಾವಿನ ಉಡಿಯಲ್ಲಿ, ಎರಡನೆ ಸಂಬಂಧ,' ಯಶವಂತ ಚಿತ್ತಾಲ (ಮೂರು ದಾರಿಗಳು ಶಿಕಾರಿ) ಶಾಂತಿನಾಥ ದೇಸಾಯಿ (ಮುಕ್ತಿ, ವಿಕ್ಷೇಪ), ಯು.ಆರ್.ಅನಂತಮೂರ್ತಿ (ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ) ಪಿ.ಲಂಕೇಶ್ (ಬಿರುಕು), ಎ.ಕೆ.ರಾಮಾನುಜನ್ (ಹಳದಿ ಮೀನು), ಶಂಕರ ಮೊಕಾಶಿ ಪ್ರಣೇಕರರ (ಗಂಗವ್ವ ಗಾಂಗಾಮಾಯಿ), ಪೂರ್ಣಚಂದ್ರತೇಜಸ್ವಿ (ಸ್ವರೂಪ), ಗಿರಿ (ಗತಿಸ್ಥಿತಿ), ಕಾಮರೂಪಿ (ಕುದುರೆಮೊಟ್ಟೆ), ಆರ್ಯ (ಗುರು), ಶ್ರೀಕೃಷ್ಣ ಅಲನಹಳ್ಳಿ, (ಕಾಡು, ಪರಸಂಗದ ಗೆಂಡೆತಿಮ್ಮ, ಭುಜಂಗಯ್ಯನ ದಶಾವತಾರ) ಮೊದಲಾದವರು.

ಸಂಸ್ಕಾರ, ವಂಶವೃಕ್ಷ, ದಾಟು, ಕರಾವಳಿ, ಮುಕ್ತಿ, ವಿಕ್ಷೇಪ, ಕಾಡು, ಗಂಗವ್ವ ಗಂಗಾಮಾಯಿ, ಗತಿಸ್ಥಿತಿ, ಬಿರುಕು, ಮಲೆಗಳಲ್ಲಿ ಮದುಮಗಳು, ಗ್ರಾಮಾಯಣ, ಮರಳಿಮಣ್ಣಿಗೆ, ಅಳಿದಮೇಲೆ, ಕುಸುಮಬಾಲೆ ಇವು ಇತ್ತೀಚೆಗೆ ಹೆಚ್ಚು ಚರ್ಚೆಗೆ ಒಳಗಾದ ಕಾದಂಬರಿಗಳಾಗಿವೆ.

ಸ್ತ್ರೀಯರೂ ಮುಂದೆ ಬಂದು ಕಾದಂಬರಿಗಳನ್ನು ರಚಿಸಿರುವುದು ಸ್ವಾತಂತ್ರ್ಯೋತ್ತರ ಕಾಲದ ಒಂದು ವೈಶಿಷ್ಟ್ಯ. ಶರಪಂಜರ, ಹಣ್ಣೆಲೆ ಚಿಗುರಿದಾಗ, ಬೆಕ್ಕಿನ ಕಣ್ಣು, ಬೆಳ್ಳಿಮೋಡ– ಮೊದಲಾದ ಕಾದಂಬರಿಗಳನ್ನು ಬರೆದಿರುವ ತ್ರಿವೇಣಿ ಅವರು ಓದುಗರಿಗೆ ಹೆಚ್ಚು ಪರಿಚಿತರಾಗಿದ್ದಾರೆ. ಮಾನವ ಜೀವನದ ಹಲವು ಜಟಿಲ ಹಾಗೂ ಮನೋವೈಜ್ಞಾನಿಕ ಸಮಸ್ಯೆಗಳ ಮೇಲೆ ಇವರು ಕಾದಂಬರಿಗಳನ್ನು ರಚಿಸಿದ್ದಾರೆ. ಅನುಪಮಾ ನಿರಂಜನ, ಎಂ.ಕೆ.ಇಂದಿರಾ, ವಾಣಿ, ಜಯಲಕ್ಷ್ಮಿ, ಆರ್ಯಾಂಬ ಪಟ್ಟಾಭಿ, ಗೀತಾಕುಲಕರ್ಣಿ, ಕೆ.ಸರೋಜರಾವ್, ಎ.ಪಿ.ಮಾಲತಿ, ವೀಣಾ ಬಿ.ಟಿ.ಲಲಿತಾನಾಯಕ, ಲತಾರಾಜಶೇಖರ, ಸುಧಾಮೂರ್ತಿ – ಮೊದಲಾದ ಕಾದಂಬರಿಕಾರ್ತಿಯರು ಕನ್ನಡದಲ್ಲಿ ಕಾದಂಬರಿ ರಚನೆಯಲ್ಲಿ ತೊಡಗಿದ್ದಾರೆ.

ಒಂದು ಕಡೆ ಸೃಜನಶೀಲ ಸಾಹಿತ್ಯ ಕಾದಂಬರಿ ಪ್ರಕಾರವನ್ನು ಶ್ರೀಮಂತಗೊಳಿಸಿದರೆ ಇನ್ನೊಂದೆಡೆ ಶ್ರೇಷ್ಠ ಭಾಷಾಂತರಗಳು ಈ ಸಾಹಿತ್ಯವನ್ನು ಹೆಚ್ಚು ಸಂಪದ್ಭರಿತಗೊಳಿಸಿವೆ. ಫ್ರೆಂಚ್, ಇಂಗ್ಲಿಷ್, ರಷಿಯನ್, ಮರಾಠಿ, ಬಂಗಾಳಿ, ಹಿಂದಿ, ತಮಿಳು, ತೆಲುಗು, ಮಲೆಯಾಳಂ ಹಾಗೂ ಇತರ ಹಲವು ಭಾಷೆಗಳಿಂದ ಭಾಷಾಂತರಕಾರ್ಯ ಸಾಗಿದೆ. ಹಮ್ಮು ಬಿಮ್ಮು, ಪುನರುತ್ಥಾನ, ಮದಾಂ ಬಾವರಿ, ಅನ್ನ, ಸೋತು ಗೆದ್ದವನು, ಕೆಂಪುಮೀನು ಮುಂತಾದ ಶ್ರೇಷ್ಠ ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡಿವೆ. (ನೋಡಿ: ಕನ್ನಡದಲ್ಲಿ ಭಾಷಾಂತರಗಳು).

ಅಗ್ಗದ ಕಿರುಹೊತ್ತಗೆಗಳಿಂದ ಒಂದು ಕಾಲದಲ್ಲಿ ಕಾದಂಬರಿ ಜನಪ್ರಿಯವಾಗಿತ್ತು. ಈಗ ಆ ಕೆಲಸವನ್ನು ದಿನಪತ್ರಿಕೆಗಳು ವಾರಪತ್ರಿಕೆಗಳು ಮಾಸಪತ್ರಿಕೆಗಳು ನೆರವೇರಿಸುತ್ತಿವೆ. ದೈನಿಕ ಧಾರಾವಾಹಿಯಾಗಿ ಕಾದಂಬರಿಯನ್ನು ಪ್ರಕಟಿಸುವ ಉದ್ಯಮವನ್ನು ಕನ್ನಡಪ್ರಭ ಮೊದಲಿಗೆ ಪ್ರಾರಂಭಿಸಿತು. ಮಯೂರ, ಮಲ್ಲಿಗೆ, ತುಷಾರ, ಸುಧಾ, ಪ್ರಜಾಮತ, ಜನಪ್ರಗತಿ, ಕರ್ಮವೀರ ಮುಂತಾದ ವಾರಪತ್ರಿಕೆಗಳಲ್ಲೂ ಕಾದಂಬರಿಗಳು ಪ್ರಕಟವಾಗುತ್ತಿವೆ. *

ಎಪ್ಪತ್ತರ ದಶಕದ ಉತ್ತರಾರ್ಧದ ಹೊತ್ತಿಗೆ ಕನ್ನಡ ಕಾದಂಬರಿ ಪರಂಪರೆಯಲ್ಲಿ ಮಹತ್ವದ ಬದಲಾವಣೆಯುಂಟಾಯಿತು. ಕುವೆಂಪು, ಕಾರಂತ, ನಿರಂಜನ, ತ.ರಾ.ಸು., ಬಸವರಾಜಕಟ್ಟೀಮನಿ, ವಿ.ಎಂ.ಇನಾಂದಾರ, ಎಸ್.ಎಲ್.ಭೈರಪ್ಪ, ಯು.ಆರ್.ಅನಂತ ಮೂರ್ತಿ, ಶಾಂತಿನಾಥ ದೇಸಾಯಿ, ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ, ಅನುಪಮಾ ನಿರಂಜನ, ಎಂ.ಕೆ.ಇಂದಿರಾ ಮೊದಲಾದ ಕಾದಂಬರಿಕಾರರು ತಮ್ಮದೇ ಸಂಪ್ರದಾಯವನ್ನು ಈಗಾಗಲೇ ನಿರ್ಮಿಸಿಕೊಂಡಿದ್ದರು. ವಸ್ತು, ಶೈಲಿ, ಧೋರಣೆ, ಸಂವಿಧಾನ ಮೊದಲಾದ ವಿಷಯಗಳಲ್ಲಿ ಎದ್ದುಕಾಣುವ ತಮ್ಮತನದ ಮುದ್ರೆಯನ್ನು ತಮ್ಮ ಕಾದಂಬರಿಗಳಲ್ಲಿ ಇವರೆಲ್ಲಾ ಒತ್ತಿದ್ದರು. ತಮ್ಮ ಕೃತಿಗಳ ಬಗೆಗೆ ಪೂರ್ವ ನಿರೀಕ್ಷೆಯುಳ್ಳ ಓದುಗ ವರ್ಗವನ್ನು ಈ ಕಾದಂಬರಿಕಾರರು ಹುಟ್ಟು ಹಾಕಿದ್ದರು. ಇದಕ್ಕೆ ನಿದರ್ಶನವೆಂದರೆ, 1977ರಲ್ಲಿ ಬಂದ ಕಾರಂತರ 'ಅದೇ ಊರು ಅದೇ ಮರ' ಕಾದಂಬರಿಯು ಸುಧಾರಣಾವಾದಿ ಪಾತ್ರತೆಯೊಳಗಿನ ಬದಲಾವಣೆಯ ಬಗೆಗಿನ ಅಸಹನೆಯನ್ನೇ ಮುಂದುವರೆಸಿದೆ. 'ಗ್ರಾಮಾಯಣ'ದ ದರ್ಶನ ನೀಡಿದ ರಾವಬಹಾದ್ದೂರರು ಚಲೇಜಾವ್ ಚಳುವಳಿಯ ಸಂದರ್ಭದ ವಿವಿಧ ಬಗೆಯ ಜೀವನಾಸಕ್ತಿಯುಳ್ಳ ವ್ಯಕ್ತಿಗಳ ಅನುಭವ ವನ್ನು ಸೂಕ್ಷ್ಮ ಕಲೆಗಾರಿಕೆಯಲ್ಲಿ ದಾಖಲಿಸುತ್ತಾರೆ. 1978ರಲ್ಲಿ ಬಂದ ಯು.ಆರ್.ಅನಂತಮೂರ್ತಿಯವರ 'ಅವಸ್ಥೆ' ಕಾದಂಬರಿಯಲ್ಲಿ 'ಸಂಸ್ಕಾರ' 'ಭಾರತೀಪುರ' ಕಾದಂಬರಿಗಳ ಆಶಯವೇ

ಮುಂದುವರಿಯಿತು. ಅಂತರಂಗ ಬಹಿರಂಗಗಳ ನಡುವಿನ ಗೆರೆಯನ್ನೇ ಇಲ್ಲವಾಗಿಸುವಷ್ಟು ಸಂಕೀರ್ಣ ಸಂಬಂಧವನ್ನು ಹೊಂದಿದ ವ್ಯಕ್ತಿತ್ವದ ಶೋಧವನ್ನು 'ಅವಸ್ಥೆ' ಕೈಗೊಳ್ಳುತ್ತದೆ. ಸಾಮಾಜಿಕ ಪ್ರಕ್ರಿಯೆಯ ಪಾತಳಿಯಲ್ಲಿ ರಾಜಕೀಯ ವ್ಯಕ್ತಿತ್ವವನ್ನು ಕೃಷ್ಣಪ್ಪನ ಪಾತ್ರ ಹೊಂದಿದರೆ, ವೈಯಕ್ತಿಕ ಪಾತಳಿಯಲ್ಲಿ ಪ್ರೇಮಿ, ಆಧ್ಯಾತ್ಮಿಯ ಪಾತ್ರವಿದೆ. ಇವೆರಡರ ನಡುವಿನ ದ್ವಂದ್ವದಲ್ಲಿ ವ್ಯಕ್ತಿ–ಸಮಾಜ –ಚರಿತ್ರೆಯ ವಾಸ್ತವಗಳು ನಿರ್ಮಾಣವಾಗುತ್ತವೆಂಬ ದರ್ಶನ ಈ ಕಾದಂಬರಿಯದು. ಭ್ರಷ್ಟ ರಾಜಕೀಯದ ಹಿನ್ನೆಲೆಯಲ್ಲಿ ಮನುಷ್ಯ ಪ್ರಜ್ಞೆಯ ವಿವಿಧ ಅವಸ್ಥಾಂತರಗಳನ್ನು ಕೃಷ್ಣಪ್ಪ ಪಾತ್ರದ ಬದುಕಿನ ವಿವಿಧ ಹಂತಗಳಲ್ಲಿ ಈ ಕಾದಂಬರಿ ಅನಾವರಣಗೊಳಿಸುತ್ತದೆ.

ಗ್ರಾಮ್ಯಜೀವನದ ಸಂಕ್ರಮಣಾವಸ್ಥೆಯನ್ನು ಶೋಧಿಸಲೆತ್ನಿಸುವ ಕಾದಂಬರಿಗಳಾದ ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಹಾಗೂ ಚಂದ್ರಶೇಖರ ಕಂಬಾರರ 'ಕರಿಮಾಯಿ' 70ರ ದಶಕದವೇ. ಬರೆಯುವ ಪ್ರೇರಣೆಯನ್ನು ವಿಮರ್ಶಕರಿಂದ ಪಡೆಯುವಂತಿದ್ದ ನವ್ಯ ಸಂದರ್ಭವು 70ರ ದಶಕದ ಕೊನೆಯ ಹೊತ್ತಿಗಾಗಲೇ ಹೆಚ್ಚು ವಾಚಕಾಭಿಮುಖಿಯಾಗ ತೊಡಗಿತು. ಹೀಗಾಗಿ ಕಥನದ ತಾಂತ್ರಿಕತೆಯಕಡೆ ಒಲಿಯದ ನಿರಾಳ ಶೈಲಿಯನ್ನು ಲಂಕೇಶ ಮತ್ತು ಕಂಬಾರರು ಅನುಸರಿಸಿದರು. ಅಂತರಾಳದ ಸಂಘರ್ಷಗಳ ಶೋಧ ಉಸಿರುಗಟ್ಟಿಸುವಷ್ಟು ಅಸಹನೀಯವೆನಿಸಿದಾಗ, ಗ್ರಾಮ್ಯಸಹಜ ವ್ಯಕ್ತಿತ್ವಗಳ ಜೀವನೋತ್ಸಾಹ ಗಳನ್ನು ಕಾಣಿಸುವ ಉದ್ದೇಶ ಇವರಿಬ್ಬರಲ್ಲಿ ಕಂಡುಬರುತ್ತದೆ. ಆಧುನೀಕರಣ ಪ್ರಕ್ರಿಯೆಯನ್ನು ಸಿನಿಕತನದಿಂದ ನಿರಾಕರಿಸದೆ ಅದನ್ನು ಉತ್ಸಾಹ, ಬೆರಗಿನಿಂದ ಅರ್ಥೈಸಿಕೊಳ್ಳಲು ಎರಡೂ ಕಾದಂಬರಿಗಳು ಯತ್ನಿಸುತ್ತವೆ.

ನವ್ಯ ಸಾಹಿತ್ಯಕ್ಕೆ ದಕ್ಕಿದ ಈ ಆಯಾಮ ಸೃಜನಶೀಲತೆಯ ಸಾಧ್ಯತೆಗಳ ವಿಸ್ತಾರದ ಅರಿವನ್ನುಂಟುಮಾಡಿತು. ಈ ದಶಕದಲ್ಲಿ ಬಂದ ಶಾಂತಿನಾಥ ದೇಸಾಯಿಯವರ 'ಸೃಷ್ಟಿ' (1979) ಬದುಕಿನ ಅನಂತ ಸಾಧ್ಯತೆಗಳನ್ನೆಲ್ಲ ಸಾಹಿತ್ಯ ಒಳಗೊಳ್ಳುತ್ತದೆಂಬುದನ್ನು ಕಲಾತ್ಮಕವಾಗಿ ಬಿಂಬಿಸುವ ಕೃತಿ. ಸಾಮಾಜಿಕ ಬದ್ಧತೆ ಸೃಷ್ಟಿಕ್ರಿಯೆಯ ಪ್ರಮುಖ ಗುರಿಯಾದಾಗ ಲೆಕ್ಕಣಿಕೆಯ ಮಸಿಯನ್ನೆಷ್ಟು ಹರಿಸಿದರೂ ವ್ಯರ್ಥ; ರಕ್ತಕ್ರಾಂತಿ ಎಂಬ ಗಂಗಾವತರಣದಲ್ಲಿ ಮಿಂದು ಕಲಾವಿದರ ಪುನರ್ಜನ್ಮವಾಗಬೇಕೆಂಬ ಆಶಯ ಈ ಕಾದಂಬರಿಯದು. ಕನ್ನಡ ಕಥಾಸಾಹಿತ್ಯ ತನ್ನನ್ನು ಪರಂಪರೆಯ ಸಾಹಿತ್ಯರೂಪದಲ್ಲಿ ಸ್ಥಾಪಿಸಿಕೊಳ್ಳುವುದಕ್ಕೆ ಬದಲಾಗಿ ಹೊಸದಾಗಿ ಪುನಃ ರೂಪಿಸಿಕೊಂಡದ್ದನ್ನು ಸೂಚಿಸುವ ಕೃತಿಯಾಗಿ 'ಸೃಷ್ಟಿ' ಮುಖ್ಯವೆನಿಸುತ್ತದೆ.

'ಸೃಷ್ಟಿ' ಕ್ರಿಯೆಯಲ್ಲಿ ಅನುಭವದ ತಾತ್ವಿಕತೆಗಿಂತ ಅಭಿವ್ಯಕ್ತಿಯ ತಾಂತ್ರಿಕತೆಗಿಂತ 'ಅನುಭವವೇ' ಮುಖ್ಯವಾದ ಸಂದರ್ಭ ದಲಿತ ಬಂಡಾಯ ಚಳವಳಿಯದು. ಕಾದಂಬರಿ ರಚನೆಯ ಹಿಂದೆ ಕೆಲಸ ಮಾಡಿದ ಕಾಳಜಿಯನ್ನೇ ಪ್ರಧಾನನೆಲೆಗೆ ತರುವ ಹವಣಿಕೆ ಈ ಸಂದರ್ಭದ ಕಾದಂಬರಿಗಳದು. ವಸ್ತು, ತಂತ್ರ, ಶೈಲಿ, ವರ್ಣನೆಗಳು ತಮಗೆ ತಾವೇ ಮುಖ್ಯವಾಗದೆ ಅನುಭವದ ಒಡಲಾಳದಿಂದ ಮೂಡಿಬರುವ ಬದ್ಧತೆಗೆ ಪ್ರಾಧಾನ್ಯ ಬಂತು. ದೇವನೂರ ಮಹದೇವರ ಕಿರುಕಾದಂಬರಿ 'ಒಡಲಾಳ'ದ ಕೇಂದ್ರ ಪ್ರತಿಮೆ ಹಿಂಗಿಸಲು ಅಸಾಧ್ಯವಾಗುಳಿದ ಹಸಿವೆಯ ಬೆಂಕಿ. ಈ ಹಸಿವಿನ ಬೆಂಕಿ ನವೋದಯದ ಸುಧಾರಣಾವಾದಿ ಸುರಕ್ಷಿತ ನೆಲೆಯನ್ನು ದುಃಸ್ವಪ್ನದಂತೆ ಕಾಡಬಲ್ಲ ಕ್ರಾಂತಿಯ ಬೆಂಕಿ. ದುಃಸ್ವಪ್ನವಾದದ್ದು ಪ್ರಗತಿಶೀಲರಲ್ಲಿ ಅತಿಸರಳೀಕರಣಗೊಂಡು ರಂಜನೆಯ ವಿಷಯವಾಯಿತು. ಆದರೆ ದಲಿತ ಬಂಡಾಯದ ಸಂದರ್ಭ ಸ್ಪಷ್ಟವಾಗಿ ಸಾಮಾಜಿಕ ಸಂಚಲನಗಳನ್ನು ಸಂಘಟಿತ ರೂಪದಲ್ಲಿ ಸಾಧ್ಯವಾಗಿಸಿತು. ದಲಿತ ಸಂಘರ್ಷ ಸಮಿತಿ, ಬಂಡಾಯ ಸಂಘಟನೆಗಳು ಕನ್ನಡದ ಮಹತ್ವದ ಕಾದಂಬರಿಕಾರರ ಸಾಮಾಜಿಕ ಬದ್ಧತೆಯ ನೆಲೆಗಳಾದವು.

ವರ್ಣವ್ಯವಸ್ಥೆಯ ಸಂಕೀರ್ಣ ಗ್ರಾಮಸಮಾಜದ ಶೋಷಣೆಯ ಸ್ವರೂಪವನ್ನು ವಾಸ್ತವತಾವಾದೀ ನೆಲೆಯಲ್ಲಿ ಕಂಡರಿಸುವ ಯತ್ನ ಹಲವಾರು ಕಾದಂಬರಿಗಳದು. ಜಾತಿ, ಅಸ್ಪೃಶ್ಯತೆ, ವರ್ಗಸಂಬಂಧಗಳು, ಲಿಂಗ ವ್ಯವಸ್ಥೆಗಳ ನಡುವಿನ ಸಂಬಂಧಗಳ ಜಟಿಲತೆಯನ್ನು ಬರಗೂರು ರಾಮಚಂದ್ರಪ್ಪನವರ 'ಒಂದು ಊರಿನ ಕತೆ' ಸ್ಪಷ್ಟಪಡಿಸುತ್ತದೆ. 'ಸೂರ್ಯ', 'ಉಕ್ಕಿನ ಕೋಟೆ', 'ಹುತ್ತ' ಕಾದಂಬರಿಗಳಲ್ಲಿ ವ್ಯವಸ್ಥೆಯ ಕ್ರೌರ್ಯದ ಬಹುಮುಖಗಳನ್ನು ಹಾಗೂ ಶೋಷಿತರ ಪ್ರತಿರೋಧವನ್ನು ಬರಗೂರರು ಮುಖಾಮುಖಿಯಾಗಿಸುತ್ತಾರೆ. ಸಾಮಾಜಿಕ ಚಳವಳಿಯ ತಾತ್ವಿಕತೆಯ ವ್ಯಾಖ್ಯಾನರೂಪವಾಗಿ ಈ ಕಾದಂಬರಿಗಳು ನಿಲ್ಲುತ್ತವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಬಡ ಗೇಣಿದಾರನ ಅತಂತ್ರ ಸ್ಥಿತಿಯನ್ನು ವಿಶುಕುಮಾರರ 'ಭೂಮಿ' ಹಿಡಿದಿಡುತ್ತದೆ. ನಾ.ಡಿಸೋಜರ 'ತಿರುಗೋಡಿನ ರೈತ ಮಕ್ಕಳು' (1979), ರಮೇಶ ಹುಲ್ಲುಕೆರೆಯವರ 'ತೆಂಡೆ', ನಾ.ಮೊಗಸಾಲೆ ಅವರ 'ಪಲ್ಲಟ' ಗ್ರಾಮ್ಯವೈಷಮ್ಯವನ್ನು ವಸ್ತುವಾಗಿಟ್ಟುಕೊಂಡ ಕಥನಗಳು. ಇದೇ ಅವಧಿಯಲ್ಲಿ ಬಂದ ಬಸವರಾಜ ಕಟ್ಟೀಮನಿಯವರ 'ಹರಿಜನಾಯಣ' ವರ್ಗ ಸಂಘರ್ಷದ ಸಮಸ್ಯೆಗಳನ್ನು ಸರಳೀಕೃತ ಗೊಳಿಸಿದ ಕಾದಂಬರಿ. ಕಾರಂತರಂಥ ಕಾದಂಬರಿಕಾರರು 'ನಾವು ಕಟ್ಟಿದ ಸ್ವರ್ಗ'ದಲ್ಲಿ ಸ್ವಾತಂತ್ರ್ಯೋತ್ತರ ಭಾರತವನ್ನು ಕುರಿತಂತೆ ಭ್ರಮನಿರಸನ ಭಾವವನ್ನು ಚಿತ್ರಿಸಿದರು.

70ರ ದಶಕದ ಉತ್ತರಾರ್ಧ ಕನ್ನಡದ ಹಿರಿಯ ಸಾಹಿತಿಗಳಿಗೆ ಭ್ರಮನಿರಸನ ವನ್ನುಂಟುಮಾಡಿದ ಕಾಲ. ಗ್ರಾಮ–ನಗರಗಳಲ್ಲಿನ ಏಕರೂಪ ಭ್ರಷ್ಟರೂಪದೊಂದಿಗೆ, ಇನ್ನಿಲ್ಲದ ಸಾಂಸ್ಕೃತಿಕ ಬಿಕ್ಕಟ್ಟುಗಳು ಮೂಡಿಬಂದ ಕಾಲವಿದು. 'ನಾವು ಕಟ್ಟಿದ ಸ್ವರ್ಗ' ಎಂಬ ವ್ಯಂಗ್ಯದ ನೆಲೆಯ ಕಾದಂಬರಿಯನ್ನು ಕಾರಂತರು ಬರೆದರೆ ಎಸ್.ಎಲ್.ಭೈರಪ್ಪನವರು 'ಪರ್ವ'ದ ಮೂಲಕ ಬಿಕ್ಕಟ್ಟುಗಳಿಗೆ ಪರ್ಯಾಯವನ್ನು ಹುಡುಕುವ ಹವಣಿಕೆಯಲ್ಲಿ ತೊಡಗಿದರು. ಮಹಾಭಾರತವನ್ನು ಸಮೂಹ ಜೀವನ ಸಂಹಿತೆಯ ನೆಲೆಯಿಂದ ವ್ಯಕ್ತಿಗತ ನೆಲೆಯಲ್ಲಿ ಸ್ಥಾಪಿಸುವ ನಾಟಕೀಯ ಹಾಗೂ ಭಾವಗೀತಾತ್ಮಕ ನಿರೂಪಣಾ ಶೈಲಿಯುಳ್ಳ ಕೃತಿಯಿದು. ಪ್ರಭುತ್ವ ಹಾಗೂ ಕುಟುಂಬ ವ್ಯವಸ್ಥೆಯೊಳಗಿನ ಸ್ತ್ರೀಪುರುಷ ಸಂಬಂಧಗಳ ಪಲ್ಲಟಗಳನ್ನು 'ಪರ್ವ' ವಿಭಿನ್ನ ನೆಲೆಯಲ್ಲಿ ಹಿಡಿದಿಡಲೆತ್ನಿಸುತ್ತದೆ. ಕತೆಯ ಮೂಲ ಪುರಾಣದ್ದಾದರೂ ಪುರಾಣಭಂಜನೆ ಮಾಡದೇ ಪುರಾಣವನ್ನು ಸಮಕಾಲೀನ ಸಂದರ್ಭದ ವ್ಯಾಖ್ಯಾನವಾಗಿ ರೂಪಾಂತರಿಸ ಲಾಗಿದೆ. ಸಿದ್ಧಪಾತ್ರಗಳ ಚೌಕಟ್ಟಿನಾಚೆ ಸ್ತ್ರೀಪಾತ್ರಗಳಿಗೆ ಈ ಕಾದಂಬರಿ ಕಲ್ಪಿಸಿರುವ ಆಯಾಮ 80ರ ದಶಕದಲ್ಲಿ ಪ್ರಚುರಗೊಂಡ ಮಹಿಳಾ ಆಂದೋಲನದ ಪೂರ್ವ ಸೂಚನೆ ಯಾಗಿದೆ. ಇದೇ ಅವಧಿಯಲ್ಲಿ (1980) ಬಂದ ಎಚ್.ವಿ.ಸಾವಿತ್ರಮ್ಮ ಅವರ 'ಸೀತೆ–ರಾಮ–ರಾವಣ' ಕಾದಂಬರಿಯು ರಾಮಾಯಣವನ್ನು ಸ್ತ್ರೀವಾದಿ ನೆಲೆಯಲ್ಲಿ ಕಟ್ಟಿಕೊಡಲೆತ್ನಿಸುತ್ತದೆ. ವ್ಯವಸ್ಥೆಯ ವೈರುಧ್ಯವಾದ ರಕ್ಷಣೆ–ಆಕ್ರಮಣಗಳ ಸುಳಿಗೆ ಸಿಕ್ಕ ಸ್ತ್ರೀ ಪಾತ್ರಗಳು ಈ ಕೃತಿಯಲ್ಲಿ ತಮ್ಮ 'ಅನುಭವ'ವನ್ನು ತಾತ್ವೀಕರಿಸಿಕೊಳ್ಳಲೆತ್ನಿಸುತ್ತವೆ. ಅನುಪಮಾ ನಿರಂಜನರ 'ಆಳ', ಗೀತಾನಾಗಭೂಷಣರ 'ಹಸಿಮಾಂಸ ಮತ್ತು ಹದ್ದು', ವೀಣಾ ಶಾಂತೇಶ್ವರ ಅವರ 'ಗಂಡಸರು' ಕಾದಂಬರಿಗಳು ಮಹಿಳಾ ಸಮಸ್ಯೆಯನ್ನು ಪ್ರಜ್ಞೆ– ಪರಿಸರಗಳ ನಡುವಿನ ಗತಿತಾರ್ಕಿಕತೆಯಲ್ಲಿ ಅತ್ಯಂತ ನೈಜವಾಗಿ ಸ್ಥಾಪಿಸಲೆತ್ನಿಸುತ್ತವೆ. ತನ್ನೆಲ್ಲ ಮಾನಸಿಕ ಭಾವದ್ರವ್ಯವನ್ನು ಮಹಿಳೆ ಪುರುಷ ಕೇಂದ್ರಕ್ಕೆ ಸಮರ್ಪಿಸುವ, 'ತ್ಯಾಗಸುಖ'ದ ಜನಪ್ರಿಯ ಕಥನಗಳಿಂದ ಭಿನ್ನವಾದ ಮಾರ್ಗವನ್ನು ಮಹಿಳಾ ಬರವಣಿಗೆ ಹಿಡಿಯತೊಡಗಿತು. ಮಹಿಳಾ ಶೋಷಣೆಯ ಪ್ರತೀಕವಾಗಿ 'ಹಸಿಮಾಂಸ ಮತ್ತು ಹದ್ದು'ವನ್ನು ಪರಿಭಾವಿಸುವ ಗೀತಾನಾಗಭೂಷಣರು ತಾಯ್ತನಕ್ಕಂಟಿಕೊಂಡಿರುವ ವೈಭವೀಕರಣವನ್ನು ಲಚ್ಚಿ ಪಾತ್ರದ ಮೂಲಕ ಸ್ಫೋಟಿಸಿದರು. ವಿದ್ಯಾವಂತ ಉದ್ಯೋಗಸ್ಥ ಹೆಣ್ಣಿನ ಪ್ರಜ್ಞಾಜಾಗೃತಿ ಒಳಗೊಳ್ಳಬಹುದಾದ ತಲ್ಲಣಗಳನ್ನು ನಿರೂಪಿಸುತ್ತಲೇ ಪುರುಷ ರಾಜಕಾರಣದ ಸ್ವರೂಪವನ್ನು ನಾಗರಿಕ ಸಂದರ್ಭದಲ್ಲಿ ತೆರೆದಿಡುವ ಯತ್ನ 'ಆಳ' ಹಾಗೂ 'ಗಂಡಸರು' ಕಾದಂಬರಿಗಳದು.

ಕೃಷ್ಣಮೂರ್ತಿ ಪುರಾಣಿಕ

ಪಶ್ಚಿಮದ ಅಭಿವೃದ್ಧಿ ಸಿದ್ಧಾಂತಗಳನ್ನು ಅನುಮಾನದಿಂದ ನೋಡಬಲ್ಲ, ಪ್ರಶ್ನಿಸಬಲ್ಲ ಪರ್ಯಾಯ ಸೃಷ್ಟಿಯನ್ನು ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಗಳು ಹೊಂದಿವೆ. ವ್ಯಕ್ತಿ, ಸಮೂಹ, ನಿಸರ್ಗದ ನಿತ್ಯದೈನಿಕದ ಸೂಕ್ಷ್ಮಾತಿಸೂಕ್ಷ್ಮ ಆಗುಹೋಗುಗಳ ದರ್ಶನ ಸುಲಭಗ್ರಾಹ್ಯವಲ್ಲ. ಎಲ್ಲವನ್ನೂ ಅರ್ಥೈಸಬಲ್ಲೆ ಎಂಬ ಬೌದ್ಧಿಕ ಅಹಂಕಾರಕ್ಕೆ ಸಿಗದೆ ನುಣುಚಿಕೊಳ್ಳುವ ವಾಸ್ತವಸತ್ಯವನ್ನು ಗ್ರಹಿಸುವ ಬಗೆ ಯಾವುದೆಂಬ ಹುಡುಕಾಟ 'ಕರ್ವಾಲೋ' ಕೃತಿಯದು. ಜೀವವಿಕಾಸ ಸಿದ್ಧಾಂತವನ್ನಾಧರಿಸಿದ ಅಭಿವೃದ್ಧಿ ಸಿದ್ಧಾಂತಗಳು, ಅವುಗಳನ್ನಾಧರಿಸಿದ ರಾಜಕಾರಣದಲ್ಲಿ 'ಮಂದಣ್ಣ'ನಂಥ ದೇಸಿ ಪ್ರತಿಭೆಗಳು 'ಸ್ಥಗಿತ ಪ್ರಜ್ಞೆ'ಯುಳ್ಳ ಜೀವಿಗಳಾಗಿ ತಪ್ಪು ವ್ಯಾಖ್ಯಾನಕ್ಕೊಳಗಾಗುತ್ತಿದ್ದಾರೆ. ಬೌದ್ಧಿಕತೆಗೆ ಮಾನವೀಯ ಸ್ಪರ್ಶವಿದ್ದಾಗ ಮಾತ್ರ ಸಾಮರ್ಥ್ಯದ ಅನಂತ ಸಾಧ್ಯತೆಗಳ ನೆಲೆಯಾಗಿ ಜೀವಿಯನ್ನು ಕಾಣಲು ಸಾಧ್ಯವೆಂಬ ತಾತ್ವಿಕ ಸತ್ವವನ್ನು 'ಕರ್ವಾಲೋ' ಒದಗಿಸುತ್ತದೆ. ವೇಗದ ಓಟದಲ್ಲಿ ಹಿಂದುಳಿದವರ ಅದಮ್ಯ ಶಕ್ತಿಯ ಅಪಾರ ಸಾಧ್ಯತೆಗಳ ಬಗೆಗೆ ಹೆಚ್ಚು ಆಶಾವಾದಿಯಾದ ಸಂದರ್ಭ 70ರ ದಶಕದ್ದು. ಸಾಮಾಜಿಕ ಸಂಘಟನೆಗಳ ನಾಯಕತ್ವವನ್ನು ಸುಧಾರಣಾವಾದಿ ನೆಲೆಗಿಂತ ಭಿನ್ನವಾಗಿ ವಿವರಿಸಿಕೊಳ್ಳಬೇಕಾದ ಅನಿವಾರ್ಯತೆ ಈ ಸಂದರ್ಭದಲ್ಲುಂಟಾಯಿತು. ಹೊಸ ಬದುಕಿನ ನಿರ್ಮಾಣಕ್ಕೆ ತೊಡಗುವವರು ಯಾವ ವರ್ಗದವರೇ ಇದ್ದರೂ ಮುಂಚೂಣಿಯ ನಾಯಕತ್ವ ದಲಿತರದೇ ಇರಬೇಕೆಂಬ ಆಶಯ ಬರಗೂರರ

'ಸೀಳುನೆಲ'ದ್ದು (1980). ಅಂತರ್ಮುಖವಾಗಿದ್ದು, ಕ್ರಾಂತಿಯ ಬಗೆಗಿನ ವೈಚಾರಿಕ ಪ್ರೇರಣೆಗಳನ್ನು ಹೊರಗಿನಿಂದ ಪಡೆದ ನಾಯಕನ ವ್ಯಕ್ತಿತ್ವದ ಮಿತಿಗಳನ್ನು 'ನಾಯಕತ್ವ'ದ ಸಮಸ್ಯೆಯಾಗಿ ಇಲ್ಲಿ ಕಾಣಿಸಲಾಗಿದೆ. ಈ ಹೊತ್ತಿನಲ್ಲೇ ಬಂದ ಎಚ್.ತಿಪ್ಪೇರುದ್ರಸ್ವಾಮಿಯವರ 'ನೆರಳಾಚೆಯ ಬೆಳಗು' ಕಾಯಕವನ್ನು ಯೋಗವಾಗಿಸಿಕೊಂಡು ಸಿದ್ಧರಾಮನನ್ನು ಸಿದ್ಧಕಥಾಚೌಕಟ್ಟಿನಲ್ಲಿಯೇ ಚಿತ್ರಿಸುತ್ತದೆ.

ನಗರ ಹಾಗೂ ಗ್ರಾಮವೆಂಬ ಭಿನ್ನತೆಯನ್ನು ಕಾಯ್ದು ಕೊಳ್ಳಲಾರದಷ್ಟು ಸಂಕೀರ್ಣಗೊಂಡ ಸಾಮಾಜಿಕ ಸಂದರ್ಭವನ್ನು 80ರ ದಶಕದ ಕಾದಂಬರಿಗಳು ವಿಶ್ಲೇಷಣೆಗೊಳಪಡಿಸುತ್ತವೆ. ಚದುರಂಗರ 'ವೈಶಾಖ', ತೇಜಸ್ವಿಯವರ 'ಚಿದಂಬರ ರಹಸ್ಯ', ದೇವನೂರು ಮಹಾದೇವ ಅವರ 'ಕುಸುಮಬಾಲೆ', ಮನಜ ಅವರ 'ಮಾಗಿ', ಕುಂ. ವೀರಭದ್ರಪ್ಪನವರ 'ಕಪ್ಪು, ಪಕ್ಷಿ', ಅರವಿಂದ ಮಾಲಗತ್ತಿಯವರ 'ಕಾರ್ಯ', ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ಇವು ಸಾಮಾಜಿಕ ಸ್ಥಿತ್ಯಂತರಗೊಳ್ಳುತ್ತಿರುವ ಭಾರತದ ದರ್ಶನವನ್ನು ಮಾಡಿಕೊಡುತ್ತವೆ. ಈ ಕೃತಿಗಳು ದಲಿತ ಮತ್ತು ಮಹಿಳೆ ಹಾಗೂ ಅಂತಾರಾಷ್ಟ್ರೀಯ ರಾಜಕಾರಣದ ನೆಲೆಗಳಿಂದ ಸ್ಥಿತ್ಯಂತರದ ಸೂಕ್ಷ್ಮಗಳನ್ನು ಅರ್ಥೈಸಲೆತ್ನಿಸುತ್ತವೆ.

ಮಾನವನ ಅಂತರಂಗದ 'ನಿಗೂಢತೆ'ಯ ಶೋಧದಷ್ಟೇ ಮಾನವ ಸಮಾಜದ ಅಂತರಂಗವೂ ಅನೂಹ್ಯವೆಂಬುದನ್ನು ತೇಜಸ್ವಿಯವರ 'ಚಿದಂಬರ ರಹಸ್ಯ' ಸಾಧಿಸುತ್ತದೆ. ಸಮಾಜದ ಅಂತರಂಗವನ್ನು ಕಲಾತ್ಮಕ ರೂಪದಲ್ಲಿ ಹಿಡಿದಿಡಲೆತ್ನಿಸಿದಾಗ ತೆಳುಪತ್ತೇದಾರಿ ಕಥನದಷ್ಟೇ ವ್ಯರ್ಥವೆಂಬುದನ್ನು ಕೃತಿ ತಿಳಿಸುತ್ತದೆ. ಮೌಢ್ಯ, ಜಾತೀಯ ದಂಗೆ, ಅಸಂಗತ ದಾಂಪತ್ಯ, ಕಚ್ಚೆ ಹರುಕತನ, ಪರಿಸರ ನಾಶ, ಅಂತಾರಾಷ್ಟ್ರೀಯ ಮಾಫಿಯಾ ಚಟುವಟಿಕೆ, ಕೊಲೆ, ಸುಲಿಗೆಗಳೇ ತಾಣವಾದ 'ಕೆಸರೂರು' ಭಾರತೀಯ ಸಮಾಜದ ಅಡ್ಡಕೊಯ್ತದ ಮಾದರಿಯಾಗಿ ಕಾಣುತ್ತದೆ. ಇಷ್ಟೆಲ್ಲಾ ವೈಷಮ್ಯದ ಮಧ್ಯೆಯೂ ಪ್ರಕೃತಿ ಸಹಜ ಮುಗ್ಧ ಪ್ರಾಮಾಣಿಕ ಪ್ರಣಯಿಗಳು ವಿನಾಶದ ಬೆಂಕಿಯಿಂದ ಪಾರಾಗುವ ಆಶಯ ಆಶಾವಾದಿ ನೆಲೆಯದಾಗಿದೆ.

ವೈಶಾಖ ಮತ್ತು ಕುಸುಮಬಾಲೆ ಕಾದಂಬರಿಗಳು ಸ್ತ್ರೀ ಶೋಷಣೆಯೊಂದಿಗೆ ಹಾಸುಹೊಕ್ಕಾಗಿರುವ ವರ್ಣ–ವರ್ಗ ಸಮಾಜದ ಬೇರುಗಳನ್ನು ಶೋಧಿಸಲೆತ್ನಿಸುತ್ತವೆ. ಎರಡೂ ಕಾದಂಬರಿಗಳಲ್ಲಿ ಲೈಂಗಿಕತೆ ಪ್ರಮುಖ ವಿಷಯವಾಗಿದೆ. ಜಾತಿ ಮತ್ತು ಹೆಣ್ಣಿನ ಪಾವಿತ್ರ್ಯ ಪರಿಕಲ್ಪನೆಗಳು ಒಗ್ಗೂಡಿ ಬ್ರಾಹ್ಮಣ ಜಾತಿಯ ರುಕ್ಮಿಣಿಯನ್ನೂ ದಲಿತ ಲಕ್ಕನನ್ನೂ ಬಲಿತೆಗೆದುಕೊಳ್ಳುವ ಮಾರ್ಮಿಕ ಕಥನ ವೈಶಾಖ ಕಾದಂಬರಿಯಲ್ಲಿದೆ. ಮಾನವ ಅಸ್ತಿತ್ವವೇ ನಿರಾಕೃತಗೊಂಡ ದಲಿತ ಸಮುದಾಯದ ಬದುಕನ್ನು ಹೋರಾಟದ ಬೃಹತ್ ರೂಪಕವಾಗಿ ದೇವನೂರರ 'ಕುಸುಮಬಾಲೆ' ಹಿಡಿದಿಟ್ಟಿದೆ. ಕರುಳು ಬಳ್ಳಿ ತೊಡಕುಗಳನ್ನು ಆವರಿಸಿರುವ ಶ್ರದ್ಧೆ–ನಂಬಿಕೆಗಳ ದಟ್ಟ ಲೋಕದೊಳಗೆ ಭೂತ–ವರ್ತಮಾನ–ಭವಿಷ್ಯವೆಂಬ ಕಾಲ ಪರಿಗಣನೆಯಿಲ್ಲ. ವರ್ಣವ್ಯವಸ್ಥೆಯ ಭದ್ರ ಬೇರುಗಳುಳ್ಳ ಮರ ಗಿಡದ ಟೊಂಗೆಯಲ್ಲರಳುವ ಕುಸುಮವು ವರ್ಣಸಂಕರದ ಸಹಜ ಧರ್ಮಕ್ಕೆ ಅಧೀನ. ಈ ಸಹಜತೆಯನ್ನು ಹೊಸಕಿಹಾಕಬಲ್ಲ ವ್ಯವಸ್ಥೆಯ ಹಿಂಸಾಗುಣಕ್ಕೆ ಮಾಂತ್ರಿಕ ಶಕ್ತಿಯಿದೆ. ಸಾವಿನೆದುರು ಬದುಕಲೆಳಸುವ ಹೋರಾಟದಲ್ಲಿ ಮೈದುಂಬಿಕೊಳ್ಳದಿದ್ದರೆ ಗತ್ಯಂತರವಿಲ್ಲ. ಕ್ರಾಂತಿಯ ಸೂಚಕವಾದ ರಕ್ತದೊಂದಿಗಿನ ನೆನಪುಗಳೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸುತ್ತ ಕಾಯುತ್ತ ಕೂತ ದಲಿತ ಪ್ರಜ್ಞೆಯ ಜಾಗರಣವನ್ನು 'ಕುಸುಮ ಬಾಲೆ' ಪ್ರತಿಮಿಸುತ್ತದೆ. ಸಾಂಸ್ಕೃತಿಕ ನೆನಪುಗಳ ಮೂಲದ್ರವ್ಯವನ್ನು ಸಮಕಾಲೀನ ದಲಿತ–ಬಂಡಾಯ ಹೋರಾಟದ ತಾತ್ವಿಕ ಅಂಶವಾಗಿ ಹೇಗೆ ವಿನ್ಯಾಸಗೊಳಿಸಿಕೊಳ್ಳಬಹುದೆಂಬ ಮಹತ್ವದ ಸೂಚನೆ ಈ ಕಾದಂಬರಿಯಲ್ಲಿದೆ.

ಸಾಮಾಜಿಕ ಶೋಷಣೆಯನ್ನು ಸ್ತ್ರೀ ಕೇಂದ್ರದಿಂದ ನೋಡುತ್ತಾ ವಿಶಿಷ್ಟವಾಗಿ ವ್ಯಾಖ್ಯಾನಿಸುವ ಕೃತಿ – ಮ.ನ.ಜ. ಅವರ 'ಮಾಗಿ', ಪುರುಷ ಪ್ರಧಾನ ಕೌಟುಂಬಿಕ ಸಂರಚನೆಯೊಳಗೆ ಸೇರಿಯೂ ಸೇರದ ಮಹಿಳೆಯ ಅತಂತ್ರ ಸ್ಥಿತಿಯನ್ನು ಹಿಡಿದಿಡುತ್ತದೆ. ದಲಿತ ಮಹಿಳೆಯೊಬ್ಬಳ ಶ್ರಮ ಜೀವನದ ಮೌಲ್ಯವನ್ನು ಹೊಸ ಆರ್ಥಿಕ ಪರಿಭಾಷೆಯಲ್ಲಿ ಈ ಕೃತಿ ಕಟ್ಟುತ್ತದೆ.

ಉತ್ಪಾದನಾ ಸಾಧನವಾದ ಭೂಮಿ ಇಲ್ಲದಿದ್ದರೂ ಕೌಟುಂಬಿಕ ಸಂಬಂಧಗಳ ಆಪ್ತನೆಲೆಯನ್ನೂ ದಲಿತ ಪಾತ್ರಗಳು ಕಳೆದುಕೊಳ್ಳುವ ಪರಿ ಗೀತಾನಾಗಭೂಷಣರ 'ನೀಲಗಂಗಾ'ದಲ್ಲಿದೆ. ಜಮೀನ್ದಾರೀ ಪದ್ಧತಿಯ ಅಮಾನುಷ ಮುಖವನ್ನು ಬಸವಿ ಸಮಸ್ಯೆಯ ಮೂಲಕ ಕುಂ.ವೀ. ಅವರ 'ಕಪ್ಪು' ಪರಿಚಯಿಸುತ್ತದೆ. ಪಿತೃಪ್ರಾಧಾನ್ಯದ ಸಂಕೋಲೆಗಳ ಅರಮನೆಯಲ್ಲಿ ಹೆಣ್ಣೊಬ್ಬಳ ಜೀವಚೈತನ್ಯ ಮುರುಟಿಹೋಗುವುದನ್ನು ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಹೃದಯಂಗಮವಾಗಿ ಚಿತ್ರಿಸುತ್ತದೆ.

ಸಿಂಗಾರೆವ್ವನಂತೆಯೇ ಬರಗೂರರ 'ಬೆಂಕಿ'ಯ ನಾಯಿಕೆ ಲಕ್ಷ್ಮಿ ಈಡೇರಿಸಿಕೊಳ್ಳಲಾಗದ ದೈಹಿಕ ಕಾಮನೆಗಳಿಂದ ತಪ್ತಳಾದವಳು. ದಾಂಪತ್ಯದ ಎಲ್ಲೆಕಟ್ಟನ್ನು ಮೀರುವಲ್ಲಿ ದ್ವಂದ್ವಕ್ಕೊಳಗಾದರೂ ಹೊಸಬಾಳಿನ ಸಂಕಲ್ಪವನ್ನು ಹೊತ್ತ ಪಾತ್ರವಾಗಿ ಲಕ್ಷ್ಮಿ ಮೂಡಿಬಂದಿದ್ದಾಳೆ. ಸ್ತ್ರೀವಾದಿ ತಾತ್ವಿಕತೆಯ ಹಿನ್ನೆಲೆಯಲ್ಲಿ ಸ್ತ್ರೀ ಪುರುಷ ಸಂಬಂಧಗಳನ್ನು ವಿಭಿನ್ನವಾಗಿ ನಿರ್ವಚಿಸಿಕೊಳ್ಳುವ ಯತ್ನ ವೀಣಾ ಶಾಂತೇಶ್ವರರ 'ಮಹಿಳೆ' ಶೋಷಣೆ ಬಂಡಾಯ ಇತ್ಯಾದಿಯಲ್ಲಿದೆ. ತನ್ನ ಪರಿಚಯದ ಮಹಿಳೆಯರ ಮೇಲಿನ ಶೋಷಣೆಯನ್ನು ಅರ್ಥಮಾಡಿಕೊಳ್ಳುತ್ತಲೇ ತಾನೂ ಅವರ ಸಾಲಿನ ಪಾತ್ರವಾಗಿಬಿಡುವ ವಿಶಿಷ್ಟತೆ ಶಶಿಯದು. ಬೌದ್ಧಿಕ ನೆಲೆಯ ಸ್ತ್ರೀವಾದಿ ತಾತ್ವಿಕತೆಗೆ ಕ್ರಿಯಾಶೀಲ ಆಯಾಮವಿಲ್ಲದಿದ್ದರೆ ಏನಾಗುತ್ತದೆಂಬುದನ್ನು ಈ ಕೃತಿ ಪ್ರಕಟಿಸುತ್ತದೆ. ಬಳೆಪ್ರಿಯ ಮಹಿಳೆಯರು ಹಾಗೂ ಬಳೆಮುರುಕ ಅತ್ಯಾಚಾರಿ ಗಂಡಸರನ್ನೊಳಗೊಂಡ ಈ ಸಮಾಜದಲ್ಲಿ ಮಹಿಳೆಯ ನೆಲೆ–ಬೆಲೆಗಳೇನೆಂಬುದರ ವಿವೇಚನೆ ಬಿ.ಟಿ.ಲಲಿತಾನಾಯಕರ 'ನೆಲೆ–ಬೆಲೆ' ಕಾದಂಬರಿಯಲ್ಲಿದೆ. ಆದರೆ ಈ ದಶಕದಲ್ಲಿಯೇ ಬಂದ ಎಂ.ಕೆ.ಇಂದಿರಾ ಅವರ 'ತಾಳಿದವರು' ತಾಳಿಕೆಯ ನೀತಿಯನ್ನೇ ಬೋಧಿಸಲೆತ್ನಿಸುವ ಕೃತಿಯಾಗಿದೆ.

ನಗರೀಕರಣದ ಸಮಸ್ಯೆಯನ್ನು ಯಶವಂತ ಚಿತ್ತಾಲರ ಶಿಕಾರಿ ಸಮರ್ಥವಾಗಿ ಮನಗಾಣಿಸುತ್ತದೆ (ಪರಿಸರದ ಕ್ರೌರ್ಯಕ್ಕೆ ಉಪಾಯವೆಂಬಂತೆ 'ಮಣ್ಣಿಗೆ ಮರಳುವ' ಆಶಯ ಕಾರಂತರ 'ಗೆದ್ದ ದೊಡ್ಡಸ್ತಿಕೆ'ಯಲ್ಲಿದೆ). ಇಂಥ ರಮ್ಯ ಕಲ್ಪನೆಯಾಚೆ, ಗತಬದುಕಿನ ಮಣ್ಣಿನ ಸೆಳೆತವನ್ನು ನಿಷುವಿರ ಪರೀಕ್ಷೆಗೆ ಚಿತ್ತಾಲರು ಒಡ್ಡುತ್ತಾರೆ. ಗತದ ಬೇರುಗಳ ಮೂಲಕ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಯತ್ನವನ್ನು ಹೊಸಕಿಹಾಕಬಲ್ಲ ವ್ಯಾವಹಾರಿಕ ಸ್ಪರ್ಧಾ ಜಗತ್ತಿನ ಕ್ರೌರ್ಯವನ್ನು 'ಶಿಕಾರಿ' ನಿಚ್ಚಳವಾಗಿ ತೋರಿಸಲೆತ್ನಿಸುತ್ತದೆ.

ಯಶವಂತ ಚಿತ್ತಾಲರ ಶಿಕಾರಿ ಒಂದು ಮಹತ್ವದ ಕಾದಂಬರಿ. ಬೇಟೆಗೆ ಗುರಿಯಾಗುವವನಲ್ಲಿ ಇನ್ನಿಲ್ಲದ ಜೀವವಾಂಛೆಯನ್ನುದ್ದೀಪಿಸುವ ಕಲಾತ್ಮಕತೆ ಶಿಕಾರಿಗಿದೆ. ತನ್ನನ್ನು ತಾನು ಸಜ್ಜುಗೊಳಿಸಿಕೊಳ್ಳುವುದಕ್ಕೆ ಅವಕಾಶವನ್ನೇ ನೀಡದಂಥ ಕತ್ತಲಮರೆಯ ತರ್ಕಾತೀತ ಕ್ರೌರ್ಯವನ್ನು ಚಿತ್ತಾಲರ 'ಛೇದ' ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಕೊಲೆ ಸುಲಿಗೆಗಳ ಕ್ರೂರಜಗತ್ತಿನಲ್ಲಿ ಕೋಯಿ ಬಚಾವ್ ಎಂಬ ಕೂಗು ಪ್ರತಿಧ್ವನಿಸುತ್ತ ಮಾನವತ್ವದ ಛೇದವನ್ನು ಅಭಿನಯಿಸುತ್ತದೆ. 'ಪುರುಷೋತ್ತಮ'ದಲ್ಲಿಯೂ (1990) ಕ್ರೌರ್ಯವನ್ನೇ ಕೇಂದ್ರ ವಸ್ತುವಾಗಿ ಚಿತ್ತಾಲರು ನಿರೂಪಿಸಿದ್ದಾರೆ. ಅಸ್ತಿತ್ವದ ಭದ್ರನೆಲೆ, ವಿಸ್ತಾರವಾಗಬಹುದಾದ 'ಮನೆ'ಯು ಅತಿಕ್ರಮಣಕ್ಕೆ ಗುರಿಯಾಗುವ ಅಪಾಯಕಾರಿ ಸ್ಥಿತಿಯಲ್ಲಿಯೇ ಪುರುಷೋತ್ತಮತ್ವದ ಪೂರ್ಣ ಪ್ರಕಟನೆ ಸಾಧ್ಯವೆಂಬ ಧ್ವನಿ ಇಲ್ಲಿದೆ. 1990ರಲ್ಲಿ ಬಂದ ಭೈರಪ್ಪನವರ 'ಅಂಚು' ಕೂಡ ಹತಾಶಬದುಕಿನ ಪರಿಣಾಮವಾದ ಮಾನಸಿಕ ದೌರ್ಬಲ್ಯ ವಿಕೃತಿಯಿಂದ ಜೀವಪರತೆಯಲ್ಲಿ ನೆಲೆಗೊಳ್ಳುವ ಹೆಣ್ಣಿನ ಕಥನ. ಕುಟುಂಬ ಸಂಬಂಧಗಳ ಗಟ್ಟಿನೆಲೆಗಳು ಕರಗಿ ವ್ಯಕ್ತಿಗಳು ಅತಂತ್ರಗೊಳ್ಳುವ ಪರಿಯನ್ನು 1983ರಲ್ಲಿ ಬಂದ ಭೈರಪ್ಪನವರ 'ನೆಲೆ' ವಿವರಿಸಲೆತ್ನಿಸುತ್ತದೆ. ಕಾಮ ಮತ್ತು ಸಾವಿನ ತೀವ್ರಾನುಭವಗಳು ವ್ಯಕ್ತಿ ನೆಲೆಯನ್ನು ಪ್ರಭಾವಗೊಳಿಸುವ ಬಗೆಯನ್ನು ಇಲ್ಲಿ ಕಾಣಿಸಲಾಗಿದೆ.

ವ್ಯಾಸರಾಯ ಬಲ್ಲಾಳರ 'ಬಂಡಾಯ' (1984) ಹಾಗೂ ಶಂಕರ ಮೊಕಾಶಿ ಪುಣೇಕರರ 'ಅವಧೇಶ್ವರಿ' (1987) ಕಾದಂಬರಿಗಳು ಸಮೂಹ ವ್ಯಕ್ತಿ ಪ್ರತಿಭಟನೆಯ ತಾತ್ವಿಕತೆಯನ್ನು ಚಾರಿತ್ರಿಕ ನೆಲೆಯಲ್ಲಿ ವ್ಯಾಖ್ಯಾನಸಲೆತ್ನಿಸುತ್ತವೆ. 'ಬಂಡಾಯ'ದ ವಸ್ತು ಸಮಕಾಲೀನ ಚಾರಿತ್ರಿಕತೆಯಾದರೆ, 'ಅವಧೇಶ್ವರಿ'ಯ ವಸ್ತು ವೇದಕಾಲ ಸ್ಥಿತ್ಯಂತರಗೊಳ್ಳುತ್ತಿರುವ ಚಾರಿತ್ರಿಕತೆ. ವರ್ಗ ಪ್ರಜ್ಞೆಯ ವಿಕಾಸದ ಹಂತದಲ್ಲಿ ಪಲ್ಲಟಗೊಳ್ಳುವ ಸಾಮಾಜಿಕ ಸಂಬಂಧಗಳನ್ನು 'ಬಂಡಾಯ' ಅನ್ವೇಷಿಸುತ್ತದೆ. ವರ್ಣ ಪ್ರಜ್ಞೆಯ ಸಂಹಿತೆಯೊಳಗಿನ ಸಡಿಲಿಕೆಯುಂಟುಮಾಡುವ ರಾಜಕೀಯ ಸಂಘರ್ಷವನ್ನು 'ಅವಧೇಶ್ವರಿ' ಪುನಾರಚಿಸುತ್ತದೆ. ಕುಟುಂಬದೊಳಗಿನ ಸಿದ್ಧಪಾತ್ರದಿಂದಾಚೆ ತುಡಿವ ಸ್ತ್ರೀಪಾತ್ರಗಳನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಎರಡೂ ಕಾದಂಬರಿಗಳು ಸಾಮಾಜಿಕ ಬದಲಾವಣೆಯ ಸ್ವರೂಪ–ಸಾಧ್ಯತೆಗಳ ದರ್ಶನವನ್ನು ಕಟ್ಟಿಕೊಡುತ್ತವೆ. ಮಹಿಳೆಗೆ ವಿಧಿಸಿರುವ ಲೈಂಗಿಕ ಸಂಹಿತೆಯನ್ನು ಅನುಸರಿಸುವಾಗ ಎದುರಾಗಬಹುದಾದ ರಾಜಕೀಯ ತಾತ್ವಿಕತೆಯನ್ನು ಈ ಕಾದಂಬರಿಗಳು ಹಿಡಿದಿಡುತ್ತವೆ.

ಸಾಮಾಜಿಕ ಕ್ರಾಂತಿಯಲ್ಲಿನ ಮಹಿಳಾ ಸಹಭಾಗಿತ್ವವನ್ನು ಅನುಪಮಾ ನಿರಂಜನರ 'ಘೋಷ' (1985) ಹಾಗೂ 'ಮುಕ್ತಿಚಿತ್ರ' (1988) ಕಾದಂಬರಿಗಳು ಪ್ರಮುಖ ವಸ್ತುವನ್ನಾಗಿಸಿಕೊಂಡಿವೆ. ಅಬಲೆ, ಅಸಹಾಯಕಳೆಂದು ಕರೆಸಿಕೊಳ್ಳುತ್ತಿದ್ದ ಮಹಿಳೆ ಹೊಸ ಪ್ರಜ್ಞೆಯಿಂದ ಜಾಗೃತಳಾಗಿ ಶೋಷಣೆಯ ವಿರುದ್ಧ ಬಂಡೇಳುವ ಕಥನ ಈ ಕಾದಂಬರಿಗಳದು.

ಕಾ.ತ.ಚಿಕ್ಕಣ್ಣನವರ 'ಮುಂಜಾವು' (1989) ಹಾಗೂ ಅರವಿಂದ ಮಾಲಗತ್ತಿಯವರ 'ಕಾರ್ಯ' (1989) ಕಾದಂಬರಿಗಳು ಶೋಷಿತರ ಬದುಕಿನ ಮೂಲರೂಪೀ ದುರಂತವನ್ನು ಚಿತ್ರಿಸುತ್ತವೆ. ದಲಿತರ, ಶೋಷಿತರ ಜೀವನ ಪ್ರೀತಿ, ಮುಗ್ಧತೆ, ಜಾಣತನ, ಸಹನೆ, ತಾಳ್ಮೆಗಳ ನಿರೂಪಣೆಗೆ ಹೊಸ ಆಯಾಮವನ್ನು ದಲಿತ ಬಂಡಾಯ ಸಂಘಟನೆ ಒದಗಿಸಿತು. ಮುಂಜಾವಿನ ತಿಮ್ಮಾಜಿಯ ದಂಗೆ ಹಾಗೂ 'ಕಾರ್ಯ'ದ ದಲಿತ ಸಮೂಹ ಕೈಗೊಳ್ಳಲೆತ್ನಿಸುವ

ನ್ಯಾಯ ತೀರ್ಮಾನಗಳು ಸ್ಥಾಪಿತ ಸಂಸ್ಕೃತಿಯ ಸಂರಚನೆಯನ್ನೇ ಬುಡಮೇಲಾಗಿಸಬಲ್ಲಷ್ಟು ಸಶಕ್ತವಾಗಿವೆ. ಆದರೆ ತಮ್ಮಲ್ಲೇಳುವ ಪ್ರತಿರೋಧಕ ಅನುಭವವನ್ನು ಬೌದ್ಧಿಕ ನೆಲೆಯಲ್ಲಿ ಜ್ಞಾನರೂಪದ ತತ್ವವನ್ನಾಗಿಸಿಕೊಳ್ಳಲಾರದ ದುರಂತವನ್ನು 'ಕಾರ್ಯ' ಸೆರೆ ಹಿಡಿಯುತ್ತದೆ. ಹುಟ್ಟು ಸಾವುಗಳ ವರ್ತುಲಕ್ಕೆ ಸಂಬಂಧಿಸಿದ ಶ್ರದ್ಧೆ ನಂಬಿಕೆಗಳ ಮೂಲವಾದ ಭಾವದ್ರವ್ಯವನ್ನು ಪುರೋಹಿತಶಾಹಿ, ಊಳಿಗಮಾನ್ಯ ಪ್ರಬಲರು ಬಳಸಿಕೊಳ್ಳುವಲ್ಲಿ ಶೋಷಣೆಯ ಬೇರುಗಳಿರುವುದನ್ನು ಕಾರ್ಯ ಕಾದಂಬರಿ ಗುರುತಿಸುತ್ತದೆ.

ಮುಸ್ಲಿಂ ಸಮುದಾಯದ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಮೌಲ್ಯಗಳ ವಸ್ತುನಿಷ್ಠ ವಿಶ್ಲೇಷಣೆಯನ್ನು ಸಾರಾ ಅಬೂಬಕರ್‌ರವರ ಚಂದ್ರಗಿರಿಯ ತೀರದಲ್ಲಿ, ಸಹನಾ, ವಜ್ರಗಳು ಕಾದಂಬರಿಗಳು ಮಾಡಿವೆ. ಪಿತೃಪ್ರಧಾನ ಮೌಲ್ಯ ವ್ಯವಸ್ಥೆಯಡಿಯಲ್ಲಿ ನಲುಗಿಹೋದ ಮುಸ್ಲಿಂ ಮಹಿಳೆಯರ ಬವಣೆಯ ಕಥನ ಬಂಡಾಯದ ಆಶಯಕ್ಕೆ ಪೂರಕವಾಗಿದೆ.

ಒಟ್ಟಿನಲ್ಲಿ 1980ರ ದಶಕದ ಕಾದಂಬರಿಗಳು ವ್ಯಕ್ತಿ–ಸಮೂಹ ಸಾಧ್ಯತೆಗಳ ವಿಸ್ತಾರದ ಅರಿವನ್ನು ಹೆಚ್ಚಿಸಿದವು. ಈ ದಶಕದ ಪ್ರಾರಂಭದಲ್ಲಿ ಬಂದ ಶಾಂತಿನಾಥ ದೇಸಾಯಿ ಅವರ 'ಬೀಜ' ಕಾದಂಬರಿಯ ತಾತ್ವಿಕತೆಯಲ್ಲಿ ಇದು ಸ್ಪಷ್ಟವಾಗುತ್ತದೆ. ಬೀಜ, ಏಕಕಾಲಕ್ಕೆ ಬಂಧಿತ ಸ್ಥಿತಿಯನ್ನೂ ಬಿಡುಗಡೆಯ ಸಾಧ್ಯತೆಯನ್ನೂ ತನ್ನೊಳಗೆ ಅದ್ಭುತವಾಗಿ ಅಡಗಿಸಿಕೊಂಡ ರಹಸ್ಯ ಬಂಧನ ಒಡೆದು ಬೆಳೆದು ನಿಲ್ಲುವುದು ಮುಕ್ತಿ. ಬೀಜದ ಮುಕ್ತಿ ಸಂಗತಿ ಜಾಗೃತಿಗೆ ಆತ್ಮರತಿಯ ನವ್ಯನಾಯಕತ್ವದಿಂದ ಹೆಚ್ಚು ಸಮಾಜಮುಖಿಯಾಗಿ ಹೊರಳಿಕೊಳ್ಳುವ 'ಬೀಜ'ದ ನಾಯಕ ಶ್ರೇಯಾಂಸ–ಸ್ಥಿತ್ಯಂತರದ ಸೂಕ್ತ ಪ್ರತಿಮೆಯಾಗಿದ್ದಾನೆ.

ದಲಿತರ ವಿಚಾರ–ಭಾವದ್ರವ್ಯದ ಹರಣವನ್ನು ಕುರಿತ 'ಕಾರ್ಯ'ದ ಕಥನದ ಮುಂದುವರಿಕೆಯಾಗಿ 1992ರಲ್ಲಿ ಬಂದ ಮುಳ್ಳೂರು ನಾಗರಾಜ್ ಅವರ 'ಮರಣ ಮಂಡಲ ಮಧ್ಯದೊಳಗೆ' ಕಂಡುಬರುತ್ತದೆ. ಶೋಷಣೆಯ ಮೂಲವೇ ಮಿದುಳ ಹರಣವೆಂಬುದನ್ನು ಜಾನಪದೀಯ ಶೈಲಿಯಲ್ಲಿ ಈ ಕೃತಿ ನಿರೂಪಿಸುತ್ತದೆ. ಈ ಕೃತಿಯಲ್ಲಿ ಶುದ್ಧತೆ–ಅಶುದ್ಧತೆಯ ಪರಿಕಲ್ಪನೆಯನ್ನಾಧರಿಸಿದ ವರ್ಣಾಶ್ರಮ ವ್ಯವಸ್ಥೆಯ ಐತಿಹಾಸಿಕ ಪ್ರಕ್ರಿಯೆಯನ್ನು ಆಧುನಿಕ ಪೌರಾಣಿಕ ನೆಲೆಯಲ್ಲಿ ಹಿಡಿದಿಡಲಾಗಿದೆ. ವರ್ಣಸಂಕರದಿಂದ ಮೊಳೆಯುವ ಸ್ತ್ರೀ–ಪುರುಷ ಸಂಬಂಧಗಳು ಪ್ರೇಮ–ದ್ವೇಷ–ಅಸೂಯೆ–ಪ್ರತೀಕಾರ–ಪರಿವರ್ತನೆಗಳ ಸುಳಿಯಲ್ಲಿ ಸಿಲುಕಿಕೊಳ್ಳುವುದನ್ನು ಕಾದಂಬರಿ ಚಿತ್ರಿಸುತ್ತದೆ. ಕತ್ತಲ ರಾಜ್ಯದ ಸಾಂಕೇತಿಕತೆಯನ್ನು ಪ್ರಮುಖ ತಾತ್ವಿಕ ಪ್ರಶ್ನೆಯಾಗಿ ಬೆಳೆಸುವ ಪಾತ್ರವಾಗಿ ಬಸರಾಜು ಇದ್ದಾನೆ. ಆದರೆ ಸಂಘಟನೆಯು ಈ ತಾತ್ವಿಕತೆಯ ಅರಿವಿಲ್ಲದ ವ್ಯಕ್ತಿಗಳಲ್ಲಿರುವುದು ನೋವಿನ ಸಂಗತಿ. ಸಮಕಾಲೀನ ದಲಿತ ಬಂಡಾಯ ಸಂಘಟನೆಗಳ ಕುರಿತಾದ ಲೇಖಕರ ನಿಲುವೂ ಇದಾಗಿರಬಹುದೆನಿಸುತ್ತದೆ.

ಕಾರಂತ, ಕುವೆಂಪುರವರ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಈ ಹೊತ್ತಿನ ಪರಿಸ್ಥಿತಿಗೂ ಇರುವ ಅಂತರವನ್ನು ಪೂರ್ಣಚಂದ್ರ ತೇಜಸ್ವಿಯವರ 'ಜುಗಾರಿ ಕ್ರಾಸ್' ತೋರ್ಪಡಿಸುತ್ತದೆ. ಈ ಹೊತ್ತು ಕಾಳದಂಧೆಗಳ ತವರುಮನೆಯಾಗಿರುವ ಕಾಡು ರಮ್ಯ ಕಲ್ಪನೆಯ ತಾಣವಾಗಿಲ್ಲವೆಂಬ ವಾಸ್ತವವನ್ನು ಈ ಕಾದಂಬರಿ ಚಿತ್ರಿಸುತ್ತದೆ. ಅತ್ಯಂತ ಅಭದ್ರ ಸ್ಥಿತಿಯ ಅಂಚಿಗೆ ಸಾಮಾನ್ಯ ನಾಗರೀಕರನ್ನು ತಂದಿಟ್ಟ ಭ್ರಷ್ಟ ವ್ಯವಸ್ಥೆಯ ವಿಷವರ್ತುಲವನ್ನು ಈ ಕಾದಂಬರಿ ಪರಿಚಯಿಸುತ್ತದೆ. ಕೇಶವ ಮಳಗಿಯವರ ಕುಂಕುಮ ಭೂಮಿ–ಭೂಮಿಯೊಂದಿಗಿನ ಮಾನವ ಸಂಬಂಧಗಳ ಭಾವನಾತ್ಮಕ ಹಾಗೂ ಉಪಭೋಗಾತ್ಮಕ ನೆಲೆಗಳನ್ನು ಚರ್ಚಿಸುವ ಕೃತಿ. ಅಭಿವೃದ್ಧಿ ಸಿದ್ಧಾಂತಗಳ ರಾಜಕಾರಣವು ಪರಿಸರ ನಾಶದೊಂದಿಗೆ ಆ ಪರಿಸರವನ್ನಾಶ್ರಯಿಸಿದ್ದ ಶ್ರಮಜೀವಿಗಳನ್ನು ಹೊಸಕಿ ಹಾಕುವುದನ್ನು ನಾ.ಡಿಸೋಜರ 'ಒಡ್ಡು' ಸರಳವಾಗಿ ನಿರೂಪಿಸುತ್ತದೆ. ಪರಿಸರ ಅಧ್ಯಯನ ಆಯಾಮದ ಮೂಲಕ ಸ್ಥಳೀಯ ನೆಲೆಯ ಶೋಷಿತರ ಕಥನಗಳು ಜಾಗತಿಕ ನೆಲೆಗೆ ವಿಸ್ತಾರಗೊಳ್ಳುವುದನ್ನು 80ರ ದಶಕದ ಉತ್ತರಾರ್ಧದ ಕಾದಂಬರಿಗಳು ಸೂಚಿಸುತ್ತವೆ.

1990ರಲ್ಲಿ ಬಂದ ರೇಖಾ ಕಾಖಂಡಕಿಯವರ 'ಹೊಸ ಹೆಜ್ಜೆ' ಲಂಬಾಣಿ ಸಮುದಾಯದ ಸಾಂಸ್ಕೃತಿಕ ಬದುಕಿನ ವಿವರಗಳ ಒಡಲಿನಂದಲೇ ಬಂಡಾಯದ ಆಶಯವನ್ನು ಸ್ತ್ರೀಕೇಂದ್ರಿತ ನೆಲೆಯಲ್ಲಿ ಪ್ರಕಟಿಸುವ ಕೃತಿ. ಪುರುಷಕೇಂದ್ರದ ಸುತ್ತ ಕಟ್ಟಿಕೊಂಡ ತನ್ನ ಮಾನಸಿಕ ಭೌತಿಕ ಜೀವನದಿಂದ ಆಚೆ ಬರುವ ಕ್ರಿಯಾಶೀಲ ತಾತ್ವಿಕತೆ ಎಚ್.ವಿ.ಸಾವಿತ್ರಮ್ಮ ಅವರ 'ವಿಮುಕ್ತಿ'ಯಲ್ಲಿದೆ. ಸಾರ್ವತ್ರಿಕ ಜೀವನ ಸಂಹಿತೆಯಡಿ ಇಲ್ಲವಾಗುವ ರಾಮನ ಬದುಕೂ ಅದನ್ನವಲಂಬಿಸಿದ ಸೀತೆಯ ಸಂಕಷ್ಟಗಳನ್ನು ಲೇಖಕಿ ದಾಖಲಿಸುತ್ತಾರೆ. ಆ ಮೂಲಕ ಪುರುಷ ಪ್ರಧಾನವ್ಯವಸ್ಥೆಯೊಂದಿಗಿನ ಭಾವನಾತ್ಮಕ ಸಂಬಂಧಗಳನ್ನು ಮೀರಲೆಳಸುವ ಸೀತೆಯ ಮೂಲಕ ಸ್ತ್ರೀಸ್ವಾತಂತ್ರ್ಯದ ದರ್ಶನವನ್ನು 'ವಿಮುಕ್ತಿ' ನೀಡಿದೆ. ಜ್ಞಾನವನ್ನೇ ಅಧಿಕಾರವಾಗಿಸಿಕೊಂಡ ಯಜಮಾನ ಸಂಸ್ಕೃತಿಯ ದಬ್ಬಾಳಿಕೆಗೆ ಗುರಿಯಾದವರ ಬದುಕಿನ ಸತ್ವವನ್ನು (1989) ಸುನಂದಾ ಬೆಳಗಾಂವಕರರ 'ನಾಸು' ಕಳಕಳಿಯಿಂದ ಸ್ಥಾಪಿಸುತ್ತದೆ. ಸ್ತ್ರೀ ಗುಣಗಳೆಂದು ಪರಿಭಾವಿತವಾಗುವ ಅಂತಃಕರಣ, ಮೃದುತ್ವ, ಸಹನೆ, ಭಾವನಾ ತೀವ್ರತೆಗಳನ್ನು ಪುರುಷ ಚೇತನ ಅಂತರ್ಗತಮಾಡಿಕೊಳ್ಳಬೇಕಾದ ಜರೂರನ್ನು 'ನಾಸು' ಪಾತ್ರದ ಮೂಲಕ ಈ ಕೃತಿ ಮನಗಾಣಿಸುತ್ತದೆ. ಸಾಂಸ್ಕೃತಿಕ ಸ್ತ್ರೀವಾದೀ ಚಿಂತನೆಯನ್ನು ಪುರುಷಪಾತ್ರ ಕೇಂದ್ರದಿಂದ ಅಭಿವ್ಯಕ್ತಿಸುವ ಕಾದಂಬರಿ ಇದಾಗಿದೆ.

ಶೋಷಣೆಯ ಕಥನವನ್ನು ಮಾನವಶಾಸ್ತ್ರೀಯ ಸಂಶೋಧನ ಕುತೂಹಲದಿಂದ ಹಿಡಿದಿಡಲಾಗದೆಂಬುದು 1990ರ ದಶಕಗಳ ಕಾದಂಬರಿಗಳ ಮೂಲಕ ಇನ್ನಷ್ಟು ಸ್ಫುಟವಾಗುತ್ತದೆ. ಶಿವರಾಮ ಕಾರಂತರ ಅಥೆಂಟಿಸಿಟಿಗೂ 1990ರಿಂದೀಚಿಗಿನ ಸೃಜನಶೀಲತೆಯ ಅಥೆಂಟಿಸಿಟಿಗೂ ಗುಣಾತ್ಮಕ ವ್ಯತ್ಯಾಸ ಕಂಡುಬರುತ್ತದೆ. ಸಾಹಿತ್ಯಕ ಸೃಜನಶೀಲತೆ ಇನ್ನಿಲ್ಲದಂತೆ ಸಾಮಾಜಿಕ ಬದ್ಧತೆಯ ಪ್ರಶ್ನೆಯನ್ನು ಮುಖಾಮುಖಿ ಯಾಗಿಸಿಕೊಂಡ ಸಂದರ್ಭ ಇದಾಗಿದೆ.

ಸ್ವಂತ ಬದುಕಿನ ರಕ್ತ ಸಂಬಂಧಗಳ ಶೋಧದ ಮೂಲಕ ವರ್ಣಸಂಕರದ ಸಾಮಾಜಿಕ ಸೂಕ್ಷ್ಮಗಳನ್ನು ಅಧ್ಯಯನ ಮಾಡುವ ಕೇಂದ್ರ ಪಾತ್ರ – 'ಮೂಲಮುಖಿ'ಯ ಚಾರುಮತಿ. 1991ರಲ್ಲಿ ಹೊರಬಂದ ಈ ಕಾದಂಬರಿಯಲ್ಲಿ ಅನುಪಮಾ ನಿರಂಜನರು ಮಹಿಳಾ ಹೋರಾಟಗಳ ಮೂಲದ್ರವ್ಯವಾಗಿ ತಾತ್ವಿಕತೆಯೊಂದಿಗೆ ಕ್ರಿಯಾಶಾಲಿ ಜೀವನಾನುಭವಮೂ ಅತ್ಯಗತ್ಯವೆಂದು ಸ್ಥಾಪಿಸುತ್ತಾರೆ. ಗ್ರಾಮ್ಯ ಬದುಕಿನ ಮುಗ್ಧತೆ, ಒಳಸಂಚುಗಳ ಸುಳಿಗಳು, ಔದಾರ್ಯ, ಕ್ಷುದ್ರತನಗಳ ಪ್ರತ್ಯಕ್ಷಾನುಭವದಲ್ಲಿಯೇ ಸಂಶೋಧನೆಗೆ ಮಾನವೀಯ ಆಯಾಮ, ಅಧಿಕೃತತೆ ಪ್ರಾಪ್ತವಾಗಬಲ್ಲುದೆಂಬುದನ್ನು ಈ ಕೃತಿ ಸೂಚಿಸುತ್ತದೆ. ಡಿ.ಎಸ್.ನಂದಾರಿಂದ ಪೂರ್ಣಗೊಂಡ ಅನುಪಮಾರ 'ದಿಟ್ಟೆ', ಸ್ವಂತ ನಿರ್ಧಾರಗಳ ಮೂಲಕವೇ ವೈಯಕ್ತಿಕಮೂ ಹಾಗೂ ರಾಜಕೀಯ ವ್ಯಕ್ತಿತ್ವ ಉಳಿಸಿಕೊಂಡ ಅಬ್ಬಕ್ಕ ರಾಣಿಯ ದಿಟ್ಟತನವನ್ನು ಕೀರ್ತಿಸುತ್ತದೆ.

ಸೃಷ್ಟಿಯನ್ನು ಸ್ತ್ರೀತತ್ವವಾಗಿ ಅರ್ಥೈಸುವ ಪುರುಷ ಸೌಂದರ್ಯ ಮೀಮಾಂಸೆಯನ್ನು ಪುನರ್‌ವ್ಯಾಖ್ಯಾನಿಸುವ ನೆಲೆ ಸುನಂದಾ ಬೆಳಗಾಂವಕರ ಅವರ 'ಝುವಾದಿ'. ಸ್ವಾಹಿಲಿ ಭಾಷೆಯಲ್ಲಿ 'ಕಾಣಿಕೆ' ಎಂಬ ಅರ್ಥವುಳ್ಳ ಪದ 'ಝುವಾದಿ'. ಪ್ರಕೃತಿ ಹಾಗೂ ಸ್ತ್ರೀಯಲ್ಲಿನ ಸಂಗೋಪನಾ ಸತ್ವವನ್ನು ಕಾಣಿಕೆಯ ಭಾವದಲ್ಲಿ ಸ್ವೀಕರಿಸಿದಾಗ ಮಾತ್ರವೇ ಪುರುಷ ಅಹಂಕಾರ ಕರಗಿ ನಿಜಮಾನವತ್ವ ಸಾಧ್ಯವಾಗುತ್ತದೆ. ಅಂತರ್‌ದೃಷ್ಟಿ ಮೊಳೆಯುವ ತನಕ ಹೆಣ್ಣಿನ ಶೋಷಣೆ ಇರತಕ್ಕದ್ದೇ ಎಂಬ ನಿಲುವು ಈ ಕೃತಿಯದು.

ಕಥನದ ಸಾಂಪ್ರದಾಯಿಕ ಕ್ರಮಗಳಿಂದ ಬಿಡಿಸಿಕೊಂಡ ಸವಿತಾ ನಾಗಭೂಷಣರ 'ಸ್ತ್ರೀಲೋಕ' ಮಹಿಳಾ ಸಂಸ್ಕೃತಿಯ ವಿನೂತನ ಅಭಿವ್ಯಕ್ತಿಯಾಗಿದೆ. ಮಹಿಳೆಯರಿಬ್ಬರ ಸಂಭಾಷಣೆಯ ಘಟಕಗಳ ಮೂಲಕ ನಿತ್ಯ ದೈನಕವನ್ನು ವೈವಿಧ್ಯಮಯ ಗ್ರಹಿಕೆಗಳ ನೆಲೆಯಲ್ಲಿ ಈ ಕಾದಂಬರಿ ಸೃಷ್ಟಿಸುತ್ತದೆ. ಎಲ್ಲವನ್ನೂ ತಾತ್ವೀಕರಿಸುವ ಬೌದ್ಧಿಕತೆಯ ಅಹಂಕಾರಕ್ಕೆ ಉತ್ತರವೆಂಬಂತೆ ಸ್ತ್ರೀಲೋಕವನ್ನು ಈ ಕೃತಿ ಪುನರ್‌ವ್ಯಾಖ್ಯಾನಿಸುತ್ತದೆ.

80 ಹಾಗೂ 90ರ ದಶಕಗಳ ದಲಿತ ಬಂಡಾಯ ಕಥಾಸಾಹಿತ್ಯ ಈಗಾಗಲೇ ಸಿದ್ಧಗೊಂಡಿದ್ದ ತಾತ್ವಿಕತೆಯ ಒಳಶೋಧವನ್ನು ಸೂಕ್ಷ್ಮನೆಲೆಗೆ ವಿಸ್ತರಿಸಲೆತ್ನಿಸಿತು. ಹಾಗಾಗಿ, ಶೋಷಣೆಯ ಕಥನವನ್ನು ಸಮಕಾಲೀನ ಹಾಗೂ ಪುರಾತನ ನೆಲೆಗಳೆರಡರಲ್ಲೂ ಏಕಕಾಲಕ್ಕೆ ನಿರೂಪಿಸುವಂಥ ವಿನೂತನ ತಂತ್ರವನ್ನು ಬಳಸಿಕೊಳ್ಳಲಾಯ್ತು. ಆ ಮೂಲಕ ಆಚರಣಾತ್ಮಕ ಭಾವದ್ರವ್ಯಕ್ಕೆ ವೈಚಾರಿಕ, ಚಾರಿತ್ರಿಕ ವೇದಿಕೆಯನ್ನು ಕಲ್ಪಿಸಲಾಯಿತು. ಹಾಗೆಯೇ ಸಮಕಾಲೀನ ಸಮಾಜದ ವಾಸ್ತವದಲ್ಲಿನ ಹೋರಾಟಕ್ಕೆ ಭದ್ರವಾದ ಸಾಂಸ್ಕೃತಿಕ ಭಾವಕೋಶ ನಿರ್ಮಾಣಗೊಂಡಿತು.

ಸ್ವಾತಂತ್ರ್ಯೋತ್ತರ ಭಾರತೀಯ ಸಾಮಾಜಿಕ ಸಂದರ್ಭದ ಸಂಚಲನಗಳನ್ನು ಶೋಷಿತರ ನೆಲೆಯಿಂದ ಹಿಡಿದಿಡುವ ಕಾದಂಬರಿಗಳು ಸಾಕಷ್ಟು ಬಂದಿವೆ. ಭೂಮಿ ಮೇಲಿನ ಹಕ್ಕು, ವಿದ್ಯೆ ಹಾಗೂ ಉದ್ಯೋಗಾವಕಾಶಗಳ ಬೇಡಿಕೆ, ಸ್ವಾಭಿಮಾನ ಗಳಿಕೆ, ಸಾಂಸ್ಕೃತಿಕ ಗುರುತುಗಳ ಬಗೆಗಿನ ಹೆಮ್ಮೆ ಇತ್ಯಾದಿಗಳು ಕಾದಂಬರಿಗಳ ಪ್ರಮುಖ ಆಶಯಗಳಾಗಿವೆ. 1993ರ ಕುಂ.ವೀರಭದ್ರಪ್ಪನವರ 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಜೀತದಾಳೊಬ್ಬನ ಮಗ ವಿದ್ಯೆ ಪಡೆಯಲು ಹೊರಟ ಸಂಘರ್ಷದ ಕತೆಯನ್ನು ಹೇಳುತ್ತದೆ. ಬಿಡುಗಡೆಯ ಸಾಧ್ಯತೆಗಳ ಅರಿವು ಮಾತ್ರ ದಲಿತರನ್ನು ಮಾನಸಿಕ ದಾಸ್ಯದಿಂದ ಮುಕ್ತರಾಗಿಸಬಲ್ಲ ದೆಂಬುದನ್ನು ಇವರ ಇನ್ನೊಂದು ಕಾದಂಬರಿ ಕೆಂಡದ ಮಳೆ (1989) ನಿರೂಪಿಸುತ್ತದೆ. ಭೂಹೀನ ದಲಿತರ ಬದುಕುವ ಹಕ್ಕುಗಳಿಗಾಗಿ ಅಧಿಕಾರಶಾಹಿ ವ್ಯವಸ್ಥೆಯೊಳಗಿದ್ದೇ ಹೋರಾಡುವ ದಲಿತ ಸರ್ಕಾರಿ ಅಧಿಕಾರಯೊಬ್ಬನ ಸೋಲು ಗೆಲವುಗಳ ಕಥನ ಆರ್.ವಿ.ಭಂಡಾರಿಯವರ 'ಬೆಂಕಿಯ ಮಧ್ಯೆ' (1984) ಕಾದಂಬರಿಯದು.

ಬಿ.ಟಿ.ಲಲಿತಾನಾಯಕರ ಗತಿ (1983) ಹಾಗೂ ಎಂ.ವೀರಪ್ಪ ಮೊಯಿಲಿವರ ಕೊಟ್ಟ (1993) – ಈ ಕೃತಿಗಳು ಲಂಬಾಣಿ ಮತ್ತು ಕೊರಗ ಜನಾಂಗದ ನಂಬಿಕೆ, ಆಚರಣೆಗಳ ಹಿನ್ನೆಲೆಯುಳ್ಳವು. ಪುರೋಹಿತಶಾಹಿ ಹಾಗೂ ಅಧಿಕಾರಶಾಹಿ ವ್ಯವಸ್ಥೆ ಈ

ಸಮುದಾಯಗಳನ್ನು ಶೋಷಿಸುವ ಬಗೆ ಇಲ್ಲಿ ನಿರೂಪಿತವಾಗಿವೆ. ಜೈವಿಕ ಮಾದರಿಯ ಬಂಡಾಯವನ್ನು ಸಂಘಟಿತ ಶೋಷಿತರು ಕೈಗೊಳ್ಳಬೇಕಾದ ಅನಿವಾರ್ಯತೆಯನ್ನು 80ರಿಂದೀಚಿನ ಕಾದಂಬರಿಗಳು ಮನಗಾಣಿಸುತ್ತವೆ. ಜೀವಪ್ರೇಮಕ್ಕೆ ಇಂಬಾಗಬಲ್ಲ ವರ್ಣಸಂಕರದ ಪುರಾತನ ಘಟನೆಗೆ ಮರಣ ಮಂಡಲ ಮಧ್ಯದೊಳಗೆ ಕೃತಿಯ ನಾಯಕ ಬಸರಾಜುವಿನ ಕನಸಿನ ಕಣ್ಣು ಸಾಕ್ಷಿಯಾಗುತ್ತದೆ. ಈ ಕಣ್ಣು ಹೋರಾಟದ ತಾತ್ವಿಕತೆಗೆ ಜೀವಂತಿಕೆ ತರಬಲ್ಲುದೆಂಬ ಆಶಾವಾದ ಕೃತಿಯಲ್ಲಿದೆ.

ಇರುವಿಕೆ ಮತ್ತು ಆಗುವಿಕೆಗಳ ನಡುವಿನ ಗತಿ ತಾರ್ಕಿಕತೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಮೂರು ತಲೆಮಾರಿನ ಪುರುಷ ಪಾತ್ರಗಳ ಕಥೆ ಅನಂತ ಮೂರ್ತಿಯವರ 'ಭವ' ಕಾದಂಬರಿಯದು. ಆಗುವಿಕೆಯ ಹಂಬಲದಲ್ಲಿ ಮಾನವ ಸಂಬಂಧಗಳನ್ನು ಪುರುಷ ಪಾತ್ರಗಳು ಬೇಜವಾಬ್ದಾರಿಯಿಂದ ವ್ಯಾವಹಾರಿಕವಾಗಿ ಕಾಣುತ್ತವೆ. ಅದೇ, ನಿತ್ಯದೈನಿಕದ ಮಾನವಸಂಬಂಧಗಳನ್ನು ಜೀವಪ್ರೇಮದಿಂದ ಭವದ ಸ್ತ್ರೀಪಾತ್ರಗಳು ಕಾಣುತ್ತವೆ.

ಇವರ ದಿವ್ಯ ಕಾದಂಬರಿಯು ಸ್ತ್ರೀಸಾಮರ್ಥ್ಯದ ಬಗೆಗಿನ ತುಂಬು ವಿಸ್ಮಯದ ಕಥನವಾಗಿದೆ. ನೆಹರೂ ಪ್ರಣೀತ ಆಧುನಿಕ ಅಭಿವೃದ್ಧಿ ಸಿದ್ಧಾಂತದ ಪ್ರಾತಿನಿಧಿಕ ಪಾತ್ರ– ಘನಶ್ಯಾಮ. ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಗಾಢವಾಗಿ ತೊಡಗಿಸಿಕೊಳ್ಳುತ್ತಲೇ ಪ್ರಕೃತಿಯೊಂದಿಗಿನ ತಾದಾತ್ಮ್ಯವನ್ನೂ ಬೆಳೆಸಿಕೊಂಡಾಕೆ ಗೌರಿ. ಈ ಎರಡು ಮೂಲಗಳಿಂದ ಒದಗಿಬರುವ ಜೀವನಾನುಭವಗಳನ್ನು ಬೌದ್ಧಿಕ ಜ್ಞಾನವಾಗಿಸಿ ಕೊಳ್ಳದೆ ಸಹಜಜ್ಞಾನಿಯಾಗುತ್ತ ಸಾಗಿದವಳಿಕೆ. ಒಳ ಹೊರಗುಗಳ ದ್ವಂದ್ವವುಳ್ಳ ಪುರುಷನಿಗೆ ಗೌರಿಯಂಥ ರಹಸ್ಯ ಚೇತನದ ಸಂಗಮ ಅತ್ಯಗತ್ಯ. ಚಿರವಾಸ್ತವದ ಪ್ರತೀಕವಾದ ಗೌರಿ ಪ್ರತಿನಿಧಿಸುವ ಜೀವನತತ್ವ ಚರವಾಸ್ತವದ ಮಿತ ತಿಳುವಳಿಕೆಯ ಸಾಲಿಗೆ ದಿವ್ಯವೇ ಆಗುತ್ತದೆ. ಕೃಷ್ಣಮೂರ್ತಿ ಹನೂರರು ನಿಕ್ಷೇಪದಲ್ಲಿ (1998) ನಾಗರಿಕ ವ್ಯಾವಹಾರಿಕತೆ ಹಾಗೂ ಪ್ರಾಕೃತಿಕ ಜೀವನ ಸೌಂದರ್ಯ, ಮುಗ್ಧತೆಗಳನ್ನು ಮುಖಾಮುಖಿಯಾಗಿಸುತ್ತಾರೆ. ಉಪಭೋಗ ಸಂಸ್ಕೃತಿಯ ಕ್ರೌರ್ಯದಡಿಯಲ್ಲಿ ಆದಿವಾಸಿ ಹೆಣ್ಣುಗಂಡುಗಳ ಸುಂದರ ಬದುಕು ನಿರ್ನಾಮ ವಾಗುವುದನ್ನು ಕಾದಂಬರಿ ನಿರೂಪಿಸುತ್ತದೆ.

ಚದುರಂಗರ ಹೆಜ್ಜಾಲ (1998) ಪ್ರಕೃತಿಯ ಜೀವ ಸಂಗೋಪನೆಯನ್ನು ಕೇಂದ್ರವಾಗಿಟ್ಟುಕೊಂಡ, ಕಾಲೂರನೆಂಬ ದಲಿತನ ಕಥಾನಕ. ಶ್ರೇಣೀಕೃತ ಸಮಾಜದ ಕ್ರೌರ್ಯ, ಶೋಷಣೆಗಳನ್ನು ಬಯಲಿಗೆಳೆಯುತ್ತಲೇ ಬಿಡುಗಡೆಯ ಸಾಧ್ಯತೆಗಳನ್ನು ನಮ್ಮ ಮುಂದಿಡುವ ಕೃತಿ. ವೀರಪ್ಪಮೊಯ್ಲಿಯವರ ತೆಂಬರೆ (1999) ಕಾದಂಬರಿ ಭೂತಾರಾಧನೆ ಸಂದರ್ಭದಲ್ಲಿ ಪಂಜುರ್ಲಿ ಭೂತವನ್ನು ಕಟ್ಟುವ ಪಂಬದ ಜನಾಂಗದ ಬದುಕನ್ನು ಹಿನ್ನೆಲೆಯಾಗಿಟ್ಟುಕೊಂಡಿದೆ. ತೆಂಬರೆ ವಾದ್ಯ ಸಾಮಾಜಿಕ ಕ್ರಾಂತಿಗೆ ಅತ್ಯಗತ್ಯವಾದ ಶೋಷಿತರ ಅಂತರಾಳದ ಜೀವಚೈತನ್ಯದ ಬೃಹತ್ ಪ್ರತೀಕವಾಗಿ ಬೆಳೆದು ನಿಲ್ಲುತ್ತದೆ.

90ರ ದಶಕದಲ್ಲಿ ಬಂದ ಕಾದಂಬರಿಗಳು ಶೋಷಿತ ಸಮುದಾಯಗಳ ಆತ್ಮಕಥನಗಳಂತೆ ನಿರೂಪಿತವಾಗಿವೆ. ಶೋಷಣೆಯ ಸುಳಿಯಲ್ಲೇ ಉಳಿಯುವ ಬಹುಸಂಖ್ಯಾತರ ನಡುವಿನಿಂದ ಬಂದ ಶಿಕ್ಷಿತ ಪಾತ್ರವಾಗಿ ಈ ಕಾದಂಬರಿಗಳ ಕರ್ತೃಗಳೂ ಸೇರಿಹೋಗಿದ್ದಾರೆ. ಸಮುದಾಯದಿಂದ ಪ್ರತ್ಯೇಕವಾಗಿ ತನ್ನನ್ನು ಪ್ರಜ್ಞೆಯ ನೆಲೆಯಲ್ಲಿ ಗುರುತಿಸಲೆತ್ನಿಸಿಕೊಳ್ಳುವ ನವ್ಯ ಕಾದಂಬರಿಗಳಿಗಿಂತ ಭಿನ್ನಹಾದಿಯನ್ನು ಈ ದಶಕದ ಅನಂತರದ ಕೃತಿಗಳು ಹಿಡಿಯಲಾರಂಭಿಸಿದವು. ವ್ಯಕ್ತಿಪ್ರಜ್ಞೆಯನ್ನು ಸಮುದಾಯದೊಂದಿಗಿನ ತಮ್ಮ ಸಂಬಂಧವನ್ನು ಮತ್ತೂ ಗಾಢ ಹಾಗೂ ಆಳಗೊಳಿಸಿಕೊಳ್ಳಲು ಈ ಕಾದಂಬರಿಕಾರರು ಬಳಸಿಕೊಳ್ಳುತ್ತಾರೆ. ಹೀಗಾಗಿ ಏಕತಾನತೆ, ಘೋಷಣೆಗಳಿಲ್ಲದ, ಬಹುಮುಖಿ ಆಯಾಮಗಳುಳ್ಳ ಸಮುದಾಯ ಕಥನಗಳು ಸೃಷ್ಟಿಗೊಳ್ಳತೊಡಗಿದವು.

ತೆಂಬರೆ ಕಾದಂಬರಿಯ ತೋಮುವಿನಂತೆಯೇ ನೇರ ಹೋರಾಟಕ್ಕಿಳಿದ ದಲಿತ ಕೃಷಿಕಾರ್ಮಿಕಪಾತ್ರ ಲಕ್ಷ್ಮಣರ 'ಬದುಕು' ಕಾದಂಬರಿಯ ಮಾಳಕ್ಕಜ್ಜಿ. ಅಸಹಾಯಕತೆಯ ಚಿಪ್ಪೊಡೆದು, ಅನ್ಯಾಯದ ಬಗೆಗಿನ ಅರಿವನ್ನು ಹೊಂದುವ ಮಾಳಕ್ಕಜ್ಜಿ ದಲಿತ ಹೋರಾಟದ ಆತ್ಮವಿಶ್ವಾಸದ ಸಂಕೇತವಾಗುತ್ತಾಳೆ. ಬುಡಕಟ್ಟಿನ ಜೀವನಕ್ರಮದಲ್ಲಿ ಉಂಟಾಗುವ ಪಲ್ಲಟಗಳನ್ನೂ ಅದರ ತಲ್ಲಣಗಳನ್ನೂ ಸಮರ್ಥವಾಗಿ ಜಂಬಣ್ಣ ಅಮರಚಿಂತರ ಕುರುವಯ್ಯ ಮತ್ತು ಅಂಕುಶದೊಡ್ಡಿ (1993) ಹಿಡಿದಿಟ್ಟಿದೆ.

ಶೋಷಕ ಶೋಷಿತ ಸಂಬಂಧವನ್ನು ದ್ವೈತದ ನೆಲೆಯಲ್ಲಿ ಪರಿಭಾವಿಸದೆ, ವ್ಯಕ್ತಿಗತ ನೆಲೆಯಲ್ಲಿ ಏಕತ್ರಗೊಳಿಸಿ ಕಾಣಿಸುವ ಯತ್ನ ಶಿವರುದ್ರ ಕಲ್ಲೋಳಿಕರರ ಹೊಲಗೇರಿಯ ರಾಜಕುಮಾರ (1994) ಕಾದಂಬರಿಯದು. ದಲಿತರು ಹಾಗೂ ಅಂಬೇಡ್ಕರ್ ಚಿಂತನೆಗಳ ನಡುವಿನ ಚಾರಿತ್ರಿಕ ಸಂಬಂಧವನ್ನು ಈ ಕೃತಿ ಸೂಕ್ಷ್ಮವಾಗಿ ವಿವೇಚಿಸುತ್ತದೆ. ಇಳಿತ, ಭರತ, ಪ್ರವಾಹ, ಸುಳಿ – ಎಂಬ ನಾಲ್ಕು ಭಾಗಗಳ ಯೋಜನೆಯುಳ್ಳ ಕೃತಿ – ಸಾರಾ ಅಬೂಬಕರ್‌ರವರ ಸುಳಿಯಲ್ಲಿ ಸಿಕ್ಕವರು (1994). ಬಡತನದಂತೆಯೇ ಶ್ರೀಮಂತಿಕೆಯೂ ಸುಳಿಯಾಗಬಲ್ಲದೆಂಬುದನ್ನು ಮುಮ್ತಾಜ್ ಪಾತ್ರದ ಮೂಲಕ ಇಲ್ಲಿ ತೋರಿಸಿಕೊಡಲಾಗಿದೆ. ಈ ಸುಳಿಯಲ್ಲಿ ವಿಶೇಷವಾಗಿ ಸೇರ್ಪಡೆಯಾಗುವ ಕುಟುಂಬದ ಹೆಣ್ಣುಗಳ ನೋವು ಸಂಕಷ್ಟಗಳ ಸರಣಿಯ ನಿರೂಪಣೆಯಿದೆ. ಎಚ್.ಎಸ್.ಚಂಪಾವತಿಯವರ ಶಿವಗಂಗಾ (1997) ಎಂಬ ಕಾದಂಬರಿ ಮಹಿಳಾ ಹೋರಾಟದ ಅನುಭವಗಳು ವ್ಯಕ್ತಿಯ ಅಂತಃಕರಣದ ವಿಕಾಸಕ್ಕೆಡೆ ಮಾಡಿಕೊಡುವ ಸಾಧ್ಯತೆಗಳನ್ನು ಗಂಗಾ ಪಾತ್ರದ ಮೂಲಕ ವಿವೇಚಿಸುತ್ತದೆ. ತಮ್ಮ ಅಸ್ತಿತ್ವದ ಶೋಧಕ್ಕೆ ಹೆಣ್ಣನ್ನು ಜೈವಿಕವಸ್ತುವಾಗಿ ಪರಿಭಾವಿಸುವ ನವ್ಯಕಾದಂಬರಿಗಳ ನಾಯಕ ಪಾತ್ರಗಳನ್ನು ಶಿವಗಂಗಾ ಲಿಂಗವ್ಯವಸ್ಥೆಯ ನೆಲೆಯಲ್ಲಿ ವಿಮರ್ಶಿಸುತ್ತದೆ.

ಲಿಂಗವ್ಯವಸ್ಥೆಯೊಳಗಿನ ಹೆಣ್ಣಿನ ವಿವಿಧ ಮನಃಸ್ತರಗಳ ಸಂಕೀರ್ಣಲೋಕವನ್ನು ತಾರಾಭಟ್‌ರವರ ಅವ್ಯಕ್ತ ಪರಿಚಯಿಸುತ್ತದೆ. ಭಾವನೆ ಹಾಗೂ ವ್ಯಾವಹಾರಿಕ ಜಗತ್ತುಗಳ ನಡುವಿನ ದ್ವಂದ್ವವನ್ನು, ಸ್ತ್ರೀಯ ಪ್ರಜ್ಞಾವಿಕಾಸದ ಸಾಧ್ಯತೆಗಳು ಹೊಸಕಿಹೋಗುವ ಬಗೆಯನ್ನು ಈ ಕಾದಂಬರಿ ಕಾಣಿಸುತ್ತದೆ. ಲಿಂಗದರ್ಪವಿರದ ಅಮೆರಿಕನ್ ಜೋಫ್ರೆ ಕ್ಲಾರ್ಕನ ಕಣ್ಣಿನಿಂದ ದೊರಕುವ ನೋಟವನ್ನು ವಿಮರ್ಶಾತ್ಮಕವಾಗಿ ಲೇಖಕಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಕೊಳೆಗೇರಿ ಬಾಲಕ ಕ್ಯಾತನ ಜೀವನಾನುಭವಗಳ ಹಿನ್ನೆಲೆಯಲ್ಲಿ ಪಿ.ಲಂಕೇಶರ 'ಅಕ್ಕ' (1991) ರಚಿತವಾಗಿದೆ. ಅಕ್ಕನೊಂದಿಗಿನ ಭಾವಸಂಬಂಧ ಗಳು ಮಾನಸಿಕ ಪೋಷಣೆಯ ನೆಲೆಯನ್ನೂ ದಾಟಿ ಸಾಮಾಜಿಕ ವಾಸ್ತವದ ಕ್ರೌರ್ಯವನ್ನು ಒಳಗೊಳ್ಳುವುದನ್ನು ಕಾದಂಬರಿ ದರ್ಶಿಸುತ್ತದೆ. ಬಾಲಕನೊಬ್ಬನ ಪ್ರಜ್ಞೆಯ ಬೆಳವಣಿಗೆಯ ಗತಿಯೊಂದಿಗೇ ಆತನ ನಿರೂಪಣೆಯ ಮೂಲಕ ಸಾಮಾಜಿಕ ವಾಸ್ತವವನ್ನು ಈ ಕೃತಿ ಅಧಿಕೃತವಾಗಿ ಹಿಡಿದಿಡುತ್ತದೆ. ಸಾಕ್ಷಿ ಪ್ರಜ್ಞೆಯ ಮೂಲಕ ಗತ ಅನುಭವಗಳನ್ನು ವರ್ತಮಾನದ ಅರಿವಿನೊಂದಿಗೆ ಮುಖಾಮುಖಿಯಾಗಿಸುವ ಯತ್ನವನ್ನು ಶಾಂತಿನಾಥ ದೇಸಾಯಿಯವರು ತಮ್ಮ ಅಂತರಾಳ (1993) ಕಾದಂಬರಿಯಲ್ಲಿ ಮಾಡಿದ್ದಾರೆ. ಓಂಣಮೋ (1998) ಕಾದಂಬರಿಯಲ್ಲಿ ವ್ಯಕ್ತಿಸ್ವಾತಂತ್ರ್ಯದ ತಾತ್ವಿಕತೆಯನ್ನು ಜೈನದರ್ಶನ ಹಾಗೂ ಆಚರಣೆಗಳಲ್ಲಿ ಶೋಧಿಸುವ ಪ್ರಯತ್ನವನ್ನು ಶಾಂತನಾಥ ದೇಸಾಯಿ ಮಾಡಿದ್ದಾರೆ. ವ್ಯಕ್ತಿನಿಷ್ಠ ನೆಲೆಯಲ್ಲಿಯೇ ಧರ್ಮದ ಸಾಮಾಜಿಕ ಆಯಾಮ ಸದಾ ಚಿಕಿತ್ಸೆಗೊಳಗಾಬೇಕಾದುದು ಅನಿವಾರ್ಯವೆಂಬ ಮಹತ್ವದ ನಿರ್ಧಾರ ಈ ಕೃತಿಯದು. ಕುಂ.ವೀರಭದ್ರಪ್ಪ ನವರ ಶಾಮಣ್ಣ (1998), ಸಾಂಪ್ರದಾಯಿಕ ವೈದಿಕ ಕುಟುಂಬದ ಮೂರು ತಲೆಮಾರುಗಳ ಏಳುಬೀಳುಗಳನ್ನು ಕಥಿಸುತ್ತಲೇ ಪಾಶ್ಚಾತ್ಯ ಹಾಗೂ ಪಾರ್ವಾತ್ಯ ಜೀವನ ಶೈಲಿಗಳ ಮುಖಾಮುಖಿಯಲ್ಲಿ ಪ್ರಕಟಗೊಳ್ಳಬಹುದಾದ ಅಸಂಗತತೆಯನ್ನು ವೈನೋದಿಕ ಶೈಲಿಯಲ್ಲಿ ಈ ಕಾದಂಬರಿ ಹಿಡಿದಿಡುತ್ತದೆ. ದಕ್ಷಿಣ ಕನ್ನಡದ ಗ್ರಾಮೀಣ ವರ್ಗದ ಬಡ ಮುಸ್ಲಿಂರ ಬದುಕನ್ನು ನಿಯಂತ್ರಿಸುವ ಧಾರ್ಮಿಕ ಮೂಲಭೂತವಾದವನ್ನು ರಫೀಕ್ ಉಪ್ಪಿನಂಗಡಿ ಯವರ ಅಜ್ಜಿಮಾದ (1998) ಪರಿಚಯಿಸುತ್ತದೆ. ಜೊತೆಗೆ ಮೂಲಭೂತವಾದವನ್ನು ಸ್ವಂತ ಸಂಕಲ್ಪಬಲದ ಮೂಲಕ ಪ್ರತಿಭಟಿಸುವ ಅಜ್ಜಿಮಾದಳ ಜೀವಪರತೆಯನ್ನು ಕೃತಿ ದಾಖಲಿಸುತ್ತದೆ.

ತುಳುನಾಡಿನ ಸಾಂಸ್ಕೃತಿಕ ಕಥನದ ಒಡಲಿನಿಂದಲೇ ಸಾಮಾಜಿಕ ಸಂಚಲನಗಳನ್ನು ದಲಿತ ಹಾಗೂ ಸ್ತ್ರೀಕೇಂದ್ರದಿಂದ ದಾಖಲಿಸುವ ಕೃತಿ ಎಚ್.ಎಸ್.ನಾಗವೇಣಿಯವರ 'ಗಾಂಧಿ ಬಂದ' (1999). ಜನರ ಬದುಕಿನ ಸೂಕ್ಷ್ಮ ವಿವರಗಳೊಂದಿಗೆ ಗಾಂಧೀ ತತ್ವ ಹಾಸುಹೊಕ್ಕಾಗಿ ಪ್ರಾಯೋಗಿಕ ರೂಪದಲ್ಲಿ ಪ್ರಕಟವಾಗುವ ಪರಿ ಇಲ್ಲಿದೆ. ಗುಲ್ಬರ್ಗ ಜಿಲ್ಲೆಯ ಗಡಸು ಗ್ರಾಮೀಣ ಭಾಷೆಯಲ್ಲಿ ಹಳ್ಳಿಯ ದಲಿತ ಹೆಣ್ಣುಮಕ್ಕಳ ಮೇಲಾಗುವ ಧಾರ್ಮಿಕ, ಆರ್ಥಿಕ, ಸಾಮಾಜಿಕ ಶೋಷಣೆಯನ್ನು ಗೀತಾ ನಾಗಭೂಷಣರ ಬದುಕು (2001) ಕಾದಂಬರಿ ವಿವರಿಸುತ್ತದೆ. ಊಳಿಗಮಾನ್ಯ ಹಾಗೂ ಬಂಡವಾಳಶಾಹೀ ವ್ಯವಸ್ಥೆಯಡಿ ನಲುಗಿ ಹೋಗುವ ಕುಟುಂಬದ ದುರಂತವನ್ನು ಈ ಕಾದಂಬರಿ ವಿಸ್ತೃತವಾಗಿ ಹಿಡಿದಿಟ್ಟಿದೆ. ಉಮಾರಾವ್‌ರವರ ನೂರುಸ್ವರ (1999) ಆಧುನಿಕ ಸಂವೇದನೆಯುಳ್ಳ ಮಹಿಳೆಯೊಬ್ಬಳ ತಲ್ಲಣಗಳನ್ನು ಸೂಕ್ಷ್ಮವಾಗಿ ಚಿತ್ರಿಸುವ ಕಾದಂಬರಿ. ಲತಾರಾಜಶೇಖರರ ಈ ಸ್ನೇಹ ಈ ಜೀವನ (1999) ಸಾಂಪ್ರದಾಯಿಕ ಕೌಟುಂಬಿಕ ಸಂಬಂಧಗಳನ್ನು ಶೋಧಿಸಲೆತ್ನಿಸುತ್ತದೆ. ಎಚ್.ಎಸ್.ಶ್ರೀಮತಿಯವರ ಉದ್ಗಮ (2000) ಎಂಬ ಕಾದಂಬರಿ ತನ್ನೊಳಗಿನ ರಹಸ್ಯಗಳಿಗೆ ಬಾಯಿಕೊಡಲೆತ್ನಿಸುವ ಮಹಿಳೆಯೊಬ್ಬಳ ಸ್ವಗತ ಕತೆ ಎನ್ನಬಹುದು. ಪುರುಷನಿಗಿಂತಲೂ ಹೆಚ್ಚು ಆತಂಕ ಒತ್ತಡಗಳನ್ನು ಪ್ರೇಮವಿವಾಹವಾಗುವ ಮಹಿಳೆ ಹೊರಬೇಕಾದ ಸ್ಥಿತಿಯನ್ನು ಈ ಕೃತಿ ಚಿತ್ರಿಸುತ್ತದೆ. ಗ್ರಾಮ ರಾಜಕಾರಣದೆದುರು ಕೃಷಿಯ ಬಗೆಗಿನ ರಮ್ಯಕಲ್ಪನೆಗಳು ಧೂಳೀಪಟವಾಗುವುದನ್ನು ಎಂ.ಎಸ್.ವೇದಾರ ಜಮೀನು (2000) ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಪಟ್ಟಣವಾಸಿ ನೌಕರನಾಗಿಯೂ ಭೂಮಿಯೊಂದಿಗಿನ ಸಂಬಂಧವನ್ನು ಜೀವಂತವಾಗಿಟ್ಟು ಕೊಳ್ಳಲೆತ್ನಿಸಿ ಸೋಲುವ ಶಿವಪ್ಪ ಹಾಗೂ ಆತನ ಪತ್ನಿ ದೇವಮ್ಮರ ಪ್ರಯತ್ನದ ಸೂಕ್ಷ್ಮ ಚಿತ್ರ ಇಲ್ಲಿದೆ. ಗ್ರಾಮೀಣ ಸಂವೇದನೆಗಳೊಳಗಿನಿಂದಲೇ ತನ್ನ ಸುತ್ತಲಿನ ಸಾಮಾಜಿಕ ವ್ಯವಸ್ಥೆಯನ್ನು ಅದರೆಲ್ಲ

ಕ್ರೌರ್ಯದೊಂದಿಗೆ ಕಾಣಿಸುವ ಕೃತಿಯಿದು. ಸರಸ್ವತಿಯವರ ಈಗೇನ್ ಮಾಡೀರಿ? (2001) ಎಂಬ ಕೃತಿಯಲ್ಲಿ ಬಂಡವಾಳಶಾಹಿ ಕ್ರೌರ್ಯಕ್ಕೆ ಸವಾಲೆಂಬಂತೆ ತಾಯಿಯ ನೆನಪುಗಳುಳ್ಳ ರಮ್ಯಭಾವಕೇಂದ್ರವನ್ನು ಜೀವಂತವಾಗಿಡಲು ಇಲ್ಲಿಯ ನಾಯಕಿ ಯತ್ನಿಸುತ್ತಾಳೆ.

ಕಲಾವಿದ ಚೇತನದ ಒಳತುಮುಲಗಳ ನಿರೂಪಣೆಯ ಮೂಲಕವೇ ಮಾನವ ಬದುಕಿನ ಸಾರ್ಥಕತೆಯ ಮಹತ್ವದ ಪ್ರಶ್ನೆಗಳನ್ನೆತ್ತುವ ಕೃತಿ ಎಸ್.ಎಲ್.ಭೈರಪ್ಪನವರ 'ಮಂದ್ರ'. ಕಲಾಜೀವನದಲ್ಲಾಗಲೀ ಬದುಕಿನಲ್ಲಾಗಲೀ ಮಾನವ ಸಂಬಂಧಗಳು ಹೊಂದಬಹುದಾದ ವ್ಯಾವಹಾರಿಕ ಹಾಗೂ ಆಧ್ಯಾತ್ಮಿಕ ನೆಲೆಯ ಸ್ವರೂಪವನ್ನು ಕುರಿತಂತೆ ಈ ಕೃತಿ ಚರ್ಚಿಸುತ್ತದೆ. ಸೋಸಲೆ ಗಂಗಾಧರ ಅವರ ಯಾಮಿನಿ (2001) ಶ್ರಮಜೀವನದಲ್ಲಿಯೇ ತಮ್ಮ ಸ್ವಾಭಿಮಾನದ ನೆಲೆಗಳನ್ನು ಅರ್ಥಪೂರ್ಣವಾಗಿ ದಕ್ಕಿಸಿಕೊಳ್ಳಲೆತ್ನಿಸುವ ದಲಿತ ಲೋಕದ ಕಥನವಾಗಿದೆ. ಕುಂ.ವೀರಭದ್ರಪ್ಪನವರ ಯಾಪಿಲ್ಲು (2001) ಆಧುನೀಕರಣ ಪ್ರಕ್ರಿಯೆಗೆ ಒಳಗಾಗುತ್ತಲೇ ದುರಂತದೆಡೆ ಹೆಜ್ಜೆ ಇಡುತ್ತಿರುವ ದಲಿತರ ಸ್ಥಿತಿಯನ್ನು ಅಸಹಾಯಕ ಚಲನೆಯ ಬಾಲಿಕೆಯ ರೂಪಕದಲ್ಲಿ ಹಿಡಿದಿಡುತ್ತದೆ. ಶಿಕ್ಷಣ ಹಾಗೂ ಆ ಮೂಲಕ ದಕ್ಕಬಹುದಾದ ಜೀವನಾವಶ್ಯಕಗಳು ಶೋಷಿತರ ಪಾಲಿಗೆ ಕಡೆಗೂ ಮರೀಚಿಕೆಯಾಗುವ ದುರಂತವನ್ನು ಕಾದಂಬರಿ ಹಿಡಿದಿಡಲು ಪ್ರಯತ್ನಿಸುತ್ತದೆ. ಜಾಗತೀಕರಣದ ನೆಲೆಯಲ್ಲಿನ ಭಾರತದಂತಹ ತೃತೀಯ ಜಗತ್ತಿನ ರಾಷ್ಟ್ರಗಳ ತಲ್ಲಣಗಳಿಗೂ ಈ ಕಾದಂಬರಿ ಪ್ರತೀಕವಾಗುತ್ತದೆ.

ಬಿಳುಮನೆ ರಾಮದಾಸ್ ಅವರ ನಂಬಿಕೆಟ್ಟವರಿಲ್ಲವೊ, ಎಸ್.ವಿ.ಪ್ರಭಾವತಿ ಅವರ ಶಕುಂತಲಾ, ಅಗ್ರಹಾರಕೃಷ್ಣಮೂರ್ತಿಯವರ ನೀರು ಮತ್ತು ಪ್ರೀತಿ, ದೇವುಹನೇಹಳ್ಳಿಯವರ ಶಿಲೆಯೊಳಡಗಿದ ಕಪ್ಪೆ, ಮಲ್ಲಿಕಾರ್ಜುನ ಹಿರೇ ಮಠರ ಹವನ, ವಿವೇಕ್ ಶಾನುಭಾಗರ ಇನ್ನೂ ಒಂದು ಇವು 2001ರಲ್ಲಿ ಬಂದಿರುವ ಕೆಲವು ಕಾದಂಬರಿಗಳು. ಪ್ರೀತಿಯ ಕಣ್ಣು (ಶಾಂತಾರಾಮ ಸೋಮಯಾಜಿ); ಅರ್ಥ (ನಾ.ಮೊಗಸಾಲೆ); ಚಿತ್ರಮಾಲ (ಆರ್.ವಿಜಯರಾಘವನ್); ಮಳೆನಂತ ಮೇಲಿನ ಮರ (ಶಿವಾನಂದ ಬೇಕಲ್); ಗೌರಿ (ಜಾನಕಿ ಸುಂದರೇಶ್); ಕಲ್ಲಖಣಿಯಾಗು ಕರಿಕೆಬೇರಾಗು (ದಮಯಂತಿ ನರೇಗಲ್ಲ) – ಇವು 2002ರಲ್ಲಿ ಬಂದ ಕೆಲವು ಕಾದಂಬರಿಗಳು.

ಮನಜರ ಸೂರಪ್ಪ (2004) ಕಾದಂಬರಿ ಗತದ ಯಶೋಗಾಥೆ ಹಾಗೂ ದುರಂತದ ನೆನಪುಗಳೆರಡರ ಮೂಲಕ ದಲಿತತ್ವದ ಆತ್ಮತೇಜವನ್ನು ಸಶಕ್ತವಾಗಿ ಸೃಷ್ಟಿಸಿಕೊಳ್ಳುವ ಕಥನವಾಗಿದೆ. ಸಿಪಾಯಿ ಸೂರಪ್ಪನ ಧೈರ್ಯ ಸಾಹಸಗಳ ಕಥನದೊಂದಿಗೆ ಟಿಪ್ಪುಸುಲ್ತಾನನ ಬಗೆಗಿನ ಚರಿತ್ರೆ ಹೊಸ ಆಯಾಮವನ್ನು ಪಡೆದುಕೊಳ್ಳುವುದು ಈ ಕಾದಂಬರಿಯ ವಿಶೇಷತೆ. ಅಂತೆಯೇ ಯಜಮಾನ್ ಸೂರಪ್ಪನ ಜೀವನ ಕೌಶಲ್ಯದ ಕಥನವು ಹಳೇ ಮೈಸೂರು ಇತಿಹಾಸವನ್ನು ಹೊಸ ಬೆಳಕಿನಲ್ಲಿ ಅರ್ಥೈಸುತ್ತದೆ. ಅಂಚಿಗೆ ಒತ್ತರಿಸಲ್ಪಟ್ಟ ಚೇತನಗಳನ್ನು ಪ್ರಧಾನನೆಲೆಗೆ ತರುವುದರ ಮೂಲಕ ಈ ಕೃತಿ ಇತಿಹಾಸದ ಪುನರ್ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ. ಗ್ರಾಮೀಣ ಕೃಷಿಕ ಜೈನ ಸಮಾಜದ ಚಿತ್ರಣವುಳ್ಳ ಕೃತಿ ಬಾಳಾ ಸಾಹೇಬ ಲೋಕಾಪೂರರ ಹುತ್ತ (2002), ಅಹಿಂಸೆ ಹಾಗೂ ಹಿಂಸೆಗಳ ನಡುವಿನ ವೈರುಧ್ಯದಲ್ಲಿ ಪ್ರಕಟಗೊಳ್ಳುವ ಗ್ರಾಮರಾಜಕಾರಣವನ್ನೂ ಮಾನವಸಂಬಂಧಗಳ ಸೂಕ್ಷ್ಮ ಕಂಪನಗಳನ್ನೂ ಇದು ದಾಖಲಿಸುತ್ತದೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಚಲನಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ಅನೇಕ ಮಹತ್ವದ ಕಾದಂಬರಿಗಳು ಹೊರಬಂದಿವೆ. ಪ್ರಯೋಗದ ನಾವೀನ್ಯತೆ ಹಾಗೂ ಪ್ರಬುದ್ಧತಾತ್ತ್ವಿಕತೆಯುಳ್ಳ ಕನ್ನಡ ಕಾದಂಬರಿಗಳು ಜಾಗತಿಕ ಕಥನ ಸಾಹಿತ್ಯಕ್ಕೆ ವಿಶಿಷ್ಟ ಆಯಾಮವನ್ನು ನೀಡುತ್ತ ಬಂದಿವೆ. (ಪಿ.ಎಸ್.ಎಚ್.)

**ಕನ್ನಡದಲ್ಲಿ ಕಾವ್ಯಮೀಮಾಂಸೆ :** ಕನ್ನಡದ ಮುನ್ನಡೆಗೆ ಸಹಾಯವಾಗುವಂತೆ ಸಂಸ್ಕೃತದ ಕಾವ್ಯತತ್ತ್ವಗಳನ್ನು ಕನ್ನಡದ ಮೂಲಕ ಪ್ರತಿಪಾದಿಸುವ ಮಹತ್ತ್ವದ ಆದಿಗ್ರಂಥವೆಂದರೆ ಕವಿರಾಜಮಾರ್ಗ. ಮಹಾಕವಿಗಳನ್ನು ಕವಿರಾಜರೆಂದು ಗ್ರಹಿಸಿ, ಅವರ ಕಾವ್ಯ ಸಂಪ್ರದಾಯವನ್ನೇ ಮಾರ್ಗವೆಂದು ದಂಡಿಯಂತೆ ಇಲ್ಲಿ ಹೆಸರಿಸಿದೆಯೆನಿಸುತ್ತದೆ. ಇದು ದಂಡಿಯ ಕಾವ್ಯಾದರ್ಶದಲ್ಲಿರುವ ಗುಣ, ಮಾರ್ಗ, ದೋಷ, ಅಲಂಕಾರ ಪ್ರಕ್ರಿಯೆಗಳನ್ನೆಲ್ಲ ಕನ್ನಡಕ್ಕೆ ಅನ್ವಯಿಸಿ ಹೇಳಲು ಮುಖ್ಯವಾಗಿ ಹೊರಟಿದ್ದರೂ ಪೀಠಿಕೆಯಾಗಿ ಕನ್ನಡದ ವೈಶಿಷ್ಟ್ಯಗಳನ್ನು ಕೂಡ ಪ್ರತಿಪಾದಿಸಿದೆ. ಬಾಣ, ಕಾಳಿದಾಸ ಮುಂತಾದ ಸಂಸ್ಕೃತ ಮಹಾಕವಿಗಳಂತೆ, ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತಾದಿ ಕನ್ನಡ ಗದ್ಯಕಾರರನ್ನೂ ಶ್ರೀವಿಜಯ ಕವೀಶ್ವರ ಪಂಡಿತ ಚಂದ್ರ ಲೋಕಪಾಲಾದಿ ಕನ್ನಡ ಪದ್ಯಕಾರರನ್ನೂ ಲೇಖಕ ಸ್ಮರಿಸಿದ್ದಾನೆ. ಚತ್ತಾಣ, ಬೆದಂಡೆಗಳೆಂಬ ಕನ್ನಡದ ವಿಶಿಷ್ಟ ಕಾವ್ಯಪ್ರಕಾರಗಳನ್ನೂ ಉಲ್ಲೇಖಿಸಿದ್ದಾನೆ. ಕಂದವೃತ್ತಗಳು ಕಡಿಮೆಯಾಗಿ ದೇಶೀಯ ಛಂದೋಜಾತಿಗಳು ಹೆಚ್ಚಾಗಿರುವ ಕಾವ್ಯವೇ ಬೆದಂಡೆ; ಕಂದವೃತ್ತಗಳು ಹೆಚ್ಚಾಗಿ ಚೌಪದಿ, ಗೀತಿಕೆ ತ್ರಿಪದಿಗಳು ಕಡಿಮೆಯಿರುವುದು ಚತ್ತಾಣವೆಂದು ತೋರುತ್ತದೆ.

ಕವಿರಾಜಮಾರ್ಗಕಾರ ಶಬ್ದ ಪ್ರಯೋಗದಲ್ಲಿ ಸಂಸ್ಕೃತ ಕನ್ನಡಗಳನ್ನು ಹೆಚ್ಚಾಗಿ ಬೆರೆಸುವುದು ತಪ್ಪೆಂದಿದ್ದಾನೆ. ಉಚ್ಚೈ: ಮುಹುರ್ಮುಹು: ಎಂಬ ಕರ್ಣ ಕರ್ಕಶ ಅವ್ಯಯಗಳ ಬದಲು ಬಹಿರುದ್ಯಾನ ಮುಂತಾಗಿ ಕಿವಿಗಿಂಪಾದ ಅವ್ಯಯ ಪೂರ್ವಪದಗಳನ್ನು ಬಳಸಬೇಕೆಂದಿದ್ದಾನೆ. ಅರಸುಕುಮಾರ ಮುಂತಾದ ಅರಿಸಮಾಸಗಳು ತ್ಯಾಜ್ಯವೆಂದಿದ್ದಾನೆ.

ಕನ್ನಡಿಗರ ಮೇಲ್ಮೆಯನ್ನೂ ಕನ್ನಡದ ವಿಶಿಷ್ಟ ದೋಷಗಳನ್ನೂ ನಿರೂಪಿಸಿದ ಮೇಲೆ ದಂಡಿ ಹೇಳುವ ಶ್ರುತಿದುಷ್ಟ ಯತಿಭಂಗ ಮುಂತಾದ ದೋಷಗಳ ಲಕ್ಷ್ಯ-ಲಕ್ಷಣಪೂರ್ವಕ ವಿವೇಚನೆ ಗ್ರಂಥಗಳಲ್ಲಿ ವಿಸ್ತಾರವಾಗಿ ಬಂದಿದೆ. ಇಲ್ಲಿಯೇ ಕಾರಕ, ವಚನ, ಗುರುಲಘು-ವಿಪರ್ಯಯ, ಸಮುಚ್ಚಯ, ವಿಕಲ್ಪ, ಅವಧಾರಣೆ, ವಿಶಂಕ ಮುಂತಾದ ವ್ಯಾಕರಣ ದೋಷಗಳ ಪ್ರತಿಪಾದನೆಯೂ ಸ್ಪಷ್ಟವಾಗಿ ಬರುತ್ತದೆ. ನುಡಿಗಳು ಬಗೆದುದನ್ನು ಬಗೆದಂತೆ ಒಡಮೂಡಿಸುತ್ತಿರಬೇಕು; ಕನ್ನಡ ನಾಣ್ನುಡಿಯ ಬೆಡಗು ಬೆಳಗುವಂತಿರಬೇಕು; ಕಿವಿಗೆ ಹಿತವಲ್ಲದ ವಿಕಟಾಕ್ಷರಗಳು ಬರಲಾಗದು; ಸಂಸ್ಕೃತ ಪದಾವಲಿ ಹವಣಾಗಿ ಬರಬೇಕು; ಮನೋಹರವಾದ ಹೂಗಳ ಮಾಲೆಯಂತೆ ಕವಿಯ ಶೈಲಿ ಕಂಗೊಳಿಸಬೇಕು-ಎಂದು ಮೊದಲ ಪರಿಚ್ಛೇದದ ಕಡೆಗೆ ತನ್ನ ಸಿದ್ಧಾಂತವನ್ನು ಸಂಗ್ರಹಿಸುತ್ತಾನೆ.

ಎರಡನೆಯ ಪರಿಚ್ಛೇದದಲ್ಲಿ ಶಬ್ದಾಲಂಕಾರಗಳ ವಿವೇಚನೆ ಬಂದಿದೆ. ಇಲ್ಲಿಯೂ ಕನ್ನಡದ ಶಬ್ದ ಸೌಂದರ್ಯದ ಬಗೆಗೆ ಕವಿಯ ಸ್ವತಂತ್ರ ವಿಚಾರಗಳಿವೆ. ಇಲ್ಲಿಗಿದು ತಕ್ಕುದು ಎಂಬ ವಿವೇಚನೆಯಿಂದ ಮೃದುಪದವಿಡಬೇಕು. ಅರ್ಥಾನುಗುಣ್ಯ ತಪ್ಪಿದರೆ ಮುತ್ತನ್ನೂ ಮೆಣಸನ್ನೂ ಕೋದಂತೆ, ಲಘುವಿನ ಮುಂದೆ ಸಂಯುಕ್ತಾಕ್ಷರ ಬಂದರೆ ಹಿತವಲ್ಲ; ಕೂಸಿನ ತಲೆಯ ಮೇಲೆ ಭಾರ ಹೇರಿದಂತಾಗುತ್ತದೆ; (ಉದಾಹರಣೆ : ಬರಿಸಿ ಕ್ಷಿತಿಪತಿಯಂ), ಅನೇಕ ವಿಶೇಷಣಗಳು ಸರಮಾಲೆಯಂತೆ ಬಂದರೆ ಸಲ್ಲದು, ಗಡ, ಮೇಣ್ ಮುಂತಾದ ಪಾದ ಪೂರಣಗಳು ಅತಿಯಾಗಬಾರದು, ಕನ್ನಡದಲ್ಲಿ ಬಗೆಬಗೆಯ ಪ್ರಾಸಗಳೇ ಮೋಹಕ ಮುಂತಾದ ವೈಶಿಷ್ಟ್ಯಗಳನ್ನೇ ಕವಿರಾಜಮಾರ್ಗಕಾರ ಮೊದಲು ಪ್ರತಿಪಾದಿಸಿದ್ದಾನೆ.

ಅನಂತರ ಮಾರ್ಗಗಳ ನಿರೂಪಣೆ ಬರುತ್ತದೆ. ವೈದರ್ಭಿಯನ್ನು ದಕ್ಷಿಣ ಮಾರ್ಗವೆಂದೂ ಗೌಡಿಯನ್ನು ಉತ್ತರಮಾರ್ಗವೆಂದೂ ಹೆಸರಿಸಲಾಗಿದೆ. ಸ್ವಭಾವೋಕ್ತಿ ಮೊದಲನೆಯದರ ವೈಶಿಷ್ಟ್ಯ, ವಕ್ರೋಕ್ತಿ ಎರಡನೆಯದರಲ್ಲಿ ಹೆಚ್ಚು, ಸಮ, ಮಧುರ ನಿಬಿಡ, ಕಾಂತ, ಸುಕುಮಾರ, ಸಮಾಹಿತ, ಪ್ರಸನ್ನ, ಉದಾರ, ಅಗ್ರಾಮ್ಯ, ಓಜಸ್ವಿ-ಈ ಹತ್ತು ಗುಣಗಳೂ ಮೊದಲನೆಯದರಲ್ಲಿ ಸಹಜಸುಂದರವಾಗಿ ಮಾರ್ಪೊಳೆಯುತ್ತವೆ. ; ಎರಡನೆಯದರಲ್ಲಿ ಇವುಗಳ ವಿಪರ್ಯಯ ಅಥವಾ ಅತಿಶಯ ಕಲ್ಪನೆಯೇ ಚಮತ್ಕಾರಕ. ದೆಸೆಗಳ್ ವಿಳಾಸಮಾದಂ, ಕೆಸರಿಂ ಪಿಂಗಿತ್ತು ಧರಣಿ, ತಿಳಿದವು ಕೊಳಗಳ್-ಎನ್ನುವುದು ದಕ್ಷಿಣಮಾರ್ಗಕ್ಕೆ ಉದಾಹರಣೆ. ಅದನ್ನೇ ಧವಳ ಜಳಧರ ಕುಳಾಕುಳಮವಿಕಳಮಂಬರತಳಂ ವಿನೀಳಚ್ಛಾಯಂ -ಎಂದರೆ ಉತ್ತರಮಾರ್ಗವಾಗುತ್ತದೆ. ಈ ಗುಣಗಳು ರಸವಿಶೇಷದಲ್ಲಿ ಅನ್ವಯಿಸುವುದು ಹೇಗೆಂಬುದನ್ನೂ ತೋರಿಸಿದ್ದಾನೆ; ಸ್ಫುಟೋಕ್ತಿಯಿಂದ ವೀರರಸ, ಮೃದೂಕ್ತಿಯಿಂದ ಕರುಣರಸ, ನಿಬಿಡೋಕ್ತಿಯಿಂದ ಅದ್ಭುತರಸ, ಸುಕುಮಾರೋಕ್ತಿಯಿಂದ ಶೃಂಗಾರ ರಸ- ಇತ್ಯಾದಿ, ಕಡೆಗೆ ದಂಡಿ ಹೇಳಿರುವ ಯಮಕ, ಚಿತ್ರಕಾವ್ಯ ಭೇದಗಳ ನಿರೂಪಣೆಯಿಂದ ಪರಿಚ್ಛೇದ ಮುಗಿಯುತ್ತದೆ.

ಮೂರನೆಯ ಪರಿಚ್ಛೇದದಲ್ಲಿ ಜಾತಿಯಿಂದ (ಸ್ವಭಾವೋಕ್ತಿ) ಹಿಡಿದು ಭಾವಿಕದವರೆಗೆ 35 ಅರ್ಥಾಲಂಕಾರಗಳನ್ನು ದಂಡಿ ಭಾಮಹರ ಮೇಲ್ಪಂಕ್ತಿಯನ್ನನುಸರಿಸಿ ಲಕ್ಷ್ಯ ಲಕ್ಷಣಪೂರ್ವಕವಾಗಿ ವಿವರಿಸಲಾಗಿದೆ. ಧ್ವನಿಯನ್ನು 36ನೆಯ ಅಲಂಕಾರವೆನ್ನಲಾಗಿದೆ.

ಕಡೆಗೆ ಗ್ರಂಥಾಂತ್ಯದಲ್ಲಿ ಕಾವ್ಯದ ಅಷ್ಟಾದಶ ವರ್ಣನೆಗಳ ವಿವರಗಳನ್ನು ಕೊಡಲಾಗಿದೆ.

ಹೀಗೆ ಕನ್ನಡ ಭಾಷೆಯ ಅಂತಸ್ಸತ್ತ್ವವನ್ನು ಮರೆಯದೆ, ಸಂಸ್ಕೃತದ ಆದರ್ಶಗಳ ಅಗತ್ಯವನ್ನು ತೃಣೀಕರಿಸದೆ, ಮುಂದಿನ ಕವಿಗಳಿಗೂ ಲಾಕ್ಷಣಿಕರಿಗೂ ಮಾರ್ಗದರ್ಶನ ಮಾಡಿದ ಮಹತ್ತ್ವ ಕವಿರಾಜಮಾರ್ಗಕ್ಕೆ ಸಲ್ಲುತ್ತದೆ. ಗ್ರಂಥದಲ್ಲಿ ಕಂದಪದ್ಯಗಳು ಹೆಚ್ಚು, ಅಲ್ಲಲ್ಲಿ ವೃತ್ತಗಳೂ ಇವೆ. ಎಲ್ಲಿಯೂ ಸಾಹಿತ್ಯಗುಣಕ್ಕೆ ಲೋಪವಿಲ್ಲ.

ಮೊದಲನೆಯ ನಾಗವರ್ಮನ ಛಂದೋಂಬುಧಿ (ಪ್ರ.ಶ. 10-11ನೆಯ ಶತಮಾನಗಳ ಮಧ್ಯ) ಮುಖ್ಯವಾಗಿ ಛಂದಶ್ಶಾಸ್ತ್ರ ಗ್ರಂಥ. ಅದರಲ್ಲಿ ಸಮವೃತ್ತಗಳು, ಮಾತ್ರಾಗಣ ವೃತ್ತಗಳು, ಕಂದಾದಿಗಳು, ಕರ್ನಾಟವಿಷಯಕ ಜಾತಿ, ಷಟ್ಪ್ರತ್ಯಯಗಳ ವಿವರಣೆ ವಿಸ್ತಾರವಾಗಿ ಬರುವಂತೆ ಕಾವ್ಯದೋಷಗಳ ಉಲ್ಲೇಖವೂ ಬರುತ್ತದೆ ; ಪ್ರಾಸಗಳ ನೂತನ ನಿರೂಪಣೆಯೂ ಇದೆ.

ಎರಡನೆಯ ನಾಗವರ್ಮನ ಕಾವ್ಯಾವಲೋಕನ (ಪ್ರ.ಶ. 12ನೆಯ ಶತಮಾನ) ನಿಜವಾಗಿಯೂ ಮುಂದಿನ ಮಹತ್ತ್ವದ ಗ್ರಂಥವೆನ್ನಬೇಕು. ವಾಮನ, ಉದ್ಭಟ, ರುದ್ರಟ, ರಾಜಶೇಖರರು ಸಂಸ್ಕೃತ ಅಲಂಕಾರಶಾಸ್ತ್ರದಲ್ಲಿ ಮತ್ತಷ್ಟು ಪರಿಷ್ಕರಿಸಿದ್ದ ನೂತನಾಂಶಗಳನ್ನೆಲ್ಲ ಕ್ರೋಡೀಕರಿಸಿಕೊಂಡು ಪಂಪನೇ ಮೊದಲಾದ ಪ್ರಸಿದ್ಧ ಕನ್ನಡ ಕವಿಗಳಿಂದಲೇ ತನ್ನ ಲಕ್ಷ್ಯಗಳನ್ನೆಲ್ಲ ಆಯ್ದುಕೊಂಡು, ಕನ್ನಡ ಕಾವ್ಯಮೀಮಾಂಸೆಯ ಸರ್ವೋತ್ತಮ ಗ್ರಂಥವೆನಿಸುವಂತೆ ತನ್ನ ಗ್ರಂಥವನ್ನು ನಾಗವರ್ಮ ರಚಿಸಿದ್ದಾನೆ. ಮಾರ್ಗದ್ವಯದ ಬದಲು

ರೀತಿತ್ರಯವನ್ನು ವಾಮನನಂತೆ ಹೇಳಿದ್ದಾನೆ. ಉದ್ಭಟ ಹೇಳುವ ಕಾವ್ಯವೃತ್ತಿಗಳನ್ನು ಪ್ರಸ್ತಾಪಿಸಿದ್ದಾನೆ. ರುದ್ರಟನಂತೆ ರಸಗಳನ್ನು ವಿವರಿಸಿದ್ದಾನೆ. ರಾಜಶೇಖರನ ರೀತಿಯಲ್ಲಿ ಕವಿಸಮಯಗಳನ್ನು ಮೊಟ್ಟಮೊದಲಿಗೆ ನಿರೂಪಿಸಿದ್ದಾನೆ. ಕಾವ್ಯರಹಸ್ಯದ ಬಗೆಗೂ ನಾಗವರ್ಮನಿಗೆ ರಸವೇ ಜೀವವೆಂಬ ಸ್ಪಷ್ಟ ಕಲ್ಪನೆಯಿದ್ದಿತು. ರುದ್ರಟ ಮಾತ್ರ ಹೇಳಿರುವ ಹತ್ತಾರು ಹೊಸ ಅಲಂಕಾರಗಳನ್ನು ಪ್ರತಿಪಾದಿಸಿದ್ದಾನೆ. ಹೀಗೆ ಕವಿರಾಜಮಾರ್ಗದಲ್ಲಿ ಆರಂಭವಾದ ಕನ್ನಡ ಕಾವ್ಯಮೀಮಾಂಸೆ ಕಾವ್ಯಾವಲೋಕದಲ್ಲಿ ಶಿಖರವನ್ನು ಮುಟ್ಟಿತೆನ್ನಬಹುದು.

ಅದಕ್ಕೂ ಮುಂದಿನ ಗ್ರಂಥಗಳೆಂದರೆ ಉದಯಾದಿತ್ಯನೃಪನ ಉದಯಾದಿತ್ಯಾಲಂಕಾರ (ಪ್ರ.ಶ. 12ನೆಯ ಶತಮಾನ), ಕವಿಕಾಮನ ಶೃಂಗಾರರತ್ನಾಕರ (ಪ್ರ.ಶ. ಸು. 1200), ಮಾಧವನ ಮಾದವಾಲಂಕಾರ (ಪ್ರ.ಶ. 1500), ಇವಲ್ಲಿ ದಂಡಿಯಿಂದ ಸಂಗ್ರಹೀತವಾದ ವಿಚಾರವೇ ಹೊರತು ಸಿದ್ಧಾಂತದ ಹೊಸ ವಿವೇಚನೆ ಕಾಣುವುದಿಲ್ಲ. ಬೇರೆ ಉದಾಹರಣೆಗಳಿರುವುದಷ್ಟೇ ವಿಶೇಷ.

ಸಾಳ್ವನ ರಸರತ್ನಾಕರ ಮತ್ತು ಶಾರದಾವಿಲಾಸಗಳಲ್ಲಿ (ಪ್ರ.ಶ. 1500) ಮಾತ್ರ ಮಮ್ಮಟಾದಿಗಳ ವಿಸ್ತೃತ ರಸವಿವೇಚನೆ ಕನ್ನಡದಲ್ಲಿ ಮೊದಲಿಗೆ ಬರುತ್ತದೆ ; ಧ್ವನಿಯ ವಿವೇಚನೆಗೂ ಎಡೆ ದೊರೆಯುತ್ತದೆ. ಮಿಕ್ಕ ಗ್ರಂಥಗಳು–ತಿಮ್ಮನ ಅಲಂಕಾರ ರಸಸಂಗ್ರಹ (ಪ್ರ.ಶ. 1600), ತಿರುಮಲಾರ್ಯನ ಅಪ್ರತಿಮ ವೀರಚರಿತ (ಪ್ರ.ಶ. 1650), ಚಾಮೇಂದ್ರನ ಕರ್ನಾಟಕ ಕುವಲಯಾನಂದ (ಪ್ರ.ಶ. 18ನೆಯ ಶತಮಾನ), ಅಳಿಯ ಲಿಂಗರಾಜನ ನರಪತಿಚರಿತ (ಪ್ರ.ಶ. 19ನೆಯ ಶತಮಾನ) ಇವೆಲ್ಲ ವಿದ್ಯಾನಾಥ, ಅಪ್ಪಯ್ಯ ದೀಕ್ಷಿತ ಮುಂತಾದ ಸಂಸ್ಕೃತ ಲಾಕ್ಷಣಿಕರ ಅನುಕರಣಗಳಾದ ಸಂಕಲನ ಗ್ರಂಥಗಳಷ್ಟೇ ಎನ್ನಬೇಕು.

ಇಪ್ಪತ್ತನೆಯ ಶತಮಾನದಲ್ಲಿ ಎ. ಆರ್. ಕೃಷ್ಣಶಾಸ್ತ್ರಿಗಳ ಕನ್ನಡ ಕೈಪಿಡಿಯ ಅಲಂಕಾರಶಾಸ್ತ್ರ ವಿಭಾಗ, ತೀ. ನಂ. ಶ್ರೀಕಂಠಯ್ಯನವರ ಭಾರತೀಯಕಾವ್ಯ ಮೀಮಾಂಸೆ, ಕೆ. ಕೃಷ್ಣಮೂರ್ತಿಗಳ ಕನ್ನಡ ಧ್ವನ್ಯಾಲೋಕ ಮುಂತಾದ ಗ್ರಂಥಗಳು, ಪ್ರಭುಶಂಕರ ಕನ್ನಡದಲ್ಲಿ ಭಾವಗೀತೆ, ಶಿವರುದ್ರಪ್ಪನವರ ಸೌಂದರ್ಯ ಸಮೀಕ್ಷೆ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ತೌಲನಿಕ ಕಾವ್ಯಮೀಮಾಂಸೆ ಈ ಮೊದಲಾದವು ಈ ಕ್ಷೇತ್ರದಲ್ಲಿ ಬಂದಿರುವ ಸಮರ್ಥ ಹಾಗೂ ಶಾಸ್ತ್ರೀಯ ನಿರೂಪಣೆಗಳಾಗಿವೆ (**ನೋಡಿ– ಕನ್ನಡದಲ್ಲಿ–ವಿಮರ್ಶನ–ಸಾಹಿತ್ಯ**). (ಕೆ.ಕೆ.)

**ಕನ್ನಡದಲ್ಲಿ ಗದ್ಯಸಾಹಿತ್ಯ :** ಸದ್ಯದಲ್ಲಿ ಕನ್ನಡ ಗದ್ಯ ಸಾಹಿತ್ಯದ ಇತಿಹಾಸವನ್ನು ಹಲ್ಮಿಡಿ ಶಾಸನದಿಂದ (ಸು.450) ಗುರುತಿಸಬಹುದು. ಸು.5ನೆಯ ಶತಮಾನದಿಂದ ಸು.18ನೆಯ ಶತಮಾನದವರೆಗೆ ಅಸಂಖ್ಯ ಗದ್ಯ ಶಾಸನಗಳು ದೊರೆಯುತ್ತವೆ. ಅವುಗಳಲ್ಲಿ ವೀರಗಲ್ಲು, ಮಾಸ್ತಿಕಲ್ಲು, ದತ್ತಿಶಾಸನಗಳಲ್ಲಿಯ ಗದ್ಯ ಆಯಾ ಕಾಲದ ಐತಿಹಾಸಿಕ, ಸಾಮಾಜಿಕ ಮತ್ತು ಇತರ ಸಂಗತಿಗಳೊಂದಿಗೆ ಭಾಷಾಸ್ವರೂಪವನ್ನು ತಿಳಿಸುತ್ತದೆ.

ಕದಂಬ ಕಾಕುತ್ಸ್ಥವರ್ಮನ ಕಾಲಕ್ಕೆ ಸೇರಿದ ಹಲ್ಮಿಡಿ ಶಾಸನ ಪೂರ್ವದ ಹಳಗನ್ನಡ ಭಾಷೆಯಲ್ಲಿದೆ. ಅದರ ಕೆಲವು ಪಂಕ್ತಿಗಳನ್ನು ನೋಡಬಹುದು:

ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ(ನಾ)ಅರಿ ಕ
ಕುಸ್ಥಭಟ್ಟೋರನಾಳೆ ನರಿದಾವಿ(ಳೆ)ನಾಡುಳ್ ಮೃಗೇಶನಾ
ಗೇನ್ದ್ರಾಭೀಳಭ್ಬ್ರಟಹರಪ್ಪೊ.ರ್ ಶ್ರೀಮೃಗೇಶನಾಗಾಹ್ವಯ
ರಿರ್ವ್ವರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ
ಗಣಪಶುಪತಿ............................
ಭಟ್ಟರ್ಗ್ಗೀಗಟ್ಟೆ ಒಡ್ಡಲಿ ಆಪತ್ತೊನ್ದಿವಿಟ್ಟಾರಕರ

ಆರಂಭದಲ್ಲಿನ ಶ್ಲೋಕವನ್ನು ಬಿಟ್ಟರೆ ಹಲ್ಮಿಡಿ ಶಾಸನದಲ್ಲಿ ಉಳಿದಿದ್ದೆಲ್ಲವೂ ಗದ್ಯದಲ್ಲಿದೆ. ಇದರಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚು. ಕನ್ನಡ ಪದಗಳು ಬೆರಳಲ್ಲಿ ಎಣಿಸುವಷ್ಟು ಮಾತ್ರ ಇವೆ. ಪೂರ್ವ ಹಳಗನ್ನಡದ ವಿಭಕ್ತಿ ಪ್ರತ್ಯಯಗಳು ಅಲ್ಲಲ್ಲಿ ಕಾಣುತ್ತವೆ. ಕರ್ಮಣೀಪ್ರಯೋಗದ ಒಂದು ರೂಪವೂ ಇದೆ. ಹೀಗೆ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಅನೇಕ ರಂಗಗಳಲ್ಲಿ ಬೆಳೆದುಕೊಡು ಬಂದಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ. ಈ ಶಾಸನದಿಂದ 1–2ನೆಯ ಶತಮಾನಗಳ ಹಿಂದಿನಿಂದಲೂ ಕನ್ನಡ ಗ್ರಾಂಥಿಕ ಭಾಷೆಯಾಗಿ ಬೆಳೆಯತೊಡಗಿತ್ತು ಎಂದು ಹೇಳಬಹುದು. ಇದು ಸಂಸ್ಕೃತದ ಒತ್ತಡಕ್ಕೆ ಒಳಗಾದ ಕನ್ನಡದ ಪ್ರಯೋಗ ಕಾಲವೆಂದು ಹೇಳಬಹುದು.

ಹಲ್ಮಿಡಿ ಶಾಸನದ ಅನಂತರ ಬಾದಾಮಿಯ ಚಳುಕ್ಯ ರಾಜ ಮಂಗಳೇಶನ 578ರ ಗದ್ಯಶಾಸನವನ್ನು ಇಲ್ಲಿ ಹೆಸರಿಸಬೇಕು. ಈ ಶಾಸನದಲ್ಲಿ ಸಾಹಿತ್ಯ ಗುಣಗಳಿಲ್ಲದಿದ್ದರೂ ಪೂರ್ವದ ಹಳಗನ್ನಡ ಭಾಷೆಯ ವಿಶಿಷ್ಟ ರೂಪಗಳಿವೆ.

ಮುಂದೆ, 7, 8, 9ನೆಯ ಶತಮಾನದ ಗದ್ಯಶಾಸನಗಳಲ್ಲಿ ಹಳಗನ್ನಡ ಶಬ್ದಗಳ ಬಳಕೆಯನ್ನು ವಿಶೇಷವಾಗಿ ಕಾಣುತ್ತೇವೆ. ಅಲ್ಲಲ್ಲಿ ಪೂರ್ವದ ಹಳಗನ್ನಡದ ಪ್ರಯೋಗಗಳೂ ಇವೆ. ಸಂಸ್ಕೃತ, ಪ್ರಾಕೃತ ತದ್ಭವಗಳ ಮಿಶ್ರಣ ಈ ಕಾಲದ ಗದ್ಯ ಶಾಸನಗಳಲ್ಲಿ ಕಂಡುಬರುತ್ತದೆ. ಆದರೂ ಕನ್ನಡ ಭಾಷೆ, ಅದರ ವ್ಯಾಕರಣ ಪ್ರಯೋಗಗಳು ಬಹುಮಟ್ಟಿಗೆ ತಮಿಳು ಭಾಷೆಯನ್ನು ಹೋಲುತ್ತವೆ. 10ನೆಯ ಶತಮಾನದ ಹೊತ್ತಿಗೆ ಗದ್ಯಕ್ಕಿಂತ ಪದ್ಯದ ಕಡೆಗೆ ಒಲವು ಹೆಚ್ಚಿರುವುದು ಕಾಣುತ್ತದೆ. ಇದು ಚಂಪೂಯುಗದ ಸುವರ್ಣಕಾಲ. ಪಂಪ ರನ್ನರ ಪ್ರಭಾವ ಶಾಸನ ಕವಿಗಳ ಮೇಲೆಯೂ ಬಿದ್ದಿರಬೇಕು. ಈ ಕಾಲದಲ್ಲಿ ಗದ್ಯಶಾಸನಗಳಿಗಿಂತ ಪದ್ಯ ಶಾಸನಗಳೇ ಹೇರಳವಾಗಿವೆ. ಅನಂತರ 13–14ನೆಯ ಶತಮಾನಗಳಲ್ಲಿಯ ಶಾಸನಗಳು ಸಂಪ್ರದಾಯ ಹಾಗೂ ಅನುಕರಣಕ್ಕೆ ಮಾರುಹೋಗಿವೆ. ಅವುಗಳಲ್ಲಿ ಹೊಸತನವಿಲ್ಲ. ಅನಂತರ 15, 16, 17ನೆಯ ಶತಮಾನಗಳಲ್ಲಿಯ ಶಾಸನಗಳಲ್ಲಿಯೂ ಭಾಷಾಪ್ರೌಢಿಮೆಯಿಲ್ಲ. ದೇಶದಲ್ಲಿ ಮಹಮ್ಮದೀಯರು ಹಾಗೂ ಇಂಗ್ಲಿಷರ ಆಕ್ರಮಣದಿಂದ ಆಯಾ ಭಾಷೆಯ ಬಳಕೆಯ ಮಾತುಗಳು ಶಾಸನ ಸಾಹಿತ್ಯದಲ್ಲಿಯೂ ಸೇರಿಕೊಂಡಿವೆ.

ಸು.11 ರಿಂದ 18ನೆಯ ಶತಮಾನದ ಅವಧಿಯಲ್ಲಿ ಪದ್ಯ ಶಾಸನಗಳೇ ಹೇರಳವಾಗಿ ದೊರೆಯುತ್ತವೆ. ಗದ್ಯ ಶಾಸನಗಳು ಅಲ್ಲಲ್ಲಿ ಮಿನುಗುತ್ತವೆ. ವೀರಗಲ್ಲು, ದತ್ತಿಶಾಸನಗಳು ವಿಶೇಷವಾಗಿ ಗದ್ಯದಲ್ಲಿಯೇ ಸಿಗುತ್ತವೆ. ಅವು ಚಿಕ್ಕ ಚಿಕ್ಕವಾಗಿದ್ದರೂ ಮೇಲ್‌ಸ್ತರದ ಗದ್ಯಶೈಲಿಯನ್ನು ಅಲ್ಲಿ ಕಾಣಬಹುದು. ಈ ಕಾಲದ ಶಾಸನಗಳಲ್ಲಿ ಬಳಸಿದ ಗದ್ಯದಲ್ಲಿಯೂ ಒಂದು ಹೊಸ ನೋಟವಿದೆ. ಇಲ್ಲಿಯ ಗದ್ಯ ನೀರಸವಾಗಿರದೆ ಹೃದ್ಯವಾಗಿದೆ. ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಕಾಲದ ಸಜ್ಜನತಿಲಕನೆಂಬ ಕವಿ ಬರೆದ ಸಿರಸಂಗಿ ಶಾಸನ ಸೊಗಸಾದ ಚಿಕ್ಕ ಚಂಪೂ ಕಾವ್ಯ ಎನ್ನುವಂತಿದೆ. ಋಷ್ಯಶೃಂಗನ ಜನ್ಮಕಥೆ ಇದು ಹೃದಯಂಗಮವಾದ ಗದ್ಯ ಶೈಲಿಯಲ್ಲಿದೆ. ಒಂದು ಸುದೀರ್ಘವಾದ ವಾಕ್ಯದಲ್ಲಿ ಚಿಕ್ಕ ಚಿಕ್ಕ ವಾಕ್ಯಗಳ ಮಾಲೆಯನ್ನು ಹೆಣೆದು ಅದರಲ್ಲಿ ಚಿಕ್ಕ ಕಥೆಯನ್ನು ಜೋಡಿಸಿದುದು ಕಾವ್ಯದ ಮೇಲ್ಮಟ್ಟವನ್ನು ಸೂಚಿಸುತ್ತದೆ. ಇದೇ ಶಾಸನದಲ್ಲಿ ಮತ್ತೊಂದು ಗದ್ಯಭಾಗ ಹೀಗಿದೆ: ಇಂತೆನಿಸಿ ..............ಮಟ್ಟಮೀರದೆ ಸಿಟ್ಟು ನುಡಿವ ದುಟ್ಟನಾಯಕರ ನಿಟ್ಟೆಲ್ವಂ ಮುಳುದೊಟ್ಟಜಿಯಿಂದಟ್ಟಿಯಾಡಿಸುವ ಬಿರುದನಾಯಕರ ಶಿರದ ಶಿರ್ಪಂ ಬಿದಿರ್ಚುವ ಚಪಳನಾಯಕ ಹೃದಯನಲ್ಲ, ಭೀತನಾಯಕರ ಕೊಲ್ಲ, ಸತ್ಯರಾಧೇಯ, ಸಾಹಸವೈನತೇಯ– ಈ ಮಾತುಗಳು ಹಬ್ಬೆಯ ನಾಯಕನ ಸಾಹಸವನ್ನು ಅವನ ಸತ್ಯಸಂಧತೆಯನ್ನು ಸಾರುತ್ತವೆ. ಇಲ್ಲಿಯ ಅಚ್ಚಗನ್ನಡದ ಪದಗಳ ಜೋಡಣೆ ಟಕಾರದ ಠೇಂಕಾರ ಮನೋಜ್ಞವಾಗಿದೆ. ಹೀಗೆ ಕೆಲವು ಶಾಸನಗಳು ಸಂಪ್ರದಾಯ ಹಾಗೂ ಅನುಕರಣಕ್ಕೆ ಮಾರುಹೋದರೆ, ಹಲವು ಶಾಸನಗಳು ಅಚ್ಚಗನ್ನಡದ ಬಿಗುವಿನಿಂದಲೂ ಚಿಕ್ಕ ಚಿಕ್ಕ ವಾಕ್ಯಗಳ ಶ್ರೇಷ್ಠ ಗದ್ಯಶೈಲಿಯಿಂದಲೂ ಶೋಭಿಸುತ್ತವೆ. ಶಾಸನದ ಗದ್ಯ ಕನ್ನಡದ ಗದ್ಯ ಸಾಹಿತ್ಯಕ್ಕೆ ಹಿರಿದಾದ ಕೊಡುಗೆಯನ್ನು ಕೊಟ್ಟಿದೆ. ಅಂದಿನ ಶಾಸನಗಳಲ್ಲಿ ಮುಖ್ಯವಾಗಿ ಆಡುಮಾತಿನ ಗ್ರಂಥಸ್ಥ ಭಾಷೆಯ, ವ್ಯಾವಹಾರಿಕ ಹಾಗೂ ಸರ್ಕಾರಿ ಭಾಷೆಯ, ಕಾವ್ಯಭಾಷೆಯ, ಪ್ರಾದೇಶಿಕ ಸೊಗಡಿನ ಎಲ್ಲ ಸ್ತರಗಳನ್ನೂ ಕಾಣಬಹುದಾಗಿದೆ.

ಕವಿರಾಜಮಾರ್ಗದಲ್ಲಿ (ಸು.850) ಪದಪಾದವಿಯುತ ನಿಯಮಾಸ್ಪದಮಲ್ಲದಳಂಕೃತಂ ಕ್ರಿಯಾಕಾರಕಮೊಳ್ ಪುದಿದರ್ಥ ವ್ಯಕ್ತಿಯನೀವುದು ಗದ್ಯಮನೇಕ ರೂಪಭೇದವಿವಿಕ್ತಂ ಎಂದು ಗದ್ಯಕಾವ್ಯದ ಲಕ್ಷಣವನ್ನು ತಿಳಿಸಿದೆ. ವಿಮಳ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತಾದಿಗಳು ಗದ್ಯ ಕ್ಷೇತ್ರದಲ್ಲಿ ಖ್ಯಾತಿಯನ್ನು ಪಡೆದಿದ್ದಾರೆನ್ನುವುದು ಕವಿಯ ಅಭಿಪ್ರಾಯವಾಗಿದೆ. ಇಲ್ಲಿಯವರೆಗೆ ಇವರ ಯಾವ ಗ್ರಂಥಗಳೂ ದೊರೆತಿಲ್ಲ. ಇವರಲ್ಲದೆ ಇನ್ನೂ ಸಾಮಾನ್ಯ ಗದ್ಯ ಲೇಖಕರು ಎಷ್ಟು ಜನರಿದ್ದರೋ ತಿಳಿಯದು. ಅಂತು ನೃಪತುಂಗನ ಕಾಲಕ್ಕೆ ಸ್ವತಂತ್ರವಾದ ಗದ್ಯಲೇಖನ ಚೆನ್ನಾಗಿ ಬೆಳೆದುಬಂದಿತ್ತೆಂದು ಹೇಳಬಹುದು.

ವಡ್ಡಾರಾಧನೆ (ಸು.920) ಕನ್ನಡ ಸಾಹಿತ್ಯದ ಮೊಟ್ಟಮೊದಲನೆಯ ಗದ್ಯ ಗ್ರಂಥ (ನೋಡಿ ವಡ್ಡಾರಾಧನೆ). ಈ ಗ್ರಂಥದಲ್ಲಿ ಕವಿ ಜೈನ ತತ್ತ್ವಗಳನ್ನು ಕಥೆಗಳ ಮೂಲಕ ಸಾಮಾನ್ಯರಿಗೂ ಮನಮೆಚ್ಚುವಂತೆ ಬೋಧಿಸಿದ್ದಾನೆ. ಶೈಲಿಯಲ್ಲಿ ಕನ್ನಡತನವಿದೆ. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಕತೆಯ ಓಟ ಸುಗಮವಾಗಿ ಸಾಗುತ್ತದೆ. ಎಲ್ಲಿಯೂ ವರ್ಣನೆಗಳ ಆಡಂಬರವಿಲ್ಲ. ನಾಣ್ಣುಡಿಗಳು, ಅನುಭವವೇದ್ಯವಾದ ದೃಷ್ಟಾಂತಗಳು ಅಡಿಗಡಿಗೆ ಬಂದು ಕಥೆಗಳಿಗೆ ಕಳೆಕಟ್ಟಿವೆ. ಹೀಗೆ ದೇಶೀಯ ಪ್ರಚುರತೆ, ವಿಶಿಷ್ಟವಾದ ವ್ಯಾಕರಣ ಪ್ರಕ್ರಿಯೆಗಳು, ಅಪೂರ್ವ ಪದಗಳು, ಜೀವಂತ ಮಾತುಗಾರಿಕೆ, ಅನುಭವ ಸಂಪನ್ನವಾದ ಅಭಿವ್ಯಕ್ತಿ, ಕನ್ನಡ ಸಂಸ್ಕೃತ ಪದಗಳ ಸಮತೂಕ ಇವುಗಳಿಂದ ವಡ್ಡಾರಾಧನೆಯ ಗದ್ಯ ವಿಶಿಷ್ಟವಾದರೂಪ ತಾಳಿದೆ. ಹಳಗನ್ನಡ ಗದ್ಯದ ಒಳ್ಳೆಯ ಮಾದರಿಗೆ ಈ ಗ್ರಂಥ ಮೇಲುಪಂಕ್ತಿಯಾಗಿದೆ.

ಕನ್ನಡ ಗದ್ಯ ಸಾಹಿತ್ಯ ಚರಿತ್ರೆಯಲ್ಲಿ ಶಾಸನಗದ್ಯ, ವಡ್ಡಾರಾಧನೆಯ ಗದ್ಯ ಒಂದೊಂದು ಘಟ್ಟವಾದರೆ ಚಾವುಂಡರಾಯನ ಗದ್ಯ ಇನ್ನೊಂದು ಘಟ್ಟ. ಇವನ ತ್ರಿಷಷ್ಟಿಲಕ್ಷಣ ಮಹಾಪುರಾಣ (ಸು.978) ಕನ್ನಡ ಗದ್ಯಸಾಹಿತ್ಯದ ಎರಡನೆಯ ಪ್ರಮುಖ ಗ್ರಂಥ. ಇದರಲ್ಲಿ ಜೈನಧರ್ಮದ ನಂಬಿಕೆಗಳೂ ತತ್ತ್ವಗಳೂ ಅರುವತ್ತುಮೂರು ಪುರಾತನರ ಚರಿತ್ರೆಗಳೂ ಅಡಕವಾಗಿವೆ. ಅಲ್ಲಲ್ಲಿ ಪದ್ಯಗಳೂ ಪ್ರಾಕೃತ ಗಾದೆಗಳೂ ಬಂದಿವೆ. ಈ ಕೃತಿಯ ಗದ್ಯಶೈಲಿ

ವಡ್ಡಾರಾಧನೆಯದಕ್ಕಿಂತ ಸ್ವಲ್ಪಮಟ್ಟಿಗೆ ಪ್ರೌಢವೂ ಗಂಭೀರವೂ ಆಗಿದೆ. ಇದರಲ್ಲಿ ಸಂಸ್ಕೃತ ಪದಗಳ ಬಳಕೆ, ಮತಸಂಬಂಧವಾದ ವಿಷಯಗಳು ಹೆಚ್ಚು. ವಾಕ್ಯಗಳು ಉದ್ದುದ್ದವಾಗಿವೆ. ಕನ್ನಡ, ಸಂಸ್ಕೃತ, ಪ್ರಾಕೃತಗಳಲ್ಲಿ ಕವಿಗಿರುವ ಪಾಂಡಿತ್ಯ ಗ್ರಂಥದ ಉದ್ದಕ್ಕೂ ಕಾಣಬರುತ್ತದೆ. ಇಲ್ಲಿಯ ಸಾಹಿತ್ಯ ಸ್ವರೂಪ, ಭಾಷೆ ಪೂರ್ತಿಯಾಗಿ ಹಳಗನ್ನಡದಲ್ಲಿದೆ. ವಡ್ಡಾರಾಧನೆಯ ಅನಂತರ ಸು.60 ವರ್ಷಗಳಾದ ಮೇಲೆ ಬೆಳೆದು ಬಂದ ಈ ಗದ್ಯ ವೈಶಿಷ್ಟ್ಯಪೂರ್ಣವಾಗಿದೆ. ವಡ್ಡಾರಾಧನೆಯಲ್ಲಿ ಕಥಾ ಗದ್ಯಕ್ಕೆ ಪ್ರಾಧಾನ್ಯವಿದ್ದರೆ ಇಲ್ಲಿ ಕಥಾಗದ್ಯ ಮತ್ತು ಶಾಸ್ತ್ರೀಯ ಗದ್ಯ ಮಿಲನವಾಗಿವೆ. ಇವೆರಡನ್ನೂ ಹೀಗೆ ಮಿಲನ ಮಾಡಿದ ಈ ಕವಿ ಮೇಲ್ತರಗತಿಯ ಗದ್ಯಕಾರನೆಂದು ಹೇಳಬೇಕು.

ಚಂಪೂ ಗ್ರಂಥಗಳಲ್ಲಿ ಬಳಕೆಯಾದ ಗದ್ಯ, ಗದ್ಯ ಸಾಹಿತ್ಯದ ಬೆಳವಣಿಗೆಗೆ ತುಂಬ ಸಹಾಯವಾಗಿದೆ. ಪಂಪ ತನ್ನ ಎರಡೂ ಚಂಪೂಕೃತಿಗಳಲ್ಲಿ ಔಚಿತ್ಯಪೂರ್ಣವಾಗಿ ಗದ್ಯವನ್ನು ಬಳಸಿದ್ದಾನೆ. ತನ್ನ ಕಥಾನಾಯಕನಾದ ಅರಿಕೇಸರಿಯ ಯೌವನೋದಯ ಸಂದರ್ಭವನ್ನು ಸುಮಾರು 55 ಪಂಕ್ತಿಗಳ ಗದ್ಯದಲ್ಲಿ ಬಣ್ಣಿಸಿದ್ದಾನೆ. ಇಲ್ಲಿ ಅತಿಶಯೋಕ್ತಿಯಿದ್ದರೂ ಮನೋಹರತೆಯಿದೆ. ಕಥಾನಾಯಕನ ಸೊಬಗನ್ನು ಮಧುರವಾಗಿ ಚಿತ್ರಿಸಲಾಗಿದೆ. ಹೇರಳವಾದ ಹೋಲಿಕೆಗಳಿದ್ದರೂ ಎಲ್ಲಮೂ ಹದವರಿತು ಬಂದಿವೆ. ಇದರಿಂದಾಗಿ ಸುದೀರ್ಘವಾದರೂ ಈ ಗದ್ಯಭಾಗ ಚಿತ್ತಾಕರ್ಷಕವಾಗಿದೆ. ಕಾವ್ಯಮಯವಾಗಿದೆ. ದೇಸೀ ನುಡಿಗಟ್ಟುಗಳು, ನಾದ ಸೂಕ್ಷ್ಮಗಳು ಇವನ ಕಾವ್ಯ ಶೈಲಿಯ ಗುಣಗಳು. ಈ ಎಲ್ಲವನ್ನೂ ನಾವು ಇವನ ಗದ್ಯದಲ್ಲೂ ಕಾಣಬಹುದು. ಈತನ ಚಂಪೂಕಾವ್ಯಗಳಲ್ಲಿ ಬಳಕೆಯಾದ ಗದ್ಯ ಮುಂದಿನ ತಲೆಮಾರಿನವರಿಗೆ ಮಾರ್ಗದರ್ಶಿಯಾಯಿತು.

ಪಂಪನ ಅನಂತರ ಬಂದ ಚಂಪೂಕಾವ್ಯಗಳಲ್ಲಿನ ಗದ್ಯ ಸಾಮಾನ್ಯವಾಗಿ ಪಾಂಡಿತ್ಯ ಪ್ರದರ್ಶನದಿಂದ ತುಂಬಿದೆ. ಕಥೆಯ ಬೆಳವಣಿಗೆಯ ದೃಷ್ಟಿ, ವಿವರಗಳ ಸಂಕ್ಷಿಪ್ತತೆ ಪಂಪನಂತೆ ಕೆಲವು ಕವಿಗಳಲ್ಲಿ ಕಾಣುವುದಿಲ್ಲ. ರುದ್ರಭಟ್ಟ, ಜನ್ನ, ಷಡಕ್ಷರಿ ಮೊದಲಾದವರು ಇದಕ್ಕೆ ಹೊರತಾಗಿಲ್ಲ.

ದುರ್ಗಸಿಂಹ, ನಯಸೇನರ ಚಂಪೂ ಕೃತಿಗಳಲ್ಲಿನ ಗದ್ಯದಲ್ಲಿ ಸ್ಪಷ್ಟತೆ, ಸರಳತೆ, ಹೃದ್ಯತೆ ವಿಶೇಷವಾಗಿದೆ ದುರ್ಗಸಿಂಹನ ಪಂಚತಂತ್ರದಲ್ಲಿ ಪದ್ಯಕ್ಕಿಂತ ಗದ್ಯವೇ ಹೆಚ್ಚು. ಕಥಾನಿರೂಪಣೆಗೆ ಗದ್ಯ ಆವಶ್ಯಕವೆಂಬುದನ್ನು ಕವಿ ಇಲ್ಲಿ ತೋರಿಸಿಕೊಟ್ಟಿದ್ದಾನೆ. ಇವನ ಗದ್ಯದಲ್ಲಿ ನಾಣ್ಣುಡಿಗಳೂ ಜಾಣ್ಣುಡಿಗಳೂ ಇವೆ. ನಯಸೇನನ ಧರ್ಮಾಮೃತದಲ್ಲಿ ಈ ಸಂಪ್ರದಾಯ ಬೆಳೆದಿದೆ. ಧರ್ಮಾಮೃತದಲ್ಲಿ ದೀರ್ಘವಾದ ಗದ್ಯ ಹೆಚ್ಚಾಗಿಲ್ಲ. ಚಿಕ್ಕ ಚಿಕ್ಕದಾಗಿ ಹೆಣೆದ ಇಲ್ಲಿನ ಗದ್ಯ ಚೊಕ್ಕವಾಗಿದೆ. ಹೋಲಿಕೆಗಳಂತೂ ಹೊಳೆಯಾಗಿ ಹರಿದಿವೆ. ಕಥೆಯನ್ನು ಹೇಳಹೇಳುತ್ತಲೇ ರಾಶಿರಾಶಿಯಾಗಿ ಸಾದೃಶ್ಯ ಮಾಲಿಕೆಗಳನ್ನು ತರುವುದು ಇವನ ಶೈಲಿಯ ಗುಣವಿಶೇಷಮೂ ಪರಿಮಿತಿಯೂ ಆಗಿದೆ. ಸಂಸ್ಕೃತವನ್ನು ಅಲ್ಲಲ್ಲಿ ಬಳಸಿದ್ದರೂ ತಿರುಳ್ಗನ್ನಡದ ಹೊಗರು ಹೆಚ್ಚಾಗಿ ಹೊರಹೊಮ್ಮಿದೆ. ಇವನ ಅನಂತರ ಬಂದ ಎಲ್ಲ ಚಂಪೂ ಕವಿಗಳ ಗದ್ಯ ಸುಮಾರಾಗಿ ಒಂದೇ ಮಾದರಿಯದು. ಇವರ ಗದ್ಯಭಾಗದಲ್ಲಿನ ಅಲಂಕಾರಗಳ ಬಾಹುಳ್ಯ ಮತ್ತು ಉದ್ದುದ್ದ ಸಮಾಸಗಳು ಕಥಾವಸ್ತುವಿಗೆ ಪೋಷಕವಾಗಿಲ್ಲದಿರುವುದು. ಗದ್ಯಬಂಧ ಬಿಗಿಯಾಗಿರದೆ ಶಿಥಿಲವಾಗಿರುವುದು ಕಂಡುಬರುತ್ತದೆ. ಆದರೂ ಚಂಪೂಗದ್ಯ, ಗದ್ಯ ಸಾಹಿತ್ಯದ ಬೆಳವಣಿಗೆಗೆ ಪ್ರೇರಕ, ಪೋಷಕ, ಸಹಾಯಕ ಆಗಿದೆ ಎಂಬ ಮಾತು ಸ್ಪಷ್ಟ.

ಕನ್ನಡ ಗದ್ಯಕ್ಕೆ ವಚನಗಳದು ಒಂದು ಅಪೂರ್ವವಾದ ಕಾಣಿಕೆ. ಅನುಭಾವಿಗಳ ಈ ಭಾಷೆಯಲ್ಲಿ ಉತ್ಕಟವಾದ ಭಾವಾವೇಶವಿದೆ, ಲಯವಿದೆ, ನಾದವಿದೆ, ಮಾಧುರ್ಯವಿದೆ. ಇವುಗಳನ್ನು ಗಮನಿಸಿದಾಗ ಈ ವಚನಗಳು ಪದ್ಯಜಾತಿಗೆ ಸೇರಿದುವೇ ಅಥವಾ ಗದ್ಯಜಾತಿಗೆ ಸೇರಿದುವೇ ಎಂಬ ಪ್ರಶ್ನೆ, ಆಲೋಚನೆ ಉಂಟಾಗುತ್ತದೆ. ಮೂಲದಲ್ಲಿ ಇವು ಛಂದೋಬದ್ಧ ರಚನೆಗಳೆಂದೇ ಕೆಲವು ವಿದ್ವಾಂಸರು ಹೇಳಿದರೆ, ಹಲವರು ಗದ್ಯವೆಂದೂ ಗದ್ಯಪದ್ಯಗಳ ನಡುವಿನ ಒಂದು ಮಾದರಿಯೆಂದೂ ಅಭಿಪ್ರಾಯಪಡುತ್ತಾರೆ.

12ನೆಯ ಶತಮಾನದ ಉತ್ತರಾರ್ಧದಲ್ಲಿ ಉಕ್ಕಂದವಾಗಿ ಹರಿದ ಈ ಸಾಹಿತ್ಯ ಅತ್ಯಂತ ಶ್ರೀಮಂತವಾಯಿತು. ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ ಮೊದಲಾದವರ ವಚನ ಸಾಹಿತ್ಯವು ಅಂದಿನ ಸಾಹಿತ್ಯ ಧೋರಣೆ, ಜೀವನ, ಮತಧರ್ಮ ಮೊದಲಾದವಕ್ಕೆ ಸಾಕ್ಷಿಯಾಯಿತು. ಇವರ ವಚನಗಳಲ್ಲಿ ಹೊಸಗನ್ನಡ ಗದ್ಯದ ಪ್ರಾರಂಭವನ್ನು ಗುರುತಿಸಬಹುದು. ಅಚ್ಚುಕಟ್ಟಾದ ಗಾದೆ ಮಾತಿನಂಥ ಸೂತ್ರರೂಪದ ವಾಕ್ಯಗಳು, ಮಾಲೆಮಾಲೆಯಾಗಿ ಬರುವ ದೃಷ್ಟಾಂತಗಳು, ರೂಪಕಗಳು, ಉಪಮೆಗಳು, ಮಾತಿನ ಅಭಿಪ್ರಾಯದ ಹಿತಮಿತವಾದ ಪುನರಾವರ್ತನೆ, ಕಠೋರವೆನಿಸದ ಪ್ರಾಸನಿರ್ವಹಣೆ, ಕೊನೆಯಲ್ಲಿ ಹೊಳೆದು ನಿಲ್ಲುವ ತತ್ತ್ವ ಇವುಗಳಿಂದಾಗಿ ವಚನಗಳು ಇಂದಿಗೂ ತಮ್ಮ ಚೆಲುವನ್ನು ಕಳೆದುಕೊಂಡಿಲ್ಲ. ಈ ಪ್ರಕಾರ 20ನೆಯ ಶತಮಾನದ ಕೆಲವು ಕವಿಗಳಿಗೂ ಸ್ಫೂರ್ತಿಯನ್ನು ಕೊಟ್ಟಿದೆ ಎಂಬ ವಿಷಯವನ್ನು ಇಲ್ಲಿ ಸ್ಮರಿಸಬಹುದು. ಮುಂದೆ 15ನೆಯ ಶತಮಾನದಲ್ಲಿ ಕೆಲವು ವಚನಕಾರರು ಹಿಂದಿನ ವಚನ ಸಾಹಿತ್ಯವನ್ನು ಅಚ್ಚುಕಟ್ಟಾಗಿ ಆಯ್ದು ಜೋಡಿಸಿದರು. ಇದರ ಪರಿಣಾಮವಾಗಿ ಶೂನ್ಯ ಸಂಪಾದನೆ ಮೊದಲಾದ ವಿಶಿಷ್ಟ ಮಾದರಿಯ ವಚನ ಗ್ರಂಥಗಳು ಹೊರಬಂದುವು.

ಹರಿಹರನ ರಗಳೆಯಲ್ಲಿಯ ಗದ್ಯ ಕನ್ನಡ ಗದ್ಯಕ್ಕೆ ಒಂದು ಹಿರಿದಾದ ಕೊಡುಗೆ. ಕಥೆ ದೊಡ್ಡದಾದಾಗ ಹರಿಹರ ಒಂದು ಭಾಗ ರಗಳೆ, ಇನ್ನೊಂದು ಭಾಗ ಗದ್ಯ, ಮತ್ತೆ ರಗಳೆ ಅನಂತರ ಗದ್ಯ ಹೀಗೆ ಸಂದರ್ಭಗಳನ್ನು ಬೆಳೆಸಿದ್ದಾನೆ. ಇದೊಂದು ಅಪೂರ್ವ ಪ್ರಯೋಗ. ಹಳೆಯ ಚಂಪೂಕ್ರಮ ಇಲ್ಲಿ ಇನ್ನೂ ಹಿಗ್ಗಿದೆ. ಪದ್ಯ ಭಾಗದಲ್ಲಿ ಹೇಗೊ ಹಾಗೆ ಗದ್ಯಭಾಗದಲ್ಲೂ ಕಥೆ, ವರ್ಣನೆ ಎಲ್ಲ ನಿರರ್ಗಳವಾಗಿ ಹರಿಯುತ್ತದೆ. ಚಂಪೂವಿನಲ್ಲಿ ಕಥೆಯ ಓಟಕ್ಕೆ ಸಹಾಯಕವಾಗಿದ್ದ ಗದ್ಯಕ್ಕೆ ಇಲ್ಲಿ ಸ್ವತಂತ್ರ ಅಸ್ತಿತ್ವ ದೊರಕಿತು. ಒಂದು ಕಡೆ ವಚನಗಳ ಧೋರಣೆ, ಇನ್ನೊಂದು ಕಡೆ ತಾನೇ ಬಳಸಿ ರೂಢಿಸಿದ ರಗಳೆ ಇವೆರಡರ ಸಂಗಮದಿಂದ ಇವನ ಗದ್ಯ ಹರಿತವಾಯಿತು. ಹೆಚ್ಚು ಜೀವಂತವಾಯಿತು. ಭಾಷೆ ಆಡುಮಾತಿಗೆ ಬಹು ಹತ್ತಿರವಾಯಿತು. ಅಂದರೆ ಇಲ್ಲಿ ಗದ್ಯದ ನಿಜವಾದ ಉದ್ದೇಶ ಸಫಲವಾಯಿತೆನ್ನಬಹುದು.

ಕನ್ನಡ ಗದ್ಯ ಸಾಹಿತ್ಯದ ಇತಿಹಾಸದಲ್ಲಿ ವ್ಯಾಖ್ಯಾನಕಾರರಿಗೆ ಒಂದು ಸ್ಥಾನವಿದೆ. ವೈದ್ಯ, ಜ್ಯೋತಿಷ, ಪಾಕ, ಸಂಗೀತ, ಗಣಿತ, ಸಾಮುದ್ರಿಕ, ಧರ್ಮ, ವ್ಯಾಕರಣ ಮೊದಲಾದ ವಿಷಯಗಳ ಮೇಲೆ ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳಿವೆ. ಅವುಗಳಲ್ಲಿ ಕೆಲವಕ್ಕೆ ವಿಸ್ತಾರವಾದ ವ್ಯಾಖ್ಯಾನಗಳು, ಟೀಕೆ, ಟಿಪ್ಪಣಿಗಳು ಬಂದಿವೆ. ಸೂಚ್ಯವಾದುದನ್ನು ವಾಚ್ಯವಾಗಿ ವಿವರಿಸಿ ಹೇಳುವುದೇ ಇವುಗಳ ಮುಖ್ಯ ಗುರಿ. ಹೇಳುವ ಮಾತಿನಲ್ಲಿ, ಬಳಸುವ ಶಬ್ದಗಳಲ್ಲಿ ಕ್ಲಿಷ್ಟತೆ ಇದ್ದರೂ ಇದೊಂದು ಮಾದರಿಯ ಗದ್ಯವಾಗಿ ಬೆಳೆದುಕೊಂಡು ಬಂದಿದೆ. ಅಷ್ಟು ಉತ್ತಮ ಗದ್ಯವಲ್ಲದಿದ್ದರೂ ಇದಕ್ಕೆ ಗದ್ಯ ಸಾಹಿತ್ಯ ವಿವೇಚನೆಯಲ್ಲಿ ಒಂದು ಸ್ಥಾನವಿದೆ.

ಹಸ್ತಿಮಲ್ಲನ ಪೂರ್ವಪುರಾಣಕ್ಕೂ ಕನ್ನಡ ಗದ್ಯ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸ್ಥಾನವಿದೆ. ಸು.14ನೆಯ ಶತಮಾನದ ಗದ್ಯದ ಒಂದು ಮಾದರಿಯನ್ನು ಇಲ್ಲಿ ಕಾಣಬಹುದಾಗಿದೆ. ಈ ಪುಟ್ಟ ಕೃತಿಯ ಗದ್ಯ ಸುಲಭಮೂ ಸರಳಮೂ ಆಗಿದೆ. ಚಿಕ್ಕ ಚಿಕ್ಕ ವಾಕ್ಯಗಳೂ ಆಡುಮಾತುಗಳೂ ಇಲ್ಲಿ ದೊರೆಯುತ್ತವೆ. ಸಾಮಾನ್ಯವಾಗಿ ಜೈನ ಪುರಾಣಗಳಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚು. ಆದರೆ ಇಲ್ಲಿ ಅವು ಕಡಿಮೆಯಾಗಿದ್ದು ಬಂದ ಕಡೆ ಚೆನ್ನಾಗಿ ಹೊಂದಿಕೊಂಡು ಬಂದಿರುವುದನ್ನು ಗಮನಿಸಬಹುದು.

14ನೆಯ ಶತಮಾನದಿಂದ 17ನೆಯ ಶತಮಾನದವರೆಗೆ ಕನ್ನಡ ಗದ್ಯ ಸಾಹಿತ್ಯದ ಸ್ರೋತ ಬತ್ತಿದಂತೆ ಕಾಣುತ್ತದೆ. ನಿಜಗುಣ ಶಿವಯೋಗಿ, ಗುಬ್ಬಿಯ ಮಲ್ಲಣ್ಣ, ಮಗ್ಗೆಯ ಮಾಯಿದೇವ ಮೊದಲಾದ ವೀರಶೈವ ಶಾಸ್ತ್ರೀಯ ಗದ್ಯಗ್ರಂಥಗಳನ್ನು ಬಿಟ್ಟರೆ ಗದ್ಯಸಾಹಿತ್ಯವನ್ನು ಬೆಳೆಸಿದ ಬೇರೆ ಕವಿಗಳ ಯಾವ ಕೃತಿಗಳೂ ಈ ಕಾಲದಲ್ಲಿ ಕಾಣುವುದಿಲ್ಲ.

17ನೆಯ ಶತಮಾನದಲ್ಲಿ ಮೈಸೂರು ಅರಸರೂ ಅವರ ಆಶ್ರಯದಲ್ಲಿದ್ದ ಕವಿಗಳೂ ಗದ್ಯಸಾಹಿತ್ಯವನ್ನು ಸಾಕಷ್ಟು ಬೆಳೆಸಿದರು. ಚಿಕ್ಕದೇವರಾಜನು ಚಿಕ್ಕದೇವರಾಜ ಬಿನ್ನಪವನ್ನೂ ಭಾಗವತ, ಶೇಷಧರ್ಮಗಳ ಟೀಕೆಗಳನ್ನೂ ಗದ್ಯದಲ್ಲಿ ಬರೆದಿದ್ದಾನೆ. ಶಾಂತಲಿಂಗ ದೇಶಿಕ, ತಿರುಮಲಾರ್ಯ, ಚಿಕುಪಾಧ್ಯಾಯ (ಸು.1672) ಈ ಕಾಲದ ಉತ್ತಮ ಗದ್ಯಕಾರರು. ಶಾಂತಲಿಂಗ ದೇಶಿಕನ ಕೃತಿಗಿಂತಲೂ ತಿರುಮಲಾರ್ಯನ ಚಿಕ್ಕದೇವರಾಜವಂಶಾವಳಿಯ ಭಾಷೆ ಪ್ರೌಢವಾಗಿಯೂ ಹಳಗನ್ನಡದ ಬಿಗುವಿನಿಂದಲೂ ಕೂಡಿದೆ. ಚಿಕುಪಾಧ್ಯಾಯನೇ ಸುಮಾರು ಏಳು ಗದ್ಯ ಗ್ರಂಥಗಳನ್ನು ಬರೆದಂತೆ ತಿಳಿಯುತ್ತದೆ. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಹಳಗನ್ನಡ ನಡುಗನ್ನಡ ಶಬ್ದರೂಪಗಳ ಮಿಶ್ರಣ ಕಂಡುಬರುತ್ತದೆ.

17–18ನೆಯ ಶತಮಾನದಲ್ಲಿ ಬಖೈರು, ಕೈಫಿಯತ್ತು ಎಂಬ ಹೆಸರಿನ ಐತಿಹಾಸಿಕ ಗದ್ಯಕೃತಿಗಳು ಸಿಗುತ್ತವೆ. ಇವುಗಳಲ್ಲಿ ಉರ್ದು, ಪಾರಸೀ ಶಬ್ದಗಳು ಹೇರಳವಾಗಿ ಬಳಕೆಯಾಗಿವೆ. ಬಖೈರುಗಳ ಗದ್ಯಶೈಲಿ ಇತಿಹಾಸವನ್ನು ಚಿತ್ರಿಸುವ ಅಂದವಾದ ಶೈಲಿಯಾಗಿದೆ. ಕನ್ನಡ ಗದ್ಯದ ಬೆಳವಣಿಗೆಯ ದೃಷ್ಟಿಯಿಂದ ಈ ಬಖೈರುಗಳು ಉಲ್ಲೇಖನಾರ್ಹವಾಗಿವೆ.

18–19ನೆಯ ಶತಮಾನದಲ್ಲಿ ಕನ್ನಡ ಗದ್ಯಸಾಹಿತ್ಯ ವಿಪುಲವಾಗಿ ಸಮರ್ಥವಾಗಿ ಬೆಳೆದಿದೆ. ಈ ಕಾಲದಲ್ಲಿ ಕಾಣಬರುವಷ್ಟು ಗದ್ಯ ಕೃತಿಗಳು ಹಿಂದೆ ಮತ್ತಾವ ಕಾಲದಲ್ಲಿಯೂ ಕಂಡುಬಂದಿಲ್ಲ. ಇದನ್ನು ಗದ್ಯ ಸಾಹಿತ್ಯದ ಸುವರ್ಣಯುಗವೆಂದೇ ಕರೆಯಬಹುದು. ಕಳಲೆ ನಂಜರಾಜ (1740), ದೇವಚಂದ್ರ (1770–1841), ಮುಮ್ಮಡಿ ಕೃಷ್ಣರಾಜ (1794–1868), ಕೆಂಪುನಾರಾಯಣ (ಸು.1823), ಅಳಿಯ ಲಿಂಗರಾಜ (1823–74), ಮುದ್ದಣ (1870–1901) ಮೊದಲಾದ ಗದ್ಯ ಲೇಖಕರು ಈ ಕಾಲದಲ್ಲಿ ಪ್ರಸಿದ್ಧರಾಗಿದ್ದಾರೆ. ಕೆಂಪುನಾರಾಯಣನ ಮುದ್ರಾಮಂಜೂಷ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಭಾಷೆಗಳಿಂದ ಮುಪ್ಪುರಿಗೊಂಡಿದೆ. ಕಥಾ ನಿರೂಪಣೆಗೆ ಉಚಿತವಾದ ಗದ್ಯವನ್ನಿಲ್ಲಿ ಕಾಣಬಹುದು. 20ನೆಯ ಶತಮಾನದ ಗದ್ಯಕ್ಕೆ ಈ ಗ್ರಂಥ ಮುಂಬೆಳಕಾಯಿತು. ಮುಂದೆ

ಕ್ರೈಸ್ತ ಮಿಶನರಿಗಳು ಗದ್ಯಕ್ಕೆ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಟ್ಟರು. ಬೈಬಲ್ ಗ್ರಂಥ ಸು.1823ರಲ್ಲಿ ಕನ್ನಡ ಗದ್ಯದಲ್ಲಿ ಪ್ರಕಟವಾಯಿತು. 19ನೆಯ ಶತಮಾನದ ಮಧ್ಯದಲ್ಲಿ ಹೊರಟ ಸಭಾಪತ್ರ, ಸತ್ಯ ದೀಪಿಕೆಗಳೆಂಬ ಪತ್ರಿಕೆಗಳು ಪತ್ರಿಕಾ ವ್ಯವಸಾಯಕ್ಕೆ ನೆಲಗಟ್ಟಾದುವು.

ಮುದ್ದಣ ಎರಡು ಗದ್ಯಗ್ರಂಥಗಳನ್ನು ಬರೆದ. ಅದ್ಭುತ ರಾಮಾಯಣ ಸರಳ ಶೈಲಿಯಲ್ಲಿ ಚೊಕ್ಕವಾಗಿರುವ ಹಳಗನ್ನಡ ಗ್ರಂಥ. ಹಳಗನ್ನಡ ಅಭ್ಯಾಸಿಗಳಿಗೆ ಇದು ಹಿತಮಿತವಾದ ಕೃತಿ. ರಾಮಾಶ್ವಮೇಧದಲ್ಲಿ ಇವನ ಪ್ರತಿಭೆ ಇನ್ನೂ ಮಿಗಿಲಾಗಿದೆ. ಇಲ್ಲಿಯೇ ಕವಿ ಪದ್ಯಂ ವಧ್ಯಂ ಗದ್ಯಂ ಹೃದ್ಯಂ ಎಂದು ಗದ್ಯದ ಮೇಲ್ಮೆಯನ್ನು ಹೇಳಿದ್ದಾನೆ. ಇದರಲ್ಲಿ ಆರಂಭದ ಮಳೆಗಾಲದ ವರ್ಣನೆ, ಮುದ್ದಣ ಮನೋರಮೆಯರ ಸಂಭಾಷಣಾಕುಶಲತೆ, ಕಥಾನಿರೂಪಣೆಯಲ್ಲಿನ ನವೀನತೆ ಇವೆಲ್ಲಮೂ ಇವನ ಗದ್ಯಶೈಲಿಯ ಬೆಡಗನ್ನು ತೋರುತ್ತವೆ. ಹಳಗನ್ನಡ ಭಾಷೆಯನ್ನು ಹೊಸಗನ್ನಡ ಧೋರಣೆಯಲ್ಲಿ ಬಳಸಿರುವುದೇ ಮುದ್ದಣನ ವೈಶಿಷ್ಟ್ಯ. ಇವನ ಶೈಲಿಯಲ್ಲಿ ಆಧುನಕ ಕಥೆಕಾದಂಬರಿಗಳ ಸೊಗಸು ವೈವಿಧ್ಯಗಳನ್ನು ಕಾಣಬಹುದಾಗಿದೆ.

ಹೊಸಗನ್ನಡ ಗದ್ಯ ಸಾಹಿತ್ಯ ಹೊಸ ಮಾದರಿಯಲ್ಲಿ ರೂಪುಗೊಂಡಿತು. ನಡುಗನ್ನಡ ಶಬ್ದಗಳು ಮಾಯವಾಗಿ ಹೊಸ ಹೊಸ ಶಬ್ದಗಳು ತಲೆದೋರಿದುವು. ಮುಸಲ್ಮಾನರು, ಫ್ರೆಂಚರು, ಪೋರ್ಚುಗೀಸರು, ಇಂಗ್ಲಿಷರು ಮುಂತಾದವರ ಭಾಷಾ ಸಾಹಿತ್ಯಗಳ ಪ್ರಭಾವ ನೇರವಾಗಿ ಕನ್ನಡದ ಮೇಲೆ ಆದುದರಿಂದ ಕನ್ನಡದಲ್ಲಿ ಅನ್ಯದೇಶ ಶಬ್ದಗಳು ಸೇರಿಕೊಂಡವು. ದೇಶೀಯ ಸಾಹಿತ್ಯದೊಂದಿಗೆ ಇಂಗ್ಲಿಷ್ ಹಾಗೂ ಇತರ ವಿದೇಶೀಯ ಸಾಹಿತ್ಯಗಳ ವ್ಯಾಸಂಗದ ಪರಿಣಾಮವಾಗಿ ಕನ್ನಡದಲ್ಲಿಯೂ ನವಜಾಗೃತಿಯುಂಟಾಯಿತು. ಗದ್ಯ ಸಾಹಿತ್ಯದ ವಿವಿಧ ಪ್ರಕಾರಗಳು ಬೆಳೆದುವು. ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ನಾಟಕ, ವ್ಯಕ್ತಿಚಿತ್ರ, ಪ್ರಬಂಧ, ಹರಟೆ, ಪ್ರವಾಸಸಾಹಿತ್ಯ, ಪತ್ರಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಮಾನವಿಕ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಮರ್ಶೆ ಹೀಗೆ ನಾನಾ ರೂಪದಲ್ಲಿ ಹುಲುಸಾಗಿ ಬೆಳೆಯುತ್ತಿದೆ. ಇವುಗಳಲ್ಲಿ ಕೆಲವು ಮುಖ್ಯ ಪ್ರಕಾರಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

ಕಾದಂಬರಿ ಸಾಹಿತ್ಯ ಪ್ರಕಾರ ಕನ್ನಡಕ್ಕೆ ಹೊಸತು. ಇದು ಬಂಗಾಲಿ, ಮರಾಠಿ, ಇಂಗ್ಲಿಷ್ ಇತ್ಯಾದಿ ಭಾಷೆಗಳ ಪ್ರಭಾವದಿಂದ ಕನ್ನಡಕ್ಕೆ ಬಂದುದು. ಚ.ವಾಸುದೇವಯ್ಯನವರ ಆರ್ಯಕೀರ್ತಿ, ಭೀಷ್ಮ ಚರಿತೆಗಳು ಹೊಸಗನ್ನಡದ ಗದ್ಯಶೈಲಿಗೆ ಭದ್ರವಾದ ತಳಹದಿಯನ್ನು ಹಾಕಿದುವು. ಬಿ.ವೆಂಕಟಾಚಾರ್ಯರು ಮತ್ತು ಗಳಗನಾಥರು ಬಂಗಾಲಿ, ಮರಾಠಿ ಭಾಷೆಗಳ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದರು. ಎಂ.ಎಸ್.ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಮೊದಲಾದ ಸ್ವತಂತ್ರ ಕಾದಂಬರಿಗಳಲ್ಲಿ ಮೈಸೂರು ಚಾಮರಾಜನಗರಗಳ ಕಡೆಯ ಅಂದಿನ ಕನ್ನಡದ ಪ್ರಾದೇಶಿಕ ಕಸುವನ್ನು ಕಾಣಬಹುದು. ಮುಂದೆ ಕಾದಂಬರಿ ಕ್ಷೇತ್ರ ವೈವಿಧ್ಯ ಪೂರ್ಣವಾಗಿ ಬೆಳೆಯಿತು. ಐತಿಹಾಸಿಕ, ಪೌರಾಣಿಕ, ಸಾಮಾಜಿಕ, ರಾಜಕೀಯ, ಪತ್ತೇದಾರಿ ಹೀಗೆ ಐದು ಬಗೆಯಲ್ಲಿ ಅದು ವಿಕಸಿಸಿತು. ಶಿವರಾಮ ಕಾರಂತ, ಅ.ನ.ಕೃ., ಕೃಷ್ಣಮೂರ್ತಿ ಪುರಾಣಿಕ, ತ.ರಾ.ಸು., ಶ್ರೀನಿವಾಸರಾವ್ ಕೊರಟಿ, ತ್ರಿವೇಣಿ, ಬಸವರಾಜ ಕಟ್ಟೀಮನಿ, ವಿ.ಎಂ.ಇನಾಂದಾರ್ ಮೊದಲಾದವರ ಕಾದಂಬರಿಗಳಲ್ಲಿನ ಭಾಷೆ ಗದ್ಯಕ್ಕೆ ಹೊಸತನವನ್ನು ತಂದುಕೊಟ್ಟಿತು. ಭಾಷೆಯ ಪ್ರಾದೇಶಿಕ ವೈಭವಕ್ಕೆ ಕುವೆಂಪು, ಮಿರ್ಜಿ ಅಣ್ಣಾರಾಯ, ರಾವಬಹಾದ್ದೂರ, ಶಿವರಾಮ ಕಾರಂತ, ಶ್ರೀರಂಗ ಇವರ ಕೃತಿಗಳನ್ನು ವೀಕ್ಷಿಸಬಹುದು. ಇವರ ಗದ್ಯದಿಂದ ಅನೇಕಾನೇಕ ಪ್ರಾದೇಶಿಕ ಶಬ್ದಗಳು, ನುಡಿಗಟ್ಟುಗಳು ಭಾಷಾಮರ್ಯಾದೆಗಳು ಕನ್ನಡಕ್ಕೆ ಬಂದು ಸೇರಿವೆ. ಜೀವನವನ್ನು ವರ್ಣಿಸುವಲ್ಲಿ, ಸಂಭಾಷಣೆಗಳನ್ನು ಹೆಣೆಯುವುದರಲ್ಲಿ ಗದ್ಯಕ್ಕಿರುವ ಎಲ್ಲ ಸಾಮರ್ಥ್ಯವನ್ನೂ ಉಪಯೋಗಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಮುಂದೆ ನವ್ಯ ಸಾಹಿತ್ಯ ಪ್ರಕಾರ ಬೆಳೆದು ಭಾಷೆಗೆ ಹೊಸ ಸತ್ವವನ್ನೂ ಜೀವಂತಿಕೆಯನ್ನೂ ತುಂಬಿತು. ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಗಿರಿ, ಶಾಂತಿನಾಥ ದೇಸಾಯಿ, ಪೂರ್ಣಚಂದ್ರ ತೇಜಸ್ವಿ, ಶ್ರೀಕೃಷ್ಣ ಆಲನಹಳ್ಳಿ ಮುಂತಾದ ಶ್ರೇಷ್ಠ ದರ್ಜೆಯ ಗದ್ಯ ಲೇಖಕರು ಕನ್ನಡ ಗದ್ಯದ ಬೆಳೆವಣಿಗೆಗೆ ಶಕ್ತಿ ನೀಡಿದ್ದಾರೆ.

ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಕಾದಂಬರಿಯ ಅನಂತರ ಸಣ್ಣ ಕಥೆಗಳದೇ ಅಗ್ರಸ್ಥಾನ. ಒಂದು ದೃಷ್ಟಿಯಲ್ಲಿ ಕಾದಂಬರಿಗಿಂತ ಸಣ್ಣಕಥೆಯ ರಚನೆ ಹೆಚ್ಚು ಕ್ಲಿಷ್ಟವಾದುದು. ಹೀಗಿರುವಲ್ಲಿ ಕನ್ನಡ ಸಣ್ಣಕಥೆಗಳು ತಮ್ಮ ಕ್ಷೇತ್ರದಲ್ಲಿ ಪಡೆದಿರುವ ಸಿದ್ಧಿಯನ್ನು ನೋಡಿದರೆ ಕನ್ನಡ ಗದ್ಯ ಎಷ್ಟರಮಟ್ಟಿಗೆ ವಿಕಸನಗೊಂಡಿದೆಯೆಂಬ ಅಂಶ ಸ್ವಯಂವೇದ್ಯವಾಗುತ್ತದೆ. ಕೆರೂರ ವಾಸುದೇವಾಚಾರ್ಯ, ಪಂಜೆ, ಮಂಗೇಶರಾಯ, ಎಂ.ಎನ್.ಕಾಮತ್, ಶ್ರೀನಿವಾಸ ಇವರು ಕನ್ನಡ ಸಣ್ಣ ಕಥೆಗಳ ಮೊದಲಿಗರು. ನವೋದಯದಲ್ಲಿ ಕುವೆಂಪು, ಚದುರಂಗ, ಅ.ನ.ಕೃ. ಅಶ್ವತ್ಥ, ಎ.ಆರ್.ಕೃ., ಮೊದಲಾದ ಲೇಖಕರೂ ನವ್ಯದಲ್ಲಿ ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಶಾಂತಿನಾಥ ದೇಶಾಯಿ, ಪಿ.ಲಂಕೇಶ್, ಟಿ.ಜಿ.ರಾಘವ, ಕಾಮರೂಪಿ, ಯಶವಂತ ಚಿತ್ತಾಲ ಮೊದಲಾದವರು ಉತ್ತಮ ಕಥೆಗಳನ್ನು, ಶ್ರೇಷ್ಠ ದರ್ಜೆಯ ಭಾಷೆಯನ್ನು ಕೊಟ್ಟಿದ್ದಾರೆ.

ಜೀವನಚರಿತ್ರೆಯೂ ಗದ್ಯ ಪ್ರಕಾರಗಳಲ್ಲಿ ಒಂದು. ಎಂ.ಎಸ್.ಪುಟ್ಟಣ್ಣ, ಚ.ವಾಸುದೇವಯ್ಯ, ಡಿ.ವಿ.ಜಿ., ಕುವೆಂಪು, ಆಲೂರ ವೆಂಕಟರಾಯ, ಸಿ.ಕೆ.ವೆಂಕಟರಾಮಯ್ಯ ಮೊದಲಾದವರು ಉತ್ತಮ ದರ್ಜೆಯ ಜೀವನ ಚರಿತ್ರೆಗಳನ್ನು ನೀಡಿದ್ದಾರೆ. ಅದರಲ್ಲಿಯೂ ಕುವೆಂಪು ಅವರ ಗದ್ಯ ವಿಶಿಷ್ಟವಾದದ್ದು, ಪ್ರೌಢವಾದದ್ದು. ದೇಜಗೌ ಅವರ ಭಾಷೆ ಹೆಚ್ಚು ಗ್ರಾಮೀಣವಾದದ್ದು. ಶಿವರಾಮ ಕಾರಂತರದು ಹದವರಿತ ಶೈಲಿ. ಬೆಳೆಯುತ್ತಿರುವ ಆಧುನಿಕ ಜೀವನವನ್ನು ಯುಕ್ತವಾಗಿ ನಿರೂಪಿಸಬಲ್ಲ ಶಕ್ತಿ ಕನ್ನಡ ಗದ್ಯಕ್ಕೆ ಇದೆ ಎನ್ನುವ ವಿಷಯ ಈ ಜೀವನ ಚರಿತ್ರೆಗಳಿಂದ ಸ್ಪಷ್ಟವಾಗುತ್ತದೆ.

ನಾಟಕ ಇನ್ನೊಂದು ಬಗೆಯ ಗದ್ಯಕ್ಕೆ ದಾರಿಮಾಡಿಕೊಟ್ಟಿದೆ. ಆಧುನಿಕ ಕನ್ನಡ ನಾಟಕಗಳನ್ನು ವಿವೇಚಿಸಬೇಕಾದರೆ ಅಳಸಿಂಗರಾಚಾರ್ಯ, ಬಸವಪ್ಪಶಾಸ್ತ್ರಿ, ಟಿ.ಪಿ.ಕೈಲಾಸಂ, ಶ್ರೀರಂಗ, ಕುವೆಂಪು ಮೊದಲಾದವರನ್ನು ಮರೆಯುವಂತಿಲ್ಲ. ಗಿರೀಶ ಕಾರ್ನಾಡ ಕನ್ನಡ ನಾಟಕಗಳಿಗೆ ಒಂದು ಹೊಸ ದೃಷ್ಟಿಕೋನ ಕೊಟ್ಟರು. ನವ್ಯನಾಟಕಕಾರರಲ್ಲಿ ಪಿ.ಲಂಕೇಶ್, ಎಚ್.ಎಂ.ಚನ್ನಯ್ಯ, ಚಂದ್ರಶೇಖರ ಪಾಟೀಲ, ಚದುರಂಗ, ಕೀರ್ತಿನಾಥ ಕುರ್ತಕೋಟಿ, ಚಂದ್ರಕಾಂತ ಕುಸನೂರ, ಚಂದ್ರಶೇಖರ ಕಂಬಾರ ಮೊದಲಾದವರು ಸಮರ್ಥ ಲೇಖಕರು. ಇವರ ಕೈಯಲ್ಲಿ ಕನ್ನಡ ಗದ್ಯ ಬೆಳೆದಿದೆ; ಶ್ರೀಮಂತವಾಗಿದೆ. ಇಂಥ ಬರೆಹಗಾರರಿಂದ ಕನ್ನಡ ಗದ್ಯಸಾಹಿತ್ಯ ಹೊಸಹೊಸ ಆಯಾಮವನ್ನು ಪಡೆಯುತ್ತಿದೆ. ಪೌರಾಣಿಕ, ರುದ್ರ ಪ್ರಹಸನ, ಏಕಾಂಕ ನಾಟಕ ಈ ಮೊದಲಾದ ಪ್ರಕಾರಗಳಲ್ಲಿ ನಾಟಕಕಾರರು ಬಳಸಿರುವ ಗದ್ಯಭಾಷೆ ತನ್ನ ವೈವಿಧ್ಯದಿಂದ ಔಚಿತ್ಯದಿಂದ ಸಂಕೀರ್ಣತೆಯಿಂದ ವ್ಯಾಸಂಗಯೋಗ್ಯವೆನಿಸಿದೆ.

ವಿಮರ್ಶಾತ್ಮಕ ಲೇಖನಗಳು, ಕೃತಿಗಳು, ಹೊಸಗನ್ನಡ ಗದ್ಯವನ್ನು ಬೆಳೆಸುವುದರಲ್ಲಿ ಹೆಚ್ಚಿನ ಕೆಲಸ ನಡೆಸಿವೆ. ಮೊದಮೊದಲು ಈ ಲೇಖನಗಳು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಪ್ರಬುದ್ಧ ಕರ್ಣಾಟಕ, ಜಯಂತಿ, ಜಯಕರ್ನಾಟಕ, ಜೀವನ, ಶರಣಸಾಹಿತ್ಯ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುವು. ಈಗ ಅವುಗಳ ಜೊತೆಗೆ ಕರ್ನಾಟಕ ಭಾರತಿ, ವಿಜ್ಞಾನ ಕರ್ಣಾಟಕ, ಮಾನವಿಕ ಕರ್ಣಾಟಕ, ಸಾಧನೆ, ಸಂಕ್ರಮಣ, ಸಾಕ್ಷಿ, ಸಮನ್ವಯ, ಜಾನಪದ ಮೊದಲಾದುವು ಸೇರಿವೆ. ಇವಲ್ಲದೆ ದೈನಂದಿನ ಮತ್ತು ವಾರಪತ್ರಿಕೆಗಳಾದ ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಸುಧಾ, ಕರ್ಮವೀರ, ತರಂಗ, ಪ್ರಜಾಮತ, ಜನಪ್ರಗತಿ ಮೊದಲಾದುವು ವರ್ಷಕ್ಕೆ ಒಂದು ಬಾರಿಯೋ ಎರಡು ಬಾರಿಯೋ ಹೊರತರುವ ವಿಶೇಷಾಂಕಗಳಲ್ಲೂ ಪ್ರೌಢಲೇಖನಗಳು ಅಚ್ಚಾಗುತ್ತಿವೆ. ವಿಮರ್ಶಾರಂಗ ವಿಶಾಲವಾಗಿ ಬೆಳೆಯುವುದಕ್ಕೆ ಈ ಪತ್ರಿಕೆಗಳಿಂದ ಆಗಿರುವ ಸಹಾಯ ಅಪಾರ. ಇವಲ್ಲದೆ ವಿಮರ್ಶನ ಗದ್ಯ ಕಾಲಕಾಲಕ್ಕೆ ಪುಸ್ತಕಗಳಾಗಿಯೂ ಹೊರಬಂದಿದೆ. ಪಂಪ, ರನ್ನ, ಕುಮಾರವ್ಯಾಸ, ಮುದ್ದಣ ಮೊದಲಾದವರನ್ನು ಕುರಿತ ಪ್ರಶಸ್ತಿಗಳು ಆಯಾ ಕವಿಯ ಮತ್ತು ಕಾವ್ಯದ ಪರಿಚಯವನ್ನು ಮಾಡಿಕೊಡುವ ವಿಮರ್ಶಾತ್ಮಕ ಕೃತಿಗಳು. ಇಲ್ಲಿಯ ಲೇಖನಗಳೆಲ್ಲ ಶಾಸ್ತ್ರೀಯ ಗದ್ಯ ಶೈಲಿಯಲ್ಲಿವೆ. ಇವೇ ಮುಂದಿನ ವಿಮರ್ಶಕರಿಗೆ ಮಾರ್ಗದರ್ಶನ ನೀಡಿದುವೆನ್ನಬಹುದು. ಅಭಿವಂದನೆ, ಸಂಭಾವನೆ, ಉಡುಗೊರೆ, ಉಪಾಯನ, ಬಾಗಿನ, ಗಂಗೋತ್ರಿ, ದೇಜಗೌ ಐವತ್ತು, ರಸಿಕರಂಗ, ಗಂಗೋತ್ರಿ, ಸಹ್ಯಾದ್ರಿ, ಕಾರಂತ ಪ್ರಪಂಚ, ಸವಿನೆನಪು, ಮಹಾಮಾರ್ಗ ಈ ಮೊದಲಾದ ಅಭಿನಂದನ ಗ್ರಂಥಗಳು ಕನ್ನಡ ವಿಮರ್ಶಾಗದ್ಯದ ಉಜ್ವಲ ಮಾದರಿಗಳನ್ನು ಒದಗಿಸುತ್ತವೆ. ವಿಮರ್ಶಾರಂಗದಲ್ಲಿ ಎಸ್.ವಿ.ರಂಗಣ್ಣ, ದೇಜಗೌ, ಹಾ.ಮಾ.ನಾಯಕ, ಎಲ್.ಬಸವರಾಜು, ಎಂ.ಚಿದಾನಂದಮೂರ್ತಿ, ರಂ.ಶ್ರೀ.ಮುಗಳಿ, ಜಿ.ಎಸ್.ಶಿವರುದ್ರಪ್ಪ, ಸಿ.ಪಿ.ಕೃಷ್ಣಕುಮಾರ್ ಮೊದಲಾದವರು ಸ್ಮರಣೀಯ ಕೆಲಸ ಮಾಡಿದ್ದಾರೆ. ಈ ಮಹನೀಯರಲ್ಲಿ ಕೆಲವರು ಹಳಗನ್ನಡ ಕಾವ್ಯಗಳನ್ನು ಪರಿಷ್ಕರಿಸಿ ಸಂಪಾದಿಸಿ ಅವುಗಳಿಗೆ ಮುನ್ನುಡಿ, ಪ್ರಸ್ತಾವನೆಗಳನ್ನು ಗದ್ಯದಲ್ಲಿ ಬರೆದು ಗದ್ಯಸಾಹಿತ್ಯವನ್ನು ಪುಷ್ಟಿಗೊಳಿಸಿದ್ದಾರೆ. ಇವರಲ್ಲದೆ ಹೆಚ್ಚಾಗಿ ನವ್ಯ ಸಾಹಿತ್ಯವನ್ನು ಕುರಿತು ವಿಮರ್ಶಿಸಿ ಹೊಸದೃಷ್ಟಿಯನ್ನು ಬೆಳೆಸಿದವರಲ್ಲಿ ಗೋಪಾಲಕೃಷ್ಣ ಅಡಿಗ, ಎಂ.ಜಿ.ಕೃಷ್ಣಮೂರ್ತಿ, ಯು.ಆರ್.ಅನಂತಮೂರ್ತಿ, ಕುರ್ತಕೋಟಿ, ಶಂಕರ ಮೊಕಾಶಿ ಪುಣೇಕರ, ಪಿ.ಲಂಕೇಶ್, ಜಿ.ಎಚ್.ನಾಯಕ, ಎಚ್.ಎಂ.ಚನ್ನಯ್ಯ, ಎನ್.ಎಸ್.ಎಲ್.ಭಟ್ಟ, ಸುಮತೀಂದ್ರ ನಾಡಿಗ, ಡಿ.ಆರ್.ನಾಗರಾಜ್, ಟಿ.ಪಿ.ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮೊದಲಾದವರು ಮುಖ್ಯರು.

ಗದ್ಯದ ಬೆಳೆವಣಿಗೆಗೆ ವೃತ್ತ ಪತ್ರಿಕೆಗಳು, ಸಾಪ್ತಾಹಿಕ ಪತ್ರಿಕೆಗಳು, ಮಾಸಪತ್ರಿಕೆಗಳು, ತ್ರೈಮಾಸಿಕ ಪತ್ರಿಕೆಗಳು, ಆಯನಪತ್ರಿಕೆಗಳು ನಾನಾಮುಖವಾಗಿ ಸೇವೆ ಸಲ್ಲಿಸುತ್ತಿವೆ. ಗದ್ಯ ವಿಕಸನಕ್ಕೆ ಆಡುಮಾತನ್ನು ಬಿಟ್ಟರೆ ಪತ್ರಿಕೆಗಳೇ ಪ್ರಮುಖ ರಂಗವನ್ನು ಒದಗಿಸಿವೆಯೆಂಬ ಮಾತು ನಿಜ. ಮಾತು, ಅಭಿಪ್ರಾಯ, ವರದಿ, ವರ್ಣನೆ, ವಾದ, ವಿವಾದ, ತರ್ಕ, ರಂಜನೆ ಎಲ್ಲ ಅನುಭವಗಳಿಗೂ ಪತ್ರಿಕೆ ಎಡೆಕೊಡುತ್ತದೆ. ತನ್ಮೂಲಕ ಗದ್ಯ ಮಾದರಿಗಳನ್ನು ಬೆಳೆಸುತ್ತದೆ. ಸದ್ಯಕ್ಕೆ ಒದಗಬಲ್ಲ ಹೊಸ ಹೊಸ ಪದಗಳ ಸೃಷ್ಟಿಯಾಗುವುದೂ ಪತ್ರಿಕೆಗಳಲ್ಲಿಯೇ.

ಈ ದೃಷ್ಟಿಯಿಂದ ಪ್ರಜಾವಾಣಿ, ಉದಯವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಸುಧಾ, ಕರ್ಮವೀರ, ಕಸ್ತೂರಿ, ಮಯೂರ, ತುಷಾರ, ತರಂಗ ಮೊದಲಾದವು ಮಾಡುತ್ತಿರುವ ಕೆಲಸ ಮುಖ್ಯವಾದುದು. ಹೀಗೆ ಪತ್ರಿಕೆ ಜೀವದ್ಭಾಷೆಯ ಪ್ರಯೋಗ ಶಾಲೆಯಾಗಿದೆ.

ಅನುವಾದಕೃತಿಗಳಿಂದಲೂ ಕನ್ನಡ ಗದ್ಯಭಾಷೆ ಹೆಚ್ಚು ಸಂಪದ್ಭರಿತವಾಗಿದೆ. ಸಂಸ್ಕೃತ, ಇಂಗ್ಲಿಷ್, ರಷ್ಯನ್ ಹಿಂದಿ, ತೆಲುಗು, ತಮಿಳು, ಮಲೆಯಾಳಂ, ಮರಾಠಿ, ಬಂಗಾಲಿ ಇತ್ಯಾದಿ ಭಾಷೆಗಳ ಅನುವಾದದಿಂದ ಕನ್ನಡದ ಗದ್ಯ ಹೊಸ ಸತ್ವವನ್ನು ಪಡೆಯುತ್ತಿದೆ. ವಿವಿಧ ಭಾಷೆಗಳ ವಿಶಿಷ್ಟ ಶಬ್ದಗಳು, ನುಡಿಗಟ್ಟು, ವಾಕ್ಯರಚನೆ ಮುಂತಾದುವನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಕನ್ನಡ ಹೇಗೆ ಅದನ್ನು ನಿರ್ವಹಿಸಿದೆ. ಅದರಲ್ಲಿ ಎರವಲು ಎಷ್ಟು, ಎಷ್ಟರ ಮಟ್ಟಿಗೆ ಅನುವಾದ ಸಫಲವಾಗಿದೆ ಎಂಬ ವಿಷಯಗಳನ್ನು ಪರಿಶೀಲಿಸಿದಲ್ಲಿ ಅನುವಾದದಿಂದ ಭಾಷೆ ಹೇಗೆ ಬೆಳೆಯಬಲ್ಲದೆಂಬ ಅಂಶ ಸ್ಪಷ್ಟವಾಗುತ್ತದೆ. ಸಂಸ್ಕೃತ ಗ್ರಂಥವನ್ನು ಅನುವಾದಿಸುವುದರಲ್ಲಿ ಕೆ. ಕೃಷ್ಣಮೂರ್ತಿಯವರ ಹೆಸರು ಹೊಸಗನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ದೇಜಗೌ ಅವರು ಇಂಗ್ಲಿಷ್ ಹಾಗೂ ರಷ್ಯನ್ ಸಾಹಿತ್ಯಾನುವಾದದಿಂದ ಕನ್ನಡದ ಗದ್ಯಸಂಪತ್ತನ್ನು ಬೆಳಗಿಸಿದ್ದಾರೆ. ಇವರ ಗದ್ಯದಲ್ಲಿ ಬಿಗು ಬಿನ್ನಾಣವಿದೆ, ಬನಿ ತನಿ ಇದೆ, ಆಡುಮಾತುಗಳ ಜಾಲವಿದೆ, ಅಸಂಖ್ಯ ಹೊಸ ಶಬ್ದಗಳ ಸೃಷ್ಟಿಯಿದೆ. ಶಾಸ್ತ್ರೀಯ ಅನುವಾದಕ್ಕೆ ಎನ್.ಬಾಲಸುಬ್ರಹ್ಮಣ್ಯಂ ಹೆಸರಾಗಿದ್ದಾರೆ. ಸಿ.ಪಿ.ಕೆ. ಅವರು ಸಂಸ್ಕೃತ, ಇಂಗ್ಲಿಷ್ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಗದ್ಯ ಸಾಹಿತ್ಯವನ್ನು ಬಲಪಡಿಸಿದ್ದಾರೆ.

ಎ.ಆರ್. ಕೃಷ್ಣಶಾಸ್ತ್ರೀ

ಇನ್ನು ವಿದ್ವಾಂಸರು ನಡೆಸಿದ ಹಿರಿಯ ಸಂಶೋಧನೆಗಳ ಪ್ರಕಟಣೆಗಳನ್ನು ಗಮನಿಸಬಹುದು. ಎ.ಆರ್.ಕೃ. ಅವರ ಕನ್ನಡ ನಾಟಕ, ಬಂಕಿಮಚಂದ್ರ, ಜಿ.ವರದರಾಜರಾವ್ ಅವರ ಕುಮಾರರಾಮನ ಸಾಂಗತ್ಯಗಳು, ಚಿದಾನಂದಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಜಿ.ಎಸ್.ಶಿವರುದ್ರಪ್ಪನವರ ಸೌಂದರ್ಯ ಸಮೀಕ್ಷೆ, ಪ್ರಭುಶಂಕರರ ಕನ್ನಡದಲ್ಲಿ ಭಾವಗೀತೆ, ಟಿ.ವಿ.ವೆಂಕಟಾಚಲಶಾಸ್ತ್ರೀ ಅವರ ಕನ್ನಡ ಛಂದಸ್ಸು, ಶ್ರೀನಿವಾಸ ಹಾವನೂರರ ಹೊಸಗನ್ನಡದ ಅರುಣೋದಯ ಮೊದಲಾದವು ಈ ಬಗೆಯ ಗದ್ಯಕ್ಕೆ ಉತ್ತಮ ಉದಾಹರಣೆಗಳು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗುತ್ತಿರುವ ಕನ್ನಡ ವಿಶ್ವಕೋಶದ ಸಂಪುಟಗಳು ಗದ್ಯ ಕ್ಷೇತ್ರದಲ್ಲಿ ಹೊಸದೊಂದು ವಿಕ್ರಮ ಸ್ಥಾಪಿಸುತ್ತಿವೆ. ಭಾಷೆಯನ್ನು ವೈಜ್ಞಾನಿಕವಾಗಿ ಬಳಸುವುದು, ಪದಪ್ರಯೋಗಗಳಲ್ಲಿ ಸಾಧ್ಯವಾದಷ್ಟು ಏಕತೆಯನ್ನು ಸಾಧಿಸುವುದು, ಅನುಚಿತವೆನಿಸಬಹುದಾದ ಕೆಲವು ಪ್ರತ್ಯಯಗಳನ್ನು ನಿವಾರಿಸುವುದು, ಭಿನ್ನ ಭಿನ್ನ ಲೇಖಕರ ಬರೆಹಗಳನ್ನು ಉಚಿತ ಸಂಯೋಜನೆಯಿಂದ ಒಂದು ಸಮಾನ ರೂಪಕ್ಕೆ ತರುವುದು ಈ ಮೊದಲಾದ ಅಂಶಗಳಿಂದಾಗಿ ಇಲ್ಲಿನ ಗದ್ಯ ಪರಿಶೀಲನಯೋಗ್ಯವಾಗಿದೆ. ವಿವಿಧ ಜ್ಞಾನಕ್ಷೇತ್ರಗಳಲ್ಲಿನ ಅದರಲ್ಲೂ ವಿಜ್ಞಾನ ವಿಭಾಗಗಳಲ್ಲಿನ ಸೂಕ್ಷ್ಮವೂ ಸಂಕೀರ್ಣವೂ ಆದ ಅಂಶಗಳನ್ನು ಶಾಸ್ತ್ರೀಯ ಸ್ಪಷ್ಟತೆಯಿಂದ ಕನ್ನಡ ಗದ್ಯ ರೂಪಿಸಬಲ್ಲುದೆಂಬುದಕ್ಕೆ ಈ ಕೋಶಗಳಲ್ಲಿ ನಿದರ್ಶನಗಳಿವೆ. ಇದರ ಜೊತೆಗೆ ವಿಜ್ಞಾನ ವಿಷಯಗಳನ್ನು ಕುರಿತು ಆರ್.ಎಲ್.ನರಸಿಂಹಯ್ಯ, ಶಿವರಾಮ ಕಾರಂತ, ಜೆ.ಆರ್.ಲಕ್ಷ್ಮಣರಾವ್, ಡಿ.ಎಸ್.ಶಿವಪ್ಪ, ಜಿ.ಟಿ.ನಾರಾಯಣರಾವ್ ಮೊದಲಾದವರು ರಚಿಸಿರುವ ಗ್ರಂಥಗಳನ್ನೂ ಕನ್ನಡ ವಿಜ್ಞಾನ ಸಾಹಿತ್ಯ ನಿರ್ಮಾಣ ಗ್ರಂಥಗಳನ್ನೂ ಪರಿಶೀಲಿಸಬಹುದು. ಇತ್ತೀಚೆಗೆ ಹೆಚ್ಚು ವಿಶಾಲವೂ ವೈಜ್ಞಾನಿಕವೂ ಆಗಿ ಬೆಳೆಯುತ್ತಿರುವ ವಿಷಯಗಳಲ್ಲಿ ಜಾನಪದವೂ ಒಂದು. ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಕಥೆ, ಒಗಟು, ಗಾದೆ, ಗೀತೆ ಪ್ರಮುಖವಾದವು. ನೂರಾರು ಜನಪದ ಕಥೆಗಳೂ ಗಾದೆ ಗೀತೆ ಒಗಟುಗಳೂ ಸಂಪಾದನೆ ಹೊಂದಿ ಪ್ರಕಟವಾಗಿವೆ. ಹಲವಾರು ವಿದ್ವಾಂಸರು ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ ಹೆಸರು ಗಳಿಸಿದ್ದಾರೆ. ಜಾನಪದದ ಬಗ್ಗೆ ಜನಪದ ಸಾಹಿತ್ಯದ ಬಗ್ಗೆ ಅನೇಕ ಲೇಖನಗಳೂ ವಿಮರ್ಶಾಕೃತಿಗಳೂ ಹೊರಬಂದಿವೆ. ಜನಪದ ಸಾಹಿತ್ಯದಲ್ಲಿ ಕಥೆ, ಒಗಟು, ಗಾದೆ ಇವುಗಳಲ್ಲಿ ಬಳಕೆಯಾಗಿರುವ ಗದ್ಯ ಆಡುಭಾಷೆಯ ಸೊಗಡಿನಿಂದ ಕೂಡಿದ್ದು ಜೀವಂತವಾಗಿದೆ. ಈ ಭಾಷೆ ಕನ್ನಡದ ನೈಜ ಜಾಯಮಾನದ ಸಂಪತ್ತಿನಿಂದ ಕೂಡಿದೆ.

ಇಂದು ಸೃಜನಶೀಲ ಗದ್ಯ ಒಂದು ಕಡೆ, ಶಾಸ್ತ್ರ ಗದ್ಯ ಇನ್ನೊಂದು ಕಡೆ ವೈವಿಧ್ಯಪೂರ್ಣವಾಗಿ ಬೆಳೆಯುತ್ತಿದೆ. ಪದ್ಯಕ್ಕಿಂತ ಗದ್ಯಕ್ಕೆ ಹೆಚ್ಚಿನ ವ್ಯಾವಹಾರಿಕ ಪ್ರಾಮುಖ್ಯವಿದೆ. ಆಧುನಿಕ ಯುಗದಲ್ಲಂತೂ ಗದ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ಸಂದಿದೆ. ಈಚೆಗೆ ವಾಣಿಜ್ಯ ವ್ಯವಹಾರಗಳಲ್ಲಿ ಕನ್ನಡದ ಬಳಕೆ ಹೆಚ್ಚಿದೆ. ಕನ್ನಡ ಹಂತಹಂತವಾಗಿ ಆಡಳಿತ ಭಾಷೆಯಾಗಿ ರೂಢಿಯಾಗುತ್ತಿದೆ. ಪದವಿ ಮಟ್ಟದ ಶಿಕ್ಷಣ ಕನ್ನಡ ಮಾಧ್ಯಮದಿಂದ ಯಶಸ್ವಿಯಾಗಿ ನೆರವೇರುತ್ತಿದೆ. ಅದಕ್ಕನುಕೂಲವಾಗಿ ಪಠ್ಯಪುಸ್ತಕಗಳು ಸೃಷ್ಟಿಯಾಗುತ್ತಿವೆ. ಕನ್ನಡ ಗದ್ಯ ಸುಪುಷ್ಟವಾಗಿ ಬೆಳೆದು ಶಾಸ್ತ್ರಾಭಿವ್ಯಕ್ತಿಗೂ ಭಾವಾಭಿವ್ಯಕ್ತಿಗೂ ಸಮರ್ಥವಾದುದಾಗಿದೆ. ಕನ್ನಡ ಮಾಧ್ಯಮದಿಂದ ಯಾವ ವಿಷಯವನ್ನಾದರೂ ಹೇಳಲು ಕಲಿಯಲು ಬರುತ್ತದೆ ಎಂಬ ಅಂಶ ಮೇಲಿನ ಪರಿಶೀಲನೆಯಿಂದ ಸಹಜವಾಗಿ ಸ್ಪಷ್ಟಗೊಳ್ಳುತ್ತಿದೆ.

*

1970ರ ದಶಕ ಕನ್ನಡ ಗದ್ಯಸಾಹಿತ್ಯಕ್ಷೇತ್ರದಲ್ಲಿ ಬಹಳ ಪ್ರಮುಖವಾದದ್ದು ನವೋದಯ ಕಾಲದ ಸಾಹಿತ್ಯ, ಪ್ರಗತಿಶೀಲ ಕಾಲದ ಸಾಹಿತ್ಯದ ಹಂತಗಳನ್ನು ದಾಟಿ ನವ್ಯಪಂಥದ ಕಾಲದ ಸಾಹಿತ್ಯ ಶಿಖರಾವಸ್ಥೆಯನ್ನು ತಲಪಿದ ಕಾಲವದು. ಕಾವ್ಯದ ಕ್ಷೇತ್ರದಲ್ಲಿ ನವ್ಯಪಂಥ ಒಂದು ವಿನೂತನ ಕಾವ್ಯಮಾದರಿಯನ್ನು ರೂಢಿಸಿತು. ಪದ್ಯಗಂಧಿ ಗದ್ಯ ಹೆಚ್ಚು ಪ್ರಬಲವಾಯಿತು. ಕಾವ್ಯ ತನ್ನ ಗೇಯತೆಯನ್ನು ಕಳೆದುಕೊಂಡು ವಾಸ್ತವಕ್ಕೆ ಹೆಚ್ಚು ಹತ್ತಿರವಾಯ್ತು. ಅನೇಕ ನವ್ಯ ಲೇಖಕರು ಕನ್ನಡ ಗದ್ಯವನ್ನು ಅತ್ಯಂತ ಸೃಜನಶೀಲವಾಗಿ ಬೆಳೆಸಿದರು. ಗದ್ಯವೂ ಕಾವ್ಯದಷ್ಟೇ, ಅದಕ್ಕೆ ಒಂದು ಕೈ ಮೇಲಾಗಿ ಸಾಹಿತ್ಯವನ್ನು ತುಂಬಿಕೊಂಡಿತು. ವಿಮರ್ಶೆಯ ಕ್ಷೇತ್ರ, ಅದರ ಪರಿಮಿತಿಗಳ ನಡುವೆಯೂ ಅತ್ಯಂತ ಶ್ರೀಮಂತವಾದದ್ದು ನವ್ಯ ಸಾಹಿತ್ಯ ಸಂದರ್ಭದಲ್ಲಿ. ಗೋಪಾಲಕೃಷ್ಣ ಅಡಿಗ, ಲಂಕೇಶ್, ಅನಂತಮೂರ್ತಿ, ಎಂ.ಜಿ.ಕೃಷ್ಣಮೂರ್ತಿ, ಮೊದಲಾದವರು ಕನ್ನಡ ಗದ್ಯಸಾಹಿತ್ಯ ಕ್ಷೇತ್ರದ ಕ್ಷಿತಿಜವನ್ನು ತಮ್ಮ ಬರೆಹಗಳಿಂದ ವಿಸ್ತರಿಸಿದರು. ಈ ವಿಸ್ತರಣೆಯಲ್ಲಿ ಸಾಕ್ಷಿ, ಸಂಕ್ರಮಣ ಮೊದಲಾದ ಸಾಹಿತ್ಯ ಪತ್ರಿಕೆಗಳ ಕೊಡುಗೆಯನ್ನು ನಾವು ಮರೆಯುವಂತಿಲ್ಲ. ಅನಂತರ ಬಂಡಾಯ, ದಲಿತ ಸಾಹಿತ್ಯದ ಸಂದರ್ಭದಲ್ಲಿ ಗದ್ಯ ನ ಭೂತೋ ನ ಭವಿಷ್ಯತಿ ಎಂಬಂತೆ ಸಹಸ್ರ ಮುಖಿಯಾಯ್ತು. ಕೆಳವರ್ಗದಿಂದ ಬಂದ ಲೇಖಕರ ತಾಜಾ ಅನುಭವಗಳ ಅಭಿವ್ಯಕ್ತಿ ಆಯಾ ಪ್ರಾದೇಶಿಕ ಭಾಷೆಯ ಎಲ್ಲ ಸತ್ವದೊಡನೆ ವಿಜೃಂಭಿಸಿತು. ಕನ್ನಡ ಗದ್ಯಕ್ಕೆ ಹೊಸ ರಕ್ತದಾನವಾಯಿತು.

ತೇಜಸ್ವಿ, ಲಂಕೇಶ್, ಬೆಸಗರಹಳ್ಳಿ ರಾಮಣ್ಣ, ಕುಂ.ವೀರಭದ್ರಪ್ಪ, ವೀರಭದ್ರ, ಗಿರೀಶ್ ಕಾರ್ನಾಡ್, ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಪಾಟೀಲ, ಸಿದ್ಧಲಿಂಗಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜ, ಮಾಧವ ಕುಲಕರ್ಣಿ, ಚೆನ್ನಣ್ಣ ವಾಲೀಕಾರ ಮುಂತಾದವರು ಕನ್ನಡ ಗದ್ಯಕ್ಕೆ ಹೊಸ ಆಯಾಮವನ್ನು ನೀಡಿದರು. ಕಾರ್ನಾಡ್, ಕಂಬಾರ, ಲಂಕೇಶ್ ಮುಂತಾದವರು ನಾಟಕ ಕ್ಷೇತ್ರದ ಗದ್ಯದಲ್ಲಿ ಉತ್ತಮ ಸಾಧನೆ ಮಾಡಿದರು.

ಬಂಡಾಯ ಸಾಹಿತ್ಯದಲ್ಲಿ ಮುಖ್ಯವಾಗಿ ಮೂರು ಬಗೆಯ ಸಂವೇದನೆಗಳನ್ನು ನೋಡಬಹುದು – ದಲಿತ ಸಂವೇದನೆ, ಮಹಿಳಾ ಸಂವೇದನೆ ಮತ್ತು ಮುಸ್ಲಿಂ ಸಂವೇದನೆ. ಸಣ್ಣಕಥೆಗಳ ಕ್ಷೇತ್ರದಲ್ಲಿ ಬರೆವಣಿಗೆಯ ಹೊಸತನ ಕಾಣಿಸಿಕೊಳ್ಳತೊಡಗಿತು. ಕುಂ.ವೀರಭದ್ರಪ್ಪನವರ ಇನ್ನಾದರೂ ಸಾಯಬೇಕು, ಬೆಸಗರಹಳ್ಳಿ ರಾಮಣ್ಣನವರ ಕನ್ನಂಬಾಡಿ, ಬರಗೂರು ರಾಮಚಂದ್ರಪ್ಪನವರ ಕಪ್ಪುನೆಲದ ಕೆಂಪುಕಾಲು, ಫಕೀರ್ ಮಹಮ್ಮದ್ ಕಟ್ಪಾಡಿಯವರ ನೋಂಬು, ಬಾನು ಮುಷ್ತಾಕ್ ಅವರ ಹೆಜ್ಜೆ ಮೂಡದ ಹಾದಿ, ವೀರಭದ್ರ ಅವರ ಕನ್ನಡಿ ನೋಡಿದ ನಾಯಿ, ಚದುರಂಗರ ಮೃಗಯಾ, ವೀಣಾ ಶಾಂತೇಶ್ವರರ ಬಿಡುಗಡೆ, ಕೊಡ್ಲೆಕೆರೆಯವರ ಯಕ್ಷಸೃಷ್ಟಿ, ತೇಜಸ್ವಿಯವರ ಕಿರಗೂರಿನ ಗಯ್ಯಾಳಿಗಳು, ಮೊಗಳ್ಳಿ ಗಣೇಶ್ ಅವರ ಬುಗುರಿ ಮುಂತಾದ ಕೃತಿಗಳಲ್ಲಿ ಗ್ರಾಮೀಣ ಲಕ್ಷಣವನ್ನುಳ್ಳ ಭಾಷೆಯನ್ನೂ ಗದ್ಯದ ವಿಕಾಸವನ್ನೂ ಕಾಣುತ್ತೇವೆ. ನಾ.ಡಿಸೋಜರವರ ಸಣ್ಣಕಥೆಗಳ ಭಾಷೆಯ ಸ್ವಾರಸ್ಯದಿಂದಾಗಿ ಓದುಗರು ಕ್ರೈಸ್ತ ಸಮಾಜ, ಸಮುದಾಯದ ನಡುವೆಯೇ ಇರುವಂತೆ ತೋರುತ್ತದೆ. ಕೆಳವರ್ಗದವರ ಬದುಕಿನ ಹೃದಯಸ್ಪರ್ಶಿ ಚಿತ್ರಣವನ್ನು ಅನೇಕ ಸಣ್ಣಕತೆಗಾರರ ಬರೆಹಗಳಲ್ಲಿ ಕಾಣುತ್ತೇವೆ. ದೇವನೂರು ಮಹಾದೇವ, ಮೊಗಳ್ಳಿ ಗಣೇಶ್, ಕುಂ.ವೀರಭದ್ರಪ್ಪ, ಅಮರೇಶ ನುಗುಡೋಣಿ, ಎಂ.ಎಸ್.ವೇದಾ ಮುಂತಾದವರ ಕಥೆಗಳನ್ನು ಭಾಷೆಯ ಸ್ವಾರಸ್ಯಕ್ಕಾಗಿಯೂ ಮತ್ತೆ ಮತ್ತೆ ಓದಬೇಕೆನಿಸುವುದುಂಟು.

ಇದೇ ಸಂದರ್ಭದಲ್ಲಿ ಬಂದ ಕಾದಂಬರಿಗಳೂ ಭಾಷೆಯ ಗತಿಸ್ಥಿತಿಯನ್ನು ವಿಸ್ತೃತಗೊಳಿಸಿದವು. ದೇವನೂರರ ಕುಸುಮಬಾಲೆ ಕಾದಂಬರಿಯ ಗದ್ಯ, ಒಡಲಾಳದ ಗದ್ಯ ಒಂದು ಸಮಾಜದ ಸಮುದಾಯಮೊಂದರ ಆಡುಭಾಷೆಯ ಎಲ್ಲ ಕಸುವನ್ನೂ

ಬೆರಗನ್ನೂ ಒಳಗೊಂಡಿರುವುದು ನಮ್ಮ ಗಮನ ಸೆಳೆಯುತ್ತದೆ. ಈ ಕೃತಿಗಳನ್ನು ಓದಲು, ಅರ್ಥೈಸಲು ಒಂದು ವಿಶಿಷ್ಟ ಬಗೆಯ ಮನೋಭಾವ, ಗ್ರಾಮೀಣ ಬದುಕಿನ ಅರಿವು ಅತ್ಯಂತ ಅಗತ್ಯವಾಗಿಬಿಡುತ್ತದೆ. ಕನ್ನಡ ಗದ್ಯಲೋಕ ಅದುವರೆಗೆ ಈ ಬಗೆಯ ಬೆರಗಿನ ಭಾಷೆಯನ್ನು ಕಂಡಿರಲಿಲ್ಲ.

ಕನ್ನಡದಲ್ಲಿ ನಾಟಕಗಳು ಕಡಿಮೆ ಎಂಬ ಭಾವನೆ ಇದೆ. ಶ್ರೀರಂಗರ ಅನಂತರ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರರು ನಾಟಕದ ಗದ್ಯವನ್ನು ಬೆಳೆಸಿದರು. ಕಂಬಾರರು ಉತ್ತರ ಕರ್ನಾಟಕದ ಭಾಷೆಯನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಕಾರ್ನಾಡ್‌ರ ನಾಟಕಗಳು ಸೊಗಸಾದ ಗದ್ಯವನ್ನು ನಿರ್ಮಿಸಿಕೊಟ್ಟಿವೆ. ತುಘಲಕ್, ಯಯಾತಿ, ಹಯವದನ, ಅಗ್ನಿ ಮತ್ತು ಮಳೆ ಮುಂತಾದುವುಗಳ ಗದ್ಯವನ್ನು ನೋಡಬಹುದು. ಎಚ್.ಎಸ್.ಶಿವಪ್ರಕಾಶ್ ಅವರ ಸುಲ್ತಾನ್ ಟಿಪ್ಪು, ಮಹಾಚೈತ್ರ, ಟಿ.ಎನ್.ಸೀತಾರಾಮ್ ಅವರ ಆಸ್ಫೋಟ, ನಮ್ಮೊಳಗೊಬ್ಬ ನಾಜೂಕಯ್ಯ ಮುಂತಾದುವನ್ನೂ ಭಾಷೆಯದೃಷ್ಟಿಯಿಂದ ಪರಿಶೀಲಿಸಬೇಕು.

ಕನ್ನಡದಲ್ಲಿ ನವ್ಯಪಂಥದ ಕಾಲದಲ್ಲಿ ಕುರ್ತಕೋಟಿ, ಆಮೂರ, ಗಿರಡ್ಡಿ, ಲಂಕೇಶ್, ಚಂದ್ರಶೇಖರ ಪಾಟೀಲ್, ಮಾಧವ ಕುಲಕರ್ಣಿ, ಎಚ್.ಎಂ.ಚನ್ನಯ್ಯ ಮುಂತಾದವರು ವಿಮರ್ಶೆಯ ಗದ್ಯವನ್ನು ಕನ್ನಡ ಜಾಯಮಾನಕ್ಕೆ ಒಗ್ಗುವಂತೆ ಬಳಸತೊಡಗಿದರು.

ದಲಿತ ಸಂವೇದನೆ ಸ್ಪಷ್ಟವಾಗಿ ಕನ್ನಡ ನೆಲದಲ್ಲಿ ಹಬ್ಬಿದ ಅನಂತರ ಕನ್ನಡ ಗದ್ಯಕ್ಕೆ ಹೊಸ ಆಯಾಮ ಲಭಿಸಿತು. ಅದುವರೆಗೆ ಶಿಷ್ಟರಿಗೆ ಅಗೋಚರವಾಗಿದ್ದ ಪರಿಶಿಷ್ಟರ ಗದ್ಯದ ಗತ್ತು ತಿಳಿದುಬಂದಿತು. ದೇವನೂರು ಮಹಾದೇವರ ಅನಂತರ ಮುಳ್ಳೂರು ನಾಗರಾಜ, ಮ.ನ.ಜ., ಮೊಗಳ್ಳಿ ಗಣೇಶ್, ಅರವಿಂದಮಾಲಗತ್ತಿ ಮೊದಲಾದವರ ಗದ್ಯ ದಲಿತ ಸಂವೇದನೆಯನ್ನು ಪ್ರಕಟಿಸತೊಡಗಿತು. ಮಹಿಳಾ ಸಂವೇದನೆ ಕಳೆದ ಕಾಲು ಶತಮಾನದಲ್ಲಿ ಬೆಳೆದಂತೆ ಹಿಂದೆಂದೂ ಬೆಳೆದಿರಲಿಲ್ಲ. ಹಿಂದೆ ಮಹಿಳಾ ಕಾದಂಬರಿಕಾರರು ಇದ್ದರೇ ವಿನಾ ಮಹಿಳಾ ಸಂವೇದನೆಯನ್ನು ಪ್ರತಿಪಾದಿಸುವ ಧೈರ್ಯವನ್ನು ತೋರುವವರು ತುಂಬಾ ಕಡಿಮೆ ಇದ್ದರು. ಮಹಿಳೆಯರಲ್ಲಿ ದಲಿತ ದಲಿತೇತರ ಎಂಬ ವ್ಯತ್ಯಾಸವೇನೂ ಇಲ್ಲ. ಏಕೆಂದರೆ ಇಡೀ ಸ್ತ್ರೀವರ್ಗವೇ ವಿಮೋಚನೆಯನ್ನು ಬಯಸುವ ಸ್ಥಿತಿಯಲ್ಲಿತ್ತು. ಉಷಾನವರತ್ನರಾಂ, ಸಿ.ಎನ್.ಮುಕ್ತಾ, ಈಚನೂರು ಸಹೋದರಿಯರು, ಸಾರಾ ಅಬೂಬಕರ್, ಬಾನು ಮುಷ್ತಾಕ್, ಗೀತಾ ನಾಗಭೂಷಣ, ವಿಜಯಾ, ಫಿಲೋಮಿನಾ, ಸಂಧ್ಯಾರೆಡ್ಡಿ, ಸುನಂದಾ ಬೆಳಗಾಂವಕರ, ವಿಜಯಾದಬ್ಬೆ, ಸುಮಿತ್ರಾಬಾಯಿ, ಪ್ರತಿಭಾ ನಂದಕುಮಾರ್, ನಾಗಚಂದ್ರ ಮೊದಲಾದ ಅನೇಕ ಲೇಖಕಿಯರು ಕೃತಿರಚನೆ ಮಾಡಿದ್ದಾರೆ. ಆದರೆ ಭಾಷೆಯ ವೈಶಿಷ್ಟ್ಯವನ್ನು ತೋರಿಸಿದವರಲ್ಲಿ ಸುನಂದಾ ಬೆಳಗಾಂವಕರ, ವೈದೇಹಿ ಮುಂತಾದವರು ಪ್ರಮುಖರು. ಮುಸ್ಲಿಂ ಸಂವೇದನೆ ತುಂಬ ತಡವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿತು. ರಮಜಾನದರ್ಗಾ, ಅದೀಬ್‌ಅಕ್ತರ್, ಅಬ್ದುಲ್‌ರಷೀದ್, ಬೊಳುವಾರು, ಕಟ್ಪಾಡಿ, ರಹಮತ್ ತರೀಕರೆ ಮುಂತಾದವರು ಕನ್ನಡವನ್ನು ಮಾತೃಭಾಷೆಯೆಂಬಂತೆ ಬಳಸಿದ್ದಾರೆ. ಮುಚ್ಚಿದ ಸಮಾಜವೆನ್ನಿಸಿಕೊಂಡಿರುವ ಮುಸ್ಲಿಂ ಸಮಾಜದ ಒಳ ಆಯಾಮಗಳು ಇನ್ನೂ ಹೆಚ್ಚಾಗಿ ಬೆಳಕಿಗೆ ಬರುವಂತಾದರೆ ಕನ್ನಡ ಭಾಷೆಗೆ ಹೊಸ ಮಗ್ಗಲು ಪ್ರಾಪ್ತವಾಗುತ್ತದೆ.

ಕನ್ನಡ ನಿಯತಕಾಲಿಕೆಗಳಲ್ಲಿ ಅಂಕಣ ಸ್ಥಿರಶೀರ್ಷಿಕೆ ಪ್ರಾರಂಭವಾದ ಬಳಿಕ ಕನ್ನಡ ಗದ್ಯಕ್ಕೆ ಇನ್ನೊಂದು ಬಣ್ಣದ ಎಳೆ ಸೇರಿಕೊಂಡಿತು. ಕು.ಶಿ.ಹರಿದಾಸಭಟ್ಟ, ನಿರಂಜನ, ಹಾ.ಮಾ.ನಾಯಕ, ಎಚ್ಚೆಸ್ಕೆ ಮುಂತಾದ ಹಿರಿಯರು ಬರೆದಿರುವ ಅಂಕಣ ಗದ್ಯ ಕನ್ನಡಕ್ಕೆ ಇನ್ನೊಂದು ಗರಿಯನ್ನು ಮೂಡಿಸಿತು. ಎಚ್ಚೆಸ್ಕೆಯವರ ವ್ಯಕ್ತಿಚಿತ್ರ ವಿಶಿಷ್ಟ ಸ್ವರೂಪದ ಗದ್ಯವಾಗಿದೆ. ಉದಾಹರಣೆಗೆ 'ಬಕ್ಕತಲೆ, ಚೂಪಾದ ಮೂಗು, ಭೇದಿಸಿ ನೋಡುವ ಕಣ್ಣು, ಕಿವಿಯೊಳಗಿಂದ ಬೆಳೆದ ಪೊದೆಗೂದಲು, ಕೈಯಲ್ಲೊಂದು ಕೊಡೆ, ಪುಟಪುಟನೆ ನಡೆದು ಬರುತ್ತಿದ್ದ ಪುಟ್ಟ ಆಕೃತಿ'. ಹೀಗೆ ಭಾಷೆಯನ್ನು ಹೇಗೆಂದರೆ ಹಾಗೆ ನಿರಾಯಾಸವಾಗಿ ಬಳಸಿಕೊಳ್ಳುವ ಶಕ್ತಿ ಎಚ್ಚೆಸ್ಕೆಯವರಿಗಿರುವುದನ್ನು ಕಾಣುತ್ತೇವೆ.

ಸಾಹಿತ್ಯಕ ಬರೆಹಗಳಲ್ಲಿಯೂ ಗದ್ಯದ ಎಲ್ಲ ಸಾಧ್ಯತೆಗಳನ್ನೂ ದುಡಿಸಿಕೊಂಡ ಲೇಖಕರು ಕನ್ನಡದಲ್ಲಿ ಅನೇಕರಿದ್ದಾರೆ. ದೇಜಗೌ, ಎ.ಎನ್.ಮೂರ್ತಿರಾವ್, ಹಾ.ಮಾ.ನಾಯಕ, ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಎಂ.ಜಿ.ಕೃಷ್ಣಮೂರ್ತಿ, ಸುಮತೀಂದ್ರ ನಾಡಿಗ, ಲಂಕೇಶ್, ತೇಜಸ್ವಿ, ಎಂ.ಚಿದಾನಂದಮೂರ್ತಿ, ಎಚ್ಚೆಸ್ಕೆ ಮೊದಲಾದವರು ಕನ್ನಡ ಗದ್ಯ ಬರೆವಣಿಗೆಯನ್ನು ವಿಸ್ತೃತಗೊಳಿಸಿದರು. ಡಾಕ್ಟೋರೇಟ್ ಪದವಿಗಳಿಗೆ ಬರೆದ ನಿಬಂಧಗಳಿಂದಲೂ ಕನ್ನಡ ಗದ್ಯಕ್ಕೆ ಉತ್ತಮ ಕೊಡುಗೆ ಲಭ್ಯವಾಗಿದೆ. ಸಂಶೋಧನ ಗ್ರಂಥಗಳಲ್ಲಿಯೂ ಕೇವಲ ಶಾಸ್ತ್ರೀಯ ಪರಿಭಾಷೆಯನ್ನು ಮೀರಿದ ಗುಣಗಳನ್ನು ನಾವು ಕಾಣಬಹುದು. ಹಾಸ್ಯ ಬರೆಹಗಳು ಕನ್ನಡ ಗದ್ಯಕ್ಕೆ ಮೊನಚು ತಂದಿರುವುದು ಸ್ವಯಂವೇದ್ಯ ವಿಚಾರವೇ ಸರಿ. ರಾ.ಶಿ., ಪಾ.ವೆಂ., ಬೀಚಿ, ಅ.ರಾ.ಮಿತ್ರ, ಅ.ರಾ.ಸೇ., ಎಚ್.ಎಲ್.ಕೇಶವಮೂರ್ತಿ, ಮನೋಹರ ಚಂದ್ರನ್, ಭುವನೇಶ್ವರಿ ಹೆಗಡೆ, ಬಿ.ಚಂದ್ರೇಗೌಡ ಮುಂತಾದವರು ಗದ್ಯವನ್ನು ಬಳಸಿ ಬೆಳೆಸಿದ್ದಾರೆ. ವೈಎನ್ಕೆಯವರ 'ವಂಡರ್ ಕಣ್ಣು' ಅಂಕಣ ಒಂದು ವಿಶಿಷ್ಟ ಬಗೆಯ ಬರವಣಿಗೆ. ಅದು ವಿದ್ವತ್ಪೂರ್ಣವೂ ಹೌದು ಅತ್ಯಂತ ಸರಸವೂ ಸರಳವೂ ಹೌದು. ಇಂಥ ಸಮ್ಮಿಳನ ಬಹಳ ಅಪರೂಪ ಎನ್ನಬಹುದು. ಪುಂಡಲೀಕ ಶೇಟ್ ಬರೆಯುತ್ತಿದ್ದ ಹುಬ್ಬಳ್ಳಿಯಾಂವ ಶೀರ್ಷಿಕೆಯ ಹಾಸ್ಯ ಬರೆಹದ ಗದ್ಯ ಬಹಳ ಸೊಗಸಾದುದು. ಬಯಲು ಸೀಮೆಯ ಕಟ್ಟೆಪುರಾಣ ಶೀರ್ಷಿಕೆಯಲ್ಲಿ ಬಂದ ಬಿ.ಚಂದ್ರೇಗೌಡರ ಗದ್ಯವಂತೂ ಮಂಡ್ಯ ಹಾಸನ ಗಡಿಭಾಗದ ಆಡುಭಾಷೆಯ ಪ್ರತಿರೂಪವಾಗಿದೆ. "ಅಂಗಲ್ಲ ಕಣ ಮಾವ, ನಮಿಗುವೆ ಯಾವುದು ಸರಿ, ಯಾವುದು ತಪ್ಪು ಅಂತ ತಿಳಿವಳಿಕೆ ಬಂದದೆ, ಏನಾದ್ರೂ ಇದ್ದುದ್ದ ಬರಿಯೋ ಅಂತ ಸಗತಿನೂ ಬಂದದೆ, ಓದೋ ಸಗತಿನೂ ಅದೆ ..... ಅದರೊಳಿಕೋಗಿ ಬ್ಯಾಡಬ್ಯಾಡ ಅಂದ್ರೂವೆ ಕೋಟಿಕ್ಕಿ ಅದ್ಯೆಂತದ್ನೋ ಹಗ್ಗಬಿಗಿದಂಗೆ ಕತ್ತಿಗೆ ಬಿಗುದು ತಗಸಿದ್ರು ಆ ಪೋಟಾ ನೋಡಿದೋರ್ಯೆಲ್ಲ ನೀನು ರಾಜಕುಮಾರನಗೆ ಏನು ಕಮ್ಮಿ ಅಂದ್ರು ............" ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಚಹಾದ ಜೋಡಿ ಚೂಡಾದಾಂಗ ಎಂಬ ಅಂಕಣ ಬರೆಹದ ಗದ್ಯವೂ ಅತ್ಯಂತ ಆಪ್ತವಾದದ್ದು.

ಆತ್ಮಚರಿತ್ರೆ, ಜೀವನ ಚರಿತ್ರೆಗಳ ರಚನೆಯಲ್ಲಿಯೂ ಭಾಷೆಯ ಅಂಶವನ್ನು ಪ್ರತ್ಯೇಕವಾಗಿ ಗಮನಿಸುವುದರಿಂದ ಆ ಗ್ರಂಥಗಳ ವಿಮರ್ಶೆಗೂ ಬೆಲೆ ಬರುತ್ತದೆ. ವಸ್ತು ಮತ್ತು ವಾಹಕಗಳೆರಡೂ ಇಲ್ಲಿ ಮುಖ್ಯ. ಎ.ಎನ್.ಮೂರ್ತಿರಾಯರ ಸಂಜೆಗಣ್ಣಿನ ಹಿನ್ನೋಟ, ಎಚ್.ನರಸಿಂಹಯ್ಯನವರ ತೆರೆದ ಮನ, ಕೋ.ಚನ್ನಬಸಪ್ಪನವರ ನ್ಯಾಯಾಧೀಶನ ನೆನಪುಗಳು, ತರಳಬಾಳು ಶಿವಾಚಾರ್ಯರ ಆತ್ಮನಿವೇದನ, ಕೆ.ಆರ್.ರಾಮಚಂದ್ರನ್ ಅವರ ತಾಪೇದಾರಿ, ಬಿ.ಡಿ.ಜತ್ತಿಯವರ ನನಗೆ ನಾನೇ ಮಾದರಿ, ಸಿದ್ಧಲಿಂಗಯ್ಯನವರ ಊರುಕೇರಿ ಮುಂತಾದುವನ್ನು ನೋಡಿದಾಗ ಕನ್ನಡ ಗದ್ಯ ಎಷ್ಟು ಸುಲಲಿತವಾದುದು ಎಂಬುದು ತಿಳಿಯುತ್ತದೆ. ಇಡೀ ಭಾರತದಲ್ಲಿಯೇ ಕನ್ನಡ ಅತ್ಯಂತ ಸಮೃದ್ಧವಾದ ಭಾಷೆ ಎಂಬ ಮಾತು ಗದ್ಯ ಬರೆಹಕ್ಕೂ ಋಣಿಯಾಗಿದೆ ಎಂದರೆ ಅದು ಅತಿಶಯೋಕ್ತಿಯ ಮಾತಲ್ಲ. ಗದ್ಯಂ ಕವೀನಾಂ ನಿಕಷಂ ವದಂತಿ ಎಂಬ ಮಾತು ತ್ರಿಕಾಲಾಬಾಧಿತ ಸತ್ಯವೆಂದು ತೋರುತ್ತದೆ. ಇತ್ತೀಚಿನ ಕನ್ನಡ ಗದ್ಯದ ಕೆಲವು ಮಾದರಿಗಳನ್ನು ಇಲ್ಲಿ ನೋಡಬಹುದು.

'ಅಕ್ಷರ ರಹಿತ ಆತ್ಮಗಳ ಮೇಲೆ ಅಕ್ಷರಗಳು ಹರಿದಾಡಿ ಹೊರಟಾಗಿನ ಅದೇ ಅಲಂಕಾರರಹಿತ ಶಬ್ದಗಳ ಗ್ರಾಮ್ಯತೆ, ಒಂದು ವಿನೂತನ ಅಲಂಕಾರವನ್ನೂ ಅನುಭಾವ ಸೌಂದರ್ಯವನ್ನು ಕನ್ನಡ ಅಕ್ಷರಗಳು ಪಡೆಯತೊಡಗಿದವೆಂಬುದನ್ನು ಮರೆಯುವಂತಿಲ್ಲ'

'ಮಾನವನು ಸ್ವತಂತ್ರನಾಗಿಯೇ ಹುಟ್ಟಿಲ್ಲ. ಸ್ವತಂತ್ರನಾಗಲು ಹುಟ್ಟಿದವನು. ಸ್ವಾತಂತ್ರ್ಯದ ಪ್ರೇರಣೆಯು ಮಾನವ ಜೀವನದ ಮರ್ಮ'.

'ಮತಿದಾಸ್ಯ, ಮತದಾಸ್ಯ ಪೂರ್ವದ ಲಕ್ಷಣ ಬುದ್ಧಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ ಪಶ್ಚಿಮದ ಲಕ್ಷಣ'

'ಬಡತನ, ಅಜ್ಞಾನ, ದಟ್ಟವಿಷಾದ ಹಾಗೂ ಬದುಕಿನ ವಿವಿಧ ಲಯಗಳು ಇಲ್ಲಿ ಜೀವಂತವಾಗಿವೆ.'

'ಕಂಡದ್ದನ್ನು ಮೈತುಂಬ ತುಂಬಿಕೊಂಡು ನಡುಗಿದರು. ಮತ್ತೆ ಕಣ್ಣು ತೆರೆದು ನೇರವಾಗಿ ನಿರ್ಭಯವಾಗಿ ನೋಡಿದರು. ಕೆಂಡದಂತೆ ಉರಿಯುತ್ತ ಅಬ್ಬರಿಯ ತಳದಲ್ಲಿ ಮಲಗಿದ್ದ ಹುಲಿಯೂ ಅವರನ್ನು ನೋಡಿತು. ಅವರ ಹಾಗೆ ಕಣ್ಣಗಲಿಸಿ, ನಿರ್ಭಯವಾಗಿ, ಯಾವ ಎಗ್ಗೂ ಇಲ್ಲದೆ, ನಿಶ್ಚಯ'

'ಕೂದಲು ಕತ್ತರಿಸಿದ ಮಂಡೆಯಂತಿದ್ದ ತೋಟವನ್ನು ನೋಡಿದವರ ಸುತ್ತ ಸೊನ್ನೆಗಳು ಮಿಡತೆಗಳಂತೆ ಮುತ್ತಿದುವು. ಅಷ್ಟೆತ್ತರ ಹಸಿರು ಹೊತ್ತು ಬಳುಕುತ್ತಿದ್ದ ಅಡಿಕೆ ಮರಗಳು ಹೀಗೆ ರುಬ್ಬಾರುಬ್ಬಿ ಬೇರು ಸಹಿತ ಕಿತ್ತು ಯಾಕೆ ಬಿದ್ದಿವೆ?'

'ಪ್ರಾಣದ ವಿಸರ್ಜನೆಗೆ ಧ್ಯಾನಿಸುತ್ತಿರುವರೆಂಬಂತೆ ಕುಕ್ಕೂರು ಕೂತ ....... ಅವರು ಮಾತಾಡಲಿಲ್ಲ. ಮೌನಿಯ ವಸ್ತ್ರಾವೃತ ಆಕೃತಿ ಕಣ್ಣಿನಲ್ಲಿ ಊರಿದಂತಾಗಿ .........ರ ಸಲೀಸು ಬಾಯಿ ಸ್ತಬ್ಧವಾಯಿತು'

'ಅವನು ವ್ಯಾವಹಾರಿಕವಾದ ಘಟನೆಗಳಿಂದ ಕಾಯುವ, ಹೊಂದಿಕೊಳ್ಳುವ ಮೂಲಗಳಿಂದಲೇ ಅಸಹಕಾರದಿಂದ, ಅವಮಾನದಿಂದ, ವಿಶಿಷ್ಟ ಸಂಸ್ಕಾರಗಳನ್ನು ಪಡೆಯುತ್ತಾ ಬಂದಂತೆ ತನ್ನ ಪರಿಗಳನ್ನು ಕೀಳುತ್ತ ಕೀಳುತ್ತ ಜೈವಿಕ ಪ್ರಪಂಚದಿಂದ ದೂರವಾಗುತ್ತಾ ಒಂಟಿಯಾಗುತ್ತಾನೆ'

'ಒಂದು ಗುಂಪು ಅಥವಾ ಸಮಾಜ ಪರಂಪರಾಗತ ಮೌಲ್ಯದ ಒತ್ತಡ ಮಾತ್ರದಿಂದಲೇ ಅಲ್ಲದೆ ತಮ್ಮದೇ ಆದ ದೌರ್ಬಲ್ಯ, ಅಚಾತುರ್ಯ, ಅತಿಭಾವುಕತೆ, ಕಾರ್ಪಣ್ಯ, ಹಾಯಲಾರದ, ಕಟ್ಟಲಾರದ ಬದುಕಿನ ಪೇಚು ಇತ್ಯಾದಿಗಳಲ್ಲಿ ಯಾವುದೋ ಒಂದು ಅಥವಾ ಎಲ್ಲಮೂ ಕಾರಣವಾಗಿ ಬದುಕಿನ ಅಸ್ವಸ್ಥತೆ, ದುಃಖ, ಯಾತನೆಗಳನ್ನು ........ ಹೆಚ್ಚಾಗಿ ಗಮನಿಸಿದಂತೆನಿಸುವುದಿಲ್ಲ'

'ಆ ವಿಚಾರಗಳ ನೇಪಥ್ಯದಲ್ಲಿ ಅದರ ಒಡೆಯನ, ಸಜೀವ ಎದೆಬಡಿತವನ್ನು ಅಡಿಗಡಿಗೂ ಆಲಿಸಿ ಭಾವ ಆಲೋಚನೆಗಳ ಮಾತಂತಿರಲಿ, ಅವುಗಳನ್ನು ಶಬ್ದಗಳಲ್ಲಿ ಹರಳಿಸುವ ಮಾತುಗಾರಿಕೆಯ ಸಂವೇದನಾಶೀಲ ಗತಿ ಸೂಕ್ಷ್ಮಗಳ ಮೇಲೆ ನಯವಂತ ಗೇಯಾತ್ಮಕ ಲಯ ಸೌಕುಮಾರ್ಯದ ಮೇಲೆ ..... ಆನಂದಾಶ್ಚರ್ಯಗಳು ಅಷ್ಟಿಷ್ಟಲ್ಲ'.

'ವಾಸ್ತವತೆಯ ಹೆಸರಿನಲ್ಲಿ ತಮ್ಮ ಲೋಕಾನುಭವವನ್ನು ಹಾಗೆ ಹಾಗೇ ಕಚ್ಚಾ ಸ್ಥಿತಿಯಲ್ಲಿ ತೋಡಿಕೊಳ್ಳುತ್ತಿರುವ ಲೇಖಕರ ಅಪ್ರಬುದ್ಧ ಹುಂಬ ಹುಮ್ಮಸ್ಸಿಗೆ ಕಡಿವಾಣ ಜಡಿಯಬೇಕಾದದ್ದು ತುಂಬಾ ಸಮಂಜಸ'

ಮೇಲಿನ ಉದ್ಧೃತ ಭಾಗಗಳಲ್ಲಿ ಕೆಲವು ಉದ್ಧೃತಗಳು ಲಕ್ಷಣ ಸಮನ್ವಿತವಾಗಿರುವುದನ್ನೂ ಗಮನಿಸಬಹುದು. ಬಂಡಾಯ, ದಲಿತ, ಸಮನ್ವಯ ಎಂಬ ಹೆಸರಿನಲ್ಲಿ ಸಾಹಿತ್ಯ ಪ್ರಯಾಣ ಮುಂದುವರಿಯುವ ಮುನ್ನ ಕನ್ನಡ ಗದ್ಯದ ಒಂದು ಮುಖ ಹೇಗಿತ್ತು ಎಂಬುದನ್ನು ಈ ಮುಂದಿನ ಒಂದು ಉದ್ಧೃತ ಭಾಗದ ಸಹಾಯದಿಂದ ಕಲ್ಪಿಸಿಕೊಳ್ಳಬಹುದು.

'ಇದು ತುಂಬಾ ಅಥೆಂಟಿಕ್ ಆಗಿರುವಂತೆ ಕಂಡರೂ ಆಬ್ವಿಯಸ್ ಎನ್ನಿಸುವುದಿಲ್ಲ. ಪಾತ್ರಗಳ ಐಡೆಂಟಿಟಿ ಬಗ್ಗೆ ಅನುಮಾನವಿರುವುದಾದರೂ ಅವುಗಳ ಸ್ಟೆಬಿಲಿಟಿಗೆ ಕಾರಣವನ್ನು ಇದರಲ್ಲೇ ಹುಡುಕಬಾರದು'

ಕನ್ನಡ ಗದ್ಯ ಇಂದು ಬಹಳ ಶಕ್ತಿಯುತವಾಗಿ, ಭಾವನೆ ಆಲೋಚನೆಗಳ ಪ್ರಬಲ ಮಾಧ್ಯಮವಾಗಿ ಅಗತ್ಯಕ್ಕೆ ತಕ್ಕ ರೂಪವನ್ನು ಪಡೆಯುವ ಅಂತಃಸತ್ತ್ವವನ್ನು ಮೈಗೂಡಿಸಿಕೊಳ್ಳುತ್ತ ಸಾಗಿದೆ ಎಂದು ಹೇಳಬಹುದು. (ಎಂ.ಆರ್.)

**ಕನ್ನಡದಲ್ಲಿ ಗಾಂಧೀಸಾಹಿತ್ಯ :** 20ನೆಯ ಶತಮಾನದ ವಿಚಾರಶೀಲ ಸಾಹಿತ್ಯದಲ್ಲಿ ಗಾಂಧೀ ಸಾಹಿತ್ಯ ಒಂದು ಅನುಪಮ ಸ್ಥಾನವನ್ನು ಗಳಿಸಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಧ್ಯಯನದ ಉತ್ತಮ ಆಕರವಾಗಿರುವುದೇ ಅಲ್ಲದೆ ಭಾರತದ ಇತಿಹಾಸ, ಸಂಸ್ಕೃತಿ, ಲೋಪದೋಷಗಳು, ಅಭ್ಯುದಯ – ಇವುಗಳ ಮೇಲೆ ಜಿಜ್ಞಾಸಾತ್ಮಕ ಬರೆಹಗಳಾಗಿರುವ ಗಾಂಧೀ ಸಾಹಿತ್ಯದ ಕೃಷಿ ಕನ್ನಡದಲ್ಲೂ ಸಾಕಷ್ಟು ನಡೆದಿದೆ.

ಗಾಂಧೀ ಸಾಹಿತ್ಯ ಗಾಂಧೀಯವರ ಸ್ವಂತ ಬರೆಹಗಳನ್ನು, ಇತರರು ಅವರನ್ನು ಮತ್ತು ಅವರ ವಿಚಾರಗಳನ್ನು ಕುರಿತು ಬರೆದ ಬರೆಹಗಳನ್ನು ಒಳಗೊಳ್ಳುತ್ತದೆ. ಗಾಂಧೀಜೀಯವರೇ ಬರೆದಿರುವ ವಿಷಯಗಳ ವ್ಯಾಪ್ತಿ ಅಪಾರ. ಅಲ್ಪಸಂಖ್ಯಾತರು, ಅಸ್ಪೃಶ್ಯತೆ, ಅಹಿಂಸೆ, ಆರೋಗ್ಯ, ಆಹಾರ, ಇಸ್ಲಾಂ, ಉಪವಾಸ, ಕಸ್ತೂರಬಾ, ಕೈಗಾರಿಕಾ ಸಂಬಂಧಗಳು, ಕ್ರಿಶ್ಚಿಯನ್ನರು, ಖಿಲಾಫತ್ ಚಳವಳಿ, ಜಪಾನ್, ಜನನ ನಿಯಂತ್ರಣ, ಜಲಿಯನ್ ವಾಲಾಬಾಗ್, ಜಾತೀಯತೆ, ದೇವರು, ನೀತಿ, ಬೌದ್ಧಧರ್ಮ, ಮುಷ್ಕರಗಳು, ಮೂಲ ಶಿಕ್ಷಣ, ರಾಷ್ಟ್ರಭಾಷೆ, ವೈದ್ಯ, ಶಿಕ್ಷಣ, ಸರ್ವೋದಯ, ಸತ್ಯಾಗ್ರಹ, ಸಿಖ್‍ಧರ್ಮ, ಸ್ವದೇಶೀ, ಸ್ತ್ರೀಯರು, ಸೋಷಿಯಲಿಸಂ ಮುಂತಾಗಿ ನಾನಾ ವಿಷಯಗಳ ಮೇಲೆ ಗಾಂಧೀಜಿ ಬರೆದಿದ್ದಾರೆ. ನಾನಾ ಸಮಸ್ಯೆಗಳನ್ನು ಸತ್ಯ ಅಹಿಂಸೆಯ ಆಧಾರದ ಮೇಲೆ ಸಾಮಾಜಿಕ ನ್ಯಾಯದೃಷ್ಟಿಯಿಂದ ವಿವೇಚಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅವರ ಬರೆಹಗಳನ್ನು 600 ಶೀರ್ಷಿಕೆಗಳಲ್ಲಿ ವಿಂಗಡಿಸಲಾಗಿದೆ. ಗಾಂಧೀಜಿಯವರನ್ನು ಬುದ್ಧ, ಕ್ರಿಸ್ತ, ಹೆನ್ರಿಫೋರ್ಡ್, ಲೆನಿನ್, ಸ್ಟಾಲಿನ್, ಟಾಗೂರ್, ಟಾಲ್‍ಸ್ಟಾಯರಿಗೆ ಹೋಲಿಸಿ ಬರೆದವರಿದ್ದಾರೆ. ಅವರನ್ನು ಸಂತರೆಂದೂ ಪ್ರವಾದಿಯೆಂದೂ ಕ್ರಾಂತಿಕಾರರೆಂದೂ ಸಮಾಜಸುಧಾರಕರೆಂದೂ ನಾನಾ ರೀತಿಯಲ್ಲಿ ಕರೆದವರಿದ್ದಾರೆ. ಗಾಂಧೀಜಿ ಯವರನ್ನು ಕುರಿತು ಬರೆದಿರುವ ಬರೆಹಗಳಲ್ಲಿ ಪೂರ್ಣಜೀವನ ಚರಿತ್ರೆ, ಅವರ ಜೀವನದ ನಾನಾ ಘಟನೆಗಳು, ಅಹಿಂಸಾದರ್ಶನ, ಸತ್ಯಾಗ್ರಹ ವಿಚಾರಧಾರೆಯನ್ನು ಕುರಿತ ಪ್ರಬಂಧಗಳು, ಲೇಖನಗಳು, ಪತ್ರಗಳು, ಪದ್ಯಗಳು, ಸಂದರ್ಶನ ವರದಿಗಳು, ಶ್ರದ್ಧಾಂಜಲಿಗಳು ಅನೇಕವಿವೆ. ಕಳೆದ ಐವತ್ತು ವರ್ಷಗಳಲ್ಲಿ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಯನ್ನು ಕುರಿತು ಬರೆದಿರುವ ಪ್ರತಿಯೊಂದು ಪುಸ್ತಕದಲ್ಲೂ ಗಾಂಧೀಜಿಯವರ ಪಾತ್ರವನ್ನು ಕುರಿತು ಬರೆಯುವುದು ಅನಿವಾರ್ಯವೆನಿಸಿದೆ. ಈ ಲೇಖನಗಳು ಅವರ ಪ್ರಶಂಸಾಕಾರರಿಂದಲೂ ಸಹಾನುಭೂತಿಯುಳ್ಳ ಟೀಕಾಕಾರರಿಂದಲೂ ತೀವ್ರ ಎದುರಾಳಿಗಳಿಂದಲೂ ಬಂದಿದ್ದು ಗಾಂಧೀ ಸಾಹಿತ್ಯ ವೈವಿಧ್ಯಮಯವಾಗಿದೆ.

ಗಾಂಧೀಜಿಯವರು ಬರೆದಿರುವ ಪುಸ್ತಕಗಳಲ್ಲಿ ಈಗ ತಿಳಿದಿರುವಂತೆ ಕನ್ನಡದ ಪ್ರಥಮ ಅನುವಾದ ಅವರ ಇಂಡಿಯನ್ ಹೋಂ ರೂಲ್ ಎಂಬ ಪುಸ್ತಕ. ದ.ಕೃ.ಭಾರದ್ವಾಜರು ಆ ಕೆಲಸ ಮಾಡಿದ್ದಾರೆ (1919). ಇದೇ ರೀತಿ ಇನ್ನೂ ಮೂರು ಪುಸ್ತಕಗಳನ್ನು ಭಾರದ್ವಾಜರು ಅನುವಾದಿಸಿದ್ದಾರೆ. ಗಾಂಧೀಸಾಹಿತ್ಯ ಅನುವಾದಕರಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರು ಅಗ್ರಗಣ್ಯರು. ಇವರು ತಮ್ಮ ಸರಳ ಹಾಗೂ ಶಕ್ತಿಯುತ ಶೈಲಿಯಲ್ಲಿ 20 ಪುಸ್ತಕಗಳನ್ನು ಸ್ವಂತವಾಗಿಯೂ ನಾಲ್ಕನ್ನು ಇತರರೊಡಗೂಡಿಯೂ ಅನುವಾದಿಸಿದ್ದಾರೆ. ಅನುವಾದಗಳ ಪೈಕಿ ಆರ್ಥಿಕ ವಿಚಾರಗಳಲ್ಲಿ 3, ಆರೋಗ್ಯ 1, ಖಾದಿ ಗ್ರಾಮೋದ್ಯೋಗ 1, ಜೀವನ ಚರಿತ್ರೆ (ಆತ್ಮಕಥೆ) 20, ಧರ್ಮ 8, ನೀತಿ ಸತ್ಯ ಅಹಿಂಸೆ 8, ಭಗವದ್ಗೀತೆ 3, ಮಹಿಳೆಯರು 4, ರಾಜಕೀಯ ವಿಚಾರಗಳು 14, ಶಿಕ್ಷಣ 3, ಸರ್ವೋದಯ 1, ಸಾಮಾಜಿಕ ದರ್ಶನ 6, –ಈ ರೀತಿ 72 ಪುಸ್ತಕಗಳಿವೆ. ಗಾಂಧೀಜಿಯವರ ಪ್ರಮುಖ ಕೃತಿಗಳಾದ ಸತ್ಯಶೋಧನೆ, ಹಿಂದ್ ಸ್ವರಾಜ್ಯ, ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ, ನನ್ನ ಕನಸಿನ ಭಾರತ, ಅನಾಸಕ್ತಿಯೋಗ, ಸರ್ವೋದಯ, ಮೂಲಶಿಕ್ಷಣ ಮುಂತಾದ ಮುಖ್ಯ ಕೃತಿಗಳೆಲ್ಲಮೂ ಕನ್ನಡಕ್ಕೆ ಅನುವಾದವಾಗಿವೆ.

ಅನುವಾದಕರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ರಂ.ರಾ.ದಿವಾಕರ, ವಿ.ಎಸ್.ನಾರಾಯಣರಾವ್, ಜಿ.ವಿ.ನಾರಾಯಣಮೂರ್ತಿ, ಕೆ.ಎಸ್.ನರಸಿಂಹಸ್ವಾಮಿ, ಎಸ್.ವಿ.ಕೃಷ್ಣಮೂರ್ತಿರಾವ್ ಮುಖ್ಯರು. ಇವರೆಲ್ಲರೂ ನುರಿತ ಲೇಖಕರಾದುದರಿಂದ ಅನುವಾದಗಳು ಮೂಲದಂತೆಯೇ ಮನೋಜ್ಞವಾಗಿವೆ. ಹಿರಿಯ ರಾಜಕಾರಣಿ ಶಂಕರಗೌಡರು ಪ್ಯಾರೇಲಾಲ್‍ರವರ 'ಮಹಾತ್ಮ ಗಾಂಧೀ ಅಂತಿಮ ಹಂತ' ಎಂಬ ಬೃಹತ್ ಗ್ರಂಥವನ್ನು ಭಾಷಾಂತರಿಸಿದ್ದಾರೆ. ಗಾಂಧೀಸಾಹಿತ್ಯಕ್ಕೆ ಇದೊಂದು ಬಹುದೊಡ್ಡ ಕೊಡುಗೆ.

ಗಾಂಧೀನಿಧಿಯವರು ಅಚ್ಚುಕಟ್ಟಾಗಿ ಪ್ರಕಟಿಸಿರುವ, ಸುಲಭ ಬೆಲೆಯ ಇಪ್ಪತ್ತು ಕನ್ನಡ ಪುಸ್ತಕಗಳು ನಮಗೆ ಬಾಪುವಿನ ಜೀವನ ಸಾಧನೆಗಳನ್ನು ಸರಳ ಶೈಲಿಯಲ್ಲಿ ಸುಲಭವಾಗಿ ಅರ್ಥವಾಗುವಂತೆ ತಿಳಿಸುತ್ತವೆ.

ಮಹಾಪುರುಷರ ಜೀವನ ಚರಿತ್ರೆಗಳನ್ನು ಸಂಕ್ಷಿಪ್ತವಾಗಿ ಬರೆದ ಅನೇಕ ಪುಸ್ತಕಗಳಲ್ಲಿ ಗಾಂಧೀಜಿಯವರ ಬದುಕು, ಸಾಧನೆಯನ್ನು ಕುರಿತು ಬರೆದ ಅಧ್ಯಾಯಗಳಿವೆ. ಇವುಗಳಲ್ಲಿ ಮುಖ್ಯವಾದವು ಕುವೆಂಪುರವರ ವಿಭೂತಿ ಪೂಜೆ, ಎಚ್.ಕೃಷ್ಣರಾಯರ ಚರಿತ್ರೆಯ ಮಹಾಪುರುಷರು, ಮಿರ್ಜಿ ಅಣ್ಣಾರಾಯರ ಭಾರತದ ಬೆಳಕು, ಕೆ.ಎಸ್.ನಾರಾಯಣಸ್ವಾಮಿ ಯವರ ವಿಶ್ವಜ್ಯೋತಿಗಳು, ತೀ.ನಂ.ಶ್ರೀ. ಅವರ ನಂಟರು, ಸಾ.ಶಿ.ಮರುಳಯ್ಯನವರ ವಿಭೂತಿ ಪುರುಷರು ಮುಂತಾದ ಪುಸ್ತಕಗಳು ಗಮನಾರ್ಹವಾದವು.

ರಾಜಕೀಯ ಸಾಮಾಜಿಕ ವಿಚಾರಗಳಲ್ಲಿ ಕ್ರಾಂತಿಯೆಬ್ಬಿಸಿದ ಗಾಂಧೀಜಿಯವರ ವಿಚಾರಧಾರೆಗಳಿಗಿಂತ, ವೈಚಾರಿಕ ವಿಷಯಗಳ ಸಿದ್ಧಿಯಾದ ಭಾರತ ಸ್ವಾತಂತ್ರ್ಯ ಸಂಗ್ರಾಮ ಅಗಾಧ ಪರಿಣಾಮ ಬೀರಿತು. ಈ ಹೋರಾಟ ಜನಗಳಿಗೊಂದು ಅಪೂರ್ವ ಅನುಭವವನ್ನೊದಗಿಸಿತು. ಈ ಸಂಗ್ರಾಮದ ಕಾವು ಹೆಚ್ಚು ಚುರುಕಾಗಿ ತಟ್ಟಿದುದು ಉತ್ತರ ಕರ್ನಾಟಕದಲ್ಲೇ, ತ.ರಾ.ಸು. ಅವರ ಕಾದಂಬರಿ ರಕ್ತತರ್ಪಣದಿಂದ ಆರಂಭವಾಗಿ ಮಿರ್ಜಿ ಅಣ್ಣಾರಾಯ, ಬಸವರಾಜು ಕಟ್ಟೀಮನಿ, ಎಸ್.ಅನಂತನಾರಾಯಣ, ಅ.ನ.ಕೃ., ನಿರಂಜನ, ವಿ.ಎಂ.ಇನಾಂದಾರ, ಕೋ.ಚೆನ್ನಬಸಪ್ಪ, ಅಶ್ವತ್ಥ ಮೊದಲಾದವರ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ವರ್ಣನೆ ಕಷ್ಟನಷ್ಟಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ನಿರಂಜನ, ಅಶ್ವತ್ಥ, ಬಸವರಾಜ ಕಟ್ಟೀಮನಿ ಮುಂತಾದ ಲೇಖಕರ ಕಥೆಗಳಲ್ಲಿ ಗಾಂಧೀಜಿಯವರ ತತ್ತ್ವಗಳ ಪ್ರತಿಪಾದನೆ ಇದೆ. ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆ ಇದೆ. ಆದರೆ ಈ ಎಲ್ಲ ಲೇಖಕರು ತಮ್ಮ ಕಲಾಕೃತಿಗಳಲ್ಲಿ ಗಾಂಧೀ ತತ್ತ್ವಗಳನ್ನು ಒರೆಗೆ ಹಚ್ಚಿಲ್ಲ ಎಂಬ ಟೀಕೆ ಇದ್ದೇ ಇದೆ. ಸಣ್ಣಕಥೆಗಳಲ್ಲಿಯೂ ಗಾಂಧೀಜಿಯವರ ಆದರ್ಶತತ್ತ್ವಗಳನ್ನು ಎತ್ತಿ ಹಿಡಿಯಲಾಗಿದೆ. ನಿರಂಜನರ ಬಾಪೂಜಿ ಬಾಪೂಜಿ, ರಾ.ಬಸವರಾಜರ ಕುರಿಗಳು ಸಾಕಿದ ತೋಳ, ಪೂರ್ಣಚಂದ್ರತೇಜಸ್ವಿ ಅವರ ಗಾಂಧೀಜಿ ದೆಸೆಯಿಂದ, ಅಶ್ವತ್ಥರ ಪುಣ್ಯಾತ್ಮರು, ಜನಾರ್ದನ ಗುರ್ಕಾರರ ಬಾಪೂಜಿ – ಮುಂತಾದ ಕಥೆಗಳು ಗಾಂಧೀ ತತ್ತ್ವಗಳಿಂದ ಪ್ರಭಾವಗೊಂಡು ಕನ್ನಡಕ್ಕೆ ಬಂದವು.

ಗಾಂಧೀಜಿಯವರ ಆದರ್ಶ, ನಡೆನುಡಿಗಳು, ಬರೆಹಗಳು ಭಾವಜೀವಿಗಳಾದ ಕವಿಗಳನ್ನು ಉತ್ತೇಜಿಸಿದುದರಲ್ಲಿ ಆಶ್ಚರ್ಯವಿಲ್ಲ. ಡಿ.ವಿ.ಜಿ.ಕುವೆಂಪು, ಮಾಸ್ತಿ, ರಂ.ಶ್ರೀ.ಮುಗಳಿ, ವಿ.ಸೀ., ಬೇಂದ್ರೆ, ಪು.ತಿ.ನ., ತೀ.ನಂ.ಶ್ರೀ., ಕಯ್ಯಾರ ಕಿಞ್ಞಣ್ಣ ರೈ, ಸುಜನಾ, ಕೆ.ಎಸ್.ನರಸಿಂಹಸ್ವಾಮಿ, ಜಿ.ಪಿ.ರಾಜರತ್ನಂ, ಎಸ್.ವಿ.ಪರಮೇಶ್ವರಭಟ್ಟ, ಚೆನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಸಿದ್ದಲಿಂಗ ಪಟ್ಟಣಶೆಟ್ಟಿ, ವಿ.ಕೃ.ಗೋಕಾಕ, ದಿನಕರ ದೇಸಾಯಿ, ಸಿದ್ಧಯ್ಯ ಪುರಾಣಿಕ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ನಿಸಾರ್ ಅಹಮದ್, ಡಿ.ಎಸ್.ಕರ್ಕಿ, ಸಿ.ಪಿ.ಕೆ – ಮೊದಲಾದವರ ಕವನಗಳಲ್ಲಿ ಗಾಂಧೀಜಿಯವರ ದರ್ಶನ, ಸಾಧನೆಗಳ ಪ್ರಶಂಸೆಯಿದೆ.

ಶ್ರೀರಂಗರ ಹರಿಜನ್ವಾರ, ಶೋಕಚಕ್ರ, ಕುವೆಂಪು ಅವರ ಬಲಿದಾನ, ಶಿವರಾಮ ಕಾರಂತರ ಗರ್ಭಗುಡಿ, ಬೇಂದ್ರೆಯವರ ಉದ್ಧಾರ ಎಂಬ ನಾಟಕಗಳಲ್ಲಿ ಅಸ್ಪೃಶ್ಯತೆ, ಮದ್ಯಪಾನ ನಿರೋಧ ಮುಂತಾದ ಗಾಂಧೀ ತತ್ತ್ವಗಳ ಪ್ರತಿಪಾದನೆ ಇದೆ. ರಾಜರತ್ನಂ ಅವರ ಸಂಭವಾಮಿ ಯುಗೇ ಯುಗೇ, ನಾ.ಕಸ್ತೂರಿಯವರ ಕ್ರಾಂತಿಮಾರ್ಗ, ಇದು

ಭಾರತದ ದಾರಿ, ಎಚ್.ರಾಮಕೃಷ್ಣರಾವ್ ಅವರ ಗಾಂಧೀಜಿ ಸ್ವರ್ಗದಲ್ಲಿ, ಎಂ.ಎ.ದೊರೆಸ್ವಾಮಿ ಅಯ್ಯಂಗಾರ್ ಅವರ ಧರ್ಮಜ್ಯೋತಿ, ಪು.ತಿ.ನ. ಅವರ ವಿಕಟಕವಿ ವಿಜಯ ಮೊದಲಾದ ನಾಟಕಗಳು ಒಂದಲ್ಲ ಒಂದು ದೃಷ್ಟಿಕೋನದಲ್ಲಿ ಗಾಂಧೀಜಿ ಅವರ ತತ್ತ್ವಗಳನ್ನು ಪ್ರತಿಪಾದಿಸುವ ನಾಟಕಗಳಾಗಿವೆ. ಗಾಂಧೀತತ್ತ್ವಗಳನ್ನು ನಿರೂಪಿಸುವ ಮತ್ತು ಎತ್ತಿ ಹಿಡಿಯುವ ಕಥೆ, ಕಾದಂಬರಿ, ನಾಟಕ, ಪ್ರಬಂಧಗಳಿರುವಂತೆ ಸ್ವತಂತ್ರ ಪುಸ್ತಕಗಳು (ಲೇಖನಗಳ ಸಂಕಲನ) ಪ್ರಕಟಗೊಂಡಿವೆ. ಹರ್ಡೇಕರ ಮಂಜಪ್ಪ, ಗೊರೂರು, ರಂ.ರಾ.ದಿವಾಕರ, ಬಿಂದುಮಾಧವ, ಜಿ.ಪಿ.ರಾಜರತ್ನಂ, ಸಿದ್ದವನಹಳ್ಳಿ ಕೃಷ್ಣಶರ್ಮ, ಪಾಟೀಲ ಪುಟ್ಟಪ್ಪ, ಎಚ್ಚೆಸ್ಕೆ, ಕಾರ್ನಾಡ ಸದಾಶಿವರಾಯ, ಕಡಪ ರಾಘವೇಂದ್ರರಾಯ, ಕಡೆಂಗೋಡ್ಲು ಶಂಕರಭಟ್ಟ, ಕೆ.ಕೆ.ಶೆಟ್ಟಿ, ನಾರಾಯಣರಾವ್ ಕೆಲ್ಲಿ ಈ ರೀತಿಯ ಬರೆವಣಿಗೆಯಲ್ಲಿ ಪ್ರಮುಖರು, ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀಭವನ ಡಿ.ಜಿ.ತೆಂಡೂಲ್ಕರ್ ಅವರ ಮಹಾತ್ಮ ಸಂಪುಟಗಳನ್ನು ವಿವಿಧ ಲೇಖಕರಿಂದ ಭಾಷಾಂತರಿಸಿ ಪ್ರಕಟಿಸಿದೆ. ಇದಲ್ಲದೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ಮಹಾತ್ಮಗಾಂಧೀಯವರ ಹಾಸ್ಯ ಪ್ರವೃತ್ತಿ ಮತ್ತು ಇತರ ಲೇಖನಗಳು, ದೇ.ಜವರೇಗೌಡರ ಲೋಕದ ಬೆಳಕು, ಎಚ್.ತಿಪ್ಪೇರುದ್ರಸ್ವಾಮಿಯವರು ಸಂಪಾದಿಸಿರುವ ಗಾಂಧೀ ವಿಚಾರ ಮಾರ್ಗ, ಮಹಾತ್ಮ ಗಾಂಧೀ – ನೂರುವರ್ಷಗಳು ಮುಂತಾದ ಪುಸ್ತಕಗಳು ಪ್ರಕಟವಾಗಿವೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ ಎಂಬ ಕೃತಿಯನ್ನು ಪ್ರಕಟಿಸಿದೆ (1971). ಇದನ್ನು ಹಾ.ಮಾ. ನಾಯಕರು ಸಂಪಾದಿಸಿದ್ದಾರೆ. ಜಿ.ಪಿ.ರಾಜರತ್ನಂ ಅವರ ವಿಚಾರತರಂಗ, ಕೃಷ್ಣಾನುಭವ, ಸಿದ್ಧವನಹಳ್ಳಿ ಕೃಷ್ಣಶರ್ಮರ ಪರ್ಣಕುಟಿ – ಉತ್ತಮ ಬರೆವಣಿಗೆಗೆ ನಿದರ್ಶನಗಳಾಗಿವೆ. ಕೃಷ್ಣಶರ್ಮರ ಶೈಲಿಯಂತೂ ಚೈತನ್ಯಭರಿತವಾಗಿದೆ. ವಿಷಯನಿರೂಪಣೆ ಸೊಗಸಾಗಿದೆ. ನೇರವಾಗಿ ವಿಷಯ ಪ್ರತಿಪಾದಿಸುವುದು, ಕ್ಲಿಷ್ಟವಾದ ವಿಷಯಗಳನ್ನು ಸರಳವಾಗಿ ಹೇಳುವುದು ಇವರ ವೈಶಿಷ್ಟ್ಯ. ಸುಶೀಲಾ ಕೊಪ್ಪರ ಮತ್ತು ಮಂದಾಕಿನಿಬಾಯಿ ಮಹಿಳೆಯರ ಬಗ್ಗೆ ಗಾಂಧೀಜಿಯವರ ದೃಷ್ಟಿ ಎಂಥದ್ದು ಎಂಬುದನ್ನು ಕುರಿತು ಪ್ರಬಂಧಗಳನ್ನು ಬರೆದಿದ್ದಾರೆ.

ಗಾಂಧೀಜಿಯವರ ಆಲೋಚನೆ – ದೃಷ್ಟಿಕೋನಗಳನ್ನು ಕುರಿತು ಬರೆದ ಪುಸ್ತಕಗಳಲ್ಲಿ ಹರ್ಡೇಕರ ಮಂಜಪ್ಪನವರ 'ಖಾದಿಶಾಸ್ತ್ರ' ಬಹು ಮುಖ್ಯವಾದುದು. ಇದರಲ್ಲಿ ಖಾದಿಯ ಉಪಯೋಗಗಳನ್ನೂ ಅದರ ಗುಣವಿಶೇಷ ಮೊದಲಾದ ವಿಷಯಗಳನ್ನೂ ವಿವರವಾಗಿ ನಿರೂಪಿಸಲಾಗಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪೂರ್ಣಸ್ವದೇಶಿ ಎಂಬ ಗ್ರಂಥದಲ್ಲಿ ಗಾಂಧೀಜೀಯವರಿಗೆ ಹಳ್ಳಿಗಳ ಏಳ್ಗೆಯ ಬಗ್ಗೆ ಇದ್ದ ಪೂರ್ಣದೃಷ್ಟಿಯನ್ನು ಕುರಿತು ಬರೆಯಲಾಗಿದೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ಸೇವಾಗ್ರಾಮ ಮತ್ತು ಸರ್ವೋದಯ, ಗಾಂಧೀಯೋಜನೆ, ವಿ.ಎಸ್.ನಾರಾಯಣರಾಯರ ಗಾಂಧೀವಾದ, ಗಾಂಧೀಯವರ ಆರ್ಥಿಕವಾದ – ಇವು ಗಾಂಧೀಜಿಯವರ ಸಾಮಾಜಿಕ, ಆರ್ಥಿಕ, ರಾಜಕೀಯ ದೃಷ್ಟಿ ಯಾವ ರೀತಿಯದ್ದು ಎಂಬ ವಿಷಯದ ಬಗ್ಗೆ ಬೆಳಕು ಚೆಲ್ಲುವ ಕೃತಿಗಳು. ಜಿ.ಪಿ. ರಾಜರತ್ನಂ ಅವರ 'ಗಾಂಧೀವಿದ್ಯಾ' ಖಾದಿಯ ಆರ್ಥಿಕತೆಯನ್ನು ಕುರಿತ ಪುಸ್ತಕ, ಮಹಾತ್ಮರ ಮರಣ ಹಾಗೂ ಇತರ ಉಪನ್ಯಾಸಗಳು, ದೇವರ ಸಾಕ್ಷಿ ಗಾಂಧೀಜಿ, ಗಾಂಧೀ ಸಾಹಿತ್ಯದ ಮೂಲ – ಇದೇ ಲೇಖಕರ ಇತರ ಕೃತಿಗಳು. ಕೆ.ಎಸ್.ಜೋಶಿಯವರ ಗಾಂಧೀಜಿಯ ತತ್ತ್ವಜ್ಞಾನದ ರಹಸ್ಯ, ರಂ.ರಾ.ದಿವಾಕರರ ಸತ್ಯಾಗ್ರಹ – ಇವು ಅಷ್ಟೇ ಗಮನಾರ್ಹವಾದ ಕೃತಿಗಳು. ದಿವಾಕರರ ಪುಸ್ತಕದಲ್ಲಿ ಗಾಂಧೀಜಿಯವರ ಸತ್ಯಾಗ್ರಹ ಸಿದ್ಧಾಂತಗಳು, ತಂತ್ರ, ಧೋರಣೆ, ಅದರ ಇತಿಮಿತಿ ಮುಂತಾದ ವಿಷಯಗಳು ತುಂಬ ಸೊಗಸಾಗಿ ನಿರೂಪಿತವಾಗಿವೆ.

ಕನ್ನಡದಲ್ಲಿ ಗಾಂಧೀಜಿಯವರ ಜೀವನಚರಿತ್ರೆಯನ್ನು ಕುರಿತಂತೆ ಹಲವಾರು ಪುಸ್ತಕಗಳು ಪ್ರಕಟಗೊಂಡಿವೆ. ಹರ್ಡೇಕರ ಮಂಜಪ್ಪನವರ ಮಹಾತ್ಮಾಗಾಂಧೀಯವರ ಚರಿತ್ರೆ – ಗಾಂಧೀಜಿಯವರ ಮೊದಲ 50 ವರ್ಷಗಳ ಬದುಕನ್ನು ತುಂಬ ಸರಳ ಭಾಷೆಯಲ್ಲಿ ನಿರೂಪಿಸಿರುವ ಕೃತಿ. ಬಿ.ಎಲ್.ಆಚಾರ್ ಅವರ ಮಹಾತ್ಮಗಾಂಧೀ (ಜೀವನ ಚರಿತ್ರೆ, ಜಾತಕ), ಬಿ.ಎ.ಆರ್. ಅವರ ಪೂಜ್ಯ ಗಾಂಧೀಜಿ, ಧನ್ಯೆ ಕಸ್ತೂರಬಾ, ವಿ.ಎಸ್.ನಾರಾಯಣರಾವ್ ಅವರ ಮಹಾತ್ಮ ಬಾಪೂಜಿ, ನಭರವರ ಗಾಂಧೀಜಿ, ಅ.ನ.ಕೃ. ಅವರ ಭಾರತದ ಬಾಪು, ಗೊರೂರರ ಭಾರತ ಭಾಗ್ಯವಿಧಾತ, ಜೋನ್ ಆಫ್ ಆರ್ಕ್ ಮತ್ತು ಮಹಾತ್ಮ ಗಾಂಧೀ, ದಿವಾಕರರ ಮಹಾತ್ಮಗಾಂಧೀ, ಕರಗುಪ್ಪಿಯವರ ಮಹಾತ್ಮಗಾಂಧೀ ಚರಿತ್ರೆ, ರಾಮರಾಯರ ಮಹಾತ್ಮ ಗಾಂಧೀ – ಇವು ಕೆಲವು ಮುಖ್ಯ ಕೃತಿಗಳು. ದಿವಾಕರರ, ಗೊರೂರರ ಪುಸ್ತಕಗಳು ಜೀವನಚರಿತ್ರೆಯ ದೃಷ್ಟಿಯಿದ ಬಹುಮುಖ್ಯ ಗ್ರಂಥಗಳಾಗಿವೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ಗಾಂಧೀ ಕಥೆಗಳು, ಕೃಷ್ಣಗೋಸಾವಿಯವರ ಬಾಪೂಜಿಯ ಬದುಕು– ಜೀವನಚರಿತ್ರೆಯ ಮಾದರಿಯಲ್ಲಿ ಬರೆದ ಗಾಂಧೀಜಿಯನ್ನು ಕುರಿತ ಗ್ರಂಥಗಳಾಗಿವೆ.

ಮಕ್ಕಳಿಗಾಗಿಯೇ ಗಾಂಧೀಜಿಯವರ ವಿಷಯ ಕುರಿತ ಹಲವಾರು ಪುಸ್ತಕಗಳು ಬಂದಿವೆ. ಹರ್ಡೇಕರ ಮಂಜಪ್ಪನವರ ಗಾಂಧೀ ಸಂದೇಶ – ಈ ಉದ್ದೇಶದಿಂದ ಮೊದಲು ಬಂದ ಕನ್ನಡ ಗ್ರಂಥ. ಇದರಲ್ಲಿ ತುಂಬ ಸರಳ ಹಾಗೂ ನೇರ ಭಾಷೆಯಲ್ಲಿ ಗಾಂಧೀಜಿಯವರನ್ನು ಮಕ್ಕಳಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. 'ಮಕ್ಕಳ ಕಹಳೆ' ಬಿ.ಎನ್.ಸುಂದರರಾವ್ ಅವರಿಂದ ಮಕ್ಕಳಿಗಾಗಿ ರಚಿತವಾದ ಪುಸ್ತಕದಲ್ಲಿ ಗಾಂಧೀಯವರನ್ನು ಕುರಿತ ಕೆಲವು ಕವನಗಳಿವೆ. ಪರಿಮಳ ಮತ್ತು ಟಿ.ಎಂ.ಆರ್.ಸ್ವಾಮಿ ಅವರು ಅಜ್ಜ ಅಜ್ಜಿ ಎಂಬ ಪುಸ್ತಕವನ್ನು ಹೊರತಂದಿದ್ದಾರೆ. ಈ ಪುಸ್ತಕ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಬಗ್ಗೆ ಮಕ್ಕಳಿಗೆ ತಿಳಿವಳಿಕೆ ನೀಡುತ್ತದೆ. ನಾರಾಯಣಶರ್ಮರ ಮಕ್ಕಳ ಮಹಾತ್ಮ ಗಾಂಧಿ, ರವಿಚಂದ್ರರ ಮಹಾತ್ಮಗಾಂಧಿ, ವಿ.ಎಸ್.ನಾರಾಯಣರಾಯರ ಗಾಂಧಿ ಕಥಾವಳಿ, ಸವ್ಯಸಾಚಿಯವರ ಭಾರತ ಭಾಗ್ಯವಿಧಾತ ಮೊದಲಾದ ಪುಸ್ತಕಗಳು ಮಕ್ಕಳ ಮನಸ್ಸಿಗೆ ರಂಜಕವಾಗುವ ರೀತಿಯಲ್ಲಿ ಗಾಂಧೀಜಿಯವರ ಜೀವನ ಹಾಗೂ ಕೃತಿಗಳನ್ನು ಕುರಿತು ರಚಿತವಾಗಿವೆ. ಮಕ್ಕಳ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯನ್ನೇ ಇತ್ತಿರುವ ಜಿ.ಪಿ.ರಾಜರತ್ನಂ ಮಕ್ಕಳ ಗಾಂಧಿ ಎಂಬ ಬೃಹತ್ ಸಂಕಲನವನ್ನು ಹೊರತಂದಿದ್ದಾರೆ. ಇದರಲ್ಲಿ ಮಕ್ಕಳಿಗಾಗಿ ರಚಿತವಾದ ಕಥೆ, ಕವನ, ನಾಟಕಗಳು ಸಂಕಲನಗೊಂಡಿವೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಬರೆದು ಅದರ ಕೋಪಕ್ಕೆ ಪಾತ್ರವಾದ ವಿಶ್ವಕರ್ಣಾಟಕ, ತಾಯಿನಾಡು, ಸಂಯುಕ್ತ ಕರ್ನಾಟಕ, ಪ್ರಜಾಮತ ಪತ್ರಿಕೆಗಳನ್ನೂ ಇವುಗಳಲ್ಲಿ ದಿಟ್ಟತನದಿಂದ ಸಂಪಾದಕೀಯ ಬರೆಯುತ್ತಿದ್ದ ತಿ.ತಾ.ಶರ್ಮ, ಪಿ.ಆರ್.ರಾಮಯ್ಯ, ರಂ.ರಾ.ದಿವಾಕರ, ಬಿ.ಎನ್.ಗುಪ್ತ ಇವರ ಪ್ರಭಾವಶಾಲೀ ಬರೆಹಗಳನ್ನೂ ಯಾರೂ ಮರೆಯುವಂತಿಲ್ಲ.

ಪತ್ರಿಕೆಗಳಂತೆ ಪ್ರಕಾಶಕರಲ್ಲೂ ಎಲ್ಲರೂ ಗಾಂಧೀ ಸಾಹಿತ್ಯವನ್ನು ಒಂದಲ್ಲ ಒಂದು ರೀತಿಯಿಂದ ಪ್ರಕಟಿಸಿದ್ದಾರೆ. ಕಾವ್ಯಾಲಯ, ಉಷಾ ಸಾಹಿತ್ಯ ಮಾಲೆ, ಗೀತಾ ಬುಕ್ ಹೌಸ್, ಮೋಹನ ಪ್ರಕಾಶನ, ವಯಸ್ಕರ ಶಿಕ್ಷಣ ಸಮಿತಿ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಸತ್ಯಶೋಧನ ಪ್ರಕಟನಾಲಯ, ಸ್ಟ್ಯಾಂಡರ್ಡ್ ಬುಕ್ ಡಿಪೋ, ಗಾಂಧೀ ಸಾಹಿತ್ಯ ಮಂಡಳಿ, ಕರ್ನಾಟಕ ಸಂಘ – ಸೆಂಟ್ರಲ್ ಕಾಲೇಜು, ಸರ್ವೋದಯ ಸಂಘ, ಮಿಂಚಿನ ಬಳ್ಳಿ, ಸಾಧನ ಬುಕ್ ಡಿಪೋ, ಮನೋಹರ ಗ್ರಂಥಮಾಲೆ, ಗಾಂಧೀಭವನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ – ಮೊದಲಾದವು ಈ ದಿಸೆಯಲ್ಲಿ ಸೇವೆ ಸಲ್ಲಿಸಿವೆ. ಇತ್ತೀಚೆಗೆ ಬೆಂಗಳೂರಿನ ಭಾರತೀಯ ವಿದ್ಯಾಭವನ ಕೇಂದ್ರ ಗಾಂಧೀಜಿಯವರ ಸಮಗ್ರ ಬರೆಹದ ಅನುವಾದ ಮಾಡಿಸಿ ಪ್ರಕಟಿಸುವ ಬೃಹತ್ಕಾರ್ಯವನ್ನು ಕೈಗೊಂಡಿದ್ದು ಅದರಲ್ಲಿ ಕೆಲವು ಸಂಪುಟಗಳು ಬೆಳಕುಕಂಡಿವೆ. (ಟಿ.ವಿ.ಎಸ್.)

**ಕನ್ನಡದಲ್ಲಿ ಗಾದೆಗಳು :** ಜನಪದ ಸಾಹಿತ್ಯದ ಬಹು ಮುಖ್ಯ ಪ್ರಕಾರಗಳಲ್ಲೊಂದು. ಗಾದೆ ಎಂಬ ಪದ ಸಂಸ್ಕೃತದ ಗಾಥಾ ಎಂಬುದರ ನೇರ ತದ್ಭವವಾಗಿರಬಹುದು. ಇಲ್ಲವೆ ಪ್ರಾಕೃತದ 'ಗಾಹ' ಎಂಬ ಪದದ ರೂಪಾಂತರವಾಗಿರಬಹುದು. ಗಾದೆಗೆ ಸಂವಾದಿಯಾಗಿ ಸಾಮತಿ, ಸೂಕ್ತಿ, ಸೂತ್ರ, ಲೋಕೋಕ್ತಿ, ಪ್ರಾಚೀನೋಕ್ತಿ, ಸಾರೋಕ್ತಿ, ಉದ್ಧರಣೆ, ಹೇಳಿಕೆ, ವಿಧಿ, ನಿಯಮ, ಪ್ರಮಾಣ, ನಾಣ್ನುಡಿ ಮುಂತಾದ ಪದಗಳು ಬಳಕೆಯಲ್ಲಿದ್ದರೂ ಗಾದೆ ಶಬ್ದವೇ ಹೆಚ್ಚು ಪ್ರಚಾರದಲ್ಲಿದೆ.

ಗಾದೆಯ ಲಕ್ಷಣಗಳನ್ನು ಒಂದೇ ಮಾತಿನಲ್ಲಿ ಸೂತ್ರೀಕರಿಸಿ ಹೇಳುವುದು ಕಷ್ಟಸಾಧ್ಯವಾದ ಕೆಲಸ. ಏಕೆಂದರೆ ಗಾದೆಯ ವಸ್ತುವ್ಯಾಪ್ತಿ ಅನಂತವಾದುದು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಗಾದೆ ತನ್ನೊಳಗುಮಾಡಿಕೊಳ್ಳದ ವಿಷಯಗಳಿಲ್ಲ. ಅದು ಒಂದು ರೀತಿಯಲ್ಲಿ ಜನಸಾಮಾನ್ಯರ ವಿಶ್ವಕೋಶ. ಪರಂಪರಾನುಗತವಾಗಿ ಬರುವ ಜ್ಞಾನದಿಂದ ಯಾರೋ ಒಬ್ಬ ಅನುಭವಿ ವಿವೇಕಿ ನುಡಿದ ಸಾಮಯಿಕ ಸೂಳ್ನುಡಿ ಜನತೆಯ ಅಂಗೀಕಾರ ಮುದ್ರೆಯನ್ನು ಪಡೆದು, ಪರಿಮಿತ ವಲಯದಲ್ಲಿ ಮೊದಲು ಸಲುವಳಿ ಪಡೆಯುತ್ತದೆ. ಅನಂತರ ಅದರ ಸತ್ತ್ವಕ್ಕೂ ಸ್ವಾರಸ್ಯಕ್ಕೂ ಸತ್ಯತೆಗೂ ಮಾರುಹೋಗುವಂಥ ಇತರ ಜನರೂ ಅದನ್ನು ಬಳಸತೊಡಗುತ್ತಾರೆ. ಹೀಗಾಗಿ ಅದು ಒಂದು ಸಮಾಜದ ಸಾರ್ವಜನಿಕ ಸ್ವತ್ತಾಗಿ ಚಲಾವಣೆಯಾಗುತ್ತದೆ. ಸಂಕ್ಷಿಪ್ತತೆ ಅಥವಾ ಸಂಕೀರ್ಣತೆ, ವಿವೇಚನೆ, ತೀಕ್ಷ್ಣತೆ ಅಥವಾ ಒಗಟುತನ ಹಾಗೂ ಜನಪ್ರಿಯತೆ ಗಾದೆಯ ನಾಲ್ಕು ಪ್ರಮುಖ ಲಕ್ಷಣಗಳು. ಪ್ರತಿಯೊಂದು ಗಾದೆಯೂ ಒಂದು ರೀತಿಯಲ್ಲಿ ಬಿಡಿ ಕವಿತೆ. ಅದರಲ್ಲಿ ಛಂದೋಬದ್ಧತೆ, ಪ್ರಾಸಾನುಪ್ರಾಸ ಆಲಂಕಾರಿಕ ಅಭಿವ್ಯಕ್ತಿ, ಕಾವ್ಯದ ಬಿಗುಪು, ಬಂಧುರತೆ, ಸೂಚ್ಯಭಾವ ವ್ಯಂಗ್ಯವೈಚಾರಿಕತೆಗಳು ಸಹಜವಾಗಿ ರೂಪುಗೊಂಡಿರುತ್ತವೆ. ಸಾಹಿತ್ಯದ ಸಮಸ್ತ ಚಟುವಟಿಕೆಗಳನ್ನೂ ಸೃಜನಾತ್ಮಕ ಶಕ್ತಿಯನ್ನೂ ಒಳಗೊಂಡಿರುವ ಗಾದೆಯ ಭಾಷೆ ಸಾಂಕೇತಿಕ. ಭಾವ ಬಹುಮಟ್ಟಿಗೆ ರೂಪಕ. ಇವುಗಳಲ್ಲದೆ ನಾಟಕೀಯತೆ ಹಾಗೂ ಸಮತೋಲ ಗುಣಗಳೂ ಗಾದೆಯಲ್ಲಿ ಗೋಚರಿಸುತ್ತವೆ. ಗಾದೆಗಳು ಮಾನವಸ್ವಭಾವಕ್ಕೆ ಒಡ್ಡಿದ ಪ್ರತೀಕಗಳಾಗಿವೆ; ಸಮಾಜದ ಪ್ರತಿಬಿಂಬಗಳಾಗಿವೆ;

ಸಂಸ್ಕೃತಿಯ ಪ್ರತಿನಿಧಿಗಳಾಗಿವೆ. ಏಕೆಂದರೆ ಅವುಗಳಲ್ಲಿ ಬದುಕಿನ ಎಲ್ಲ ಕ್ಷೇತ್ರಗಳ ಅನುಭವಗಳಿಗೂ ಅಭಿವ್ಯಕ್ತಿ ದೊರೆತಿದೆ. ರೀತಿನೀತಿ, ನಂಬಿಕೆ, ನಡಾವಳಿ, ಆಚಾರವಿಚಾರ ಗಳೆಲ್ಲವನ್ನೂ ಅವು ಒಳಗೊಂಡಿವೆ. 'ಗಾದೆ ವೇದಕ್ಕೆ ಸಮ' ಎಂಬ ಗಾದೆಯೇ ಅವುಗಳ ಅಗ್ಗಳಿಕೆಯನ್ನು ಎತ್ತಿ ಹೇಳುತ್ತದೆ. 'ಊಟಕ್ಕೆ ಮೊದಲು ಉಪ್ಪಿನಕಾಯಿ; ಮಾತಿಗೆ ಮೊದಲು ಗಾದೆ' ಎಂಬ ಗಾದೆಯೇ ಗಾದೆಗಳ ತೀವ್ರಾವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಗಾದೆಯಿಲ್ಲದ ಭಾಷೆಯಿಲ್ಲ; ಭಾಷೆಯಿಲ್ಲದ ಜನಾಂಗವಿಲ್ಲ. ಗಾದೆಗಳ ಮಹತ್ತ್ವವನ್ನು ಅರಿತುಕೊಂಡ; ಯಾವ ವ್ಯಕ್ತಿಯೂ ಅವುಗಳ ಸೌಂದರ್ಯ, ಸಾರ್ಥಕತೆ, ಜೀವಂತಿಕೆಗಳನ್ನು ಮೆಚ್ಚದಿರಲಾರ. ಗಾದೆ ಜೀವನಕ್ಕೆ ಕೇವಲ ವ್ಯಂಜಕ ಮನರಂಜಕ ಸೂಕ್ತಿ ಮಾತ್ರವಲ್ಲ; ಅದು ಸಾರ್ಥಕ ಜೀವನಸೂತ್ರ ಹಾಗೂ ವಿವೇಕದ ದಾರಿದೀಪ. ಗಾದೆ ಬೋಧಿಸುವ ಸನ್ಮಾರ್ಗವಿಡಿದು ನಡೆದರೆ ಒಬ್ಬನ ಬಾಳು ಭವ್ಯವೂ ಬೆಲೆಯುಳ್ಳದ್ದೂ ಆಗುವುದರಲ್ಲಿ ಸಂದೇಹವಿಲ್ಲ. ಸಮಾಜದಲ್ಲಿ ಗಾದೆಗಳಿಗೆ ಎಂದಿನಿಂದಲೂ ಮಹತ್ತ್ವ ಸಲ್ಲುತ್ತ ಬಂದಿದೆ. ಗಾದೆಗಳು ವಿದ್ಯಾವಂತರಲ್ಲದ ಆದರೆ ಆಳವಾದ ಜೀವನಾನುಭವವನ್ನುಳ್ಳ ಜನಪದರಿಗೆ ತಮ್ಮ ಅಭಿಪ್ರಾಯಗಳನ್ನು ಮನಮುಟ್ಟುವಂತೆ ಹೇಳಲು ತುಂಬ ಸಹಕಾರಿಯಾಗಿವೆ.

ನಿರಂತರ ಚಲಾವಣೆಯೇ ಗಾದೆಯ ಜೀವಂತಿಕೆ ಹಾಗೂ ಶಾಶ್ವತ ಮೌಲ್ಯದ ಮುಖ್ಯ ಕುರುಹು. ಗಾದೆಗಳ ಭಂಡಾರ ನಿಂತ ನೀರಿನ ಮಡುವಿನಂತಲ್ಲ; ಅಪಾರ ಸಾಗರದಂತೆ. ಅದರಲ್ಲಿ ಹಳೆಯ ಹೊಸ ಗಾದೆಗಳ ಸಮ್ಮಿಳನ, ಹುಟ್ಟು, ಸಾವು ನಿತ್ಯವಾಗಿರುತ್ತದೆ. ತಿಳಿಹಾಸ್ಯ, ಕಟುವ್ಯಂಗ್ಯ, ವಿಡಂಬನೆ, ಅನ್ಯೋಕ್ತಿ ಹಾಗೂ ಪಕ್ಷಿಪ್ರಾಣಿ ಪದಾರ್ಥಗಳ ಹೋಲಿಕೆ ಇತ್ಯಾದಿಗಳ ಮುಖಾಂತರ ಗಾದೆಗಳು ವಿವೇಕ ಜಾಗೃತಿಗೊಳಿಸುತ್ತವೆ. ಅವು ಸದಾ ಒಳ್ಳೆಯ ಬುದ್ಧಿಯನ್ನು ಹೇಳುತ್ತಿರಬೇಕೆಂಬ ನಿಯಮವಿದ್ದರೂ ಅಪವಾದಗಳುಂಟು. ಒಟ್ಟಾರೆ ಗಾದೆಗಳು ಮೂರ್ತಿಶಿಲ್ಪದಂತೆ ಸೂಕ್ಷ್ಮ ಹಾಗೂ ಸಂಕೀರ್ಣ ಸ್ವಭಾವವುಳ್ಳ ಸುಭಾಷಿತಗಳು ಎನ್ನಬಹುದು.

ಗಾದೆಗಳ ಬಗ್ಗೆ ಕನ್ನಡದ ಪ್ರಸಿದ್ಧ ವಿದ್ವಾಂಸರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸ್ಥೂಲವಾಗಿ ಹೀಗೆ ಕ್ರೋಡೀಕರಿಸಬಹುದು: 'ತಲೆತಲಾಂತರದಿಂದ ಶೇಖರವಾಗಿರುವ ಅನುಭವವು ಯಾವನಾದರೊಬ್ಬನ ಬಾಯಲ್ಲಿ ಮಾತಾಗಿ ಹೊರಬೀಳುವುದು. ಜನ ಆ ಮಾತಿನ ಸೊಬಗಿಗೂ ಅದರ ಹಿಂದಿರುವ ಅನುಭವಕ್ಕೂ ಮೆಚ್ಚಿ ಅದನ್ನು ನಾಣ್ಯವಾಗಿ ಸಂಗ್ರಹಿಸುವರು. ಜ್ಞಾತಾಜ್ಞಾತವಾಗಿ ಅದನ್ನು ಸಾಧ್ಯವಾದಂತೆಲ್ಲ ಅವರಿವರೆನ್ನದೆ ತಿದ್ದುವರು; ಉಜ್ಜಿ ಹೊಳಪಿಕ್ಕುವರು. ಹೀಗೆ ಸಿದ್ಧವಾದ ಮೊಹರೆವಾಕ್ಯವು ಗಾದೆ' ಎಂದು ದೇವುಡು ನರಸಿಂಹಶಾಸ್ತ್ರಿ ಬರೆದಿದ್ದಾರೆ.

ಗಾದೆ ಸಾವಿರ ಮಾತಿನ ಸರದಾರ. ಗಾದೆಮಾತುಗಳೆಂದರೆ ಅಚ್ಚುಕಟ್ಟಾದ ನಿರ್ಣಯಗಳಲ್ಲ; ವಿವೇಕಜಾಗೃತಿ ಉಂಟು ಮಾಡುವ ಸುಭಾಷಿತಗಳು. ಅವು ಒಂದು ಬಗೆಯ ವಕ್ರೋಕ್ತಿಗಳು. ಅವುಗಳ ಧ್ವನಿತಾರ್ಥ ಹಿಡಿಯಲು ವ್ಯಾವಹಾರಿಕ ಜ್ಞಾನದಷ್ಟೇ ಪಾರಮಾರ್ಥಿಕ ತಿಳಿವಳಿಕೆಯೂ ಬೇಕು. ಗಾದೆಗಳು ಧರ್ಮ ಅರ್ಥ ಕಾಮಗಳ ವಿವೇಕಕ್ಕಾಗಿ ನೀಡಿದ ಸೂಕ್ತಿಗಳು. ಗಾದೆಗಳು ಹೊಸ ಸುಭಾಷಿತಗಳ ಮಸೆಗಲ್ಲು; ವಿವೇಕದ ಒರೆಗಲ್ಲು ಎಂದಿದ್ದಾರೆ ದ.ರಾ.ಬೇಂದ್ರೆ.

ಗಾದೆಗಳು ಜೀವನದ ಅನುಭವಗಳಿಂದ ಜನಿತವಾದ ಜಾಣ್ಮೆಯನ್ನು ಸ್ವಾರಸ್ಯವಾಗಿ ಬಹಳ ಕಡಿಮೆ ಪದಗಳಲ್ಲಿ ಅಡಕಮಾಡಿ ಹೇಳುತ್ತವೆ. ಗಾದೆಯ ಮಾತು ಎಂದರೆ ಸಾವಿರಕ್ಕೊಂದು ಮಾತು. ಕಿರಿದರಲ್ಲಿ ಹಿರಿದಾದ ಅರ್ಥವನ್ನು ಅದು ತುಂಬಿಕೊಂಡಿದೆ. ಬಿಂದಿಗೆಯಲ್ಲಿ ಕಡಲನ್ನು ತುಂಬಿದಂತೆ ಲೋಕಾನುಭವ,ಸಂಸ್ಕೃತಿ, ನೀತಿ–ಇವುಗಳ ತ್ರಿವೇಣಿಸಂಗಮವನ್ನು ಅಲ್ಲಿ ಕಾಣಬಹುದು ಎಂಬುದು ಎಂ.ಮರಿಯಪ್ಪಭಟ್ಟರ ಮಾತು.

ಒಂದು ಗುಂಪಿನ ಜಾಣ್ಮೆ, ಜೀವನಾನುಭವ, ಅಭಿವ್ಯಕ್ತಿಯ ನವುರು ಗಾದೆಗಳಲ್ಲಿಯ ಹಾಗೆ ಸ್ಪಷ್ಟವಾಗಿ ಜನಪದ ಸಾಹಿತ್ಯದ ಮಿಕ್ಕೆಲ್ಲೂ ಗೋಚರಿಸುವುದಿಲ್ಲ. ಏಕೆಂದರೆ ಗಾದೆ ವಿಶಾಲವಾದ ಜೀವನಾನುಭವದ ಆಧಾರದಿಂದ ರೂಪಗೊಂಡ ಸಂಕ್ಷಿಪ್ತ ಅಭಿವ್ಯಕ್ತಿಯಾಗಿದೆ ಎನ್ನುತ್ತಾರೆ ಹಾ.ಮಾ.ನಾಯಕ.

ಗಾದೆಗಳು ಜನತೆಯ ಸಂಸ್ಕೃತಿಯ ಶಿಲಾಶಾಸನಗಳು. ಅವುಗಳಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಅಂಶಗಳು ಕೆತ್ತಲ್ಪಟ್ಟಿವೆ. ಗಾದೆಗಳ ಭಂಡಾರ ಒಂದು ಜನಾಂಗದ ವಿಶ್ವಕೋಶ ಎಂಬುದು ಟಿ.ವೆಂಕಟರಮಣಯ್ಯನವರ ನುಡಿ.

ಅತ್ಯುತ್ತಮವಾದ ಸಹಜ ಗಾದೆಯೊಂದು ಅದು ಹುಟ್ಟಿದ ಸಮಾಜದ ಸಾಂಸ್ಕೃತಿಕ ಐತಿಹಾಸಿಕ ಹಾಗೂ ಧಾರ್ಮಿಕ ಅಂಶಗಳನ್ನು ಗರ್ಭೀಕರಿಸಿಕೊಂಡು ರೂಪುಗೊಂಡಿರುತ್ತದೆ. ಕನ್ನಡದ ಉದ್ದಾಮ ಕವಿಗಳೆಲ್ಲರೂ ತಮ್ಮ ಕೃತಿಗಳಲ್ಲಿ ಇಂಥ ಗಾದೆಗಳನ್ನು ಬಳಸಿಕೊಂಡಿದ್ದಾರೆ. ನಯಸೇನ, ಬಸವಣ್ಣ, ಹರಿದಾಸರು, ಸರ್ವಜ್ಞ ಮುಂತಾದ ಜನತಾಕವಿಗಳು ಜನಪದ ಗಾದೆಗಳನ್ನು ಸೂರೆಮಾಡಿ ತಮ್ಮ ಕೃತಿಗಳಲ್ಲಿ ಅತ್ಯಂತ ಸಾರ್ಥಕವಾಗಿ ಬಳಸಿಕೊಂಡು, ಗಾದೆಗಳಿಗೂ ತಮ್ಮ ಕೃತಿಗಳಿಗೂ ಅಮರತ್ವ ಒದಗಿಸಿದ್ದಾರೆ.

ಜ್ಞಾನದ ಆಗರವೂ ಅನುಭವದ ಸಾಗರವೂ ಆದ ಗಾದೆಗಳಲ್ಲಿ ಅನೇಕ ಪ್ರಕಾರಗಳುಂಟು. ಸ್ಥೂಲವಾಗಿ ಅವನ್ನು ಗ್ರಂಥಸ್ಥ ಗಾದೆಗಳು, ಜನಬಳಕೆಯ ಕಂಠಸ್ಥ ಗಾದೆಗಳು ಎಂದು ವಿಂಗಡಿಸಿಕೊಳ್ಳಬಹುದು. ಗ್ರಂಥಸ್ಥ ಗಾದೆಗಳು ಲೇಖಕರ ಗಮನವನ್ನು ಸೆಳೆದುಕೊಂಡು ಅವರ ಗ್ರಂಥಗಳಲ್ಲಿ ಅನೇಕ ಮಾರ್ಪಾಟುಗಳನ್ನು ಹೊಂದಿ ಅಥವಾ ತಮ್ಮ ಮೂಲಸ್ವರೂಪದಲ್ಲೇ ಸೇರ್ಪಡೆಗೊಂಡಂಥವು. ಮತ್ತು ಹೆಚ್ಚಾಗಿ ವಿದ್ಯಾವಂತರ ವರ್ಗದಲ್ಲಿ ಪ್ರಚಾರದಲ್ಲಿರುವಂಥವು. ಇವುಗಳಲ್ಲಿ ಒಂದು ತೆರನಾದ ಏಕರೂಪತೆ, ನಾವೀನ್ಯ ಹಾಗೂ ಬೆಡಗು ಕಾಣಬರುತ್ತದೆ. ಇಂಥ ಅನೇಕ ಗಾದೆಗಳನ್ನು ಪ್ರತಿಭಾವಂತರಾದ ಕವಿಗಳು ತಾವೇ ಸೃಷ್ಟಿಸಿಕೊಂಡು ಬಳಸಿರಬಹುದು ಅಥವಾ ಪ್ರಚಲಿತವಿರುವ ಗಾದೆಗಳನ್ನು ಆರಿಸಿಕೊಂಡು ಅವುಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡಿರಬಹುದು. ಹೇಗೆ ಮಾಡಿದ್ದರೂ ಗ್ರಂಥಸ್ಥ ಗಾದೆಗಳು ಸಂಸ್ಕಾರಗೊಂಡ ಮುತ್ತುರತ್ನಗಳಿದ್ದಂತೆ.

ಗ್ರಂಥಸ್ಥವಾಗದ, ಆದರೆ ಜನಸಾಮಾನ್ಯರ ಆಡುನುಡಿಯಲ್ಲಿ ಧಾರಾಳವಾಗಿ ಬಳಕೆಯಲ್ಲಿರುವ ಗಾದೆಗಳಲ್ಲಿ ಬಹುಪಾಲಿನವು ಹುಟ್ಟುಗಾದೆಗಳು. ಇವು ಪ್ರಾಚೀನತೆ ಹಾಗೂ ಪ್ರಭಾವದ ದೃಷ್ಟಿಯಿಂದ ಅತ್ಯಂತ ಮಹತ್ವವುಳ್ಳವು. ಇವನ್ನು ಯಾರು ಯಾವಾಗ ಸೃಷ್ಟಿಸಿದರೆಂಬುದನ್ನು ಕಂಡುಹಿಡಿಯಲಾಗುವುದಿಲ್ಲ. ಹೀಗೆ ಜನಸಾಮಾನ್ಯರ ಆಡುನುಡಿಯಲ್ಲಿ ಪರಂಪಾರನುಗತವಾಗಿ ಬಳಕೆಯಲ್ಲಿರುವ ಗಾದೆಗಳನ್ನು ಜನಪದ ಗಾದೆಗಳೆನ್ನಬಹುದು. ಅವು ಹುಟ್ಟಿದ ಹಿನ್ನೆಲೆಯಲ್ಲಿರುವ ಒಂದು ಬಗೆಯ ಒರಟುತನ ಅವುಗಳಲ್ಲಿ ಎದ್ದುಕಾಣುತ್ತದೆ. ಆದರೆ ಜನಪದ ಗಾದೆಗಳೆಲ್ಲ ಅಸಂಸ್ಕೃತವಾದ ಅನಾಗರಿಕರ ಅಶ್ಲೀಲ ನುಡಿಗಳೆನ್ನುವಂತಿಲ್ಲ. ವಾಸ್ತವವಾಗಿ ಒಂದು ಭಾಷೆಯಲ್ಲಿ ರೂಢಿಯಲ್ಲಿರುವ ಗಾದೆಗಳಲ್ಲಿ ಬಹುಪಾಲಿನವು ಜನಪದರಿಂದ ಸೃಷ್ಟಿಸಲ್ಪಟ್ಟವೆಂಬುದು ಅವುಗಳ ಸಮರ್ಥ ವಿಶ್ಲೇಷಣೆಯಿಂದ ಮಾತ್ರ ತಿಳಿದುಬರುತ್ತದೆ. ಮೇಲಿನ ವಿಭಜನೆಯಲ್ಲಿ ಮತ್ತೆ ಗಾದೆಗಳನ್ನು ವ್ಯಾವಸಾಯಿಕ ಗಾದೆಗಳು, ವೈದ್ಯ ಕುರಿತ ಗಾದೆಗಳು, ವೃತ್ತಿಸೂಚಕ ಗಾದೆಗಳು, ನೀತಿಬೋಧಕ ಗಾದೆಗಳು, ನಗೆ ಗಾದೆಗಳು ಇತ್ಯಾದಿಯಾಗಿ ವಿಂಗಡಿಸುತ್ತ ಹೋಗಲು ಸಾಧ್ಯವಿದೆ. ಐತಿಹಾಸಿಕ ಹಾಗೂ ಪೌರಾಣಿಕ ಪ್ರಸಂಗಗಳನ್ನು ಸೂಚಿಸುವ ಗಾದೆಗಳೂ ಇಲ್ಲಿ ಕಾಣಸಿಗುತ್ತವೆ. ಆದರೆ ಸಾಮಾಜಿಕ, ಧಾರ್ಮಿಕ ಪರಿಸರವನ್ನು ಸೂಚಿಸುವ ಗಾದೆಗಳ ಸಂಖ್ಯೆ ಹೆಚ್ಚು.

(ಪಿ.ಕೆ.ಆರ್.;ಎನ್.ಟಿ.)

ಈ ಹಿನ್ನೆಲೆಯಲ್ಲಿ ಕನ್ನಡ ಗಾದೆಗಳ ವಸ್ತು, ವ್ಯಾಪ್ತಿ, ವೈಶಿಷ್ಟ್ಯಗಳನ್ನು ಸ್ಥೂಲವಾಗಿ ಪರಿಶೀಲಿಸಬಹುದು. ಒಂದು ಗಾದೆ ತಲೆಮಾರಿನಿಂದ ತಲೆಮಾರಿಗೆ, ವ್ಯಕ್ತಿಯಿಂದ ವ್ಯಕ್ತಿಗೆ ಇಳಿದು ಉಳಿದುಬರುವಲ್ಲಿ ಪ್ರಾಸ ಅಥವಾ ಲಯಬದ್ಧತೆ ಬಹು ಮುಖ್ಯ ಕಾರಣವಾಗುತ್ತದೆ.

ಎಳೀಲಾರದ ಎತ್ತು ಮೆಳೇ ಮೇಲೆ ಬಿತ್ತು

ಎಂಬ ಈ ಗಾದೆಯಲ್ಲಿ ಆದಿಪ್ರಾಸ ಹಾಗೂ ಅಂತ್ಯಪ್ರಾಸ ಎರಡೂ ಇದ್ದು ಕೇಳುಗನ ಸ್ಮರಣೆಯಲ್ಲುಳಿಯಲು ಸಹಾಯಕವಾಗಿದೆ. ಕೋಗಿಲೆಯಂತದೂ ಕಾಲಬಂದಂಗೆ ಕಾಗೆ ಗೂಡಲ್ಲಿ ಕತೆ ಹಾಕ್ತದೆ, ಮುದ್ದಾದ ಮುದಿಗಂಡ ಮೂರನೆಯೋಳಿಗೆ ಎಂಬ ಗಾದೆಗಳಲ್ಲಿ ಕಂಡುಬರುವ ಕಕಾರ ಮಕಾರಗಳ ಅನುಪ್ರಾಸ ನೆನಪಿನಲ್ಲುಳಿಯಲು ಅನುವಾಗಿದೆ. ಉಪಮೆ, ರೂಪಕ, ಅತ್ಯುಕ್ತಿ, ವಿರೋಧಾಭಾಸ ಮುಂತಾದ ಅಲಂಕಾರವಿಶೇಷಗಳ ಮೂಲಕ ಒಂದು ಅನುಭವವನ್ನು ಮನದಲ್ಲಿ ಅಚ್ಚೊತ್ತಿದಂತೆ ಮೂಡಿಸುವುದು ಗಾದೆಯ ಇನ್ನೊಂದು ಗುಣ. ಅಂಥ ಒಂದು ಗಾದೆಯನ್ನು ಇಲ್ಲಿ ಗಮನಿಸಬಹುದು:

ಅತ್ತೆ ಮನೇಲಿ ಹೆಂಗಿದ್ದಿ ಮಗಳೆ ಅಂದ್ರೆ
ಮುಳ್ಳಾಗೆ ಹಾದಿ ನಡೆದಂಗೆ
ಮೊಳಕೈಗೆ ಚಿಲಕ ಹೊಡೆದಂಗೆ

ಪ್ರೀತಿಯಿಂದ ಸಾಕಿದ ಮಗಳು ಮದುವೆಯಾದ ಮೇಲೆ ಗಂಡನ ಮನೆಯಲ್ಲಿ ಕೆಲವು ದಿನ ಇದ್ದು ತೌರಿಗೆ ಬಂದಿರುತ್ತಾಳೆ. ಬಹುದಿನಗಳಿಂದ ಅಗಲಿದ್ದ ತಾಯಿಗೆ ಮಗಳು ಅತ್ತೆಯ ಮನೆಯಲ್ಲಿ ಹೇಗಿದ್ದಳು ಎಂಬುದನ್ನು ತಿಳಿದುಕೊಳ್ಳುವ ಕಾತರ, ಕುತೂಹಲ; ಮಗಳನ್ನು ಕೇಳುತ್ತಾಳೆ. ಆದರೆ ಮಗಳಿಂದ ಬಂದ ಉತ್ತರ ಮಾತ್ರ ಮಾರ್ಮಿಕವಾಗಿದೆ. ಇಲ್ಲಿ ಬಳಸಿರುವ ಎರಡು ಉಪಮೆಗಳು ಆಕೆ ಅನುಭವಿಸಿದ ಕಷ್ಟಪರಂಪರೆಯನ್ನು ಧ್ವನಿಪೂರ್ಣವಾಗಿ ಸಮರ್ಥವಾಗಿ ಚಿತ್ರಿಸುತ್ತವೆ. ಕೆಲವು ಗಾದೆಗಳು ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿದ್ದು ಆಯಾ ಸಂಸ್ಕೃತಿಯ ಗುಣಾವಗುಣಗಳನ್ನು ಪ್ರತಿಬಿಂಬಿಸುತ್ತವೆ. ತಿರ್ಕೊಂಡು ತಿಂದ್ರು ಕರ್ಕೊಂಡು ಉಣ್ಣು; ಹೂವ ಹಂಚಿ ಮುಡಿ, ಹಣ್ಣ ಹಂಚಿ ತಿನ್ನು ಎಂಬ ಗಾದೆಗಳು ಒಳ್ಳೆಯದು ಎಲ್ಲರಿಗೂ ದೊರಕಬೇಕು, ಯಾವಾಗಲೂ ಒಬ್ಬರಿಗೊಬ್ಬರು ನೆರವಾಗಬೇಕು ಎನ್ನುವ ಅಂಶವನ್ನೂ ಜನಸಾಮಾನ್ಯರ ತ್ಯಾಗಗುಣವನ್ನೂ ನಮ್ಮ ನೆಲದ ಸಂಸ್ಕೃತಿಯನ್ನೂ ಪ್ರತಿನಿಧಿಸುತ್ತವೆ. ತಲೆ ಬಿಟ್ಟು ಸಾಸೇವು ಇಕ್ತಾರ ಎಂಬ ಗಾದೆ ಹಿರಿಯನನ್ನು ಬಿಟ್ಟು ಕಿರಿಯನಿಗೆ ಮದುವೆ ಮಾಡಬಹುದೆ? ಎನ್ನುವ ಅರ್ಥವನ್ನೊಳ

ಗೊಂಡಿರುವುದರ ಜೊತೆಗೆ ಕ್ರಮಬದ್ಧವಾದ ಹಂತಗಳನ್ನು ಅನುಸರಿಸಬೇಕು, ಮೊದಲು ಹಿರಿಯದಕ್ಕೆ ಹೆಚ್ಚು ಬೆಲೆಯುಳ್ಳದ್ದಕ್ಕೆ ಮಹತ್ವ ನೀಡಬೇಕು ಎಂಬ ಅಂಶವನ್ನು ಪರ್ಯಾಯವಾಗಿ ಸೂಚಿಸುತ್ತದೆ. ಅಕ್ಕೀ ಮೇಲಾಸೆ ನೆಂಟರ ಮೇಲೆ ಪ್ರೀತಿ ಎಂಬ ಗಾದೆ ಮನಸ್ಸಿಲ್ಲದ ಮನಸ್ಸಿನಿಂದ ಉಪಚರಿಸುವ ಜನರನ್ನು ಕುರಿತು ಹಂಗಿಸಿ ಹೇಳಿದ್ದಾಗಿದೆ. ಜೊತೆಗೆ ಮನೆಗೆ ಬಂದ ಅತಿಥಿಗಳನ್ನು ಪ್ರೀತಿಯಿಂದ ಉಪಚರಿಸಬೇಕು ಎಂಬ ಗೃಹಸ್ಥಧರ್ಮದ ಮರ್ಮವನ್ನು ಈ ಗಾದೆ ಧ್ವನಿಸುತ್ತದೆ. ಅಲ್ಪನಿಗೆ ಐಶ್ವರ್ಯ ಬರೋವತ್ಗೆ ಅರ್ಧ ರಾತ್ರೀಲಿ ಕೊಡೇ ಹಿಡಿಸಿಕಂಡನಂತೆ ಎನ್ನುವ ಗಾದೆ ಧಿಡೀರನೆ ಸಾಹುಕಾರನಾದ ವ್ಯಕ್ತಿಯೊಬ್ಬನ ಡಾಂಭಿಕತನವನ್ನೂ ಅವನ ಕುಸಂಸ್ಕೃತಿಯನ್ನೂ ಪ್ರತಿಬಿಂಬಿಸಿದೆ. ಕೀತ ಬೆಳ್ಳಿಗೆ ಉಚ್ಚೆ ಉಯ್ಯೋ ಅಂದ್ರೆ ಜಲ್ಮಾಲ್ ಕಟ್ಟಿ ಆರ್ತಿಂಗ್ಳಾಯ್ತು ಅಂದ್ನಂತೆ. ಈ ಗಾದೆ ವ್ಯಕ್ತಿಯೊಬ್ಬನ ಜಿಪುಣತನದ ಪರಾಕಾಷ್ಠೆಯನ್ನೂ ಅವನ ಸ್ವಾರ್ಥಮನೋಭಾವವನ್ನೂ ಎತ್ತಿಹಿಡಿಯುತ್ತದೆ. ಮನುಷ್ಯ ಸ್ವಾರ್ಥಿ ನಿಜ. ಆದರೆ ಆತನಲ್ಲಿ ಪರೋಪಕಾರ ಗುಣ ಸ್ವಲ್ಪವಾದರೂ ಇರಬೇಕು ಎಂಬ ಅಂಶವನ್ನು ಉಪಮೆಯ ಮೂಲಕ ಗಾದೆ ಸೂಚಿಸುತ್ತದೆ. ಮೇಲುನೋಟಕ್ಕೆ ಗಾದೆ ಅಶ್ಲೀಲವೆನಸಬಹುದು. ಆದರೆ ಒಳನೋಟ ಅರ್ಥಗರ್ಭಿತವಾಗಿದೆ. ಬಂಜೆಮನೆ ಚಂದ ಬಸ್ತೀಗುಡಿ ಚಂದ ಎನ್ನುವ ಗಾದೆಯಲ್ಲಿ ಹೊರನೋಟಕ್ಕೆ ಎರಡು ಮನೆಗಳ ಸ್ವಚ್ಛತೆಯನ್ನೂ ಸುಂದರತೆ ಯನ್ನೂ ಕುರಿತು ಆಡುವಂತೆ ತೋರಿದರೂ ಆಂತರಿಕವಾಗಿ ನೆಮ್ಮದಿಯಿಲ್ಲದ ಬದುಕನ್ನೂ ಸಂತೋಷವನ್ನೂ ಕುರಿತು ಹೇಳಿದುದಾಗಿದೆ. ಬಂಜೆಯ ಮನೆ ಸುಂದರವಾಗಿದ್ದೂ್ರ ಅಲ್ಲಿ ನಲಿವಿಲ್ಲ. ಸಂತೋಷವಿಲ್ಲ. ಕಾರಣ ಅವಳಿಗೆ ಮಕ್ಕಳಿಲ್ಲ. ಬಸದಿ ಅಥವಾ ಗುಡಿಯಲ್ಲಿರುವ ದೇವರ ಸಾನ್ನಿಧ್ಯ ಸುಂದರವಾಗಿರುವುದರ ಜೊತೆಗೆ ಶುಭದಾಯಕಮೂ ಆಗಿರುತ್ತದೆ. ಮನಸ್ಸಿಗೆ ನೆಮ್ಮದಿಯನ್ನೂ ಆನಂದವನ್ನೂ ಅದು ನೀಡುತ್ತದೆ. ಒಂದು ವಸ್ತು ಸುಂದರವಾಗಿದ್ದರೆ ಸ್ವಚ್ಛವಾಗಿದ್ದರೆ ಸಾಲದು, ಅದು ಒಳಿತನ್ನುಂಟು ಮಾಡುವುದಾಗಿರಬೇಕು, ಸಂತೋಷವನ್ನು ಕೊಡುವಂಥದ್ದಾಗಬೇಕು ಎಂಬ ಅಂಶವೂ ಈ ಗಾದೆಯಿಂದ ಧ್ವನಿತವಾಗುತ್ತದೆ. ಬದುಕಿದರೆ ಬಾಯ್ ಬಡ್ಕತರೆ; ಕೆಟ್ಟರೆ ತಿಗಾ ಬಡ್ಕತರೆ ಎಂಬ ಗಾದೆ ಹೊಟ್ಟೆಕಿಚ್ಚಿನ ಜನರ, ಅಸೂಯಾಪರರ ಬದುಕಿನ ರೀತಿಯನ್ನು ಹೇಳುತ್ತದೆ. ಅಂಥವರು ಇನ್ನೊಬ್ಬರಿಗೆ ಒಳಿತಾದರೆ ಸಹಿಸಲಾರರು, ಕೆಡುಕಾದರೆ ಅದನ್ನು ಕಂಡು ಸಂತೋಷಪಡುವರು. ಇವರಿಂದ ಸಮಾಜಕ್ಕಾಗಲಿ ನೆರೆಹೊರೆಯವರಿಗಾಗಲಿ ಎಂದೂ ಒಳಿತಾಗುವುದಿಲ್ಲ. ಪ್ರಪಂಚದಲ್ಲಿ ಈ ಮನೋಭಾವದ ಜನರೇ ಸುತ್ತಮುತ್ತ ಹೆಚ್ಚು. ಅವರಿಂದ ದೂರ ಇರಬೇಕು ಎಂದು ಈ ಗಾದೆ ಎಚ್ಚರಿಕೆ ನೀಡುತ್ತದೆ.

ಸಾಹಿತ್ಯಕ ದೃಷ್ಟಿಯಿಂದಲೂ ಗಾದೆಗಳು ಗಮನಾರ್ಹವಾಗಿವೆ. ಅರೀದುಡುಗ ಆರಂಭಮಾಡಿ ವಡೇ ವಲ ಕೂದು ಮೆದೇ ಆಕ್ದ ಎಂಬ ಗಾದೆಯನ್ನು ಗಮನಿಸಬಹುದು. ಬೇಸಾಯದ ತಿಳಿವಳಿಕೆಯಿಲ್ಲದ, ವಿವೇಕವಿಲ್ಲದ ಎಳೆಯ ಪ್ರಾಯದ ಹುಡುಗನ ಆತುರ, ಅಚಾತುರ್ಯ, ಅದರಿಂದಾದ ನಷ್ಟ ಮೊದಲಾದವನ್ನು ಗಾದೆ ಧ್ವನಿಪೂರ್ಣವಾಗಿ ಚಿತ್ರಿಸಿದೆ. ವಿವೇಕವಿಲ್ಲದ ಹುಡುಗ ಸಲ್ಲದ ಕೆಲಸ ಮಾಡಿದನೆಂದು ವಾಚ್ಯವಾಗಿ ಹೇಳದೆ 'ವಡೇ ವಲ ಕೂದು ಮೆದೇ ಆಕ್ದ' ಎಂದು ಸೂಚ್ಯವಾಗಿ ಹೇಳುವಲ್ಲಿ ಗಾದೆಯಲ್ಲಿ ಸಾಹಿತ್ಯಕ ಸೊಗಸು ಕಂಡುಬರುತ್ತದೆ. ಬಡವನೆಂಡ್ತಿ ಬೇಲೀ ಉವ್ವ (ಹೂವು). ಈ ಗಾದೆ ಬಡವನ ಹೆಂಡತಿಯ ಸೌಂದರ್ಯವನ್ನೂ ಅವಳ ಅಸಹಾಯಕತೆಯನ್ನೂ ಬಡತನ ಬಡವರಿಗೆ ಎಂಥ ಶಾಪ ಎಂಬುದನ್ನೂ ಸುಂದರವಾಗಿ ಹೇಳುತ್ತದೆ. ಬೇಲಿಯಲ್ಲಿ ಬಿಟ್ಟಿರುವ ಹೂ ದಾರಿಹೋಕರಿಗೆ ಹೇಗೆ ಸುಲಭವಾಗಿ ದೊರೆಯುತ್ತದೆಯೋ ಅದನ್ನು ಹೇಗೆ ಯಾರು ಬೇಕಾದರೂ ಕೊಯ್ದು ಮುಡಿಯುವಲ್ಲಿ ಯಾವ ನಿರ್ಬಂಧವೂ ಇಲ್ಲವೋ ಹಾಗೆಯೇ ಬಡವನ ಹೆಂಡತಿಯ ಪಾಡು ಎಂಬುದನ್ನು ಬೇಲಿ ಉವ್ವ ಎಂಬ ಉಪಮಾನದೊಂದಿಗೆ ಹೇಳಿರುವ ರೀತಿ ಅನನ್ಯವಾಗಿದೆ. ಇಂಥ ಗಾದೆಗಳಲ್ಲಿ ಸಾಹಿತ್ಯಕಾಂಶ ಮಡುಗಟ್ಟಿದೆ.

ವೃತ್ತಿಗೆ ಸಂಬಂಧಿಸಿದ ಗಾದೆಗಳಲ್ಲಿ ಬೇಸಾಯ ಕುರಿತ ಗಾದೆಗಳು ಕನ್ನಡದಲ್ಲಿ ಅಪಾರವಾಗಿ ದೊರೆಯುತ್ತವೆ. ಈ ಗಾದೆಗಳಲ್ಲಿ ರೈತರ ಬೇಸಾಯ ಕ್ರಮ, ಮಳೆಯ ಗುಣಸ್ವಭಾವ, ಮಳೆಗಳ ಬಗೆ, ಪರಿಣಾಮ, ಉಪಯೋಗ ಮೊದಲಾದ ಸಂಗತಿಗಳು ಅನುಭವದ ಹರಳಾಗಿ ಮೂಡಿಬಂದಿವೆ. ಆದದ್ದು ಆದ್ರಿ ಮಳೇಲಿ ಚೆಲ್ಲು; ಮಿಕ್ಕಿದ್ದು ಮಿಕ್ಸಿರಿ (ಮೃಗಶಿರ) ಮಳೇಲಿ ಚೆಲ್ಲು ಎಂಬ ಗಾದೆಯಲ್ಲಿ ಯಾವ ಮಳೆಯಲ್ಲಿ ಹೆಚ್ಚು ಬಿತ್ತಬೇಕು ಎನ್ನುವ ಅಂಶ ಸೂಚಿತವಾಗಿದೆ. ಉತ್ತರೆ ಮಳೆ ಉಯ್ದರೆ ಉತ್ತೆತ್ತು ಉಕ್ಕೆ ದೋಣೇಲಿ ನೀರ್ ಕುಡಿತದೆ; ಉತ್ತರೆ ಮಳೆ ಉಯ್ದರೆ ಉತ್ತೆತ್ತು ನೀರಿಗೆ ಬೀಳ್ತದೆ ಎಂಬ ಈ ಎರಡು ಗಾದೆಗಳು, ಉತ್ತರೆ ಮಳೆಯ ಬಿರುಸು, ಸಮೃದ್ಧಿ ಹಾಗೂ ಆ ಕಾಲದ ಬಿಸಿಲ ಝಳವನ್ನು ಸೂಚಿಸುತ್ತವೆ. ಎತ್ತು ಮಾರು ಮಿಂಚಿದರೆ ಕುರ್ತೇಟು ಮಳೆ ಎನ್ನುವ ಗಾದೆ ಮಳೆಯ ಬಗ್ಗೆ ಜನಪದರಿಗಿರುವ ನಂಬಿಕೆಯೊಂದನ್ನು ಸೂಚಿಸುತ್ತದೆ. ಜೊತೆಗೆ ಜನಪದರು ಹೇಗೆ ಸೂಕ್ಷ್ಮವಾಗಿ ವಾತಾವರಣದ ಬದಲಾವಣೆಯನ್ನು ಗಮನಿಸಿ ಅರಿಯಬಲ್ಲರು ಎಂಬುದಕ್ಕೆ ನಿದರ್ಶನವಾಗಿದೆ. ಅಸಲೇ ಮಳೆ ಕೈತುಂಬ ಬೆಳೆ; ಆರಿದ್ರೆ ಇಲ್ದಿದ್ರೆ ದರಿದ್ರ ಕಂಡಿತ ಎಂಬ ಗಾದೆ ಆಯಾ ಮಳೆಯಿಂದ ರೈತರಿಗೆ ಆಗುವ ಲಾಭನಷ್ಟಗಳನ್ನು ತಿಳಿಸುತ್ತದೆ. ಕೆಬ್ಬೆ ಹೊಲಮಾಡಿದರೆ ಕಿಬ್ಬೊಟ್ಟೆಗೂ ಹಿಟ್ಟು ಸಿಗಲ್ಲ ಎಂಬ ಗಾದೆ ಬೇಸಾಯದ ಮರ್ಮವನ್ನು ಹೇಳುತ್ತದೆ. ಕೆಂಪುಮಣ್ಣಿನಿಂದ ಕೂಡಿದ ಹೊಲಕ್ಕೆ ಹೆಚ್ಚು ನೀರು ಬೇಕು, ಸಾಲದ್ದಕ್ಕೆ ಭೂಮಿಯೂ ಗಟ್ಟಿ. ಉಳುವುದಾಗಲಿ ಬೆಳೆಯುವುದಾಗಲಿ ತೀರ ಕಷ್ಟದ ಕೆಲಸ. ಅಂಥ ಭೂಮಿಯನ್ನು ಸಾಗುವಳಿ ಮಾಡಬಾರದು ಎಂದು ಎಚ್ಚರಿಕೆಯನ್ನು ಈ ಗಾದೆ ನೀಡುತ್ತದೆ. ಬೇಸಾಯ ವಿಷಯ ಕುರಿತಂತೆ ಹುಟ್ಟಿಕೊಂಡ ಗಾದೆ ಕೆಲಮೊಮ್ಮೆ ಪ್ರಾದೇಶಿಕವೂ ಆಗಿರಬಹುದು. ಅನುರಾಧೆ ಮಳೆ ಬಂದರೆ ನಮ್ಮ ರಾಗಿ ನಮ್ಮದು ಎಂಬ ಒಂದು ಗಾದೆ ರಾಗಿ ಹೆಚ್ಚು ಬೆಳೆಯುವ ಪ್ರದೇಶದಲ್ಲಿ ಹುಟ್ಟಿಕೊಂಡದ್ದು ಎಂದು ಹೇಳಬಹುದು. ಹಾಗೆಯೇ ಸ್ವಾತಿಮಳೆ ಬಿದ್ರೆ ಮುತ್ತಿನಂಥ ಜೋಳ ಎಂಬ ಗಾದೆ ಜೋಳವನ್ನು ಹೆಚ್ಚಾಗಿ ಬೆಳೆವ ಪ್ರದೇಶದಲ್ಲಿ ಹುಟ್ಟಿಕೊಂಡದ್ದಿರಬಹುದು.

ಹಾಸ್ಯವನ್ನು ವಸ್ತುವಾಗುಳ್ಳ ಗಾದೆಗಳಲ್ಲಿ ಹಾಸ್ಯ ಕೆಲಮೊಮ್ಮೆ ನವುರಾಗಿ ಮೊನಚಾಗಿ ವಿಡಂಬನಾತ್ಮಕವಾಗಿ ನರೂಪಿತವಾಗಿರುವುದುಂಟು. ಕೆಲಮೊಮ್ಮೆ ನಗಿಸುವುದೇ ಗಾದೆಯ ಉದ್ದೇಶವಾಗಿಬಿಡಬಹುದು. ಸಾಯ್ತಿನಿ ಸಾಯ್ತೀನಿ ಅಂತಾ ಸಾವ್ರ ಕೋಳಿ ತಿಂದ, ಮುತ್ತಿನಂಗೆ ಅವನೇ ನನ್ನ ಮುದಿಗಂಡ; ಮುತ್ತಿನಂಥ ಗಂಡ ಮೂರನೆಯವಳಿಗೆ; ಗಂಜೀಗೇ ಗತಿ ಇಲ್ಲ ನಂಜಿಕೋ ಬುಲಾವ್; ಸೆಟ್ಟರೆ ನಿಮ್ಮ ಮಗ ಬಿದ್ದ ಅಂದರೆ ಫಾಯಿದೆ ಕಾಣದೆ ಬಿದ್ದಿರಲಾರ ಎಂದಂತೆ; ಕೈಲಿ ಕಿಸೀದ ಗಂಡ ಮಲಗೋ ಹೊತ್ತಿಗೆ ಸರಿಯಾಗಿ ಮುನಿಸಿಕೊಂಡ; ಹೆಡ್ಡಾ ನಿನಗೆ ಹೆಣ್ಣು ಯಾರು ಕೊಟ್ಟಾರು ಅಂದ್ರೆ ನಮ್ಮನೇಲೇ ನಾಲ್ಕೈದವೆ; ಮದುವೆ ಆಗೋ ಗಂಡಿಗೆ ಅದೇ ಇಲ್ಲ ಅಂದಂಗೆ; ಯಾಲಕ್ಕಿ ಅಂತ ನನ್ನಳಿಯ ಏಳು ಮುದ್ದೆ ಉಂಡ ಮೊದಲಾದ ಗಾದೆಗಳು ಈ ಮಾದರಿಯವು. ನೀತಿಬೋಧೆ ಗಾದೆಯ ಮುಖ್ಯ ಉದ್ದೇಶಗಳಲ್ಲೊಂದು. ಜಲ ನೋಡಿ ಬಾವಿ ತೆಗಿ, ಕುಲ ನೋಡಿ ಹೆಣ್ಣು ತತ್ತ, ಕುಲ ಬಿಟ್ಟರೂ ಛಲ ಬಿಡಬಾರದು. ಆಳಾಗಿ ದುಡಿ ಅರಸಾಗಿ ಉಣ್ಣು ಎಂಬ ಗಾದೆಗಳಲ್ಲಿ ಈ ಅಂಶ ಪ್ರಖರವಾಗಿದೆ.

ಕೆಲವೊಮ್ಮೆ ಗಾದೆಗಳು ಇತಿಹಾಸವನ್ನು ವಸ್ತುವಾಗಿಸಿಕೊಂಡಿರಬಹುದು. ಹಳ್ಳೀದೇವರ ತಲೆ ಹೊಡೆದು ದಿಳ್ಳೀ ದೇವರ ಡೊಳ್ಳು ಬೆಳೆಸಿದ ಎಂಬ ಗಾದೆ ಮುಸ್ಲಿಂ ರಾಜರು ದಂಡಯಾತ್ರೆ ನಡೆಸಿ ಕೊಳ್ಳೆಹೊಡೆದು ಲೂಟಿ ಮಾಡಿ ಸಂಪತ್ತು ದೋಚಿಕೊಂಡು ಹೋಗಿ ದೆಹಲಿಗೆ ತುಂಬಿಕೊಂಡದ್ದನ್ನು ತಿಳಿಸುವಂತಿದೆ.

ಕುಂತು ಕುಣಿಗಲು ಗೆದ್ದ
ನಿಂತು ಮಾಗಡಿ ಗೆದ್ದ
ಮಾತಿಲ್ಲದೆ ಗೆದ್ದ ಮದುರೇನ

ಎಂಬ ಗಾದೆ ಮಾಗಡಿ ಕೆಂಪೇಗೌಡನಿಗೆ ಸಂಬಂಧಪಟ್ಟದ್ದು. ಇಲ್ಲಿ ಮದುರೆ ಯಾವುದು ಎಂಬ ಸಮಸ್ಯೆ ಉಂಟಾಗುತ್ತದೆ. ಗಾದೆಗಳು ಚಾರಿತ್ರಿಕ ಸಂಶೋಧನೆಗಳಿಗೂ ಸಹಾಯಕವಾಗಬಲ್ಲವು. ಸಂಶೋಧನೆ ನಡೆದರೆ ಗಾದೆಗಳು ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಸಾಮರ್ಥ್ಯ ಹೊಂದಿವೆ.

ಪುರಾಣ ಪುಣ್ಯಕಥೆಗಳ ಪರಿಚಯದಿಂದ ಅವು ತಮ್ಮ ಮೇಲೆ ಬೀರಿದ ಪ್ರಭಾವದಿಂದ ಕನ್ನಡದಲ್ಲಿ ಹಲವಾರು ಪೌರಾಣಿಕ ಗಾದೆಗಳು ಸೃಷ್ಟಿಯಾಗಿವೆ. ಅಳಿಲಸೇವೆ ಮಳಲಭಕ್ತಿ, ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು. ಹೆಣ್ಣಿನಿಂದ ರಾವಣ ಕೆಟ್ಟ ಮಣ್ಣಿನಿಂದ ಕೌರವ ಕೆಟ್ಟ, ಗಾಂಧಾರಿ ಗರ್ಭ ಗುದ್ದಿಕಂಡಂಗೆ, ಸಾರಂಗಧರನ ಕೈಕಾಲ್ ಕಡಿಸ್ದೋಳು, ಎಂಟನೇ ಶನ ಹೆಗಲೇರಿಕಂಡಂಗೆ ಈ ಗಾದೆಗಳು ರಾಮಾಯಣ, ಮಹಾಭಾರತ, ಸಾರಂಗಧರನ ಕಥೆ, ಶನಮಹಾತ್ಮೆ ಮೊದಲಾದ ಕಥೆಗಳ ಅರಿವಿನಂದ ಹುಟ್ಟಿಕೊಂಡವಾಗಿವೆ.

ಗಾದೆಗಳು ಪ್ರಾಣಿವಿಜ್ಞಾನಿಗಳಿಗೆ, ಸಮಾಜಶಾಸ್ತ್ರಜ್ಞರಿಗೆ, ಮಾನವ ಶಾಸ್ತ್ರಜ್ಞರಿಗೆ ಭಾಷಾವಿಜ್ಞಾನಿಗಳಿಗೆ ಸಂಶೋಧನೆಗೆ ಸಾಮಗ್ರಿಯನ್ನೊದಗಿಸಬಲ್ಲವು.

ಅಮ್ಮ ಪಟ್ಟಕ್ಕೆ ಬರುವಾಗ್ಗೆ ಅಪ್ಪ ಚಟ್ಟಕ್ಕೆ
ಆಡೋ ಹುಡುಗಿಗೊಂದು ಕಾಡೋ ಕೂಸು

ಈ ಎರಡು ಗಾದೆಗಳು ಹಿಂದೆ ನಮ್ಮ ಸಮಾಜದಲ್ಲಿ ಅನುಷ್ಠಾನದಲ್ಲಿದ್ದ ಬಾಲ್ಯವಿಹಾಹಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತವೆ. ಅಂಬಲಿ ಕುಡಿದೋನು ಮಡಕೆ ಹೊತ್ತಾನೆ ಎಂಬ ಗಾದೆಯಲ್ಲಿ ಮಡಕೆ ಪದ ಭಾಷಾವಿಜ್ಞಾನದೃಷ್ಟಿಯಿಂದ ಗಮನಾರ್ಹವಾಗಿದೆ. ಈ ಪದ ಮೂಲತಃ ತೆಲುಗು ಭಾಷೆಯದು. ಅಲ್ಲಿ ಮಡಕಾ ಅಂದರೆ ನೇಗಿಲು ಎಂದರ್ಥ. ತೆಲುಗಿನ ಸಂಪರ್ಕವಿರುವ ಹಿಂದೂಪುರ, ಮಧುಗಿರಿಯ ಕಡೆ ನೇಗಿಲಿಗೆ ಮಡಕೆ ಎಂಬ ಪದವನ್ನು ಬಳಸುತ್ತಾರೆ. ಆ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಮೇಲೆ ತೆಲುಗಿನ ಪ್ರಭಾವ ಎಷ್ಟರಮಟ್ಟಿಗೆ ಆಗಿದೆ ಎಂಬುದಕ್ಕೆ ನಿದರ್ಶನವಾಗಿದೆ. ಕೊತ್ತಿ ಕೊಂದ ಪಾಪ ತಿತ್ತಿ ಹೊಕ್ಕರೂ ಬಿಡದು ಎಂಬ ಗಾದೆಯಲ್ಲೂ ಅಷ್ಟೆ. ತಿತ್ತಿ ಎಂಬ

ಪದ ತಿರುಪತಿ–ತಿರುಪ್ತಿ > ತಿರಿಪ್ತಿ > ತಿಪ್ತಿ > ತಿರ್ತಿ > ತಿತ್ತಿ ಆಗಿರುವಂತೆ ತೋರುತ್ತದೆ. ಬಾಳೆಗೆ ಗೊನೆ ಚೇಳಿಗೆ ಬಸಿರು ಎಂಬ ಗಾದೆ ಪ್ರಾಣಿವಿಜ್ಞಾನದ ದೃಷ್ಟಿಯಿಂದ ಗಮನಾರ್ಹವಾಗಿದೆ. ಚೇಳು ಬಸಿರಾದರೆ ಮರಿ ಹಾಕಿದ ಮೇಲೆ ಸಾಯುತ್ತದೆ ಎಂಬುದು ಜನಪದರ ನಂಬಿಕೆ. ವಾಸ್ತವವಾಗಿ ವೈಜ್ಞಾನಿಕವಾಗಿ ಇದು ಎಷ್ಟರಮಟ್ಟಿಗೆ ಸತ್ಯ ಅಥವಾ ಇಲ್ಲ ತಿಳಿಯಬೇಕಾಗಿದೆ. ಹಾವು ತನ್ನ ಮೊಟ್ಟೆ ತಾನೆ ತಿಂದ್ಹಂಗೆ ಎಂಬುದು ಇಂಥದೇ ಸಮಸ್ಯೆಯುಳ್ಳ ಇನ್ನೊಂದು ಗಾದೆ. ಈ ತೆರನ ಗಾದೆಗಳು ಕನ್ನಡದಲ್ಲಿ ಹಲವಾರಿವೆ. ಈ ಎಲ್ಲ ದೃಷ್ಟಿಯಿಂದಲೂ ಗಾದೆಗಳ ಅಧ್ಯಯನ ಕಾರ್ಯ ವ್ಯಾಪಕವಾಗಿ ನಡೆಯಬೇಕಾಗಿದೆ.

ಕನ್ನಡದಲ್ಲಿ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಗಾದೆಗಳಿವೆಯೆಂದು ಅಂದಾಜು ಮಾಡಬಹುದಾಗಿದೆ. ಕನ್ನಡ ಗಾದೆಗಳ ಸಂಗ್ರಹಕಾರ್ಯಕ್ಕೆ ಸುಮಾರು ಒಂದೂಕಾಲು ಶತಮಾನಗಳ ಇತಿಹಾಸವಿದ್ದು ಇದುವರೆಗೆ ಹಲವು ಗಾದೆಗಳ ಸಂಕಲನಗಳು ಪ್ರಕಟವಾಗಿವೆ.

1852ರಲ್ಲಿ ಮಂಗಳೂರಿನಿಂದ ಪ್ರಕಟವಾದ ಕನ್ನಡ ಗಾದೆಗಳು ಕನ್ನಡದ ಪ್ರಪ್ರಥಮ ಗಾದೆಗಳ ಸಂಕಲನ. ಗುಣ ಸಂಖ್ಯೆಗಳೆರಡರಲ್ಲೂ ಮಹತ್ತ್ವದ್ದೆನಿಸಿದ ಈ ಗ್ರಂಥದಲ್ಲಿ 3,457 ಗಾದೆಗಳಿವೆ. ಈ ಕೃತಿ ಗಾದೆಗಳನ್ನು ಸಂಗ್ರಹಿಸುವ ಕಡೆ ಕನ್ನಡಿಗರ ಗಮನ ಸೆಳೆಯಿತು. ಗಾದೆಗಳನ್ನು ಅಕಾರಾದಿಯಾಗಿ ಸಂಕಲಿಸಿ ಪ್ರಕಟಿಸುವ ಕ್ರಮಕ್ಕೂ ಈ ಕೃತಿಯೇ ಮಾರ್ಗದರ್ಶಕವೆನ್ನಬಹುದು. ಅನಂತರ 1874ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪಾಜಿಟರಿಯವರಿಂದ ಪ್ರಕಟವಾದ ಸಹಸ್ರಗಾಥಾಮೃತ ಕಲಶವು ಒಂದು ಸಾವಿರ ಸುಂದರ ಗಾದೆಗಳ ಸಂಕಲನ. ಇದೇ ಪ್ರಕಾಶಕರ ಆಶ್ರಯದಲ್ಲಿ ಶದ್ರಾಚ್ ಐಮನ್ ಮತ್ತು ಉಭಯದ ನರಸಿಂಹರಾವ್ ಅವರು ಸಂಪಾದಿಸಿದ ಪಾಪ್ಯುಲರ್ ಕೆನರೀಸ್ ಪ್ರಾವರ್ಬ್ಸ್ ಅಂಡ್ ದೆರ್ ಇಂಗ್ಲಿಷ್ ಈಕ್ವಿವಲೆಂಟ್ಸ್ ಎಂಬ ಕೃತಿ 1894ರಲ್ಲಿ ಪ್ರಕಟವಾಯಿತು. ಈ ಸಮಯದಲ್ಲೇ ಹಣಮಂತ ಗೋವಿಂದ ಜೋಶಿ ಅವರ ಸಾಮತಿ ಸಂಗ್ರಹ–ಕನ್ನಡ ಗಾದೆಗಳೂ ಅವುಗಳ ಸಮಾನಾರ್ಥಕ ಇಂಗ್ಲಿಷ್ ನುಡಿಗಳೂ ಎಂಬ ಕೃತಿ ಬೆಳಗಾಂ ಸಮಾಚಾರ್ ಪ್ರೆಸ್‌ನಿಂದ ಪ್ರಕಟವಾಯಿತು. ಇದು 1906ರಲ್ಲಿ ಮರುಮುದ್ರಣವನ್ನು ಕಂಡಿತು. ಇದೇ ಅವಧಿಯಲ್ಲಿ ಕನ್ನಡ ನಿಘಂಟೊಂದನ್ನು ಪ್ರಕಟಿಸಿದ ಕಿಟ್ಟೆಲ್ ಅವರು ಗಾದೆಗಳ ಸಂಗ್ರಹಕಾರರಾಗಿಯೂ ದುಡಿದಿರುವುದು ಮಹತ್ತ್ವದ ವಿಷಯವಾಗಿದೆ. ಅನಂತರ ಬಾಸೆಲ್ ಬುಕ್ ಅಂಡ್ ಟ್ರಾಕ್ಟ್ ಡಿಪಾಜಿಟರಿಯ 'ತ್ರೀ ಹಂಡ್ರೆಡ್ ಕೆನರೀಸ್ ಪ್ರಾವರ್ಬ್ಸ್' ಎಂಬ ಸಂಕಲನ 1903ರಲ್ಲಿ ಪ್ರಕಟವಾಯಿತು. 1911ರಲ್ಲಿ ಮೈಸೂರಿನ ಕ್ರೌನ್ ಪ್ರೆಸ್‌ನಿಂದ ಪ್ರಕಟವಾದ 'ನೂತನ ಸಹಸ್ರಗಾಥಾ ಕುಸುಮ ಮಂಜರಿ' ಒಂದು ಸಾವಿರ ಗಾದೆಗಳನ್ನುಳ್ಳ ಸಂಗ್ರಹ. ಈ ಕೃತಿಯ ಸಂಗ್ರಹಕಾರರು ಸಿ.ಸಿಂಗಪ್ಪ. ಸುಮಾರು 300 ಕನ್ನಡ ಗಾದೆಗಳನ್ನು ಇಂಗ್ಲಿಷಿನ ಸಮಾನಾರ್ಥಕ ಗಾದೆಗಳೊಡನೆ ಬಾಸೆಲ್ ಮಿಶನ್ ಬುಕ್ ಅಂಡ್ ಟ್ರಾಕ್ಟ್ ಡಿಪಾಜಿಟರಿ ಪ್ರಕಾಶನದಿಂದ ಎ ಹ್ಯಾಂಡ್ ಬುಕ್ ಆಫ್ ಕೆನರೀಸ್ ಪ್ರಾವರ್ಬ್ಸ್ ವಿತ್ ಇಂಗ್ಲಿಷ್ ಈಕ್ವಿವಲೆಂಟ್ಸ್ ಎಂಬ ಹೆಸರಿನಿಂದ ಯು.ಬಿ.ನರಸಿಂಗರಾವ್ ಅವರು ಸಂಗ್ರಹಿಸಿ ಪ್ರಕಟಿಸಿದರು. 1500 ಕನ್ನಡ ಗಾದೆಗಳನ್ನು ಅವುಗಳ ಉದ್ದೇಶ ವಿವರಣೆಯೊಂದಿಗೆ ಕರ್ನಾಟಕ ಲೋಕೋಕ್ತಿ ನಿಧಾನ ಎಂಬ ಹೆಸರಿನಿಂದ 1919ರಲ್ಲಿ ಕೆನರೀಸ್ ಮಿಶನ್ ಬುಕ್ ಅಂಡ್ ಟ್ರಾಕ್ಟ್ ಡಿಪಾಜಿಟರಿಯವರು ಪ್ರಕಟಿಸಿದರು. ಈ ಕೃತಿ 1912ರಲ್ಲಿ ಪ್ರಕಟವಾಗಿದ್ದ ಕೃತಿಯ ಪುನರ್ಮುದ್ರಣ. ಇವಿಷ್ಟು ಕ್ರೈಸ್ತ ಮಿಷನರಿಗಳಿಂದ ಹೊರಬಂದ ಗಾದೆಯ ಸಂಕಲನಗಳು. ಈ ಸಂದರ್ಭದಲ್ಲಿ ಕನ್ನಡ ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದಂತೆಯೇ ಬಾಸೆಲ್ ಮಿಶನರಿಯವರೇ ಕೊಡಗು ಭಾಷೆಯ ಗಾದೆಗಳನ್ನು ಮೊಟ್ಟಮೊದಲಿಗೆ ಸಂಗ್ರಹಿಸಿ ಕನ್ನಡ ಲಿಪಿಯಲ್ಲಿ 'ಕೊಡವ ಪಡಿಮ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದು (1886) ಗಮನಾರ್ಹ ಸಂಗತಿಯಾಗಿದೆ.

ಅನಂತರ 1944ರಲ್ಲಿ ಪ್ರಕಟವಾದ ಎಚ್.ಎಸ್. ಅಚ್ಚಪ್ಪನವರ 'ಕನ್ನಡ ಗಾದೆಗಳು' ಒಂದು ಅಪೂರ್ವ ಸಂಗ್ರಹ. ಹಾಗೆಯೇ ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದಿಂದ 1956ರಲ್ಲಿ ಪ್ರಕಟವಾದ ಜಂಗಮಕೋಟೆ ಕೃಷ್ಣಶಾಸ್ತ್ರಿಗಳ ಗಾದೆಗಳ ಭಂಡಾರ ಎಂಬ ಕೃತಿ ಇನ್ನೊಂದು ಮಹತ್ತ್ವದ ಸಂಗ್ರಹವಾಗಿದೆ. ಇದರಲ್ಲಿ 3,872 ಗಾದೆಗಳನ್ನು ವಿಷಯಾನುಸಾರ ವರ್ಗೀಕರಿಸಿ ಕೆಲವು ಗಾದೆಗಳಿಗೆ ವಿವರಣೆ ವ್ಯಾಖ್ಯಾನಗಳನ್ನು ಕೊಡಲಾಗಿದೆ. ಇದರಲ್ಲಿ ಕೆಲವು ಸಂಸ್ಕೃತ ಸೂಕ್ತಿಗಳೂ ಸೇರಿವೆ. ಸಂಸ್ಕೃತ ಸೂಕ್ತಿಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟಿರುವುದಾಗಿ ಹೇಳಿರುವುದರಿಂದ ಕೆಲಮೊಮ್ಮೆ ಕನ್ನಡದ ನಿಜವಾದ ಗಾದೆಗಳು ಯಾವುವು, ಕೃತಕ ಗಾದೆಗಳು ಯಾವುವು ಎಂಬ ಸಮಸ್ಯೆ ಎದುರಾಗುತ್ತದೆ. ಇದೇ ವರ್ಷದಲ್ಲಿ ಪಡುವಾರಿ ಸುಬ್ಬಣ್ಣಶೆಟ್ಟಿಯವರ ಗಾದೆಗಳ ಗುಚ್ಛ ಕೆ.ವೆಂಕಟರಾಯಾಚಾರ್ಯರ ಸೂಕ್ತಿಗಳು ಮತ್ತು ಬೇಬಿ ಸರೋಜಿನಿಯವರ ಗಾದೆಗಳು ಮತ್ತು ಜ್ಞಾನೋಕ್ತಿಗಳು ಎಂಬ ಸಂಕಲನಗಳು ಪ್ರಕಟವಾಗಿವೆ. ಅನಂತರ ಕುರಾಡಿ ಸೀತಾರಾಮ ಅಡಿಗರ 'ಕನ್ನಡ ಗಾದೆಗಳು' 1957ರಲ್ಲಿ ಪ್ರಕಟವಾಯಿತು. ಇದರಲ್ಲಿ 387 ಗಾದೆಗಳಿವೆ. ಎಂ.ಸಂಜೀವಶೆಟ್ಟಿಯವರ 'ನಾಡುನುಡಿಗಳು' ಎರಡು ಭಾಗಗಳಾಗಿ ಪ್ರಕಟವಾಗಿದ್ದು (1954) ಭಾಗ ಒಂದರಲ್ಲಿ 225 ಗಾದೆಗಳೂ ಭಾಗ ಎರಡರಲ್ಲಿ 234 ಗಾದೆಗಳೂ ಇವೆ.

ಬೆಂಗಳೂರಿನ ಸುದರ್ಶನಂ ಅಂಡ್ ಕಂಪನಿ ಪ್ರಕಟಿಸಿದ (1960) ಎಚ್.ಎಂ.ರಾಮಾರಾಧ್ಯರ ಗಾದೆಗಳ ಗೀತಗಳು ಗಾದೆಗಳನ್ನು ಪೋಣಿಸಿ ಕಟ್ಟಿದ ಸುಂದರ ಹಾಡುಗಳ ಸಂಕಲನ. ಇವರು ಗಾದೆಗಳನ್ನು ಬಳಸಿಕೊಂಡು ಗೀತಗಳು ಹಾಗೂ ನಾಟಕಗಳನ್ನು ರಚಿಸುವ ವಿಶಿಷ್ಟ ಪ್ರಯೋಗಗಳನ್ನು ನಡೆಸಿದ್ದಾರೆ. ಗಾದೆಗಳನ್ನು ಜೋಡಿಸಿ ರಚಿಸಿದ ದೀಪ ನುಂಗೊ ಅತ್ತೆಗೆ ದೀವಟಿಗೆ ನುಂಗೊ ಸೊಸೆ ಎಂಬ ಇವರ ನಾಟಕ ಹೊನ್ನ ಬಿತ್ತೇವು ಹೊಲಕೆಲ್ಲ ಎಂಬ ಗ್ರಂಥದಲ್ಲಿ ಪ್ರಕಟವಾಗಿದೆ. ಈ ನಾಟಕದ ಪ್ರಯೋಗ ತಂತ್ರ ಅತ್ಯಂತ ಕುತೂಹಲಕಾರಿಯಾಗಿದೆ. ಗಮನಿಸಬಹುದಾದ ಮತ್ತೊಂದು ಕೃತಿಯೆಂದರೆ ದಕ್ಷಿಣ ಭಾರತ ಭಾಷಾ ಸಂಸ್ಥೆ ಪ್ರಕಟಿಸಿದ ನಾಲ್ ನುಡಿ–ನಾಣ್ನುಡಿ (1962). ಇದರಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿನ 467 ಸಮಾನ ಗಾದೆಗಳನ್ನು ಎಂ.ಮರಿಯಪ್ಪಭಟ್ಟ, ಎನ್.ವೆಂಕಟರಾವ್, ಆರ್‌ಪಿ.ಸೇತುಪಿಳ್ಳೆ, ಎಸ್.ಕೆ.ನಾಯರ್ ಅವರು ಕ್ರಮವಾಗಿ ಸಂಕಲಿಸಿದ್ದಾರೆ. ಟಿ.ವಿ.ವೆಂಕಟರಮಣಯ್ಯನವರ ಕನ್ನಡ ಗಾದೆಗಳ ಕೋಶ 1963ರಲ್ಲಿ ಪ್ರಕಟವಾಯಿತು. ಇದು 4,234 ಗಾದೆಗಳನ್ನೊಳ ಗೊಂಡಿದ್ದು, ವಿಷಯಾನುಸಾರ ವಾಗಿ ಗಾದೆಗಳನ್ನು ವಿಭಜಿಸಿರುವ ಈ ಕೃತಿ ಉಲ್ಲೇಖನೀಯ ಸಂಗ್ರಹವಾಗಿದೆ. (1964, ಮರುಮುದ್ರಣ), ಪುತ್ತಿಗೆ ಶ್ರೀನಿವಾಸರಾಯರ ಕನ್ನಡ ತುಳು ಗಾದೆಗಳು ಎಂಬಸಂಕಲನ 1967ರಲ್ಲಿ ಪ್ರಕಟವಾಯಿತು.

ಜಾನಪದ ಸ್ನಾತಕೋತ್ತರ ಮಟ್ಟದ ಒಂದು ಅಧ್ಯಯನ ವಿಷಯವಾಗಿ ವಿಶ್ವವಿದ್ಯಾನಿಲಯದ ಮೆಟ್ಟಿಲೇರಿದ ತರುವಾಯ ಗಾದೆಗಳ ಸಂಗ್ರಹಣೆ, ಸಂಪಾದನೆ, ವಿಶ್ಲೇಷಣೆ, ಪ್ರಕಟಣೆಗಳಲ್ಲಿ ಹೊಸ ಚೇತನವುಂಟಾಯಿತೆನ್ನಬಹುದು. ಸಂಗ್ರಹಕಾರರು ಗ್ರಾಮಾಂತರ ಪ್ರದೇಶಗಳನ್ನು ಪ್ರವೇಶಿಸಿ ಕೃಷಿಗೆ ತೊಡಗಿದುದರ ಫಲವಾಗಿ ಅಜ್ಞಾತ ವಲಯದಲ್ಲಿ ಹುದುಗಿದ್ದ ಅಪೂರ್ವ ಗಾದೆಗಳು ಬೆಳಕಿಗೆ ಬಂದವು. ಈ ಬಗೆಯ ಜಾನಪದ ದೃಷ್ಟಿಯಿಂದ ಗಾದೆಗಳ ಸಂಗ್ರಹಕಾರ್ಯ ನಡೆಸಿದ ಕೀರ್ತಿ ರಾಗೌ ಅವರಿಗೆ ಸಲ್ಲುತ್ತದೆ. 1968ರಲ್ಲಿ ಪ್ರಕಟವಾದ ಇವರ ನಮ್ಮ ಗಾದೆಗಳು ಸಂಕಲನ ಹಲವಾರು ದೃಷ್ಟಿಗಳಿಂದ ಮಹತ್ತ್ವದ ಕೃತಿಯಾಗಿದೆ. ರಾಗೌ ಅವರು ಈವರೆಗೆ, 2,200 ಗಾದೆಗಳನ್ನು ಬೆಳಕಿಗೆ ತಂದಿದ್ದಾರೆ. ಈ ಸಂಕಲನ ಗಾದೆಗಳ ಸ್ವರೂಪಲಕ್ಷಣಾದಿಗಳನ್ನು ಕುರಿತ ವಿದ್ವತ್‌ಪೂರ್ಣ ಪ್ರಸ್ತಾವನೆ, ಇದು ಅತ್ಯುಪಯುಕ್ತ ಮಾಹಿತಿಗಳಿಂದ ಕೂಡಿದ್ದು ಈ ಕ್ಷೇತ್ರದಲ್ಲಿ ಕೆಲಸಮಾಡುವವರಿಗೆದಾರಿದೀಪವಾಗಿದೆ. ಇದೇ ಲೇಖಕರ ಮತ್ತೊಂದು ಶ್ರೇಷ್ಠ ಸಂಕಲನ ಕಿಟ್ಟೆಲ್ ಕೋಶದ ಗಾದೆಗಳು (1969). ಇದರಲ್ಲಿ ಕಿಟ್ಟೆಲ್ ಕೋಶದಲ್ಲಿ ಉದಾಹರಿಸಿರುವ 4,260 ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿದೆ.

1969ರಲ್ಲಿ ಪ್ರಕಟವಾದ ಅಚ್ಚಪ್ಪನವರ 'ಗ್ರಂಥಸ್ಥ ಗಾದೆಗಳು' ಕವಿರಾಜ ಮಾರ್ಗದಿಂದ ಮುದ್ದಣನವರೆಗಿನ ಕೆಲವು ಕಾವ್ಯಗಳಿಂದ ಆಯ್ದ ಗಾದೆಗಳು, ಉದ್ಧರಣೆಗಳು, ಸಾಮತಿಗಳು, ಜಾಣ್ನುಡಿಗಳು, ಸೂಕ್ತಿಗಳು, ರೂಪಕಗಳು ಇತ್ಯಾದಿಗಳನ್ನೊಳಗೊಂಡ ಸಂಕಲನ.

1971ರಲ್ಲಿ ಮಂಗಳೂರಿನ ಪಲಚಂಪಿ ಪ್ರಕಾಶನದಿಂದ ಪ್ರಕಟವಾಗಿರುವ ಬಿ.ಎ.ವಿವೇಕರೈ ಅವರ ತುಳು ಗಾದೆಗಳು ಉಲ್ಲೇಖನೀಯ ಕೃತಿ. ಇದರಲ್ಲಿ 704 ತುಳು ಗಾದೆಗಳಿಗೆ ಸಂವಾದಿಯಾದ ಕನ್ನಡ ಗಾದೆ ಇಲ್ಲವೇ ಅರ್ಥವಿವರಣೆಯನ್ನು ಕೊಡಲಾಗಿದೆ. ವಿಸ್ತಾರವಾದ ಪ್ರಸ್ತಾವನೆ, ತುಳು ಕನ್ನಡ ಅರ್ಥಕೋಶಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಬಸಯ್ಯ ವಿರೂಪಾಕ್ಷಯ್ಯ ಮಠದ ಅವರ ಸಾವಿರ ಮಾತಿನ ಸರದಾರ ಎಂಬ ಸಂಕಲನ ಶ್ರೀ ಗುರುಲಿಂಗ ಜಂಗಮ ಗ್ರಂಥ ಪ್ರಸಾರಕ ಸಂಘ, ಹಳ್ಳೀಗುಡಿ, ಗದಗ ತಾಲ್ಲೂಕಿನಿಂದ ಪ್ರಕಟವಾಗಿದೆ (1972). ಇದರಲ್ಲಿ ಒಂದು ಸಾವಿರ ಗಾದೆಗಳಿವೆ. ಇದೇ ವರ್ಷ ಪ್ರಕಟವಾದ ಎಸ್.ವಿ.ಪರಮೇಶ್ವರಭಟ್ಟರ 'ನೆನಪಿಗೆ ಬಂದ ಗಾದೆಗಳು' 200ಗಾದೆಗಳ ಸಂಕಲನ. ತುಳು ಗಾದೆಗಳ ಸಂಗ್ರಹಕಾರ್ಯದಲ್ಲಿ ತೊಡಗಿದ ಮತ್ತೊಬ್ಬರು ಬಿ.ದೂಮಪ್ಪ ಮಾಸ್ಟರ್. 1973ರಲ್ಲಿ ಪ್ರಕಟವಾದ ಇವರ ಮಾದಿರನ ಗಾದೆ ಎಂಬ ಸಂಕಲನದಲ್ಲಿ ಸಾವಿರ ಗಾದೆಗಳಿವೆ. ಇವುಗಳನ್ನು ಕನ್ನಡ ಲಿಪಿಯಲಿ ಗೀತರೂಪದಲ್ಲಿ ಪೋಣಿಸಿದೆ. ಚೌಡೇಗೌಡ ಬೀಡನಹಳ್ಳಿ ಅವರ ಪ್ರಾದೇಶಿಕ ಗಾದೆಗಳು 1973ರಲ್ಲಿ ಪ್ರಕಟವಾಯಿತು. ಗಾದೆಗಳ ಸಂಕಲನ ಗ್ರಂಥಗಳಲ್ಲಿ ಇನ್ನೊಂದು ಮಹತ್ತ್ವದ ಕೃತಿ ಎಂದರೆ ಸುಧಾಕರ ಅವರ ನಮ್ಮ ಸುತ್ತಿನ ಗಾದೆಗಳು ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದೆ (1973). ಕಾಳೇಗೌಡ ನಾಗವಾರ ಅವರ ಬೀದಿಮಕ್ಕಳು ಬೆಳೆದೊ ಒಂದು ಉತ್ತಮ ಸಂಕಲನ. ಮೈಲಹಳ್ಳಿ ರೇವಣ್ಣ ಅವರ ದೀಪದ ಕೆಳಗೆ ಕತ್ತಲೆ ಎಂಬ 1412 ಗಾದೆಗಳ ಸಂಕಲನ ಇತ್ತೀಚಿನ ಕೃತಿ (2003).

ಜನಪದ ಗಾದೆಗಳಂತೆ ಅನೇಕ ಸ್ವತಂತ್ರ ಗಾದೆಗಳೂ ರಚಿತವಾಗಿವೆ. ಅವುಗಳಲ್ಲಿ ಹೆಚ್ಚು ಗಾದೆಗಳು ಅನುಕರಣೆಯಿಂದ ಮೂಡಿದವಾಗಿವೆ. ಉದಾ: ಊರಿಗೆ ಬಂದವಳು ನೀರಿಗೆ ಬರೋದಿಲ್ಲವೆ ಎಂಬ ಗಾದೆಗೆ ಸಂವಾದಿಯಾಗಿ ಸಿಟಿಗೆ ಬಂದವಳು ಸಿನಿಮಾಕ್ಕೆ ಬರೋದಿಲ್ಲವೆ ಇತ್ಯಾದಿ. ಇಂಥ ಗಾದೆಗಳನ್ನು ನಾ.ಕಸ್ತೂರಿ, ಎಸ್.ವಿ.ಪರಮೇಶ್ವರಭಟ್ಟ, ಎಚ್.ಜೆ.ಲಕ್ಕಪ್ಪಗೌಡ ಮೊದಲಾದವರು ರಚಿಸಿದ್ದಾರೆ.

ಗಾದೆಗಳ ಸಂಗ್ರಹಕಾರ್ಯದ ಜೊತೆಗೆ ವಿಮರ್ಶೆ ವಿಶ್ಲೇಷಣೆಗಳ ಕಾರ್ಯವೂ ನಡೆದಿದೆ. ಈ ಸಾಲಿನ ಮೊದಲ ಸ್ತುತ್ಯ ಪ್ರಯತ್ನವೆಂದರೆ ಪ್ರಹ್ಲಾದ ಕುಲಕರ್ಣಿಯವರ ನಾಣ್ಣುಡಿ ಎಂಬ ಕೃತಿ (1936). ಗಾದೆಗಳ ಉಗಮ, ವಿಕಾಸ, ಸ್ವರೂಪಗಳ ಅಧ್ಯಯನದ ಆವಶ್ಯಕತೆಯನ್ನು ಇಷ್ಟು ಹಿಂದೆಯೇ ಅರಿತುಕೊಂಡದ್ದು ಶ್ರೀಯುತರ ವೈಶಿಷ್ಟ್ಯವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾದ ಎ.ಕೆ.ರಾಮನುಜನ್ ಅವರ ಗಾದೆಗಳು (1955) ಎಂಬ ಚಿಕ್ಕ ಪುಸ್ತಕ ಗಾದೆಗಳ ವೈಚಾರಿಕ ಅಧ್ಯಯನದ ಆವಶ್ಯಕತೆಯನ್ನು ಎತ್ತಿ ತೋರಿಸುತ್ತದೆ. ಅನಂತರ ಮೈಸೂರು ವಿಶ್ವವಿದ್ಯಾ ನಿಲಯದ ಪ್ರಸಾರಾಂಗದಿಂದ ಪ್ರಕಟವಾದ ನಂ.ತಪಸ್ವೀಕುಮಾರ್ ಅವರ 'ಕನ್ನಡ ಗಾದೆಗಳ ಸಮೀಕ್ಷೆ' ಒಂದು ವಿದ್ವತ್ಪೂರ್ಣ ಕೃತಿ (1972). ಈ ಕೃತಿಯಲ್ಲಿ ಗಾದೆಗಳ ಹುಟ್ಟು, ಬೆಳೆವಣಿಗೆ, ಸ್ವರೂಪ, ಸಾಹಿತ್ಯಕ, ಸಾಮಾಜಿಕ ಮೌಲ್ಯಗಳನ್ನು ಸಮರ್ಪಕ ರೀತಿಯಲ್ಲಿ ವಿವೇಚಿಸಲಾಗಿದೆ. ಇಷ್ಟಲ್ಲದೆ ಗಾದೆಗಳನ್ನು ಕುರಿತ ಹಲವಾರು ಲೇಖನಗಳು ವಿವಿಧ ಲೇಖಕರ ಕೃತಿಗಳಲ್ಲಿ, ಪತ್ರಿಕೆಗಳಲ್ಲಿ ಚೆದುರಿಹೋಗಿವೆ. ಗಾದೆಗಳನ್ನು ಕುರಿತಂತೆ ನಾನಾದೃಷ್ಟಿಕೋನದ ಅಧ್ಯಯನ ಅಗತ್ಯ ಎಂಬುದನ್ನು ಈ ಲೇಖನಗಳು ತೋರಿಸಿಕೊಟ್ಟಿವೆ. (ಪಿ.ಕೆ.ಆರ್.)

**ಕನ್ನಡದಲ್ಲಿ ಜೀವನಚರಿತ್ರೆಗಳು :** ಕನ್ನಡದಲ್ಲಿ ಜೀವನ ಚರಿತ್ರೆಯ ಇತಿಹಾಸ ಅಷ್ಟೊಂದು ಪ್ರಾಚೀನವೇನಲ್ಲ ಆದರೂ ಕರ್ನಾಟಕದಾದ್ಯಂತ ವಿಪುಲವಾಗಿ ಹರಡಿರುವ ಮಾಸ್ತಿಕಲ್ಲು. ವೀರಗಲ್ಲುಗಳಲ್ಲಿ, ಇನ್ನಿತರ ಶಿಲಾಶಾಸನಗಳಲ್ಲಿ ವ್ಯಕ್ತಿಗಳ ಜೀವನಕಥೆ ಮಿಂಚಿ ಮರೆಯಾಗುತ್ತದೆ. ಕನ್ನಡ ಕಾವ್ಯಗಳಲ್ಲಿಯೂ ಕವಿಗಳು ಸ್ವವಿಷಯವಾಗಿಯೂ ಪರವಿಷಯವಾಗಿಯೂ ಹೇಳಿರುವ ಮಾತುಗಳಲ್ಲಿ ಅವರ ಜೀವನಕ್ಕೆ ಸಂಬಂಧಿಸಿದ ಹಲವಾರು ವಿಷಯಗಳು ವ್ಯಕ್ತವಾಗಿವೆ. ಹರಿಹರ, ರಾಘವಾಂಕಾದಿಗಳೂ ಮೈಸೂರು ಒಡೆಯರ ಆಸ್ಥಾನ ಕವಿಗಳೂ ತಮ್ಮ ತಮ್ಮ ಆದರ್ಶ ವ್ಯಕ್ತಿಗಳನ್ನು ಕುರಿತು, ಪೋಷಕರ ಶೀಲ ಚಾರಿತ್ರ್ಯಾದಿಗಳನ್ನು ಕುರಿತು ಬಣ್ಣಿಸಿದ್ದಾರೆ. ಜನಪದ ಗೀತೆಗಳಲ್ಲಿಯೂ ಐತಿಹಾಸಿಕ, ಧಾರ್ಮಿಕ ವೀರವರೇಣ್ಯರ ಜೀವನ ಚಿತ್ರಿತವಾಗಿದೆ. ಸ್ಮರಣ ಚಿತ್ರಗಳು, ಪತ್ರಗಳು, ದಿನಚರಿಗಳು ಕೂಡ ಜೀವನ ಚರಿತ್ರೆಗೆ ಸಾಧನ ಸಲಕರಣೆಗಳಾಗಿವೆ. ಆದರೆ ಜೀವನ ಚರಿತ್ರೆ ಕನ್ನಡದಲ್ಲಿ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದದ್ದು ಇತ್ತೀಚೆಗೆ ಅದೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎನ್ನಬಹುದು.

ಸ್ವಾತಂತ್ರ್ಯಪೂರ್ವದ ಸುಮಾರು ಐದು ದಶಕಗಳ ಅವಧಿಯಲ್ಲಿ ಕನ್ನಡದಲ್ಲಿ ಐನೂರಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ. ಸ್ವಾತಂತ್ರ್ಯೋತ್ತರದಲ್ಲಿ ಇದೀಗ 1000ಕ್ಕೂ ಹೆಚ್ಚು ಜೀವನ ಚರಿತ್ರೆಗಳು ರಚಿತವಾಗಿವೆ. ಕನ್ನಡದಲ್ಲಿ ಮೊದಲು ರಚಿತವಾದ ಜೀವನ ಚರಿತ್ರೆಗಳು ಮಹಾಪುರುಷರ ಜೀವಿತದ ಸಾಧನೆ ಸಿದ್ಧಿಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ, ಆ ಮೂಲಕ ದೇಶಾಭಿಮಾನವನ್ನೂ ಉನ್ನತ ಧ್ಯೇಯ ಧೋರಣೆಗಳನ್ನೂ ಜನತೆಯ ಮನಸ್ಸಿನಲ್ಲಿ ಬಿತ್ತುವ ಉದ್ದೇಶದಿಂದ ಕೂಡಿವೆ. ಹಾಗಾಗಿ ಧಾರ್ಮಿಕ ಪುರುಷರ, ಮಠಾಚಾರ್ಯರ, ಸಾಧುಸಂತರ, ಸಮಾಜ ಸುಧಾರಕರ, ಚರಿತ್ರೆಯ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳು ಪ್ರಕಟಗೊಂಡವು. ಇವುಗಳಲ್ಲಿ ಯೇಸುಕ್ರಿಸ್ತ (ಕಿಟ್ಟೆಲ್), ಬಸವ ಚರಿತ್ರೆ, ಭಗವಾನ್ ಬುದ್ಧನ ಚರಿತ್ರೆ, ಸ್ವಾಮಿ ರಾಮತೀರ್ಥ (ಹರ್ಡೇಕರ ಮಂಜಪ್ಪ), ಶಂಕರಾಚಾರ್ಯರ ಚರಿತ್ರೆ, (ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ), ಮಧ್ವಾಚಾರ್ಯರ ಚರಿತ್ರೆ (ನಾ.ಶ್ರೀ.ರಾಜಪುರೋಹಿತ), ಅಲ್ಲಮಪ್ರಭು (ಸಿದ್ಧಯ್ಯ ಪುರಾಣಿಕ), ಮಹಮದ್ ಪೈಗಂಬರ್ (ಎಂ.ಪಿ.ಪೂಜಾರ), ರಜಿಯಾ ಬೇಗಂ (ಹುರುಳಿ ಭೀಮರಾಯ) ಅಬ್ರಹಾಂ ಲಿಂಕನ್ (ಬಿ.ಚಂದ್ರಶೇಖರಯ್ಯ, ಸಿ.ಕೆ.ವೆಂಕಟರಾಮಯ್ಯ, ಹೊನ್ನಾಪುರ ಮಠ), ಅಕ್ಬರ್, ಛತ್ರಪತಿ ಶಿವಾಜಿ, ಟಿಪ್ಪೂಸುಲ್ತಾನ, ನಾನಾ ಫಡ್ನವೀಸ, ರಣಜಿತ್ ಸಿಂಹ (ರಾ.ಹ.ದೇಶಪಾಂಡೆ), ನೆಪೋಲಿಯನ್ ಬೋನಪಾರ್ಟೆ (ಆನವಟ್ಟಿ ರಾಮರಾಯ) ಮೊದಲಾದವು ಗಮನಾರ್ಹವಾಗಿವೆ.

ಅನಂತರದ ಬೆಳೆವಣಿಗೆಯ ಘಟ್ಟದಲ್ಲಿ ಜೀವನಚರಿತ್ರೆಗಳ ವಿಷಯವೈವಿಧ್ಯ ವಿಸ್ತಾರವಾಯಿತು. ರಾಜಕಾರಣಿಗಳು, ದೇಶಭಕ್ತರು, ನಟರು, ವಿಜ್ಞಾನಿಗಳು, ಕವಿಗಳು– ಇವರನ್ನು ಕುರಿತಂತೆ ಜೀವನ ಚರಿತ್ರೆಗಳು ರಚನೆಗೊಂಡವು. ಸಾಹಿತ್ಯದ ವಿವಿಧ ರಂಗಗಳಲ್ಲಿ ಕೆಲಸ ಮಾಡಿದ ಮಹನೀಯರುಗಳು ಈ ಪ್ರಕಾರದಲ್ಲಿ ಬರೆಯತೊಡಗಿದ್ದರಿಂದ ಜೀವನಚರಿತ್ರೆ ಲಕ್ಷಣಬದ್ಧವಾದ ಒಂದು ಸಾಹಿತ್ಯ ಪ್ರಕಾರವಾಗಿ ಪರಿಣಮಿಸಿತು. ಇದರಿಂದಾಗಿ, ಚ.ವಾಸುದೇವಯ್ಯ, ಎಂ.ಎಸ್.ಪುಟ್ಟಣ್ಣ, ಆಲೂರ ವೆಂಕಟರಾಯ, ಡಿ.ವಿ.ಜಿ., ಮಾಸ್ತಿ, ಸಿ.ಕೆ.ವೆಂಕಟರಾಮಯ್ಯ, ಜಿ.ಪಿ.ರಾಜರತ್ನಂ, ಎ.ಆರ್.ಕೃಷ್ಣಶಾಸ್ತ್ರೀ, ಸುಬೋಧ ರಾಮರಾಯ, ದ.ಕೃ.ಭಾರದ್ವಾಜ, ಟಿ.ಎಸ್.ವೆಂಕಣ್ಣಯ್ಯ, ಕುವೆಂಪು ಮೊದಲಾದ ಸಮರ್ಥ ಲೇಖಕರು ಹುಟ್ಟಿಕೊಂಡರು.

ಬೌದ್ಧ, ಜೈನ, ವೈದಿಕ, ವೀರಶೈವ ಮೊದಲಾದ ಧರ್ಮಗಳಿಗೆ ಸಂಬಂಧಿಸಿದ ಧಾರ್ಮಿಕ ಆಚಾರ್ಯರನ್ನು ಕುರಿತ ಕೃತಿಗಳು ರಚಿತವಾದವು. ಬುದ್ಧನನ್ನು ಕುರಿತಂತೆ ಜಿ.ಪಿ.ರಾಜರತ್ನಂ ಅವರ ಗೌತಮ ಬುದ್ಧ ಒಂದು ಉತ್ತಮ ಜೀವನಚರಿತ್ರೆ, ಮಹಾವೀರನ ಜೀವನ ಚರಿತ್ರೆಯನ್ನು ಮಿರ್ಜಿ ಅಣ್ಣಾರಾಯರು ಸಮರ್ಪಕವಾಗಿ ನೀಡಿದ್ದಾರೆ. ಶೈವಧರ್ಮಕ್ಕೆ ಸಂಬಂಧಿಸಿದ 63 ಪುರಾತನರ ಜೀವನವನ್ನು ವಸ್ತುವಾಗುಳ್ಳ ಸಿದ್ಧಯ್ಯ ಪುರಾಣಿಕರ ಶರಣಚರಿತಾಮೃತ, ಆಳ್ವಾರರ ಬಗೆಗೆ ಯಾಮುನಾಚಾರ್ಯರು ಬರೆದಿರುವ ಆಳ್ವಾರರು– ಇವು ಉಲ್ಲೇಖನೀಯ. ಆದರೆ ಇವು ಶುದ್ಧ ಜೀವನಚರಿತ್ರೆಗಳಲ್ಲ. ಇದಕ್ಕೆ ಕಾರಣ ಇಂಥ ಜೀವನ ಚರಿತ್ರೆಗಳನ್ನು ಬರೆಯುವುದಕ್ಕೆ ದೊರಕುವ ಸಾಮಗ್ರಿಯ ಅಭಾವ, ರಾಮಾನುಜರನ್ನು ಕುರಿತು ಬರೆದ ಎಚ್ಚೆಸ್ಕೆ ಅವರ ಶ್ರೀ ರಾಮಾನುಜ ಧಾರ್ಮಿಕ ಪುರುಷರನ್ನು ಕುರಿತು ಬರೆದ ಜೀವನ ಚರಿತ್ರೆಗಳಲ್ಲಿ ಗಮನಾರ್ಹವಾದದ್ದು. ಬಸವಣ್ಣನವರ ಜೀವನಚರಿತ್ರೆಯನ್ನು ಕುರಿತಂತೆ ಸಾಕಷ್ಟು ಗ್ರಂಥಗಳು ರಚಿತವಾಗಿವೆ. ಮೈಸೂರು ಸರ್ಕಾರ ಬಸವೇಶ್ವರರ ಎಂಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ ಶ್ರೀ ಬಸವೇಶ್ವರರು– ಪ್ರಾಮಾಣಿಕಮೂ ಪ್ರಾತಿನಿಧಿಕಮೂ ಆದ ಗ್ರಂಥ. ಇದರಲ್ಲಿ ಕನ್ನಡದ ಹಲವಾರು ಶ್ರೇಷ್ಠ ವಿದ್ವಾಂಸರು ತಮ್ಮ ಲೇಖನಗಳಲ್ಲಿ ಬಸವಣ್ಣನವರ ಜೀವನ, ವ್ಯಕ್ತಿತ್ವ, ಸಾಧನೆ, ಸಿದ್ಧಿ– ಇವುಗಳ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಬಸವಣ್ಣನವರ ಬದುಕಿನ ವಿವಿಧ ಮುಖಗಳ ಪರಿಚಯ ಈ ಗ್ರಂಥದಿಂದ ತಿಳಿದುಬರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನ ಸಿದ್ಧಿ– ಆರು ಉಪನ್ಯಾಸಗಳನ್ನೊಳಗೊಂಡ ಒಂದು ಉತ್ತಮ ಗ್ರಂಥ. ಈ ರೀತಿಯ ಹಲವಾರು ಗ್ರಂಥಗಳು ಕನ್ನಡ ಕವಿಗಳನ್ನು ಕುರಿತಂತೆ ಪ್ರಕಟಗೊಂಡಿವೆ. ಎಂ.ಚಿದಾನಂದಮೂರ್ತಿಯವರ 'ಬಸವಣ್ಣನವರು' ವಸ್ತುನಿಷ್ಠ ಹಾಗೂ ಸಂಶೋಧನ ದೃಷ್ಟಿಯನ್ನೊಳಗೊಂಡ, ವಚನ, ಶಾಸನ ಹಾಗೂ ಕಾವ್ಯಾಧಾರಗಳ ಮೇಲೆ ಬರೆದ ಗ್ರಂಥ. 'ರಾಮಕೃಷ್ಣಲೀಲಾ ಪ್ರಸಂಗ', ಬಂಗಾಲಿಯಿಂದ ಸ್ವಾಮಿ ಪ್ರಣವೇಶಾನಂದರಿಂದ ಕನ್ನಡಕ್ಕೆ ಅನುವಾದಗೊಂಡ ರಾಮಕೃಷ್ಣಪರಮಹಂಸರನ್ನು ಕುರಿತ ಗ್ರಂಥ. 'ರಾಮಕೃಷ್ಣ ಶಿಷ್ಯಕೋಟಿ', ರಾಮಕೃಷ್ಣರ ಮೂವತ್ತು ಜನ ಶಿಷ್ಯರನ್ನೂ ಅವರ ಜೀವನ ಚರಿತ್ರೆಯನ್ನೂ ಸಂಕ್ಷೇಪವಾಗಿ ನಿರೂಪಿಸುವ ಒಂದು ಗಮನಾರ್ಹ ಕೃತಿ. ಸ್ವಾಮಿ ಸೋಮನಾಥಾನಂದರು ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಶಾರದಾದೇವಿ ಎಂಬ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಜಿ.ವೆಂಕಟಯ್ಯನವರ 'ಬುದ್ಧದೇವ' ತನ್ನ ಸರಳ ಶೈಲಿಯಿಂದ ಗಮನ ಸೆಳೆಯುತ್ತದೆ. ಬುದ್ಧನನ್ನು ಕುರಿತಂತೆ ಮರಾಠಿಯಲ್ಲಿ ರಚಿತವಾಗಿರುವ ಭಗವಾನ್ ಬುದ್ಧ ಶ್ರೀರಂಗರಿಂದ ಕನ್ನಡಕ್ಕೆ ಅನುವಾದಗೊಂಡಿದೆ. ಉ.ಕಾ. ಸುಬ್ಬರಾಯಚಾರ್ಯರ ಯೇಸುಕ್ರಿಸ್ತ ಎಂಬ ಜೀವನ ಚರಿತೆ ಹೆಸರಿಸಬೇಕಾದ ಮಹತ್ತ ಪಡೆದಿದೆ. ಕುವೆಂಪು ಅವರ ಶ್ರೀ ರಾಮಕೃಷ್ಣಪರಮಹಂಸ ಮತ್ತು ಸ್ವಾಮಿ ವಿವೇಕಾನಂದ ಎಂಬ ಜೀವನಚರಿತ್ರೆಗಳು ಕನ್ನಡ ಜೀವನ ಚರಿತ್ರೆಗಳ ಸಾಲಿನಲ್ಲಿ ವಿಶಿಷ್ಟವಾಗಿ ನಿಲ್ಲುವ ಮಹತ್ವ ಪಡೆದುಕೊಂಡಿವೆ. ವಿಷಯನಿರೂಪಣೆ, ಭಾಷೆ, ವರ್ಣನೆ ಈ ದೃಷ್ಟಿಗಳಿಂದ ಈ ಜೀವನ ಚರಿತ್ರೆಗಳು ಕಾದಂಬರಿಯ, ಕಾವ್ಯತ್ವದ ಓಜಸ್ಸನ್ನು ಪಡೆಯುತ್ತವೆ. ಕುವೆಂಪು ಅವರ ಶೈಲಿ ಈ ರಂಗದಲ್ಲೂ ಪ್ರತ್ಯೇಕವಾಗಿ ಗುರುತಿಸುವಷ್ಟರಮಟ್ಟಿಗೆ ಸ್ವಂತಿಕೆಯಿಂದ ಕೂಡಿದೆ. ಕೋ.ಚೆನ್ನಬಸಪ್ಪನವರ ಸ್ವಾತಂತ್ರ್ಯಯೋಧ ಶ್ರೀಅರವಿಂದ ಅರವಿಂದರ ಜೀವನವನ್ನು ಪರಿಚಯ ಮಾಡಿಕೊಡುತ್ತದೆ.

ಸಾಹಿತಿಗಳ, ಕಲಾವಿದರ ಜೀವನ ಚರಿತ್ರೆಗಳು ಕನ್ನಡದಲ್ಲಿ ವಿಪುಲ ಸಂಖ್ಯೆಯಲ್ಲಿವೆ. ಪ್ರಾಚೀನ ಕನ್ನಡ ಕವಿಗಳನ್ನು ಕುರಿತಂತೆ ಪಂಪ, ರನ್ನ, ಮುದ್ದಣ, ಕುಮಾರವ್ಯಾಸ ಮೊದಲಾದ ಪ್ರಶಸ್ತಿ ಗ್ರಂಥಗಳಲ್ಲಿ ಆಯಾ ಕವಿಗಳ ಜೀವನ ಪರಿಚಯ ಸಾಕಷ್ಟು ದೊರೆಯುತ್ತದೆ. ಪಂಪನನ್ನು ಕುರಿತಂತೆ ಪ್ರಕಟವಾಗಿರುವ ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ' ಸಂಶೋಧನೆ, ಚರಿತ್ರೆ, ಸಾಹಿತ್ಯ– ಈ ಮೂರು ಅಂಶಗಳನ್ನೊಳ ಗೊಂಡ ಜೀವನ ಚರಿತ್ರೆಯಾಗಿ ರೂಪುಗೊಂಡಿದೆ. ಇವರೇ ರಚಿಸಿದ ಪಾರ್ತಿಸುಬ್ಬ ಸಹ ಒಂದು ಗಮನಾರ್ಹ ಕೃತಿ. ದೇಜಗೌ ಅವರ ರಾಷ್ಟ್ರಕವಿ ಕುವೆಂಪು ಮತ್ತು ತೀನಂಶ್ರೀ, ಅನಕೃ ಅವರ ಕೈಲಾಸಂ, ತರಾಸು ಅವರ ಅನಕೃ, ವಿ.ಸೀ.ಅವರ ಶಿವರಾಮಕಾರಂತ, ಎನ್.ಅನಂತರಂಗಾಚಾರ್ಯರ ಪ್ರಾಕ್ತನ ವಿಮರ್ಶಾ ವಿಚಕ್ಷಣ, ರಾವ್‌ಬಹದ್ದೂರ ಆರ್.ನರಸಿಂಹಾಚಾರ್ಯ ಜೀವನ ಮತ್ತು ಕಾರ್ಯ, ಶಿವರಾಮಕಾರಂತರ ಕಲಾವಿದ ಕೃಷ್ಣಹೆಬ್ಬಾರರು, ತಿರುಮಲೆ ರಾಜಮ್ಮನವರ ವೀಣೆ ಶೇಷಣ್ಣ, ಕು.ಶಿ.ಹರಿದಾಸಭಟ್ಟ ಅವರ ಕೆ.ಕೆ.ಹೆಬ್ಬಾರರ ಕಲೆ ಮತ್ತು ಬದುಕು, ಎಚ್.ತಿಪ್ಪೇರುದ್ರಸ್ವಾಮಿಯವರ ಬಸವೇಶ್ವರ, ಗಾಂಧೀಜಿ, ಚೆನ್ನವೀರ ಕಣವಿಯವರ ಮಧುರಚೆನ್ನ, ವಿಜಯನಾರಸಿಂಹ ಅವರ ಪುಟ್ಟಣ್ಣ ಕಣಗಾಲ್, ಎಲ್.ಎಸ್.ಶೇಷಗಿರಿರಾವ್ ಅವರ ಟಿ.ಪಿ.ಕೈಲಾಸಂ, ವಿ.ಎಂ.ಇನಾಂದಾರರ, ಬಿ.ಎಂ.ಶ್ರೀ., ಶಾ.ಮಂ.ಕೃಷ್ಣರಾಯರ ಪಾಪು, ಬಸವರಾಜ ಮನ್ಸೂರ, ಕವಿ ತಿಪ್ಪಯ್ಯ, ಮಾಸ್ತರ್, ಅ.ನ.ಕೃಷ್ಣರಾಯ, ಬಳ್ಳಾರಿ ಬೀಚಿ ಪ್ರತಿಭಾಶಿಖರಗಳು, ಕೀರ್ತಿಕಳಶಗಳು, ಹಾ.ಮಾ.ನಾಯಕರ ಸ್ತವನ, ಆರ್.ವಿ.ಎಸ್. ಸುಂದರಂರವರ ರಾಮಕೋಟೀಶ್ವರರಾವ್, ಪಟ್ಟಾಭಿ ಸೀತಾರಾಮಯ್ಯ, ಪಾಲ್ಕುರಿಕೆ ಸೋಮನಾಥ, ವೇಮನ, ಅಕ್ಕಮಹಾದೇವಿಯವರ ದಾಸವರೇಣ್ಯ, ಅನ್ನಮಾಚಾರ್ಯರು, ಬಿ.ಶಾಮಸುಂದರ ಅವರ ಫ.ಗು, ಹಳ್ಳಕಟ್ಟಿ,

ಮಾಚಿದೇವ, ಡಾ.ಹಾನಿಮನ್ ಮೊದಲಾದ ಗ್ರಂಥಗಳು ಗಮನಾರ್ಹವಾಗಿವೆ. ರಾಜಕುಮಾರ್ ಹಾಗೂ ಕಾಡುಗಳ್ಳ ವೀರಪ್ಪನ್ ಕುರಿತ ಅನೇಕ ಜೀವನ ಚರಿತ್ರೆಗಳು ಪ್ರಕಟವಾಗಿವೆ. ಪ್ರಪಂಚದ ವಿಜ್ಞಾನಿಗಳ ಜೀವನ ಚರಿತ್ರೆಯಲ್ಲಿ ಕೆಲವು ಕೃತಿಗಳು ಕನ್ನಡಕ್ಕೆ ಅನುವಾದವಾಗಿಯೂ ಬಂದಿವೆ. ಐಸಾಕ್ ನ್ಯೂಟನ್, ಥಾಮಸ್ ಆಲ್ವ ಎಡಿಸನ್, ಯಂತ್ರಯೋಗಿ ಕಿರ್ಲೋಸ್ಕರ್ ಲಕ್ಷ್ಮಣರಾಯ, ಮಹಾವಿಜ್ಞಾನಿಗಳು, ಭಾರತೀಯ ವಿಜ್ಞಾನಿಗಳು, ಮೇರಿ ಕ್ಯೂರಿ, ಮೇಡಂ ಕ್ಯೂರಿ, ಚಾರ್ಲ್ಸ್ ಡಾರ್ವಿನ್, ಅಲೆಗ್ಸಾಂಡರ್ ಫ್ಲೆಮಿಂಗ್, ಲೂಯಿ ಪ್ಯಾಶ್ಚರ್, ಆಲ್ಬರ್ಟ್ ಐನ್‌ಸ್ಟೀನ್, ಹೆನ್ರಿ ಫೋರ್ಡ್, ದೇಶ ವಿದೇಶದ ಪ್ರಭೃತಿಗಳಾದ ಮ್ಯಾಕ್ಸಿಂ ಗಾರ್ಕಿ, ಸಾಕ್ರಟೀಸ್, ಸ್ಟಾಲಿನ್, ಲೆನಿನ್, ನಿಕ್ಸನ್, ಕಾರ್ಲ್ ಮಾರ್ಕ್ಸ್, ಕೆಮಾಲ್ ಪಾಷಾ, ಜಾನ್ ಸ್ಟುವರ್ಟ್ ಮಿಲ್, ಫ್ರಾಂಕ್ಲಿನ್, ಮಾರ್ಟಿನ್ ಲೂಥರ್ ಕಿಂಗ್, ಸ್ಯಾಮ್ಯುಯಲ್ ಜಾನ್‌ಸನ್, ಅಬ್ರಹಾಂ ಲಿಂಕನ್, ಕೆನಡಿ ಮೊದಲಾದವರ ಜೀವನ ಚರಿತ್ರೆಗಳು ಸ್ವಂತ ಕೃತಿಗಳಾಗೋ ಅನುವಾದ ಕೃತಿಗಳಾಗೋ ಕನ್ನಡಿಗರಿಗೆ ದೊರಕಿವೆ. (ಎಸ್.ವಿ.ಪಿ.ಬಿ.)

ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಹಲವು ರಾಷ್ಟ್ರೀಯ ನಾಯಕರ ಮತ್ತು ಭಾರತೀಯ ಲೇಖಕರನ್ನು ಕುರಿತಂತೆ ಜೀವನ ಚರಿತ್ರೆಗಳನ್ನು ಪ್ರಕಟಿಸಿವೆ. ಈ ಮಾಲೆಗಳಲ್ಲಿ ರಾಜಾರಾಮಮೋಹನರಾಯ್, ಕಬೀರ, ಚಂಡಿದಾಸ್, ಜಯದೇವ ಮೊದಲಾದ ಸಮಾಜ ಸುಧಾರಕರು, ಸಂತರು, ಕವಿಗಳನ್ನು ಕುರಿತಂತೆ ಜೀವನ ಚರಿತ್ರೆಗಳು ಪ್ರಕಟವಾಗಿವೆ. ಶ್ರೀನಿವಾಸರಾಘವನ್‌ರ್ ನಮ್ಮಾಳ್ವಾರ್ (ಪು.ತಿನ) ಕಂಬನ್ (ಎಸ್.ಮಹಾಜನ್) ದೇವೇಂದ್ರನಾಥ್ ಠಾಕೂರ್ (ನಾ.ಚೌಧರಿ) ಅನುವಾದ ಗೊಂಡಿವೆ. ಸ್ನೇಹಲತಾ ರೆಡ್ಡಿಯವರ ಜೈಲಿನ ದಿನಚರಿ (ಯು.ಆರ್.ಅನಂತಮೂರ್ತಿ), ಅನುವಾದಗೊಂಡಿದೆ. ಬೆಂಗಳೂರಿನ ಶ್ರೀ ರಮಣ ಸೆಂಟರ್ ಫಾರ್ ಲರ್ನಿಂಗ್ ಸಂಸ್ಥೆಯು ಪಾಲ್ ಬ್ರೆಂಟನ್‌ರ ರಮಣ ಮಹರ್ಷಿ ಅವರ ಸಂದೇಶಗಳನ್ನು ಅನುವಾದಿಸಿ (ಎ.ಎಸ್.ವೇಣುಗೋಪಾಲರಾವ್) ಪ್ರಕಟಿಸಿದೆ. ಬಿ.ವಿ.ನರಸಿಂಹ ಸ್ವಾಮಿಯವರು ರಚಿಸಿದ ಸೆಲ್ಫ್ ರಿಯಲೈಸೇಷನ್ ಎಂಬುದು ರಮಣ ಮಹರ್ಷಿಗಳ ಜೀವನ ಚರಿತ್ರೆ. ಇದನ್ನು ಕೆ.ಎ.ನಾರಾಯಣ್ ಅನುವಾದಿಸಿದ್ದಾರೆ. ನಾ.ಕಸ್ತೂರಿಯವರ ಸತ್ಯಂ ಶಿವಂ ಸುಂದರಂ ಎಂಬುದು ಸತ್ಯಸಾಯಿಬಾಬಾರವರ ಜೀವನ ಚರಿತ್ರೆ. ಕೆ.ಎಸ್.ನಾರಾಯಣ ಸ್ವಾಮಿಯವರು ಅಬ್ರಹಾಂ ಲಿಂಕನ್, ಲೆನಿನ್ ಮತ್ತು ಗಾಂಧೀಜಿಯವರ ಜೀವನ ಚರಿತ್ರೆ ರಚಿಸಿದ್ದಾರೆ. ಕ.ರಾ.ಸಾರಂಗರ ರಾಜೇಂದ್ರಪ್ರಸಾದ್, ಮತ್ತೂರು ಕೃಷ್ಣಮೂರ್ತಿಯವರ ಡಾ.ಜಾಕೀರ್ ಹುಸೇನ್, ಡಿ.ವಿ.ಜಿ.ಯವರ ಮೈಸೂರಿನ ದಿವಾನರುಗಳು ಜ್ಞಾಪಕ ಚಿತ್ರಶಾಲೆ ಸಂಪುಟಗಳು, ಬಿ.ಆರ್.ಪ್ರಾಣೇಶರಾಯರ, ಲಾಲ್ ಬಹದ್ದೂರ್ ಶಾಸ್ತ್ರೀ, ರಾಜಾರಾಮ ಮೋಹನರಾಯ, ಕೆ.ಎಸ್.ಪಾಟೀಲರ ಸಮಾಜವಾದಿ ಇಂದಿರಾಗಾಂಧೀ, ನೇತಾಜಿ ಸುಭಾಷ್‌ಚಂದ್ರ ಬೋಸ್, ಜಿ.ಎಸ್.ಭಟ್ಟರ ರಾಜಾರಾಮ್ ಮೋಹನ ರಾಯ್, ಸಾಹಿತ್ಯ ಕಲಾ ಸಂಪನ್ನರು, ಲೋಕಮಾನ್ಯ, ರಾಷ್ಟ್ರಶಿಲ್ಪಿ (ಸರ್ದಾರ ಪಟೇಲ್) ಲಾಲಾ ಲಜಪತರಾಯ್, ಟಿ.ಆರ್.ಅನಂತರಾಮು ಅವರ ಶಕ್ತಿ ಸಾರಥಿ ರಾಷ್ಟ್ರಪತಿ (ಅಬ್ದುಲ್ ಕಲಾಂ), ಎಂ.ಎಸ್.ಜಾಂದ್ ಕವಟಿರವರ ಸೇವೆ ತ್ಯಾಗ (ಡಿ.ವಿ.ನಂಜುಂಡಪ್ಪನವರ ಜೀವನ ಚರಿತ್ರೆ), ಹೊ.ಶ್ರೀನಿವಾಸಯ್ಯನವರ ಎನ್.ಎಸ್.ಹರ್ಡೀಕರ, ದೇಜಗೌ ಅವರ ಅಮೇರಿಕಾ ಗಾಂಧಿ, ಲೋಕದ ಬೆಳಕು, ಲೋಕನಾಯಕ ವಿಚಾರವಾದಿ ಪೆರಿಯಾರ್, ನಿತ್ಯ ಸಚಿವ, ಕರ್ನಾಟಕದ ರೂವಾರಿ, ತೀ.ತಾ.ಶರ್ಮರ ಮೋಕ್ಷಗುಂಡಂ, ವಿ.ಎಂ.ಇನಾಂದಾರ್‌ರ ಡಾ.ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ, ರಂಜಾನ್ ದರ್ಗಾರ ನೆಲ್ಸನ್ ಮಂಡೇಲಾ, ಪಾಟೀಲ್ ಪುಟ್ಟಪ್ಪನವರ ಭಾರತದ ಬೆಳಕು, ನೆಲದ ನಕ್ಷತ್ರಗಳು, ಜೀವನ ಪ್ರಕಾಶ, ಡಿ.ಎಸ್.ಜಯಪ್ಪಗೌಡರ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಮೊದಲಾದವು ಕನ್ನಡ ನಾಡಿನ ಭಾರತೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತಿವೆತ್ತ ರಾಜಕಾರಣಿಗಳ ಜೀವನ ಚರಿತ್ರೆಯನ್ನು ನಿರೂಪಿಸುತ್ತವೆ. ಎಚ್ಚೆಸ್ಕೆಯವರ ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ವ್ಯಕ್ತಿ ಚಿತ್ರಗಳ ಮೂರು ಬೃಹತ್ ಸಂಪುಟಗಳಾದ ಬೆಳಕು ಚೆಲ್ಲಿದ ಬದುಕು, ಮಾನ್ಯರು ಸಾಮಾನ್ಯರು, ಗಗನಚುಕ್ಕಿ-ಭರಚುಕ್ಕಿ -ಇವು ಉಲ್ಲೇಖನೀಯ. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಕನ್ನಡ ಪ್ರತಿಭೆ ಎಂಬ ಕೃತಿಯನ್ನು ಪ್ರಕಟಿಸಿದೆ. ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಆಡಳಿತ, ಶಿಕ್ಷಣ, ಸಮಾಜಸೇವೆ, ಕ್ರೀಡೆ ಮೊದಲಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳ ಬಗ್ಗೆ ಚಿತ್ರಣವಿದೆ. ಮೈಸೂರಿನ ಮುಲಕನಾಡು ಸಭಾದವರು ಮುಲಕನಾಡು ಮಹನೀಯರು ಎಂಬ ಮಾಲಿಕೆಯಲ್ಲಿ ವಿಶ್ವೇಶ್ವರಯ್ಯ, ಟಿ.ಎಸ್.ವೆಂಕಣ್ಣಯ್ಯ, ಎಚ್.ವಿ.ನಂಜುಂಡಯ್ಯ ಬಿ.ಕೃಷ್ಣಪ್ಪ, ದೇವುಡು ಮೊದಲಾದ ವ್ಯಕ್ತಿಗಳನ್ನು ಕುರಿತು 20 ಕೃತಿಗಳನ್ನು ಹೊರತಂದಿದ್ದಾರೆ.

ಒಬ್ಬ ವ್ಯಕ್ತಿಯ ಸಾಧನೆಯ ಗೌರವಾರ್ಥವಾಗಿ ಅರ್ಪಿಸುವ ಅಭಿನಂದನಾ ಗ್ರಂಥಗಳು, ಸಂಭಾವನಾ ಗ್ರಂಥಗಳು ಜೀವನ ಚರಿತ್ರೆಗೆ ದೊಡ್ಡ ಕೊಡುಗೆಗಳೇ ಆಗಿವೆ. ಇಲ್ಲಿ ಲೇಖಕರು ವಿವಿಧ ದೃಷ್ಟಿ ಕೋನಗಳಿಂದ ಅಭಿನಂದಾನಾರ್ಹ ವ್ಯಕ್ತಿಯ, ಜೀವನದ ವಿವಿಧ ಮುಖಗಳ ಪರಿಚಯ ವಿಮರ್ಶೆಗಳನ್ನು ಒದಗಿಸಿರುತ್ತಾರೆ. ವ್ಯಕ್ತಿಯ ಜೀವನ ಚರಿತ್ರೆ ಸಾಧ್ಯವಾದ ಮಟ್ಟಿಗೆ ಇವುಗಳಲ್ಲಿ ಸಮರ್ಪಕವಾಗಿ ಸಿಗುತ್ತದೆ. (ನೋಡಿ: ಕನ್ನಡದಲ್ಲಿ ಸಂಕಲನ ಗ್ರಂಥಗಳು).

ಕನ್ನಡದ ಅನೇಕ ಪ್ರಮುಖ ಸಾಹಿತಿಗಳು ಅಂಕಣ ಪ್ರಕಾರ ಸಾಹಿತ್ಯದಲ್ಲಿ ಕೆಲಸ ಮಾಡಿದ್ದಾರೆ. ಈ ಬರೆಹಗಳಲ್ಲಿ ಹಲವು ವ್ಯಕ್ತಿಗಳ ಜೀವನ, ಸಾಧನೆಗಳು ದೊರೆಯುತ್ತವೆ (ನೋಡಿ: ಕನ್ನಡದಲ್ಲಿ ಅಂಕಣ ಸಾಹಿತ್ಯ). ಕನ್ನಡದಲ್ಲಿ ಕವಿಕೃತಿಗಳನ್ನು ಕುರಿತಂತೆ ಹಲವರು ಪ್ರೌಢ ಪ್ರಬಂಧಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಆ ಲೇಖಕರ ಜೀವನ ಚರಿತ್ರೆಗಳು ಲಭ್ಯವಾಗಿವೆ. ಸಾಹಿತ್ಯ ಸಂಪದ ಎಂಬ ಮಾಲೆಯಲ್ಲಿ ನವಕರ್ನಾಟಕ ಪ್ರಕಾಶನ ಸಂಸ್ಥೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಲೇಖಕರ ಬಗೆಗೆ ಕೃತಿಗಳನ್ನು ಹೊರತರುವ ಯೋಜನೆಯನ್ನು (ಸಂ: ಹಾ.ಮಾ. ನಾಯಕ, ಪ್ರಧಾನ ಗುರುದತ್ತ) ಹಮ್ಮಿಕೊಂಡಿದ್ದು, ಇದುವರೆಗೆ 20 ಕೃತಿಗಳು ಹೊರಬಂದಿವೆ (2004).

**ಆತ್ಮಕಥೆಗಳು:** ವ್ಯಕ್ತಿ ತನ್ನ ಜೀವನ ವಿಚಾರಗಳನ್ನು ತಾನೇ ಬರೆದಲ್ಲಿ ಆತ್ಮಕಥೆ ಎನಿಸಿಕೊಳ್ಳುತ್ತದೆ. ಅದನ್ನೇ ಇತರರು ಬರೆದಾಗ ಜೀವನ ಚರಿತ್ರೆಯಾಗುತ್ತದೆ. ಆತ್ಮಕಥೆ ಜೀವನ ಚರಿತ್ರೆಯೆಂಬ ಸಾಹಿತ್ಯ ಪ್ರಕಾರದ ಒಂದು ಭಾಗ. ಆತ್ಮಕಥೆ ವ್ಯಕ್ತಿಯೊಬ್ಬನ ಚರಿತ್ರೆಯಾಗಿರುವಂತೆ ಆತನ ಪರಿಸರದ ಚರಿತ್ರೆಯೂ ಆಗಿರುತ್ತದೆ. ಕಥಾನಾಯಕ ತನ್ನ ಮತ್ತು ತನ್ನ ಸುತ್ತುಮುತ್ತಿನ ಜೀವನವನ್ನು ತಾನು ಕಂಡಂತೆ ಇಲ್ಲಿ ವರ್ಣಿಸಿರುತ್ತಾನೆ. ಬರೆಯುವಷ್ಟು ಶಕ್ತಿ ಮತ್ತು ತಾಳ್ಮೆ ಇದ್ದಲ್ಲಿ ಪ್ರತಿಯೊಬ್ಬನೂ ತನ್ನ ಆತ್ಮಕಥೆಯನ್ನು ಬರೆಯಬಹುದು. ಒಂದೊಂದೊಂದಕ್ಕೂ ಪ್ರಾಮುಖ್ಯ ಇದ್ದೇ ಇದೆ. ಬರೆದಾತ ಸಮಾಜದಲ್ಲಿ ಗಣ್ಯವ್ಯಕ್ತಿಯಾದಾಗಲಂತೂ ಆತ ಬರೆದ ಆತ್ಮಕಥೆಗೆ ಹೆಚ್ಚಿನ ಪ್ರಾಧಾನ್ಯ ಒದಗುತ್ತದೆ.

ಕನ್ನಡದಲ್ಲಿ ಆತ್ಮಕಥಾಸಾಹಿತ್ಯ ಹೆಚ್ಚು ಬೆಳೆದಿಲ್ಲವೆನ್ನಬೇಕು. ಈಗ ಬಂದಿರುವ ಜೀವನಚರಿತ್ರೆಗಳಲ್ಲಿ ಅರ್ಧದಷ್ಟೂ ಆತ್ಮಕಥೆಗಳಿಲ್ಲ. ಬಂದಿರುವಂಥವು ಅರ್ಧ ಸ್ವತಂತ್ರ ಆತ್ಮಕಥೆಗಳಾದರೆ ಉಳಿದವು ಅನುವಾದಗಳು. ಅವು ರಾಷ್ಟ್ರನಾಯಕರು, ಅನ್ಯರಾಷ್ಟ್ರನಾಯಕರು, ಸಾಹಿತಿಗಳು ಮತ್ತು ವಿಜ್ಞಾನಿಗಳನ್ನು ಕುರಿತವಾಗಿವೆ. ಸ್ವತಂತ್ರ ಆತ್ಮಕಥೆಯಲ್ಲಿ 50ಕ್ಕೂ ಹೆಚ್ಚು ಜನ ಸಾಹಿತಿಗಳ ಮತ್ತು ಕಲಾವಿದರ ಆತ್ಮವೃತ್ತಾಂತಗಳನ್ನು ಕಾಣಬಹುದು. 1350 ಪುಟಗಳಷ್ಟು ವ್ಯಾಪ್ತಿವುಳ್ಳ ಕೆಲವು ಸಂಪುಟಗಳಲ್ಲಿ ಪ್ರಕಟವಾಗಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್‍ಯರ ಭಾವ (1968-69) ಕನ್ನಡದ ಆತ್ಮಚರಿತ್ರೆಗಳಲ್ಲಿ ಒಂದು ದೊಡ್ಡ ಹೆಜ್ಜೆ. ಗಾತ್ರದಲ್ಲಿಯೂ ಪಾತ್ರದಲ್ಲಿಯೂ ಹಿರಿದಾದ ಸ್ಥಾನವನ್ನು ಪಡೆದಿರುವ ಈ ಗ್ರಂಥ ಅವರ ಸಾರ್ಥಕ ಬಾಳಿನ ಅರ್ಧಶತಮಾನವನ್ನು ಬಿಂಬಿಸಿದೆ. ಮೊದಲ ಭಾಗದಲ್ಲಿ ತಮ್ಮ ಊರಿಗೆ ಮಾಸ್ತಿ ಎಂದು ಹೆಸರು ಬರಲು ಕಾರಣ, ತಮ್ಮ ಬಾಲ್ಯ, ವಿದ್ಯಾಭ್ಯಾಸ, ಆಗಿನ ಕಾಲದ ಸಂಪ್ರದಾಯ ಮೊದಲಾದವುಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಎರಡನೆಯ ಭಾಗದಲ್ಲಿ ಅವರ ಅಧಿಕಾರಾವಧಿಯ ಏಕಮುಖ ಚಿತ್ರವಿದೆ. ಮೂರನೆಯ ಭಾಗದಲ್ಲಿ ವಿಶ್ರಾಂತಿ ಕಾಲದ ಬದುಕಿದೆ. ಮಾಸ್ತಿಯವರ ಸಮಕಾಲೀನರಾಗಿ ಕನ್ನಡಕ್ಕಾಗಿ ಬಹುವಿಧವಾಗಿ ದುಡಿದ ಕೆಲವು ಹಿರಿಯ ಚೇತನಗಳ ವಿಷಯಗಳೂ ಹಾಸುಹೊಕ್ಕಾಗಿ ಈ ಗ್ರಂಥದಲ್ಲಿ ಬಂದಿವೆ. ಒಂದು ದೃಷ್ಟಿಯಿಂದ ಇದು ಸುಮಾರು ಆರು ದಶಕಗಳ ಕನ್ನಡನಾಡಿನ ಚಿತ್ರವನ್ನೂ ಕನ್ನಡ ನಿಧಾನವಾಗಿಯಾದರೂ ಸುಪುಷ್ಟವಾಗಿ ತಲೆಯೆತ್ತಿದ ಬಗೆಯನ್ನೂ ಪ್ರತಿಬಿಂಬಿಸುತ್ತದೆ.

ಹುಚ್ಚು ಮನಸ್ಸಿನ ಹತ್ತು ಮುಖಗಳು (1948) ಕೆ.ಶಿವರಾಮ ಕಾರಂತರ ಕಾಲುಶತಮಾನದ ಬಾಳಿನ ಕಥೆ. ಈ ಕೃತಿ ಕಾರಂತರ ಸಮೃದ್ಧಾನುಭವಕ್ಕೂ ಬಹುಮುಖ ಪ್ರತಿಭೆಗೂ ಜ್ವಲಂತ ಸಾಕ್ಷಿಯಾಗಿದೆ. ಗುರುವಿಲ್ಲದೆ, ಗುರಿಯಿಲ್ಲದೆ ಹುಚ್ಚು ಮನಸ್ಸು ತೋರಿದ ದಿಕ್ಕಿನಲ್ಲಿ ನಡೆದು ಇವರ ಸಾಧನೆ ಅದ್ಭುತ. ವಿಷ್ಣುವಿಗೆ ಬರಿಯ ಹತ್ತು ಅವತಾರಗಳಾದರೆ, ತನ್ನ ಧ್ಯೇಯಗಳು ಹದಿನಾರು ಅವತಾರಗಳನ್ನು ತಳೆಯು ವಂತಾಯಿತೆಂದು ಲೇಖಕರೇ ಹೇಳಿಕೊಂಡಿದ್ದಾರೆ. ರಾಷ್ಟ್ರಭಕ್ತಿ, ಸ್ವದೇಶಿಚಳವಳಿ, ವ್ಯಾಪಾರ, ಪತ್ರಿಕೋದ್ಯಮ, ಅಧ್ಯಾತ್ಮಸಾಧನೆ, ಕಲೆಯ ಭಿನ್ನ ಭಿನ್ನ ಮುಖಗಳು, ಫೋಟೋಗ್ರಫಿ, ನಾಟಕ, ನೃತ್ಯ, ಚಿತ್ರ, ವಾಸ್ತು, ಸಂಗೀತ, ಚಲನಚಿತ್ರ, ಸಮಾಜಸುಧಾರಣೆ, ಗ್ರಾಮೋದ್ಧಾರ, ಶಿಕ್ಷಣ ವಲಯದಲ್ಲಿ ಪ್ರಯೋಗಗಳು, ಉದ್ಯೋಗ ಇವೆಲ್ಲ ಅವತಾರಗಳೂ ಅವಾಂತರಗಳೂ ಕಾರಂತರ ಜೀವನದಲ್ಲಿ ಆಗಿಹೋಗಿವೆ. ಸ್ವತಂತ್ರ ಜೀವನದಿಂದ ಸನ್ಯಾಸಿ ಜೀವನದ ಮೂಲಕ ಹಾದು ಸಂಸಾರಿಯಾಗಿಯೂ ಸಾಗಿದ್ದೇನೆ ಎಂದು ಅವರೇ ಹೇಳಿಕೊಂಡಿದ್ದಾರೆ. ಪ್ರಚಲಿತ ವಿಷಯಗಳ ಬಗ್ಗೆ ಆಳವಾಗಿ ಅಲೋಚನೆ ಮಾಡಿ, ಅಸಾಧ್ಯ ಸಾಹಸಗಳಿಗೆ ಕೈಹಾಕಿ ಜಯಿಸಿದ ಕೀರ್ತಿ ಕಾರಂತರದು. ಇಷ್ಟೊಂದು ವ್ಯಾಪಕ ಹವ್ಯಾಸಗಳನ್ನುಳ್ಳ ಬೇರೊಬ್ಬ ಕನ್ನಡ ಸಾಹಿತಿಯನ್ನು ಹೆಸರಿಸುವುದು ಕಷ್ಟ. ಸ್ಮೃತಿಪಟಲದಿಂದ (1977-78 ಮೂರು ಭಾಗಗಳು) ಎಂಬ ಕೃತಿ ಕಾರಂತರ ಆತ್ಮಕಥೆಯ ಮುಂದುವರಿದ ಭಾಗ.

ಹೋರಾಟದ ಬದುಕು (1968) ದೇ.ಜ.ಗೌ. ಅವರ ಆತ್ಮಕಥೆ. ಇದು ಅಚ್ಚಕನ್ನಡದ ಧೀಮಂತ ಯೋಧನ ಹೋರಾಟದ ಬದುಕನ್ನು ಒಳಗೊಂಡಿದೆ. ಬಡಕುಟುಂಬದಲ್ಲಿ ಗುಡಿಸಲಿನಲ್ಲಿ ಜನಿಸಿ, ಅಡಿಗಡಿಗೆ ನಾನಾ ಎಡರುತೊಡರುಗಳನ್ನು ಎದುರಿಸಿ, ಗೊತ್ತುಗುರಿಯಿಲ್ಲದೆ ಬೆಳೆದು, ಗುರು ಕುವೆಂಪು ಅವರ ಕೃಪಾಕಟಾಕ್ಷಕ್ಕೆ ಪಾತ್ರವಾಗಿ, ಅವರ ಆಶೀರ್ವಾದದ ಮಹಾರಕ್ಷೆಯಲ್ಲಿ ಕನ್ನಡದ ದೀಕ್ಷೆಯನ್ನು ಪಡೆದು, ಕನ್ನಡಕ್ಕಾಗಿ ದುಡಿದು, ಕನ್ನಡದಿಂದ ಕೀರ್ತಿ, ಯಶಸ್ಸುಗಳನ್ನು ಪಡೆದು, ಕನ್ನಡಕ್ಕಾಗಿಯೇ ತನು, ಮನ, ಧನಗಳನ್ನು ಸಮರ್ಪಿಸಿಕೊಂಡ ಮಹಾಚೇತನಮೊಂದರ ಆತ್ಮವೃತ್ತಾಂತವಿದು. ಗುಡಿಸಲಿನಿಂದ ಗಂಗೋತ್ರಿಯವರೆಗೆ ನಡೆದ ಜೀವನಾವಧಿಯಲ್ಲಿ ನಾನಾ ಕಾರಣಗಳಿಂದ, ನಾನಾ ರೀತಿಯಲ್ಲಿ ಲೇಖಕರು ನಡೆಸಿದ ಹೋರಾಟಗಳ ವೃತ್ತಾಂತವನ್ನೊಳಗೊಂಡಿರುವ ಈ ಕೃತಿಗೆ ಹೋರಾಟದ ಬದುಕು ಎಂಬ ಹೆಸರು ಉಚಿತವಾಗಿದೆ. ಆರಂಭದಲ್ಲಿ ಬಡತನದೊಂದಿಗೆ, ಜಾತೀಯತೆಯೊಂದಿಗೆ ಹೋರಾಟ ನಡೆದಿರುವುದು ಕಂಡುಬಂದರೂ ಪ್ರಮುಖವಾದ ಹೋರಾಟ ಕನ್ನಡಕ್ಕೆ ಸಂಬಂಧಿಸಿದುದಾಗಿದೆ. ಈ ಕೃತಿ ಆತ್ಮಕಥಾಸಾಹಿತ್ಯಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ. ಇಲ್ಲಿನ ಗದ್ಯದ ಗತ್ತು ಮತ್ತು ಗ್ರಾಮೀಣ ಭಾಷಾ ಬಳಕೆಯ ಸೊಗಡು ಹೆಚ್ಚು ಆಕರ್ಷಣೀಯವೂ ಮನೋಜ್ಞವೂ ಆಗಿದ್ದು ಶೈಲಿಯ ಹೊಸದೊಂದು ಮಾದರಿಗೆ ಬುನಾದಿಯಾಗಿದೆ. ಕನ್ನಡದ ಮುನ್ನಡೆಗೆ ಇರಬಹುದಾದ ತೊಡಕುಗಳು, ಅಡ್ಡಬಂದ ವ್ಯಕ್ತಿಗಳು, ಸನ್ನಿವೇಶಗಳು, ಕನ್ನಡ ಪ್ರಗತಿಯ ಹಲವಾರು ಮಾರ್ಗಗಳು, ಕನ್ನಡ ನಾಡಿನಲ್ಲಿ ನಡೆದ ಹೋರಾಟದ ವಿವರ ಇಲ್ಲಿ ಚಿತ್ರಿತವಾಗಿರುವುದರಿಂದ ಕನ್ನಡ ನುಡಿ ಮತ್ತು ಸಾಹಿತ್ಯದ ಬಗೆಗಿನ ಮೂಲ ವಸ್ತುವನ್ನೊದಗಿಸುವುದರಲ್ಲಿ ಈ ಕೃತಿಗೆ ಸಾರ್ಥಕತೆ ಲಭಿಸಿದೆ.

ಹತ್ತು ವರುಷ (1939) ಜಿ.ಪಿ.ರಾಜರತ್ನಂ ಅವರ ಆತ್ಮಕಥೆ. 152 ಪುಟಗಳ ಈ ಕೃತಿಯಲ್ಲಿ ಲೇಖಕರ ಹತ್ತು ವರ್ಷಗಳ ಜೀವನ ಕಥೆಯಿದೆ. ಇದರಲ್ಲಿ ರಾಜರತ್ನಂ ಅಯ್ಯಂಗಾರ್ ರಾಜರತ್ನಂ ಆದುದು, ನಮ್ಮ ನಮ್ಮವರು ಕೃತಿ ಅಚ್ಚಾದುದು ಈ ಎರಡು ಭಾಗಗಳು ತುಂಬ ಸ್ವಾರಸ್ಯವಾಗಿವೆ. ರತ್ನನ ತಂದೆ ತೀರಿಕೊಂಡಾಗ ನಂಟರಾರೂ ಸಹಕರಿಸದೆ ಶವವನ್ನು ಜಟಕಾ ಗಾಡಿಯಲ್ಲಿ ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಿದ್ದನ್ನು ಓದಿದಾಗ ಎಂಥವರ ಎದೆಯೂ ಕರಗುತ್ತದೆ. ಸತಿಯನ್ನು ಕ್ಷಯದ ಆಸ್ಪತ್ರೆಗೆ ಸೇರಿಸಿ ಹಿಂತಿರುಗಿ ಬರುವಾಗ ದಾರಿಯಲ್ಲಿ ಕಂಡ ಹೆಂಡದಂಗಡಿಯ ಅನುಭವವೇ ಅವರ ರತ್ನನ ಪದಗಳು ಸೃಷ್ಟಿಯಾಗಲು ಕಾರಣವಾಯಿತೆಂದು ಓದಿದಾಗ ಕುತೂಹಲವೂ ಆಶ್ಚರ್ಯವೂ ಉಂಟಾಗುತ್ತದೆ.

ಮಿಂಚಿನ ಬಳ್ಳಿ ಕಾರ್ಯಾಲಯದಿಂದ ಪ್ರಕಟವಾದ ಸಾಹಿತ್ಯಜ್ಞರ ಆತ್ಮಕಥನ (1946) ಇನ್ನೊಂದು ವಿಶಿಷ್ಟ ಕೃತಿ. ಈ ಕೃತಿಯಲ್ಲಿ ಹನ್ನೊಂದು ಪ್ರಸಿದ್ಧ ಸಾಹಿತಿಗಳ ಭಿನ್ನಾನುಭವಗಳ ವೈವಿಧ್ಯಮಯವೂ ಸ್ವಾರಸ್ಯಪೂರ್ಣವೂ ಆದ ಪರಿಚಯವನ್ನು ಅವರವರ ಮಾತಿನಲ್ಲಿಯೇ ಕಾಣಬಹುದು. ಗೋವಿಂದ ಪೈ, ಆರ್.ವಿ.ಜಾಗೀರದಾರ್, ದೇವುಡು ನರಸಿಂಹಶಾಸ್ತ್ರೀ, ರಂ.ಶ್ರೀ.ಮುಗಳಿ, ಸಿ.ಕೆ.ವೆಂಕಟರಾಮಯ್ಯ, ವಿ.ಕೃ.ಗೋಕಾಕ, ಶಂ.ಬಾ.ಜೋಶಿ, ಚನಪ್ಪ ಉತ್ತಂಗಿ, ಬೆಟಗೇರಿ ಕೃಷ್ಣಶರ್ಮ, ಎ.ಆರ್.ಕೃಷ್ಣಶಾಸ್ತ್ರೀ, ದ.ರಾ.ಬೇಂದ್ರೆ, ಇವರುಗಳೇ ಅಲ್ಲಿನ ಸಾಹಿತಿಗಳು.

ನಾಟ್ಯನೆನಪುಗಳು ಎಂಬ ಕೃತಿಯಲ್ಲಿ ಶ್ರೀರಂಗರು ರಂಗಭೂಮಿಗೂ ತಮಗೂ ಇರುವ ನಂಟನ್ನು ಹೇಳಿಕೊಂಡಿದ್ದಾರೆ. ನಡೆದು ಬಂದ ದಾರಿಯ ಮೂರನೆಯ ಸಂಪುಟದಲ್ಲಿ (1961) ಬೇಂದ್ರೆ ಅವರು ಚತುರ್ಮುಖ ಎಂಬ ಶೀರ್ಷಿಕೆಯಲ್ಲಿ ತಮ್ಮ ಆತ್ಮವೃತ್ತಾಂತವನ್ನು ಬರೆದಿದ್ದಾರೆ. ಮನ್ವಂತರದ ಒಂದನೆಯ ಸಂಪುಟದಲ್ಲಿಯೂ ಅವರು ತಮ್ಮ ಕಾವ್ಯಜೀವನದ ಹಿನ್ನೆಲೆಯನ್ನು ವಿವರಿಸಿದ್ದಾರೆ. ಸಿಂ.ಪಿ.ಲಿಂಗಣ್ಣನವರು ಮೂವತ್ತೈದು ವರ್ಷಗಳು ಎಂಬ ಕೃತಿಯಲ್ಲಿ ತಾವು ಕಂಡುಂಡ ಸಿಹಿಕಹಿಗಳ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಆಲೂರು ವೆಂಕಟರಾಯರ ಜೀವನ ಸ್ಮರಣೆ ಎಂಬ ಗ್ರಂಥದಲ್ಲಿ ಕರ್ನಾಟಕದ ಹೊಸ ಪ್ರಜ್ಞೆಯ ಬೆಳೆವಣಿಗೆಯನ್ನು ಕಾಣಬಹುದು.

ನವರತ್ನ ರಾಮರಾಯರ ಕೆಲವು ನೆನಪುಗಳು, ವಾಸುದೇವಾಚಾರ್ಯರ ನೆನಪುಗಳು, ಡೂನು ಅವರ ಕಾಡಿನಲ್ಲಿ ಕಳೆದ ದಿನಗಳು, ದಿವಾಕರರ ಸೆರೆಮನೆ ಇವು ಅತ್ಯುತ್ತಮ ನೆನಪುಗಳಾಗಿವೆ. ಗುಬ್ಬಿ ವೀರಣ್ಣನವರ ಕಲೆಯೇ ಕಾಯಕ (1967) ಕಲಾವಿದನೊಬ್ಬನ ಹಲವು ಹನ್ನೆರಡು ಬವಣೆಗಳ, ನೂರಾರು ಸಮಸ್ಯೆಗಳ ಪ್ರಾತಿನಿಧಿಕ ಗ್ರಂಥದಂತಿದೆ. ಕನ್ನಡ ರಂಗಭೂಮಿಗೆ ಗುಬ್ಬಿ ವೀರಣ್ಣನವರು ಸಲ್ಲಿಸಿದ ಬಹುಮುಖ ಸೇವೆಯನ್ನೂ ಅವರ ಸಾಧನೆ ಸಿದ್ಧಿಗಳನ್ನೂ ಇಲ್ಲಿ ಕಾಣಬಹುದು.

ಸುಧಾ, ಕರ್ಮವೀರ ಮೊದಲಾದ ವಾರಪತ್ರಿಕೆಗಳಲ್ಲಿಯೂ ಪ್ರಜಾವಾಣಿ ದಿನಪ್ರತಿಕೆಯಲ್ಲಿಯೂ ಅನೇಕರ ಆತ್ಮಕಥೆಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಕರ್ಣನ ಪಾತ್ರಕ್ಕೆ ಅತ್ಯಂತ ಹೆಸರುವಾಸಿಯಾದ ಕೊಟ್ಟೂರಪ್ಪ ಮತ್ತು ಭೀಮನ ಪಾತ್ರದ ಮೂಲಕ ಹೆಸರು ಪಡೆದ ಸ್ತ್ರೀ ನಾಟಕ ಮಂಡಳಿಯ ನಾಗರತ್ನಮ್ಮ ಇವರ ಆತ್ಮಚರಿತ್ರೆಗಳು ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗಿವೆ.

ಕನ್ನಡದ ಅತ್ಯಂತ ಜನಪ್ರಿಯ ನಾಯಕ ನಟ ರಾಜಕುಮಾರ್ ಅವರ ಹೃದ್ಯವಾದ ಆತ್ಮಕಥೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು (1970). ಮಣ್ಣಿನ ಮಗನೊಬ್ಬ ತನಗೆ ರಕ್ತಗತವಾಗಿ ಬಂದ ಕಲೆಯನ್ನು ಭಯ ಭಕ್ತಿ ಶ್ರದ್ಧೆ ಗೌರವಗಳಿಂದ ಆರಾಧಿಸಿ, ಸಾಧಿಸಿ, ಅತ್ಯುನ್ನತ ಮಟ್ಟಕ್ಕೇರಿದ ಚಿತ್ರವನ್ನಿಲ್ಲಿ ಕಾಣಬಹುದು. ಸಾಧನೆಯ ಸಮಯದಲ್ಲಿ ಆತ ಪಟ್ಟ ಪಾಡು, ತೊಟ್ಟ ನಿಷ್ಠೆ, ಕನ್ನಡ ಪ್ರೇಮ ಎಂಥವರಿಗೂ ಮೆಚ್ಚಿಗೆ ತರುವಂಥವು.

ಆತ್ಮಕತೆ ನಿವೇದಿಸಿದವರಲ್ಲಿ ಹೆಸರಾಂತ ಲೇಖಕರು, ಕಲಾವಿದರು, ಕ್ರೀಡಾಪಟುಗಳು, ಚಲನಚಿತ್ರ ಮತ್ತು ರಂಗಭೂಮಿಯ ನಟನಟಿಯರು ಸೇರಿದ್ದಾರೆ. ವ್ಯಕ್ತಿಗಳಿಗೆ ಸಮರ್ಪಿಸಿದ ಅಭಿನಂದನ ಗ್ರಂಥಗಳಲ್ಲಿ ಅವುಗಳ ಪ್ರಾರಂಭದ ಪುಟಗಳಲ್ಲಿ ಆಯಾ ವ್ಯಕ್ತಿಗಳು ತಮ್ಮ ಜೀವನ ವೃತ್ತಾಂತವನ್ನು ನಿರೂಪಿಸಿದ್ದಾರೆ. ಕನ್ನಡದಲ್ಲಿ ಅಭಿನಂದನ ಗ್ರಂಥಗಳ ಒಂದು ಪರಂಪರೆಯೇ ಇರುವುದನ್ನು ನಾವು ಮರೆಯುವಂತಿಲ್ಲ. ಕನ್ನಡದ ಕೆಲವು ಮುಖ್ಯ ಆತ್ಮಕಥೆಗಳನ್ನು ಈ ಮುಂದೆ ಹೆಸರಿಸಲಾಗಿದೆ. ರಾವ್ ಬಹುದ್ದೂರರ ಮರೆಯದ ನೆನಪುಗಳು (1959), ಡಿವಿಜಿಯವರ ಜ್ಞಾಪಕ ಚಿತ್ರಶಾಲೆ (1967–74), ರಾಜಕುಮಾರ್ ಅವರ ನಟಸಾರ್ವಭೌಮ (1970), ವಿ.ಸೀತಾರಾಮಯ್ಯನವರ ಕಾಲೇಜು ದಿನಗಳು (1971) ಮತ್ತು ಮುಂಬಯಿ ವಾಸದ ನೆನಪುಗಳು (1976), ಅನಕೃ ಅವರ ಬರಹಗಾರನ ಬದುಕು (1972), ಅಲೂರು ವೆಂಕಟರಾಯರ ನನ್ನ ಜೀವನ ಸ್ಮೃತಿಗಳು (1973), ಕೋ.ಚೆನ್ನಬಸಪ್ಪನವರ ನನ್ನ ಮನಸ್ಸು–ನನ್ನ ನಂಬುಗೆ (1973), ಎಚ್.ಕೆ.ವೀರಣ್ಣಗೌಡರ ಬದುಕು–ಮೆಲಕು (1974), ಆರ್.ನಾಗೇಂದ್ರರಾವ್ ಅವರ ಇದು ನನ್ನ ಕಥೆ (1974), ಮಳವಳ್ಳಿ ಸುಂದರಮ್ಮನವರ ಅಭಿನಯಶಾರದೆ (1975), ಬಸವರಾಜ ಕಟ್ಟೀಮನಿ ಅವರ ಕುಂದರನಾಡಿನ ಕಂದ (1976) ಮತ್ತು ಕಾದಂಬರಿಕಾರನ ಕಥೆ (1981), ಬೀಚಿಯವರ ನನ್ನ ಬಯಾಗ್ರಫಿ (1976), ಶಾರದ ವಿ.ಗೋಕಾಕ್ ಅವರ ಒಲವೆ ನನ್ನ ಬದುಕು (1977), ಶ್ರೀರಂಗರಾಜು ಅವರ ನಾನು ತುಳಿದ ಹಾದಿ (1978), ಇ.ಎ.ಎಸ್.ಪ್ರಸನ್ನರ ಪ್ರಸನ್ನ ಜೀವನ ಒಂದು ಆತ್ಮಕಥೆ (1978), ಕೆದಂಬಾಡಿ ಜತ್ತಪ್ಪ ರೈ ಅವರ ಬೇಟೆಯ ನೆನಪುಗಳು (1978–79), ಬಿ.ಜಿ.ಎಲ್.ಸ್ವಾಮಿ ಅವರ ಪ್ರಾಧ್ಯಾಪಕನ ಪೀಠದಲ್ಲಿ (1979), ಬಿ.ಜಯಮ್ಮನವರ ಅಭಿನೇತ್ರಿ (1979), ಡಿ.ಕೆಂಪರಾಜ ಅರಸ್ ಅವರ ಅರವತ್ತು ವರ್ಷಗಳು (1980), ಕುವೆಂಪು ಅವರ ನೆನಪಿನ ದೋಣಿಯಲ್ಲಿ (1980), ಶೇ.ಗೋ.ಕುಲಕರ್ಣಿ ಅವರ ನಾನು ಕಂಡ ಗೆಳೆಯರ ಗುಂಪು (1980), ರಂ.ಶ್ರೀ.ಮುಗಳಿಯವರ ಜೀವನ ರಸಿಕ (1982), ಮಲ್ಲಿಕಾರ್ಜುನ ಮನ್ಸೂರರ ನನ್ನ ರಸಯಾತ್ರೆ (1983), ಎನ್ಕೆ ಕುಲಕರ್ಣಿಯವರ ನಾನಿಯ ನೆನಪುಗಳು (1983), ಚಿ.ನ.ಮಂಗಳಾ ಅವರ ಅಧ್ಯಾಪಕಿಯಾಗಿ ಇಪ್ಪತ್ತೈದು ವರ್ಷ ಮತ್ತು ಸ್ನೇಹಸಿಂಧು (1985), ಅನುಪಮಾ ನಿರಂಜನರ ನೆನಪು ಸಿಹಿ ಕಹಿ (1985) ಮತ್ತು ಬರಹಗಾರ್ತಿಯ ಬದುಕು (1990), ಜಿ.ಎಸ್.ಶಿವರುದ್ರಪ್ಪ ಅವರ ಚದುರಂಗ (1986), ತ.ಸು.ಶಾಮರಾಯರ ಮೂರುತಲೆಮಾರು (1987), ಸ.ಸ.ಮಾಳವಾಡರ ದಾರಿ ಸಾಗಿದೆ (1989). ಅಂಬುಜಾ ತ.ರಾ.ಸು. ಅವರ ಹಿಂತಿರುಗಿ ನೋಡಿದಾಗ (1990), ಎ.ಎನ್.ಮೂರ್ತಿರಾವ್ ಅವರ ಸಂಜೆಗಣ್ಣಿನ ಹಿನ್ನೋಟ (1990), ಬಿ.ಡಿ.ಜತ್ತಿ ಅವರ ನನಗೆ ನಾನೇ ಮಾದರಿ (1990), ಸಮೇತನಹಳ್ಳಿ ರಾಮರಾಯರ ಕೋಟು ಕೊಟ್ಟಮನೆ (1991), ತ.ಸು.ಶಾಮರಾಯರ ನೆನಪಿನ ಅಲೆಗಳು (1991), ಉತ್ತಂಗಿ ಚನ್ನಪ್ಪನವರ ಆತ್ಮಚರಿತ್ರೆ (1991), ಕು.ಶಿ.ಹರಿದಾಸಭಟ್ಟರ ನಿವೇದನೆ (1992), ಎಸ್.ಆರ್.ಗುಂಜಾಳ ಅವರ ನಾನು (1992), ನಂಜುಂಡಸ್ವಾಮಿಯವರ ಅಜ್ಞಾತ ಅಧ್ಯಾಪಕನ ಆತ್ಮಚರಿತ್ರೆ (1994), ಪೆರ್ಲ ಕೃಷ್ಣಭಟ್ಟರ ಬದುಕಿ ಫಲವೇನು (1994), ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ (1994), ಪಿ.ಲಂಕೇಶರ ಹುಳಿಮಾವು (1997), ಆರ್.ಸಿ.ಹಿರೇಮಠ ಅವರ ಉರಿ ಬರಲಿ ಸಿರಿ ಬರಲಿ (1995), ಎಚ್.ನರಸಿಂಹಯ್ಯನವರ ಹೋರಾಟದ ಹಾದಿ (1995), ಜಿ.ಎಂ.ಪಾಟೀಲರ ನೆನಪಿನಂಗಳದಲ್ಲಿ (1995), ಕೆರೆಮನೆ ಶಿವರಾಮ ಹೆಗಡೆಯವರ ನೆನಪಿನ ರಂಗಸ್ಥಳ (1996), ಕಯ್ಯಾರಕಿಞ್ಞಣ್ಣರೈ ಅವರ ದುಡಿಮೆಯೇ ನನ್ನ ದೇವರು (1996), ಸೇಡಿಯಾಪು ಕೃಷ್ಣಭಟ್ಟರ ಈಶ್ವರ ಸಂಕಲ್ಪ ಅಥವಾ ದೈವಲೀಲೆ (1996), ಸಿದ್ಧಲಿಂಗಯ್ಯನವರ ಊರು ಕೇರಿ (1996), ಎಸ್.ಎಲ್.ಭೈರಪ್ಪನವರ ಭಿತ್ತಿ (1996), ಎಚ್.ಎಲ್. ನಾಗೇಗೌಡರ ನಾಗಸಿರಿ (1996 ನಾಲ್ಕು ಸಂಪುಟಗಳು) ಪಿ.ಲಂಕೇಶರ ಹುಳಿಮಾವಿನ ಮರ (1998), ಕೆ.ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ (2001), ಸಿ.ಜಿ.ಕೃಷ್ಣಸ್ವಾಮಿ ಅವರ ಕತ್ತಾಲೆ ಬೆಳದಿಂಗಳೊಳಗೆ (2002), ಹಿರಿಯಡಕ ಗೋಪಾಲರಾಯರ, ಮದ್ದಳೆಯ ಮಾಯಾಲೋಕ, ಬಿ.ವಿ.ಕಾರಂತರ ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ (2003), ಎಚ್.ಎಸ್.ಶಿವಪ್ರಕಾಶ್ ಅವರ ಬತ್ತೀಸರಾಗ (2003), ಸ.ಜ.ನಾಗಲೋಟಿಮಠ ಅವರ ಬಿಚ್ಚಿದ ಜೋಳಿಗೆ (2003), ಇಂಥ ಸ್ವತಂತ್ರ ಕೃತಿಗಳಲ್ಲದೆ

ಕನ್ನಡಕ್ಕೆ ಅನೇಕ ಆತ್ಮಕಥೆಗಳು ಅನುವಾದಗೊಂಡಿವೆ. ಇವುಗಳಲ್ಲಿ ಹೆಚ್ಚಿನವು ಭಾರತೀಯ ಮತ್ತು ವಿದೇಶೀಯ ರಾಷ್ಟ್ರನಾಯಕರ, ವಿಜ್ಞಾನಿಗಳ ಮತ್ತು ಸಾಹಿತಿಗಳ ಆತ್ಮಕಥೆಗಳಾಗಿವೆ. ಸತ್ಯಶೋಧನ ಪ್ರಕಟಣ ಮಂದಿರದವರ ಸತ್ಯಶೋಧನೆ ಅಥವಾ ಗಾಂಧೀಜಿ ಅವರ ಆತ್ಮಕಥೆ ಮತ್ತು ಸಿದ್ಧವನಹಳ್ಳಿ ಕೃಷ್ಣಶರ್ಮರ ಗಾಂಧೀಜಿ ಆತ್ಮಕಥೆ (ಸಂಕ್ಷಿಪ್ತ) ಪ್ರಕಟವಾಗಿವೆ. ಜವಾಹರಲಾಲ್ ನೆಹರೂ ಅವರ ಆತ್ಮಕಥೆಯನ್ನು ಗುರುನಾಥ ಜೋಶಿ ಅವರು ನನ್ನ ಕಥೆ ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ (1958). ಗಾಂಧಿ ಮತ್ತು ನೆಹರೂ ಅವರ ಆತ್ಮಕಥೆಗಳು ಅಂತಾರಾಷ್ಟ್ರೀಯ ಮನ್ನಣೆಯನ್ನು ಪಡೆದಿರುವುದು ಮಾತ್ರವಲ್ಲದೆ ಅನೇಕರು ತಮ್ಮ ಆತ್ಮಕಥೆಯನ್ನು ಬರೆಯಲು ಪ್ರೇರಣೆಯನ್ನುಂಟುಮಾಡಿವೆ. ಕೃಷ್ಣ ಹತೀಸಿಂಗ್ ಅವರ ವಿತ್ ನೋ ರಿಗ್ರೆಟ್ಸ್ ಎಂಬ ಆತ್ಮಕಥೆಯನ್ನು ದೇ.ಜ.ಗೌ. ಅವರು ನೆನಪು ಕಹಿಯಲ್ಲ ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇದು ನೆಹರೂ ತಂಗಿಯ ಆತ್ಮಕಥೆಯಾದರೂ ಇಲ್ಲಿ ಸಮಸ್ತ ನೆಹರೂ ಮನೆತನದ ಅರ್ಧ ಶತಮಾನದ ತ್ಯಾಗಭೋಗಗಳ ಜೀವನದ ಕಥೆಯಿದೆ. ಸಿದ್ಧವನಹಳ್ಳಿ ಕೃಷ್ಣಶರ್ಮರು ಬಾಬು ರಾಜೇಂದ್ರ ಪ್ರಸಾದರ ಸ್ವವೃತ್ತಾಂತವನ್ನು ರಾಜೇಂದ್ರ ಪ್ರಸಾದ್ ಆತ್ಮಕಥೆ ಎಂಬ ನಾಮಾಂಕಿತದಲ್ಲಿ ಕನ್ನಡಕ್ಕೆ ತಂದಿದ್ದಾರೆ (1959). ಸ್ವಾತಂತ್ರ್ಯಯೋಧ ದೇಶಭಕ್ತನ ರೋಮಾಂಚಕಾರಿಯಾದ ಈ ಕಥೆ 866 ಪುಟಗಳಲ್ಲಿ ಹೊರಬಂದಿರುವ ಬೃಹತ್ ಗ್ರಂಥ. ಗೌರೀಶಂಕರದ ತುತ್ತತುದಿಗೇರಿ ಹೊಸ ದಾಖಲೆಯೊಂದನ್ನು ಸ್ಥಾಪಿಸಿದ ತೇನ್‌ಸಿಂಗನ ಆತ್ಮಕಥೆಯನ್ನು ಎವರೆಸ್ಟ್ ವೀರ ಎಂಬ ಹೆಸರಿನಲ್ಲಿ ಕೂಡಲಿ ಚಿದಂಬರಂ ಮತ್ತು ಜನಾರ್ದನ ಗುರ್ಕಾರ್ ಅವರು ಸುಂದರವಾಗಿ ಅನುವಾದಿಸಿದ್ದಾರೆ (1957). ಟಾಲ್‌ಸ್ಟಾಯ್ ಅವರ ಸುಪ್ರಸಿದ್ಧ ಆತ್ಮಚರಿತ್ರೆಯನ್ನು ಲಿಯೊ ಟಾಲ್‌ಸ್ಟಾಯ್ ಎಂಬ ಶೀರ್ಷಿಕೆಯಲ್ಲಿ ಆನಂದರು ಕನ್ನಡಕ್ಕೆ ತಂದಿದ್ದಾರೆ (1958). 388 ಪುಟಗಳ ಈ ಕೃತಿಯಲ್ಲಿ ಟಾಲ್‌ಸ್ಟಾಯ್ ಅವರ ಬಾಲ್ಯ ಮತ್ತು ಯೌವನಗಳ ಜೀವನಪರಿಚಯವಿದೆ.

ಲೋಕವಿಖ್ಯಾತ ವಿಜ್ಞಾನಿ ಚಾರಲ್ಸ್ ಡಾರ್ವಿನ್ನರ ಆತ್ಮಕಥೆಯನ್ನು ಶ್ರೀಮತಿ ಜೀಮೂಬಾಯಿ ಲಕ್ಷ್ಮಣರಾವ್ ಅವರು ಚಾರಲ್ಸ್ ಡಾರ್ವಿನ್ನನ ಆತ್ಮಕಥೆ ಎಂಬ ಹೆಸರಿನಲ್ಲಿ ಅನುವಾದಿಸಿದ್ದರು (1969). ಸುಪ್ರಸಿದ್ಧ ರಾಜಕಾರಣಿ ಬೆಂಜಮಿನ್ ಫ್ರಾಂಕ್ಲಿನ್ ಆತ್ಮಕಥೆ ಅದೇ ಹೆಸರಿನಿಂದ ಜನಾರ್ದನ ಗುರ್ಕಾರ್ ಅವರಿಂದ ಕನ್ನಡಕ್ಕೆ ಬಂದಿದೆ (1958). ಪ್ರಖ್ಯಾತ ಮಹಿಳೆ ಹೆಲನ್ ಕೆಲ್ಲರಳ ಆತ್ಮಕಥೆಯನ್ನು ಚಿ.ನ. ಮಂಗಳ ಅನುವಾದಿಸಿದ್ದಾರೆ. ಅಮೆರಿಕದ ಅಧ್ಯಕ್ಷರಾಗಿದ್ದ ರೂಸ್ವೆಲ್ಟ್ ಅವರ ಪತ್ನಿ ಎಲೀನರ್ ರೂಸ್‌ವೆಲ್ಟ್ ಅವರ ಆತ್ಮಕಥೆ ಸವಿನೆನಪು ಎಂಬ ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ. ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ ಎಚ್.ಎಲ್. ನಾಗೇಗೌಡರಿಂದ ಅನುವಾದಿತವಾಗಿರುವ ಇನ್ನೊಂದು ಆತ್ಮಕಥಾಗ್ರಂಥ ಮರಾಠಿಯಿಂದ ಅನೇಕ ದಲಿತ ಆತ್ಮಕಥೆಗಳು ಕನ್ನಡಕ್ಕೆ ಅನುವಾದಗೊಂಡು ಕನ್ನಡ ದಲಿತ ಸಂವೇದನೆಗಳನ್ನು ಈ ನೆಲೆಯಲ್ಲಿ ಉನ್ಮೀಲನಗೊಳಿಸಿ ಹೊಸ ಬಗೆಯ ಬರವಣಿಗೆಗೆ ಹಾದಿ ಮಾಡಿಕೊಟ್ಟಿವೆ. ಅಕ್ರಮಸಂತಾನ, ಉಚಲ್ಯಾ (ಅನು: ದು.ನಿಂ. ಬೆಳಗಲಿ), ಇವು ದಲಿತ ಬದುಕಿನ ಭೀಕರವಾದ ಹಾಗೂ ಬೆರಗಿನ ಲೋಕವನ್ನು ತೆರೆದಿಟ್ಟಿವೆ. ಪಂಜಾಬಿ ಲೇಖಕಿ ಅಜಿತ್ ಕೌರ್ ಅವರ ಆತ್ಮಚರಿತ್ರೆ ಲವ್‌ಲೀನ್ ಜಾಲಿ (2003). ಅಲೆಮಾರಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಗೊಂಡಿದೆ. (ಅನು: ವಿಜಯಲಕ್ಷ್ಮೀಅರಸ್) ಕನ್ನಡ ಆತ್ಮಕಥಾ ಸಾಹಿತ್ಯ ಅನುವಾದಗಳೂ ಸೇರಿದಂತೆ ಶ್ರೀಮಂತವಾಗುತ್ತಿದೆ. *

**ಕನ್ನಡದಲ್ಲಿ ದಾಸಸಾಹಿತ್ಯ :** ಕನ್ನಡಕ್ಕೆ ಹರಿದಾಸರ ಕೊಡುಗೆ ಅಪಾರ. ಅನೇಕಾನೇಕ ಹಾಡುಗಳಾಗಿ, ಭಗವದ್ಭಕ್ತರ ಜೀವನಕಥನಗಳಾಗಿ, ವಚನರೂಪದ ಸುಳಾದಿ ಉಗಾಭೋಗಗಳಾಗಿ ಅದು ಬೆಳೆದಿದೆ. ತತ್ತ್ವಬೋಧೆಯನ್ನು ರಮ್ಯವಾಗಿ ಸುಲಭಗ್ರಾಹ್ಯವಾಗಿ ಹೇಳುವಲ್ಲಿ, ಆಡುಮಾತನ್ನೂ ಕನ್ನಡ ಛಂದಸ್ಸುಗಳನ್ನೂ ಬಳಸುವಲ್ಲಿ ಅದರ ವೈಶಿಷ್ಟ್ಯವನ್ನು ಕಾಣಬಹುದು. 13ನೆಯ ಶತಮಾನದ ವೇಳೆಗೆ ದ್ವೈತಸಿದ್ಧಾಂತವನ್ನು ಸಾರಿದ ಮಧ್ವಾಚಾರ್ಯರು ಹರಿದಾಸ ಪಂಥಕ್ಕೆ ಮೂಲಪ್ರೇರಕರು. ಅವರ ದ್ವಾದಶಸ್ತೋತ್ರ ಹರಿದಾಸರಿಗೆ ಸ್ಫೂರ್ತಿಯ ಸೆಲೆ. ಅವರ ದ್ವೈತಸಿದ್ಧಾಂತ ಹರಿದಾಸರ ಸಿದ್ಧಾಂತವೂ ಹೌದು. ಮಧ್ವಮತದ ತತ್ತ್ವಗಳನ್ನೊಪ್ಪಿ, ಅವುಗಳ ಪ್ರತಿಪಾದನೆಯೊಂದಿಗೆ ತಮ್ಮ ಭಕ್ತಿ ಸಾಧನೆಯನ್ನೂ ಮೇಳವಿಸಿದ್ದಾರೆ ಹರಿದಾಸರು. ಇತ್ತೀಚೆಗೆ ದೊರೆತಿರುವ ಕನ್ನಡ ಭಾಷೆಯ ಒಂದು ಓಲೆಗ್ರಂಥದ ನಾಲ್ಕೇನಾಲ್ಕು ಓಲೆಗರಿಗಳಲ್ಲಿ ಅಚಲಾನಂದರನ್ನು ಕುರಿತ ಕೆಲವು ಸಂಗತಿಗಳಿವೆ. ಆ ಪ್ರಕಾರ ಸು.9ನೆಯ ಶತಮಾನದಲ್ಲಿ ಒಬ್ಬರು ಅಚಲಾನಂದರು ಇದ್ದರು. ಅವರು ಮಠಾಧಿಪತಿಗಳಾಗಿದ್ದುದಲ್ಲದೆ ಪಾಂಡುರಂಗ, ಕಳಸ, ವಿದ್ಯಾನಗರ, ಪೆನುಗೊಂಡೆ, ರಾಮೇಶ್ವರ, ಕಾಶಿ, ಕೆಳದಿ, ಬಿದನೂರುಗಳಲ್ಲಿ ಒಂದೊಂದು ಮಠವನ್ನು ಸ್ಥಾಪಿಸಿದರು. ಆದರೆ ಅವರದೆನ್ನಲಾಗಿರುವ ಕೃತಿಗಳ ಭಾಷೆ 9ನೆಯ ಶತಮಾನದ್ದಲ್ಲ; 15–16ನೆಯ ಶತಮಾನದ ಕನ್ನಡ. ಈ ಸಂದಿಗ್ಧವನ್ನು ಗಮನಿಸಿ ಬೇರೆ ಬೇರೆ ಕಾಲಕ್ಕೆ ಸೇರಿದ ಇಬ್ಬರು ಅಚಲಾನಂದರು ಇದ್ದಿರಬೇಕು ಎಂದು ಹೇಳಿದ ವರದರಾಜರಾಯರ ಊಹೆ ನಿಜವಾದುದು. ಇವರ ಈ ಊಹೆಗೆ 1722ರ ತೊಣ್ಣೂರು ದೇವಾಲಯದ ತಾಮ್ರಶಾಸನಮೊಂದು ಪೂರಕ ಮಾಹಿತಿ ನೀಡುತ್ತದೆ. ಮೈಸೂರಿನ ದೊರೆ ಒಂದನೆಯ ಕೃಷ್ಣರಾಜ ತೊಂಡೂರು, ಅತ್ತಿಕುಪ್ಪೆ ಹಳ್ಳಿಗಳನ್ನು ಅಗ್ರಹಾರವನ್ನಾಗಿ ಮಾಡಿ, ಅದನ್ನು ವೃತ್ತಿಗಳಾಗಿ ವಿಭಜಿಸಿ, ಹೊರನಾಡುಗಳಿಂದ ಆಹ್ವಾನಿತರಾಗಿ ಬಂದ ಬ್ರಾಹ್ಮಣರಿಗೆ ಅಲ್ಲಿಯೇ ನೆಲೆಸಲೆಂದು ಹಂಚಿಕೊಟ್ಟ ವಿಚಾರ ಅದರಲ್ಲಿದೆ.

................ ಅಚಲಾನನ್ದದಾಸಾಖ್ಯ  
ವಿಷ್ಣುಕುಲೋದ್ಭವಃ ಆಶ್ವಲಾಯನ  
ವಾಸಿಷ್ಠ ಋಕ್ಶಾಖ್ಯಪ್ಪಣ ಪುತ್ರಜಃ ವೃತ್ತಿಂ  
ನೃಸಿಂಹಜೋ ತ್ರೈಕಾಂ ಹರಿದಾಸಸ್ಸಮಶ್ನುತೇ

ವೃತ್ತಿಗಳನ್ನು ಪಡೆದ 112 ಜನರಲ್ಲಿ ವೈಷ್ಣವ ಮನೆತನದಲ್ಲಿ ಹುಟ್ಟಿದ, ನೃಸಿಂಹನ ಮಗನೂ ಅಪ್ಪಣನ ಮೊಮ್ಮಗನೂ ಆದ, ವಾಸಿಷ್ಠಗೋತ್ರ ಆಶ್ವಲಾಯನ ಸೂತ್ರ ಋಕ್ ಶಾಖಾಧ್ಯಾಯಿ ಅಚಲಾನಂದದಾಸರೂ ಒಬ್ಬರು. ಅಚಲಾನಂದರನ್ನು ಹೆಸರಿಸುವ ಇನ್ನೊಂದು ಶಾಸನ 15–16ನೆಯ ಶತಮಾನಕ್ಕೆ ಸೇರಿದ ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ನಲ್ಲೂರು ಶಾಸನ. ಈ ಶಾಸನದಲ್ಲಿ 'ಶ್ರೀ ಅಚಲಾನಂದನ ವಿಠಲ' ಎಂಬ ಬರೆಹವಿದೆ. ಈ ಎಲ್ಲ ದಾಖಲೆಗಳನ್ನು ಗಮನಿಸಿದಾಗ ದೊರೆತಿರುವ ಅಚಲಾನಂದ ವಿಠಲಾಂಕಿತ ಕೀರ್ತನೆಗಳು 9ನೆಯ ಶತಮಾನದ ಮಠಾಧಿಪತಿ ಅಚಲಾನಂದರದಲ್ಲ 16ನೆಯ ಶತಮಾನದ ಹರಿದಾಸ ಅಚಲಾನಂದರದು ಎಂಬುದು ಸ್ಪಷ್ಟ. ಹೀಗಾಗಿ ಹರಿದಾಸಪಂಥಕ್ಕೆ ಅಚಲಾನಂದ ದಾಸರು ಮೊದಲಿಗರೆನ್ನುವ ವಾದವನ್ನು ಒಪ್ಪಲಾಗುವುದಿಲ್ಲ.

ಬೇಲೂರು ಕೇಶವದಾಸರು ಮತ್ತು ಎ.ಟಿ.ಪಾಟೀಲರು ಸು.9ನೆಯ ಶತಮಾನದಲ್ಲಿದ್ದರೆನ್ನಲಾದ ಅಚಲಾನಂದದಾಸರೇ ಹರಿದಾಸಪಂಥಕ್ಕೆ ಮೊದಲಿಗರೆಂದು ಅಭಿಪ್ರಾಯಪಟ್ಟಿದ್ದಾರೆ. ಅಚಲಾನಂದವಿಠಲ ಎಂಬ ಅಂಕಿತದಲ್ಲಿರುವ ಕೀರ್ತನೆ, ಉಗಾಭೋಗಗಳ ಭಾಷೆ 15ನೆಯ ಶತಮಾನದ್ದಾಗಿ ಕಾಣುವುದರಿಂದಲೂ ಅಚಲಾನಂದರು ಮಧ್ವಮತದ ವಿಷಯವನ್ನೆತ್ತಿರುವುದರಿಂದಲೂ ಇವರ ಕಾಲ 13ನೆಯ ಶತಮಾನದಿಂದ ಈಚಿನದಾಗುತ್ತದೆ ಎಂದು ಆರ್.ಎಸ್.ಪಂಚಮುಖಿ, ಕೆ.ಎಂ.ಕೃಷ್ಣರಾವ್, ಎಚ್.ಕೆ.ವೇದವ್ಯಾಸಾಚಾರ್ಯ, ಜಿ.ವರದರಾಜರಾವ್, ರಂ.ಶ್ರೀ.ಮುಗಳಿ ಮೊದಲಾದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

13ನೆಯ ಶತಮಾನದ ಮಧ್ವಾಚಾರ್ಯರ ನೇರಶಿಷ್ಯರಾದ ನರಹರಿತೀರ್ಥರೇ ಹರಿದಾಸ ಪಂಥದ ಆದ್ಯಪ್ರವರ್ತಕರೆಂಬ ಒಂದು ವಾದವೂ ಇದೆ. ಅವರವೆಂದು ಹೇಳಲಾಗಿರುವ ಕೇವಲ ಮೂರೇ ಮೂರು ಕೀರ್ತನೆಗಳು ದೊರೆತಿವೆ. ಈ ವಾದದ ಬಗ್ಗೆ ಚರ್ಚಿಸಿದವರಲ್ಲಿ ಆರ್.ಎಸ್.ಪಂಚಮುಖಿ, ಗೋರಬಾಳ ಹನುಮಂತರಾವ್, ಕೆ.ಎಂ.ಕೃಷ್ಣರಾವ್ ಮುಖ್ಯರು. ಅವರ ವಾದದ ಸಾರಾಂಶವಿಷ್ಟು: ದೊರೆತಿರುವ ಮೂರು ಕೀರ್ತನೆಗಳಲ್ಲೂ ಅಂಕಿತ ನಿರ್ದಿಷ್ಟವಾಗಿಲ್ಲ. ನರಹರಿತೀರ್ಥರ ಶಿಷ್ಯಪರಂಪರೆಯಿಲ್ಲ; ಹರಿದಾಸ ಪರಂಪರೆಯನ್ನು ಕುರಿತ ವಂದನಾ ಶ್ಲೋಕದಲ್ಲಿ ಅವರ ಹೆಸರಿಲ್ಲ; ಅವರ ಮಾತೃಭಾಷೆ ಕನ್ನಡವಲ್ಲ. ಈ ಕೆಲವು ಅಂಶಗಳನ್ನು ಗಮನಿಸಿ ನರಹರಿತೀರ್ಥರು ದಾಸಸಾಹಿತ್ಯಕ್ಕೆ ಮೊದಲಿಗರೆಂದು ಒಪ್ಪುವುದು ಕಷ್ಟ. ಈ ಎಲ್ಲ ವಿಚಾರಗಳನ್ನು ಗಮನಿಸಿ ಜಿ.ವರದರಾಜರಾಯರು ಅವುಗಳ ಜೊತೆಗೆ ನರಹರಿತೀರ್ಥರ ಕೃತಿಗಳಲ್ಲಿ ಕಂಡುಬರುವ ಅನುಪಲ್ಲವಿಯ ಪ್ರಯೋಗ ಆ ಕಾಲದ ಸಂಗೀತಶಾಸ್ತ್ರ ನಿಯಮಗಳಿಗೆ ವಿರುದ್ಧವಾದುದೂ ಐತಿಹಾಸಿಕವಾಗಿಯೂ ಅಸಂಗತ ಎಂಬ ವಿಚಾರಗಳನ್ನು ಎತ್ತಿ ತೋರಿಸಿ ಶ್ರೀಪಾದರಾಜರೇ ಕನ್ನಡ ಹರಿದಾಸಸಾಹಿತ್ಯದ ಆದ್ಯಪ್ರವರ್ತಕರೆಂಬುದನ್ನು ಸಾಧಾರವಾಗಿ ಸ್ಥಾಪಿಸಿದ್ದಾರೆ.

ನರಹರಿತೀರ್ಥರ ಬಳಿಕ ಸುಮಾರು ಒಂದು ಶತಮಾನದ ಅನಂತರ ನಮಗೆ ಶ್ರೀಪಾದರಾಯರ ಹೆಸರು ಸಿಕ್ಕುತ್ತದೆ. ಇವರು 15ನೆಯ ಶತಮಾನದಲ್ಲಿದ್ದ ಖ್ಯಾತ ಮಠಾಧಿಪತಿ, ಹರಿದಾಸಸಾಹಿತ್ಯದ ಪ್ರಮುಖರಲ್ಲೊಬ್ಬರು. ಚನ್ನಪಟ್ಟಣದ ಬಳಿಯಿರುವ ಅಬ್ಬೂರು ಇವರ ಜನ್ಮಸ್ಥಳ. ರಂಗವಿಠಲ ಎಂಬ ಅಂಕಿತದಿಂದ ಕೃತಿರಚನೆ ಮಾಡಿದ್ದಾರೆ. ಸಂಸ್ಕೃತದ ಬಲವಿದ್ದರೂ ಕನ್ನಡದ ಒಲವನ್ನು ಕೃತಿಗಳಲ್ಲಿ ತೋರಿದ್ದಾರೆ. ಅನೇಕ ವರ್ಷಗಳ ಕಾಲ ಶ್ರೀರಂಗದಲ್ಲಿದ್ದು, ತಮಿಳಿನ ಆಳ್ವಾರರ ಕೃತಿಗಳು ಸಾಮಾನ್ಯ ಜನರ ಮೇಲೆ ಬೀರಿದ್ದ ಪ್ರಭಾವವನ್ನು ಕಣ್ಣಾರೆ ಕಂಡಿದ್ದವರು. ನರಹರಿತೀರ್ಥರ ಮೇಲ್ಪಂಕ್ತಿಯೊಂದಿಗೆ ಶಿವಶರಣರ ಪ್ರಭಾವವೂ ಸೇರಿ ಇವರ ಕೃತಿರಚನೆಗೆ ಪುಷ್ಟಿ ದೊರೆತಂತೆ ಕಾಣುತ್ತದೆ. ಹರಿದಾಸ ಸಾಹಿತ್ಯವಾಹಿನಿ ಇವರಲ್ಲಿ ವೈವಿಧ್ಯಪೂರ್ಣವಾಗಿ, ಬಹುಮುಖವಾಗಿ ವಿಕಸಿಸಿದೆ. ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತಭಾವಗಳ ಮೂಲಕ ಭಕ್ತಿ ಇಲ್ಲಿ ಹೊನಲಿಟ್ಟಿದೆ. ಜೋಗುಳದ ಹಾಡಿನಲ್ಲಿ ಹರಿಯ ದಶಾವತಾರಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಒಂದು ಪ್ರಸಂಗ ಅಥವಾ ಸಂದರ್ಭವನ್ನು ಆರಿಸಿಕೊಂಡು ನೀಳವಾದ ಕೀರ್ತನೆ ರಚಿಸಿರುವುದು ಇವರ ಇನ್ನೊಂದು ವೈಶಿಷ್ಟ್ಯ. ಶ್ರೀ ರುಕ್ಮಿಣಿಸತ್ಯಭಾಮ ವಿಲಾಸವನ್ನು ನಿದರ್ಶನವಾಗಿ ಹೆಸರಿಸಬಹುದು. ಇವರಲ್ಲಿ ಭಾಗವತಕ್ಕೆ ಹೆಚ್ಚು ಪ್ರಾಶಸ್ತ್ಯ ದೊರೆತಿದೆ.

ಈ ಎಲ್ಲ ಕಾರಣಗಳಿಂದಾಗಿ ಹರಿದಾಸ ಸಾಹಿತ್ಯದ ಮುನ್ನಡೆಗೆ ಶ್ರೀಪಾದರಾಯರೇ ಮೊದಲಿಗರೆನ್ನಬಹುದು. ಕೀರ್ತನೆ, ಸುಳಾದಿ, ಉಗಾಭೋಗಗಳೊಂದಿಗೆ ದಂಡಕ, ವೃತ್ತನಾಮಗಳನ್ನೂ ಇವರು ಬಳಸಿಕೊಂಡಿದ್ದಾರೆ. ಇವರ ಅನಂತರದ ಹರಿದಾಸರಿಗೆ ಇವರ ಕೃತಿಗಳು ಸಾಂಪ್ರದಾಯಕವಾಗಿ ಪರಿಣಮಿಸಿದುವು. ಇವರ ಆತ್ಮಸಾಧನೆ ಉಳಿದವರಿಗೆ ಮಾರ್ಗದರ್ಶಕವಾಯಿತು.

ಶ್ರೀಪಾದರಾಯರ ಅನಂತರ ಇವರ ಶಿಷ್ಯೋತ್ತಮರಾದ ವ್ಯಾಸರಾಯರನ್ನು ಹೆಸರಿಸಬೇಕು. ಇವರು ಸು.1447ರಲ್ಲಿ ವಹ್ನಿಪುರದಲ್ಲಿ (ಈಗಿನ ಬನ್ನೂರು) ಜನಿಸಿದರು. ವಿಜಯನಗರದ ಕೃಷ್ಣದೇವರಾಯನ ಸಮಕಾಲೀನರೂ ರಾಜಮರ್ಯಾದೆಗೆ ಪಾತ್ರರೂ ಆಗಿದ್ದ ಗಣ್ಯ ಮಠಾಧಿಪತಿ ಇವರು. ಶ್ರೀಕೃಷ್ಣ ಎಂಬ ಅಂಕಿತದಿಂದ ಕೃತಿರಚನೆ ಮಾಡಿದ್ದಾರೆ. ಇವರ ಮತ್ತು ಇವರ ಶಿಷ್ಯರಿಂದ ಹರಿದಾಸರ ಒಂದು ಒಕ್ಕೂಟ ಪ್ರಾರಂಭವಾಯಿತು. ಪುರಂದರದಾಸ, ಕನಕದಾಸ, ವಾದಿರಾಜರು ದಾಸಕೂಟದ ಪ್ರಮುಖ ಸ್ತಂಭಗಳು, ಪ್ರತಿನಿಧಿಗಳು. ಶ್ರೀಪಾದರಾಯರಲ್ಲಿ ಕಂಡುಬರುವ ದೃಷ್ಟಿ ಭಾವಾದಿಗಳು ಇವರಲ್ಲಿ ಇನ್ನೂ ಬೆಳೆವಣಿಗೆ ಹೊಂದಿವೆ. ಅಪೂರ್ವವಾದ ಕೆಲವು ಭಾವನೆಗಳನ್ನು ಇವರಲ್ಲಿ ಕಾಣಬಹುದು. ಆದಿಕವಿ ಪಂಪ ಬನವಾಸಿಯಲ್ಲಿ ಮರುಹುಟ್ಟು ಬಯಸಿದಂತೆ ವ್ಯಾಸರಾಯರು ಬೃಂದಾವನದಲ್ಲಿ ಮತ್ತೊಮ್ಮೆ ಹುಟ್ಟಬೇಕೆಂದು ಹಂಬಲಿಸುತ್ತಾರೆ. ಕೃಷ್ಣನನ್ನು ಕುರಿತು ‘ಏನಬೇಡಲೊ ನಿನ್ನ ದೇವಾದಿದೇವ’ ಎಂದು ಪ್ರಶ್ನಿಸುತ್ತ ‘ವನಿತೆಯರ ಬೇಡಲೆ ಬ್ರಹ್ಮಚಾರಿ’ ಎಂದು ಉದ್ಗರಿಸುತ್ತಾರೆ. ವಾಮನಾವತಾರದಲ್ಲಿ ವಟುವಾಗಿ ಬಂದ ಆ ಕೃಷ್ಣನನ್ನು ವ್ಯಾಸರಾಯರು ಪ್ರಶ್ನಿಸಿರುವ ರೀತಿ ಇದು. ದಾಸಕೂಟದ ಮೇಲ್ವಿಚಾರಕರ ಸ್ಥಾನದಲ್ಲಿರುವ ಇವರನ್ನು ಕುರಿತು ಗುರುವೆಂದೂ ಜ್ಞಾನಿಗಳ ಅರಸನೆಂದೂ ಪುರಂದರದಾಸರು ಹೊಗಳಿದ್ದಾರೆ.

ವ್ಯಾಸರಾಯರ ಶಿಷ್ಯಪರಂಪರೆಯಲ್ಲಿ ಕರ್ನಾಟಕದ ಮನೆ ಮನೆಯಲ್ಲಿಯೂ ಕೇಳಿಬರುವ ಹೆಸರೆಂದರೆ ಪುರಂದರದಾಸರದು (ನೋಡಿ). ತಮ್ಮ ಅಪಾರ ಕೃತಿರಾಶಿಯಿಂದ ಇವರು ಕನ್ನಡಿಗರಿಗೆ ಚಿರ ಪರಿಚಿತರಾಗಿದ್ದಾರೆ. ಇವರು ಸು.1484ರಲ್ಲಿ ಪುರಂದರಗಡ ಎಂಬಲ್ಲಿ ಜನಿಸಿದರು. ಪೂರ್ವಾಶ್ರಮದ ಹೆಸರು ಶ್ರೀನಿವಾಸನಾಯಕ, ಹೆಂಡತಿ ಸರಸ್ವತಿ. ದಾಸದೀಕ್ಷೆಯನ್ನು ಕೈಗೊಳ್ಳುವ ಮೊದಲು ಅತ್ಯಂತ ಶ್ರೀಮಂತರಾಗಿ ವೈಭವದಿಂದ ಮೆರೆದವರು. ಮೂಗುತಿಯ ಕಾರಣದಿಂದ ಮನಃ ಪರಿವರ್ತನೆಯಾದ ಮೇಲೆ, ಐಶ್ವರ್ಯವನ್ನೆಲ್ಲ ದಾನಮಾಡಿ ವ್ಯಾಸರಾಯರ ಬಳಿ ಬಂದು ದಾಸದೀಕ್ಷೆಯನ್ನು ಕೈಗೊಂಡರು ಇತ್ಯಾದಿ ವಿಚಾರಗಳು ಪ್ರಚಲಿತವಾಗಿವೆ. ಆದರೆ ಕಮಲಾಪುರದ ತಾಮ್ರಶಾಸನದಿಂದ (1526 ಫೆಬ್ರವರಿ 24) ಅಧಿಕೃತವಾಗಿ ತಿಳಿದಿರುವ ಅಂಶಗಳು ಹೀಗಿವೆ. ಪುರಂದರದಾಸರು ವಸಿಷ್ಠಗೋತ್ರದ ಯಜುಶ್ಶಾಖೆಯವರು. ಇವರಿಗೆ ಲಕ್ಷ್ಮಣದಾಸ, ಹೇಬಣದಾಸ ಮತ್ತು ಮಧ್ವಪದಾಸ ಎಂಬ ಮೂವರು ಮಕ್ಕಳಿದ್ದರು. ಪುರಂದರದಾಸರು ಬದುಕಿದ್ದಾಗಲೇ ವಿಜಯನಗರದ ಅರಸ ಕೃಷ್ಣದೇವರಾಯನಿಂದ ಹೊರಟ ಶಾಸನವಿದು. ಇವರು ವ್ಯಾಸರಾಯರ ಶಿಷ್ಯರಾಗಿದ್ದುದು ಇವರ ‘ವ್ಯಾಸರಾಯರ ಚರಣಕಮಲದರುಶನ .............’ ಎಂಬ ಕೀರ್ತನೆಯಿಂದಲೇ ಸ್ಪಷ್ಟವಾಗುತ್ತದೆ. ಅವರಿಂದಲೇ ದಾಸದೀಕ್ಷೆ ಪಡೆದು ಪುರಂದರವಿಠಲ ಎಂಬ ಅಂಕಿತದಿಂದ ಕೃತಿರಚನೆ ಮಾಡಿದರು. ಹೆಂಡತಿಯ ಮೂಲಕ ಭಕ್ತಿಯೆಡೆಗೆ ತಿರುಗಿದ ಮನಸ್ಸು ಗುರುಮುಖೇನ ದೀಕ್ಷೆಯನ್ನು ಪಡೆಯಿತು. ಪಂಚಭಾವಗಳ ಮೂಲಕ ಭಗವಂತನನ್ನು ಇವರು ಬಗೆಬಗೆಯಾಗಿ ಸ್ತುತಿಸಿದ್ದಾರೆ. ವಾತ್ಸಲ್ಯಭಾವಕ್ಕೆ ಇವರಲ್ಲಿ ಹೆಚ್ಚಿನ ಪ್ರಾಮುಖ್ಯ ದೊರೆತಿದೆ. ಭಕ್ತಿಸಾಧನೆಯೊಂದಿಗೆ ಸಮಾಜದ ರೀತಿ ನೀತಿಗಳನ್ನು ಸರಿಪಡಿಸುವ ಹೊಣೆಯನ್ನು ಹೊತ್ತು ನಿರ್ವಹಿಸಿದ್ದಾರೆ. ನಡೆದಂತೆ ನುಡಿಯುತ್ತ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ವೈದ್ಯನಂತೆ ನೋಡುತ್ತ ಅದರ ಸರಿತಪ್ಪುಗಳನ್ನು ಎತ್ತಿ ಆಡಿದ್ದಾರೆ. ಇವರು ಶುಷ್ಕ ನೀತಿಬೋಧಕರಲ್ಲ, ಜನರೊಡನೆ ಬೆರೆತು, ಅವರ ಕಷ್ಟ ಸುಖಗಳನ್ನು ಹಂಚಿಕೊಂಡು ಅವರಿಗೆ ಮುಕ್ತಿ ಪಥವನ್ನು ತೋರಿಸಿಕೊಟ್ಟ ದಿಟ್ಟರು. ಮಧ್ವಮತ ತತ್ತ್ವ, ವೇದಾಂತಸಾರಗಳನ್ನು ಕನ್ನಡದಲ್ಲಿ ಸಾರಿದ ಹರಿಕಾರರು. ವ್ಯಾಸರಾಯರು ಇವರ ಕೃತಿಗಳನ್ನು ಒಟ್ಟಾಗಿ ಪುರಂದರೋಪನಿಷತ್ತು ಎಂದು ಕರೆದು ಶ್ಲಾಘಿಸಿದ್ದಾರೆ. ಅದರಲ್ಲಿ ಕೀರ್ತನೆಗಳು ಮಾತ್ರವಲ್ಲ, ಅನುಭವದ ರಸಗಟ್ಟಿಗಳಾದ ಉಗಾಭೋಗಗಳೂ ತತ್ತ್ವಭೂಯಿಷ್ಠವಾದ ಸುಳಾದಿಗಳೂ ಅಡಕವಾಗಿವೆ. ಆತ್ಮಚರಿತ್ರೆ, ಆಧ್ಯಾತ್ಮಿಕದೃಷ್ಟಿ ಹಾಗೂ ಲೋಕಚರಿತ್ರೆ ಈ ದೃಷ್ಟಿಗಳಿಂದಲೂ ಇವರ ಕೃತಿಗಳು ವಿಶಿಷ್ಟವಾಗಿವೆ. ಜನಸಾಮಾನ್ಯರ ಬದುಕನ್ನು ಅನಂತರೀತಿಯಲ್ಲಿ ನೋಡುವ ಒಂದು ವಿಸ್ತಾರ ದೃಷ್ಟಿ ಇವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸಾರ್ವಜನಿಕ ಹಾಗೂ ಸಾರ್ವಕಾಲಿಕ ಧರ್ಮಸತ್ಯಗಳನ್ನು ಎತ್ತಿಹಿಡಿಯುವುದರಲ್ಲಿ ಹರಿದಾಸ ಸಾಹಿತ್ಯದಲ್ಲಿ ಕನಕದಾಸರನ್ನು ಬಿಟ್ಟರೆ ಉಳಿದವರಾರೂ ಇವರ ಸಮಕ್ಕೆ ಬರಲಾರರು. ಸಾಹಿತ್ಯ, ಸಂಗೀತ ಮತ್ತು ಪಾರಮಾರ್ಥಿಕಗಳ ಸಮ್ಮಿಲನ ಇವರ ಕೃತಿಗಳಲ್ಲಿದೆ. ಕೃಷ್ಣನ ವಿವಿಧ ಲೀಲೆಗಳನ್ನು ದಶಾವತಾರಗಳನ್ನು ಬಗೆಬಗೆಯಾಗಿ ವರ್ಣಿಸುವ ಅಸಂಖ್ಯಾತ ಕೃತಿಗಳು ಶ್ರೇಷ್ಠ ಭಾವಗೀತೆಗಳಾಗಿವೆ. ಧರ್ಮವೇ ಜಯವೆಂಬ ದಿವ್ಯಮಂತ್ರ ಎಂಬ ಹಾಡಿನಲ್ಲಿ ಧರ್ಮಜೀವನದ ತುತ್ತತುದಿಯ ಆದರ್ಶವನ್ನು ಬಹು ಸೊಗಸಾಗಿ ವರ್ಣಿಸಿದ್ದಾರೆ. ಶಾಸ್ತ್ರೀಯ ಸಂಗೀತದ ಆರಂಭದ ಅಭ್ಯಾಸಿಗಳಿಗೆ ಪಿಳ್ಳಾರಿಗೀತೆಗಳನ್ನು ರಚಿಸಿಕೊಟ್ಟಿದ್ದಾರೆ. ಇವರು ನಾರದಾಂಶಸಂಭೂತರೆಂದು ಪ್ರತೀತಿ. ಕರ್ನಾಟಕ ಸಂಗೀತಕ್ಕೆ ಭದ್ರವಾದ ತಳಪಾಯವನ್ನು ಹಾಕಿದವರೇ ಇವರು. ಶಾಸ್ತ್ರೀಯ ಸಂಗೀತಕ್ಕೆ ಹೊಂದುವ ಕನ್ನಡ ಹಾಡುಗಳನ್ನು ರಚಿಸಿರುವುದು ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ. ದಾಸರೆಂದರೆ ಪುರಂದರದಾಸರಯ್ಯ ಎಂದು ಗುರು ವ್ಯಾಸರಾಯರೇ ಇವರನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ.

ಪುರಂದರದಾಸರ ಸಮಕಾಲೀನರೂ ವ್ಯಾಸರಾಯರ ಶಿಷ್ಯರೂ ಆದ ಮತ್ತೊಬ್ಬ ದಾಸಶ್ರೇಷ್ಠರು ಕನಕದಾಸರು. ಇಂದಿನ ಹಾವೇರಿ ಜಿಲ್ಲೆಯ ಬಂಕಾಪುರದ ಬಳಿ ಇರುವ ಬಾಡ ಎಂಬಲ್ಲಿ ಜನಿಸಿದರು (ಸು.1500) ಜಾತಿಯಲ್ಲಿ ಕುರುಬರು. ಹೆಸರು ತಿಮ್ಮ, ಚಿಕ್ಕಂದಿನಲ್ಲೇ ತಂದೆ–ತಾಯಿಗಳು ತೀರಿಕೊಂಡರು. ಬಾಲಕ ತಿಮ್ಮನಿಗೆ ಬೇಟೆ, ಕತ್ತಿವರಸೆ, ಕಾಳಗಗಳಲ್ಲಿ ವಿಶೇಷ ಆಸಕ್ತಿ ಮೂಡಿತು. ಅನೇಕ ಗ್ರಾಮಗಳ ಢಣಾಯಕನಾದ. ನಿಧಿಯೊಂದು ಸಿಕ್ಕಿದ್ದರಿಂದ ಕನಕನಾಯಕನೆಂದು ಪ್ರಸಿದ್ಧನಾದ. ಪುರಂದರರಂತೆ ವೈರಾಗ್ಯದ ಕಡೆ ತಿರುಗಿ ವ್ಯಾಸರಾಯರ ಗುರುತ್ವದಲ್ಲಿ, ಆದಿಕೇಶವ ಎಂಬ ಅಂಕಿತದಲ್ಲಿ ಕೃತಿರಚನೆ ಮಾಡಿ ಕನಕದಾಸರಾದರು. ಇವರದು ಶ್ರೀವೈಷ್ಣವ ಸಂಪ್ರದಾಯವೋ ಮಾಧ್ವ ಸಂಪ್ರದಾಯವೋ ಎಂಬ ಬಗ್ಗೆ ಏಕಾಭಿಪ್ರಾಯವಿಲ್ಲ. ಇವರ ಕಾವ್ಯಗಳಲ್ಲೊಂದಾದ ಮೋಹನ ತರಂಗಿಣಿಯಿಂದ ಇವರು ಶ್ರೀವೈಷ್ಣವಸಂಪ್ರದಾಯಸ್ಥರೆನ್ನಲು ಅವಕಾಶವಿದೆ. ವ್ಯಾಸರಾಯರ ಶಿಷ್ಯರಾಗಿ ಮಧ್ವಮತ ತತ್ತ್ವಗಳನ್ನೂ ಬೋಧಿಸಿದ್ದಾರೆ. ಹರಿ ಹರ ಸಾಮರಸ್ಯದೃಷ್ಟಿ ಮೋಹನ ತರಂಗಿಣಿಯಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಇವರ ಸಾಮರಸ್ಯದೃಷ್ಟಿ ಭಿನ್ನಧರ್ಮದ ನಾಯಕ ನಾಯಿಕೆಯರನ್ನು ವಿವಾಹಬಂಧನದ ಮೂಲಕ ಒಟ್ಟುಗೂಡಿಸುವವರೆಗೂ ಚಾಚಿದೆ. ಇವರ ಕ್ರಾಂತಿಕಾರಕ ಮನೋಭಾವಕ್ಕೆ ಇದೊಂದು ನಿದರ್ಶನ. ಸಮಾಜದ ರೀತಿನೀತಿಗಳನ್ನು ಕಟುವಾಗಿ ಟೀಕಿಸಬಲ್ಲ ಎದೆಗಾರಿಕೆ ಇವರದು. ಡೊಂಕುಬಾಲದ ನಾಯಕರೆ ನೀವೇನೂಟವ ಮಾಡಿದಿರಿ ಎಂಬ ಹಾಡಿನಲ್ಲಿ ಸಾಮಾಜಿಕ ವಿಡಂಬನೆ ಕಾಣುತ್ತದೆ. ಕನಕನ ಕಿಂಡಿಯ ಕಲ್ಪಿತ ಕಥೆ ಮಾರ್ಮಿಕವಾಗಿ ಅಂದಿನ ಸಾಮಾಜಿಕ ನಡೆವಳಿಕೆಯನ್ನೂ ಕನಕದಾಸರ ಭಕ್ತಿಪಾರಮ್ಯವನ್ನೂ ಸೂಚಿಸುತ್ತದೆ. ಲೋಕ ಹೇಗೆ ತಿಳಿಯಲಿ ವ್ಯಾಸರಾಯರು ಕನಕರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು, ಪುರಂದರದಾಸರು ಸ್ನೇಹಿತರಾಗಿ ಕಂಡರು. ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯಚರಿತ್ರೆ, ಹರಿಭಕ್ತಿ ಸಾರ –ಈ ಕಾವ್ಯಗಳನ್ನು ರಚಿಸಿ, ಹರಿದಾಸ ಪಂಥದಲ್ಲಿ ಕವಿಯೆನಿಸಿಕೊಂಡಿದ್ದಾರೆ. ಪದ, ಸುಳಾದಿ, ಉಗಾಭೋಗಗಳೊಂದಿಗೆ ಮುಂಡಿಗೆಗಳನ್ನೂ ರಚಿಸಿದ ವೈಶಿಷ್ಟ್ಯ ಇವರದು.

ಕನಕದಾಸರ ಬಳಿಕ ವ್ಯಾಸರಾಯರ ಪ್ರಮುಖ ಶಿಷ್ಯರಲ್ಲೊಬ್ಬರಾದ ವಾದಿರಾಜರು. ಸೋದೆಮಠದ ಅಧಿಪತಿಯಾಗಿದ್ದ (1480–1600) ಇವರ ಹುಟ್ಟು ಹೆಸರು ವರಾಹ. ವಾದದಲ್ಲಿ ಇವರು ನಿಸ್ಸೀಮರು. ಸಂಸ್ಕೃತ, ಕನ್ನಡಗಳಲ್ಲಿ ಪಾಂಡಿತ್ಯ ಪಡೆದಿದ್ದ ಸವ್ಯಸಾಚಿ, ಉಡುಪಿಯ ಅಷ್ಟಮಠಗಳನ್ನು ಒಂದು ವ್ಯವಸ್ಥೆಗೆ ತಂದು, ಪರ್ಯಾಯದ ಏರ್ಪಾಡು ಮಾಡಿದವರು. ಇಷ್ಟದೈವ ಇವರಿಗೆ ಕುದುರೆಯ ರೂಪದಲ್ಲಿ ದರ್ಶನಕೊಟ್ಟಿತಂತೆ. ಹಯವದನ ಎಂಬ ಅಂಕಿತದಿಂದ ಕೃತಿರಚನೆ ಮಾಡಿದ್ದಾರೆ. ಶಾಸ್ತ್ರೀಯ ವಿಚಾರಗಳತ್ತ ಇವರಿಗೆ ಗಮನ ಹೆಚ್ಚು. ಸಂಭಾಷಣಾರೂಪದಲ್ಲಿ ಕೃತಿರಚನೆ ಮಾಡಿರುವುದು ಇವರ ವೈಶಿಷ್ಟ್ಯ. ಮಹಾಭಾರತದ ಕೀಚಕವಧೆಯ ಪ್ರಸಂಗವನ್ನು ಮನೋಹರವಾಗಿ ಚಿತ್ರಿಸಿದ್ದಾರೆ. ಕೀರ್ತನೆಯನ್ನು ಕಟ್ಟುತ್ತಿದ್ದ ದಾಸರದೃಷ್ಟಿ ಇಲ್ಲಿ ಕಥನಕವನದ ಘಟ್ಟವನ್ನು ಮುಟ್ಟಿದೆ. ಸ್ವಪ್ನಪದ, ಲಕ್ಷ್ಮೀಶೋಭಾನೆ, ವೈಕುಂಠ ವರ್ಣನೆಗಳಂಥ ಖಂಡಕಾವ್ಯಗಳೆನ್ನಬಹುದಾದ ಕೃತಿಗಳನ್ನೂ ರಚಿಸಿದ್ದಾರೆ. ವೈಕುಂಠವರ್ಣನೆ ನಾಲ್ಕು ಸಂಧಿಗಳಲ್ಲಿ ಅಡಕವಾಗಿರುವ ಸಾಂಗತ್ಯ ಕೃತಿ. ಕನ್ನಡಿಯಂತಿರುವ ಪೂರ್ಣಪ್ರಜ್ಞರ ಮತದ ಸಾರವನ್ನು ಕನ್ನಡಿಸುವುದೇ ತನ್ನ ಕರ್ತವ್ಯವೆಂದು ಒಂದು ಕಡೆ ಹೇಳಿಕೊಂಡಿದ್ದಾರೆ. ಉಭಯ ಭಾಷಾವಿಶಾರದರಾದ ಇವರ ಈ ಸಂಕಲ್ಪ ಕನ್ನಡಿಗರಿಗೆ ನಿಜಕ್ಕೂ ಒಂದು ವರವಾಗಿ ಪರಿಣಮಿಸಿದೆ. ತತ್ತ್ವಪ್ರಕಾಶಿಕಾ, ಭಗವದ್ಗೀತಾಟಿಪ್ಪಣಿ, ಮಹಾಭಾರತಟೀಕಾ ಮೊದಲಾದ ಸಂಸ್ಕೃತಗ್ರಂಥಗಳನ್ನು ರಚಿಸಿದ್ದಾರೆ. ನೂರಿಪ್ಪತ್ತು ವರ್ಷಗಳ ತುಂಬುಬಾಳನ್ನು ಬಾಳಿದ ಇವರು ಅನೇಕ ಕೀರ್ತನೆಗಳು, ಉಗಾಭೋಗಗಳು, ಸುಳಾದಿಗಳನ್ನು ರಚಿಸಿದ್ದಾರೆ. ‘ತಾಳುವಿಕೆಗಿಂತ ತಪವು ಇಲ್ಲ’ ಎಂಬುದು ಇವರು ನೀಡಿದ ಸಂದೇಶ.

ವಿಜಯದಾಸರು, ಗೋಪಾಲದಾಸರು ಮತ್ತು ಜಗನ್ನಾಥದಾಸರು ದಾಸಸಾಹಿತ್ಯ ಪರಂಪರೆಯನ್ನು ಮುಂದುವರಿಸಿದವರು. ಕಾವ್ಯಮಯವಾದ ದೃಷ್ಟಿಕೋನದಿಂದ ಶಾಸ್ತ್ರಭೂಯಿಷ್ಠವಾಗಿ ಪರಿಣಮಿಸಿದ ಹರಿದಾಸ ಸಾಹಿತ್ಯದ ಒಂದು ತಿರುವನ್ನು ವಿಜಯದಾಸರ ಕೃತಿಗಳಲ್ಲಿ ಗುರುತಿಸಬಹುದು. 18ನೆಯ ಶತಮಾನದಲ್ಲಿ ಚೀಕಲಪರಿವೆ

ಎಂಬಲ್ಲಿ ಇವರು ಜನಿಸಿದರು. ಸ್ವಪ್ನದಲ್ಲಿ ಪುರಂದರದಾಸರ ಅನುಗ್ರಹವಾಯಿತು. ವಿಜಯವಿಠಲ ಎಂಬ ಅಂಕಿತ ದೊರೆಯಿತು. ಇವರು ಕೀರ್ತನೆಗಳಲ್ಲಿ ತಮ್ಮ ಪರೋಕ್ಷ ಗುರುವನ್ನು ನಾನಾವಿಧವಾಗಿ ಸ್ತುತಿಸಿದ್ದಾರೆ. ಇವರಲ್ಲಿ ಭಾವ ವೈವಿಧ್ಯ, ಲಾಲಿತ್ಯ, ಕಡಿಮೆ, ತತ್ತ್ವಗಳ ನಿರೂಪಣೆಗೆ ಅನುಗುಣವಾಗಿ ಸುಳಾದಿಯಂಥ ಬಿಗುಬಂಧ ರೂಪುಗೊಂಡಿದೆ. ಗಹನತತ್ತ್ವಗಳನ್ನು ಸರಳವಾಗಿ ನಿರೂಪಿಸಿರುವ ಕೌಶಲ ಮೆಚ್ಚುವಂಥದು. ಹರಿ ಸರ್ವೋತ್ತಮತ್ವ, ಬಿಂಬರೂಪಿ ಪರಮಾತ್ಮನನ್ನು ಒಲಿಸಿಕೊಳ್ಳುವ ಬಗೆ, ಜ್ಞಾನ – ಭಕ್ತಿ – ವೈರಾಗ್ಯಗಳ ಸಂಪಾದನೆ, ಪ್ರಾಣದೇವರಸ್ತುತಿ, ಮಾನವ ಜನ್ಮದಲ್ಲಿ ಕರ್ಮದ ಪಾತ್ರ ಇತ್ಯಾದಿ ಅನೇಕ ಗಹನ ತತ್ತ್ವಗಳನ್ನು ತೆಗೆದುಕೊಂಡು ಅವನ್ನು ವಿವರಿಸಲೆತ್ನಿಸಿದ್ದಾರೆ. ಇವರ ಶಿಷ್ಯ ಗೋಪಾಲದಾಸರು, ಇವರ ಪೂರ್ವಾಶ್ರಮದ ಹೆಸರು ಭಾಗಣ್ಣ, ಭಕ್ತಿಯಲ್ಲಿ ಭಾಗಣ್ಣ ಎಂಬ ಜನಪ್ರಿಯೋಕ್ತಿಯೊಂದಿದೆ. ದಾಸಚತುಷ್ಟಯ ಎಂದು ಪ್ರಸಿದ್ಧರಾಗಿರುವವರಲ್ಲಿ ಪುರಂದರ, ವಿಜಯ ಹಾಗೂ ಜಗನ್ನಾಥದಾಸರೊಂದಿಗೆ ಇವರೂ ಒಬ್ಬರು. ವಿಜಯದಾಸರಿಂದ ದೀಕ್ಷೆಪಡೆದು 'ಗೋಪಾಲವಿಠಲ' ಎಂಬ ಅಂಕಿತದಲ್ಲಿ ಕೃತಿರಚನೆ ಮಾಡಿದ್ದಾರೆ.

ಅನಂತರದ ಹರಿದಾಸ ಪೀಳಿಗೆಯಲ್ಲಿ ಜಗನ್ನಾಥದಾಸರು ಮುಖ್ಯರು. ವಿಜಯದಾಸರಲ್ಲಿ ಕಾಣುವ ಶಾಸ್ತ್ರಪ್ರಾವೀಣ್ಯ ಇವರಲ್ಲಿ ಇನ್ನೂ ಹೆಚ್ಚಿನ ಪಕ್ವತೆ ಪಡೆದಿದೆ. ಸು.1727ರಲ್ಲಿ ಮಾನ್ವಿ ತಾಲ್ಲೂಕಿನ ಬ್ಯಾಗವಟ್ಟದಲ್ಲಿ ಜನಿಸಿದರು. ಮೊದಲ ಹೆಸರು ಶ್ರೀನಿವಾಸ. ಅಂಕಿತ ಜಗನ್ನಾಥವಿಠಲ. ಹರಿಕಥಾಮೃತಾಸಾರ ಇವರ ತಾತ್ತ್ವಿಕ ಉದ್ಗ್ರಂಥ. ಇದರಲ್ಲಿ ಶುಷ್ಕವೈದಿಕ ತತ್ತ್ವಬೋಧನೆ ಮಾತ್ರವಿರದೆ ಸರಳವಾಗಿ, ಅರ್ಥವಾಗುವಂತಿರುವುದು ಇದರ ವೈಶಿಷ್ಟ್ಯ. ಈ ಕೃತಿಯಲ್ಲಿ 32 ಸಂಧಿಗಳಿವೆ. ಭಾಮಿನೀಷಟ್ಪದಿಯಲ್ಲಿ ರಚಿತವಾಗಿರುವ ಶುದ್ಧಕಾವ್ಯವಿದಲ್ಲ ಎಂದು ಕವಿಯೇ ಹೇಳಿಬಿಟ್ಟಿದ್ದಾರೆ. ಶಾಸ್ತ್ರದಲ್ಲಿ ಅಭಿರುಚಿ, ಧರ್ಮದಲ್ಲಿ ಶ್ರದ್ಧೆ, ಪರಮಾತ್ಮನಲ್ಲಿ ಪ್ರೀತಿಯಿರುವ ಎಲ್ಲರಿಗೂ ಈ ಗ್ರಂಥ ಒಂದು ಸವಿಯುಣಿಸಾಗ ಬಲ್ಲುದು. ಇದರೊಂದಿಗೆ ಅನೇಕ ಕೀರ್ತನೆಗಳನ್ನೂ ಸುಳಾದಿಗಳನ್ನೂ ಇವರು ರಚಿಸಿದ್ದಾರೆ. ಸುವ್ವಾಲಿಗಳ ರಚನೆ ಇವರ ಮತ್ತೊಂದು ವೈಶಿಷ್ಟ್ಯ.

ವಾತ್ಸಲ್ಯ ಭಾವದ ಪ್ರತಿಪಾದನೆಯ ದೃಷ್ಟಿಯಿಂದ ಜಗನ್ನಾಥದಾಸರ ಸಮಕಾಲೀನರಾದ ಪ್ರಸನ್ನ ವೆಂಕಟದಾಸರನ್ನು ಗಮನಿಸಬೇಕಾಗುತ್ತದೆ. ವಾತ್ಸಲ್ಯ ಭಾವದ ಪ್ರತಿಪಾದನೆ ಎಲ್ಲ ದಾಸರಲ್ಲೂ ಸಾಮಾನ್ಯವಾಗಿ ಕಂಡುಬಂದರೂ ಇವರಲ್ಲಿ ವಿಶೇಷವಾಗಿದೆ. ಕೃಷ್ಣಾದಿಗಳ ಬಾಲಭಾಷೆಯನ್ನು ಬಳಸಿ ಕೊಂಡಿರುವುದು ಇವರ ವೈಶಿಷ್ಟ್ಯ. ಹೀಗೆ ಹರಿದಾಸ ಪರಂಪರೆಯನ್ನು ಗಮನಿಸಿದರೆ ಪ್ರಾಣೇಶವಿಠಲರು (ಸು.1736–1822), ಗುರುಶ್ರೀಶವಿಠಲರು (ಸು.1740–1840), ಶ್ರೀದವಿಠಲರು (ಸು.1800), ಹರಪನಹಳ್ಳಿ ಭೀಮವ್ವ (ಸು.1823–1903), ಗುರುಜಗನ್ನಾಥವಿಠಲರು (ಸು.1841–1930) ಮೊದಲಾದ ಸುಮಾರು 350 ಮಂದಿ ದಾಸರು ಆಗಿಹೋಗಿದ್ದಾರೆ.

ಹರಿದಾಸ ಸಾಹಿತ್ಯವನ್ನು ಒಟ್ಟಾಗಿ ಪರಿಶೀಲಿಸಿದಾಗ ಕೆಲವು ವಿಶಿಷ್ಟ ಗುಣಗಳನ್ನು ಗುರುತಿಸಬಹುದು. ಮಧ್ವಾಚಾರ್ಯರ ಹನುಮ, ಭೀಮ, ಮಧ್ವ – ಈ ಅವತಾರತ್ರಯದಲ್ಲಿ ಹರಿದಾಸರೆಲ್ಲರಿಗೂ ನಂಬಿಕೆಯಿದೆ. ಹರಿಯ ದಶಾವತಾರಗಳನ್ನೊಪ್ಪಿಕೊಂಡ ವಿಷ್ಣುಪಂಥೀಯರಿವರು. ಹನುಮನಿಗೆ ಗುರುಪದವಿಯನ್ನು ಕೊಟ್ಟಿರುವ ದ್ವೈತಿಗಳು. ಈ ಹಿನ್ನೆಲೆಯಲ್ಲಿ, ವಿಷ್ಣುಭಕ್ತಿಯ ಆಗರಗಳಾದ ರಾಮಾಯಣ, ಮಹಾಭಾರತ, ಭಾಗವತಗಳನ್ನು ತಮ್ಮ ತತ್ತ್ವಪ್ರತಿಪಾದನೆಗಳಲ್ಲಿ ಧಾರಾಳವಾಗಿ ಇವರು ಬಳಸಿಕೊಂಡಿದ್ದಾರೆ. ಹನುಮನ ಸ್ವಾಮಿಭಕ್ತಿದ್ಯೋತಕವಾಗಿರುವ ರಾಮಾಯಣ, ಭೀಮನ ಪರಾಕ್ರಮದ ಪ್ರತೀಕವಾಗಿರುವ ಮಹಾಭಾರತ, ವಿಷ್ಣುವಿನ ಲೀಲಾಕಥನವೇ ಆದ ಭಾಗವತ – ಇವು ಅನುಸರಣೀಯವಾದುದರಲ್ಲಿ ಆಶ್ಚರ್ಯವಿಲ್ಲ. ತಮ್ಮ ನಂಬಿಕೆಗಳನ್ನು ಧ್ರುವ, ಅಜಾಮಿಳ, ಪ್ರಹ್ಲಾದ, ಗಜೇಂದ್ರ, ಬಲಿ, ಅಂಬರೀಷ ಮೊದಲಾದವರ ಉದಾಹರಣೆಗಳ ಮೂಲಕ ನಮಗೆ ಮತ್ತೆ ಮತ್ತೆ ದಾಸರು ಸ್ಪಷ್ಟಪಡಿಸುತ್ತಾರೆ. ಅಂತೆಯೇ ಪೂತನಿ, ಕಂಸ, ಶಕಟಾಸುರ, ಕಾಳಿಂಗನೇ ಮೊದಲಾದ ದುಷ್ಟರ ನಿಗ್ರಹ ದಾಸರಿಗೆ ಮಾದರಿಯಾಗಿದೆ. ಭಾಗವತದ ದಶಮಸ್ಕಂದವನ್ನಂತೂ ದಾಸರ ಪದಗಳಿಂದಲೇ ಪುನಾರಚಿಸಬಹುದು. ಪ್ರತಿಯೊಬ್ಬ ದಾಸರೂ ಗುರುಮುಖೇನ ಅಂಕಿತವನ್ನು ಪಡೆದಿರುವುದು ಸ್ಪಷ್ಟವಿದೆ.

ಸಾಮಾನ್ಯ ಜನರ ಉದ್ಧಾರಕ್ಕೆ ಕಂಕಣಬದ್ಧರಾಗಿ ನಿಂತಂಥ ಹರಿದಾಸರು ಆ ಜನರ ಪ್ರತಿನಿತ್ಯದ ಜೀವನದ ಕಡೆಗೂ ತಮ್ಮ ದೃಷ್ಟಿಯನ್ನು ಹರಿಸಿರುವುದು ಸ್ತುತ್ಯರ್ಹ. ಲೌಕಿಕ ಘಟನೆಗಳನ್ನು ಬಣ್ಣಿಸಿ ಅದಕ್ಕೆ ಒಂದು ಪಾರಮಾರ್ಥಿಕ ಅರ್ಥವನ್ನಳವಡಿಸಿರುವುದು ಹರಿದಾಸರ ವೈಶಿಷ್ಟ್ಯಗಳಲ್ಲೊಂದು. ಜೀವನದಲ್ಲಿ ಅಂಟಿಯೂ ಅಂಟದಂತೆ ಬಾಳಬೇಕೆಂಬುದೇ ಹರಿದಾಸರ ಉಪದೇಶದ ಸಾರ. ಮಾನವಧರ್ಮವನ್ನು ಕಟ್ಟುವ ಪ್ರಯತ್ನ ಅವರದು. ಸಮಾಜದಲ್ಲಿದ್ದ ಸಣ್ಣತನ, ಮತ್ಸರ, ಮೋಹ, ಭ್ರಮೆ, ಅಂಧಶ್ರದ್ಧೆ, ಕುರುಡುನಿಷ್ಠೆ– ಇತ್ಯಾದಿ ರೋಗಾಣುಗಳನ್ನೆಲ್ಲ ತಮ್ಮ ಸಾಹಿತ್ಯವೆಂಬ ಸಿದ್ಧೌಷಧದಿಂದ ನಾಶಪಡಿಸಲೆತ್ನಿಸಿದರು. ತಮ್ಮದು ನ್ಯಾಯಮಾರ್ಗವೆಂಬ ಪ್ರಜ್ಞೆಯನ್ನು ಎಲ್ಲಿಯೂ ಅವರು ಮರೆತಂತಿಲ್ಲ. ಆ ಧೈರ್ಯದಿಂದಲೇ ಅವರು ಭಗವಂತನೊಡನೆ ವಾದ ಮಾಡಲು ಶಕ್ತರಾದುದು. ಪರಮಾತ್ಮನ ಸ್ವರೂಪ, ಗುಣಾದಿ ವಿಷಯಗಳಿಗೆ ಬಂದಾಗಲಂತೂ ಅವರ ಸರಳ ಸುಂದರ ನಿರೂಪಣೆಗಳು ಅಚ್ಚರಿಯನ್ನುಂಟುಮಾಡುತ್ತವೆ. ವೇದೋಪನಿಷತ್ತುಗಳ ಸಾರವನ್ನೇ ಕನ್ನಡಕ್ಕವರು ಭಟ್ಟಿಯಿಳಿಸಿಕೊಟ್ಟಿದ್ದಾರೆ.

ಇಡೀ ಭಾರತದಲ್ಲೇ ಧರ್ಮಜಾಗೃತಿಯ ಕಾಲವಾಗಿದ್ದ ಆ ಪರ್ವಕಾಲದಲ್ಲಿ, ಕರ್ನಾಟಕದಲ್ಲಿ ಧರ್ಮ ಹಾಗೂ ವಿಷ್ಣುಭಕ್ತಿಗಳನ್ನು ಪುನರುಜ್ಜೀವನಗೊಳಿಸಿದ ಕೀರ್ತಿ ಹರಿದಾಸರದು. ತಮ್ಮ ನಾದಮಯ ಪದಸೃಷ್ಟಿಯನ್ನು ತಂಬೂರಿಯ ಶ್ರುತಿಯೊಂದಿಗೆ ಮೇಳವಿಸಿ, ಕಾಲಿಗೆ ಗೆಜ್ಜೆಕಟ್ಟಿಕೊಂಡು ನರ್ತಿಸುತ್ತ ಹಾಡಿ, ಮನೆ ಮನೆಗೂ ಸಂಗೀತ, ಸಾಹಿತ್ಯ, ನೃತ್ಯಗಳ ರಸಾನುಭವವನ್ನು ಮುಟ್ಟಿಸಿದರು.

ದಾಸಸಾಹಿತ್ಯದಲ್ಲಿ ನಿರೂಪಣಾ ಮಾಧ್ಯಮಗಳು ವೈವಿಧ್ಯ ಪೂರ್ಣವಾಗಿವೆ. ಕೀರ್ತನೆ, ಉಗಾಭೋಗ, ಸುಳಾದಿ, ದಂಡಕ, ಸುವ್ವಾಲಿ, ವೃತ್ತನಾಮ ಮೊದಲಾದ ಪ್ರಕಾರಗಳಲ್ಲಿ ಅವು ಹೊರಹೊಮ್ಮಿವೆ. ಕೆಲವು ಉದಾಹರಣೆಗಳನ್ನು ಈ ಮುಂದೆ ಕೊಟ್ಟಿದೆ.

ಕೀರ್ತನೆ:

ಈಸಬೇಕು ಇದ್ದು ಜಯಿಸಬೇಕು
ಹೇಸಿಕೆ ಸಂಸಾರದಲ್ಲಿ । ಆಸೆ ಲೇಶ ಇಡದ್ಹಾಂಗೆ
ತಾಮರಸಜಲದಂತೆ । ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮ ಎನುತ ಪಾಡಿ । ಕಾಮಿತ ಕಯ್ಗೊಂಬರೆಲ್ಲ
ಗೇರುಹಣ್ಣಿನಲ್ಲಿ ಬೀಜ । ಸೇರಿದಂತೆ ಸಂಸಾರದಿ
ಮೀರಿಯಾಸೆ ಮಾಡದಲೆ । ಧೀರ ಕೃಷ್ಣನ ಭಕುತರೆಲ್ಲ

ಮಾಂಸದಾಸೆಗೆ ಮತ್ಸ್ಯಸಿಲುಕಿ । ಹಿಂಸೆ ಪಟ್ಟಪರಿಯಂತೆ
ಮೋಸ ಹೋಗದ್ಹಾಂಗೆ । ಜಗದೀಶ ಪುರಂದರ ವಿಠಲನ ನೆನೆದು

ಉಗಾಭೋಗ:

ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ತಂದೆ ಎನಗುಂಟು ನಿನಗಿಲ್ಲ

ನೀನೆ ಪರದೇಶಿ ನಾನೆ ಸ್ವದೇಶಿ
ನಿನ್ನರಸಿ ಲಕುಮಿ ಎನ್ನ ತಾಯಿ
ನಿನ್ನ ತಾಯ ತೋರೋ ಶ್ರೀ ಪುರಂದರವಿಠಲ

ಸುಳಾದಿ:

ಒಡೆಯ ಹಾವಿಗೆ ಮೆಟ್ಟೆ ಹಾವಿಗೆಯವ ನಾನು
ಒಡೆಯ ಮೆಲ್ಲಡಿಯಿಡಲು ಕಟ್ಟಿಗೆಯವ ನಾನು
ಕಡೆಯ ತಾಂಬೂಲವನುಗುಳುವ ವೇಳ್ಯಗಳಲ್ಲಿ ಕಾಳಾಂಚಿಯವ ನಾನು

ಒಡೆಯನೊಡ್ಡೋಲಗದಲ್ಲಿ ಚಿತ್ತೈಸಿರೆ
ಛತ್ರ ಚಾಮರ ಕನ್ನಡಿ ಪಿಡಿವವ ನಾನೊಡೆಯಗೆ
ಒಡೆಯ ಪುರಂದರವಿಠಲರಾಯನ ಉಗುರು ಬಿದ್ದಲ್ಲಿ
ಯೆನ್ನ ಶಿರವ ಕೊಡುವೆ ನಾನೊಡೆಯಗೆ
ಮಠ್ಯತಾಳ
ಹರಿಯನೋಲೈಸುವೆಂಬಣ್ಣಗಳಿರ ಕೇಳಿರೊ
ಶರಧಿಯ ಕಟ್ಟಿಟ್ಟು ಕುಲಂಕೆಯ ಮುಟ್ಟಿ
ಕುರಾವಣಾದಿಗಳ ಕೂಡೆ ಇರಿದಾಡುತಿರಬೇಕು
ಪುರಂದರ ವಿಠಲನೋಲಗದೊಳೀಗ ಘನಾ

ಅಟ್ಟತಾಳ
ಚಂದ್ರಮ ನೀನಿನ್ನು ನಿಂದಿರೆ ತೆರವಿಲ್ಲ
ಸೂರೆಯಗೈಯಿನ್ನು ತಿರುಗದಲೆ ಹೊತ್ತು
ಇಂದ್ರಾದಿಗಳಿಗೆಲ್ಲ ಹರಿಹರಿ ನಿಂದು ತಲೆ
ಯನು ತುರಿಸಲು ಹೊತ್ತಿಲ್ಲ

ಬೊಮ್ಮಾದಿಗಳಿಗೂ ಒಮ್ಮೆಯೂ ತೆರಪಿಲ್ಲ
ಈ ದೇವರೆಲ್ಲರೊಳೊಬ್ಬನೆ ಮೆಟ್ಟಿ
ಆಡುವ ನಮ್ಮ ಪುರಂದರವಿಠಲ ಕಟ್ಟಾಳು ಕಾಣಿರೊ

ಆದಿತಾಳ
ಧರೆಯಂಜುತಲಿದೆ ಗಿರಿಗಳಂಜುತಲಿವೆ
ಮರಬಳ್ಳಿಗಳಂಜಿ ಫಲವನೀವುತಲಿವೆ
ಸರಿತು ಸಮುದ್ರಗಳಂಜಿ ಬೆಚ್ಚುತಲಿವೆ
ಪುರಂದರವಿಠಲ ನೀನೆಂಥ ಅರಸೂ

ಜತೆ
ನಾ ಘನ ನೀ ಘನ ತಾ ಘನಯೆನಬೇಡಾ।
ಪುರಂದರವಿಠಲನೊಬ್ಬನೆ ಘನ

ಸಂಖ್ಯಾಬಾಹುಳ್ಯದಿಂದ ನೋಡುವುದಾದರೆ ಪದ ಅಥವಾ ಕೀರ್ತನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕುತ್ತವೆ. ಅನಂತರ ಸುಳಾದಿಗಳು, ಬಳಿಕ ಉಗಾಭೋಗಗಳು, ದಂಡಕ, ವೃತ್ತನಾಮ, ಸುವ್ವಾಲಿಗಳು ಅಲ್ಲಲ್ಲಿ ಕಾಣಸಿಗುತ್ತವೆ.

ಹರಿದಾಸಸಾಹಿತ್ಯವನ್ನು ಸಂಗ್ರಹಿಸಿ, ಪರಿಷ್ಕರಿಸಿ ಪ್ರಕಟಿಸುವ ಕಾರ್ಯ ಹಲವಾರು ವ್ಯಕ್ತಿ, ಸಂಸ್ಥೆ ಮತ್ತು ಸರ್ಕಾರದಿಂದ ಕರ್ನಾಟಕದಲ್ಲಿ ನಿರಂತರವಾಗಿ ನಡೆದಿದೆ. ವ್ಯಕ್ತಿ ಹಂತದಲ್ಲಿ ಸುಬೋಧ ರಾಮರಾಯರು, ಗೋರಬಾಳ ಹನುಮಂತರಾವ್, ಪಾವಂಜೆ ಗುರುರಾಯರನ್ನು ಹೆಸರಿಸಬಹುದು. ಅಂತೆಯೇ ಕನಕದಾಸರ ನಾಲ್ಕನೆಯ ಶತಮಾನೋತ್ಸವ ಸಮಿತಿಯವರು ಕನಕದಾಸರ ಕೃತಿಗಳನ್ನೂ ಅಖಿಲ ಕರ್ನಾಟಕ ಪುರಂದರದಾಸರ 400ನೆಯ ವರ್ಷದ ಉತ್ಸವಮಂಡಳದವರು (ಧಾರವಾಡ) ಪುರಂದರದಾಸರ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹರಿದಾಸಸಾಹಿತ್ಯ ವಿಭಾಗ 'ಹರಿದಾಸಸಾಹಿತ್ಯ ಮಾಲೆ'ಯಾಗಿ ದಾಸಸಾಹಿತ್ಯದ ಸಂಪಾದನ ಕಾರ್ಯವನ್ನು ಕೈಗೊಂಡು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಪ್ರಕಟಿಸುವ ಕಾರ್ಯ ಮಾಡಿದೆ. ಇದುವರೆಗೆ ಈ ಮಾಲೆಯಲ್ಲಿ ಅನೇಕ ಕೃತಿಗಳು ಪಂಡಿತ ಹಾಗೂ ಜನಪ್ರಿಯ ಆವೃತ್ತಿಗಳಲ್ಲಿ ಪ್ರಕಟವಾಗಿವೆ. ದಾಸ ಸಾಹಿತ್ಯ ಪ್ರಕಟಣ ಯೋಜನೆಯನ್ನು ಇತ್ತೀಚೆಗೆ ಕರ್ನಾಟಕ ಸರ್ಕಾರ ಸಮಗ್ರ ದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಯ ಕಾರ್ಯವಾಗಿ ಕೈಗೆತ್ತಿಕೊಂಡು ಐವತ್ತು ಸಂಪುಟಗಳಲ್ಲಿ ಹೊರತಂದಿದೆ.

ಕನ್ನಡದಲ್ಲಿ ದಾಸಸಾಹಿತ್ಯ ಕುರಿತ ಸಂಶೋಧನೆ ಸಾಕಷ್ಟು ನಡೆದಿದ್ದು ಅನೇಕ ಕೃತಿಗಳು ಹೊರಬಂದಿವೆ. ಪ್ರಸನ್ನ ವೆಂಕಟಾದಾಸರು ಮತ್ತು ಅವರ ಕೃತಿಗಳು (ಎ.ಟಿ.ಪಾಟೀಲ), ಕರ್ನಾಟಕದ ಹರಿದಾಸರು (ಎಚ್.ಕೆ.ವೇದವ್ಯಾಸಾಚಾರ್ಯ), ಜಗನ್ನಾಥದಾಸರು (ಕೆ.ಎಂ.ಕೃಷ್ಣರಾವ್), ಪ್ರಸಾದಯೋಗ (ವಿ.ಎ.ದಿವಾಣಜಿ), ಶ್ರೀವಿಜಯದಾಸರು ಜೀವನ ಮತ್ತು ಕೃತಿಗಳ ಸಮೀಕ್ಷೆ (ಕೆ.ಗೋಕುಲನಾಥ್), ಹರಿದಾಸರ ಭಕ್ತಿ ಸ್ವರೂಪ (ಟಿ.ಎನ್.ನಾಗರತ್ನ), ಶ್ರೀವಾದಿರಾಜರ ಕನ್ನಡ ಕೃತಿಗಳು (ಎಚ್.ಜಿ. ಲೋಕೂರ), ಪುರಂದರದಾಸರ ಮತ್ತು ಅನ್ನಮಾಚಾರ್ಯರ ಕೀರ್ತನೆಗಳ ಸಾಂಸ್ಕೃತಿಕ ಅಧ್ಯಯನ (ಅಕ್ಕಮಹಾದೇವಿ), ಬಸವೇಶ್ವರ ಮತ್ತು ಪುರಂದರದಾಸ (ಬಸವರಾಜ ಸಬರದ), ಹರಿದಾಸ ಅಂದೋಲನ – ಒಂದು ಅಧ್ಯಯನ (ಎನ್.ಕೆ.ರಾಮಶೇಷನ್), ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು– ಒಂದು ಅಧ್ಯಯನ (ಆರ್.ಸುನಂದಮ್ಮ), ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯ (ಅನಂತ ಪದ್ಮನಾಭರಾವ್) – ಇವು ದಾಸಸಾಹಿತ್ಯ ಕ್ಷೇತ್ರದಲ್ಲಿ ಡಾಕ್ಟೊರೇಟ್ ಪಡೆದಿರುವ ಮಹಾಪ್ರಬಂಧಗಳು.

ಆರ್.ಎಸ್.ಪಂಚಮುಖಿಯವರ ಕರ್ನಾಟಕದ ಹರಿದಾಸ ಸಾಹಿತ್ಯ, ಬೇಲೂರು ಕೇಶವದಾಸರ ಕರ್ನಾಟಕ ಭಕ್ತವಿಜಯ, ಆರ್.ಆರ್.ದಿವಾಕರರ ಹರಿಭಕ್ತಿಸುಧೆ, ಜಿ.ವರದರಾಜರಾಯರ ಹರಿದಾಸ ಹೃದಯ ಇವು ದಾಸಸಾಹಿತ್ಯವನ್ನು ಕುರಿತ ಕೆಲವು ಮೌಲಿಕ ಕೃತಿಗಳು. ಈ ಶತಮಾನದಲ್ಲೂ ದಾಸಪರಂಪರೆಯನ್ನುಳಿಸಿಕೊಂಡು ಕೃತಿರಚನೆಯಲ್ಲಿ ತೊಡಗಿರುವವರಲ್ಲಿ ಚಿತ್ರದುರ್ಗದ ರಾಮಚಂದ್ರರಾವ್ (ತಂದೆ ವೆಂಕಟೇಶ ವಿಠಲ), ಮೈಸೂರಿನ ಎಂ.ಆರ್.ಗೋವಿಂದರಾವ್ (ಗುರುಗೋವಿಂದ ವಿಠಲ) ಮತ್ತು ಜೀಮೂಬಾಯಿ (ಕಮಲನಾಭವಿಠಲ) ಮೊದಲಾದವರನ್ನು ಹೆಸರಿಸಬಹುದು. ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನ ಸಾಹಿತ್ಯ ಐದುನೂರು ವರ್ಷಗಳಲ್ಲಿ ಸಮೃದ್ಧವಾಗಿ ಬೆಳೆದಿದೆ. ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಕೀರ್ತನೆಗಳು ರಚಿತವಾಗಿವೆ. ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ತ್ವಪೂರ್ಣ ಭಾಗವಾದ ದಾಸಸಾಹಿತ್ಯ ವಾಹಿನಿ ಇಂದಿಗೂ ಜೀವಂತವಾಗಿ ಮುಂದುವರಿದಿದೆ. (ಟಿ.ಎನ್.ಎನ್.)

**ಕನ್ನಡದಲ್ಲಿ ನವ್ಯಕಾವ್ಯ :** ನವೋದಯ ಕಾವ್ಯದಂತೆ ನವ್ಯಕಾವ್ಯವೂ ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದಲೇ ಹುಟ್ಟಿಕೊಂಡದ್ದು. ನವ್ಯಕಾವ್ಯ ಇಂಗ್ಲಿಷಿನ ಮಾಡರ್ನ್ ಪೊಯಿಟ್ರಿಗೆ ಸಂವಾದಿಯಾದ ಪದ. ನವೋದಯ ಕಾವ್ಯಕ್ಕೆ ಆಧುನಿಕ ಕಾವ್ಯ ಎಂಬ ಇನ್ನೊಂದು ಹೆಸರೂ ಬಳಕೆಯಲ್ಲಿ ಇದ್ದಿತಾದ್ದರಿಂದ ಇಂಗ್ಲಿಷಿನ ಮಾಡರ್ನ್ ಪೊಯಿಟ್ರಿಯಿಂದ ಪ್ರೇರಣೆಪಡೆದ ಕನ್ನಡ ಕಾವ್ಯವನ್ನು ಆಧುನಿಕ ಕಾವ್ಯ ಎಂದು ಕರೆಯುವಂತಿರಲಿಲ್ಲ. ಆದ್ದರಿಂದ ಅದನ್ನು ಕನ್ನಡದ ಸಂದರ್ಭದಲ್ಲಿ ನವ್ಯಕಾವ್ಯ ಎಂದು ಕರೆಯಬೇಕಾಗಿ ಬಂದಿತೆಂದು ತೋರುತ್ತದೆ. ನವೋದಯ ಕಾವ್ಯಕ್ಕಿಂತ ಭಿನ್ನರೀತಿಯ ಕಾವ್ಯಪ್ರಕಾರವಿದು ಎಂದು ನಿರ್ದೇಶಿಸುವ ಅನುಕೂಲಕ್ಕಾಗಿ ಬಳಸಿದ ಪಾರಿಭಾಷಿಕ ಪದವೆಂದು ಮಾತ್ರ ಇದನ್ನು ತಿಳಿಯಬೇಕಾಗುತ್ತದೆ. ಶ್ರೇಷ್ಠಕಾವ್ಯ ಯಾವ ಕಾಲಕ್ಕೂ ನವ್ಯವಾಗಿಯೆ ಇರುತ್ತದೆ. ಇದು ನವ್ಯ ಎಂದಕೂಡಲೆ ಎಲ್ಲ ರೀತಿಯಿಂದಲೂ ನವ್ಯ–ನ ಭೂತೋ ನ ಭವಿಷ್ಯತಿ ಎಂದು ಅರ್ಥ ಹಚ್ಚಬೇಕಾಗಿಲ್ಲ ಎಂಬ ಗೋಪಾಲಕೃಷ್ಣ ಅಡಿಗರ ಮಾತನ್ನು ಇಲ್ಲಿ ನೆನೆಯಬಹುದು (ಹೊಸ ಕವಿತೆಯನ್ನು ಕುರಿತು, 1953). ನವ್ಯಕಾವ್ಯ ಎಂಬ ಕಾವ್ಯ ಪ್ರಕಾರಕ್ಕೆ ಆ ಹೆಸರನ್ನು ಕೊಟ್ಟವರು ವಿ.ಕೃ. ಗೋಕಾಕರು.

ಕನ್ನಡದ ನವೋದಯ ಕಾವ್ಯ 19ನೆಯ ಶತಮಾನದ ಇಂಗ್ಲೆಂಡಿನ ರೊಮ್ಯಾಂಟಿಕ್ ಕಾವ್ಯ ಸಂಪ್ರದಾಯದಿಂದ ಪ್ರೇರಣೆ ಪಡೆದದ್ದಾಗಿತ್ತು. ನಮ್ಮಲ್ಲಿ 20ನೆಯ ಶತಮಾನದ ಪೂರ್ವಾರ್ಧದಲ್ಲಿ ಅದರ ಪ್ರಭಾವ ಗಾಢವಾಗಿತ್ತು. ಆ ಹೊತ್ತಿಗಾಗಲೇ ಇಂಗ್ಲೆಂಡಿನಲ್ಲಿ ತೀವ್ರತರವಾದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳ ಬದಲಾವಣೆಗಳಿಂದಾಗಿ ಕಾವ್ಯ ಕ್ಷೇತ್ರದಲ್ಲಿಯೂ ಅಪೂರ್ವವಾದ ಬದಲಾವಣೆಗಳು ಆಗತೊಡಗಿದ್ದವು. ರೊಮ್ಯಾಂಟಿಕ್ ಯುಗ ಮುಗಿದು ವಿಕ್ಟೋರಿಯನ್ ಯುಗವೂ ಕಳೆದು ಟಿ.ಇ.ಹ್ಯೂಮ್ ಮುಂತಾದವರು ಕಾವ್ಯ ಅಭಿವ್ಯಕ್ತಿ ತಂತ್ರ ಮತ್ತು ಧೋರಣೆಗಳಿಗೆ ಸಂಬಂಧಿಸಿದಂತೆ ಭಿನ್ನ ನಿಲವನ್ನು ಪ್ರತಿಪಾದಿಸಿ ಪ್ರತಿಮಾನಿಷ್ಠ ಆಂದೋಲನಕ್ಕೆ ಕಾರಣರಾಗಿದ್ದರು. ಎಜ್ರಾ ಪೌಂಡ್ ಕವಿಯೂ ಅದನ್ನು ಬೆಂಬಲಿಸಿದ್ದ. ಮುಂದೆ ಟಿ.ಎಸ್. ಎಲಿಯಟ್ ಪ್ರತಿಮಾನಿಷ್ಠ ಕಾವ್ಯ ರೀತಿಯೊಂದಿಗೆ ಅನುಭಾವ ಪಂಥ ಮತ್ತು ಫ್ರೆಂಚ್ ಸಂಕೇತನಿಷ್ಠ ಕಾವ್ಯಗಳ ಉತ್ತಮಾಂಶಗಳನ್ನೂ ಸಮನ್ವಯಗೊಳಿಸಿ ಹೆಚ್ಚು ಸಂಕೀರ್ಣವೂ ಸಮಗ್ರವೂ ಆದ ಕಾವ್ಯ ರೀತಿಯನ್ನೂ ವಿಮರ್ಶಾ ವಿಧಾನವನ್ನೂ ಬೆಳೆಸಿದ. ಈ ಮಧ್ಯೆ ಯೇಟ್ಸ್ ಕವಿಯೂ ತನ್ನ ಕೊನೆಗಾಲದ ಕವನಗಳಲ್ಲಿ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಂಥ ನವ್ಯಕಾವ್ಯವನ್ನು ಬರೆಯುತ್ತಿದ್ದ. ಎಲಿಯಟ್‌ನ ವೇಸ್ಟ್‌ಲ್ಯಾಂಡ್ ಕಾವ್ಯ ಪ್ರಕಟವಾಗುವುದಕ್ಕಿಂತ ನಾಲ್ಕು ವರ್ಷ ಮೊದಲು (1918) ಹಾಪ್‌ಕಿನ್ಸ್‌ನ ಕವನಗಳ ಸಂಗ್ರಹವನ್ನು ಆತನ ಮರಣೋತ್ತರಕಾಲದಲ್ಲಿ ರಾಬರ್ಟ್ ಬ್ರಿಡ್ಜಸ್ ಎಂಬುವನು ಪ್ರಕಟಿಸಿದ್ದ. ಹಾಪ್‌ಕಿನ್ಸ್ ತನ್ನ ಕಾವ್ಯದಲ್ಲಿ ಭಾಷೆ ಮತ್ತು ಛಂದೋರೂಪಗಳಿಗೆ ಸಂಬಂಧಿಸಿದಂತೆ ಹೊಸ ಬಗೆಯ ಪ್ರಯೋಗಗಳನ್ನು ನಡೆಸಿದ್ದ. ಮುಂದೆ ಬಂದ ತರುಣ ಪೀಳಿಗೆಯ ಆಡೆನ್, ಸಿ.ಡೇ.ಲೂಯಿ, ಸ್ಟೀಫನ್ ಸ್ಪೆಂಡರ್, ಡಿಲಾನ್ ಥಾಮಸ್ ಮುಂತಾದ ಕವಿಗಳು ಹಾಪ್‌ಕಿನ್ಸ್ ಮತ್ತು ಎಲಿಯಟ್ ಈ ಇಬ್ಬರ ಕಾವ್ಯಗಳ ಪ್ರಭಾವಕ್ಕೂ ಒಳಗಾದರು. ಮುಂದೆ ರಾಜಕೀಯವಾಗಿ ವಾಮಪಂಥೀಯ ಒಲವನ್ನು ಬೆಳೆಸಿಕೊಳ್ಳುವುದರ ಮೂಲಕ ಹಾಪ್‌ಕಿನ್ಸ್ ಮತ್ತು ಎಲಿಯಟರ ಪ್ರಭಾವದಿಂದಲೂ ಬಿಡಿಸಿಕೊಳ್ಳಲು ತರುಣ ಕವಿಗಳು ಹಾತೊರೆದರು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಹಿಟ್ಲರ್ ಮತ್ತು ರಷ್ಯ ನಡುವಿನ ಒಡಂಬಡಿಕೆಯಾಗಿ ಅವರ ವಾಮಪಂಥೀಯ ಧೋರಣೆ ಕರಗಿಹೋಗುವಂತಾಯಿತು. ಅನಂತರದ ಕಾಲದ ಇಂಗ್ಲೆಂಡಿನ ಕವಿಗಳ ಧೋರಣೆ ತಮ್ಮ ತಮ್ಮ ವೈಯಕ್ತಿಕ ಋಜುತ್ವವನ್ನು (ಇಂಟೆಗ್ರಿಟಿ) ಉಳಿಸಿಕೊಳ್ಳುವುದರಲ್ಲಿ ಮತ್ತು ಘೋರವಾದ ಯುದ್ಧಗಳನ್ನು ತಡೆಯುವುದರ ಮೂಲಕ ಹೇಗೆ ತಮ್ಮನ್ನೂ ಪ್ರಪಂಚವನ್ನೂ ಉಳಿಸಿಕೊಳ್ಳಬೇಕೆಂಬುದರಲ್ಲಿ ಕೇಂದ್ರೀಕೃತವಾಗುವಂತಾಗಿತ್ತು. ಇಂಗ್ಲಿಷ್ ನವ್ಯ ಕಾವ್ಯದ ಈ ಅವಸ್ಥಾಂತರಗಳ ವಿವರವಾದ ಹಿನ್ನೆಲೆಯನ್ನು ಬಲ್ಲವರಾಗಿದ್ದ ವಿ.ಕೃ.ಗೋಕಾಕರು ಮತ್ತು ಗೋಪಾಲಕೃಷ್ಣ ಅಡಿಗರು ತಮ್ಮದೇ ಆದ ಒಲವು ವ್ಯಾಖ್ಯಾನಗಳಿಗೆ ಅನುಗುಣವಾಗಿ ನವ್ಯಕಾವ್ಯವನ್ನು ಕನ್ನಡದಲ್ಲಿ ಹುಟ್ಟುಹಾಕಲು, ಬೆಳೆಸಲು ಸಿದ್ಧರಾದರು. ಭಾರತದಲ್ಲಿಯೂ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಆದ

ವಿ.ಕೃ. ಗೋಕಾಕ್

ತೀವ್ರತರವಾದ ರಾಜಕೀಯ, ಸಾಮಾಜಿಕ ಪರಿವರ್ತನೆಗಳು, ಜನಸಮಷ್ಟಿಯ ಆಶೋತ್ತರಗಳು, ವಾಸ್ತವ ಪರಿಸ್ಥಿತಿಗಳು ಅವರ ಕಾವ್ಯಧೋರಣೆಗಳನ್ನು ರೂಪಿಸುವುದರಲ್ಲಿ ಪೋಷಕಾಂಶಗಳಾದವು.

ವಿ.ಕೃ.ಗೋಕಾಕರು ಸಮುದ್ರಗೀತೆಗಳು (1940), ಅಭ್ಯುದಯ (1946), ನವ್ಯಕವಿಗಳು (1950) ಎಂಬ ಕವನ ಸಂಕಲನಗಳಲ್ಲಿ ಅವರದೇ ಆದ ಬಗೆಯಲ್ಲಿ ನವ್ಯಕಾವ್ಯ ಪ್ರಯೋಗಗಳನ್ನು ನಡೆಸುತ್ತಿದ್ದರಾದರೂ ಆ ಬಗೆಯ ಕಾವ್ಯ ರೀತಿಗೆ ಒಂದು ತಾತ್ತ್ವಿಕ ಹಿನ್ನೆಲೆಯನ್ನು ರೂಪಿಸಿಕೊಂಡಿರಲಿಲ್ಲ; ಇಲ್ಲವೆ ಬಹಿರಂಗವಾಗಿ ಪ್ರತಿಪಾದಿಸಿರಲಿಲ್ಲ. 1950ರಲ್ಲಿ ಮುಂಬಯಿಯಲ್ಲಿ ನಡೆದ 34ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕಗೋಷ್ಠಿಯ ಅಧ್ಯಕ್ಷಭಾಷಣದಲ್ಲಿ ಆ ಕೆಲಸವನ್ನು ಅವರು ಮಾಡಿದರು. ಆ ಭಾಷಣ ಮುಂದೆ ನವ್ಯತೆ ಹಾಗೂ ಕಾವ್ಯಜೀವನ ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಧಾರವಾಡದ ಬಾನುಲಿ ಕೇಂದ್ರದಿಂದ ಅವರು ಪ್ರಸಾರ ಮಾಡಿದ ನವ್ಯ ಕಾವ್ಯದ ರೀತಿ ಎಂಬ ಭಾಷಣದಲ್ಲಿಯೂ ಚೆನ್ನವೀರ ಕಣವಿಯವರ ಜೊತೆಯಲ್ಲಿ ಸಂಪಾದಿಸಿದ 'ನವ್ಯ ಧ್ವನಿ' (1956) ಎಂಬ ಬೇರೆ ಬೇರೆ ಕವಿಗಳ ನವ್ಯ ಕವನಗಳ ಸಂಚಯದ ಮುನ್ನುಡಿಯಲ್ಲಿಯೂ ನವ್ಯಕಾವ್ಯವನ್ನು ಕುರಿತಂಥ ಗೋಕಾಕರ ವಿಚಾರ, ವಿವರಣೆಗಳಿವೆ.

ಗೋಕಾಕರು ನವ್ಯಕಾವ್ಯ ಮತ್ತು ಕನ್ನಡದಲ್ಲಿ ಅದರ ಆವಶ್ಯಕತೆಯನ್ನು ಕುರಿತಂತೆ ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಗಮನಿಸಬಹುದಾಗಿದೆ. ನವ್ಯಕಾವ್ಯವೆಂದರೆ ಆಧುನಿಕ ಕಾವ್ಯಕ್ಕಿಂತ ಬೇರೆಯಾದ ಕಾವ್ಯ. ವಿಶೇಷ ತಂತ್ರ ವಿಧಾನಗಳನ್ನು ಪಡೆದ ಕಾವ್ಯ. ಮುದ್ದಣನ ಕಾಲದಿಂದ ಬೆಳೆದು ಬಂದ ಆಧುನಿಕ ಕಾವ್ಯವು ಆಧುನಿಕ ಕಾವ್ಯ ಪ್ರಕಾರಗಳನ್ನು ಕಾವ್ಯವಸ್ತುಗಳನ್ನು ಕನ್ನಡಕ್ಕೆ ತಂದಿತು. ಈ ಕಾವ್ಯಪ್ರಕಾರ – ವಸ್ತುಗಳಿಗೆ ಉಚಿತವಾದ ಶೈಲಿ – ಛಂದಸ್ಸುಗಳನ್ನು ನಿರ್ಮಾಣ ಮಾಡಿತು. ವ್ಯಕ್ತಿತ್ವ ನಿರೂಪಣೆಯನ್ನು ಸಾಧಿಸಿತು. ಈಗ ಆಧುನಿಕ ಕಾವ್ಯದ ಪರಂಪರೆಯೊಂದು ನಿರ್ಮಿತವಾಗಿದೆ. ಒಂದು ಪರಂಪರೆ ಪೂರ್ಣವಾದಾಗ ಇನ್ನೊಂದು ಹೊಳಹನ್ನು ಹಾಕದೆ ಉಕ್ತಿಗೆ ಸಮಗ್ರತೆಯೂ ಕಾಂತಿಯೂ ಬರುವುದು ಕಠಿಣ. ಅಂತೇ ಇಂದು ನವ್ಯ ಕಾವ್ಯ ಆವಶ್ಯಕತೆಯೂ ಉಂಟಾಗಿದೆ. ಒಂದು ಪರಂಪರೆ ತನ್ನ ಸಿದ್ಧಿಯನ್ನು ಮುಟ್ಟಿದಾಗ ಇನ್ನೊಂದು ಸಿದ್ಧತೆಯು ತನ್ನ ಸಿದ್ಧಿಯ ದಾರಿಯನ್ನು ಹುಡುಕುತ್ತಿರುತ್ತದೆ. ಇಂಥ ಆಂತರಿಕ ಆವಶ್ಯಕತೆಯಿಂದ ಪ್ರಚೋದನೆಗೊಂಡ ಬಂಗಾಲಿ ಹಾಗೂ ಮರಾಠಿ ಕಾವ್ಯಗಳೂ ನವ್ಯಕಾವ್ಯದ ದಾರಿಯನ್ನು ನೇರವಾಗಿ ತುಳಿಯಹತ್ತಿದವು. ಆಧುನಿಕ ಕನ್ನಡ ಕಾವ್ಯವೂ ತನ್ನ ಪರಂಪರೆಯ ಸಿದ್ಧಿಯನ್ನು ಮುಟ್ಟಿದಾಗ– ಮುಂದೇನೆಂಬ ಪ್ರಶ್ನೆ ಎದ್ದಿತು. ಈ ಪ್ರಶ್ನೆಗೆ ಉತ್ತರ ನವ್ಯ ಕಾವ್ಯ; ಚಂಪೂ, ಷಟ್ಪದಿ, ವಚನ, ಸಾಂಗತ್ಯ, ತ್ರಿಪದಿ– ಹೀಗೆ ಅನೇಕ ರೂಪಗಳನ್ನು ತಾಳಿದ ಕನ್ನಡ ಕಾವ್ಯ ಇಲ್ಲಿಯವರೆಗೆ ಆಧುನಿಕವಾಗಿ ಬೆಳೆಯಿತು. ಅದು ನವ್ಯವಾಗುವುದೂ ಒಂದು ಬಗೆಯ ಚಂದ. ಈ ನವೀನ ಪರಿಸ್ಥಿತಿಯೂ ಒಂದು ಪರಂಪರೆಯ ಕೃತಕೃತ್ಯತೆಯೂ ನವ್ಯಕಾವ್ಯದ ಅಗತ್ಯವನ್ನು ಸೂಚಿಸುತ್ತಿವೆ.


ಗೋಪಾಲಕೃಷ್ಣ ಅಡಿಗ

ಬಳಕೆಮಾತು, ಛಂದಸ್ಸಿನಲ್ಲಿಯ ನವೀನ ಪ್ರಯೋಗ, ಪ್ರತಿಮಾ, ಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕ ಶೈಲಿ, ವಸ್ತುವಿನ ಆಯ್ಕೆಯಲ್ಲಿಯ ಸ್ವಾತಂತ್ರ್ಯ, ಬುದ್ಧಿ ಪ್ರಧಾನತೆ, ವ್ಯಕ್ತಿತೀತ ಮೌಲ್ಯಗಳಿಗೆ ಪ್ರಧಾನತೆ – ಈ ಎಂಟು ನವ್ಯಕಾವ್ಯದ ಲಕ್ಷಣಗಳೆಂದು ಗೋಕಾಕರು ಪಟ್ಟಿಮಾಡಿ ವಿವರಿಸಿದ್ದಾರೆ. ಅವರು ಮೊದಲಿನ ಐದು ಲಕ್ಷಣಗಳಲ್ಲಿ ಆಧುನಿಕ ಕಾವ್ಯವೂ ಕ್ರಮೇಣ ಆಸ್ಥೆ ವಹಿಸಿದೆಯೆಂದೂ ಅವೆಲ್ಲವುಗಳ ಸಮಯೋಚಿತ ಪ್ರಜ್ಞೆಯನ್ನು ನವ್ಯಪ್ರಜ್ಞೆಯೆಂದು ಕರೆಯಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ, ಗೋವಿಂದ ಪೈ ಅವರ ಕವನಗಳು, ಬೇಂದ್ರೆ ಅವರ ಕರಿಮರಿನಾಯಿ, ಕೈಗಲ್ಲ, ನರಬಲಿ, ಕೆ.ವಿ.ಪುಟ್ಟಪ್ಪನವರ ಕೋಗಿಲೆ ಮತ್ತು ಸೋವಿಯೆತ್ ರಷ್ಯಾ, ಜಿ.ಪಿ.ರಾಜರತ್ನಂ ಅವರ ಎಂಡ್ಕುಡ್ಕ ರತ್ನ, ವಿ.ಸೀ. ಅವರ ಗಡಿದಾಟು, ಕ್ರೋಧಕೇತನ, ಗೋಪಾಲಕೃಷ್ಣ ಅಡಿಗರ ಹಿಮಗಿರಿಯ ಕಂದರ, ಗೊಂದಲಪುರ, ರಾಮಚಂದ್ರ ಶರ್ಮರ ಏಳುಸುತ್ತಿನ ಕೋಟೆ, ಚೆನ್ನವೀರಕಣವಿ, ಸು.ರಂ.ಎಕ್ಕುಂಡಿ, ವಿ.ಜಿ.ಭಟ್ಟ ಮೊದಲಾದವರ ಸಾಮಾಜಿಕ ಕವನಗಳು – ಇವೆಲ್ಲವನ್ನೂ ನವ್ಯಕಾವ್ಯ ಪ್ರಕಾರಕ್ಕೆ ಗೋಕಾಕರು ಸೇರಿಸಿದ್ದಾರೆ (ನವ್ಯಕಾವ್ಯದ ರೀತಿ). ಚೆನ್ನವೀರ ಕಣವಿಯವರೊಂದಿಗೆ ಸಂಪಾದಿಸಿದ ನವ್ಯಧ್ವನಿ ಎಂಬ ನವ್ಯಕಾವ್ಯ ಸಂಚಯದ ಕವನಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ ಪ್ರಗತಿಪರ, ಉಪನವ್ಯ, ನವ್ಯ, ವ್ಯಂಗ್ಯನವ್ಯ ಎಂದು ಗೋಕಾಕರು ಕರೆದಿದ್ದಾರೆ. ಇನ್ನೊಂದು ಕಡೆ ನವ್ಯಕಾವ್ಯದ ಆದ್ಯಗುರು ಸರ್ವಜ್ಞ ಎಂದು ಹೇಳುತ್ತಾರೆ. ನವ್ಯಕಾವ್ಯದ ಕೆಲವು ವಿಶೇಷಗುಣಗಳನ್ನು ಹಾಪ್‌ಕಿನ್ಸ್, ಅರವಿಂದ ಹಾಗೂ ತಮ್ಮ ಕಾವ್ಯಗಳಿಂದ ಉದಾಹರಿಸಿ ತೋರಿಸಿದ್ದಾರೆ. ನವ್ಯಕಾವ್ಯದ ರಹಸ್ಯವನ್ನು ಅರವಿಂದರ ಮಾತುಗಳನ್ನು ಉದ್ಧರಿಸುವುದರ ಮೂಲಕವೇ ತಿಳಿಸಿದ್ದಾರೆ (ನವ್ಯಕಾವ್ಯ ರೀತಿ), ಇವೆಲ್ಲವನ್ನು ವಿವರವಾಗಿ ಪರಿಶೀಲಿಸುತ್ತ ಹೋದಂತೆ ನವ್ಯಕಾವ್ಯವನ್ನು ಕುರಿತ ಗೋಕಾಕರ ಅಭಿಪ್ರಾಯಗಳ ಹಿಂದಿರುವ ಏಕಸೂತ್ರತೆಯನ್ನು ಕಂಡುಕೊಳ್ಳುವುದು ಸುಲಭವಾಗುವುದಿಲ್ಲ.

1950ರ ಅನಂತರದ ಕಾಲದಲ್ಲಿ ಗೋಕಾಕರು ಉಗಮ, ಊರ್ಣನಾಭ, ಚಿಂತನ, ದ್ಯಾವಾಪೃಥಿವೀ ಮುಂತಾದ ಕವನಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವರ ಕಾವ್ಯವನ್ನೂ ನವ್ಯಕಾವ್ಯದ ಸೈದ್ಧಾಂತಿಕ ಪ್ರತಿಪಾದನೆಯನ್ನೂ ಒಟ್ಟಿನಲ್ಲಿ ನೋಡಿದಾಗ, ಭಾಷೆ ಮತ್ತು ಛಂದೋರೂಪಗಳಲ್ಲಿ ಅವರು ಬದಲಾವಣೆ, ಬಗೆಬಗೆಯ ಪ್ರಯೋಗಮಾಡಿದ್ದು ಕಂಡುಬರುತ್ತದೆ. ಛಂದೋರೂಪಗಳಲ್ಲಿ ಮಾಡಿದ ಪರಿವರ್ತನೆಯನ್ನು ಮುಕ್ತಛಂದಸ್ಸು ಎಂದು ಕರೆಯಲಾಗಿದೆ. ತಂತ್ರವಿಧಾನದಲ್ಲಿ ಪ್ರತಿಮಾನಿಷ್ಠತೆ, ಸಾಂಕೇತಿಕತೆಗಳನ್ನು ಅಳವಡಿಸಿಕೊಳ್ಳುವ ಬಗೆಯಲ್ಲಿಯೂ ಹೊಸತನ ಕಾಣುತ್ತದೆ. ಕಾವ್ಯ ಧೋರಣೆಗೆ ಸಂಬಂಧಿಸಿದಂತೆ ನವೋದಯದವರೊಂದಿಗೆ ಹೇಳಿಕೊಳ್ಳುವಂಥ ಭಿನ್ನತೆ ಇದ್ದಂತೆ ತೋರುವುದಿಲ್ಲ. ಭಾರತೀಯ ಮತ್ತು ಜಾಗತಿಕ ವಿದ್ಯಮಾನಗಳ ಸಂದರ್ಭದಲ್ಲಿ ಒಟ್ಟು ಮಾನವ ಸಮಷ್ಟಿಯ ಕ್ಷೇಮಚಿಂತನೆಗೆ ಅರವಿಂದರ ಅಂತಃಪ್ರಜ್ಞೆಯ (ಇಂಟ್ಯೂಷನ್) ನೆರವಿನಿಂದ ಸಮನ್ವಯ ಸಂಜೀವಿನಿ ಸೂತ್ರವೊಂದನ್ನು ರೂಪಿಸಿಕೊಳ್ಳುವುದರ ಕಡೆಗೆ ಹೆಚ್ಚಾದ ಆಶಾವಾದದಿಂದ ನೋಡುವ ಒಲವು, ಒತ್ತು ಇರುವುದು ಕಾಣುತ್ತದೆ. ಆದ್ದರಿಂದ ನವೋದಯದವರ ಕನಸುಗಾರಿಕೆ, ದಿವ್ಯ ಆದರ್ಶ, ಭಾರತೀಯವಾದುದರ ಬಗೆಗಿನ ಭಾವನಾತ್ಮಕವಾದ ಆರಾಧನಾಭಾವಗಳು ಇವರಲ್ಲಿಯೂ ಕಾಣುತ್ತವೆ. ಲೋಕದ ವಿಲಯವನ್ನು ತಪ್ಪಿಸುವ ಹೊಣೆಗಾರಿಕೆಯನ್ನು ಸ್ವಯಂ ಆರೋಪಿಸಿಕೊಂಡ ನೆಹರೂ ರೀತಿಯ ಆದರ್ಶಕ್ಕೆ ಕಾವ್ಯದಲ್ಲಿ ನುಡಿಗೊಡುವ ಹಂಬಲವೂ ಅದರೊಟ್ಟಿಗೆ ಸೇರಿಕೊಂಡಿದೆ. ಅಭಿಜಾತಕಾವ್ಯ ಪ್ರತಿಭೆಗಿಂತ ವ್ಯುತ್ಪತ್ತಿ ಪ್ರಧಾನವಾದ ಕಾವ್ಯಮೀಮಾಂಸೆ, ಆಧ್ಯಾತ್ಮಿಕ ವಿಚಾರಗಳೇ ಅವರ ಕಾವ್ಯವನ್ನು ನಡೆಸಿಕೊಂಡು ಹೋದದ್ದರಿಂದ ಗೋಕಾಕರ ಈ ಮೇಲಿನ ಹೊಸ ಪ್ರಯೋಗಗಳು, ಸದ್ಭಾವನೆ ಸದುದ್ದೇಶಗಳು ಎಷ್ಟೇ ಪ್ರಾಮಾಣಿಕವಾಗಿದ್ದರೂ ಶ್ರೇಷ್ಠ ಕಾವ್ಯವಾಗಿ ಅಭಿವ್ಯಕ್ತಿಪಡೆದು ಸಾರ್ಥಕಗೊಳ್ಳುವುದರಲ್ಲಿ ನಿರೀಕ್ಷಿತ ಯಶಸ್ಸನ್ನು ಪಡೆಯಲಾಗಲಿಲ್ಲ.

ಗೋಕಾಕರ ಕಾವ್ಯ ಮತ್ತು ಸಾಹಿತ್ಯ ಚಿಂತನದ ಪ್ರಭಾವಕ್ಕೆ ಒಳಗಾಗಿಯೂ ತಮ್ಮ ದನಿವಿಶಿಷ್ಟತೆಯನ್ನು ಬೆಳೆಸಿಕೊಂಡವರಲ್ಲಿ ಮುಖ್ಯರಾದವರು ಗಂಗಾಧರ ಚಿತ್ತಾಲ, ಸು.ರಂ.ಎಕ್ಕುಂಡಿ, ಶಂಕರ ಮೊಕಾಶಿ ಪುಣೇಕರ ಮತ್ತು ಎಂ.ಅಕಬರ ಅಲಿ. ಗಂಗಾಧರ ಚಿತ್ತಾಲರ ಮನುಕುಲದ ಹಾಡು, ಹರಿವ ನೀರಿದು ಎಂಬ ಸಂಕಲನಗಳಲ್ಲಿ ಬದುಕು ಮತ್ತು ಸಾವಿನ ಗೂಢದ ಬಗೆಗೆ ಚಿಂತನೆಯಿದೆ. ಮನುಷ್ಯ ಸಂಬಂಧದ ಸುಖದ ಕ್ಷಣಗಳ ಉತ್ಕರ್ಷಭಾವವಿದೆ. ಆತ್ಮೀಯರ ಸಾವು ತಂದ ದುರಂತ ವೇದನೆಯಿದೆ. ಅವರ ಬರೆವಣಿಗೆಯಲ್ಲಿ ಬೌದ್ಧಿಕ ಮತ್ತು ಭಾವನಾತ್ಮಕ ದ್ರವ್ಯದ ಕೊರತೆಯಿಲ್ಲ. ಆದರೆ, ಧ್ವನಿಶಕ್ತಿಯ ಕೊರತೆಯಿರುವುದು ಕಾಣುತ್ತದೆ. ಕವನಗಳ ಲಯಗತಿಯಲ್ಲಿ ಮುದತರುವ ಗುಣವಿದೆ. ಪ್ರಯೋಗಶೀಲತೆಯಿದೆ. ಸಮುದ್ರವನ್ನು ಕುರಿತ ಗೀತಗಳಲ್ಲಿ ತನ್ಮಯತೆ ಇದೆ. ಮನುಷ್ಯ ಸಂಬಂಧಗಳಲ್ಲಿ ಹೆಚ್ಚಿನ ಗೌರವ, ಆತ್ಮೀಯತೆ, ಅಂತಃಕರಣ ಇದೆ. ಸಂತಾನ, ಹಾವಾಡಿಗರ ಹುಡುಗ, ನೆರಳು, ಮತ್ಸ್ಯಗಂಧಿ ಕವನ ಸಂಕಲನಗಳನ್ನು ಪ್ರಕಟಿಸಿದ ಎಕ್ಕುಂಡಿಯವರ ಕಾವ್ಯದಲ್ಲಿ ನವೋದಯ ರೀತಿಯ ಛಂದೋರೂಪ, ಗೇಯತೆಯ ಅಂಶ ಹೆಚ್ಚಾಗಿದೆ. ಸಮರ್ಥವಾಗಿದೆ. ಭಾವಗೀತೆಯ ಗುಣ ಸಮೃದ್ಧವಾಗಿದೆ. ಅವರ ಭಾಗವತ ಧೋರಣೆ ಪುರಾಣದ ವಸ್ತು, ಪ್ರತಿಮೆಗಳ ಮೂಲಕ ಅಭಿವ್ಯಕ್ತಗೊಳ್ಳುವ ಬಗೆ ಅನನ್ಯವಾಗಿದೆ. ಕಾವ್ಯಪ್ರತಿಮೆಗಳ ಬಳಕೆಯ ಕ್ರಮವೂ ವಿಶಿಷ್ಟವಾಗಿದೆ. ಕಾವ್ಯವಸ್ತುವಿನ ಸಹಜ, ನೇರನಿರೂಪಣೆಯೊಂದಿಗೆ ಸದ್ದಿಲ್ಲದೆ ಧ್ವನಿಪರಿವೇಷವನ್ನು ಕಟ್ಟುತ್ತ ಸಾಗಿ ಕವನದ ಕೊನೆಗೆ ಬಂದು ಮುಟ್ಟಿದಾಗ, ಅನುಭವ ಸಮಸ್ತವೂ ಒಂದು ಕಾವ್ಯಪ್ರತಿಮೆಯ ಹಿಡಿಯಲ್ಲಿ ಇಡಿಯಾಗಿ ದೀಪ್ತಗೊಳ್ಳುವಂತೆ ಮಾಡುವ ಬಗೆ, ಯಶಸ್ವಿಯಾದ ಪ್ರಯತ್ನ ಹಾವಾಡಿಗರ ಹುಡುಗ, ಅತಿಥಿ ಮುಂತಾದ ಕೆಲವು ಕವನಗಳಲ್ಲಿ ಕಾಣುತ್ತದೆ. ಒಟ್ಟಿನಲ್ಲಿ ಎಕ್ಕುಂಡಿಯವರ ಕಾವ್ಯ ಭಾವಪ್ರಧಾನವಾದದ್ದು. ಬುದ್ಧಿ ಪ್ರಧಾನವಾದದ್ದಲ್ಲ. ಮೊಕಾಶಿಯವರ ಕವನಸಂಕಲನ

ಮಾಯಿಯ ಮೂರು ಮುಖಗಳು. ಅವರು ಪ್ರಯೋಗಪ್ರಿಯರು. ಸೀಮಂತಿನೀ ಕೋಪಾಖ್ಯಾನ ಕಂದ ಮತ್ತು ಚಂಪೂಗದ್ಯಗಳಿಂದ ಕೂಡಿದ ಕವನವಾದರೆ (ಗೋಕಾಕರೂ ಇಂದಿಲ್ಲ ನಾಳೆಯಲ್ಲಿ ಚಂಪೂ ರೀತಿಯನ್ನು ಬಳಸಿದ್ದಾರೆ) 'ಸಂಸ್ಕೃತಿ' ಅಷ್ಟಷಟ್ಪದಿ ಮತ್ತು ಹೊಸಗನ್ನಡದ ಗದ್ಯದ ನಿರೂಪಣೆಯನ್ನು ಬಳಸಿಕೊಂಡಿರುವ ಬರವಣಿಗೆಯಾಗಿದೆ. ಈ ಬಗೆಯ ಬರವಣಿಗೆಗಳು ತಮ್ಮ ವಿಚಿತ್ರ ರೀತಿಯಿಂದಾಗಿ ಗಮನ ಸೆಳೆಯುತ್ತವೆ; ಕಾವ್ಯ ಗುಣಗಳಿಂದಲ್ಲ; ಗಂಧಕೊರಡು, ನೆರಳು ಬೆಳಕು, ಅಪಸ್ವರದಂಥ ಕವನಗಳು ಮೊಕಾಶಿಯವರ ಕಾವ್ಯಪ್ರತಿಭೆ ಇನ್ನೂ ಹೆಚ್ಚು ಗಂಭೀರವಾದದ್ದನ್ನು ಬರೆಯಬಹುದಾದ ಸಾಮರ್ಥ್ಯವುಳ್ಳದ್ದೆಂಬ ಅನಿಸಿಕೆಯನ್ನು ಓದುಗನಲ್ಲಿ ಹುಟ್ಟಿಸುತ್ತದೆ. ಮಾಯಿಯ ಮೂರು ಮುಖಗಳು ಎಂಬ ಕವನದ ಯಶಸ್ಸು ಈ ಅನಿಸಿಕೆ ಹುಸಿಯಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. 'ನನ್ನ ಕಾವ್ಯ ಜೀವನಕ್ಕೆ ಆವಶ್ಯಕವಾದ ಅಂತಃಕರಣದ ಮಾರ್ಗದರ್ಶನ ನೀಡಿದವರು ಗೋಕಾಕರು' ಎಂದು ಹೇಳಿಕೊಂಡಿದ್ದರೂ ಎಂ.ಅಕಬರ ಅಲಿಯವರು ಗೋಕಾಕರನ್ನು ಕಣ್ಣುಮುಚ್ಚಿ ಅನುಕರಿಸದೆ ನವಚೇತನ, ಸುಮನ ಸೌರಭ, ಗಂಧ ಕೇಸರ ಎಂಬ ಸಂಕಲನಗಳಲ್ಲಿ ಅಭಿವ್ಯಕ್ತಿಯಲ್ಲಿ ತನ್ನತನದ ಹುಡುಕಾಟದಲ್ಲಿರುವುದು ಕಾಣುತ್ತದೆ. ಕಾವ್ಯಸತ್ತ್ವದ ದೃಷ್ಟಿಯಿಂದ ಇನ್ನೂ ಮಹತ್ವ ಪೂರ್ಣವಾದ ಅನನ್ಯವಾದ ದನಿಯನ್ನು ರೂಢಿಸಿಕೊಳ್ಳಬಹುದಾದ ಸಾಧ್ಯತೆಗಳು ಅವರ ಕಾವ್ಯದಲ್ಲಿ ಕಾಣುತ್ತವೆಯಾದರೂ ತನ್ನೊಳಗಿನ ನಿಜದನಿಯನ್ನು ಮೈಚಳಿ ಬಿಟ್ಟು ಎಬ್ಬಿಸಲಾರದ ಸಂಕೋಚದ ಪೊರೆಯೊಂದು ಉದ್ದಕ್ಕೂ ಆವರಿಸಿಕೊಂಡಿರುವಂತೆ ತೋರುತ್ತದೆ. ಆಶಾವಾದಿತ್ವವಿದ್ದರೂ ಜೀವನದ ವಾಸ್ತವವನ್ನು ನಿರಾಕರಿಸದೆ, ಹೀಗಳೆಯದೆ ಅದರ ಅಸ್ತಿತ್ವ ಮತ್ತು ಅದರ ಪ್ರಾಣಶಕ್ತಿಯನ್ನು ಒಪ್ಪಿಕೊಂಡು ಪರವನ್ನು ಅರಸಬೇಕೆಂಬ ಆರೋಗ್ಯಕರವಾದ ಧೋರಣೆ ಅವರಲ್ಲಿರುವುದು ಕಾಣುತ್ತದೆ. ಹಾವು ಹೆಡೆ ಬಿಡಿಸಿದಾಗ, ಲೋಕವೇ ಸಾಕ್ಷಿಯಂಥ ಕೆಲವು ಕವನಗಳು ಈ ಮಾತಿಗೆ ನಿದರ್ಶನಗಳಾಗಿವೆ.

ಗೋಪಾಲಕೃಷ್ಣ ಅಡಿಗರು ತಮ್ಮ ನಡೆದು ಬಂದ ದಾರಿ (1952) ಕವನ ಸಂಕಲನದ ಸಹೃದಯರಿಗೆ ಎಂಬ ತಲೆಬರೆಹವುಳ್ಳ ಮುನ್ನುಡಿ ರೂಪದ ಮಾತುಗಳಲ್ಲಿ ಹೊಸ ಕಾವ್ಯದ ಅಗತ್ಯವನ್ನೂ ಅನಿವಾರ್ಯತೆಯನ್ನೂ ವಿವರಿಸಿದರು. ಅದುವರೆಗೆ ನವೋದಯ ಕಾವ್ಯ ರೀತಿಯಲ್ಲಿ ಭಾವತರಂಗ, ಕಟ್ಟುವೆವು ನಾವು ಕವನಸಂಗ್ರಹಗಳನ್ನು ಪ್ರಕಟಿಸಿ ಸತ್ತ್ವಶಾಲಿ ಕವಿಯೆಂದು ಪ್ರಸಿದ್ಧಿ ಪಡೆದಿದ್ದರಾದರೂ ಆ ಬಗೆಯ ಕಾವ್ಯರಚನೆಯನ್ನು ಇನ್ನು ಮುಂದೆ ಮಾಡುವುದಿಲ್ಲ. ಮಾಡುವುದರಲ್ಲಿ ಅರ್ಥವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅವರ ಮಾತುಗಳಲ್ಲಿಯೇ ಅವರ ಅಭಿಪ್ರಾಯಗಳನ್ನು ನೋಡಬಹುದು.

"ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟ ಕಳೆದು ಈಗ ಇನ್ನೊಂದು ಘಟ್ಟ ಮೊದಲಾಗುತ್ತಿದೆ. ಕಾವ್ಯರೂಪದಲ್ಲಿ ಬದಲಾವಣೆ ಆಗಬೇಕಾದ ಕಾಲ ಆಗಲೇ ಬಂದುಬಿಟ್ಟಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ತನಕ ಇದ್ದ ವಾತಾವರಣ ಈಗ ಸಮೂಲ ಪರಿವರ್ತನೆಗೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದ ಉತ್ಸಾಹ, ಉದ್ವೇಗ, ಆದರ್ಶಪರವಶತೆಯ ಹಾರಾಟ ಮುಗಿದು ಈಗ ನಮ್ಮ ಮನಸ್ಸು ಮತ್ತೆ ನೆಲಕ್ಕಿಳಿದಿದೆ. ಮೋಡವಾಗಿ ಮೇಲೇರಿದ ಮನಸ್ಸು ಮಳೆಯಾಗಿ ಬಿದ್ದು ಮತ್ತೆ ಹಳ್ಳಕೊಳ್ಳಗಳಲ್ಲಿ ತುಂಬಿಕೊಂಡಿದೆ. ತಳದಲ್ಲಿ ಕೂತಿದ್ದ ಕೊಳೆ ಕಸ ರಾಡಿಯೆಲ್ಲ ಈಗ ಮೇಲೆದ್ದು ಬಂದು ಕನ್ನಡಿಯಂಥ ನೀರು ಕಲಕಿದೆ. ಹೊಸ ಆದರ್ಶಕ್ಕಾಗಿ ಹೊಸ ಕನಸಿಗಾಗಿ ದೇಶದ ಮನಸ್ಸು ಹಸಿದು ಕಾಯುತ್ತಿದೆ. ಇಂಥ ವಾತಾವರಣ ಸುತ್ತುಮುತ್ತಲೂ ಇರುವಾಗ, ಜೀವನಾವಲಂಬಿಯಾದ ಕಾವ್ಯವೂ ಪರಿವರ್ತನೆಗೊಳ್ಳುವುದು ಸಹಜ. ಗಾಂಧಿಯುಗದಲ್ಲಿ ಬರೆದ ರೀತಿಯಲ್ಲೇ ಇನ್ನೂ ಬರೆದರೆ ಬಹುಶಃ ಅದು ಕಾವ್ಯಾಭಾಸವಾಗುತ್ತದೆ. ಇಲ್ಲವೇ ಸತ್ವಹೀನ ಕಾವ್ಯವಾಗುತ್ತದೆ. ಚರ್ವಿತಚರ್ವಣವಾಗುತ್ತದೆ. ಆಗ ಭಾವವನ್ನು ಕೊಲ್ಲುವ ಮಾತು ಬೇತಾಳದಂತೆ ನಮ್ಮ ಬೆನ್ನು ಹತ್ತಿ ಸಮಾಜದ ಬೆಳವಣಿಗೆಗೆ ಮಾರಕವಾಗುತ್ತದೆಂದು ನನಗೆ ತೋರುತ್ತದೆ. ಆದ ಕಾರಣ ಈಗ ಕಾಣುತ್ತಿರುವ ಹೊಸ ಮನೋಧರ್ಮವನ್ನು ವ್ಯಕ್ತಪಡಿಸಲು ಹೊಸ ನಾಲಗೆ, ಹೊಸ ನುಡಿಕಟ್ಟು, ರೂಪುಗೊಳ್ಳಬೇಕಾಗಿದೆ. ಈಗ ಬರೆಯುತ್ತಿರುವ ಕವಿಗಳೆಲ್ಲ ಈ ಕುರಿತು ಯೋಚನೆ ಮಾಡಬೇಕಾದದ್ದು ಅನಿವಾರ್ಯ, ಹೊಸ ಹೊಸತಾಗಿ ಬರೆಯುತ್ತಿರುವ ತರುಣ ಕವಿಗಳಂತೂ ಈ ಸಮಸ್ಯೆಯನ್ನು ಎದುರಿಸದೆ ಗತ್ಯಂತರವಿಲ್ಲ. ನಮ್ಮ ಹಿರಿಯ ಕವಿಗಳ ದಾರಿಯಲ್ಲಿ ನಡೆಯುವುದರಿಂದಲೂ ಅಷ್ಟು ಕವಿತೆ ಬಂದೀತು. ಆದರೆ ಅದಕ್ಕೆ ಜೀವ ಕೊಡುವ ಸತ್ವವಾಗಲೀ ಹೊಸ ಸಮಾಜದ ವಾಣಿಯಾಗುವ ಸಾಮರ್ಥ್ಯವಾಗಲೀ ಖಂಡಿತ ಬರಲಾರದು; ನಮ್ಮ ಹಿರಿಯ ಕವಿಗಳು ಆಧುನಿಕ ಕಾವ್ಯಕ್ಕೆ ತಕ್ಕ ಭಾಷೆಯನ್ನು ಸಿದ್ಧಗೊಳಿಸಿ ಅದರಲ್ಲಿ ಅಮೋಘವಾದ ಕೆಲಸವನ್ನು ಮಾಡಿದ್ದಾರೆ. ಆದರೆ ಅದೇ ರೀತಿ ಅಮೋಘವಾದ ಕೆಲಸವನ್ನು ಹೊಸ ತಲೆಮಾರಿನವರೂ ಮಾಡಿ ತೋರಿಸಬೇಕಾಗಿದೆ....... ಗತಕಾಲದ ಭಾಷೆಭಾವವನ್ನು ಕೊಲ್ಲುತ್ತದೆ; ಮನಸ್ಸನ್ನು ಮಂಕಾಗಿಸುತ್ತದೆ. ಅರ್ಥಕ್ಕಿಂತ ಶಬ್ದಗಳ ಹಾರಾಟವೇ ಹೆಚ್ಚಿ ಅರ್ಥ ಮರೆಯಾಗುತ್ತದೆ. ಸಂಕೇತ ಮೂಲರೂಪವನ್ನು ಮರಸುತ್ತದೆ; ಉತ್ಸವಮೂರ್ತಿ ತಾನೇ ಮೂಲವಿಗ್ರಹವೆಂದು ವಿಜೃಂಭಿಸುತ್ತದೆ. ಆದಕಾರಣವೇ ಹೊಸ ಜೀವನ ಭಾವನೆಗಳಿಗೆ ತಕ್ಕ ರೀತಿ ರೂಪುಗೊಳ್ಳಬೇಕಾದ ಕಾಲ ಈಗ ಸಾಹಿತಿಗಳನ್ನು ಎದುರಿಸಿ ನಿಂತಿದೆ; 19ನೆಯ ಶತಮಾನದ ಆಂಗ್ಲಕವಿಗಳಾದ ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್ ಮುಂತಾದ ರೊಮ್ಯಾಂಟಿಕ್ ಕವಿಗಳಿಂದ ಪ್ರೇರಿತವಾದ ನಮ್ಮ ಆಧುನಿಕ ಕನ್ನಡ ಕಾವ್ಯ ಆ ಸಂಪ್ರದಾಯದಲ್ಲಿ ತಾನು ಮಾಡಬಹುದಾದಷ್ಟು ಕೆಲಸವನ್ನು ಮಾಡಿ ಮುಗಿಸಿದೆ. ಆ ಸಂಪ್ರದಾಯದ ಸತ್ವ ಈಗ ತೀರಿದೆ. ಅದಕ್ಕೆ ಅವನತಿ ಬಂದಿದೆ. ಅದರ ದೋಷಗಳೆಲ್ಲ ಈಗ ಎದ್ದು ಕಾಣಿಸುತ್ತಿವೆ. ನೆಲದ ಮೇಲೆ ಕಾಲೂರಿನಿಂತೇ ನಕ್ಷತ್ರವನ್ನು ತುಡುಕುತ್ತಿದ್ದುದು ಈಗ ನೆಲಬಿಟ್ಟು ಮೇಲೇರಿ ವೇದಾಂತದ ಮಂಜಿನಲ್ಲಿ ಮರೆಯಾಗಿ ಹೋಗುತ್ತಿದೆ. ಶಬ್ದಗಳು ಅರ್ಥದ ಸ್ಥಾನವನ್ನು ಆಕ್ರಮಿಸುತ್ತಿವೆ. ಪ್ರತಿಯೊಂದು ಭಾವವೂ ಅನುಭವವೂ ಅತಿಸರಳವಾಗಿ ಸತ್ಯದಿಂದ ದೂರದೂರ ಹೋಗುತ್ತಿವೆ. ಇಂಥ ಕಾಲದಲ್ಲಿ ಕಾವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು. ಕಾವ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು. ಈ ಜಗತ್ತನ್ನು ಬಿಟ್ಟು ಕಾವ್ಯ ಬದುಕಲಾರದು, ಎಂಬುದನ್ನು ಮತ್ತೆ ಕವಿಗಳು ಅರಿಯಬೇಕಾಗುತ್ತದೆ. ನಿಜವಾದ ಕವಿ ಈ ಮಾತನ್ನು ಎಂದೂ ಮರೆಯುವುದಿಲ್ಲ. ಮರೆಯಲಾರ, ಆದರೆ ಕೇವಲ ವಾಸ್ತವ ಇಂದ್ರಿಯಗಮ್ಯವಾದುದು ಮಾತ್ರವೇ ಕಾವ್ಯದ ವಸ್ತುವಾಗಲಾರದು. ಈ ಜಗತ್ತಿನಲ್ಲಿ ನಮ್ಮ ಸುತ್ತ ಕಾಣುವ ವಸ್ತುಗಳು ಎಷ್ಟು ನಿಜವೋ ಆ ವಸ್ತುಗಳ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ಹುಟ್ಟುವ ಭಾವಗಳೂ ಅಷ್ಟೇ ನಿಜ. ಪಂಚಭೌತಿಕವಾದದ್ದು ಕಾವ್ಯಕ್ಕೆ ಎಷ್ಟು ಅಗತ್ಯವೋ ಅಷ್ಟೇ ನಮ್ಮ ಆದರ್ಶವೂ ಕಲ್ಪನೆಯೂ ಕನಸೂ ಅಗತ್ಯ.ಈ ಎರಡೂ ಸೇರಿ ಆದ ಪಾಕವೇ ಕಾವ್ಯ. ವಿದ್ಯಮಾನಗಳ, ಅನುಭವಗಳ ಆದರ್ಶ ಸ್ವರೂಪದ ಕನಸಿನ ಒಂದಂಶ ಸೇರದೆ ಇದ್ದದ್ದು ಕಾವ್ಯವಾಗಲಿ ಸಾಹಿತ್ಯವಾಗಲಿ ಆಗಲಾರದು. ಈ ದೃಷ್ಟಿಯಿಂದ ಆಧುನಿಕ ಇಂಗ್ಲಿಷ್ ಕಾವ್ಯದ ಪ್ರಸಿದ್ಧ ಕವಿಗಳಾದ ಈಲಿಯಟ್, ಆಡೆನ್ ಮುಂತಾದವರಿಂದ ನಾವು ಇನ್ನು ಮುಂದೆ ಸ್ಫೂರ್ತಿ ಪಡೆಯಬೇಕಾದದ್ದು ಅತ್ಯಗತ್ಯ. ಆದರೆ ನಮ್ಮ ಹೊಸ ಕವಿತೆ ಆ ಇಂಗ್ಲಿಷ್ ಕವಿಗಳ ಕಾವ್ಯದಂತೆಯೇ ರೂಪುಗೊಳ್ಳಲಾರದು. ಆ ಕವಿಗಳ ಅಂಧಾನುಕರಣೆಯಿಂದ ಹೊಸತನ ಬಂದೀತು. ಆದರೆ ಅದು ಕಾವ್ಯವಾಗ ಲಾರದು. ನಮ್ಮ ಹೊಸ ಕಾವ್ಯ ನಮ್ಮ ನಾಡಿನ ಹೊಸ ವಾತಾವರಣಕ್ಕೂ ನಮ್ಮ ಜನಜೀವನಕ್ಕೂ ನಮ್ಮ ಹೊಸಭಾಷೆಯ ಪರಿಪಾಕದ ಪರಿಮಿತಿಗೂ ಒಳಪಟ್ಟಿದೆ ಎಂಬುದನ್ನು ನಾವು ಮರೆಯತಕ್ಕದ್ದಲ್ಲ.

ಇಲ್ಲಿ ಅಡಿಗರ ಹೊಸ ಕಾವ್ಯವನ್ನು ಕುರಿತಂಥ ಆಲೋಚನ ಕ್ರಮದಲ್ಲಿ ನಿರ್ದಿಷ್ಟತೆ ಇದೆ, ಖಚಿತತೆ ಇದೆ. ಹೊಸ ಕವಿತೆಯನ್ನು ಕುರಿತು (1953), ಇಂದಿನ ಜೀವನ ಕ್ಲಿಷ್ಟ ಎಂದರೇನು (1954), ಸಾಕ್ಷಿ (1962), ಕಳೆದ ಹತ್ತು ವರ್ಷಗಳ ಕನ್ನಡ ಕಾವ್ಯ (1965), ಮಣ್ಣಿನ ವಾಸನೆ, ನವ್ಯಕವಿತೆಯಲ್ಲಿ ಪ್ರತಿಮಾ ವಿಧಾನ (1967)– ಈ ಲೇಖನಗಳಲ್ಲಿ ವಿಚಾರಪಥ ಗ್ರಂಥದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಇರುವ ಲೇಖನಗಳಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ಹರಡಿಕೊಂಡಿರುವ ಸಾಹಿತ್ಯವನ್ನು ಕುರಿತಂಥ ವಿಚಾರಸರಣಿಗಳು ಈ ಮೇಲೆ ಉದ್ಧರಿಸಿದಂಥ ಮಾತುಗಳಿಗೆ ಇನ್ನಷ್ಟು ಸ್ಪಷ್ಟವಾದ ಪ್ರಬುದ್ಧವಾದ ವಿವರಣೆ, ವ್ಯಾಖ್ಯಾನಗಳಾಗಿವೆಯೇ ಹೊರತು 'ನಡೆದು ಬಂದ ದಾರಿ'ಯ ಮುನ್ನುಡಿ ರೂಪದ ಮಾತುಗಳಿಗೆ ವ್ಯತಿರಿಕ್ತವಾದ ಮಾತುಗಳಾಗಿಲ್ಲ ಎಂಬುದು ಮುಖ್ಯವಾದ ಸಂಗತಿಯಾಗಿದೆ. ಅಡಿಗರ ಹೊಸ ಕಾವ್ಯದ ಕಲ್ಪನೆ ಪ್ರಥಮ ದರ್ಜೆಯ ಕಾವ್ಯಸತ್ವವುಳ್ಳ ಕವಿಯೊಬ್ಬನ ಅಂತರಂಗದ ನಿಜದನಿಗೆ ನುಡಿ ಕೊಟ್ಟದ್ದಾಗಿತ್ತು. ಹೊಸತು ಬೇಕೆಂಬ ಕೇವಲ ತೋರಿಕೆಯ ಅನಿಸಿಕೆಯ ಮಾತಾಗಿರಲಿಲ್ಲ ಎಂಬುದನ್ನು ಮುಂದಿನ ಅವರ ಚಂಡೆ ಮದ್ದಳೆ, ಭೂಮಿಗೀತ, ವರ್ಧಮಾನ, ಇದನ್ನು ಬಯಸಿರಲಿಲ್ಲ ಎಂಬ ಕವನ ಸಂಕಲನಗಳು ಸಿದ್ಧಪಡಿಸಿ ತೋರಿಸಿವೆ. ಅಷ್ಟೇ ಅಲ್ಲದೆ, ಮುಂದೆ ಸುಮಾರು ಕಾಲು ಶತಮಾನಗಳ ಕಾಲ ಅವರಿಗಿಂತ ಕಿರಿಯ ತಲೆಮಾರಿನವರ ಕಾವ್ಯದ ಮೇಲೆ ಮಾತ್ರವಲ್ಲ ಹಿರಿಯ ತಲೆಮಾರಿನ ಮತ್ತು ಓರಗೆಯ ತಲೆಮಾರಿನ ಕವಿ, ಸಾಹಿತಿಗಳ ಮೇಲೆ ಹಾಗೂ ಬೇರೆ ಬೇರೆ ಸಾಹಿತ್ಯ ಪ್ರಕಾರಗಳ ಮೇಲೆ ಅವರ ಕಾವ್ಯ ಮತ್ತು ಸಾಹಿತ್ಯ ಚಿಂತನೆ ಬೀರಿದ ಪ್ರಭಾವ, ಒಡ್ಡಿದ ಸವಾಲು ಕನ್ನಡ ಸಾಹಿತ್ಯ ಚರಿತ್ರೆಯ ಮುಖ್ಯ ಅಧ್ಯಾಯಗಳಲ್ಲೊಂದಾಗಿದೆ. ಅಡಿಗರ ಕಾವ್ಯ ಮತ್ತು ಸಾಹಿತ್ಯಿಕ ಚಿಂತನೆಗಳು ಕಳೆದ ಕಾಲು ಶತಮಾನದಿಂದಲೂ ಪ್ರಬಲವಾದ ವಿರೋಧ ಮತ್ತು ಪ್ರಬಲವಾದ ಸಮರ್ಥನೆ ಎರಡನ್ನೂ ಎದುರಿಸಿಕೊಂಡು ಕುದುರಿಸಿಕೊಂಡು ಬೆಳೆದು ಬಂದದ್ದಾಗಿದೆ.

ಗೋಕಾಕರ ರೀತಿಯ ನವ್ಯಕಾವ್ಯದಂತೆ ಅಡಿಗರ ರೀತಿಯ ನವ್ಯಕಾವ್ಯದಲ್ಲಿಯೂ ಸಂಕೇತ ನಿಷ್ಠತೆ, ಪ್ರತಿಮಾ ಪ್ರಧಾನತೆ, ನವೋದಯ ರೀತಿಯ ನಿಯತ ಛಂದಸ್ಸಿನ ಉಲ್ಲಂಘನೆ, ಬುದ್ಧಿ ಪ್ರಧಾನತೆಗಳ ಮೇಲೆ ಒತ್ತು ಬಿದ್ದದ್ದು ಕಾಣುತ್ತದೆ. ಗೋಕಾಕರಂತೆ ಅಡಿಗರಲ್ಲಿಯೂ ಅಧ್ಯಾತ್ಮದ ತುಡಿತವಿರುವುದು ಕಾಣುತ್ತದೆ. ಗೋಕಾಕರು ಅರವಿಂದರ

ದರ್ಶನದ ಬಗೆಗೆ ಬೆಳೆಸಿಕೊಂಡ ನಂಬಿಕೆ, ಶ್ರದ್ಧೆಗಳ ಮೂಲಕ ಲೋಕದ ವಿದ್ಯಮಾನಗಳನ್ನು ಅಧಿಮಾನಸ, ವಿಶ್ವಮಾನವತಾವಾದಗಳ ಪರಿಕಲ್ಪನೆಯ ಸಂದರ್ಭದಲ್ಲಿಟ್ಟು ಧೇನಿಸುತ್ತಾರೆ, ವ್ಯಾಖ್ಯಾನಿಸುತ್ತಾರೆ. ಅಡಿಗರು ಸ್ವಾನುಭವದ ನಿಜದನಿಗಳನ್ನು ಆಪ್ತವಾಗಿ ಕೇಳಿಸಿಕೊಂಡು ಗುಣಾತ್ಮಕ ನಿರಪೇಕ್ಷತೆಯಲ್ಲಿ ಪರಿಭಾವಿಸಿ ಅದರೆಲ್ಲ ದ್ವಂದ್ವ, ಸಂಕೀರ್ಣತೆಗಳಲ್ಲಿ ಅದಕ್ಕೆ ಭಾಷೆಯಲ್ಲಿ ಆಕಾರ ಕೊಡುವ ವ್ರತನಿಷ್ಠ ಮನೋಭಾವದ ಕವಿಯಾಗಿದ್ದಾರೆ. ಆದ್ದರಿಂದ ವಿಶ್ವಮಾನವ ಪ್ರಜ್ಞೆಯ ಆದರ್ಶವು ಆರೋಪಿತಭಂಗಿ, ಪಾತ್ರಾಭಿನಯದ ನಿಲುವು ಎಂದು ಅವರಿಗೆ ತೋರಿದರೆ ಆಶ್ಚರ್ಯವಿಲ್ಲ. ವ್ಯಕ್ತಿಪ್ರಜ್ಞೆ ನಿಷ್ಠುರ ವಾಸ್ತವದ ನೆಲೆಯಲ್ಲಿ ಶೋಧನೆಗೊಳಗಾದಾಗ ಮನುಷ್ಯನ ದೌರ್ಬಲ್ಯ, ಸಣ್ಣತನಗಳನ್ನೂ ಅದು ಎತ್ತಿ ತೋರಿಸುವುದರಿಂದ ಅಂಥ ಕಾವ್ಯ ಮಾನವ ಚೈತನ್ಯದ ಔನ್ನತ್ಯದ ಬಗೆಗೆ ಆತ್ಮವಿಶ್ವಾಸ, ಆಶಾವಾದಿತ್ವ, ಮಹತ್ವಾಕಾಂಕ್ಷೆಗಳನ್ನು ಕುದುರಿಸದೆ ಓದುಗನಲ್ಲಿ ವಿಷಾದದ, ನಿರಾಶಾವಾದದ, ಸಿನಿಕತನದ ಧೋರಣೆಯನ್ನೇ ಹೆಚ್ಚಾಗಿ ಪೋಷಿಸೀತೆಂಬ ದಿಗಿಲು ಗೋಕಾಕರಿಗೂ ಇದ್ದರೆ ಆಶ್ಚರ್ಯವಿಲ್ಲ. ಒಟ್ಟಿನಲ್ಲಿ ಈ ಇಬ್ಬರೂ ಭಿನ್ನ ಪ್ರಕೃತಿಯ, ಭಿನ್ನ ದೃಷ್ಟಿಕೋನದ ಕವಿಗಳೆಂಬುದೂ ನವ್ಯಕಾವ್ಯದ ಎರಡು ಪ್ರಧಾನ ಪ್ರವೃತ್ತಿಗಳ ಪ್ರವರ್ತಕರೆಂಬುದೂ ಮುಖ್ಯವಾದ ಸಂಗತಿಯಾಗಿದೆ.

ಅಡಿಗರ ನವ್ಯಮಾರ್ಗದಿಂದ ಪ್ರಭಾವಿತರಾಗಿ ತಮ್ಮ ಕಾವ್ಯಜೀವನವನ್ನು ರೂಪಿಸಿಕೊಂಡ ಕವಿಗಳ ಸಂಖ್ಯೆ ಹೇರಳವಾಗಿದೆ. ಯುವತಲೆಮಾರಿನ ಪ್ರತಿಭಾಶಾಲಿ ಕವಿಗಳಲ್ಲಿ ಹಲವರು ಈ ಮಾರ್ಗಕ್ಕೆ ಸೇರುತ್ತಾರೆ. ಬಿ.ಸಿ.ರಾಮಚಂದ್ರಶರ್ಮರದು ನವ್ಯಕಾವ್ಯದ ಆರಂಭದ ಕಾಲದಲ್ಲಿ ಅಡಿಗರ ಜೊತೆ ಜೊತೆಯಲ್ಲೇ ಕೇಳಿಬರುತ್ತಿದ್ದ ಹೆಸರಾಗಿತ್ತು. ಏಳುಸುತ್ತಿನ ಕೋಟೆ (1953), ಬುವಿ ನೀಡಿದ ಸ್ಫೂರ್ತಿ, ಹೇಸರಗತ್ತೆ ಇವು ಅವರ ನವ್ಯಕಾವ್ಯ ಸಂಕಲನಗಳು. ಲೈಂಗಿಕ ವಸ್ತುವಿನಲ್ಲಿಯೇ ಹೆಚ್ಚಾದ ಲೋಲುಪತೆ ತೋರಿಸಿದ ಶರ್ಮರು ಅಭಿವ್ಯಕ್ತಿ ವಿಧಾನದ ಹೊಸತನ ಮತ್ತು ಕಸುವಿನಿಂದಾಗಿ ತುಂಬ ಭರವಸೆ ಹುಟ್ಟಿಸಿದ್ದರು. ಮುಂದೆ ಅವರ ಕಾವ್ಯಜೀವನ ಪ್ರವರ್ಧಮಾನವಾಗದೆ ಇಳಿಮುಖವಾಗಿರುವುದಕ್ಕೆ ಅವರ ಹೇಸರಗತ್ತೆ ಕವನ ಸಂಕಲನ ನಿದರ್ಶನವಾಗಿದೆ. ಮುಂದೆ ಶರ್ಮರಂತೆ ಕಾಮವೇ ಪ್ರಧಾನವಸ್ತುವಾಗಿ ಉಳ್ಳ ಕವನಗಳನ್ನು ಹೆಚ್ಚಾಗಿ ಬರೆದು ಶರ್ಮರನ್ನು ನೆನಪಿಗೆ ತಂದವರು ಕಾಮಿ, ಆಮೆ ಸಂಕಲನಗಳ ಎಚ್.ಎಂ.ಚನ್ನಯ್ಯನವರು. ಭಾಷೆಯ ಉಪಯೋಗ ಮತ್ತು ಲಯಗತಿಯಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಅವರು ರೂಢಿಸಿದರು. ಯು.ಆರ್.ಅನಂತಮೂರ್ತಿಯವರ 'ಬಾವಲಿ' ಸಂಕಲನವೇ ಇನ್ನೂ ಕೆಲವು ಕವನಗಳನ್ನೊಳಗೊಂಡು 15 ಪದ್ಯಗಳು ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಭಿಕ್ಷುಕರು, ಕಿಳ್ಳೇಕ್ಯಾತರ ಹುಡುಗಿ, ರಾಜನ ಹೊಸ ವರ್ಷದ ಬೇಡಿಕೆಗಳಂಥ ಉತ್ತಮ ಕವನಗಳು ಅದರಲ್ಲಿವೆ. ಪಿ.ಲಂಕೇಶರು ಬಿಚ್ಚು, ತಲೆಮಾರು ಎಂಬ ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ ಪ್ರಥಮ ಸಂಕಲನವಾದ ಬಿಚ್ಚುವಿನಲ್ಲಿ ಹಲವು ಉತ್ತಮ ಕವನಗಳಿವೆ. ಅಡಿಗರಿಗೆ ಭಿನ್ನವಾದ ಲಯಸಾಧ್ಯತೆಗಳ ಹುಡುಕಾಟವಿದೆ. ಕವಿಯ ವಿಶಿಷ್ಟವೂ ಸತ್ವಪೂರ್ಣವೂ ಆದ ದನಿಯ ಮುದ್ರೆ ಇದೆ. ಅವರ ಅವ್ವ ಕನ್ನಡದ ಅತ್ಯುತ್ತಮ ಕವನಗಳಲ್ಲೊಂದೆಂದು ಸುಪ್ರಸಿದ್ಧವಾಗಿದೆ. ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಸಂಕಲನದ ಅನಂತರ ಪೂರ್ಣಚಂದ್ರ ತೇಜಸ್ವಿಯವರು ಕವನಗಳನ್ನು ಹೆಚ್ಚು ಬರೆಯಲಿಲ್ಲ.

ಚಂದ್ರಶೇಖರ ಪಾಟೀಲರು ಬಾನುಲಿ, ಮಧ್ಯಬಿಂದು, ಹತ್ತೊಂಬತ್ತು ಕವನಗಳು ಮುಂತಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಮಕಾಲೀನ ಪ್ರಜ್ಞೆ, ಜೀವನದ ಬಗ್ಗೆ ಲವಲವಿಕೆ, ವಿಡಂಬನೆಯ ಮಾತುಗಾರಿಕೆ, ಅರ್ಥಭಾರವನ್ನು ಹಗುರಾಗಿ ತೇಲಿಸುವ ಜಾಣ್ಮೆ, ಅಭಿವ್ಯಕ್ತಿಯ ವ್ಯಂಗ್ಯಪೂರ್ಣತೆ ಇವು ಎಲ್ಲ ಕವಿತೆಗಳ ಸಾಮಾನ್ಯ ಲಕ್ಷಣಗಳು ಎಂದು ಹತ್ತೊಂಬತ್ತು ಕವನಗಳು ಸಂಗ್ರಹದ ಹಿನ್ನುಡಿಯಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಹೇಳಿದ ಮಾತು ಪಾಟೀಲರ ಒಟ್ಟು ಕಾವ್ಯಕ್ಕೇ ಅನ್ವಯವಾಗಬಹುದಾದ ಮಾತಾಗಿದೆ. ಚಂದ್ರಶೇಖರ ಕಂಬಾರರ ಹೇಳತೇನ ಕೇಳ, ತಕರಾರಿನವರು ನವ್ಯಕಾವ್ಯ ಸಂಕಲನಗಳಾಗಿವೆ. ಜನಪದ ಭಾಷೆಯ ಬಳಕೆ ಮತ್ತು ಕಲ್ಪಕತೆಯ ಸಮೃದ್ಧಿ ಪ್ರಥಮ ದರ್ಜೆಯದಾಗಿದೆ. ನವ್ಯಧೋರಣೆ ಮತ್ತು ಅಭಿವ್ಯಕ್ತಿ ತಂತ್ರಕ್ಕೆ ಜನಪದದ ಜೀವಂತ ಆಡುಭಾಷೆಯನ್ನು ಕಸಿಗೊಳಿಸುವುದರಲ್ಲಿ ಅವರ ಸಾಧನೆ ಅಪೂರ್ವವಾದದ್ದಾಗಿದೆ. ಜನ್ಮಜಾತ ಕವಿಪ್ರತಿಭೆಯ ಪುಟಿತ ಇವರಷ್ಟು ಸಹಜ ಸಮೃದ್ಧಿಯಲ್ಲಿ ಅಡಿಗರ ಅನಂತರದ ಇನ್ನಾವ ನವ್ಯಕವಿಯಲ್ಲಿಯೂ ಕಾಣುವುದಿಲ್ಲ. ಕಂಬಾರರು ಅಡಿಗರ ಪ್ರಭಾವದಿಂದ ಬಿಡಿಸಿಕೊಳ್ಳಬೇಕೆಂಬ ತಮ್ಮ ಅನಿಸಿಕೆಯನ್ನು ಇತರರೊಂದಿಗೆ ತಾವು ಸಂಪಾದಿಸಿದ 'ಅಕಾವ್ಯ' ಎಂಬ ಪತ್ರಿಕೆಯಲ್ಲಿ 'ಏನೇನೋ ಮಾಡಿ ಸುದ್ದಿಯಲ್ಲಿರುವ ಗತ್ತಲ್ಲ 'ಅಕಾವ್ಯ'. ಅಥವಾ ಜಾತೀಯತೆಯ ಕಿಡಿಗೇಡಿ ರಾಜಕೀಯವೂ ಅಲ್ಲ. ನಮಗೂ ಗಂಭೀರ ಕಾಳಜಿಗಳಿವೆ. ಘೋಷಣೆಗಳಿಂದ ಹೊಸ ಕಾವ್ಯ ಹುಟ್ಟಬಾರದೆಂದೇನು ನಿಯಮವಿದೆಯೇ? ಅಕಾವ್ಯ ನಮಗೆ ನಾವೇ ಹಾಕಿಕೊಂಡ ಸವಾಲು, ಅದಕ್ಕೆ ಜವಾಬು ಹುಡುಕುವುದು ನಮ್ಮ ಜವಾಬ್ದಾರಿ. ಸತ್ವವಿದ್ದರೆ ಅದನ್ನು ಗುರುತಿಸುವುದು ಗುಣಪಕ್ಷಪಾತಿಗಳಾದ ಸಹೃದಯರ ಜವಾಬ್ದಾರಿ' ಎಂದು ದಿಟ್ಟತನದಿಂದ ಪ್ರತಿಪಾದಿಸಿದ್ದುಂಟು.

ನಿಮ್ಮ ಪ್ರೇಮಕುಮಾರಿಯ ಜಾತಕ, ಕಪ್ಪು ದೇವತೆ ಮತ್ತು ಲೀಲಾರಾಮರ ಕವನಗಳು ಎಂಬ ಸಂಕಲನಗಳ ಸುಮತೀಂದ್ರ ನಾಡಿಗರು ಪದ್ಯ ಕಟ್ಟುವುದರಲ್ಲಿ ತೋರುವ ಚಾಕಚಕ್ಯತೆ, ಸಹಜತೆಗಳು ಮನಸೆಳೆಯುವಂತಿವೆ. ಎಲ್ಲ ಕವನಗಳಿಗೂ ತಮ್ಮನ್ನು ಓದಿಸಿಕೊಳ್ಳುವ ಗುಣ ಇದ್ದೇ ಇದೆ. ಕಪ್ಪು ದೇವತೆ ಬಹುಶಃ ಅವರ ಅತ್ಯುತ್ತಮ ಕವನವಾಗಿದೆ. ಪದ್ಯ ಕಟ್ಟುವ ಚಾಕಚಕ್ಯತೆಯಲ್ಲಿ, ಸಹಜತೆಯಲ್ಲಿ ಸುಮತೀಂದ್ರರನ್ನೂ ಮೀರಿಸುವಂತಿರುವ ನಿಸಾರ್ ಅಹಮದ್ ಅವರು ಮನಸ್ಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ಸುಮುಹೂರ್ತ, ಸಂಜೆ ಐದರ ಮಳೆ, ನಾನೆಂಬ ಪರಕೀಯ ಮುಂತಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ವೃತ್ತ, ಸುಳಿ, ನಿನ್ನೆಗೆ ನನ್ನ ಮಾತು ಮುಂತಾದ ಹಲವಾರು ಸಂಕಲನಗಳನ್ನು ಪ್ರಕಟಿಸಿರುವ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರೂ ಹೇಳುವುದನ್ನು ಪರಿಷ್ಕಾರವಾಗಿ ರುಚಿಕರವಾಗಿ ಹೇಳುವುದರ ಮೂಲಕ ಓದುಗನನ್ನು ಮುಟ್ಟುವ ಕವಿ. ರಸಗಂಗೆ, ಉತ್ತರ, ಚಿತ್ರವಿಚಿತ್ರ ಎಂಬ ಸಂಕಲನಗಳನ್ನು ಪ್ರಕಟಿಸಿರುವ ಜಿ.ಎಸ್.ಸಿದ್ಧಲಿಂಗಯ್ಯನವರೂ ಅಂಜೂರ, ನದಿಯ ಮೇಲಿನ ಗಾಳಿ ಸಂಕಲನಗಳನ್ನು ಪ್ರಕಟಿಸಿರುವ ಕ.ವೆಂ.ರಾಜಗೋಪಾಲರೂ ಯಾವ ಅತಿಗೂ ಹೋಗದೆ ಕಾವ್ಯ ರಚಿಸಬೇಕೆಂಬ ಹಂಬಲವಿರುವವರು. ರಾಜಗೋಪಾಲರ ಮನಸ್ಸಿಗೆ ಮೃದುವಾಗುವ, ಕರಗುವ ಗುಣ ಇದೆ. ಸಿದ್ಧಲಿಂಗಯ್ಯನವರ ಮನಸ್ಸು ಸರಿ ತಪ್ಪುಗಳ ಬಗೆಗೆ ಹೆಚ್ಚಿನ ಆತ್ಮವಿಶ್ವಾಸದಿಂದ ವ್ಯವಹರಿಸುತ್ತದೆ. ಅವರ 'ಮಿಥಿಲೆಗಿಲ್ಲಿಂದಲೇ ಮಾರ್ಗವೇನು ಗುರು' ಸಾಕಷ್ಟು ಪ್ರಸಿದ್ಧಿಪಡೆದ ಕವನವಾಗಿದೆ.

ಕೆ.ವಿ.ತಿರುಮಲೇಶರು ಮುಖವಾಡಗಳು, ವಠಾರ, ಮಹಾಪ್ರಸ್ಥಾನ ಮುಂತಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಭಾಷೆ ಮತ್ತು ಲಯದ ದೃಷ್ಟಿಯಿಂದ ನೋಡಿದಾಗ ಅವರು ಅನನ್ಯತೆಯನ್ನು ಪ್ರಕಟಿಸಿರುವುದು ಕಂಡು ಬರುತ್ತದೆ. ಕೊಕ್ಕೊಡುತ್ತ ಹರಿಯುವ ಲಯಗತಿ ಅವರ ಕಾವ್ಯದ ಲಯವಿಧಾನದಲ್ಲಿ ಹೆಚ್ಚಾಗಿ ಕಾಣುತ್ತದೆ. ಮಹಾಪ್ರಸ್ಥಾನ ಅವರ ಕಾವ್ಯ ಗಂಭೀರವಾದ ಆಯಾಮವನ್ನು ಮೈಗೂಡಿಸಿಕೊಳ್ಳುತ್ತ ಬೆಳೆಯುತ್ತಿದೆಯೆಂಬುದಕ್ಕೆ ಸಾಕ್ಷಿ ನುಡಿಯುವಂತಿದೆ. ಶ್ರೀಕೃಷ್ಣ ಆಲನಹಳ್ಳಿಯವರ ಮಣ್ಣಿನ ಹಾಡು, ಕಾಡುಗಿಡದ ಹಾಡು ಪಾಡು ಸಂಕಲನಗಳ ಕವನಗಳು ತಮ್ಮ ಕಸುವು ಮತ್ತು ಜೀವನಾನುರಕ್ತಿಯಿಂದಾಗಿ ಮನಸೆಳೆಯುತ್ತವೆ. ಗೋಪಿ ಮತ್ತು ಗಾಂಡಲೀನ ಸಂಕಲನದ ಬಿ.ಆರ್.ಲಕ್ಷ್ಮಣರಾವ್ ಅವರ ಬರೆವಣಿಗೆಗೆ ತನ್ನದೇ ಆದ ಧಾಟಿ ಧೋರಣೆಗಳಿವೆ.

ಅನನ್ಯ ರೀತಿಗಳಲ್ಲಿ ಆಡುಭಾಷೆಯ ಪ್ರಯೋಗ ನಡೆಸುವುದರ ಮೂಲಕ ನವ್ಯಕಾವ್ಯಕ್ಕೆ ವೈವಿಧ್ಯವನ್ನೂ ಹೊಸ ಆಯಾಮವನ್ನೂ ತಂದುಕೊಟ್ಟವರು 'ಹೊಕ್ಕುಳಲ್ಲಿ ಹೂವಿಲ್ಲ' ಸಂಕಲನದ ಎ.ಕೆ.ರಾಮಾನುಜನ್ ಮತ್ತು ಶಿಲಾಲತೆ, ಮನೆಯಿಂದ ಮನೆಗೆ ಸಂಕಲನಗಳ ಕೆ.ಎಸ್.ನರಸಿಂಹ ಸ್ವಾಮಿಯವರು. ಅಡಿಗರು ಹೆಚ್ಚು ಸಂಕೀರ್ಣವೂ ವೈವಿಧ್ಯಪೂರ್ಣವೂ ಆದ ಬಗೆಯಲ್ಲಿ ಕನ್ನಡ ಭಾಷೆಯ ಸಾಧ್ಯತೆಯನ್ನು ಸೂರೆಮಾಡಿದ್ದು ನಿಜ. ಆದರೆ ಈ ಇಬ್ಬರೂ ಕೇವಲ ಶಿಷ್ಟ ಕನ್ನಡ ನುಡಿಯನ್ನು ಶ್ರುತಿಗೊಳಿಸುವುದರ ಮೂಲಕವೇ ಎಂಥೆಂಥ ಲಯವಿನ್ಯಾಸ, ಏನೆಲ್ಲ ಪಲುಕು, ಸೂಕ್ಷ್ಮಗಳನ್ನು ದುಡಿಸಿಕೊಳ್ಳಬಹುದೆಂಬುದನ್ನು ಅತ್ಯುತ್ತಮ ಮಟ್ಟದಲ್ಲಿ ತಮ್ಮದೇ ಆದ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ನಾಗರಿಕ (ಅರ್ಬನ್) ಭಾಷೆಯಲ್ಲಿಯೇ ವಿವಿಧ ಲಯ ಸಾಧ್ಯತೆಗಳನ್ನು ಲಂಕೇಶರೂ ಅನಂತರದ ತಿರುಮಲೇಶರೂ ತೆರೆದು ತೋರಿಸಿ ಆಡುನುಡಿಗೆ ಲಯವೈವಿಧ್ಯವನ್ನು ತಂದದ್ದು ಉಂಟಾದರೂ ಅವರಿಬ್ಬರ ಆ ಪ್ರಯೋಗಗಳಲ್ಲಿಯೂ ಲಯ ಗತಿಯ ವೇಗ, ತುಯ್ತಗಳು ಜಾಸ್ತಿಯಾಗಿದ್ದವು. ಚಂದ್ರಶೇಖರ ಕಂಬಾರರೂ ಜನಪದ ಆಡುಭಾಷೆಯನ್ನು ಬಳಸಿದಲ್ಲೆಲ್ಲ ಅದನ್ನು ಹೊಸ ಸಂವೇದನೆಗೆ ಒಗ್ಗಿಸುವುದರ ಮೂಲಕ ನವ್ಯಕಾವ್ಯರೀತಿಗೆ ಹೊಸ ವೈವಿಧ್ಯ, ಆಯಾಮ ತಂದಿದ್ದಾರೆ. ಆದರೆ ರಾಮಾನುಜನ್ ಮತ್ತು ಕೆ.ಎಸ್.ನ ಅವರು ಆಡುನುಡಿಯ ನಡಿಗೆಯನ್ನು ನಿಧಾನಗೊಳಿಸಿ ಗದ್ಯಗತಿಗೆ ಪದ್ಯದ ಲಯಗತಿಯನ್ನು ಎಷ್ಟು ಹತ್ತಿರ ತಂದು ಕಾವ್ಯವನ್ನು ಸೃಷ್ಟಿಸಬಹುದೆಂಬುದನ್ನು ಕನ್ನಡದಲ್ಲಿ ಅದರ ಆತ್ಯಂತಿಕ ಸ್ಥಿತಿಯಲ್ಲಿ ತೋರಿಸಿಕೊಟ್ಟವರೆಂಬುದನ್ನು ಮರೆಯುವಂತಿಲ್ಲ. ರಾಮಾನುಜನ್ ಅವರ ಮೇಲೆ ಅಡಿಗರ ಪ್ರಭಾವ ತೋರಿಸುವುದು ಕಷ್ಟ ಅವರದು ಶುದ್ಧವಾಗಿ ಹೊಸದನಿ. ಕೆ.ಎಸ್.ನರಸಿಂಹಸ್ವಾಮಿಯವರು ಮೈಸೂರು ಮಲ್ಲಿಗೆ, ಇರುವಂತಿಗೆ ಮುಂತಾದ ಕವನಸಂಕಲನಗಳಲ್ಲಿ ನವೋದಯದ ರೀತಿಯಲ್ಲಿ ಸುಕುಮಾರವಾಗಿ, ಅಚ್ಚುಕಟ್ಟಾಗಿ ಬರೆಯುತ್ತಿದ್ದವರು. ಶಿಲಾಲತೆಯಿಂದ ಮುಂದಿನ ಕಾವ್ಯದಲ್ಲಿ ಸೌಕುಮಾರ್ಯ, ಅಚ್ಚುಕಟ್ಟುಗಳು ಇಲ್ಲವೆಂದಲ್ಲ. ಆದರೆ ಅವು ಬದುಕಿನ ಗಂಭೀರ ಆಳಗಳನ್ನು ಬಗೆಯವಲ್ಲಿ ಬಳಕೆಯಾದ ರೀತಿ ಅನನ್ಯವಾಗಿದೆ. ರಾಮಾನುಜನ್ ಅವರ ಬರೆವಣಿಗೆಯ ಪ್ರಭಾವ ಕೆಲವು ಎಳೆಯ ಕವಿಗಳ ಮೇಲೆ ಆದಂತೆ ನರಸಿಂಹಸ್ವಾಮಿಯವರ ಪ್ರಭಾವ ಅಷ್ಟಾಗಿ ಆದಂತೆ ತೋರುವುದಿಲ್ಲ. ರಾಮಾನುಜನ್ ಅವರನ್ನು ಅನುಕರಿಸಿದವರಿಗೂ

ರಾಮಾನುಜನ್ ಅವರ ಶಿಷ್ಟ ನಾಜೂಕನ್ನು (ಸೊಫಿಸ್ಟಿಕೇಷನ್) ರೂಢಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಆದ್ದರಿಂದ ಉಳಿದವರಲ್ಲಿ ಹೆಚ್ಚು ಕಡೆಗಳಲ್ಲಿ ಲಯದ ಕಸರತ್ತುಗಳಾಗಿಯೇ ಕಾಣಿಸುವಂತಾಯಿತು.

ಜಿ.ಎಸ್.ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿಯವರು ತಮ್ಮ ಕವಿ ಜೀವನದ ಪ್ರಥಮ ಹಂತದಲ್ಲಿ ನವೋದಯದ ಸೌಂದರ್ಯಾರಾಧಕ ಮನೋಭಾವವನ್ನು ಬೆಳೆಸಿಕೊಂಡಿದ್ದವರು. ಶಿವರುದ್ರಪ್ಪನವರ ಸಾಮಗಾನ, ಚೆಲುವು – ಒಲವು, ದೇವಶಿಲ್ಪಗಳೂ ಕಣವಿಯವರ ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ಮಧುಚಂದ್ರಗಳೂ ಆ ರೀತಿಯ ಮನೋಭಾವವನ್ನೂ ಪ್ರತಿನಿಧಿಸುತ್ತವೆ. ಶಿವರುದ್ರಪ್ಪನವರ ದೀಪದ ಹೆಜ್ಜೆ ಕವನಸಂಕಲನ ಅವರ ಕಾವ್ಯಜೀವನದ ಮಹತ್ತ್ವದ ಘಟ್ಟವನ್ನು ಸೂಚಿಸಿತು. ಅವರ ಕಾವ್ಯಶಕ್ತಿ ಹೊಸ ಚೈತನ್ಯವನ್ನು ರೂಢಿಸಿಕೊಳ್ಳುತ್ತದೆ ಎಂಬ ಭರವಸೆಯನ್ನೂ ಹುಟ್ಟಿಸಿತು. ಆದರೆ ಮುಂದೆ ಬಂದ ಕಾರ್ತೀಕ, ಅನಾವರಣ, ತೆರೆದ ದಾರಿ, ಗೋಡೆ ಸಂಕಲನಗಳು ನಿರೀಕ್ಷಿತ ಬೆಳವಣಿಗೆಯನ್ನು ತೋರಿಸದಿದ್ದುದು ಆಶ್ಚರ್ಯ. ಕಣವಿಯವರ ಮಣ್ಣಿನ ಮೆರವಣಿಗೆ, ನೆಲಮುಗಿಲು, ಎರಡು ದಡಗಳಲ್ಲಿ ಮಹತ್ವಾಕಾಂಕ್ಷೆಯ ಬರೆವಣಿಗೆ ಕಾಣುತ್ತದೆ. ಈ ಇಬ್ಬರು ಕವಿಗಳನ್ನು 'ಸಮನ್ವಯ' ಕವಿಗಳೆಂದು ಕರೆಯುವ ಪರಿಪಾಠ ಬಂದುಹೋಗಿದೆ. ನವೋದಯ ನವ್ಯಗಳ ನಡುವೆ ತಮ್ಮದೇ ಆದ ವಿಶಿಷ್ಟ ಬಗೆಯ ಸೃಜನಾತ್ಮಕ ಭಾವಸಂಬಂಧ ಸ್ಥಾಪಿಸಲು ಹೆಣಗುವುದರಲ್ಲಿ ಅವರಿಬ್ಬರಲ್ಲಿ ಕಂಡುಬರುತ್ತಿರುವ ಸಾಮ್ಯವೇ ಅವರನ್ನು ಹಾಗೆ ಕರೆಯುವುದಕ್ಕೆ ಕಾರಣವಾಗಿರುವಂತಿದೆ. ಇಲ್ಲಿಯೇ ಹೆಸರಿಸಬಹುದಾದ ಇನ್ನಿಬ್ಬರು ಕವಿಗಳು ನಾಣ್ಯಯಾತ್ರೆ, ಮಂಗಳಾರತಿ, ಕುಂಡಗಳೇ ಸಾಕು ಸಂಕಲನಗಳ ಸುಜನಾ (ಎಸ್.ನಾರಾಯಣ ಶೆಟ್ಟಿ) ಮತ್ತು ತಾರಾಸಖ, ಅನಂತ ಪೃಥ್ವೀ, ಪ್ರಕೃತಿ, ವರ್ತಮಾನ, ಮೊದಲಾದ ಸಂಕಲನಗಳ ಸಿ.ಪಿ.ಕೆ. (ಸಿ.ಪಿ.ಕೃಷ್ಣಕುಮಾರ್).

ನವೋದಯ ಕಾವ್ಯರೀತಿಗೆ ಭಿನ್ನವಾದ ರೀತಿಯ ಕಾವ್ಯಸೃಷ್ಟಿಯಲ್ಲಿ ತೊಡಗಿದ ಮೊದಲಿಗರಲ್ಲಿ ದಿವಂಗತ ಪೇಜಾವರ ಸದಾಶಿವರಾಯ ಮತ್ತು ವಿ.ಜಿ.ಭಟ್ಟರನ್ನು ಮರೆಯುವಂತಿಲ್ಲ. ತಮ್ಮಚಿಕ್ಕ ವಯಸ್ಸಿನಲ್ಲಿಯೇ ಇಟಲಿಯಲ್ಲಿ ತೀರಿಹೋದ ಶಿಲ್ಪಶಾಸ್ತ್ರ ತಜ್ಞರೂ ಕವಿಯೂ ಆದ ಪೇಜಾವರ ಸದಾಶಿವರಾಯರ ವರುಣ ಎಂಬ ಸಂಕಲನ ಅವರ ಮರಣಾನಂತರ 1952ರಲ್ಲಿ ಪ್ರಕಟವಾದರೂ ನವ್ಯಕಾವ್ಯದ ಅಧಿಕೃತ ಘೋಷಣೆಯಾಗುವುದಕ್ಕಿಂತ ಹಿಂದೆಯೇ ಅಂದರೆ 1950ಕ್ಕಿಂತ ಮೊದಲೇ ಅವರು ನಾಟ್ಯೋತ್ಸವ, ವರುಣದಂಥ ಕವನಗಳನ್ನು ಬರೆದಿದ್ದಂತೆ ತಿಳಿದುಬರುತ್ತದೆ. ನಾಟ್ಯೋತ್ಸವ ಇಂದಿಗೂ ತನ್ನ ಜೀವನೋತ್ಸಾಹ, ಲಯ ವೈವಿಧ್ಯ, ಹೊಸತನಗಳಿಂದಾಗಿ ಮನಸೆಳೆಯುವಂತಿದೆ. ಪಲಾಯನ, ರಕ್ತಾಂಜಲಿ, ತುಂಟನ ಪದಗಳು, ಕಾವ್ಯ ವೇದನೆ, ಕಿಷ್ಕಿಂದೆ ಸಂಕಲನಗಳ ವಿ.ಜಿ.ಭಟ್ಟರು ಸೂತ್ರಗಳಿಗೆ ಸಿಲುಕದೆ ಸುಸೂತ್ರವಾಗಿ ಬದುಕಲು ಆಗುವುದೆಂಬ ವಿಶ್ವಾಸವುಳ್ಳವರೆಂದು ತಾವೇ ಹೇಳಿಕೊಂಡಿದ್ದಾರೆ. ಸೂತ್ರಗಳಿಗೆ ಸಿಗದ ಸ್ವತಂತ್ರಮನೋಧರ್ಮ ಅವರದೆಂಬುದರಲ್ಲಿ ಅನುಮಾನಕ್ಕೆ ಎಡೆಯಿಲ್ಲ. ಆದರೆ 'ಸುಸೂತ್ರ' ಎಂಬ ಮಾತಿಗೆ ಸಲೀಸಾಗಿ ಎಂಬ ಸಾಮಾನ್ಯಾರ್ಥ ಮಾಡಿದರೆ ಅವರೂ ಒಪ್ಪಲಿಕ್ಕಿಲ್ಲ. ಏಕೆಂದರೆ ಅವರಿಗೆ ಬದುಕಿನ ಸಲೀಸುತನದಲ್ಲಿ ನಂಬಿಕೆಯಿಲ್ಲ. ಒಳ್ಳೆಯ ಸೂತ್ರವೊಂದು ತಮ್ಮ ಕಾವ್ಯದಲ್ಲಿದೆ ಎಂಬರ್ಥದಲ್ಲಿ ಅವರು ಸುಸೂತ್ರ ಎಂಬ ಪದ ಬಳಸಿದ್ದರೆ ಅದರಲ್ಲಿ ಆತ್ಮಪ್ರತ್ಯಯ ಕಂಡುಬಂದರೂ ಸತ್ಯಾಂಶವಿದೆ. ಇಲ್ಲಿಯೇ ಹೆಸರಿಸಬೇಕಾದವರು ನಂದನ, ನಾಯಿಕೊಡೆ ಸಂಕಲನಗಳ ಎಚ್.ಎಸ್.ಬಿಳಿಗಿರಿಯವರು. ವಿ.ಜಿ.ಭಟ್ಟರಂತೆ ಅವರೂ ಯಾವ ಸೂತ್ರಕ್ಕೂ ಸಿಲುಕದ ಕವಿ. ವಿಡಂಬನ ಬರೆವಣಿಗೆಗೆ ಹೆಸರಾದವರು. ಅವರ ವಿಡಂಬನೆಯಲ್ಲಿ ಮೊನಚಿದ್ದರೂ ಪರೋಕ್ಷವಾದ ಆತ್ಮಪ್ರಶಂಸೆಯಿಲ್ಲದ ನಿರ್ಲಿಪ್ತ ಮನೋಭಾವವಿದೆ. ಭಟ್ಟರಿಗೂ ಬಿಳಿಗಿರಿಯವರಿಗೂ ತಮ್ಮ ಬರೆವಣಿಗೆಯಿಂದ ಲೋಕ ತಿದ್ದುತ್ತೇವೆಂಬ ಭಂಗಿಯನ್ನು ಆರೋಪಿಸಿಕೊಳ್ಳುವ ಉಮೇದಿಲ್ಲ. ನೇರವಾಗಿ ಸೂಕ್ಷ್ಮವಾಗಿ ನೋಡುವ ಚುರುಕು ಆಸಕ್ತಿಯಿದೆ.

ಕಾವ್ಯಾರ್ಪಣ, ಮಾಯಾವಿ, ಜರಾಸಂಧ– ಸಂಕಲನಗಳನ್ನು ಪ್ರಕಟಿಸಿದ ಅರವಿಂದ ನಾಡಕರ್ಣಿ; 'ಹಸಿರು ದೀಪ'ದ ಸುಂದರ ನಾಡಕರ್ಣಿ; 'ಶೂದ್ರ'ದ ಹಾ. ಮ. ಪಟೇಲ; 'ರಂಗದಿಂದೊಂದಿಷ್ಟು ದೂರ'ದ ಜಯಂತ ಕಾಯ್ಕಿಣಿ; 'ಮನುಷ್ಯ'ದ ಆರ್ಯ; 'ಬೆಂಕಿಬಳ್ಳಿ', 'ಹೊಕ್ಕಳು'ಗಳ ಜಿ.ಎಸ್.ಅವಧಾನಿ,; 'ನೀನಾ', 'ಔರಂಗಜೇಬ'ದ ಸಿದ್ಧಲಿಂಗ ಪಟ್ಟಣಶೆಟ್ಟಿ; 'ರಸವಂತಿ', 'ಮರ್ಲಿನ್ ಮನ್ರೋ ಮತ್ತು ಇತರ ಪದ್ಯಗಳು' ಕಾವ್ಯದ ಗಿರಡ್ಡಿ ಗೋವಿಂದರಾಜ; 'ಹೂವು ಚೆಲ್ಲಿದ ಹಾದಿಯಲ್ಲಿ'ಯ ಕೆ.ವಿ.ಸುಬ್ಬಣ್ಣ; 'ನಂದಿಕೋಲು'ನ ಚಂದ್ರಕಾಂತ ಕುಸನೂರ; ಮುಸುಕು ನಸುಕು ಜೀವಜೀವಂತ ಸಂಕಲನಗಳ ವೇಣುಗೋಪಾಲ ಸೊರಬ 'ವಿದಾಯ'ದ (ದಿ) ಯರ್ಮುಂಜ ರಾಮಚಂದ್ರ; 'ಬೆಂಕಿ', 'ಗಂಡಹೆಂಡಿರ ಜಗಳ ಗಂಧ ತೀಡಿದ್ಹಾಂಗ'ಗಳ ಸೋಮಶೇಖರ ಇಮ್ರಾಪುರ; ಪರಿವೃತ್ತ, ಬಾಗಿಲು ಬಡಿವ ಜನ, ಮೊಖ್ತಾ ಸಂಕಲನಗಳ ಎಚ್.ಎಸ್.ವೆಂಕಟೇಶಮೂರ್ತಿ; 'ಅಜ್ಜಗಾವಲು'ನ ಶಾಮಸುಂದರ ಬಿದರಕುಂದಿ; ಜಗಲಿ ಹತ್ತಿ ಇಳಿದು, ಕಣ್ಣು ನಾಲಗೆ ಕಡಲು, ನಾಡಾಡಿ ಸಂಕಲನಗಳ ದೊಡ್ಡರಂಗೇಗೌಡ, ಇಲ್ಲದ್ದು, ಇನ್ನಾದರೂ ಬದುಕಬೇಕು ಸಂಕಲನಗಳ ಜಯಸುದರ್ಶನ,; 'ತುಡುಗಿ'ಯ.ಎಚ್.ಎಸ್. ಭೀಮನಗೌಡರ; 'ಕಿಸ್ಮ'ಯ ಸಿಂಹ ಕೊಳ್ಳೇಗಾಲ; 'ಗದ್ಯದಿಂದ ಪದ್ಯಕ್ಕೆ' ಸಂಕಲನದ ಜಾಗೋ; ಏಕಾಂತ, ಉತ್ತರ ಧ್ರುವಗಳ ಕಾವ್ಯದ ಕೆ.ಎನ್.ಶಿವಪ್ಪ; ಋತಗೀತಾಮೃತ, ರಾಮದಾಸರ ಕವನಗಳು ಸಂಕಲನಗಳ ರಾಮದಾಸ್; (ಪ್ರೇಮಸೋದರ); 'ಅಭೀಪ್ಸೆ'ಯ ಸಣ್ಣಗುಡ್ಡಯ್ಯ; 'ಯಾತ್ರೆ'ಯ ರಾಗೌ; 'ತಾಕಲಾಟ'ದ ಬಿ.ಎಸ್.ಜಗದೀಶ; 'ಮರಕುಟಿಗ'ದ ಬರಗೂರು ರಾಮಚಂದ್ರಪ್ಪ,; 'ಮುಕ್ತ'ದ ಜೈರಾಮ ಹೆಗ್ಗಡೆ; 'ಇರುತ್ತವೆ'ಯ ಡಿ.ವಿಜಯ; 'ತೆರೆ'ಯ ಸುಬ್ರಾಯ ಚೊಕ್ಕಾಡಿ; 'ಅಸ್ತವ್ಯಸ್ತ'ದ ವಿ.ಮ.ಜಗದೀಶ; 'ಕಲೈಡೋಸ್ಕೋಪ'ದ ಎಂ.ಎಲ್.ಚೆನ್ನಕೇಶವಶಾಸ್ತ್ರಿ; 'ಶಾಪ'ದ ಬಿ.ಸೋಮಶೇಖರ; ಮೊದಲು ತೊದಲು ಸಂಕಲನದ ಸಂ.ವಾ.ದ; ನಕ್ಷತ್ರಗಳು ಸಂಕಲನದ ನಾಗಭೂಷಣಸ್ವಾಮಿ,; 'ಪಿಸುಗುಟ್ಟಿತು ಬಯಕೆ'ಯ ಪರಮೇಶ, 'ಆಕ್ಟೋಪಸ್'ದ ಎಸ್.ಜಿ.ಶಿವಶಂಕರ್; ದಾರಿ ಮಗ್ಗುಲಹಾಡು ಸಂಕಲನದ ಮು. ಶಿವನಂಜಯ್ಯ; 'ನಾಲ್ಕು ಹಿಡಿಬೆಂಕಿ'ಯ ದೇಶಪಾಂಡೆ ಸುಬ್ಬರಾಯ; 'ಕರೀತೆಲಿ ಮಾನವನ ಜೀಪದ'ದ ಚೆನ್ನಣ್ಣ ವಾಲೀಕಾರ; 'ಚಿಗಳಿ'ಯ ಸಿದ್ಧಲಿಂಗ ದೇಸಾಯಿ; 'ನಸುಕು ಹರಿಯುವ ಮುನ್ನ'ದ ಎಂ.ಬಿ.ನಟರಾಜ; 'ಹುಲ್ಲು ಹೆಜ್ಜೆ' 'ಶಬ್ದರಕ್ತಮಾಂಸ'ದ ಬುದ್ದಣ್ಣ ಹಿಂಗಮಿರೆ; ಹತ್ತರ ಕೂಡ ಹನ್ನೊಂದು ಸಂಕಲನದ ಶಿವಶರಣ ಜಾವಳಿ; ಪ್ರಣಯ ಚೈತ್ರ, ವಿಷಾದನಕ್ಷೆಗಳ ವೀಚಿ; ನೆರಳು ಸಂಕಲನದ ಗಂಗಾಧರ ಭಟ್; 'ಕಾರವಾನ'ದ ವಿಷ್ಣುಮೂರ್ತಿ; ಗರಿ ಮುರಿದ ಹಕ್ಕಿಗಳು ಸಂಕಲನದ ವೇಣುಗೋಪಾಲಕಾಸರಗೋಡು; 'ಸಾರಂಗ'ದ ವಿ.ಎನ್.ನಾಯಕ; ಹೊಲೆಮಾದಿಗರ ಹಾಡು ಸಂಕಲನದ ಸಿದ್ಧಲಿಂಗಯ್ಯ; 'ಮೂಡಲದನಿ'ಯ ಸಿ.ವೀರಣ್ಣ; 'ಹಿಪ್ಪೆಮರ'ದ ಸತ್ಯನಾರಾಯಣ ರಾವ್ ಅಣತಿ; ಬೆತ್ತಲೆ ಪದ್ಯಗಳು ಸಂಕಲನದ ಹೊ.ಮ. ಪಂಡಿತಾರಾಧ್ಯ; ಕೆಲವು ಕವನಗಳು ಸಂಕಲನದ ಪ್ರಭುಸ್ವಾಮಿಮಠ, 'ರುದ್ರಾಕ್ಷಿ'ಯ ರಾಜಶೇಖರ, 'ಮೊರೆಮೊರೆ'ತದ ರಾಧಾಕೃಷ್ಣ, 'ಕಲ್ಲುತೋಟ'ದ ಜೆ.ಎಂ.ಹನಸೋಗೆ, ಮಂಗೇಶ ನಾಡಕರ್ಣಿ, ಭೈರವಮೂರ್ತಿ, ರಾಮಚಂದ್ರದೇವ, ದೇವನೂರ ಮಹಾದೇವ, ಕಮಲಾ ಹೆಮ್ಮಿಗೆ, ಎಸ್.ಮಾಲತಿ, ಎಸ್.ಉಷಾ, (ತೊಗಲು ಗೊಂಬೆಯ ಆತ್ಮಕತೆ) ಉಮಾದೇವಿ, ಚ.ಸರ್ವಮಂಗಳಾ (ಅಮ್ಮನ ಗುಡ್ಡ) ಲಕ್ಷ್ಮೀಶ ತೋಳ್ಪಾಡಿ, ಕಾಳೇಗೌಡ ನಾಗವಾರ, ಕೆ.ಎನ್.ಶಿವತೀರ್ಥನ್ (ಬೆಸ್ತ), ಅಬ್ದುಲ್ ಮಜೀದ್ ಖಾನ್, ಯು.ಕೆ.ವಿ.ಆಚಾರ್ಯ, ಗಂಗಾಧರಮೂರ್ತಿ, ಬೀ.ಪ.ಹನುಮಕ್ಕ, ಎ.ಎನ್.ಪ್ರಸನ್ನ, ಎಂ.ಎನ್.ಜೈಪ್ರಕಾಶ್, ಶ್ರೀಕಂಠಕೂಡಿಗೆ, ಅಲ್ಲಮಪ್ರಭು ಬೆಟ್ಟದೂರು, ಶಿವಳ್ಳಿ ಕೆಂಪೇಗೌಡ, ಜಿ.ಎಸ್.ಭಟ್ಟ ಉಬರಡ್ಕ, ಕಿರಣ, ಜಂಬಣ್ಣ ಅಮರಚಿಂತ, ಶಾಂತರಸ, ನಾಗಭೂಷಣರಾವ್ ಸಿಂಧೆ, ಬನ್ನಂಜೆ ಗೋವಿಂದಾಚಾರ್ಯ, ವಿ.ಎನ್.ಲಕ್ಷ್ಮೀನಾರಾಯಣ, ಬಿ.ಎನ್.ನಾಗರಾಜಭಟ್, ನಳಿನೀ ದೇಶಪಾಂಡೆ, ಶಾಂತಾರಾಮಹಿಚ್ಕಡ ಮೊದಲಾದ ಕವಿಗಳು ಕಾವ್ಯರಚನೆಯಲ್ಲಿ ತೊಡಗಿದ್ದಾರೆ. ಕೆಲವರಲ್ಲಿ ಉತ್ತಮಮಟ್ಟದ ಪ್ರತಿಭೆಯ ಲಕ್ಷಣಗಳು ಕಂಡುಬಂದರೆ, ಇನ್ನು ಹಲವರಲ್ಲಿ ಆ ಮಟ್ಟದ ಪ್ರತಿಭೆ ಕಂಡುಬರುವುದಿಲ್ಲ.

ಕನ್ನಡದಲ್ಲಿ ನವ್ಯಕಾವ್ಯವನ್ನು ಕುರಿತ ಈ ಬರೆವಣಿಗೆಯಲ್ಲಿ ನವೋದಯ ಕಾವ್ಯ ರೀತಿಗೆ ಭಿನ್ನವಾದ ದನಿಗಳಾಗಿ ಬಂದ ಕಳೆದ ಕಾಲು ಶತಮಾನದ ಕಾವ್ಯ ರಾಶಿಯನ್ನು ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ. ಗೋಕಾಕರ ನವ್ಯಕಾವ್ಯ ಮಾರ್ಗ, ಅಡಿಗರ ನವ್ಯಕಾವ್ಯ ಮಾರ್ಗಗಳು ಪ್ರಮುಖವಾದ ನವ್ಯಕಾವ್ಯ ಮಾರ್ಗಗಳಾಗಿವೆ. ಅದರಲ್ಲೂ ಅಡಿಗರ ನವ್ಯಕಾವ್ಯ ಮಾರ್ಗದ ಪ್ರಭಾವಕ್ಕೆ ಬಂದ ಕವಿಗಳ ಸಂಖ್ಯೆ ಹೇರಳವಾಗಿದೆ. ಈ ಮಧ್ಯೆ ರಾಮಾನುಜನ್ ಅವರದೇ ಆದ ಹೊಸದನಿಯ ನವ್ಯಕಾವ್ಯ ಸದ್ದಿಲ್ಲದೆ ಕೆಲವು ಕವಿಗಳ ಮೇಲೆ ಪ್ರಭಾವ ಬೀರುತ್ತಿದೆ. ಅಡಿಗರ ಮತ್ತು ಗೋಕಾಕರ ಕಾವ್ಯಮಾರ್ಗಕ್ಕೆ ಪ್ರತಿಕ್ರಿಯೆಯಾಗಿ ನವೋದಯ ಕಾವ್ಯದ ಜಾಡಿನಲ್ಲಿಯೇ ಹೊಸತನ ರೂಢಿಸಬಹುದೆಂದು ಪ್ರಯತ್ನಿಸಿದ ಶಿವರುದ್ರಪ್ಪ, ಕಣವಿಯವರ ಸಮನ್ವಯ ಕಾವ್ಯ ಕೆಲಕಾಲ ಪ್ರತ್ಯೇಕವಾಗಿ ಬೆಳೆದಂತೆ ಕಂಡುಬಂದರೂ ಇತ್ತೀಚೆಗೆ ಗೋಕಾಕರ ರೀತಿಗೆ ಹೆಚ್ಚು ಹತ್ತಿರವಾಗುತ್ತಿರುವಂತೆ ಗೋಕಾಕರೂ ಸಮನ್ವಯದವರೊಟ್ಟಿಗೇ ಸೇರಿ ಹೋಗುತ್ತಿರುವಂತೆ ಕಾಣುತ್ತಿದೆ. ಅಥವಾ ಸಮನ್ವಯದವರೇ ಅವರೊಟ್ಟಿಗೆ ಸೇರಿಕೊಂಡಿದ್ದಾರೆ. ಅಡಿಗರ ಪ್ರಭಾವಕ್ಕೆ ಒಳಗಾಗಿ ಬರೆಯುತ್ತಿದ್ದ ಲಂಕೇಶ್, ಕಂಬಾರ, ತೇಜಸ್ವಿ, ಚಂದ್ರಶೇಖರ ಪಾಟೀಲ ಮುಂತಾದವರು ಅಡಿಗರ ಕಾವ್ಯರೀತಿಗೆ ಭಿನ್ನವಾದ ರೀತಿಯ ಕಾವ್ಯದ ಆವಶ್ಯಕತೆಯನ್ನು ಪ್ರತಿಪಾದಿಸಿದರು. ಅವರಿಗಿಂತ ಇನ್ನೂ ಎಳೆಯ ತಲೆಮಾರಿನ ಕವಿಗಳಲ್ಲಿ ಕೆಲವರು ಈವರೆಗೆ ಹೊಸಗನ್ನಡದಲ್ಲಿ ನವೋದಯವನ್ನೂ ಸೇರಿಸಿಕೊಂಡು ಬೆಳೆದು ಬಂದ ಕಾವ್ಯಮಾರ್ಗಗಳ ಬಗೆಗೆ ಅಸಹನೆಯನ್ನು ತೋರಿಸುತ್ತಿದ್ದಾರೆ. ಹೊಸ ಕಾವ್ಯರೀತಿಯ ಹುಡುಕಾಟದಲ್ಲಿ ತೊಡಗುವ ಸಂಕಲ್ಪ ತೊಟ್ಟಂತೆ ತೋರಿಬರುತ್ತಿದೆ. ಒಟ್ಟಿನಲ್ಲಿ ಸಾರಾಂಶವಿಷ್ಟೆ: ನವ್ಯಕಾವ್ಯಕ್ಕಿಂತ ಭಿನ್ನವಾದ

ಹೊಸ ಕಾವ್ಯ ರೀತಿ ಮೈಮುರಿದೇಳಲು ತವಕಿಸುತ್ತಿದೆ. ಹೀಗೆ ಆಗುವುದರಲ್ಲಿ ತಪ್ಪೂ ಇಲ್ಲ, ಅದು ಸೋಜಿಗದ ಸಂಗತಿಯೂ ಅಲ್ಲ. ಜೀವಂತವಾದ ಜನಾಂಗದ ಲಕ್ಷಣ ಯಾವಾಗಲೂ ಮುಂದೆ ನೋಡುತ್ತ ಹೋಗುವುದಾಗಿದೆ. ಉಥಾಫೆಗಿಂತ ವಿವೇಕ ಈ ನೋಟಕ್ಕೆ ಪ್ರೇರಕ ಶಕ್ತಿಯಾದಾಗ ಜನಾಂಗ ಹೊಸ ಜೀವಂತಿಕೆ ಲವಲವಿಕೆಯಿಂದ ಕಳಕಳಿಸುತ್ತದೆ. ಇಂಥ ಸಂಧಿಕಾಲದಲ್ಲಿ ಹೊಸದೆಲ್ಲವನ್ನೂ ಉಥಾಫೆಯೆಂದೇ ನೋಡುವ ದೃಷ್ಟಿಯನ್ನು ಬಿಟ್ಟು, ವಸ್ತುನಿಷ್ಠವಾಗಿ ತೆರೆದ ಮನಸ್ಸಿನಿಂದ ಹೊಸ ಬದಲಾವಣೆ, ಹೊಸ ಪ್ರಯೋಗಗಳನ್ನು ಗಮನಿಸುತ್ತ, ಬೆಲೆ ಕಟ್ಟಲು ಪ್ರಯತ್ನಿಸುತ್ತ ಸಾಗಬೇಕಾದದ್ದು ಸಹೃದಯರ ಮತ್ತು ವಿಮರ್ಶಕರ ಹೊಣೆಗಾರಿಕೆಯಾಗಿದೆ. ಸದ್ಯಕ್ಕೆ ಇನ್ನೂ ಒಂದು ತಲೆಮಾರಿನ ತನಕವಾದರೂ ಉತ್ತಮಕಾವ್ಯ ರೊಮ್ಯಾಂಟಿಕ್ ಸಂಪ್ರದಾಯಕ್ಕೆ ತೀರ ವಿರುದ್ಧವಾದ ದಿಕ್ಕಿನಲ್ಲೇ ಹರಿದೀತು ಎಂದು ತೋರುತ್ತದೆ. ಯಾವ ಸಂಪ್ರದಾಯದ್ದೇ ಆಗಲಿ, ಉತ್ತಮ ಕವಿತೆ ಯಾವಾಗಲೂ ಉತ್ತಮ ಕವಿತೆಯೇ. ಆದರೆ ಅದು ರಚಿತವಾದ ಕಾಲದಲ್ಲಿ ಅದು ಎಷ್ಟು ಉತ್ತಮ ಎಂದು ತಿಳಿದಿದ್ದರೋ ಅಷ್ಟು ಉತ್ತಮ ಅದಲ್ಲ, ಅದು ಉತ್ತಮವಾಗಿರುವ ರೀತಿ ಈಗ ಸಲ್ಲ ಎಂದು ಮುಂದಿನ ತಲೆಮಾರು ನಿರ್ಧರಿಸಬಹುದು. ಹಾಗೆಯೇ ಇನ್ನೂ ಮುಂದಿನ ತಲೆಮಾರಿನಲ್ಲಿ ಅದೇ ಉತ್ತಮ ಕವಿತೆ, ಆ ರೀತಿಯೇ ರೀತಿ ಈಗ ಸಲ್ಲ ಎಂದು ಮುಂದಿನ ತಲೆಮಾರಿನಲ್ಲಿ ಅದೇ ಉತ್ತಮ ಕವಿತೆ, ಆ ರೀತಿಯೇ ರೀತಿ ಎಂತಲೂ ಮತ್ತೊಮ್ಮೆ ವಿಚಾರ ಕ್ರಾಂತಿಯಾಗಬಹುದು ಎಂಬ ಅಡಿಗರ ಮಾತು (ಹೊಸ ಕವಿತೆಯನ್ನು ಕುರಿತು 1953) ಈ ಸಂದರ್ಭದಲ್ಲಿಯೂ ಮನನೀಯವಾಗಿದೆ.

ಕೊನೆಯದಾಗಿ, ನವ್ಯಕಾವ್ಯದ ಬೆಳವಣಿಗೆಯಲ್ಲಿಯೂ ನವೋದಯ ಕಾವ್ಯದ ಬೆಳವಣಿಗೆಯಲ್ಲಿ ಎಂತೋ ಅಂತೆ ಅನೇಕ ದಿನ, ವಾರ, ಮಾಸ, ದ್ವೈಮಾಸಿಕ, ತ್ರೈಮಾಸಿಕ, ಅನಿಯತಕಾಲಿಕ ಪತ್ರಿಕೆಗಳು ಕವನಗಳ ಪ್ರಕಟನೆ, ಕೃತಿಗಳ ವಿಮರ್ಶೆ, ಅವಲೋಕನ, ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸುವುದು ಮುಂತಾದ ಬಗೆಯಲ್ಲಿ ತಮ್ಮ ಪಾಲಿನ ಕಾಣಿಕೆ ಸಲ್ಲಿಸಿವೆ. ಸಾಕ್ಷಿ, ಲಹರಿ, ಸಮೀಕ್ಷಕ, ಸಂಕೀರ್ಣ, ಸಮನ್ವಯ, ಸಂಕ್ರಮಣ, ರುಜುವಾತು, ಕವಿತಾ ಮುಂತಾದ ಪತ್ರಿಕೆಗಳು ನವ್ಯಸಾಹಿತ್ಯಕ್ಕಾಗಿಯೇ ಮೀಸಲಾದ ಪತ್ರಿಕೆಗಳಾಗಿವೆ. ನವ್ಯಧ್ವನಿ, ನಡೆದು ಬಂದ ದಾರಿ–1, ಅಕ್ಷರ ಹೊಸ ಕಾವ್ಯ, ಹೊಸ ಜನಾಂಗದ ಕವಿತೆಗಳು, ಸಂಕ್ರಮಣ ಕಾವ್ಯ– ಇವು ನವ್ಯಕಾವ್ಯದ ಮಹತ್ವದ ಸಂಚಯಗಳಾಗಿವೆ. (ಜಿ.ಎಚ್.ಎನ್.)

**ಕನ್ನಡದಲ್ಲಿ ನಾಟಕಸಾಹಿತ್ಯ :** ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು ಶ್ರೀಮಂತವಾಗಿರುವಂತೆ, ನಾಟಕ ಪ್ರಕಾರವೂ ಶ್ರೀಮಂತವಾಗಿದೆ. ಆದರೆ ಇದರ ಹುಟ್ಟನ್ನು ಬೆಳವಣಿಗೆಯನ್ನು ಗುರುತಿಸಲು ಹೊರಟರೆ 1680ರ ಸುಮಾರಿನಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನಕವಿ ಸಿಂಗರಾರ್ಯನಿಂದ ರಚಿತವಾದ ಮಿತ್ರವಿಂದಾ ಗೋವಿಂದ ಕನ್ನಡದ ಮೊಟ್ಟಮೊದಲ ನಾಟಕವೆಂದು ಕಂಡುಬರುತ್ತದೆ. ಇದು ಶ್ರೀಹರ್ಷನಿಂದ ಸಂಸ್ಕೃತದಲ್ಲಿ ರಚಿತವಾದ ರತ್ನಾವಳಿ ನಾಟಕದ ಕನ್ನಡ ಅನುವಾದ. ಅನುವಾದವಾದರೂ ಒಂದು ರೀತಿಯಲ್ಲಿ ಸ್ವತಂತ್ರ ಕೃತಿ ಎನ್ನುವಂತೆ ನಾಟಕಕಾರ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಆದ್ದರಿಂದ ಇದನ್ನು ರೂಪಾಂತರವೆನ್ನಲೂಬಹುದು. ಮೂಲದ ಕಥೆ ಉದಯನನ್ನು ಕುರಿತದ್ದಾಗಿದ್ದು, ಈ ನಾಟಕದ ಕಥೆ ಶ್ರೀ ಕೃಷ್ಣನ ಕಥೆಯನ್ನು ಹೇಳುತ್ತದೆ. ಜೊತೆಗೆ ಇಲ್ಲಿನ ಪಾತ್ರಗಳ ಹೆಸರುಗಳಲ್ಲೂ ಘಟನೆಗಳಲ್ಲೂ ಒಂದೆರಡು ಸಣ್ಣಪುಟ್ಟ ಬದಲಾವಣೆಗಳಾಗಿವೆ. ಭಾಗವತದಲ್ಲಿರುವ ಕೃಷ್ಣನ ಕಥೆ ಮಿತ್ರವಿಂದಾ ಗೋವಿಂದ ನಾಟಕಕ್ಕೆ ಮೂಲ. ನಾಟಕದ ಭಾಷೆ ಹಳಗನ್ನಡ. ಹಲವರ ಅಭಿಪ್ರಾಯದಂತೆ ಈ ನಾಟಕ ಮೂಲ ರತ್ನಾವಳಿಯಷ್ಟು ತೃಪ್ತಿ ಕೊಡುವುದಿಲ್ಲವಾದರೂ ದೊರೆತ ಕನ್ನಡ ನಾಟಕಗಳಲ್ಲಿ ಮೊದಲನೆಯದೆಂಬ ದೃಷ್ಟಿಯಿಂದ ಇದಕ್ಕೆ ಐತಿಹಾಸಿಕ ಮಹತ್ತ್ವವಿದೆ.

ದುರ್ಗಸಿಂಹನು ನೆನೆದ ಕನ್ನಮಯ್ಯ ಬರೆದ ಮಾಲತೀಮಾಧವ, ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಸೂಚಿತವಾದ ಸುಭದ್ರಾಹರಣ ಮತ್ತು ಪ್ರಬೋಧಚಂದ್ರ ಇವು ಕನ್ನಡ ನಾಟಕಗಳಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ ಒಂದು ಪದ್ಯವೂ ಶ್ರೀಹರ್ಷನ ನಾಗಾನಂದ ಹಾಗೂ ಭವಭೂತಿಯ ಮಾಲತೀಮಾಧವ ಈ ನಾಟಕಗಳ ಕೆಲವು ಪದ್ಯಗಳೂ ಕನ್ನಡಕ್ಕೆ ಬಂದಿವೆ. ಇದರಿಂದ ಅಂದಿನ ಕಾಲಕ್ಕಾಗಲೇ ಸಂಸ್ಕೃತ ನಾಟಕಗಳು ಕನ್ನಡಕ್ಕೆ ಅನುವಾದಗೊಂಡಿರಬಹುದೆಂದು ಸಂಶೋಧಕರು ಊಹಿಸುತ್ತಾರೆ.

ಕನ್ನಡ ನಾಟಕ ಸಾಹಿತ್ಯ ಪರಂಪರೆಯನ್ನು ವಿವೇಚಿಸುವಾಗ ಮಿತ್ರವಿಂದಾ ಗೋವಿಂದ ನಾಟಕಕ್ಕೆ ಮೊದಲು ಕನ್ನಡದಲ್ಲಿ ನಾಟಕಗಳಿರಲಿಲ್ಲವೇ ಎಂಬ ಪ್ರಶ್ನೆ ವಿದ್ವಾಂಸರನ್ನು ಬಹಳಷ್ಟು ಕಾಡಿದೆ. ಇದಕ್ಕೆ ಉತ್ತರವಾಗಿ ನಾಟಕಗಳಿದ್ದರೂ ಈ ರೂಪದಲ್ಲಿ ಇದ್ದಿರುವುದಕ್ಕೆ ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಹಿಂದಿನ ಕನ್ನಡ ಕಾವ್ಯಗಳಲ್ಲಿ ನಾಟಕಶಾಲೆ, ನಾಟಕ ಇವೇ ಮೊದಲಾದ ಪದ ಪ್ರಯೋಗಗಳು ಕಂಡುಬರುವುದರಿಂದ, ಅಭಿನಯಕ್ಕೆ ಸಂಬಂಧಿಸಿದಂತೆ ರಾಜಾಸ್ಥಾನಗಳಲ್ಲಿ ದೃಶ್ಯರೂಪಕಗಳು ಇದ್ದಿರಬೇಕು. ಅಭಿನಯ ನೃತ್ಯಗಳು ಇದ್ದಿರಲೂಬಹುದು. ಇದರಿಂದ ಅಂದಿನ ಅರಮನೆಗಳಲ್ಲಿ ನಾಟಕಶಾಲೆಗಳು ಇದ್ದಿರಬೇಕು ಎನ್ನುವುದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಮೈಸೂರಿನ ಕಂಠೀರವ ನರಸರಾಜರ ಅರಮನೆಯಲ್ಲಿ ನಾಟಕಶಾಲೆ ಇದ್ದಿತೆಂದು ಕಂಠೀರವ ನರಸರಾಜವಿಜಯದಿಂದ ತಿಳಿದುಬರುತ್ತದೆ. ಕೆಳದಿಯ ವೆಂಕಟಪ್ಪ ನಾಯಕ (1582–1629) ತನ್ನ 'ಇಕ್ಕೇರಿಯರಮನೆಯೊಳ್ವಿಚಿತ್ರತರ ರಚನಾ ಕೌಶಲದಿಂ ನಾಟಕಶಾಲೆಯಂ ನಿರ್ಮಾಣಗೈಯ್ಸಿದನ್' ಎಂದು – ಕೆಳದಿನೃಪ ವಿಜಯದಲ್ಲಿ ಹೇಳಿದೆ. ರತ್ನಾಕರವರ್ಣಿ ತನ್ನ ಭರತೇಶವೈಭವದಲ್ಲಿ ನಾಟಕ ಎಂಬ ಪದವನ್ನು ಬಳಸಿದ್ದಾನೆ. ನಾಟಕಶಾಲೆಯ ವರ್ಣನೆಗಳನ್ನು ಮಾಡಿದ್ದಾನೆ. ಅಲ್ಲದೆ ಅವನ ಕಾವ್ಯದಲ್ಲಿ ಪೂರ್ವನಾಟಕ, ಉತ್ತರನಾಟಕ ಎಂಬ ಎರಡು ಸಂಧಿಗಳಿವೆ. ಕೃಷ್ಣದೇವರಾಯನ ರಾಜಧಾನಿಯಲ್ಲಿ ಪಟ್ಟದ ನಾಟಕಶಾಲೆಯೂ ಇಕ್ಕೇರಿ, ಮೊದಲಾದೆಡೆಗಳಲ್ಲಿ ರತ್ನಖಚಿತವಾದ ಅಲಂಕಾರಗಳನ್ನು ಹೊಂದಿದ್ದ ನಾಟಕಶಾಲೆಗಳೂ ನಿರ್ಮಾಣವಾಗಿದ್ದಿತೆಂದು ಕಂಡುಬರುತ್ತದೆ. ಧಾರವಾಡದ ಸಮೀಪದ ಮಗದ ಗ್ರಾಮದಲ್ಲಿರುವ 11ನೆಯ ಶತಮಾನದ ಶಿಲಾಫಲಕದಲ್ಲಿ ಶ್ರೀಮನ್ಮಹಾಸಾಮನ್ತಂ ಮಾರ್ತಾಣ್ಡಯಂ ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕಶಾಲೆಯಂ ಮಾಡಿಸಿ, ತನ್ನ ಕೀರ್ತಿ ಶಿಲಾಸ್ತಂಭಮಂ ಆಚಂದ್ರಾರ್ಕತಾರಾಂಬರಂ ನಿಲಿಸಿದಂ ಎಂದಿದೆ. ಬಸವಪುರಾಣ, ಶೃಂಗಾರರತ್ನಾಕರ, ವಿವೇಕಚೂಡಾಮಣಿ, ಕಂಠೀರವವಿಜಯ, ಕರ್ಣಾಟ ಭಾರತ ಕಥಾಮಂಜರಿ ಮೊದಲಾದ ಕಾವ್ಯಗಳಲ್ಲಿ ನಾಟಕ ಎನ್ನುವ ಮಾತು ಬಂದಿದೆ. ದುರ್ಗಸಿಂಹನ ಪಂಚತಂತ್ರದಲ್ಲಿ ನಾಟಕ ಎಂಬ ಮಾತಿನ ಬಳಕೆಯಾಗಿದೆ. ಹೊಯ್ಸಳ ದೊರೆ ವೀರಬಲ್ಲಾಳ ಒಬ್ಬ ಶ್ರೇಷ್ಠ ನಟನಾಗಿದ್ದನೆಂದು ಸೊರಬದ ಶಿಲಾಶಾಸನದಲ್ಲಿ ವರ್ಣಿತವಾಗಿದೆ. ಪಂಪ, ಪೊನ್ನ, ರನ್ನ ಇವರುಗಳೂ ನಾಟಕ ಹಾಗೂ ನಾಟಕಕ್ಕೆ ಸಂಬಂಧಿಸಿದ ಹಲವು ಮಾತುಗಳನ್ನು ತಮ್ಮ ಕಾವ್ಯಗಳಲ್ಲಿ ಆಡಿದ್ದಾರೆ. ಪಂಪ 'ಕೃತಾನುಕರಣಮೆ ನಾಟಕಂ' ಎಂದಿದ್ದಾನೆ. ಹಿಂದಿನ ಕವಿಗಳು ಕಾವ್ಯಗಳನ್ನೆ ರಚಿಸಿದರೂ ಅವರ ದೃಷ್ಟಿ ನಾಟಕದ ಕಡೆಗೆ ಇದ್ದಿತು ಎನ್ನುವುದಕ್ಕೆ ರನ್ನನ ಗದಾಯುದ್ಧ ಹಾಗೂ ರಾಘವಾಂಕನ ಹರಿಶ್ಚಂದ್ರಕಾವ್ಯಗಳಲ್ಲಿ ಬರುವ ನಾಟಕೀಯ ಸನ್ನಿವೇಶಗಳ ಸಂಭಾಷಣೆಯ ಚತುರತೆ ಸಾಕ್ಷಿಯಾಗಿದೆ. 17ನೆಯ ಶತಮಾನದಲ್ಲಿ ಕನ್ನಡದ ಮೊದಲ ನಾಟಕ ನಮಗೆ ದೊರೆತರೂ 10ನೆಯ ಶತಮಾನದಿಂದಲೆ ನಾಟಕ ಎಂಬ ಹೆಸರಿನ ಸಾಹಿತ್ಯ ಪ್ರಕಾರ ಇದ್ದಿತು ಎಂಬ ವಿಷಯ ಮೇಲಿನ ವಿವರಣೆಗಳಿಂದ ಸ್ಪಷ್ಟಪಡುತ್ತದೆ. ಹಾಗಾದರೆ ಕನ್ನಡದಲ್ಲಿ ನಾಟಕಗಳೇಕೆ ಆ ಕಾಲದಲ್ಲಿ ರಚಿತವಾಗಲಿಲ್ಲ ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಉತ್ತರವಾಗಿ ಅಂದು ಸಂಸ್ಕೃತ ಭಾಷೆಯ ಪ್ರಾಬಲ್ಯ ಬಹಳವಾಗಿದ್ದುದರಿಂದ, ಕನ್ನಡ ಭಾಷೆಯಲ್ಲಿ ಸ್ವತಂತ್ರ ನಾಟಕಗಳು ರಚಿತವಾಗಲಿಲ್ಲ ಎಂದು ಊಹಿಸಲು ಸಾಧ್ಯವಿದೆ.

ಕನ್ನಡದಲ್ಲಿ ನಾಟಕ ಸಾಹಿತ್ಯದ ನಿರಂತರಧಾರೆ 19ನೆಯ ಶತಮಾನದ ಅಂತ್ಯದಿಂದ ಹೊಸತಾಗಿ ಪ್ರಾರಂಭವಾಯಿತೆಂದು ಹೇಳಬಹುದು. ಮೈಸೂರಿನ ಚಾಮರಾಜ ಒಡೆಯರ ಆಳಿಕೆಯ ಕಾಲದಲ್ಲಿ (1881–94) ಪಾರಸೀ ಕಂಪನಿಯೊಂದು ಕನ್ನಡ ನಾಡಿಗೆ ಬಂದು ಕೆಲವು ನಾಟಕಗಳನ್ನು ಪ್ರಯೋಗಿಸಿತು. ಈ ನಾಟಕಗಳಲ್ಲಿನ ಅಭಿನಯ, ರಂಗಸಾಧ್ಯತೆ, ರಂಗಪರಿಕರಗಳು ಕನ್ನಡಿಗರನ್ನು ಆಕರ್ಷಿಸಿದವು. ಕಲೆಗೆ ಆಶ್ರಯಸ್ಥಾನವಾಗಿದ್ದ ಅರಮನೆ 1882ರಲ್ಲಿ ತನ್ನದೇ ಆದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂಬ ನಾಟಕ ಸಂಸ್ಥೆಯನ್ನು ಸ್ಥಾಪಿಸಿತು. ಒಡೆಯರ ಆಸ್ಥಾನಕವಿಯಾಗಿದ್ದ ಬಸವಪ್ಪಶಾಸ್ತ್ರಿಗಳು ಈ ಸಭೆಗಾಗಿ ನಾಟಕಗಳನ್ನು ಬರೆಯಲು, ಸಿದ್ಧರಾದರು. ಇದರಿಂದಾಗಿ ಶಾಕುಂತಲಾ, ವಿಕ್ರಮೋರ್ವಶೀಯ, ರತ್ನಾವಳಿ, ಉತ್ತರರಾಮಚರಿತೆ, ಮಾಲತೀಮಾಧವ, ಚಂಡಕೌಶಿಕ ಮೊದಲಾದ ನಾಟಕಗಳು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಗೊಂಡವು. ಇವರು ಇಂಗ್ಲಿಷ್ ನಾಟಕಗಳ ಕಡೆಗೂ ಗಮನ ಹರಿಸಿ ಷೇಕ್ಸ್‌ಪಿಯರನ ಒಥೆಲೊ ಶೂರಸೇನ ಚರಿತ್ರೆಯಾಗಿ ಕನ್ನಡಕ್ಕೆ ಬಂತು. ಇವರ ಷೇಕ್ಸ್‌ಪಿಯರ್ ನಾಟಕದ ಅನುವಾದ ಅಷ್ಟಾಗಿ ಉತ್ತಮವಾಗಿಲ್ಲ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿರುವುದಾದರೂ ಸಂಸ್ಕೃತ ಅನುವಾದಗಳು ಹೆಚ್ಚಿನ ಪ್ರಶಂಸೆಗೆ ಪಾತ್ರವಾದವು. ಅದರಲ್ಲೂ ಶಾಕುಂತಲಾ ಒಂದು ಉತ್ಕೃಷ್ಟ ಅನುವಾದ ಎಂಬ ಖ್ಯಾತಿಪಡೆಯಿತು. ಮೂಲ ನಾಟಕದ ತಿರುಳು, ಸೌಂದರ್ಯ, ಆಳ, ಔನ್ನತ್ಯಗಳು ಅನುವಾದದಲ್ಲೂ ಮೂಡಿಬಂದಿವೆ. ಈ ಅನುವಾದ ಕನ್ನಡದ್ದೇ ಎಂಬಷ್ಟರ ಮಟ್ಟಿಗೆ ಸಮರ್ಪಕವಾಗಿದೆ. ಭಾಷಾಂತರ ಕಲೆಗೆ ಈ ನಾಟಕ ಒಂದು ಉತ್ತಮ ನಿದರ್ಶನವಾಯಿತು. ಭಾಷಾಂತರದ ಕೆಲಸದಲ್ಲಿ ಎದ್ದುಕಾಣುವ ಮತ್ತೊಂದು ಹೆಸರು ಅಳಸಿಂಗರಾಚಾರ್ಯರದು. ಇವರು ಹೆಚ್ಚಾಗಿ ಅನುವಾದ ಮಾಡಿಲ್ಲವಾದರೂ ಇವರ ಭಾಸನ ಸ್ವಪ್ನವಾಸವದತ್ತ ಹಾಗೂ ಪಂಚರಾತ್ರ – ಈ ಎರಡು ನಾಟಕಗಳು ಹೆಸರುಗಳಿಸಿವೆ. ಭಾಸನ ನಾಟಕಗಳಲ್ಲೆಲ್ಲ ಉತ್ತಮ ನಾಟಕ ಎಂದು ಪ್ರಶಂಸೆ ಹೊಂದಿದ ಸ್ವಪ್ನವಾವವದತ್ತವನ್ನು ಮೂಲಕ್ಕೆ ಲೋಪವಾಗದಂತೆ ಇವರು ಕನ್ನಡಕ್ಕೆ ತಂದರು. ಹಾಗೆಯೇ ಪಂಚರಾತ್ರ ರೂಪಕವೂ ಮನೋಜ್ಞವಾಗಿ ಅನುವಾದಗೊಂಡಿತು.

ಶ್ರೀಹರ್ಷನ ನಾಗಾನಂದ ನಾಟಕ ಕನ್ನಡಕ್ಕೆ ಅನುವಾದಗೊಂಡಿರುವ ಶ್ರೇಷ್ಠ ಸಂಸ್ಕೃತ ನಾಟಕಗಳಲ್ಲಿ ಒಂದು. ಇದನ್ನು ಮೈಸೂರಿನ ಅನಂತನಾರಾಯಣಶಾಸ್ತ್ರಿ ಮೊದಲಿಗೆ ಅನುವಾದ ಮಾಡಿದರು.ಇವರ ಅನುವಾದದ ಭಾಷೆ, ಶೈಲಿ ಚೆನ್ನಾಗಿದ್ದು ಮೂಲವನ್ನು ಚಾಚೂತಪ್ಪದೆ ಅನುಸರಿಸಿದೆ. ಶೂದ್ರಕನಿಂದ ರಚಿತವಾದ ಮೃಚ್ಛಕಟಿಕ ಕನ್ನಡಕ್ಕೆ ಬಂದಿರುವ ಮುಖ್ಯ ನಾಟಕಗಳಲ್ಲೊಂದು. ಇದನ್ನು ಹಲಕೆಲವು ಬದಲಾವಣೆಗಳೊಂದಿಗೆ ನಂಜನಗೂಡು ಸುಬ್ಬಾಶಾಸ್ತ್ರಿಗಳು ಕನ್ನಡಕ್ಕೆ ಅನುವಾದಿಸಿದರು. ಇವರು ಮೂಲದ ಕೆಲವು ಶ್ಲೋಕಗಳನ್ನು ಗದ್ಯದಲ್ಲಿ ಬರೆದಿದ್ದಾರೆ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡಿದ್ದರೂ ಇದು ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಒಳ್ಳೆಯ ಅನುವಾದ ಎನ್ನಬಹುದು.

ಮೇಲೆ ಹೇಳಿದ ಅನುವಾದಗಳೆಲ್ಲವೂ ಬಹಳ ಹಿಂದೆಯೇ ಸಂಸ್ಕೃತದಿಂದ ಕನ್ನಡಕ್ಕೆ ಬಂದವು. ಈ ಕೆಲಸ ಇಂದಿಗೂ ಸಾಗುತ್ತಿದೆ. ಮೂಲ ಕೃತಿಗಳು ಶ್ರೇಷ್ಠ ಕೃತಿಗಳಾಗಿದ್ದಲ್ಲಿ ಅನುವಾದಕರಿಗೆ ಯಾವುದೋ ಒಂದು ಕೃತಿಯಲ್ಲಿ ಮಹತ್ತು ಕಂಡಲ್ಲಿ ಅಂಥದನ್ನು ಅನುವಾದಕ್ಕೆ ಎತ್ತಿಕೊಂಡರು. ಹೀಗಾಗಿ ಕಾಳಿದಾಸ, ಭಾಸ, ಭಟ್ಟನಾರಾಯಣ, ಶೂದ್ರಕ, ಶ್ರೀಹರ್ಷ ಮೊದಲಾದವರ ಸಂಸ್ಕೃತ ನಾಟಕಗಳನ್ನು ಎಲ್.ಗುಂಡಪ್ಪ, ಕೆ.ಕೃಷ್ಣಮೂರ್ತಿ, ಎಸ್.ವಿ.ಪರಮೇಶ್ವರಭಟ್ಟ, ಸಿ.ಪಿ.ಕೆ., ಎಂ.ವಾಸುದೇವ ಭಟ್ಟ, ಗಣಪತಿ ಮೊಳಿಯಾರ್, ಪಂಡಿತ ಕವಲಿ ಮೊದಲಾದವರು ಕನ್ನಡಕ್ಕೆ ತಂದಿದ್ದಾರೆ. ಹಾಗೆ ಮಾಡುವಲ್ಲಿ ಕೆಲವರು ಹೊಸ ಹೊಸ ಛಂದಸ್ಸಿನಲ್ಲಿ ಮೂಲ ಶ್ಲೋಕಗಳನ್ನು ಅನುವಾದ ಮಾಡಿದರು. ಆಳವಾದ ಅಭ್ಯಾಸ, ಭಾಷಾಪ್ರೌಢಿಮೆ, ಸದಭಿರುಚಿ ಹಾಗೂ ಗ್ರಂಥದ ಮೂಲ ಉದ್ದೇಶಕ್ಕೆ ಭಂಗ ತಾರದ ನಿರೂಪಣೆ ಈ ಅನುವಾದಕರಲ್ಲಿ ಕಾಣಬಹುದಾದ ಶ್ರೇಷ್ಠ ಗುಣಗಳು.

ಸಂಸ್ಕೃತದಿಂದ ನಾಟಕಗಳು ಅನುವಾದಗೊಂಡಂತೆ ಇಂಗ್ಲಿಷ್‌ನಿಂದಲೂ ನಾಟಕಗಳು ಕನ್ನಡಕ್ಕೆ ಅನುವಾದಗೊಂಡವು. ಇಲ್ಲಿ ಕೆಲವರು ಮೂಲದಲ್ಲಿದ್ದಂತೆ ಅನುವಾದ ಮಾಡಿದರೆ ಕೆಲವರು ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅನುವಾದ ಮಾಡಿದರು, ರೂಪಾಂತರ ಮಾಡಿದರು. 1890ರ ಸುಮಾರಿನಲ್ಲೇ ಎಂ.ಎಲ್.ಶ್ರೀಕಂಠೇಶಗೌಡರು ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ಹಾಗು ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ನಾಟಕಗಳನ್ನು ಪ್ರತಾಪರುದ್ರದೇವ ಹಾಗೂ ಪ್ರಮೀಳಾರ್ಜುನೀಯ ಎಂಬ ಹೆಸರುಗಳಿಂದ ಕನ್ನಡಕ್ಕೆ ತಂದರು. ಪ್ರತಾಪರುದ್ರದೇವ ನಾಟಕದಲ್ಲಿ ಅನುವಾದ ಮಾಡುವಾಗ, ಅಲ್ಲಿನ ಪಾತ್ರಗಳ ಹೆಸರುಗಳನ್ನೆಲ್ಲ ಬದಲಾಯಿಸಿದ್ದಾರೆ. ಆದರೆ ಮೂಲದ ಭಾವಗಳನ್ನು ಬದಲಾಯಿಸಿರುವುದಿಲ್ಲ. ಹೀಗಾಗಿ ಅಲ್ಲಿನ ಘಟನೆಗಳು ಅಸ್ವಾಭಾವಿಕ ಅನಿಸುತ್ತದೆ. ಪ್ರಮೀಳಾರ್ಜುನೀಯದಲ್ಲಿಯೂ ಮೂಲವನ್ನೂ ಹಾಗೆಯೇ ಇಟ್ಟುಕೊಂಡು, ಹೆಸರುಗಳಲ್ಲಿ ಹಾಗೂ ಸಂಭಾಷಣೆಗಳಲ್ಲಿ ತಮ್ಮತನವನ್ನು ತೋರಿದ್ದಾರೆ. ಈ ಎರಡೂ ನಾಟಕಗಳನ್ನು ನೋಡಿದಾಗ ಗೌಡರು, ರಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿರುವಂತೆ ಕಾಣುತ್ತದೆ. ಮ್ಯಾಕ್‌ಬೆತ್ ನಾಟಕ ಡಿ.ವಿ.ಜಿ. ಅವರಿಂದ ಮೂಲದಲ್ಲಿದ್ದಂತೆಯೇ ಕಾವ್ಯವಿದ್ದಲ್ಲಿ ಕಾವ್ಯ, ಗದ್ಯವಿದ್ದಲ್ಲಿ ಗದ್ಯ ಹೀಗೆ ಅನುವಾದಗೊಂಡಿದೆ. ಇದೊಂದು ಒಳ್ಳೆಯ ಅನುವಾದ.

ಈ ಸಾಲಿನಲ್ಲಿ ಬಿ.ಎಂ.ಶ್ರೀ. ಅವರ ಪಾರಸಿಕರು, ಎಸ್.ಜಿ.ಶಾಸ್ತ್ರಿ ಅವರ ಸಾಕ್ರಟೀಸನ ಕೊನೆಯ ದಿನಗಳು, ಆರ್ಯಕ ಮತ್ತು ಸೂತ್ರದ ಬೊಂಬೆ –ಇವುಗಳನ್ನು ಒಳ್ಳೆಯ ಅನುವಾದಗಳೆಂದು ಹೆಸರಿಸಬಹುದು. ಸಾಕ್ರಟೀಸನ ಕೊನೆಯ ದಿನಗಳು ನಾಟಕದಲ್ಲಿ ಅವನ ಮನಸ್ಸಾಮರ್ಥ್ಯ ಅದ್ಭುತವಾಗಿ ಪ್ರದರ್ಶಿತಗೊಂಡಿದೆ. ಆರ್ಯಕ ನಾಟಕದಲ್ಲಿ ನಾರ್ವೆ ದೇಶದ ಪ್ರಾಚೀನ ಜನರಲ್ಲಿ ನೆಲಸಿದ್ದ ಸಮುದ್ರಯಾನ ಜೀವನ, ಆ ಜನದ ಕ್ರೌರ್ಯಶೌರ್ಯಗಳೂ, ಮಾನಾಭಿಮಾನಗಳೂ ವರ್ಣಿತವಾಗಿವೆ. ನೋರಾ, ಹೆಲ್ಮರ್ ಮತ್ತು ಇವರ ಮೂರು ಮಕ್ಕಳ ಒಂದು ಸಂಸಾರ ಹೆಲ್ಮರನಿಗೆ ಸಿಕ್ಕಿರುವ ಒಂದು ಕೆಲಸ. ಬರಲಿರುವ ಕ್ರಿಸ್‌ಮಸ್ ಹಬ್ಬ ಈ ಮನೋಹರವಾದ ವಾತಾವಣದಲ್ಲಿ ಆರಂಭವಾದ ಈ ನಾಟಕ ನೋರಾಳ ಗೃಹತ್ಯಾಗದೊಡನೆ ಮುಗಿಯುತ್ತದೆ.

ಗುಂಡೋ ಕೃಷ್ಣ ಚುರುಮುರಿಯವರಿಂದ ಅನುವಾದಿತವಾದ ಷೇಕ್ಸ್‌ಪಿಯರನ ಒಥೆಲೊ ನಾಟಕ, ಸಿ.ಆನಂದರಾಯರು ಅನುವಾದ ಮಾಡಿರುವ ರಾಮವರ್ಮ ಲೀಲಾವತಿ (ರೋಮಿಯೋ ಜ್ಯೂಲಿಯಟ್). ಇವುಗಳಲ್ಲಿ ಕಥೆ ಭಾಷಾಂತರಗೊಂಡು, ಅಲ್ಲಿನ ಪಾತ್ರಗಳ ಹೆಸರು ರೂಪಾಂತರಗೊಂಡಿದೆ. ರಾಮವರ್ಮ ಲೀಲಾವತಿ ನಾಟಕ ಮಾತ್ರ ರಂಗಭೂಮಿಯ ಮೇಲೆ ಬಹಳ ಜನಪ್ರಿಯವಾಗಿತ್ತೆಂದು ತಿಳಿದುಬರುತ್ತದೆ. ಒಥೆಲೊ ಮಾಸ್ತಿಯವರಿಂದ ಶೂರಸೇನ ಎಂಬ ಹೆಸರಿನಲ್ಲೂ ಬರ್ನಾರ್ಡ್‌ಷಾನ ಪಿಗ್‌ಮೇಲಿಯೆನ್ ಅದೇ ಹೆಸರಿನಲ್ಲಿ ವಿ.ಸೀತಾರಾಮಯ್ಯನವರಿಂದಲೂ ಅನುವಾದಗೊಂಡಿವೆ.

ಷೇಕ್ಸ್‌ಪಿಯರನ ಟೆಂಪೆಸ್ಟ್ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಬಿರುಗಾಳಿ ಎಂದು ಹೆಸರು ಹೊತ್ತು ಕುವೆಂಪು ಅವರಿಂದ ಒಂದು ಒಳ್ಳೆಯ ಅನುವಾದವಾಗಿದೆ. ಹ್ಯಾಮ್ಲೆಟ್ ನಾಟಕ ಆಧರಿಸಿ ಬರೆದ ರಕ್ತಾಕ್ಷಿ ಕನ್ನಡದ ಅತ್ಯುತ್ತಮ ಐತಿಹಾಸಿಕ ನಾಟಕಗಳಲ್ಲಿ ಒಂದಾಯಿತು.

ಪಿ.ಲಂಕೇಶ್ ಅವರ ಈಡಿಪಸ್ ಹಾಗೂ ಅಂತಿಗೊನೆ, ಕನ್ನಡ ನಾಟಕಗಳ ಅನುವಾದಗಳಲ್ಲಿ ಮುಖ್ಯವಾದದ್ದು. ಇಲ್ಲಿನ ಭಾಷೆ ಆಡುಮಾತಿಗೆ ಹತ್ತಿರವಾಗಿ, ಸಂವೇದನೆಯ ದೃಷ್ಟಿಯಿಂದ ಇದು ಮೂಲಕ್ಕೆ ಹತ್ತಿರವಾಗಿದೆ ಅನಿಸುತ್ತದೆ. ಈ ಹಿಂದೆ ಕೆ.ವಿ.ರಾಘವಾಚಾರ್ಯರಿಂದ ಆದ ಅಂತಿಗೊನೆ ಅನುವಾದ ಹಳಗನ್ನಡದ್ದು. ಎಚ್.ಕೆ.ರಾಮಚಂದ್ರಮೂರ್ತಿ ಅವರಿಂದ ಟೆನಿಸಿ ವಿಲಿಯಮ್‌ನ ಗ್ಲಾಸ್‌ಮೆನಾಜಂ ಕನ್ನಡಕ್ಕೆ ಗಾಜಿನ ಗೊಂಬೆ ಎಂದು ಹೆಸರು ಪಡೆದು ಬಂದಿದೆ. ರೂಪಾಂತರದಂತೆ ಕಂಡರೂ ಇದು ಅನುವಾದವೇ. ಭಾಷೆ ಮೂಲಕ್ಕೆ ಹತ್ತಿರವಾಗಿದ್ದು ಮೂಲಕ್ಕೂ ಅನ್ವಯವಾಗದೆ ಕನ್ನಡದ ಸ್ವತಂತ್ರ ಕೃತಿಯಂತೆ ರೂಪುಗೊಂಡಿದೆ. ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್‌ನ ಅನುವಾದ ಅದೇ ಹೆಸರಿನಲ್ಲಿ ಕೆ.ಎಸ್.ನಿಸಾರ್ ಅಹಮದ್ ಅವರಿಂದ ಆಗಿದೆ.

ಅನುವಾದಗಳಂತೆಯೇ ಪ್ರಪಂಚದ ಬೇರೆಬೇರೆ ಸಾಹಿತ್ಯದಿಂದ ರೂಪಾಂತರಗೊಂಡು ಹಲವು ಸಾಹಿತ್ಯಕೃತಿಗಳು ಕನ್ನಡಕ್ಕೆ ಬಂದಿವೆ. ರೂಪಾಂತರಗೊಳ್ಳುವಲ್ಲಿ ಮೂಲದ ಚೌಕಟ್ಟು ಹಾಗೆಯೇ ಇದ್ದು, ವಸ್ತು ಮತ್ತು ಪಾತ್ರಗಳು ನಮ್ಮದಾಗಿವೆ. ಹೀಗೆ ರೂಪಾಂತರಗೊಂಡಾಗ ಇವುಗಳ ಮೂಲ ಚೌಕಟ್ಟೂ ಇತರರದ್ದಲ್ಲ ಎನಿಸುವಷ್ಟು ಕನ್ನಡದ್ದಾಗಿದೆ. ಹೀಗೆ ಈ ಹಿಂದೆ ರೂಪಾಂತರಗೊಂಡ ಸಾಮಾಜಿಕ ನಾಟಕಗಳಲ್ಲಿ ಎ.ಎನ್. ಮೂರ್ತಿರಾಯರ ಆಷಾಢಭೂತಿ, ಪರ್ವತವಾಣಿ ಅವರ ಬಹದ್ದೂರ್ ಗಂಡ, ವಾರ್ಷಿಕೋತ್ಸವ, ಉಂಡಾಡಿ ಗುಂಡ ಮೊದಲಾದವು ಮುಖ್ಯವಾಗಿ ಹೆಸರಿಸಬೇಕಾದಂಥ ನಾಟಕಗಳು.

ಕನ್ನಡದಲ್ಲಿ ಮೊದಲಿಗೆ ಕಂಡುಬಂದ ನಾಟಕಗಳು ಏನಿದ್ದರೂ ಪೌರಾಣಿಕ ವಸ್ತುಗಳನ್ನುಳ್ಳ ಸಂಸ್ಕೃತದಿಂದ ಅನುವಾದಗೊಂಡು ಬಂದ ನಾಟಕಗಳು. ಸ್ವತಂತ್ರ ನಾಟಕಗಳನ್ನು ರಚಿಸುವಾಗಲೂ ಲೇಖಕರಿಗೆ ಈ ಅನುವಾದಗಳ ಮಾದರಿಯೇ ಆದರ್ಶವಾಯಿತು. ಹೊಸದಾಗಿ ನಾಟಕ ರಚಿಸ ಹೊರಟವರು ಸಾಮಾಜಿಕ ವಸ್ತುಗಳನ್ನು ಕೈಗೆತ್ತಿಕೊಳ್ಳದೆ ಹೆಚ್ಚಾಗಿ ಪೌರಾಣಿಕ ವಸ್ತುಗಳನ್ನೇ ಆಯ್ಕೆಮಾಡಿಕೊಂಡರು. ಇದಕ್ಕೆ ಕಾರಣ ಇಂದಿನ ಸಮಸ್ಯೆಗಳೇ ರೂಪಾಂತರಹೊಂದಿ ಸಾರ್ವಕಾಲಿಕ ಸಮಸ್ಯೆಗಳಾಗಿ ಪರಿಣಮಿಸುತ್ತವೆ ಎಂಬ ದೃಷ್ಟಿಯಿದ್ದುದರಿಂದ ಎಂದು ತೋರುತ್ತದೆ.

ಕೆಲವರು ಸ್ವತಂತ್ರವಾಗಿ ಪೌರಾಣಿಕ ನಾಟಕಗಳನ್ನು ರಚಿಸಿದರು. ಈ ರಚನೆಗಳಿಗೆ ಕಾರಣ ಕನ್ನಡ ಅಭಿಮಾನ ಹಾಗೂ ಕನ್ನಡ ರಂಗಭೂಮಿಯನ್ನು ಜೀವಂತಗೊಳಿಸಬೇಕೆಂಬ, ಪ್ರಚಾರಗೊಳಿಸಬೇಕೆಂಬ ಹಂಬಲ. ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕಗಳು ಪ್ರದರ್ಶಿತವಾಗುತ್ತಿದ್ದಾಗ, ಕನ್ನಡ ಜನ ಅವುಗಳಿಗೆ ಮಾರುಹೋಗುತ್ತಿದ್ದಾಗ, ಕನ್ನಡ ರಂಗಭೂಮಿ ನಶಿಸಿಹೋಗಬಾರದು ಎಂಬ ಅಭಿಮಾನದಿಂದ ಮೊದಲಿಗೆ ಸ್ವತಂತ್ರ ಕನ್ನಡನಾಟಕ ರಚಿತವಾಯಿತು ಎಂದು ಹೇಳಬಹುದು. ಹೀಗೆ ಮೊದಲು ರಚಿಸಿದವರು ಶಾಂತಕವಿಗಳು. ಇವರ ನಾಟಕಗಳು ಬಯಲಾಟಗಳಿಗೂ ನಾಟಕಗಳಿಗೂ ನಡುವೆ ಬರುತ್ತವೆ. ಇವರ ಎಲ್ಲ ನಾಟಕಗಳಲ್ಲಿ ಬಯಲಾಟದ ಮಾದರಿ ಕಂಡುಬರುತ್ತದೆ. ಗಿರಿಜಾಕಲ್ಯಾಣ, ಉಷಾಹರಣ, ವತ್ಸಲಾಹರಣ – ಈ ಮಾದರಿಯಲ್ಲಿ ರಚಿತವಾದ ಇವರ ಮುಖ್ಯ ನಾಟಕಗಳು. ಇವರು ಪುರಾಣ ವಸ್ತುಗಳನ್ನು ನಾಟಕಕ್ಕೆ ಬಳಸಿಕೊಳ್ಳುವಾಗ ಯಾವುದೇ ಹೊಸ ದೃಷ್ಟಿಕೋನವಾಗಲಿ, ಸಂವಿಧಾನ ಕೌಶಲವಾಗಲಿ ಕಂಡುಬರುವುದಿಲ್ಲ. ಆದರೂ ಕನ್ನಡದಲ್ಲಿ ಮೊದಲು ಬಂದ ಸ್ವತಂತ್ರ ರಂಗಕೃತಿಗಳೆಂಬ ದೃಷ್ಟಿಯಿಂದ ಇವು ಗಮನಾರ್ಹವಾಗುತ್ತವೆ.

ರಂಗಭೂಮಿಗಾಗಿಯೇ ನಾಟಕ ಬರೆಯಲು ಹೊರಟವರಲ್ಲಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು ಮುಖ್ಯರು. ಸಾಹಿತ್ಯಕವಾಗಿಯಾಗಲಿ, ಸಂವಿಧಾನ ಕೌಶಲದೃಷ್ಟಿಯಿಂದಾಗಲಿ ಇವರ ರಚನೆಗಳಲ್ಲಿ ಹೊಸತನ ಕಂಡುಬರುವುದಿಲ್ಲವಾದರೂ ಇವರ ನಾಟಕಗಳು ರಂಗಭೂಮಿಯ ಮೇಲೆ ಯಶಸ್ವೀ ಪ್ರಯೋಗಗಳಾದವು. ಕೃಷ್ಣಲೀಲಾ, ಶ್ರೀಕೃಷ್ಣಪಾರಿಜಾತ, ರುಕ್ಮಿಣೀಸ್ವಯಂವರ, ಮಾರ್ಕಂಡೇಯ, ತುಕಾರಾಂ – ಇವು ಇವರ ಮುಖ್ಯ ರಂಗನಾಟಕಗಳು.

ಇದೇ ಹಾದಿಯಲ್ಲಿ ಮುಂದೆ ನಡೆದ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಶಕ್ತಿವಂತರು. ಇವರಿಗಿದ್ದ ಪಾಂಡಿತ್ಯ ಹೆಚ್ಚಿನದು ಅನ್ನುವುದು ಇವರ ರಚನೆಗಳಲ್ಲಿ ಕಂಡುಬರುತ್ತದೆ. ಸೀತಾಪರಿಣಯ, ಸೀತಾ ಸ್ವರ್ಣಮೃಗ, ಅಭಿಜ್ಞಾನ ಪ್ರಧಾನ, ರಾಜಸೂಯಯಾಗ ಮೊದಲಾದವು ಇವರು ರಚಿಸಿರುವ ಹಲವಾರು ನಾಟಕಗಳಲ್ಲಿ ಮುಖ್ಯ ನಾಟಕಗಳು.

ಈ ಮೂವರಿಗಿಂತಲೂ ಸ್ವಲ್ಪ ಭಿನ್ನವಾದವರು ಬಿ.ಪುಟ್ಟಸ್ವಾಮಯ್ಯ. ಇವರೂ ರಂಗಭೂಮಿಗಾಗಿಯೇ ಕೆಲವು ನಾಟಕಗಳನ್ನು ರಚಿಸಿದವರು. ಅವುಗಳಲ್ಲಿ ಮುಖ್ಯವಾದವು ಸತಿತುಳಸಿ, ಅಕ್ಕಮಹಾದೇವಿ, ಕುರುಕ್ಷೇತ್ರ, ದಶಾವತಾರ, ಗೌತಮಬುದ್ಧ, ಷಹಜಹಾನ್. ಈ ನಾಟಕಗಳ ವಸ್ತು ಪೌರಾಣಿಕ ಹಾಗೂ ಐತಿಹಾಸಿಕವಾದರೂ ಇವರ ರಚನೆಗಳಲ್ಲಿ ಹೊಸ ದೃಷ್ಟಿಯನ್ನು ಕಾಣಬಹುದು. ಮೊದಲಿನಂತೆ ನಾಟಕಗಳಲ್ಲಿ ಪುರಾಣ ಪುಣ್ಯಕಥೆಗಳನ್ನು ಕೇಳಿಹೋಗಲು ಪ್ರೇಕ್ಷಕರನ್ನು ಬಿಡದೆ ಅವರ ದೃಷ್ಟಿಯನ್ನು ಬದಲಾಯಿಸಲು ನಾಟಕಗಳ

ಮುಖಾಂತರ ಪ್ರಯತ್ನಿಸಿದ್ದಾರೆ. ಉಳಿದಂತೆ ಸಾಂಪ್ರದಾಯಿಕ ನಾಟಕಗಳ ಸಂವಿಧಾನ ಕೌಶಲವನ್ನೇ ಉಳಿಸಿಕೊಂಡಿದ್ದಾರೆ. ಭಾಷಾಂತರ ಕಲೆಯಲ್ಲಿ ಮುಂದುವರಿದ ಕನ್ನಡ ನಾಟಕ ರಚನೆ ಕಾಲಾನಂತರದಲ್ಲಿ ಬದಲಾವಣೆ ಹೊಂದಿತು. ಇಂಗ್ಲಿಷ್, ಗ್ರೀಕ್ ಮೊದಲಾದ ಸಾಹಿತ್ಯಗಳ ಅಭ್ಯಾಸ ಮಾಡಿದವರು ಆ ಸಾಹಿತ್ಯಗಳ ಪ್ರಭಾವಕ್ಕೆ ಒಳಗಾದರು. ಇದರ ಪರಿಣಾಮವಾಗಿ ಕನ್ನಡದಲ್ಲಿ ಓದಲೂ ಆಡಲೂ ಸಾಧ್ಯವಾಗುವಂಥ ಕೆಲವು ನಾಟಕಗಳು ಬಂದವು. ಇವುಗಳಲ್ಲಿ ರೂಪಾಂತರಗಳೂ ಅನುವಾದಗಳೂ ಸ್ವತಂತ್ರ ಕೃತಿಗಳೂ ಇವೆ. ಈ ಹಿಂದೆ ನೋಡಿದ ರಚನೆಗಳೊಡನೆ ಹೋಲಿಸಿದಾಗ ಇದು ಕನ್ನಡ ನಾಟಕ ಪರಂಪರೆಯಲ್ಲಿ ಮಹತ್ವದ ಹೆಜ್ಜೆ ಎಂಬುದು ಸ್ಪಷ್ಟವಾಗುತ್ತದೆ. ಈ ಸಾಲಿನಲ್ಲಿ ಬಿ.ಎಂ.ಶ್ರೀ., ಕುವೆಂಪು, ಮಾಸ್ತಿ, ಡಿ.ವಿ.ಜಿ., ವಿ.ಸೀ., ಎಲ್.ಗುಂಡಪ್ಪ, ಜಿ.ಪಿ.ರಾಜರತ್ನಂ, ಕಡೆಂಗೋಡ್ಲು ಶಂಕರಭಟ್ಟ ಮೊದಲಾದ ವರನ್ನು ಗಮನಿಸಬಹುದು. ಬಿ.ಎಂ.ಶ್ರೀ. ಅವರ ಇಂಗ್ಲಿಷ್, ಗ್ರೀಕ್ ಹಾಗೂ ಕನ್ನಡ ಸಾಹಿತ್ಯದ ಆಳವಾದ ಅಭ್ಯಾಸದ ಫಲ ಗದಾಯುದ್ಧ, ಅಶ್ವತ್ಥಾಮನ್ ಮತ್ತು ಪಾರಸಿಕರು. ಗದಾಯುದ್ಧ ನಾಟಕದಲ್ಲಿ ನೇರವಾಗಿ ಗ್ರೀಕ್ ನಾಟಕದ ಪ್ರಭಾವ ಏರದಿದ್ದರೂ ಆ ಸಾಹಿತ್ಯದ ಅಭ್ಯಾಸದ ಲಕ್ಷಣಗಳನ್ನು ಗುರುತಿಸಬಹುದು. ರನ್ನನ ಕಾವ್ಯದ ಗಾಢ ಪ್ರಭಾವ, ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದಾದ ಪ್ರೇರಣೆ ಇವುಗಳಿಂದ ಕನ್ನಡಕ್ಕೆ ಒಂದು ಆಧುನಿಕ ನಾಟಕ ದೊರೆಯಿತು. ಅಶ್ವತ್ಥಾಮನ್ ನಾಟಕ ಸಾಫೊಕ್ಲಿಸನ ಅಯಾಸ್ ನಾಟಕದ ರೂಪಾಂತರ. ಈ ರೂಪಾಂತರ ಸಾಧ್ಯವಾದದ್ದು ಗ್ರೀಕ್ ಪುರಾಣ ಕಥೆಗಳಿಗೂ ನಮ್ಮ ಪುರಾಣ ಕಥೆಗಳಿಗೂ ಸಾಮ್ಯವಿರುವುದರಿಂದ. ಇದು ರೂಪಾಂತರ ವಾದರೂ ಕನ್ನಡ ನೆಲಕ್ಕೆ ಸೇರಿದ್ದು ಎನ್ನುವಷ್ಟು ಸ್ವತಂತ್ರ ಕೃತಿಯಾಗಿದೆ. ಅಶ್ವತ್ಥಾಮನನ್ನು ಚಿರಂಜೀವಿ ಎಂದು ತೋರಿಸಿದ ಈ ನಾಟಕ ಒಂದು ಕಾಲಕ್ಕೆ ಕ್ರಾಂತಿಯ ರಚನೆಯಾಯಿತು. ಪಾರಸಿಕರು ಮೂಲ ಗ್ರೀಕ್ ನಾಟಕ ಇದ್ದಂತೆಯೇ ಅನುವಾದಗೊಂಡಿದೆ. ಗ್ರೀಕ್ ಸಾಹಿತ್ಯದ ವಾಸನೆ ಇಲ್ಲಿ ಸಂಪೂರ್ಣವಾಗಿ ಇದೆ. ಈ ನಾಟಕದಿಂದ ಈಸ್ಕಲಸ್‌ನ ಪರಿಚಯ ಕನ್ನಡಿಗರಿಗೆ ಸ್ವಲ್ಪಮಟ್ಟಿಗೆ ಆಯಿತು.



ಟಿ.ಪಿ. ಕೈಲಾಸಂ

ಜಗತ್ತಿನ ಶ್ರೇಷ್ಠ ಕೃತಿಗಳು ಕನ್ನಡಕ್ಕೆ ಅನುವಾದಗೊಂಡು ರೂಪಾಂತರಗೊಂಡು ರಂಗಭೂಮಿಯ ಮೇಲೆ ಬರುತ್ತಿದ್ದಂತೆಯೇ ಕನ್ನಡ ರಂಗಭೂಮಿಯ ಮೇಲೆ ಸ್ವತಂತ್ರ ಕೃತಿಗಳೂ ಕಾಣಿಸಿಕೊಂಡವು. ಉತ್ತರ ಕನ್ನಡ ಜಿಲ್ಲೆಯಲ್ಲಿ, ಹವ್ಯಕರು ಮಾತನಾಡುವ ಕನ್ನಡದಲ್ಲಿ ರಚಿತವಾದ ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಮೊದಲ ಸಾಮಾಜಿಕ ನಾಟಕ ಎನ್ನುವ ಐತಿಹಾಸಿಕ ಮಹತ್ವ ಪಡೆದಿದೆ. ಈ ದಿಶೆಯಲ್ಲಿ ಕೆಲಸ ಮಾಡಿದ ಮೊದಲಿಗರೆಂದರೆ ಟಿ.ಪಿ.ಕೈಲಾಸಂ ಹಾಗೂ ಶ್ರೀರಂಗ. ಕೈಲಾಸಂ ಅವರು ಬರ್ನಾರ್ಡ್ ಷಾ, ಇಬ್ಸನ್ ಮೊದಲಾದವರ ಮಾದರಿಯಲ್ಲಿ ನಾಟಕಗಳನ್ನು ರಚಿಸತೊಡಗಿದರು. ಇವರ ನಾಟಕಗಳಲ್ಲಿ ಹೆಚ್ಚಾಗಿ ಮಧ್ಯಮವರ್ಗದ ಜನರ ಜೀವನ ಚಿತ್ರಿತವಾಯಿತು. ಸಮಸ್ಯೆಗಳೂ ಅವರವೇ. ಗೇಲಿ, ಅನುಕಂಪ, ವ್ಯಂಗ್ಯ, ಟೀಕೆಗಳ ಮೂಲಕ ಸಮಾಜವನ್ನು ತಿದ್ದಲು ತೊಡಗಿದರು. ಮಧ್ಯಮವರ್ಗದ ಮನೆಮಾತು ರಂಗಭಾಷೆಯಾಯಿತು. ಅಹೋಬ್ಳು, ಗಂಗಣ್ಣ, ಸಾವಿತ್ರಮ್ಮ, ಸುಬ್ಬಣ್ಣ, ಪಾರ್ವತಮ್ಮ ಇವರುಗಳಿಗೆ ರಂಗದ ಮೇಲೆ ಸ್ಥಾನ ದೊರಕಿತು. ಈ ಎಲ್ಲ ದೃಷ್ಟಿಯಿಂದ ರಂಗಭೂಮಿಯಲ್ಲಿ ಕ್ರಾಂತಿಯಾಯಿತೆಂದು ಹೇಳಬಹುದು. ಕೈಲಾಸಂ ನಾಟಕಗಳು ಒಂದೇ ಸಮನೆ ಪ್ರಯೋಗವಾದುವು. ಇಂಥ ನಾಟಕಗಳ ಪ್ರಯೋಗ ಮಾಡುವುದು ಸಣ್ಣ ಸಣ್ಣ ಗುಂಪುಗಳಿಗೆ ಕಷ್ಟವಾಗುತ್ತಿರಲಿಲ್ಲ. ರಂಗಸಜ್ಜಿಕೆ, ಬೆಳಕು, ಉಡುಗೆ ತೊಡುಗೆ ಹಾಗೂ ರಂಗಪರಿಕರಗಳ ಬಗ್ಗೆ ನಾಟಕವಾಡುವವರು ಅಷ್ಟಾಗಿ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಹೀಗೆ ರಚನೆಗೊಂಡ ನಾಟಕಗಳಲ್ಲಿ ಮುಖ್ಯವಾದವು ಟೊಳ್ಳುಗಟ್ಟಿ, ಬಂಡ್ವಾಳ್ವಿಲ್ಲದ್ಬಡಾಯಿ, ಹುತ್ತದಲ್ಲಿ ಹುತ್ತ, ಪಾತೂ ಶೌರ್‍ಮನೆ, ಸಾತೂ ಶೌರ್‍ಮನೆ, ಬಹಿಷ್ಕಾರ ಮೊದಲಾದವು. ಇವರ ಕೀಚಕ, ಮಹಾಭಾರತದಲ್ಲಿ ಒಂದು ಪಾತ್ರವನ್ನು ಆಧರಿಸಿ ಬರೆದ ಹೊಸ ರೀತಿಯ ನಾಟಕ. ಕೈಲಾಸಂ ಅವರಂತೆಯೇ ಶ್ರೀರಂಗರೂ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡರೂ ಇವರ ವಿಮರ್ಶೆ ಹರಿತವಾಗಿದೆ. ಸಮಾಜ ಪುನರ್ನಿರ್ಮಾಣವಾಗಬೇಕೆಂಬ ದೃಷ್ಟಿಯಿಂದ ಇವರು ನಾಟಕ ರಚನೆಗೆ ಕೈಹಾಕಿದರು. ಹಳತು –ಹೊಸತು, ಮುಪ್ಪು–ಯೌವನ, ಪ್ರಾಮಾಣಿಕತೆ–ಕುತಂತ್ರ, ನ್ಯಾಯ–ಅನ್ಯಾಯ – ಇವುಗಳನ್ನೆಲ್ಲ ಚಿತ್ರಿಸಿದರು. ಈ ದೃಷ್ಟಿಯಿಂದ ಹರಿಜನ್ವಾರ ನಾಟಕ ಒಂದು ಗಮನಾರ್ಹ ಕೃತಿಯಾಗಿದೆ. ಅಂತೆಯೇ ಇವರ ಸಂಸಾರಿಗ ಕಂಸ, ನರಕದಲ್ಲಿ ನರಸಿಂಹ, ಪ್ರಪಂಚ ಪಾಣಿಪತ್ತು ಮೊದಲಾದ ನಾಟಕಗಳೂ ಮುಖ್ಯವಾಗುತ್ತವೆ. ಇತ್ತೀಚೆಗೆ ಶ್ರೀರಂಗರ ಬರೆವಣಿಗೆಯ ಧೋರಣೆ ಬದಲಾಗಿದೆ. ಹೆಚ್ಚಿಗೆ ಅವು ಬುದ್ಧಿನಾಟಕಗಳಾಗಿವೆ. ಮಾತಿನ ಜಾಣತನ, ರಂಗಸಜ್ಜಿಕೆ, ಬೆಳಕು, ಉಡುಗೆ–ತೊಡುಗೆ ಇವುಗಳಲ್ಲಿ ರಂಗಸಾಧ್ಯತೆಗಳನ್ನು ತರಲು ಹೋಗಿದ್ದಾರೆ. ಅಲ್ಲದೆ ಪ್ರೇಕ್ಷಕ ಹಾಗೂ ನಾಟಕಕಾರನಿಗೆ ಒಂದು ಮಹತ್ತರ ಸ್ಥಾನವನ್ನು ನಾಟಕಗಳಲ್ಲಿ ತಂದುಕೊಟ್ಟಿದ್ದಾರೆ. ಇವರ ಕತ್ತಲೆ–ಬೆಳಕು, ಏನ ಬೇಡಲಿ ನಿನ್ನ ಬಳಿಗೆ ಬಂದು, ಯಾರಿಗೆ ಮಾಡ್ತೀ ಮ್ಯಾಂ ಮೊದಲಾದವು ಈ ಮಾದರಿಯ ಕೃತಿಗಳು. ಇವರ ನಾಟಕಗಳಲ್ಲಿ ಎದ್ದುಕಾಣುವ ನ್ಯೂನತೆ ಎಂದರೆ ಒಂದು ವಿಚಾರ ಹಲವು ನಾಟಕಗಳಲ್ಲಿ ಬೇರೆಬೇರೆ ರೀತಿಯಲ್ಲಿ ಬಂದಿರುವುದು. ಇಷ್ಟಾದರೂ ಶ್ರೀರಂಗರು ರಂಗಭೂಮಿಯ ಬೆಳೆವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಹೇಳಬಹುದು.

ಕೈಲಾಸಂ, ಶ್ರೀರಂಗರು ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡು ಬರೆಯಲು ಪ್ರಾರಂಭಿಸಿದ ಮೇಲೆ ಹಲವಾರು ನಾಟಕಕಾರರು ಬಂದರು. ಇವರಲ್ಲಿ ಮುಖ್ಯರಾದವರೆಂದರೆ ಪರ್ವತವಾಣಿ. ಇವರಿಂದ ರಚಿತವಾದ ಹಲವು ನಾಟಕಗಳು ರೂಪಾಂತರವಾದರೂ ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಡುವ ದೃಷ್ಟಿಯಿಂದ ಇವುಗಳಿಗೆ ಒಂದು ಮುಖ್ಯ ಸ್ಥಾನವಿದೆ. ಇವರ ಮುಖ್ಯ ನಾಟಕಗಳೆಂದರೆ ಬಹದ್ದೂರ್ ಗಂಡ, ಉಂಡಾಡಿ ಗುಂಡ, ವಾರ್ಷಿಕೋತ್ಸವ, ಹಣಹದ್ದು ಮೊದಲಾದವು. ಇನ್ನೂ ಕೆಲವರು ನಾಟಕಕಾರರು ಪ್ರಹಸನಗಳನ್ನು ರಚಿಸಿದರು. ಹೀಗೆ ಬರೆದಾಗ ಹಲವರು ಹವ್ಯಾಸಿ ರಂಗಭೂಮಿಯನ್ನೇ ದೃಷ್ಟಿಯಿಟ್ಟುಕೊಂಡು ಬರೆದರು ಎನ್ನುವುದೂ ಕಂಡುಬರುತ್ತದೆ. ಈ ದಿಕ್ಕಿನಲ್ಲಿ ದಾಶರಥಿ ದೀಕ್ಷಿತ್, ಎ.ಎಸ್.ಮೂರ್ತಿ, ಎನ್ಕೆ.ನಾ.ಕಸ್ತೂರಿ, ಕೆ.ಎನ್.ಸುಬ್ಬನರಸಿಂಹ, ಗುಂಡಣ್ಣ ಮೊದಲಾದವರು ಶ್ರಮಿಸಿದರು. ಎ.ಎಸ್.ಮೂರ್ತಿ ಅವರ ಬರೆವಣಿಗೆಯಲ್ಲಿ ಬದಲಾವಣೆಯನ್ನು ಗುರುತಿಸಬಹುದು. ಅಯ್ಯಾ ನಾನು ಯಾರು, ಸುಳಿಯಲ್ಲಿ ಸಿಕ್ಕಾಗ ಮೊದಲಾದವುಗಳಲ್ಲಿ ಪ್ರವೃತ್ತಿಯ ಬದಲಾವಣೆ ಕಂಡುಬರುತ್ತದೆ.

ಈ ಕಾಲದಲ್ಲೇ ಇಂಗ್ಲಿಷ್‌ನ ಅಪೇರಾ ಮಾದರಿಯ ನಾಟಕಗಳು ಗೀತರೂಪಕಗಳು ಎಂಬ ಹೆಸರಿನಿಂದ ಕನ್ನಡಕ್ಕೆ ಬಂದವು. ಈ ಕ್ಷೇತ್ರದಲ್ಲಿ ದುಡಿದವರೆಂದರೆ ಶಿವರಾಮ ಕಾರಂತ ಹಾಗೂ ಪು.ತಿ.ನ. ಇವರುಗಳ ಗೀತನಾಟಕಗಳು ರಚನೆಯಲ್ಲಿ ಭಿನ್ನವಾಗಿವೆ. ಕಾರಂತರು ತಮ್ಮ ಗೀತನಾಟಕಗಳಲ್ಲಿ ಜನಪದ ದೇಸಿಯನ್ನು ಉಪಯೋಗಿಸಿದರೆ ಪು.ತಿ.ನ. ತಮ್ಮ ನಾಟಕಗಳಿಗೆ ಪುರಾಣಗಳಿಂದ ವಸ್ತುಗಳನ್ನು ಆಯ್ದು ಸ್ವತಂತ್ರ ಕೃತಿಗಳನ್ನು ರಚಿಸಿದರು. ಇಂಥ ನಾಟಕಗಳಲ್ಲಿ ಕಾರಂತರ ಗೀತನಾಟಕಗಳು, ಪು.ತಿ.ನ. ಅವರ ಅಹಲ್ಯೆ, ಗೋಕುಲ ನಿರ್ಗಮನ, ಹಂಸದಮಯಂತಿ ಮತ್ತು ಇತರ ರೂಪಕಗಳು ಮುಖ್ಯವಾದವು. ಕೀರ್ತಿನಾಥ ಕುರ್ತುಕೋಟಿಯವರು ಈ ರಂಗದಲ್ಲಿ ಕೆಲಸ ಮಾಡಿ ಸ್ವಪ್ನದರ್ಶಿ ಮತ್ತು ಇತರ ಗೀತನಾಟಕಗಳು ಎಂಬ ಕೃತಿಯನ್ನು ನೀಡಿದ್ದಾರೆ.

ರೇಡಿಯೋಕ್ಕಾಗಿಯೇ ಬರೆದ ನಾಟಕಗಳು, ರಂಗಭೂಮಿಗಾಗಿ ಬರೆದ ನಾಟಕ ಗಳಿಗಿಂತ ಬೇರೆಯಾಗಿವೆ. ಈ ದೃಷ್ಟಿಯಿಂದ ರಚನೆಯಾದ ನಾಟಕಗಳಲ್ಲಿ ಹೆಸರಿಸಬಹುದಾದುವೆಂದರೆ ಬೀಚಿ ಅವರ ರೇಡಿಯೋ ನಾಟಕಗಳು. ಎಚ್.ಕೆ.ರಂಗನಾಥ ಅವರ ದುರಂತ ಮತ್ತು ಇತರ ಪ್ರಸಾರ ನಾಟಕಗಳು, ಎಸ್.ಎನ್.ಶಿವಸ್ವಾಮಿ ಅವರ ಹೃದಯಾಂತರಾಳ, ವಸಂತಕವಲಿ ಅವರ ಪುರಂದರದರ್ಶನ ಮೊದಲಾದುವುಗಳು.

ಪ್ರಬುದ್ಧರಿಗಾಗಿ ನಾಟಕಗಳು ರಚನೆಯಾದಂತೆ ಮಕ್ಕಳಿಗಾಗಿಯೂ ರಚನೆಗೊಂಡಿವೆ. ಆದರೂ ಈ ದಿಶೆಯಲ್ಲಿನ ಸಾಹಿತ್ಯ ರಚನೆ ಕಡಿಮೆ ಎಂದೇ ಹೇಳಬೇಕು. ಕೆಲವು ಅನುವಾದಗಳೂ ಕಥೆಗಳನ್ನು ಆಧರಿಸಿ ರಚಿಸಿದ ಕೃತಿಗಳೂ ಬಂದಿವೆ. ಮಕ್ಕಳಿಗಾಗಿ, ಮಕ್ಕಳಿಂದ ಮಕ್ಕಳಿಗಾಗಿ ದೊಡ್ಡವರಿಂದ ನಾಟಕಗಳು ರಂಗಭೂಮಿಯಲ್ಲಿ ಕಾಣಿಸಿಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಕೆಲವು ಪ್ರಯೋಗಗಳು ಗಮನಾರ್ಹವಾಗಿವೆ. ಈ ರಂಗದಲ್ಲಿ ಉತ್ಸಾಹದಿಂದ ದುಡಿದವರೆಂದರೆ ಹೊಯಿಸಳರು. ಇವರ ಅಗಿಲಿನ ಮಗಳು, ಪ್ರಸಾದ, ವಾತಾಪಿ ಮೊದಲಾದ ನಾಟಕಗಳು ಮಕ್ಕಳ ಮನಸ್ಸನ್ನು ಸೆರೆಹಿಡಿಯುತ್ತವೆ. ಈ ನಿಟ್ಟಿನಲ್ಲಿ ಕುವೆಂಪು ಅವರ ಪ್ರಯತ್ನವೂ ಸ್ತುತ್ಯರ್ಹವಾದದ್ದು. ಇವರ ಮೋಡಣ್ಣನ ತಮ್ಮ, ನನ್ನ ಗೋಪಾಲ ಎಂಬ ನಾಟಕಗಳು ಭಾಷಾದೃಷ್ಟಿಯಿಂದ, ರಚನೆ ಹಾಗೂ ಪ್ರಯೋಗ ದೃಷ್ಟಿಗಳಿಂದ ಗಮನಾರ್ಹವಾಗಿವೆ. ಇತ್ತೀಚೆಗೆ ಈ ಪ್ರಕಾರ ಚೆನ್ನಾಗಿ ಬೆಳೆಯುತ್ತಿದೆ. ಹೊಸ ರೀತಿಯ ರಂಜನೆಯನ್ನುಂಟುಮಾಡುವ ನಾಟಕಗಳಲ್ಲಿ ಕೆ.ವಿ.ಸುಬ್ಬಣ್ಣನವರ ಕಾಡಿನಲ್ಲಿ ಕಥೆ, ಬಿ.ವಿ.ಕಾರಂತರ ಪಂಜರಶಾಲೆ ಮೊದಲಾದವುಗಳನ್ನು ಇಲ್ಲಿ ಹೆಸರಿಸಬಹುದು.

ಸಾಹಿತ್ಯದೃಷ್ಟಿಯಿಂದ ಹಾಗೂ ರಂಗಭೂಮಿಯ ದೃಷ್ಟಿಯಿಂದ ಕೆಲವು ನಾಟಕಗಳು ಬಹಳ ಮುಖ್ಯವಾಗಿವೆ. ಮಾಸ್ತಿ ಅವರ ಕಾಕನಕೋಟೆ ಒಂದು ಗಮನಾರ್ಹ ಕೃತಿ. ರಂಗದ ಮೇಲೂ ಯಶಸ್ವಿ ಪ್ರಯೋಗವನ್ನು ಕಂಡಿದೆ. ಕುವೆಂಪು ಅವರ ಬೆರಳ್‌ಗೆ

ಕೊರಳ್‌ನ ಸರಳ ರಚನೆ ಪಾತ್ರನಿರ್ವಹಣೆಯಲ್ಲಿ ಹೆಚ್ಚು ಸಹಾಯವಾಗಿದೆ. ದೃಶ್ಯವಿನ್ಯಾಸವೂ ಅಷ್ಟೇ ಚೆನ್ನಾಗಿದೆ. ಸ್ಮಶಾನ ಕುರುಕ್ಷೇತ್ರ ಭಾರತದ ಕಥೆಗೆ ಹೊಸ ದೃಷ್ಟಿಕೋನ ನೀಡಿದೆ. ಕನ್ನಡದ ಇನ್ನೊಬ್ಬ ಪ್ರಮುಖ ನಾಟಕಕಾರರೆಂದರೆ ಜಡಭರತರು (ಜಿ.ಬಿ.ಜೋಶಿ). ಇವರ ಕದಡಿದ ನೀರು, ಆ ಊರು ಈ ಊರು ನಾಟಕಗಳು ಭಾಷಾದೃಷ್ಟಿಯಿಂದ, ಸಾಹಿತ್ಯದೃಷ್ಟಿಯಿಂದ ಮುಖ್ಯವಾಗಿವೆ. ಇವರ ಸತ್ತವರ ನೆರಳು, ಸಮಾಜದ ಒಂದು ಪಂಗಡದಲ್ಲಿ, ಆಚಾರದ ನೆವದಲ್ಲಿ ಆಗುವ ಶೋಷಣೆ ಹಾಗೂ ಮೌಢ್ಯವನ್ನು ಚಿತ್ರಿಸುವ ಗಮನಾರ್ಹ ಕೃತಿಯಾಗಿದೆ. ಸಂಸ ಅವರ ನಾಟಕಗಳು ತಮ್ಮಷ್ಟಕ್ಕೆ ತಾವೇ ಪ್ರತ್ಯೇಕವಾಗಿವೆ. ಇವರ ಎಲ್ಲ ಐತಿಹಾಸಿಕ ನಾಟಕಗಳೂ ಹೆಚ್ಚಾಗಿ ಮೈಸೂರು ಇತಿಹಾಸಕ್ಕೆ ಸಂಬಂಧಪಟ್ಟವು. ಭಾಷಾ ಬಳಕೆ ಹಾಗೂ ಪ್ರಯೋಗದೃಷ್ಟಿಯಿಂದ ಗಮನಾರ್ಹವಾಗಿವೆ. ವಿಗಡ ವಿಕ್ರಮರಾಯ, ಬಿರುದೆಂತೆಂಬರ ಗಂಡ –ಇವುಗಳನ್ನು ಇಲ್ಲಿ ಹೆಸರಿಸಬಹುದು. ಬೇಂದ್ರೆ, ಗೋಕಾಕ, ಕುರ್ತುಕೋಟಿ, ವಿ.ಸೀ., ಶಿವರಾಮ ಕಾರಂತ ಮೊದಲಾದವರ ಕೃತಿಗಳು ಸಾಹಿತ್ಯ ಇಲ್ಲವೇ ರಂಗಭೂಮಿಯ ದೃಷ್ಟಿಯಿಂದ ಮುಖ್ಯ ಕೃತಿಗಳಾಗುತ್ತವೆ. ಕೀರ್ತಿನಾಥರ ಆ ಮನಿ, ಕಾರಂತರ ಗರ್ಭಗುಡಿ ಒಳ್ಳೆಯ ನಾಟಕಗಳು. ಆ ಮನಿಯಲ್ಲಿ ಸಾಂಕೇತಿಕತೆ ದಟ್ಟವಾಗಿದೆ. ಗರ್ಭಗುಡಿ ಸಾಮಾಜಿಕ ಸಮಸ್ಯೆಯೊಂದನ್ನು ಪ್ರಭಾವಪೂರ್ಣವಾಗಿ ಚಿತ್ರಿಸುತ್ತದೆ. ಎಂ.ಆರ್.ಶ್ರೀ., ಅವರ ಧರ್ಮದುರಂತ ಐತಿಹಾಸಿಕ ನಾಟಕಗಳಲ್ಲಿ ಹೆಸರಿಸಬೇಕಾದ ಮಹತ್ವ ಪಡೆದಿದೆ.

ವಸ್ತು, ಪಾತ್ರ, ರಚನೆ, ರಂಜನೆ –ಇವುಗಳನ್ನೇ ಗಮನದಲ್ಲಿಟ್ಟು ಕೊಂಡು ಬಂದ ಸಾಂಪ್ರದಾಯಿಕ ನಾಟಕಗಳು ರಚನೆಯಾಗುತ್ತಿದ್ದಂತೆಯೇ ಕನ್ನಡ ರಂಗಭೂಮಿಯ ಮೇಲೆ ಹೊಸ ಗಾಳಿ ಬೀಸತೊಡಗಿತು. ಪಾಶ್ಚಾತ್ಯ ಸಾಹಿತ್ಯ ಹಾಗೂ ರಂಗಭೂಮಿಯ ಪರಿಚಯ ಪ್ರಭಾವ ನಮ್ಮ ಬುದ್ಧಿಜೀವಿಗಳ ಮೇಲೆ ದಟ್ಟವಾದ ಪ್ರಭಾವ ಬೀರಿದವು. ಜೀವನದ ಮೌಲ್ಯಗಳಲ್ಲಾದ ಏರುಪೇರು, ಪಟ್ಟಭದ್ರರ ಮೇಲುಗೈ, ರಾಜಕೀಯ ದೊಂಬರಾಟ ಹಾಗೂ ಅವರುಗಳ ಮೇಲುಗೈ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಉಂಟಾದ ಧಕ್ಕೆ, ಜೀವನದ ಅಸಾಂಗತ್ಯ – ಇವುಗಳು ಬುದ್ಧಿಜೀವಿಗಳನ್ನು ಕೆಣಕಿ ಕಾಡಿದವು. ಸಾಂಪ್ರದಾಯಿಕ ಜಾಡಿನಲ್ಲಿ ರಚನೆಯಾದ ನಾಟಕಗಳು ಅವರಿಗೆ ಬೇಡಾದವು. ಇವರು ಅವನ್ನು ವಿರೋಧಿಸುವುದರ ಜೊತೆಗೆ ಕ್ರಿಯಾತ್ಮಕವಾಗಿ ಹೊಸ ದಾರಿ ತುಳಿದರು. ಇದರ ಪರಿಣಾಮವಾಗಿ ಹೊಸ ಸಂವೇದನೆಯ ನಾಟಕಗಳು ರಚಿತವಾದವು. ಈ ಜಾಡಿನ ನಾಟಕಗಳೇ ಅಸಂಗತ ನಾಟಕಗಳು. ಕನ್ನಡಕ್ಕೆ ಇದೊಂದು ವಿಶಿಷ್ಟ ಕೊಡುಗೆ. ಈ ದಿಕ್ಕಿನಲ್ಲಿ ಮೊಟ್ಟಮೊದಲು ಅಯನ ಸ್ಕೋವಿನ ಬಾಲ್ಡ್‌ಸೊಪ್ರಾನೋ ಸುಮತೀಂದ್ರ ನಾಡಿಗರಿಂದ ಬೊಕ್ಕತಲೆಯ ನರ್ತಕಿಯಾಗಿ ಕನ್ನಡಕ್ಕೆ ಬಂದಿತು. ಇದಕ್ಕೆ ಐತಿಹಾಸಿಕ ಮಹತ್ವವಿದೆ. ಇವರು ಮುಂದೆ ಈ ಮಾದರಿಯ ನಾಟಕಗಳನ್ನು ರಚಿಸಲಿಲ್ಲ. ಅನಂತರ ಪಿ.ಲಂಕೇಶ್, ನ.ರತ್ನ, ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ ಪಾಟೀಲ, ಚಂದ್ರಶೇಖರ ಕಂಬಾರ, ಚಂದ್ರಕಾಂತ ಕುಸನೂರ, ರಾಮಚಂದ್ರ ಶರ್ಮ, ಚದುರಂಗ ಮೊದಲಾದವರು ಈ ಪ್ರಕಾರದಲ್ಲಿ ಹೆಚ್ಚು ಕೆಲಸ ಮಾಡಿದರು. ವ್ಯಕ್ತಿಗಳ ವ್ಯಕ್ತಿತ್ವದ ಅಂತರಂಗ ಹಾಗೂ ಬಹಿರಂಗಗಳ ಸ್ವರೂಪ ಹಾಗೂ ಸಂಬಂಧಗಳನ್ನು ವಿಶ್ಲೇಷಿಸುವುದೆ ಲಂಕೇಶರ ತೆರೆಗಳು ನಾಟಕದ ಉದ್ದೇಶವಾಗಿದೆ. ನ.ರತ್ನರ ಎಲ್ಲಿಗೆ ನಾಟಕದಲ್ಲಿ ಜೀವನದ ಅಸಾಂಗತ್ಯ ಧ್ವನಿಪೂರ್ಣವಾಗಿ ಚಿತ್ರಿತವಾಗಿರುವುದನ್ನು ನೋಡಬಹುದು. ವ್ಯಕ್ತಿಯ ಅನ್ವೇಷಣೆಯಲ್ಲಿನ ಅಸಾಧ್ಯತೆಯನ್ನು ವ್ಯಂಗ್ಯವಾಗಿ ನೋಡುವ ನಾಟಕ ಇದು. ಪೂರ್ಣಚಂದ್ರ ತೇಜಸ್ವಿ ಅವರ ಯಮಳಪ್ರಶ್ನೆಯಲ್ಲಿ ಯಂತ್ರಕ್ಕೆ ಸಿಗುವ ಪ್ರಾಮುಖ್ಯತೆ ಮಾನವನಿಗೆ ಸಿಗುವುದಿಲ್ಲ ಎನ್ನುವ ಜೀವನದ ವ್ಯಂಗ್ಯ ನಾಟಕದ ವಸ್ತುವಾಗಿದೆ. ಚಂದ್ರಶೇಖರ ಪಾಟೀಲರ ಅಪ್ಪ ನಾಟಕದಲ್ಲಿ ಬರುವ ಬಸವ ಸಮಾಜದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಪಡುವ ಪ್ರಯತ್ನ ಅವನದೇ ಆಗಿರದೆ ಸಮಾಜದ ಯಾವ ಒಬ್ಬ ವ್ಯಕ್ತಿಯದೂ ಆಗುತ್ತದೆ. ಚಂದ್ರಶೇಖರ ಕಂಬಾರರ ಚಾಳೇಶದಲ್ಲಿ ವ್ಯಕ್ತಿತ್ವಗಳ ನಡುವೆ, ಸುಳ್ಳು ಮತ್ತು ಸತ್ಯಗಳ ನಡುವೆ, ಕನಸು ಮತ್ತು ಎಚ್ಚರಗಳ ನಡುವೆ ಇರುವ ದ್ವಂದ್ವವನ್ನು (ವ್ಯಕ್ತಿಯ ಸಂಕಟ) ನೋಡಬಹುದು. ಇಲಿ ಬೋನು, ಹಳ್ಳಾಕೊಳ್ಳಾ ನೀರು, ಕೊಡೆಗಳು ಮೊದಲಾದ ನಾಟಕಗಳಲ್ಲಿ ಜೀವನದ ಅಸಂಗತತೆಯ ಚಿತ್ರಣ ಸಾಂದ್ರತರವಾಗಿ ಅಭಿವ್ಯಕ್ತವಾಗಿದೆ. ಋಷ್ಯಶೃಂಗ, ಸಂಕ್ರಾಂತಿ ನಾಟಕಗಳಲ್ಲಿನ ಇತಿಹಾಸಕ್ಕೆ ಹೊಸ ಅರ್ಥ ಬರುತ್ತದೆ. ಎಚ್.ಎಂ.ಚನ್ನಯ್ಯನವರ ಎಲ್ಲರಂಥವನಲ್ಲ ನನ ಗಂಡ, ಚಂದ್ರಶೇಖರ ಕಂಬಾರರ ಜೋಕುಮಾರಸ್ವಾಮಿ, ಚಂದ್ರಶೇಖರ ಪಾಟೀಲರ ಗೋಕರ್ಣದ ಗೌಡಶಾನಿ– ಈ ನಾಟಕಗಳು ರಚನೆಯ ದೃಷ್ಟಿಯಿಂದ ಪ್ರತ್ಯೇಕವಾಗಿವೆ – ಇವು ಎಪಿಕ್ ನಾಟಕದ ಮಾದರಿಯ ನಾಟಕಗಳು. ಎಲ್ಲರಂಥವನಲ್ಲ ನನ ಗಂಡ ಹಾಗೂ ಜೋಕುಮಾರಸ್ವಾಮಿ ಪ್ರಯೋಗದ ದೃಷ್ಟಿಯಿಂದ ಗಮನಾರ್ಹ ಕೃತಿಗಳಾಗಿವೆ.



ಶ್ರೀರಂಗ

ಗಿರೀಶ್ ಕಾರ್ನಾಡರು ಐತಿಹಾಸಿಕ, ಪೌರಾಣಿಕ ವಸ್ತುಗಳನ್ನು ಎತ್ತಿಕೊಂಡು ಅವಕ್ಕೆ ಹೊಸ ವ್ಯಾಖ್ಯಾನ ಮಾಡಿ ನಾಟಕಗಳನ್ನು ರಚಿಸುತ್ತ ಬಂದಿದ್ದಾರೆ. ಯಯಾತಿ, ತುಘಲಕ್, ಹಯವದನ, ಅಗ್ನಿ ಮತ್ತು ಮಳೆ ಇವರ ಮುಖ್ಯ ಕೃತಿಗಳು. ಯಯಾತಿಯಲ್ಲಿ ಹೊಸ ಪಾತ್ರಗಳೂ ಸೇರಿದಂತೆ ಹೊಸ ವ್ಯಾಖ್ಯಾನವಿದ್ದರೆ, ತುಘಲಕ್ ನಾಟಕದಲ್ಲಿ ತುಘಲಕನ ಪಾತ್ರದಲ್ಲಿ ಅಸಾಂಗತ್ಯವಿದೆ. ಈ ನಾಟಕ ಕಾಮುವಿನ ಕ್ಯಾಲಿಗುಲಕ್ಕೆ ಬಹಳಷ್ಟು ಋಣಿಯಾಗಿದೆ. ಹಯವದನ ಬಹಳ ತಂತ್ರಗಳುಳ್ಳ ನಾಟಕ. ಪಾತ್ರಗಳ ವಿಶ್ಲೇಷಣೆಯ ದೃಷ್ಟಿಯಿಂದ, ತಂತ್ರದ ದೃಷ್ಟಿಯಿಂದ ಹೊಸತು–ಹಳತುಗಳ ಬೆಸುಗೆಯಿಂದ ಇವರ ನಾಟಕಗಳು ಮುಖ್ಯವಾಗುತ್ತವೆ.

ಇಂಥ ಸ್ವತಂತ್ರ ಕೃತಿಗಳ ರಚನೆಯ ಜೊತೆಗೆ ಪ್ರಪಂಚದ ಹಾಗೂ ಭಾರತದ ಇತರ ಭಾಷೆಯ ಹೊಸ ಸಂವೇದನೆಯ ಕೃತಿಗಳು ಕನ್ನಡಕ್ಕೆ ಅನುವಾದಗೊಳ್ಳುತ್ತಿವೆ. ಬಂಗಾಲಿ, ಮರಾಠಿ, ಹಿಂದಿ ಮೊದಲಾದ ಭಾಷೆಗಳಿಂದ ಕೆಲವು ಗಮನಾರ್ಹ ಕೃತಿಗಳು ಅನುವಾದಗೊಂಡಿವೆ. ಮರಾಠಿಯಿಂದ ವಿಜಯ ತೆಂಡೂಲ್ಕರ್ ಅವರ ಶಾಂತತಾ ಕೋರ್ಟ್ ಚಾಲು ಹೈ ಕನ್ನಡದಲ್ಲಿ ಸದ್ದು ವಿಚಾರಣೇ ನಡೀತಾ ಇದೆ ಎಂದೂ ಬಾದಲ್ ಸರ್ಕಾರ್ ಅವರ ಪಗಲಾ ಘೋಡಾ ಹಾಗೂ ಬಾಕಿ ಇತಿಹಾಸ್ ಎನ್.ಎಸ್.ವೆಂಕಟರಾಂ ಅವರಿಂದ ಹುಚ್ಚು ಕುದುರೆ ಹಾಗೂ ಬಾಕಿ ಇತಿಹಾಸ ಎಂದೂ ಬಿ.ವಿ.ಕಾರಂತರಿಂದ ಏವಂ ಇಂದ್ರಜಿತ್ ಅದೇ ಹೆಸರಿನಲ್ಲೂ ಮೋಹನ್ ರಾಕೇಶ್ ಅವರ ಆಷಾಢ್ ಕೆ ಏಕ್ ದಿನ್ ಸಿದ್ಧಲಿಂಗಪಟ್ಟಣ ಶೆಟ್ಟಿ ಅವರಿಂದ ಆಷಾಢದಲ್ಲಿ ಒಂದು ದಿನ ಎಂದೂ ಅನುವಾದಗೊಂಡಿವೆ. ಬರ್ನಾರ್ಡ್ ಷಾ ಅವರ 'ಆರಮ್ಸ್ ಅಂಡ್ ದಿ ಮ್ಯಾನ್' ನಾಟಕವನ್ನು 'ಚಾಕೊಲೇಟ್ ಸಿಪಾಯಿ' ಎಂದು ಎಚ್.ಎ.ರಾಮಕೃಷ್ಣ ಅನುವಾದ ಮಾಡಿದ್ದಾರೆ. ಈ ಮೇಲಿನ ವಿವರಣೆಗಳು ಸಾಹಿತ್ಯಕೃತಿಗಳ ದೃಷ್ಟಿಯಿಂದ, ರಂಗಭೂಮಿಯ ದೃಷ್ಟಿಯಿಂದ ಕನ್ನಡ ನಾಟಕ ಸಂಪತ್ತು ಚೆನ್ನಾಗಿಯೇ ಬೆಳೆಯುತ್ತ ಬಂದಿದೆ ಎಂಬುದನ್ನು ವಿಶದಪಡಿಸುತ್ತದೆ.

ಅನುವಾದ, ರೂಪಾಂತರ, ಸ್ವತಂತ್ರ ರಚನೆ – ಹೀಗೆ ವೈವಿಧ್ಯಮಯವಾಗಿ ಬೆಳೆದುಕೊಂಡು ಬಂದ ಕನ್ನಡ ನಾಟಕ–ರಂಗಭೂಮಿಯ ಮೇಲೆ ಆಗಾಗ್ಗೆ ಪಾಶ್ಚಾತ್ಯ ಗಾಳಿ ಬೀಸಿದೆ. ನಾಟಕಗಳು ರಚನೆ ದೃಷ್ಟಿ ಹಾಗೂ ಮೌಲ್ಯಗಳ ದೃಷ್ಟಿಯಿಂದ ಒಂದು ಹಂತವನ್ನು ಮುಟ್ಟಿವೆ. ಕನ್ನಡ ವೃತ್ತಿ ರಂಗಭೂಮಿ ನಾಟಕ ಸಾಹಿತ್ಯರಚನೆಗೆ ಸ್ಫೂರ್ತಿ ನೀಡಿದೆ. ಹವ್ಯಾಸಿ ರಂಗಭೂಮಿ ಸಾಹಿತ್ಯರಚನೆಯ ದೃಷ್ಟಿಯಿಂದ ಹಾಗೂ ಪ್ರಯೋಗದ ದೃಷ್ಟಿಯಿಂದ ಮುಖ್ಯವಾಗಿದೆ. ಎಪ್ಪತ್ತರ ದಶಕದಲ್ಲಿ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿಗೆ ಸಿಕ್ಕಿದ್ದಷ್ಟೇ ಪ್ರಾಮುಖ್ಯತೆ ನಾಟಕ ರಚನೆ ಮತ್ತು ರಂಗಭೂಮಿ ಪ್ರದರ್ಶನಗಳಿಗೂ ಸಿಕ್ಕಿತು. ಕನ್ನಡದಲ್ಲಿ ನಾಟಕಗಳಿಲ್ಲ ಎಂಬ ಗೊಣಗಾಟದ ನಡುವೆಯೇ ಗಣನೀಯವಾದ ಸಂಖ್ಯೆಯಲ್ಲಿ ನಾಟಕಗಳು ರಚಿತವಾದವು. ಹಾಗೆಯೇ ಗಣನೀಯವಾದ ಸಂಖ್ಯೆಯಲ್ಲಿ ಬೇರೆಬೇರೆ ಭಾಷೆಗಳಿಂದ ನಾಟಕಗಳು ಕನ್ನಡಕ್ಕೆ ಅನುವಾದಗೊಂಡವು. ಅತಿ ಹೆಚ್ಚಿನ ನಾಟಕಗಳು ರಚನೆಯಾಗುವುದಕ್ಕೆ ಕಾರಣ ರಂಗಭೂಮಿಯ ಸ್ವರೂಪದಲ್ಲಿ ಆದ ಬದಲಾವಣೆಗಳು. ಎಪ್ಪತ್ತರ ದಶಕದಲ್ಲಿ ರಂಗಭೂಮಿ ಅತ್ಯಂತ ಕ್ರಿಯಾಶೀಲವಾಗಿ ಕೆಲಸ ಮಾಡತೊಡಗಿತು. ಅದರಿಂದಾಗಿ ನಾಟಕ ಎಂಬ ಪ್ರಕಾರವನ್ನು ನೋಡುವ ದೃಷ್ಟಿಯೇ ಬದಲಾಗತೊಡಗಿತು. ನಾಟಕವನ್ನು ಏಕಕಾಲದಲ್ಲಿ 'ಲಿಖಿತ ಕೃತಿ'ಯನ್ನಾಗಿಯೂ 'ರಂಗಕೃತಿ'ಯನ್ನಾಗಿಯೂ ಪರಿಭಾವಿಸುವ ದೃಷ್ಟಿ ಹುಟ್ಟಿಕೊಂಡಿತು. (ಎಸ್.ಎ.)

ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡ ಕೆಲವು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳವಳಿಗಳು ನಾಟಕ ರಚನೆಯ ಮೇಲೆ ಅಗಾಧವಾದ ಪರಿಣಾಮ ಬೀರಿದವು. ದಲಿತ ಸಂಘರ್ಷ ಸಮಿತಿ, ರೈತ ಸಂಘಟನೆ, ಎಡಪಂಥೀಯ ಸಂಘಟನೆ ಮತ್ತು ಬಂಡಾಯ ಸಾಹಿತ್ಯ ಸಂಘಟನೆ ತಮ್ಮ ಪ್ರಖರವಾದ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನೆಗಳ ಹಿನ್ನೆಲೆಯಲ್ಲಿ ಇಡೀ ಸಮಾಜದ ಚಾರಿತ್ರಿಕ ದ್ವಂದ್ವಮಾನ ಮತ್ತು ಗತಿತಾರ್ಕಿಕತೆಯನ್ನು ವಿಶ್ಲೇಷಿಸತೊಡಗಿದ್ದವು. ಈ ಎಲ್ಲಾ ಪ್ರಭಾವಗಳೂ ನಾಟಕ ಬರೆವಣಿಗೆಯ ಮೇಲೆ ನೇರ ಪ್ರಭಾವ ಬೀರತೊಡಗಿದವು. ಇದರಿಂದ ರಾಜಕೀಯ ನೆಲೆಯ ಅನೇಕ ಆಯಾಮಗಳನ್ನು ವಿಶ್ಲೇಷಿಸುವ ನಾಟಕಗಳು ಬರತೊಡಗಿದವು.

ಅಲ್ಲಿಯವರೆಗೆ ನಾಟಕ ಬರೆಯುತ್ತಿದ್ದ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಜಿ.ಬಿ.ಜೋಷಿ ಮೊದಲಾದ ನಾಟಕಕಾರರ ಮೇಲೂ ಇದರ ಪ್ರಭಾವ ಕಂಡುಬರತೊಡಗಿತು. ಎಪ್ಪತ್ತೈದರ ಹಿಂದೆ ವಾಸ್ತವವಾದದ ನೆಲೆಯಲ್ಲಿ, ಅಸಂಗತವಾದದ ನೆಲೆಯಲ್ಲಿ ಹಾಗೂ ಅಭಿವ್ಯಕ್ತಿವಾದದ ನೆಲೆಯಲ್ಲಿ ನಾಟಕ ಬರೆಯುತ್ತಿದ್ದ ಕೈಲಾಸಂ, ಶ್ರೀರಂಗ, ಲಂಕೇಶ್, ಜಡಭರತ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಮೊದಲಾದವರು ಎಪ್ಪತ್ತಾರರ ಅನಂತರ ನಾಟಕ ಬರೆಯಲು ಪ್ರಾರಂಭಿಸಿದ ನಾಟಕಕಾರರಿಗೂ ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಸಾಕಷ್ಟು ವ್ಯತ್ಯಾಸಗಳಿವೆ. ಎಪ್ಪತ್ತಾರರ ಹೊತ್ತಿಗಾಗಲೇ ಜರ್ಮನಿಯ ನಾಟಕಕಾಕರ ಬರ್ಟೋಲ್ಟ್ ಬ್ರೆಕ್ಟ್‌ನ "ಎಪಿಕ್ ತಂತ್ರ" ರಂಗಭೂಮಿಯನ್ನು ಪ್ರವೇಶಿಸಿಯಾಗಿತ್ತು. ನಾಟಕದ ವಸ್ತು ಸೈದ್ಧಾಂತಿಕ ನೆಲೆಯಲ್ಲಿ ರೂಪುಗೊಳ್ಳುತ್ತಿತ್ತು. ಜಾತಿ ಸಂಘರ್ಷ, ವರ್ಗ ಸಂಘರ್ಷ, ರಾಜಕೀಯ ಶಿಥಿಲತ್ವ, ಸಾಮಾಜಿಕ ಅಸಮಾನತೆ – ಹೀಗೆ ಸಮಕಾಲೀನ ವೈರುಧ್ಯಗಳು ನಾಟಕದ ವಸ್ತುಗಳಾಗಿ ಕಾಣಿಸಿಕೊಳ್ಳತೊಡಗಿದವು.

ಈ ಅವಧಿಯಲ್ಲಿ ಹಿರಿಯ ತಲೆಮಾರಿನ ಅನೇಕ ನಾಟಕಕಾರರು ತಮ್ಮ ನಾಟಕದ ಬರವಣಿಗೆಯನ್ನು ಮುಂದುವರೆಸಿದರು. ಅವರ ಜೊತೆ ಜೊತೆಗೇ ಅನೇಕ ಹೊಸಪೀಳಿಗೆಯ ನಾಟಕಕಾರರೂ ಹುಟ್ಟಿಕೊಂಡರು. ಹಿರಿಯ ನಾಟಕಕಾರರ ನಾಟಕಗಳು ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಸಾಕಷ್ಟು ಬದಲಾವಣೆಗೂ ಒಳಪಟ್ಟವು. ಗಿರೀಶ್ ಕಾರ್ನಾಡ್ ಅವರು ತಲೆದಂಡ, ನಾಗಮಂಡಲ, ಅಗ್ನಿ ಮತ್ತು ಮಳೆ ಎಂಬ ನಾಟಕಗಳನ್ನು ರಚಿಸಿದರು. ತಲೆದಂಡ 12ನೆಯ ಶತಮಾನದ ಶರಣ ಚಳವಳಿಯ ಹಿನ್ನೆಲೆಯ ನಾಟಕ. ಧರ್ಮ ಮತ್ತು ರಾಜಕೀಯದ ಮಧ್ಯದ ಸಂಘರ್ಷದ ಕಥೆ. 'ನಾಗಮಂಡಲ' ಜನಪದ ಕಥೆಯನ್ನಾಧರಿಸಿದ ನಾಟಕ. ಗಿರೀಶರನ್ನು ಅಪಾರವಾಗಿ ಕಾಡಿದ ಸೀಳು ವ್ಯಕ್ತಿತ್ವದ ಕತೆ ಇಲ್ಲಿದೆ. 'ಅಗ್ನಿ ಮತ್ತು ಮಳೆ' ಮಹಾಭಾರತದ ಉಪಾಖ್ಯಾನಮೊಂದನ್ನು ಆಧರಿಸಿದ ನಾಟಕ. ವೈದಿಕಾಚರಣೆಗಳ ಶುಷ್ಕತೆ ಹಾಗೂ ದೇಸೀ ಮೂಲಗಳ ಫಲವತ್ತತೆಯನ್ನು ಅತ್ಯಂತ ಸಂಕೀರ್ಣವಾಗಿ ಹಿಡಿದಿಡುವ ನಾಟಕ. ಶತಮಾನದ ಕಡೆಯಲ್ಲಿ ಗಿರೀಶರು ಟಿಪ್ಪು ಕಂಡ ಕನಸು ಎಂಬ ಇನ್ನೊಂದು ನಾಟಕ ಬರೆದರು. ಇದು ಮುಖ್ಯವಾಗಿ ಸಾಮ್ರಾಜ್ಯಶಾಹಿ ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪು ಸುಲ್ತಾನನ ಆಶೋತ್ತರಗಳನ್ನು ಪ್ರತಿಫಲಿಸುತ್ತದೆ. ಆದರೆ ಇದು ಗಿರೀಶರ ಮಿಕ್ಕ ನಾಟಕಗಳಷ್ಟು ಪರಿಣಾಮಕಾರಿಯಾಗಿ ಮೂಡಿ ಬಂದಿಲ್ಲ. ಈ ಅವಧಿಯಲ್ಲಿಯೂ ಗಿರೀಶ್ ಕಾರ್ನಾಡ್ ಕನ್ನಡದ ಮಹತ್ವದ ನಾಟಕಕಾರರಾಗಿಯೇ ಉಳಿದಿದ್ದಾರೆ ಎಂಬುದು ಗಮನಾರ್ಹ. ಪಿ.ಲಂಕೇಶ್ ಈ ಅವಧಿಯಲ್ಲಿ ಗುಣಮುಖ ನಾಟಕ ಬರೆದರು. ಇದು ಭಾರತದ ಮೇಲೆ ಆಕ್ರಮಣ ಮಾಡಿದ ಪರ್ಷಿಯನ್ ದೊರೆ ನಾದಿರ್‌ಶಾ ದೈಹಿಕವಾಗಿ ಮತ್ತು ಮಾನಸಿಕವಾಗಿ ಅಸ್ವಸ್ಥನಾದುದರ ಹಿನ್ನೆಲೆ ಹೊಂದಿದೆ. ನಾಟಿವೈದ್ಯನೊಬ್ಬನ ಮಾನವೀಯ ಚಿಕಿತ್ಸೆಯಿಂದ ಅವನು ಸ್ವಸ್ಥನಾಗುತ್ತಾ ಹೋಗುತ್ತಾನೆ. ನಾಟಕವನ್ನು ಪ್ರಧಾನ ಸೃಜನಶೀಲ ಅಭಿವ್ಯಕ್ತಿಯಾಗಿ ಮುಂದುವರೆಸಿದ ಇನ್ನೊಬ್ಬ ಪ್ರಮುಖ ನಾಟಕಕಾರರೆಂದರೆ ಚಂದ್ರಶೇಖರ ಕಂಬಾರ. ಇವರು ಹುಲಿಯ ನೆರಳು, ಸಾಂಬಶಿವ ಪ್ರಹಸನ, ಹರಕೆಯ ಕುರಿ, ಜೈಸಿದನಾಯ್ಕ, ಸಿರಿಸಂಪಿಗೆ, ತುಕ್ರನ ಕನಸು, ನಾಯಿಕತೆ, ಮಹಾಮಾಯಿ ಮುಂತಾದ ನಾಟಕಗಳನ್ನು ರಚಿಸಿದರು. ಹರಕೆಯ ಕುರಿ ಮತ್ತು ಜೈಸಿದನಾಯ್ಕ ಮುಖ್ಯವಾಗಿ ಸಮಕಾಲೀನ ರಾಜಕೀಯ ನಾಟಕಗಳು. 'ತುಕ್ರನ ಕನಸು' ಚೀನಿ ಕತೆಯೊಂದರಿಂದ ಪ್ರೇರಿತವಾದ ಸಮಕಾಲೀನ ವಸ್ತುವನ್ನು ಉಳ್ಳದ್ದು. ಕಂಬಾರರ ನಿಜವಾದ ನಾಟ್ಯ ಪ್ರತಿಭೆ ಉಜ್ವಲವಾಗಿ ಬೆಳಗಿರುವುದು ಅವರ ಜಾನಪದೀಯ ಹಿನ್ನೆಲೆಯ ನಾಟಕಗಳಲ್ಲಿ. ಅದ್ಭುತವಾದ ಹಾಸ್ಯಪ್ರಜ್ಞೆ, ಜಾನಪದೀಯ ಮತ್ತು ಪೌರಾಣಿಕ ರೂಪಗಳನ್ನು ಸಮಕಾಲೀನವಾಗಿ ವ್ಯಾಖ್ಯಾನಗೊಳಿಸುವ ಇವರ ಪ್ರತಿಭೆ ಬೆರುಗುಗೊಳಿಸುವಂಥದ್ದು. ಇವರು ಕನ್ನಡ ನಾಟಕ ಸ್ವರೂಪಕ್ಕೆ ಬೆರಗಿನ ಬೆಡಗನ್ನು ನೀಡಿದವರು. ಇವರು ಮಕ್ಕಳ ನಾಟಕಗಳನ್ನೂ ಅಷ್ಟೇ ಯಶಸ್ವಿಯಾಗಿ ರಚಿಸಿದ್ದಾರೆ. ಇವರ ಕಿಟ್ಟಿಕಥೆ, ಪುಷ್ಪರಾಣಿ, ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು, ಮಕ್ಕಳ ನಾಟಕದ ಪರಿಕಲ್ಪನೆಯನ್ನು ವಿಸ್ತರಿಸುವಲ್ಲಿ ದೊಡ್ಡಪಾತ್ರ ವಹಿಸಿವೆ. ಕನ್ನಡ ನಾಟಕ ಸಾಹಿತ್ಯವನ್ನು ಸಮೃದ್ಧಿಗೊಳಿಸಿದ ಶ್ರೀರಂಗರು ಈ ಅವಧಿಯಲ್ಲಿ ನೀವೇ ಹೇಳಿರಿ ಮತ್ತು ಅಗ್ನಿಸಾಕ್ಷಿ ಎಂಬ ಎರಡು ನಾಟಕಗಳನ್ನು ಪ್ರಕಟಿಸಿದ್ದಾರೆ. ಜಿ.ಬಿ.ಜೋಷಿಯವರು ನಾನೇ ಬಿಜ್ಜಳ, ಪರಿಮಳದವರು ಎಂಬ ನಾಟಕಗಳನ್ನು ಪ್ರಕಟಸಿದ್ದಾರೆ.

ಎಂಬತ್ತರ ದಶಕದಲ್ಲಿ ಕನ್ನಡ ನಾಟಕ ಸಾಹಿತ್ಯದಲ್ಲಿ ಹೊಸದೊಂದು ರೀತಿಯ ಬೆಳವಣಿಗೆ ಕಾಣತೊಡಗಿತು. ಅನೇಕ ಜನ ಯುವ ನಾಟಕಕಾರರು ನಾಟಕ ಬರೆಯಲು ಆರಂಭಿಸಿದರು. ಈ ರೀತಿ ಯುವ ನಾಟಕಕಾರರು ದೊಡ್ಡ ಸಂಖ್ಯೆಯಲ್ಲಿ ನಾಟಕಕಾರರಾಗಿ ಹೊರಹೊಮ್ಮುವುದಕ್ಕೆ ಮುಖ್ಯ ಕಾರಣ ರಂಗಭೂಮಿಯಲ್ಲಾದ ಬದಲಾವಣೆ, ಎಡಪಂಥೀಯ ಚಳವಳಿ, ರೈತ ಸಂಘಟನೆ, ದಲಿತ–ಬಂಡಾಯ ಸಂಘಟನೆಗಳು ತಮ್ಮ ಪ್ರಖರ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನೆಗಳನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಿಸಲು ತೊಡಗಿದವು. ಅಂಥವರಿಗೆ ರಂಗಭೂಮಿ ಬಹಳ ಮುಖ್ಯವಾದ ಮಾಧ್ಯಮವಾಗಿ ಕಂಡುಬಂದಿತು. ಇದರ ಫಲವಾಗಿ ರಾಜಕೀಯ ವಸ್ತುವಿನ, ಸಾಮಾಜಿಕ ಬದ್ಧತೆಯ ಹಿನ್ನೆಲೆಯ ನಾಟಕಗಳು ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದವು. ನಾಟಕ ಮತ್ತು ರಂಗಭೂಮಿಯ ಮೂಲಕ ಸಾಮಾಜಿಕ ಜಾಗೃತಿಯನ್ನುಂಟುಮಾಡುವ ಉದ್ದೇಶ ಇದರ ಹಿನ್ನೆಲೆಗಿತ್ತು. ಬದ್ಧತೆಯೊಂದಿಗೆ ನಾಟಕ ಬರೆಯುವುದರ ಜೊತೆಗೆ, ಬದ್ಧತೆಯ ವಸ್ತುವನ್ನುಳ್ಳ ಕಥೆ, ಕಾದಂಬರಿಗಳನ್ನು ನಾಟಕಗಳನ್ನಾಗಿ ಪರಿವರ್ತಿಸ ತೊಡಗಿದರು. ಹಾಗೆಯೇ ಬೇರೆ ಬೇರೆ ಭಾಷೆಗಳಿಂದ ನಾಟಕಗಳನ್ನು ಭಾಷಾಂತರಿಸತೊಡಗಿದರು. ಇಲ್ಲಿಯವರೆಗೆ ಅಷ್ಟಾಗಿ ಕನ್ನಡದಲ್ಲಿ ಪರಿಚಯವಿರದ ಅನೇಕ ಭಾಷಾನೆಲೆಯ ನಾಟಕಕಾರರು ಕನ್ನಡಕ್ಕೆ ಪ್ರವೇಶಿಸಿದರು. ಮಕ್ಕಳ ನಾಟಕಗಳೂ ಈ ಅವಧಿಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡವು. ರಾಷ್ಟ್ರೀಯ ನಾಟಕ ಶಾಲೆ (ಎನ್.ಎಸ್.ಡಿ.), ಹೆಗ್ಗೋಡಿನ ನೀನಾಸಂ ನಾಟಕ ಶಾಲೆ, ಹಾಗೂ ಅನೇಕ ರಂಗತರಬೇತಿ ಶಿಬಿರಗಳಲ್ಲಿ ತರಬೇತಿ ಪಡೆದುಕೊಂಡ ರಂಗನಿರ್ದೇಶಕರು ಈ ರೀತಿಯ ನಾಟಕಗಳ ಹುಟ್ಟಿಗೆ ಕಾರಣರಾದರೆಂಬುದು ಮುಖ್ಯ ವಿಷಯ. ಪ್ರಧಾನಧಾರೆಯ ನಾಟಕಗಳ ಜೊತೆಗೆ ಬೀದಿನಾಟಕಗಳ ಹುಟ್ಟು ಕೂಡಾ ಇದೇ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಆಯಿತು.

ಈ ಅವಧಿಯಲ್ಲಿ ಬಂದ ಪ್ರಮುಖ ನಾಟಕಕಾರರೆಂದರೆ ಬಿ.ವಿ.ವೈಕುಂತರಾಜು, ಎಚ್.ಎಸ್.ಶಿವಪ್ರಕಾಶ್, ಪ್ರಸನ್ನ, ಲಿಂಗದೇವರು ಹಳೆಮನೆ, ಸಿದ್ಧಲಿಂಗಯ್ಯ, ಹೂಲಿಶೇಖರ್, ಟಿ.ಎನ್.ಸೀತಾರಾಮ್, ಕೆ.ವಿ.ಸುಬ್ಬಣ್ಣ, ಕೆ.ವಿ.ಅಕ್ಷರ, ಎಚ್.ಎಸ್.ವೆಂಕಟೇಶಮೂರ್ತಿ, ಗೋಪಾಲ ವಾಜಪೇಯಿ, ನಿಸರ್ಗಪ್ರಿಯ, ಕಿ.ರಂ.ನಾಗರಾಜ ಮೊದಲಾದವರು.

ಬಿ.ವಿ.ವೈಕುಂತರಾಜು ಅವರು ಸಂದರ್ಭ, ಸನ್ನಿವೇಶ ಮತ್ತು ಕಾನನ್‌ದೇವಿ ಎಂಬ ನಾಟಕಗಳನ್ನು ಬರೆದಿದ್ದಾರೆ. ಇವರ ನಾಟಕಗಳು ಸಮಕಾಲೀನ ರಾಜಕೀಯ ವಸ್ತುಗಳನ್ನಾಧರಿಸಿವೆ. ಕೆ.ವಿ.ನಾರಾಯಣ ಅವರು ಸಂಸರ 'ವಿಗಡ ವಿಕ್ರಮರಾಯ' ನಾಟಕವನ್ನು ಆಧರಿಸಿ ಹುತ್ತವ ಬಡಿದರೆ ಎಂಬ ನಾಟಕವನ್ನು ರಚಿಸಿದ್ದಾರೆ. ಬರ್ಟೋಲ್ಟ್ ಬ್ರೆಕ್ಟ್‌ನ ಎಪಿಕ್‌ತಂತ್ರವನ್ನು ಅತ್ಯಂತ ಯಶಸ್ವಿಯಾಗಿ ಅಳವಡಿಸಿಕೊಂಡಿರುವ ಈ ನಾಟಕ ಇತಿಹಾಸವನ್ನು ಸಮಕಾಲೀನವಾಗಿ ಅರ್ಥೈಸುವ ಹೊಸದೊಂದು ಕ್ರಮವನ್ನು ಪರಿಚಯಿಸಿತ್ತು. ಟಿ.ಎನ್.ಸೀತಾರಾಮ್ ಅವರ ಆಸ್ಫೋಟ, ನಮ್ಮೊಳಗೊಬ್ಬ ನಾಜೂಕಯ್ಯ ಎಂಬ ನಾಟಕಗಳು ಕನ್ನಡದಲ್ಲಿ ಬಂದ ಅತ್ಯಂತ ಸಶಕ್ತ ರಾಜಕೀಯ ನಾಟಕಗಳು. ಇವು ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸಂಬಂಧಗಳನ್ನು ಅವುಗಳ ಸಂಕೀರ್ಣ ಸ್ತರದಲ್ಲಿ ಹಿಡಿದಿಡಬಲ್ಲ ಅಪರೂಪದ ನಾಟಕಗಳು. ದಲಿತಕವಿ ಸಿದ್ಧಲಿಂಗಯ್ಯನವರು ಪಂಚಮ, ನೆಲಸಮ ಮತ್ತು ಏಕಲವ್ಯ ಎಂಬ ನಾಟಕಗಳನ್ನು ಬರೆದಿದ್ದಾರೆ. ದಲಿತರ ಸ್ಥಿತಿ, ನೋವು, ಅವಮಾನ ಮತ್ತು ಜಾಗೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದ ನಾಟಕಗಳಿವು. ದಲಿತ ಸಾಹಿತ್ಯಕ್ಕೆ ಸಂದ ಮಹತ್ವದ ಕೊಡುಗೆಗಳು. ಬಹುಮುಖ್ಯವಾಗಿ 'ಏಕಲವ್ಯ' ನಾಟಕದಲ್ಲಿ ಅವರು ಏಕಲವ್ಯ ಬಲಗೈ ಹೆಬ್ಬೆರಳನ್ನು ಕಳೆದುಕೊಂಡರೂ ಎಡಗೈ ಹೆಬ್ಬೆರಳಿನ ಮೂಲಕ ಧನುರ್ವಿದ್ಯೆಯನ್ನು ಮುಂದುವರೆಸುವ ರೀತಿಯ ಬದಲಾವಣೆಯ ಮೂಲಕ ದಲಿತರ ಕಲಿಯುವ ಛಲವನ್ನು ಅತ್ಯಂತ ಪ್ರಖರವಾಗಿ ಚಿತ್ರಿಸಿದ್ದಾರೆ.

ಈ ತಲೆಮಾರಿನ ನಾಟಕಕಾರರಲ್ಲಿ ಅತಿ ಹೆಚ್ಚಿನ ಮತ್ತು ಅತಿಮಹತ್ವದ ನಾಟಕಗಳನ್ನು ಬರೆದಿರುವರು ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಸುಲ್ತಾನ್ ಟಿಪ್ಪು, ಮಾದಾರಿ ಮಾದಯ್ಯ, ಮಂಟೇಸ್ವಾಮಿ ಕಥಾಪ್ರಸಂಗ, ಷೇಕ್ಸ್‌ಪಿಯರನ ಸ್ವಪ್ನನೌಕೆ, ಮಧುರೆಕಾಂಡ, ಮಾಧವಿ ಮಾತೃಕಾ ಇವು ಇವರು ಬರೆದ ನಾಟಕಗಳು. 'ಮಹಾಚೈತ್ರ' 12ನೆಯ ಶತಮಾನದ ವಚನ ಚಳವಳಿಯನ್ನು ದುಡಿಯುವ ವರ್ಗದ ನೆಲೆಯಲ್ಲಿ ಕಂಡಿರುವ ನಾಟಕ. 'ಸುಲ್ತಾನ್ ಟಿಪ್ಪು' ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪುವಿನ ಹಿನ್ನೆಲೆ ಒಳಗೊಂಡಿದೆ. 'ಮಾದಾರಿಮಾದಯ್ಯ ಮತ್ತು ಮಂಟೇಸ್ವಾಮಿ ಕಥಾ ಪ್ರಸಂಗ' ನಮ್ಮ ಪ್ರಸಿದ್ಧ ಜನಪದ ಮಹಾಕಾವ್ಯಗಳನ್ನು ಆಧರಿಸಿದ ನಾಟಕಗಳು. ತಮಿಳು ಮಹಾಕಾವ್ಯ 'ಶಿಲಪ್ಪದಿಗಾರಂ' ಆಧರಿಸಿದ ತ್ರಿವಳಿ ನಾಟಕಗಳು – ಮಧುರೆಕಾಂಡ, ಮಾಧವಿ ಮತ್ತು ಮಾತೃಕಾ ಚರಿತ್ರೆ. ಪುರಾಣಗಳ ದ್ವಂದ್ವಮಾನ ವೈರುಧ್ಯಗಳನ್ನು ಸಮಕಾಲೀನವಾಗಿ ಚಿತ್ರಿಸುವಲ್ಲಿ ಶಿವಪ್ರಕಾಶರು ಹೆಚ್ಚು ಆಸಕ್ತಿ ತೋರುತ್ತಾರೆ. ಮೂಲತಃ ಕವಿಯಾದ ಇವರು ತಮ್ಮ ನಾಟಕ ರಚನಾ ಶೈಲಿಯಲ್ಲಿ ವಸ್ತುವನ್ನು ವಿಶ್ಲೇಷಿಸುವ ಕ್ರಮದಲ್ಲಿ ಬೇರೆ ಎಲ್ಲಾ ನಾಟಕಕಾರರಿಗಿಂತ ಅನನ್ಯವಾಗಿ ಎದ್ದುಕಾಣುತ್ತಾರೆ. ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ನಾಟಕವನ್ನು ಆಧರಿಸಿ 'ಮಾರನಾಯಕ' ಎಂಬ ನಾಟಕವನ್ನು ಕನ್ನಡದ್ದೇ ಸ್ವಂತ ಕೃತಿ ಎಂಬಂತೆ ರಚಿಸಿದ್ದಾರೆ. ಪ್ರಸನ್ನ ಈ ಅವಧಿಯ ಇನ್ನೊಬ್ಬ ಮಹತ್ವದ ನಾಟಕಕಾರರು. ರಂಗನಿರ್ದೇಶಕರೂ ಆದ ಇವರು ತಮ್ಮ ನಾಟಕಗಳನ್ನು ರಂಗನಿರ್ಮಿತಿಯ ದೃಷ್ಟಿಕೋನವಿಟ್ಟುಕೊಂಡು ರಚಿಸಿದ್ದಾರೆ.

ಇವರ ಒಂದು ಲೋಕ ಕಥೆ, ದಂಗೆಯ ಮುಂಚಿನ ದಿನಗಳು, ತದ್ರೂಪಿ, ಮಹಿಮಾಪುರ, ಹದ್ದುಮೀರಿದ ಹಾದಿ ಮತ್ತು ಜಂಗಮದ ಬದುಕು ಇವು ಇವರ ಪ್ರಮುಖ ನಾಟಕಗಳು. ಸಮಾಜದ ಶಿಥಿಲತ್ವವನ್ನೂ ಅವನತಿಯನ್ನೂ ಚಿತ್ರಿಸುವುದರಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ. ವ್ಯಕ್ತಿ ಮತ್ತು ಸಮಾಜದ ಮಧ್ಯದ ಸಂಬಂಧಗಳು ಕಲುಷಿತಗೊಳ್ಳುವ ನೆಲೆಗಳನ್ನು ಅನ್ವೇಷಿಸುವ ಪ್ರಯತ್ನವನ್ನು ಇವರು ತಮ್ಮ ಬಹುತೇಕ ನಾಟಕಗಳಲ್ಲಿ ಮಾಡಿದ್ದಾರೆ. ಲಿಂಗದೇವರು ಹಳೆಮನೆಯವರ ಚಿಕ್ಕದೇವಭೂಪ, ಹೈದರ್, ಅಂತೆಂಬರಗಂಡ – ಇವು ಮೈಸೂರಿನ ಇತಿಹಾಸದ ನೆಲೆಯಲ್ಲಿ ಎಡಪಂಥೀಯ ದೃಷ್ಟಿಕೋನದಿಂದ ಬರೆದ ನಾಟಕಗಳು. ಇತಿಹಾಸ ಇರುವುದು ಪುನರ್ ಸೃಷ್ಟಿಸುವುದಕ್ಕಲ್ಲ ಪುನರ್‌ಪ್ರತಿಪಾದಿಸುವುದಕ್ಕೆ ಎಂಬ ಧೋರಣೆಯನ್ನು ಇವು ಎತ್ತಿ ಹಿಡಿಯುತ್ತವೆ. ಕಿ.ರಂ.ನಾಗರಾಜ ಅವರು ನೀಗಿಕೊಂಡ ಸಂಸ, ಕಾಲಜ್ಞಾನಿ ಕನಕ ಎಂಬ ಎರಡು ಮಹತ್ವದ ನಾಟಕಗಳನ್ನು ಬರೆದಿದ್ದಾರೆ. ನೀಗಿಕೊಂಡ ಸಂಸ ಕನ್ನಡದ ಖ್ಯಾತ ನಾಟಕಕಾರರಾದ ಸಂಸ ಅವರ ಬದುಕನ್ನು ಕುರಿತದ್ದು, ಕಾಲಜ್ಞಾನಿ ಕನಕ ಕನಕದಾಸರನ್ನು ಕುರಿತದ್ದು. ಈ ಇಬ್ಬರು ವ್ಯಕ್ತಿಗಳ ಸಂಕೀರ್ಣ ವ್ಯಕ್ತಿತ್ವವನ್ನು ಅತ್ಯಂತ ವಿಶಿಷ್ಟ ರೀತಿಯಲ್ಲಿ ನಾಟಕವಾಗಿಸಲಾಗಿದೆ. ಟಿ.ಎನ್.ನರಸಿಂಹನ್ ಅವರು ಕೈಲಾಸಂ ಜೀವನವನ್ನಾಧರಿಸಿ ಟಿಪಿಕಲ್ ಟಿ.ಪಿ.ಕೈಲಾಸಂ ಎಂಬ ಏಕವ್ಯಕ್ತಿ ಪ್ರಸ್ತುತಿಯ ನಾಟಕವನ್ನು ರಚಿಸಿದ್ದರು. ಅದಕ್ಕಿಂತ ಭಿನ್ನವಾಗಿ ನಿಲ್ಲುವ ಸಂಸರ ನಾಟಕವನ್ನು ಕಿ.ರಂ.ನಾಗರಾಜ ರಚಿಸಿರುವುದು ವಿಶೇಷವಾಗಿ ಉಲ್ಲೇಖಾರ್ಹ. ನಿಸರ್ಗಪ್ರಿಯ ಅವರು ಪುರಾಣ ಮತ್ತು ಜನಪದ ಕಥೆಗಳನ್ನು ಆಯ್ಕೆಮಾಡಿಕೊಂಡು ನಾಟಕಗಳನ್ನು ಬರೆದಿದ್ದಾರೆ. ಚೋರಪುರಾಣ, ತಿರುಕರಾಜ, ವ್ಯವಸ್ಥೆ, ಶುನಶ್ಯೇಪ, ಯಶೋಧರ ಚಕ್ರವರ್ತಿ, ಜುಂಜಪ್ಪ ಇವು ಇವರು ರಚಿಸಿದ ನಾಟಕಗಳು. ಸರಸಮಯವಾದ ಕಥಾ ನಿರೂಪಣೆ, ಲವಲವಿಕೆಯ ಸಂಭಾಷಣೆ, ಸರಳವಾದ ಪಾತ್ರರಚನೆ ನಿಸರ್ಗಪ್ರಿಯರ ನಾಟಕಗಳ ಲಕ್ಷಣ.

ಉತ್ತರ ಕರ್ನಾಟಕದಿಂದ ಬಂದ ಯುವಪೀಳಿಗೆಯ ನಾಟಕಕಾರರಲ್ಲಿ ಹೂಲಿಶೇಖರ ಮುಖ್ಯರು. ಇವರು ಕಲ್ಯಾಣದಲ್ಲಿ ಕ್ರಾಂತಿ, ಹಾವು ಹರಿದಾಡತಾವ, ಅರಗಿನ ಬೆಟ್ಟ ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಸಮಕಾಲೀನ ಸಾಮಾಜಿಕ ಸಮಸ್ಯೆಯನ್ನು ಜಾನಪದ ಚೌಕಟ್ಟಿನಲ್ಲಿ ಅತ್ಯಂತ ಆಕರ್ಷಣೀಯವಾಗಿ ಹೇಳುವ ನಾಟಕೀಯತೆ ಹೂಲಿ ಶೇಖರ್‌ರವರಿಗೆ ಸಿದ್ಧಿಸಿದೆ. ಆದರೆ ಸಮಸ್ಯೆಯನ್ನು ಇವರು ನೋಡುವ ಸರಳ ದೃಷ್ಟಿಯಿಂದಾಗಿ ಇವರ ನಾಟಕಗಳು ಗಾಢವಾಗಿ ತಟ್ಟುವುದಿಲ್ಲ. ಎಚ್.ಎಸ್.ವೆಂಕಟೇಶಮೂರ್ತಿಯವರು ಅಗ್ನಿವರ್ಣ, ಚಿತ್ರಪಟ ಮತ್ತು ಉರಿಯ ಉಯ್ಯಾಲೆ ಎಂಬ ಮೂರು ನಾಟಕಗಳನ್ನು ಪುರಾಣದ ವಸ್ತುಗಳನ್ನಾಧರಿಸಿ ಮರು ಸೃಷ್ಟಿಸಿದ್ದಾರೆ. ಆಕರ್ಷಕ ಮಾತುಗಾರಿಕೆ ಈ ನಾಟಕಗಳ ಪ್ರಮುಖ ಆಕರ್ಷಣೆ. ಉರಿಯ ಉಯ್ಯಾಲೆ ಸ್ತ್ರೀವಾದಿ ನೆಲೆಯಲ್ಲಿ ದ್ರೌಪದಿಯನ್ನು ಚಿತ್ರಿಸಿರುವ ನಾಟಕ.

ಒಂದೋ ಎರಡೋ ನಾಟಕಗಳನ್ನು ಬರೆದು ಕನ್ನಡ ನಾಟಕ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆ ನೀಡಿರುವ ಅನೇಕ ಯುವ ನಾಟಕಕಾರರಿದ್ದಾರೆ. ಅವರಲ್ಲಿ ಕೆಲವರನ್ನು ಇಲ್ಲಿ ಹೆಸರಿಸಬೇಕು. ಗೋಪಾಲ ವಾಜಪೇಯಿಯವರ 'ದೊಡ್ಡಪ್ಪ' ದೇವದಾಸಿ ಪದ್ಧತಿಯ ಹಿಂದಿರುವ ಶೋಷಣೆಯನ್ನಾಧರಿಸಿದ ನಾಟಕ. ಜಿ.ಶ್ರೀನಿವಾಸರಾಜು ಅವರ ಮೂರು ಏಕಾಂಕಗಳು, ಅಸಂಗತ ನಾಟಕಗಳನ್ನು ನೆನಪಿಸುವ ಮನುಷ್ಯನ ಉದ್ದೇಶ ರಹಿತ ಕ್ರೌರ್ಯವನ್ನು ತೋರುವ ನಾಟಕಗಳು. ಕೆ.ವಿ.ಅಕ್ಷರ ಅವರು ಪರಿಸರ ನಾಶದ ಸಮಸ್ಯೆಯನ್ನು ಎತ್ತಿಕೊಂಡು ಸಹ್ಯಾದ್ರಿಕಾಂಡ ಎಂಬ ನಾಟಕವನ್ನೂ ಕೋಮು ಸಮಸ್ಯೆಯನ್ನು ಎತ್ತಿಕೊಂಡು ಚೂರಿ ಕಟ್ಟೆ ಅರ್ಥಾತ್ ಕಲ್ಯಾಣಪುರ ಎಂಬ ಎರಡು ಮಹತ್ವದ ನಾಟಕಗಳನ್ನು ರಚಿಸಿದ್ದಾರೆ.

ಕನ್ನಡಕ್ಕೆ ಬೇರೆ ಬೇರೆ ಭಾಷೆಯಿಂದ ಸಮೃದ್ಧವಾಗಿ ನಾಟಕಗಳು ಅನುವಾದಗೊಂಡು ಬಂದಿವೆ. ಸಂಸ್ಕೃತ ರಂಗಭೂಮಿಯ ಪ್ರಸಿದ್ಧ ನಾಟಕಗಳನ್ನು ಕೆ.ವಿ.ಸುಬ್ಬಣ್ಣ ಅವರು ಕನ್ನಡದ ಪರಿಸರದಲ್ಲಿ ಪುನರ್‌ರಚಿಸುವ ಕೆಲಸವನ್ನು ಮಾಡಿದ್ದಾರೆ. ಭಗವದುಜ್ಜುಕೀಯ, ಅಭಿಜ್ಞಾನಶಾಕುಂತಲ, ಮುದ್ರಾರಾಕ್ಷಸ ಮತ್ತು ಮಾಲವಿಕಾಗ್ನಿಮಿತ್ರ ಈ ನಾಟಕಗಳನ್ನು ಸೂಳೆ ಮತ್ತು ಸನ್ಯಾಸಿ, ಲೋಕಶಾಕುಂತಲ, ಚಾಣಕ್ಯ ಪ್ರಪಂಚ ಮತ್ತು ವಿದಿಶೆಯ ವಿದೂಷಕ ಎಂದು ಪರಿವರ್ತಿಸಿದ್ದಾರೆ. ಇವುಗಳನ್ನು ಇವರು ಕನ್ನಡದ ಪರಿಸರಕ್ಕೆ ಹೊಂದಿಸಿರುವ ರೀತಿ ಅನನ್ಯವಾದುದು. ಬರ್ಟೋಲ್ಟ್ ಬ್ರೆಕ್ಟ್‌ನ ಅನೇಕ ನಾಟಕಗಳು ಈ ಅವಧಿಯಲ್ಲಿ ಕನ್ನಡಕ್ಕೆ ಬಂದಿವೆ. ಸಿ.ವೀರಣ್ಣ ಮದರ್ ನಾಟಕವನ್ನೂ, ಕೆ.ವಿ.ಸುಬ್ಬಣ್ಣ, ಲಿಂಗದೇವರು ಹಳೆಮನೆ, ರಂಶಾ ಅವರು ಪ್ರತ್ಯೇಕವಾಗಿ ಗುಡ್‌ವುಮೆನ್ ಆಫ್ ಸೆಜುವಾನ್ ನಾಟಕವನ್ನೂ, ಜೆ.ಆರ್.ಲಕ್ಷ್ಮಣರಾವ್ ಮತ್ತು ರಾಮಚಂದ್ರಮೂರ್ತಿ ಅವರು ಗೆಲಿಲಿಯೋ ನಾಟಕವನ್ನೂ, ಗೋಪಾಲ ವಾಜಪೇಯಿ, ಜೆ.ಆರ್.ಲಕ್ಷ್ಮಣ್‌ರಾವ್ ಅವರು ಕಕೇಷಿಯನ್ ಚಾಕ್ ಸರ್ಕಲ್ ನಾಟಕವನ್ನೂ ಲಿಂಗದೇವರು ಹಳೆಮನೆ ಅವರು ಮದರ್‌ಕರೇಜ್ ನಾಟಕವನ್ನೂ ಅನುವಾದಿಸಿದ್ದಾರೆ. ಷೇಕ್ಸ್‌ಪಿಯರನ ಅನೇಕ ನಾಟಕಗಳು ಈ ಅವಧಿಯಲ್ಲಿ ಮತ್ತೆ ಕನ್ನಡಕ್ಕೆ ಭಾಷಾಂತರಗೊಂಡಿವೆ. ಎಚ್.ಎಸ್.ಶಿವಪ್ರಕಾಶ್, ಕೆ.ಎಸ್.ಭಗವಾನ್, ನಿಸಾರ್ ಅಹಮದ್, ರಾಮಚಂದ್ರದೇವ ಪ್ರಮುಖವಾಗಿ ಈ ಭಾಷಾಂತರಗಳನ್ನು ಮಾಡಿದ್ದಾರೆ. ಸ್ಟ್ರಿಂಡ್‌ಬರ್ಗ್, ಗೊಗಲ್, ಚೆಕಾಫ್, ಲೋರ್ಕ, ಇಬ್ಸೆನ್ ಮೊದಲಾದವರ ಪ್ರಸಿದ್ಧ ನಾಟಕಗಳೂ ಕನ್ನಡಕ್ಕೆ ಬಂದಿವೆ. ಹಾಗೆಯೇ ಹಿಂದಿ, ಮರಾಠಿ ಮತ್ತು ಬೇರೆ ಭಾರತೀಯ ಭಾಷೆಗಳಿಂದಲೂ ಅನೇಕ ನಾಟಕಗಳು ಅನುವಾದಗೊಂಡಿವೆ.

ಮಕ್ಕಳ ನಾಟಕಗಳ ರಚನೆ ಹೊಸ ರೂಪವನ್ನು ಈ ಅವಧಿಯಲ್ಲಿ ಪಡೆದುಕೊಂಡಿತು. ಬೇಸಗೆ ಶಿಬಿರ ಮತ್ತು ಮಕ್ಕಳ ಶಿಬಿರಗಳಿಂದಾಗಿ ಮಕ್ಕಳ ನಾಟಕ ರಚನೆಗೆ ವಿಶೇಷ ಪ್ರೋತ್ಸಾಹ ದೊರಕಿತು. ಇದರಿಂದಾಗಿ ಅನೇಕ ಹಿರಿಯಕಿರಿಯ ನಾಟಕಕಾರರು ಮಕ್ಕಳಿಗಾಗಿಯೇ ಬರೆಯತೊಡಗಿದರು. ಬಿ.ವಿ.ಕಾರಂತ, ಕೆ.ವಿ.ಸುಬ್ಬಣ್ಣ, ಚಂದ್ರಶೇಖರ ಕಂಬಾರ, ಅಬ್ದುಲ್ ರೆಹಮಾನ್ ಪಾಷ, ಪ್ರೇಮಕಾರಂತ, ವೈದೇಹಿ ಮೊದಲಾದವರು ಮಕ್ಕಳಿಗಾಗಿ ಉತ್ತಮ ನಾಟಕಗಳನ್ನು ಬರೆದಿದ್ದಾರೆ. ಬಿ.ವಿ.ಕಾರಂತರ ಪಂಜರಶಾಲೆ, ನೀಲಿಕುದುರೆ, ಹೆಡ್ಡಾಯಣ – ಇವು ಕನ್ನಡ ಮಕ್ಕಳ ನಾಟಕ ಸಾಹಿತ್ಯಕ್ಕೆ ಸ್ಫೂರ್ತಿತಂದ ನಾಟಕಗಳು. ಕೆ.ವಿ. ಸುಬ್ಬಣ್ಣನವರ ಜಯಂಟ್‌ಮಾಮ, ಬೆಟ್ಟಕ್ಕೆ ಚಳಿಯಾದರೆ, ಅಬ್ದುಲ್ ರೆಹಮಾನ್ ಪಾಷ ಅವರ ಬೆಳೆದವರು, ನಕ್ಕಳಾ ರಾಜಕುಮಾರಿ, ನೀ ನನಗಿದ್ದರೆ ನಾ ನಿನಗೆ, ವೈದೇಹಿಯವರ ಧಾಂ ಧೂಂ ಸುಂಟರಗಾಳಿ, ಸೂರ್ಯಬಂದ, ಮೂಕನ ಮಕ್ಕಳು ಮುಂತಾದವು ಮಕ್ಕಳ ರಂಗಭೂಮಿಯ ಸಾಧ್ಯತೆಗಳನ್ನು ವಿಸ್ತರಿಸಿವೆ. ಎಂ.ಎಸ್.ಮೂರ್ತಿ, ಎಚ್.ಎಸ್.ವೆಂಕಟೇಶಮೂರ್ತಿ, ಕೃಷ್ಣಮೂರ್ತಿ ಬಿಳಿಗೆರೆ ಮೊದಲಾದವರು ಈಗಲೂ ವಸ್ತು ವೈವಿಧ್ಯದ ಮಕ್ಕಳ ನಾಟಕಗಳನ್ನು ರಚಿಸುತ್ತಿದ್ದಾರೆ.


ಬಿ. ಪುಟ್ಟಸ್ವಾಮಯ್ಯ

ಕನ್ನಡದ ಪ್ರಮುಖ ಕಥೆಗಳು ಮತ್ತು ಕಾದಂಬರಿಗಳು ನಾಟಕದ ರೂಪವನ್ನು ತಳೆಯಲಾರಂಭಿಸಿದ್ದು ಈ ಅವಧಿಯ ಇನ್ನೊಂದು ಪ್ರಮುಖ ಅಂಶವೆನ್ನಬಹುದು. ದೇವನೂರು ಮಹಾದೇವ ಅವರ ಕಥೆಗಳು ಮತ್ತು ಕಾದಂಬರಿಗಳು, ಪೂರ್ಣಚಂದ್ರ ತೇಜಸ್ವಿಯವರ ಕಥೆಗಳು ಮತ್ತು ಶಿವರಾಮ ಕಾರಂತರ ಕಾದಂಬರಿಗಳು ನಾಟಕದ ಸ್ವರೂಪವನ್ನು ತಳೆದವು. ಹಾಗೆಯೇ ಕನ್ನಡ ಪ್ರಮುಖ ಕಾವ್ಯಗಳೂ ರಂಗ ಪ್ರದರ್ಶನಕ್ಕೆ ಅಣಿಯಾದವು. ಬಹುಮುಖ್ಯವಾಗಿ ದೇವನೂರು ಮಹಾದೇವ ಅವರ ದ್ಯಾವನೂರು, ಒಡಲಾಳ ಮತ್ತು ಕುಸುಮಬಾಲೆ ಇವು ರಂಗಕೃತಿಯಾಗಿ ಹೊಸದೊಂದು ಟ್ರೆಂಡ್‌ಅನ್ನೇ ಸೃಷ್ಟಿಸಿದವು. ಶಿವರಾಮ ಕಾರಂತರ 'ಚೋಮ', ತೇಜಸ್ವಿಯವರ ಕುಬಿ ಮತ್ತು ಇಯಾಲ, 'ಕಿರಗೂರಿನ ಗಯ್ಯಾಳಿಗಳು' ಕುಂ.ವೀರಭದ್ರಪ್ಪನವರ 'ಬೇಲಿ ಮತ್ತು ಹೊಲ' ಈ ನಿಟ್ಟಿನಲ್ಲಿ ಮೂಡಿ ಬಂದ ನಾಟಕಗಳು.

ಬೀದಿ ನಾಟಕ ಒಂದು ಪ್ರಮುಖ ರಂಗಮಾಧ್ಯಮವಾಗಿ ಹೊರಹೊಮ್ಮಿದ್ದೂ ಈ ಅವಧಿಯಲ್ಲಿಯೇ. ಎ.ಎಸ್.ಮೂರ್ತಿಯವರ ಬಂದ್ರಪ್ಪೋ ಬಂದ್ರು, ಚಂದ್ರಶೇಖರ ಪಾಟೀಲ ಅವರ ಜಗದಂಬೆಯ ಬೀದಿ ನಾಟಕ, ಸಿ.ಜಿ.ಕೃಷ್ಣಸ್ವಾಮಿಯವರ ಬೆಲ್ಚಿ ಮುಂತಾದವು ಬೀದಿನಾಟಕದ ಸ್ವರೂಪಕ್ಕೊಂದು ಸ್ಪಷ್ಟ ಸ್ವರೂಪ ನೀಡಿರುವ ನಾಟಕಗಳು. ಈಗಲೂ ಬೀದಿ ನಾಟಕಗಳು ತತ್‌ಕ್ಷಣದ ಪ್ರತಿಕ್ರಿಯೆಯಾಗಿ ಹುಟ್ಟಿಕೊಳ್ಳುತ್ತಲೇ ಇವೆ.

ಹೀಗೆ ಕನ್ನಡ ನಾಟಕ ಸಾಹಿತ್ಯ ಬಹುಮುಖವಾದ ಬೆಳವಣಿಗೆಯನ್ನು ತೋರಿದ ಅವಧಿ ಇದು. ಕನ್ನಡದಲ್ಲಿಯೇ ಸ್ವಂತ ನಾಟಕಗಳು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಯಾದದ್ದರ ಜೊತೆಜೊತೆಗೇ ಬಹುಸಂಖ್ಯೆಯ ಹೊರಗಿನ ನಾಟಕಗಳೂ ಕನ್ನಡಕ್ಕೆ ಬಂದವು. ಹಾಗೆಯೇ ಕನ್ನಡದ ಬಹಳಷ್ಟು ನಾಟಕಗಳು ಬೇರೆ ಬೇರೆ ಭಾಷೆಗಳಿಗೂ ಅನುವಾದಗೊಂಡವು. ಈ ದೃಷ್ಟಿಯಿಂದ ಇಪ್ಪತ್ತನೆಯ ಶತಮಾನದ ಕೊನೆಯ ಎರಡೂವರೆ ದಶಕಗಳು ಕನ್ನಡ ನಾಟಕ ಸಾಹಿತ್ಯದ ಅತ್ಯಂತ ಫಲಪ್ರದ ದಶಕಗಳೆನ್ನಬಹುದು. (ಎಲ್.ಎಚ್.)

**ಕನ್ನಡದಲ್ಲಿ ಪ್ರಬಂಧಸಾಹಿತ್ಯ :** ಆಧುನಿಕ ಸಾಹಿತ್ಯದ ಇತರ ಪ್ರಕಾರಗಳಂತೆ ಕನ್ನಡ ಪ್ರಬಂಧವೂ ರಚನಾವಿಧಾನ ದೃಷ್ಟಿಯಿಂದ ಇಂಗ್ಲಿಷ್ ಪ್ರಬಂಧದಿಂದ ಪ್ರಭಾವಿತವಾಗಿದ್ದರೂ ನಮ್ಮ ನುಡಿನೆಲದಲ್ಲಿ ಹುಟ್ಟಿ ಬೆಳೆದದ್ದು ಎಂಬಂತೆ ಸ್ವಂತ ಸತ್ವದಿಂದ ಶೋಭೆ ಪಡೆದಿದೆ. ಸಾಹಿತ್ಯಗುಣ ಸಿದ್ಧಿಸುವಂತೆ ವಿಶಿಷ್ಟ ಪದಬಂಧಗಳಿಂದ ನಿರ್ಮಾಣವಾದ ಯಾವ ಸಾಹಿತ್ಯ ಕೃತಿಯನ್ನಾದರೂ ಪ್ರಬಂಧ ಎಂದು ಹೇಳಬಹುದು. ಪ್ರಬಂಧ

ಎಂಬ ಮಾತು ಬಹಳ ಹಳೆಯದು. ಕನ್ನಡದ ಅನೇಕ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳನ್ನು 'ಪ್ರಬಂಧ' ಎಂದು ಕರೆದಿರುವುದೂ ಉಂಟು. ಆದರೆ ಪ್ರಾಚೀನರ ದೃಷ್ಟಿಯಲ್ಲಿ ಪ್ರಬಂಧ ಎಂದರೆ ಕಾವ್ಯ ಎಂದರ್ಥ.

ನಮ್ಮಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಪ್ರಾರಂಭವಾದಮೇಲೆ ಶಾಲಾಕಾಲೇಜುಗಳ ಶಿಕ್ಷಣ ಕ್ರಮದಲ್ಲಿ 'ಪ್ರಬಂಧ' ಎಂಬ ಮಾತಿಗೆ ಒಂದು ನಿರ್ದಿಷ್ಟ ವಿಷಯದ ಮೇಲೆ ಬರೆದ ಸಂಕ್ಷೇಪವಾದ ಗದ್ಯರಚನೆ ಎಂಬ ಅರ್ಥ ಬಂತು. ಪ್ರಬಂಧ ರಚನೆ ಅಭ್ಯಾಸವಿಷಯ ವಾಯಿತು. ಇಂಗ್ಲಿಷಿನ ಎಸ್ಸೆ ಕನ್ನಡದಲ್ಲಿ ಪ್ರಬಂಧ, ಲಘು ಪ್ರಬಂಧ, ನಿಬಂಧ, ಹರಟೆ, ನ್ಯಾಸ, ಪ್ರಸಂಗ, ಲಲಿತ ಪ್ರಸಂಗ ಎಂಬ ಬೇರೆ ಬೇರೆ ಹೆಸರುಗಳಲ್ಲಿ ಅವತರಿಸಿತು. ಈ ಎಸ್ಸೆ ಎಂಬ ಇಂಗ್ಲಿಷ್ ಪದವನ್ನೇ ಈ ಪ್ರಕಾರಕ್ಕೆ ಕನ್ನಡದಲ್ಲೂ ಬಳಸಿದವರೂ ಬಳಸುತ್ತಿರುವವರೂ ಉಂಟು. ಸಂಕ್ಷಿಪ್ತತೆ ಮತ್ತು ಅಸಮಗ್ರತೆಯಲ್ಲಿಯೂ ಪರಿಪೂರ್ಣತೆಯ ತೋರಿಕೆ ಈ ಬರೆಹದ ವಿಶಿಷ್ಟ ಲಕ್ಷಣ. ನಮ್ಮ ವಿಮರ್ಶಕರು ಬಳಸುವ ಭಾವಪ್ರಬಂಧ, ಲಲಿತಪ್ರಬಂಧ, ಲಘುಪ್ರಬಂಧ ಎಂಬ ಪದಗಳಲ್ಲಿನ ವಿಶೇಷಣಗಳು ಪ್ರಬಂಧದ ಕಾವ್ಯಗುಣ ವನ್ನೂ ಶೈಲಿಯ ಸೊಬಗನ್ನೂ ಸಂಕ್ಷಿಪ್ತಮೂ ಹಗುರವೂ ಆದ ನಿರೂಪಣಾ ಕ್ರಮವನ್ನೂ ಸೂಚಿಸುತ್ತವೆ. ಸ್ವಂತ ಭಾವನೆಗಳನ್ನೂ ಆಲೋಚನೆಗಳನ್ನೂ ಇನ್ನೊಬ್ಬರಿಗೆ ಆತ್ಮೀಯವಾಗಿ ಹೇಳುವ ಪ್ರಬಂಧದ ವ್ಯಕ್ತಿನಿಷ್ಠ ಕಥನಕ್ರಮದಲ್ಲಿ ಹರಟೆಯ ಧೋರಣೆ ಇದ್ದರೂ ಪ್ರಬಂಧ ಹೆಚ್ಚು ಗಂಭೀರವಾದದ್ದು. ಆದರೂ ಕನ್ನಡದ ಮಟ್ಟಿಗೆ, ಪ್ರಬಂಧ – ಹರಟೆಗಳನ್ನು ಒಂದೇ ಸಾಹಿತ್ಯಪ್ರಕಾರದ ಅವಳಿಜವಳಿಗಳೆಂದು ಎಣಿಸಬಹುದು.

ವಿಜ್ಞಾನ, ತತ್ತ್ವಜ್ಞಾನ, ಸಾಹಿತ್ಯ ವಿಮರ್ಶೆ ಮುಂತಾದ ನಾನಾ ಶಾಸ್ತ್ರಗಳ ತೂಕದ ವಿಷಯಗಳನ್ನು ಕುರಿತು ಒಳ್ಳೆಯ ರಂಜಕ ಶೈಲಿಯಲ್ಲಿ ಬರೆದ ಲೇಖನಗಳನ್ನೂ ಪ್ರಬಂಧಗಳೆಂದೇ ಕರೆಯಬಹುದು. ಆದರೆ, ಅವುಗಳ ಗುರಿ ತಿಳಿವಳಿಕೆ ನೀಡುವುದೇ ಹೊರತು ಮನೋಲ್ಲಾಸವಲ್ಲ. ಇವುಗಳನ್ನು ಶುದ್ಧ ಎಸ್ಸೆಯಿಂದ ಬೇರ್ಪಡಿಸಿ, 'ವಿಚಾರ ಪ್ರಬಂಧ' ಎಂದು ಕರೆಯಬಹುದು.

ಕನ್ನಡ ಪ್ರಬಂಧ ಅನುಕರಣಶೀಲವಾಗದೆ ಸ್ವತಂತ್ರವಾಗಿಯೇ ಬೆಳೆದು ಬಂದಿದ್ದರೂ ಇಂಗ್ಲಿಷ್ ಪ್ರಬಂಧದಿಂದ ಭಿನ್ನವಾದ ಲಕ್ಷಣಗಳನ್ನೇನೂ ಹೊಂದಿಲ್ಲ. ಕನ್ನಡದ ಪ್ರಬಂಧಗಳನ್ನೇ ಬಹುಮಟ್ಟಿಗೆ ಅಧಿಕರಿಸಿ ಪ್ರಬಂಧದ ಸಾಮಾನ್ಯ ಲಕ್ಷಣಗಳನ್ನು ವಿವರಿಸುವ ಲೇಖನಗಳು ಪ್ರಬಂಧ ಸಂಗ್ರಹಗಳ ಮುನ್ನುಡಿಗಳ ರೂಪದಲ್ಲಿಯೂ ಪ್ರತ್ಯೇಕ ವಾಗಿಯೂ ಪ್ರಕಟವಾಗಿವೆ. ದ.ರಾ.ಬೇಂದ್ರೆ, ವಿ.ಕೃ.ಗೋಕಾಕ, ವಿ.ಸೀ., ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಿ.ವೆಂಕಟಸುಬ್ಬಯ್ಯ, ಎ.ಎನ್. ಮೂರ್ತಿರಾವ್ ಮುಂತಾದವರ ಮುನ್ನುಡಿಗಳು ವಿಮರ್ಶಾತ್ಮಕ ಸಮೀಕ್ಷೆಗಳನ್ನು ಒಳಗೊಂಡಿವೆ. ವರದರಾಜ ಹುಯಿಲಗೋಳರು ಲಲಿತ ಪ್ರಬಂಧಗಳು ಎಂಬ ಸಮೀಕ್ಷಾ ಗ್ರಂಥವನ್ನೇ ಬರೆದಿದ್ದಾರೆ. ಎ.ಎನ್. ಮೂರ್ತಿರಾಯರ ಹರಟೆ ಮತ್ತು ಪ್ರಬಂಧ, ಎಚ್ಚೆಸ್ಕೆ ಅವರ ಕನ್ನಡದಲ್ಲಿ ಹರಟೆಯ ಸ್ಥಾನ ಎಂಬ ಲೇಖನಗಳು ಪ್ರಬಂಧದ ಸ್ವರೂಪ ವನ್ನು ಚೆನ್ನಾಗಿ ತಿಳಿಸಿಕೊಡುತ್ತವೆ. ಹೊಸಗನ್ನಡ ಪ್ರಬಂಧ ಸಂಕಲನದ (1961) ಸಂಪಾದಕರಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಕೆಲವು ಮಾತುಗಳನ್ನು ಕನ್ನಡ ಪ್ರಬಂಧಕ್ಕೆ ಸಂಬಂಧಪಟ್ಟಂತೆ ಇಲ್ಲಿ ಉಲ್ಲೇಖಿಸಬಹುದು.



ಎ.ಎನ್. ಮೂರ್ತಿರಾವ್

"ಲಘುಪ್ರಬಂಧಕ್ಕೆ ವಿಷಯ ಇಂತಹುದೇ ಆಗಬೇಕೆಂಬ ನಿಯಮವಿಲ್ಲ. ಸಣ್ಣ ವಿಷಯ, ದೊಡ್ಡ ವಿಷಯ, ಯಾವುದು ಬೇಕಾದರೂ ಆಗಬಹುದು. .......... ಲಘು ಪ್ರಬಂಧವನ್ನು ಓದಿದ ಕೂಡಲೇ ಒಂದು ತೃಪ್ತಿಯ ಮನೋಭಾವ ಉಂಟಾಗಬೇಕು. ಹೇಳುವುದನ್ನೆಲ್ಲ ಹೇಳಿಯಾಯಿತು ಎಂಬಂತೆ ಇರಬಾರದು .......... ಒಂದು ದೃಷ್ಟಿಯಿಂದ ಪೂರ್ಣವಾಗಿ ತೋರಿದರೂ ಮತ್ತೊಂದು ದೃಷ್ಟಿಯಿಂದ ಹೆಚ್ಚಿನ ಜ್ಞಾನಕ್ಕೆ ಅದು ಸೋಪಾನವಾಗಬೇಕು. ಉತ್ತಮವಾದ ಎಸ್ಸೆ ನಮ್ಮನ್ನು ನಲಿಸಲೂ ಬೇಕು, ತಿದ್ದಲೂ ಬೇಕು ......... ಭಾವನೆಗಳು ಅನುಭವಗಳು ಹಾಸ್ಯನಗೆ ಇವು ಉದ್ದಕ್ಕೂ ಮಿಂಚುತ್ತಿರಬೇಕು ......... ಗುರಿ ಮುಟ್ಟುವುದೊಂದೇ ಮುಖ್ಯವಲ್ಲ ಮಾರ್ಗಪ್ರಯಾಣವೂ ಆಕರ್ಷಕ ವಾಗಿರಬೇಕು". ಈ ಮಾತುಗಳು ಪ್ರಬಂಧದ ವಿಷಯ, ಉದ್ದೇಶ, ವ್ಯಾಪ್ತಿ, ಗುಣ ಇವುಗಳ ಬಗ್ಗೆ ಸಂಪೂರ್ಣ ಜ್ಞಾನ ನೀಡುತ್ತವೆ.

ವಿ.ಕೃ.ಗೋಕಾಕರು ಇಂಗ್ಲಿಷ್ ಹಾಗೂ ಕನ್ನಡ ಪ್ರಬಂಧ ಸಾಹಿತ್ಯವನ್ನು ಅನುಲಕ್ಷಿಸಿ ನಿಬಂಧ ಹಾಗೂ ಹರಟೆಯ ವಿಭಾಗಗಳು ಅನೇಕ ಸಲ ಬೆರೆಯುವುದುಂಟೆಂದೂ ಅವುಗಳ ಬೆರಕೆಯಿಂದ ಸಣ್ಣಪುಟ್ಟ ಭೇದಗಳು ಹುಟ್ಟುವುದೆಂದೂ ಹೇಳಿ ಅಂತಹ ಉಪಭೇದಗಳನ್ನು ಹೀಗೆ ಒಕ್ಕಣಿಸಿದ್ದಾರೆ: ಚಿಂತನಪರ (ಮಾಸ್ತಿಯವರ ಶಾಂತಿ); ಚಾರಿತ್ರಿಕ (ಸಿದ್ಧವನಹಳ್ಳಿ ಕೃಷ್ಣಶರ್ಮರ ಕನ್ನಡ ಕಿಡಿಗಳು); ಐತಿಹಾಸಿಕ (ಆಲೂರ ವೆಂಕಟರಾಯರ ಕರ್ನಾಟಕ ಗತವೈಭವದ ಲೇಖನಗಳು); ವೈಜ್ಞಾನಿಕ (ಕನ್ನಡ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳು); ವಿಮರ್ಶಾತ್ಮಕ ಇಲ್ಲವೇ ವಿವೇಚನಾತ್ಮಕ (ಸಾಹಿತ್ಯ, ಕಲೆ ಮುಂತಾದುವನ್ನು ಕುರಿತವು); ಸ್ವಭಾವ ವಿಭಜನಾತ್ಮಕ (ಕೆ.ಎಸ್.ಕಾರಂತರ ಮುಂದಾಳುಗಳು – ಮಂದಾಳುಗಳು); ಲಘು ಕಥಾತ್ಮಕ (ಗೊರೂರು ರಾಮಸ್ವಾಮಿ ಅಯ್ಯಂಗಾರರ ವಿಮೆ ಯಮನನ್ನೇ ಹೆದರಿಸಿತು); ವರ್ಣನಪರ (ವಿ.ಜಿ. ಕುಲಕರ್ಣಿ ಅವರ ಮಾವು); ಪತ್ರಪ್ರಬಂಧ ಇಲ್ಲವೇ ಹರಟೆಯೋಲೆ (ಸಿ.ಕೃಷ್ಣರ ಮುಗುದೆಯರ ಪತ್ರಗಳು); ಹರಟೆ (ರಂ.ಶ್ರೀ.ಮುಗಳಿಯವರ ನಾದುರಸ್ತು). ಇವುಗಳ ಜೊತೆಗೆ ವ್ಯಕ್ತಿಚಿತ್ರಗಳನ್ನೂ (ಎಚ್ಚೆಸ್ಕೆ ಅವರ ಎತ್ತರದ ವ್ಯಕ್ತಿಗಳು) ಮತ್ತು ಸ್ಮೃತಿ ಚಿತ್ರಗಳನ್ನೂ (ಡಿ.ವಿ.ಜಿ. ಅವರ ಜ್ಞಾಪಕ ಚಿತ್ರಶಾಲೆ) ನಾವು ಸೇರಿಸಬಹುದು. ಈ ಎಲ್ಲ ಪ್ರಭೇದಗಳನ್ನೂ ಒಟ್ಟಿನ ಮೇಲೆ, ವರ್ಣನಾತ್ಮಕ, ಚಿಂತನಾತ್ಮಕ, ವಿಚಾರಾತ್ಮಕ ಅಥವಾ ವಿವೇಚನಾತ್ಮಕ, ಲಘುಪ್ರಬಂಧ ಅಥವಾ ಹರಟೆ (ವಿನೋದಾತ್ಮಕ ಮತ್ತು ವಿಡಂಬನಾತ್ಮಕ) ಎಂದು ನಾಲ್ಕೈದು ಸ್ಥೂಲ ಪ್ರಭೇದಗಳಲ್ಲಿ ಅಡಕ ಮಾಡಬಹುದು.

ಬಂಕಿಮಚಂದ್ರರ ಬಂಗಾಲಿ ಪ್ರಬಂಧಗಳ ಕನ್ನಡ ಅನುವಾದ, ಲೋಕರಹಸ್ಯ ಬಿ.ವೆಂಕಟಾಚಾರ್ಯರಿಂದ 1898ರಲ್ಲಿ ಪ್ರಕಟವಾಯಿತೆನ್ನಲಾದ ಇದು ಕನ್ನಡದ ಮೊದಲ ಪ್ರಬಂಧ ಸಂಕಲನ. ಅನಂತರ ಪ್ರಕಟವಾದ ಆರ್.ಶ್ರೀನಿವಾಸರಾವ್ ಅವರ ವಿವೇಕಮಂಜರಿ (1912) ಕನ್ನಡ ಪ್ರಬಂಧ ಸಂಕಲನಗಳಲ್ಲಿ ಎರಡನೆಯದು. ಬಿ.ವೆಂಕಟಾಚಾರ್ಯರಿಂದ ರಚಿತವಾದ ದಾಡಿಯ ಹೇಳಿಕೆ ಕನ್ನಡದಲ್ಲಿ ಪ್ರಕಟವಾದ ಸ್ವತಂತ್ರ ಲಲಿತ ಪ್ರಬಂಧ. ಚಿತ್ರವಿಚಿತ್ರಾವಳಿ ಇದೇ ಲೇಖಕರ ಇನ್ನೊಂದು ಪ್ರಬಂಧ ಸಂಕಲನ. ಕೆ.ಲಕ್ಷ್ಮಣರಾವ್ ಅವರ ಕಲಿಯುಗ ಸುಧನ್ವ ಇದೇ ಕಾಲದ್ದಾಗಿದ್ದು, ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವ್ಯಕ್ತಿಯೊಬ್ಬನ ಸ್ವಾನುಭವ ಚಿತ್ರಣ ಇದರಲ್ಲಿ ಮೂಡಿಬಂದಿದೆ. ಸ್ವಲ್ಪಕಾಲದ ಅನಂತರ ಪ್ರಕಟವಾದ ಬಾಳಾಜಿ ಕೃಷ್ಣಪೇಟೆಯವರ ಎಲ್ಲಿದೆ ಸ್ತ್ರೀ ಸೌಂದರ್ಯವು (1923), ಸಳಕೆರೆ ಜಯರಾವ್ ಅವರ ಒಂದು ಗಳಿಗೆಯ ಮೋಜು (1925), ರಾಘವೇಂದ್ರರಾವ್ ತಡಸ ಅವರ ಇತ್ಯಾದಿಯ ಆತ್ಮವೃತ್ತ ಕಥನ (1927) – ಪ್ರಮುಖವಾದವುಗಳು. 1930ರ ದಶಕವನ್ನು ಗಮನಿಸಿ ಹೇಳುವುದಾದರೆ ರಚಿತವಾದ ಪ್ರಬಂಧಗಳ ಸಂಖ್ಯೆ ಕಡಿಮೆಯಷ್ಟೇ ಅಲ್ಲದೆ ಅವುಗಳನ್ನು ರಚಿಸಿದ ಯಾರೂ ಪ್ರಮುಖ ಪ್ರಬಂಧಕಾರರೆಂಬ ಹೆಸರು ಗಳಿಸಲಿಲ್ಲ. ಈ ಕಾಲವನ್ನು ಕನ್ನಡ ಪ್ರಬಂಧಗಳ ಬಾಲ್ಯಾವಸ್ಥೆಯ ಕಾಲವೆಂದು ಹೇಳಬಹುದು.

ಕಾಲಮಾನ ದೃಷ್ಟಿಯಿಂದ 1931 ಲಲಿತ ಪ್ರಬಂಧಗಳ ಇತಿಹಾಸದಲ್ಲಿ ಎರಡನೆಯ ಘಟ್ಟದ ಆರಂಭವೆನ್ನಬಹುದು. ಇಂಗ್ಲಿಷ್ ಪ್ರಬಂಧದ ಜಾಡನ್ನು ಮೊತ್ತಮೊದಲಿಗೆ ಹಿಡಿಯಲು ಯತ್ನಿಸಿದ ಬರೆಹ ಎಂದರೆ, ಎಂ.ಜಿ. ವೆಂಕಟೇಶಯ್ಯನವರ ಪುಲ್ಲಯ್ಯನ ಪ್ರಬಂಧಗಳು. ಇದು ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಜೈಲ್ದರ್ಶನ, ಶೈಲಿ, ಮೀಸೆ, ಮುಖಸ್ತುತಿ ಇವು ಇವರ ಉತ್ತಮ ಪ್ರಬಂಧಗಳು. ಅನಂತರದಲ್ಲಿ ಸಂಪದ್ಗಿರಿರಾಯರ ಇಜಾರ, ವಿ.ಸೀತಾರಾಮಯ್ಯನವರ ಮೈಸೂರು ರುಮಾಲು ಹಾಗೂ ಖಾಯಿಲೆಗಳು ಎಂಬ ಪ್ರಬಂಧಗಳು ಸಾಹಿತ್ಯ ರಸಿಕರ ಮನಸ್ಸನ್ನು ಸೆಳೆದು, ಕನ್ನಡ ಪ್ರಬಂಧದ ಬೆಳವಣಿಗೆಗೆ ಮಾರ್ಗದರ್ಶಕವಾದುವು. ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ ಮುಂತಾದ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಬಂಧಗಳು ಕ್ರಮವಾಗಿ ಪ್ರಕಟವಾಗತೊಡಗಿದುವು. ಸ್ವಲ್ಪ ಒರಟು ಎನ್ನಿಸಿದರೂ ಹಾಸ್ಯದ ಬರೆಹಕ್ಕೆ ಹಾದಿ ತೆರೆದಿದ್ದು ವಿಕಟ ವಿನೋದಿನಿ, ದ.ರಾ.ಬೇಂದ್ರೆಯವರು ಹೊರತಂದ ಹರಟೆಗಳು (ಪ್ರಥಮ ಪ್ರಾತಿನಿಧಿಕ ಹರಟೆಗಳ ಸಂಕಲನ), ವಿ.ಕೃ.ಗೋಕಾಕರ ಮುನ್ನುಡಿಯುಳ್ಳ ಸುಳುವು ಹೊಳವು (ಪ್ರಾತಿನಿಧಿಕ ಪ್ರಬಂಧ ಸಂಕಲನ). ಇವು ಹೊರಬರುವ ವೇಳೆಗೆ (ಸು.1938–39) ಅ.ನ.ಕೃಷ್ಣರಾಯರ ಹೊಸ ಹುಟ್ಟು, ಎ.ಎನ್.ಮೂರ್ತಿರಾಯರ ಹಗಲುಗನಸುಗಳು, ಕೆ.ವಿ.ಪುಟ್ಟಪ್ಪನವರ ಮಲೆನಾಡಿನ ಚಿತ್ರಗಳು, ಪು.ತಿ.ನರಸಿಂಹಾಚಾರ್ಯರ ರಾಮಾಚಾರಿಯ ನೆನಪು ಮುಂತಾದ ಪ್ರಬಂಧ ಸಂಗ್ರಹಗಳು ಪ್ರಕಟವಾಗಿ ಕನ್ನಡ ಪ್ರಬಂಧ ಸಾಹಿತ್ಯದ ಆಶಾದಾಯಕ ಬೆಳವಣಿಗೆಗೆ ನಿದರ್ಶನಗಳಾಗಿದ್ದವು. ಸಣ್ಣಕಥೆ, ಕಾದಂಬರಿ ಸಾಹಿತ್ಯ ಪ್ರಕಾರಗಳಷ್ಟು ಜನಪ್ರಿಯವಲ್ಲದ ಪ್ರಬಂಧ ಸಾಹಿತ್ಯ ಪ್ರಕಾರ ಕೆಲವು ಕಾಲ ಹಿಂದೆ ಸರಿದಂತೆ ಕಂಡುಬಂದದ್ದೂ ಉಂಟು. ಆದರೆ ಈಚಿನ ದಶಕಗಳಲ್ಲಿ ಅನೇಕ

ಹೊಸ ಪ್ರಬಂಧಕಾರರೂ ನಗೆಬರೆಹಗಾರರೂ ಬೆಳಕಿಗೆ ಬಂದು ಕೃಷಿ ಮಾಡಿದ್ದರಿಂದ ಕನ್ನಡ ಪ್ರಬಂಧ ಸಾಹಿತ್ಯದ ಪರಂಪರೆ ಅವಿಚ್ಛಿನ್ನವಾಗಿ ಮುಂದುವರಿದುಕೊಂಡು ಬಂದಿದೆ. ಅದರ ಗುಣಮಟ್ಟ ಇಳಿಯದೆ, ವೈವಿಧ್ಯಪೂರ್ಣವಾದ ಬಾಹುಳ್ಯ ಬೆಳೆಯಲು ಅವಕಾಶವಾಗಿದೆ. ಈ ಬೆಳವಣಿಗೆಗೆ ಇಂಗ್ಲೆಂಡಿನಂತೆ ಇಲ್ಲಿಯೂ ನಿಯತಕಾಲಿಕ ಪತ್ರಿಕೆಗಳು ತುಂಬ ಸಹಕಾರಿಯಾಗಿವೆ.

ಕೆಲವು ಕನ್ನಡ ಪ್ರಬಂಧಗಳ ಹೆಸರುಗಳನ್ನು ಗಮನಿಸಿದರೆ, ಕನ್ನಡ ಪ್ರಬಂಧ ಸಾಹಿತ್ಯದ ವಿಷಯವೈವಿಧ್ಯ ವೈಶಿಷ್ಟ್ಯ ಸ್ಪಷ್ಟವಾಗುತ್ತದೆ. ಶಾಂತಿ (ಶ್ರೀನಿವಾಸ), ಬರೆಹಗಾರನ ಹಣೆಬರಹ (ಗೋವಿಂದ ಪೈ), ಕೋಗಿಲ (ವಿ.ಕೃ.ಗೋಕಾಕ), ವ್ಯಾಸಂಗದ ಹವ್ಯಾಸ (ಡಿ.ಎಲ್.ನರಸಿಂಹಾಚಾರ್), ಸಾವಿನ ಕೂಡ ಸರಸ (ದ.ರಾ.ಬೇಂದ್ರೆ), ಹೋಟೆಲುಗಳು (ಎ.ಎನ್.ಮೂರ್ತಿರಾವ್), ಅಜ್ಜಯ್ಯನ ಅಭ್ಯಂಜನ (ಕೆ.ವಿ.ಪುಟ್ಟಪ್ಪ), ತುಂಬೆಯ ಹೂ (ಎಂ.ವಿ.ಸೀತಾರಾಮಯ್ಯ), ನನ್ನ ಬೆನ್ನು (ನಾ.ಕಸ್ತೂರಿ), ನೆಗಡಿ, ತಿಗಣೆ, (ತೀ.ನಂ.ಶ್ರೀಕಂಠಯ್ಯ), ನನ್ನ ಸ್ವಂತ ಶ್ರಾದ್ಧ (ಶ್ರೀರಂಗ), ಮಂಕರು ಬೆಪ್ಪರು (ರಾ.ಶಿ) ಇತ್ಯಾದಿ.

ಕರ್ನಾಟಕದ ಪ್ರಸಿದ್ಧ ಲೇಖಕರೆಲ್ಲರೂ ಒಂದೋ ಎರಡೋ ಹಲವೋ ಕೆಲವೋ ಪ್ರಬಂಧಗಳನ್ನು ಬರೆದಿರುವವರಾದರೂ ಪ್ರಬಂಧಕಾರರೆಂದು ಹೆಸರು ಮಾಡಿರುವವರ ಸಂಖ್ಯೆಯೂ ಕಡಮೆಯೇನಲ್ಲ. ಇವರ ಕೊಡುಗೆಯಿಂದಾಗಿ ಕನ್ನಡ ಪ್ರಬಂಧಸಾಹಿತ್ಯ ನಮಗೆ ಹೆಚ್ಚು ಪರಿಚಿತವಾದ ಇಂಗ್ಲಿಷ್ ಪ್ರಬಂಧ ಸಾಹಿತ್ಯಕ್ಕೆ ಸರಿದೊರೆಯಾಗಿ ನಿಲ್ಲಬಲ್ಲ ಯೋಗ್ಯತೆಯನ್ನು ಪಡೆದಿದೆ. ಪ್ರಸಿದ್ಧರಾದ ಪ್ರಬಂಧಕಾರರಲ್ಲಿ ಒಬ್ಬೊಬ್ಬರದ್ದು ಒಂದೊಂದು ವೈಶಿಷ್ಟ್ಯ. ಎ.ಎನ್.ಮೂರ್ತಿರಾಯರ (ಹಗಲುಗನಸುಗಳು, ಅಲೆಯುವ ಮನ, ಮಿನುಗು ಮಿಂಚು) ಹೂವರಳಿದಂತೆ ಅರಳುವ ಮಧುರಭಾವಗಳ ಮೋಹಕತೆ ಹಾಗೂ ಲಲಿತಶೈಲಿ, ವಿ.ಸೀ. ಅವರ (ಬೆಳುದಿಂಗಳು, ಸೀಕರಣೆ) ರಸಿಕ ಹೃದಯದಿಂದ ಹೊಮ್ಮುವ ಭಾವುಕತೆಯೊಂದಿಗೆ ಬೆರೆತ ತೆಳು ವಿಚಾರಧಾರೆ, ಪು.ತಿ.ನ. ಅವರ (ರಥಸಪ್ತಮಿ ಮತ್ತು ಇತರ ಚಿತ್ರಗಳು, ಈಚಲುಮರದ ಕೆಳಗೆ, ಧೇನುಕಪುರಾಣ) ಸಂಸ್ಕೃತ ಭೂಯಿಷ್ಠ ಪ್ರೌಢ ಶೈಲಿಯ ವಸ್ತುನಿಷ್ಠ ವೈಚಾರಿಕತೆ ಮತ್ತು ಭಾವಸಾಂದ್ರತೆ, ತೀ.ನಂ.ಶ್ರೀ. ಯವರ (ನಂಟರು)

ವಿ. ಸೀತಾರಾಮಯ್ಯ

ಅಚ್ಚುಕಟ್ಟಾದ ಒಪ್ಪ ಓರಣದ ಸಮಗ್ರ ದೃಷ್ಟಿಯ ಗಂಭೀರತೆಯ ವಿಷಯ ವಿವೇಚನೆ, ರಾ.ಕುಲಕರ್ಣಿ ಅವರ (ಗಾಳಿಪಟ, ದೇವಕನ್ಯೆ), ಕಾವ್ಯಪ್ರಪಂಚಕ್ಕೂ ವಾಸ್ತವ ಜಗತ್ತಿಗೂ ಗಂಟುಹಾಕಿ ವಿವಿಧ ಕೋನಗಳಿಂದ ವಸ್ತುದರ್ಶನ ಮಾಡಿಸುವ ವಿಶಿಷ್ಟ ತಂತ್ರದ ಬಳಕೆ, ಎಂ.ವಿ.ಸೀ. ಅವರ (ಧೂಮಲೀಲೆ ಮತ್ತು ಮುಗಿಲುಗಳು) ಹದವಾದ ಗದ್ಯಶಿಲ್ಪದಲ್ಲಿ ಮೂಡಿಬಂದಿರುವ ಚಿತ್ರವಿನ್ಯಾಸ, ಜಿಜ್ಞಾಸೆಯ ಬಲೆಯನ್ನು ಹೆಣೆಯುವ ಕ್ರಮ, ಎನ್.ಪ್ರಹ್ಲಾದರಾವ್ ಅವರ (ರಥರಥಿಕ, ಮಧುವ್ರತ, ಮುತ್ತಿನ ಹಾರ) ಆತ್ಮಾಭಿವ್ಯಕ್ತಿಯ ಭಾವಲಹರಿಗಳ ಆತ್ಮೀಯತೆ, ಶುಚಿಯಾದ ಹಾಸ್ಯ, ಹಾ.ಮಾ.ನಾಯಕರ (ನಮ್ಮ ಮನೆಯ ದೀಪ) ಮಕ್ಕಳ ಜಗತ್ತಿನ ಮುಗ್ಧ ರಮ್ಯತೆ ಎಚ್.ಎಲ್.ನಾಗೇಗೌಡರ (ನನ್ನೂರು) ಆಡುಮಾತಿನ ಲಯಬದ್ಧ ಗ್ರಾಮ್ಯ ಬರೆವಣಿಗೆ ಇವು ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಎತ್ತರಬಿತ್ತರಗಳನ್ನೂ ವೈವಿಧ್ಯಪೂರ್ಣ ಸೌಂದರ್ಯವನ್ನೂ ನೀಡಿವೆ. ಈ ಪ್ರಬಂಧಕಾರರ ಸಾಲಿನಲ್ಲಿ ನಿಲ್ಲತಕ್ಕ ಅರ್ಹತೆಯನ್ನು ಹೊಂದಿರುವ ಹಿರೇಮಲ್ಲೂರ ಈಶ್ವರನ್ (ಶಿವನ ಬುಟ್ಟಿ), ಕಲ್ಯಾಣಸುಂದರ (ಸ್ನೇಹದೃಷ್ಟಿ), ಆನಂದ (ಆನಂದಲಹರಿ), ರಮಾನಂದರಾವ್, (ಹುಚ್ಚು ಬೆಳದಿಂಗಳಿನ ಹೂಬಾಣ), ಎನ್.ಎಸ್.ಗದಗಕರ (ಒಡೆದ ಕನ್ನಡಿ), ಬಿ.ಆರ್.ವಾಡಪ್ಪಿ (ಸುಳಿಗಾಳಿ), ಎಚ್ಚೆಸ್ಕೆ (ಜೇಡನ ಬಲೆ), ಎಂ.ರಾಮರಾವ್ (ನಮ್ಮ ಅರಣ್ಯಯಾತ್ರೆ), ಎಸ್.ಮಂಜುನಾಥ್ (ಪುಸ್ತಕವನ್ನು ಬಿಡು), ಅ.ನ.ಕೃ. (ಪೊರಕೆ), ಡಿ.ಎಸ್.ಕರ್ಕಿ (ನಾಲ್ದೆಸೆಯ ನೋಟ), ಶ್ರೀಧರಮೂರ್ತಿ (ಲಂಚ ಪ್ರಪಂಚ), ದ.ಬಾ.ಕುಲಕರ್ಣಿ (ಸಾವಧಾನ, ಬದುಕಿದ ಬಾಳು), ರಾ.ಯ. ಧಾರವಾಡಕರ (ಧೂಮ್ರವಲಯ), ಎಸ್.ಅನಂತನಾರಾಯಣ (ಇಂಥವರೂ ಇದ್ದಾರೆ), ಕೆ.ವೆಂಕಟರಾಯಪ್ಪ (ವಿಚಾರಲಹರಿ), ಸದಾಶಿವ ಒಡೆಯರ (ಜೀವನಕಥೆ) – ಮುಂತಾದವರು ತಮ್ಮ ಕೊಡುಗೆಗಳಿಂದ ಪ್ರಬಂಧದ ಪರಿಧಿಯನ್ನು ವಿಸ್ತರಿಸಿದ್ದಾರೆ.

ಪ್ರಬಂಧದ ಕಕ್ಷೆಯಲ್ಲೆ ಬಂದರೂ ವಿನೋದ, ವ್ಯಂಗ್ಯ, ವಿಡಂಬನೆ ಮುಂತಾದ ವಿಭಿನ್ನ ಗುಣಗಳಿಂದ ಪ್ರತ್ಯೇಕ ಗಣ್ಯತೆಗೆ ಅರ್ಹವಾದ ಹರಟೆಯ ಪ್ರಕಾರ ಅನೇಕ ಪ್ರತಿಷ್ಠಿತ ಸಾಹಿತಿಗಳನ್ನೂ ಹೊಸ ಬರೆಹಗಾರರನ್ನೂ ಆಕರ್ಷಿಸಿದೆ. ಇವರಲ್ಲಿ ನಾ.ಕಸ್ತೂರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಹೇಮಾವತಿಯ ತೀರದಲ್ಲಿ, ನಮ್ಮೂರಿನ ರಸಿಕರು), ರಾ.ಶಿ.ಶ್ರೀರಂಗ, ಶಿವರಾಮ ಕಾರಂತ, (ಮೈಲಿಕಲ್ಲಿನೊಡನೆ ಮಾತುಕತೆ), ಬೀಚಿ (ತಿಮ್ಮನ ತಲೆ), ನಾಡಿಗೇರ ಕೃಷ್ಣರಾಯ (ಮೆಲ್ಲೋಗರ), ಜಿ.ಪಿ.ರಾಜರತ್ನಂ, ಲಾಂಗೂಲಾಚಾರ್ಯ ಮುಂತಾದವರು ವಿವಿಧ ಕೃತಿಗಳ ಮೂಲಕ ನಗೆಬರೆಹಗಳ ಹೆದ್ದಾರಿ ಹಾಕಿದರು. ಇದೇ ದಾರಿಯಲ್ಲಿ ನಡೆದು ಪ್ರಬಂಧ ಸಾಹಿತ್ಯಕ್ಕೆ ವಿನೋದ ವಿಡಂಬನೆಗಳ ಮುಖವನ್ನು ಕೊಟ್ಟವರಲ್ಲಿ – ಅ.ರಾ.ಸೇ. (ಸುಳಿನಗು), ದಾಶರಥಿ ದೀಕ್ಷಿತ್ (ಗಾಂಪರ ಹರಟೆಗಳು), ಅಷ್ಟಾವಕ್ರ, ಎನ್ಕೆ (ಮುಂಗಾಲ್ ಪುಟಿಗೆ), ನಾಡಿಗೇರ ಗೋವಿಂದರಾವ್ (ನಗೆಬರಹಗಳು), ಕುಡ್ಡಿ ವಾಸುದೇವ ಶೆಣೈ (ಕಸದ ಡಬ್ಬಿಗಳು), ಅ.ರಾ.ಮಿತ್ರ (ಯಾರೋ ಬಂದಿದ್ದರು) ಇವರುಗಳು ಗಮನಾರ್ಹರು. ಇವರಲ್ಲದೆ ಎಚ್.ಕೆ.ರಂಗನಾಥ (ವೈದ್ಯನಲ್ಲದ ಗಂಡ), ಉಮಾಪತಿ (ಅಡಿಗೆಮನೆ), ಎ.ಕೃಷ್ಣಮೂರ್ತಿ, ಎ.ಎಸ್.ರಾಮಕೃಷ್ಣ (ಹುಟ್ಟೂರಿನ ಮೋಹ), ಅಶ್ವತ್ಥ, ಸಚ್ಚಿದಾನಂದ ಶಿರೋಡ್ಕರ್, ಸದಾಶಿವ ಎಣ್ಣೆಹೊಳೆ (ಸನ್ಮಾನ), ಎಚ್.ಎಲ್.ಕೇಶವ ಮೂರ್ತಿ (ನೀನ್ಯಾಕೊ ನಿನ್ನ ಹಂಗ್ಯಾಕೊ, ಹ್ಯಂಗಾರ ಟಿಕೇಟ್ ಕೊಡಿ) ಮೊದಲಾದ ಬರೆಹಗಾರರು ಪ್ರಬಂಧ ಸಾಹಿತ್ಯದ ಗಮನಾರ್ಹ ಲೇಖಕರಾಗಿದ್ದಾರೆ. ಹರಟೆಗಾರರ ಬಳಗ ಬೆಳೆಯುತ್ತಲೇ ಇದ್ದು, ಹರಟೆ ಕನ್ನಡ ಸಾಹಿತ್ಯದಲ್ಲಿ ಹಾಸ್ಯದ ಕೊರತೆಯನ್ನು ಬಹುಮಟ್ಟಿಗೆ ಹೋಗಲಾಡಿಸಿದೆ. ಬಿಗುವಿನ ಪ್ರಬಂಧಕ್ಕಿಂತ ನಗುವಿನ ಹರಟೆ ಜನಪ್ರಿಯ ಎನಿಸಿದೆ. ಇಂಗ್ಲಿಷ್‍ನ ಕೆಲವು ಪ್ರಸಿದ್ಧ ಪ್ರಬಂಧಗಳನ್ನು ಎಸ್. ಮಂಜುನಾಥ್, ಎಂ. ರಾಮರಾವ್, ಎನ್.ಎಸ್. ರಾಮಚಂದ್ರಯ್ಯ, ಎಸ್.ವಿ. ಪರಮೇಶ್ವರಭಟ್ಟ ಮುಂತಾದವರು ಭಾಷಾಂತರಮಾಡಿ ಕನ್ನಡಕ್ಕೆ ಒಳ್ಳೆಯ ಮಾದರಿಗಳನ್ನು ಒದಗಿಸಿದ್ದಾರೆ. (ಎಂ.ವಿ.ಎಸ್.)

ನವ್ಯ ಸಾಹಿತ್ಯದ ಪ್ರಖರತೆ ಕಡಿಮೆಯಾದ ಅನಂತರದಲ್ಲಿ ದಲಿತ ಬಂಡಾಯ ಸಾಹಿತ್ಯದ ನೆರಳಿನಲ್ಲಿ ಲಲಿತ ಪ್ರಬಂಧ ಪ್ರಕಾರ ಹೊಸಹುಟ್ಟನ್ನು ಪಡೆದಿರುವುದನ್ನು ಕಾಣಬಹುದಾಗಿದೆ. ನವ್ಯದ ಸಂದರ್ಭ ಒಬ್ಬನೇ ಒಬ್ಬ ಪ್ರಬಂಧಕಾರನನ್ನು ಸೃಜಿಸಲಿಲ್ಲ. ನವ್ಯದ ತಾತ್ತ್ವಿಕತೆಯ ಮಂದಶ್ರುತಿಯ ಭಾವಗೀತೆಯೆನಿಸಿದ ಪ್ರಬಂಧ ಪ್ರಕಾರವನ್ನು ಇಡಿಯಾಗಿ ತಿರಸ್ಕರಿಸಿತು. ಹೀಗೆಂದ ಮಾತ್ರಕ್ಕೆ ನವ್ಯದ ಕಾಲದಲ್ಲಿ ಪ್ರಬಂಧಗಳೇ ರಚಿತವಾಗಿಲ್ಲವೆಂದಲ್ಲ. ಕು.ಶಿ.ಹರಿದಾಸಭಟ್ಟ, ಹಾ.ಮಾ.ನಾಯಕ, ಪಾ.ವೆಂ.ಆಚಾರ್ಯ, ಪ್ರಭುಶಂಕರ, ಸಿ.ಪಿ.ಕೆ., ದೇಜಗೌ, ಜಿ.ಶಂ.ಪ., ಟಿ.ಸುನಂದಮ್ಮ ಮುಂತಾದವರೆಲ್ಲ ಪ್ರಬಂಧಗಳನ್ನು ರಚಿಸಿದ್ದಾರೆ. ಆದರೆ ನಿಜವಾದ ತಾತ್ತ್ವಿಕವಾಗಿ ಇವರು ನವೋದಯಕ್ಕೆ ಬದ್ಧರಾದವರು.

ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಜಗತ್ತನ್ನು ಕಾಣುವ ನವ್ಯರ ಪರಿಭಾಷೆಯನ್ನು ನಿರಾಕರಿಸಿ ಕಾವ್ಯ ಹೇಗೆ ಸಂಗೀತದ ಸಾಹಚರ್ಯವನ್ನು ಮೈಗೂಡಿಸಿಕೊಂಡು ಮರುಜೀವವನ್ನು ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಪಡೆಯಿತೋ ಹಾಗೆ, ಲಲಿತ ಪ್ರಬಂಧವೂ ಸಾಹಿತ್ಯ ಮತ್ತು ಸಾಹಿತ್ಯೇತರ ಕಾರಣಗಳಿಂದ ಮರುಹುಟ್ಟನ್ನು ಪಡೆಯಿತು. ಸಮಷ್ಟಿಯೊಂದಿಗಿನ ಮುಖಾಮುಖಿ, ಸಾಹಿತಿಗಳ ಸಾಮಾಜಿಕ ಕಳಕಳಿ, ಹರಟುವ ಲಕ್ಷಣ ತೀವ್ರಗತಿಯಲ್ಲಿ ಪುನಃ ಸ್ಥಾಪನೆಗೊಂಡಿದ್ದು ಸಾಹಿತ್ಯಕ ಲಕ್ಷಣಗಳಾದರೆ, ಸಾಹಿತ್ಯ ಅಕಾಡೆಮಿಯಂಥ ಸಾಹಿತ್ಯ ಸಂಘಟನೆ ಈ ಪ್ರಕಾರವನ್ನು ಪೋಷಿಸಿದ್ದು ಸಾಹಿತ್ಯೇತರ ಕಾರಣ. ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಅನೇಕ ಪ್ರಬಂಧಕಾರರು ಪ್ರಬಂಧಗಳನ್ನು ಬರೆಯತೊಡಗಿದರು.

ಹಿರಿಯ ಪ್ರಬಂಧಕಾರರಲ್ಲಿ ಗೊರೂರರ 'ಹಳೆಯ ಪಳೆಯ ಮುಖಗಳು' ಶಿವರಾಮಕಾರಂತರ 'ಅಳಿದುಳಿದ ನೆನಪುಗಳು' ಈ ಎರಡರಲ್ಲೂ ಹಳೆಯ ಪ್ರಬಂಧಗಳಲ್ಲಿ ಚಿತ್ರಿತವಾಗದಿರುವ ಸ್ಮೃತಿಗಳಿವೆ. ಪು.ತಿ.ನ ಅವರ 'ಯದುಗಿರಿಯಲ್ಲಿ ಗೆಳೆಯರು' (1981) 'ರಥಸಪ್ತಮಿ ಮತ್ತು ಇತರ ಚಿತ್ರಗಳು' ಕೃತಿಯ ಬಂಧದ ವಿಷಯಕ್ಕೆ ಸೇರುವಂಥವು. 'ರಾಮಾಚಾರಿಯ ನೆನಪು'ವಿನ ಶಿವ ಇಲ್ಲಿಯೂ ಕಾಣಿಸಿಕೊಳ್ಳುತ್ತಾನೆ. ಇಲ್ಲಿನ 'ಗೆಳೆಯರು' ಕಾಲ್ಪನಿಕರು. ಗೊರೂರು, ಕಾರಂತ ಮತ್ತು ಪು.ತಿ.ನ. ಅವರ ಲಲಿತ ಪ್ರಬಂಧದ ಕೊನೆಯ ರೇಖೆಗಳನ್ನಿಲ್ಲಿ ಕಾಣಬಲ್ಲೆವು.

ಎ.ಎನ್.ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧಗಳು' ಕ್ಷಿಪ್ರಗತಿಯಲ್ಲಿ ಮರುಮುದ್ರಣ ಕಂಡಿರುವುದು ಇವರ ಪ್ರಬಂಧಗಳು ಜನಮನವನ್ನು ಇಂದಿಗೂ ಆಕರ್ಷಿಸಿರುವುದನ್ನು ಸೂಚಿಸುತ್ತದೆ. ಈ ಹಿಂದೆಯೇ ಪ್ರಕಟವಾಗಿದ್ದ (ಹಗಲುಗನಸುಗಳು, ಅಲೆಯುವ ಮನ ಮತ್ತು ಮಿನುಗುಮಿಂಚು) ಮೂರು ಸಂಕಲನಗಳ ಜೊತೆಗೆ, ಸಂಕಲಿತ ಪ್ರಬಂಧಗಳು ಎಂಬ ಶೀರ್ಷಿಕೆಯಡಿ ಒಂಬತ್ತು ಪ್ರಬಂಧಗಳನ್ನು ಹೊಸದಾಗಿ ಸೇರಿಸಿದ್ದಾರೆ. ತೀ.ನಂ.ಶ್ರೀ.ಯವರಿಗೆ ಪಂಪಪ್ರಶಸ್ತಿ ಲಭಿಸಿದಾಗ ಮಾಡಿದ ಅಭಿನಂದನಾ ಭಾಷಣ ಹಾಗೂ 'ನಮಗೆ ಬೇಕಾದ ಸಾಹಿತ್ಯ' ಮತ್ತು 'ಸಾಹಿತ್ಯ ಮತ್ತು ಸಮಾಜ' ಎಂಬೆರಡು ಬರೆಹಗಳೂ ಈ ಸಮಗ್ರಸಂಕಲನದಲ್ಲಿ ಸೇರಿವೆ. 'ಚಿತ್ರಗಳು ಪತ್ರಗಳು' ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಪರೂಪದ ಬರೆಹವೆನಿಸಿದೆ.

ಎರಡನೆಯ ತಲೆಮಾರಿನ ಪ್ರಬಂಧಕಾರರಲ್ಲಿ ಪ್ರಮುಖರಾದ ಅ.ರಾ. ಮಿತ್ರ ಅವರ ಎಪ್ಪತ್ತೊಂಬತ್ತು ಪ್ರಬಂಧಗಳನ್ನು 'ಅ.ರಾ.ಮಿತ್ರರ ಸಮಗ್ರ ಲಲಿತ ಪ್ರಬಂಧಗಳು' ಎಂಬ ಹೆಸರಿನಲ್ಲಿ ಹೊರತರಲಾಗಿದೆ. ಎಂ.ಎಚ್.ಕೃಷ್ಣಯ್ಯನವರ ಮೌಲಿಕವಾದ ಪ್ರಸ್ತಾವನೆ ಪ್ರಬಂಧಗಳಿಗೆ ಉತ್ತಮ ಪ್ರವೇಶಿಕೆಯನ್ನು ಕಲ್ಪಿಸಿದೆ. "ಅ.ರಾ.ಮಿತ್ರರು ತಮ್ಮ ಪ್ರಬಂಧಗಳಲ್ಲಿ ಮಾನವ ಸ್ವಭಾವದ ಅರೆಕೊರೆಗಳನ್ನು ವ್ಯಕ್ತಪಡಿಸುವ ರೀತಿ ಅನನ್ಯವಾಗಿದೆ. ನಯನಾಜೂಕಿನ ಭಾಷೆ ವಸ್ತುವನ್ನು ಸಮರ್ಥಿಸುತ್ತಿದ್ದರೂ ಅದನ್ನು ನಿಜವಾಗಿಯೂ ಖಂಡಿಸುತ್ತಿದ್ದಾರೆ ಎಂದು ನಂಬಿಕೆ ಹುಟ್ಟಿಸುವ ಶೈಲಿ, ವಸ್ತುವನ್ನು ವಿವಿಧ ಮಗ್ಗಲುಗಳಿಂದ ನೋಡಿ ಅದರಲ್ಲಿ ಹರಿಗಡಿಯದ ಏಕಸೂತ್ರತೆಯ ರೀತಿ ಹಾಗೂ ಪ್ರಸನ್ನ ಮನೋ ಧರ್ಮಗಳನ್ನು ವ್ಯಕ್ತಪಡಿಸುತ್ತಾ ಅ.ರಾ.ಮಿತ್ರರು ತಮ್ಮ ಪ್ರಬಂಧಗಳಲ್ಲಿ ಹಿರಿದಾದ ಯಶಸ್ಸನ್ನು ಪಡೆದಿದ್ದಾರೆ" ಎಂಬ ವೀರೇಂದ್ರ ಸಿಂಪಿಯವರ ಮಾತುಗಳು ಗಮನಾರ್ಹವಾದುದು.

'ರಾ.ಕು.' ಅವರ ಪ್ರಬಂಧಗಳಲ್ಲಿ ವ್ಯಂಗ್ಯೋಕ್ತಿ, ಕಟೋಕ್ತಿ, ತರ್ಕ, ಜಿಜ್ಞಾಸೆ, ಹಳೆಗನ್ನಡ ಕಾವ್ಯದ ಸಾಲುಗಳು, ಉಪಮೆಗಳು, ವಿಚಾರಗಳು – ಇವುಗಳನ್ನು ಬೆರೆಸಿರುವ ಬಗೆ ಆಕರ್ಷಣೀಯವೆನಿಸಿದೆ. 'ಗಾಳಿಪಟ' ಹಾಗೂ 'ದೇವಕನ್ಯೆ' ಇವೆರಡೂ ರಾ.ಕು. ಅವರ ಮಹತ್ವದ ಸಂಕಲನಗಳು. ಹಾ.ಮಾ. ನಾಯಕರು ಹೇಳುವಂತೆ ರಾ.ಕು. ಅವರ ಪ್ರಬಂಧಗಳಲ್ಲಿ 'ತತ್ವಶಾಸ್ತ್ರೀಯ ಚಿಂತನವೂ ಕವಿಯ ಕಲ್ಪನಾ ವಿಲಾಸವೂ ಸಮರಸವಾಗಿ ಬೆರೆತುಕೊಂಡಿದೆ'.

ಮುಂಗಾಲ್ ಪುಟಿಗೆ (1945) ಎಂಬ ಸಂಕಲನದ ಮೂಲಕ ಗಮನಸೆಳೆದಿದ್ದ ಎನ್.ಕೆ.ಕುಲಕರ್ಣಿ (ಎನ್ಕೆ) ಯವರ ಎಂಬತ್ತೊಂದು ಬರೆಹಗಳಿರುವ ಎನ್ಕೆ ಲಲಿತ ಪ್ರಬಂಧಗಳು ಇತ್ತೀಚೆಗೆ ಪ್ರಕಟಗೊಂಡಿರುವ ಬೃಹತ್ ಸಂಪುಟ. ವೈವಿಧ್ಯಪೂರ್ಣವಾದ ಪ್ರಬಂಧಗಳನ್ನಿಲ್ಲಿ ಕಾಣಬಹುದು. ಈ ಸಂಪುಟ ಇವರ ಸಮಗ್ರ ಪ್ರಬಂಧ ಸಂಪುಟವಲ್ಲ ಎಂಬುದನ್ನು ಗಮನಿಸಬೇಕು. ಈ ಸಂಕಲನದಲ್ಲಿರುವ ಎರಡೂವರೆಪಟ್ಟು ಲೇಖನಗಳು ಸಂಕಲಿತವಾಗದೆ ಉಳಿದಿವೆ.

ಟಿ.ಸುನಂದಮ್ಮನವರ 'ಸಮಗ್ರ' ಸಂಕಲನ ಈ ಕಾಲಮಾನದಲ್ಲಿ ಪ್ರಕಟಗೊಂಡಿರುವ ಬೃಹತ್ ಸಂಪುಟ. ಹಾಸ್ಯ ಹರಟೆಯ ಪ್ರಸಂಗಗಳೇ ಹೆಚ್ಚಾಗಿರುವ ಇಲ್ಲಿನ ಬರೆಹಗಳಲ್ಲಿ ಲಲಿತವಾದುವು ತೀರ ವಿರಳ.

ಕರ್ನಾಟಕ ಸಾಹಿತ್ಯ ಅಕಾಡೆಮಿ ದಶವಾರ್ಷಿಕ ಪ್ರಬಂಧ ಹಾಗೂ ವಾರ್ಷಿಕ ಪ್ರಬಂಧಗಳನ್ನು ಪ್ರಕಟಿಸುವ ಮೂಲಕ ಲಲಿತ ಪ್ರಬಂಧ ಸಂಕಲನಗಳ ಹೊಸಶಕೆಯನ್ನೇ ಆರಂಭಿಸಿತು. ದಶವಾರ್ಷಿಕ ಪ್ರಬಂಧಗಳು (1974–83) ಅತ್ಯಂತ ಮಹತ್ವದ ಸಂಕಲನ. ಈ ಅವಧಿಯಲ್ಲಿ ಸರಿಸುಮಾರು ಎಂಟನೂರು ಲಲಿತ ಪ್ರಬಂಧಗಳು ಪ್ರಕಟಗೊಂಡಿರುವ ಉಲ್ಲೇಖ ಇಲ್ಲಿದೆ. ಹಿರಿಯ ಕಿರಿಯ ಪ್ರಬಂಧಗಳೂ ಸೇರಿದಂತೆ, ಐವತ್ತಾರು ಪ್ರಬಂಧಗಳು ಈ ಸಂಕಲನದಲ್ಲಿ ಸೇರಿವೆ. ಸಂಖ್ಯೆಯ ದೃಷ್ಟಿಯಿಂದಲ್ಲದೆ ಗುಣಮಟ್ಟದ ದೃಷ್ಟಿಯಿಂದಲೂ ವಿಪುಲವಾದ ಪ್ರಬಂಧಗಳು ಈ ಅವಧಿಯಲ್ಲಿ ಪ್ರಕಟಗೊಂಡಿವೆ. ಭಾರತದ ಬೇರೆ ಭಾಷೆಗಳ ಯಾವುದೇ ಅಕಾಡೆಮಿ ಕೈಗೊಳ್ಳದ ಅನನ್ಯ ಪ್ರಯತ್ನ ಇದಾಗಿದೆ. ಪ್ರತಿವರ್ಷವೂ ವಾರ್ಷಿಕ ಪ್ರಬಂಧಗಳನ್ನು ಅಕಾಡೆಮಿ ಪ್ರಕಟಿಸುತ್ತಿರುವುದು ಆಯಾ ವರ್ಷದಲ್ಲಿ ಪ್ರಬಂಧ ಸೃಷ್ಟಿಯ ಹರಹನ್ನು ದಾಖಲಿಸುವ ಪ್ರಯತ್ನವಾಗಿದೆ. ಪ್ರಬಂಧ 1976 (ಸಂ.ಅನಂತನಾರಾಯಣ), 1981 (ಸಂ.ಪ್ರಭುಶಂಕರ), 1987 (ಸಂ.ಡಿ.ಆರ್.ನಾಗರಾಜ್), 1988 (ಸಂ.ಪುರುಷೋತ್ತಮ ಬಿಳಿಮಲೆ) ಗಮನಾರ್ಹವಾದ ಸಂಕಲನಗಳು. ನಾಗರಾಜ್ ಹಾಗೂ ಬಿಳಿಮಲೆಯವರ ಪ್ರಸ್ತಾವನೆಗಳು ಆ ತಲೆಮಾರು ಪ್ರಬಂಧ ಸಾಹಿತ್ಯವನ್ನು ಗ್ರಹಿಸಿರುವ ಬಗೆಗಿನ ದಾಖಲೆಯಾಗಿದೆ ಎನ್ನಬಹುದು.

ಹಿರಿಯ ಲಲಿತ ಪ್ರಬಂಧಕಾರರಲ್ಲಿ ಒಬ್ಬರಾದ ರಾ.ಯ. ಧಾರವಾಡಕರರಿಗೆ ಎಪ್ಪತ್ತು ವರ್ಷ ತುಂಬಿದಾಗ ಅರ್ಪಿಸಿರುವ 'ಪ್ರಬಂಧ ಪ್ರಪಂಚ' ಎಂಬ ಅಭಿನಂದನಗ್ರಂಥ (ಸಂ.ಎಚ್.ವಿ.ನಾಗೇಶ) ಪ್ರಬಂಧ ಸಾಹಿತ್ಯವನ್ನು ಕುರಿತು ಅದುವರೆವಿಗೆ ನಡೆದಿರುವ ಅಧ್ಯಯನಗಳನ್ನು ಒಂದೆಡೆ ಸಂಕಲಿಸಿದೆ. ಈ ಗ್ರಂಥದ ವಿಶೇಷವೆಂದರೆ ಪ್ರಬಂಧ ವಿಸ್ತಾರ ಎಂಬ ವಿಭಾಗ. ಇಲ್ಲಿ ಎನ್.ಬಾಲಸುಬ್ರಮಣ್ಯರ ಫ್ರೆಂಚ್ ಮೂಲ, ಮಾಂಟೇನನ ಪ್ರಬಂಧಗಳು ಎಂಬ ಲೇಖನದಿಂದ ತೊಡಗಿ ಹಿಂದಿ ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ ಮತ್ತು ಮರಾಠಿ ಭಾಷೆಗಳಲ್ಲಿ ಪ್ರಬಂಧ ಸಾಹಿತ್ಯ ಪ್ರಕಾರ ಬೆಳೆದು ಬಂದಿರುವ ಹೆಜ್ಜೆಗಳನ್ನು ಗುರುತಿಸುವ ಪ್ರಯತ್ನವಿದೆ. ಇದು ಉಲ್ಲೇಖಾರ್ಹ ದಾಖಲೆ. ಭಾರತೀಯ ಲಲಿತ ಪ್ರಬಂಧಗಳ ಎಡೆಯಲ್ಲಿ ಕನ್ನಡ ಪ್ರಬಂಧಗಳ ಅನನ್ಯತೆಯನ್ನು ಅಧ್ಯಯನ ಮಾಡಲು ದಾರಿದೀಪವಾಗಿದೆ. ಇದರೊಂದಿಗೆ ವಿ.ಕೃ.ಗೋಕಾಕ, ಗೊರೂರರು ಪ್ರಬಂಧ ಸಂಕಲನಗಳಿಗೆ ಬರೆದಿರುವ ಪ್ರಸ್ತಾವನೆಯೂ ಸೇರಿದಂತೆ, ಬೇಂದ್ರೆ, ಪಂಜೆ, ಪಡುಕೋಣೆ, ವಿಸೀ, ಪ್ರಹ್ಲಾದರಾವ್, ಮಾಸ್ತಿ, ತೀನಂಶ್ರೀ, ಕಡೆಂಗೋಡ್ಲು, ಮೂರ್ತಿರಾವ್, ಬೀಚಿ, ಪು.ತಿ.ನ., ಗೊರೂರು, ಕುವೆಂಪು, ಕಾರಂತ, ಎಂ.ವಿ.ಸೀ., ಪಾವೆಂ., ಹಾಮಾನಾ., ಮಿತ್ರ, ಸಿಂಪಿ ಲಿಂಗಣ್ಣ, ಎನ್ಕೆ, ರಾ.ಕು. ಪ್ರಬಂಧ ಸಾಹಿತ್ಯದ ಸಮೀಕ್ಷೆ ಇದೆ. ಒಟ್ಟಿನಲ್ಲಿ ಲಲಿತಪ್ರಬಂಧದ ಬಗ್ಗೆ ಆಸಕ್ತ ಅಧ್ಯಯನಕಾರರಿಗೆ ಪ್ರಬಂಧ ಪ್ರಪಂಚ ಕೈಮರವಿದ್ದಂತೆ. ಈ ಕೃತಿಯ ಯೋಜನೆಯ ಮೂಲಕ ಸಂಪಾದಕರಾದ ಎಚ್.ವಿ.ನಾಗೇಶ್ ಅಗತ್ಯ ದಾಖಲೆಯನ್ನು ಕನ್ನಡ ಸಾಹಿತ್ಯ ಚರಿತ್ರೆಗೆ ಕೊಟ್ಟಿದ್ದಾರೆ.

ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಶತಮಾನದ ಲಲಿತ ಪ್ರಬಂಧಗಳು' (ಸಂ.ಗುರುಲಿಂಗ ಕಾಪಸೆ, 2000) ಲಲಿತ ಪ್ರಬಂಧ ನಡೆದು ಬಂದ ದಾರಿಯನ್ನು ಅತ್ಯಂತ ಸಮರ್ಪಕವಾಗಿ ಪರಿಚಯಿಸುವ ಸಂಕಲನವಾಗಿದೆ. ಗೋವಿಂದ ಪೈ, ಪಂಜೆಮಂಗೇಶರಾಯರಿಂದ ತೊಡಗಿ ಇಂದಿನ ಮಹತ್ವದ ಪ್ರಬಂಧಕಾರರಾದ ಚಂದ್ರಶೇಖರ ಆಲೂರು, ಬಿ.ಚಂದ್ರೇಗೌಡ ಮೊಗಳ್ಳಿ ಗಣೇಶ, ಈರಪ್ಪ ಎಂ.ಕಂಬಳಿ, ಗುರುದೇವಿ ಹುಲೆಪ್ಪನವರ ಮಠರವರೆಗೆ ಸರಿಸುಮಾರು ಎಂಬತ್ತು ತೊಂಬತ್ತು ವರ್ಷಗಳಲ್ಲಿ ವಿಕಾಸಗೊಂಡಿರುವ ಲಲಿತ ಪ್ರಬಂಧ ಸಾಹಿತ್ಯದ ಹಾಸನ್ನು ಈ ಸಂಕಲನ ಸಮರ್ಥವಾಗಿ ಪ್ರತಿನಿಧಿಸಿದೆ. ಗುರುಲಿಂಗ ಕಾಪಸೆಯವರ 'ಪ್ರಸ್ತಾವನೆ' ಅಭ್ಯಾಸಯೋಗ್ಯವಾದುದು.

ಕಳೆದ ಎರಡು ಮೂರು ದಶಕಗಳಲ್ಲಿ ಅನೇಕ ಗಮನಾರ್ಹ ಕೃತಿಗಳು ಪ್ರಕಟಗೊಂಡಿವೆ. ಮಹತ್ವದ ಕೃತಿಗಳನ್ನು ಗಮನಿಸುವುದಾದರೆ ಪು.ತಿ.ನ. ಅವರ ಯದುಗಿರಿಯಲ್ಲಿ ಗೆಳೆಯರು, ಶಿವರಾಮಕಾರಂತರ, ಅಳಿದುಳಿದ ನೆನಪುಗಳು, ಹಾ.ಮಾ.ನಾಯಕರ ಸ್ವಜನ, ಸೂಲಂಗಿ ಮತ್ತು ಸಂಗತಿ, ಕು.ಶಿ.ಹರಿದಾಸಭಟ್ಟರವರ ಲೋಕಾಭಿರಾಮ, ಸ.ಸ.ಮಾಳವಾಡರ ದೃಷ್ಟಿಕೋನ, ಗೀತಾಕುಲಕರ್ಣಿಯವರ 'ಹುರಿಗಾಳು', ಪ್ರಭುಶಂಕರರ 'ಜನಮನ', ಟಿ.ವಿ.ವೆಂಕಟಾಚಲಶಾಸ್ತ್ರೀಯವರ ಸದ್ದಂತೆಂಬರ ಗಂಡ, ಎಚ್ಚೆಸ್ಕೆಯವರ ಮೇಘಲಹರಿ, ಹವಳದ ಸರ, ಡಿ.ಕೆ.ರಾಜೇಂದ್ರ ಅವರ 'ಮಾತಿನ ಮಲ್ಲರು', ಘಟನೆಗಳು, ರಾ.ಕು. ಅವರ ಸಲ್ಲಾಪ, ರಾಶಿಯವರ ಕೊರವಂಜಿ ಕಂಡ ಸಮಾಜ, ಸುನಂದಾ ಬೆಳಗಾಂವಕರರ 'ಕಜ್ಜಾಯ', ಮ.ಸು.ಕೃಷ್ಣ ಮೂರ್ತಿಯವರ ಚಂಕ್ರಮಣ, ಹಂಪನಾ ಅವರ ಹೆಸರಿನ ಸೊಗಸು, ಅನಂತ ಕುಲಕರ್ಣಿಯವರ ತಳಿರು, ಎಂ.ಎಸ್.ವೇಣುಗೋಪಾಲರ ಆತ್ಮೀಯ, ವೀರೇಂದ್ರ ಸಿಂಪಿಯವರ ಭಾವಮೈದುನ, ಬಿ.ಆರ್.ವಾಡಪ್ಪಿ ಯವರ 'ಗಾಳಿಗುದುರಿ', ಕಾಂತರಾಜು ಮಿರ್ಲೆಯವರ 'ಪ್ರೇಮದರ್ಶನ', ಪಿ.ಎಸ್.ರಾಮನುಜಂ ಅವರ 'ಪ್ರಬಂಧ ವಿಹಾರ', ಬಿ.ಶಾಮಸುಂದರ ಅವರ ಮುಖಗಳು, ರಸ್ತೆ ಹಾಗೂ ಇತರ ಪ್ರಬಂಧಗಳು, ವೈದೇಹಿಯವರ ಮಲ್ಲಿನಾಥನ ಧ್ಯಾನ, ಚಂದ್ರಶೇಖರ ಆಲೂರರ 'ಒಲಿದಂತೆ ಹಾಡುವೆ' ಹೀಗೆ ಅನೇಕವನ್ನು ಹೆಸರಿಸಬಹುದು.

ಈಚಿನ ದಶಕಗಳಲ್ಲಿ ಲಂಕೇಶರ 'ಟೀಕೆ ಟಿಪ್ಪಣಿ'ಯ ಲಂಕೇಶ್ ಪತ್ರಿಕೆಯ ಸಂಗ್ರಹಗಳಲ್ಲಿರುವ ರಾಮು ಎಂಬ ಹುಡುಗ, ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ ಹಾಗೂ 'ಗುಬ್ಬಚ್ಚಿ ಗೂಡು' ಇತ್ಯಾದಿ ಪ್ರಬಂಧಗಳು ಕನ್ನಡ ಗದ್ಯ ಸಾಹಿತ್ಯಕ್ಕೆ ಸಂದ ಅನನ್ಯ ಕೊಡುಗೆಗಳು. ಲಂಕೇಶ್ ಪತ್ರಿಕೆಯಲ್ಲಿ ಎಸ್.ಮಂಜುನಾಥರ ಇಪ್ಪತ್ತಕ್ಕೂ ಹೆಚ್ಚು ಪ್ರಬಂಧಗಳು ಪ್ರಕಟಗೊಂಡಿವೆ. ಇವಿನ್ನೂ ಸಂಕಲನ ರೂಪದಲ್ಲಿ ಪ್ರಕಟವಾಗಿಲ್ಲ.

ಹೊಸ ತಲೆಮಾರಿನ ಪ್ರಬಂಧಕಾರರಲ್ಲಿ ಚಂದ್ರಶೇಖರ ಆಲೂರು ವೈದೇಹಿ ಮೊಗಳ್ಳಿ ಗಣೇಶ ಉತ್ತಮ ಕಥನ ಪ್ರಬಂಧಗಳನ್ನು ರಚಿಸುತ್ತಿದ್ದಾರೆ. ಇವರು ರಚಿಸುತ್ತಿರುವ ಪ್ರಬಂಧಗಳ ವಸ್ತು, ನಿರೂಪಣೆ ಹಿಂದೆಂದಿಗಿಂತಲೂ ಭಿನ್ನವೆನಿಸಿದೆ. ಅಂತರಂಗ ನಿರೀಕ್ಷಣೆ ಈ ಪ್ರಬಂಧಗಳಲ್ಲಿ ಎದ್ದು ಕಾಣುವ ಗುಣ. ಜಯಂತ ಕಾಯ್ಕಿಣಿಯವರ 'ಬೊಗಸೆಯಲ್ಲಿ ಮಳೆ' ಹಾಗೂ 'ಶಬ್ದತೀರ' ಶೀರ್ಷಿಕೆಯಡಿ ಪ್ರಕಟಗೊಂಡಿರುವ ಪ್ರಬಂಧಗಳು ವಿಶಿಷ್ಟ ಸಂವೇದನೆಗಳನ್ನು ಅಂತರ್ಗತವಾಗಿಸಿಕೊಂಡಿವೆ. ಬಿ.ಆರ್.ಲಕ್ಷ್ಮಣರಾಯರ 'ಇತ್ಯಾದಿ' ಕೃತಿ ಗಮನಾರ್ಹವಾದುದು.

ವಿವಿಧ ನಿಯತ ಕಾಲಿಕೆಗಳಲ್ಲಿ ಬೆಳಕು ಕಾಣುತ್ತಿರುವ ಹೊಸ ಪ್ರಬಂಧಕಾರರಲ್ಲಿ ಎಂ.ಆರ್.ಮಂದಾರವಲ್ಲಿ, ನಂದಾ. ಡಿ., ನರೇಂದ್ರ ರೈ ದೇರ್ಲ, ವಸುಮತಿ ಉಡುಪ, ಭಾರತೀ ಕಾಸರಗೋಡು, ಆರ್.ನಿರ್ಮಲ, ಜಯಾ ಯಾಜಿ, ಶಿರಾಲಿ, ಶೈಲಾ ಛಬ್ಬಿ, ಸೂರಿ ಹಾರ್ದಳ್ಳಿ, ಪ.ರಾಮಕೃಷ್ಣ ಶಾಸ್ತ್ರಿ, ಶ್ರೀನಿವಾಸ ಚಲವಾದಿ, ಹ.ಶಿ.ಭೈರವಟ್ಟಿ, ಜಾನಕಿ ಸುಂದರೇಶ, ಲೀಲಾ ದಾಮೋದರ, ಭುವನೇಶ್ವರಿ ಹೆಗಡೆ, ಪ್ರತಿಭಾ ನಂದಕುಮಾರ್, ರವಿ ಬೆಳಗೆರೆ ಮುಂತಾದವರು ಲಲಿತ ಪ್ರಬಂಧಗಳನ್ನು ಸೃಷ್ಟಿಸುತ್ತಿದ್ದಾರೆ.

ಕನ್ನಡ ವಿಮರ್ಶೆ 'ಲಲಿತ ಪ್ರಬಂಧ' ಪ್ರಕಾರವನ್ನು ಅಷ್ಟಾಗಿ ಗಮನಿಸಿಲ್ಲ. ಈ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳು ಬಿಡಿ ಬಿಡಿಯಾಗಿ ಪ್ರಬಂಧಕಾರರನ್ನು ಅಲ್ಲಲ್ಲಿ ಅನುಲಕ್ಷಿಸಿರುವುದನ್ನು ಬಿಟ್ಟರೆ ಸಮಗ್ರವಾದ ಸಮಾಜೋ – ಸಾಂಸ್ಕೃತಿಕ ಗ್ರಹಿಕೆಗಳನ್ನು ಅಭ್ಯಸಿಸಲು ವಿಪುಲವಾದ ಅವಕಾಶಗಳಿವೆ. (ಎಚ್.ಎಸ್.ಎಸ್.)

**ಕನ್ನಡದಲ್ಲಿ ಪ್ರವಾಸಸಾಹಿತ್ಯ :** ಕನ್ನಡ ಪ್ರವಾಸ ಸಾಹಿತ್ಯ 19ನೆಯ ಶತಮಾನದಲ್ಲಿಯೇ ಆರಂಭವಾಯಿತು. ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರು (ನೋಡಿ) 1890ರಲ್ಲಿ ದಕ್ಷಿಣ ಭಾರತ ಯಾತ್ರೆ ಎಂಬ ಪ್ರವಾಸ ಗ್ರಂಥವನ್ನು ಪ್ರಕಟಿಸಿದರು. ಮುಂದೆ 35 ವರ್ಷಗಳ ಕಾಲ ಯಾವ ಪ್ರವಾಸ ಗ್ರಂಥವೂ ಬರಲಿಲ್ಲ. 1920ರಲ್ಲಿ

ವಿ.ಸೀ.ಯವರ ಪಂಪಾಯಾತ್ರೆ ಪ್ರಕಟವಾಯಿತು. ಈ ವಿಭಾಗದಲ್ಲಿ ಇದು ಆದ್ಯ ಹಾಗೂ ಮೇರುಕೃತಿ. ಲೇಖಕರು ತಮ್ಮ ಮಿತ್ರರೊಂದಿಗೆ ಹಂಪೆಗೆ ಹೋಗಿ, ಅಲ್ಲಿನ ಪಾಳು ಹಂಪೆಯನ್ನು ಕಂಡು ತಮಗಾದ ಅನುಭವವನ್ನು ಈ ಗ್ರಂಥದಲ್ಲಿ ಪಡಿಮೂಡಿಸಿದ್ದಾರೆ. ಇದೊಂದು ರಸಭರಿತ ಪ್ರಬಂಧ. ಇಲ್ಲಿ ಲೇಖಕರ ಅಗಾಧವಾದ ಲೋಕಾನುಭವ, ತತ್ತ್ವಚಿಂತನ ಮತ್ತು ಜೀವನ ದೃಷ್ಟಿಗಳ ತ್ರಿವೇಣೀಸಂಗಮವನ್ನು ಕಾಣಬಹುದು. ಎರಡು ದಿನಗಳ ಅಲ್ಪಾವಧಿಯಲ್ಲಿ ಇನ್ನೂರ ಐವತ್ತು ವರ್ಷಗಳ ಚರಿತ್ರೆಯನ್ನು ಸ್ವತಃ ಲೇಖಕರು ಇಲ್ಲಿ ಅನುಭವ ಮಾಡಿಸಿಕೊಡುತ್ತಾರೆ. ಸುಖ ದುಃಖಗಳೆರಡನ್ನೂ ಓದುಗರಿಗೆ ಉಣಬಡಿಸುತ್ತಾರೆ. ಕೊನೆಯಲ್ಲಿ ಬರುವ ಸ್ವಪ್ನ ಮಾಲಿಕೆಗಳಲ್ಲಿ ಗತಕಾಲದ ವೈಭವ, ವಿನಾಶಗಳು ಹೃದಯವಿದ್ರಾವಕವಾಗಿ ನಿರೂಪಿತವಾಗಿವೆ. ಕವಿಯ ಅನುಭವಕ್ಕೆ ಐತಿಹಾಸಿಕ ದೃಷ್ಟಿಯೂ ಉಜ್ವಲ ಅಭಿಮಾನವೂ ಬೆಸೆದುಕೊಂಡಿವೆ.

ಬಿ.ಪುಟ್ಟಯ್ಯನವರ ಅಭಿವೃದ್ಧಿ ಸಂದೇಶ ಪಶ್ಚಿಮ ದೇಶದಲ್ಲಿಯ ಪ್ರವಾಸದ ಪ್ರಥಮ ಗ್ರಂಥ. ವಿ.ಕೃ.ಗೋಕಾಕರ ಸಮುದ್ರದಾಚೆಯಿಂದ, ಇಂದಲ್ಲ ನಾಳೆ ಮತ್ತು ಸಮುದ್ರದೀಚೆಯಿಂದ ಗ್ರಂಥಗಳು ಕನ್ನಡ ಪ್ರವಾಸ ಸಾಹಿತ್ಯದ ಗಮನಾರ್ಹ ಕೃತಿಗಳು. 1936–37ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋದ ತಮ್ಮ ಅನುಭವಗಳನ್ನು ಪತ್ನಿ ಹಾಗೂ ಸ್ನೇಹಿತರನ್ನು ಸಂಬೋಧಿಸಿ ಬರೆದ ಪತ್ರಗಳ ಸಂಕಲನವೇ ಸಮುದ್ರದಾಚೆಯಿಂದ ಎಂಬ ಗ್ರಂಥ. ಇಂದಲ್ಲ ನಾಳೆ ಎಂಬ ಗ್ರಂಥದಲ್ಲಿ ಅಮೆರಿಕದ ಗಡಿಬಿಡಿಯ ಬದುಕು, ನಿರಾಸಕ್ತಿ, ನಾಗರಿಕತೆಗಳ ಚಿತ್ರಣ ಕಾವ್ಯಮಯವಾಗಿ ಮೂಡಿಬಂದಿದೆ. ಇಲ್ಲಿನ ನವೀನ ಚಂಪೂ ಶೈಲಿ ವಸ್ತು ನಿರೂಪಣೆಯ ಹೊಸತೊಂದು ಮಾರ್ಗವನ್ನು ತೆರೆದಿದೆ. 1967ರಲ್ಲಿ ಪಿ.ಇ.ಎನ್. ಸಮ್ಮೇಳನಕ್ಕಾಗಿ ಜಪಾನಿಗೆ ಹೋದಾಗಿನ ಅನುಭವ ಸಮುದ್ರದೀಚೆಯಿಂದ ಎಂಬ ಗ್ರಂಥದಲ್ಲಿ ಮೂಡಿವೆ. ಒಟ್ಟಿನಲ್ಲಿ ಗೋಕಾಕರಿಗೆ ಕಾವ್ಯದ ಮುಖ್ಯ ಪ್ರೇರಣೆಯೇ ಪ್ರವಾಸ ಎನ್ನುವ ಜಿ.ಎಸ್.ಶಿವರುದ್ರಪ್ಪನವರ ಮಾತು ಒಪ್ಪತಕ್ಕುದಾಗಿದೆ.

ಶಿವರಾಮ ಕಾರಂತರ ಅಪೂರ್ವ ಪಶ್ಚಿಮ (1953) ಪ್ರವಾಸ ಸಾಹಿತ್ಯದ ಬಹುಮುಖ್ಯ ಕೃತಿ. ಇದೊಂದು ಕಲೆಗಾರನ ಅನುಭವದ ಕಥೆ. ಇಲ್ಲಿ ಭಾವದ ಕಾವೂ ಆಲೋಚನೆಯ ತೀಕ್ಷ್ಣತೆಯೂ ಮಿಳಿತವಾಗಿವೆ. ಪಾಶ್ಚಾತ್ಯ ಪ್ರವಾಸದ ಅನುಭವಗಳು ಇಲ್ಲಿ ವಿಸ್ತಾರವಾಗಿ ಸವಿವರವಾಗಿ ಬಂದಿವೆ. ಕಾರಂತರ ಆತ್ಮಕಥನವಾದ ಹುಚ್ಚು ಮನಸ್ಸಿನ ಹತ್ತು ಮುಖಗಳು ಎಂಬ ಗ್ರಂಥದಲ್ಲೂ ಆಳನಿರಾಳದಂಥ ಅವರ ಬಹುಪಾಲು ಕಾದಂಬರಿಗಳಲ್ಲೂ ಪ್ರವಾಸಾನುಭವ ಕಥೆಯೊಂದಿಗೆ ಮಿಳಿತವಾಗಿ ಬಂದಿದೆ.

ದಿನಕರ ದೇಸಾಯಿಯವರ ನಾ ಕಂಡ ಪಡುವಣ, ಮನೋಹರ ಗ್ರಂಥಮಾಲೆಯವರ ನಡೆದು ಬಂದ ದಾರಿಯ ಮೂರನೆಯ ಸಂಪುಟದಲ್ಲಿ ಅಚ್ಚಾಗಿದೆ. ದೇಸಾಯಿಯವರು ಭಾರತದ ಪ್ರತಿನಿಧಿಯಾಗಿ ಅಂತಾರಾಷ್ಟ್ರೀಯ ಕೂಲಿಕಾರ ಪರಿಷತ್ತಿನಲ್ಲಿ ಭಾಗವಹಿಸಲು ಪ್ರವಾಸಮಾಡಿದಾಗಿನ ಅನುಭವಮಾಲಿಕೆಯೇ ಈ ಕೃತಿ. ಈ ಗ್ರಂಥದಲ್ಲಿ ದೇಸಾಯಿಯವರು ಕೂಲಿಕಾರರ ಸಂಘಟನೆ, ಸಾರಿಗೆ ವ್ಯವಸ್ಥೆ, ಶಿಸ್ತು, ಪಾಕಶಾಸ್ತ್ರ ಮುಂತಾದವುಗಳ ಬಗ್ಗೆ ಕಥೆಯ ರೀತಿಯಲ್ಲಿ ತಮ್ಮ ಅನುಭವಗಳನ್ನು ನೀಡಿದ್ದಾರೆ. ಅಮೆರಿಕವನ್ನು ಕುರಿತು ಬಂದ ಗ್ರಂಥಗಳಲ್ಲಿ ಬಿ.ಜಿ.ಎಲ್. ಸ್ವಾಮಿಯವರ ಅಮೆರಿಕದಲ್ಲಿ ನಾನು ಎಂಬುದು ಅತ್ಯುತ್ತಮ ಗ್ರಂಥ. ಸ್ವಾಮಿಯವರು ಸಸ್ಯವಿಜ್ಞಾನದಲ್ಲಿ ಸಂಶೋಧನೆ ನಡೆಸಲು ಅಮೆರಿಕಕ್ಕೆ ಹೋಗಿ ಆರು ವರ್ಷಗಳ ಕಾಲ ಅಲ್ಲಿದ್ದು, ಅಲ್ಲಿನ ಜನಜೀವನ ಸಂಸ್ಕೃತಿ ವ್ಯವಹಾರ ಸ್ವಭಾವ ಧರ್ಮ ಹಾಗೂ ಭಾರತೀಯ ಮತ್ತು ಅಮೆರಿಕದ ಜೀವನದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಕುರಿತು ಬರೆದಿದ್ದಾರೆ. 'ನಮ್ಮಂತೆಯೇ ಅಮೆರಿಕನ್ನರು ಅಮೆರಿಕನ್ನರಂತೆಯೇ ನಾವು' ಎಂಬುದು. ಅವರ ಅನುಭವ: ಕೃಷ್ಣಾನಂದ ಕಾಮತರ ನಾನೂ ಅಮೆರಿಕೆಗೆ ಹೋಗಿದ್ದೆ ಎಂಬುದು ಅಮೆರಿಕ ಪ್ರವಾಸವನ್ನು ವಿವರಿಸುವ ಮತ್ತೊಂದು ಉತ್ತಮ ಕೃತಿ. ಹೋಗುವ ಮುಂಚೆ ಹಲವು ಕಲ್ಪನೆಗಳನ್ನು ಕಟ್ಟಿಕೊಂಡು ಹೋಗಿ ಅಲ್ಲಿ ಹೋದ ಬಳಿಕ ತಾವು ಎದುರಿಸಿದ ಸಮಸ್ಯೆಗಳನ್ನು ಲೇಖಕರು ಹೊಸಬಗೆಯಲ್ಲಿ ವಿವರಿಸಿದ್ದಾರೆ.

ಶ್ರೀರಂಗರ ಶ್ರೀರಂಗಯಾತ್ರೆ ಮತ್ತೊಂದು ಉತ್ತಮ ವಿದೇಶಿ ಪ್ರವಾಸ ಗ್ರಂಥ. ಯುರೋಪಿನ ಈ ಪ್ರವಾಸಕಥನ ಕುತೂಹಲ ಭರಿತವಾಗಿದೆ. ಶ್ರೀರಂಗ, ನೆಗಳೂರು ರಂಗನಾಥ, ಎಚ್.ಎಲ್.ಪಾಟೀಲ –ಈ ಮೂವರೂ ಕೂಡಿ ಹಳೇಬೀಡು, ಬೇಲೂರು, ಶ್ರವಣಬೆಳಗೊಳ ಮುಂತಾದ ದಕ್ಷಿಣ ಮೈಸೂರಿನ ಪ್ರದೇಶಗಳಲ್ಲಿ ಮಾಡಿದ ಪ್ರವಾಸಕಥನ ಮುಕ್ಕಣ್ಣಯಾತ್ರೆ ಎಂಬ ಪುಸ್ತಕದಲ್ಲಿ ರಮ್ಯವಾಗಿ ಚಿತ್ರಿತವಾಗಿದೆ (1946).

ನವರತ್ನರಾಮ್ ಬರೆದ ಪ್ಯಾರಿಸ್ಸಿನಿಂದ ಪ್ರೇಯಸಿಗೆ ಎಂಬ ಪುಸ್ತಕ ಆಕರ್ಷಕ ಶೈಲಿ ಹಾಗೂ ಸುಂದರ ಸನ್ನಿವೇಶಗಳಿಂದ ಕೂಡಿದೆ. ಪ್ಯಾರಿಸ್ಸಿನ ಸ್ವಚ್ಛಂದ ಪ್ರೇಮ ವಾತಾವರಣವನ್ನು ಚಿತ್ರಿಸುವುದರಲ್ಲಿ ರಾಮ್ ಯಶಸ್ವಿಯಾಗಿದ್ದಾರೆ. ವಕೀಲರಾದ ಕೆ.ಆರ್.ಕಾರಂತರು ಯುರೋಪಿನಲ್ಲಿ ಪ್ರವಾಸಮಾಡಿ ಪ್ರವಾಸಿಯ ಪತ್ರಗಳು (1951) ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ರಾಜಕೀಯದ ಮತ್ತು ಪ್ರಜಾಪ್ರಭುತ್ವದ ವಿಶ್ಲೇಷಣೆ ವಿಶೇಷವಾಗಿ ಬಂದಿದೆ. ಸಾಗರದಾಚೆ ಮತ್ತು ನಮ್ಮ ಕಾಗದಗಳು ಎಂಬೆರಡು ಹೊತ್ತಗೆಗಳಲ್ಲಿ ನಾಡಿಗ ಕೃಷ್ಣಮೂರ್ತಿಯವರು ಪತ್ರಿಕೋದ್ಯಮದ ವಿಷಯ ಸಂಗ್ರಹಣೆಗಾಗಿ ಅಮೆರಿಕದಲ್ಲಿ ಪ್ರವಾಸ ಮಾಡಿದಾಗಿನ ತಮ್ಮ ಅನುಭವಗಳನ್ನು ವ್ಯಕ್ತಪಡಿಸಿದ್ದಾರೆ. ಎಂ.ವೀರಪ್ಪನವರ ಸಯೋನರ ಜಪಾನ್, ಜಪಾನ್ ಪ್ರವಾಸದ ಅನುಭವಗಳನ್ನು ತಿಳಿಸುವ ಪತ್ರರೂಪದ ಕಥನ.

ವಿದೇಶಗಳಲ್ಲಿ ನಾಲ್ಕು ವಾರ ಎಂಬುದು ದೇಜಗೌ ಅವರ ಮೊದಲ ಪ್ರವಾಸ ಗ್ರಂಥ. ಈ ಕ್ಷೇತ್ರದ ಉತ್ತಮ ಕೃತಿಗಳಲ್ಲೊಂದು. 1970ರ ಅಕ್ಟೋಬರ್– ನವೆಂಬರ್ ತಿಂಗಳುಗಳಲ್ಲಿ ರಷ್ಯದ ಕೀವ್ ವಿಶ್ವವಿದ್ಯಾಲಯದಲ್ಲಿ ಲೆನಿನ್ ಪ್ರಶಸ್ತಿ ಸ್ವೀಕರಿಸಲೂ ಆಸ್ಟ್ರಿಯ, ಜರ್ಮನಿ ಹಾಗೂ ಲಂಡನ್ ವಿಶ್ವವಿದ್ಯಾಯಲಯಗಳನ್ನು ವೀಕ್ಷಿಸಲೂ ಕೈಗೊಂಡ ಪ್ರವಾಸ ಸಮಯದಲ್ಲಿನ ತಮ್ಮ ಅನುಭವಗಳ ದಿನಚರಿಯನ್ನು ಇಲ್ಲಿ ಕೊಡಲಾಗಿದೆ. 'ನನ್ನ ನಾಡು ಬಡವಾಗಿದ್ದರೂ ಅದೇ ನನಗೆ ಮೆಚ್ಚು; ನನ್ನ ಜನ ಹರಕು ಚಿಂದಿಯಲ್ಲಿದ್ದರೂ ಅವರೇ ನನಗೆ ಹೆಚ್ಚು; ನನ್ನ ನೆಲ ನನಗೆ ಹುಚ್ಚು. ಬೇರೆಯವರ ಬಗೆಗೆ ದ್ವೇಷವಿಲ್ಲ. ಅಷ್ಟೇ ಅಲ್ಲ ಅವರ ಬಗೆಗೆ, ಅವರು ಸಾಧಿಸಿರುವ ಸಿದ್ಧಿಯ ಬಗೆಗೆ ನನಗೆ ಅಪಾರ ಗೌರವ. ನಮ್ಮ ಸಂಸ್ಕೃತಿಗೆ ಬಾಧಕವಾಗದಂತೆ ಅದರ ಪ್ರಗತಿಯ ದೃಷ್ಟಿಯಿಂದ ಅನ್ಯ ಸಂಸ್ಕೃತಿಯ ಶ್ರೇಷ್ಠ ಗುಣಗಳನ್ನು ಅಳವಡಿಸಿಕೊಳ್ಳಬೇಕೆಂಬುದೇ ನನ್ನ ಸ್ಪಷ್ಟ ನಿಲುವು' ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಈ ಗ್ರಂಥದಲ್ಲಿ ಅವರು ಪ್ರವಾಸ ಮಾಡಿದ ದೇಶಗಳ ಜನರ ವಾಸ್ತವ ಚಿತ್ರಣ ನೈಜವಾಗಿ ಮೂಡಿಬಂದಿದೆ. ವಿದೇಶಿಯರ ಗುರಿ ನಿಲುವು ಕರ್ತವ್ಯ ಶ್ರದ್ಧೆ ತಾಯ್ನಾಡು ಮತ್ತು ತಾಯ್ನುಡಿಗಳ ಬಗ್ಗೆ ಅವರಿಗಿರುವ ಕಾಳಜಿಗಳು ಗ್ರಂಥದುದ್ದಕ್ಕೂ ಮಿನುಗುತ್ತವೆ.

ವಿದೇಶ ಯಾತ್ರೆಯನ್ನು ಕುರಿತ ಈ ಗ್ರಂಥಗಳಲ್ಲದೆ ಹಲವು ಪತ್ರಿಕೆಗಳಲ್ಲಿ ಸಾಪ್ತಾಹಿಕ, ಮಾಸಿಕಗಳಲ್ಲಿ ಹಾಗೂ ಪ್ರಬಂಧ ಸಂಕಲನಗಳಲ್ಲಿ ಪ್ರಕಟವಾದ ಪ್ರವಾಸ ಸಾಹಿತ್ಯ ಲೇಖನಗಳಂತೂ ಅಸಂಖ್ಯಾತವಾಗಿವೆ. ಬಹುಪಾಲು ಉತ್ತಮ ಲೇಖನಗಳು ಹೀಗೆ ಚೆಲ್ಲಾಪಿಲ್ಲಿಯಾಗಿವೆ. ರಂ.ಶ್ರೀ.ಮುಗಳಿ, ಎಸ್.ಪಿ.ಭಟ್ಟ, ಬಸವರಾಜ ಕಟ್ಟೀಮನಿ, ಸ.ಸ.ಮಾಳವಾಡ, ಬಿ.ವಿ.ರಾಮನ್, ಭಾಸ್ಕರ್ ರಾವ್ ಮಾಲೂರ್ಕರ್, ಸಿದ್ಧವನಹಳ್ಳಿ ಕೃಷ್ಣಶರ್ಮ, ತೀ.ನಂ.ಶ್ರೀಕಂಠಯ್ಯ, ಪ.ಸು.ಭಟ್ಟ, ಆರ್.ಸಿ.ಹಿರೇಮಠ, ಹಾ.ಮಾ.ನಾಯಕ, ಸರೋಜಿನಿಮಹಿಷಿ, ಮತ್ತೀಹಳ್ಳಿ ನಾಗರಾಜರಾವ್, ಸಿಸು ಸಂಗಮೇಶ– ಮುಂತಾದವರ ಹೆಸರುಗಳನ್ನು ಉದ್ಧರಿಸಬಹುದು.

ಸರ್ಕಾರದ ಉನ್ನತ ಹುದ್ದೆಯಲ್ಲಿದ್ದು ವಿಶ್ವದಲ್ಲಿ ಹಲವು ಬಾರಿ ಸಂಚರಿಸಿ ಹಲವು ದೇಶದ ಹಲವು ಜನರ ಜೀವನ ಸಂಸ್ಕೃತಿಗಳನ್ನು ತುಂಬ ಹತ್ತಿರದಿಂದ ಕಂಡು ವಿದೇಶೀಯರ ಬಗೆಗೆ ಅತ್ಯಂತ ನೈಜವಾಗಿ ರಚಿತವಾಗಿರುವ ಗ್ರಂಥವೆಂದರೆ ಕೆ.ಪಿ.ಎಸ್.ಮೆನನ್ ಅವರ ವಿಶ್ವಪರ್ಯಟನೆ. ಇಂಗ್ಲಿಷಿನಲ್ಲಿರುವ ಈ ಗ್ರಂಥವನ್ನು ಮಾ.ಭೀ.ಶೇಷಗಿರಿರಾವ್‌ರವರು ಕನ್ನಡಕ್ಕೆ ಅನುವಾದಿಸಿ ಕನ್ನಡ ಪ್ರವಾಸ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆ ಕೊಟ್ಟಿದ್ದಾರೆ.

ಕನ್ನಡದಲ್ಲಿ ಪ್ರಕಟವಾಗಿರುವ ಪ್ರವಾಸ ಕಥನಗಳಲ್ಲಿ ಅರ್ಧಕ್ಕಿಂತ ಹೆಚ್ಚು ಗ್ರಂಥಗಳು ಕ್ಷೇತ್ರ ಪರಿಚಯವನ್ನು ಮಾಡಿ ಕೊಡುವಂಥವು. ಭಾರತದ ಹಾಗೂ ಕರ್ನಾಟಕದ ಹಲವು ಕ್ಷೇತ್ರಗಳನ್ನು ಪರಿಚಯಿಸುವ ಈ ಗ್ರಂಥಗಳಲ್ಲಿ ಸಾಹಿತ್ಯ ಮೌಲ್ಯಕ್ಕಿಂತ ಹೆಚ್ಚಾಗಿ ಕ್ಷೇತ್ರ ಪರಿಚಯವೇ ಮುಖ್ಯ ಗುರಿಯಾಗಿದೆ. ಇಂಥ ಕೆಲವು ಗ್ರಂಥಗಳಲ್ಲಿ ಕ್ಷೇತ್ರಮಹಿಮೆಯನ್ನು ಕುರಿತು ರಚಿತವಾಗಿರುವ ಹಾಡುಗಳಲ್ಲಿ ಸಾಹಿತ್ಯಾಂಶವನ್ನು ಕಾಣಬಹುದಾಗಿದೆ. ಬಹುಪಾಲು ಗ್ರಂಥಗಳು ಸಚಿತ್ರವಾಗಿರುವುದರಿಂದ ಆಕರ್ಷಕವಾಗಿವೆ. ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಬಹುದು.

ಕೃಷ್ಣ ನಾರಾಯಣ ಗೋಸಾಮಿ ಅವರ ಹಿಮಾಲಯ ದರ್ಶನ, ಕೈಲಾಸ – ಮಾನಸ ಸರೋವರ ಯಾತ್ರೆ ಮತ್ತು ಬದರಿಯಾತ್ರೆ, ಭಾರದ್ವಾಜರ ಸಚಿತ್ರ ಭಾರತಯಾತ್ರೆ, ಶ್ರೀನಿವಾಸ ಕಂಪನಿಯವರ ಸಚಿತ್ರ ವಿಜಯನಗರ, ನ.ರಾ.ಗಲಗಲಿಯವರ ಬದರಿನಾರಾಯಣ ದರ್ಶನ, ಜಿ.ವೆಂಕಟಯ್ಯನವರ ಚಿನ್ನದ ಗಿರಿ ಯಾತ್ರೆ, ಬನದ ಸೆರಗು, ಸೋಮನಾಥಾನಂದರ ಅಮರನಾಥ ಯಾತ್ರೆ ಮತ್ತು ಹೈಮಾಚಲ ಸಾನಿಧ್ಯದಲ್ಲಿ, ಬಿ.ಶಿವಮೂರ್ತಿಶಾಸ್ತ್ರಿಗಳ ಕರ್ನಾಟಕ ಸಂದರ್ಶನ, ಯು.ರಾಘವೇಂದ್ರ ಭಟ್ಟರ ರಜತಪೀಠದಿಂದ ರಜತಾದ್ರಿಗೆ, ಮಹದೇವಿಯಮ್ಮನವರ ದೇವತಾತ್ಮ, ಪಿ.ಆರ್.ಜಯಲಕ್ಷ್ಮಮ್ಮನವರ ಬದರೀ ಯಾತ್ರೆ, ಮ.ನ.ಮೂರ್ತಿಯವರ ನಮ್ಮ ಪ್ರವಾಸ ಮತ್ತು ನಾವು ಕಂಡ ಬೆಂಗಳೂರು, ಡಿ.ಟಿ.ರಂಗಸ್ವಾಮಿಯವರ ಭಾರತ ಯಾತ್ರೆ, ಎಚ್.ಆರ್.ನಾಗರಾಜ್‌ರವರ ಹಿಮಾಚಲ ಪ್ರದೇಶ, ಜೆ.ವಿ.ನರಸಿಂಹಮೂರ್ತಿ ಯವರ ಆಸೇತುಹಿಮಾಚಲ ಯಾತ್ರೆ, ಎಂ.ವೆಂಕಟಾಚಲ ಭಟ್ಟರ ಕಾಶ್ಮೀರ ಅಮರನಾಥ ಯಾತ್ರೆ, ಕೋ.ಚೆನ್ನಬಸಪ್ಪನವರ ದಕ್ಷಿಣೇಶ್ವರ ದರ್ಶನ, ಗುರುನಾಥ ಜೋಶಿಯವರ ಪ್ರವಾಸ, ಭದ್ರಗಿರಿ ಕೇಶವದಾಸರ ದಾಸ ಕೀರ್ತನೆ ಮಂಡಳಿಯ ಪ್ರಥಮ ಯಾತ್ರೆ, ಕೆ.ಗಣೇಶಮಲ್ಯರ ಶರಾವತಿಯಿಂದ ಗೋದಾವರಿವರೆಗೆ, ಶ್ರೀರಂತಶಾಸ್ತ್ರೀಯವರ ಮಾನಸ ಸರೋವರ ಮತ್ತು ಕೈಲಾಸ

ಕ್ಷೇತ್ರ ಪ್ರಕರಣ, ಟಿ.ಚಂದ್ರರಾಜ ಶೆಟ್ಟಿಯವರ ಮಂಗಳೂರಿನಿಂದ ಮಧುರೆಗೆ, ಕೆ.ಗೋಪಾಲಕೃಷ್ಣರಾಯರ ತಿರುಪತಿ ಯಾತ್ರೆ, ಎಂ.ಎನ್.ಶೇಷಾದ್ರಿ ಅಯ್ಯಂಗಾರ್ ಅವರ ಧರ್ಮಸ್ಥಳದ ಯಾತ್ರೆ, ವಿ.ನಾ.ಅವರ ಯಾತ್ರಿಕನ ಪತ್ರಗಳು, ಕೆ.ಕೊಟ್ಟರಗೌಡರ ನಮ್ಮ ಪ್ರವಾಸ, ಎಸ್.ರಜತಾದ್ರಿಯವರ ಪಶ್ಚಿಮದ ಹೊಂಬೆಳಕು ಮುಂತಾದ ಗ್ರಂಥಗಳು ಒಂದೇ ಮಾಲಿಕೆಯಲ್ಲಿ ಬರಬಹುದಾದ ಕೃತಿಗಳಾಗಿವೆ.

ಇವೇ ಅಲ್ಲದೆ ಬಾಲಕನೊಬ್ಬ ಬಾಲಕರಿಗಾಗಿ ಬರೆದ ಅಜಿತಕುಮಾರನ ನನ್ನ ಪ್ರವಾಸ ಕಥನ, ಎಸ್.ವಿ.ಕೃಷ್ಣಮೂರ್ತಿರಾಯರ ದಿಲ್ಲಿಯ ಪತ್ರಗಳು, ಎಚ್.ವಿ.ಶ್ರೀರಂಗರಾಜು ಅವರ ಸೋವಿಯೆಟ್ ದಿನಚರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮಹಾತ್ಮಾ ಗಾಂಧಿಯವರ ದಕ್ಷಿಣ ಯಾತ್ರೆ, ಗುಂಡ್ಮಿ ಚಂದ್ರಶೇಖರ ಐತಾಳರ ಸೌಂದರ್ಯದ ಸಾನಿಧ್ಯದಲ್ಲಿ, ಮಿರ್ಜಿ ಅಣ್ಣಾರಾಯರ ನಾ ಕಂಡ ನಾಡು, ಎಚ್.ಜಿ.ಜೋಶಿಯವರ ಶಿಲಾಹೃದಯ, ವೆಂ.ಮು.ಜೋಶಿಯವರ ಸೈನಿಕ ಉವಾಚ, ಎನ್.ಎಸ್.ಗದಗಕರ್‌ರವರ ಗೋವಾಯಾತ್ರೆ, ಟಿ.ಚಂದ್ರರಾಜ ಶೆಟ್ಟಿ ಅವರ ಭಾರತದ ಮಹಾನಗರಗಳು, ಎ.ಎಂ.ಅಣ್ಣಿಗೇರಿಯವರ ಕರ್ನಾಟಕದ ಸಾಂಸ್ಕೃತಿಕ ಸ್ಥಳಗಳು, ಹಿರೇಮಲ್ಲೂರು ಈಶ್ವರನ್ ಅವರ ಕವಿ ಕಂಡ ನಾಡು – ಕನ್ನಡ ಪ್ರವಾಸ ಸಾಹಿತ್ಯಕ್ಕೆ ಕೊಟ್ಟ ಮಹತ್ವದ ಕೊಡುಗೆಗಳಾಗಿವೆ.

ಕ್ಷೇತ್ರ ಪರಿಚಯ ಗ್ರಂಥಗಳಲ್ಲಿ ಶಿವರಾಮ ಕಾರಂತರ ಅಬುವಿನಿಂದ ಬರಾಮಕ್ಕೆ ಒಂದು ಅಪೂರ್ವ ಕೃತಿ. ಅಬು, ಅಜ್ಮೀರ, ಪುಷ್ಕರ, ಜಯಪುರ, ಸಿಮ್ಲಾ, ಆಗ್ರ, ಕಾಶಿ, ಡಾಲ್ಮಿಯಾ, ಕಲ್ಕತ್ತ ಮತ್ತು ಬರಾಮಗಳಲ್ಲಿ ಸಂಚರಿಸಿ ಅಲ್ಲಿನ ನಿಸರ್ಗ ಮತ್ತು ಸಂಗೀತ, ಸಾಹಿತ್ಯ, ಜನಜೀವನಾದಿಗಳನ್ನು ಈ ಗ್ರಂಥದಲ್ಲಿ ಕಂಡರಿಸಿದ್ದಾರೆ. ಕೆ.ಬಿ. ಪ್ರಭುಪ್ರಸಾದರ ದೇಗುಲಗಳ ದಾರಿಯಲ್ಲಿ ಎಂಬುದು ಒಂದು ಉತ್ತಮ ಗ್ರಂಥ. ಸಹಜವಾಗಿ, ನೇರವಾಗಿ, ಸರಳವಾಗಿ ತಮ್ಮ ಅನುಭವಗಳನ್ನು ಲೇಖಕರು ಇಲ್ಲಿ ಮೂಡಿಸಿದ್ದಾರೆ. ಹ.ರಾ.ಪುರೋಹಿತರ ರಾಮೇಶ್ವರ ಕನ್ಯಾಕುಮಾರಿ ದರ್ಶನ ಮತ್ತು ಬದರಿ ಕೇದಾರನಾಥ ದರ್ಶನಗಳು ಭಕ್ತಿ ಭಾವದಿಂದ ಬರೆದ ಗ್ರಂಥಗಳಾಗಿವೆ.

1943ರಲ್ಲಿ ಶಿವಮೊಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಿತ್ರರೊಂದಿಗೆ ಹೋಗಿದ್ದ ಮಾಸ್ತಿ ನರಸಿಂಗರಾಯರು ತಮ್ಮ ಮತ್ತು ಮಿತ್ರರ ಅನುಭವಗಳನ್ನು ಕನ್ನಡ ಯಾತ್ರೆಯಲ್ಲಿ ತಂದುಕೊಟ್ಟಿದ್ದಾರೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ವಾರ್ಧಾಯಾತ್ರೆಯಲ್ಲಿ ಕಥನ ಕೌಶಲ, ವರ್ಣನೆ, ವಿನೋದ ವಿಲಾಸ ಮೊದಲಾದ ಅನೇಕ ಗುಣಗಳು ಕೃಷ್ಣಶರ್ಮರ ಮನಃಶಕ್ತಿಗಳ ಪರಿಪಾಕದೊಡನೆ ಇದರಲ್ಲಿ ಸ್ವಚ್ಛಂದವಾಗಿ ಬಂದಿವೆ ಎಂದು ಬೇಂದ್ರೆಯವರು ಅಭಿಪ್ರಾಯಪಟ್ಟಿದ್ದಾರೆ. ಇವರ ಭೂದಾನಯಜ್ಞಯಾತ್ರೆ ಉತ್ತರ ಭಾರತ ಪ್ರವಾಸದ ವಿವರವನ್ನೊಳಗೊಂಡ ಮತ್ತೊಂದು ಕೃತಿ. ಒಕ್ಕಲುತನದ ಪ್ರವಾಸ ಗ್ರಂಥಗಳಲ್ಲಿ ವೀ.ಚ.ಹಿತ್ತಲಮನಿಯವರ ಶರಾವತಿಯಿಂದ ಸಾಬರಮತಿ, ವಿ.ಪುರಂದರ ರೈರವರ ನಮ್ಮ ಪ್ರವಾಸಾನುಭವ ಗಣನೀಯ ಕೃತಿಗಳು.

ಜಿ.ಪಿ.ರಾಜರತ್ನಂ ಅವರ ಚೀನಾದೇಶದ ಬೌದ್ಧ ಯಾತ್ರಿಕರು, ಪಾಹಿಯಾನನ ಕ್ಷೇತ್ರಯಾತ್ರೆ ಎಂಬುವು ವಿದೇಶೀ ಯಾತ್ರಿಕರ ಅನುಭವಗಳನ್ನು ಕುರಿತ ಅನುವಾದ ಗ್ರಂಥಗಳು. ಪ್ರಾಚೀನ ಕಾಲದಿಂದಲೂ ಭಾರತಕ್ಕೆ ಬಂದು ಹೋದ ನೂರಾರು ಪ್ರವಾಸಿಗಳ ಪ್ರವಾಸ ಕಥನವನ್ನು ಸಮಗ್ರವಾಗಿ ಕನ್ನಡಕ್ಕೆ ತಂದುಕೊಟ್ಟ ಕೀರ್ತಿ ಎಚ್.ಎಲ್.ನಾಗೇಗೌಡರಿಗೆ (ನೋಡಿ) ಸಲ್ಲುತ್ತದೆ. ಮಾರ್ಕೋಪೋಲೋನ ಪ್ರವಾಸ ಕಥನವನ್ನು ಮೊದಲು ಕನ್ನಡಕ್ಕೆ ತಂದು, ಈ ಅನುವಾದದಿಂದ ಪ್ರೋತ್ಸಾಹಿತರಾಗಿ, ದಶಕಗಳಷ್ಟು ಕಾಲ ಇಡೀ ಭಾರತದಲ್ಲಿ ಸಂಚರಿಸಿ ಹಲವು ಪ್ರಾಚ್ಯ ಕೋಶಾಗಾರಗಳಲ್ಲೂ ಗ್ರಂಥ ಹಾಗೂ ವಸ್ತು ಸಂಗ್ರಹಾಲಯಗಳಲ್ಲೂ ಹುದುಗಿದ್ದ ವರದಿಗಳನ್ನು ಹೆಕ್ಕಿ ತಂದು ಅವುಗಳ ಸಾರವನ್ನು ಭಟ್ಟಿ ಇಳಿಸಿ ಸು.200 ಜನ ವಿದೇಶೀಪ್ರವಾಸಿಗರ ಪ್ರವಾಸ ಕಥನವನ್ನು ಕನ್ನಡದಲ್ಲಿ ಪ್ರವಾಸಿ ಕಂಡ ಇಂಡಿಯಾ ಎಂಬ ಹೆಸರಿನಲ್ಲಿ ಐದು ಬೃಹತ್ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಈ ಗ್ರಂಥಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅತ್ಯಮೂಲ್ಯ ಕಾಣಿಕೆ ಕೊಟ್ಟು ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ರಾವಬಹಾದ್ದೂರ ಅವರ ನಾನು ಕಂಡ ಬಾಂಗ್ಲಾದೇಶ (1972) ಕೃಷ್ಣಾನಂದ ಕಾಮತರ ವಂಗದರ್ಶನ (1972), ಜಿ.ಎಸ್.ಶಿವರುದ್ರಪ್ಪನವರ ವಿದೇಶಗಳಲ್ಲಿ ಇಪ್ಪತ್ತೆರಡು ದಿನ (1973), ದೇಜಗೌ ಅವರ ಪ್ರವಾಸಿಯ ದಿನಚರಿ (1974), ಹ.ವೆಂ.ನಾಗರಾಜರಾವ್ ಅವರ ನವರಷ್ಯದ ನೋಟ (1974), ಶಾಂತಾದೇವಿ ಮಾಳವಾಡ ಅವರ ಶ್ರೀಗಿರಿಯಿಂದ ಹಿಮಗಿರಿಗೆ (1974)– ಇವು ಇತರ ಕೆಲವು ಮುಖ್ಯ ಪ್ರವಾಸ ಗ್ರಂಥಗಳು.

ಶಾಂತಾದೇವಿ ಮಾಳವಾಡರ ಶ್ರೀಗಿರಿಯಿಂದ ಹಿಮಗಿರಿಗೆ ಹಾಗೂ ರುಕ್ಮಿಣಿ ಗಿರಿಮಾಜಿಯವರ ಬೆಂಗಳೂರಿಂದ ಬದರಿನಾಥಕ್ಕೆ (1974), ಎಂಬ ಕೃತಿಯ ತೀರ್ಥಯಾತ್ರೆಯ ನೆವದಲ್ಲಿ ಭಾರತದ ಹಲವು ಪ್ರದೇಶಗಳ ಸಾಂಸ್ಕೃತಿಕ ಬದುಕಿನ ಪದರಗಳನ್ನು ಚಿತ್ರಿಸುತ್ತವೆ. ಹ.ವೆಂ.ನಾಗರಾಜರಾವ್ ಅವರ ನವರಷ್ಯದ ನೋಟ (1974) ಲೆನಿನ್ ನಾಯಕತ್ವದ ಮಹಾಕ್ರಾಂತಿಯ ಅನಂತರದ ರಷ್ಯದ ವಿವಿಧ ರೀತಿಯ ಸ್ಥಿತ್ಯಂತರಗಳನ್ನು ದಾಖಲಿಸುತ್ತದೆ.

ಜವಹರಲಾಲ್ ನೆಹರೂರವರು ಕೆ.ಪಿ.ಎಸ್.ಮೆನನ್‌ರವರ ಗ್ರಂಥಕ್ಕೆ ಮುನ್ನುಡಿ ಬರೆಯುತ್ತ ಹೀಗೆ ಹೇಳಿದ್ದಾರೆ: 'ಪ್ರವಾಸ ಮಾಡುವುದು ಒಳ್ಳೆಯದು; ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ'. ಕನ್ನಡಿಗರು ಈ ಹವ್ಯಾಸ ಬೆಳೆಸಿಕೊಳ್ಳಲು ಸಾಕಷ್ಟು ಸರಕಿದೆ. ಪ್ರವಾಸ ಸಾಹಿತ್ಯದ ಬೆಳೆ 80 ಮತ್ತು 90ರ ದಶಕದಲ್ಲಿ ಅಪೂರ್ವವೂ ಸಾಹಿತ್ಯ ಶ್ರೀಮಂತವೂ ಆಗಿದೆಯೆಂದು ಅಭಿಮಾನದಿಂದಲೇ ಹೇಳಬಹುದಾದಷ್ಟು ವಿಪುಲ ಸಂಖ್ಯೆ, ಭಿನ್ನ ವಿಭಿನ್ನ ದೃಷ್ಟಿಕೋನ ಹಾಗೂ ಅನುಭವದ ಪ್ರವಾಸ ಕೃತಿಗಳು ಪ್ರಕಟವಾಗಿರುವುದನ್ನು ನೋಡಬಹುದಾಗಿದೆ. ಪ್ರತಿಯೊಬ್ಬ ಲೇಖಕನೂ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಹೊಸ ನಾಡಿನ ಹೊಸ ಕತೆಯೊಂದನ್ನು ಕೊಟ್ಟಿದ್ದಾನೆ. ಕೆಲವೊಂದು ಕಥನಗಳಂತೂ ಜಾಗತಿಕ ಪ್ರವಾಸ ಸಾಹಿತ್ಯ ಕೃತಿಗಳ ಮಟ್ಟಕ್ಕೆ ನಿಲ್ಲುವಷ್ಟು ಚೆನ್ನಾಗಿವೆ. ಶೈಕ್ಷಣಿಕ ಮಹತ್ವ ಹಾಗೂ ವಿಭಿನ್ನ ಅನುಭವದ ನೆಲೆಗಳು ಇಂದು ಪ್ರವಾಸ ಸಾಹಿತ್ಯದ ಒಳಸೂತ್ರವಾಗಿ ನಿಂತಿವೆ. ಪ್ರವಾಸಾನುಭವ ಕಥನ, ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ– ಹೀಗೆ ಭಿನ್ನ ಕೋನಗಳಿಂದ ಅನ್ಯ ಸಂಸ್ಕೃತಿಯನ್ನು ಸಾಂದ್ರವಾಗಿ ತಾಗುವ ದಿಕ್ಕಿನಲ್ಲಿ ಸಾಗಿದೆ. ಈ ಪ್ರಯತ್ನದ ಹಾದಿಯಲ್ಲಿ ಪ್ರವಾಸ ಸಾಹಿತ್ಯದ ಸಂಖ್ಯೆಯೂ ಮಹಿಳಾ ಬರೆಹಗಾರ್ತಿಯರ ಸಂಖ್ಯೆಯೂ ವೃದ್ಧಿಸಿದೆ. ಸ್ವಾತಂತ್ರ್ಯೋತ್ತರ ಕಾಲದಿಂದ ಇಲ್ಲಿಯವರೆಗೆ 50ಕ್ಕೂ ಹೆಚ್ಚು ಮಹಿಳಾ ಪ್ರವಾಸ ಕಥನಗಳು ದೊರಕುತ್ತವೆ. ಪ್ರವಾಸಕ್ಕಾಗಿ ಒದಗುತ್ತಿರುವ ಕಾರಣಗಳೂ ಗಮನಾರ್ಹವಾಗಿ ಹೆಚ್ಚಾಗಿವೆ. ಯುನೆಸ್ಕೋ ಸೇವೆಗಾಗಿಯೋ ವಿವಿಧ ಸಾಹಿತ್ಯ ಸಂಘಗಳ ಮೂಲಕವೋ ಸಾಂಸ್ಕೃತಿಕ ತಂಡಗಳ ಪರವಾಗಿಯೋ ಅಕಾಡೆಮಿಗಳ ನೆರವಿನಿಂದಲೋ ಕೆಲವೊಮ್ಮೆ ಸ್ವಂತ ಖರ್ಚಿನಿಂದಲೋ ದೇಶೀಯ ಹಾಗೂ ವಿದೇಶೀಯ ಸ್ಥಳಗಳ ಪ್ರವಾಸ ಸಮೃದ್ಧವಾಗಿದೆ. (ಜಿ.ಎಸ್.ಪಿ.ಎಂ.)

ಹೊ.ಶ್ರೀನಿವಾಸಯ್ಯನವರ ನಾ ಕಂಡ ಜರ್ಮನಿ (1975), ದೇಜಗೌ ಅವರ ಆಫ್ರಿಕಾ ಯಾತ್ರೆ (1975) ಸಾಂಸ್ಕೃತಿಕ ಹಾಗೂ ಜನಪದೀಯ ನೆಲೆಗಳನ್ನು ಕುರಿತ ಅಧ್ಯಯನ ಶೀಲ ದೃಷ್ಟಿಕೋನವನ್ನು ಹೊಂದಿವೆ. ಆಶಾ ಪೋತೆದಾರ್ ಅವರ ಪೌರ್ವಾತ್ಯ ದೇಶಗಳ ಹಕ್ಕಿನೋಟ (1977) ಎಂಬ ಕೃತಿಯಲ್ಲಿ ಜಪಾನ್, ಹಾಂಕಾಂಗ್, ಥಾಯ್‌ಲೆಂಡ್‌ಗಳಲ್ಲಿ ಕಾರ್ಖಾನೆಗಳ ಕುರಿತ ಕುತೂಹಲಗಳಿವೆ. ವಿವಿಧ ಸ್ಥಳಗಳ ದರ್ಶನ ಮಾಡಿಸುವ ಅನುಪಮಾ ನಿರಂಜನ ಅವರ ಸ್ನೇಹಯಾತ್ರೆ (1978), ಕೊಡತ್ತೂರು ನಯನಾಭಿರಾಮ ಉಡುಪರ ಔತ್ತರೇಯ ಖಂಡ ದರ್ಶನ (1978), ರಾಗು ಜೋಶಿಯವರ ರಾಯಚೂರಿನಿಂದ ರಾಮೇಶ್ವರದಾಟಿ (1978) – ಇವುಗಳನ್ನು ಹೆಸರಿಸಬಹುದು. ಶ್ರೀ ಮೂಜಗಂ ಅವರ ನಮ್ಮ ವಿದೇಶಯಾತ್ರೆ (1979), ಉ.ಕಾ.ಸುಬ್ಬರಾಯಚಾರ್ ಅವರ ಸೋವಿಯತ್ ನಾಡಿನಲ್ಲಿ ಹತ್ತುದಿನಗಳು (1980), ಎಂ.ಕೆ.ಇಂದಿರಾ ಅವರ ಅನುಭವ ಕುಂಜ (1980) ಕೃತಿಗಳೂ ಇದೇ ಸಾಲಿನಲ್ಲಿ ಬರುವಂಥವು.

ಇಲ್ಲಿ ವಿಶೇಷವಾಗಿ ದಾಖಲಿಸಬೇಕಾದ ಎರಡು ಮುಖ್ಯ ಕೃತಿಗಳೆಂದರೆ ಎ.ಎನ್.ಮೂರ್ತಿರಾಯರ ಅಪರವಯಸ್ಕನ ಅಮೆರಿಕಾ ಯಾತ್ರೆ (1979) ಹಾಗೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅಮೆರಿಕದಲ್ಲಿ ಗೊರೂರು (1979). ಶೈಕ್ಷಣಿಕ ಮೌಲ್ಯವುಳ್ಳ ಪರಸಂಸ್ಕೃತಿ, ಜೀವನ ಸಂಪ್ರದಾಯಗಳನ್ನು ಅತ್ಯಂತ ನಿಕಟವೆಂಬಂತೆ ಪರಿಚಯಿಸುವ ಶೈಲಿ ಈ ಕೃತಿಗಳ ವೈಶಿಷ್ಟ್ಯ. ಹಾಸ್ಯದ ಲೇಪನವುಳ್ಳ ಅಮೆರಿಕದಲ್ಲಿ ಗೊರೂರು ನಮ್ಮನ್ನು ಹೆಚ್ಚು ಆಕರ್ಷಿಸುತ್ತದೆ. ಈ ಎರಡೂ ಕೃತಿಗಳಲ್ಲಿ ಸಾಮ್ಯವಿದೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ದೇಶಗಳ ಸಂಸ್ಕೃತಿಗಳನ್ನು ಹೋಲಿಕೆಯ ಮಾನದಂಡದಿಂದ ವಿಶ್ಲೇಷಿಸದೆ ಸಣ್ಣಸಣ್ಣ ಸಂಗತಿಗಳನ್ನೂ ನಿರ್ಲಕ್ಷಿಸದೆ, ಹೇಗೆ ಬೃಹತ್ತಾಗಿ ಬೆಳೆದಿವೆ ಎಂಬ ಪರಿಶೀಲನಾ ದೃಷ್ಟಿಯಿದೆ. ಪ್ರವಾಸ ಸಾಹಿತ್ಯಗಳ ಸಾಲಿನಲ್ಲಿ ಈ ಕೃತಿಗಳು ಭಿನ್ನವಾಗಿ ನಿಲ್ಲುವುದೇ ಈ ವೈಶಿಷ್ಟ್ಯದಿಂದ.

ಸೀತಮ್ಮ ನಂಜೇಗೌಡ ಅವರ ನಾ ಕಂಡ ಅಮೆರಿಕಾ (1981), ಸರೋಜಾ ಚಾಮರಾಜರ ಉತ್ತರ ಭಾರತ ಪ್ರವಾಸ ಕುರಿತ ಸಿಂಹಾಚಲದಿಂದ ಹೈಮಾಚಲದವರೆಗೆ (1981), ಕು.ಶಿ.ಹರಿದಾಸಭಟ್ಟರ ಜಗದಗಲ (1981), ಸರೋಜಾ ಗೋಪಾಲ್ ಅವರ ಭೂಪ್ರದಕ್ಷಿಣೆ (1982)– ಈ ಕೃತಿಗಳು ಸಾಂಸ್ಕೃತಿಕ ಭಿನ್ನತೆಗಳನ್ನು ವಿವಿಧ ನೆಲೆಗಳಲ್ಲಿ ಪರಿಚಯಿಸಿಕೊಡುತ್ತವೆ. ಎಚ್.ವಿ.ಶ್ರೀನಿವಾಸರಾವ್ ಅವರ ವೇಲ್ಸ್ ದಿನಚರಿಯಿಂದ (1982) ಹಾಗೂ ಜಿ.ಗೋಪಾಲ್ ಅವರ ಮೈಸೂರಿನಿಂದ ಮೆಕ್ಸಿಕೋಗೆ (1982) ಕೃತಿಗಳೂ ಭಿನ್ನ ಭಿನ್ನ ಸಾಂಸ್ಥಿಕ ಯೋಜನೆಗಳ ರೀತಿನೀತಿಗಳನ್ನು ಪರಿಶೀಲಿಸಿವೆ.

ಯುನೆಸ್ಕೋ ಪ್ರವಾಸದ ಈಜಿಪ್ಟ್, ಇರಾನ್, ನೈಜೀರಿಯ, ಘಾನಾ, ರೊಮೇನಿಯ, ಫಿಲಿಫೈನ್ಸ್, ಇಂಡೊನೇಷ್ಯಗಳ ಸಾಂಸ್ಕೃತಿಕ ವರದಿ ನೀಡುವ ಎಚ್.ಕೆ.ರಂಗನಾಥರ ಪರದೇಶಿಯಾದಾಗ (1983), ಕು.ಶಿ.ಹರಿದಾಸಭಟ್ಟರ ಒಮ್ಮೆ ರಷಿಯಾ ಒಮ್ಮೆ ಇಟಲಿಯಾ (1983), ವಿ.ಪುಟ್ಟಮಾದಪ್ಪನವರ ನೆಮ್ಮುಗೆಯ ನಾಡು, ಅನುಪಮಾ ನಿರಂಜನರ ಅಂಗೈಯಲ್ಲಿ ಯುರೋ ಅಮೆರಿಕಾ (1984), ಎಡಿನ್‌ಬರೋದಲ್ಲಿನ ವೈದ್ಯಕೀಯ ವ್ಯವಸ್ಥೆಯನ್ನೂ ಆಸ್ಪತ್ರೆಯ ನಿಯಮಾವಳಿಗಳನ್ನೂ ದಾಖಲಿಸುವ ಹಾಗೂ ಆ ಹಿನ್ನೆಲೆಯಲ್ಲಿ ಅಲ್ಲಿನ ಸಾಮಾಜಿಕ ಎತ್ತರ ಬಿತ್ತರಗಳನ್ನು ಪರಿಶೀಲಿಸುವ ಜಿ.ಗೋಪಾಲರ ವೈದ್ಯನ ವಿದೇಶ ಯಾತ್ರೆ (1984) ಮುಂತಾದ ಕೃತಿಗಳು ಭಿನ್ನ ಭಿನ್ನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಐತಿಹಾಸಿಕ ದೃಷ್ಟಿಕೋನಗಳಿಂದ ಆಯಾ ದೇಶಗಳನ್ನು ವಿಮರ್ಶಿಸುವ ಕೃತಿಗಳಾಗಿವೆ. ಈ ನಿಟ್ಟಿನಲ್ಲಿ ರಂಜನಭಟ್ಟ ಅವರ ಕುಬೇರ ರಾಜ್ಯದ ಚಿತ್ರವಿಚಿತ್ರ (1983) ಕೃತಿಯನ್ನು ಗಮನಿಸಬೇಕು. ಅಮೆರಿಕದ ವ್ಯಾಪಾರೀಕರಣದ ಗುಣ ಆ ಸಮಾಜದಲ್ಲಿ ಸೃಷ್ಟಿಸಿರುವ ಚಿತ್ರ ವಿಚಿತ್ರಗಳು, ಮೃತ್ಯುವಿನ ಸಮ್ಮುಖದಲ್ಲಿ ಮನುಷ್ಯನ ಭಾವ ಭಾವನೆಗಳ ಚಿತ್ರ, ಅಮೆರಿಕೆಯ ಜೀವನ ವ್ಯವಸ್ಥೆಯ ಒಳಚಿತ್ರಗಳ ಪರಿಚಯವನ್ನು ಈ ಕೃತಿ ನೀಡುತ್ತದೆ. ಅಲ್ಲಲ್ಲಿ ಬರುವ ಅಮೆರಿಕದ ನಿಸರ್ಗ ನಿರ್ಜನವಾದುದು, ಬರ್ಕಲಿ ಹೂವಿಲ್ಲದ ಹಕ್ಕಿಯಿಲ್ಲದ ಊರು ಎಂಬ ಮಾತುಗಳು ಕುಬೇರ ರಾಜ್ಯದ ನಿರ್ಜೀವ ಪರಿಸರವನ್ನು ದಾಖಲಿಸುತ್ತದೆ.

ಶಿರಂಗಲ್ಲು ಈಶ್ವರಭಟ್ಟರ ಅಮರನಾಥ ದರ್ಶನ (1984), ದೊಡ್ಡೇರಿ ವೆಂಕಟರಾವ್ ಅವರ ಏಕಾಕಿ ಪ್ರವಾಸಿ (1984), ನಾ ಕಂಡ ಪಡುವಣ, ಎಚ್.ಎಸ್.ಹರಿಶಂಕರ್ ಅವರ ಸುಂದರ ಮಾಸ್ಕೋ ಸುಂದರ ರಶಿಯಾ (1985), ಗೌತಮರ ನಯಾಗರಾಕ್ಕೆ ಐದು ಮೈಲಿ, ಜಿ.ಗೋಪಾಲರ ಬೆಂಗಳೂರಿಂದ ಬಾರ್ಸಲೋನಾಕ್ಕೆ– ಇವು ಗಮನಿಸಬೇಕಾದಂತಹ ಕೃತಿಗಳು. ನೀಳಾದೇವಿಯವರ ನಾ ಕಂಡ ಆ ಖಂಡ (1985) ಅಮೆರಿಕದ ಶ್ರೀಮಂತಿಕೆಗೆ ಕಾರಣವಾಗುವ ಅವರ ಜೀವನಶ್ರದ್ಧೆ, ಅಪಾರ ಪರಿಶ್ರಮದ ಜೀವನವನ್ನು ವ್ಯವಸ್ಥಿತ ಸಾಮಾಜಿಕ ಬದುಕು, ಕಾಲವನ್ನು ಬಳಸಿಕೊಳ್ಳುವಲ್ಲಿನ ಶಿಸ್ತು– ಇವುಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸುತ್ತದೆ. ಇದೇ ಸಾಲಿನಲ್ಲಿ ಬರುವ ನಭ ಅವರ ಕ್ಯಾಮರೂನಿನ ಬಣಗಳೊಡನೆ (1985) ಎಂಬ ಕೃತಿಯಲ್ಲಿ ಆಫ್ರಿಕದ ಕ್ಯಾಮರೂನನ್ನು ಅಲ್ಲಿಯ ಜನ ದೇವತೆಗಳ ರಥ ಎಂದು ಬಣ್ಣಿಸಿರುವುದನ್ನು ವಿವರಿಸಲಾಗಿದೆ. ಎಚ್.ಎಸ್.ರಾಘವೇಂದ್ರರಾಯರ ಜನಗಣಮನ ಎಂಬ ಕೃತಿಯಲ್ಲಿ ಪಶ್ಚಿಮ ಬಂಗಾಲವನ್ನು ಅತೀ ವ್ಯಾವಹಾರಿಕ ಜಗತ್ತು ಎಂದೂ ಅಲ್ಲಿನ ಅರಾಜಕತೆಯ ಹಿಂದೆ ಒಂದು ಜೀವಂತಿಕೆಯೂ ನಿಗೂಢ ಚೆಲುವಿಕೆಯೂ ಇರುವುದನ್ನು ಗುರುತಿಸಿದ್ದಾರೆ. ನಭ ಅವರು ಯುನೆಸ್ಕೋ ಸೇವೆಯಲ್ಲಿ (1985) ಎಂಬ ಕೃತಿಯಲ್ಲಿ ಇಂಡೊನೇಷ್ಯದ ಪ್ರಸಿದ್ಧ ಬೋರಾಂ ಬೋದೂರಿನ ಒಂಬತ್ತು ಅಂತಸ್ತುಗಳ ಬೌದ್ಧ ಸ್ತೂಪವನ್ನು ವಿಶಿಷ್ಟವಾಗಿ ವರ್ಣಿಸಿದ್ದಾರೆ. ಬೆಂಗಳೂರಿಂದ ಬಾರ್ಸಲೋನಾಕ್ಕೆ ಕೃತಿಯಲ್ಲಿ ಜಿ.ಗೋಪಾಲರು ಬಾರ್ಸಲೋನಾದ ಜನಪದ ನೃತ್ಯ, ಸಂಗೀತ ರಚನೆ, ಕೊಲಂಬಸ್ ಹಡಗಿನ ಕುತೂಹಲ ಈ ಎಲ್ಲವನ್ನೂ ವೈದ್ಯಕೀಯ ಹಾಗೂ ಸಾಮಾಜಿಕ ಗ್ರಹಿಕೆಗಳೊಂದಿಗೆ ಪರಿಭಾವಿಸಿದ್ದಾರೆ. ನಾ ಕಂಡ ಜರ್ಮನಿಯಲ್ಲಿ ಹೊ.ಶ್ರೀನಿವಾಸಯ್ಯನವರು ದಾಖಲಿಸುವ ಕೈರೋ ಮ್ಯೂಸಿಯಂ, ಟುಟುನ್ ಖಾಮೆನ್ ಕಾಲದ ಖಡ್ಗಗಳು, ಮಮ್ಮಿಗಳು, ಸ್ತ್ರೀ ಮುಖ ಮತ್ತು ಸಿಂಹದ ಮೈ ಹೊಂದಿರುವ ಸ್ಫಿಂಕ್ಸ್ – ಇವುಗಳು ವಿಶೇಷ ಅಧ್ಯಯನ ಮೂಲದ ದೃಷ್ಟಿಕೋನಗಳಾಗಿವೆ. ಇದೇ ಹಂತದಲ್ಲಿ ಬಿ.ಜಿ.ಎಲ್. ಸ್ವಾಮಿಯವರ ಹಸಿರು ಹೊನ್ನು ಕೃತಿಯನ್ನೂ (1983) ನೆನೆಯಬೇಕು. ಅಧ್ಯಯನಶೀಲತೆಯೇ ಪ್ರಧಾನ ಎಂಬಂತೆ ಸಸ್ಯಕ್ಷೇತ್ರದ ಅನ್ವೇಷಣೆಯ ದಾಖಲಾತಿ ಇದಾಗಿದೆ. ಪ್ರವಾಸ ಸಾಹಿತ್ಯದ ಹಿಂದಿರುವ ಸಿದ್ಧಾಂತಗಳ ನೆಲೆಗೊಂದು ಭಿನ್ನ ಒಳನೋಟವನ್ನು ಈ ಕೃತಿ ನೀಡುತ್ತದೆ.

90ರ ದಶಕದಲ್ಲಿ ಅನೇಕ ಮಹತ್ವದ ಪ್ರವಾಸ ಸಾಹಿತ್ಯ ಕೃತಿಗಳು ಪ್ರಕಟಗೊಂಡಿವೆ. ಲತಾಗುತ್ತಿಯವರ ಯುರೋನಾಡಿನಲ್ಲಿ (1986), ರುಕ್ಮಿಣಿಕುಮಾರಿಯವರ ಸುವರ್ಣ ಮಧುಚಂದ್ರ (1988), ವ್ಯಾಸರಾಯ ಬಲ್ಲಾಳರ ನಾನೊಬ್ಬ ಭಾರತೀಯ ಪ್ರವಾಸಿ (1989), ಸುಶೀಲಾ ಕೊಪ್ಪರ ಅವರ ಪಡುವಣ ಪತ್ರಮಾಲೆ (1989), ವಿ.ಕೃ.ಗೋಕಾಕರ ಪ್ರವಾಸ ಸಾಹಿತ್ಯ (1988), ರಾ.ಯ.ಧಾರವಾಡಕರರ ನಾಕಂಡ ಅಮೆರಿಕೆ (1988), ಜಿ.ಎಸ್.ಕಾಪಸೆ ಅವರ ಶಾಲ್ಮಲೆಯಿಂದ ಗೋದಾವರಿವರೆಗೆ (1989), ನಭ ಅವರ ನಾ ಕಂಡ ಕೆನ್ಯಾ (1986) ಮುಂತಾದುವುಗಳನ್ನು ಹೆಸರಿಸಬಹುದು.

ಯಜ್ಞಾವತಿ ಕೇಶವ ಕಂಗೆನ್ ಅವರ ಸ್ಮರಣೀಯ ಪ್ರವಾಸ (1991), ಹೇಮಲತಾ ಮಹಿಷಿ ಅವರ ಯುರೋದರ್ಶನ (1991), ಶಮಂತರ ನೇಪಾಳದ ಹಿಮಾಲಯ ಚಾರಣ ಅನುಭವ ನೀಡುವ ಗಿರಿಸ್ನೇಹ (1992), ಶಿವಲಿಂಗಮ್ಮ ಕಟ್ಟಿಯವರ ಲಂಡನ್ ಭೇಟಿ ಕುರಿತ ಪಡುವಣ ಪಯಣ (1993), ಪದ್ಮಾಶೆಣೈ ಅವರ ಅಮೆರಿಕವಾಸ – ಪ್ರವಾಸ (1993), ಬಿ.ಕೆ.ನರ್ಮದ ಅವರ ಸುಂದರಸ್ವಪ್ನ, ಅನಸೂಯಾ ರಾವ್ ಅವರ ಸುಂದರ ಕರ್ನಾಟಕ, ಜಯಾ ರಾಜಶೇಖರ ಅವರ ಶ್ರೀಲಂಕಾ – ಇಂಗ್ಲೆಂಡ್ ಅಮೆರಿಕಾ ಪ್ರವಾಸ ಕುರಿತ ಮರಳಿ ಬಂದ ಮಧುರ ಮಾಸ, ಟಿ.ಆರ್.ನಾಗಪ್ಪನವರ ದೇಶ ನೋಡು ಕೋಶ ಓದು (1992), ಜಾನಕಿ ಬ್ರಹ್ಮಾವರ ಅವರ ತಿರುಗಾಟದ ತಿರುಳು, ನನ್ನ ಪ್ರವಾಸ ಕಥನ ಮೊದಲಾದವು ಪ್ರವಾಸ ಸಾಹಿತ್ಯ ಪಟ್ಟಿಯಲ್ಲಿನ ಪ್ರಮುಖ ಸೇರ್ಪಡೆಗಳು.

ಉಳಿಯ ದನಿ ಕಡಲಮೊರೆ (1994) ಪಿ.ವಿ.ನಾರಾಯಣ ಅವರ ಒರಿಸ್ಸ ರಾಜ್ಯ ಪ್ರವಾಸ ಕುರಿತದ್ದು. ಎಚ್.ಎಸ್.ಮುಕ್ತಾಯಕ್ಕನವರ ಮದಿರೆಯ ನಾಡಿನಲ್ಲಿ ಎಂಬ ಕೃತಿಯಲ್ಲಿ ಗೋವೆಯ ಭೇಟಿಯ ಚಿತ್ರಣವಿದೆ. ದೇವಕೀ ಮೂರ್ತಿ ಅವರ ಯುರೋ–ಅಮೆರಿಕಾದ ಇಣುಕುನೋಟ (1994), ಪದ್ಮಗುರುರಾಜ್ ಅವರ ಕಾಂಗರೂಗಳ ನಾಡಿನಲ್ಲಿ (1995), ಲೀಲಾ ಮಿರ್ಲೆಯವರ ಪ್ರವಾಸ (1995), ಆರ್.ನಂಜುಂಡೇಗೌಡರ ಕೆರೆಬಿಯನ್ ಪ್ರವಾಸ, (1996)– ಈ ಕೃತಿಗಳು ನಮ್ಮ ಕುತೂಹಲವನ್ನು ತಣಿಸುತ್ತವೆ. ಕೆರೆಬಿಯನ್ ದ್ವೀಪದ ಸೊಬಗು, ಕಪ್ಪುಜನರ ಬದುಕು, ಕಾರ್ನವಾಲ್ ಹಬ್ಬ, ಉತ್ತರ ಮತ್ತು ದಕ್ಷಿಣ ಅಮೆರಿಕಗಳ ನಡುವಣ ಭಾಗದ ಈ ದ್ವೀಪ ಸಮುಚ್ಚಯದಲ್ಲಿ ರೂಪುಗೊಂಡ ಬಗೆಯನ್ನು ಕೆರೆಬಿಯನ್ ಪ್ರವಾಸ ಎಂಬ ಕೃತಿ ಮನೋಜ್ಞವಾಗಿ ವಿಶ್ಲೇಷಿಸುತ್ತದೆ. ಹಿ.ಚಿ.ಬೋರಲಿಂಗಯ್ಯನವರ ಗಿರಿಜನ ನಾಡಿಗೆ ಪಯಣ (1991) ಕೃತಿ ಭಾರತದ ಎಲ್ಲೆಕಟ್ಟಿನೊಳಗೆ ಕರಾವಳಿಯ ಸುಂದರ ಗಿರಿಶಿಖರ ಶ್ರೇಣಿಗಳು, ಹಸುರು, ಸಾಗರ ನಡುಗಡ್ಡೆಯ ಸೊಬಗು, ಹವಳ ಕಣಿವೆಯ ಸೌಂದರ್ಯ, ಗೊಂಡರ ಜೀವನ–ಸಂಸ್ಕೃತಿ–ಪರಿಚಯ– ಹೀಗೆ ಅನೇಕ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ಜನಪದ ಮಾಹಿತಿಯ ದಾಖಲೆಯಾಗಿದೆ.

ಜಿ.ಎನ್.ಮೋಹನ ಅವರ ನನ್ನೊಳಗಿನ ಹಾಡು ಕ್ಯೂಬಾ (2000) ಒಂದು ವಿಶಿಷ್ಟ ರೀತಿಯ ಪ್ರವಾಸ ಕೃತಿ. ಹೊಟ್ಟೆಯಲ್ಲಿ ಅಳುವಿಟ್ಟುಕೊಂಡು ಸದಾ ನಾದದ ಅಲೆಗಳ ಮೇಲೆ ನಿಂತಿರುವ ದೇಶ ಕ್ಯೂಬಾ ಎಂದು ಲೇಖಕರು ಹೇಳುವ ಮಾತು ಅರ್ಥಪೂರ್ಣವಾಗಿದೆ. ಕ್ರಾಂತಿ ನಮ್ಮನ್ನು ಮನುಷ್ಯರನ್ನಾಗಿ ಮಾಡುತ್ತದೆ ಎಂದಿದ್ದ ಚೆಗೆವಾರನ ಮಾತಿನಂತೆ ಸೋಲುಗಳನ್ನು ಏಣಿ ಮಾಡಿಕೊಂಡು ಮೇಲೇರಿದ ಕ್ಯೂಬಾದ ದಣಿವಿನ ಕತೆಯನ್ನು ಇಲ್ಲಿ ಲೇಖಕರು ಆಪ್ತ ಧಾಟಿಯಲ್ಲಿ ವರ್ಣಿಸಿದ್ದಾರೆ.

ಕೆ.ಅನಂತರಾಮು ಅವರ ದಕ್ಷಿಣದ ಸಿರಿನಾಡು (1997), ಇಸ್ರೇಲಿನ ಸಾಧನೆಗಳ ರೋಚಕ ಇತಿಹಾಸವನ್ನೊಳಗೊಂಡ ಮತ್ತಿಹಳ್ಳಿ ನಾಗರಾಜರ ಮರುಭೂಮಿ ಚಿಗುರಿತು (2000), ಎಸ್.ಎಲ್.ಕುಲಕರ್ಣಿ ಯವರ ಭಾರತ ದರ್ಶನ (2000), ಭಾರತಿ ಭಟ್ ಅವರ ನನ್ನ ಬೆಲ್ಜಿಯಂ ಪ್ರವಾಸ (2000), ಕೆ.ಜಿ.ಗುರುಮೂರ್ತಿ ಅವರ ಅಮೆರಿಕೆಯಲ್ಲಿ ಪ್ರವಾಸ (2000), ವಿಜಯಾ ಸುಬ್ಬರಾಜ್‌ರ ಸ್ವರ್ಗ ದ್ವೀಪದ ಕನಸಿನ ಬೆನ್ನೇರಿ ಮುಂತಾದ ಕೃತಿಗಳು ವಿಷಯನಿರೂಪಣೆ, ಕುತೂಹಲದ ವರ್ಣನೆಗಳಿಂದ ನಮ್ಮ ಗಮನವನ್ನು ಸಾಕಷ್ಟು ಸೆಳೆಯುತ್ತವೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ (1990) ಎಂಬ ಕೃತಿಗಳು ಪ್ರವಾಸ ಸಾಹಿತ್ಯದ ಏಕಮುಖ ಏಕತಾನವನ್ನು ಮೀರಿದ ಕೃತಿಗಳು. ಇಲ್ಲಿನ ಕಥನತಂತ್ರ ಹೊಸ ರೀತಿಯ ವಸ್ತು, ಶೋಧನೆ, ಅನುಭವದ ಆಳ ವಿಸ್ಮಯಗೊಳಿಸುವಂಥವು. ಜಿ.ಟಿ.ನಾರಾಯಣರಾಯರ ಸಪ್ತ ಸಾಗರದಾಚೆಯೆಲ್ಲೋ (1999) ವಿಜ್ಞಾನ ವಾಙ್ಮಯದ ಮತ್ತೊಂದು ಮಗ್ಗುಲಿನ ಪರಿಶೋಧನೆಯೇ ಆಗಿದೆ. ಎಸ್.ಸಂಧ್ಯಾ ಅವರು ಹಲವು ಕಾಲಗಳ ನಾಡು– ಗುಜರಾತು (1997), ಕಾಶ್ಮೀರದ ತಲ್ಲಣದ ಚಿತ್ರ ನೀಡುವ ಶಮಂತ ಅವರ ಹಿಮದಗ್ನಿ (1996), ಜಯಾ ಕಲ್‌ಬಾಗಲ್ ಅವರ ಅಮೆರಿಕದಲ್ಲಿ 67ರ ಹುಟ್ಟುಹಬ್ಬ, ಸಿದ್ಧರಾಮ ಹೊನ್ನಲ್ ಅವರ ಪಂಜಾಬು ಕುರಿತ ಪಂಚನದಿಗಳ ನಾಡಿನಲ್ಲಿ (1996), ಶಂಕರ ಪಾಟೀಲರ ಹಿಮಾಚಲದ ಹಿನ್ನೆಲೆಯಲ್ಲಿ (1997), ಪಿ.ವಿ.ಕೃಷ್ಣಮೂರ್ತಿಯವರ ವಿಂಧ್ಯ ನರ್ಮದೆಯರ ನಾಡಿನಲ್ಲಿ (1999), ಎಚ್.ಎಸ್.ಗೋಪಾಲರಾವ್ ಅವರ ಗೋದಾವರಿಯ ಆಸುಪಾಸಿನಲ್ಲಿ (1999), ದೇಜಗೌ ಅವರ ಸ್ವಿಟ್ಸರ್ಲೆಂಡ್ ಕುರಿತ ನಿಚ್ಚ ಹಸುರಿನ ನಾಡಿನಲ್ಲಿ, ವಸಂತೀ ಚಂದ್ರರ ಕನಕಕ್ಷೇತ್ರ–ಕರ್ನಾಟಕ ಭಾಗ –1 (1999), ನೀಳಾದೇವಿಯರ ಮಕ್ಕಳಿಗೆಂದೇ ಬರೆದ ಸಬಲನ ವಿದೇಶ ಪ್ರವಾಸ (1997), ಕುಲಶೇಖರಿ ಅವರ ಅಮೆರಿಕ ಕುರಿತ ಬೊಗಸೆ ಬುತ್ತಿ, ಶ್ವೇತಾಕೋಟಿ ಅವರ ಪುಟಾಣಿಯ ಕಂಗಳಲ್ಲಿ ನೂರು ಬಣ್ಣಗಳು (1997), ವಿಜಯಾದಬ್ಬೆ ಅವರ ಒರಿಸ್ಸ ಕುರಿತ ಉರಿಯ ಚಿಗುರ ಉತ್ಕಲೆ (1998), ದೊಡ್ಡಿ ಸಾರಾಬಾಯಿ ಅವರ ತೀರ್ಥಕ್ಷೇತ್ರ ಮಹಿಮೆ (1998), ಬಿ.ಎನ್.ಸುಮಿತ್ರಾಬಾಯಿ ಅವರ ಅಸ್ಸಾಂ ಕುರಿತ ಬ್ರಹ್ಮಪುತ್ರದ ಕಣಿವೆಯಲ್ಲಿ, ವನಜ ರಾಜನ್ ಅವರ ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮ (1998), ಶಿವಲಿಂಗಮ್ಮ ಕಟ್ಟಿ ಅವರ ಬೆಳಕಿನೆಡೆಗೆ (1998), ಲೀಲಾವತಿ ದೇವದಾಸರ ಏಸುವಿನ ತಾಣವಾದ ಇಸ್ರೇಲ್ ಕುರಿತಾದ ಪವಿತ್ರನಾಡಿನಲ್ಲಿ ಪ್ರವಾಸ (1999), ಶಾರದಾ ಹೆಮ್ಮಿಗೆ ಅವರ ಕರ್ನಾಟಕದ ಒಂದು ನಿರ್ದಿಷ್ಟ ದಿಕ್ಕಿನ ಹಳ್ಳಿಯ ಸುತ್ತಮುತ್ತ (1999), ನೇಮಿಚಂದ್ರರು ಹೇಮಲತಾ ಮಹಿಷಿಯವರೊಂದಿಗೆ ಕೈಗೊಂಡ ಯುರೋಪಿನ ಪ್ರವಾಸ

ವಿಶೇಷವಾಗಿ ಮಹಿಳಾ ಸಾಹಿತಿ, ವಿಜ್ಞಾನಿ, ಕಲೆಗಾರರುಗಳ ಬಗೆಗಿನ ವಿವರಗಳನ್ನೂ ಒಳಗೊಂಡ ಒಂದು ಕನಸಿನ ಪಯಣ (1999), ವಸಂತೀ ಚಂದ್ರರ ಅಮೆರಿಕ ಕುರಿತ ಭೋಗಭೂಮಿಯ ಮಡಿಲಲ್ಲಿ ಭಾಗ–1 (1999), ಪ್ರವೀಣ್ ಫರ್ನಾಂಡಿಸ್ ಅವರ ಜಪಾನ್ ಕುರಿತ ಕಣ್ಣು ಕುಕ್ಕುವ ಜಪಾನ್ (1998), ಎಸ್.ವಿ.ಶ್ರೀನಿವಾಸರಾವ್ ಅವರ ಅಮೆರಿಕ ಕುರಿತ ಇಣುಕು ನೋಟ (1997), ಲತಾಗುತ್ತಿ ಅವರ ನಾ ಕಂಡ ಅರೇಬಿಯಾ (1995) ಎಸ್.ಕೇಶವಮೂರ್ತಿ ಅವರ ನೇಪಾಳ ಯಾತ್ರೆ (2000), ವಿಜಯಾ ಸುಬ್ಬರಾವ್ ಅವರ ಅಂಡಮಾನಿನ ಪ್ರವಾಸ ಕುರಿತ ಸ್ವರ್ಗದ್ವೀಪದ ಕನಸಿನ ಬೆನ್ನೇರಿ (2000), ಇಂದಿರಾ ಶಿವಣ್ಣ ಅವರ ಹಾಲೆಂಡ್‌ನಿಂದ ಲಂಡನ್‌ವರೆಗೆ (2001), ಎಸ್.ಕೇಶವಮೂರ್ತಿ ಅವರ ಉತ್ತರಾಖಂಡದ ಯಾತ್ರೆ (2000), ಬಿ.ವಿ.ನಾಗರಾಜರ ಕೆನಡಾದಲ್ಲಿ ಬಿ.ವಿ.ದಿನಚರಿ (1999), ದೇಜಗೌ ಅವರ ಅಲಾಸ್ಕ ಪ್ರವಾಸ ಕುರಿತ ಜಗತ್ತಿನ ನಡುನೆತ್ತಿಯ ಮೇಲೆ (1999), ಮುಂತಾದ ಕೃತಿಗಳನ್ನು ಗಮನಿಸಿದರೆ ವಿಶೇಷವಾಗಿ ಈ ಅವಧಿಯಲ್ಲಿ ಬಂದ ಮಹಿಳಾ ಪ್ರವಾಸ ಕಥನಕಾರರ ಸಂಖ್ಯೆ, ಸಾಧನೆ, ಕೌಶಲ ಗಮನಸೆಳೆಯುವಂಥದ್ದು.

2001–2003ರ ಅವಧಿಯಲ್ಲಿಯೂ ಹಲವು ಕೃತಿಗಳು ಈ ಕ್ಷೇತ್ರದಲ್ಲಿ ಪ್ರಕಟವಾಗಿವೆ. ರಹಮತ್ ತರೀಕೆರೆ ಅವರ ಅಂಡಮಾನ್ ಕನಸು (2001), ಬಿ.ಎಸ್.ಸಣ್ಣಯ್ಯನವರ ನಾನೂ ಹೋಗಿದ್ದೆ ಅಮೆರಿಕೆಗೆ (2001), ಜಲಜಾ ಗಂಗೂರ್‌ರವರ ಅವನಿಯ ಅಪ್ಸರೆ ಅಮೆರಿಕ (2001), ಸುಧಾಮೂರ್ತಿ ಅವರ ಕಾವೇರಿಯಿಂದ ಮೆಕಾಂಗಿಗೆ (2001), ಹಕ್ಕಿಯ ತೆರದಲಿ (2001), ಆರ್ಯಾಂಬ ಪಟ್ಟಾಭಿ ಅವರ ವಿದೇಶ ಪ್ರವಾಸ (2001), ಸಾರಾ ಅಬೂಬಕರ್ ಅವರ ಐಷಾರಾಮದ ಆಳದಲ್ಲಿ (2001), ಪಿ.ಎಂ.ಹೆಗ್ಗಡೆಯವರ ಆಲ್ಮನೆಯಿಂದ ಆ್ಯನ್ ಆರ್ಬರ್‌ಗೆ (2002), ಚಂದ್ರಶೇಖರ ಆಲೂರರ ಅಮೆರಿಕಾದಲ್ಲಿ ಆಲೂರು (2002), ಕೃಷ್ಣಾನಂದ ಕಾಮತರ ನಾನೂ ಅಮೆರಿಕೆಗೆ ಹೋಗಿದ್ದೆ (2002), ಕೆ.ರಾಮಣ್ಣ ಅವರ ಜಗವ ಸುತ್ತಿ ನಲಿ – ಜನರ ನೋಡಿ ಕಲಿ (2002), ಶಾಂತಾ ನಾಗರಾಜರ ಸಿಂಗಾಪುರ, ಮಲೇಷಿಯಾ ಕುರಿತ ಯಾನ ಸಂಸ್ಕೃತಿ (2002)– ಅಜ್ಜಂಪುರ ಕೃಷ್ಣಸ್ವಾಮಿಯವರ ಜಪಾನ್ (2002), ಸುಮನಾ ವಿಶ್ವನಾಥ್‌ರವರ ಮತ್ತೂರರೊಂದಿಗೆ ಕಾಶಿಯಾತ್ರೆ (2002), ಕೆ.ಸಿ.ಲಕ್ಷ್ಮೀನರಸಿಂಹಯ್ಯ ಅವರ ನಾ ಕಂಡ ಭಾರತ (ವಿಸ್ತೃತ–2002), ಜಗದಂಬಾ ಮಲ್ಲೇದೇವರು ಅವರ ಪಯಣಿಗಳಾಗಿ ಪಶ್ಚಿಮದೆಡೆಗೆ (2002), ನಾಗತಿಹಳ್ಳಿ ಚಂದ್ರಶೇಖರ ಅವರ ಅಮೆರಿಕಾ ಅಮೆರಿಕಾ (2002), ಪಿ.ವಿ.ನಾರಾಯಣ ಅವರ ಭುವಿಯ ಬಸಿರಿಗೆ ಪಯಣ (2002), ವಾಣಿರಾವ್ ಅವರ ಹಿಮಗಿರಿಯ ಶಿಖರದ ಮೇಲೆ (2002), ಡಿ.ವಿ.ಗುರುಪ್ರಸಾದರ ಯೂರೋಪಿನಿಂದ ಆಸ್ಟ್ರೇಲಿಯಾವರೆಗೆ ವಿಶ್ವಪರ್ಯಟನಾ ದಿನಚರಿ (2002), ಕೆ.ಮರುಳಸಿದ್ಧಪ್ಪ ಅವರ ನೋಟ ನಿಲುವು (2002), ಪ್ರಭಾಮೂರ್ತಿಯವರ ಹಸಿರು ಹವಳ (2002), ಜೀ.ವಿ.ಕುಲಕರ್ಣಿಯವರ ಜೀವಿ ಕಂಡ ಅಮೆರಿಕ (2002), ಸಿದ್ಧರಾಮ ಹೊನ್ಕಲ್ ಅವರ ಕನ್ಯಾಕುಮಾರಿಯಿಂದ ಹಿಮಾಲಯದೆಡೆಗೆ (2002), ಎಸ್.ಪಿ.ಪದ್ಮಪ್ರಸಾದ್ ಅವರ ರಾಜಾಸ್ಥಾನದ ಜೈನ ಮಂದಿರಗಳು (2002), ವೆಂಕಟೇಶ ಮಾಚಕನೂರು ಅವರ ಥೇಮ್ಸ್‌ನಿಂದ ಟೈಬರ್‌ವರೆಗೆ (2002), ಸುನೀತಾ ಎಂ.ಶೆಟ್ಟಿ ಅವರ ಪ್ರವಾಸಿಯ ಹೆಜ್ಜೆಗಳು (2002), ವಸಂತರಾಜ್.ಎನ್.ಕೆ. ಅವರ ಅಮೆರಿಕಾದೊಳಗೊಂದು ಇಣುಕು (2001), ಮೀನಾ ಮೈಸೂರು ಅವರ ಫ್ರಾನ್ಸ್‌ಪ್ರವಾಸದ ಎತ್ತಣಿಂದೆತ್ತ (2003), ಮೊಳಕಾಲ್ಮೂರು ಶ್ರೀನಿವಾಸಮೂರ್ತಿಯವರ ಬುದ್ಧನೊಡನೆ ಇಪ್ಪತ್ತು ದಿನಗಳು (2003) ಎಚ್.ಎಂ.ನಾಗರಾಜುರವರ ಸೂರ್ಯ ಮುಳುಗದ ಸಾಮ್ರಾಜ್ಯದಲ್ಲಿ ಮೊದಲಾದ ಕೃತಿಗಳು ನಿರಂತರವಾಗಿ ಹುಲಸಾಗಿ ಬೆಳೆಯುತ್ತ ಸಾಗಿರುವ ಪ್ರವಾಸ ಸಾಹಿತ್ಯದ ದಿಕ್ಸೂಚಿಯಾಗಿದೆ ಎನ್ನಬಹುದು.

ಪ್ರವಾಸ ಸಾಹಿತ್ಯದ ಹಲವು ಉತ್ತಮ ಅನುವಾದ ಗ್ರಂಥಗಳು ಕನ್ನಡಕ್ಕೆ ಬಂದಿವೆ. ಬಂಗಾಲಿ ಲೇಖಕ ಪ್ರಬೋಧಕುಮಾರ ಸನ್ಯಾಲರ ಪ್ರವಾಸ ಪ್ರಬಂಧವನ್ನು ಎಂ.ಕೆ.ಭಾರತೀರಮಣಾಚಾರ್ಯರು ಮಹಾಪ್ರಸ್ಥಾನದ ಪಥದಲ್ಲಿ ಎಂಬ ಹೆಸರಿನಿಂದ ಕನ್ನಡಕ್ಕೆ ತಂದಿದ್ದಾರೆ. ಇದು ಒಂದು ಉತ್ತಮ ಕಾದಂಬರಿಯಂತಿದೆ. ಸಾಮ್ಯುಯಲ್ ಎಲಿಯೆಟ್ ಮಾರಿಸನ್‌ರವರ ನಾವಿಕ ಕ್ರಿಸ್ಟೋಫರ್ ಕೊಲಂಬಸ್ ಗ್ರಂಥವನ್ನು ಎಚ್.ವಿ.ನಾರಾಯಣ ರಾಯರು, ಥಾರ್ ಹೆಯರ್ ಡಾಹಾಲ್‌ರ ಕಾಂಟಿಕಿಯ ಸಾಹಸವನ್ನು ಎಚ್.ಎನ್.ಮಾಧವರಾವ್ ಅವರೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಸ್ವಾಮಿ ವಿವೇಕಾನಂದರ ಕೊಲಂಬೊ ಇಂದ ಆಲ್ಮೋರಕ್ಕೆ ಮತ್ತು ಜವಹರಲಾಲ್ ನೆಹರುರವರ ಮಗಳಿಗೆ ತಂದೆಯ ಓಲೆಗಳು ಎಂಬೆರಡು ಕೃತಿಗಳು ಕೂಡ ಕನ್ನಡದಲ್ಲಿ ಪ್ರಕಟವಾಗಿದ್ದು ಪ್ರವಾಸ ಸಾಹಿತ್ಯದ ಹರವಿಗೂ ಬರಬಹುದಾದ ಗ್ರಂಥಗಳಾಗಿವೆ. ಪ್ರದೀಪ ಕೆಂಜಿಗೆಯವರ ಅದ್ಭುತಯಾನ (1995), ಬಿ.ಜಿ.ಎಲ್.ಸ್ವಾಮಿ ಅವರ ನಡೆದಿಹೆ ಬಾಳೌ ಕಾವೇರಿ (2001) ಎಂಬ ಕೃತಿಗಳನ್ನು ಈ ನಿಟ್ಟಿನಲ್ಲಿ ಉಲ್ಲೇಖಿಸಬಹುದು. (ಜಿ.ಎನ್.)

**ಕನ್ನಡದಲ್ಲಿ ಭಾವಗೀತೆ :** ಭಾವಗೀತೆ ಎಂಬ ಸಾಹಿತ್ಯ ರೂಪ ಮೂಲತಃ ಕನ್ನಡದ್ದಲ್ಲ. ಮೊದಲು ಗ್ರೀಕ್ ಭಾಷೆಯಲ್ಲಿ ಪ್ರಚುರವಾದ ಈ ಸಾಹಿತ್ಯರೂಪ ಅನೇಕ ಶತಮಾನಗಳ ಅನಂತರ ಇಂಗ್ಲಿಷ್ ಭಾಷೆಯಲ್ಲಿ ಸಮೃದ್ಧವಾಗಿ ಬೆಳೆಯಿತು. ಇಂಗ್ಲಿಷ್ ಸಾಹಿತ್ಯದ ಪ್ರಭಾವ ಕನ್ನಡದ ಮೇಲೆ ಆದಂತೆ ಅಲ್ಲಿ ಲಿರಿಕ್ ಎಂದು ಕರೆಯುತ್ತಿದ್ದ ಈ ವಿಧಾನವನ್ನು ಇಲ್ಲಿ ಸ್ವೀಕರಿಸಿ ಭಾವಗೀತೆ ಎಂದು ಕರೆಯಲಾಯಿತು. ಕನ್ನಡದ ಅನೇಕ ಪ್ರತಿಭಾಶಾಲಿ ಕವಿಗಳು ವಿಪುಲ ಸಂಖ್ಯೆಯಲ್ಲಿ ಶ್ರೇಷ್ಠಮಟ್ಟದ ಭಾವಗೀತೆಗಳನ್ನು ರಚಿಸಿದ್ದಾರೆ. ಕಾದಂಬರಿ ಕ್ಷೇತ್ರವನ್ನು ಬಿಟ್ಟರೆ ಇಷ್ಟು ಪುಷ್ಟವಾಗಿ ಬೆಳೆದ ಮತ್ತೊಂದು ಸಾಹಿತ್ಯ ಪ್ರಕಾರ ಹೊಸಗನ್ನಡದಲ್ಲಿ ಇಲ್ಲ.

ಕನ್ನಡಿಗರಿಗೆ ಈ ಸಾಹಿತ್ಯ ಪ್ರಕಾರವನ್ನು ಸ್ಫೂರ್ತಿದಾಯಕವಾದ ರೀತಿಯಲ್ಲಿ ಪರಿಚಯ ಮಾಡಿಸಿದ ಕೀರ್ತಿ ಐದಾರು ಜನ ಸಾಹಿತಿಗಳಿಗೆ ಸಲ್ಲುವುದಾದರೂ ಅವರಲ್ಲಿ ಅಗ್ರಗಣ್ಯ ರಾದವರು ಬಿ.ಎಂ. ಶ್ರೀಕಂಠಯ್ಯನವರು. ಅಭಿನಂದನೀಯವಾದ ಈ ಕಾರ್ಯದಲ್ಲಿ ತೊಡಗಿದ್ದ ಇತರ ಸ್ಮರಣೀಯ ವ್ಯಕ್ತಿಗಳೆಂದರೆ ಎಸ್.ಜಿ. ನರಸಿಂಹಾಚಾರ್ಯರು, ಪಂಜೆ ಮಂಗೇಶರಾಯರು, ಹಟ್ಟಿಯಂಗಡಿ ನಾರಾಯಣರಾಯರು, ಎಂ.ಗೋವಿಂದ ಪೈ ಅವರು ಹಾಗೂ ಡಿ.ವಿ.ಗುಂಡಪ್ಪನವರು. ಇವರಲ್ಲಿ ಅನೇಕರು ಅನುವಾದಕ್ಕೆ ಕನ್ನಡದ ಹಳೆಯ ಛಂದೋರೂಪಗಳನ್ನೇ ಬಳಸಿಕೊಂಡರು. ಇವರಲ್ಲಿ ಪ್ರಾಸತ್ಯಾಗದ ಧೀರ ನಿರ್ಧಾರವನ್ನು ಕೈಗೊಂಡವರು ಗೋವಿಂದ ಪೈ ಅವರು. 1911ರ ಸುಮಾರಿಗೆ ಅವರು ಪ್ರಾಸವನ್ನು ಬಿಡುವುದಾಗಿ ತೀರ್ಮಾನಿಸಿದರು. ಅಂದಿನ ದಿನಕ್ಕೆ ಅದು ಸಾಹಸದ ಮಾತು. ಹೀಗೆ ಮಾಡಿದುದಕ್ಕೆ ಅವರು ಕೊಟ್ಟ ಕಾರಣ 'ಕನ್ನಡಕ್ಕೆ ಪ್ರಾಸವೇನು ವೇದವಾಕ್ಯಮೂ ಅಲ್ಲ, ಶಾಶ್ವತವೂ ಅಲ್ಲ, ಅದನ್ನು ಬೇಕಾದಾಗ ಬೇಕಾದಂತೆ ಬಿಟ್ಟುಬಿಡಬಹುದು' ಎಂದು. ಈ ಪ್ರಾಸತ್ಯಾಗ ಕವಿಯ ಭಾವಗಳು ನಿರರ್ಗಳವಾಗಿ ಹರಿಯಲು ಅವಕಾಶ ಮಾಡಿಕೊಟ್ಟಿತು.



ಕುವೆಂಪು

ಹಟ್ಟಿಯಂಗಡಿ ನಾರಾಯಣರಾಯರು 1900ಕ್ಕೆ ಮುಂಚೆಯೇ ಕಾಲಿನ್ಸ್, ಗ್ರೇ, ಟೈಲರ್, ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ಲಾಂಗ್‌ಫೆಲೋ, ವ್ಹಿಟ್ಟಿಯರ್ ಮತ್ತು ಎಮರ್ಸನ್ ಮುಂತಾದ ಕವಿಗಳ ಕವನಗಳನ್ನು ಅನುವಾದ ಮಾಡಿದ್ದರು. ಆದರೆ ಇವರ ಕವನಗಳು ಅಚ್ಚಾದದ್ದು ಮಾತ್ರ ಕೆಲವು ವರ್ಷಗಳ ಅನಂತರ. ಇವರಲ್ಲಿ ಮೂಲದ ಭಾವಗಳನ್ನು ಸಂಗ್ರಹಿಸುವ ಪ್ರವೃತ್ತಿ ಇದ್ದುದರಿಂದ ಮೂಲದ ಎಷ್ಟೋ ಸುಂದರವಾದ ಭಾವಗಳು ಅನುವಾದದಲ್ಲಿ ಹಾರಿಹೋಗಿವೆ. ಅನುವಾದ ಬಹುಮಟ್ಟಿಗೆ ವಿಫಲವಾಗಿದೆ. 'ಆದರೆ ಈ ಪ್ರಥಮ ಪ್ರಯತ್ನದ ಸೋಲಿಗೂ ಚಾರಿತ್ರಿಕವಾಗಿ ವಿಶೇಷವಾದ ಪ್ರಾಮುಖ್ಯತೆಯಿದೆ. ಇದರ ಹಿಂದೆ ಕನ್ನಡದ ಏಳಿಗೆಗಾಗಿ, ಕನ್ನಡದಲ್ಲಿ ನೂತನ ಮಾರ್ಗವನ್ನು ತೆರೆಯುವುದಕ್ಕಾಗಿ ಆಳವಾಗಿ ಆಲೋಚಿಸುವ ನಿರಂತರವೂ ಶ್ರಮಿಸುವ' ಚೇತನಮೊಂದು ಇದೆ ಎಂಬುದನ್ನು ನಾವು ಮರೆಯುವಂತಿಲ್ಲ.

ಆಧುನಿಕ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸದೊಂದು ಹೆದ್ದಾರಿಯನ್ನು ತೆರೆದು ಚಿರಂಜೀವಿಯಾಗುವ ಸತ್ವವನ್ನು ತಳೆದಿರುವ ಕೃತಿ ಬಿ.ಎಂ.ಶ್ರೀ.ಅವರ ಇಂಗ್ಲಿಷ್ ಗೀತಗಳು. ಇಂಗ್ಲಿಷ್‌ನ ನ್ಯಾಷ್, ಬ್ರಿಡ್ಜಸ್, ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ಕೋಲ್‌ರಿಜ್, ಲೇಡಿ ಲಿಂಡ್ಸೆ ಮೊದಲಾದ ಕವಿಗಳ ಕವನಗಳನ್ನು ಸೊಗಸಾದ ರೀತಿಯಲ್ಲಿ ಶ್ರೀಯವರು ಅನುವಾದ ಮಾಡಿದ್ದಾರೆ. ಇಂಗ್ಲಿಷ್ ಗೀತಗಳು ಸಂಕಲನವನ್ನು ಸ್ವಾಗತಿಸುತ್ತ 'ಆಂಗ್ಲೇಯ ಸಾಹಿತ್ಯವನ್ನು ಕಾಣದೆ ಇರುವವರಿಗೆ ಆ ಸಾಹಿತ್ಯದ ಐಶ್ವರ್ಯವೆಂಥದೆಂದು ತಿಳಿಯುವುದಕ್ಕೆ ಕನ್ನಡದಲ್ಲಿ ಇಂಥ ಒಂದು ಭಾಷಾಂತರ ಬೇಕಾಗಿತ್ತು. ಈ ಅತ್ಯವಶ್ಯಕವಾದ ಕಾರ್ಯವನ್ನು ಕೈಗೊಂಡಿದ್ದಕ್ಕಾಗಿ ಕನ್ನಡಿಗರು ಗ್ರಂಥಕರ್ತರನ್ನು ವಂದಿಸಬೇಕಾಗಿದೆ. ಶ್ರೀಕಂಠಯ್ಯನವರು ಪ್ರಯೋಗಿಸಿರುವ ಛಂದೋರೂಪಗಳು ಸುಂದರವಾಗಿವೆ; ಕಾವ್ಯ ವಸ್ತುವಿಗೆ ಅನುಕೂಲವಾಗಿವೆ; ಕನ್ನಡದ ಮರ್ಯಾದೆಗೆ ಒಪ್ಪಿವೆ. ಮುಖ್ಯವಾಗಿ ಶೈಲಿಯಲ್ಲಿಯೂ ಛಂದಸ್ಸಿನಲ್ಲಿಯೂ ಶ್ರೀಕಂಠಯ್ಯನವರು ಮಾರ್ಗದರ್ಶಿಗಳು. ಇನ್ನು ಮೇಲೆ ಬರುವ ಕವಿಗಳು ಇವರು ತೋರಿಸಿಕೊಟ್ಟಿರುವ ದಾರಿಯಲ್ಲಿ ಹೆಚ್ಚು ಹೆಚ್ಚಾಗಿ ನಡೆಯುವರೆಂಬುದರಲ್ಲಿಯೂ ಇದರಿಂದ ನಮ್ಮ ಸಾಹಿತ್ಯವು ಪಂಡಿತರಿಗೆ ಮಾತ್ರವಲ್ಲದೆ ಈಗಿನದಕ್ಕಿಂತ ಹೆಚ್ಚಾಗಿ ಜನಸಾಮಾನ್ಯಕ್ಕೆ ನಿಲುಕುವಂತಾಗುತ್ತದೆಂಬುದರಲ್ಲಿಯೂ ಸಂದೇಹವಿಲ್ಲ' ಎಂದು ಮಾಸ್ತಿ ವೆಂಕಟೇಶ

ಅಯ್ಯಂಗಾರ್ಯರು ಬರೆದ ಮಾತುಗಳು ಈ ಕೃತಿಯ ಮಹತ್ತ್ವವನ್ನು ಸೂಚಿಸುತ್ತವೆ. 'ವಿಮರ್ಶಕರ ನಿರೀಕ್ಷೆ ನಿಷ್ಫಲವಾಗಲಿಲ್ಲ. ಕೃತಿಯ ಅಂತರ್ನಿಹಿತವಾದ ಶಕ್ತಿಯ ಪ್ರಭಾವದಿಂದಲೂ ಸಹೃದಯರ ಮತ್ತು ವಿಮರ್ಶಕರ ತೋಲನ ದಕ್ಷತೆಯಿಂದಲೂ ಕನ್ನಡದ ಅಗತ್ಯದಿಂದಲೂ ಮಾರ್ಗದರ್ಶನದ ಕಠಿಣ ಕಾರ್ಯವನ್ನು ಸಾಮಾನ್ಯ ಜನಮನದ ನಿರೀಕ್ಷಣೆಯನ್ನು ಮೀರಿದ ಮಹತ್ ಪ್ರಮಾಣದಲ್ಲಿ ಈ ಕೃತಿ ಸಾಧಿಸಿತು'.

ಕೆಲವು ಕನ್ನಡ ಕವಿಗಳು ಕಾವ್ಯಾಭಿವ್ಯಕ್ತಿಯ ಹೊಸ ಮಾಧ್ಯಮಕ್ಕಾಗಿ ಸ್ವಂತವಾಗಿ ಪ್ರಯೋಗಗಳನ್ನು ನಡೆಸುತ್ತಿದ್ದರು. ಇಂಗ್ಲಿಷ್ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದ ಕುವೆಂಪು ಅವರೂ ಅಂಥವರಲ್ಲಿ ಒಬ್ಬರು. ತಾವು ಕೂಡ ನೂತನ ಛಂದೋವೈವಿಧ್ಯಗಳನ್ನು ಕುರಿತು ಸ್ವತಂತ್ರವಾಗಿ ಪ್ರಯೋಗಗಳಲ್ಲಿ ತೊಡಗಿದ್ದರೆಂದು ಅವರು ಹೇಳುತ್ತಾರೆ. ಆದರೂ ಎಲ್ಲರಿಗೂ ಸ್ಪಷ್ಟವಾದ ಒಂದು ಮಾರ್ಗದರ್ಶನ ಶ್ರೀಯವರ ಇಂಗ್ಲಿಷ್ ಗೀತಗಳಿಂದ ದೊರಕಿತು ಎಂಬುದರಲ್ಲಿ ಭಿನ್ನಾಭಿಪ್ರಾಯಗಳಿಲ್ಲ.

ಇಂಗ್ಲಿಷ್ ಗೀತಗಳು ಮುಖ್ಯವಾಗಿ ಸಾಧಿಸಿ ತೋರಿಸಿದ ಅಂಶಗಳು ಎರಡು. ಮೊದಲನೆಯದು, ಕನ್ನಡ ಅದುವರೆಗೆ ಕಾಣದಿದ್ದ ವಸ್ತು ವೈವಿಧ್ಯವನ್ನು ನಮ್ಮ ಜನದ ಮುಂದೆ ತೆರೆದಿಟ್ಟದ್ದು. ಎರಡನೆಯದು, ಹಳೆಯ ಮಾತ್ರಾಗಣಗಳನ್ನು ಆಧಾರವಾಗಿಟ್ಟುಕೊಂಡು ಹೊಸ ಹೊಸ ರೂಪವೈವಿಧ್ಯವನ್ನು ತರಬಹುದು ಎಂದು ತೋರಿಸಿದ್ದು.

ವಸ್ತುವಿನ ನೂತನತೆಯ ಬಗೆಗೆ ಒಂದು ಮಾತನ್ನು ಒತ್ತಿ ಹೇಳಬೇಕಾದ ಅಗತ್ಯವಿದೆ. ಈ ಶತಮಾನದ ಆದಿಯಲ್ಲಿ ಕೆಲವರಾದರೂ ಕವಿಗಳು ವಸ್ತುವಿನಲ್ಲಿ ನೂತನತೆಯನ್ನು ತರಲು ಪ್ರಯತ್ನಿಸಿದ್ದರು ಎಂಬುದಕ್ಕೆ ಆಧಾರಗಳಿವೆ.

ರೈಲನ್ನು ಕುರಿತು ಎಸ್.ಜಿ.ನರಸಿಂಹಾಚಾರ್ಯರು ಬರೆದ ಹೊಗೆಯಗಾಡಿ ಎಂಬ ಕವಿತೆ ಚೌಪದದಲ್ಲಿದೆ. ಅದರ ಕೆಲವು ಪಂಕ್ತಿಗಳು:

ನೊಗವನೆತ್ತಿನ ಕೊರಲೊಳಿಡುವ ಪಾಡಿಲ್ಲ  
ಬಿಗಿದ ಕುದುರೆಯ ಹೂಡುವಾಯಾಸವಿಲ್ಲ  
ಮಿಗೆ ಕಾದ ನೀರ ಹಬೆಯಿಂದ ಬಲುಬೇಗ  
ಹೊಗೆಯ ಗಾಡಿಯು ನೋಡು ಹೋಗುತಿಹುದೀಗ

ರೈಲನ್ನು ಕುರಿತು ಆಸ್ಥಾನ ವಿದ್ವಾನ್ ಜಯರಾಯಾಚಾರ್ಯರು ಬರೆದ ರೈಲುಗಾಡಿ ಎಂಬ ಪದ್ಯ:

ಓಡುತಿರ್ಪುದು। ರೈಲು ॥ ಪಲ್ಲವಿ ॥  
ನೋಡು ಕೂಡಿರುವ ಜನರ।  
ಗಾಡಿಯನೊಳಕೊಂಡು ಬೇಗ ॥ ಅನುಪಲ್ಲವಿ ॥  
ಮುಂದಿನಿಂಜಿನಲ್ಲಿ ಬೆಂಕಿ  
ಯೊಂದೆಡೆಯೊಳಗಾ ಬೆಂಕಿ  
ಯಿಂದ ನೀರು ಕಾಯ್ದು ಹಬೆಯು।  
ಬಂದಪುದಾ ಹಬೆಯ ಬಲದಿ॥

ಸಿದ್ದೇಶ್ವರ ಮಳೀಮಠ ಎಂಬವರು ಅತ್ಯಧಿಕ ಸಂತಸದಿಂದ ಇಪ್ಪತ್ತು ರೌಪ್ಯವ ಕೊಟ್ಟು ಕೊಂಡ ಕಾಲುಗಾಡಿ (ಸೈಕಲ್)ಯ ಸವಾರಿಯನ್ನು ಕುರಿತು ರಚಿಸಿರುವ ಒಂದು ಷಟ್ಪದಿ ಹೀಗಿದೆ:

ಬಲು ಭಯದಿ ಸತ್ತಿರುವ ನರಗಳ  
ಸೆಳೆದು ಬಿಗಿದನು ಕಚ್ಚಿ ದವಡೆಯ  
ಉಲುಕದುಸುರನು ಬಿಡದಲೆದೆಯನು ಗಟ್ಟಿ ಪಿಡಿದಿಹನು  
ನಿಲದೆ ಗಣಗಣ ಗಂಟೆ ಹೊಡೆಯುತ  
ಹಲವು ಕುತ್ತನು ದಾಂಟಿ ಗುಡ್ಡದ  
ಹೊಳಲ ಹೊರಗಿರ್ಪಿಳುಕಲಿನ ಮಾರ್ಗದಲಿ ನಡೆತಂದ

ಇವೆಲ್ಲ ಒಳ್ಳೆಯ ಭಾವಗೀತೆಗಳಿಗೆ ನಿದರ್ಶನ ಎಂದು ಭಾವಿಸುವಂತಿಲ್ಲ. ಆದರೆ ವಸ್ತುವಿನಲ್ಲಿ ನೂತನತೆಯನ್ನು ತರುವ ಪ್ರಯತ್ನ ನಡೆದಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಇಂಗ್ಲಿಷ್ ಕವನಗಳ ಅನುವಾದದಿಂದ ಕನ್ನಡ ಕಾವ್ಯ ಪ್ರಪಂಚವನ್ನು ಶ್ರೀಮಂತಗೊಳಿಸಲು ಶ್ರಮಿಸಿದ ಬಿ.ಎಂ.ಶ್ರೀಯವರೇ ಸ್ವಯಂ ಕವಿಗಳಾಗಿದ್ದು ಉತ್ತಮವಾದ ಕೆಲವು ಸ್ವತಂತ್ರ ಭಾವಗೀತೆಗಳನ್ನು ರಚಿಸಿದ್ದಾರೆ. ತಿಳಿಯಾದ ಕನ್ನಡದಲ್ಲಿ, ಹೇಳಬೇಕಾದುದನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಕಲೆ ಶ್ರೀಯವರಿಗೆ ಸಿದ್ಧಿಸಿತ್ತು. ಈ ಕೆಲವು ಪಂಕ್ತಿಗಳು ಅದಕ್ಕೆ ಸಾಕ್ಷಿ:

ಕನ್ನಡ ನುಡಿ, ನಮ್ಮ ಹೆಣ್ಣು  
ನಮ್ಮ ತೋಟದಿನಿಯ ಹಣ್ಣು  
ಬಳಿಕ, ಬೇರೆ ಬೆಳೆದ ಹೆಣ್ಣು  
ಬಳಿಗೆ ಸುಳಿದಳು  
ಹೊಸದು ರಸದ ಬಳ್ಳಿ ಹಣ್ಣು  
ಒಳಗೆ ಸುಳಿದಳು

ಶ್ರೀಯವರು ರಚಿಸಿರುವ ಕನ್ನಡ ತಾಯನೋಟ, ಶುಕ್ರಗೀತೆ ಮತ್ತು ಶ್ರೀ ಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ ಎಂಬ ಮೂರು ಪ್ರಗಾಥಗಳು ಕನ್ನಡಕ್ಕೆ ಕವಿ ನೀಡಿರುವ ಉತ್ತಮ ಕಾಣಿಕೆಗಳು.

ಶ್ರೀಯವರಿಗಿಂತ ಹತ್ತು ಹದಿನೈದು ವರ್ಷಗಳ ಹಿಂದೆಯೇ ಅನುವಾದಗಳನ್ನು ಮಾಡಿ, ಸ್ವತಂತ್ರ ಕವನಗಳನ್ನು ರಚಿಸಿ ಕಾವ್ಯಕ್ಷೇತ್ರವನ್ನು ಸಮೃದ್ಧಗೊಳಿಸಲು ಪ್ರಯತ್ನಿಸಿದ್ದ ಮತ್ತೊಬ್ಬರು ಪಂಜೆ ಮಂಗೇಶರಾಯರು. 1893ಕ್ಕೆ ಮುಂಚಿನಿಂದಲೂ ಪಂಜೆಯವರು ಕವಿತೆಗಳನ್ನು ಬರೆಯುತ್ತಿದ್ದರು ಎಂದು ತೀರ್ಮಾನಿಸುವುದಕ್ಕೆ ಆಧಾರಗಳಿವೆ. ಅವರ ಕವಿತೆಗಳಲ್ಲಿ 'ಅದೊಂದು ಬಗೆಯ ದ್ರವಣವಿದೆ, ಮನವಳಿಕೆ ಇದೆ' ಎನ್ನುತ್ತಾರೆ ಗೋವಿಂದ ಪೈ. ಅವರ ಲಲಿತವಾದ ಶೈಲಿ ಮುಂದೆ ಕನ್ನಡದಲ್ಲಿ ಇತರರು ಅನುಕರಣ ಮಾಡಬೇಕಾದಂಥದು ಎನಿಸಿತು. ಅವರ ಹುತ್ತರಿ ಹಾಡು ಕೊಡಗರಿಗೆ ನಾಡಗೀತೆ ಯಾಯಿತು. ಕೊಡಗರ ಸಾಹಸವನ್ನು ಕೊಂಡಾಡುತ್ತ ಪಂಜೆಯವರು ನೀಡಿರುವ ಚಿತ್ರಗಳು ಭಯಮಿಶ್ರಿತ ರೋಮಾಂಚನವನ್ನು ಉಂಟುಮಾಡುವಂಥವು:

ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು,  
ಕವಣೆ ತಿರಿ ಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು,  
ಸವರಿ ಆನೆಯ ಸೊಂಡಲಿನ ರಣಕೊಂಬನಾರ್ ಭೋರ್ಗರೆದರೋ  
ಸವೆದು ಸವೆಯದ ಸಾಹಸತ್ವದ ಕ್ಷಾತ್ರಬೇಟೆಯ ಮೆರೆದರೋ,  
ಅವರೆ ಸೋಲ್ ಸಾವರಿಯರು !  
ಅವರೆ ಕಡುಗಲಿ ಗರಿಯರು !  
ಅವರೆ ಕೊಡಗಿನ ಹಿರಿಯರು !

ಇದೇ ತಲೆಮಾರಿನ ಕವಿಗಳಲ್ಲಿ ಗಮನೀಯರಾದವರು ಎಸ್.ಜಿ. ನರಸಿಂಹಾಚಾರ್ಯರು. ಇವರು ಅನೇಕ ಇಂಗ್ಲಿಷ್ ಕವನಗಳನ್ನು ತುಂಬ ಸೊಗಸಾಗಿ ಅನುವಾದ ಮಾಡಿದ್ದಾರೆ. ಇವರ ಕನ್ನಡದ ಹದಕ್ಕೆ ಈ ಕೆಳಗಿನ ಉದಾಹರಣೆ: ವರ್ಡ್ಸ್‌ವರ್ತ್ ಕವಿಯ ಟು ದಿ ಕಕೂ ಎಂಬ ಕವನದ ಪಂಕ್ತಿಗಳ ಅನುವಾದ ಇದು:

ಬಾರೊ ಬಸಂತದ ಕಂದಾ ಬಾ ಬಾರೊ  
ಹಾರುವ ಹಕ್ಕಿ ನೀನಲ್ಲ  
ಸಾರುವ ದನಿ, ಮಾಯದಗಂಟು।,ಕಣ್ಣಿಗೆ  
ತೋರದ ಹುರುಳಾಗಿ ಸುಳಿವೆ

ಅನುವಾದಗಳಲ್ಲದೆ ಸ್ವತಂತ್ರ ಕವನಗಳ ರಚನೆಯನ್ನು ನೋಡಿದರೆ ನರಸಿಂಹಾಚಾರ್ಯರು ಹುಟ್ಟುಕವಿ. ಕನ್ನಡ ಭಾಷೆ ಇವರ ಕೈಯಲ್ಲಿ ಹೊಸ ಹದವನ್ನು ಕಂಡಿತು ಎಂದು ಹೇಳಬೇಕಾಗುತ್ತದೆ. ಅದಕ್ಕೆ ನಿದರ್ಶನ 'ನೋಡು ಕಾವೇರಿಯು ನಾಡಿನ ಜನರಿಗೆ ಬೇಡಿದ ಫಲಗಳ ನೀಡುತ ಪೊರೆವಳು', 'ಬಾರೋ ನಾವಾಡುವ ಬಾರೋ, ಸಾರಿತು ಸುಗ್ಗಿಯ ತಿಂಗಳಿದು' ಎಂದು ಆರಂಭವಾಗುವ ಕವನಗಳು ಹಳೆಯ ಷಟ್ಪದಿ ಛಂದಸ್ಸಿನಲ್ಲಿ ರಚಿತವಾದುದಾದರೂ ನಮ್ಮ ಭಾಷೆಗೆ ಹೊಸದು ಎನ್ನುವಂಥ ಶೋಕಗೀತೆಯೊಂದನ್ನು ರಚಿಸಿದವರು ಇವರೇ. 1894ರಲ್ಲಿ ಚಾಮರಾಜ ಒಡೆಯರು ತೀರಿಕೊಂಡಾಗ ಬರೆದ ಚರಮಗೀತೆ ಅದು. ಸಂಗೀತ ನಾಟಕಗಳಿಗೆ ಆಶ್ರಯ ಕೊಟ್ಟಿದ್ದ ಪ್ರಭು ಅವರು. ಅವರೇ ತೀರಿಕೊಂಡಮೇಲೆ ಇನ್ನೆಲ್ಲಿ ಆ ಕಲೆಗಳಿಗೆ ಉಳಿವು ಎಂಬ ಭಾವ ಹೀಗೆ ಬಂದಿದೆ:

ವೀಣೆಗಳು ಮುಸುಕಿಟ್ಟು ಮೌನದಿ  
ಕೋಣೆಯೊಳಡಗಿದುವು ಬಿನ್ನನೆ  
ಜಾಣಳಿದು ನಾಟಕಗಳುಳಿದುವು ತೆರೆಯ ಮರೆಯೊಳಗೆ ॥

1918ಕ್ಕೆ ಮುಂಚೆಯೇ ಸ್ವತಂತ್ರವಾದ ಕವನಗಳನ್ನು ರಚಿಸಿ ಭಾವಗೀತೆಯ ಪಂಥಕ್ಕೆ ಒಳ್ಳೆಯ ಬುನಾದಿಯನ್ನು ಹಾಕಿದ ಮತ್ತೊಬ್ಬ ಗಣ್ಯರು ಬಾಳಾಚಾರ್ಯ ಗೋಪಾಳಾಚಾರ್ಯ ಸಕ್ಕರಿ (ಶಾಂತಕವಿ). ಕನ್ನಡಿಗರನ್ನು ಎಚ್ಚರಿಸಲು ಬರೆದ ಒಂದು ಕವನದ ಕೆಲವು ಪಂಕ್ತಿಗಳು ಇವು:

ಏಳು ಸಾಯಣ ಕಟ್ಟು ಗ್ರಂಥವ  
ನೇಳು ಪಂಪಾಕ್ಷೇತ್ರಕೆ  
ಗಾಳಿಗಂಟುಗಳೋದಿದೇತಕೆ  
ಏಳು ಈ ಕ್ಷಣಮಾತ್ರಕೆ

ಶ್ರೀಯವರು ತೆರೆದ ನೂತನ ಕಾವ್ಯಮಾರ್ಗವನ್ನು ವಿಸ್ತರಿಸುತ್ತ ಹೋದ ಕವಿಗಳಲ್ಲಿ ಮುಖ್ಯರಾದವರು ಡಿ.ವಿ.ಗುಂಡಪ್ಪನವರು. ಹಳೆಯ ವಸ್ತು, ಛಂದಸ್ಸುಗಳನ್ನು ಉಳಿಸಿಕೊಂಡು ಹೊಸದರ ಕಡೆಗೆ ಕಣ್ಣು ಹಾಯಿಸಿದ್ದು ಇವರ ಕವನಗಳ ವೈಶಿಷ್ಟ್ಯ. ಸೀಸ, ವೃತ್ತ, ಕಂದ, ಖಂಡಭೋಗ ಷಟ್ಪದಿ ಮುಂತಾದ ಛಂದೋರೂಪಗಳನ್ನು ಇವರು ಬಳಸಿಕೊಂಡರು. ಸಂಗೀತದ ಕಡೆಗೆ ಒಲವು ಹೆಚ್ಚಾಗಿರುವ ಈ ಕವಿ ಗಡುಸಾದ, ಆದರೆ ಇಂಪಾದ ಅನೇಕ ಕವನಗಳನ್ನು ರಚಿಸಿದ್ದಾರೆ. ವನಸುಮ ಎಂಬುದು ಸುಮಾರು ನಾಲ್ಕು ದಶಕಗಳ ಕಾಲ ಕನ್ನಡನಾಡಿನ ಜನರೆಲ್ಲರ ಕಿವಿ ಮನಗಳನ್ನು ತುಂಬಿದ ಕವನ. ಎಸ್.ಅನಂತನಾರಾಯಣ ಅವರು ಹೇಳುವಂತೆ ಇವರ ಹೆಚ್ಚಿನ 'ಗೀತೆಗಳೆಲ್ಲ ಜೀವಂತ ಕಳೆ ಪಡೆಯುವುದು ಹಾಡಿದಾಗ ............ ಇಲ್ಲಿಯ ಲಾಲಿತ್ಯ, ಪದಗಳನ್ನು ಜೋಡಿಸುವ ಕೌಶಲ್ಯ, ನೃತ್ಯಲಯ – ಇವುಗಳು ಅಂತಃಪುರಗೀತೆ (1950) ಯಲ್ಲಿ ಪರಿಪೂರ್ಣ ಪಾಕವನ್ನು ಪಡೆದಿವೆ.' ಅನೇಕ ಕವಿಗಳಿಗೆ ಸ್ಫೂರ್ತಿದಾಯಕರಾಗಿದ್ದು, ಆಚಾರ್ಯ ಸ್ಥಾನದಲ್ಲಿ ನಿಂತ ಡಿ.ವಿ.ಜಿ. ಅವರ ಕವನಗಳಲ್ಲಿ ಕನ್ನಡ ಕಬ್ಬವೆಣ್ಣು ಸನಾತನ ಮತ್ತು ನೂತನಗಳ ಮಧ್ಯೆ ಹೊಸ್ತಿಲಮೇಲೆ ನಿಂತಂತಿದೆ. ಅನೇಕ ಪದ್ಯಗಳು ವೃತ್ತಕಂದ ರೂಪವಾಗಿವೆ. ಆತ್ಮವು ನೂತನವಾದರೂ ವೇಷವು ಪುರಾತನವಾದುದು ಎಂಬುದು ಕುವೆಂಪು ಅವರ ಅಭಿಪ್ರಾಯ. ಡಿ.ವಿ.ಜಿ. ಅವರಂತೆಯೇ ಗಡುಸಾಗಿಯೂ ಚಿಂತನಾಂಶಗಳಿಂದ ಕೂಡಿದುವೂ ಆದ ಭಾವಗೀತೆಗಳನ್ನು ರಚಿಸಿದವರು ಮಂಜೇಶ್ವರ ಗೋವಿಂದ ಪೈ ಅವರು. ಇವರು ಶ್ರೀಯವರಂತೆಯೇ ಅನೇಕ ಇಂಗ್ಲಿಷ್ ಕವನಗಳನ್ನು ಸಮರ್ಥವಾಗಿ ಕನ್ನಡಕ್ಕೆ ತಂದಿರುವುದಲ್ಲದೆ ಸ್ವತಂತ್ರವಾಗಿಯೂ ಕವನಗಳನ್ನು ರಚಿಸಿ ಯಶಸ್ಸು ಗಳಿಸಿದ್ದಾರೆ. ಈ ದಿಕ್ಕಿನಲ್ಲಿ ಇವರ ಗಿಳಿವಿಂಡು (1930) ಗಮನಾರ್ಹವಾದ ಸಂಕಲನ.



ದ.ರಾ. ಬೇಂದ್ರೆ

1925 ರಿಂದ 1950ರ ವರೆಗಿನ ಇಪ್ಪತ್ತೈದು ವರ್ಷಗಳು ಕನ್ನಡ ಭಾವಗೀತೆಯ ಇತಿಹಾಸದಲ್ಲಿ ಸುವರ್ಣಯುಗ. ಕೆ.ವಿ.ಪುಟ್ಟಪ್ಪ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಪು.ತಿ.ನರಸಿಂಹಾಚಾರ್, ವಿ.ಸೀತಾರಾಮಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜಿ.ಪಿ.ರಾಜರತ್ನಂ, ಕೆ.ಎಸ್.ನರಸಿಂಹಸ್ವಾಮಿ, ಎಂ.ಗೋಪಾಲಕೃಷ್ಣ ಅಡಿಗ ಮುಂತಾದ ಪ್ರತಿಭಾಶಾಲಿ ಕವಿಗಳು ಭಾವಗೀತೆಯ ಕ್ಷೇತ್ರದಲ್ಲಿ ಸಮೃದ್ಧವಾದ ಸುಗ್ಗಿಯನ್ನು ತಂದರು. ಪ್ರಕೃತಿ, ಪ್ರೇಮ, ದೇಶಭಕ್ತಿ, ಸಮಾಜ, ಸಂಸಾರ ಎಲ್ಲಮೂ ಈ ಕವಿಗಳಿಗೆ ವಸ್ತುವಾದುವು. ಕನ್ನಡದಲ್ಲಿ ಇದುವರೆಗೆ ಕಾಣದಿದ್ದ ವಸ್ತುವೈವಿಧ್ಯವನ್ನು ಭಾವಗೀತಕಾರರು ಪ್ರದರ್ಶಿಸಿದರು. ಜೊತೆ ಜೊತೆಗೇ ಕನ್ನಡ ಭಾಷೆ ಹೆಚ್ಚು ಸತ್ತ್ವಪೂರ್ಣವಾದ ಅಭಿವ್ಯಕ್ತಿಗೆ ಪಾತ್ರವಾಗುವಂತೆ ಮಾಡಲು ಶ್ರಮಿಸಿದರು. ವಸ್ತುವೈವಿಧ್ಯದಂತೆಯೇ ಛಂದೋ ವೈವಿಧ್ಯವೂ ಪ್ರದರ್ಶಿತವಾಯಿತು. ಒಟ್ಟಿನಲ್ಲಿ ಭಾವಗೀತಕಾರರಿಂದ ಕನ್ನಡದ ಕಾವ್ಯ ಪ್ರಕಾರ ಸಂಪದ್ಭರಿತವಾಯಿತು.

ಭಾವಗೀತೆಯ ಸಮೃದ್ಧಿಗೆ ಕಾರಣರಾದ ಕವಿಗಳಲ್ಲಿ ಪ್ರಧಾನರಾದವರು ಕುವೆಂಪು. ಕೊಳಲು, ನವಿಲು, ಪಕ್ಷಿಕಾಶಿ, ಅಗ್ನಿಹಂಸ, ಪ್ರೇಮಕಾಶ್ಮೀರ, ಇಕ್ಷುಗಂಗೋತ್ರಿ, ಚಂದ್ರಮಂಚಕೆ ಬಾ ಚಕೋರಿ, ಜೇನಾಗುವಾ, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ ಮುಂತಾದ ಕವನ ಸಂಕಲನಗಳಲ್ಲಿ ಪ್ರಕಟವಾಗಿರುವ ಇವರ ಭಾವಗೀತೆಗಳ ವಸ್ತು ಪ್ರಕೃತಿ ವರ್ಣನೆ, ಅಧ್ಯಾತ್ಮ, ಪ್ರೇಮ, ಸಾಮಾಜಿಕ ಚಿಂತನೆ, ಕುಟುಂಬಜೀವನದ ರಸನಿಮಿಷಗಳು ಇತ್ಯಾದಿ. ಪ್ರಕೃತಿ ಮತ್ತು ಅಧ್ಯಾತ್ಮಗಳು ಈ ಭಾವಗೀತಕಾರರ ಶ್ವಾಸಕೋಶಗಳು. ಮನೋಹರವಾದ ಪ್ರಕೃತಿಯ ವಿವಿಧ ಅಂಶಗಳು, ಬಿಳಿ ಮಳಲ ರಾಶಿ, ಕಾಡಿನ ಹಸುರೆಲೆಯ ಸಾಗರ ಮುಂತಾದುವು ಕವಿಯ ದೃಷ್ಟಿಗೆ ಆವೇಶ ಭಾವಗಳು; ವಿಶ್ವರೂಪಿಯಾದ ಭಗವಂತನ ಶರೀರದ ಚಿನ್ಮಯವಾದ ಅಂಗಗಳು; ಬ್ರಹ್ಮದ ಮಹಾಚಿತ್ತ ಶರಧಿಯ ಅಲೆಗಳು, ವರ್ಡ್ಸ್‌ವರ್ತನಿಗೆಂತೋ ಅಂತು ಮನಸ್ಸಿನ ಚಿಂತೆಗಳಾಗಿ, ನಾಡಿಯಲ್ಲಿ ಹರಿಯುವ ರಕ್ತಬಿಂದುಗಳಾಗಿ ಅವು ಪರಿವರ್ತನೆ ಹೊಂದಿವೆ. ತಾವು ಉಸಿರಾಡಿದರೆ ಮೋಡಗಳು ಉಸಿರಾಡುತ್ತವೆ ಎನ್ನುವ ತಾದಾತ್ಮ್ಯ ದೊರೆತಿದೆ ಈ ಕವಿಗೆ. ಪ್ರಕೃತಿಸಾಧನೆಯ ವಿಷಯಕವಾದ ಕವಿಯ ಜೀವನ ಮಂತ್ರ ಇದು. ಪ್ರಕೃತಿಯಾರಾಧನೆಯೇ ಪರಮನಾರಾಧನೆ. ಈ ಭಾವದಿಂದ ಕವಿಯ ಪ್ರಕೃತಿಯ ಆರಾಧನೆ ಮುಂದುವರಿದಿದೆ. ಇವರ ಪ್ರಕೃತಿಯ ಕಲ್ಪನೆ 'ಉದಯಾಸ್ತಗಳು, ವನಗಿರಿಗಳು, ತಂಗಾಳಿ, ರುದ್ರವರ್ಷ, ತಿಂಗಳು, ಹಿಮಮಣಿಗಳು, ಕಾಜಾಣ, ಕಾಮಳ್ಳಿ, ಕೋಗಿಲೆ, ಗಿಳಿಗಳನ್ನು ಮಾತ್ರ ಒಳಗೊಂಡು ಮುಕ್ತಾಯವಾಗಿಲ್ಲ. ಮಾನವ ಸೌಂದರ್ಯ, ಒಲುಮೆ, ಸ್ನೇಹಗಳನ್ನೂ ಅದು ವ್ಯಾಪಿಸಿದೆ. ಆ ಎಲ್ಲದರಲ್ಲಿ ತಮ್ಮ ಇಷ್ಟದೇವತೆಯ ಗುಡಿಯನ್ನು ಕಟ್ಟಿ ಕವಿ ಪೂಜೆಯಲ್ಲಿ ತಲ್ಲೀನರಾಗಿದ್ದಾರೆ'. ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ ಎಂದು ಈ ಕವಿ ಹಾಡಿದರು. ಹೀಗೆಯೇ ಪ್ರೇಮ, ಅಧ್ಯಾತ್ಮಗಳನ್ನು ಕುರಿತ ಇವರ ಕವನಗಳೂ ಸಹೃದಯರ ಮೆಚ್ಚುಗೆಯನ್ನು ಗಳಿಸಿದುವು.

ಕುವೆಂಪು ಅವರ ಸಾಮಾಜಿಕ ಗೀತೆಗಳು ಇಂದಿನ ಕ್ರಾಂತಿಯನ್ನು ಮೂರು ನಾಲ್ಕು ದಶಕಗಳಷ್ಟು ಮುಂಚೆಯೇ ನಿರೀಕ್ಷಿಸಿದ್ದವು. ಇವರ ಕಲ್ಕಿ ಅತ್ಯಂತ ಶಕ್ತಿಪೂರ್ಣವಾದ ಒಂದು ಸಾಮಾಜಿಕ ಗೀತೆ. ಅಪಾರವಾದ ಧ್ವನಿ ಪ್ರಪಂಚವನ್ನು ಮಾತ್ರವಲ್ಲದೆ ನಾಳೆಯನ್ನು ಇಂದೇ ತೆರೆದು ತೋರಿಸಿದ ಆ ಕವನದ ಕೆಲವು ಪಂಕ್ತಿಗಳು ಇವು:

ಬಡಬಗ್ಗರ ಜಠರಾಗ್ನಿಯು ಎದ್ದು,
ಗುಡಿಸಲುಗಳಿಗೇ ಬೆಂಕಿಯು ಬಿದ್ದು,
ಧಗಧಗ ಧಗಧಗ ಹೊತ್ತಿದುದು
ಭುಗಿಭುಗಿಲೆನ್ನುತ ಮುತ್ತಿದುದು
ಮುಗಿಲಿನವರೆಗೂ ಬಾನಿನವರೆಗೂ
ದಿಕ್ಕುದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ
ಶ್ರೀಮಂತರನಪ್ಪಿತು ಬಾಚಿ

ಸಾಮಾನ್ಯವಾದ ಅಗ್ನಿಯಲ್ಲ ಅದು, 'ಅದರ ಮುಂದೆ ಬಡಬಾಗ್ನಿಯು ತಲೆ ತಗ್ಗಿತು ನಾಚಿ'.

ಜನಪದ ಛಂದಸ್ಸು ಲಯಗಳನ್ನು ಬಳಸಿಕೊಂಡು ಉತ್ತರ ಕರ್ನಾಟಕದ ಜನರ ಆಡುಭಾಷೆಯಲ್ಲಿ ತುಂಬ ಸತ್ತ್ವಪೂರ್ಣವಾದ ಅನೇಕ ಭಾವಗೀತೆಗಳನ್ನು ರಚಿಸಿದವರು ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು. ಗರಿ, ಉಯ್ಯಾಲೆ, ನಾದಲೀಲೆ, ಸಖೀಗೀತ, ಮೂರ್ತಿ ಮತ್ತು ಕಾಮಕಸ್ತೂರಿ, ಗಂಗಾವತರಣ, ನಾಕುತಂತಿ ಮುಂತಾದ ಕವನ ಸಂಕಲನಗಳ ಮೂಲಕ ಭಾವಗೀತೆಯ ಪ್ರಕಾರಕ್ಕೆ ಈ ಕವಿ ಅಮರವಾದ ಕಾಣಿಕೆಯನ್ನು ನೀಡಿದ್ದಾರೆ. ನಾದದ ಗುಂಗು, ಭಾವದ ಸೊಗಸು, ಮಾತಿನ ಮೋಡಿ – ಇವು ಇವರ ಕವನಗಳ ವಿಶಿಷ್ಟಲಕ್ಷಣಗಳು. ಭಾವ ತೀವ್ರವಾಗಿ, ಗಾನ ಪ್ರಧಾನವಾಗಿ ಅನನ್ಯ ಮನೋಹರತೆಯಿಂದ ವಿಶಿಷ್ಟತೆಯನ್ನು ಪಡೆದಿವೆ ಇವರ ಕವನಗಳು. ಬೆಳಗು ಬೆಳುದಿಂಗಳುಗಳ ವರ್ಣನೆ ಇವರಿಂದ ಕನ್ನಡ ಕಾವ್ಯದಲ್ಲಿ ಹೊಚ್ಚ ಹೊಸದಾಗಿ ಉಳಿದಿವೆ.

ಈ ಕೆಲವು ದಶಕಗಳಲ್ಲಿ ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವ, ಸರ್ವಜನ ಮೋಹಕವಾಗಿರುವ ಇವರ ಕವನ 'ಬೆಳಗು', ಅತ್ಯಂತ ಸರಳವಾದ, ಅಚ್ಚಗನ್ನಡ ಪದಗಳಿಂದ ಅತ್ಯಪೂರ್ವವಾದ ವರ್ಣನೆ, ಅನುಭವಗಳನ್ನು ಒಳಗೊಂಡಿರುವ ಈ ಕವನ ಆ ಕಾರಣಗಳಿಗಾಗಿಯೇ ಸರ್ವಜನಪ್ರಿಯತೆಯನ್ನು ಪಡೆದಿದೆ. ಅದರ ಆರಂಭದ ಸಾಲುಗಳು ಹೀಗಿವೆ:

ಮೂಡಲ ಮನೆಯಾ ಮುತ್ತಿನ ನೀರಿನ
ಎರಕಾವ ಹೊಯ್ದಾ
ನುಣ್ಣ – ನ್ನೆರಕಾವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ – ಜಗವೆಲ್ಲಾ ತೊಯ್ದಾ

ಸೂಕ್ಷ್ಮವಾದ ಕವಿಕಲ್ಪನೆ ಪ್ರಕೃತಿಯ ವರ್ಣನೆಯಲ್ಲೇ ತನ್ನನ್ನು ಮುಗಿಸಿಕೊಂಡಿಲ್ಲ. ಸಾಮಾಜಿಕ ಅನ್ಯಾಯಗಳ ಖಂಡನೆ, ದೇಶಭಕ್ತಿ ಮುಂತಾದ ಅನೇಕ ಭಾವಗಳು ಸುಂದರ ಪ್ರತಿಮಾ ಕವನಗಳ (ಕುರುಡು ಕಾಂಚಾಣಾ, ಪುಟ್ಟ ವಿಧವೆ, ಮೂವತ್ತು ಮೂರು ಕೋಟಿ) ರಚನೆಗೆ ಕಾರಣವಾಗಿವೆ.

ಚಿಂತನಪ್ರಧಾನವಾದ, ಚಿಂತನೆಯ ಸಾಣೆಗೆ ಭಾವವನ್ನು ಒಡ್ಡಿ ಹರಿತಗೊಳಿಸಿದ ಅನೇಕ ಅಮೂಲ್ಯವಾದ ಕವನಗಳನ್ನು ರಚಿಸಿರುವ ಅಗ್ರಪಂಕ್ತಿಯ ಮತ್ತೊಬ್ಬ ಕವಿ ಪು.ತಿ.ನರಸಿಂಹಾಚಾರ್ಯರು. ಹಣತೆ, ಮಾಂದಳಿರು, ಶಾರದಯಾಮಿನೀ, ಗಣೇಶದರ್ಶನ, ರಸಸರಸ್ವತಿ, ಮಲೆದೇಗುಲ ಮುಂತಾದ ಕವನಸಂಕಲನಗಳಲ್ಲಿ ಮಾತ್ರವಲ್ಲದೆ ಗೋಕುಲನಿರ್ಗಮನ, ಅಹಲ್ಯೆ ಮುಂತಾದ ಗೀತರೂಪಕಗಳಲ್ಲೂ ಇವರ ಅತ್ಯುತ್ಕೃಷ್ಟವಾದ ಭಾವಗೀತೆಗಳಿವೆ. ಪ್ರಕೃತಿಯ ಆಸ್ವಾದನೆಯಂತೆಯೇ ಭಕ್ತಿ, ಪ್ರಪತ್ತಿಗಳ ಪ್ರತಿಪಾದನೆಯೂ ಕಾವ್ಯಕ್ಕೆ ನೂತನತೆಯ ಸೊಗಡನ್ನು ತರುವ ವಸ್ತುವಾಗಬಹುದು ಎಂಬುದನ್ನು ಪು.ತಿ.ನ. ತೋರಿಸಿದ್ದಾರೆ. ಜಗತ್ತಿನ ಚೆಲುವನ್ನು ಗುರುತಿಸುವುದೂ ಅದನ್ನು ಆಹ್ವಾನಿಸುವುದೂ ಭಗವಂತನ ಅಹೇತುಕ ಕರುಣೆಯಿಂದಲೇ ಎನ್ನುವುದು ಈ ಕವಿಯ ಅಚಲವಿಶ್ವಾಸ.

'ಜಗ ಚೆಲುವೆನ್ನುವ ಬಗೆಯನುರಣನೆ ವಿಶ್ವಾತ್ಮನ ನಿಹೇತುಕ ಕರುಣೆ', ಜಗದ ಚೆಲುವಿನ ಒಂದು ಮುಹೂರ್ತದ ಆಸ್ವಾದನೆಯಿಂದ ತೃಪ್ತಿಪಡೆದ ಇವರ ಮನಸ್ಸು ಮರುಗಳಿಗೆಯೆ ಆಲೋಚನಾಮಗ್ನವಾಗುತ್ತದೆ. ಚಿಂತನೆ ಇವರ ಕವನಗಳಲ್ಲಿ ಭಾವದ ಅವಿನಾಸಂಗಿ, ಜೊತೆಗೆ ಆಶ್ಚರ್ಯ ಇವರ ಕವನಗಳ ಇನ್ನೊಂದು ಲಕ್ಷಣ. ಸೊಗವು ತೋರಬೇಕಾದಲ್ಲಿ ಅಳಲು ತೋರುವುದು, ವಿಷಾದದ ಛಾಯೆಯಲ್ಲಿ ಲೀನವಾಗುವುದು ಇವರ ಕೆಲವು ಮುಖ್ಯ ಕವನಗಳಲ್ಲಿ ಎದ್ದು ಕಾಣುವ ಮತ್ತೊಂದು ಅಂಶ. ಒಂದು ಸಂಜೆ ಎಂಬ ಇವರ ಪುಟ್ಟ ಕವನವೊಂದು ಇವರ ಕಾವ್ಯದ ಲಕ್ಷಣಗಳಿಗೆಲ್ಲ ಸುಂದರವಾದ ನಿದರ್ಶನ:

ಹೊತ್ತು ಮುಳುಗಿತು – ಮಾಸಿಹೋಯಿತು  
ಭೂಮಿ ಹೊರಳುತ ನಸುಕೊಳು,  
ತಾಯಿ ಕಣ್ಮರೆಯಾಗೆ ಧೂಳಿನೊ–  
ಳಾಡಿ ಮಾಸುವ ಮಗುವೊಲು  
ಕತ್ತಲಾಯಿತು ಹೊಳೆದುವಿದುಗೋ  
ಮೇಲೆ ಚುಕ್ಕಿಗಳಂದದಿ  
ಅಂಧಕಾರದ ತೆರೆಗಳಾವುದೊ  
ಬೆಳಕ ಬಿಂಬಿಸುವಂದದಿ  
ತಲದಿ ನಾನಿಹೆನೀ ಪುರಾತನ  
ತಮರು ತಾರೆಗು ಮೋಹಿಸಿ,  
ನಿಜ ವಿಷಾದದೊಳಲ್ಲಿಗಲ್ಲಿಗೆ  
ಹೊಳೆವ ಭಾವಕೆ ಹೋಲಿಸಿ

ಅರುಣ, ಬಿನ್ನಹ, ತಾವರೆ – ಇವು ಮಾಸ್ತಿವೆಂಕಟೇಶ ಅಯ್ಯಂಗಾರ್ಯರ ಭಾವಗೀತೆಗಳ ಸಂಕಲನಗಳು. ಭಗವಂತನ ಅನುಗ್ರಹಕ್ಕಾಗಿ ಕಾತರತೆ, ಚೆಲುವಿನ ಬಗೆಗೆ ನವುರಾದ ವಿಸ್ಮಯ – ಇವು ಇವರ ಕವನಗಳ ಪ್ರಧಾನ ವಸ್ತು. ಸತ್ವದಲ್ಲಿ ಇವರ ಸಣ್ಣಕಥೆಗಳ ಮಟ್ಟಕ್ಕೆ ಬರುವ ಸಾಮರ್ಥ್ಯ ಇವರ ಕವನಗಳಿಗಿಲ್ಲ. ಆದರೆ ಸಂಖ್ಯೆಯಲ್ಲಿ ಇವು ವಿಪುಲವಾಗಿವೆ.

ಕನ್ನಡದ ಮತ್ತೊಬ್ಬ ಪ್ರಮುಖ ಭಾವಗೀತಕಾರರು ವಿ.ಸೀತಾರಾಮಯ್ಯನವರು. ಬಹುಮುಖ ಪ್ರತಿಭೆಯ ಈ ಕವಿ ಭಾವಗೀತಕಾರನ ಕರ್ತವ್ಯವೇನು ಎಂಬುದನ್ನು ಸೂಚಿಸಿದರು. 'ಕವಿಯು ಪ್ರಪಂಚವನ್ನು ಕಣ್ಣುತುಂಬ ನೋಡಲಿ ತನ್ನ ಆದೇಶಗಳು ಒಂದು ಹದಕ್ಕೂ ಪಾಕಕ್ಕೂ ಬರುವಂತೆ ಮನಸ್ಸನ್ನು ನಿರಂತರವಾಗಿ ಒಂದು ಶಾಖದಲ್ಲಿಟ್ಟುಕೊಳ್ಳಲಿ: ತನ್ನ ವ್ಯಕ್ತಿತ್ವದ ಮುದ್ರೆಯನ್ನು ಕವಿತೆಯ ಮೇಲೆ ಹಾಕಲಿ (ಅವನು ನಿಜವಾಗಿ ವ್ಯಕ್ತಿಯಾದರೆ ಆ ಮುದ್ರೆ ಬಿದ್ದೇ ಅವನ ವಾಣಿ ಕೇಳುವುದು); ಪ್ರಪಂಚಕ್ಕೆ ಒಂದು ಹೊಸ ದೃಷ್ಟಿಯನ್ನೂ ಸಾತ್ವಿಕದಿಂದ ಮಿಡಿಯುವ ಒಂದು ಮೃದು ಜೀವನವನ್ನೂ ಕಾಣಿಕೆಯಾಗಿ ಅರ್ಪಿಸಲಿ; ಅದರಿಂದ ಪ್ರಪಂಚದ ಸತ್ವವು ಬೆಳೆಯುವಂತಾಗಲಿ'. ಗೀತಗಳು, ದೀಪಗಳು, ನೆಳಲು–ಬೆಳಕು, ದ್ರಾಕ್ಷಿ ದಾಳಿಂಬೆ, ಹೆಜ್ಜೆ ಪಾಡು, ಅರಲು ಬರಲು – ಇವು ವಿ.ಸೀ. ಅವರ ಕವನಸಂಕಲನಗಳು. ಸೊಗಸಾದ ಕನ್ನಡ ಪದಗಳು, ಮುಗಿಲಿನವರೆಗೂ ಬೀಸುವ ಭಾವ, ಹೃದಯದ ಆಳದವರೆಗೂ ಇಳಿಯುವ ಸಂವೇದನೆ, ಇವೆಲ್ಲದರೊಡನೆ ಹದವಾಗಿ ಬೆರೆಯುವ ಸೂಕ್ಷ್ಮ ಸಂವೇದನೆ, ಕೆಲಮೊಮ್ಮೆ ಹದವಾದ ಸಂಗೀತ ಗುಣ – ಇವು ವಿ.ಸೀ. ಅವರ ಭಾವಗೀತೆಯ ಲಕ್ಷಣಗಳು. ವಿಶ್ವಾಸ ಎನ್ನುವ ಕವನದ ಎರಡು ಪಂಕ್ತಿಗಳು ಇವು:

ಮಾನವನೆತ್ತರ ಆಗಸದೇರಿಗೆ ಏರುವವರೆಗೂ ಏರೇವು;  
ಮಾನವಹೃದಯಕೆ ವಿಶ್ವವಿಶಾಲತೆ ಹಾಯುವವರೆಗೂ ಹಾರೇವು,

ಕನ್ನಡದ ಅತಿಶ್ರೇಷ್ಠ ಭಾವಗೀತೆಗಳ ಪಂಕ್ತಿಯಲ್ಲಿ ನಿಲ್ಲುವ ಕವನ ವಿ.ಸೀ.ಅವರ ಮನೆ ತುಂಬಿಸುವುದು, ಜಿ.ಎಸ್.ಶಿವರುದ್ರಪ್ಪನವರ ಮಾತಿನಲ್ಲಿ 'ಮುಟ್ಟಿದರೆಲ್ಲಿ ಮಾಸುವುದೋ ಎಂಬಂತೆ ಥಳಥಳಿಸುವ ಇಬ್ಬನಿಯಂತೆ ಇದರ ಚೆಲುವು'. ಆ ಕವನದ ಮೊದಲ ಪಂಕ್ತಿಗಳು:

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು  
ನಿಮ್ಮ ಮಡಿಲೊಳಗಿಡಲು ತಂದಿರುವೆವು  
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು  
ನಿಮ್ಮ ಮನೆಯನ್ನು ತುಂಬಲೊಪ್ಪಿಸುವೆವು

ಸಾಮಾನ್ಯಾತಿಸಾಮಾನ್ಯರು ಆಡುವ ಮಾತಿನ ಸೊಗಡನ್ನು ಕಾವ್ಯಕ್ಕೆ ಕನ್ನಡದಲ್ಲಿ ಬಹುಶಃ ಮೊಟ್ಟಮೊದಲ ಬಾರಿಗೆ ತಂದು ಅನೇಕ ಶ್ರೇಷ್ಠ ಭಾವಗೀತೆಗಳನ್ನು ರಚಿಸಿದ ಕವಿ ಜಿ.ಪಿ.ರಾಜರತ್ನಂ. ರತ್ನನ ಪದಗಳು ಮತ್ತು ನಾಗನ ಪದಗಳು ಇವರು ಕನ್ನಡ ಕಾವ್ಯಕ್ಕೆ ನೀಡಿರುವ ಅಪೂರ್ವ ಕಾಣಿಕೆಗಳು. ಪ್ರಕೃತಿಯ ಸೊಬಗು, ಕೌಟುಂಬಿಕ ಜೀವನದ ಹತ್ತು ಹಲವು ರಸನಿಮಿಷಗಳು, ಕನ್ನಡದ ಉತ್ಕಟಪ್ರೇಮ – ಇವೆಲ್ಲಕ್ಕೂ ಆಡುಭಾಷೆ ಅಭಿವ್ಯಕ್ತಿಮಾಧ್ಯಮವಾಗಬಲ್ಲದು ಎಂಬುದನ್ನು ರಾಜರತ್ನಂ ಯಶಸ್ವಿಯಾಗಿ ತೋರಿಸಿಕೊಟ್ಟಿದ್ದಾರೆ. ತಾಯಿ ಮಗುವನ್ನು ಎತ್ತಿಕೊಂಡಂತೆ, ಒಂದು ಮತ್ತೊಂದನ್ನು ಕೂಡಿ ಅಂಟಿಕೊಂಡಂತೆ ಮಡಿಕೇರಿಯನ್ನು ಎತ್ತಿಕೊಂಡಿದ್ದ ಮಂಜಿನ ಶುಭ್ರತೆಯನ್ನು ಸೂಚಿಸುವ ವರ್ಣನೆ ಇದು:

ಮಲಗಾಕ್ ಸೊಳ್ಳೇಪರದೆ ಕಟ್ಟಿ  
ಒದಿಯಾಕ್ ಒಗದಿದ್ ದುಪಟಿ ಕೊಟ್ಟಿ  
ಪಕ್ಕಾಗ್ ಗಂದದ್ ದೂಪ ಆಕ್ದಂಗ್  
ಮಡಿಕೇರೀಮೇಲ್ ಮಂಜು!

ಸೂರ್ಯನನ್ನು ಹೆಂಡಕುಡುಕನಿಗೆ ಹೋಲಿಸಿ ಬರೆದಿರುವ ಸಮಾಧಾನ ಎಂಬ ಕವನ ಇವರ ಇನ್ನೊಂದು ಉತ್ತಮ ಪದ್ಯ. ಕವಿಯ ಕನ್ನಡ ಪ್ರೇಮ ಎಷ್ಟು ಉತ್ಕಟವಾದುದು ಎಂಬುದನ್ನು ತೋರಿಸುವ ಪಂಕ್ತಿಗಳು:

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ  
ಬಾಯ್ ಒಲಿಸಾಕಿದ್ರೂನೆ–  
ಮೂಗ್ನಲ್ ಕನ್ನಡ್ ಪದವಾಡ್ತೇನಿ!  
ನನ್ ಮನಸನ್ ನೀ ಕಾಣೆ!

ತೀ.ನಂ.ಶ್ರೀಕಂಠಯ್ಯನವರ ಒಲುಮೆ (1932) ಕನ್ನಡ ನವೋದಯ ಸಾಹಿತ್ಯದಲ್ಲಿ ಪ್ರೇಮಕವನಗಳ ಪ್ರಥಮ ಸಂಕಲನ. 1930ರಲ್ಲಿ ಪ್ರಕಟವಾದ ಕುವೆಂಪು ಅವರ ಕೊಳಲು ಸಂಕಲನದಲ್ಲಿಯೇ ಕೆಲವು ಮುಗ್ಧವಾದ ಪ್ರೇಮಗೀತೆಗಳಿವೆ. ಆದರೂ ಪ್ರೇಮಗೀತೆಗಳೇ ಒಂದು ಸಂಕಲನವಾಗಿ ಪ್ರಕಟವಾದುದು ತೀ.ನಂ.ಶ್ರೀ. ಅವರ ಒಲುಮೆಯಲ್ಲೇ. ಸ್ವಲ್ಪವೂ ಆಡಂಬರವಿಲ್ಲದ ಸಹಜವಾದ ಸರಳ ಶೈಲಿಯಲ್ಲಿ ಶುಚಿಯಾದ ಸಾಂಸಾರಿಕ ಪ್ರೇಮವನ್ನು ವರ್ಣಿಸಿದ ಕೀರ್ತಿ ತೀ.ನಂ.ಶ್ರೀ. ಅವರ ಕವನಗಳಿಗೆ ಸಲ್ಲುತ್ತದೆ. ಮೊದಲ ದಿನ ತಮ್ಮ ಜೀವನ ಸಂಗಾತಿಯನ್ನು ಕಂಡ ಸಂದರ್ಭವನ್ನು ನಮ್ಮ ಸಾಮಾಜಿಕ ಸಂಪ್ರದಾಯದ ಹಿನ್ನೆಲೆಯಲ್ಲಿ ಕವಿ ವರ್ಣಿಸಿರುವ ರೀತಿ ಇದು:


ಕೆ.ಎಸ್. ನರಸಿಂಹಸ್ವಾಮಿ

ಬಾರೆ ತಾಯಿ, ಮಾವನವರಿ  
ಗೆರಗು ಎಂದ ಮಾತಿಗೆ –  
ತೋರಿ, ಮೆಲ್ಲನೊಳಗಿನಿಂದ  
ನಡೆದು ಬಂದ ಮಿಂಚಿದು,  
ಅವಳ ಮುಗುಳುನಗೆಯ ಹೊನಲು  
ಮನೆಯನೆಲ್ಲ ತುಂಬಿತು.  
ಅವಳ ಕಣ್ಣ ಬೆಳಕಿನಲ್ಲಿ  
ಹಗಲ ಮಂಕು ಚೆದರಿತು.

ಪ್ರೇಮಗೀತೆಗಳನ್ನೇ ಗಮನಿಸಿ ಹೇಳುವುದಾದರೆ ಭಾವಗೀತೆಗಳ ಇತಿಹಾಸದಲ್ಲಿ ಕೆ.ಎಸ್.ನರಸಿಂಹ ಸ್ವಾಮಿಯವರಿಗೆ ವಿಶಿಷ್ಟವಾದ ಒಂದು ಸ್ಥಾನವಿದೆ. ಪ್ರೇಮದ ತೋಟದಲ್ಲಿ ಕೃಷಿ ಮಾಡಿ, ಮಲ್ಲಿಗೆ, ಇರುವಂತಿಗೆಗಳನ್ನು ಅರಳಿಸಿದವರು ಇವರು. ಕರ್ನಾಟಕದಾದ್ಯಂತ ಮನೆಮನೆಗಳಲ್ಲೂ ಇವರ ಹೆಸರು ಅನುರಣಿಸುವಂತೆ ಮಾಡಿದ ಕವನ ಸಂಕಲನ 'ಮೈಸೂರು ಮಲ್ಲಿಗೆ'. ಇವರದು ಮಲ್ಲಿಗೆ ಶೈಲಿ. ಅಚ್ಚಕನ್ನಡದ ಪದಗಳು, ನವುರಾದ ಭಾವ, ಸುಂದರವಾದ ಸ್ವಪ್ನಲೋಕವನ್ನು ಸೃಷ್ಟಿಸುವ ಉಪಮೆಗಳು ಇವರ ಭಾವಗೀತೆಗಳ ಲಕ್ಷಣಗಳು. ತಮ್ಮ 'ಗೃಹಲಕ್ಷ್ಮಿ'ಯನ್ನು ವರ್ಣಿಸುವ ಇವರ ಕವನದ ಕೆಲವು ಪಂಕ್ತಿಗಳು ಇವು:

ನನ್ನವಳು ನನ್ನೆದೆಯ ಹೊನ್ನಾಡನಾಳುವಳು  
ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ;  
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವು  
ಅವಳೊಮ್ಮೆ ಹೆರಳ ಕೆದರಿ  
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ  
ದೂರದಲಿ ಗಿರಿಯ ಮೇಲೆ  
ಇಳಿದಂತೆ ಇರುಳ ಮಾಲೆ

ಉಂಗುರ, ಇರುವಂತಿಗೆ, ದೀಪದ ಮಲ್ಲಿ, ಐರಾವತ – ಇವು ಕೆ.ಎಸ್.ನರಸಿಂಹ ಸ್ವಾಮಿಯವರ ಇತರ ಕವನ ಸಂಕಲನಗಳು. ಹೆಣ್ಣಿನ ಹೃದಯದ ನಿಕಟವಾದ ಪರಿಚಯ, ಅವಳ ಹೂ ಮನಸಿನ ಹೊಂಗನಸುಗಳ ಚಿತ್ರಣ, ಸಂಸಾರದ ಮಧುರ ನಿಮಿಷಗಳ

ಕಲಾತ್ಮಕ ಅಭಿವ್ಯಕ್ತಿ, ಉಪಮೆಗಳ ನೂತನತೆ, ಶೈಲಿಯ ಮಾರ್ದವತೆ – ಈ ಎಲ್ಲ ಲಕ್ಷಣಗಳೂ ಇವರ ಅನೇಕ ಕವನಗಳಲ್ಲಿ ಎದ್ದು ಕಾಣುತ್ತವೆ. ಮಣ್ಣಿನಂತೆ ಕಾಣುವ ಜೀವನದ ಹೊನ್ನನ್ನು ಅನನ್ಯವಾದ ರೀತಿಯಲ್ಲಿ ತೆರೆದು ತೋರಿಸುವ ಈ ಕವಿ ಜನತೆಗೆ ತೀರ ಹತ್ತಿರ, ತುಂಬ ಪ್ರಿಯ.

ನವೋದಯ ಭಾವಗೀತಕಾರರಾಗಿ ಪ್ರಾರಂಭವಾಗಿ ನವ್ಯ ಪಂಥದ ಕವಿಗಳಾಗಿ ಪರ್ಯವಸಾನಗೊಂಡ ಎಂ.ಗೋಪಾಲಕೃಷ್ಣ ಅಡಿಗರು ಭಾವತರಂಗ ಮತ್ತು ಕಟ್ಟುವೆವು ನಾವು ಕವನಸಂಕಲನಗಳಲ್ಲಿ ಕೆಲವು ಮಹತ್ತ್ವದ ಭಾವಗೀತೆಗಳನ್ನು ನೀಡಿದ್ದಾರೆ. ಇವರ 'ಮೋಹನ – ಮುರಲಿ', ಒಂದು ಸುಂದರ, ಶಕ್ತಿಪೂರ್ಣ ಕಲಾಸೃಷ್ಟಿ. ಪ್ರಾಸ, ಅನುಪ್ರಾಸಗಳು ಮರುಕಳಿಸಿ, ರಹಸ್ಯಪೂರ್ಣವಾದ, ಆದರೆ ನಮ್ಮ ಅಂತರಂಗ ಜಗತ್ತಿನಲ್ಲಿ ಅಸ್ತಿತ್ವದಲ್ಲಿದೆ ಎನ್ನುವಂಥ ವಾಸ್ತವ ಭಾವಗಳನ್ನು ಮೂರ್ತರೂಪದಲ್ಲಿ ನೀಡುವ ಶಕ್ತಿ ಅಡಿಗರಿಗೆ ಸಿದ್ಧಿಸಿದೆ. ಇವರ ಮೋಹನ – ಮುರಲಿಯ ಕೆಲವು ಪಂಕ್ತಿಗಳು ಇವು:

ಹೂವು ಹಾಸಿಗೆ, ಚಂದ್ರ ಚಂದನ, ಬಾಹುಬಂಧನ, ಚುಂಬನ;
ಬಯಕೆ ತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ
ಒಲಿದ ಮಿದುವೆದೆ ರಕ್ತಮಾಂಸದ ಬಿಸಿದು ಸೋಂಕಿನ ಪಂಜರ;
ಇಷ್ಟೆ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ?

ಸಾಮಗಾನ, ಸಂಜೆದಾರಿ, ಚೆಲುವು– ಒಲವುಗಳ ಮೂಲಕ ಭಾವಗೀತೆಯ ಕ್ಷೇತ್ರದಲ್ಲಿ ತಮ್ಮ ಸ್ಥಾನವನ್ನು ಸ್ಥಾಪಿಸಿದ ಕವಿ ಜಿ.ಎಸ್.ಶಿವರುದ್ರಪ್ಪ. ಸರಳವಾದ ಮಾತುಗಳಲ್ಲಿ ಸಾಮಾನ್ಯ ಎಂದು ನಮಗೆ ತೋರುವಂಥ ವಿಷಯಗಳಲ್ಲಿ ಕೂಡ ಆಶ್ಚರ್ಯವನ್ನು ವ್ಯಕ್ತಪಡಿಸಿ, ಮೋಹಕವಾದ ವರ್ಣನೆಯಿಂದ, ನಮ್ಮ ಮನಸ್ಸನ್ನು ಸೆರೆಹಿಡಿಯುವ ಶಕ್ತಿ ಈ ಕವಿಯ ಶೈಲಿಯಲ್ಲುಂಟು. ಬಯಲನ್ನು – ಅದೂ ಬರಿಯ ಬಯಲನ್ನು ಕಂಡು ಕೂಡ ಕವಿ ರೋಮಾಂಚನಗೊಳ್ಳುತ್ತಾರೆ 'ಎರಡು ಬಯಲ ಬೇಟಕಾಗಿ ಇರುಳು ತೆರೆಯ ಕಟ್ಟಿದೆ, ಮೌನವೊಂದೇ ಹಾಡಿದೆ'. ಮಲ್ಲಿಗೆ, ಜಡೆ, ಮುಂಬಯಿ ಜಾತಕ, ಮಬ್ಬಿನಿಂದ ಮಬ್ಬಿಗೆ, ಸಂಜೆದಾರಿ ಮುಂತಾದ ಇವರ ಕವನಗಳು ಭಾವಗೀತೆಯ ಕ್ಷೇತ್ರಕ್ಕೆ ಕವಿ ನೀಡಿರುವ ಅಮರವಾದ ಕಾಣಿಕೆಗಳು. ಪು.ತಿ.ನ. ಅವರು ಇವರ ಜಡೆ ಎಂಬ ಕವನವನ್ನು 'ಭಾವೋಪಮಾಪೂರ್ಣವಾದದ್ದು' ಎಂದು ಕರೆದಿದ್ದಾರೆ. ಭವಪ್ರಪಂಚದಲ್ಲಿ ಆರಂಭವಾಗಿ ಭಾವಪ್ರಪಂಚದಲ್ಲಿ ವಿಹರಿಸಿ ಭವ್ಯತಾಪ್ರಪಂಚದ ಸೀಮೆಯಲ್ಲಿ ಲೀನವಾಗಿದೆ ಕವನ. ಕಣ್ಣಿಗೆ ಕಾಣುವ ಹೆಣ್ಣಿನ ಜಡೆಗಳ ವೈವಿಧ್ಯದಿಂದ ಪ್ರಾರಂಭವಾಗಿ, ಪುರಾಣಪ್ರಪಂಚದ ಪ್ರಖ್ಯಾತ ಜಡೆಗಳನ್ನು ನೆನೆದು ಓ ಓ ಈ ಜಡೆಗೆಲ್ಲಿ ಕಡೆ ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿ ಅನಂತರ ಪ್ರಕೃತಿಯ ವಿವಿಧ ಮುಖಗಳಲ್ಲಿ ಹೆಣೆದುಕೊಂಡಿರುವ ಜಡೆಗಳನ್ನು ವರ್ಣಿಸುವ ಪಂಕ್ತಿಗಳು ಇವು:

ಪು.ತಿ. ನರಸಿಂಹಾಚಾರ್

ಸಂಜೆಯಲಿ ಹಗಲು ಕೆದರುವ ಕತ್ತಲೆಯ
ಕಾಳಜಡೆ
ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯ
ಬೆಳಕು ಜಡೆ
ಒಮ್ಮೊಮ್ಮೆ ಮುಗಿಲಿನಲಿ ತೇಲುತ್ತ ಬರುವಂಥ
ಬೆಳ್ಳಕ್ಕಿಗಳ ಜಡೆ,
ಕೊಂಚೆಗಳ ಜಡೆ
ಮರಮರದಿ ಬಳಕುತ್ತ ಹೂ ಬಿಟ್ಟ ಬಳ್ಳಿ ಜಡೆ
ಕಾಡು ಬಯಲಿನ ಹಸರು ಹಸರದಲಿ ಹರಿಹರಿದು
ಮುನ್ನಡೆವ ಹೊಳೆಯ ಜಡೆ;
ಶ್ರೇಣಿ ಶ್ರೇಣಿಗಳಾಗಿ ಹರಿದಿರುವ ಗಿರಿಯ ಜಡೆ

ಚೆನ್ನವೀರ ಕಣವಿಯವರೂ ಪ್ರಕೃತಿಯನ್ನು ಮೆಚ್ಚಿ ಆರಾಧಿಸಿದ ಕವಿ. ಕಾವ್ಯಾಕ್ಷಿ, ಆಕಾಶಬುಟ್ಟಿ, ಭಾವಜೀವಿ, ಮಧುಚಂದ್ರ, ನೆಲ ಮುಗಿಲು ಮುಂತಾದ ಕವನಸಂಕಲನಗಳ ಅನೇಕ ಕವನಗಳು ಇವರ ಕಾವ್ಯಪ್ರತಿಭೆಯನ್ನು ಎತ್ತಿ ಸಾರುತ್ತಿವೆ. ನಿಯಮೋಲ್ಲಂಘನ ಎಂಬುದು ಇವರ ಅತ್ಯುತ್ತಮ ಕವನಗಳಲ್ಲಿ ಒಂದು. ಅದರ ಒಂದು ಚರಣ ಹೀಗಿದೆ:

ತರುಲತಾದಿಗಳಲ್ಲಿ ಚಿಗುರಿಲ್ಲ ಹೊಗರಿಲ್ಲ–
ಅಸ್ಥಿಪಂಜರವಾಗಿ ಸವೆಯುತಿಹವು
ಎಲ್ಲೊ ಅಂಗೈಯಗಲ ಹಸಿರು ಕಂಡರೆ ಸಾಕು
ಮನದ ಆಸೆಗಳಲ್ಲಿ ಸೇರುತಿಹವು

'ಕಾಲ' ಚೆನ್ನವೀರ ಕಣವಿಯವರ ಇನ್ನೊಂದು ಉತ್ತಮ ಕವನ.

ಈ ಸಮೀಕ್ಷೆಯಲ್ಲಿ ಸಾಂಕೇತಿಕವಾಗಿ ಕನ್ನಡದ ಕೆಲವು ಪ್ರಮುಖ ಕವಿಗಳ ಕಾವ್ಯಶೈಲಿಯನ್ನು ತೋರಿಸಲಾಗಿದೆ. ಇವರಲ್ಲದೆ ಇನ್ನೂ ನೂರಾರು ಜನ ಭಾವಗೀತಕಾರರು ತಮ್ಮ ಕವನಸಂಕಲನಗಳ ಮೂಲಕ ಭಾವಗೀತೆಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಅವರಲ್ಲಿ ಪ್ರಮುಖರಾದ ಕೆಲವರು: ಪೇಜಾವರ ಸದಾಶಿವರಾಯರು, ಎಂ.ವಿ.ಸೀತಾರಾಮಯ್ಯ, ಸಿದ್ಧಯ್ಯ ಪುರಾಣಿಕ, ರಂಗನಾಥ ಎಕ್ಕುಂಡಿ, ಎಸ್.ಐ. ಇಂಚಲ, ಡಿ.ಎಸ್.ಕರ್ಕಿ, ಕುಸುಮಾಕರ ದೇವರಗೆಣ್ಣೂರ, ಸೇಡಿಯಾಪು ಕೃಷ್ಣಭಟ್ಟ, ಕಯ್ಯಾರ ಕಿಞ್ಞಣ್ಣ ರೈ, ಗಣಪತಿರಾವ್ ಪಾಂಡೇಶ್ವರ, ಜಿ.ಗುಂಡಣ್ಣ, ಗಂಗಾಧರ ಚಿತ್ತಾಲ, ಮಧುರಚೆನ್ನ, ದಿನಕರ ದೇಸಾಯಿ, ಎಸ್.ವಿ.ಪರಮೇಶ್ವರಭಟ್ಟ, ರಂ.ಶ್ರೀ.ಮುಗಳಿ, ಬ.ಗಿ.ಯಲ್ಲಟ್ಟಿ, ಸಾಲಿ ರಾಮಚಂದ್ರರಾಯರು, ಜಿ.ವರದರಾಜರಾವ್, ಅರ್ಚಕ ವೆಂಕಟೇಶ, ಅಕಬರ ಅಲಿ, ಹಿ.ಮ.ನಾಗಯ್ಯ.


ಕಯ್ಯಾರ ಕಿಞ್ಞಣ್ಣ ರೈ

ಭಾವಗೀತೆಗಳ ಇತಿಹಾಸ ಸುಮಾರು ಅರ್ಧ ಶತಮಾನಗಳ ಅವಧಿಯದ್ದು, ಈ ಐವತ್ತು ವರ್ಷಗಳಲ್ಲಿ ರಚಿತವಾಗಿರುವ ಭಾವಗೀತೆಗಳು ಗುಣದಲ್ಲೂ ಸಂಖ್ಯೆಯಲ್ಲೂ ಯಾವುದೇ ಸಾಹಿತ್ಯಕ್ಕೂ ಹೆಮ್ಮೆ ಸಮಾಧಾನಗಳನ್ನು ತರುವ ಅಂತಸ್ಸತ್ವವನ್ನು ಉಳ್ಳವು ಎಂಬ ಅಂಶ ಗಮನಾರ್ಹವಾದದ್ದು. ಈ ಭಾವಗೀತ ಪ್ರಕಾರವೇ ಮುಂದೆ ನವ್ಯಕಾವ್ಯದ ಜನನಕ್ಕೆ ಬೀಜಾಂಕುರವಾಯಿತು. (ಪಿ.ಎಸ್.)

**ಕನ್ನಡದಲ್ಲಿ ಭಾಷಾಂತರಗಳು :** ಕನ್ನಡ ಸಾಹಿತ್ಯ ತನ್ನ ಸಾವಿರದ ಮುನ್ನೂರು ವರ್ಷಗಳ ಇತಿಹಾಸದಲ್ಲಿ ಉದ್ದಕ್ಕೂ ಭಾಷಾಂತರಗಳಿಂದ ಪುಷ್ಟವಾಗಿದೆ. ಈ ಭಾಷಾಂತರ ಪರಂಪರೆಯನ್ನು ಕವಿರಾಜಮಾರ್ಗದ ಕಾಲದಿಂದಲೂ ಗುರುತಿಸಬಹುದು. ಹಿಂದೆ ಸಂಸ್ಕೃತ ಪ್ರಾಕೃತಗಳಿಂದ, ಆಧುನಿಕ ಕಾಲದಲ್ಲಿ ವಿಶೇಷವಾಗಿ ಇಂಗ್ಲಿಷಿನಿಂದ ಭಾಷಾಂತರಗಳು ಬಂದಿವೆ. ಪ್ರಾಚೀನ ಕನ್ನಡ ಸಾಹಿತ್ಯವೆಲ್ಲ ಭಾಷಾಂತರವೆಂದು ಹೇಳುವುದುಂಟು. ಇದು ಪೂರ್ಣ ಸತ್ಯವಲ್ಲ. ಹಿಂದಿನ ಕನ್ನಡ ಕವಿಗಳು ಸಂಸ್ಕೃತ ಪ್ರಾಕೃತಗಳಿಂದ ವಸ್ತುವನ್ನು ಸ್ವೀಕರಿಸುತ್ತಿದ್ದರೆಂಬ ಬಹು ಸ್ಥೂಲವಾದ ಅರ್ಥದಲ್ಲಿ ಅವರ ಕೃತಿಗಳನ್ನು ಭಾಷಾಂತರಗಳೆನ್ನಬಹುದು. ಆದರೆ ಅವರು ಪ್ರತಿಭೆ, ಸ್ವೋಪಜ್ಞತೆಗಳನ್ನು ತಮ್ಮ ಕಾವ್ಯಗಳಲ್ಲಿ ಮೇಳವಿಸುತ್ತಿದ್ದರು. ಅವರಲ್ಲಿ ಭಾಷಾಂತರ ಎನ್ನುವುದು ಕೇವಲ ಒಂದು ಅಂಗವಾಗಿತ್ತಷ್ಟೆ. ಆದ್ದರಿಂದ ಹಿಂದಿನ ಕನ್ನಡ ಕಾವ್ಯಗಳನ್ನು ಬರಿಯ ಭಾಷಾಂತರಗಳೆನ್ನದೆ ಸ್ವತಂತ್ರ ಕೃತಿಗಳೆಂದೇ ಪರಿಗಣಿಸಬೇಕಾಗುತ್ತದೆ. ಪಂಪ, ಕುಮಾರವ್ಯಾಸರ ಭಾರತಗಳನ್ನು ಒಂದರ್ಥದಲ್ಲಿ ಭಾಷಾಂತರಗಳೆನ್ನಬಹುದಾದರೂ ಮತ್ತೊಂದು ದೃಷ್ಟಿಯಿಂದ ಅವು ಸ್ವತಂತ್ರ ಕಾವ್ಯಗಳೇ. ಇಂದು ಭಾಷಾಂತರವೆಂದರೆ ಯಾವ ನಿಷ್ಕೃಷ್ಟವಾದ ಖಚಿತವಾದ ಕಲ್ಪನೆಯಿದೆಯೋ ಅದು ಹಿಂದಿನವರಿಗಿರಲಿಲ್ಲ. ಭಾಷಾಂತರಿಸುವುದು ಅವರ ಉದ್ದೇಶವಲ್ಲ. ಆದರೆ ಇಂದಿನ ಅರ್ಥದಲ್ಲಿ ಕೂಡ ಭಾಷಾಂತರದ ಅಂಶಗಳನ್ನು ಪ್ರಾಚೀನ ಕನ್ನಡ ಸಾಹಿತ್ಯ ವಿಪುಲವಾಗಿ ತೋರಿಸಿಕೊಡುತ್ತಿದೆ ಎಂಬುದು ಗಮನಾರ್ಹ ಸಂಗತಿ. ರೂಪಾಂತರ, ಭಾವಾನುವಾದ, ಸಂಗ್ರಹಾನುವಾದ, ವಿಸ್ತಾರಾನುವಾದ, ನಿಕಟಾನುವಾದ ಮುಂತಾದ ಬಗೆಗಳಿಗೆಲ್ಲ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಿದರ್ಶನಗಳಿವೆ. ನಮ್ಮ ಹಿಂದಿನ ಕವಿಗಳು ಯಾವುದೋ ಒಂದು ಆಕರವನ್ನು ಆಧಾರವಾಗಿಟ್ಟುಕೊಂಡಿದ್ದರೂ ಅದಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ ವರ್ಣನಾವಸರದಲ್ಲಿ ನಾನಾ ಮೂಲಗಳಿಂದ ಅನುವಾದಿಸುವುದೂ ಉಂಟು. ಒಟ್ಟಿನಲ್ಲಿ

ಪ್ರಾಚೀನ ಕನ್ನಡ ಕೃತಿಗಳು ಸ್ಥೂಲವಾಗಿ ಅಂಶತಃ ಭಾಷಾಂತರಗಳಾಗಿವೆ. ನಿಯತವಾದ ಅರ್ಥದಲ್ಲಿ ಅಪ್ಪಟ ಭಾಷಾಂತರಗಳನ್ನು ನಾವು ನೋಡುವುದು ಆಧುನಿಕ ಕಾಲದಲ್ಲೇ. ಹಳಗನ್ನಡದಲ್ಲಿ ಕಂಡುಬರುವ ಕೆಲವು ಭಾಷಾಂತರ ನಿದರ್ಶನಗಳನ್ನು ಮೊದಲು ನೋಡಬಹುದು. ದಂಡಿಯ ಕಾವ್ಯಾದರ್ಶವನ್ನು ಬಹುಮಟ್ಟಿಗೆ ಅವಲಂಬಿಸಿರುವ ಕವಿರಾಜಮಾರ್ಗದ ಪ್ರಾರ್ಥನಾಪದ್ಯವೇ ಭಾಷಾಂತರವಾಗಿದೆ. ಜನ್ನನ ಯಶೋಧರಚರಿತೆ ಕಾವ್ಯವೆಲ್ಲ ಬಹುಮಟ್ಟಿಗೆ ವಾದಿರಾಜನ ಸಂಸ್ಕೃತ ಯಶೋಧರ ಚರಿತದ ನಿಕಟಾನುವಾದವಾಗಿದೆ.

ಹೊಸಗನ್ನಡ ಸಾಹಿತ್ಯ ಭಾಷಾಂತರಗಳಿಗೆ ಬಹಳ ಋಣಿಯಾಗಿದೆ. 16ನೆಯ ಶತಮಾನದ ಅನಂತರ ಮಡುಗಟ್ಟಿ ನಿಂತ ನೀರಾಗಿದ್ದ ಕನ್ನಡ ಸಾಹಿತ್ಯವಾಹಿನಿಗೆ 19–20ನೆಯ ಶತಮಾನಗಳಲ್ಲಿ ಹೊಸ ಪಾತ್ರವನ್ನು ನಿರ್ಮಿಸಿದ ಶ್ರೇಯಸ್ಸು ಭಾಷಾಂತರಗಳದು. ಅದರಲ್ಲೂ ಇಂಗ್ಲಿಷಿನಿಂದಾದ ಭಾಷಾಂತರಗಳದು. ವಿಲಿಯಂ ಕೇರಿಯ ಬೈಬಲಿನ ಭಾಷಾಂತರ 1829ರಲ್ಲೇ ಪ್ರಕಟವಾಯಿತು. ಮುದ್ರಾಮಂಜೂಷವನ್ನು ಬಿಟ್ಟರೆ ಇದೇ ಹೊಸಗನ್ನಡದಲ್ಲಿ ಮೊದಲು ಅನುವಾದವಾದ ಗದ್ಯಗ್ರಂಥ.

ಕನ್ನಡದಲ್ಲಿ ಆಗಿರುವ ಭಾಷಾಂತರಗಳಲ್ಲಿ ನಾಟಕಗಳು ಬಹುಸಂಖ್ಯೆಯಲ್ಲಿವೆ. ಕನ್ನಡದಲ್ಲಿ ನಮಗೆ ಮೊದಲು ಸಿಕ್ಕುವ ನಾಟಕ 17ನೆಯ ಶತಮಾನದಲ್ಲಿ ರಚಿತವಾದ ಸಿಂಗರಾರ್ಯನ ಮಿತ್ರವಿಂದಾಗೋವಿಂದ. ಇದು ಸಂಸ್ಕೃತ ರತ್ನಾವಳಿಯ ಅನುವಾದ. ಮುಂದೆ 19–20ನೆಯ ಶತಮಾನಗಳಲ್ಲಿ ಮುಖ್ಯ ಸಂಸ್ಕೃತ ನಾಟಕಗಳೆಲ್ಲ ಕನ್ನಡಕ್ಕೆ ಬಂದುವು. ಬಸವಪ್ಪಶಾಸ್ತ್ರಿಗಳು ಶಾಕುಂತಲ, ವಿಕ್ರಮೋರ್ವಶೀಯ, ರತ್ನಾವಳಿ, ಉತ್ತರರಾಮಚರಿತೆ ಮತ್ತು ಚಂಡಕೌಶಿಕ ನಾಟಕಗಳನ್ನು ಭಾಷಾಂತರಿಸಿದರು. ಅವರ ಶಾಕುಂತಲದ ಅನುವಾದ ಶ್ರೇಷ್ಠ ವೆನಿಸಿದೆ. ಅವರಿಗಿಂತ ಮೊದಲೆ ಚುರಮುರಿ ಶೇಷಗಿರಿರಾಯರು ಶಾಕುಂತಲವನ್ನು ಹಾಡಿನ ರೂಪದಲ್ಲಿ ಅನುವಾದಿಸಿದ್ದರು. ಬಿ.ಕೃಷ್ಣಪ್ಪನವರು ಅದನ್ನು ಗದ್ಯದಲ್ಲಿ ಪರಿವರ್ತಿಸಿದ್ದರು. ಧೋಂಡೊ ನರಸಿಂಹ ಮುಳಬಾಗಿಲರು ಉತ್ತರರಾಮಚರಿತೆ, ಮಾಲವಿಕಾಗ್ನಿಮಿತ್ರ, ಮೃಚ್ಛಕಟಿಕ, ವೇಣೀಸಂಹಾರಗಳನ್ನು ಭಾಷಾಂತರಿಸಿದ್ದಾರೆ. ಅಳಸಿಂಗಾಚಾರ್ಯರಿಂದ ಸ್ವಪ್ನವಾಸವದತ್ತ, ಪಂಚರಾತ್ರಗಳು, ಮೈಸೂರು ಸೀತಾರಾಮಶಾಸ್ತ್ರಿಗಳಿಂದ ಪ್ರತಿಮಾನಾಟಕ, ನಂಜನಗೂಡು

ಬಸವಪ್ಪಶಾಸ್ತ್ರಿಗಳು

ಸುಬ್ಬಾಶಾಸ್ತ್ರಿಗಳಿಂದ ಮೃಚ್ಛಕಟಿಕ, ಅನಂತನಾರಾಯಣಶಾಸ್ತ್ರಿಗಳಿಂದ ನಾಗಾನಂದ ಅನುವಾದಗೊಂಡಿವೆ. ವೇಣೀಸಂಹಾರವನ್ನು ಸೀತಾರಾಮಶಾಸ್ತ್ರಿಗಳೂ ಜಯರಾಯಾಚಾರ್ಯರೂ ಭಾಷಾಂತರಿಸಿದ್ದಾರೆ. ಈ ಎಲ್ಲ ಭಾಷಾಂತರಗಳೂ ಕಂದವೃತ್ತಗಳ ರೂಪದಲ್ಲಿವೆ. ಹೊಸಗನ್ನಡ ಛಂದಸ್ಸಿನಲ್ಲೂ ಸಂಸ್ಕೃತ ನಾಟಕಗಳನ್ನು ಅನುವಾದಿಸಲಾಗಿದೆ. ಎಸ್.ವಿ.ಪರಮೇಶ್ವರ ಭಟ್ಟರು ಕಾಳಿದಾಸ, ಭಾಸರ ಎಲ್ಲ ನಾಟಕಗಳನ್ನೂ ಕೆ.ಕೃಷ್ಣಮೂರ್ತಿಯವರು ಪ್ರತಿಮಾನಾಟಕ, ಉತ್ತರರಾಮಚರಿತೆ, ಯಜ್ಞಫಲ, ಆಶ್ಚರ್ಯ ಚೂಡಾಮಣಿಗಳನ್ನೂ ಕನ್ನಡಿಸಿದ್ದಾರೆ. ಎಲ್.ಗುಂಡಪ್ಪನವರು ಭಾಸನ ಏಕಾಂಕ ನಾಟಕಗಳನ್ನೂ ಪ್ರತಿಜ್ಞಾ ಯೌಗಂಧರಾಯಣ ನಾಟಕ, ಸ್ವಪ್ನವಾಸವದತ್ತ ನಾಟಕಗಳನ್ನೂ ಅನುವಾದಿಸಿದ್ದಾರೆ. ತೀ.ನಂ.ಶ್ರೀಯವರ ರಾಕ್ಷಸನ ಮುದ್ರಿಕೆ ಸಂಸ್ಕೃತ ಮುದ್ರಾರಾಕ್ಷಸದ ಸಂಗ್ರಹಾನುವಾದ. ಸಿ.ಪಿ.ಕೆ.ಅವರಿಂದ ಸ್ವಪ್ನವಾಸವದತ್ತ, ಪ್ರತಿಜ್ಞಾಯೌಗಂಧರಾಯಣ, ರತ್ನಾವಳಿ, ನಾಗಾನಂದ, ವೇಣೀಸಂಹಾರಗಳು ಭಾಷಾಂತರಗೊಂಡಿವೆ.

ಇಂಗ್ಲಿಷಿನಿಂದ ನಾಟಕಗಳನ್ನು ಅನುವಾದಿಸಿದವರಲ್ಲಿ ಎಂ.ಎಲ್. ಶ್ರೀಕಂಠೇಶಗೌಡರು ಮೊದಲಿಗರು. ಅವರು ಷೇಕ್ಸ್‌ಪಿಯರನ ಮ್ಯಾಕ್‌ಬೆತ್, ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ನಾಟಕಗಳನ್ನು ಅನುಕ್ರಮವಾಗಿ ಪ್ರತಾಪರುದ್ರದೇವ, ಪ್ರಮೀಳಾರ್ಜುನೀಯ ಎಂದು ಕನ್ನಡಕ್ಕೆ ತಂದಿದ್ದಾರೆ. ಚುರಮುರಿಯವರು ಒಥೆಲೊ ನಾಟಕವನ್ನು ರಾಘವೇಂದ್ರರಾವ್ ನಾಟಕ ಎಂದೂ ಸಿ.ಆನಂದರಾಯರು ರೋಮಿಯೊ ಅಂಡ್ ಜೂಲಿಯಟ್ ನಾಟಕವನ್ನು ರಾಮವರ್ಮ ಲೀಲಾವತಿ ಎಂದೂ ಪರಿವರ್ತಿಸಿದ್ದಾರೆ. ಮ್ಯಾಕ್‌ಬೆತ್ ನಾಟಕವನ್ನು ಡಿ.ವಿ.ಜಿ.ಯವರು ಸೊಗಸಾಗಿ ಕನ್ನಡಿಸಿದ್ದಾರೆ. ಕುವೆಂಪು ಅವರ ರಕ್ತಾಕ್ಷಿ ಮತ್ತು ಬಿರುಗಾಳಿ ಷೇಕ್ಸ್‌ಪಿಯರನ ನಾಟಕಗಳ ರೂಪಾಂತರಗಳು. ಷೇಕ್ಸ್‌ಪಿಯರನ ಕೆಲವು ನಾಟಕಗಳು ಮಾಸ್ತಿಯವರಿಂದಲೂ ಅನುವಾದಗೊಂಡಿವೆ. ಕೆ.ಎಸ್.ಭಗವಾನ್ ಅವರಿಂದ ಜೂಲಿಯಸ್ ಸೀಸರ್, ಮ್ಯಾಕ್‌ಬೆತ್, ಒಥೆಲೋಗಳು ತರ್ಜುಮೆಗೊಂಡಿವೆ. ಬರ್ನಾರ್ಡ್‌ಷಾನ ಪಿಗ್ಮೇಲಿಯನ್ ಮತ್ತು ಮೇಜರ್ ಬಾರ್ಬರಾಗಳನ್ನು ವಿ.ಸೀ.ಕನ್ನಡಿಸಿದ್ದಾರೆ.

ಗ್ರೀಕ್ ಸಾಹಿತ್ಯದಿಂದ ಅನೇಕ ನಾಟಕಗಳು ಕನ್ನಡಕ್ಕೆ ಬಂದಿವೆ. ಪಾರಸಿಕರು, ಅಂತಿಗೊನೆ, ಏಜಾಕ್ಸ್, ದೊರೆ ಈಡಿಪಸ್, ಕಪ್ಪೆಗಳು, ಬದ್ಧಪ್ರಮಿತ್ಯೂಸ್, ಮೀಡಿಯಾ ಇವುಗಳನ್ನು ಕನ್ನಡಕ್ಕೆ ತಂದಿರುವವರು ಬಿ.ಎಂ.ಶ್ರೀ., ಕೆ.ವಿ.ರಾಘವಾಚಾರ್, ಸುಜನಾ, ಟಿ.ವಿ.ವೆಂಕಟಾಚಲಶಾಸ್ತ್ರೀ ಮತ್ತು ಕೆ.ಎಸ್.ನರಸಿಂಹಸ್ವಾಮಿ. ಇಬ್ಸನ್ನನ ಕೆಲವು ನಾಟಕಗಳನ್ನು ಎಸ್.ಜಿ.ಶಾಸ್ತ್ರೀ, ಅಡಿಗ, ಶ್ರೀರಂಗರು ಕನ್ನಡಿಸಿದ್ದಾರೆ. ಮೋಲಿಯರನ ಎರಡು ನಾಟಕಗಳನ್ನು ಎ.ಎನ್.ಮೂರ್ತಿರಾಯರು ಅನುವಾದಿಸಿದ್ದಾರೆ. ಗಯಟೆಯ ಫೌಸ್ಟ್ ನಾಟಕದ ಪ್ರಥಮ ಭಾಗ ಪು.ತಿ.ನ.ಅವರಿಂದ ಭಾಷಾಂತರವಾಗಿದೆ. ಪಿ.ಲಂಕೇಶರ 'ದೊರೆ ಈಡಿಪಸ್ ಮತ್ತು ಅಂತಿಗೊನೆ' ಇತ್ತೀಚಿನ ಸಮರ್ಥ ಅನುವಾದ ಗ್ರಂಥ. ಷೇಕ್ಸ್‌ಪಿಯರನ ಎ.ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ನಾಟಕವನ್ನು ನಿಸಾರ್ ಅಹಮದ್ ಕನ್ನಡಕ್ಕೆ ಅದೇ ಹೆಸರಿನಲ್ಲಿ ಅನುವಾದಿಸಿದ್ದಾರೆ. ಆಲ್ಬರ್ಟ್ ಕಾಮುವಿನ ಎರಡು ನಾಟಕಗಳನ್ನು (ಕಾಲಿಗುಲ; ತಪ್ಪಿದ ಎಳೆ) ಡಿ.ಎ.ಶಂಕರ್, ಅ.ರಾ.ಮಿತ್ರ ಅನುವಾದಿಸಿದ್ದಾರೆ.

ಹೊಸಗನ್ನಡ ಕವಿತೆ ಭಾಷಾಂತರಗಳಿಂದಲೇ ಮೊದಲಾಯಿತು. 19ನೆಯ ಶತಮಾನದ ಮಧ್ಯಭಾಗದಲ್ಲಿ ಇಂಗ್ಲಿಷ್, ಜರ್ಮನ್ ಮುಂತಾದ ಭಾಷೆಗಳಿಂದ ಕ್ರಿಶ್ಚಿಯನ್ ಮಿಷನರಿಗಳು ಕವಿತೆಗಳನ್ನೂ ಗೀತೆಗಳನ್ನೂ ಅನುವಾದಿಸಿ ಪ್ರಕಟಿಸಿದ್ದರು. ಕಳೆದ ಶತಮಾನದ ಕಡೆಯಲ್ಲಿ ಮತ್ತು ಈ ಶತಮಾನದ ಮೊದಲ ಎರಡು ದಶಕಗಳಲ್ಲಿ ಈ ಅನುವಾದಕಾರ್ಯ ವ್ಯಾಪಕವಾಗಿ ನಡೆಯಿತು. ಈ ಕ್ಷೇತ್ರದಲ್ಲಿ ಹಟ್ಟಿಯಂಗಡಿ ನಾರಾಯಣರಾಯ, ಎಸ್.ಜಿ.ನರಸಿಂಹಾಚಾರ್ಯ, ಜಯರಾಯಾಚಾರ್ಯ, ಪಂಜೆ ಮಂಗೇಶರಾಯ, ಗೋವಿಂದ ಪೈ, ಬಿ.ಎಂ.ಶ್ರೀಕಂಠಯ್ಯನರು ಮುಖ್ಯರು. 1921ರಲ್ಲಿ ಪ್ರಕಟವಾದ ಶ್ರೀಯವರ ಇಂಗ್ಲಿಷ್ ಗೀತಗಳು ಹೊಸಗನ್ನಡ ಕಾವ್ಯದ ಚರಿತ್ರೆಯಲ್ಲಿ ಒಂದು ಮೈಲುಗಲ್ಲು. ಅದು ಕನ್ನಡ ಕವಿಗಳಿಗೆ ಹೊಸ ಹೊಸ ವಸ್ತುಗಳನ್ನು ತೋರಿಸಿಕೊಟ್ಟಿತಲ್ಲದೆ ಹೊಸ ಲಯಗಳನ್ನು ರೂಪಿಸಿ, ಭಾವಗೀತೆಗಳ ಯುಗಕ್ಕೆ ನಾಂದಿಯಾಯಿತು. ಕುವೆಂಪು ಅವರ ದೇವಕೀತು (ಹೌಂಡ್ ಆಫ್ ಹೆವನ್), ಬೊಮ್ಮನಹಳ್ಳಿಯ ಕಿಂದರಿಜೋಗಿ, ಎಲ್.ಗುಂಡಪ್ಪನವರ ಸೊಹ್ರಾಬ್–ರುಸ್ತುಂ, ಅಡಿಗರ ಹುಲ್ಲಿನ ದಳಗಳು (ಲೀವ್ಸ್ ಆಫ್ ಗ್ರಾಸ್) ಇತ್ಯಾದಿ ಅನುವಾದಗಳನ್ನು ಈ ಕ್ಷೇತ್ರದಲ್ಲಿ ಹೆಸರಿಸಬಹುದು. ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳು ಎಲ್.ಎಸ್.ಶೇಷಗಿರಿರಾವ್ ಹಾಗೂ ಜಿ.ಎ.ರೆಡ್ಡಿಯವರಿಂದ ಗದ್ಯರೂಪದಲ್ಲಿ ಕನ್ನಡಕ್ಕೆ ತರ್ಜುಮೆಗೊಂಡಿವೆ. ಏಟ್ಸ್ ಕವಿಯ 50 ಕವನಗಳನ್ನು ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ ಅನುವಾದಿಸಿ ಚಿನ್ನದ ಹಕ್ಕಿ ಎಂಬ ಸಂಕಲನವನ್ನು ತಂದಿದ್ದಾರೆ. ವೆರಿಯರ್ ಎಲ್ವಿನ್‌ರ ಕೃತಿಯನ್ನು ಕಾಡಿನ ಹಾಡುಗಳು ಎಂಬ ಶೀರ್ಷಿಕೆಯಲ್ಲಿ ಸಿ.ಪಿ.ಕೆ.ಯವರು ಕನ್ನಡಿಸಿದ್ದಾರೆ.

ಸಂಸ್ಕೃತದಿಂದ ಕೆಲವು ಕಾವ್ಯಗಳನ್ನು ಕನ್ನಡಕ್ಕೆ ತರಲಾಗಿದೆ. ಎ.ಆರ್.ಕೃಷ್ಣಶಾಸ್ತ್ರಿಗಳ ವಚನ ಭಾರತ ಹಾಗೂ ಕಥಾಮೃತ ಇವು ಗಣ್ಯವಾದ ಕೃತಿಗಳು. ಶ್ರೀ ಮನ್ಮಹಾಭಾರತ ಸಂಪುಟಗಳು ಸುಬ್ರಹ್ಮಣ್ಯ ಕೌಶಿಕರು ಕನ್ನಡಕ್ಕೆ ತಂದ ಸರಳಾನುವಾದಗಳು. ಎನ್.ರಂಗನಾಥಶರ್ಮರು. ಶ್ರೀಮದ್ವಾಲ್ಮೀಕಿ ರಾಮಾಯಣವ್ ಕೃತಿಯನ್ನು ಅನುವಾದಿಸಿದ್ದಾರೆ. ಚುರಮುರಿಯವರಿಂದ ಬಾಣನ ಕಾದಂಬರಿ ಅನುವಾದಗೊಂಡಿದೆ. ಎಸ್.ವಿ.ಪರಮೇಶ್ವರ ಭಟ್ಟರು ಗೀತಗೋವಿಂದ, ಗಾಥಾಸಪ್ತಶತಿ, ಅಮರಶತಕ, ಭರ್ತೃಹರಿಶತಕ, ಬುದ್ಧಚರಿತಗಳನ್ನು ಕನ್ನಡಿಸಿದ್ದಾರೆ. ಅಶ್ವಘೋಷನ ಬುದ್ಧಚರಿತೆ ಹಾಗೂ ಸೌಂದರನಂದ ಕೃತಿಗಳನ್ನು ಇತ್ತೀಚೆಗೆ ಎಲ್.ಬಸವರಾಜು ಅವರು ಅನುವಾದಿಸಿದ್ದಾರೆ. ಬೇಂದ್ರೆಯವರ ಮೇಘದೂತದ ಅನುವಾದ ಶ್ಲಾಘ್ಯವಾಗಿದೆ. ಎಂ.ಜಿ.ನಂಜುಂಡಾರಾಧ್ಯರು ಶಿಶುಪಾಲವಧವನ್ನು, ಕಡವ ಶಂಭುಶರ್ಮರು ಸೌಂದರನಂದವನ್ನು, ವೈ.ನಾಗೇಶಶಾಸ್ತ್ರಿಗಳು ರಘುವಂಶವನ್ನು, ಅಮ್ಮೆಂಬಳ ಶಂಕರನಾರಾಯಣರು ಕುಮಾರಸಂಭವವನ್ನು, ಸಿ.ಪಿ.ಕೆ.ಯವರು ಯಶೋಧರಚರಿತೆ, ಸೌಂದರ್ಯ ಲಹರಿಗಳನ್ನು, ಮೇವುಂಡಿ ಮಲ್ಲಾರಿಯವರು ಶಿವಾನಂದಲಹರಿಯನ್ನು, ಕೆ.ಕೃಷ್ಣಮೂರ್ತಿ ಅವರು ಕಿರಾತಾರ್ಜುನೀಯದ ಕೆಲವು ಸರ್ಗಗಳನ್ನು ಅನುವಾದಿಸಿದ್ದಾರೆ. ತೀ.ನಂ.ಶ್ರೀ.ಯವರ ಬಿಡಿಮುತ್ತು ಸಂಸ್ಕೃತ ಸುಭಾಷಿತಗಳ ಚೆಲುವಾದ ಭಾಷಾಂತರ.

ಅರಿಸ್ಟಾಟಲ್ ಮತ್ತು ಹೋರೇಸನ ಕಾವ್ಯಮೀಮಾಂಸೆ ಎನ್.ಬಾಲಸುಬ್ರಹ್ಮಣ್ಯಂ ಅವರಿಂದ, ಷೆಲ್ಲಿಯ ಡಿಫೆನ್ಸ್ ಆಫ್ ಪೊಯಟ್ರಿ (ಕಾವ್ಯಸಮರ್ಥನೆ) ಸಿ.ಮಹದೇವಪ್ಪನವರಿಂದ ಹಡ್ಸನ್, ಅಬರ್‌ಕ್ರಾಂಬಿ ಅವರ ಕೃತಿಗಳು ಸಿ.ಪಿ.ಕೆ. ಅವರಿಂದ, ಎಲಿಯಟ್ಟನ ಕೆಲವು ಬರೆಹಗಳು ಆರ್.ನಾಗರಾಜ ಮತ್ತು ಸಿ.ಪಿ.ಕೆ ಅವರಿಂದ ಭಾಷಾಂತರಗೊಂಡಿವೆ. ಪ್ರಮುಖವಾದ ಸಂಸ್ಕೃತ ಅಲಂಕಾರಗ್ರಂಥಗಳನ್ನೆಲ್ಲ ಕೆ.ಕೃಷ್ಣಮೂರ್ತಿಯವರೂ ಧನಂಜಯನ ದಶರೂಪಕವನ್ನು ಕೆ.ವಿ.ಸುಬ್ಬಣ್ಣನವರೂ ಕನ್ನಡಿಸಿದ್ದಾರೆ.

ಕಥೆಕಾದಂಬರಿಗಳ ರಂಗದಲ್ಲಿಯೂ ಕೆಲವು ಭಾಷಾಂತರಗಳಿವೆ. ರೆ.ವೆಗಲ್ ಮಾಡಿದ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್ ಗ್ರಂಥದ ಭಾಷಾಂತರ ಯಾತ್ರಿಕನ ಸಂಚಾರ ಎಂಬ ಹೆಸರಿನಲ್ಲಿ 1847ರಲ್ಲಿ ಪ್ರಕಟವಾಯಿತು. ಮುದ್ರಾಮಂಜೂಷವನ್ನು ಬಿಟ್ಟರೆ ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಭಾಷಾಂತರಗೊಂಡಿರುವುದು ಇದೇ ಮೊದಲನೆಯದು. ಬಿ.ವೆಂಕಟಾಚಾರ್ಯರು ಬಂಗಾಲಿಯಿಂದ ಅನುವಾದಿಸಿದ ಮತ್ತು ಗಳಗನಾಥರು ಮರಾಠಿಯಿಂದ ರೂಪಾಂತರಿಸಿದ ಕಾದಂಬರಿಗಳು ಕನ್ನಡ ಕಾದಂಬರಿ ಪ್ರಪಂಚಕ್ಕೆ ತಳಹದಿ ಹಾಕಿದುವು. ದೇವದಾಸಿ ಜೀವನ ಚಿತ್ರಿಸುವ ಮರಾಠಿಯ ಜೋಗವ್ವವನ್ನು ಶಾ.ಮಂ.ಕೃಷ್ಣರಾಯರು ಕನ್ನಡಕ್ಕೆ ತಂದಿದ್ದಾರೆ. ವೆಂಕಟಾಚಾರ್ಯರು ಬಂಕಿಮಚಂದ್ರರನ್ನೂ ಗಳಗನಾಥರು ಹರಿನಾರಾಯಣ ಆಪ್ಟೆಯವರನ್ನೂ ಕನ್ನಡಕ್ಕೆ ತಂದರು. ಈಚೆಗೆ ಇಂಗ್ಲಿಷಿನಿಂದ ಅನೇಕ ಕಥೆಕಾದಂಬರಿಗಳು ಕನ್ನಡಕ್ಕೆ ಬಂದಿವೆ.

ವಾಲ್ಟರ್ ಸ್ಕಾಟ್‌ನ ಕೆನಿಲ್‌ವರ್ತ್‌ಅನ್ನು ನಾಗೇಗೌಡರು, ಸ್ಟೀವನ್‌ಸನ್ನನ ಡಾ.ಜೆಕಿಲ್ ಅಂಡ್ ಮಿ.ಹೈಡನ್ನು ಆನಂದರು (ಪುರುಷಾಮೃಗ), ಚಾರಲ್ಸ್ ಡಿಕನ್ಸ್‌ನ ಡೇವಿಡ್ ಕಾಪರ್‌ಫೀಲ್ಡನ್ನು ಎ.ಪಿ.ಸುಬ್ಬಯ್ಯನವರು, ಜೇನ್ ಆಸ್ಟೆನ್ನಳ ಪ್ರೈಡ್ ಅಂಡ್ ಪ್ರಿಜುಡಿಸ್ ಅನ್ನು ದೇಜಗೌ ಅವರು (ಹಮ್ಮು-ಬಿಮ್ಮು), ಜಾರ್ಜ್ ಎಲಿಯಟ್ಟಳ ಸೈಲಾಸ್ ಮಾರ್ನರನ್ನು ಎಂ.ರಾಮರಾಯರು, ರೈಡರ್ ಹಗಾರ್ಡನಷಿ ಅನ್ನು ಎ.ಮೈಲಾರಿರಾಯರು (ಆಷಾ) ಭಾಷಾಂತರಿಸಿದ್ದಾರೆ. ಥೋರೋನ ವಾಲ್ಡನ್ ದೇವುಡು ನರಸಿಂಹಶಾಸ್ತ್ರಿಗಳಿಂದ, ಹೆಮಿಂಗ್ವೇಯ ಓಲ್ಡ್ ಮ್ಯಾನ್ ಅಂಡ್ ದಿ ಸೀ, ಪಂಕಜ ಅವರಿಂದ (ಗೆದ್ದು ಸೋತವನು), ಹಾಥಾರ್ನನ ಹೌಸ್ ಆಫ್ ಸೆವನ್ ಗೇಬಲ್ಸ್ ಎಂ.ವಿ.ಸೀತಾರಾಮಯ್ಯನವರಿಂದ (ಏಳು ಇಪ್ಪಾರಿನ ಮನೆ) ಕನ್ನಡಿಸಲ್ಪಟ್ಟಿವೆ. ಥಾಮಸ್ ಹಾರ್ಡಿಯ ಮೇಯರ್ ಆಫ್ ಕ್ಯಾಸ್ಟರ್‌ಬ್ರಿಡ್ಜನ್ನು ಆನಂದರಾಯರು ಸಂಗ್ರಹಾನುವಾದ ಮಾಡಿದ್ದಾರೆ (ಏರಿಳಿತ). ಇದೇ ಲೇಖಕನ ಎರಡು ಕಾದಂಬರಿಗಳನ್ನು ಗೌರೀಶ ಕಾಯ್ಕಿಣಿ ಅನುವಾದಿಸಿದ್ದಾರೆ. ರಿಟರ್ನ್ ಆಫ್ ದಿ ನೇಟೀವ್ ಮತ್ತು ಟೆಸ್ ಆಫ್ ದ ಡಿ ಅರ್ಬರ್ ವಿಲೆ, ಕಾದಂಬರಿಗಳನ್ನು ವಿ.ನಾಗರಾಜರಾವ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಆಲ್ಬರ್ಟ್ ಕಾಮುವಿನ ದಿ ಔಟ್ ಸೈಡರ್ (ಅನ್ಯ) ಡಿ.ಎ.ಶಂಕರ್ ಅವರಿಂದ ಅನುವಾದವಾಗಿದೆ. ಅವರೇ ಮುಲ್ಕ್ ರಾಜ್ ಆನಂದರ ಅನ್‌ಟಚಬಲ್ಸ್ ಕೃತಿಯನ್ನು ಅಸ್ಪೃಶ್ಯ ಎಂಬ ಹೆಸರಿನಲ್ಲಿ ಕನ್ನಡೀಕರಿಸಿದ್ದಾರೆ. ಆರ್.ಕೆ.ನಾರಾಯಣ್, ಮಾಳಗಾಂವಕರ್ ಮೊದಲಾದ ಭಾರತೀಯ ಇಂಗ್ಲಿಷ್ ಲೇಖಕರ ಕೆಲವು ಕಾದಂಬರಿಗಳೂ ಕನ್ನಡಕ್ಕೆ ಬಂದಿವೆ. ಎ.ಎನ್.ಮೂರ್ತಿರಾಯರು ಅನೇಕ ಪಾಶ್ಚಾತ್ಯ ಕಥೆಗಳನ್ನು ಯೋಧನ ಪುನರಾಗಮನ ಮತ್ತು ಪಾಶ್ಚಾತ್ಯ ಸಣ್ಣಕಥೆಗಳು ಎಂಬೆರಡು ಸಂಕಲನಗಳಲ್ಲಿ ಕೊಟ್ಟಿದ್ದಾರೆ. ಸಿ.ಪಿ.ಕೆ. ಅವರ ಹನ್ನೊಂದು ಹೊರಗಿನ ಕತೆಗಳನ್ನೂ ಇಲ್ಲಿ ಹೆಸರಿಸಬಹುದು. ಎರಿಕ್ ಫ್ರಾಮ್‌ನ ಮನೋವೈಜ್ಞಾನಿಕ ಕೃತಿಯನ್ನು 'ಪ್ರೀತಿಸುವುದೆಂದರೆ' ಎಂದು ಕೆ.ವಿ.ನಾರಾಯಣ ಅವರು ಅನುವಾದಿಸಿದ್ದಾರೆ.

ಇತರ ಭಾಷೆಗಳ ಕೆಲವು ಕೃತಿಗಳು ಇಂಗ್ಲಿಷಿನ ಮೂಲಕ ಕನ್ನಡಕ್ಕಿಳಿದಿವೆ. ವಿಕ್ಟರ್ ಹ್ಯೂಗೋವಿನ ಲೆ ಮಿಸರಬಲ್ ಕಾದಂಬರಿಯನ್ನು ಎ.ಪಿ.ಸುಬ್ಬಯ್ಯ ಮತ್ತು ನಾ.ಕಸ್ತೂರಿ ಅನುವಾದಿಸಿದ್ದಾರೆ. ಡ್ಯೂಮಾನ ತ್ರೀ ಮಸ್ಕೆಟೀರ್ಸ್‌ನ್ನು ಮಾಧವ ಬಾಳಿಗರು, ವಾಲ್ಟೇರನ ಕ್ಯಾಂಡಿಡ್ ಅನ್ನು ಜಿ.ಪಿ.ರಾಜರತ್ನಂ ಭಾಷಾಂತರಿಸಿದ್ದಾರೆ. ಲಿಯೊ ಟಾಲ್‌ಸ್ಟಾಯ್ ಅವರ ರಷ್ಯನ್ ಕಾದಂಬರಿ ರಿಸರಕ್ಷನ್ ದೇಜಗೌ ಅವರಿಂದ ಪುನರುತ್ಥಾನವಾಗಿ ಕನ್ನಡಕ್ಕೆ ಲಭಿಸಿದೆ. ಅದೇ ಸಾಹಿತಿಯ ವಾರ್ ಅಂಡ್ ಪೀಸ್ ಎಂಬ ಕೃತಿಯನ್ನು ಸಮರ ಮತ್ತು ಶಾಂತಿ ಎಂದು ಅನುವಾದಿಸಿದ ದೇಜಗೌ ಅವರೇ ಅನ್ನ ಕರೇನಿನ ಕೃತಿಯನ್ನು ಕನ್ನಡಕ್ಕೆ ನೀಡಿದ್ದಾರೆ. ಟಾಲ್‌ಸ್ಟಾಯ್‌ನ ಕೆಲವು ಕಥೆಗಳನ್ನು ಎಲ್.ಗುಂಡಪ್ಪನವರೂ ಅಲೆಕ್ಸಿ ಟಾಲ್‌ಸ್ಟಾಯ್ ಅವರ ಆರ್ಡಿಯಲನ್ನು ಆನಂದರೂ ಗಾರ್ಕಿಯ ಆತ್ಮಕಥೆಯನ್ನು ನಿರಂಜನರೂ ಭಾಷಾಂತರಿಸಿದ್ದಾರೆ. ಗೊರೂರು, ಮ.ಶ್ರೀಧರಮೂರ್ತಿ, ತ.ರಾ.ಸು., ಅನಕೃ ಮೊದಲಾದವರು ರಷ್ಯನ್ ಕೃತಿಗಳನ್ನು ಅನುವಾದಿಸಿಕೊಟ್ಟಿದ್ದಾರೆ. ಬುದ್ದಣ್ಣಹಿಂಗಮಿರೆ ಅವರು ಪುಷ್ಕಿನ್ ಕವಿತೆಗಳು ಎಂಬ ಹೆಸರಿನಲ್ಲಿ 41 ಕವಿತೆಗಳನ್ನು ಅನುವಾದಿಸಿದ್ದಾರೆ. ಶಾ.ಬಾಲೂರಾಯರು ಆನ್ನಾ ಆದ್ಮತೋವ ಎಂಬ ಕವಯಿತ್ರಿಯ ನೂರು ಕವನಗಳನ್ನು ಕನ್ನಡಕ್ಕೆ ತಂದಿದ್ದಾರೆ. ಸಿ.ಪಿ.ಕೆ. ಅವರು ಟಾಲ್‌ಸ್ಟಾಯ್‌ನ ಕಲೆ ಕುರಿತ ಗ್ರಂಥವನ್ನು ಕನ್ನಡಿಸಿದ್ದಾರೆ.

ಎಸ್.ವಿ.ಪರಮೇಶ್ವರ ಭಟ್ಟ, ಎಂ.ರಾಮರಾವ್ ಮತ್ತು ರಾಮಚಂದ್ರಯ್ಯನವರು ಅನೇಕ ಇಂಗ್ಲಿಷ್ ಪ್ರಬಂಧಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ಲೇಟೋವಿನ ರಿಪಬ್ಲಿಕ್ ಕೆ.ವೆಂಕಟರಾಮಪ್ಪನವರಿಂದ, ಮ್ಯಾಕಿಯವೆಲ್ಲಿಯ ರಾಜನೀತಿ ನವರತ್ನ ರಾಮರಾಯರಿಂದ ಭಾಷಾಂತರಗೊಂಡಿವೆ. ಎಚ್.ಎಲ್.ನಾಗೇಗೌಡರ ಪ್ರವಾಸಿ ಕಂಡ ಇಂಡಿಯಾದ ಸಂಪುಟಗಳು ಪ್ರವಾಸ ಸಾಹಿತ್ಯದ ಅನುವಾದ. ಲೂಯಿ ಫಿಶರ್, ಲಾರೆನ್ಸ್ ಬನ್ಯನ್ ಮೊದಲಾದವರು ಬರೆದ ಜೀವನ ಚರಿತ್ರೆಗಳೂ ಕೆಲವು ಆತ್ಮಕಥೆಗಳೂ ಕನ್ನಡಕ್ಕೆ ಬಂದಿವೆ. ಗಾಂಧೀ, ನೆಹರು, ವಿವೇಕಾನಂದ, ಅರವಿಂದ, ಟಾಗೂರ್, ಕೃಷ್ಣಾ ಹಥೀಸಿಂಗ್, ರಾಜಾಜಿ ಮೊದಲಾದ ಭಾರತೀಯ ಲೇಖಕರ ಸಾಹಿತ್ಯ ಕನ್ನಡದಲ್ಲಿ ಸಿಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಗಾಂಧೀಭವನಗಳು ಹಾಗೂ ಭಾರತೀಯ ವಿದ್ಯಾಭವನ ಕೇಂದ್ರಮೂ ಮಹಾತ್ಮಗಾಂಧೀಜಿಯವರ ಕೃತಿಗಳನ್ನೂ ಬರೆಹ, ಭಾಷಣಗಳನ್ನೂ ಜೀವನ ಚರಿತ್ರೆಗಳನ್ನೂ ಕನ್ನಡಕ್ಕೆ ಸಮಗ್ರವಾಗಿ ತಂದಿವೆ. ಆನಂದರು ಟಾಲ್‌ಸ್ಟಾಯ್‌ನ ಆತ್ಮಕಥೆಯ ಮೂರು ಭಾಗಗಳನ್ನು ಅನುವಾದಿಸಿದ್ದಾರೆ. ನೆಹರು ಅವರ ಡಿಸ್ಕವರಿ ಆಫ್ ಇಂಡಿಯಾ ಭಾರತದರ್ಶನ ಎಂಬ ಹೆಸರಿನಿಂದ ಅನುವಾದಗೊಂಡಿದೆ. ಬರ್ಟ್ರಂಡ್ ರಸಲ್‌ನ ಇಂಪ್ಯಾಕ್ಟ್ ಆಫ್ ಸೈನ್ಸ್ ಆನ್ ಸೊಸೈಟಿ ಸಮಾಜದ ಮೇಲೆ ವಿಜ್ಞಾನದ ಪ್ರಭಾವ ಎಂಬ ಹೆಸರಿನಿಂದ ಭಾಷಾಂತರಗೊಂಡಿದೆ.

ನೂರಾರು ವಿಜ್ಞಾನ ಗ್ರಂಥಗಳು ಇಂಗ್ಲಿಷ್ ಹಾಗೂ ಇತರ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡಿವೆ ಎಂದು ಅಂದಾಜಿಸಲಾಗಿದೆ. ಇವನ್ನು ಪಠ್ಯಪುಸ್ತಕಗಳು, ಜನಪ್ರಿಯ ಗ್ರಂಥಗಳು, ಆಕರ ಗ್ರಂಥಗಳು ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. 1969ರ ವರೆಗೂ ಪ್ರಕಟಗೊಂಡಿರುವ ಅನುವಾದ ಗ್ರಂಥಗಳು ಬಹುಪಾಲು ಮೊದಲಿನ ಎರಡು ವಿಭಾಗಗಳಿಗೇ ಸೀಮಿತವಾಗಿವೆ. ಈಗ ಸಿಕ್ಕಿರುವ ಮೊದಲ ಅನುವಾದಿತ ಗ್ರಂಥದ ಹೆಸರು ಅಂಕಗಣಿತವು (ಇಂಗ್ಲಿಷಿನಿಂದ ಅನುವಾದಿಸಿದವರು ಚನ್ನಬಸಪ್ಪಾ ಬಸಲಿಂಗಪ್ಪಾ ಧಾರವಾಡಕರ, 1873). 1969ರಿಂದ ಈಚೆಗೆ ಮುಖ್ಯವಾಗಿ ವಿಶ್ವವಿದ್ಯಾಲಯಗಳ ನೆರವಿನಿಂದ ಆಕರ ಗ್ರಂಥಗಳ ಕನ್ನಡ ಅನುವಾದಗಳು ಬರತೊಡಗಿವೆ. ಕನ್ನಡ ಬೋಧನ ಮಾಧ್ಯಮವಾಗಲು ಈ ಬಗೆಯ ಶಾಸ್ತ್ರಗ್ರಂಥಗಳ ಅನುವಾದ ಅಗತ್ಯವೆನಿಸಿದೆ. ಈ ಕಾರ್ಯ ಬಹು ತ್ವರೆಯಿಂದ ಜರುಗುತ್ತಿದ್ದು ಆಧಾರ ಗ್ರಂಥಗಳೆಲ್ಲವುಗಳ ಅನುವಾದ ನಡೆಯುತ್ತಿದೆ.

ಹಿಂದಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಮರಾಠಿ, ಉರ್ದು, ಪಂಜಾಬಿ ಮುಂತಾದ ಭಾರತೀಯ ಭಾಷೆಗಳೂ ಕನ್ನಡಕ್ಕೆ ಕೊಡುಗೆಗಳನ್ನಿತ್ತಿವೆ. ಈ ದಿಶೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್‌ಗಳು ಮಹತ್ತ್ವದ ಪಾತ್ರವಹಿಸಿವೆ. ಹಿಂದಿಯಿಂದ ರಾಮಚರಿತಮಾನಸ, ಆಂಸೂ ಮುಂತಾದ ಕಾವ್ಯಗಳೂ ಪ್ರೇಮಚಂದ್, ಯಶಪಾಲ್, ವೃಂದಾವನಲಾಲವರ್ಮ, ಹಜಾರಿಪ್ರಸಾದ್‌ದ್ವಿವೇದಿ, ದೇವಕಿನಂದನ ಖತ್ರಿ, ಜಯಶಂಕರ ಪ್ರಸಾದ್, ಮೊದಲಾದವರ ಕಥೆ ಕಾದಂಬರಿ ನಾಟಕ ಪ್ರಬಂಧಗಳೂ ಭಾಷಾಂತರಗೊಂಡಿವೆ. ದ.ಕೃ.ಭಾರದ್ವಾಜ, ಗುರುನಾಥ ಜೋಶಿ, ಕುಮುದಪ್ರಿಯ, ಎಂ.ಎಸ್.ಕೃಷ್ಣ ಮೂರ್ತಿ, ಮೇ.ರಾಜೇಶ್ವರಯ್ಯ, ಪ್ರಧಾನ್ ಗುರುದತ್ತ, ತಿಪ್ಪೇಸ್ವಾಮಿ ಮೊದಲಾದವರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಬಂಗಾಲಿಯಿಂದ ಶರಚ್ಚಂದ್ರ, ಟಾಗೂರ್ ಮೊದಲಾದವರ ಕೃತಿಗಳನ್ನು ಅಹೋಬಲ ಶಂಕರ, ಎಚ್.ಕೆ.ವೇದವ್ಯಾಸಾಚಾರ್ಯ, ಶಂಕರಾನಂದ ಸರಸ್ವತಿ, ಎಚ್.ವಿ.ಸಾವಿತ್ರಮ್ಮ ಮೊದಲಾದವರು ಕನ್ನಡಿಸಿದ್ದಾರೆ. ಟಾಗೂರರ ಪ್ರಬಂಧಗಳು ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿಯವರಿಂದ ಅನುವಾದಿತ ವಾಗಿವೆ. ತಮಿಳಿನಿಂದ ಮತ್ತೂರು ಕೃಷ್ಣಮೂರ್ತಿ, ಎಲ್.ಗುಂಡಪ್ಪ, ಕೆ.ಸಂಪದ್ಗಿರಿರಾವ್ ಮೊದಲಾದವರೂ ತೆಲುಗಿನಿಂದ ಕೆ.ವೆಂಕಟರಾಮಪ್ಪ, ಕೋ.ಚೆನ್ನಬಸಪ್ಪ, ವೀರಭದ್ರ, ಆರ್.ವಿ.ಎಸ್.ಸುಂದರಂ ಮೊದಲಾದವರೂ ಮಲಯಾಳಂನಿಂದ ನಾ.ಕಸ್ತೂರಿ, ಕರುಣಾಕರನ್, ಬಿ.ಕೆ.ತಿಮ್ಮಪ್ಪ ಮೊದಲಾದವರೂ ಮರಾಠಿಯಿಂದ ಬಾಲಚಂದ್ರ ಫಾಣೇಕರ, ವಿ.ಎಂ.ಇನಾಂದಾರ್, ಸರಸ್ವತಿಗಜಾನನರಿಸಬೂಡ ಶಾ.ಮಂ.ಕೃಷ್ಣರಾಯ, ಮೊದಲಾದವರೂ ಭಾಷಾಂತರಿಸಿದ್ದಾರೆ. ಮರಾಠಿಯ ಛಾಯಾದಾತಾರ್‌ರ ಸ್ತ್ರೀ ಪುರುಷ ಕೃತಿ ಸರಸ್ವತಿಯವರಿಂದ ಕನ್ನಡೀಕರಣಗೊಂಡಿದೆ. ಪರ್ಷಿಯನ್ ಕವಿ ರೂಮಿಯನ 64 ಕವಿತೆಗಳನ್ನು ಡಿ.ಆರ್.ನಾಗರಾಜ್‌ರವರು ವಸಂತಸ್ಮೃತಿ ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ. ಹಿಂದಿಯ ನಿರ್ಮಲ್‌ವರ್ಮಾ ಅವರ ಕಾದಂಬರಿ ವೇದಿನ್ ಕನ್ನಡಕ್ಕೆ ಆ ದಿನಗಳು ಎಂಬ ಹೆಸರಿನಲ್ಲಿ ಅನುವಾದಗೊಂಡಿದೆ (ತಿಪ್ಪೇಸ್ವಾಮಿ).

ಸಂಸ್ಕೃತದಿಂದ ವೇದ, ಉಪನಿಷತ್, ಗೀತೆ, ಪುರಾಣ, ರಾಮಾಯಣ, ಭಾರತಾದಿಗಳೂ ಹಲವಾರು ಶಾಸ್ತ್ರಕೃತಿಗಳೂ ಕನ್ನಡಕ್ಕೆ ಬಂದಿವೆ. ಈ ದಿಶೆಯಲ್ಲಿ ಮೈಸೂರು ಅರಮನೆಯಿಂದ ಪ್ರಕಟವಾಗಿರುವ ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲೆಯಲ್ಲಿ 34 ಸಂಪುಟಗಳು ಅನುವಾದಗೊಂಡು ಬೆಳಕು ಕಂಡಿವೆ. ಎಚ್.ಪಿ.ವೆಂಕಟರಾವ್ ಅವರು ಋಗ್ವೇದ ಸಂಹಿತೆ ಸಂಪುಟಗಳನ್ನು ಅನುವಾದಿಸಿದ್ದಾರೆ. ಟಿಳಕರ ಶ್ರೀಮದ್ಭಗವದ್ಗೀತಾ ರಹಸ್ಯ ಕೃತಿಯನ್ನು ವೆಂಕಟೇಶ ಭೀಮರಾವ್ ಆಲೂರ ಮತ್ತು ವಿ.ಎಸ್.ಕೆರೂರು ಅವರು ಅನುವಾದಿಸಿದ್ದಾರೆ.

ಭಾಷಾಂತರ ಪ್ರಕಾರ ದಿನೇ ದಿನೇ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತಿದೆ. ಹೊರಗಿನ ಸಾಹಿತ್ಯ ಕೃತಿಗಳನ್ನು ಪರಿಚಯಿಸಿಕೊಳ್ಳಲು ಹಾಗೂ ವಿಜ್ಞಾನ, ಮಾನವಿಕ, ಶಾಸ್ತ್ರಗ್ರಂಥಗಳು ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯನ್ನು ತಿಳಿಯಲು ಭಾಷಾಂತರಕ್ಕೆ ಮೊರೆ ಹೋಗಲಾಗುತ್ತಿದೆ. ಇತ್ತೀಚಿನ ಅನುವಾದಗಳಲ್ಲಿ ಕೆಲವನ್ನು ಇಲ್ಲಿ

ಹೆಸರಿಸಬಹುದು. ಕೆ.ಎಂ.ಜಾರ್ಜ್ ಸಂಪಾದಿಸಿರುವ ಕಂಪ್ಯಾರಿಟಿವ್ ಇಂಡಿಯನ್ ಲಿಟರೇಚರ್ ಸಂಪುಟಗಳು ಕನ್ನಡಕ್ಕೆ ತರ್ಜುಮೆಗೊಂಡಿವೆ. ಇವನ್ನು ಎಲ್.ಎಸ್.ಶೇಷಗಿರಿ ರಾವ್ ಸಂಪಾದಿಸಿದ್ದು ಭಾರತೀಯ ಸಾಹಿತ್ಯ ಸಮೀಕ್ಷೆ ಎಂಬ ಶೀರ್ಷಿಕೆಯಡಿ ಹೊರತರಲಾಗಿದೆ. ಗ್ರೀಕ್ ಮೂಲದ ಲಾಂಜಿನಸ್‌ನ ಕೃತಿಯನ್ನು ಔನ್ನತ್ಯ ವಿಚಾರ ಚರ್ಚೆ ಎಂಬ ಶೀರ್ಷಿಕೆಯಲ್ಲಿ ಎನ್.ಬಾಲಸುಬ್ರಹ್ಮಣ್ಯರವರು ಕನ್ನಡಿಸಿದ್ದಾರೆ. ಜಾರ್ಜ್ ಆರ್‌ವೆಲ್‌ರ ನೈನ್‌ಟೀನ್ ಎಯ್ಟಿಫೋರ್ ಎಂಬ ಕಾದಂಬರಿಯನ್ನು ಎಚ್.ಎಚ್.ಅಣ್ಣಯ್ಯ ಗೌಡರು ಕನ್ನಡಕ್ಕೆ ತಂದಿದ್ದಾರೆ (1984).

ಸಂಸ್ಕೃತ ಕೃತಿಗಳು ಮತ್ತೆ ಮತ್ತೆ ಭಾಷಾಂತರಗೊಂಡಿರುವುದನ್ನು ಕಾಣಬಹುದು. ಉದಾಹರಣೆಗೆ ಜಯದೇವ ಕವಿಯ ಗೀತಗೋವಿಂದ ಕೃತಿ ಬಿ.ಶ್ರೀನಿವಾಸಮೂರ್ತಿಯವರಿಂದ ಭಾಷಾಂತರಗೊಂಡಿದೆ. ಬಿ.ಗೋಪಾಲರಾವ್ ಅವರು ಕಾಳಿದಾಸ ಭಾಸಾದಿಗಳ ವಿವಿಧ ಕೃತಿಗಳನ್ನು ಕನ್ನಡಕ್ಕೆ ಮೂಲ ಮತ್ತು ಅರ್ಥವ್ಯಾಖ್ಯೆ ಸಹಿತ ಅನುವಾದಿಸಿ ಪ್ರಕಟಿಸಿದ್ದಾರೆ. ಕಾಳಿದಾಸ ವಿರಚಿತ ಕುಮಾರ ಸಂಭವ ಮಹಾಕಾವ್ಯ (1999) ಅಂತಹವುಗಳಲ್ಲಿ ಒಂದು. ಕಲ್ಹಣನ ರಾಜತರಂಗಿಣಿಯನ್ನು ನಿರ್ಪಾಜೆ ಭೀಮಭಟ್ಟರು ಭಾಷಾಂತರಿಸಿದ್ದಾರೆ (1994). ಶೇಷ ನವರತ್ನರಿಂದ ನಾಲ್ಕು ವೇದಗಳು ಎಂಬ ಸಂಪುಟಗಳು ಹೊರಬಂದಿವೆ. ಶ್ರೀಮಧ್ವಾಚಾರ್ಯರ ದ್ವೈತ ವೇದಾಂತ ದರ್ಶನ ಎಂಬ ಶೀರ್ಷಿಕೆಯಲ್ಲಿ ಸುರೇಂದ್ರನಾಥ್ ದಾಸಗುಪ್ತರ ಆಂಗ್ಲ ಕೃತಿಯನ್ನು ಆರ್.ಜಿ.ಕುಲಕರ್ಣಿಯವರು ಕನ್ನಡೀಕರಿಸಿದ್ದಾರೆ.

ಇಂಗ್ಲಿಷೇತರ ಐರೋಪ್ಯ ಸಾಹಿತ್ಯವನ್ನು ಪರಿಚಯಿಸುವ ವಿವಿಧ ಭಾಷಾಂತರ ಗ್ರಂಥಗಳ ಪ್ರಕಟಣೆ ಮುಂದುವರೆದಿದೆ. ಕೆ.ಎಲ್.ಗೋಪಾಲ ಕೃಷ್ಣರಾವ್‌ರವರು ತೊಲ್‌ಸ್ತೋಯ್ ನೀಳ್ಗತೆಗಳು ಎಂಬುದರಲ್ಲಿ ರಷ್ಯನ್ ಮಹಾಕವಿ ಟಾಲ್‌ಸ್ಟಾಯ್‌ರವರ ಕಥಾಸಾಹಿತ್ಯವನ್ನು ಅನುವಾದಿಸಿದ್ದಾರೆ. ಜಾನ್ ರೀಡ್‌ರ ಟೆನ್ ಡೇಸ್ ದಟ್ ಷುಕ್ ದ ವರ್ಲ್ಡ್ ಎಂಬ ರಷ್ಯದ ಕ್ರಾಂತಿ ಕುರಿತ ಕೃತಿಯನ್ನು ಎಚ್.ಎಸ್.ಹರಿಶಂಕರ ಅವರು ಕನ್ನಡೀಕರಿಸಿದ್ದಾರೆ. ಪ.ವಿ.ಚಂದ್ರಶೇಖರ್ ರಷ್ಯಾದ ಸಣ್ಣ ಕಥೆಗಳು ಎಂಬ ಆಯ್ದ ಕಥೆಗಳ ಸಂಕಲನವನ್ನು ಕನ್ನಡಕ್ಕೆ ತಂದಿದ್ದಾರೆ. ಜರ್ಮನ್ ಮೂಲದ ಜಾರ್ಜ್ ಬುಶ್ನರ್‌ರ ಕೃತಿಯನ್ನು ವಾಯ್‌ಜೆಕ್ ಎಂಬ ಶೀರ್ಷಿಕೆಯಲ್ಲಿ ಕೆ.ವಿ.ಸುಬ್ಬಣ್ಣ ಅನುವಾದಿಸಿದ್ದಾರೆ. (ಸಿ.ಪಿ.ಕೆ.)

ಮರಾಠಿ ಸಾಹಿತ್ಯ ಅನುವಾದಕರ ಗಮನವನ್ನು ಹೆಚ್ಚಾಗಿ ಸೆಳೆದಿದೆ. ದುರ್ಗಾಭಾಗವತರ ವ್ಯಾಸಪರ್ವ ಕೃತಿ ಗೌರೀಶ ಕಾಯ್ಕಿಣಿಯವರಿಂದ ತರ್ಜುಮೆಗೊಂಡಿದೆ. ಅಶೋಕ ಪ್ರಭಾಕರರ ಮರಾಠಿ ಕೃತಿ ಕ್ಷಿತಿಜ ಅಂಕೋಲಾರಿಂದ ಕನ್ನಡಕ್ಕೆ ಲಭ್ಯವಾಗಿದೆ. ರಘುನಾಥ ಬಿಡೆಯವರ ಮರಾಠಿಯ ವಾಲ್ಮೀಕಿ ರಾಮಾಯಣದಲ್ಲಿ ಶಾಪ ಮತ್ತು ವರ (ಅನು. ಸರಸ್ವತಿ ಗಜಾನನ ರಿಸಬೂಡ), ಮಹಾಭಾರತದಲ್ಲಿ ಕುಮಾರ ಸಂಭವ (ಅನು. ವಿರೂಪಾಕ್ಷ ಕುಲಕರ್ಣಿ) ಕನ್ನಡಕ್ಕೆ ಬಂದಿವೆ. ಅಶೋಕ ನೀಲಗಾರರು ಶಿವಾಜಿ ಸಾವಂತರ ಮರಾಠಿ ಕೃತಿ ಮೃತ್ಯುಂಜಯವನ್ನು ಅನುವಾದಿಸಿದ್ದಾರೆ. ನರೇಂದ್ರ ಪಾಲ್ ಸಿಂಘರ ಪಂಜಾಬಿ ಮೂಲದ ಕೃತಿಯನ್ನು ಕತ್ತಲೆಯಿಂದ ಕಗ್ಗತ್ತಲೆಗೆ ಎಂಬ ಶೀರ್ಷಿಕೆಯಲ್ಲಿ ಪಿ.ಶಶಿಕಲಾ ಅನುವಾದಿಸಿದ್ದಾರೆ. ಚಂದ್ರಕಾಂತ ಪೋಕಳೆ ಅವರಿಂದ ಮರಾಠಿಯ ಮಹಾನಂದ ಕಾದಂಬರಿ ಮಾನು ಎಂಬ ಹೆಸರಿನಲ್ಲಿ ಕನ್ನಡೀಕರಣಗೊಂಡಿದೆ. ಅದೇ ಭಾಷೆಯ ಶರಣಕುಮಾರ ಲಿಂಬಾಳೆಯವರ ಕೃತಿಯನ್ನು ಅಕ್ರಮ ಸಂತಾನ ಎಂದು ದು.ನಿಂ.ಬೆಳಗಲಿ ಭಾಷಾಂತರಿಸಿದ್ದಾರೆ. ಮರಾಠಿಯಿಂದ ಲಕ್ಷ್ಮಣಗಾಯಕ್‌ವಾಡರ. ಉಚಲ್ಯಾ ಎಂಬ ಕಾದಂಬರಿಯನ್ನು ಇವರೇ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರೇಮಚಂದರ ನಿರ್ಮಲಾ ಎಂಬ ಕಾದಂಬರಿಯ ಕನ್ನಡ ಅವತರಣಿಕೆಯನ್ನು ತಿಪ್ಪೇಸ್ವಾಮಿಯವರು ತಂದಿದ್ದಾರೆ. ಒರಿಯ ಮೂಲದ ನಿಶ್ಶಬ್ದದಲ್ಲಿ ಕವಿ ಎಂಬ ಸೀತಾಕಾಂತ ಮಹಾಪಾತ್ರರ ಒಂದು ಕೃತಿ ಸಿ.ಪಿ.ಕೆ.ಯವರಿಂದ ಕನ್ನಡಕ್ಕೆ ಬಂದಿದೆ. ಹೀಗೆ ತೆಲುಗು, ತಮಿಳು, ಬಂಗಾಲಿ, ಮರಾಠಿ ಮೊದಲಾದ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ.

ವಿವಿಧ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳು ಹಾಗೂ ಧಾರ್ಮಿಕ ಕೇಂದ್ರಗಳು ಭಾಷಾಂತರ ಕೃತಿಗಳನ್ನು ಹೊರತರುವಲ್ಲಿ ನಿರತವಾಗಿವೆ. ಇದರಿಂದಾಗಿ ಬೇರೆ ಬೇರೆ ಅಧ್ಯಯನ ಶಿಸ್ತುಗಳಲ್ಲಿ ಅನುವಾದ ಕೃತಿಗಳು ಬರುತ್ತಿವೆ. ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಇತಿಹಾಸಗಳಿಗೆ ಪೂರಕವಾದ ಗಂಭೀರ ಕೃತಿಗಳೂ ಭಾಷಾಂತರ ಗೊಳ್ಳುತ್ತಿರುವುದನ್ನು ಕಾಣಬಹುದು. ಹಿಂದೂಧರ್ಮವನ್ನು ಕುರಿತ ಗ್ರಂಥಗಳಂತೆಯೇ ಜೈನ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಸಂಬಂಧವಾದ ಕೃತಿಗಳು ಆಯಾ ಧಾರ್ಮಿಕ ಕೇಂದ್ರಗಳಿಂದ ಭಾಷಾಂತರಗೊಳ್ಳುತ್ತಿವೆ. ಬೌದ್ಧ ಸಾಹಿತ್ಯದ ಕೃತಿಗಳು ಬೆಳಕು ಕಾಣುತ್ತಿರುವುದು ಒಂದು ವಿಶೇಷ ವಿದ್ಯಮಾನವಾಗಿದೆ. ಎಚ್.ವಿ.ಶ್ರೀರಂಗರಾಜು ಅವರು ದೀಘ್ಘನಿಕಾಯವನ್ನು ಅನುವಾದಿಸಿದ್ದಾರೆ (1984). ಬಿ.ನಂ.ಚಂದ್ರಯ್ಯನವರ ಬುದ್ಧನ ಜಾತಕ ಕಥೆಗಳು ಈ ಕ್ಷೇತ್ರದಲ್ಲಿ ಉಲ್ಲೇಖಾರ್ಹ ಕೃತಿ. ಕೆ.ಎಸ್.ಭಗವಾನ್ ರವರ ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಎಂಬ ಅನುವಾದ ಕೃತಿಯ ಮೂಲ ಲೇಖಕರು ಸ್ವಾಮಿ ಧರ್ಮತೀರ್ಥರು.

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಯುಗಯಾತ್ರೀ ಭಾರತೀಯ ಸಂಸ್ಕೃತಿ ಎಂಬ ಅನುವಾದ ಸಂಪುಟಗಳು ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ ಕೃತಿ ಸರಣಿಯ ಅನುವಾದ; ವಿವಿಧ ಲೇಖಕರು ಅನುವಾದ ಮಾಡಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪಿ.ವಿ.ಕಾಣೆಯವರ ಹಿಸ್ಟರಿ ಆಫ್ ಧರ್ಮಶಾಸ್ತ್ರ ಎಂಬ ಕೃತಿಯ ಮೊದಲ ಸಂಪುಟಗಳನ್ನು ಅನುವಾದಿಸಿ ಧರ್ಮಶಾಸ್ತ್ರದ ಇತಿಹಾಸ ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಭಾರತೀಯ ವಿದ್ಯಾಭವನದ ಬೆಂಗಳೂರು ಕೇಂದ್ರ ಅದೇ ಸಂಸ್ಥೆಯ ಹಿಸ್ಟರಿ ಅಂಡ್ ಕಲ್ಚರ್ ಆಫ್ ಇಂಡಿಯನ್ ಪೀಪಲ್ ಎಂಬ ಇತಿಹಾಸ ಸರಣಿ ಕೃತಿಗಳ ಅನುವಾದ ಮತ್ತು ಪ್ರಕಟಣೆಯಲ್ಲಿ ತೊಡಗಿಕೊಂಡಿದೆ. ಅದೇ ಸಂಸ್ಥೆಯು ಮಹಾತ್ಮ ಗಾಂಧೀಜಿಯವರ ಸಮಗ್ರ ಸಾಹಿತ್ಯದ ಅನುವಾದ ಕಾರ್ಯ ಕೈಗೆತ್ತಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಗಾಂಧೀಭವನಗಳು ಮಹಾತ್ಮರಿಗೆ ಸಂಬಂಧಿಸಿದ ಅನೇಕ ಕೃತಿಗಳನ್ನು ಅನುವಾದಿಸಿವೆ. ನೆಹರು, ಅಂಬೇಡ್ಕರ್, ಲಾಲ್‌ಬಹದ್ದೂರ್ ಶಾಸ್ತ್ರಿ, ಸರ್ವೇಪಲ್ಲಿ ರಾಧಾಕೃಷ್ಣನ್ ಮೊದಲಾದ ರಾಷ್ಟ್ರನಾಯಕರ ಜೀವನ ಚರಿತ್ರೆಗಳು ಅನುವಾದದ ಮೂಲಕ ಕನ್ನಡಿಗರಿಗೆ ಲಭ್ಯವಿವೆ.

ಕನ್ನಡ ಭಾಷಾಂತರಗಳು ಒಂದು ಕಾಲದಲ್ಲಿ ಮುಖ್ಯವಾಗಿ ಕಥೆ, ಕಾದಂಬರಿಗಳ ಕ್ಷೇತ್ರದಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದುವು. ಅನಂತರದ ದಿನಗಳಲ್ಲಿ ಭಾಷಾಂತರ ಇತರ ಗಂಭೀರ ಸಾಹಿತ್ಯದತ್ತಲೂ ಮುಖ ಮಾಡಿತು. ಮುಖ್ಯವಾಗಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಇಂಥ ಕೆಲಸಕ್ಕೆ ಚಾಲನೆ ನೀಡಿದುವು. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯವೂ ಪ್ರತ್ಯೇಕ ಪ್ರಕಟಣಾ ಶಾಖೆಯನ್ನು ಪ್ರಾರಂಭಿಸಿ ಈ ನಿಟ್ಟಿನಲ್ಲಿ ಗಮನ ಹರಿಸಿದೆ. ಹಂಪೆಯ ಕನ್ನಡ ವಿಶ್ವವಿದ್ಯಾನಿಲಯ ಪ್ರತ್ಯೇಕ ಭಾಷಾಂತರ ವಿಭಾಗವನ್ನೇ ಸ್ಥಾಪಿಸಿದೆ. ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಅನುವಾದ ಕೃತಿಗಳನ್ನು ಹೊರತಂದಿವೆ. ಕನ್ನಡ ಭಾಷೆಯ ಸತ್ವ ಹೆಚ್ಚಲು ಮತ್ತು ಬೋಧನೆಯಲ್ಲಿ ಅದು ಪರಿಣಾಮಕಾರಿಯಾದ ಮಾಧ್ಯಮವಾಗಲು ಅತ್ಯಾಧುನಿಕ ತಂತ್ರಜ್ಞಾನ ಕ್ಷೇತ್ರದಿಂದ ಹಿಡಿದು ವಿವಿಧ ಜ್ಞಾನ ಶಾಖೆಗಳಲ್ಲಿ ಭಾಷಾಂತರ ಕೃತಿಗಳು ಹೊರಬರಬೇಕೆಂದು ನಿರೀಕ್ಷಿಸಲಾಗಿದೆ.

ಇಂದು ಭಾಷಾಂತರ ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳಿಂದ ಮಾನ್ಯತೆ ಪಡೆದಿರುವ ಸಾಹಿತ್ಯ ಪ್ರಕಾರವಾಗಿದೆ. ಕನ್ನಡ ಅನುವಾದಕರಲ್ಲಿ ಕೆಲವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿರುವುದು ಹೆಮ್ಮೆಯ ವಿಷಯ. ಎಸ್.ವಿ.ಪರಮೇಶ್ವರ ಭಟ್ಟ, ಪ್ರಧಾನ ಗುರುದತ್ತ, ತಿಪ್ಪೇಸ್ವಾಮಿ, ಎಚ್.ಎಸ್.ವೆಂಕಟೇಶಮೂರ್ತಿ, ನೀರ್ಪಾಜೆ ಭೀಮಭಟ್ಟ, ಶೇಷನಾರಾಯಣ, ಕೀರ್ತಿನಾಥ ಕುರ್ತಕೋಟಿ, ಬಿ.ಆರ್.ನಾರಾಯಣ, ಹಮೀದ್ ಅಲ್ಮಾಸ್, ಉಮಾ ವಿರೂಪಾಕ್ಷ ಕುಲಕರ್ಣಿ ಮೊದಲಾದವರು ಈ ಪ್ರಶಸ್ತಿಗೆ ಸೇರಿದ್ದಾರೆ. *

ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ ಈ ಎರಡೂ ಸಂಸ್ಥೆಗಳು ಅನುವಾದ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಕಟಣೆಗಳನ್ನು ಕೈಗೊಂಡಿವೆ. ಕೇಂದ್ರ ಸರ್ಕಾರದ ನೆರವಿನಿಂದ ನಡೆಯುತ್ತಿರುವ ಈ ಸಂಸ್ಥೆಗಳು ಭಾರತೀಯ ಭಾಷೆಗಳ ಅಭಿವೃದ್ಧಿಗಾಗಿ ಮತ್ತು ವಿವಿಧ ಭಾಷೆಗಳ ಸಾಹಿತ್ಯವನ್ನು ಪರಸ್ಪರ ಪರಿಚಯಿಸುವುದಕ್ಕಾಗಿ ವಿವಿಧ ಮಾಲಿಕೆಗಳನ್ನು ಪ್ರಾರಂಭಿಸಿ ಲೇಖಕರನ್ನು ಗುರುತಿಸಿ ಅನುವಾದ ಕಾರ್ಯವನ್ನು ಕೈಗೊಂಡಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ದಕ್ಷಿಣ ಪ್ರಾದೇಶಿಕ ಕಛೇರಿ ಬೆಂಗಳೂರಿನಲ್ಲಿದೆ. ಅದು ವಿವಿಧ ಮಾಲೆಗಳಲ್ಲಿ ಕನ್ನಡ ಅನುವಾದ ಗ್ರಂಥಗಳನ್ನು ಪ್ರಕಟಿಸಿದೆ. ಕಾದಂಬರಿಗಳು, ಕಥಾ ಸಂಕಲನ, ಕಾವ್ಯ, ಜಾನಪದ, ನಾಟಕ, ಭಾರತೀಯ ಸಾಹಿತ್ಯ ನಿರ್ಮಾಣಕಾರರು ಮೊದಲಾದ ಶೀರ್ಷಿಕೆಗಳ ಅಡಿಯಲ್ಲಿ ಕೃತಿಗಳು ಪ್ರಕಟವಾಗಿವೆ. ಮರಾಠಿಯ ಹರಿನಾರಾಯಣ ಆಪ್ಟೆಯವರ ಯಾರು ಲಕ್ಷಿಸುವರು? ಎಂಬ ಕಾದಂಬರಿ (ಲೀಲಾ ಕಾರಂತ ಮತ್ತು ಶಿವರಾಮ ಕಾರಂತ), ಗುಜರಾತಿಯ ಕುಂದನಿಕಾ ಕಪಾಡಿಯಾ ಅವರ ಗೋಡೆಗಳಿಂದ ಆಚೆ ಆಕಾಶ ಎಂಬ ಕಾದಂಬರಿ (ಎಸ್.ಕೆ.ರಮಾದೇವಮ್ಮ ಮತ್ತು ಲಿಂಗರಾಜು) ಅನುವಾದಗೊಂಡಿವೆ. ಮಲಯಾಳಂ ಮೂಲದ ಪಿ.ಕೆ.ಬಾಲಕೃಷ್ಣನ್ ರಚಿಸಿರುವ 'ನಾನಿನ್ನು ನಿದ್ರಿಸುವೆ' ಕೃತಿಯ ಅನುವಾದಕರು ಸಾರಾ ಅಬೂಬಕರ್. ಅಸ್ಸಾಮಿ ಮೂಲದ ಬೀರೇಂದ್ರ ಕುಮಾರ್ ರಚಿಸಿದ ಜನತೆಯ ರಾಜ್ಯ ಎಂಬ ಕಾದಂಬರಿಯನ್ನು ಕೆ.ಪುಟ್ಟರಾಜು ಕನ್ನಡಿಸಿದ್ದಾರೆ.

ಜಾನಕೀರಾಮನ್‌ರ ತಮಿಳು ಕೃತಿ ಶಕ್ತಿವೈದ್ಯ ಎಂಬ ಕಥಾಸಂಕಲನವನ್ನು ಶೇಷನಾರಾಯಣರು ಕನ್ನಡಕ್ಕೆ ತಂದಿದ್ದಾರೆ. ಒರಿಯಾ ಮೂಲದ ಕಾಣೆಯಾದ ಟೋಪಿಯ ರಹಸ್ಯ ಮತ್ತಿತರ ಕಥೆಗಳು ಎಂಬ ಸಂಕಲನದ ಅನುವಾದಕರು ಎಂ.ಎಸ್.ಕೆ.ಪ್ರಭು. ಇಂಗ್ಲಿಷಿನಲ್ಲಿರುವ ಶಿವ್ ಕೆ.ಕುಮಾರ್ ಅವರ 'ಕಾವ್ಯ ದೇವರ ಸ್ವಗತ' ಎಂಬ ಹೆಸರಿನಲ್ಲಿ (ಬಿ.ಸಿ.ರಾಮಚಂದ್ರ ಶರ್ಮ) ಕನ್ನಡಕ್ಕೆ ಬಂದಿದೆ. ಇಂಗ್ಲಿಷ್‌ನ ವಾಲ್ಟ್‌ವಿಟ್‌ಮನ್‌ನ ಕೃತಿಯನ್ನು

ಗೋಪಾಲಕೃಷ್ಣ ಅಡಿಗರು 'ಹುಲ್ಲಿನ ದಳಗಳು' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ರವೀಂದ್ರನಾಥ ಠಾಕೂರರ 'ನೂರೊಂದು ಕವನ' ಕೃತಿಯನ್ನು ದ.ರಾ.ಬೇಂದ್ರೆ ಮತ್ತು ನಾರಾಯಣ ಸಂಗಮ ಅನುವಾದಿಸಿದ್ದಾರೆ. ಮರಾಠಿ ಮೂಲದ ಎ.ಆರ್.ದೇಶಪಾಂಡೆ ಯವರ ಕೃತಿ 'ಭಗ್ನಮೂರ್ತಿ' ಎಂಬ ಹೆಸರಿನಲ್ಲಿ ದ.ರಾ.ಬೇಂದ್ರೆಯವರಿಂದ ಕನ್ನಡಕ್ಕೆ ಬಂದಿದೆ. ಪಂಜಾಬಿ ಮೂಲದ ಭಾಯಿವೀರ್ ಸಿಂಗ್‌ರ ಕಾವ್ಯ ನನ್ನ ಪ್ರಿಯತಮನೇ ಬಾಳು ಎಂಬ ಕೃತಿ ಎನ್.ಮಾಲತಿಯವರಿಂದ ಅನುವಾದಗೊಂಡಿದೆ.

ಗ್ರೀಕ್, ಇಂಗ್ಲಿಷ್, ಸಂಸ್ಕೃತ ನಾಟಕ ಕೃತಿಗಳೂ ಕನ್ನಡದಲ್ಲಿ ಪ್ರಕಟವಾಗಿವೆ. ಮುದ್ದುಕೃಷ್ಣ ಸಂಪಾದಿಸಿರುವ 'ತೆಲುಗು ಏಕಾಂಕ ನಾಟಕಗಳು' ಕೃತಿಯನ್ನು ಲಕ್ಷ್ಮಿ ಜಿ.ಎ.ರೆಡ್ಡಿ ಮತ್ತು ಜಿ.ಎ.ರೆಡ್ಡಿ ಕನ್ನಡಿಸಿದ್ದಾರೆ. ಎ.ಎನ್.ಮೂರ್ತಿ ರಾಯರು ಮೋಲಿಯೇರನ ಎರಡು ನಾಟಕಗಳನ್ನು ಭಾಷಾಂತರಿಸಿದ್ದಾರೆ. ಪ್ರಬಂಧ ಸಾಹಿತ್ಯ ಮತ್ತಿತರ ಪ್ರಕಾರದ ಕೃತಿಗಳ ಅನುವಾದಗಳನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ರವೀಂದ್ರನಾಥ ಠಾಕೂರರ ನಿಬಂಧಮಾಲಾ–I ಸ್ವಾಮಿ ಶಂಕರಾನಂದ ಸರಸ್ವತಿಯವರಿಂದ ಕನ್ನಡದಲ್ಲಿ ಬೆಳಕು ಕಂಡಿದೆ. ಹಿಂದಿ ಮೂಲದ ಮೋತಿಚಂದ್ರ ವಿರಚಿತ ಸಾರ್ಥವಾಹವನ್ನು ಎಚ್.ಎಸ್.ಪಾಟೀಲರು ಅನುವಾದಿಸಿದ್ದಾರೆ. ಭಾರತೀಯ ಸಾಹಿತ್ಯ ನಿರ್ಮಾಣಕಾರರು ಎಂಬ ಮಾಲಿಕೆಯಲ್ಲಿ ಜಯಶಂಕರ್ ಪ್ರಸಾದ್, ಮಹಾಕವಿ ಉಳ್ಳೂರ್, ಗಾಲಿಬ್, ಈಶ್ವರಚಂದ್ರ ವಿದ್ಯಾಸಾಗರ, ಯಶ್‌ಪಾಲ್ ಮೊದಲಾದವರ ಬಗೆಗೆ ಬಂದಿರುವ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ.

ನ್ಯಾಷನಲ್ ಬುಕ್ ಟ್ರಸ್ಟ್ ಕೂಡ ಭಾರತ ದೇಶ ಮತ್ತು ಜನ ಮಾಲೆ, ತರುಣ ಭಾರತೀ, ಜನಪ್ರಿಯ ವಿಜ್ಞಾನ ಮಾಲೆ, ಅಂತರ ಭಾರತೀಯ ಪುಸ್ತಕಮಾಲೆ, ಜಾನಪದ ಮಾಲೆ, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ನವಸಾಕ್ಷರತೆ ಸಾಹಿತ್ಯ ಮಾಲೆ, ಸತತ ಶಿಕ್ಷಣ ಪುಸ್ತಕ ಮಾಲೆ, ಏಷ್ಯಾ ಪೆಸಿಫಿಕ್ ಸಹ ಪ್ರಕಾಶನ, ಭಾರತೀಯ ಸಾಹಿತ್ಯ ನಿಧಿ, ಸೃಜನಶೀಲ ಕಲಿಕೆ, ಹೊಸ ಕಾರ್ಯಕ್ಷೇತ್ರ ಮೊದಲಾದ ಮಾಲೆಗಳಲ್ಲಿ ಪ್ರಕಟಣೆಯನ್ನು ಕೈಗೊಂಡಿದ್ದು ಅವುಗಳಲ್ಲಿ ಹೆಚ್ಚಿನವು ಭಾಷಾಂತರಗಳು.

ಸಿ.ಶಿವರಾಮಮೂರ್ತಿಯವರ ಭಾರತೀಯ ಚಿತ್ರಕಲೆ ಎಂಬ ಕೃತಿಯನ್ನು ಪಿ.ಆರ್.ತಿಪ್ಪೇಸ್ವಾಮಿಯವರು ಅನುವಾದಿಸಿದ್ದಾರೆ. ಬಂಗಾಲಿ ರಂಗಭೂಮಿ ಕೃತಿಯ ಅನುವಾದಕರು ಎಚ್.ಕೆ.ರಂಗನಾಥ್. ಮಹಾತ್ಮಾ ಗಾಂಧಿಯವರ ಹಿಂದೂಧರ್ಮ ಎಂದರೇನು ಎಂಬ ಕೃತಿಯ ಅನುವಾದಕರು ಎನ್.ಬಾಲಸುಬ್ರಹ್ಮಣ್ಯ. ಬಸವರಾಜ ಪುರಾಣಿಕರು ಕೆಲವು ಉರ್ದು ಕಥೆಗಳನ್ನು ಕನ್ನಡೀಕರಿಸಿದ್ದಾರೆ. ಪಠಾಣಿ ಪಟ್ನಾಯಕ್‌ರ 'ಒರಿಯಾ ಕಥೆಗಳು' ಎಸ್.ವಿ.ಶ್ರೀನಿವಾಸರಾವ್‌ರಿಂದ ಅನುವಾದಗೊಂಡಿವೆ. ಎ.ಎಂ.ರಾವಲ್‌ರ ಗುಜರಾತಿ 'ಏಕಾಂಕಗಳು' ಪ್ರೇಮಾಕಾರಂತರಿಂದ ಅನುವಾದಗೊಂಡಿದೆ. ಎಂ.ಟಿ.ವಾಸುದೇವನ್ ನಾಯರ್‌ರ ಮಲಯಾಳಂ ಕೃತಿ 'ಚೌಕಟ್ಟಿನ ಮನೆ' ಬಿ.ಕೆ.ತಿಮ್ಮಪ್ಪನವರಿಂದ ಅನುವಾದವಾಗಿದೆ. ಹರಭಜನ್‌ಸಿಂಗ್‌ರ ಪಂಜಾಬಿ ಕಥೆಗಳು ಎಂಬ ಕೃತಿಯನ್ನು ಗೌರೀಶ ಕಾಯ್ಕಿಣಿಯವರು ಕನ್ನಡಿಸಿದ್ದಾರೆ. ಚಂದ್ರಗುಪ್ತ ವಿದ್ಯಾಲಂಕಾರರ ಹಿಂದಿ ಏಕಾಂಕ ಕೃತಿ ಎಸ್.ಬಿ.ಕೊಡದರಿಂದ ಅನುವಾದಗೊಂಡಿದೆ. ಆರ್.ಕೆ.ನಾರಾಯಣ್‌ರ 'ಸ್ವಾಮಿ ಮತ್ತು ಅವನ ಸ್ನೇಹಿತರು' ಎಂಬ ಕೃತಿಯನ್ನು ಎಚ್.ವೈ.ಶಾರದಾಪ್ರಸಾದ್ ಕನ್ನಡಿಸಿದ್ದಾರೆ. ವಿವಿಧ ಲೇಖಕರ ಹದಿಮೂರು ಶ್ರೇಷ್ಠ ಕಥೆಗಳು ಎಂಬ ಕೃತಿಯನ್ನು ಎಲ್.ಎಸ್.ಶೇಷಗಿರಿರಾವ್ ಅನುವಾದಿಸಿದ್ದಾರೆ. ಏಷ್ಯಾದ ಆಯ್ದ ಕಥೆಗಳು ಎಂಬ ಕೃತಿಯನ್ನು ಎಸ್.ಕೆ.ರಮಾದೇವಮ್ಮ ಕನ್ನಡೀಕರಿಸಿದ್ದಾರೆ.

ಜಾನಪದ ಕ್ಷೇತ್ರದಲ್ಲಿಯೂ ಅನೇಕ ಅನುವಾದ ಕೃತಿಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಬಿ.ರಾಮರಾಜರ 'ಆಂಧ್ರ ಜಾನಪದ' (ಆರ್ವಿಯಸ್ ಸುಂದರಂ), ಡಿ.ಆರ್.ಅಹುಜ 'ರಾಜಾಸ್ಥಾನದ ಜಾನಪದ' (ಸಿ.ಪಿ.ಕೃಷ್ಣ ಕುಮಾರ್) ಅನುವಾದಗೊಂಡಿವೆ. ಶಾಂತಾ ರಂಗಾಚಾರಿಯವರ 'ಎಲ್ಲಾ ಕಾಲಕ್ಕೂ ಬರುವ ಕಥೆಗಳು', ಎಂಬುದನ್ನು ಕೆ.ವಿ.ಸುಬ್ಬಣ್ಣ ಅನುವಾದಿಸಿದ್ದಾರೆ. ಮನೋಜ್‌ದಾಸ್‌ರ, 'ಸಾರ್ವಕಾಲಿಕ ಪುಸ್ತಕಗಳು' ಎಂ.ಗೋಪಾಲಕೃಷ್ಣ ಅಡಿಗರಿಂದ ಅನುವಾದಗೊಂಡಿದೆ. ಲೀಲಾವತಿ ಭಾಗವತ್‌ರ 'ಸ್ವರ್ಗಕ್ಕೆ ಸವಾರಿ ಮತ್ತು ಇತರ ಕಥೆಗಳು' ಎಂಬ ಕೃತಿಯನ್ನು ಯು.ಆರ್.ಅನಂತಮೂರ್ತಿ ಕನ್ನಡಿಸಿದ್ದಾರೆ. ಲೀಲಾ ಜಾರ್ಜ್‌ರ 'ಸತ್ಯಶೋಧನೆ' ಜಿ.ಆರ್.ರಂಗಸ್ವಾಮಯ್ಯನವರಿಂದ ಅನುವಾದಗೊಂಡಿದೆ. ಅನುವಾದ ಆಧುನಿಕ ಕಾಲದಲ್ಲಿ ಹೆಚ್ಚು ಹೆಚ್ಚು ಮಹತ್ವ ಪಡೆದುಕೊಂಡಿದ್ದು ಅದು ಸೃಜನಾತ್ಮಕ ಪ್ರಕಾರವನ್ನಷ್ಟೇ ಅಲ್ಲದೆ ಜ್ಞಾನದ ಎಲ್ಲ ಶಾಖೆಗಳನ್ನೂ ವ್ಯಾಪಿಸಿದೆ. *

**ಕನ್ನಡದಲ್ಲಿ ಮಕ್ಕಳಸಾಹಿತ್ಯ :** ಮಕ್ಕಳ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಸಾಹಿತ್ಯವನ್ನು ಮಕ್ಕಳ ಸಾಹಿತ್ಯ ವೆನ್ನಬಹುದು. ಮಕ್ಕಳ ಸಾಹಿತ್ಯ ಕಿವಿಯ ಮೂಲಕ ಗ್ರಹಿಸುವ ಲಾಲಿ ಹಾಡುಗಳಿಂದಲೇ ಮೊದಲಿಟ್ಟಿರಬಹುದು. ಅನಂತರ ಕಥೆಗಳಿಂದ ಬೆಳೆದಿರಬಹುದು. ಹಾಡುವ ಹಾಗೂ ಕಥೆ ಹೇಳುವವರ ಹಾವ ಭಾವಗಳನ್ನು ನೋಡಿಯೂ ಮಗು ಗ್ರಹಿಸಿರಬಹುದು. ಈ ಕಾರಣದಿಂದ ಮಾನವನ ಸಾಹಿತ್ಯದ ಬುನಾದಿ ಇದಾಗಿದೆ ಎಂದರೆ ತಪ್ಪಾಗಲಾರದು. ಇದರ ಮೂಲ ಜಾನಪದವಾಗಿರಬಹುದು. ಜಗತ್ತಿನಲ್ಲಿ ಇದು ಹೇಗೇ ಪ್ರಾರಂಭವಾಗಿರಲಿ ಮಕ್ಕಳಿಗೆ ಅತ್ಯಗತ್ಯವಾದುದು, ಉಪಯುಕ್ತವಾದುದು ಎನ್ನುವುದಕ್ಕೆ ಎರಡನೆಯ ಮಾತಿಲ್ಲ. ಹಿರಿಯರೂ ಇದನ್ನು ಸವಿಯಬಹುದು ಎನ್ನುವುದು ಇದರ ಒಂದು ವಿಶೇಷ ಲಕ್ಷಣ.

ಮಕ್ಕಳ ಸಾಹಿತ್ಯ ಮಕ್ಕಳಿಗೆ ನಲಿವು, ತಿಳಿವು ಎರಡನ್ನೂ ಕೊಡಬೇಕು. ಸಂಸ್ಕೃತಿ, ಶಿಕ್ಷಣ, ಕುಟುಂಬ, ಪರಿಸರ ಈ ನಾಲ್ಕರ ಪ್ರಭಾವವೂ ಅದರಲ್ಲಿ ಬರಬೇಕು. ಮಕ್ಕಳ ಮಾನಸಿಕ, ಬೌದ್ಧಿಕ, ಸಾಮಾಜಿಕ ಮತ್ತು ಭಾಷಿಕ ಬೆಳವಣಿಗೆಗೆ ಸಹಾಯಕವಾಗಬೇಕು ಮೊದಲಾದ ಅನೇಕ ಅಭಿಪ್ರಾಯಗಳು ಈ ಸಾಹಿತ್ಯ ಕುರಿತು ವ್ಯಕ್ತವಾಗಿವೆ. ಒಟ್ಟಾರೆ ಮಕ್ಕಳ ಸಾಹಿತ್ಯ ಮಕ್ಕಳಿಗೆ ಸಂತೋಷ ನೀಡಬೇಕು, ಭಾಷೆಯನ್ನು ಕಲಿಸಬೇಕು, ಆಲೋಚನಾ ಶಕ್ತಿಯನ್ನು ಬೆಳೆಸಬೇಕು, ಜೊತೆಗೆ ಬದುಕುವ ವಿವೇಕವನ್ನು ಹೊಳೆಯಿಸಬೇಕು. ಆಗ ಅದು ಸಾರ್ಥಕವಾದೀತು.

ಕಾವ್ಯ ಜಗತ್ತಿನಲ್ಲೇ ಮಕ್ಕಳ ಪದ್ಯಗಳನ್ನು ಫ್ರಾನ್ಸ್ ದೇಶದ ಪೆಕಾಟ್ ಎನ್ನುವಾತ ಮೊದಲು ಪ್ರಕಟಿಸಿದನೆಂದು ನಂಬಲಾಗಿದೆ. 'ಸಾಂಗ್ಸ್ ಆಫ್ ನರ್ಸರಿ' 1717ರಲ್ಲಿ ಪ್ರಕಟವಾಯಿತೆಂದು ತಿಳಿದುಬರುತ್ತದೆ. ಕನ್ನಡದಲ್ಲಿ 1862ರಲ್ಲಿ ಹೊರಬಂದ ಬಾಲ ಗೀತೆಗಳು ಎನ್ನುವ ಮೊದಲ ಸಂಕಲನವನ್ನು ಸಿದ್ಧಪಡಿಸಿದವರು ಜಿ.ಮ್ಯಾಕ್ ಅವರು (ಈ ಕೃತಿ ಅಲಭ್ಯ). ಕೆರೋಡಿ ಸುಬ್ಬರಾಯರು, ಎಸ್.ಜಿ.ನರಸಿಂಹಾಚಾರ್ಯರು ಇಂಗ್ಲಿಷ್ ಭಾಷೆಯಿಂದ ಮಕ್ಕಳಿಗಾಗಿ ಕೆಲವು ಕವಿತೆಗಳನ್ನು ಅನುವಾದಿಸಿದ್ದಾರೆ. ಇವುಗಳಲ್ಲಿ ಭಾಷೆ, ಛಂದಸ್ಸುಗಳು ಹಳೆಯ ಶೈಲಿಯಲ್ಲಿದ್ದರೂ ಇವು ಮೊದಲ ಪ್ರಯತ್ನಗಳಾಗಿವೆ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಮಕ್ಕಳಿಗೆಂದೇ ಸಿದ್ಧಪಡಿಸಿದ ಪಠ್ಯ ಹಾಗೂ ಕ್ರಮಿಕ ಪುಸ್ತಕಗಳಲ್ಲಿ, ವಾಚಿಕೆಗಳಲ್ಲಿ ಮಕ್ಕಳ ಕವಿತೆಗಳು ಕಂಡುಬರುತ್ತವೆ. ಈ ಪ್ರಯತ್ನಗಳಲ್ಲಿ ಕ್ರೈಸ್ತ ಮಿಷನರಿಗಳದು ಶ್ಲಾಘನೀಯ ಪಾತ್ರ. ಮೊದಮೊದಲಿಗೆ ದೇವರ ಪ್ರಾರ್ಥನೆ, ಆದರ್ಶಗಳ ಬೋಧನೆ ಇಂಥವು, ಜೊತೆಗೆ ಕ್ಲಿಷ್ಟವಾದ ಪದಗಳ ಸಂಯೋಜನೆಗಳು ಕಾಣಿಸಿಕೊಂಡವು. ಬರಬರುತ್ತ ಸರಳವಾದ, ಸೊಗಸಾದ ರಚನೆಗಳು ಬಂದಿರುವುದು ಈಗ ಇತಿಹಾಸವಾಗಿದೆ. ಮುದ್ರಣಾಲಯಗಳು ಪ್ರಾರಂಭವಾದ ಮೇಲೆ ಹೊಸ ಕ್ರಾಂತಿಯೇ ನಡೆಯಿತು. ಜಯರಾಯಾಚಾರ್ಯರ ಅನುಕರಣ ಗೀತಗಳು, ಸೋಸಲೆ ಅಯ್ಯಾಶಾಸ್ತ್ರಿಗಳ ಪದ್ಯಗಳು ಗಮನ ಸೆಳೆಯುತ್ತವೆ. ಇಂಥವರು ಅನೇಕರು ಮಕ್ಕಳ ಕಾವ್ಯದ ಬೆಳೆಗಾಗಿ ನೆಲವನ್ನು ಹದ ಮಾಡಿದರು. ವಸ್ತು, ಭಾಷೆ, ತಂತ್ರಗಳಲ್ಲಿ ಪ್ರಯೋಗಗಳು ನಡೆಯುತ್ತ ಹೋದವು.

ಪಂಜೆ ಮಂಗೇಶರಾಯ, ಹೊಯಿಸಳ, ಜಿ.ಪಿ.ರಾಜರತ್ನಂ ಇವರು ಮೂವರನ್ನೂ ಮಕ್ಕಳ ಸಾಹಿತ್ಯದ ರತ್ನತ್ರಯರು ಎನ್ನಬಹುದು. ಕುವೆಂಪು, ಶಿವರಾಮ ಕಾರಂತ, ದಿನಕರ ದೇಸಾಯಿ, ರಾಘವ, ಎಲ್.ಗುಂಡಪ್ಪ, ಮೇವುಂಡಿ ಮಲ್ಲಾರಿ, ಸಿದ್ದಯ್ಯ ಪುರಾಣಿಕ, ತೋನ್ಸೆ ಮಂಗೇಶ ರಾವ್, ಸಿ.ಫ.ಕಟ್ಟೀಮನಿ ಮೊದಲಾದವರು ಕವಿತೆಗಳನ್ನು ರಚಿಸಿ ಮಕ್ಕಳನ್ನು ಖುಷಿ ಪಡಿಸಿದರು. ಜಿ.ಪಿ.ರಾಜರತ್ನಂ ಅವರ ಒಂದು ಚುಟುಕ ಹೀಗಿದೆ:

ಗಡಗಡ ಓಡಿತು ರೈಲು!
ನಿಮಿಷಕೆ ಸಾವಿರ ಮೈಲು!
ಸಾವಿರ ಮೈಲನ್ನು!
ಮೀರುತ ಹೋಗಲು!
ಆಗದು ರೈಲಿನ ಕೈಲು!

ಅವರ ರಚನೆಗಳಲ್ಲಿ ಇಂತಹ ಚೋಟಾರಿ ಮೋಟಾರಿ ಚುಟುಕಗಳ ಜೊತೆಗೆ ಮಕ್ಕಳನ್ನು ಕುಣಿಸಿ, ತಣಿಸಬಲ್ಲ ಪದ್ಯಗಳಿವೆ. ಇಂಥ ಹಿರಿಯರೆಲ್ಲ ಬಿತ್ತಿದ ನೆಲಕ್ಕೆ ನೀರೆರೆದು ಗೊಬ್ಬರ ಹಾಕಿದವರು ಮುಂದಿನ ಹಂತದ ಕವಿಗಳು. ಶಂ.ಗು.ಬಿರಾದಾರ, ಕಯ್ಯಾರ ಕಿಞ್ಞಣ್ಣ ರೈ, ಸಿಸು ಸಂಗಮೇಶ, ಬಿ.ಎ.ಸನದಿ, ರಸಿಕ ಪುತ್ತಿಗೆ, ಶಶಿಕುಮಾರ, ಪಳಕಳ ಸೀತಾರಾಮ ಭಟ್ಟ, ಮುಂಡಾಜೆ ರಾಮಚಂದ್ರ ಭಟ್ಟ, ಶ್ರೀನಿವಾಸ ಶೆಟ್ಟಿ, ಈಶ್ವರ ಕಮ್ಮಾರ, ಚನ್ನವೀರ ಕಣವಿ, ಕಂಚ್ಯಾಣಿ ಶರಣಪ್ಪ, ಎಂ.ವಿ.ಸೀತಾರಾಮಯ್ಯ, ನೀ.ರೇ ಹಿರೇಮಠ ಮೊದಲಾದವರು ಈ ಸಾಲಿಗೆ ಸೇರುತ್ತಾರೆ. ತಲೆಯೆತ್ತಿದ ಸಸಿಗೆ ಆಧಾರ ನೀಡಿ ಅದನ್ನು ಪೋಷಿಸುತ್ತಿರುವವರು ಹಲವಾರು ಕವಿಗಳು. ಎಚ್.ಎಸ್.ವೆಂಕಟೇಶಮೂರ್ತಿ, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಟಿ.ಎಸ್.ನಾಗರಾಜ ಶೆಟ್ಟಿ, ಎನ್.ಶ್ರೀನಿವಾಸ ಉಡುಪ, ಸಿ.ಎಂ.ಗೋವಿಂದ ರೆಡ್ಡಿ, ಸುಮತೀಂದ್ರ ನಾಡಿಗ, ಆರ್.ಕೆ.ಶಾನಭೋಗ, ಬಿ.ತಿಪ್ಪೇರುದ್ರಪ್ಪ ಮೊದಲಾದವರನ್ನು ಹೆಸರಿಸಬಹುದು.

ಮುಪ್ಪಿನ ಷಡಕ್ಷರಿಯ (ಸು.1500) ತಿರುಕನ ಕನಸು, ಹಳೆಯದಾದರೂ ಅತ್ಯಂತ ಆಕರ್ಷಕವೂ ಅರ್ಥಪೂರ್ಣವೂ ಆದ ಗೋವಿನ ಹಾಡು, ಕುವೆಂಪು ಅವರ ಬೊಮ್ಮನ ಹಳ್ಳಿಯ ಕಿಂದರಿ ಜೋಗಿ, ಎನ್.ಶ್ರೀನವಾಸ ಉಡುಪರ ಕುಂಭಕರ್ಣನ ನಿದ್ದೆ ಶ್ರೇಷ್ಠಮಟ್ಟದ ಕಥನ ಕವನಗಳು. ಎಚ್.ಎಸ್.ವೆಂಕಟೇಶ ಮೂರ್ತಿಯವರ ಘಟ್ಟದ ಯೋಗಿ ಕೂಡ ಚೆನ್ನಾಗಿದೆ.

ಕುವೆಂಪು ಅವರ ಬೊಮ್ಮನಹಳ್ಳಿಯ ಕಿಂದರಿ ಜೋಗಿಯ ಕೆಲವು ಸಾಲುಗಳು:

ಇಲಿಗಳು! ಇಲಿಗಳು! ಇಲಿಗಳ ಹಿಂಡು!
ಬಳಬಳ ಬಂದುವು ಇಲಿಗಳ ದಂಡು!
ಅನ್ನದ ಮಡಕೆಯನಗಲಿದುವು!
ಟೋಪಿಯ ಗೂಡನು ತ್ಯಜಿಸಿದುವು!
ಬಂದುವು ಅಂಗಿಯ ಜೇಬನು ಬಿಟ್ಟು,
ಮಕ್ಕಳ ಕಾಲಿನ ಚೀಲವ ಬಿಟ್ಟು,
ಹಾರುತ ಬಂದುವು, ಓಡುತ ಬಂದುವು,
ನೆಗೆಯುತ ಬಂದುವು, ಕುಣಿಯುತ ಬಂದುವು,
ಜೋಗಿಯು ಬಾರಿಸೆ ಕಿಂದರಿಯ!

ಈ ಕವಿತೆ ಇಂಗ್ಲಿಷ್ ಕವಿ ರಾಬರ್ಟ್ ಬ್ರೌನಿಂಗ್‌ನ ದಿ ಪೈಡ್ ಪೈಪರ್ ಆಫ್ ಹ್ಯಾಮೆಲಿನ್ ಎನ್ನುವ ಕವನದ ಭಾವಾನುವಾದವಾಗಿದೆ.

ನಮ್ಮ ನೆನಪಿನಲ್ಲಿ ಚಿರಕಾಲ ಉಳಿದು ಅನುರಣಿಸುವ ಗುಣಮಟ್ಟದ ಕವಿತೆಗಳು ಒಟ್ಟಾರೆ ಬಹಳ ಕಡಮೆಯಾಗಿವೆ ಎನ್ನದೆ ವಿಧಿಯಿಲ್ಲ. ಇತ್ತೀಚಿನ ಕೆಲವು ಕವಿಗಳ ರಚನೆಗಳು ಆಶಾದಾಯಕವಾಗಿವೆ. ಕೆ.ಚಿದಾನಂದರ ವಿಜ್ಞಾನ ಪದ್ಯಗಳು ವಿಜ್ಞಾನವನ್ನು ಮಕ್ಕಳಿಗೆ ಕವಿತೆಯ ಮೂಲಕ ತಿಳಿಸುವ ಸರಳ ಸುಂದರ ಕೊಡುಗೆ. ಕವಿಯ ಒಟ್ಟಾರೆಯ ಕವಿತೆಗಳು ಒಂದೆಡೆ ಸಿಗುವಂತೆ ಕೆಲವು ಸಂಪುಟಗಳು ಬಂದಿವೆ: ಪಂಜೆಯವರ ಪದ್ಯಗಳು, ಜಿ.ಪಿ.ರಾಜರತ್ನಂ ಅವರ ಕಂದನ ಕಾವ್ಯ ಮಾಲೆ, ಟಿ.ಎಸ್.ನಾಗರಾಜಶೆಟ್ಟಿ ಅವರ ಸಮಗ್ರ ಮಕ್ಕಳ ಕವಿತೆಗಳು, ಕಂಚ್ಯಾಣಿ ಶರಣಪ್ಪ ಅವರ ಆಯ್ದ ನೂರೊಂದು ಕವಿತೆಗಳು, ಎಂ.ಡಿ.ಗೋಗೇರಿ ಅವರ ಪುಟ್ಟನ ಪರಿಸರ.

**ಕತೆ:** ಪಂಚತಂತ್ರ, ಕಥಾ ಸರಿತ್ಸಾಗರ, ಹಿತೋಪದೇಶ, ಇಂಥ ಕತೆಗಳು ಭಾರತದಲ್ಲಿ ಹುಟ್ಟಿ ಪ್ರಸಿದ್ಧವಾಗಿವೆ. ಪಂಚತಂತ್ರದ ಕತೆಗಾರಿಕೆ, ಚಮತ್ಕಾರ, ಬುದ್ಧಿವಂತಿಕೆ, ವ್ಯವಹಾರ, ಜ್ಞಾನ ಮುಂತಾದ ಗುಣಗಳು ಶ್ರೇಷ್ಠ ಕತೆಗಳ ಮಾದರಿಯೇ ಸರಿ. ಕತೆ ಎಂದರೆ ಸಾಕು ಮಕ್ಕಳ ಕಿವಿ ನೆಟ್ಟಗಾಗುತ್ತದೆ. ಅವರು ಕತೆ ಹೇಳಲು ಹಿರಿಯರನ್ನು ಪೀಡಿಸುವುದೂ ಉಂಟು. ನಮ್ಮ ಇಂದಿನ ಹಿರಿಯರು ಕುತೂಹಲ ಕೆರಳಿಸುವ, ಅವರ ಕಲ್ಪನಾ ಲೋಕದ ಬಾಗಿಲು ತೆರೆಯುವ, ಮನಸ್ಸಿಗೆ ಮುದ ನೀಡುವ ಕತೆಗಳನ್ನು ಹೆಣೆದು ಹೇಳಿದ್ದಾರೆ. ಪಂಜೆ ಮಂಗೇಶರಾಯ (ಇಲಿಗಳ ತಕ್ಕಥೈ, ಗುಡುಗುಡು ಗುಮ್ಮಟ ದೇವರು, ಸೀಗಡಿ ಯಾಕೆ ಒಣಗಲಿಲ್ಲ), ಹೊಯಿಸಳ (ಹೂವಿನ ಹಾಸಿಗೆ, ಪತಾಕ್ಷಿ, ಪುಟ್ಟರಸು, ಪೋರಿ), ದೇವುಡು (ಬುದ್ಧಿಯ ಕತೆಗಳು, ಮಂಗಪ್ಪಾಜಿಯ ಪುರಾಣ), ಶಿವರಾಮ ಕಾರಂತ (ಗಜರಾಜ), ಜಿ.ಪಿ.ರಾಜರತ್ನಂ, ಟಿ.ಎಂ.ಆರ್.ಸ್ವಾಮಿ, ಮೇವುಂಡಿ ಮಲ್ಲಾರಿ, ಎಂ.ಎಸ್.ಪುಟ್ಟಣ್ಣ (ನೀತಿ ಚಿಂತಾಮಣಿ), ಸುಬೋಧ ರಾಮರಾಯರು, ಆನವಟ್ಟಿ ರಾಮರಾಯರು (ಬಾಲಕರ ನೀತಿ ಕಥಾವಳಿ) ಹೆಸರಿಸಬಹುದಾದ, ಮೊಟ್ಟ ಮೊದಲ ಮಕ್ಕಳ ಕಥೆಗಳ ಲೇಖಕರಾಗಿದ್ದಾರೆ. ಕತೆಗಳಲ್ಲಿ ಜಾನಪದ ಕತೆಗಳು, ಸಾಹಸದ ಕತೆಗಳು, ಪುರಾಣ ಕತೆಗಳು, ವೈಜ್ಞಾನಿಕ ಕತೆಗಳು, ಪ್ರಾಣಿ ಕತೆಗಳು, ಸಾಮಾಜಿಕ ಕತೆಗಳು ಮುಂತಾದ ಪ್ರಕಾರಗಳು ಕಂಡುಬರುತ್ತವೆ. ಇವೆಲ್ಲಮೂ ಮಕ್ಕಳನ್ನು ಸದಾ ರಂಜಿಸಿವೆ. ಅವರಿಗೆ ವಿವಿಧ ವಿಷಯಗಳನ್ನು ತಿಳಿಸಿವೆ, ಕಲಿಸಿವೆ.

ನಾ.ಡಿಸೋಜ, ಸಿಸು ಸಂಗಮೇಶ (ನರಿಯ ಫಜೀತಿ), ರಸಿಕ ಪುತ್ತಿಗೆ (ಸುಕ್ಕಿನುಂಡೆ ಸುಬ್ಬ), ಟಿ.ಎಸ್.ನಾಗರಾಜ ಶೆಟ್ಟಿ (ಕರಡಿ ರಸಾಯನ) ಮತ್ತೂರು ಸುಬ್ಬಣ್ಣ (ಅಂಶು ಮತ್ತು ರಾಬೋಟ್), ಕೃ.ನಾರಾಯಣರಾವ್ (ದಿನಕ್ಕೊಂದು ಕತೆ), ಎಂ.ಜಿ.ಗೋವಿಂದರಾಜು (ಆಕಾಶದ ಅಂಚು), ರಾಜಶೇಖರ ಭೂಸನೂರಮಠ (ವೈಜ್ಞಾನಿಕ ಕತೆಗಳು) ಮೊದಲಾದವರು ಈಚಿನ ಕತೆಗಾರರು. ಇತ್ತೀಚೆಗೆ ಅಪಾರ ಸಂಖ್ಯೆಯ ಕತೆಗಳ ರಚನೆಗೊಂಡಿವೆ.

ಬಹುತೇಕ ಸಮಕಾಲೀನ ಮಕ್ಕಳ ಕತೆಗಳಲ್ಲಿ ಭಾವನೆಗಳನ್ನು ದುಡಿಸಿಕೊಳ್ಳುವ ಪ್ರಯತ್ನವಿದೆಯೇ ಹೊರತು ಅವರ ಬುದ್ಧಿಯನ್ನು ದುಡಿಸಿಕೊಂಡು ಯೋಚನೆ ಮಾಡುವಂತೆ ಪ್ರಚೋದಿಸುವ ಕತೆಗಳು ಕೆಲವೇ. ಹೆಚ್ಚು ಕಡಿಮೆ ಸಮಕಾಲೀನ ಬರೆಹಗಾರರಲ್ಲಿ ಯಾವುದೇ ಹೊಸ ಪ್ರಯೋಗ ಕಡಿಮೆ. ಬಹುಶಃ ಪ್ರಯೋಗ ನಡೆಸುವಷ್ಟು ಒತ್ತಡ ಕಂಡುಕೊಳ್ಳದಿರುವುದು ಅವರ ಸೃಜನಶೀಲತೆಯಲ್ಲಿ ಇರುವ ಕೊರತೆ ಎನಿಸುತ್ತದೆ. ಅಂದರೆ ಬದಲಾಗುತ್ತಿರುವ ಬದುಕಿನ, ಮಕ್ಕಳ ಪ್ರಪಂಚದ ರೀತಿ ನೀತಿಗಳಿಗೆ ನಮ್ಮ ಶಿಶು ಸಾಹಿತಿಗಳು ಸ್ಪಂದಿಸಿಲ್ಲ ಎಂದು ಎನ್.ಎಸ್.ರಘುನಾಥ್ ಅಭಿಪ್ರಾಯಪಟ್ಟಿದ್ದಾರೆ. ಸಮಕಾಲೀನತೆಗೆ ಸ್ಪಂದಿಸುವ (ಕಂಪ್ಯೂಟರ್ ಯುಗ) ಕತೆಗಳು ಇನ್ನೂ ಬರಬೇಕಾಗಿದೆ.

ಅನುಪಮಾ ನಿರಂಜನ ಅವರು ಮಕ್ಕಳಿಗಾಗಿ ಸಂಪಾದಿಸಿ ಕೊಟ್ಟಿರುವ ದಿನಕ್ಕೊಂದು ಕತೆ ಸಂಪಟಗಳು ಒಂದು ಅಮೂಲ್ಯ ಕೊಡುಗೆ. ಬೇರೆ ಬೇರೆ ದೇಶಗಳ, ಭಾಷೆಗಳ ಕತೆಗಳೂ ಇದರಲ್ಲಿ ಸೇರಿವೆ. ಸಿಸು ಸಂಗಮೇಶರ ಆಯ್ದ ಕತೆಗಳು, ಟಿ.ಎಸ್.ನಾಗರಾಜ ಶೆಟ್ಟಿ ಅವರ ಕರಡಿ ರಸಾಯನ (ಇಪ್ಪತ್ತೈದು ಕತೆಗಳು) ಈ ಸಂಕಲನಗಳನ್ನು ಇಲ್ಲಿ ಹೆಸರಿಸಬಹುದು. ಬಿಡಿಬಿಡಿಯಾದ ಮಕ್ಕಳ ಕತೆಗಳ, ಕವಿತೆಗಳ ಪುಸ್ತಕಗಳನ್ನು ತರುವಲ್ಲಿ ಅನೇಕ ಸಂಸ್ಥೆಗಳು ದುಡಿದಿವೆ. ನವಕರ್ನಾಟಕ ಪ್ರೈ.ಲಿ., ಸಪ್ನ ಬುಕ್ ಹೌಸ್, ಟಿ.ನಾರಾಯಣ ಅಯ್ಯಂಗಾರ್ ಪ್ರಕಾಶನ, ಬಿಜಾಪುರದ ಭಾರತಿ ಪ್ರಕಾಶನ, ತಿಪಟೂರಿನ ನಿರ್ಮಲ ಪ್ರಕಾಶನ, ಮಿತ್ತಬೈಲಿನ ಶಿಶು ಸಾಹಿತ್ಯ ಮಾಲೆ, ಬೆಂಗಳೂರಿನ ಇಂಡಿಯ ಬುಕ್‌ಹೌಸ್ (ಅಮರ ಚಿತ್ರ ಕಥಾ ಮಾಲಿಕೆ), ಗುಬ್ಬಚ್ಚಿ ಪುಸ್ತಕ ಮಾಲೆ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಮೈಸೂರು ರಾಜ್ಯದ ಶಿಕ್ಷಣ ಇಲಾಖೆ, ಮೈಸೂರಿನ ಕಾವ್ಯಾಲಯ ಪ್ರಕಾಶನ ಇತ್ಯಾದಿ ನೂರಾರು ಪ್ರಕಾಶಕರ ಸೇವೆ ಸ್ಮರಣೀಯವಾದುದು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರತಿ ವರ್ಷಮೂ ಕನ್ನಡದ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಮಕ್ಕಳ ಕತೆ, ಕವನಗಳನ್ನು ಸಂಪಾದನೆ ಮಾಡಿಸಿ ಪ್ರಕಟಿಸುತ್ತಿದೆ. ಅಲ್ಲದೆ ಕಾಲು ಶತಮಾನದ ಸಾಹಿತ್ಯ ಮಾಲಿಕೆಯಲ್ಲಿ ಕತೆ ಹಾಗೂ ಕವಿತೆಗಳ ಒಂದೊಂದು ಸಂಪುಟವನ್ನು ಪ್ರತ್ಯೇಕವಾಗಿ ಪ್ರಕಟಿಸಿದೆ. ಇತ್ತೀಚೆಗೆ ಎನ್.ಎಸ್.ರಘುನಾಥ್ ಅವರ ಸಂಪಾದಕತ್ವದಲ್ಲಿ ಶತಮಾನದ ಮಕ್ಕಳ ಸಾಹಿತ್ಯ ಎಂಬ ಸಂಪುಟವನ್ನು ಹೊರತಂದಿದೆ. ಇದರಲ್ಲಿ ಆಯ್ದ 101 ಕವಿತೆಗಳು, 104 ಕತೆಗಳು ಮತ್ತು 19 ನಾಟಕಗಳು ಸೇರಿವೆ.

**ನಾಟಕ :** ಅಭಿನಯ, ಸಂಭಾಷಣೆ, ಹಾಡು, ವಿಶೇಷ ವಸ್ತ್ರ ವಿನ್ಯಾಸ, ದೃಶ್ಯ ವೈಭವ ಮುಂತಾದ ಹಲವು ಮಿಶ್ರಕಲೆಗಳ ಸಂಯೋಜನೆಯಾದ ನಾಟಕ ಎಲ್ಲರನ್ನು ಆಕರ್ಷಿಸುವ ಕಲೆ. ನೋಡಿ ಸಂತೋಷಿಸುವ ಹಾಗೆಯೇ ಓದಿಯೂ ಆನಂದಿಸಬಹುದು. ಈ ದಿಸೆಯಲ್ಲಿ ಆಲೋಚಿಸಿ ಬರೆದವರೆಂದರೆ ನಾರಾಯಣಸ್ವಾಮಿ (ಪೃಥ್ವೀರಾಜ ಜಯಚಂದ್ರ, ಹುಲಿ ಶಿಕಾರಿ, 1925), ಕುವೆಂಪು (ಮೋಡಣ್ಣನ ತಮ್ಮ, 1926), ಎಂ.ಎನ್.ಕಾಮತ್, ಪಂಜೆ ಮಂಗೇಶರಾಯ, ಎಂ.ಎಸ್.ಪುಟ್ಟಣ್ಣ, ಹೊಯಿಸಳ (ಮಕ್ಕಳ ಮಂಟಪ, ಚಂದ್ರಹಾಸ), ಚಿ.ಸದಾಶಿವಯ್ಯ, ಬೆಂ.ಶ್ರೀ.ಪಾಂಡುರಂಗರಾಯ (ಸುಳ್ಳಿನ ಸೋಲು 1940), ಶಿವರಾಮ ಕಾರಂತ (ಹೊಟ್ಟೆಯ ಹಾಡು, ನಾಲ್ಕನೆಯ ಪಿಶಾಚಿ), ಜಿ.ಪಿ.ರಾಜರತ್ನಂ (ಬೆಳೆಯುವ ಪೈರು, ಧ್ವಜ ವಂದನೆ) ಮೊದಲಾದವರನ್ನು ಹೆಸರಿಸಬಹುದು. ಕಾಲ ಕ್ರಮೇಣ ನಾಟಕಗಳ ರಚನೆಯ ಸಂಖ್ಯೆ ಹೆಚ್ಚಾಯಿತು. ವಿವಿಧತೆಯ ಜೊತೆಗೆ ಗುಣಮಟ್ಟ ಹೆಚ್ಚಿರುವ ನಾಟಕಗಳೂ ಬಂದುವು.

ಕೀರ್ತಿನಾಥ ಕುರ್ತಕೋಟಿಯವರ ಆ ಮನಿ ಮಕ್ಕಳ ಲೋಕವನ್ನು ಅದರ ಎಲ್ಲ ಗುಣಗಳೊಂದಿಗೆ ಕಣ್ಣೆದಿರು ತೆರೆದಿಡುವುದು ಆಕರ್ಷಕವಾಗಿದೆ. ಕುವೆಂಪು ಅವರ ಮೋಡಣ್ಣನ ತಮ್ಮ ಗೀತರೂಪಕವಾಗಿದ್ದು ಮಕ್ಕಳಲ್ಲಿ ನಿಸರ್ಗ ಪ್ರೀತಿಯನ್ನು ಮೂಡಿಸಬಲ್ಲುದು. ಆರ್ಯ ಅವರ ಮಳೆ ಬಂತು, ಚಂದ್ರಶೇಖರ ಕಂಬಾರರ ಆಲೀಬಾಬಾ ಮತ್ತು ನಲವತ್ತು ಮಂದಿಕಳ್ಳರು, ಪುಷ್ಪರಾಣಿ ಎನ್.ಎಸ್.ವೆಂಕಟರಾಮ್ ಅವರ ಹಿಮಾನಿ ಮತ್ತು ಏಳು ಜನ ಕಳ್ಳರು, ಅಬ್ದುಲ್ ರೆಹಮಾನ್ ಪಾಷ ಅವರ ನಕ್ಕಳಾ ರಾಜಕುಮಾರಿ ಜಾನಪದ ಸತ್ವವನ್ನು ಮೈಗೂಡಿಸಿಕೊಂಡಿವೆ. ಮೇವುಂಡಿ ಮಲ್ಲಾರಿ ಅವರ ಮಯೂರ ವರ್ಮ, ನಾರಾಯಣ ಸ್ವಾಮಿ ಅವರ ಶಿವಾಜಿ, ಎಂ.ವಿ.ಸೀತಾರಾಮಯ್ಯ ಅವರ ಕರುಣೆಯ ಕುಡಿ, ಶ್ರೀನಿವಾಸ ಅವರ ಬೈಲಂಗಡಿಯ ರಾಣಿ, ರಘುಸುತ ಅವರ ಹೊಸ ಬೆಳಕು ಮುಂತಾದವು ಐತಿಹಾಸಿಕ ನಾಟಕಗಳಾಗಿದ್ದು ಮಕ್ಕಳಲ್ಲಿ ಸಾಹಸಪ್ರಿಯತೆ, ಆದರ್ಶಗಳ ಬಗೆಗಿನ ಒಲವನ್ನು ಹೆಚ್ಚಿಸುವುದರ ಜೊತೆಗೆ ವಾಸ್ತವವಾಗಿ ನೆಲೆಸಿದ್ದ ಮಹಾನ್ ಸಾಧಕರ ಬಗೆಗಿನ ಕುತೂಹಲವನ್ನು ತಣಿಸಬಲ್ಲವು.

ಹೆಗ್ಗೋಡಿನ ಅಕ್ಷರ ಪ್ರಕಾಶನ ಹೊರತಂದಿರುವ ಅನೇಕ ಮಕ್ಕಳ ನಾಟಕಗಳು (ಬಿ.ವಿ.ಕಾರಂತರ ಪಂಜರ ಶಾಲೆ, ಕಂಬಾರರ ಕಿಟ್ಟೀ ಕಥೆ, ಪ್ರಸನ್ನ ಅವರ ಒಂದಾನೊಂದು ಕಾಡಿನಲ್ಲಿ, ಕೆ.ವಿ.ಸುಬ್ಬಣ್ಣ ಅವರ ಬೆಟ್ಟಕ್ಕೆ ಚಳಿಯಾದರೆ, ನೀಲಿ ಕುದುರೆ) ಹೊಸ ಶೈಲಿಯಲ್ಲಿ ರಚನೆಯಾಗಿದ್ದು ರಂಗ ಪ್ರಯೋಗಗಳಾಗಿಯೂ ಅಪಾರ ಯಶಸ್ಸನ್ನು ಪಡೆದಿವೆ. ಇವುಗಳ ಜೊತೆಗೆ ವೈದೇಹಿ ಅವರ ಕೆಲವು ನಾಟಕಗಳೂ ಗುಣಮಟ್ಟದ ದೃಷ್ಟಿಯಿಂದ ಮೇಲು ಮಟ್ಟದವು. ಮಕ್ಕಳನ್ನು ಅಪಾರವಾಗಿ ರಂಜಿಸಬಲ್ಲವು ಕೂಡ. ಅದ್ಭುತ ರಮ್ಯತೆಯನ್ನು, ಪೌರಾಣಿಕ ಕತೆಗಳನ್ನು, ವಿಜ್ಞಾನ ಮನೋವಿಜ್ಞಾನಗಳನ್ನು ಬಳಸಿಕೊಂಡಿರುವ ನಾಟಕಗಳೂ ಇವೆ. ಸೂ.ಸುಬ್ರಹ್ಮಣ್ಯಂ ಅವರ ನಕ್ಕಿತು ನಕ್ಷತ್ರ – ನಕ್ಷತ್ರಗಳನ್ನು ಕುರಿತು ಹೊಸ ತಂತ್ರದ ಮೂಲಕ ತಿಳಿಯಪಡಿಸುವ ವಿಶಿಷ್ಟವಾದ ನಾಟಕವಾಗಿದೆ. ಈಚೆಗೆ ಪ್ರಕಟವಾಗಿರುವ ಆರ್.ಕೆ.ಶಾನಭೋಗರ ಅಪೂರ್ವ ಹಾಗೂ ಉಪ್ಪಿನ ಕಾಯಿಯ ಅತ್ತೆ, ಬಿಳಿಗೆರೆ ಕೃಷ್ಣಮೂರ್ತಿ ಅವರ ಮಳೆ ಹುಚ್ಚ ಮತ್ತು ನವಿಲೂರಿನ ಕತೆ, ಗ.ಸು.ಭಟ್ಟ ಅವರ ನಲಿಯಿತು ನವಿಲು ಆಕರ್ಷಕ ಭಾಷೆಯಿಂದ ಕೂಡಿರುವ ಲವಲವಿಕೆಯ ನಾಟಕಗಳಾಗಿವೆ. ನಾಟಕಗಳ ಸಾರ್ಥಕತೆ ಇರುವುದು ರಂಗಾಭಿನಯದಲ್ಲಿ, ಪ್ರದರ್ಶನದಲ್ಲಿ. ಹೀಗೆ ನಾಟಕಗಳನ್ನು ಪ್ರದರ್ಶಿಸುವುದರಲ್ಲಿ ಹೆಗ್ಗೋಡಿನ ನೀನಾಸಂ, ತಿಪಟೂರಿನ ಅಭಿನಯ, ಬೆಂಗಳೂರಿನ ಬಿಂಬ, ಮೈಸೂರಿನ ರಂಗಾಯಣ, ತಮರಿಯ ಕಿನ್ನರ ಮೇಳ ಮುಂತಾದ ತಂಡಗಳು ಸಾಕಷ್ಟು ಆಸಕ್ತಿಯಿಂದ ದುಡಿಯುತ್ತಿವೆ.

**ಕಾದಂಬರಿ :** ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಅತಿ ಹೆಚ್ಚು ಸಂಖ್ಯೆ ಯಲ್ಲಿ ಬಂದಿರುವುದು ಕತೆಗಳೇ. ಅನಂತರ ಜೀವನ ಚರಿತ್ರೆ, ವಿಜ್ಞಾನ ಮತ್ತಿತರ ವಿಷಯಕ ವಸ್ತುಗಳ ಕೃತಿಗಳು ಬಹಳವಾಗಿವೆ. ಕಾವ್ಯದ್ದು ಮೂರನೆಯ ಸ್ಥಾನ ಇರಬಹುದು. ನಾಟಕಗಳೂ ಬಹಳ ಕಡಿಮೆ. ಕಾದಂಬರಿಗಳ ಸಂಖ್ಯೆಯಂತೂ ಮತ್ತೂ ಕಡಿಮೆ. ಕಾದಂಬರಿ ಬಹು ಕಾಲದ ಓದುವ ಸಹನೆಯನ್ನು ಅಪೇಕ್ಷಿಸುತ್ತದೆ. ಬೆಳೆದ ಮಕ್ಕಳು (ಹನ್ನೆರಡು ವರ್ಷಗಳಿಗಿಂತ ದೊಡ್ಡವರು) ಮಾತ್ರ ಓದಬಲ್ಲರೆಂದು ಕಾಣುತ್ತದೆ. ಕನ್ನಡದಲ್ಲಿ ವಯಸ್ಸಿಗನುಗುಣವಾಗಿ ಸಾಹಿತ್ಯ ರಚನೆ ಆಗಿಲ್ಲ. ಇಂಗ್ಲಿಷಿನಲ್ಲಿ ಅಂಥ ಪ್ರಯತ್ನಗಳಾಗಿವೆ. ಐದರಿಂದ ಎಂಟು ವರ್ಷದ ವಯೋಮಾನದವರು, ಒಂಬತ್ತರಿಂದ ಹನ್ನೆರಡು ವಯಸ್ಸಿನ ಮಕ್ಕಳು, ಹದಿಮೂರರಿಂದ ಹದಿನೈದರವರೆಗಿನವರು ಎಂದು ಮಕ್ಕಳ ಸಾಹಿತ್ಯವನ್ನು ವಿಂಗಡಿಸಿದ್ದಾರೆ. ಆಯಾ ವಯಸ್ಸಿನ ಮಕ್ಕಳ ಸ್ವಭಾವ, ಸಾಮರ್ಥ್ಯ, ಅಗತ್ಯಗಳನ್ನು ಅನುಸರಿಸಿ ಸಾಹಿತ್ಯ ರಚನೆ ಆಗಬೇಕೆನ್ನುವುದು ಮನೋವಿಜ್ಞಾನಿಗಳ ಅಭಿಪ್ರಾಯ.

ಕಾದಂಬರಿ ಕ್ಷೇತ್ರದಲ್ಲಿ ಸಾಹಸ ಪ್ರಧಾನ ವಸ್ತುವಿನ ರಚನೆಗಳು ಮೇಲುಗೈ ಸಾಧಿಸಿವೆ. ರಸಿಕ ಪುತ್ತಿಗೆ ಅವರ ಕೆಂಪು ಕಾರು, ಎಂ.ಪಿ.ಮನೋಹರ ಚಂದ್ರನ್ ಅವರ ಪೂಪ ಕಾಡಿನಲ್ಲಿ ಪಾಪು, ಎಚ್.ಎಸ್.ವೆಂಕಟೇಶಮೂರ್ತಿ ಅವರ ಅಮಾನುಷರು, ಅಗ್ನಿಮುಖಿ, ಸುಮತೀಂದ್ರ ನಾಡಿಗರ ಸಾಹಸ, ಬಿ.ಎಲ್.ವೇಣು ಅವರ ಗುಹೆ ಸೇರಿದವರು, ಟಿ.ಕೆ.ರಾಮರಾವ್ ಅವರ ದಿಬ್ಬದ ಮನೆ ಇವುಗಳನ್ನು ಹೆಸರಿಸಬಹುದು. ಹುಡುಗ ಹುಡುಗಿಯರ ಮನಸ್ಸಿನ ಕುತೂಹಲ ತಣಿಸುವಲ್ಲಿ, ಅವರನ್ನು ತುದಿಗಾಲಲ್ಲಿ ನಿಲ್ಲಿಸಿ ರೋಮಾಂಚನ ಗೊಳಿಸುವುದರಲ್ಲಿ, ಅನಿರೀಕ್ಷಿತ ತಿರುವುಗಳ ಮೂಲಕ ಬೆರಗು ಮೂಡಿಸುವುದರಲ್ಲಿ ಈ ಕೃತಿಗಳು ಯಶಸ್ವಿಯಾಗಿವೆ. ಆನಂದ ಪಾಟೀಲರ ಬೆಳದಿಂಗಳು, ಎನ್.ವಿ.ಶ್ರೀನಿವಾಸರಾವ್ ಅವರ ಹಾರೋ ಹನುಮ – ಈ ಕೃತಿಗಳು ಅದ್ಭುತ ರಮ್ಯತೆಯನ್ನು ಬಹಳ ಚೆನ್ನಾಗಿ ದುಡಿಸಿಕೊಂಡಿವೆ. ಆರ್.ವಿ.ಭಂಡಾರಿ ಅವರ ಬಿರುಗಾಳಿ ಒಂದು ವಿಶಿಷ್ಟ ಕಾದಂಬರಿ. ಜಂಬುನಾಥ ಕಂಚ್ಯಾಣಿ ಅವರ ಮಿಡಿದ ಕರುಳು ಮಕ್ಕಳಲ್ಲಿ ಭಾವೈಕ್ಯತೆಯ ಭಾವನೆ ಮೂಡಿಸುವುದರ ಜೊತೆಗೆ ರಂಜನೆಯನ್ನು ನೀಡಬಲ್ಲದು. ಗೀತಾ ಕುಲಕರ್ಣಿ ಅವರ ನೇಜಿ ಗುಬ್ಬಚ್ಚಿ ಕೂಡ ಬಹಳ ಅಪರೂಪದ ಕೃತಿ. ರಾಜಶೇಖರ ಭೂಸನೂರಮಠ ಅವರು ರಾಕ್ಷಸ ದ್ವೀಪ, ಅಟ್ಲಾಂಟಿಸ್ ಮುಂತಾದ ಮನಸೂರೆಗೊಳ್ಳುವ ಅನೇಕ ವೈಜ್ಞಾನಿಕ ಕಾದಂಬರಿಗಳನ್ನು ಹೆಣೆದು ಮಕ್ಕಳ ಕೈಗೆ ಇತ್ತಿದ್ದಾರೆ.

ಪಾತಾಳದಲ್ಲಿ ಪಾಪಚ್ಚಿ (ನಾ.ಕಾಸ್ತೂರಿ), ಪಿನೋಕಿಯೋ (ಅನು: ಎನ್.ಪ್ರಹ್ಲಾದರಾವ್), ಭೂಗರ್ಭ ಯಾತ್ರೆ, ಬನದ ಮಕ್ಕಳು, (ಎಂ.ಗೋಪಾಲ ಕೃಷ್ಣ ಅಡಿಗ), ಸಮುದ್ರ ತಳದಲ್ಲಿ ಇಪ್ಪತ್ತು ಸಾವಿರ ಯೋಜನೆಗಳು (ಅನು: ವಾಸುದೇವ ರಾವ್) ಮುಂತಾದ ಒಳ್ಳೆಯ ಹಲವು ಅನುವಾದಿತ ಕೃತಿಗಳೂ ಬಂದಿವೆ. ಕೆ.ನಟರಾಜ್ ಅವರ ಚಂದ್ರಲೋಕಕೆ ಹೋಗೋಣು ಬಾರಾ, ಪುಟಾಣಿ ಕಂಡ ಪರಮಾಣು ಲೋಕ, ಆರ್.ಕೆ.ಶಾನಭೋಗ ಅವರ ಅಂಟಾರ್ಕಟಿಕಾ – ಇವು ಉತ್ತಮ ವೈಜ್ಞಾನಕ ಕಾದಂಬರಿಗಳು. ಮಕ್ಕಳ ಕಾದಂಬರಿಕ್ಷೇತ್ರ ಸಾಧಿಸಬೇಕಾದದ್ದು ಇನ್ನೂ ಇದೆ. ಇದಕ್ಕೆ ಅವಕಾಶವೂ ಅಪಾರವಾಗಿದೆ.

ಕನ್ನಡ ಪತ್ರಿಕೋದ್ಯಮ ಕ್ಷೇತ್ರ ಮಕ್ಕಳ ಸಾಹಿತ್ಯ ಸೃಷ್ಟಿಗೆ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಮೊದಲಾದ ನಿಯತಕಾಲಿಕಗಳಲ್ಲಿ ಮಕ್ಕಳ ಸಾಹಿತ್ಯ ಸೃಷ್ಟಿ ಸಾಕಷ್ಟು ನಡೆದಿದೆ. ಹೀಗೆಯೇ ಮಕ್ಕಳ ಸಾಹಿತ್ಯ ಪ್ರಕಟಣೆಗೇ ಮೀಸಲಾದ ಮಕ್ಕಳ ಪತ್ರಿಕೆಗಳು ಕೂಡ ಮಕ್ಕಳ ಸಾಹಿತ್ಯದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿವೆ, ಶ್ರಮಿಸುತ್ತಿವೆ; 'ಮಕ್ಕಳ ಪುಸ್ತಕ' ಕನ್ನಡದ ಮೊತ್ತ ಮೊದಲ ಮಕ್ಕಳ ಪತ್ರಿಕೆ (1926). ಅಶ್ವತ್ಥ ನಾರಾಯಣರಾಯ ಎಂಬವರು ಇದನ್ನು ಹುಟ್ಟು ಹಾಕಿದರು. ಅನಂತರ ಇದನ್ನು ದ.ಕೃ.ಭಾರದ್ವಾಜ, ದೇವುಡು ಅವರು ಸಂಪಾದಕರಾಗಿ ಮನ್ನಡೆಸಿದರು. ದೇವುಡು ಅವರು ಅನಂತರ ನಮ್ಮ ಪುಸ್ತಕ ಎಂಬ ಒಂದು ಸ್ವತಂತ್ರ ಪತ್ರಿಕೆಯನ್ನೂ ನಡೆಸಿದರು. ಬಾಲವನ (ಶಿವರಾಮ ಕಾರಂತ), ಬಾಲಚಂದ್ರ (ಉಳ್ಳಾಲ ಮಂಗೇಶರಾಯ), ಕಂದಮಾಸಿಕ (ಆರ್.ಎಸ್.ಮೈಲಾರಯ್ಯ ಮತ್ತು ಡಿ.ಆರ್.ನಾಥ್), ತುತ್ತೂರಿ (ರಾ.ಮೋ.ವಿಶ್ವಾಮಿತ್ರ), ವಿಶ್ವಾಮಿತ್ರ (ಪದ್ಮನಾಭ ನಾಯಕ), ಮಕ್ಕಳ ಪತ್ರಿಕೆ (ಶಿವರಾಮ ಕಾರಂತ), ಕನ್ನಡ ಕಂದ (ಮೇವುಂಡಿ ಮಲ್ಲಾರಿ), ಬೆಂಗಳೂರಿನ ಮಕ್ಕಳ ಕೂಟ ಮಕ್ಕಳ ಬಾವುಟ (ಮೈಸೂರಿನ ಚಿಲ್ಡ್ರನ್ ಬುಕ್ ಕೌನ್ಸಿಲ್), ಬಾಲ ಭಾರತಿ (ಸಿಸು ಸಂಗಮೇಶ), ಮಕ್ಕಳ ಮನೆ (ಈಶ್ವರ ಕಮ್ಮಾರ) ಇವೆಲ್ಲ ಕೆಲ ಕಾಲ ನಡೆದು ನಿಂತು ಹೋದ ಪತ್ರಿಕೆಗಳು. ಬೆಂಗಳೂರಿನಿಂದ ಹೊರಟ ಪತ್ರಿಕೆಗಳಲ್ಲಿ ಪಾಪಚ್ಚಿ, ಸಂತೃಪ್ತಿ, ಪುಟಾಣಿ, ಚಂಪಕ – ಒಳ್ಳೆಯ ಪ್ರಯತ್ನಗಳು. ಕೇರಳದ ಮಂಗಳ ಪ್ರಕಾಶಕರು ಬಾಲ ಮಂಗಳ ಎಂಬ ಪಾಕ್ಷಿಕವನ್ನು ಹೊರತರುತ್ತಿದ್ದಾರೆ. ಮಣಿಪಾಲದ ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ತುಂತುರು ಎಂಬ ಮಾಸ ಪತ್ರಿಕೆಯನ್ನು ಸುಂದರವಾಗಿ ಮುದ್ರಿಸುತ್ತಿದ್ದಾರೆ. ಮದರಾಸಿನಿಂದ ಬರುತ್ತಿದ್ದ ಚಂದಮಾಮ ಮತ್ತು ಬಾಲಮಿತ್ರ ಪತ್ರಿಕೆಗಳು ಕೆಲಕಾಲ ಸ್ಥಗಿತಗೊಂಡಿದ್ದು ಇದೀಗ ಮತ್ತೆ ಪ್ರಾರಂಭವಾಗಿವೆ. ಬೊಂಬೆ ಮನೆ ಇಂಥದೇ ಮತ್ತೊಂದು ಪತ್ರಿಕೆ. ಕರ್ನಾಟಕ ವಿಜ್ಞಾನ ಪರಿಷತ್ತು ಬಾಲ ವಿಜ್ಞಾನ ಎಂಬ ಬಹಳ ಉಪಯುಕ್ತವಾದ ವೈಜ್ಞಾನಿಕ ಮಾಸಿಕವನ್ನು ಹೊರಡಿಸುತ್ತಿದೆ. ಅಂಗಳ ಎಂಬ ಒಂದು ವಾರ ಪತ್ರಿಕೆ ಬೆಂಗಳೂರಿನಿಂದ ಹೊರಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳಿಗಾಗಿ ಜೀವನ ಚರಿತ್ರೆಗಳು, ಮಾಹಿತಿ ಪುಸ್ತಕಗಳು, ವಿಜ್ಞಾನ ವಿಚಾರಗಳು ಅಪಾರ ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ. ರಾಷ್ಟ್ರೋತ್ಥಾನ ಪರಿಷತ್ತು 'ಭಾರತ ಭಾರತಿ' ಪುಸ್ತಕ ಮಾಲಿಕೆಯಲ್ಲಿ 510 ಪುಸ್ತಕಗಳನ್ನು ಪ್ರಕಟಿಸಿದೆ. ಐಬಿಎಚ್ ಪ್ರಕಾಶನ ಸಂಸ್ಥೆ ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಮಾಲೆಯಲ್ಲಿ ಅನೇಕ ಕೃತಿಗಳನ್ನು ಪ್ರಕಟಿಸಿದೆ.

ಕನ್ನಡದಲ್ಲಿ ಮಕ್ಕಳ ಕಾಮಿಕ್ಸ್‌ಗಳಿಗೂ ಬರವಿಲ್ಲ. ಐ.ಬಿ.ಎಚ್.ನ. ಅಮರ ಚಿತ್ರಕಥಾಮಾಲಿಕೆಯಲ್ಲಿ ಪುರಾಣ ಪುಣ್ಯ ಪುರುಷರ ಕಥೆಗಳು ಅರ್ಥಪೂರ್ಣ ಚಿತ್ರಗಳೊಂದಿಗೆ ಅಚ್ಚಾಗಿವೆ. ಕಾಮಿಕ್ಸ್ ಲೋಕ ಮಕ್ಕಳ ಕಲ್ಪನಾ ರಮ್ಯತೆಯನ್ನು (ಫ್ಯಾಂಟಸಿ) ಗರಿಗೆದರಿಸುವಲೋಕ. ಅನೇಕ ಇಂಗ್ಲಿಷ್ ಕಾಮಿಕ್ಸ್ ಕಥಾಮಾಲಿಕೆಗಳು ಕನ್ನಡಕ್ಕೆ ಅನುವಾದಗೊಂಡು ಜನಪ್ರಿಯವಾಗಿವೆ. ಫ್ಯಾಂಟಮ್, ಮಾಡಸ್ಟಿಬ್ಲೇಸ್, ಮೋಗ್ಲಿ, ಮಾಂಡ್ರೇಕ್ ಮೊದಲಾದ ಕಥಾಮಾಲಿಕೆಗಳು ಮಕ್ಕಳನ್ನು ರಂಜಿಸಿವೆ.

ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ವಕೋಶ ಮಾದರಿಯ ಪರಾಮರ್ಶನ ಗ್ರಂಥಗಳನ್ನು ಸಿದ್ಧಪಡಿಸುವ ಕಾರ್ಯವೂ ಕನ್ನಡದಲ್ಲಿ ಸಾಗಿದೆ. ಶಿವರಾಮ ಕಾರಂತರ ಬಾಲ ಪ್ರಪಂಚ (ಮೂರು ಸಂಪುಟ), ವಿಜ್ಞಾನ ಪ್ರಪಂಚ (ನಾಲ್ಕು ಸಂಪುಟ) ಮೊದಲ ಗಟ್ಟಿ ಪ್ರಯತ್ನಗಳು. ನಿರಂಜನರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಜ್ಞಾನ ಗಂಗೋತ್ರಿ (ಏಳು ಸಂಪುಟ) ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಮೈಲುಗಲ್ಲೆನ್ನಬಹುದು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕಿರಿಯರಿಗಾಗಿ ಪ್ರಕಟಿಸಿರುವ ಕಿರಿಯರ ಕರ್ನಾಟಕ ವಿಶ್ವಕೋಶವನ್ನೂ ಇಲ್ಲಿ ಸ್ಮರಿಸಬಹುದು. ನವಕರ್ನಾಟಕ ಪ್ರಕಾಶನದವರು ಪ್ರಕಟಿಸಿರುವ ಜ್ಞಾನ ವಿಜ್ಞಾನ ಕೋಶ (ನಾಲ್ಕು ಸಂಪುಟ) ಮಕ್ಕಳ ವಿಜ್ಞಾನ ಕ್ಷೇತ್ರದ ಅದ್ವಿತೀಯ ಕೊಡುಗೆಯಾಗಿದೆ. ಇದೇ ಪ್ರಕಾಶನದ ವಿಜ್ಞಾನ ಪದವಿವರಣಕೋಶ ಕೂಡ ಉಲ್ಲೇಖನೀಯ ಕೃತಿಯಾಗಿದ್ದು ಉಪಯುಕ್ತವಾಗಿದೆ. ಚಿತ್ತಾಕರ್ಷಕ ಬಣ್ಣದ ಚಿತ್ರಗಳ, ಉತ್ತಮ ಗುಣಮಟ್ಟದ ಕಾಗದದ ಬಳಕೆಯ, ಉತ್ಕೃಷ್ಟ ಖಚಿತಜ್ಞಾನದ ಈ ಬಗೆಯ ಉತ್ಪಾದನೆ ಕನ್ನಡದ ಮಟ್ಟಿಗೆ ಹೇಳುವುದಾದರೆ ಮೊದಲ ಮಾದರಿ ಎನ್ನಬಹುದು. ಇಂಥ ಚಿತ್ತಾಕರ್ಷಕವಾದ, ಕಣ್ಮನಗಳನ್ನು ತಣಿಸಬಲ್ಲ ವಿವಿಧ ವಿಷಯಕ ವಿಶ್ವಕೋಶಗಳ ಅಗತ್ಯ ಕನ್ನಡದ ಮಕ್ಕಳಿಗೆ ಇನ್ನೂ ಇದೆ.

ಮಕ್ಕಳ ಸಾಹಿತ್ಯ ಕುರಿತಂತೆ ವಿಮರ್ಶಾತ್ಮಕ ಹಾಗೂ ವಿಶ್ಲೇಷಣಾತ್ಮಕವಾದ ಕೆಲವು ಕೃತಿಗಳೂ ಬಂದಿವೆ. ನಿರುಪಮಾ ಅವರ ನಿಮ್ಮ ಮಕ್ಕಳಿಗೆಂತಹ ಸಾಹಿತ್ಯ ಬೇಕು, ಟಿ.ಎಸ್.ನಾಗರಾಜ ಶೆಟ್ಟಿ ಅವರ ಮಕ್ಕಳ ಸಾಹಿತ್ಯ, ಏಕೆ ಬೇಕು? ಸಿಸು ಸಂಗಮೇಶ ಅವರ ಮಕ್ಕಳ ಸಾಹಿತ್ಯ ನಾನು ಕಂಡಂತೆ ಅಂಥವುಗಳಲ್ಲಿ ಪ್ರಮುಖವಾದವು. ಮಕ್ಕಳ ಪುಸ್ತಕಗಳ ವಿಷಯ ವೈವಿಧ್ಯ, ರಚನೆ, ಉತ್ಪಾದನೆ, ಮಾರಾಟ ಈ ಎಲ್ಲ ಕ್ಷೇತ್ರಗಳಲ್ಲಿಯೂ ಸಾಕಷ್ಟು ಸುಧಾರಣೆಗಳು ನಡೆಯಬೇಕಾಗಿದೆ. (ಟಿ.ಎಸ್.ಎನ್.)

**ಕನ್ನಡದಲ್ಲಿ ಮಹಿಳಾಸಾಹಿತ್ಯ :** ಸಾವಿರದೈನೂರು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ 20ನೆಯ ಶತಮಾನಕ್ಕೆ ಕಾಲಿರಿಸುವವರೆಗೆ ಮಹಿಳೆಯರೇ ರಚಿಸಿದ ಸಾಹಿತ್ಯ, ಮಹಿಳಾ ಸಾಹಿತ್ಯವೆಂಬ ಹೆಸರಿನಲ್ಲಿ ಗುರುತಿಸಬಹುದಾದಂಥದ್ದು ಹೆಚ್ಚು ಕಂಡುಬರುವುದಿಲ್ಲ. ಸ್ತ್ರೀಯರು ವಿದ್ಯೆಯಿಂದ ವಂಚಿತರಾದದ್ದು, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗದೇ ಹೋದದ್ದು, ಸ್ವಾತಂತ್ರ್ಯವಿರದ ಅವಲಂಬನೆಯ ಜೀವನವೇ ಪ್ರಧಾನವಾದದ್ದು – ಇಂಥ ಅನೇಕ ಕಾರಣಗಳಿಂದಾಗಿ ಮಹಿಳೆ ಕನ್ನಡ ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಬಹುಕಾಲದವರೆಗೆ ಅನನ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದಗಳಿರಬಹುದು. ಗುರುತಿಸುವಂಥ ಸೃಜನಶೀಲತೆ ನಮಗೆ ಕಾಣುವುದು 20ನೆಯ ಶತಮಾನದಲ್ಲಿಯೇ ಎನ್ನಬಹುದು.

ಸಾತವಾಹನರ ಕಾಲದಿಂದಲೂ ಆಡಳಿತ, ರಾಜ್ಯಭಾರ ಇತ್ಯಾದಿ ಕ್ಷೇತ್ರಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಶಕ್ತಿಸಾಮರ್ಥ್ಯಗಳನ್ನು ಪ್ರದರ್ಶಿಸಿದ ಕೆಲ ಮಹಿಳೆಯರು ಪ್ರತಿಭೆಗೆ ಉದಾಹರಣೆಯಾಗಿ ಕಾಣಸಿಗುತ್ತಾರೆ. ಬಾದಾಮಿ ಚಳುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯ (ಸು.610–42) ಎರಡನೆಯ ಮಗನಾದ ಚಂದ್ರಾದಿತ್ಯನ ಪ್ರಿಯ ಮಹಿಷಿ 'ವಿಜ್ಜಿಕೆ' ಎಂದು ಹೆಸರಾದ ವಿಜಯಮಹಾದೇವಿ ಸಂಸ್ಕೃತ ಪಂಡಿತೆಯೂ ಉತ್ತಮ ಕವಯಿತ್ರಿಯೂ ಆಗಿದ್ದು ಕೌಮುದೀ ಮಹೋತ್ಸವ ಎಂಬ ಸಂಸ್ಕೃತ ನಾಟಕವನ್ನು ರಚಿಸಿದಳೆಂದು ತಿಳಿದುಬರುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಅತ್ತಿಮಬ್ಬೆ ಎಂಬ ಜೈನ ಮಹಿಳೆಯ ಹೆಸರು ಪ್ರಸಿದ್ಧವಾದದ್ದು. ಈಕೆ ಸಾವಿರದೈನೂರು ಜಿನ ಬಸದಿಗಳನ್ನು ನಿರ್ಮಿಸಿ, ಜಿನ ಪ್ರತಿಮೆಗಳನ್ನು ಮಾಡಿಸಿ ದಾನ ಚಿಂತಾಮಣಿ ಎಂಬ ಬಿರುದು ಗಳಿಸಿದ್ದವಳು.

ಕವಿ ರನ್ನನಿಂದ ಅಜಿತ ಪುರಾಣ ಕಾವ್ಯವನ್ನು ಬರೆಸಿ, ಪೊನ್ನ ಬರೆದ ಶಾಂತಿಪುರಾಣದ ಸಹಸ್ರ ಪ್ರತಿಗಳನ್ನು ಮಾಡಿಸಿ ದಾನ ಮಾಡಿದವಳು. ಸು.1100ರಲ್ಲಿದ್ದಳೆಂದು ಭಾವಿಸಲಾಗಿರುವ ಕಂತಿ (ನೋಡಿ) ಕನ್ನಡದ ಪ್ರಪ್ರಥಮ ಕವಯಿತ್ರಿ, ಈಕೆಗೆ ಅದ್ಭುತ ಕವಿತಾ ಸಾಮರ್ಥ್ಯವಿತ್ತೆಂದೂ ಅಭಿನವ ವಾಗ್ದೇವಿ, ಅಧಿಕ ಕವೀಶ್ವರಿ ಇತ್ಯಾದಿ ಬಿರುದುಗಳಿದ್ದವೆಂದೂ ಕಂತಿ ಹಂಪನ ಸಮಸ್ಯೆಗಳು ಎಂಬ ಕೃತಿಯನ್ನು ಬರೆದಿರುವಳೆಂದೂ ತಿಳಿದುಬರುತ್ತದೆ.

ಕಂತಿಯ ಅನಂತರ 12ನೆಯ ಶತಮಾನದಲ್ಲಿ ಹಲವಾರು ವಚನಕಾರ್ತಿಯರು ಕನ್ನಡದಲ್ಲಿ ವಚನಗಳನ್ನು ರಚಿಸಿ ಒಂದು ಚಳವಳಿಯನ್ನೇ ನಡೆಸಿದರು. ಮಹಿಳೆಯರು ತಮ್ಮ ಸಾಹಿತ್ಯದಲ್ಲಿ ಸಮಾಜದ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ, ಸಾಹಿತ್ಯ ರಚಿಸತೊಡಗಿದ್ದನ್ನು ನಾವು ಕೆಲವು ಹಂತಗಳಲ್ಲಿ ಗುರುತಿಸಬಹುದು. ಮೊದಲನೆಯದು 12ನೆಯ ಶತಮಾನದ ವಚನಕಾರ್ತಿಯರ ಕಾಲದಲ್ಲಿ; ಎರಡನೆಯ ಹಂತ, ದೇಶದ ಸ್ವಾತಂತ್ರ್ಯ ಚಳವಳಿಗಳು ನಡೆಯತೊಡಗಿ, ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿ ಮಹಿಳೆಯರು ಶಿಕ್ಷಣದ ಮಹತ್ತ್ವದ ಬಗ್ಗೆ ಅರಿವು ಮೂಡಿಸಿಕೊಂಡಾಗ; ಮೂರು ಮತ್ತು ನಾಲ್ಕನೆಯ ಹಂತ, 20ನೆಯ ಶತಮಾನದ ಎಪ್ಪತ್ತು – ಎಂಬತ್ತರ ದಶಕದಲ್ಲಿ, ದಲಿತ – ಬಂಡಾಯ ಹಾಗೂ ಸ್ತ್ರೀಶೋಷಣೆಯ ಅಥವಾ ಸ್ತ್ರೀವಾದದ ಹೊಸ ಎಚ್ಚರ, ಹೊಸ ಅರಿವು ಮೂಡಿದಾಗ. ಈ ಸಂದರ್ಭಗಳಲ್ಲೆಲ್ಲ ಮಹಿಳೆಯರು ಸಮಾಜದ ಸಮಸ್ಯೆಗಳ ಬಗ್ಗೆ, ಅವುಗಳನ್ನು ತೊಡೆಯಲು ಆಗಬೇಕಾದ ಸುಧಾರಣೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಿ ಸಾಹಿತ್ಯ ರಚಿಸಿದ್ದಾರೆ. ಇವೆಲ್ಲದರ ಜೊತೆ ಜೊತೆಗೇ ಪ್ರತ್ಯೇಕವಾಗಿ ಹರಿದು ಬಂದ ಜನಪದ ಸಾಹಿತ್ಯವನ್ನೂ ನಾವು ಮರೆಯುವಂತಿಲ್ಲ.

12ನೆಯ ಶತಮಾನದಲ್ಲಿ ಶರಣರು ಧಾರ್ಮಿಕ ಬದಲಾವಣೆಯ ಮೂಲಕ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದರು. ಸಾಮಾಜಿಕ, ಸಾಹಿತ್ಯಕ ಆಂದೋಲನವನ್ನು ರೂಪಿಸಿದರು. ಮೊದಲ ಬಾರಿಗೆ ಮಹಿಳೆಯರೂ ಸಾಹಿತ್ಯ ಸೃಷ್ಟಿಗೆ ಹಾಗೂ ಸಾಂಸ್ಕೃತಿಕ ಬದಲಾವಣೆಗೆ ಸ್ಪಂದಿಸಿದರು. ಕನ್ನಡ ಮಹಿಳಾ ಸಾಹಿತ್ಯದ ಆರಂಭದ ಕುರುಹುಗಳನ್ನು ನಾವು ವಚನ ಚಳವಳಿಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ವಚನ ಸಾಹಿತ್ಯದ ಮೂಲಕ ಸಾಹಿತ್ಯ ಆರಂಭಗೊಂಡಿದೆ. ಅಕ್ಕಮಹಾದೇವಿ, (ಚನ್ನಮಲ್ಲಿಕಾರ್ಜುನ), ಅಕ್ಕಮ್ಮ (ರಾಮೇಶ್ವರ ಲಿಂಗ), ರೆಮ್ಮವ್ವೆ (ಗುಮ್ಮೇಶ್ವರ), ಗಂಗಮ್ಮ, ಲಕ್ಷ್ಮಮ್ಮ ಮೊದಲಾದ ವಚನಕಾರ್ತಿಯರು ವಚನ ರಚನೆಯಲ್ಲಿ ಪಾಲುದಾರರಾದರು. ಮೂವತ್ತಾರಕ್ಕೂ ಹೆಚ್ಚು ಶಿವಶರಣೆಯರು ವಚನಗಳನ್ನು ರಚಿಸಿದ್ದು ಸೂಳೆ ಸಂಕವ್ವೆ, ಹೊಲತಿ ಗುಡ್ಡವ್ವೆ, ಉರಿಲಿಂಗ ಪೆದ್ದಿಯ ಪತ್ನಿ ಕಾಳವ್ವೆ, ಕುಂಬಾರ ಕೇತಲದೇವಿ, ಲಕ್ಕವ್ವೆ ಮೊದಲಾದ ದಲಿತ ಸ್ತ್ರೀಯರೂ ವಚನಗಳಲ್ಲಿ ಮಾತನಾಡಿದ್ದು ಆ ಕಾಲಕ್ಕೆ ಪವಾಡಸದೃಶ ಸಂದರ್ಭವಾಗಿತ್ತು. ಹೀಗೆ ವಚನಕಾರ್ತಿಯರು ವಚನ ಸಾಹಿತ್ಯಕ್ಕೆ ತಮ್ಮ ಅಮೂಲ್ಯ ಕಾಣಿಕೆ ನೀಡಿದರು. ಸಮಾಜದ ರೀತಿ–ನೀತಿಗಳನ್ನು ಜಾತಿ ಭೇದಗಳನ್ನು ಲಿಂಗ ಭೇದಗಳನ್ನು ತೊಡೆದು ಹಾಕುವ ಚಿಂತನೆ ಮಾಡಿದರು. ಇಂದಿನ ಮಹಿಳಾವಾದಕ್ಕೆ, ದಲಿತ ವಾದಕ್ಕೆ ಸಮಾಜದಲ್ಲಿ ಸಮಾನತೆ ಬೇಕೆಂಬ ಆಲೋಚನೆ ಮತ್ತು ಬೇಡಿಕೆಗಳಿಗೆ, ಇತಿಹಾಸದಲ್ಲಿ ಈ ವಚನಕಾರ್ತಿಯರು ಮೊದಲ ಮೆಟ್ಟಿಲನ್ನು ಕಟ್ಟಿಕೊಟ್ಟಿದ್ದಾರೆ ಎಂದು ಹೇಳಬಹುದು. ಅಕ್ಕಮಹಾದೇವಿಯನ್ನು ಕನ್ನಡ ಸಾಹಿತ್ಯದ ಮೊದಲ ಬಂಡಾಯ ಲೇಖಕಿ ಎಂದು ನಾವು ಗುರುತಿಸಬಹುದು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕಂಪಣನ ರಾಣಿಯಾದ ಗಂಗಾಂಬಿಕೆ ಮಧುರಾವಿಜಯವನ್ನು (ವೀರ ಕಂಪಣರಾಯ ಚರಿತೆ) ಸಂಸ್ಕೃತದಲ್ಲಿ ಬರೆದಳು. ಅಚ್ಯುತರಾಯನ ಹಿರಿಯ ರಾಣಿ ತಿರುಮಲಾಂಬೆ ಪತಿಯ ಎರಡನೆಯ ವಿವಾಹವನ್ನು ವಸ್ತುವಾಗಿಟ್ಟುಕೊಂಡು ವರದಾಂಬಿಕಾ ಪರಿಣಯ ಎಂಬ ಕೃತಿಯನ್ನು ರಚಿಸಿದಳು. ಅಭಿರಾಮ ಕಾಮಾಕ್ಷಿ ಎಂಬಾಕೆ ಅಭಿನವ ರಾಮಾಭ್ಯುದಯವನ್ನೂ ರಾಮಭದ್ರಾಂಬ ಎಂಬಾಕೆ ರಘುನಾಥ ಅಭ್ಯುದಯವನ್ನೂ ರಚಿಸಿರುವುದಾಗಿ ಹೇಳಲಾಗಿದೆ. ರಘುನಾಥ ನಾಯಕನ ಆಸ್ಥಾನದಲ್ಲಿ ಮಧುರವಾಣಿ ಎಂಬ ಕವಯಿತ್ರಿ ಇದ್ದಳೆಂದು ತಿಳಿದುಬರುತ್ತದೆ.

ಚಿಕ್ಕದೇವರಾಜ ಒಡೆಯರ (1672–1704) ಆಸ್ಥಾನದಲ್ಲಿ ಸಂಚಿಯ ಹೊನ್ನಮ್ಮ, ಶೃಂಗಾರಮ್ಮ ಎಂಬ ಕವಯಿತ್ರಿಯರಿದ್ದರು. ಸಂಚಿಯ ಹೊನ್ನಮ್ಮ (ನೋಡಿ) ಹದಿಬದೆಯ ಧರ್ಮ ಎಂಬ ಕಾವ್ಯವನ್ನು ಸಾಂಗತ್ಯದಲ್ಲಿ ರಚಿಸಿದ್ದಾಳೆ. ಈಕೆ ಸಮಾಜದಲ್ಲಿಯ ಪುರುಷ ಪ್ರಾಧಾನ್ಯವನ್ನು ಸಂಪೂರ್ಣ ಒಪ್ಪಿಕೊಂಡು, ಪುರುಷನ ಸುಖ– ಸಂತೋಷಗಳಿಗಾಗಿ ಹೆಣ್ಣು ದುಡಿದರೆ, ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಸುಖ–ನೆಮ್ಮದಿಗಳಿರುತ್ತವೆ ಎಂಬ ಅಭಿಪ್ರಾಯವನ್ನೇ ತನ್ನ ಕೃತಿಯ ಉದ್ದಕ್ಕೂ ಹೇಳಿಕೊಂಡು ಬಂದಿದ್ದಾಳೆ. ಈಕೆ ಸ್ತ್ರೀ ಪ್ರಗತಿಯ ಚಿಂತಕಿಯೂ ಅಲ್ಲ, ಪುರುಷ ಪ್ರಾಧಾನ್ಯವನ್ನು ಪ್ರಶ್ನಿಸಿದವಳೂ ಅಲ್ಲ. ಕುವರನಾದರೆ ಬಂದ ಗುಣವೇನದರಿಂದ ಕುವರಿಯಾದೊಡೆ ಕುಂದೇನು; ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು; ಪೆಣ್ಣು ಪೆತ್ತವರು ಪೆರ್ಚ್ಚುವರು; ಪೆಣ್ಣ ನಿಂದಿಸಲೇಕೆ ಪೆರರು; ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು – ಹೀಗೆ ಸ್ತ್ರೀಪರವಾದ ಚಿಂತನೆಯ, ಹೆಣ್ಣು ಕೀಳಲ್ಲ ಎಂಬ ಭಾವನೆಯ ತಣ್ಣಗಿನ, ಮೆಲುದನಿಯ ಪ್ರತಿಭಟನೆಯ ದನಿಯನ್ನು ನಾವು ಇವಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಶೃಂಗಾರಮ್ಮ (ನೋಡಿ) ಬರೆದ ಪದ್ಮಿನೀ ಕಲ್ಯಾಣ ಸಾಂಗತ್ಯ ರೂಪದ ಒಂದು ಸಾಮಾನ್ಯ ಕಾವ್ಯ. ದೊಡ್ಡ ಕೃಷ್ಣರಾಜ ಒಡೆಯರ (1713–32) ಪಟ್ಟ ಮಹಿಷಿಯಾಗಿದ್ದ ಚೆಲುವಾಂಬೆ (ನೋಡಿ) ವರನಂದೀ ಕಲ್ಯಾಣ ಎಂಬ ಕೃತಿಯನ್ನು ರಚಿಸಿದ್ದಾಳೆ. ವೆಂಕಟಾಚಲ ಮಾಹಾತ್ಮ್ಯ ಲಾಲಿಪದ, ಅಲಮೇಲುಮಂಗ್ಯೆ ಲಾಲಿಪದ, ತಲಕಾವೇರಿ ಮಹಾತ್ಮ್ಯ ಟೀಕೆ – ಇವು ಈಕೆ ರಚಿಸಿದ ಇತರ ಕೃತಿಗಳು. ಹೆಳವನಕಟ್ಟೆ ಗಿರಿಯಮ್ಮ (ನೋಡಿ) ಚಂದ್ರಹಾಸನ ಕಥೆ, ಸೀತಾ ಕಲ್ಯಾಣ, ಉದ್ದಾಳಿಕನ ಕಥೆ, ಬ್ರಹ್ಮ ಕೊರವಂಜಿ ಮುಂತಾದ ಹಾಡುಗಬ್ಬಗಳನ್ನು ರಚಿಸಿದ್ದಾಳೆ. ಚಂದ್ರಹಾಸನ ಕಥೆಗೆ ಲಕ್ಷ್ಮೀಶನ ಜೈಮಿನೀ ಭಾರತ ಮೂಲ ಆಧಾರವೆಂದು ಈಕೆ ಹೇಳಿಕೊಂಡಿದ್ದಾಳೆ. ದಾಸ ಸಾಹಿತ್ಯದ ಸಂದರ್ಭದಲ್ಲಿಯೂ ಅನೇಕ ಸ್ತ್ರೀಯರು ಕೀರ್ತನೆಗಳನ್ನೂ ರಚಿಸಿದ್ದಾರೆ. ರುಕ್ಮಿಣೀಬಾಯಿ, ವಿಜಾಪುರದ ಪ್ರಯಾಗಬಾಯಿ, ಗಲಗಲಿ ಅವ್ವ, ಹರಪನಹಳ್ಳಿ ಭೀಮವ್ವ ಮೊದಲಾದವರು ಹಲವಾರು ಕೀರ್ತನೆಗಳನ್ನು ರಚಿಸಿದ್ದಾಗಿ ತಿಳಿದುಬಂದಿದೆ. ಗೋಪಾಲಕೃಷ್ಣ ವಿಠಲ ಎಂಬ ಅಂಕಿತ ಪಡೆದು 400ಕ್ಕೂ ಹೆಚ್ಚು ಹಾಡುಗಳನ್ನೂ ದ್ವಿಪದಿ ಛಂದಸ್ಸಿನ ರಾಮಾಯಣವನ್ನೂ ಬರೆದ ಚಿತ್ರದುರ್ಗದ ಅಂಬಾಬಾಯಿಯ (ಸು.1902) ಜೀವನ ವಿವರಗಳು ಇತ್ತೀಚೆಗೆ ದೊರಕಿದ್ದು ಆಕೆಯ ಹಾಡಿನ ಕ್ಯಾಸೆಟ್‌ಗಳು ಬಿಡುಗಡೆಯಾಗಿವೆ (2003).

ಜನಪದ ಗೀತೆಗಳ ರಚನೆಯಲ್ಲಿ ಮಹಿಳೆಯರದೇ ಸಿಂಹಪಾಲು. ಆದರೆ ಇಂಥವರ ರಚನೆಗಳು ಕಳೆದುಹೋಗಿರುವುದೇ ಹೆಚ್ಚು. ಸೀತಾ ಪರಿತ್ಯಾಗ, ರುಕ್ಮಿಣೀ ಕಲ್ಯಾಣ, ಚಂದ್ರಾವಳಿ ಮುಂತಾದ ಕೃತಿಗಳ ಲೇಖಕಿ ಯಶೋದಾಬಾಯಿ, ಜನಪದ ಛಂದಸ್ಸನ್ನು ಬಳಸಿ ಕೀರ್ತನ ರಾಮಾಯಣ ಬರೆದ ಬೊಮ್ಮಸಂದ್ರದ ಭಾಗೀರಥಮ್ಮ ಇಂಥ ಅಲ್ಲೊಬ್ಬ ಇಲ್ಲೊಬ್ಬರ ರಚನೆಗಳು ಅಕಸ್ಮಾತ್ ಉಳಿದುಬಂದಿರುವುದನ್ನು ನಾವು ಕಾಣಬಹುದು.

ಮೈಸೂರು ಅರಸರ ಕಾಲದ ಅನಂತರ 19ನೆಯ ಶತಮಾನದವರೆಗೆ–ಹೊಸಗನ್ನಡದ ಅರುಣೋದಯದ ಕಾಲದವರೆಗೆ – ಸಾಹಿತ್ಯ ರಚನೆ ಅಷ್ಟಾಗಿ ಕಂಡುಬರುವುದಿಲ್ಲ. 19ನೆಯ ಶತಮಾನದಲ್ಲಿ, ಸಾಂಸ್ಕೃತಿಕ ವಾತಾವರಣದಲ್ಲಿ ಸ್ತ್ರೀಪರ ಆಲೋಚನೆಗಳು ಕಾಣಿಸಿಕೊಳ್ಳತೊಡಗಿದ್ದವು. ರಾಷ್ಟ್ರೀಯ ಪುನರುತ್ಥಾನ ಆಂದೋಲನದಲ್ಲಿ ಸ್ತ್ರೀಯರ ಉದ್ಧಾರದ ಕಳಕಳಿಯೂ ಸೇರಿಕೊಂಡಿತ್ತು. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ, ಶಾಲಾ ಶಿಕ್ಷಣ ಪಡೆದ ಮತ್ತು ಸಾಹಿತ್ಯದಲ್ಲಿ ಒಂದಿಷ್ಟು ಆಸಕ್ತಿ ಹೊಂದಿದ ಸ್ತ್ರೀಯರು ಅಲ್ಲಲ್ಲಿ ಕಾಣ ಸಿಕ್ಕರೂ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುವ ಧೈರ್ಯ ಮಾಡಿರಲಿಲ್ಲ. ಮಹಿಳೆಯರ ಪರವಾಗಿ ಪುರುಷರೇ ಬರೆಯಬೇಕಾದ ಸಂದರ್ಭವಿತ್ತು. ಆ ಕಾಲದ ಕೆಲವು ಪತ್ರಿಕೆಗಳು ಮತ್ತು ಸಂಘ–ಸಂಸ್ಥೆಗಳು, ಹೆಣ್ಣು ಮಕ್ಕಳ ಬರವಣಿಗೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮಹಿಳೆಯರ ಬರೆಹಗಳಿಗೆ ಬಹುಮಾನಗಳನ್ನಿಟ್ಟು ಸ್ಪರ್ಧೆಗಿಳಿಸಿದವು. ಹೀಗೆ ಸ್ಪರ್ಧೆಗೆ ಬರೆಯುವ ಮೂಲಕ, ಬರವಣಿಗೆಯ ಬದುಕು ಆರಂಭಿಸಿದ ಶಾಂತಾಬಾಯಿ ನೀಲಗಾರ, ತಿರುಮಲಾಂಬಾ, ಸರಸ್ವತಿ ದೇವಿಗೌಡರ ಮೊದಲಾದವರು, ನಿಬಂಧ, ಕಾದಂಬರಿ ಅಥವಾ ಲೇಖನಗಳನ್ನು ಬರೆದು ಬಹುಮಾನಗಳನ್ನೂ ಪಡೆದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಇಂಥ ನಿಬಂಧವನ್ನು ಆಹ್ವಾನಿಸಿದಾಗ, ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ್ ಶಾಲೆಯಲ್ಲಿ ಮುಖ್ಯೋಪಾಧ್ಯಾಯ ರಾಗಿದ್ದ ಶಾಂತಾಬಾಯಿ ನೀಲಗಾರ ಎಂಬ ಮಹಿಳೆ ಸದ್ಗುಣಿ ಕೃಷ್ಣಾಬಾಯಿ (ಉತ್ತಮ ಗೃಹಿಣಿ) ಎಂಬ ಕೃತಿಯನ್ನು ಬರೆದರು. ಇದು ವಾಗ್ಭೂಷಣ ಗ್ರಂಥಮಾಲೆಯಲ್ಲಿ ಪ್ರಕಟವಾಯಿತು (1908). ಇದು ಆಧುನಿಕ ಕಾಲದಲ್ಲಿ ಮಹಿಳೆಯೊಬ್ಬರು ಬರೆದ ಮೊತ್ತ ಮೊದಲ ಕಾದಂಬರಿ. ಶಾಂತಾಬಾಯಿ ನೀಲಗಾರರೇ ಮೊದಲ ಕಾದಂಬರಿಕಾರ್ತಿ. ಈ ಕೃತಿಯಲ್ಲಿ ಆ ಕಾಲದ ಸಮಾಜದಲ್ಲಿ ಮಹಿಳೆಯರ ಶಿಕ್ಷಣದ ಬಗ್ಗೆ ಇದ್ದ ಆತಂಕ ಮತ್ತು ಅನುಮಾನಗಳನ್ನು ದೂರಮಾಡುವ ಪ್ರಯತ್ನವಿದೆ. 'ಜ್ಞಾನವು ಎಲ್ಲ ಹೆಂಗಸರಿಗೂ ಗಂಡಸರಿಗೂ ಸರಿಯಾಗಿಯೇ ಅಗತ್ಯವಾದದ್ದು. ವಿದ್ಯೆ ಕಲಿತ ಹೆಂಗಸರೇ ವಿದ್ಯೆ ಕಲಿತ ಗಂಡಸರ ಮನಸ್ಸಿಗೆ ತಮ್ಮ ಭಾಷಣ ಮುಂತಾದ್ದರಿಂದ ಆನಂದಪಡಿಸುವರಲ್ಲದೆ ಮೂಢ ಹೆಂಗಸರು ಪಡಿಸಲಾರರು. ವಿದ್ಯೆ ಕಲಿಯದ ಹೆಂಡಂದಿರು, ಸುಶಿಕ್ಷಿತ ಗಂಡಂದಿರಿಗೆ, ಕೇವಲ ವಂಶಾಭಿವೃದ್ಧಿಯ ಕೆಲಸದಲ್ಲಿ ಮಾತ್ರ ಉಪಯೋಗವಾಗುವರು. ಸುಶಿಕ್ಷಿತ ಸ್ತ್ರೀಯರು ಮಕ್ಕಳಿಗೂ ಗಂಡಂದಿರಿಗೂ ಗುರುಹಿರಿಯರಿಗೂ ಉಪಯುಕ್ತರಾಗಿ ದೇಶೋನ್ನತಿಗೆ ಸಹ ಕಾರಣರಾಗುತ್ತಾರೆ' ಎಂಬಂತಹ ವಿಚಾರ ನೀತಿಸಂಹಿತೆಯಂತೆ ಕಂಡರೂ ಸಂಸ್ಕೃತಭೂಯಿಷ್ಠ ಶೈಲಿ ಅನಿಸಿದರೂ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕಾದ ಅಗತ್ಯದ ಬಗ್ಗೆ ಆಲೋಚನೆ ಮಾಡುವಂತೆ ಮಾಡಿದರು.

ಶಾಂತಾಬಾಯಿಯವರ ಕಾದಂಬರಿ ದೊರಕುವವರೆಗೆ ನಂಜನಗೂಡು ತಿರುಮಲಾಂಬಾ ಅವರೇ ಆಧುನಿಕ ಕನ್ನಡದ ಮೊತ್ತಮೊದಲ ಕಾದಂಬರಿಕಾರ್ತಿ ಎಂದೂ ಅವರು ಪ್ರಕಟಿಸಿದ ಸುಶೀಲೆ (1913) ಕಾದಂಬರಿಯೇ ಮೊದಲ ಮಹಿಳಾ ಕಾದಂಬರಿ ಎಂದೂ ಪರಿಗಣಿಸಲಾಗಿತ್ತು. ತಿರುಮಲಾಂಬಾ ಮತ್ತು ಆರ್.ಕಲ್ಯಾಣಮ್ಮನವರು ಸ್ವತಃ ನವೋದಯದ

ಲೇಖಕರಿಗಿಂತ ಹೆಚ್ಚು ಹಳೆಯ ಪೀಳಿಗೆಯವರ ಸುಧಾರಣಾ ಮನೋಭಾವ, ವಿಚಾರ ಮತ್ತು ಭಾಷೆಗಳನ್ನು ತಮ್ಮ ಆದರ್ಶವಾಗಿಸಿಕೊಂಡವರು. ಸ್ವತಃ ವಿಧವೆಯರಾಗಿದ್ದು ವಿದ್ಯಾಭ್ಯಾಸ ಮಾತ್ರವಲ್ಲದೆ, ಕೇಶಮುಂಡನ ಸಮಸ್ಯೆ, ಅಸಮ ವಿವಾಹ, ಬಾಲ್ಯ ವಿವಾಹ, ವಿಧವಾ ವಿವಾಹ ಮುಂತಾದ ಸುಧಾರಣಾ ಅಂಶಗಳ ಬಗ್ಗೆ ಆಲೋಚನೆ ನಡೆಸಿದರು. ಸಮಾಜದ ಮನಸ್ಸನ್ನೂ ಸ್ತ್ರೀಯರ ಸ್ಥಾನಮಾನವನ್ನೂ ತಿದ್ದಲು ಬೇಕಾದಂತಹ ಪಾತ್ರಸನ್ನಿವೇಶಗಳನ್ನು ತಮ್ಮ ಕೃತಿಗಳಲ್ಲಿ ತಂದು ಕಥೆ, ಕಾದಂಬರಿ, ನಾಟಕ, ಲೇಖನ ಇತ್ಯಾದಿ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದರು. ತಿರುಮಲಾಂಬಾರವರು ಸತೀಹಿತೈಷಿಣಿ ಗ್ರಂಥಮಾಲೆ ಎಂಬ ಪ್ರಕಟಣಾ ಸಂಸ್ಥೆಯನ್ನೂ (1913) ಕರ್ನಾಟಕ ನಂದಿನಿ ಎಂಬ ಪತ್ರಿಕೆಯನ್ನೂ ಆರಂಭಿಸಿದ್ದರು (1916). ತಿರುಮಲಾಂಬಾರವರಿಗಿಂತ ಹೆಚ್ಚು ನಿಖರವಾದ ನಿಲುವುಳ್ಳ ಆರ್.ಕಲ್ಯಾಣಮ್ಮನವರು 'ಶ್ರೀ ಶಾರದಾ ಸ್ತ್ರೀ ಸಮಾಜ' (1913) ಆರಂಭಿಸಿದುದಲ್ಲದೆ ಸ್ತ್ರೀ ಸಮಸ್ಯೆಗಳು, ಸ್ತ್ರೀ ಜಗತ್ತಿನ ವಿವಿಧ ವಿಷಯಗಳು, ಜ್ಞಾನಾಭಿವೃದ್ಧಿ ಅಂಕಣಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿ, ಕೌಟುಂಬಿಕ ಸಲಹೆ ಇತ್ಯಾದಿ ವಿಷಯಗಳನ್ನೊಳಗೊಂಡ ಸರಸ್ವತಿ ಎಂಬ ಪತ್ರಿಕೆಯನ್ನು ಆರಂಭಿಸಿ (1917) ಸು.43 ವರ್ಷಗಳ ಕಾಲ ನಡೆಸಿದರು. ಇದೇ ಪತ್ರಿಕೆಯ ಮಕ್ಕಳ ಬಾವುಟ ವಿಭಾಗ ಮಕ್ಕಳ ಬರೆಹಗಳನ್ನು ಪ್ರಕಟಿಸಿ, ಆ ಕಾಲದಲ್ಲಿ ಮಕ್ಕಳಲ್ಲಿ ಸಾಹಿತ್ಯ ರಚನೆಯನ್ನೂ ಅಧ್ಯಯನದ ಅಭಿಲಾಷೆಯನ್ನೂ ಮೂಡಿಸುವಲ್ಲಿ ನೆರವಾಯಿತು. ಪೌರ ಸಾಮಾಜಿಕ ಕಾರ್ಯಗಳಿಗೂ ತಮ್ಮ ಜವಾಬ್ದಾರಿಯನ್ನು ಹೆಂಗಸರು ವಿಸ್ತರಿಸಲು ಅನುವಾಗುವಂತೆ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವ ರೀತಿಯಲ್ಲಿ ಸ್ತ್ರೀಯರಿಗೆ ವಿದ್ಯೆಯಾಗಬೇಕು ಎಂಬುದನ್ನು ಇವರು ಪ್ರತಿಪಾದಿಸಿದರು. ಸಾಮಾಜಿಕ ವಾತಾವರಣ ಬದಲಾಗುತ್ತ ಹೋದಂತೆ ತಮ್ಮ ಬರೆಹದ ಧಾಟಿ, ಧೋರಣೆಗಳನ್ನೂ ಇವರು ಬದಲಾಯಿಸಿಕೊಂಡರು.

ಭಾರತ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಅನೇಕ ಮಹಿಳೆಯರು ಭಾಗವಹಿಸಿದರು. ಅದುವರೆಗೆ ಅಡುಗೆಮನೆಯನ್ನು ದಾಟದವರಿಗೆ, ದೇಶದ ಸ್ವಾತಂತ್ರ್ಯದ ಪರಿಕಲ್ಪನೆಯೊಂದಿಗೆ ಶಿಕ್ಷಣದ ಪರಿಕಲ್ಪನೆ ಮೂಡಿತು. ಸಮಾಜವೆಂದರೆ ಕೇವಲ ಪುರುಷರಲ್ಲ, ಅದರಲ್ಲಿ ಸ್ತ್ರೀಯೂ ಸೇರಿದ್ದಾಳೆ ಎಂಬ ಭಾವನೆ ಬೆಳೆಯಲಾರಂಭವಾಯಿತು. ಸ್ತ್ರೀಗೂ ಶಿಕ್ಷಣ ಬೇಕು, ಆಗಲೇ ಸಮಾಜದ ಅಭಿವೃದ್ಧಿ ಸಾಧ್ಯ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆದವು. ತಿ.ತಾ.ಶರ್ಮರ ಪತ್ನಿ ತಿರುಮಲೆ ರಾಜಮ್ಮ (ಸು.1900) ನವರು ಭಾರತಿ ಎಂಬ ಕಾವ್ಯನಾಮದಿಂದ ಕಾವ್ಯ, ನಾಟಕ, ವ್ಯಕ್ತಿಚಿತ್ರ, ರೂಪಕ ಮುಂತಾದ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದರು. ಮಹಾತ್ಮಾ ಗಾಂಧೀಜಿಯವರನ್ನು ತಮ್ಮ ಸಂಗೀತದಿಂದ ಪ್ರಭಾವಿಸಿದರು. ಇವರು ಬರೆದ ತಪಸ್ವಿನಿ, ಮಹಾಸತಿ, ವಾತ್ಸಲ್ಯ, ತರಂಗಲೀಲ ಎಂಬ ನಾಟಕಗಳು; ಸ್ವರ್ಗ ನಿರಸನ, ದುಂದುಭಿ ಮುಂತಾದ ಕೃತಿಗಳು; ಜೀವನ ಜಿಜ್ಞಾಸೆ, ಅಂತರವಾಣಿ ಮುಂತಾದ ಕವಿತೆಗಳು, ವಿಮರ್ಶೆ, ಪ್ರಬಂಧ, ಮಕ್ಕಳ ಸಾಹಿತ್ಯ – ಇವು ಇವರು ಕನ್ನಡಕ್ಕೆ ನೀಡಿದ ಉತ್ತಮ ಕೊಡುಗೆಗಳು. ಇವರು ರಚಿಸಿದ 'ಜೈ ಭಾರತ ಭುವಿಗೆ ಮಾತೆಗೆ ಜೈ ಪಾವನ ಮೂರ್ತಿಗೆ ಜೈ' ಎಂಬುದು ಆ ಕಾಲದ ಅತ್ಯಂತ ಜನಪ್ರಿಯ ದೇಶಭಕ್ತಿ ಗೀತೆಯಾಗಿತ್ತು.

ಇವರ ಅನಂತರದ ಪೀಳಿಗೆಯವರಾದ ಶ್ಯಾಮಲಾದೇವಿಯವರು (1910) ಮಿಸೆಸ್ ಬಿ.ಟಿ.ಜಿ.ಕೃಷ್ಣ ಎಂಬ ಹೆಸರಿನಿಂದ ಕಥೆಗಳನ್ನು ಬರೆದರು. ಕೊಡಗಿನ ಗೌರಮ್ಮ (1912–39), ಗಿರಿಬಾಲೆ (ಸರಸ್ವತಿಬಾಯಿ ರಾಜವಾಡೆ, 1913), ಎಚ್.ವಿ.ಸಾವಿತ್ರಮ್ಮ (1913) – ಇವರು ಆಧುನಿಕ ಶಿಕ್ಷಣ, ಸುಧಾರಣೆಯ ಮನೋಧರ್ಮಗಳನ್ನು ಹೊಂದಿದ್ದು, ಮುಂದುವರೆದ ನೆಲೆಯಲ್ಲಿ ತಮ್ಮ ಚಿಂತನೆ ಮತ್ತು ಬರೆಹಗಳಿಗೆ ತೊಡಗಿದರು. ಸ್ತ್ರೀಯರ ಮತ್ತು ಬಡವರ ಶೋಷಣೆಯ ಸಮಸ್ಯೆಗಳನ್ನು ವಸ್ತುವಾಗಿಟ್ಟುಕೊಂಡು ಇವರೆಲ್ಲರೂ ಕೃತಿ ರಚನೆ ಮಾಡಿದ್ದಾರೆ. 'ಕಂಬನಿ' ಕೊಡಗಿನ ಗೌರಮ್ಮನವರ (ನೋಡಿ) ಸಣ್ಣಕಥೆಗಳ ಸಂಕಲನ, ಅವರ ನಿಧನಾನಂತರ ಪ್ರಕಟವಾಯಿತು. ಗಿರಿಬಾಲೆಯವರು ಕ್ರೌರ್ಯ, ಸ್ವಾರ್ಥ, ಬಡತನ, ಡಾಂಭಿಕತೆ, ಮೌಢ್ಯಗಳನ್ನು ತೀಕ್ಷ್ಣವಾಗಿ ತರ್ಕಬದ್ಧವಾಗಿ ತಮ್ಮ ಹರಿತವಾದ ಭಾಷೆಯಲ್ಲಿ ಚಿತ್ರಿಸಿದರು. ಅನ್ಯಾಯದ ವಿರುದ್ಧ ಬಂಡೇಳಬಲ್ಲ ಗಟ್ಟಿತನ, ವಿಚಾರಶಕ್ತಿಗಳು ಇವರ ಕೃತಿಗಳಲ್ಲಿವೆ. ಹೂ ಬಿಸಿಲು (1936), ಹೊಂಬಿಸಿಲು (1943) ಎಂಬ ಕಥಾಸಂಕಲನಗಳ ಕರ್ತೃವಾದ ಶ್ಯಾಮಲಾದೇವಿ ಬೆಳಗಾಂವಕರ್ ಅವರು ಸಾಮಾಜಿಕ ಸಮಸ್ಯೆಗಳಿಗೆ ಕಲಾತ್ಮಕ ರೂಪ ಕೊಟ್ಟವರು. ತಮ್ಮ ಪತಿಯೊಂದಿಗೆ ಜಯ ಕರ್ನಾಟಕ ಪತ್ರಿಕೆಯನ್ನು ನಡೆಸಲು ಎಲ್ಲ ರೀತಿಯಲ್ಲಿ ನೆರವಾದವರು. ಎಚ್.ವಿ.ಸಾವಿತ್ರಮ್ಮನವರು ಸೀತೆ–ರಾಮ–ರಾವಣ, ವಿಮುಕ್ತಿ ಎಂಬ ಕಾದಂಬರಿಗಳಲ್ಲಿ ರಾಮಾಯಣದ ಕಥೆಯಲ್ಲೇ ಜಾಗೃತ ಸ್ತ್ರೀ ಪಾತ್ರಗಳನ್ನು ಕೆತ್ತಿದ್ದಾರೆ. ಸಂಕಷ್ಟ ಪರಿಸ್ಥಿತಿಯಲ್ಲಿ ಪುರುಷರ ಪಲಾಯನವಾದ, ಸ್ವಾರ್ಥ, ಅವಿಶ್ವಾಸಗಳನ್ನು ಈ ಕೃತಿಗಳು ಗಮನಕ್ಕೆ ತರುತ್ತವೆ. ಈ ಎಲ್ಲ ಲೇಖಕಿಯರು ಸ್ತ್ರೀ ಸಂವೇದನೆಯ ಕೃತಿಗಳನ್ನು ರಚಿಸಿದವರು.

ಬೆಳಗೆರೆ ಜಾನಕಮ್ಮನವರು (1912) ಕಲ್ಯಾಣ ಎಂಬ ಒಂದೇ ಕವನ ಸಂಕಲನ ತಂದರೂ ಇದು ಸ್ತ್ರೀವಾದಿ ದೃಷ್ಟಿಯಿಂದ ಮಹತ್ತ್ವದ ಕೃತಿಯಾಗಿದೆ. ಸ್ತ್ರೀ ಪರ ಕಾಳಜಿಯುಳ್ಳ ಕೃತಿ ರಚಿಸಿದ ಮೊದಲಿಗರಲ್ಲಿ ಇವರೂ ಒಬ್ಬರು. ಆ ಕಾಲದ ಸ್ತ್ರೀಯರ ಬವಣೆಗಳ ಬಗ್ಗೆ, ಬಂಧನ ಮತ್ತು ಕಟ್ಟುಪಾಡುಗಳ ಬಗ್ಗೆ, ಪಾರತಂತ್ರ್ಯದ ಬಗ್ಗೆ ಇವರ ಕವನಗಳು ನಮ್ಮ ಗಮನ ಸೆಳೆಯುತ್ತವೆ. ಹೆಣ್ಣಿನ ಮುಕ್ತಿಗೆ, ಸುಖಕ್ಕೆ ಮದುವೆ–ಮಕ್ಕಳು ಬಿಟ್ಟು ಬೇರೆ ಪ್ರಪಂಚವೂ ಕಾರ್ಯರಂಗವೂ ಇದೆ, ಉಪಯುಕ್ತ ಸೇವೆಗಳಿವೆ ಎಂಬ ಹೊಸ ಮಾತನ್ನು ಹೇಳಿದ ವಿಶಿಷ್ಟ ಕತೆಗಾರ್ತಿ ಎಚ್.ಎಸ್.ಕಾತ್ಯಾಯನಿ (1923–95). ರಸಪಾಕದಿಂದ ಹಿಡಿದು ಶೂರರಾಣಿ ಕೆಳದಿಯ ಚೆನ್ನಮ್ಮಾಜಿಯಂತಹ ಸಂಶೋಧನಾತ್ಮಕ ಕೃತಿಗಳನ್ನೊಳಗೊಂಡಂತೆ ಇಪ್ಪತ್ತಾರಕ್ಕೂ ಹೆಚ್ಚು ವಿವಿಧ ವಿಷಯಗಳ ಕುರಿತು ಕೃತಿ ರಚಿಸಿದ ಶಾಂತಾದೇವಿ ಮಾಳವಾಡ (1922), ಸ್ತ್ರೀ ಸಂಬಂಧದ ಪರಂಪರಾಗತ ಮೌಲ್ಯಗಳು ಹಾಗೂ ಧೋರಣೆಗಳನ್ನು ಒರೆಗೆ ಹಚ್ಚಿ ನೋಡುವ ಹೊಸ ಕೆಲಸವನ್ನು ತಮ್ಮ ಹಲವಾರು ನಾಟಕ, ಸಣ್ಣಕತೆ, ಕಾವ್ಯ, ಪ್ರಬಂಧಗಳ ಮೂಲಕ ಮಾಡಿದ ಸರಸ್ವತೀ ದೇವಿಗೌಡರ (1923–73), ಸ್ತ್ರೀಯನ್ನು ಕನಿಕರದಿಂದ ಕಾಣದೆ ಸಮಾನ ಭಾವನೆಯಿಂದ ಕಾಣಬೇಕೆಂದು ಪ್ರತಿಪಾದಿಸಿ ಸಣ್ಣಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯಗಳ ಪ್ರಕಾರದಲ್ಲಿ ಕೊಡುಗೆ ನೀಡಿದ ಗೀತಾ ಕುಲಕರ್ಣಿ (1927–86) ಇವರುಗಳ ಕೊಡುಗೆಯೂ ಈ ನಿಟ್ಟಿನಲ್ಲಿ ಗಮನಾರ್ಹವಾದುದು.

ಹಿಂದಿ, ಕೊಂಕಣಿ ಮತ್ತು ಕನ್ನಡದಲ್ಲಿ ಕೃತಿಗಳನ್ನು ರಚಿಸಿದ ಸೀತಾದೇವಿ ಪಡುಕೋಣೆ (1903), ಸಾಕಷ್ಟು ಸಂಕಷ್ಟಗಳ ನಡುವೆಯೂ ಸ್ವಂತ ಕೃತಿಗಳನ್ನೂ ಹಿಂದಿಯಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಹಿಂದಿಗೆ ಭಾಷಾಂತರಿಸಿದ ರಚನೆಗಳನ್ನು ಹೊರತಂದ ವಾಸಂತಿ ಪಡುಕೋಣೆ (1908–95), ನೈತಿಕ ನಿಲುವಿನಲ್ಲಿಯೇ ಮಹಿಳೆಯರ ಪ್ರಗತಿಯ ಬಗ್ಗೆಯೂ ಯೋಚಿಸಿ ಗ್ರಾಮೋದ್ಧಾರಕ ರಾಮಚಂದ್ರ, ಕುಮುದಿನಿ, ಕೃಪಾಶಂಕರ್, ಚಂಚಲೆ, ಪರಿಮಳೆ, ಜೀವನದ ಕರೆ ಮುಂತಾಗಿ ತಮಿಳು ಮತ್ತು ಕನ್ನಡಗಳಲ್ಲಿ ಕಥೆ, ಕಾದಂಬರಿ, ಮತ್ತಿತರ ಪ್ರಕಾರದಲ್ಲಿ ಸಾವಿರಕ್ಕೂ ಹೆಚ್ಚು ಲೇಖನ ಹಾಗೂ ಕಥೆಗಳನ್ನು ರಚಿಸಿದ (ಸರೋಜ ಕಾವ್ಯನಾಮದ) ಜಯಲಕ್ಷ್ಮಿ ಶ್ರೀನಿವಾಸನ್ (1911), ಸಂಪ್ರದಾಯಗಳ ದಾರಿಯಲ್ಲಿ, ಸಿದ್ಧರಾಮೇಶ್ವರ ಪುರಾಣ, ತಾಯಿಯ ಪದಗಳು, ಜಯಗೀತ, ಬಂದೇವು ಕಲ್ಯಾಣಕೆ ಮುಂತಾದ ಧಾರ್ಮಿಕ ನೆಲೆಯ ಕೃತಿಗಳನ್ನು ರಚಿಸಿ, ಕನ್ನಡದ ಉಳಿವಿಗೆ ಸೊಲ್ಲಾಪುರ ಪ್ರದೇಶದಲ್ಲಿ ಹೋರಾಟ ನಡೆಸಿದ ಜಯದೇವಿತಾಯಿ ಲಿಗಾಡೆ (1912–86), ಸೋದರಿ ಎಂಬ ವಾರಪತ್ರಿಕೆಯ ಮೂಲಕ ಹಲವು ಮಹಿಳೆಯರ ಅರಿವಿಗೆ ಹಾಗೂ ಪ್ರಗತಿಗೆ ಅಗತ್ಯ ಸಾಮಗ್ರಿಗಳನ್ನೊದಗಿಸಿ, ಹಲವರನ್ನು ಬರೆಹಕ್ಕೆ ತೊಡಗಿಸಿದ ಎಂ.ಆರ್.ಲಕ್ಷ್ಮಮ್ಮ (1913), ಹಾಸ್ಯ ಕ್ಷೇತ್ರದಲ್ಲಿ ಲೇಖಕಿಯಾಗಿ ನವಿರು ಹಾಸ್ಯದ ಉತ್ತಮ ಕೃತಿಗಳನ್ನು ಕೊಟ್ಟ ಟಿ.ಸುನಂದಮ್ಮ (1917), ಸಂಪ್ರದಾಯಗಳ ಬೇರಿಗೆ ಅಂಟಿಕೊಳ್ಳದೆ, ಕ್ರಿಸ್ತನಲ್ಲೇ ರಾಮನನ್ನು ಕಾಣುತ್ತ ವಿಜಾತೀಯರಲ್ಲಿ ಮತ್ತು ವಿದೇಶೀಯರಲ್ಲಿ ಮಾನವೀಯ ಅಂಶಗಳನ್ನು ಗಮನಿಸಿ ತಮ್ಮವರಾಗಿ ಕಾಣುವ ವಿಶಾಲ ಮನೋಭಾವನೆಯಿಂದ ಲೇಖಕನ ಹೆಂಡತಿ ಮತ್ತು ಇತರ ಕಥೆಗಳು, ಕಣ್ಮುಚ್ಚಿ ನೋಡಿದಾಗ ಮೊದಲಾದ ಕೃತಿಗಳನ್ನು ಹೊರ ತಂದ ಸುಶೀಲಾ ಕೊಪ್ಪರ್ (1924), ಜೀವನಪ್ರೀತಿಯನ್ನು ತೋರುವ ಕಥೆಗಳನ್ನು ಬರೆಯುತ್ತಿದ್ದ ರಾಜೇಶ್ವರಿ ನರಸಿಂಹಮೂರ್ತಿ (1916–73), ಗಂಗರಸ ದುರ್ವಿನೀತ, ಶಪ್ತವಾಪಿ ಎಂಬ ಉತ್ತಮ ಚಾರಿತ್ರಿಕ ಕಾದಂಬರಿಗಳನ್ನು ಬರೆದ ಮೊದಲ ಕನ್ನಡ ಮಹಿಳೆ ಸಿ.ಎನ್.ಜಯಲಕ್ಷ್ಮೀದೇವಿ (1925–95), ವೀರಮಾತೆ ಎಂಬ ಪತ್ರಿಕೆಯ ಸಂಪಾದಕಿಯೂ ಸಮರ್ಥ ಮಂತ್ರಿಯೂ ಮುಳ್ಳು ಗುಲಾಬಿ, ನವಿಲು, ಇಂಚರ ಎಂಬ ಶಿಶುಸಾಹಿತ್ಯವನ್ನೂ ಕಾವ್ಯ ಕೃತಿಗಳನ್ನೂ ಕರ್ನಾಟಕದ ಕವಯಿತ್ರಿಯರು ಎಂಬ ಸಂಶೋಧನಾ ನಿಬಂಧವನ್ನೂ ಹಲವಾರು ಲೇಖನಗಳನ್ನೂ ರಚಿಸಿದ ಅಪಾರ ವಿದ್ವತ್ ಪ್ರತಿಭೆಯ ಸರೋಜಿನಿ ಮಹಿಷಿ ಮೊದಲಾದವರು ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿದ್ದಾರೆ. ಮಂಡ್ಯದ ಶೃಂಗಾರಮ್ಮನವರು ಶ್ರೀದೇವಿ ಎಂಬ ಕಾವ್ಯನಾಮದಲ್ಲಿ ಆಗಮ ಶಾಸ್ತ್ರಗಳ ಬಗ್ಗೆ ಪುಸ್ತಕಗಳನ್ನು ಬರೆದ ಮೊದಲ ಲೇಖಕಿಯಾಗಿ ಕಂಡುಬರುತ್ತಾರೆ.

ತ್ರಿವೇಣಿ (1928–65) ಕಾವ್ಯನಾಮದ ಅನಸೂಯ ಮಹಿಳಾ ಕಾದಂಬರಿಕಾರ್ತಿಯರಲ್ಲಿ ದೊಡ್ಡ ಹೆಸರು. ಇವರು 20ನೆಯ ಶತಮಾನದ 50–60ರ ದಶಕದಲ್ಲಿ ಲೇಖಕಿಯರ ಸುಧಾರಣಾ ಸಾಹಿತ್ಯ ಮಾರ್ಗವನ್ನೂ ಅ.ನ.ಕೃ., ಕಾರಂತ ಮೊದಲಾದವರು ಸಿದ್ಧಪಡಿಸಿಟ್ಟ ಕಾದಂಬರಿಯ ವೇದಿಕೆಯನ್ನೂ ಮನೋವೈಜ್ಞಾನಿಕ ಸೂತ್ರಗಳನ್ನು ಬಳಸಿಕೊಂಡು ಮಹಿಳೆಯರ ವಿವಿಧ ಬಗೆಯ ಸಮಸ್ಯೆಗಳನ್ನು ವಸ್ತುವಾಗಿಟ್ಟುಕೊಂಡು, ಆಕರ್ಷಕ ಶೈಲಿ, ಸುಂದರ ಭಾಷೆ ಮತ್ತು ನಿರೂಪಣೆಯ ಜಾಣ್ಮೆಯಿಂದ ಒಂದು ದಶಕದ ಅವಧಿಯಲ್ಲಿ ಇಪ್ಪತ್ತನಾಲ್ಕು ಕಥೆ–ಕಾದಂಬರಿಗಳನ್ನು ರಚಿಸಿ ಅಪಾರ ಜನಪ್ರಿಯತೆ ಗಳಿಸಿದರು. ಕಾದಂಬರಿ ಪ್ರಕಾರದ ಮಹತ್ತ್ವವನ್ನೂ ಓದುಗರ ಸಂಖ್ಯೆಯನ್ನೂ ಇವರ ರೀತಿ ಬರೆಯುವ ಲೇಖಕಿಯರ ಸಂಖ್ಯೆಯನ್ನೂ ಹೆಚ್ಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಹಣ್ಣೆಲೆ ಚಿಗುರಿದಾಗ, ಬೆಳ್ಳಿಮೋಡ, ಶರಪಂಜರ, ಹೂವು ಹಣ್ಣು ಕನ್ನಡದಲ್ಲೂ ಬೆಕ್ಕಿನ ಕಣ್ಣು ಮಲೆಯಾಳಂನಲ್ಲೂ ಚಲನಚಿತ್ರಗಳಾಗಿ ಭರ್ಜರಿ ಯಶಸ್ಸುಗಳಿಸಿದ ಕಾದಂಬರಿಗಳು. ದೂರದ ಬೆಟ್ಟ, ಹಣ್ಣೆಲೆ ಚಿಗುರಿದಾಗ, ಸೋತು ಗೆದ್ದವಳು, ಕೀಲುಗೊಂಬೆ ಮುಂತಾದವು ಹೆಚ್ಚಿನ ಜನಮೆಚ್ಚುಗೆ ಪಡೆದ ಇತರ ಕಾದಂಬರಿಗಳು (ನೋಡಿ: ತ್ರಿವೇಣಿ).

ತ್ರಿವೇಣಿಯವರ ಅನಂತರದ ಮಹತ್ವದ ಹೆಸರು ಎಂ.ಕೆ.ಇಂದಿರಾ (1917). ತಮ್ಮ 44ನೆಯ ವಯಸ್ಸಿನಲ್ಲಿ ಬರೆಹಕ್ಕೆ ತೊಡಗಿ ಮೊದಲ ಕಾದಂಬರಿಯಾದ ತುಂಗಭದ್ರದಿಂದ ಜನಪ್ರಿಯರಾದವರು. ಸಾಮಾಜಿಕ ಜೀವನವನ್ನು ಸಂಪ್ರದಾಯಪರ ನಿಲುವಿನಲ್ಲಿಯೇ ಚಿತ್ರಿಸಿದರೂ ಸಮಾಜದ ವಿವಿಧ ಬಗೆಯ ಸಾಮಾಜಿಕ ಸಮಸ್ಯೆಗಳನ್ನೂ ಸ್ತ್ರೀಯರ ಜಗತ್ತಿನಲ್ಲಿ ಆಗುತ್ತಿರುವ ಶೋಷಣೆಯ ಸೂಕ್ಷ್ಮ ಎಳೆಗಳನ್ನೂ ಕಂಡರಿಸಿದ್ದರೆ, ತಪೋವನ ಎಂಬ ಕಾದಂಬರಿಯಲ್ಲಿ ದೇವರು, ಭಕ್ತಿ ಇತ್ಯಾದಿಗಳ ಬೂಟಾಟಿಕೆಗಳನ್ನು ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಗೆಜ್ಜೆಪೂಜೆಯಲ್ಲಿ ವಿವಾಹದ ದಾರಿಯಲ್ಲಿ ಹೋಗಬೇಕೆಂದು ಬಯಸುವ ವೇಶ್ಯೆಯೊಬ್ಬಳ ಮಗಳು ಎದುರಿಸುವ ಸಮಸ್ಯೆಗಳ ಬಗ್ಗೆ ಚಿತ್ರಣವಿದೆ. ವೇಶ್ಯೆಯ ಸಮಸ್ಯೆಯ ಬಗ್ಗೆ ಸಮಾಜ ಯೋಚಿಸುವಂತೆ ಮಾಡಿದ ಕೃತಿಯಿದು. ವಿಧವಾ ಸಮಸ್ಯೆಯನ್ನು ಕುರಿತ ಇವರ ಫಣಿಯಮ್ಮ ಕಾದಂಬರಿ ಚಲನಚಿತ್ರವಾಗಿಯೂ ಹೆಸರು ಗಳಿಸಿದೆ. ಪ್ರೇಮಾಕಾರಂತರು ಈ ಕಾದಂಬರಿಯನ್ನು ಯಶಸ್ವೀ ಚಲನಚಿತ್ರವಾಗಿ ತೆರೆಗೆ ತಂದಿದ್ದಾರೆ. ಗೆಜ್ಜೆಪೂಜೆ ಕಾದಂಬರಿಯೂ ಚಲನಚಿತ್ರವಾಗಿ ಪ್ರಸಿದ್ಧವಾಗಿದೆ.

1970ರ ಅನಂತರ ದಲಿತ, ಬಂಡಾಯ ಸಾಹಿತ್ಯದ ದನಿ ಕೇಳಲಾರಂಭಿಸಿತು. ದಲಿತರ ಮೇಲೆ ನಡೆಯುವ ದೌರ್ಜನ್ಯ, ಶೋಷಣೆಗಳ ಚಿತ್ರಣ ಮೊದಲಿಗೆ ಕಾವ್ಯದಲ್ಲಿ, ಅನಂತರ ಗದ್ಯ ಸಾಹಿತ್ಯದಲ್ಲಿ ಗಟ್ಟಿಯಾಗಿ ಕಾಣಿಸಿಕೊಳ್ಳಲು ಆರಂಭವಾಯಿತು. ಆಗ ಕೆಲವು ಲೇಖಕಿಯರೂ ಬರೆಯತೊಡಗಿದರು. ಅವರ ಬರೆವಣಿಗೆ ಈ ದಲಿತ ಬಂಡಾಯದಿಂದ ಇನ್ನಷ್ಟು ಪ್ರಖರಗೊಳ್ಳಲು ಸಾಧ್ಯವಾಯಿತು. ಗೀತಾ ನಾಗಭೂಷಣ, ಬಿ.ಟಿ.ಲಲಿತಾನಾಯಕ್, ಬಿ.ಟಿ.ಜಾಹ್ನವಿ, ಸರಸ್ವತಿ ಚಿಮ್ಮಲಗಿ, ಸುಕನ್ಯಾ ಮಾರುತಿ ಮುಂತಾದವರು ದಲಿತ ಸಮಾಜವನ್ನೂ ಅವರ ಸಮಸ್ಯೆಗಳನ್ನೂ ಬಹು ಸೂಕ್ಷ್ಮವಾಗಿ ಸಾಹಿತ್ಯದಲ್ಲಿ ಚಿತ್ರಿಸತೊಡಗಿದರು. ಗೀತಾ ನಾಗಭೂಷಣರವರ ಹಸಿ ಮಾಂಸ ಮತ್ತು ಹದ್ದುಗಳು, ಮಾಪುರ ತಾಯಿ ಮಕ್ಕಳು, ಬದುಕು, ಬಿ.ಟಿ.ಲಲಿತಾನಾಯಕ್‌ರವರ ಹಬ್ಬ ಮತ್ತು ಬಲಿ ಮುಂತಾದ ಕೃತಿಗಳು ಕೆಳವರ್ಗದಲ್ಲಿ ನಡೆಯುವ ಜೀವನ ಸಂಗತಿಗಳನ್ನು ಸಮಾಜದ ಗಮನಕ್ಕೆ ಸಾಹಿತ್ಯದ ಮೂಲಕ ತರಲು ಪ್ರಯತ್ನ ಮಾಡಿದವು. ದಲಿತಪರ ಕಾಳಜಿಯಿಂದ ತಮ್ಮ ಚಿಂತನೆಯನ್ನು ದಲಿತೇತರ ಬರೆಹಗಾರ್ತಿಯರೂ ಮಾಡಿದರು. ವೈದೇಹಿ (ಅಸ್ಪಶ್ಯರು), ಅನುಪಮಾ ನಿರಂಜನ (ಘೋಷ), ಎಂ.ಎಸ್.ವೇದಾ (ಪಾಲು), ಕೆ.ಎಂ.ವಿಜಯಲಕ್ಷ್ಮೀ (ಭೇದವಿಲ್ಲದ ಆಸೆಗಳು), ಎಚ್.ನಾಗವೇಣಿ (ನಾಕನೇ ನೀರು, ಗಾಂಧಿ ಬಂದ) ಮೊದಲಾದವರ ಕೃತಿಗಳಲ್ಲಿ ಕೆಳವರ್ಗದವರ ಸಮಸ್ಯೆ ಮತ್ತು ನೋವುಗಳ ಬಗ್ಗೆ ತುಡಿತವಿರುವುದನ್ನು ನಾವು ಗುರುತಿಸಬಹುದು.

ದಲಿತ ಬಂಡಾಯದ ಜೊತೆ ಜೊತೆಗೆ ನಡೆದ ಇನ್ನೊಂದು ಚಳವಳಿ ಎಂದರೆ ಸ್ತ್ರೀಯರ ಹೊಸ ಎಚ್ಚರದ ಮತ್ತು ಗಂಭೀರ ಚಿಂತನೆಯನ್ನು ಹೊಂದಿದ ಸ್ತ್ರೀವಾದಿ ಚಳವಳಿ. 1975ರ ಅಂತಾರಾಷ್ಟ್ರೀಯ ಮಹಿಳಾ ವರ್ಷದಿಂದ ಈ ಚಳವಳಿ ಪ್ರಾರಂಭಗೊಂಡಿತೆನ್ನಬಹುದು. ಗಮನಾರ್ಹ ಪ್ರಮಾಣದಲ್ಲಿ ಕನ್ನಡ ಸಾಹಿತಿಗಳು ಸ್ತ್ರೀವಾದಕ್ಕೆ ತೆರೆದುಕೊಳ್ಳತೊಡಗಿದರು. 'ಸಮಾಜ, ಉದ್ಯೋಗ ಮತ್ತು ಕುಟುಂಬಗಳಲ್ಲಿ ಮಹಿಳೆಯರ ತುಳಿತ ಹಾಗೂ ಶೋಷಣೆಯ ಬಗ್ಗೆ ಅರಿವು ಮೂಡಿಸಿ, ಈ ಪರಿಸ್ಥಿತಿಯನ್ನು ಪರಿವರ್ತಿಸಲು ಪುರುಷರು ಮತ್ತು ಸ್ತ್ರೀಯರು ಸೇರಿ ನಡೆಸುವ ಪ್ರಜ್ಞಾಪೂರ್ವಕ ಕ್ರಿಯೆಯೇ ಸ್ತ್ರೀವಾದ' ಎಂದು ಸ್ತ್ರೀವಾದಿ ನೆಲೆಯನ್ನು ವ್ಯಾಖ್ಯಾನಿಸಲಾಯಿತು. ಎಂಬತ್ತರ ದಶಕದಲ್ಲಿ ಸ್ತ್ರೀವಾದಿ ನೆಲೆಯ ಚಿಂತನೆ ಪ್ರಖರವಾಯಿತು. ಪುರುಷ ಪ್ರಧಾನ ವ್ಯವಸ್ಥೆಯನ್ನು ಅರ್ಥಪೂರ್ಣವಾಗಿ ಪ್ರಶ್ನಿಸುವ ಈ ಒಳ ಬಂಡಾಯದ ದನಿ ಕನ್ನಡ ಸಾಹಿತ್ಯ ರಚನೆಗೆ ಹೊಸ ಆಯಾಮವನ್ನು ಸೇರಿಸಿತು. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಸಾಹಿತ್ಯದ ನೆಲೆಯಿಂದ ಮಹಿಳೆಯರು ಸಾಹಿತ್ಯ ರಚನೆಯ ಕಾರ್ಯದಲ್ಲಿ ಆಯಾ ಸಾಹಿತ್ಯ ಸಿದ್ಧಾಂತಗಳ ಹಿನ್ನೆಲೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದುಂಟು. ಆವರೆಗೆ ಹೆಣ್ಣಿಗಾಗುತ್ತಿದ್ದ ಅನ್ಯಾಯಗಳನ್ನು ಖಂಡಿಸಿ, ಆ ಬಗ್ಗೆ ಸಮಾಜ ಆಲೋಚಿಸಬೇಕಾದಂತಹ ಕೃತಿಗಳನ್ನು ಅತ್ಯಂತ ಸಂಕೀರ್ಣತೆಯಲ್ಲಿ ಸಾಹಿತ್ಯಕವಾಗಿ ಹೃದಯಕ್ಕೆ ಮುಟ್ಟುವಂತೆ ತರತೊಡಗಿದರು. ವೀಣಾ ಶಾಂತೇಶ್ವರ ಮತ್ತು ರಾಜಲಕ್ಷ್ಮೀ ಎನ್.ರಾವ್ ಅವರು ನವ್ಯದ ಸಂದರ್ಭದಲ್ಲಿ ಹೊಸ ವಿಧಾನದಲ್ಲಿ ಅಭಿವ್ಯಕ್ತಿಸಿದವರು. ರಾಜಲಕ್ಷ್ಮೀಯವರ ಸಂಗಮ, ವೈಶಾಖ ಶುದ್ಧ ಪೂರ್ಣಿಮ, ಕಲ್ಯಾಣೀ ಮುಂತಾದ ಕಥೆಗಳು ಉಲ್ಲೇಖನೀಯವಾಗಿವೆ. ಸ.ಉಷಾ, ಚ.ಸರ್ವಮಂಗಳಾ, ಶಶಿಕಲಾವಸ್ತ್ರದ, ಜಯ ಭಾಗ್ಯಸುದರ್ಶನ, ಎನ್.ವಿ.ಭಾಗ್ಯಲಕ್ಷ್ಮೀ, ಶೈಲಜಾ ಉಡಚಣ, ಎಚ್.ಎಲ್.ಪುಷ್ಪ, ಸರಸ್ವತಿಗೌಡ ಮುಂತಾದ ಕವಯಿತ್ರಿಯರು ತಮ್ಮ ವ್ಯಕ್ತಿ ವಿಶಿಷ್ಟತೆಯನ್ನು, ಈ ಹೊಸ ಧೋರಣೆಯನ್ನು ಕಾವ್ಯ ಮಾಧ್ಯಮದಲ್ಲಿ ಅತ್ಯಂತ ಶಕ್ತಿಯುತವಾಗಿ ಅಭಿವ್ಯಕ್ತಿಸತೊಡಗಿದರು. ಸ.ಉಷಾ ಅವರ ತೊಗಲು ಗೊಂಬೆಯ ಆತ್ಮಕಥೆ (1973), ವಿಜಯಾದಬ್ಬೆಯವರ ಇರುತ್ತವೆ (1975), ಚ.ಸರ್ವಮಂಗಳಾ ಅವರ ಅಮ್ಮನಗುಡ್ಡ ಎಂಬ ಕವನ ಸಂಕಲನಗಳೂ ಶಾಂತಾದೇವಿ ಕಣವಿಯವರ ಬಯಲು ಆಲಯ, ಜಾತ್ರೆ ಮುಗಿದಿತ್ತು, ವೀಣಾ ಶಾಂತೇಶ್ವರರ ಗಂಡಸರು (1978), ಎನ್.ವಿ.ಭಾಗ್ಯಲಕ್ಷ್ಮೀಯವರ ಬೆರಳಸಂದಿಯ ಬದುಕು (1976), ಅನುಪಮಾ ನಿರಂಜನರ ಮಾಧವಿ (1976), ಭಾಗ್ಯ ಜಯಸುದರ್ಶನ ಅವರ ಬದುಕಿನ ತೆಕ್ಕೆಯಲ್ಲಿ (1978), ಶಾಂತಾ ಜಗದೀಶ್ ಅವರ ಎರಡು ಸೆಳೆ (1977), ಕೊಪ್ಪಮನೆ ವಿಜಯಲಕ್ಷ್ಮಿಯವರ ಕೆಂಪು ಹೂ (1978) ಮೊದಲಾದ ಹಲವಾರು ಕೃತಿಗಳು ಈ ದಶಕದಲ್ಲಿ ಪ್ರಕಟವಾದುವು.

ಮಹಿಳೆಯರ ಬದುಕಿನ ವಿವಿಧ ಬರೆಹ ಕುರಿತು ಮಹಿಳೆಯರೇ ರಚಿಸಿರುವ 23 ಕೃತಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟವಾದುವು (1975). ಈ ಪ್ರಕಟಣೆಗಳು ಮಹಿಳೆಯರ ಆತ್ಮವಿಶ್ವಾಸಕ್ಕೆ ಹಾಗೂ ಮುಂದಿನ ಬರೆವಣಿಗೆಗೆ ಪ್ರೇರಕವಾದವೆನ್ನಬಹುದು. ಈಗ ಕನ್ನಡದಲ್ಲಿ ಮಹಿಳೆಯರು ರಚಿಸುತ್ತಿರುವ ಸಾಹಿತ್ಯ ವಿಪುಲವಾಗಿ ಪ್ರಕಟವಾಗುತ್ತಿದೆ. ಅನೇಕರು ಈ ಕ್ಷೇತ್ರದಲ್ಲಿ ಸಾಧನೆಯ ಪಥದಲ್ಲಿದ್ದಾರೆ. ಪ್ರತಿಭಾ ನಂದಕುಮಾರ್, ಹೇಮಾ ಪಟ್ಟಣಶೆಟ್ಟಿ, ಮಾಲತಿ, ಮಮತಾ ಜಿ.ಸಾಗರ, ಸವಿತಾ ನಾಗಭೂಷಣ, ಎಚ್.ಎಸ್.ಮುಕ್ತಾಯಕ್ಕ, ಆರ್.ಸುನಂದಮ್ಮ, ಮೊದಲಾದ ಲೇಖಕಿಯರು ಸ್ತ್ರೀವಾದಿ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕಾವ್ಯ, ಕಥೆ, ಕಾದಂಬರಿ, ವಿಚಾರ ಮೊದಲಾದ ಪ್ರಕಾರಗಳಲ್ಲಿ ಕಲಾತ್ಮಕವಾಗಿ ಕೃತಿ ರಚನೆ ಮಾಡುತ್ತಿದ್ದಾರೆ.

ಹೊಸ ತಲೆಮಾರಿನ ವೀಣಾ ಶಾಂತೇಶ್ವರರ ಸ್ತ್ರೀವಾದಿ ಅಂಶಗಳನ್ನೊಳಗೊಂಡ ಗಂಡಸರು (1978) ಕಾದಂಬರಿ ಹೆಚ್ಚಿನ ಚರ್ಚೆಗೆ ಒಳಪಟ್ಟ ಕೃತಿ. ಅನುಪಮಾನಿರಂಜನರು ಪ್ರಗತಿಶೀಲ ಪಂಥದ ಜೊತೆ ತಮ್ಮ ಸಾಹಿತ್ಯಕ ನಿಲವನ್ನು ಗುರುತಿಸಿಕೊಂಡ ಬಳಿಕ ಬಂದ ಕೃತಿಗಳಾದ ಒಂದು ಗಿಣಿಯ ಕಥೆ, ಒಂದು ಘಟನೆ ಮತ್ತು ಆ ನಂತರ, ಮಾಧವಿ ಮತ್ತು ಎಳೆಗಳಲ್ಲಿ ವ್ಯಕ್ತಿಯ ಆಂತರಿಕ ತಳಮಳ ಮತ್ತು ಬಾಹ್ಯ ಪರಿಸರದ ವಾಸ್ತವಗಳನ್ನು ಸ್ತ್ರೀ ಶೋಷಣೆಯನ್ನು ಅದರಾಚೆಗೆ ಹಾರುವ ಸ್ತ್ರೀ ಪ್ರತೀಕಗಳನ್ನು ಸೃಷ್ಟಿಸಿದರು. ವಿಜಯಾ ಅವರು ಎಲ್ಲಿದ್ದೇವೆ ನಾವು ಎಲ್ಲಿದ್ದೇವೆ ಎಂಬಂತಹ ಬೀದಿ ನಾಟಕಗಳಲ್ಲಿ, ಹೆಣ್ಣು ಮತ್ತು ಗಂಡು ಮಕ್ಕಳನ್ನು ಬೆಳೆಸುವ ವಿಧಾನದಲ್ಲಿಯೇ ಇರುವ ತಾರತಮ್ಯಗಳನ್ನು ಎತ್ತಿ ತೋರಿಸುವ ಕೆಲಸ ಮಾಡಿದರು. ಸಾರಾ ಅಬೂಬಕರ್ ಶೋಷಿತ ಮುಸಲ್ಮಾನ ಮಹಿಳೆಯರ ನಿರಂತರ ನೋವುಗಳನ್ನು ತಮ್ಮ ಕಾದಂಬರಿ, ಕತೆಗಳಲ್ಲಿ ತಂದರು (ಚಂದ್ರಗಿರಿಯ ತೀರದಲ್ಲಿ). ವೈದೇಹಿ ಅತ್ಯಂತ ಸೂಕ್ಷ್ಮ ಮತ್ತು ಹೆಪ್ಪುಗಟ್ಟಿಸುವ ರೀತಿಯಲ್ಲಿ ಸ್ತ್ರೀವಾದಿ ನೆಲೆಯ ಕೃತಿಗಳನ್ನು ನೀಡಿದರು. ನೇಮಿಚಂದ್ರರವರು ಸ್ತ್ರೀ ಸಂವೇದನೆಯನ್ನು ತಮ್ಮ ಕೃತಿಗಳಲ್ಲಿ ತಂದರು. ವಿಜಯಾ ದಬ್ಬೆ, ಬಿ.ಎನ್.ಸುಮಿತ್ರಾಬಾಯಿ, ಪ್ರೀತಿ ಶುಭಚಂದ್ರ, ಚಂದ್ರಮತಿ ಸೋಂದಾ ಮೊದಲಾದವರು ಸ್ತ್ರೀ ವಾದಿ ದೃಷ್ಟಿಕೋನದಿಂದ ಕನ್ನಡದ ಪ್ರಮುಖ ಕೃತಿಗಳನ್ನು ವಿಮರ್ಶಿಸತೊಡಗಿದರು.

ಈಗ ಸ್ತ್ರೀ ಜಗತ್ತಿನ ಆಲೋಚನೆಗಳನ್ನು ಮಂಡಿಸಿ, ಹೊಸ ಅನುಭವವನ್ನೂ ಹೊಸ ದೃಷ್ಟಿಯನ್ನೂ ಒದಗಿಸಿ ಕೊಡುವ ಕಲಾತ್ಮಕ ಕೃತಿಗಳನ್ನು ಅನೇಕರು ರಚಿಸುತ್ತಿದ್ದಾರೆ. ಎಚ್.ಎಸ್.ಪಾರ್ವತಿ, ಗಂಗಾ ಪಾದೇಕಲ್, ಕಮಲಾ ಹೆಮ್ಮಿಗೆ, ವಿಜಯ ಸುಬ್ಬರಾಜ್, ಕೆ.ಎಂ.ವಿಜಯಲಕ್ಷ್ಮಿ (ಕೊಪ್ಪಮನೆ), ಭಾಗೀರಥಿ ಹೆಗಡೆ, ಬಾನು ಮುಷ್ತಾಕ್, ಕೆ.ಆರ್.ಸಂಧ್ಯಾರೆಡ್ಡಿ, ಮಲ್ಲಿಕಾ ಘಂಟಿ, ಎಸ್.ವಿ.ಪ್ರಭಾವತಿ, ಸುನೀತಾ ಶೆಟ್ಟಿ, ಗಿರಿಜಾ ಶಾಸ್ತ್ರಿ, ತುಳಸಿ ವೇಣುಗೋಪಾಲ್ ಮೊದಲಾದವರು ಸ್ತ್ರೀವಾದೀ ಸಿದ್ಧಾಂತಗಳ ಅರಿವಿನ ಹಿನ್ನೆಲೆಯಲ್ಲಿ, ಶಕ್ತಿಯುತವಾಗಿ ಕೃತಿ ರಚಿಸುವ ಮತ್ತು ವಿಮರ್ಶಿಸುವ ಲೇಖಕಿಯರ ದೊಡ್ಡ ಪಡೆಯೇ ಇದೆ. ಕಜ್ಜಾಯ, ನಾಸು ಅಂತಹ ಶ್ರೇಷ್ಠ ಕೃತಿಗಳನ್ನು ಕೊಟ್ಟ ಸುನಂದಾ ಬೆಳಗಾಂವಕರ್, ಜೈನ ಸಾಹಿತ್ಯದಲ್ಲಿ ವಿಶೇಷ ಪರಿಣತಿ ಇರುವ ಕಮಲಾ ಹಂಪನಾ, ಹಲವು ಭಾಷೆಗಳ ಜ್ಞಾನವಿರುವ ಸಾಕಷ್ಟು ಸಾಹಿತ್ಯ ರಚಿಸಿರುವ ನಿರುಪಮಾ; ಹಲವಾರು ಉತ್ತಮ ಕಾದಂಬರಿಗಳನ್ನು ಕೊಟ್ಟಿರುವ ರೇಖಾ ಕಾಖಂಡಕಿ ಹಾಗೂ ವಸುಮತಿ ಉಡುಪ; ಕಥೆಗಾರ್ತಿ ಪ್ರೇಮಾಭಟ್, ಎಂ.ಎಸ್.ವೇದಾ, ಮೊದಲಾದವರು ಯಾವುದೇ ವಾದಕ್ಕೆ ಅಂಟಿಕೊಳ್ಳದೆ ಬರೆಯುವಂಥ ಸಮರ್ಥ ಲೇಖಕಿಯರು. ಮಹಿಳಾ ಚಳವಳಿಯ ತಾತ್ತ್ವಿಕತೆಯನ್ನು ಕುರಿತಂತೆ ಬಿ.ಎಸ್.ವೆಂಕಟಲಕ್ಷ್ಮಿ, ಎನ್.ಗಾಯತ್ರಿ ನಾವಡ, ಧರಣೀದೇವಿ ಮಾಲಗತ್ತಿ, ಪ್ರೀತಿ ಶುಭ ಚಂದ್ರ, ಎಚ್.ಎಸ್.ಶ್ರೀಮತಿ ಮೊದಲಾದವರು ಕೃತಿಗಳನ್ನು ಹೊರತಂದಿದ್ದಾರೆ.

ಕರ್ನಾಟಕದಲ್ಲಿ ಸ್ತ್ರೀವಾದವನ್ನು ಚಳವಳಿಯಾಗಿ ರೂಪಿಸುವಲ್ಲಿ ಬಹಳಷ್ಟು ಶ್ರಮ ವಹಿಸಿದ ಬೆಂಗಳೂರಿನ ಕರ್ನಾಟಕ ಲೇಖಕಿಯರ ಸಂಘದ (1979) ಸಾಧನೆ ಕೂಡ ಗಮನಾರ್ಹವಾದದ್ದು. ಈ ಸಂಘ ಮಹಿಳೆಯರನ್ನು ಸಂಘಟಿಸುವ ಕೆಲಸವನ್ನು ಆರಂಭಿಸಿ, ಮಹಿಳೆಯರ ದನಿಗೆ ಪ್ರತ್ಯೇಕ ವೇದಿಕೆಯನ್ನು ಒದಗಿಸಿಕೊಟ್ಟದ್ದಲ್ಲದೆ ಸ್ತ್ರೀವಾದದ ಉದ್ದೇಶ, ಅರ್ಥ, ಚಿಂತನೆ, ಅದರ ಆವಶ್ಯಕತೆ ಇತ್ಯಾದಿಗಳ ಬಗ್ಗೆಯೇ ಹೆಚ್ಚು ಒತ್ತುಕೊಟ್ಟು ಹಲವಾರು ಕಾರ್ಯಕ್ರಮಗಳನ್ನೂ ವಿಚಾರ ಸಂಕಿರಣಗಳನ್ನೂ ಕಾರ್ಯಾಗಾರಗಳನ್ನೂ ನಡೆಸಿತು. ಈ ಸಂಘ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನಗಳನ್ನೂ ನಡೆಸಿದೆ. ಬೆಂಗಳೂರಿನಲ್ಲಿ ಸರೋಜಿನಿ ಮಹಿಷಿಯವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಪ್ರಥಮ ಸಮ್ಮೇಳನ ನಡೆಯಿತು (1985). ಅನಂತರ ಪದ್ಮಾ ಶೆಣೈರವರ ಅಧ್ಯಕ್ಷತೆಯಲ್ಲಿ ದ್ವಿತೀಯ ಸಮ್ಮೇಳನ (1988), ಧಾರವಾಡದಲ್ಲಿ ಶಾಂತಾದೇವಿ ಮಾಳವಾಡರ ಅಧ್ಯಕ್ಷತೆಯಲ್ಲಿ ಮೂರನೆಯ ಸಮ್ಮೇಳನ

(1993), ಮಂಗಳೂರಿನಲ್ಲಿ ಎಚ್.ಎಸ್.ಪಾರ್ವತಿಯವರ ಅಧ್ಯಕ್ಷತೆಯಲ್ಲಿ ನಾಲ್ಕನೆಯ ಸಮ್ಮೇಳನ (1996), ವೀಣಾ ಶಾಂತೇಶ್ವರರ ಅಧ್ಯಕ್ಷತೆಯಲ್ಲಿ ಐದನೆಯ ಸಮ್ಮೇಳನ ನಡೆದುವು. ಸ್ತ್ರೀ ಸಾಹಿತ್ಯ ಚರಿತ್ರೆಗೆ ಉಪಯುಕ್ತವಾಗುವ ಹಲವು ಪುಸ್ತಕಗಳನ್ನೂ ಈ ಸಂಘ ಪ್ರಕಟಿಸಿದೆ. ಈ ಸಂಘದ ಪ್ರಭಾವ ಮತ್ತು ಪ್ರೋತ್ಸಾಹಗಳಿಂದ ಉತ್ತರ ಕರ್ನಾಟಕ ಲೇಖಕಿಯರ ಸಂಘ (1985), ದಕ್ಷಿಣ ಕನ್ನಡ ಮತ್ತು ಕಾಸರಗೋಡು ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ (1987) ಸ್ಥಾಪನೆಯಾಗಿ ಸ್ತ್ರೀವಾದಕ್ಕೆ ಬೆಂಬಲ ನೀಡಿದುವು.

ಯಾವುದೇ ಸಾಹಿತ್ಯದ ಚಳವಳಿಯ ಪ್ರಭಾವ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ಚಿ.ನಾ.ಮಂಗಳಾ ಅವರಿಂದ 1987ರಲ್ಲಿ 'ಮಹಿಳಾ ಅಧ್ಯಯನ' ಎಂಬ ಹೊಸ ವಿಷಯ ಬಿ.ಎ. ವಿದ್ಯಾರ್ಥಿನಿಯರಿಗಾಗಿ ಆರಂಭಗೊಂಡು, ಈಗ ಹೆಚ್ಚು ಕಡಿಮೆ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಲಾಗಿದೆ. ಸ್ತ್ರೀವಾದದ ಪ್ರಭಾವದಿಂದಾಗಿ, ಕನ್ನಡದ ಕೆಲ ಮಹಿಳೆಯರು ವಿಶ್ವವಿದ್ಯಾಲಯಗಳಲ್ಲಿ, ಕಾನೂನು ಕ್ಷೇತ್ರ, ವೈದ್ಯಕೀಯ, ವೈಜ್ಞಾನಿಕ ಕ್ಷೇತ್ರ– ಹೀಗೆ ತಾವು ದುಡಿಯುವ ಕ್ಷೇತ್ರಗಳಲ್ಲಿ, ಮಹಿಳೆಯರ ಸ್ಥಾನಮಾನವನ್ನು ಹೆಚ್ಚಿಸಲು ಒಂದಲ್ಲ ಒಂದು ರೀತಿಯಲ್ಲಿ ಶ್ರಮಿಸುತ್ತಿದ್ದಾರೆ.

ಮಾನವತಾವಾದದ ಒಂದು ಅಂಗವಾದ ಈ ಸ್ತ್ರೀವಾದ ಈಗ ಸರ್ವಮಾನ್ಯವಾಗಿದೆ. ಕೇವಲ ಲೇಖಕಿಯರ ಬರೆಹಗಳಲ್ಲಷ್ಟೇ ಅಲ್ಲದೆ ಲೇಖಕರ ಸಾಹಿತ್ಯ ಕೃತಿಗಳಲ್ಲಿಯೂ ಸ್ತ್ರೀವಾದಿ ನೆಲೆಯನ್ನು ನಾವು ಇತ್ತೀಚಿನ ದಿನಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. (ಕೆ.ಎಂ.ವಿ.)

**ಕನ್ನಡದಲ್ಲಿ ಮುಕ್ತಕ ಸಾಹಿತ್ಯ :** ಸಂಸ್ಕೃತ ಸಾಹಿತ್ಯದಲ್ಲಿ ಲೋಕೋಕ್ತಿ, ಶೋಕಗೀತೆ, ಚರಮಗೀತೆ, ಚಾಟುಪದ್ಯ, ಸೂಕ್ತಿ, ಸುಭಾಷಿತ ಮುಂತಾದ ಎಲ್ಲ ಬಗೆಯ ಲಘು ಪದ್ಯಗಳನ್ನೂ ಒಟ್ಟಾಗಿ ಮುಕ್ತಕಗಳು ಎಂಬ ಹೆಸರಿನಿಂದ ಕರೆಯುವುದು ರೂಢಿಯಲ್ಲಿದೆ. ಕನ್ನಡದಲ್ಲಿ ಕೂಡ ಈ ಬಗೆಯ ಲಘು ಪದ್ಯಗಳು ಪೂರ್ವದಿಂದಲೂ ರಚಿತವಾಗುತ್ತಲೇ ಬಂದಿವೆ. ಪ್ರಾಚೀನ ಕನ್ನಡದಲ್ಲಿ ಇವನ್ನು ಇಡುಕುಂಗಬ್ಬ, ಮುಕ್ತಕ, ವಚನ, ಚಾಟುಪದ್ಯ, ಶೋಕಗೀತೆ ಮುಂತಾಗಿ ಕರೆದರೆ ಹೊಸಗನ್ನಡದಲ್ಲಿ ನಾಟುನುಡಿ, ಹನಿಗವನ, ಮಿನಿಗವನ, ಚುಟುಕ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹಾಗೆಯೇ ತೆಲುಗಿನಲ್ಲಿ ಚಾಟುಪದ್ಯ ಎಂದೂ ತಮಿಳಿನಲ್ಲಿ ನಾಟುನುಡಿ ಎಂದೂ ಉರ್ದುವಿನಲ್ಲಿ ಶಾಯಿರಿ ಎಂದೂ ಪ್ರಾಕೃತದಲ್ಲಿ ಗಾಹೆ ಎಂದೂ ಜಪಾನೀ ಭಾಷೆಯಲ್ಲಿ ಹೈಕು ಎಂದೂ ಕರೆಯುತ್ತಾರೆ. ಪಾಶ್ಚಿಮಾತ್ಯ ಸಾಹಿತ್ಯದಲ್ಲಿಯಂತೂ ಈ ಕಾವ್ಯ ಪ್ರಕಾರದ ಮಹಾಪೂರವೇ ಹರಿದಿದೆ. ಇಂಗ್ಲಿಷ್‌ನಲ್ಲಿ ಎಪಿಗ್ರಮ್, ಲಿಮರಿಕ್, ಎಪಿಗ್ರಮ್ಯಾಟಿಕ್, ಎಲಿಜಿ, ನಾನ್‌ಸೆನ್ಸ್ ಪೊಯೆಮ್ಸ್ ಮುಂತಾಗಿ ಕರೆಯಲ್ಪಡುವ ರಚನೆಗಳು ನಮ್ಮ ಮುಕ್ತಕವನ್ನು ಹೋಲುವ ಪದ್ಯಗಳೇ ಆಗಿವೆ.

ಮುಕ್ತಕ ಆಕಾರದಲ್ಲಿ ಅತ್ಯಂತ ಸಣ್ಣದಾದ, ಒಂದೇ ಒಂದು ಭಾವವನ್ನು ಅರ್ಥಗರ್ಭಿತವಾಗಿ ಅಭಿವ್ಯಕ್ತಿಸುವ ಒಂದು ಬಿಡಿಪದ್ಯ. ಭಾವಕ್ಕೆ ಸೂಕ್ತ ಭಾಷೆಯಲ್ಲಿ ಅಭಿವ್ಯಕ್ತಗೊಂಡು ಮಿಂಚಿನಂತೆ ಕೋರೈಸುವ ಗುಣವುಳ್ಳದ್ದು. ಕಾವ್ಯ ಪ್ರಕಾರಗಳಲ್ಲಿಯೇ ಮುಕ್ತಕ ಅತ್ಯಂತ ಸಣ್ಣದಾದದ್ದೂ ಸುಂದರವಾದದ್ದೂ ಹೌದು.

ಮುಕ್ತಕದ ಪ್ರಾಚೀನತೆಯನ್ನು ಗುರುತಿಸುವುದು ಸುಲಭವಲ್ಲ. ಈಗ ತಿಳಿದಿರುವ ಮಟ್ಟಿಗೆ ವೇದಗಳೇ ಅತ್ಯಂತ ಪ್ರಾಚೀನತಮ ಕೃತಿಗಳಾಗಿರುವುದರಿಂದ ಸದ್ಯದ ಮಟ್ಟಿಗೆ ಇವೇ ಮುಕ್ತಕ ಪರಂಪರೆಯ ತಲಕಾವೇರಿಗಳೆಂದು ಹೇಳಬಹುದು. ಆದರೆ ವೇದಗಳಿಗಿಂತಲೂ ಮೊದಲು ಜನಪದರಲ್ಲಿ, ಜನಪದ ಗೀತೆಗಳ ರೂಪದಲ್ಲಿ ಈ ಮುಕ್ತಕಗಳು ಸೃಷ್ಟಿಗೊಂಡಿರಬಹುದೆಂದು ಹೇಳಬಹುದು.

ವೇದಗಳಲ್ಲದೆ ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತಗಳಲ್ಲಿಯೂ ಮುಕ್ತಕ ರೂಪಗಳು ದೊರೆಯುತ್ತವೆ. ಸಂಸ್ಕೃತ ಸಾಹಿತ್ಯವಂತೂ ಮುಕ್ತಕಗಳ ಉಗ್ರಾಣವೇ ಆಗಿದೆ. ಅಲ್ಲಿ ಮುಕ್ತಕಗಳು ಮಹಾಕಾವ್ಯ, ಪುರಾಣ, ಐತಿಹಾಸಿಕ ಕಾವ್ಯ, ನಾಟಕ, ಕಥೆ, ಖಂಡಕಾವ್ಯ, ಶಾಸನ ಮುಂತಾದ ಕೃತಿಗಳ ನಡುನಡುವೆ ಬಿಡಿಯಾಗಿ ದೊರೆಯುತ್ತವೆ. ಅಲ್ಲದೆ ಬರಿಯ ಮುಕ್ತಕಗಳನ್ನೇ ಸಂಕಲನ ರೂಪದಲ್ಲಿ ಹೊಂದಿರುವ ಸಾಹಿತ್ಯ ರಾಶಿಯೇ ಸಂಸ್ಕೃತದಲ್ಲಿದೆ. ಪ್ರಾಕೃತ ಭಾಷೆಯಲ್ಲಿಯೂ ಮುಕ್ತಕಗಳು ವಿಶೇಷವಾಗಿ ರಚನೆಯಾಗಿವೆ. ಗಾಥಾಸಪ್ತಶತಿ, ತಂದುಲವೇಯಾಲಿಯಾ, ಭಕ್ತಪರಿಣ್ಣಾಯ, ವಜ್ಜಾಲಗ್ಗಂ, ಗಾಥಾಕೋಶೊ ಮುಂತಾದವು ಪ್ರಸಿದ್ಧ ಮುಕ್ತಕ ಸಂಕಲನಗಳು.

ಕನ್ನಡದಲ್ಲಿಯೂ ಮುಕ್ತಕಗಳು ಅಪಾರ ಸಂಖ್ಯೆಯಲ್ಲಿ ರಚಿತವಾಗಿವೆ. ಕನ್ನಡ ಶಾಸನಗಳು ಮತ್ತು ಪ್ರಾಚೀನ ಕನ್ನಡ ಕಾವ್ಯಗಳ ನಡುನಡುವೆ ಮುಕ್ತಕಗಳು ಸೇರಿಕೊಂಡಿರುವುವಲ್ಲದೆ ಹಲವು ಬಗೆಯ ಮುಕ್ತಕ ಸಂಕಲನಗಳೂ ಸಂಕಲಿತವಾಗಿವೆ.

ಕನ್ನಡದ ಸುಪ್ರಸಿದ್ಧ ಸಂಕಲನ ಗ್ರಂಥಗಳಾದ ಸೂಕ್ತಿ ಸುಧಾರ್ಣವ ಮತ್ತು ಕಾವ್ಯಸಾರ, ತಾತ್ವಿಕ ಗ್ರಂಥಗಳಾದ ಹದಿಬದೆಯ ಧರ್ಮ, ಅನುಭವ ಮುಕುರ, ಅನುಭವಸಾರ, ದ್ವಾದಶಾನುಪ್ರೇಕ್ಷೆ, ಅನುಭವಾಮೃತ, ಸಮಯ ಪರೀಕ್ಷೆ ಮುಂತಾದ ಕೃತಿಗಳಲ್ಲಿ ವಿಪುಲವಾಗಿ ಮುಕ್ತಕ ರೂಪದ ಪದ್ಯಗಳು ದೊರೆಯುತ್ತವೆ. ಪ್ರಾಚೀನ ಕನ್ನಡದ ವಿವಿಧ ಲಕ್ಷಣ ಗ್ರಂಥಗಳಾದ ಕವಿರಾಜಮಾರ್ಗ, ಛಂದೋಂಬುಧಿ, ಉದಯಾದಿತ್ಯಾಲಂಕಾರ, ಶೃಂಗಾರ ರತ್ನಾಕರ, ಶಬ್ದಮಣಿದರ್ಪಣ, ಕಾವ್ಯಾವಲೋಕನ, ರಸರತ್ನಾಕರ, ಛಂದಸ್ಸಾರ ಮುಂತಾದ ಕೃತಿಗಳಲ್ಲಿಯೂ ಮುಕ್ತಕಗಳು ದೊರೆಯುತ್ತವೆ. ವೈಯಾಕರಣರು, ಆಲಂಕಾರಿಕರು, ಛಾಂದಸರು ಮೊದಲಾದ ಲಾಕ್ಷಣಿಕರು ತಮ್ಮ ಲಕ್ಷಣ ಗ್ರಂಥಗಳಲ್ಲಿ ಬೇರೆ ಬೇರೆ ಕಾವ್ಯಗಳಿಂದಾಯ್ದು ಇಂಥ ಪದ್ಯಗಳನ್ನು ಸಂದರ್ಭವರಿತು ಉದಾಹರಿಸಿರುತ್ತಾರೆ. ಇದೇ ರೀತಿ ಕನ್ನಡದಲ್ಲಿ ವಿಶೇಷವಾಗಿ ರಚನೆಯಾಗಿರುವ ಅಷ್ಟಕಗಳು ಮತ್ತು ಶತಕಗಳು ಸಹ ಶ್ರೇಷ್ಠಮಟ್ಟದ ಮುಕ್ತಕಗಳನ್ನು ಒಳಗೊಂಡಿವೆ.

ಕನ್ನಡ ಸಾಹಿತ್ಯಕ್ಕೆ ಸಾವಿರಾರು ಸಂಖ್ಯೆಯಲ್ಲಿ ಅಮೂಲ್ಯ ಮುಕ್ತಕಗಳನ್ನು ಒದಗಿಸಿದ ಇನ್ನೊಂದು ಸಾಹಿತ್ಯವೆಂದರೆ ಅದು ವಚನ ಸಾಹಿತ್ಯ. ಕನ್ನಡದ ಅತ್ಯಂತ ಜನಪ್ರಿಯ ಕವಿ ಸರ್ವಜ್ಞನ ಖ್ಯಾತಿಗೆ ಅವನ ಸರಳಸುಂದರ ವಚನಗಳೇ ಕಾರಣವಾಗಿವೆ. ಅವನ ಪ್ರತಿಯೊಂದು ವಚನವೂ ಒಂದು ಅಪೂರ್ವ ಮುಕ್ತಕವಾಗಿದ್ದು, ಸರ್ವಜ್ಞ ಕನ್ನಡ ಮುಕ್ತಕ ಸಾಮ್ರಾಜ್ಯದ ಸಾಮ್ರಾಟ ಎಂಬ ಖ್ಯಾತಿಗೂ ಪಾತ್ರನಾಗಿದ್ದಾನೆ.

ಕನ್ನಡ ಜನಪದ ಸಾಹಿತ್ಯ ಮುಕ್ತಕ ಸಾಹಿತ್ಯದ ಗಣಿಯಿದ್ದಂತೆ. ಏಳೆ, ದ್ವಿಪದಿ, ತ್ರಿಪದಿ ಮತ್ತು ಸಾಂಗತ್ಯ ರೂಪದಲ್ಲಿ ರಚಿತವಾಗಿರುವ ಈ ಮುಕ್ತಕಗಳು ಜನಪದರ ಅನುಭವದ ರಸಘಟ್ಟಿಗಳಾಗಿ ರಾರಾಜಿಸುತ್ತಿವೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದೊರೆಯುವ ಮುಕ್ತಕಗಳಿಗೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಒಂದು ಶೃಂಗಾರ ಮುಕ್ತಕ:

> ನೆನೆಯಲು ಬೇಗುದಿಗೊಳಿಸುವಳು
> ಕಾಣಲು ಹುಚ್ಚನು ಹಿಡಿಸುವಳು
> ಮುಟ್ಟಲು ಮೂರ್ಛೆಗೆ ಸಲಿಸುವಳು
> ಪ್ರೇಯಸಿ ಎಂತಿವಳು

ಪ್ರೇಯಸಿಯೊಬ್ಬಳು ತನ್ನ ಪ್ರಿಯತಮನ ಮೇಲೆ ಬೀರುವ ಗಾಢ ಪ್ರಭಾವವನ್ನು ಈ ಮುಕ್ತಕ ವರ್ಣಿಸುತ್ತದೆ.

ಕನ್ನಡ ಕಾವ್ಯ ಹೇಗೆ ವಿಭಿನ್ನ ರಸಿಕರನ್ನು ರಂಜಿಸಬೇಕೆಂಬುದನ್ನು ಬಯಸುವ ಕವಿಯೊಬ್ಬನ ಅನಿಸಿಕೆಯ ರೂಪ ಹೀಗಿದೆ:

> ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
> ರಯ್ಯಾ ಮಂಚಿದಿಯೆನೆ ತೆಲುಗಾ
> ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು
> ಮೆಯ್ಯುಬ್ಬಿ ಕೇಳಬೇಕಣ್ಣ (ರತ್ನಾಕರವರ್ಣಿ)

ಧನಮದದಿಂದ ಮೆರೆಯುವವರನ್ನು ವಿಡಂಬಿಸುವ ವಚನಸಾಹಿತ್ಯದ ಒಂದು ಮುಕ್ತಕ:

> ಹಾವು ತಿಂದವರ ನುಡಿಸಬಹುದು
> ಗರ ಹೊಡೆದವರ ನುಡಿಸಬಹುದು
> ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ
> ಬಡತನವೆಂಬ ಮಂತ್ರವಾದಿ ಹೊಗಲು
> ಒಡನೆ ನುಡಿವರು ನೋಡಾ ಕೂಡಲ ಸಂಗಮದೇವ (ಬಸವಣ್ಣ)

ಸ್ತ್ರೀ ಪುರುಷರು ಪರಸ್ಪರ ಪ್ರೀತಿಸಿ ಮದುವೆಯಾಗುವುದರ ಮಹತ್ತ್ವವನ್ನು ಸಾರುವ ಸರ್ವಜ್ಞನ ಒಂದು ಸುಂದರ ಮುಕ್ತಕ ಹೀಗಿದೆ:

> ಮನಬಂದ ಹೆಣ್ಣನ್ನು ವಿನಯದಲಿ ಕರೆದಿತ್ತು
> ಮನ ಮುಟ್ಟಿ ಬಾಳ್ವೆ ಮಾಡಿದರೆ ಅಮೃತದ
> ಕೆನೆಯ ಸವಿದಂತೆ ಸರ್ವಜ್ಞ

ಹೆತ್ತು ಹೊತ್ತ ತಂದೆ ತಾಯಿಗಳ ಹಿರಿಮೆಯನ್ನು ವರ್ಣಿಸುವ ಒಂದು ಜನಪದ ಮುಕ್ತಕ:

> ತಂದೀನ ನೆನೆದರೆ ತಂಗೂಳು ಬಿಸಿಯಾಯ್ತು
> ಗಂಗಾದೇವಿ ನನ್ನ ಹಡೆದವ್ವ ನೆನೆದರೆ
> ಮಾಸೀದ ತಲೆಯು ಮಡಿಯಾಯ್ತು

ಹೊಸಗನ್ನಡದಲ್ಲಿಯೂ ವಿಪುಲವಾಗಿ ಮುಕ್ತಕಗಳು ರಚನೆಗೊಂಡಿವೆ. ಸಂಸ್ಕೃತ, ಪ್ರಾಕೃತ, ಹಿಂದಿ, ಇಂಗ್ಲಿಷ್ ಹಾಗೂ ಇತರ ಭಾರತದ ಮತ್ತು ವಿದೇಶೀಯ ಭಾಷೆಗಳ ಪ್ರಭಾವದಿಂದಾಗಿ ಹೊಸಗನ್ನಡ ಕವಿಗಳು ಮುಕ್ತಕಧಾರೆಯನ್ನೇ ಹರಿಸಿದ್ದಾರೆ. ಅವುಗಳಲ್ಲಿ ನಾನಾಛಂದಸ್ಸು, ನಾನಾಲಯ ಹಾಗೂ ವಸ್ತುಗಳು ಮೈಗೂಡಿಕೊಂಡಿವೆ. ಹಳಗನ್ನಡ, ನಡುಗನ್ನಡ, ಜನಪದ ಮತ್ತು ಹೊಸಗನ್ನಡದ ಮಿಕ್ಕ ಶೈಲಿಗಳಲ್ಲಿ ಈ ಮುಕ್ತಕಗಳು ರಚಿತವಾಗಿವೆ. ಹಿಂದೆಂದೂ ಕಾಣದಂಥ ಮುಕ್ತಕ ವೈವಿಧ್ಯವನ್ನು ನಾವು ಇಂದಿನ ಮುಕ್ತಕ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಹೊಸಗನ್ನಡದಲ್ಲಿ ಮುಕ್ತಕ ರಚನೆ ಯಾರಿಂದ ಮೊದಲಾಯಿತೆಂದು ಖಚಿತವಾಗಿ ಹೇಳುವುದಕ್ಕೆ ಬರುವುದಿಲ್ಲವಾದರೂ ನಮಗೆ ದೊರಕುವ ಆಧಾರದ ಮೇಲೆ ಆ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ. ಅವರು 1928ರಿಂದಲೇ ಇವುಗಳ ರಚನೆಗೆ ತೊಡಗಿದರು. ತೀ.ನಂ.ಶ್ರೀ ಅವರೂ ಸುಮಾರು ಇದೇ ಸಮಯದಲ್ಲಿ ಬಿಡಿ ಪದ್ಯಗಳ ರಚನೆಗೆ ತೊಡಗಿದರು. 1932ರಲ್ಲಿ ಪ್ರಕಟವಾದ ಅವರ ಒಲುಮೆ ಕವನ ಸಂಕಲನದಲ್ಲಿ ಅಂಥ ಕೆಲವು ಮುಕ್ತಕಗಳನ್ನು ಸೇರಿಸಿ ಪ್ರಕಟಿಸಿ, ಹೊಸಗನ್ನಡದಲ್ಲಿ ಈ ಕಾವ್ಯ ಪ್ರಕಾರ ಬೆಳೆಯುವುದಕ್ಕೆ ಅಂಕುರಾರ್ಪಣ ಮಾಡಿದರು. ಇವರ ಅನಂತರ 1938ರಲ್ಲಿ ಬಿ.ಶ್ರೀಕಂಠಯ್ಯ ಎಂಬವರು ಸೂಕ್ತಿಸುಧೆ ಎಂಬ ಸ್ವತಂತ್ರ ಮುಕ್ತಕ ಸಂಕಲನವನ್ನು ಪ್ರಕಟಿಸಿದರು. ಅದಾದ ಮೇಲೆ 1940ರಲ್ಲಿ ಜಿ.ಪಿ.ರಾಜರತ್ನಂ ಅವರು ತಮ್ಮ ನೂರು ಪುಟಾಣಿ ಎಂಬ ಸಂಕಲನವನ್ನೂ ಅನಂತರ ಚುಟಕ ಎಂಬ ಸಂಕಲನವನ್ನೂ ಪ್ರಕಟಿಸಿ ಮುಕ್ತಕ ರಚನೆಗೆ ಚಾಲನೆ ನೀಡಿದರು.

ಹೊಸಗನ್ನಡದ ಸಂದರ್ಭದಲ್ಲಿ ಅನೇಕ ಕವಿಗಳು ಸಾವಿರಾರು ಮುಕ್ತಕಗಳನ್ನು ರಚಿಸಿದ್ದಾರೆ. ಅಂಥವರಲ್ಲಿ ವಿ.ಜಿ.ಭಟ್ಟ, ಡಿ.ವಿ.ಜಿ., ಅಕಬರ ಆಲಿ, ತೋಫಖಾನೆ ಶ್ರೀನಿವಾಸ, ಎಸ್.ವಿ.ಪರಮೇಶ್ವರಭಟ್ಟ, ದಿನಕರ ದೇಸಾಯಿ, ಸಿಪಿಕೆ, ಗುಂಡ್ಮಿ ಚಂದ್ರಶೇಖರ ಐತಾಳ, ಎನ್.ಪ್ರಹ್ಲಾದರಾವ್, ದ್ವಾರಕಾನಾಥ್ ಕಬಂಡಿ, ನಾ.ಕಸ್ತೂರಿ, ಇಟಗಿ ಈರಣ್ಣ, ದುಂಡಿರಾಜ್. ವಿಡಂಬಾರಿ, ಸಿದ್ಧಯ್ಯ ಪುರಾಣಿಕ, ಬಿ.ಆರ್.ಲಕ್ಷ್ಮಣರಾವ್, ಸದಾಶಿವ ಎಣ್ಣೆಹೊಳೆ, ಸುಜನಾ, ಡಿ.ವಿ.ಬಡಿಗೇರ, ಚಿತ್ರಲಿಂಗಯ್ಯ, ಜರಗನಹಳ್ಳಿ ಶಿವಶಂಕರ, ದೊಡ್ಡರಂಗೇಗೌಡ, ಬೆಮೆಲ್ ಕಂಪ್ಲಪ್ಪ, ಕೆ.ವಿ.ರಾಜೇಶ್ವರಿ ಮೊದಲಾದವರನ್ನು ಹೆಸರಿಸಬಹುದು. ಮುಕ್ತಕೇ ಕವಯೋನಂತಾಃ (ಮುಕ್ತಕ ಕವಿಗಳಿಗೆ ಲೆಕ್ಕವಿಲ್ಲ) ಎಂದಂತೆ ಇಂದು ನೂರಾರು ಮಂದಿ ಕವಿಗಳು ಮುಕ್ತಕ ರಚನೆಯಲ್ಲಿ ತೊಡಗಿದ್ದಾರೆ. ಹೊಸಗನ್ನಡ ಮುಕ್ತಕಗಳಿಗೆ ಕೆಲವು ಉದಾಹರಣೆಗಳು ಹೀಗಿವೆ:

ಮಾನವ ತನ್ನ ಜೀವನದಲ್ಲಿ ಅಮೂಲ್ಯವಾದ ಕಾಲವನ್ನು ಹೇಗೆ ಅಳವಡಿಸಿಕೊಳ್ಳ ಬೇಕೆಂಬುದನ್ನು ಬಲು ಸ್ವಾರಸ್ಯಪೂರ್ಣವಾಗಿ ಹೇಳುವ ಒಂದು ಮುಕ್ತಕ:

ಒಮ್ಮೆ ಹೂದೋಟದಲಿ ಒಮ್ಮೆ ಕೆಳೆಕೂಟದಲಿ
ಒಮ್ಮೆ ಸಂಗೀತದಲಿ ಒಮ್ಮೆ ಶಾಸ್ತ್ರದಲಿ
ಒಮ್ಮೆ ಸಂಸಾರದಲಿ ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೊ ಮಂಕುತಿಮ್ಮ (ಡಿ.ವಿ.ಜಿ.)

ಮಡದಿ ಮನೆಯಲ್ಲಿಲ್ಲದಿರುವಾಗಿನ ವಿರಹವೇದನೆಯನ್ನು ಚಿತ್ರಿಸುವ ಒಂದು ಮುಕ್ತಕ:

ಮಲ್ಲಿಗೆಯ ಹೂವಿಂದೆ ಮನೆಯೆಲ್ಲ ಘಂ
ಮುಡಿಯುವವಳಿಲ್ಲದೆಯೆ ಮನ ಬಿಕೋ ಬಿಂ (ಕುವೆಂಪು)

ಒಲವಿಲ್ಲದ ಹೆಣ್ಣಿನ ಸಹವಾಸವನ್ನು ಬಿಟ್ಟುಬಿಡುವುದೇ ಲೇಸು, ಇಲ್ಲವಾದರೆ ಗಂಡಾಂತರ ತಪ್ಪಿದ್ದಲ್ಲ ಎಂಬುದನ್ನು ಸಾರುವ ಒಂದು ಮುಕ್ತಕ:

ಮನೆ ಬಿಟ್ಟ ಹೆಣ್ಣನು ನೆಲೆ ಬಿಟ್ಟ ಬಸ್ಸನು
ಹಿಡಿಯುವೆನೆಂದೊಡಬೇಡ
ಮತ್ತೊಂದು ಮಾರಿಯ ಮತ್ತೊಂದು ಲಾರಿಯ
ಬಾಯಿಗೆ ಸಿಕ್ಕೀಯೆ ನೋಡ (ಎಸ್.ವಿ.ಪರಮೇಶ್ವರಭಟ್ಟ)

ಹಟಮಾರಿ ಗಂಡನ ನಿರ್ಬಂಧಕ್ಕೆ ಸಿಲುಕಿಕೊಂಡು ತೊಳಲುವ ಹೆಂಡತಿಯ ಕರುಣಾಜನಕ ಸ್ಥಿತಿಯನ್ನು ಚಿತ್ರಿಸುವ ಒಂದು ಮುಕ್ತಕ:

ಮನೆಯಲ್ಲೂ ನೆರೆಯಲ್ಲೂ ಹಾಲಿಲ್ಲವೆಂದರೂ
ಗಂಡ ಒದರಿದ ಬೇಕೇ ಬೇಕು ಕಾಫೀ
ಎಂತೆಂತೋ ಮಾಡಿದಳು ಕಾಫಿಯನು, ಮಗು ಅತ್ತು
ಹಾಲಿಲ್ಲ ಅಂದಿತ್ತು ಮೊಲೆಯ ಸೀಪಿ (ವಿ.ಜಿ.ಭಟ್ಟ)

ಬೂಟಾಟಿಕೆಯ ಜನರನ್ನು ವಿಡಂಬಿಸುವ ಒಂದು ಮುಕ್ತಕ:

ಗಾಂಧಿ ಜಯಂತಿಯಂದು ಮಾಂಸವನ್ನು ತಿನ್ನಬಹುದೇ ಎಂಬ
ಪ್ರಶ್ನೆಯೊಮ್ಮೆ ಮನಸ್ಸಿಗೆ ಬಂತು, ಮರು ಕ್ಷಣದಲ್ಲಿ
ಮನಸ್ಸು ಹೇಳಿತು ಅಯ್ಯೊ ಹುಚ್ಚ! ಗಾಂಧಿಯನ್ನೆ
ತಿಂದಿದ್ದೇವೆ, ಇನ್ನು ಮಾಂಸದಲ್ಲೇನಿದೆ (ಸಿ.ಪಿ.ಕೆ.)

ತಾಯಿ ವಾತ್ಸಲ್ಯದ ಮಹಿಮೆ ಅಪಾರವಾದುದು, ಅವ್ಯಾಜವಾದುದು ಎಂಬುದನ್ನು ಬಲು ಮಾರ್ಮಿಕವಾಗಿ ಅಭಿವ್ಯಕ್ತಿಸುವ ಒಂದು ಮುಕ್ತಕ:

ತಾಯಿ ತೋಳಿಂದೊಮ್ಮೆ ನನ್ನನ್ನು ನೇವರಿಸಿದಳು
ಓ, ತಿಂಗಳ ಮುಡಿದವನೇ
ಸಾವಿರಾರು ಪುಟ ಹೇಳದ ವಾತ್ಸಲ್ಯವನು
ಅವಳ ಬೆರಳುಗಳು ತಿಳಿಸಿದುವು (ಗುಂಡ್ಮಿಚಂದ್ರಶೇಖರ ಐತಾಳ)

ಹೀಗೆ ಕನ್ನಡದಲ್ಲಿ ಮುಕ್ತಕ ಸಾಹಿತ್ಯದ ಬೆಳೆ ಹುಲುಸಾಗುತ್ತ ಸಾಗಿದೆ. (ಎಂ.ಪಿ.ಎಂ.)

**ಕನ್ನಡದಲ್ಲಿ ರುದ್ರ ನಾಟಕ : ನೋಡಿ: ಗಂಭೀರನಾಟಕ**

**ಕನ್ನಡದಲ್ಲಿ ವಚನಸಾಹಿತ್ಯ :** ವಚನ ಕನ್ನಡದ ವಿಶಿಷ್ಟ ಸಾಹಿತ್ಯ ಪ್ರಕಾರ; ವೀರಶೈವಸಾಹಿತ್ಯದ ಮೊದಲ ಬೆಳೆ. ಈ ಸಾಹಿತ್ಯವನ್ನು ಐತಿಹಾಸಿಕವಾಗಿ ಬಸವಪೂರ್ವಯುಗ, ಬಸವಯುಗ, ಬಸವೋತ್ತರಯುಗ ಎಂದು ವಿಭಾಗಿಸಲಾಗುತ್ತದೆ.

ಶಂಕರದಾಸಿಮಯ್ಯ, ಜೇಡರದಾಸಿಮಯ್ಯ, ಕೊಂಡಗುಳಿ ಕೇಶಿರಾಜ ಮೊದಲಾದವರು ಬಸವಪೂರ್ವಯುಗದ ಶರಣರು. ಇವರಲ್ಲಿ ಚಾಳುಕ್ಯ 2ನೆಯ ಜಯಸಿಂಹನ (1015–44) ಅರಸಿ ಸುಗ್ಗಲೆಯ ಗುರುವಾದ ಜೇಡರದಾಸಿಮಯ್ಯನ ವಚನಗಳು ಲಭಿಸಿವೆ. 10ನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿರಬಹುದಾದ ಈತನ ಗುರು ಶಂಕರದಾಸಿಮಯ್ಯನೂ ವಚನಗಳನ್ನು ರಚಿಸಿರಬಹುದು. ಜೇಡರ ದಾಸಿಮಯ್ಯನ ಹದಗೊಂಡ ಶೈಲಿಯೂ ಈ ಹೇಳಿಕೆಗೆ ಪುಷ್ಟಿ ನೀಡುತ್ತದೆ. ಅದಕ್ಕಾಗಿ ಈ ಸಾಹಿತ್ಯಪ್ರಕಾರದ ಪ್ರಾಚೀನತೆ 10ನೆಯ ಶತಮಾನದಷ್ಟು ಹಿಂದೆ ಸರಿಯಬಹುದಾಗಿದೆ. ಈ ಕಾಲದ ವಚನಗಳು ಅಲ್ಲಲ್ಲಿ ಅಂಶಲಯ ಒಳಪ್ರಾಸಯುಕ್ತವಾಗಿದ್ದು ಗಾತ್ರದಲ್ಲಿ ಚಿಕ್ಕವಾಗಿವೆ. ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದಿಪ್ಪುದೆ, ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ, ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ, ನಾನೊಂದು ಸುರಗಿಯನೇನೆಂದು ಹಿಡಿಯುವೆನು ಇತ್ಯಾದಿಯಾದ ಜೇಡರದಾಸಿಮಯ್ಯನ ವಚನಗಳು ಇದಕ್ಕೆ ನಿದರ್ಶನ. ಮುಂದಣ ಯುಗದ ವಚನಸಾಹಿತ್ಯದ ಮೇಲೆ ಇವುಗಳ ಪ್ರಭಾವ ಕೆಲಮಟ್ಟಿಗೆ ತೋರಿಬರುತ್ತದೆ. ಈ ಯುಗದ ವಚನ ಸಾಹಿತ್ಯ ಈಗ ಕಡಿಮೆ ಪ್ರಮಾಣದಲ್ಲಿ ಸಿಕ್ಕಿದ್ದರೂ ಶೋಧಿಸಿದಲ್ಲಿ ಹೊಸ ವಚನಗಳು, ವಚನಕಾರರು ಹೊರಬರುವ ಸಂಭವವಿದೆ.

ಬಸವಯುಗ ವಚನಸಾಹಿತ್ಯದ ಸುಗ್ಗಿಕಾಲ. 12ನೆಯ ಶತಮಾನದ ಮಧ್ಯ ಭಾಗದಲ್ಲಿ ಮೈಮುರಿದು ಎದ್ದ ವೀರಶೈವ ಆಂದೋಲನ ಕನ್ನಡ ಸಮಾಜಕ್ಕೆ ಹೊಸ ತಿರುವು ಕೊಟ್ಟಿತು. ಆಚಾರ–ವಿಚಾರ, ಭಾಷೆ–ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳಲ್ಲಿ ಹೊಸತನ್ನು ತುಂಬಿತು. ಬಸವಣ್ಣ, ಚೆನ್ನಬಸವ, ಪ್ರಭುದೇವ, ಅಕ್ಕಮಹಾದೇವಿ, ಸಿದ್ಧರಾಮ – ಇವರು ಸುಪ್ರಸಿದ್ಧ ವಚನಕಾರರು. ಈ ಕಾಲದ ವಚನಸಂಖ್ಯೆ ಹಲವು ಸಾವಿರ, ಹಲವು ಲಕ್ಷ, ಕೋಟಿ ಎಂಬ ಹೇಳಿಕೆಗಳಿವೆ. ಕನ್ನಡ ಭಾಷೆಯ ಅಭಿವ್ಯಕ್ತಿ ಸಾಧ್ಯತೆಯನ್ನು ತಳಮುಟ್ಟ ಕೈವಶಮಾಡಿಕೊಂಡ ವಚನಕಾರರು ಆ ಸಾಧ್ಯತೆಯನ್ನು ಇನ್ನೂ ಹಿಗ್ಗಿಸಿದರು. ಅನುಭವ ಹಾಗೂ ಅಭಿವ್ಯಕ್ತಿಗಳಲ್ಲಿ ಪ್ರಾಮಾಣಿಕತೆಯನ್ನು ಸಾಧ್ಯಮಾಡಿ ತೋರಿಸಿದರು. ಈ ಆಂದೋಲನದ ಅಧಿನಾಯಕ ಬಸವಣ್ಣ, ಕಾರ್ಯಚಟುವಟಿಕೆಗಳ ಕೇಂದ್ರಸ್ಥಳ ಕಲ್ಯಾಣ.

ಅಂದಿನ ಅನುಭವಮಂಟಪದ ಅಧ್ಯಕ್ಷನಾಗಿ ಮೆರೆದವನೆಂದರೆ ಅಲ್ಲಮಪ್ರಭು. ಈತ ಹಿರಿಯ ಆತ್ಮಜ್ಞಾನಿ, ನಿಜವಾದ ವೈರಾಗ್ಯವನ್ನು ಪಡೆದವ. ತನಗಿಂತ ಕಿರಿಯರಾದ ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಮೊದಲಾದವರ ಧ್ಯೇಯ ಧೋರಣೆಗಳಲ್ಲಿನ ಇತಿಮಿತಿಗಳನ್ನು ಎತ್ತಿ ತೋರಿಸಿ ಅವರನ್ನು ಸರಿಯಾದ ಮಾರ್ಗಕ್ಕೆ ಕೊಂಡೊಯ್ದ ಹಿರಿಯ. ಈತ ತನ್ನ ವಚನಗಳಲ್ಲಿ ತಾನು ಕಂಡ ಸತ್ಯವನ್ನು ತನಗೆ ಹಿಡಿಸದ ಆಚಾರ–ವಿಚಾರಗಳನ್ನು ತೀಕ್ಷ್ಣವಾಗಿ ಪ್ರಸ್ತಾಪಿಸಿದ್ದಾನೆ. ಇವನಿಗೆ ತನ್ನವರು ಪರರು ಎಂಬ ಹಂಗಿಲ್ಲ. ಅನಾಚಾರವನ್ನು ಎಲ್ಲೇ ಕಾಣಲಿ ಈತ ಟೀಕಿಸುತ್ತಾನೆ. ವಚನಸಾಹಿತ್ಯದಲ್ಲೆಲ್ಲ ಈತನ ವಚನಗಳು ಅತಿ ಕಠಿಣವೆನಿಸಿವೆ. ಈತನ ಬೆಡಗಿನ ವಚನಗಳಂತೂ ಪಾರಿಭಾಷಿಕ ಸಂಕೇತಗಳಿಂದ ಕೂಡಿ ಭೇದಿಸಲಸಾಧ್ಯವಾಗಿವೆ:

ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದೊಡೇನು?
ಹಸಿವು ಹೋಹುದೇ? ಅಂಗದ ಮೇಲೆ ಲಿಂಗಸ್ವಾಯತವಾದರೇನು?
ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ ಆ ಕಲ್ಲು ಲಿಂಗವೆ?
ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ? ಇಂತಪ್ಪವರ
ಕಂಡಡೆ ನಾನು ನಾಚುವೆನಯ್ಯ ಗುಹೇಶ್ವರಾ
ಮುನಿಯದಿರಿ, ಮುನಿಯದಿರಿ, ನಿಮಗೊಂದು ಯುಕ್ತಿಯ
ಹೇಳುವೆನು. ಅದೆಂತೆಂದೊಡೆ ನೀವೆನ್ನ ವಂಶೀಭೂತರಾದ
ಕಾರಣ ನಿಮ್ಮ ಹೆಚ್ಚು ಕುಂದು ಎನ್ನದಾಗಿ, ನಿಮ್ಮ ಆಸ್ತಿ ನಾಸ್ತಿ
ಎನ್ನದಾಗಿ, ನಿಮ್ಮ ಹಾನಿ ವೃದ್ಧಿ ಎನ್ನದಾಗಿ ಹಾವ ಹಿಡಿದವರು
ಬೇಲಿಯ ಹೊಗದೆ ಹೋಹರೇ ಅಯ್ಯ? ವ್ಯಾಧನು ಸೂಸಲ
ಚೆಲ್ಲಿ, ಜಂತ್ರವ ಹಣ್ಣಿ, ಅಡಿಗಲ್ಲನೊಡ್ಡಿ ಹೋದ ಬಳಿಕ,
ಸೂಸಲ ಕಂಪಿಂಗೆ ಹೆಗ್ಗಣ ಬಂದು ಬಿದ್ದಂತೆ ಬಿದ್ದಿರಲ್ಲಾ
ಮಾಯದ ಬಲೆಯಲ್ಲಿ! ಕೋಪವೆಂಬ ರಾಡನೊಡ್ಡಿ, ತಾಪವೆಂಬ
ಅರೆಗಲ್ಲನಿರಿಸಿ, ಹುಸಿ ಎಂಬ ಮೀಟುಗವಣೆಯ ಜಂತ್ರಿಸಿ,
ಹೊನ್ನು ಹೆಣ್ಣು ಮಣ್ಣೆಂಬ ಅಡಿಗಲ್ಲನೊಡ್ಡಿ ಕೆಡಹಿದನಲ್ಲಾ
ನೀಕರುಣಿ ಮುಕ್ಕಣ್ಣವ್ಯಾಧನು! ಹೊನ್ನು ಹೆಣ್ಣು ಮಣ್ಣಿ
ನಾಶೆಯ ಬಿಟ್ಟು, ಕೋಪ ತಾಪವಂ ಬಿಟ್ಟು, ಭ್ರಾಂತಿ

ಭ್ರಮೆಯಂ ಬಿಟ್ಟು, ಜಂಗಮವಾಗಬೇಕು ಕಾಣಿರೋ
ಮರುಳುಗಳಿರಾ! ಇಂತೀ ಷಡುಲೋಭದ ರುಚಿಯ
ಹಿಂಗಿ ಜಂಗಮನಾದಲ್ಲದೆ ಭವ ಹಿಂಗದು ಕಾಣಾ ಗುಹೇಶ್ವರಾ

ಅಲ್ಲಮನ ವಚನಗಳು ಬಸವಣ್ಣ ಅಥವಾ ಮಹಾದೇವಿಯಕ್ಕನ ವಚನಗಳಷ್ಟು ಜನಪ್ರಿಯವಾಗಿರದಿದ್ದರೂ ತಮ್ಮ ಆಳವಾದ ತತ್ತ್ವಸಾರದಿಂದ, ಶೈಲಿಯಿಂದ, ಕಾವ್ಯತ್ವದಿಂದ ಕಾಂತಿಯುಕ್ತವಾಗಿವೆ. ಉಳಿದವರಲ್ಲಿನ ಅತಿರೇಕಗಳಾವುವೂ ಅಲ್ಲಮನಲ್ಲಿ ಕಾಣವು. ಈ ದೃಷ್ಟಿಯಿಂದ ಇವನ ವಚನಗಳು ವ್ಯಾಸಂಗಯೋಗ್ಯವಾಗುತ್ತವೆ.

ಭಕ್ತಿಭಂಡಾರಿ ಎಂಬ ಕೀರ್ತಿಗೆ ಭಾಜನನಾದ ಬಸವಣ್ಣನ ವಚನ ಗಳಲ್ಲಿ ಭಕ್ತಿಯ ಅತಿರೇಕವನ್ನು ಕಾಣುತ್ತೇವೆ. ಹೆಂಗರುಳಿನ ಸಹಾನು ಭೂತಿಯನ್ನು ಕಾಣುತ್ತೇವೆ. ಒಂದು ದೇಶದ ಮಹಾಮಂತ್ರಿ ಯಾಗಿದ್ದರೂ ಈತ ಅಹಂಕಾರಪಟ್ಟವನಲ್ಲ. ಜಂಗಮಸೇವೆಯೇ ಲಿಂಗದ ಸೇವೆ ಎಂದು ತನ್ನ ತನುಮನಧನಗಳನ್ನು ಜಂಗಮ ದಾಸೋಹಕ್ಕಾಗಿ ಮುಡಿಪಾಗಿಟ್ಟ ಭಕ್ತಶ್ರೇಷ್ಠವಿನೀತ. ಅನುಕಂಪ, ಜೀವನಾನುಭವದ ಸಾರ, ರಸಾರ್ದ್ರಹೃದಯ, ಲೋಕಹಿತ ಸಾಧನೆಯ ಉದ್ದೇಶ – ಇವು ಕ್ಷಣಕ್ಷಣಕ್ಕೂ ಈತನ ವಚನಗಳಲ್ಲಿ ಕಾಣುತ್ತವೆ. ಮತೋಪದೇಶ ಕ್ಕೆಂದೇ ಕಟ್ಟಿದವಾದರೂ ಈತನ ವಚನಗಳಲ್ಲಿ ಹೃದ್ಯವಾದ ರಸಭಾವ ಮಿಡಿವ ಮಾತುಗಳು ಉದ್ದಕ್ಕೂ ಬರುತ್ತವೆ:

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ!
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ!
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ!
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು
ಕೂಡಲಸಂಗಮದೇವ
ನಾದಪ್ರಿಯನಲ್ಲ, ವೇದಪ್ರಿಯನಲ್ಲ ಭಕ್ತಿಪ್ರಿಯ ನಮ್ಮ
ಕೂಡಲಸಂಗಮದೇವ
ಸಂಸಾರಸಾಗರ ತೆರೆಕೊಬ್ಬಿ, ಮುಖದ ಮೇಲೆ ಅಲೆವುತ್ತಲಿದ್ದುದೇ?
ಸಂಸಾರಸಾಗರ ಉರದುದ್ದವೇ ಹೇಳಾ?
ಸಂಸಾರಸಾಗರ ಕೊರಳುದ್ದವೇ ಹೇಳಾ?
ಸಂಸಾರಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯ? ಅಯ್ಯಾ
ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ ಕೂಡಲಸಂಗಮದೇವಯ್ಯ
ನಾನೇವೆನಯ್ಯ
ಕಾಂಚನವೆಂಬ ನಾಯ ನಚ್ಚಿ ನಿಮ್ಮ ನಾನು ಮರೆದೆನಯ್ಯ!
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ ಹಡಕಿಗೆ
ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ
ಕೂಡಲಸಂಗಮದೇವ

ಹೀಗೆ ಬಸವಣ್ಣನಿಂದ ನೂರಾರು ಉತ್ತಮ ವಚನಗಳನ್ನು ಎತ್ತಿ ತೋರಿಸಬಹುದು. ಷಟ್ಪದಿಕಾರರಲ್ಲಿ ಕುಮಾರವ್ಯಾಸ, ದಾಸರಲ್ಲಿ ಪುರಂದರದಾಸ ಇರುವಂತೆ ವಚನಕಾರರಲ್ಲಿ ಬಸವಣ್ಣ ಬಹುಜನಪ್ರಿಯ.

ವಚನಸಾಹಿತ್ಯ ಪ್ರಧಾನವಾಗಿ ಅನುಭಾವಸಾಹಿತ್ಯ, ಭಕ್ತಿ ಸಾಹಿತ್ಯ. ಅಂಥದರಲ್ಲಿ ಜ್ಞಾನಮಾರ್ಗವನ್ನೇ ಹೆಚ್ಚಾಗಿ ಎತ್ತಿಹಿಡಿದವನೆಂದರೆ ಚೆನ್ನಬಸವಣ್ಣ. ಮುಕ್ತಿ ಸಾಧನೆಯ ಮಾರ್ಗಗಳಲ್ಲೆಲ್ಲ ಇದು ಕಠಿಣತಮವಾದುದು:

ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ
ಅಹಂಕಾರ ಪ್ರಬೋಧೆಗೆಳೇಕಯ್ಯ? ಕಾಮ ಕ್ರೋಧ ಲೋಭ
ಮೋಹ ಮದ ಮತ್ಸರಂಗಳನಿಕ್ಕಿ ಎನ್ನ ಮಾಡಿದಿರಿ, ಎನ್ನ
ಬಾಧಿಸಲಿಂತು ಲಿಂಗಯ್ಯ ತಂದೆ? ಆದಿ ವ್ಯಾಧಿಗಳೆಲ್ಲವ
ಕಳೆದು ನಿರ್ವಾಣವಪ್ಪ ಪದವ ಕರುಣಿಸಯ್ಯ
ಕೂಡಲಚೆನ್ನಸಂಗಮದೇವ
ತಾಳು ಬೋಳು ಕಪ್ಪರವೆಂತೆಂಬರು, ತಾಳಾವುದು, ಬೋಳಾವುದು,
ಕಪ್ಪರವಾವುದೆಂದರಿಯರು, ಕಾಯದ ಕಳವಳದ ಗುಣವ
ತಾಳಬಲ್ಲಡೆ ತಾಳು, ಸಂಸಾರವಿಷಯವ ಬೋಳಿಸಬಲ್ಲಡೆ
ಬೋಳು, ಪರದಲ್ಲಿ ಪರಿಣಾಮಿಸಬಲ್ಲಡೆ ಕಪ್ಪರ, ಇಂತಿಲ್ಲ
ದಿದ್ದಡೆ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಡೊಂಬರ ಬೋಳು.

ಬಸವಣ್ಣನವರೇ ತನ್ನ ಗುರುವೆಂದೂ ಇಷ್ಟಲಿಂಗವನ್ನು ದಯಪಾಲಿಸಿ ತನ್ನನ್ನು ಉದ್ಧರಿಸಿದ ಮಹಾತ್ಮರೆಂದೂ ಹೇಳಿಕೊಂಡ ಚೆನ್ನಬಸವಣ್ಣ ಶುದ್ಧ ಜ್ಞಾನಮಾರ್ಗದ ಬೋಧಕನಾಗಿ ಹೆಸರು ಪಡೆದಿದ್ದಾನೆ.

ಸಿದ್ಧರಾಮಯೋಗಿ ಕರ್ಮಯೋಗಿ, ಪರೋಪಕಾರ, ವಿದ್ಯಾಪ್ರಸಾರ ಮೊದಲಾದ ಸಮಾಜಸೇವೆಯೇ ತನ್ನ ಜೀವನದ ಧ್ಯೇಯವೆಂದು ಸಾರಿದಾತ. ಕೆರೆ ಕಟ್ಟಿಸುವುದು, ಮಠಾದಿಗಳನ್ನು ನಿರ್ಮಿಸುವುದು ಮುಂತಾದ ಕೆಲಸಗಳಲ್ಲಿ ನಿರತನಾಗಿದ್ದವ. ಇವನ ಉಪದೇಶವನ್ನು ಮೆಚ್ಚಿದ ಸಹಸ್ರಾರು ಶಿಷ್ಯರು ಇವನೊಡನೆ ಸೇರಿ ಕಾಯಕನಿರತರಾಗಿದ್ದರು:

ಕೃಷಿಯ ಮಾಡಿ ಉಣ್ಣದೆ, ಹಸಿವು ಹರಿವ ಪರಿ ಇನ್ನೆಂತೋ?
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ?
ಬೇಯದೆ ಅಶನನುಂಬ ಠಾವಾವುದು ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಕ್ಕೆ?

ಮಹಾದೇವಿಯಕ್ಕ ಬಸವಣ್ಣನಂತೆ ಬಹು ಜನಪ್ರಿಯಳಾದ ವಚನಕಾರ್ತಿ. ವೈರಾಗ್ಯವನ್ನೂ ಶರಣಸತಿ ಲಿಂಗಪತಿ ಎಂಬ ತತ್ತ್ವವನ್ನೂ ಜೀವನದಲ್ಲಿ ಅನುಸರಿಸಿದಳಲ್ಲದೆ ವಚನಗಳಲ್ಲಿ ಬೋಧಿಸಿದಳು. ದೇವರ ಹಂಬಲವನ್ನೇ ವಸ್ತುವನ್ನಾಗುಳ್ಳ ಈಕೆಯ ವಚನಗಳು ಉತ್ತಮ ಕಾವ್ಯಗುಣವನ್ನು ಪಡೆದಿವೆ:

ಹಸಿವಾದಡೆ ಭಿಕ್ಷಾನ್ನಗಳುಂಟು, ತೃಷೆಯಾದಡೆ ಕೆರೆ ಹಳ್ಳಬಾವಿ ಗಳುಂಟು, ಶಯನಕ್ಕೆ ಹಾಳು ದೇಗುಲಗಳುಂಟು, ಚೆನ್ನಮಲ್ಲಿಕಾರ್ಜುನಯ್ಯ, ಆತ್ಮಸಂಗಾತಕ್ಕೆ ನೀನೆನಗುಂಟು

ವನವೆಲ್ಲನೀವೆ ವನದೊಳಗಣ ದೇವತರುವೆಲ್ಲ ನೀವೆ, ತರುವಿನೊಳ ಗಾಡುವ ಖಗಮೃಗವೆಲ್ಲನೀವೆ. ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ

ವಚನಸಾಹಿತ್ಯದ ಹಿರಿಮೆಯನ್ನು ಶ್ರುತಪಡಿಸಲು ಇಲ್ಲಿ ಹೀಗೆ ಕೆಲವು ಉದಾಹರಣೆಗಳನ್ನು ಮಾತ್ರ ಕೊಡಲಾಗಿದೆ. ನಿಜವಾಗಿ ವಚನಸಾಹಿತ್ಯದ ಮುತ್ತು ರತ್ನಗಳನ್ನೆಲ್ಲ ಆಯ್ದು ಒಂದೆಡೆ ಇಟ್ಟು ನೋಡಿದಲ್ಲಿ ಅವುಗಳ ಯೋಗ್ಯತೆ, ಹಿರಿಮೆ ತಿಳಿಯುತ್ತದೆ. ಅಂದಿನಿಂದ ಇಂದಿನವರೆಗೂ ಅವುಗಳ ಕಾಂತಿ ಮಾಸಿಲ್ಲ.

13–14ನೆಯ ಶತಮಾನಗಳಲ್ಲಿ ವೀರಶೈವ ಶರಣರು ಆಂಧ್ರ ಪ್ರದೇಶದ ಓರಂಗಲ್ಲು, ಶ್ರೀಶೈಲ; ಮಧ್ಯಕರ್ನಾಟಕದ ಉಳವಿ, ಹಂಪೆ, ದ್ವಾರಸಮುದ್ರಗಳಲ್ಲಿ ನೆಲೆನಿಂತರು. ವಚನರಚನೆ ಇಳಿಮುಖವಾಯಿತು. ವಚನಕಾರರ ಬದುಕನ್ನು ಬರೆಹಕ್ಕೆ ಇಳಿಸುವ ಕೆಲಸ ಪ್ರಾರಂಭವಾಯಿತು. ವೀರಶೈವ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣಗಳ ಯುಗ ಪ್ರಾರಂಭವಾಯಿತು. ಆದರೂ ವೀರಶೈವಕ್ಕೆ ಸ್ಥಿರನೆಲೆ ಸಿಕ್ಕಿದ್ದು ನೂರೊಂದು ವಿರಕ್ತರು ಬಾಳಿದ ಪ್ರೌಢದೇವರಾಯನ ಕಾಲದಲ್ಲಿ. ವಿಪ್ಲವಕ್ಕೆ ಗುರಿಯಾಗಿ ನಷ್ಟಗೊಳ್ಳುತ್ತಿದ್ದ ಮತ್ತು ಪುರಾಣರಚನೆಯಿಂದ ಅಲಕ್ಷಿಸಲ್ಪಟ್ಟ ಹಿಂದಣ ವಚನಸಾಹಿತ್ಯದ ಸಂಗ್ರಹ, ಸಂಕಲನ, ಸಂಪಾದನಕಾರ್ಯ ಪ್ರಾರಂಭವಾಯಿತು. ಈ ಕಾರ್ಯವನ್ನು ನಿರ್ವಹಿಸಿದವರಲ್ಲಿ ಮಹಲಿಂಗ ಮೊದಲಾದವರೂ ಪ್ರೇರಣೆ ಕೊಟ್ಟವರಲ್ಲಿ ಲಕ್ಕಣದಂಡೇಶ ಮುಂತಾದವರೂ ಪ್ರಮುಖರು. ಇವರ ಪ್ರಯತ್ನದಿಂದಾಗಿ ಸಕಲಪುರಾತನರ ವಚನ, ಏಕೋತ್ತರಶತಸ್ಥಲ, ಲಿಂಗಲೀಲಾ ವಿಲಾಸಚಾರಿತ್ರ ಮೊದಲಾದ ಗ್ರಂಥಗಳಲ್ಲಿ ವಚನಗಳು ತತ್ತ್ವದ ತಳಹದಿಯ ಮೇಲೆ ಸೂತ್ರಬದ್ಧವಾಗಿ ಹೆಣೆಯಲ್ಪಟ್ಟವು. ಹೀಗೆ ವಚನಸಾಹಿತ್ಯ ಹೊಸ ರೂಪವನ್ನು ರೂಪಿಸಿಕೊಂಡು ಮುನ್ನಡೆಯಿತು. ಶಿವನಿಷ್ಠೆಯ ಸಂಗಮವಂಶ ಕೊನೆಗೊಂಡ 15ನೆಯ ಶತಮಾನದಲ್ಲಿ ನಡೆದ ವಚನಸಾಹಿತ್ಯ ಸಂಬಂಧವಾದ ಆಂದೋಲನದ ಕೇಂದ್ರವ್ಯಕ್ತಿ ತೋಂಟದ ಸಿದ್ಧಲಿಂಗ; ಷಟ್‌ಸ್ಥಲದ ಇತಿಹಾಸದಲ್ಲಿ ಎರಡನೆಯ ಚೆನ್ನಬಸವಣ್ಣನೆನಿಸಿದ. ಈತನ ದೈವೀಬೆಂಬಲದಿಂದ ವಚನಗಳ ಸಂಕಲನ, ಸಂಪಾದನೆ ಇನ್ನೂ ತೀವ್ರಗೊಂಡಿತು. ಈ ಜಾಗೃತ ಸಮಯದಲ್ಲಿ ಹುಟ್ಟಿದ ನಾಲ್ಕು ಶೂನ್ಯಸಂಪಾದನೆಗಳಲ್ಲಿ ಕೊನೆಯವೆರಡು ಈತನ ಶಿಷ್ಯವರ್ಗದವರಿಂದ ರಚನೆಗೊಂಡುದು ಗಮನಿಸಬೇಕಾದ ಸಂಗತಿ. ಸಾಲದುದಕ್ಕೆ ಈತನ ಶಿಷ್ಯರಲ್ಲಿ ಸಂಪಾದನೆಯ ಒಂದು ಶಿಷ್ಯಪರಂಪರೆಯೇ ಮುಂದುವರಿಯಿತು. ಈ ಸಂಪ್ರದಾಯಕ್ಕೆ ಸಂಬಂಧಿಸಿದ ಸಂಪಾದನೆಯ ಚೆನ್ನಂಜೆದೇವ, ಸಂಪಾದನೆಯ ಬೋಳಬಸವದೇವ, ಸಂಪಾದನೆಯ ಗುರುಶಾಂತದೇವ, ಸಂಪಾದನೆಯ ಸಿದ್ಧವೀರಣಾರ್ಯ ಮೊದಲಾದವರು ಕಾರಣವಾಗಿ ಲಿಂಗವಿಕಳಾವಸ್ಥೆಯ ವಚನ, ಮಿಶ್ರ ಸ್ತೋತ್ರದ ವಚನ, ಆಚರಣೆಯ ವಚನ, ಬಸವಸ್ತೋತ್ರದ ವಚನ, ಶರಣಸ್ತೋತ್ರದ ವಚನ – ಇತ್ಯಾದಿ ಹೊಸ ಹೊಸ ವಚನಸಂಕಲನ ಗ್ರಂಥಗಳು ಹೊರಬಂದುವು. ಹೀಗೆ ಬಸವಣ್ಣನ ತರುವಾಯದ ಅವಧಿ ವಚನಗಳ ಸಂಕಲನ, ಸಂಪಾದನೆಗಳ ಯುಗವೆನಿಸಿದರೂ ತೋಂಟದ ಸಿದ್ಧಲಿಂಗ, ಘನಲಿಂಗಿದೇವ, ಕಾಡಸಿದ್ಧ, ಷಣ್ಮುಖಸ್ವಾಮಿ ಮೊದಲಾದವರು ವಚನಗಳನ್ನೂ ರಚಿಸಿದ್ದಾರೆ. ಗುಣ, ಗಾತ್ರ ಎರಡು ದೃಷ್ಟಿಯಿಂದಲೂ ಇವರ ವಚನಗಳು ಬಸವಯುಗದ ವಚನಗಳ ಎತ್ತರಕ್ಕೆ ಬಾರವು.

ಶರಣರು ತ್ರಿವಿಧಿ, ಮಂತ್ರಗೋಪ್ಯ, ಕರಣಹಸಿಗೆ, ವಿವಿಶ್ರಾರ್ಪಣ ಇತ್ಯಾದಿ ಪ್ರಕಾರಗಳನ್ನು ನಿರ್ಮಿಸಿದ್ದರೂ ವಚನ ಪ್ರಕಾರ ಅವರ ವ್ಯಕ್ತಿಸಿದ್ಧಿಯ ಪತಾಕೆ. ಇದರಲ್ಲಿ ವಚನ, ಸ್ವರವಚನವೆಂದು ಎರಡು ವಿಧಗಳುಂಟು. ಒಂದು ಅನುಭಾವದ ಗದ್ಯ ಪ್ರಕಾರ, ಇನ್ನೊಂದು ಅನುಭಾವದ ಗೀತಪ್ರಕಾರ. ವಚನಗಳು ತಮ್ಮ ಉಜ್ವಲ ಸಾಹಿತ್ಯದಿಂದ, ಸ್ವರವಚನಗಳು ತಮ್ಮ ಗೇಯ ಗುಣದಿಂದ ಸಮಸ್ತ ಸಹೃದಯರನ್ನೂ ಆಕರ್ಷಿಸಿವೆ.

ಪ್ರತಿಯೊಬ್ಬ ಶರಣನ ವಚನ ಮತ್ತು ಸ್ವರವಚನಗಳ ಕೊನೆಗೆ ಕೃತಿಕಾರನನ್ನು ಸೂಚಿಸುವ, ಆರಾಧ್ಯದೈವನಾಮಾಂಕಿತವಾದ ಮುದ್ರೆ ಇರುತ್ತದೆ. ಕೂಡಲ ಸಂಗಮದೇವ, ಕೂಡಲ ಚೆನ್ನಸಂಗಮದೇವ ಹೀಗೆ ಒಂದೊಂದು ದೇವತೆಯ ಸುತ್ತ ಇರುವ ಕೆಲವು ಅಂಕಿತಗಳು ಒಂದೊಂದು ವರ್ಗವನ್ನು ನಿರ್ಮಿಸುತ್ತವೆ.

ಗಾತ್ರದೃಷ್ಟಿಯಿಂದ ವಚನ ಒಂದು ಬಿಡಿ ಮುಕ್ತಕ. ಸ್ವರವಚನ 3–5, 7–9 ನುಡಿಗಳ ಒಂದು ಪುಂಜ. ಹಾಡುಗಬ್ಬಗಳಾದ ಈ ಸ್ವರವಚನಗಳು ಬಸವ ಮೊದಲಾದವರಿಂದ ಪ್ರವೃತ್ತವಾಗಿದ್ದು ಮುಂದೆ ಬಂದ ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾಮಹಾಂತ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಮೈಲಾರದ ಬಸವಲಿಂಗ ಶರಣ ಮೊದಲಾದವರ ಕೈಯಲ್ಲಿ ಉಚ್ಛ್ರಾಯಸ್ಥಿತಿಗೇರಿದುವು. ವಚನಸಾಹಿತ್ಯದ ಈ ರಮ್ಯ ಮಾರ್ಗ ವಿಕಾಸಗೊಂಡು ಹಲವು ಬಗೆಯಾಗಿ ಬೆಳೆದಿರುವುದನ್ನು ಮುಂದಿನ ದಾಸಸಾಹಿತ್ಯದಲ್ಲೂ ಇಸ್ಲಾಮೀ ಅನುಭಾವ ಸಾಹಿತ್ಯದಲ್ಲೂ ಕಾಣಬಹುದಾಗಿದೆ.

ವಚನಗಳು ಚರಿತ್ರೆ, ತತ್ತ್ವ, ಸಾಹಿತ್ಯ ದೃಷ್ಟಿಗಳಿಂದ ಅಮೂಲ್ಯ ವೆನಿಸಿವೆ. ತಾವು ಸತ್ಯವನ್ನು ಕಂಡ ಉಂಡ ಅನುಭವವನ್ನು ಅಭಿವ್ಯಕ್ತಗೊಳಿಸುವಲ್ಲಿ ಕೆಲವು ಸಲ ಶರಣರ ವ್ಯಕ್ತಿಗತ ಅಂಶಗಳೂ ವಚನಗಳಲ್ಲಿ ನುಸುಳಿಬಂದಿವೆ. ‘ಆರು ಜನ್ಮದವ ಬಸವಣ್ಣನೆಂಬರು ಈ ಗಾರುಮಾತ ಕೇಳಲಾಗದು, ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ, ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ ಒಬ್ಬ ಜಂಗಮದ ಅಭಿಮಾನದಿಂದ, ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳ ಚಲುವೆ’ ಇಂಥ ಅಂಶಗಳು ಶರಣರ ಚರಿತೆ ಬರೆಯುವಲ್ಲಿ ಪ್ರಮಾಣಗಳಾಗಿ ನಿಲ್ಲುತ್ತವೆ.

ವಚನಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಸಮಕಾಲೀನ ಸಮಾಜ ಚಿತ್ರ ಮೂಡಿದೆ. ‘ಮಾರಿಕವ್ವೆಯನೋಂತು ಕೊರಳಲ್ಲಿ ಕಟ್ಟಿಕೊಂಬರು, ಮರನ ಗೋಟಿಗೆ ಬರ್ಪ ಕಿರುಕುಳದೈವಕ್ಕೆ ಕುರಿಯನಿತ್ತಿಹವೆಂದು ನಲಿನಲಿದಾಡುವರು, ವಿಷ್ಣುವ ಪೂಜಿಸಿ ಮುಡಿಹ ಸುಡಿಸಿಕೊಂಬುದ ಕಂಡೆ, ಜಿನನ ಪೂಜಿಸಿ ಬತ್ತಲೆಯಪ್ಪುದ ಕಂಡೆ, ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದ ಕಂಡೆ’ ಇಂಥ ಈ ವ್ಯಕ್ತಿಗತ ಸಂಗತಿ ಮತ್ತು ಸಮಾಜ ಚಿತ್ರಣಗಳಿಗಿಂತ ಶರಣರಿಗೆ ಮುಖ್ಯವಾದುದು ವೀರಶೈವಧರ್ಮದ ತತ್ತ್ವ ಮತ್ತು ಆಚರಣೆಗಳ ಪ್ರತಿಪಾದನೆ. ಹೀಗಾಗಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಇತ್ಯಾದಿಗಳ ತಾತ್ತ್ವಿಕ ವಿವೇಚನೆ ಅಲ್ಲಿ ವಸ್ತುವಾಗಿ ನಿಂತಿತು. ಕಾಯಕ, ಜಾತಿಭೇದ ನಿರ್ಮೂಲನ, ಸ್ತ್ರೀಪುರುಷ ಸಮಾನತೆ – ಮುಂತಾದ ಆಚರಣೆಗಳು ಅಲ್ಲಿ ಪ್ರತಿಪಾದಿಸಲ್ಪಟ್ಟು ಕಾಯಕವೇ ಕೈಲಾಸ, ಸಕಲ ಜೀವಾತ್ಮರಿಗೆ ಲೇಸ ಬಯಸುವನೇ ಕುಲಜ, ದಯವೇ ಧರ್ಮದ ಮೂಲ, ಅರಿವೇ ಗುರು, ದೇವನೊಬ್ಬ ನಾಮ ಹಲವು ಕೂಡಲಸಂಗನ ಒಲಿಸಲು ಬಂದ ಪ್ರಸಾದಕಾಯವ ಕೆಡಿಸಲಾಗದು, ಭಕ್ತಿ ಪ್ರಿಯ ನಮ್ಮ ಕೂಡಲಸಂಗಮ ದೇವ, ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂಬ ಲೋಕಮಾನ್ಯ ವಿಚಾರಗಳು ಆವಿರ್ಭವಿಸಿದುವು. ಹೀಗೆ ಹೊಸ ಆಚಾರ ಹೊಸ ವಿಚಾರಗಳನ್ನು ತುಂಬಿಕೊಂಡ ವಚನಗಳು ಹೊಸ ಭಾಷೆ ಹೊಸ ಸಾಮಗ್ರಿ ಹೊಸ ಸಂವೇದನೆಗಳನ್ನು ಹೊತ್ತು ಹೊರಬಂದುವು. ಇದರ ಫಲವಾಗಿ ಕಮ್ಮಟ, ಗಂಜಳ, ಹನ್ನಿಬ್ಬರು, ಉಳ್ಳವರು, ಮೇಳಾಪ, ತುಯ್ಯಲ ಇತ್ಯಾದಿ ದೇಶೀಪದಗಳು ಸಾಹಿತ್ಯದಲ್ಲಿ ಸಾರ್ಥಕಗೊಂಡುವು. ಬದುಕಿನ ಹಂಚು ಹರಳು ಇತ್ಯಾದಿ ವಸ್ತುಕೋಟಿಯೆಲ್ಲ ಅವರ ಕೈಯಲ್ಲಿ ಹದವಾಗಿ ಬಳಕೆಗೊಂಡುವು. ಅವರವರ ಕಾಯಕಗಳು ವಚನಗಳಲ್ಲಿ ರೂಪಕ ರೂಪತಾಳಿ ಶೋಭಿಸಿದುವು. ಇದರಿಂದ ಕನ್ನಡ ಭಾಷೆಯ ಅಭಿವ್ಯಕ್ತಿ, ಸತ್ತ್ವ ಸಾವಿರ ಪಾಲು ವಿಸ್ತಾರಗೊಂಡಿತು.

ಸಾಮಾನ್ಯವಾಗಿ ವಚನ ಸಾಹಿತ್ಯವೆಂದರೆ ಸ್ವಾನುಭವ ಲೋಕಾನುಭವಗಳ ಸಂಗಮ. ಶೈಲಿದೃಷ್ಟಿಯಿಂದ ಈ ಸಾಹಿತ್ಯವನ್ನು ಪ್ರಸನ್ನಶೈಲಿ, ಬೆಡಗಿನ ಶೈಲಿ, ಶಾಸ್ತ್ರಶೈಲಿಯೆಂದು ವಿಭಾಗಿಸಬಹುದು. ಪ್ರಸನ್ನಕ್ಕೆ ಬಸವ, ಬೆಡಗಿಗೆ ಪ್ರಭುದೇವ, ಶಾಸ್ತ್ರಕ್ಕೆ ಚೆನ್ನಬಸವ ಇವರ ವಚನಗಳು ಮಾದರಿ. ಆಡುಮಾತಿನ ಕೆಚ್ಚು, ಕಮನೀಯತೆ, ಅನುಭವದ ಪ್ರಾಮಾಣಿಕತೆ, ಅಭಿವ್ಯಕ್ತಿಯ ತೀವ್ರಪರಿಣಾಮ – ಇವು ಗುಣವಿಶೇಷಗಳು. ಹೀಗಾಗಿ ಇದು ಕನ್ನಡದ ಅನುಪಮ ಅನುಭಾವಸಾಹಿತ್ಯ, ವಿಶ್ವವಾಙ್ಮಯಕ್ಕೆ ಕನ್ನಡ ನೀಡಿದ ವಿಶಿಷ್ಟ ಸಾಹಿತ್ಯ ಎಂಬ ಕೀರ್ತಿ ಗಳಿಸಿದೆ.

ವಚನಶಾಸ್ತ್ರ ಪಿತಾಮಹರೆನಿಸಿದ ಫ.ಗು.ಹಳಕಟ್ಟಿಯವರು ಪ್ರಥಮತಃ ವಚನ ಸಾಹಿತ್ಯವನ್ನು ಸಂಗ್ರಹಿಸಿ ಮುದ್ರಿಸಿದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯವೂ ಬೆಂಗಳೂರಿನ ಬಸವ ಸಮಿತಿಯೂ ವಚನ ಸಾಹಿತ್ಯವನ್ನು ಪರಿಷ್ಕರಿಸಿ ಮುದ್ರಿಸುವ ಕೆಲಸವನ್ನು ಮಾಡಿವೆ. ಎಂ.ಆರ್.ಶ್ರೀನಿವಾಸಮೂರ್ತಿ,ಬಿ.ಶಿವಮೂರ್ತಿಶಾಸ್ತ್ರೀ, ಆರ್.ಸಿ.ಹಿರೇಮಠ, ಭೂಸನೂರುಮಠ, ಸ.ಸ.ಮಾಳವಾಡ, ಎಲ್.ಬಸವರಾಜು, ಎಂ.ಎಂ.ಕಲಬುರ್ಗಿ ಮೊದಲಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಗಣ್ಯ ಕೆಲಸ ಮಾಡಿದ್ದಾರೆ.

20ನೆಯ ಶತಮಾನದಲ್ಲಿಯೂ ವಚನ ಕನ್ನಡ ಸಾಹಿತ್ಯಕ್ಕೇ ವಿಶಿಷ್ಟವಾದ ಒಂದು ಸಾಹಿತ್ಯಪ್ರಕಾರ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಶಿವಶರಣರ ವಚನ ವಾಙ್ಮಯ ಲೋಕದ ಅನುಭಾವಸಾಹಿತ್ಯಕ್ಕೆ ಒಂದು ಶ್ರೀಮಂತ ಕೊಡುಗೆ. ಸುಮಾರು 12ನೆಯ ಶತಮಾನದ ಹೊತ್ತಿಗೆ ಯಶಸ್ಸಿನ ತುದಿಯನ್ನೇರಿದ ಈ ಸಾಹಿತ್ಯಪ್ರಕಾರ ಬರಬರುತ್ತಾ ತನ್ನ ಉಜ್ವಲ ಕಾಂತಿಯನ್ನು ಕಳೆದುಕೊಂಡು ಕೊನೆಗೊಮ್ಮೆ ನಿಂತೇ ಹೋಯಿತು. ನಡುವೆ ಒಂದು ಸಲ ಅದರ ಪುನರುಜ್ಜೀವನದ ಪ್ರಯತ್ನ ನಡೆದಿರುವುದಕ್ಕೇನೋ ಸಾಹಿತ್ಯಚರಿತ್ರೆಯಲ್ಲಿ ಉಲ್ಲೇಖಗಳಿವೆ. ಆದರೆ ಯಶಸ್ಸಿನ ದಾಖಲೆಗಳಿಲ್ಲ. ಬಸವಣ್ಣ, ಅಕ್ಕಮಹಾದೇವಿ ಮೊದಲಾದವರು ಈ ಅಭಿವ್ಯಕ್ತಿಮಾಧ್ಯಮದಲ್ಲಿ ತೋರಿದ ಕೌಶಲವೇ ಒಂದು ಜಲಚಿಹ್ನೆಯಾಗಿ ನಿಂತು ಹೋಯಿತು. ಇದನ್ನು ಅನುಸರಿಸಿದವರು, ಅನುಕರಿಸಿದವರು ಅನೇಕರು; ಆದರೆ ಮೀರಿದವರು ಮಾತ್ರ ಒಬ್ಬರೂ ಇಲ್ಲ. ಸರಳವಾದ ಮಾತುಗಳಲ್ಲಿ ಅನುಭವ ತೀವ್ರತೆಯನ್ನು ಪ್ರಾಮಾಣಿಕ ಆತ್ಮವಿಮರ್ಶೆಯಲ್ಲಿ ದಿಟ್ಟತನವನ್ನು, ಅಲಂಕಾರ ಭಾರವಿಲ್ಲದ ರಚನೆಯಲ್ಲಿ ಕಲೆಗಾರಿಕೆಯನ್ನು ಹೊಮ್ಮಿಸುವುದು ಮುಂದಿನವರಿಗೆ ಹೆಚ್ಚು ಸಾಧ್ಯವಾಗಲಿಲ್ಲ. ಆದರೂ ಪ್ರಯೋಗಪ್ರಿಯರಿಗೆ ವಚನಗಳ ಮಾದರಿ ಯಾವಾಗಲೂ ಒಂದು ಆಹ್ವಾನವಾಗಿ ಉಳಿದದ್ದರಲ್ಲಿ ಆಶ್ಚರ್ಯವಿಲ್ಲ. ವಿಚಾರಧಾರೆ, ಆವೇಶ, ಉತ್ಸಾಹಗಳು ಛಂದಸ್ಸಿನ ಚೌಕಟ್ಟಿನಲ್ಲಿ ಸಿಕ್ಕಿ ಸೊರಗದಿರಬೇಕಾದರೆ ವಚನದಂಥ ಒಂದು ಮಾಧ್ಯಮ ಎಲ್ಲ ಕಾಲಕ್ಕೂ ಸಮರ್ಪಕವಾಗಿ ಅಗತ್ಯವಾಗಿ ತೋರಿದ್ದರಲ್ಲಿಯೇ ಈ ಪ್ರಕಾರದ ಮಹತ್ತ್ವವಿದೆ. ಅಂತೆಯೇ ಹೊಸ ಸಾಹಿತ್ಯದಲ್ಲಿಯೂ ವಚನ ಪ್ರಕಾರ ಒಂದು ಪ್ರೇರಣೆಯ ಸೆಲೆಯಾಗಿದೆ; ಅನುಕರಣೆಗೆ ಮಾದರಿಯಾಗಿದೆ.

ಸಾಹಿತ್ಯಚರಿತ್ರೆಯ ಪರಿಭಾಷೆಯಲ್ಲಿ ನಮಗೆ ಪರಿಚಿತರಾಗಿರುವಂಥ ವಚನಕಾರರು ಇಂದು ಇಲ್ಲ. ಆದರೆ ಸಾಹಿತ್ಯಕ್ಷೇತ್ರದ ಬೇರೆ ಬೇರೆ ಪ್ರಕಾರಗಳಲ್ಲಿ ಇಂದು ಕೆಲಸ ಮಾಡುತ್ತಿರುವ ಅನೇಕರು ವಚನಗಳನ್ನು ರಚಿಸಿದ್ದಾರೆ. ಈ ಗದ್ಯಗೀತ ಪ್ರಕಾರದ ರೂಪಾಂಶಕ್ಕೆ ಹೊಸ ಲೇಖಕರಿಗೆ ಅನ್ಯಮೂಲಗಳ ಸ್ಫೂರ್ತಿಯೂ ಲಭಿಸಿದೆ. ವಾಲ್ಟ್ ವಿಟ್‌ಮನ್ನನ ಹುಲ್ಲಿನ ದಳಗಳು, ರವೀಂದ್ರನಾಥ ಠಾಕೂರರ ಕವಿತೆಗಳ ಇಂಗ್ಲಿಷ್ ಅನುವಾದಗಳು ಈ ನಿಟ್ಟಿನಲ್ಲಿ ಒಡನೆಯೇ ನೆನಪಿಗೆ ಬರುವ ಮೂಲಗಳು.

ಸಮಕಾಲೀನರು ಅನೇಕರು ವಚನಗಳನ್ನು ಇಲ್ಲವೇ ರೂಪಾಂಶದಲ್ಲಿ ವಚನಗಳಿಗೆ ತೀರ ಹತ್ತಿರವಾದ ಕೃತಿಗಳನ್ನು ರಚಿಸಿದ್ದಾರೆ. ಸುಮಾರು ಇಪ್ಪತ್ತೆರಡು ಜನ ಲೇಖಕರು ಮೂವತ್ತಕ್ಕೂ ಹೆಚ್ಚು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹದಿನೆಂಟು ಜನರ ವಚನಗಳು, ಬೇರೆ ಬೇರೆ ಗ್ರಂಥಗಳಲ್ಲಿ ಪತ್ರಿಕೆಗಳಲ್ಲಿ ಅಚ್ಚಾಗಿವೆ ಅಥವಾ ಹಸ್ತಪ್ರತಿಯ ರೂಪದಲ್ಲಿವೆ. ಈ ಲೇಖಕರಲ್ಲಿ ಮೂರೇ ಮೂರು ವಚಗಳನ್ನು ಬರೆದ ತೀ.ನಂ.ಶ್ರೀಕಂಠಯ್ಯನವರೂ ಮೂರು ಸಾವಿರದ ಐದುನೂರು ವಚನಗಳನ್ನು ಬರೆದು ಪ್ರಖ್ಯಾತರಾದ ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಚೆನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳೂ (ಜಚನಿ) ಸೇರಿದ್ದಾರೆ; ಶಂಕರಮ್ಮ, ಓಂಕಾರಮ್ಮನವರ ಹಾಗೆ ವಾಚಕರಿಗೆ ಪರಿಚಯವೇ ಇಲ್ಲದವರೂ ನಾಡಿನಲ್ಲಿ ಮನೆಮಾತಾಗಿರುವ ಕುವೆಂಪು, ಬೇಂದ್ರೆಯವರೂ ಇದ್ದಾರೆ; ರಂಗಣ್ಣ, ದಿವಾಕರರಂಥ ಹಿರಿಯರೂ ಚಂದ್ರಶೇಖರ ಐತಾಳ, ಭೈರವಮೂರ್ತಿ ಯಂಥವರೂ ಸಿಂಪಿ ಲಿಂಗಣ್ಣನವರಂಥ ಮಾಸ್ತರರೂ ಸದಾಶಿವ ಶಿವಾಚಾರ್ಯರು, ಗಂಗಾಧರ ಶಿವಾಚಾರ್ಯರಂಥ ಮಠಾಧೀಶರೂ ಜೋಳದರಾಶಿ ದೊಡ್ಡನಗೌಡರಂಥ ಗಮಕಿಗಳೂ ಈ ಪಟ್ಟಿಯಲ್ಲಿ ಬರುತ್ತಾರೆ. ಈ ಎಲ್ಲ ಲೇಖಕರು ಬರೆದಿರುವ ವಚನಗಳ ಸಂಖ್ಯೆ ಒಂದು ಅಂದಾಜಿನಂತೆ ಸುಮಾರು ಹತ್ತು ಸಾವಿರವಾಗುತ್ತದೆ. ಇದೇನು ಸಾಮಾನ್ಯವಾದ ಸಾಧನೆಯಲ್ಲ.

ರಚನೆಯ ವಿನ್ಯಾಸದ ದೃಷ್ಟಿಯಿಂದಲೂ ವಸ್ತುವೈವಿಧ್ಯದ ದೃಷ್ಟಿಯಿಂದಲೂ ಈ ವಚನಗಳು ನಾನಾ ಬಗೆಯಾಗಿವೆ. ಇವುಗಳಲ್ಲಿ ಪ್ರಾಚೀನ ಸಂಪ್ರದಾಯವಿದೆ, ಆಧುನಿಕ ವಿಚಾರಧಾರೆಯಿದೆ, ಆತ್ಮ ಶೋಧನೆಯಿದೆ, ಪ್ರಕೃತಿವರ್ಣನೆಯಿದೆ, ಭಕ್ತಿ ಇದೆ, ರಾಜಕೀಯವಿದೆ, ಭಾವುಕತೆಯಿದೆ, ವೈಚಾರಿಕತೆಯಿದೆ, ಪರದ ಆದರ್ಶವಿದೆ, ಇಹದ ವಾಸ್ತವಿಕತೆಯಿದೆ, ಮರಗಟ್ಟಿಕೊಂಡ ಪ್ರತಿಭೆಯೊಡನೆ ಕುಡಿಯೊಡೆದ ಪ್ರಜ್ಞೆಯಿದೆ. ಇಲ್ಲಿ ಅರಳಿದ ವಚನಗಳಿವೆ, ಕರುಳಿನ ವಚನಗಳಿವೆ; ಅನುಕರಿಸಿದ ವಚನಗಳಿಗೂ ಸೋಗಿನ ವಚನಗಳಿಗೂ ಬರವಿಲ್ಲ. ಈ ಆಧುನಿಕ ವಚನಸಾಹಿತ್ಯ ಮೈದಾಳಿರುವ ರೀತಿ, ಅದರ ಮುಖ್ಯ ಒಲವು ನಿಲುವುಗಳು, ಪ್ರವೃತ್ತಿಗಳು ವಿಸ್ತಾರವಾದ ಪ್ರತ್ಯೇಕ ಅಧ್ಯಯನಕ್ಕೆ ಅರ್ಹವಾಗಿವೆ.

ಆಧುನಿಕ ವಚನಕಾರರಲ್ಲಿ ಮೊದಲು ಗಮನ ಸೆಳೆಯುವ ಹೆಸರು ಎಸ್.ವಿ.ರಂಗಣ್ಣ ನವರದು. ಜಚನಿ ಅವರನ್ನು ಬಿಟ್ಟರೆ ರಂಗಣ್ಣನವರೇ ಅತಿ ಹೆಚ್ಚಿನ ಸಂಖ್ಯೆಯ ವಚನಗಳನ್ನು ಬರೆದಿದ್ದಾರೆ. ರಂಗಬಿನ್ನಪ ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಇವರ ವಚನಗಳು ಆಧುನಿಕ ಸಾಹಿತ್ಯದಲ್ಲಿ ಮೊತ್ತಮೊದಲಿಗೆ ವಚನಗಳನ್ನು ಬರೆಯನ್ನು ಕೀರ್ತಿ ಇವರಿಗೆ ತಂದುಕೊಟ್ಟಿವೆ. 1925ರ ಅಕ್ಟೋಬರ್ ತಿಂಗಳಿನಲ್ಲಿ ಅವರು ತಮ್ಮ ಪ್ರಥಮ ವಚನವನ್ನು ಬರೆದುದಾಗಿ ಹೇಳಿಕೊಂಡಿದ್ದಾರೆ. ಸುಮಾರು ಹತ್ತು ವರ್ಷಗಳ ಅನಂತರ (1934) ಇವರ ಹದಿನೈದು ವಚನಗಳನ್ನು ರಂಗಯ್ಯನ ವಚನಗಳು ಎಂಬ ಶೀರ್ಷಿಕೆಯಲ್ಲಿ ಪ್ರಬುದ್ಧ ಕರ್ಣಾಟಕ ಮೊದಲ ಬಾರಿಗೆ ಪ್ರಕಟಿಸಿತು. ಆಧುನಿಕರಲ್ಲಿ ಇದಕ್ಕಿಂತ ಮೊದಲು ಬೇರೊಬ್ಬರು

ವಚನಗಳನ್ನು ಪ್ರಕಟಿಸಿರುವುದು ಗಮನಕ್ಕೆ ಬಂದಿಲ್ಲ. ಐತಿಹಾಸಿಕವಾಗಿ ಆಧುನಿಕ ವಚನಕಾರರಲ್ಲಿ ರಂಗಣ್ಣನವರು ಮೊದಲಿಗರಾಗಿರುವುದು ಮಾತ್ರವಲ್ಲದೆ ಈ ಸಾಹಿತ್ಯಪ್ರಕಾರಕ್ಕೆ ರಾಷ್ಟ್ರದ ಅತ್ಯುಚ್ಚ ಪ್ರಶಸ್ತಿಯನ್ನು ಗಳಿಸಿ ಸಫಲತೆಯನ್ನು ಪಡೆದಿದ್ದಾರೆ.

ಒಂದು ದೃಷ್ಟಿಯಿಂದ ದ.ರಾ.ಬೇಂದ್ರೆಯವರೇ ರಂಗಣ್ಣನವರಿಗಿಂತ ಮೊದಲು ವಚನಗಳನ್ನು ರಚಿಸಿದವರು ಎನ್ನಬೇಕು. ಇವರ ಪ್ರಖ್ಯಾತವಾದ ಕರುಳಿನ ವಚನಗಳು ಜಯ ಕರ್ನಾಟಕದಲ್ಲಿ 1931ರಲ್ಲಿ ಪ್ರಕಟವಾದರೂ ಅವನ್ನು ಪೂರ್ಣಗೊಳಿಸಿದ್ದು 1942ರಲ್ಲಿಯೇ ಎಂದೂ ಅವರೇ ಹೇಳಿದ್ದಾರೆ. ಆದರೆ ರಂಗಣ್ಣನವರ ವಚನಗಳು ರಚನಾವಿನ್ಯಾಸದಲ್ಲಿ ವಚನಗಳ ಚೌಕಟ್ಟಿನಲ್ಲಿ ಬರುವ ಹಾಗೆ ಬೇಂದ್ರೆಯವರ ವಚನಗಳು ಬರುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಬೇಂದ್ರೆಯವರ ವಚನಗಳು ಹೆಚ್ಚು ಕಡಿಮೆ ಮುಕ್ತಛಂದಸ್ಸು ಸ್ವಚ್ಛಂದ ಗೀತೆಗಳೇ ಸರಿ. ಪ್ರಾಚೀನರ ವಚನಗಳು ಶುದ್ಧ ಪಾರಮಾರ್ಥಿಕ ಸಾಧನೆಯ ಮಾರ್ಗದೊಳಗಿನವು. ಕರುಳಿನ ವಚನಗಳೊ ಲೌಕಿಕ ಭಾವದ ಪ್ರಕಟನೆಗೆ ಬಳಸಿಕೊಂಡಂಥವು ಎಂಬ ಬೇಂದ್ರೆಯವರ ಮಾತುಗಳು ಸಹಜವಾಗಿ ವಸ್ತುವನ್ನುದ್ದೇಶಿಸುತ್ತವೆ. ರೂಪಾಂಶದಲ್ಲಿ ಅವು ಪ್ರಾಚೀನರ ವಚನಗಳಿಗಿಂತಲೂ ವಿಟ್‌ಮನ್, ಠಾಕೂರರ ಕೃತಿಗಳಿಗೆ ಹತ್ತಿರವಾದ ಗದ್ಯಗೀತಗಳು. ಕುವೆಂಪು ಅವರ ಕಿಂಕಿಣಿಗೂ ದಿವಾಕರರ ಅಂತರಾತ್ಮನಿಗೆ ಕೃತಿಗೂ ಈ ಮಾತುಗಳೇ ಅನ್ವಯವಾಗುತ್ತವೆ.

ರಂಗಣ್ಣನವರ ವಚನಗಳಲ್ಲಿ ಪ್ರಾಚೀನ ವಚನಗಳ ಪ್ರತಿಧ್ವನಿಯನ್ನು ಸ್ಪಷ್ಟವಾಗಿ ಕೇಳಬಹುದಾಗಿದೆ. ಇದು ಆ ಸಾಹಿತ್ಯ ಪ್ರಕಾರ ಹೊಸ ಕಾಲದ ಲೇಖಕರ ಮೇಲೆ ಪ್ರಭಾವ ಬೀರಿರುವುದಕ್ಕೆ ಒಂದು ಉದಾಹರಣೆಯೂ ಹೌದು. ಎಂಟುನೂರು ವರ್ಷಗಳಷ್ಟು ಹಿಂದಿನ ಆ ವಚನಗಳು ರೂಪಗೊಂಡ ಅನ್ಯಾದೃಶ ಸೊಗಸಿಗೆ, ಅವುಗಳಲ್ಲಿ ಅಭಿವ್ಯಕ್ತಗೊಂಡ ನಿಚ್ಚಳ ಪ್ರಾಮಾಣಿಕತೆಗೆ, ತುಯ್ತ ತುಡಿತಗಳಿಗೆ ರಂಗಣ್ಣನವರ ಪ್ರತಿಭೆ ಸ್ಪಂದಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಹೊಸ ಕಾಲಕ್ಕೆ ತಕ್ಕಂತೆ ಸಾಹಿತ್ಯವೂ ಹೊಸ ರೂಪವನ್ನು ಪಡೆಯುವುದು ಅನಿವಾರ್ಯವಾದುದರಿಂದ, ಈ ವಚನಗಳಾದರೂ ಪ್ರಾಚೀನದ ಪ್ರತಿರೂಪವಾದರೆ ಹೆಚ್ಚಿನದೇನನ್ನೂ ಸಾಧಿಸುವಂತಿರಲಿಲ್ಲ. ಆಗಲೇ ವಚನಸಾಹಿತ್ಯಸೃಷ್ಟಿಯ ಎರಡನೆಯ ಆವರ್ತದಲ್ಲಿಯೆ ವಚನಗಳ ಬಣ್ಣ ಅಳಿಸಿರುವುದು, ಕಾವು ಕಳೆದಿರುವುದು, ದನಿ ಮಾಸಿರುವುದು ಸಾಹಿತ್ಯಚರಿತ್ರೆಯ ವಿದ್ಯಾರ್ಥಿಗಳಿಗೆ ತಿಳಿದಿದೆ. ಬದಲಾದ ಮೌಲ್ಯಗಳು ಸಾಹಿತ್ಯನಿರ್ಮಾಣದಲ್ಲಿ ಸ್ಪಂದಿಸದೆ ಹೋದರೆ ಎಲ್ಲ ಕಾಲದ ಕಥೆಯೂ ಹೀಗಾಗುತ್ತದೆ. ಹೊಸ ಕಾಲದ ವಚನ ಹೀಗಾಗಬಾರದೆಂಬುದನ್ನು ಆರಂಭಕ್ಕೇ ರಂಗಣ್ಣನವರು ಅರಿತುಕೊಂಡರು. ಅವರಿಗೆ ವಚನಕಾರರ ಸೃಷ್ಟಿಯ ಸೀಮೆಯ ಪರಿಚಯವಿತ್ತು, ಸೀಮಿತಗಳ ತಿಳಿವಳಿಕೆಯಿತ್ತು. ವಚನ ಅದೇ ರೂಪದಲ್ಲಿ ಉಳಿಯುವುದು ಸಾಧ್ಯವಿಲ್ಲ ಎನ್ನುವುದೂ ಅವರಿಗೆ ಖಚಿತವಾಯಿತು. ಆಧುನಿಕ ವಚನ ಯಾವ ರೂಪ ತಾಳಬೇಕೆಂಬುದಕ್ಕೆ ಅವರು ವಿವಿಧ ಪ್ರಯೋಗಗಳನ್ನು ನಡೆಸಿದರು. ಹೊಸ ಕಾಲದ ಲೇಖಕರ ಈ ನಿಟ್ಟಿನ ಎಲ್ಲ ಪ್ರಯತ್ನಗಳಿಗೂ ಅವರು ಆಚಾರ್ಯರಾದರು. ಕೆಲವು ಉದಾಹರಣೆಗಳು ಹೀಗಿವೆ:

ಕರ್ನಾಟಕ ಜನಪದವಿಂದು ಕುರಿಮಂದೆ, ನರಿಬಳಗ, ಹೆಬ್ಬಾವು ಸಂಸಾರ, ಎಮ್ಮೆ ದೊಡ್ಡಿ, ತಟ್ಟು ಕೊಟ್ಟಿಗೆ, ಇರುವೆ ಗೂಡು; ಎಲ್ಲವನ್ನು ಎಲ್ಲರನ್ನು ಎಚ್ಚರಿಸಿ ಇದಿರು ನಿಲ್ಲಿಸಿಕೊಂಡು, ಆಣತಿ ಪಾಲಿಸಯ್ಯ; ಕನ್ನಡವ ಕಾಪಿಡಲು ಸಂಕಲ್ಪ ತಿಳಿಸಯ್ಯ, ಕೌಸಲ್ಯ ಕಲಿಸಯ್ಯ.

ಏಳನೆಯ ಮಾಸದಲ್ಲಿ ಬಸುರಿ ಬಲಬಾಹುವಿಗೆ ಕನ್ನಡ ರಕ್ಷೆ ಕಟ್ಟಬೇಕು. ಶಿಶು ಜನಿಸಿದ ಒಡನೆ ತಿನ್ನಿಸುವ ಬಜೆಬೆಣ್ಣೆಯ ಜೊತೆಗೆ ಕನ್ನಡವ ಬೆರಸುವುದ ಮರೆಯಬಾರದು. ಅನ್ಯಭಾಷೆಯ ಅನ್ಯಾಯ ಕಾಮವೆನ್ನುವ ಸಾಂಕ್ರಾಮಿಕ ಜಾಡ್ಯ ಸೋಂಕದಿರಲು, ಆರು ತಿಂಗಳು ತೀರುವುದರೊಳಗೆ ಕನ್ನಡ ಸಿಡುಬು ಹಾಕಿಸಬೇಕು. ಆಮೇಲೆ ಸಮಸಂವತ್ಸರ ನಡೆಯುವಾಗ ಕತ್ತರಿಸಲಯ್ಯ ಕನ್ನಡಕೆ ಮುಡಿಯ, ಓನಾಮ ಹಬ್ಬಕ್ಕೆ ಸ್ವಾಮಿಯಾಗಿರಲಿ ಕನ್ನಡದಿಂದ ಮಾಡಿದ ಸಿದ್ಧಿವಿಘ್ನೇಶ. ವಿದ್ಯಾಭ್ಯಾಸ ಆಗಬೇಕು ಕನ್ನಡ ಹಲಗೆ ಬಳಪ ಬಾಲಬೋಧೆಗಳ ಬಳಸುತ್ತ ಮುಂಜಿಯಲಿ ಕನ್ನಡ ಜನಿವಾರ ಕನ್ನಡ ಗಾಯತ್ರಿ; ಮದುವೆಯಲ್ಲಿ ಕನ್ನಡ ಬಾಸಿಂಗ, ಕನ್ನಡ ಮಾಂಗಲ್ಯ, ಕನ್ನಡ ಸಂಕಲಿಕೆ ಕನ್ನಡ ಧಾರೆಯಸೀರೆ. ತರುವಾಯ ಮನೆ ಕಟ್ಟಬೇಕು ಕನ್ನಡ ಇಟ್ಟಿಗೆ ದೂಲ ಹೆಂಚುಗಳಿಂದ; ಮೇಲೆ ಏರಿಸಬೇಕು ಕನ್ನಡ ಬಾವುಟವ. ದಿನದಿನವು ಕನ್ನಡದ ಆಹಾರ, ಕನ್ನಡದ ವಿಹಾರ, ಕನ್ನಡದಲ್ಲಿ ಶಯನ; ಎದ್ದೊಡನೆ ಕನ್ನಡದ ಸ್ಮರಣೆ, ಮಧ್ಯಾಹ್ನ ಕನ್ನಡ ಪೂಜೆ. ಈ ನಾಡು ಆ ನಾಡು ನುಡಿಗಳೆಲ್ಲ ನೆಮ್ಮದಿಯ ದಾಸದಾಸಿಯರಾಗಿ ಓಡಾಡಿ ಗೆಯ್ಮೆ ದುಡಿದು ತಂದು ತುಂಬಿಸಲಿ ಕನ್ನಡ ಕುಟುಂಬದುಗ್ರಾಣವನ್ನು, ಕನ್ನಡ ಕುಲವ ಭಾರಿಯದಾಗಿ ಬೆಳೆಸಿ ಏಳಿಸಲಿ.

ಇಂಥ ಬಾಲ ಪದ್ಧತಿಯೆ ಕನ್ನಡಿಗನಿಗೆ ಸವಿ ಸಾರ್ಥಕವಾದ ನರಜನುಮದಾನಂದ ದೀಕ್ಷೆ; ಅಪ್ಪಣೆಯ ಹಾಡಯ್ಯ, ಅನುಕೂಲ ಮಾಡಯ್ಯ, ವಿಧಿಕೂಸ ಹೊಕ್ಕಳಲಿ ಹೆತ್ತವನೆ ರಂಗಯ್ಯ

ಹಾಗೆ ಕನಸಾಯ್ತು:
ನೆನ್ನೆ ಮೊನ್ನೆ ಸರ್ಕಾರದಾಶ್ರಯದಲ್ಲಿ
ಒಂದು ಗುಮಾಸ್ತಿಕೆಗಾಗಿ
ಪರೀಕ್ಷೆ ತೆಗೆದುಕೊಂಡ ವಾಲ್ಮೀಕಿ.
ಆ ವರ್ಷ ಸಾಹಿತ್ಯ ಪ್ರಶ್ನಪತ್ರಿಕೆಯಲ್ಲಿ
ರಾಮಾಯಣವ ಕುರಿತು ಕೆಲವ ಕೇಳಿತ್ತು
ವಾಲ್ಮೀಕಿ ತೇರ್ಗಡೆಯಾಗಲಿಲ್ಲ!
ಏತಕ್ಕೆ ಆಗಲಿಲ್ಲ?
ಗೋವಿಂದರಾಜ ತಿಲಕ ಮಹೇಶ್ವರ ತೀರ್ಥ
ಯಾವೊಂದು ವ್ಯಾಖ್ಯಾನವನು ಅವ ಓದಿಯೇ ಇರಲಿಲ್ಲ
ಎನ್ನಜ್ಞಾನ, ರಂಗ ಸರ್ವಜ್ಞ!

ಇಂದಿನ ವಚನಗಳಿಗೂ ಹಿಂದಣ ವಚನಗಳಿಗೂ ಕೆಲವು ವಿಚಾರಗಳಲ್ಲಿ ಸಾದೃಶ್ಯ ವೈದೃಶ್ಯಗಳಿರುವುದನ್ನು ನಾವು ಗಮನಿಸಬಹುದು: ಹಿಂದಿನ ವಚನಗಳ ತಿರುಳು ಭಕ್ತಿ, ವಿಚಾರ ಮತ್ತು ವಿಮರ್ಶೆ. ಹೊಸ ಕಾಲದ ವಚನಗಳು ವಿಚಾರವಿಮರ್ಶೆಗಳ ಜೊತೆಗೆ ಆರಿಸಿಕೊಂಡದ್ದು ವಚನರಚನೆಯ ವಿಧಾನವನ್ನು. ವಚನಗಳ ಒಂದು ಸಾಮಾನ್ಯ ಲಕ್ಷಣ ಅವುಗಳಲ್ಲಿ ಕಂಡುಬರುವ ಲಯಬದ್ಧತೆ. ಯಾವುದೇ ಬದ್ಧತೆ ಮುಕ್ತತೆಗಳಿಂದ ಬೇರೆಯಾಗಿ

ಎಂ.ಆರ್. ಶ್ರೀನಿವಾಸ ಮೂರ್ತಿ

ವಚನಗಳು ಗದ್ಯಪದ್ಯದ ಒಂದು ನಡುವಣ ಸ್ಥಿತಿಯಲ್ಲಿವೆ. ವಚನಗಳ ಲಯದ ಪ್ರಾಸಾದಿಕತೆ ಅವುಗಳ ಉಗಮವನ್ನು ಹಾಡುಗಳಲ್ಲೊ ತ್ರಿಪದಿಗಳಲ್ಲೊ ಕಾಣುವಂತೆ ಅನೇಕ ವಿದ್ವಾಂಸರನ್ನು ಪ್ರಚೋದಿಸಿದೆ. ಒಂದು ನಿರ್ದಿಷ್ಟವಾದ ಛಂದಸ್ಸಿನ ಚೌಕಟ್ಟಿನಿಂದ ವಚನವನ್ನು ಹೊರ ಗೆಳೆಯಬೇಕಾಗಿಲ್ಲ. ಭಾವಭರಿತ ವಾದ, ಆವೇಶಯುಕ್ತವಾದ ಮಾತು ತನಗೆ ತಾನೇ ಲಯಬದ್ಧವೂ ನಾದ ಮಯವೂ ಆಗುತ್ತದೆ. ಭಾಷೆ ಆರಂಭ ಗೊಂಡಾಗ ಅದು ನಾದಯುಕ್ತ ವಾಗಿತ್ತೆಂದೇ ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಂದಿನ ವೃತ್ತಪತ್ರಿಕೆಗಳ ವರದಿರೂಪದ ಬರೆಹಗಳಲ್ಲಿಯೂ ಭಾಷೆಯ ಅನಿವಾರ್ಯ ಅಂಶವಾದ ಲಯಗುಣವನ್ನು ಗುರುತಿಸಬಹುದು. ಆದುದರಿಂದ ವಚನಗಳಲ್ಲಿ ಭಾಷೆಯ ಈ ಸಹಜ ಲಯ, ಭಾವತೀವ್ರತೆ ಅನುಭವತೀವ್ರತೆಗಳಿಂದಾಗಿ ಮಿಕ್ಕ ಕಡೆಗಳಿಗಿಂತ ಸ್ಪಷ್ಟವಾಗಿ ಮೈದೋರಿದೆಯೆಂಬುದನ್ನು ಗಮನಿಸಿದರೆ ಸಾಕು. ಈ ದೃಷ್ಟಿಯಿಂದ ಇಂದಿನ ವಚನಗಳನ್ನು ಹಳೆಯ ವಚನಗಳೊಂದಿಗೆ ಹೋಲಿಸಿ ಪರಿಶೀಲಿಸಿದಾಗ, ಇಂದಿನ ವಚನಗಳ ಬಂಧದಲ್ಲಿ ಒಂದು ಬಗೆಯ ಶಿಥಿಲತೆ ಕಾಣಿಸುತ್ತದೆ. ಹಳೆಯ ವಚನಗಳಲ್ಲಿ ಹಾಡುಗಬ್ಬಗಳ ಒಲವಿದ್ದರೆ ಇಂದಿನವು ಓದುಗಬ್ಬಗಳಾಗಿವೆ. ಅಂದಿನ ವಚನಗಳಲ್ಲಿ ಅಲ್ಲಲ್ಲಿ ತ್ರಿಪದಿಗಳೇ ಹುದುಗಿ ಕೊಂಡಿದ್ದರೆ, ಇಂದಿನ ವಚನಗಳಲ್ಲಿ ಎಷ್ಟೋ ಕಡೆ ತೆಳುವಾದ ಒರಟು ಗದ್ಯವಿದೆ.

ತಂತ್ರದ ದೃಷ್ಟಿಯಿಂದ ಇನ್ನೊಂದು ಸಾಮಾನ್ಯ ಅಂಶವೆಂದರೆ, ಪ್ರಾಚೀನ ವಚನಗಳು ಬರೆದವರ ಗುಪ್ತ ಅಂಕಿತಗಳನ್ನೊಳಗೊಂಡಿರುವುದು. ಮಧ್ಯಕಾಲದ ಭಕ್ತಿ ಸಾಹಿತ್ಯದ ಒಂದು ಪ್ರಧಾನ ಲಕ್ಷಣ ಇದು. ಹೆಚ್ಚು ಕಡಿಮೆ ಇಂದಿನ ವಚನಕಾರರೆಲ್ಲ ಈ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ. ಕುವೆಂಪು, ಬೇಂದ್ರೆ ಅವರಿಗೆ ವಚನ ಬರೆಹ ಕೇವಲ ಒಂದು ಕಾವ್ಯವಿಧಾನ, ಅಷ್ಟೆ ಅವರಂತೆಯೆ ಸಿಂಪಿ ಲಿಂಗಣ್ಣ, ವಾಮನ ಭಟ್ಟ ಮೊದಲಾದವರಿಗೆ ಅಂಕಿತದ ಅಗತ್ಯ ತೋರಲಿಲ್ಲ. ಆರ್.ಬಾಳ ಮೊದಲಾದ ಇನ್ನೂ ಕೆಲವರಿಗೆ ಇದರಲ್ಲಿ ಯಾವುದೇ ವಿಧದ ಕಟ್ಟುನಿಟ್ಟಿಲ್ಲ. ರಂಗಣ್ಣ, ಜಚನಿ, ಪರಮೇಶ್ವರ ಭಟ್ಟ ಅವರಂಥವರಿಗೆ ಇದು ತಾಂತ್ರಿಕ ಅನಿವಾರ್ಯತೆ. ದಿವಾಕರರ ಒಳನುಡಿಗಳಲ್ಲಿಯೂ ಅಂತರಾತ್ಮನನ್ನು ಕುರಿತು ಸಂಬೋಧನೆಯಿದೆ.

ಮತಾತೀತವಾದ ಭಕ್ತಿಯನ್ನೂ ಲೌಕಿಕ ಜೀವನದ ವಿವಿಧ ನಿಲವುಗಳನ್ನೂ ಅಭಿವ್ಯಕ್ತ ಗೊಳಿಸಿರುವುದು ಆಧುನಿಕ ವಚನಗಳ ಒಂದು ಸಾಧನೆಯಾಗಿದೆ. ಜಚನಿ ಅವರನ್ನುಳಿದು ಇತರ ವೀರಶೈವ ಮಠಾಧೀಶರು ರಚಿಸಿದ ವಚನಗಳು ತೀರ ಸೀಮಿತವಾದ ಧಾರ್ಮಿಕ ಪರಿಸರದಲ್ಲಿ ಸುಂದರವಾಗಿ ಅರಳದೆ ಹೋಗಿವೆ. ಜಚನಿ ಅವರ ಆರಂಭದ ವಚನಗಳನ್ನು

ಅವರ ಈಚಿನ ವಚನಗಳೊಂದಿಗೆ ಹೋಲಿಸಿದಾಗ ವೈವಿಧ್ಯ ಕುಂದಿರುವುದು ಸ್ಪಷ್ಟವಾಗುತ್ತದೆ. ದೊಡ್ಡನಗೌಡರು, ಜೀರಿಗೆಕಟ್ಟೆ ಬಸಪ್ಪನವರು ಮೊದಲಾದವರು ಸಂಪ್ರದಾಯದ ವಚನಗಳಿಂದ ಸಂಪೂರ್ಣವಾಗಿ ಪ್ರಭಾವಿತರಾಗಿದ್ದರೂ ಲೌಕಿಕವನ್ನು ಕಡೆಗಣಿಸುವುದಿಲ್ಲ. ದಿವಾಕರ ಹಾಗೂ ಸಿಂಪಿಯವರ ವಚನಗಳಲ್ಲಿ ಅತೀಂದ್ರಿಯ ಪ್ರಜ್ಞೆಯ ಪುಣ್ಯಸ್ಪರ್ಶದಿಂದ ಪುಳಕಿತಗೊಳ್ಳುವ ಕವಿಚೇತನದ ಕಂಪನವಿದೆ:

ವಿಜ್ಞಾನಿಗಳಿಗೆ ಅಜ್ಞಾನವಾಗಿ ಕಾಡಿತ್ತು ಮಾಯೆ
ಸತ್ಯರಿಗೆ ಅಸತ್ಯವಾಗಿ ಕಾಡಿತ್ತು ಮಾಯೆ
ಸಾಹಿತಿಗಳಿಗೆ ಸಂಪ್ರದಾಯವಾಗಿ ಕಾಡಿತ್ತು ಮಾಯೆ
ವಿರಾಗಿಗೆ ಅನುರಾಗವಾಗಿ ಕಾಡಿತ್ತು ಮಾಯೆ
ಹಿರಿಯರಿಗೆ ಕಿರುಕುಳವಾಗಿ ಕಾಡಿತ್ತು ಮಾಯೆ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ
ಮಾಯಾ ಮೋಹಕೆ ಮರುಳಾಗದವರ ಕಾಣೆನಯ್ಯ
ಹೊಟ್ಟೆಯ ಪಾಡಿಂಗೆ ಪಟ್ಟಕ್ಕೇರುವವರಿಗೆ
ನುಡಿಸೇವೆಯ ಮಾತೇಕೆ, ನಾಡಸೇವೆಯ ದಂದುಗವೇಕೆ?
ವಂದನೆಗೆ ಆಶಿಸುವರು; ಪರನಿಂದೆಗೆ ಆನಂದಿಸುವರು
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರನ
ಸುಖಸಾರಾಯವು ಅವರಿಗೆ ರುಚಿಸದು
ಸೀಮೆ ರಾಜನಿಗಲ್ಲದೆ ರಸಜ್ಞನಿಗುಂಟೆ?
ಸೀಮೆ ವಾರಿಧಿಗಲ್ಲದೆ ವಾಙ್ಮಯಕ್ಕುಂಟೆ?
ಸೀಮೆ ರಸಾನ್ನಕ್ಕುಂಟಲ್ಲದೆ ರಸೋಕ್ತಿಗುಂಟೆ?
ಶ್ರೀನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ
ಸೀಮಾತೀತ ಸಾಹಿತಿ; ಸೀಮಾತೀತ ಸಾಹಿತ್ಯ

ಬೇಂದ್ರೆಯವರ ಕರುಳಿನ ವಚನಗಳಲ್ಲಿ ವಾತ್ಸಲ್ಯಭಾವ ಮಡುಗಟ್ಟಿದ್ದರೆ, ಕುವೆಂಪು ಅವರು ಕಿಂಕಿಣಿಯ ನಾದದಲ್ಲಿ ಆತ್ಮಶೋಧನೆಗೆ ತೊಡಗುತ್ತಾರೆ. ರಂಗಣ್ಣನವರ ವಿಮರ್ಶನ ಪ್ರಜ್ಞೆ ವಿಶ್ವವ್ಯಾಪಕವಾದುದು: ಪರಮೇಶ್ವರ ಭಟ್ಟರು ಸಮಕಾಲೀನ ಜೀವನದ ಸಣ್ಣಪುಟ್ಟ ಸಂಗತಿಗಳಿಗೆ ವಿಲಕ್ಷಣವಾದ ತಿರುವು ಕೊಡುತ್ತಾರೆ. ಚಂದ್ರಶೇಖರ ಐತಾಳರ ವಚನಗಳ ಕೇಂದ್ರಬಿಂದು ತಾಯಿ, ತಾಯಿತನ. ಮೊತ್ತದಲ್ಲಿ ಇಂದಿನ ವಚನ ಸೆಕ್ಯುಲರ್ ಆಗಿದೆ. ಅಂದಮಾತ್ರಕ್ಕೆ ಅದು ಆರ್ತತೆಯನ್ನು, ಆತ್ಮನಿರೀಕ್ಷಣೆಯನ್ನು, ಆನಂದಾನುಭವವನ್ನು ಕಡೆಗಣಿಸಿದೆ ಎಂದು ಅರ್ಥವಲ್ಲ. ಹಿಂದಿನ ವಚನಗಳಲ್ಲಿ ಒಂದೇ ಸಮನೆ ಕೇಳಿಸುತ್ತಿದ್ದುದು, ಪರಮಾತ್ಮನನ್ನು ಅರಸುತ್ತಿದ್ದ ಆತ್ಮದ ಕರೆ, ಈ ಹಾದಿಯಲ್ಲಿ ಕಲ್ಲು ಮುಳ್ಳು ಕಸ ಇರಬಾರದೆಂದು ಪದೇ ಪದೇ ಒತ್ತಿಹೇಳುವ ಶುಚಿಜೀವನದ ಸಂದೇಶ. ಇಂದಿನ ವಚನಗಳಿಗಾದರೊ ಬೇಲಿಯಿಲ್ಲ. ಜೀವನದ ವಿಸ್ತಾರವನ್ನೆಲ್ಲ ಅವು ಆವರಿಸುತ್ತವೆ. ಸಂಕೀರ್ಣ ಬದುಕಿನ ಎಲ್ಲ ಪದರಗಳನ್ನೂ ವರ್ಣಿಸಲು ಅವು ಸಮರ್ಥವಾಗಿವೆ. ಅಂದರೆ 12ನೆಯ ಶತಮಾನದಲ್ಲಿ ವಚನ ಸಾಧಿಸಿದುದನ್ನೆಲ್ಲ ಇಂದು ಸಾಧಿಸಲಾಗದು. ಅದನ್ನು ನಿರೀಕ್ಷಿಸುವುದೂ ಸಾಧ್ಯವಿಲ್ಲ; ಸಾಧುವೂ ಅಲ್ಲ. ಅಂದಿನವರೆದುರಿಗಿದ್ದುದು ಒಂದೇ ಧ್ಯೇಯ: ಕಾವ್ಯ ಶುದ್ಧ ಜೀವನ ಸಂಹಿತೆ. ಇಂದಿನ ಲೇಖಕನೋ ಸಂಕೀರ್ಣತೆಯ ಶಿಶು. ಭಾಷೆಯಾದರೋ ಅಂದಿನವರು ನಡೆದುದೆ ದಾರಿ: ಇಂದು ಮಾರ್ಗನಿರ್ಮಾಣ ಸುಲಭವಲ್ಲ.

ಪರಮೇಶ್ವರಭಟ್ಟರು ವಚನಗಳನ್ನು ಬರೆದವರಲ್ಲಿ ಅತ್ಯಂತ ಮುಖ್ಯರು. ಜಚನಿ ಹಾಗೂ ರಂಗಣ್ಣನವರನ್ನುಳಿದರೆ ಭಟ್ಟರೇ ಹೆಚ್ಚು ಸಂಖ್ಯೆಯ ವಚನಗಳನ್ನು ಬರೆದಿರುವವರು. ಅವರ ಉಪ್ಪು ಕಡಲು ಸಂಗ್ರಹದಲ್ಲಿ 705 ವಚನಗಳಿವೆ. ಇದು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳಲ್ಲೊಂದು. ಭಟ್ಟರ ಪರಿಣತ ಕೃತಿಯೂ ಹೌದು. ಯಶಸ್ಸಿನ ದೃಷ್ಟಿಯಿಂದಲಂತೂ ಅವರ ರಚನೆಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾದವು. ಇವನ್ನು ಹೋಲಿಸಬಹುದಾದರೆ ಕೇವಲ ರಂಗಣ್ಣನವರ ವಚನಗಳೊಂದಿಗೆ ಮಾತ್ರ. ಹಾಗೆ ಮಾಡಿದರೂ ರಂಗಣ್ಣನವರ ವಚನಗಳಲ್ಲಿ ಅಷ್ಟಾಗಿ ಕಾಣಿಸದ ಕೆಲವು ಗುಣಗಳೂ ಭಟ್ಟರ ವಚನಗಳಲ್ಲಿ ಕಾಣಿಸುತ್ತವೆ.

ರಂಗಣ್ಣನವರು ಪ್ರಧಾನವಾಗಿ ಪಂಡಿತರು, ವಿಮರ್ಶಕರು. ಅವರ ವಚನಗಳಾದರೂ ಪಾಂಡಿತ್ಯವಿಮರ್ಶೆಯಿಂದಲೇ ತುಂಬಿವೆ ಎನ್ನಬಹುದು. ರಂಗಣ್ಣನವರ ಜೀವನಾನುಭವ ದೊಡನೆ ಅವರ ವ್ಯಾಪಕವಾದ ಅಧ್ಯಯನ ಸ್ಪರ್ಧಿಸುತ್ತಿರುವಂತೆ ಕಾಣುತ್ತದೆ. ಭಟ್ಟರು ಕೇವಲ ವಿಮರ್ಶಕರಲ್ಲ, ಕವಿಗಳೂ ಹೌದು. ಅವರ ವಚನಗಳಲ್ಲಿ ಯಥೇಚ್ಛವಾಗಿ ಕಾವ್ಯ ಹೊಳಹು ಹಾಕಿದೆ. ತಾಂತ್ರಿಕವಾಗಿ ಇಬ್ಬರೂ ಪ್ರಾಚೀನ ವಚನಗಳಿಗೆ ಸರಿಸಮನಾದ ರಚನೆಗಳನ್ನು ಮಾಡಿದ್ದಾರೆ. ಆದರೆ ಭಟ್ಟರ ವಚನಗಳಲ್ಲಿ ವಚನರೂಪ ಖಚಿತಗೊಂಡಿರುವ ಹಾಗೆ ರಂಗಣ್ಣನವರ ವಚನಗಳಲ್ಲಿ ಕಾಣಿಸುವುದಿಲ್ಲ. ಸದಾಶಿವ ಗುರುವಿಗೆ ಭಟ್ಟರು ಮೊರೆ ಹೋಗುವುದರಲ್ಲಿ ಅಭಿವ್ಯಕ್ತವಾಗುವ ಆರ್ತತೆ ಉತ್ಕಟತೆಗಳು ರಂಗಣ್ಣನವರು ಮಾವಿನಕೆರೆಯ ಅಧಿದೈವಕ್ಕೆ ಪ್ರಾರ್ಥನೆ ಸಲ್ಲಿಸುವಾಗ ತೋರುವುದಿಲ್ಲ. ರಂಗಬಿನ್ನಪದ ವೈಚಾರಿಕತೆ ಭಾಷಣಾತ್ಮಕವಾದುದ್ದು; ಉಪ್ಪುಕಡಲಿನ ವೈಚಾರಿಕತೆ ನಿವೇದನಾತ್ಮಕವಾದದ್ದು, ಮೊದಲನೆಯದರಲ್ಲಿ ನಿರೂಪಣೆ; ಎರಡನೆಯದರಲ್ಲಿ ತೋಡಿಕೆ. ರಂಗಯ್ಯ ಆತ್ಮವನ್ನು ಮರೆಯದಿದ್ದರೂ ಲೋಕಕ್ಕೆ ಸನಿಹದವನು; ಸದಾಶಿವಗುರು ಲೋಕವನ್ನು ಕಡೆಗಾಣದಿದ್ದರೂ ಆತ್ಮಕ್ಕೆ ಹತ್ತಿರದವನು.

ಈ ವಚನಗಳಲ್ಲಿ ಕಡಲಿನ ಆಳ ವೈಶಾಲ್ಯ ವೈವಿಧ್ಯಗಳನ್ನು ವರ್ಣಿಸುವ ನೆಪದಲ್ಲಿ ಕವಿ ಮನುಷ್ಯನ ಅಲ್ಪತೆಗಳನ್ನೆಲ್ಲ ಎತ್ತಿ ಆಡಿದ್ದಾನೆ. ಈ ವಚನಗಳು ಕಡಲಿನ ಒಂದು ವರ್ಣಮಯ ಆಲ್ಬಂ. ಇಲ್ಲಿಯ ಕಡಲಿನ ಮೊರೆತ ಮಾನವಹೃದಯದ ತುಯಿತ; ಇದು ಅಪ್ಪಳಿಸುವುದಿಲ್ಲ, ಸ್ಪರ್ಶಿಸುತ್ತದೆ; ಭೋರ್ಗರೆಯುವುದಿಲ್ಲ ಪಿಸುಗುಡುತ್ತದೆ. ಕಡಲ ಕಥನಕ್ಕೆ ಮೀಸಲಾದ ಈ ವಚನಗಳ ಜೀವನದ ವಿಮರ್ಶೆಯಿದೆ; ಅನುಭವದ ತುಡಿತವಿದೆ; ಆತ್ಮವಿಮರ್ಶೆಯ ಕೆಚ್ಚಿದೆ. ಬದುಕಿನ ನಾನಾಮುಖಗಳಲ್ಲಿ ಕಂಡು ಉಂಡ ಅನುಭವ ಈ ವಚನಗಳಲ್ಲಿ ತೊಟ್ಟಿಕ್ಕುತ್ತದೆ. ಇವುಗಳ ವಸ್ತು ನಿತ್ಯಜೀವನ. ಇವುಗಳ ನಿರ್ವಹಣೆಯಲ್ಲಿ ಪ್ರತಿಭೆಯಿದೆ, ಪಾಂಡಿತ್ಯವಿದೆ, ವ್ಯುತ್ಪತ್ತಿಯಿದೆ. ಇಲ್ಲಿಯ ಎಷ್ಟೋ ಸಂಗತಿಗಳು ಪರಮೇಶ್ವರ ಭಟ್ಟರ ಮಿಕ್ಕ ಕೃತಿಗಳನ್ನು ಬಲ್ಲವರಿಗೆ ಹೊಸವಲ್ಲ. ಅವರ ಅನೇಕ ವಿಚಾರಗಳು ಇಲ್ಲಿ ರೂಪಾಂತರಗೊಂಡಿರುವುದನ್ನು ಗಮನಿಸಬಹುದು. ಪ್ರತಿಮೆ ಉಪಮೆ ಹೋಲಿಕೆ ಮೊದಲಾದ ಈ ವಚನಗಳ ಪರಿಕರಗಳು ಬಹುವಾಗಿ ಸಮಕಾಲೀನ ಜೀವನದಿಂದ ಎತ್ತಿಕೊಂಡವು. ಸ್ಕೂಟರ್ ಮೇಲೆ ಹೋಗುತ್ತಿರುವ ಗಂಡಹೆಂಡಿರು ಆಧುನಿಕ ದಾಂಪತ್ಯಕ್ಕೆ ಅದ್ಭುತ ಸಂಕೇತವಾಗಬಲ್ಲರು:

ಸ್ಕೂಟರು ನಡೆಸುವ ಗಂಡನ ಮುಖ ಪಯಣದ ದಿಕ್ಕಿಗೆ
ಮನೆಯ ಕಡೆಗೆ!
ಹಿಂದೆ ಕುಳಿತ ಹೆಂಡತಿಯ ಮುಖ ಬೀದಿಯ ದಿಕ್ಕಿಗೆ
ಅಂಗಡಿಯ ಕಡೆಗೆ!
ಹೀಗೆ ಪತಿಯ ಮುಖ ಅತ್ತ ಸತಿಯ ಮುಖ ಇತ್ತ!
ಆದರೇನು ಒಮ್ಮುಖವಾದರೆ ಚಿತ್ತಸುಖವದುವೆ ಸದಾಶಿವಗುರು

ಇಲ್ಲಿನ ಮಾತುಗಳು ಒಡೆಯುವುದಕ್ಕೂ ಸಂಕೇತ, ಕೂಡುವುದಕ್ಕೂ ಸಂಕೇತ. ಎರಡೇ ಸಾಲುಗಳಲ್ಲಿ ಭಾರತ ದೇಶದ ಸ್ವಾತಂತ್ರ್ಯೋತ್ತರ ಪರಿಸ್ಥಿತಿಯನ್ನು ವರ್ಣಿಸಿರುವ ರೀತಿ:

ನಮ್ಮ ದೇಶಕ್ಕೆ ಸ್ವಾತಂತ್ರ್ಯದ ಜತೆಗೆ ಸ್ವೈರ ಬಂತು
ಮಗುವಿಗೆ ಮಾತಿನ ಜತೆಗೆ ಉಗ್ಗು ಬಂದಂತೆ ಸದಾಶಿವಗುರು ಬದುಕಿನ

ಹೊಣೆಗಾರಿಕೆಯನ್ನು ಆತ್ಮವಿಶ್ವಾಸವನ್ನು ಹೇಳುವ ಹೊಸ ವಿಧಾನ:

ಬ್ರೇಕಿಲ್ಲದ ಬೆಲ್ಲಿಲ್ಲದ ಲೈಟಿಲ್ಲದ ಲೈಸೆನ್ಸಿಲ್ಲದ ಸೈಕಲ್ಲನು ಮೆಟ್ಟಿಂದೆ
ಟಾರಿಲ್ಲದ ಕಲ್ಲಿಲ್ಲದ ಈ ಹೊಳ್ಳದೆ ಈ ಕೊಳ್ಳದೆ ನಡೆಯೆಂದೆ
ಆದರೂ ನಾನೆದೆಗೆಡದೆಯೆ ಎಡೆಬಿಡದೆಯೆ ಪೆಡಲೊತ್ತುವೆ
ಮುಂದಾಗುವೆ ಗುರಿಮುಟ್ಟುವೆ ಸದಾಶಿವಗುರು

ಒಂದು ಪಂಕ್ತಿಯಿಂದ ಹಿಡಿದು ಮುಕ್ಕಾಲು ಪುಟದವರೆಗೆ ಸಾಮಾನ್ಯವಾಗಿ ಇವರ ವಚನಗಳ ವ್ಯಾಪ್ತಿ. ಅವುಗಳ ರಚನಾವಿನ್ಯಾಸ ಎಲ್ಲ ವಿವರಗಳಲ್ಲಿಯೂ ಸಂಪೂರ್ಣವಾಗಿ ಪ್ರಾಚೀನದ ಶ್ರೇಷ್ಠ ವಚನಗಳನ್ನು ನೆನಪಿಗೆ ತರುತ್ತವೆ. ರೂಪಾಂಶದ ದೃಷ್ಟಿಯಿಂದ ಎಷ್ಟೋ ಸಂದರ್ಭಗಳಲ್ಲಿ ಈ ವಚನಗಳನ್ನು ಹಳೆಯ ವಚನಗಳಿಂದ ಬೇರ್ಪಡಿಸುವುದು ಕೂಡ ಸಾಧ್ಯವಾಗುವುದಿಲ್ಲ. ಭಟ್ಟರ ಪ್ರಾಸಪ್ರಯೋಗಗಳು ವಿಚಿತ್ರ ರೀತಿಯಲ್ಲಿ ಪರಿಣಾಮವನ್ನುಂಟುಮಾಡುತ್ತವೆ. ಪರಿಚಿತ ಪ್ರಸಂಗಗಳಿಗೆ, ಮಾತುಗಳಿಗೆ ಭಟ್ಟರು ತರುವ ಅನಿರೀಕ್ಷಿತ ತಿರುವಿನಿಂದಲೆ ಒಂದು ಸ್ವಾರಸ್ಯ ಉಂಟಾಗುತ್ತದೆ. ಹಳೆಯ ಗಾದೆಯ ಮಾತುಗಳಿಗೆ ಅವರು ವಿಲಕ್ಷಣ ಪ್ರತಿಕ್ರಿಯೆಯನ್ನೊದಗಿಸುತ್ತಾರೆ. ಪದಗಳಲ್ಲಿ ತೀರ ಹೊಸ ಅರ್ಥವನ್ನು ಅವರು ಒಮ್ಮೊಮ್ಮೆ ಹೊಮ್ಮಿಸಬಲ್ಲರು. ಆತ್ಮವಿಮರ್ಶೆ ಈ ವಚನಗಳಲ್ಲಿ ತಾನೇ ತಾನಾಗಿ ತುಂಬಿಕೊಂಡಿದೆ. ಒಟ್ಟಿನಲ್ಲಿ ಆಧುನಿಕ ವಚನಸಾಹಿತ್ಯದ ಬೆಳಸು ಆಶಾದಾಯಕವಾಗಿದೆ ಎನ್ನಬಹುದು. ಇಂದು ವಚನ ಸಾಹಿತ್ಯ ಸಾಕಷ್ಟು ಹೊಸ ವಿಚಾರಗಳನ್ನು ತೆಗೆದುಕೊಂಡು ಬೆಳೆಯುತ್ತಿದೆ. ಮಾತೆ ಮಹಾದೇವಿಯವರಿಂದ ಹಿಡಿದು ಹಲವು ಹತ್ತು ಕವಿಗಳು ಕವಯಿತ್ರಿಯರು ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಿದ್ದಾರೆ.

*

**ಕನ್ನಡದಲ್ಲಿ ವಿಚಾರಸಾಹಿತ್ಯ :** ವಿಚಾರ ಸಾಹಿತ್ಯವೆಂದು ಕರೆಯ ಬಹುದಾದ ಚರ್ಚೆ, ಶಾಸ್ತ್ರ, ಮೀಮಾಂಸೆಯ ಒಂದು ಸಾಹಿತ್ಯ ಪ್ರಕಾರ ಕನ್ನಡದಲ್ಲಿ ಬಹಳ ಹಿಂದಿನಿಂದಲೂ ಸಮೃದ್ಧವಾಗಿ ಬೆಳೆದುಬಂದಿದೆ. ಆದರೆ ಶುದ್ಧ ವೈಚಾರಿಕ ಕೃತಿಗಳು ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿದ್ದು ಮಾತ್ರ 20ನೆಯ ಶತಮಾನದಲ್ಲಿ. ಶಾಸನಗಳಲ್ಲೂ ವೈಚಾರಿಕ ಅಂಶಗಳು ಕಂಡುಬರುತ್ತವೆಯಾದರೂ ಅವು ಸಾಹಿತ್ಯ ಪ್ರಕಾರಕ್ಕೆ ಹೆಚ್ಚಾಗಿ ಸೇರುವುದಿಲ್ಲ. 10–11ನೆಯ ಶತಮಾನದವರೆಗೆ ಜೈನಸಾಹಿತ್ಯ ತನ್ನ ದಾರ್ಶನಿಕ ರಂಗದಲ್ಲಿಯೂ

ವಿಕಾಸಗೊಂಡಿತ್ತು. ಅಂದಿನ ಸಾಹಿತ್ಯದಲ್ಲಿ ಜ್ಞಾನ ಮತ್ತು ಭಾವ (ರಸ) ಎಂಬ ಎರಡು ಪ್ರಕಾರಗಳನ್ನು ಕಲ್ಪಿಸಿದರೆ ಜ್ಞಾನಸಾಹಿತ್ಯದ ಅಂಗವಾಗಿ ವ್ಯಾಕರಣ, ಛಂದಸ್ಸು, ಕಾವ್ಯರೀತಿ ಲಕ್ಷಣಾದಿಗಳಷ್ಟಕ್ಕೆ ಮಾತ್ರ ಕನ್ನಡ ವಿಚಾರ ಸಾಹಿತ್ಯ ಸೀಮಿತವಾಗಿತ್ತು. ಇದಕ್ಕೆ ಕವಿರಾಜಮಾರ್ಗ ಸಾಕ್ಷಿ. ಅನಂತರ ಬಂದ ಕೇಶಿರಾಜನ ಶಬ್ದಮಣಿದರ್ಪಣ, ಭಟ್ಟಾಕಳಂಕನ ಶಬ್ದಾನುಶಾಸನ ಅಲ್ಲದೆ ಆಯುರ್ವೇದ, ಜ್ಯೋತಿಷ ಮುಂತಾದವುಗಳನ್ನು ಕುರಿತ ಗ್ರಂಥಗಳು ಆ ಯುಗದ ವೈಚಾರಿಕ ವಾಙ್ಮಯದ ಉದಾಹರಣೆಗಳು (ನೋಡಿ–ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯ). ಅನಂತರ 12ನೆಯ ಶತಮಾನದಲ್ಲಿ ವೀರಶೈವ ಸಾಹಿತ್ಯಧಾರೆ ಹರಿಯತೊಡಗಿತ್ತು. ಅಂದಿನ ವಿಚಾರಸರಣಿ ಅನಿವಾರ್ಯವಾಗಿ ಮತೀಯ ಸಂಪ್ರದಾಯದ ಹಿನ್ನೆಲೆಯಲ್ಲಿ ಮುಂದುವರಿದರೂ ಸ್ವತಂತ್ರ ವಿಚಾರಗಳು, ಆಲೋಚನೆಗಳ ಮಥನಕ್ರಿಯೆ ನಡೆಯಿತು. ವಚನಸಾಹಿತ್ಯ ಭಕ್ತಿ ಜ್ಞಾನ ವೈರಾಗ್ಯ ಶರಣಾರ್ಥಿ ಅನುಭಾವ ನೀತಿ ಧರ್ಮಗಳ ಪ್ರಚಾರ ಪುರಸ್ಕಾರಗಳ ಧ್ವನಿಯಾಯಿತು.

ಅಂದಿನಿಂದ ಇಂದಿನವರೆಗೆ ಬಹುಮುಖವಾಗಿ ಹರಿದುಬಂದ ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಒಟ್ಟಾರೆ ವಿಚಾರ ಸಾಹಿತ್ಯದ ಮೊತ್ತ ಕಡಿಮೆಯೇ. ವಿಚಾರ ಸಾಹಿತ್ಯದ ಪ್ರಧಾನ ಕ್ಷೇತ್ರಗಳೆಂದರೆ ಶಾಲಾಕಾಲೇಜುಗಳ ಪಠ್ಯಪುಸ್ತಕಗಳ ಹಾಗೂ ಪ್ರಾಧ್ಯಾಪಕರ ಲೇಖನಪ್ರಪಂಚ ಮತ್ತು ವಿಶ್ವವಿದ್ಯಾಲಯಗಳ ಪ್ರಚಾರೋಪನ್ಯಾಸಗಳ ವ್ಯಾಸಂಗ ವಿಸ್ತರಣೆಯ ಫಲವಾದ ಜನಪ್ರಿಯ ಶಾಸ್ತ್ರೀಯ ಗ್ರಂಥ ನಿರ್ಮಿತಿ. ಕರ್ನಾಟಕದ ಬಹುಪಾಲು ವಿಶ್ವವಿದ್ಯಾಲಯಗಳು ವಿಚಾರ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿವೆ. ಇಲ್ಲಿ ಮೌಲಿಕ ಸಂಶೋಧನೆ ಇದ್ದರೂ ಅದರ ಪರಿಮಾಣ ಕಡಿಮೆ. ಸಂಗ್ರಹ ಸಂಪಾದನೆಗಳೇ ಹೆಚ್ಚು. ಒಂದು ಮಾತು ನಿಜ, ಮೂಲಭೂತವಾದ ಶಾಸ್ತ್ರವಿಷಯಗಳನ್ನು ಶುದ್ಧ ಕನ್ನಡದ ಮೂಲಕ ಜನಸಾಮಾನ್ಯರಿಗೂ ಒದಗಿಸಿದ ಕೀರ್ತಿ ಈ ಪ್ರಕಟನೆಗಳಿಗೆ ಸಲ್ಲುತ್ತದೆ. ಇದರಿಂದ ಜನತೆಯಲ್ಲಿ ವೈಚಾರಿಕ ಮನೋಧರ್ಮ ಅಂಕುರಿಸಿ ಬೆಳೆಯಲು ಆಸ್ಪದವಾಯಿತು ಎನ್ನಬಹುದು.

ಆಧುನಿಕ ಯುಗದ ಆರಂಭದ ದಶಕಗಳಲ್ಲಿ ವಚನಶಾಸ್ತ್ರದ ಮೇಲೆ ಬೆಳಕು ಚೆಲ್ಲಿದವರು ಫ.ಗು.ಹಳಕಟ್ಟಿ. ಉತ್ತಂಗಿ ಚನ್ನಪ್ಪನವರು ಸರ್ವಜ್ಞನನ್ನು ಬೆಳಕಿನಲ್ಲಿ ತಂದಿರಿಸಿದರೆ ಆರ್ಯದ್ರಾವಿಡ ಕಂದಮಿಳು ಜನಾಂಗದ ಮೂಲ ಮತ್ತು ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆಯನ್ನು ಕುರಿತು ಅಗಾಧ ಪರಿಶ್ರಮದಿಂದ ಸಂಶೋಧನೆ ಸಾಗಿಸಿದ ವರು ಶಂ.ಬಾ.ಜೋಶಿ. ಶೂನ್ಯಸಂಪಾದನೆಯನ್ನು ಕುರಿತು ಗ್ರಂಥ ರಚಿಸಿರುವ ಎಚ್.ತಿಪ್ಪೇರುದ್ರ ಸ್ವಾಮಿ, ಛಂದೋವಿಕಾಸವನ್ನು ಬರೆದ ಡಿ.ಎಸ್.ಕರ್ಕಿ ಇಂಥ ಮಹನೀಯ ರನ್ನು ಇಲ್ಲಿ ಸ್ಮರಿಸಬೇಕು. ಹಾಗೆಯೇ ಒಂದು ತಲೆಮಾರಿನ ಇತಿಹಾಸ ಪ್ರಜ್ಞೆಯನ್ನು, ಸ್ವಾಭಿಮಾನವನ್ನು ಬಡಿದೆಬ್ಬಿಸಿದ ಕರ್ನಾಟಕ ಗತವೈಭವದ ಲೇಖಕರಾದ ಆಲೂರ ವೆಂಕಟ ರಾಯರು ಕನ್ನಡದ ಕುಲಪುರೋಹಿತ ರೆಂದು ಹೆಸರಾದವರು. ಪ್ರಾಚೀನ ಕವಿಗಳ ಕಾಲನಿರ್ಣಯದಲ್ಲಿ ಕವಿ ಗೋವಿಂದ ಪೈಗಳು ಧನ್ಯಸೇವೆ ಸಲ್ಲಿಸಿದ್ದಾರೆ. ಇತಿಹಾಸ ಸಂಶೋಧನೆಯಲ್ಲಿ ಪಾಂಡುರಂಗರಾವ್ ದೇಸಾಯಿ, ತಿರುಮಲೆ ತಾತಾಚಾರ್ಯ ಶರ್ಮ ಮೊದಲಾದವರು ಗಣ್ಯ ಕೆಲಸ ಮಾಡಿದ್ದಾರೆ.

ಚೆನ್ನಪ್ಪ ಉತ್ತಂಗಿ

ಭಾವ(ರಸ)ಸಾಹಿತ್ಯವಿಮರ್ಶನಕ್ಷೇತ್ರದಲ್ಲಿ ತೀ.ನಂ.ಶ್ರೀಕಂಠಯ್ಯನವರ ಭಾರತೀಯ ಕಾವ್ಯಮೀಮಾಂಸೆ, ದ.ರಾ.ಬೇಂದ್ರೆಯವರ ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯದ ವಿರಾಟ್ ಸ್ವರೂಪ, ಗೋಪಾಲಕೃಷ್ಣ ಅಡಿಗರ ಮಣ್ಣಿನ ವಾಸನೆ, ಬಿ.ಎಚ್.ಶ್ರೀಧರರ ಕಾವ್ಯಸೂತ್ರ (ಅನಂತರ ಜ್ಞಾನಸೂತ್ರ), ರಂ.ಶ್ರೀ.ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ, ಶಿವರುದ್ರಪ್ಪನವರ ವಿಮರ್ಶೆಯ ಪೂರ್ವ ಪಶ್ಚಿಮ ಹಾಗೂ ಸೌಂದರ್ಯಸಮೀಕ್ಷೆ, ಕೀರ್ತಿನಾಥ ಕುರ್ತಕೋಟಿಯವರ ಕನ್ನಡ ಸಾಹಿತ್ಯ ಪ್ರಕಾರಗಳನ್ನು ವಿಮರ್ಶಿಸುವ ಇತಿಹಾಸ ಲೇಖನಗಳು – ಇವೇ ಕೆಲವು ಈ ಕ್ಷೇತ್ರದಲ್ಲಿಯ ವೈಚಾರಿಕ ಪ್ರಗತಿಯ ಮೈಲುಗಲ್ಲುಗಳು. ಶಿವರಾಮ ಕಾರಂತರ ವಿಚಾರ ಸಾಹಿತ್ಯ ನಿರ್ಮಾಣವೆಂಬ ಪುಸ್ತಕ ಮಹತ್ತ್ವಪೂರ್ಣವಾಗಿದೆ. ಅಷ್ಟೇ ಮಹತ್ತ್ವಪೂರ್ಣವಾದ ಇನ್ನೊಂದು ಕೃತಿ ಬಿಡಿ ಬರೆಹಗಳು. ಅದೇ ರೀತಿ ವಿ.ಸೀತಾರಾಮಯ್ಯನವರ ಸಾಹಿತ್ಯ ಸಂಪ್ರದಾಯ ಮತ್ತು ಹೊಸ ಮಾರ್ಗ, ಸತ್ಯ ಮತ್ತು ಮೌಲ್ಯ, ಮುಗಳಿಯವರ ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ಪ್ರಾಚೀನ ಸಾಹಿತ್ಯದ ಕೆಲವು ಪ್ರಕಾರಗಳು ಮೊದಲಾದುವು ವೈಶಿಷ್ಟ್ಯಪೂರ್ಣವಾಗಿವೆ.

ಡಿ.ವಿ.ಜಿ. ಅವರ ಜೀವನ ಸೌಂದರ್ಯ ಮತ್ತು ಸಾಹಿತ್ಯ ಕನ್ನಡದ ವೈಚಾರಿಕ ಪ್ರಜ್ಞೆಗೆ ಒಂದು ನಿದರ್ಶನವಾಗಿದೆ. ಎಸ್.ವಿ.ರಂಗಣ್ಣನವರ ರುಚಿ, ಶ್ರೀರಂಗರ ನಗೆ, ಸುಂಕಾಪುರ ಅವರ ಹೆಬ್ಬೊಟ್ಟೆಗೆ ಕನ್ನಡ ಸಾಹಿತ್ಯದಲ್ಲಿ ಹಾಸ್ಯ, ಅ.ನ.ಕೃ. ಅವರ ಸಾಹಿತ್ಯ ಮತ್ತು ಕಾಮ ಪ್ರಚೋದನೆ, ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ವಿ.ಸೀ.ಅವರ ಹಣಪ್ರಪಂಚ, ಶ್ರೀರಂಗರ ಶಾರದೆಯ ಸಂಸಾರ, ರಂಗನಾಥ ದಿವಾಕರರ ಗಾಂಧೀವಾದ, ಗೌರೀಶ ಕಾಯ್ಕಿಣಿ ಅವರ ಮಾರ್ಕ್ಸ್‌ವಾದ, ವಿಚಾರವಾದ, ಎಸ್.ಎಲ್. ಭೈರಪ್ಪನವರ ಸತ್ಯ ಮತ್ತು ಸೌಂದರ್ಯ, ಹಾಲಪ್ಪನವರ ರಾಜಕಾರಣ ಮೂಲಸೂತ್ರಗಳು, ಎನ್.ಆರ್. ರಾವ್‌ರವರ ರಾಜಕೀಯ ಜಿಜ್ಞಾಸೆ, ಅಡಿಗರ ಲೋಹಿಯಾ ಇತಿಹಾಸ ಚಕ್ರ (ಅನುವಾದ), ವಿಚಾರಪಥ, ಕನ್ನಡ ಅಭಿಮಾನ ಮತ್ತು ಇತರ ಲೇಖನಗಳು ಇವೆಲ್ಲ ತತ್ತ್ವವಿವೇಚನೆಯ ಗಮನಾರ್ಹ ಗ್ರಂಥಗಳೆಂದು ಗುರುತಿಸಬಹುದು.


ಶಂ.ಬಾ. ಜೋಶಿ

ಮತೀಯ ಸಿದ್ಧಾಂತಗಳನ್ನು ಕುರಿತು ಅನೇಕ ಗ್ರಂಥಗಳು ಪ್ರಕಟವಾಗಿವೆ. ಆದರೆ ಅವು ಹೆಚ್ಚಾಗಿ ವಿವರಣಾತ್ಮಕಗಳೇ ಹೊರತು ವಿಶ್ಲೇಷಣೆ, ತೌಲನಿಕ ವಿಮರ್ಶೆ ಮಾಡುವಂಥವಲ್ಲ. ಜೈನಮತ ತತ್ತ್ವಗಳ ಬಗೆಗೆ ಮಿರ್ಜಿ ಅಣ್ಣಾರಾಯರ ಗ್ರಂಥ ಜೈನಧರ್ಮ ಉಲ್ಲೇಖನೀಯವಾಗಿದೆ. ಹಾಗೆಯೇ ಸಂ.ಶಿ.ಭೂಸನೂರಮಠ ಅವರ ಶೂನ್ಯಸಂಪಾದನೆಯ ಪರಾಮರ್ಶೆ ಹೆಸರಿಸಬೇಕಾದ ಪ್ರಮುಖ ಗ್ರಂಥ. ನಿಜವಾದ ವಿಚಾರ ಸಾಹಿತ್ಯವೆಂಬ ದೃಷ್ಟಿಯಿಂದ ಸ್ವಾನುಭವ ಸ್ವೋಪಜ್ಞತೆಯಿಂದ ಬದುಕಿನ ಮರ್ಮವನ್ನರಿತ ತನ್ನ ವಿಚಾರಧಾರೆಯನ್ನು ಕಾರಂತರು ಬಾಳ್ವೆಯ ಬೆಳಕು, ಡಿ.ವಿ.ಜಿ.ಯವರು ಬಾಳಿಗೊಂದು ನಂಬಿಕೆ ಈ ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ಆದರೂ ಇಂಥ ಬರೆಹದ ಕೊರತೆ ಕನ್ನಡದಲ್ಲಿ ಬಹಳವಾಗಿದೆ.

ಪ್ರಾಚೀನ ಕಾವ್ಯಕೃತಿಗಳ ಪುನರ್ವಿಮರ್ಶೆ, ಮೌಲ್ಯಮಾಪನಗಳು ಕನ್ನಡದಲ್ಲಿ ಸಾಕಷ್ಟು ಆಗಿವೆ. ಸಿ.ಕೆ.ವೆಂಕಟರಾಮಯ್ಯನವರು ಭಾಸನ ನಾಟಕಗಳ ಬಗೆಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಆದಿಕವಿ ವಾಲ್ಮೀಕಿ ಮತ್ತು ಮಹಾಭಾರತದ ಬಗೆಗೂ ಎ.ಆರ್. ಕೃಷ್ಣಶಾಸ್ತ್ರಿಗಳು ಸಂಸ್ಕೃತ ನಾಟಕಗಳ ಬಗೆಗೂ ಎಸ್.ವಿ.ರಂಗಣ್ಣನವರು ಕಾಳಿದಾಸ ಮತ್ತು ಪಾಶ್ಚಾತ್ಯ ಗಂಭೀರ ನಾಟಕಗಳ ಬಗೆಗೂ ವಿ.ಸೀ.ಯವರು ಕರ್ನಾಟಕ ಕಾದಂಬರಿಯ ಬಗೆಗೂ ಮಹತ್ತ್ವದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಶ್ರೀರಂಗರ ಗೀತಾಗಾಂಭೀರ್ಯ, ಡಿ.ವಿ.ಜಿಯವರ ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ, ಬೇಂದ್ರೆಯವರ ಕನ್ನಡ ಸಾಹಿತ್ಯದ ನಾಲ್ಕು ನಾಯಕರತ್ನಗಳು, ಶಂ.ಬಾ.ಜೋಶಿ ಅವರ ಕರ್ಣನ ಮೂರು ಚಿತ್ರಗಳು, ಕುವೆಂಪು ಅವರ ತಪೋನಂದನ, ದ್ರೌಪದಿಯ ಶ್ರೀಮುಡಿ, ರಸೋ ವೈಸಃ ಕಾವ್ಯ ವಿಹಾರ, ಮುಗಳಿಯವರ ತವನಿಧಿ, ದೇಜಗೌ ಅವರ ಕೆಲವು ಕೃತಿಗಳನ್ನು ಇಲ್ಲಿ ಎತ್ತಿಹೇಳಬಹುದು. ಇದೇ ಜಾಡಿನಲ್ಲಿ ಆರ್.ಆರ್.ದಿವಾಕರರ ವಚನಶಾಸ್ತ್ರರಹಸ್ಯ, ಉಪನಿಷದ್ರಹಸ್ಯ, ಎಂ.ಆರ್.ಶ್ರೀನಿವಾಸಮೂರ್ತಿಯವರ ವಚನಧರ್ಮಸಾರ, ಹಲಸಂಗಿ ಚನ್ನಮಲ್ಲಪ್ಪನವರ ಕಾಳರಾತ್ರಿ ಮತ್ತು ಅರವಿಂದರ ಪೂರ್ಣಯೋಗದ ಪರಿಚಯ ಮಾಡಿಕೊಡುವ ಅನುಭಾವೀ ಬರೆಹಗಳೂ ವಿಚಾರಣೀಯವಾಗಿವೆ. ಹಾಗೆಯೇ ಬೆಂಗಳೂರಿನ ಕನ್ನಡ ಅಧ್ಯಯನ ಕೇಂದ್ರ ಪ್ರಕಟಿಸಿರುವ ಪಂಪ ಒಂದು ಅಧ್ಯಯನ, ಮೂರು ಸಂಪುಟಗಳ ವಿಚಾರಸಾಹಿತ್ಯ, ಎಂ.ಎಂ.ಕಲಬುರ್ಗಿಯವರ ಕವಿರಾಜಮಾರ್ಗ ಕಾಲಪರಿಸರದ ಕನ್ನಡ ಸಾಹಿತ್ಯ, 'ಮಾರ್ಗ' ಸಂಪುಟಗಳು, ಎಸ್.ವಿ.ರಂಗಣ್ಣನವರ ಹಳಗನ್ನಡ ಕವಿಗಳನ್ನು ಕುರಿತ 'ಶೈಲಿ' ಮುಂತಾದ ಬರೆಹಗಳು ಉಲ್ಲೇಖನೀಯವಾದವು.

ಪ್ರಗತಿಶೀಲ ಸಾಹಿತ್ಯದ ಚಳವಳಿಯಿಂದಾಗಿ ಅ.ನ.ಕೃ., ತ.ರಾ.ಸು., ಬಸವರಾಜ ಕಟ್ಟೀಮನಿ, ನಿರಂಜನ ಮುಂತಾದವರು ತಮ್ಮ ಲೇಖನಗಳಲ್ಲಿ ಆರ್ಥಿಕ ರಾಜಕೀಯ ಪ್ರಜ್ಞೆಯ ವೈಚಾರಿಕತೆಯನ್ನು ತುಂಬಿದರು. ಒಂದನೆಯ ಮಹಾಯುದ್ಧದ ಅನಂತರ ಹೊಸ ಸಾಹಿತ್ಯ ಹುಟ್ಟಿತು. ಎರಡನೆಯ ಮಹಾಯುದ್ಧದ ಅನಂತರ ಹೊಸ ವಿಮರ್ಶೆ ಹುಟ್ಟಿಬಂದಿತು. ಮೂವತ್ತರ ದಶಕದಲ್ಲಿ ಮಾರ್ಕ್ಸ್‌ವಾದಿ ದೃಷ್ಟಿ ತೆರೆದರೆ 50ರ ದಶಕದಲ್ಲಿ ಮನೋವೈಜ್ಞಾನಿಕ ದೃಷ್ಟಿ ಬೆಳೆಗಿತು. ಸಾಂಪ್ರದಾಯಿಕ ವಿಚಾರವನ್ನು ಆಧುನಿಕ ಭಾಷೆಯಲ್ಲಿ ದೇವುಡು ನರಸಿಂಹಶಾಸ್ತ್ರಿಗಳಂಥವರು ಯಶಸ್ವಿಯಾಗಿ ಕೊಡಲು ಯತ್ನಿಸಿದರು. ಗಾಂಧೀವಾದವನ್ನು ಸಿದ್ದವನಹಳ್ಳಿ ಕೃಷ್ಣಶರ್ಮರು ತಮ್ಮದೇ ಆದ ಲಲಿತ ಮಧುರ ಶೈಲಿಯಲ್ಲಿ ಕನ್ನಡಕ್ಕೆ ನೀಡಿದರು. ಹಾಗೆಯೇ ರವೀಂದ್ರನಾಥ ಠಾಕೂರ್ ಹಾಗೂ ಸರೋಜಿನಿ

ನಾಯ್ಡು ಅವರನ್ನು ಕುರಿತು ಎಸ್.ಎಸ್.ಒಡೆಯರು ಎರಡು ಸಮಾಲೋಚನಾತ್ಮಕ ಪುಸ್ತಕಗಳನ್ನು ನೀಡಿದ್ದಾರೆ. ಚನ್ನವೀರಕಣವಿಯವರೂ ಸಾಹಿತ್ಯಚಿಂತನೆಯನ್ನು ಚಿಂತನೀಯವಾಗಿ ಮಾಡಿದ್ದಾರೆ. ಅದೇ ರೀತಿ ಧಾರವಾಡಕರ, ಎನ್ಕೆ, ಆರ್.ಕೆ.ಕುಲಕರ್ಣಿ, ಗೊರೂರು, ಗದಗಕರ ಮೊದಲಾದವರ ಹರಟೆಗಳಲ್ಲಿಯೂ ವೈಚಾರಿಕ ಅಂಶ ಒಡೆದೆದ್ದು ಕಾಣಿಸುವುದೂ ಇದೆ.

ಅನುವಾದ ರಂಗದಲ್ಲಿ ಅರವಿಂದರ ಭಾರತೀಯ ನವಜನ್ಮವನ್ನು ಬೇಂದ್ರೆಯವರೂ ಭಾರತೀಯ ರಾಜಧರ್ಮ ಮತ್ತು ಜಾನ್ ಸ್ಟೂವರ್ಟ್ ಮಿಲ್ಲನ ಲಿಬರ್ಟಿಯನ್ನು (ಸ್ವಾತಂತ್ರ್ಯ) ಎನ್.ಸಿ.ಆರ್. ಮತ್ತು ಬಿ.ಎಚ್.ಶ್ರೀಧರರೂ ಧ್ವನ್ಯಾಲೋಕ ಮತ್ತು ಕಾವ್ಯಪ್ರಕಾಶಾದಿಗಳನ್ನು ಕೆ.ಕೃಷ್ಣಮೂರ್ತಿಯವರೂ ದಶರೂಪಕವನ್ನು ಕೆ.ವಿ.ಸುಬ್ಬಣ್ಣನವರೂ ಆಡ್ಲರನ ವ್ಯಕ್ತಿಮನೋವಿಜ್ಞಾನವನ್ನು (ಬಾಳಿನ ಗುಟ್ಟು) ಗೌರೀಶ ಕಾಯ್ಕಿಣಿಯವರೂ ಕನ್ನಡದಲ್ಲಿ ನೀಡಿದ್ದಾರೆ. ರಘುನಾಥಬಿಡೆ ಅವರ ವಾಲ್ಮೀಕಿ ರಾಮಾಯಣದಲ್ಲಿ ಶಾಪ ಮತ್ತು ವರ ಮರಾಠಿಯಿಂದ ಕನ್ನಡಕ್ಕೆ ಅನುವಾದಗೊಂಡಿವೆ.

ಮನೋವಿಜ್ಞಾನ ರಂಗದಲ್ಲಿ ಕುಪ್ಪುಸ್ವಾಮಿ ಅವರ ಮನೋವಿಜ್ಞಾನ, ಹನುಮಂತರಾಯರ ಮಾನಸದರ್ಪಣ, ಸಿ.ಆರ್.ಚಂದ್ರಶೇಖರ ಅವರ ನಿದ್ರೆ ಮತ್ತು ಕನಸುಗಳು, ಕೆ.ವಾರಿಜಾ ಅವರ ನಿಮ್ಮ ಮನಸ್ಸು, ಗೌರೀಶ ಕಾಯ್ಕಿಣಿಯವರ ಮನೋವಿಜ್ಞಾನದ ರೂಪರೇಖೆಗಳು, ಗಂಡು, ಹೆಣ್ಣು ಮತ್ತು ಪ್ರೀತಿ, ವಿಚಾರವಾದ, ಎಂ.ಶಿವರಾಮ್ ಅವರ ಮನಮಂಥನ, ಮೀನಗುಂಡಿ ಸುಬ್ರಹ್ಮಣ್ಯಂ ಅವರ ಮನಸ್ಸು ಇಲ್ಲದ ಮಾರ್ಗ, ಈ ವರ್ತನೆಗಳು ನಿಮ್ಮಲ್ಲಿ ಎಷ್ಟಿವೆ, ವಿಚಾರವಾದಿ ಕೋಮೂರರ ದೇವರು, ದೆವ್ವ ವಿಜ್ಞಾನ – ಇವೇ ಮುಂತಾದವನ್ನು ಹೆಸರಿಸಬಹುದು.

ವಿಜ್ಞಾನರಂಗದಲ್ಲೂ ಅನೇಕ ಗ್ರಂಥಗಳು ಪ್ರಕಟವಾಗಿವೆ. ಆದರೆ ವಿಜ್ಞಾನವನ್ನು ಕುರಿತು ಸಮುನ್ನತ ವೈಚಾರಿಕ ಕಾಣಿಕೆಯನ್ನು ದೊಡ್ಡ ಮೊತ್ತದಲ್ಲಿ ತಮ್ಮ ವಿಜ್ಞಾನಕೋಶದ ಮೂರು ಸಂಪುಟಗಳಲ್ಲಿ ಸಲ್ಲಿಸಿದವರು ಶಿವರಾಮ ಕಾರಂತರು.

ಪುರಂದರದಾಸರ ಕನಕದಾಸರ ಚತುಶ್ಶತಮಾನೋತ್ಸವಗಳ ನಿಮಿತ್ತ ಉಭಯದಾಸರ ಭಕ್ತಿಕಾವ್ಯದ ಬಗೆಗೆ ಅನೇಕ ಲೇಖನಸಂಗ್ರಹಗಳ ಸುಗ್ಗಿಯೇ ಬೆಳೆದು ಬಂದಿತು. ಹಾಗೆಯೇ ಷೇಕ್ಸ್ಪಿಯರನ ಆರನೆಯ ಶತಮಾನೋತ್ಸವದ ನಿಮಿತ್ತ ಹೊಸ ದಿಲ್ಲಿಯಲ್ಲಿ ಕನ್ನಡ ಭಾರತೀ ಸಂಸ್ಥೆಯವರು ಒಂದು ಉತ್ಕೃಷ್ಟ ಪರಿಸಂವಾದಾತ್ಮಕ ಗ್ರಂಥವನ್ನು (ಷೇಕ್ಸ್ಪಿಯರನಿಗೆ ನಮಸ್ಕಾರ) ಪ್ರಕಟಿಸಿದ್ದಾರೆ. ಎ.ಎನ್.ಮೂರ್ತಿರಾಯರು ಷೇಕ್ಸ್ಪಿಯರನ ಕೃತಿಗಳನ್ನು ಕುರಿತು ಒಂದು ಪರಿಚಯ ಗ್ರಂಥವನ್ನು ಬರೆದಿದ್ದಾರೆ. ಮುಂದೆ ಗಾಂಧೀ ಶತಾಬ್ದಿಯ ನಿಮಿತ್ತಮೂ ಗಾಂಧೀತತ್ತ್ವ ವಿಚಾರಗಳ ಅನೇಕ ಲೇಖನ–ಉಪನ್ಯಾಸ ಸಂಗ್ರಹಗಳು ಬೆಳಕಿಗೆ ಬಂದಿವೆ. ಇದಲ್ಲದೆ ಎಚ್.ನರಸಿಂಹಯ್ಯನವರ ಆತ್ಮಕಥೆ ತೆರೆದ ಮನ, ಪಂಡಿತ ತಾರಾನಾಥರ ಧರ್ಮಸಂಭವ, ಸ.ಜ.ನಾಗಲೋಟಿಮಠ ಅವರ ಸತ್ತ ಮೇಲೆ ಸಮಾಜಸೇವೆ – ಇವೆಲ್ಲವನ್ನು ವಿಚಾರಸಾಹಿತ್ಯದಲ್ಲಿ ಉಲ್ಲೇಖಿಸಬಹುದು.

ಧಾರವಾಡದ ಮಿಂಚಿನಬಳ್ಳಿ ಪ್ರಕಾಶನ ಸಂಸ್ಥೆ ಬುರ್ಲಿ ಬಿಂದುಮಾಧವ ಅವರ ನೇತೃತ್ವದಲ್ಲಿ ಕಾಲುಶತಮಾನವನ್ನು ಮೀರಿ ಕೇವಲ ವಿಚಾರಸಾಹಿತ್ಯವನ್ನೆ ಪಂಥ ತೊಟ್ಟು ಪ್ರಕಟಿಸುತ್ತ ಬಂದಿರುವುದನ್ನು ಇಲ್ಲಿ ನೆನೆಯಲೇಬೇಕು. ಹಾಗೆಯೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ಣಾಟಕ ಮತ್ತು ಅದರ ವಿಸ್ತರಣೆಗಳಾದ ವಿಜ್ಞಾನ ಕರ್ಣಾಟಕ ಮತ್ತು ಮಾನವಿಕ ಕರ್ಣಾಟಕ, ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯದ ಸಾಧನೆ ಮುಂತಾದ ನಿಯತಕಾಲಿಕಗಳೂ ಕನ್ನಡದಲ್ಲಿರುವ ವೈಚಾರಿಕ ವಾಙ್ಮಯ ಪ್ರಕಾಶನಕ್ಕೆ ಆಧಾರವಾಗಿವೆ. ಹೊಸ ವಿಮರ್ಶೆಯ ಪ್ರತಿಕ್ರಿಯಾಮಾಲೆಯೆಂಬಂತೆ ಸಾಕ್ಷಿ, ಸಂಕ್ರಮಣ, ಮನ್ವಂತರ, ಪರಂಪರೆ ಇತ್ಯಾದಿ ನಿಯತಾನಿಯತ ಕಾಲಿಕಗಳು ಕೇವಲ ಸಾಹಿತ್ಯ ಚರ್ಚೆಗಾಗಿಯೇ ಮೀಸಲಾಗಿ ಹೊರಟಿದ್ದು ಶ್ಲಾಘನೀಯ ಸಾಹಸ.

ವಸ್ತುತಃ ವಿಚಾರಸಾಹಿತ್ಯ ವಿಸ್ತಾರವಾಗಿ ಬರಬೇಕಾದದ್ದು ಸಾಮಾಜಿಕ ವಿಚಾರ ಕ್ಷೇತ್ರದಲ್ಲಿ. ಇಂದು ಸ್ಥಿತ್ಯಂತರಗೊಳ್ಳುತ್ತಿರುವ ಸಾಮಾಜಿಕ ಜೀವನದ ಬಗೆಗೆ ಆರ್ಥಿಕ, ಮನೋವೈಜ್ಞಾನಿಕ, ಮಾನವವಂಶಶಾಸ್ತ್ರೀಯ, ಸಾಂಸ್ಕೃತಿಕ – ಹೀಗೆ ನೂರು ಮುಖವಾಗಿ ವಿಚಿಕಿತ್ಸೆ ನಡೆಯಬೇಕು. ನಾಗರಿಕನ ಅಸಹಾಯಕತೆ, ಏಕಾಂಗಿ ವ್ಯಕ್ತಿತ್ವ, ನಾಯಕತ್ವ, ಬಹುರಾಷ್ಟ್ರ ನಾಗರಿಕತ್ವ, ಬಹುಭಾಷಿಕ ರಾಷ್ಟ್ರೀಯತ್ವ, ಜಾತೀಯತೆ, ವಿಕಾಸಾಭಿವೃದ್ಧಿಯ ಸಾಂಸ್ಕೃತಿಕ ಫಲಿತಾಂಶ, ಪಕ್ಷಪದ್ಧತಿ, ಜನಾಭಿಪ್ರಾಯ ನಿರ್ಮಿತಿ, ಯುವಜನರ ಸಮಸ್ಯೆ–ಇಂಥ ವಿವಿಧ ಯಕ್ಷಪ್ರಶ್ನೆಗಳನ್ನು ಪರಿಶೀಲಿಸಿ ಪರಿಷ್ಕರಿಸುವುದಿರಲಿ,ಆ ಕುರಿತು ಪ್ರಜ್ಞೆಯನ್ನು ಜಾಗೃತಗೊಳಿಸಲು ಪರಿಸಂವಾದಗಳನ್ನು ಆರಂಭಿಸಬಲ್ಲ ಸಾಹಿತ್ಯ ಗುಣದಲ್ಲಿಯೂ ಗಾತ್ರದಲ್ಲಿಯೂ ತುಸು ಬೆಳೆದು ಬರಬೇಕು. ಇಂಥ ಸಾಮಾಜಿಕ ವಿಚಾರದಲ್ಲಿ ಶಂ.ಬಾ.ಜೋಶಿಯವರ ಸಮಾಜದರ್ಶನದ ಅನಂತರ ಶಾಸ್ತ್ರೀಯ ವಿಚಿಕಿತ್ಸೆಗೆ ಕೈಹಾಕಿದ ಪುಸ್ತಕಗಳೆಂದರೆ ಎಚ್.ಎಂ.ಮರುಳಸಿದ್ದಯ್ಯನವರ ಸಮಾಜಕಾರ್ಯ ಮತ್ತು ಸಮಾಜ ಶಾಸ್ತ್ರದ ಕೆಲವು ಪಾಠಗಳು, ಎನ್.ಆರ್.ರಾವ್ ಅವರ ಜನಾಭಿಪ್ರಾಯ, ಪ್ರಚಲಿತ ಸಾರ್ವಜನಿಕ ಚರಿತ್ರೆಯನ್ನು ಕುರಿತ ಕಾಣಿಕೆಯೆಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರರ ಜೀವನ ಪತ್ರಿಕೆಯ ಸಂಪಾದಕೀಯಗಳ ಲೋಕಚರಿತವೆಂಬ ಸಂಕಲನ. ಈ ಮಾದರಿಯ ಬರೆಹ ಕನ್ನಡಕ್ಕೆ ಅಪೂರ್ವವೆನ್ನಬಹುದು. ಎ.ಎನ್.ಮೂರ್ತಿರಾಯರ ದೇವರು ಎಂಬ ಕೃತಿ ಇಲ್ಲಿ ಉಲ್ಲೇಖನೀಯ. ಕುವೆಂಪು ಅವರ ವಿಚಾರ ಕ್ರಾಂತಿಗೆ ಆಹ್ವಾನ ಎಂಬ ವೈಚಾರಿಕ ಲೇಖನಗಳನ್ನು ಮರೆಯುವಂತಿಲ್ಲ. ನಿರಂಕುಶಮತಿಗಳಾಗಿ, ಷಷ್ಠಿನಮನ, ಮನುಜಮತ ವಿಶ್ವಪಥ ಮುಂತಾದ ಕೃತಿಗಳೂ ವಿಶೇಷವಾಗಿ ಇಲ್ಲಿ ಉಲ್ಲೇಖಾರ್ಹ. ಕುವೆಂಪು ಅವರ ದಾರ್ಶನಿಕ ಕಾವ್ಯಮೀಮಾಂಸೆ ಆ ಕ್ಷೇತ್ರದ ಒಂದು ಮಹತ್ತ್ವದ ಕೃತಿ, ಸ್ವೋಪಜ್ಞ ಚಿಂತನೆಯ ಫಲ, ಎಚ್.ತಿಪ್ಪೇರುದ್ರಸ್ವಾಮಿಯವರ **'ಕುವೆಂಪು ಅವರ ವೈಚಾರಿಕತೆ'** ಎಂಬುದು ಆ ಕವಿಯ ವ್ಯಾಪಕ ಚಿಂತನೆಯ ಎಲ್ಲ ಮಗ್ಗುಲುಗಳ ದರ್ಶನ ಮಾಡಿಕೊಡಲು ಹವಣಿಸುವ ಕೃತಿಯಾಗಿದೆ.

ವಿಚಾರ ಸಾಹಿತ್ಯವೆಂಬ ಒಂದು ಪ್ರತ್ಯೇಕ ಪ್ರಕಾರದ ಕಕ್ಷೆಯೊಳಕ್ಕೆ ಎಂಥ ಕೃತಿಗಳು ಬರುವುವೆಂಬ ಜಿಜ್ಞಾಸೆ ಬಹಳ ಕಷ್ಟದ್ದು; ವೈಚಾರಿಕತೆ ಇಲ್ಲದ ಕೃತಿ ಇಲ್ಲವೇ ಇಲ್ಲವೆಂದು ಹೇಳಬೇಕು. ಸೃಜನಶೀಲ ಎಂಬ ಕೃತಿಯಲ್ಲೂ ಹಿನ್ನೆಲೆಯಲ್ಲಿ ವೈಚಾರಿಕತೆ ಇದ್ದೇ ಇರುತ್ತದೆ. ಆದರೆ ಅದು ಸುಪ್ತವಾಗಿ ಕಂಡೂ ಕಾಣದಂತೆ, ಹಾಲಿನಲ್ಲಿ ಸಕ್ಕರೆ ಬೆರೆತಂತೆ ವ್ಯಾಪಿಸಿರುತ್ತದೆ.


ಮಿರ್ಜಿ ಅಣ್ಣಾರಾಯ

ಕಾವ್ಯಮೀಮಾಂಸಕಾರರ ಪ್ರಕಾರ ಕಾವ್ಯದಲ್ಲಿ (ಸ್ಥೂಲವಾಗಿ ಎಲ್ಲ ಸೃಜನ ಸಾಹಿತ್ಯದಲ್ಲಿ) ಪ್ರತಿಭೆ ಮತ್ತು ಪ್ರಜ್ಞೆ– ಈ ಎರಡೂ ಅಂಶಗಳಿರುತ್ತವೆ. ಪ್ರತಿಭೆ ಹೃದಯಸಂಬಂಧಿಯಾದ್ದು, ಚಿತ್ತವೃತ್ತಿ ಪ್ರಧಾನವಾಗಿದ್ದಾಗ ಹೊಮ್ಮುವಂಥದ್ದು, ಪ್ರತಿಭೆ ಎಂದರೆ ಹೊಳಹು ಎನ್ನುತ್ತಾರೆ ತೀನಂಶ್ರೀ. ಪ್ರಜ್ಞೆ ಬುದ್ಧಿಸಂಬಂಧಿ ಎನ್ನಬಹುದು. ಇದು ಮುಖ್ಯವಾಗಿ ಸ್ಮೃತಿ ಬುದ್ಧಿ ಮತ್ತು ಮತಿ ಇವನ್ನೊಳಗೊಳ್ಳುತ್ತವೆ. ಹಿಂದೆ ಅದದ್ದನ್ನು ನೆನೆಯುವುದು ಸ್ಮೃತಿ, ಈಗ ನಡೆಯು ವುದನ್ನು ಪರಿಶೀಲಿಸುವುದು ಬುದ್ಧಿ; ಮುಂದೆ ಆಗುವುದನ್ನು ಊಹಿಸುವುದು ಮತಿ. ಈ ಮೂರೂ ವಿಚಾರ ಸಾಹಿತ್ಯದಲ್ಲಿ ಎದ್ದು ಕಾಣುತ್ತವೆ. ಅದರಲ್ಲೂ ರಂಜನೆಯ ಅಂಶ ಇರಬೇಕು, ಆದರೆ ಅದು ಸಂಯಮ ದಿಂದ ಕೂಡಿದ್ದು ಹಿನ್ನೆಲೆಯಲ್ಲಿರುತ್ತದೆ. ಹನ್ನೆರಡನೆಯ ಶತಮಾನದ ವೀರಶೈವ ವಚನಕಾರರ ವಚನಗಳಲ್ಲಿ ವಿಚಾರ ಪ್ರಾಧಾನ್ಯವನ್ನು ಗಮನಿಸಬಹುದು. ಅವು ಮುಖ್ಯವಾಗಿ ಆಧ್ಯಾತ್ಮಿಕ ಎನ್ನಬಹುದಾದರೂ ಜಗತ್ತು, ಸಮಾಜ ಮುಂತಾದ ವಿಚಾರಗಳ ವಿವೇಚನೆಯೂ ಪ್ರಧಾನವಾಗಿರುತ್ತದೆ.

ಸೃಜನ ಪ್ರಧಾನ ಸಾಹಿತ್ಯ ಸಾಮಾನ್ಯವಾಗಿ ಸಂಶ್ಲೇಷಣಾತ್ಮಕವಾದ್ದು ಎನ್ನುವುದಾದರೆ ವಿಚಾರ ಸಾಹಿತ್ಯ ವಿಶ್ಲೇಷಣಾತ್ಮಕವಾದ್ದು. ಯಾವುದೇ ವಿಷಯವನ್ನು ಕುರಿತಂತೆ ಪ್ರಯೋಗಪೂರ್ವಕವಾಗಿ ಚಿಕಿತ್ಸಕ ದೃಷ್ಟಿಯನ್ನು ಬೀರಿ ಅದರ ಸತ್ತ್ವವನ್ನು ಗುರುತಿಸಿ, ಸಂಗ್ರಹಿಸಿದ ಮಾಹಿತಿಯನ್ನೆಲ್ಲ ವಿಂಗಡಿಸಿ ವಿವೇಚಿಸಿ ಕರಾರುವಾಕ್ಕು ಎನಿಸುವಂತೆ ನಿರ್ಣಯ ನೀಡುವ ದಿಕ್ಕಿನಲ್ಲಿ ಮುಂದುವರಿಯುವುದು ವಿಚಾರ ಸಾಹಿತ್ಯದ ರೀತಿ ಎನ್ನುವುದಾದರೆ, ನಮ್ಮಲ್ಲಿ ಸೃಷ್ಟಿಯಾಗಿರುವ ಎಲ್ಲ ಸ್ವೋಪಜ್ಞ ಚಿಂತನಶೀಲ ವಿವೇಚನೆ ಹಾಗೂ ಇದಮಿತ್ಥಂ ಎಂಬ ನಿಲುಮೂ ವಿಚಾರ ಸಾಹಿತ್ಯದ ಕಕ್ಷೆಯೊಳಗೆ ಬರುತ್ತವೆ. ಮುಖ್ಯವಾಗಿ ಯಾವುದೋ ಒಂದು ನಿಶ್ಚಿತ ವಿಷಯದ ಬಗ್ಗೆ ಸಂಶೋಧನೆ, ಅದರ ಫಲವಾದ ಜ್ಞಾನದ ದಾಖಲೆ, ಅನುಶೀಲನೆ, ನಿರ್ಣಯಗಳಿಂದ ಕೂಡಿದ್ದು ವಿಚಾರ ಸಾಹಿತ್ಯ ಎನಿಸಿಕೊಳ್ಳುತ್ತದೆ. ವಿಜ್ಞಾನ, ಮಾನವಿಕ, ಸಮಾಜ ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ನಡೆಯುವ ಸಂಶೋಧನೆಯ ಫಲಶ್ರುತಿಗಳು ನಿಬಂಧ ರೂಪದಲ್ಲಿ ಬಂದಾಗ ಅವು ಆಧಾರಭೂತ ವಿಚಾರಸಾಹಿತ್ಯ ಎನಿಸಿಕೊಳ್ಳುತ್ತವೆ. ವಿದ್ವಾಂಸರ ಅಥವಾ ಆಯಾ ಕ್ಷೇತ್ರದ ತಜ್ಞರ ಹಾಗೂ ಜ್ಞಾನಾರ್ಥಿಗಳ ಗಮನವನ್ನು ಸೆಳೆಯುವ ಅಂಥ ನಿಬಂಧಗಳ ಆಧಾರದ ಮೇಲೆ ಇತರರಿಗೆ, ಅನಂತರ ಸಾಮಾನ್ಯರಿಗೆ–ಹೀಗೆ ಮೂರು ಹಂತಗಳಲ್ಲಿ ವಿಚಾರ ಸಾಹಿತ್ಯ ಪ್ರವಹಿಸಬೇಕು. ಆದರೆ ಈ ನಿಟ್ಟಿನಲ್ಲಿ ಸೆಮಿನಾಲ್– ಬೀಜಸ್ವರೂಪಿ– ಎಂಬ ಕೃತಿಗಳು ಕನ್ನಡದಲ್ಲಿ ಬಹಳ ಕಡಿಮೆ. ಆಧುನಿಕ ಕಾಲದವರೆಗೂ ಸಂಸ್ಕೃತ ಪ್ರಾಕೃತ ಗ್ರಂಥಗಳಲ್ಲಿಯ ಮೂಲಭೂತ ಚಿಂತನೆಯ ಕೃತಿಗಳನ್ನೇ ಆಧರಿಸಿ ರಚನೆಯಾಗುತ್ತ ಬಂದ ಕನ್ನಡ ಕೃತಿಗಳಲ್ಲಿ ಸ್ವೋಪಜ್ಞತೆಯ ಅಂಶ ಬಹಳ ಕಡಿಮೆ.

ಬೀಜಸ್ವರೂಪಿ ಕೃತಿ ರಚನೆ ಇಲ್ಲದೆ ಮುಂದಿನ ಎರಡು ಹಂತಗಳಲ್ಲಿ ವಿಚಾರ ಹರಿದು ಬರುವುದೆಂದು ನಿರೀಕ್ಷಿಸುವುದು ತಪ್ಪು. ಆದರೂ ವಿರಳವಾಗಿಯಾದರೂ ಅಂಥ ಕೃತಿಗಳು ಬರುತ್ತಿವೆಯೆಂದು ಸಮಾಧಾನಪಟ್ಟುಕೊಳ್ಳಬೇಕು. ಹಿಂದೆ ಹೇಳಿದ ಮಹಾನ್ ಲೇಖಕರ ಕೃತಿಗಳಲ್ಲದೆ ಈಚಿನ ವರ್ಷಗಳಲ್ಲಿ ಮುಖ್ಯವಾಗಿ 20ನೆಯ ಶತಮಾನದ ಉತ್ತರಾರ್ಧದಲ್ಲಿ ಈ ಪ್ರಯತ್ನ ಮುಂದುವರಿದಿದೆ. ತುಂಬ ವ್ಯಾಪಕವಾದ ಕ್ಷೇತ್ರ ಇದಾದ್ದರಿಂದ ಕೆಲವು ದಿಕ್ಸೂಚಿಗಳನ್ನಷ್ಟೆ ಇಲ್ಲಿ ನೀಡಬಹುದು. ಆದರೂ ಇದು ಸಮಸ್ತ ಎನಿಸಲಾರದು. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಇವುಗಳ ಕೆಲವು ಪ್ರಕಟಣೆಗಳು ಈ ಪ್ರಕಾರಕ್ಕೆ ಸೇರುತ್ತವೆ. ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟವಾದ ಕೆಲವು ಮಹತ್ವದ ಕೃತಿಗಳು ಪುನರ್ಮುದ್ರಣಗಳಾದರೂ ಉಲ್ಲೇಖಾರ್ಹ.

ನವ ಕರ್ನಾಟಕ ಪ್ರಕಾಶನ ಸಂಸ್ಥೆ ಅನೇಕ ವಿಚಾರ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದೆ. ಸಂಪ್ರದಾಯ, ವಿಜ್ಞಾನ ಮತ್ತು ಸಮಾಜ (ಎಸ್.ಬಾಲಚಂದ್ರರಾವ್), ವೈಜ್ಞಾನಿಕ ಮನೋಧರ್ಮ (ಜಿ.ಟಿ.ನಾರಾಯಣ ರಾವ್), ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ (ಅನು: ಎಸ್.ಆರ್.ಭಟ್), ಧರ್ಮ ಮತ್ತು ವೈಚಾರಿಕತೆ (ಬಿ.ವಿ.ವೀರಭದ್ರಪ್ಪ), ನಾನೇಕೆ ನಾಸ್ತಿಕ (ಅನು: ಎನ್.ಗಾಯತ್ರಿ) ಮೊದಲಾದ ಕೆಲವು ಕೃತಿಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಈ ಸಂದರ್ಭದಲ್ಲಿ ಎಚ್ಚೆಸ್ಕೆ ಅವರ ವಿಚಾರ ವಿಹಾರ, ಕನ್ನಡದ ಸ್ಥಿತಿಗತಿ, ಶಿಕ್ಷಣ ಸಂಸ್ಕೃತಿ, ಸರ್ವಾರ್ಥ ಸಾಧನೆ – ಈ ಕೃತಿಗಳು ವಿಚಾರ ಸಾಹಿತ್ಯದ ಹಲವು ಪ್ರಕಾರಗಳ ವಿಹಂಗಮ ನೋಟ ನೀಡುತ್ತವೆ. ಪ್ರಾಧಿಕಾರದ ಜಾಗತಿಕ ಚಿಂತಕರ ಮಾಲೆ, ವಿಜ್ಞಾನ ಶಿಕ್ಷಣ ಮಾಲೆ, ಅನುವಾದ ಮಾಲೆ, ಮೂಲ ಭೂತ ಶೈಕ್ಷಣಿಕ ಮಾಲೆ, ವಿಜ್ಞಾನದೀಪ ಮಾಲೆ– ಇವು ಸಾಮಾನ್ಯರ ಜ್ಞಾನದ ಪರಿಧಿಯನ್ನು ವಿಸ್ತರಿಸುವ ಪ್ರಯತ್ನಗಳಾಗಿ ಸ್ವಾಗತಾರ್ಹವೆನಿಸುತ್ತವೆಯಾದರೂ ಸ್ವೋಪಜ್ಞತೆಯಿಂದ ಕೂಡಿದ್ದೆನ್ನಲಾದ ಆಚಾರ್ಯ ಕೃತಿಗಳು ಬಹುತೇಕ ಇಲ್ಲವೇ ಇಲ್ಲವೆನ್ನಬೇಕು.

ತನ್ಮಯತೆ ಮತ್ತು ತಾಟಸ್ಥ್ಯ, ತಪಶೀಲು ಮತ್ತು ತಾತ್ತ್ವಿಕತೆ– ಇವುಗಳ ನಡುವೆ ಒಂದು ತೂಕದ ತಕ್ಕ ಸಮನ್ವಯ ಸಾಧಿಸುವ ಪ್ರಜ್ಞಾ ಪರಿಷ್ಕಾರ ನಮ್ಮ ಸುಶಿಕ್ಷಿತ ವರ್ಗಗಳಲ್ಲಿ ಸ್ಥಿರವಾಗುವ ತನಕ ದೊಡ್ಡ ಪ್ರಮಾಣದ ವಿವಿಧ ಪ್ರಕಾರದ ವಿಚಾರ ಸಾಹಿತ್ಯಕ್ಕಾಗಿ ನಾವು ಕಾಯಬೇಕು. ಈ ಕ್ಷೇತ್ರದ ಈವರೆಗಿನ ಕೃಷಿಯಿಂದ ವಿಚಾರ ಸಾಹಿತ್ಯ ಸ್ವತಂತ್ರವಾಗಿ ಸಮೃದ್ಧವಾಗಿ ಬೆಳೆಯಬಹುದೆಂಬ ಭರವಸೆಯನ್ನು ತಾಳಬಹುದು. (ಜಿ.ಕೆ.)

**ಕನ್ನಡದಲ್ಲಿ ವಿಜ್ಞಾನ ಪತ್ರಿಕೆಗಳು** : ಕನ್ನಡದಲ್ಲಿ ವಿಜ್ಞಾನ ಪತ್ರಿಕೆಯ ಪ್ರಕಟನೆಯ ಸಾಹಸ ಸು. 80 ವರ್ಷಗಳ ಹಿಂದೆಯೇ ಆರಂಭವಾಯಿತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪ ಹಾಗೂ ಶ್ರೀ ನಂಗಪುರಂ ವೆಂಕಟೇಶ ಅಯ್ಯಂಗಾರ್ ಅವರುಗಳು ಪ್ರದೇಶ ಭಾಷೆಯಲ್ಲಿ ಜನರಿಗೆ ವಿಜ್ಞಾನದ ವಿಷಯಗಳನ್ನು ತಿಳಿಸಬೇಕಾದ ಅಗತ್ಯವನ್ನು ಮನಗಂಡು ವಿಜ್ಞಾನ ಪ್ರಚಾರಿಣೀ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಭೆಯ ವತಿಯಿಂದ 1917 ಏಪ್ರಿಲ್‌ನಲ್ಲಿ ವಿಜ್ಞಾನ ಎಂಬ ಮಾಸಪತ್ರಿಕೆಯ ಮೊದಲ ಸಂಚಿಕೆ ಪ್ರಕಟವಾಯಿತು. ಆರಂಭದಲ್ಲಿ ಪತ್ರಿಕೆಯ ಮುಖ್ಯ ಉದ್ದೇಶವನ್ನು ವಿವರಿಸುತ್ತಾ ಜನಸಾಮಾನ್ಯರಲ್ಲೆಲ್ಲಾ ವಿಜ್ಞಾನವನ್ನು ಹರಡಿದ ಹೊರತು ದೇಶವು ಅಭಿವೃದ್ಧಿಗೆ ಬರಲಾರದು. ಇದಕ್ಕಾಗಿ ಆಂಗ್ಲಭಾಷೆಯಲ್ಲಿ ವಿಜ್ಞಾನ ಪರಿಶ್ರಮವುಳ್ಳ ದೇಶಾಭಿಮಾನಿಗಳು ಸಾವಕಾಶಮಾಡದೆ ಈ ಕೆಲಸದಲ್ಲಿ ತೊಡಗಬೇಕೆಂದು ನಮ್ಮ ಪ್ರಾರ್ಥನೆ. ಇದರಲ್ಲಿ ಆಧುನಿಕ ವಿಜ್ಞಾನದ ವಿಷಯಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಕೈಲಾದಮಟ್ಟಿಗೆ ತಿಳಿಗನ್ನಡದಲ್ಲಿ ಬರೆಯಲು ಪ್ರಯತ್ನಿಸಿರುತ್ತೇವೆ ಎಂದು ಹೇಳಿ 32 ಪುಟಗಳ ಸಂಚಿಕೆಯನ್ನು ತಿಂಗಳಿಗೊಮ್ಮೆ ಪ್ರಕಟಿಸಲು ಆರಂಭಿಸಿದರು. ಶ್ರೀಯುತರ ಕನ್ನಡಾಭಿಮಾನವೂ ವಿಜ್ಞಾನದ ಆಗುಹೋಗುಗಳನ್ನು ಜನಸಾಮಾನ್ಯರಿಗೆ ತಿಳಿಸಬೇಕೆಂಬ ಉತ್ಕಟೇಚ್ಛೆಯೂ ಕನ್ನಡದಲ್ಲಿ ವಿಜ್ಞಾನ ಲೇಖನಗಳನ್ನು ಬರೆಯಲು ಇಚ್ಛಿಸುವವರಿಗೆ ಇಂದಿಗೂ ಸ್ಫೂರ್ತಿದಾಯಕ.

ಈ ಪತ್ರಿಕೆಯ ಲೇಖನಗಳು ಸರಳ ವಾಕ್ಯಗಳಿಂದ ಕೂಡಿ ಸುಲಲಿತವಾಗಿ ಓದಿಸಿಕೊಳ್ಳುತ್ತವೆ. ಇದರಲ್ಲಿನ ಹಲವಾರು ವಿಷಯಗಳು ಇಂದಿಗೂ ಪ್ರಸ್ತುತವೆನಿಸಿಕೊಳ್ಳುತ್ತವೆ. ಈ ಪತ್ರಿಕೆಯ ಲೇಖನಗಳಲ್ಲಿ ಅನೇಕ ಆಂಗ್ಲ ಪದಗಳಿಗೆ ಸಮಾನಾರ್ಥಕವಾದ ಕನ್ನಡ ಪಾರಿಭಾಷಿಕ ಪದಗಳನ್ನು ಮೊದಲ ಬಾರಿಗೆ ಬಳಕೆಗೆ ತಂದಿರುವುದನ್ನು ಗುರುತಿಸಬಹುದು. ಹೀಗೆ ಕನ್ನಡದಲ್ಲಿ ಪಾರಿಭಾಷಿಕ ಪದಗಳ ವ್ಯಾಪಕ ಬಳಕೆಗೆ ಈ ಪತ್ರಿಕೆ ನಾಂದಿ ಹಾಡಿತು ಎನ್ನಬಹುದು. ಇದರಲ್ಲಿನ ಹಲವು ಲೇಖನಗಳ ಶೈಲಿಯು ಆಕರ್ಷಕವಾಗಿದ್ದು ಈಗಿನ ಲೇಖಕರಿಗೂ ಮಾದರಿಯಾಗಿದೆ. ವಿಜ್ಞಾನವು ಯಾವುದೇ ದೇಶಭಾಷೆಯ ಅಳವಿಗೆ ಒಳಪಡಬಲ್ಲುದು ಎಂಬುದು ವಿಜ್ಞಾನ ಪತ್ರಿಕೆಯ ಲೇಖನಗಳನ್ನು ಓದಿದೊಡನೆ ಅರ್ಥವಾಗುತ್ತದೆ. ಕನ್ನಡ ವಿಜ್ಞಾನ ಸಾಹಿತ್ಯದ ಅಭಿವೃದ್ಧಿಗೆ ಈ ಪತ್ರಿಕೆಯ ಕಾಣಿಕೆ ಗಣನೀಯವಾದುದು.

ಪ್ರಕಾಶಕರು ನಮ್ಮ ಜನರಿಂದ ಇಂತಹ ಪತ್ರಿಕೆಗಳಿಗೆ ತಕ್ಕ ಪ್ರೋತ್ಸಾಹವು ದೊರೆಯುವುದು ಕೇವಲ ಅನುಮಾನದ ವಿಷಯವಾಗಿದೆ. ಪ್ರೋತ್ಸಾಹ ದೊರೆಯದೆ ಹೋದಲ್ಲಿ ಒಂದು ವರ್ಷದ ಮೇಲೆ ನಡೆಯಲಾರದು ಎಂದು ತಮ್ಮ ಅರಿಕೆಯಲ್ಲಿ ಊಹಿಸಿದ್ದಂತೆ ದುರದೃಷ್ಟವಶಾತ್ ಈ ವಿಜ್ಞಾನ ಮಾಸಪತ್ರಿಕೆಯು ಸು. ಒಂದೂವರೆ ವರ್ಷಗಳ ಕಾಲ ಮಾತ್ರ ಪ್ರಕಟವಾಗಿ ನಿಂತುಹೋಯಿತು.

ಆಗಿನ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯು ಮಂದಗತಿಯಲ್ಲಿದ್ದು, ಭಾರತದಲ್ಲಿ ವಿಜ್ಞಾನದ ಕಲಿಕೆ ಅಂಬೆಗಾಲಿಡುತ್ತಿದ್ದುದರಿಂದ ಈ ಪತ್ರಿಕೆಗೆ ಸಾರ್ವಜನಿಕರ ಪ್ರೋತ್ಸಾಹ ದೊರೆಯದಿದ್ದುದು ಆಶ್ಚರ್ಯವೇನಲ್ಲ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನಗಳೇ ಸರ್ವಸ್ವ ಎಂದು ಹೇಳುವ ಈ ಕಾಲದಲ್ಲಿ, ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಹೊರಬರುತ್ತಿರುವ ಲೇಖನಗಳು ಹಾಗೂ ಗ್ರಂಥಗಳ ಮಹಾಪೂರದಲ್ಲಿ ಕನ್ನಡ ವಿಜ್ಞಾನ ಬರವಣಿಗೆಯ ಬಗ್ಗೆ ಸಾರ್ವಜನಿಕರಲ್ಲಿ ಇದೇ ಬಗೆಯ ಅನಾದರ, ನಿರುತ್ಸಾಹಗಳು ಕಂಡುಬರುತ್ತಿರುವುದು ವಿಪರ್ಯಾಸದ ಸಂಗತಿ.

ಮುಂದೆ ಕನ್ನಡದಲ್ಲಿ ಅನೇಕ ವೈಜ್ಞಾನಿಕ ಪುಸ್ತಕಗಳು, ಬಿಡಿ ಲೇಖನಗಳು ಪ್ರಕಟವಾಗುತ್ತಾ ಬಂದರೂ ವೈಜ್ಞಾನಿಕ ಲೇಖನಗಳಿಗೆ ಮೀಸಲಾದ ಪತ್ರಿಕೆಯ ಪ್ರಕಟನೆಯ ಎರಡನೆಯ ಪ್ರಯತ್ನ ಇದಾದ 33 ವರ್ಷಗಳ ನಂತರವೇ ಸಾಧ್ಯವಾಯಿತು ಎನ್ನಬೇಕು. ಈ ದಿಸೆಯಲ್ಲಿ 1950ರಲ್ಲಿ ಬಿ.ವಿ. ಸುಬ್ಬರಾಯಪ್ಪನವರು ಪ್ರಕಟಿಸಲಾರಂಭಿಸಿದ ವಿಜ್ಞಾನ ಯುಗ ಎಂಬ ಮಾಸಪತ್ರಿಕೆಯೂ ಸಹ ಸು. 9 ತಿಂಗಳು ಮಾತ್ರ ಬೆಳಕನ್ನು ಕಂಡಿತು.

ಸ್ವಾತಂತ್ರ್ಯಾನಂತರ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ದೊರೆತ ಪ್ರಾಮುಖ್ಯತೆಯ ಕಾರಣ ಈ ವಿಷಯಗಳ ಅಧ್ಯಯನಕ್ಕೆ ಅತಿ ಹೆಚ್ಚಿನ ಮಹತ್ವ ದೊರೆಯಲಾರಂಭಿಸಿತು. ವೈಜ್ಞಾನಿಕ, ತಾಂತ್ರಿಕ ಹಾಗೂ ಔದ್ಯಮಿಕ ಸಂಸ್ಥೆಗಳು ಹುಟ್ಟಿಕೊಂಡು ವ್ಯಾಪಕವಾಗಿ ಬೆಳೆಯಲಾರಂಭಿಸಿದವು. ಈ ಕಾಲದಲ್ಲಿ ಕನ್ನಡಾಭಿಮಾನಿಗಳಾದ ವಿಜ್ಞಾನ ಪದವೀಧರರ ಸಂಖ್ಯೆಯು ಗಣನೀಯವಾಗಿ ಬೆಳೆಯಿತು. ಕಾಲೇಜುಮಟ್ಟದಲ್ಲೂ ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸುವ ಪ್ರಯತ್ನಗಳು ನಡೆದವು. ಇದೇ ಸಂದರ್ಭದಲ್ಲಿ ಶಿವರಾಮ ಕಾರಂತರ ವಿಜ್ಞಾನ ಪ್ರಪಂಚ ವಿಶ್ವಕೋಶ, ಆರ್.ಎಲ್. ನರಸಿಂಹಯ್ಯನವರ ಹಲವಾರು ವಿಜ್ಞಾನ ಗ್ರಂಥಗಳು, ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಹಲವಾರು ವಿಜ್ಞಾನ ಗ್ರಂಥಗಳ ಪ್ರಕಟಣೆಗಳಿಂದ ಉತ್ತೇಜಿತವಾಗಿ ವಿಜ್ಞಾನದ 2 ಪತ್ರಿಕೆಗಳು ಪ್ರಕಟವಾಗಲಾರಂಭಿಸಿದವು. ಮೊದಲನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ಲಿನ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ 1965ರಲ್ಲಿ ಆರಂಭವಾದ ವಿಜ್ಞಾನಲೋಕ ಮಾಸಪತ್ರಿಕೆಯು 12 ವರ್ಷಗಳ ಕಾಲ ಸತತವಾಗಿ ಪ್ರಕಟಗೊಂಡು ಇತಿಹಾಸವನ್ನೇ ನಿರ್ಮಿಸಿತು. ಶ್ರೀ ಪಾ. ದೇವರಾಯ ಅವರ ತಣಿಯದ ಉತ್ಸಾಹ ಶ್ರೀ ಅಡ್ಯನಡ್ಕ ಕೃಷ್ಣಭಟ್ಟ ಅವರ ಸಂಪಾದಕತ್ವ ಮತ್ತು ಇವರ ಹಲವಾರು ಮಿತ್ರರ ಆತ್ಮೀಯ ಸಹಕಾರಗಳಿಂದ ಈ ಪತ್ರಿಕೆಯ ಪ್ರಕಟನೆ ಸಾಕಷ್ಟು ಯಶಸ್ವಿಯೂ ಆಯಿತೆನ್ನಬಹುದು. ಸರಳ ವಿಜ್ಞಾನ ಲೇಖನಗಳಲ್ಲದೆ ವಿಜ್ಞಾನ ಮುನ್ನಡೆ, ಸುದ್ದಿ ಸಾರ, ನಡೆದದ್ದು, ಕಂಡದ್ದು, ಏಕೆ ಹೀಗಾಯಿತು, ನೀವೆಷ್ಟು ಕಲಿತಿರಿ ಮುಂತಾದ ಜನಪ್ರಿಯ ಶೀರ್ಷಿಕೆಗಳಡಿಯಲ್ಲಿ ಲೇಖನಗಳ ಪ್ರಕಟನೆಗೆ ವಿದ್ಯಾರ್ಥಿಗಳನ್ನೂ, ಆಸಕ್ತ ಸಾರ್ವಜನಿಕರನ್ನೂ ತೊಡಗಿಸಿದ ಈ ಪತ್ರಿಕೆಯ ಪ್ರಕಾಶಕರ ಪ್ರಯತ್ನ ಅಭಿನಂದನಾರ್ಹವಾದುದು. ಅಚ್ಚುಕಟ್ಟಾಗಿ, ವ್ಯವಸ್ಥಿತ ರೀತಿಯಲ್ಲಿ ಪ್ರಕಟವಾಗುತ್ತಿದ್ದ ಈ ಪತ್ರಿಕೆಯು 12 ವರ್ಷಗಳ ನಂತರ ಕಾರಣಾಂತರಗಳಿಂದ ನಿಂತುಹೋದುದು ವಿಷಾದಕರ ಸಂಗತಿ.

ಇದೇ ಕಾಲಾವಧಿಯಲ್ಲಿ ಅಂದರೆ 1969ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಕಟನೆಯಾದ ಪ್ರಬುದ್ಧ ಕರ್ನಾಟಕದ ಮಾದರಿಯಲ್ಲೇ ವಿಜ್ಞಾನ ಕರ್ನಾಟಕ ಎಂಬ ತ್ರೈಮಾಸಿಕ ಪತ್ರಿಕೆಯು ಪ್ರಕಟವಾಗಲಾರಂಭಿಸಿತು. ಇದರ ಪ್ರಕಟನೆಗೆ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸವಲತ್ತುಗಳು, ಸಂಪಾದನೆ ಹಾಗೂ ಪ್ರಸಾರ ಕಾರ್ಯಗಳಿಗೆ ಬೇಕಾದ ಸಿಬ್ಬಂದಿಗಳೆಲ್ಲವೂ ಕೂಡಿ ಸುಸಜ್ಜಿತ ವ್ಯವಸ್ಥೆ ಇದ್ದ ಕಾರಣ ಕನ್ನಡ ವಿಜ್ಞಾನ ಸಾಹಿತ್ಯದ ಬೆಳವಣಿಗೆ ಮತ್ತು ಜನಸಾಮಾನ್ಯರಿಗೆ ಆಧುನಿಕ ವಿಜ್ಞಾನ, ತಂತ್ರಜ್ಞಾನಗಳನ್ನು ಪರಿಚಯಿಸಲು ವಿಜ್ಞಾನ ಕರ್ನಾಟಕವು ಬಹುಮುಖ್ಯವಾದ ಸಾಧನವಾಗಬಹುದೆಂದು ನಿರೀಕ್ಷಿಸಲಾಯಿತು. ಈ ನಿರೀಕ್ಷೆಯು ನಿಜವೆನ್ನುವಂತೆ ಜೆ.ಆರ್. ಲಕ್ಷ್ಮಣರಾಯರ ದಕ್ಷ ನೇತೃತ್ವದಲ್ಲಿ ಉತ್ತಮ ಲೇಖನಗಳನ್ನೊಳಗೊಂಡು ವಿಜ್ಞಾನ ಕರ್ನಾಟಕವು ಆಕರ್ಷಕವಾಗಿ ಪ್ರಕಟವಾಗಲಾರಂಬಿಸಿತು. ಅನೇಕ ಹಿರಿಯ ಪ್ರಾಧ್ಯಾಪಕರುಗಳು ಸರಳ ಸುಂದರ ಶೈಲಿಯಲ್ಲಿ ಆಧುನಿಕ ವಿಜ್ಞಾನದ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಹಾಗೂ ಸಾಧನೆಗಳ ಪರಿಚಯ ಮಾಡಿಕೊಡಲಾರಂಭಿಸಿದರು. ಜೆ.ಆರ್. ಲಕ್ಷ್ಮಣರಾವ್, ಜಿ.ಟಿ. ನಾರಾಯಣರಾವ್, ಚಕ್ರವರ್ತಿ, ದೇವರಾಜ ಸರ್ಕಾರ್ ಮುಂತಾದ ಹಿರಿಯ ಪ್ರಾಧ್ಯಾಪಕರೂ ಹಾಗೂ ವಿಜ್ಞಾನಿಗಳು ಬಹುವಾಗಿ ಶ್ರಮಿಸಿ ಕನ್ನಡದ ವೈಜ್ಞಾನಿಕ ಲೇಖನಗಳ ಬರವಣಿಗೆಗೆ ಹೊಸ ಆಯಾಮವನ್ನು

ಒದಗಿಸಿಕೊಟ್ಟರು. ಸಿ.ವಿ. ರಾಮನ್, ಆರ್.ಎಲ್. ನರಸಿಂಹಯ್ಯ ಅವರನ್ನು ಕುರಿತ ವಿಜ್ಞಾನ ಕರ್ನಾಟಕದ ವಿಶೇಷ ಸಂಚಿಕೆಗಳು ಶ್ರೇಷ್ಠಮಟ್ಟದ್ದಾಗಿವೆ. ವಿಜ್ಞಾನ ಲೇಖನಗಳ ಅನುವಾದಕ್ಕೆ ಹಲವಾರು ಅನುಕರಣೀಯ ಮಾದರಿಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ದುರದೃಷ್ಟವಶಾತ್ ವಿಶ್ವವಿದ್ಯಾನಿಲಯವು ಇದರ ಪ್ರಕಟನೆಯಲ್ಲಿ ಹೆಚ್ಚು ಆಸಕ್ತಿ ತೋರದೆ ಹೋದುದರಿಂದಲೂ, ಆರ್ಥಿಕ ಮುಗ್ಗಟ್ಟಿನಿಂದಲೂ ಮತ್ತು ಹಲವು ವೈಯಕ್ತಿಕ ಕಾರಣಗಳಿಂದಲೂ ಸು. 15 ವರ್ಷಗಳ ನಂತರ ವಿಜ್ಞಾನ ಕರ್ನಾಟಕದ ಪ್ರಕಟನೆಯು ನಿಂತುಹೋಯಿತು. ಕನ್ನಡದ ದೃಷ್ಟಿಯಿಂದ ಇದು ಭಾರಿ ಹಿನ್ನೆಡೆ ಎನ್ನಬಹುದು.

ಇದರಂತೆಯೇ ಬೆಂಗಳೂರು ವಿಶ್ವವಿದ್ಯಾನಿಲಯದಿಂದ 1976ರಲ್ಲಿ ಆರಂಭವಾಗಿ ಉತ್ತಮ ವಿಜ್ಞಾನ ಲೇಖನಗಳನ್ನು ಒಳಗೊಂಡು ಪ್ರಕಟವಾಗುತ್ತಿದ್ದ ಜನಪ್ರಿಯ ವಿಜ್ಞಾನ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಲಾರಂಭಿಸಿದ ವಿಜ್ಞಾನ ಪತ್ರಿಕೆಗಳೂ ಸಹ ಕೆಲವೇ ವರ್ಷಗಳಲ್ಲಿ ಆರ್ಥಿಕ ಮುಗ್ಗಟ್ಟು ವೈಯಕ್ತಿಕ ಸಮಸ್ಯೆ ಹಾಗೂ ವಿಶ್ವವಿದ್ಯಾನಿಲಯಗಳ ಅನಾದರಗಳಿಗೆ ಈಡಾಗಿ ನಿಂತುಹೋದುದು ದೌರ್ಭಾಗ್ಯವೇ ಸರಿ. ವಿಜ್ಞಾನ, ತಂತ್ರಜ್ಞಾನ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿನ ನಾಗಾಲೋಟದ ಬೆಳವಣಿಗೆ, ಈ ವಿದ್ಯಾಭ್ಯಾಸಕ್ಕೆ ಈಗ ದೊರೆತಿರುವ ಅತಿ ಹೆಚ್ಚಿನ ಪ್ರಾಮುಖ್ಯತೆ, ಕರ್ನಾಟಕದಲ್ಲಿ ಸ್ಥಾಪಿತಗೊಂಡಿರುವ ವಿಜ್ಞಾನ ತಂತ್ರಜ್ಞಾನ ಸಂಸ್ಥೆಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳು ವಿಜ್ಞಾನ ಪತ್ರಿಕೆಗಳಿಗೆ ಇನ್ನೂ ವಿಶಾಲ ತಳಹದಿ, ಆರ್ಥಿಕ ಭದ್ರತೆ ಮತ್ತು ಸಿಬ್ಬಂದಿ ವರ್ಗಗಳನ್ನು ಒದಗಿಸಿ ಪ್ರಕಟನೆಗೆ ಪ್ರೋತ್ಸಾಹಿಸುವುದು ತನ್ನ ಆದ್ಯ ಕರ್ತವ್ಯವನ್ನಾಗಿಸಿಕೊಳ್ಳಬೇಕೆನಿಸುತ್ತದೆ.

ಈ ವಿಫಲತೆಗಳ ಜೊತೆಯಲ್ಲಿಯೇ 1970ರ ದಶಕದಲ್ಲಿ ಹೊಸದಾಗಿ ಎರಡು ವಿಜ್ಞಾನ ಪತ್ರಿಕೆಗಳು ಹುಟ್ಟಿಕೊಂಡು ಜನತೆಯಲ್ಲಿ ಕನ್ನಡದ ಮೂಲಕ ವಿಜ್ಞಾನದ ಕಂಪನ್ನು ಹರಡಲಾರಂಭಿಸಿದವು. 1975ರಲ್ಲಿ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳ ಕನ್ನಡ ಸಾಂಸ್ಕೃತಿಕ ಸಂಘದವರ ವಾರ್ಷಿಕ ವಿಜ್ಞಾನ ಪತ್ರಿಕೆ ಕಣಾದ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವತಿಯಿಂದ 1976ರಲ್ಲಿ ಆರಂಭವಾದ ಮಾಸಪತ್ರಿಕೆ ಬಾಲವಿಜ್ಞಾನಗಳು ಇಂದಿಗೂ ಯಶಸ್ವಿಯಾಗಿ ಪ್ರಕಟವಾಗುತ್ತಿವೆ. ವಿಜ್ಞಾನ ಪತ್ರಿಕೆಗಳ ಪ್ರಕಟನೆಯಲ್ಲಿ ಹಾಗೂ ಹಲವಾರು ವಿಶ್ವಕೋಶಗಳ ಸಂಪಾದಕರು ಹಾಗೂ ಹಿರಿಯರಾದ ಜೆ.ಆರ್. ಲಕ್ಷ್ಮಣರಾವ್, ಅಡ್ಯನಡ್ಕ ಕೃಷ್ಣಭಟ್ಟ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಪ್ರಾಧ್ಯಾಪಕರಾಗಿದ್ದ ದಿವಂಗತ ಎಂ.ಎ. ಸೇತೂರಾವ್, ಡಿ.ಆರ್. ಬಳೂರಗಿ, ಎಂ.ಆರ್. ನಾಗರಾಜ್ ಮುಂತಾದವರ ಸಂಘಟಿತ ಪ್ರಯತ್ನಗಳಿಂದಲೂ ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಲಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ಅನುದಾನಗಳಿಂದಲೂ, ವ್ಯವಸ್ಥಿತ ಕಾರ್ಯಾಲಯದಿಂದಲೂ ಸಜ್ಜುಗೊಂಡು ಬಾಲವಿಜ್ಞಾನವು ಕಳೆದ 30 ವರ್ಷಗಳಿಂದ ಯಶಸ್ವಿಯಾಗಿ ಪ್ರಕಟವಾಗುತ್ತಿದೆ. ರಾಜ್ಯದ ಎಲ್ಲಾ ಶಾಲೆಗಳಿಗಾಗಿ ಇದರ ಪ್ರತಿಗಳನ್ನು ಸರ್ಕಾರವೇ ಕೊಳ್ಳುತ್ತಿದೆ. ಶಾಲಾ ವಿದ್ಯಾರ್ಥಿಗಳಿಗೆ ಈ ಪತ್ರಿಕೆ ಉಪಯುಕ್ತವಾಗಿ ಮನ್ನಣೆ ಗಳಿಸಿಕೊಂಡಿದೆ. ಇದರಲ್ಲಿನ ಲೇಖನಗಳು ಶಾಲಾ ವಿದ್ಯಾರ್ಥಿಗಳನ್ನು ನೇರವಾಗಿ ಸಂಬೋಧಿಸುತ್ತವೆ. ಪ್ರಸಿದ್ಧ ವಿಜ್ಞಾನಿಗಳ ಪರಿಚಯಾತ್ಮಕ ಲೇಖನಗಳು, ನೀನೇ ಮಾಡಿ ನೋಡು ಶೀರ್ಷಿಕೆಯಲ್ಲಿನ ಪ್ರಯೋಗಗಳ ಪರಿಚಯ, ಪ್ರಶ್ನೋತ್ತರಗಳು ಯಶಗಳಿಸಿವೆ. ರಾಜ್ಯದ ವಿವಿಧ ನಗರಗಳಲ್ಲಿ ವಿಜ್ಞಾನಪರಿಷತ್ತಿನ ಹಲವು ಘಟಕಗಳು ಪ್ರಾರಂಭಗೊಂಡು ಬಾಲವಿಜ್ಞಾನದ ಉಪಯುಕ್ತತೆ ಮತ್ತು ಬಳಕೆಯನ್ನು ಹೆಚ್ಚಿಸಿವೆ. ಪ್ರತಿ ತಿಂಗಳೂ ಬಾಲವಿಜ್ಞಾನದ ಸಹಸ್ರಾರು ಪ್ರತಿಗಳು ಈಗ ಮುದ್ರಣಗೊಳ್ಳುತ್ತಿವೆ. ಹಲವರ ದೂರದೃಷ್ಟಿಯ ಅಭಾವದಿಂದಾಗಿ ಕೆಲವು ವರ್ಷಗಳ ಹಿಂದೆ ಇದರ ಪ್ರಕಟನೆಯೂ ನಿಲ್ಲುವ ಹಂತಕ್ಕೆ ಬಂದಿತ್ತು. ಆದರೆ ಪ್ರಾಜ್ಞರ ಒತ್ತಾಯ ಮತ್ತು ಸಮಯೋಚಿತ ತಿಳಿವಳಿಕೆಯಿಂದಾಗಿ ಒದಗಿಬಂದ ಆ ಕುತ್ತಿನಿಂದ ಬಾಲವಿಜ್ಞಾನವು ಪಾರಾಯಿತು.

1975ರಲ್ಲಿ ಪ್ರಕಟಣೆ ಆರಂಭಿಸಿದ ಕಣಾದ ವಿಜ್ಞಾನ ಪತ್ರಿಕೆಯು ಆಧುನಿಕ ವಿಜ್ಞಾನವನ್ನು ಭಾರತೀಯ ಭಾಷೆಗಳಲ್ಲಿ ಪ್ರಸಾರ ಮಾಡುವ ಒಂದು ಅಪೂರ್ವ ಪ್ರಯತ್ನವೆನಿಸಿ ಪ್ರಸಿದ್ಧವಾಗಿದೆ. ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳ ವಿಜ್ಞಾನಿಗಳ ಮನದ ಆಳದಲ್ಲಿ ಚಿಗುರಿ ಫಲಿಸಿರುವ, ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಸೇವೆ ಸಲ್ಲಿಸುತ್ತಿರುವ ಕಣಾದದ ಗುರಿ ಸ್ವಲ್ಪ ವಿಭಿನ್ನವಾದುದು. ಅತ್ಯಾಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಒಡನಾಟದಲ್ಲಿರುವ ವಿಜ್ಞಾನಿಗಳು, ತಮ್ಮ ಅಪಾರ ಮಾಹಿತಿ ಭಂಡಾರವನ್ನು ಮಾತೃಭಾಷೆಯಲ್ಲಿ ಸಮಾಜದೊಡನೆ ಹಂಚಿಕೊಳ್ಳುವುದು ತಮ್ಮ ಕರ್ತವ್ಯವೆಂದು ಭಾವಿಸಿರುವುದೇ ಈ ಪ್ರಕಟನೆಗೆ ಕಾರಣವಾಯಿತು. ಭಾರತದಾದ್ಯಂತ ಹರಡಿಕೊಂಡು ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲಿ ತೊಡಗಿರುವ ಅನೇಕ ವೈಜ್ಞಾನಿಕ ಸಂಸ್ಥೆಗಳನ್ನು ನಿರ್ದೇಶಿಸುತ್ತಿರುವ, ಕೇಂದ್ರ ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನಾ ಮಂಡಲಿಯ (ಸಿ.ಎಸ್.ಐಆರ್.) ನಿರ್ದೇಶಕ ಸೂತ್ರಗಳಲ್ಲಿ ವಿಜ್ಞಾನಿಗಳು ತಮ್ಮ ಅರಿವಿಗೆ ಬಂದ ಸಂಗತಿಗಳನ್ನು ಜನಸಾಮಾನ್ಯರಿಗೆ ಅವರದೇ ಭಾಷೆಯಲ್ಲಿ ತಿಳಿಸಬೇಕೆಂಬ ಸೂತ್ರವೂ ಒಂದಾಗಿದ್ದು, ಅಂತೆಯೇ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಯ ವಿಜ್ಞಾನಿಗಳು ವೈಮಾಂತರಿಕ್ಷ ಕ್ಷೇತ್ರವಲ್ಲದೆ ಇತರ ಅತ್ಯಾಧುನಿಕ ಸಂಶೋಧನಾ ಕ್ಷೇತ್ರಗಳಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಅನೇಕ ಸಂಗತಿಗಳನ್ನು ಸಾಧ್ಯವಾದಷ್ಟೂ ಸರಳವಾಗಿ ಕಣಾದದ ಮೂಲಕ ತಿಳಿಸಿಕೊಡಲು ಯತ್ನಿಸಿದ್ದಾರೆ. ಭಾರತದ ಯಾವುದೇ ವೈಜ್ಞಾನಿಕ ಸಂಸ್ಥೆಯ ವಿಜ್ಞಾನಿ ಸಮುದಾಯವೂ ಈ ಪ್ರಯತ್ನವನ್ನು ನಡೆಸದಿರುವುದು ಸಾಮಾನ್ಯರನ್ನು ವಿಜ್ಞಾನ ಕ್ಷೇತ್ರದಿಂದ ಹೊರಗುಳಿಯುವಂತೆ ಮಾಡಿದೆ. ಕಣಾದವು ಇತರ ವಿಜ್ಞಾನಿಗಳಿಗೆ ಒಂದು ಮಾದರಿ ಎಂಬ ಅಭಿಪ್ರಾಯವು ಕನ್ನಡ ಸಾಂಸ್ಕೃತಿಕ ಸಂಘದ ಮತ್ತು ಎನ್.ಎ.ಎಲ್‌ನ ಹೆಗ್ಗಳಿಕೆಯಾಗಿದೆ. ಕಣಾದದಲ್ಲಿ ಈವರೆಗೆ 600 ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿದ್ದು 200ಕ್ಕೂ ಹೆಚ್ಚು ಲೇಖನಗಳು ವೈಮಾಂತರಿಕ್ಷ ಕ್ಷೇತ್ರಗಳಿಗೆ ಸಂಬಂಧಿಸಿವೆ. ವಿಜ್ಞಾನ ಪ್ರಪಂಚದ ಪ್ರಚಲಿತ ವಿದ್ಯಮಾನಗಳನ್ನು ತೆರೆದಿಡುತ್ತಿರುವ ಕಣಾದದ ಲೇಖನಗಳು ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಹತ್ತಾರು ಸರಳ, ಜನಪ್ರಿಯ ಲೇಖನಗಳಿಗೆ ದಾರಿಮಾಡಿಕೊಡಬಲ್ಲವು ಎಂಬುದು ಅನೇಕರ ಅಭಿಪ್ರಾಯವಾಗಿದೆ. ಜೊತೆಗೆ ಕಣಾದದ ವತಿಯಿಂದ ಪ್ರತಿವರ್ಷ ನಡೆಸಲಾಗುತ್ತಿರುವ ವಿಜ್ಞಾನ ಪ್ರಬಂಧ ಸ್ಪರ್ಧೆಯು ರಾಜ್ಯಾದ್ಯಂತ ಅನೇಕ ಲೇಖಕರ ಸೃಷ್ಟಿಗೆ ಮತ್ತು ವಿಜ್ಞಾನ ಬರವಣಿಗೆಗೆ ಸ್ಫೂರ್ತಿಯಾಗಿದೆ. ಕಣಾದದ ವಿಜ್ಞಾನ ರಸಪ್ರಶ್ನೆಯು, ಕನ್ನಡ ವಿದ್ಯಾರ್ಥಿಗಳಲ್ಲಿ ಪ್ರೌಢ ವಿಜ್ಞಾನ ಸಾಹಿತ್ಯವನ್ನೋದುವ ಅಭಿರುಚಿಯನ್ನು ಬೆಳೆಸುತ್ತಿದೆ. ಸಿ.ಎಸ್.ಐ.ಆರ್‌ನ ಆರ್ಥಿಕ ಸಹಾಯ, ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗ ಶಾಲೆಗಳ ಪರೋಕ್ಷ ಬೆಂಬಲ ಹಾಗೂ ಅನೇಕ ಉತ್ಸಾಹಿ ಕಾರ್ಯಕರ್ತರ ಶ್ರಮದ ಫಲವಾಗಿ ಕಣಾದವು ಉಳಿದು ಬೆಳೆಯುತ್ತಿದೆ.

ಕನ್ನಡ ವಿಜ್ಞಾನಿಗಳು ಎಸಗಿದ ಮತ್ತೊಂದು ಸಾಹಸ ಬೆಳಗು ವಿಜ್ಞಾನ ಪತ್ರಿಕೆಯ ಪ್ರಕಟನೆ. ಮುಂಬೈನಲ್ಲಿರುವ ಭಾಭಾ ಅಣುಶಕ್ತಿ ಕೇಂದ್ರದ ಕನ್ನಡ ಸಂಘವು ಈ ಪತ್ರಿಕೆಯನ್ನು ಪ್ರಕಟಿಸುತ್ತಿತ್ತು. ಅನೇಕ ಮೌಲಿಕ ಲೇಖನಗಳು ಈಗಾಗಲೇ ಇದರಲ್ಲಿ ಬೆಳಕನ್ನು ಕಂಡಿವೆ. ಅಚ್ಚುಕಟ್ಟಾಗಿ ಈ ಪತ್ರಿಕೆಯನ್ನು ಹೊರತರುತ್ತಿದ್ದ ಕಾರ್ಯಕರ್ತರು ಅಭಿನಂದನಾರ್ಹರು. ರಾಮಚಂದ್ರ ಭಟ್, ವ್ಯಾಸರಾವ್ ನಿಂಜೂರು ಮುಂತಾದವರ ಶ್ರಮ ಸಾರ್ಥಕವಾದುದು. ಈ ಪತ್ರಿಕೆಯ ಅಂಗವಾಗಿ ಎರಡು ವರ್ಷಗಳಿಗೊಮ್ಮೆ ಆಧುನಿಕ ವಿಜ್ಞಾನ ವಿಷಯ ವೊಂದನ್ನಾರಿಸಿಕೊಂಡು ಕನ್ನಡದಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಿ ಅಲ್ಲಿ ಮಂಡಿಸಲ್ಪಟ್ಟ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದುದು ವಾಡಿಕೆ. ಮುಂಬೈನ ಕನ್ನಡ ಮಾಧ್ಯಮದ ಶಾಲೆಗಳ ವಿದ್ಯಾರ್ಥಿಗಳಿಗಾಗಿ ವೈಜ್ಞಾನಿಕ ಲೇಖನ ಸ್ಪರ್ಧೆಯ ಆಯೋಜನೆ ಮತ್ತು ರಾಷ್ಟ್ರಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ವಿಷಯವನ್ನು ಕುರಿತ ವಿಜ್ಞಾನ ಲೇಖನ ಸ್ಪರ್ಧೆಯ ಆಯೋಜನೆ, ಬೆಳಗು ಪ್ರಕಟನೆಯ ಮೈಲುಗಲ್ಲುಗಳಾಗಿದ್ದವು.

ಇಂತಹ ಮತ್ತೊಂದು ಪ್ರಯತ್ನವನ್ನೂ ಇಲ್ಲಿ ಉಲ್ಲೇಖಿಸಬಹುದು. ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದ ಕೆಲವು ಕಾರ್ಯಕರ್ತರ ಉತ್ಸಾಹದ ಪ್ರಯತ್ನಗಳಿಂದ ಆಹಾರ ಸಂಶೋಧನಾಲಯವು ತನ್ನ ಅಧಿಕೃತ ಪ್ರಕಟನೆಯನ್ನಾಗಿ ಆಹಾರ ವಿಜ್ಞಾನ ಎಂಬ ಮಾಸಪತ್ರಿಕೆಯನ್ನು 1960ರ ದಶಕದಲ್ಲೇ ಪ್ರಕಟಿಸಲಾರಂಭಿಸಿತು. ಹಲವು ಸಹಸ್ರ ಸಂಖ್ಯೆಯಲ್ಲಿ ಮುದ್ರಣವಾಗಿ ಆಹಾರ ವಿಜ್ಞಾನವನ್ನು ಜನತೆಯ ಬಳಿಗೆ ಕೊಂಡೊಯ್ಯುತ್ತಾ ಬಹು ಯಶಸ್ವಿಯಾಗಿ ಪ್ರಕಟವಾಗುತ್ತಿದ್ದ ಈ ಆಹಾರ ವಿಜ್ಞಾನ ಪತ್ರಿಕೆಯೂ ಸಹ ಇದ್ದಕ್ಕಿದ್ದಂತೆ 1990ರ ವೇಳೆಗೆ ನಿಂತುಹೋಯಿತು. ಈ ನಿಲುಗಡೆ ಯಾವ ರೀತಿಯಲ್ಲೂ ಸಮರ್ಥನೀಯ ವಲ್ಲ. ಈಗಲೂ ಈ ಪತ್ರಿಕೆಯು ಪುನರಾರಂಭ ವಾಗುವುದನ್ನೇ ಕನ್ನಡಿಗರು ನಿರೀಕ್ಷಿಸುತ್ತಿದ್ದಾರೆ.

ಕನ್ನಡದಲ್ಲಿ ಪತ್ರಿಕಾ ಪ್ರಕಟನೆಯೇ ಒಂದು ಗಂಭೀರ ಸಮಸ್ಯೆಯಾಗಿರುವ ಈ ಕಾಲದಲ್ಲಿ 1992 ಜುಲೈನಿಂದ ಪ್ರಕಟವಾಗುತ್ತಿರುವ ದಿಕ್ಸೂಚಿ ಎಂಬ ಮಾಸಪತ್ರಿಕೆಯು ರಂಜನೆಗೆ ಪ್ರಾಮುಖ್ಯತೆ ನೀಡದೆ, ಕೇವಲ ತಿಳಿವಳಿಕೆ ನೀಡುವ, ಬಹುಮಟ್ಟಿಗೆ ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸುತ್ತಿದೆ. ಪ್ರಚಲಿತ ವಿದ್ಯಮಾನಗಳನ್ನು ಕುರಿತ ಮುಖಪುಟ ಲೇಖನಗಳು, ಗಣಕದ ಬಗ್ಗೆ ಪೂರ್ಣ ಅರಿವನ್ನು ನೀಡುವ ಲೇಖನಮಾಲೆ, ಪ್ರಶ್ನೋತ್ತರಗಳು, ಪ್ರತಿಪುಟದ ಅಡಿಯಲ್ಲಿ ವೈಜ್ಞಾನಿಕ ಸಂಗತಿಯ ಚುಟುಕುಗಳು ಹೀಗೆ ಮುದ್ರಿತವಾಗುವ ಅನೇಕ ಪುಟಗಳು ವೈಜ್ಞಾನಿಕ ವಿಚಾರಗಳನ್ನು ಕನ್ನಡದಲ್ಲಿ ಓದುವ ಪ್ರವೃತ್ತಿಯನ್ನು ಜನತೆಯಲ್ಲಿ ಬೆಳೆಸುವುದಕ್ಕೆ ಸಹಾಯಕವಾಗಿವೆ. ಈ ಪತ್ರಿಕೆಯು ಸಾಕಷ್ಟು ಪ್ರಸಾರದಲ್ಲಿರುವುದು ಸಂತಸದ ಸಂಗತಿ. ಈ ಪತ್ರಿಕೆಯ ಪ್ರಕಾಶಕರು ವೈದ್ಯ ವಿಜ್ಞಾನಕ್ಕೆ ಮೀಸಲಾದ ಜೀವನಾಡಿ ಎಂಬ ಪತ್ರಿಕೆಯ ಪ್ರಕಟನೆಯನ್ನು ಪ್ರಾರಂಭಿಸಿ ಪ್ರಕಟಿಸುತ್ತಿದ್ದಾರೆ.

ಸು. ಹತ್ತು ವರ್ಷಗಳ ಹಿಂದೆ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಪುಟಾಣಿ ವಿಜ್ಞಾನ ಎಂಬ ಮಾಸಪತ್ರಿಕೆ ಪ್ರಕಟನೆಯ ಸಾರ್ಥಕ ಪ್ರಯತ್ನವೂ ಆರಂಭವಾಯಿತು. ಚಿತ್ರದುರ್ಗದ ಹಲವು ಉತ್ಸಾಹಿ ಕಾರ್ಯಕರ್ತರ ಈ ಪ್ರಕಟನೆಯ ಭಾಷೆ ಸರಳವಾಗಿದ್ದು, ವಿಪುಲ ರೇಖಾಚಿತ್ರಗಳು ಮತ್ತು ಸುಲಭ ಮಾಹಿತಿಗಳೊಡನೆ ಮಕ್ಕಳಿಗೆ ವಿಜ್ಞಾನದ ಸಂಗತಿಗಳನ್ನು ತಿಳಿಸುತ್ತಿತ್ತು. ದುರದೃಷ್ಟವಶಾತ್ ಈ ಪತ್ರಿಕೆಯ ಪ್ರಕಟಣೆಯೂ ನಿಂತುಹೋಯಿತು.

ಕನ್ನಡ ವಿಜ್ಞಾನ ಪತ್ರಿಕೆಗಳ ಪ್ರಕಟಣೆಗಳ ಮತ್ತೊಂದು ಪ್ರಮುಖ ಘಟ್ಟ ವಿಜ್ಞಾನ ಸಂಗಾತಿ ಮಾಸಪತ್ರಿಕೆಯ ಪ್ರಕಟಣೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ತನ್ನ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ 1993 ಆಗಸ್ಟ್‌ನಿಂದ ಪ್ರಕಟಿಸುತ್ತಿದ್ದ ಈ ಪತ್ರಿಕೆಯು ವರ್ಣಮಯ ಚಿತ್ರಗಳನ್ನೊಳಗೊಂಡು ಸುಂದರವಾಗಿ ಮುದ್ರಣಗೊಳ್ಳುತ್ತಿತ್ತು. ಪ್ರಸಿದ್ಧ ಇಂಗ್ಲಿಷ್ ಮಾಸಪತ್ರಿಕೆ ಸೈನ್ಸ್ ರಿಪೋರ್ಟರ್‌ನ ಸಂಪಾದಕ ವರ್ಗದವರ ಸಲಹೆ ಸಹಕಾರಗಳನ್ನು ಒಳಗೊಂಡ ಈ ಪತ್ರಿಕೆಯಲ್ಲಿ ಅನೇಕ ಶ್ರೇಷ್ಠಮಟ್ಟದ ಲೇಖನಗಳು ಪ್ರಕಟವಾಗಿವೆ. ಈ ಪತ್ರಿಕೆಯೂ ಗಟ್ಟಿಯಾಗಿ ನಿಂತು ಕನ್ನಡ ವಿಜ್ಞಾನ ಸಾಹಿತ್ಯದ ಬೆಳವಣಿಗೆಗೆ ಹೆಚ್ಚಿನ ಕಾಣಿಕೆ ನೀಡಲೆಂದು ನಿರೀಕ್ಷಿಸುತ್ತಿದ್ದಾಗಲೇ ಇದರ ಪ್ರಕಟಣೆ ನಿಂತುಹೋದುದು ದುರದೃಷ್ಟಕರ ಎನ್ನಬಹುದು.

ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮೀಸಲಾದ ಪತ್ರಿಕೆಗಳನ್ನು ಕುರಿತ ಈ ಲೇಖನದಲ್ಲಿ ವೈದ್ಯ ವಿಜ್ಞಾನದ ಪತ್ರಿಕೆಗಳನ್ನು ನಾನು ಪ್ರಸ್ತಾಪಿಸಿಲ್ಲ. ಈ ದಿಸೆಯಲ್ಲಿ ಮುಖ್ಯವಾಗಿ ಆಯುರ್ವೇದ ವಿಜ್ಞಾನದ ಹಲವಾರು ಪತ್ರಿಕೆಗಳನ್ನು ನಾವು ಗುರುತಿಸಬಹುದು. ಈ ಪತ್ರಿಕೆಗಳ ಪ್ರಕಟಣೆಯ ಸಾಹಸಗಾಥೆಯು ಪ್ರತ್ಯೇಕ ಲೇಖನವಾಗಿಬಿಡುತ್ತದೆ.

ಕನ್ನಡದಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಲೇಖನಗಳ ಸೃಷ್ಟಿ ಮತ್ತು ಅವುಗಳ ಓದುಗರು ಎಂದಾಗ ಎರಡು ಅಭಿಪ್ರಾಯಗಳು ಬೆಳೆದು ಬಂದಿರುವುದನ್ನು ನಾವು ಗುರುತಿಸಬಹುದು. ಮೊದಲನೆಯದಾಗಿ ಸಾಂಪ್ರದಾಯಿಕ ಶಾಲಾಕಾಲೇಜು, ಸ್ನಾತಕೋತ್ತರ ತರಗತಿಗಳ ಅಧ್ಯಾಪಕರು, ವಿದ್ಯಾರ್ಥಿವರ್ಗ ಹಾಗೂ ಜನಸಾಮಾನ್ಯರಿಗೆ ಮಾತ್ರ ಇದು ಸಂಬಂಧಿಸಿದೆ. ಮತ್ತು ಎರಡನೆಯದಾಗಿ ಎಲ್ಲ ಲೇಖನಗಳೂ ಅತಿ ಸರಳವಾಗಿದ್ದು ಕೇವಲ ಜನಸಾಮಾನ್ಯರನ್ನು ಮಾತ್ರ ಉದ್ದೇಶಿಸಿರಬೇಕು ಎಂಬುದೇ ಈ ಅಭಿಪ್ರಾಯಗಳ ಸಾರಾಂಶ. ಈ ದೃಷ್ಟಿಕೋನವು ಬದಲಾಗಬೇಕು. ಏಕೆಂದರೆ ಈಗ ಪ್ರತಿ ವರ್ಷವೂ ಅಸಂಖ್ಯಾತ ಸಂಖ್ಯೆಯ ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪದವೀಧರರಾಗುತ್ತಿದ್ದಾರೆ. ಅನೇಕ ಸಂಖ್ಯೆಯಲ್ಲಿರುವ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಅಧ್ಯಯನ ಮಾಡುತ್ತಿರುವ ಹಾಗೂ ದುಡಿಯುತ್ತಿರುವ ಕನ್ನಡ ಬಲ್ಲ ಉತ್ಸಾಹಿಗಳನ್ನು ಸಹ ಕನ್ನಡ ವಿಜ್ಞಾನ ಸಾಹಿತ್ಯದ ಬರೆವಣಿಗೆಗೆ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಆಧುನಿಕ ವಿಚಾರಗಳು ಜನತೆಯನ್ನು ತಲುಪಲು ಸಾಧ್ಯ. ಲೇಖನಗಳು ಜನಸಾಮಾನ್ಯರಿಗೆ ಮಾತ್ರ ಎಂಬ ನಿರ್ಬಂಧವಿರಬಾರದು. ಏಕೆಂದರೆ ಕೇವಲ ವಿಜ್ಞಾನದ ಮತ್ತು ತಂತ್ರಜ್ಞಾನದ ಅತ್ಯಾಧುನಿಕ ವಿಚಾರಗಳನ್ನು ತಿಳಿಸಲು ಹೊರಟಾಗ ಜನಪ್ರಿಯ ಲೇಖನವೆನ್ನುವ ಮಿತಿಯಿಂದ ಹೊರಬರಬೇಕಾಗುವುದು. ಆದ್ದರಿಂದಲೇ ಈ ಎರಡೂ ರೀತಿಯ ಲೇಖನಗಳು ರಚಿತವಾಗಿ ಪ್ರಕಟವಾಗಬೇಕು. ವಿಶೇಷ ಲೇಖನಗಳನ್ನು ಓದುವವರ ಸಂಖ್ಯೆಯನ್ನು ಹೆಚ್ಚಿಸಲು ಈಗ ಸಾಕಷ್ಟು ಅವಕಾಶಗಳಿವೆ. ಈ ದಿಸೆಯಲ್ಲಿ ವಿಜ್ಞಾನ ಸಾಹಿತ್ಯವು ನಿಂತನೀರಿನಂತೆಯೇ ಕೊಳೆಯುತ್ತಿದೆ. ಆದ್ದರಿಂದಲೇ ವಿಜ್ಞಾನ ಹಾಗೂ ತಂತ್ರಜ್ಞಾನ ಮತ್ತು ಔದ್ಯಮಿಕ ಕ್ಷೇತ್ರದ ಸಂಸ್ಥೆಗಳಲ್ಲಿರುವ ಕನ್ನಡಿಗರನ್ನು ಕನ್ನಡ ವಿಜ್ಞಾನ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಸಂಘಟಿಸಬೇಕು. ಅವರುಗಳು ತಾವು ಅರಿತ ವಿಚಾರಗಳನ್ನು ತಮ್ಮ ಮಾತೃಭಾಷೆಯಲ್ಲಿ ತಿಳಿಸುವ ಔಚಿತ್ಯ–ಕರ್ತವ್ಯಗಳನ್ನು, ಅವರಿಗೆ ಮನವರಿಕೆ ಮಾಡಿಸಬೇಕು. ಇಂತಹ ಸಂಸ್ಥೆಗಳಲ್ಲಿರುವ ಕನ್ನಡಿಗರು ತಾವು ನಿರ್ಮಿಸಿಕೊಂಡ ದಂತಗೋಪುರಗಳಿಂದ ಹೊರಬಂದು, ಸಂಘಟಿತರಾಗಿ ತಮ್ಮ ಸಂಸ್ಥೆಗಳಿಂದ ವಿಜ್ಞಾನ–ತಂತ್ರಜ್ಞಾನ ನಿಯತಕಾಲಿಕೆಗಳನ್ನು ಪ್ರಕಟಿಸಲು ಆರಂಭಿಸಬೇಕು. ಇವರೊಡನೆ ಈ ಸಂಸ್ಥೆಗಳು ತಮ್ಮ ಅಧಿಕೃತ ಚಟುವಟಿಕೆಗಳಿಗೆ ಸಂಬಂಧಿಸಿದ ವಿಜ್ಞಾನ ಮತ್ತು ತಂತ್ರಜ್ಞಾನ ವಿಚಾರಗಳನ್ನು ಜನತೆಗೆ ತಿಳಿಸುವ ಜವಾಬ್ದಾರಿ ಅರಿತುಕೊಂಡು ಅಂತಹ ಕಾರ್ಯಕ್ರಮಗಳಿಗೆ ಹೆಚ್ಚಿಲ್ಲದಿದ್ದರೂ ಕನಿಷ್ಠ ಸೌಲಭ್ಯಗಳನ್ನಾದರೂ ಅಧಿಕೃತವಾಗಿ ಒದಗಿಸಬೇಕು.

ಹೀಗೆ ಗಣಕ, ಎಲೆಕ್ಟ್ರಾನಿಕ್ಸ್, ಬಾಹ್ಯಾಂತರಿಕ್ಷ, ಮಾಹಿತಿ ತಂತ್ರಜ್ಞಾನ, ಸಂಘಟಿತ ವಸ್ತುಗಳು, ವೈಮಾನಿಕೀಯ, ದೃಕ್‌ಶ್ರವಣ ತಂತ್ರಜ್ಞಾನ, ಅಣುವಿಜ್ಞಾನ, ಭೌತವಿಜ್ಞಾನ, ಜೈವಿಕ ತಂತ್ರಜ್ಞಾನ ಮುಂತಾದ ಸಾರ್ವಜನಿಕ ಮತ್ತು ಖಾಸಗೀ ವಲಯದ ಉದ್ಯಮಗಳು ತಮ್ಮ ಕ್ಷೇತ್ರದಲ್ಲಿನ ಬೆಳವಣಿಗೆ ಕುರಿತ ಪ್ರತ್ಯೇಕ ನಿಯತಕಾಲಿಕೆಗಳನ್ನು ವಿವಿಧ ಸಂಸ್ಥೆಗಳ ಮೂಲಕ ಕನ್ನಡದಲ್ಲಿ ಪ್ರಕಟಿಸಲಾರಂಭಿಸಬೇಕು. ಇದರಿಂದ ಜನಸಾಮಾನ್ಯರಿಗೂ, ವೃತ್ತಿನಿರತರಿಗೂ ಹಾಗೂ ಮುಖ್ಯವಾಗಿ ವಿದ್ಯಾರ್ಥಿಗಳಿಗೂ ಜ್ಞಾನಾರ್ಜನೆಗೆ ಉಪಯೋಗವಾಗುತ್ತದೆ. ಹೀಗಾದಾಗಲೇ ಕನ್ನಡ ಜನತೆಯು ದಾಪುಗಾಲಿಡುತ್ತಿರುವ ವಿಜ್ಞಾನದ ಜೊತೆ ಹೆಜ್ಜೆ ಹಾಕಲು ಸಾಧ್ಯವಾಗುತ್ತದೆ.

ಪತ್ರಿಕೆಗಳನ್ನು ಪ್ರಕಟಿಸುವಷ್ಟೇ ಸಮಸ್ಯೆಗಳು ಅವುಗಳ ಪ್ರಸಾರದಲ್ಲೂ ಇವೆ. ಬಾಲವಿಜ್ಞಾನ, ವಿಜ್ಞಾನ ಸಂಗಾತಿ ಮತ್ತು ಆಹಾರ ವಿಜ್ಞಾನ ಪತ್ರಿಕೆಗಳು ರಾಜ್ಯದ ಎಲ್ಲಾ ಶಾಲೆಗಳ ಪುಸ್ತಕ ಭಂಡಾರಗಳಿಗೆ ತಲುಪುವ ನಿಶ್ಚಿತ ವ್ಯವಸ್ಥೆ ಕಾರಣ ಇವುಗಳ ಪ್ರಸಾರಕ್ಕೆ ಅಷ್ಟೊಂದು ಬಿಸಿ ತಟ್ಟಲಿಲ್ಲ/ತಟ್ಟಿಲ್ಲ. ರಾಜ್ಯಾದ್ಯಂತ ಇರುವ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಿವಿಧ ಘಟಕಗಳ ಉತ್ಸಾಹಿ ಕಾರ್ಯಕರ್ತರ ಪ್ರಯತ್ನಗಳು ಬಾಲವಿಜ್ಞಾನದ ಹೆಚ್ಚಿನ ಪ್ರಸಾರಕ್ಕೆ ಕಾರಣವಾಗಿದೆ. ಇನ್ನಿತರ ಪತ್ರಿಕೆಗಳು ಪ್ರಸಾರ ಮಾರಾಟದ ಅನೇಕ ತೊಡಕುಗಳಿಗೆ ಸಿಲುಕಿ ಸೊರಗಿವೆ, ತೊಳಲಾಡುತ್ತಿವೆ. ಇನ್ನಿತರ ಪ್ರಕಟಣೆಗಳಂತಲ್ಲದ ವೈಜ್ಞಾನಿಕ ಪ್ರಕಟನೆಗಳು ಒಂದಕ್ಕೊಂದು ಪೂರಕವಾದ ಲೇಖನಗಳನ್ನು ಹೊಂದಿರುವುದರಿಂದ, ಕನ್ನಡದ ಎಲ್ಲಾ ವೈಜ್ಞಾನಿಕ ಪತ್ರಿಕೆಗಳು ಹಾಗೂ ಗ್ರಂಥಗಳು ಒಂದೇ ಕೇಂದ್ರದಲ್ಲಿ ದೊರೆಯುವಂತಾಗಬೇಕು. ಇಂತಹ ಅನೇಕ ಕೇಂದ್ರಗಳು ರಾಜ್ಯಾದ್ಯಂತ ಹರಡಿಕೊಂಡಿರಬೇಕು. ಈ ರೀತಿಯ ಸಂಘಟನೆ ಈಗ ಅಗತ್ಯವಾಗಿದೆ. ಇಲ್ಲದಿದ್ದರೆ ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದ ಕ್ಷೇತ್ರಗಳ ವೈವಿಧ್ಯಪೂರ್ಣ ಗ್ರಂಥಗಳ ನಡುವೆ ವೈಜ್ಞಾನಿಕ ಪ್ರಕಟಣೆಗಳು, ಕಂಡೂ ಕಾಣದಂತೆ ಇಣುಕುತ್ತಾ ಎಲೆಮರೆಯ ಕಾಯಾಗಿಯೇ ಉಳಿದುಬಿಡುವುದಲ್ಲದೆ, ಜನಸಾಮಾನ್ಯರ ಬದುಕಿನ ಅಂಗವಾದ ವೈಜ್ಞಾನಿಕ ಬಳಕೆ, ಅದರ ಅರಿವಿಲ್ಲದೇ ಸೊರಗುತ್ತದೆ. ಆಗ ವೈಜ್ಞಾನಿಕ ಬದುಕು ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತದೆ. (ವಿ.ಎಸ್.)

**ಕನ್ನಡದಲ್ಲಿ ವಿಜ್ಞಾನಸಾಹಿತ್ಯ :** ಜನಸಾಮಾನ್ಯರೆಡೆಗೆ ವೈಜ್ಞಾನಿಕ ಮಾಹಿತಿಗಳನ್ನು ಸಾಗಿಸುವುದು ಮತ್ತು ಸಮಾಜದಲ್ಲಿ ವಿಜ್ಞಾನ – ತಂತ್ರಜ್ಞಾನಗಳ ಪ್ರಗತಿಗೆ ತಕ್ಕ ವಾತಾವರಣವನ್ನು ನಿರ್ಮಿಸುವುದು – ಇವು 20ನೆಯ ಶತಮಾನದ ಆರಂಭದಲ್ಲಿ ಕನ್ನಡ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿಸಿಕೊಂಡವರ ಮುಖ್ಯ ಉದ್ದೇಶಗಳಾಗಿದ್ದುವು. 20ನೆಯ ಶತಮಾನದ ನಾಲ್ಕನೆಯ ಮತ್ತು ಐದನೆಯ ದಶಕಗಳಲ್ಲಿ ಪ್ರೌಢಶಾಲಾ ಶಿಕ್ಷಣ ಮಾಧ್ಯಮವಾಗಿ ಕನ್ನಡ ಬರತೊಡಗಿತು. ಕನ್ನಡ ಮಾಧ್ಯಮವನ್ನು ಆರಿಸುವ ಸ್ವಾತಂತ್ರ್ಯ ಆರನೆಯ ದಶಕದ ಕೊನೆಗೆ ಕಾಲೇಜು ವಿದ್ಯಾರ್ಥಿಗಳಿಗೂ ಸಿಕ್ಕಿತು. ಇದರಿಂದ ಕನ್ನಡದಲ್ಲಿ ವಿಜ್ಞಾನ ಪಠ್ಯಗಳನ್ನೂ ಪ್ರೌಢ ಗ್ರಂಥಗಳನ್ನೂ ಜನಪ್ರಿಯ ಕೃತಿಗಳನ್ನೂ ಪ್ರಕಟಣೆಗೆ ಎತ್ತಿಕೊಳ್ಳುವ ಪ್ರವೃತ್ತಿ ಬೆಳೆಯಿತು. ಕ್ರಮೇಣ ಮಕ್ಕಳ ವಿಜ್ಞಾನ ಪುಸ್ತಕಗಳು, ವಿಜ್ಞಾನ ಪತ್ರಿಕೆ, ಕೈಪಿಡಿ, ವಿಶ್ವಕೋಶ, ನಿಘಂಟುಗಳು ಪ್ರಕಟವಾಗತೊಡಗಿದುವು. ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಆಸಕ್ತ ಬರೆಹಗಾರರು ಮತ್ತು ಖಾಸಗಿ ಪ್ರಕಾಶಕರು ವಿಜ್ಞಾನ ಕೃತಿಗಳ ಪ್ರಕಟಣೆಯಲ್ಲಿ ಪಾಲುಗೊಂಡರು.

1997ರಲ್ಲಿ ಕನ್ನಡ ವಿಜ್ಞಾನ ಗ್ರಂಥ ಸೂಚಿಯನ್ನು ತಯಾರಿಸುವ ಒಂದು ಯೋಜನೆಯನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕೈಗೆತ್ತಿಕೊಂಡಿತು. ಇದರಿಂದಾಗಿ ರಾಜ್ಯದ ಹಾಗೂ ಹೊರ ರಾಜ್ಯಗಳ ಅನೇಕ ಗ್ರಂಥಭಂಡಾರಗಳಲ್ಲಿ ನಡೆಸಿದ ಸಮೀಕ್ಷೆಯಿಂದ ಸು.3000 ಪ್ರಕಟಿತ ಕೃತಿಗಳನ್ನು ಗುರುತಿಸಲು ಸಾಧ್ಯವಾಯಿತು. ಕಾಲಾನುಕ್ರಮದಲ್ಲಿ ಪ್ರಕಟಣೆಗಳ ಸಂಖ್ಯೆ ಹೀಗಿದೆ: 130 (1900ರವರೆಗೆ), 160 (1901–30), 460 (1931–60), 1830 (1961–90), 840 (1991–95ರವರೆಗೆ). ವರ್ಷಗಳು ಕಳೆದಂತೆ ವಿಜ್ಞಾನ ಸಾಹಿತ್ಯ ಕೃತಿಗಳ ಸಂಖ್ಯೆ ಹೆಚ್ಚಾದುದು ಇದರಿಂದ ಸ್ಪಷ್ಟವಾಗುತ್ತದೆ. ಸು.40 ವಿಭಾಗಗಳಲ್ಲಿ ಈ ಪುಸ್ತಕಗಳು ಹಂಚಿಹೋಗಿವೆ. ವೈದ್ಯವಿಜ್ಞಾನ (900), ಪಠ್ಯ ಪುಸ್ತಕಗಳು (450), ಸಾಮಾನ್ಯ ವಿಜ್ಞಾನ (440), ಕೃಷಿ (415), ಭೌತವಿಜ್ಞಾನ (214), ಜೀವನ ಚರಿತ್ರೆ (211), ಪ್ರಾಣಿವಿಜ್ಞಾನ (195), ಸಸ್ಯವಿಜ್ಞಾನ (115), ಗಣಿತ (110), ಖಗೋಳ (99), ಪಶುಪಾಲನೆ (80), ರಸಾಯನ ವಿಜ್ಞಾನ (70), ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ (62), ಪರಿಸರ, ವಾಸ್ತು, ಕಂಪ್ಯೂಟರ್, ಭೂವಿಜ್ಞಾನ, ಶಕ್ತಿ, ಅರಣ್ಯ ವಿಜ್ಞಾನ, ಆನುವಂಶೀಯತೆ, ಗೃಹವಿಜ್ಞಾನ, ತೋಟಗಾರಿಕೆ, ಸಂಖ್ಯಾಕಲನ ಮೊದಲಾದ ಶಾಖೆಗಳಲ್ಲಿ ಕೃತಿಗಳು ರಚನೆಯಾಗಿವೆ.

ವಿಜ್ಞಾನವನ್ನು ಜನಪ್ರಿಯಗೊಳಿಸುವ ಮತ್ತು ವೈಜ್ಞಾನಿಕ ಮನೋಭಾವದ ಪ್ರಸಾರ ಇವನ್ನು ಮುಖ್ಯ ಉದ್ದೇಶಗಳಾಗಿಟ್ಟುಕೊಂಡು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಸ್ಥಾಪಿತವಾಯಿತು. ಕರ್ನಾಟಕದ ನೂರಾರು ಊರುಗಳಲ್ಲಿ ಇದರ ಘಟಕಗಳಿವೆ. ಜನರಿಗೆ ಉಪಯುಕ್ತವಾದ ನೂರಕ್ಕಿಂತಲೂ ಅಧಿಕ ವಿಜ್ಞಾನ ಕೃತಿಗಳನ್ನು ಪ್ರಕಟಿಸಿದ್ದಷ್ಟೇ ಅಲ್ಲದೆ ತನ್ನ ಉದ್ದೇಶ ಸಾಧನೆಗಾಗಿ ಇದು ಜನವಿಜ್ಞಾನ ಜಾಥಾ ಮತ್ತು ಕಲಾಮಾಧ್ಯಮಗಳನ್ನು ಬಳಸಿಕೊಂಡುದರಿಂದ ಹಾಡಬಹುದಾದ ವಿಜ್ಞಾನ ಗೀತೆಗಳೂ ಆಡಬಹುದಾದ ವೈಜ್ಞಾನಿಕ ಹಿನ್ನೆಲೆಯ ನಾಟಕಗಳೂ ಸೃಷ್ಟಿಯಾದುವು. ಪ್ರಯೋಗ ಮತ್ತು ವೈಜ್ಞಾನಿಕ ವೀಕ್ಷಣೆಗಳಿಗೆ ಅನುಕೂಲವಾದ ಕೈಪಿಡಿಗಳೂ ಪ್ರಕಟವಾದುವು. ಹಲವು ಸ್ಥಳೀಯ ಘಟಕಗಳೂ ವಿಜ್ಞಾನ ಕೃತಿಗಳ ಪ್ರಕಟಣೆ ಮತ್ತು ಪ್ರಸಾರದಲ್ಲಿ ಸಕ್ರಿಯವಾಗಿ ಪಾಲುಗೊಂಡುವು. ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಪುಸ್ತಕ ಪ್ರಾಧಿಕಾರ, ವೈದ್ಯವಿಜ್ಞಾನ ಸಾಹಿತ್ಯ ಪರಿಷತ್ತು ನವಕರ್ನಾಟಕ ಪ್ರಕಾಶನ. ಇವು ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿದ ಇತರ ಸಂಸ್ಥೆಗಳಲ್ಲಿ ಮುಖ್ಯವಾದುವು.

**ವಿಜ್ಞಾನ ಪತ್ರಿಕೆಗಳು:** 1978ರ ಮೊದಲೇ ಪ್ರಕಟವಾಗುತ್ತಿದ್ದ ವಿಜ್ಞಾನ ಲೋಕ, ವಿಜ್ಞಾನ ಕರ್ನಾಟಕ ಮೊದಲಾದ ವಿಜ್ಞಾನ ಪತ್ರಿಕೆಗಳ ನಿಯತಕಾಲಿಕ ಪ್ರಕಾಶನಕ್ಕೆ ತೊಂದರೆಯಾದರೂ ಅನಂತರದ ಕೆಲವು ಪತ್ರಿಕೆಗಳಿಗೆ ಹಾಗಾಗಲಿಲ್ಲ. 1978 ನವೆಂಬರ್ 1ರಂದು 'ಬಾಲವಿಜ್ಞಾನ' ಮಾಸಿಕದ (ಕರಾವಿಪದಿಂದ ಪ್ರಕಟಿತ) ಮೊದಲ ಸಂಚಿಕೆ

ಪ್ರಕಟವಾಯಿತು. ಮುಂದಿನ ಎರಡು ದಶಕಗಳಲ್ಲಿ ಸುಮಾರು ಎರಡೂವರೆ ಸಾವಿರಗಳಿಗೂ ಅಧಿಕ ಸಂಖ್ಯೆಯ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ವಿದ್ಯಾರ್ಥಿಗಳು ನಡೆಸಬಹುದಾದ ವಿಜ್ಞಾನ ಪ್ರಯೋಗಗಳು, ಪಠ್ಯಪೂರಕ ವಿಷಯಗಳು, ವಿಜ್ಞಾನದ ಮುನ್ನಡೆ, ವಿಜ್ಞಾನ ಕೌತುಕ, ಪಾರಿಭಾಷಿಕ ಪದ ಸಂಪದ, ವಿಜ್ಞಾನಿಗಳ ಪರಿಚಯ, ಪ್ರಶ್ನೋತ್ತರ, ವಿಜ್ಞಾನ ಪದಬಂಧ ಇವೆಲ್ಲ ಮುಖ್ಯ ಲೇಖನಗಳೊಂದಿಗೆ ಸ್ಥಿರಶೀರ್ಷಿಕೆಗಳಾಗಿ ಅಥವಾ ಆವರ್ತ ಶೀರ್ಷಿಕೆಗಳಾಗಿ ವಿವಿಧ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ವಿಜ್ಞಾನ ಸಂಗಾತಿ, ಕನ್ನಡ ವಿಶ್ವವಿದ್ಯಾಲಯ (ಹಂಪಿ) ಅಡಿಕೆ ಪತ್ರಿಕೆ (ಬೆಳೆಗಾರರೇ ಪ್ರಕಾಶಕರು), ಸುಜಾತ, ಮೇಟಿವಿದ್ಯೆ, ನಮ್ಮ ಪರಿಸರ, (ಕರಾವಿಪ), ಜೀವನಾಡಿ (ದಿಕ್ಸೂಚಿ ಬಳಗ), ಮಕ್ಕಳ ವಿಜ್ಞಾನ ಮಾಸಿಕ, ಪುಟಾಣಿ ವಿಜ್ಞಾನ – ಇವೆಲ್ಲ 1978ರ ಅನಂತರ ಬೆಳಕು ಕಂಡಂಥ ಇತರ ಪತ್ರಿಕೆಗಳು. ಸಂಶೋಧಕ, ವಿಜ್ಞಾನ ವಾಹಿನಿ ಈ ಬಗೆಯ ಕೆಲವು ಪತ್ರಿಕೆಗಳು ವೈಯಕ್ತಿಕ ಆಸಕ್ತಿ ಮತ್ತು ಪ್ರಯತ್ನಗಳಿಂದ ಹುಟ್ಟಿದ್ದರೂ ದೀರ್ಘಕಾಲ ಬಾಳಲಿಲ್ಲ. ವಯಸ್ಕರ ಶಿಕ್ಷಣ ಸಮಿತಿಯ ವತಿಯಿಂದ ಪ್ರಕಟವಾಗುತ್ತಿದ್ದ ಪುಸ್ತಕ ಪ್ರಪಂಚದಲ್ಲಿ ಪ್ರಕಟವಾಗಿರುವ ವಿಜ್ಞಾನ ಸಂಬಂಧ ಲೇಖನಗಳನ್ನು ನಾವು ಗಮನಿಸಬೇಕು. ವಿಜ್ಞಾನ ಪತ್ರಿಕೆಗಳಿಂದಾಗಿ ನೂರಾರು ವಿಜ್ಞಾನ ಬರೆಹಗಾರರಿಗೆ ಬರೆಯಲು ಆಸ್ಪದ ದೊರಕಿದ್ದಷ್ಟೇ ಅಲ್ಲ, ವಿದ್ಯಾರ್ಥಿ – ಅಧ್ಯಾಪಕ ಕಾರ್ಯನಿರತ ವಿಜ್ಞಾನಿಗಳೊಂದಿಗೆ ಆಸಕ್ತ ನಾಗರಿಕರೂ ಲಿಖಿತ ಮಾಧ್ಯಮದ ಮೂಲಕ ವಿಜ್ಞಾನ ವಿಚಾರಗಳ ಬಗ್ಗೆ ಅಂತರ್ವರ್ತಿಸುವಂತಾಯಿತು.

ಬೆಳ್ಳಾವೆ ವೆಂಕಟನಾರಾಯಣಪ್ಪ

**ಅಂಕಣಬಿಡಿಬರೆಹಗಳು:** ಕನ್ನಡದಲ್ಲಿ ಸಾಮಾನ್ಯ ದಿನಪತ್ರಿಕೆ, ವಾರಪತ್ರಿಕೆ ಮತ್ತು ಮಾಸಿಕಗಳ ಸಂಖ್ಯೆಯೂ 1978ರ ಅನಂತರ ಹೆಚ್ಚಿದೆ. ಸ್ಥಳೀಯ ಅಥವಾ ಪ್ರಾದೇಶಿಕ ವ್ಯಾಪ್ತಿಯ ಪತ್ರಿಕೆಗಳೂ ನಗರ ಕೇಂದ್ರಿತವಾಗಿ ಹೆಚ್ಚಿವೆ. ಇವುಗಳಲ್ಲಿ ಸಚಿತ್ರ ಬಿಡಿಬರೆಹಗಳ ರೂಪದಲ್ಲಾಗಲೀ ನಿಶ್ಚಿತ ಶೀರ್ಷಿಕೆಯನ್ನು ಹೊತ್ತು ವರ್ತಮಾನ ಕಾಲದ ವಿಜ್ಞಾನ ವಿಷಯಗಳನ್ನು ತಿಳಿಸಿ ಚರ್ಚಿಸುವ ಅಂಕಣಗಳಲ್ಲಾಗಲೀ ಪ್ರಕಟವಾಗುವ ವಿಜ್ಞಾನ ಸಾಹಿತ್ಯದ ಪ್ರಮಾಣ ಗಮನಾರ್ಹವಾದುದು. ಉದಾಹರಣೆಗೆ ವಿಜ್ಞಾನ ವಿಶೇಷ (ಪ್ರಜಾವಾಣಿ), ವಿಜ್ಞಾನ ವಿಹಾರ (ಕನ್ನಡ ಪ್ರಭ) – ಈ ಅಂಕಣಗಳು ಲಲಿತ ಶೈಲಿಯಲ್ಲಿ ವಿಜ್ಞಾನ ಕ್ಷೇತ್ರದ ಬೆಳವಣಿಗೆಗಳ ಬಗ್ಗೆ ವಾರ ವಾರವೂ ಬೆಳಕು ಚೆಲ್ಲುತ್ತವೆ. ನಭೋಮಂಡಲ (ಹೊಸತು), ನೆಟ್‌ನೋಟ (ವಿಜ್ಞಾನ ಸಂಗಾತಿ) ಎಂಬ ಅಂಕಣಗಳು ರಾತ್ರಿ ಆಕಾಶದ ವೀಕ್ಷಣೆ, ಇಂಟರ್‌ನೆಟ್‌ನ ಬೆಳವಣಿಗೆಯಂಥ ವಿಶೇಷ ಆಸಕ್ತಿಗಳನ್ನು ತಣಿಸಬಲ್ಲುವಾದುವು. ದಿನಪತ್ರಿಕೆಗಳ ವಿಶೇಷ ಪುರವಣಿಗಳಲ್ಲೂ ವಿಶೇಷ ವಿಜ್ಞಾನ ಲೇಖನಗಳು ಪ್ರಕಟವಾಗುವ ಪ್ರವೃತ್ತಿ ಬೆಳೆಯಿತು.

**ಆಕರಗ್ರಂಥಗಳು:** ಬರೆಹಗಾರರ ವೈಯಕ್ತಿಕ ಒಲವು ಮತ್ತು ಕನ್ನಡದ ಪ್ರಾದೇಶಿಕ ಭಿನ್ನತೆಗಳಿಂದಾಗಿ ಇಂಗ್ಲಿಷಿನ ಒಂದು ನಿರ್ದಿಷ್ಟ ಪಾರಿಭಾಷಿಕ ಪದಕ್ಕೆ ಎರಡು ಅಥವಾ ಹೆಚ್ಚು ಸಮಾನ ಪದಗಳು ಹಿಂದೆ ಬಳಕೆಯಾಗುತ್ತಿದ್ದುವು. ಒಂದು ಶಬ್ದದ ಏಕರೂಪ ಬಳಕೆಯ ವಿಚಾರವಾಗಿ ವಿಜ್ಞಾನ ಬರೆಹಗಾರರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿದ್ದುವು. 1984 ಮೇ ತಿಂಗಳಲ್ಲಿ ಧಾರವಾಡದಲ್ಲಿ ನಡೆದ ಮೊದಲನೆಯ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನದಲ್ಲಿ ಈ ಸಮಸ್ಯೆಯ ಬಗ್ಗೆ ಚರ್ಚಿಸಲಾಯಿತು. ಬಳಿಕ ರಾಜ್ಯದ ವಿವಿಧ ಪ್ರದೇಶಗಳನ್ನು ಪ್ರತಿನಿಧಿಸುವ ವಿದ್ವಾಂಸರ ಮತ್ತು ವಿಜ್ಞಾನಿಗಳ ಸಹಾಯದಿಂದ ವಿಜ್ಞಾನ ಶಬ್ದಕೋಶದ ಯೋಜನೆಯನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕೈಗೆತ್ತಿಕೊಳ್ಳಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು. ಅದರಂತೆ ಇಂಗ್ಲಿಷ್–ಕನ್ನಡ ವಿಜ್ಞಾನ ಶಬ್ದಕೋಶ ಸಿದ್ಧವಾಯಿತು (1990). ಈ ಶಬ್ದಕೋಶ ರಚನೆಯಲ್ಲಿ ಯಾವ ಬಗೆಯ ಪಾರಿಭಾಷಿಕ ಪದಗಳನ್ನು ನೇರವಾಗಿ ಇಂಗ್ಲಿಷಿನಿಂದ ಪಡೆಯಬಹುದು, ಯಾವ ಬಗೆಯ ಪದಗಳಿಗೆ ಸಮಾನ ಪದಗಳನ್ನು ಸೃಷ್ಟಿಸಬಹುದು ಹಾಗೂ ಸೃಷ್ಟಿಸುವಾಗ ಅನುಸರಿಸುವ ಮಾರ್ಗಗಳಾವುವು ಎಂಬುದರ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ ಅನ್ವಯಿಸಲಾಯಿತು. ಸಮಾನ ಶಬ್ದಕಾಂಡ ಮತ್ತು ಪ್ರತ್ಯಯಗಳ ಪಟ್ಟಿಯನ್ನೂ ನೀಡಲಾಯಿತು. ಈ ಜಾಡಿನಲ್ಲೇ ಮುಂದುವರಿದು ನವಕರ್ನಾಟಕ ಪ್ರಕಾಶನವು ವಿಜ್ಞಾನ ಪದ ವಿವರಣ ಕೋಶವನ್ನು ಪ್ರಕಟಿಸಿತು (2001). ಇದರಲ್ಲಿ ಕನ್ನಡ ಪಾರಿಭಾಷಿಕ ಪದಗಳನ್ನು ಅಕಾರಾದಿಯಾಗಿ ನೀಡಿ, ಅವುಗಳ ಇಂಗ್ಲಿಷ್ ಸಮಾನ ಪದಗಳೊಂದಿಗೆ ಕನ್ನಡದಲ್ಲಿ ವಿವರಣೆಯನ್ನೂ ಇಂಗ್ಲಿಷ್ ಪಾರಿಭಾಷಿಕ ಪದಗಳಿಗೆ ಕನ್ನಡ ಸಮಾನ ಪದಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ನೀಡಲಾಯಿತು. ಇದರಿಂದ ಬರೆಹಗಾರರಿಗಷ್ಟೇ ಅಲ್ಲದೆ ಓದುಗರಿಗೂ ಅನುಕೂಲವಾಯಿತು. ಹಾಗೆಯೇ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್– ಕನ್ನಡ ನಿಘಂಟುವಿನ ಪರಿಷ್ಕರಣವೂ ಒಂದು ಮುಖ್ಯ ಹೆಜ್ಜೆ. 1946 ರಿಂದಲೂ ಪಾರಿಭಾಷಿಕ ಪದಗಳನ್ನು ಆರಿಸುವಲ್ಲಿ ಈ ನಿಘಂಟು ಒಂದು ಮುಖ್ಯ ಆಕರವಾಗಿತ್ತು. ಈ ನಿಘಂಟನ್ನು ಪರಿಷ್ಕರಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ 1989ರಲ್ಲಿ ಆರಂಭವಾಗಿ ಈಗ ಮುಗಿದಿದೆ (2004).

ಕನ್ನಡ ವಿಜ್ಞಾನ ಸಾಹಿತ್ಯ ನಿರ್ಮಾಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ಕೊಡುಗೆಯೂ ಗಮನಾರ್ಹ. 14 ಸಂಪುಟಗಳ ಈ ಯೋಜನೆ ಈಗ ಪೂರ್ಣಗೊಂಡಿದೆ (2004). 1970ರ ದಶಕದಲ್ಲಿ ಪ್ರಕಟವಾಗಿದ್ದ ಏಳು ಸಂಪುಟಗಳ ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯ ಪ್ರತಿಗಳು ಈಗ ಅಲಭ್ಯ. ಈ ಸನ್ನಿವೇಶದಲ್ಲಿ ಕೇವಲ ವಿಜ್ಞಾನಕ್ಕೇ ಮೀಸಲಾದ ನವಕರ್ನಾಟಕ ಜ್ಞಾನ ವಿಜ್ಞಾನ ಕೋಶ (ನವಕರ್ನಾಟಕ ಪ್ರಕಾಶನ 1998) ಕನ್ನಡ ಓದುಗರಿಗೆ ನೀಡಿದ ವಿಶಿಷ್ಟ ಕೊಡುಗೆಯಾಯಿತು. ಅಂದವಾದ ಮುದ್ರಣ ಮತ್ತು ಪುಟಪುಟಗಳಲ್ಲಿ ಪಠ್ಯಕ್ಕೆ ಪೂರಕವಾದ ವರ್ಣಮಯ ಚಿತ್ರಗಳಿಂದಾಗಿಯೂ ಈ ಪ್ರಕಟಣೆ ದಾಖಲೆ ನಿರ್ಮಿಸಿತು. ಹಂಪಿ ಕನ್ನಡ ವಿಶ್ವವಿದ್ಯಾಲಯವು ವೈದ್ಯವಿಜ್ಞಾನದ ವಿಶ್ವಕೋಶವನ್ನು ಪ್ರಕಟಿಸಿದ್ದರಿಂದ ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಮತ್ತೊಂದು ಆಕರ ಗ್ರಂಥದ ಸೇರ್ಪಡೆಯಾದಂತಾಯಿತು.

ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳು 20ನೆಯ ಶತಮಾನದ ಎಂಟನೆಯ ದಶಕದಲ್ಲಿ ಸ್ನಾತಕ ವಿದ್ಯಾರ್ಥಿಗಳಿಗೆ ಅಗತ್ಯವಾದ ಅನೇಕ ವಿಜ್ಞಾನ ಪಠ್ಯಗಳನ್ನೂ ಪರಾಮರ್ಶನ ಗ್ರಂಥಗಳನ್ನೂ ಪ್ರಕಟಿಸಿದ್ದುವು. ಆದರೆ ಸ್ನಾತಕ ಮಟ್ಟದಲ್ಲಿ ಕನ್ನಡ ಮಾಧ್ಯಮಕ್ಕೆ ಪ್ರೋತ್ಸಾಹ ಸಿಗದಿದ್ದಾಗ ಇಂಥ ಪ್ರಕಟಣೆಗಳು ಮುಂದುವರಿಯಲಿಲ್ಲ. ಇದಕ್ಕೆ ಅಪವಾದ ಎಂಬಂತೆ ಇಂಥ ಪ್ರಕಟಣೆಗಳು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ 1990ರ ದಶಕದಲ್ಲೂ ಮುಂದುವರಿದುವು. ಕನ್ನಡ ಮಾಧ್ಯಮದಲ್ಲಿ ಓದಿ ಬಿ.ಎಸ್‌ಸಿ. (ಕೃಷಿ) ಪದವಿ ಪಡೆದ ವಿದ್ಯಾರ್ಥಿಗಳು ಯಾವುದೇ ಕೀಳರಿಮೆಗೆ ತುತ್ತಾಗದೆ ಆಡಳಿತ ಮತ್ತು ಕೃಷಿ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನೂ ಸ್ನಾತಕೋತ್ತರ ಕೋರ್ಸುಗಳಿಗೆ ಕಾಲಿರಿಸಿ ಯಶಸ್ವಿಯಾಗುತ್ತಿರುವುದನ್ನೂ, ಕೃಷಿ ವಿಶ್ವವಿದ್ಯಾಲಯ ಅಧಿಕೃತವಾಗಿ ಸಾರಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಪದವಿಪೂರ್ವ ತರಗತಿಗಳಿಗಾಗಿ ವಿಜ್ಞಾನ ಪಠ್ಯ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿದೆ. ಪಠ್ಯಪುಸ್ತಕಗಳಲ್ಲಿ ಸಂಗ್ರಹವಾಗಿ ನಿರೂಪಿಸಿರುವ ವಿಷಯಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ನೆರವಾಗುವ ಪುಸ್ತಕಗಳು ಕನ್ನಡದಲ್ಲಿ ದೊರೆಯಬೇಕೆಂಬ ಇರಾದೆಯಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಮೂಲಭೂತ ಶೈಕ್ಷಣಿಕ ಪುಸ್ತಕ ಮಾಲೆ'ಯಲ್ಲಿ ಹಲವು ವಿಜ್ಞಾನ ಕೃತಿಗಳನ್ನು ಪ್ರಕಟಿಸಿದೆ. ವಿಜ್ಞಾನ ದೀಪಮಾಲೆ, ಜನಪ್ರಿಯ ಪುಸ್ತಕ ಮಾಲೆಯಲ್ಲಿಯೂ ವಿಜ್ಞಾನ ಕೃತಿಗಳು ಬಂದುವು. ಹೀಗಿದ್ದರೂ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಿಗುವ ವಿಜ್ಞಾನ ಪಠ್ಯಗಳೂ ಪ್ರತಿ ವರ್ಷವೂ ಒಂದಲ್ಲ ಒಂದು ಬಗೆಯ ಟೀಕೆಗೆ ಒಳಗಾಗುತ್ತಿವೆ. ಎಳೆಯ ವಿದ್ಯಾರ್ಥಿಗಳ ಮೇಲೆ ಆಳ ಪರಿಣಾಮ ಬೀರಬಲ್ಲ ವಿಜ್ಞಾನ ಪಠ್ಯಗಳಲ್ಲಿ ಪರಿಕಲ್ಪನೆ, ಸತ್ಯಾಂಶ, ವ್ಯಾಕರಣ, ಚಿತ್ರ ಮತ್ತು ಮುದ್ರಣಕ್ಕೆ ಸಂಬಂಧಿಸಿದ ದೋಷಗಳನ್ನು ನಿವಾರಿಸಲು ಬೇಕಾದ ವ್ಯವಸ್ಥೆಯನ್ನು ಕೆಲಮೊಮ್ಮೆ ರೂಪಿಸಲು ಸಾಧ್ಯವಾಗದಿರುವುದೇ ಇದಕ್ಕೆ ಕಾರಣವಾಗಿದೆ.

ಇತ್ತೀಚೆಗೆ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನಗಳಂಥ ಸಾಂಪ್ರದಾಯಿಕ ವಿಭಾಗಗಳಷ್ಟೇ ಅಲ್ಲದೆ ಕಂಪ್ಯೂಟರ್, ಜೀವವೈವಿಧ್ಯ, ಪರಿಸರ, ಜೀವರಸಾಯನ ವಿಜ್ಞಾನ, ಸಾವಯವ ಕೃಷಿಯಂಥ ವಿಷಯಗಳೂ ಹೆಚ್ಚು ಹೆಚ್ಚಾಗಿ ಲೇಖಕರ ಗಮನ ಸೆಳೆಯುತ್ತಿವೆ. ಗ್ರಹಣ, ಧೂಮಕೇತು, ಅಂತರ್ಜಲ, ತ್ಯಾಜ್ಯವಸ್ತು ನಿರ್ವಹಣೆ, ಮಳೆನೀರಿನ ಸಂಗ್ರಹ, ಮೂಢನಂಬಿಕೆ, ಪವಾಡ ಪ್ರದರ್ಶನ, ಪ್ರಳಯ, ಫಲಜ್ಯೋತಿಷ್ಯ, ವಾಸ್ತುಗಳಂಥ ವಿಚಾರಗಳನ್ನು ವಸ್ತುನಿಷ್ಠವಾಗಿ ತಿಳಿಯಬೇಕೆನ್ನುವ ಕನ್ನಡದ ಓದುಗರಿಗೆ ಆವಶ್ಯವಾದ ಕೃತಿಗಳಿಗೆ ಈಗ ಅಭಾವವಿಲ್ಲ. ಉತ್ತಮ ವಿಜ್ಞಾನ ಕೃತಿಗಳು ಓದುಗರನ್ನು ಅಪಾರವಾಗಿ ಆಕರ್ಷಿಸುತ್ತಿವೆ.

(ಜಿ.ಆರ್‌ಎಲ್.)

ವಿಜ್ಞಾನ ಸಾಹಿತ್ಯದಲ್ಲಿ ಬೇರೆ ಬೇರೆ ಪ್ರಕಾರಗಳುಂಟು. ವಿವಿಧ ಪ್ರಕಾರಗಳ ವಿಜ್ಞಾನ ಸಾಹಿತ್ಯದ ಆವಶ್ಯಕತೆ ಮತ್ತು ಅವುಗಳ ಪೂರೈಕೆ ಸಮಾಜದಲ್ಲಿ ಹೇಗೆ ಬೆಳೆಯುತ್ತದೆ ಎಂಬುದನ್ನು ವಿಶಾಲವಾಗಿ ಪರಿಶೀಲಿಸಿ ಕನ್ನಡ ಭಾಷೆಯಲ್ಲಿ ವಿಜ್ಞಾನ ಸಾಹಿತ್ಯದ ಬೆಳವಣಿಗೆಯನ್ನು ಸಮೀಕ್ಷಿಸಲಾಗಿದೆ.

ಕಾರ್ಯನಿರತ ವಿಜ್ಞಾನಿಗಳು ಸಾಮಾನ್ಯವಾಗಿ ವಿಜ್ಞಾನ ಸಾಹಿತ್ಯ ಎಂದು ಕರೆಯುವುದು ಸಂಶೋಧನೆಯ ಫಲಿತಾಂಶಗಳನ್ನು ಪ್ರಚುರಪಡಿಸುವ ಕೃತಿಗಳನ್ನು. ಆಧುನಿಕ ವಿಜ್ಞಾನ ಇಂದಿನ ರೂಪದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಜನ್ಮತಾಳಿದ ಹೊಸದರಲ್ಲಿ, ಸಂಶೋಧನ ವರದಿಗಳ ಪ್ರಕಟಣೆಗೇ ಮೀಸಲಾದ ವಿಜ್ಞಾನ ಪತ್ರಿಕೆಗಳು ಇನ್ನೂ ಹೆಚ್ಚಾಗಿ ಇಲ್ಲದಿದ್ದ

ಕಾಲದಲ್ಲಿ, ವಿಜ್ಞಾನಿಗಳು ತಮ್ಮ ಸಂಶೋಧನೆಯ ಫಲಿತಾಂಶಗಳನ್ನು ಸಹ ಪುಸ್ತಕಗಳ ರೂಪದಲ್ಲಿ ಪ್ರಚುರಪಡಿಸುತ್ತಿದ್ದರು. ಕೊಪರ್ನಿಕಸ್‌ನ ಡಿ ಆರ್ಬಿಯಂ ಸೆಲೆಸ್ಟಿಯಂ ರೆವಲ್ಯೂಷನಿಬಸ್, ಡಾರ್ವಿನ್ನನ ಆರಿಜಿನ್ ಆಫ್ ಸ್ಪೀಷೀಸ್, ನ್ಯೂಟನ್ನನ ಪ್ರಿನ್ಸಿಪಿಯ, ರಾಬರ್ಟ್ ಬಾಯಿಲನ ಸ್ಕೆಪ್ಟಿಕಲ್ ಕೆಮಿಸ್ಟ್- ಇವೆಲ್ಲಮೂ ಅಂಥ ಪುಸ್ತಕಗಳೇ. ಇಂದು ಸಾಮಾನ್ಯವಾಗಿ ಸಂಶೋಧನೆಯ ವರದಿಗಳೆಲ್ಲಮೂ ಪ್ರಕಟವಾಗುವುದು ಅದಕ್ಕೇ ಮೀಸಲಾಗಿರುವ ಅನೇಕಾನೇಕ ನಿಯತಕಾಲಿಕ ಪತ್ರಿಕೆಗಳಲ್ಲಿ. ವಿಜ್ಞಾನಿಗಳು ಪರಿಮಿತ ಅರ್ಥದಲ್ಲಿ ಸಾಹಿತ್ಯ ಎಂಬ ಶಬ್ದವನ್ನು ಬಳಸುವುದು ಈ ಪ್ರಕಾರದ ಸಾಹಿತ್ಯಕ್ಕೆ. ಕನ್ನಡದಲ್ಲಿ ಈ ಬಗೆಯ ಸಾಹಿತ್ಯ ಇಲ್ಲವೇ ಇಲ್ಲ ಎನ್ನಬಹುದು. ಇದಕ್ಕೆ ಕಾರಣ ಶತಮಾನಗಳ ಕಾಲ ದಾಸ್ಯದಲ್ಲಿ ಸಿಕ್ಕಿದ್ದ ಭಾರತದಲ್ಲಿ ಆಧುನಿಕ ವಿಜ್ಞಾನ ಯುರೋಪ್ ದೇಶಗಳಲ್ಲಿ ವಿಕಾಸಗೊಂಡಂತೆ ಸ್ವಾಭಾವಿಕವಾಗಿ ವಿಕಾಸಗೊಳ್ಳಲು ಸಾಧ್ಯವಾಗಲಿಲ್ಲ. ಕಳೆದ ಒಂದು ಶತಮಾನದಲ್ಲಿ ಯುರೋಪಿನಿಂದ ಇಲ್ಲಿಗೆ ಬಂದ ವಿಜ್ಞಾನ, ಇಂಗ್ಲಿಷ್ ಭಾಷೆಯ ಮೂಲಕ ಬಂತು. ಆದ್ದರಿಂದ ಈಚೆಗೆ ಸ್ವತಂತ್ರ ಸಂಶೋಧನೆಗಳನ್ನು ಕೈಗೊಂಡ ವಿಜ್ಞಾನಿಗಳು ಸಹಜವಾಗಿಯೇ ತಮ್ಮ ಫಲಿತಾಂಶಗಳನ್ನು ವಿದೇಶಿ ಭಾಷೆಗಳ ಮೂಲಕವೇ ವರದಿಮಾಡುತ್ತ ಬಂದಿದ್ದಾರೆ.

ವಿದ್ಯಾರ್ಥಿಗಳಿಗೆ ಆವಶ್ಯವಾದ ಪಠ್ಯಪುಸ್ತಕಗಳು, ಪ್ರಕರಣ ಗ್ರಂಥಗಳು (ಟ್ರಿಟೈಸಸ್), ಏಕಪ್ರಬಂಧಗಳು (ಮೊನೊಗ್ರಾಫ್) ಮುಂತಾದವು ಇನ್ನೊಂದು ಬಗೆಯವು. ಕನ್ನಡ ಮಾಧ್ಯಮದಲ್ಲಿ ಬೋಧನೆ ನಡೆದು,ಈ ಬಗೆಯ ಸಾಹಿತ್ಯಕ್ಕೆ ಬೇಡಿಕೆ ಒದಗಿಬಂದರೆ ಅವು ತಾವಾಗಿಯೇ ಬೆಳಕು ಕಾಣುತ್ತವೆ. ಐವತ್ತು ವರ್ಷಗಳ ಹಿಂದೆ ಮಾಧ್ಯಮಿಕ ಶಾಲೆಯಲ್ಲಿ ಸಹ ಇಂಗ್ಲಿಷ್ ಮಾಧ್ಯಮವೇ ಬಳಕೆಯಲ್ಲಿದ್ದ ಕಾಲದಲ್ಲಿ ಬಹುಶಃ ಆಧುನಿಕ ವಿಜ್ಞಾನದ ಅಧ್ಯಯನಕ್ಕೆ ಬೇಕಾಗುವ ಪಠ್ಯಪುಸ್ತಕಗಳ ಹೆಸರೇ ಇರಲಿಲ್ಲವೆಂದು ಕಾಣುತ್ತದೆ. 1930-40ರ ದಶಕದಲ್ಲಿ ನಮ್ಮ ಪ್ರೌಢಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತಂದಮೇಲೆ ಆ ಮಟ್ಟಕ್ಕೆ ತಯಾರಿಸಿದ ವಿಜ್ಞಾನ ಪಠ್ಯಪುಸ್ತಕಗಳು ಹೇರಳವಾಗಿ ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾನಿಲಯ ಕೈಗೊಂಡಿರುವ ಕನ್ನಡ ಗ್ರಂಥ ಸೂಚಿ (ಬಿಬ್ಲಿಯೊಗ್ರಫಿ) ಯೋಜನೆಯ ಅಂಗವಾಗಿ ಪ್ರಕಟವಾಗಿರುವ (1971) ಅದರ ಮೊದಲನೆಯ ಸಂಪುಟದ ಪುಟಗಳ ಮೇಲೆ ಕಣ್ಣು ಹಾಯಿಸಿದರೆ ಈ ಮಾತು ಸತ್ಯವೆಂಬುದು ಸ್ಪಷ್ಟವಾಗುತ್ತದೆ. ಈ ಸಂಪುಟದಲ್ಲಿ ಗಣಿತ ಮತ್ತು ವಿವಿಧ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಪಠ್ಯಪುಸ್ತಕಗಳಿಂದ ಪ್ರೌಢಗ್ರಂಥಗಳವರೆಗೆ, ಉಪಯುಕ್ತ ಕೋಷ್ಟಕ ಕೈಪಿಡಿಗಳಿಂದ ಜನಪ್ರಿಯ ವಿಜ್ಞಾನ ಪುಸ್ತಕಗಳವರೆಗೆ ಇದುವರೆಗೆ ಅಚ್ಚಾಗಿರುವ ಎಲ್ಲ ಕನ್ನಡ ಗ್ರಂಥಗಳನ್ನೂ ಪಟ್ಟಿ ಮಾಡುವ ಯತ್ನ ನಡೆದಿದೆ. ಈಗ ಸಿಕ್ಕಿರುವ 1 ಪೈಯಿಂದ 1,000 ರೂಪಾಯಿವರೆಗೆ ಅಸಲಿಗೆ 1 ದಿವಸದಿಂದ 100 ವರ್ಷಪರ್ಯಂತ 100ಕ್ಕೆ 12ರ ಪ್ರಕಾರ ಆಗುವ ಬಡ್ಡಿಯ ಪಟ್ಟಿಗಳು (ಮಂಗಳೂರು ಜರ್ಮನ್ ಮಿಶನ್ ಪ್ರೆಸ್, 1858) ಎಂಬ ಮೊತ್ತಮೊದಲ ಪುಸ್ತಕದಿಂದ 1968ರ ವರೆಗೆ ಪ್ರಕಟವಾಗಿರುವ 1,449 ಮುದ್ರಿತ ಗ್ರಂಥಗಳ ವಿವರಗಳನ್ನು ಈ ಸಂಪುಟದಲ್ಲಿ ಕಾಣಬಹುದು (ಬಹಶಃ ಒಟ್ಟು ಸಂಖ್ಯೆಯ ಸೇ.20 ಪುಸ್ತಕಗಳು ಲೆಕ್ಕಕ್ಕೆ ಸಿಕ್ಕಿರದೆ ಹೋಗಿರಬಹುದುದೆಂದು ಇದರ ಸಂಪಾದಕ ಮಂಡಲಿಯ ಅಂದಾಜು). ಇದರಲ್ಲಿ ಹೆಸರಿರುವ 422 ಗಣಿತ ಗ್ರಂಥಗಳಲ್ಲಿ ಹತ್ತಿಪ್ಪತ್ತು ವಿನಾ ಉಳಿದ ಎಲ್ಲಮೂ ಅಂಥ ಪಠ್ಯಪುಸ್ತಗಳೇ. ಭೌತವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನಗಳ ಬಗ್ಗೆಯೂ ಇದೇ ಮಾತು ಹೇಳಬಹುದು.



ಶಿವರಾಮ ಕಾರಂತ

ಕಾಲೇಜು ಮಟ್ಟದಲ್ಲಿ ಕನ್ನಡ ಮಾಧ್ಯಮ ಬಳಸಲು ಮೊತ್ತಮೊದಲು ಪ್ರಯತ್ನ ನಡೆದದ್ದು 1957ರಲ್ಲಿ. ವಿಶ್ವವಿದ್ಯಾನಿಲಯಗಳು ಕನ್ನಡದಲ್ಲಿ ಬೋಧನೆಗೆ ಏರ್ಪಾಡು ಮಾಡಿ ಕನ್ನಡದಲ್ಲಿ ಪಠ್ಯಪುಸ್ತಕ ರಚನೆಗೆ ಉತ್ತೇಜನ ನೀಡಿದುವು. ಒಂದೊಂದು ವಿಜ್ಞಾನ ವಿಭಾಗದಲ್ಲೂ ಹಲವಾರು ಪಠ್ಯಪುಸ್ತಕಗಳು ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಉತ್ಕೃಷ್ಟ ಇಂಗ್ಲಿಷ್ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದೆ. ಸ್ವಂತವಾಗಿ ಸ್ನಾತಕಮಟ್ಟದ ಪಠ್ಯಪುಸ್ತಕಗಳನ್ನು ರಚಿಸುವವರಿಗೆ ಉತ್ತೇಜನ ನೀಡುವುದಕ್ಕಾಗಿ ಹಿಂದೆ ಒಂದು ಸ್ಪರ್ಧೆಯನ್ನೂ ಏರ್ಪಡಿಸಲಾಗಿತ್ತು. 1970ರಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ ಭೌತವಿಜ್ಞಾನ, ರಸಾಯನವಿಜ್ಞಾನ ಮತ್ತು ಮನಶ್ಶಾಸ್ತ್ರದ ಪುಸ್ತಕಗಳು ವಿಷಯ ನಿರೂಪಣೆ, ಆಧುನಿಕತೆ ಮತ್ತು ಪ್ರೌಢಿಮೆಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವ ಆ ವಿಷಯಗಳನ್ನು ಕುರಿತ ಅತ್ಯುತ್ತಮ ಗ್ರಂಥಗಳಿಗೆ ಸರಿಸಮಾನವಾಗಿವೆ ಯೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪಠ್ಯಪುಸ್ತಕಗಳ ತಯಾರಿಕೆಗೆ ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳೂ ವಿಶೇಷ ಆದ್ಯತೆ ಕೊಟ್ಟು ಈಗಾಗಲೇ ಹಲವಾರು ಪುಸ್ತಕಗಳನ್ನು ಹೊರತಂದಿವೆ. ಸ್ನಾತಕಮಟ್ಟದ ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲ ವಿಜ್ಞಾನ ವಿಭಾಗಗಳ ಪಠ್ಯಪುಸ್ತಕಗಳು ಈಗ ದೊರೆಯುತ್ತವೆ.

ವಿಜ್ಞಾನ ಸಾಹಿತ್ಯದ ಇನ್ನೊಂದು ಪ್ರಕಾರ ಜನಪ್ರಿಯ ವಿಜ್ಞಾನ. ತಜ್ಞರಲ್ಲದ ಓದುಗರನ್ನು ಉದ್ದೇಶಿಸಿ ವಿಜ್ಞಾನದ ಸಾಧನೆಗಳನ್ನು ವಿವರಿಸುವುದು, ಜನತೆಯಲ್ಲಿ ವಿಜ್ಞಾನ ವಿಧಾನ ಮತ್ತು ವಿಜ್ಞಾನ ಮನೋಧರ್ಮವನ್ನು ಹರಡುವುದು ಈ ಬಗೆಯ ಸಾಹಿತ್ಯದ ಗುರಿ. ವಿಜ್ಞಾನ ಸಾಹಿತ್ಯದ ಈ ಒಂದು ಪ್ರಕಾರ ಕನ್ನಡದಲ್ಲಿ 20ನೆಯ ಶತಮಾನದಲ್ಲಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ಸ್ಥೂಲವಾಗಿ ಸಮೀಕ್ಷಿಸಬಹುದು.

ಸಂಶೋಧನ ಕೃತಿಗಳಂತೆ ಮತ್ತು ಪಠ್ಯಪುಸ್ತಕಗಳಂತೆ ಜನಪ್ರಿಯ ವಿಜ್ಞಾನ ಸಾಹಿತ್ಯಮೂ ಜನತೆಯ ಆವಶ್ಯಕತೆ ಮತ್ತು ಬೇಡಿಕೆಗಳನ್ನನುಸರಿಸಿ ತಾನೇ ತಾನಾಗಿ ಬೆಳೆಯುವುದೆಂದು ಹೇಳುವ ಹಾಗಿಲ್ಲ. ಜನತೆಗೆ ಏನು ಬೇಕು ಎಂಬ ಬಗ್ಗೆ ತಜ್ಞರಲ್ಲಿ ಮೂಡುವ ಪ್ರಜ್ಞೆ, ವಿಜ್ಞಾನದ ಪರಿಭಾಷೆಯನ್ನು ಆದಷ್ಟು ಕಡಿಮೆ ಮಾಡಿ ಜನಸಾಮಾನ್ಯರ ಭಾಷೆಯಲ್ಲಿ ಅದನ್ನು ಒದಗಿಸಬೇಕೆಂಬ ಪ್ರೇರಣೆ, ಅದಕ್ಕೆ ಬೇಕಾದ ಸಾಮರ್ಥ್ಯ-ಇವು ಬೆಳೆಯುವವರೆಗೂ ಜನಪ್ರಿಯ ವಿಜ್ಞಾನ ಸಾಹಿತ್ಯ ಬೆಳೆಯಲಾರದು.

ಪಾಶ್ಚಾತ್ಯ ಭಾಷೆಗಳಲ್ಲಿ, ಮುಖ್ಯವಾಗಿ ಇಂಗ್ಲಿಷ್ ಭಾಷೆಯಲ್ಲಿ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದವರೆಗೆ, ಅಂದರೆ ಆಧುನಿಕ ವಿಜ್ಞಾನಕ್ಕೆ ಇಂದಿನ ರೂಪ ಕೊಟ್ಟವರಲ್ಲಿ ಮೊದಲಿಗರೆನ್ನಬಹುದಾದ ಗೆಲಿಲಿಯೊ, ನ್ಯೂಟನ್ ಮೊದಲಾದವರ ಸಂಶೋಧನೆಗಳ ಫಲವಾಗಿ ವಿಜ್ಞಾನ ಮನುಷ್ಯನ ಜ್ಞಾನಾನ್ವೇಷಣೆಯ ಒಂದು ವಿಶೇಷ ಶಾಖೆಯಾಗಿ ಬೆಳೆಯಲು ಪ್ರಾರಂಭಿಸಿದ ನೂರಿನ್ನೂರು ವರ್ಷಗಳವರೆಗೆ, ಜನಪ್ರಿಯ ವಿಜ್ಞಾನ ಎಂದು ಕರೆಯಬಹುದಾದ ಸಾಹಿತ್ಯ ಪ್ರಕಾರ ಜನ್ಮತಾಳಲಿಲ್ಲ. ಡಾರ್ವಿನ್ನನ ಅನುಯಾಯಿಗಳಲ್ಲಿ ಪ್ರಮುಖನಾದ ಥಾಮಸ್ ಹಕ್ಸ್ಲಿಯನ್ನು ಜನಪ್ರಿಯ ವಿಜ್ಞಾನದ ಆದ್ಯಪ್ರವರ್ತಕ ಎನ್ನಬಹುದು. ಡಾರ್ವಿನ್ನನ ವಿಕಸನವಾದದ ಪರಿಣಾಮವಾಗಿ ಕ್ರೈಸ್ತಮತಾವಲಂಬಿಗಳ ಕೆಲವು ಮುಖ್ಯ ನಂಬಿಕೆಗಳಿಗೆ ಪೆಟ್ಟು ಬಿದ್ದ ಕಾರಣ ಯುರೋಪ್ ದೇಶಗಳಲ್ಲಿ ವಿಕಾಸವಾದವನ್ನು ಕುರಿತು ದೊಡ್ಡ ವಿವಾದವೆದ್ದಿತು. ಆಗ ವಿಜ್ಞಾನದ ಒಳ ವ್ಯವಹಾರಗಳು ಹೊರಗಿನವರ ಗಮನ ಸೆಳೆದುವು. ವಿಜ್ಞಾನದ ಬಗ್ಗೆ ಸಾಮಾನ್ಯ ಜನತೆಗೆ ತಿಳಿವಳಿಕೆ ಕೊಡಬೇಕಾದ ಅಗತ್ಯ ವಿಜ್ಞಾನಿಗಳಿಗೆ ಮನವರಿಕೆಯಾಯಿತು. ಆ ಕೆಲಸವನ್ನು ಹಕ್ಸ್ಲಿ ಅತ್ಯಂತ ಸಮರ್ಥವಾಗಿ ನೆರವೇರಿಸಿದ. ವಿಜ್ಞಾನದ ಇತಿಹಾಸವನ್ನು ಸ್ಥೂಲವಾಗಿ ಅವಲೋಕಿಸಿದರೆ ವಿಜ್ಞಾನದ ಬಗ್ಗೆ ನಿರ್ಲಿಪ್ತ ಭಾವನೆ ತಾಳಿದ್ದ ಸಾಮಾನ್ಯ ಜನತೆಯನ್ನು ಹೊಡೆದೆಬ್ಬಿಸಿದ ಇಂಥ ಹಲವಾರು ನಿದರ್ಶನಗಳನ್ನು ಕಾಣಬಹುದು. ಐನ್‌ಸ್ಟೈನನ ಸಾಪೇಕ್ಷತಾವಾದದ ಪ್ರಕಟಣೆ, ಹಿರೋಷಿಮದಲ್ಲಿ ಸಿಡಿದ ಪರಮಾಣು ಬಾಂಬು, ರಷ್ಯನರು ಹಾರಿಬಿಟ್ಟ ಮೊದಲನೆಯ ಸ್ಪೂಟ್ನಿಕ್ ಮುಂತಾದ-ಈ ಘಟನೆಗಳಿಂದ ವಿಜ್ಞಾನದ ಬಗ್ಗೆ ಜನರ ಆಸಕ್ತಿ ಹೆಚ್ಚಾದಂತೆ ಜನಪ್ರಿಯ ವಿಜ್ಞಾನ ಸಾಹಿತ್ಯ ಪಾಶ್ಚಾತ್ಯ ಭಾಷೆಗಳಲ್ಲಿ ವಿಪುಲವಾಗಿ ಬೆಳೆಯಿತು.

ಭಾರತದಲ್ಲಿ ಆಧುನಿಕ ವಿಜ್ಞಾನದ ಅಧ್ಯಯನಕ್ಕೆ ಆಸ್ಪದ ದೊರೆತದ್ದು ಬಹಳ ತಡವಾಗಿ. ಪಾಶ್ಚಾತ್ಯ ಶಿಕ್ಷಣ ಪದ್ಧತಿಯನ್ನು ಭಾರತಕ್ಕೆ ತಂದ ಬ್ರಿಟಿಷರು ನಮಗೆ ವಿಜ್ಞಾನ ಶಿಕ್ಷಣವನ್ನು ಒದಗಿಸುವ ಬಗ್ಗೆ ಆಸಕ್ತಿ ತೋರಲಿಲ್ಲ. ಅವರು ನೀಡಿದ ಶಿಕ್ಷಣದ ಉದ್ದೇಶ ತಮಗೆ ಬೇಕಾದ ಗುಮಾಸ್ತರನ್ನೂ ಆಡಳಿತಗಾರರನ್ನೂ ತಯಾರುಮಾಡುವುದಕ್ಕಷ್ಟೇ ಆಗಿತ್ತು. ಆದರೆ ನಮ್ಮ ದೇಶದ ನೈಸರ್ಗಿಕ ಸಂಪತ್ತಿನ ಪೂರ್ಣ ಪ್ರಯೋಜನ ಪಡೆಯುವುದಕ್ಕಾಗಿ ಆಧುನಿಕ ವಿಧಾನಗಳನ್ನು ಬಳಸಬೇಕಾಗಿ ಬಂದು, ಅದಕ್ಕೆ ಅವಶ್ಯವೆನಿಸುವ ತಾಂತ್ರಿಕರನ್ನೂ ಇಲ್ಲಿಯೇ ತಯಾರುಮಾಡಬೇಕಾಗಿ ಬಂದುದರಿಂದ ಅಲ್ಪ ಪ್ರಮಾಣದಲ್ಲಿಯಾದರೂ ವಿಜ್ಞಾನ ಶಿಕ್ಷಣವನ್ನು ಪ್ರಾರಂಭಿಸಬೇಕಾಯಿತು. ಹೀಗಾಗಿ ನಮ್ಮ ಜನತೆಗೆ ಆಧುನಿಕ ವಿಜ್ಞಾನದ ಸಂಪರ್ಕ ಒದಗಿಬಂದದ್ದು ಬಹು ನಿಧಾನವಾಗಿ ಮತ್ತು ಬಹು ಕಡಿಮೆ ಪ್ರಮಾಣದಲ್ಲಿ. ಆದ್ದರಿಂದ ಇತ್ತೀಚಿನವರೆಗೂ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ಜನತೆಯಿಂದ ಬೇಡಿಕೆ ಬರುವ ಸಂಭವವೇ ಇರಲಿಲ್ಲ. ಅಂಥ ಸಾಹಿತ್ಯವೇನಾದರೂ ಸೃಷ್ಟಿಯಾಗುವುದಿದ್ದರೆ ಅದರ ಪ್ರಯೋಜನವನ್ನು ಮನಗಂಡ ದೂರದೃಷ್ಟಿಯುಳ್ಳ ಹಲಕೆಲವು ತಜ್ಞರ ಪ್ರಯತ್ನದಿಂದ ಮಾತ್ರ ಸಾಧ್ಯವಾಗಬಹುದಿತ್ತು.

ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿದವರಲ್ಲಿ ಮೊದಲಿಗರೆನ್ನಬಹುದಾದ ಬೆಳ್ಳಾವೆ ವೆಂಕಟನಾರಣಪ್ಪ ಮತ್ತು ನಂಗಪುರಂ ವೆಂಕಟೇಶ ಅಯ್ಯಂಗಾರ್ಯರ ದೂರದರ್ಶಿತ್ವದ ಬಗ್ಗೆ ವಿಸ್ಮಯ ಉಂಟಾಗುವುದು ಸಹಜ.

1917ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾಗಿ ಕೇವಲ ಒಂದು ವರ್ಷವಾಗಿತ್ತು. ಮೈಸೂರು ರಾಜ್ಯದಲ್ಲಿದ್ದ ಒಂದೇ ಒಂದು ಕಾಲೇಜಾದ ಸೆಂಟ್ರಲ್ ಕಾಲೇಜಿನಲ್ಲಿ ಬೆರಳೆಣಿಕೆ ಯಷ್ಟು ವಿದ್ಯಾರ್ಥಿಗಳಿದ್ದರು. ವಿದ್ಯಾವಂತರೆನಿಸಿಕೊಂಡವರು ಕನ್ನಡದಲ್ಲಿ ಮಾತನಾಡಿದರೆ

ಅಥವಾ ಬರೆದರೆ ಅವಮಾನವೆಂಬ ಭಾವನೆಯಿದ್ದ ಆ ಕಾಲದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರೂ ಮೈಸೂರು ಸರ್ಕಾರದ ಪವನಶಾಸ್ತ್ರ ವೀಕ್ಷಣಾಲಯದ ಮುಖ್ಯಸ್ಥರಾಗಿದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರೂ ವಿಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಜನತೆಯಲ್ಲಿ ಹರಡುವ ಆವಶ್ಯಕತೆಯನ್ನು ಮನಗಂಡರು. ಕರ್ನಾಟಕ ವಿಜ್ಞಾನ ಪ್ರಚಾರಿಣಿ ಸಮಿತಿ ಎಂಬ ಒಂದು ಸಂಸ್ಥೆಯನ್ನು ಕಟ್ಟಿ ಅದರ ವತಿಯಿಂದ ವಿಜ್ಞಾನ ಎಂಬ ಒಂದು ಮಾಸಪತ್ರಿಕೆಯನ್ನು ಹೊರಡಿಸುವ ಸಾಹಸ ಮಾಡಿದರು. ಅದರ ಸಂಪಾದಕತ್ವವನ್ನು ಅವರಿಬ್ಬರೂ ವಹಿಸಿಕೊಂಡರು. ಪತ್ರಿಕೆಯ ಧ್ಯೇಯೋದ್ದೇಶಗಳ ಬಗ್ಗೆ ಅವರಿಗೆ ಖಚಿತವಾದ ಮತ್ತು ಸ್ಪಷ್ಟವಾದ ಅಭಿಪ್ರಾಯವಿತ್ತೆಂಬುದು ಪತ್ರಿಕೆಯ ಮೊದಲ ಸಂಚಿಕೆಯಲ್ಲಿನ ಅವತರಣಿಕೆಯಿಂದ ವ್ಯಕ್ತವಾಗುತ್ತದೆ. ಈಗ ಸುಮಾರು ಅರವತ್ತು ಎಪ್ಪತ್ತು ವರ್ಷಗಳಿಂದಲೂ ಆಂಗ್ಲ ಭಾಷಾಭ್ಯಾಸ ನಮ್ಮ ದೇಶದಲ್ಲಿ ದಿನೇ ದಿನೇ ಅಭಿವೃದ್ಧಿಯಾಗುತ್ತಿದ್ದರೂ ವಿಜ್ಞಾನದ ವಿಷಯವಾಗಿ ಮಾತ್ರ ವಿಶೇಷ ಶ್ರದ್ಧೆ ತೋರಿಬಂದಿಲ್ಲ. ಆ ಭಾಗದಲ್ಲಿ ಈಗೀಗ ಕಣ್ಣು ಬಿಡುತ್ತಿದ್ದೇವೆ. ಜನಸಾಮಾನ್ಯರಲ್ಲೆಲ್ಲ ವಿಜ್ಞಾನವನ್ನು ಹರಡದ ಹೊರತು ದೇಶ ಅಭಿವೃದ್ಧಿ ಸ್ಥಿತಿಗೆ ಬರಲಾರದು. ಇದಕ್ಕಾಗಿ ಆಂಗ್ಲ ಭಾಷೆಯಲ್ಲಿ ವಿಜ್ಞಾನ ಪರಿಶ್ರಮವುಳ್ಳ ದೇಶಾಭಿಮಾನಿಗಳು ಸಾವಕಾಶ ಮಾಡದೆ ಈ ಕೆಲಸವನ್ನು ಮಾಡಲು ತೊಡಗಬೇಕೆಂದು ನಮ್ಮ ಪ್ರಾರ್ಥನೆ ಎಂದು ಅವರು ಕೇಳಿಕೊಂಡಿದ್ದಾರೆ.



ಆರ್.ಎಲ್. ನರಸಿಂಹಯ್ಯ

ಅಂದಿನ ಪರಿಸ್ಥಿತಿಯಲ್ಲಿ ಅಂಥದೊಂದು ಪತ್ರಿಕೆಗೆ ಲೇಖನಗಳನ್ನೂ ಇತರ ಸಾಮಗ್ರಿಯನ್ನೂ ಒದಗಿಸುವುದು ಅತ್ಯಂತ ಪ್ರಯಾಸಕರ ವಾಗಿದ್ದಿರಬೇಕು. ಆದ್ದರಿಂದಲೇ ಅದರ ಜೀವಿತಕಾಲದಲ್ಲಿ ಹೊರಬಂದ ಎಲ್ಲ ಸಂಚಿಕೆಗಳಲ್ಲಿ ಪ್ರಕಟವಾದ ಒಟ್ಟು ಸುಮಾರು 40 ಲೇಖನಗಳಲ್ಲಿ ಅರ್ಧ ಭಾಗದಷ್ಟು ಲೇಖನಗಳಿಗೆ ವೆಂಕಟನಾರಣಪ್ಪನವರೇ ಲೇಖಕರು, ಇಲ್ಲವೇ ಸಹ ಲೇಖಕರು. ಉಳಿದವುಗಳಲ್ಲಿ ಆರೇಳು ಲೇಖನಗಳು ವೆಂಕಟೇಶ ಅಯ್ಯಂಗಾರ್ಯರು ಬರೆದವು. ಅವರಿಬ್ಬರಲ್ಲದೆ ಇತರ ಹತ್ತು ಹದಿನೈದು ಜನ ತಜ್ಞರನ್ನು ಅವರೇ ಪ್ರೇರೇಪಿಸಿ, ಅವರಿಂದಲೂ ಲೇಖನಗಳನ್ನು ಬರೆಸಿ ಪ್ರಕಟಿಸಿರುವುದು ಕಂಡುಬರುತ್ತದೆ. ವಿಜ್ಞಾನ ಲೇಖನಗಳಲ್ಲದೆ ವಿವಿಧ ವಿಜ್ಞಾನ ವಿಷಯ ಸಂಗ್ರಹ ಎಂಬ ಶೀರ್ಷಿಕೆಯಲ್ಲಿ ಹೊಸ ವೈಜ್ಞಾನಿಕ ಸಂಶೋಧನೆಗಳೇ ಮೊದಲಾದ ಸುದ್ದಿಗಳನ್ನು ನೇಚರ್, ಸೈಂಟಿಫಿಕ್ ಅಮೆರಿಕನ್ ಮುಂತಾದ ಪ್ರಸಿದ್ಧ ವಿಜ್ಞಾನ ಪತ್ರಿಕೆಗಳಿಂದ ಆಯ್ದು ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟಿಸುತ್ತಿದ್ದರು.

ಪತ್ರಿಕೆಗೆ ಸಾಮಗ್ರಿಯನ್ನೊದಗಿಸುವುದರಲ್ಲಿ ಎಷ್ಟೇ ಕಷ್ಟಗಳಿದ್ದರೂ ಅವುಗಳನ್ನೆದುರಿಸಿ ಮಾಸಪತ್ರಿಕೆಯನ್ನು ನಡೆಸಿಕೊಂಡು ಬರಲು ಅಗತ್ಯವಾದ ಶ್ರದ್ಧೆ ಉತ್ಸಾಹಗಳು ಸಂಪಾದಕರಲ್ಲಿದ್ದುವಾದರೂ ವಿಜ್ಞಾನಕ್ಕೇ ಮೀಸಲಾದ ಪತ್ರಿಕೆಯೊಂದು ಅಭಿವೃದ್ಧಿ ಹೊಂದಲು ಕಾಲವಿನ್ನೂ ಪಕ್ವವಾಗಿರಲಿಲ್ಲ. ಜನತೆಯಿಂದ ಅದಕ್ಕೆ ಆಸರೆ ದೊರೆಯಲಿಲ್ಲ. ಹನ್ನೆರಡು ಸಂಚಿಕೆಗಳ ಒಂದು ಸಂಪುಟ ಮುಗಿಸಿ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು.

ಕರ್ನಾಟಕ ವಿಜ್ಞಾನ ಪ್ರಚಾರಿಣಿ ಸಮಿತಿಯ ಚಟುವಟಿಕೆ ವಿಜ್ಞಾನ ಪತ್ರಿಕೆಯ ನಿರ್ವಹಣೆಗೆ ಮಾತ್ರ ಮೀಸಲಾಗಿರಲಿಲ್ಲ. ಸಮಿತಿಯ ಆಶ್ರಯದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ವಿಜ್ಞಾನ ವಿಷಯಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸ ಮಾಲೆಗಳು ನಡೆದುವೆಂದೂ ಅದಕ್ಕೆ ಮೈಸೂರು ಸರ್ಕಾರದ ನೆರವನ್ನು ಸಂಪಾದಿಸಿಕೊಳ್ಳಲಾಗಿತ್ತೆಂದೂ ಸಮಿತಿಯ ಗೌರವ ಕಾರ್ಯದರ್ಶಿಯಾಗಿದ್ದ ವೆಂಕಟನಾರಣಪ್ಪನವರೇ ನೀಡಿದ ಮೊದಲ ಉಪನ್ಯಾಸಕ್ಕೆ ಆಗಿನ ದಿವಾನರಾಗಿದ್ದ ಎಂ.ವಿಶ್ವೇಶ್ವರಯ್ಯನವರು ಬಂದು ಕನ್ನಡದಲ್ಲಿ ಉದ್ಘಾಟನ ಭಾಷಣ ಮಾಡಿದರೆಂದೂ ವಿಜ್ಞಾನದ ಸಂಚಿಕೆಯೊಂದರಿಂದ ತಿಳಿದುಬರುತ್ತದೆ.

ವಿಜ್ಞಾನ ಪ್ರಚಾರಿಣಿ ಸಮಿತಿ ಕೆಲಕಾಲದ ತರುವಾಯ ಅನಿವಾರ್ಯವಾಗಿ ತನ್ನ ಚಟುವಟಿಕೆಗಳನ್ನು ನಿಲ್ಲಿಸಿತ್ತೆಂದು ಕಾಣುತ್ತದೆ. ಆದರೆ ಸಮಿತಿಯ ಪ್ರಮುಖ ಕಾರ್ಯಕರ್ತರಾಗಿದ್ದ ವೆಂಕಟನಾರಣಪ್ಪನವರೂ ವೆಂಕಟೇಶ ಅಯ್ಯಂಗಾರ್ಯರೂ ತಮ್ಮ ಗುರಿ ಸಾಧನೆಗಾಗಿ ಬೇರೆ ಮಾರ್ಗಗಳನ್ನವಲಂಬಿಸಿ ದುಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಮೈಸೂರು ಯುವರಾಜರೂ ಆಗಿದ್ದ ಕಂಠೀರವ ನರಸಿಂಹರಾಜ ಒಡೆಯರ್ ಅವರಿಂದ ಸಹಾಯದ್ರವ್ಯ ಪಡೆದು ಅವರ ಹೆಸರಿನಲ್ಲಿ ಒಂದು ವಿಜ್ಞಾನ ಗ್ರಂಥಮಾಲೆಯನ್ನು ಪ್ರಾರಂಭಿಸಿ, ಅದರ ಮೊದಲ ಕುಸುಮವಾಗಿ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರ ಜ್ಯೋತಿರ್ವಿನೋದಿನಿ ಎಂಬ ಪುಸ್ತಕವನ್ನು 1931ರಲ್ಲಿ ಹೊರಡಿಸಿದರು. ಇದು ಫ್ರೆಂಚ್ ವಿಜ್ಞಾನ ಲೇಖಕ ಕೆಮಿಲ್ ಫ್ಲಮೇರಿಯೋನ ಅಸ್ಟ್ರಾನಮಿ ಫಾರ್ ವಿಮೆನ್ ಎಂಬ ಪುಸ್ತಕದ ಇಂಗ್ಲಿಷ್ ಅನುವಾದದ ಪುನರನುವಾದ. ಇದಕ್ಕೆ ಬೆಳ್ಳಾವೆ ವೆಂಕಟನಾರಣಪ್ಪನವರು ಮುನ್ನುಡಿ ಬರೆದಿದ್ದಾರೆ. ಅಲ್ಲಿಂದ ಎಂಟು ವರ್ಷಗಳ ತರುವಾಯ (1939) ವಿಶ್ವವಿದ್ಯಾನಿಲಯದಿಂದ ನಿವೃತ್ತರಾದ ಹಲವು ವರ್ಷಗಳ ಮೇಲೆ, ವೆಂಕಟನಾರಣಪ್ಪನವರು ಜೀವವಿಜ್ಞಾನವೆಂಬ 350ಪುಟಗಳ ಪುಸ್ತಕವನ್ನು ಬರೆದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಪ್ರಕಟಿಸಿದರು. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯವನ್ನು ನಿರ್ಮಿಸುವುದರಲ್ಲಿ ಈ ಇಬ್ಬರು ಮಹನೀಯರು ತಳೆದ ಆಸ್ಥೆ, ಅದರ ಬೆಳವಣಿಗೆಯಲ್ಲಿ ಅವರು ವಹಿಸಿದ ಪಾತ್ರ ಬಹು ಹಿರಿದು ಮತ್ತು ಸ್ತುತ್ಯರ್ಹವಾದುದು.

ಕನ್ನಡ ವಿಜ್ಞಾನ ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವಹಿಸಿದ ಇನ್ನೊಬ್ಬ ವ್ಯಕ್ತಿ ಶಿವರಾಮ ಕಾರಂತರು ಸ್ವತಃ ವಿಜ್ಞಾನಿಯಲ್ಲ, ಶಾಲಾ ಕಾಲೇಜುಗಳಲ್ಲಿ ಕ್ರಮಬದ್ಧವಾಗಿ ವಿಜ್ಞಾನವನ್ನು ವ್ಯಾಸಂಗ ಮಾಡಿದವರೂ ಅಲ್ಲ. ಆದರೆ ಅವರು ಆಸಕ್ತಿವಹಿಸದಿದ್ದ ವಿಷಯವಿಲ್ಲ. ಕಾರ್ಯಾಚರಣೆಗೆ ಕೈ ಹಾಕದ ಕ್ಷೇತ್ರವಿಲ್ಲ. ಬಹುಮುಖ ವ್ಯಕ್ತಿತ್ವದ ಈ ಮೇಧಾವಿ ಕನ್ನಡ ಜನತೆಯಲ್ಲಿ ತಾಯ್ನುಡಿಯ ಮೂಲಕವೇ ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸುವ ಅಗತ್ಯವನ್ನು ಕಂಡುಕೊಂಡರು. ಆ ಕಾರ್ಯವನ್ನು ಕೈಗೊಳ್ಳಲು ಆವಶ್ಯವಾದ ವಿಜ್ಞಾನ ಶಿಕ್ಷಣವನ್ನು ಪಡೆದಿರದಿದ್ದರೂ ಸ್ವಂತ ಶ್ರಮದಿಂದ ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಂಡರು. ಇಂಗ್ಲಿಷ್ ಭಾಷೆಯಲ್ಲಿ ಹೇರಳವಾಗಿ ದೊರೆಯುವ ಜನಪ್ರಿಯ ವಿಜ್ಞಾನ ಸಾಹಿತ್ಯವನ್ನು ಆಳವಾಗಿ ಮತ್ತು ವಿಸ್ತಾರವಾಗಿ ಅಭ್ಯಾಸಮಾಡಿ ತಾವು ಪಡೆದ ಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಕನ್ನಡಿಗರಿಗೆ ನೀಡುವ ಪ್ರಯತ್ನ ಮಾಡಿದರು. 1931ರಲ್ಲಿ ಅವರು ಹೊರತಂದ ಬಾಲ ಪ್ರಪಂಚ ಎಂಬ ಮೂರು ಸಂಪುಟಗಳ ವಿಶ್ವಕೋಶದಲ್ಲಿ ವಿಜ್ಞಾನವನ್ನು ಕುರಿತ ಲೇಖನಗಳಿಗೆ ಗಣನೀಯ ಸ್ಥಾನವನ್ನು ಕೊಟ್ಟಿದ್ದಾರೆ. ತರುವಾಯ 1959–64ರ ಅವಧಿಯಲ್ಲಿ ವಿಜ್ಞಾನಕ್ಕೆ ಮೀಸಲಾದ ನಾಲ್ಕು ಸಂಪುಟಗಳ ವಿಜ್ಞಾನ ಪ್ರಪಂಚ ಎಂಬ ವಿಜ್ಞಾನ ವಿಶ್ವಕೋಶವನ್ನು ಪ್ರಕಟಿಸಿದ್ದಾರೆ. ಅಲ್ಲದೆ ಒಳ್ಳೆಯ ಇಂಗ್ಲಿಷ್ ಪುಸ್ತಕಗಳನ್ನು ಆಯ್ದುಕಂಡು ಅನುವಾದ ಮಾಡಿ ಪ್ರಕಟಿಸಿದ್ದಾರೆ. ನುರಿತ ವಿಜ್ಞಾನಿಯ, ವಿಜ್ಞಾನ ಬೋಧಕನ ನಿಖರತೆ ನಿಷ್ಪಕ್ಷತೆಗಳು ಅವರ ಬರೆಹಗಳಲ್ಲಿ ಕಂಡುಬರದಿರಬಹುದು; ಆದರೆ ವಿಜ್ಞಾನವನ್ನು ಜನಪ್ರಿಯಗೊಳಿಸಬಲ್ಲ ಸಾಹಿತ್ಯವನ್ನು ಅವರಷ್ಟು ಅಗಾಧ ಪ್ರಮಾಣದಲ್ಲಿ ಸೃಷ್ಟಿಮಾಡಿ ಕನ್ನಡ ನಾಡಿನ ವಿವಿಧ ಪ್ರಾಂತ್ಯದ ಓದುಗರನ್ನು ತಲುಪಿಸಿರುವ ಬೇರೊಬ್ಬ ಲೇಖಕನಿಲ್ಲ.

ವಿಜ್ಞಾನ ಅತ್ಯಧಿಕ ವೇಗದಲ್ಲಿ ಬೆಳೆಯುತ್ತಿರುವ ಇಂದಿನ ಯುಗದಲ್ಲಿ ಹಿಂದೆ ಬೀಳದೆ ವಿಜ್ಞಾನದ ಪ್ರಗತಿಯನ್ನು ಗಮನದಲ್ಲಿರಿಸಿ ಕೊಂಡು ಅತ್ಯಾಧುನಿಕ ವಿಷಯಗಳೆಲ್ಲವನ್ನೂ ಕನ್ನಡ ಭಾಷೆಯ ಮೂಲಕ ನಿಷ್ಕೃಷ್ಟವಾಗಿ ತಿಳಿಯಹೇಳುವ ಪ್ರಯತ್ನ ಮಾಡಿ ಯಶಸ್ಸು ಗಳಿಸಿದ ಲೇಖಕರೆಂದರೆ ಆರ್.ಎಲ್.ನರಸಿಂಹಯ್ಯ. ಸೆಂಟ್ರಲ್ ಕಾಲೇಜಿನಲ್ಲಿ ಭೌತವಿಜ್ಞಾನದ ಅಧ್ಯಾಪಕರಾಗಿದ್ದು ನಿವೃತ್ತರಾದ ಅನಂತರ ಬೆಂಗಳೂರಿನ ನ್ಯಾಷನಲ್ ಕಾಲೇಜು ಮತ್ತು ಆಚಾರ್ಯ ಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಇವರು ಕಾರ್ಯನಿರತ ವಿಜ್ಞಾನಿ ಮತ್ತು ವಿಜ್ಞಾನ ಬೋಧಕರಾಗಿದ್ದರು. ಶಕ್ತಿ, ಜಗತ್ತುಗಳ ಹುಟ್ಟು ಮತ್ತು ಸಾವು, ನಕ್ಷತ್ರ ದರ್ಶನ ಮುಂತಾದ ಉತ್ತಮ ಗ್ರಂಥಗಳನ್ನು ರಚಿಸಿದರು. ಎರಡು ಒಳ್ಳೆಯ ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಅನುವಾದಿಸಿದರು. ಪ್ರಬುದ್ಧ ಕರ್ಣಾಟಕದಲ್ಲಿಯೂ ವಿವಿಧ ದಿನಪತ್ರಿಕೆ ವಾರಪತ್ರಿಕೆಗಳಲ್ಲಿಯೂ ನಲವತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದರು. ನರಸಿಂಹಯ್ಯನವರ ವಿಷಯ ನಿರೂಪಣೆ ನಿಖರ; ಭಾಷೆ ಮತ್ತು ಶೈಲಿ ಬಿಗಿ. ಪಾರಿಭಾಷಿಕ ಶಬ್ದಗಳ ವಿಷಯದಲ್ಲಿ ಇವರು ಒಂದು ನಿರ್ದಿಷ್ಟ ನಿಲುವನ್ನು ತಳೆದಿದ್ದರು. ಪದಾರ್ಥಗಳು, ಸಲಕರಣೆಗಳು ಮುಂತಾದವುಗಳ ಹೆಸರುಗಳನ್ನು ಇಂಗ್ಲಿಷ್ ಭಾಷೆಯಿಂದ ಎರವಲು ಪಡೆಯುವುದು ಮತ್ತು ತತ್ತ್ವನಿಯಮ, ಪರಿಣಾಮಗಳಿಗೆ ಸಂಬಂಧಿಸಿದ ಶಬ್ದಗಳಿಗೆ ಸಮಾನ ಪದಗಳನ್ನು ಸಂಸ್ಕೃತದ ಸಹಾಯದಿಂದ ಕನ್ನಡದಲ್ಲಿ ಟಂಕಿಸುವುದು ಸರಿಯಾದ ಮಾರ್ಗವೆಂಬ ಇವರ ಅಭಿಪ್ರಾಯಕ್ಕೆ ಅನುಸಾರವಾಗಿ ಅತ್ಯಂತ ಔಚಿತ್ಯಪೂರ್ಣವಾದ ಪದಗಳನ್ನು ಸೃಷ್ಟಿಮಾಡಿ ಇವರು ತಮ್ಮ ಬರವಣಿಗೆಯಲ್ಲಿ ಬಳಸುತ್ತಿದ್ದರು. ಆದರೆ ಅವು ಸಾಕಷ್ಟು ಚಲಾವಣೆಗೆ ಬರಲಿಲ್ಲವಾದ್ದರಿಂದ ಇವರ ಬರೆವಣಿಗೆ ಕೆಲವು ವೇಳೆ ಸ್ವಲ್ಪ ಭಾರವಾಗಿ ಕಾಣಿಸುತ್ತಿದ್ದುದ್ದು ನಿಜ. ಆದರೆ ಇವರು ಮಾಡುತ್ತಿದ್ದ ಉಪನ್ಯಾಸಗಳು ಅತ್ಯಂತ ಜನಾಕರ್ಷಣೀಯವಾಗಿದ್ದುವು.

ಜನಪ್ರಿಯ ವಿಜ್ಞಾನ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಂಘಸಂಸ್ಥೆಗಳಲ್ಲಿ ಮೈಸೂರು ವಿಶ್ವವಿದ್ಯಾಯನಿಲಯವನ್ನೂ ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಆಶ್ರಯದಲ್ಲಿ ಜನ್ಮವೆತ್ತಿ (1919) ಈಗ ಮೈಸೂರು

ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ಪ್ರಬುದ್ಧ ಕರ್ಣಾಟಕ ಪತ್ರಿಕೆಯನ್ನೂ ಮೊದಲು ಹೆಸರಿಸಬೇಕು. ಬಹುಶಃ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಮೊತ್ತಮೊದಲ ಕನ್ನಡ ವಿಜ್ಞಾನ ಗ್ರಂಥವೆಂದರೆ 1924ರಲ್ಲಿ ಪ್ರಕಟವಾದ ಎಸ್.ಎನ್.ನರಸಿಂಹಯ್ಯನವರ ಖಗೋಳಶಾಸ್ತ್ರ ಕೆಲಕಾಲದ ಮೇಲೆ ವಿಶ್ವವಿದ್ಯಾನಿಲಯದ ಪ್ರಕಟಣ ಶಾಖೆಯ ಚಟುವಟಿಕೆಗಳು ಬೆಳೆದು ವಿವಿಧ ಗ್ರಂಥಮಾಲೆಗಳಿಗೆ ಸೇರಿದಂತೆ ಅನೇಕ ವಿಜ್ಞಾನ ಪುಸ್ತಕಗಳು ಬೆಳಕು ಕಂಡಿವೆ. ಈ ಗ್ರಂಥಮಾಲೆಗಳ ಪೈಕಿ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ನಡೆಸಿರುವ ಕೆಲಸ ಗಮನಾರ್ಹವಾದುದು. ಜಿ.ಹನುಮಂತರಾಯರ ನೇತೃತ್ವದಲ್ಲಿ ರೂಪುಗೊಂಡ ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘ ಗ್ರಾಮಾಂತರ ಪ್ರದೇಶಗಳಲ್ಲಿ ಸಂಘದ ಸದಸ್ಯರಿಂದ ಉಪನ್ಯಾಸಗಳನ್ನು ನಡೆಸುವುದು, ತರುವಾಯ ಈ ಉಪನ್ಯಾಸಗಳ ಸಾರಾಂಶವನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸುವುದು ಈ ಕಾರ್ಯವನ್ನು ನಡೆಸುತ್ತಿತ್ತು. ಈ ಕೆಲಸಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗವೆಂಬ ಒಂದು ಸಂಸ್ಥೆಯನ್ನೇ ಸ್ಥಾಪಿಸಿದೆ. ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಕಟವಾಗಿರುವ ವಿಜ್ಞಾನ ಪುಸ್ತಕಗಳು ಅತ್ಯಂತ ಜನಪ್ರಿಯತೆಯನ್ನು ಗಳಿಸಿವೆಯೆಂದು ಧಾರಾಳವಾಗಿ ಹೇಳಬಹುದು. ಅವುಗಳಲ್ಲಿ ಹಲವು ಮೂರು ನಾಲ್ಕು ಬಾರಿ ಅಚ್ಚಾಗಿ ಹೊರಬಿದ್ದಿರುವುದೂ ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಇದೇ ಮಾದರಿಯನ್ನನುಸರಿಸಿ ಕಿರುಹೊತ್ತಗೆಗಳನ್ನು ಹೊರತರುತ್ತಿರುವುದೂ ಅವುಗಳ ಜನಪ್ರಿಯತೆಗೆ ಸಾಕ್ಷಿ.

ಕನ್ನಡದಲ್ಲಿ ಉತ್ತಮ ಸಾಹಿತಿಗಳನ್ನು ಗುರುತಿಸಿ ಅಂಥ ಅನೇಕರಿಗೆ ಪ್ರೋತ್ಸಾಹ ನೀಡಿ ಅವರನ್ನು ಬೆಳಕಿಗೆ ತಂದ ಕೀರ್ತಿ ಪಡೆದಿರುವ ಪ್ರಬುದ್ಧ ಕರ್ಣಾಟಕ ಪತ್ರಿಕೆ ವಿಜ್ಞಾನ ಲೇಖಕರನ್ನು ತಯಾರಿಸುವುದರಲ್ಲಿಯೂ ಪ್ರಮುಖ ಪಾತ್ರ ವಹಿಸಿದೆ. ಪ್ರಾರಂಭದಲ್ಲಿ ಪ್ರಬುದ್ಧ ಕರ್ಣಾಟಕ ಕೇವಲ ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಯಾಗಿತ್ತು. ಆದರೆ ವಿಜ್ಞಾನ ಸಾಹಿತ್ಯ ಜೊತೆಯಲ್ಲಿಯೇ ಬೆಳೆಯದೆ ಹೋದಲ್ಲಿ ಭಾಷೆಯ ಮತ್ತು ಸಾಹಿತ್ಯದ ಸರ್ವತೋಮುಖ ಪ್ರಗತಿ ಸಾಧ್ಯವಿಲ್ಲ ಎಂಬುದನ್ನು ಬಹು ಬೇಗನೆ ಈ ಪತ್ರಿಕೆ ಅರಿತುಕೊಂಡು 1923ರಲ್ಲಿಯೇ ಅಂದರೆ ಅದರ ಐದನೆಯ ಸಂಪುಟದ ಮೊದಲ ಸಂಚಿಕೆಯಲ್ಲಿಯೇ ವಿಜ್ಞಾನ ಲೇಖನಗಳಿಗೆ ಅವಕಾಶ ಕಲ್ಪಿಸಿಕೊಟ್ಟಿತು. ಅಲ್ಲಿಂದ ಮುಂದೆ ಕ್ರಮೇಣ ವಿಜ್ಞಾನ ಲೇಖನಗಳು ಹೆಚ್ಚು ಹೆಚ್ಚಾಗಿ ಬರಲು ಪ್ರಾರಂಭಿಸಿದುದರಿಂದ 1963ರ ವೇಳೆಗೆ ಪ್ರಬುದ್ಧ ಕರ್ಣಾಟಕ ಆರು ತಿಂಗಳಿಗೊಮ್ಮೆ ಒಂದು ವಿಜ್ಞಾನ ವಿಶೇಷಾಂಕವನ್ನು ಪ್ರಕಟಿಸಬೇಕಾಯಿತು. ಇದುವರೆಗೆ ಈ ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳ ಸಂಖ್ಯೆ ಸುಮಾರು 300ಕ್ಕೂ ಹೆಚ್ಚು. ಈ ಪತ್ರಿಕೆ ಹಲವಾರು ಹೊಸ ವಿಜ್ಞಾನ ಲೇಖಕರನ್ನು ಗುರುತಿಸಿ ಅವರಿಗೆ ಉತ್ತೇಜನ ನೀಡಿದೆ.

1969ರಲ್ಲಿ ಪ್ರಬುದ್ಧ ಕರ್ಣಾಟಕ ಅದರ ಚಿನ್ನದ ಹಬ್ಬವನ್ನಾಚರಿಸಿದ ಸಂದರ್ಭದಲ್ಲಿ ಹೊರತಂದ ಚಿನ್ನದ ಸಂಚಿಕೆಯ ವಿಜ್ಞಾನ ವಿಭಾಗ ಕನ್ನಡ ವಿಜ್ಞಾನ ಸಾಹಿತ್ಯದ ಬೆಳೆವಣಿಗೆಯ ಮಾರ್ಗದಲ್ಲಿ ಒಂದು ಪ್ರಮುಖ ಮೈಲುಗಲ್ಲು. 1600 ಪುಟಗಳ ಈ ಸಂಚಿಕೆ ಐವತ್ತೇಳು ಮಂದಿ ವಿಜ್ಞಾನ ಲೇಖಕರ ಸಹಕಾರದಿಂದ ರೂಪುಗೊಂಡಿತ್ತು. ವಿಜ್ಞಾನದ ಇತಿಹಾಸದ ಮುಖ್ಯ ಘಟ್ಟಗಳೆನ್ನಬಹುದಾದ ಮಹತ್ತರ ಸಂಶೋಧನೆಗಳನ್ನು ಮತ್ತು ಅವಕ್ಕೆ ಕಾರಣರಾದ ಮಹಾವಿಜ್ಞಾನಿಗಳನ್ನು ಕುರಿತ ಲೇಖನಗಳನ್ನು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಿವಿಧ ವಿಜ್ಞಾನ ವಿಭಾಗಗಳಲ್ಲಿ ಆಗಿರುವ ಪ್ರಗತಿಯ ಸಮೀಕ್ಷೆಗಳು, ಇಂದು ಬಹುಪಾಲು ವಿಜ್ಞಾನಿಗಳ ಆಸಕ್ತಿಯನ್ನು ಕೆರಳಿಸಿರುವ ಸಂಶೋಧನ ಕ್ಷೇತ್ರಗಳು, ಭಾರತದಲ್ಲಿ ವಿಜ್ಞಾನದ ಪ್ರಗತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಒಟ್ಟು ಐವತ್ತೇಳು ಲೇಖನಗಳಿಂದ ಕೂಡಿದ ಈ ದೊಡ್ಡ ಸಂಚಿಕೆ ಕನ್ನಡ ವಿಜ್ಞಾನ ಸಾಹಿತ್ಯ ಪ್ರಬುದ್ಧವಾಗಿದೆ ಎಂಬುದರ ಕುರುಹು. ಪ್ರಬುದ್ಧ ಕರ್ಣಾಟಕದ ಚಿನ್ನದ ಸಂಚಿಕೆಯ ಯಶಸ್ಸಿನಿಂದ ಪ್ರೇರಿತರಾಗಿ ಮೈಸೂರು ವಿಶ್ವವಿದ್ಯಾನಿಲಯ ವಿಜ್ಞಾನಕ್ಕೆ ಮೀಸಲಾದ ಪ್ರತ್ಯೇಕ ಪತ್ರಿಕೆ ವಿಜ್ಞಾನ ಕರ್ಣಾಟಕವನ್ನು ಪ್ರಾರಂಭಿಸಿತು (1969). ಇದು ನಿಯತಕಾಲಿಕವಾಗಿ ಪ್ರಕಟವಾಗುತ್ತಿದೆ. ನಾಲ್ಕು ದಶಕಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿ ನೋಡಿದರೆ ಈಗ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಗಾತ್ರದಲ್ಲಿ ಹಿರಿದಾಗಿ ಬೆಳೆದಿದೆ. ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಕಟವಾಗುತ್ತಿರುವ ವಿಜ್ಞಾನ ಕರ್ಣಾಟಕವಲ್ಲದೆ ದಕ್ಷಿಣ ಕನ್ನಡದ ಶ್ರೀನಿವಾಸ ನಗರದಿಂದ ವಿಜ್ಞಾನ ಸಂಘದವರು ವಿಜ್ಞಾನ ಲೋಕವೆಂಬ ಇನ್ನೊಂದು ಪತ್ರಿಕೆಯನ್ನು 1967 ಅಕ್ಟೋಬರದಿಂದ ಎರಡು ವರ್ಷಗಳ ಕಾಲ ತ್ರೈಮಾಸಿಕವಾಗಿಯೂ 1969ರ ನವೆಂಬರ್ ಅನಂತರ ಮಾಸಿಕವಾಗಿಯೂ ಪ್ರಕಟಿಸಿದ್ದಾರೆ. ವಿಜ್ಞಾನಕ್ಕೆ ಮೀಸಲಾದ ಖಾಸಗಿ ಪತ್ರಿಕೆಯೊಂದು ನಾಲ್ಕೈದು ವರ್ಷಗಳ ಕಾಲ ತ್ರೈಮಾಸಿಕವಾಗಿ ಜೀವಂತವಾಗಿ ಉಳಿದದ್ದು ಒಂದು ದೊಡ್ಡ ವಿಷಯ. ಸುಮಾರು 45 ವರ್ಷಗಳ ಕೆಳಗೆ ಬಿ.ವಿ.ಸುಬ್ಬರಾಯಪ್ಪನವರ ಸಂಪಾದಕತ್ವದಲ್ಲಿ ಪ್ರಾರಂಭವಾದ ವಿಜ್ಞಾನ ಯುಗ ಒಂದು ವರ್ಷ ತುಂಬುವುದರಲ್ಲಿ ಅಳಿದುಹೋದದ್ದನ್ನು ನೆನೆಸಿಕೊಂಡರೆ ವಾತಾವರಣ ವಿಶೇಷವಾಗಿ ಬದಲಾಯಿಸಿರುವುದು ಸ್ಪಷ್ಟವಾಗುತ್ತದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ವಿಜ್ಞಾನ ಸಂಗಾತಿ ಎಂಬ ತ್ರೈಮಾಸಿಕ ಪ್ರಕಟವಾಗುತ್ತಿದೆ. ವಿಜ್ಞಾನಕ್ಕೆ ಮೀಸಲಾದ ಇನ್ನೊಂದು ಪತ್ರಿಕೆ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದವರು ಪ್ರಕಟಿಸುತ್ತಿರುವ ಆಹಾರ ವಿಜ್ಞಾನ. ಈ ಪತ್ರಿಕೆಗಳಲ್ಲದೆ ವಾರಪತ್ರಿಕೆಗಳು, ಮಾಸಿಕಗಳು ಮತ್ತು ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳು ಸಾಮಾನ್ಯವಾಗಿ ಪ್ರತಿಯೊಂದು ಸಂಚಿಕೆಯಲ್ಲೂ ವಿಜ್ಞಾನ ಲೇಖನಗಳನ್ನು ಪ್ರಕಟಿಸುತ್ತಿರುವುದನ್ನು ಕಾಣಬಹುದು.

ಇದೆಲ್ಲದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ವಿಜ್ಞಾನ ಜನಜೀವನಕ್ಕೆ ಸಂಬಂಧವಿಲ್ಲದ, ತಜ್ಞರಿಗೆ ಮಾತ್ರ ಸಂಬಂಧಪಟ್ಟ ಪ್ರತ್ಯೇಕ ವಿಷಯವೆಂಬ ಭಾವನೆ ಕ್ರಮೇಣ ಕಡಿಮೆಯಾಗುತ್ತಿದೆ. ವಿಜ್ಞಾನದಲ್ಲಿ ಪರಿಶ್ರಮ ಉಳ್ಳವರು ಕನ್ನಡದಲ್ಲಿ ಬರೆಯಲು ಮುಂದೆ ಬರುತ್ತಿದ್ದಾರೆ. ಆದರೆ ಗಾತ್ರದಲ್ಲಿ ಬೆಳೆಯುತ್ತಿರುವ ಈ ಸಾಹಿತ್ಯ ಗುಣದಲ್ಲಿಯೂ ಅದೇ ಪ್ರಮಾಣದಲ್ಲಿ ಬೆಳೆಯುತ್ತಿಲ್ಲವೆಂಬ ದೂರೂ ಕೇಳಿಬರುತ್ತಿದೆ. ಈಗ ಇದರಲ್ಲಿ ಹೆಚ್ಚಿನ ಸತ್ಯಾಂಶವಿಲ್ಲ. ಕನ್ನಡ ವಿಜ್ಞಾನ ಸಾಹಿತ್ಯ ನಿರ್ಮಾಣ ಅರ್ಥಪೂರ್ಣವಾದ ದಿಕ್ಕಿನಲ್ಲಿ ಸಾಗಿದೆ. (ಎ.ಕೆ.ಬಿ.)

**ಕನ್ನಡದಲ್ಲಿ ವಿಡಂಬನಸಾಹಿತ್ಯ :** ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿಡಂಬನಕ್ಕೇನೂ ಕೊರತೆಯಿಲ್ಲ. ಆದರೆ ವಿಡಂಬನವೆಂಬ ಸಾಹಿತ್ಯಪ್ರಕಾರ ಮೈ ತಳೆದು ಬೆಳೆದದ್ದು 20ನೆಯ ಶತಮಾನದಲ್ಲೇ. ಈ ಪ್ರಕಾರಕ್ಕೇ ಅಷ್ಟಾಗಿ ಪ್ರಾಮುಖ್ಯವಿಲ್ಲದಿದ್ದ ಹಿಂದಿನ ಕಾಲದಲ್ಲಿ ವಿಡಂಬನವನ್ನೇ ಮುಖ್ಯೋದ್ದೇಶವಾಗಿ ಕೈಕೊಂಡು ಕೃತಿರಚನೆ ಮಾಡಿದ ಕವಿಯಂತೂ ಯಾರೂ ಇಲ್ಲ. ಶೃಂಗಾರ, ವೀರ, ಕರುಣಾದಿ ರಸಗಳ ಮೇಲೆ ಕಣ್ಣಿಟ್ಟ ಕವಿಗಳು ಆಗಾಗ್ಗೆ ಶೃಂಗಾರಕ್ಕೊ, ವೀರಕ್ಕೊ, ಕರುಣಕ್ಕೊ ಹೆಚ್ಚಿನ ಪ್ರಾಧಾನ್ಯ ಕೊಟ್ಟದ್ದುಂಟು. ವಿಡಂಬನ ಸಾಹಿತ್ಯವೆಂಬ ವಿಶಿಷ್ಟ ಪ್ರಕಾರವಂತೂ ಅವರ ಯೋಚನೆಯ ಪರಿಧಿಯೊಳಕ್ಕೆ ಬಂದೇ ಇರಲಿಲ್ಲ. ಮಾತು ಎಷ್ಟು ಸಹಜವೋ ಅಷ್ಟೇ ಸಹಜವಾಗಿ ಅದರೊಂದಿಗೆ ಅಂಟಿಕೊಂಡ ವಿಡಂಬನದ ಮೆಟ್ಟಿಲುಗಳನ್ನು ಎಣಿಸಿ ಪಟ್ಟಿಮಾಡಲು ಯಾರೂ ಪ್ರಯತ್ನಿಸಲಿಲ್ಲ. ಆದರೆ ಪಾತ್ರಾಪಾತ್ರಗಳ ನಡುವಣ ಕಟಕಿ, ನಿಂದೆ, ಮೂದಲೆ, ಅಪಹಾಸ್ಯ, ವಕ್ರೋಕ್ತಿ,ಪರಿಹಾಸ ಮುಂತಾದವಕ್ಕೂ ಸಮಾಜ ಅಥವಾ ಸನ್ನಿವೇಶಜನ್ಯವಾದ ಜುಗುಪ್ಸೆ, ವಿನೋದ, ಕ್ರೋಧ, ಅಸಮಾಧಾನಗಳನ್ನು ನಗೆಯ ಉಬ್ಬು ಕನ್ನಡಿಯಿಂದ ಕಂಡಾಗ ಧ್ವನಿಯುಕ್ತವಾದ ಸಾಹಿತ್ಯಕ್ಕೆ ಕನ್ನಡದಲ್ಲಿ ಕೊರತೆಯಿಲ್ಲ ಎನ್ನಬಹುದು. ಶಾಸನದಿಂದ ಸರ್ವಜ್ಞನ ವರೆಗೆ ಹಳೆಯ ಸಾಹಿತ್ಯದಲ್ಲಿ ಎಲ್ಲೆಲ್ಲೂ ವಿಡಂಬನದ ನೂರಾರು ಉದಾಹರಣೆಗಳು ದೊರಕುತ್ತವೆ. ತುರುಗೋಳು ಗಡಿಕಾಳಗಗಳಲ್ಲಿ ಜೀವ ತೆತ್ತವರನ್ನು ಗೌರವಿಸಿ ನೆಟ್ಟ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ವಿಡಂಬನದ ತವರುಗಳು. ಕಟ್ಟಿದ ಸಿಂಘಮನ್ ಕೆಟ್ಟೋದೇನಮಗೆನ್ದು ಬಿಟ್ಟೋಮೋಲ್ ಕಲಿಗೆ ವಿಪರೀತಂಗಹಿತರ್ಕ್ಕಳ್ ಕೆಟ್ಟರ್ ಮೇಣ್ ಸತ್ತರ ವಿಚಾರಂ – ಎಂಬುದಾಗಿ ಕಲಿಯುಗವಿಪರೀತನಾದ ಕಪ್ಪೆ ಅರಭಟ್ಟನ ಪ್ರತಾಪವನ್ನು ಕುರಿತ ಬಾದಾಮಿ ಶಾಸನದಲ್ಲಿ (ಸು.700) ಅವನನ್ನು ಕೆಣಕುವವರ ಬಗ್ಗೆ ಅಪಹಾಸ್ಯವಿದೆ. ಇಂಥ ಎಷ್ಟೋ ಉದಾಹರಣೆಗಳನ್ನು ಶಾಸನಗಳಲ್ಲಿ ಕಾಣಬಹುದು. ಹಿಂದಿನ ಕಾಲದ ಪ್ರತಿಯೊಬ್ಬ ಕವಿಯೂ ಸಾಮಾನ್ಯವಾಗಿ ಮಾಡುತ್ತಿದ್ದ ಪ್ರಶಂಸೆ, ಅನ್ಯಕವಿನಿಂದೆಗಳು ಈ ಬಗೆಯ ವಿಡಂಬನಕ್ಕೆ ಸೂಕ್ತ ಉದಾಹರಣೆಗಳು. ಗೂಡಾರದ ಕವಿಯಂತಿರೆ ಮುಚ್ಚಿಪೋದ ಕವಿಯುಂ ಕವಿಯೇ ಎಂದೋ ಹಟಿಗವಿಗಳ ಕಬ್ಬಂಗಳ ಹೊಜಗಳಿಯಕ್ಕರದ ಹೊಲಿಗೆ, ಬಿರ್ಚಿದೊಡೆಲ್ಲಂ ಬಟೆಜಾಱಗ ಬೀಱಗವೆತ್ತತತ್ತರವೆಕ್ಕಸಕ್ಕಮಸ್ತವ್ಯಸ್ತಂ ಎಂದೋ ಅಪಹಾಸ್ಯ ಮಾಡಿದ್ದಾರೆ. ನೇರವಾಗಿ ಧಿಕ್ಕರಿಸುವುದೂ ಒಂದು ಮಾರ್ಗ. ಧರೆಯೊಳ್ ಮೇಣ್ ಪುಟ್ಟಿ ಪುಟ್ಟುತ್ತುರುರ್ವ ನರರ ಮೇಲುರ್ಬಿ ಕಬ್ಬಂಗಳಂ ಬಿತ್ತರಿಸುತ್ತುಂ ಸಪ್ರಯಾಸಂ ಕೆಲಕೆಲರಕಟಾ ಕಬ್ಬಿಗರ್ ಕೆಟ್ಟುಪೋದರ್ ಎಂಬ ಪಾರಮಾರ್ಥಿಕವಾದ ಮರುಕ ದೃಷ್ಟಿ ಮತ್ತೊಂದು ಮಾರ್ಗ.

ಒಬ್ಬ ಒಂದು ಒಳ್ಳೆಯ ಕೃತಿ ಬರೆದಾಗ ಇತರರು ಅವನ ಶೈಲಿಯನ್ನೋ ಕಥೆಯನ್ನೋ ಅನುಕರಿಸಿ ಬರೆಯತೊಡಗುತ್ತಿದ್ದುದೂ ವಿಡಂಬನೆಗೆ ತುತ್ತಾಗದಿರಲಿಲ್ಲ. ರಾಮಾಯಣಗಳು ಅತಿಯಾದಾಗ ಮಿಡಿದ ಕುಮಾರವ್ಯಾಸ ಕವಿಯ ಹಾಸ್ಯದ ಮೊನೆ ತೀಕ್ಷ್ಣವಾದದ್ದು. ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ, ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ ಎಂದು ಆತ ಬರೆದ. ಇದು ರಾಮಾಯಣಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಮಹಾಭಾರತವನ್ನು ಹೊತ್ತು ಮುಲುಗಾಡಿದ ಅಳಿಗವಿಗಳಿಗೂ ಅನ್ವಯಿಸುತ್ತದೆ.

ಕವಿ–ವಾಚಕ–ವಿಮರ್ಶಕರ ಸಂಬಂಧವನ್ನು ಕುರಿತಾದ ವಿಡಂಬನೆಗೂ ಹಳಗನ್ನಡ ಸಾಹಿತ್ಯದಲ್ಲಿ ಕೊರತೆಯಿಲ್ಲ. ಇರುಮರುಳೆ ಶುಷ್ಕ ವೈಯಾಕರಣಂಗಂ ಶುಷ್ಕ ತಾರ್ಕಿಕಂಗಂ ಬೆಳ್ಳಕ್ಕರಿಗಂಗಂ ವಿಷಯವೆ ಕಾವ್ಯರತ್ನಮತಿಚತುರಕವಿ–ಕದಂಬಕ ವಿಷಯಂ ಎನ್ನುತ್ತಾನೆ ಪಂಪ. ಆರಾರೇರರ್ ಶಾಸ್ತ್ರ ಶ್ರೀರೋಹಣಗಿರಿಯನಲ್ಲಿ ನವಕವಿತಾ ಚಿಂತಾರತ್ನಂ ದೊರೆಗುಮೇ ಮಾರಾರಿಯ ಕೃಪೆಯಿಲ್ಲದಂಗೆ ಧರಣೀ ತಳದೊಳ್ ಎಂಬುದು ಷಡಕ್ಷರಿಯ ಚಿರಂತನ ಪ್ರಶ್ನೆ. ಎನಿತನೊಱಲ್ದು ಪೇೞ್ದ ಕವಿಯೇವನ್? ಅದಂ ಪೆಸರಿಟ್ಟು ಮೆಚ್ಚಬಲ್ಲವನನಱಸಲ್ಕೆವೇೞ್ಪುದು, ಕಟ್ಟಿಯುಮೇನೊ ಮಾಲೆಗಾಱನ ಪೊಸ ಬಾಸಿಗಂ

ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ? ಎಂಬುದು ಜನ್ನನ ಅಳಲು. ಆದರೆ ಇದನ್ನರಿಯಲಾರದ ಅನೇಕರು ಎಲ್ಲ ಕಾಲಕ್ಕೂ ಇದ್ದಾರೆ. ಇಂಥವರನ್ನು ಅನೇಕ ಕವಿಗಳು ವಿಡಂಬಿಸಿದ್ದಾರೆ. ಕುಚೆಗೆಳೋಪಾದಿಯಲ್ಲಿ ಕಬ್ಬಿನ ಹೊಱಗಣೆಲೆಯನು ಮೇದಕ ಮೇಲುಕಿಱುವು ತಲ್ಪಸುಖಕ್ಕೆ ಸೋಲಬಾರದೆಂಬುದು ಚಾಮರಸನ ಚುಚ್ಚುನುಡಿ.

ಪ್ರಾಚೀನವಾದ ಕನ್ನಡ ಭಾಷೆಯ ಮೇಲೆ ಆದ ಸಂಸ್ಕೃತದ ಪ್ರಭಾವದಿಂದಾಗಿ ಕನ್ನಡದ ಶಬ್ದಭಂಡಾರ ಇನ್ನಷ್ಟು ಸಮೃದ್ಧವಾಗಿ ಬೆಳೆಯಿತೆಂಬುದು ನಿಜವಾದರೂ ಸಂಸ್ಕೃತದ ಬಗ್ಗೆ ಹಲವರು ತಳೆದ ಅತಿಯಾದ ಮೋಹವನ್ನೂ ಕನ್ನಡಕ್ಕಿಂತ ಸಂಸ್ಕೃತವೇ ಉತ್ತಮವಾದುದೆಂಬ ಅವರ ಮನೋಭಾವವನ್ನೂ ಅನೇಕ ಕವಿಗಳು ವಿಡಂಬನದ ಕತ್ತಿಯಿಂದ ಕತ್ತರಿಸಲು ಯತ್ನಿಸಿದ್ದಾರೆ. ಪೞಗನ್ನಡದೆ ಪುದುಂಗೊಳೆ ಕೋಡಿಸಕ್ಕದಮಂ ತಗುಳ್ಚಿ ಜಾಣ್ ಕಿಡೆ ಮುತ್ತುಂ ಮೆಣಸುಂಗೋದಂತಿರೆ ಪೇೞ್ವಿಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ ಎಂಬುದು ಈ ಬಗ್ಗೆ ಕವಿಯ ಉದ್ಗಾರ. ಸಂಸ್ಕೃತದಲ್ಲಿ ಹೇಳುವುದಾದರೆ ಸಂಸ್ಕೃತದಲ್ಲೇ ಹೇಳಿ, ಶುದ್ಧ ಕನ್ನಡದಲ್ಲಿ ಸಂಸ್ಕೃತವನ್ನು ತರುವುದೇಕೆ? ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ಎಂಬ ನಯಸೇನನ ಮಾತಿನ ನಂಜು ಬಲು ತೀವ್ರ. ಆದರೂ ಇದು ಸಕ್ಕದದೊಂದು ಚೆಲ್ವು ಎಂದು ಸಂಸ್ಕೃತಕ್ಕೆ ಜೋತುಬಿದ್ದವರನೇಕರ ಮನೋಧರ್ಮವನ್ನು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿದ್ದ ಮುದ್ದಣ ಕವಿ ಮನೋರಮೆಯ ಬಾಯಲ್ಲಿ ವಿಡಂಬಿಸಿದ್ದಾನೆ. ಸಂಸ್ಕೃತ ಕನ್ನಡಗಳು ಪರಸ್ಪರ ಪೂರಕವಾಗಿ ಬೆರೆಯಬೇಕೆಂಬುದಾಗಿ ಆತ ತೀರ್ಪು ನುಡಿದಿದ್ದಾನೆ.

**ಪಂಪಯುಗ:** 10ನೆಯ ಶತಮಾನದಲ್ಲಿದ್ದ ಪಂಪನ ಆದಿಪುರಾಣವಾಗಲಿ, ವಿಕ್ರಮಾರ್ಜುನವಿಜಯವಾಗಲಿ ವಿಡಂಬನಕಾವ್ಯಗಳಲ್ಲ. ಆದರೂ ವಿಡಂಬನದ ಹಲವು ಪ್ರಸಂಗಗಳು ಈ ಕಾವ್ಯಗಳಲ್ಲಿ ಕಂಡುಬರುತ್ತವೆ. ಒಂದು ಪಾತ್ರ ಇನ್ನೊಂದು ಪಾತ್ರವನ್ನು ಕುರಿತಾಡುವ ವಿಡಂಬನವೇ ಇಲ್ಲಿ ಹೆಚ್ಚು. ರಾಜಸೂಯಯಾಗದಲ್ಲಿ ಕೃಷ್ಣನಿಗೆ ಅಗ್ರಪೂಜೆಯ ಮರ್ಯಾದೆಯೆಂಬುದು ತಿಳಿದಾಗ ಶಿಶುಪಾಲ ಗಳಪುವ ನುಡಿ ಒಂದು ಉದಾಹರಣೆ. ತನ್ನಂಥ ದನುಜ ಪುಟ್ಟದ್ದರಿಂದ ಕೃಷ್ಣನಿಗೆ ದನುಜಾಂತಕನೆಂಬ ಬಿರುದು ಲಭ್ಯವಾಯಿತೆಂದು ಆತ ಮೂದಲಿಸುತ್ತಾನೆ. ಕೃಷ್ಣ ಸಂಧಾನಕ್ಕೆ ಬಂದಿದ್ದಾಗ, ದುರ್ಯೋಧನನಿಗೆ ಆತ ಬುದ್ಧಿವಾದವನ್ನು ಹೇಳಿದಾಗ ದುರ್ಯೋಧನ ಕೊಡುವ 'ನಾವೆಲ್ಲರು ಒಂದೆ ಗರುಡಿಯೊಳ್ ಓದಿದ ಮಾನಸರು. ನೀನು ಸುಮ್ಮನೆ ಬಳಲಬೇಡ, ಇರದೆ ಅಡಿ ಎತ್ತು' ಎಂದ ಮಾತು ವ್ಯಂಗ್ಯಕ್ಕೆ ಸುಂದರವಾದ ಉದಾಹರಣೆಯಾಗಿದೆ. ಭೀಷ್ಮನಿಗೆ ಸೇನಾಧಿಪತ್ಯ ದೊರಕಿದ ಸಂದರ್ಭದಲ್ಲಿ ಕರ್ಣನನ್ನು ಹೀನಕುಲಜನೆಂದು ದ್ರೋಣಾಚಾರ್ಯ ಹೇಳಿದಾಗ ಕರ್ಣ ನೀಡುವ ಉತ್ತರ ಸಮಾಜ ವಿಡಂಬನಕ್ಕೊಂದು ಉದಾಹರಣೆ. ಕುಲಮನೆ ಮುನ್ನಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂತು ಮಾರ್ಮಲೆವನನಟ್ಟಿ ತಿಂಬುವೆ, ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಂ ಅಭಿಮಾನಂ ಕುಲಂ – ಎಂಬುದು ಕರ್ಣನ ಕಟಕಿ. ಇಲ್ಲಿ ಸಮಾಜದ ಕಟ್ಟಳೆಯ ಬಗ್ಗೆ ನಂಜುನಗೆಯಿದೆ. ಅಶ್ವತ್ಥಾಮನು ಕರ್ಣನನ್ನು ಬಯ್ದಾಗ ಕರ್ಣ ಅಶ್ವತ್ಥಾಮನನ್ನು ಕುರಿತು ಹೇಳುವ ನೆಟ್ಟನೆ ವಿಷಮೊಳ್ಳೆಗುಳ್ಳೊಡಂ ಒಳ್ಳೆ ಒಳ್ಳೆಯೆ ಕಾಳಿಯನಾಗನಾಗದು ಎಂಬ ಮಾತಿನಲ್ಲಿ ಅಶ್ವತ್ಥಾಮನ ಶೌರ್ಯವನ್ನು ಕುರಿತ ವಿಡಂಬನೆ ಮೊನಚಾಗಿದೆ.

ರನ್ನನ ಗದಾಯುದ್ಧದಲ್ಲೂ ಕಟಕಿ ನಿಂದೆ ಅಪಹಾಸ್ಯ ಮೂದಲೆಗಳಿಗೆ ಕೊರತೆಯಿಲ್ಲ. ಇವಕ್ಕೆ ಕಾವು ಹೆಚ್ಚು. ಮೊನೆ ಅಧಿಕ. ಎಲ್ಲವನ್ನೂ ಸೋತು, ವೈಶಂಪಾಯನ ಸರೋವರವನ್ನು ಹೊಕ್ಕು ಕುಳಿತ ದುರ್ಯೋಧನನನ್ನು ಅರಸಿ ಹೊರಟಿದ್ದಾರೆ ಕೃಷ್ಣ, ಭೀಮ. ಆ ಸಂದರ್ಭದಲ್ಲಿ ಬರುವ ಕುರುಧರೆಯೊಳ್ ಕುರುಪತಿಯನಱಿಸಿದಂ ಪವನಸುತಂ, ಇದೊಂದು ಲಜ್ಜೆಯಾಯ್ತು ಭರತಕುಲಕ್ಕೆ, ರಾಜ್ಯಲಕ್ಷ್ಮಿ ಪೇಸಿ ಬಿಸುಟ್ಟವನು ದುರ್ಯೋಧನ, ನೀರೊಳಗೆಸಡಿರ್ಕುಂ ಮೀನಿರ್ಕುಂ ಇರ್ಪರೆ ಗಂಡರ್? ಎಂಬ ಮಾತುಗಳು ಕೌರವನ ಕಡೆಗೆ ಎಸೆದ ಮೂದಲಿಕೆಯ ಕೂರಂಬುಗಳು. ಆದರೆ ಪಾಂಡವರಿಗೂ ಈ ಬಗೆಯ ಬಿರುದುಗಳನ್ನು ಪಡೆಯಲು ಅರ್ಹತೆಯಿಲ್ಲವೆ ನಾಟ್ಕಿಗಳೆದುಱುಬೇರಂ ಬಿಟ್ಕಿಯುಮಂ ತಿಂದು ವನದೊಳಗಿದ್ದವರು ಪಾಂಡವರು. ಇನ್ನು ಭೀಮಸೇನನ ಕೆಚ್ಚನ್ನೇನೆಂದು ಹೇಳೋಣ ಸಟ್ಟುಗಂ ಬಿಸುಟ್ಟು ಗದೆಗೊಂಡೊಟ್ಟೆಸುವಂಥದು! ದುರ್ಯೋಧನ, ಧರ್ಮಜಂ ಕೃಪೆಯಿಂದೊಳ್ಪಿತಂ ಪೇಳ್ದಪಂ – ಈಗಳುಂ ಕೇಳ್ದು ಬರ್ದುಕು – ಎಂದು ಉಪದೇಶ ಮಾಡಿದರೆ ಅವನಿಗೆ ಎಷ್ಟು ಉರಿಯಾಗಬೇಡ? ಕೊನೆಗೆ ಆತ ತೊಡೆಯೊಡೆದು ಬಿದ್ದ. ಇಡೆ ತೊಡೆಯನುಡಿದು ನೆಟ್ಟಗೆ ಕಡೆಯತ್ತುಂ ಕರ್ಚಿ ನೆಲನಾನದನೆಂತುಂ ಬಿಡೆನ್ –ಎಂದು ಹಟದಿಂದ ಭೂಮಿಯನ್ನಪ್ಪಿದ್ದಾನೆ. ಆತ ಈ ಸಂಗರಾಧ್ವರದಲ್ಲಿ ಅರಸನೇ ದೀಕ್ಷಿತ, ಉಳಿದ ನಾಲ್ವರು ಋತ್ವಿಜರು, ಮುರಹರನೇ ಉಪದೇಶಕ, ದ್ರೌಪದಿಯೇ ಗೃಹೀತವ್ರತಾಚರಣವ್ಯಾಪಿಕೆ, ಪರಿಭವವೇ ಸಂಚಾರಕ, ಕೌರವೇಶ್ವರನೇ ಪಶು. ವಿದೂಷಕನ ಈ ನಂಜು ಕೊರಳನ್ನು ಕೊಯ್ಯುವಂಥದು. ಭೀಮ, ದುರ್ಯೋಧನರ ಗದಾಯುದ್ಧ ಸಂದರ್ಭದಲ್ಲಿ ಬರುವ ಮಾತುಗಳು ವ್ಯಂಗ್ಯಕ್ಕೆ ಹಾಸ್ಯಕ್ಕೆ ವಿಡಂಬನೆಗೆ ಸಾಕ್ಷಿಗಳಾಗಿವೆ.

**ನಯಸೇನ, ಬ್ರಹ್ಮ, ಶಿವ, ವೃತ್ತವಿಲಾಸ:** ಒಂದು ಪಾತ್ರದ ಮೇಲೆ ಪ್ರಯೋಗಿಸುತ್ತಿದ್ದ ವಿಡಂಬನಕ್ಕೆ ಸಮಾಜವೀಕ್ಷಣೆಯ ಕಣ್ಣು ದೊರೆತದ್ದೂ ಅನ್ಯ ಮತಗಳನ್ನೇ ಗುರಿಯಾಗಿಟ್ಟುಕೊಂಡು ಅವುಗಳನ್ನು ಪ್ರಹರಿಸುವ ಅಭ್ಯಾಸ ಬೆಳೆದದ್ದೂ ಮುಂದಿನ ಜೈನಕವಿಗಳ ಕಾವ್ಯಗಳಲ್ಲಿ. ನಯಸೇನ, ಬ್ರಹ್ಮಶಿವ, ವೃತ್ತವಿಲಾಸರು ಇದರಲ್ಲಿ ಅಗ್ರಗಣ್ಯರು. ಅನ್ಯಮತಾನುಯಾಯಿಗಳು ಜೈನರ ಉಪದೇಶದಿಂದ ಅವರ ಧರ್ಮಕ್ಕೆ ಪರಿವರ್ತನೆಗೊಳ್ಳುವ ಕಥೆಗಳೇ ಹಲವಾರು:

ಕಡುಮೂರ್ಖರ್ ತಮ್ಮಿಚ್ಛೆಗೆ
ಪಿಡಿದುದೆ ಪಿರಿದೆಂಬರಣ್ಣ ಜಿನಮಾರ್ಗದೊಳೇಂ
ನಡೆಯಲ್ ಬರ್ಕುಮೆ ಬಾರದು
ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೇ

– ಎಂಬುದಾಗಿ ಜೈನಧರ್ಮದ ಹಿರಿಮೆಯನ್ನು ಇವು ಬೋಧಿಸುತ್ತವೆ.

ಕಲಿತನದಿಂದಂ ಲೋಗರ್
ಪುಲಿಯಂ ಪಿಡಿದೊಡಮದೇಂ ಬಿಡೆಂಬರ್ ತಾಮೊಂ
ದಿಲಿಯಂ ಪಿಡಿದೊಡಮದು ಪೆ
ರ್ಬುಲಿಯೆಂಬರ್ ದುರ್ಜನರ್ಗೆ ತಾನಿದು ಸಹಜಂ

– ಎಂಬುದು ಎಲ್ಲ ಕಾಲದಲ್ಲೂ ಕಾಣಬರುವ ಲೋಕರೂಢಿಯ ವಿಡಂಬನೆ.

ಕನ್ನಡಿಯಂ ತೋಱೆದೊಡತ್ಯುನ್ನತ
ಸಲ್ಲಕ್ಷಣಂಗೆ ಮುಳಿಸಾಗದು ಮ
ತ್ತೆನ್ನದೆ ಮೂಕೊಱೆಯಂಗಾ
ಕನ್ನಡಿಯಂ ತೋಱೆ ಬಡಿಗುಮಿರಿಗುಂ ಕೊಲ್ಗುಂ

– ಎಂಬ ಇನ್ನೊಂದು ಪದ್ಯದಲ್ಲಿ ವಿಡಂಬನಕ್ಕೆ ಒಳಗಾಗಿರುವ ಮಾನವ ಸ್ವಭಾವವಾದರೂ ಸಾರ್ವಕಾಲಿಕ, ಸಾರ್ವದೇಶಿಕ.

ಆಗಿನ ವೈದಿಕ ಮತದ ಅಂಧಾಚಾರವನ್ನು ಅಪಹಾಸ್ಯ ಮಾಡುವ ಪದ್ಯಗಳಿಗಂತೂ ಲೆಕ್ಕವೇ ಇಲ್ಲ. ಇದೊಂದು ಉದಾಹರಣೆ. ಹೋಮಮಂ ಮಾಡುವ ಬ್ರಾಹ್ಮಣಂ ನೊಣವು ಬೆನ್ನನೂಱೆದೊಡೆ ಸೈರಿಸಲಾಱದೆ ಬೆನ್ನಂ ಪೊಯ್ದುಕೊಳ್ವುದುಂ ಕೆಲದೊಳಿರ್ದವರೆಲ್ಲಂ ಕೊಡನ ತುಪ್ಪದೊಳ್ ಕೈಯನದ್ದಿ ತಮ್ಮ ಬೆನ್ಗಳಂ ಪೊಯ್ದುಕೊಂಡರ್.

ಅಂಧಾನುಕರಣೆಯ ಶುಷ್ಕತೆ ಅಪಾಯಗಳನ್ನು ತೆಗಳಿ ಮಾಡಬಹುದಾದ ಹಲವಾರು ಉಪನ್ಯಾಸಗಳಿಗಿಂತ ಇಂಥ ಒಂದು ವಿಡಂಬನದ ತುಣುಕು ಹೆಚ್ಚು ಮಾರ್ಮಿಕ, ಸಾರ್ಥಕ. ನಯಸೇನನ ಧರ್ಮಾಮೃತದಲ್ಲಿಯ ಹಲವಾರು ಕಥೆಗಳು ವಿಡಂಬನ ಸಾಹಿತ್ಯಕೃತಿಗಳೆಂದೇ ಹೇಳಬಹುದು. ವಿಡಂಬನದ ವಿವಿಧ ಮೊಗವಾಡಗಳಾದ ಬಿಸಿನಗೆ ಹುಸಿನಗೆ ನಂಜುನಗೆ ರಸನಗೆಗಳ ಮೆರವಣಿಗೆಯೇ ಇಲ್ಲಿ ನಡೆದಿದೆ.

ಇದೇ ಪೀಳಿಗೆಯ ಇನ್ನೊಬ್ಬ ಸಮರ್ಥನೆಂದರೆ ಬ್ರಹ್ಮಶಿವ. ಇವನ ಸಮಯ ಪರೀಕ್ಷೆಯಲ್ಲಿಯ ವಿಡಂಬನದ ಸರಳುಗಳು ಬಲು ತೀಕ್ಷ್ಣ. ಇವನ ದೃಷ್ಟಿಯಲ್ಲಿ ವಿಷ್ಣು ಸರ್ವೋತ್ತಮ ಎನ್ನುವುದು ಹಾಸ್ಯಾಸ್ಪದ. ಧರೆಗೊಡೆಯಂ ಚಕ್ರೇಶಂ ತಿರಿವನೆ ಬಲಿಯಲ್ಲಿ ಬೇಡಿ ಮೂರಡಿ ನೆಲನಂ? ವಿಶ್ವವನ್ನೇ ಹೊಟ್ಟೆಯಲ್ಲಿಟ್ಟುಕೊಂಡು ರಕ್ಷಿಸುವ ಆತ, ಅದರೊಳಗೇ ಇದ್ದ ರಾಕ್ಷಸರನ್ನೇಕೆ ಕೊಂದ? ತರ್ಕಬದ್ಧವೆನಿಸುವ ಈ ಪ್ರಶ್ನೆಗಳಿಗೆ ಏನುತ್ತರ? ಆದರೆ ಸ್ವ ಮತಗಳ ಬಗ್ಗೆ ಈ ಕವಿ ಮತ್ತು ಇಂಥ ಕವಿಗಳು ಪಕ್ಷಪಾತಿಗಳು. ಇವರ ತರ್ಕವನ್ನೇ ಇತರರೂ ಅನ್ವಯಿಸುವರೆಂಬುದನ್ನು ಇವರು ಮರೆಯುತ್ತಾರೆ. ಇದು ಹೇಗಾದರೂ ಇರಲಿ, ಅನ್ಯಮತ ವಿಡಂಬನಕ್ಕೆಳಸಿದ ಎಲ್ಲ ಮತಗಳ ಕವಿಗಳಿಗೂ ಅನ್ವಯಿಸುವ ಮಾತು ಇದು. ಜಗಮಂ ಸುಡುವೊಡೆ ರುದ್ರಂ ಜನದೊಳಗಿರ್ದಾತ್ಮ ಭಕ್ತರೆಲ್ಲರುಮಂ ಮೆಲ್ಲಗೆ ತೆಗೆದು ಬೇಱೆ ಪೊಱಗಿಕ್ಕುಮೋ ಮೇಣ್ ಕೂಡೆ ಸುಟ್ಟು ಕಳೆಗುಮೊಪೇೞಿಂ? ಎಂದು ಆತ ಪ್ರಶ್ನೆ ಹಾಕಿದಾಗ ಇಂಥ ಕಲ್ಪನೆಯ ಚಿನ್ನಗಳಿಗೆ ತರ್ಕಮಣಿ ತಾಕಿ ಅವು ಕಬ್ಬಿಣದ ತುಂಡುಗಳಾಗಿ ಮಾರ್ಪಡುವುದಂತೂ ನಿಜ. ಈ ಚಮತ್ಕಾರ ದಿಂದ ಯಾರಿಗೆ ತಾನೆ ನಗೆ ಹೊಮ್ಮುವುದಿಲ್ಲ? ನಗೆಯ ಬಾಂಬೆಸೆದ ಜನರ ನಂಬಿಕೆಗಳ ಹೆಬ್ಬಂಡೆಗಳನ್ನು ಛಳಾರನೇ ಸೀಳಿಸುವುದು ವಿಡಂಬನ ಕೃತಿಗಳ ಉದ್ದೇಶ.

ಬಗೆಮೊಡದೇನಾನುಂ ಬಾ
ೞ್ತಗಲ್ಲವೆನಿಪರಳಿಗೊಲ್ದು ಪೊಡೆಮಡುವವನಾ
ಚಿಗುರುಂ ಪೂವುಂ ಕಾಯುಂ
ಸೊಗಯಿಪ ಮಾವಿಂಗೆ ಪುಣಿಸೆಗೆಱಗಲ್ವೇಡಾ

ಏನು ಉತ್ತರ ಹೇಳಬೇಕು ಇದಕ್ಕೆ? ನಯಸೇನ ಬ್ರಹ್ಮಶಿವರಂತೆಯೇ ಅನ್ಯಮತಗಳ ಅಂಧಸಂಪ್ರದಾಯಗಳನ್ನು ಗೇಲಿಗೆ ಗುರಿಪಡಿಸಿದವನು ವೃತ್ತವಿಲಾಸ. ಮನೋವೇಗ ಪವನವೇಗರೆಂಬ ರಾಜಕುಮಾರರು ಪಾಟಲೀಪುತ್ರಕ್ಕೆ ಹೋಗಿ ಜೈನಧರ್ಮವನ್ನು ಮೆರೆದದ್ದು

ಧರ್ಮಪರೀಕ್ಷೆಯ ಕಥೆ. ಇಲ್ಲಿಯ ವಿಡಂಬನದ ಚುರುಕು ಮುಟ್ಟಿನೋಡಿ ಕೊಳ್ಳುವಂಥದು. ಪುರಾಣಗಳೆಲ್ಲ ಸುಳ್ಳಿನ ಕಂತೆ. ದೇವರುಗಳಿಗೇನೂ ಶಕ್ತಿಯಿಲ್ಲ. ಕುರುಡು ಭಕ್ತಿಯಲ್ಲಿ ಫಲವಿಲ್ಲ– ಹೀಗೆಂದೆಲ್ಲ– ಸ್ಥಾಪಿಸಲು ಈತ ಅವಲಂಬಿಸಿರುವುದೂ ಗೇಲಿಯ ವಿಧಾನವೇ! ಮುಂದಿನದೊಂದು ಉದಾಹರಣೆ:

ಅಜ್ಞಾನಿಗಳ್ ಇಟ್ಟಿವರುಂಗಳಂ ಒಟ್ಟಿದ ಕಲ್ಗಳಂ ದೈವಮೆಂದು ಪೆಸರಿಟ್ಟು ಕೊಂಡಾಡಿ ವರಮೀಗುಮೆಂಬಾಸೆಯಿಂ ತಮ್ಮೊಳರ್ಥಮಂ ಬಚೆಸೊಳೆಗ್ಯೆವರ್. ಆ ದೈವಂ ವರಮನೀವಂದಂ ಎಂತುಟೆಂದೊಡೆ, ಬಂಜೆಯ ಪೆರ್ಮಗಂ ಮೃಗತೃಷ್ಣಾಂಬುವಂ ಮಿಂದು, ಕಲ್ಲನಾರ ಸೀರೆಯನುಟ್ಟು ಆಗಸಮೂದುಜುಂಬಿ, ಮೊಲದ ಕೋಡ ಬಿಲ್ವಿಡಿದು ಬರುತ್ತಿರ್ಪುದಂ ಪುಟ್ಟುಂಗುರುಡಂ ಅಂಧಕಾರದ ನಟ್ಟನಡುವಿರುಳೊಳ್ ಕಂಡನ್ ಎಂಬಂತೆ ನಿಷ್ಫಲಂ ಕ್ಲೇಶಂ ದುರ್ಗತಿ ದುಃಖವೇ ಅಕ್ಕುಂ. ಆ ದೈವಂ ಪೆಱರ್ಗೀವುದುಂ ಕಾವುದುಂ ಅಂತಿರ್ಕೆ. ತಮಗೆಂದು ಸಂಕಲ್ಪಿಸಿದ ವಸ್ತುವಂ ಕಾಯಲಾಱರ್.

ಈ ಮಾತಿನ ಚಮತ್ಕಾರ, ವಾದವೈಖರಿ, ಅಪಹಾಸ್ಯ – ಇವು ಅದ್ಭುತ. ಯಾವ ಮತಪ್ರಚಾರಕನೂ ಇದಕ್ಕಿಂತ ಚೆನ್ನಾಗಿ ಅನ್ಯಮತದ ವಿಡಂಬನೆ ಮಾಡಲಾರ.

ಈ ವಿಡಂಬನ ತ್ರಿಮೂರ್ತಿಗಳಿಗೂ ಮುಂಚೆ, ಎಂದರೆ ಸು.1031ರಲ್ಲಿ ಸಂಸ್ಕೃತದಿಂದ ಕನ್ನಡಕ್ಕೆ ಬಂದ ಗ್ರಂಥಮೊಂದನ್ನು ಇಲ್ಲಿ ಉಲ್ಲೇಖಿಸುವುದು ಮುಖ್ಯವೆನಿಸುತ್ತದೆ. ಅದು ಪಂಚತಂತ್ರ, ಅನುವಾದಕ ದುರ್ಗಸಿಂಹ. ತನ್ನ ಮೂವರು ದಡ್ಡ ಮಕ್ಕಳಿಗೆ ವಿದ್ಯೆ ಕಲಿಸುವ ದಾರಿ ಕಾಣದೆ ನಿರಾಶೆಗೊಂಡಿದ್ದ ದೊರೆಯೊಬ್ಬನಿಗೆ ಸಿಕ್ಕ ಬ್ರಾಹ್ಮಣನು ಹೇಳಿದ ಪ್ರಾಣಿಕಥೆಗಳಿಂದ ಆ ಮಕ್ಕಳು ವಿವೇಕ ಪಡೆಯುತ್ತಾರೆ. ಅಡಕವಾಗಿ ನಾಟಕೀಯವಾಗಿ ಹಾಸ್ಯಬದ್ಧವಾಗಿರುವ ಈ ಕಥೆಗಳ ಪಾತ್ರಗಳಾದ ಪ್ರಾಣಿಗಳು, ಮಾನವರ ಸ್ವಭಾವಗಳ ಪ್ರತೀಕಗಳು. ವೇದ ಕೂಡ ಅವಕ್ಕೆ ಗೊತ್ತುಂಟು. ಪಂಚತಂತ್ರಮೊಂದು ಅದ್ಭುತ ವಿಡಂಬನ ಗ್ರಂಥ. ಇದರ ಧ್ವನಿಶಕ್ತಿ ಅದ್ಭುತ ಪ್ರಚಂಡ ಪರಿಣಾಮಕಾರಿ.

**ವಚನಕಾರರು:** ಕನ್ನಡ ನಾಡಿನಲ್ಲಿ ಒಂದು ವ್ಯಾಪಕವಾದ ಧಾರ್ಮಿಕ ಸಾಮಾಜಿಕ ಕ್ರಾಂತಿಯನ್ನೇ ಪ್ರಾರಂಭಿಸಿದ ವೀರಶೈವ ವಚನಕಾರರು ಸಮಾಜ ವಿಮರ್ಶಕರು. ತಮ್ಮ ಸುತ್ತಮುತ್ತಣ ಜನರಲ್ಲಿದ್ದ ಹಲವೆಂಟು ಕುಂದುಗಳನ್ನೂ ಡಂಭಾಚಾರಗಳನ್ನೂ ಕಂಡು ಸಿಡಿಮಿಡಿಗೊಂಡು ವಿಡಂಬನದ ನೆರವಿನಿಂದ ಸಮಾಜವನ್ನು ಶುದ್ಧೀಕರಿಸಲು ಯತ್ನಿಸಿದರು. ವಚನಕಾರರಲ್ಲಿ ಹಿರಿಯರೆನಿಸಿಕೊಂಡವರಿಗಂತೂ ಪೂರ್ವಾಗ್ರಹವಿನಿತೂ ಇಲ್ಲ. ಅವರಿಗೆ ತಮ್ಮ ನಾಡವರಲ್ಲಿ ಪ್ರೀತಿ. ಅವರ ವಚನಗಳಲ್ಲಿ ಕಟಕಿ, ಮೂದಲೆ, ಅಪಹಾಸ್ಯಗಳಿಗಿಂತ ಪರಿಹಾಸ, ಚತುರೋಕ್ತಿಗಳಿಗೆ ಹೆಚ್ಚು ಮೌಲ್ಯ. ಆದರೆ ಸಾಂದರ್ಭಿಕವಾಗಿ ಮೂದಲೆ, ಕಟಕಿ, ನಿಂದೆಗಳಲ್ಲೂ ಅವರು ತೊಡಗದವರಲ್ಲ. ಬಸವಣ್ಣನವರಿಗಿಂತ ಮುಂಚೆ ಇದ್ದ ಸಕಲೇಶ ಮಾದರಸನ ಜನಮೆಚ್ಚಿ ಶುದ್ಧನಲ್ಲದೆ ಮನಮೆಚ್ಚಿ ಶುದ್ಧನಲ್ಲಯ್ಯಾ, ವೇಷ ಮೇಷದಲ್ಲಧಿಕನಲ್ಲದೆ ಭಾಷೆಯಲ್ಲಧಿಕನಲ್ಲಯ್ಯಾ, ನುಡಿಯ ಜಾಣನಲ್ಲದೆ ನಡೆಯ ಜಾಣನಲ್ಲಯ್ಯಾ, ಧನದೊರೆಯದಿರ್ದೊಡೆ ನಿಃಪ್ರಿಯನಲ್ಲದೆ ಧನ ದೊರೆತು ನಿಃಪ್ರಿಯನಲ್ಲಯ್ಯಾಏಕಾಂತದ್ರೋಹಿ, ಗುಪ್ತಘಾತಕಿ, ಯುಕ್ತಿಹೀನರಿಗೆ ಸಕಲೇಶ್ವರದೇವ ಎಂತೊಲಿವ? ಎಂಬ ವಚನದಲ್ಲಿ ವಚನಕಾರರ ಸಮಾಜವೀಕ್ಷಣೆಯ ವಿಶಿಷ್ಟ ದೃಷ್ಟಿ ಆ ವೇಳೆಗಾಗಲೇ ಪ್ರಕಟವಾಗಿತ್ತು.

ಬಸವಣ್ಣನವರು ಕಲ್ಯಾಣದಲ್ಲಿ ನೆಲಸುವ ವೇಳೆಗೆ ಹಲವರು ಶಿವಶರಣರು ಅಲ್ಲಿಗೆ ಬಂದು ಸೇರಿದ್ದರು. ವೈರಾಗ್ಯ ಜ್ಞಾನನಿಧಿ ಅಲ್ಲಮ, ಯೋಗಿ ಚೆನ್ನಬಸವಣ್ಣ, ಕರ್ಮದ ನೆಲೆ ಸಿದ್ಧರಾಮ, ಶರಣೆ ಮಹಾದೇವಿಯಕ್ಕ– ಇಂಥವರೆಲ್ಲ ಒಂದೆಡೆ ಸೇರಿದಾಗ ನಿರ್ದಾಕ್ಷಿಣ್ಯವಾಗಿ ಟೀಕಿಸುವ ಹಾದಿ ಇವರದು. ಇವರ ಕ್ರೋಧ ಸಾತ್ವಿಕದಿಂದ ಕೂಡಿದ್ದು.

ಶಿವಶರಣರ ವಚನಗಳು ನಾನಾ ತೆರ. ತಮ್ಮ ಸಾಧನೆಯಲ್ಲಿ ಸಿದ್ಧಿ ದೊರಕದುದಕ್ಕಾಗಿ ದೇಹವನ್ನೇ ವಿಡಂಬಿಸುವ ವಚನಗಳದು ಒಂದು ಗುಂಪು. ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಆಚರಣೆಯಲ್ಲಿದ್ದ ಮೂಢ ನಂಬಿಕೆಗಳನ್ನೂ ಅನ್ಯಾಯಗಳನ್ನೂ ಬಯಲಿಗೆಳೆದವು ಇನ್ನೊಂದು ಗುಂಪು. ಈ ಜೀವನ ನಿತ್ಯವಲ್ಲ– ಎಂಬುದು ಮೂರನೆಯ ಗುಂಪು. ಐಹಿಕ ಸುಖೋದ್ದೇಶದಿಂದ ವೀರಶೈವಮತ ಸ್ವೀಕಾರಮಾಡಿ, ಆ ಮತಕ್ಕೇ ಕಳಂಕ ತರುತ್ತಿದ್ದವರನ್ನು ಉದ್ದೇಶಿಸಿ ಆಡಿದ ವಚನಗಳದು ನಾಲ್ಕನೆಯ ಗುಂಪು. ವೀರಶೈವಮತದ ಮುನ್ನಡೆಯನ್ನು ಕಂಡು ಅಸೂಯೆಗೊಂಡು ಅವನ್ನು ತೆಗಳಿದವರಿಗೆ ಉತ್ತರ ರೂಪವಾಗಿ ಬಂದವು ಎಷ್ಟೋ ವಚನಗಳು. ಮತ, ಧರ್ಮ, ಭಕ್ತಿ, ಸಾಧನೆ–ಮುಂತಾದವುಗಳಿಗೆ ಸಂಬಂಧಿಸಿದ ವಚನಗಳೂ ಅಸಂಖ್ಯಾತವಾಗುಂಟು. ಕೊನೆಯವನ್ನು ಬಿಟ್ಟು ಉಳಿದೆಲ್ಲ ವಚನಗಳಲ್ಲೂ ವಿಡಂಬನೆಯ ನಾನಾ ಪ್ರಕಾರಗಳನ್ನು ಕಾಣಬಹುದು.

ಭಕ್ತನಾದಾತ ದೇವರ ಒಲುಮೆಯನ್ನು ಗುರಿಯಾಗಿಟ್ಟುಕೊಂಡು ಸಾಧನೆ ಮಾಡಿದಾಗ ಅವನನ್ನು ದೇವರು ನಾನಾ ವಿಧವಾಗಿ ಪರೀಕ್ಷಿಸುತ್ತಾನೆ. ಎಲ್ಲದರಲ್ಲೂ ಗೆದ್ದ ಮೇಲೆಯೇ ದೇವರ ಅನುಗ್ರಹ. ಆದರೆ ಭಕ್ತನಿಗೆ ಅಸಹನೆ, ದುಗುಡ, ದೇವರ ಒಳ್ಳೆಯತನದಲ್ಲೇ ಸಂದೇಹ. ಆಗ ಹೊರಡುತ್ತದೆ ಅವನ ಬಾಯಿಂದ ವಿಡಂಬನೆ – ಹುಟ್ಟಿಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟರೆ ನಿಮ್ಮ ನಗುವರಯ್ಯ.

ಆದರೆ ದೇವರ ಒಲುಮೆಗಾಗಿ ದೃಢಚಿತ್ತದಿಂದ ಸಾಧನೆ ಮುಂದುವರಿಸುವವರಾದರೂ ಎಷ್ಟು ಮಂದಿ? ಅನೇಕರದು ಬರಿಯ ತೋರಿಕೆಯ ಭಕ್ತಿ. ಏತ ತಲೆವಾಗಿದರೇನು, ಗುರುಭಕ್ತನಾಗಬಲ್ಲುದೇ? ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೇ? ಗಿಳಿಯೋದಿದರೇನು, ಲಿಂಗವೇದಿಯಾಗಬಲ್ಲುದೇ? ಈ ರೀತಿ ಆಡಂಬರದ ಭಕ್ತಿ ತೋರಿ, ಇಹವನ್ನೇ ಶಾಶ್ವತವೆಂದು ನಂಬಿ ಫಲವೇನು? ನೀರ ಬೊಬ್ಬುಳಿಗೆ ಕಬ್ಬುನದ ಕಟ್ಟ ಕೊಟ್ಟು ಸುರಕ್ಷಿತ ಮಾಡುವ ಭರ ಇದು. ಅದಕ್ಕೇ ಒಬ್ಬ ವಚನಕಾರ 'ಭಕ್ತಿ ಎಂಬುದು ತೋರುಂಬ ಲಾಭ' ಎಂದು ಕರೆದದ್ದು.

ಆಗಿನ ಕಾಲದ ಮತವಾದರೂ ಅಷ್ಟೇ. ಆಡುವುದೊಂದು, ಮಾಡುವುದೊಂದು. ಕಲ್ಲ ನಾಗರಕ್ಕೆ ಹಾಲನೆರೆಯುವುದು, ದಿಟದ ನಾಗರ ಕಂಡರೆ ಕೊಲ್ಲೆಂಬುದು, ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬೀದಿಯ ದೂಳವ ಹೊಯ್ದು ಬೊಬ್ಬಿಟ್ಟೆಲ್ಲರ ಕರೆಯುವುದು.

ಆದರೆ ವೀರಶೈವ ಧರ್ಮಾವಲಂಬಿಗಳೆಲ್ಲರೂ ಶಿವವಿಜ್ಞಾನಿಗಳಲ್ಲ. ಅವರಲ್ಲಿ ಜಳ್ಳೂ ಉಂಟು ಕಾಳೂ ಉಂಟು. ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದರೆ ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಹುದೊ.

ವಚನಕಾರರು ಎಲ್ಲರೂ ಒಂದೇ ತೆರನಲ್ಲ. ಒಬ್ಬೊಬ್ಬರ ವಚನ ಒಂದೊಂದು ರೀತಿಯದು. ಬಸವಣ್ಣನವರದು ತಿಳಿ ಮನಸ್ಸು. ಅವರಿಗೆ ಬೆಳ್ಳಗಿರುವುದೆಲ್ಲ ಹಾಲು. ಅಲ್ಲಮಪ್ರಭು ಬೇರೆ ತೆರ: ನಿರ್ದಾಕ್ಷಿಣ್ಯಪರ. ಲಿಂಗೈಕಶರಣರೆಂದು ತಿಳಿದಾಗ ಅವರಿಗೆ ಪ್ರಭುವಿನ ಪುರಸ್ಕಾರ. ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು ಲಿಂಗವಾರ್ತೆಯ ನುಡಿವರಯ್ಯ ಎಂದು ನೇರವಾಗಿ ಹೇಳುವುದವರ ಸ್ವಭಾವ, ಗುಹೇಶ್ವರಾ. ನೀನು ಕಲ್ಲಾದರೆ ನಾನೇನಪ್ಪೆನಯ್ಯಾ? ಎಂಬ ದಾಸಿಮಯ್ಯನ ವಚನದ ಧ್ವನಿ ಬಲು ಹರಿತ. ಚೆನ್ನಬಸವಣ್ಣ ಮನೆವಾರ್ತೆಯ ಯಜಮಾನ, ಅಕ್ಕಮಹಾದೇವಿಯದು ಭಾವಾವೇಶ. ಅಂಬಿಗರ ಚೌಡಯ್ಯನದು ರಜೋದೃಷ್ಟಿ. ಇವರೆಲ್ಲ ಒಂದು ಕಡೆ ಸೇರಿ ಸಮಾಜದ ಮುಖಕ್ಕೆ ಉಬ್ಬುತಗ್ಗಿನ ಕನ್ನಡಿ ಹಿಡಿದು ಅದರ ವಕ್ರತೆಗಳನ್ನೆತ್ತಿ ತೋರಿದರು.

**ಹರಿಹರಯುಗ:** ಹರಿಹರ ವಿಡಂಬನಕ್ಕೂ ಕೈ ಎತ್ತಿದ ಕವಿ. ಇವನ ಹಲವು ರಗಳೆಗಳಲ್ಲಿ ಅನ್ಯಮತ ವಿಡಂಬನ ಧಾರಾಳವಾಗಿ ಹರಿದಿದೆ. ಜಯಸಿಂಹರಾಯನ ರಾಜಧಾನಿಯಲ್ಲಿದ್ದ ವಿಷ್ಣುಗೃಹ ಕೋಳಿಯ ಗೂಡಿನಂತೆ ಇತ್ತು, ಶಂಕರದಾಸಿಮಯ್ಯ ತನ್ನ ನೊಸಲ ಕಣ್ಣು ತೆರೆದೊಡನೆ ಬೆಂಕಿ ಘುಳು ಘುಳಿಸಿ ಸುಳಿದು, ಧಗಿಲ್‌ಭುಗಿಲೆಂದು ಭೋಂಕನೆ ನೆಗೆದು, ಮುಂಗಾಣಿಸಿ ಪರಿದು, ನೃಸಿಂಹ ಪ್ರತಿಮೆಯಂ ನೆರೆದುರುಪಿತು. ಆಗ ಜಯಸಿಂಹರಾಯನುಂ ವೈಷ್ಣವರುಂ ವಾದಿಗಳುಂ ಉರಿದು ಮೊಗಂಗೆಡೆ ಪರಸಮಯಿಗಳ್ಮೊರೆಯಿಟ್ಟು ಹಲ್ಲು ಕಿರಿದು ಹುಲ್ಲು ಕರ್ಚಿದರು. ಪದ್ಮಾವತಿಯ ಪಿತನಾದ ಜೈನ ಪಾರಿಷ ಪಂಡಿತಂ ಮೇರೆಗೆಟ್ಟ ಮತಿಹೀನಂ ಕೋಪಣದಿಂ ಬಂದ ಹೊಸ ಋಷಿಯರು.... ನೀಚರುಂ.... ಬರಿಯ ಭಂಡರುಂ ಲೋಚಿನ ತಾಲ್ಕರುಂ ಬೆತ್ತಲೆಯ ಭ್ರಷ್ಟರುಂ ಕುಂಚದ ಖೂಳರುಂ ತಟ್ಟುಗಳ ಅಜ್ಞಾನಿಗಳುಂ ನಾಱುವಾಯ ನರಕಿಗಳುಂ ಸರ್ವಮಲ ಭಾಂಡರುಂ ಎಂದು ಮೊದಲಾಗಿ ಬರೆಯುತ್ತಾನೆ. ಹರಿಹರ ಹಿರಿಯ ಕವಿಯಾದರೂ ತನ್ನ ಧರ್ಮದ ಹಿರಿಮೆ ಸಾಧಿಸುವ ವಿಚಾರ ಬಂದಾಗ ಆತ ಹಿಂದೆ ಮುಂದೆ ನೋಡುವುದಿಲ್ಲ. ಅನ್ಯಮತಗಳ ನಿಂದೆಯನ್ನೇ ನೇಯುತ್ತಾನೆ. ಔಚಿತ್ಯಪ್ರಜ್ಞೆ ತಪ್ಪಿತೇನೋ ಎನಿಸಿದರೂ ಕಾವ್ಯಾವೇಶದ ದೃಷ್ಟಿಯಿಂದ ಆ ಕುಂದನ್ನು ಮರೆಯತಕ್ಕದ್ದು. ವಿಡಂಬನದ ಎಷ್ಟೊಂದು ಪ್ರಕಾರಗಳು ಎಷ್ಟೊಂದು ತೀವ್ರವಾಗಿ ಬಂದಿವೆಯೆಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಹರಿಹರನಿಂದೀಚೆಗೆ ಇತಿಹಾಸದಲ್ಲಿ ಬಹುದೂರ ಮುಂದೆ ಬಂದಿರುವ ಈ ಶತಮಾನದ ಜನಕ್ಕೆ ಆಗಿನ ವಾತಾವರಣದ ಇಣುಕು ನೋಟ ಪಡೆಯಲು ಇಂಥ ಪರಮತ ವಿಡಂಬನೆಗಳೂ ಒಂದು ಸಾಧನ. ಹರಿಹರನ ರಗಳೆಗಳ ಇನ್ನು ಕೆಲವು ಸಾಲುಗಳನ್ನೂ ನೋಡಬಹುದು. ಕರ್ಮಲತೆಯಂತಿದ್ದ ಜನ್ನಿವಾರಮಂ ಕಳೆದು ಬಿಸುಟು, ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪಱಿದು ಬಿಸುಟು, ನವ್ಯ ದುಕೂಲಮಂ ತೆಗೆದುಟ್ಟು, ಬಸವಣ್ಣನವರು ಬಾಗೇವಾಡಿಯಿಂದ ಕಪ್ಪಡಿಸಂಗಮಕ್ಕೆ ಹೋದರು. ಬಿಜ್ಜಳನ ಗುರುಗಳು ಕಾಗೆಗಳಂತಱಚಿ, ಗೂಗೆಗಳಂತೆ ಪಲುಂಬಿ, ಕತ್ತೆಗಳಂತೆ ತೊಟಲಿ, ಕೋಡಗಗಳಂತೆ ಪಲುಗಿರಿದು, ನರಿಗಳಂತೆ ಜಿನುಗಿ ಮಾತಾಡುವರು. ಶರಣರನ್ನು ನಿಂದಿಸುತ್ತಿದ್ದವರಂತೂ ಛಾಂದಸರು, ವೇದಜಡರು, ಭೈಟ್ಟಿಯ ಮರುಳ್ಗಳು, ಹೆಬ್ಬೇಳಿಗಳು, ದರ್ಭೆಯ ನಿರ್ಭಾಗ್ಯರು, ಹರಿಹರನ ಮುಗುಳದಲ್ಲೂ ಮಂತ್ರಶಕ್ತಿಯುಂಟು. ಅವನ ಶಬ್ದಗಳ ಆಯ್ಕೆ ಅಮೋಘ. ಹರಿಹರನ ಭರ್ತ್ಸನೆಗೆ ಈಡಾಗುವಂಥ ವ್ಯವಸ್ಥೆಯೊಂದಿದ್ದುದರಿಂದಲೆ ಈ ಎಲ್ಲ ವಾಕ್‌ಪ್ರವಾಹ, ನಿಂದೆ ಮೂದಲೆಗಳ ಚಂಡೆಮದ್ದಳೆ, ನಯಸೇನ 'ಬ್ರಹ್ಮಶಿವ' ವೃತ್ತವಿಲಾಸರ ಚತುರೋಕ್ತಿ ಇಲ್ಲಿ ಕಡಿಮೆಯಾದರೂ ಕಟಕಿಗೇನೂ ಕೊರತೆಯಿಲ್ಲ. ಚತುರತೆಯ ಅರಕೆಯನ್ನು ಇವನ ಆವೇಶ ಭರ್ತಿ ಮಾಡುತ್ತದೆ.

ಷಟ್ಪದಿಯ ಪಿತ ರಾಘವಾಂಕನ ಸೋಮನಾಥ ಚರಿತ್ರೆಯಲ್ಲಿ ಜೈನಮತ ಹೆಚ್ಚಾಗಿ ವಿಡಂಬನೆಗೆ ಈಡಾಗಿದೆ. ನರನೊಬ್ಬನ ಸತ್ಯವ್ರತವನ್ನು ಹೊಗಳಹೊರಟ ಹರಿಶ್ಚಂದ್ರಕಾವ್ಯದಲ್ಲಿ ಉದಾತ್ತ ವಿಡಂಬನೆಯನ್ನು ಎರಡು ಕಡೆಗಳಲ್ಲಿ ಕಾಣಬಹುದು. ವಸಿಷ್ಠ ವಿಶ್ವಾಮಿತ್ರರ ಸಂವಾದ ಮತ್ತು ಹರಿಶ್ಚಂದ್ರ ಗಾಯಕಿಯರ ಮಾತಿನ ಚಕಮಕಿಗಳು ಕಟಕಿ ಮೂದಲೆ ಅಪಹಾಸ್ಯ ಚತುರೋಕ್ತಿ ವಕ್ರನುಡಿಗಳ ಚಕ್ರಬಂಧವೆನಿಸುತ್ತದೆ.

ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಕಾಣುವುದು ನವುರಾದ ವಿಡಂಬನೆ, ಕವಿಯದು ವ್ಯಂಗ್ಯಾನುಭೂತಿ. ಈ ಕೃತಿ ಸತ್ತವರ ಕಥೆಯಲ್ಲ, ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲುಕುವವರ ಸೀಮೆಯ ಮಾತು ತಾನಲ್ಲ, ಹೊತ್ತು ಹೋಗದ ಪುಂಡರಾಲಿಪ ಮತ್ತಮತಿಗಳ ಗೋಷ್ಠಿವಿಯಲ್ಲ. ಈ ಕೃತಿಯಲ್ಲಿ ಕಾಣುವುದು ಪಾರಮಾರ್ಥಿಕ ವಿಡಂಬನೆ, ಮಾನವ ದೇವತ್ವಕ್ಕಡರಲು ಅಡ್ಡವಾಗಿ ಬರುವ ಕೊಳೆಯನ್ನು ಕಳೆಯಲು ವಿಡಂಬನಮೊಂದು ಮೃದುವಾದ ಪೊರಕೆ. ಮಾಯೆ ಅರಣ್ಯವನ್ನು ಹೊಕ್ಕಾಗ ತಪಸ್ವಿಗಳು ಆಕೆಯನ್ನು ಕಂಡು ತಮ್ಮ ಕಂತೆ ಕಚ್ಚಟಗಳನ್ನೂ ವಿಭೂತಿಯ ಬುಟ್ಟಿಗಳನ್ನೂ ಎತ್ತಿಕೊಂಡು ಎದ್ದೋಡಿದರು ಹುಲಿಗ್ದಂಡ ಹುಲ್ಲೆಗಳಂತೆ ದಸೆದೆಸೆಗೆ. ಅಲ್ಲಮಪ್ರಭು ಕಂಡ ಸಿದ್ಧರಾಮನದು ಮೂಢಭಕ್ತಿ, ದೇವರನ್ನು ತನ್ನೊಳಗೇ ಕಂಡುಕೊಳ್ಳುವ ಬದಲು, ಸಕಲ ಕಲ್ಲನು ಕಡಿದು ಕಲ್ಲಿಗೆ ಶಿಖರ ದೇಗುಲವೆಂದು ಮಾಡಿಸಿ ಅಲ್ಲಿ ದೇವರನ್ನು ಹುಡುಕುತ್ತಿದ್ದಾನೆ. ಅವನ ಆಗಮ ಯುಕುತಿಯೆಲ್ಲ ಪಾಷಾಣಕ್ಕೆ ಬಂದುದು. ಗೋರಕ್ಷನ ಕಥೆಯಲ್ಲಿ ಉದ್ದಕ್ಕೂ ಧರ್ಮನೀತಿಗಳೊಡನೆ ವಿಡಂಬನದ ಅಂತರ್ಗತ ಪ್ರವಾಹ ಹರಿದಿದೆ.

ಕುಮಾರವ್ಯಾಸನ ಭಾರತ ವಿಡಂಬನ ಕಾವ್ಯವಲ್ಲ. ಈತನದು ವಿಡಂಬನ ಸಾಹಿತ್ಯಮೂ ಅಲ್ಲ. ಆದರೆ ಕೆಲವು ಕಡೆ ಕಥೆಯ ಹಂದರದ ಮೇಲೆ ವಿಡಂಬನದ ನಾನಾ ಬಗೆಯ ಬಳ್ಳಿಗಳನ್ನೇ ಈತ ಹಬ್ಬಿಸಿದ್ದಾನೆ. ಬೇಂದ್ರೆಯವರೆಂದಿರುವಂತೆ ಕಟಕಿ, ಬಿರುನುಡಿ, ಕಿರುನುಡಿ, ವ್ಯಂಗ್ಯ ಸರಸ, ವಕ್ರೋಕ್ತಿ, ಜಾಣ್ನುಡಿ, ಪರಿಹಾಸ– ಎಲ್ಲಮೂ ಅವನ ಬತ್ತಳಿಕೆಯಲ್ಲಿವೆ. ಯುದ್ಧಭೀರುವನ್ನು ಯುದ್ಧವೀರನ ಸೋಗಿನಲ್ಲಿ ಕುಣಿಸಿರುವ ಉತ್ತರನ ಪಾತ್ರಮೊಂದು ಉದಾಹರಣೆ. ಧನು ತನಗೆ ನೆಗಹಲ್ಕೆ ಕೃಷ್ಣಾಜಿನಮೊ ಸಾಲಗ್ರಾಮದೇವರೊ ವಿನುತ ತುಳಸಿಯೊ ಕುಶಮೊ ದರ್ಭೆಯೊ ಸಮಿಧೆಗಳ ಹೊರೆಯೋ– ಎಂದು ಮುಂತಾಗಿ ದ್ರೌಪದೀ ಸ್ವಯಂವರ ಕಾಲದಲ್ಲಿ ಬ್ರಾಹ್ಮಣ ವೇಷದ ಅರ್ಜುನನ ಬಗ್ಗೆ ಆಡಿಸಿರುವ ಮಾತು ಅಪಹಾಸ್ಯದ ಹುಚ್ಚುಹೊಳೆ. ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು – ಎಂದು ದ್ರೌಪದಿಯಾಡುವ ಮಾತು ಕಟಕಿಯ ಕೂರ್ಗಣೆ. ಹಿರಿಯರಿಲ್ಲದ ಸಭೆ ನೆರವಿಯದು ಸಭೆಯಲ್ಲ– ಎಂಬುದರ ಅರ್ಥ ಆ ಶಬ್ದಗಳಿಗೂ ಮೀರಿದ್ದು. ಕವಿತಾಗೌರವಕ್ಕೆ ಕುಂದಿಲ್ಲದಂತೆ ಅಲ್ಲಲ್ಲಿ ವಿಡಂಬನದ ಹರಳುಗಳನ್ನು ತನ್ನ ಮಹಾಭಾರತದ ಕುಂದಣದಲ್ಲಿಟ್ಟಿದ್ದಾನೆ ಕುಮಾರವ್ಯಾಸ.

**ದಾಸಯುಗ:** ಭಕ್ತಿಪ್ರಧಾನವಾದ ದಾಸಸಾಹಿತ್ಯದಲ್ಲಿ ವಿಡಂಬನಕ್ಕೇನೂ ಕೊರತೆಯಿಲ್ಲ. ವಚನ ಸಾಹಿತ್ಯದ ಮನೋಧರ್ಮವನ್ನೇ ಇಲ್ಲೂ ಕಾಣಬಹುದು. ಸಮಯದಲ್ಲಿ ಕೈಕೊಡುತ್ತಿದ್ದ ದೇವರನ್ನು ಕುರಿತು–ಆರು ಬದುಕಿದರಯ್ಯಾ ಹರಿ ನಿನ್ನ ನಂಬಿ ತೋರು ಈ ಜಗದೊಳಗೆ ಒಬ್ಬರನ್ನು ಕಾಣೆ ಎನ್ನುತ್ತಾರೆ ದಾಸರು. ದೇವರನ್ನು ಬಿಟ್ಟು ಮಾನವರ ಬಳಿಗೆ ಬಂದರೂ ಅವರಲ್ಲೂ ಹಲಮೊಮ್ಮೆ ಹೃದಯದ ಅಭಾವ. ಭಾರತ ರಾಮಾಯಣ ಪಂಚರಾತ್ರಾಗಮ ಸಾರತತ್ವದ ಬಿಂದು ಒಳಗೆ ಬಿದ್ದೀತೆಂದು ಗಯ್ಯಾಳಿ ಮೂಳೀ ಕದವನಿಕ್ಕಿದಳಿದಕೊ, ಪದುಮನಾಭನಲಿ ಲೇಶಭಕುತಿಯಿಲ್ಲ ಉದರವೈರಾಗ್ಯವಿದು, ಮಡಿಮಡಿಮಡಿಯೆಂದು ಮೂರು ಮಾರು ಹಾರುತಿ ಮಡಿಯೆಲ್ಲಿ ಬಂತೆ ಬಿಕನಾಶಿ? ಶಿವೋಹಂ ಎಂದು ಕಣ್ಣು ಮುಚ್ಚಿ ಕೂತ ಬೂಟಕರನ್ನೂ ದಾಸರು ಬಿಟ್ಟಿಲ್ಲ. ಶಿವ ನೀ ಹೇಗಾದೊ? ಶಿವ ನೀನಾದರೆ ಶಿವನರ್ಧಾಂಗಿಗೆ ಧವನಾದೆಯಲ್ಲೊ ಅವಿವೇಕಿ ಮೂಢ ಎನ್ನುತ್ತಾರೆ.

**ರಾಮಧಾನ್ಯಚರಿತೆ:** ಕನಕದಾಸರ ರಾಮಧಾನ್ಯಚರಿತೆ ಒಂದು ವಿಡಂಬನ ಕಾವ್ಯ. ಇದರಲ್ಲಿ ರಾಗಿ ಬತ್ತಗಳ ನಡುವೆ ತಂತಮ್ಮ ಹಿರಿಮೆಗಳ ಬಗ್ಗೆ ನಡೆದ ವಾಗ್ವಾದ ಮನೋಜ್ಞವಾಗಿದೆ. ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ ಎಂದು ಬತ್ತದಿಂದ ರಾಗಿಯ ಬಗ್ಗೆ ತಿರಸ್ಕಾರ. ಕ್ಷಿತಿಯಮರ ರೂಪ ನಮನದಲಿ ಸುವ್ರತ ಸುಭೋಜನ ಪರಮ ಮಂತ್ರಾಕ್ಷತೆಗಳಲ್ಲಿ ......... ದೇವರಿಗತಿಶಯದ ನೈವೇದ್ಯ ತಾನಹೆನೆಂದು ಬತ್ತಕ್ಕೆ ಜಂಬ, ಹೆತ್ತ ಬಾಣಂತಿಯರು ರೋಗಿಗೆ ಪತ್ಯ ನೀನಹೆ; ಹೆಣದ ಬಾಯಿಗೆ ತುತ್ತು ನೀನಹೆ; ಎಳ್ಳು ದರ್ಭೆಗೆ ತೆತ್ತಿಗನು ನೀನಾದೆ ಎಂದು ರಾಗಿ ಅಕ್ಕಿಯನ್ನು ಹೀಯಾಳಿಸುತ್ತದೆ. ಶ್ರೀಮಂತರ ಮತ್ತು ಬಡವರ ನಡುವಿನ ಅಂತರದ ಚಿತ್ರ ಈ ಕಥೆಯಲ್ಲಿ ವಿಡಂಬನಾತ್ಮಕವಾಗಿ ಮೂಡಿಬಂದಿದೆ. ಬಿಂಕಗುಳಿಗಳ, ಮದಾಂಧರ ಮತ್ತು ಪಟ್ಟಭದ್ರ ಹಿತಾಸಕ್ತರ ಶಕ್ತರ ಮೂಗು ಕೆತ್ತಿ, ಅವರ ಓರೆಕೋರೆಗಳನ್ನು ತಿದ್ದಬೇಕೆಂಬುದೇ ಕವಿಯ ಪ್ರತಿಜ್ಞೆಯಾಗಿದೆ; ಜೊತೆಗೆ ಈ ಓರೆಕೋರೆಗಳು ಸಾಮಾನ್ಯರಿಗೆ ಗ್ರಹಿಕೆಯಾಗಿ ಅವರು ಎಚ್ಚೆತ್ತುಕೊಳ್ಳಬೇಕೆಂಬುದು ಅವನ ಆಶಯವಾಗಿದೆ. ಸತ್ಯಾಸತ್ಯಗಳ ನಡುವೆ ರಾಜಿಯ ಸೂತ್ರ ಸಲ್ಲದೆಂಬುದು ಕವಿಯ ದೃಢನಿಲುವಾಗಿದೆ. ಅವನ ಗ್ರಾಮೀಣ ಸ್ವಭಾವಕ್ಕೆ ಅವನ ರೂಕ್ಷ ಪ್ರತಿಜ್ಞೆಗೆ ಉಪಾಯ ಹುನ್ನಾರುಗಳಾಗಲೀ, ಮಂತ್ರ ತಂತ್ರಗಳಾಗಲೀ ಮರೆಮೋಸಗಳಾಗಲೀ ನುಣ್ಣನೆಯ ಬೆಣ್ಣೆ ಮಾತುಗಳಾಗಲೀ ಒಗ್ಗುವಂತಿಲ್ಲ. ಒರಟುತನ, ನಿಷ್ಕಾಪಟ್ಯ, ತತ್ತ್ವನಿಷ್ಠೆ, ಶ್ರದ್ಧೋತ್ಸಾಹಗಳು ಅವನ ಪ್ರವೃತ್ತಿ ಜಾಯಮಾನಗಳಿಗೆ ಪೋಷಕವಾಗಿರುವ ದ್ರವ್ಯ ವಿಶೇಷಗಳು. ಆದ್ದರಿಂದ ಅವನ ವಿಡಂಬನೆಯಲ್ಲಿ ಕಹಿಯಿದೆ ವಿಷವಿಲ್ಲ. ಮೊನಚಿದೆ ನೋವಿಲ್ಲ. ಹಠವಿದೆ, ದ್ವೇಷವಿಲ್ಲ. ಕಾವಿದೆ, ತಾಪವಿಲ್ಲ. ಕೋಪವಿದೆ, ವೈರವಿಲ್ಲ. ಚುರುಕಿದೆ ಉರಿಯಿಲ್ಲ. ಎಲ್ಲಿಯೂ ಬ್ರಹ್ಮಶಿವ, ವೃತ್ತವಿಲಾಸರ ಮತಾಂಧತೆಯ ದೋಷಲೇಪವಿಲ್ಲ. ಕರ್ತವ್ಯಪ್ರಜ್ಞೆ, ಸತ್ಯನಿಷ್ಠೆ, ಲೋಕಕಾರುಣ್ಯ, ನೈತಿಕಶ್ರದ್ಧೆ ಮೇಲಾಗಿ ಧರ್ಮಕೋಪ–ಇವು ಈ ವಿಡಂಬನೆಯ ಹಿಂದಿರುವ ಮೂಲಭೂತವಾದ ಪ್ರೇರಕ ಪ್ರವೃತ್ತಿಗಳು – ಎಂದು ದೇಜಗೌ ಹೇಳಿರುವ ಮಾತುಗಳು ವಿಡಂಬನ ಕಾವ್ಯಕ್ಷೇತ್ರದಲ್ಲಿ ರಾಮಧಾನ್ಯ ಚರಿತ್ರೆಗಿರುವ ಭದ್ರಸ್ಥಾನದ ಬಗ್ಗೆ ನೀಡಲಾಗಿರುವ ನಿರ್ಣಯ.

**ಸರ್ವಜ್ಞ:** ಸರ್ವಜ್ಞ ವಿಡಂಬನದ ಸಾರ್ವಭೌಮ. ಆಡುಮುಟ್ಟದ ಸೊಪ್ಪಿಲ್ಲ. ಹಾಗೇ ದೈವನಂಬಿಕೆಯಿಂದ ರಾಜಕಾರಣದವರೆಗೆ ಎಲ್ಲ ವಿಷಯಗಳೂ ಇವನ ಸೊತ್ತೇ. ತ್ರಿಪದಿಗೆ ಹೊಸ ಬೆಡಗನ್ನೂ ಚುರುಕನ್ನೂ ನೀಡಿ ಸಾಸಿವೆಯ ಗಾತ್ರದಲ್ಲಿ ಬ್ರಹ್ಮಾಂಡದ ಶಕ್ತಿಯನ್ನು ತುಂಬಿರುವ ಸರ್ವಜ್ಞನ ವಚನಗಳಲ್ಲಿ ವಿಡಂಬನದ ಹಲವು ಶ್ರೇಣಿಗಳನ್ನು ಕಾಣಬಹುದು

ಒಂದಾಡ ತಿಂದಾತ ಹೊಂದಿದೆಡೆ ಸ್ವರ್ಗವನು
ಎಂದೆಂದು ಅಜನ ಕಡಿತಿಂಬ ಕಟುಕ ತಾ
ನಿಂದ್ರನೇಕಾಗ ಸರ್ವಜ್ಞ

ಎಂಬುದು ಈತನ ವಿಡಂಬನ ವಿಧಾನ. ವಿಪರ್ಯಯವೆನಿಸುವಂಥ ಎರಡು ಸನ್ನಿವೇಶಗಳನ್ನು ಮೂರೇ ಸಾಲಿನಲ್ಲಿ ಒಟ್ಟಗಿಟ್ಟು ಸಾಧಿಸಿರುವ ಪರಿಣಾಮ ಅದ್ಭುತ.

**ಇತರ ಕೃತಿಗಳು:** ಮುಪ್ಪಿನ ಷಡಕ್ಷರಿ ಬರೆದಿರುವ ಹಲವಾರು ಹಾಡು ಗಳಲ್ಲಿ ವಿಡಂಬನವಿಲ್ಲದೆ ಇಲ್ಲ. ಇದರ ಉದ್ದೇಶಮೂ ಸಾಮಾನ್ಯವಾಗಿ ಪಾರಮಾರ್ಥಿಕ. ಈತ ಬರೆದಿರುವ ತಿರುಕನ ಕನಸು ಒಂದು ಉತ್ತಮ ವಿಡಂಬನ ಕೃತಿ. ಕನ್ನಡ ಜನಪದ ಸಾಹಿತ್ಯದಲ್ಲೂ ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ಮುಂತಾದ ಕಾವ್ಯಗಳಲ್ಲೂ ನೀತಿ, ನಗೆ, ಕನಸು, ನನಸುಗಳೊಂದಿಗೆ ವಿಡಂಬನಮೂ ಬೆರೆತುಕೊಂಡಿದೆ. ಗಾದೆಗಳಂತೂ ವಿಡಂಬನದ ಹುತ್ತ. ದುಡ್ಡಿನ ಆಸೆಗೆ ಬೆಲ್ಲ ಮಾರಿ ಗೋಣೀಚೀಲ ನೆಕ್ಕಿದ, ಅಳ್ತಾ ಹೋದ ನಾಯಿ ಮೊಲ ಹಿಡ್ದಾದ್ತೇ, ಇತ್ತಿತ್ತ ಬಾ ಅಂದರೆ ಇದ್ದ ಗೋಡೇನೂ ಕಿತ್ತುಕೊಂಡು ಬಂದ, ಅಜ್ಜಿಗರಿವೆ ಕಾಟ ಮಗಳಿಗೆ ಮಿಂಡನ ಕಾಟ, ಯಾಕಳ್ತಿಯಾ ಮಗಳೆ ಅಂದ್ರೆ ಲೋಕ ಮೆಚ್ಚಾಕೆ ಮೊದಲಾದ ಸಾವಿರಾರು ಗಾದೆಗಳಲ್ಲಿ ವಿಡಂಬನೆಯ ವಿಶ್ವರೂಪದರ್ಶನವನ್ನು ಮಾಡಬಹುದು. ಒಂದೇ ಒಂದು ವಾಕ್ಯದಲ್ಲಿ ಅರ್ಥಶ್ರೀಮಂತಿಕೆಯನ್ನು ತುಂಬಿಕೊಂಡು ಹೊಳೆಯುವ ಈ ಗಾದೆಗಳು ವಿಡಂಬನ ಸಾಹಿತ್ಯದ ಭಂಡಾರಗಳು.

**ಇಪ್ಪತ್ತನೆಯ ಶತಮಾನ:** ಈ ಶತಮಾನದಲ್ಲಿ ವಿಡಂಬನ ಸಾಹಿತ್ಯ ಸಾಕಷ್ಟು ಬೆಳೆದಿದೆ. ಸಮಾಜಿಕ ವಿಡಂಬನ, ರಾಜಕೀಯ ವಿಡಂಬನ, ಸಾಹಿತ್ಯಕ ವಿಡಂಬನ ಮುಂತಾದ ನಾನಾ ಪ್ರಕಾರಗಳು ಹುಟ್ಟಿಕೊಂಡಿವೆ. ವಿಡಂಬನಾತ್ಮಕ ಸಣ್ಣಕಥೆ, ಕಾದಂಬರಿ, ಪದ್ಯ, ಚುಟುಕ, ಪ್ರಬಂಧಗಳಿಗೇನೂ ಕಡಿಮೆಯಿಲ್ಲ. ದಿನೇ ದಿನೇ ಬೆಳೆಯುತ್ತಿರುವ ಈ ಸಾಹಿತ್ಯದಲ್ಲಿ ಗಟ್ಟಿಯಾದ್ದನ್ನು ಆರಿಸಿ ಪಟ್ಟಿಮಾಡಿ ಪಠಿಸುವುದು ಇನ್ನೂ ಸ್ವಲ್ಪ ಕಾಲ ಸರಿದ ಮೇಲೆ. ಮುದ್ರೆಯೊತ್ತಿರುವ ಕೆಲವು ಲೇಖಕರ ಮತ್ತು ಕೃತಿಗಳ ಆನೆಹೆಜ್ಜೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಕನ್ನಡಕ್ಕೊಬ್ಬರೇ ಎಂದು ಕೀರ್ತಿ ಗಳಿಸಿರುವ ಟಿ.ಪಿ.ಕೈಲಾಸಂ ಹಾಸ್ಯಚಕ್ರವರ್ತಿ, ವಿಡಂಬನ ಪ್ರವೀಣ. ನಡೆ, ನುಡಿ, ನಾಟಕ ಎಲ್ಲಕ್ಕೂ ಹಾಸ್ಯದ ಉಡುಪು, ಒಡ್ಯಾಣ. ಮೊನೆಮಾತು ಎಸೆದು ಚುಚ್ಚಿ ಕೊಲ್ಲುವುದಕ್ಕಿಂತ ಹಾಸ್ಯದ ಹೊಳೆ ಹರಿಸಿ ಕೊಚ್ಚಿ ಬಿಸಾಡುವುದು ಇವರ ವಿಧಾನ. ಬಂಡ್ವಾಳ್ವಿಲ್ಲದ್ಬಡಾಯಿ, ಹೋಂ ರೂಲು, ಅಮ್ಮಾವ್ರ ಗಂಡ, ನಮ್ಬ್ರಾಹ್ಮಣ್ಕೆ, ಗಂಡಸ್ಕತ್ರಿ ಮುಂತಾದ ನಾಟಕಗಳಲ್ಲಿ ಸಮಾಜದ ವಿಡಂಬನೆ ಸಮರ್ಥವಾಗಿ ಮೂಡಿಬಂದಿದೆ. ಪುಟ್ಟು, ಮಾಧು, ನಾಗತ್ತೆ ಥಳಕಿನ ಪುತ್ಥಳಿ ಪಾತೂ, ಮಗಳ ಮದುವೆಗಾಗಿ ಅಂಚೆಯವನಿಗೆ ಕೂಡಾ ಕಾಸು ಕೊಡದೆ ಹಣ ಕೂಡಿಡುತ್ತಿದ್ದ ಲಾಯರ್ ನರಸಿಂಹಯ್ಯ, ದೊಡ್ಡ ಮನುಷ್ಯನ ಸೋಗು ಹಾಕಿ ಸಮಾಜದ ರಕ್ತ ಹೀರುವ ಜಿಗಣೆ ರಂಗಣ್ಣ, ರಾಮಣ್ಣ, ವಿ.ಸಿ. (ವರಪೂಜೆ ಛಾಂಪಿಯನ್), ಬಂಡ್ವಾಳ್ವಿಲ್ಲದ್ಬಡಾಯಿಗಾರ ಬುಳ್ಳಾಪುರದ ಲಾಯರಿ ಅಹೋಬ್ಳು–ಇವರೆಲ್ಲ ನಮ್ಮ ಸಮಾಜದ ವ್ಯಕ್ತಿಗಳೇ. ಇವರೇ ವಿಡಂಬನಕ್ಕೆ ಇಲ್ಲಿ ಆಹಾರ. ಇಬ್ಸ್‌ನ್‌ದು ಇನಿವಾತು, ಗ್ಯಾಲ್ಸ್‌ವರ್ದೀದು ಗೆಳೆವಾತು, ಷಾನದು ಸುಡೋ ಮಾತು, ಕೈಲಾಸಂದು ಕೊಡಲಿಪೆಟ್ಟು– ಇದು ಕೈಲಾಸಂ ಅಭಿಪ್ರಾಯ. ಟೊಳ್ಳುತನಕ್ಕೆ ಪೆಟ್ಟುಕೊಟ್ಟು ಉರುಳಿಸುವುದರಲ್ಲಿ ಕೈಲಾಸಂ ಪ್ರವೀಣ. ಪ್ರಾಸ, ಶ್ಲೇಷೆ, ವಕ್ರೋಕ್ತಿ, ಚತುರೋಕ್ತಿ, ವಿಕಟಹಾಸ್ಯ– ಇವೇ ಇವರ ಸೇನೆ. ಆದರೆ ಇದಕ್ಕೆ ದ್ವೇಷ ಅಥವಾ ಕ್ರೋಧ ಮೂಲವಲ್ಲ; ಸಹಾನುಭೂತಿಯೇ ಇದರ ಜೀವಾಳ. ಆದ್ದರಿಂದ ಇವರ ನಗುವಿನ ಹಿಂದೆಯೇ ಅಳು ಮಡುಗಟ್ಟಿ ನಿಂತೇ ಇರುತ್ತದೆ.

ಕಿರಿ ಆಳದ ನಗೆನೀರಿನ ಮೇಲೆ
ತಿರುಗುತ ಬಹು ವೇಳೆ
ಕಣ್ಣೀರಿನ ಕಡಲಿನ ಪಾಲು
ಹಾಸ್ಯದ ಹರಿಗೋಲು

ಎಂಬುದು ಅವರ ಮಾತು. ಬಂಡ್ವಾಳ್ವಿಲ್ಲದ್ಬಡಾಯಿಯ ಒಂದು ಪಾತ್ರವಾದ ಬೋರನನ್ನು ಕುರಿತು, ಬೀದೀಲೇನಾದ್ರೂ ಬಿಡಿಗಾಸು ಬಿದ್ದಿದ್ದೇಂತ ಬಗ್ನೋಡ್ತ ಬರ್ತ್ತಿದೀಯೇನೋ ಬಕ್ವೇ ಎಂದು ಅಹೋಬ್ಲು ಆಡುವ ಪ್ರಾಸಬದ್ಧ ಕಿರಿಚಾಟದ ತಕ್ಷಣದ ಪ್ರತಿಕ್ರಿಯೆಯೆಂದರೆ ಕೇಕೆ ನಗು. ಆದರೆ ಅದರ ಹಿಂದೆಯೇ ಬಡತನದ ದಾರುಣ ಚಿತ್ರವನ್ನು ನೆನೆದು ಕಣ್ಣೀರು, ಅಹೋಬ್ಲುವಿನ ಟೊಳ್ಳು ಜಂಬದ ಬಗ್ಗೆ ಮರುಕ. ಇದು ಕೈಲಾಸಂ ವಿಡಂಬನದ ಪರಿಣಾಮ.

ನಾಟಕ ಪ್ರಪಂಚದ ಇನ್ನೊಬ್ಬ ವಿಡಂಬನಕಾರರು ಶ್ರೀರಂಗ. ಇವರ ಮಾತು ಹೆಚ್ಚು ಮಾರ್ಮಿಕ. ಎಂ.ವಿ.ಸೀತಾರಾಮ್ಯನವರು ಶ್ರೀರಂಗರ ಬಗ್ಗೆ ಬರೆಯುತ್ತ ಅವರ ಹರಿತವಾದ ಬುದ್ಧಿಶಕ್ತಿ, ವ್ಯಂಗ್ಯ, ಕಟುಹಾಸ್ಯ, ವಿಡಂಬನೆ, ಮಾರ್ಮಿಕವಾದ ಮಾತುಗಾರಿಕೆ, ಹದಿರುನುಡಿಯ ಹೆಕ್ಕಳ ಮತ್ತು ಅವರ ವಿಚಾರಸರಣಿ, ವ್ಯಕ್ತಿತ್ವ– ಇವುಗಳೆಲ್ಲ ಅವರ ನಾಟಕಗಳಲ್ಲಿ ಚೆನ್ನಾಗಿ ಹೊಮ್ಮಿವೆ. ಬರಿಯ ವಿನೋದಕ್ಕಾಗಿ ಇಲ್ಲ ಇವರ ನಾಟಕಗಳು, ಅವು ವಿಚಾರಕ್ಕಾಗಿ ವಿಕಾಸಕ್ಕಾಗಿ– ವಿಡಂಬನ ವಿನೋದ ಗಳ ಮೂಲಕ ಎಂದು ಹೇಳಿದ್ದಾರೆ. ಕಟ್ಟಿದ ಮನೆಯನ್ನು ರಿಪೇರಿ ಮಾಡುವುದು ಎಷ್ಟು ಮೂರ್ಖತನವೋ ಸಮಾಜವನ್ನು ಸುಧಾರಿಸುವುದೂ ಅಷ್ಟೇ ಮೂರ್ಖತನ. ಚಿರಕಾಲ ಬಾಳ ಬೇಕಾದರೆ ಹೊಸ ಸಮಾಜವನ್ನೇ ರೂಪಿಸಬೇಕು– ಎಂಬ ಭಾವನೆಯಿಂದ ಹೊರಟ ಇವರ ಈಗಿನ ಹಲವಾರು ಕೃತಿಗಳು ಭ್ರಮನಿರಸನದ ಪ್ರತೀಕಗಳಾಗಿವೆ. ನಮ್ಮ ಸ್ವರ್ಗೀಯ ಶತ್ರುಗಳು ಎಂಬ ಪ್ರಬಂಧಗಳಲ್ಲಿ ದೇವತೆಗಳನ್ನು ಕೋರ್ಟಿಗೆಳೆದಿರುವ ಶ್ರೀರಂಗರ ಕೃತಿಗಳಲ್ಲಿ ಭಾವದ ಕಾವಿಗಿಂತ ಕ್ರೋಧದ ನೋವು ಹೆಚ್ಚು. ಇವರ ನಗೆ ಬಲು ಹರಿತ. ವಿಶ್ವಾಮಿತ್ರನ ಸೃಷ್ಟಿ ಕಾದಂಬರಿಯಲ್ಲಿ ಬರುವ ಹೋಟಲು ಮಾಲಿಕನ ಚಿತ್ರವಿದು. 'ಕ್ಷೀರಸಾಗರದಲ್ಲಿ ಒರಗಿದ ವಿಷ್ಣುವಿಗೆ ಒಲಿದ ಲಕ್ಷ್ಮಿಯು ಚಹದಂಗಡಿಯವನಿಗೆ ಒಲಿಯುವುದು ಆಶ್ಚರ್ಯವೇ? ಇದ್ದಷ್ಟು ಕ್ಷೀರವನ್ನೇ ಸಾಗರವನ್ನಾಗಿ ಮಾಡುವ ಮಹಾಮಾಯಿಯಿವನು. ಲಕ್ಷ್ಮಿಯು ಅವನ ದಾಸಿಯಾಗಿದ್ದಾಳೆ; ಎರಡೂ ಕಿವಿಗಳಿಂದ ಜೋತುಬಿದ್ದಿದ್ದಾಳೆ; ಎರಡೂ ಕೈಗಳಲ್ಲಿ ಕುಣಿಯುತ್ತಿದ್ದಾಳೆ; ಬೆರಳುಗಳಲ್ಲಿ ಬಳುಕುತ್ತಲಿದ್ದಾಳೆ ಮಾಲಿಕನ ಲಕ್ಷ್ಮಿ'.


ಜಿ.ಪಿ. ರಾಜರತ್ನಂ

ಬೇಂದ್ರೆಯವರು ವಿಡಂಬನ ಕೃತಿಗಳನ್ನು ರಚಿಸದೆ ಇಲ್ಲ. ಇವರ ಅವರ್ಣನೀಯ, ಅರ್ವಾಚೀನ ಸೌಂದರ್ಯ, ಶೂನ್ಯ ಮುಂತಾದ ಹಲವು ಪದ್ಯಗಳಲ್ಲಿ ಕಾವ್ಯದ ಕಾವು ಕಡಿಮೆಯಾಗಿ ವಿಡಂಬನದ ಮೊನೆಯ ಅನುಭವವಾಗುತ್ತದೆ. ಬೇಂದ್ರೆಯವರು ರಾಜಕೀಯವನ್ನೂ ವಿಡಂಬನಕ್ಕೆ ತುತ್ತಾಗಿಸಿದ್ದಾರೆ. ಅವರ ಜಾತ್ರೆಯಿಂದ ಒಂದು ಉದಾಹರಣೆಯಿದು:

ಯಾರೆಂದರು ಪ್ಲೇಗೆಂದು? ಈ ಅರಮನೆಯಲ್ಲಿ
ನನ್ನ ಅಪ್ಪಣೆಯಿಲ್ಲದೆ ಪ್ಲೇಗೂ ಬರಕೂಡದು
ಯಾರೂ ಬರಕೂಡದು. ನಾನು ಪ್ಲೇಗಿದೆ ಎನ್ನುವ
ವರೆಗೆ ಯಾರೂ ಪ್ಲೇಗು ಎಂಬ ಮಾತೂ ಎತ್ತಕೂಡದು.

ಶಿವರಾಮ ಕಾರಂತರ ಕೃತಿಗಳಲ್ಲಿ ಕಂಡುಬರುವ ಮುಖ್ಯ ಸೂತ್ರಗಳಲ್ಲಿ ವಿಡಂಬನವೂ ಒಂದು. ಇದು ಒಮ್ಮೆ ಹಾಸ್ಯದ ಕಡೆಗೂ ಇನ್ನೊಮ್ಮೆ ಕ್ರೋಧದ ಕಡೆಗೂ ಮತ್ತೊಮ್ಮೆ ವಿಷಾದದ ಕಡೆಗೂ ಓಲುತ್ತದೆ. ಅವರ ಗ್ನಾನ, ದೇವದೂತರು, ಹಳ್ಳಿಯ ಹತ್ತು ಸಮಸ್ತರು, ಮೈಲಿಕಲ್ಲುಗಳೊಡನೆ ಮಾತುಕತೆ ಇವೇ ವಿಡಂಬನ ಕೃತಿಗಳು. ಅವರ ಅನೇಕ ಕಾದಂಬರಿಗಳಲ್ಲೂ ವಿಡಂಬನೆ ಮೂಡಿಬಂದಿದೆ.

ಕುವೆಂಪು ಅವರ ಶ್ರೀರಾಮಾಯಣದರ್ಶನದಲ್ಲಿ, ಶೂದ್ರ ತಪಸ್ವಿಯಲ್ಲಿ, ಬೆರಳ್‌ಗೆ ಕೊರಳ್ ನಾಟಕದಲ್ಲಿ, ಕಾನೂರು ಹೆಗ್ಗಡತಿಯಲ್ಲಿ, ಅವರು ಬರೆದಿರುವ ನೂರಾರು ಕವನಗಳಲ್ಲಿ ವಿಡಂಬನಕ್ಕೇನೂ ಕೊರತೆಯಿಲ್ಲ. ರಕ್ತಾಕ್ಷಿ ನಾಟಕದಲ್ಲಿ ಬರುವ ಸಾಮಾನ್ಯ ಪಾತ್ರಗಳಲ್ಲಿ ಹೊಮ್ಮುವ ಅಸಾಮಾನ್ಯ ವಿಡಂಬನವನ್ನು ಕಂಡಾಗ, ಅವರ ಕವನಗಳಲ್ಲಿ ಬರುವ ವಿಡಂಬನೆಗಳನ್ನು ನೋಡಿದಾಗ ವಿಡಂಬನ ಸಾಹಿತ್ಯದಲ್ಲಿಯೂ ಅವರು ಸಮರ್ಥರು ಎಂಬ ಅಂಶ ವ್ಯಕ್ತವಾಗದಿರದು.

ಪ್ರಬಂಧಕಾರರ ಪೈಕಿ ಗೊರೂರರದು ಸಕ್ಕರೆ ಹಚ್ಚಿದ ಕಹಿಗುಳಿಗೆಗಳ ರೀತಿ. ವಿಡಂಬನಕ್ಕೆ ತುತ್ತಾದ ವ್ಯಕ್ತಿಗಳ ಪೈಕಿ ಇವರಿಗೆ ಎಳ್ಳಷ್ಟೂ ಅಗೌರವವಿಲ್ಲ. ಇವರದು ವಿಡಂಬನದ ಸರಳಮಾರ್ಗ. ಇವರ ಶಾಲುಸಾಬಿ, ಜೋಡಿದಾರರು, ಶೀನಪ್ಪ, ರಂಗೇಗೌಡ– ಮುಂತಾದವರು ನಮಗೂ ಹತ್ತಿರದವರಾಗುತ್ತಾರೆ. ರಾಶಿಯವರ ತುಟಿಮೀರಿ ಹೊಮ್ಮುವ ಹಾಸ್ಯದ್ದು ವಿವಿಧ ಮುಖ. ಅದಕ್ಕೆ ನಗರದ ಸಂಸ್ಕಾರವಿದೆ; ಅದು ಸೌಮ್ಯವಾಗಿ ಕೆಲಸ ಮಾಡುವ ಅಗ್ನಿ ಪರ್ವತ. ರಾಶಿಯವರ ಗರಡಿಯಲ್ಲಿ ತಯಾರಾದವರ ಪೈಕಿ ಸುನಂದಮ್ಮ, ದಾಶರಥಿ ದೀಕ್ಷಿತ್ ಇವರ ಕೃತಿಗಳಲ್ಲಿ ನಗೆಯ ಅಂಶ ಹೆಚ್ಚು. ಅ.ರಾ.ಸೇ. ಬಲು ಚುರುಕು. ದೀಕ್ಷಿತರ ಕನ್ನಡದ ಗಾಡಿಯಲ್ಲಿ ಅವರ ವೈಶಿಷ್ಟ್ಯ ವ್ಯಕ್ತವಾಗುತ್ತದೆ. ಅವರ ಗಾಂಪರ ಗುಂಪು ನಗೆಗಡಲಿನ ತಮ್ಮ, ರಾಶಿಯವರ ಉರಿಗಾಳು, ಅರವಾಮೊದ್ದು, ಕೊರವ, ಹೆಬ್ಬಿ ಗುಬ್ಬಾಲೆಯ ಜನ– ಎಲ್ಲ ಚಿರಂಜೀವಿಗಳು. ಶ್ರೀರಂಗರ ಹಾದಿಯಲ್ಲಿ ನಡೆದ ಎನ್ಕೆ ಕುಲಕರ್ಣಿ ಇನ್ನೊಬ್ಬ ವಿಡಂಬನಕಾರ. ಶ್ರೀನಿವಾಸರನ್ನು ವಿಡಂಬನಕಾರರ ಪಟ್ಟಿಯಲ್ಲಿ ಸೇರಿಸುವುದಾಗುವುದಿಲ್ಲ ವಾದರೂ ಅವರ ಡೂಬಾಯಿ ಪಾದ್ರಿಯ ಪಾತ್ರದಂಥ ಹಲವು ಪ್ರಬಂಧಗಳಲ್ಲಿ ಮೃದುಮಧುರ ವಿಡಂಬನವಿದೆ.

ಬೀಚಿ ವಿಡಂಬನಬ್ರಹ್ಮ. ಅವರ ತಿಂಮನ ತಲೆ, ಚಿನ್ನದ ಕಸ ಕನ್ನಡದಲ್ಲಿ ಹಾಸ್ಯ ವಿಡಂಬನೆಯ ಉತ್ತಮ ಬರೆಹಗಳು. ಪ್ರತಿಯೊಂದು ಸನ್ನಿವೇಶದಲ್ಲೂ ಹಾಸ್ಯವನ್ನು ಕಾಣುವ ಕಣ್ಣು ಬೀಚಿಯವರಿಗಿದೆ. ನಾಡಿಗೇರರ ನಗೆಬರೆಹಗಳ ಹಿಂದೆಯೂ ವ್ಯಂಗ್ಯನೋಟದ ಕೊಂಡಿಯಿದೆ.

ಹಿಂದಿನ ತಲೆಮಾರಿನವರ ಪೈಕಿ ಹಾಸ್ಯವನ್ನೇ ತಮ್ಮ ಖಾಯಂ ಹವ್ಯಾಸವಾಗಿ ಮಾಡಿಕೊಂಡ ಕಸ್ತೂರಿ ಅವರ ನಗೆಪದ್ಯಗಳಲ್ಲೂ ಅಣಕವಾಡುಗಳಲ್ಲೂ ಲಘುಪ್ರಬಂಧಗಳಲ್ಲೂ ನಗರಜೀವಿಗಳ ಅಷ್ಟಾವಕ್ರದ ಹಾಸ್ಯನೋಟವಿದೆ. ಆಧುನಿಕ ಸಾಹಿತ್ಯದಲ್ಲಿ ಹಾಸ್ಯಕ್ಕೆಂದೇ ಹಲವು ಅಂತಸ್ತುಗಳ ಮಹಲ್ಲೊಂದನ್ನು ಕಟ್ಟಿದವರು ನಾ. ಕಸ್ತೂರಿ. ಉದಾಹರಣೆಗಾಗಿ ಅವರ 'ಅನರ್ಥ ಕೋಶ'ದ ಶಬ್ದಗಳ ಪೈಕಿ ಎರಡನ್ನಿಲ್ಲಿ ಕೊಟ್ಟಿದೆ:

ಕನ್ಯಾರ್ಥಿ – ಕಾಲೇಜು ವಿದ್ಯಾರ್ಥಿ. ತನಗಿಂತ ಹೆಚ್ಚು ಸೌಂದರ್ಯ, ಕಡಿಮೆ ವಿದ್ಯೆ ಇರುವ ಹೆಣ್ಣನ್ನೇ ಹುಡುಕುವವ.

ಮೂಗು – ಅನೇಕರ ನಶ್ಯದ ಡಬ್ಬಿ, ಕನ್ನಡಕ ಧರಿಸಲು ಅತ್ಯಾವಶ್ಯಕವಾದ ಅಂಗ. ಇದರ ನೇರಕ್ಕೆ ನಡೆವವರೇ ಹೆಚ್ಚು, ಧ್ಯಾನಕ್ಕೆ ಇದರ ತುದಿ ತುಂಬ ಅನುಕೂಲ. ಇದರ ಕೊಂಕನ್ನು ತಿದ್ದುವುದು ಬಲು ಕಷ್ಟ. ದೇವರಿಂದಲೂ ಅಸಾಧ್ಯ. ನಮಗೆ ಇದೊಂದು ಸಂಗೀತೋಪಕರಣ, ನೆಗಡಿಯ ನೆಲವೀಡು.

ಇತ್ತೀಚೆಗೆ ಈ ಕ್ಷೇತ್ರದಲ್ಲಿ ಅನೇಕರು ಕೃಷಿ ನಡೆಸಿದ್ದಾರೆ. ಸಿ.ಕೆ.ಎನ್.ರಾಜ, ಎಂ.ಪಿ.ಮನೋಹರ ಚಂದ್ರನ್, ಪಿ.ಎಸ್.ರಾಮಾನುಜಂ, ಎಸ್.ಎನ್.ಶಿವಸ್ವಾಮಿ, ಎಂ.ಎಸ್.ನರಸಿಂಹಮೂರ್ತಿ, ಟಿ.ಸುನಂದಮ್ಮ, ಪ್ರಭುಶಂಕರ, ಬಿ.ಜಿ.ಎಲ್.ಸ್ವಾಮಿ. ಎಚ್.ಎಲ್.ಕೇಶವಮೂರ್ತಿ, ಎಚ್.ಡುಂಡಿರಾಜ್, ಭುವನೇಶ್ವರಿ ಹೆಗಡೆ, ಬಿ.ಚಂದ್ರೇಗೌಡ, ಎಚ್.ಆನಂದರಾಯಮೂರ್ತಿ ಮುಂತಾದ ಅನೇಕ ಲೇಖಕರೂ ಸಾಕಷ್ಟು ವಿಡಂಬನ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ.

ಪಾಶ್ಚಾತ್ಯರಲ್ಲಿ ಸಾಹಿತ್ಯ ವಿಡಂಬನವೆಂಬ ವಿಶಿಷ್ಟ ಪ್ರಕಾರಮೊಂದು ಬೆಳೆದು ಬಂದಿದೆ. ಸಾಹಿತ್ಯದಲ್ಲಿ ಕಂಡುಬರುವ ನಾನಾ ವಿಚಾರಗಳನ್ನೂ ಅರ್ಥವಿಲ್ಲದ ಸಂಪ್ರದಾಯಗಳನ್ನೂ ಗೇಲಿ ಮಾಡುವುದು ಇದರ ಉದ್ದೇಶ. ಅಣಕವೇ ಇದರ ಅಸ್ತ್ರ. ವಿಡಂಬನಕ್ಕೆ ತುತ್ತಾದ ಕೃತಿಗಳಲ್ಲಿ ಎದ್ದು ಕಾಣುವ ಮಾತಿನ ಚಟಾಕಿಗಳನ್ನೇ ಎತ್ತಿ ಹಾಸ್ಯಕ್ಕೀಡು ಮಾಡುವುದು ಇದರ ವಿಧಾನ. ಆದರೆ ಅಣಕಿಸುವುದು ಅಷ್ಟೇನೂ ಸುಲಭವಲ್ಲ. ಅಣಕಿಸುವವನಿಗೆ ಮೂಲದ ಕೃತಿಯ ಲೇಖಕನಷ್ಟೇ, ಹಲವೇಳೆ ಅದಕ್ಕಿಂತ ಹೆಚ್ಚಾಗಿ ಶಕ್ತಿ ಇರಬೇಕು.

ಕನ್ನಡದಲ್ಲಿ ವಿಡಂಬನೆ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದದ್ದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ, ಇಂಗ್ಲಿಷ್‌ನ ಸೆಟೈರ್ ಕನ್ನಡ ವಿಡಂಬನ ಸಾಹಿತ್ಯಕ್ಕೆ ಪ್ರೇರಣೆ ನೀಡಿತು. ಪದ್ಯ ಮತ್ತು ಗದ್ಯ ಈ ಎರಡೂ ರೂಪಗಳಲ್ಲಿ ಕನ್ನಡದಲ್ಲಿ ವಿಡಂಬನೆ ಕಾಣಿಸಿಕೊಂಡಿದೆ. ಕಾವ್ಯ ಕ್ಷೇತ್ರದಲ್ಲಿ ಹೆಚ್ಚಾಗಿ ಬಿಡಿ ಪದ್ಯಗಳು ರಚನೆಗೊಂಡಿವೆ. ನಮ್ಮಲ್ಲಿ ಪೂರ್ಣ ಪ್ರಮಾಣದ ವಿಡಂಬನ ಕಾವ್ಯಗಳು ಕಡಿಮೆ. ಕೆರೋಡಿ ಸುಬ್ಬರಾಯರ ಅನುಕೂಲಸಿಂಧು (1926) ಕನ್ನಡದ ಮೊದಲ ವಿಡಂಬನ ಕಾವ್ಯ. ಜಿ.ಪಿ.ರಾಜರತ್ನಂ ಅವರ ಮಹಾಕವಿ ಪುರುಷಸರಸ್ವತಿ (1940) ಇದೇ ಬಗೆಯ ಇನ್ನೊಂದು ಮಹತ್ವದ ಕೃತಿ. ಕರ್ಣಾಟಕವೆಂಬ ಪದ ಸರಿಯೋ, ಕರ್ನಾಟಕ ಸರಿಯೋ ಎಂಬ ವಾದದ ಬಿರುಗಾಳಿ ನಾಡಿನಲ್ಲಿ ಬೀಸಿದಾಗ ಪುರುಷಸರಸ್ವತಿ ಹುಟ್ಟಿಕೊಂಡದ್ದು. ಕನ್ನಡ ಕವಿಗಳಲ್ಲಿ ಪರಂಪರೆಯಾಗಿ ಬಂದ ಕುಕವಿನಿಂದೆ, ಸ್ವಪ್ರತಿಷ್ಠೆಯ

ಸ್ಥಾಪನೆ, ಅಲಂಕಾರಪ್ರಿಯತೆ, ಪ್ರಾಸದ ಪೂಜೆ, ನಾಯಕನ ವರ್ಣನೆ, ನಾಯಕ ನಿವಾಸ ವರ್ಣನೆ, ನಿರ್ಜೀವ ವಸ್ತು ಸಂಭಾಷಣೆ, ಬಲವಂತದ ಉಪಮಾನ ಜೋಡಣೆ ಮುಂತಾದ ಇಡೀ ಕಾವ್ಯ ಪರಂಪರೆಯನ್ನೇ ರಾಜರತ್ನಂ ಇಲ್ಲಿ ಗೇಲಿ ಮಾಡಿದ್ದಾರೆ. ಮೇಲೆ ಹೇಳಿದ ಎರಡೂ ಕೃತಿಗಳಲ್ಲಿ ಕನ್ನಡಾಂಗ್ಲ ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಲಾಗಿದೆ. ಆಧುನಿಕ ವಿಡಂಬನ ಕಾವ್ಯ ಮಾದರಿಗೆ ಎರಡು ಪದ್ಯಗಳನ್ನು ಈ ಮುಂದೆ ಕೊಟ್ಟಿದೆ.

ಆಧುನಿಕ ವಿದ್ಯಾಭ್ಯಾಸದ, ವಿದ್ಯಾರ್ಥಿಯ ಆಡಂಬರದ ವಿಡಂಬನೆ ಹೀಗಿದೆ:

ಫೆಲ್ಟ್‌ಕ್ಯಾಪ್ ತೊಗಲಂ ತಲೆಯೊಳ್
ಬೆಲ್ಟಿನ ಮೃದುತೊಗಲ ಟೊಂಕದೊಳ್ ಬಲಗೈಯೊಳ್
ಗಿಲ್ಟೆಡ್ ವಾಚಿನ ತೊಗಲಂ
ಚಾಲ್ತಿಯೊಳಳವಡುವುದೊಂದು ವಿದ್ಯಾಭ್ಯಾಸಂ (ಕೆರೋಡಿ ಸುಬ್ಬರಾವ್)

ಕಾವ್ಯಾರಂಭದಲ್ಲಿ ಗಣಪತಿಯನ್ನು ಸ್ಮರಿಸುವ ಸಂಪ್ರದಾಯವನ್ನೂ ಪ್ರಾಸಪ್ರಿಯತೆಯನ್ನೂ ವಿಡಂಬಿಸಿರುವ ನವೀನ ರೀತಿ ಹೀಗಿದೆ:

ಕಳ್ಪು ಕಾವ್ಯದ ಮಸಿಯ ಕುಡಿಕೆಯ
ಟಿಳ್ಪು ಮಾಡುವ ಮೊದಲು ಹಾವಿನ
ಬೆಲ್ಪು ಹಾಕಿದ ಗಣಪನನು ಹಾಡುವುದು ನಮ್ಮವರ
ಘಾಳ್ಪು ಮೀರಿದರಿದನು ಸಿವಿಯರ್
ಜೋಳ್ಪು ತಪ್ಪದು ಸತ್ಯ ಥಂಡರ್
ಬೋಳ್ಪು ಬಿದ್ದಂತೆಂದು ದೇರ್ಫೋರ್ ಗಣಪತಿಯ ನೆನೆವೆ (ಜಿ.ಪಿ.ರಾಜರತ್ನಂ)

ಮಾತಿಗೆ ಅರ್ಥ ಹೇಗೋ ಹಾಗೆ ನಗೆಯೊಂದಿಗೆ ಸಾಮಾನ್ಯವಾಗಿ ಜನ್ಮವೆತ್ತುವ ವಿಡಂಬನದ್ದು ಸರ್ವಾಂತರ್ಯಾಮಿ ಗುಣ. ಕನ್ನಡ ಸಾಹಿತ್ಯದಲ್ಲೂ ಇದು ಓತಪ್ರೋತವಾಗಿ ಹರಿದಿರುವುದಷ್ಟೇ ಅಲ್ಲ, ಪೂರ್ತಿಯಾಗಿ ವಿಡಂಬನವೇ ಮೈಯಾಂತ ಕೃತಿಗಳು ಹೊರಬರುತ್ತಲೇ ಇವೆ. (ಎಚ್.ಎಸ್.ಕೆ.)

**ಕನ್ನಡದಲ್ಲಿ ವಿಮರ್ಶನ ಸಾಹಿತ್ಯ :** ಸಾಹಿತ್ಯ ವಿಮರ್ಶೆ ಕನ್ನಡದಲ್ಲಿ ಒಂದು ಪ್ರತ್ಯೇಕವಾದ ಅಧ್ಯಯನ ಶಿಸ್ತಾಗಿ ಬೆಳೆದದ್ದು ಈ ಶತಮಾನದಲ್ಲಿಯೇ. ಇದರ ಉಗಮ ಮತ್ತು ಬೆಳವಣಿಗೆಗಳಿಗೆ ಕಾರಣ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಕನ್ನಡದ ಸಾಹಿತ್ಯಾಭ್ಯಾಸಿಗಳ ಮೇಲೆ ಬೀರಿದ ಪ್ರಭಾವ. ಪಶ್ಚಿಮದಲ್ಲಿ ತೀಕ್ಷ್ಣಮತಿಗಳೂ ಪ್ರಕಾಂಡ ಪಂಡಿತರೂ ಸೂಕ್ಷ್ಮ ಸಂವೇದನಾಶೀಲರೂ ಆದ ಅನೇಕ ವಿಮರ್ಶಕರೂ ಕವಿ ವಿಮರ್ಶಕರೂ ಈ ಕ್ಷೇತ್ರದಲ್ಲಿ ದುಡಿದು ನೂರಾರು ಆಚಾರ್ಯ ಕೃತಿಗಳನ್ನು ರಚಿಸಿದ್ದಾರೆ. ಇಂಗ್ಲಿಷ್ ಭಾಷೆ, ಸಾಹಿತ್ಯ, ವಿಮರ್ಶೆಗಳನ್ನು ಆಸ್ಥೆಯಿಂದ ಅಧ್ಯಯನ ಮಾಡಿದ ಕನ್ನಡದ ವಿದ್ವಾಂಸರು ಪಶ್ಚಿಮದ ವಿಮರ್ಶೆಯ ವೈಪುಲ್ಯವನ್ನೂ ಪ್ರಖರತೆಯನ್ನೂ ಕಂಡು ಬೆರಗಾಗಿ, ಅನಂತರ ಅದನ್ನು ಆಳವಾಗಿ ಅಧ್ಯಯನ ಮಾಡಿ, ಅದರ ಮೂಲತತ್ತ್ವಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಜೊತೆಗೆ ಆ ಮೂಲತತ್ತ್ವಗಳನ್ನು ಕನ್ನಡದಲ್ಲಿ ಸಾಹಿತ್ಯ ಕೃತಿಗಳಿಗೆ ಅನ್ವಯಮಾಡಿ ವಿಮರ್ಶೆ ನಡೆಸಿದ್ದಾರೆ. ಮುಂದೆ ಇಲ್ಲಿ ಸೃಷ್ಟಿಯಾಗಿರುವ ಕೃತಿಗಳಿಗೆ ಅನ್ವಯವಾಗಬೇಕಾದ ಮಾನದಂಡಗಳು ಯಾವುವು ಎಂಬುದನ್ನು ಕುರಿತು ಚರ್ಚೆ ನಡೆಸಿದ್ದಾರೆ. ಅಲ್ಲದೆ ನಮ್ಮಲ್ಲಿ ಮಹತ್ತಾದವು ಎಂದು ಪ್ರಖ್ಯಾತವಾಗಿರುವ ಕೃತಿಗಳನ್ನು ಜಗತ್ತಿನ ಇತರ ಮಹಾಕೃತಿಗಳೊಂದಿಗೆ ಹೋಲಿಸಿ ನೋಡಿದ್ದಾರೆ. ಇದೆಲ್ಲದರ ಫಲವಾಗಿ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ವಿಸ್ತಾರವಾಗಿಯೂ ವಿಪುಲವಾಗಿಯೂ ಬೆಳೆದಿದೆ. ಅನೇಕ ವಿಮರ್ಶಕರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಿಮರ್ಶೆಯ ಗ್ರಂಥಗಳು ಪ್ರಕಟವಾಗುತ್ತಿವೆ. ಸಾಹಿತ್ಯ ಸಂಪ್ರದಾಯಗಳು ಬದಲಾದಂತೆಲ್ಲ ಕನ್ನಡ ವಿಮರ್ಶೆಯೂ ಕಾಲಕ್ಕೆ ಅನುಗುಣವಾಗಿ ಹೊಸ ಹೊಸ ಮಾನದಂಡಗಳನ್ನು ರೂಪಿಸಿಕೊಳ್ಳುತ್ತ ಸಾಗಿದೆ.

ಮೊದಲಿಗೆ ನಮ್ಮಲ್ಲಿದ್ದ ವಿಮರ್ಶಾ ವಿಧಾನ ಯಾವ ರೀತಿಯದು ಎಂಬುದನ್ನು ಪರಿಶೀಲಿಸಬಹುದು. ಪ್ರಾಚೀನರು ಅಲಂಕಾರ ಗ್ರಂಥಗಳಲ್ಲಿ ಕಾವ್ಯದ ಗುಣಗಳಿಗೂ ದೋಷಗಳಿಗೂ ಉದಾಹರಣೆ ನೀಡುವಾಗ ಇದು ಒಳ್ಳೆಯ ಕಾವ್ಯ ಭಾಗ, ಇದು ಅಲ್ಲ ಎಂದು ಸೂಚಿಸುತ್ತಿದ್ದರಷ್ಟೆ. ಅದರಿಂದ ಅವರು ಇದು ಸಾಹಿತ್ಯ ವಿಮರ್ಶೆ ಎಂದು ಸ್ಪಷ್ಟವಾಗಿ ಹೇಳದೆ ಒಂದು ರೀತಿಯಲ್ಲಿ ವಿಮರ್ಶೆ ಮಾಡುತ್ತಿದ್ದರು ಎಂದು ಹೇಳಬಹುದು. ಎರಡನೆಯದಾಗಿ, ಕವಿಗಳು ಕಾವ್ಯದ ಮೊದಲಲ್ಲಿಯೋ ಕೊನೆಯಲ್ಲಿಯೋ ಸತ್ಕಾವ್ಯದ ಪ್ರಶಂಸೆಯನ್ನು, ಕೆಟ್ಟ ಕಾವ್ಯದ ನಿಂದೆಯನ್ನು ಮಾಡುವಲ್ಲಿ ಮತ್ತೊಂದು ರೀತಿಯಲ್ಲಿ ವಿಮರ್ಶೆಯ ಕಾರ್ಯ ನಡೆಯುತ್ತಿತ್ತು. ಆದರೆ ಇವು ಯಾವುವೂ ಕ್ರಮಬದ್ಧವಾದ ಶಾಸ್ತ್ರೀಯವಾದ ವಿಮರ್ಶೆ ಎನ್ನಿಸಿಕೊಳ್ಳುವುದಿಲ್ಲ.

ಕನ್ನಡ ವಿಮರ್ಶೆಯ ಉಗಮ ಸಂಸ್ಕೃತ ಕೃತಿಗಳು ಮತ್ತು ಪ್ರಾಚೀನ ಕನ್ನಡ ಗ್ರಂಥಗಳ ಪರಿಚಯದಲ್ಲಿ ಎನ್ನಬಹುದು. ಈ ದಿಕ್ಕಿನಲ್ಲಿ ಬಹುಶಃ ಮೊತ್ತಮೊದಲ ಕೃತಿ ಮಂ.ಆ.ರಾಮಾನುಜ ಅಯ್ಯಂಗಾರ್ ಅವರ ಕವಿ ಚಕ್ರವರ್ತಿ ಕವಿ ರನ್ನನ ಜೀವನ ಚರಿತ್ರೆ, ಗ್ರಂಥವಿಮರ್ಶೆ ಇತ್ಯಾದಿ (1895). ಈ ಗ್ರಂಥದಲ್ಲಿ ಲೇಖಕರು ರನ್ನನ ಜೀವನ ಚರಿತ್ರೆಯ ಜೊತೆಗೆ ಅವನ ಕೃತಿಗಳ ಪರಿಚಯಾತ್ಮಕ ವಿಮರ್ಶೆಯನ್ನೂ ಒದಗಿಸಿದ್ದಾರೆ. ಈ ಕೃತಿಯನ್ನು ಗಮನಕ್ಕೆ ತಂದುಕೊಂಡು ಹೇಳುವುದಾದರೆ ಕನ್ನಡ ವಿಮರ್ಶೆಯ ಉಗಮ 19ನೆಯ ಶತಮಾನದ ಕೊನೆಯ ಭಾಗದಲ್ಲೇ ಎಂದು ಹೇಳಬಹುದು. ಐತಿಹಾಸಿಕ ದೃಷ್ಟಿಯಿಂದ ಮುಖ್ಯವಾದ ಇನ್ನೊಂದು ಕೃತಿ ಬಿ.ಕೃಷ್ಣಪ್ಪನವರ ರಾಮಚಂದ್ರಚರಿತಪುರಾಣ ವಿಮರ್ಶೆ (1923). ಮುಂದೆ ಜಿ.ಪಿ. ರಾಜರತ್ನಂ ಅವರು ಶ್ರೀ ಕವಿ ಪಂಪ (1931) ಎಂಬುದರಲ್ಲಿ ಪಂಪನನ್ನು ಕುರಿತು ತಕ್ಕ ಮಟ್ಟಿಗೆ ವಿಸ್ತಾರವಾದ ವಿಮರ್ಶೆಯನ್ನು ನೀಡಿದರು. ತೀ.ನಂ.ಶ್ರೀ ಅವರ ಪಂಪ (1939) ಎಂಬ ಕಿರು ಹೊತ್ತಗೆ ಮಹಾಕವಿಯೊಬ್ಬನನ್ನು ಅಚ್ಚುಕಟ್ಟಾದ ರೀತಿಯಲ್ಲಿ ಪರಿಚಯ ಮಾಡಿಕೊಡಲು ನಡೆದಿರುವ ಒಂದು ಸ್ತುತ್ಯ ಪ್ರಯತ್ನ. ಎಸ್.ವಿ.ರಂಗಣ್ಣನವರ ಕುಮಾರವ್ಯಾಸ (1962) ಕೂಡ ಇಂಥದೇ ಇನ್ನೊಂದು ಗ್ರಂಥ. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ತಮ್ಮ ಪ್ರಚಾರ ಪುಸ್ತಕ ಮಾಲೆಗಳಲ್ಲಿ ಅನೇಕ ಕನ್ನಡ, ಸಂಸ್ಕೃತ, ತೆಲುಗು, ಹಿಂದಿ ಕವಿಗಳನ್ನು ಕುರಿತು ಕಿರು ಹೊತ್ತಗೆಗಳನ್ನು ತಂದಿವೆ. ಅವುಗಳಲ್ಲೆಲ್ಲ ಅಲ್ಲಲ್ಲಿ ಒಳ್ಳೆಯ ವಿಮರ್ಶೆ ಪ್ರತಿಬಿಂಬಗೊಂಡಿದೆ.

ಪ್ರಾಚೀನ ಕನ್ನಡ ಕವಿಗಳ ಕೃತಿಗಳನ್ನು ಸಹೃದಯರಿಗೆ ಪರಿಚಯ ಮಾಡಿಕೊಡುವ ಕೆಲವು ಗ್ರಂಥಗಳಲ್ಲಿ ವಿಮರ್ಶೆ ತನ್ನ ಬೆಳವಣಿಗೆಯನ್ನೂ ಕಂಡಿದೆ. ರಂ.ಶ್ರೀ.ಮುಗಳಿಯವರ ರನ್ನನ ಕೃತಿರತ್ನ (1946), ಜಿ.ಎಸ್.ಮುರಿಗಾರಾಧ್ಯರ ಷಡಕ್ಷರದೇವಂ (1906), ಡಿ.ವಿ.ಶೇಷಗಿರಿರಾಯರ ಪಂಪ ರಾಮಾಯಣ ಕಾವ್ಯ ಪರಿಚಯ (1950), ನಾಗಚಂದ್ರನ ಕಾವ್ಯಗಳು (1950), ವಿ.ಶಿವಾನಂದ ಅವರ ಸೀಮಾಪುರುಷ ಷಡಕ್ಷರದೇವ (1966), ಚನ್ನಬಸವಪ್ಪ ಕವಲಿ ಮತ್ತು ಸಂ.ಮರಿದೇವಸ್ವಾಮಿ ಅವರ (ದೇವಕವಿಯ ಮರುಳಸಿದ್ಧ ಕಾವ್ಯದ ವಿಮರ್ಶೆಯನ್ನುಳ್ಳ) ಮರುಳಸಿದ್ಧಾಂಕ (1949)– ಇವೆಲ್ಲ ಈ ಗುಂಪಿನವೇ. ಕಾಲದ ದೃಷ್ಟಿಯಿಂದ ಇವೆಲ್ಲಕ್ಕಿಂತ ಮೊದಲು ಪ್ರಕಟವಾದ ಮುಳಿಯ ತಿಮ್ಮಪ್ಪಯ್ಯನವರ ನಾಡೋಜ ಪಂಪ (1938) ಒಂದು ಅಸಾಮಾನ್ಯವಾದ ಕೃತಿ. ಹತ್ತಿರ ಹತ್ತಿರ ಆರು ನೂರು ಪುಟಗಳ ವಿಸ್ತಾರವಾದ ಹರವಿನಲ್ಲಿ ತಿಮ್ಮಪ್ಪಯ್ಯನವರು ಪಂಪನನ್ನು ಕುರಿತ ಆಳವಾದ ಅಧ್ಯಯನವನ್ನೂ ಅಂದಿಗೆ ಹೊಸತು ಎನಿಸುವ ಚಾರಿತ್ರಿಕ ದೃಷ್ಟಿಯನ್ನೂ ಅವನ ಕೃತಿಗಳನ್ನು ಕುರಿತಂತೆ ಹಿತಮಿತವಾದ ವಿಮರ್ಶೆಯನ್ನೂ ನೀಡಿದ್ದಾರೆ. ಪಂಪನನ್ನು ಕುರಿತು ವಿಸ್ತಾರವಾದ ಇಂಥ ಒಂದು ಅಧ್ಯಯನ, ಆದರೆ ಇನ್ನೂ ಹರಿತವಾದ, ಹೃದಯಂಗಮವಾದ, ವಿಚಾರಪೂರ್ಣವಾದ ವಿಮರ್ಶೆ ಕನ್ನಡ ವಾಚಕರಿಗೆ ದೊರೆತದ್ದು ವಿ.ಸೀತಾರಾಮಯ್ಯನವರ ಮಹಾಕವಿ ಪಂಪ (1975) ಎಂಬ ಕೃತಿಯಿಂದ. ಈ ಕೃತಿ ವಿ.ಸೀ.ಅವರ ಅರ್ಧ ಶತಮಾನದ ಅಧ್ಯಯನ, ಪೂರ್ವ ಪಶ್ಚಿಮಗಳ ಕಾವ್ಯತತ್ತ್ವಗಳ ನಿಕಟವಾದ ಪರಿಚಯ, ಪಕ್ವವಾದ ಜೀವನಾನುಭವ, ಹೃದಯಸ್ಪರ್ಶಿಯಾದ ರಸದೃಷ್ಟಿ, ನಮ್ಮ ಜೀವನ ಮಾರ್ಗಕ್ಕೆ ತೀರ ಪರಿಚಿತವಾದ ಜೀವನ ನೋಟ ಇವುಗಳೆಲ್ಲವನ್ನೂ ಒಳಗೊಂಡಿರುವ ತೂಕವಾದ ವಿಮರ್ಶೆಗೆ ಸಾರ್ವಕಾಲಿಕವಾದ ಆದರ್ಶವಾಗಿದೆ.

ತಮ್ಮ ಬರೆಹಗಳ ಬಾಹುಳ್ಯದಿಂದ ಜನಸಾಮಾನ್ಯರಿಗೆ ತುಂಬ ಪ್ರಿಯವಾಗುವ ಪದ್ಯಗಂಧಿಯಾದ ಶೈಲಿಯಿಂದ ಜನಪ್ರಿಯರಾಗಿರುವ ನಿಡುಮಾಮಿಡಿ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ (ಜ.ಚ.ನಿ.) ಅವರು ತಮ್ಮ ಹೆಮ್ಮೆಗಳು (1948) ಎಂಬ ಕೃತಿಯಲ್ಲಿ ಮುಪ್ಪಿನ ಷಡಕ್ಷರಿಯ ಹಾಡುಗಳ ವಿವರಣೆ ವಿಮರ್ಶೆಗಳನ್ನೂ ಅಲ್ಲಯ್ಯನ ಬೆಳಕು (1950) ಎಂಬ ಕೃತಿಯಲ್ಲಿ ಅಲ್ಲಮ ಪ್ರಭುವಿನ ವಚನಗಳ ವಿಮರ್ಶೆಯನ್ನೂ ನೀಡಿದ್ದಾರೆ.

ಕನ್ನಡದ ಹಿಂದಿನ ಕವಿಗಳನ್ನು ಕುರಿತು ಪ್ರಕಟಿಸಿದ ಅನೇಕ ಸಂಭಾವನಾ ಗ್ರಂಥಗಳು ಸ್ತುತಿ ಪರವಾಗಿದ್ದು ಒಳ್ಳೆಯ ವಿಮರ್ಶೆಗೆ ನಿದರ್ಶನಗಳಲ್ಲವಾದರೂ ಆಯಾ ಕವಿಗಳನ್ನು ಸಹೃದಯರಿಗೆ ಪರಿಚಯ ಮಾಡಿಕೊಡುವ ಗ್ರಂಥಗಳಾಗಿ ಉಪಯುಕ್ತವಾದ ಕೆಲಸ ಮಾಡಿದವು. ಅವುಗಳಲ್ಲಿ ಮುದ್ದಣ (1926), ರನ್ನಕವಿ ಪ್ರಶಸ್ತಿ (1928), ಅಭಿನವ ಪಂಪ (1934), ಕುಮಾರವ್ಯಾಸ ಪ್ರಶಸ್ತಿ (1940), ಹರಿಹರದೇವ (1937), ಶ್ರೀ ಶಿವಯೋಗಿ ನಿಜಗುಣರ ಸ್ವರೂಪ ದರ್ಶನ (1954), ಕವಿ ಲಕ್ಷ್ಮೀಶ (1933), ಮಹಾತ್ಮ ಕನಕದಾಸ ಪ್ರಶಸ್ತಿ (1965) ಮುಂತಾದವು ಇಂಥವು. ಇವುಗಳ ಜೊತೆಗೆ ಅನೇಕ ಲೇಖಕರು ತಮ್ಮ ಪ್ರಬಂಧ ಸಂಕಲನಗಳಲ್ಲಿ ಪ್ರಾಚೀನ ಕವಿಗಳನ್ನು ಕುರಿತು ತಮ್ಮ ದೃಷ್ಟಿಕೋನಗಳನ್ನು ಮಂಡಿಸಿದ್ದಾರೆ. ಇವುಗಳಲ್ಲಿ ಹೆಸರಿಸಬೇಕಾದ ಕೃತಿಗಳು ಟಿ.ಎಸ್.ವೆಂಕಣ್ಣಯ್ಯನವರ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು (1938), ತೀ.ನಂ.ಶ್ರೀಕಂಠಯ್ಯನವರ ಕಾವ್ಯಸಮೀಕ್ಷೆ (1947) ಮತ್ತು ಸಮಾಲೋಕನ (1958), ಜಿ.ಎಸ್.ಶಿವರುದ್ರಪ್ಪನವರ ಪರಿಶೀಲನ (1967) ಮತ್ತು ಗತಿಬಿಂಬ (1969), ಚೆನ್ನವೀರ ಕಣವಿಯವರ ಸಾಹಿತ್ಯ ಚಿಂತನ (1966). ಸುಜನಾ ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಎಸ್.ನಾರಾಯಣಶೆಟ್ಟರ ಹೃದಯ ಸಂವಾದ (1964) ನಮ್ಮ ವಿಮರ್ಶೆ ಏರಬಲ್ಲ ಎತ್ತರಗಳನ್ನೂ ವ್ಯಾಪಿಸಬಲ್ಲ

ಹರಹನ್ನೂ ಸೂಚಿಸುತ್ತದೆ. ವಿಮರ್ಶೆಯ ಕ್ಷೇತ್ರದಲ್ಲಿ ದೇಜಗೌ ಅವರದು ಮುಖ್ಯ ಹೆಸರು. ಇವರು ಹಲವು ಗ್ರಂಥಗಳಿಗೆ ಬರೆದ ಅನೇಕ ಮುನ್ನುಡಿಗಳಲ್ಲಿ ತೂಕವಾದ ವಿಮರ್ಶೆ, ಕಸುವುಳ್ಳ ಭಾಷೆಯ ಬಳಕೆ ಕಂಡುಬರುತ್ತದೆ. ಇವರ ನಂಜುಂಡ ಕವಿ, ಷಡಕ್ಷರದೇವ ಆಯಾ ಕವಿಗಳನ್ನು ಕುರಿತ ವಿಮರ್ಶಾ ಗ್ರಂಥಗಳಾಗಿವೆ.

ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯ ದಿಕ್ಕುದೆಸೆಗಳನ್ನೇ ಬದಲಿಸಲು ಪ್ರಯತ್ನಿಸಿದ ಇಬ್ಬರು ಮಹನೀಯರು ಇಲ್ಲಿ ಪ್ರತ್ಯೇಕವಾಗಿ ಉಲ್ಲೇಖಾರ್ಹರು. ಮೊದಲನೆಯವರು ಎಸ್.ವಿ.ರಂಗಣ್ಣನವರು. ಇವರ 'ಶೈಲಿ' (1944) ಕನ್ನಡ ವಿಮರ್ಶೆಯ ಜಗತ್ತಿಗೆ ಹೊಸ ಆಯಾಮವನ್ನು ತಂದ ಮೊದಲ ಕೃತಿ. ಶೈಲಿಯ ಸ್ವರೂಪವನ್ನೂ ಮಧ್ಯಮ ಶೈಲಿ, ಸಾಧಾರಣ ಶೈಲಿ ಎಂದರೇನು ಎಂಬುದನ್ನೂ ಶೈಲಿಯಲ್ಲಿ ಮಹತ್ವ ಭವ್ಯತೆಗಳ ಸ್ವರೂಪವನ್ನೂ ನಮ್ಮ ಜನತೆಗೆ ಮೊದಲಬಾರಿಗೆ ಪರಿಚಯ ಮಾಡಿ ಕೊಟ್ಟವರು ಇವರು. ಪಂಪ, ರನ್ನ, ರಾಘವಾಂಕ, ಕುಮಾರವ್ಯಾಸ, ಜನ್ನ, ರತ್ನಾಕರವರ್ಣಿ, ರುದ್ರಭಟ್ಟ, ಹರಿಹರ, ಲಕ್ಷ್ಮೀಶ, ನಾಗಚಂದ್ರ, ನಯಸೇನ, ಆಂಡಯ್ಯ, ಪುರಂದರದಾಸ, ಕನಕದಾಸ, ಕುಮಾರ ವಾಲ್ಮೀಕಿ, ಸರ್ವಜ್ಞ, ಹೊನ್ನಮ್ಮ, ಷಡಕ್ಷರದೇವ– ಈ ಕವಿಗಳ ಶೈಲಿಯ ಸ್ವರೂಪವನ್ನೂ ಅವರ ಏಳು ಬೀಳು ಗಳನ್ನೂ ಧೀರ ರೀತಿಯಿಂದ ಚರ್ಚಿಸಿದ ಕೀರ್ತಿ ರಂಗಣ್ಣನವರದು. ಇಂಗ್ಲಿಷ್ ಭಾಷಾ ಸಾಹಿತ್ಯಗಳ ಪ್ರಕಾಂಡ ಪಾಂಡಿತ್ಯ, ಕನ್ನಡ ಕವಿಗಳ ಆಳವಾದ ಅಧ್ಯಯನ ಇವರ ವಾಣಿಗೆ ಅಧಿಕಾರವನ್ನೂ ದೃಷ್ಟಿಗೆ ತೀಕ್ಷ್ಣತೆಯನ್ನೂ ಒದಗಿಸಿದುವು. ಇವರ ಹೊನ್ನ ಶೂಲ (1959) ಅದುವರೆಗೆ ಅತಿ ಪ್ರಶಂಸೆಯಿಂದ ಬೀಗಿ ಬಿರಿಯುತ್ತಿದ್ದ ಅನೇಕ ಕವಿಗಳನ್ನು, ಅದರಲ್ಲೂ ಕನ್ನಡದ ಮುದ್ದಣ, ಸಂಸ್ಕೃತದ ಕಾಳಿದಾಸ– ಇವರನ್ನು ಅವರವರ ಸ್ಥಾನಗಳಿಗೆ ಕೂರಿಸಿತು.

ಎಸ್.ವಿ. ರಂಗಣ್ಣ

ಎರಡನೆಯವರು ಈ ಯುಗದ ಮಹಾಕವಿಯಾದ ಕುವೆಂಪು ಅವರು. ಇವರು ಕವಿಯ ಕಣ್ಣು ಕಾವ್ಯದ ದರ್ಶನದಲ್ಲಿ ಎಂದು ಸಾರಿದರು. ವಿಮರ್ಶೆಯಲ್ಲಿ ಕಾವ್ಯ ಒಡಗೂಡುವಂತೆ ಮಾಡಿದರು. ಇವರ ಕಾವ್ಯವಿಹಾರ, ತಪೋನಂದನ (1950), ವಿಭೂತಿಪೂಜೆ (1953), ದ್ರೌಪದಿಯ ಶ್ರೀಮುಡಿ (1960), ರಸೋ ವೈ ಸಃ (1962)– ಇವು ಅಂತಃಸತ್ವದಲ್ಲಿ ಮಹಾಕವಿಯಾದವನು ಮಾತ್ರ ನಿರೂಪಿಸಬಲ್ಲ ಕಾವ್ಯ ತತ್ತ್ವಗಳನ್ನು, ನೂತನ ವಿಮರ್ಶೆಯನ್ನು ಒಳಗೊಂಡಿವೆ – ಸರೋವರದ ಸಿರಿಗನ್ನಡಿಯಲ್ಲಿ, ಪಂಪನಲ್ಲಿ ಭವ್ಯತೆ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ – ಇವು ಜಗತ್ತಿನ ಇತರ ಸಾಹಿತ್ಯಗಳಿಗೂ ಕೊಡುಗೆಯಾಗಬಲ್ಲಂಥ ವಿಮರ್ಶಾ ಪ್ರಬಂಧಗಳು. ಇವರದು ದರ್ಶನ ವಿಮರ್ಶೆ ಎಂದರೆ, ಇತರರು ಕಾಣದ ಲಾಲಿತ್ಯ ಭವ್ಯತೆಗಳನ್ನೂ ಮಹಿಮೆ ಮಾರ್ದವತೆಗಳನ್ನೂ ಕಾವ್ಯಮಯವಾಗಿ ನಿರೂಪಿಸುವ ವಿಮರ್ಶೆ.

ಪ್ರಾಚೀನ ಕವಿಗಳನ್ನು ಕುರಿತ ವಿಮರ್ಶೆ ಹಲವು ಕಾವ್ಯ ಸಂಗ್ರಹಗಳ ಮುನ್ನುಡಿಗಳಲ್ಲಿ ಹಂಚಿಹೋಗಿದೆ. ಆದಿಪುರಾಣ ಸಂಗ್ರಹದಲ್ಲಿ ಎಲ್.ಗುಂಡಪ್ಪನವರು, ಪಂಪ ರಾಮಾಯಣ ಸಂಗ್ರಹದಲ್ಲಿ ಡಿ.ಎಲ್.ನರಸಿಂಹಾಚಾರ್ಯರು, ಹರಿಶ್ಚಂದ್ರಕಾವ್ಯಸಂಗ್ರಹದಲ್ಲಿ ಎ.ಆರ್.ಕೃಷ್ಣ ಶಾಸ್ತ್ರಿಗಳು, ಭರತೇಶವೈಭವ ಸಂಗ್ರಹದಲ್ಲಿ ತ.ಸು. ಶಾಮರಾಯರು ಆಯಾ ಕವಿಗಳ ಕಾವ್ಯಶಕ್ತಿಯನ್ನು ಅಳೆದು ತೂಗಿದ್ದಾರೆ. ಆಧುನಿಕರ ಕೃತಿಗಳಿಗೆ ಬರೆದ ಮುನ್ನುಡಿಗಳಲ್ಲಿಯೂ ಇಂಥ ವಿಮರ್ಶೆ ಅಡಗಿದ್ದು ಮಾಸ್ತಿಯವರ ಪೂಜನ, ಪು.ತಿ.ನ. ಅವರ ಕಾವ್ಯ ಕುತೂಹಲ ಸಂಕಲನಗಳಾಗಿ ಪ್ರಕಟಗೊಂಡಿವೆ. ಅಭಿನವಗುಪ್ತ, ಮಿಡ್ಲ್‌ಟನ್ ಮರ್ರಿ ಮುಂತಾದವರಂತೆ ಸ್ವತಂತ್ರವಾಗಿ ಪ್ರತಿಭಾ ಪೂರ್ಣವಾಗಿ ಕಾವ್ಯಮೀಮಾಂಸೆಯ ಮೂಲತತ್ತ್ವಗಳನ್ನು ನೂತನವಾಗಿ ನಿರೂಪಿಸಬಲ್ಲ ಪು.ತಿ.ನ. ಅವರ ಶಕ್ತಿ ಕಾವ್ಯಕುತೂಹಲದ ಪುಟಗಳಲ್ಲಿ ಮಡುಗಟ್ಟಿ ನಿಂತಿದೆ.

ಒಂದು ಕೃತಿಯನ್ನು ಕುರಿತು ಅಪೂರ್ವವಾದ ರೀತಿಯಲ್ಲಿ ಒಬ್ಬ ಲೇಖಕರು ವಿಚಾರ ನಡೆಸಿರುವ ಒಂದು ಮಹತ್ತ್ವದ ಕೃತಿ ಎಂದರೆ ಸಂ.ಶಿ.ಭೂಸನೂರಮಠ ಅವರ ಶೂನ್ಯಸಂಪಾದನೆಯ ಪರಾಮರ್ಶೆ (1969). ಇದು ಕನ್ನಡ ವಿಮರ್ಶೆಯ ಕ್ಷೇತ್ರದಲ್ಲಿ ಮೂಲವನ್ನು ಪ್ರವೇಶಿಸಿ, ಅದನ್ನು ಮತ್ತೆ ಹೊಸದಾಗಿ ಸೃಷ್ಟಿಸಿ, ರಸಾನುಭವವನ್ನು ಅನುಭಾವದ ಅನುಭೂತಿಯನ್ನು ಸಹೃದಯರಿಗೆ ಒದಗಿಸುವ ಕೃತಿ.

ವಿಮರ್ಶೆಯ ಕ್ಷೇತ್ರವನ್ನು ಶ್ರೀಮಂತಗೊಳಿಸುವುದರಲ್ಲಿ ನೆರವಾದ ಒಂದು ಉದ್ಯಮ ಎಂದರೆ ಸಂಸ್ಕೃತ ಕವಿಗಳನ್ನೂ ಅವರ ಕೃತಿಗಳನ್ನೂ ಪರಿಚಯ ಮಾಡಿಕೊಡಲು ನಡೆದ ಪ್ರಯತ್ನ. ಈ ಗುಂಪಿನಲ್ಲಿ ಆಚಾರ್ಯಕೃತಿ ಎ.ಆರ್.ಕೃಷ್ಣಶಾಸ್ತ್ರಿಗಳ ಸಂಸ್ಕೃತ ನಾಟಕ. ಸಂಸ್ಕೃತ ನಾಟಕಗಳನ್ನು ಕುರಿತು ಇಂಥ ಒಂದು ಕೃತಿ ಇಂಗ್ಲಿಷ್‌ನಲ್ಲಾಗಲೀ ಬೇರಾವುದೇ ದೇಶಭಾಷೆಗಳಲ್ಲಾಗಲಿ ಪ್ರಕಟವಾಗಿಲ್ಲ ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಅವರದೇ 'ಭಾಸಕವಿ' (1933) ಕೂಡ ಈ ಗುಂಪಿಗೆ ಸೇರುವಂಥದ್ದು. ಇತರ ಕೃತಿಗಳು ಸಿ.ಕೆ.ವೆಂಕಟರಾಮಯ್ಯನವರ ಕಾಳಿದಾಸ ಮಹಾಕವಿ (1966), ನಾರಾಯಣ ವೆಂಕಟೇಶ ಕುರಡಿಯವರ ಶ್ರೀಹರ್ಷನ ನಾಟಕಗಳು (1930), ಎಂ.ಸುಬ್ರಾಯನ್ ಅವರ ವಿಶ್ವಕವಿ ಕಾಳಿದಾಸ ಕೃತಿದರ್ಶನ, ಸಿ.ಆರ್.ಹೊಸಲಯ್ಯನವರ ಸಂಸ್ಕೃತಿ (1955), ಎಂ.ರಾಜಗೋಪಾಲ ಆಚಾರ್ಯ ಅವರ ಕಾಳಿದಾಸನ ಉಪಮೆಗಳು (1967). ವಿ.ಸೀ. ಅವರು ತಮ್ಮ ಅಭಿಜ್ಞಾನ ಶಾಕುಂತಲ (1943) ಗ್ರಂಥದಲ್ಲಿ ಕಾಳಿದಾಸನ ಶಾಕುಂತಲದ ಬಗ್ಗೆ ಸಮಗ್ರ ವಿಮರ್ಶೆಯನ್ನೂ ಕೆ.ಕೃಷ್ಣಮೂರ್ತಿಗಳು ಕಾಳಿದಾಸನ ನಾಟಕಗಳು ಮತ್ತು ಭವಭೂತಿ ಎಂಬ ಎರಡು ಪುಟ್ಟ ಪುಸ್ತಕಗಳಲ್ಲಿ ಆ ಕವಿಗಳ ಕೃತಿಗಳಿಗೆ ಪ್ರವೇಶವನ್ನೂ ದೊರಕಿಸಿಕೊಟ್ಟಿದ್ದಾರೆ.

ಮಾಸ್ತಿಯವರ 'ಆದಿಕವಿ ವಾಲ್ಮೀಕಿ' ಒಂದು ರಸಸೃಷ್ಟಿ. ಇಲ್ಲಿ ವಿಮರ್ಶೆ ಕಾವ್ಯವಾಗಿ ಹರಿದಿದೆ. ವಾಲ್ಮೀಕಿ ರಾಮಾಯಣದ ಶಿಖರಗಳನ್ನೂ ವಾಲ್ಮೀಕಿಯ ಪ್ರತಿಭೆಯ ನೂರಾರು ಮುಖಗಳನ್ನೂ ಆ ಮಹಾಕವಿಯ ಹೃದಯದ ನವಿರು ಕೋಮಲತೆಗಳನ್ನೂ ಮನೋಜ್ಞವಾದ ರೀತಿಯಲ್ಲಿ ಮಾಸ್ತಿಯವರು ಪರಿಚಯ ಮಾಡಿಕೊಟ್ಟಿದ್ದಾರೆ. ವಾಲ್ಮೀಕಿ ರಾಮಾಯಣವನ್ನು ಕುರಿತ ಇನ್ನೊಂದು ಕೃತಿ ವಿ.ಸೀತಾರಾಮಯ್ಯನವರದು.

ಎಸ್.ವಿ. ರಂಗಣ್ಣನವರು ಶಾಕುಂತಲ ನಾಟಕದ ವಿಮರ್ಶೆ ಮತ್ತು ವಿಕ್ರಮೋರ್ವಶೀಯ ನಾಟಕದ ವಿಮರ್ಶೆ (1960)– ಈ ಗ್ರಂಥಗಳಲ್ಲಿ ಕವಿಕುಲಗುರು ಎಂಬ ಕಾಳಿದಾಸನ ಪ್ರಶಸ್ತಿಯನ್ನು ತರ್ಕಬದ್ಧವಾಗಿ ಪ್ರಶ್ನಿಸಿದ್ದಾರೆ. ಸೊಗಸಾದ ವಾದವೈಖರಿಯಿಂದಲೂ ಉದಾರವಾದರೂ ತೀಕ್ಷ್ಣವಾದ ವಿಮರ್ಶನ ಶಕ್ತಿಯಿಂದಲೂ ಕಾಳಿದಾಸನ ಮೌಲ್ಯಮಾಪನ ಮಾಡಿದ್ದಾರೆ. ವಿಮರ್ಶೆಯ ಮೇಲೆ ಹಿಡಿತವುಳ್ಳ ಇವರ ಬರೆವಣಿಗೆ ಮೆಚ್ಚುವಂಥದ್ದು.

ವಿಮರ್ಶೆಯ ಮೂಲತತ್ತ್ವಗಳನ್ನು ಕುರಿತು ಅತ್ಯಗತ್ಯವಾದ ಪರಿಚಯ ಕೃತಿಗಳನ್ನು ಕೆಲವರು ನೀಡಿದ್ದಾರೆ. ವಿಮರ್ಶೆ ಎಂದರೆ ಏನು ಎಂಬುದನ್ನು ಸರಳವಾದ ಮಾತುಗಳಲ್ಲಿ ನಮಗೆ ತಿಳಿಯಹೇಳಿದ ಮೊದಲಿಗರು ಮಾಸ್ತಿಯವರು. 1926ರಲ್ಲಿ ಪ್ರಕಟವಾದ ಇವರ ವಿಮರ್ಶೆ ಎಂಬ ಗ್ರಂಥದಲ್ಲಿ ಸಾಹಿತ್ಯ ವಿಮರ್ಶೆಯ ಕಾರ್ಯ ಎಂಬ ಲೇಖನವಿದೆ. ಪೂರ್ವ ಪಶ್ಚಿಮಗಳ ಸಾಹಿತ್ಯ ಮತ್ತು ವಿಮರ್ಶೆಯ ಆಳವಾದ ಪಾಂಡಿತ್ಯವುಳ್ಳ ಈ ಹಿರಿಯರು ತಮ್ಮ ಕವಿಸಹಜವಾದ ದೃಷ್ಟಿಯಿಂದ ಅನುಕರಣೀಯವಾದ ಸರಳ ಶೈಲಿಯಲ್ಲಿ ವಿಮರ್ಶೆಯ ಮೂಲತತ್ತ್ವಗಳನ್ನು ಅಡಕವಾಗಿ ಆ ಪ್ರಬಂಧದಲ್ಲಿ ನಿರೂಪಿಸಿದ್ದಾರೆ. ಅನಂತರದ ವರ್ಷಗಳಲ್ಲಿ ಎಷ್ಟೋ ಬಗೆಯ ವಿಮರ್ಶೆಗಳು ಬೆಳೆದರೂ ವಿಮರ್ಶೆಯ ಮೂಲ ತತ್ತ್ವಗಳನ್ನು ಕುರಿತ ಗ್ರಂಥಗಳು ನಮ್ಮಲ್ಲಿ ಕಡಮೆ. ಇದುವರೆಗೆ ನಮ್ಮಲ್ಲಿ ಪ್ರಕಟವಾಗಿರುವ ವಿಮರ್ಶೆಯ ಮುಕ್ಕಾಲು ಮೂರು ವೀಸ ಪಾಲು ಆನ್ವಯಿಕ ವಿಮರ್ಶೆ. ವಿಮರ್ಶೆಯ ಸಿದ್ಧಾಂತಗಳನ್ನು ತಿಳಿಸುವುದಕ್ಕೆಂದು ಹೊರಟಿರುವ ಕೆಲವು ಪುಸ್ತಕಗಳು ಇವು – ವಿ.ಕೃ.ಗೋಕಾಕರ ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು (1946), ಸ.ಸ.ಮಾಳವಾಡರ ಪುಸ್ತಕ ಪ್ರಪಂಚ (1956), ಮಿರ್ಜಿ ಅಣ್ಣಾರಾಯರ ವಿಮರ್ಶೆಯ ಸ್ವರೂಪ (1959), ಜಿ.ಎಸ್.ಶಿವರುದ್ರಪ್ಪನವರ ವಿಮರ್ಶೆಯ ಪೂರ್ವಪಶ್ಚಿಮ (1961), ಎಚ್.ತಿಪ್ಪೇರುದ್ರಸ್ವಾಮಿಗಳ ಸಾಹಿತ್ಯ ವಿಮರ್ಶೆಯ ಮೂಲತತ್ತ್ವಗಳು (1970), ರಂ.ಶ್ರೀ.ಮುಗಳಿಯವರ ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು (1969).

ವಿಮರ್ಶೆಯ ಶಾಸ್ತ್ರೀಯವಾದ ವಿವೇಚನೆ ಮೊಟ್ಟಮೊದಲ ಬಾರಿಗೆ ಪ್ರಶಂಸನೀಯವಾದ ರೀತಿಯಲ್ಲಿ ಸಮಗ್ರವಾಗಿ ಪುಸ್ತಕರೂಪದಲ್ಲಿ ಪ್ರಕಟವಾದದ್ದು ಜಿ.ಎಸ್.ಶಿವರುದ್ರಪ್ಪನವರ ವಿಮರ್ಶೆಯ ಪೂರ್ವ ಪಶ್ಚಿಮದಲ್ಲಿ. ಈ ಲೇಖಕರಿಗೆ ಅನೇಕ ರೀತಿಯ ಅನುಕೂಲತೆಗಳು ದೊರೆತಿದ್ದವು. ಮೊದಲನೆಯದು ಪಾಶ್ಚಾತ್ಯ ಮತ್ತು ಪೌರ್ವಾತ್ಯ ಕಾವ್ಯಮೀಮಾಂಸೆಗಳ ಶಾಸ್ತ್ರೀಯವಾದ ಅಧ್ಯಯನ, ಕುವೆಂಪು ಅವರಂಥ ಸಮರ್ಥ ಗುರುಗಳ ಬೋಧನ, ಮಾರ್ಗದರ್ಶನ; ಜೊತೆಗೆ ತಾವೇ ಕವಿಗಳಾದುದರಿಂದ ಕವಿಮನಸ್ಸು ಕೆಲಸ ಮಾಡುವ ರೀತಿಯ ನಿಕಟವಾದ ಪರಿಚಯ, ಇವೆಲ್ಲದರ ಜೊತೆಗೆ ಆಕರ್ಷಕವಾದ ಶೈಲಿ – ಹೀಗಾಗಿ ಈ ಕೃತಿ ಕಾಲದಲ್ಲಿ ಹೇಗೋ ಹಾಗೆ ಗುಣದಲ್ಲೂ ವಿಮರ್ಶೆಯ ಮೂಲತತ್ತ್ವಗಳಿಗೆ ಅನುಗುಣವಾಗಿದೆ. ಭಾರತೀಯಕಾವ್ಯಮೀಮಾಂಸೆಯ ವಿಸ್ತಾರವಾದ ಹಿನ್ನೆಲೆಯಲ್ಲಿ ಪಾಶ್ಚಾತ್ಯ ವಿಮರ್ಶೆಯ ಮೂಲಭೂತ ಸಿದ್ಧಾಂತಗಳನ್ನು ತಿಪ್ಪೇರುದ್ರಸ್ವಾಮಿಯವರು ತಮ್ಮ ಗ್ರಂಥದಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಈ ಇಬ್ಬರ ಕೃತಿಗಳ ವೈಶಿಷ್ಟ್ಯವೆಂದರೆ ಇಬ್ಬರೂ ಆಧುನಿಕ ಮನಶ್ಶಾಸ್ತ್ರದ ಬೆಳಕಿನಲ್ಲಿ ವಿಮರ್ಶೆಯ ನಡೆಯನ್ನು ಗುರುತಿಸಿರುವುದು.

ವಿಮರ್ಶೆಯ ಮೂಲತತ್ತ್ವಗಳಿಗೆ ಸಂಬಂಧಿಸಿದಂತೆ ವಿಶೇಷವಾಗಿ ಉಲ್ಲೇಖಿಸಬೇಕಾದ ಇನ್ನೊಂದು ಕೃತಿ. ಬಿ.ಎಚ್.ಶ್ರೀಧರರ ಕಾವ್ಯಸೂತ್ರ (1968). ಪ್ಲೇಟೋ, ಲಾಂಜೈನಸ್, ಉಲ್ಫ್‌ಡೋವರ್ ವಿಲ್ಸನ್, ಹೊರೇಸ್, ಡೆಮಿಟ್ರಿಯಸ್, ಐ.ಎ.ರಿಚರ್ಡ್ಸ್ ಮುಂತಾದವರ ವಿಮರ್ಶೆಯ ಪ್ರಕ್ರಿಯೆಗಳಿಂದ ಹಿಡಿದು ಮಾರ್ಕ್ಸ್‌ವಾದೀಯ ವಿಮರ್ಶೆ, ಮನೋವಿಶ್ಲೇಷಣಾತ್ಮಕ ವಿಮರ್ಶೆ, ಭಾಷಾಶಾಸ್ತ್ರೀಯ ಶೈಲಿ, ವಿವೇಚನಾತ್ಮಕ ವಿಮರ್ಶೆ– ಇವೆಲ್ಲವನ್ನೂ ಅತ್ಯಾಧುನಿಕ ಪಾಶ್ಚಾತ್ಯ ವಿಮರ್ಶಕರ ವಾದಗಳನ್ನೂ ತಮ್ಮದೇ ಆದ ಶಾಸ್ತ್ರೀಯ ಶೈಲಿಯಲ್ಲಿ ಶ್ರೀಧರರು ಮಂಡಿಸಿದ್ದಾರೆ. ಇತರ ವಿಮರ್ಶಕರ ದೃಷ್ಟಿಗಳನ್ನು ನಿರೂಪಿಸಿ ಕೈಬಿಟ್ಟು ಬಿಡದೆ ಅವುಗಳನ್ನು ಅರಗಿಸಿಕೊಂಡು ಶ್ರೀಧರರು ಸ್ವತಂತ್ರವಾಗಿ ಆಲೋಚಿಸಬಲ್ಲ ಶಕ್ತಿಯನ್ನು ತೋರಿಸಿದ್ದಾರೆ. ಒಂದು ರೀತಿಯಿಂದ ಈ ಕೃತಿಯನ್ನು ವಿಮರ್ಶೆಯ ಸಿದ್ಧಾಂತಗಳ ಕಿರಿಯ ವಿಶ್ವಕೋಶ ಎನ್ನಬಹುದು.

ಸಾಹಿತ್ಯ ವಿಮರ್ಶೆ ಗಟ್ಟಿಯಾದ ತಳಹದಿಯ ಮೇಲೆ ನಿಂತು ಸರ್ವತೋಮುಖವಾಗಿ ಬೆಳೆಯಬೇಕಾದರೆ ಪ್ರಪಂಚದ ಪ್ರಬುದ್ಧ ಸಾಹಿತ್ಯಗಳನ್ನು ವಿಶ್ಲೇಷಣೆಗೆ ಗುರಿಪಡಿಸಿರುವ ಮೀಮಾಂಸಕಾರರು ನಿರೂಪಿಸಿದ ತತ್ತ್ವಗಳನ್ನು ಪರಿಚಯ ಮಾಡಿಕೊಳ್ಳಬೇಕಾದದ್ದು ಅಗತ್ಯ. ಈ ದೃಷ್ಟಿಯಿಂದ ಅರಿಸ್ಟಾಟಲನ ಕಾವ್ಯಮೀಮಾಂಸೆ (1959) ಮತ್ತು ಹೊರೇಸನ ಸಾಹಿತ್ಯ ವಿಮರ್ಶೆ (1969)– ಈ ಎರಡೂ ಎನ್.ಬಾಲಸುಬ್ರಹ್ಮಣ್ಯ ಅವರು ಕನ್ನಡಕ್ಕೆ ನೀಡಿದ ಅಪೂರ್ವ ಕಾಣಿಕೆಗಳು. ತಮ್ಮ ಪ್ರಕಾಂಡ ಪಾಂಡಿತ್ಯ, ನಿಷ್ಪಕ್ಷಪಾತವಾದ ನಿರೂಪಣೆ, ಪ್ರಖರವಾದ ವಿಮರ್ಶನ ಶಕ್ತಿಗಳನ್ನು ಹಾಳತವಾಗಿ ಬೆರಸಿ, ಈ ಪ್ರಾಚೀನರ ಆಚಾರ್ಯಕೃತಿಗಳನ್ನು ಮೋಹಕವಾದ ಕನ್ನಡ ಶೈಲಿಯಲ್ಲಿ ನೀಡಿ ಬಾಲಸುಬ್ರಹ್ಮಣ್ಯ ಅವರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಹಾಗೆಯೇ ಅಬರಕ್ರಾಂಬಿಯ ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ ಗ್ರಂಥವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಸಾಹಿತ್ಯ ವಿಮರ್ಶೆಯ ತತ್ತ್ವಗಳು (1964) ಎಂಬ ಹೆಸರಿನಿಂದಲೂ ವಿಲಿಯಂ ಹೆನ್ರಿ ಹಡ್ಸನನ ಇಂಟ್ರೊಡಕ್ಷನ್ ಟು ದಿ ಸ್ಟಡಿ ಆಫ್ ಲಿಟರೇಚರ್ ಎಂಬ ಕೃತಿಯನ್ನು ಸಾಹಿತ್ಯಪ್ರವೇಶ (1965) ಎಂಬ ಹೆಸರಿನಿಂದಲೂ ಅನುವಾದ ಮಾಡಿಕೊಟ್ಟಿದ್ದಾರೆ. ಇವರ ಪಾಶ್ಚಾತ್ಯ ಕಾವ್ಯಚಿಂತನ (1970) ಎಂಬ ಗ್ರಂಥದಲ್ಲಿ ಲೀ ಹಂಟ್, ಎಮರ್ಸನ್, ಜಾನ್ ಸ್ಟುಯರ್ಟ್ ಮಿಲ್, ಜೇಮ್ಸ್, ರಸೆಲ್ ಲೊವೆಲ್, ಮ್ಯಾಥ್ಯೂ ಆರ್ನಾಲ್ಡ್, ಜಾರ್ಜ್ ಸಂತಾಯನ ಮತ್ತು ಎ.ಸಿ.ಬ್ರಾಡ್ಲೆ ಅವರ ಕಾವ್ಯಚಿಂತನೆಗಳ ಅನುವಾದ ಇದೆ. ಈ ಅನುವಾದಗಳ ಸಾಲಿನಲ್ಲೇ ಹೆಸರಿಸಬೇಕಾದ ಇತರ ಕೃತಿಗಳು ಇನ್ನೂ ಕೆಲವಿವೆ. ಜಿ.ಗುಂಡಣ್ಣನವರು ವರ್ಡ್ಸ್‌ವರ್ತ್ ಕವಿಯ 'ಲಿರಿಕಲ್ ಬ್ಯಾಲೆಡ್ಸ್' ಮುನ್ನುಡಿಯನ್ನು ಕಾವ್ಯ ಮತ್ತು ಶಬ್ದದ ರೀತಿ (1961) ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಜಿ.ಗುಂಡಣ್ಣನವರು ಮತ್ತು ಸಿ.ಮಹಾದೇವಪ್ಪನವರು ಷೆಲ್ಲಿಯ ಡಿಫೆನ್ಸ್ ಆಫ್ ಪೊಯೆಟ್ರಿಯನ್ನು ಕಾವ್ಯ ಸಮರ್ಥನೆ (1956) ಎಂಬ ಹೆಸರಿನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಅನುವಾದ ಮಾಡಿದ್ದಾರೆ (ಈ ಕೃತಿಯ ಸರಳಾನುವಾದವನ್ನು ಬಹಳ ಹಿಂದೆಯೇ 1930ರ ಸುಮಾರಿನಲ್ಲಿ ಕುವೆಂಪು ಅವರು ಮಾಡಿದ್ದರು). ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಷೋಪೆನ್ ಹೋವರನ ನಾಲ್ಕು ಸಾಹಿತ್ಯ ಪ್ರಬಂಧಗಳ ಅನುವಾದಗಳನ್ನು ಸಾಹಿತ್ಯದ ಜೀವಾಳ ಎಂಬ ಹೆಸರಿನಲ್ಲಿ ಪ್ರಕಟಿಸಿದರು (1942). ಎಸ್.ಬ್ರಾಡ್‌ಬ್ರೂಕನ ಟಿ.ಎಸ್.ಎಲಿಯಟ್ ಎಂಬ ಗ್ರಂಥವನ್ನು ಬಿ.ಎಚ್.ಶ್ರೀಧರ ಅವರು ಅನುವಾದ ಮಾಡಿದ್ದಾರೆ.



ರಂ.ಶ್ರೀ. ಮುಗಳಿ

ವಿಮರ್ಶೆಯನ್ನು ಬೆಳೆಸುವುದರಲ್ಲಿ ನೆರವಾದ ಕೆಲವು ಡಾಕ್ಟೊರೇಟ್ ಪ್ರಬಂಧಗಳನ್ನು ಹೆಸರಿಸಬಹುದು. ಪ್ರಭುಶಂಕರರ ಕನ್ನಡದಲ್ಲಿ ಭಾವಗೀತೆ (1966), ಜಿ.ಎಸ್.ಶಿವರುದ್ರಪ್ಪನವರ ಸೌಂದರ್ಯ ಸಮೀಕ್ಷೆ (1965), ಎಚ್.ತಿಪ್ಪೇರುದ್ರಸ್ವಾಮಿಯವರ ಶರಣರ ಅನುಭಾವ ಸಾಹಿತ್ಯ (1963) ಇಂಥವು. ಪದವಿಗಾಗಿ ಬರೆದ ಮಹಾ ಪ್ರಬಂಧಗಳಲ್ಲಿ ತ.ಸು.ಶಾಮರಾಯರ ಕನ್ನಡನಾಟಕ (1961) ಒಂದು ಗಮನಾರ್ಹ ಕೃತಿ.

ಇದೇ ಗುಂಪಿನಲ್ಲಿ ಎದ್ದುನಿಲ್ಲುವ ಒಂದು ಉತ್ತಮ ಕೃತಿ ಎಸ್.ಅನಂತನಾರಾಯಣ ಅವರ ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ (1962). ಕನ್ನಡದ ವಿವಿಧ ಕಾವ್ಯಪ್ರಕಾರಗಳ ಮೇಲೆ ಇಂಗ್ಲಿಷ್ ಕಾವ್ಯ ಬೀರಿರುವ ಪ್ರಭಾವವನ್ನು ಅನಂತನಾರಾಯಣ ಅವರು ಅಭಿನಂದನೀಯವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಅವರದ್ದೇ ಕಾರಂತರ ಕಾದಂಬರಿಗಳು (1948) ಮತ್ತು ಪ್ರಸಿದ್ಧ ವಿದ್ವಾಂಸರಾದ ಎಲ್.ಎಸ್.ಶೇಷಗಿರಿರಾಯರ ಕಾದಂಬರಿ – ಸಾಮಾನ್ಯ ಮನುಷ್ಯ (1952)– ಇವು ಒಂದು ಸಾಹಿತ್ಯ ರೂಪದ ಅಭ್ಯಾಸದ ದಾರಿಯನ್ನು ತೆರೆದ ಕೃತಿಗಳು.

ಹೊರಭಾಷೆಯ ಸಾಹಿತ್ಯಗಳ ವಿಮರ್ಶೆಗೆ ಸಂಬಂಧಿಸಿದಂತೆ ಅಭಿಮಾನ ಪಡಬಹುದಾದ ಎರಡು ಕೃತಿಗಳನ್ನು ಹೆಸರಿಸಬೇಕು. ಒಂದು ಎ.ಆರ್.ಕೃಷ್ಣಶಾಸ್ತ್ರಿಗಳ ಬಂಕಿಮಚಂದ್ರ (1960), ಬಂಗಾಲಿ ಭಾಷೆಯಲ್ಲೂ ಆ ಪ್ರಸಿದ್ಧ ಕಾದಂಬರಿಕಾರರನ್ನು ಕುರಿತು ಇಂಥ ವಿಸ್ತಾರವಾದ ಸಮರ್ಥ ವಿಮರ್ಶಾ ಗ್ರಂಥ ಪ್ರಕಟವಾಗಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ. ಎರಡನೆಯದು ಎ.ಎನ್.ಮೂರ್ತಿರಾಯರ ಷೇಕ್ಸ್‌ಪಿಯರ್ (ಅಪೂರ್ಣ), ಅಪೂರ್ವವಾದ ವಿದ್ವತ್ತು, ಅಭಿನಂದನೀಯವಾದ ಸಹೃದಯತೆಗಳು ಎಂಥ ತೂಕವಾದ ವಿಮರ್ಶೆಯನ್ನು ನೀಡಬಲ್ಲುವು ಎಂಬುದಕ್ಕೆ ಮೂರ್ತಿರಾಯರ ಕೃತಿ ನಿದರ್ಶನ. ವಿಮರ್ಶೆಯಲ್ಲಿ ಒಂದು ಮೇರುಕೃತಿ ಎಸ್.ವಿ.ರಂಗಣ್ಣನವರ ಪಾಶ್ಚಾತ್ಯಗಂಭೀರ ನಾಟಕಗಳು (1970). ಗಂಭೀರನಾಟಕಗಳ ಬೆಳವಣಿಗೆಯನ್ನು ಗ್ರೀಕ್ ಯುಗದಿಂದ ಇಂದಿನವರೆಗೆ ಸಾವಿರದ ಇನ್ನೂರು ಪುಟಗಳ ಹರವಿನಲ್ಲಿ ಚಿತ್ರಿಸಿರುವ ರಂಗಣ್ಣನವರು ತಮ್ಮ ಅರ್ಧಶತಮಾನದ ಅಧ್ಯಯನದ ಫಲವನ್ನೂ ಪರಿಣತ ವಿಮರ್ಶಾದೃಷ್ಟಿಯ ಸಾಧನೆಯನ್ನೂ ಈ ಗ್ರಂಥದಲ್ಲಿ ಏಕತ್ರ ಸಂಗಮಗೊಳಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ವಿಮರ್ಶೆಯ ಇತಿಹಾಸದಲ್ಲಿ ಕೀರ್ತಿನಾಥ ಕುರ್ತುಕೋಟಿ ಯವರಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಸಾಹಿತ್ಯದ ಮುಖ್ಯ ಪ್ರಕಾರಗಳನ್ನೆಲ್ಲ ಪರಿಶೀಲಿಸಿ ವಿಮರ್ಶಿಸ ಹೊರಟಿರುವ ಇವರ ಧೈರ್ಯ ಅಪಾರವಾದದ್ದು. ಇವರ ಅಧ್ಯಯನದ ವ್ಯಾಪ್ತಿ ಹಿರಿದು. ಇವರು ಹೇಳುವ ಎಲ್ಲ ಮಾತನ್ನೂ ಎಲ್ಲರೂ ಒಪ್ಪುವುದು ಸಾಧ್ಯವಿಲ್ಲ ಎಂಬುದು ಇವರ ವಿಮರ್ಶೆಗೆ ಮಾತ್ರವಲ್ಲದೆ ಎಲ್ಲ ವಿಮರ್ಶೆಗೂ ಅನ್ವಯಿಸುವಂಥ ಮಾತು. ಇವರ ಯುಗಧರ್ಮ ಹಾಗೂ ಸಾಹಿತ್ಯ (1963) ದರ್ಶನವಿಚಾರಕ್ಕೆ, ವಿಮರ್ಶೆಗೆ ವಿಶೇಷ ಆಸ್ವದ ನೀಡಿರುವ ವಿಮರ್ಶಾಕೃತಿ.

ನವ್ಯ ಸಾಹಿತ್ಯ ಆರಂಭವಾದ ಮೇಲೆ ಹೊಸ ವಿಮರ್ಶೆಯ ರೀತಿಯೂ ಕನ್ನಡಕ್ಕೆ ಬಂತು. ಎಲ್.ಎಸ್.ಶೇಷಗಿರಿರಾಯರು ಹೇಳುತ್ತಾರೆ: ಈ ಸಾಹಿತ್ಯ ವಿಮರ್ಶೆಯಲ್ಲಿ ಕೃತಿಯೇ ಸರ್ವಸ್ವವಾದ್ದರಿಂದ ಕೃತಿಕಾರ ಏನನ್ನೇ ಹೇಳಬೇಕಾದರೂ ಭಾಷೆಯ ಮೂಲಕ ಮಾತ್ರ ಹೇಳಬಲ್ಲ ಎಂಬ ನಂಬಿಕೆ ಇರುವುದರಿಂದ ಕೃತಿಯ ವಿವರವಾದ, ಸೂಕ್ಷ್ಮವಾದ ಅಧ್ಯಯನ ಮುಖ್ಯವಾಯಿತು. ಒಂದು ಕವನ, ನಾಟಕ ಅಥವಾ ಕಾದಂಬರಿ ಸಾವಯವ ಶಿಲ್ಪ. ಹೇಗೆ ಮನುಷ್ಯನ ಅಂಗಾಂಗಗಳೆಲ್ಲ ಸೇರಿ ದೇಹವಾಗಿದೆಯೋ ಹಾಗೆ ವಸ್ತು, ಪಾತ್ರ, ಆವರಣ, ತಂತ್ರ ಎಲ್ಲ ಸೇರಿ ಕೃತಿ. ಮೊದಲು ಭಾವ, ಅನಂತರ ಭಾಷೆ, ತಂತ್ರಗಳ ಆಯ್ಕೆ ಎನ್ನುವುದಿಲ್ಲ. ಇದನ್ನು ಸದಾ ಲಕ್ಷ್ಯದಲ್ಲಿಟ್ಟುಕೊಂಡೇ ವಿಮರ್ಶಕ ಕೃತಿಯ ಅರ್ಥವನ್ನು ಗ್ರಹಿಸಲು ಪ್ರಯತ್ನಿಸುತ್ತಾನೆ. ನವ್ಯ ವಿಮರ್ಶೆಯ ಕೃತಿ ವಿಶ್ಲೇಷಣಾ ರೀತಿಯನ್ನು ಅದರ ವೈವಿಧ್ಯವನ್ನು ಜಿ.ಎಸ್.ಶಿವರುದ್ರಪ್ಪನವರೂ ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟರೂ ಸಂಪಾದಿಸಿರುವ ಪ್ರಾಯೋಗಿಕ ವಿಮರ್ಶೆ ಎಂಬ ಗ್ರಂಥದಿಂದ ಪರಿಚಯ ಮಾಡಿಕೊಳ್ಳಬಹುದು.

ಎಂ.ಗೋಪಾಲಕೃಷ್ಣ ಅಡಿಗರ ನಡೆದು ಬಂದ ದಾರಿ ಸಂಗ್ರಹಕ್ಕೆ ಬರೆದ ಮುನ್ನುಡಿಯಿಂದ ಪ್ರಾರಂಭವಾದ ನವ್ಯವಿಮರ್ಶೆ ಸಾಕ್ಷಿ, ಸಂಕ್ರಮಣ ಪತ್ರಿಕೆಗಳ ನೆರವಿನಿಂದಲೂ ಅನೇಕ ವಿಮರ್ಶಕರಿಂದಲೂ ಬೆಳೆಯುತ್ತ ಬಂದಿದೆ. ಯು.ಆರ್.ಅನಂತಮೂರ್ತಿ, ಎಂ.ಜಿ.ಕೃಷ್ಣಮೂರ್ತಿ, ಪಿ.ಲಂಕೇಶ್, ಗಿರಡ್ಡಿ ಗೋವಿಂದರಾಜ, ಜಿ.ಎಚ್.ನಾಯಕ, ಎಚ್.ಎಂ.ಚನ್ನಯ್ಯ, ಬರಗೂರು ರಾಮಚಂದ್ರಪ್ಪ, ರಾಮಚಂದ್ರದೇವ, ಮಾಧವ ಕುಲಕರ್ಣಿ – ಇವರೆಲ್ಲ ಈ ಕ್ಷೇತ್ರದಲ್ಲಿ ಕೃಷಿ ಮಾಡಿದ ಅನೇಕ ವಿಮರ್ಶಕರಲ್ಲಿ ಕೆಲವರು. ಯು.ಆರ್.ಅನಂತಮೂರ್ತಿಯವರ ಪ್ರಜ್ಞೆ ಮತ್ತು ಪರಿಸರ (1971), ಎಂ.ಜಿ.ಕೃಷ್ಣಮೂರ್ತಿಯವರ ಆಧುನಿಕ ಭಾರತೀಯ ಸಾಹಿತ್ಯ (1970), ಜಿ.ಎಚ್.ನಾಯಕರ ಸಮಕಾಲೀನ (1974), ಎಚ್.ಎಂ.ಚನ್ನಯ್ಯನವರ ಜಿಜ್ಞಾಸೆ (1975), ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಹೊರಳು ದಾರಿಯಲ್ಲಿ ಕಾವ್ಯ, ಜಿ.ಎನ್.ರಂಗನಾಥರಾವ್ ಅವರ ಹೊಸ ತಿರುವು, ಗಿರಡ್ಡಿ ಗೋವಿಂದರಾಜರ ಸಣ್ಣಕತೆಯ ಹೊಸ ಒಲವುಗಳು– ಇವೆಲ್ಲ ಗಮನಿಸಬೇಕಾದ ವಿಮರ್ಶೆಯ ಕೃತಿಗಳು. ಗೋಪಾಲಕೃಷ್ಣ ಅಡಿಗರನ್ನು ಕುರಿತು ಬರೆದ ಸುಮತೀಂದ್ರ ನಾಡಿಗರ ಗೋಪಾಲಕೃಷ್ಣ ಅಡಿಗ ಒಂದು ಕಾವ್ಯಾಭ್ಯಾಸ ಅಡಿಗರ ಕಾವ್ಯಧೋರಣೆಯನ್ನು ಅರ್ಥಮಾಡಿಕೊಳ್ಳಲು ಉತ್ತಮ ಪ್ರವೇಶಿಕೆಯಾಗಿದೆ. ವಿಮರ್ಶಕರಾಗಿ ಪ್ರಖ್ಯಾತರಾಗಿರುವ ಸಿ.ಪಿ.ಕೃಷ್ಣಕುಮಾರ್ ಅವರು ಅನೇಕ ವಿಮರ್ಶಾ ಸಂಕಲನಗಳನ್ನು ಹೊರತಂದಿದ್ದಾರೆ. ಕನ್ನಡ ಚತುರ್ಮುಖ, ಪರಿಭಾವನೆ, ಆಲೋಚನ ಮುಂತಾದ ಕೃತಿಗಳಲ್ಲಿ ಇವರು ಉತ್ತಮ ವರ್ಣನಾತ್ಮಕ ವಿಮರ್ಶೆಯನ್ನು ನೀಡಿದ್ದಾರೆ.

ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳು ವಿಸ್ತಾರವಾಗಿ ಪ್ರಕಟಿಸುತ್ತಿರುವ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಕಟಿತ ಸಂಪುಟಗಳನ್ನು ನೋಡಿದರೆ ಕನ್ನಡದ ವಿಮರ್ಶೆ ವಿಪುಲವಾಗಿ ಬೆಳೆಯುವ ಶುಭಲಕ್ಷಣಗಳು ಕಾಣುತ್ತಿವೆ.

ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿರುವ ಗೃಹಸರಸ್ವತೀ ಗ್ರಂಥಮಾಲೆಯಲ್ಲಿ ಪ್ರಭುಶಂಕರರ ಖಲೀಲ್ ಗಿಬ್ರಾನ್ (1970), ಎಚ್.ಕೆ.ರಾಮಚಂದ್ರ ಮೂರ್ತಿಯವರ ಮೋಲಿಯರ್ (1973), ಎಲ್.ಎಸ್.ಶೇಷಗಿರಿರಾಯರ ಆಲಿವರ್ ಗೋಲ್ಡ್ ಸ್ಮಿತ್ (1972)– ಇವು ಗಮನಿಸಬೇಕಾದ ಕೃತಿಗಳು. ಕೊನೆಯ ಎರಡರಲ್ಲಿ ಆಯಾ ಕವಿಗಳ ಕೃತಿಗಳ ಸೊಗಸಾದ ವಿಮರ್ಶೆಯಿದೆ.

ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಅವುಗಳಲ್ಲಿ ಓದಿದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿವೆ. ಇವು ವಿಮರ್ಶೆಗೆ ಶ್ರೇಷ್ಠವಾದ ಕಾಣಿಕೆಗಳು. ಇವುಗಳಲ್ಲಿ ಕೆಲವು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಸುವರ್ಣ ಸಂಚಯ (1967), ಚಿನ್ನದ ಗರಿ (1974), ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ,ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಕನ್ನಡ ವಿಮರ್ಶೆಯ ನೆಲೆ ಬೆಲೆ, ಪಂಪ ಒಂದು ಅಧ್ಯಯನ; ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ದಾಸ ಸಾಹಿತ್ಯ, ಕನ್ನಡ ರಂಗಭೂಮಿ ಅಂದು –ಇಂದು – ಇವೆಲ್ಲ ಮೌಲಿಕ ವಿಮರ್ಶೆಗಳನ್ನು ಒಳಗೊಂಡಿವೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಕೂಡ ಒಂದು ಉತ್ತಮ ಸಂಕಲನ. (ಪಿ.ಎಸ್.)

ಕರ್ನಾಟಕದಲ್ಲಿ ಕಳೆದ ನಾಲ್ಕು ದಶಕಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾದವು. ಕನ್ನಡ ಸಾಹಿತ್ಯಕ್ಕೆ ಇವುಗಳ ಪ್ರೇರಣೆಯೂ ಆಯಿತು. ನವೋದಯ ಸಾಹಿತ್ಯ (1920–45) ಚಳವಳಿಯಲ್ಲಿ ಪಾಶ್ಚಾತ್ಯ ಕಾವ್ಯದ ಅನುಸರಣೆಯೂ ಸೇರಿದಂತೆ ನಮ್ಮ ಸಂದರ್ಭದ ಆಸೆ ಆಕಾಂಕ್ಷೆಗಳು ಅಭಿವ್ಯಕ್ತಗೊಳ್ಳಲು ಕಾರಣವಾಯಿತು. ಅನಂತರ ವ್ಯಕ್ತಿ ಪ್ರಜ್ಞೆಯ ಕೇಂದ್ರ ನೆಲೆಯಾದ ನವ್ಯ ಸಾಹಿತ್ಯ (1950 ರಿಂದ) ರೂಪುಗೊಂಡರೆ ಪ್ರಗತಿಶೀಲ ಸಾಹಿತ್ಯಕ್ಕೆ (1945–50) ಮಾರ್ಕ್ಸ್‌ವಾದದ ನೆಲೆಗಟ್ಟು ಕಾರಣವಾಯಿತು. ಆಮೇಲೆ ಸ್ಥಗಿತ ಮೌಲ್ಯಗಳನ್ನು ಪ್ರಶ್ನಿಸಲೆಂದು ಶೂದ್ರ ಬರೆಹಗಾರರ ಒಕ್ಕೂಟ ಹುಟ್ಟಿಕೊಂಡಿತು. ದಲಿತರ ಮೇಲಿನ ಆಕ್ರಮಣವನ್ನು, ಶೋಷಣೆಯನ್ನು ತಪ್ಪಿಸಿ ಸಮಾನತೆ ಹಾಗೂ ಸ್ವಾಭಿಮಾನವನ್ನುಂಟುಮಾಡುವುದಕ್ಕಾಗಿ ದಲಿತ ಬಂಡಾಯ ಚಳವಳಿ (1979) ಹುಟ್ಟಿಕೊಂಡದ್ದಲ್ಲದೆ ಇವುಗಳ ಪ್ರತ್ಯುತ್ಪನ್ನವಾಗಿ ದಲಿತ ಬಂಡಾಯ ಸಾಹಿತ್ಯವು ರಚನೆಗೊಂಡಿತು. ಈ ಬಗೆಯ ಸಾಹಿತ್ಯದಲ್ಲಿ ಅಸಮಾನತೆಯ ನಿವಾರಣೆಗಾಗಿ, ತಮ್ಮ ಹಕ್ಕುಗಳ ಈಡೇರಿಕೆಗಾಗಿ ಜನಪರವಾದ ದನಿ ಸ್ಫೋಟವಾಯಿತು. ಸಾಹಿತ್ಯ ಕೃತಿಯನ್ನು ಕೇವಲ ಸಾಹಿತ್ಯ ಕೃತಿಯನ್ನಾಗಿ ನೋಡದೆ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡುವ, ಮೌಲ್ಯಮಾಪನ ಮಾಡುವ ಪರಿಪಾಠ ಬೆಳೆದದ್ದರಿಂದ ಅದಕ್ಕೆ ಸಂಬಂಧಿಸಿದ ವಿಮರ್ಶನ ಮಾದರಿಗಳು, ಕ್ರಮಗಳು ರೂಢಿಗೆ ಬಂದವು. ಹಾಗಾಗಿ ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ವ್ಯಾಖ್ಯಾನಿಸುವ, ವಿಶ್ಲೇಷಿಸುವ ಕೆಲಸದಲ್ಲಿ ವಿಮರ್ಶಕರು ಮುಂದಾದರು. ವರ್ತಮಾನದಲ್ಲಿ ಇದ್ದು ಭೂತವನ್ನು ಅವಲೋಕಿಸುವ ಕೆಲಸದಲ್ಲಿ ತೊಡಗಿದರು. ಅಂದರೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜನಪರ ಆಶಯಗಳನ್ನು, ದುಡಿಯುವ ವರ್ಗದ ದನಿಗಳನ್ನು, ದಲಿತ ಬಂಡಾಯದ ಆಶಯಗಳನ್ನು, ಅನ್ವೇಷಿಸುವ ಕೆಲಸದಲ್ಲಿ ವಿಮರ್ಶನ ಕಾರ್ಯ ಜರುಗಿತು. ಹೀಗಾಗಿ ನವೋದಯ ಮತ್ತು ನವ್ಯ ವಿಮರ್ಶೆಗಿಂತ ಭಿನ್ನವಾದ ಶೈಲಿ ವ್ಯಕ್ತವಾಯಿತು. ಕನ್ನಡ ಸಾಹಿತ್ಯ ಪರಂಪರೆಯ ಜೊತೆ ಜೊತೆಯಲ್ಲಿಯೇ ವಿಮರ್ಶೆಯೂ ಬೆಳೆಯುತ್ತಾ ಬಂದಿರುವಂತೆ, ಕಾಲಕಾಲಕ್ಕೂ ಅದರ ಪರಿಭಾಷೆಯಲ್ಲೂ ಅಲ್ಪಸ್ವಲ್ಪ ಬದಲಾವಣೆಗಳೂ ಉಂಟಾಗಿರುವುದನ್ನು ಗಮನಿಸಬಹುದು. ಬರಗೂರು ರಾಮಚಂದ್ರಪ್ಪನವರು ಹೇಳುವಂತೆ "ಸಾಹಿತ್ಯ ಮತ್ತು ವಿಮರ್ಶೆಗಳ ಮುಖಾ ಮುಖಿ ಒಂದು ಉತ್ತಮ ಅಂತರ್‌ಕ್ರಿಯೆಗೆ ಕಾರಣವಾದಾಗ ಆರೋಗ್ಯಕರ ಸಾಂಸ್ಕೃತಿಕ ಪರಿಸರದ ನಿರ್ಮಾಣವಾಗುತ್ತದೆ." ದಲಿತ ಬಂಡಾಯ ಸಂದರ್ಭದ ವಿಮರ್ಶೆ ಈ ಬಗೆಯದಾಗಿದೆ.

ಗಾಂಧಿ, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಸಿದ್ಧಾಂತಗಳು ಸಾಹಿತ್ಯ ವಿಮರ್ಶೆಯಲ್ಲಿ ಸಂವಾದದಲ್ಲಿ ಪ್ರಮುಖವಾದವು. ದಲಿತ ಬಂಡಾಯ ಸಾಹಿತ್ಯದ ಪ್ರಭಾವದಿಂದಾಗಿ ಈ ಬಗೆಯ ಸಂವೇದನೆಗಳ ಅಧ್ಯಯನಕ್ಕೆ ಕಾರಣವಾಯಿತು. ಈ ಸಂದರ್ಭದಲ್ಲಿ ಕನ್ನಡ ವಿಮರ್ಶೆ ಸಾಹಿತ್ಯವನ್ನು ರಾಜಕೀಯ ಸಿದ್ಧಾಂತ, ವರ್ಗ ಸಂಘರ್ಷಗಳ ಹಿನ್ನೆಲೆಯಲ್ಲಿ ಮೌಲ್ಯಮಾಪನ ಮಾಡತೊಡಗಿತು. ಜನಪರ ದನಿ ಪರಿಶೀಲನೆಗೆ ಬಳಸುವ ಸಾಮಾಜಿಕ ಮಾನದಂಡ, ಎಡಪಂಥೀಯ ಸೈದ್ಧಾಂತಿಕತೆ, ನಿರ್ದಿಷ್ಟವಾದ ಪರಿಭಾಷೆ ಇವೆಲ್ಲ ದಲಿತ ಬಂಡಾಯ ಸಾಹಿತ್ಯ ವಿಮರ್ಶೆಯ ಅಂತಃಸತ್ವಗಳಾದುವು. ಹಾಗಾಗಿ ವಿಮರ್ಶೆಯಲ್ಲಿ ಸಾಮಾಜಿಕ ಸಂದರ್ಭ ಮುಖ್ಯವಾಯಿತು. ಕನ್ನಡ ವಿಮರ್ಶೆ ಪರಂಪರೆಯೊಂದಿಗೆ ಅನುಸಂಧಾನದಲ್ಲಿ ತೊಡಗುತ್ತಲೇ ಬಂತು. ಈ ನಡುವೆ ವಿಮರ್ಶೆಯಲ್ಲಿ ಸಾಂಸ್ಕೃತಿಕ ಜವಾಬ್ದಾರಿ ಹೆಚ್ಚಿತು. ಅನ್ಯಜ್ಞಾನ ಶಿಸ್ತುಗಳ ಅಧ್ಯಯನ, ಪೂರಕ ಸಾಹಿತ್ಯದ ಬಗೆಗಿನ ಕಾಳಜಿಗಳು – ಇವು ನವ್ಯೋತ್ತರ ವಿಮರ್ಶೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಸೂಕ್ಷ್ಮಗೊಂಡ ಈ ವಿಮರ್ಶೆ ಪ್ರಬುದ್ಧತೆಯತ್ತಲೂ ಸಾಗಿತು. ಅಲ್ಲದೆ ಪಾಶ್ಚಾತ್ಯ ವಿಮರ್ಶನ ಮಾದರಿಗಳ ಬಗ್ಗೆ ತಾತ್ಸಾರ ಹುಟ್ಟಿಸುತ್ತಲೇ ಕನ್ನಡ ಸಾಹಿತ್ಯ ಪರಂಪರೆ ಸಂಸ್ಕೃತಿಗಳಲ್ಲಿ ಅಂತರ್ಗಾಮಿಯಾಗಿರುವ ಸಾಂಸ್ಕೃತಿಕ ವಿನ್ಯಾಸಗಳನ್ನು, ದೇಸೀ ನೆಲೆಗಳನ್ನು ಅರಸತೊಡಗಿತು. ನವ್ಯವಿಮರ್ಶೆ ಓದುಗ ಸಂವೇದನೆಯನ್ನು ಕಡೆಗಣಿಸಿದರೂ ಬಂಡಾಯ ಸಾಹಿತ್ಯ ಆ ಕೃತಕ ಕಂದಕವನ್ನು ಮುಚ್ಚುವ ಕೆಲಸ ಮಾಡಿತು.

ಆದರೆ ನವ್ಯ ವಿಮರ್ಶೆಯಲ್ಲಿ ಸಾಂಸ್ಕೃತಿಕ ಕಾಳಜಿಗಳಿಲ್ಲದೆ ಶುಷ್ಕವಾಗತೊಡಗಿದಾಗಲೂ ಅನಂತಮೂರ್ತಿ, ಚನ್ನಯ್ಯನಂಥವರು ಸಮಾಜವಾದಿ ಹಿನ್ನೆಲೆಯಲ್ಲಿ ಬರೆಯತೊಡಗಿದ್ದರು. ನರಹಳ್ಳಿ ಬಾಲಸುಬ್ರಹ್ಮಣ್ಯ, ಎಚ್.ಎಸ್. ರಾಘವೇಂದ್ರರಾವ್, ಜಿ.ಎಚ್. ನಾಯಕ, ಕೆ.ವಿ.ತಿರುಮಲೇಶ ಮೊದಲಾದವರಂತೂ ನವ್ಯೋತ್ತರ ಸಾಹಿತ್ಯದ ಹೊಸಸಂವೇದನೆಗಳನ್ನು ಕುತೂಹಲದಿಂದ ಗಮನಿಸಿ ಪ್ರತಿಕ್ರಿಯಿಸತೊಡಗಿದ್ದು ಗಮನಾರ್ಹ ಸಂಗತಿ.

ಇನ್ನೂ ಕೆಲ ವಿಮರ್ಶಕರು ದಲಿತ ಬಂಡಾಯ ಕೃತಿಗಳನ್ನು ನವ್ಯ ವಿಮರ್ಶೆಯ ಮಾನದಂಡಗಳಿಂದಲೇ ಅಳೆಯತೊಡಗಿದ್ದರು. ಇದರ ಪರಿಣಾಮವಾಗಿ ಕೃತಿಯ ಮೌಲ್ಯಮಾಪನಕ್ಕಿಂತ ಅದನ್ನು ಸಾರಾಸಗಟಾಗಿ ತಳ್ಳಿಹಾಕುವ ನಿಲುವು ಬಹಿರಂಗವಾಯಿತು. ಆಕ್ರೋಶ, ಅಬ್ಬರ, ಸರಳತೆ, ಘೋಷಿತ ಬಂಡಾಯ – ಇವೆಲ್ಲಾ ಸಾಹಿತ್ಯಕ ಮೌಲ್ಯಗಳೇ ಅಲ್ಲ ಎಂಬ ನಿರ್ಧಾರಕ್ಕೆ ಬಂದದ್ದುಂಟು. ಅನಂತರ ಬಂದ ಬಂಡಾಯ ಸಾಹಿತ್ಯ ವಿಮರ್ಶಕರು ಇವುಗಳನ್ನೇ ನಿಜವಾದ ಸಾಹಿತ್ಯಕ ಮೌಲ್ಯಗಳೆಂದು ಪರಿಗಣಿಸಿ ಕೃತಿ ವಿಮರ್ಶೆಗೆ ತೊಡಗಿದರು. ಯಾರು ಬರೆದದ್ದು ದಲಿತ ಸಾಹಿತ್ಯ ಎಂಬ ಪ್ರಶ್ನೆ ಹುಟ್ಟಿತು. ದಲಿತರು ಬರೆದದ್ದು ದಲಿತಸಾಹಿತ್ಯವೆಂದೂ ಅದು ಮಹತ್ವದ್ದೇ ಆಗಿರುತ್ತದೆಂದೂ ಭಾವಿಸಲಾಯಿತು. ದಲಿತ ವಿಮರ್ಶೆ ಎಂಬುದು ಪ್ರತ್ಯೇಕವಾಗಿ ಬೆಳೆದಿಲ್ಲವಾದರೂ ಪಿ.ಕೃಷ್ಣಪ್ಪ, ದೇವಯ್ಯಹರವೆ ಮುಂತಾದವರು ಆರಂಭದ ದಿನಗಳಲ್ಲಿ ವಿಮರ್ಶನ ವಲಯದಲ್ಲಿ ಭರವಸೆ ಮೂಡಿಸಿದ್ದರು. ಅನಂತರ ಮ.ನ. ಜವರಯ್ಯ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ, ಮೊಗಳ್ಳಿಗಣೇಶ ಮುಂತಾದವರ ಬರೆಹಗಳು ಗಮನಾರ್ಹವೆನಿಸಿದುವು.

ಪ್ರಜಾವಾಣಿಯ ಸಾಹಿತ್ಯ ಸಂವಾದದಲ್ಲಿ ಪ್ರಕಟವಾದ ವಿ.ಮುನಿವೆಂಕಟಪ್ಪನವರ 'ದಲಿತ ಸಾಹಿತ್ಯ ಎತ್ತ ಸಾಗಿದೆ' ಮುಳ್ಳೂರು ನಾಗರಾಜರ 'ದಲಿತ ಸಾಹಿತಿಗಳ ಏಕಾಂತ ದಂತ ಗೋಪುರ' ಮುಂತಾದ ಬರೆಹಗಳು ಏಕಮುಖವಾದ ವಿಮರ್ಶೆಯ ಬಗ್ಗೆ ಕಿಡಿಕಾರಿದವು. ಅದಕ್ಕಾಗಿ ಸುಬ್ಬು ಹೊಲೆಯಾರ್ 'ದಲಿತ ಸಾಹಿತಿಗಳಿಗೆ ಅಸಹಾಯಕತೆ ಬೇಡ' ಎಂದು ಸಮಾಧಾನಪಡಿಸಿದ್ದೂ ಉಂಟು. ಹೀಗೆ ಕೆಲ ದಲಿತ ಸಾಹಿತಿಗಳು ವೈಯಕ್ತಿಕ ಕೊರಗನ್ನು ತೋಡಿಕೊಳ್ಳುತ್ತಲೇ ತಮ್ಮ ಹಾಗೂ ತಮ್ಮಂಥವರ ಕೃತಿಗಳಿಗೆ ವಿಮರ್ಶನ ಕ್ಷೇತ್ರದಲ್ಲಿ ಆಗುತ್ತಿರುವ ತಾರತಮ್ಯಗಳನ್ನು ಬಹಿರಂಗಗೊಳಿಸಿದರು. ಮುಸುಕಿನ ಗುದ್ದಾಟದಂತೆ ಸಂವಾದದಲ್ಲಿ ತೊಡಗಿದ್ದವರ ಚರ್ಚೆಯೂ ಒಂದು ರೀತಿಯಲ್ಲಿ ದಲಿತ ಸಾಹಿತ್ಯ ವಿಮರ್ಶೆಯ ಏರುಪೇರಿನ ಮೌಲ್ಯಮಾಪನವೂ ಆಗಿತ್ತು. ಇಂಥ ವಿಮರ್ಶೆಗೆ ಮುಖ್ಯಕಾರಣ ವಿಮರ್ಶಾವಲಯದಲ್ಲಿ ಬರೆಯುವವರೆಲ್ಲಾ ಶೈಕ್ಷಣಿಕ ವಲಯದಲ್ಲಿರುವ ದಲಿತ ಲೇಖಕರನ್ನು ಅವರ ಕೃತಿಗಳನ್ನು ವೈಭವೀಕರಿಸಿದ್ದು ಮತ್ತು ನಾನ್ ಅಕಾಡೆಮಿಕ್ ವಲಯದ ದಲಿತ ಲೇಖಕರ ಬಗ್ಗೆ ಅನಾದರ ತೋರಿಸಿದ್ದು. ಅಕಸ್ಮಾತ್ ಬರೆದರೂ 'ಈ ಸಾಲು ಸಪ್ಪೆಯಾಗಿದೆ ಈ ಪಂಕ್ತಿ ಖಾರವಾಗಿದೆ' ಎಂದು ಊಟದ ಪರಿಭಾಷೆಯಲ್ಲಿ ದಲಿತ ಸಾಹಿತ್ಯದ ಪರಿಶೀಲನಾಕಾರ್ಯ ನಡೆದುದ್ದುಂಟು. ಇದನ್ನೆಲ್ಲಾ ಗಮನಿಸಿದವರಿಗೆ ವಿಮರ್ಶೆಯಲ್ಲಿ ಸಾಮಾಜಿಕ ಪರಿಭಾಷೆ ರೂಪುಗೊಳ್ಳುವವರೆಗೆ ದಲಿತ ಸಾಹಿತ್ಯಕ್ಕೆ ನ್ಯಾಯದೊರಕುವುದಿಲ್ಲ ಎನಿಸಿತು. ಪಾಶ್ಚಾತ್ಯ ಸಾಹಿತ್ಯದ ಮಾನದಂಡಗಳನ್ನಿಟ್ಟುಕೊಂಡು ವಿಮರ್ಶಿಸುವದರಿಂದಾಗಲೀ, ಗತ ಇತಿಹಾಸದ ಅಥವಾ ಪರಂಪರೆಯನ್ನು ತಪ್ಪಾಗಿ ಗ್ರಹಿಸುವುದರಿಂದಾಗಲೀ ಕಾವ್ಯಕ್ಕೆ ರಸವೇ ಪ್ರಧಾನ ಎಂಬುದರಿಂದಾಗಲೀ, ವ್ಯಾಕರಣವೇ ಪ್ರಧಾನ ಎನ್ನುವವರಿಂದಾಗಲೀ ದಲಿತ ಸಾಹಿತ್ಯದ ವಿಮರ್ಶೆ ಸಾಧ್ಯವಾಗದು ಎಂಬುದು ಇದರ ಮೀಮಾಂಸಕರ ವಾದವಾಯಿತು. ದಲಿತ ಪ್ರಜ್ಞೆಯ ಆಂತರ್ಯಕ್ಕೆ ಸ್ಪಂದಿಸಿದವರಿಂದ ಮಾತ್ರ ಇದರ ವಸ್ತುನಿಷ್ಠ ವಿಮರ್ಶೆ ಸಾಧ್ಯ ಎಂಬ ತೀರ್ಮಾನಕ್ಕೆ ಬಂದು ಘೋಷಣಾಮೂಲವಾದ ಕಾವ್ಯವೂ ಶ್ರೇಷ್ಠವೆಂದು ಪ್ರಶಂಸೆ ಮಾಡುತ್ತಾಬಂದದ್ದರಿಂದ ಕಲಾತ್ಮಕವಲ್ಲದ ಕಾವ್ಯಸೃಷ್ಟಿಗೂ ಕಾರಣವಾಗಬೇಕಾಯಿತು.

ವಿಮರ್ಶೆಯ ಹೆಸರಿನಲ್ಲಿ ನಡೆಯುವ ಹಲ್ಲೆಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಬರಗೂರು ರಾಮಚಂದ್ರಪ್ಪನವರು ಬಂಡಾಯ ಸಾಹಿತ್ಯ ವಿಮರ್ಶೆಗೆ ಪ್ರತ್ಯೇಕವಾದ ಮಾನದಂಡಗಳ ಅಗತ್ಯವಿದೆ ಎಂದು ಹೇಳಿ ಬಂಡಾಯ ಸಾಹಿತ್ಯ ಮೀಮಾಂಸೆಯನ್ನು ಪ್ರಕಟಿಸಿದರು. ಅವರೆಗಿನ ವಿಮರ್ಶೆಯ ಪಕ್ಷಪಾತದ ಆರೋಪಕ್ಕೆ ಬದಲಾಗಿ ವಿಮರ್ಶೆಯ ಸ್ವರೂಪದ ವಿಮರ್ಶೆಗೆ ಹೆಚ್ಚು ಕಾಳಜಿ ವಹಿಸಿದರು. ವಿಮರ್ಶಕರಾಗಿ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳಿಗೆ ಹೊಸ ತಿರುವು ನೀಡಿದರು. ಸಾಹಿತ್ಯದಲ್ಲಿ ರಾಜಕೀಯಪ್ರಜ್ಞೆಯ ಅಗತ್ಯವನ್ನು ಪ್ರತಿಪಾದಿಸಿದರು. ಸಾಹಿತ್ಯ ಮತ್ತು ರಾಜಕಾರಣದಲ್ಲಿ ಇಂಥ ಮಹತ್ವದ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು.

2001ರಲ್ಲಿ ಹೊರಬಂದ ಬರಗೂರರ ಆಯ್ದ ವಿಚಾರ ವಿಮರ್ಶಾ ಲೇಖನಗಳ ಸಂಕಲನ 'ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ'ಯಲ್ಲಿ ಸಂಸ್ಕೃತಿಜನ್ಯದ ಹಿಂದಿರುವ ಶ್ರಮ ಹಾಗೂ ಸೃಜನಶೀಲತೆಯಲ್ಲಿ ಕಾರ್ಯವೈಖರಿಯನ್ನು ವಸ್ತುನಿಷ್ಠವಾಗಿ ವಿಮರ್ಶಿಸಲಾಗಿದೆ. ಬಂಡಾಯ ಸಾಹಿತ್ಯವನ್ನು ವಿಮರ್ಶಿಸಬೇಕಾದ ಮಾನದಂಡಗಳ ಚರ್ಚೆ ನಡೆಯುತ್ತಿರುವಾಗಲೇ ಆಯಾ ವರ್ಗದವರಿಂದ ಬಂದಂಥ ಬರೆಹಗಾರರಲ್ಲಿ ಮಾತ್ರ ಅವರವರ ಬದುಕಿನ ವಿವರಗಳಿರುತ್ತವೆಂಬ ಅಭಿಪ್ರಾಯ ಮೂಡಿತು ಹಾಗೂ ಆ ಸಂದರ್ಭದಲ್ಲಿ ಮೂರು ಮುಖ್ಯ ವಿಮರ್ಶನ ಪರಿಕಲ್ಪನೆಗಳನ್ನು ಗುರುತಿಸಲು ಸಾಧ್ಯವಾಯಿತು. ಅವೆಂದರೆ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ ಮತ್ತು ಸ್ತ್ರೀ ಸಂವೇದನೆ.

ಈ ಮೊದಲು ಪ್ರಸ್ತಾಪಿಸಿದಂತೆ ಪ್ರಗತಿಶೀಲ ಲೇಖಕರು ತಮ್ಮ ಕೃತಿಗಳಲ್ಲಿ ಸಾಮಾಜಿಕವಾದ ವೈರುಧ್ಯಗಳನ್ನು ಎತ್ತಿಹಿಡಿದರು, ನಿಜ. ಆ ಕಾಲದ ವಿಮರ್ಶೆಯು ಇದನ್ನು ಗುರುತಿಸುತ್ತಾ ಸಮಾಜದ ವೈರುಧ್ಯಗಳಿಗೆ ಮುಖ ಮಾಡಿತು. ಪ್ರಗತಿಶೀಲ ವಿಮರ್ಶೆ ಸಂಸ್ಕೃತಿಯನ್ನು ಸ್ಪರ್ಶಿಸದೆ ಇದ್ದುದರಿಂದ ಶುಷ್ಕತೆಗೆ ಕಾರಣವಾಯಿತು. ಆದರೆ ದಲಿತ ಬಂಡಾಯದ ಸಂದರ್ಭದಲ್ಲಿ ಆ ಕೊರತೆ ನಿವಾರಣೆಯಾಯಿತು. ಆಯಾ ಜನವರ್ಗಗಳ ಹಿನ್ನೆಲೆಯಲ್ಲಿ ಕೃತಿವಿಮರ್ಶೆ ಮಾಡುವ ಧಾಟಿ ವ್ಯಕ್ತವಾಯಿತು. ಈ ದೃಷ್ಟಿಯಿಂದ ದಲಿತ ಲೇಖಕನ ಆತ್ಮಕಥನ ಆತನ ವಿವರಗಳನ್ನೆಲ್ಲ ಒದಗಿಸುತ್ತದೆಂದಾದ ಮೇಲೆ ಅದು ಆತನ ಬಗ್ಗೆ ಚರಿತ್ರೆಯೂ ಆಗುತ್ತದೆ. ಇತರ ಸಂಗತಿಗಳ ಬಗ್ಗೆ ವಿಮರ್ಶೆಯೂ ಆಗತೊಡಗಿತು. ಅಲ್ಲದೆ ಜಾತಿ ವ್ಯವಸ್ಥೆ, ಮಡಿವಂತಿಕೆ, ಆಹಾರ ಪದ್ಧತಿ, ಅಸಮಾನತೆ ಇತ್ಯಾದಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುವುದರಿಂದ ಅದೊಂದು ವಿಮರ್ಶೆಯೂ ಆಗಿಬಿಟ್ಟಿತು. ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ, ಸಿದ್ಧಲಿಂಗಯ್ಯನವರ ಊರು ಕೇರಿ, ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ, ರಾಮಯ್ಯನವರ ಮಣೆಗಾರ – ಇವು ಈ ದೃಷ್ಟಿಯಿಂದ ಮುಖ್ಯವೆನಿಸಿದ್ದವು. ಈ ಮಧ್ಯೆ ಮಹಿಳಾ ಬರೆಹಗಳ ಕುರಿತ ಅಧ್ಯಯನ ವಿಶೇಷವಾಗಿ ಜರುಗಿತ್ತು. ಸ್ತ್ರೀವಾದಿ ವಿಮರ್ಶೆಯಲ್ಲಿ ವಿಜಯಾದಬ್ಬೆ, ನೇಮಿಚಂದ್ರ, ವಿಜಯಶ್ರೀ, ಪ್ರತಿಭಾ ನಂದಕುಮಾರ್, ಎನ್.ಗಾಯತ್ರಿ, ತೇಜಸ್ವಿನಿ ನಿರಂಜನ, ಸುಮಿತ್ರಾಬಾಯಿ, ಬಿ.ಎಂ.ರೋಹಿಣಿ ಮುಂತಾದವರು ವಿಶೇಷವಾಗಿ ಕೆಲಸ ಮಾಡಿದರು.

ಸ್ತ್ರೀವಾದಿ ಸಾಹಿತ್ಯ ವಿಮರ್ಶೆ (1994) (ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ) 1995ರಲ್ಲಿ ಬಂದ ಸ್ತ್ರೀವಾದಿ ಪ್ರವೇಶಿಕೆ (ಬಿ.ಎನ್.ಸುಮಿತ್ರಾಬಾಯಿ, ಎನ್.ಗಾಯಿತ್ರಿ), 1993ರಲ್ಲಿ ಹೊರಬಂದ 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ' (ಸಂ:ಬರಗೂರು ರಾಮಚಂದ್ರಪ್ಪ), 1992ರಲ್ಲಿ ಹೊರಬಂದ ಕೇಶವಶರ್ಮರ 'ಕ್ರಿಯೆ– ಪ್ರತಿಕ್ರಿಯೆ', ಡಿ.ಆರ್.ನಾಗರಾಜರ 'ಸಾಹಿತ್ಯ ಕಥನ', ರಹಮತ್ ತರೀಕೆರೆ ಅವರ 'ಮರದೊಳಗಣ ಕಿಚ್ಚು', ವಿಜಯಾದಬ್ಬೆ ಅವರ 'ಮಹಿಳೆ ಸಾಹಿತ್ಯ ಸಮಾಜ' (1989), ಗಾಯಿತ್ರಿ ನಾವಡ ಅವರ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' (1999), ಧರಣೀದೇವಿ ಅವರ ಭಾರತೀಯತೆ ಮತ್ತು ಸ್ತ್ರೀವಾದ ಮುಂತಾದ ಕೃತಿಗಳು ಸ್ತ್ರೀವಾದಿ ಚಿಂತನೆಯ ದೃಷ್ಟಿಯಿಂದ ಗಮನಾರ್ಹವೆನಿಸಿದವು. ಒಟ್ಟಾರೆ 70ರ ದಶಕದಿಂದೀಚಿನ ಕನ್ನಡ ವಿಮರ್ಶೆಯನ್ನು ಗಮನಿಸಿದರೆ ಹಿಂದಿಗಿಂತಲೂ ಸಾಕಷ್ಟು ಬೆಳವಣಿಗೆಯನ್ನು ಹೊಂದಿದೆ ಎಂದೇ ಹೇಳಬಹುದು. ಕೃತಿಕೇಂದ್ರಿತ ವಿಮರ್ಶೆ, ಸಮಾಜ ಕೇಂದ್ರಿತ ವಿಮರ್ಶೆ, ಕರ್ತೃ ಕೇಂದ್ರಿತ ವಿಮರ್ಶೆ, ವಾಚಕ ಕೇಂದ್ರಿತ ವಿಮರ್ಶೆ ಇತ್ಯಾದಿ ಪಾಶ್ಚಾತ್ಯ ಮಾರ್ಗಗಳ ಪ್ರಭಾವಗಳಿಗೆ ಆಂತರ್ಯದಲ್ಲಿ ಸಂಘರ್ಷವನ್ನು ಒಡ್ಡುತ್ತಲೇ ಇತ್ತೀಚಿನ ವಿಮರ್ಶೆ ಬೆಳೆಯ ತೊಡಗಿತು. ನವ್ಯ ಮತ್ತು ಬಂಡಾಯದ ವಿಭಿನ್ನ ನೆಲೆಗಳಲ್ಲಿ ಇತಿಮಿತಿಗಳನ್ನು ಅಭಿವ್ಯಕ್ತಿಸುತ್ತಲೇ ಆರೋಗ್ಯಕರ ನಿಲುವುಗಳನ್ನು ವಿಮರ್ಶನ ವಲಯದಲ್ಲಿ ಸಾದರಪಡಿಸುವ ಪ್ರಯತ್ನಗಳೂ ಜರುಗಿದವು. ಶಾಂತಿನಾಥ ದೇಸಾಯಿ, ಕೆ.ವಿ.ನಾರಾಯಣ, ರಾಜೇಂದ್ರ ಚೆನ್ನಿ, ಜಿ.ರಾಜಶೇಖರ, ಜಿ.ಎಚ್.ನಾಯಕ, ಸಿ.ಎನ್.ರಾಮಚಂದ್ರನ್ ಮುಂತಾದವರು ವಿಮರ್ಶೆಯಲ್ಲಿ ಅಗತ್ಯ ನೆಲೆಗಳನ್ನು ಒದಗಿಸಿದರು. ಅನ್ಯ ಶಿಸ್ತುಗಳ ಅಧ್ಯಯನದಿಂದಲೂ ಕನ್ನಡ ವಿಮರ್ಶೆ ಅನುಕೂಲ ಪಡೆಯಿತು. ಕನ್ನಡ ವಿಮರ್ಶೆಯಲ್ಲಿ ಗಮನಾರ್ಹ ಕೆಲಸ ಮಾಡಿದವರು ಡಿ.ಆರ್.ನಾಗರಾಜ್. ಚರಿತ್ರೆ, ಸಮಾಜ, ಕೃತಿ, ಕೃತಿಕಾರ ಮುಂತಾದ ಪರಿಕಲ್ಪನೆಗಳ ಮೂಲಕ ಸೈದ್ಧಾಂತಿಕ ಚರ್ಚೆಗೆ ತೊಡಗಿದ ಇವರು ಸಂಸ್ಕೃತಿ ಮತ್ತು ಸಾಹಿತ್ಯದ ಚಲನಶೀಲತೆಗೆ ಕಾರಣರಾದರು. ಅಮೃತ ಮತ್ತು ಗರುಡ (1983), ಶಕ್ತಿ ಶಾರದೆಯ ಮೇಳ (1987), ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ (1990) ಇವುಗಳಲ್ಲಿ ಇವರ ವಿಮರ್ಶಾ ಪ್ರತಿಭೆ ಮೆರೆದಿದೆ.

ಸಿ.ಎನ್.ರಾಮಚಂದ್ರನ್ ಅವರು ಪಾಶ್ಚಾತ್ಯ ವಿಮರ್ಶೆಯ ಸಂದರ್ಭದಲ್ಲಿ ಸಾಹಿತ್ಯಾಧ್ಯಯನದ ಬೇರೆ ಬೇರೆ ವಿಧಾನ ಪರಿಕಲ್ಪನೆಗಳನ್ನು ಕನ್ನಡ ವಿಮರ್ಶೆಗೆ ಒದಗಿಸಿದರು. 'ಸೀತಾಯಣ' ವಿಮರ್ಶಾ ಕೃತಿಯ ಮೂಲಕ ಪೋಲಂಕಿ ರಾಮಮೂರ್ತಿಯವರು ಚಿಂತನೆಯಲ್ಲಿ ಹೊಸ ವಿವಾದ, ಎಚ್ಚರಗಳನ್ನು ಹುಟ್ಟು ಹಾಕಿದರು. ಅದರ ಮುಖಾಂತರ ದಲಿತ ಬಂಡಾಯದ ಪರ ನಿಲುವುಗಳನ್ನು ತಾಳಿದರು. ಸಾಹಿತ್ಯ ಸಂಪರ್ಕ (1986) ಮತ್ತು ಸಾಹಿತ್ಯ ಸಂದರ್ಭ (1991) ಗಳಲ್ಲಿ ಟಿ.ಪಿ.ಅಶೋಕ ಅವರು ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕೃತಿಯ ಸಾಧ್ಯಾಸಾಧ್ಯತೆಗಳನ್ನು ವಿಮರ್ಶಿಸಿದರು. ಹಾಗೆಯೇ ಎಚ್.ಎಸ್.ರಾಘವೇಂದ್ರರಾವ್ ಅವರ ನಿಲುವು (1989), ಹಾಡೆ ಹಾದಿಯ ತೋರಿತು (1998), ಅರವಿಂದ ಮಾಲಗತ್ತಿ ಯವರ 'ದಲಿತ ಯುಗ ಮತ್ತು ಕನ್ನಡ ಸಾಹಿತ್ಯ' (1999) ರಹಮತ್ ತರೀಕೆರೆ ಅವರ ಪ್ರತಿಸಂಸ್ಕೃತಿ, ಜಿ.ಎಸ್.ಆಮೂರರ ಸಮಕಾಲೀನ ಕತೆ ಕಾದಂಬರಿ– ಹೊಸ ಪ್ರಯೋಗಗಳು (1981), ಅರ್ಥಲೋಕ (1988), ಸಿ.ಪಿ.ಸಿದ್ಧಾಶ್ರಮ ಅವರ ಹೊಸ ಅಲೆ (1978), ನಿಕಷ (1987), ಕೆ.ವಿ.ನಾರಾಯಣರ ಬೇರು, ಕಾಂಡ, ಚಿಗುರು (1996), ಮಲ್ಲೇಪುರಂ ಜಿ.ವೆಂಕಟೇಶ್ ಅವರ ತಿಳಿವ ತೇಜದ ಮುಂದೆ (1996), ಬಿ.ದಾಮೋದರರಾವ್ ಅವರ ಆಂಚಾವಾಗಳು (1992), ಓ.ಎಲ್.ನಾಗಭೂಷಣಸ್ವಾಮಿ ಅವರ ಇಂದಿನ ಹೆಜ್ಜೆ (1998), ಜಿ.ರಾಮಕೃಷ್ಣ ಅವರ ಆಯತನ (1984), ಸಿ.ಎನ್.ರಾಮಚಂದ್ರನ್ ಅವರ ವಸಾಹತೋತ್ತರ ಚಿಂತನೆ (1999), ತೌಲನಿಕ ಸಾಹಿತ್ಯ (1998), ಪುರುಷೋತ್ತಮ ಬಿಳಿಮಲೆಯವರ ಶಿಷ್ಟ ಪರಿಶಿಷ್ಟ, ಗಿರಡ್ಡಿ ಗೋವಿಂದರಾಜರ ವಚನ ವಿನ್ಯಾಸ (1997), ಜಿ.ಎಸ್.ಆಮೂರರ ಭುವನದ ಭಾಗ್ಯ (1991), ಜಿ.ಎಚ್.ನಾಯಕರ ನಿರಪೇಕ್ಷ (1984), ನಿಜದನಿ (1988), ಲಕ್ಷ್ಮೀಪತಿ ಕೋಲಾರ ಅವರ ಕಾಲುದಾರಿ (2001), ಚಂದ್ರಶೇಖರ ನಂಗಲಿ ಅವರ ನಾನಿಮ್ಮೊಳಗು (2001), ನಾ ನಿಲ್ಲುವಳಲ್ಲ, ಜಿ.ಆರ್.ತಿಪ್ಪೇಸ್ವಾಮಿ ಅವರ ಅಭಿಮುಖ (2000), ಕನ್ನಡ ದಲಿತ ಸಾಹಿತ್ಯದ ನೆಲೆ (2001), ಅರ್ಥ ಸುಗಂಧ (2003), ರಂಗಾರೆಡ್ಡಿ ಕೋಡಿರಾಂಪುರ ಅವರ 'ಬಂಡಾಯ ಜಾನಪದ', ಶಿವರಾಮಯ್ಯನವರ ಸಾಹಿತ್ಯ ಪರಿಸರ (1993), 'ಉರಿಯ ಉಯ್ಯಲೆ' (2002), ಆರ್.ಲಕ್ಷ್ಮೀನಾರಾಯಣರ ಆಹ್ಲಾದ (2002) ಮೊದಲಾದ ಕೃತಿಗಳು ಕನ್ನಡ ಸಾಹಿತ್ಯ ವಿಮರ್ಶೆ ತುಂಬ ಶಕ್ತಿಶಾಲಿಯಾಗಿ, ಬಹುಮುಖಿಯಾಗಿ ಮೂಡಿಬಂದಿದೆ ಎಂಬುದನ್ನು ಸಾಬೀತುಪಡಿಸುತ್ತವೆ.

ದಲಿತ ಬಂಡಾಯ ಸಾಹಿತ್ಯ ಚಳವಳಿಯ ಸೃಜನಶೀಲ ಕೃತಿಗಳಲ್ಲಿ ಸಾಮಾಜಿಕ ದೃಷ್ಟಿಕೋನ ಅಭಿವ್ಯಕ್ತವಾದರೆ, ಅದರ ವಿಮರ್ಶೆಯಲ್ಲಿ ಪ್ರತಿಸಂಸ್ಕೃತಿ ದೃಷ್ಟಿಕೋನ ಪ್ರಮುಖವಾಗಿ ಕೆಲಸ ಮಾಡಿತು. ಪ್ರಸ್ತುತ ಸಾಹಿತ್ಯವನ್ನು ಬಹುಶಿಸ್ತೀಯ ಅಧ್ಯಯನಕ್ಕೆ ಒಳಗುಮಾಡುವ ಕೆಲಸವೂ ನಡೆಯಿತು. ಸಾಹಿತ್ಯದ ಪುನರ್ ಮೌಲ್ಯೀಕರಣ ಪ್ರಕ್ರಿಯೆಗಳೂ ಜರುಗಿದಂತೆ ವಿಮರ್ಶೆ ಹೊಸ ಓದಿನತ್ತ ಮುಂದುವರಿದಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದ ಪುನರ್ ಮೌಲ್ಯೀಕರಣ ಯೋಜನೆಯ ಹನ್ನೆರಡು ಪುಸ್ತಕಗಳು ನಿರ್ದಿಷ್ಟ ಪರಿಕಲ್ಪನೆಗಳ ನೆಲೆಯಿಂದ ನಡೆಸುವ ಅನ್ವೇಷಣೆಗೆ ಮಾದರಿಗಳಾಗಿವೆ. ಈ ರೀತಿಯ ಪುನರ್ ಮೌಲ್ಯೀಕರಣ ಶೋಧ ನಿರಂತರವಾಗಿ ಸಾಗತೊಡಗಿದೆ.

ತಮ್ಮ ತಮ್ಮ ತಾತ್ವಿಕ ನಿಲುವುಗಳನ್ನು ಬಿಟ್ಟುಕೊಡದೆ ಸಾಹಿತ್ಯ ಪಂಥಗಳ ನಡುವೆ ವಾದ ವಿವಾದಗಳು ಜರುಗುತ್ತಲೇ ಇವೆ. ಆದರೆ ತಮ್ಮ ಪಂಥದ ಹೊರಗಿನ ಸಾಹಿತ್ಯದ ಬಗೆಗೂ ಚಿಂತನ ಮಂಥನ ಮಾಡುವ ಆರೋಗ್ಯಕರ ಬೆಳವಣಿಗೆಗಳೂ ಕಾಣಿಸಿಕೊಂಡವು. ನವೋದಯ, ನವ್ಯ ಬರೆಹಗಾರರನೇಕರ ಬಗೆಗೆ ಇತ್ತೀಚೆಗೆ ಅನೇಕ ವಿಮರ್ಶನ ಬರೆಹಗಳು ಪ್ರಕಟವಾಗಿವೆ. ಮಾಸ್ತಿ, ಬೇಂದ್ರೆ, ಕುವೆಂಪು, ನರಸಿಂಹಸ್ವಾಮಿ, ತರಾಸು, ನಿರಂಜನ, ಚದುರಂಗ, ಅಡಿಗ, ಅನಂತಮೂರ್ತಿ, ತೇಜಸ್ವಿ, ಶ್ರೀರಂಗ, ಸಿದ್ಧಲಿಂಗಯ್ಯ, ಕಾರ್ನಾಡ್, ಶಿವಪ್ರಕಾಶ್, ಗದ್ದರ್, ದೇವನೂರು, ಮಹಾದೇವ ಮುಂತಾದವರ ಸಾಹಿತ್ಯದ ಬಗೆಗೆ ವಿಮರ್ಶೆ ಹೆಚ್ಚಾಗಿ ನಡೆದಿದೆ. ಪ್ರಾಚೀನ ವಚನಕಾರರ ಬಗೆಗಿನ ಶೋಧವೂ ಗಮನಾರ್ಹವಾದುದು. ಕೆ.ಜಿ.ನಾಗರಾಜಪ್ಪನವರ 'ಮರುಚಿಂತನ' ದಲ್ಲಿ ತೊಡಗಿ ವೀರಶೈವಧರ್ಮ ಹಾಗೂ ಕನ್ನಡಸಾಹಿತ್ಯದ ಬಗೆಗೆ ಇದ್ದ ಪರಂಪರಾಗತವಾದ ಆಲೋಚನೆಗಳನ್ನು ನಿಕಷಕ್ಕೆ ಒಡ್ಡಿದರು. ಸಾಂಪ್ರದಾಯಿಕ ಆಲೋಚನೆಗಳನ್ನು ಬದಲಾಯಿಸಿದರು. ಬಸವರಾಜ ಕಲ್ಗುಡಿಯವರು ವಚನಕಾರರ ವಿಭಿನ್ನ ಆಶಯಗಳ ಹಿನ್ನೆಲೆಯಲ್ಲಿ ಮಧ್ಯಕಾಲೀನ ಸಾಹಿತ್ಯವನ್ನು ಶೋಧಿಸುವ ಗಮನಾರ್ಹ ಕೆಲಸ ಮಾಡಿದರು. ಅದರ ಫಲವಾಗಿ ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ (1985) ಎಂಬ ಮೌಲಿಕ ಗ್ರಂಥಗಳನ್ನು ಹೊರತಂದರು. ಈ ನಡುವೆ ಅಮೃತ ಮತ್ತು ಗರುಡ (ಡಿ.ಆರ್.ನಾಗರಾಜು), ಕಾಗೋಡು ಸತ್ಯಾಗ್ರಹ, ಬ್ರೆಕ್ಟ್ (ಜಿ.ರಾಜಶೇಖರ), ಮುನ್ನೋಟ (ಜಿ.ರಾಮಕೃಷ್ಣ), ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, 12ನೆಯ ಶತಮಾನದ ಕಾಯಕ ಜೀವಿಗಳ ಚಳವಳಿ (ಸಿ.ವೀರಣ್ಣ), ಸಂಸ್ಕೃತಿ, ಉಪಸಂಸ್ಕೃತಿ (ಬರಗೂರು ರಾಮಚಂದ್ರಪ್ಪ), ಮಾರ್ಕ್ಸ್‌ವಾದದ ವಿಮರ್ಶೆ (ಚಂದ್ರಶೇಖರ ನಂಗಲಿ), ಅನ್ವೇಷಣೆ (ಆರ್ಕೆ ಮಣಿಪಾಲ) ಮುಂತಾದ ಮಾರ್ಕ್ಸ್‌ವಾದಿ ಧೋರಣೆಯ ವಿಮರ್ಶಾ ಸಂಕಲನಗಳೂ ಹೊರಬಂದವು.

ಆಧುನಿಕ ಕನ್ನಡಸಾಹಿತ್ಯದ ಎಲ್ಲ ಮಾದರಿಗಳೂ ಸೃಜನಶೀಲತೆಯಲ್ಲಿ ಗೋಚರವಾದಂತೆ ಆಯಾ ಕಾಲಘಟ್ಟದಲ್ಲಿ ಬಳಕೆಗೆ ಬಂದ ವಿಮರ್ಶನ ಪದ್ಧತಿಗಳೂ ಹೆಚ್ಚು ಕಡಿಮೆ ಬಳಕೆಯಲ್ಲಿವೆ. ತಾತ್ತ್ವಿಕ ವಿಮರ್ಶೆ, ರಸವಿಮರ್ಶೆ, ಆನ್ವಯಿಕ ವಿಮರ್ಶೆ, ವಿವರಣಾತ್ಮಕ ವಿಮರ್ಶೆ, ವಸ್ತುನಿಷ್ಠ ವಿಮರ್ಶೆ, ಚಾರಿತ್ರಿಕ ವಿಧಾನ ವಿಮರ್ಶೆ, ಸಾಮಾಜಿಕ ವಿಮರ್ಶೆ, ಮಾರ್ಕ್ಸ್‌ವಾದಿ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ, ಪ್ರಾಯೋಗಿಕ ವಿಮರ್ಶೆ, ಮನಶ್ಶಾಸ್ತ್ರೀಯ ವಿಮರ್ಶೆ ಮುಂತಾದವುಗಳೆಲ್ಲಮೂ ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಹೆಚ್ಚು ಕಡಿಮೆ ಬಳಕೆಯಾಗುತ್ತಲೇ ಇವೆ. ಕಾವ್ಯ ಮೀಮಾಂಸೆಯ ಮೂಲತತ್ತ್ವಗಳ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಪತ್ರಿಕಾ ವಿಮರ್ಶೆ, ಪ್ರೌಢ ಪ್ರಬಂಧದ ವಿಮರ್ಶೆಗಳೂ ಇಂದಿನ ಕನ್ನಡ ವಿಮರ್ಶೆಯಲ್ಲಿ ಅಡಕಗೊಳ್ಳುತ್ತಿವೆ.

ಹಿರಿಯ ಬರೆಹಗಾರರಿಗೆ ವಿಶೇಷ ಸಂದರ್ಭಗಳಲ್ಲಿ ಅಭಿನಂದನ ಗ್ರಂಥಗಳನ್ನು, ಸ್ಮರಣ ಗ್ರಂಥಗಳನ್ನು ಸಮರ್ಪಿಸುವ ಪದ್ಧತಿ ರೂಢಿಯಲ್ಲಿದೆ. ಸಂಬಂಧಿಸಿದವರ ಬದುಕು ಬರೆಹಗಳನ್ನು ಕುರಿತ ಬರೆಹಗಳು ಅದರಲ್ಲಿ ಅಡಕವಾಗಿರುತ್ತವೆ. ಬದುಕಿನ ವಿವರಗಳನ್ನು ಕುರಿತ ಬರೆಹಗಳಲ್ಲಿ ಪ್ರಶಂಸೆಯ, ಆರಾಧನೆಯ ಮನೋಧರ್ಮಗಳೇ ಅಧಿಕವಾಗಿರುತ್ತದೆ. ಲೇಖಕನ ಸಾಹಿತ್ಯ ಕೃತಿಗಳನ್ನು ಕುರಿತಂತೆ ಮೂಡಿ ಬಂದ ಬರೆಹಗಳಲ್ಲಿ ವಿಮರ್ಶೆಯ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಬಿ.ಎಂ.ಶ್ರೀಕಂಠಯ್ಯನವರಿಗೆ ಸಮರ್ಪಿಸಿದ ಸಂಭಾವನೆ (1941) ಈ ಪಂಕ್ತಿಯಲ್ಲಿ ಮೊದಲನೆಯದು. ಎ.ಆರ್.ಕೃಷ್ಣಶಾಸ್ತ್ರೀ, ಪಂಜೆ ಮಂಗೇಶರಾಯ, ಡಿ.ಎಲ್.ನರಸಿಂಹಾಚಾರ್, ತ.ಸು.ಶಾಮರಾಯ, ಸ.ಸ.ಮಾಳವಾಡ, ಮಂಜಯ್ಯ ಹೆಗ್ಗಡೆ, ಕುವೆಂಪು, ಮಾಸ್ತಿ, ಬೇಂದ್ರೆ, ವಿ.ಸೀ., ಕೆ.ಎಸ್.ನರಸಿಂಹಸ್ವಾಮಿ, ಸಿದ್ಧವ್ವನಹಳ್ಳಿ ಕೃಷ್ಣಶರ್ಮ, ವಿ.ಕೃ.ಗೋಕಾಕ್, ಶಿವರಾಮಕಾರಂತ, ಎಸ್.ವಿ.ರಂಗಣ್ಣ, ಬೆಟಗೇರಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ದಿನಕರ ದೇಸಾಯಿ, ತಿರುಮಲೆ ರಾಜಮ್ಮ, ಶಂ.ಬಾ.ಜೋಶಿ, ಎಂ.ಚಿದಾನಂದ ಮೂರ್ತಿ, ಹಂಪನಾ, ಜಿ.ಎಸ್.ಶಿವರುದ್ರಪ್ಪ, ದೇ.ಜ.ಗೌ., ಎಚ್.ತಿಪ್ಪೇರುದ್ರಸ್ವಾಮಿ, ಸಿದ್ಧಲಿಂಗಯ್ಯ, ಕೆ.ಆರ್.ಲಿಂಗಪ್ಪ, ಎಂ.ಎಸ್.ಸುಂಕಾಪುರ, ಸೋಮಶೇಖರ ಇಮ್ರಾಪೂರ, ಬಸವರಾಜ ಕಟ್ಟೀಮನಿ, ನಿರಂಜನ, ಹಾ.ಮಾ.ನಾಯಕ, ಎಸ್.ಎಲ್.ಭೈರಪ್ಪ, ಕಮಲಾ ಹಂಪನಾ ಮುಂತಾದವರಿಗೆ ಅಭಿನಂದನ ಗ್ರಂಥಗಳು ಸಮರ್ಪಿತವಾಗಿವೆ. ಪಂಜೆ ಮಂಗೇಶರಾಯ, ಎ.ಕೆ.ರಾಮಾನುಜನ್, ಶಾಂತಿನಾಥ ದೇಸಾಯಿ, ಮೂರ್ತಿರಾವ್ ಮೊದಲಾದವರಿಗೆ ಸ್ಮರಣ ಸಂಪುಟಗಳು ಹೊರಬಂದಿವೆ.

ವಿಮರ್ಶೆಯನ್ನು ಪ್ರಕಟಿಸುವಲ್ಲಿ ಸಂವಾದಗಳನ್ನು ಏರ್ಪಡಿಸುವಲ್ಲಿ ಕನ್ನಡ ಪತ್ರಿಕೆಗಳು ಸಕ್ರಿಯವಾಗಿ ಪಾತ್ರವಹಿಸುತ್ತಿವೆ. ಜೊತೆಗೆ ವಿಮರ್ಶೆಯನ್ನು ಬೆಳೆಸುವ ವಾತಾವರಣವೂ ವಿಸ್ತೃತವಾಗುತ್ತಿದೆ. ವಿವಿಧ ಅಕಾಡೆಮಿಗಳು, ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಮೊದಲಾದ ಸಂಸ್ಥೆಗಳು ಸಂವಾದಗಳಿಗೆ, ಸಂಶೋಧನೆಗೆ ಅವಕಾಶ ಮಾಡಿಕೊಡುತ್ತಿವೆ. ಮಂಡಿಸಲ್ಪಟ್ಟ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಜವಾಬ್ದಾರಿಯನ್ನೂ ಹೊತ್ತಿವೆ. ಸಾಹಿತ್ಯ ಅಕಾಡೆಮಿ ಶತಮಾನದ ಸಾಹಿತ್ಯ ವಿಮರ್ಶೆ ಪ್ರಕಟಿಸಿದೆ. ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಸುವರ್ಣ ಸಂಚಯ, ಚಿನ್ನದ ಗರಿ, ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ಶ್ರೀ ಸಾಮಾನ್ಯನಿಗೆ ಕನ್ನಡ ಸಾಹಿತ್ಯ ಚರಿತ್ರೆ, ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ ಮೊದಲಾದ ಕೃತಿಗಳು ಗಮನಾರ್ಹವಾಗಿವೆ. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಕನ್ನಡ ವಿಮರ್ಶೆಯ ನೆಲೆ ಬೆಲೆ, ಕವಿ ಬೇಂದ್ರೆ, ಪ್ರಾಯೋಗಿಕ ವಿಮರ್ಶೆ ಮೊದಲಾದ ಕೃತಿಗಳು ಗಮನಾರ್ಹವಾಗಿವೆ.

ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ದಾಸ ಸಾಹಿತ್ಯ, ಕನ್ನಡ ರಂಗಭೂಮಿ ಅಂದು – ಇಂದು, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಆಯಾ ವರ್ಷದ ಸಾಹಿತ್ಯ ವಿಮರ್ಶೆ ಸಂಕಲನಗಳು, ಪುನರ್ ಮೌಲ್ಯೀಕರಣ ಯೋಜನೆಯ ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಚಿನ್ನದ ಬೆಳಸು, ಜೊತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗಳಲ್ಲಿ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಅಮೂಲ್ಯ ಗ್ರಂಥಗಳಿವೆ.

ಸಾಮಾಜಿಕ ಬದಲಾವಣೆಯ ಸಂದರ್ಭದಲ್ಲಿ ನಿಜವಾದ ಬರೆಹಗಾರ ಎದುರಿಸುವ ಸಮಸ್ಯೆ ಸವಾಲುಗಳು ಹಲವಾರು. ಅಭಿವ್ಯಕ್ತಿ ವಿಧಾನದಲ್ಲೂ ಬದಲಾವಣೆ ಅನಿವಾರ್ಯ. ಸಾಹಿತ್ಯವನ್ನು ಬೇರೆ ಬೇರೆ ಶಾಸ್ತ್ರ ವಿಜ್ಞಾನ ವಿಚಾರಗಳ ಹಿನ್ನೆಲೆಯಲ್ಲಿ ನೋಡುವ ಪರಿಪಾಠವೂ ಬೆಳೆಯುತ್ತಿದೆ. 19ನೆಯ ಶತಮಾನದ ಕಡೆಯ ವೇಳೆಗೆ ಕನ್ನಡ ಸಾಹಿತ್ಯ ವಿಮರ್ಶೆ ಆರಂಭವಾಗಿ, 20ನೆಯ ಶತಮಾನದಲ್ಲಿ ಅನೇಕ ಪ್ರಭಾವಗಳಿಗೆ ಒಳಗಾಗುತ್ತಲೇ ಬಂದು, ಅದು 21ನೆಯ ಶತಮಾನದಲ್ಲೂ ಮುಂದುವರಿದಿದೆ. ವಿಮರ್ಶೆಯಲ್ಲಿ ಇನ್ನೂ ಹೊಸ ಮಟ್ಟದ ವೈಚಾರಿಕತೆಗೆ ಒತ್ತು ಬೀಳಬೇಕಾಗಿದೆ. (ಜಿ.ಆರ್.ಟಿ.)

**ಕನ್ನಡದಲ್ಲಿ ವಿಶ್ವಕೋಶಗಳು :** ಜ್ಞಾನದ ವಿವಿಧ ಶಾಖೆಗಳ ವ್ಯಾಪಕ ವಿವೇಚನೆಯನ್ನುಳ್ಳ ವಿಶ್ವಕೋಶಗಳ ರಚನೆ ಕರ್ನಾಟಕದಲ್ಲಿ ಹಿಂದಿನಿಂದ ಸಾಗಿ ಬಂದಿದೆ. ಪ್ರಬುದ್ಧ ಸಮಾಜಕ್ಕೆ ಅಗತ್ಯವೆನಿಸಿದ ಹಲವಾರು ಶಾಸ್ತ್ರಗಳ ಸಾರವನ್ನು ಒಂದೇ ಗ್ರಂಥವಾಗಿ ರಚಿಸುವ ಬಗೆಗಿನ ಇಂಥ ಪ್ರಯತ್ನ ಸು.800 ವರ್ಷಗಳಿಂದ ಒಂದಾದ ಮೇಲೊಂದು ನಡೆದಿದೆ. ಈ ವಿಷಯದಲ್ಲಿ ಕಲ್ಯಾಣದ ಚಾಳುಕ್ಯ ಚಕ್ರವರ್ತಿ 3ನೆಯ ಸೋಮೇಶ್ವರನ (1127–39) ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥಚಿಂತಾಮಣಿ, ಕೆಳದಿಯ ಒಂದನೆಯ ಬಸವಪ್ಪ ನಾಯಕನ (1697–1714) ಶಿವತತ್ತ್ವರತ್ನಾಕರ– ಇವು ಸಂಸ್ಕೃತದಲ್ಲಿ ರಚಿತವಾದ ವಿಶ್ವಕೋಶದಂಥ ಗ್ರಂಥಗಳು.

ನಿಜಗುಣಶಿವಯೋಗಿಯ ವಿವೇಕ ಚಿಂತಾಮಣಿ (ಸು.1500) ಕನ್ನಡದ ಮೊಟ್ಟಮೊದಲ ಜ್ಞಾನಕೋಶ. ಈ ಗ್ರಂಥವನ್ನು ಸಾತಾರಾ ಜಿಲ್ಲೆಯ ಸಿಂಘಣಾಪುರದ ಕಾಂತೇಶ್ವರ ಎಂಬ ಕವಿ 16ನೆಯ ಶತಮಾನದಲ್ಲಿ ಮರಾಠಿಗೂ ತಮಿಳುನಾಡಿನಲ್ಲಿ 17ನೆಯ ಶತಮಾನದಲ್ಲಿ ಪ್ರಸಿದ್ಧನಾಗಿದ್ದ ಶಿವಪ್ರಕಾಶನೆಂಬ ಕವಿ ತಮಿಳು ಭಾಷೆಗೂ 18ನೆಯ ಶತಮಾನದಲ್ಲಿ ಮೈಸೂರು ಭಾಗದ ಹರಪುರದ ಲಿಂಗರಾಜ ಸಂಸ್ಕೃತ ಭಾಷೆಗೂ ಭಾಷಾಂತರಿಸಿದರೆಂಬುದು ಈ ಗ್ರಂಥದ ಮಹತ್ವಕ್ಕೆ ನಿದರ್ಶನಗಳಾಗಿವೆ. ವೇದಪುರಾಣಶಾಸ್ತ್ರದೊಳ್ ನೇಮಿಸಿ ತೋರ್ಪ ವಿಶ್ವವಿಷಯಂಗಳ ಸಂಸ್ಥಿತಿಯಂ ವಿವೇಕಚಿಂತಾಮಣಿ ಎಂಬ ಪೆಸರಿಟ್ಟು ಪ್ರೇಮದಿ ಪೇಳ್ವೆಂ ಎಂಬುದಾಗಿ ಕವಿ ಗ್ರಂಥವನ್ನು ಪ್ರಾರಂಭಿಸಿದ್ದಾನೆ. ಈ ಗ್ರಂಥವನ್ನು 10 ಪರಿಚ್ಛೇದಗಳಾಗಿ ವಿಭಾಗಿಸಲಾಗಿದೆ. 535 ವಿವಿಧ ವಿಷಯಗಳನ್ನು ಕುರಿತು ಇಲ್ಲಿ ಹೇಳಲಾಗಿದೆ. ವೇದ, ವೇದಾಂಗ, ಉಪನಿಷತ್ತು, ಸ್ಮೃತಿಗಳು, ಕರ್ಮಗಳು, ವರ್ಣಧರ್ಮಗಳು, ಗಣಿತ, ತೂಕ, ಪ್ರಮಾಣ, ಪುರಾಣಗಳು, ಇತಿಹಾಸಗಳು, ಚಾರ್ವಾಕ, ಬೌದ್ಧ, ಕೌಳಯಾಮಲ, ಶಾಕ್ತೇಯ, ಪಾಂಚರಾತ್ರ, ವೈದಿಕ – ಲೌಕಿಕ ಶಾಸ್ತ್ರಗಳು, ಮೀಮಾಂಸೆ, ವೈಶೇಷಿಕ, ಸಾಂಖ್ಯ, ಪಾತಂಜಲ, ಮೋಕ್ಷಪ್ರತಿಪಾದನೆ, ಸೂತ್ರ, ಭಾಷ್ಯ, ವ್ಯಾಖ್ಯಾನ, ಲಕ್ಷಣಗಳು – ಇತ್ಯಾದಿ ವಿಷಯಗಳಿಂದ ಈ ಗ್ರಂಥ ಮುಂದುವರಿದಿದೆ. ಆಗಮಭೇದ, ಆಗಮಸಂಖ್ಯೆ, ಆಗಮಸಾರ, ಶೈವ ಭೇದಗಳು; ವಿಭೂತಿ, ರುದ್ರಾಕ್ಷಿ, ಲಿಂಗ, ಮಂತ್ರ ಸಾಧನೆಗಳು; ಸೃಷ್ಟಿಸ್ವರೂಪ, ಅಷ್ಟದಿಗ್ಗಜಗಳು, ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಭೂಕೈಲಾಸ, ಹೇಮಕೂಟ, ಸಿದ್ಧವಟ, ಭರತವರ್ಷ, ರಾಜಲಕ್ಷಣ, ಛಂದಸ್ಸು, ಅಲಂಕಾರ, ಮಹಾಕಾವ್ಯ, ಗಮಕಿ, ವಾದಿ, ವಾಗ್ಮಿ, ಪುಣ್ಯಕ್ಷೇತ್ರಗಳು, ಅಹೋರಾತ್ರಿಗಳ ಕಲ್ಪನೆಗಳು, ನಕ್ಷತ್ರಮಂಡಲ, ಮರಣಸೂಚನೆ, ಉತ್ತಮಲೋಕ ಪ್ರಾಪ್ತಿ, ಪಾಪಿಷ್ಠರಿಗೆ ದುರ್ಗತಿ, ಚತುರ್ಯುಗಗಳು, ಶಾಸ್ತ್ರ ಪ್ರಯೋಜನ – ಇತ್ಯಾದಿ ವಿಷಯಗಳನ್ನು ಕುರಿತು ಗ್ರಂಥಕಾರ ಹೃದಯಂಗಮವಾಗಿ ವಿವೇಚಿಸಿದ್ದಾನೆ. ನಿಜವಾಗಿಯೂ ಇದು ಕನ್ನಡದ ಒಂದು ಜ್ಞಾನ ಭಂಡಾರವೆಂದು ಹೇಳಬಹುದು. ಮೊಟ್ಟಮೊದಲು ಸಂಗೀತಶಾಸ್ತ್ರವನ್ನು ಕುರಿತು ವಿಸ್ತಾರವಾಗಿ ಹೇಳಿರುವುದು ಈ ಗ್ರಂಥದಲ್ಲಿ ಮಾತ್ರ ಎಂಬುದು ಇಲ್ಲಿ ಸ್ಮರಣಾರ್ಹವಾಗಿದೆ.

ಇದಲ್ಲದೆ 2ನೆಯ ಚಾವುಂಡರಾಯನ ಲೋಕೋಪಕಾರ (ಸು.1150), ಲಕ್ಕಣ್ಣದಂಡೇಶನ ಶಿವತತ್ತ್ವಚಿಂತಾಮಣಿ (ಸು.1424), ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಪುರಾಣ (ಸು.1513), ಮೈಸೂರು ವೀರರಾಜನ ಸಕಲವೈದ್ಯ ಸಂಹಿತಾಸಾರಾರ್ಣವ (ಸು.1720) ಎಂಬ ಗ್ರಂಥಗಳು ವಿಶ್ವಕೋಶವನ್ನು ರಚಿಸುವವರಿಗೆ ಹೆಚ್ಚು ವಿಷಯಗಳನ್ನು ಒದಗಿಸಿಕೊಡುವ ಮಹತ್ವದ ಗ್ರಂಥಗಳಾಗಿವೆ.

ಜ್ಞಾನಭಂಡಾರಗಳೆನಿಸಿದ ಇಂಥ ಗ್ರಂಥಗಳ ರಚನೆ ಈಚಿನ ವಿಶ್ವಕೋಶಗಳಿಗೆ ತಳಹದಿಯಾಯಿತೆನ್ನಬಹುದು. ಶಾಸ್ತ್ರೀಯವಾದ ವಿಶ್ವಕೋಶ ರಚನೆ ಪ್ರಾರಂಭವಾದುದು ಈಚೆಗೆ – 20ನೆಯ ಶತಮಾನದ ಎರಡು ಮೂರು ದಶಕಗಳು ಕಳೆದಮೇಲೆ.

**ಬಾಲಪ್ರಪಂಚ:** ಶಿವರಾಮ ಕಾರಂತರಿಂದ ರಚಿತವಾದ ಮೂರು ಸಂಪುಟಗಳ ಮೊದಲ ವಿಶ್ವಕೋಶ (1931). ಸಚಿತ್ರವಾದ ಈ ಗ್ರಂಥ ಮಕ್ಕಳಿಗಾಗಿ ಸೃಷ್ಟಿಯಾದುದು. ಇಲ್ಲಿ ವಿಜ್ಞಾನ ವಿಷಯಗಳು ಬರುತ್ತವೆ. ನಡುನಡುವೆ ಕಥೆ, ಕವನ ಮುಂತಾದ ರಂಜಕ ವಿಷಯಗಳು ಬರುವುದರಿಂದ ಮಕ್ಕಳು ಆಸಕ್ತಿಯಿಂದ ಇವನ್ನು ಓದಲು ಅನುಕೂಲವೇರ್ಪಟ್ಟಿದೆ. ಇದು ಇಂಗ್ಲಿಷಿನಲ್ಲಿ ಆರ್ಥರ್ ಮೀ ಎಂಬಾತ ಮೊದಲು ಮಕ್ಕಳಿಗಾಗಿ ರಚಿಸಿದ ವಿಶ್ವಕೋಶದ ಮಾದರಿಯಲ್ಲಿದೆ.

**ವಿಜ್ಞಾನಪ್ರಪಂಚ:** ಶಿವರಾಮ ಕಾರಂತರಿಂದ ನಾಲ್ಕು ಸಂಪುಟಗಳಲ್ಲಿ ರಚಿತವಾದ (1959–1964) ವಿಜ್ಞಾನ ವಿಷಯ ವಿಶ್ವಕೋಶ. ಮೊದಲ ಭಾಗವಾದ 'ಈ ಜಗತ್ತು' ಎಂಬುದರಲ್ಲಿ ಖಗೋಳ, ಭೂಗೋಳ, ಸಾಗರ, ವಾತಾವರಣ ಮುಂತಾದ ವಿಷಯಗಳೂ ಎರಡನೆಯ ಭಾಗವಾದ 'ಜೀವ, ಜೀವನ'ದಲ್ಲಿ ಜೀವವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಗ್‌ಜೀವ ವಿಜ್ಞಾನ, ಆರೋಗ್ಯ ಶಾಸ್ತ್ರ, ಮನೋವಿಜ್ಞಾನ, ಪ್ರಕೃತಿ ವಿಜ್ಞಾನಗಳೂ ಮೂರನೆಯ ಭಾಗವಾದ 'ವಸ್ತು ಚೈತನ್ಯ'ದಲ್ಲಿ ವಿಜ್ಞಾನದ ಇತಿಹಾಸ, ಪರಮಾಣುಚರಿತ್ರೆ, ರಸಾಯನ ವಿಜ್ಞಾನ, ಭೌತವಿಜ್ಞಾನ, ಸಾಪೇಕ್ಷ ಸಿದ್ಧಾಂತ ಮೊದಲಾದ ವಿಷಯಗಳೂ ನಾಲ್ಕನೆಯ

ಭಾಗವಾದ ವಿಜ್ಞಾನ ಸಾಧನದಲ್ಲಿ ಎಲೆಕ್ಟ್ರಾನಿಕ್ಸ್, ಎಂಜಿನಿಯರಿಂಗ್, ಬದುಕಿನ ಸಮಸ್ಯೆಗಳು, ಸಾಹಸಗಳು, ವಿಜ್ಞಾನಿಗಳು– ಮುಂತಾದ ವಿಷಯಗಳೂ ಬಂದಿವೆ. ಪ್ರೌಢಶಾಲೆಯ ಕೊನೆಯ ಹಂತದಲ್ಲಿರುವ ವಿದ್ಯಾರ್ಥಿ ಶ್ರಮವಿಲ್ಲದೆ ನೇರವಾಗಿ ಕನ್ನಡದ ಮೂಲಕ ವಿಜ್ಞಾನ ವಿಷಯಗಳನ್ನು ತಿಳಿಯಲು ಈ ಗ್ರಂಥಗಳು ಉತ್ತಮ ಸಾಧನಗಳಾಗಿವೆ. ಪಾರಿಭಾಷಿಕ ಶಬ್ದಗಳನ್ನು ಆಯುವಲ್ಲಿ, ಶಾಸ್ತ್ರೀಯ ವಿಷಯವನ್ನು ಪ್ರತಿಪಾದಿಸುವಲ್ಲಿ ಉದ್ದಕ್ಕೂ ಲೇಖಕರೂ ತಮ್ಮ ಸಹಜ ಸರಳ ಮನೋಧರ್ಮವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಉದಾಹರಣೆಗಳು ಕೇವಲ ವಿದೇಶೀಯವಾಗಿಲ್ಲ. ಬೇಕಾದಷ್ಟು ದೇಶೀಯ ನಿದರ್ಶನಗಳೂ ಬರುತ್ತವೆ. ಹತ್ತು ಕಡೆಯಿಂದ ಸಂಗ್ರಹಿಸಿದ ವಿಷಯಗಳನ್ನು ವಿಚಾರದ ಒರೆಗಲ್ಲಿನಲ್ಲಿ ಸಾಣೆ ಹಿಡಿದು ನಿರೂಪಿಸಲಾಗಿದೆ. ಈ ಸಂಪುಟಗಳಲ್ಲಿ ವಿಜ್ಞಾನದ ಸಮಗ್ರವಾದ ಆದರೆ ಸಂಕ್ಷೇಪ ನಿರೂಪಣೆಯನ್ನು ಕಾಣಬಹುದಾಗಿದೆ. ವಿಷಯಕ್ಕೆ ಒಪ್ಪುವ ಹಲವಾರು ಚಿತ್ರಗಳಿವೆ. ಇದೆಲ್ಲಮೂ ಒಬ್ಬ ವ್ಯಕ್ತಿಯ ಸಾಧನೆ ಎಂಬ ವಿಷಯವನ್ನು ನೆನೆದಾಗ ಹತ್ತು ಮುಖಗಳ ಕಾರಂತರ ಬಗ್ಗೆ ಓದುಗರ ಮನಸ್ಸಿನಲ್ಲಿ ಕೃತಜ್ಞತೆ ಮೂಡುತ್ತದೆ.

**ಅನುವಾದಿತ ವಿಶ್ವಕೋಶ:** ಕನ್ನಡ ವಿಶ್ವಕೋಶ ಚರಿತ್ರೆಯಲ್ಲಿ ಗಮನಾರ್ಹವಾದ ಒಂದು ಗ್ರಂಥ 1927ರಲ್ಲಿ ಪ್ರಕಟವಾಯಿತು. ಬೆಂಗಳೂರಿನ ಟ್ರ್ಯಾಕ್ ಅಂಡ್ ಬುಕ್ ಸೊಸೈಟಿಯವರು ಪ್ರಕಟಿಸಿರುವ ಈ ಎರಡು ಸಂಪುಟಗಳ ಹೆಸರು 'ಹೊಸ ಒಡಂಬಡಿಕೆಯ ವೇದಕೋಶ' ಎಂದು. ಸಂಪಾದಕರು ಚಿಂತಾಮಣಿ ಕೇಲೆಬ್ ಮತ್ತು ಇ ಸ್ಟಾಂಲೆ ಎಡ್ವರ್ಡ್ಸ್. ಇದರಲ್ಲಿ ಕ್ರೈಸ್ತಧರ್ಮ, ಪುರಾಣ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಅಕಾರಾದಿಯಾಗಿ ಕೊಡಲಾಗಿದೆ. ತಮಿಳಿನಲ್ಲಿ ಇದು ಮೊದಲು ಅಚ್ಚಾಗಿದ್ದು ಅನಂತರ ಹೆಚ್ಚಿನ ವಿವರಗಳೊಂದಿಗೆ ಕನ್ನಡಕ್ಕೆ ಅನುವಾದಗೊಂಡಿದೆ. ಇವನ್ನು ಬಾಲಪಾಠಗಳು ಎನ್ನಲಾಗಿದೆ. ಅಂದರೆ ಕ್ರೈಸ್ತಧರ್ಮಾದಿಗಳನ್ನು ತಿಳಿಯಬಯಸುವವರಿಗೆ ಇದು ಪ್ರವೇಶವಿದ್ದಂತೆ. ಇಲ್ಲಿಯ ಲೇಖನಗಳು ಅಧಿಕೃತವಾಗಿವೆ. ಭಾಷೆ ಲಲಿತವಾಗಿದೆ. ಪ್ರತಿವಿಷಯಕ್ಕೂ ವಿಪುಲವಾಗಿ ಆಧಾರಗಳನ್ನು ಕೊಡಲಾಗಿದೆ. ಭಾಷಾದೃಷ್ಟಿಯಿಂದಲೂ ಈ ಗ್ರಂಥ ವಿಚಾರಯೋಗ್ಯವಾಗಿದೆ.

**ಕನ್ನಡ ವಿಶ್ವಕೋಶ:** 14 ಸಂಪುಟಗಳ ಸಾಮಾನ್ಯ ವಿಶ್ವಕೋಶ. ಈ ಯೋಜನೆಯಂತೆ ಈಗ ಎಲ್ಲ ಸಂಪುಟಗಳೂ ಪ್ರಕಟವಾಗಿವೆ (2005). 1969ರ ನವೆಂಬರ್ 21ರಂದು ಮೊದಲ ಸಂಪುಟ ಬಿಡುಗಡೆಯಾಯಿತು. 20 ಮಾರ್ಚ್ 2005ರಂದು 14ನೆಯ ಸಂಪುಟ ಬಡುಗಡೆಯಾಯಿತು. ಇದರ ಸಂಕ್ಷಿಪ್ತ ಚರಿತ್ರೆ ಮತ್ತು ವಿವರಗಳು ಹೀಗಿವೆ:

1954ರಷ್ಟು ಹಿಂದೆಯೇ ಕೆ.ವಿ.ಪುಟ್ಟಪ್ಪನವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಈ ಬಗ್ಗೆ ಯೋಜನೆಯೊಂದನ್ನು ಸಿದ್ಧಪಡಿಸಿ ಮೈಸೂರು ಸರ್ಕಾರಕ್ಕೆ ಒಪ್ಪಿಸಿತು. ಈ ಯೋಜನೆಯ ಪೂರೈಕೆಗೆ ವಿದ್ಯಾಭ್ಯಾಸ ಇಲಾಖೆಯ ಅಂಗವಾಗಿ ಒಂದು ಪ್ರತ್ಯೇಕ ಭಾಗವನ್ನೆ ಸರ್ಕಾರ ತೆರೆಯಿತಾದರೂ ಈ ಕೆಲಸ ನಿಧಾನಗತಿಯಲ್ಲಿ ನಡೆದಿತ್ತು. ಹತ್ತು ವರ್ಷ ಕಳೆದ ಮೇಲೂ ಪ್ರಥಮ ಸಂಪುಟ ಬಿಡುಗಡೆಯಾಗುವ ಚಿಹ್ನೆಗಳೇ ಇರಲಿಲ್ಲ. ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾದದ್ದು 1968ರಲ್ಲಿ.

ಅದೇ ವರ್ಷ ಮೇ ತಿಂಗಳಿನಲ್ಲಿ ದೇ.ಜವರೇಗೌಡರ ನೇತೃತ್ವದಲ್ಲಿ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಕನ್ನಡ ವಿಶ್ವಕೋಶದ ಕಾರ್ಯ ವ್ಯವಸ್ಥಿತವಾಗಿ ಆರಂಭವಾಯಿತು. ಮೊದಲ ಕೆಲವು ತಿಂಗಳುಗಳಲ್ಲಿ ಎದುರಾದ ವಿಘ್ನಗಳು ಅನೇಕ. ಕಾರ್ಯ ಕೈಗೊಳ್ಳಲು ಅಗತ್ಯವಾದ ಸೂಕ್ತ ಸಿಬ್ಬಂದಿಯ ಅಭಾವ, ವಿಷಯಗಳ ಮತ್ತು ಲೇಖಕರ ಆಯ್ಕೆ, ವಿಶ್ವಕೋಶದ ಸ್ವರೂಪ ನಿಷ್ಕರ್ಷೆ, ಚಿತ್ರರಚನೆ, ಲೇಖನಗಳ ಬೆರಳಚ್ಚು, ಮುದ್ರಣಕಾರ್ಯ ಇವು ಪರಿಹಾರವಾಗಬೇಕಾಗಿದ್ದ ಕೆಲವು ಸಮಸ್ಯೆಗಳು. ಒಟ್ಟಿನಲ್ಲಿ ವಿಶ್ವಕೋಶ ತನ್ನದೇ ಆದ ವಿಧಾನವೊಂದನ್ನು ರೂಪಿಸಿಕೊಳ್ಳುವುದು ಅವಶ್ಯವಾಗಿತ್ತು. ಆ ವರ್ಷ ಕಳೆಯುವುದರೊಳಗೆ ಕಾರ್ಯದ ಸಮಗ್ರ ಯೋಜನೆ ಸಿದ್ಧವಾಯಿತು. 1969 ಅಂತ್ಯವಾಗುವ ಮುನ್ನವೇ ವಿಶ್ವಕೋಶದ ಪ್ರಥಮ ಸಂಪುಟವನ್ನು ಜನತೆಯ ಕೈಯಲ್ಲಿಡಬಹುದೆಂಬ ಭರವಸೆ ಮೂಡಿದ್ದು ಆಗ.

ಕನ್ನಡ ವಿಶ್ವಕೋಶದ ಮೊದಲ ಸಂಪುಟದ ಪ್ರಕಟಣೆ ಕನ್ನಡ ಭಾಷೆಯ ಇತಿಹಾಸದಲ್ಲೊಂದು ಮಹೋಜ್ವಲ ಘಟನೆ. ಈ ಕೋಶ ಮತ್ತೊಂದು ವಿಚಾರವನ್ನೂ ಸ್ಪಷ್ಟಪಡಿಸಿದೆ. ವೈಜ್ಞಾನಿಕ, ಮಾನವಿಕ, ತಾಂತ್ರಿಕ ಯಾವುದೇ ವಿಷಯವನ್ನಾದರೂ ಕನ್ನಡದಲ್ಲಿ ಸರಳವಾಗಿ, ಸುಲಭವಾಗಿ ಹೃದಯವೇದ್ಯವಾಗುವಂತೆ ಹೇಳಬಹುದೆಂಬುದಕ್ಕೆ ಈ ಸಂಪುಟ ಸಾಕ್ಷೀಭೂತವಾಗಿದೆ. ಕನ್ನಡ ವಿಜ್ಞಾನಭಾಷೆಯಾಗಿ ಬೆಳೆದಿಲ್ಲವೆಂಬ ಸೊಲ್ಲು ಎಷ್ಟು ನಿರರ್ಥಕವಾದುದೆಂಬುದನ್ನು ಈ ಸಂಪುಟ ಪ್ರಮಾಣೀಕರಿಸುತ್ತದೆ ಎಂದು ಆಗ ಪ್ರಧಾನ ಸಂಪಾದಕರಾಗಿದ್ದ ದೇ. ಜವರೇಗೌಡ ಅವರು ಪೀಠಿಕೆಯಲ್ಲಿ ಬರೆದಿದ್ದಾರೆ.

**ಸಂಪುಟಗಳ ಮುಖ್ಯ ಲಕ್ಷಣಗಳಿವು:** ಗ್ರಂಥದ ಆಕಾರ ಡೆಮಿ ಚತುರ್ಥಾಕಾರದ ಸು.1000 ಪುಟ, 10 ಪಾಯಿಂಟ್ ಅಕ್ಷರದಲ್ಲಿ ಆಕರ್ಷಕ ಮುದ್ರಣ. ಕನ್ನಡ ವರ್ಣಮಾಲೆಯ ಅಕಾರದಿಂದಾರಂಭವಾಗಿ ಳಕಾರದ ವರೆಗೆ ವಿವಿಧ ವಿಷಯಗಳ ಮೇಲೆ ಲೇಖನಗಳು. ಆವಶ್ಯವಿದ್ದೆಡೆಯಲ್ಲೆಲ್ಲ ಚಿತ್ರ. ಇವುಗಳಲ್ಲಿ ಹಲವು ಹೊಳಪು ಕಾಗದದ ಮೇಲೆ ಅಚ್ಚಾಗಿರುವುದಲ್ಲದೆ ಕೆಲವು ವರ್ಣರಂಜಿತ. ಇಂಗ್ಲಿಷಿನ ಬ್ರಿಟಾನಿಕ ವಿಶ್ವಕೋಶದ ಮಾದರಿಯಲ್ಲೆ ಇದರ ವಿನ್ಯಾಸ.

ಸಾಮಾನ್ಯ ವಿಶ್ವಕೋಶದಲ್ಲಿ ಈ ಶಾಸ್ತ್ರಗಳೆಲ್ಲ ಅಡಕವಾಗಿವೆ: ಸೌಂದರ್ಯ ತತ್ತ್ವ, ಪಾಶ್ಚಾತ್ಯಸಾಹಿತ್ಯ, ಪೌರಸ್ತ್ಯಸಾಹಿತ್ಯ, ಜನಪದಕಲೆ, ಜೀವನ, ಅರ್ಥಶಾಸ್ತ್ರ, ತತ್ತ್ವ ಮತ್ತು ಧರ್ಮ, ಸಮಾಜ ವಿಜ್ಞಾನ, ಪ್ರಾಕ್ತನಶಾಸ್ತ್ರ, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ವಾಣಿಜ್ಯ, ವ್ಯಾಪಾರ, ಶಿಕ್ಷಣ, ಸಮರ ವಿಜ್ಞಾನ, ನ್ಯಾಯಶಾಸ್ತ್ರ, ಮನೋವಿಜ್ಞಾನ, ಲಲಿತಕಲೆ, ಉಪಯುಕ್ತ ಕಲೆ, ಸಂಸ್ಕೃತ ಭಾಷೆ, ಸಾಹಿತ್ಯ, ಕನ್ನಡ ಭಾಷೆ, ಸಾಹಿತ್ಯ, ಭಾಷಾ ವಿಜ್ಞಾನ, ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ಭೂವಿಜ್ಞಾನ, ವೈದ್ಯ, ಆಯುರ್ವೇದ, ಯುನಾನಿ, ಹೋಮಿಯೋಪತಿ, ಕೃಷಿ, ತೋಟಗಾರಿಕೆ, ಪಶುವೈದ್ಯ, ಶಿಲ್ಪ, ಕ್ರೀಡೆ, ಪತ್ರಿಕೋದ್ಯಮ, ಗ್ರಂಥಾಲಯ ವಿಜ್ಞಾನ, ಮುದ್ರಣ ವಿಜ್ಞಾನ, ಸಂಖ್ಯಾಶಾಸ್ತ್ರ, ಅರಣ್ಯ ವಿಜ್ಞಾನ ಇತ್ಯಾದಿ.

ಕನ್ನಡ ವಿಶ್ವಕೋಶ ಕಚೇರಿಯ ಕಾರ್ಯವಿಧಾನದ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಬರೆಯಬಹುದು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ವಿಶ್ವಕೋಶದ ಅಧಿಕಾರ ಪ್ರಯುಕ್ತ (ಎಕ್ಸ್ – ಅಫಿಷಿಯೋ) ಪ್ರಧಾನ ಸಂಪಾದಕರು. ಈ ಕಾರ್ಯ ನಿರ್ವಹಣೆಯಲ್ಲಿ ಇವರಿಗೆ ನೆರವು ನೀಡುವವರು ನಾಲ್ವರು ಸಂಪಾದಕರು. ವಿಜ್ಞಾನಕ್ಕಾಗಿ ಒಬ್ಬರು, ಮಾನವಿಕ ವಿಭಾಗಕ್ಕೊಬ್ಬರು, ಇಡೀ ಸಂಪಾದನ ಕಾರ್ಯದ ಸಂಯೋಜನಕ್ಕಾಗಿ ಒಬ್ಬರು, ಯೋಜನೆಯ ಕಾರ್ಯನಿರ್ವಹಣೆಗಾಗಿ ಒಬ್ಬರು, ಸಹ ಸಂಪಾದಕರು ಒಬ್ಬರು, ಇವರ ಜೊತೆಗೆ ಮೂವರು ಸಹಾಯಕ ಸಂಪಾದಕರು ಮತ್ತು ಐವರು ಉಪಸಂಪಾದಕರು. ಈಗ ಈ ವ್ಯವಸ್ಥೆಯಲ್ಲಿ ಕಾಲನುಕ್ರಮದಲ್ಲಿ ಅನೇಕ ಬದಲಾವಣೆಗಳಾಗಿವೆ. ಲೇಖನಗಳನ್ನು ಬರೆಯುವ ಕಾರ್ಯವನ್ನು ವಿವಿಧ ಕ್ಷೇತ್ರಗಳಲ್ಲಿ ಸಮರ್ಥ ವಿದ್ವಾಂಸರಿಗೆ ಒಪ್ಪಿಸಲಾಗುತ್ತದೆ. ಈ ಲೇಖನಗಳನ್ನು ಅವರು ಕನ್ನಡದಲ್ಲೇ ಬರೆಯಬೇಕೆಂಬ ಕಡ್ಡಾಯವೇನೂ ಇಲ್ಲ. ಆಧುನಿಕ ವಿಷಯಗಳನ್ನು ಸರಳ ಶೈಲಿಯಲ್ಲಿ ನಿಷ್ಪಕ್ಷವಾಗಿ ನಿರೂಪಿಸಬೇಕೆಂಬುದು ವಿಶ್ವಕೋಶಗಳ ಮುಖ್ಯ ಉದ್ದೇಶ. ಹೀಗೆ ಸಿದ್ಧವಾದ ಲೇಖನಗಳನ್ನು ಸಂಪಾದಕರು, ಪರಿಶೀಲಿಸುವರಲ್ಲದೆ ಸಂಬಂಧಪಟ್ಟ ಕೆಲವನ್ನು ಗೌರವ ಸಮಾಲೋಚಕರ ಅವಗಾಹನೆಗಾಗಿಯೂ ಕಳುಹಿಸಲಾಗುವುದು. ವಿಷಯದ ಹೂರಣ, ಅಭಿವ್ಯಕ್ತಿ, ಚಿತ್ರಗಳು, ಆವಶ್ಯವಾದ ಹಾಗೂ ಲಭ್ಯವಿರುವ ಹೊಸ ವಿಚಾರಗಳ ಅಡಕ, ಶೈಲಿ ಮತ್ತು ತಾಂತ್ರಿಕ ಶಬ್ದಗಳ ಏಕರೂಪತೆ, ಸೂಕ್ತ ಸ್ವರೂಪ ಇವು ಸಂಪಾದಕರು ಮುಖ್ಯವಾಗಿ ಗಮನಿಸುವ ವಿಚಾರ. ಲೇಖಕರಿಂದ ತರಿಸಿದ ಲೇಖನಗಳೇ ಅಲ್ಲದೆ ಹೊಸ ಲೇಖನಗಳನ್ನೂ ಸಂಪಾದಕ ವರ್ಗದವರು ಬರೆಯುತ್ತಾರೆ. ಸದಾ ಕಣ್ಣಿಟ್ಟು ವಿಷಯ ವೈವಿಧ್ಯವನ್ನೂ ಅದರ ವಿಭಿನ್ನ ಮುಖಗಳನ್ನೂ ಒದಗಿಸುವುದು ಸಂಪಾದಕ ವರ್ಗದ ವಿಶಿಷ್ಟ ಕಾರ್ಯಭಾಗ.

ಹೀಗೆ ಶಾಸ್ತ್ರೀಯವಾಗಿ ವೈಜ್ಞಾನಿಕವಾಗಿ ಸಿದ್ಧವಾದ ವಿಶ್ವಕೋಶದ ಒಂದೊಂದು ಹೊಸ ಸಂಪುಟದ ಬಿಡುಗಡೆಯೊಂದಿಗೆ ಕನ್ನಡ ಭಾಷೆಗೆ ಒಂದೊಂದು ಹೊಸ ಆಯಾಮ ಲಭ್ಯವಾಗಿ ಭಾಷೆಗೆ ದೊರಕಿದ ಈ ಹೊಸ ಸತ್ತ್ವಸಂಪತ್ತಿಯಿಂದ ಕೋಶದ ಮುಂದಿನ ಸಂಪುಟಗಳು ಮತ್ತಷ್ಟು ಶ್ರೀಮಂತಗೊಂಡಿವೆ.

**ಕನ್ನಡ ವಿಷಯ ವಿಶ್ವಕೋಶ:** ಸಾಮಾನ್ಯ ವಿಶ್ವಕೋಶಗಳು ಗಳಿಸಿದ ಯಶಸ್ಸಿನ ದೃಷ್ಟಿಯಿಂದ ವಿಷಯ ವಿಶ್ವಕೋಶಗಳನ್ನು ಹೊರತರಲು ಬೃಹದ್ಯೋಜನೆಯೊಂದನ್ನು ತಯಾರಿಸಲಾಯಿತು. ಪ್ರಾಣಿವಿಜ್ಞಾನ, ಗಣಿತವಿಜ್ಞಾನ, ವೈದ್ಯವಿಜ್ಞಾನ ಮುಂತಾದ 16 ವಿಜ್ಞಾನ ವಿಷಯಗಳು; ಕರ್ನಾಟಕ, ಇತಿಹಾಸ, ತತ್ತ್ವಶಾಸ್ತ್ರ, ಭಾಷಾವಿಜ್ಞಾನ ಮುಂತಾದ 14 ಮಾನವಿಕ ಶಾಸ್ತ್ರ ವಿಷಯಗಳು – ಹೀಗೆ ಒಟ್ಟು 30 ಸ್ವತಂತ್ರ ಸಂಪುಟಗಳನ್ನು ಹೊರತರುವ ಯೋಜನೆ ಇದಾಗಿದೆ. ಇಡೀ ಯೋಜನೆಯ ವೆಚ್ಚ ಸು.90ಲಕ್ಷ ರೂಪಾಯಿಗಳು. ಕರ್ನಾಟಕ ಸರ್ಕಾರ ಈ ಯೋಜನೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಈ ಹೊಣೆಯನ್ನೂ ಮೈಸೂರು ವಿಶ್ವವಿದ್ಯಾನಿಲಯಕ್ಕೇ ವಹಿಸಿಕೊಟ್ಟಿತ್ತು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಪ್ರಾರಂಭವಾದ ಈ ಕೆಲಸದಲ್ಲಿ ವಿಷಯ ವಿಶ್ವಕೋಶ ಯೋಜನೆಯ ಮೊದಲ ಸಂಪುಟವಾಗಿ ಕರ್ನಾಟಕ –ವಿಷಯ ವಿಶ್ವಕೋಶ ಪ್ರಕಟಿಸಲಾಯಿತು (1979). ಸುದೀರ್ಘ ಇತಿಹಾಸದ ಶ್ರೀಮಂತ ಸಂಸ್ಕೃತಿಯ ಬಹುಮುಖ ಪ್ರಗತಿಯ ಕರ್ನಾಟಕವನ್ನು ತಿಳಿಯಲು ಈ ವಿಶ್ವಕೋಶವೊಂದು ಅಧಿಕೃತ ಆಕರವಾಗಿದೆ. ಈ ವಿಶ್ವಕೋಶ ವಿಷಯದ ಆಯ್ಕೆ, ನಿರೂಪಣೆ ಮತ್ತು ತಾಂತ್ರಿಕತೆಯ ದೃಷ್ಟಿಯಿಂದ ಸಾಮಾನ್ಯವಿಶ್ವಕೋಶಕ್ಕಿಂತ ಭಿನ್ನವಾಗಿದೆ. 1790 ಲೇಖನಗಳನ್ನೊಳಗೊಂಡ ಈ ಹೆಬ್ಬೊತ್ತಿಗೆ ಕನ್ನಡ ಪ್ರಕಟಣೆಯಲ್ಲಿ ಒಂದು ಮೈಲಿಗಲ್ಲು. ಕರ್ನಾಟಕ ವಿಷಯ ವಿಶ್ವಕೋಶದ ಪ್ರತಿಗಳೆಲ್ಲ ಮಾರಾಟವಾಗಿ ಅದರ ಪುನರ್ಮುದ್ರಣ ಮತ್ತು ಪರಿಷ್ಕರಣೆಗೆ ಬೇಡಿಕೆ ಹೆಚ್ಚಿದುದನ್ನು ಮನಗಂಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಈ ಸಂಪುಟದ ಪರಿಷ್ಕರಣೆ ಹಾಗೂ ಪುನರ್ ಮುದ್ರಣ ಕಾರ್ಯವನ್ನು ಪೂರೈಸಿ ಎರಡು ಸಂಪುಟಗಳಲ್ಲಿ

ಮುದ್ರಿಸಿದೆ (). ಇದಲ್ಲದೆ ಜಾನಪದ, ಪ್ರಾಣಿವಿಜ್ಞಾನ, ಇತಿಹಾಸ ಮತ್ತು ಪ್ರಾಕ್ತನ, ಸಸ್ಯವಿಜ್ಞಾನ ಎಂಬ ವಿಷಯ ವಿಶ್ವಕೋಶ ಸಂಪುಟಗಳೂ ಪ್ರಕಟಗೊಂಡಿವೆ. ಇದರ ಜೊತೆಗೆ ಕನ್ನಡ ವಿಶ್ವಕೊಶದ 14 ಸಂಪುಗಳನ್ನು ಅಡಕತಟ್ಟೆಯಲ್ಲಿ (ಸಿಡಿ) ತರುವುದರೊಂದಿಗೆ ಪರಿಷ್ಕರಿಸಿ ಪುನರ್ ಮುದ್ರಿಸುವ ಕೆಲಸವೂ ನಿರಂತರವಾಗಿ ನಡೆದಿದೆ. ಮೊದಲ 7 ಸಂಪುಟಗಳು ಅಲ್ಪಸ್ವಲ್ಪ ಪರಿಷ್ಕಾರಗಳೊಂದಿಗೆ ಪುನರ್‌ಮುದ್ರಣಗೊಂಡಿದ್ದು (2013–14ರಲ್ಲಿ) ಹಳೆಯ 6 ಸಂಪುಟಗಳು ಕ್ರಿಯೆಟಿವ್ ಕಾಮನ್ಸ್ ಪರವಾನಗಿಯಡಿಯಲ್ಲಿ ವಿಕಿಪೀಡಿಯಾದಲ್ಲಿ ಅಂತರ್ಜಾಲದಲ್ಲಿ ಬಿಡುಗಡೆಗೊಂಡಿವೆ (15–07–2014).

**ಜ್ಞಾನಗಂಗೋತ್ರಿ:** ಏಳು ಸಂಪುಟಗಳ ಕಿರಿಯರ ವಿಶ್ವಕೋಶ. ಕನ್ನಡ ವಿಶ್ವಕೋಶ ರಚನೆಯ ಹೊಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ ವಹಿಸಿಕೊಂಡ ಸರಿಸುಮಾರಿನಲ್ಲೆ (1968) ಇದರ ಯೋಜನೆಯೂ ಆರಂಭವಾಯಿತು. ಬೆಂಗಳೂರಿನ ಕರ್ನಾಟಕ ಸಹಕಾರಿ ಪ್ರಕಾಶನದವರಿಗೆ ಈ ಯೋಜನೆಯನ್ನು ವಹಿಸಿಕೊಟ್ಟ ಸರ್ಕಾರ ಈ ಕಾರ್ಯಕ್ಕಾಗಿ 34 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತ್ತು. ಜ್ಞಾನಗಂಗೋತ್ರಿಯ ಸಂಪಾದಕ ಮಂಡಳಿಗೆ ದೇಜಗೌ ಅಧ್ಯಕ್ಷರೂ ನಿರಂಜನರು ನಿಯಂತ್ರಕರೂ ಹಾಗೂ ಪ್ರಧಾನ ಸಂಪಾದಕರೂ ಆಗಿದ್ದರು. ಇವರಲ್ಲದೆ ಉಪಸಂಪಾದಕರೂ ವ್ಯವಸ್ಥಾಪಕ ಸಂಪಾದಕರೂ ಆಡಳಿತಾಧಿಕಾರಿಗಳೂ ಇದ್ದರು. ಮನುಕುಲದ ಕಥೆ; ಜೀವಜಗತ್ತು; ಭೌತಜಗತ್ತು; ಯಂತ್ರ ಜಗತ್ತು; ಕಲೆ, ಸಾಹಿತ್ಯ; ಕ್ರೀಡೆ, ಮನೋಲ್ಲಾಸ; ಭಾರತದ ಕಥೆ ಎಂಬ ಏಳು ಸಂಪುಟಗಳು ಪ್ರಕಟಗೊಂಡಿವೆ (1970–1974). ಒಂದೊಂದು ಸಂಪುಟದ ಬೆಲೆ ಐವತ್ತು ರೂಪಾಯಿ. ಏಳೂ ಸಂಪುಟಗಳ ಒಟ್ಟು ಬೆಲೆ 350 ರೂಪಾಯಿ. ಮನುಕುಲದ ಕಥೆಯಲ್ಲಿ ನವಜೀವನದಿಂದ ಚಂದ್ರಯಾನದ ತನಕ, ನಾಗರಿಕತೆಗಳು, ಧರ್ಮಗಳು, ತತ್ತ್ವಜ್ಞಾನಿಗಳು, ರಾಜ್ಯಗಳ ಉದಯ, ರಾಜಕೀಯ ವ್ಯವಸ್ಥೆಗಳು, ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಭೂಗೋಳ, ಇತಿಹಾಸ ಪ್ರಸಿದ್ಧ ಸ್ತ್ರೀ ಪುರುಷರು – ಈ ವಿಷಯಗಳಿಗೆ ಸಂಬಂಧಪಟ್ಟಂತೆ ಲೇಖನಗಳಿವೆ. ಜೀವಜಗತ್ತಿನಲ್ಲಿ ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಶರೀರವಿಜ್ಞಾನ, ಮನೋವಿಜ್ಞಾನ, ವೈದ್ಯಕೀಯ, ಶಸ್ತ್ರಚಿಕಿತ್ಸೆ, ಕೃಷಿ, ಮತ್ಸ್ಯೋದ್ಯಮ, ತೋಟಗಾರಿಕೆ, ವಿಖ್ಯಾತ ಜೀವವಿಜ್ಞಾನಿಗಳು – ಇವುಗಳ ವಿಷಯ ನಿರೂಪಿತವಾಗಿದೆ. ಭೌತಜಗತ್ತಿನಲ್ಲಿ ಭೌತವಿಜ್ಞಾನ, ರಸಾಯನ ವಿಜ್ಞಾನ, ಖಗೋಳ ವಿಜ್ಞಾನ, ಗಣಿತ, ಭೂವಿಜ್ಞಾನ, ಪವನ ವಿಜ್ಞಾನ, ವ್ಯೋಮಯಾನ, ಗ್ರಹಾಂತರ ಯಾನ, ಈ ಕ್ಷೇತ್ರದ ಪ್ರಸಿದ್ಧ ವಿಜ್ಞಾನಿಗಳು ಮೊದಲಾದ ವಿಷಯಗಳಿವೆ. ಯಂತ್ರಜಗತ್ತು ಇದರಲ್ಲಿ ಎಂಜಿನಿಯರಿಂಗ್, ಮಿಲಿಟರಿ, ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ತಾಂತ್ರಿಕತೆ, ಘನ, ಲಘು, ಬೃಹತ್ ಪ್ರಮಾಣದ ಕೈಗಾರಿಕೋದ್ಯಮಗಳು, ದೂರ ಸಂಪರ್ಕಸಾಧನ, ಎಲೆಕ್ಟ್ರಾನಿಕ್, ಈ ಕ್ಷೇತ್ರಗಳ ಕೀರ್ತಿಶಾಲಿಗಳು– ಈ ವಿಷಯಗಳಿವೆ. ಕಲೆ ಸಾಹಿತ್ಯದಲ್ಲಿ ನೃತ್ಯ, ಸಂಗೀತ, ನಾಟಕ ಕಲೆ, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ಸಾಹಿತ್ಯ, ಆರಂಭದ ನಾಗರಿಕತೆಯಿಂದ ಆಧುನಿಕ ಅವಧಿಯತನಕ, ಭಾರತೀಯ ಮತ್ತು ಗ್ರೀಕ್ ಮಹಾಕಾವ್ಯಗಳು, ಕರ್ನಾಟಕದ, ಭಾರತದ, ವಿದೇಶಗಳ ಖ್ಯಾತ ಕಲಾವಿದರು, ಸಾಹಿತಿಗಳು ಈ ವಿವಿಧ ವಿಷಯಗಳು ತುಂಬ ಸೊಗಸಾಗಿ ಪ್ರತಿಪಾದಿತವಾಗಿವೆ. ಕ್ರೀಡೆ, ಮನಲ್ಲಾಸದಲ್ಲಿ ಜಗತ್ತಿನ ಕ್ರೀಡೆಗಳು, ಆಟಗಳು, ಶರೀರ ಶಿಕ್ಷಣ, ಪ್ರಸಿದ್ಧ ಕ್ರೀಡಾಪಟುಗಳು, ಒಲಿಂಪಿಕ್ ವೀರರು, ಹವ್ಯಾಸಗಳು, ಮನೋರಂಜನೆಯ ವಿಷಯಗಳು ಇವೆ. ಭಾರತದ ಕಥೆಯು ಚರಿತ್ರ ಪೂರ್ವ ಕಾಲಾವಧಿಯಿಂದ ಗಾಂಧೀ ಯುಗದ ತನಕ, ಪ್ರವಾಸಿಗರು ಕಂಡ ಭಾರತ, ಪ್ರಾಚೀನ ಭಾರತದಲ್ಲಿ ವಿಜ್ಞಾನ ಸಾಹಿತ್ಯ, ಪುರಾಣ ವ್ಯಕ್ತಿಗಳು, ಧರ್ಮೋಪದೇಶಕರು, ರಾಷ್ಟ್ರ ನಿರ್ಮಾಪಕರು, ಮಹಾನ್ ಆಡಳಿತಗಾರರು, ದಾಸ್ಯ–ಸ್ವಾತಂತ್ರ್ಯ, ಭಾರತದ ಭೂಗೋಳ, ಕೃಷಿ, ಕೈಗಾರಿಕೋದ್ಯಮ, ಭಾರತ ಮತ್ತು ವ್ಯೋಮಯುಗ, ವಿವಿಧತೆಯಲ್ಲಿ ಏಕತೆ – ಈ ಮೊದಲಾದ ವಿಷಯಗಳಿಂದ ತುಂಬಿದೆ. ಒಟ್ಟು ಏಳು ಸಂಪುಟಗಳಲ್ಲಿ 17 ಲಕ್ಷ ಪದಗಳೂ 3782 ಲೇಖನಗಳೂ 3800 ರೇಖಾಚಿತ್ರಗಳೂ 3750 ಛಾಯಾಚಿತ್ರಗಳೂ 291 ವರ್ಣಚಿತ್ರಗಳೂ ಸಂದರ್ಭಸೂಚಿಯ ಪದಗಳೂ ಇವೆ. ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಕನ್ನಡ ನಾಡಿನ ಅನೇಕ ಪ್ರಸಿದ್ಧ ಲೇಖಕರಿಂದ ಮೂಲ ಸಾಹಿತ್ಯವನ್ನೂ ಸಿದ್ಧ ಲೇಖನಗಳನ್ನೂ ತರಿಸಿಕೊಳ್ಳಲಾಗಿದೆ. 11 ರಿಂದ 18 ವರ್ಷ ವಯಸ್ಸಿನವರನ್ನು ಉದ್ದೇಶದಲ್ಲಿಟ್ಟುಕೊಂಡು ಸಿದ್ಧಮಾಡಿದ ಈ ಗ್ರಂಥಗಳಲ್ಲಿ ವಿಷಯ ವೈವಿಧ್ಯ, ಅವುಗಳ ಆಯ್ಕೆ, ನಿರೂಪಣೆ, ವಿಶ್ಲೇಷಣೆ, ಸಂಯೋಜನೆ, ವಿವರಣೆ ಉತ್ಕೃಷ್ಟತೆಯಿಂದ ಕೂಡಿದೆ. ಕನ್ನಡ ಜ್ಞಾನ ಸಾಹಿತ್ಯದ ಇತಿಹಾಸದಲ್ಲಿ ಜ್ಞಾನಗಂಗೋತ್ರಿಗೆ ಒಂದು ಗಣನೀಯ ಸ್ಥಾನ ದೊರಕುತ್ತದೆ ಎಂಬುದನ್ನು ಈ ಸಂಪುಟಗಳು ಸಿದ್ಧಪಡಿಸಿ ತೋರುತ್ತವೆ.

**ಕನ್ನಡ ಜಾನಪದ ವಿಶ್ವಕೋಶ:** ಕನ್ನಡ ಸಾಹಿತ್ಯ ಪರಿಷತ್ತು ಹೆಸರಾಂತ ಜಾನಪದ ವಿದ್ವಾಂಸ ಚಂದ್ರಶೇಖರ ಕಂಬಾರ (ನೋಡಿ) ಅವರ ಸಂಪಾದಕತ್ವದಲ್ಲಿ ಕನ್ನಡ ಜಾನಪದ ವಿಶ್ವಕೋಶವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ (1985). ಕನ್ನಡ ನಾಡಿನ ನಂಬಿಕೆ, ಹಾಡು, ಸಂಪ್ರದಾಯ, ಕಥೆ, ಪುರಾಣ, ಗಾದೆ, ಬಯಲಾಟಗಳಂತಹ ಜಾನಪದ ಪ್ರಕಾರಗಳನ್ನು ಕುರಿತಂತೆ ಈ ಸಂಪುಟದಲ್ಲಿ ವಿಶ್ಲೇಷಿಸಲಾಗಿದೆ. ಜನಪದ ಆಚರಣೆಗಳು, ಆಟಗಳು, ಒಡಪುಗಳು, ಒಗಟುಗಳು, ಐತಿಹ್ಯಗಳು, ಶಕುನಗಳು, ಪ್ರಾಣಿಪಕ್ಷಿಗಳು, ಖನಿಜಗಳು, ಮಳೆ–ಗಾಳಿ, ನಕ್ಷತ್ರಗಳು, ಲಾವಣಿಗಳು, ಹಬ್ಬ–ಜಾತ್ರೆಗಳು, ಆಹಾರ ಸಂಪ್ರದಾಯಗಳು ವಿವಿಧ ಜನಾಂಗಗಳು, ಶವಸಂಸ್ಕಾರ ಪದ್ಧತಿಗಳು – ಮುಂತಾದ ಹತ್ತಾರು ವಿಷಯಗಳನ್ನು ಕುರಿತಂತೆ ಇದರಲ್ಲಿ ಲೇಖನಗಳಿವೆ. ಜಾನಪದ ವಿದ್ಯಾರ್ಥಿಗಳನ್ನಷ್ಟೇ ಅಲ್ಲದೆ ಈ ಕ್ಷೇತ್ರದಲ್ಲಿ ಆಸಕ್ತಿ ಇರುವ ಸಾಮಾನ್ಯರನ್ನೂ ಗಮನದಲ್ಲಿಟ್ಟುಕೊಂಡು ಜಾನಪದಕ್ಕೆ ಸಂಬಂಧಪಟ್ಟ ಲೇಖನ, ಕಲ್ಪನೆಗಳನ್ನು, ಸಿದ್ಧಾಂತಗಳನ್ನು, ವಿದೇಶಗಳ ಜಾನಪದ ಸ್ವರೂಪವನ್ನು ಅವುಗಳ ಅಧ್ಯಯನ ಸಾಧನೆಗಳನ್ನು ಇಲ್ಲಿ ವಿಶದವಾಗಿ ನಿರೂಪಿಸಲಾಗಿದೆ.

**ಹಂಪಿ ಕನ್ನಡ ವಿಶ್ವವಿದ್ಯಾನಿಯಲದ ವಿಶ್ವಕೋಶಗಳು:** ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿವಿಧ ವಿಶ್ವಕೋಶಗಳು ಎಂಬ ಹನ್ನೆರಡು ಸಂಪುಟಗಳ ಯೋಜನೆಯೊಂದನ್ನು ಕೈಗೆತ್ತಿಕೊಂಡಿದೆ. ಈಗಾಗಲೆ 8 ವಿಷಯಗಳಿಗೆ ಸಂಬಂಧಿಸಿದಂತೆ ಕೃತಿಗಳನ್ನು ಪ್ರಕಟಿಸಿದೆ: ವೈದ್ಯ, ಜನಪದ ಕಲೆ, ಸಮಾಜಕಾರ್ಯ, ಭಾಷೆ, ಧರ್ಮ, ಕರಕುಶಲ ಕಲೆ. ಈ ವಿಶ್ವಕೋಶಗಳು ವಿಷಯ ವೈವಿಧ್ಯತೆಯಿಂದ ಕೂಡಿದ್ದು ನಾಡಿನ ಹೆಸರಾಂತ ವಿದ್ವಾಂಸರು ಲೇಖನಗಳನ್ನು ಬರೆದಿದ್ದಾರೆ.

**ಕಿರಿಯರ ಕರ್ನಾಟಕ ವಿಶ್ವಕೋಶ:** ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಸಂಪೂರ್ಣ ಚಿತ್ರಣವನ್ನು ಕನ್ನಡ ನಾಡಿನ ಕಿರಿಯರಿಗೆ ನೀಡುವ ಉದ್ದೇಶದಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯ ಕಿರಿಯರ ಕರ್ನಾಟಕ ವಿಶ್ವಕೋಶವನ್ನು ಪ್ರಕಟಿಸಿದೆ. 12 ರಿಂದ 17 ವರ್ಷದ ವಯೋಮಾನದವರನ್ನು ದೃಷ್ಟಿಯಲ್ಲಿರಿಸಿಕೊಂಡು ಈ ಸಚಿತ್ರ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಕರ್ನಾಟಕದ ಇತಿಹಾಸ, ಭಾಷೆ, ಸಾಹಿತ್ಯ, ಪತ್ರಿಕೋದ್ಯಮ, ಕೃಷಿ, ಕೈಗಾರಿಕೆ, ಉದ್ಯೋಗ, ಜಾನಪದ, ಶಿಕ್ಷಣ ಮೊದಲಾದ ವಿಷಯಗಳನ್ನು ಕುರಿತು ಸರಳ ನಿರೂಪಣೆ ಇದೆ. *

**ಕನ್ನಡದಲ್ಲಿ ಶತಕಸಾಹಿತ್ಯ :** ಕನ್ನಡದ ಚಂಪೂ, ಷಟ್ಪದಿ, ವಚನ, ತ್ರಿಪದಿ, ಸಾಂಗತ್ಯ ಮೊದಲಾದ ಸಾಹಿತ್ಯ ಪ್ರಕಾರಗಳಂತೆ ಶತಕ ಸಾಹಿತ್ಯವೂ ಒಂದು. ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕ ಎಂಬ ಹೆಸರಿನಿಂದ ಕರೆಯುತ್ತಾರೆ. ಕಂದ, ವೃತ್ತ, ಷಟ್ಪದಿ, ಸಾಂಗತ್ಯ ಮೊದಲಾದ ಛಂದಸ್ಸಿನಲ್ಲಿ ರಚಿತವಾಗಿರುತ್ತವೆ. ಇದು ಆತ್ಮನಿಷ್ಠವಾದ, ಭಾವನಿಷ್ಠವಾದ ಒಂದು ಕಾವ್ಯ ಪ್ರಕಾರ. ಮಹಾಕಾವ್ಯ, ಖಂಡಕಾವ್ಯಗಳಂತೆ ವಸ್ತುನಿಷ್ಠವಲ್ಲ, ಕಥಾವಸ್ತುವನ್ನೊಳಗೊಂಡಿರುವುದಿಲ್ಲ. ಕವಿಯ ಮನೋಲಹರಿ ಹರಿದಂತೆ ಹಲವಾರು ಸಂದರ್ಭಗಳಲ್ಲಿ ರಚಿತವಾದ ಪದ್ಯಗಳು ಒಂದು ವಿಷಯದ ಏಕಸೂತ್ರಕ್ಕೆ ಒಳಗಾಗಿರುತ್ತವೆ. ಆದುದರಿಂದ ಶತಕಗಳನ್ನು ಪ್ರಾಚೀನ ಕಾಲದ ಭಾವಗೀತೆಗಳು ಎನ್ನಬಹುದು. ಭಕ್ತಿ, ಜ್ಞಾನ, ವೈರಾಗ್ಯ, ನೀತಿಗಳನ್ನು ಪ್ರತಿಪಾದಿಸುವುದು ಶತಕಗಳ ಸಾಮಾನ್ಯ ಲಕ್ಷಣ ಎನ್ನಬಹುದು. ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕವೆಂದು ಕರೆವ ವಾಡಿಕೆ ಇದ್ದರೂ ಕನ್ನಡದಲ್ಲಿ 100 ರಿಂದ 128 ಪದ್ಯಗಳಿರುವ ಶತಕಗಳೂ ಕಂಡುಬರುತ್ತವೆ.

ಕನ್ನಡದ ಶತಕ ಸಾಹಿತ್ಯಪ್ರಕಾರ ಸಂಸ್ಕೃತ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು. ಸಂಸ್ಕೃತದಲ್ಲಿ ನ್ಯಾಯಶತಕ, ಭರ್ತೃಹರಿಯ ಶತಕತ್ರಯ, ಮಯೂರನ ಸೂರ್ಯಶತಕ ಮೊದಲಾದವು ಪ್ರಸಿದ್ಧವಾಗಿವೆ. ಕನ್ನಡದಲ್ಲಿ ನಾನೂರಕ್ಕೂ ಹೆಚ್ಚು ಶತಕಗಳಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಇವುಗಳಲ್ಲಿ ಕೆಲವು ಶತಕಗಳ ಕರ್ತೃಗಳು ಯಾರೆಂದು ತಿಳಿಯುವುದಿಲ್ಲ.

ನಾಗವರ್ಮಾಚಾರ್ಯನ (ಸು.1071) ಚಂದ್ರಚೂಡಾಮಣಿ ಶತಕ ಕನ್ನಡದ ಮೊಟ್ಟಮೊದಲನೆಯ ಶತಕ ಗ್ರಂಥ. ಇದಕ್ಕೆ ಜ್ಞಾನಸಾರ ಎಂಬ ಹೆಸರೂ ಇದೆ. ಕೃತಿಯ ವಸ್ತು ವೈರಾಗ್ಯ ಪ್ರತಿಪಾದನೆ. ಬಂಧ ಲಲಿತವಾಗಿಯೂ ಗಂಭೀರವಾಗಿಯೂ ಇದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅನಂತರ ಕೊಂಡುಗುಳಿ ಕೇಶಿರಾಜನ (ಸು.1160) ಷಡಕ್ಷರಕಂದ ಕಂಡುಬರುತ್ತದೆ. ಇದೇ ಕಾಲದಲ್ಲಿ ಕವಿಕಾಮ (ಸು.1200) ಸ್ತನಶತಕವೆಂಬ ಗ್ರಂಥವನ್ನು ರಚಿಸಿರುವುದಾಗಿ ಪಾರ್ಶ್ವನಾಥ ಪುರಾಣದಿಂದ ತಿಳಿದುಬರುತ್ತದೆ. ಆದರೆ ಗ್ರಂಥ ಉಪಲಬ್ಧವಿಲ್ಲ. ಇದು ಬಹುಶಃ ಸಂಸ್ಕೃತದ 'ವಕ್ಷೋಜಶತಕ'ದ ಹಾಗೆ ವರ್ಣನಾತ್ಮಕ ವಾಗಿರಬೇಕು.

ಕನ್ನಡದ ಶತಕ ಸಾಹಿತ್ಯದಲ್ಲಿ ಹರಿಹರನ ಪಾತ್ರ ಪ್ರಮುಖವಾದದ್ದು. ಇವನ ಪಂಪಾಶತಕ, ರಕ್ಷಾಶತಕಗಳು ಉನ್ನತ ಕಾವ್ಯಗುಣಗಳಿಂದ, ಭಾವಗೀತೆಯ ಲಕ್ಷಣಗಳಿಂದ ಕೂಡಿದ್ದು ಸಹೃದಯರ ಮನಸೆಳೆದಿವೆ. ಪಂಪಾಶತಕದಲ್ಲಿ ಈ ಕವಿಯ ಹೃದಯ ತುಡಿದಿರುವಷ್ಟು, ವಿರೂಪಾಕ್ಷನನ್ನು ಸ್ತುತಿಸಿರುವಷ್ಟು, ಆತ್ಮವನ್ನು ಅರ್ಪಿಸಿ ಹಿಗ್ಗಿರುವಷ್ಟು ಮತ್ತಾವ ಕವಿಯ ಹೃದಯವೂ ತುಡಿದಿಲ್ಲ, ಸ್ತುತಿಸಿಲ್ಲ, ಹಿಗ್ಗಿಲ್ಲ. ರಕ್ಷಾಶತಕದಲ್ಲಿ ಕವಿ ತನ್ನ ತಪ್ಪುಒಪ್ಪುಗಳನ್ನೆಲ್ಲ ತೋಡಿಕೊಂಡು ನಿರ್ಲಿಪ್ತನಾಗಿ, ಶಾಂತನಾಗಿ ತನ್ನ ಅಂತರಂಗವನ್ನೆಲ್ಲ ಶೋಧಿಸಿಕೊಂಡಿದ್ದಾನೆ. ಸಂಸಾರದ ಸುಳಿಗೆ ಸಿಕ್ಕ ಜೀವ ಅದರಿಂದ ಹೊರಬರಲು ನಡೆಸಿರುವ ಮನಸ್ಸಿನ ಹೋರಾಟ ಸೂಕ್ಷ್ಮವಾಗಿ ಇದರಲ್ಲಿ ಪ್ರಕಟಗೊಂಡಿದೆ.

ಸು.16ನೆಯ ಶತಮಾನಕ್ಕೆ ಸೇರಿದ ಪುಲಿಗೆರೆ ಸೋಮನ 'ಸೋಮೇಶ್ವರ ಶತಕ' ಕನ್ನಡ ನೀತಿಶತಕಗಳಲ್ಲಿ ಅಗ್ರಸ್ಥಾನವನ್ನು ಪಡೆದು ಜನಪ್ರಿಯವಾಗಿದೆ. ನೀತಿ ಪ್ರತಿಪಾದನೆ ಕೆಲವೆಡೆ ಕಾವ್ಯಾತ್ಮಕವಾಗಿ ನಿರೂಪಿತವಾಗಿರುವುದು ಈ ಶತಕದ ಹೆಗ್ಗಳಿಕೆಗೆ ಕಾರಣವಾಗಿದೆ. ಕೆಲವಂ ಬಲ್ಲವರಿಂದ ಕಲ್ತು, ರವಿಯಾಕಾಶಕೆ ಭೂಷಣಂ, ಚರಿಪಾರಣ್ಯದ ಪಕ್ಷಿಗೊಂದು ತರುಗೊಡ್ಡಾಗಲ್ ಮುಂತಾದ ಪದ್ಯಗಳು ಜನಮನದಲ್ಲಿ ನೆಲಸಿವೆ. ಶೈಲಿ ಅನುಭವದ ನುಡಿಗಳಿಂದ, ಗಾದೆ ಮಾತುಗಳಂಥ ಸೂಕ್ತಿಗಳಿಂದ, ಜನಸಾಮಾನ್ಯರ ಹೃದಯಕ್ಕೆ ನೇರವಾಗಿ ತಾಗುವಂತಿವೆ.

ದೇಪರಾಜ (ಸು.1410) ಪರಿವರ್ಧಿನೀ ಷಟ್ಪದಿಯಲ್ಲಿ ಸಂಸ್ಕೃತ ಅಮರುಕವನ್ನು ಕನ್ನಡಿಸಿದ್ದಾನೆ. ಇದೇ ಅಮರುಕವನ್ನು ಚಿಕುಪಾಧ್ಯಾಯ (ಸು.1672) ಅನುವಾದ ಮಾಡಿದ್ದಾನೆ. ಚಂದ್ರಕವಿ (ಸು.1430) ಗುರುಮೂರ್ತಿ ಶಂಕರಶತಕವನ್ನು ರಚಿಸಿದ್ದಾನೆ. ಮಗ್ಗೆಯ ಮಾಯಿದೇವನ (ಸು.1430) ಶಿವಾಧವ, ಶಿವಾವಲ್ಲಭ, ಮಹದೈಪುರೀಶ್ವರ ಶತಕಗಳು ಕ್ರಮವಾಗಿ ಭಕ್ತಿ, ಜ್ಞಾನ, ವೈರಾಗ್ಯವನ್ನು ಪ್ರತಿಪಾದಿಸುತ್ತವೆ. ಈ ಶತಕತ್ರಯ ಜನಪ್ರಿಯವಾಗಿದ್ದರೂ ಶಾಸ್ತ್ರ ಮತ್ತು ಪಾಂಡಿತ್ಯ ಭಾರದಿಂದ ಕುಸಿಯುತ್ತವೆ. ಹರಿಹರನಲ್ಲಿ ಕಾಣುವಂತೆ ಭಾವತೀವ್ರತೆಯಾಗಲೀ ಕಲ್ಪನಾಶಕ್ತಿಯಾಗಲೀ ಸರಳವಾದ ರಮ್ಯಶೈಲಿಯಾಗಲೀ ಇವನಲ್ಲಿ ಕಂಡುಬರುವುದಿಲ್ಲ. ಆದರೆ ಜನತೆಯ ಆಚಾರವಿಚಾರ ಹೇಳುವೆಡೆ ಮಾತ್ರ ಸೊಗಸು ಕಂಡುಬರುತ್ತದೆ.

ಹತ್ತಕ್ಕೂ ಹೆಚ್ಚು ಶತಕಗಳು 16ನೆಯ ಶತಮಾನದಲ್ಲಿ ರಚಿತವಾಗಿವೆ. ಗುಮ್ಮಟಾರ್ಯ (ಸು.1500), ಸಿರಿನಾಮಧೇಯ (ಸು.1550), ಚೆನ್ನಮಲ್ಲಿಕಾರ್ಜುನ (ಸು1560) – ಇವರು ಒಂದೊಂದು ಶತಕವನ್ನೂ ವೀರಭದ್ರರಾಜ (ಸು.1530) ಐದು ಶತಕಗಳನ್ನೂ ರಚಿಸಿದ್ದಾರೆ. ರತ್ನಾಕರವರ್ಣಿ ಈ ಶತಮಾನದ ಪ್ರಮುಖ ಶತಕ ಕರ್ತೃ. ಇವನು ರತ್ನಾಕರ ಶತಕ, ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕಗಳನ್ನು ರಚಿಸಿದ್ದಾನೆ. ರತ್ನಾಕರ ಶತಕದಲ್ಲಿ ನೀತಿಬೋಧೆಗಿಂತ ಹೆಚ್ಚು ವೈರಾಗ್ಯಬೋಧೆ ಕಂಡುಬರುತ್ತದೆ. ಕೆಲವು ವೃತ್ತಗಳ ಬಂಧ ಮಧುರವಾಗಿದೆ. ಅಪರಾಜಿತೇಶ್ವರ ಶತಕದಲ್ಲಿ ಜೈನದೃಷ್ಟಿ ಪ್ರಧಾನವಾಗಿದ್ದರೂ ಆರ್ತಭಕ್ತನ ವಾಣಿ ನುಡಿಯುತ್ತದೆ. ಅನುಭವ ಭಾವರೂಪಿಯಾಗಿ ತೀವ್ರತೆಯಿಂದ ಹೊಮ್ಮುತ್ತದೆ. ಈತನ ತ್ರಿಲೋಕ ಶತಕ ಜೈನಾಗಮದಲ್ಲಿ ಹೇಳಿರುವ ಭೂಗೋಳ ವಿವರಗಳಿಂದ ಕೂಡಿದೆ. ಕನಕದಾಸರ ಹರಿಭಕ್ತಿಸಾರ ವಿಷ್ಣುಸ್ತುತಿ ಪರವಾದ ಶತಕ. ಭಕ್ತಿ ಪ್ರತಿಪಾದನೆ ಈ ಶತಕದ ವಸ್ತು.

17ನೆಯ ಶತಮಾನದಲ್ಲಿ ಶಾಂತವೀರದೇಶಿಕ, ಶಂಕರದೇವ, ಹಿರಿಯೂರುರಂಗ, ತಿರುಮಲಾರ್ಯ ಮೊದಲಾದವರು ಶಕತಗಳನ್ನು ರಚಿಸಿದ್ದಾರೆ. ಸಮಾಧಿ ಸಿದ್ಧೇಶ್ವರನೆಂಬುವನ ಶಿಷ್ಯ ಶಾಂತಾಚಾರ್ಯ (ಸು.1700) ಸ್ಕಾಂದಪುರಾಣದ ಆಧಾರದ ಮೇಲೆ ಮರಣಮಣಿದರ್ಪಣ ಶತಕ ಎಂಬ ಕೃತಿಯನ್ನು ರಚಿಸಿದ್ದಾನೆ. ಚಿಕುಪಾಧ್ಯಾಯನ ಶೃಂಗಾರಶತಕ ಸಾಂಗತ್ಯ, ರಂಗಧಾಮಶತಕ ಸಾಂಗತ್ಯಗಳು ಸಾಂಗತ್ಯ ಛಂದಸ್ಸಿನಲ್ಲಿರುವುದು ಗಮನಾರ್ಹ.

18 ಮತ್ತು 19ನೆಯ ಶತಮಾನಗಳಲ್ಲಿ ವೃತ್ತಕಂದಗಳಲ್ಲಿ ಮಾತ್ರವಲ್ಲದೆ ಬಗೆಬಗೆಯ ಷಟ್ಪದಿಗಳಲ್ಲೂ ಹೇರಳವಾಗಿ ಶತಕಗಳು ರಚಿತವಾದುವು. ಕೇಶವನು ತಿರುವೇಂಗಡಾಚಾರ್ಯ ಶತಕ ಎಂಬ ಪಂಚಶತಕವನ್ನು ಬರೆದಿದ್ದಾನೆ. ಇದರಲ್ಲಿ 597 ಪದ್ಯಗಳಿವೆ. ಶಾಲ್ಯದ ಕೃಷ್ಣರಾಜನು ಸದಾಶಿವಶತಕ, ಅಪ್ರಸ್ತುತಪ್ರಶಂಸಾಶತಕಗಳನ್ನು ರಚಿಸಿದ್ದಾನೆ. ದೇವಲಾಪುರದನಂಜುಂಡನು ಕೃಷ್ಣರಾಜಶೃಂಗಾರಶತಕ, ತಿಪ್ಪಾಂಬಿಕಾಶತಕಗಳನ್ನು ರಚಿಸಿದ್ದಾನೆ. ಅಳಿಯ ಲಿಂಗರಾಜನ ಮಹಾಲಿಂಗಶತಕ, ಮುಮ್ಮಡಿ ಕೃಷ್ಣಭೂಪಾಲನ ಸಿರಿನಂಜುಂಡಶತಕ ಸರಳಸುಂದರವಾಗಿವೆ. ಕಪ್ಪಿನಿಯ (ಸು.1800) ನಂಜುಂಡಶತಕ ಕಂದದಲ್ಲಿ ರಚಿತವಾಗಿದೆ. ಚಾಮಸೂನು ಶ್ರೀಕಂಠಕಲಕಂಠಶತಕವನ್ನೂ ಪರ್ವತಕವಿ ಚಂದ್ರಲೇಖಾವಸಂತಶತಕವನ್ನೂ ರಚಿಸಿದ್ದಾರೆ. 19 ಮತ್ತು 20ನೆಯ ಶತಮಾನದ ಆದಿಯಲ್ಲಿ ಗುರುಗಳ, ರಾಜರ ಜೀವನವನ್ನು ನಿರೂಪಿಸುವ ಇನ್ನೊಂದು ಬಗೆಯ ಶತಕಗಳನ್ನು ಕಾಣಬಹುದು. ಕೃಷ್ಣರಾಜವರ್ಧಂತಿಶತಕ, ಚಾಮರಾಜಶತಕ, ಮುಳಬಾಗಿಲರ ಚರಿತ್ರಶತಕ, ಶ್ರೀಮದ್ಯುವರಾಜ ಕಂಠೀರವ ಕಲ್ಯಾಣಶತಕಂ – ಇವು ಇಂಥ ಕೃತಿಗಳು. ಕೆ.ರಾಮಸ್ವಾಮಿ ಅಯ್ಯಂಗಾರ್ ಅವರ ದಾರಿದ್ರ್ಯಶತಕ, ಕೆರೋಡಿ ಸುಬ್ಬರಾಯರ ಗಂಭೀರ ಶೃಂಗಾರಶತಕ– ಇವು ಗಮನಾರ್ಹವಾದವು. ಭರ್ತೃಹರಿಯ ಶತಕತ್ರಯವನ್ನು ಬಸವಪ್ಪಶಾಸ್ತ್ರಿಗಳು ಕನ್ನಡದಲ್ಲಿ ಪ್ರೌಢವಾಗಿ ಭಾಷಾಂತರಿಸಿದ್ದಾರೆ. ಭರ್ತೃಹರಿಯನ್ನು ಎಸ್.ವಿ.ಪರಮೇಶ್ವರಭಟ್ಟ ಹಾಗೂ ಎ.ಕೆ.ಪುಟ್ಟರಾಮು ಕನ್ನಡಕ್ಕೆ ಅನುವಾದಿಸಿದ್ದಾರೆ. ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ, ಪರಮೇಶ್ವರ ಭಟ್ಟರ ಇಂದ್ರಚಾಪ ಮೊದಲಾದವು ನೂರರ ಮಿತಿಯುಳ್ಳ ಶತಕಗಳಲ್ಲದಿದ್ದರೂ ಸಪ್ತಶತಿಯಂತೆ ಶತಕಸಾಹಿತ್ಯದಲ್ಲಿ ಸೇರಿಸಬಹುದು.

ಶತಕಸಾಹಿತ್ಯ ಕನ್ನಡದಲ್ಲಿ ಒಂದು ಸಾವಿರ ವರ್ಷದ ಹರಹನ್ನು ಪಡೆದಿದೆ. ನಾನೂರಕ್ಕೂ ಹೆಚ್ಚು ಶತಕಗಳಿದ್ದರೂ ಜನಪ್ರಿಯವಾದವು, ಉತ್ತಮವಾದವು ಕೆಲವು ಮಾತ್ರ. ನೂರು ಪದ್ಯವಿದ್ದರೆ ಸಾಕು, ಏನು ಬರೆದರೂ ಸಲ್ಲುತ್ತದೆ ಎಂದು ಹೊರಟ ಕಾರಣ ಶತಕವೆಂದರೆ ಶುಷ್ಕ ಎಂಬ ಭಾವನೆ ಬೆಳೆದಿದೆ. ಶೃಂಗಾರ ಶತಕಗಳು ಒಂದೆರಡು ಮಾತ್ರ ಇವೆ. ಬಹುಪಾಲು ಕನ್ನಡ ಶತಕಗಳು ಸ್ತೋತ್ರ, ದೈವನಾಮಾವಳಿಗಳಿಂದ ತುಂಬಿ ಸಾಹಿತ್ಯವೆಂಬ ಹೆಸರಿಗೆ ಹೊರತಾಗಿವೆ. ಹರಿಹರ, ರತ್ನಾಕರವರ್ಣಿಯಂಥ ಒಬ್ಬಿಬ್ಬರು ಮಾತ್ರ ಸಂಸ್ಕೃತ ಶತಕಸಾಹಿತ್ಯಕ್ಕೆ ಹೆಗಲೆಣೆಯಾಗಿ ನಿಲ್ಲಬಲ್ಲ ಕವಿಗಳಾಗಿದ್ದಾರೆ. (ಎಂ.ಎಚ್.ಕೆ.)

**ಕನ್ನಡದಲ್ಲಿ ಶಾಸ್ತ್ರಸಾಹಿತ್ಯ :** ಸಂಸ್ಕೃತ ಆಲಂಕಾರಿಕ ರಾಜಶೇಖರ ಕಾವ್ಯಕವಿ, ಶಾಸ್ತ್ರಕವಿ, ಉಭಯಕವಿ ಎಂಬ ಮೂರು ಬಗೆಯ ಕೃತಿಕಾರರನ್ನು ಗುರುತಿಸುತ್ತಾನೆ: ಕಾವ್ಯಕವಿ ರಮಣೀಯವಾಗಿ ಬರೆಯಬಲ್ಲನೇ ಹೊರತು ಖಚಿತತೆ ಪ್ರಧಾನ ಲಕ್ಷಣವಾದ ಶಾಸ್ತ್ರಭಾಗಗಳನ್ನು ಬರೆಯುವಲ್ಲಿ ಅವನು ಸೋತುಬಿಡಬಹುದು. ಶಾಸ್ತ್ರಕವಿ ಶಾಸ್ತ್ರಭಾಗಗಳನ್ನು ತರ್ಕಬದ್ಧವಾಗಿ ನಿರೂಪಿಸಬಲ್ಲವನಾದರೂ ಕಾವ್ಯಭಾಗಗಳನ್ನು ಬರೆಯುವಾಗ ನೀರಸವಾಗಿ ಬಿಡಬಹುದು. ಉಭಯಕವಿ ಮಾತ್ರ ಕಾವ್ಯ ಶಾಸ್ತ್ರಗಳೆರಡನ್ನೂ ಅವುಗಳಿಗೆ ಅಪಚಾರ ವೆಸಗದಂತೆ ಬರೆಯುವ ಸಮರ್ಥ ಎಂದು ರಾಜಶೇಖರ ಅಂಥವನನ್ನು ಹೊಗಳಿದ್ದಾನೆ.

ಈ ರೀತಿಯ ವಿಶ್ಲೇಷಣೆಯಿಂದ ಧ್ವನಿತವಾಗುವ ಸಂಗತಿಗಳು ಎರಡು – ಒಂದು, ಕಾವ್ಯ ಮತ್ತು ಶಾಸ್ತ್ರಗಳೆರಡೂ ಬೇರೆ ಬೇರೆ. ಎರಡು; ಕಾವ್ಯ ಅನುಭವ ಪ್ರಪಂಚಕ್ಕೆ ಸೇರಿದ್ದು, ಶಾಸ್ತ್ರ ಆಲೋಚನಾ ಪ್ರಪಂಚಕ್ಕೆ ಸೇರಿದ್ದು. ಅನುಭವ ಮತ್ತು ಆಲೋಚನೆ ಇವು ಮನುಷ್ಯನ ಪ್ರವೃತ್ತಿಗಳು. ಆದ್ದರಿಂದಲೇ ಒಂದು ಪ್ರಧಾನವಾಗಿರುವ ಕಡೆಯಲ್ಲಿಯೂ ಇನ್ನೊಂದು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಪಂಪನ ಆದಿಪುರಾಣದಂಥ ಕಾವ್ಯದಲ್ಲಿ ಶಾಸ್ತ್ರ ಎಂದು ಕರೆಯಿಸಿಕೊಳ್ಳುವ ಎಷ್ಟೋ ಭಾಗಗಳಿವೆ. ಕೇಶಿರಾಜನ ಶಬ್ದಮಣಿದರ್ಪಣದಂಥ ವ್ಯಾಕರಣದಲ್ಲಿ ವ್ಯಾಕರಣ ಪ್ರಕ್ರಿಯೆಗಳನ್ನು ನಿರೂಪಿಸುವಾಗ, ಪ್ರಯೋಗಗಳನ್ನು ಕೊಡುವಾಗ ಕೃತಿಕಾರನ ರಸಪ್ರಜ್ಞೆ ವ್ಯಕ್ತವಾಗುತ್ತದೆ. ಹಾಗೆ ನೋಡಿದರೆ ಯಾವುದೇ ಉತ್ತಮ ಕೃತಿಯಲ್ಲಿ ಕಾವ್ಯಾಂಶಮೂ ಶಾಸ್ತ್ರಾಂಶಮೂ ಇರಬಹುದು. ಒಟ್ಟಿನ ದೃಷ್ಟಿಯಲ್ಲಿ ಒಂದು ಕೃತಿ ಕಾವ್ಯವೇ ಶಾಸ್ತ್ರವೇ ಎಂಬುದನ್ನು ನಿರ್ಣಯಿಸುವುದು ಅದರ ಮೂಲೋದ್ದೇಶವನ್ನು ಅವಲಂಬಿಸಿರುತ್ತದೆ.

ನಮ್ಮ ಹಿಂದಿನವರ ಪ್ರಕಾರ ಶಾಸ್ತ್ರ ಕಾವ್ಯಕ್ಕೆ ಬಿಗಿ, ತೂಕ, ಗಹನತೆಗಳನ್ನು ತಂದುಕೊಟ್ಟರೆ, ಕಾವ್ಯ ಶಾಸ್ತ್ರಕ್ಕೆ ಚೆಲುವನ್ನೂ ಓದಿಸಿಕೊಂಡು ಹೋಗುವ ಗುಣವನ್ನೂ ಮಾನವೀಯ ಸ್ಪರ್ಶವನ್ನೂ ತಂದುಕೊಡುತ್ತದೆ.

ಹಿಂದೆ ಕನ್ನಡದ ಕವಿಯಾಗಲಿ, ಶಾಸ್ತ್ರಕಾರನಾಗಲಿ ಸಾಧ್ಯವಾದಷ್ಟು ಕ್ಷೇತ್ರಗಳಲ್ಲಿ ಪಾಂಡಿತ್ಯವನ್ನು ಪಡೆಯಬೇಕಾಗಿತ್ತು. ಈ ದೃಷ್ಟಿಯಿಂದ ಪಂಪ ವರ್ಣಿಸುವ ಅರ್ಜುನನ (ಅರಿಕೇಸರಿ) ವಿದ್ಯಾಭ್ಯಾಸ ಹೀಗಿದೆ: ಅಂತು ಪಂಚಾಂಗ ವ್ಯಾಕರಣದ ವೃತ್ತಿಭೇದಮಪ್ಪ ಛಂದೋವೃತ್ತಿಯೊಳಂ ಶಬ್ದಾಲಂಕಾರನಿಷಿವಿತಮಪ್ಪಲಂಕಾರದೊಳಂ ವ್ಯಾಸ ವಾಲ್ಮೀಕಿ ಕಶ್ಯಪ ಪ್ರಭೃತಿ ವಿರಚಿತಂಗಳಪ್ಪ ಮಹಾಕಾವ್ಯಂಗಳೊಳಂ ನಾಂದೀ ಪ್ರರೋಚ[ನಾ]ಪ್ರಸ್ತಾವ [ನೇ]ತಿವೃ[ತ್ತ] ಸಂಧಿಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ ಪದಿನೆಂಟು ಧರ್ಮಶಾಸ್ತ್ರಂಗಳೊಳಂ ನಾಲ್ಕು ವೇದದೊಳಮಾಱಂಗ ದೊಳಮಯ್ದುತೆಱದ ಮಂತ್ರಂಗಳೊಳ[ಮಾ]ಱುಂ ದರ್ಶನದೊಳಂ ಪ್ರತ್ಯಕ್ಷಾನುಮಾನ ಪ್ರಮಾಣಂಗಳೊಳಂ ಭರತಪ್ರಣೀತ ನೃತ್ಯಶಾಸ್ತ್ರದೊಳಂ ನಾರದಾದಿ ಪ್ರಣೀತ ಗಾಂಧರ್ವ ವಿದ್ಯಾವಿಶೇಷಂಗಳೊಳಂ ಗಜಾಗಮಜ್ಞ ರಾಜಪುತ್ರ ಗೌತಮ ವಾದ್ವಾಕಿ ಪಾಳಕಾಪ್ಯಪ ಸುಪತಿ ಶ್ರೀ ಹರ್ಷಾದಿ ಪುರಾಣಪುರುಷ ವಿರಚಿತಂಗಳಪ್ಪ ಹಸ್ತಿಶಾಸ್ತ್ರಂಗಳೊಳಂ ಚಿತ್ರಕರ್ಮ ಪತ್ರಚ್ಛೇದ ಗ್ರಹಗಣಿತ ರತ್ನಪರೀಕ್ಷೆಗಳೊಳಂ ದಾರುಕರ್ಮ ವಾಸ್ತುವಿದ್ಯಾಪೂರ್ವಯಂತ್ರ ಪ್ರಯೋಗ ವಿ[ಷಾ]ಪಹರಣ ಸರಭೇದ ರತಿತಂತ್ರೇಂದ್ರಜಾಲ ವಿವಿಧ ವಿದ್ಯೆಗಳೊಳಮನೇಕಾಕ್ಷರ ಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಳ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಮತಿ ಪ್ರವೀಣ[ನು] ಮಾರೂಢ ಸರ್ವಜ್ಞ ಮಹೇಂದ್ರಜಾಣ[ನು]ಮಾಗಿ. ಇದು 10ನೆಯ ಶತಮಾನದ ವಿದ್ಯಾಭ್ಯಾಸದ ಚಿತ್ರವೂ ಆಗಿರಬಹುದು. ಇಲ್ಲಿ ಕಾವ್ಯ, ಶಾಸ್ತ್ರಗಳ ಸಂಗಮವನ್ನು ಗುರುತಿಸಬೇಕು. ಕವಿಗೆ ಪ್ರತಿಭೆ ಎಷ್ಟು ಆವಶ್ಯಕಮೋ ಕಾವ್ಯ ವಿದ್ಯಾಪ್ರಚಯ ಪರಿಚಯಮೂ ಅಷ್ಟೇ ಅಗತ್ಯವಾಗಿದ್ದಿತು. ಶಾಸ್ತ್ರಕಾರರಂತೂ ತಮ್ಮ ತಮ್ಮ ಶಾಸ್ತ್ರ ವಿಷಯಗಳಲ್ಲಿ ನಿಪುಣರಾಗಿದ್ದಂತೆಯೇ ಉಳಿದ ಶಾಸ್ತ್ರಗಳಲ್ಲಿಯೂ ತಕ್ಕ ಪರಿಣತಿಯನ್ನು ಪಡೆದಿರುತ್ತಿದ್ದರು. ಕಾಮಶಾಸ್ತ್ರ ಸಂಬಂಧಿ ಗ್ರಂಥ ಬರೆದಿರುವ ಚಂದ್ರರಾಜ ತಾನು ಕಾಮಶಾಸ್ತ್ರದಲ್ಲಲ್ಲದೆ ವ್ಯಾಕರಣ ಅರ್ಥಶಾಸ್ತ್ರ ಗಣಿತ ಅಲಂಕಾರ ಕಾವ್ಯ ನಾಟಕ ಹಯಶಾಸ್ತ್ರ ಅದ್ವೈತ ಸಂಗೀತ ಇತ್ಯಾದಿ ವಿಷಯಗಳಲ್ಲಿ ನೈಪುಣ್ಯವನ್ನು ಪಡೆದಿರುವುದಾಗಿ ಹೇಳಿಕೊಂಡಿದ್ದಾನೆ.

ಕನ್ನಡದಲ್ಲಿ ಹುಟ್ಟಿರುವ ಶಾಸ್ತ್ರ ಗ್ರಂಥಗಳಲ್ಲಿ ಆಯಾ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಮುಖ ಗ್ರಂಥಗಳನ್ನು ಮಾತ್ರ ಕೆಳಗೆ ಲಕ್ಷಿಸಲಾಗಿದೆ.

**ಅಲಂಕಾರಶಾಸ್ತ್ರ:** ಶ್ರೀ ವಿಜಯನ (ಸು.850) ಕವಿರಾಜಮಾರ್ಗ ಕನ್ನಡದಲ್ಲಿ ಉಪಲಬ್ಧವಾದ ಅತ್ಯಂತ ಪ್ರಾಚೀನ ಅಲಂಕಾರ ಗ್ರಂಥ. ಇದು ದಂಡಿಯ ಕಾವ್ಯಾದರ್ಶದ ಮಾದರಿಯಲ್ಲಿ ರಚಿತವಾಗಿದೆ. ಇದರಲ್ಲಿ ಮೂರು ಅಧ್ಯಾಯವಿದೆ. ಕಾವ್ಯಕ್ಕೆ ಸೌಂದರ್ಯವನ್ನು ತಂದುಕೊಡುವ ಎಲ್ಲಮೂ ಅಲಂಕಾರವೆಂದು ಇವನ ಅಭಿಪ್ರಾಯ. ರಸಗಳಲ್ಲಿ ಇವನು

ಶಾಂತವನ್ನು ಹೇಳಿರುವುದು ಗಮನಾರ್ಹವಾಗಿದೆ. ಈ ಗ್ರಂಥದಲ್ಲಿ ಕನ್ನಡ ನಾಡು, ನುಡಿಗಳ ಬಗ್ಗೆ, 850ಕ್ಕಿಂತ ಹಿಂದಿನ ಕನ್ನಡ ಸಾಹಿತ್ಯದ ಬಗ್ಗೆ, ಅನೇಕ ಕಾವ್ಯ ಪ್ರಕಾರಗಳ ಬಗ್ಗೆ ಹಲವು ಸ್ವಾರಸ್ಯಕರವಾದ ಹೇಳಿಕೆಗಳಿವೆ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ (ಸು.1042) ಐದು ಪರಿಚ್ಛೇದಗಳಿದ್ದು ಕೊನೆಯ ನಾಲ್ಕು ಅಲಂಕಾರ ಶಾಸ್ತ್ರಕ್ಕೆ ಮೀಸಲಾಗಿವೆ. ಇವನು ವಾಮನ, ರುದ್ರಟ, ಭಾಮಹ, ದಂಡಿ ಮುಂತಾದ ಸಂಸ್ಕೃತ ಅಲಂಕಾರಿಕರಿಂದ ವಿಷಯ ಸಂಗ್ರಹಿಸಿದ್ದಾನೆ. ಕವಿಸಮಯದ ಭಾಗಕ್ಕೆ ರಾಜಶೇಖರನಿಗೆ ಋಣಿಯಾಗಿರುವಂತೆ ತೋರುತ್ತದೆ. ಈತ ಧ್ವನಿಯ ಮಾತೆತ್ತಿದ್ದರೂ ಅದೂ ಒಂದು ಅಲಂಕಾರ ಎಂದಿದ್ದಾನೆ. ಕವಿಕಾಮನ ಶೃಂಗಾರರತ್ನಾಕರ (ಸು.1200) ರಸದ ವಿಷಯವನ್ನು ವಿಸ್ತಾರವಾಗಿ ಪ್ರತಿ ಪಾದಿಸುವ ಮೊದಲ ಕನ್ನಡ ಗ್ರಂಥ. ರಸಮೇ ಮೊದಲ್ ಕವಿತೆಗೆ ಎಂದೀತ ಹೇಳಿದ್ದಾನೆ. ಮಾಧವನ ಮಾಧವಾಲಂಕಾರ ಸಂಸ್ಕೃತ ಕಾವ್ಯಾದರ್ಶದ ಸರಳಾನುವಾದ. ಸಾಳ್ವನ ರಸರತ್ನಾಕರದಲ್ಲಿ (ಸು.1550) ವಿಸ್ತಾರವಾದ ರಸದ ಪ್ರತಿಪಾದನೆ ಇದೆ. ಇವನ ಇನ್ನೊಂದು ಗ್ರಂಥ ಶಾರದಾವಿಲಾಸದಲ್ಲಿ ಧ್ವನಿಯ ಬಗ್ಗೆ ಮೊತ್ತಮೊದಲು ವಿಸ್ತೃತ ಚರ್ಚೆ ದೊರೆಯುತ್ತದೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿದ್ದ ತಿರುಮಲಾರ್ಯ ತನ್ನ ಅಪ್ರತಿಮವೀರಚರಿತದಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರಗಳ ವಿವರಣೆಗಳನ್ನಿತ್ತಿದ್ದಾನೆ. ಜಾಯೇಂದ್ರ (1734) ಅಪ್ಪಯ್ಯ ದೀಕ್ಷಿತನ ಸಂಸ್ಕೃತ ಕುವಲಯಾನಂದವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಇವನ ಇನ್ನೊಂದು ಸ್ವಕೃತಿ ರಸಮಂಜರಿಯಲ್ಲಿ ನಾಯಕ, ನಾಯಿಕೆಯರ ಪ್ರಭೇದಗಳನ್ನು ವಿವರಿಸಲಾಗಿದೆ. ತಿಮ್ಮ ತನ್ನ ನವರಸಾಲಂಕಾರದಲ್ಲಿ (ಸು.1600 ಗ್ರಂಥ ಪ್ರಕಟವಾಗಿಲ್ಲ) ಮುಖ್ಯವಾಗಿ ಪೂರ್ವಗ್ರಂಥಗಳಿಂದ, ಅದರಲ್ಲೂ ವಿಶೇಷವಾಗಿ ಸಾಳ್ವನ ರಸರತ್ನಾಕರ ಮತ್ತು ಕವಿಕಾಮನ ಶೃಂಗಾರ ರತ್ನಾಕರಗಳಿಂದ ರಸಲಕ್ಷಣಗಳನ್ನು ಇದ್ದಕ್ಕಿದ್ದಂತೆ ಎತ್ತಿಕೊಂಡು ಸಂಕಲನ ಗ್ರಂಥವೆನ್ನುವ ರೀತಿಯಲ್ಲಿ ಬರೆದಿದ್ದಾನೆ. ಇದರ ಒಂದು ಗಮನಾರ್ಹ ವೈಶಿಷ್ಟ್ಯವೆಂದರೆ ಕೇವಲ ಚಂಪೂಕಾವ್ಯದ ಉದಾಹರಣೆಗಳನ್ನು ಕೊಡದೆ ಎರಡು ಷಟ್ಪದಿ ಹಾಗೂ ಒಂದು ತ್ರಿಪದಿಯನ್ನು ಉದಾಹರಿಸಿರುವುದು. ಅಳಿಯ ಲಿಂಗರಾಜನ ನರಪತಿಚರಿತ (ಸು.1867) ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ಹೇಳುವಲ್ಲಿ ಸಂಸ್ಕೃತ ಕುವಲಯಾನಂದವನ್ನು ಅನುಸರಿಸಿದೆ. ಅದೇ ಶತಮಾನದ ಉತ್ತರಾರ್ಧದಲ್ಲಿದ್ದ ಚಾವಲಿರಾಮಸ್ವಾಮಿಶಾಸ್ತ್ರಿಗಳ 'ಕರ್ನಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ ಸಂಗ್ರಹ' ಛಂದಸ್ಸು ಹಾಗೂ ಅಲಂಕಾರ ಶಾಸ್ತ್ರಗಳ ಕೈಪಿಡಿಯಾಗಿದೆ. ಕನ್ನಡ ಕೈಪಿಡಿ, ತೀ.ನಂ.ಶ್ರೀಕಂಠಯ್ಯ ನವರ ಭಾರತೀಯ ಕಾವ್ಯಮೀಮಾಂಸೆ, ಕೆ.ಕೃಷ್ಣಮೂರ್ತಿಯವರ ಕನ್ನಡದಲ್ಲಿ ಕಾವ್ಯತತ್ತ್ವ, ದ.ರಾ.ಬೇಂದ್ರೆಯವರ ಸಾಹಿತ್ಯ ಮತ್ತು ವಿಮರ್ಶೆ, ಕುವೆಂಪು ಅವರ ರಸೋ ವೈ ಸಃ, ಡಿ.ವಿ.ಜಿ. ಅವರ ಸಾಹಿತ್ಯಶಕ್ತಿ, ವಿ.ಸೀ. ಅವರ ಸಾಹಿತ್ಯ ಸಂಪ್ರದಾಯ ಮತ್ತು ಹೊಸ ಮಾರ್ಗ, ಬಿ.ಎಚ್.ಶ್ರೀಧರ ಅವರ ಕಾವ್ಯಸೂತ್ರ ಜಿ.ಎಸ್.ಶಿವರುದ್ರಪ್ಪ ಅವರ ಕಾವ್ಯಾರ್ಥಚಿಂತನೆ ಎಚ್.ತಿಪ್ಪೇರುದ್ರಸ್ವಾಮಿ ಯವರ ತೌಲನಿಕಕಾವ್ಯಮೀಮಾಂಸೆ ಮುಂತಾದ ಗ್ರಂಥಗಳಲ್ಲಿ ಕನ್ನಡ ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಸಾಕಷ್ಟು ಸಾಮಗ್ರಿ ಚರ್ಚಿತವಾಗಿದೆ.

**ವ್ಯಾಕರಣ ಗ್ರಂಥಗಳು:** ಕವಿರಾಜಮಾರ್ಗ ಮುಖ್ಯವಾಗಿ ಅಲಂಕಾರ ಗ್ರಂಥ ವಾದರೂ ಕನ್ನಡ ಭಾಷೆ, ಉಪಭಾಷೆ, ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ಸ್ವಾರಸ್ಯವಾದ ಸಂಗತಿಗಳನ್ನು ಇದರಲ್ಲಿ ಹೇಳಿದೆ. ರನ್ನ (ಸು.993), ನಯಸೇನರು (ಸು.1112) ವ್ಯಾಕರಣಗಳನ್ನು ಬರೆದಿರುವರೆಂಬ ಊಹೆ ಇದ್ದರೂ ಅವರ ಕೃತಿಗಳು ನಮಗೆ ಉಪಲಬ್ಧವಿಲ್ಲ. ಎರಡನೆಯ ನಾಗವರ್ಮ (ಸು.1042) ಈಗ ತಿಳಿದಮಟ್ಟಿಗೆ ಮೊಟ್ಟ ಮೊದಲ ವ್ಯಾಕರಣಕಾರ. ಇವನ ಕಾವ್ಯಾವಲೋಕನ ಪ್ರಧಾನವಾಗಿ ಅಲಂಕಾರಶಾಸ್ತ್ರ ಗ್ರಂಥವಾಗಿದ್ದರೂ ಮೊದಲನೆಯ ಅಧ್ಯಾಯ ಶಬ್ದಸ್ಮೃತಿಯನ್ನು ವ್ಯಾಕರಣಕ್ಕೆ ಮೀಸಲಾಗಿಟ್ಟಿದ್ದಾನೆ. ಇವನ ಭಾಷಾಭೂಷಣ ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣ. ಸೂತ್ರ ವೃತ್ತಿಗಳು ಸಂಸ್ಕೃತದಲ್ಲಿವೆ. ಉದಾಹರಣೆಗಳನ್ನು ಪೂರ್ವಕವಿಗಳ ಕನ್ನಡ ಗ್ರಂಥಗಳಿಂದ ಕೊಟ್ಟಿದ್ದಾನೆ. ಕೇಶಿರಾಜನ (ಸು.1260) ಶಬ್ದಮಣಿದರ್ಪಣ ಹಳಗನ್ನಡದ ಶ್ರೇಷ್ಠ ಗ್ರಂಥಗಳಲ್ಲೊಂದು. ಇದರಲ್ಲಿ ಶಬ್ದಸ್ಮೃತಿಯಲ್ಲಿರುವಂತೆಯೇ ಸೂತ್ರಗಳು ಕಂದಪದ್ಯದಲ್ಲಿವೆ. ಆದರೆ ತನ್ನ ಸೂತ್ರಗಳಿಗೆ ತಾನೇ ಗದ್ಯದಲ್ಲಿ ವೃತ್ತಿಯನ್ನು ಬರೆದು, ಬೇರೆ ಕಡೆಗಳಿಂದ ಲಕ್ಷ್ಯಗಳನ್ನು ಉದಾಹರಿಸಿದ್ದಾನೆ. ಶಬ್ದಮಣಿದರ್ಪಣಕ್ಕೆ ಲಿಂಗಣಾರಾಧ್ಯ, ನಿಟ್ಟೂರು ನಂಜಯ್ಯ (ಸು.1725) ಇವರು ಟೀಕೆ ಬರೆದಿದ್ದಾರೆ. ಭಟ್ಟಾಕಳಂಕನ (ಸು.1604) ಶಬ್ದಾನುಶಾಸನ ಭಾಷಾಭೂಷಣದಂತೆಯೇ ಸಂಸ್ಕೃತದಲ್ಲಿರುವ ಕನ್ನಡ ಪ್ರೌಢವ್ಯಾಕರಣ. ಈತ ತನ್ನ ಕೃತಿಗೆ ಸಂಸ್ಕೃತದಲ್ಲಿ ಭಾಷಾಮಂಜರಿ ಎಂಬ ವೃತ್ತಿಯನ್ನೂ ಮಂಜರೀ ಮಕರಂದವೆಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. 19ನೆಯ ಶತಮಾನದ ಅನೇಕ ಪಾದ್ರಿಗಳು, ಐರೋಪ್ಯ ಮತ್ತು ದೇಶೀಯ ವಿದ್ವಾಂಸರು ಕನ್ನಡ ಭಾಷೆಗೆ ವ್ಯಾಕರಣಗಳನ್ನು ಬರೆದರು. ರೆ.ಕೇರಿಯವರ ಎ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್ (1817), ಜೆ.ಎಂ.ಮೆಕೆರಲ್ ಅವರ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್ (1820), ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ ಹೊಸಗನ್ನಡ ನುಡಿಗನ್ನಡಿ (1838), ಥಾಮಸ್ ಹಡ್ಸನ್ ಅವರ ವ್ಯಾಕರಣ (1859), ಸಿ.ಕ್ಯಾಂಪ್‌ಬೆಲ್ ಅವರ ಕನ್ನಡ ವ್ಯಾಕರಣಸಾರ, ಧೋಂಡೊ ಮುಳಬಾಗಿಲ ಅವರ ನುಡಿಗಟ್ಟು (1892), ವೆಂಕಟರಂಗೋಕಟ್ಟಿ ಯವರ ಕನ್ನಡ ಲಘುವ್ಯಾಕರಣ (1880), ಆರ್.ರಘುನಾಥರಾಯರ ಕರ್ನಾಟಕ ಭಾಷಾ ವ್ಯಾಕರಣೋಪನ್ಯಾಸ ಮಂಜರಿ (1894), ಬಿ.ಮಲ್ಲಪ್ಪನವರ ಶಬ್ದಾದರ್ಶ (1890), ತೀ.ನಂ.ಶ್ರೀ. ಅವರ ಹೊಸಗನ್ನಡ ವ್ಯಾಕರಣ ಮುಂತಾದ ವ್ಯಾಕರಣ ಗ್ರಂಥಗಳು ಪ್ರಕಟವಾಗಿವೆ.

**ನಿಘಂಟುಗಳು:** ರನ್ನನ ರನ್ನಕಂದ ಈಗ ದೊರೆತಿರುವ ಮೊದಲ ನಿಘಂಟು. ಹಳಗನ್ನಡದ ಶಬ್ದಗಳಿಗೆ ಅರ್ಥ ಹೇಳುವ ಈ ಕೃತಿಯ 11 ಕಂದ ಪದ್ಯಗಳು ಮಾತ್ರ ದೊರಕಿವೆ. ಕೇಶಿರಾಜನ ಶಬ್ದಮಣಿದರ್ಪಣ ವ್ಯಾಕರಣ ಗ್ರಂಥವಾದರೂ ಅದರಲ್ಲಿ ಅನೇಕ ಅಪೂರ್ವ ಪದಗಳಿಗೆ ಅರ್ಥವನ್ನು ಕೊಡಲಾಗಿದೆ. ಸು.1400ರಲ್ಲಿ ರಚಿತವಾದ ಗದ್ಯರೂಪದ ಕರ್ನಾಟಕ ಶಬ್ದಸಾರ, ಸುಮಾರು ಅದೇ ಕಾಲದ ಕರ್ನಾಟಕ ನಿಘಂಟುವಿನಲ್ಲಿ ಕಂದ, ವೃತ್ತಗಳಲ್ಲಿ ಅನೇಕ ಕನ್ನಡ ಪದಗಳಿಗೆ ಅರ್ಥ ಹೇಳಿದೆ. ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ (ಸು.1530) ವಾರ್ಧಕ ಷಟ್ಪದಿ ರೂಪವಾದ ಪ್ರಸಿದ್ಧ ನಿಘಂಟು. ಶೃಂಗಾರ ಕವಿಯ (ಸು.1600) ಕರ್ನಾಟಕ ಸಂಜೀವನದಲ್ಲಿ ಕುಳ್ಕಳ ಶಬ್ದಗಳಿಗೆ, ಸೂರ್ಯಕವಿಯ (ಸು.1640) ಕವಿ ಕಂಠಹಾರದಲ್ಲಿ ಹಳಗನ್ನಡ ಪದಗಳಿಗೆ ಅರ್ಥವಿವರಣೆ ಬಂದಿದೆ. 2ನೆಯ ನಾಗವರ್ಮನ ಅಭಿಧಾನ ವಸ್ತುಕೋಶ, 2ನೆಯ ಮಂಗರಾಜನ ಅಭಿನವ ನಿಘಂಟು (ಸು.1398), ಕರ್ತೃ ಗೊತ್ತಿಲ್ಲದ ಶಬ್ದರತ್ನಾಕರ (ಸು.1600), ಚೆನ್ನಕವಿಯ ನಾನಾರ್ಥ ಕಂದ (ಸು.1600), ದೇವೋತ್ತಮನ ನಾನಾರ್ಥರತ್ನಾಕರ (ಸು.1600), ಏಕಾಕ್ಷರ ನಿಘಂಟು ಇತ್ಯಾದಿಗಳಲ್ಲಿ ಸಂಸ್ಕೃತ ಪದಗಳಿಗೆ ಅರ್ಥ ಹೇಳಿದೆ. ಹಲಾಯುಧನ ಸಂಸ್ಕೃತ ಅಭಿಧಾನ ರತ್ನಮಾಲಾ, ಅಮರಕೋಶ ಇವುಗಳಿಗೆ ಕನ್ನಡ ಟೀಕೆಗಳು ದೊರೆಯುತ್ತವೆ. ಅಮೃತನಂದಿಯ ಅಕಾರಾದಿ ವೈದ್ಯ ನಿಘಂಟು (ಸು.1300), ಕರ್ತೃ ಗೊತ್ತಿಲ್ಲದ ಧನ್ವಂತರೀಯ ನಿಘಂಟು (ಸು.1500), ಇಂದ್ರ ದೀಪಿಕಾ ನಿಘಂಟು, ಮದನಾರಿ ವೈದ್ಯ ನಿಘಂಟು – ಇವುಗಳಲ್ಲಿ ವೈದ್ಯಕ್ಕೆ ಸಂಬಂಧಿಸಿದ ಸಂಸ್ಕತ ಪದಗಳಿಗೆ ಅರ್ಥ ಹೇಳಿದೆ. ಚತುರಾಸ್ಯ ಬೊಮ್ಮರಸನ ಚತುರಾಸ್ಯ ನಿಘಂಟು (ಸು.1450), ವಿರಕ್ತ ತೋಂಟದಾರ್ಯನ ಕರ್ನಾಟಕ ಶಬ್ದಮಂಜರಿ (ಸು.1560) ಇವುಗಳಲ್ಲಿ ದೇಶ್ಯ, ತತ್ಸಮ, ತದ್ಭವ ಶಬ್ದಗಳಿಗೆ ಅರ್ಥ ಹೇಳಿದೆ. ಕರ್ನಾಟಕ ಶಬ್ದಮಂಜರಿಗೆ ನಾಲ್ಕು ಬೇರೆ ಬೇರೆ ಟೀಕೆಗಳು ದೊರೆಯುತ್ತವೆ. ಕರ್ತೃ ತಿಳಿಯದ ಭಾರತ ನಿಘಂಟು (ಸು.1600) ಎಂಬ ಕೃತಿಯಲ್ಲಿ ಕುಮಾರವ್ಯಾಸ ಭಾರತದಲ್ಲಿನ ದೇಶ್ಯ ಶಬ್ದಗಳಿಗೆ 67 ಕಂದಪದ್ಯಗಳಲ್ಲಿ ಅರ್ಥ ಹೇಳಿದೆ. ಮುಮ್ಮಡಿ ಕೃಷ್ಣರಾಜನ ಚಾಮುಂಡಿಕಾ ಲಘು ನಿಘಂಟು (ಸು.1848) ಎಂಬ ಕೃತಿಯಲ್ಲಿ ದೇವತೆಗಳು ಮೊದಲಾದವರು ಹಸ್ತದಲ್ಲಿ ಧರಿಸುವ ಆಯುಧಗಳು, ಹಸ್ತ ವಿಶೇಷಗಳು, ಮೃಗನಾಮಾವಳಿ ಇವುಗಳಿಗೆ ಸಂಬಂಧಿಸಿದ ಸಂಸ್ಕೃತ ಶಬ್ದಗಳಿಗೆ ಪ್ರತಿಪದ ಕನ್ನಡ ಟೀಕನ್ನು ಕೊಟ್ಟಿದೆ. 19ನೆಯ ಶತಮಾನದಿಂದೀಚೆಗೆ ಅನೇಕ ಪಾದ್ರಿಗಳು, ದೇಶೀಯ ವಿದ್ವಾಂಸರು ನಿಘಂಟುಗಳನ್ನು ಬರೆದಿದ್ದಾರೆ. ಅವುಗಳಲ್ಲಿ ರೆವರೆಂಡ್ ಎಫ್. ಕಿಟ್ಟೆಲರ ಕನ್ನಡ–ಇಂಗ್ಲಿಷ್ ನಿಘಂಟು (1832) ಅತ್ಯಂತ ಶ್ರೇಷ್ಠವಾದುದು. ಕನ್ನಡದ ಪ್ರೌಢ ವಿದ್ಯಾರ್ಥಿಗಳಿಗೆ ಪಂಡಿತರಿಗೆ ವಿದ್ವಾಂಸರಿಗೆ ಇದು ಇಂದಿಗೂ ಮಾರ್ಗದರ್ಶಿಯಾಗಿದೆ. ಇದರಲ್ಲಿ ಕನ್ನಡ ಪದಗಳಿಗೆ ಸಂವಾದಿಯಾದ ಇತರ ದ್ರಾವಿಡ ಭಾಷೆಯ ಪದಗಳನ್ನು ಕೊಟ್ಟಿರುವುದಲ್ಲದೆ, ಸಂಸ್ಕೃತ ಮತ್ತು ತದ್ಭವ ಪದಗಳಿಗೆ ಅರ್ಥವನ್ನು ಕೊಟ್ಟಿದೆ. ಸಾಧ್ಯವಾದಷ್ಟು ಕಡೆ ಪ್ರಯೋಗಗಳನ್ನು ಸೂಚಿಸಿದೆ. 20ನೆಯ ಶತಮಾನದಲ್ಲಿಯೂ ಅನೇಕ ನಿಘಂಟುಗಳು ರಚಿತವಾಗಿವೆ. ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶ (ಸು.1940) ಜೆ.ಎ.ಕವಲಿ ಯವರ ಸಚಿತ್ರ ಕನ್ನಡ–ಕನ್ನಡ ಕಸ್ತೂರೀ ಕೋಶ (1957)– ಆರ್.ಎಸ್.ರಾಮರಾವ್ ಅವರ ಕನ್ನಡ–ಕನ್ನಡ–ಇಂಗ್ಲಿಷ್ ನಿಘಂಟು ಮುಂತಾದುವನ್ನು ಇಲ್ಲಿ ಹೆಸರಿಸಬಹುದು.

ಒಬ್ಬ ಕವಿಯನ್ನು ಕುರಿತಂತೆ ಅವನು ಉಪಯೋಗಿಸುವ ಪದಗಳಿಗೆ ಅರ್ಥ ವಿವರಣೆ ಕೊಡುವ ನಿಘಂಟುಗಳೂ ಕನ್ನಡದಲ್ಲಿ ರಚಿತವಾಗಿವೆ. ಅವುಗಳಲ್ಲಿ ಕುಮಾರವ್ಯಾಸ ನಿಘಂಟು ಹೆಸರಿಸಬಹುದಾದ್ದು.

ಈಗ ಪ್ರಕಟವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ನಿಘಂಟು ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. ಕನ್ನಡ ಭಾಷೆಯಲ್ಲಿನ ಎಲ್ಲ ತೆರನ ಸಾಹಿತ್ಯವನ್ನು ಈ ನಿಘಂಟುವಿನಲ್ಲಿ ಬಳಸಿಕೊಳ್ಳಲಾಗಿದೆ. ಹಲ್ಮಿಡಿ ಶಾಸನದಿಂದ (ಸು.450) ಹಿಡಿದು 18ನೆಯ ಶತಮಾನದ ವರೆಗಿನ ಪ್ರಕಟಿತ, ಅಪ್ರಕಟಿತ ಶಾಸನಗಳ ಸಾಮಗ್ರಿಯನ್ನೂ ಕವಿರಾಜಮಾರ್ಗದಿಂದ ಶ್ರೀ ರಾಮಾಯಣದರ್ಶನಂ ವರೆಗಿನ, ಇನ್ನೂ ಇತ್ತೀಚಿನ ಸಾಹಿತ್ಯ ಸಾಮಗ್ರಿಯನ್ನೂ ಕನ್ನಡದಲ್ಲಿ ಬಳಕೆಯಾಗಿರುವ, ಬಳಕೆಯಾಗುತ್ತಿರುವ ಎಲ್ಲ ಪದಗಳಿಗೂ ಭಾಷಾ ವಿಜ್ಞಾನದ ನಿಯಮಗಳಿಗನುಸಾರವಾಗಿ ಚಾರಿತ್ರಿಕ ವಿವರಣೆಯೊಂದಿಗೆ ಅರ್ಥವನ್ನು ಕೊಡಲಾಗಿದೆ. ಇದು ಪ್ರಧಾನವಾಗಿ ಕನ್ನಡ ನಿಘಂಟಾದರೂ ಕನ್ನಡ ಭಾಷೆಯಲ್ಲಿ ಸೇರಿ ಹೋಗಿರುವ ದೇಶ್ಯ, ತದ್ಭವ, ತತ್ಸಮ, ಅನ್ಯದೇಶ್ಯ ಮುಂತಾದ ಶಬ್ದಗಳೂ ಧಾರ್ಮಿಕ,

ಲೌಕಿಕ, ವ್ಯಾವಹಾರಿಕ, ಪಾರಿಭಾಷಿಕ ಮುಂತಾದ ಶಬ್ದಗಳೂ ಇಲ್ಲಿ ಸೇರಿವೆ. ಯಾವುದಾದರೂ ಒಂದು ಶಬ್ದ ಅಪೂರ್ವವಾಗಿದ್ದರೆ, ವಿಶೇಷಾರ್ಥವುಳ್ಳದ್ದಾಗಿದ್ದರೆ ಅಥವಾ ಶಾಸ್ತ್ರ ಪರಿಭಾಷೆಯಾಗಿದ್ದರೆ ಅದರ ಅರ್ಥವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಉಚಿತವರಿತು ಪ್ರಯೋಗಗಳನ್ನು ಕೊಡಲಾಗುವುದು. ಪ್ರತಿಯೊಂದು ಶಬ್ದದ ಅರ್ಥ ನಿರ್ಣಯಕ್ಕೂ ಪ್ರಯೋಗಗಳನ್ನೇ ಮುಖ್ಯ ಆಧಾರವಾಗಿಟ್ಟು ಕೊಳ್ಳಲಾಗಿದೆ. ಪ್ರತಿಯೊಂದು ಮುಖ್ಯ ಶಬ್ದಕ್ಕೂ ನಿಷ್ಪತ್ತಿಯನ್ನು ಸೂಚಿಸಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಜೀವಂತ ಪ್ರತೀಕದಂತಿರುವ ಚಾರಿತ್ರಿಕ ಕ್ರಮದ ಎಂಟು ಸಂಪುಟಗಳ ಈ ನಿಘಂಟು ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ವಿಧದಲ್ಲಿ ರಚಿತವಾಗಿ ಪ್ರಕಟವಾಗುತ್ತಿರುವುದು (1995) ಇದೇ ಮೊದಲು.

**ಛಂದೋಗ್ರಂಥಗಳು:** ಒಂದನೆಯ ನಾಗವರ್ಮನ (ಸು.990) ಛಂದೋಂಬುಧಿ ದೊರೆತ ಛಂದೋಗ್ರಂಥಗಳಲ್ಲಿ ಪ್ರಾಚೀನವಾದುದು. ಆದರೆ ಇದಕ್ಕಿಂತ ಹಿಂದೆ 9ನೆಯ ಶತಮಾನದಲ್ಲಿ ಗುಣಗಾಂಕೀಯ ಎಂಬ ಛಂದೋಗ್ರಂಥವಿದ್ದಿತೆಂದು ಊಹಿಸಲು ಅವಕಾಶವಿದೆ. ಕವಿರಾಜಮಾರ್ಗದಲ್ಲಿ ಛಂದಸ್ಸಿಗೆ ಸಂಬಂಧಿಸಿದ ಅನೇಕ ಮುಖ್ಯ ಸಂಗತಿಗಳಿವೆ. ಆದರೂ ಛಂದೋಂಬುಧಿ ಕನ್ನಡದ ಏಕೈಕ, ಅಧಿಕೃತ ಪ್ರಾಚೀನ ಲಕ್ಷಣಗ್ರಂಥ (ನೋಡಿ: ನಾಗವರ್ಮ I). ಜಯಕೀರ್ತಿಯ ಛಂದೋನುಶಾಸನ (ಏಳನೆಯ ಅಧ್ಯಾಯ), 3ನೆಯ ಸೋಮೇಶ್ವರನ ಮಾನಸೋಲ್ಲಾಸ, ಶಾರ್ಙ್ಗದೇವನ ಸಂಗೀತರತ್ನಾಕರ ಮುಂತಾದ ಸಂಸ್ಕೃತ ಗ್ರಂಥಗಳಲ್ಲಿ ಕನ್ನಡ ಛಂದಸ್ಸಿಗೆ ಸಂಬಂಧಿಸಿದ ಅನೇಕ ಸಂಗತಿಗಳು ಪ್ರತಿಪಾದಿತವಾಗಿವೆ. 2ನೆಯ ನಾಗವರ್ಮನ ಛಂದೋವಿಚಿತಿ ಎಂಬ ಗ್ರಂಥ ಉಪಲಬ್ಧವಿಲ್ಲ. ಈಶ್ವರಕವಿಯ (ಸು.1500) ಕವಿಜಿಹ್ವಾಬಂಧನ, ಗುಣಚಂದ್ರನ ಛಂದಸ್ಸಾರ (ಸು.1650), ಶಾಲ್ಯದ ಕೃಷ್ಣರಾಜನ ಷಟ್ಪ್ರತ್ಯಯ (1748), ವೀರಭದ್ರ ಕವಿಯ ನಂದಿ ಛಂದಸ್ಸು ಮುಂತಾದ ಛಂದೋಗ್ರಂಥಗಳಲ್ಲಿಯೂ ಕನ್ನಡ ಛಂದಸ್ಸಿನ ವಿಷಯಗಳು ಸ್ವಲ್ಪಮಟ್ಟಿಗೆ ನಿರೂಪಿತವಾಗಿವೆ.

**ವೈದ್ಯಶಾಸ್ತ್ರ:** ಜಗದ್ದಳ ಸೋಮನಾಥನ ಕರ್ನಾಟಕ ಕಲ್ಯಾಣಕಾರಕ (ಸು.1175) ಈಗ ದೊರೆತಿರುವ ಮೊದಲನೆಯ ಕನ್ನಡ ಆಯುರ್ವೇದ ಗ್ರಂಥ. ಇದು ಪೂಜ್ಯಪಾದನ ಸಂಸ್ಕೃತ ಕಲ್ಯಾಣಕಾರಕದ ಅನುವಾದ. ದೇವೇಂದ್ರಮುನಿ ಬಾಲಗ್ರಹ ಚಿಕಿತ್ಸೆ (ಸು.1200) ಎಂಬ ಗ್ರಂಥವನ್ನು ಬರೆದಿದ್ದಾನೆ. 1ನೆಯ ಮಂಗರಾಜನ ಖಗೇಂದ್ರಮಣಿದರ್ಪಣ (ಸು.1360) ಮುಖ್ಯವಾಗಿ ಒಂದು ವಿಷವೈದ್ಯಗ್ರಂಥ. ಇವನ ಗ್ರಂಥಕ್ಕೆ ಮೂಲ ಪೂಜ್ಯಪಾದನ ವೈದ್ಯಗ್ರಂಥದ ಸ್ಥಾವರವಿಷಪ್ರಕ್ರಿಯೆ. ಕನ್ನಡದ ಇತರ ವೈದ್ಯಗ್ರಂಥಗಳು ಹೀಗಿವೆ: ಶ್ರೀಧರದೇವನ ವೈದ್ಯಾಮೃತ (ಸು.1500), ಸಾಳ್ವನ ವೈದ್ಯಸಾಂಗತ್ಯ (ಸು.1550), ಚೆನ್ನರಾಜನ ವೈದ್ಯಸಾರ ಸಂಗ್ರಹ (ಸು.1570), ನಂಜನಾಥ ಭೂಪಾಲನ ವೈದ್ಯಸಾರ ಸಂಗ್ರಹ (ಸು.1700), ವೀರರಾಜನ ಸಕಲವೈದ್ಯಸಂಹಿತಾ ಸಾರಾರ್ಣವ (ಸು.1700), ಬ್ರಹ್ಮನ ವೈದ್ಯಕಂದ (ಸು.1750), ತಿಮ್ಮರಾಜಗೌಡನ ಸ್ತ್ರೀವೈದ್ಯ (ಸು.1750).

**ಪಶುವೈದ್ಯ:** ಕೀರ್ತಿವರ್ಮನ (ಸು.1100) ಗೋವೈದ್ಯ ಕನ್ನಡ ವೈದ್ಯ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುದು. ಇದರಲ್ಲಿ ಗೋವುಗಳ ವ್ಯಾಧಿಗಳಿಗೆ ಔಷಧ, ಯಂತ್ರ ಕಟ್ಟುವುದು, ಬರೆಹಾಕುವುದು ಇತ್ಯಾದಿ ವಿಷಯಗಳನ್ನು ಹೇಳಿದೆ. ಅಭಿನವಚಂದ್ರ (ಸು.1400) ಅಶ್ವಶಾಸ್ತ್ರವನ್ನು ಬರೆದ ಮೊದಲ ಕನ್ನಡ ಕೃತಿಕಾರ. ಈ ಕೃತಿಯಲ್ಲಿ ಕುದುರೆಗಳ ಸರ್ವಾಂಗ ಪರೀಕ್ಷೆ, ವರ್ಣ, ಸುಳಿ, ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ಚಿಕಿತ್ಸೆ ಇತ್ಯಾದಿ ವಿಷಯಗಳಿವೆ. ಬಾಚರಸನ ಅಶ್ವವೈದ್ಯ (ಸು.1500) ಕುದುರೆಗಳ ಕಾಯಿಲೆಗಳಿಗೆ ಸಂಬಂಧಿಸಿದ್ದು. ರಾಮಚಂದ್ರ (ಸು.1625) ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಗದ್ಯದಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಪದ್ಮಣಪಂಡಿತನು ಹಯಸಾರ ಸಮುಚ್ಚಯ (ಸು.1627) ಎಂಬ ಗ್ರಂಥವನ್ನು ಬರೆದಿದ್ದಾನೆ. ಗಂಗರ ದೊರೆ ಶಿವಮಾರನ ಗಜಾಷ್ಟಕ (8ನೆಯ ಶತಮಾನ) ಕನ್ನಡದ ಪ್ರಾಚೀನ ಗಜಶಾಸ್ತ್ರ ಗ್ರಂಥ. ಈ ಪುಟ್ಟಕೃತಿ (8 ಪದ್ಯ) ಉಪಲಬ್ಧವಾಗಿಲ್ಲದಿದ್ದರೂ ಒನಕೆವಾಡಾಗುವಷ್ಟು ಜನ ಪ್ರಿಯತೆಯನ್ನು ಪಡೆದಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ವೀರಭದ್ರರಾಜ (ಸು.1600) ಪಾಲಕಾಪ್ಯನ ಹಸ್ತ್ಯಾಯುರ್ವೇದಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾನೆ.

**ಜ್ಯೋತಿಷ್ಯ, ಗಣಿತ, ಸೂಪ, ನೀತಿ, ವೃಷ್ಟಿ ಮತ್ತು ರತ್ನಶಾಸ್ತ್ರ:** ಶ್ರೀಧರಾ ಚಾರ್ಯನ ಜಾತಕತಿಲಕ (ಸು.1049) ಕನ್ನಡದ ಮೊದಲ ಜ್ಯೋತಿಷ್ಯ ಗ್ರಂಥ. ಇದರಲ್ಲಿ ಗ್ರಹಣಗಳು, ಮುಹೂರ್ತಗಳು, ಉತ್ಪಾತಗಳು ಮತ್ತು ಅವುಗಳ ಫಲಾಫಲಗಳು ಇತ್ಯಾದಿ ಸಂಗತಿಗಳು ನಿರೂಪಿತವಾಗಿವೆ. ಈತ ವರಾಹಮಿಹಿರನ ಬೃಹಜ್ಜಾತಕ ಮತ್ತು ಲಘುಜಾತಕಗಳು, ಕಲ್ಯಾಣವರ್ಮನ ಸಾರಾವಳಿ ಇತ್ಯಾದಿಗಳಿಂದ ವಿಷಯ ಸಂಗ್ರಹಿಸಿದ್ದಾನೆ. ಗಣಿತಶಾಸ್ತ್ರಕ್ಕೆ ಸಂಬಂಧಿಸಿದಂತೆ ರಾಜಾದಿತ್ಯ (ಸು.1190) ಕನ್ನಡದಲ್ಲಿ ವ್ಯವಹಾರಗಣಿತ, ಕ್ಷೇತ್ರಗಣಿತ, ವ್ಯವಹಾರರತ್ನ ಲೀಲಾವತಿ, ಚಿತ್ರಹಸುಗೆ, ಜೈನಗಣಿತ ಸೂತ್ರ ಟೀಕೋದಾಹರಣ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಆ ಕಾಲದ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ತನ್ನ ಗ್ರಂಥದಲ್ಲಿ ಈತ ತಿಳಿಸಿದ್ದಾನೆ. ಭಾಸ್ಕರ (ಸು.1650) ಬೇಹಾರಗಣಿತವೆಂಬ ಕೃತಿಯನ್ನು ರಚಿಸಿರುವನು. ತಿಮ್ಮರಸನ ಕ್ಷೇತ್ರಗಣಿತ (ಸು.1700) ಹೊಲಗಳನ್ನು ಅಳೆಯುವ ಬೇರೆ ಬೇರೆ ಮಾನಗಳ ವಿವರಗಳನ್ನು ಕೊಡುವುದರಿಂದ ಒಂದು ಸ್ವಾರಸ್ಯ ಗ್ರಂಥವಾಗಿದೆ. ದೈವಜ್ಞವಲ್ಲಭ (ಸು.1700) ಮಹಾವೀರಾಚಾರ್ಯನ ಗಣಿತಕ್ಕೆ ಕನ್ನಡ ವ್ಯಾಖ್ಯಾನವನ್ನು ರಚಿಸಿದ್ದಾನೆ. ಬಾಲವೈದ್ಯದ ಚೆಲುವನ (ಸು.1785) ಕನ್ನಡ ಲೀಲಾವತಿಯಲ್ಲಿ ಸಾಧಾರಣ ಮತ್ತು ಕ್ಷೇತ್ರಗಣಿತ ಎರಡನ್ನೂ ನಿರೂಪಿಸಲಾಗಿದೆ. ಕನ್ನಡದಲ್ಲಿ ಅನೇಕ ಶಕುನ ಗ್ರಂಥಗಳು ರಚಿತವಾಗಿವೆ. ಶುಭಚಂದ್ರನ ನರಪಿಂಗಳಿ (ಸು.1500), ಲಕ್ಷ್ಮಣಾಂಕನ ಶಕುನಸಾರ, ಚಾಕರಾಜನ ಶಕುನಪ್ರಪಂಚ, ಮಾಧವದೇವನ ನರಪಿಂಗಲಿ (ಸು.1650), ದೇವನ ಶಕುನಪ್ರಪಂಚ (ಸು.1725 ಉಪಲಬ್ಧವಿಲ್ಲ) – ಇವು ಶಕುನ ಗ್ರಂಥಗಳಲ್ಲಿ ಮುಖ್ಯವಾದವು. ಸೂಪಶಾಸ್ತ್ರ ಗ್ರಂಥಗಳಲ್ಲಿ 3ನೆಯ ಮಂಗರಸನ ಸೂಪಶಾಸ್ತ್ರ (ಸು.1508) ಅತ್ಯಂತ ಪ್ರಸಿದ್ಧವಾದುದು. ಇದರಲ್ಲಿ ಹಲವಾರು ರೀತಿಯ ಅಡುಗೆಗಳ ಸ್ವಾರಸ್ಯಕರವಾದ ನಿರೂಪಣೆಯಿದೆ. ಇವನ ಸಮ್ಯಕ್ತ್ವ ಕೌಮುದಿ ಎಂಬ ಕಾವ್ಯದಲ್ಲಿ ಒಂದು ಭೋಜನಸಮಾರಂಭದ ವಿನೋದ ವರ್ಣನೆ ಇದೆ. 2ನೆಯ ಚಾವುಂಡರಾಯನ (ಸು.1025) ಲೋಕೋಪಕಾರ ಎಂಬ ಗ್ರಂಥದಲ್ಲಿ ಸೂಪಶಾಸ್ತ್ರ ಎಂಬ ಒಂದು ಪ್ರತ್ಯೇಕ ಅಧ್ಯಾಯವಿದ್ದು ಈ ಅಧ್ಯಾಯಕ್ಕೆ ಕನ್ನಡದಲ್ಲಿ ಒಂದು ಟೀಕೂ ದೊರೆಯುತ್ತದೆ. ದುರ್ಗಸಿಂಹನ ಪಂಚತಂತ್ರ (ಸು.1031) ಕಾವ್ಯ, ನೀತಿ ಇವೆರಡರ ಸಾರಭೂತ ಕೃತಿ. ವಸುಭಾಗಭಟ್ಟನ ಸಂಸ್ಕೃತ ಮೂಲ ಕನ್ನಡ ಪಂಚತಂತ್ರಕ್ಕೆ ಆಕರವೆಂದು ತಿಳಿದುಬರುತ್ತದೆ. ಇದರಲ್ಲಿ ಪ್ರಾಣಿಗಳ ಕಥೆಯ ಮೂಲಕ ರಾಜನೀತಿ ನಿರೂಪಣೆಗೊಂಡಿದೆ. ಚಿಕುಪಾಧ್ಯಾಯ (ಸು.1672) ಸಂಸ್ಕೃತ ಕಾಮಂದಕ ನೀತಿಗೆ ಗದ್ಯರೂಪವಾದ ಟೀಕೆಯೊಂದನ್ನು ಬರೆದಿದ್ದಾನೆ. ರಟ್ಟಕವಿಯ ರಟ್ಟಮತ (ಸು.1300) ವೃಷ್ಟಿಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಇದರಲ್ಲಿ ಮಳೆಯ ಕುರುಹು, ಶಕುನಗಳು, ಬಿತ್ತುವುದು, ಭೂಜಲವನ್ನು ತೆಗೆಯುವುದು, ಕ್ಷಾಮ ಇತ್ಯಾದಿ ವಿಷಯಗಳಿವೆ. ಬಾಲವೈದ್ಯದ ಚೆಲುವನ ರತ್ನಶಾಸ್ತ್ರದಲ್ಲಿ ಬೇರೆ ಬೇರೆ ಜಾತಿಯ ರತ್ನಗಳು ಅವುಗಳ ಗುಣದೋಷಗಳು, ಕೃತ್ರಿಮರತ್ನದ ಲಕ್ಷಣ ಇತ್ಯಾದಿ ಸಂಗತಿಗಳಿವೆ.

**ಸಂಗೀತಶಾಸ್ತ್ರ ಇತ್ಯಾದಿ:** ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ವಿಸ್ತಾರವಾದ ನಿರೂಪಣೆ ನಿಜಗುಣಶಿವಯೋಗಿಗಳ ವಿವೇಕಚಿಂತಾಮಣಿಯ ನಾಲ್ಕನೆಯ ಅಧ್ಯಾಯದಲ್ಲಿ ದೊರಕುತ್ತದೆ. ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಂಗೀತ ರತ್ನಾಕರ ಎಂಬ ಒಂದು ಗ್ರಂಥಮೂ ಪ್ರಕಟವಾಗಿದೆ (ಸಂಸ್ಕೃತ ಕೃತಿಯ ಅನುವಾದವಲ್ಲ). ಇದಲ್ಲದೆ ಕನ್ನಡದ ಅನೇಕ ಕಾವ್ಯಗಳಲ್ಲಿ ಸಂಗೀತ ಹಾಗೂ ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ವರ್ಣನೆಗಳು ವಿಪುಲವಾಗಿ ದೊರೆಯುತ್ತವೆ. ಸಿಂಹಭೂಪಾಲನ (16ನೆಯ ಶತಮಾನ) ಲಾಸ್ಯರಂಜನಂ ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ಒಂದು ದೊಡ್ಡ ಗ್ರಂಥ. (ನೋಡಿ: ಕರ್ನಾಟಕ ಸಂಗೀತ)

**ಕಾಮಶಾಸ್ತ್ರ:** 'ಮದನತಿಲಕ' ಚಂದ್ರರಾಜನಿಂದ (ಸು.1040) ರಚಿತವಾದ ಕನ್ನಡದ ಮೊತ್ತಮೊದಲ ಕಾಮಶಾಸ್ತ್ರಗ್ರಂಥ. ಪುರುಷಾರ್ಥಗಳಲ್ಲಿ ಕಾಮಮೂ ಒಂದಾದ್ದರಿಂದ ಅದು ನಿಂದನೀಯವಾದುದಲ್ಲ ಎಂಬುದು ಕೃತಿಕಾರನ ಮತ. ಮದನತಿಲಕ ಕಾಮಶಾಸ್ತ್ರ ಗ್ರಂಥವಾದರೂ ಇದಕ್ಕೆ ಪ್ರಸಿದ್ಧಿ ದೊರೆತಿರುವುದು ಛಂದಸ್ಸಿನ ದೃಷ್ಟಿಯಿಂದ. ಇದರಲ್ಲಿ ಕನ್ನಡದ ಅನೇಕ ಅಪೂರ್ವ ವೃತ್ತಗಳು ಬಳಕೆಯಾಗಿವೆ. ಇವನು ವಾತ್ಸ್ಯಾಯನ, ವೈಶಿಕ, ಚಾರಾಯಣ, ಸ್ವರ್ಣನಾಭ ಮುಂತಾದ ಹಿಂದಿನ ಲೇಖಕರಿಂದ ವಿಷಯ ಸಂಗ್ರಹಿಸಿ ಕೃತಿರಚನೆ ಮಾಡಿದ್ದಾನೆ. ಜನ್ನನ 'ಅನುಭವಮುಕುರ' ಸುಂದರಿಯರು, ಅವರ ಸೌಂದರ್ಯ, ಪ್ರೇಮಗಳನ್ನು ಕುರಿತಾದ ಗ್ರಂಥ. ಕಲ್ಲರಸನ (ಸು.1450) ಜನವಶ್ಯದಲ್ಲಿ ವಾತ್ಸ್ಯಾಯನ ಮುಂತಾದವರ ಮತಗಳನ್ನು ಸಂಗ್ರಹಿಸಲಾಗಿದೆ. ಪಂಪ, ನೇಮಿಚಂದ್ರ, ಷಡಕ್ಷರಿ, ರತ್ನಾಕರವರ್ಣಿ, ಕವಿಲಿಂಗ ಮುಂತಾದ ಕವಿಗಳ ಕಾವ್ಯಗಳಲ್ಲಿ ಕಾಮಶಾಸ್ತ್ರಕ್ಕೆ ಸಂಬಂಧಪಟ್ಟ ಹಲವಾರು ಸಂಗತಿಗಳು ನಿರೂಪಿತವಾಗಿರುವುದು ಕಂಡುಬರುತ್ತದೆ.

**ಧಾರ್ಮಿಕಶಾಸ್ತ್ರಗ್ರಂಥಗಳು:** ಇಂತಹ ಗ್ರಂಥಗಳಲ್ಲಿ ಕಾವ್ಯಾಂಶವೂ ಶಾಸ್ತ್ರಾಂಶಮೂ ಕೂಡಿರಬಹುದು. ಪಂಪನ ಆದಿಪುರಾಣದಂಥ ಜೈನಪುರಾಣಗಳಲ್ಲಿ ಕಾವ್ಯವೂ ಶಾಸ್ತ್ರವೂ (ಧರ್ಮ ಪ್ರಕ್ರಿಯೆಗಳೂ) ಕೂಡಿಯೇ ನಿರೂಪಿತವಾಗಿದೆ. ವೀರಶೈವ ಪುರಾಣಗಳಲ್ಲೂ ವಚನ ಸಾಹಿತ್ಯದಲ್ಲೂ ಹರಿದಾಸ ಸಾಹಿತ್ಯದ ಅನೇಕ ಭಾಗದಲ್ಲೂ ಕಾವ್ಯಾಂಶ ಶಾಸ್ತ್ರಾಂಶ ಬೆಸುಗೆಯಾಗಿರುವುದನ್ನು ಕಾಣಬಹುದು. ಆದರೂ ಇಂಥ ಕೃತಿಗಳನ್ನುಳಿದು ಕೇವಲ ವಿಷಯ ನಿರೂಪಣೆಯೇ ಮುಖ್ಯವಾಗಿರುವ ಗ್ರಂಥಗಳನ್ನು ಮಾತ್ರ ಇಲ್ಲಿ ವಿಚಾರ ಮಾಡಲಾಗಿದೆ.

ಅನೇಕ ಜೈನ ವಿದ್ವಾಂಸರು ಕನ್ನಡದಲ್ಲಿ ಹಲವಾರು ಸಂಸ್ಕೃತ, ಪ್ರಾಕೃತ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ದಿವಾಕರನಂದಿ (ಸು.1062) ಗೃಧ್ರಪಿಂಛಾಚಾರ್ಯನ ತತ್ತ್ವಾರ್ಥಸೂತ್ರಕ್ಕೆ ಕನ್ನಡ ವೃತ್ತಿ ಬರೆದಿದ್ದಾನೆ. ವೀರನಂದಿ (ಸು.1153) ತನ್ನದೇ ಆಚಾರಸಾರಕ್ಕೆ ಕನ್ನಡ ವ್ಯಾಖ್ಯಾನ ಬರೆದಿದ್ದಾನೆ. ಅಭಿನವಶ್ರುತಮುನಿ (ಸು.1365) ಮಲ್ಲಿಷೇಣನ ಸಜ್ಜನಚಿತ್ತವಲ್ಲಭಕ್ಕೂ ಕಮಲಪಂಡಿತ ಸಮಂತಭದ್ರನ ರತ್ನಕರಂಡಕಕ್ಕೂ ಟೀಕೆ ಬರೆದಿದ್ದಾರೆ. ಚಂದ್ರಕೀರ್ತಿಯ (ಸು.1400) ಪರಮಾಗಮಸಾರ ಜೈನಧರ್ಮದ ತಿರುಳನ್ನು ಹೇಳುತ್ತದೆ. ಇದಲ್ಲದೆ ಇನ್ನೂ ಅನೇಕ ಗ್ರಂಥಗಳು ಜೈನಧರ್ಮವನ್ನು ಕುರಿತು ರಚಿತವಾಗಿವೆ.

ವೀರಶೈವ ವಿದ್ವಾಂಸರೂ ತಮ್ಮ ಧರ್ಮಸಂಬಂಧಿಯಾದ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅಂಥ ವ್ಯಾಖ್ಯಾನಗಳಲ್ಲಿ ಮಹಾಲಿಂಗದೇವನ ಏಕೋತ್ತರಶತಸ್ಥಲ (ಸು.1425) ಮತ್ತು ಪ್ರಭುದೇವರ ಷಟ್ಸ್ಥಲಜ್ಞಾನ ಚಾರಿತ್ರ ವಚನದ ಟೀಕೆಗಳು, ಕಲ್ಲಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ (ಸು.1430), ಜಕ್ಕಣಾರ್ಯನ ಏಕೋತ್ತರಶತಸ್ಥಲ (ಸು.1430) ಇವನ್ನು ಹೆಸರಿಸಬಹುದು. ಗುಬ್ಬಿಯ ಮಲ್ಲಣ್ಣ (ಸು.1475) ತನ್ನ ಗಣಭಾಷಿತ ರತ್ನಮಾಲೆಯಲ್ಲಿ ನೂರೊಂದು ಸ್ಥಲಗಳ ವಿವರಣೆಯನ್ನು ಕೊಟ್ಟಿದ್ದಾನೆ. ಅನೇಕ ಶೈವಾಗಮಗಳಿಗೆ ಮತ್ತು ಇತರ ಗ್ರಂಥಗಳಿಗೆ ವೀರಶೈವ ವಿದ್ವಾಂಸರು ಬರೆದ ಟೀಕೆಗಳು ದೊರೆಯುತ್ತವೆ. ವೀರಶೈವ ಸಿದ್ಧಾಂತವನ್ನು ಪ್ರತಿಪಾದನೆ ಮಾಡುವ ಕನ್ನಡ ಗ್ರಂಥಗಳಲ್ಲಿ ಮಗ್ಗೆಯ ಮಾಯಿದೇವನ ಅನುಭವಸೂತ್ರ, ಗುರುಬಸವನ ಸಪ್ತಕಾವ್ಯಗಳು, ನಿಜಗುಣಶಿವಯೋಗಿಯ ಕೃತಿಗಳು – ಇವುಗಳನ್ನು ಹೆಸರಿಸಬಹುದು.

ಪರಂಜ್ಯೋತಿಯ (ಸು.1450) ಅನುಭವಮುಕುರ, ರಂಗನಾಥನ (ಸು.1675) ಅನುಭವಾಮೃತ, ಚಿದಾನಂದನ (ಸು.1725) ಚಿದಖಂಡಾನುಭವಸಾರ, ಚಿದಾನಂದಾವಧೂತನ (ಸು.1750) ಜ್ಞಾನಸಿಂಧು ಇವು ಅದ್ವೈತವೇದಾಂತ ಪರವಾದ ಗ್ರಂಥಗಳು.

ಜಗನ್ನಾಥದಾಸರ ಹರಿಕಥಾಮೃತಸಾರ ದ್ವೈತವೇದಾಂತಬೋಧಕವಾಗಿದೆ. ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯನಿರ್ಣಯಕ್ಕೆ ವಾದಿರಾಜರು (ಸು.1570) ಕನ್ನಡದಲ್ಲಿ ಟೀಕೆ ಬರೆದಿದ್ದಾರೆ. ರಂಗರಾಜನ (ಸು.1660) ಸಾತ್ವಿಕ ಬ್ರಹ್ಮವಿದ್ಯಾವಿಲಾಸ ವಿಶಿಷ್ಟಾದ್ವೈತ ಸಿದ್ಧಾಂತವನ್ನು ನಿರೂಪಿಸುತ್ತದೆ. ಚಿಕ್ಕದೇವರಾಜ ಒಡೆಯರ (1673–1704) ಚಿಕದೇವರಾಜ ಬಿನ್ನಪದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತದ ಸಾರವನ್ನು ಕೊಟ್ಟಿದೆ. ಚಿಕುಪಾಧ್ಯಾಯನ ತಿರುವಾಯ್ಮೊಳಿ ಟೀಕೆ ನಮ್ಮಾಳ್ವಾರರ ತಮಿಳು ಪ್ರಬಂಧಕ್ಕೆ ಬರೆದ ವ್ಯಾಖ್ಯಾನವಾಗಿದೆ.

**ಜ್ಞಾನಕೋಶಗಳು:** ಕನ್ನಡದಲ್ಲಿ ವಿಶ್ವಕೋಶಗಳಂಥ ಕೆಲವು ಗ್ರಂಥಗಳು ಹುಟ್ಟಿವೆ. ಅವು ಬೇರೆ ಬೇರೆ ವಿಷಯಗಳ ಸಂಗ್ರಹರೂಪಗಳಾಗಿವೆ. (ನೋಡಿ: ಕನ್ನಡದಲ್ಲಿ ವಿಶ್ವಕೋಶಗಳು).

(ಎಂ.ಸಿ.,ಕೆ.ಕೆ.,ಎನ್.ಬಿ.)

**ಕನ್ನಡದಲ್ಲಿ ಷಟ್ಪದಿ ಕಾವ್ಯಗಳು :** ಷಟ್ಪದಿ ಎನ್ನುವುದು ಆರು ಸಾಲಿನ ಪದ್ಯಜಾತಿಯೊಂದನ್ನು ನಿರ್ದೇಶಿಸುತ್ತದೆ. ಅದರಲ್ಲಿ 1, 2, 4, 5ನೆಯ ಪಾದಗಳು ಒಂದು ರೀತಿಯಾಗಿಯೂ 3, 6ನೆಯ ಪಾದಗಳು ಒಂದು ರೀತಿಯಾಗಿಯೂ ಇರುತ್ತವೆ. ಷಟ್ಪದಿ ಆರು ಬಗೆಯಾಗಿದೆ. ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ. ಈ ಷಟ್ಪದಿಗಳು ಮಾತ್ರಾಗಣಗಳಿಂದ ಕೂಡಿದುವಾಗಿರುವುದರಿಂದ ಇವನ್ನು ಮಾತ್ರಾಷಟ್ಪದಿಗಳೆಂದು ಕರೆಯಬಹುದು. ಈ ಎಲ್ಲ ಮಾತ್ರಾಷಟ್ಪದಿಗಳಿಗೆ ಮೂಲವಾಗಿ ಒಂದು ಷಟ್ಪದಿಯಿತ್ತು. ಅದನ್ನು ಮೂಲಷಟ್ಪದಿ ಎಂದೋ ಅಂಶಷಟ್ಪದಿ ಎಂದೋ ಅಥವಾ ತೀ.ನಂ.ಶ್ರೀಕಂಠಯ್ಯನವರನ್ನನುಸರಿಸಿ ಷಟ್ಪದ ಎಂದೋ ನಿರ್ದೇಶಿಸಬಹುದು. ಈ ಮೂಲಷಟ್ಪದಿ ಅಥವಾ ಷಟ್ಪದ ಅಂಶಗಣಗಳಿಂದ ಕೂಡಿದ್ದು, ಈ ಲಕ್ಷಣವನ್ನು ಪಡೆದಿದ್ದಿತು (ವಿ– ವಿಷ್ಣುಗಣ : ರು– ರುದ್ರಗಣ).

| | | | | | | |
|---|---|---|---|---|---|---|
| ವಿ | । | ವಿ | । | | |
| ವಿ | । | ವಿ | । | | |
| ವಿ | । | ವಿ | । | ರು | ॥ |
| ವಿ | । | ವಿ | । | | |
| ವಿ | । | ವಿ | । | | |
| ವಿ | । | ವಿ | । | ರು | ॥ |

ನಾಗವರ್ಮ, ಜಯಕೀರ್ತಿಗಳು ತಮ್ಮ ಲಕ್ಷಣಗ್ರಂಥಗಳಲ್ಲಿ ಷಟ್ಪದಿಯ ಗುಣ ಲಕ್ಷಣಗಳನ್ನು ವರ್ಣಿಸಿರುವರಲ್ಲದೆ ಅದು ಅನೇಕ ಶಾಸನಗಳಲ್ಲೂ (ಉದಾ: ಅಮ್ಮಿನಬಾವಿ ಶಾಸನ) ಅನೇಕ ಚಂಪೂ ಕಾವ್ಯಗಳಲ್ಲಿಯೂ (ಉದಾ: ಸುಕುಮಾರ ಚರಿತೆ) ಕಾಣಿಸಿಕೊಂಡಿದೆ. ಚಾಳುಕ್ಯ ಚಕ್ರವರ್ತಿ 3ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿಯೂ (ಸು.1129) ಅಂಶಗಣ ಘಟಿತವಾದ ಷಟ್ಪದ ಕಾಣಿಸಿಕೊಳ್ಳುತ್ತದೆ. ಆ ಕಾಲಕ್ಕಾಗಲೇ ಷಟ್ಪದರೂಪವಾದ ಕಥೆಗಳು ಹುಟ್ಟಿದ್ದುವೆಂಬುದಕ್ಕೆ ಆ ಕೃತಿಯಲ್ಲಿಯೇ ಆಧಾರವಿರುವುದಾದರೂ ನಮಗೆ ಷಟ್ಪದರೂಪದ ಯಾವ ಕಾವ್ಯವೂ ದೊರಕಿಲ್ಲ. ಎಂದರೆ 12ನೆಯ ಶತಮಾನದ ಮಧ್ಯದವರೆಗೆ ದೊರಕಿರುವ ಷಟ್ಪದಗಳೆಲ್ಲವೂ ಶಾಸನಗಳಲ್ಲಿ, ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಬಿಡಿಪದ್ಯಗಳಾಗಿವೆ.

12ನೆಯ ಶತಮಾನದ ಮಧ್ಯಭಾಗದಲ್ಲಿ ಅಂಶಗಣಗಳ ಸ್ಥಾನದಲ್ಲಿ ಮಾತ್ರಾಗಣಗಳನ್ನು ತರುವ ರೂಢಿ ಪ್ರಬಲವಾದ ಮೇಲೆ ಮೂಲಷಟ್ಪದಿ ಅಥವಾ ಷಟ್ಪದ ಆರು ರೀತಿಯ ಮಾತ್ರಾಷಟ್ಪದಿಗಳಾಗಿ ವಿಕಾಸ ಹೊಂದಿತು. ಅವನ್ನೇ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕಗಳೆಂದು ಕರೆದಿರುವುದು. ಆಯಾ ಷಟ್ಪದಿಗಳ ಮೊದಲ ಪಾದದ ಲಕ್ಷಣ ಹೀಗಿರುತ್ತದೆ (ಮೂರನೆಯ ಪಾದ ಅದರ ಒಂದೂವರೆಯಷ್ಟು + 1 ಗುರು ಆಗಿರುತ್ತದೆ).

| | | |
|---|---|---|
| ಶರ | (4 + 4) | = 8 ಮಾತ್ರೆಗಳು |
| ಕುಸುಮ | (5 + 5) | = 10 ಮಾತ್ರೆಗಳು |
| ಭೋಗ | (3 + 3 + 3 + 3) | = 12 ಮಾತ್ರೆಗಳು |
| ಭಾಮಿನಿ | (3 + 4 + 3 + 4) | = 14 ಮಾತ್ರೆಗಳು |
| ಪರಿವರ್ಧಿನಿ | (4 + 4 + 4 + 4) | = 16 ಮಾತ್ರೆಗಳು |
| ವಾರ್ಧಕ | (5 + 5 + 5 + 5) | = 20 ಮಾತ್ರೆಗಳು |

ಇವುಗಳಲ್ಲಿ ಭಾಮಿನಿ, ವಾರ್ಧಕಗಳು ಹೆಚ್ಚು ಪ್ರಚಾರದಲ್ಲಿದ್ದು, ಕನ್ನಡದ ಕೆಲವು ಅತ್ಯಂತ ಶ್ರೇಷ್ಠ ಕಾವ್ಯಗಳು ರಚಿತವಾಗಿವೆ.

ಷಟ್ಪದಿ ಕಾವ್ಯಗಳ ಸಮಗ್ರ ಇತಿಹಾಸವನ್ನು ಕೊಡುವುದು ಇಲ್ಲಿ ಸಾಧ್ಯವಿಲ್ಲವಾದುದರಿಂದ ಕೆಲವು ಪ್ರಮುಖ ಕಾವ್ಯಗಳ ಪರಿಚಯವನ್ನು ಮಾತ್ರ ಕಾಲಾನುಕ್ರಮದಲ್ಲಿ ಕೊಡಲು ಪ್ರಯತ್ನಿಸಿದೆ.

1224ರ ಹರಿಹರದ ಶಾಸನದಲ್ಲಿ ಪೋಲಾಳ್ವದಂಡನಾಥನೆಂಬಾತ ಹರಿಚಾರಿತ್ರವೆಂಬ ಕಾವ್ಯವನ್ನು ಷಟ್ಪದಿರೂಪವಾಗಿ ರಚಿಸಿದನೆಂದು ಹೇಳಿದೆ. ಆ ಕಾವ್ಯ ದೊರೆತಿಲ್ಲವಾದ್ದರಿಂದ ಅದರ ಬಗ್ಗೆ ಇನ್ನೇನೂ ಹೇಳಲು ಸಾಧ್ಯವಿಲ್ಲ. ಆದಕಾರಣ ಅವನ ಸಮಕಾಲೀನನಾದ ರಾಘವಾಂಕನಿಂದ (ಸು.1230) ಷಟ್ಪದಿಕಾವ್ಯಗಳ ಇತಿಹಾಸವನ್ನು ಆರಂಭಿಸಬಹುದು.

ರಾಘವಾಂಕನ ಒಟ್ಟು ನಾಲ್ಕು ಕಾವ್ಯಗಳು ದೊರಕಿವೆ. ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣ, ಸೋಮನಾಥ ಚಾರಿತ್ರ ಮತ್ತು ವೀರೇಶಚರಿತೆ (ಅವನ ಶರಭಚಾರಿತ್ರ ಮತ್ತು ಹರಿಹರ ಮಹತ್ತ್ವಗಳು ಅಲಭ್ಯ). ಇವುಗಳಲ್ಲಿ ಮೊದಲ ಮೂರು ವಾರ್ಧಕಷಟ್ಪದಿಯಲ್ಲಿದ್ದರೆ (5+5+5+5) ವೀರೇಶಚರಿತೆ ಉದ್ದಂಡ ಷಟ್ಪದಿಯಲ್ಲಿದೆ (4+4+4+4) ತನ್ನ ಬಹು ಶ್ರೇಷ್ಠ ಕೃತಿಗಳಿಂದಲೂ ನಮಗೆ ತಿಳಿದಮಟ್ಟಿಗೆ ಮೊದಲ ಷಟ್ಪದಿ ಕಾವ್ಯಗಳನ್ನು ಬರೆದ ಕವಿ ಆಗಿರುವುದರಿಂದಲೂ ರಾಘವಾಂಕ ಷಟ್ಪದಿ ಸಂಪ್ರದಾಯದ ಪ್ರವರ್ತಕನೆಂದು ಹೇಳಬಹುದು.

ರಾಘವಾಂಕನ ಅನಂತರ ಷಟ್ಪದಿ ಕಾವ್ಯಗಳು ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲಾರಂಭಿಸುತ್ತವೆ. ಸು.1250–60ರಲ್ಲಿದ್ದ ಕುಮಾರಪದ್ಮರಸ ರಾಘವಾಂಕನ ಸಮಕಾಲೀನನೂ ತನ್ನ ತಂದೆಯೂ ಆದ ಕೆರೆಯಪದ್ಮರಸನ ಸಂಸ್ಕೃತ ಕೃತಿ ಸಾನಂದಚರಿತೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಇದರಲ್ಲಿ ಅನೇಕ ಬಗೆಯ ಷಟ್ಪದಿಗಳಿದ್ದರೂ ಕುಸುಮಷಟ್ಪದಿಯ ಬಾಹುಳ್ಯವನ್ನು ಇಲ್ಲಿ ಕಾಣಬಹುದು. ಸು.1275ರಲ್ಲಿದ್ದ ಕುಮುದೇಂದುವಿನ ಕುಮುದೇಂದು ರಾಮಾಯಣದಲ್ಲಿ ಶರ, ಭೋಗಗಳನ್ನು ಬಿಟ್ಟರೆ ಉಳಿದೆಲ್ಲ ಷಟ್ಪದಿಗಳೂ ಬಳಕೆಯಾಗಿವೆ. ಜೈನ ಸಂಪ್ರದಾಯದ ರಾಮಾಯಣದ ಕಥೆ ಇಲ್ಲಿ ಬಂದಿದೆ. ಕವಿ ತನಗಿಂತ ಹಿಂದಿದ್ದ ನಾಗಚಂದ್ರನನ್ನು ಯಥೇಷ್ಟವಾಗಿ ಅನುಕರಿಸಿರುವುದು ಕಂಡುಬರುತ್ತದೆ. ಸು.1369ರಲ್ಲಿದ್ದ ಭೀಮಕವಿಯ ಬಸವಪುರಾಣ ಒಂದು ಪ್ರಮುಖ ಕೃತಿ. ಬಸವಣ್ಣನವರನ್ನು ಕುರಿತಾದ ಕನ್ನಡ ಕಾವ್ಯಗಳಲ್ಲಿ ಇದು ಅತ್ಯಂತ ಜನಪ್ರಿಯವಾದುದು. ವಾಸ್ತವವಾಗಿ ಇದು ಸ್ವತಂತ್ರ ಕೃತಿಯಲ್ಲ. ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣದ ಪ್ರಾಮಾಣಿಕವಾದ ಕನ್ನಡ ಅನುವಾದವಷ್ಟೆ. ಇದು ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಮೊಟ್ಟಮೊದಲ ಸಮಗ್ರ ಗ್ರಂಥ. ಸು.1400ರಲ್ಲಿದ್ದ ಪದ್ಮಣಾಂಕನ ಪದ್ಮರಾಜ ಪುರಾಣವೂ ಒಂದು ಗಮನಾರ್ಹ ಕೃತಿ. ವಾರ್ಧಕಷಟ್ಪದಿಯ ಈ ಕಾವ್ಯಕ್ಕೆ ಕೆರೆಯಪದ್ಮರಸನೇ ಕಥಾವಸ್ತು. ಹೀಗೆ ತಮಗಿಂತ ಹಿಂದೆ ಮನುಷ್ಯರಂತೆಯೇ ಬದುಕಿ, ಶಿವನ ಕೃಪೆಯನ್ನು ಪಡೆದ ಭಕ್ತರ ಕಥೆಗಳನ್ನು ಆರಿಸಿಕೊಂಡು ಕಾವ್ಯಗಳನ್ನು ರಚಿಸುವ ಹರಿಹರನ ಸಂಪ್ರದಾಯ ವಿಶೇಷವಾಗಿ ವೀರಶೈವಕವಿಗಳಲ್ಲಿ ಬೆಳೆದುಕೊಂಡು ಬಂದಿರುವುದು ಒಂದು ಮುಖ್ಯ ಸಂಗತಿಯಾಗಿದೆ.

ಕುಮಾರವ್ಯಾಸ (ಸು.1400) ಕನ್ನಡದ ಅತ್ಯಂತ ಶ್ರೇಷ್ಠ ಕವಿಗಳಲ್ಲೊಬ್ಬ. ಇವನ ಕನ್ನಡ ಭಾರತ ಕನ್ನಡದ ಅತಿ ಜನಪ್ರಿಯ ಕಾವ್ಯಗಳಲ್ಲೊಂದು. ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡಕ್ಕೆ ಭಾಮಿನಿ ಷಟ್ಪದಿಗಳಲ್ಲಿ ಈತ ಯಶಸ್ವಿಯಾಗಿ ತಂದಿದ್ದಾನೆ. ಕುಮಾರವ್ಯಾಸನ ಪ್ರಭಾವ ಮುಂದಿನ ಕವಿಗಳ ಮೇಲೆ ಅಪರಿಮಿತವಾಗಿದೆ. ಉದಾಹರಣೆಗೆ 1424ರಲ್ಲಿದ್ದ ಭಾಸ್ಕರ ಎಂಬ ಜೈನಕವಿ ತನ್ನ ಜೀವಂಧರಚರಿತೆಯೆಂಬ ಭಾಮಿನಿ ಷಟ್ಪದಿ ಕಾವ್ಯದಲ್ಲಿ ಕುಮಾರವ್ಯಾಸನನ್ನು ಅನೇಕ ಕಡೆಗಳಲ್ಲಿ ಅನುಕರಿಸಿರುವುದು ಸುಸ್ಪಷ್ಟವಾಗಿದೆ.

ಚಾಮರಸನ (ಸು.1430) ಪ್ರಭುಲಿಂಗಲೀಲೆ ಅಲ್ಲಮಪ್ರಭುವನ್ನು ವಸ್ತುವಾಗಿ ಉಳ್ಳ ಶ್ರೇಷ್ಠ ಕಾವ್ಯ. ಇವನು ಭಾಮಿನಿಷಟ್ಪದಿಗಳನ್ನು ಬಳಸುವುದರಲ್ಲಿ, ಸೊಗಸಾದ ರೂಪಕಗಳನ್ನು ನಿರ್ಮಿಸುವುದರಲ್ಲಿ ಕುಮಾರವ್ಯಾಸನನ್ನು ಹೋಲುತ್ತಾನೆ. ಇವನ ಸಮಕಾಲೀನನಾಗಿದ್ದ ಲಕ್ಕಣ್ಣದಂಡೇಶ ಪ್ರೌಢದೇವರಾಯನ ಮಂತ್ರಿಯಾಗಿದ್ದು ಶಿವತತ್ತ್ವ ಚಿಂತಾಮಣಿಯೆಂಬ

ವಾರ್ಧಕ ಷಟ್ಪದಿ ಕಾವ್ಯವನ್ನು ಬರೆದಿದ್ದಾನೆ. ಇದರಲ್ಲಿ ಅನೇಕ ಪುರಾತನ ಹಾಗೂ ನೂತನ ಶಿವಭಕ್ತರ ಕಥೆಗಳು ದೊರೆಯುತ್ತವೆ. ಇದೇ ಕಾಲದ ಗುರುಬಸವನ ಏಳುಕಾವ್ಯಗಳು ಸಪ್ತಕಾವ್ಯಗಳೆಂದು ಪ್ರಸಿದ್ಧವಾಗಿವೆ. ಅವುಗಳಲ್ಲಿ ಶಿವಯೋಗಾಂಗಭೂಷಣ ಪರಿವರ್ಧಿನಿಯಲ್ಲಿಯೂ ವೃಷಭಗೀತೆ ಭೋಗಷಟ್ಪದಿಯಲ್ಲಿಯೂ ಮನೋವಿಜಯಕಾವ್ಯ ಕುಸುಮಷಟ್ಪದಿಯಲ್ಲಿಯೂ ರಚಿತವಾಗಿವೆ. ಅದೇ ಕಾಲದ ಬತ್ತಲೇಶ್ವರ ಎಂಬ ವೀರಶೈವ ಕವಿ ಬತ್ತಲೇಶ್ವರ ರಾಮಾಯಣವನ್ನು ಬರೆದಿದ್ದಾನೆ. ಷಟ್ಪದಿ ಕಾವ್ಯಗಳನ್ನು ಬರೆದ ಈ ಶತಮಾನದ ಇತರ ವೀರಶೈವ ಕವಿಗಳು – ಬೊಮ್ಮರಸ (ಸು.1450, ಸೌಂದರ ಪುರಾಣ); ನೀಲಕಂಠಾಚಾರ್ಯ (ಸು.1485, ಆರಾಧ್ಯ ಚಾರಿತ್ರ); ಚತುರ್ಮುಖ ಬೊಮ್ಮರಸ (ಸು.1500, ರೇವಣಸಿದ್ಧೇಶ್ವರ ಕಾವ್ಯ); ಸಿಂಗಿರಾಜ (ಸು.1500, ಅಮಲಬಸವಚಾರಿತ್ರ ಅಥವಾ ಸಿಂಗಿರಾಜ ಪುರಾಣ. ಇದರಲ್ಲಿ ಬಸವಣ್ಣನವರ ಕತೆ ನಿರೂಪಿತವಾಗಿದೆ. ಇದು ಬಸವಣ್ಣನವರ ಪವಾಡಗಳ ಬಗ್ಗೆ ಹೆಚ್ಚು ಒಲವನ್ನು ತೋರಿರುವ ಕೃತಿಯಾಗಿದೆ).

15ನೆಯ ಶತಮಾನದ ಜೈನಕವಿಗಳಲ್ಲಿ ಕಲ್ಯಾಣಕೀರ್ತಿ (1439) ಮತ್ತು ತೆರಕಣಾಂಬಿ ಬೊಮ್ಮರಸ (ಸು.1485) ಉಲ್ಲೇಖಾರ್ಹರು. ಬೊಮ್ಮರಸನ ಸನತ್ಕುಮಾರಚರಿತೆ ಭಾಮಿನಿ ಷಟ್ಪದಿಯ ಕಾವ್ಯ. ವಡ್ಡಾರಾಧನೆಯಲ್ಲಿ ಗದ್ಯರೂಪವಾಗಿ ಕಾಣಿಸಿಕೊಂಡಿದ್ದ ಸನತ್ಕುಮಾರನ ಕಥೆಯನ್ನು ಇಲ್ಲಿ ಕಾವ್ಯರೂಪದಲ್ಲಿ ಸೊಗಸಾಗಿ ನಿರೂಪಿಸಲಾಗಿದೆ.

ಕುಮಾರವ್ಯಾಸನ ಸಂಪ್ರದಾಯದಲ್ಲಿ ರಾಮಾಯಣವನ್ನು ವಸ್ತುವನ್ನಾಗಿ ಮಾಡಿಕೊಂಡು ಕಾವ್ಯರಚನೆ ಮಾಡಿದ ನರಹರಿ ಅಥವಾ ಕುಮಾರವಾಲ್ಮೀಕಿಯ (ಸು.1500) ತೊರವೆ ರಾಮಾಯಣ ಅಂಥ ಉತ್ತಮ ಕಾವ್ಯವಲ್ಲದಿದ್ದರೂ ಕಥಾವಸ್ತುವಿನಿಂದಾಗಿ ಅತ್ಯಂತ ಜನಪ್ರಿಯ ಕೃತಿಗಳಲ್ಲೊಂದಾಗಿದ್ದಿತು.

ಮೂರನೆಯ ಮಂಗರಸನ (1508) ಜಯನೃಪಕಾವ್ಯ ಪರಿವರ್ಧಿನಿಯಲ್ಲಿದೆ. ಗುಬ್ಬಿಮಲ್ಲಣಾರ್ಯನ (1513) ಭಾವಚಿಂತಾರತ್ನ ಚಮತ್ಕಾರಗಳಿಂದ ಕೂಡಿದ ಪ್ರೌಢರಚನೆಯ ಕಾವ್ಯ. ಪಂಚಾಕ್ಷರೀ ಮಂತ್ರದ ಮಹಿಮೆಯನ್ನು ಸಾರುವ ಸುಪ್ರಸಿದ್ಧ ಸತ್ಯೇಂದ್ರಚೋಳನ ಕಥೆ ಇದರ ವಸ್ತು. ಇವನ ವೀರಶೈವಾಮೃತ ಮಹಾಪುರಾಣ ದೊಡ್ಡ ಗಾತ್ರದ ವಾರ್ಧಕ ಷಟ್ಪದಿ ಕಾವ್ಯ. ಸು.1550ರಲ್ಲಿದ್ದ ಗುರುಲಿಂಗವಿಭುವಿನ ಭಿಕ್ಷಾಟನ ಚರಿತೆಯಲ್ಲಿನ ಶಿವನ ಅದೇ ಹೆಸರಿನ ಲೀಲೆಯೊಂದನ್ನು ನಿರೂಪಿಸಿದೆ. ಅವನ ಸಮಕಾಲೀನನಾದ ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣದಲ್ಲಿ ಅಕ್ಕಮಹಾದೇವಿಯ ಕಥೆ ಹಲವು ಬಗೆಯ ಷಟ್ಪದಿಗಳಲ್ಲಿ ವರ್ಣಿತವಾಗಿದೆ.

ಈ ಶತಮಾನದ ಪ್ರಮುಖ ಷಟ್ಪದಿ ಕವಿಗಳೆಂದರೆ ಲಕ್ಷ್ಮೀಶ (ಸು.1550), ಕನಕದಾಸ (ಸು.1550) ಮತ್ತು ವಿರೂಪಾಕ್ಷಪಂಡಿತ (1584). ಕುಮಾರವ್ಯಾಸ ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಕನ್ನಡಕ್ಕೆ ತಂದಿದ್ದರೆ, ತಿಮ್ಮಣ್ಣ (ಸು.1510) ಅದರ ಮುಂದಿನ ಎಂಟು ಪರ್ವಗಳನ್ನು ಕನ್ನಡದಲ್ಲಿ ನಿರೂಪಿಸಿದ. ಲಕ್ಷ್ಮೀಶನ ಜೈಮಿನಿಭಾರತ ಕೌರವನ ಸಾವಿನ ಬಳಿಕ ಪಾಂಡವರು ರಾಜ್ಯದಲ್ಲಿ ಪ್ರತಿಷ್ಠಿತರಾದ ಮೇಲಿನ ಕಥೆಯನ್ನು ವಸ್ತುವಾಗಿ ಪಡೆದ ಒಂದು ಅತ್ಯಂತ ಜನಪ್ರಿಯ ಕಾವ್ಯ. ಕನಕದಾಸ ಮನೋಹರವಾದ ಕೀರ್ತನೆಗಳನ್ನು ರಚಿಸಿದ ಭಕ್ತಶ್ರೇಷ್ಠ. ಇವನ ರಾಮಧಾನ್ಯಚರಿತೆ ರಾಗಿಯ ಶ್ರೇಷ್ಠತೆಯನ್ನು ಸ್ಥಾಪಿಸಲಿಕ್ಕಾಗಿ ಹುಟ್ಟಿದ ಕಾಲ್ಪನಿಕ ಕಥೆಯೊಂದನ್ನು ಹೇಳುತ್ತದೆ. ಇವನ ನಳಚರಿತ್ರೆ ಕನ್ನಡದ ಜನಪ್ರಿಯ ಕಾವ್ಯಗಳಲ್ಲೊಂದು. ವಾರ್ಧಕ ಷಟ್ಪದಿಗಳನ್ನು ಬರೆಯುವುದರಲ್ಲಿ ಲಕ್ಷ್ಮೀಶನಿಗೆ ಹೆಗಲೆಣೆಯಾದ ಕವಿ ವಿರೂಪಾಕ್ಷಪಂಡಿತ. ಇವನ ಚನ್ನಬಸವಪುರಾಣ ನೆಪಕ್ಕೆ ಮಾತ್ರ ಚನ್ನಬಸವಣ್ಣನ ಕಥೆಯನ್ನು ಆಶ್ರಯಿಸಿದೆ. ಆದರೆ ಅದರ ತುಂಬ ಶಿವನ ಅನೇಕ ಲೀಲೆಗಳು, ವೀರಶೈವ ಧರ್ಮದ ತತ್ತ್ವಗಳು, ಕಾಲಜ್ಞಾನಗಳು ಸೇರಿಕೊಂಡು ಕಾವ್ಯವನ್ನು ಹಿಗ್ಗಿಲವೆ. ಇದೇ ಶತಮಾನದ ಇನ್ನೊಬ್ಬ ಉಲ್ಲೇಖಾರ್ಹನಾದ ಕವಿಯೆಂದರೆ ಕನ್ನಡ ಭಾಗವತವನ್ನು ಬರೆದ ಚಾಟುವಿಠ್ಠಲನಾಥ (ಸು.1530). ಈ ಕೃತಿ ತೊರವೆ ರಾಮಾಯಣದಂತೆಯೇ ಕೇವಲ ಕಥಾವಸ್ತುವಿನ ಕಾರಣದಿಂದಾಗಿ ಜನಪ್ರಿಯತ್ವವನ್ನು ಪಡೆದಿದ್ದ ಇನ್ನೊಂದು ಕಾವ್ಯ.

16ನೆಯ ಶತಮಾನಕ್ಕೆ ಉತ್ತಮ ಷಟ್ಪದಿ ಕಾವ್ಯಗಳ ಕಾಲ ಮುಗಿಯಿತೆಂದು ಭಾವಿಸಬಹುದು. ರಕ್ಕಸತಂಗಡಿ ಯುದ್ಧದಲ್ಲಿ (ಸು.1565) ವಿಜಯನಗರ ಸಾಮ್ರಾಜ್ಯ ಒಡೆದ ಮೇಲೆ ಸಾಹಿತ್ಯಕ್ಕಿದ್ದ ರಾಜಾಶ್ರಯ ತಪ್ಪಿತು. ಜನಜೀವನ ಅಸ್ತವ್ಯಸ್ತವಾಯಿತು. ಮುಂದೆ ಮೈಸೂರು, ಕೆಳದಿ ಮುಂತಾದ ಅರಸರು ಆಶ್ರಯವನ್ನು ಕೊಟ್ಟರೂ ಒಟ್ಟಿನಲ್ಲಿ ಯಾವುದೇ ರೀತಿಯ ಶ್ರೇಷ್ಠ ಕಾವ್ಯಗಳ ಕಾಲ ಅಲ್ಲಿಗೆ ಮುಗಿಯಿತೆಂದೂ ಅಲ್ಲಿಂದ ಏನಿದ್ದರೂ ಆಧುನಿಕ ಯುಗಕ್ಕೆ ಬಂದಾಗಲೇ ಉತ್ತಮ ಕೃತಿಗಳನ್ನು ಕಾಣಲು ಸಾಧ್ಯವೆಂದೂ ಹೇಳಬಹುದು. 17ನೆಯ ಶತಕದಿಂದೀಚೆಗೆ ಹುಟ್ಟಿದ ಕೆಲವು ಕೃತಿಗಳು ಹೀಗಿವೆ: ಸು.1606ರಲ್ಲಿದ್ದ ಎಳಂದೂರ ಹರೀಶರನು ಪ್ರಭುದೇವರ ಪುರಾಣವನ್ನು ಬರೆದಿದ್ದಾನೆ. ಇದರಲ್ಲಿ ಅಲ್ಲಮಪ್ರಭುವಿನ ಕಥೆಯ ಜೊತೆಗೆ ಬೇರೆ ಭಕ್ತರ ಕಥೆಗಳೂ ದೊರಕುತ್ತವೆ. ಸು.1650ರಲ್ಲಿದ್ದ ಸಿದ್ಧನಂಜೇಶ ಅಥವಾ ಚಿಕ್ಕ ನಂಜೇಶನ ಎರಡು ವಾರ್ಧಕ ಷಟ್ಪದಿ ರೂಪದ ಕೃತಿಗಳಿವೆ: ಗುರುರಾಜ ಚಾರಿತ್ರ ಮತ್ತು ರಾಘವಾಂಕ ಚರಿತೆ. ಕವಿ ರಾಘವಾಂಕನ ಬಗ್ಗೆ ನಮಗೆ ತಿಳಿದಿರುವ ಸಂಗತಿಗಳಿಗೆ ಇದು ಮುಖ್ಯ ಆಕರ. ಜೊತೆಗೆ, ಸಿದ್ಧನಂಜೇಶ ರಾಘವಾಂಕನ ಎಲ್ಲ ಕಾವ್ಯಗಳ ಸಾರಾಂಶವನ್ನು ಕೊಡುವಂತೆ ಹರಿಹರಮಹತ್ತ್ವ ಎಂಬ ಕೃತಿಯ ಸಾರಾಂಶವನ್ನೂ ಕೊಟ್ಟಿದ್ದಾನೆ. ರಾಘವಾಂಕನ ಈ ಕೃತಿ ಇಂದು ಅಲಭ್ಯ ವಾಗಿದೆಯಾದರೂ ಅದರ ಕಥಾ ಸಾರಾಂಶ ನಮಗೆ ದೊರಕುವುದರಿಂದಾಗಿ, ಹರಿಹರನ ವೈಯಕ್ತಿಕ ಜೀವನದ ಕೆಲವಾದರೂ ಪ್ರಮುಖ ಘಟನೆಗಳು ತಿಳಿದುಬರುವುದು ಇದರಿಂದ ಸಾಧ್ಯ ವಾಗಿದೆ. ಗೋವಿಂದ (ಸು. 1650, ನಂದಿ ಮಾಹಾತ್ಮ್ಯ), ಲಕ್ಷ್ಮಕವಿ(1723, ಭಾರತ), ಬಬ್ಬೂರುರಂಗ (1750, ಅಂಬಿಕಾ ವಿಜಯ), ಕೋನಯ್ಯ (ಸು.1750, ಗಯಚರಿತ್ರೆ)– ಇವರೆಲ್ಲರೂ ಕುಮಾರ ವ್ಯಾಸನಿಂದ ಪ್ರಭಾವಿತರಾದ ಕವಿಗಳು. ಸಹ್ಯಾದ್ರಿ ಖಂಡ ತೀರ್ಥಕ್ಷೇತ್ರಗಳ ಮಹಿಮೆಯನ್ನು ಭಾಮಿನಿಷಟ್ಪದಿಯಲ್ಲಿ ನಿರೂಪಿಸುವ ಒಂದು ಬೃಹತ್ಕಾವ್ಯ. ಮಹಲಿಂಗರಂಗನ (ಸು.1675) ಅನುಭವಾಮೃತ ಅದ್ವೈತ ತತ್ತ್ವಗಳನ್ನು ಸುಲಭಶೈಲಿಯಲ್ಲಿ ಬೋಧಿಸುವ ಒಂದು ಜನಪ್ರಿಯ ಕೃತಿ. ದ್ವೈತ ತತ್ತ್ವಗಳನ್ನು ಬೋಧಿಸುವ ಜಗನ್ನಾಥದಾಸರ (ಸು.1775) ಹರಿಕಥಾಮೃತಸಾರ ಇನ್ನೊಂದು ಜನಪ್ರಿಯ ಗ್ರಂಥವಾಗಿದೆ.

ಮುದ್ದಣ

ಷಟ್ಪದಿ ಗ್ರಂಥಗಳ ಮಾಲಿಕೆಯಲ್ಲಿ ಕೊನೆಯದಾಗಿ ಮುದ್ದಣನ (1869–1901) ಹೆಸರನ್ನು ಹೇಳಬಹುದು. ಇವನು ಹಳೆಯ ಮತ್ತು ಹೊಸ ಸಾಹಿತ್ಯಗಳ ಸಂಧಿಕಾಲದಲ್ಲಿದ್ದ ಕವಿ. ಇವನ ಗದ್ಯಕೃತಿಗಳಾದ ರಾಮಾಶ್ವಮೇಧ ಮತ್ತು ಅದ್ಭುತರಾಮಾಯಣಗಳು ಪ್ರಖ್ಯಾತವಾಗಿವೆ. ಅಷ್ಟೊಂದು ಪ್ರಸಿದ್ಧವಲ್ಲದ ಇವನ ಕೃತಿ ಶ್ರೀರಾಮಪಟ್ಟಾಭಿಷೇಕ ವಾರ್ಧಕದಲ್ಲಿ ರಚಿತವಾಗಿರುವ ಸುಂದರ ಕಾವ್ಯ. ಮುದ್ದಣನಾದ ಮೇಲೂ ಹಲವರು ಷಟ್ಪದಿ ಕಾವ್ಯಗಳನ್ನು ಮುಂದುವರಿಸಿದ್ದುಂಟು. ಬಹು ಹಿಂದಿನಿಂದ ಷಟ್ಪದಿ ಕಾವ್ಯಗಳು ಅತ್ಯಂತ ಜನಪ್ರಿಯವಾಗಿವೆ. ರಾಘವಾಂಕನ ಹರಿಶ್ಚಂದ್ರಕಾವ್ಯ, ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಭಾರತಗಳು, ಕನಕದಾಸರ ನಳಚರಿತ್ರೆ ಇವು ಇದಕ್ಕೆ ಉದಾಹರಣೆಗಳು. ಇವನ್ನು ಇಂದಿಗೂ ಗಮಕಿಗಳು ವಾಚನಮಾಡಿ ಶ್ರೋತೃಗಳನ್ನು ತಣಿಸುತ್ತಾರೆ. ಇವು ಕವಿತೆಯ ದೃಷ್ಟಿಯಿಂದಲೂ ಉನ್ನತಮಟ್ಟದವು ಎಂಬುದರಲ್ಲಿ ಸಂದೇಹವಿಲ್ಲ. ಇವುಗಳ ವಸ್ತು ಸುಪ್ರಸಿದ್ಧ; ಭಾಷೆ ಸರಳ, ಜೊತೆಗೆ ರಾಗವಾಗಿ ಹಾಡಲೂ ಅನುಕೂಲ. ಅನುಭವಾಮೃತದಂಥ ವೇದಾಂತ ಗ್ರಂಥಮೂ ಷಟ್ಪದೀರೂಪವಾಗಿದೆಯೆಂಬುದನ್ನು ಇಲ್ಲಿ ಸ್ಮರಿಸಬಹುದು.

20ನೆಯ ಶತಮಾನದಲ್ಲಿ ಷಟ್ಪದಿ ರಚನೆಯನ್ನು ಬಹುಯಶಸ್ವಿಯಾಗಿ ಬಳಸಿಕೊಂಡವರೆಂದರೆ ಜಿ.ಪಿ.ರಾಜರತ್ನಂ. ಇವರು ತಮ್ಮ ಮಹಾಕವಿ ಪುರುಷ ಸರಸ್ವತಿ ಎಂಬ ವಿಡಂಬನ ಗ್ರಂಥದಲ್ಲಿ ಹೊಸ ಮಾದರಿಯಲ್ಲಿ ಷಟ್ಪದಿ ರಚನೆಯನ್ನು ಕನ್ನಡಾಂಗ್ಲಭಾಷಾ ಮಿಶ್ರಣದಲ್ಲಿ ವಿಶಿಷ್ಟವಾಗಿ ಬಳಸಿಕೊಂಡಿದ್ದಾರೆ. ಮಹಾಕವಿ ಪುರುಷ ಸರಸ್ವತಿಯ ಗುಣಕಥನ ಮಾಡುವಾಗಲಾಗಲಿ, ಕುಕವಿನಿಂದೆ, ಸತ್ಕವಿಪ್ರಶಂಸೆ ಮಾಡುವಾಗಲಾಗಲಿ, ಹಾರ್ಮೋನಿಯಂ ಹರಣದಂತೆ ಕರ್ಣಕಥೆಯನ್ನು ಹೇಳುವಾಗಲಾಗಲಿ ತನಿಯಾದ ಹಾಸ್ಯ ವ್ಯಂಗ್ಯ ಬಹು ಸಹಜವಾಗಿ, ಅದ್ಭುತವಾಗಿ ಮೂಡಿನಿಂತಿದೆ.

*

**ಕನ್ನಡದಲ್ಲಿ ಸಂಕಲನಗ್ರಂಥಗಳು :** ಸಂಕಲನವೆಂದರೆ ಇತರರ ರಚನೆಗಳಿಂದ ಆಯ್ದ ಅವತರಣಿಕೆಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಅಳವಡಿಸಿಕೊಡುವ ಸಂದರ್ಭ ಗ್ರಂಥ. ಇದರಲ್ಲಿ ಆಯ್ಕೆ, ಸಂಯೋಜನೆಗಳು ಮಾತ್ರ ಸಂಕಲನಕಾರನ ಮುಖ್ಯ ಕೆಲಸ; ಟೀಕೆಟಿಪ್ಪಣಿಗಳನ್ನು ಯಥೋಚಿತವಾಗಿ ಸೇರಿಸಲು ಅವಕಾಶವಿರುವುದಾದರೂ ಕೇಂದ್ರಸ್ಥಾನವೆಲ್ಲ ಮೂಲ ಲೇಖಕರಿಗೆ. ಇಂಥ ಗ್ರಂಥಗಳನ್ನು ಒಂದು ಭಾಷಾಸಾಹಿತ್ಯದ ವೈಭವಗಳ ದಿಗ್ದರ್ಶಿಕೆಗಳೆನ್ನಬಹುದು.

ಮಲ್ಲಿಕಾರ್ಜುನನ (13ನೆಯ ಶತಮಾನ) ಸೂಕ್ತಿಸುಧಾರ್ಣವ (ಕಾವ್ಯಸಾರ) ಕನ್ನಡದ ಪ್ರಥಮ ಸಂಕಲನ ಗ್ರಂಥ. ಪಂಪ, ರನ್ನ, ಜನ್ನ, ಪೊನ್ನ ಮುಂತಾದ ಪ್ರಸಿದ್ಧ ಮಹಾಕವಿಗಳಿಂದಷ್ಟೇ ಅಲ್ಲದೆ, ಈಗ ಅನುಪಲಬ್ಧ ಕೃತಿಗಳ ಕರ್ತೃಗಳಾದ ಗುಣನಂದಿ, ಗುಣವರ್ಮ ಮುಂತಾದ ಪ್ರಾಚೀನರಿಂದಲೂ ಇವನು ಪದ್ಯಗಳನ್ನು ಆಯ್ದಿದ್ದಾನೆ ಎಂಬ

ಕಾರಣದಿಂದ ಗ್ರಂಥದ ಮಹತ್ತ್ವ ಹೆಚ್ಚಿದೆ. ಇದರಲ್ಲಿ ಕಾವ್ಯದ ಹದಿನೆಂಟು ಅಂಗಗಳಿಗೂ ಒಂದೊಂದು ಆಶ್ವಾಸ ಮೀಸಲಾಗಿರಿಸಿದ್ದು ಪ್ರತಿಯೊಂದು ಆಶ್ವಾಸದಲ್ಲೂ ಪೂರ್ವ ಕವಿಗಳ ಉತ್ತಮ ವರ್ಣನಾಪದ್ಯಗಳ ಸಂಕಲನವಿದೆ. ಸಂಕಲನಕಾರ ಜೈನನಾದರೂ ಶಿವ, ವಿಷ್ಣು, ಗಣಪತಿ ಸ್ತೋತ್ರಗಳನ್ನು ಪೀಠಿಕಾ ಭಾಗದಲ್ಲಿ ಸೇರಿಸಿದ್ದಾನೆ. ತಾನು ಆಯ್ದ ಪದ್ಯಗಳನ್ನು ಬರೆದ ಕವಿಗಳ ಹೆಸರನ್ನು ಹೇಳದೆ ಇರುವುದು ಈ ಗ್ರಂಥದ ದೊಡ್ಡ ಕೊರತೆಯಾಗಿದೆ.

ಸೂಕ್ತಿ ಸುಧಾರ್ಣವದಂತೆಯೇ ಪ್ರಸಿದ್ಧವಾಗಿರುವ ಇನ್ನೊಂದು ಕೃತಿ ಅಭಿನವವಾದಿ ವಿದ್ಯಾನಂದನಿಂದ (16ನೆಯ ಶತಮಾನ) ಸಂಕಲಿತವಾದ ಕಾವ್ಯಸಾರ. ಇದರಲ್ಲಿ ಕವಿಗಳ ಹಾಗೂ ಉದಾಹೃತ ಕಾವ್ಯಗಳ ಹೆಸರಿರುವುದರಿಂದ ಗ್ರಂಥ ಹೆಚ್ಚು ಪ್ರಯೋಜನಕಾರಿಯಾಗಿದೆ. ಸೂಕ್ತಿಸುಧಾರ್ಣವದಲ್ಲಿ ಕಂಡುಬರದ ಮುಂದಿನ ಕವಿಗಳಿಗೂ ಅನೇಕ ಮುಕ್ತಕಗಳು ಹಾಗೂ ಚಾಟುಪದ್ಯಗಳಿಗೂ ಇಲ್ಲಿ ಸ್ಥಾನ ದೊರೆತಿದೆ.

ಇದೇ ಕಾಲದಲ್ಲಿ ವೀರಶೈವರು ತಮ್ಮ ಧಾರ್ಮಿಕ ಸಾಹಿತ್ಯದ ವಚನಗಳನ್ನು ಶ್ರದ್ಧೆಯಿಂದ ಸಂಕಲನ ಮಾಡುವ ಮಹಾಕಾರ್ಯ ನಡೆಯಿತು. ಜೈನರ (ಪದ್ಯ) ಸಂಕಲನಗಳು ಸಾಹಿತ್ಯ ದೃಷ್ಟಿಯಿಂದ ಹೆಚ್ಚು ಪ್ರೇರಿತವಾದಂತೆ ವೀರಶೈವರ (ಗದ್ಯ ವಚನ) ಸಂಕಲನಗಳು ಭಕ್ತಿಯಿಂದ ಪ್ರೇರಿತವಾದವು. ಜಕ್ಕಣಾರ್ಯನ ಏಕೋತ್ತರ ಶತಸ್ಥಲ, ಕಲ್ಲಮಠದ ಪ್ರಭುದೇವರ ಲಿಂಗಲೀಲಾವಿಲಾಸಚಾರಿತ್ರ, ಚೆನ್ನಂಜೇದೇವನ ಬಸವಸ್ತೋತ್ರದ ವಚನ, ವೀರಶೈವ ಚಿಂತಾಮಣಿ, ವಿಶೇಷಾನುಭವ ಷಟ್ಸ್ಥಲ ಮುಂತಾದ ಎಷ್ಟೋ ವಚನ ಸಂಕಲನಗಳು ಹುಟ್ಟಿದ್ದುವು.

ಇವುಗಳೆಲ್ಲ ಶೂನ್ಯಸಂಪಾದನೆ ಮುಖ್ಯವಾದುದೆನ್ನಬಹುದು. ಈಗ ಪ್ರಸಿದ್ಧವಾಗಿರುವ ಶೂನ್ಯಸಂಪಾದನೆ ಗೂಳೂರ ಸಿದ್ಧವೀರಣ್ಣೊಡೆಯನ ಸಂಕಲನ. ಆದರೆ ಇದಕ್ಕೂ ಮುಂಚೆಯೇ ಶಿವಗಣಪ್ರಸಾದಿ ಮಹದೇವಯ್ಯ, ಕೆಂಚವೀರಣ್ಣೊಡೆಯ, ಹಲಗೆಯ ದೇವರು, ಗುಮ್ಮಳಾಪುರದ ಸಿದ್ಧಲಿಂಗಯತಿ ಮುಂತಾದವರಿಂದ ಶೂನ್ಯಸಂಪಾದನೆ ಎಂಬ ಹೆಸರಿನಲ್ಲಿ ಬೇರೆ ಸಂಕಲನಗ್ರಂಥಗಳಿದ್ದುವೆಂದು ತಿಳಿದುಬರುತ್ತದೆ. ಇವುಗಳಲ್ಲಿ ಅಲ್ಲಮಪ್ರಭು, ಬಸವೇಶ್ವರ, ಅಕ್ಕಮಹಾದೇವಿ ಮುಂತಾದ ಶಿವಶರಣ ಶರಣೆಯರ ವಚನಗಳನ್ನು ನಾಟಕೀಯವಾಗಿ ಸಂವಾದರೂಪದಲ್ಲಿ ಅಳವಡಿಸಿರುವುದು ಸಂಕಲನಕಾರನ ವೈಶಿಷ್ಟ್ಯವಾಗಿದೆ. ಒಮ್ಮೊಮ್ಮೆ ವಚನಗಳ ವ್ಯಾಖ್ಯಾನವೂ ಈ ಗ್ರಂಥಗಳಲ್ಲಿ ಕಾಣಬರುತ್ತದೆ.

ಅನಂತರ 20ನೆಯ ಶತಮಾನದ ಆರಂಭದವರೆಗೂ ಸಂಕಲನ ಗ್ರಂಥಗಳ ಹುಟ್ಟು ಹೆಚ್ಚಾಗಿ ಕಾಣಿಸದು. ಮೊದಲಿಗೆ ಪ್ರೌಢಶಾಲಾ ಕಾಲೇಜುಗಳ ಪಾಠಕ್ಕೆ ಉಪಯೋಗವಾಗುವಂತೆ ಪದ್ಯಸಾರ ಮುಂತಾದ ಪ್ರಕಟನೆಗಳು ಬಂದುವು. ಆದರೆ ಹೊಸದಾಗಿ ಕನ್ನಡ ಭಾಷಾಭಿಮಾನ ಉಕ್ಕುವಂತೆ ಬಿ.ಎಂ.ಶ್ರೀಕಂಠಯ್ಯನವರಿಂದ ಸಂಕಲಿತವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಕನ್ನಡ ಬಾವುಟ ಆಧುನಿಕ ಕನ್ನಡ ಸಂಕಲನ ಗ್ರಂಥಗಳಿಗೆ ನಾಂದಿ ಹಾಡಿತೆನ್ನಬಹುದು. ಹಾಗೆಯೇ ಇಂಗ್ಲಿಷ್‌ನಿಂದ ಅನುವಾದ ಮಾಡಲಾದ ಕನ್ನಡ ಕವಿತೆಗಳನ್ನೇ ಒಳಗೊಂಡಿದ್ದರೂ ಕನ್ನಡ ಕವಿತಾರಚನೆಗೆ ಛಂದಸ್ಸು, ತಂತ್ರಗಳ ನೂತನ ದೃಷ್ಟಿಯನ್ನೊದಗಿಸಿ, ವಿನೂತನ ಕಾವ್ಯ ಸಂಪ್ರದಾಯಕ್ಕೆ ನಾಂದಿ ಹಾಡಿದ ಶ್ರೀ ಅವರ ಇಂಗ್ಲಿಷ್ ಗೀತಗಳು ಕೂಡ ಇಲ್ಲಿ ಉಲ್ಲೇಖನೀಯ. ಮುಂದೆ ರೊಮ್ಯಾಂಟಿಕ್ ಸಂಪ್ರದಾಯದಲ್ಲಿ ಬರೆದ ಕವನ ಸಂಕಲನಗಳು ತಳಿರು ಮೊದಲಾದವು ಪ್ರಕಟವಾಗುವ ಪರಿಪಾಠ ಬೆಳೆದುದನ್ನು ಕಾಣುತ್ತೇವೆ. ಕೆ.ಡಿ.ಕುರ್ತಕೋಟಿ ಮತ್ತು ಜಿ.ಬಿ.ಜೋಶಿ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ (1959) ನಡೆದು ಬಂದ ದಾರಿ ವಿಶೇಷ ಮಹತ್ತ್ವಪಡೆದ ಒಂದು ಸಂಕಲನಗ್ರಂಥವಾಗಿದೆ. ಇದರಲ್ಲಿ ಹೊಸಗನ್ನಡ ಕಾವ್ಯ, ವಿಮರ್ಶೆ, ನಾಟಕ, ಕಾದಂಬರಿ, ಸಣ್ಣಕಥೆ ಈ ಸಾಹಿತ್ಯ ಪ್ರಕಾರಗಳ ವಿಷಯ ನಿರೂಪಿತವಾಗಿದೆ.

'ನವ್ಯ-ಧ್ವನಿ' ಒಂದು ವಿಶಿಷ್ಟ ಕಾವ್ಯಮಾರ್ಗದ ದಿಗ್ದರ್ಶನದ ದೃಷ್ಟಿಯಿಂದಲೇ ಹೊರಟ ಮೊದಲ ಕಾವ್ಯಸಂಕಲನ (ಧಾರವಾಡ 1956). ಇದರ ಸಂಪಾದಕರಾದ ವಿ.ಕೆ.ಗೋಕಾಕ ಮತ್ತು ಚೆನ್ನವೀರ ಕಣವಿ ಅವರು ರೊಮ್ಯಾಂಟಿಕ್ ಪರಂಪರೆಯ ಕವಿಗಳಿಗಿಂತ ಭಿನ್ನವಾದ ಕಾವ್ಯಸ್ವರೂಪವನ್ನು ಗುರುತಿಸಿ ಕನ್ನಡ ಕಾವ್ಯದ ನೂತನ ದಿಗಂತವನ್ನು ಕೈಮಾಡಿ ತೋರಿಸಲು ಯತ್ನಿಸಿದರು. ಇದರಲ್ಲಿ ಗೋಕಾಕ, ಅಡಿಗ, ಕಣವಿ, ರಾಮಚಂದ್ರಶರ್ಮ, ಶಂಕರಮೊಕಾಶಿಪುಣೇಕರ ಮೊದಲಾದವರ ಹೊಸ ಕಾವ್ಯ ಧೋರಣೆಯನ್ನು ಕಾಣುತ್ತೇವೆ. ಧಾರವಾಡದಿಂದ ಪ್ರಕಟವಾದ ಮತ್ತೊಂದು ಕವನ ಸಂಕಲನ – ಸಂಕ್ರಮಣ ಕಾವ್ಯ (1965). ಇದರ ಸಂಪಾದಕರು ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣ ಶೆಟ್ಟಿ. ಇದರಲ್ಲಿ ಹಿಂದಿನವರ ಜೊತೆಗೆ ಕೆ.ಎಸ್.ನರಸಿಂಹಸ್ವಾಮಿ, ಲಂಕೇಶ್, ರಾಮಾನುಜನ್ ಮುಂತಾದವರ ನೂತನ ರಚನೆಗಳೂ ಸೇರಿವೆ.

ಪಿ.ಲಂಕೇಶ್ ಅವರಿಂದ ಸಂಪಾದಿತವಾಗಿ ಪ್ರಕಟವಾದ ಅಕ್ಷರ ಹೊಸ ಕಾವ್ಯ (1970) ಕನ್ನಡ ನವ್ಯ ಸಾಹಿತ್ಯದ ಸಮಗ್ರ ಸ್ವರೂಪವನ್ನು ದಿಗ್ದರ್ಶಿಸುವ ಪ್ರಯತ್ನವುಳ್ಳ ಅತ್ಯಂತ ಗಮನಾರ್ಹ ಸಂಕಲನ ಗ್ರಂಥ. ಇಂಗ್ಲಿಷಿನಲ್ಲಿ ಪ್ರಕಟವಾದ ಫೇಬರ್ ಬುಕ್ ಆಫ್ ಮಾಡ್ರನ್ ವರ್ಸ್ ಈ ಗ್ರಂಥಕ್ಕೆ ಮಾದರಿ. ಅಕ್ಷರ ಹೊಸ ಕಾವ್ಯದಲ್ಲಿ ಸುಮಾರು 34 ಜನ ಕನ್ನಡದ ಪ್ರತಿಭಾವಂತ ಕವಿಗಳಿಗೆ ಎಡೆ ದೊರಕಿದೆ. 4000 ಪದ್ಯಗಳನ್ನು ಓದಿ ಆಯಾ ಕವಿಯ ಒಟ್ಟು ಜೀವನ ದೃಷ್ಟಿ, ಧೋರಣೆಗಳನ್ನು ಪ್ರತಿಬಿಂಬಿಸುವಂತೆ ಕವನಗಳನ್ನು ಆಯ್ಕೆ ಮಾಡಲಾಗಿದೆ. ನವ್ಯಕಾವ್ಯದ ಗಟ್ಟಿ ನೆಲವಾದ ಎಂ.ಗೋಪಾಲಕೃಷ್ಣ ಅಡಿಗರಿಂದ ಹಿಡಿದು ಬಿ.ಆರ್.ಲಕ್ಷ್ಮಣ ರಾವ್, ಶ್ರೀ ಕೃಷ್ಣ ಆಲನಹಳ್ಳಿ, ಕೆ.ವಿ.ತಿರುಮಲೇಶ್, ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟ ಮೊದಲಾದ ಕವಿಗಳ ಕವನಗಳು ಸಂಕಲನಗೊಂಡಿವೆ. ಹೊಸ ಜನಾಂಗದ ಕವಿತೆಗಳು (1971) ಅಕ್ಷರ ಹೊಸ ಕಾವ್ಯದ ಮಾದರಿಯಲ್ಲಿ ರಚಿತವಾದ ಇನ್ನೊಂದು ಸಂಕಲನ ಗ್ರಂಥ. ಬುದ್ದಣ್ಣ ಹಿಂಗಮಿರೆ ಇದರ ಸಂಪಾದಕರು. ಈ ಗ್ರಂಥದಲ್ಲಿ ಅಕ್ಷರ ಹೊಸ ಕಾವ್ಯದಲ್ಲಿ ಸೇರದೆ ಇರುವ ಕವಿಗಳ ಕವನಗಳು ಸಂಕಲನಗೊಂಡಿವೆ. ಸಂಪಾದಕರ ಪ್ರಶ್ನೆಗಳಿಗೆ ಕವಿಗಳಿಂದ ಬಂದ ಉತ್ತರಗಳು ಈ ಗ್ರಂಥದ ಪ್ರಮುಖ ಆಕರ್ಷಣೆ. ಈ ಪ್ರಶ್ನೋತ್ತರ ಸಂವಾದ ಆಯಾ ಕವಿಯ ಕಾವ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಸಾಕಷ್ಟು ಸಹಾಯವನ್ನೊದಗಿಸುತ್ತದೆ.

ಹಳಗನ್ನಡದಿಂದ ಆರಂಭಿಸಿ ಆಧುನಿಕ ಕಾಲದ ವರೆಗೂ ಪ್ರಸಿದ್ಧ ಕವಿಗಳ ಕಾವ್ಯ ರಚನೆಗಳಿಂದ ಆಯ್ದು ಸಿದ್ಧಪಡಿಸಿದ ಸಂಕಲನ ಗ್ರಂಥಗಳಲ್ಲಿ ರಂ.ಶ್ರೀ.ಮುಗಳಿಯವರ ಸಂಪಾದಕತ್ವದಲ್ಲಿ ಹೊರಬಂದ ಕಾವ್ಯ ಸಂಚಯ ಬಹುಮುಖ್ಯವಾದುದು. ಇದು ಸಾಹಿತ್ಯ ಅಕಾಡೆಮಿಯಿಂದ ಪ್ರಕಟಗೊಂಡಿದೆ (1970).

ಬೆನ್ನಹಿಂದಿನ ಬೆಳಕು (1972) ಬಳ್ಳಾರಿ, ಗುಲ್ಬರ್ಗ, ರಾಯಚೂರು, ಬೀದರ್- ಈ ಭಾಗದ ಸುಮಾರು 27 ಜನ ಕವಿಗಳನ್ನೊಳಗೊಂಡ ಸಂಕಲನ ಗ್ರಂಥ. ಶಾಂತರಸ ಈ ಸಂಕಲನದ ಸಂಪಾದಕರು.

ಕವಿತಾ ಸಂಕಲನಗಳಂತೆಯೇ ಸಣ್ಣಕಥೆಗಳ, ಲಘುಪ್ರಬಂಧಗಳ, ಏಕಾಂಕ ನಾಟಕಗಳ ಕೆಲವು ಸಂಕಲನ ಗ್ರಂಥಗಳೂ ಈ ಕಾಲದಲ್ಲೇ ಪ್ರಕಟಗೊಂಡಿವೆ. ಇನ್ನಷ್ಟು ಹೊಸ ಕತೆಗಳು (ಮನೋಹರ ಗ್ರಂಥಮಾಲೆ) ಸಣ್ಣಕಥೆಗಳ ಒಂದು ಗಮನಾರ್ಹ ಸಂಕಲನ.

ವಿದ್ವತ್ಪೂರ್ಣವಾದ ಗಂಭೀರ ಪ್ರಬಂಧಗಳ ಹಾಗೂ ವ್ಯಕ್ತಿತ್ವದ್ಯೋತಕ ಪ್ರಬಂಧಗಳ ಸಂಕಲನವನ್ನು ಸುಂದರವಾದ ಬೃಹತ್ಸಂಪುಟಗಳಲ್ಲಿ ಮಾಡುವ ಒಂದು ನೂತನ ಕ್ರಮವನ್ನು ಇಲ್ಲಿ ನಿರ್ದೇಶಿಸದೆ ಕೈಬಿಡುವಂತಿಲ್ಲ. ಕನ್ನಡ ನಾಡು – ನುಡಿಗಳ ಉನ್ನತಿಗಾಗಿ ದುಡಿದ ಅನೇಕ ಮಹನೀಯರ ಹಾಗೂ ಸಂಸ್ಥೆಗಳ ಸಂಸ್ಮರಣಾರ್ಥವಾಗಿ ಕಾಲದಿಂದ ಕಾಲಕ್ಕೆ ಅಭಿನಂದನ ಗ್ರಂಥಗಳೆಂಬ ಹೆಬ್ಬೊತ್ತಿಗೆಗಳು ಈಗಾಗಲೆ ಗಣನೀಯ ಪ್ರಮಾಣದಲ್ಲಿ ಬಂದಿವೆ. ಇಲ್ಲಿ ಆತ್ಮೀಯರಿಂದ ಬರೆಯಲಾದ ವ್ಯಕ್ತಿ ಚಿತ್ರಣಗಳ ಜೊತೆಜೊತೆಗೆ ಕನ್ನಡ ಸಾಹಿತ್ಯ, ಸಂಸ್ಕೃತಿಗಳ ವಿಶಿಷ್ಟಾಂಶಗಳ ಬಗೆಗೆ ವಿಶೇಷಜ್ಞರಿಂದ ಬರೆಯಿಸಲಾದ ಸಂಶೋಧನ ಪ್ರಬಂಧಗಳೂ ಸೇರಿರುತ್ತವೆ. ಈ ಮಾಲಿಕೆಯಲ್ಲಿ ಬಿ.ಎಂ.ಶ್ರೀ. ಅವರಿಗೆ ಅರ್ಪಿಸಲಾದ ಸಂಭಾವನೆ ಮೊದಲನೆಯದೆನ್ನಬಹುದು. ಇದಾದ ಮೇಲೆ ಸುಮಾರು 100ಕ್ಕೂ ಮೇಲ್ಪಟ್ಟು ಅಭಿನಂದನ ಗ್ರಂಥಗಳು ಪ್ರಕಟಗೊಂಡಿವೆ. ಇವುಗಳಲ್ಲಿ ವಚನ ಪಿತಾಮಹ (ಫ.ಗು.ಹಳಕಟ್ಟಿ), ಜ್ಞಾನೋಪಾಸಕ ಮತ್ತು ಉಪಾಯನ (ಡಿ.ಎಲ್. ನರಸಿಂಹಾಚಾರ್), ಗಂಗೋತ್ರಿ ಮತ್ತು ಸಹ್ಯಾದ್ರಿ (ಕುವೆಂಪು), ದೀವಿಗೆ (ಗೋವಿಂದ ಪೈ), ಸವಿನೆನಪು (ಟಿ.ಎಸ್.ವೆಂಕಣ್ಣಯ್ಯ), ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್), ಚಂದನ (ಕೆ.ಎಸ್. ನರಸಿಂಹಸ್ವಾಮಿ), ಕಾದಂಬರೀ ದರ್ಶನ (ಕೃಷ್ಣಮೂರ್ತಿ ಪುರಾಣಿಕ), ದೇವಗಂಗೆ (ಬಿ.ಶಿವಮೂರ್ತಿಶಾಸ್ತ್ರಿ), ಅಂತಃಕರಣ, ನಮ್ಮ ನಾಡೋಜ (ದೇಜಗೌ), ಗೊರೂರು ಗೌರವಗ್ರಂಥ (ಗೊರೂರು ರಾಮಸ್ವಾಮಿ ಅಯ್ಯಂಗಾರ್), ರಸಚೇತನ (ಅ.ನ.ಕೃ.), ವಿನಾಯಕ ವಾಙ್ಮಯ (ವಿ.ಕೃ.ಗೋಕಾಕ), ವಿ.ಸೀ-75 (ವಿ.ಸೀತಾರಾಮಯ್ಯ), ಅಭಿನಂದನೆ (ಎ.ಆರ್.ಕೃಷ್ಣಶಾಸ್ತ್ರೀ), ಪೂರ್ಣಕುಂಭ (ಎಸ್.ವಿ.ಪರಮೇಶ್ವರ ಭಟ್ಟ), ಕಬ್ಬಿನ ಹಾಲು (ಕೆ.ವಿ.ಶಂಕರಗೌಡ), ಅಧ್ಯಯನ (ಶಂ.ಬಾ.ಜೋಶಿ), ಚೆಂಬೆಳಕು (ಚೆನ್ನವೀರಕಣವಿ), ಯದುಗಿರಿ (ಪು.ತಿ.ನ), ಕಾವ್ಯಾನಂದ (ಸಿದ್ಧಯ್ಯ ಪುರಾಣಿಕ), ಎಚ್ಚೆಸ್ಕೆಯವರ ಆಯ್ದ ಬರಹಗಳು (ಎಚ್ಚೆಸ್ಕೆ), ಸಿದ್ಧಗಂಗಾಶ್ರೀ (ಶಿವಕುಮಾರ ಮಹಾಸ್ವಾಮಿ), ಕಲಾಗೌರವ (ಆರ್.ಜಿ.ರಾಯಕರ), ತ.ರಾ.ಸು. ಬದುಕು ಬರಹ (ತ.ರಾ.ಸು), ಜಾನಪದ ಸಂಪದ (ಎಂ.ಎಸ್.ಸುಂಕಾಪುರ), ಬೆಳುವಲ (ಬೆಟಗೇರಿ ಕೃಷ್ಣಶರ್ಮ), ನಾಡಿಗರ ಬರಹಗಳು (ನಾಡಿಗ ಕೃಷ್ಣಮೂರ್ತಿ), ಗಮಕಶಾರದೆ (ಶಕುಂತಲಾಬಾಯಿ ಪಾಂಡುರಂಗರಾವ್), ರಸರಾಜ (ಚಿಟ್ಟಾಣಿ ರಾಮಚಂದ್ರ ಹೆಗಡೆ), ಸ್ವಸ್ತಿ (ತ.ಸು.ಶಾಮರಾಯ), ಮಾನ (ಹಾ.ಮಾ.ನಾಯಕ), (ಎಸ್.ಎಲ್.ಭೈರಪ್ಪ) ವ್ಯಾಸಂಗನೆ, ಪ್ರಶಾಂತ (ಶಾಂತಾದೇವಿ ಮಾಳವಾಡ), ನಾನೀಕಾಕಾ ಎನ್ಕೆ ಬದುಕು, (ಎನ್ಕೆ ಕುಲಕರ್ಣಿ), ಇಂಚರ (ಪಂಡಿತ ಬಸವರಾಜ ರಾಜಗುರು), ಜಿ.ನಾರಾಯಣ ವಿಚಾರ (ಜಿ.ನಾರಾಯಣ), ನಾಟಕ (ಬೇಲೂರು ಕೃಷ್ಣಮೂರ್ತಿ), ಅರವಿಂದ (ಪಂಡಿತ ಶೇಷಾದ್ರಿ ಗವಾಯಿ), ಕಟ್ಟೀಮನಿ, ಬದುಕ ಬರಹ (ಬಸವರಾಜ ಕಟ್ಟೀಮನಿ), ನಿರಂಜನ ಅಭಿನಂದನಾ ಗ್ರಂಥ (ನಿರಂಜನ), ಅನುಪಮಾ ಅಭಿನಂದನಾ (ಅನುಪಮಾ ನಿರಂಜನ), ಚದುರಂಗ ವ್ಯಕ್ತಿ ಅಭಿವ್ಯಕ್ತಿ (ಚದುರಂಗ), ಶಿವಚಿಂತನ (ಎಚ್.ತಿಪ್ಪೇರುದ್ರಸ್ವಾಮಿ), ಲೋಕಮಿತ್ರ (ಕು.ಶಿ.ಹರಿದಾಸ ಭಟ್ಟ), ಅಭಿನಂದನ (ರಾಮಚಂದ್ರ ಉಚ್ಚಿಲ), ಸಾರ್ಥಕ (ಸಿ.ಪಿ.ಕೆ.), ಜ್ಞಾನದೇಗುಲ (ಪುಟ್ಟರಾಜ ಗವಾಯಿ),

ಶ್ರೀಮುಖ (ಟಿ.ವಿ.ವೆಂಕಟಾಚಲಶಾಸ್ತ್ರೀ), ಅಭಿಜ್ಞಾನ (ಕೆ.ಕೃಷ್ಣಮೂರ್ತಿ), ಸಂಶೋಧನೆ (ಚಿದಾನಂದಮೂರ್ತಿ), ಹೊನ್ನಹೊಂಬಾಳೆ (ಡಿ.ಕೆ.ರಾಜೇಂದ್ರ), ವಜ್ರಕುಸುಮ (ಬಿ.ಬಿ.ಸಾಸನೂರ), ಸಿರಸಂಪದ (ಬ.ವಿ.ಶಿರೂರ), ಉನ್ಮೀಲನ (ಆರ್ಯಾಂಬಪಟ್ಟಾಭಿ), ಅಕ್ಕಕೇಳವ್ವ (ಸರೋಜನಿ ಶಿಂತ್ರಿ), ವಾಙ್ಮಯತಪಸ್ವಿ (ಕಡೆಂಗೋಡ್ಲು ಶಂಕರಭಟ್ಟ), ತುಂಬಿದ ಕೊಡ (ಕಾಶಿವಿಶ್ವನಾಥ ಶೆಟ್ಟಿ), ಸಾರ್ಥಕ (ಎಂ.ಮರಿಯಪ್ಪಭಟ್ಟ) (ಎಂ.ಎಂ.ಕಲಬುರ್ಗಿ) ಮಹಾಮಾರ್ಗ ಮೊದಲಾದವುಗಳನ್ನು ಹೆಸರಿಸಬಹುದು.

ಇತ್ತೀಚಿನ ದಿನಗಳಲ್ಲಿ ಒಬ್ಬ ಲೇಖಕನ ಸಮಗ್ರ ಕೃತಿಗಳನ್ನು ಒಂದೆಡೆ ಸಂಕಲಿಸಿ ಪ್ರಕಟಿಸುವ ಪರಿಪಾಠ ಆರಂಭವಾಗಿದೆ. ಸಮಗ್ರ ಗದ್ಯ, ಪದ್ಯ, ಕಾವ್ಯ, ಕಥೆಗಳು ಮೊದಲಾದ ಶೀರ್ಷಿಕೆಯಡಿಯಲ್ಲಿ ಕನ್ನಡದ ಅನೇಕ ಲೇಖಕರ ಕೃತಿಗಳು ಪ್ರಕಟವಾಗಿವೆ, ಪ್ರಕಟವಾಗುತ್ತಿವೆ. ಉತ್ತಮ ಮಕ್ಕಳ ಕವಿತೆಗಳನ್ನು ಒಂದೆಡೆ ಸಂಕಲಿಸಿ ಕೊಡುವ ಪ್ರಯತ್ನವನ್ನು ಬೋಳುವಾರು ಮಹಮದ್ ಕುಂಞ ರಚಿಸಿದ್ದು, 'ತಟ್ಟು ಚಪ್ಪಾಳೆ ಪುಟ್ಟ ಮಗು' ಒಂದು ಮಹತ್ವದ ಸಂಕಲನವಾಗಿದೆ. ಕನ್ನಡ ಸಣ್ಣಕಥೆಗಳು (ಜಿ.ಎಚ್. ನಾಯಕ) ಇನ್ನೊಂದು ಗಮನಾರ್ಹ ಸಣ್ಣಕಥೆಗಳ ಸಂಕಲನ. ಅಕಾಡೆಮಿಗಳು, ಅನೇಕ ಸಾಹಿತ್ಯಕ ಸಂಸ್ಥೆಗಳು ಸಂಕಲನ ಗ್ರಂಥಗಳನ್ನು ಪ್ರಕಟಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ 2001ರಲ್ಲಿ ಪ್ರಕಟಿಸಿರುವ ಶತಮಾನದ ಕಾವ್ಯ (ಸಂ. ಎಚ್.ಎಸ್.ವೆಂಕಟೇಶಮೂರ್ತಿ), ಶತಮಾನದ ಸಣ್ಣಕತೆ (ಸಂ. ಬೋಳುವಾರು ಮಹಮದ್ ಕುಂಞ), ಶತಮಾನದ ಸಾಹಿತ್ಯ ವಿಮರ್ಶೆ (ಸಂ. ಎಚ್.ಎಸ್.ರಾಘವೇಂದ್ರರಾವ್), ಶತಮಾನದ ಸಂಶೋಧನೆ (ಸಂ. ಎನ್.ಎಸ್.ತಾರಾನಾಥ್) ಶತಮಾನದ ಲಲಿತ ಪ್ರಬಂಧ (ಸಂ. ಗುರುಲಿಂಗ ಕಾಪಸೆ), ಶತಮಾನದ ಮಕ್ಕಳ ಸಾಹಿತ್ಯ (ಸಂ. ಎನ್.ಎಸ್.ರಘುನಾಥ್) ಇವು ಉಲ್ಲೇಖನೀಯ ಗ್ರಂಥಗಳು. (ಕೆ.ಕೆ.)

**ಕನ್ನಡದಲ್ಲಿ ಸಣ್ಣಕಥೆಗಳು :** ಕಾದಂಬರಿಯ ತರುವಾಯ ಸಣ್ಣ ಕಥೆಯೇ ಅತ್ಯಂತ ಜನಪ್ರಿಯವಾದ ಪ್ರಕಾರ. ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಾಳಿದುದು ಸುಮಾರು ನೂರು ವರ್ಷಗಳ ಹಿಂದೆ. ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಕಥೆಗಾರರ ಸಣ್ಣಕಥೆಗಳ ಸಂಖ್ಯೆಯನ್ನು ಪಟ್ಟಿ ಮಾಡುವುದು ಪ್ರಯಾಸದ ಕೆಲಸ. ವಾರಪತ್ರಿಕೆ, ದಿನಪತ್ರಿಕೆ, ಮಾಸಪತ್ರಿಕೆಗಳಲ್ಲಿ ಹೊಸ ಹೊಸ ಕಥೆಗಳು ಪ್ರಕಟವಾಗುತ್ತಲೇ ಇವೆ. ಇದರ ತಂತ್ರ, ವ್ಯಾಪ್ತಿ, ಬರೆವಣಿಗೆಯ ರೀತಿ, ಒಟ್ಟಂದದ ಪರಿಣಾಮ, ರೂಪಗಳನ್ನು ಮಾತ್ರ ಇಲ್ಲಿ ಸ್ಥೂಲವಾಗಿ ಗಮನಿಸಿದೆ.

ಕನ್ನಡದಲ್ಲಿ ಸಣ್ಣಕಥೆಗೆ ವಿಶಿಷ್ಟ ರೂಪ ಕೊಟ್ಟವರು, ಚಾರಿತ್ರಿಕವಾಗಿ ಮೊಟ್ಟ ಮೊದಲು ಕಥೆಗಳನ್ನು ಬರೆದವರು ಯಾರು ಎಂಬ ಬಗ್ಗೆ ಜಿಜ್ಞಾಸೆಯಿದೆ. ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ.ಎಸ್.ಕಾಮತರು ಇವರೆಲ್ಲ ಆರಂಭದಲ್ಲಿ ಸಣ್ಣ ಕಥೆಗಳನ್ನು ಬರೆದವರು. ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾದ ಪಂಜೆ ಮಂಗೇಶರಾಯರ ನನ್ನ ಚಿಕ್ಕತಾಯಿ (1900) ಕನ್ನಡದ ಮೊದಲ ಸಣ್ಣ ಕಥೆ ಎಂದು ಭಾವಿಸಲಾಗಿದೆ. ಅನಂತರದಲ್ಲಿ ಅವರು ನನ್ನ ಚಿಕ್ಕ ತಂದೆ (1902), ಭಾರತ ಶ್ರವಣ (1902), ಕಮಲಪುರದ ಹೋಟ್ಲಿನಲ್ಲಿ (1902) ಮೊದಲಾದ ಉತ್ತಮ ಕಥೆಗಳನ್ನು ಪ್ರಕಟಿಸಿದರು. ಆದರೆ ಇವರಾರೂ ಅದೊಂದು ಸಾಹಿತ್ಯ ಪ್ರಕಾರವೆಂಬ ಪ್ರಜ್ಞೆಯನ್ನು ಮೂಡಿಸಿರಲಿಲ್ಲ. ಆ ಪ್ರಜ್ಞೆಯನ್ನು ಮೂಡಿಸಿ ಅದನ್ನೇ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಶ್ರೀನಿವಾಸರು (ಮಾಸ್ತಿ) ಮೊದಲಿಗರು. ಇವರು ಸಣ್ಣಕಥೆಯ ಜನಕರೆಂಬ ಹೆಸರಿಗೆ ಪಾತ್ರರಾದವರು. ಇವರ ವಸ್ತುವಿನ ಆಯ್ಕೆ, ದೃಷ್ಟಿ, ತಿಳಿಹಾಸ್ಯ, ಸರಳಶೈಲಿ – ಇವು ಕನ್ನಡ ಕಥಾಲೋಕಕ್ಕೆ ಮಾರ್ಗದರ್ಶಕವಾಗಿವೆ. ಇವರ ಕಥೆಗಳು ಅನೇಕ ಸಂಪುಟಗಳಲ್ಲಿವೆ. ರಂಗಪ್ಪನ ದೀಪಾವಳಿಯಿಂದ ಹಿಡಿದು ಇವರ ಎಲ್ಲ ಕಥೆಗಳಲ್ಲಿ ಕಾಣುವುದು ಸಾಮಾನ್ಯ ಘಟನೆಗಳನ್ನು ಉತ್ಪ್ರೇಕ್ಷೆಯಿಲ್ಲದೆ ಹೇಳುವ ಕಲೆ. ಇವರ ಕಥೆಗಳಲ್ಲಿ ಆವೇಶವಿಲ್ಲ, ಚಮತ್ಕಾರವಿಲ್ಲ, ವಿಸ್ಮಯವಿಲ್ಲ; ಉದಾತ್ತಗುಣಗಳಿಂದ ತುಂಬಿದ ಆತ್ಮದ ಒಂದು ಚೇತನವನ್ನು ಕಾಣುತ್ತೇವೆ. ಇವರ ಇಂದಿರೆಯೋ ಅಲ್ಲವೋ? ಬೀದಿಯಲ್ಲಿ ಹೋಗುವ ನಾರಿ, ನಮ್ಮ ಮೇಷ್ಟ್ರು, ರಂಗಸ್ವಾಮಿಯ ಅವಿವೇಕ ಇವುಗಳಲ್ಲಿ ಸಣ್ಣಕಥೆಯ ಎಲ್ಲ ಸಲ್ಲಕ್ಷಣಗಳನ್ನೂ ಕಾಣಬಹುದು. ಇವರಲ್ಲಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಎಲ್ಲ ಬಗೆಯ ಕಥೆಗಳೂ ಇವೆ. ಸಾಮಾಜಿಕ ಕಥೆಗಳಲ್ಲಿ ಜೀವನಶ್ರದ್ಧೆ ಕಂಡರೆ ಐತಿಹಾಸಿಕ, ಪೌರಾಣಿಕ ಕಥೆಗಳಲ್ಲಿ ಗುಪ್ತಗಾಮಿನಿಯಾಗಿ ಹರಿಯುವ ಸಂಸ್ಕೃತಿ ಪ್ರವಾಹವನ್ನು ಕಾಣಬಹುದು. ಬಾದಷಹನ ದಂಡನೆ, ಪಂಡಿತನ ಮರಣಶಾಸನ ಇವುಗಳಲ್ಲಿ ರಾಜಕೀಯ ಜೀವನ ಕಂಡರೆ ನಿಜಗಲ್ಲಿನ ರಾಣಿ, ಗೊಂಡೆಯ ಕೃಷ್ಣಮೂರ್ತಿ ಕಥೆಗಳಲ್ಲಿ ನಾಡಿನ ಹೆಣ್ಣುಮಕ್ಕಳ ಧೀರೋದಾತ್ತ ಚಿತ್ರಗಳನ್ನು ಕಾಣಬಹುದು. ಆಚಾರ್ಯರ ಪತ್ನಿ, ಹೇಮಕೂಟದಿಂದ ಬಂದಮೇಲೆ, ಮಸುಮತಿ, ಗೌತಮಿ ಹೇಳಿದ ಕಥೆ ಇವುಗಳಲ್ಲಿ ವಸ್ತುವಿನ ಆಯ್ಕೆಯ ಅನನ್ಯತೆಯನ್ನು ಕಾಣಬಹುದು.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಶ್ರೀನಿವಾಸರ ಮಾರ್ಗದಲ್ಲಿ ಬೆಳೆದು ಬಂದ ಕೆಲವು ಕಥೆಗಾರರಲ್ಲಿ ಮುಖ್ಯರೆಂದರೆ ಆನಂದರು (ಎ.ಸೀತಾರಾಂ). ಭವತಿ ಭಿಕ್ಷಾಂ ದೇಹಿ ಇವರ ಮೊದಲ ಕಥೆ. ವಾರದ ಹುಡುಗನ ದುಃಖಮಯ ಜೀವನ ಇಲ್ಲಿ ಚಿತ್ರಿತವಾಗಿದೆ. ಆನಂದರು ಕಥೆಗಾರರೆಂದು ಹೆಸರಾದುದು ಶೃಂಗಾರ ಹಾಗೂ ಪ್ರಣಯ ಕಥೆಗಳಿಂದ. ಹೆಂಡತಿಯ ಕಾಗದ, ಪದ್ಮಪಾಕ, ರಾಧೆಯ ಕ್ಷಮೆ, ನಾವು ಹಾಗೆಯೇ – ಇವು ಪ್ರಣಯ ಜೀವನದ ನಯನಾಜೂಕುಗಳನ್ನು ಚಿತ್ರಿಸುತ್ತವೆ. ಗಂಡಹೆಂಡತಿಯರ ಸಂಭಾಷಣೆಯನ್ನು ಅತ್ಯಂತ ನವುರಾಗಿ ಮಾರ್ಮಿಕವಾಗಿ, ಯಥಾವತ್ತಾಗಿ ಇವರ ಕಥೆಗಳಲ್ಲಿ ಕಾಣಬಹುದು. ನಾನು ಕೊಂದ ಹುಡುಗಿ ಇವರ ಅತ್ಯುತ್ತಮ ಕೃತಿ. ಒಂದು ಸುಂದರ ಜಗತ್ತನ್ನೇ ಕಥೆಯ ಪ್ರಾರಂಭದಲ್ಲಿ ಸೃಷ್ಟಿಸಿಬಿಡುತ್ತಾರೆ. ಕಥೆಯ ಕೊನೆಯೂ ಅತಿ ರಮ್ಯವಾದುದು. ಇಲ್ಲಿ ಯಾವ ಭಾವಾತಿರೇಕಕ್ಕೂ ಎಡೆಗೊಟ್ಟಿಲ್ಲ. ಹೆಂಡತಿಯ ಕಾಗದ ಇವರ ಕಥಾರಚನಾ ಕೌಶಲ್ಯಕ್ಕೆ ಮತ್ತೊಂದು ಸಾಕ್ಷಿ. ಇವರ ಕಥೆಗಳು ಶೈಲಿಯ ದೃಷ್ಟಿಯಿಂದಲೂ ಕನ್ನಡ ಗದ್ಯ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳಾಗಿವೆ.

ಶ್ರೀಸ್ವಾಮಿ ಹಾಗೂ ಕೆ.ಗೋಪಾಲಕೃಷ್ಣರಾಯರನ್ನೂ ಇದೇ ಗುಂಪಿಗೆ ಸೇರಿಸಬಹುದು. ಗೋಪಾಲಕೃಷ್ಣರಾಯರು ತಮ್ಮ ಕಥೆಗಳಲ್ಲಿ ವ್ಯಕ್ತಿಯ ಬಾಳಿನ ರೀತಿನೀತಿ, ಗುರಿಗಳತ್ತ ತಮ್ಮ ದೃಷ್ಟಿಹಾಯಿಸಿದ್ದಾರೆ. ಇವರ ಜಟಕಾ ಸಾಹೇಬು, ಮಾಗಡಿ ರಂಗ ಇವು ಮಾನವ ಸ್ವಭಾವದ ಸುಪ್ತ ಹಿರಿಮೆಯ ದ್ಯೋತಕಗಳಾಗಿವೆ. ಸುಶೀಲಾ ಸಂಕೇತ್ ಸೊಗಸಾದ ಕಥೆ; ಹೆಣೆದಿರುವ ರೀತಿ ಮನೋಹರವಾದುದು. ಶ್ರೀಸ್ವಾಮಿಯವರು ಸುಂದರ ಕಥೆಗಳನ್ನು ಬರೆಯಬಲ್ಲರು. ಪುಷ್ಪಮಾಲೆ, ನಂಜಮ್ಮ, ಗೋಧೂಳೀ ಲಗ್ನ ಕಥೆಗಳಲ್ಲಿ ಭಾವನೆಗಳಲ್ಲದೆ ಪಾತ್ರಸೃಷ್ಟಿಯೂ ಹಿತವಾಗಿದೆ. ಪತಿಪರಾಯಣೆ, ಬೀಬಿ ನಾಚ್ಚಿಯಾರ್ ಅಂಥ ಕಥೆಗಳನ್ನು ಆಸಕ್ತಿಯಿಂದ ಓದಬಹುದು.

ಎ.ಆರ್.ಕೃಷ್ಣಶಾಸ್ತ್ರಿಗಳ 'ಕಥೆಗಳು' ಸೊಗಸಾದ ಕಥಾಸಂಕಲನ. ಇವರ ಕಥೆಗಳಲ್ಲಿ ಜೀವನದ ಒಂದು ದರ್ಶನ, ಮೌಲ್ಯಗಳ ಸೂಚನೆ ಅಂತರ್ಗತವಾಗಿ ಬರುತ್ತದೆ. ಇತರರು ಹತ್ತು ಮಾತಿನಲ್ಲಿ ಹೇಳುವುದನ್ನು ಶಾಸ್ತ್ರಿಗಳು ಒಂದೇ ಮಾತಿನಲ್ಲಿ ಖಚಿತವಾಗಿ ಮರೆಯದಂತೆ ಹೇಳಬಲ್ಲರು. ಊಟದಲ್ಲಿ ಉಪಚಾರ, ಅಗ್ಗದ ಮನೆ ಇವುಗಳಲ್ಲಿ ಹಾಸ್ಯವಿದ್ದರೆ ಶ್ಯಾನುಭೋಗನ ಪುಣ್ಯದಲ್ಲಿ ಹಳ್ಳಿಯ ಕಲಕಿದ ರಾಜಕೀಯವಿದೆ. ಇವರ ಎಲ್ಲ ಕಥೆಗಳಲ್ಲೂ ಕನ್ನಡತನ ಎದ್ದು ಕಾಣುತ್ತದೆ.

ಎಸ್.ಜಿ.ಶಾಸ್ತ್ರಿಗಳ ಕಥೆಗಳನ್ನು (ಇದ್ದರೂ ಇರಬಹುದು) ಬೇರೊಂದು ಗುಂಪಿಗೆ ಸೇರಿಸಬಹುದು. ಮಧ್ಯಮ ವರ್ಗದವರ ಜೀವನದ ಹೊಳಪು ಇವರ ಕಥೆಗಳಲ್ಲಿ ಎದ್ದು ಕಾಣುತ್ತದೆ. ಕಥೆಗಳ ಸೊಗಸು, ಭಾವಗಳು ಚೆನ್ನಾಗಿ ಪ್ರಖರವಾಗಿವೆ. ಪರಪುರುಷದಲ್ಲಿ ರಚನಾವೈವಿಧ್ಯವನ್ನು ಕಾಣಬಹುದು. ತುಂಟಮರಿಯಲ್ಲಿ ಮನಕರಗಿಸುವ ಚಿತ್ರವಿದೆ, ನೈಸರ್ಗಿಕ ಕಲಾವಂತಿಕೆಯಿದೆ.

ನವರತ್ನ ರಾಮರಾಯರ ಕಥೆಗಳಲ್ಲಿ ಕುತೂಹಲಕ್ಕೆ ವಿಪುಲ ಆದ್ಯತೆಯಿದೆ. ಲಕ್ಷ್ಮಣರಾಯರ ಭಾಗ್ಯದಲ್ಲಿ ಲಕ್ಷ್ಮಣರಾಯ ದೇವಿಯ ಮಂದಿರಕ್ಕೆ ಸೇರಿ ಮಂಗಮಾರಿ ಸಾಹೇಬರನ್ನು ಕಂಡು ಬಹುಮಾನ ಪಡೆಯುವವರೆಗೆ ಪತ್ತೇದಾರಿ ಕಾದಂಬರಿಯಂತೆ ಕುತೂಹಲ ಕೆರಳುತ್ತಿರುತ್ತದೆ. ಹೆಣ್ಣು ಹೃದಯ ಉತ್ತಮ ಕಥೆ. ಮಾತಿನ ಧೋರಣೆಯಲ್ಲಿ ಸನ್ನಿವೇಶ ರಚನೆಯಲ್ಲಿ ಕಾಣುವ ಕಥೇರಿ ವಾತಾವರಣ ಇವರ ಕೃತಿಗಳಿಗೆ ವಿಶಿಷ್ಟ ಸೊಗಸು ತಂದಿದೆ.

ಉತ್ತರ ಕರ್ನಾಟಕದ ಭಾಗದಿಂದಲೂ ಸಣ್ಣಕಥಾಸಾಹಿತ್ಯ ವಿಪುಲವಾಗಿ ಬೆಳೆಯಿತು. ಆನಂದಕಂದರ ಕಥೆಗಳು ಇಂದಿಗೂ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡಿವೆ. ಅಲ್ಲಿನ ಹಳ್ಳಿಗಳಲ್ಲಿಯ ಜೀವನವೇ ಇವರ ಕಥಾವಸ್ತು. ಇವರ ಕಥೆಗಳಲ್ಲಿ ಭಾವನಾಪರವಶತೆ ಮಾಯವಾಗಿ ವಾಸ್ತವ ದೃಷ್ಟಿ ಹರಿದಿದೆ. ಇಬ್ಬಂದ ದಿಬ್ಬಣದಲ್ಲಿ ಶುದ್ಧ ವಾಸ್ತವತೆಯನ್ನು ಕಾಣಬಹುದು. ಭಾಷೆಯ ಬಳಕೆಯಲ್ಲೂ ಆನಂದಕಂದರ ಕೈ ಮಿಗಿಲಾದುದು. ಸೀಮೆಯ ಕಲ್ಲಿನ ಶಾಸನದ ಭಾಷೆ, ಜೋಗತಿಕಲ್ಲಿನಲ್ಲಿ ಧರಮಣ್ಣನ ಕೆಚ್ಚು ತುಂಬಿದ ಕನ್ನಡ, ಕಂಕಣದ ಕೈಯ ಐತಿಹಾಸಿಕತೆ ಹೊರಸೂಸುವ ಭಾಷೆ ಇವರ ಭಾಷಾಪ್ರಭುತ್ವವನ್ನು ಸಾರುತ್ತವೆ.

ಇನ್ನೊಬ್ಬ ಪ್ರಮುಖ ಕಥೆಗಾರರೆಂದರೆ ಕೃಷ್ಣಕುಮಾರ ಕಲ್ಲೂರ. ಇವರ ಮೊದಲ ಸಂಗ್ರಹವಾದ ಬಿಸಿಲುಗುದುರೆಯಲ್ಲಿ ಭಾಷೆ ಕಾವ್ಯಮಯವಾಗಿದ್ದರೂ ಅನುಭವದ ದೃಷ್ಟಿಯಿಂದ ಇನ್ನೂ ಮಾಗಬೇಕಾದ ಕಥೆಗಳೆನಿಸಿದರೂ ಇವರ ಎರಡನೆಯ ಸಂಕಲನ ಜೀವನ ಎಂಬುದರಲ್ಲಿ ಉತ್ತಮ ಕಥೆಗಳಿವೆ. ಇವರ ಕಥೆಗಳಲ್ಲಿ ಗೆಳೆತನ ಹಾಗೂ ಆದರ್ಶಪ್ರಿಯತೆಗಳು ವೈಚಾರಿಕವಾಗಿ ಬಂದಿವೆ. ಜೀವನ ಎಂಬ ಕಥೆಯಲ್ಲಿನ ರಮಾಬಾಯಿಯ ಪಾತ್ರಸೃಷ್ಟಿ ಅದ್ಭುತವಾದುದು. ಇದು ಇವರ ಕಲಾವಂತಿಕೆಗೆ ಸಾಕ್ಷಿಯಾಗಿದೆ. ಇವರ ಕೆಲವು ಕಥೆಗಳನ್ನು ನೋಡಿದಾಗ ಕಥಾವಸ್ತುವಿನ ಆಯ್ಕೆಯಿಂದ ಹಿಡಿದು ಅದರ ನಿರ್ವಹಣೆಯವರೆಗೆ ಕಂಡು ಬರುವ ಕಲೆಗಾರಿಕೆ ಮೆಚ್ಚುವಂಥದು.

ಗಂಗೆಯ ಗುತ್ತಿಗೆಯನ್ನು ಬರೆದು ಪ್ರಸಿದ್ಧರಾದ ಟೇಂಗ್ಸೆ ಗೋವಿಂದರಾಯರ ಕೈಯಲ್ಲಿ ಸಣ್ಣಕಥೆ ಹೊಸ ರೂಪು ತಳೆಯಿತು. ಟೇಂಗ್ಸೆಯವರ ಗಂಗೆಯ ಗುತ್ತಿಗೆ ಹಾಗೂ ಛಪ್ಪರಬಂಧ ಪ್ರತಿಭೆಯ ಎರಡು ಮುಖಗಳು. ಮೊದಲನೆಯದರಲ್ಲಿ ವಿನೋದದ ಆವರಣವಿದ್ದರೆ ಎರಡನೆಯದರಲ್ಲಿ ಬಡತನದ ವಿಷಮತೆಯಿದೆ. ಪರಿಣಾಮದ ದೃಷ್ಟಿಯಿಂದ ಛಪ್ಪರಬಂಧ ಯಶಸ್ವೀ ಕಥೆ.

ರಂ.ಶ್ರೀ.ಮುಗಳಿಯವರ ಕನಸಿನ ಕೆಳದಿ ಸಂಕಲನದಲ್ಲಿ ಉತ್ತಮ ವಾದ ಕಥೆಗಳಿವೆ. ಸುಸಂಬದ್ಧವಾದ ಕಥಾರಚನೆ, ಗುರಿ ತಪ್ಪದ ಪರಿಣಾಮ ಇವರ ಕಥೆಗಳ ವೈಶಿಷ್ಟ್ಯ – ಮಧ್ಯಮವರ್ಗದ ಜನರ ಅನೇಕ ತೊಂದರೆ ತೊಡಕುಗಳು ಹೃದಯಂಗಮವಾಗಿ ಚಿತ್ರಿತವಾಗಿವೆ. ವಿತಂತು ವೇಶ್ಯೆಯಲ್ಲಿ ಉತ್ತಮ ಕಥೆಯ ಎಲ್ಲ ಗುಣಗಳೂ ಇವೆ. ದುರ್ದೈವಿ ಹೆಣ್ಣೊಬ್ಬಳ ಹೃದಯವಿದ್ರಾವಕ ಚಿತ್ರಣ ಈ ಕಥೆಯ ವಸ್ತು. ಇದರ ಶೈಲಿ ನಿರರ್ಗಳವಾಗಿ ಹರಿಯುತ್ತದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹಾಗೂ ಪಡುಕೋಣೆ ರಮಾನಂದರಾಯರ ಕಥೆಗಳನ್ನು ಪ್ರತ್ಯೇಕವಾಗಿಯೇ ನೋಡಬೇಕು. ಇಬ್ಬರೂ ಹೆಸರಾದ ನಗೆಗಾರರು. ಇವರ ಹಾಸ್ಯ, ವ್ಯಕ್ತಿಗಳ ವಿಕ್ಷಿಪ್ತತೆ ಹಾಗೂ ಘಟನೆಗಳ ಚಮತ್ಕಾರಗಳಿಂದಾಗಿ ಕಳೆಗೂಡಿ ನಿಲ್ಲುತ್ತದೆ. ತಾಂತ್ರಿಕವಾಗಿ ಇವರ ಬರೆಹಗಳಲ್ಲಿ ಸಣ್ಣಕಥೆಯ ಅಂಶಗಳು ಕಡಿಮೆಯಿದ್ದರೂ ಕಥನ ರೀತಿ ದೃಢವಾದುದು. ರಮಾನಂದರಾಯರ ಹುಚ್ಚು ಬೆಳುದಿಂಗಳಿನ ಹೂಬಾಣಗಳು ಎಂಬ ಆಧಾರಿತ ಸಂಗ್ರಹದಲ್ಲಿ ಸಣ್ಣಕಥೆಗಳೆನಿಸುವ ಕೃತಿಗಳಿದ್ದರೂ ಅವು ಚೆಲ್ಲುವ ಹಾಸ್ಯದಿಂದಾಗಿ ನಗೆಬರೆಹಗಳು ಎಂದೇ ಪ್ರಸಿದ್ಧವಾಗಿವೆ. ಗೊರೂರರ ಎಲ್ಲ ಬರೆಹಗಳಿಂದಲೂ ಕೆಲವು ಕಥೆಗಳನ್ನು ಆರಿಸಬಹುದು. ವೈಯಾರಿ, ಗರುಡಗಂಬದ ದಾಸಯ್ಯ, ಬೆಸ್ತರ ಕರಿಯ, ಶಿವರಾತ್ರಿ ಈ ಸಂಗ್ರಹಗಳಲ್ಲಿ ಹಲವು ಉತ್ತಮ ಕಥೆಗಳಿವೆ. ಆದರೆ ಗೊರೂರರ ಹಾಸ್ಯ ಪ್ರತಿಭೆಯಲ್ಲಿ ಕಥಾಂಶ ಮಸುಕಾಗುತ್ತದೆ. ಹಾಸ್ಯರಸ ಹೊನಲಾದಾಗ ಇವರ ಕಥೆಗಳು ಉಪಕಥೆಗಳ ಗೊಂಚಲಾಗುತ್ತವೆ. ಹಾರುವಯ್ಯ ಹಜಾಮನಾದದ್ದು, ಆಚಾರ ಕೆಟ್ಟರೂ ಆಕಾರ ಕೆಡಬಾರದು, ಬೂತಯ್ಯನ ಮಗ ಅಯ್ಯು, ಡೊಂಕು ಬಾಲ – ಇಂಥ ಉಜ್ವಲ ಕಥೆಗಳೂ ಈ ಸಂಕಲನಗಳಲ್ಲಿವೆ. ಗೊರೂರರ ಕಥೆಗಳು ಹೆಚ್ಚು ಚಿತ್ರಮಯವೂ ಆ ಚಿತ್ರಗಳು ಹಾಸ್ಯಮಯವೂ ಆಗಿವೆಯೆನ್ನಬಹುದು. ವಾಸ್ತವತೆಯ ಒಂದು ಕಾರ್ಯವಾದ ಜೀವನ ಚಿತ್ರಣದಲ್ಲಿ ಗೊರೂರರು ಯಶಸ್ವಿಯಾಗಿದ್ದಾರೆ ಎನ್ನಬಹುದು.

ಕೊಡಗಿನ ಗೌರಮ್ಮನವರ ಹೆಸರು ಸಣ್ಣಕಥೆಯೊಂದಿಗೆ ನಿಕಟಸಂಬಂಧವನ್ನು ಬೆಸೆದುಕೊಂಡಿದೆ. ಹೆಣ್ಣಿನ ಬಾಳಿನ ನೋವುನಲಿವುಗಳನ್ನು ತಮ್ಮ ಕಥೆಗಳ ಮೂಲಕ (ಕಂಬನಿ) ಇವರು ಚಿತ್ರಿಸಿದ್ದಾರೆ. ಮರದ ಬೊಂಬೆ ಕಥೆಯಲ್ಲಿ ಕಾಣುವ ಹೆಣ್ಣು ಜೀವನದ ದೃಷ್ಟಿಕೋನ ಇವರು ಒಳ್ಳೆಯ ಕಥೆಗಾರ್ತಿ ಎಂಬುದಕ್ಕೆ ಸಾಕ್ಷಿಯಾಗಿದೆ. ಇವರ ಜೊತೆಗೇ ಹೇಳಬೇಕಾದ ಇನ್ನೊಂದು ಹೆಸರೆಂದರೆ ಶ್ಯಾಮಲಾದೇವಿಯವರದು. ಇವರ ಹೂಬಿಸಿಲು, ಹೊಂಬಿಸಿಲು ಎಂಬ ಎರಡು ಕಥಾಸಂಗ್ರಹಗಳಲ್ಲೂ ಮಧ್ಯಮ ವರ್ಗದ ಕೌಟುಂಬಿಕ ಜೀವನ ಚಿತ್ರಿತವಾಗಿದೆ. ಹೀಗೆಯೇ ಸರಸ್ವತಿಬಾಯಿ ರಾಜವಾಡೆ (ಗಿರಿಬಾಲೆ) ಅವರ ಕಥನ ಪ್ರಪಂಚ ಸ್ತ್ರೀ ಕೇಂದ್ರಿತ ವಾದಂಥದ್ದು. ಇವರ ಕಥೆಗಳಲ್ಲಿ ಕೌಟುಂಬಿಕ ನೆಲೆ ಪ್ರಧಾನವಾಗಿದೆ. ಮಹಿಳೆಯರು ಒಳಗಿನಿಂದ ಕಾಣಬಹುದಾದ ಕೌಟುಂಬಿಕ ಸೂಕ್ಷ್ಮಗಳು, ವಿವರಗಳು, ವೈಪರೀತ್ಯಗಳು, ಸುಖದುಃಖಗಳು ಸಹಜವಾಗಿ ಇವರ ಕಥೆಗಳಲ್ಲಿ ಪಡಿಮೂಡಿವೆ.

ಸಣ್ಣಕಥೆಗಳಲ್ಲಿ ಹೆಸರಿಸಬೇಕಾದ ಇನ್ನೊಂದು ಹೆಸರು ದೇವುಡು. ಪಾತ್ರಗಳ ಕ್ರಮಬದ್ಧ ವಿಕಾಸ, ಕಥೆ ಪಡೆಯುವ ಏರಿಳಿತಗಳು, ಸನ್ನಿವೇಶಗಳ ಯಥಾರ್ಥತೆಗಳಿಂದಾಗಿ ದೇವುಡು ಅವರ ಕಥೆಗಳು ಮಹತ್ತ್ವದ್ದಾಗಿವೆ. ಕವಿಗಳಾದ ಬೇಂದ್ರೆ, ಕುವೆಂಪು, ಪುತಿನ ಇವರು ಕಥೆಗಳನ್ನು ಬರೆದಿದ್ದಾರೆ. ಸಣ್ಣಕಥೆ ತನ್ನ ಸ್ವಭಾವದಲ್ಲಿ ಭಾವಗೀತೆಗೆ ಸಮೀಪವಾಗಿರುವುದರಿಂದ ಇವರು ಬರೆದ ಕಥೆಗಳು ಪ್ರಮಾಣದಲ್ಲಿ ಅಲ್ಪವಾದರೂ ಹಿರಿಮೆಯಲ್ಲಿ ಮಹತ್ತ್ವಪೂರ್ಣವಾಗಿವೆ. ಬೇಂದ್ರೆಯವರ ಪಾಲಾ ಪೂ, ಹಿರಿದ ಕತ್ತಿ, ಏಕಾಕಿನಿ ಉತ್ತಮವಾದ ಕಥೆಗಳಾಗಿವೆ. ಇವರ ಶೈಲಿ ಈ ಕೃತಿಗಳಲ್ಲಿ ಸಂಗೀತದ ನಾದಲೋಲುಪತೆಯನ್ನು ಪಡೆದಿದೆ. ಆದರ್ಶವಾದ ಸಮಾಜವನ್ನು ತಿದ್ದುವ ಬಯಕೆ ಕುವೆಂಪು ಅವರಲ್ಲಿದ್ದರೂ ನಿಸರ್ಗಪ್ರಿಯರಾದ ಇವರ ಕಥೆಗಳಲ್ಲಿ ಸುಧಾರಣಾಮನೋಭಾವ ಹಿನ್ನೆಲೆಯಲ್ಲಿ ಉಳಿದಿದೆ. ನನ್ನ ದೇವರು, ಸನ್ಯಾಸಿ ಮುಂತಾದ ಕಥೆಗಳಲ್ಲಿ ಆದರ್ಶತ್ವವನ್ನು ಕಂಡರೆ, ಧನ್ವಂತರಿಯ ಚಿಕಿತ್ಸೆ ಎಂಬ ಕಥೆಯಲ್ಲಿ ಸಾಮಾಜಿಕ ಕ್ರಾಂತಿಯ ಒಲವನ್ನು ಕಾಣಬಹುದು. ಮೀನಾಕ್ಷಿಯ ಮನೆ ಮೇಷ್ಟ್ರು ಕಥೆಯಲ್ಲಿ ಕಥೆಗಾರರನ್ನು ಆಕರ್ಷಿಸುವ ವಸ್ತುವಿನ ವಿಶಿಷ್ಟ ನಿರೂಪಣೆಯನ್ನು ಕಾಣಬಹುದು. ಇಲ್ಲಿನ ವಸ್ತು ಚಿರಪರಿಚಿತ ಭಗ್ನ ಪ್ರಣಯ, ಸುಂದರವಾಗಿ ನಿರೂಪಿತವಾಗಿದೆ. ಯಾರೂ ಅರಿಯದ ವೀರ ಎಂಬ ಕಥೆಯಲ್ಲಿ ಉತ್ತಮ ಕಥೆಗಾರಿಕೆಯ ಮಟ್ಟವನ್ನು ಗುರುತಿಸಬಹುದು. ಇವರ ಶೈಲಿ ಭಾವಗೀತೆಯಂತಿದ್ದರೂ ಮಹಾಕಾವ್ಯದ ಸನ್ನಿವೇಶಮೊಂದರ ಪ್ರಭಾವವನ್ನು ಬೀರುತ್ತದೆ. ಪುತಿನ ಅವರ ಧ್ವಜರಕ್ಷಣೆಯಲ್ಲಿ ಕೆಲವು ಸತ್ತ್ವಪೂರ್ಣ ಕಥೆಗಳಿವೆ. ಧ್ವಜರಕ್ಷಣೆಯ ವಸ್ತು ರಾಜಕೀಯಕ್ಕೆ ಸಂಬಂಧಿಸಿದ್ದರೂ ಆದರ್ಶಪ್ರಿಯ ಯುವಕನ ಅಂತರಂಗದ ತುಮುಲವನ್ನೂ ಚಿತ್ರಿಸುತ್ತದೆ.

ಇವರುಗಳಲ್ಲದೆ ಮೊದಲ ತಲೆಮಾರಿನ ಇನ್ನೂ ಅನೇಕರು ಕಥೆಗಳನ್ನು ಬರೆದರು. ಭಾರತೀಪ್ರಿಯರ ವೀಣೆ ಹಾಗೂ ಒಂದು ಹಳೆಯ ಕಥೆ ಕನ್ನಡದ ಜನ ಎಂದೂ ಮರೆಯಲಾರದಂಥ ಕೃತಿಗಳು. ಇವರ ಕಥೆಗಳಲ್ಲಿ ಸನ್ನಿವೇಶವನ್ನು ಮನಸ್ಸಿನಲ್ಲಿ ಕೆತ್ತಿ ನಿಲ್ಲಿಸುವಂತೆ ಮಾಡುವ ಮೋಡಿಯಿದೆ. ರಾಹೂ, ನಾದನಾಮಕ್ರಿಯಾ, ಸಾಧನೆ ಮೊದಲಾದ ಕಥೆಗಳಲ್ಲಿ ಹೊಳಪಿನ ಶೈಲಿಯನ್ನು ಕಂಡರೆ ಮೋಚಿಯಲ್ಲಿ ನಿರಾಡಂಬರವಾದ ಶೈಲಿಯಿದೆ. ಮೋಚಿ ಇವರ ಪ್ರಾತಿನಿಧಿಕ ಕಥೆಯಲ್ಲದಿದ್ದರೂ ಒಂದು ಉತ್ತಮ ಕಥೆ. ವೈನಾಡಿನ ಸ್ಥಾನಿಕ ಸೌಂದರ್ಯವನ್ನಲ್ಲದೆ ಅಲ್ಲಿಯ ಜನರ ವಿಚಿತ್ರ ನಡೆವಳಿಕೆಗಳನ್ನೂ ಇವರ ಕಥೆಗಳಲ್ಲಿ ಕಾಣಬಹುದು.

ಕ್ಷೀರಸಾಗರರ ನಮ್ಮೂರಿನ ಪಶ್ಚಿಮಕ್ಕೆ, ಭಾವಪೂರ್ಣತೆ ಹಾಗೂ ರಸೋತ್ಕರ್ಷಗಳಿಗೆ ಮಾದರಿಯಾದ ಕಥೆ. ಎಂ.ವಿ.ಸೀತಾರಾಮಯ್ಯನವರ ಹುಟ್ಟಿನ ಹಂಬಲು ಹೃದಯವೇದಕ ವಾದ ಕಥೆ. ಹೀಗೆಯೇ ಶಂಕರಭಟ್ಟರ ಅದ್ದಿಟ್ಟು, ಜಡಭರತರ ಡೂಗಜ್ಜನ ಬಹಿಷ್ಕಾರ ಮೊದಲಾದ ಕಥೆಗಳೂ ಉತ್ತಮ ಕಥೆಗಳಾಗಿವೆ. ಸೇಡಿಯಾಪು ಕೃಷ್ಣಭಟ್ಟರ ಕಥೆಗಳ ಸ್ವರೂಪ ವಡ್ಡಾರಾಧನೆಯ ಕಥೆಗಳನ್ನು ಕಸಿ ಮಾಡಿದಂತಿದೆ. ನಾಗರಬೆತ್ತ ಇವರ ಉತ್ತಮ ಕಥೆಗಳಲ್ಲೊಂದು. ಮೇವುಂಡಿ ಯವರೂ ಅಚ್ಚಗನ್ನಡದ ಬಿಗುವು ತೊಟ್ಟು ಹಲವು ಕಥೆಗಳನ್ನು ನೀಡಿದರು. ಕಾದಂಬರಿ ಕ್ಷೇತ್ರದಲ್ಲಿ ಹಸನಾದ ಕೆಲಸ ಮಾಡಿರುವ ಶಿವರಾಮ ಕಾರಂತರು ತಮ್ಮ ಹಸಿವು ಮತ್ತು ಹಾವು ಎಂಬ ಎರಡು ಸಂಕಲನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಡತನದ ಬಾಳನ್ನು ಮನ ಕರಗುವಂತೆ ಚಿತ್ರಿಸಿದ್ದಾರೆ. ಹಳ್ಳಿಯ ಹತ್ತು ಸಮಸ್ತರು ಒಂದು ರೀತಿಯ ಕಥಾಸಂಕಲನವೇ ಆಗಿದೆ. ಎಕ್ಕುಂಡಿಯವರು ತಮ್ಮ ಕಥೆಗಳಲ್ಲಿ ಪೌರಾಣಿಕ ಸನ್ನಿವೇಶಗಳನ್ನು ಉಜ್ವಲವಾಗಿ ಹಿಡಿದಿಟ್ಟಿದ್ದಾರೆ.


ಎಂ.ವಿ. ಸೀತಾರಾಮಯ್ಯ

1920–42ರ ಅವಧಿಯ ಸಣ್ಣಕಥೆಯ ಮಜಲನ್ನು ಇಲ್ಲಿ ನೋಡಿದ್ದಾಯಿತು. ಆದರೂ ಸಣ್ಣಕಥಾಸಾಹಿತ್ಯ ನಿರೀಕ್ಷಿಸಿದಷ್ಟು ಬೆಳೆಯಲಿಲ್ಲ. ಹೊಸಗನ್ನಡದ ಓದುಗರು ಕಾದಂಬರಿಗೆ ಮನತೆತ್ತರು. ಕಥೆಗಳಿಗಾಗಿಯೇ ಮೀಸಲಾದ ಪತ್ರಿಕೆಗಳು ಕ್ರಮೇಣ ನಿಂತುಹೋದುವು. ಮೊದಲಿಗೆ ಮಿಂಚಿನಬಳ್ಳಿ ಪ್ರಕಾಶನ ಸಂಸ್ಥೆ ಕನ್ನಡದಲ್ಲಿ ಸತ್ತ್ವಶಾಲಿಯಾದ ಕಥೆಗಳು ಹೊರಬರಲು ಕಾರಣವಾಯಿತು. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಿಂದ ಆಗ ಹೊರಡುತ್ತಿದ್ದ ಪ್ರಬುದ್ಧ ಕರ್ನಾಟಕ ತ್ರೈಮಾಸಿಕ ಸಣ್ಣಕಥೆಯ ಸಾಹಿತ್ಯ ಪ್ರಕಾರವನ್ನು ಕನ್ನಡಿಗರಿಗೆ ಕೊಡಲು ತುಂಬ ಆಸ್ಥೆ ವಹಿಸಿತು. ಅ.ನ.ಕೃಷ್ಣರಾಯರು ಹೊರಡಿಸುತ್ತಿದ್ದ ಕಥಾಂಜಲಿ ಅನೇಕ ತರುಣ ಕಥೆಗಾರರನ್ನೂ ಬೆಳಕಿಗೆ ತಂದಿತು. ಧಾರವಾಡದ ಜಯಂತಿ, ಜಯಕರ್ನಾಟಕ ವಿಪುಲವಾಗಿ ಸಣ್ಣಕಥೆಗಳನ್ನು ಪ್ರಕಟಿಸಿದುವು.

ಆಧುನಿಕ ಕನ್ನಡ ಸಾಹಿತ್ಯ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಹೀಗೆ ಅವಸ್ಥಾಂತರಗಳನ್ನು ಕಂಡಂತೆ ಕನ್ನಡ ಸಣ್ಣ ಕಥಾಪ್ರಪಂಚವೂ ಇದಕ್ಕೆ ಹೊಂದಿಕೊಂಡಂತೆ ವಿಸ್ತರಿಸುತ್ತಾ ಹೋಯಿತು. ಆಯಾ ಕಾಲದ ಸ್ಪಂದನಕ್ಕೆ ಜೀವಂತವಾಗಿ ಉಳಿಯಿತು. ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲತೆಯ ಚಳವಳಿ ಸಣ್ಣಕಥೆಯಿಂದಲೇ ಆರಂಭವಾಯಿತು ಎನ್ನಬೇಕು. 1936–42ರವರೆಗೆ ನಡೆದ ರಾಜಕೀಯ ಆಂದೋಲನಗಳು, ಪತ್ರಿಕೆಗಳಲ್ಲಿ ನಡೆಯುತ್ತಿದ್ದ ಪ್ರಗತಿಶೀಲತೆಯ ಪ್ರಚಾರ, ರಷ್ಯದ ಹಾಗೂ ಹಿಂದಿ ಕಥೆಗಳ ಅನುವಾದ ಇವೆಲ್ಲ ಪ್ರಭಾವಗಳಿಂದ ಕನ್ನಡ ಸಾಹಿತ್ಯದಲ್ಲಿ ಹಲವು ಬದಲಾವಣೆಗಳುಂಟಾಗಿ

ಬರೆಹಗಾರರು ಎಲ್ಲ ವಿಧದಲ್ಲೂ ಸತ್ವಯುತ ಸಾಹಿತ್ಯರಚನೆ ಮಾಡಿದರೆನ್ನುವ ಮಾತನ್ನು ಮರೆಯಲಾಗದು. ಅ.ನ.ಕೃ. ಅವರ ನೇತೃತ್ವದಲ್ಲಿ ತ.ರಾ.ಸು., ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ ಮುಂತಾದ ಲೇಖಕರು ಸಣ್ಣಕಥೆಯಲ್ಲಿ ವಿಶೇಷವಾಗಿ ಪ್ರಗತಿಶೀಲತೆಯನ್ನು ತಂದರು. ದಲಿತವರ್ಗಗಳ ಬಗ್ಗೆ ಸಹಾನುಭೂತಿ, ಶೋಷಣೆಯ ವಿರುದ್ಧ ಆಕ್ರೋಶ, ಸಾಮಾಜಿಕ ವೈಷಮ್ಯಗಳ ಬಗ್ಗೆ ಅಸಮಾಧಾನ ಇವರ ಪ್ರಮುಖ ದೃಷ್ಟಿಕೋನಗಳಾದುವು. ನವೋದಯದ ಲೇಖಕರನ್ನು ಪ್ರತಿಗಾಮಿಗಳೆಂದು ಕರೆದು, ಸಮಾಜದ ಡಂಭಾಚಾರವನ್ನು ಎತ್ತಿ ತೋರಿಸಿದರು. ವಾಸ್ತವತಾವಾದ ಇವರ ಕೈಯಲ್ಲಿ ಅತೀರೇಕಕ್ಕೆ ಹೋಯಿತು. ಸಾಮ್ಯವಾದ ಈ ದೇಶಕ್ಕೆ ಅಕಾಲಿಕವಾಗಿದ್ದುದರಿಂದಲೋ ಅಥವಾ ವೈಚಾರಿಕತೆ ಪ್ರಗತಿಶೀಲರ ಮನೋಧರ್ಮದಲ್ಲೇ ಸರಿಯಾಗಿ ಆಗಿರಲಿಲ್ಲವೆಂದೋ ಈ ಪ್ರಗತಿಶೀಲ ಬಿರುಗಾಳಿ ಕ್ರಮೇಣ ಸ್ತಬ್ಧವಾಯಿತು. ಪರಸ್ಪರ ಕೊಳುಕೊಡುಗೆಗಳು ಹೆಚ್ಚಿದುದರಿಂದ ಪ್ರಗತಿಶೀಲರಿಗೂ ನವೋದಯ ಲೇಖಕರಿಗೂ ವಿಶೇಷ ಅಂತರವೇನೂ ಕಾಣಬರುವುದಿಲ್ಲ.

ಪ್ರಗತಿಶೀಲತೆಯಿಂದ ಕನ್ನಡ ಸಣ್ಣಕಥೆಯಲ್ಲಿ ಕೆಲವು ಬದಲಾವಣೆಗಳಾದವು. ವಸ್ತು ಸಮಾಜಸಮ್ಮುಖವಾಗಿ ವೈಯಕ್ತಿಕ ತೀವ್ರತೆಯನ್ನು ಕಳೆದುಕೊಂಡಿತು. ವಸ್ತುವಿನ ಆಯ್ಕೆ ಸೀಮಿತವಾಯಿತು. ಆದರೆ ಬರೆವಣಿಗೆಗೆ ಹೆಚ್ಚು ವೇಗ, ಮೊನಚು ಬಂತು. ಒಂದು ಬಗೆಯ ಅತೃಪ್ತ ವಾತಾವರಣ ಹುಟ್ಟಿಕೊಂಡಿತು. ಸಂಭಾಷಣೆಗಳಲ್ಲಿ ಆಡುಮಾತಿನ ಬಳಕೆ ಹೆಚ್ಚಾಯಿತು. ಈ ಪ್ರಕಾರದಲ್ಲಿ ಅ.ನ.ಕೃ. ಸಿದ್ಧಹಸ್ತರು. ಅವರಿಗೆ ಕಥೆ ಹೇಳುವ ಕಲೆ ಅದ್ಭುತವಾಗಿ ಸಾಧಿಸಿದೆ. ಅವರ ಶೈಲಿ ತುಂಬಿ ಹರಿಯುವ ತೊರೆಯಂತೆ. ಕಥೆಗಳಲ್ಲಿ ಕಲಾವಂತಿಕೆ ಹಿಂದೆ ಬಿದ್ದರೂ ಶೈಲಿಯಿಂದ ಎಂಥ ಕಳಪೆಯ ವಿಷಯವನ್ನಾದರೂ ರಸಭರಿತವಾಗಿ ಮಾಡುವ ಮೋಡಿಯಿದೆ. ಮಣ್ಣಿನ ಮಗ ಒಂದು ಉತ್ತಮ ಕೃತಿ. ಅನ್ನವಿತ್ತ ನೆಲವನ್ನು ನಿರ್ಲಕ್ಷಿಸಿದವನಿಗೆ ಮೋಕ್ಷವಿಲ್ಲ ಎಂಬ ಆಶಯವನ್ನು ಹೊತ್ತ ನಾಯಕನ ಪ್ರತಿಬಿಂಬ ಆ ಕೃತಿ. ಇವರ ಅಗ್ನಿಕನ್ಯೆ ಸಂಕಲನದಲ್ಲಿ ಹಲವು ಪ್ರಗತಿಶೀಲ ಕಥೆಗಳಿವೆ. ಇವರ ಕೆಲವು ಕಥೆಗಳಲ್ಲಿ ಲೈಂಗಿಕ ಜೀವನದ ವಿಶ್ಲೇಷಣೆಯನ್ನೂ ಕಾಣಬಹುದು.

ಅ.ನ.ಕೃ. ಅವರ ಪ್ರಗತಿಶೀಲತೆಯ ವಾದ ಉಳಿದವರ ಮೇಲೆ ಹೆಚ್ಚು ಪರಿಣಾಮವನ್ನು ಉಂಟುಮಾಡಿತು. ಇವರ ಪ್ರಭಾವ ಎರಡು ಮೂರು ಪೀಳಿಗೆಗಳ ಲೇಖಕರ ಮೇಲೆ ಬಿದ್ದಿದೆ. ತ.ರಾ.ಸು., ನಿರಂಜನ, ಚದುರಂಗ, ಬಸವರಾಜ ಕಟ್ಟೀಮನಿ, ಅರ್ಚಕ ವೆಂಕಟೇಶ, ವೆಂಕಟರಾಜ ಪಾನಸೆ ಮೊದಲಾದವರು ಸಾಹಿತ್ಯವನ್ನು ಸಮಾಜದ ಕನ್ನಡಿಯಲ್ಲಿ ನೋಡಲು ಯತ್ನಿಸಿದರು. ತ.ರಾ.ಸು. ಅವರು ಕಾದಂಬರಿಗಳ ಜೊತೆಗೆ ಕೆಲವು ಅತ್ಯುತ್ತಮ ಸಣ್ಣಕಥೆಗಳನ್ನೂ ನೀಡಿದ್ದಾರೆ. 0–0–9 ಎಕ್ಸ್, ಇನ್ನೊಂದು ಮುಖ – ಇವು ತಂತ್ರದ ದೃಷ್ಟಿಯಿಂದ ಯಶಸ್ವಿಯಾದ ಕಥೆಗಳು. ಇವರ ಜೊತೆಯಲ್ಲಿಯೇ ನೆನೆಯಬೇಕಾದ ಇನ್ನೊಂದು ಹೆಸರೆಂದರೆ ನಿರಂಜನರದು. ನಿರಂಜನರು ಪರಿಣಾಮ ಕಾರಿಯಾಗಿ ಕಥೆ ಹೇಳುವಕಲೆ ಸಾಧಿಸಿ ಕೊಂಡಿದ್ದಾರೆ. ಜೀವನಾನುಭವದ ಆಳದಲ್ಲಿ ಮುಳುಗಿ ಅಲ್ಲಿಯ ನೋವು ನಲಿವುಗಳನ್ನು ಖಂಡತುಂಡವಾಗಿ ಇವರು ಚಿತ್ರಿಸಬಲ್ಲರು. ಇವರದು ಹರಿತವಾದ ಶೈಲಿ. ಕೊನೆಯ ಗಿರಾಕಿ ಇವರ ಅತ್ಯುತ್ತಮ ಪ್ರಾತಿನಿಧಿಕ ಕಥೆ. ಹೆಣ್ಣನ್ನು ಭೋಗದ ವಸ್ತುವಾಗಿ ಅಸಹ್ಯವಾಗಿ, ಕ್ರೂರವಾಗಿ ಬಳಸಲೆತ್ನಿಸುವ ಜಗತ್ತಿನ ರೌದ್ರ ವಾಸ್ತವಿಕತೆ ಕಥೆಯ ಪರಿಣಾಮಕ್ಕೆ ತೀವ್ರತೆಯನ್ನು ತಂದಿದೆ.



ಚದುರಂಗ

ಕನ್ನಡ ಕಥಾಪ್ರಪಂಚದಲ್ಲಿ ಮರೆಯಲಾಗದ ಇನ್ನೊಂದು ಹೆಸರು ಬಸವರಾಜ ಕಟ್ಟೀಮನಿ. ಇವರು ಕೊಳೆ ಇರುವ ಕಡೆ ಬೆಂಕಿಯನ್ನು ಉಗುಳುವ ಕನ್ನಡದ ಜೀವಂತ ಜ್ವಾಲಾಮುಖಿ. ಅನ್ಯಾಯಗಳ ವಿರುದ್ಧ ನಿಲ್ಲುವುದೇ ಇವರ ಸ್ವಭಾವ. ಮೊದಮೊದಲು ಇವರ ಕಥೆಗಳಲ್ಲಿ ರಾಜಕೀಯತನ ತುಂಬಿದ್ದರೂ ಅನಂತರದ ಕಥೆಗಳಲ್ಲಿ ಸಾಮಾಜಿಕತೆಯೇ ಹೆಚ್ಚು. ಗಿರಿಜಾ ಕಂಡ ಸಿನಿಮಾ, ಬೂಟ್ ಪಾಲಿಷ್, ರಕ್ತಧ್ವಜ, ನೀಲಗಂಗಾ, ನಾಗಪಂಚಮಿಗೆ ಬಂದದ್ದು, ಜೀವನ ಕಲೆ – ಇವು ಇವರ ಉತ್ತಮ ಕಥೆಗಳಲ್ಲಿ ಕೆಲವು. ಕಟ್ಟೀಮನಿಯವರಲ್ಲಿ ಕಥೆಗಾರನಿಗಿರಬೇಕಾದ ಎಲ್ಲ ನೈಜಗುಣಗಳೂ ಇವೆ. ಭಾಷೆಯನ್ನೂ ಸಜೀವವಾಗಿ ಇವರು ಉಪಯೋಗಿಸಬಲ್ಲರು.

ಕೋ. ಚೆನ್ನಬಸಪ್ಪನವರು ಕಟ್ಟೀಮನಿಯವರಂತೆ ಹಳ್ಳಿಯ ಜೀವನವನ್ನು ಚೆನ್ನಾಗಿ ಅರಿತವರು. ಇವರದು ಶಕ್ತಿಪೂರ್ಣ ಶೈಲಿ. ನಮ್ಮೂರಿನ ದೀಪ, ಉಂಗುರದ ಉರುಲು ಇವರ ಉತ್ತಮ ಕಥೆಗಳು. ಒಕ್ಕಲಿಗನ ಬಾಳಿನ ಪ್ರತಿ ಎಳೆಯನ್ನು ಬಿಡಿಸಿ ತೋರಿಸುವ ಆಸಕ್ತಿ ಇವರ ಕಥೆಗಳಲ್ಲಿ ಕಂಡುಬರುತ್ತದೆ.

ಸಂಪ್ರದಾಯ, ಪ್ರಗತಿಶೀಲ ಮನೋಭಾವಗಳ ಮಧ್ಯವರ್ತಿಯ ವಿಧಾನವನ್ನು ತುಳಿದ ಕಥೆಗಾರರ ಪಂಗಡವೊಂದುಂಟು. ಜೀವನದ ವೈವಿಧ್ಯವೇ ಇವರ ಪ್ರಥಮ ಆಕರ್ಷಣೆ. ಇವರಿಗೆ ಸಮಾಜ ಸುಧಾರಣೆಯ ಬಯಕೆಯುಂಟು. ಈ ಮಾರ್ಗದಲ್ಲಿ ನಡೆದ ಎಂ.ವಿ.ಸೀತಾರಾಮಯ್ಯ, ಅಶ್ವತ್ಥ, ಎಸ್.ಅನಂತನಾರಾಯಣ, ನರೇಂದ್ರಬಾಬು, ಎಚ್.ಪಿ. ಜೋಶಿ, ದ.ಬಾ.ಕುಲಕರ್ಣಿ, ರಾಮಚಂದ್ರ ಕೊಟ್ಟಲಗಿ, ವರದರಾಜ ಹುಯಿಲಗೋಳ, ಎಲ್.ಎಸ್. ಶೇಷಗಿರಿ ರಾವ್, ಹಿರೇಮಲ್ಲೂರ ಈಶ್ವರನ್, ವರಗಿರಿ, ಶ್ರೀಕಂಠ ಪುತ್ತೂರು, ಮಿರ್ಜಿ ಅಣ್ಣಾರಾಯ, ವಿ.ಜಿ.ಭಟ್ಟ, ರಾ.ವೆಂ.ಶ್ರೀನಿವಾಸ, ಕೊ.ಸು. ಸೀತಾರಾಮ್, ಜೀ.ಶಂ. ಪರಮ ಶಿವಯ್ಯ, ಸುಧಾಕರ, ನಂಜರಾಜೇ ಅರಸು, ಉಮಾಶಂಕರ, ಚಿದಂಬರಾ ನಂದ, ಬೆಸಗರಹಳ್ಳಿ ರಾಮಣ್ಣ, ಶೇಷನಾರಾಯಣ, ಜನಾರ್ದನ ಗುರ್ಕಾರ, ಶ್ರೀನಿವಾಸ ಉಡುಪ, ಶ್ರೀಕಾಂತ, ಕ.ವೆಂ. ರಾಜಗೋಪಾಲ್, ಶಾಂತರಸ, ನಾರಾಯಣ ಬಲ್ಲಾಳ, ಸೇವ ನಮಿರಾಜಮಲ್ಲ, ಆರ್.ಬಸವರಾಜ, ವೆಂ.ಮು.ಜೋಶಿ, ವೀರಭದ್ರ, ಎನ್.ಎಸ್.ಚಿದಂಬರರಾವ್, ಪ.ಸು.ಭಟ್ಟ, ಟಿ.ಕೆ.ರಾಮರಾವ್, ದಯಾನಂದ ತೊರ್ಕೆ, ಶಾಂತಾರಾಮ ಸೋಮಯಾಜಿ ಮುಂತಾದವರು ಉತ್ತಮ ಕಥೆಗಳನ್ನು ಸೃಷ್ಟಿಸಿದ್ದಾರೆ. ಸುಧಾಕರ (ಕಣ್ಣಿ ಕಿತ್ತ ಹಸು, ಗರಿಕೆ ಬೇರು), ಬೆಸಗರಹಳ್ಳಿ ರಾಮಣ್ಣ (ನೆಲದ ಒಡಲು, ಗರ್ಜನೆ), ಜೀಶಂಪ (ಕಾವಲುಗಾರ ಮತ್ತು ಇತರ ಕಥೆಗಳು, ಮಬ್ಬು ಜಾರಿದ ಕಣಿವೆಯಲ್ಲಿ) – ಇವರ ಕಥೆಗಳು ಹಳ್ಳಿಯ ಜೀವನವನ್ನು ದಟ್ಟವಾಗಿ ಮೈಗೂಡಿಸಿಕೊಂಡು, ಆಡುಭಾಷೆಯ ಒರಟುತನ, ನಯನಾಜೂಕು, ಸೊಗಡನ್ನು ಭಾಷೆಯ ಬಳಕೆಯಲ್ಲಿ ಹದಗೊಳಿಸಿ, ಅನುಭವದ ತೀವ್ರತೆಯಿಂದ ಬರೆದಂಥವು. ಗ್ರಾಮಜೀವನದ ವಿವಿಧ ಮುಖಗಳ ಚಿತ್ರಣ ಇವರ ಕಥೆಗಳಲ್ಲಿ ಜೀವಂತವಾಗಿ ಮೂಡಿಬಂದಿದೆ.



ಬಸವರಾಜ ಕಟ್ಟೀಮನಿ

ಅನೇಕ ಲೇಖಕಿಯರು ಉತ್ತಮ ಕಥೆಗಳನ್ನು ರಚಿಸಿದ್ದಾರೆ. ತ್ರಿವೇಣಿ, ವಾಣಿ, ಅನುಪಮಾ ನಿರಂಜನ, ಆರ್ಯಾಂಬಾ ಪಟ್ಟಾಭಿ, ಗೀತಾ ಕುಲಕರ್ಣಿ, ವೀಣಾ ಶಾಂತೇಶ್ವರ, ಈಚನೂರು ಶಾಂತ, ಎಚ್.ವಿ.ಸಾವಿತ್ರಮ್ಮ, ಜಯಲಕ್ಷ್ಮಿ ಶ್ರೀನಿವಾಸನ್, ಎಂ.ಕೆ.ಜಯಲಕ್ಷ್ಮಿ, ಶಾಂತಾದೇವಿ ಕಣವಿ, ಆನಂದಿ ಸದಾಶಿವರಾವ್, ಎಚ್.ಎಸ್.ಕಾತ್ಯಾಯಿನಿ, ರಾಜಲಕ್ಷ್ಮಿ ಎನ್.ರಾವ್, ಶಾಂತಾದೇವಿ ಮಾಳವಾಡ, ಚಂಪಾ ಮಹಿಷಿ, ಸುಶೀಲಾ ಕೊಪ್ಪರ, ಎಚ್.ಎಸ್.ಪಾರ್ವತಿ, ಚಿತ್ರಲೇಖ, ನಿರುಪಮಾ, ಮಲ್ಲಿಕಾ, ಎಚ್.ಆರ್.ಲೀಲಾವತಿ, ಲಲಿತಾಂಬ ಚಂದ್ರಶೇಖರ್, ಕುಸುಮಾ ಎಸ್. ಕುಲಗಾಣ, ವಿಶಾಲಾಕ್ಷಿ ಲಕ್ಷ್ಮಣಗೌಡ, ನೀಲಾದೇವಿ, ಪ್ರೇಮಾಭಟ್, ಎ.ಪಿ.ಮಾಲತಿ, ವೈದೇಹಿ, ಎಂ.ಎಸ್.ವೇದಾ, ಸಾರಾ ಅಬೂಬಕರ್, ಗೀತಾ ನಾಗಭೂಷಣ, ಬಾನು ಮುಷ್ತಾಕ್, ಭಾಗೀರಥಿ ಹೆಗಡೆ, ಹೇಮಾ ಪಟ್ಟಣಶೆಟ್ಟಿ, ಗಂಗಾ ಪಾದೇಕಲ್ ಮುಂತಾದವರು ಸೊಗಸಾದ ಕಥೆಗಳನ್ನು ರಚಿಸಿದ್ದಾರೆ.

ಸ್ವಾತಂತ್ರ್ಯ ಬಂದ ಕೆಲವೇ ವರ್ಷಗಳಲ್ಲಿ ಕನ್ನಡದಲ್ಲಿ ನವ್ಯ ಪಂಥವೊಂದು ಉದಯವಾಯಿತು. ನವೋದಯ ಹಾಗೂ ಅನಂತರ ಬಂದ ಪ್ರಗತಿಶೀಲ ಪಂಥಕ್ಕೆ ಇವರು ಸ್ವಲ್ಪ ಭಿನ್ನರಾದರು. ಮನಸ್ಸಿನ ಬೆನ್ನು ಹತ್ತಿ ಅದರ ಸಂಕೀರ್ಣತೆಗಳನ್ನು ಬಿಚ್ಚಿ ತೋರಿಸುವ ಸಾಹಸ ಮಾಡಿದರು. ಇದರಿಂದಾಗಿ ಹಲವು ಮನೋವೈಜ್ಞಾನಿಕ ಕಥೆಗಳು ಹುಟ್ಟಿಬಂದುವು. ಕಥಾ ಪ್ರಪಂಚದಲ್ಲೂ ನವ್ಯತೆ ಮೂಡಿತು. ಈ ದಿಶೆಯಲ್ಲಿ ರಾಮಚಂದ್ರ ಶರ್ಮರು ಸಂಗಮ, ಏಳನೆಯ ಜೀವ, ಸೆರಗಿನ ಕೆಂಡ ಇಂಥ ಕೆಲವು ಮಾದರಿಯ ನವ್ಯಕಥೆಗಳನ್ನು ಬರೆದರು. ಯು.ಆರ್.ಅನಂತಮೂರ್ತಿಯವರ ಎಂದೆಂದೂ ಮುಗಿಯದ ಕಥೆ ನವ್ಯ ಕಥೆಗಳ ಪ್ರಾತಿನಿಧಿಕ ಸಂಗ್ರಹ. ಅನಂತರ ಪ್ರಶ್ನೆ, ಮೌನಿ ಸಂಕಲನಗಳು ಪ್ರಕಟಗೊಂಡಿವೆ. ಶಾಂತಿನಾಥ ದೇಸಾಯಿ (ಮಂಜುಗಡ್ಡೆ, ಕ್ಷಿತಿಜ, ದಂಡೆ), ಯಶವಂತ ಚಿತ್ತಾಲ (ಸಂದರ್ಶನ, ಆಬೋಲಿನ, ಆಟ, ಕತೆಯಾದಳು ಹುಡುಗಿ), ಪಿ.ಲಂಕೇಶ್, (ನಾನಲ್ಲ, ಕೆರೆಯ ನೀರನು ಕೆರೆಗೆ ಚೆಲ್ಲಿ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ), ಕೆ.ಸದಾಶಿವ (ತುಣುಕುಗಳು, ನಲ್ಲಿಯಲ್ಲಿ ನೀರು ಬಂತು), ಟಿ.ಜಿ.ರಾಘವ (ಜ್ವಾಲೆ ಆರಿತು), ಕಾಮರೂಪಿ

(ಒಂದು ತೊಲ ಪುನುಗು ಮತ್ತು ಇತರ ಕಥೆಗಳು), ಗಿರಡ್ಡಿ ಗೋವಿಂದರಾಜ (ಆ ಮುಖಾ ಈ ಮುಖಾ), ಪೂರ್ಣಚಂದ್ರ ತೇಜಸ್ವಿ (ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟ್ ಆಫೀಸು) ಮುಂತಾದವರು ಹಲವಾರು ಉತ್ತಮ ನವ್ಯಕಥೆಗಳನ್ನು ನೀಡಿದ್ದಾರೆ.

80ರ ದಶಕ ಕನ್ನಡ ಕಥಾದಿಗಂತ ವಿಸ್ತರಿಸಿದ ಕಾಲವಾಗಿದ್ದು ಕನ್ನಡದ ಸಣ್ಣಕಥೆಗಳ ಸುಗ್ಗಿಯನ್ನೇ ಕಾಣಬಹುದಾಗಿದೆ. ಈ ಅವಧಿಯಲ್ಲಿ ಅನೇಕ ಉತ್ತಮ ಕಥೆಗಾರರು ಸೃಷ್ಟಿಯಾದರು. ನವ್ಯಕಥೆಯ ಮುಂದುವರಿದ ಕೊಂಡಿಯಾಗಿ, ಅದಕ್ಕಿಂತ ಭಿನ್ನವಾಗಿ ಸಣ್ಣಕಥೆ ರೂಪತಾಳತೊಡಗಿತು. ಶ್ರೀಕೃಷ್ಣ ಆಲನಹಳ್ಳಿ, (ತಪ್ತ, ಫೀನಿಕ್ಸ್), ಬರಗೂರು ರಾಮಚಂದ್ರಪ್ಪ (ಸುಂಟರಗಾಳಿ), ಟಿ.ಎಂ.ಸುಬ್ಬರಾಯ, ಹಿ.ಮ.ಬಸವಯ್ಯ, (ಗಂಟು), ಎಂ.ಜಿ.ಈಶ್ವರ್, ಲಕ್ಷ್ಮಣ ಕೊಡಸೆ, ರಾಮದಾಸ್ (ಸೇಡು), ಈಶ್ವರ ಚಂದ್ರ, ಜಯಂತ ಕಾಯ್ಕಿಣಿ, ಬಿ.ವಿ.ವೈಕುಂಠರಾಜು, ರಾಮಚಂದ್ರದೇವ (ದಂಗೆಯ ಪ್ರಕರಣ), ಜಿ.ಎಸ್.ಸದಾಶಿವ (ಮೀಸೆಯವರು) ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ನವ್ಯತೆ ಕನ್ನಡ ಸಣ್ಣಕಥೆಯ ವಸ್ತು, ಶೈಲಿಯಲ್ಲಿ ಬದಲಾವಣೆ ತಂದಿತು. ತಂತ್ರದಲ್ಲೂ ಅನೇಕ ಬದಲಾವಣೆಗಳನ್ನು ಮೂಡಿಸಿತು. ಭಾಷೆಯ ಬಳಕೆಯ ದೃಷ್ಟಿಯಿಂದ ಈ ಕಥೆಗಾರರು ಅಗಾಧವಾದ ಕೆಲಸ ಮಾಡಿದ್ದಾರೆ. ಇವರ ಕೃತಿಗಳಲ್ಲಿ ತಂತ್ರ, ಅಭಿವ್ಯಕ್ತಿ ಅನಿವಾರ್ಯವಾಗಿವೆ. ಅನುಭವವನ್ನು ಅರಗಿಸಿಕೊಂಡು ಅದರಿಂದ ದೂರ ನಿಂತು ತಾದಾತ್ಮ್ಯವನ್ನು ಸಾಧಿಸಿ ವಿಮರ್ಶಕ ಪ್ರಜ್ಞೆಯನ್ನು ಇಟ್ಟುಕೊಂಡು ಕೃತಿರಚನೆಗೆ ತೊಡಗಿದರು. ವೀರ್ಯವತ್ತಾದ ಶೈಲಿ ಇವರದು. ನವೋದಯ ಹಾಗೂ ಪ್ರಗತಿಶೀಲ ಕಥೆಗಾರರಿಗಿದ್ದಂತೆ ವಿರೋಧಿಸಲಿಕ್ಕೆ ನಿಶ್ಚಿತ ಮೌಲ್ಯಗಳಿರಲಿಲ್ಲ. ಜೀವನದಲ್ಲಿ ಮಾರ್ಗದರ್ಶಕವಾಗುವ ಸಾಮಾನ್ಯ ಮೌಲ್ಯಗಳು ಉಂಟೆ ಎಂಬುದೇ ಇವರ ಪ್ರಶ್ನೆ. ಆದ್ದರಿಂದ ಇಡಿಯ ಸಮಾಜದ ಸಮಸ್ಯೆಗಳಿಗಿಂತ ವೈಯಕ್ತಿಕ ಸಮಸ್ಯೆಗಳಿಗೇ ಇವರ ಕಥೆಗಳಲ್ಲಿ ಹೆಚ್ಚು ಒತ್ತು ಬಿತ್ತು. ಇಂಥ ವೈಯಕ್ತಿಕ ಆಲೋಚನೆಗಳು, ಅನುಭವದ ಉತ್ಕಟತೆಯ ಮೂಲಕ ಸಾರ್ವತ್ರಿಕವಾಗಬಲ್ಲುದೆಂಬುದು ಇವರ ಆಶಯವಾಗಿತ್ತು. ಸಾಮಾಜಿಕ ಬದಲಾವಣೆಗಳನ್ನು ಇವರು ವ್ಯಕ್ತಿಯ ಸಂವೇದನೆಯ ಮೇಲಾಗುವ ಪರಿಣಾಮಗಳಲ್ಲಿ ಗ್ರಹಿಸಿದರು. ವ್ಯಕ್ತಿಯ ಮನಸ್ಸಿನ ಹೊಯ್ದಾಟ ತುಯ್ದಾಟಗಳ ರಹಸ್ಯಗಳನ್ನು ಸಂಕೋಚವಿಲ್ಲದೆ ಚಿತ್ರಿಸಿದರು. ಪ್ರಜ್ಞೆಯ ಬೆಲೆಯುಳ್ಳ ಸ್ಥಿತಿಗಳನ್ನು ಹಿಡಿದಿಡುವುದು ಇವರ ಉದ್ದೇಶ. ಇಂಥ ಸೂಕ್ಷ್ಮ ಹಾಗೂ ಸಂಕೀರ್ಣ ಉದ್ದೇಶಗಳಿಗೆ ತೆತ್ತುಕೊಂಡ ಇವರ ಬರೆವಣಿಗೆಯೂ ಒಮ್ಮೊಮ್ಮೆ ಜಟಿಲತೆಯನ್ನು ಪಡೆದುಕೊಂಡಿತು. ಕುತೂಹಲ ಕೆರಳಿಸುವ ನಿರೂಪಣಾಕ್ರಮವನ್ನು ಬಿಟ್ಟು ಕೊಟ್ಟು ಘಟನೆಗಳ ಹಿಂದಿನ ಧ್ವನಿಯ ಮೇಲೆ, ಅನುಭವದ ಅರ್ಥವಿಶ್ಲೇಷಣೆಯ ಮೇಲೆ ಈ ಕಥೆಗಾರರು ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಈ ಪ್ರಯತ್ನದಲ್ಲಿ ಘಟನೆಗಳ ತಾರ್ಕಿಕ ಹೊಂದಾಣಿಕೆಯನ್ನು ಉದ್ದೇಶಪೂರ್ವಕವಾಗಿ ನಿರಾಕರಿಸಿದ್ದರು. ಪ್ರಜ್ಞಾಪ್ರವಾಹ ತಂತ್ರದ ಮೂಲಕ ಘಟನೆ ಹಾಗೂ ಪರಿಸರದ ವಿವರಗಳನ್ನೆಲ್ಲ, ಸಾಂಕೇತಿಕವಾಗಿ ಬಳಸಿಕೊಂಡು ಅನುಭವ, ಅರ್ಥದ ಪದರುಗಳನ್ನು ವಿಸ್ತರಿಸಿದರು. ಹೀಗಾಗಿ ಸಣ್ಣಕಥೆ ಕವಿತೆಗೆ ತೀರಾ ಹತ್ತಿರವಾಯಿತು. ಭಾಷೆಯನ್ನು ಅತ್ಯಂತ ಕಾಳಜಿಯಿಂದ ಬಳಸತೊಡಗಿದರು. ಅನುಭವದ ದೃಷ್ಟಿಯಿಂದಲೂ ಸರಳಗೊಳಿಸದೆ ಅದರ ಪರ ವಿರೋಧಗಳನ್ನು ಕಥೆಯ ಹಾಸಿನಲ್ಲೇ ನಿರೀಕ್ಷಿಸಿ ವಿವೇಚಿಸಿದ್ದರು. ವಾಸ್ತವವಾದದ ನಿರ್ಬಂಧವನ್ನು ಮುರಿದು ಮಾನವಶಾಸ್ತ್ರ ಹಾಗೂ ಅಸ್ತಿತ್ವವಾದಗಳ ಪ್ರಭಾವವನ್ನು ಕಥೆಗಳಲ್ಲಿ ಮೂಡಿಸಿದರು. ನವ್ಯ ಕಥೆಗಾರರು ತಮ್ಮ ಅನುಭವ ಕ್ಷೇತ್ರಗಳನ್ನು ಸಂಕುಚಿತಗೊಳಿಸುತ್ತಿದ್ದಾರೆಂದೂ ಕಾಮಕ್ಕೆ ಅವಾಸ್ತವ ಮಹತ್ತ್ವ ಕೊಟ್ಟು ಅಶ್ಲೀಲವಾಗಿ ಬರೆಯುತ್ತಾರೆಂದೂ ಸಾಮಾನ್ಯ ಓದುಗರಿಗೆ ಇವರ ಕಥೆಗಳು ಅರ್ಥವಾಗುವುದಿಲ್ಲವೆಂದೂ ಟೀಕೆಗಳು ಬಂದವು. ಆದರೂ ನವ್ಯ ಕಥೆಗಳ ಬರೆವಣಿಗೆ ವಿಪುಲವಾಗಿ ಸಾಗಿಬಂತು. ಕನ್ನಡ ಗದ್ಯ ಅನನ್ಯತೆಯನ್ನು ಪಡೆದ ಸಂದರ್ಭವಿದು. ಗದ್ಯವೂ ಕಾವ್ಯಮಯವಾಗಬಲ್ಲದೆಂಬ ಸಂಗತಿಯನ್ನು ನವ್ಯಕಥೆಗಾರರು ತೋರಿಸಿಕೊಟ್ಟರು.

ತ್ರಿವೇಣಿ

ದೇವನೂರು ಮಹಾದೇವ ಅವರ ದ್ಯಾವನೂರು ಕಥಾ ಸಂಕಲನದ ಪ್ರಕಟಣೆಯ ಅನಂತರ ದಲಿತ ಸಂವೇದನೆಗಳ ಹೊಸ ದನಿಯೊಂದು ಕನ್ನಡ ಸಣ್ಣಕಥಾವಾಹಿನಿಯನ್ನು ಸೇರಿಕೊಂಡಿತು. ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ, ತುಳಿತಕ್ಕೊಳಗಾದವರ, ಅದುವರೆಗೂ ಅನಾವರಣವಾಗದಿದ್ದ ಬದುಕು, ಆ ಬದುಕಿನ ಸಂಕೀರ್ಣಗಳು ಕಥೆಯಲ್ಲಿ ಮೈಪಡೆಯ ತೊಡಗಿದವು. ಹೊಸ ಸಂವೇದನೆಗಳು, ಹೊಸ ಅನುಭವಗಳು, ವಿಶಿಷ್ಟವಾದ ದೇಸಿಯ ಅಭಿವ್ಯಕ್ತಿ, ಆಡುಭಾಷೆಯ ಬಳಕೆಯಿಂದಾಗಿ ಸಣ್ಣಕಥೆ ಹೊಸ ಆಯಾಮವನ್ನು ಪಡೆದುಕೊಂಡಿತು. ಕುಂ.ವೀರಭದ್ರಪ್ಪ, ಮೊಗಳ್ಳಿಗಣೇಶ್, ಅಮರೇಶ ನುಗಡೋಣಿ ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ದಲಿತಸಂವೇದನೆಯ ಇನ್ನೊಂದು ಮುಖವೇ ಆದ ಬಂಡಾಯ ಸಂವೇದನೆಯ ಕಥೆಗಳೂ ಅನಂತರದಲ್ಲಿ ಕನ್ನಡದಲ್ಲಿ ಪ್ರಕಟಗೊಂಡವು. ಕನ್ನಡದ ಸಂದರ್ಭದಲ್ಲಿ ಮುಸ್ಲಿಂ ಸಂವೇದನೆಯ ಅನೇಕ ಕಥೆಗಾರರೂ ಕನ್ನಡ ಸಣ್ಣಕಥೆಯ ಕ್ಷಿತಿಜವನ್ನು ಹಿಗ್ಗಿಸುವಲ್ಲಿ ತಮ್ಮ ಪಾಲಿನ ಕಾಣಿಕೆಯನ್ನು ಸಲ್ಲಿಸಿದರು. ಹೀಗೆ ಕನ್ನಡ ಸಣ್ಣಕಥಾ ಪ್ರಪಂಚ ಹೊಸ ಸಂವೇದನೆಗಳನ್ನು ಆಯಾ ಕಾಲ ಸಂದರ್ಭದ ಯುಗಧರ್ಮವನ್ನು ಒಳಗೊಳ್ಳುತ್ತ ಶ್ರೀಮಂತವಾಗುತ್ತ ಸಾಗಿದೆ.

ಸಣ್ಣಕಥೆಯ ಕ್ಷೇತ್ರದಲ್ಲಿ ಅನೇಕ ಕಥೆಗಾರರು ತಮ್ಮ ಸೃಜನಶೀಲತೆಯಿಂದ ಗಮನ ಸೆಳೆದಿದ್ದಾರೆ. ಅಂಥವರ ಹೆಸರುಗಳಲ್ಲಿ ಕೆಲವನ್ನು ಹೀಗೆ ಪಟ್ಟಿ ಮಾಡಬಹುದು: ಕಾಳೇಗೌಡ ನಾಗವಾರ, ರಾಜಶೇಖರ ನೀರಮಾನ್ವಿ, ಎಂ.ಎಸ್.ಕೆ.ಪ್ರಭು, ರಾಘವೇಂದ್ರ ಖಾಸನೀಸ, ಎಸ್.ದಿವಾಕರ, ಶಾಂತರಸ, ವೀರಭದ್ರ ಕರೀಗೌಡ ಬೀಚನಹಳ್ಳಿ, ಕೆ.ಸತ್ಯನಾರಾಯಣ, ರಾಘವೇಂದ್ರ ಪಾಟೀಲ, ವಿವೇಕ ಶಾನಭಾಗ, ಕೆ.ವಿ.ತಿರುಮಲೇಶ್, ನಾ.ಡಿಸೋಜ, ಬಿ.ಶಾಮಸುಂದರ, ರಮೇಶ ಹುಲ್ಲುಕೆರೆ, ಕ್ಯಾತನಹಳ್ಳಿ ರಾಮಣ್ಣ, ಜವರನಹಳ್ಳಿ ಸಿದ್ದಪ್ಪ, ಕಾ.ತ.ಚಿಕ್ಕಣ್ಣ, ಬೊಳುವಾರು ಮಹಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಅಬ್ದುಲ್ ರಶೀದ್, ಬಿ.ಎಂ.ಬಷೀರ್, ರಫೀಕ್‌ಉಪ್ಪಿನಂಗಡಿ, ಕುಕ್ಕರಹಳ್ಳಿ ಬಸವರಾಜು, ಕೇಶವರೆಡ್ಡಿ ಹಂದ್ರಾಳ ಮೊದಲಾದವರು.

ಪಂಜೆಯವರು, ಶ್ರೀನಿವಾಸರಿಂದ ಹಿಡಿದು ಇಂದಿನವರೆಗೆ ಸುಮಾರು ನೂರು ವರುಷಗಳ ಕಥೆಗಾರರ ಕೃತಿಗಳು ಕನ್ನಡ ಸಣ್ಣಕಥೆ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಹಾಗೆಂದ ಮಾತ್ರಕ್ಕೆ ಸಣ್ಣಕಥಾ ಪ್ರಪಂಚ ಪರಿಪೂರ್ಣವಾಗಿದೆ ಎಂದಲ್ಲ. ಇತ್ತೀಚೆಗೆ ಇತರ ಭಾಷೆಗಳಿಂದ ಅನೇಕ ಕಥೆಗಳು ಅನುವಾದವಾಗಿ ಬರುತ್ತಿರುವುದು ಒಂದು ಸಂತೋಷದಾಯಕ ಸಂಗತಿ. ನವಕರ್ನಾಟಕ ಪ್ರಕಾಶನ ನಿರಂಜನರ ಸಂಪಾದಕತ್ವದಲ್ಲಿ ವಿಶ್ವಕಥಾಕೋಶ ಮಾಲಿಕೆಯಲ್ಲಿ ಅನುವಾದಿತ ಕಥೆಗಳ 25 ಸಂಪುಟಗಳನ್ನು ಪ್ರಕಟಿಸಿರುವುದು ಭಾರತೀಯ ಭಾಷೆಗಳಲ್ಲಿಯೇ ಒಂದು ದಾಖಲೆ. ಹಾಗೆಯೇ ಕನ್ನಡದ ಅನೇಕ ಉತ್ತಮ ಕಥೆಗಳು ಭಾರತೀಯ ಹಾಗೂ ಹೊರ ದೇಶಗಳ ಭಾಷೆಗೆ ಅನುವಾದವಾಗಿರುವುದು ಗಮನಿಸಬೇಕಾದ ಅಂಶ. ಇದೆಲ್ಲವನ್ನೂ ಗಮನಿಸಿದಾಗ ಕನ್ನಡ ಸಣ್ಣಕಥೆಗಳಿಗೆ ಉಜ್ವಲ ಭವಿಷ್ಯವಿದೆ ಎನ್ನಬಹುದು.

ಕನ್ನಡದಲ್ಲಿ ಸಣ್ಣಕಥೆಗಳು ಕೇವಲ ಪತ್ರಿಕೆಗಳಲ್ಲಿ ಕಾಣುತ್ತಿದ್ದ ಕಾಲವೊಂದಿತ್ತು. ಈಗ ಅವು ಹಲವಾರು ರೂಪದ ಸಂಗ್ರಹದಲ್ಲಿ ಕಾಣುತ್ತಿವೆ. ಲೇಖಕರು ಹೊರತರುವ ಸಂಗ್ರಹಗಳಲ್ಲದೆ ಪ್ರಸಿದ್ಧ ಲೇಖಕರ ಪ್ರಾತಿನಿಧಿಕ ಕಥೆಗಳ ಸಂಗ್ರಹಗಳೇ ಹೊರಬರುತ್ತಿವೆ. ಕನ್ನಡ ಸಾಹಿತ್ಯ ಪರಿಷತ್ತು ಉತ್ತಮ ಕಥೆಗಳನ್ನು ಆಯ್ದು ಪ್ರಕಟಿಸಿದೆ. ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ ಉತ್ತಮ ಸಣ್ಣಕಥೆಗಳ ಸಂಗ್ರಹಗಳನ್ನು ತಂದಿವೆ. ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಶತಮಾನದ ಸಣ್ಣಕಥೆಗಳು ಎಂಬ ಸಂಕಲನ ಗ್ರಂಥವನ್ನು ಪ್ರಕಟಿಸಿದೆ (2001). ಸಾಲದ್ದಕ್ಕೆ ಒಬ್ಬನೇ ಲೇಖಕನ ಆಯ್ದ ಕಥೆಗಳ ಸಂಕಲನಗಳೂ ಬರುತ್ತಿವೆ. ವಿವಿಧ ಲೇಖಕರ ಕಥೆಗಳನ್ನೊಳಗೊಂಡ ಬೃಹತ್ ಕಥಾಸಂಕಲನಗಳೂ ಈಚೆಗೆ ಬೆಳಕು ಕಂಡಿವೆ. ಇದಲ್ಲದೆ ಕನ್ನಡ ನಾಡಿನ ವಿವಿಧ ಲೇಖಕಿಯರ ಕಥೆಗಳ ಸಂಕಲನಗಳೂ ಹೊರಬಂದಿವೆ.

ಪತ್ರಿಕೆಗಳ ಪ್ರೋತ್ಸಾಹವೂ ಮುಂದುವರಿದಿದೆ. ಇಂದು ಯಾವ ಪತ್ರಿಕೆಯೂ ಕಥೆಗಳನ್ನು ಪ್ರಕಟಿಸದೆ ಇಲ್ಲ. ಎಲ್ಲ ಪತ್ರಿಕೆಗಳಲ್ಲೂ ಸಣ್ಣ ಕಥಾ ವಿಭಾಗ ಇದ್ದೇ ಇದೆ. ಒಂದು ದೃಷ್ಟಿಯಿಂದ ಸಣ್ಣಕಥೆಗಳು ಇಷ್ಟೊಂದು ಸಂಖ್ಯೆಗಳಲ್ಲಿ ಹೊರಬರಲು ನಾಡಿನ ಪತ್ರಿಕೆಗಳು ಮಹತ್ವಪೂರ್ಣಪಾತ್ರ ವಹಿಸಿವೆ. ಕೆಲವು ಪತ್ರಿಕೆಗಳು ವಿಶೇಷ ಸಂದರ್ಭಗಳಲ್ಲಿ (ದೀಪಾವಳಿ ವಿಶೇಷಾಂಕ, ಯುಗಾದಿ ವಿಶೇಷಾಂಕ ಇತ್ಯಾದಿ) ಆಕರ್ಷಕ ಮೊತ್ತದ ಬಹುಮಾನಗಳನ್ನಿಟ್ಟು ಉತ್ತಮ ಸಣ್ಣಕಥೆಗಳನ್ನು ಆಹ್ವಾನಿಸುತ್ತಿವೆ. ಅಲ್ಲದೆ ಹಲವಾರು ಸಾಹಿತ್ಯಕ ಸಂಘಸಂಸ್ಥೆಗಳು ಆಗಾಗ್ಗೆ ಸ್ಪರ್ಧೆಯನ್ನು ಏರ್ಪಡಿಸಿ ಸಣ್ಣಕಥೆಗಳನ್ನು ಆಹ್ವಾನಿಸುತ್ತಿವೆ. ಈ ಎಲ್ಲ ಕಾರಣಗಳಿಂದ ಸಣ್ಣ ಕಥಾಪ್ರಪಂಚ ಸಮೃದ್ಧವಾಗುತ್ತ ಸಾಗಿದೆ. **(ಟಿ.ಎಚ್.ಎಚ್.,ಜಿ.ಜಿ.)**

**ಕನ್ನಡದಲ್ಲಿ ಸಾಂಗತ್ಯಕಾವ್ಯ :** ಕನ್ನಡದಲ್ಲಿ ಸಾಂಗತ್ಯಕೃತಿಗಳು ವಿಪುಲವಾಗಿವೆ. ಸಾಂಗತ್ಯದ ಪ್ರಾಚೀನತೆಯ ಬಗೆಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಕರ್ನಾಟಕ ಕವಿಚರಿತೆಕಾರರು ಸು.1233ರ ಶಿಶುಮಾಯಣನೇ ಪ್ರಥಮ ಸಾಂಗತ್ಯಕಾರನೆಂದು ಹೇಳಿದ್ದಾರೆ. ಆದರೆ ಈತನ ಕಾಲ 15ನೆಯ ಶತಮಾನದ ಕಡೆಯ ಭಾಗ ಎಂದು ತರುವಾಯದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸದ್ಯದಲ್ಲಿ ಸು.1410ರಲ್ಲಿದ್ದ ದೇಪರಾಜನ ಸೊಬಗಿನ ಸೋನೆಯೇ ಪ್ರಥಮ ಸಾಂಗತ್ಯಕೃತಿ.

ಸಾಂಗತ್ಯ ಅಂಶಗಣಗಳಿಂದ ಸಂಘಟಿತವಾದುದು. ಇದರಲ್ಲಿ ಒಟ್ಟು ಹದಿನಾಲ್ಕು ಗಣಗಳಿರುತ್ತವೆ. ಅದರ ಒಂದು ಮತ್ತು ಮೂರನೆಯ ಪಾದಗಳು ಒಂದು ಸಮನಾಗಿಯೂ ಎರಡು ಮತ್ತು ನಾಲ್ಕನೆಯ ಪಾದಗಳು ಮತ್ತೊಂದು ಸಮನಾಗಿಯೂ ಇರುತ್ತವೆ. ಒಂದು ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ನಾಲ್ಕು ವಿಷ್ಣುಗಣಗಳೂ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಎರಡೆರಡು ವಿಷ್ಣುಗಣಗಳೂ ಕೊನೆಯಲ್ಲಿ ಒಂದು ಬ್ರಹ್ಮಗಣವೂ ಇರುತ್ತವೆ. ಮಾದರಿಗಾಗಿ ಒಂದು ಪದ್ಯವನ್ನು ನೋಡಬಹುದು.

ವಿ ವಿ ವಿ ವಿ
ಪರಮಪ । ರಂಜ್ಯೋತಿ । ಕೋಟಿಚಂ । ದ್ರಾದಿತ್ಯ
ವಿ ವಿ ಬ್ರ
ಕಿರಣಸು । ಜ್ಞಾನಪ್ರ । ಕಾಶ ।
ವಿ ವಿ ವಿ ವಿ ವಿ
ಸುರರಮ । ಕುಟಮಣಿ । ರಂಜಿತ । ಚರಣಾಬ್ದ
ವಿ ವಿ ಬ್ರ
ಶರಣಾಗು । ಪ್ರಥಮಜಿ । ನೇಶ (ಭರತೇಶವೈಭವ)

ಸಾಂಗತ್ಯ ಹಾಡುಗಬ್ಬದ ಜಾತಿಗೆ ಸೇರಿದುದು. ಆದುದರಿಂದ ಅರ್ಥ ಸ್ವಾರಸ್ಯಕ್ಕಾಗಿ, ಹಾಡಿನ ಸೌಲಭ್ಯಕ್ಕಾಗಿ ವಿಷ್ಣುಗಣದ ಸ್ಥಾನದಲ್ಲಿ ಬ್ರಹ್ಮವೋ ರುದ್ರವೋ ಬ್ರಹ್ಮಗಣದ ಸ್ಥಾನದಲ್ಲಿ ವಿಷ್ಣುವೋ ರುದ್ರವೋ ಪರ್ಯಾಯವಾಗಿ ಬರುವುದುಂಟು. ಒಂದು ಉದಾಹರಣೆ:

ಬ್ರ ವಿ ರು ವಿ
ಕುರುರಾ । ಯನಮೈದು । ನನಕೊಲೆಗೆ । ಧರ್ಮಜ
ವಿ ವಿ ಬ್ರ
ನರನಕ । ಉಪುವತೆ । ಐದೊಳು ।
ವಿ ವಿ ವಿ ವಿ
ನರಪತಿ। ಯೊಡಬಟ್ಟು । ಕಳುಪಿದ । ರಾಮನ
ವಿ ವಿ ಬ್ರ
ಪರಬಲ । ಜಲನಿಧಿ । ಯೆಡೆಗೆ । (ರಾಮನಾಥಚರಿತೆ)

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಆದಿಪ್ರಾಸ ಒಂದು ಅಪರಿಹಾರ್ಯವಾದ ಅಂಶ. ಸಾಂಗತ್ಯಕಾರರೂ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಆದರೆ ಕೆಲವು ಸಾಂಗತ್ಯಕೃತಿಗಳಲ್ಲಿ ಪ್ರಾಸೋಲ್ಲಂಘನೆಯಾಗಿರುವುದನ್ನು ಕಾಣಬಹುದು.

ಸಮಯ ಕಾಲವನರಿತು ಗೆಲಬೇಕು ವೈರಿಯ
ಮುಳುಗು ಮುಗ್ಗಿದ ಕಾಲದೊಳಗೆ
ನರಿ ಬಂದು ಗುಂಡಿಯ ಕೆಡೆದಾಗ ಜನಕೊಂದು
ಯಿಡಬೇಕು ಕಲ್ಲೆಂಬ ಗಾದೆ

(ಕುಮಾರರಾಮನ ಸಾಂಗತ್ಯಗಳು)

ಪ್ರಾಚೀನ ಕನ್ನಡ ಛಂದಃಕಾರರು ಸಾಂಗತ್ಯದ ಲಕ್ಷಣವನ್ನು ಹೇಳಿಲ್ಲ. ನಾಗವರ್ಮನ ಛಂದೋಂಬುಧಿಯಲ್ಲೂ ಜಯಕೀರ್ತಿಯ ಛಂದೋನುಶಾಸನದಲ್ಲೂ ಈಚಿನ ಇತರ ಕನ್ನಡ ಛಂದೋಗ್ರಂಥಗಳಲ್ಲಿಯೂ ಈಶ್ವರ ಕವಿಯ ಕವಿಜಿಹ್ವಾಬಂಧನದಲ್ಲೂ ನಂದಿಯ ನಂದಿಛಂದಸ್ಸಿನಲ್ಲೂ ಸಾಂಗತ್ಯದ ಉಲ್ಲೇಖವಿಲ್ಲ. ಕನ್ನಡ ಸಾಹಿತ್ಯದ ಪ್ರಥಮ ಸಾಂಗತ್ಯಕೃತಿಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವ ದೇಪರಾಜನ ಸೊಬಗಿನ ಸೋನೆ ಒಂದು ವಿಶಿಷ್ಟ ರೀತಿಯದು. ಈ ಕೃತಿಯಲ್ಲಿನ ಪ್ರತಿಯೊಂದು ಪದ್ಯದಲ್ಲಿಯೂ ಬ್ರಹ್ಮಗಣಗಳಿಗೆ ಪರ್ಯಾಯವಾಗಿ ವಿಷ್ಣುಗಣಗಳನ್ನು ಬಳಸಲಾಗಿದೆ. ಕೆಲವು ವಿದ್ವಾಂಸರು ಇದನ್ನು ಬ್ರಹ್ಮಗಣ ಮತ್ತು ಒಂದು ಅಂಶ ಎಂದು ಅಭಿಪ್ರಾಯ ಪಡುತ್ತಾರೆ.

ಸೊಬಗಿನ । ಸೋನೆಯ । ನೊಲಿದಾ । ಲಿಸಿ ಕೇಳೆ
ಸೊಬಗಿನೀ । ಸೋನೆಯೆ । ನಿಪಂ ಪ್ರಿಯೆ
ಕಬರಿಯಿಂ । ದೆಸೆವಕಂ । ಜರಿಮಾಳ । ವನವರಿ
ಸಬಲೆ ನೀ । ನೆಂದ ವಿ । ಕ್ರಮನೆಂದು

(ಸೊಬಗಿನ ಸೋನೆ)

ಆಧುನಿಕ ವಿದ್ವಾಂಸರಲ್ಲಿ ಕೆಲವರು ಗೀತಿಕೆಯ ಎರಡು ಪದಗಳ ರೂಪಾಂತರವೆ ಸಾಂಗತ್ಯವಾಗಿ ತೋರುವುದು (ಕನ್ನಡ ಕೈಪಿಡಿ) ಎಂದೂ ಸಾಂಗತ್ಯ ತ್ರಿಪದಿಯಿಂದ ಹೊರಟ ಮಟ್ಟೆಂದೂ ತ್ರಿಪದಿಯ ಚರಣವನ್ನು ಆವೃತ್ತಿ ಮಾಡಿ ಹಾಡುವ ರೂಢಿ ಸಾಂಗತ್ಯದ ರೂಪನಿರ್ಮಾಣಕ್ಕೆ ದಾರಿಯನ್ನು ಮಾಡಿತು (ಕನ್ನಡ ಛಂದೋವಿಕಾಸ) ಎಂದೂ ಅಭಿಪ್ರಾಯಪಟ್ಟಿದ್ದಾರೆ. ಗೀತಿಕೆಯಿಂದಾಗಲಿ, ತ್ರಿಪದಿ ಅಥವಾ ಪಿರಿಯಕ್ಕರದಿಂದಾಗಲಿ ಸಾಂಗತ್ಯ ಆವಿರ್ಭವಿಸಿತೆಂದು ಹೇಳುವುದು ಅಷ್ಟು ಸಮಂಜಸವಾಗಿ ತೋರುವುದಿಲ್ಲ. ಏಕೆಂದರೆ ಅದನ್ನು ಸಾಧಿಸುವುದು ಕಷ್ಟ. ಸಾಂಗತ್ಯ ಶುದ್ಧ ದೇಶೀಯ ಮಟ್ಟು. ಅಂಶಗಣ ಘಟಿತವಾದ ಸಾಂಗತ್ಯಕ್ಕಿಂತಲೂ ಪ್ರಾಚೀನವಾದ ತ್ರಿಪದಿ, ಕಾಲಕ್ರಮದಲ್ಲಿ ಮಾತ್ರಾಗಣಕ್ಕೆ ತಿರುಗಿದ್ದರೂ ಸಾಂಗತ್ಯ ಇಂದಿಗೂ ಅಂಶಗಣಘಟಿತವಾಗಿಯೇ ಉಳಿದುಕೊಂಡು ಬಂದಿರುವುದರಿಂದ ಇದಕ್ಕೆ ಪ್ರತ್ಯೇಕ ಅಸ್ತಿತ್ವವಿದ್ದಿತೆಂದು ಭಾವಿಸುವುದಕ್ಕೆ ಅವಕಾಶವುಂಟು.

ಕನ್ನಡ ಸಾಹಿತ್ಯದ ಸಾಂಗತ್ಯಚರಿತ್ರೆಯಲ್ಲಿ ಬಸವೇಶ್ವರ ವಿರಚಿತ ಕಾಲಜ್ಞಾನವೇ ಪ್ರಥಮ ಕೃತಿಯೆಂದು ಹೇಳಿ ಕರ್ಕಿಯವರು ಕವಿಚರಿತ್ರೆಯಿಂದ ಒಂದು ಪದ್ಯವನ್ನು ಉದಾಹರಿಸಿದ್ದಾರೆ:

ಮಳೆಯಿಲ್ಲ ಬೆಳೆಯಿಲ್ಲ ಹೊಳೆಯಿಲ್ಲ ಕೆರೆಯಿಲ್ಲ
ನೆಳಲಿಲ್ಲ ಉದಕ ಮುನ್ನಿಲ್ಲ
ಮೊಳೆಯಿಲ್ಲ ಸೂರ್ಯನ ಕಳೆಯಿಲ್ಲ ಗೆಲವಿಲ್ಲ
ಉಳಿವಿಲ್ಲ ಆ ಪಾಪಿಗಳಿಗೆ

(ಕನ್ನಡ ಛಂದೋವಿಕಾಸ)

ಈ ಪದ್ಯದಲ್ಲಿ ಪ್ರಧಾನವಾಗಿ ಎದ್ದುಕಾಣುವ ಅಂಶವೆಂದರೆ ಅಂಶಗಣಗಳಿಗೆ ಬದಲಾಗಿ ಮಾತ್ರಾಗಣಗಳು ಬಂದಿರುವುದು. ಪ್ರಥಮ ಸಾಂಗತ್ಯಕೃತಿಯೆಂದು ಭಾವಿಸಲಾಗಿರುವ ಈ ಕಾಲಾಜ್ಞಾನವಚನ ಬಸವೇಶ್ವರರ ಹೆಸರಿಗೆ ಆರೋಪಿಸಲ್ಪಟ್ಟಿರುವ ಪ್ರಕ್ಷಿಪ್ತ ಕೃತಿಯಾಗಿರ ಬಹುದು. ತರುವಾಯ ಕಾಣಿಸಿಕೊಳ್ಳುವ ಸಾಂಗತ್ಯಕಾರ ಕಾಲದ ದೃಷ್ಟಿಯಿಂದ ಸಂದಿಗ್ಧತೆ ಗೊಳಗಾಗಿರುವ ಶಿಶುಮಾಯಣ. ಆತನ ಕೃತಿಗಳು ತ್ರಿಪುರದಹನಸಾಂಗತ್ಯ ಮತ್ತು ಅಂಜನಾಚರಿತ್ರೆ, ಗುಣದ ದೃಷ್ಟಿಯಿಂದಲೂ ಗಾತ್ರದ ದೃಷ್ಟಿಯಿಂದಲೂ ಇವು ಮಿಗಿಲಾಗಿವೆ. ಅಂಜನಾಚರಿತ್ರೆ ಸಾಹಿತ್ಯ ಮತ್ತು ಐತಿಹಾಸಿಕ ದೃಷ್ಟಿಗಳಿಂದ ಉಲ್ಲೇಖಾರ್ಹವಾಗಿದೆ.

16ನೆಯ ಶತಮಾನದಲ್ಲಿ ಶ್ರೇಷ್ಠ ಸಾಂಗತ್ಯಕೃತಿಗಳು ಸೃಷ್ಟಿಯಾದುವು. ಈ ಶತಮಾನದಲ್ಲಿ ಸುಮಾರು ಇಪ್ಪತ್ತೆಂಟು ಸಾಂಗತ್ಯಕೃತಿಗಳು ಹುಟ್ಟಿಕೊಂಡಿವೆ. ಮೂರನೆಯ ಮಂಗರಸನ ನೇಮಿಜಿನೇಶ ಸಂಗತಿ, ಪ್ರಭಂಜನಚರಿತೆ, ಶ್ರೀಪಾಲ ಚರಿತೆಗಳು, ನಂಜುಂಡನ ರಾಮನಾಥಚರಿತೆ, ಕನಕದಾಸರ ಮೋಹನತರಂಗಿಣಿ, ರತ್ನಾಕರವರ್ಣಿಯ ಭರತೇಶವೈಭವ, ರಾಮರಸ ವಿರೂಪಾಕ್ಷ, ಬೊಂಬೆಯ ಲಕ್ಕ, ಹಲಗ, ಓದುವಗಿರಿಯ ಇವರ ಸಾಂಗತ್ಯಕೃತಿಗಳು ಹೆಸರಿಸತಕ್ಕವು. ಈ ಶತಮಾನದ ಮತ್ತೊಂದು ಕೃತಿ ಕಿಕ್ಕೇರಿಯಾರಾಧ್ಯ ನಂಜುಂಡ ವಿರಚಿತ ಭೈರವೇಶ್ವರಕಾವ್ಯ. ಇದು ಛಂದಸ್ಸಿನ ದೃಷ್ಟಿಯಿಂದ ವಿದ್ವಾಂಸರ ಗಮನವನ್ನು ಸೆಳೆದಿದೆ. ಇದರ ಸಂಪಾದಕರು ಈ ಕಾವ್ಯವನ್ನು ಷಟ್ಪದಿಯೆಂದು ನಿರ್ಧರಿಸಿ ಪ್ರತಿಪದ್ಯವನ್ನೂ ಆರು ಪಾದಗಳಾಗಿ ವಿಂಗಡಿಸಿ ಅಚ್ಚುಮಾಡಿದ್ದಾರೆ. ಅವರ ಅಭಿಪ್ರಾಯದಂತೆ ಪ್ರತಿ ಪದ್ಯದ ಒಂದು ಎರಡು ನಾಲ್ಕು ಮತ್ತು ಐದನೆಯ ಪಾದಗಳು ಶರಷಟ್ಪದಿಯಲ್ಲೂ ಮೂರು ಮತ್ತು ಆರನೆಯ ಪಾದಗಳು ಕುಸುಮಷಟ್ಪದಿಯಲ್ಲೂ ರಚಿತವಾಗಿವೆ. ಒಂದು ಪದ್ಯದ ಬೇರೆ ಬೇರೆ ಪಾದಗಳು ಬೇರೆ ಬೇರೆ ಛಂದಸ್ಸಿನಲ್ಲಿ ರಚಿತವಾಗಿರುವುದು ಕನ್ನಡ ಸಾಹಿತ್ಯದಲ್ಲಿ ಎಲ್ಲೂ ಕಂಡುಬರುವುದಿಲ್ಲ. ವಾಸ್ತವವಾಗಿ ಈ ಕಾವ್ಯದ ಛಂದಸ್ಸು ಸಾಂಗತ್ಯ, ಷಟ್ಪದಿಯಲ್ಲ. ಪ್ರತಿ ಪದ್ಯದಲ್ಲೂ ಖಂಡ ಪ್ರಾಸವಿರುವುದೇ ಈ ಭ್ರಾಂತಿಗೆ ಕಾರಣ. ಈ ರೀತಿ ಖಂಡಪ್ರಾಸವನ್ನು ಒಳಕೊಂಡಿರುವ ಕೃತಿಗಳು ಇನ್ನೂ ಕೆಲವು ಕಂಡುಬರುತ್ತವೆ.

17ನೆಯ ಶತಮಾನದಲ್ಲಿ ಸುಮಾರು ಅರವತ್ತು ಸಾಂಗತ್ಯ ಕೃತಿಗಳು ಹುಟ್ಟಿಕೊಂಡಿವೆ. ಸಂಖ್ಯಾದೃಷ್ಟಿಯಿಂದ ಈ ಶತಮಾನದ ಕೃತಿಗಳು ವಿಪುಲವಾಗಿದ್ದರೂ ಕಾವ್ಯಗುಣದ ದೃಷ್ಟಿಯಿಂದ ಹೇಳಿಕೊಳ್ಳುವಂಥವು ಹೆಚ್ಚಾಗಿಲ್ಲ. ಪಂಚಬಾಣನ ಭುಜಬಲಿಚರಿತೆ, ಶಾಂತಮಲ್ಲನ ಅನುಭವಮುದ್ರೆ, ಶೇಷಕವಿಯ ರುಕ್ಮಾಂಗದ ಚರಿತೆ, ತಿರುಮಲಾರ್ಯನ ಕರ್ಣವೃತ್ತಾಂತ ಕಥೆ, ಚಿಕುಪಾಧ್ಯಾಯನ ಯಾದವಗಿರಿ ಮಹಾತ್ಮೆ, ಪಶ್ಚಿಮರಂಗ ಮಹಾತ್ಮೆ, ರಂಗಧಾಮಸ್ತುತಿ ಸಾಂಗತ್ಯ, ರಂಗಧಾಮ ಪುರುಷ ವಿರಹ ಸಾಂಗತ್ಯ, ಚಿತ್ರಶತಕ ಸಾಂಗತ್ಯ, ರಂಗನಾಯಕ ರಂಗನಾಯಕೀ ಸ್ತುತಿ ಸಾಂಗತ್ಯ, ನೇಮಿವ್ರತಿಯ ಸುವಿಚಾರಚರಿತೆ, ಧರಣಿಪಂಡಿತನ ಬಿಜ್ಜಳರಾಯಚರಿತೆ, ಚಂದ್ರಮನ ಕಾರ್ಕಳದ ಗೋಮ್ಮಟೇಶ್ವರಚರಿತೆ, ಪದ್ಮನಾಭನ ಪದ್ಮಾವತೀ ಚರಿತೆ, ಜಿನದತ್ತರಾಯನ ಚರಿತೆ, ಬಸವಕವಿಯ ರೇಣುಕಾಚಾರ್ಯಚರಿತೆ, ಚೆನ್ನಮಲ್ಲೇಶನ ದೀಪದಕಲಿಯರ ಕಾವ್ಯ, ಸಿದ್ಧಕವಿಯ ಸಿರುಮನ ಸಾಂಗತ್ಯ, ಚಾಮಯ್ಯನ ದೇವರಾಜೇಂದ್ರಸಾಂಗತ್ಯ ಇವು ಹೆಸರಿಸತಕ್ಕವು. ಗೋವಿಂದ ವೈದ್ಯನ ಕಂಠೀರವ ನರಸರಾಜವಿಜಯ ಒಂದು ಅಪೂರ್ವಕೃತಿ. ಈ ಕವಿ ವೀರರಸ ಪ್ರತಿಪಾದನೆಗೆ ಸಾಂಗತ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿದ್ದಾನೆ. ಈ ಶತಮಾನದ ವೈಶಿಷ್ಟ್ಯವೆಂದರೆ ಸ್ತ್ರೀಯರು ಸಾಂಗತ್ಯರಚನೆಗೆ ತೊಡಗಿದ್ದು. ಚಿಕ್ಕದೇವರಾಜನ ಆಸ್ಥಾನದಲ್ಲಿದ್ದ ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ಒಂದು ಉತ್ಕೃಷ್ಟ ಕೃತಿ. ಶೃಂಗಾರಮ್ಮ ಪದ್ಮಿನೀ ಪರಿಣಯವನ್ನು ಬರೆದಿದ್ದಾಳೆ.

18 ಮತ್ತು 19ನೆಯ ಶತಮಾನಗಳಲ್ಲಿ ಸಾಂಗತ್ಯದ ಬೆಳಸು ಅಷ್ಟೊಂದು ಹುಲುಸಾಗಿದ್ದಂತೆ ಕಂಡುಬರುವುದಿಲ್ಲ. 18ನೆಯ ಶತಮಾನದಲ್ಲಿ ಕೇವಲ ಹದಿನೇಳು ಸಾಂಗತ್ಯಕೃತಿಗಳೂ 19ನೆಯ ಶತಮಾನದಲ್ಲಿ ಕೇವಲ ಎಂಟು ಸಾಂಗತ್ಯಕೃತಿಗಳೂ ಹೊರಬಂದಿವೆ. 18ನೆಯ ಶತಮಾನದಲ್ಲಿ ಗೋಪಾಲಾಚಾರ್ಯ ಶಿಷ್ಯನ ಜೀವೇಶ್ವರ ಸಾಂಗತ್ಯ, ತತ್ತ್ವದ ಸೊಬಗಿನ ಸೋನೆ, ಗುರುಸಿದ್ದಪ್ಪನ ಮಾದೇಶ್ವರ ಸಾಂಗತ್ಯ, ಚಲುವ ಕವಿಯ ಮಡಿವಾಳಯ್ಯನ ಚರಿತೆ, ದೇಪನ ದೇವಾಂಗಪುರಾಣ, ನೂರೊಂದಯ್ಯನ ಸೌಂದರಕಾವ್ಯ, ಪಾಯಣ್ಣನ ಅಹಿಂಸಾ ಚರಿತೆ, ಪದ್ಮನಾಭನ ರಾಮಚಂದ್ರಚರಿತೆ, ತರಳ ಚಲಪತಿಯ ಗಂಗೆಗೌರಿ ಸಂವಾದ –ಇವು ಮುಖ್ಯವಾದುದು. 1750ರಲ್ಲಿದ್ದ ಹೆಳವನಕಟ್ಟೆ ಗಿರಿಯಮ್ಮ ಚಂದ್ರಹಾಸನ ಕಥೆ, ಉದ್ದಾಳಿಕನಕಥೆ ಮೊದಲಾದ ಭಕ್ತಿ ಮತ್ತು ನೀತಿಪ್ರದವಾದ ಕೃತಿಗಳನ್ನು ರಚಿಸಿದ್ದಾಳೆ. ಮತ್ತೊಬ್ಬ ಕವಯಿತ್ರಿ ಚೆಲುವಾಂಬೆ ವರನಂದಿ ಕಲ್ಯಾಣ ಎಂಬ ಕೃತಿಯನ್ನು ರಚಿಸಿದ್ದಾಳೆ.

20ನೆಯ ಶತಮಾನದಲ್ಲೂ ಸಾಂಗತ್ಯದ ರಚನೆ ಮುಂದುವರಿದುಕೊಂಡು ಬಂದಿದೆ. ಬಿ.ಎಂ.ಶ್ರೀಕಂಠಯ್ಯ, ಬೇಂದ್ರೆ, ಪು.ತಿ.ನರಸಿಂಹಾಚಾರ್, ಎಸ್.ವಿ.ಪರಮೇಶ್ವರಭಟ್ಟ ಮೊದಲಾದವರು ಸಾಂಗತ್ಯದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಪರಮೇಶ್ವರಭಟ್ಟರು ನೀಳವಾದ ತಮ್ಮ ಆತ್ಮವೃತ್ತವನ್ನು ಹೇಳುವುದಕ್ಕೂ ಬಿಡಿ ಮುಕ್ತಕ ರಚನೆಗೂ ಸಾಂಗತ್ಯವನ್ನು ಬಳಸಿದ್ದಾರೆ. ಪರಿಮಾಣ ಮತ್ತು ಯೋಗ್ಯತೆ ಎರಡು ದೃಷ್ಟಿಯಿಂದಲೂ ಇವರ ಸಾಂಗತ್ಯ ಕೃತಿಗಳು ಗಮನಾರ್ಹವಾಗಿವೆ. ಉದಾಹರಣೆಗೆ ಎರಡು ಸಾಂಗತ್ಯ ಪದ್ಯಗಳು:

ಕಳೆವುದು ಸಾಬೂನು ಬಟ್ಟೆಯ ಕೊಳೆಯನು
ಕಳೆವುದು ಸೀಗೆ ಎಣ್ಣೆಯನು
ಪ್ರಾರ್ಥನೆ ತೊಡೆವುದು ಮನದ ಕಿಲ್ಬಿಷವನು
ಆ ಸೋಪು ಸೀಗೆಗಳಂತೆ

(ಚಂದ್ರವೀಧಿ)

ಸ್ಕೂಟರು ಹೆಳವನಿಗೇನುಪಯೋಗವು
ಬೋಳನಿಗೇಕೆ ಬಾಚಣಿಗೆ
ಅರಸಿಕನಿಗೆ ಏಕೆ ಕಾವ್ಯದ ಗಮಕವು
ಟ್ರಾನ್ಸಿಸ್ಟರೇಕೆ ಕೆಪ್ಪನಿಗೆ

(ಇಂದ್ರಚಾಪ)

ಪ್ರಾಚೀನ ಕಾವ್ಯಪರಂಪರೆಯಲ್ಲಿ ಪ್ರಮುಖವಾದ ಚಂಪೂ, ಷಟ್ಪದಿ, ತ್ರಿಪದಿ ಮುಂತಾದ ಛಂದೋಬಂಧಗಳಲ್ಲಿ ನಿರೂಪಿತವಾಗಿದ್ದ ಕಾವ್ಯ, ಶಾಸ್ತ್ರ ಧರ್ಮ ಪ್ರತಿಪಾದನೆ ಮೊದಲಾದ ನಿಗೂಢ ವಿಷಯಗಳು ಜನಸಾಮಾನ್ಯಕ್ಕೆ ಸುಲಭವಾಗಿ ನಿಲುಕುವಂತೆ ಶುದ್ಧ ದೇಶೀಯ ಛಂದಸ್ಸಿನಲ್ಲಿ ಹೊರಬರುವುದಕ್ಕೆ ವಾಹಕವಾದುದು ಎಂದರೆ ಒಂದು ಸಾಂಗತ್ಯ, ಇನ್ನೊಂದು ಷಟ್ಪದಿ (ನೋಡಿ: ಕನ್ನಡದಲ್ಲಿ ಷಟ್ಪದಿ ಕಾವ್ಯಗಳು). ಕನ್ನಡ ಛಂದಶ್ಶಾಸ್ತ್ರದ ಇತಿಹಾಸದಲ್ಲಿ ಬೇರಾವ ಛಂದೋಪ್ರಕಾರಕ್ಕೂ ಇಲ್ಲದ ವೈಶಿಷ್ಟ್ಯ ಸಾಂಗತ್ಯಕ್ಕಿದೆ. ಇದು ತನ್ನ ಗೇಯತೆ ಮತ್ತು ಸೌಲಭ್ಯಗಳಿಂದ ಜನಪ್ರಿಯತೆಯನ್ನು ಗಳಿಸಿರುವುದೇ ಅಲ್ಲದೆ ಕನ್ನಡ ಸಾಹಿತ್ಯಕ್ಕೆ ಮಕುಟಪ್ರಾಯವಾದ ಕೃತಿಗಳನ್ನು ಒದಗಿಸಿದೆ. *

**ಕನ್ನಡದಲ್ಲಿ ಹಾಸ್ಯಸಾಹಿತ್ಯ :** ಹಳಗನ್ನಡ ಸಾಹಿತ್ಯದಲ್ಲಿ ಹಾಸ್ಯವನ್ನೇ ಪ್ರಧಾನವಾಗಿ ವಸ್ತುವಾಗುಳ್ಳ ಕೃತಿರಚನೆಯ ಪ್ರಯತ್ನ ನಡೆದಿಲ್ಲವಾದರೂ ಹಾಸ್ಯದ ಸನ್ನಿವೇಶಗಳು ಕೃತಿಯ ಒಡಲಲ್ಲಿ ಬಂದಾಗ ಕವಿಗಳು ತಮ್ಮ ಹಾಸ್ಯ ಪ್ರೌಢಿಮೆಯನ್ನು ಮೆರೆದಿದ್ದಾರೆ. ಕಾವ್ಯದ ಪ್ರಸ್ತಾವನಾ ಭಾಗದಲ್ಲಿ ಬರುವ ಕುಕವಿನಿಂದೆಯಂಥ ಸಿದ್ಧ ಬರೆಹರೂಪಗಳಲ್ಲಿ, ಶೃಂಗಾರ ಸನ್ನಿವೇಶಗಳಲ್ಲಿ, ರಾಜರ ಸುಖಸಂಕಥಾವಿನೋದಗಳಲ್ಲಿ, ಸಾಮಯಿಕ ಚತುರೋಕ್ತಿಗಳಲ್ಲಿ, ಯುದ್ಧಪ್ರಸಂಗಗಳಲ್ಲಿ, ವೀರರ ಮೂದಲಿಕೆಯ ಮಾತುಗಳಲ್ಲಿ, ವಾಗ್ವಾದದ ಸಂದರ್ಭಗಳಲ್ಲಿ ಇಂಥ ಹತ್ತಾರು ಕಡೆ ಹಾಸ್ಯ ರಚನೆಗೆ ಅವರು ಅವಕಾಶ ಮಾಡಿಕೊಂಡಿದ್ದಾರೆ. ಕನ್ನಡದ ಅಸಂಖ್ಯಾತ ಶಾಸನಗಳಲ್ಲಿ ಹಾಸ್ಯ ಪ್ರಸಂಗಗಳು ಅಲ್ಲಲ್ಲಿ ಮಿಂಚುವುದನ್ನು ಕಾಣಬಹುದು. ಅಂಥ ಒಂದು ಶಾಸನದ ನಾಯಕ ವಿಕ್ರಮಸಾಂತ. ರಣರಂಗದಲ್ಲಿ ಇವನ ಪ್ರತಾಪ ಅಪ್ರತಿಮ. ಈತ ಕೊಂದ ಶತ್ರುಗಳ ಹೆಣಗಳನ್ನುಂಡ ಮರುಳುಗಳಿಗೆ ಹಬ್ಬ, ಅಜೀರ್ಣ. ಅವು ವೈದ್ಯ ಮರುಳಿನ ಬಳಿಗೆ ಹೋದಾಗ ಆ ವೈದ್ಯ ಸೂಚಿಸಿದ ಔಷಧವಾದರೂ ಮರುಳುಗಳಿಗೆ ಮಾತ್ರವೇ ಉಚಿತ. ಅಜೀರ್ಣವಾದಾಗ ಆನೆ ನುಂಗುವುದೇ ಮದ್ದು. ಮರುಳುಗಳು ಹಾಗೆಯೇ ಮಾಡಿದುವು. ರೋಗ ವಾಸಿಯಾಯ್ತು. ವಿಸಂಗತ ವಿಚಾರದಿಂದ ಮಿನುಗುವ ಹಾಸ್ಯಕ್ಕೆ ಇದೊಂದು ಉತ್ತಮ ದೃಷ್ಟಾಂತ.

ಕನ್ನಡದ ಪ್ರಥಮ ಗ್ರಂಥ ಕವಿರಾಜಮಾರ್ಗದಲ್ಲಿ ವ್ಯಾಕರಣ, ಛಂದಸ್ಸು, ಭಾಷೆ ಮುಂತಾದವನ್ನು ಕುರಿತ ವಿವೇಚನೆಯ ನಡುನಡುವೆ ಉದಾಹರಣೆಗಾಗಿ ಕೊಟ್ಟಿರುವ ಪೂರ್ವಕವಿ ಕೃತಿ ಖಂಡಗಳಲ್ಲಿ ಅಲ್ಲಲ್ಲಿ ಬಗೆಬಗೆಯ ಹಾಸ್ಯ ಮಿನುಗುತ್ತದೆ. ಕವಿರಾಜಮಾರ್ಗಕಾರನಿಗೆ ಹಿಂದೆ ಇದ್ದ ಕವಿಗಳು ಹಾಸ್ಯವೇ ಪ್ರಧಾನವಾದ ಕೃತಿಗಳ ರಚನೆ ಮಾಡದಿದ್ದರೂ ಹಾಸ್ಯದ ನಾನಾ ಪ್ರಕಾರಗಳನ್ನವರು ಅರಿಯದವರಾಗಿರಲಿಲ್ಲವೆಂಬುದು ಇವುಗಳಿಂದ ವೇದ್ಯವಾಗುತ್ತದೆ. ಕವಿರಾಜಮಾರ್ಗಕಾರನಿಗೂ ಹಾಸ್ಯವನ್ನು ಗುರುತಿಸುವ ಶಕ್ತಿಯಿತ್ತು. ಅದನ್ನು ಸಾರಿಕೊಳ್ಳುವ ಉದ್ದೇಶವಿಲ್ಲದಿದ್ದರೂ ಅಂಥ ಹಾಸ್ಯ ಪ್ರಸಂಗಗಳ ಮೇಲೆ ಆತ ಬೆರಳಿಟ್ಟು ತೋರಿದ್ದಾನೆ ಎನ್ನಬಹುದು.

ಪಂಪಕವಿಯ ಎರಡೂ ಕಾವ್ಯಗಳಲ್ಲಿ ಹಾಸ್ಯದ ಹಲವಾರು ಪ್ರಸಂಗಗಳಿವೆ. ವಿಕ್ರಮಾರ್ಜುನವಿಜಯ ಕೌರವಪಾಂಡವರ ಕಥೆಯಾದ್ದರಿಂದ ಅಲ್ಲಿ ಬರುವ ಹಲವು ಸನ್ನಿವೇಶಗಳಲ್ಲಿ ಹಾಸ್ಯದ ನಾನಾ ಪ್ರಕಾರಗಳಿಗೆ ಧಾರಾಳವಾಗಿ ಅವಕಾಶವುಂಟು. ಹಾಸ್ಯ ಸನ್ನಿವೇಶಗಳನ್ನೊಳಗೊಂಡ ಇಡೀ ಭಾಗಗಳೂ ಹಾಸ್ಯ ಪಾತ್ರಗಳೂ ಅನೇಕ. ಬರಿಯ ಸರಸವೇ ಅಲ್ಲ, ಕಟಕಿ, ಮೂದಲೆ, ಅಪಹಾಸ್ಯ, ನಿಂದೆ, ಹೊಗೆಯ ನಗೆ – ಎಲ್ಲ ಉಂಟು. ಬಾಲ್ಯದಲ್ಲಿ ಕೌರವ ಪಾಂಡವರು ಮರಗೆರಸೆಯಾಡುತ್ತಿದ್ದಾಗ (ಮರಕೋತಿ) ಮರವೇರಿ ಕುಳಿತು ಹಂಗಿಸಿದ ಕೌರವರಿಗೆ ಬುದ್ಧಿ ಕಲಿಸುವ ಸಲುವಾಗಿ ಭೀಮಸೇನ ಆ ಮರವನ್ನೇ ಅಳ್ಳಾಡಿಸಿ ಅಷ್ಟು ಜನರನ್ನೂ ಕೆಳಗೆ ಉದುರಿಸಿದನಂತೆ. ಈ ಕೊರಚಾಟ ದಾಯಾದಿಮತ್ಸರವನ್ನೇ ಬೆಳೆಸಿದ ಚುಚ್ಚು ಹಾಸ್ಯ. ದ್ರುಪದನ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ದ್ರೋಣಾಚಾರ್ಯ ತಮ್ಮ ಶಿಷ್ಯನಿಂದ ದ್ರುಪದನನ್ನು ಹಿಡಿತರಿಸಿ ಮಂಚದ ಕಾಲಿಗೆ ಕಟ್ಟಿಸಿ ಅವನ ತಲೆಯ ಮೇಲೆ ಕಾಲಿಟ್ಟಾಗಿನ ಸನ್ನಿವೇಶವೂ ರೋಚಕವಾಗಿದೆ. ಇಲ್ಲಿ ಒಂದು ಕಡೆ ದ್ರೋಣರ ಕೆಚ್ಚು ಇನ್ನೊಂದೆಡೆ ದ್ರುಪದನ ಅಸಹಾಯಕತೆ ಕಣ್ಣಿಗೆ ಕಟ್ಟುತ್ತದೆ. ಗೆದ್ದು ತಂದ ಭೀಷ್ಮ ತನ್ನನ್ನು ವರಿಸಲ್ಲೊಲ್ಲದೆ ಹೋದಾಗ ಅಂಬೆಯೆಂಬುವಳು ಸಾಲ್ವನಲ್ಲಿಗೆ ಹೋಗಿ ತನ್ನನ್ನು ವರಿಸಬೇಕೆಂದು ಬೇಡಿದಾಗ ಅವನು ತುಂಟನಗೆ ನಕ್ಕು ಭೀಷ್ಮ ನನ್ನನ್ನು ಓಡಿಸಿ ನಿನ್ನನ್ನು ಕೊಂಡೊಯ್ದ, ಆದ್ದರಿಂದ ನಾನೂ ಅವನ ಹೆಂಡತಿಯೆ ಆದ ಹಾಗಾಯಿತು, ಪೆಂಡಿರ್ ಪೆಂಡಿರೊಳದೆಂತು ಬೆರೆಸುವರಬಲೇ ಎಂದನಂತೆ. ಇದು ನುಡಿಯ ಚಮತ್ಕಾರದಿಂದ ಉದಿಸುವ ಹಾಸ್ಯ. ಇಂಥ ನುಡಿಗಳಲ್ಲಿ ಪಂಪನ ನಿಶಿತ ಹಾಸ್ಯಪ್ರಜ್ಞೆಯನ್ನು ಗುರುತಿಸಬಹುದು. ದ್ರೌಪದೀಸ್ವಯಂವರದ ಸಂದರ್ಭದಲ್ಲಿ ಬರುವ ವಿವಿಧ ರಾಜಕುಮಾರರ ಹಾಸ್ಯಪೂರ್ಣವಾದ ನಡೆವಳಿಕೆಗಳು ಪಂಪನ ಹಾಸ್ಯಪ್ರಜ್ಞೆಗೆ ಸಾಕ್ಷಿಯಾಗಿವೆ. ಆದರೆ ದುರ್ಯೋಧನನನ್ನು ಹಂಗಿಸುವ ದ್ರೌಪದಿಯ ಹಲವಾರು ಮಾತುಗಳು ಶುದ್ಧ ಹಾಸ್ಯವಲ್ಲ. ಅದೂ ಇರಲಿ, ಸತ್ತವರನ್ನೂ ಪಂಪ ನಗಿಸದೆ ಬಿಟ್ಟಿಲ್ಲ. ಯುದ್ಧಭೂಮಿಯಲ್ಲಿ ಮರುಳುಗಳ ಆಟವನ್ನು ನೋಡಿ ವೀರಭಟರ ಪಂದಲೆಗಳು ಮುಗುಳ್ನಗೆ ನಕ್ಕುವಂತೆ.

ರನ್ನನ ಸಾಹಸಭೀಮವಿಜಯವೂ ಮಹಾಭಾರತವನ್ನೇ ಆಧರಿಸಿ ರಚಿಸಿದ ಕೃತಿಯಾದ್ದರಿಂದ ಇದರಲ್ಲಿ ಅಲ್ಲಲ್ಲಿ ಮಿಂಚುವ ಹಾಸ್ಯ ಕೂಡ ಸನ್ನಿವೇಶ ಮತ್ತು ಪಾತ್ರಗಳನ್ನೇ ಅವಲಂಬಿಸಿದ್ದು. ಇಲ್ಲಿಯ ಹಾಸ್ಯ ಗೌಣ. ಆದರೆ ಸಂಸ್ಕೃತ ನಾಟಕಗಳಲ್ಲಿರುವಂತೆ ವಿದೂಷಕನ ಪಾತ್ರವನ್ನು ನಿರ್ಮಿಸಿರುವುದು ರನ್ನನ ಕೃತಿಯ ವೈಶಿಷ್ಟ್ಯ. ಕೌರವ ಪಾಂಡವರ ನಡುವೆ ಸಂಧಾನ ಫಲಿಸಬಹುದೆಂಬ ಸೂಚನೆ ಬಂದಾಗ ಎಲ್ಲರಿಗಿಂತ ಆತಂಕಗೊಂಡವಳು ದ್ರೌಪದಿ. ಸಂಧಿ ಏರ್ಪಡಬಾರದು, ಹಾಗಾದರೆ ಪಾಂಡವರಿಗೆ ನೆಲೆ ತಪ್ಪುತ್ತದೆ, ತನಗೆ ಜೀವನ ಬೇಡವಾಗುತ್ತದೆ ಎಂದು ಆಕೆ ಭೀಮನಲ್ಲಿಗೆ ಬಂದು ಅಳುತ್ತಾಳೆ. ದುರ್ಯೋಧನನ ತೊಡೆ ಮುರಿಯುವುದಾಗಿ ಆಗ ಭೀಮ ಪ್ರತಿಜ್ಞೆಮಾಡಿದ. ಇಂಥ ಗಂಭೀರ ಪರಿಸ್ಥಿತಿಯಲ್ಲಿ ಬರುತ್ತವೆ ವಿದೂಷಕನ ನಗೆಮಾತು. ದೇವಾಸುರ ಯುದ್ಧಕ್ಕೆ ಕರಗಂಬೊತ್ತ ಡಾವರ ಡಾಕಿನಿಯೇ ಪಾಂಚಾಲಿ ಎಂಬುದು ಅವನ ವರ್ಣನೆ. ಅಲ್ಲದೆ

ಕುರುಕುಲಮಂ ನುಂಗಿದೆಯಿನ್ನರೆಬರುಮಂ ನುಂಗಲಿರ್ಪೆ ಕುರುಪತಿಯುಮನಿ
ನ್ನೆರಡನೆಯ ಹಿಡಂಬಿಯನೆಮ್ಮರಸಂ ರಕ್ಕಸಿಯನೆಲ್ಲಿ ತಂದನೊ ನಿನ್ನಂ
ಮಾರುತಿ ನಿಜವೇಣೀಸಂಹಾರಂ ಮಾಡಿದೊಡೆ ಮಾಳ್ಪುದೆನಗಂ ನಿನಗಂ
ಪೂರಣಿಗೆ ಜಠರ ಪಿಠರಕ ಪೂರಣೆಗೇಂ ಮಾಡದೆಂತು ಕರೆವೆಂ ನಿನ್ನಂ

ಎಂದು ಅಳುತ್ತ ಬಂದ ತನ್ನನ್ನು ನಗುತ್ತ ಹೋಗುವಂತೆ ವಿದೂಷಕ ಸಂತೋಷ ಪಡಿಸಿದುದಕ್ಕೆ ಒಡಂಬಟ್ಟು ಚಾರುಹಾಸಿನಿ (ದ್ರೌಪದಿ) ನಿಜನಿವಾಸಕ್ಕೆ ಹೋದಳು. ಇದು ರನ್ನನ ಹಾಸ್ಯವಿಧಾನ. ರೌದ್ರ, ವೀರ ರಸಗಳನ್ನು ಸಮರ್ಥವಾಗಿ ಪ್ರತಿಪಾದಿಸುವಂತೆ, ಹಾಸ್ಯರಸ ಪ್ರತಿಪಾದನೆಯಲ್ಲೂ ರನ್ನನದು ಮೇಲುಗೈ. ಅಭಿನವ ಪಂಪನ (ನಾಗಚಂದ್ರ) ಸಮಕಾಲೀನಳೆನ್ನಲಾದ ಕಂತಿಯೆಂಬ ಕವಯಿತ್ರಿಗೂ ಅಭಿನವಪಂಪನಿಗೂ ನಡೆದ ವಾಗ್ವಾದಗಳು, ಕಂತಿಹಂಪನ ಸಮಸ್ಯೆಗಳೆಂದು ಪ್ರಸಿದ್ಧವಾಗಿರುವ ಈ ಪದ್ಯಗಳಲ್ಲಿ ಸಂಸ್ಕೃತದ ಚತುರೋಕ್ತಿಗಳೂ ನೆನಪಿಗೆ ಬರುತ್ತವೆ. ಇವು ಶ್ಲೇಷೆ ವಿಚಿತ್ರ ಪದಜೋಡಣೆ ಮತ್ತು ಸರಸ ಹಾಸ್ಯಗಳಿಂದ ಕೂಡಿದ್ದು ಓದುಗರಿಗೆ ಹಾಸ್ಯರಂಜನೆಯನ್ನುಂಟುಮಾಡುವ ಗುಣಗಳನ್ನು ಪಡೆದಿವೆ.

ಮತೀಯ ವಿಕಾರ, ಪುರಾಣ ಕಲ್ಪನೆ, ತತ್ತ್ವಕ್ಕೂ ಆಚರಣೆಗೂ ನಡುವಣ ಭೇದ ಇವನ್ನು ಸ್ವಾರಸ್ಯವೂ ಹಾಸ್ಯಪೂರ್ಣವೂ ಆದ ಕಥನರೂಪದಲ್ಲಿ ವರ್ಣಿಸುವ ಕಲೆಯಲ್ಲಿ ಜೈನಕವಿಗಳಾದ ನಯಸೇನ, ಬ್ರಹ್ಮಶಿವ ಮತ್ತು ವೃತ್ತವಿಲಾಸ ಸಮರ್ಥರು. ಇವರ ಕಾವ್ಯಗಳಲ್ಲಿ

ಬರುವುದು ಶುದ್ಧ ಹಾಸ್ಯವಲ್ಲ; ನಂಜುನಗೆ, ವಿಡಂಬನ, ವೈದಿಕಮತದ ಅಂಧಶ್ರದ್ಧೆಯನ್ನು ಅವಹೇಳನ ಮಾಡುವಾಗ ಈ ಬಗೆಯ ನಗೆ ಹೊಮ್ಮುತ್ತದೆ. ಅಲ್ಲಲ್ಲಿ ಲೋಕವೀಕ್ಷಣೆಯ ಫಲವಾದ ಸರಸ ಹಾಸ್ಯವೂ ಹರಿಯುವುದುಂಟು. ಒಬ್ಬ ಮುದುಕನ ಮದುವೆಯ ಹುಚ್ಚನ್ನು ವೃತ್ತವಿಲಾಸ ವರ್ಣಿಸಿರುವ ಪರಿಯಿದು:

ನೆರೆದಲೆ ಜೋಲ್ದ ಪುರ್ಬು ಕುಟಿದಕ್ಷಿಯುಗಂ ತುಟಿಯರ್ತ ಬೋಡಬಾಯ್
ತೆರೆಮಸಗಿರ್ದ ಮೋರೆಯುಡುಗಿರ್ದುರಮಕ್ಕುಳಿಸಿರ್ದ ಪೊಟ್ಟೆ ಮೇ
ಲ್ಪೆರೆಮಸಗಿರ್ದ ಕಾಲ್ ಮುಜಿದ ಬೆನ್ನುಜೆ ಕಂಪಿಪ ಹಸ್ತಮಸ್ತಕಂ
ಪರಿಕಿಸೆ ತಾಪಸಂಗೆನಗೆ ಪೇಸದೆ ಕನ್ನೆಯನ್ನೀಯಬಲ್ಲರೆ

ರುದ್ರಭಟ್ಟ ಕವಿಯ ಜಗನ್ನಾಥ ವಿಜಯದಲ್ಲಿ ಹಾಸ್ಯರಸ ಕೋಡಿವರಿದಿದೆ. ಕೃಷ್ಣನನ್ನು ರಮಿಸಲು ಅವನ ತಾಯಿ ಕಥೆ ಹೇಳಿದ ಪರಿಯಿದು

ಕಥೆಯಂ ಕೇಳೆಲೆ ಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನ
ಸ್ಥಿತನಾದಂ ಗುರು ಪೇಟೆ ಹುಂ ದಶಶಿರಂ ಕೊಂಡೊಯ್ದನಾ ರಾಮನಾ
ಸತಿಯಂ ತಾನೆನೆ ಪೂರ್ವಮಂ ನೆನೆಯುತು ಹುಂಕೊಳ್ಳದುತ್ಕೋಪ ಹುಂ
ಕೃತಿಯಂ ಮಾಡುತುಮೌಂಡುಗರ್ಚಿ ಕಿಸುಗಣ್ಮಿಟ್ಟಚ್ಯುತಂ ರಂಜಿಕುಂ

– ಈ ಮಾತುಗಳಲ್ಲಿ ಹಾಸ್ಯರಸದ ಛಾಯೆಯನ್ನು ಗುರುತಿಸಬಹುದು.

12ನೆಯ ಶತಮಾನದ ಶಿವಶರಣರ ವಚನಗಳು ಮೃದುಹಾಸ್ಯ ಮತ್ತು ವಿಡಂಬನಗಳ ತವರು. ಸಾಮಾನ್ಯರ ಬಗೆಗೂ ನಿಲುಕುವಂತೆ ಚಮತ್ಕಾರದಿಂದ ಹೇಳುವುದರಲ್ಲಿ ವಚನಕಾರರು ಅಸಾಮಾನ್ಯರು. ಏತ ತಲೆವಾಗಿದರೇನು, ಭೃತ್ಯಾಚಾರಿಯಾಗಬಲ್ಲುದೇ ಅಯ್ಯ, ಇಕ್ಕುಳ ಕೈಮುಗಿದರೇನು, ಲಿಂಗವೇದಿಯಾಗಬಲ್ಲದೇ ಅಯ್ಯ ಎನ್ನುವುದು ಬಸವಣ್ಣನವರ ನಗೆಯ ರೀತಿ ನೀತಿ. ಗುಡಿ ಕೆರೆ ಕಟ್ಟಿಸಿ, ಪರಮಾರ್ಥದ ತೃಪ್ತಿ ಪಡೆದನೆನ್ನುತ್ತಿದ್ದ ಸಿದ್ಧರಾಮನನ್ನು ಹಿರಿಯ ಒಡ್ಡನೆಂದು ಪರಿಹಾಸ ಮಾಡಿದ ಅಲ್ಲಮಪ್ರಭುವಿನದು ನಿರ್ದಾಕ್ಷಿಣ್ಯ ದೃಷ್ಟಿ. ಕಲಿಕಂಭನೆಂಬ ಶರಣನಿಗೆ ಭಕ್ತರನ್ನು ನಗಿಸುವುದೇ ಕಾಯಕ. ವಿಕೃತ ವೇಷಭೂಷಣ ಗಳನ್ನು ನೋಡಿ ನಗೆಯಾಡುವುದು ಹಲವು ವಚನಕಾರರ ಸಹಜ ಪ್ರವೃತ್ತಿ. ಹೀಗೆ ವಚನಕಾರರ ಕೃತಿಗಳಲ್ಲಿ ನಗೆ, ಸಹಾನುಭೂತಿ, ಚುಚ್ಚು ನುಡಿಗಳು ಕೂಡಿ ಹರಿದಿವೆ.

ರಗಳೆಗಳನ್ನು ಪ್ರಚಾರಕ್ಕೆ ತಂದು ಹೊಸ ಕಾವ್ಯ ಪ್ರಕಾರವೊಂದರ ಪ್ರವರ್ತಕನಾದ ಹರಿಹರನ ಕೃತಿಗಳು ಭಕ್ತಿಪ್ರಧಾನವಾದರೂ ಅವುಗಳಲ್ಲೂ ಹಾಸ್ಯಕ್ಕೇನೂ ಕೊರತೆಯಿಲ್ಲ. ಬಸವರಾಜದೇವರ ರಗಳೆಯಲ್ಲಿ ಶಿವನ ಒಡ್ಡೋಲಗದ ರಸ ಸನ್ನಿವೇಶದಲ್ಲಿ ಬಂದಿರುವ ಭೃಂಗಿಯ ನಗೆಯ ನೃತ್ಯ ಒಂದು ಉದಾಹರಣೆಯಾಗಿದೆ. ಅವತಾರ ಪುರುಷನಾದ ನಂಬಿಯಣ್ಣನ ರಗಳೆಯಲ್ಲಿ ಅಲ್ಲಲ್ಲಿ ಮಿಂಚುವ ಹಾಸ್ಯ ಇನ್ನೊಂದು ಉದಾಹರಣೆ. ನಂಬಿಯಣ್ಣನಿಗೆ ಆಗಲಿದ್ದ ಮದುವೆಯನ್ನು ತಪ್ಪಿಸಿ, ಆತ ಇನ್ನೊಬ್ಬಳನ್ನು ಲಗ್ನವಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಶಿವನೇ ವೃದ್ಧ ಮಾಹೇಶ್ವರನ ವೇಷ ಧರಿಸಿ ಬಂದಾಗಿನ ಸನ್ನಿವೇಶದ ತುಂಬ ನಗೆಯೇ ಹಾಸು ಹೊಕ್ಕಾಗಿದೆ. ಕಯ್ಯ ಕೊಡೆಯಿಂ, ಮಯ್ಯ ತೆರೆಯಿಂ, ಜೋಲ್ವ ಪುರ್ವಿಂ, ನೇಲ್ವ ತೋಳ ತೊವಲಿಂ, ಇಟ್ಟ ವಿಭೂತಿಯಿಂ, ಊಜಿದ ಯಷ್ಟಿಯ ಕೋಲಿಂ, ಪಿಡಿದ ಕಮಂಡಲದಿಂದಿಳಿದ ಬೆಳುಗಡ್ಡದಿಂ, ನಡುಗುವ ನರೆದಲೆಯಿಂ, ನರೆತು ಸಡಿಲ್ವ ಸರ್ವಾಂಗದಿಂ, ಪುಣ್ಯಂ ಪಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತೊಮ್ಮೊಮ್ಮೆ ಗೊಹೆ ಗೊಹೆಗುಟ್ಟುತುಂ, ಶಿಥಿಲಾಕ್ಷರಂಗಳಿಂ ನಮಃ ಶಿವಾಯಯೆನುತ್ತೆನಲಾಜಿದಂತೆ ನಡುಗುತ್ತುಂ ಬಂದ ಶಿವ ಹೆಂಗಸರ ನಡುವೆ ನಡೆದು, ವಿಪ್ರರ ಸಮೂಹವನ್ನು ಬಳಸಿ, ಮನಸ್ಸಿನಲ್ಲೇ ನಗುತ್ತ ಕೋಲನೂಜುತೆ ಕೆಮ್ಮಿ ಕುಮ್ಮುತ್ತೆ ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳ್ ನಾಲ್ಕೆರಡನೆಡಹಿ ನಮಃಶಿವಾಯ ಎಂಬ ವೃದ್ಧ ಧ್ವನಿ ಪುಟ್ಟೆ ಕೊಡಂಗಳ ಮೇಲೊಡೆಬೀಳ್ದು ಕುಳ್ಳಿರ್ದರ ಮುಖದೊಳಂ, ಕಣ್ಣೊಳಂ ಮಯ್ಯೊಳಂ ತುಪ್ಪಂ ಚೆಲ್ಲೆ ಎಲ್ಲರೆರ್ದುಮಲ್ಲಳಿಗೊಂಡು ಘೊಳ್ಳೆಂದು ಬಿಳ್ದ ವೃದ್ಧ ಮಾಹೇಶ್ವರನಂ ಮುತ್ತಿಕೊಂಡೆತ್ತಲನುವಾಗಿ ಮೆಲ್ಲನೆ ನೆಗಪಿ ಹೊರಗೆ ತಂದು ಬಿಡುತ್ತಾರೆ. ಈ ಸಂದರ್ಭದಲ್ಲಿ ಹಾಸ್ಯರಸ ಹೊನಲಾಗಿ ಹರಿದಿದೆ. ಹೀಗೆ ಮಧುರ ಹಾಸ್ಯಗಳಿಂದ ಹಿಡಿದು ಪರಸಮಯಿಗಳನ್ನು ಕೆರಳಿಸುವ ಚುಚ್ಚುನುಡಿಯವರೆಗೆ ಹಾಸ್ಯದ ನಾನಾ ಪ್ರಕಾರಗಳು ಹರಿಹರನ ಕೃತಿಗಳಲ್ಲಿ ಯಥೇಷ್ಟವಾಗಿವೆ.

ಅಹಿಂಸಾವ್ರತದ ಮಹಿಮೆಯನ್ನು ಸಾರುವುದೇ ಜನ್ನನ ಯಶೋಧರ ಚರಿತೆಯ ಮುಖ್ಯೋದ್ದೇಶವಾದರೂ ಈತ ಸರಸ ಹಾಸ್ಯಗಾರ ಕೂಡ. ವಿಸಂಗತ ಸನ್ನಿವೇಶಗಳನ್ನು ತಂದೊಡ್ಡಿ ಹಾಸ್ಯದ ಬುಗ್ಗೆ ಹೊಮ್ಮಿಸುವುದೇ ಈತ ಇಲ್ಲಿ ಅನುಸರಿಸಿರುವ ವಿಧಾನ. ಅರಮನೆಯ ಸಕಲ ಭೋಗಭಾಗ್ಯಗಳೂ ಅಮೃತಮತಿಗೆ ಇದ್ದರೂ ಆಕೆಗೆ ಪಜೆದಲೆ, ಕುಟಿ ನೊಸಲು, ಅಜೆಗಣ್ಣು, ಹಪ್ಪಳಿಕೆ ಮೂಗೂ ಟೊಂಕ ಮುಜಿದ ಕತ್ತೆಯ ಕಾಲಂ ಮಜೆಯಿಸುವ ಕಾಲೂ ಇದ್ದ ಬಧಿರನಲ್ಲಿ ಕಾಮ, ಅವನಿಗೋ ಇವಳೊಮ್ಮೆ ತಡವಾಗಿ ಹೋದಾಗ ಕ್ರೋಧಕೆರಳಿ ಹೊಡೆಯುತ್ತಾನೆ. ಆಗ ತಡವಾದುದುಂಟು ನಲ್ಲನೆ ಬಿಡು ಮುಳಿಯದಿರ್ ಎಂದು ಆಕೆ ಅಂಗಲಾಚುತ್ತಾಳೆ. ಇದು ಬೇರೆಲ್ಲೂ ಸಿಗದ ವಿಕೃತ ಹಾಸ್ಯ ಸನ್ನಿವೇಶ.

ಷಟ್ಪದಿಯನ್ನು ರಚಿಸಿದ ಕವಿಗಳ ಕೃತಿಗಳಲ್ಲೂ ಅಲ್ಲಲ್ಲಿ ಹಾಸ್ಯಕ್ಕೇನೂ ಕೊರತೆಯಿಲ್ಲ. ವಿಶ್ವಾಮಿತ್ರನ ವಿಚಿತ್ರ ಪ್ರತಿಜ್ಞೆಯಿಂದ ಆರಂಭವಾಗಿ ಹರಿಶ್ಚಂದ್ರನ ಸತ್ಯ ಸ್ಥಾಪನೆಯಲ್ಲಿ ಕೊನೆಗೊಳ್ಳುವ ಹರಿಶ್ಚಂದ್ರ ಕಾವ್ಯದ ಕರ್ತೃವಾದ ರಾಘವಾಂಕನ ಶಬ್ದಚಮತ್ಕೃತಿಯಲ್ಲಿ ಬರುವ ಹಾಸ್ಯ ವಿಶಿಷ್ಟವಾದದ್ದು. ಗರಳಗೊರಳವನರಳಸರಳಂಗೆ ಮುನಿವಂತೆ ಎಂಬ ಮಾತು ಒಂದು ಉದಾಹರಣೆ. ಮಕ್ಕಳು ಮಾಡುವ ಅಕ್ಷರಗಳ ದೊಂಬರಾಟವನ್ನಿಲ್ಲಿ ಕಾಣಬಹುದು. ಇಂಥವನ್ನು ರಾಘವಾಂಕನೇ ಅಲ್ಲದೆ ಅನೇಕರು ಹೊಸೆದಿದ್ದಾರೆ. ಆದರೆ ಹಾಸ್ಯ ಖಂಡಗಳನ್ನೇ ಕಾವ್ಯದಲ್ಲಿ ನೆಯ್ದಿರುವ ಷಟ್ಪದಿಕಾರರಲ್ಲಿ ಕುಮಾರವ್ಯಾಸ ಅಗ್ರಗಣ್ಯ. ಬಕಾಸುರನ ಹೊಟ್ಟೆಬಾಕತನ, ದ್ರೌಪದೀ ಸ್ವಯಂವರದ ಕಾಲದಲ್ಲಿ ಹಾಜರಿದ್ದ ಅರ್ಜುನನ ಬ್ರಾಹ್ಮಣವೇಷ, ಉತ್ತರನ ಪೌರುಷ – ಇವೆಲ್ಲ ಕುಮಾರವ್ಯಾಸನ ಹಾಸ್ಯದೃಷ್ಟಿಯನ್ನು ಪ್ರತಿಪಾದಿಸುವ ಪ್ರಸಂಗಗಳು. ಕಟಕಿ 'ನಿಂದೆ' ಮೂದಲೆಗಳೇ ಮುಂತಾದ ವಿಡಂಬನೆಯ ನಾನಾ ಪ್ರಕಾರಗಳಿಗೂ ಕುಮಾರವ್ಯಾಸನ ಕೃತಿಯಲ್ಲಿ ಕೊರತೆಯಿಲ್ಲ. ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಕಾಣುವುದು ಸಹಾನುಭೂತಿ ಮಿಶ್ರಿತ ತಿಳಿಹಾಸ್ಯ. ಲಘು ವಿಡಂಬನೆ, ತೀವಿದ ಎಳನಗೆಯ ಬೆಳುದಿಂಗಳನ್ನು ಪಸರಿಸುವ ದೇವಪುರ ಲಕ್ಷ್ಮೀರಮಣನ ಆಸ್ಯ ಚಂದ್ರದ ಆನಂದದಲ್ಲಿ ಮಿಂದ ಲಕ್ಷ್ಮೀಶನ ಹಾಸ್ಯ ಅವನಿಗೇ ವಿಶಿಷ್ಟವಾದದ್ದು. ಧರ್ಮರಾಜ ಅಶ್ವಮೇಧ ಮಾಡುವ ಪ್ರಸ್ತಾಪ ಬಂದಾಗ ಭೀಮ–ಕೃಷ್ಣರ ನಡುವೆ ನಡೆಯುವ ಹುಸಿ ಜಗಳ, ಷಡ್ರಸಾನ್ನದ ಆರೋಗಣೆಯಲ್ಲಿರುವ ಕೃಷ್ಣನೊಂದಿಗೆ ಹೆಂಡತಿಯ ಸರಸ ವಿನೋದ, ಬೀಗರು ಪರಸ್ಪರವಾಗಿ ಮಾಡುವ ಹುಚ್ಚು ಹಾಸ್ಯ, ಚಂಡಿಯ ಕಥೆಯ ವಿಧಿಯ ವಿಕೃತ ಹಾಸ್ಯ, ಅಲ್ಲಲ್ಲಿ ಮೊಗದೋರುವ ವ್ಯಂಗ್ಯ, ಕಟಕಿ, ನಿಂದೆ, ಮೂದಲೆ – ಇವು ಲಕ್ಷ್ಮೀಶನನ್ನು ನಗೆ ಗಾರನನ್ನಾಗಿಮಾಡಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಹೇಳಿರುವ ಹಾಗೆ, ಲಕ್ಷ್ಮೀಶ ಹಾಸ್ಯಕ್ಕಾಗಿಯೇ ಆಭಾಸಪೂರ್ಣವಾದ ಪದ್ಯಗಳನ್ನು ಹೆಣೆದು ಸೇರಿಸಿಲ್ಲ. ಅವನ ಕೃತಿಯಲ್ಲಿ ಕಾಣುವುದು ಬಲಾತ್ಕಾರದ ಕಚಕುಳಿಯ ನಗೆಯಲ್ಲ. ಔಚಿತ್ಯ, ಗಾಂಭೀರ್ಯ, ಹಿತಮಿತಗಳಿಂದ ಕೂಡಿದ ಸಹಜಹಾಸ್ಯ.

ಸಾಂಗತ್ಯಕಾರ ರತ್ನಾಕರವರ್ಣಿಯಲ್ಲಿ ಹಾಸ್ಯದ ಒರತೆಯನ್ನೇ ಕಾಣಬಹುದಾಗಿದೆ. ರಾಗರಸಿಕ ಮತ್ತು ವೀತರಾಗರಸಿಕನಾದ ರತ್ನಾಕರವರ್ಣಿ ಸರಸ ವಿನೋದಿ. ಬಿಸುನಗೆ ಯಾವುದು, ತಣ್ಣಗೆ ಯಾವುದು, ಹುಸಿನಗೆ ಮುಗುಳುನಗೆಗಳು, ರಸನಗೆಯೆಳನಗೆಯೆಂಬವೆಂತಿಹವು ಎಂದು ಈತ ಬಲ್ಲ. ಕುಸುಮಾಜಿಯ ತಂಗಿ ಮಕರಂದಾಜಿಗೂ ಭರತನಿಗೂ ನಡೆಯುವ ಸಂಭಾಷಣೆ, ಗಿಳಿನುಡಿಯ ಮಾತುಗಳು ಮೊದಲಾದ ಸಂದರ್ಭಗಳಲ್ಲಿ ಹಾಸ್ಯ ರಸ ತನಿಯಾಗಿದೆ. ಇನ್ನೊಂದು ಸನ್ನಿವೇಶ: ಭರತೇಶನೊಮ್ಮೆ ಬಾಹುಬಲಿಯ ಮೇಲೆ ಯುದ್ಧಕ್ಕೆ ಹೊರಟಿದ್ದ. ಅವನ ಸೈನಿಕರಲ್ಲಿ ಕೆಲವರು ಅವನನ್ನು ಹೊಗಳಿಯೂ ಇನ್ನು ಕೆಲವರು ಹಗುರವಾಗಿಯೂ ಮಾತಾಡಿಕೊಳ್ಳುತ್ತಿದ್ದರು. ಭರತನಿಗೆ ಈ ವಿಷಯ ಕಿವಿಗೆ ಬಿದ್ದು ಆತ ಕೋಪಗೊಳ್ಳಲಿಲ್ಲ. ಅವರಿಗೆ ತನ್ನ ಶಕ್ತಿಯ ಮನವರಿಕೆ ಮಾಡಲು ಒಂದು ಉಪಾಯ ಹೂಡಿದ. ಕಿರುಬೆರಳಿಗೆ ಬೇನೆ ಬಂದು ಅದು ಡೊಂಕಾದಂತೆ ನಟಿಸಿದ. ಯಾರ್‍ಯಾರು ಏನೇನು ತಂತ್ರಮಂತ್ರ ಮದ್ದು ಮಾಡಿದರೂ ವಾಸಿಯಾಗಲಿಲ್ಲ. ಜಟ್ಟಿಗಳು ಚಿನ್ನದ ಸರಪಳಿ ಕಟ್ಟಿ ಜಗ್ಗಿದರೂ ಬೆರಳು ನೆಟ್ಟಗಾಗಲಿಲ್ಲ. ಒಮ್ಮೆ ಹೀಗೆ ಜಗ್ಗುತ್ತಿದ್ದಾಗ ವಿನೋದಕ್ಕಾಗಿ ಭರತೇಶ ಬೆರಳು ಸಡಿಲಬಿಟ್ಟ. ಸರಪಳಿ ಹಿಡಿದೆಳೆಯುತ್ತಿದ್ದವರೆಲ್ಲ ದಿಂಡುರುಳಿ ಹೊರಳಿದರು. ಎಲ್ಲರಿಗೂ ನಗೆ. ಭರತೇಶನೆಂಥ ಪರಾಕ್ರಮಿಯೆಂದು ಎಲ್ಲರಿಗೂ ದಿಗ್ಭ್ರಮೆ. ಇದು ರತ್ನಾಕರನ ಹಾಸ್ಯದ ಒಂದು ತುಣುಕು.

ತ್ರಿಪದಿಯನ್ನು ಅಪ್ರತಿಮವಾದ ರೀತಿಯಲ್ಲಿ ಬಳಸಿರುವ ಸರ್ವಜ್ಞನ ಹಾಸ್ಯದ್ದು ನಿರ್ದಾಕ್ಷಿಣ್ಯದ ಬಣ್ಣ. ಬೊಮ್ಮವನು ಅರಿದಿಹರೆ ಸುಮ್ಮನಿದ್ದಿರಬೇಕು, ಬೊಮ್ಮವನರಿದು ಉಸುರಿದರೆ ಕಳಹೋಗಿ ಕೆಮ್ಮಿದಂತಕ್ಕು ಹೋಲಿಕೆಯ, ಸಹಜ ಹಾಸ್ಯವಿದೆ. ಗಣಿಕೆಯ ಮೂಗಿನಲಿ ಮೊಣಕಾಲು ಹುಟ್ಟಿಹುದು ಎಂಬಲ್ಲಿ ತೃಣನುಂಡು ನೀರಣುಗಲೊಲ್ಲದಂತದಕೆ ಎಣಿಕೆಯಿಲ್ಲ ಎಂಬುದರಲ್ಲಿ ಒಗಟೆಯ ಚಮತ್ಕಾರವನ್ನು ಕಾಣಬಹುದು. ಆಲದಾ ಬಿಳಲಂತೆ ಜೋಲು ಜಡೆಗಳ ಬಿಟ್ಟು ನಾಲಗೆ, ಶೌಪ ಶುದ್ಧಿಲ್ಲ ಮರಿನಾಯ ಬಾಲದಂತಕ್ಕು– ಎಂಬುದು ಬೂಟಾಟಿಕೆಯ ಜನರ ಬಗ್ಗೆ ಹಾಸ್ಯಬೆರೆತ ಭರ್ತ್ಸನೆ. ತೊಗೆಯಿಲ್ಲದೂಟ ಸಂಪಿಗೆಯಿಲ್ಲದೆಲೆತೋಟ ನಗೆಯಿಲ್ಲದವಳ ಒಡನಾಟ ಬೆರಣಿಯ ಹೊಗೆಯ ಕುಡಿದಂತೆ – ಎಂಬುದು ಸರ್ವಜ್ಞನ ನಿರ್ಣಯ. ನಗೆಯ ಎಲ್ಲ ಮೆಟ್ಟಿಲುಗಳನ್ನೂ ವಿಡಂಬನೆಯ ಎಲ್ಲ ಸೋಪಾನವನ್ನೂ ನಾವು ಸರ್ವಜ್ಞನಲ್ಲಿ ಕಾಣಬಹುದು.

ಹರಿದಾಸ ಸಾಹಿತ್ಯ ತರಂಗಿಣಿಯಲ್ಲಿ ಹಾಸ್ಯದ್ದೇ ಒಂದು ದೊಡ್ಡ ಕವಲು. ಹಾಸ್ಯ ವಿಡಂಬನಗಳ ಎಲ್ಲ ಪ್ರಕಾರಗಳೂ ಇಲ್ಲಿ ಮೈವೆತ್ತಿವೆ. ರಾಗಿ ತಂದೀರ್‍ಯಾ, ಭಿಕ್ಷಕ್ಕೆ ರಾಗಿ ತಂದೀರ್‍ಯಾ? ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು ಎಂಬುದರಲ್ಲಿನ ಶ್ಲೇಷೆ ಅಸದೃಶ. ತುರುಕರು ಕರೆದರೆ ಉಣಬಹುದಣ್ಣಾ, ತುರುಕರು ಕರೆದರೆ ಅತಿ

ಪುಣ್ಯವಣ್ಣಾ ಎಂಬುದರಲ್ಲಿ ಧ್ವನಿಯೂ ಉಂಟು. ನಿಂದಕರಿರಬೇಕು, ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧವೋ ಹಾಂಗೆ ಎನ್ನುವ ಮಾತಿನಲ್ಲಿ ಚುರುಕು ಹೆಚ್ಚು. ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ ಎಂಬುದು ಸರಸ ಬೆರೆತ ಸವಾಲು. ದಾಸರ ಹಾಸ್ಯ ಬಲು ವಿಸ್ತಾರ.

ಕನ್ನಡದ ಹಳೆ–ಹೊಸ ಹುಟ್ಟುಗಳ ನಡುಗಡ್ಡೆಯ ಮೇಲೆ ನಿಂತಿರುವ ಮುದ್ದಣ ಹಾಸ್ಯಪ್ರಿಯ. ಬಾಳಿನ ನೋವನ್ನು ನುಂಗಿ ನಗುವುದು ಇವನ ಸ್ವಭಾವ. ರಾಮಾಶ್ವಮೇಧದ ಪುಟಪುಟದಲ್ಲೂ ಪುಟಿಯುವ ಮುದ್ದಣ ಮನೋರಮೆಯರ ಸರಸ ಸಂಭಾಷಣೆಯಲ್ಲಿ ಮೃದುಹಾಸ್ಯವನ್ನು ಯಥೇಷ್ಟವಾಗಿ ಸವಿಯಬಹುದು. ಅನ್ಯಥಾ ನೀರಸವೆನಿಸಬಹುದಾದ ಆ ಗದ್ಯಕಾವ್ಯಕ್ಕೆ ಹೊಸತನದ ಮೆರುಗು ತಂದಿರುವುದು ಹಾಸ್ಯವೇ, ಅದರೊಳಗೂ ಭವತಿ ಭಿಕ್ಷಾಂದೇಹಿ ಎಂಬ ಸಪ್ತಾಕ್ಷರೀ ಮಂತ್ರದ ಪ್ರಸಂಗದಲ್ಲಿ ಬೆಡಗೂ ಚಮತ್ಕಾರವೂ ಇವೆ; ಆಧುನಿಕ ಸಣ್ಣಕಥೆಯಲ್ಲಿನಂತೆ ಕೊನೆಯ ವರೆಗೂ ಬೆಳೆಸುವ ಕುತೂಹಲದ ಮಾದರಿಯ ತಂತ್ರವಿದೆ. ಮುದ್ದಣ ತನ್ನ ಪ್ರಿಯತಮೆಯಾದ ಮನೋರಮೆಯನ್ನು ಕೊನೆಯ ತನಕವೂ ಕಾಡಿಸಿ ಯಥಾಸಾವಕಾಶವಾಗಿ ಆಕೆಯ ಕುತೂಹಲವನ್ನು ತಣಿಸುವ ಉತ್ತರ ನೀಡಿದಾಗ ಹುಸಿಗೋಪ ಬೆರೆತ ನಗುವಿನ ಅಲೆಗಳೇ ಅಪ್ಪಳಿಸುತ್ತವೆ. ಇಂಥ ಹಾಸ್ಯದಲ್ಲಿ ಮುದ್ದಣನಿಗೆ ಯಾರೂ ಸಾಟಿಯಿಲ್ಲ.

ಜನಪದ ಸಾಹಿತ್ಯಕ್ಕೂ ಸರಸಹಾಸ್ಯಕ್ಕೂ ನಿತ್ಯಗಂಟು. ದೇಹದ ವಿಕಾರ, ಸನ್ನಿವೇಶದ ವೈಪರೀತ್ಯ, ಲೋಕಾಚಾರ, ಸಂಸಾರದ ಸೊಬಗು ಮುಂತಾದ ನಾನಾ ಸಂದರ್ಭಗಳಿ ಗೊಪ್ಪುವ ಹಾಸ್ಯದ ಹಾಡುಗಳು ಇಲ್ಲಿ ಅಸಂಖ್ಯಾತ. ಗಾದೆಗಳಲ್ಲಂತೂ ನಗೆಯ ನಾನಾ ಪ್ರಕಾರಗಳನ್ನೇ ಕಾಣಬಹುದು. ಅಂಗೈಯಲ್ಲಿ ಕೈಲಾಸವನ್ನು ತೋರುವ ಸಾಹಸಪ್ರಯತ್ನಗಳಿವು.

ಹಿಂದಿನ ಕೃತಿಕಾರರಲ್ಲಿ ಹಾಸ್ಯ ಅಲ್ಲೊಮ್ಮೆ ಇಲ್ಲೊಮ್ಮೆ ಇಣುಕು ಹಾಕುತ್ತಿತ್ತು ಅಷ್ಟೆ. ನವರಸಗಳಲ್ಲಿ ಹಾಸ್ಯವೂ ಒಂದಾದ್ದರಿಂದ, ಜೀವನದಲ್ಲಿ ಹಾಸ್ಯವೂ ಬೆರೆತಿರುವುದರಿಂದ ಅದೂ ಪ್ರಕಟವಾಗಬೇಕಾದ್ದು ಅನಿವಾರ್ಯ. ಆದರೆ ಶೃಂಗಾರವೀರಕರುಣಾದ್ಭುತಗಳೇ ಮುಂತಾದ ರಸಗಳನ್ನು ಮುಖ್ಯೋದ್ದೇಶವಾಗಿಟ್ಟುಕೊಂಡು ರಚಿಸಿದ ಕೃತಿಗಳು ಇದ್ದಂತೆ ಹಾಸ್ಯ ಪ್ರಧಾನವಾದ ಕೃತಿಗಳು ಹಿಂದೆ ಇರಲಿಲ್ಲವೆಂದೇ ಹೇಳಬೇಕು. ಹಾಸ್ಯಭರಿತ ಸನ್ನಿವೇಶವನ್ನೋ ವ್ಯಕ್ತಿಯನ್ನೋ ಕಂಡು ಚಿತ್ರಿಸುತ್ತಿದ್ದುದುಂಟಾದರೂ ಪ್ರತಿಯೊಂದು ಸನ್ನಿವೇಶದಲ್ಲೂ ಹಾಸ್ಯವನ್ನು ಕಾಣುವ ದೃಷ್ಟಿಗೇ ಅಷ್ಟಾಗಿ ಪ್ರಾಧಾನ್ಯ ನೀಡಲಿಲ್ಲ. ಕಾದಂಬರಿ, ಕಥೆ, ಹರಟೆ, ಕವನಗಳೇ ಮುಂತಾದವು ಹಲವು ಪ್ರಕಟವಾಗಿವೆ. ದಿನ, ವಾರ, ಮಾಸಪತ್ರಿಕೆಗಳೂ ಹಲವು ಪ್ರಕಟನ ಸಂಸ್ಥೆಗಳೂ ಅಚ್ಚಿನ ಮನೆಯ ನೆರವಿನಿಂದ ಹಲವಾರು ಲೇಖಕರ ಕೃತಿಗಳನ್ನು ಹೊರ ತರುತ್ತಿರುವ ಈ ಕಾಲದಲ್ಲಿ ಇವನ್ನೆಲ್ಲ ವೈಜ್ಞಾನಿಕವಾಗಿ ವಿಂಗಡಿಸಿ, ವಿಶ್ಲೇಷಣೆ ಮಾಡಿ ವಿವೇಚನೆ ನಡೆಸುವುದು ಕಷ್ಟ ಸಾಧ್ಯವೇ ಸರಿ. ಇಲ್ಲಿ ಮುಖ್ಯವಾಗಿ ಪ್ರಮುಖ ಹಾಸ್ಯ ಲೇಖಕರನ್ನೂ ಅವರ ಹಾಸ್ಯ ಪ್ರವೃತ್ತಿಗಳನ್ನೂ ಗುರುತಿಸಬಹುದಾಗಿದೆ.

ಆರ್. ನರಸಿಂಹಾಚಾರ್ಯ

ಕನ್ನಡದಲ್ಲಿ ಮೊಟ್ಟ ಮೊದಲು ಸ್ವತಂತ್ರ ಕಾದಂಬರಿಯನ್ನು ಸೃಷ್ಟಿಸಿದವರಲ್ಲಿ ಎಂ.ಎಸ್. ಪುಟ್ಟಣ್ಣನವರೊಬ್ಬರು. ಇವರ ಮಾಡಿದ್ದುಣ್ಣೋ ಮಹಾರಾಯದಲ್ಲಿ ಲೇಖಕರಿಗೆ ಹಾಸ್ಯ ಹಸ್ತಗತವಾಗಿದೆ. ಸ್ವಭಾವ ವೈಚಿತ್ರ್ಯ, ಕುರೂಪ, ಅಸಂಬದ್ಧ ಸನ್ನಿವೇಶ ಇವುಗಳ ಸುತ್ತಲೂ ಹಾಸ್ಯದ ತರತಮಗಳೂ ವ್ಯಂಗ್ಯವೈವಿಧ್ಯಗಳೂ ಮಾಲೆಮಾಲೆಯಾಗಿ ಹಬ್ಬಿವೆ. ಈ ಕಾದಂಬರಿಯ ಒಂದು ಪಾತ್ರವಾದ ನಕಲಿ ನಾರಣಪ್ಪನಿಗೆ ನಗಿಸುವುದೇ ನಿರಂತರ ಹವ್ಯಾಸ. ಆತನ ಪಂಚಾಂಗ ವೀಕ್ಷಣೆಯ ಪ್ರಮಾದ ಒಂದು ಉದಾಹರಣೆ. ಪ್ರಮಾದ ಸಂವತ್ಸರವಾದ್ದರಿಂದ ಪ್ರಮಾದಗಳು ನಡೆಯುವಂಥಾದ್ದು; ಮಾರ್ಗಶಿರ ಬಹುಳ ಪಂಚಮಿಯಾದ್ದರಿಂದ ಮಾರ್ಗ ದಾರಿಯಲ್ಲಿ ಹೋಗತಕ್ಕವರ ತಲೆಯ ಬಹುಳ ಎಂದರೆ ವಿಶೇಷವಾಗಿ, ಪಂಚಮಿ ಎಂದರೆ ಪಂಚತ್ವ ಅಥವಾ ಮರಣವನ್ನು ಹೊಂದುವುದು. ಇಲ್ಲಿ ಶಬ್ದಗಳನ್ನೇ ಅರೆದು, ವಿಚಿತ್ರಾರ್ಥಗಳನ್ನು ಹೊರಡಿಸಿ, ಹಾಸ್ಯವನ್ನು ಹಿಂಡುವ ಪ್ರಯತ್ನವನ್ನು ಕಾಣಬಹುದು. ಆದರೂ ಆಧುನಿಕ ಕನ್ನಡ ಗದ್ಯಸಾಹಿತ್ಯದಲ್ಲಿ ಮೊಟ್ಟ ಮೊದಲಿಗೆ ಹಾಸ್ಯಕ್ಕೂ ಎತ್ತರದ ಸ್ಥಾನವನ್ನು ಕಲ್ಪಿಸಿಕೊಟ್ಟ ಕೀರ್ತಿ ಪುಟ್ಟಣ್ಣನವರದು.

ಆರ್.ನರಸಿಂಹಾಚಾರ್ಯರು ಕರ್ಣಾಟಕ ಕವಿಚರಿತೆಗಷ್ಟೇ ಪ್ರಸಿದ್ಧರಲ್ಲ. ಅವರು ಬರೆದ ನಗೆಗಡಲಿನ ವಸ್ತುವೇನೆಂಬುದು ಅದರ ಹೆಸರಿನಲ್ಲೆ ವ್ಯಕ್ತವಾಗುತ್ತದೆ. ಗಾಂಪರೊಡೆಯರ ಮತ್ತು ಅವರ ಶಿಷ್ಯರ ಪ್ರತಾಪಗಳಲ್ಲಿ ಕಾಣುವುದು ಹುಚ್ಚು ಹಾಸ್ಯ, ಚುಚ್ಚು ಹಾಸ್ಯ, ಪೆದ್ದು ತನದ ಲೇವಡಿ. ಜನಪದ ಸಾಹಿತ್ಯದಲ್ಲಿಯ ಜಂತದಕ್ಕಯ್ಯ ಕಥೆ, ಮಂಕುಭಟ್ಟನ ಕಥೆ, ಕಪಿ ಹಾರಿದ ಕಥೆ, ಹೆಂಟೆಗೊದ್ದನ ಕಥೆ ಮುಂತಾದುವುಗಳ ಪರಂಪರೆಗೆ ಇದು ಸೇರಿದ್ದೆನ್ನಬಹುದು. ಅಂತೆಯೇ ತೆನಾಲಿ ರಾಮಕೃಷ್ಣ ಮತ್ತು ಬೀರಬಲ್ಲನದೆನ್ನಲಾದ ಹಲವಾರು ಕಥೆಗಳು ಇಂಥ ಹಾಸ್ಯವನ್ನು ಕನ್ನಡಿಸಿವೆ. ಇವು ಸಂಬಂಧಪಟ್ಟ ವ್ಯಕ್ತಿಗಳನ್ನು ಕುರಿತ ಚತುರೋಕ್ತಿ ಸನ್ನಿವೇಶಗಳು.

ಪಂಜೆ ಮಂಗೇಶರಾಯರು ಮಕ್ಕಳಿಗೆಂದು ಬರೆದ ಕಥೆಗಳಲ್ಲಿ ತಿಳಿಹಾಸ್ಯವನ್ನು ಕಾಣಬಹುದು. ಹಳೆಯ ಸಬ್ ಎಸಿಸ್ಟಾಂಟನ ಸುಳ್ಳು ಡೈರಿಯಿಂದ ಎಂಬ ಇವರ ಒಂದು ಕಥೆ ಅತ್ಯುತ್ತಮ ಹಾಸ್ಯಕಥೆಗೆ ನಿದರ್ಶನವಾಗಿದೆ. ಶ್ರೀನಿವಾಸಕೃತ ರಂಗಪ್ಪನ ಕಥೆಗಳಂಥ ಹಲವಾರು ಕಥಾ ಶ್ರೇಣಿಗಳು ತಿಳಿ ಹಾಸ್ಯದ ಹೊನಲುಗಳು. ಈ ಹಾಸ್ಯ ಹಲವು ವೇಳೆ ಕಣ್ಣೀರು ಬೆರೆತಿದ್ದೂ ಆಗಿರುವುದುಂಟು. ವಿಡಂಬನೆಗೂ ಇಲ್ಲಿ ಕೊರತೆಯಿಲ್ಲ. ಕಥನ ಕವನಗಳಲ್ಲೂ ಭಾವಗೀತೆಗಳಲ್ಲೂ ಮಿಂಚುವುದು ಲಲಿತ ಮಧುರ ಹಾಸ್ಯ, ಶೀಲವಂತ ಜೀವಿ ಕಾಣುವ ಚೊಕ್ಕನುಡಿ. ಸನ್ನಿವೇಶ ಸಂಭಾವಿತರಲ್ಲೂ ಸುಳಿಯುವ ದುಷ್ಟ ಆಲೋಚನೆಗಳಿಗೆ ಯಥೋಚಿತ ಮುಚ್ಚುಮರೆ. ತಡೆತಡೆದು ಪುಟ್ಟ ಕಂತುಗಳಲ್ಲಿ ಹೊರಬೀಳುವ ನಗೆಯಿಂದ ಅಜೀರ್ಣವೆಂದೂ ಸಾಧ್ಯವಿಲ್ಲ.

ಕುವೆಂಪು ಅವರ ವಿಪುಲ ಸಾಹಿತ್ಯದಲ್ಲಿ ಹಾಸ್ಯಕ್ಕೇನೂ ಕೊರತೆಯಿಲ್ಲ. ಇವರ ಕಥೆ, ಕವನ, ಕಾದಂಬರಿ, ಸಣ್ಣಕಥೆ, ಪ್ರಬಂಧ, ಮಹಾಕಾವ್ಯಗಳಲ್ಲಿ ಹಾಸ್ಯ ರಸ ಹೆಚ್ಚು ಕಾವ್ಯಾತ್ಮಕವಾಗಿ ಪ್ರತಿಪಾದಿತವಾಗಿದೆ. ಮಲೆನಾಡಿನ ಚಿತ್ರಗಳು ಹಾಸ್ಯ ಕುತೂಹಲಗಳನ್ನು ಕೊನೆಯವರೆಗೂ ಕಾದಿರಿಸುವ ಪ್ರಬಂಧ ಸಂಕಲನ. ಬೊಮ್ಮನಹಳ್ಳಿ ಕಿಂದರಿಜೋಗಿ, ಮಕ್ಕಳಿಗಷ್ಟೇ ಅಲ್ಲ ದೊಡ್ಡವರಿಗೂ ಹಾಸ್ಯರಸವನ್ನು ಉಣಬಡಿಸುತ್ತದೆ. ಹೆಂಡತಿ ಹೊಲಿಯುತ್ತಿರುವ ಅಂಗಿಯನ್ನು ಕಂಡಾಗ ಕವಿ ಆಡುವ ಮಾತುಗಳು ಈ ರೀತಿ ಇವೆ:

ಬರಲಿರುವ ಕಂದಂಗೊ
ಬಂದ ಕಂದಂಗೊ
ಹೊಲಿಯುತಿರುವೀ ಅಂಗೀ
ಅರಿಗರ್ಧಾಂಗಿ

– ಈ ಮಾತುಗಳು ಕವಿಯ ಹಾಸ್ಯವಿಧಾನ ಯಾವ ಮಟ್ಟದ್ದು ಎಂಬುದಕ್ಕೆ ಹೆಗ್ಗುರುತಾಗಿದೆ. ಮಹಾಕಾವ್ಯವಾದ ಶ್ರೀ ರಾಮಾಯಣ ದರ್ಶನಂನಲ್ಲಿ ಹಾಸ್ಯಕ್ಕೆ ಮೀಸಲಾದ ಪುಟಗಳ ಸಂಖ್ಯೆಯಂತೂ ಲೆಕ್ಕವಿಲ್ಲ. ನೆಲದಂತರಾಳದಲ್ಲಿ ಹರಿಯುತ್ತಿರುವ ಹೊನಲು ಅಲ್ಲಲ್ಲಿ ಮೇಲೆದ್ದು ಬಂದಂತೆ ಈ ಕಾವ್ಯದುದ್ದಕ್ಕೂ ಕಂಗೊಳಿಸುವ ಹಾಸ್ಯ ಪ್ರಕಾರಗಳನ್ನೆಲ್ಲ ಪಟ್ಟಿಮಾಡಿದರೆ, ಈ ಕ್ಷೇತ್ರದಲ್ಲೂ ಕವಿಯ ಪ್ರತಿಭೆ ಎಂಥದೆಂದು ವೇದ್ಯವಾಗುತ್ತದೆ. ಆಗಸದ ಚಂದ್ರ ಬೇಕೆಂದು ಹಟ ಹಿಡಿದು ಅಳುತ್ತಿದ್ದ ಪುಟ್ಟ ರಾಮನ ಮುಖಕ್ಕೆ ಮುದುಕಿಯೊಬ್ಬಳು ಕನ್ನಡಿಯನ್ನು ಹಿಡಿದು ಚಂದ್ರನನ್ನು ತೋರಿಸಿದ ಪ್ರಸಂಗದ ತಿಳಿಹಾಸ್ಯ, ಆ ಕನ್ನಡಿಯಂತುಟಾಕೆಯಿಂ ಪ್ರತಿಬಿಂಬರೀತಿಯಂ ಕೈಗೊಂಡಳಾ ಜನದ ಮನದ ವಿಕೃತಿಗೆ ತನ್ನ ಮೆಯ್ ವಿಡಂಬನಮಪ್ಪವೋಲ್ ಎಂಬುದಾಗಿ ಕವಿ ಹೇಳಿರುವ ಮಂಥರೆಯ ವಿಕೃತಿ ವಕ್ರತೆಯ ರೂಪಿನ ಬಣ್ಣನೆಯಿಂದ ಉದ್ಭವಿಸುವಂಥ ವಿಕಟಹಾಸ್ಯ, ರಾಮಲಕ್ಷ್ಮಣಸೀತೆಯರು ಚಿತ್ರಕೂಟದಲ್ಲಿದ್ದಾಗ ಬರುವ ನಗೆಗೆ ಮೀರಿದುದಾ ಧೂಮದೃಶ್ಯಂ ಎಂಬ ಸನ್ನಿವೇಶ – ಇವೆಲ್ಲ ಹಾಸ್ಯರಂಜಕವಾಗಿವೆ. ಇನ್ನು ಅವರ ಸರಳರಗಳೆಗಳಲ್ಲೂ ಕಥನಕವನಗಳಲ್ಲೂ ಭಾವಗೀತೆಗಳಲ್ಲೂ ಹಾಸ್ಯ ತೊರೆಯಾಗಿ ಹರಿದಿದೆ, ಮಡುಗಟ್ಟಿ ನಿಂತಿದೆ.

ಬೇಂದ್ರೆಯವರ ಹಾಸ್ಯದ್ದು ಇನ್ನೊಂದು ಪೀಳಿಗೆ. ಅದರಲ್ಲಿ ಅವರ ವ್ಯಕ್ತಿತ್ವದ ಮುದ್ರೆ ಹೆಚ್ಚು ನಿಚ್ಚಳ. ಬಿಚ್ಚುಮನದಿಂದ ಹಾಸ್ಯ ಕೊಚ್ಚುವುದು ಅವರ ಸ್ವಭಾವ. ಹಲಮೊಮ್ಮೆ ಅದು ವಾಚ್ಯವೂ ಹರಿತವೂ ಆದೀತು. ಜನಪದದ ಮೆರುಗು ಈ ಹಾಸ್ಯದ ಇನ್ನೊಂದು ವೈಶಿಷ್ಟ್ಯ. ಹುಬ್ಬಳ್ಳಿಯವನಿನ್ನೂ ಬರಲಿಲ್ಲವೆಂದು ಕಾದು ಕುಳಿತ ಹೆಣ್ಣು, ಬಳಿಯಲ್ಲಿ ನಲ್ಲನಿಲ್ಲದಾಗ ಕೈ ಗಲ್ಲ ಹಚ್ಚಿ ಕೂತ ಕನ್ನೆ ಮುಂತಾದ ಕವನಗಳ ಕಾಮಕಸ್ತೂರಿಯ ಸೊನೆ ಬೆರೆತ ನಗೆಯಂತಿರಲಿ, ಹರಟೆಗಳಲ್ಲೂ ಅಣಕ ವಾಡುಗಳಲ್ಲೂ ಹರಿದಿರುವ ಹಾಸ್ಯಕ್ಕೂ ತುಂಬುಹೊಳೆಯ ಆವೇಶ. ಅವರ ನಿರಾಭರಣ ಸುಂದರಿಯೆಂಬುದು ಬಹುತೇಕ ಹಾಸ್ಯ ಬರೆಹಗಳೇ ಇರುವ ಪುಸ್ತಕ. ಕುಯ್ಗುಡುವ ಭಟ್ಟರ ನಾಯಿಯ ವರ್ಣನೆ, ಕೇರಿಗೊಂದು ಕೆಮ್ಮುವ ಮುದುಕಿ ಇರಲೇಬೇಕೆಂಬ ವಿಚಿತ್ರ ವಾದ, ಈ ಜಗದ ಶುದ್ಧೀಕರಣಕ್ಕೆಂದು ಧ್ವಜವೆತ್ತಿ ಮೇಲಕ್ಕೆ ಹೊರಟಿರುವ ಕಸಪೊರಕೆ, ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಕವನವನ್ನು ತಾವೇ ಅಣಕಿಸಿ ಬೆಕ್ಕು ಹಾರುತಿದೆ ನೋಡಿದಿರಾ? ಎಂದು ಕಟ್ಟಿದ ಪದ್ಯದ ಅಪ್ಪಟ ಹಾಸ್ಯ ಇವುಗಳದೊಂದು ತೂಕವಾದರೆ, ಅವರ ಹುಚ್ಚಾಟ ಮತ್ತು ನಗೆಯ ಹೊಗೆ ನಾಟಕಗಳ ನಂಜುನಗೆಯದು ಇನ್ನೊಂದು ತೂಕ. ವಿಡಂಬನದ ನಾನಾ ಪದರಗಳನ್ನಿಲ್ಲಿ ಕಾಣಬಹುದು. ಕಾರಂತರ ಹಲವಾರು ಕಾದಂಬರಿಗಳಲ್ಲಿ

ಸನ್ನಿವೇಶಜನ್ಯವಾದ ಹಾಸ್ಯದ ನೆಲೆಯೇ ಇದೆ. ಆದರೆ ದೇವದೂತರು, ಗ್ನಾನ ಮುಂತಾದವುಗಳಲ್ಲಿ ಜನರ ನಡೆನುಡಿಗಳಿಗೆ ಅವರು ನಗೆಯ ರಾವುಗನ್ನಡಿಯನ್ನೇ ಹಿಡಿದಿದ್ದಾರೆ. ಇಲ್ಲಿ ಬರುವ ಹಾಸ್ಯ ಬಲು ಹರಿತ. ಈ ವಿಡಂಬನ ನಗೆಹಲ್ಲಿಗೆ ತಮ್ಮ ಕತ್ತನೇ ಒಡ್ಡಿಕೊಂಡಿದ್ದರೂ ನಗುನಗುತ್ತಲೇ ಬಲಿಯಾಗುತ್ತಾರೆ. ವಿಡಂಬನಕ್ಕೆ ಹಾಸ್ಯಕ್ಕೆ ಇನ್ನೊಂದು ಹೆಸರು ಶ್ರೀರಂಗ. ಇವರ ಕೃತಿಗಳಲ್ಲಿ ಮಾತಿನ ಮಸೆದಾಟದಿಂದ, ಚತುರೋಕ್ತಿಯಿಂದ, ಶ್ಲೇಷೆಯ ಬಲದಿಂದ ಉಕ್ಕಿಬರುವ ಹಾಸ್ಯವೂ ಉಂಟು.

ಇದುವರೆಗೆ ಕನ್ನಡದ ಕೆಲವು ಪ್ರಧಾನ ಲೇಖಕರ ಕೃತಿಗಳಲ್ಲಿಯ ಹಾಸ್ಯವನ್ನು ಕುರಿತ ವಿವೇಚನೆ ಮಾಡಲಾಯಿತು. ಆದರೆ ಹಾಸ್ಯವನ್ನೇ ಪ್ರಧಾನ ಉದ್ಯೋಗವಾಗಿ ಮಾಡಿಕೊಂಡ ಲೇಖಕರ ಸಂಖ್ಯೆಗೇನೂ ಕನ್ನಡದಲ್ಲಿ ಕೊರತೆಯಿಲ್ಲ. ಕೈಲಾಸಂ ಅಂಥವರಿಗೆ ಆದ್ಯಪುರುಷ. ತಿಪ್ಪಾರಳ್ಳಿಯ ಬೋರ, ಕೋಳೀಕೆ ರಂಗ ಮುಂತಾದ ನಗೆವಾಡುಗಳ ದೊಗಲೆ ಬಗಲೆಯನ್ನೂ ಟೊಳ್ಳು ಗಟ್ಟಿ, ಅಮ್ಮಾವ್ರ ಗಂಡ, ನಂಬ್ರಾಹ್ಮಣ್ಕೇ, ಬಂಡ್ವಾಳ್ವಿಲ್ಲದ್ಬಡಾಯಿ, ಹುತ್ತದಲ್ಲಿ ಹುತ್ತ ಮುಂತಾದ ನಾಟಕಗಳಲ್ಲಿ ಮಧ್ಯಮ ವರ್ಗದ ಒಂದು ಪಂಗಡದ ಜನರ ಮೇಲೆ ಹರಿಸಿದ ಹಾಸ್ಯದ ದೃಷ್ಟಿಯನ್ನೂ ನೋಡಿದಾಗ ಕೈಲಾಸಂ ಎಂಬುದು ಹಾಸ್ಯಕ್ಕೆ ಪರ್ಯಾಯ ಪದವೆಂದೇ ಹೇಳಬೇಕು. ಆಗಿನ ಕಾಲದ ವಿದ್ಯಾವಂತರೆನಿಸಿ ಕೊಂಡವರ ವೃತ್ತಗಳಲ್ಲಿ ಅತಿಯಾಗಿ ಬೆಳೆದಿದ್ದ ಇಂಗ್ಲಿಷ್ ಮೋಹವನ್ನೂ ಡಾಂಭಿಕತನವನ್ನೂ, ಸಂಪ್ರದಾಯ ಮೌಢ್ಯವನ್ನೂ ದಾಸ್ಯ ಮನೋವೃತ್ತಿಯನ್ನೂ ಇವರಂತೆ ಬಯಲಿಗೆಳೆದವರು ಇನ್ನೊಬ್ಬರಿಲ್ಲ. ತಾವರೆಕೆರೆ ಪ್ರಬಂಧ ಸಂಕಲನದಲ್ಲೂ ಹಾಸ್ಯದ ಮೆರವಣಿಗೆಯೇ ನಡೆದಿದೆ. ಇವರ ಅನೇಕ ಬಿಡಿನುಡಿಗಳೂ ಹಾಸ್ಯದ ಊಟೆಗಳೇ. ಎಕ್ಕಡದಂತೆ ಇದ್ದೂ ಬೂಟ್ಸಿನಂತೆ ಕಟ್ಟಬಹುದಾದ ಚಪ್ಪಲಿಗೆ ಎಕ್ಕಡದ ಎಲಿಗೆನ್ಸೂ ಬೂಟ್ಸಿನ ಬಡಾಯಿಯೂ ಇದೆಯೆಂದು ವರ್ಣಿಸಿರುವ ಕೈಲಾಸಂ ಅವರ ನಗೆಗೆ ತುತ್ತಾಗಿರುವುದೆಲ್ಲ ಬಹಳ ಮಟ್ಟಿಗೆ ಈ ಬಗೆಯ ಮನಃಪ್ರವೃತ್ತಿಯೇ. ಅಳು-ನಗುಗಳ ನಡುಗೆರೆ ಎಷ್ಟು ಸಪೂರವೆಂಬುದನ್ನೂ ಕೈಲಾಸಂ ಅರಿತಿದ್ದವರು. ಆದ್ದರಿಂದಲೆ ಇವರ ನಗೆಯಲ್ಲಿ ವ್ಯಂಗ್ಯದ್ದು ನೂರಕ್ಕೆ ನಲವತ್ತು ಪಾಲಾದರೆ ಸಹಾನುಭೂತಿಯದು ಅರವತ್ತು ಪಾಲು. ಓದುಗರು ಸ್ವಲ್ಪ ಹೆಚ್ಚು ಹೊತ್ತು ತಮ್ಮ ಮನಸ್ಸನ್ನು ತಂಗಿಸಿದರೆ ಕಾಣುವುದು ನಗೆಯಲ್ಲ, ಕವಿಯ ಕಣ್ಣೀರು. ಹಲವೊಮ್ಮೆ ಇವರ ಹಾಸ್ಯಒರಟಾಗುವುದೂ ಉಂಟು. ಅತಿಯಾದ ಪ್ರಾಸ ಪ್ರಯೋಗಮೂ ತೀಟುಕೂ ಬೇಸರ ಬರಿಸಬಹುದು. ಆದರೂ ಕೈಲಾಸಂ ಕನ್ನಡದ ಹಾಸ್ಯಚಕ್ರವರ್ತಿ. ಹಿಂದಿನ ನಾಟಕಗಳಲ್ಲಿ ವಿದೂಷಕನ ಸೆರಗಿಗೆ ಕಟ್ಟಿದ್ದ ಹಾಸ್ಯವನ್ನು ಬಿಡಿಸಿ ಭದ್ರಾಸನದ ಮೇಲೆ ಕುಳ್ಳಿರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.



ಗೊರೂರು ರಾಮಸ್ವಾಮಯ್ಯಂಗಾರ್

ಕೈಲಾಸಂ ಪೀಳಿಗೆ ಬಲು ದೊಡ್ಡದು. ಇವರ ಅನಂತರ ಬಂದ ಅನೇಕ ನಾಟಕಕಾರರು ಇವರ ಪ್ರಭಾವದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಅತಿಯೆನಿಸುವ ಮಟ್ಟಿಗೆ ಇವರು ಹಳೆಯ ಪ್ರಯೋಗಗಳನ್ನೇ ಬೆಳೆಸಿದರು. ಆದರೂ ತಮ್ಮತನವನ್ನೂ ಉಳಿಸಿಕೊಂಡ ಕೆಲವರ ಹೆಸರನ್ನಾದರೂ ಇಲ್ಲಿ ಹೇಳಬಹುದು. ಕ್ಷೀರಸಾಗರ, ಪರ್ವತವಾಣಿ, ಎ.ಎಸ್.ಮೂರ್ತಿ - ಇವು ಮೂರು ಹೆಸರುಗಳು. ಇದೇ ರೀತಿ ಶ್ರೀರಂಗರಿಂದ ಪ್ರಭಾವಿತರಾದವರೆಂದರೆ ಎನ್ಕೆ.ಕುಲಕರ್ಣಿ ಮತ್ತು ಬೇಂದ್ರೆ ಲಕ್ಷ್ಮಣರಾವ್.

ನಗೆಯನ್ನೇ ತಮ್ಮ ಲೇಖನದ ಕಸಬನ್ನಾಗಿ ಮಾಡಿಕೊಂಡ ಇನ್ನೊಬ್ಬರು ನಾ.ಕಸ್ತೂರಿ. ಇವರು ಹರಟೆಗಳನ್ನು ಹೊಸೆದಿದ್ದಾರೆ. ನಾಟಕಗಳನ್ನು ಬರೆದಿದ್ದಾರೆ. ಕವನಗಳನ್ನು ಕಟ್ಟಿದ್ದಾರೆ. ಪಡಿನುಡಿಗಳನ್ನು ಎರಚಾಡಿದ್ದಾರೆ. ಇಂಗ್ಲಿಷ್ ಹಾಸ್ಯದ ವಿಶ್ವರೂಪವನ್ನು ಕಂಡು ಅನುಭವಿಸಿ ಅದನ್ನು ಕನ್ನಡಿಸಿದ್ದಲ್ಲದೆ ಕನ್ನಡದಲ್ಲಿಯ ಹಾಸ್ಯಜಾಯಮಾನವನ್ನು ಗುರುತಿಸಿ ಇದನ್ನೂ ಅದನ್ನೂ ಸೇರಿಸಿ ಕಸಿ ಮಾಡಿ ಹೊಸದೊಂದು ಜಾತಿಯನ್ನೇ ಸೃಷ್ಟಿಸಿದ್ದಾರೆ. ಇವರು ಬರೆದ ಅಣಕವಾಡುಗಳೂ ಹಾಸ್ಯ ಪದ್ಯಗಳೂ ಅನೇಕ. ಇವರ ಅನರ್ಥಕೋಶ ಅತ್ಯಂತ ಪ್ರಸಿದ್ಧವಾಗಿದೆ.

ಹಾಸ್ಯಕ್ಕೇ ತಮ್ಮ ಲೇಖನಿಯನ್ನು ಮುಡಿಪು ಮಾಡಿದ ರಾ.ಶಿ. ಅವರು ಸ್ವತಃ ಕೃತಿರಚನೆ ಮಾಡಿದ್ದಲ್ಲದೆ ಹಾಸ್ಯ ಬರೆಹಗಾರರ ದೊಡ್ಡ ಪಡೆಯನ್ನೇ ಕಟ್ಟಿದರು. ಇವರು ಇಪ್ಪತ್ತೈದು ವರ್ಷ ನಡೆಸಿದ ಪತ್ರಿಕೆ ಕೊರವಂಜಿ ಇಂಗ್ಲಿಷ್‌ನ ಪಂಚ್ ಮಾದರಿಯದು. ದಾಶರಥಿ ದೀಕ್ಷಿತ್, ಟಿ.ಸುನಂದಮ್ಮ, ಅ.ರಾ.ಸೇ., ಅಷ್ಟಾವಕ್ರ, ಹಾ.ರಾ.ಮುಂತಾದ ಹಲವರು ಕೊರವಂಜಿಯ ಗರಡಿಯಲ್ಲಿ ತಯಾರಾದವರು. ವಿಕಟ ವಿನೋದಿನಿ, ವಿನೋದ ಇವು ಹಾಸ್ಯಕ್ಕೆ ಮೀಸಲಾದ ಇನ್ನೆರಡು ಪತ್ರಿಕೆಗಳು.

ರಾಜರತ್ನಂ, ನಾಡಿಗೇರ ಕೃಷ್ಣರಾಯ, ಬೀಚಿ ಅವರ ಹೆಸರು ಹೇಳದೆ ಕನ್ನಡ ಹಾಸ್ಯಸಾಹಿತ್ಯದ ಅವಲೋಕನ ಸಂಪೂರ್ಣವಾಗುವುದಿಲ್ಲ. ರತ್ನನ ಪದಗಳಲ್ಲಿ ಅಲ್ಲಲ್ಲಿ ಹಾಸ್ಯದ ಹರಳುಗಳನ್ನು ಚೆಲ್ಲಿರುವ ರಾಜರತ್ನಂ ಅವರ ನರಕದ ನ್ಯಾಯವೆಂಬ ನಾಟಕ ಹಳ್ಳಿಗರ ಮಾತಿನಲ್ಲಿ ಹೆಣೆದು ನೀಡಿದ ಹುಚ್ಚುಹಾಸ್ಯ. ಸತ್ಯವಾನ್ ಸಾವಿತ್ರಿಯರ ಕಥೆಯನ್ನು ರಾಜರತ್ನಂ ಇಲ್ಲಿ ಹಾಸ್ಯಗನ್ನಡಿಯಿಂದ ನೋಡಿದ್ದಾರೆ. ಸಾಹಿತ್ಯದ ನಾನಾ ವಕ್ರ ಬೆಳೆವಣಿಗೆಗಳನ್ನೂ ಅರ್ಥವಿಲ್ಲದ ಸಂಪ್ರದಾಯಗಳನ್ನೂ ಗೇಲಿ ಮಾಡಿರುವ ಮಹಾಕವಿ ಪುರುಷ ಸರಸ್ವತಿಯೊಂದು ವಿಡಂಬನ ಕೃತಿ. ಅರುಣೋದಯದ ಆದ್ಯ ಲೇಖಕರಲ್ಲೊಬ್ಬರಾದ ಕೆರೋಡಿ ಸುಬ್ಬರಾಯರ ಅನುಕೂಲ ಸಿಂಧು (1926) ಇನ್ನೊಂದು ವಿಡಂಬನ ಕಾವ್ಯ. ಇವರು ಬರೆದ ನಾಟಕದಲ್ಲಿ ಕೈಲಾಸಂ ಅವರಿಗೂ ಮೊದಲು 'ಕನ್ನಡಾಂಗ್ಲ' ಹಾಸ್ಯ ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ನಾಡಿಗೇರರು ತಮ್ಮ ನಗೆಬರಹಗಳಲ್ಲಿ ತಮ್ಮನ್ನೇ ಆದರೂ ಹಾಸ್ಯಕ್ಕೆ ಒಡ್ಡಿಕೊಂಡು ಓದುಗರನ್ನು ನಗೆಯ ಅಲೆಯಡಿಯಲ್ಲಿ ಮುಳುಗಿಸಿ ತೇಲಿಸುವ ಹವ್ಯಾಸದಲ್ಲಿ ತೊಡಗಿದ್ದಾರೆ. ಬೀಚಿಯವರ ಹಾಸ್ಯ ಹಲಮೊಮ್ಮೆ ಹೆಚ್ಚು ಮಾರ್ಮಿಕ. ಅವರು ಬಣ್ಣಿಸುವ ತಿಂಮನ ತಲೆ ಯಾರದಾದರೂ ಆಗಿರಬಹುದು. ಅವರು ಸಿಡಿಸಿರುವ ಹಲವಾರು ನಗೆಹನಿಗಳಲ್ಲೂ ಹಾಸ್ಯಚಟಾಕಿಗಳಲ್ಲೂ ಕುಹಕ ಕಟಕಿ ಬೆಡಗು ಚುರುಕು ಚತುರತೆಗಳು ತುಂಬಿವೆ. ದಿನಕರ ದೇಸಾಯಿ, ಜಿ.ಪಿ.ರಾಜರತ್ನಂ, ಪರಮೇಶ್ವರಭಟ್ಟ, ಅಕಬರ ಅಲಿ, ವಿ.ಜಿ.ಭಟ್ಟ, ಎಚ್.ಎಸ್.ಬಿಳಿಗಿರಿ, ಬಿ.ಆರ್.ಲಕ್ಷ್ಮಣರಾವ್, ಎಚ್.ದುಂಡಿರಾಜ್, ಜರಗನಹಳ್ಳಿ ಶಿವಶಂಕರ್, ಮುಂತಾದವರು ಬರೆದಿರುವ ಚುಟುಕುಗಳು ಹನಿಗವನಗಳು, ಮಿನಿಗವನಗಳು, ಪದ್ಯಗಳು ಸಂಸ್ಕೃತದ ಚಾಟೂಕ್ತಿಗಳಂತೆ ಸರ್ವಜ್ಞನ ವಚನಗಳಂತೆ, ಇಂಗ್ಲಿಷಿನ ಎಪಿಗ್ರಂಗಳಂತಿವೆ. ಇವರಲ್ಲದೆ ಇತ್ತೀಚೆಗೆ ಕನ್ನಡದಲ್ಲಿ ಹಲವಾರು ಸಮರ್ಥ ಹಾಸ್ಯ ಲೇಖಕರೂ ಲೇಖಕಿಯರೂ ಸೃಷ್ಟಿಗೊಳ್ಳುತ್ತಿದ್ದಾರೆ. ಹಾಸ್ಯ ಸಾಹಿತ್ಯ ಹೆಚ್ಚು ವಿಪುಲವಾಗಿ ವೈವಿಧ್ಯತೆಯನ್ನು ಹೊಂದಿ ಬೆಳೆಯುತ್ತಿದೆ ಎಂಬುದು ಸಮಾಧಾನ ತರುವ ಸಂಗತಿಯಾಗಿದೆ.

ಕನ್ನಡದ ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ನಗೆಹನಿಗಳು, ಪ್ರಬಂಧಗಳು, ರಾಜಕೀಯ ಟೀಕೆ ಟಿಪ್ಪಣಿಗಳನ್ನೊಳಗೊಂಡ ಲಘು ಬರೆಹಗಳು, ಪ್ರಶ್ನೋತ್ತರಗಳು, ಕುಹಕಡಿಗಳು, ಉರಿಗಾಳುಗಳು - ಇವುಗಳಲ್ಲಿ ಹಾಸ್ಯದಂದು ವಿಸ್ತೃತ ಶಬ್ದ ಭಂಡಾರವೇ ದಿನದಿನಮೂ ಸೃಷ್ಟಿಯಾಗುತ್ತಿದೆ. ಆಧುನಿಕ ಕನ್ನಡದ ಹಾಸ್ಯ ಸಾಹಿತ್ಯ ಬಲು ದೊಡ್ಡ ಕುಟುಂಬ ಎಂಬ ಅಂಶ ಈ ಸಂಗತಿಗಳಿಂದ ಮನದಟ್ಟಾಗದಿರದು. (ನೋಡಿ: ಕನ್ನಡದಲ್ಲಿ ವಿಡಂಬನ ಸಾಹಿತ್ಯ).

(ಎ.ಆರ್.ಎಂ.,ಎಚ್.ಎಸ್.ಕೆ.)

**ಕನ್ನಡ ನುಡಿ :** ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ ಕನ್ನಡದ ಚಳವಳಿಗಾಗಿ ಮೀಸಲಾದ ಮಾಸ ಪತ್ರಿಕೆ.

ಬಿ.ಎಂ.ಶ್ರೀಯವರ ಅಪೇಕ್ಷೆಯಂತೆ 1938 ಅಕ್ಟೋಬರ್ ತಿಂಗಳಲ್ಲಿ ಅ.ನ.ಕೃ. ಅವರ ಸಂಪಾದಕತ್ವದಲ್ಲಿ ಕನ್ನಡ ನುಡಿ ವಾರಪತ್ರಿಕೆಯಾಗಿ ಜನ್ಮ ತಾಳಿತು. 1949ರಲ್ಲಿ ಪಕ್ಷಪತ್ರಿಕೆಯಾಯಿತು. 1950 ಆಗಸ್ಟ್‌ನಿಂದ ಮಾಸಪತ್ರಿಕೆಯಾಗಿ ಪರಿವರ್ತಿತವಾಯಿತು. 1969 ನವೆಂಬರಿನಿಂದ ಮತ್ತೆ ಪಕ್ಷಪತ್ರಿಕೆಯಾಯಿತು. 1991ರಿಂದ ಪುನಃ ಮಾಸಪತ್ರಿಕೆಯಾಗಿ ಪ್ರಕಟಗೊಳ್ಳುತ್ತಿದೆ. ಅ.ನ.ಕೃಷ್ಣರಾಯ, ಬಿ.ವೆಂಕೋಬ ರಾವ್, ಬಿ.ಎಂ.ಶ್ರೀ., ಎಂ.ಜಿ.ನಂಜುಂಡಾರಾಧ್ಯ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಎಸ್.ಕೃಷ್ಣಶರ್ಮ, ಡಿ.ಸಿ.ಸುಬ್ಬರಾಯಪ್ಪ ವಿ.ಸೀ., ಸಿ.ಕೆ.ವೆಂಕಟರಾಮಯ್ಯ, ಎಂ.ಆರ್.ಶ್ರೀ., ಎಂ.ವಿ.ಸೀತಾರಾಮಯ್ಯ, ಬಿ.ಶಿವಮೂರ್ತಿಶಾಸ್ತ್ರೀ, ಡಿ.ಆರ್.ರಾಮಯ್ಯ, ಜಿ.ವೆಂಕಟಸುಬ್ಬಯ್ಯ, ಹಿ.ಮ.ನಾಗಯ್ಯ, ಅನಂತ ಪದ್ಮನಾಭರಾವ್, ರಾಮಣ್ಣ ಕೋಡಿಹೊಸಹಳ್ಳಿ, ಡಿ.ವಿ.ನಾಗರಾಜು, ಸಿ.ಸಿದ್ಧಲಿಂಗಪ್ಪ, ಚಂದ್ರಕಾಂತ ಪಡೇಸೂರ, ಜಿ.ವಿ.ಶಿವಸ್ವಾಮಿ, ಅ.ರಾ.ಚಂದ್ರಹಾಸಗುಪ್ತ ಐ.ಎಂ.ವಿಠ್ಠಲಮೂರ್ತಿ, ಸಾ.ಶಿ.ಮರುಳಯ್ಯ, ವಿಜಯಾಸುಬ್ಬರಾಜ್, ನಲ್ಲೂರು ಪ್ರಸಾದ, ಅಗ್ರಹಾರ ಕೃಷ್ಣಮೂರ್ತಿ, ಟಿ.ಸಿ.ಪೂರ್ಣಿಮಾ, ಎಚ್.ಎಸ್.ಪಾರ್ವತಿ, ಸಿ.ಕೆ.ಪರಶು ರಾಮಯ್ಯ, ಎಚ್.ಪಿ.ಫಿಲೋಮಿನಾ, ವರದಾ ಶ್ರೀನಿವಾಸ್, ಎಸ್.ವಿ.ಶ್ರೀನಿವಾಸರಾವ್ ಮೊದಲಾದವರು ಕನ್ನಡ ನುಡಿಯ ಸಂಪಾದಕರಾಗಿದ್ದರು. ಮಹದೇವ ಪ್ರಕಾಶ್ ಈಗಿನ ಸಂಪಾದಕರು (2005).

ಕನ್ನಡ ನುಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸರ್ವಜನೋಪಯುಕ್ತ ಲೇಖನಗಳು ಬರುತ್ತವೆ. ಪರಿಷತ್ತು ನಡೆಸುವ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಪ್ರಬಂಧಗಳೂ ಸಣ್ಣಕಥೆಗಳೂ ಏಕಾಂಕ ನಾಟಕಗಳೂ ಪ್ರಕಟವಾಗುತ್ತವೆ. ದತ್ತಿಗಳಿಂದಲೂ ವಿಶೇಷೋತ್ಸವಗಳಲ್ಲೂ ನಡೆಯುವ ಉಪನ್ಯಾಸಗಳ ಸಂಗ್ರಹವನ್ನು ಕೊಡಲಾಗುತ್ತದೆ. ಪ್ರಾಚೀನ ಸಾಹಿತ್ಯದ ಉದ್ಗ್ರಂಥಗಳ ಪರಿಚಯ, ಆಧುನಿಕ ಸಾಹಿತ್ಯದ ಉತ್ತಮ ಕೃತಿಗಳ ಪರಿಚಯ, ವೈಜ್ಞಾನಿಕ ವಿಚಾರ, ಕಾವ್ಯಾವಲೋಕನ, ಅಂಗಸಂಸ್ಥೆಗಳಾದ ಕರ್ನಾಟಕ ಸಂಘಗಳ ಕಾರ್ಯಕಲಾಪಗಳ ಸುದ್ದಿಗಳಿರುತ್ತವೆ. ಮಾಸ್ತಿಯವರು ಕನ್ನಡ ನುಡಿ ಪರಿಷತ್ತಿನ ತಕ್ಕುದೊಂದು ಮುಖವಾಗಬೇಕೆಂದೂ ಬಿ.ಎಂ.ಶ್ರೀಯವರು ಅದು ಕರ್ನಾಟಕದ ಗೆಸೆಟಿಯರ್ ಆಗಬೇಕೆಂದೂ ಆಶಿಸಿದ್ದರು. ಅದರಂತೆ ಕನ್ನಡ ನುಡಿಯ ಅನೇಕ ಸಂಪುಟಗಳು ಹೊರಬಂದಿವೆ.

ದ.ಕೃ. ಭಾರದ್ವಾಜ, ಸ.ಸ.ಮಾಳವಾಡ, ಬಿ.ಶಿವಮೂರ್ತಿಶಾಸ್ತ್ರೀ, ವೆಂಕಟೇಶ ಸಾಂಗಲಿ ಮೊದಲಾದವರು ಕೀರ್ತಿವಂತ ಕನ್ನಡಿಗರು, ಕನ್ನಡನುಡಿಯ ಭಕ್ತರು ಮುಂತಾದ ಶೀರ್ಷಿಕೆಗಳ ಅಡಿಯಲ್ಲಿ ಚಿತ್ರಿಸಿರುವ ವ್ಯಕ್ತಿಚಿತ್ರಗಳು, ಶಿಲಾಶಾಸನ, ಕನ್ನಡಿಗರ ಜೀವನ ಕುರಿತ ತಿ.ತಾ.

ಶರ್ಮರ ಲೇಖನಗಳು, ಅ.ನ.ಕೃ. ಬರೆದ ಸಂಗೀತಗಾರರ ಮತ್ತು ಚಿತ್ರಕಲಾವಿದರ ನೆನಪುಗಳು, ರೋರಿಕ್ ಸಂದರ್ಶನಾರ್ಥ ಎಂಬ ಲೇಖನ ಮಾಲಿಕೆ, ನನ್ನ ಜೀವನ ದರ್ಶನ ಎಂಬ ಶೀರ್ಷಿಕೆಯಲ್ಲಿ ಜಿ.ಪಿ.ರಾಜರತ್ನಂ ಹಾಗೂ ಅಡಿಗರ ಲೇಖನಗಳು ವಿಚಾರಪೂರ್ಣವಾಗಿವೆ. ಭಾಷಾವಿಹಾರ, ಪದಶುದ್ಧಿ ಎಂಬ ಶಿರೋನಾಮೆಯ ಬರೆಹಗಳಲ್ಲಿ ಡಿ.ಎಲ್.ನರಸಿಂಹಾಚಾರ್, ಪಿ.ಬಿ.ದೇಸಾಯಿ, ಶಂ.ಬಾ.ಜೋಶಿ, ದ.ರಾ.ಬೇಂದ್ರೆ, ಎ.ಕೆ.ಪುಟ್ಟರಾಮು ಮೊದಲಾದವರು ಶಬ್ದಜಿಜ್ಞಾಸೆ ನಡೆಸಿದ್ದಾರೆ. ಮುದ್ರಣನಿಗೆ ಸಂಬಂಧಿಸಿದಂತೆ 1944ರಲ್ಲಿ ಪ್ರಕಟಗೊಂಡಿರುವ ಎರಡು ಹೇಳಿಕೆಗಳು, 1947ರಲ್ಲಿ ಕನ್ನಡ ಲಿಪಿ ಸುಧಾರಣೆಯ ವಿಷಯವಾಗಿ ಬಿ.ಎಂ.ಶ್ರೀ., ದೇವುಡು, ಕಾಶಿಯ ಜಂಗಮವಾಡಿ ಮಠದ ಶರ್ಮರು ನಡೆಸಿರುವ ಚರ್ಚೆ, ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದಿರುವ ಕನ್ನಡದ ಊರುಗಳು ಎಂಬ ಲೇಖನಗಳೂ ಸೀಬಯ್ಯ, ಬಿ.ಆರ್.ಶೇಷಾಚಾರ್ ಮೊದಲಾದವರ ವಿಜ್ಞಾನ ಲೇಖನಗಳೂ ಕನ್ನಡ ನುಡಿಯಲ್ಲಿ ಪ್ರಕಟವಾಗಿ ಜನಪ್ರಿಯತೆ ಗಳಿಸಿವೆ.

ಕನ್ನಡ ನುಡಿಯ ವಿಶೇಷ ಸಂಚಿಕೆಗಳಲ್ಲಿ 1957ರ ಸನ್ಮಾನೋತ್ಸವ ಸಂಚಿಕೆ ಮತ್ತು 1963ರಲ್ಲಿ ಪ್ರಕಟವಾದ ಒಂದು ನೂರು ಪುಟಗಳ ಬೆಳ್ಳಿ ಸಂಚಿಕೆ, ರವೀಂದ್ರ ಸಂಚಿಕೆ, ಕುವೆಂಪು ಲೇಖನಮಾಲೆ, ಎಂ.ಆರ್.ಶ್ರೀ ಬಾಷ್ಪಾಂಜಲಿ ಸಂಚಿಕೆ (1953), ತೀ.ನಂ.ಶ್ರೀ. ಸ್ಮರಣ ಸಂಚಿಕೆ (1966), ಡಿ.ಎಲ್.ಎನ್.ಸ್ಮರಣ ಸಂಚಿಕೆ (1971), ತಿ.ತಾ.ಶರ್ಮ ಮತ್ತು ಸಿದ್ಧವನಹಳ್ಳಿ ಕೃಷ್ಣಶರ್ಮರ ಸ್ಮರಣ ಸಂಚಿಕೆ (1974)– ಇವು ಮುಖ್ಯವಾದವು. ಸಾಹಿತ್ಯ ಸಮ್ಮೇಳನಗಳ ನೆನಪಿಗೆ ಪ್ರಕಟವಾಗುವ ಕನ್ನಡ ನುಡಿಯ ವಿಶೇಷಾಂಕಗಳು ವೈಶಿಷ್ಟ ಪೂರ್ಣವಾಗಿವೆ.

(ಎ.ಆರ್.ಎಂ.)

**ಕನ್ನಡ ಪತ್ರಿಕೋದ್ಯಮ :** ಕರ್ನಾಟಕದ ಪತ್ರಿಕೋದ್ಯಮಕ್ಕೆ 160 ವರ್ಷಗಳ ದೀರ್ಘ ಇತಿಹಾಸವಿದೆ. ಈ ಇತಿಹಾಸ ವಾರ್ತಾಪತ್ರಿಕೆ ಮತ್ತು ನಿಯತ ಕಾಲಿಕೆಗಳ ಬರವಣಿಗೆ, ಸಂಪಾದನೆ ಮತ್ತು ಪ್ರಕಟಣೆ ಅಲ್ಲದೆ, ಸುದ್ದಿ ಸಂಗ್ರಹಣ, ಪ್ರಸಾರಣ, ಪತ್ರಿಕೆಗಳ ನಿರ್ವಹಣ, ಜಾಹೀರಾತು ಮುಂತಾದ ಚಟುವಟಿಕೆಗಳನ್ನೆಲ್ಲ ಒಳಗೊಂಡಿದೆ. ಪ್ರಥಮದಲ್ಲಿ ಧರ್ಮಪ್ರಚಾರ, ಅನಂತರ ಕನ್ನಡ ನಾಡು ಮತ್ತು ನುಡಿಯ ಏಳ್ಗೆ–ಈ ಉದ್ದೇಶಗಳನ್ನಿಟ್ಟುಕೊಂಡು ಪತ್ರಿಕೆಗಳು ಪ್ರಾರಂಭವಾದುವು. ಬಹುತೇಕ ಪತ್ರಿಕೆಗಳು ಕನ್ನಡ ನವೋದಯದ ಕಾಲದಲ್ಲಿ ಊರ್ಜಿತಗೊಂಡು, ರಾಷ್ಟ್ರಬಿಡುಗಡೆಯ ಮತ್ತು ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಕಾಲದಲ್ಲಿ ಜನರಲ್ಲಿ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಲು ಛಲದಿಂದ ನಡೆದು ಹೋರಾಟದ ಬದುಕನ್ನು ನಡೆಸಿದುವು. ಎರಡನೆಯ ಮಹಾಯುದ್ಧಾನಂತರ ಕಾಲದಲ್ಲಿ ಕರ್ನಾಟಕದ ಪತ್ರಿಕೋದ್ಯಮ ಬೃಹತ್ತಾಗಿ ಬೆಳೆದಿದೆ. ಕರ್ನಾಟಕದ ಪತ್ರಿಕೆಗಳು ಭಾರತದ ಇತರ ಭಾಷೆಗಳ ಪತ್ರಿಕೆಗಳಂತೆಯೇ ಇಲ್ಲಿಯ ಜನಜೀವನದ ವಿವಿಧ ಮುಖಗಳ ಪ್ರತಿಬಿಂಬವಾಗಿವೆ.

ಈಗ ನಮಗಿರುವ ಆಧಾರಗಳ ಪ್ರಕಾರ ಕನ್ನಡದ ಮೊದಲ ಪತ್ರಿಕೆ ಮಂಗಳೂರ ಸಮಾಚಾರ. ಇದು ಪ್ರಕಟವಾದುದು 1843 ಜುಲೈ 1ರಂದು. ಮಂಗಳೂರಿನಲ್ಲಿ ಜನಸೇವೆಯಲ್ಲಿ ತೊಡಗಿದ್ದ ಬಾಸೆಲ್ ಮಿಶನ್ನಿನ ಪಾದ್ರಿ ಹರ್ಮನ್ ಮೋಗ್ಲಿಂಗ್ ಈ ಪತ್ರಿಕೆಯ ಸಂಪಾದಕ ಹಾಗೂ ಕನ್ನಡ ಪತ್ರಿಕೋದ್ಯಮದ ಆದ್ಯ ಪ್ರವರ್ತಕ. ಈತ ಭಾರತಕ್ಕೆ ಬಂದುದು 1836ರಲ್ಲಿ ಮಂಗಳೂರಿಗೆ ಬಂದ ಬಳಿಕ ಮಂಗಳೂರು ಸಮಾಚಾರ 1844ರ ಹೊತ್ತಿಗೆ ಬಳ್ಳಾರಿಗೆ ವರ್ಗಾವಣೆಗೊಂಡಿತು. ಅಲ್ಲಿ ಕನ್ನಡ ಸಮಾಚಾರ (**ನೋಡಿ**) ಎಂದು ಹೆಸರು ಬದಲಿಸಿಕೊಂಡಿತು. ಎರಡು ವರ್ಷಗಳ ಬಳಿಕ ವಾಪಸ್ಸು ಮಂಗಳೂರಿಗೇ ಬಂದು ಕೆಲಕಾಲ ಮುಂದುವರಿಯಿತು.

ಮಂಗಳೂರ ಸಮಾಚಾರ ಕಲ್ಲಚ್ಚಿನಲ್ಲಿ ಮುದ್ರಣಗೊಳ್ಳುತ್ತಿತ್ತು. ನಾಲ್ಕು ಪುಟಗಳ ಈ ಪತ್ರಿಕೆಯ ಬೆಲೆ ಕೇವಲ ಒಂದು ದುಡ್ಡು. ಅದರಲ್ಲಿ ಅಂಚೆ ವೆಚ್ಚವೂ ಸೇರಿತ್ತು. ಪತ್ರಿಕೆಯ ಒಡೆತನ ಬಾಸೆಲ್ ಮಿಸಶನ್ನಿಗೆ ಸೇರಿದ್ದೆಂದು ಹೇಳಲಾಗಿದೆ. ಆದರೆ ಎಲ್ಲಿಯೂ ಅದರ ಉಲ್ಲೇಖವಿಲ್ಲ. ಹಾಗೆಯೇ ಕ್ರೈಸ್ತಧರ್ಮ ಪ್ರಸಾರಕ್ಕಾಗಿ ಈ ಪತ್ರಿಕೆಯನ್ನು ಮೋಗ್ಲಿಂಗ್ ಬಳಸಿಕೊಳ್ಳಲಿಲ್ಲ ಎಂಬುದು ಗಮನಿಸಬೇಕಾದ ವಿಚಾರ.

ಹೀಗೆ ಆರಂಭವಾದ ಕನ್ನಡ ಪತ್ರಿಕೋದ್ಯಮ ದೇಶದ ಇತರ ಭಾಷಾ ಪತ್ರಿಕೆಗಳಲ್ಲಿ ಆದಂತೆ ಕನ್ನಡ ಪತ್ರಿಕೋದ್ಯಮವೂ ಆರಂಭಿಕ ತೊಂದರೆಗಳನ್ನು ದಾಟಿ ಬಂದು ಈಗ ಪ್ರೌಢಾವಸ್ಥೆ ತಲಪಿದೆ. ಪತ್ರಿಕೋದ್ಯಮದ ಮುಖ್ಯ ಕವಲಾದ ದಿನಪತ್ರಿಕೆಗಳೂ ನಿಯತಕಾಲಿಕೆಗಳೂ ಈ ಅವಧಿಯಲ್ಲಿ ಕನ್ನಡದಲ್ಲಿ ಹುಲುಸಾಗಿ ಬೆಳೆದಿವೆ. ಕನ್ನಡದ ಮೊದಲ ಪತ್ರಿಕೆ ಮಂಗಳೂರ ಸಮಾಚಾರ ಪಾಕ್ಷಿಕವಾಗಿದ್ದರೆ 1849ರಲ್ಲಿ ಆರಂಭಗೊಂಡಿದ್ದ ಸುಬುದ್ಧಿ ಪ್ರಕಾಶವನ್ನು ಮೊದಲ ವಾರ ಪತ್ರಿಕೆಯೆಂದು ಗುರುತಿಸಲಾಗಿದೆ. ಅದು ಬೆಳಗಾಂವಿಯಿಂದ ಪ್ರಕಟವಾಗುತ್ತಿತ್ತು. ಕಲ್ಲಚ್ಚಿನಲ್ಲಿ ಮುದ್ರಿಸಲಾಗುತ್ತಿತ್ತು. ಕಾನರೀಸ್ ವರ್ನಾಕ್ಯುಲರ್ ಸೊಸೈಟಿಯ ಆಶ್ರಯದಲ್ಲಿ ವೆಂಕಟರಂಗೋ ಕಟ್ಟಿಯವರು 1861ರ ನವೆಂಬರ್ ತಿಂಗಳಿನಲ್ಲಿ ಹೊರಡಿಸಿದ ಕನ್ನಡ ಜ್ಞಾನಬೋಧಕ ಮೊದಲು ವಾರಪತ್ರಿಕೆಯೂ ಅನಂತರ ಮಾಸಿಕವೂ ಆಗಿತ್ತು. 1862ರಲ್ಲಿ ಬಿ.ಎಚ್.ರೈಸ್ ಬೆಂಗಳೂರಿನಲ್ಲಿ ಆರಂಭಿಸಿ 1868ರ ವರೆಗೆ ನಡೆಸಿದ ಅರುಣೋದಯ ಕನ್ನಡದ ಆದ್ಯ ಮಾಸಪತ್ರಿಕೆಗಳಲ್ಲಿ ಒಂದು.

19ನೆಯ ಶತಮಾನದಲ್ಲಿ ಪ್ರಕಟಗೊಂಡ ಕನ್ನಡ ಪತ್ರಿಕೆಗಳು ನೂರಕ್ಕಿಂತ ಕಡಿಮೆ. ಅವುಗಳಲ್ಲಿ ಮೂರ್ನಾಲ್ಕು ದಿನಪತ್ರಿಕೆಗಳನ್ನು ಬಿಟ್ಟರೆ ಉಳಿದವುಗಳೆಲ್ಲ ನಿಯತಕಾಲಿಕೆಗಳು. ಧಾರ್ಮಿಕ ವಿಷಯಗಳು, ಕನ್ನಡ ಕಾವ್ಯಗಳು, ರಾಜಕಾರಣ, ಸೃಜನಶೀಲ ಸಾಹಿತ್ಯ ಅಂದಿನ ಪತ್ರಿಕೆಗಳ ಆಸಕ್ತಿಯ ಕ್ಷೇತ್ರಗಳಾಗಿದ್ದುವು.

19ನೆಯ ಶತಮಾನದಲ್ಲಿ ಪ್ರಕಟಗೊಂಡ ಶೈಕ್ಷಣಿಕ ಆಸಕ್ತಿಯ ಪತ್ರಿಕೆಗಳ ಪೈಕಿ ಹೆಸರಿಸಬೇಕಾದುದು ಕನ್ನಡ ಶಾಲಾ ಪತ್ರಿಕೆ. 1865ರಲ್ಲಿ ಬೆಳಗಾಂವಿಯಲ್ಲಿ ಮಠಪತ್ರಿಕೆ ಎಂಬ ಹೆಸರಿನಿಂದ ಈ ಪತ್ರಿಕೆ ಹೊರಟಿತು. 1867ರ ಏಪ್ರಿಲ್‌ನಲ್ಲಿ ಅದು ಶಾಲಾ ಪತ್ರಿಕೆ ಎಂದು ಪುನರ್‌ನಾಮಕರಣಗೊಂಡಿತು. ಬೆಳಗಾಂವಿಯಿಂದ ಧಾರವಾಡದ ಟೀಚರ್ಸ್ ಟ್ರೇನಿಂಗ್ ಕಾಲೇಜಿಗೆ ಅದರ ಒಡೆತನ ವರ್ಗಾವಣೆಗೊಂಡಿತು. 1871ರಲ್ಲಿ ಅದನ್ನು ಕನ್ನಡ ಶಾಲಾಪತ್ರಿಕೆ ಎಂದು ಕರೆಯಲಾಯಿತು. ಜೀವನ ಶಿಕ್ಷಣ ಎಂಬ ಹೆಸರಿನಿಂದ ಮುಂದುವರಿದ ಈ ಪತ್ರಿಕೆಗೆ 136 ವರ್ಷಗಳ ಇತಿಹಾಸವಿದೆ. ಕನ್ನಡದಲ್ಲಿ ಪ್ರಕಟಗೊಳ್ಳುತ್ತಿರುವ ಪತ್ರಿಕೆಗಳಲ್ಲೆಲ್ಲ ಇದು ಹಿರಿಯದಾಗಿದೆ. ಶಿಕ್ಷಣಾಧಿಕಾರಿಯಾಗಿದ್ದ ಡೆಪ್ಯುಟಿ ಚನ್ನಬಸಪ್ಪ (**ನೋಡಿ**) ಆರಂಭ ಕಾಲದಲ್ಲಿ ಈ ಪತ್ರಿಕೆಯ ಬೆನ್ನೆಲುಬಾಗಿ ಬೆಳೆಸಿದರು.

ರಾಜ್ಯಪತ್ರವಾಗಿ ಪ್ರಕಟಗೊಳ್ಳುತ್ತಿರುವ ಕರ್ನಾಟಕ ಸರ್ಕಾರದ ಗೆಜೆಟ್ 19ನೆಯ ಶತಮಾನದಲ್ಲೇ ಆರಂಭಗೊಂಡು ಇನ್ನೂ ಮುಂದುವರೆದಿರುವ ಮತ್ತೊಂದು ಪತ್ರಿಕೆ. ಈಗ ರಾಜ್ಯ ಪತ್ರ ಸರ್ಕಾರದ ಅಧಿಕೃತ ಸೂಚನಾ ಪತ್ರಗಳನ್ನು ಪ್ರಕಟಿಸುವುದಕ್ಕಷ್ಟೇ ಸೀಮಿತವಾಗಿದೆ. ಈಗಿನ ರಾಜ್ಯಪತ್ರದ ಪೂರ್ವರೂಪ ಮೈಸೂರು ಗೆಜೆಟ್, 1866 ಏಪ್ರಿಲ್ 7ರಂದು ಮೊದಲು ಪ್ರಕಟಗೊಂಡಿತು.

ವೃತ್ತಿಯಲ್ಲಿ ಶಿಕ್ಷಕರಾಗಿದ್ದ ವೆಂಕಟರಂಗೋಕಟ್ಟಿಯವರ ಪತ್ರಿಕಾ ಸಾಧನೆಯೂ ವಿಶೇಷ ಉಲ್ಲೇಖನೀಯ. ಜನರಲ್ಲಿ, ಮುಖ್ಯವಾಗಿ ಮಕ್ಕಳಲ್ಲಿ ಜ್ಞಾನ ಪ್ರಸಾರ ಮಾಡುವುದು, ಓದುವ ಹವ್ಯಾಸ ಹೆಚ್ಚಿಸುವುದು ಇವರ ಉದ್ದೇಶವಾಗಿತ್ತು. ಶೋಧಕ ಎಂಬ ಮಾಸಪತ್ರಿಕೆಯನ್ನು ಇವರು 1875–78ರ ವರೆಗೆ ನಡೆಸಿದರು. ಮೊದಲು ಬೆಳಗಾಂವಿಯಿಂದ ಪತ್ರಿಕೆ ಪ್ರಕಟವಾಗುತ್ತಿತ್ತು. ಅನಂತರ ಧಾರವಾಡದಿಂದ ಲೋಕಶಿಕ್ಷಕ ಎಂಬ ಇನ್ನೊಂದು ಪತ್ರಿಕೆಯನ್ನೂ ಪ್ರಾರಂಭಿಸಿದರು (1888).

19ನೆಯ ಶತಮಾನದ ಅಂತಿಮ ಚರಣದಲ್ಲಿ ಮೈಸೂರು ಭಾಗದ ಪತ್ರಿಕೋದ್ಯಮದ ನಾಯಕತ್ವ ವಹಿಸಿದವರು ಎಂ. ವೆಂಕಟಕೃಷ್ಣಯ್ಯ (**ನೋಡಿ**). ಇವರ ಸಾರ್ವಜನಿಕ ಸೇವೆಯ ಹಲವು ಮುಖಗಳಲ್ಲಿ ಪತ್ರಿಕೋದ್ಯಮವೂ ಒಂದಾಗಿತ್ತು. ತಾತಯ್ಯ ಎಂದೇ ಖ್ಯಾತರಾಗಿದ್ದ ಇವರು ಒಂದು ಸಂಸ್ಥೆಯ ರೀತಿ ಬೆಳೆದು ಹಲವು ಪತ್ರಿಕೆಗಳ ಸ್ಥಾಪಕರಾಗಿ, ಮೈಸೂರಿನ ಸಾರ್ವಜನಿಕ ಜೀವನಕ್ಕೆ ಹೇಗೋ ಪತ್ರಿಕೋದ್ಯ ಮಕ್ಕೂ ಆಧಾರಸ್ತಂಭ ವಾಗಿದ್ದರು.

ಹಿತಬೋಧಿನಿ ಮಾಸಪತ್ರಿಕೆಯ ಮೂಲಕ ಇವರು ಪತ್ರಿಕಾರಂಗ ಪ್ರವೇಶಿಸಿದರು. ಹಿತಬೋಧಿನಿ 1883ರಲ್ಲಿ ಆರಂಭಗೊಂಡು 1890ರ ವರೆಗೆ ನಡೆದು ಬಂತು. ಈ ಪತ್ರಿಕೆ ಆ ಕಾಲದಲ್ಲಿ ಅಪಾರ ಜನಮನ್ನಣೆ ಗಳಿಸಿತ್ತು ಎನ್ನಲಾಗಿದೆ. ವೃತ್ತಾಂತ ಚಿಂತಾಮಣಿ (1885) ಇವರ ಇನ್ನೊಂದು ಜನಪ್ರಿಯ ಪತ್ರಿಕೆ. ತೀಕ್ಷ್ಣ ಸಂಪಾದಕೀಯಗಳಿಂದ ಆಡಳಿತಗಾರರಿಗೆ ಈ ಪತ್ರಿಕೆ ಚುರುಕು ಮುಟ್ಟಿಸುತ್ತಿತ್ತು. ಮೈಸೂರು ಹೆರಾಲ್ಡ್ ಎಂಬ ಪತ್ರಿಕೆಯನ್ನು 1886ರಲ್ಲೂ ವೆಲ್ತ್ ಆಫ್ ಮೈಸೂರು ಎಂಬುದನ್ನು 1912ರಲ್ಲೂ ಸಂಪಾದಿಸಿ ಪ್ರಕಟಿಸಿದ ಖ್ಯಾತಿ ತಾತಯ್ಯ ನವರದು. ಇದಲ್ಲದೆ ಇವರ ಪತ್ರಿಕಾ ಸಾಹಸದ ಸಾಲಿಗೆ ಸೇರಬೇಕಾದ ಇತರ ಪತ್ರಿಕೆಗಳೆಂದರೆ ಸಂಪದಭ್ಯುದಯ (ಕನ್ನಡ ದಿನಪತ್ರಿಕೆ 1912), ನೇಚರ್ ಕ್ಯೂರ್ (ಇಂಗ್ಲಿಷ್ ದಿನಪತ್ರಿಕೆ) ಮತ್ತು ಸಾಧ್ವಿ (1899). ಸಾಧ್ವಿ (**ನೋಡಿ**) ಮೊದಲು ವಾರಪತ್ರಿಕೆಯಾಗಿ ಆರಂಭಗೊಂಡು ಅನಂತರ ದಿನಪತ್ರಿಕೆಯಾಗಿ ಬೆಳೆದು ಬಂದು, ವೆಂಕಟಕೃಷ್ಣಯ್ಯನವರ ಶಿಷ್ಯ ಅಗರಂರಂಗಯ್ಯನವರ ಸಂಪಾದಕತ್ವದಲ್ಲಿ ಈ

ಪತ್ರಿಕೆ ಶತಮಾನದ ಸನಿಹ ಬದುಕಿತು. ಒಂದು ಕಾಲದಲ್ಲಿ ಮೈಸೂರಿನ ಜನಪ್ರಿಯ ಪತ್ರಿಕೆಗಳಲ್ಲೊಂದಾಗಿತ್ತು. ಅಗರಂ ರಂಗಯ್ಯನವರ ಕಾಲಾನಂತರ ಕೆಲಕಾಲ ನಿಂತುಹೋಗಿದ್ದ ಸಾಧ್ವಿ ಈಗ ಹೊಸ ಮಾಲೀಕತ್ವದಲ್ಲಿ ಮುಂದುವರಿದಿದೆ.

ಕನ್ನಡದಲ್ಲಿ ಪತ್ರಿಕಾ ಚಟುವಟಿಕೆಗಳು ಗರಿ ಕೆದರಿದಂತೆಲ್ಲ ಮೂರು ಮುಖ್ಯ ಪ್ರಾದೇಶಿಕ ಕೇಂದ್ರಗಳು ಪತ್ರಿಕೆಯ ದೃಷ್ಟಿಯಿಂದ ಹುಟ್ಟಿಕೊಂಡುವು. ಇವನ್ನು ಮಂಗಳೂರು, ಮೈಸೂರು ಹಾಗೂ ಧಾರಾವಾಡ ವಿಭಾಗಗಳೆಂದು ಪರಿಗಣಿಸಬಹುದು. ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದು ಕರ್ನಾಟಕ ಭಾಗದಲ್ಲಿ ಕನ್ನಡ ಪತ್ರಿಕಾ ಚಟುವಟಿಕೆಗಳಿಗೆ ಪ್ರೋತ್ಸಾಹವಿರಲಿಲ್ಲ. ಕರ್ಕಿ ಸೂರಿ ವೆಂಕಟರಮಣಶಾಸ್ತ್ರಿ **(ನೋಡಿ)** ಆ ಕಾಲದಲ್ಲೇ ಮುಂಬಯಿಗೆ ತೆರಳಿ 1885ರಲ್ಲಿ ಹವ್ಯಕ ಕಾರವಾರ ಚಂದ್ರಿಕ ಎಂಬ ಸಾಪ್ತಾಹಿಕವನ್ನು ಆರಂಭಿಸಿದ್ದು ಹಾಗೂ ಅದು ಆಗ ಮುಂಬಯಿ ಪ್ರಾಂತ್ಯಕ್ಕೆ ಸೇರಿದ್ದ ಉತ್ತರ ಕನ್ನಡ ಜಿಲ್ಲೆಯಲ್ಲೂ ಜನಪ್ರಿಯವಾಗಿದ್ದು ಉಲ್ಲೇಖನೀಯ. ಈ ಪತ್ರಿಕೆ ನಾಲ್ಕು ವರ್ಷ ಬಾಳಿತು. ಹಿತೋಪದೇಶ ಎಂಬ ಮಾಸಿಕವನ್ನೂ ಇವರು ಕೆಲಕಾಲ ನಡೆಸಿದರು. ಮಕ್ಕಳಿಗಾಗಿಯೂ ವಿಶೇಷ ಪತ್ರಿಕೆ ನಡೆಸಿದರು.

19ನೆಯ ಶತಮಾನದಲ್ಲಿ ಕನ್ನಡದಲ್ಲಿ ಪ್ರಕಟವಾದುದು ಬಹುಪಾಲು ನಿಯತಕಾಲಿಕೆಗಳೇ ಆದರೂ ಶತಮಾನದ ಕೊನೆಯ ಘಟ್ಟಗಳಲ್ಲಿ ದಿನಪತ್ರಿಕೋದ್ಯಮ ಕಾಲಿರಿಸುವುದನ್ನು ಕಾಣುತ್ತೇವೆ. ಪ್ರಪ್ರಥಮ ಕನ್ನಡ ದಿನಪತ್ರಿಕೆಯೆಂದು ಗುರುತಿಸಲಾಗಿರುವ ಸೂರ್ಯೋದಯ ಪ್ರಕಾಶಿಕ ಪ್ರಕಟಗೊಂಡಿದ್ದು 1888ರಲ್ಲಿ. ಈ ಪತ್ರಿಕೆಯ ಸ್ಥಾಪಕರು ಮೈಸೂರಿನ ಬಿ.ನರಸಿಂಗರಾವ್.

19ನೆಯ ಶತಮಾನದ ಅಂತ್ಯಕ್ಕೆ ಕನ್ನಡ ಪತ್ರಿಕಾ ಲೋಕ ಬಿರುಸಿನಿಂದ ಮುನ್ನಡೆಯುತ್ತಿದ್ದುದನ್ನು ಕಾಣುತ್ತೇವೆ. ಸುದ್ದಿಯ ವಾಹಕಗಳಾದ ದಿನಪತ್ರಿಕೆಗಳು, ಮನರಂಜನೆ ಮೂಲವಾದ ನಿಯತಕಾಲಿಕೆಗಳು ಪ್ರತ್ಯೇಕ ಕವಲಾಗಿ ಬೆಳೆಯಲಾರಂಭಿಸಿದುವು. ಹಾಗೆಯೇ ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಹೊರಡಿಸಲಾಗುವ ಪತ್ರಿಕೆಗಳ ಜೊತೆ, ಘೋಷಿಸಿಕೊಂಡ ವಿಶೇಷ ಆಸಕ್ತಿಗಳನ್ನೇ ಪೋಷಿಸುವ ವಿಶೇಷಾಸಕ್ತಿ ನಿಯತಕಾಲಿಕೆಗಳೂ ಚಲಾವಣೆಯಲ್ಲಿವೆ. 1860ರ ದಶಕದಲ್ಲೇ ಮಂಗಳೂರಿ ನಿಂದ ಉಭಯ ಗೋಪಾಲಕೃಷ್ಣ ಎಂಬವರು ಪ್ರಕಟಿಸಿದ ನ್ಯಾಯಸಂಗ್ರಹ ಎಂಬುದು ವಿಶೇಷಾಸಕ್ತಿ ನಿಯತಕಾಲಿಕ ಪ್ರತ್ಯೇಕ ಕವಲೊಡೆದುದಕ್ಕೆ ಸೂಚನೆ. ಇಂದಿನ ಜನಪ್ರಿಯ ನಿಯತಕಾಲಿಕೆಗಳಲ್ಲಿ ಕಂಡುಬರುವ ಕಥೆ, ಕವನ, ಪ್ರಬಂಧ, ಲೇಖನ, ವಿಜ್ಞಾನ, ರಾಜಕೀಯ ಮುಂತಾಗಿ ಎಲ್ಲ ವರ್ಗಗಳ ಆಸಕ್ತಿ ಗಮನ ದಲ್ಲಿರಿಸಿಕೊಂಡು ಓದುವ ಸಾಮಗ್ರಿಗಳನ್ನು ನೀಡುವ ಪತ್ರಿಕೆಗಳು ನೀಡುವ ಪತ್ರಿಕೆಗಳು ಆಗಲೂ ಇದ್ದುವು. ಕಾವ್ಯಕ್ಕೆ, ಸಾಹಿತ್ಯಕ್ಕೆ, ಧರ್ಮಕ್ಕೆ ಮುಂತಾಗಿ ಸೀಮಿತ ಆಸಕ್ತಿಯನ್ನು ಮಾತ್ರ ಪೋಷಿಸುವ ಪತ್ರಿಕೆಗಳೂ ಬಂದುವು. ಕನ್ನಡದ ಮೊದಲ ಸಾಹಿತ್ಯ ಪತ್ರಿಕೆಯೆಂದು ಗುರುತಿಸಬಹುದಾದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾಗ್ಭೂಷಣ **(ನೋಡಿ)** ಮಾಸಪತ್ರಿಕೆ 1896ರಿಂದ ಪ್ರಕಟಣೆ ಆರಂಭಿಸಿತು.

ಕನ್ನಡ ಪತ್ರಿಕೆಗಳ ದೃಷ್ಟಿಯಿಂದ 1843–1900 ರ ವರೆಗಿನದು ಆರಂಭಿಕ ಘಟ್ಟ. ಕನ್ನಡಕ್ಕೆ ಆಗಿನ್ನೂ ಪತ್ರಿಕೆ ಹೊಸ ಸರಕು; ಹೊಸ ಮಾಧ್ಯಮ 1901–1950 ರವರೆಗಿನದು ಎರಡನೆಯ ಹಂತ. ಇದು ಬೆಳೆವಣಿಗೆಯ ಕಾಲ. ಹೋರಾಟದ ಕಾಲವೂ ಹೌದು. ಇಡೀ ದೇಶಕ್ಕೆ ದೇಶದ ಎಲ್ಲ ಕ್ಷೇತ್ರಗಳಿಗೆ ಈ ಅವಧಿ ಹೋರಾಟದ ಕಾಲ. ತನ್ನ ಅಸ್ತಿತ್ವವನ್ನು ಸಾಬೀತುಪಡಿಸಬೇಕಾದ ಕಾಲ. ಪತ್ರಿಕೋದ್ಯಮ ಇದಕ್ಕೆ ಹೊರತಾಗಿರಲಿಲ್ಲ. ದೇಶದ ಸ್ವಾತಂತ್ರ್ಯಕ್ಕೆ ಒತ್ತು ನೀಡುವ, ಕನ್ನಡ ರಾಜ್ಯವನ್ನು ಸ್ಥಾಪಿಸುವ, ಹೋರಾಟದ ಜೊತೆ ತನ್ನ ಕಾಲ ಮೇಲೆ ತಾನು ನಿಲ್ಲಲು ಪತ್ರಿಕೆಗಳು ಹೋರಾಡಿದ ಕಾಲ 20ನೆಯ ಶತಮಾನದ ಮೊದಲರ್ಧದ್ದು.

ಕನ್ನಡ ಪತ್ರಿಕೆಗಳ ದೃಷ್ಟಿಯಿಂದ 20ನೆಯ ಶತಮಾನದ ಆರಂಭ ಕಾಲ ಮೈಸೂರು ಸಂಸ್ಥಾನದ ವ್ಯಾಪ್ತಿಯ ಪತ್ರಿಕೆಗಳಿಗೆ ಉತ್ತೇಜಕವಾದ ಕಾಲವಾಗಿರಲಿಲ್ಲ. ದಿವಾನ್ ರಂಗಾಚಾರ್ಲು ಅವರ ತರುವಾಯ ಮೈಸೂರು ಸಂಸ್ಥಾನದ ದಿವಾನರಾದ ಕೆ. ಶೇಷಾದ್ರಿ ಅಯ್ಯರ್ ಪತ್ರಿಕೆಗಳ ಬಗ್ಗೆ ತೀವ್ರ ಅಸಹನೆ ಹೊಂದಿದವರಾಗಿದ್ದರು. ಅದೇ ಹೊತ್ತಿಗೆ ಚಾಮರಾಜ ಒಡೆಯರ್ ನಿಧನರಾಗಿ ಅಪ್ರಾಪ್ತ ವಯಸ್ಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದರು. ಇದು ದಿವಾನರ ಪ್ರಭುತ್ವವನ್ನು ಹೆಚ್ಚಿಸಿತ್ತು. ಶೇಷಾದ್ರಿ ಅಯ್ಯರ್ ಬಳಿಕ ದಿವಾನರಾಗಿ ಬಂದ ವಿ.ಪಿ. ಮಾಧವರಾಯರು ಪತ್ರಿಕೆಗಳ ಮೇಲೆ ಕೆಂಗಣ್ಣು ಬೀರಿದರು. ಇವರ ಅನಂತರ ಬಂದ ದಿವಾನ್ ಪಿ.ಎನ್. ಕೃಷ್ಣಮೂರ್ತಿಯವರಂತೂ ಮೈಸೂರು ಸ್ಟ್ಯಾಂಡರ್ಡ್ ಪತ್ರಿಕೆಯ ಪ್ರತಿನಿಧಿಯನ್ನು ಪ್ರಜಾಪ್ರತಿನಿಧಿ ಸಭೆಯಿಂದ ಹೊರಗಟ್ಟಿ ಪತ್ರಿಕೆಗಳಿಗೆ ಪಾಠ ಕಲಿಸುವುದಾಗಿ ಎಚ್ಚರಿಸಿದ್ದರು. ನಿರಂತರವಾಗಿ ದಿವಾನರುಗಳ ದುರಾಗ್ರಹಕ್ಕೆ ತುತ್ತಾಗಿ ಪತ್ರಿಕೆಗಳು ಅನುಭವಿಸಿದ ಶಿಕ್ಷೆಯೆಂದರೆ 1908ರ ಮೈಸೂರು ಸಂಸ್ಥಾನದ ಪತ್ರಿಕಾ ಪ್ರತಿಬಂಧಕ ಶಾಸನ. ಈ ಶಾಸನಕ್ಕನುಗುಣವಾಗಿ ಮೈಸೂರ ಸಂಸ್ಥಾನದಲ್ಲಿ ಪತ್ರಿಕೆ ಪ್ರಕಟಿಸುವವರು ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕಿತ್ತು. ಸರ್ಕಾರ ಯಾವ ಸಮಯದಲ್ಲಿ ಬೇಕಾದರೂ ಯಾವುದೇ ಪತ್ರಿಕೆಗೆ ನೀಡಿದ್ದ ಅನುಮತಿಯನ್ನು ವಾಪಸ್ಸು ಪಡೆಯಬಹುದಿತ್ತು. ಅನುಮತಿ ಪಡೆಯದೇ ಅಥವಾ ಅನುಮತಿ ರದ್ದಾದ ಬಳಿಕವೂ ಪತ್ರಿಕೆ ಹೊರಡಿಸುವವರು ಶಿಕ್ಷೆಗೆ ಗುರಿಯಾಗಬೇಕಿತ್ತು. ರಾಜ್ಯದಿಂದ ಅಂಥವರನ್ನು ಗಡಿಪಾರು ಮಾಡಲಿಕ್ಕೂ ಕಾನೂನಿನಲ್ಲಿ ಅವಕಾಶವಿತ್ತು. ಹೀಗೆ ಸರ್ಕಾರದ ದುರಾಗ್ರಹಕ್ಕೆ ತುತ್ತಾದವರಲ್ಲಿ ಕನ್ನಡ ನಡೆಗನ್ನಡಿ ಪತ್ರಿಕೆಯ ಸಂಪಾದಕರಾಗಿದ್ದ ಎಂ. ಗೋಪಾಲ ಅಯ್ಯಂಗಾರ್ ಮತ್ತು ಎಂ. ಶ್ರೀನಿವಾಸ ಅಯ್ಯಂಗಾರ್ ಸಹೋದರರನ್ನು ಹೆಸರಿಸಬೇಕು. 1895ರಲ್ಲೇ ಆರಂಭವಾಗಿದ್ದ ಇವರ ಪತ್ರಿಕೆ 1908ರ ಪತ್ರಿಕಾ ಶಾಸನಕ್ಕೆ ಪ್ರತೀಕಾರವಾಗಿ ಬೆಂಗಳೂರಿನಿಂದ ಅನಿವಾರ್ಯವಾಗಿ ಮದರಾಸಿಗೆ ವರ್ಗಾವಣೆಗೊಳ್ಳಬೇಕಾಯ್ತು. ಈ ಅವಧಿಯಲ್ಲಿ ಆದ ಸಾಮಾಜಿಕ ಸಂಘಟನೆಗಳ ಫಲವಾಗಿ ಕೆಲವು ಸಮುದಾಯಗಳು ತಮ್ಮ ಮುಖವಾಣಿಯಾಗಿ ಪತ್ರಿಕೆಗಳನ್ನು ಹೊರತಂದವು. ಅವುಗಳಲ್ಲಿ ಬೆಂಗಳೂರಿನಿಂದ ಒಕ್ಕಲಿಗರ ಸಂಘದವರು ಹೊರತಂದ ಒಕ್ಕಲಿಗರ ಪತ್ರಿಕೆ (1906) ನಗರದಲ್ಲಿ ಬೇಗ ಜನಪ್ರಿಯತೆ ಗಳಿಸಿತು.

ಕನ್ನಡದ ಹೆಸರಾಂತ ಲೇಖಕ ಡಿ.ವಿ. ಗುಂಡಪ್ಪ **(ನೋಡಿ)** ಭಾರತಿ ಎಂಬ ರಾಷ್ಟ್ರೀಯ ದಿನಪತ್ರಿಕೆಯನ್ನು 1907ರಲ್ಲಿ ಆರಂಭಿಸಿದರು. 1908ರ ಕರಾಳ ಪತ್ರಿಕಾ ಶಾಸನಕ್ಕೆ ಪ್ರತಿರೋಧವಾಗಿ ಭಾರತಿಯ ಪ್ರಕಟಣೆ ನಿಲ್ಲಿಸಿದರು. ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದ ತಿರುಮಲೆ ತಾತಾಚಾರ್ಯ ಶರ್ಮರು ತಮ್ಮ ಸಂಪಾದಕೀಯ ಅಂಕಣವನ್ನು ಖಾಲಿ ಬಿಡುವ ಮೂಲಕ ಶಾಸನಕ್ಕೆ ತಮ್ಮ ಪ್ರತಿಭಟನೆ ಸೂಚಿಸಿದರು. ವೆಂಕಟಕೃಷ್ಣಯ್ಯನವರೂ ತಮ್ಮ ಪ್ರಕಟಣೆಗಳನ್ನು ನಿಲ್ಲಿಸಿ ಈ ಶಾಸನಕ್ಕೆ ವಿರೋಧ ವ್ಯಕ್ತಪಡಿಸಿದರು. ಮುಂದೆ ಮೈಸೂರು ಸಂಸ್ಥಾನಕ್ಕೆ ಎಂ. ವಿಶ್ವೇಶ್ವರಯ್ಯ ದಿವಾನರಾಗಿ ಬಂದ ಬಳಿಕ ಪರಿಸ್ಥಿತಿ ಬದಲಾಯಿತು. ಇವರ ಕಾಲದಲ್ಲಿ ಶಾಸನಕ್ಕೆ ತಿದ್ದುಪಡಿ ಮಾಡಲಾಯಿತು. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪೂರ್ಣ ಗೌರವವಿದ್ದ ವಿಶ್ವೇಶ್ವರಯ್ಯನವರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಕಮರಿಹೋಗಿದ್ದ ಕನ್ನಡ ಪತ್ರಿಕೆಗಳು ಮತ್ತೆ ಚಿಗುರಲು ಅನುಕೂಲವಾಯಿತು. ಪತ್ರಿಕೋದ್ಯಮಕ್ಕೆ ಪೂರಕವಾದ ಈ ವಾತಾವರಣದಲ್ಲಿ ಕನ್ನಡದ ಉತ್ಕೃಷ್ಟ ಪತ್ರಕರ್ತರಾಗಿ ಬೆಳೆದ ಡಿ. ವಿ. ಗುಂಡಪ್ಪನವರು 1907ರಲ್ಲೇ ಬೆಂಗಳೂರಿನಿಂದ ಸಮಾಚಾರ ಸಂಗ್ರಹವೆಂಬ ದಿನಪತ್ರಿಕೆ ಹೊರಡಿಸಿದ್ದರು. ಇವರ ಇನ್ನಿತರ ಪತ್ರಿಕಾ ಸಾಹಸಗಳೆಂದರೆ ಸುಮತಿ (1909) ಎಂಬ ವಾರಪತ್ರಿಕೆ. ಕರ್ನಾಟಕ (1913–21) ಎಂಬ ಅರ್ಧವಾರ ಪತ್ರಿಕೆ, ಕರ್ನಾಟಕ ಜೀವನ ಎಂಬ (1916) ಮಾಸಪತ್ರಿಕೆ ಹಾಗೂ ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆಗಳು (1909–23).



ಡಿ.ವಿ. ಗುಂಡಪ್ಪ

20ನೆಯ ಶತಮಾನದ ಆರಂಭದಲ್ಲಾಗಲೇ ಕನ್ನಡದ ಪತ್ರಿಕೋದ್ಯಮವನ್ನೂ ಸೇರಿಸಿ ಇಡೀ ಭಾರತೀಯ ಪತ್ರಿಕೋದ್ಯಮಕ್ಕೆ ಸ್ವಾತಂತ್ರ್ಯ ಹೋರಾಟದ ಗಾಳಿ ಬೀಸತೊಡಗಿತ್ತು. 1884ರಲ್ಲೇ ಸ್ಥಾಪನೆಗೊಂಡ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಂಪೂರ್ಣ ಸ್ವರಾಜ್ಯ ತನ್ನ ಗುರಿಯೆಂದು ಘೋಷಿಸಿತ್ತು. ಬಾಲ ಗಂಗಾಧರ ಟಿಳಕ, ಗೋಪಾಲಕೃಷ್ಣ ಗೋಖಲೆ, ಮೋತಿಲಾಲ್ ಘೋಷ್ ಮೊದಲಾದ ಕಾಂಗ್ರೆಸ್ಸಿನ ನಾಯಕರು ಬ್ರಿಟಿಷರ ಜೊತೆ ಸಂಗ್ರಾಮಕ್ಕೆ ಇಳಿದಿದ್ದರು. ವಿಶೇಷವೆಂದರೆ ಈ ನಾಯಕರೆಲ್ಲರಿಗೂ ಒಂದಿಲ್ಲೊಂದು ಪತ್ರಿಕೆಯ ಜೊತೆ ಸಂಪರ್ಕವಿತ್ತು. ಇದು ಕಾರಣವಾಗಿ ಭಾರತೀಯ ದೇಶಭಾಷಾ ಪತ್ರಿಕೋದ್ಯಮವೇ ನೇರವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದಂತೆ ಭಾಸವಾಗತೊಡಗಿತ್ತು. ಆಂಗ್ಲರ ಒಡೆತನವಿದ್ದ ಇಂಗ್ಲಿಷ್ ಪತ್ರಿಕೆಗಳನ್ನು ಹೊರತುಪಡಿಸಿ ಇತರ ಎಲ್ಲಾ ದೇಶ ಭಾಷಾ ಪತ್ರಿಕೆಗಳು ಸ್ವಾತಂತ್ರ್ಯದ ಪರವಾಗಿದ್ದುವು. ಸ್ವಾತಂತ್ರ್ಯ ಚಳವಳಿಗೆ ಒತ್ತುಕೊಟ್ಟು ವರದಿಗಳನ್ನು ಪ್ರಕಟಿಸುತ್ತಿದ್ದುವು. 1920ರ ಬಳಿಕ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚುಕ್ಕಾಣಿ ಹಿಡಿದ ಮಹಾತ್ಮಾ ಗಾಂಧಿ ಸ್ವತಃ ಶ್ರೇಷ್ಠ ಪತ್ರಕರ್ತರಾಗಿದ್ದರು. ಕಾಂಗ್ರೆಸ್ಸಿನ ಮೊದಲ ಸಾಲಿನ ನಾಯಕರಾದ ಜವಾಹರಲಾಲ್ ನೆಹರೂ ಪತ್ರಿಕೆ ನಡೆಸುತ್ತಿದ್ದರು. ಆ ಕಾಲದ ಹಿರಿಯ ಕಾಂಗ್ರೆಸ್ ನಾಯಕರಿಗೆಲ್ಲ ಪತ್ರಿಕಾ ಸಂಪರ್ಕವಿತ್ತೆಂದು ಸಾಮಾನ್ಯವಾಗಿ ಅಭಿಪ್ರಾಯ ಪಡಬಹುದು.

ದೇಶ ಭಾಷಾ ಪತ್ರಿಕೆಗಳಲ್ಲಿ ಕಂಡುಬಂದ ಈ ಪರಿಸ್ಥಿತಿಯಿಂದ ಕನ್ನಡ ಪತ್ರಿಕೋದ್ಯಮ ಭಿನ್ನವಾಗಿರಲಿಲ್ಲ. ಆಗಿನ ಕಾಲದಲ್ಲಿ ಪ್ರಕಟಗೊಂಡ ಪತ್ರಿಕೆಗಳ ಹೆಸರನ್ನು ಗಮನಿಸಿದರೆ ಅವುಗಳಿಗಿದ್ದ ಸ್ವರಾಜ್ಯದ ಕನಸು, ನವ ಆರಂಭದ ಹುಮ್ಮಸ್ಸು, ದೇಶ ಸಾಕಾರಗೊಳ್ಳಬೇಕೆಂಬ ಆಸೆ ವ್ಯಕ್ತವಾಗುತ್ತದೆ. ಮೈಸೂರಿನ ದೇಶಾಭಿಮಾನಿ (1898), ತಾಯಿನಾಡು (1926), ಶಿವಮೊಗ್ಗದ ಶುಭೋದಯ (1914), ಬೆಂಗಳೂರಿನ ಭಾರತೀ (1902), ನವಜೀವನ

(1929), ಉಡುಪಿಯ ಸತ್ಯಾಗ್ರಹ (1921), ಉದಯ ಭಾರತ (1927), ಉಡುಪಿಯ ದೇಶಬಂಧು (1926), ಮಂಗಳೂರಿನ ದೇಶಭಕ್ತ (1980), ಬಿಜಾಪುರದ ನವೀನ ಭಾರತ (1922), ಹುಬ್ಬಳ್ಳಿಯ ದೇಶಬಂಧು (1930), ಮಂಡ್ಯದ ಭಾರತ ವರ್ಷ (1909), ತುಮಕೂರಿನ ಭಾರತ ಸಂದೇಶ (1927)– ಹೀಗೆ 20ನೆಯ ಶತಮಾನದ ಮೊದಲ ಮೂರು ದಶಕಗಳಲ್ಲಿ ಪ್ರಕಟಗೊಂಡ ಪತ್ರಿಕೆಗಳಲ್ಲಿ ಸ್ವರಾಜ್ಯದ ಹೊಸ ದೇಶದ ಕನಸು ನಿಚ್ಚಳವಾಗಿ ಪ್ರಕಟವಾಗುತ್ತದೆ.

ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಹೊತ್ತಿನಲ್ಲೇ ಕನ್ನಡಿಗರು ಇನ್ನೊಂದು ಹೋರಾಟದಲ್ಲಿ ತೊಡಗಿಕೊಂಡಿದ್ದರು. ಅದು ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ಭಾಗಗಳನ್ನೆಲ್ಲ ಒಂದು ಆಡಳಿತಾಂಗವಾಗಿ ಕಟ್ಟಿ ಹೊಸ ಕನ್ನಡ ರಾಜ್ಯವನ್ನು ರಚಿಸಬೇಕೆಂಬ ಕನಸು. ಅನೇಕರಿಗೆ ಭಾರತದ ಉದಯದಷ್ಟೇ ಕರ್ನಾಟಕ ಏಕೀಕರಣ (**ನೋಡಿ**) ಮುಖ್ಯವಾಗಿತ್ತು. ಅದಕ್ಕಾಗಿ ಪ್ರಾಣತೆರಲೂ ಜನ ಸಿದ್ಧವಿದ್ದರು. ಈ ಭಾವನೆಯನ್ನು ಆ ಕಾಲದ ಪತ್ರಿಕೆಗಳ ಹೆಸರುಗಳಲ್ಲೇ ಕಾಣುತ್ತೇವೆ. ಬಿಜಾಪುರದ ಕರ್ನಾಟಕ ಭಾಷಾ ಸೇವಕ (1894), ಕರ್ನಾಟಕ ವೃತ್ತ (1892), ಕರ್ನಾಟಕ ವೈಭವ (1892, ಬೆಂಗಳೂರಿನ ಕರ್ನಾಟಕ (1913–21), ಕರ್ನಾಟಕ ಜೀವನ (1916), ಬೆಳಗಾಂವಿಯ ಸಂಯುಕ್ತ ಕರ್ನಾಟಕ (1929), ನಂಜನಗೂಡಿನ ಕರ್ನಾಟಕ ನಂದಿನಿ (1916)– ಹೀಗೆ ಸರ್ವವೂ ಕರ್ನಾಟಕಮಯವಾಗಿದ್ದ ಕಾಲವದು. ಹಾಗೆಯೇ ಮಂಗಳೂರಿನ ಕನ್ನಡ ಕೋಗಿಲೆ (1916), ಬೆಂಗಳೂರಿನ ಕನ್ನಡ ಜ್ಯೋತಿ (1937), ಕನ್ನಡ ವಾಣಿ (1933), ಮಂಗಳೂರಿನ ಕನ್ನಡ ಕೇಸರಿ (1885) ಮುಂತಾಗಿ ಕನ್ನಡ ಪ್ರಜ್ಞೆ ಜಾಗೃತಗೊಳ್ಳುತ್ತಿರುವುದನ್ನು ಪತ್ರಿಕೆಗಳ ಹೆಸರುಗಳ ಮೂಲಕವೇ ಗುರುತಿಸಬಹುದು.


ತಿ.ತಾ. ಶರ್ಮ

ಸುದೀರ್ಘ ಹೋರಾಟದ ಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಕನ್ನಡಿಗರ ಒತ್ತಾಸೆಯ ಫಲವಾಗಿ, ಭಾಷಾವಾರು ಪ್ರಾಂತ್ಯಗಳ ರಚನೆಯ ವೇಳೆ ಕನ್ನಡ ರಾಜ್ಯವೂ ಉದಯವಾಯಿತು. ವಿಶೇಷವೆಂದರೆ ಪ್ರಜೆಗಳ ಅಭೀಪ್ಸೆ ಸಾಕಾರಗೊಂಡು ಭಾರತ ಸರ್ಕಾರ ಮೈಸೂರು ರಾಜ್ಯ ರಚಿಸಿ ಪ್ರಜೆಗಳ ಆಶಯಕ್ಕೆ ಮಾನ್ಯತೆ ಬಂದುದರ ಪ್ರತಿಬಿಂಬವೋ ಎನ್ನುವಂತೆ 1930 ರಿಂದ 60ರ ಅವಧಿಯಲ್ಲಿ ಪ್ರಕಟವಾದ ಅನೇಕ ಪತ್ರಿಕೆಗಳ ಹೆಸರುಗಳಿವೆ. ಉದಾಹರಣೆಗೆ ಕನ್ನಡದಲ್ಲಿ ಹಿರಿಯ ದಿನಪತ್ರಿಕೆ ಪ್ರಜಾವಾಣಿ ಪ್ರಾರಂಭವಾದುದು 1948ರಲ್ಲಿ. ಪ್ರಜಾಬಂಧು (1932), ಪ್ರಜಾಮತ (1931)– ಈ ಪತ್ರಿಕೆಗಳು ಈ ಮೊದಲು ಪ್ರಕಟವಾಗುತ್ತಿದ್ದವು.

20ನೆಯ ಶತಮಾನ ಆದಿಯಿಂದ ಸುಮಾರು ಐದು ದಶಕಗಳ ಕಾಲದವರೆಗೆ ಕನ್ನಡ ಪತ್ರಿಕೋದ್ಯಮದಲ್ಲಿ ಮಹತ್ತರ ಸಾಧನೆ ಮಾಡಿದ ಅನೇಕ ಪತ್ರಿಕೆಗಳು ಜೀವ ತಳೆದುವು. ಹಾಗೆಯೇ ಕರ್ನಾಟಕ ಸಂದರ್ಭಕ್ಕೆ ಬಹುಮುಖ್ಯ ಕೊಡುಗೆಗಳನ್ನು ನೀಡಿದ ಅನೇಕ ಮಹನೀಯರೂ ಈ ಅವಧಿಯಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದು ಉಲ್ಲೇಖನೀಯ. ಈ ಅವಧಿಯಲ್ಲಿ ಹುಟ್ಟಿದ್ದ ಹೆಚ್ಚಿನ ಪತ್ರಿಕೆಗಳು ಈಗ ಇಲ್ಲ. ಪತ್ರಕರ್ತರೂ ಇಲ್ಲ. ಆದರೆ ಕನ್ನಡ ಪತ್ರಿಕಾ ಚರಿತ್ರೆಯಲ್ಲಿ ದಾಖಲಾಗಲೇಬೇಕಾದ ಕೆಲವು ಹೆಸರುಗಳಿವೆ. ಪಿ. ಆರ್. ರಾಮಯ್ಯನವರ ತಾಯಿನಾಡು (1926), ಎಸ್.ಎಸ್. ಸೀತಾರಾಮಶಾಸ್ತ್ರಿಗಳ ದೇಶಬಂಧು (1931), ಎಂ. ಸೀತಾರಾಮ ಶಾಸ್ತ್ರಿಗಳ ವೀರಕೇಸರಿ (1928), ತಿರುಮಲೆ ತಾತಾಚಾರ್ಯ ಶರ್ಮರ ವಿಶ್ವಕರ್ನಾಟಕ (1925), ಬಿ.ಎನ್. ಗುಪ್ತರ ಪ್ರಜಾಮತ (1931), ಆಲೂರು ವೆಂಕಟರಾಯರ ಜಯಕರ್ನಾಟಕ (1922), ಕಡೆಂಗೋಡ್ಲು ಶಂಕರ ಭಟ್ಟರ ರಾಷ್ಟ್ರಬಂಧು (1928), ಎಚ್.ಕೆ. ವೀರಣ್ಣಗೌಡರ ಚಿತ್ರಗುಪ್ತ (1928), ಪಿ.ಶೇಷಪ್ಪನವರ ಕಿಡಿ (1949)– ಇವು ಈ ಅವಧಿಯಲ್ಲಿ ಬಹು ಪಾಲು ಕನ್ನಡ ಪತ್ರಿಕೋದ್ಯಮ ನಾಯಕತ್ವ ವಹಿಸಿದ್ದವು.

20ನೆಯ ಶತಮಾನದ ಪೂರ್ವಾರ್ಧದಲ್ಲಿ ಆರಂಭವಾಗಿ ಇಂದಿಗೂ ಪ್ರಕಟಣೆಯಲ್ಲಿದ್ದು ಕನ್ನಡ ಪ್ರಮುಖ ದಿನಪತ್ರಿಕೆಗಳೆನಿಸಿರುವ ಎರಡು ಪತ್ರಿಕೆಗಳ ಬಗ್ಗೆ ಇಲ್ಲಿ ಪ್ರತ್ಯೇಕ ಉಲ್ಲೇಖ ಅಗತ್ಯ. ಅದರಲ್ಲಿ ಮೊದಲಿನದು ಸಂಯುಕ್ತ ಕರ್ನಾಟಕ (**ನೋಡಿ**)ವಾದರೆ ಇನ್ನೊಂದು ಪ್ರಜಾವಾಣಿ.

ಈಗ ಹುಬ್ಬಳ್ಳಿಯಲ್ಲಿ ಪ್ರಧಾನ ಕಚೇರಿಯನ್ನೂ ಬೆಂಗಳೂರಿನಲ್ಲಿ ಇನ್ನೊಂದು ಆವೃತ್ತಿಯನ್ನೂ ಹೊಂದಿರುವ ಸಂಯುಕ್ತ ಕರ್ನಾಟಕ, ಕರ್ನಾಟಕ ಏಕೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ ಪತ್ರಿಕೆ. ಇದು ಸ್ವಾತಂತ್ರ್ಯ ಹೋರಾಟದಲ್ಲೂ ಉತ್ತರ ಕರ್ನಾಟಕದಲ್ಲಿ ಮುಂಚೂಣಿಯಲ್ಲಿತ್ತು. ಇಂದಿಗೂ ಕನ್ನಡದ ಐದು ದೊಡ್ಡ ದಿನಪತ್ರಿಕೆಗಳ ಪೈಕಿ ಅತ್ಯಂತ ಹಿರಿಯ ಪತ್ರಿಕೆ. ಕರ್ಮವೀರ 1921ರ ವೇಳೆಗೆ ಧಾರವಾಡದಲ್ಲಿ ಪ್ರಾರಂಭವಾಗಿದ್ದ ವಾರಪತ್ರಿಕೆ. ರಂಗನಾಥ ದಿವಾಕರರು ಸಂಪಾದಕರಾಗಿದ್ದಾಗ ಕರ್ಮವೀರ (**ನೋಡಿ**) ಸಂಯುಕ್ತ ಕರ್ನಾಟಕದ ಸೋದರ ಪತ್ರಿಕೆಯಾಗಿ ಬೆಳೆಯಿತು. ಲೋಕ ಶಿಕ್ಷಣ ಟ್ರಸ್ಟ್ ಇನ್ನೊಂದು ಪ್ರಕಟಣೆ ಕಸ್ತೂರಿ (**ನೋಡಿ**) ಮಾಸಿಕ. ಕಳೆದ ಐದು ದಶಕಗಳಿಂದ ತನ್ನತನವನ್ನು ಉಳಿಸಿಕೊಂಡಿರುವ ಕಸ್ತೂರಿ ಕನ್ನಡಿಗರ ರೀಡರ್ಸ್ ಡೈಜೆಸ್ಟ್ ಎನಿಸಿದೆ. ಕರ್ಮವೀರ ಮಧ್ಯದಲ್ಲಿ ಸ್ಥಗಿತ ಕಂಡಿದ್ದರೂ ಪುನರಾರಂಭಗೊಂಡಿತು.

ಕನ್ನಡದಲ್ಲಿ ಆಧುನಿಕ ವೃತ್ತಿಪರ ಪತ್ರಿಕೋದ್ಯಮ ಆರಂಭಗೊಂಡಿದ್ದು ಪ್ರಜಾವಾಣಿ (**ನೋಡಿ**) ಪತ್ರಿಕೆ ಎಂದು ಅನೇಕರು ಗುರುತಿಸುತ್ತಾರೆ. ಪ್ರಜಾವಾಣಿ 1948ರಲ್ಲಿ ಡೆಕ್ಕನ್ ಹೆರಾಲ್ಡ್ ಇಂಗ್ಲಿಷ್ ಪತ್ರಿಕೆಯ ಸಹೋದರಿ ಪ್ರಕಟಣೆಯಾಗಿ ಆರಂಭಗೊಂಡಿತು. ಬೆಂಗಳೂರಿನಲ್ಲಿ ಆ ಕಾಲದ ಹಿರಿಯ ಸಮಾಜ ಕಾರ್ಯಕರ್ತರಾಗಿದ್ದ ನೆಟ್ಟಕಲ್ಲಪ್ಪ ಪ್ರಜಾವಾಣಿಯ ಸ್ಥಾಪಕರು. ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ಪ್ರಕಾಶನ ಸಂಸ್ಥೆಯಡಿ ಪ್ರಜಾವಾಣಿ ಪ್ರಕಟಗೊಳ್ಳುತ್ತಿದ್ದು ಪ್ರಜಾವಾಣಿಯ ಸ್ಥಾಪಕ ಸಂಪಾದಕರು ಬಿ.ಪುಟ್ಟಸ್ವಾಮಯ್ಯ (**ನೋಡಿ**), ಅನಂತರ ಟಿ.ಎಸ್. ರಾಮಚಂದ್ರರಾವ್ (**ನೋಡಿ**), ಖಾದ್ರಿ ಶಾಮಣ್ಣ (**ನೋಡಿ**), ಟಿ.ಎನ್. ಕೃಷ್ಣಮೂರ್ತಿ (**ನೋಡಿ**),ಎಂ.ಬಿ.ಸಿಂಗ್ (**ನೋಡಿ**) ಇವರ ಮಾರ್ಗದರ್ಶನದಲ್ಲಿ ಪ್ರಜಾವಾಣಿ ಕನ್ನಡದ ಮುಂಚೂಣಿಯ ಪತ್ರಿಕೆಯಾಗಿ ಬೆಳೆಯಿತು. ಪ್ರಜಾವಾಣಿಯ ಜೊತೆ ಸುಧಾ ವಾರಪತ್ರಿಕೆ ಹಾಗೂ ಮಯೂರ ಮಾಸಿಕಗಳು ದಿ ಪ್ರಿಂಟರ್ಸ್ ಮೈಸೂರು ಪ್ರಕಾಶನದ ಕೊಡುಗೆಗಳಾಗಿವೆ.

ಕನ್ನಡದ ದೊಡ್ಡ ದಿನಪತ್ರಿಕೆಗಳಲ್ಲಿ ನಾಲ್ಕು ದಶಕಗಳಿಗೂ ಹೆಚ್ಚಿನ ಚರಿತ್ರೆಯಿರುವ ಇನ್ನೊಂದು ಪತ್ರಿಕೆ ಕನ್ನಡ ಪ್ರಭ (**ನೋಡಿ**). ದೇಶದ ಪ್ರಮುಖ ಪತ್ರಿಕಾ ಸಮೂಹಗಳಲ್ಲಿ ಒಂದೆನಿಸಿರುವ ಇಂಡಿಯನ್ ಎಕ್ಸ್‌ಪ್ರೆಸ್ ಗುಂಪಿಗೆ ಸೇರಿದ ಕನ್ನಡ ಪತ್ರಿಕೆ. ಇದು ಆರಂಭಗೊಂಡಿದ್ದು 1957ರಲ್ಲಿ. ಆಗಿನ ಕಾಲದ ಹಿರಿಯ ಪತ್ರಕರ್ತರಾಗಿದ್ದ ಎನ್.ಎಸ್. ಸೀತಾರಾಮಶಾಸ್ತ್ರಿಗಳು ಕನ್ನಡ ಪ್ರಭದ ಸ್ಥಾಪಕ ಸಂಪಾದಕರು.

ಕರಾವಳಿ ಕರ್ನಾಟಕದ ಜನಪ್ರಿಯ ದೈನಿಕ ಉದಯವಾಣಿ (**ನೋಡಿ**), ಕನ್ನಡದ ಇನ್ನೊಂದು ದೊಡ್ಡ ದಿನಪತ್ರಿಕೆ. 1941ರಲ್ಲಿ ಮಂಗಳೂರಿನಲ್ಲಿ ನವಭಾರತ ಎಂಬ ದೈನಿಕ ಆರಂಭವಾಯಿತು. ವಿ.ಎಸ್. ಕುಡ್ವರು ಈ ಪತ್ರಿಕೆಯ ಸಂಪಾದಕರಾಗಿದ್ದರು. ಕರಾವಳಿಯಲ್ಲಿ ನವಭಾರತ ಅತ್ಯಂತ ಜನಪ್ರಿಯವಾಗಿದ್ದ ವೇಳೆ ಅದಕ್ಕೆ ಪ್ರತಿಸ್ಪರ್ಧಿಯೆಂಬಂತೆ ಉದಯವಾಣಿ ಆರಂಭವಾಗಿದ್ದು 1970ರಲ್ಲಿ. ಉದಯವಾಣಿ ಮಣಿಪಾಲ ಸಮೂಹದ ಕೊಡುಗೆ. ಮಣಿಪಾಲ ಸಮೂಹದಿಂದ ಉದಯವಾಣಿ ದೈನಿಕವಲ್ಲದೆ ತರಂಗ ವಾರಪತ್ರಿಕೆ, ತುಷಾರ ಮಾಸಿಕ, ರೂಪತಾರಾ ಪಾಕ್ಷಿಕಗಳೂ ಪ್ರಕಟಗೊಳ್ಳುತ್ತಿವೆ. ತರಂಗ ವಾರಪತ್ರಿಕೆಗೆ ಸ್ಥಾಪಕ ಸಂಪಾದಕರು ಸಂತೋಷಕುಮಾರ ಗುಲ್ವಾಡಿ. 1983ರಲ್ಲಿ ತರಂಗ ಅತ್ಯಂತ ವೇಗವಾಗಿ ತನ್ನ ಪ್ರಸಾರವನ್ನು ಹೆಚ್ಚಿಸಿಕೊಂಡಿತು. ಕೇಂದ್ರ ಸರ್ಕಾರ ಕಾಲದಿಂದ ಕಾಲಕ್ಕೆ ಪತ್ರಿಕೆಗಳನ್ನು ಸಣ್ಣ, ಮಧ್ಯಮ ಮತ್ತು ದೊಡ್ಡ ಪತ್ರಿಕೆಗಳೆಂದು ವಿಂಗಡಿಸುತ್ತದೆ. ಈ ರೀತಿಯ ವರ್ಗೀಕರಣಕ್ಕೆ ಪತ್ರಿಕೆಗಳ ಪ್ರಸಾರ ಸಂಖ್ಯೆಯೇ ಆಧಾರ. ಈಗ ಚಾಲ್ತಿಯಲ್ಲಿರುವ ನಿಯಮದ ಪ್ರಕಾರ 25 ಸಾವಿರ ಪ್ರತಿಗಳವರೆಗೆ ಪ್ರಸಾರವಿರುವ ಪತ್ರಿಕೆಗಳನ್ನು ಸಣ್ಣ ಪತ್ರಿಕೆಗಳೆಂದೂ 25,000 ದಿಂದ 50,000 ವರೆಗಿನ ಪ್ರಸಾರ ಹೊಂದಿರುವ ಪತ್ರಿಕೆಗಳನ್ನು ಮಧ್ಯಮ ಪ್ರಮಾಣದ ಪತ್ರಿಕೆಗಳೆಂದೂ 75 ಸಾವಿರಕ್ಕೂ ಹೆಚ್ಚು ಪ್ರಸಾರವಿರುವ ಪತ್ರಿಕೆಗಳನ್ನು ದೊಡ್ಡ ಪತ್ರಿಕೆಗಳೆಂದೂ ಗುರುತಿಸಲಾಗುತ್ತದೆ. ಇಂಡಿಯಾ 2000 ವರದಿಯ ಪ್ರಕಾರ ಕನ್ನಡದಲ್ಲಿ ನಿಖರವಾಗಿ ಪತ್ರಿಕೆಗಳ ಪ್ರಸಾರ ಎಷ್ಟೆಂದು ಪತ್ರಿಕಾ ರಿಜಿಸ್ಟ್ರಾರ್ ಅವರಿಗೆ ವರದಿ ಸಲ್ಲಿಸಿದ ಪತ್ರಿಕೆಗಳು 72 ಮಾತ್ರ. ಈ 72 ಪತ್ರಿಕೆಗಳ ಪೈಕಿ 8 ಪತ್ರಿಕೆಗಳು ದೊಡ್ಡ ಪ್ರಮಾಣದವು, 21 ಪತ್ರಿಕೆಗಳು ಮಧ್ಯಮ ಪ್ರಮಾಣದವು, 43 ಪತ್ರಿಕೆಗಳು ಸಣ್ಣ ಪತ್ರಿಕೆಗಳು ಎಂದು ಗುರುತಿಸಲಾಗಿದೆ. ಈಗ ಕರ್ನಾಟಕದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳ ಒಟ್ಟು ಸಂಖ್ಯೆ 1455. ಇವುಗಳಲ್ಲಿ 72 ಪತ್ರಿಕೆಗಳ ಪ್ರಸಾರವನ್ನು ಮಾತ್ರ ನಿಖರವಾಗಿ ಗುರುತಿಸಲು ಸಾಧ್ಯವಾಗಿರುವುದರಿಂದ ಅವುಗಳಲ್ಲಿ ಮಾತ್ರ ಪತ್ರಿಕೆಗಳ

ಪಿ.ಆರ್. ರಾಮಯ್ಯ

ವರ್ಗೀಕರಣ ಮಾಡಬೇಕಾಗುತ್ತದೆ. ಉಳಿದ ಬಹುಸಂಖ್ಯಾತ ಪತ್ರಿಕೆಗಳು ಸಣ್ಣ ಪತ್ರಿಕೆಗಳೇ ಆಗಿದ್ದು ಇವುಗಳ ಪ್ರಸಾರದ ಬಗ್ಗೆ ನಿಖರವಾದ ಮಾಹಿತಿ ಪಡೆಯಲು ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಪತ್ರಿಕಾ ರಿಜಿಸ್ಟ್ರಾರ್ ಅವರ ಬಳಿಯೂ ಇಂಥ ಮಾಹಿತಿ ಲಭ್ಯವಿರುವುದಿಲ್ಲ. ಪ್ರಸಾರದ ಮಟ್ಟಿಗೆ ಆಯಾ ಪತ್ರಿಕಾ ಸಂಪಾದಕರ ಹೇಳಿಕೆಗಳನ್ನೇ ಅವಲಂಬಿಸಬೇಕಾಗುತ್ತದೆ.

ಕನ್ನಡದ 72 ಪತ್ರಿಕೆಗಳಲ್ಲಿ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿ, ಕನ್ನಡ ಪ್ರಭ, ಸುಧಾ, ತರಂಗ– ಈ ಪತ್ರಿಕೆಗಳು ದೊಡ್ಡ ಪತ್ರಿಕೆಗಳು. ಇವುಗಳ ಪೈಕಿ ಒಂದು ಲಕ್ಷಕ್ಕೂ ಹೆಚ್ಚು ಪ್ರಸಾರವಿರುವ ದಿನಪತ್ರಿಕೆ ಒಂದೇ ಒಂದು. ಆದರೆ ನಿಯತಕಾಲಿಕೆಗಳು ಮೂರು. ಹಾಗೆಯೇ 75 ಸಾವಿರಕ್ಕೂ ಹೆಚ್ಚು ಪ್ರಸಾರವಿರುವ ದಿನಪತ್ರಿಕೆಗಳು ಮೂರು ಹಾಗೂ ನಿಯತಕಾಲಿಕ ಒಂದು ಮಾತ್ರ. ಈಗ ಈ ಪತ್ರಿಕೆಗಳ ಒಟ್ಟು ಪ್ರಸಾರ ಸು. 960 ಸಾವಿರ ಪ್ರತಿಗಳು.

ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಪತ್ರಿಕೋದ್ಯಮ ಸಾಕಷ್ಟು ಬೆಳೆದಿದೆ, ಬದಲಾಗಿದೆ. ಹೊಸನೀರು ಬಂದು ಹಳೆನೀರು ಕೊಚ್ಚಿ ಹೋಗಿದೆ. ಆ ವೇಳೆಗಾಗಲೇ ಗಟ್ಟಿಯಾಗಿ ಬೇರೂರಿದ್ದ ಸಂಯುಕ್ತ ಕರ್ನಾಟಕವೂ ಸ್ವಾತಂತ್ರ್ಯದ ಜೊತೆಯೇ ಬಂತೆನ್ನಬಹುದಾದ ಪ್ರಜಾವಾಣಿಯೂ ಈ ಅವಧಿಯಲ್ಲಿ ವಿಶಾಲ ಕರ್ನಾಟಕದಲ್ಲಿ ಪ್ರಸಾರ ಹೆಚ್ಚಿಸಿಕೊಂಡು ಬೆಳೆದು, ಇವುಗಳನ್ನು ಅನುಸರಿಸಿ ಬಂದ ಕನ್ನಡ ಪ್ರಭ ಮತ್ತು ಉದಯವಾಣಿ ಹಾಗೂ ಈಗ ಪ್ರಕಟವಾಗುತ್ತಿರುವ ವಿಜಯ ಕರ್ನಾಟಕ –ಇವು ಕನ್ನಡ ದಿನಪತ್ರಿಕೆಗಳ ಏಕಪ್ರಾಬಲ್ಯವನ್ನು ಹೋಗಲಾಡಿಸಿದುವು. ಉದ್ಯಮಿ ವಿಜಯ ಸಂಕೇಶ್ವರ ವಿಜಯಾನಂದ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಸಂಸ್ಥೆಯ ವಿಜಯಕರ್ನಾಟಕ ಎಂಟು ಆವೃತ್ತಿಗಳೊಡನೆ ಪ್ರಕಟವಾಗುತ್ತಿದೆ. ಇದರ ಪ್ರಸಾರ ಸಂಖ್ಯೆ ನಾಲ್ಕು ಲಕ್ಷ. ಕನ್ನಡ ಪತ್ರಿಕೆಗಳ ಮಧ್ಯೆ ಈವರೆಗೆ ಕಾಣದಿದ್ದ ಬೆಲೆಯುದ್ಧವನ್ನೂ ವಿಜಯ ಕರ್ನಾಟಕ ಹುಟ್ಟುಹಾಕಿದೆ. ಅತಿ ಕಡಿಮೆ ಅವಧಿಯಲ್ಲಿ ವಿಜಯಕರ್ನಾಟಕ ಬೆಳೆದಿದೆ. 1942ರಲ್ಲಿ ಹುಬ್ಬಳ್ಳಿಯಲ್ಲಿ ಆರಂಭವಾದ ವಿಶಾಲ ಕರ್ನಾಟಕ ಇಂದಿಗೂ ಪ್ರಭಾವೀ ಪತ್ರಿಕೆಯಾಗಿ ಮುಂದುವರಿದಿದೆ. ಕನ್ನಡದ ಹಿರಿಯ ಪತ್ರಕರ್ತರಲ್ಲಿ ಒಬ್ಬರಾದ ಪಾಟೀಲ ಪುಟ್ಟಪ್ಪ (**ನೋಡಿ**) ಕಳೆದ ಐದು ದಶಕ ನಡೆಸಿರುವ ವಾರಪತ್ರಿಕೆ ಪ್ರಪಂಚ. ಈ ಪತ್ರಿಕೆ ನನ್ನ ಹೃದಯದಿಂದ ನಿಮ್ಮ ಹೃದಯಕ್ಕೆ ಎಂಬ ಸಂಪಾದಕೀಯಕ್ಕಾಗಿ ಪ್ರಸಿದ್ಧವಾಗಿದೆ.

ಎಚ್.ಕೆ. ವೀರಣ್ಣಗೌಡ

ತುರ್ತು ಪರಿಸ್ಥಿತಿಯ ಅನಂತರ ಕನ್ನಡ ಪತ್ರಿಕೋದ್ಯಮದಲ್ಲಿ ದಾಖಲಿಸ ಬೇಕಾದ ಮುಖ್ಯ ಬೆಳವಣಿಗೆಗಳೆಂದರೆ ಟ್ಯಾಬ್ಲಾಯ್ಡ್ ಪತ್ರಿಕೆಗಳ ಉದಯ, ವಿಪುಲವಾದ ನಿಯತಕಾಲಿಕೆಗಳ ಪ್ರಕಟಣೆ. ಕನ್ನಡ ಪತ್ರಿಕೋದ್ಯಮಕ್ಕೆ ವಸ್ತು, ವಿನ್ಯಾಸ, ನಿರೂಪಣೆಗಳ ದೃಷ್ಟಿಯಿಂದ ತಿರುವನ್ನು ನೀಡಿದ್ದು ಲಂಕೇಶ್ ಪತ್ರಿಕೆಯ ಪ್ರಕಟಣೆ. ಕನ್ನಡದ ಸೃಜನಶೀಲ ಬರೆಹಗಾರರು ಹಾಗೂ ಅಂಕಣಕಾರರಾಗಿ ಹೆಸರು ಮಾಡಿದ್ದ ಪಿ.ಲಂಕೇಶ್ (**ನೋಡಿ**) 1983ರಲ್ಲಿ ಕನ್ನಡಕ್ಕೆ ಹೊಚ್ಚ ಹೊಸತೆನ್ನಿಸಿದ ಈ ಪತ್ರಿಕೆಯನ್ನು ಆರಂಭಿಸಿ ದರು. ಇದನ್ನು ಕನ್ನಡದ ಜಾಣ–ಜಾಣೆಯರ ಪತ್ರಿಕೆ ಎಂಬುದಾಗಿ ಕರೆದರು. ಆವರೆಗೂ ಪತ್ರಿಕೆಗಳು ಮಡಿವಂತಿಕೆಯಿಂದಾಗಿ ಬಳಸದಿದ್ದ ಆಡುಮಾತಿನ ನುಡಿಗಟ್ಟುಗಳನ್ನು ಬಳಕೆಗೆ ತಂದು ಪತ್ರಿಕಾ ಭಾಷೆಯನ್ನು ಲಂಕೇಶ್ ಬದಲಿಸಿದರು. ಬಂ (ಬಂಗಾರಪ್ಪ), ಗುಂ (ಗುಂಡೂರಾವ್) ಎಂಬ ವಿಶಿಷ್ಟ ಸಂಕೇತಾಕ್ಷರಗಳನ್ನೂ ಶಬ್ದಗಳನ್ನೂ ಸೃಷ್ಟಿಸಿ ಪತ್ರಿಕಾ ಭಾಷೆಯನ್ನು ಚುರುಕುಗೊಳಿಸಿದರು.

ಲಂಕೇಶ್ ಪತ್ರಿಕೆಯನ್ನು ಅನುಸರಿಸಿ ನೂರಾರು ಪತ್ರಿಕೆಗಳು ಕನ್ನಡದಲ್ಲಿ ಬಂದುಹೋಗಿದೆ. ಕೆಲವು ಪತ್ರಿಕೆಗಳು ಜನರನ್ನು ಬ್ಲಾಕ್‌ಮೇಲ್ ಮಾಡುವ ಹಳದಿ ಪತ್ರಿಕೋದ್ಯಮಕ್ಕೂ ಇಳಿದದ್ದುಂಟು. 1995ರಲ್ಲಿ ಆರಂಭಗೊಂಡಿರುವ ಹಾಯ್ ಬೆಂಗಳೂರು ಎಂಬ ಟ್ಯಾಬ್ಲಾಯ್ಡ್ ಪತ್ರಿಕೆ ಲಂಕೇಶ್ ಪತ್ರಿಕೆ ಯನ್ನೂ ಮೀರಿ ಓದುಗರಿಗೆ ಲಗ್ಗೆ ಇಟ್ಟಿದೆ. ಇದರ ಸಂಪಾದಕ– ಪ್ರಕಾಶರು ರವಿ ಬೆಳೆಗೆರೆ. ಇವುಗಳನ್ನನುಸರಿಸಿ ಇಂದು ಅಗ್ನಿ, ಕನ್ನಡ ಟೈಮ್ಸ್ ಮುಂತಾದ ಅನೇಕ ಟ್ಯಾಬ್ಲಾಯ್ಡ್‌ಗಳು ಪ್ರಕಟವಾಗುತ್ತಿವೆ.

80ರ ದಶಕದಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ಕಂಡುಬಂದ ಇನ್ನೊಂದು ಮುಖ್ಯ ಬೆಳವಣಿಗೆ ನಿಯತಕಾಲಿಕಗಳ ಸುಗ್ಗಿ. ಸಾಲುಸಾಲಾಗಿ ನಿಯತಕಾಲಿಕೆಗಳು ಹೆಚ್ಚಾಗಿ ಬೆಂಗಳೂರು ಕೇಂದ್ರವಾಗಿ ಪ್ರಕಟಗೊಂಡವು. ಸುದ್ದಿಸಂಗಾತಿ, ಸಂಕೇಶ, ಮನ್ವಂತರ ಮುಂತಾದವು ವಾರಪತ್ರಿಕೆಗಳು. ವೈಜ್ಞಾನಿಕವಾಗಿ ಲೈಂಗಿಕ ಜ್ಞಾನವನ್ನು ಜನತೆಗೆ ಕೊಡಹೊರಟ ರತಿವಿಜ್ಞಾನದಂಥ ಅನೇಕ ಮಾಸಿಕಗಳೂ ಸಾಲುಸಾಲಾಗಿ ಪ್ರಕಟಗೊಂಡಿವೆ. ಆದರೆ ಈ ಉತ್ಸಾಹ ಒಂದು ದಶಕವೂ ಉಳಿಯಲಿಲ್ಲ. ಆರಂಭಗೊಂಡ ಹಾಗೆ ಈ ನಿಯತಕಾಲಿಕೆಗಳು ಒಂದೊಂದಾಗಿ ನಿಂತುಹೋದವು ಮಾತ್ರವಲ್ಲ ಇಂಥ ಈ ಉತ್ಸಾಹ ಮೊದಲೇ ಪ್ರಕಟಗೊಳ್ಳುತ್ತಿದ್ದ ಪ್ರಜಾಮತದಂಥ ಹಳೇ ಪತ್ರಿಕೆಗಳನ್ನೂ ಆಪೋಶನ ತೆಗೆದುಕೊಂಡಿತು.

ಜಿಲ್ಲಾ ಪತ್ರಿಕೆಗಳು ಕನ್ನಡ ಪತ್ರಿಕೋದ್ಯಮ ರಂಗಕ್ಕೆ ಅಪಾರವಾಗಿ ಕೊಡುಗೆ ನೀಡಿವೆ. ರಾಜ್ಯ ಮಟ್ಟದ ಪತ್ರಿಕೆಗಳ ಆಯಾ ಪ್ರದೇಶದ ಪ್ರಸಾರವನ್ನು ಮೀರಿಸುವಷ್ಟು ಈ ಪತ್ರಿಕೆಗಳ ಪ್ರಸಾರವಿದೆ. ಒಂದೊಂದು ಜಿಲ್ಲೆಯಲ್ಲೂ ಕನಿಷ್ಠ ಒಂದೊಂದು ಪತ್ರಿಕೆಯಾದರೂ ಸ್ಥಳೀಯವಾಗಿ ಪ್ರಬಲವಾಗಿ ಬೆಳೆದಿರುವುದು ಕನ್ನಡದ ವಿಶೇಷ. ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಬೆಳಗಾಂವಿ, ದಾವಣಗೆರೆ, ಹಾಸನ, ಹುಬ್ಬಳ್ಳಿಗಳಲ್ಲಿ ಈ ಬಗೆಯ ಪತ್ರಿಕೆಗಳು ಮಧ್ಯಮ ಪ್ರಮಾಣದ ಪ್ರಸಾರವನ್ನೂ ಹೊಂದಿದೆ. ಒಂದೊಂದು ಕಡೆಯಲ್ಲಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳು ಪ್ರವರ್ಧಮಾನಕ್ಕೆ ಬಂದಿವೆ.

ಪ್ರತಿಯೊಂದೂ ಜಿಲ್ಲೆಯಲ್ಲಿ ಪ್ರಬಲವಾಗಿ ಬೇರೂರಿರುವ ಸ್ಥಳೀಯ ಪತ್ರಿಕೆಗಳು ಪ್ರಶಂಸಾರ್ಹ ಕೆಲಸ ಮಾಡುತ್ತಿವೆ. ಅನೇಕ ಸುದ್ದಿಗಳು ಮೊದಲು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡು ಅನಂತರ ರಾಜ್ಯದ ಹಾಗೂ ದೇಶದ ಗಮನ ಸೆಳೆಯುತ್ತವೆ. ಸ್ಥಳೀಯ ಮಟ್ಟದಲ್ಲಿ ಅವುಗಳ ಪ್ರಭಾವದಿಂದಾಗಿ ರಾಜಕಾರಣಿಗಳು ಹಾಗೂ ಅಧಿಕಾರಸ್ಥರು ಕೂಡ ಈ ಪತ್ರಿಕೆಗಳನ್ನು ಗಂಭೀರವಾಗಿ ಸ್ವೀಕರಿಸುತ್ತಾರೆ. ಸಣ್ಣ ಹಾಗೂ ಸ್ಥಳೀಯ ಮಟ್ಟದ ಪತ್ರಿಕೆಗಳು ಕನ್ನಡ ಪತ್ರಿಕೋದ್ಯಮದ ಅವಿಭಾಜ್ಯ ಅಂಗಗಳಾಗಿವೆ. ಸಣ್ಣ ಪತ್ರಿಕೆಗಳನ್ನು ಬಲಗೊಳಿಸುವುದಕ್ಕಾಗಿ ಪತ್ರಕರ್ತರಿಗೆ ತರಬೇತಿ, ಸಾಲ ಸೌಲಭ್ಯ ಮುಂತಾಗಿ ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಂಗನಾಥ ದಿವಾಕರ, ಎಂ.ಬಿ.ಸಿಂಗ್ ಹಾಗೂ ಪಿ.ಆರ್.ರಾಮಯ್ಯ ಅವರ ನೇತೃತ್ವದ ಸಮಿತಿಗಳು ಮುಖ್ಯವಾಗಿ ಸಣ್ಣ ಪತ್ರಿಕೆಗಳ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ವರದಿ ನೀಡಿವೆ.

ಹೀಗೆ ಕಳೆದ ಒಂದೂವರೆ ಶತಮಾನದಿಂದ ಕನ್ನಡ ಪತ್ರಿಕೋದ್ಯಮದಲ್ಲಿ ಮಾನವನ ಆಸಕ್ತಿಯ ಕ್ಷೇತ್ರಗಳನ್ನೂ ಆಧುನಿಕ ಪ್ರವೃತ್ತಿಗಳನ್ನೂ ಪ್ರತಿನಿಧಿಸುವ ಹಾಗೆ ವೈವಿಧ್ಯಮಯ ಆಸಕ್ತಿಯ ಪತ್ರಿಕೆಗಳು ಪ್ರಕಟ ಗೊಂಡಿವೆ. ಇವುಗಳಲ್ಲಿ ಸಾಹಿತ್ಯ ಪತ್ರಿಕೆಗಳದ್ದೇ ಪ್ರತ್ಯೇಕ ಕವಲು. ಆರಂಭದಿಂದಲೂ ಪತ್ರಿಕೆ ಎಂದ ಮೇಲೆ ಅದರಲ್ಲಿ ಸಾಹಿತ್ಯಕ್ಕೆ ಸ್ಥಾನ ಇದ್ದೇ ಇದೆ. ಆಗಿನ್ನೂ ಕನ್ನಡದ ಆಧುನಿಕ ಕತೆ, ಕಾವ್ಯದ ಕಾಲ ಆರಂಭವಾಗಿರಲಿಲ್ಲ. ಆದರೂ 19ನೆಯ ಶತಮಾನದ ಮಧ್ಯ ಭಾಗದಲ್ಲಿ ಬಂದ ಪತ್ರಿಕೆಗಳಲ್ಲೇ ಪ್ರಬಂಧದ ಮಾದರಿಯ ಬರೆಹಗಳನ್ನು ಕಾಣಬಹುದಾಗಿದೆ. ಕನ್ನಡದ ಆರಂಭ ಕಾಲದ ಪತ್ರಿಕೆಗಳು ಸಾಹಿತ್ಯ ಪತ್ರಿಕೆಗಳೆಂದು ತಮ್ಮನ್ನು ಕರೆದುಕೊಳ್ಳದಿದ್ದರೂ ಸಾಹಿತ್ಯಿಕ ಬರೆಹಗಳಿಗೆ ಒತ್ತು ನೀಡುತ್ತಿದ್ದುವು. ವಿಶೇಷವೆಂದರೆ 19ನೆಯ ಶತಮಾನದ ಅಂತ್ಯದ ವೇಳೆಗೆ ಹಳೆಯ ಕನ್ನಡ ಕಾವ್ಯಗಳನ್ನು ಪ್ರಕಟಿಸು ವುದಕ್ಕಾಗಿಯೇ ಪತ್ರಿಕೆಗಳು ಹುಟ್ಟಿಕೊಂಡುವು. ಇವನ್ನು ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯ ಪತ್ರಿಕೆಗಳ ಪೂರ್ವ ರೂಪಗಳು, ಸಾಹಿತ್ಯ ಪತ್ರಿಕೆಗಳಿಗೆ ಭೂಮಿಕೆ ಸಿದ್ಧಮಾಡಿದ ಪತ್ರಿಕೆಗಳು ಎಂದು ಕರೆಯಬಹುದು. ಕರ್ನಾಟಕ ಭಾಷಾ ಸೇವಕ (1891), ಕರ್ನಾಟಕ ಕಾವ್ಯಮಂಜರಿ (1892), ಕರ್ನಾಟಕ ಗ್ರಂಥಮಾಲಾ (1893), ಕಾವ್ಯ ಕಲ್ಪದ್ರುಮ (1897) ಮೊದಲಾದ ಪತ್ರಿಕೆಗಳನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದು. ಕರ್ನಾಟಕ ಭಾಷಾ ಸೇವಕದಲ್ಲಿ ಪ್ರಾಚೀನ ಕಾವ್ಯಗಳ ಕನ್ನಡ ಭಾಷಾಂತರ ಅಥವಾ ರೂಪಾಂತರಗಳ ಜೊತೆಗೆ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ವಿಷಯಗಳು ಪ್ರಕಟಗೊಳ್ಳು ತ್ತಿದ್ದುವು. ಕರ್ನಾಟಕ ಕಾವ್ಯಮಂಜರಿ ಪ್ರಾಚೀನ ಕಾವ್ಯಗಳ ಪ್ರಕಟಣೆಗೇ ಮೀಸಲಾದ ಪತ್ರಿಕೆಯಾಗಿತ್ತು. ಕರ್ನಾಟಕ ಗ್ರಂಥಮಾಲ ಇಂಗ್ಲಿಷ್, ಬಂಗಾಲಿ, ಸಂಸ್ಕೃತ ಗ್ರಂಥಗಳನ್ನು ಅನುವಾದಿಸಿ ಗ್ರಂಥಮಾಲೆ ರೂಪದಲ್ಲಿ ಪ್ರಕಟಿಸುತ್ತಿತ್ತು. ಕಾವ್ಯಕಲ್ಪದ್ರುಮ, ಸಂಸ್ಕೃತ ಮತ್ತು ಕನ್ನಡದಲ್ಲಿ ಪ್ರಕಟಗೊಳ್ಳುತ್ತಿತ್ತು. ಸಂಸ್ಕೃತ ಕಾವ್ಯ, ನಾಟಕಗಳ ಪ್ರಕಟಣೆ ಹಾಗೂ ಅನುವಾದ ಇದರ ಉದ್ದೇಶವಾಗಿತ್ತು. ಈ ಪತ್ರಿಕೆಗಳಿಗೆ ಸಾಹಿತ್ಯದೊಂದಿಗೆ ಅವಿನಾಭಾವ ಸಂಬಂಧವಿತ್ತು. ಇಂದಿನ ಅರ್ಥದಲ್ಲಿ ಅವುಗಳಿಗೆ ನಿಯತಕಾಲಿಕತೆ ಹಾಗೂ ಮುಂದುವರಿಕೆ ಇರಲಿಲ್ಲ. ಹೀಗಾಗಿ ಇವುಗಳನ್ನು ಪೂರ್ಣಪ್ರಮಾಣದ ಸಾಹಿತ್ಯ ನಿಯತಕಾಲಿಕೆಗಳೆಂದು ಕರೆಯಲಾಗದು.



ಮೊಹರೆ ಹಣಮಂತರಾವ್

ಸುವಾಸಿನಿ (1900) ದಕ್ಷಿಣ ಕನ್ನಡ ಜಿಲ್ಲೆಯ ಮೇಲ್ಮಟ್ಟದ ಸಾಹಿತ್ಯಕ ಪತ್ರಿಕೆ. ಈ ಪತ್ರಿಕೆಗೆ ನಾಡಿನ ನಾನಾ ಭಾಗಗಳಿಂದ ಲೇಖಕರು ಬರೆಯುತ್ತಿ ದ್ದರು. ಕನ್ನಡದ ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರ ಉಗಮಿಸಿದ್ದು ಈ ಪತ್ರಿಕೆಯಲ್ಲಿ. ಕನ್ನಡ ಸಣ್ಣಕಥೆಗಳ

ಜನಕರಲ್ಲೊಬ್ಬರೆಂದು ಹೆಸರಾಗಿರುವ ಪಂಜೆ ಮಂಗೇಶರಾಯರ ಸಣ್ಣಕಥೆಗಳು, ಬಿ. ವೆಂಕಟಾಚಾರ್ಯರ ಕಾದಂಬರಿ ಈ ಪತ್ರಿಕೆಯಲ್ಲಿ ಬೆಳಕು ಕಂಡವು. ಕನ್ನಡ ನವೋದಯ ಕಾವ್ಯದ ಆರಂಭದಲ್ಲಿ ಎರಡು ಪತ್ರಿಕೆಗಳು ಅಲ್ಪಕಾಲ ಪ್ರಕಟವಾದರೂ ಅವುಗಳನ್ನು ವಿಶೇಷವಾಗಿ ಗಮನಿಸಬೇಕು. ಪ್ರಭಾತ (1918) ಮತ್ತು ಕವಿತಾ (1919) ತದ್ರೂಪಿ ಪತ್ರಿಕೆಗಳು. ಇಡೀ ಪತ್ರಿಕೆ ಕವನಕ್ಕೇ ಮೀಸಲಾಗಿ, ಸಂಪಾದಕೀಯ, ಜಾಹೀರಾತು ಹಾಗೂ ಇತರ ಪ್ರಕಟಣೆಗಳೂ ಕವನದಲ್ಲೇ ಇದ್ದುವು. ಪ್ರಭಾತದಲ್ಲಿ ಆ ಕಾಲದ ಖ್ಯಾತ ಲೇಖಕರಾಗಿದ್ದ ಶಾಂತಕವಿಗಳು, ಕಾವ್ಯಾನಂದ ಪುಣೇಕರ, ವಲ್ಲಭ ಮಹಾಲಿಂಗ ಕಟ್ಟಿ, ಬಸವಾರ್ಯ, ಕಿತ್ತೂರ ಕನ್ನಡ ವಾಮನ, ಕರಿಬಸವಶಾಸ್ತ್ರಿ, ಎಂ.ಎನ್.ರೈನಾಪುರ, ಶ್ರೀನಿವಾಸ ಕಟ್ಟಿ, ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ ಮೊದಲಾದವರೆಲ್ಲರೂ ಕವಿತೆಗಳನ್ನು ಬರೆಯುತ್ತಿದ್ದರು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದೀರ್ಘಕಾಲದಿಂದ ಸಾಹಿತಿಗಳ ವೇದಿಕೆ ಯಾಗಿ, ಆಧುನಿಕ ಕನ್ನಡ ಸಾಹಿತ್ಯದ ಭಾಗವಾಗಿರುವ ಎರಡು ಪತ್ರಿಕೆಗಳು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ **(ನೋಡಿ)** ಮತ್ತು ಪ್ರಬುದ್ಧ ಕರ್ನಾಟಕ **(ನೋಡಿ)**. ಈ ಪತ್ರಿಕೆಗಳು ಈಗಲೂ ತಮ್ಮ ಪ್ರಕಟಣೆಯನ್ನು ಮುಂದುವರಿಸಿವೆ. ಕನ್ನಡ ಸಾಹಿತ್ಯ 20ನೆಯ ಶತಮಾನ ಮೂರನೆಯ ದಶಕದಲ್ಲಿ ಮುಂದು ವರಿದಂತೆ ಕೋಟ ಶಿವರಾಮ ಕಾರಂತರ ವಸಂತ (1921), ಪಂಡಿತ ತಾರಾನಾಥರ ಪ್ರೇಮ (1923), ಆಲೂರು ವೆಂಕಟರಾಯರ ಜಯಕರ್ನಾಟಕ (1923), ಮಂಜೇಶ್ವರ ಅನಂತರಾಯರ ಕರ್ನಾಟಕ ಕೇಸರೀ (1928), ಅ.ನ.ಕೃಷ್ಣರಾಯರ ಕಥಾಂಜಲಿ (1929) ಮುಂತಾದ ಪತ್ರಿಕೆಗಳು ದಾಖಲಾದವು. ತಿಳಿನಗೆಯ ಲೇಖನಗಳಿಗೆ ಮೀಸಲಾದ ಕೊರವಂಜಿ (1942), ಇಂಗ್ಲಿಷ್‌ನ ರೀಡರ್ಸ್ ಡೈಜೆಸ್ಟ್ ಮಾದರಿಯ ಪುಸ್ತಕ ಪ್ರಪಂಚ (1943), ನವಚೇತನ (1944), ಶಕ್ತಿ (1950), ಹಂಸ (ಕೈಬರಹದ ಪತ್ರಿಕೆ 1951), ಲೇಖಕ (1953) – ಇವುಗಳು 20ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಪ್ರಕಟಣೆಯಲ್ಲಿದ್ದ ಮುಖ್ಯ ಸಾಹಿತ್ಯಕ ಪತ್ರಿಕೆಗಳು **(ನೋಡಿ; ಕಥಾಂಜಲಿ, ಕೊರವಂಜಿ, ಪುಸ್ತಕ ಪ್ರಪಂಚ)**.



ರಂ.ರಾ. ದಿವಾಕರ

'ಕವಿತಾ' ಕವನ ಮತ್ತು ಕಾವ್ಯ ವಿಮರ್ಶೆಗಳ ಋತು ಪತ್ರಿಕೆಯೆಂದು ಘೋಷಿಸಿಕೊಂಡು ಒಂದು ದಶಕಕ್ಕೂ ಹೆಚ್ಚು ಕಾಲ ಬದುಕಿತ್ತು. ಇದರ ಪ್ರಧಾನ ಸಂಪಾದಕರು ಬಾ.ಕಿ.ನ. ಎರಡು ವರ್ಷಗಳ ಬಳಿಕ ಕವಿತಾ ಪತ್ರಿಕೆ ಸಾಗರಕ್ಕೆ ವರ್ಗಾವಣೆಗೊಂಡು ಸಾಗರದಿಂದ ಗೋಪಾಲಕೃಷ್ಣ ಅಡಿಗರು ಹೊರತರುತ್ತಿದ್ದ ಸಾಕ್ಷಿಯೊಂದಿಗೆ ಲೀನವಾಗಿ ಸಾಕ್ಷಿ ಮತ್ತು ಕವಿತಾ ಆಯಿತು. ಮತ್ತೆ ಕೆಲವರ್ಷ ಪ್ರಕಟಗೊಂಡು ದಶಕ ಪೂರೈಸಿ ಕವಿತಾ ನಿಂತು ಹೋಯಿತು. ಲಹರಿ–ನವ್ಯದ ಸೃಜನಶೀಲರೇ ಸಾರಥ್ಯ ವಹಿಸಿಕೊಂಡ ಇನ್ನೊಂದು ಪತ್ರಿಕೆ. ಮೈಸೂರಿನಿಂದ ಪೂರ್ಣಚಂದ್ರ ತೇಜಸ್ವಿ ಹಾಗೂ ಬಿ.ಎಸ್. ಶ್ರೀರಾಮ ಅವರ ಸಂಪಾದಕತ್ವದಲ್ಲಿ ಇದರ ಮಾಸಿಕ ಆರು ಸಂಚಿಕೆಗಳು ಪ್ರಕಟಗೊಂಡವು.

'ಸಂಕ್ರಮಣ' ಕನ್ನಡ ಸಾಹಿತ್ಯದಲ್ಲಿ ಬೆಳ್ಳಿ ಹಬ್ಬವನ್ನು ಕಂಡ ಕೆಲವೇ ಪತ್ರಿಕೆಗಳಲ್ಲಿ ಒಂದು. ನವ್ಯದ ಸಂದರ್ಭದಲ್ಲಿ ಅಂದರೆ 1965ರಲ್ಲಿ ಹುಟ್ಟಿದ ಈ ಪತ್ರಿಕೆ ನವ್ಯೋತ್ತರ ಸಾಹಿತ್ಯ ಸಂದರ್ಭದಲ್ಲಿ ನೀಡಿದ ಕೊಡುಗೆ ಮಹತ್ತ್ವವಾದುದು. ಸಂಕ್ರಮಣವನ್ನು ಧಾರವಾಡದಲ್ಲಿ ಹುಟ್ಟುಹಾಕಿದವರಲ್ಲಿ ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ ಹಾಗೂ ಸಿದ್ಧಲಿಂಗ ಪಟ್ಟಣ ಶೆಟ್ಟಿಯವರು ಪ್ರಮುಖರು. ಕಾಲಾನುಕ್ರಮದಲ್ಲಿ ಗಿರಡ್ಡಿ ಗೋವಿಂದರಾಜ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಹಿಂದೆ ಸರಿದು ಚಂದ್ರಶೇಖರ ಪಾಟೀಲರು ಅದರ ಸಾರಥ್ಯ ವಹಿಸಿದರು. ಪಾಟೀಲರ ಹೆಂಡತಿ ನೀಲಾ ಪಾಟೀಲರು ಸಂಪಾದಕಿ ಯಾಗಿರುವ ಈ ಪತ್ರಿಕೆಯನ್ನು ಚಂಪಾ ರವರ ಪತ್ರಿಕೆಯೆಂದೇ ಗುರುತಿಸಲಾಗುತ್ತದೆ.

ಸಮೀಕ್ಷಕ (1965), ಆನಂದ (1966), ಪ್ರಜ್ಞೆ (1968), ಅಜಂತ (1969), ಸಂಕೀರ್ಣ (1970)– ಈ ಅವಧಿಯಲ್ಲಿ ಪ್ರಕಟವಾದ ಇತರ ಸಾಹಿತ್ಯಕ ಪತ್ರಿಕೆಗಳು. 'ಸಮನ್ವಯ' ವಿಭಿನ್ನ ಸಾಹಿತ್ಯ ಪ್ರಕಾರಗಳಿಗೆ ಸಮಾನ ವೇದಿಕೆಯಾಗುವ ಆಶಯದಿಂದ 1968ರಲ್ಲಿ ಬೆಂಗಳೂರಿನಿಂದ ಪ್ರಕಟಗೊಂಡ ತ್ರೈಮಾಸಿಕ ಪತ್ರಿಕೆ. ಇದರ ಸಂಪಾದಕರು ಪ.ಸು.ಭಟ್ಟ. 'ಪ್ರತೀಕ' ರಾಯಚೂರಿನಿಂದ 1968ರಲ್ಲಿ ಪ್ರಕಾಶನಗೊಂಡರೆ 'ಚಿಗುರೆಲೆ' ಮಂಡ್ಯದಿಂದ 1969ರಲ್ಲಿ ಬೆಳಕು ಕಂಡಿತು. ಚಿಗುರೆಲೆಗೆ ಪಂಡಿತ ಮ. ಮಲ್ಲಪ್ಪ ಸಂಪಾದಕರು. ಪ್ರತೀಕ ನವ್ಯ ಸಾಹಿತ್ಯಕ್ಕೆ ಒತ್ತುಕೊಟ್ಟು ಆ ಭಾಗದ ಲೇಖಕರನ್ನು ಪರಿಚಯಿಸಿತು. 'ಮುಂಗಾರು' ಎಪ್ಪತ್ತರ ದಶಕದಲ್ಲಿ ಮಂಗಳೂರಿನಲ್ಲಿ ಮಿಂಚಿ ಮಾಯವಾದ ಸಾಹಿತ್ಯ ಪತ್ರಿಕೆ. ಆಗಸ್ಟ್ 1972ರಲ್ಲಿ ಈ ತ್ರೈಮಾಸಿಕದ ಮೊದಲ ಸಂಚಿಕೆ ಪ್ರಕಟವಾಯಿತು. ಪರಂಪರೆ (1972), ಕಾವ್ಯ (1973), ನೇತಿ (1973), ದಲಿತ (1974), ಮಣ್ಣಿನ ಬದುಕು (1974), ವರ್ತಮಾನ (1978) ಮುಂತಾದವು ಈ ಅವಧಿಯಲ್ಲಿ ಬೆಳಕು ಕಂಡ ಹಾಗೂ ರಮ್ಯ–ನವ್ಯ–ನವ್ಯೋತ್ತರದ ಚರ್ಚೆಗಳಿಗೆ ವೇದಿಕೆಯಾದ ಪತ್ರಿಕೆಗಳು. ಇದೇ ಹೊತ್ತಿಗೆ ಬೆಂಗಳೂರು ವಿಶ್ವವಿದ್ಯಾಲಯದ ತ್ರೈಮಾಸಿಕ ಸಾಹಿತ್ಯ ಪತ್ರಿಕೆ ಸಾಧನೆ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಅರ್ಧವಾರ್ಷಿಕ ಸಾಹಿತ್ಯ ಪತ್ರಿಕೆ ಕರ್ನಾಟಕ ಭಾರತೀ ಪ್ರಕಟಣೆ ಆರಂಭಿಸಿದುವು. ಮೈಸೂರು ವಿಶ್ವವಿದ್ಯಾನಿಲಯ ಪ್ರಬುದ್ಧ ಕರ್ಣಾಟಕದ ಪ್ರಕಟಣೆಯೊಂದಿಗೆ ವಿಜ್ಞಾನ ಕರ್ಣಾಟಕ ಮತ್ತು ಮಾನವಿಕ ಕರ್ಣಾಟಕಗಳೆಂಬ ಎರಡು ಶಾಸ್ತ್ರೀಯ ಅಧ್ಯಯನಕ್ಕೆ ಮೀಸಲಾದ ತ್ರೈಮಾಸಿಕಗಳನ್ನು ಪ್ರಾರಂಭಿಸಿತು. ಕನ್ನಡ ವಿಶ್ವವಿದ್ಯಾಲಯ ವಿವಿಧ ವಿಷಯಗಳನ್ನಾಧರಿಸಿ ನಿಯತಕಾಲಿಕೆಗಳನ್ನು ಹೊರತರುತ್ತಿರುವುದಲ್ಲದೆ ಕನ್ನಡ ಪ್ರಕಟಣೆಗಳ ಸೂಚಿಯನ್ನು ಪ್ರಕಟಿಸುತ್ತಿದೆ. ಮಹಿಳಾ ಅಧ್ಯಯನ ವೆಂಬ ವಿಶಿಷ್ಟ ನಿಯತಕಾಲಿಕವೂ ಇವುಗಳಲ್ಲಿ ಒಂದು.



ಆಲೂರ ವೆಂಕಟರಾಯರು

ಮುಕ್ತ ಚರ್ಚೆಗಾಗಿ ಶೂದ್ರ ಎಂಬ ತಿಂಗಳ ಪತ್ರಿಕೆ 1975ರಲ್ಲಿ ಆರಂಭಗೊಂಡಿತು. ಈ ಪತ್ರಿಕೆಯಿಂದಾಗಿ ಅದೇ ಹೆಸರು ಪಡೆದ ಶೂದ್ರ ಶ್ರೀನಿವಾಸ ಇದರ ಸಂಪಾದಕರು. ವೈಯಕ್ತಿಕ ಪ್ರಯತ್ನವಾಗಿಯೂ ಎರಡು ದಶಕಕ್ಕೂ ಹೆಚ್ಚು ಕಾಲ ಜೀವಂತವಿದ್ದ ಸಾಹಿತ್ಯ ಪತ್ರಿಕೆಗಳಲ್ಲಿ ಇದು ಒಂದಾಗಿತ್ತು. ಒಡನಾಡಿ (1975), ಕಾದಂಬರಿ (1977), ಬದುಕು (1977), ಪುಸ್ತಕ ಪುರವಣಿ (1977), ಗ್ರಂಥಲೋಕ ಈ ಅವಧಿಯಲ್ಲಿ ದಾಖಲಾದ ಕೆಲ ಪತ್ರಿಕೆಗಳು.

80ರ ದಶಕದಲ್ಲಿ ಕನ್ನಡದಲ್ಲಿ ಬಂಡಾಯ–ದಲಿತ ಚಳವಳಿ ಹುಟ್ಟಿಕೊಂಡು ಅನೇಕ ಸಾಹಿತ್ಯ ಪತ್ರಿಕೆಗಳ ಹುಟ್ಟಿಗೂ ಕಾರಣವಾದವು. ಈ ಪತ್ರಿಕೆಗಳು ದಲಿತ–ಬಂಡಾಯ ಚಳವಳಿಯನ್ನೂ ಬೆಳೆಸಿದುವು. ಬಂಡಾಯ ಸಾಹಿತ್ಯ (1983), ಸೃಜನವೇದಿ (1984), ಅನ್ವೇಷಣೆ (1984), ಅಂತರ (1986), ಸಂವಾದ (1986), ಕವಿಮಾರ್ಗ (1987), ಸಾಹಿತ್ಯ ಸಂಗಾತಿ (1989), ಒಡಲಾಳ (1990), ಚ. ಏಕಾಕ್ಷರ ಪತ್ರಿಕೆ (1992), ಸಾಹಿತ್ಯ ಸಂಘರ್ಷ (1992), ಹೊಸದಿಕ್ಕು (1992), ಪ್ರಜ್ಞೆ (1993) – ಇವು ಮುಖ್ಯವಾಗಿ ಇಪ್ಪತ್ತನೆಯ ಶತಮಾನದ ಕೊನೆಯ ಎರಡು ದಶಕಗಳಲ್ಲಿ ದಲಿತ – ಬಂಡಾಯ ಸಾಹಿತ್ಯ ಚಳವಳಿಗೆ ನೀರೆರೆದು ಪೋಷಿಸಿದ, ಅವುಗಳ ಸಾಧನೆ ಸೋಲುಗಳಿಗೆ ಸಾಕ್ಷಿಯಾದ ಪತ್ರಿಕೆಗಳು.

ಇದೇ ವೇಳೆಗೆ ದಲಿತ ಬಂಡಾಯಕ್ಕೆ ಸೀಮಿತವೆನಿಸಿಕೊಳ್ಳದ ಯಾವುದೇ ಚಳವಳಿಗೆ ವೇದಿಕೆಯಾಗದೇ ಶುದ್ಧ ಸಾಹಿತ್ಯಕ ವೇದಿಕೆಯಾದ ಅನೇಕ ಪತ್ರಿಕೆಗಳೂ ಇದ್ದುವು. ಉದಾಹರಣೆಗೆ ಕನ್ನಡ ಸಾಹಿತ್ಯ ಪತ್ರಿಕೆಗಳ ಪೈಕಿ ವಿಶಿಷ್ಟ ಸ್ಥಾನ ಪಡೆದ 'ರುಜುವಾತು' ಆರಂಭಗೊಂಡಿದ್ದು 1982ರಲ್ಲಿ. 'ಸೃಜನಶೀಲ ಹೊಸ ಪ್ರಯೋಗಗಳಿಗಾಗಿ, ಹೊಸ ದಿಕ್ಕಿನ ಹುಡುಕಾಟಕ್ಕಾಗಿ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದ ಶೋಧಕ್ಕಾಗಿ' ಎಂಬುದು ರುಜುವಾತಿನ ಘೋಷಣೆ. ಕನ್ನಡದ ಹಿರಿಯ ಸಾಹಿತಿ, ವಿಮರ್ಶಕ ಯು.ಆರ್. ಅನಂತಮೂರ್ತಿ **(ನೋಡಿ)** ಈ ಪತ್ರಿಕೆಯ ಸಂಪಾದಕರು. ತ್ರೈಮಾಸಿಕವಾಗಿ ಆರಂಭವಾದ ಇದು ಕನಿಷ್ಠ 25 ಸಂಚಿಕೆಗಳವರೆಗೆ ನಿಯತವಾಗಿಯೇ ಬಂದಿತು. ಸದ್ಯಕ್ಕೆ ರುಜುವಾತು ಅನಿಯತಕಾಲಿಕವಾಗಿ ಪ್ರಕಟಗೊಳ್ಳುತ್ತಿದೆ.

ಲೋಚನ (1982), ಚಂದನ (1984), ಸಂಚಯ (1987), ಅನಿಕೇತನ (1988), ಗಾಂಧಿಬಜಾರ್ (1988), ಕನ್ನಡ ಸಾಹಿತ್ಯ ಲೋಕ (1993), ಪುಸ್ತಕ ಮಾಹಿತಿ (1993)– ಇವಿಷ್ಟು ನವ್ಯ, ದಲಿತ, ಬಂಡಾಯ ಎಂಬ ಘೋಷಣೆಯ ಹಣೆಪಟ್ಟಿಯ ಹಂಗಿಲ್ಲದೇ ಶುದ್ಧ ಸಾಹಿತ್ಯ ಪತ್ರಿಕೆಗಳಾಗಿ ಕನ್ನಡದಲ್ಲಿ ಬೆಳಕು ಕಂಡಂಥವು. ಇತ್ತೀಚೆಗೆ ದೇಶಗತಿ ಎಂಬ ಪತ್ರಿಕೆ ಪ್ರಕಟವಾಗುತ್ತಿದೆ.

ಈಗ 20ನೆಯ ಶತಮಾನ ಮುಗಿದು ಜಗತ್ತು 21ನೆಯ ಶತಮಾನಕ್ಕೆ ಕಾಲಿರಿಸಿದೆ. ಕ್ಷಣಕ್ಷಣಕ್ಕೂ ಪ್ರಪಂಚದ ಮಟ್ಟದಲ್ಲಿ ಅನೇಕ ರೀತಿಯ ಬದಲಾವಣೆಗಳಾಗುತ್ತಿವೆ. ಅದರ ಪರಿಣಾಮ ಕರ್ನಾಟಕದ ಮೇಲೆ, ಒಟ್ಟಾರೆ ಕನ್ನಡ ಸಾಹಿತ್ಯ ಸಂದರ್ಭದ ಮೇಲೂ ಆಗಿದೆ, ಆಗುತ್ತಿದೆ.

ಈಗ ಕನ್ನಡದ ದೊಡ್ಡ ಪತ್ರಿಕೆಗಳೇ ಅಸ್ತಿತ್ವಕ್ಕಾಗಿ ಹೋರಾಡುತ್ತಿವೆ. ಬೆಲೆಯಿಳಿಸಿಕೊಂಡು ಪ್ರಸಾರ ಹೆಚ್ಚಿಸಿಕೊಳ್ಳುವ ಕಸರತ್ತಿನಲ್ಲಿ ಸ್ಪರ್ಧೆಗಿಳಿ ದಿವೆ. ದಶಕದ ಹಿಂದೆ ಕೈಗಾರಿಕೆ ಹಾಗೂ ವಾಣಿಜ್ಯ ವ್ಯವಹಾರಗಳಿಂದಾ ಗುವ ಮುದ್ರಣ ಮಾಧ್ಯಮಕ್ಕೆ ಬರುತ್ತಿದ್ದ ಜಾಹೀರಾತುಗಳು ದೂರದರ್ಶನ ಚಾನಲುಗಳ ಪಾಲಾಗುತ್ತಿವೆ. ಹೀಗಾಗಿ ಪತ್ರಿಕೆಗಳ ಜಾಹೀರಾತು ಆದಾಯ ಶೇಕಡಾವಾರು ಇಳಿಕೆಗಂಡಿದೆ. ಪತ್ರಿಕೆಗಳ ನಡುವಿನ ಪ್ರಸಾರದ ಸ್ಪರ್ಧೆಯಲ್ಲಿ ಪ್ರಸಾರವೂ ಇಳಿಮುಖವಾಗಿದೆ. ಮಾಹಿತಿ ತಂತ್ರಜ್ಞಾನ ಪ್ರವೇಶದಿಂದ ಪತ್ರಿಕೋದ್ಯಮ ರಂಗದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿವೆ. ಮಾಹಿತಿ ಜ್ಞಾನದ ದೃಷ್ಟಿಯಿಂದ ಈಗ ಪ್ರಪಂಚ ಜಾಗತಿಕ ಹಳ್ಳಿಯಾಗಿ ಪರಿವರ್ತಿತವಾಗುತ್ತಿದೆ. (ಎನ್.ಐ.ವಿ.)

**ಕನ್ನಡ ಪುಸ್ತಕ ಪ್ರಾಧಿಕಾರ :** ಕರ್ನಾಟಕ ಸರ್ಕಾರದಿಂದ 1993 ಅಕ್ಟೋಬರ್ 20ರಂದು ಅಸ್ತಿತ್ವಕ್ಕೆ ಬಂದ ಸ್ವಾಯತ್ತ ಸಂಸ್ಥೆ. ಪುಸ್ತಕ ಸಂಸ್ಕೃತಿಯನ್ನು ಹುಟ್ಟುಹಾಕುವುದು, ಬೆಳೆಸುವುದು ಹಾಗೂ ಪರಿಚಲನೆಗೊಳಿಸುವುದು ಇದರ ಉದ್ದೇಶ. ವಿಶೇಷವಾಗಿ ಕನ್ನಡದಲ್ಲಿ ಲೇಖಕ, ಪ್ರಕಾಶಕ, ಮಾರಾಟಗಾರ ಹಾಗೂ ಓದುಗರ ನಡುವಿನ ಸಂಬಂಧವನ್ನು ಹೆಚ್ಚಿಸುವುದೂ ನಾಡಿನಾದ್ಯಂತ ವಾಚಕರಿಗೆ ಒಳ್ಳೆಯ ಗ್ರಂಥಗಳು ಸುಲಭ ಬೆಲೆಗೆ ದೊರೆಯುವಂತೆ ನೋಡಿಕೊಳ್ಳುವುದೂ ಈ ಮೂಲಕ ಕನ್ನಡ ಪುಸ್ತಕೋದ್ಯಮ ಪ್ರಪಂಚವನ್ನು ಜನಪರಗೊಳಿಸುವುದೂ ಇದರ ಆಶಯಗಳು. ಕನ್ನಡ ಪುಸ್ತಕ ಪ್ರಕಾಶಕರ ಆರ್ಥಿಕ ಹಾಗೂ ಬೌದ್ಧಿಕ ಶ್ರಮಕ್ಕೆ ನೆರವಾಗುವ ಸಲುವಾಗಿ ಆಯಾ ವರ್ಷ ಪ್ರಕಟಗೊಂಡ ಪುಸ್ತಕಗಳ ಸಗಟು ಖರೀದಿ ಮಾಡುವುದು, ಖರೀದಿಸಿದ ಕೃತಿಗಳನ್ನು ನಾಡಿನ ಸಾರ್ವಜನಿಕ ಗ್ರಂಥಾಲಯಗಳಿಗೂ ಶಾಲೆ–ಕಾಲೇಜು ಹಾಗೂ ಸಂಘ ಸಂಸ್ಥೆಗಳಿಗೂ ವಿತರಿಸುವುದು, ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ವಿಜ್ಞಾನ, ಮಾನವಿಕ ಮುಂತಾದ ವಿವಿಧ ಜ್ಞಾನ ಶಿಸ್ತುಗಳಲ್ಲಿ ಪರಿಣತರಾದ ವಿದ್ವಾಂಸರಿಂದ ಪುಸ್ತಕಗಳನ್ನು ಬರೆಸುವುದು, ಯುವ ಪ್ರತಿಭೆಗಳನ್ನು ಗುರುತಿಸಿ ಅವರ ಕೃತಿಗಳ ಪ್ರಕಟಣೆಗಾಗಿ ಧನಸಹಾಯ, ಸಾಲ, ಅನುದಾನ ಹಾಗೂ ಬಹುಮಾನಗಳನ್ನು ನೀಡಿ ಅವರಿಗೆ ಉತ್ತೇಜನ ನೀಡುವುದು, ಸರ್ಕಾರಿ, ಅರೆ ಸರ್ಕಾರಿ, ವಿಶ್ವವಿದ್ಯಾಲಯ ಹಾಗೂ ಖಾಸಗಿ ಸಂಘಸಂಸ್ಥೆಗಳ ಸಹಕಾರದೊಂದಿಗೆ ಪುಸ್ತಕೋದ್ಯಮದ ಆಂದೋಲನಕ್ಕೆ ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸಿ ಈ ಉದ್ಯಮವನ್ನು ವಿಸ್ತರಿಸುವುದೂ ಪ್ರಾಧಿಕಾರದ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಕೆಲವು ಯೋಜನೆಗಳನ್ನು ರೂಪಿಸಿಕೊಂಡಿದೆ.

**1. ಪುಸ್ತಕ ಪ್ರಕಟಣೆ:** ವಿಷಯದ ಸಂವಹನದ ದೃಷ್ಟಿಯಿಂದ ಕೃತಿ ಸರಳ ವಾಗಿದ್ದು ಅದನ್ನು ಕೊಂಡು ಓದುವ ಹಾಗೆ ಮಾಡಬೇಕೆಂಬ ದೃಷ್ಟಿಯಿಂದ ಅಗ್ಗದ ಬೆಲೆಯಲ್ಲಿ ಸುಲಭವಾಗಿ ದೊರೆಯುವಂತೆ ಮಾಡುವ ಜನಪ್ರಿಯ ಪುಸ್ತಕ ಮಾಲೆ, ಎಲ್ಲರೂ ಕಡ್ಡಾಯವಾಗಿ ತಿಳಿದುಕೊಳ್ಳಲೇ ಬೇಕಾದ ವಿಷಯಗಳನ್ನೊಳಗೊಂಡ ಮೂಲಭೂತ ಶೈಕ್ಷಣಿಕ ಮಾಲೆ, ವೈಜ್ಞಾನಿಕ ವಿಚಾರಗಳನ್ನು ಒಳಗೊಂಡ ವಿಜ್ಞಾನ ದೀಪಮಾಲೆ, ವಿಶೇಷವಾಗಿ ಮಕ್ಕಳ ಮನಸ್ಸನ್ನು ಅರಳಿಸಬಲ್ಲ ಹಾಗೂ ಅವರ ಪ್ರತಿಭೆಯನ್ನು ಉದ್ದೀಪನಗೊಳಿಸಬಲ್ಲ ಮಕ್ಕಳ ಪುಸ್ತಕ ಮಾಲೆ, ಪಂಪ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಕೃತಿಗಳನ್ನು ಪ್ರಕಟಿಸುವ ಪಂಪ ಪ್ರಶಸ್ತಿ ಕೃತಿ ಮಾಲೆ, ನೋಬೆಲ್ ಪುರಸ್ಕೃತ ಸಾಹಿತ್ಯಮಾಲೆ, ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಜಾನಪದ ಮಾಲೆಗಳು ಈ ನಿಟ್ಟಿನಲ್ಲಿ ಕೆಲವು ಮುಖ್ಯ ಪ್ರಯತ್ನಗಳು. ಗ್ರಾಮ ಸಂಸ್ಕೃತಿ ಮಾಲೆ, ಸಾಮಾನ್ಯರಿಗೆ ಕಾನೂನು ಮಾಲೆಗಳ ಅಡಿಯಲ್ಲಿ ಅನೇಕ ಕೃತಿಗಳನ್ನೂ ಅನುವಾದಗಳನ್ನೂ ಪ್ರಕಟಿಸಿಲಾಗುತ್ತಿದೆ.

**2. ಪುಸ್ತಕ ಸಗಟು ಖರೀದಿ ಮತ್ತು ಕೊಡುಗೆ:** ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಪ್ರಥಮಾವೃತ್ತಿ ಗ್ರಂಥಗಳನ್ನು ಸಗಟಾಗಿ ಖರೀದಿಸಿ ಲೇಖಕ ಪ್ರಕಾಶಕರಿಗೆ ನೆರವು ನೀಡುವುದು, ಹೀಗೆ ಖರೀದಿಸಿದ ಗ್ರಂಥಗಳನ್ನು ನಾಡಿನ ಸಾರ್ವಜನಿಕ ಗ್ರಂಥಾಲಯಗಳಿಗೂ ದಲಿತ ಮತ್ತು ಹಿಂದುಳಿದ ವರ್ಗಗಳು ಹಾಗೂ ಗ್ರಾಮೀಣ ಪ್ರದೇಶದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಸಾಹಿತ್ಯ ಪರಿಷತ್ತಿನ ಗ್ರಂಥಾಲಯಕ್ಕೂ ಹೊರನಾಡಿನ ಕನ್ನಡ ಸಂಘ ಸಂಸ್ಥೆಗಳು ಸ್ಥಾಪಿಸಿದ ಗ್ರಂಥಾಲಯಗಳಿಗೂ ಉಚಿತವಾಗಿ ವಿತರಿಸುವುದು ಈ ಯೋಜನೆಯ ಮೂಲೋದ್ದೇಶ.

**3. ಪುಸ್ತಕ ಪ್ರಕಟಣೆ ಸಹಾಯ:** ಉದಯೋನ್ಮುಖ ಬರೆಹಗಾರರಿಗೆ ಮತ್ತು ಉತ್ತಮ ಲೇಖಕರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಲೇಖಕರ ಮೊದಲ ಪುಸ್ತಕ ಪ್ರಕಟಣೆಗಾಗಿ ಆರ್ಥಿಕ ನೆರವು ನೀಡಲಾಗುತ್ತದೆ. ಅಪರೂಪವೂ ಅಲಭ್ಯವೂ ಆದ ಗ್ರಂಥಗಳನ್ನೂ ಮಕ್ಕಳ ಕೃತಿಗಳನ್ನೂ ಪ್ರಾಧಿಕಾರವೇ ಪ್ರಕಟಿಸುವುದರ ಜೊತೆಗೆ ಖಾಸಗಿ ಪ್ರಕಾಶಕರಿಗೆ ವಿವಿಧ ರೂಪದ ಆರ್ಥಿಕ ಸಹಾಯ ನೀಡಲಾಗುತ್ತದೆ. ಹಾಗೆಯೇ ಸೃಜನೇತರ ಸಾಹಿತ್ಯ ಪ್ರಕಾರಗಳಾದ ಜಾನಪದ, ವಿಜ್ಞಾನ, ಇತಿಹಾಸ, ಸಂಶೋಧನಾತ್ಮಕ ಕೃತಿಗಳಿಗೆ ಸಹಾಯಧನ ನೀಡುವ ಯೋಜನೆಯೂ ರೂಪುಗೊಂಡಿದೆ.

**4. ಪುಸ್ತಕಗಳ ಪ್ರಚಾರ ಹಾಗೂ ಮೇಳ:** ವಿವಿಧ ಸಂಘ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಪುಸ್ತಕ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಹಾಗೂ ಗಡಿಭಾಗಗಳಲ್ಲಿ ಪುಸ್ತಕ ಮಾರಾಟ ಆಂದೋಲನದ ಅಂಗವಾಗಿ ಒಂದುವಾರಕಾಲ ವಾರ್ಷಿಕ ಪುಸ್ತಕ ಮೇಳವನ್ನು ನಡೆಸಲಾಗುತ್ತದೆ. ಇದರಲ್ಲಿ ಎಲ್ಲ ಪುಸ್ತಕ ಪ್ರಕಾಶಕರನ್ನು ಬರಮಾಡಿಕೊಂಡು ಪುಸ್ತಕೋದ್ಯಮದ ಸಾಧಕ –ಬಾಧಕಗಳನ್ನು ಮನನ ಮಾಡಿಕೊಡುವುದೂ ಈ ಯೋಜನೆಯ ಉದ್ದೇಶವಾಗಿದೆ.

**5. ಸಂಚಾರಿ ಹಾಗೂ ಗ್ರಂಥ ಸರಸ್ವತಿ ಮಳಿಗೆಗಳು:** ರಾಜ್ಯದ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಕನ್ನಡ ಪುಸ್ತಕಗಳ ಮಾರಾಟ ಹಾಗೂ ಪ್ರದರ್ಶನಕ್ಕಾಗಿ ಸಂಚಾರಿ ಪುಸ್ತಕ ಮಳಿಗೆಗಳನ್ನೂ ರಾಜ್ಯದ ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಗ್ರಂಥ ಸರಸ್ವತಿ ಹೆಸರಿನ ಮಳಿಗೆಗಳನ್ನೂ ಅನುಷ್ಠಾನಗೊಳಿಸಲಾಗಿದೆ. ಈಗಾಗಲೇ ದಾವಣಗೆರೆ ಬಸ್ ನಿಲ್ದಾಣದಲ್ಲಿ ಮಳಿಗೆ ಆರಂಭವಾಗಿದೆ. ಹಾಸನದಲ್ಲಿ ಸಂಸತ್ ಸದಸ್ಯರ ಅನುದಾನದಿಂದ ಮಳಿಗೆ ನಿರ್ಮಿಸುವ ಪ್ರಯತ್ನಗಳು ನಡೆಸಿವೆ. ಈ ಯೋಜನೆಯಿಂದ ಪುಸ್ತಕಗಳನ್ನು ವಾಚಕರಿಗೆ ಸುಲಭವಾಗಿ ಒದಗಿಸುವುದರ ಜೊತೆಗೆ ಕೆಲವರಿಗೆ ಸ್ವಾವಲಂಬಿ ಉದ್ಯೋಗಾವಕಾಶವನ್ನು ದೊರಕಿಸಿ ಕೊಡುತ್ತಿದೆ.

**6. ಪುಸ್ತಕ ಸಂಸ್ಕೃತಿ ಪ್ರಸಾರಪ್ರೋತ್ಸಾಹ:** ರಾಜ್ಯಾದ್ಯಂತ ವಿಚಾರ ಸಂಕಿರಣಗಳು, ಕಮ್ಮಟಗಳು, ಸಭೆಸಮಾರಂಭಗಳು ಹಾಗೂ ಸಂವಾದಗಳನ್ನು ಏರ್ಪಡಿಸುವುದರ ಮೂಲಕ ಪುಸ್ತಕ ಸಂಸ್ಕೃತಿಯ ಮಹತ್ವದ ಪರಿಚಯ ಮಾಡಿಕೊಡಲಾಗುತ್ತಿದೆ. ಸಗಟು ಹಾಗೂ ವಿಶೇಷ ಖರೀದಿ ಯೋಜನೆಯಡಿಯಲ್ಲಿ ಲೇಖಕ – ಪ್ರಕಾಶಕರಿಗೆ ಸಹಾಯ ಮಾಡುವುದು, ಅತ್ಯುತ್ತಮ ಪ್ರಕಾಶಕರನ್ನು ಗುರುತಿಸಿ 25 ಸಾವಿರ ರೂಪಾಯಿಗಳ ಮೊತ್ತ ಪ್ರಶಸ್ತಿ ನೀಡುವುದು – ಇವು ಕೂಡ ಪ್ರಾಧಿಕಾರದ ಕಾರ್ಯಭಾಗವಾಗಿದೆ. ಇದುವರೆಗೆ ಈ ಪ್ರಶಸ್ತಿಯನ್ನು ಬೆಂಗಳೂರಿನ ಕ್ರೈಸ್ಟ್ ಕಾಲೇಜು ಕನ್ನಡ ಸಂಘ (1998), ಮೈಸೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಪ್ರತಿಷ್ಠಾನ (1999), ಬೆಂಗಳೂರಿನ ಸಪ್ನಾ ಬುಕ್ ಹೌಸ್ (2000) ಮೈಸೂರಿನ ಸಂವಹನ ಮತ್ತು ಬಳ್ಳಾರಿಯ ಲೋಹಿಯಾ ಪ್ರಕಾಶನ ಸಂಸ್ಥೆಗಳು ಪಡೆದುಕೊಂಡಿವೆ (2003). ಅಚ್ಚುಕಟ್ಟಾಗಿ ಮುದ್ರಣಗೊಂಡ ಹಾಗೂ ಸೊಗಸಾದ ಮುಖಪುಟ ವಿನ್ಯಾಸವುಳ್ಳ ಕೃತಿಗಳಿಗೆ 15 ಸಾವಿರ ರೂಗಳ ಮೊದಲನೆಯ, 10 ಸಾವಿರ ರೂಗಳ ಎರಡನೆಯ ಹಾಗೂ 5 ಸಾವಿರ ರೂಗಳ ಮೂರನೆಯ ಬಹುಮಾನ ನೀಡಲಾಗುತ್ತಿದೆ. 5 ಸಾವಿರ ರೂಪಾಯಿಗಳ ಮೊತ್ತದ ಬಹುಮಾನವನ್ನು ವಿಶೇಷವಾಗಿ ಮಕ್ಕಳ ಪುಸ್ತಕಗಳಿಗಾಗಿಯೇ ಮೀಸಲಿರಿಸಲಾಗಿದೆ.

**7. ಪ್ರಾಧಿಕಾರದ ಪದಾಧಿಕಾರಿಗಳು:** ಒಬ್ಬರು ಅಧ್ಯಕ್ಷರು, ಹದಿಮೂರು ಮಂದಿ ಸದಸ್ಯರು ಮತ್ತು ಒಬ್ಬರು ಸಂಚಾಲಕರನ್ನು ಒಳಗೊಂಡಂತೆ ಪದಾಧಿಕಾರಿಗಳ ಸಮಿತಿಯ ರಚನೆಯಾಗಿರುತ್ತದೆ. ಪ್ರತಿ ಮೂರು ವರ್ಷಗಳ ಅವಧಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕಮಾಡಲಾಗುತ್ತದೆ. ಪುಸ್ತಕ ಚಿಂತಕರು, ಪುಸ್ತಕ ಪ್ರೇಮಿಗಳು ಹಾಗೂ ವಿದ್ವಾಂಸರನ್ನೊಳಗೊಂಡಂತೆ ಸರಕಾರದ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಕರ್ನಾಟಕ ಪುಸ್ತಕ ಪ್ರಕಾಶಕರ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಇದರ ಸಂಚಾಲಕತ್ವವನ್ನು ಪ್ರಾಧಿಕಾರದ ಆಡಳಿತಾಧಿಕಾರಿಗಳಿಗೆ ವಹಿಸಿಕೊಡಲಾಗಿರುತ್ತದೆ. *

**ಕನ್ನಡ ಪ್ರಭ :** ಭಾರತದ ಅತ್ಯಂತ ದೊಡ್ಡ ಪತ್ರಿಕಾ ಸಮೂಹವನ್ನು ನಿರ್ವಹಿಸುತ್ತಿರುವ ಇಂಡಿಯನ್ ಎಕ್ಸ್‌ಪ್ರೆಸ್ ಸಂಸ್ಥೆಯ ಅಂಗವಾಗಿ 4 ನವೆಂಬರ್ 1967ರಂದು ಬೆಂಗಳೂರಿನಿಂದ ಆರಂಭವಾದ ಕನ್ನಡ ದಿನಪತ್ರಿಕೆ ಕನ್ನಡಪ್ರಭ. ಪ್ರಥಮ ಸಂಚಿಕೆಯಲ್ಲಿ ತನ್ನ ಧ್ಯೇಯೋದ್ದೇಶಗಳನ್ನು ಕುರಿತು ಪತ್ರಿಕೆ ಹೀಗೆಂದು ಹೇಳಿದೆ : ನಾವು ಯಾವ ಪಕ್ಷಕ್ಕೂ ಸೇರಿದವರಲ್ಲ. ಜನ ಸಾಮಾನ್ಯರ ಬದುಕನ್ನು ಹಸನುಗೊಳಿಸಲು ಪ್ರಯತ್ನಪಡುವ ಎಲ್ಲರೊಡನೆಯೂ ನಾವು ಸಹಕರಿಸುತ್ತೇವೆ. ಜನಸಾಮಾನ್ಯರ ಯೋಗಕ್ಷೇಮ ಪಾಲನೆಯಲ್ಲಿ ನಿರತರಾಗಿರುವವರೆಲ್ಲರ ಜತೆಯಲ್ಲೂ ಶ್ರಮಿಸುತ್ತೇವೆ. ಇದಕ್ಕಿಂತ ಹಿರಿದಾದ, ಶ್ರೇಯಸ್ಕರವಾದ ನಾಡ ಸೇವೆಯಿಲ್ಲ. ಇದೇ ಪ್ರಜಾಧರ್ಮ...... ಒಟ್ಟಿನ ಒಳಿತಿಗಾಗಿ ವ್ಯಕ್ತಿಯ ಹಿತವನ್ನಾಗಲಿ, ವ್ಯಕ್ತಿಯ ಹಿತಕ್ಕಾಗಿ ಒಟ್ಟಿನ ಒಳಿತನ್ನಾಗಲಿ ಕಡೆಗಾಣಲು ನಾವು ಒಪ್ಪೆವು. ಒಂದರಿಂದ ಮತ್ತೊಂದು ಸಾಧನೆಯಾಗಬೇಕು. ಒಂದು ಮತ್ತೊಂದಕ್ಕೆ ದಾರಿಯಾಗಬೇಕು. ಈ ಸಮಷ್ಟಿ ವ್ಯಷ್ಟಿಗಳ ಸಮರಸವನ್ನು ಎತ್ತಿಹಿಡಿಯಲು ನಾವು ಉದ್ಯುಕ್ತರಾಗುತ್ತೇವೆ.......

ಇಂಗ್ಲಿಷ್ ಪತ್ರಿಕೆಯೊಂದನ್ನು ಪ್ರಕಟಿಸುವ ಸಂಸ್ಥೆಯೇ ಈ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರೂ ಇದು ಇಂಗ್ಲಿಷ್ ಪತ್ರಿಕೆಯ ಅನುಕರಣವಲ್ಲ. ಕನ್ನಡ ಜನತೆಯ ಪ್ರತಿನಿಧಿಯಾಗಿ ಸ್ವತಂತ್ರ್ಯ ಧೋರಣೆಗಳನ್ನುಳ್ಳ ಪತ್ರಿಕೆಯಿದು. ಪತ್ರಿಕೆಗಳ ಪ್ರಥಮ ಲಕ್ಷ್ಯವಾದ ಸುದ್ದಿ ವಿತರಣೆಯಲ್ಲಿ ಈ ಪತ್ರಿಕೆಗೆ ವ್ಯಾಪಕವಾದ ಸುದ್ದಿ ಮೂಲಗಳಿವೆ. ರಾಜ್ಯದ ಹಾಗೂ ದೇಶ ವಿದೇಶಗಳ ಸುದ್ದಿ ಸಂಗ್ರಹದಲ್ಲಿ ಮಾಮೂಲಿ ಸುದ್ದಿ ಸಂಗ್ರಹ ಸಂಸ್ಥೆಗಳ ಜೊತೆಗೆ, ಪ್ರಪಂಚದಾದ್ಯಂತ ವ್ಯಾಪಕವಾದ ಎಕ್ಸ್‌ಪ್ರೆಸ್ ನ್ಯೂಸ್ ಸರ್ವಿಸಿನ ವಿಶೇಷ ವ್ಯವಸ್ಥೆಯೂ ಈ ಪತ್ರಿಕೆಗಿದೆ. ಸುದ್ದಿ ಹಾಗೂ ಅಭಿಪ್ರಾಯ ಪ್ರಕಟಣೆಯಲ್ಲಿ ಸ್ವತಂತ್ರ ನಿಲವು ತಳೆದು ತನ್ನದೇ ಆದ ವಿಚಾರ ವೈಶಿಷ್ಟ್ಯವನ್ನು ಇದು ಕಾಪಾಡಿಕೊಂಡಿದೆ. ವಾಚಕೋಪಯುಕ್ತವಾದ ಹಲವು ವೈಶಿಷ್ಟ್ಯಪೂರ್ಣ ಪ್ರಯೋಗಗಳನ್ನೂ ಕನ್ನಡ ಪ್ರಭ ನಡೆಸಿದೆ. ಓದುಗರಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ಹಾಗೂ ಮನೋರಂಜನೆಯನ್ನು ಒದಗಿಸುವ ಸಲುವಾಗಿ ದೈನಿಕ ಧಾರಾವಾಹಿ ಕಾದಂಬರಿಯನ್ನು ಮೊತ್ತಮೊದಲು ಆರಂಭಿಸಿದ ಪತ್ರಿಕೆಯಿದು.

ಕನ್ನಡಪ್ರಭ

ಚುನಾವಣೆ ಸಂಪುಟ

ನಂಬಿಕೆ ದ್ರೋಹ

ದೈನಿಕ ಧಾರಾವಾಹಿಯನ್ನು ಪ್ರಕಟಿಸುವ ಏಕೈಕ ದಿನಪತ್ರಿಕೆ ಎಂಬ ಹೆಗ್ಗಳಿಕೆ ಇಂದಿಗೂ ಕನ್ನಡಪ್ರಭದ್ದೇ. ಸಿನಿಮಾ ಪುರವಣಿ, ಚಿತ್ರಪ್ರಭ, ವಾಣಿಜ್ಯ ಪುರವಣಿ, ವಿತ್ತಪ್ರಭ, ಮಹಿಳೆಯರಿಗಾಗಿ ಮಹಿಳಾಪ್ರಭ ಮೊದಲು ಆರಂಭಿಸಿದ್ದು ಕನ್ನಡಪ್ರಭ. ಮಹಿಳಾಪ್ರಭ ಈಗ ಪ್ರಕಟವಾಗುತ್ತಿಲ್ಲವಾದರೂ ಕ್ರೀಡಾ ಪ್ರಭ, ಜ್ಯೋತಿಷ್ಯಪ್ರಭ, ಕರ್ನಾಟಕ ಕನ್ನಡಿ, ಉದ್ಯೋಗ ಪ್ರಭ, ಕಾಲೇಜುರಂಗದಂಥ ವಿಶೇಷ ಪುಟಗಳು ಈಗಲೂ ಓದುಗರಿಗೆ ಜ್ಞಾನ, ರಂಜನೆ ಒದಗಿಸುತ್ತವೆ. ಚಿತ್ರಪ್ರಭ, ಸಾಪ್ತಾಹಿಕ ಪ್ರಭ, ಚಿತ್ರೋದ್ಯಮ ಹಾಗೂ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಪುರವಣಿಗಳು. ಕಥಾಸ್ಪರ್ಧೆಗಳನ್ನು ಏರ್ಪಡಿಸುವ ಮೊದಲ ಪತ್ರಿಕೆ ಕನ್ನಡಪ್ರಭವಲ್ಲವಾದರೂ ಅತಿ ಹೆಚ್ಚು ಮೊತ್ತದ (10,000ರೂ.ಗಳ) ಬಹುಮಾನ ನೀಡುವ ಮೊದಲ ಪತ್ರಿಕೆಯಾಯಿತು. ಇದಕ್ಕಿಂತಲೂ ಹೆಚ್ಚು ಮೊತ್ತದ ಬಹುಮಾನ ನೀಡುವ ಪತ್ರಿಕೆಗಳು ಇವೆ. ವರ್ಷದ ವ್ಯಕ್ತಿ–ಕನ್ನಡ ಪ್ರಭ ಅತ್ಯಂತ ಪ್ರತಿಷ್ಠಿತ ಆಯ್ಕೆ. 2005ರಿಂದ ಆರಂಭವಾದ ವರ್ಷದ ವ್ಯಕ್ತಿ ಒಂದು ಲಕ್ಷ ರೂಪಾಯಿ ಪ್ರಶಸ್ತಿ ಮೊತ್ತವನ್ನು ಹೊಂದಿದೆ.

ದೀಪಾವಳಿಗೋ ದೀಪಾವಳಿ ಸಂಚಿಕೆ, ಆರೋಗ್ಯ, ವಿದ್ಯಾಕುಸುಮ ವಿಶೇಷ ಸಂಚಿಕೆಗಳನ್ನು ಹೊರತರುತ್ತಿದೆ.

ಸಂಪಾದಕೀಯ ವಿಭಾಗ ಸಂಪೂರ್ಣ ಗಣಕೀಕರಣಗೊಂಡು ಆಧುನಿಕ ಪತ್ರಿಕೋದ್ಯಮದ ಜತೆಗೆ ಹೆಜ್ಜೆ ಹಾಕುತ್ತಿದೆ. ಬೆಂಗಳೂರು, ಬೆಳಗಾಂ, ಶಿವಮೊಗ್ಗ ಮತ್ತು ಮಂಗಳೂರು ಕೇಂದ್ರಗಳಿಂದ ಪತ್ರಿಕೆ ಪ್ರಕಟವಾಗುತ್ತಿದ್ದು, ಒಟ್ಟು 20 ಆವೃತ್ತಿಗಳನ್ನು ಹೊಂದಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪೂರ್ಣಕಾಲಿಕ ವರದಿಗಾರರನ್ನೂ, 200ಕ್ಕೂ ಹೆಚ್ಚು ಮಂದಿ ಅರೆಕಾಲಿಕ ವರದಿಗಾರರನ್ನೂ (ಗ್ರಾಮಾಂತರ ಮಟ್ಟದಲ್ಲಿ) ಹೊಂದಿದೆ.

ತಾಜಾ ಸುದ್ದಿಯನ್ನು ನೀಡುವುದರ ಜತೆಗೆ ಪುಟವಿನ್ಯಾಸಕ್ಕೂ ಹೆಚ್ಚು ಲಕ್ಷ್ಯ ಕೊಡುತ್ತಿದೆ. ರಾಜ್ಯದ ಸುದ್ದಿಗಳಿಗೆ ಮಹತ್ತ್ವ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಸುದ್ದಿಗಳೂ ಅವುಗಳ ಮಹತ್ತ್ವಕ್ಕನುಗುಣವಾಗಿ (ಸ್ಥಳೀಯ ಓದುಗರ ದೃಷ್ಟಿಯಿಂದ) ಸ್ಥಾನ ಪಡೆಯುತ್ತವೆ.

ಪತ್ರಿಕೆಯ ಮೊದಲ ಸಂಪಾದಕರು ಎಸ್.ಎಸ್. ಸೀತಾರಾಮ ಶಾಸ್ತ್ರೀ. ಅನಂತರ ಕೆ.ಎಸ್. ರಾಮಕೃಷ್ಣಮೂರ್ತಿ, ಖಾದ್ರಿ ಶಾಮಣ್ಣ, ವೈ.ಎನ್. ಕೃಷ್ಣಮೂರ್ತಿ, ಕೆ. ಸತ್ಯನಾರಾಯಣ, ವೆಂಕಟನಾರಾಯಣ ಪತ್ರಿಕೆಯ ಸಂಪಾದಕರಾಗಿದ್ದರು. ಈಗ ಎಚ್.ಆರ್. ರಂಗನಾಥ್ ಅವರ ಸಂಪಾದಕತ್ವದಲ್ಲಿ ಪತ್ರಿಕೆ ಹೊರಬರುತ್ತಿದೆ. (ಕೆ.ಎಸ್.ಆರ್.ಎಂ.; ಜಿ.ಎಸ್.ಎಸ್.)

**ಕನ್ನಡ ಬೆರಳಚ್ಚು :** ಕನ್ನಡ ಬೆರಳಚ್ಚು ಯಂತ್ರವನ್ನು ರೂಪಿಸುವಲ್ಲಿ, ಇದರ ನಮೂನೆಯನ್ನು ತಯಾರಿಸಲು ಪ್ರಯತ್ನಪಟ್ಟವರಲ್ಲಿ ಬೆಂಗಳೂರಿನ ಮ.ನ.ಮೂರ್ತಿ, ಶಿವಮೊಗ್ಗದ ಕೆ.ಅನಂತಸುಬ್ಬರಾಯ, ಮೈಸೂರಿನ ನಾರಾಯಣಾಚಾರ್ಯ, ಕೇಶವ, ಚಿಕ್ಕಮಗಳೂರಿನ ಟಿ.ಎಲ್.ನಾರಾಯಣ ರಾಯ, ಚಿಟಗುಪ್ಪಿ, ಭದ್ರಾವತಿಯ ಎ.ನಾಗರಾಜರಾಯ, ಎಸ್.ಸುಬ್ಬರಾಯ ಮತ್ತು ಹೈದರಾಬಾದಿನ ತಿವಾರಿ ಎಂಬುವರ ಹೆಸರುಗಳನ್ನು ಉಲ್ಲೇಖಿಸಬಹುದು.

ಕನ್ನಡ ಬೆರಳಚ್ಚು ಕೀಲಿಮಣೆ

ಸು.1933ನೆಯ ಅಕ್ಟೋಬರ್‌ನಲ್ಲಿ ಮ.ನ.ಮೂರ್ತಿಯವರು ತಯಾರಿಸಿದ ಕನ್ನಡ ಬೆರಳಚ್ಚು ಯಂತ್ರ ಸರ್. ಎಂ.ವಿಶ್ವೇಶ್ವರಯ್ಯ ಮೊದಲಾದವರಿಂದ ಪ್ರಶಂಸೆಯನ್ನೂ ಬಹುಮಾನಗಳನ್ನೂ ಗಳಿಸಿತಾದರೂ ಅದರಲ್ಲಿ ಕೆಲವೊಂದು ದೋಷಗಳಿದ್ದುದರಿಂದ ಸುಧಾರಣೆ ಅವಶ್ಯವಿತ್ತು. ಆಗಲೇ ಎಸ್.ಸುಬ್ಬರಾಯರು, ಕೆ.ಅನಂತಸುಬ್ಬರಾಯರು, ಚಿಟಗುಪ್ಪಿಯವರು ಮತ್ತು ಎ.ನಾಗರಾಜರಾಯರು ಬೇರೆ ಬೇರೆಯಾಗಿ ಬೆರಳಚ್ಚು ಯಂತ್ರಗಳನ್ನು ತಯಾರಿಸಿದ್ದರು. ಈ ಮಧ್ಯೆ ದೋಷರಹಿತ ಪರಿಪೂರ್ಣ ಬೆರಳಚ್ಚು ಯಂತ್ರವನ್ನು ತಯಾರಿಸಲು ಲಿಪಿ ಸುಧಾರಣೆಯಾಗಬೇಕೆಂದು ತಜ್ಞರು ಅಭಿಪ್ರಾಯಪಟ್ಟರು. 1936ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬಿ.ಎಂ.ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಲಿಪಿ ಸುಧಾರಣೆಯ ಬಗ್ಗೆ ಸಲಹೆ ನೀಡಲು ಒಂದು ಸಮಿತಿಯನ್ನು ರಚಿಸಿತ್ತು. ಆದರೆ ಕಾರಣಾಂತರದಿಂದ ಈ ದಿಕ್ಕಿನ ಕಾರ್ಯ ಮುಂದುವರಿಯಲಿಲ್ಲ.

ಸ್ವಾತಂತ್ರ್ಯ ಬಂದ ಅನಂತರ ರಾಜ್ಯ ಸರ್ಕಾರ ಬೆರಳಚ್ಚು ಯಂತ್ರ ನಿರ್ಮಾಣದಲ್ಲಿ ಆಸಕ್ತಿ ವಹಿಸಿತು. ಕೆ.ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ತಿ.ತಾ.ಶರ್ಮರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ ಸಲಹೆಗಳನ್ನು ಕೇಳಿತು. ಬೆರಳಚ್ಚು ಯಂತ್ರದ ತಯಾರಿಕೆಯ ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಸಮಿತಿ ಸಂಗ್ರಹಿಸಿತು. ಅನಂತರ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಲಿಪಿಸುಧಾರಣೆ ಇಲ್ಲದೆ ದೋಷರಹಿತವಾದ ಬೆರಳಚ್ಚು ಯಂತ್ರವನ್ನು

ನಿರ್ಮಿಸುವುದು ಅಸಾಧ್ಯ ಎಂದು ಸಮಿತಿ ಅಭಿಪ್ರಾಯಪಟ್ಟಿತು. ಆದರೆ ಲಿಪಿ ಸುಧಾರಣೆ ಬಗ್ಗೆ ಸಾರ್ವಜನಿಕರಿಂದ ಪ್ರತಿಭಟನೆ ವ್ಯಕ್ತವಾದ್ದರಿಂದ ಸರ್ಕಾರ ಆ ಪ್ರಯತ್ನವನ್ನು ಕೈಬಿಟ್ಟಿತು. ಮುಂದೆ ಸರ್ಕಾರ ಕೆಲವೊಂದು ಕನ್ನಡ ಬೆರಳಚ್ಚುಗಳನ್ನು ಪರಿಶೀಲಿಸಿ 1958ರಲ್ಲಿ ಅನಂತಸುಬ್ಬರಾಯರು ನಿರ್ಮಿಸಿದ ಕನ್ನಡ ಬೆರಳಚ್ಚು ಮಾದರಿಯನ್ನು ಅಂಗೀಕರಿಸಿತು. ಸರ್ಕಾರದ ಕೋರಿಕೆಯ ಮೇರೆ ಸ್ವೀಡನ್ನಿನ ಹಾಲ್ಡಾ ಕಂಪನಿ ತಯಾರಿಸಿದ ಮೊದಲ ಕನ್ನಡ ಬೆರಳಚ್ಚು ಯಂತ್ರ 16 ಜೂನ್ 1961ರಂದು ಚಾಲನೆಗೆ ಬಂತು. ಇದರಲ್ಲಿ ಉಪಯೋಗಿಸಿದ ಕನ್ನಡ ಬೆರಳಚ್ಚಿನ ಫಲಕಕ್ಕೆ ಅನಂತ ಕೀ ಬೋರ್ಡ್ ಎಂದು ಹೆಸರಿಸಲಾಯಿತು. ಅನಂತ ಕೀ ಬೋರ್ಡ್ ಆಂಗ್ಲ ಬೆರಳಚ್ಚಿನ ಫಲಕದ ಆಧಾರದ ಮೇಲೆ ನಿರ್ಮಿಸಿರುವುದರಿಂದ ಮತ್ತು ಇದರಲ್ಲಿ 3 ಅಚಲಿತ ಕೀಗಳು ಮಾತ್ರ ಅಳವಡಿಸಿರುವುದರಿಂದ ಬಹಳ ಸುಲಭವಾಗಿ ಶೀಘ್ರವಾಗಿ ಕಲಿಯಲು ಅನುಕೂಲವಿದೆ.

ಸರ್ಕಾರ 1967ರಿಂದ ಕನ್ನಡ ಬೆರಳಚ್ಚಿನ ಪರೀಕ್ಷೆಗಳನ್ನು ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ಕರ್ನಾಟಕದ ಅನೇಕ ವಾಣಿಜ್ಯ ಶಾಲೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಇಂದು ಕನ್ನಡ ಬೆರಳಚ್ಚಿನ ತರಬೇತು ಲಭ್ಯವಾಗಿದೆ. ಹಾಲ್ಡಾ, ರೆಮಿಂಗ್‌ಟನ್ ಕಂಪನಿಯವರು ಈಗಾಗಲೇ ಅನೇಕ ಕನ್ನಡ ಬೆರಳಚ್ಚು ಯಂತ್ರಗಳನ್ನು ತಯಾರಿಸಿದ್ದು ಅವು ಉಪಯೋಗದಲ್ಲಿವೆ. ಗೋದ್ರೆಜ್ ಕಂಪನಿಯವರೂ ತಯಾರಿಕೆಯನ್ನು ಕೈಗೊಂಡಿದ್ದರು. ಆಡಳಿತದ ಎಲ್ಲ ಹಂತಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ತರುವ ಉದ್ದೇಶದಿಂದ ಅದಕ್ಕೆ ಪೂರಕವಾಗಿ ರಾಜ್ಯದಲ್ಲೇ ಕನ್ನಡ ಬೆರಳಚ್ಚು ಯಂತ್ರವನ್ನು ತಯಾರಿಸುವತ್ತ ಕರ್ನಾಟಕ ಸರ್ಕಾರ ಕಾರ್ಯೋನ್ಮುಖವಾಗಿತ್ತು. ಆದರೆ ಡಿ.ಟಿ.ಪಿ. ಮುದ್ರಣ ವ್ಯವಸ್ಥೆ ಆವಿಷ್ಕಾರಗೊಂಡ ಮೇಲೆ, ಕಂಪ್ಯೂಟರ್ ಬಳಕೆಗೆ ಬಂದ ಮೇಲೆ ಬೆರಳಚ್ಚು ಯಂತ್ರಗಳ ಬಳಕೆ ಕ್ಷೀಣಿಸಿದೆ. (ಎಸ್.ಆರ್.ಎಸ್.)

**ಕನ್ನಡ ಭಾಷೆ :** ಭಾರತದ ಸಂವಿಧಾನದಲ್ಲಿ ಮಾನ್ಯತೆಪಡೆದ 22 ಭಾಷೆಗಳಲ್ಲಿ ಒಂದಾಗಿಯೂ ಕರ್ನಾಟಕ ರಾಜ್ಯದ ಜನರ ಮನೆಮಾತಾಗಿಯೂ ಇರುವ ಕನ್ನಡ ಭಾಷೆ ದ್ರಾವಿಡ ಭಾಷಾ ಪರಿವಾರದ ನಾಲ್ಕು ಪ್ರಮುಖ ಭಾಷೆಗಳಲ್ಲೊಂದು. ಸು. 2,500 ವರ್ಷಗಳ ಸಾಹಿತ್ಯ ಹಾಗೂ ಶಿಲಾಶಾಸನಗಳ ಚರಿತ್ರೆಯನ್ನು ಹೊಂದಿದ ಈ ಭಾಷೆ ಸುಸಂಸ್ಕೃತ ಜನಾಂಗವೊಂದರ ಆಡುನುಡಿಯಾಗಿಯೂ ಸಾಹಿತ್ಯರಚನೆಗೆ ಮಾಧ್ಯಮವಾಗಿಯೂ ವಿಕಾಸಗೊಂಡು ವಿಶ್ವಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಗಳನ್ನು ಸಲ್ಲಿಸಿದೆ. ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಲು ಮತ್ತು ಮೈಸೂರು ಜನತೆಯ ಶಿಕ್ಷಣಮಾಧ್ಯಮವಾಗಲು ಸಮರ್ಥವಾಗಿದೆ.

1991ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ 2.97.75374 ಜನರ ಮಾತೃಭಾಷೆ ಕನ್ನಡ. ಭಾರತದಲ್ಲಿ 3,25,90177 ಜನರಿಗೆ ಇದು ಮಾತೃಭಾಷೆ. ಕರ್ನಾಟಕದಲ್ಲೇ ಅಲ್ಲದೆ ಕರ್ನಾಟಕದ ಗಡಿಯಾಚೆಗಿರುವ ಕಾಸರಗೋಡು, ಮಂಜೇಶ್ವರ, ಸೊಲ್ಲಾಪುರ, ಅಕ್ಕಲಕೋಟೆ, ಹೊಸೂರು, ತಾಳವಾಡಿ, ಆದವಾನಿ ಮುಂತಾದ ಪ್ರದೇಶಗಳಲ್ಲಿಯೂ ಮುಂಬೈ, ಚೆನ್ನೈ, ದೆಹಲಿ, ಕೋಲ್ಕತ್ತ, ಹೈದರಾಬಾದು ಮುಂತಾದ ಪ್ರಮುಖ ಪಟ್ಟಣಗಳಲ್ಲಿಯೂ ಇದ್ದಾರೆ. ಇದಲ್ಲದೆ ಇತರ ಭಾಷೆಗಳನ್ನಾಡುವ ಜನರಲ್ಲಿ 3,550,642 ಜನ ಕನ್ನಡವನ್ನು ತಮ್ಮ ಎರಡನೆಯ ಭಾಷೆಯಾಗಿ ಮಾತಾಡುತ್ತಾರೆಂದೂ ಜನಗಣತಿಯಿಂದ ತಿಳಿದುಬಂದಿದೆ.

ಕನ್ನಡ ಎಂಬ ಶಬ್ದ ಈ ಭಾಷೆಯ ಹೆಸರನ್ನು ಸೂಚಿಸುವಂತೆ ಈ ಭಾಷೆಯನ್ನಾಡುವ ಜನ ವಾಸಿಸುವ ಪ್ರದೇಶವನ್ನೂ ಸೂಚಿಸುತ್ತಿತ್ತೆಂದು ಪ್ರಾಚೀನ ಗ್ರಂಥಗಳಿಂದ ತಿಳಿದುಬರುತ್ತದೆ. ಕವಿರಾಜಮಾರ್ಗದಲ್ಲಿ ಕಾವೇರಿಯಿಂದಮಾ ಗೋದಾವರಿಯ ವರಮಿರ್ದ ನಾಡದಾ ಕನ್ನಡದೊಳ್ ಎಂದೂ ಕಬ್ಬಿಗರ ಕಾವದಲ್ಲಿ ಕನ್ನಡಮೆನಿಪ್ಪಾ ನಾಡು ಎಂದೂ ಉಕ್ತವಾಗಿದೆ. ಕವಿರಾಜಮಾರ್ಗದಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿತ್ತು ಎನ್ನಲಾದ ಈ ಪ್ರದೇಶ ಈಗ ತುಂಬ ಸಂಕುಚಿತವಾಗಿ ಬೆಳಗಾಂ ಬೀದರ್ ಪ್ರದೇಶದಿಂದ ಕೊಡಗು ಚಾಮರಾಜನಗರದವರೆಗೂ ಅರಬ್ಬೀ ಸಮುದ್ರತೀರದಿಂದ ಕೋಲಾರ ಬಳ್ಳಾರಿವರೆಗೂ ಸೀಮಿತವಾಗಿದೆ.

ಈ ಶಬ್ದದ ರೂಪನಿಷ್ಪತ್ತಿಯ ವಿಚಾರದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಕನ್ನಡವನ್ನು ಸಂಸ್ಕೃತಜನ್ಯವೆಂದು ನಂಬಿದ ವಿದ್ವಾಂಸರು ಈ ಶಬ್ದ ಕರ್ಣಾಟ ಅಥವಾ ಕರ್ನಾಟಕ ಎಂಬ ಸಂಸ್ಕೃತ ಶಬ್ದದಿಂದ ಬಂದಿದೆ ಎನ್ನುತ್ತಾರೆ. ಪ್ರಸಿದ್ಧ ವೈಯಾಕರಣಿಯಾದ ಕೇಶಿರಾಜನೂ ಇದೇ ಅಭಿಪ್ರಾಯವನ್ನು ಹೊಂದಿದ್ದ. ಕರ್ಣಾಟಕ ಎಂಬ ಶಬ್ದ ಕರುನಾಡಗಂ ಎಂಬ ದ್ರಾವಿಡ ಮೂಲ ಪದದ ಸಂಸ್ಕೃತ ರೂಪವೆಂದೂ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹೀಗೆ ಸಂಸ್ಕೃತ ರೂಪವನ್ನು ಪಡೆದ ಮೇಲೆ ಅದರ ನಿಷ್ಪತ್ತಿಯೂ ಕರ್ಣೇಷು ಅಟತಿ ಸರ್ವೇಷಾಂ ಕರ್ಣೇಷು ಭ್ರಮತೀತಿ–ಯಾವ ದೇಶದ ಪ್ರಸಿದ್ಧ ಜನರ ಕಿವಿಯಲ್ಲಿ ಮೊಳಗುತ್ತಿರುವುದೋ ಆ ದೇಶ–ಎಂದಾಯಿತು. ಆರ್. ನರಸಿಂಹಾಚಾರ್ಯರು ಕಮ್ಮಿತು ಎಂದರೆ ಸುವಾಸನೆಯುಳ್ಳ ಎಂದರ್ಥ. ಗಂಧದ ಮರಗಳಿಂದ ಕೂಡಿದ ಈ ರಾಜ್ಯಕ್ಕೆ ಇದು ಅನ್ವರ್ಥನಾಮವಾಗಬಹುದು. ಅಥವಾ ಕನ್ನಡಿಗರ ಅಭಿಮಾನಸೂಚಕವೂ ಆಗಬಹುದು. ಗುಡರ್ಟ್ ಮತ್ತು ಕಾಲ್ಡ್‌ವೆಲ್ ಅವರ ಅಭಿಪ್ರಾಯದಂತೆ ಜೋಳ ಮತ್ತು ಹತ್ತಿಯ ಬೆಳೆವಣಿಗೆಗೆ ಅನುಗುಣವಾದ ಕಪ್ಪು ಮಣ್ಣಿನ ಪ್ರದೇಶಕ್ಕೆ ಕರ್ ನಾಡು ಅಥವಾ ಕಪ್ಪು ಮಣ್ಣಿನ ಪ್ರದೇಶ ಎಂಬ ಹೆಸರು ಬಂತು. ಆದರೆ ಈ ಕಪ್ಪು ಮಣ್ಣು ಕರ್ನಾಟಕ ರಾಜ್ಯದ ದಕ್ಷಿಣ ಪ್ರದೇಶದಲ್ಲಿಲ್ಲ ಎಂಬುದು ಗಮನಾರ್ಹ. ಇನ್ನು ಕೆಲವರು ಕರುನಾಡು ಎಂಬ ಶಬ್ದಕ್ಕೆ ದೊಡ್ಡ ಪ್ರದೇಶ ಅಥವಾ ಮಹಾರಾಷ್ಟ್ರ ಎನ್ನುವ ನಿಷ್ಪತ್ತಿ ತೋರಿಸುವ ಪ್ರಯತ್ನವನ್ನೂ ಮಾಡಿದ್ದಾರೆ.

ಕನ್ನಡ ಭಾಷೆಯನ್ನಾಡುವವರು ದ್ರಾವಿಡ ಜನಾಂಗಕ್ಕೆ ಸೇರಿದವರು. ಆರ್ಯರು ಭಾರತಕ್ಕೆ ಬರುವ ಮುಂಚೆಯೇ ಇವರು ಇಲ್ಲಿಗೆ ಬಂದವರು. ಜಗತ್ತಿನಲ್ಲಿ ನಾಗರಿಕತೆಯ ವಿಕಾಸ ಪ್ರಾರಂಭದಿಂದಲೇ ಇವರು ಭಾರತದಲ್ಲಿ ನೆಲೆಸಿದ್ದರು. ಆಮೇಲೆ ಉತ್ತರದಲ್ಲಿ ಆರ್ಯರ ಪ್ರಾಬಲ್ಯ ಹೆಚ್ಚಾಗಿ ದ್ರಾವಿಡರು ದಕ್ಷಿಣದ ಕಡೆಗೆ ಬಂದಿರಬೇಕು ಎಂದು ಇತಿಹಾಸತಜ್ಞರ ಅಭಿಪ್ರಾಯ. ಭಾರತಕ್ಕೆ ಬರುವ ಮೊದಲು ಈ ಜನಾಂಗದವರು ಭಾರತದ ಉತ್ತರದಲ್ಲಿ ಆರ್ಯರ ಪ್ರಾಬಲ್ಯ ಹೆಚ್ಚಾಗಿ ದ್ರಾವಿಡರು ದಕ್ಷಿಣದ ಕಡೆಗೆ ಬಂದಿರಬೇಕು ಎಂದು ಇತಿಹಾಸತಜ್ಞರ ಅಭಿಪ್ರಾಯ. ಭಾರತಕ್ಕೆ ಬರುವ ಮೊದಲು ಈ ಜನಾಂಗದವರು ಭಾರತದ ಉತ್ತರದಲ್ಲಿ ಸೈಬೀರಿಯದ ಕಡೆಯಲ್ಲಿದ್ದರೆಂದು ಹಂಗೇರಿ, ಫಿನಿಶ್ ಮುಂತಾದ ಭಾಷೆಗಳಲ್ಲಿ ಕಂಡುಬರುವ ಕೆಲವು ದ್ರಾವಿಡ ಶಬ್ದಗಳ ಆಧಾರದಿಂದ ಊಹಿಸಬಹುದು. ಸಿಥಿಯನ್ ಹಾಗೂ ಸುಮೇರಿಯನ್ ಭಾಷೆಗಳನ್ನಾಡುವ ಜನಾಂಗದೊಡನೆ ಮೂಲ ದ್ರಾವಿಡ ಜನಾಂಗ ಸಂಪರ್ಕ ಹೊಂದಿತ್ತೆಂದು ಊಹಿಸಲು ಹಲವು ಆಧಾರಗಳಿವೆ. ಮಧ್ಯ ಹಾಗೂ ಪಶ್ಚಿಮ ಏಷ್ಯದಲ್ಲಿನ ಈ ದ್ರಾವಿಡ ಜನ ಬಲೂಚಿಸ್ತಾನದ ಮಾರ್ಗವಾಗಿ ಸಿಂಧ್ ಕಣಿವೆಯ ಮೂಲಕ ಇಲ್ಲಿಗೆ ಬಂದು ಪೂರ್ವದಲ್ಲಿ ಬಿಹಾರದವರೆಗೂ ದಕ್ಷಿಣದಲ್ಲಿ ಶ್ರೀಲಂಕದವರೆಗೂ ವಿಸ್ತರಿಸಿ ನೆಲೆಸಿದರೆಂಬುದನ್ನು ಬಲೂಚಿಸ್ತಾನದಲ್ಲಿ ಇನ್ನೂ ಆಡುನುಡಿಯಾಗಿ ಉಳಿದಿರುವ ಬ್ರಾಹು ಈ ಭಾಷೆ, ಹರಪ್ಪ ಮೊಹೆಂಜದಾರೊ ಅವಶೇಷಗಳು, ಬಿಹಾರ್ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಕುಡುಖ್ ಮಾಲ್ಟೋ ಭಾಷೆಗಳು ಹಾಗೂ ಶ್ರೀಲಂಕದವರೆಗೆ ಹಬ್ಬಿದ ತಮಿಳು ಭಾಷೆ ಮುಂತಾದವುಗಳ ಆಧಾರದಿಂದ ತಿಳಿಯಬಹುದು. ಈ ಜನಾಂಗದ ಮೂಲಭಾಷೆಯನ್ನು ಮೂಲದ್ರಾವಿಡ ಎಂದು ಕರೆಯಬಹುದು. ಜನಾಂಗ ಕವಲು ಕವಲಾಗಿ ಒಡೆದು ಹೋದಾಗ ಈ ಕರ್ನಾಟಕ ಪ್ರದೇಶದಲ್ಲಿ ನೆಲೆಸಿದ ಗುಂಪಿನ ಉಪಭಾಷೆಯಲ್ಲಿ ಉಂಟಾದ ಮಾರ್ಪಾಡುಗಳಿಂದಾಗಿ ಅದು ಇತರ ಉಪಭಾಷೆಗಳಿಂದ ಪ್ರತ್ಯೇಕವಾಗಿ ಕನ್ನಡವೆನಿಸಿತು ಎಂದು ಹೇಳಬಹುದು.

ಹೀಗೆ ಪ್ರತ್ಯೇಕಿಸಲ್ಪಟ್ಟ ಆಡುನುಡಿ ಯಾವ ಶತಮಾನದಿಂದ ಸ್ವತಂತ್ರ ಭಾಷೆಯಾಗಿ ಪರಿವರ್ತನೆಗೊಂಡಿತು ಎಂದು ನಿಶ್ಚಿತವಾಗಿ ಹೇಳಬರುವುದಿಲ್ಲ. ಒಂದು ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಯಾಗುವುದಕ್ಕಿಂತ ಎಷ್ಟೋ ಶತಮಾನ ಹಿಂದೆಯೇ ಆ ಭಾಷೆ ಆಡುನುಡಿಯಾಗಿ ಬಳಕೆಯಲ್ಲಿರಬಹುದು. ಆದರೂ ಉಪಲಬ್ದ ಸಾಹಿತ್ಯ, ಶಾಸನ ಹಾಗೂ ಇತರ ಭಾಷೆಗಳಲ್ಲಿನ ಉಲ್ಲೇಖದಿಂದ ಈ ಭಾಷೆ ಇಂಥ ಶತಮಾನಕ್ಕಿಂತ ಹಿಂದೆಯೇ ಬಳಕೆಯಲ್ಲಿದ್ದಿರಬೇಕೆಂದು ಮಾತ್ರ ಖಚಿತವಾಗಿ ಹೇಳಬಹುದು.

ವೇದಕಾಲದಲ್ಲಿಯೂ ಕನ್ನಡ ಭಾಷೆ ಪ್ರಚಾರದಲ್ಲಿತ್ತೆಂದು ಊಹಿಸಲು ಕೆಲವು ಆಧಾರಗಳುಂಟು. ಛಾಂದೋಗ್ಯ ಉಪನಿಷತ್ತಿನಲ್ಲಿ ಮಟಚಿ ಮೊದಲಾದ ಕನ್ನಡ ಶಬ್ದಗಳಿವೆ. ಪದ್ಮ ಹಾಗೂ ಮಾರ್ಕಂಡೇಯ ಪುರಾಣಗಳಲ್ಲಿ ಕರ್ನಾಟಕದ ಪ್ರಸ್ತಾಪವಿದೆ. ಪ್ರ.ಶ. 2ನೆಯ ಶತಮಾನದ್ದೆನ್ನಲಾದ ಒಂದು ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳಿರುವುದನ್ನು ಕಂಡು ಪ್ರ.ಶ. 2ನೆಯ ಶತಮಾನಕ್ಕಿಂತ ಮುಂಚೆಯೇ ದಕ್ಷಿಣ ಕನ್ನಡದ ಸಮುದ್ರ ತೀರದಲ್ಲಿ ಕನ್ನಡ ವ್ಯವಹಾರದಲ್ಲಿತ್ತು ಎಂದು ಗೋವಿಂದ ಪೈ ಮುಂತಾದ ವಿದ್ವಾಂಸರು ಸಾಧಿಸಿದ್ದಾರೆ. ಇದೂ ಅಲ್ಲದೆ ರಾಮಾಯಣ ಮಹಾಭಾರತಾದಿ ಗ್ರಂಥಗಳಲ್ಲಿ ಬರುವ ವಿವರಗಳಿಂದಲೂ ಪ್ರ.ಶ. 2ನೆಯ ಶತಮಾನದ ತಮಿಳು ಗ್ರಂಥ ಶಿಲಪ್ಪದಿಗಾರಂದಲ್ಲಿ ಬರುವ ಕರುನಾಡರ್ ಎಂಬ ಪ್ರಯೋಗದಿಂದಲೂ ಪ್ರಸಕ್ತಶಕದ ಆರಂಭಕ್ಕಿಂತ ಮುಂಚೆಯೇ ಕನ್ನಡ ಭಾಷೆ ಈ ಪ್ರಾಂತ್ಯದ ಜನರ ಆಡುನುಡಿಯಾಗಿತ್ತೆಂದು ಊಹಿಸಬಹುದು. ಮೊಹೆಂಜದಾರೊ ಮತ್ತು ಹರಪ್ಪಗಳ ಅವಶೇಷಗಳ ಸಂಶೋಧನೆಯಿಂದ ಈ ಊಹೆಗೆ ಮತ್ತಷ್ಟು ಪುಷ್ಟಿ ದೊರಕಿದೆ. ಅಲ್ಲಿ ಕಾಣಬರುವ ಸಂಸ್ಕೃತಿ ಆರ್ಯರಿಗೂ ಹಿಂದಿದ್ದ ದ್ರಾವಿಡ ಸಂಸ್ಕೃತಿ ಎಂದು ಹೇಳುವ ವಿದ್ವಾಂಸರ ವಾದದಲ್ಲಿ ಹುರುಳಿಲ್ಲದಿಲ್ಲ.

ಪ್ರ.ಶ. 5ನೆಯ ಶತಮಾನದ ಶಾಸನಗಳೂ 9ನೆಯ ಶತಮಾನದ ಸಾಹಿತ್ಯ ಗ್ರಂಥಗಳೂ ನಮಗೆ ಸಿಕ್ಕಿದ ಲಿಖಿತ ಪುರಾವೆಗಳಲ್ಲಿ ಅತ್ಯಂತ ಪ್ರಾಚೀನವಾದವುಗಳು. ಪ್ರ.ಶ. 450 ಹಲ್ಮಿಡಿ ಶಾಸನ ನಮಗೆ ಸಿಕ್ಕಿದ ಶಾಸನಗಳಲ್ಲಿ ಅತ್ಯಂತ ಪ್ರಾಚೀನವೆನಿಸಿದೆ. ಇದರ ಭಾಷೆಯನ್ನು ನೋಡಿದರೆ ಆ ಸಮಯಕ್ಕಾಗಲೇ ಕನ್ನಡದಲ್ಲಿ ಪ್ರೌಢವಾದ ಗದ್ಯದ ಬಳಕೆಯಿತ್ತೆಂದೂ

ಸಂಸ್ಕೃತ ಭಾಷೆಯ ಪ್ರಭಾವ ಕನ್ನಡದ ಮೇಲೆ ಸಾಕಷ್ಟಾಗಿತ್ತೆಂದೂ ತಿಳಿಯಬಹುದು. ಆ ತರುವಾಯ ಸಿಕ್ಕಿದ 9–10ನೆಯ ಶತಮಾನಗಳ ಕವಿರಾಜಮಾರ್ಗ, ವಡ್ಡಾರಾಧನೆ, ಪಂಪಭಾರತ ಮುಂತಾದ ಗ್ರಂಥಗಳಲ್ಲಿ ಹಿಂದಿನ ಕವಿಗಳನ್ನು, ಕಾವ್ಯಪ್ರಕಾರಗಳನ್ನು ಸ್ಮರಿಸಿರುವುದರಿಂದಲೂ ಕವಿರಾಜಮಾರ್ಗಕಾರ ತನಗಿಂತ ಹಿಂದಿದ್ದ ಕನ್ನಡವನ್ನು ಹಳಗನ್ನಡ ಎಂದು ಕರೆದಿರುವುದರಿಂದಲೂ ಈ ಕವಿಗಳಿಗಿಂತಲೂ ಶಾಸನಕಾರರಿಗಿಂತಲೂ ಎಷ್ಟೋ ಶತಮಾನಗಳ ಹಿಂದೆಯೇ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಕೃಷಿಯಾಗಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದು. ಹೀಗಾಗಿ ಪ್ರಸ್ತಕಶಕದ ಆರಂಭ ಕಾಲದಿಂದಲೇ ಕನ್ನಡ ಭಾಷೆ ಸುಸಂಸ್ಕೃತರಾದ ಕನ್ನಡಿಗರ ಆಡುನುಡಿಯಾಗಿತ್ತೆಂದೂ ಅವರು ಅದನ್ನು ಸಾಹಿತ್ಯ ಶಾಸನಾದಿಗಳನ್ನು ಬರೆಯಲು ಉಪಯೋಗಿಸುತ್ತಿದ್ದರೆಂದೂ ನಿರ್ವಿವಾದವಾಗಿ ಹೇಳಬಹುದು.

ನಮಗೆ ಸಿಕ್ಕಿರುವ ಪ್ರಾಚೀನ ದಾಖಲೆಗಳಲ್ಲಿಯೂ ಮುಂದಿನ ಕನ್ನಡ ಸಾಹಿತ್ಯದಲ್ಲಿಯೂ ಸಂಸ್ಕೃತದ ಪ್ರಭಾವ ತುಂಬ ಕಂಡುಬಂದರೂ ಚಾರಿತ್ರಿಕವಾಗಿ ಸಂಸ್ಕೃತ ಅಥವಾ ಇತರ ಆರ್ಯಭಾಷೆಗಳಿಂದ ಕನ್ನಡ ಜನಿಸಲಿಲ್ಲ. ಇದರ ಧ್ವನಿವ್ಯವಸ್ಥೆ, ವ್ಯಾಕರಣ ವ್ಯವಸ್ಥೆ ಮತ್ತು ವಾಕ್ಯರಚನಾ ಕ್ರಮ ಆರ್ಯಭಾಷೆಗಳಿಂದ ಭಿನ್ನವಾಗಿದ್ದು ತಮಿಳು ತೆಲುಗು ಇತ್ಯಾದಿ ಭಾಷೆಗಳೊಡನೆ ಹೋಲುವುದರಿಂದಲೇ ಈ ಭಾಷೆಗಳು ದ್ರಾವಿಡವೆಂಬ ಬೇರೆ ಬುಡಕಟ್ಟಿಗೆ ಸೇರಿದವು ಎಂದು ಹೇಳುವುದು. ಆರ್ಯ ಭಾಷೆಗಳಲ್ಲಿಲ್ಲದ ಹ್ರಸ್ವ ಎ, ಒ ಕಾರಗಳು, ಅ ಳ, ಅ ವ್ಯಂಜನಗಳು ದ್ರಾವಿಡ ಭಾಷೆಗಳಲ್ಲಿವೆ. ಆರ್ಯಭಾಷೆಗಳಲ್ಲಿರುವ ಮಹಾಪ್ರಾಣಗಳೂ ಶ. ಷ ವ್ಯಂಜನಗಳೂ ಋ, ೠ, ಒ, ಓ ಸ್ವರಗಳೂ ದ್ರಾವಿಡ ಭಾಷೆಯ ಮೂಲ ಶಬ್ದಗಳಲ್ಲಿಲ್ಲ. ಸ್ವರಾಂತಪದಗಳ ಬಾಹುಳ್ಯ ಮತ್ತು ಶಬ್ದಾದಿಯ ವ್ಯಂಜನ ಗುಚ್ಛಗಳ ಅಭಾವವೂ ದ್ರಾವಿಡ ಭಾಷೆಗಳ ವೈಶಿಷ್ಟ್ಯವೆನ್ನಬಹುದು. ಆರ್ಯಭಾಷೆಗಳಲ್ಲಿರುವಂಥ ಲಿಂಗ ವ್ಯವಸ್ಥೆಯಾಗಲಿ, ಕರ್ಮಣಿ ಪ್ರಯೋಗವಾಗಲಿ, ವಿಶೇಷಣಗಳಲ್ಲಿ ಲಿಂಗವಿವಕ್ಷೆಯಾಗಲಿ, ತರತಮ ಭಾವವಾಗಲೀ ದ್ರಾವಿಡ ಭಾಷೆಗಳಲ್ಲಿಲ್ಲ. ದ್ರಾವಿಡ ಭಾಷೆಗಳಲ್ಲಿ ಆರ್ಯಭಾಷೆಗಳಲ್ಲಿಲ್ಲದಿರುವ ಕ್ರಿಯಾಪದದ ನಿಷೇಧ ರೂಪಗಳು ಕೆಲವು ವಿಶಿಷ್ಟ ಪ್ರಯೋಗದ ಕೃದ್ವಾಚಿಗಳೂ ಕ್ರಿಯಾಧಾತುವನ್ನು ನಾಮಪದವಾಗಿ ಉಪಯೋಗಿಸುವ ಸಂಪ್ರದಾಯವೂ ಉತ್ತಮ ಪುರುಷ ಬಹುವಚನ ಸರ್ವನಾಮದಲ್ಲಿ ಕೇಳುವವನನ್ನು ಸೇರಿಸಿ ಹೇಳುವ ಅಥವಾ ಬಿಟ್ಟು ಹೇಳುವ ಸಮಾವಿಷ್ಟ ಮತ್ತು ಅಸಮಾವಿಷ್ಟ ರೂಪಗಳೂ ಇವೆ. ಅಲ್ಲದೆ ಈ ಎರಡು ಬುಡಕಟ್ಟುಗಳಿಗೆ ಸೇರಿದ ಭಾಷೆಗಳ ಕ್ರಿಯಾರೂಪಗಳ ವ್ಯವಸ್ಥೆಯಲ್ಲಿಯೂ ನಾಮಪದಗಳ ವಿಭಕ್ತಿ ಪ್ರತ್ಯಯ ವ್ಯವಸ್ಥೆಯಲ್ಲಿಯೂ ತುಂಬ ವ್ಯತ್ಯಾಸಗಳಿವೆ. ಹಾಗೆ ರಚನಾತ್ಮಕವಾಗಿ ಆರ್ಯಭಾಷೆಗಳಿಗಿಂತ ಭಿನ್ನವಾಗಿದ್ದರೂ ಕೆಲವು ಚಾರಿತ್ರಿಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಎಷ್ಟೋ ಸಂಸ್ಕೃತ ಶಬ್ದಗಳಲ್ಲಿ ಕನ್ನಡವೇ ಮೊದಲಾದ ದ್ರಾವಿಡ ಭಾಷೆಗಳಲ್ಲಿ ಸೇರಿಕೊಂಡಿವೆ. ಸಂಸ್ಕೃತದಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರೂ ದ್ರಾವಿಡ ಭಾಷೆಗಳು ಸಂಸ್ಕೃತದ ಭಂಡಾರಕ್ಕೆ ತಮ್ಮ ಕೊಡುಗೆಗಳನ್ನು ನೀಡಿವೆಯೆಂಬುದನ್ನು ಇಲ್ಲಿ ಸ್ಮರಿಸಬಹುದು.

ಹೀಗೆ ಸಂಸ್ಕೃತ ಹಾಗೂ ಇತರ ಆರ್ಯ ಭಾಷೆಗಳಿಂದ ಭಿನ್ನವಾದ ಈ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ 25ಕ್ಕೂ ಮಿಕ್ಕಿದ ಭಾಷೆಗಳನ್ನು ಭೌಗೋಳಿಕವಾಗಿ ಮತ್ತು ಚಾರಿತ್ರಿಕವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಬಿಹಾರದ ಕುಡುಖ್, ಮಾಲ್ಟೋ ಮತ್ತು ಬಲೂಚಿಸ್ತಾನದ ಬ್ರಾಹು ಈ ಭಾಷೆಗಳನ್ನು ಉತ್ತರ ದ್ರಾವಿಡ ಭಾಷೆಗಳೆಂದೂ ದಕ್ಷಿಣದ ತಮಿಳು, ಮಲೆಯಾಳ, ಕನ್ನಡ, ತುಳು ಇತ್ಯಾದಿಗಳನ್ನು ದಕ್ಷಿಣ ದ್ರಾವಿಡ ಭಾಷೆಗಳೆಂದೂ ವರ್ಗೀಕರಿಸಬಹುದು. ದ್ರಾವಿಡ ಭಾಷೆಗಳನ್ನಾಡುವ ಜನರ ಸಂಖ್ಯೆ ಸು. 13 ಕೋಟಿಯಿದೆ. ಅವರಲ್ಲಿ ಸು. 1/6 ಭಾಗದಷ್ಟು ಜನಕ್ಕೆ ಕನ್ನಡ ಆಡುಮಾತಾಗಿದೆ ಎಂದು ಸ್ಥೂಲವಾಗಿ ಹೇಳಬಹುದು.

ಹೀಗೆ 25ಕ್ಕೂ ಹೆಚ್ಚಾಗಿ ಒಡೆದ ದ್ರಾವಿಡ ಭಾಷಾ ಪ್ರಭೇದಗಳಲ್ಲೊಂದಾದ ಕನ್ನಡದ ಮುಖ್ಯ ಲಕ್ಷಣಗಳೇನು. ಅದು ತನ್ನ ಮೂಲದ್ರಾವಿಡದ ರೂಪದಿಂದ ಯಾವ ರೀತಿ ವ್ಯತ್ಯಾಸಗಳನ್ನು ಪಡೆದಿದೆ. ಆಮೇಲೆ ತನ್ನ ಎರಡು ಸಾವಿರ ವರ್ಷಗಳ ಸಾಹಿತ್ಯ ಹಾಗೂ ಆಡುನುಡಿಯ ಚರಿತ್ರೆಯಲ್ಲಿ ಏನೇನು ಬದಲಾವಣೆಗಳನ್ನು ಮಾಡಿಕೊಂಡಿದೆ. ಇದರ ಆಧುನಿಕ ಸ್ವರೂಪದ ವೈಶಿಷ್ಟ್ಯಗಳೇನು–ಎಂಬುದನ್ನು ಇಲ್ಲಿ ಸ್ಥೂಲವಾಗಿ ನಿರೂಪಿಸಬಹುದು.

2 ಸಾವಿರ ವರ್ಷಗಳ ಇತಿಹಾಸವಿರುವ ಆಡುನುಡಿಯಲ್ಲಿ ನಡೆದ ಮಾರ್ಪಾಡುಗಳನ್ನು ಗುರುತಿಸಲು ಬೇರೆ ಬೇರೆ ಶತಮಾನಗಳ ಆಡುನುಡಿಯ ಸ್ವರೂಪಕ್ಕೆ ದಾಖಲೆಗಳಿಲ್ಲ. ಆದರೆ ಶಾಸನ ಹಾಗೂ ಸಾಹಿತ್ಯಗ್ರಂಥಗಳ ಸಹಾಯದಿಂದ ಲಿಖಿತ ಭಾಷೆಯಲ್ಲಿ ಯಾವ ರೀತಿಯ ಪರಿವರ್ತನೆ ನಡೆದಿದೆ ಎಂದು ತಿಳಿಯಬಹುದು. ಭಾಷೆಯ ವಿಕಾಸದ ಆಧಾರದ ಮೇಲೆ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಕೆಲವು ಯುಗಗಳಾಗಿ ವಿಂಗಡಿಸಬಹುದು–ಈ ವಿಭಜನೆಯಲ್ಲಿ ರೈಸ್, ಕಿಟ್ಟೆಲ್, ಬಿ.ಎಂ.ಶ್ರೀ. ಅವರಲ್ಲಿ ಮತಭೇದವಿದೆ. ಸಾಮಾನ್ಯವಾಗಿ ನಾವು ನಾಲ್ಕು ಕಾಲಗಳನ್ನು ಗುರುತಿಸಬಹುದು. 5, 6, 7ನೆಯ ಶತಮಾನಗಳವರೆಗಿನ ಶಾಸನದ ಭಾಷೆಯನ್ನು ಪೂರ್ವದ ಹಳಗನ್ನಡ ಎಂದೂ ಅಲ್ಲಿಂದ 13ನೆಯ ಶತಮಾನದ ವರೆಗಿನ ಜೈನ ಕವಿಗಳ ಕಾವ್ಯದ ಭಾಷೆಯನ್ನು ಹಳಗನ್ನಡ ಎಂದು ಅಲ್ಲಿಂದ 16, 17ನೆಯ ಶತಮಾನಗಳವರೆಗಿನ ವೀರಶೈವ ಹಾಗೂ ವೈಷ್ಣವ ಸಾಹಿತ್ಯದ ಭಾಷೆಯನ್ನು ನಡುಗನ್ನಡ ವೆಂದೂ ಅಲ್ಲಿಂದೀಚೆಗೆ ಸಾಹಿತ್ಯದ ಭಾಷೆಯನ್ನು ಹೊಸಗನ್ನಡ ಎಂದೂ ಹೇಳಬಹುದು. ಹೊಸಗನ್ನಡದ ಆಡುಮಾತನ್ನು ಭೌಗೋಳಿಕ ಹಾಗೂ ಸಾಮಾಜಿಕ ಪ್ರಭೇದಗಳಾಗಿ ವಿಂಗಡಿಸಿ ಅವುಗಳ ಸ್ವರೂಪವನ್ನು ತಿಳಿಯಬಹುದು.

ಕನ್ನಡಿಗರ ಆಡುನುಡಿ ಹಿಂದೆ ಹೇಗಿತ್ತೆಂಬ ಬಗ್ಗೆ ದಾಖಲೆಗಳು ಇಲ್ಲದಿರುವುದರಿಂದ ಲಿಖಿತಭಾಷೆಯ ಚಾರಿತ್ರಿಕ ಸ್ವರೂಪವನ್ನು ಮಾತ್ರ ತಿಳಿಯಲು ಸಾಧ್ಯ. ಲಿಖಿತ ಭಾಷೆಯ ಸ್ವರೂಪವನ್ನು ತಿಳಿಯಲು ಕನ್ನಡ ಕವಿಗಳ ಕಾವ್ಯಗಳನ್ನೂ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕರು ಬರೆದ ವ್ಯಾಕರಣ ಗ್ರಂಥಗಳನ್ನೂ ಪರಿಶೀಲಿಸಬೇಕು. 12ನೆಯ ಶತಮಾನದ ನಾಗವರ್ಮ ಶಬ್ದಸ್ಮೃತಿ ಛಂದೋವಿಚಿತಿ ಎಂಬ ವ್ಯಾಕರಣವನ್ನು ಕನ್ನಡದಲ್ಲಿಯೂ ಕರ್ಣಾಟಕ ಭಾಷಾಭೂಷಣ ಎಂಬ ವ್ಯಾಕರಣ ಗ್ರಂಥವನ್ನು ಸಂಸ್ಕೃತದಲ್ಲಿಯೂ ಬರೆದಿದ್ದಾನೆ. 13ನೆಯ ಶತಮಾನದ ಕೇಶಿರಾಜ ಶಬ್ದಮಣಿದರ್ಪಣವೆಂಬ ವ್ಯಾಕರಣ ಗ್ರಂಥವನ್ನು ಕನ್ನಡದಲ್ಲಿ ಬರೆದಿದ್ದಾನೆ. 17ನೆಯ ಶತಮಾನದ ಭಟ್ಟಾಕಳಂಕ ಬರೆದ ಶಬ್ದಾನುಶಾಸನ ಸಂಸ್ಕೃತದಲ್ಲಿದೆ ಇವುಗಳಲ್ಲಿ ಶಬ್ದಮಣಿದರ್ಪಣವೇ ಎಲ್ಲಕ್ಕಿಂತ ಪ್ರಸಿದ್ಧವಾಗಿದೆ.

ಕನ್ನಡ ವರ್ಣಮಾಲೆಯಲ್ಲಿ ಒಟ್ಟು 47 ಅಕ್ಷರಗಳಿವೆ. ಸಂಸ್ಕೃತ ವರ್ಣಮಾಲೆಯ 52 ಅಕ್ಷರಗಳಲ್ಲಿ ಋ, ೠ, ಒ, ಓ ಎಂಬ ಸ್ವರಗಳು, ಶ, ಷ, ಳ ಎಂಬ ವ್ಯಂಜನಗಳು ಮೂರು ಯೋಗವಾಹಗಳು ಸೇರಿ ಹತ್ತು ಅಕ್ಷರಗಳು ಕನ್ನಡದಲ್ಲಿಲ್ಲ. ಅವಕ್ಕೆ ಬದಲಾಗಿ ಎ. ಒ, ವ ಳ ಕುಳ ಎಂಬ ಐದು ದೇಶೀಯ ಅಕ್ಷರಗಳನ್ನು ಸೇರಿಸಿದರೆ 47 ಅಕ್ಷರಗಳಾಗುತ್ತವೆ. ಆಗ ಕನ್ನಡ ವರ್ಣಮಾಲೆ ಈ ರೂಪ ತಾಳುತ್ತದೆ.

ಸ್ವರಗಳು : ಅ ಆ ಇ ಈ ಉ ಊ ಎ ಏ ಐ ಒ ಓ ಔ

ವ್ಯಂಜನಗಳು :

ವರ್ಗೀಯ : ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಅವರ್ಗೀಯ : ಯ ರ ಲ ವ ಸ ಹ ಳ

ಅನುಸ್ವಾರ : ಂ

ಈ ನಲವತ್ತೇಳರಲ್ಲೂ ಹತ್ತು ಮಹಾಪ್ರಾಣಗಳು ಸಂಸ್ಕೃತ ತತ್ಸಮ ಪದಗಳಲ್ಲಿ ಮಾತ್ರ ಕಂಡುಬರುವುದರಿಂದ ಇವು ಕನ್ನಡದ ಜಾಯಮಾನಕ್ಕೆ ಸೇರಿದವುಗಳಲ್ಲ ಎನ್ನಬಹುದು. ಕನ್ನಡದ ಒಂದೆರಡು ಸಂಖ್ಯಾವಾಚಕ ಶಬ್ದಗಳಲ್ಲಿ ಹಾಗೂ ಅನುಕರಣ ವಾಚಕಗಳಲ್ಲಿ ಮಾತ್ರ ಮಹಾಪ್ರಾಣಗಳು ಕಾರಣಾಂತರದಿಂದ ಸೇರಿಹೋಗಿವೆ. ಐ ಔ ಗಳೂ ಕನ್ನಡಕ್ಕೆ ಅವಶ್ಯವಲ್ಲ. ಅವುಗಳನ್ನು ಅಯ್ ಅವ್ ಎಂದೂ ಬರೆಯಬಹುದು. ಸಂಸ್ಕೃತ ಶಬ್ದಗಳನ್ನು ಬರೆಯಲಿಕ್ಕಾಗಿ ಋ ಎಂಬ ಸ್ವರವನ್ನು ಶ, ಷ, ವಿಸರ್ಗ ಮುಂತಾದ ವ್ಯಂಜನಗಳನ್ನು ಸೇರಿಸಬೇಕಾಗುತ್ತದೆ. ಆಧುನಿಕ ಕನ್ನಡದಲ್ಲಿ ಆಂಗ್ಲ ಭಾಷೆಯ ಪದಗಳೂ ಸೇರಿರುವುದರಿಂದ ಅವುಗಳನ್ನು ಬರೆಯಲಿಕ್ಕೆ ಫ಼ (ಈ) ಜ಼ (ಜ) ಮುಂತಾದ ವರ್ಣಗಳನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ.

ಕನ್ನಡದ ನಾಮಪದಗಳಲ್ಲಿ ಲಿಂಗ, ವಚನ, ವಿಭಕ್ತಿಗಳ ವಿವಕ್ಷೆಯಿದೆ. ನಾಮಪದಕ್ಕೆ ಲಿಂಗ, ವಚನವನ್ನು ಸೂಚಿಸುವ ಪ್ರತ್ಯಯ ಮತ್ತು ವಿಭಕ್ತಿಪ್ರತ್ಯಯ ಸೇರುತ್ತವೆ. ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳೆಂಬ ಮೂರು ಲಿಂಗಗಳೂ ಏಕವಚನ, ಬಹುವಚನಗಳೆಂಬ ಎರಡು ವಚನಗಳೂ ಐದು ವಿಭಕ್ತಿಗಳೂ ಇವೆ. ಉತ್ತಮಪುರುಷ ಹಾಗೂ ಮಧ್ಯಮಪುರುಷ ಸರ್ವನಾಮಗಳಲ್ಲಿ ಲಿಂಗ ವಿವಕ್ಷೆ ಇಲ್ಲ. ಪ್ರಥಮಪುರುಷ ಸರ್ವನಾಮ ಹಾಗೂ ಇತರ ನಾಮಪದಗಳಲ್ಲಿ ಮಹತ್, ಅಮಹತ್ ಅಥವಾ ಮೇಲು ಜಾತಿ ಮತ್ತು ಕೀಳು ಜಾತಿ ಎಂಬ ಭೇದವನ್ನು ಕಾಣಬಹುದು. ಮನುಷ್ಯವಾಚಕ ಮತ್ತು ವಿವೇಚನಾಶಕ್ತಿಯುಳ್ಳ ಜೀವಿಗಳನ್ನು ಹೇಳುವ ಶಬ್ದಗಳನ್ನು ಮೇಲು ಜಾತಿ ಎಂದೂ ಇತರ ಪ್ರಾಣಿವಾಚಕ ಹಾಗೂ ನಿರ್ಜೀವ ವಸ್ತುಗಳನ್ನು ದ್ಯೋತಿಸುವ ಶಬ್ದಗಳನ್ನು ಕೀಳು ಜಾತಿ ಎಂದೂ ಕರೆಯಬಹುದು. ಮಹತ್ ಶಬ್ದಗಳಲ್ಲಿ ನೈಸರ್ಗಿಕ ಲಿಂಗಭೇದಕ್ಕನುಸಾರವಾಗಿ ಪುಲ್ಲಿಂಗ, ಸ್ತ್ರೀಲಿಂಗವೆಂಬ ಭೇದವಿದೆ. ಅಮಹತ್ ಶಬ್ದ ಯಾವಾಗಲೂ ನಪುಂಸಕ ಲಿಂಗವಾಗಿರುತ್ತದೆ. ಪುಂಸ್ತ್ರೀಭೇದವನ್ನು ಏಕವಚನದಲ್ಲಿ ಅನ್ ಆಳ್ ಪ್ರತ್ಯಯಗಳೂ ಬಹುವಚನದಲ್ಲಿ ಅರ್, ಇರ್, ದಿರ್, ವಿರ್ ಪ್ರತ್ಯಯಗಳೂ ಸೂಚಿಸುತ್ತವೆ. ನಪುಂಸಕಲಿಂಗ ಸೂಚಕವಾಗಿ ಕೆಲವೊಮ್ಮೆ ಅಮ್ ಪ್ರತ್ಯಯವೂ ಬಹುವಚನದಲ್ಲಿ ಗಳ ಪ್ರತ್ಯಯವೂ ಸೇರುತ್ತವೆ. ಸರ್ವನಾಮದಲ್ಲಿ ನಪುಂಸಕ ಲಿಂಗ ಪ್ರತ್ಯಯಗಳು ಏಕವಚನ ಬಹುವಚನಗಳಲ್ಲಿ ಅನುಕ್ರಮವಾಗಿ ದು, ವು ಎಂದಿರುತ್ತವೆ. ಆಧುನಿಕ ಕನ್ನಡ ನಾಮಪದಗಳಲ್ಲಿ ಏಕವಚನ ಪ್ರತ್ಯಯವೂ ನಪುಂಸಕ ಲಿಂಗದಲ್ಲಿ ಬಹುವಚನ ಪ್ರತ್ಯಯವೂ ಲೋಪವಾಗುತ್ತವೆ.

ಕನ್ನಡದಲ್ಲಿ ಐದು ವಿಭಕ್ತಿಗಳಿವೆ. ಸಂಸ್ಕೃತದ ಪ್ರಥಮಾ ಮತ್ತು ಪಂಚಮೀ ಕನ್ನಡದಲ್ಲಿಲ್ಲ ಎನ್ನಬಹುದು. ಪ್ರಥಮಾ ವಿಭಕ್ತಿಯ ಅರ್ಥದಲ್ಲಿ ಪ್ರತ್ಯಯವಾವುದೂ ಬರದೆ ಪ್ರಕೃತಿಮಾತ್ರವೇ ಪ್ರಯೋಗದಲ್ಲಿದೆ. ಪಂಚಮೀವಿಭಕ್ತಿಯ ಅರ್ಥದಲ್ಲಿ ಪ್ರತ್ಯೇಕವಾದ ವಿಭಕ್ತಿ ಪ್ರತ್ಯಯವಿರದೆ ದೆಸೆ, ಅತ್ತ ಎಂಬ ಶಬ್ದಗಳನ್ನು ಸೇರಿಸಿ ಅದರ ಮೇಲೆ ತೃತೀಯ ವಿಭಕ್ತಿ ಪ್ರತ್ಯಯವಾದ ಇಂದವನ್ನು ಸೇರಿಸುವುದು ವಾಡಿಕೆ. ಹಳಗನ್ನಡದ ಮ್ ಎಂಬುದನ್ನು ಪ್ರಥಮಾವಿಭಕ್ತಿ ಪ್ರತ್ಯಯವೆಂದು ಪರಿಗಣಿಸಿದ್ದರೂ ಅದು ವಿಭಕ್ತಿ ಪ್ರತ್ಯಯವಲ್ಲವೆಂದೂ ಲಿಂಗಸೂಚಕವೆಂದೂ ಹೇಳಬಹುದು. ಹೊಸಗನ್ನಡದಲ್ಲಿ ಅದು ಕೂಡ ಲೋಪವಾಗಿದೆ. ದ್ವಿತೀಯಾವಿಭಕ್ತಿ ಪ್ರತ್ಯಯದ ರೂಪ ಹಳಗನ್ನಡದಲ್ಲಿ ಅಂ, ಅಂ ಎಂದೂ ನಡುಗನ್ನಡದಲ್ಲಿ ಅಂ, ಅನು ಎಂದೂ ಆಗುತ್ತದೆ. ತೃತೀಯಾ ವಿಭಕ್ತಿ ಪ್ರತ್ಯಯವನ್ನು ಹಳಗನ್ನಡ ನಡುಗನ್ನಡದಲ್ಲಿ ಇಂ, ಇಂದಂ ಎಂದೂ ಹೊಸಗನ್ನಡದಲ್ಲಿ ಇಂದ ಎಂದೂ ಕಾಣುತ್ತೇವೆ. ಚತುರ್ಥಿ ವಿಭಕ್ತಿಪ್ರತ್ಯಯ ಕೆ ಅಥವಾ ಗೆ. ಷಷ್ಠೀವಿಭಕ್ತಿ ಪ್ರತ್ಯಯ ಅ. ಸಪ್ತಮೀವಿಭಕ್ತಿ ಪ್ರತ್ಯಯ ಒಳ್, ಒಳಗೆ ಅಥವಾ ಅಲ್ಲಿ. ಈ ವಿಭಕ್ತಿ ಪ್ರತ್ಯಯಗಳೆಲ್ಲ ಮೊದಲು ಸ್ವತಂತ್ರ ಶಬ್ದಗಳಾಗಿದ್ದುವೆಂದೂ ಕಾಲಕ್ರಮದಲ್ಲಿ ಪ್ರತ್ಯಯಗಳಾಗಿ ಮಾರ್ಪಟ್ಟುವೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಉತ್ತಮಪುರುಷ ಸರ್ವನಾಮಗಳು ಹಳಗನ್ನಡದಲ್ಲಿ ಅನ್ ಆಮ್ ಎಂದಿದ್ದು ನಡುಗನ್ನಡದ ಕಾಲಕ್ಕೆ ನಾನ್ ನಾಮ್ ಆದುವು. ಮಧ್ಯಮಪುರುಷ ಸರ್ವನಾಮಗಳು ನೀನ್ ಮತ್ತು ನೀಮ್. ಪ್ರಥಮಪುರುಷ ಸರ್ವನಾಮಗಳು ಆ, ಇ, ಉ ಎಂಬ ಸ್ಥಾನನಿರ್ದೇಶಿಗಳಿಗೆ ಪುಲ್ಲಿಂಗ ಸ್ತ್ರೀಲಿಂಗ ನಪುಂಸಕಲಿಂಗ ಪ್ರತ್ಯಯಗಳು ಸೇರಿ ಅವನ್ ಇವನ್ ಅದು ಇತ್ಯಾದಿ ರೂಪಗಳು ಸಿದ್ಧಿಸಿವೆ. ಆ ಎಂಬುದು ದೂರವನ್ನೂ ಇ ಎಂಬುದು ಸಮೀಪವನ್ನೂ ಉ ಎಂಬುದು ಎರಡಕ್ಕೂ ಮಧ್ಯವನ್ನೂ ನಿರ್ದೇಶಿಸುತ್ತವೆ. ಉ ಕಾರದಿಂದ ಪ್ರಾರಂಭವಾಗುವ ಸರ್ವನಾಮಗಳು ಹಳಗನ್ನಡದಲ್ಲಿ ಕೆಲವಡೆ ಮಾತ್ರ ಪ್ರಯೋಗದಲ್ಲಿದ್ದು ಆಮೇಲೆ ಕಾಣಬರುವುದಿಲ್ಲ. ಉದಾ : ಆತ ಈತ ಊತ. ಆಕೆ ಈಕೆ ಊಕೆ, ಅದು ಇದು ಉದು, ಪ್ರಶ್ನಾರ್ಥಕ ಸರ್ವನಾಮಗಳು ಆವನ್ ಆವಳ್ ಇತ್ಯಾದಿಗಳಾಗಿದ್ದು ಹೊಸಗನ್ನಡದಲ್ಲಿ ಅವುಗಳ ಆದಿ ಆ ಕಾರದ ಮುಂದೆ ಯ ಕಾರ ಬಂದು ಯಾವನ್ ಯಾವನು ಇತ್ಯಾದಿಗಳಾಗಿವೆ.

ಕನ್ನಡ ಭಾಷೆಯ ಕ್ರಿಯಾಪದಗಳು ಗುಣವಾಚಕ ವಿಶೇಷಗಣಗಳಾಗಿಯೂ ನಾಮಪದಗಳಾಗಿಯೂ ಉಪಯೋಗಿಸಲ್ಪಡುತ್ತವೆ. ಕ್ರಿಯಾಪದಕ್ಕೆ ಹತ್ತುವ ಪುರುಷ ವಚನಸೂಚಕ ಪ್ರತ್ಯಯಗಳೂ ಸರ್ವನಾಮಗಳ ರೂಪಗಳೇ ಎಂಬುದನ್ನು ಗಮನಿಸಬಹುದು. ಉತ್ತಮಪುರುಷ ಏಕವಚನ ಎನ್, ಎನು ಮತ್ತು ಎ. ಬಹುವಚನ ಎಮ್, ಎವು; ಮಧ್ಯಮಪುರುಷ ಏಕವಚನ ಆಯ್, ಎ ಬಹುವಚನ ಇರ್, ಇರಿ; ಪ್ರಥಮಪುರುಷ ಏಕವಚನ ಅನ್, ಆಳ್, ಬಹುವಚನ ಆರ್ ; ನಪುಂಸಕಲಿಂಗ ಏಕವಚನ ಉದು, ಉತ್ತು, ಬಹುವಚನ ಉವು. ಈ ಎಲ್ಲ ಪ್ರತ್ಯಯಗಳೂ ಮೇಲೆ ಹೇಳಿದ ಸರ್ವನಾಮಗಳ ಸವೆದ ರೂಪಗಳೆಂದು ತೋರಿಸುವುದು ಕಷ್ಟವಲ್ಲ. ಈ ಪ್ರತ್ಯಯಗಳನ್ನು ಧಾತುವಿನ ಕೃದ್ವಾಚಿಗಳಿಗೆ ಸೇರಿಸಿ ಬೇರೆ ಬೇರೆ ಕ್ರಿಯಾರೂಪಗಳನ್ನು ಸಿದ್ಧಿಸಿಕೊಳ್ಳಬಹುದು. ಕನ್ನಡದ ಕ್ರಿಯಾಪದಗಳಲ್ಲಿ ಭೂತ ಮತ್ತು ಭವಿಷ್ಯದ್ವರ್ತಮಾನ ಎಂಬ ಎರಡೇ ಕಾಲಗಳಿವೆ. ಭೂತಕಾಲದಲ್ಲಿ ಧಾತುವಿಗೆ ದ ಪ್ರತ್ಯಯ ಮತ್ತು ಭವಿಷ್ಯತ್ಕಾಲದಲ್ಲಿ ಬ ಅಥವಾ ವ ಪ್ರತ್ಯಯ ಸೇರುತ್ತವೆ. ಹಳಗನ್ನಡದ ವರ್ತಮಾನ ಕಾಲ ಪ್ರತ್ಯಯದಲ್ಲಿ ಕಾಣಬರುವ ದಪ್ಪ ಅಥವಾ ದಪ ಪ್ರತ್ಯಯದಲ್ಲಿನ ಅಪ್ಪ ಅಪ ರೂಪ ಆಗು ; ಧಾತುವಿನ ಭವಿಷ್ಯದ್ರೂಪ. ಹೀಗೆ ಸಿದ್ಧಿಸಿದ ರೂಪ ವರ್ತಮಾನ ಹಾಗೂ ಭವಿಷ್ಯದರ್ಥವನ್ನೂ ಸಂದೇಹಾರ್ಥವನ್ನೂ ಸೂಚಿಸುತ್ತಿತ್ತು. ನಡುಗನ್ನಡದಲ್ಲಿ ಈ ದಪ್ಪ ದಹವಾಯಿತು. ಹೊಸಗನ್ನಡದಲ್ಲಿ ಈ ರೀತಿಯ ವರ್ತಮಾನಕಾಲ ರೂಪ ಮಾಯವಾಗಿ ಉತ್ತ ಎನ್ನುವ ಕೃದ್ವಾಚಿಗೆ ಪುರುಷವಾಚಕ ಪ್ರತ್ಯಯಗಳನ್ನು ಸೇರಿಸಿ ಮಾಡಿದ ಹೊಸತೊಂದು ರೀತಿಯ ವರ್ತಮಾನಕಾಲ ರೂಪಗಳು ಪ್ರಚಾರಕ್ಕೆ ಬಂದುವು. ಆದರೆ ಈ ಉತ್ತ ಪ್ರತ್ಯಯಕ್ಕೆ ಸೇರುವ ಪುರುಷವಾಚಕ ಪ್ರತ್ಯಯಗಳಲ್ಲಿ ಹಲ ಕೆಲವು ಮಾರ್ಪಾಡುಗಳಾಗಿವೆ ಎಂಬುದನ್ನು ಗಮನಿಸಬಹುದು.

ಧಾತುವಿಗೆ ಅ ಅಥವಾ ಅದೆ ಪ್ರತ್ಯಯ ಸೇರುವುದರಿಂದಲೂ ಕ್ರಿಯಾಪದಕ್ಕೆ ಅಲ್ಲ ಇಲ್ಲ ರೂಪಗಳನ್ನು ಸೇರಿಸುವುದರಿಂದಲೂ ನಿಷೇಧಕ್ರಿಯೆ ಸಿದ್ಧಿಸುತ್ತದೆ. ಧಾತುವಿನ ಮೂಲರೂಪ ವಿಧ್ಯರ್ಥಕ ಮಧ್ಯಮ ಪುರುಷ ಏಕವಚನವಾಗಿ ಬಳಸಲ್ಪಡುತ್ತದೆ. ಇದರ ಬಹುವಚನ ರೂಪ ಸಿದ್ಧಿಸಲಿಕ್ಕೆ ಹಳಗನ್ನಡದಲ್ಲಿ ಇಮ್ ಪ್ರತ್ಯಯವೂ ನಡುಗನ್ನಡ ಹೊಸಗನ್ನಡಗಳಲ್ಲಿ ಇ, ಇರಿ ಪ್ರತ್ಯಯಗಳೂ ಸೇರುತ್ತವೆ. ವಿಧ್ಯರ್ಥಕ ಉತ್ತಮಪುರುಷ ಬಹುವಚನ ಸಿದ್ಧಿಸಲಿಕ್ಕೆ ಹಳಗನ್ನಡದಲ್ಲಿ ವಮ್ ಅಥವಾ ಅಮ್ ಪ್ರತ್ಯಯವನ್ನೂ ಹೊಸಗನ್ನಡದಲ್ಲಿ ಓಣ ಪ್ರತ್ಯಯವನ್ನೂ ಸೇರಿಸುತ್ತಾರೆ. ಪ್ರಥಮಪುರುಷ ರೂಪ ಸಿದ್ಧಿಸಲಿಕ್ಕೆ ಹಳಗನ್ನಡದಲ್ಲಿ ಕೆ, ಗೆ ಪ್ರತ್ಯಯವನ್ನೂ ಹೊಸಗನ್ನಡದಲ್ಲಿ ಅಲಿ ಪ್ರತ್ಯಯವನ್ನೂ ಸೇರಿಸುತ್ತಾರೆ. ವರ್ತಮಾನಕಾಲ ವಾಚಕ ಕೃದ್ವಾಚಿ ಅಥವಾ ಅಸಂಪೂರ್ಣ ಕ್ರಿಯೆ ಧಾತುವಿಗೆ ಉತ್ ಸೇರಿಸುವುದರಿಂದಲೂ ಭೂತಕಾಲವಾಚಕ ಅಸಂಪೂರ್ಣ ಕ್ರಿಯೆ ದು ಅಥವಾ ಮ ಸೇರುವುದರಿಂದಲೂ ಸಿದ್ಧಿಸುತ್ತವೆ. ಉಕಾರಾಂತ ಧಾತುಗಳಿಗೆ ಮಾತ್ರ ದು ಅಥವಾ ತು ಪ್ರತ್ಯಯ ಬರುವುದಿಲ್ಲ. ಅದಕ್ಕೆ ಬದಲಾಗಿ ಧಾತುವಿನ ಅಂತ್ಯ ಉಕಾರ ಲೋಪವಾಗಿ ಇ ಕಾರ ಸೇರುತ್ತದೆ (ಮಾಡಿ, ಹೋಗಿ–ಇತ್ಯಾದಿ).

ಕನ್ನಡ ಭಾಷೆಯ ಧ್ವನಿ ಮತ್ತು ವ್ಯಾಕರಣ ವ್ಯವಸ್ಥೆಯ ಸ್ಥೂಲವಾದ ಪರಿಚಯವನ್ನು ಮಾಡಿಕೊಂಡ ಮೇಲೆ ಈಗ ಈ ಭಾಷೆ ಮೂಲದ್ರಾವಿಡದಿಂದ ಬೇರ್ಪಟ್ಟಾಗ ಏನೇನು ಬದಲಾವಣೆಗಳು ನಡೆದಿವೆ ಎಂಬುದನ್ನು ಪರಿಶೀಲಿಸೋಣ. ಕನ್ನಡದಲ್ಲಿ ಮೂಲ ದ್ರಾವಿಡದಲ್ಲಿದ್ದಂತೆ ಅ ಇ ಉ ಎ ಒ ಎಂಬ ಐದು ಹ್ರಸ್ವಸ್ವರಗಳೂ ಅವುಗಳ ದೀರ್ಘರೂಪಗಳೂ ಇವೆ. ಆದರೆ ಅವು ಬರಬಹುದಾದ ಸನ್ನಿವೇಶಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಕಾಣಬಹುದು. ಮೂಲದ್ರಾವಿಡದಲ್ಲಿ ಪದಾಂತ್ಯದಲ್ಲಿ ಅ ಇ ಉ ಗಳು ಮಾತ್ರ ಬರಬಲ್ಲವು. ಆದರೆ ಕನ್ನಡದಲ್ಲಿ ಪದಾಂತ್ಯದಲ್ಲಿ ಎ ಕೂಡ ಬರಬಹುದು. ಮೂಲದ್ರಾವಿಡದಲ್ಲಿ ಶಬ್ದದ ಆದ್ಯಕ್ಷರದಲ್ಲಿ ಬರುವ ಎ ಉ ಕಾರಗಳು ಕನ್ನಡದಲ್ಲಿ ಅವುಗಳ ಮುಂದೆ ಒಂದು ವ್ಯಂಜನವಿದ್ದು ಆಮೇಲೆ ಪ್ರಕೃತಿ ಸಾಧಕವಾದ ಮತ್ತು ಆ ಕಾರದಿಂದ ಪ್ರಾರಂಭವಾಗುವ ಪ್ರತ್ಯಯ ಪರವಾದಾಗ ಅನುಕ್ರಮವಾಗಿ ಎ, ಒ ಕಾರಗಳಾಗುತ್ತವೆ. ಉದಾ : ಇರ್–ಎರಡು, ಸುಡು–ಸೊಡರು ಇತ್ಯಾದಿ. ಇದೇ ರೀತಿ ಇಯಲ್ ಉಡಲ್ ಮುಂತಾದ ಶಬ್ದಗಳ ಆದಿ ಇ, ಉ ಕಾರಗಳು ಎ, ಒ ಕಾರಗಳಾಗಿ ಎಲೆ, ಒಡಲು ಎಂದಾಗಿರುವುದನ್ನು ಗಮನಿಸಬಹುದು.

ಮೂಲ ದ್ರಾವಿಡದಲ್ಲಿ ಪ, ತ, ಟ ಚ, ಕ ಮತ್ತು (ವರ್ತ್ಸ್ಯ ಸ್ಪರ್ಶ) ಎಂಬ ಆರು ಸ್ಪರ್ಶ ವ್ಯಂಜನಗಳೂ ಮ, ನ, ಣ, ಞ ಎಂಬ ನಾಲ್ಕು ಅನುನಾಸಿಕಗಳೂ ರ ಎಂಬ ರೇಫವೂ ಲ, ಳ ಎಂಬ ಎರಡು ಪಾರ್ಶ್ವಿಕಗಳೂ ವ, ಮ, ಯ ಎಂಬ ಮೂರು ಅಂತಸ್ಥಗಳೂ ಸೇರಿ ಹದಿನಾರು ವ್ಯಂಜನಗಳಿದ್ದುವು. (ಇದರ ಜೊತೆಗೆ ಆಯ್ದಂ ಎಂಬ ಮತ್ತೊಂದು ಧ್ವನಿಯೂ ಇತ್ತೆಂಬ ಕಲ್ಪನೆಗೂ ಅವಕಾಶವಿದೆ). ಕನ್ನಡದಲ್ಲಿ ಪ, ತ, ಟ, ಚ, ಕ ಎಂಬ ಐದು ಸ್ಪರ್ಶಗಳು ಘೋಷ ಮತ್ತು ಅಘೋಷಗಳಾಗಿ ಒಡೆದು ಹತ್ತು ಸ್ಪರ್ಶಗಳಾಗಿವೆ. ಮೂಲ ದ್ರಾವಿಡದಲ್ಲಿ ಈಗ ತಮಿಳಿನಲ್ಲಿರುವಂತೆ ಈ ಘೋಷ–ಅಘೋಷಭೇದ ಸನ್ನಿವೇಶಶಬ್ದ ಮಾತ್ರವಾಗಿತ್ತು. ಕನ್ನಡದಲ್ಲಿ ಪ, ತ, ಟ, ಚ, ಕ ಇವುಗಳಲ್ಲದೆ ಬ, ದ, ಡ, ಜ, ಗ ಇವುಗಳೂ ಪ್ರತ್ಯೇಕ ಧ್ವನಿಮಗಳಾದುವು. ವರ್ತ್ಯ ಸ್ಪರ್ಶವೆನ್ನಲಾದ ಱ ಎಂಬ ವಿಶಿಷ್ಟ ಧ್ವನಿ ಸ್ವರಮಧ್ಯದಲ್ಲಿ ಶಕಟರೇಫವಾಗಿಯೂ ಉಳಿದೆಡೆಗಳಲ್ಲಿ ಮುಂದೆ ಬರುವ ಧ್ವನಿಗೆ ಅನುಸಾರವಾಗಿ ಕ, ದ ಅಥವಾ ರ ಆಗಿಯೂ ಬದಲಾವಣೆ ಹೊಂದಿದೆ. ಮೂಲ ದ್ರಾವಿಡದಲ್ಲಿ ಪದಮಧ್ಯದಲ್ಲಿ ಬರುವ ಸ್ಪರ್ಶಗಳು ಕನ್ನಡದಲ್ಲಿ ಘೋಷ ಸ್ಪರ್ಶಗಳಾಗಿಯೇ ಉಳಿದಿವೆ. ಆದರೆ ಪದಮಧ್ಯದ ಚ ಕಾರ ಸ ಕಾರವಾಗಿಯೂ ಪ ಕಾರ ವ ಕಾರವಾಗಿಯೂ ಪರಿಣಮಿಸಿವೆ ಎಂದು ಬೀಸು, ಕವುಚು ಮುಂತಾದ ಉದಾಹರಣೆಗಳಿಂದ ತಿಳಿಯಬಹುದು. ಅನುನಾಸಿಕಕ್ಕೆ ಪರವಾಗಿ ಬರುವ ಸ್ಪರ್ಶಗಳೂ ಮೂಲದ್ರಾವಿಡದಂತೆ ಕನ್ನಡದಲ್ಲಿಯೂ ಘೋಷವಾಗಿಯೇ ಉಳಿದಿವೆ. ಆದರೆ ಱ ಕಾರ ಮಾತ್ರ ಈ ಸನ್ನಿವೇಶದಲ್ಲಿ ದ ಕಾರವಾಗಿದೆ. ಒನ್ ಱು ಎಂಬುದು ಒಂದು ಎಂದಾಗಿದೆ. ಮೂಲ ದ್ರಾವಿಡದ ಸ್ಪರ್ಶವ್ಯಂಜನಗಳಲ್ಲಿ ಪ, ತ, ಚ ಮತ್ತು ಕ ಗಳು ಮಾತ್ರ ಶಬ್ದದ ಆದಿಯಲ್ಲಿ ಬಂದು ಅಘೋಷಗಳಾಗಿ ಉಚ್ಚರಿಸಲ್ಪಡುತ್ತಿದ್ದುವು. ಕನ್ನಡದಲ್ಲಿಯೂ ಇವುಗಳಲ್ಲಿ ಹೆಚ್ಚಿನವು ಅಘೋಷಗಳಾಗಿಯೇ ಉಳಿದರೂ ಕೆಲವು ಮಾತ್ರ ಘೋಷಗಳಾಗಿಯೂ ಬದಲಾವಣೆಗೊಂಡಿವೆ. ಉದಾಹರಣೆಗೆ ದಟ್ಟ, ಆರು, ಗಂಡು ಮುಂತಾದ ಶಬ್ದಗಳನ್ನು ಗಮನಿಸಬಹುದು. ಆದಿ ಚ ಕಾರ ಮಾತ್ರ ಕೆಲವೆಡೆ ಸ ಕಾರವಾಗಿಯೂ (ಸುಡು, ಸಾಲು ಇತ್ಯಾದಿ) ಕೆಲವೆಡೆ ಲೋಪವಾಗಿಯೂ ಪರಿಣಾಮ ಹೊಂದಿದೆ (ಉಪ್ಪು, ಆರು ಇತ್ಯಾದಿ ಶಬ್ದಗಳಲ್ಲಿ ಆದಿ ಚ ಕಾರವಿತ್ತೆಂದು ವಿದ್ವಾಂಸರ ಅಭಿಪ್ರಾಯ), ಮೂಲದ ದ್ವಿಸ್ಪರ್ಶಗಳು ಕನ್ನಡದಲ್ಲಿ ದೀರ್ಘಸ್ವರಕ್ಕೆ ಪರವಾಗಿ ಬಂದಾಗ ದ್ವಿತ್ವವನ್ನು ಕಳೆದುಕೊಂಡಿವೆ. ಹೀಗಾಗಿ ಆಟ್ಟಂ ಇದ್ದುದು ಆಟ ಆಗಿದೆ. ವರ್ತ್ಸ್ಯ ಸ್ಪರ್ಶವಾದ ಱ ಮೂಲದಲ್ಲಿ ದ್ವಿತ್ವರೂಪದಲ್ಲಿಲದ್ದುದು ಕನ್ನಡಕ್ಕೆ ಬರುವಾಗ ಹ್ರಸ್ವಸ್ವರದ ಪರದಲ್ಲಿ ದ್ವಿತ್ವ ತ ಕಾರವಾಗಿಯೂ ದೀರ್ಘಸ್ವರಕ್ಕೆ ಪರವಾದಾಗ ಏಕ ತ ಕಾರವಾಗಿಯೂ ಪರಿಣಮಿಸಿದೆ. ಎಱ್ಱು ಎಂದಿದ್ದುದು ಎತ್ತು ಎಂದೂ ಏಱ್ಱ ಎಂದಿದ್ದುದು ಏತ ಎಂದೂ ಆಗಿವೆ. ಮೂಲ ಯ ಕಾರ ಶಬ್ದಾದಿಯಲ್ಲಿ ಲೋಪವಾಗಿದೆ. ಯಾನಯ್ ಇದ್ದುದು ಆನೆಯಾಗಿದೆ. ಊ ಉದಾಹರಣೆಯಿಂದಲೇ ಶಬ್ದಾಂತ್ಯದಲ್ಲಿರುವ ಯ ಕಾರ ಲೋಪವಾಗಿ ಅದಕ್ಕೆ ಹಿಂದಿನ ಅ ಕಾರ ಎ ಕಾರವಾಗಿದೆ ಎಂದೂ ತಿಳಿಯಬಹುದು.

ಮೂಲದ್ರಾವಿಡದ ಕ್ರಿಯಾಧಾತುಗಳು ಏಕಾಕ್ಷರಿಗಳಾಗಿದ್ದು ಕನ್ನಡದಲ್ಲಿ ಅವುಗಳಲ್ಲಿ ಕೆಲವು ಏಕಾಕ್ಷರಿಗಳಾಗಿಯೇ ಉಳಿದು ಇನ್ನು ಕೆಲವು ಉಚ್ಚಾರಣಾಸೌಕರ್ಯಕ್ಕಾಗಿ ಸೇರಿದ ಉ ಕಾರದಿಂದಾಗಿಯೂ ಕೆಲವು ಪ್ರಕೃತಿಸಾಧಕ ಪ್ರತ್ಯಯಗಳನ್ನು ಸೇರಿಸಿದ್ದರಿಂದಲೂ ಎರಡು ಅಥವಾ ಮೂರು ಅಕ್ಷರಗಳನ್ನು ಪಡೆದಿವೆ. ಏಕಾಕ್ಷರಿಗಳಿಗೆ ಉದಾಹರಣೆಯಾಗಿ ತಿನ್ ಆಳ್ ಎಂಬ ಧಾತುಗಳ್ನೂ ದ್ವ್ಯಕ್ಷರಿಗೆ ಆಡು ಕಟ್ಟು ಇತ್ಯಾದಿಗಳನ್ನೂ ತ್ರ್ಯಕ್ಷರಿಗೆ

ತಿರುಗು ತುೞುಕು ಇತ್ಯಾದಿಗಳನ್ನೂ ನೋಡಬಹುದು. ಮೂಲದ್ರಾವಿಡ ಕ್ರಿಯಾಧಾತುಗಳಲ್ಲಿ ಸಕರ್ಮಕ ಆಕರ್ಮಕ ವಿವಕ್ಷೆ ಇತ್ತೆಂದೂ ಅಕರ್ಮಕ ಪ್ರಕೃತಿಯಲ್ಲಿರುವ ಅನುನಾಸಿಕಯುಕ್ತ ಸ್ಪರ್ಶವ್ಯಂಜನ ಸಕರ್ಮಕವಾದಾಗ ದ್ವಿಸ್ಪರ್ಶವಾಗುತ್ತದೆಯೆಂದೂ ಹೇಳಬಹುದು. ಈ ಪ್ರವೃತ್ತಿ ಕನ್ನಡದಲ್ಲಿ ಸುಂದು, ಸುತ್ತು ಮುಂತಾದ ಕೆಲವು ಧಾತುಗಳಲ್ಲಿ ಉಳಿದುಕೊಂಡಿದ್ದರೂ ಹೆಚ್ಚಿನ ಕಡೆ ಈ ಭೇದ ಕಂಡುಬರುವುದಿಲ್ಲ. ಕ್ರಿಯಾಧಾತುಗಳಿಗೆ ಮೂಲದ್ರಾವಿಡದಲ್ಲಿ ಭೂತ ಮತ್ತು ಭವಿಷ್ಯದರ್ಥವನ್ನು ಸೂಚಿಸುವ ಎರಡು ಪ್ರತ್ಯಯಗಳಿದ್ದಿರಬೇಕು. ಅವುಗಳಲ್ಲಿ ಭವಿಷ್ಯತ್‌ಸೂಚಕ ಪ್ರತ್ಯಯ ಕನ್ನಡದಲ್ಲಿ ವ, ಪ ಮತ್ತು ಬ ಎಂದು ಪರಿವರ್ತನೆ ಹೊಂದಿದೆ. ಭೂತಕಾಲಸೂಚಕ ಪ್ರತ್ಯಯ ಮೂಲದ್ರಾವಿಡದಲ್ಲಿ ನ್ತ ಎಂದಿದ್ದು ಕನ್ನಡದಲ್ಲಿ ಅನುನಾಸಿಕ ಲೋಪವಾಗಿ ದ ಎಂಬುದಾಗಿ ಪರಿಣಾಮಗೊಂಡು ಈ ಆಕಾರ ಸನ್ನಿವೇಶಕ್ಕನುಸಾರವಾಗಿ ದ, ಡ, ಟ, ತ, ಕ ಎಂದು ಬೇರೆ ಬೇರೆ ರೂಪದಲ್ಲಿ ಬರುತ್ತದೆ. ಕನ್ನಡದಲ್ಲಿ ಪ್ರತ್ಯೇಕವಾದ ವರ್ತಮಾನಕಾಲ ಹುಟ್ಟಿಕೊಂಡ ಬಗೆಯನ್ನು ಆಗಲೇ ಸೂಚಿಸಿದೆ, ಉತ್ತಮಪುರುಷ ಬಹುವಚನ ಸರ್ವನಾಮದಲ್ಲಿ ಸಮಾವಿಷ್ಟ (ಯಾರೊಡನೆ ಮಾತನಾಡುತ್ತಿರುವೆವೋ ಅವರನ್ನು ಸೇರಿಸಿ) ಮತ್ತು ಅಸಮಾವಿಷ್ಟ (ಮಾತನಾಡುತ್ತಿರುವವರನ್ನು ಬಿಟ್ಟು) ಎಂಬ ಎರಡು ರೂಪಗಳಿದ್ದು ಕನ್ನಡದಲ್ಲಿ ಈ ವ್ಯತ್ಯಾಸ ಲೋಪವಾಗಿದೆ.

ಮೂಲದ್ರಾವಿಡದ ಉಪಭಾಷೆಗಳಿಂದ ಕನ್ನಡ ಬೇರ್ಪಟ್ಟು ಸ್ವತಂತ್ರ ಭಾಷೆಯಾಗುವ ಕಾಲಕ್ಕೆ ನಡೆದ ಕೆಲವು ಮುಖ್ಯವಾದ ಪರಿವರ್ತನೆಗಳ್ನು ಸ್ಥೂಲವಾಗಿ ಹಿಂದೆ ನಿರೂಪಿಸಿದೆ. ಇನ್ನು ಈ ಭಾಷೆಯ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡಗಳೆಂಬ ನಾಲ್ಕು ಹಂತಗಳಲ್ಲಿ ನಡೆದ ಕೆಲವು ಪ್ರಮುಖವಾದ ಬದಲಾವಣೆಗಳನ್ನು ಪರಿಶೀಲಿಸಬಹುದು.

ಶಾಸನಗಳಲ್ಲಿ ಕಾಣಬರುವ ಪೂರ್ವದ ಹಳಗನ್ನಡ ಪಂಪ, ಕವಿರಾಜಮಾರ್ಗಾದಿ ಗ್ರಂಥಗಳಲ್ಲಿ ಕಾಣಬರುವ ಕನ್ನಡಕ್ಕಿಂತ ಎಷ್ಟೋ ಭಿನ್ನವಾಗಿದೆ. ಅದರಲ್ಲಿ ಮೂಲ ವಕಾರ ವಕಾರವಾಗಿಯೇ ಉಳಿದಿದೆ (ಮುಂದಿನ ಶತಮಾನಗಳಲ್ಲಿ ವಕಾರ ಬಕಾರ ವಾಗಿದೆ) ವಿತ್ತು–ಬಿತ್ತು, ವೆಟ್ಟ–ಬೆಟ್ಟ ಮುಂತಾದ ಉದಾಹರಣೆಗಳನ್ನು ನೋಡಬಹುದು. ಮೂಲದ್ರಾವಿಡದ ಆದ್ಯಕ್ಷರದಲ್ಲಿ ಎ ಕಾರ ಇಲ್ಲವೆ ಒ ಕಾರವಿದ್ದು ಅದಕ್ಕೆ ಪರವಾಗಿ ಇ ಕಾರ ಇಲ್ಲವೆ ಉ ಕಾರ ಬಂದರೆ ಶಾಸನಗಳ ಕನ್ನಡದ ಎ ಕಾರ ಒ ಕಾರಗಳಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಆದರೆ ಮುಂದಿನ ಶತಮಾನಗಳ ಕನ್ನಡದಲ್ಲಿ ಎ ಒ ಕಾರಗಳು ಇ ಉ ಕಾರಗಳಾಗಿ ಮಾರ್ಪಡುತ್ತವೆ. ಶಾಸನದ ಕನ್ನಡದ ಎೞ್ದು, ಕೆಡುಗೆ ಶಬ್ದಗಳು ಹಳಗನ್ನಡದಲ್ಲಿ ಇೞ್ದು ಕಿಡುಗೆ ಎಂದಾಗುತ್ತದೆ. ಪೂರ್ವದ ಹಳಗನ್ನಡದ ಪ್ರಥಮಪುರುಷ ಪ್ರತ್ಯಯ, ನಿಷೇಧಾರ್ಥ ಪ್ರತ್ಯಯ, ದ್ವಿತೀಯಾವಿಭಕ್ತಿ ಪ್ರತ್ಯಯ, ಷಷ್ಠೀವಿಭಕ್ತಿ ಪ್ರತ್ಯಯ ಮುಂತಾದುವುಗಳಲ್ಲಿ ದೀರ್ಘರೂಪವಿರುವುದನ್ನು ಸ್ವರ್ಗಾಗ್ರಮಾನೇರಿದಾನ್, ವೆಳೆಯಾದೆ ಕೆಡುಗೆ, ಪ್ರಾಸಾದಾಂತರಮಾನ್, ಭಟಾರರಾ ದತ್ತಿ ಮುಂತಾದ ಉದಾಹರಣೆಗಳಿಂದ ಕಾಣಬಹುದು. ಸಪ್ತಮೀವಿಭಕ್ತಿ ಪ್ರತ್ಯಯ ಈ ಕಾಲದಲ್ಲಿ ಉಳ್ ಎಂಬ ರೂಪದಲ್ಲಿತ್ತು.

ಪೂರ್ವದ ಹಳಗನ್ನಡದ ಕಾಲವನ್ನು ದಾಟಿ ಪಂಪರನ್ನಾದಿ ಕವಿಗಳ ಹಳಗನ್ನಡದ ಕಾಲಕ್ಕೆ ಬಂದಾಗ ವ ಕಾರ ಬ ಕಾರವಾಗುವುದೂ ಮುಂದಿನ ಅಕ್ಷರದಲ್ಲಿ ಇ, ಉ ಎಂಬ ಉಚ್ಚಸ್ವರ ಬಂದಾಗ ಎ ಒ ಎಂಬ ಮಧ್ಯಸ್ವರ ಉಚ್ಚಸ್ವರವಾಗುವುದೂ ಕಂಡುಬರುತ್ತದೆ. ಈ ಕಾಲದಲ್ಲಿ ಱ, ೞ ಗಳ ಸ್ವರೂಪದಲ್ಲೇನೂ ಬದಲಾವಣೆಯಾದದ್ದು ಕಂಡುಬರುವುದಿಲ್ಲ. ಆದರೆ ಜನರ ಉಚ್ಚಾರಣೆಯಲ್ಲಿ ಳ ಮತ್ತು ಱಗಳ ನಡುವಿನ ಭೇದ ಕಡಿಮೆಯಾಗಿತ್ತೆಂದು ತೋರುತ್ತದೆ. ನಡುಗನ್ನಡಕ್ಕೆ ಬರುವಾಗ ಱ ಮತ್ತು ೞಗಳ ಜನರ ಉಚ್ಚಾರಣೆಯಿಂದ ಲೋಪವಾಯಿತೆನ್ನಬಹುದು. ಱ ಕಾರ ಬರೆಹದಲ್ಲಿಯೂ ಲೋಪವಾಯಿತು. ಆದರೆ ೞ ಕಾರ ಮಾತ್ರ ಬರೆಹದಲ್ಲಿ ಸು. 16ನೆಯ ಶತಮಾನದವರೆಗೆ ಬಳಕೆಯಲ್ಲಿದ್ದುದು ಕಂಡುಬರುತ್ತದೆ. ಪ ಕಾರ ಹ ಕಾರವಾಗಿ ಮಾರ್ಪಾಟಾಯಿತು. ಹೊಸಗನ್ನಡದಲ್ಲಿ ವ್ಯಂಜನ ಗುಚ್ಛಗಳಲ್ಲಿರುವ ರ, ಱ ಮತ್ತು ೞ ಕಾರಗಳು ಲೋಪವಾಗಿವೆ. ಈ ಪ್ರವೃತ್ತಿ ಕೇಶೀರಾಜನ ಕಾಲದಲ್ಲಿಯೇ ಇತ್ತೆಂದು ಊಹಿಸಬಹುದು. ದೀರ್ಘಸ್ವರಕ್ಕೆ ಪರದಲ್ಲಿರುವಾಗ ಇವು ಲೋಪವಾಗುತ್ತವೆ. ಹ್ರಸ್ವಸ್ವರಕ್ಕೆ ಪರದಲ್ಲಿದ್ದಾಗ ಈ ರಱ ಗಳು ಲೋಪವಾಗಿ ಅವುಗಳ ಪದದಲ್ಲಿರುವ ವ್ಯಂಜನ ದ್ವಿತ್ವವನ್ನು ಪಡೆಯುತ್ತದೆ. ಉದಾ ; ಬಾರ್ಚು–ಬಾಚು, ಸೊರ್ಕು–ಸೊಕ್ಕು. ಅನುನಾಸಿಕಯುಕ್ತವಾದ ವ್ಯಂಜನ ಗುಚ್ಛಗಳು ದೀರ್ಘಸ್ವರಕ್ಕೆ ಪರವಾದಾಗ ಅಥವಾ ಶಬ್ದದ ಎರಡನೆಯ ಹ್ರಸ್ವಸ್ವರಕ್ಕೆ ಪರವಾದಾಗ ಅನುನಾಸಿಕ ಲೋಪವಾಗುತ್ತದೆ. ಉದಾ: ನಾಂಟು–ನಾಟು, ಕಲಂಕು–ಕಲಕು ಇತ್ಯಾದಿ. ಹೊಸಗನ್ನಡದಲ್ಲಿ ಕ್ರಿಯಾಪದದ ಭವಿಷ್ಯತ್‌ಕಾಲ ರೂಪಗಳೂ ನಿಷೇಧಾರ್ಥರೂಪಗಳೂ ಲೋಪವಾಗಿವೆ ಎನ್ನಬಹುದು. ಹಳಗನ್ನಡದ ದಪ್ಪ ಪ್ರತ್ಯಯಯುಕ್ತವಾದ ವರ್ತಮಾನಕಾಲ ರೂಪಗಳು ಲೋಪವಾಗಿ ಅದರ ಸ್ಥಾನದಲ್ಲಿ ಹೊಸದೊಂದು ರೀತಿಯ ವರ್ತಮಾನಕಾಲ ರೂಪ ಹುಟ್ಟಿದರ ಬಗ್ಗೆ ಹಿಂದೆಯೇ ಪ್ರಸ್ತಾಪಿಸಿದೆ.

ಆಧುನಿಕ ಕನ್ನಡದ ಆಡುನುಡಿಗಳ ಸಾಮಾಜಿಕ ಮತ್ತು ಭೌಗೋಳಿಕ ಪ್ರಭೇದಗಳನ್ನು ಪರಿಶೀಲಿಸುವಾಗ ಬಡಗರು ಮತ್ತು ಸೋಲಿಗರು ಬಳಸುವ ಎರಡು ಉಪಭಾಷೆಗಳು ಮೊದಲು ನಮ್ಮ ಗಮನ ಸೆಳೆಯುತ್ತವೆ. ಇವು ಕನ್ನಡದ ಇತರ ಪ್ರಭೇದಗಳಿಗಿಂತ ತೀರ ಭಿನ್ನವಾಗಿವೆ. ಪ್ರತಿವೇಷ್ಟಿತ ಸ್ವರ (ರೆಟ್ರೊಫ್ಲೆಕ್ಸ್ ವೊವೆಲ್ಸ್) ಗಳಿರುವುದು ಈ ಭಾಷೆಗಳ ವೈಶಿಷ್ಟ್ಯ. ಕನ್ನಡದಲ್ಲಿ ಲೋಪವಾದ ಮಧ್ಯಮಪುರುಷ ಸಮಾವಿಷ್ಟ ಮತ್ತು ಅಸಮಾವಿಷ್ಟ ಉತ್ತಮಪುರುಷ ಬಹುವಾಚನ ಸರ್ವನಾಮಗಳು ಬಡಗದಲ್ಲಿವೆ. ಕ್ರಿಯಾಧಾತುಗಳಲ್ಲಿ ಸಕರ್ಮಕ–ಅಕರ್ಮಕ ವಿವಕ್ಷೆಯೂ ಅದರಲ್ಲಿದೆ. ಹೊಸಗನ್ನಡದಲ್ಲಿ ಲೋಪವಾದ ರ ೞ ವ್ಯತ್ಯಾಸ ಸೋಲಿಗರ ಕನ್ನಡದಲ್ಲಿ ಕಾಣಬರುತ್ತದೆ. ಳ ಕಾರಕ್ಕೆ ಕೆಲವೆಡೆ ಱ ಕಾರದ ಉಚ್ಚಾರಣೆಯೂ ಅದರಲ್ಲಿ ಕಂಡುಬರುತ್ತದೆ.

ಆಧುನಿಕ ಕನ್ನಡದ ಆಡುಮಾತಿನ ಇತರ ಪ್ರಭೇದಗಳನ್ನು ಭೌಗೋಳಿಕವಾಗಿ ಕರಾವಳಿ ಕನ್ನಡ ಮತ್ತು ಒಳನಾಡಿನ ಕನ್ನಡವೆಂದು ವಿಭಜಿಸಬಹುದು. ಒಳನಾಡಿನ ಕನ್ನಡವನ್ನು ಉತ್ತರದ (ಧಾರವಾಡದ ಕಡೆಯ) ಕನ್ನಡ ಮತ್ತು ದಕ್ಷಿಣದ (ಮೈಸೂರು ಕಡೆಯ) ಕನ್ನಡವೆಂದು ಸ್ಥೂಲವಾಗಿ ವಿಭಜಿಸಬಹುದು. ಕರಾವಳಿ ಪ್ರದೇಶದ ಗೌಡ, ಹವ್ಯಕ, ಕೋಟ, ಹಾಲಕ್ಕಿ ಮುಂತಾದ ಪ್ರಭೇದಗಳಲ್ಲಿ ಒಳನಾಡಿನ ಕನ್ನಡಕ್ಕಿಂತ ತುಂಬ ಬೇರೆಯಾದ ಮತ್ತು ಹಳಗನ್ನಡಕ್ಕೆ ಸಮೀಪವಾದ ರೂಪಗಳು ಕಂಡುಬರುತ್ತವೆ. ಮೇಲೆ ವಿವರಿಸಿದಂತೆ ಎ, ಒ ಕಾರಗಳು ಇ, ಉ ಕಾರಗಳಾಗುವುದಾಗಲೀ ದೀರ್ಘಸ್ವರಕ್ಕೆ ಪರವಾಗಿ ಬರುವ ಅನುನಾಸಿಕ ಮತ್ತು ಸ್ಪರ್ಶಗುಚ್ಛದಿಂದ ಅನುನಾಸಿಕ ಲೋಪವಾಗುವುದಾಗಲೀ ಈ ಪ್ರಭೇದಗಳಲ್ಲಿ ಕಂಡುಬರುವುದಿಲ್ಲ. ಉದಾಹರಣೆಗೆ ಕೆಮಿ (ಕಿವಿ) ಕೊಡಿ (ಕುದಿ) ದಾಂಟು (ದಾಟು) ಶಬ್ದಗಳನ್ನು ನೋಡಬಹುದು. ಕ್ರಿಯಾಪದದ ಭವಿಷ್ಯತ್ ಮತ್ತು ನಿಷೇಧಾರ್ಥಕ ರೂಪಗಳು ನಷ್ಟವಾಗಿಲ್ಲ. ಮೂಲದ್ರಾವಿಡದ ಸಮಾವಿಷ್ಟ ಅಸಮಾವಿಷ್ಟ ಭೇದ ಸರ್ವನಾಮದಲ್ಲಿ ಉಳಿದಿದೆ. ಒಳನಾಡಿನ ಕನ್ನಡದಂತೆ ವರ್ತಮಾನ ಮತ್ತು ಭೂತಕಾಲಗಳಿಗೆ ಪ್ರತ್ಯೇಕವಾದ ಪುರುಷವಾಚಕ ಪ್ರತ್ಯಯಗಳಿಲ್ಲ. (ಕುಡಿತ್ತೆ ವರ್ತಮಾನಕಾಲ, ಮುಂದಿನ ಕುಡುದೆ ಭೂತಕಾಲ). ಒಳನಾಡಿನ ಕನ್ನಡದ ಉತ್ತರ ಮತ್ತು ದಕ್ಷಿಣ ಪ್ರಭೇದಗಳಲ್ಲಿನ ವೈಶಿಷ್ಟ್ಯಗಳಲ್ಲಿ ಪ್ರಮುಖವಾದುವು ಹೀಗಿವೆ : ಉತ್ತರದ ಪ್ರಭೇದಗಳಲ್ಲಿ ಎ ಕಾರಾಂತ ಶಬ್ದಗಳು ಇ ಕಾರಂತವಾಗಿವೆ (ಮನೆ–ಮನಿ); ಉಕಾರಾಂತ ಶಬ್ದಗಳು ಅ ಕಾರಾಂತವಾಗಿವೆ (ಉಗುರು–ಉಗುರ). ಆಕಾರ ಉತ್ತರದ ಪ್ರಭೇದದಲ್ಲಿ ಸಂವೃತ ಆಕಾರ (ಉಚ್ಚ ಆಕಾರ) ಮತ್ತು ವಿವೃತ ಆಕಾರಗಳಾಗಿ (ನಿಮ್ನ ಆಕಾರ) ಒಡೆದಿದೆ. ಅಲ್ಲಿನ ಚ ಕಾರ ಜ ಕಾರಗಳು; ಪಶ್ಚಸ್ವರಗಳಾದ ಉ, ಒ, ಅ ಕಾರಗಳ ಮುಂದೆ ಬಂದಾಗ ವರ್ತ್ಸ್ಯಗಳಾಗಿ (ತ್ಸ ದ್ಸ ಗಳಂತೆ) ಉಚ್ಚರಿಸಲ್ಪಟ್ಟು ಬೇರೆ ಕಡೆ ತಾಲವ್ಯಗಳಾಗಿ ಉಚ್ಚರಿಸಲ್ಪಡುತ್ತವೆ ಸಪ್ತಮೀ ವಿಭಕ್ತಿ ಪ್ರತ್ಯಯ ಉತ್ತರದಲ್ಲಿ ಆಗ ಎಂದೂ ದಕ್ಷಿಣದಲ್ಲಿ ಅಲ್ಲಿ ಎಂದೂ ಬಳಕೆಯಲ್ಲಿದೆ. ಉತ್ತರದ ಪ್ರಭೇದಗಳಲ್ಲಿ ಶಬ್ದಾದಿಯ ಹ ಕಾರ ಲೋಪವಾಗುವುದಿಲ್ಲ. ದಕ್ಷಿಣದ ಹೆಚ್ಚಿನ ಸಾಮಾಜಿಕ ಪ್ರಭೇದಗಳಲ್ಲಿ ಹ ಕಾರ ಲೋಪವಾದದ್ದು ಕಂಡುಬರುತ್ತದೆ.

ಹೀಗೆ ಕರಾವಳಿ ಕನ್ನಡ, ಉತ್ತರ ಕರ್ನಾಟಕದ ಕನ್ನಡ, ದಕ್ಷಿಣ ಕರ್ನಾಟಕ ಅಥವಾ ಮೈಸೂರಿನ ಕನ್ನಡ ಎಂದು ಸ್ಥೂಲವಾಗಿ ಹೇಳಬಹುದಷ್ಟೆ, ಈ ಒಂದೊಂದು ಪ್ರದೇಶದಲ್ಲಿಯೂ ಭೌಗೋಳಿಕ ಹಾಗೂ ಸಾಮಾಜಿಕವಾಗಿ ಹತ್ತು ಹಲವಾರು ಪ್ರಭೇದಗಳನ್ನು ಗುರುತಿಸಬಹುದು. ಕೆಲವೇ ಕಿಮೀ ಗಳ ಅಂತರದಲ್ಲಿ ಬಳಕೆಯಲ್ಲಿರುವ ಆಡುನುಡಿಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಹಾಗೆಯೇ ಒಂದೇ ಹಳ್ಳಿಯಲ್ಲಿ ಬಳಕೆಯಲ್ಲಿರುವ ಬೇರೆ ಬೇರೆ ಜಾತಿ ಪಂಗಡಗಳ ಭಾಷೆಯಲ್ಲಿ ಗಮನಾರ್ಹವಾದ ವ್ಯತ್ಯಾಸಗಳು ಇವೆಯೆಂಬುದು ಜನಸಾಮಾನ್ಯರಿಗೂ ತಿಳಿದೇ ಇದೆ. ಬ್ರಾಹ್ಮಣರ ಭಾಷೆ, ಗೌಡರ ಭಾಷೆ, ಹರಿಜನರ ಭಾಷೆ ಎಂದು ಮುಂತಾಗಿ ಹಲವಾರು ಪ್ರಭೇದಗಳನ್ನು ಗಮನಿಸಬಹುದು. ಈ ಎಲ್ಲ ಪ್ರಭೇದಗಳ ಅಧ್ಯಯನ ಇನ್ನೂ ನಡೆದಿಲ್ಲವಾದರೂ ಕೆಲವು ಪ್ರಮುಖ ಪ್ರದೇಶ ಹಾಗೂ ಪಂಗಡಗಳ ಆಡುನುಡಿಯ ವ್ಯಶಿಷ್ಟಗಳನ್ನು ಇಲ್ಲಿ ಗುರುತಿಸಬಹುದು.

ಕರಾವಳಿಯ ಕನ್ನಡ ಪ್ರಭೇದಗಳಲ್ಲಿ ಅನೇಕ ರೀತಿಯ ಸಾದೃಶ್ಯಗಳಿದ್ದರೂ ದಕ್ಷಿಣ ಕನ್ನಡದ ಹವ್ಯಕ, ಗೌಡ, ಕುಂದಾಪುರ ಮತ್ತು ಕೋಟ ಹಾಗೂ ಉತ್ತರ ಕನ್ನಡದ ಹಾಲಕ್ಕಿ ಮುಂತಾದ ಪ್ರಭೇದಗಳು ತಮ್ಮದೇ ಆದ ವೈಶಿಷ್ಟ್ಯಗಳಿಂದ ಕೂಡಿವೆ. ಗೌಡ ಮತ್ತು ಹವ್ಯಕದಲ್ಲಿ ಗಳು ಎನ್ನುವ ವಚನ ಪ್ರತ್ಯಯಗಳು ಲೋಪವಾಗಿ ಗ ಮಾತ್ರ ಉಳಿದಿದೆ. ಈ ಪ್ರಭೇದಗಳಲ್ಲಿ ದ್ವಿತೀಯ ಮತ್ತು ಷಷ್ಠೀ ವಿಭಕ್ತಿ ಪ್ರತ್ಯಯಗಳು ಒಂದೇ ಆಗಿವೆ. ಗೌಡ ಕನ್ನಡದಲ್ಲಿ ಸ, ಶ, ಷ ಕಾರಗಳು ಒಂದೂಗೂಡಿ ಸಕಾರ ಮಾತ್ರ ಉಳಿದರೆ ಹಾಲಕ್ಕಿಯಲ್ಲಿ ಚ–ಸಕಾರಗಳೂ ನ–ಣ ಗಳೂ ಲ–ಳಗಳೂ ಒಂದುಗೂಡಿವೆ. ಕುಂದಾಪುರದ ಕೆಲವು ಪ್ರಭೇದಗಳ ಕ್ರಿಯಾಪದಗಳ ಪ್ರಥಮ ಪುರುಷ ಏಕವಚನದಲ್ಲಿ ಪುಲ್ಲಿಂಗ ಸ್ತ್ರೀಲಿಂಗ ನಪುಂಸಕಲಿಂಗ ವಿವಕ್ಷೆಯೂ ಬಹುವಚನದಲ್ಲಿ ಪುಂ–ಸ್ತ್ರೀ ಮತ್ತು ನಪುಂಸಕವೆಂಬ ಎರಡು ರೂಪಗಳೂ ಇವೆ. ಆದರೆ ಇತರ ಪ್ರಭೇದಗಳಲ್ಲಿ ಪುಲ್ಲಿಂಗ ಸ್ತ್ರೀಲಿಂಗ ವ್ಯತ್ಯಾಸ ಕಂಡುಬರದೆ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ವಿವಕ್ಷೆಯಿದೆ. ಬಹುವಚನದಲ್ಲಿ ಈ ವಿವಕ್ಷೆಯೂ ಇಲ್ಲದೆ ಒಂದೇ ರೂಪವಿರುವುದು ಗೌಡ, ಹಾಲಕ್ಕಿ ಮುಂತಾದ ಪ್ರಭೇದಗಳಲ್ಲಿ ಕಂಡುಬರುತ್ತದೆ. ಉದಾ: ಗೌಡ ಕನ್ನಡ ಅವು ಬಂದೊ (ಅವರು ಬಂದರು, ಅವು

ಬಂದುವು) ಈ ರೂಪವೇ ಉತ್ತಮ ಮತ್ತು ಮಧ್ಯಮ ಪುರುಷ ಬಹುವಚನಗಳಲ್ಲಿಯೂ ಕಂಡು ಬರುತ್ತದೆ. ಕರಾವಳಿ ಪ್ರಭೇದಗಳ ಕೆಲವು ವಿಶಿಷ್ಟ ಶಬ್ದಗಳೂ ಪ್ರಯೋಗಗಳೂ ಈ ರೀತಿ ಇವೆ–ಹೌದಾ, ಮಾರಾಯಾ, ಉಂಟು. (ಇದೆ ಎಂಬ ಅರ್ಥದಲ್ಲಿ) ಆಯ್ತು (ಆಗಲಿ) ಕೂಗು (ಅಳು) ಕ್ರಯ (ಬೆಲೆ) ಮದ್ದು (ಔಷಧಿ) ಅತ್ಲಾಗಿ (ಆ ಕಡೆ) ತೋರ (ದಪ್ಪಗೆ) ಸಪುರ (ತೆಳ್ಳಗೆ) ಪದಾರ್ಥ (ಪಲ್ಯ) ಮಾಡುವ (ಮಾಡೋಣ) ಸೈಕಲ್ ಬಿಡು (ಸೈಕಲ್ ಹೊಡೆ) ಬೀಡಿ ಎಳೆ (ಬೀಡಿ ಸೇದು) ನಿದ್ದೆ ತೆಗಿ (ನಿದ್ದೆ ಮಾಡು) ಕ್ರಯಕ್ಕೆ ತಕ್ಕೊಳ್ಳು (ಕೊಂಡುಕೊಳ್ಳು).

ಒಳನಾಡಿನ ಕನ್ನಡದ ಉತ್ತರದ ಪ್ರಭೇದಗಳಲ್ಲಿ ಧಾರವಾಡ, ಬೆಳಗಾಂ, ಬಿಜಾಪುರ, ಬೀದರ್–ಗುಲ್ಬರ್ಗ, ಬಳ್ಳಾರಿ ಮುಂತಾದ ಪ್ರಭೇದಗಳು ಪ್ರಮುಖವಾದವು. ಧಾರವಾಡದಲ್ಲಿ ಚತುರ್ಥಿ ವಿಭಕ್ತಿಯ ರೂಪ ಗ ಎಂದಿದ್ದರೆ ಬೆಳಗಾಂನಲ್ಲಿ ಗಿ ಎಂದಿದೆ. ಉ ಕಾರಾಂತ ಶಬ್ದಗಳು ಧಾರವಾಡದಲ್ಲಿ ಆ ಕಾರಂತವಾದರೆ ಬೆಳಗಾಂನಲ್ಲಿ ಆ ಕಾರಾಂತವಾಗುತ್ತವೆ. ಹಾಲಾ (ಹಾಲು) ಮೊಸರಾ (ಮೊಸರು) ಇತ್ಯಾದಿ. ಅಲ್ಲಿನ ಕ್ರಿಯಾಪದಗಳಲ್ಲಿ ಹಾಕಿಳು, ಮಾಡಿಳು, ತರತೇತಿ, ತಂದೇತಿ, ತೈಂದಾನ, ಹೌಂದು ಮಾಡತೀನ, ತಿನ್‍ಲಾಕ್ (ತಿನ್ನಲಿಕ್ಕೆ) ಮುಂತಾದ ರೂಪಗಳು ಕಂಡುಬರುತ್ತವೆ ಇಲ್ಲಿನ ಕನ್ನಡದಲ್ಲಿ ಧಾರವಾಡ ಕನ್ನಡದಲ್ಲಿ ಧಾರವಾಡ ಕನ್ನಡಕ್ಕಿಂತಲೂ ಮರಾಠೀ ಪ್ರಭಾವ ಜಾಸ್ತಿಯಿದ್ದು ಮರಾಠೀ–ಕನ್ನಡ ಮಿಶ್ರಿತ ರೂಪಗಳು ತುಂಬ ಕಂಡುಬರುತ್ತವೆ. ಉದಾ: ವಾಚಾಸತ್ಯಾನ (ಓದುತ್ತಾನೆ) ಲಾಜಾಸ್ಥಾಳ (ನಾಚುತ್ತಾಳೆ). ಬಿಜಾಪುರದ ಕನ್ನಡದಲ್ಲಿ ಅಲ್ಲಿ, ಇಲ್ಲಿ, ಎಲ್ಲಿ ಮುಂತಾದ ಕಡೆ ಕಲ್ಲಿ ಕಿಲ್ಲಿ ಕೆಲ್ಲಿ ರೂಪಗಳೂ ಹಾಗೆ, ಹೀಗೆ ಎಂಬ ಕಡೆ ಖಾಂಗ, ಖೀಂಗ ರೂಪಗಳೂ ಕಂಡುಬರುತ್ತವೆ. ಇರು ಧಾತುವಿನ ವರ್ತಮಾನ ಕಾಲ ರೂಪಗಳಾಗಿ ಹೀನಿ, ಹೀವಿ, ಹೀದಿ, ಹೀರಿ, ಹಾನ, ಹಾಳ, ಹಾರ, ಅರ ಅವ ರೂಪಗಳೂ ಕುಡಿತುನು, ಕುಡೀತಾತಿ ಮುಂತಾದ ಕ್ರಿಯಾರೂಪಗಳೂ ಕುಡೀವೆಲ್‍ನಿ, ಕುಡೀವಲ್ಲವಿ ಮುಂತಾದ ನಿಷೇಧಾರ್ಥ ಕ್ರಿಯಾಪದಗಳೂ ಈ ಪ್ರಭೇದದ ವೈಶಿಷ್ಟ್ಯಗಳು. ಧಾರವಾಡ, ಬೆಳಗಾಂ ಬಿಜಾಪುರದ ಹೆಚ್ಚಿನ ಪ್ರಭೇದಗಳಲ್ಲಿ ಚತುರ್ಥಿ ವಿಭಕ್ತಿ ದ್ವಿತೀಯ ವಿಭಕ್ತಿಯ ಅರ್ಥದಲ್ಲಿ ಉಪಯೋಗಿಸಲ್ಪಡುವುದರಿಂದ ಅವನಿಗೆ ಕರಿ, ಅವನಿಗೆ ನೋಡು ಮುಂತಾದ ರೂಪಗಳು ದೊರೆಯುತ್ತವೆ. ಈ ಪ್ರಭೇದಗಳ ಶಬ್ದಭಂಡಾರದಲ್ಲಿ ಮರಾಠೀ ಶಬ್ದಗಳು ಅಧಿಕ ಸಂಖ್ಯೆಯಲ್ಲಿ ತುಂಬಿವೆ. ಸಂಖ್ಯಾವಚಿ ಶಬ್ದಗಳಲ್ಲಿಯೂ ಮರಾಠಿ ಶಬ್ದಗಳೇ ಜಾಸ್ತಿ, ಅಲ್ಲಿಯ ಜನರಿಗೆ ಸಾಡೇ ದಹಾ ಬಡಿತು ಎಂದರೆ ಅರ್ಥವಾಗುತ್ತದೆಯೇ ಹೊರತು ಹತ್ತುವರೆ ಗಂಟೆ ಆಯಿತು ಎಂದರೆ ಅರ್ಥವಾಗುವುದಿಲ್ಲ. ನೆಟ್ಟಗಿಲ್ಲ (ಚೆನ್ನಾಗಿಲ್ಲ) ಅಗದಿ (ತುಂಬ) ಛಲೋ (ಚೆನ್ನಾಗಿ) ಜಳಕ (ಸ್ನಾನ) ಗಂಗಾಳ (ತಟ್ಟೆ) ಖರೆ (ನಿಜ) ಮಂದಿ (ಜನ) ಅವ್ವ (ಅಮ್ಮ) ಪಗಾರ (ಸಂಬಳ) ಒದರು (ಹೇಳು) ಹಿಂದಾಕಡೆ (ಆಮೇಲೆ) ಲಗೂನೆ (ಬೇಗನೆ) ಮುಂತಾದ ಶಬ್ದಗಳನ್ನು ಈ ಪ್ರಭೇದಗಳನ್ನಾಡುವ ಜನರಿಂದ ಯಾವಾಗಲೂ ಕೇಳಬಹುದು.

ಧಾರವಾಡ, ಬೆಳಗಾಂ ಕಡೆಯ ಭಾಷೆಯ ಮೇಲೆ ಮರಾಠಿಯ ಪ್ರಭಾವ ಬಿದ್ದಂತೆಯೇ ಗುಲ್ಬರ್ಗ, ಬೀದರ ಕಡೆಯ ಆಡುನುಡಿಯಲ್ಲಿ ಉರ್ದು ಭಾಷೆಯ ಪ್ರಭಾವವನ್ನು ಗುರುತಿಸಬಹುದು. ಉರ್ದು ಭಾಷೆ ಅಲ್ಲಿನ ಶಬ್ದಭಂಡಾರದ ಮೇಲೆ ಮಾತ್ರವಲ್ಲದೆ ವಾಕ್ಯರಚನೆಯ ಮೇಲೂ ತನ್ನ ಪ್ರಭಾವವನ್ನು ಬೀರಿದೆ. ಪ್ರಧಾನ ವಾಕ್ಯಾಂಶವನ್ನು ಮೊದಲು ಹೇಳಿ ಕಿ ಎಂಬ ಸಂಯೋಜಕಾವ್ಯಯವನ್ನು ಸೇರಿಸಿ ಉದ್ಧೃತ ವಾಕ್ಯಾಂಶವನ್ನು ಹೇಳುವ ಉರ್ದು ಭಾಷೆಯ ಪದ್ಧತಿ ಇಲ್ಲಿನ ಕನ್ನಡದಲ್ಲಿಯೂ ಕಂಡುಬರುತ್ತದೆ. ಉದಾ: ಅವ ಅಂದ ಕಿ ನಾನ್ ಭೀ ನಿಮಿ ಸರಿ ಬರ್‍ತೆ (ಉಸ್ ನೇ ಕಹಾ ಕೀ ಮೈಭೀ ತುಮ್ಹಾರೇ ಸಾಥ್ ಆವೂಂಗಾ) ಉರ್ದು–ಕನ್ನಡ ಮಿಶ್ರಿತ ಸಮಾಸ ಶಬ್ದಗಳು, ಉರ್ದು ಶಬ್ದಕ್ಕೆ ಕನ್ನಡ ಇಸು ಪ್ರತ್ಯಯ ಅಥವಾ ಮಾಡು ಸೇರಿಸಿ ಮಾಡಿದ ಧಾತುಗಳು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ಘೋಲ್ ಮಂದಿ (ತುಂಬ ಮಂದಿ) ಬಾಜೀಮನಿ (ನೆರೆಮನೆ) ಹಟಾಯಿತು (ದೂರಮಾಡು) ರುಕಾಯಿಸು (ತಡೆ) ಡಕಾಸು (ದಣಿಯುವುದು) ಸಕಾಸು (ಸಾಧ್ಯವಾಗು)–ನಿಕಾಲ್‍ಮಾಡು (ಹೊರಡಿಸು) ಇತ್ಯಾದಿ. ಎಷ್ಟೋ ಉರ್ದು ಪ್ರತ್ಯಯಗಳೂ ಆವ್ಯಯಗಳೂ ಇಲ್ಲಿನ ಆಡುನುಡಿಯಲ್ಲಿ ಸೇರಿಕೊಂಡಿವೆ. ಘರ್ ಬರ್ ಕಾ ಮಂದಿ (ಮನೆಯ ಜನರು) ಬೆಣ್ಣೆ ಕಾ ಭಾವ (ಬೆಣ್ಣೆಯ ಬೆಲೆ) ಬಗೀಚೇ ಕಾ ಅಗಿ (ತೋಟದ ಗಿಡ) ಹರ್ ಮನುಷ್ಯ (ಪ್ರತಿಯೊಬ್ಬ ಮನುಷ್ಯ) ಅದರ್ ಬಾದ್ (ಆಮೇಲೆ) ಇತ್ಯಾದಿ ಹ್ರಸ್ವ ಅ ಕಾರಾಂತ ಶಬ್ದಗಳೂ ಕೆಲವು ಕ್ರಿಯಾರೂಪಗಳೂ ವ್ಯಂಜನಾಂತವಾಗಿವೆ. ಉದಾ : ಮಾಡ್‍ತದ್ (ಮಾಡುತ್ತದೆ). ಗಿಂತ ಪ್ರತ್ಯಯ ಇಲ್ಲಿ ಕಿನ ಆಗಿದೆ. ಅವನ್‍ಕಿನ (ಅವನಿಗಿಂತ), ಖೂನಾ (ಪರಿಚಯ) ಬಕ್ಕಳ (ಬಹಳ) ಹಳ್ಳಗ (ನಿಧಾನವಾಗಿ) ಧಮ್ಮಗ (ಜೋರಾಗಿ) ಹಿನಾ (ಇನ್ನೂ) ಫೇಕಿ (ಸಲ) ಸರಿಹೋಗು (ಸಾಯು) ಹತ್ತಿದೆ (ಪ್ರಾರಂಭಿಸಿದೆ) ಪಾರ (ಹುಡುಗ) ಕಳ್ವಿ (ಬತ್ತ) ಮುಂತಾದ ಎಷ್ಟೋ ಶಬ್ದಗಳು ಕನ್ನಡದ ಈ ಪ್ರಭೇದದ ಜಾಯಮಾನಕ್ಕೆ ಸೇರಿ ಹೋಗಿವೆ.

ಒಳನಾಡಿನ ಕನ್ನಡದ ದಕ್ಷಿಣದ ಪ್ರಭೇದಗಳಲ್ಲಿ ಕೊಡಗು, ಮೈಸೂರು, ಕೋಲಾರ ಮುಂತಾದ ಕೆಲವು ಮುಖ್ಯವಾದ ಪ್ರಭೇದಗಳನ್ನು ನಾವು ಗುರುತಿಸಬಹುದು. ಕೊಡಗಿನ ಜೇನುಕುರುಬರು ಆಡುವ ಮಾತಿನಲ್ಲಿ ಮೂರಕ್ಷರದ ಶಬ್ದಗಳಲ್ಲಿ ಎರಡನೆಯ ಅಕ್ಷರದ ಆಕಾರ ದೀರ್ಘವಾಗುವುದು ಕಂಡುಬರುತ್ತದೆ. ಉದಾ: ಜಗಾಲಿ (ಜಗಲಿ) ಕೂದಾಲು (ಕೂದಲು) ಕೆಚ್ಚಾಲು (ಕೆಚ್ಚಲು) ಇತ್ಯಾದಿ. (ಕನ್ನಡದ ಇತರ ಪ್ರಭೇದಗಳಲ್ಲಿ ಈ ಸ್ವರವು ಲೋಪವಾಗುವುದು ಕಂಡುಬರುತ್ತದೆ. ಉದಾ : ಜಗ್ಲಿ ಕೂದ್ಲು, ಇತ್ಯಾದಿ). ಇಲ್ಲಿನ ಆಡುನುಡಿಯಲ್ಲಿ ಚ ಕಾರ, ಸ ಕಾರದೊಂದಿಗೆ ವಿಲೀನಗೊಂಡಿದೆ. ಸೇಳು (ಚೇಳು) ಸಿನ್ನ (ಚಿನ್ನ) ಸಂದ (ಚಂದ) ಇತ್ಯಾದಿ. ಮಚ್ಚ (ಮಂಚ) ಬಿಕ್ಕಿ (ಬಿಂಕಿ) ಮಿಚ್ಚು (ಮಿಂಚು) ಗಿತ್ತ (ಗಿಂತ) ಕುಕ್ಕುಮ (ಕುಂಕುಮ) ಮುಂತಾದುವುಗಳಲ್ಲಿ ಅನುನಾಸಿಕ ಲೋಪ ಗಮನಾರ್ಹವಾಗಿದೆ. ಕ್ರಿಯಾಧಾತುಗಳ ಉ ಕಾರ ವರ್ತಮಾನ ಕಾಲ ಪ್ರತ್ಯಯದ ಮುಂದೆ ಇ ಕಾರವಾಗುತ್ತದೆ. ಕ್ರಿಯಾಧಾತುಗಳ ಉ ಕಾರ ವರ್ತಮಾನ ಕಾಲ ಪ್ರತ್ಯಯದ ಮುಂದೆ ಇ ಕಾರವಾಗುತ್ತದೆ. ಉದಾ ; ಇಡಿತೀನಿ (ಇಡುತ್ತೇನೆ). ಇ ಕಾರಾಂತ ಧಾತುಗಳ ಭೂತಕಾಲ ರೂಪದಲ್ಲಿ ದ ಪ್ರತ್ಯಯದ ಬದಲಿಗೆ ಎಷ್ಟೋ ಕಡೆ ತ ಪ್ರತ್ಯಯ ಕಂಡುಬರುತ್ತದೆ. ಕುಡ್‍ತೆ (ಕುಡಿದೆ) ಕ್ರಿಯಾಪದಗಳಲ್ಲಿ ಪುರುಷ ಮತ್ತು ವಚನಸೂಚಕ ಪ್ರತ್ಯಯಗಳಿದ್ದರೂ ವಾಡಿಕೆಯಲ್ಲಿ ಹೆಚ್ಚಾಗಿ ಇಗೆ ಎಂಬ ಒಂದೇ ಪ್ರತ್ಯಯವಿದೆ. ನಾನು ಕುಡಿತಿಗೆ, ನಾವು ಕುಡಿತಿಗೆ, ನೀವು ಕುಡಿತಿಗೆ ಅವ ಕುಡಿತಿಗೆ ಇತ್ಯಾದಿ. ಸಪ್ತಮೀ ವಿಭಕ್ತಿ ರೂಪ ಲು ಎಂದಿದ್ದು ದೇಶಾಲು (ದೇಶದಲ್ಲಿ) ಗಾಡೀಲು (ಗಾಡಿಯಲ್ಲಿ) ಮುಂತಾದ ರೂಪಗಳಿವೆ.

ಮೈಸೂರಿನ ಆಸುಪಾಸು ಪ್ರದೇಶದ ಆಡುನುಡಿಯಲ್ಲಿ ನಿಷೇಧಾರ್ಥ ಕ್ರಿಯಾರೂಪದ ಲ ಕಾರಕ್ಕೆ ಬದಲಾಗಿ ನ ಕಾರ ಕಂಡುಬರುತ್ತದೆ. ಉದಾ : ಬರ್‍ನಿಲ್ಲ (ಬರಲಿಲ್ಲ) ಹೋಗ್‍ನಿಲ್ಲ (ಹೋಗಲಿಲ್ಲ) ಇತ್ಯಾದಿ. ಕೊಳ್ಳು ಎನ್ನುವ ಕ್ರಿಯಾಪದದ ಭೂತಕಾಲ ರೂಪದಲ್ಲಿ ಮೂರ್ಧನ್ಯ ಧ್ವನಿ ಕಂಡುಬರುವುದಿಲ್ಲ. ಮಾಡ್‍ಕಂದೆ (ಮಾಡಿಕೊಂಡೆ) ತಗಂದು (ತೆಗೆದುಕೊಂಡು). ಓಣ ಪ್ರತ್ಯಯಕ್ಕೆ ಬದಲಾಗಿ ಮ ಪ್ರತ್ಯಯವಿದೆ. ಹಾಕ್‍ಮ (ಹಾಕೋಣ) ಹೋಗ್‍ಮ (ಹೋಗೋಣ) ಇತ್ಯಾದಿ. ಉ ಕಾರಾಂತ ಭೂತ ಕೃದಂತ ಇಲ್ಲಿ ಇ ಕಾರವಾಗಿದೆ. ಕೊಟ್ಟಿ (ಕೊಟ್ಟು) ತಿಂದಿ ಬಂದೆ (ತಿಂದು ಬಂದೆ) ಇತ್ಯಾದಿ, ಇ, ಎ ಕಾರಗಳು ಪರವಾದಾಗ ಕ ಕಾರವು ಚ ಕಾರವಾಗುವುದೂ ಗ ಕಾರ ಜ ಕಾರ ವಾಗುವುದೂ ಇಲ್ಲಿನ ಕೆಲವು ಪ್ರಭೇದಗಳಲ್ಲಿ ಕಂಡುಬರುತ್ತವೆ. ಚಿವಿ (ಕಿವಿ) ಜಿಣಿ (ಗಿಣಿ) ಜೆಲ್ಲು (ಗೆಲ್ಲು) ಇತ್ಯಾದಿ. ಸ ಕಾರ ಇ ಕಾರ ಎ ಕಾರಗಳು ಪರವಾದಾಗ ಶ ಕಾರವಾಗುವುದೂ ಕೆಲವಡೆ ಕಾಣಬರುತ್ತದೆ. ಶಿಟ್ಟು (ಸಿಟ್ಟು), ಶಿಮ್ಮ (ಸಿಂಹ) ಇತ್ಯಾದಿ, ಜ ಕಾರ ಸ್ವರಗಳ ಮಧ್ಯದಲ್ಲಿಯೂ ಬಂದು ಮಜ (ಮಗ) ನೊಜ (ನೊಗ) ಮುಂತಾದ ರೂಪಗಳು ಸಿದ್ಧಿಸುತ್ತವೆ.

ಕೋಲಾರ ಜಿಲ್ಲೆ ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದರೂ ಅಲ್ಲಿನ ಆಡುನುಡಿಯಲ್ಲಿ ಉತ್ತರದ ಕರ್ನಾಟಕದಂತೆ ಚ ಕಾರ ಜ ಕಾರಗಳಲ್ಲಿ ವರ್ತ್ಸ್ಯ ಧ್ವನಿಯನ್ನು ಗಮನಿಸಬಹುದು. ಕ್ರಿಯಾಪದದ ಭೂತಕಾಲ ರೂಪದ ಪುರುಷವಾಚಕ ಪ್ರತ್ಯಯಗಳಲ್ಲಿನ ನ ಕಾರ ಉಳಿದಿದೆ. ಮಾಡಿದ್ನು, ಬಂದ್ನು ಬನ್ನು ಇತ್ಯಾದಿ ಇ ಕಾರಾಂತ ಧಾತುಗಳ ಅಂತ್ಯ ಇಕಾರವು ವರ್ತಮಾನ ಕಾಲಪ್ರತ್ಯಯ ಪರವಾದಾಗ ಉ ಕಾರವಾಗುತ್ತದೆ. ಕುಡುತಿನಿ (ಕುಡಿಯುತ್ತೇನೆ) ಬರಲಿಕ್ಕೆ, ಇಡಲಿಕ್ಕೆ ಮುಂತಾದೆಡೆಗಳಲ್ಲಿ ಬರುಕು ಇಡುಕ ರೂಪಗಳಿವೆ. ಕೊಯ್ಯು, ಬಯ್ಯು ಮುಂತಾದ ಧಾತುಗಳ ಯ ಕಾರಗಳು ವ ಕಾರಗಳಾಗುತ್ತವೆ. ಉದಾ: ಕೊವ್‍ತಿನಿ, ಬವ್‍ತಿನಿ ಇತ್ಯಾದಿ. ನಿಷೇಧಾರ್ಥ ಕ್ರಿಯಾಪದ ತೆಲುಗಿನಂತೆ, ತೆಳೀದು (ತಿಳಿಯದು) ಎಂಬ ರೂಪದಲ್ಲಿದೆ. ಸಹಾಯಕ ಕ್ರಿಯಾಪದವಾಗಿ ಇಕ್ಕು ಅಟ್ಟು ಧಾತುಗಳು ಬಳಕೆಯಲ್ಲಿವೆ. ಮಾಡಿಕ್ಕಿದ್ನಿ ಇತ್ಯಾದಿ. ದ್ವಿತೀಯ ವಿಭಕ್ತಿ ಪ್ರತ್ಯಯ ವ ಎಂದಾಗಿದೆ. ಮನೆವ ನೋಡ್‍ದ್ನಿ, (ಮನೆಯನ್ನು ನೋಡಿದೆನು). ತುಲನಾತ್ಮಕ ಪ್ರತ್ಯಯ ಇಂಥ ಪ್ರಭೇದದಲ್ಲಿ ಕಾನ ಎಂದಾಗಿದೆ. ಅವನ್‍ಕಾನ (ಅವನಿಗಿಂತ) ತೆಲುಗು ಶಬ್ದಗಳು ಇಲ್ಲಿನ ಆಡುನುಡಿಯಲ್ಲಿ ತುಂಬಾ ಸಂಖ್ಯೆಯಲ್ಲಿ ಸೇರಿಕೊಂಡಿದೆ ಎಂಬುದಕ್ಕೆ ಗೋರು (ಉಗುರು) ಪೆದುವು (ತುಟಿ) ಸದು (ಓದು) ಎಕ್ಕು (ಏರು) ಎದುಕು (ಹುಡುಕು) ಮುಂತಾದ ಹಲವಾರು ಉದಾಹರಣೆಗಳನ್ನು ಕೊಡಬಹುದು.

ಹೀಗೆ ದೇಶ, ಕಾಲ ಮತ್ತು ಸಮಾಜಕ್ಕನುಗುಣವಾಗಿ ಆಡುನುಡಿಯಲ್ಲಿ ನೂರಾರು ಪ್ರಭೇದಗಳಿರುವುದು ಜೀವಂತ ಭಾಷೆಯ ಲಕ್ಷಣ. ಆಡುನುಡಿಯ ವೈವಿಧ್ಯಗಳಿಂದ ಕನ್ನಡ ಭಾಷೆ ಶೋಭಿತವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. (ಯು.ಪಿ.ಯು.)

**ಕನ್ನಡ ರಂಗಭೂಮಿ :** ಕನ್ನಡ ರಂಗಭೂಮಿಯ ಉಗಮ ಎಂದು ಹೇಗೆ ಆಯಿತೆಂಬುದು ಸ್ಪಷ್ಟವಾಗಿಲ್ಲವಾದರೂ ಇದರ ಪರಂಪರೆ ಅತ್ಯಂತ ಪ್ರಾಚೀನವಾದ ದ್ದೆಂಬುದರಲ್ಲಿ ಸಂದೇಹವಿಲ್ಲ. ದೊರೆತಿರುವ ಕನ್ನಡ ನಾಟಕಗಳಲ್ಲಿ ತುಂಬ ಹಳೆಯದು ಚಿಕ್ಕದೇವರಾಜರ ಆಸ್ಥಾನದಲ್ಲಿದ್ದ ಸಿಂಗರಾರ್ಯ ರಚಿಸಿದ 'ಮಿತ್ರವಿಂದಾ ಗೋವಿಂದ'. ಇದು 17ನೆಯ ಶತಮಾನದ ಅಂತ್ಯಭಾಗದಲ್ಲಿ ರಚಿತವಾದ ಕೃತಿ; ಶ್ರೀಹರ್ಷನ ರತ್ನಾವಳೀ

ನಾಟಕದ ಕನ್ನಡ ರೂಪ. ಒಂದು ದೃಷ್ಟಿಯಿಂದ, ಇದು ಮೂಲಕೃತಿಯಷ್ಟೂ ತೃಪ್ತಿಕೊಡಲಾರದ ಕನ್ನಡರೂಪವೆಂದು ಹೇಳಬಹುದು. ಇದಕ್ಕಿಂತ ಪ್ರಾಚೀನವಾದ ಕನ್ನಡ ನಾಟಕ ದೊರೆತಿಲ್ಲ ಎನ್ನುವುದರಿಂದಲೇ ಇದಕ್ಕೆ ಹಿರಿಮೆ ಪ್ರಾಪ್ತವಾಗಿದೆ. ದೊರೆತಿಲ್ಲ ಎಂದರೆ ಇರಲಿಲ್ಲ ಎಂದು ಹೇಳಿದಂತಲ್ಲ. ಪ್ರಾಚೀನ ಕನ್ನಡ ಸಾಹಿತ್ಯದ ಶಾಸನಗಳಲ್ಲಿ ನಾಟಕದ ಪ್ರಸ್ತಾಪ ಮತ್ತೆ ಮತ್ತೆ ಕಾಣಸಿಗುತ್ತದೆ.

**ಪ್ರಾಚೀನ ನಾಟಕಶಾಲೆಗಳು :** ಕನ್ನಡ ನಾಡಿನಲ್ಲಿ ಹಿಂದೆ ಅನೇಕ ನಾಟಕ ಶಾಲೆಗಳಿದ್ದುವೆಂದು ತಿಳಿಯಲು ಆಧಾರಗಳಿವೆ. ಮೈಸೂರಿನ ಕಂಠೀರವ ನರಸರಾಜರ (1638–59) ಅರಮನೆಯಲ್ಲಿ ಮನೋಹರವಾದ ನಾಟಕಶಾಲೆ ಇತ್ತೆಂದು ಆ ರಾಜರ ಚರಿತ್ರೆಯನ್ನು ರಚಿಸಿದ ಗೋವಿಂದವೈದ್ಯ ತನ್ನ ಕಾವ್ಯದಲ್ಲಿ ಹೇಳಿದ್ದಾನೆ. ಕೆಳದಿಯ ವೆಂಕಟಪ್ಪ ನಾಯಕ (1582–1620) ತನ್ನ ಇಕ್ಕೇರಿಯರಮನೆಯೊಳ್ ಚಿತ್ರಕರ ರಚನಾಕೌಶಲ್ಯದಿಂ ನಾಟಕಶಾಲೆಯಂ ನಿರ್ಮಿಸಿದನ್' ಎಂದು ಲಿಂಗಣ್ಣ ಕವಿಯ ಕೆಳದಿನೃಪವಿಜಯದಲ್ಲಿ ಖಚಿತವಾದ ಮಾತಿದೆ. ಅದಕ್ಕಿಂತ ನೂರು ವರ್ಷಗಳ ಹಿಂದೆ, ಕವಿ ರತ್ನಾಕರವರ್ಣಿ ತನ್ನ ಭರತೇಶವೈಭವ ಕಾವ್ಯದ ಪೂರ್ವನಾಟಕ ಸಂಧಿ, ಉತ್ತರನಾಟಕ ಸಂಧಿಗಳಲ್ಲಿ ಶೃಂಗಾರಮಯವಾದ ನಾಟಕಶಾಲೆಯ ವರ್ಣನೆಯನ್ನು ಕೊಡುತ್ತಾನೆ. ವಿಜಯನಗರ ಸಾಮ್ರಾಜ್ಯದ ಸಂಪತ್ಸಮೃದ್ಧಿಯ ಕಾಲದಲ್ಲಿಯಂತೂ ಕೃಷ್ಣದೇವರಾಯನ ರಾಜಧಾನಿಯಲ್ಲಿದ್ದ ಪಟ್ಟದ ನಾಟಕಶಾಲೆಯಲ್ಲದೆ ಇಕ್ಕೇರಿ, ತಂಜಾವೂರು ಮೊದಲಾದ ಪ್ರಾದೇಶಿಕ ಕೇಂದ್ರಗಳಲ್ಲೂ ರತ್ನಖಚಿತವಾದ ಅಲಂಕಾರಗಳನ್ನು ಹೊಂದಿದ್ದ ನಾಟಕಶಾಲೆಗಳಿದ್ದುವೆಂದು ಬಿ.ಎ. ಸಾಲೆತೊರೆಯವರು ಹೇಳಿದ್ದಾರೆ. ಇದೆಲ್ಲಕ್ಕಿಂತ ಹಿಂದೆ 1045ರಲ್ಲಿ ಧಾರವಾಡದ ಸಮೀಪದ ಮುಳಗುಂದದಲ್ಲಿ (ಇಂದು ಮುಗದ ಎಂಬ ಹಳ್ಳಿ) ನಿಲ್ಲಿಸಿ ಇಂದಿಗೂ ಬಿಸಿಲು ಮಳೆಗಾಳಿಗಳಿಗೆ ಮೈಯೊಡ್ಡಿ ನಿಂತಿರುವ ದೊಡ್ಡದೊಂದು ಶಿಲಾಫಲಕ –

ಶ್ರೀಮನ್ಮಹಾಸಾಮನ್ತಂ ಮಾರ್ತಾಣ್ಡಯ್ಯಂ
ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ
ನಾಟಕಶಾಲೆಯಂ ಮಾಡಿಸಿ, ತನ್ನ ಕೀರ್ತಿಶಿಳಾಸ್ತಂಭಮಂ
ಆಚಂದ್ರಾರ್ಕತಾರಂಬರಂ ನಿಲಿಸಿದಂ

ಎಂದು 11ನೆಯ ಶತಮಾನದ ಕನ್ನಡ ನಾಟಕಶಾಲೆಯ ಕತೆಯನ್ನು ಹೇಳುತ್ತಿದೆ.

**ನಾಟಕದ ಪ್ರಾಚೀನತೆ :** ನಾಟಕ ಎಂಬ ಮಾತೂ ಕನ್ನಡನಾಡಿನಲ್ಲಿ ತುಂಬ ಹಳೆಯದು. ಗೋವಿಂದವೈದ್ಯ, ರತ್ನಾಕರವರ್ಣಿಗಳ ಕೃತಿಗಳಲ್ಲಿ ನಾಟಕ ಎಂಬ ಪದವೂ ನಾಟಕದ ವರ್ಣನೆಯೂ ಕಂಡುಬರುತ್ತವೆ. 17ನೆಯ ಶತಮಾನದ ಆದಿಭಾಗದಲ್ಲಿದ್ದ ಭಟ್ಟಾಕಳಂಕ. ಕಾವ್ಯನಾಟಕಾಲಂಕಾರಕಲಾಶಾಸ್ತ್ರ ವಿಷಯಾಣಾಂಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಮುಪಲಭ್ಯಮಾನತ್ವಾತ್'–ಎಂದು ಬರೆದಿದ್ದಾನೆ. ಕುಮಾರವ್ಯಾಸ ಕವಿ ನಾಟಕ ಎಂಬ ಮಾತನ್ನು ಅನೇಕ ಕಡೆಗಳಲ್ಲಿ ಉಪಯೋಗಿಸಿದ್ದಾನೆ. ಬಸವಪುರಾಣವನ್ನು ರಚಿಸಿದ ಭೀಮಕವಿ, 'ಶೃಂಗಾರಗೊಂಡು ಒಡವೆಗಳಿಂದ ಅಲಂಕೃತವಾಗಿ ನಾಟಕಕ್ಕಳವಟ್ಟು ರೀತಿಯೊಳೊಪ್ಪಿ ನಡೆತಂದ ಚದುರೆ' ಸೋಮಲದೇವಿಯನ್ನು ವರ್ಣಿಸಿದ್ದಾನೆ. ಶೃಂಗಾರ ರತ್ನಾಕರವನ್ನು ರಚಿಸಿದ ಕವಿ ಕಾಮದೇವನೂ ಪೇಳ್ದಭಿನಯಿಸಿ ನಾಟಕಂಗಳನಂತುಂ ಪಡೆದಲ್ಲದೆ ಬರ್ಕುಮೆ ಎಂದು ನಾಟಕದ ಬಗ್ಗೆ ನುಡಿದಿದ್ದಾನೆ. ಮಹಾದೇವಿ, ರೂಪಾದೇವಿ ಎಂಬ ರಾಣಿಯರು ಸೀತೆ–ರಾಮರಾಗಿ ಕೃತಕ ನಾಟಕವನ್ನಾಡಿದ ರೀತಿಯನ್ನು ಪಂಚತಂತ್ರ ಕೃತಿಕಾರ ದುರ್ಗಸಿಂಹ ತಿಳಿಸಿದ್ದಾನೆ. ಹೆಸರಾಂತ ಹೊಯ್ಸಳ ದೊರೆ ವೀರಬಲ್ಲಾಳ ಕಲಾವಂತನಾದ ನಟನಾಗಿದ್ದನೆಂದು ಸೊರಬದ ಶಿಲಾಶಾಸನದಲ್ಲಿ (1208) ಹೇಳಿದೆ. ನೀಲಾಂಜನೆ ನಾಟಕ ಮಾಡಿದುದರ ಬಣ್ಣನೆ ಪಂಪನ ಆದಿಪುರಾಣದಲ್ಲಿದೆ. ಪೊನ್ನಕವಿ ತನ್ನ ಶಾಂತಿಪುರಾಣದಲ್ಲಿ ಚಂದ್ರೋದಯವನ್ನು ನಾಟಕಾರಂಭಕ್ಕೆ ಹೋಲಿಸುತ್ತ, ನಕ್ಷತ್ರಗಳು ಸೂತ್ರಧಾರ ಪೂಸಿದ ಪುಷ್ಪಗಳೆಂದೂ ಸರಿದು ಹೋಗುತ್ತಿರುವ ಕತ್ತಲೆಯ ಮೇಲೇರುತಿರುವ ತೆರೆಯೆಂದೂ ರಾತ್ರಿಯ ನಾಲ್ಕು ಪ್ರಹರಗಳು ನಾಟಕದ ನಾಲ್ಕು ಅಂಕಗಳು ಎಂದೂ ವರ್ಣಿಸಿದ್ದಾನೆ. ಅಜಿತಪುರಾಣದ ಕರ್ತೃ ರನ್ನ ಕವಿಯ ಕಾವ್ಯದಲ್ಲಿ ನಾಟಕವಿಧಿಯ ವಿವರಣೆಯನ್ನು ನೋಡಬಹುದು. ನಾಟಕವೆಂಬ ಹೆಸರಿನ ಮನೋರಂಜನೆಯು ಕನ್ನಡ ನಾಡಿನಲ್ಲಿ 10ನೆಯ ಶತಮಾನದಿಂದಲಾದರೂ ಇದ್ದಿತೆಂದು ನಂಬಲು ಇವೆಲ್ಲ ಆಧಾರಗಳುಂಟು. ಭಾರತದ ಉಳಿದ ಭಾಷೆಗಳಲ್ಲಿ ನಾಟಕದ ಹಳಮೆಯ ಬಗೆಗೆ ಇಷ್ಟೊಂದು ಖಚಿತವಾದ ಆಧಾರ ಸಿಕ್ಕಿಲ್ಲ.

**ಪ್ರಾಚೀನ ನಾಟಕಗಳ ಸ್ವರೂಪ :** ಅಂದಿನ ಆ ನಾಟಕಗಳ ರೂಪುರೇಷೆಗಳೇನು ಎಂಬ ಪ್ರಶ್ನೆಗೆ ನಿಶ್ಚಿತವಾದ ಉತ್ತರವಿನ್ನೂ ದೊರೆತಿಲ್ಲ. ಗೋವಿಂದವೈದ್ಯನ ಅಥವಾ ರತ್ನಾಕರವರ್ಣಿ ಬಣ್ಣಿಸಿದ ನಾಟಕದ ವರ್ಣನೆಯನ್ನು ಗಮನಿಸಿದರೆ, ಅದು ನಾಟ್ಯ ಅಥವಾ ಭಾವಪ್ರಧಾನವಾದ ನೃತ್ಯದ ವರ್ಣನೆಯೇನೋ ಎನಿಸುತ್ತದೆ. ರತ್ನಾಕರ ಚಿತ್ರಿಸಿದ ತಾಳ ಹಿಡಿದ ಸೂತ್ರಧಾರನೂ ಬಸವಪುರಾಣದ ನಾಟಕ ಪಂಡಿತನಂತೆ ಇಂದಿನ ಯಕ್ಷಗಾನದ ಭಾಗವತನನ್ನೇ ಹೋಲುತ್ತಾನೆ. ಇಟ್ಟು ಜಡೆಬೊಲ್ಲ ಹವಮರ್ದಿರೆ, ತೊಟ್ಟು ಕಂಚುಕಮಂ ದುಕೂಲವನುಟ್ಟು, ಚಲ್ಲಣಮಂ ರಚಿಸಿ, ಮಣಿಖಚಿತ ಸಿಂಜಿನಿಯ ಕಟ್ಟಿಕೊಂಡು– ಬಸವಪುರಾಣದಲ್ಲಿ ನಾಟಕವಾಡಿದ ಸೋಮಲದೇವಿಯ ವರ್ಣಿಕೆಯ ಅಲಂಕಾರವೂ ಆಕೆ ನರ್ತಕಿ ಎಂದೇ ಸೂಚಿಸುತ್ತವೆ. ಕವಿ ಕಾಮದೇವನೂ ನಾಟಕವೆಂದರೆ ಅಭಿನಯ ಪ್ರಧಾನವಾದ ನೃತ್ಯಕಲೆಯೆಂದು ಸೂಚಿಸುವಂತಿದೆ. ಆದಿಪಂಪ ನೀಲಾಂಜನೆಯ ನೃತ್ಯವನ್ನು ಬಣ್ಣಿಸುವಾಗ ನಾಟಕ ಎಂಬ ಪದವನ್ನು ಪ್ರಯೋಗಿಸುತ್ತಾನೆ. 'ಕೃತಾನುಕರಣಮೆ ನಾಟಕಮಪ್ಪುದು' ಎಂದು ಆತ ಹೇಳಿದರೂ ಆ ಅನುಕರಣದಲ್ಲಿ ಪಾತ್ರಕ್ಕೆ ಆಡುವ ಮಾತಿದೆಯೇ ಎಂಬುದು ಸ್ಪಷ್ಟವಾಗುವುದಿಲ್ಲ. ಈ ಎಲ್ಲದರಿಂದಾಗಿ, ಭರತೇಶವೈಭವ ಕಾವ್ಯದ ಜಲಕನ್ನಿಕಾನಾಟ್ಯ, ದಿಕ್ಕನ್ನಿಕಾನಾಟ್ಯಗಳಂತೆ ಅಭಿನಯ ಪ್ರಧಾನವಾದ ನೃತ್ಯಗಳೇ ಕನ್ನಡದ ಪ್ರಾಚೀನ ನಾಟಕಗಳಾಗಿದ್ದಿರಬೇಕು ಎನಿಸುತ್ತದೆ. ಅಭಿನವ ಮಂಗರಾಜನ ಅಭಿನವಾಭಿದಾನ ಎಂಬ ನಿಘಂಟಿನಲ್ಲಿಯೂ (1378) ನಾಟಕಕ್ಕೆ ಇದೇ ಅರ್ಥವನ್ನು ತರುವ ವಿವರಣೆ ಇದೆ: ನೃತ್ಯದೊಳು ಹಸ್ತಾಂಗ ದೃಷ್ಟಿಗತಿ ಪದ್ಧತಿಯೊಳಾಡೆ ನಾಟಕಮೆನಿಕ್ಕು.

ಈ ಎಲ್ಲ ಮಾತುಗಳನ್ನೂ ವಿವೇಚಿಸಿದಾಗ, ಕೆ. ಜಿ. ಕುಂದಣಗಾರರು ಬರೆದಂತೆ, ಕನ್ನಡನಾಡಿನ ಪ್ರಾಚೀನ ನಾಟಕ ಇಂದಿನ ಕಥಕ್ಕಳಿಯಂತೆ, ಭಾವ ಮತ್ತು ಗೀತ ಪ್ರಧಾನವಾದ ಆಡುಮಾತಿಲ್ಲದ ಒಂದು ನೃತ್ಯ ಪ್ರಕಾರವಾಗಿರಬೇಕು ಎನಿಸುತ್ತದೆ. ಅಂದಿನ ರಂಗಭೂಮಿಗೆ ಆಶ್ರಯವಿತ್ತ ರಾಜಾಸ್ಥಾನಗಳಲ್ಲಿ ಸಂಕೇತ ಪ್ರಧಾನವಾದ ಇಂಥ ಪ್ರಯೋಗಗಳೇ ಹೆಚ್ಚು ಪ್ರಿಯವಾಗಿ, ಆಡುಮಾತಿನ ನಾಟಕಗಳು ಕಡಿಮೆ ಇದ್ದಿರಬೇಕು.

ಇದರ ಜೊತೆಗೆ ಕನ್ನಡ ರಾಯರ ಆಸ್ಥಾನಗಳಲ್ಲಿ ಆಡುಮಾತಿನ ನಾಟಕಗಳನ್ನೂ ಆಡುತ್ತಿದ್ದರು ಎನ್ನುವುದಕ್ಕೆ ಕೆಲವೊಂದು ಆಧಾರಗಳಿವೆ. ಚಿಕ್ಕದೇವರಾಜರ ಆಸ್ಥಾನದಲ್ಲಿ ಮಿತ್ರವಿಂದಾ ಗೋವಿಂದ ಪ್ರದರ್ಶಿತವಾಯಿತು. ಸಂಸ್ಕೃತದಲ್ಲೂ ಆಡುಮಾತಿನ ನಾಟಕಗಳು ಇನ್ನೂ ಹಿಂದಿನ ಕಾಲದಿಂದಲೂ ಆಸ್ಥಾನಗಳಲ್ಲಿ ಪ್ರದರ್ಶಿತವಾಗುತ್ತಿದ್ದುವು. ವಿಜಯನಗರದ ಅರಸ ಕೃಷ್ಣದೇವರಾಯ ಸಂಸ್ಕೃತದಲ್ಲಿ ರಚಿಸಿದ ಜಾಂಬವತೀಕಲ್ಯಾಣಂ ಎಂಬ ನಾಟಕವನ್ನು ಚೈತ್ರೋತ್ಸವದಂದು ನೆರೆದ ಮಹಾಪ್ರಜೆಗಳ ಸಮ್ಮುಖದಲ್ಲಿ ಪ್ರದರ್ಶಿಸಲಾಯಿತು. ಜ್ಯೋತಿರೇಶ್ವರ ಕವಿ ವೇಬರಾಚಾರ್ಯರ ಧೂರ್ತಸಮಾಗಮ ಪ್ರಹಸನವೂ ಆಸ್ಥಾನವನ್ನು ರಂಜಿಸಿದ ಸಂಸ್ಕೃತ ನಾಟಕವೇ.

ಆಡುಮಾತಿನ ಕನ್ನಡ ನಾಟಕಗಳು ಅಂದು ಇದ್ದುವೆ ಎಂಬ ವಿಷಯವನ್ನು ಎಂ. ಗೋವಿಂದಪೈಯವರು ಪರಿಶೀಲಿಸುತ್ತಾ ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಸೂಚಿತವಾದ ಸುಭದ್ರಾಹರಣ ಮತ್ತು ಪ್ರಭೋದಚಂದ್ರ ಇವು ಕನ್ನಡ ನಾಟಕಗಳಾಗಿದ್ದಿರ ಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಕಾಳಿದಾಸನ ವಿಕ್ರಮೋರ್ವಶೀಯದ ಒಂದು ಪದ್ಯದ (ಅಂಕ 1 ಪದ್ಯ 3) ಹಾಗೂ ಶ್ರೀಹರ್ಷನ ನಾಗಾನಂದದ ಮತ್ತು ಭವಭೂತಿಯ ಮಾಲತೀಮಾಧವದ ಕೆಲವು ಪದ್ಯಗಳ ಕನ್ನಡ ರೂಪಗಳಿವೆ. ಛಂದಾನುಶಾಸನದ ಕರ್ತೃ ಜಯಕೀರ್ತಿ ಹೇಳಿದ ಪ್ರತಿಥಂ ಕರ್ಣಾಟಮಾಲತೀಮಾಧವ ಪ್ರಭೃತಿಕಾವ್ಯೇ ಎಂಬ ಮಾತಿನಿಂದ ಭವಭೂತಿಯ ಆ ನಾಟಕ ಕನ್ನಡಕ್ಕೆ ಅನುವಾದವಾಗಿದ್ದಿರಬಹುದೆಂದು ಸಂಶೋಧಕರು ಭಾವಿಸುತ್ತಾರೆ. ಹೀಗೆ 10ನೆಯ ಶತಮಾನದಿಂದ ಬಳಕೆಗೆ ಬಂದ ನಾಟಕ ರಾಜಾಸ್ಥಾನದಲ್ಲಿ ತುಂಬ ಪ್ರಿಯವೆನಿಸಿದ್ದ ನೃತ್ಯಪ್ರಕಾರಗಳನ್ನಲ್ಲದೆ ಸಂಸ್ಕೃತನಾಟಕಗಳ ಕನ್ನಡ ರೂಪಗಳನ್ನು ಒಳಗೊಂಡಿದ್ದಿರಬೇಕು.

**ದೇಸೀಪರಂಪರೆ :** ಹಿಂದೆ ಹೇಳಿದ್ದು ರಾಜಾಶ್ರಯದಲ್ಲಿದ್ದ ರಂಗಭೂಮಿಯ ನಾಟಕಗಳ ಮಾತು; ಆದರೆ ಜನಪದ ರಂಗಭೂಮಿ ಅದಕ್ಕಿಂತ ಹಳೆಯದು. ಮೆಟ್ಟಲು ಮೆಟ್ಟಲಾಗಿ ಕಾಲಮಾನದಲ್ಲಿ ಹಿಂದೆ ಹಿಂದೆ ಹೋಗಿ ಪರೀಕ್ಷಿಸಿದರೆ ಕನ್ನಡ ನಾಡಿನ ಜನಪದ ರಂಗಭೂಮಿ ಸಾವಿರ ವರ್ಷಕ್ಕಿಂತ ಹಿಂದಿನದು ಎಂದು ತಿಳಿಯುತ್ತದೆ. ದಶಾವತಾರದ ಮಾತನ್ನೇ ಎತ್ತಿಕೊಳ್ಳೋಣ. 1812ರಲ್ಲಿ ಧರ್ಮಸ್ಥಳದ ಯಕ್ಷಗಾನಮೇಳವೊಂದು ಮೈಸೂರಿನ ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿದ್ದ ರಾಜಾಶ್ರಯ ಪಡೆಯಿತು. ಅದಕ್ಕಿಂತ ಹಿಂದೆ, 17ನೆಯ ಶತಮಾನದ ಉತ್ತರಾರ್ಧದಲ್ಲಿ ಬಿದನೂರಿನ ವೀರಭದ್ರನಾಯಕ ದಶಾವತಾರ ನಾಟಕವೊಂದನ್ನು ಬಿಜಾಪುರದ ಬಾದಷಹಾನ ಸಮ್ಮುಖದಲ್ಲಿ ಆಡಿತೋರಿಸಿ, ರಂಜನೆಗೊಂಡ ಆತನಿಂದ ತನ್ನ ಶತ್ರುಗಳನ್ನು ಓಡಿಸಲು; ಸಹಾಯ ಪಡೆದನಂತೆ, 1648ರಲ್ಲಿ ಗೋವಿಂದವೈದ್ಯ ಕವಿ ರಚಿಸಿದ ಕಂಠೀರವ ನರಸರಾಜವಿಜಯದಲ್ಲಿ 'ದಶಾವತಾರ'ದ ಮಾತಿದೆ. ಯಕ್ಷಗಾನ ಒಂದು ವಿಶಿಷ್ಟ ಸಂಗೀತಪದ್ಧತಿ ಎಂಬುದಾಗಿ ಗೋವಿಂದ ದೀಕ್ಷಿತರು 1628ರಲ್ಲಿ ರಚಿಸಿದ ಸಂಗೀತ ಸುಧೆಯಲ್ಲಿ ಉಲ್ಲೇಖವಿದೆ. 1577ರಲ್ಲಿ ರಚಿತವಾದ ಭರತೇಶವೈಭವದಲ್ಲಿ ಬರುವ ಎಕ್ಕಡಿಗರು ಯಕ್ಷಗಾನಕಲಾವಿದರಿದ್ದಿರಬೇಕೆಂದು ಸಂಶೋಧಕರ ಅಭಿಪ್ರಾಯ. ಕವಿ ಕುಮಾರವ್ಯಾಸ 'ನಾಡಾಡಿಗಳ ನಾಟಕ'ದ ಮಾತು ಹೇಳಿದ್ದಾನೆ. ನಿಜಗುಣ ಶಿವಯೋಗಿ ಹೇಳಿದ ನಾಟಕದಲ್ಲಿ 'ದಿನದಿನಕ್ಕಭಿನಯಿಸಲ್ಪಕ್ಕ ರಸ ಭಾವ ಸಂವಿಧಾನ ಆಶ್ರಯಗಳೆಂಬ ಚತುರ್ವಿಧ ಪ್ರಬಂಧಾಂಶಂಗಳಂ, ಮುಖ ದೃಷ್ಟಿ ಹಸ್ತ ಪಾದಂಗಳಭಿನಯಿಪ ಲಕ್ಷಣಂ

ತಪ್ಪದೆ. ಚತುರ್ವಿಧ ಮೋಹವಂ ಮೆಯ್ವೆತ್ತು ಶುದ್ಧದೇಶೀಯವೆಂಬ ದ್ವಯಮಾ' ವಿವರಗೊಂಡ ನಾಟಕದ ರೀತಿಯನ್ನು ಓದಿದ್ದರೆ ಅದು ಇಂದಿನ ಯಕ್ಷಗಾನದ ಹಳೆಯ ರೂಪವನ್ನು ಕುರಿತು ಹೇಳಿದ ಮಾತೇನೊ ಎನ್ನಿಸುತ್ತದೆ. ದೇಗುಲಗಳ ಆವಾರಗಳಲ್ಲಿದ್ದ ಜಾನಪದ ರಂಗಮಂಟಪಗಳ ಬಗೆಗೆ 1125ರಿಂದ ಮಾಹಿತಿ ಕಾಣಸಿಕ್ಕುವುದೆಂದು ಬಿ.ಎ. ಸಾಲೆತೊರೆಯವರು ಆಧಾರಸಹಿತವಾಗಿ ಬರೆದಿದ್ದಾರೆ. ನೃಪತುಂಗ ಹೇಳಿದ ನಾಪಿಗರಣವೆಂದರೆ ಕನ್ನಡ ಜಾನಪದರಂಗಭೂಮಿಯ ಒಂದು ಪ್ರಕಾರ. 8ನೆಯ ಶತಮಾನದ ಪಟ್ಟದಕಲ್ ಶಿಲಾಶಾಸನದಲ್ಲಿ ಇನ್ನಾತನೆ ನರ್ತಕಂ, ನಟರೊಳಗ್ಗಳಂ ಈ ಭುವನಾಸ್ತ ರಂಗದೊಳೆ ಎಂದು ಕೀರ್ತಿಗೊಂಡ ನಟಸೇವ್ಯ, ಕನ್ನಡ ಜಾನಪದ ರಂಗ ಭೂಮಿಯ ಹೆಸರಾಂತ ಕಲಾವಿದನಿದ್ದಿರಬೇಕೆಂದು ಸಂಶೋಧಕರ ಮತ. ಇವೆಲ್ಲಕ್ಕಿಂತ ಹಿಂದೆ ಸಿಕ್ಕುವ ಆಧಾರವೆಂದರೆ, ಭಾಗವತದ ಹರಿವಂಶಪುರಾಣದಲ್ಲಿ (200–400?) ವಜ್ರನಾಭಾಸುರನ ಸಂಹಾರಕ್ಕಾಗಿ ಕಟ್ಟಿದ ಆಟದ ಅಂಗವಾಗಿ, ಭದ್ರನಟನ ನಾಯಕತ್ವದಲ್ಲಿ ನಡೆದ ಭಾಗವತ ಮೇಳದ ಮಾತು ಎಂದು ಕೆರೋಡಿ ಸುಬ್ಬರಾಯರು ಸೂಚಿಸಿದ್ದಾರೆ. ಕನ್ನಡ ಜಾನಪದದ ಕಲಾವಂತಿಕೆಯ ಮಾತು ಪ್ರಾಚೀನ ತಮಿಳು ಸಾಹಿತ್ಯದಲ್ಲೂ ಬರುತ್ತದೆ. ಪ್ರಸಕ್ತಶಕದ ಮೊದಲ ವರ್ಷಗಳಲ್ಲಿ ರಚಿತವಾದ ಶಿಲಪ್ಪದಿಗಾರಂ ಕಾವ್ಯದಲ್ಲಿ ಚೇರರಾಜನಾದ ಶೆಂಗುಟ್ಟುವನ್ ನೀಲಗಿರಿಗೆ ಬಂದಾಗ, ಅವನ ಮನೋರಂಜನೆಗಾಗಿ ಕರುನಾಟಕದ ನಟಿ ನರ್ತಕಿಯರು ಆಡಿದ ಗೀತಾನೃತ್ಯದ ವರ್ಣನೆಯಿದೆ. ಇಷ್ಟು ಪ್ರಾಚೀನವೂ ವೈಭವಯುಕ್ತವೂ ಆದ ನಮ್ಮ (ದ್ರಾವಿಡರ) ಜನಪದ ರಂಗಭೂಮಿಯ ಪ್ರಭಾವ ಭರತನ ನಾಟ್ಯಶಾಸ್ತ್ರದ ಮೇಲೆ ಬಿದ್ದಿರಬೇಕೆಂದು ಕೃಷ್ಣಶಾಸ್ತ್ರೀಯವರು, ಶ್ರೀರಂಗರು ಅಭಿಪ್ರಾಯಪಟ್ಟಿದ್ದಾರೆ.

ಹಳೆಮೆಯೊಂದೇ ಕನ್ನಡ ರಂಗಭೂಮಿಯ ಹಿರಿಮೆಯಲ್ಲ ಎಂದು, ಕಳೆದ 100–150 ವರ್ಷಗಳ ಕಾಲಾವಧಿಯಲ್ಲಿ ಅದರ ಇತಿಹಾಸವನ್ನು ವಿವೇಚಿಸಿದಾಗ ತಿಳಿದು ಬರುತ್ತದೆ. ಕನ್ನಡ ರಂಗಭೂಮಿ ಮೂರು ಮುಖ ತಳೆದು; ಜನಪದ ರಂಗಭೂಮಿ ಯಲ್ಲಿಯೂ ವೃತ್ತಿನಿರತ (ಪ್ರೊಫೆಷನಲ್) ರಂಗಭೂಮಿಯಲ್ಲಿಯೂ ವಿಲಾಸ (ಅಮೆಚೂರ್) ರಂಗಭೂಮಿಯಲ್ಲಿಯೂ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡು ಬೆಳೆದು ಬಂದಿದೆ.

**ಜನಪದ ರಂಗಭೂಮಿ :** ಕನ್ನಡ ಜನಪದ ರಂಗಭೂಮಿಯ ಮೂಲ ಅಂಶಗಳೂ ದೈವಾರಾಧನೆಯಲ್ಲಿಯೇ ಕಂಡುಬರುತ್ತದೆ. ದೈವವನ್ನೋ ದೆವ್ವವನ್ನೋ ತೃಪ್ತಿಪಡಿಸಿ, ಅದರಲ್ಲಿ ತಮ್ಮ ಏಳಿಗೆಯನ್ನು ಕಂಡುಕೊಳ್ಳುತ್ತಿದ್ದ ಹಳ್ಳಿಗರ ಆರಾಧನೆಯಲ್ಲಿ ಆ ದೈವ ಅಥವಾ ದೆವ್ವದ ಅನುಕರಣ ಅನಿವಾರ್ಯವಾಯಿತು. ಇಂಥ ಅನುಕರಣ ಇಂದಿಗೂ ಕನ್ನಡನಾಡಿನ ಕರಾವಳಿಯ ಹಳ್ಳಿಗಳಲ್ಲಿರುವ ಭೂತಸ್ಥಾನಗಳಲ್ಲಿ ಕೋಲ ಮೊದಲಾದ ಉತ್ಸವಗಳಲ್ಲಿ ಕಂಡುಬರುತ್ತದೆ. ಈ ಅನುಕರಣ ಜನ ನಂಬುವಷ್ಟು ಪ್ರಭಾವಶಾಲಿಯಾಗುವಂತೆ ಮಾಡುವ ಸಲುವಾಗಿ ಬಳಸಿದ ಮುಖವರ್ಣಿಕೆ, ವೇಷಭೂಷಣ, ಅಲಂಕಾರ, ಆಯುಧಾದಿಗಳಿಂದ ಹಿಡಿದು, ಮಾತು ಗೀತೆ ಕುಣಿತಗಳವರೆಗೆ ಎಲ್ಲವೂ ನಾಟಕದ ಮೂಲ ಅಂಶಗಳೇ. ಕನ್ನಡನಾಡಿನಲ್ಲಿ ನಾಟಕದ ಮೂಲಪ್ರಕಾರವೆನಿಸುವ ವೈದ್ಯರ ಕುಣಿತ, ನಾಗನೃತ್ಯಗಳು ಇಂದಿಗೂ ಕರಾವಳಿಯ ಹಳ್ಳಿಗಳಲ್ಲಿ ಆಗಾಗ ನೋಡಸಿಗುತ್ತವೆ.

ನಾಟಕೀಯವಾದ ಈ ಆರಾಧನೆಗಳು ನೋಡುವವರ ಮನಸ್ಸಿಗೆ ರಂಜನೆ ಕೊಡುತ್ತ, ಸ್ಥೂಲವಾದ ಕಥಾವಸ್ತುವನ್ನು ಕ್ರಮೇಣ ಒಳಗೊಂಡುವು. ಸಾಮೂಹಿಕ ನೃತ್ಯಪ್ರಕಾರಗಳೂ ಬಳಕೆಗೆ ಬಂದುವು. ಮಲೆಕುಡಿಯರ ಕುಣಿತ, ಪುರವಂತರ ಕುಣಿತ, ರಾಣಿಯರ ಕೋಲಾಟ, ಬೀರೇದೇವರ ಕುಣಿತ, ವೀರಭದ್ರನ ಕುಣಿತ ಮೊದಲಾದವು ಈ ಬಗೆಯಲ್ಲಿ ಕೆಲವು. ಇಂಥ ಆಟಗಳು ಬೆಳೆದು ನಾಟಕವಾಗುವ ನಡೆಯಲ್ಲಿ ನೃತ್ಯಗೀತೆಗಳೊಂದಿಗೆ ಅಭಿನಯವೂ, ಅಭಿನಯದೊಂದಿಗೆ ಆಯಾ ಪಾತ್ರಗಳ ಮಾತುಗಳೂ ಸೇರಿಕೊಳ್ಳಬೇಕಾಯಿತು. ನೃತ್ಯ–ಗೀತೆಗಳಿಗಿಂತ ಹೆಚ್ಚಾಗಿ ನಾಟಕೀಯವಾದ ಸಂಭಾಷಣೆಗಳಲ್ಲಿ ಪರಿಣತರಾಗಿದ್ದ ನಟ್ಟುವ, ಬಹುರೂಪಿ, ನಕಲಿ, ಹಾಸ್ಯಗಾರರೂ ಹಿಂದೆಯೇ ವೇಷ ಕಟ್ಟಿ ಆಟವಾಡುತ್ತಿದ್ದರು. ಹಿಂದಿನ ನೃತ್ಯಗೀತೆಗಳೊಂದಿಗೆ ಅವರ ಮಾತಿನ ಚಾತುರ್ಯ ಮಿಲನವಾಗಿ, ಕೋಲೆಬಸವ, ಗಂಗೆ–ಗೌರಿ ಸಂವಾದ, ಹಗಲುವೇಷದ ಆಟ ಮೊದಲಾದ ಸರಸವಾದ ಆಟಗಳು (ಅವುಗಳನ್ನು ಇನ್ನೂ ನಾಟಕ ಎನ್ನುವಂತಿರಲಿಲ್ಲ) ಜನಮನವನ್ನು ರಂಜಿಸಿದುವು.

**ದಾಸರ ಆಟ :** ರಂಗಕಲೆ ಇನ್ನೂ ಪ್ರಬುದ್ಧವಾದಾಗ, ನಾಟಕದ ಚೌಕಟ್ಟಿನಲ್ಲಿಯೇ ಬರುವಂಥ ಜಾನಪದ ರಂಗ ಪ್ರಕಾರಗಳು ಮೈತಳೆದು ಬಂದುವು. ಇವುಗಳಲ್ಲಿ ಉತ್ತರ ಮೈಸೂರಿನ ದಾಸರಾಟ ಮುಖ್ಯವಾದುದು. ಗಂಡು ಮತ್ತು ಹೆಣ್ಣುದಾಸರ ಮೇಳವನ್ನೊಳಗೊಂಡ ಈ ಮನೋರಂಜನ ಪ್ರಕಾರದಲ್ಲಿ ರಂಗದ ಮೇಲೆ ನಾಯಕ ಗೊಡ್ಡಿಭೀಮಣ್ಣ, ನಾಯಿಕೆ ಚಿಮನಾ ಮತ್ತು ವಿದೂಷಕ ಜವ್ವಾರಿ ಇವರು ಗಂಡು ಹೆಚ್ಚೋ ಹೆಣ್ಣು ಹೆಚ್ಚೋ ಎಂಬ ವಸ್ತುವಿನ ಮೇಲೆ ಎಲ್ಲೆಲ್ಲಿಂದಲೋ ಎಳೆದು ತಂದ ಆಧಾರಗಳೆನ್ನೆಲ್ಲ ಉಪಯೋಗಿಸಿ ನೋಡುವವರ ಕಣ್ಣು ಮನ ತಣಿಯುವ ರೀತಿಯಲ್ಲಿ ನಾಟಕವಾಡುತ್ತಾರೆ. ನೃತ್ಯ–ಗೀತ ಸಂಭಾಷಣೆಗಳ ಸರಸ ಸಂಗಮವಾದ ಈ ಆಟವೇ ಮಹಾರಾಷ್ಟ್ರದ 'ತಮಾಷಾ' ಆಗಿ ಪರಿವರ್ತನೆಗೊಂಡು, ಅಲ್ಲಿ ಮತ್ತಿಷ್ಟು ಪರಿಷ್ಕಾರಗೊಂಡ ಮೇಲೆ ಉತ್ತರ ಕನ್ನಡ ರಂಗಭೂಮಿಗೆ 'ರಾಧಾನ ಆಟ' ಎಂಬ ಹೆಸರಿನಿಂದ ಹಿಂದಿರುಗಿ ಬಂದಿತು. ಈ ಆಟದಲ್ಲಿಯೂ ನಿರ್ದಿಷ್ಟವಾದ, ರಂಜಕವಾದ ಕಥಾವಸ್ತು ಇಲ್ಲದಿದ್ದರೂ ಮನಸ್ಸನ್ನು ಆಹ್ಲಾದಗೊಳಿಸುವ ಹಾಡುಗಳಿಂದಾಗಿ, ಕುಣಿತದಿಂದ, ತಡೆಯರಿಯದ ಹಾಸ್ಯದಿಂದಾಗಿ, ಪಾತ್ರಪೋಷಣೆಯಿಂದಾಗಿ ಇಂದೂ ಉತ್ತರ ಕರ್ನಾಟಕದಲ್ಲಿ ಜನರ ಅನುರಾಗ ಗಳಿಸಿದೆ.

ಜನಪದ ರಂಗದಲ್ಲಿ ಮಾತುಗಾರಿಕೆಯ ನಾಟಕಗಳನ್ನೇ ಹೋಲುವ ಪ್ರಯೋಗಗಳೆಂದರೆ 40–50 ವರ್ಷಗಳಿಗೆ ಈಚಿನ ಪ್ರಯೋಗಗಳೇ. ರೂಪಸಿಂಗನ ಆಟ, ಮುಕ್ಕುಂದ–ಗೋವಿಂದ, ಸಂಗ್ಯಾ–ಬಾಳ್ಯಾ ಮುಂತಾದ ಜಾನಪದ ನಾಟಕಗಳ ವೈಶಿಷ್ಟ್ಯವೆಂದರೆ, ಈ ಎಲ್ಲ ಆಟಗಳೂ ಸಾಮಾಜಿಕ ಕಥಾವಸ್ತುವನ್ನು ಕುರಿತು ಕಟ್ಟಿದಂಥವು. ಎರಡನೆಯದಾಗಿ ಹಾಡು ಕುಣಿತಗಳಿಗಿಂತ ಸರಸವಾದ ಸಂಭಾಷಣೆಯಲ್ಲಿ ಮೇಲುಗೈ ಪಡೆದಿರುವಂಥವು. ಇವುಗಳ ಮುಖ್ಯವಾದ್ಯ ಡಪ್ಪು. ಇವುಗಳಿಗೆ ಡಪ್ಪಿನಾಟಗಳೆಂದೂ ಹೆಸರು. ಇದೇ ಪರಂಪರೆಯಲ್ಲಿ ಶ್ರೀ ಕೃಷ್ಣ ಪಾರಿಜಾತವೂ ಬರುತ್ತದೆ. ಇದರ ಕಥೆ, ಸಂಗೀತ, ತತ್ತ್ವ ರಂಗಭೂಮಿಗೇ ಕಳೆಕಟ್ಟುವಂಥದ್ದು.

**ಬೊಂಬೆಯಾಟ :** (ಪಪೆಟ್) ಕನ್ನಡ ಜನಪದ ರಂಗಭೂಮಿಯಲ್ಲಿ ಬಹಳ ಜನಾನುರಾಗ ಗಳಿಸಿದ ಒಂದು ಮನೋರಂಜನ ಪ್ರಕಾರವೆಂದರೆ ಬೊಂಬೆಯಾಟ. ಬೊಂಬೆಗಳಿಗೆ ಪಾತ್ರಗಳಂತೆ ವೇಷತೊಡಿಸಿ ಅಲಂಕಾರ ಮಾಡಿ ಅವುಗಳಿಂದ ಮಾನವನ ಚಟುವಟಿಕೆಗಳ ಅನುಕರಣ ಮಾಡಿಸುವ ಕಲೆ ಅದು. ತುಂಬ ಹಿಂದಿನ ಕಾಲದಿಂದ ಈ ಕಲೆ ಅನೇಕ ಪೌರಸ್ತ್ಯ ದೇಶಗಳಲ್ಲಿ ಬೆಳೆದುಬಂದಿದೆ. ಸೂತ್ರದ ಬೊಂಬೆ ಎಂದು ಕರೆಸಿಕೊಳ್ಳುವ ಈ ಕಲೆ ಕನ್ನಡನಾಡಿನಲ್ಲಿ ಹಿಂದಿನ ಕಾಲದಿಂದ ಇದ್ದಿರಬೇಕು. ಗೊಂಬೆಯಾಟವನಾಡಿಸಿದ ಮಹಾಭಾರತವ ಎಂಬ ಪುರಂದರದಾಸರ ನುಡಿ ಅಥವಾ ಡಿಂಭದೊಳು ಪ್ರಾಣವಿರಲು ಕಾಂಬ ಸೂತ್ರಗೊಂಬೆಯಂತೆ ಎಂಬ ಕನಕದಾಸರ ನುಡಿ ಈ ಮಾತಿನ ಸತ್ಯಾರ್ಥವನ್ನು ಸೂಚಿಸುತ್ತದೆ. ಭರತೇಶನ ಆಸ್ಥಾನಕ್ಕೆ ಆಗಮಿಸಿದ ಆಟಗಾರರಲ್ಲಿ ಗೊಂಬೆಯಾಡಿದವರೂ ಇದ್ದರೆಂದು ರತ್ನಾಕರವರ್ಣಿ ಹಾಡಿದ್ದಾನೆ. ವಿಜಯನಗರ ಕಾಲದ ಶಿಲಾಶಾಸನಗಳಲ್ಲಿಯೂ ಬೊಂಬೆಯಾಟವನ್ನು ಕುರಿತು ಮಾತುಗಳಿವೆ.

ಪಾತ್ರಗಳಂತೆ ವೇಷಭೂಷಣಗಳನ್ನು ಧರಿಸಿದ ಬೊಂಬೆಗಳನ್ನು ಸೂತ್ರ ಹಿಡಿದು ಆಡಿಸುವವನೇ ಸೂತ್ರಧಾರ. ರಾಮಾಯಣ, ಮಹಾಭಾರತ, ಭಾಗವತಗಳ ಅನೇಕ ನಾಟಕೀಯ ಕಥಾವಸ್ತುಗಳನ್ನು ಬೊಂಬೆಯಾಟಕ್ಕೆ ಅಳವಡಿಸಿಕೊಳ್ಳಲಾಗಿದೆ. ಬೊಂಬೆಗಳು ಆಡುವಾಗ, ಕುಣಿಯುವಾಗ, ಯುದ್ಧ ಮಾಡುವಾಗ, ಅಭಿನಯ ಮಾಡುವಾಗ ಹಿಮ್ಮೇಳದ ಗೀತೆ ಮಾತು ಶಬ್ದವಿಶೇಷಗಳ ಸಂಯೋಜನೆಯನ್ನು ಪರದೆಯ ಹಿಂದೆ ನಿಂತು ಬೊಂಬೆಗಳ ಅವಯವಗಳಿಗೆ ಕಟ್ಟಿದ ಸೂತ್ರಗಳನ್ನು ತನ್ನ ಕೈಬೆರಳು ಹಸ್ತ ಮುಂಗಟ್ಟುಗಳಿಗೆ ಕಟ್ಟಿಕೊಂಡು ಆಡಿಸುವ ಸೂತ್ರದಾರ ಹಾಗೂ ಮೇಳದವರು ಒದಗಿಸುತ್ತಾರೆ. ಬೆಳಗಾಂವಿಯ ಗೊಂಬೆ ಅನಂತಪ್ಪನವರು ಮನೆತನದಿಂದ ಗೊಂಬೆಯಾಟದ ಕಲೆಯಲ್ಲಿ ಪರಿಣತರು. ಅವರ ಮೇಳದವರು ರಂಗದ ಮೇಲೆ ಒಟ್ಟಿಗೆ ಹತ್ತಾರು ಬೊಂಬೆಗಳನ್ನು ಪಾತ್ರದಲ್ಲಿ ತರುತ್ತಿದ್ದರು. ಸತ್ಯಭಾಮೆಯ ಪಾತ್ರ ವಹಿಸಿದ ಬೊಂಬೆ ಕೃಷ್ಣನ ಮೇಲೆ ಮುನಿಸಿಕೊಂಡು, ತನ್ನ ಆಭರಣಗಳನ್ನೆಲ್ಲ–ಮೂಗುತಿಯನ್ನು ಮೊದಲು ಮಾಡಿ–ಕಳೆದೆಸೆದು ಶೋಕಾಭಿನಯ ಮಾಡುವಾಗ ಪ್ರೇಕ್ಷಕರ ಕಣ್ಣು ಒದ್ದೆಯಾಗುತ್ತಿದ್ದುವೆಂದು ಮುದವೀಡು ಕೃಷ್ಣರಾಯರು ಬರೆದಿದ್ದಾರೆ. ಅತ್ಯಂತ ನಿಷ್ಕೃಷ್ಟವಾದ ಸಾಧನೆಯಿಂದ ಕರಗತ ಮಾಡಿಕೊಂಡಿದ್ದ ಕಲೆ ಅದು. ಹಿಂದಿನ ಕಾಲದ ಜಾತ್ರೆ ಉತ್ಸವಗಳಲ್ಲಿ ಮುಖ್ಯ ಮನೋರಂಜನ ಪ್ರಕಾರವಾಗಿದ್ದ ಬೊಂಬೆಯಾಟ ಇಂದು ಕನ್ನಡನಾಡಿನಲ್ಲಿ ಇಳಿಮುಖವಾಗುತ್ತಿದೆ.

**ತೊಗಲು ಬೊಂಬೆ :** ತೊಗಲುಬೊಂಬೆ ಕನ್ನಡದ ಜನಪದರಂಗದ ಇನ್ನೊಂದು ಪ್ರಮುಖ ಮನೋರಂಜನ ಪ್ರಕಾರ. ಬಲು ತೆಳ್ಳಗಾಗುವಂತೆ ಚರ್ಮವನ್ನು ಹದಮಾಡಿ, ಮಾನವ ಮತ್ತು ಪ್ರಾಣಿಪಕ್ಷಿಗಳ ಆಕಾರ ಬರುವಂತೆ ಕತ್ತರಿಸಿ, ಮಡಿಸಿ ಪಟ್ಟಿಗಳನ್ನು ಹೆಣೆದು, ಕತ್ತರಿಯಿಂದಲೇ ಕುಸುರಿ ಕೆಲಸ ಮಾಡಿ, ಅಂಗ ಉಡುಪು ಕೇಶಗಳನ್ನು ಸೂಚಿಸುವಂತೆ ಬೇರೆ ಬೇರೆ ಬಣ್ಣಗಳನ್ನು ಸೂಕ್ತವಾಗಿ ತುಂಬಿ–ಆ ಆಕೃತಿಯ ಎರಡೂ ತುದಿಗಳನ್ನು ಸೀಳುಬೆತ್ತಕ್ಕೆ ಸಿಕ್ಕಿಸಿದ ಅನಂತರ ಅವನ್ನು ಬಿಳಿಯ ಪರದೆಯ ಹಿಂದೆ ಹಿಡಿದು ಅದರ ಹಿಂದಿನಿಂದ ತೀಕ್ಷ್ಣವಾದ ಬೆಳಕನ್ನು ಬೀಳಿಸುತ್ತಾರೆ. ಪರದೆಯ ಮೇಲೆ ಬಿದ್ದ ಆ ವರ್ಣರಂಜಿತ ಆಕಾರಗಳು–ಹತ್ತು ತಲೆಯ ರಾವಣ, ಸಾವಿರ ಹೆಡೆಯ ಆದಿಶೇಷ, ಬೃಹತ್ತಾಗಿ ಬೆಳೆದು ಆಕಾಶವನ್ನು ಅಳೆಯುವ ತ್ರಿವಿಕ್ರಮ, ಇಂತಹವಂತೂ ಬಲು ಪರಿಣಾಮಕಾರಿಯಾದ ಚಿತ್ರಗಳಾಗುತ್ತವೆ. ನಡೆದಾಡುವಂತೆ, ಹಾರುವಂತೆ, ಕುಣಿಯುವಂತೆ, ಕದನವಾಡುವಂತೆ, ಸಂಭಾಷಿಸುವಂತೆ ಕೈಚಳಕದಿಂದ ಆಡಿಸುತ್ತಾರೆ. ಪರದೆಯ ಮುಂದೆ ಕುಳಿತ ಜನಕ್ಕೆ ವರ್ಣರಂಜಿತ ಚಲನಚಿತ್ರವನ್ನೇ ನೋಡಿದ

ಅನುಭವವಾಗುತ್ತವೆ. ಈ ಆಟದಲ್ಲಿಯೂ ಪೌರಾಣಿಕ ಪ್ರಸಂಗಗಳೇ ಬಹಳ. ಮಾತು ಗೀತ, ಶಬ್ದ ವಿಶೇಷಗಳನ್ನೆಲ್ಲ ಆಟಗಾರ ಮತ್ತು ಅವನ ಮೇಳದವರು (ಎಂದರೆ, ಆತನ ತಂದೆ, ತಾಯಿ, ಹೆಂಡತಿ, ಮಕ್ಕಳು ಮೊದಲಾದವರು) ಪರದೆಯ ಮೇಲಿನ ಪಾತ್ರಗಳಿಗೆ ಸರಿಯಾಗಿ ಹೊಂದಿಸಿ ಹೊರಡಿಸುತ್ತಾರೆ. ಕಿಳ್ಳೆಕೇತರೆಂಬ ಹೆಸರಿನ ಈ ಆಟಗಾರರು ತೊಗಲುಬೊಂಬೆಯ ಕಲೆಯಲ್ಲಿ ನಿಷ್ಣಾತರು. ಈ ಜನದ ಅನೇಕ ಮನೆತನಗಳು ಕನ್ನಡನಾಡಿನ ಬಳ್ಳಾರಿ ಜಿಲ್ಲೆಯಲ್ಲಿ ಇದ್ದುವು. ಬೊಂಬೆಯಾಟದಂತೆಯೇ ತೊಗಲುಬೊಂಬೆಯೂ ಇಂದು ಕನ್ನಡ ಜನಮನದಿಂದ ಮೆಲ್ಲಮೆಲ್ಲನೆ ಮರೆಯಾಗುತ್ತಿದೆ.

**ಮೂಡಲಪಾಯ** : ಕರಾವಳಿಯ ಯಕ್ಷಗಾನವನ್ನು ಸ್ಥೂಲವಾಗಿ ಹೋಲುತ್ತ, ಘಟ್ಟದ ಮೇಲಿನ ಮೈದಾನ ಪ್ರದೇಶಗಳಲ್ಲಿ ಪ್ರಸಿದ್ಧವಾಗಿರುವ ಜನಪದ ರಂಗಭೂಮಿಯ ಮತ್ತೊಂದು ಪ್ರಕಾರ ಮೂಡಲಪಾಯ. ಈ ಆಟಕ್ಕೆ ಅಟ್ಟದಾಟ, ಬಯಲಾಟ, ದೊಡ್ಡಾಟ, ದೊಂಬಿದಾಸರ ಕುಣಿತ, ದಶಾವತಾರದ ಆಟ ಎಂಬ ಹೆಸರುಗಳೂ ಇವೆ. ಪಾತ್ರಗಳ ಹಾಡು, ಕುಣಿತ, ಸಂಭಾಷಣೆ, ಅಭಿನಯಗಳ ದೃಷ್ಟಿಯಿಂದ ಇದರಲ್ಲಿ ಯಕ್ಷಗಾನದಷ್ಟು ನಿಷ್ಕೃಷ್ಟತೆ, ಶಾಸ್ತ್ರೀಯತೆ ಇಲ್ಲ. ಇದರ ಕಲಾವಿದರು ಯಕ್ಷಗಾನದ ಕಲಾವಿದರಂತೆ ಸುಶಿಕ್ಷಿತರಲ್ಲ, ಸುಸಂಸ್ಕೃತರಲ್ಲ ಎಂದರೂ ಸಲ್ಲುತ್ತದೆ. ಆದ್ದರಿಂದ ಪಾತ್ರಪೋಷಣೆಯಲ್ಲಿ ಅರಕೆಯಾಗುತ್ತದೆ. ಅರ್ಥ ತಿಳಿಯದಿದ್ದರೂ ಶಬ್ದದ ಆಟಾಟೋಪಕ್ಕೆ ಮರುಳಾಗಿ, ಬಲು ಭಾರವಾದ ಭಾಷೆಯನ್ನು ಪಾತ್ರಧಾರಿಗಳು ಗಟ್ಟಿಮಾಡಿ ಉರುಳಿಸಿ ಬಿಡುತ್ತಾರೆ. ಸಮರದ ಸಂದರ್ಭಗಳಲ್ಲಿ ಬಣ್ಣದ ವೇಷದ ನೃತ್ಯ ನೆಗೆದಾಟಗಳೂ ಆಗಬಹುದು. ಇಷ್ಟಾದರೂ ವೀರರಸ ಪ್ರತಿಪಾದನೆಯಲ್ಲಿ ಮೂಡಲಪಾಯ ಹೆಸರು ಪಡೆದಿದೆ.

ಪುರಾಣದ ಪ್ರಸಂಗಗಳೇ ಮೂಡಲಪಾಯದ ಕಥಾವಸ್ತುಗಳು. ರಾತ್ರಿಯಿಂದ ಮುಂಜಾವಿನವರೆಗೆ ನಡೆಯುವ ರಂಗದಮೇಲಿನ ಈ ಆಟಗಳಲ್ಲಿ ಹಾಡು, ಕುಣಿತ, ಹಾಸ್ಯ, ಮಾತು ಯಥೇಚ್ಛವಾಗಿರುತ್ತವೆ. ಇಲ್ಲಿಯ ವೇಷಭೂಷಣ ಮುಖವರ್ಣಿಕೆಗಳು ಸೂಕ್ಷ್ಮತೆಯನ್ನು ಮೀರಿದಂಥವು. ಪಾತ್ರಗಳನ್ನು ಸಭೆಗೆ ಪರಿಚಯಮಾಡಿಕೊಡುವ ಸಲುವಾಗಿ, ಅಲ್ಲದೆ ರಂಗಕ್ಕೆ ಬಂದ ಪ್ರತಿಯೊಂದು ಪಾತ್ರದಿಂದಲೂ ಹಿಂದಿನ, ಇಂದಿನ, ಮುಂದಿನ ಸಂಗತಿಗಳನ್ನು ಹೊರಡಿಸುವ ಸಲುವಾಗಿ ಸಾರಥಿ ಇಲ್ಲವೆ ಕೋಡಂಗಿ ಎಂಬ ಹಾಸ್ಯಪಾತ್ರ ವಿರುತ್ತದೆ. ರಂಗದ ಮೇಲೆ, ಹಿಂದಿನ ಪರದೆಯ ಮುಂದೆ, ಮಧ್ಯದಲ್ಲಿ, ಭಾಗವತನನ್ನು ಹೊಂದಿಕೊಂಡು ಹಾಡುವ ಹಿಮ್ಮೇಳದವರಿರುತ್ತಾರೆ. ಸುಂದರಿ, ಮೃದಂಗ, ತಾಳ ಮೊದಲಾದ ವಾದ್ಯ ವಿಶೇಷಗಳನ್ನು ಹಿಮ್ಮೇಳ ಬಳಸುತ್ತದೆ.

ಮೂಡಲಪಾಯದಲ್ಲಿ ಪ್ರಧಾನಪಾತ್ರವೆಂದರೆ ಕಥಾನಾಯಕನಲ್ಲ, ಖಳನಾಯಕ ಎಂದರೆ ಇಲ್ಲಿ ರಾಮನಿಗಿಂತ ರಾವಣನಿಗೆ ಹೆಚ್ಚಿನ ಮಹತ್ತ್ವ ಕೊಟ್ಟು ಆ ಪಾತ್ರವನ್ನು ತುಂಬ ಎಚ್ಚರಿಕೆಯಿಂದ ಸಿದ್ಧಗೊಳಿಸುತ್ತಾರೆ. ಖಳನಾಯಕನ ಪಾತ್ರಕ್ಕೆ ಬಣ್ಣದ ವೇಷ ಎಂದೂ ಹೆಸರು. ಬಣ್ಣದ ವೇಷ ಕಟ್ಟುವ ಕಲಾವಿದ, ಚಾವಡಿಯಲ್ಲೋ ತನ್ನ ಹಟ್ಟಿಯಲ್ಲೊ ರೌದ್ರಾಲಂಕಾರ ಮಾಡಿಕೊಂಡು, ವೇಷಭೂಷಣಗಳನ್ನು ಧರಿಸಿ, ಬೆಳಕಿನ ಮಧ್ಯೆ, ಓಲಗ ತಮಟೆ ತುತ್ತೂರಿಗಳನ್ನು ಮುಂದೆ ಮಾಡಿಕೊಂಡು ಮೆರವಣಿಗೆಯಲ್ಲಿ ರಂಗಮಂಚಕ್ಕೆ ಬರುವುದು ವಾಡಿಕೆ. ಮಾರ್ಗದ ಮಧ್ಯೆ ಅಲ್ಲಲ್ಲಿ ನಿಂತು ಆತ ಸುತ್ತು ನೃತ್ಯ ಮಾಡುತ್ತಾನೆ. ಹಾರುತ್ತಾನೆ, ನೆಗೆಯುತ್ತಾನೆ, ಅಟ್ಟಹಾಸ ಆಟೋಪಗಳನ್ನು ಮಾಡುತ್ತಾ ಬರುತ್ತಾನೆ. ರಾತ್ರಿ ಪ್ರಾರಂಭವಾದ ಆಟ ಮುಂಜಾನೆ ಮುಗಿಯುವ ಹೊತ್ತಿಗೆ ಆತನ ಚಿತ್ರ ನೋಟಕರ ಕಣ್ಣಿಗೆ ಕಟ್ಟಿಹೋಗುತ್ತದೆ; ಧ್ವನಿ ಕಿವಿಗಳಲ್ಲಿ ಮೊರೆಯುತ್ತದೆ. ಆತ ಒಳ್ಳೆಯ ನಟನಾದರಂತೂ ನೋಟಕರ ಮೈಯಲ್ಲಿ ಅಡಿಗಡಿಗೆ ಜುಮ್ಮು ತಟ್ಟುತ್ತದೆ.

ಮೂಡಲಪಾಯ ಕನ್ನಡನಾಡಿನ ಬಯಲುಸೀಮೆಯ ಹಳ್ಳಿಗಳಲ್ಲಿ ಪ್ರದರ್ಶನಗೊಳ್ಳುವ ಒಂದು ಅದ್ಭುತರಮ್ಯ ಮನೋರಂಜನ ಪ್ರಕಾರ. ಇಂದು ಅದರ ಮೇಲೆ ಪಟ್ಟಣಗಳಲ್ಲಿನ ವೃತ್ತಿನಿರತ ರಂಗಭೂಮಿಯ ಪ್ರಭಾವ ಹೆಚ್ಚಾಗಿ ಬಿದ್ದು ಅದರ ಮೂಲರೂಪ ಬದಲಾಗುತ್ತಾ ನಡೆದಿದ್ದರೂ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಾಗಿರುವ ಕೃಷ್ಣಪಾರಿಜಾತದಂಥ ದೊಡ್ಡಾಟದ ಪ್ರಕಾರಗಳ ಪ್ರಭಾವ ವೈಶಿಷ್ಟ್ಯಗಳು ಇನ್ನೂ ಮಾಸಿಹೋಗಿಲ್ಲ.

**ಸಣ್ಣಾಟ** : ಮೂಡಲಪಾಯದ ಛಾಯೆಯನ್ನೇ ಪಡಿಮೂಡಿಸುತ್ತಿದ್ದರೂ ವೃತ್ತಿನಿರತ ನಾಟಕದ ಪರದೆ, ಪರಿಕರಗಳನ್ನು ಇತ್ತೀಚೆಗೆ ಹೆಸರು ಪಡೆಯುತ್ತಿರುವ ಮತ್ತೊಂದು ಜಾನಪದ ಪ್ರಕಾರವೆಂದರೆ ಸಣ್ಣಾಟ. ಮೂಡಲಪಾಯಕ್ಕೂ ವೃತ್ತಿನಿರತ ರಂಗಭೂಮಿಗೂ ಮಧ್ಯದ ಮೈಲಿಗಲ್ಲು ಇದು. ಮೂಡಲಪಾಯದಂತೆ ಇಲ್ಲೂ ಭಾಗವತನೂ ಹಿಮ್ಮೇಳದವರೂ ಕಥೆಯ ಸೂತ್ರಗಳನ್ನು ಪದ್ಯರೂಪದಲ್ಲಿ ಹೇಳಿದ ಮೇಲೆ ಪಾತ್ರಗಳು ಮಾತನಾಡಿ ಅಭಿನಯಿಸುತ್ತವೆ. ಆದರೆ ಇಲ್ಲಿಯ ವೇಷಭೂಷಣ, ರಂಗಸಜ್ಜಿಕೆ, ಪಾತ್ರಾಲಂಕಾರಗಳೆಲ್ಲ ಕಂಪನಿಯ ನಾಟಕಗಳನ್ನೇ ಅನುಕರಿಸಿ ಮಾಡಿದಂಥವು. ಅಲ್ಲದೆ ಇದರ ಕಥಾವಸ್ತು ಪೌರಾಣಿಕವಲ್ಲದೆ ಸಾಧುಸಂತರ ಜೀವನಗಳನ್ನು ಕುರಿತು ಕಟ್ಟಿದ ಆಟಗಳು ಇವು. ಬೆಳಗಾಂವಿ ಜಿಲ್ಲೆಯ ನೀಲಕಂಠಪ್ಪ ಪತ್ತಾರ, ಹಣ್ಣಿಕೇರಿ ಶಿವಾನಂದ ಕವಿಗಳು ಇಂಥ ಸಣ್ಣಾಟಗಳನ್ನು ಬರೆದವರಲ್ಲಿ ಪ್ರಮುಖರು. ನಿಜಗುಣ ಶಿವಯೋಗಿ, ತಿರುನೀಲಕಂಠ, ಕಬೀರದಾಸ ಮುಂತಾದವು ಇವರ ಪ್ರಮುಖ ಸಣ್ಣಾಟಗಳು. ಧಾರವಾಡದ ಬಳಿಯ ಕೆಳಗೇರಿಯಲ್ಲಿಯ ಪ್ರಸಿದ್ಧವಾದ ಕಲೆಗಾರ ತಂಡ ಕನ್ನಡನಾಡಿನ ಹಾಗೂ ಹೊರಗಿನ ಸಾಧುಸಂತರ ಜೀವನಗಳನ್ನು ಸಣ್ಣಾಟಗಳಲ್ಲಿ ಅಳವಡಿಸಿದೆ. ನೀತಿಪ್ರಸಾರವೇ ಸಣ್ಣಾಟದ ಮುಖ್ಯ ಗುರಿ.

**ವೃತ್ತಿನಿರತ ರಂಗಭೂಮಿ** : ಕಲಿತವರ ಮನೋರಂಜನೆಯ ಸಲುವಾಗಿ, ಸಂಸ್ಕೃತ ನಾಟಕಗಳನ್ನು ಆಧಾರವಾಗಿಟ್ಟುಕೊಂಡಿದ್ದ ಅರಮನೆ ರಂಗಭೂಮಿಗೂ ಕಲಿಯದವರ ಮನೋರಂಜನೆ ಮಾಡುತ್ತಿದ್ದ ಜಾನಪದ ರಂಗಭೂಮಿಗೂ ನಡುವೆ, ಜನಸಾಮಾನ್ಯರ ಎಂದರೆ ಮಧ್ಯಮವರ್ಗದ ಜನತೆಯನ್ನು ರಂಜಿಸುವ ಧ್ಯೇಯದಿಂದ, ಹುಟ್ಟಿದುದೇ ವೃತ್ತಿನಿರತ ರಂಗಭೂಮಿ. ಭಾರತದಲ್ಲಿ ಇದರ ಬೆಳೆವಣಿಗೆಯಾಗಿರುವುದು ಕಳೆದ ಸು. 150 ವರ್ಷಗಳ ಕಾಲದಲ್ಲಿ ಅಷ್ಟೆ. ಪಾಶ್ಚಾತ್ಯ ಸಂಪರ್ಕದಿಂದಾಗಿ ರಂಗಕಲೆಯ ಬಗ್ಗೆ ಜನರಲ್ಲಿ ಬಂದ ಹೊಸ ಅರಿವು ಭಾರತದ ವೃತ್ತಿ ರಂಗಭೂಮಿಯ ಸ್ಥಾಪನೆಗೆ ಪ್ರಚೋದನೆ ಕೊಟ್ಟಿತು. ಕಲೆಯನ್ನೇ ಕಾಯಕವಾಗಿ ಮಾಡಿಕೊಂಡಿದ್ದ ಈ ರಂಗಭೂಮಿ 1775–76ರಲ್ಲಿ ಮೊದಲಿಗೆ ಕೋಲ್ಕತ್ತದಲ್ಲಿ ಪ್ರಾರಂಭವಾಯಿತು. ಇದರ ಪ್ರಭಾವದಿಂದ 1842ರ ಹೊತ್ತಿಗೆ ಮುಂಬೈಯಲ್ಲಿ ಬಾಡಿಗೆಗೆ ಕೊಡಮಾಡುವ ರಂಗಶಾಲೆಗಳನ್ನು ನಿರ್ಮಿಸಲಾಯಿತು. 30 ವರ್ಷಗಳ ಅನಂತರ ಪಾರ್ಸಿ ಹಾಗೂ ಮರಾಠೀ ನಾಟಕ ಕಂಪನಿಗಳು ಉತ್ತರ ಕರ್ನಾಟಕ ಹಾಗೂ ಮೈಸೂರಿಗೆ ಭೇಟಿಯಿತ್ತು ನಾಟಕಗಳನ್ನು ಪ್ರದರ್ಶಿಸಿದ ಮೇಲೆ ಕನ್ನಡನಾಡಿನಲ್ಲಿ ವೃತ್ತಿನಿರತ ರಂಗಭೂಮಿಯ ಅವತಾರವಾಯಿತೆನ್ನಬೇಕು.

**ಉತ್ತರ ಕರ್ನಾಟಕ ರಂಗಭೂಮಿ** : ಕರ್ನಾಟಕ ರಂಗಭೂಮಿಯ ಸ್ಥೂಲನೋಟಕ್ಕೆ ಪ್ರಾದೇಶಿಕ ಒಳ ವೈವಿಧ್ಯಗಳು ಅಷ್ಟಾಗಿ ಕಾಣಿಸಲಿಕ್ಕಿಲ್ಲ. ಕಾರಣ ಯಾವುದೇ ಕಲೆಯ ಸೂಕ್ಷ್ಮ ನೆಲೆಗಳನ್ನು ಪರಿಚಯಿಸಿಕೊಳ್ಳಬೇಕಾದರೆ ಪ್ರಾದೇಶಿಕವಾದ ಕೇಂದ್ರಗಳತ್ತಲೇ ನಮ್ಮ ದೃಷ್ಟಿ ಹರಿಸಬೇಕಾಗುತ್ತದೆ. ಈ ರೀತಿಯ ಚಲನೆಯಿಂದ ಕರ್ನಾಟಕದ ಕರಾವಳಿಯ, ಮಲೆನಾಡಿನ ಬಯಲು ಸೀಮೆಯ ಸೊಗಸುಗಳು ಕಣ್ಣಿಗೆ ಕಟ್ಟುತ್ತವೆ. ಆಯಾ ಮಣ್ಣಿನ ಗುಣಗಳು ಅಲ್ಲಲ್ಲಿಯ ಕಲೆಗಳನ್ನು ಸಂಸ್ಕೃತಿಯನ್ನು ಹೇಗೆ ರೂಪಿಸಿವೆ? ಹೇಗೆ ಬೆಳೆಸಿವೆ ಎಂಬುನ್ನು ನೋಡಲೂ ಇದರಿಂದ ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕ ರಂಗಭೂಮಿಗಿರುವ ವೈವಿಧ್ಯತೆ, ವೈಶಿಷ್ಟ್ಯತೆಯನ್ನು ಪರಿಚಯಿಸಿಕೊಳ್ಳೋಣ. ಇಲ್ಲಿಯ ಯಕ್ಷಗಾನ ಮೂಡಲಪಾಯ ದೊಡ್ಡಾಟಗಳಿಗೆ 500–600 ವರ್ಷಗಳಿಗಿಂತಲೂ ಸುದೀರ್ಘವಾದ ಚರಿತ್ರೆ ಇದೆ. ಒಂದು ಕಾಲದಲ್ಲಿ ಬಯಲಿನಲ್ಲಿ ನಡೆಯುತ್ತಿದ್ದ ಬಯಲಾಟಗಳನ್ನು ನೋಡುವುದೇ ಈ ಭಾಗದ ಜನರಿಗೆ ಹಬ್ಬವಾಗಿತ್ತು. 1960–70 ರ ದಶದಲ್ಲಿ ಬೆಳಗಾಂವಿ ಮತ್ತು ಧಾರವಾಡದ ಪರಿಸರದಲ್ಲಿ ನಡೆದ ರಂಗ ಪ್ರಯೋಗಗಳು ಹಾಗೂ ಆಧುನಿಕ ರಂಗಭೂಮಿಯನ್ನು ಕಟ್ಟಲು ನಡೆಸಿದಂತೆ ಪ್ರಯತ್ನಗಳು ನಾಡಿನ ಚರಿತ್ರೆಯಲ್ಲೇ ಗಮನಾರ್ಹವೆನಿಸಿದೆ. ಕುಲಗೋಡ ತಮ್ಮಣ್ಣನ ಶ್ರೀ ಕೃಷ್ಣ ಪಾರಿಜಾತ, ಬಸರಗಿ ಕುಂಬಾರನ ರಾಧಾನಾಟ, ಬೈಲವಾಡ ಪತ್ತಾರ, ಮಾಸ್ತರನ ಸಂಗ್ಯಾ–ಬಾಳ್ಯಾ, ಚುರಮುರಿ ಶೇಷಗಿರಿರಾಯರ ಶಾಕುಂತಲದ ಅನುವಾದ, ಹಲಸಿ ವಿದ್ಯಾಮಂಡಳದ ವಿದ್ಯಾರ್ಥಿ ಬಳಗ ಪ್ರದರ್ಶಿಸಿದ ಕಂಪನಿ ಶೈಲಿಯ ನಾಟಕಗಳು. ಶಾಂತ ಕವಿಗಳ ಕರ್ನಾಟಕ ನಾಟಕ ಮಂಡಳಿಯ ಸಂಘಟನೆ ಇವೆಲ್ಲವೂ ರಂಗಭೂಮಿ ಚರಿತ್ರೆಯ ಮಹತ್ತ್ವದ ಮೈಲಿಗಲ್ಲುಗಳು.

**I. ಜನಪದ ರಂಗಭೂಮಿ. :** ಯಕ್ಷಗಾನ ಬಯಲಾಟ. ಯಕ್ಷಗಾನದ ಉಗಮ ಹಾಗೂ ಪ್ರಸಾರದ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಸು. 500 ವರ್ಷಗಳಿಂದ ಈ ಕಲೆ ಕರ್ನಾಟಕದಲ್ಲಿ ಪರಂಪರಾನುಗತವಾಗಿ ಬೆಳೆದು ಬಂದಿದೆ. ಆಂಧ್ರದ ಕೂಚಿಪುಡಿ ತಮಿಳುನಾಡಿನ ಮೇಳತ್ತೂರು ಭಾಗವತಮೇಳ ಮತ್ತು ಕರ್ನಾಟಕದ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜನಪ್ರಿಯವಾಗಿರುವ ಯಕ್ಷಗಾನ ಬಯಲಾಟ– ಈ ಮೂರು ರಂಗ ಪ್ರಕಾರಗಳನ್ನು ಯಕ್ಷಗಾನವೆಂದೇ ಕರೆಯುತ್ತಾರೆ. ಮೂಲತಃ ಯಕ್ಷಗಾನವೆಂಬುದು ಒಂದು ಸಂಗೀತ ಶೈಲಿಯೆಂದು, ಕಾವ್ಯ ಪ್ರಕಾರವೆಂದು ಹೇಳುವ ವಾದಗಳಿವೆ. ಕಾಲಾಂತರದಲ್ಲಿ ಹಲವು ಪರಿಕರಗಳನ್ನು ಒಳಗೊಂಡು ಯಕ್ಷಗಾನ ಬಯಲಾಟ ಬೆಳೆದು ಬಂದಿರಬೇಕೆನ್ನಲು ಆಧಾರಗಳಿವೆ. ಯಕ್ಷಗಾನವನ್ನು ಆಡಿಸುವ ಸೂತ್ರಧಾರನಿಗೆ ಭಾಗವತ ಎಂದು ಹೆಸರು. ಇವನಿಂದಾಗಿ ಯಕ್ಷಗಾನಕ್ಕೆ ಭಾಗವತರ ಆಟವೆಂದೂ ಕರೆಯುತ್ತಾರೆ. ಈ ಆಟವನ್ನು ಆಡುವ ಕಲಾವಿದರ ತಂಡಕ್ಕೆ ಮೇಳ ಎಂದು ಕರೆಯುತ್ತಾರೆ. ಸಂಗೀತ, ಸಂಭಾಷಣೆ, ಕುಣಿತ, ಅಭಿನಯ, ವೇಷಭೂಷಣಗಳ ಸೊಗಸಾದ ಸಮೀಕರಣದಿಂದ ಯಕ್ಷಗಾನ ಅತ್ಯಾಕರ್ಷಕ ರಂಗ ಕಲೆ ಎನಿಸಿದೆ. ಯಕ್ಷಗಾನದಲ್ಲಿ ಎರಡು ಪ್ರಭೇದಗಳಿವೆ. 1. ತಾಳಮದ್ದಳೆ, 2. ಬಯಲಾಟ.

**1. ತಾಳಮದ್ದಳೆ:** ಮಲೆನಾಡಿನಲ್ಲಿ ಬರುವ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ವರ್ಷದ 6 ತಿಂಗಳು ಮಳೆ. ಮಳೆಗಾಲದಲ್ಲಿ ಬಯಲಾಟವಾಡಲು ಆಗುವುದಿಲ್ಲ. ಆಗ ದೇವಸ್ಥಾನ, ಚಾವಡಿ, ಮನೆಯ ಅಂಗಳದ ಸ್ಥಳಗಳಲ್ಲಿ ತಾಳ ಮದ್ದಳೆ ಕೂಟಗಳು

ನಡೆಯುತ್ತವೆ. ತಾಳಮದ್ದಳೆಗೆ ರಂಗಸ್ಥಳ ಬೇಕಿಲ್ಲ. ವೇಷ ಭೂಷಣಗಳ ಅಗತ್ಯವೂ ಇಲ್ಲ. ಭಾಗವತ, ಹಿಮ್ಮೇಳದವರು ಕುಳಿತವರ ಎದುರಿಗೆ ಅರ್ಥದಾರಿಗಳು ಕೂರುತ್ತಾರೆ. ಭಾಗವತನು ಯಕ್ಷಗಾನ ಪದಗಳನ್ನು ಹಾಡುತ್ತಾನೆ. ಮದ್ದಳೆಕಾರ ತಾಳಕ್ಕೆ ತಕ್ಕಂತೆ ಮದ್ದಳೆ ಬಾರಿಸುತ್ತಾನೆ. ಭಾಗವತನ ಪದದ ಅರ್ಥಕ್ಕನುಗುಣವಾಗಿ ಅರ್ಥದಾರಿಗಳು ಕುಳಿತಲ್ಲಿಯೇ ಆಶು ಸಂಭಾಷಣೆ ನಡೆಸುತ್ತಾರೆ. ಪ್ರಸಂಗವು ಹಾಡು–ಮಾತಿನಿಂದ ಕಳೆ ಕಟ್ಟುತ್ತದೆ. ಅಲ್ಲಿ ಸೇರಿದ್ದ ಪ್ರೇಕ್ಷಕರ ತಾಳಮದ್ದಳೆ ಪ್ರಸಂಗವನ್ನು ತನ್ಮಯತೆಯಿಂದ ಅನುಭವಿಸುತ್ತಾರೆ.

**2. ಬಯಲಾಟ:** ಮಳೆಗಾಲದ ನಂತರ ಯಕ್ಷಗಾನವು ಬಯಲಿನಲ್ಲಿ ಪ್ರದರ್ಶನಗೊಳ್ಳಲು ಸಿದ್ಧವಾಗುತ್ತದೆ. ಮೊದಲು ಊರಿನ ದೇವರ ಎದುರಿನಲ್ಲಿ ಪ್ರದರ್ಶನ ನೀಡಲಾಗುತ್ತದೆ. ಆಮೇಲೆ ಹರಕೆ ಹೊತ್ತವರ ಆಮಂತ್ರಣದ ಮೇರೆಗೆ ಅಲ್ಲಿಗೆ ಹೋಗಿ ಪ್ರದರ್ಶನ ನೀಡಲಾಗುವುದು. ಹಿಂದೆ ಊರಿನ ಶ್ರೀಮಂತರು, ಜಮೀನುದಾರರು ಈ ಕಲೆಯನ್ನು ಪೋಷಿಸುತ್ತಿದ್ದರು. ಈಗ ಜನರ ಪ್ರೋತ್ಸಾಹದಿಂದ ಪ್ರೇಕ್ಷಕರ ನೆರವಿನಿಂದ ಯಕ್ಷಗಾನ ಕಲೆ ಮುಂದುವರಿದಿದೆ.

ಸಾಮಾನ್ಯವಾಗಿ ಯಕ್ಷಗಾನ ಪ್ರಸಂಗಗಳು ಪೌರಾಣಿಕ ಕಥೆಗಳನ್ನು ಆಧರಿಸಿರುತ್ತವೆ. ಪ್ರತಿ ಪ್ರಸಂಗಕ್ಕೂ ಪ್ರತ್ಯೇಕ ಗೀತೆಗಳಿರುತ್ತವೆ. ಹಾಡುಗಾರಿಕೆಯೇ ಪಾತ್ರದ ಮನೋಸ್ಥಿತಿ ಮತ್ತು ಭಾವತೀವ್ರತೆಯನ್ನು ಸೂಚಿಸುತ್ತದೆ. ಭಾಗವತನ ಹಾಡುಗಳೇ ನಟರ ಆಶು ಸಂಭಾಷಣೆಗೆ ಆಧಾರ. ಭಾಗವತ ಎರಡು ಪಂಕ್ತಿ ಹಾಡಿದರೆ ಸಾಕು ನಟರು ಅದರ ಎಳೆ ಹಿಡಿದು ಮಾತನ್ನು ಪೋಣಿಸುತ್ತಾರೆ. ನಟರ ಮಾತಿನ ಗತ್ತು, ಕುಣಿತದ ಆರ್ಭಟ, ಹನುಮನಾಯಕನ ಹಾಸ್ಯ, ಕಿರೀಟ, ವೇಷಭೂಷಣ, ವರ್ಣಮಯ ಪ್ರಸಾದನಗಳಿಂದ ಯಕ್ಷಗಾನ ಬಯಲಾಟದ ಆಕರ್ಷಣೆ ಇಮ್ಮಡಿಸುತ್ತದೆ.

ಯಕ್ಷಗಾನ ಬಯಲಾಟದಲ್ಲಿ ಮುಖ್ಯವಾಗಿ ಎರಡು ಭೇದಗಳಿವೆ. 1. ತೆಂಕತಿಟ್ಟು. 2. ಬಡಗತಿಟ್ಟು. ದಕ್ಷಿಣ ಕನ್ನಡ ಜಿಲ್ಲೆ ಉಡುಪಿಯನ್ನು ಗಡಿಯಾಗಿರಿಸಿಕೊಂಡರೆ ಉತ್ತರ ಭಾಗದ ಸಂಪ್ರದಾಯ ಬಡಗುತಿಟ್ಟು, ದಕ್ಷಿಣ ಭಾಗದ ಸಂಪ್ರದಾಯ ತೆಂಕ ತಿಟ್ಟು. ಎರಡೂ ಸಂಪ್ರದಾಯಗಳ ಪ್ರಸಂಗಸಾಹಿತ್ಯ ಒಂದೇ ಆಗಿರುತ್ತದೆ. ಆದರೆ ಹಾಡುವ ಕ್ರಮ, ಕುಣಿತದ ವಿಧಾನ, ವಾದ್ಯಗಳನ್ನು ನುಡಿಸುವ ರೀತಿಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಕಂಡು ಬರುತ್ತದೆ. ಕರಾವಳಿ ಪ್ರದೇಶದ ಹಲವಾರು ಮೇಳಗಳು ದೇಶ ವಿದೇಶಗಳನ್ನು ಸುತ್ತಿ ಯಕ್ಷಗಾನವನ್ನು ಪ್ರದರ್ಶಿಸಿವೆ.

**ಮೂಡಲ ಪಾಯ ಬಯಲಾಟ :** ಉತ್ತರ ಕರ್ನಾಟಕದಲ್ಲಿಯೇ ಅತ್ಯಂತ ಶ್ರೀಮಂತ ಪರಂಪರೆಯನ್ನು ಹೊಂದಿರುವ ರಂಗ ಕಲೆ ಇದು. ಯಕ್ಷಗಾನದ ಹಾಗೆಯೇ ಮೂಡಲಪಾಯವು ಮೂಲದಲ್ಲಿ ಪೂರ್ವದ ಸಂಗೀತ ಶೈಲಿಯಾಗಿದ್ದು ಅನಂತರದಲ್ಲಿ ಅದು ಬಯಲಾಟವಾಗಿ ಬೆಳೆದ ಕಥೆಯನ್ನು ರಂಗ ಭೂಮಿ ಇತಿಹಾಸ ತಿಳಿಸುತ್ತದೆ. ಮೂಡಲ ಪಾಯವು ದಕ್ಷಿಣಾದಿ ಸಂಗೀತದ ಒಂದು ಕವಲು. ಧಾರವಾಡ ಭಾಗದಲ್ಲಿ ಬಯಲಾಟದ ಹಾಡುಗಳನ್ನು ಮೂಡಲಪಾಯದ ಶೈಲಿ, ಯಕ್ಷಗಾನ ಶೈಲಿಯವು ಎಂದು ಪ್ರತ್ಯೇಕಿಸುವುದುಂಟು. ಬೆಳಗಾಂವಿ, ಬಳ್ಳಾರಿ, ಬಿಜಾಪುರ, ಧಾರವಾಡ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಮೂಡಲಪಾಯ ಬಯಲಾಟಗಳ ಜನಪ್ರಿಯತೆ ಹೆಚ್ಚು. ಮೈಸೂರು ಪ್ರದೇಶಗಳಲ್ಲಿಯೂ ಸಹ ಈ ಕಲೆ ಅಸ್ತಿತ್ವದಲ್ಲಿದೆ. ಬೆಳಗಾಂವಿ, ಬಿಜಾಪುರ ಪ್ರದೇಶಗಳಲ್ಲಿ ಈ ಬಯಲಾಟಕ್ಕೆ ದೊಡ್ಡಾಟವೆಂದು ಕರೆಯುತ್ತಾರೆ. ಈ ಭಾಗದಲ್ಲಿ ಸಣ್ಣಾಟಗಳು ಹುಟ್ಟಿಕೊಂಡ ಮೇಲೆ ಅವುಗಳಿಂದ ಪ್ರತ್ಯೇಕಿಸಲು ಈ ದೊಡ್ಡಾಟ ಹೆಸರು ರೂಢಿಗೆ ಬಂದಿರಬೇಕು.

ದೊಡ್ಡಾಟದ ರಂಗಸ್ಥಳವು ದೊಡ್ಡದಾಗಿರುತ್ತದೆ. ಪ್ರೇಕ್ಷಕರು ಮೂರೂ ಕಡೆಯಿಂದ ನೋಡಬಹುದಾದ ರೀತಿಯಲ್ಲಿ ದೊಡ್ಡಾಟದ ಅಟ್ಟ ರಚನೆಯಾಗಿರುತ್ತದೆ. ದೊಡ್ಡಾಟದಲ್ಲಿ ಮುಮ್ಮೇಳ ಹಿಮ್ಮೇಳ ಎರಡೂ ಇರುತ್ತವೆ. ಪಾತ್ರಧಾರಿ ಮುಮ್ಮೇಳದೊಂದಿಗೆ ತಾನೂ ಹಾಡುತ್ತಾನೆ. ಹಿಮ್ಮೇಳದವರು ಹಾಡುವಾಗ ಕುಣಿಯುತ್ತಾರೆ. ಈ ಆಟವನ್ನು ನಡೆಸುವವನು ಸಾರಥಿ. ಪಾತ್ರವನ್ನು ಪ್ರೇಕ್ಷಕರಿಗೆ ಪರಿಚಯಿಸುತ್ತಾ ದಿನ ನಿತ್ಯದ ಘಟನೆಗಳನ್ನು ಆಟದ ಸನ್ನಿವೇಷಕ್ಕೆ ಹೋಲಿಸುತ್ತಾ ಕಥೆಯನ್ನು ಸಾಗಿಸುವುದು ಇವನ ಕರ್ತವ್ಯ. ಕಥೆಯು ಪುರಾಣ ಪ್ರಸಂಗವನ್ನು ಆಧರಿಸಿರುತ್ತದೆ. ನಮ್ಮ ಜನಪದ ಕವಿಗಳು ಮೊದಲು ಹಾಡಿನ ರೂಪದಲ್ಲಿ ಇಂಥ ಕಥೆಗಳನ್ನು ರಚಿಸಿಕೊಡುತ್ತಿದ್ದರು. ಹಾಡಿಗೆ ತಕ್ಕ ಮಾತುಗಳನ್ನು ನಟನು ಶಕ್ತ್ಯಾನುಸಾರ ಹೇಳುತ್ತಿದ್ದ. ಕಾಲಾಂತರದಲ್ಲಿ ನಟರ ಮಾತುಗಳನ್ನು ಬರೆದಿಡುವ ಪದ್ಧತಿ ರೂಢಿಯಾಯಿತು. ದೊಡ್ಡಾಟದ ಮಾತುಗಳು ಪ್ರಾಸಬದ್ಧವಾಗಿರುತ್ತವೆ ಮತ್ತು ಶಿಷ್ಟವಾಗಿರುತ್ತವೆ.

ಗಣಪತಿಯ ಸ್ತುತಿಯೊಂದಿಗೆ ಆಟದ ಆರಂಭ. ಮೊದಲ ದೃಶ್ಯವೇ ಒಡ್ಡೋಲಗ ವಿರುತ್ತದೆ. ಪ್ರತಿ ಪಾತ್ರವನ್ನೂ ಸಾರಥಿ ಪರಿಚಯಿಸುತ್ತಾನೆ. ಅವರು ಬಂದಿರುವ ಉದ್ದೇಶವನ್ನು ತಿಳಿಸುತ್ತಾನೆ. ಸಂಗೀತವು ಪಾತ್ರಗಳ ಪ್ರವೇಶ ಮತ್ತು ನಿರ್ಗಮನವನ್ನು ಸೂಚಿಸುತ್ತದೆ. ರಾತ್ರಿ ಹತ್ತು ಗಂಟೆಯಿಂದ ಬೆಳಕು ಹರಿಯುವವರೆಗೂ ದೊಡ್ಡಾಟದ ಕಥೆ ನಡೆಯುತ್ತದೆ. ವೀರರಸ ಪ್ರಧಾನವಾಗಿರುವ ದೊಡ್ಡಾಟಗಳ ಕುಣಿತ ವೇಷಭೂಷಣ ಮುಖವರ್ಣಿಕೆಗಳಲ್ಲಿಯೂ ಭವ್ಯತೆ ಇರುತ್ತದೆ. ಐರಾವಣ ಮೈರಾವಣ, ದಕ್ಷ ಯಜ್ಞ, ಭೀಮ ವಿಲಾಸ, ಲವಕುಶ, ಮನೋರಾಯ ಮುಂತಾದ ಹಲವಾರು ದೊಡ್ಡಾಟಗಳು ಉತ್ತರ ಕರ್ನಾಟಕದ ತುಂಬ ಜನಪ್ರಿಯತೆ ಪಡೆದಿವೆ.

**ಸಣ್ಣಾಟ – ಡಪ್ಪಿನಾಟಗಳು. :** ಸಣ್ಣಾಟಗಳನ್ನು ಡಪ್ಪಿನಾಟಗಳೆಂದೂ ಕರೆಯುತ್ತಾರೆ. ತಪ್ಪಿನ ವಾದ್ಯಗಳೊಂದಿಗೆ ಸಾಗುವ ಹಾಡುಗಳನ್ನೊಳಗೊಂಡಿರುವುದರಿಂದ ಇದು ಡಪ್ಪಿನಾಟ. 19ನೆಯ ಶತಮಾನದ ಉತ್ತರಾರ್ಧದಲ್ಲಿ ಈ ಬಗೆಯ ಆಟಗಳು ರಂಗದ ಮೇಲೆ ಬೆಳಕು ಕಂಡವು. ವಿದ್ವಾಂಸರು ಡಪ್ಪಿನಾಟಗಳಲ್ಲಿ ಎರಡು ಹಂತಗಳನ್ನು ಗುರುತಿಸುತ್ತಾರೆ. 1. ಹಾಡುಗಳೇ ಪ್ರಧಾನವಾಗಿರುವ ಬಯಲಾಟಗಳು; 2. ಕವಿಗಳಿಂದ ರಚನೆಯಾದ ಕಾದ್ರೊಳ್ಳಿಧರತಿಯ ಬಯಲಾಟಗಳು.

ಡಪ್ಪಿನ ಗತಿಗೆ ಹೊಂದಿಕೊಳ್ಳುವ ವಿಶಿಷ್ಟ ಲಯ, ಧಾಟಿಗಳಿರುವ ಹಾಡುಗಳೇ ಮೊದಲ ಹಂತದ ಆಟಗಳಲ್ಲಿ ಪ್ರಮುಖ. ಇವುಗಳಲ್ಲಿ ಹಾಡಿನ ಮೂಲಕವೇ ಕಥೆ ಚಲಿಸುತ್ತದೆ. ಮಾತುಗಳು ನಿರ್ದಿಷ್ಟವಾಗಿರುವುದಿಲ್ಲ. ಹಾಡುಗಳೆಲ್ಲ ಕವಿ ಸೃಷ್ಟಿಯಾದರೆ ಮಾತುಗಳು ನಟರ ಸೃಷ್ಟಿ. ರಾಧಾನಾಟ್ಯ, ಸಂಗ್ಯಾ–ಬಾಳ್ಯಾ, ರೂಪಸೇನ ಮುಂತಾದವು ಈ ಮಾದರಿಯ ಆಟಗಳೆನಿಸಿದೆ. ಎರಡನೆಯ ಹಂತದ ಆಟಗಳಲ್ಲಿ ಕವಿ ಕೃತಿಗಳಿಗೇ ಪ್ರಾಧಾನ್ಯ. ಹಾಡು ಮಾತುಗಳನ್ನು ಜೊತೆಗೂಡಿಸಿ ಡಪ್ಪಿನಾಟಗಳನ್ನು ಬರೆಯುವ ಪರಂಪರೆಯು ಬೆಳಗಾಂವಿ ಜಿಲ್ಲೆ ಕಾದ್ರೊಳ್ಳಿಯ ನೀಲಕಂಠಪ್ಪನಿಂದ ಪ್ರಾರಂಭವಾಯಿತು. ಸು. 1920ರಲ್ಲಿ ಈ ಕವಿಯ ತಿರುನೀಲಕಂಠ ಡಪ್ಪಿನಾಟ ಪ್ರಯೋಗವಾಯಿತು, ಜನಪ್ರಿಯವೂ ಆಯಿತು. ಮುಂದೆ ಬೆಳಗಾಂವಿ ಪರಿಸರದಲ್ಲಿ ಇಂಥ ಹಲವಾರು ಡಪ್ಪಿನಾಟಗಳು ರಚನೆಯಾಗಿ ಪ್ರಯೋಗಗೊಂಡವು. ಹೀಗೆ 'ಕಾದ್ರೊಳ್ಳಿ ಶೈಲಿ' ಯ ಆಟಗಳು ಬೆಳಗಾಂವಿ ಪರಿಸರದಲ್ಲಿ ಪ್ರಚಾರಕ್ಕೆ ಬಂದವು.

ಯಾವುದೇ ಡಪ್ಪಿನಾಟವು ಸಣ್ಣಪದ (ಗಣಪತಿ ಸ್ತುತಿ)ದೊಂದಿಗೆ ಆರಂಭವಾಗುತ್ತದೆ. ಇದಾದ ಮೇಲೆ ಪೂರ್ವ ರಂಗದಲ್ಲಿ ಕಥೆಯ ಪರಿಚಯ, ಆಡುವ ಉದ್ದೇಶ ಪ್ರಯೋಗವಾಗುತ್ತದೆ. ಆಮೇಲೆ ಉತ್ತರರಂಗದಲ್ಲಿ ಹಾಡು, ಅಭಿನಯದ ಮೂಲಕ ಕಥೆ ಪ್ರದರ್ಶನಗೊಳ್ಳುತ್ತದೆ. ಡಪ್ಪಿನಾಟಗಳಲ್ಲಿ ಪೌರಾಣಿಕ ಐತಿಹಾಸಿಕ ಸಾಮಾಜಿಕ ಜಾನಪದ ಭಕ್ತರ ಕಥೆಗಳೆಂದು ವಿಂಗಡಿಸಲಾಗುತ್ತದೆ. ಇವುಗಳ ಸಂಭಾಷಣೆ, ಸಂಗೀತ, ಕುಣಿತಗಳಲ್ಲಿ ದೊಡ್ಡಾಟದ ಆರ್ಭಟವಿರುವುದಿಲ್ಲ.

**ದಾಸರಾಟ :** ದಾಸರು ಎಂಬುದು ಜಾತಿವಾಚಕ ಪದ. ದಾಸರು ಆಡುವ ಆಟಗಳೇ ದಾಸರಾಟಗಳು. ಪ್ರಾಚೀನ ಕಾಲದಲ್ಲಿ ದೇವಾಲಯಗಳಲ್ಲಿ ಹಾಡು ಕುಣಿತಗಳ ಸೇವೆಗಾಗಿ ದೇವದಾಸಿಯರನ್ನು ನೇಮಿಸುತ್ತಿದ್ದ ಸಂಪ್ರದಾಯವಿತ್ತು. ದೇವಾಲಯದ ರಂಗ ಮಂಟಪದಲ್ಲಿ ಜರುಗುತ್ತಿದ್ದ ಪ್ರದರ್ಶನಗಳು ಸಾಮಾನ್ಯವಾಗಿ ಊರ ಪ್ರತಿಷ್ಠಿತರಿಗೆ ಸೀಮಿತವಾಗಿದ್ದವು. ಕಾಲಾಂತರದಲ್ಲಿ ದೇವಾಲಯಗಳ ಶಿಸ್ತು ಸಡಿಲಗೊಳ್ಳಲು ದೇವದಾಸಿಯರ ಬದುಕಿಗೆ ಭದ್ರತೆ ದೊರೆಯದಂತಾಯಿತು. ಆಗ ಇಂಥ ಪ್ರದರ್ಶನಗಳು ಬೀದಿಗೆ ಬರುವುದು ಅನಿವಾರ್ಯವಾಯಿತು. ಜನರ ಅಭಿರುಚಿಗೆ ತಕ್ಕಂತೆ ಹಾಡು ಕುಣಿತ, ಮಾತುಗಳಲ್ಲಿ ಮಾರ್ಪಾಟುಗಳಾದವು.

ದಾಸರಾಟದ ರಂಗ ಸ್ಥಳ ನಿರ್ದಿಷ್ಟವಿಲ್ಲ. ಊರ ಚಾವಡಿ ಕಟ್ಟೆ, ಗುಡಿ ಗುಡಾರಗಳ ಮುಂಭಾಗ, ಶ್ರೀಮಂತರ ಮನೆಯ ಅಂಗಳಗಳಲ್ಲಿ ಈ ಆಟ ಪ್ರದರ್ಶನಗೊಳ್ಳುತ್ತಿತ್ತು. ಇದರಲ್ಲಿ ಮೂರೇ ಮುಖ್ಯ ಪಾತ್ರಗಳು. ಚಿಮಣಾ (ನಾಯಕಿ), ಗೊಡ್ಡಿ ಭೀಮಣ್ಣ (ನಾಯಕ), ಜವಾರಿ (ವಿದೂಷಕ) ಇನ್ನುಳಿದ ಪಾತ್ರಗಳಾಗಿ ಹಿಮ್ಮೇಳದವರು ಸಹಕರಿಸುತ್ತಾರೆ. ಕೃಷ್ಣನ ರಾಸ ಲೀಲೆಯ ಸನ್ನಿವೇಶಗಳು ಮತ್ತು ಪ್ರೇಮದ ಕಥೆಗಳನ್ನು ಇವರು ಅಭಿನಯಿಸಿ ತೋರಿಸುತ್ತಾರೆ. ಹಾಡುಗಳಿಗಾಗಿ ಲಾವಣಿ, ಜಾವಳಿ ಮತ್ತು ದಾಸರ ಕೀರ್ತನೆಗಳನ್ನು ಬಳಸಿಕೊಳ್ಳುತ್ತಾರೆ. ಬರುಬರುತ್ತ ಪ್ರೇಕ್ಷಕರು ಬಯಸುವಂಥ ಹಾಡುಗಳನ್ನು ಹಾಡಿ ಕುಣಿಯುವುದು ನಡೆಯಿತು. ಇದರಿಂದ ಕಥೆ ಹೀಗೆ ಸರಿದು ದಾಸರಾಟವೆಂಬುದು ಮೋಜಿನ ಕಾಲಾಪನೆಯಾಗಿ ಪರಿಣಮಿಸಿತು. ಹೀಗಾದಾಗ ದಾಸರಾಟದಲ್ಲಿ ದ್ವಾಸಿ ಊಟ ಅಲ್ಲ, ಎಂದು ಹೇಳುವುದು ರೂಢಿಗೆ ಬಂದಿರಬೇಕು.

**ರಾಧಾನಾಟ :** ಡಪ್ಪಿನಾಟಗಳಲ್ಲಿ ರಾಧಾನಾಟದ ಆಕರ್ಷಣೆ ವಿಶೇಷವಾದುದು. ದಾಸರಾಟದ ಪರಿಷ್ಕೃತ ರೂಪವೇ ರಾಧಾನಾಟವೆಂಬುದು ಕೆಲವರ ಅಭಿಪ್ರಾಯ. ಇನ್ನೊಂದು ಅಭಿಪ್ರಾಯದ ಪ್ರಕಾರ ಮಹಾರಾಷ್ಟ್ರದ ತಮಾಷಾದ ಪ್ರೇರಣೆಯಿಂದ ರಾಧಾನಾಟ ಹುಟ್ಟಿಕೊಂಡಿತೆಂಬುದು. ಇನ್ನು ಈ ಬಗ್ಗೆ ಖಚಿತತೆ ಇಲ್ಲ. ಡಪ್ಪಿನ ಗತ್ತು ಲಾವಣಿ ಧಾಟಿಯ ಹಾಡುಗಳು, ಬೆಡಗಿನ ಮಾತುಗಳು, ಗೊಲ್ಲತಿ ಪ್ರಸಂಗ, ಚಿಮಣಾಳ ಕುಣಿತ, ಇವುಗಳಿಂದ ರಾಧಾನಾಟದ ಆಕರ್ಷಣೆ ಹೇಳತೀರದು. ಮೊದಲ ಹಂತದಲ್ಲಿ ಈ ಆಟವು ಕೃಷ್ಣ ರಾಧೆಯರ ಕಥೆಯನ್ನೇ ಒಳಗೊಂಡಿದ್ದಿರಬೇಕು. ಕಾಲಕ್ರಮೇಣ ಈ ಭಾಗದ ಜನರ ಕಲಾವಂತಿಕೆಯಿಂದ

ಈ ಆಟದ ಕಥೆಗೆ ಸಾಮಾಜಿಕ ಆಯಾಮ ಪ್ರಾಪ್ತವಾಗಿರಬೇಕು. ಈ ಆಟದ ಪೂರ್ವರಂಗದಲ್ಲಿ ಗೋಪಾಲ–ಗೊಲ್ಲತಿಯರ ಹಾಲು ಮೊಸರು ಮಾರುವ ಪ್ರಸಂಗ ನಡೆಯುತ್ತದೆ. ಉತ್ತರ ರಂಗದಲ್ಲಿ ಹೆಣ್ಣು ಹೆಚ್ಚೋ–ಗಂಡು ಹೆಚ್ಚೋ ಎಂಬ ಚರ್ಚೆ ಪ್ರಧಾನವಾಗಿ ಬೆಳೆಯುತ್ತದೆ. ಪೂರ್ವ ರಂಗದಲ್ಲಿದ್ದ ಗೋಪಾಲ, ರಾಧಾ, ಧೂತಿ ಪಾತ್ರಗಳು ಉತ್ತರ ರಂಗದಲ್ಲಿ ಗಲಪೋಜಿ, ಚಿಮಣಾ, ಸಖಾರಾಮತಾತ್ಯಾ, ಆಗಿ ಬರುತ್ತಾರೆ. ಕಲಾವಿದರು ತಮ್ಮ ಅನುಭವ, ಅಧ್ಯಾತ್ಮ ಹಾಗೂ ಮಾತಿನ ಚಾತುರ್ಯ ತೋರಿಸಲು ಉತ್ತರರಂಗ ಸಾಕಷ್ಟು ಅವಕಾಶ ಕಲ್ಪಿಸುತ್ತದೆ. ಇದೇ ಆಟ ಬಿಜಾಪುರ ಭಾಗದಲ್ಲಿ ಬೀಬೀ ಇಂಗಳಗಿ ಆಟವೆಂದು ಪ್ರಸಿದ್ಧಿ ಪಡೆದಿದೆ. ಇದಕ್ಕೆ ಬೀಬೀ ಇಂಗಳಗಿಯ ಹಸವನಾಬನೆಂಬ ಕಲಾವಿದನಿಂದ ಆ ಆಟವು ಅಲ್ಲಿ ತುಂಬ ಜನಪ್ರಿಯವಾಯಿತೆಂದು ತಿಳಿಯುತ್ತದೆ. ಆಯಾ ಭಾಗದ ಕವಿಗಳು, ಕಲಾವಿದರು, ಹಾಡುಗಳನ್ನು ಬರೆದು ಇದಕ್ಕೆ ಸೇರಿಸಿದ್ದಾರೆ. ತಮ್ಮ ಆಶಯಕ್ಕೆ ತಕ್ಕಂತೆ ಬದಲಿಸಿಕೊಂಡು ಈ ಆಟವನ್ನು ಆಡುತ್ತಾರೆ. ಬೆಳಗಾಂವಿ ಭಾಗದಲ್ಲಿ ಬಸರಗಿ ಕುಂಬಾರನ ರಂಗ ಪ್ರತಿ ಹೆಚ್ಚು ಪ್ರಚಲಿತದಲ್ಲಿದೆ.

ಇವತ್ತಿಗೂ ಬೆಳಗಾಂವಿ, ಬಿಜಾಪುರ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ರಾಧಾನಾಟ ಪ್ರದರ್ಶನಗೊಳ್ಳುತ್ತದೆ. ಈ ಆಟವನ್ನಾಡುವ ವೃತ್ತಿ ತಂಡಗಳೂ ಇಲ್ಲಿವೆ. ರಾಧಾನಾಟದ ಜೊತೆಗೆ ರೂಪ ಸಿಂಗನಾಟ, ಬಲವಂತ, ಬಸವಂತ, ಕಟ್ಟಿಚೆನ್ನ, ಸಂಗ್ಯಾ–ಬಾಳ್ಯಾ ಮುಂತಾದ ಆಟಗಳನ್ನೂ ಈ ತಂಡಗಳು ಆಡುತ್ತವೆ.

**ಸಂಗ್ಯಾ–ಬಾಳ್ಯಾ:** ಇದು ಕರ್ನಾಟಕದ ತುಂಬಾ ಜನಪ್ರಿಯತೆ ಪಡೆದಿರುವ ಸಣ್ಣಾಟ. ಇದು 19ನೆಯ ಶತಮಾನದ ಮಧ್ಯ ಭಾಗದಲ್ಲಿ ಬೆಳಗಾಂವಿ ಜಿಲ್ಲೆಯ ಬೈಲಹೊಂಗಲದಲ್ಲಿ ಜರುಗಿರುವ ನೈಜ ಘಟನೆ ಎಂದು ಹೇಳಲಾಗುತ್ತದೆ. ಸಂಗ್ಯಾ ಬೈಲಹೊಂಗಲದ ಶ್ರೀಮಂತ ಯುವಕ. ಗಂಗಿ ಅದೇ ಊರಿನ ವ್ಯಾಪಾರಸ್ಥ ಲಗಳೇರ ಈರಣ್ಣನ ಹೆಂಡತಿ. ಬಲು ರೂಪವತಿ. ಸಂಗ್ಯಾ ಗಂಗಿಯನ್ನು ಒಲಿಸಿಕೊಳ್ಳಲು ಅವಳ ಹಿಂದೆ ಬೀಳುತ್ತಾನೆ. ಗೆಳೆಯ ಬಾಳ್ಯಾ ಮತ್ತು ಕುಂಟಲಗಿತ್ತಿ ಪರಮ್ಮನ ನೆರವಿನಿಂದ ಯಶಸ್ವಿಯೂ ಆಗುತ್ತಾನೆ. ಗುಟ್ಟಾಗಿ ನಡೆದಿದ್ದ ಇವರ ಹಾದರವು ಕೆಲವೇ ದಿನಗಳಲ್ಲಿ ಈರಣ್ಣನಿಗೆ ಗೊತ್ತಾಗುತ್ತದೆ. ಅವನು ತಮ್ಮಂದಿರನ್ನು ಕರೆದುಕೊಂಡು ಹೋಗಿ ಸಂಗ್ಯಾನ ಕೊಲೆ ಮಾಡುತ್ತಾನೆ. ಪೋಲೀಸರು ಈರಣ್ಣನಿಗೆ ಫಾಸಿ ಶಿಕ್ಷೆ ಕೊಡುತ್ತಾರೆ. ಈ ಘಟನೆಗೆ ಬಯಲಾಟದ ರೂಪ ಕೊಟ್ಟವನು ಬೈಲವಾಡದ ಪತ್ತಾರ ಮಾಸ್ತರ. ರೂಪವತಿಯಾಗಿದ್ದ ಗಂಗಿಯನ್ನು ಪ್ರೀತಿಸಿ ಅವಳಿಂದ ಅವಮಾನಿತನಾದ ಬೈಲವಾಡ ಪತ್ತಾರ ಮಾಸ್ತರ ಅವಳ ಮೇಲಿನ ಸೇಡಿಗಾಗಿ ಈ ನಾಟಕ ಬರೆದನೆಂದೂ ಈ ಭಾಗದ ಜನರು ಹೇಳುತ್ತಾರೆ. ಏನೇ ಇರಲಿ, ಇದನ್ನು ಅಪ್ಪಟ ಜನಪದ ಆಟವನ್ನಾಗಿ ಬೆಳೆಸಿದವರು ಈ ಭಾಗದ ಕಲಾವಿದರು. ಇದರ ಜನಪ್ರಿಯತೆಯಿಂದಾಗಿ ಬಯಲಾಟದ ಕಥೆ ಕಂಪನಿ ನಾಟಕವಾಗಿ, ಹವ್ಯಾಸಿ ನಾಟಕವಾಗಿ, ಸಿನಿಮಾ ಆಗಿ ಅತ್ಯಧಿಕ ಪ್ರಮಾಣದಲ್ಲಿ ಪ್ರದರ್ಶನಗಳನ್ನು ಕಂಡಿದೆ. ಬೇರೆ ಬೇರೆ ಭಾಷೆಯ ರಂಗಭೂಮಿಯನ್ನು ಅಲಂಕರಿಸಿದೆ. ಸಂಗ್ಯಾ–ಬಾಳ್ಯಾ ಬಯಲಾಟದಷ್ಟು ಪ್ರಸಾರ ಮತ್ತು ಪ್ರಚಾರ ಪಡೆದ ಕಥೆ ಭಾರತೀಯ ರಂಗಭೂಮಿಯಲ್ಲಿಯೇ ಮತ್ತೊಂದಿರಲಿಕ್ಕಿಲ್ಲವೆನ್ನಬಹುದು.

**ಶ್ರೀಕೃಷ್ಣಪಾರಿಜಾತ:** ಶ್ರೀಕೃಷ್ಣನ ಪಾರಿಜಾತ ಪ್ರಸಂಗವನ್ನು ಬಯಲಾಟವನ್ನಾಗಿ ಪ್ರದರ್ಶಿಸಿದ ಶ್ರೇಯಸ್ಸು ಉತ್ತರ ಕರ್ನಾಟಕಕ್ಕೇ ಸಲ್ಲುತ್ತದೆ. ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣನ ಕೀರ್ತನ ಕಾವ್ಯವಾಗಿದ್ದ ಶ್ರೀಕೃಷ್ಣಪಾರಿಜಾತವನ್ನು ಬಯಲಾಟಕ್ಕೆ ಅಳವಡಿಸಿ ಜನಪ್ರಿಯಗೊಳಿಸಿದವನು ಬೆಳಗಾಂವಿ ಜಿಲ್ಲೆ ಗೋಕಾಕ ತಾಲೂಕಿನ ಕುಲಗೋಡ ತಮ್ಮಣ್ಣನು. ಇವನ ರಂಗಪ್ರಜ್ಞೆಯಿಂದ ಪಾರಿಜಾತದ ಕಥೆ ಭಕ್ತ ಶೃಂಗಾರ ಹಾಸ್ಯ ರಸಗಳ ರಸಾಯನವಾಗಿ ಪರಿಣಮಿಸಿತು. ಸಂಸಾರದಿಂದ ಅಧ್ಯಾತ್ಮ, ಅಧ್ಯಾತ್ಮದಿಂದ ಸಂಸಾರಕ್ಕೆ ಸಂಚರಿಸುವ ಇಲ್ಲಿಯ ಚರ್ಚೆ, ಮಧುರವಾದ ಸಂಗೀತ ಮತ್ತು ದೂತಿಯ ಹಾಸ್ಯ– ಈ ಸಂಗತಿಗಳೆಲ್ಲ ಈ ಬಯಲಾಟಗಳಲ್ಲಿ ಅನನ್ಯವಾಗಿ ಸೇರಿಕೊಂಡಿವೆ. ಪಾತ್ರಧಾರಿಗಳು ಸ್ವತಃ ಹಾಡುವ, ಸ್ತ್ರೀಯರು ಅಭಿನಯಿಸುವ ಪರಂಪರೆ ಪಾರಿಜಾತದಿಂದಲೇ ಪ್ರಾರಂಭವಾಯಿತು. ಸತ್ಯಭಾಮ ಪಾತ್ರದಿಂದ ಪ್ರಸಿದ್ಧಳಾದ ಕೌಜಲಗಿ ನಿಂಗವ್ವ ಕನ್ನಡ ರಂಗಭೂಮಿಯ ಮೊದಲ ನಟಿ ಎಂಬ ಗೌರವಕ್ಕೆ ಪಾತ್ರಳಾಗಿದ್ದಾಳೆ.

ಮೊದಲ ಹಂತದಲ್ಲಿ ಪಾರಿಜಾತವನ್ನು ಬೆಳೆಸಿದವರು ಕುಲಗೋಡ ತಮ್ಮಣ್ಣ, ಕೌಜಲಗಿ ನಿಂಗವ್ವ, ಬಡಕುಂದ್ರಿ ಬಸ್ಸಪ್ಪ ಮುಂತಾದ ಹಿರಿಯರು. ಹಿಂದುಸ್ಥಾನೀ ಸಂಗೀತದ ಧಾಟಿಗಳನ್ನು ಬಳಸಿ ಪಾರಿಜಾತವನ್ನು ಇನ್ನಷ್ಟು ಜನಪ್ರಿಯಗೊಳಿಸಿದವರು ನಂದಿ ರಾಮಣ್ಣ, ಶಿರಗುಪ್ಪೆ ಕಾಡಗೌಡ, ಬರಗಿ ರಾಚಯ್ಯ, ಯತ್ತಂಬಿ ಕುಂಬಾರ, ಬಸಾಪೂರದ ಅಪ್ಪಾರಾಯಪ್ಪ, ಲೋಕಾಪುರ ದೇಶಪಾಂಡೆ, ಅಪ್ಪಲಾಲ ನದಾಫ ಮೊದಲಾದವರು. ಪಾರಿಜಾತವು ನೂರಾರು ವರುಷಗಳಿಂದ ಈ ಭಾಗದ ಜನರನ್ನು ರಂಜಿಸುತ್ತ ಬಂದಿದೆ. ಇವತ್ತಿಗೂ ರಂಜಿಸುತ್ತ ಮುಂದುವರೆದಿದೆ.

**II. ವೃತ್ತಿ ರಂಗಭೂಮಿ :** ಆಧುನಿಕ ರಂಗಭೂಮಿಯ ಮಹತ್ತ್ವದ ಭಾಗವೆನಿಸಿದ ಕಂಪನಿ ನಾಟಕಗಳು ಮೊದಲು ರಂಗದ ಮೇಲೆ ಕಾಣಿಸಿಕೊಂಡಿದ್ದು ಉತ್ತರ ಕರ್ನಾಟಕದಲ್ಲಿಯೇ ಇದಕ್ಕೆ ಕಾರಣಗಳಿವೆ. 1885ರಲ್ಲಿ ಮುಂಬಯಿಯಿಂದ ಈ ಭಾಗಕ್ಕೆ ರೈಲು ಸಂಚಾರ ಪ್ರಾರಂಭವಾಯಿತು. ಇದರಿಂದ ಜನರ ವ್ಯಾಪಾರ ವಹಿವಾಟುಗಳ ಜೊತೆಗೆ ಕಲೆಗಳ ಸಂಚಾರಕ್ಕೂ ದಾರಿ ಸುಗಮವಾಯಿತು. ಕಂಪನಿ ನಾಟಕಗಳ ಕೇಂದ್ರವಾಗಿದ್ದ ಮುಂಬಯಿಯಿಂದ ಕೆಲವು ನಾಟಕ ಕಂಪನಿಗಳು ಉತ್ತರ ಕರ್ನಾಟಕದ ಪ್ರಮುಖ ನಗರಗಳಿಗೆ ಬಂದು ಕ್ಯಾಂಪ್ ಮಾಡತೊಡಗಿದವು. ಅವು ಪ್ರದರ್ಶಿಸುತ್ತಿದ್ದ ಪಾರಸಿ ಮತ್ತು ಮರಾಠಿ ನಾಟಕಗಳು ಇಲ್ಲಿಯ ಜನರಿಗೆ ಹೊಸ ಆಕರ್ಷಣೆಯಾದವು. ಕ್ರಮೇಣ ಮರಾಠಿ ನಾಟಕಗಳನ್ನು ನೋಡುವುದು, ಮರಾಠಿ ಹಾಡುಗಳನ್ನು ಗುನುಗುನಿಸುವುದೇ ಇಲ್ಲಿಯ ಜನರ ಶೋಕಿಯಾಯಿತು. ಪರಿಣಾಮ 1850–80ರ ಅವಧಿಯಲ್ಲಿ ಬೆಳಗಾಂವಿ ಹುಬ್ಬಳ್ಳಿ ಧಾರವಾಡ ಪ್ರದೇಶಗಳು ಶೈಕ್ಷಣಿಕವಾಗಿ ಆಡಳಿತಾತ್ಮಕವಾಗಿ ಹೇಗೋ ಹಾಗೆ ಸಾಂಸ್ಕೃತಿಕವಾಗಿಯೂ ಮರಾಠಿಮಯವಾಗಿ ಪರಿಣಮಿಸಿದವು. ಕನ್ನಡದಲ್ಲಿ ಒಳ್ಳೆಯ ನಾಟಕಗಳಿಲ್ಲ, ಒಳ್ಳೆಯ ನಟ ನಟಿಯರಿಲ್ಲ ಎಂಬ ಕೊರಗು ಧಾರವಾಡ ಸೀಮೆಯ ಜನರಿಂದ ಕೇಳಿಬರತೊಡಗಿತು. ಕನ್ನಡ ರಂಗಭೂಮಿಗೆ ಒದಗಿದ ಈ ದುಃಸ್ಥಿತಿಗೆ ಶಾಂತಕವಿಗಳಂತ ಹಿರಿಯರ ಮನಸ್ಸು ಮರುಗಿತು. ಭಾಷಾಭಿಮಾನ ಕೆರಳಿತು. ಮರಾಠಿ ನಾಟಕಗಳ ಮಾದರಿಯಲ್ಲಿಯೇ ಕನ್ನಡದಲ್ಲಿಯೂ ನಾಟಕಗಳನ್ನಾಡುವ ಛಲ ಬೆಳೆಯಿತು. ಹೀಗೆ ಕನ್ನಡ ನಾಡು–ನುಡಿಯ ಅಭಿಮಾನದಿಂದ ಕಂಪನಿ ನಾಟಕಗಳನ್ನಾಡುವ ಸ್ಥಿತಿ ಉತ್ತರ ಕರ್ನಾಟಕಕ್ಕೆ ಎದುರಾಯಿತು.

ಕರ್ನಾಟಕ ವೃತ್ತಿರಂಗಭೂಮಿಯ ಕಥನವನ್ನು ಬೆಳಗಾಂವಿ ಜಿಲ್ಲೆಯ ಹಲಸಿ ಕಂಪನಿಯಿಂದಲೋ (1869) ಅಥವಾ ಧಾರವಾಡ ಜಿಲ್ಲೆಯ ಶರತಪುರ ನಾಟಕಮಂಡಳಿಯಿಂದಲೋ (1972) ಆರಂಭಿಸುತ್ತೇವೆ. ಆದರೆ ಇವೆರಡೂ ಕಂಪನಿಗಳು ವೃತ್ತಿಯ ಶಿಸ್ತನ್ನು ಅಷ್ಟಾಗಿ ಅಳವಡಿಸಿಕೊಂಡಿರಲಿಲ್ಲ. ಸಂಘಟನೆ, ಸಂಚಾರ ಮತ್ತು ನಾಟಕ ಪ್ರದರ್ಶನಗಳಲ್ಲಿ ಇವು ಅರೆವೃತ್ತಿ ಅರೆ ಹವ್ಯಾಸಿಗಳಾಗಿದ್ದವು. ಶ್ರೀರಂಗರು ಇವುಗಳಿಗೆ ಅರೆವೃತ್ತಿಯ ರಂಗಭೂಮಿಗಳೆಂದು ಕರೆದಿದ್ದಾರೆ. ವೃತ್ತಿಯ ಶಿಸ್ತನ್ನು ಅಳವಡಿಕೊಂಡ ಕರ್ನಾಟಕದ ಕಂಪನಿಯೆಂದರೆ ಶಿವಮೂರ್ತಿಸ್ವಾಮಿ ಕಣಬರಗಿಮಠರ ಶ್ರೀ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ. ತೊಣ್ಣೂರ (1899) ಶಿವಮೂರ್ತಿಸ್ವಾಮಿಗಳು ಗೋಕಾಕ ಮಿಲ್ಲಿನಲ್ಲಿ ನೌಕರಿ ಮಾಡುತ್ತಿದ್ದರು. ರಂಗಕಲೆಯ ಬಗ್ಗೆ ಬಹಳ ಆಸಕ್ತಿ ಇತ್ತು. ಆಗಾಗ ಇವರು ಮಿಲ್ಲಿನ ಕೆಲಸಕ್ಕಾಗಿ ಮುಂಬೈಗೆ ಹೋಗಿ ಬರುತ್ತಿದ್ದರು. ಅಲ್ಲಿದ್ದಾಗ ಮತ್ತು ಬೆಳಗಾಂವಿಗೆ ಬರುತ್ತಿದ್ದ ಮರಾಠ ನಾಟಕಗಳನ್ನು ತಪ್ಪದೆ ನೋಡುತ್ತಿದ್ದರು. ಅಲ್ಲಿಯ ಹೊಸತನವನ್ನು ಕನ್ನಡ ರಂಗಭೂಮಿಗೂ ತುಂಬಲು ಹಂಬಲಿಸುತ್ತಿದ್ದರು. ಅವರ ಪ್ರಯತ್ನದ ಫಲವಾಗಿಯೇ ಕೊಣ್ಣೂರ ಕಂಪನಿಯು ವೃತ್ತಿರಂಗಭೂಮಿಯ ವೈಭವ ಪರಂಪರೆಗೆ ನಾಂದಿ ಹಾಡಿತು. ಮೊದಲಿಗೆ ಡೈನಮೋ ವಿದ್ಯುತ್ತನ್ನು ಬಳಸಿದ ಟ್ರಾನ್ಸಫರ್ ಸೀನರಿಗಳನ್ನು ಅಳವಡಿಸಿದ ಮತ್ತು ಸ್ತ್ರೀ ಪಾತ್ರಕ್ಕೆ ಸ್ತ್ರೀಯರಿದ್ದರೇ ಚೆಂದ ಎಂದು ಕಲಾವಿದೆಯರಿಗೆ ಅವಕಾಶ ನೀಡಿದ ಹೆಗ್ಗಳಿಕೆ ಈ ಕಂಪನಿಯವರದು. ರಂಗಸಂಗೀತ, ರಂಗಶಿಕ್ಷಣ ಹಾಗೂ ಕಂಪನಿಯ ವ್ಯವಸ್ಥಾಪನೆಗೂ ಈ ಕಂಪನಿ ತುಂಬ ಮಹತ್ತ್ವ ನೀಡಿತು.

ಶನಿಪ್ರಭಾವ, ಮನೋವಿಜಯ, ಬಸವೇಶ್ವರ ಮುಂತಾದವು ಈ ಕಂಪನಿಯ ಪ್ರಸಿದ್ಧ ನಾಟಕಗಳು. ಬೆಳವಿ ರಾಚಯ್ಯ, ಚಿಕ್ಕೋಡಿ ಶಿವಲಿಂಗಯ್ಯ, ಮುರಗೋಡ ಗಂಗಾಧರಪ್ಪ, ಬಳ್ಳಾರಿ ಬಸಪ್ಪ, ಪೀತಾಂಬರಪ್ಪ, ಡೋಂಗರೆ, ಗುರುಲಿಂಗಪ್ಪ, ಗುಳೇದಗುಡ್ಡ, ಯಲ್ಲೂಬಾಯಿ ಗುಳೇದಗುಡ್ಡ ಮೊದಲಾದ ಪ್ರಸಿದ್ಧ ನಟನಟಿಯರು ಈ ಕಂಪನಿಯಲ್ಲಿದ್ದರು. ಗರುಡ ಸದಾಶಿವರಾಯರು ಕೆಲಕಾಲ ಈ ಕಂಪನಿಯಲ್ಲಿ ಅಭಿನಯದ ಶಿಕ್ಷಕರಾಗಿದ್ದರು. ಗುರುಸಿದ್ದಯ್ಯ, ಸಾಗಾವಿಮಠ ಎಂಬುವರು ವ್ಯವಸ್ಥಾಪಕರಾಗಿದ್ದರು. 20 ವರುಷಗಳ ರಂಗಸೇವೆಯ ಅನಂತರ ಕಂಪನಿ ನಿಂತಿತು. ಇಲ್ಲಿದ್ದ ಕಲಾವಿದರು ತಾವು ಗಳಿಸಿದ್ದ ಅನುಭವದ ಮೇಲೆ ಸ್ವತಂತ್ರ ಕಂಪನಿಗಳನ್ನು ಹುಟ್ಟುಹಾಕಿದರು. ಇದರಿಂದ ಕರ್ನಾಟಕದಲ್ಲಿ ನಾಟಕ ಕಂಪನಿಗಳ ಬೆಳೆಗೆ ನೆಲ ಹದವಾಯಿತು.

ಕೊಣ್ಣೂರ ಕಂಪನಿ ಅನಂತರ ಉತ್ತರ ಕರ್ನಾಟಕದಲ್ಲಿ ತಲೆಯೆತ್ತಿದ ನಾಟಕ ಕಂಪನಿಗಳ ಹೆಸರನ್ನು ಹೀಗೆ ಪಟ್ಟಿ ಮಾಡಬಹುದು. ಶಿರಹಟ್ಟಿ ವೆಂಕೋಬರಾಯರ ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ–1911. ಲಕ್ಷ್ಮೇಶ್ವರದ ಬಚ್ಚಾಸಾನಿ ದೊಡ್ಡಮನಿಯವರ ಸ್ತ್ರೀ ನಾಟಕ ಮಂಡಳಿ 1912. ಹೊಂಬಳ ಶಂಕರಗೌಡರ ಶ್ರೀ ಸಂಕರ ಲಿಂಗೇಶ್ವರ ಸಂಗೀತ ನಾಟಕ ಮಂಡಳಿ–1912, ವಾಮನ ರಾವ ಮಾಸ್ತರರ ವಿಶ್ವ ಗುಣಾದರ್ಶ ಸಂಗೀತ ನಾಟಕ ಮಂಡಳಿ 1914, ಗರುಡ ಸದಾಶಿವರಾಯರ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ–1919, ಗುಳೇದ ಗುಡ್ಡ ಗಂಗೂ ಬಾಯಿಯವರ ಶ್ರೀ ಕೃಷ್ಣ ಸಂಗೀತ ನಾಟಕ ಮಂಡಳಿ–1925 ಚಿಕ್ಕೋಡಿ ಶಿವಲಿಂಗ ಸ್ವಾಮಿಗಳ ಶಿರಸಿ

ಮಾರಿಕಾಂಬಾ ನಾಟಕ ಮಂಡಳಿ, ಬಸನಗೌಡ ಅಬ್ಬಿಗೇರಿ ಅವರ ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ–1928, ಶಿವ ಯೋಗಪ್ಪ ವಾಲಿ ಅವರ ಲೋಕಸೇವಾ ಸಂಗೀತ ನಾಟಕ ಮಂಡಳಿ ಸಂಪಗಾವಿ–1928, ಚಿಂದೋಡಿ ಶಾಂತವೀರಪ್ಪನವರ ಶ್ರೀ ಗುರು ಕೆ.ಬಿ.ಆರ್ ಡ್ರಾಮಾ ಕಂಪನಿ–1928, ಯರಾಸಿ ಭರಮಪ್ಪನವರ ಶ್ರೀ ವಾಣಿ ವಿಲಾಸ ಸಂಗೀತ ನಾಟಕ ಮಂಡಳಿ–1929, ಲಕ್ಷ್ಮಣರಾವ್ ಅಸುಂಡಿಯವರ ಶಿವಾನಂದ ಸಂಗೀತ ನಾಟಕ ಮಂಡಳಿ–1930, ಕಂದಗಲ್ಲ ಹನುಮಂತರಾಯರ ಲಲಿತ ಕಲೋದ್ಧಾರಕ ನಾಟಕ ಮಂಡಳಿ–1933, ಸೂಡಿ ಹುಚ್ಚಪ್ಪ ಏಣಗಿ ಬಾಳಪ್ಪನವರ ಗುರುಸೇವಾ ಸಂಗೀತ ನಾಟಕ ಮಂಡಳಿ–1933, ಭೀಮಪ್ಪ ಹೂಗಾರರ ಶ್ರೀ ಭಾಗ್ಯೋದಯ ನಾಟಕ ಮಂಡಳಿ, ಅಥಣಿ–1933, ಗೋಕಾಕ ತುಕಾರಾಮಪ್ಪನವರ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ–1934, ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಜಯ ಕರ್ನಾಟಕ ನಾಟಕ ಮಂಡಳಿ–1935, ಸೋನುಬಾಯಿ ದೊಡ್ಡಮನಿಯವರ ನೂತನ ಸಂಗೀತ ನಾಟಕ ಮಂಡಲಿ–1935, ಹಂದಿಗನೂರು ಸಿದ್ರಾಮಪ್ಪನವರ ವಿಶ್ವಕಲಾರಂಜನ ನಾಟಕ ಮಂಡಳಿ–1937, ಬಸವರಾಜ ಮನಸೂರರ ಕಲಾಪ್ರಕಾಶ ನಾಟಕ ಮಂಡಳಿ–1939, ಪಂಡಿತ ಪುಟ್ಟರಾಜ ಗವಾಯಿಗಳ ನಾಟಕ ಮಂಡಳಿ ಗದಗ–1940. ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕುಮಾರ ವಿಜಯ ನಾಟ್ಯಸಂಘ–1942, ನ್ಯಾಮತಿ ಶಾಂತಪ್ಪನವರ ಶ್ರೀ ಮಹೇಶ ನಾಟ್ಯ ಸಂಘ–1942, ಏಣಗಿ ಬಾಳಪ್ಪ ಮತ್ತು ಎಲ್.ಎಸ್. ಇನಾಮದಾರರ ವೈಭವ ಶಾಲಿ ನಾಟ್ಯ ಸಂಘ–1943. ಅಮ್ಮಣಗಿ ದೇಸಾಯಿ ಅವರ ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘ–1943, ವಸಂತಸಾ ನಾಕೋಡ ಸಹೋದರರ ವಸಂತಕಲಾ ನಾಟ್ಯಸಂಘ ಹುಬ್ಬಳ್ಳಿ–1943, ರಹಿಮಾನವ್ವ ಕುಕನೂರರ ಶ್ರೀ ಲಲಿತಕಲಾ ನಾಟ್ಯ ಸಂಘ–1950, ಚೆನ್ನ ಬಸಪ್ಪ ಕವಲಿ ಅವರ ಕಲಾಪ್ರಕಾಶ ನಾಟಕ ಮಂಡಳಿ, ಬ್ಯಾಡಗಿ–1950, ಸಿದ್ದರಾಜ ಉಜ್ಜಯಿನಿಮಠದ ಸಮಾಜ ವಿಕಾಸ ನಾಟಕ ಮಂಡಳಿ–1951, ಸಂಗಪ್ಪ ಬೆಳವುಣಕಿ ಅವರ ಶ್ರೀ ವೀರಭದ್ರೇಶ್ವರ ನಾಟಕ ಸಂಘ–1959, ಬಿ.ಆರ್ ಅರಿಷಿನ ಗೋಡಿ ಅವರ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ–1961, ಗುಡಗೇರಿ ಎನ್. ಬಸವರಾಜರ ಶ್ರೀ ಸಂಗಮೇಶ್ವರ ನಾಟ್ಯ ಸಂಘ–1963, ಶಂಕ್ರಯ್ಯ ಸ್ವಾಮಿ ಕಡಪಟ್ಟಿಯವರ ಶ್ರೀ ಗುರುಪ್ರಸಾದ ನಾಟ್ಯ ಸಂಘ, ಜಮಖಂಡಿ–1963, ಬಿ. ಓಬಳೇಶ ಅವರ ಶ್ರೀ ಓಂಕರೇಶ್ವರ ನಾಟ್ಯ ಸಂಘ, ರಾಣಿಬೆನ್ನೂರು–1965, ಮಲ್ಲನಗೌಡ ದೇಸಾಯಿ ಯವರ ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ–1966, ಸಿ.ಕೆ. ಜೋಷಿ ಅವರ ಕರ್ನಾಟಕ ಕಲಾ ಸಂಘ, ಯಂಕಂಚಿ–1968, ಪೂಡಿ ಶೇಖರಯ್ಯನವರ ಶ್ರೀ ಭಾರತಿ ನಾಟ್ಯ ಸಂಘ–1969, ಬಿ.ಎಸ್. ಪಟ್ಟಣಶೆಟ್ಟಿಯವರ ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ–1975, ವೀರನ ಗೌಡ ಪಾಟೀಲರ ಶ್ರೀ ಸಂಗಮೇಶ್ವರ ನಾಟ್ಯ ಸಂಘ ಆಶಾಪೂರ–1982, ಮಂಡಲಗಿರಿ ಕಂಪನಿ, ಶೇಖರ ಮಾಸ್ತರರ ಕಂಪನಿ, ಶ್ರೀಧರ ಹೆಗಡೆಯವರ ಕಂಪನಿ, ನಾಗರಾಜ ಸಾಗರರ ಕಂಪನಿ, ರಾಜು ತಾಳಿಕೋಟೆಯವರ ಕಂಪನಿ, ಬಸವರಾಜ ಹಿರೇಮಠ ಕಂಪನಿ, ಕೆ. ನಾಗಯ್ಯ ಸ್ವಾಮಿಗಳ ಕಂಪನಿ.

ಅಲ್ಪ ಕಾಲ ಸೇವೆ ಗೈದ ಕಂಪನಿಗಳ ಹೆಸರನ್ನು ಇಲ್ಲಿ ಉಲ್ಲೇಖಿಸಿಲ್ಲ. ಮೇಲಿನ ಪಟ್ಟಿ ಗಮನಿಸಿದರೆ, 1900–70ರ ಕಾಲಾವಧಿಯಲ್ಲಿ ಉತ್ತರ ಕರ್ನಾಟಕವು ನಾಟಕ ಕಂಪನಿಗಳ ಸಮೃದ್ಧ ಬೆಳೆಯನ್ನು ಕಂಡಿತ್ತೆಂಬುದು ಸ್ಪಷ್ಟ. ಈ ಅವಧಿಯಲ್ಲಿ ಹೊಸ ನಾಟಕಗಳಿಂದ ಹೊಸ ರಂಗ ಪರಿಕರಗಳಿಂದ ಪ್ರೇಕ್ಷಕರನ್ನು ಆಕರ್ಷಿಸಿ ವೃತ್ತಿ ರಂಗಭೂಮಿ ಬೆಳೆಯಿತು. ಪ್ರೇಕ್ಷಕರನ್ನು ಬೆಳೆಸಿತು. ಅದ್ಭುತವಾದ ರಂಗ ಸಜ್ಜಿಕೆ, ಸೀನ ಸೀನರಿಗಳಿಗೆ ಶಿರಹಟ್ಟಿಕಂಪನಿ, ಹೆಸರಾಗಿತ್ತು. ಈ ಕಂಪನಿಯ ದಶಾವತಾರ ನಾಟಕ ನಾಡಿನ ತುಂಬ ಪ್ರಚಾರವಾಗಿತ್ತು. ಹಾಸ್ಯರಸ ಪ್ರಧಾನ ನಾಟಕಗಳಿಂದ ಹಲಗೇರಿ ಕಂಪನಿ ಪ್ರಸಿದ್ಧವಾಗಿತ್ತು. ವಾಮನರಾಯರ ಕಂಪನಿಯು ರಂಗ ಸಂಗೀತದಿಂದ ಹೆಸರುವಾಸಿಯಾಗಿತ್ತು. ಗರುಡರ ಕಂಪನಿಯು ಅಭಿನಯ ಪ್ರಧಾನ ನಾಟಕಗಳಿಂದ ಕೀರ್ತಿ ಪಡೆದಿತ್ತು. ಕಂದಗಲ್ಲರ ನಾಟಕಗಳಿಗೆ ಮತ್ತು ಸಾಮಾಜಿಕ ನಾಟಕಗಳಿಗೆ ವಿಶೇಷ ಮಹತ್ತ್ವ ತಂದುಕೊಟ್ಟ ಕಂಪನಿಗಳೆಂದರೆ ಗೋಕಾಕ ಕಂಪನಿ ಮತ್ತು ಜಮಖಂಡಿ ಕಂಪನಿಗಳು. ಮರಾಠಿ ನಾಟಕಗಳ ಪ್ರಯೋಗಶೀಲತೆ ಯನ್ನು ಅಳವಡಿಸಿ, ರಂಗಭೂಮಿಗೆ ಹೊಸತನ ತಂದ ಕಂಪನಿಗಳಲ್ಲಿ ಏಣಗಿ ಭಾಳಪ್ಪನವರ ಕಂಪನಿ ಪ್ರಮುಖವಾದುದು.

ಪ್ರೇಕ್ಷಕರನ್ನು ಕಡಿಮೆ ಅವಧಿಯಲ್ಲಿ ರಂಜಿಸಿ, ಕಥೆ, ಚಾಲನೆ ನೀಡುವಂಥ ಸಂಗೀತವನ್ನು ನಾಟಕ ಕಂಪನಿಗಳು ಪ್ರಯೋಗಿಸಿದವು. ರಂಗ ಸಂಗೀತ ಪರಂಪರೆಯನ್ನು ನಿರ್ಮಿಸಿದವು. ಕಂಪನಿಗಳಲ್ಲಿ ಸಂಗೀತ ಹೇಳಿಕೊಡಲು ಗವಾಯಿಗಳಿರುತ್ತಿದ್ದರು. ನಟರ ಕಂಠತ್ರಾಣ ಪರೀಕ್ಷಿಸಿಯೇ ಪಾತ್ರ ಕೊಡುವ ಪದ್ಧತಿ ಇತ್ತು. ಹಿಂದಿನ ಕಾಲದಲ್ಲಿ ಹಾಡಬಲ್ಲವನೇ ನಟ, ಹಾಡುವುದೇ ನಾಟಕ, ಎನ್ನುವಂಥ ಸ್ಥಿತಿ ಇತ್ತು. ಸಂಗೀತ ಪ್ರಧಾನ ನಾಟಕಗಳ ಕಾಲದಲ್ಲಿ ಗಾಯಕ–ನಟರ ದೊಡ್ಡ ಪರಂಪರೆ ನಿರ್ಮಾಣವಾಯಿತು. ವಾಮನರಾವ್ ಮಾಸ್ತರ, ಬಸವರಾಜ ಮನಸೂರ, ಗಂಗು ಬಾಯಿಗುಳೇದ ಗುಡ್ಡ, ಡಿ. ಮುದ್ದು ವೀರಾಚಾರ್ಯ, ಬೇವೂರ ಬಾದಷಾ ಮಾಸ್ತರ, ನೀಲಕಂಠ ಬುವಾ, ಗಾಡಗೋಳಿ ಮುರಗೋಡ ಗಂಗಾಧರಪ್ಪ ತುಕಾರಾಮ ಬುವಾ ಗೋಕಾಕ, ಸೋನುಬಾಯಿ ದೊಡ್ಡ ಮನಿ, ಏಣಗಿ ಬಾಳಪ್ಪ, ಗಿರಡಿ ಗಂಗಯ್ಯ ಮೊದಲಾದ ನಟ–ನಟಿಯರು ಗಾಯನದಿಂದ ಪ್ರೇಕ್ಷಕರನ್ನು ರಂಜಿಸಿ ಪ್ರಸಿದ್ಧರಾಗಿದ್ದರು.

ಗರುಡ ಸದಾಶಿವರಾಯರಿಂದ ಅಭಿನಯಕ್ಕೆ ಮಹತ್ತ್ವ ಬಂತು. ಕಂದಗಲ್ಲ ಹನುಮಂತರಾಯರಿಂದ ಧ್ವನಿರಮ್ಯತೆಯ ಸಂಭಾಷಣೆ ಒತ್ತು ದೊರೆಯಿತು. ಕೋಲ ಕಾಂತಪ್ಪನವರಿಂದ ನಲವಡಿ ಶ್ರೀಕಂಠಶಾಸ್ತ್ರಿಗಳಿಂದ, ಎಚ್.ಟಿ. ಮಹಾಂತೇಶ ಶಾಸ್ತ್ರಿಗಳಿಂದ ನಾಟಕದ ಲಲಿತ ಸಂಭಾಷಣೆಗೆ, ಸಾಮಾಜಿಕ ಸಮಸ್ಯೆಗಳಿಗೆ ಪ್ರಾಧಾನ್ಯತೆ ದೊರೆಯಿತು. ಚಿಕ್ಕೋಡಿ ಶಿವಲಿಂಗ ಸ್ವಾಮಿಗಳ 'ಕಿತ್ತೂರು ಚೆನ್ನಮ್ಮ' ಕೃತಿಯಿಂದ ಐತಿಹಾಸಿಕ ನಾಟಕಗಳಿಗೆ ಸ್ಫೂರ್ತಿ ದೊರೆಯಿತು. ಅಚ್ಯುತರಾವ್ ಹುಯಿಲಗೋಳ, ಎಲ್.ಎಸ್.ಇನಾಮದಾರ, ಆರ್.ಡಿ.ಕಾಮತ ಜಿ.ಜಿ.ಹೆಗಡೆ, ಪುಟ್ಟರಾಜು ಗವಾಯಿಗಳು ಪಿ.ಬಿ.ಧುತ್ತರಗಿ, ಕೆ.ಎನ್.ಸಾಳುಂಕೆ, ಮಾರುತೇಶ ಮಾಂಡ್ರೆ, ಎಚ್.ಎನ್.ಹೂಗಾರ, ಎಚ್.ಆರ್.ಬಸ್ಮೆ, ಅರಿಷಿಣಗೋಡಿ, ಎನ್.ಎಸ್.ಜೋಷಿ, ಹುಲಿಮನೆ ಸೀತಾರಾಮಶಾಸ್ತ್ರಿ, ನೀಲಕಂಠರಾವ್ ಶೇಡಬಾಳಕರ, ಚಿತ್ತರಗಿ ಗಂಗಾಧರಶಾಸ್ತ್ರಿ, ಬಿ.ಓಬಳೇಶ, ಮೋಹನಕುಮಾರ ಕೀರಣಗಿ, ನಿಟ್ಟಾಲಿ ಕವಿ, ಹಾವೇರಿ ಬಸವಲಿಂಗಶಾಸ್ತ್ರಿ, ಎನ್.ಎಸ್.ತಾರನಾಳ, ಪ್ರಕಾಶ ಕಡಪಟ್ಟಿ, ಬಿ.ವಿ.ಈಶ, ನಾದ ನರಸಿಂಹಮೂರ್ತಿ, ಎಸ್ ಬಸವರಾಜ ಮೊದಲಾದವರಿಂದ ಕಂಪನಿಗಳಿಗಾಗಿ ವೈವಿಧ್ಯಪೂರ್ಣ ನಾಟಕಗಳು ರಚನೆಯಾದವು. 1980ರಿಂದ ಈಚೆಗೆ ಹೊಸ ನಾಟಕಗಳ ಕೊರತೆಯಿಂದಾಗಿ ಬಹು ದೊಡ್ಡ ಕಂದರ ನಿರ್ಮಾಣವಾಗಿದೆ.

ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿ ಕಂಪನಿ ನಾಟಕಗಳು ವಸಾಹತುಶಾಹಿ ಸರಕಾರವನ್ನು ಪ್ರತಿಭಟಿಸುವುದರಲ್ಲಿ ಮಹತ್ತ್ವದ ಪಾತ್ರವಹಿಸಿದವು. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ವೀರ ಸಿಂಧೂರ ಲಕ್ಷ್ಮಣ, ನರಗುಂದ ಬಂಡಾಯ, ಗರುಡ ಸದಾಶಿವರಾಯರ ಪಾದುಕಾ ಕಂದಗಲ್ಲರ ಅಕ್ಷಯಾಂಬರ ಮುಂತಾದ ನಾಟಕಗಳು ಜನರಲ್ಲಿ ಸ್ವಾತಂತ್ರ್ಯದ ಅಭಿಮಾನವನ್ನು ಜಾಗೃತಿಗೊಳಿಸಿದವು. ಅವತ್ತಿನ ಸಂದರ್ಭದಲ್ಲಿ ಜನರಿಗೆ ಗೊತ್ತಾಗುವ ಆದರೆ ಅಧಿಕಾರಿಗಳಿಗೆ ಗೊತ್ತಾಗದಂತೆ ರಹಸ್ಯ ಭಾಷೆಯನ್ನು ರೂಪಕ ಕಥೆಗಳನ್ನು ವೃತ್ತಿರಂಗಭೂಮಿ ರೂಪಿಸಿಕೊಂಡಿತ್ತು. ಜೊತೆಗೆ ಭೂಗತ ಚಳವಳಿಗಾರರಿಗೆ, ಚಳವಳಿಗಾರರ ಮನೆ ಮಂದಿಗೆ ನಾಟಕ ಕಂಪನಿಗಳು ಆಸರೆಯ ತಾಣಗಳಾಗಿದ್ದವು.

ಸ್ವಾತಂತ್ರ್ಯ ಸಿಕ್ಕ ಮೇಲೆ ದೇಶದ ರಾಜಕೀಯ ಚಿತ್ರ, ಸಮಾಜದ ಚಿತ್ರ ಬದಲಾಯಿತು. ಭಾಷಾವಾರು ಪ್ರಾಂತಗಳ ರಚನೆಯಿಂದ ಗಡಿ ಸಮಸ್ಯೆಗಳು ತಲೆದೋರಿದವು. ರಾಜಕಾರಣಿಗಳು ಅಧಿಕಾರಕ್ಕಾಗಿ ಕಚ್ಚಾಡತೊಡಗಿದರು. ಶಿಕ್ಷಣದಿಂದ ನಗರೀಕರಣದಿಂದ ಹೊಸ ಹೊಸ ಸಮಸ್ಯೆಗಳು ಎದುರಾದವು. ಇಂಥವುಗಳನ್ನೆಲ್ಲ ಬಿಂಬಿಸಲು ಕಂಪನಿ ನಾಟಕಗಳು ಪ್ರಯತ್ನಿಸಿದವು. ದೇಶದ ಹಿತಾಸಕ್ತಿ, ಸಾಮಾಜಿಕ ಸೌಖ್ಯ, ಕುಟುಂಬದ ಯೋಗಕ್ಷೇಮ ಸಾರುವಂಥ ನಾಟಕಗಳು ಈ ಅವಧಿಯಲ್ಲಿ ಪ್ರದರ್ಶನಗೊಂಡವು.

ನಟ ಪರಂಪರೆಯನ್ನು ರೂಪಿಸಿದ್ದು ನಾಟಕ ಕಂಪನಿಗಳ ಮಹತ್ತ್ವದ ಸಾಧನೆಗಳಲ್ಲಿ ಒಂದು. ಮೊದಲಿನ ಕಾಲದಲ್ಲಿ ಶರೀರ ಹಾಗೂ ಶಾರೀರಗಳೆರಡೂ ನಟನ ಅಳತೆ ಗೋಲಾಗಿದ್ದವು. ನಟನಾಗುವವನಿಗೆ ರೂಪ, ಗಾಂಭೀರ್ಯ, ಮಧುರ ಕಂಠ ಹಾಗೂ ಸಂವಾದ ಶೈಲಿ ಬೇಕಾಗುತ್ತಿತ್ತು. ಇಂಥ ವ್ಯಕ್ತಿತ್ವದ ನಟರು ಗಾನಾಭಿನಯಗಳಿಂದ ಪಾತ್ರಕ್ಕೆ ಕಳೆ ಕಟ್ಟುತ್ತಿದ್ದರು. ಕೆಲವು ನಟರಂತೂ ತಮ್ಮ ವ್ಯಕ್ತಿತ್ವದಿಂದ, ಅಭಿನಯ ಕೌಶಲ್ಯದಿಂದ ಒಂದೊಂದು ಪಾತ್ರಗಳನ್ನೂ ಆಕಸ್ಮಾತ್ ಮೆಚ್ಚಿಕೊಂಡಿದ್ದರು. ವಿಶಿಷ್ಟ ಪಾತ್ರಗಳಿಂದಲೇ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿದ್ದರು. ಆಂಜನೇಯನ ಪಾತ್ರದಲ್ಲಿ ಬೆಳ್ಳೂರು ನಂಜುಂಡಯ್ಯ, ದಶರಥನ ಪಾತ್ರದಲ್ಲಿ ಗರುಡ ಸದಾಶಿವರಾಯರು, ಭೀಷ್ಮನ ಪಾತ್ರದಲ್ಲಿ ಹಂದಿಗನೂರು ಸಿದ್ರಾಮಪ್ಪ , ಭೀಮನ ಪಾತ್ರದಲ್ಲಿ ಅದೃಶ್ಯಪ್ಪ, ಮಾನವಿ, ಅಶ್ವತ್ಥಾಮನ ಪಾತ್ರದಲ್ಲಿ ಎಲಿವಾಳ ಸಿದ್ದಯ್ಯಸ್ವಾಮಿ, ಶಕುನಿ ಪಾತ್ರದಲ್ಲಿ ಲಾರಿ ಗುಂಡಪ್ಪ, ಬಸವಣ್ಣನ ಪಾತ್ರದಲ್ಲಿ ಏಣಗಿ ಬಾಳಪ್ಪ ಹೀಗೆಯೇ ಪಾತ್ರಗಳಿಂದ ನಟರು, ನಟರಿಂದ ಪಾತ್ರ ಬೆಳೆದು ಬೆಳಗಿದ್ದು ಒಂದು ಅದ್ಭುತವೇ. ನೂರಾರು ವರ್ಷಗಳ ಅವಧಿಯಲ್ಲಿ ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ ಕಂಪನಿಗಳನ್ನು ಕಟ್ಟಿ ಬೆಳೆಸಿತು. ಕಲಾವಿದರನ್ನು ರೂಪಿಸಿತು. ಪ್ರೇಕ್ಷಕರನ್ನು ಕಟ್ಟಿತು. ರಂಗ ಸಂಗೀತ ಪರಂಪರೆಯನ್ನು ನಿರ್ಮಿಸಿತು. ನಾಟಕಗಳಿಂದ ಸಮಕಾಲೀನ ಬದುಕಿಗೆ ಸ್ಪಂದಿಸಿತು. ಹೀಗೆ ಹಲವಾರು ದೃಷ್ಟಿಗಳಿಂದ ಇತಿಹಾಸವನ್ನು ಸೃಷ್ಟಿಸಿದ್ದ ವೃತ್ತಿ ರಂಗಭೂಮಿಯು 1970ರಿಂದ ಸಮಸ್ಯೆಗಳನ್ನು ಎದುರಿಸುತ್ತ ಸೋತ ಹೆಜ್ಜೆಗಳಿಂದ ನಡೆಯುತ್ತಿದೆ. ಇದರ ಪುನಶ್ಚೇತನಕ್ಕಾಗಿ ಸರಕಾರದಿಂದ ಹಲವಾರು ಯೋಜನೆಗಳು ಜಾರಿಯಾದರೂ ಪ್ರಯೋಜನ ಕಂಡುಬರುತ್ತಿಲ್ಲ. ವರುಷದಿಂದ ವರುಷಕ್ಕೆ ಕಂಪನಿಗಳು ಮುಚ್ಚುತ್ತಿವೆ. ಹೀಗೆಯೇ ಆದರೆ ಕೆಲ ವರ್ಷಗಳಲ್ಲಿ ಹೇಳಿಕೊಳ್ಳಲು ಒಂದು ನಾಟಕ ಕಂಪನಿಯೂ ಉಳಿಯಲಿಕ್ಕಿಲ್ಲ.

ಹೀಗಾಗದಂತೆ ನೋಡಿಕೊಳ್ಳಬೇಕು. ವೃತ್ತಿರಂಗದ ನಿಜವಾದ ವೈರಿ ಹೊರಗಿದ್ದಾನೋ ಒಳಗಿದ್ದಾನೋ ಪತ್ತೆ ಹಚ್ಚಬೇಕು. ಪುನಶ್ಚೇತನದ ಆದ್ಯತೆಗಳು ಹೇಗಿರಬೇಕು? ಎಂಬುದು ಸ್ಪಷ್ಟವಾಗಬೇಕು. ಪರಿಸ್ಥಿತಿ ಕೈಮೀರುವ ಮೊದಲು, ಈ ರಂಗಭೂಮಿಯ ಒಳಗಿನಿಂದ, ಹೊರಗಿನಿಂದ ಎಲ್ಲರಿಂದ ಕಾಯಕಲ್ಪದ ಚಟುವಟಿಕೆಗಳು ಪ್ರಾಮಾಣಿಕವಾಗಿ ನಡೆಯಬೇಕು.

**III. ಹವ್ಯಾಸಿ ರಂಗಭೂಮಿ :** ವೃತ್ತಿ ರಂಗಭೂಮಿಯ ಜೊತೆಯಲ್ಲೇ ಹವ್ಯಾಸಿ ರಂಗಭೂಮಿ ಉತ್ತರ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿತು. 1896 ರ ಸು., ಧಾರವಾಡದ ಮದಿಹಾಳದಲ್ಲಿ ಪ್ರಾಚ್ಯ ಕ್ರೀಡಾ ಸಂವರ್ಧಕ ಮಂಡಳಿಯೇ ಮೊದಲ ಹವ್ಯಾಸಿ ರಂಗಸಂಸ್ಥೆ ಎನಿಸಿದೆ. ಪೌರಾಣಿಕ ನಾಟಕಗಳಿಂದ ಪ್ರಾರಂಭವಾದ ಸಂಸ್ಥೆ ಸಾಮಾಜಿಕ ನಾಟಕಗಳನ್ನು ಪ್ರಯೋಗಿಸಿತು. 1899ರಲ್ಲಿ ಮುಗಳಿ ಶ್ರೀನಿವಾಸ ರಾಯರು ನೇತೃತ್ವದಲ್ಲಿ 'ಬಾದಾಮಿ ಅಮೆಚೂರ್ಸ್' ರಂಗ ಸಂಸ್ಥೆ ಸ್ಥಾಪನೆಯಾಯಿತು. ಚುರಮುರಿಯವರ ಶಾಕುಂತಲವನ್ನು ಇದು ಬಾದಾಮಿ, ಬಾಗಲಕೋಟೆ, ಬಿಜಾಪುರ ನಗರಗಳಲ್ಲಿ ಪ್ರದರ್ಶಿಸಿತು. ಈ ಸಂಘದಿಂದ ಸ್ಫೂರ್ತಿ ಪಡೆದು ಮುದವೀಡು ಕೃಷ್ಣರಾಯರು ಧಾರವಾಡದಲ್ಲಿ ಭರತ ಕಲೋತ್ತೇಜಕ ಸಂಗೀತ ಸಮಾಜವನ್ನು ಸ್ಥಾಪಿಸಿದರು. 1905ರಲ್ಲಿ ಇದು ಚುರುಮುರಿಯವರ 'ಶಾಕುಂತಲವನ್ನು' ಅಭಿನಯಿಸಿತು. ಇದರ ಜೊತೆಗೆ ಸೌಭದ್ರ, ರಾಮರಾಜ್ಯ ವಿಯೋಗ, ಮೃಚ್ಛಕಟಿಕ ಮೊದಲಾದ ನಾಟಕಗಳನ್ನು ಆಡಿತು. ಧಾರವಾಡದ ರೈಲ್ವೆ ಕಛೇರಿಯಲ್ಲಿದ್ದ ನೌಕರರೇ ಇಲ್ಲಿ ಕಲಾವಿದರಾಗಿದ್ದರು. ರೈಲ್ವೆ ಕಛೇರಿ ಚೆನ್ನೈಗೆ ವರ್ಗವಾದಾಗ ಸಂಘಕ್ಕೆ ಕಲಾವಿದರ ಕೊರತೆ ಎದುರಾಯಿತು.

ಭರತ ಕಲೋತ್ತೇಜಕ ಸಮಾಜವನ್ನು ಅನುಸರಿಸಿ ಧಾರವಾಡ, ಬಿಜಾಪುರ, ಬೆಳಗಾವಿ ಭಾಗಗಳಲ್ಲಿ ಹಲವಾರು ವಿಲಾಸಿ ರಂಗ ಸಂಸ್ಥೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಗದುಗಿನ ಹುಯಿಲಗೋಳ ನಾರಾಯಣರಾಯರ 'ಯಂಗ್‌ಮನ್ಸ್ ಫುಟ್‌ಬಾಲ್‌ಕ್ಲಬ್ ಅಮೆಚೂರ್ಸ್' ಪ್ರಮುಖವಾದುದು. ಈ ಸಂಘವು ನಾರಾಯಣರಾಯರೇ ಬರೆದ ಶಿಕ್ಷಣ ಸಂಭ್ರಮ, ಸ್ತ್ರೀಧರ್ಮ–ರಹಸ್ಯ ಮೊದಲಾದ ನಾಟಕಗಳನ್ನು ಪ್ರದರ್ಶಿಸಿತು. 1927 ರಲ್ಲಿ ಕೆರೂರು ವಾಸುದೇವಾಚಾರ್ಯರು ಬಾಗಲಕೋಟೆಯಲ್ಲಿ 'ವಾಸುದೇವ ವಿನೋದಿನಿ ಸಭಾ' ಆರಂಭಿಸಿದರು. ವಾಸುದೇವಾಚಾರ್ಯರೇ ಅನುವಾದಿಸಿದ ಇಂಗ್ಲಿಷ್ ನಾಟಕಗಳನ್ನು ಪ್ರದರ್ಶಿಸಿ ಈ ಸಂಸ್ಥೆ ಜನಪ್ರಿಯತೆ ಪಡೆಯಿತು. ಇದಾದ ಮೇಲೆ ಈ ಭಾಗದಲ್ಲಿ ಹಲವಾರು ಹವ್ಯಾಸಿ ನಾಟಕ ತಂಡಗಳು ತಲೆಯೆತ್ತಿದವು. ಶ್ರೀರಂಗರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಸಂದರ್ಭದಲ್ಲಿ ಹವ್ಯಾಸಿ ರಂಗ ಚಟುವಟಿಕೆಗಳಿಗೆ ಜೋರು ಬಂದಿತು. ಅವರು ಧಾರವಾಡದಲ್ಲಿ ಕನ್ನಡ ಅಮೆಚೂರ್ಸ್ ನಾಟ್ಯಸಂಘವನ್ನು 1933 ರಲ್ಲಿ ಪ್ರಾರಂಭಿಸಿದರು. ಶ್ರೀರಂಗರ ವೈಚಾರಿಕ ನಾಟಕಗಳಿಂದ ಈ ಸಂಸ್ಥೆ ರಂಗಭೂಮಿಯ ಮೇಲೆ ಹೊಸ ಕ್ರಾಂತಿಯನ್ನೇ ಮಾಡಿತು. ಇದರಿಂದ ಸ್ಫೂರ್ತಿ ಪಡೆದು ಯುವಕರು, ಕಾಲೇಜು ವಿದ್ಯಾರ್ಥಿಗಳು, ನೌಕರರು ಶ್ರೀರಂಗರ ನಾಟಕಗಳನ್ನು ಆಡಲಿಕ್ಕೆಂದು ರಂಗಸಂಸ್ಥೆಗಳನ್ನು ಕಟ್ಟಿಕೊಂಡರು. ಬೆಳಗಾಂವಿ, ಬಿಜಾಪುರ, ಬಾಗಲಕೋಟೆ, ಹುಬ್ಬಳ್ಳಿ, ಗದಗ ಮುಂತಾದ ಸ್ಥಳಗಳಲ್ಲಿ ಹವ್ಯಾಸಿ ರಂಗಚಟುವಟಿಕೆಗಳು ಭರದಿಂದ ಸಾಗಿದವು. ಶ್ರೀರಂಗರ ಶೋಕಚಕ್ರ, ಹರಿಜನ್ವಾರ, ಹುಟ್ಟಿದ್ದು ಹೊಲೆಯೂರು, ಕತ್ತಲೆ ಬೆಳಕು, ಕೇಳು ಜನಮೇಜಯ ಮುಂತಾದ ನಾಟಕಗಳು ಪ್ರೇಕ್ಷಕರಿಗೆ ಹೊಸ ಸಾಮಾಜಿಕ ಅರಿವು ಮತ್ತು ವಿಚಾರಶಕ್ತಿಯನ್ನು ತಂದುಕೊಟ್ಟವು. ಒಟ್ಟಿನಲ್ಲಿ ಕನ್ನಡ ಅಮೇಚೂರ್ಸ್ ನಾಟ್ಯ ಸಂಘ ಮತ್ತು ಕಲೋಪಾಸಕ ಮಂಡಳಿಯಿಂದ ಹವ್ಯಾಸಿ ರಂಗಭೂಮಿಯು ಚಳವಳಿಯ ರೂಪ ಪಡೆಯಿತು.

ಶ್ರೀರಂಗರ ಅನಂತರ ಜಿ.ಬಿ. ಜೋಶಿ, ಚಂದ್ರಶೇಖರ ಕಂಬಾರ, ಚಂದ್ರಕಾಂತ ಕುಸನೂರ, ಗಿರೀಶ ಕಾರ್ನಾಡ, ಚಂದ್ರಶೇಖರ ಪಾಟೀಲ, ಹೂಲಿ ಶೇಖರ ಮೊದಲಾದವರ ನಾಟಕಗಳಿಂದ ಉತ್ತರ ಕರ್ನಾಟಕದ ಹವ್ಯಾಸಿ ರಂಗಭೂಮಿ ಚೆನ್ನಾಗಿಯೇ ಬೆಳೆಯಿತು. ನೀನಾಸಂ ರಂಗ ಶಿಕ್ಷಣ ಕೇಂದ್ರದಿಂದ ತರಬೇತಿ ಪಡೆದು ಬಂದ ಕಲಾವಿದರು ನಿರ್ದೇಶಕರು ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಟ್ಟಿದ್ದಾರೆ. ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಒಂದು ಇಲ್ಲವೆ ಎರಡರಂತೆ ಹವ್ಯಾಸಿ ರಂಗತಂಡಗಳಿವೆ. ಇವು ವರುಷದಲ್ಲಿ ಎರಡು–ಮೂರು ಬಾರಿ ನಾಟಕ ಪ್ರದರ್ಶನವನ್ನು ಹಮ್ಮಿಕೊಳ್ಳುತ್ತವೆ. ಟಿ.ವಿ.ಯಿಂದಾಗಿ ಇತ್ತೀಚೆಗೆ ಹವ್ಯಾಸಿ ರಂಗಭೂಮಿಯೂ ಸೊರಗಿದಂತೆ ಕಾಣುತ್ತದೆ. ಇಲ್ಲಿಯ ಕಲಾವಿದರು ಟಿ.ವಿ. ಮತ್ತು ಸಿನಿಮಾ ಮಾಧ್ಯಮಗಳತ್ತ ಒಲಿದ ಪರಿಣಾಮವೋ, ಬದಲಾದ ಪ್ರೇಕ್ಷಕರ ಅಭಿರುಚಿಯ ಪರಿಣಾಮವೋ ಹವ್ಯಾಸಿ ರಂಗಭೂಮಿಯಲ್ಲಿ ಮೊದಲಿನ ಉತ್ಸಾಹ ಉಳಿದಿಲ್ಲ. ನೀನಾಸಂ ತಿರುಗಾಟ ರಂಗಾಯಣದ ಚಟುವಟಿಕೆಗಳು, ಅಕಾಡೆಮಿಯು ಹಮ್ಮಿಕೊಳ್ಳುವ ನಾಟಕೋತ್ಸವಗಳು, ಗ್ರಾಮೀಣ ಭಾಗದ ಜಾತ್ರೆ ಉತ್ಸವಗಳಲ್ಲಿ ನಡೆಯುವ ಕಂಪನಿ ಶೈಲಿಯ ನಾಟಕಗಳು ಹವ್ಯಾಸಿ ರಂಗಭೂಮಿಯನ್ನು ಮುಂದುವರೆಸಿದೆ.

**ಉತ್ತರ ಕರ್ನಾಟಕ ರಂಗಭೂಮಿಯ ಪ್ರಭಾವ–ಪ್ರೇರಣೆ :** 1842ರಲ್ಲಿ ಕರ್ಕಿಯ ಯಕ್ಷಗಾನ ಮೇಳವು ಸಾಂಗ್ಲಿಗೆ ಭೇಟಿ ಕೊಟ್ಟು ಶ್ರೀಮಂತ ಅಪ್ಪಾಸಾಹೇಬ ಪಟವರ್ಧನರ ಆಶ್ರಯದಲ್ಲಿ ಯಕ್ಷಗಾನ ಪ್ರಸಂಗವನ್ನು ಪ್ರದರ್ಶಿಸಿತು. 1849–50ರಲ್ಲಿ ಗೋಕರ್ಣದ ಯಕ್ಷಗಾನ ಮೇಳವು ಈಚಲರಂಜಿಗೆ ಹೋಗಿ ಪ್ರದರ್ಶನ ನೀಡಿತು. ಈ ರೀತಿಯ ಪ್ರದರ್ಶನಗಳಿಂದ ಪ್ರೇರಣೆ ಪಡೆದುಕೊಂಡು ಮರಾಠಿ ರಂಗಭೂಮಿ ಹುಟ್ಟಿಕೊಂಡಿತು. ಇದಕ್ಕೆ ಮರಾಠಿ ರಂಗಭೂಮಿಯ ಇತಿಹಾಸವೇ ನಿದರ್ಶನ.

ಅಣ್ಣಾಸಾಹೇಬ ಕಿರ್ಲೋಸ್ಕರರ ಸಂಗೀತ ಶಾಕುಂತಲವು 31 ಅಕ್ಟೋಬರ್ 1880ರಂದು ಪುಣೆಯಲ್ಲಿ ಪ್ರದರ್ಶನವಾಯಿತು. ಈ ನಾಟಕದಿಂದ ಮರಾಠಿಯಲ್ಲಿ ಸಂಗೀತ ನಾಟಕಗಳ ಯುಗ ಆರಂಭವಾಯಿತೆಂದು, ಅಣ್ಣಾಸಾಹೇಬ ಕಿರ್ಲೋಸ್ಕರ ಸಂಗೀತ ನಾಟಕಗಳ ಪಿತಾಮಹ ಎಂದು ಮರಾಠಿ ರಂಗಭೂಮಿ ಚರಿತ್ರೆ ವರ್ಣಿಸುತ್ತದೆ. ಆದರೆ ಅಣ್ಣಾಸಾಹೇಬ ಕಿರ್ಲೋಸ್ಕರರ ಮೇಲೆ ಶ್ರೀಕೃಷ್ಣ ಪಾರಿಜಾತದ ಪ್ರಭಾವವಿರುವುದನ್ನು ಅವರ 'ಶಾಕುಂತಲ'ದ ಮೇಲೆ ಚುರುಮುರಿಯವರ ಶಾಕುಂತಲದ ಪ್ರಭಾವವಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಸ್ವತಃ ಕಿರ್ಲೋಸ್ಕರರೇ ತನ್ನ ಶಾಕುಂತಲದೊಳಗಿನ ಹಾಡುಗಳಿಗೆ ಪಾರಿಜಾತದ ದಾಟಿಗಳನ್ನು ಸೂಚಿಸಿದ್ದಾರೆ. ಮರಾಠಿ ರಂಗಭೂಮಿಯಲ್ಲಿ ಪಾತ್ರಧಾರಿಗಳು ಸ್ವತಃ ಹಾಡುವಂತಾದುದು, ಸ್ತ್ರೀಯರು ಸ್ತ್ರೀ ಪಾತ್ರ ಮಾಡಲು ಪ್ರವೇಶಿಸಿದ್ದುದು ಕಿರ್ಲೋಸ್ಕರ ರಿಂದಲೇ ಎಂಬುದನ್ನು ಅಲ್ಲಿಯ ರಂಗಭೂಮಿ ಚರಿತ್ರೆ ದಾಖಲಿಸುತ್ತದೆ, ಆದರೆ ಈ ಎಲ್ಲ ವಿಶೇಷತೆಗಳು ಉತ್ತರ ಕರ್ನಾಟಕದ ಜನಪ್ರಿಯ ರಂಗ ಕಲೆ ಶ್ರೀ ಕೃಷ್ಣ ಪಾರಿಜಾತ ದಲ್ಲಿದ್ದವು. ಕಿರ್ಲೋಸ್ಕರರ ಮೇಲೆ ಈ ಪಾರಿಜಾತ ಅಗಾಧ ಪರಿಣಾಮ ಬೀರಿತ್ತು. ಅವರು ಮರಾಠಿಯಲ್ಲಿ ಪಾರಿಜಾತ ಬರೆದು ಆಡಲು ಯತ್ನಿಸಿದ್ದನ್ನು ನಾ.ಸಿ.ಫಡಕೆ ಉಲ್ಲೇಖಿಸಿದ್ದಾರೆ.

ಧಾರವಾಡದ ತಂತು ಪುರಸ್ಥ ನಾಟಕ ಮಂಡಳಿ (1889) ನೆರೆಯ ಆಂಧ್ರಪ್ರದೇಶಕ್ಕೆ ಹೋಗಿ ಅಲ್ಲಿ ನಾಟಕಗಳನ್ನು ಆಡಲು, ಇದರಿಂದ ಪ್ರೇರಣೆ ಪಡೆದು ಆಧುನಿಕ ಆಂಧ್ರ ರಂಗಭೂಮಿ ಹುಟ್ಟಿಕೊಂಡಿತೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿ, ನೆರೆಹೊರೆಯ ರಂಗಭೂಮಿಗಳ ಕೊಡು ಕೊಳುವಿಕೆಯಿಂದ ಭಾರತೀಯ ರಂಗಪರಂಪರೆಯು ಶ್ರೀಮಂತವಾಗಿ ಬೆಳೆಯಲು ಸಾಧ್ಯವಾಯಿತು. (ಆರ್.ಎಂ.)

**ದಕ್ಷಿಣ ಕರ್ನಾಟಕದ ವೃತ್ತಿ ರಂಗಭೂಮಿ :** 20ನೆಯ ಶತಮಾನ ನಾಟಕಗಳ ಯುಗ. ಪಂಡಿತರಿಂದ–ಪಾಮರರವರೆಗೆ, ಮಹಾರಾಜರಿಂದ ಕೂಲಿ ಕಾರ್ಮಿಕರವರೆಗೆ ಎಲ್ಲ ಸ್ತರದವರೂ ರಂಗಮಂದಿರದಲ್ಲಿ ಒಟ್ಟಿಗೇ ಕುಳಿತು ನಾಟಕ ನೋಡುವ ಪರಂಪರೆಯನ್ನು ಹುಟ್ಟುಹಾಕಿದ ಹೆಗ್ಗಳಿಕೆ ಈ ಶತಮಾನಕ್ಕೆ ಸಲ್ಲಬೇಕು. ಈ ರೀತಿಯ ಸಮಾನತೆ ಸಾಧ್ಯವಾಗಿದ್ದು ವೃತ್ತಿರಂಗಭೂಮಿ – ನಾಟಕ ಕಂಪನಿಗಳಿಂದ.

ವೃತ್ತಿ ರಂಗಭೂಮಿ ಅಸ್ತಿತ್ವಕ್ಕೆ ಬಂದದ್ದು ಮಧ್ಯಮವರ್ಗದ ಮನರಂಜನೆಗಾಗಿ. ಕೈಗಾರಿಕಾ ಕ್ರಾಂತಿಯ ಫಲವಾಗಿ ಹೊಸದಾಗಿ ಹುಟ್ಟಿಕೊಂಡಿದ್ದ ಮಧ್ಯಮವರ್ಗ ತನ್ನದೇ ಆದ ಮಾಧ್ಯಮವೊಂದರ ಶೋಧನೆಗೆ ತೊಡಗಿ ಕಂಡುಕೊಂಡದ್ದೇ ಈ ನಾಟಕ ಕಂಪನಿಗಳು.

ಭಾರತ ದೇಶವನ್ನು ಆಳುತ್ತಿದ್ದ ಬ್ರಿಟಿಷರು ಕೋಲ್ಕತ್ತಾದಲ್ಲಿ ಮೊದಲು (1775) ಇಂಗ್ಲಿಷ್ ನಾಟಕಗಳನ್ನು, ಬರಬರುತ್ತ ಸ್ಥಳೀಯ ಭಾಷೆಗಳಲ್ಲಿ ಅವುಗಳ ಅನುವಾದಿತ ನಾಟಕಗಳನ್ನು ಪ್ರದರ್ಶಿಸಿದಾಗ ರಂಗಕಲೆಯ ಬಗ್ಗೆ ಆಸಕ್ತಿ ತಾಳಿದ್ದ ಭಾರತೀಯ ಮಧ್ಯಮವರ್ಗದಲ್ಲಿ ಹೊಸ ಅರಿವು ಮೂಡಿತು. ನಿಧಾನವಾಗಿಯಾದರೂ ಪೂರ್ವದಿಂದ ಪಶ್ಚಿಮಕ್ಕೆ ಈ ಗಾಳಿ ಬೀಸಿತು. ಸು. 1842ರಲ್ಲಿ ಮುಂಬೈನಲ್ಲಿಯೂ ಇದೇ ಮಾದರಿಯಲ್ಲಿ ನಾಟಕಗಳ ಪ್ರದರ್ಶನ ಆರಂಭವಾಯಿತು. ಮುಂಬೈನ ಪಾರ್ಸಿ ಜನಾಂಗದವರು ಇಂತಹ ನಾಟಕಗಳ ಪ್ರದರ್ಶನಕ್ಕಾಗಿಯೇ ರಂಗಮಂದಿರ ನಿರ್ಮಿಸಿ ಬಾಡಿಗೆ ಕೊಡಲಾರಂಭಿಸದರು. ಅನಂತರದ ದಿನಗಳಲ್ಲಿ ರಂಗಪರಿಕರಗಳನ್ನೂ ಅವರೇ ಪೂರೈಸಿದರು. ಪಾರ್ಸಿಗಳು ಮೂಲತಃ ವ್ಯಾಪಾರಿಗಳು. ನಾಟಕವೊಂದು ಪ್ರದರ್ಶನ ಕಾಣಬೇಕಾದರೆ ಅದಕ್ಕೆ ಬೇಕಾದ ವ್ಯಾವಹಾರಿಕ ಶಿಸ್ತುಗಳನ್ನೆಲ್ಲ ಇದೇ ಜನಾಂಗ ಕಲ್ಪಿಸಿಕೊಟ್ಟಿದ್ದರಿಂದ ವೃತ್ತಿ ನಾಟಕ ಕಂಪನಿಗಳನ್ನು ಇತ್ತೀಚಿನ ವರ್ಷಗಳವರೆಗೆ ಪಾರ್ಸಿ ರಂಗಭೂಮಿ ಎಂದೇ ಕರೆಯುತ್ತ ಬರಲಾಯಿತು!

ಸಂಸ್ಕೃತ ನಾಟಕಗಳನ್ನು ಆಧಾರವಾಗಿಟ್ಟುಕೊಂಡ ಅರಮನೆಯ ಪ್ರದರ್ಶನಗಳು ಕಲಿತ, ಕುಲೀನ ಜನತೆಯ ಮನೋರಂಜನೆಯಾದರೆ, ಕಲಿಯದವರ ಮನೋರಂಜನೆಗೆ ಜಾನಪದ ನಾಟಕಗಳಿದ್ದವು. ಆದರೆ ಮಧ್ಯಮವರ್ಗಕ್ಕೆ ಅಂದರೆ ಜನಸಾಮಾನ್ಯರಿಗೆ ಬೇರೆಯದೇ ಆದ ಸುವರ್ಣ ಮಾಧ್ಯಮವೊಂದು ಬೇಕಾಗಿತ್ತು. ಕಂಪನಿ ನಾಟಕಗಳು ಆ ಕೊರತೆಯನ್ನು ತುಂಬಿದವು. ಪ್ರಜಾಪ್ರಭುತ್ವದೆಡೆಗೆ ಸಾಗಿದ್ದ ಮೈಸೂರು ಅರಸು ಮನೆತನವೂ ಈ ಬೇಡಿಕೆಗಳಿಗೆ ಸ್ಪಂದಿಸಿತು. ಉತ್ತರ ಕರ್ನಾಟಕದಲ್ಲಿ ಮಧ್ಯಮವರ್ಗದ ಶಿಕ್ಷಿತ ಸಮುದಾಯ ಇಂತಹ ನಾಟಕ ಕಂಪನಿಗಳನ್ನು ಸ್ಥಾಪಿಸಿದ್ದರೆ, ಹಳೇ ಮೈಸೂರು ಪ್ರದೇಶದಲ್ಲಿ ಮೈಸೂರು ಅರಸರುಗಳೇ ಈ ನಾಟಕ ಕಂಪನಿಗಳನ್ನು ಸ್ಥಾಪಿಸಿ, ಕೆಲಕಾಲ ಪೋಷಿಸಿದರು.

ಜಾನಪದ ನಾಟಕಗಳಾಗಲೀ ಅಥವಾ ಅರಮನೆಗಳು ಪೋಷಿಸಿಕೊಂಡು ಬಂದ ಅದುವರೆಗಿನ ಸಂಸ್ಕೃತ ನಾಟಕಗಳಿಗಾಗಲೀ ಪ್ರಾಯೋಜಕರಿದ್ದರು. ಆದರೆ ದುಡ್ಡು ಕೊಟ್ಟು ನಾಟಕ ನೋಡುವ ಪರಿಪಾಠ ಆರಂಭವಾದದ್ದು ನಾಟಕ ಕಂಪನಿಗಳು ಅಸ್ತಿತ್ವ ಪಡೆದ ಅನಂತರ.

ಹೆಚ್ಚಿನ ದರದ ಟಿಕೆಟ್ ಕೊಳ್ಳುವ ಸ್ಥಿತಿವಂತರಿಗೆ ಮುಂದಿನ ಸಾಲುಗಳಲ್ಲಿ, ಕಡಿಮೆ ದರದ ಟಿಕೆಟ್ ಕೊಳ್ಳುವ ಬಡವರಿಗೆ ಹಿಂದಿನ ಸೀಟುಗಳಲ್ಲಿ ಕುಳಿತುಕೊಂಡು ನಾಟಕ ನೋಡುವ ವ್ಯವಸ್ಥೆಯೇ ಅಂದಿನಿಂದ ಇಂದಿನವರೆಗೂ ಜಾರಿಯಲ್ಲಿರುವುದಾದರೂ, ಎಲ್ಲ ವರ್ಗದ ಜನರು ಒಂದೇ ರಂಗಮಂದಿರದಲ್ಲಿ ಕುಳಿತುಕೊಂಡು ನಾಟಕ ನೋಡುವಂತೆ ಮಾಡಿದ್ದು ಕಂಪನಿ ನಾಟಕಗಳ ಬಹುದೊಡ್ಡ ಕೊಡುಗೆ. ಪಾರ್ಸಿ ಜನಾಂಗದವರು ನಾಟಕಗಳಿಗೆ ಇಂತಹದೊಂದು ವ್ಯಾವಹಾರಿಕ ಶಿಸ್ತು ಕಲ್ಪಿಸಿದ ಅನಂತರ ಮರಾಠಿ ನಾಟಕ ಕಂಪನಿಗಳು ಹುಟ್ಟಿಕೊಂಡವು. ಹತ್ತಿಪ್ಪತ್ತು ವರ್ಷಗಳ ಅನಂತರ ಅವು ಕನ್ನಡ ನಾಡಿಗೂ ಬಂದು ಪ್ರದರ್ಶನ ಕೊಡಲಾರಂಭಿಸಿದವು. ಕರ್ನಾಟಕದೊಂದಿಗೆ ಇಂತಹದೊಂದು ಕೊಡುಕೊಳ್ಳುವಿಕೆಯ ಸಂಬಂಧ ಆದಾಗಲೇ ಸ್ಥಾಪಿತವಾಗಿತ್ತು. ಕನ್ನಡ ನಾಡಿನ ಯಕ್ಷಗಾನ ಹಾಗೂ ಕೃಷ್ಣ ಪಾರಿಜಾತ ಮರಾಠಿ ನಾಡಿನಲ್ಲಿ ಸಾಕಷ್ಟು ಪ್ರಯೋಗ ನೀಡಿದ್ದವು.

ಉತ್ತರ ಕರ್ನಾಟಕದಲ್ಲಿ ಈ ಮರಾಠಿ ನಾಟಕ ಕಂಪನಿಗಳು 18ನೆಯ ಶತಮಾನದ ಕೊನೆಯಲ್ಲಿ ಪ್ರದರ್ಶನ ನೀಡಲಾರಂಭಿಸಿದ ಮೇಲೆ ಕನ್ನಡ ನಾಡಿನ ಆ ಭಾಗದ ಕಲಾಲೋಕವೆಲ್ಲ ಮರಾಠಿಮಯವಾಯಿತು. ಇದನ್ನು ಪ್ರತಿಭಟಿಸಲೆಂದೇ ಕನ್ನಡ ಭಾಷೆಯ ಮೇಲಿನ ಪ್ರೇಮದಿಂದ ಕನ್ನಡ ನಾಟಕಗಳು ಉತ್ತರ ಕರ್ನಾಟಕದಲ್ಲಿ ಹುಟ್ಟಿಕೊಂಡರೆ(1872), ಹಳೇ ಮೈಸೂರಿನಲ್ಲಿ ಕಲೆಗೆ ಅಪಾರ ಪ್ರೋತ್ಸಾಹ ನೀಡುತ್ತಿದ್ದ ಮೈಸೂರು ಅರಸರ ಪ್ರೋತ್ಸಾಹದಿಂದಾಗಿ ಈ ನಾಟಕ ಕಂಪನಿಗಳು (1881) ಅಸ್ತಿತ್ವಕ್ಕೆ ಬಂದವು. 1812ರಿಂದಲೂ ಅರಮನೆಯ ಆಶ್ರಯದಲ್ಲಿ ಬಿಡಾರದ ದಶಾವತಾರ ಮೇಳ ಆಟವನ್ನು ಪ್ರದರ್ಶಿಸುತ್ತಿತ್ತು. ಬೆಂಗಳೂರು ಕೆಂಪೇಗೌಡ ಸಹ ಸ್ವತಃ ಯಕ್ಷಗಾನ ರಚಿಸಿದ್ದನಂತೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅಳಿಯ ಲಿಂಗರಾಜೇ ಅರಸು ಅವರು 60ಕ್ಕೂ ಮೇಲ್ಪಟ್ಟ ಯಕ್ಷಗಾನ ರಚಿಸಿದ್ದರು. ಅವರ ಕೃತಿಗಳನ್ನು ಅರಮನೆಯಲ್ಲಿದ್ದ ನಾಟಕ ಸಂಘವೇ ಅಭಿನಯಿಸುತ್ತಿತ್ತು.

ಉತ್ತರ ಕರ್ನಾಟಕವನ್ನು ಮರಾಠಿಮಯ ಮಾಡಿದ್ದ ಮರಾಠಿ ನಾಟಕ ಕಂಪನಿಗಳು ಮೈಸೂರಿಗೆ ಬರಲು ತಡ ಮಾಡಲಿಲ್ಲ. ಮೈಸೂರು ಮಹಾರಾಜರು ಕಲೆಗೆ ನೀಡುತ್ತಿದ್ದ ಪ್ರೋತ್ಸಾಹದ ಸಂಗತಿ ಎಲ್ಲೆಡೆಯೂ ಹಬ್ಬಿತ್ತು. 1876–77ರಲ್ಲಿ ಸಾಂಗ್ಲಿಯ ಮರಾಠ ನಾಟಕ ಕಂಪನಿಯು ಸೌಭದ್ರಾ, ಶಾಕುಂತಲಾ ಎಂಬ ಮರಾಠಿ ನಾಟಕಗಳನ್ನು ಹಾಗೂ ಮುಂಬೈನ ಬಾಲೀವಾಲಾ ಪಾರ್ಸಿ ನಾಟಕ ಕಂಪನಿ ಮೈಸೂರಿನ ಅರಮನೆಯಲ್ಲಿ ದೊರೆ ಚಾಮರಾಜ ಒಡೆಯರ ಸಮ್ಮುಖದಲ್ಲಿ ಇಂದ್ರಸಭಾ, ಗುಲೇಬ ಕಾವಲಿ ಉರ್ದು ನಾಟಕಗಳ ಪ್ರದರ್ಶನಗಳನ್ನು ನೀಡಿತು. ಇದರಿಂದ ಪ್ರಭಾವಿತರಾದ ಮಹಾರಾಜರು, ಇಂತಹ ನಾಟಕಗಳು ಕನ್ನಡದಲ್ಲೂ ಬರಲಿ ಎಂದು ಆದೇಶ ಕೊಟ್ಟರು. ಮುಂದಿನ ದಿನಗಳಲ್ಲಿ ಮಹಾರಾಜರು ಈ ನಾಟಕಗಳ ಪ್ರದರ್ಶನವನ್ನು ಅರಮನೆಯ ಗಣ್ಯರಿಗೆ ಮಾತ್ರ ಸೀಮಿತವಾಗಿರಿಸಲಿಲ್ಲ. ಮೈಸೂರಿನ ಜನತೆ ಹಾಗೂ ಸುತ್ತಲಿನ ಗ್ರಾಮಸ್ಥರೂ ವೀಕ್ಷಿಸಲು ಅನುವಾಗುವಂತೆ ಪ್ರದರ್ಶನದ ವ್ಯವಸ್ಥೆ ಮಾಡುತ್ತಿದ್ದರು. ಅದುವರೆಗೆ ಮೈಸೂರು ಭಾಗದ ಜನತೆ ಇಂತಹ ನಾಟಕಗಳನ್ನು ನೋಡಿಯೇ ಇರಲಿಲ್ಲ. ಪಾರ್ಸಿ ನಾಟಕಗಳ ರಂಗಸಜ್ಜಿಕೆ, ವಿನ್ಯಾಸ, ವೇಷಭೂಷಣ, ಬೆಳಕಿನ ವ್ಯವಸ್ಥೆಗೆ ಜನ ಮಾರುಹೋದರು. ಕನ್ನಡ ಭಾಷೆಯಲ್ಲಿ ಇಂತಹ ನಾಟಕಗಳನ್ನು ಪ್ರದರ್ಶಿಸಬೇಕೆಂಬ ಆಸೆ ಮೊಳಕೆಯೊಡೆದದ್ದು, ಅದು ಹುರಿಗೊಂಡದ್ದು ಈ ಹಂತದ ಬೆಳವಣಿಗೆ.

ಮರಾಠಿ ಹಾಗೂ ಪಾರ್ಸಿ ಕಂಪನಿಗಳು ಬಂದು ಹೋದ ಮೇಲೆ ಅವುಗಳ ಪ್ರಭಾವದಿಂದಾಗಿ ಅರಮನೆಯ ರಾಯಲ್ ಶಾಲೆಗೆ ಸೇರಿದ ವಿದ್ಯಾರ್ಥಿಗಳು ಪ್ರಹ್ಲಾದ ನಾಟಕವನ್ನು 1880ರಲ್ಲಿ ಪ್ರಯೋಗಾರ್ಥವಾಗಿ ಪ್ರದರ್ಶಿಸಿ ಯಶಸ್ವಿಯಾದರು. ಅನಂತರ ಆಸ್ಥಾನದ ವಿದ್ವಾಂಸರು, ಗಾಯಕರು, ರಾಯಲ್ ಶಾಲೆಯ ಅಧ್ಯಾಪಕವರ್ಗ ಒಟ್ಟಾಗಿ ಕಲೆತು ಬಸವಪ್ಪ ಶಾಸ್ತ್ರಿಗಳು ಕನ್ನಡಕ್ಕೆ ಪರಿವರ್ತಿಸಿದ ಶಾಕುಂತಲ ನಾಟಕವನ್ನು ಅಭ್ಯಾಸ ಮಾಡಿ 1881 ನವೆಂಬರ್ 9ರಂದು ದೊರೆಗಳ ಸಮ್ಮುಖದಲ್ಲಿ ಅಭಿನಯಿಸಿದರು. ಪಾರ್ಸಿ ಕಂಪನಿಗಳಂತೆ ವೇಷಭೂಷಣ, ರಂಗಸಜ್ಜಿಕೆ, ವಿನ್ಯಾಸ, ರಂಗಸಂಗೀತ ಹಾಗೂ ಬಸವಪ್ಪ ಶಾಸ್ತ್ರಿಗಳ ಸೊಗಸಾದ ಅನುವಾದದಿಂದಾಗಿ ನಾಟಕ ಕಳೆಗಟ್ಟುತ್ತದೆ. ಜನತೆಯ ನಾಡಿಮಿಡಿತ ಅರಿತ ಮೈಸೂರು ಶ್ರೀಚಾಮರಾಜೇಂದ್ರ ಒಡೆಯರ್ 1882ರಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಸ್ಥಾಪಿಸಿದರು. ಆಸ್ಥಾನ ವಿದ್ವಾನ್ ಬಸವಪ್ಪ ಶಾಸ್ತ್ರಿಗಳೇ ಸ್ವತಃ ಮುಂದೆ ನಿಂತು ಕಲಾವಿದರುಗಳಿಗೆ ತಾಲೀಮು ಮಾಡಿಸಿದರು. ಶಾಸ್ತ್ರಿಗಳ ಶ್ರೇಷ್ಠಮಟ್ಟದ ಸಾಹಿತ್ಯ ಹಾಗೂ ಸಂಗೀತ ಜನಮನ ಗೆದ್ದಿತು. ಮೈಸೂರು, ಮಂಡ್ಯ, ಬೆಂಗಳೂರು ಮುಂತಾದ ಕಡೆ ಶಾಕುಂತಲ ನಾಟಕದ ನೂರಾರು ಪ್ರದರ್ಶನಗಳಾದವು.

ಇದೇ ಸಂದರ್ಭದಲ್ಲಿ ಮಂಡ್ಯಂ ರಂಗಾಚಾರ್ಯರು ತಮ್ಮ ಸ್ನೇಹಿತರೊಡಗೂಡಿ ರಾಜಧಾನಿ ನಾಟಕ ಮಂಡಳಿ ಸ್ಥಾಪಿಸಿದರು. ಈ ಮಂಡಳಿಯ ಮುಖ್ಯ ಚೇತನಗಳ ಪೈಕಿ ಮಾದಪ್ಪ ಶಾಸ್ತ್ರಿಗಳು ಪ್ರಮುಖರು. ಅವರು ರಚಿಸಿದ ಮಕರಂದಿಕ ಪರಿಣಯ ಭಾರಿ ಜನಪ್ರಿಯವಾಯಿತು. ರಾಜಧಾನಿ ನಾಟಕ ಮಂಡಳಿ ಅರಮನೆಯ ಕಂಪನಿಯೊಳಗೇ ಪೈಪೋಟಿ ನಡೆಸಿತು. ಇಂತಹ ಪೈಪೋಟಿ ಬೇಡ ಎಂದು ಬಯಸಿದ ಅರಮನೆಯ ವ್ಯವಹಾರ ಚತುರರು ರಾಜಧಾನಿ ನಾಟಕ ಮಂಡಳಿಯ ಎಲ್ಲ ಒಳ್ಳೆಯ ಕಲಾವಿದರ ಮನವೊಲಿಸಿ ಅರಮನೆಯ ನಾಟಕಸಭಾಕ್ಕೆ ಸೇರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಅರಮನೆ ಕಂಪನಿ ಮತ್ತಷ್ಟು ಸಮರ್ಥವಾಯಿತು. ಮಹಾರಾಜರು ಸ್ಥಾಪಿಸಿದ ಈ ನಾಟಕ ಸಭಾ ಮುಂದಿನ 35 ವರ್ಷಗಳ ಕಾಲ (1917 ರ ವರೆಗೆ) ನಾಡಿನ ಹಲವೆಡೆ ಸಂಚಾರ ಮಾಡಿ ನಾಟಕ ಪ್ರದರ್ಶಿಸುವ ವೃತ್ತಿ ಕಂಪನಿಯಾಯಿತು. ಆರಂಭದಲ್ಲಿ ಸಂಸ್ಕೃತ ಹಾಗೂ ಶೇಕ್ಸ್‌ಪಿಯರ್‌ನ ಇಂಗ್ಲಿಷ್ ನಾಟಕಗಳ ಅನುವಾದಗಳು ಪ್ರದರ್ಶನಗಳಾದವು. ಅರಮನೆ ಆಸರೆಯಿಂದ ಕ್ರಮೇಣ ಪ್ರತ್ಯೇಕಗೊಂಡ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಮುಂದೆ ಶಾಕುಂತಲ ಕರ್ನಾಟಕ ನಾಟಕ ಸಭಾ ಆಯಿತು. 1917ಕ್ಕೆ ಈ ನಾಟಕ ಸಭಾ ತನ್ನ ಚಟುವಟಿಕೆ ಸ್ಥಗಿತಗೊಳಿಸಿದರೂ 1919ರಿಂದ ಮತ್ತೆ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ ಹೆಸರಿನಲ್ಲಿ ಪುನರಾರಂಭವಾಯಿತು. ಮಳವಳ್ಳಿ ಸುಂದರಮ್ಮ ಸೇರಿದಂತೆ ಹಲವಾರು ಕಲಾವಿದರು ಕಂಪನಿಯ ಸಾರಥ್ಯ ವಹಿಸಿ 30ರ ದಶಕದವರೆಗೂ ಕಂಪನಿಯನ್ನು ನಡೆಸಿಕೊಂಡು ಬಂದರು.

ಅರಮನೆ ನಾಟಕಸಭಾದ ಮತ್ತೊಂದು ಮುಖ್ಯ ಕೊಡುಗೆ ಎಂದರೆ, ಮೈಸೂರು ಸೀಮೆಯಲ್ಲಿ ಹಲವಾರು ನಾಟಕ ಮಂಡಳಿಗಳ ಹುಟ್ಟು, ಮುಂದಿನ ಒಂದೆರಡು ದಶಕಗಳಲ್ಲಿ ಸ್ಥಾಪನೆಯಾದ ಯಾವುದೇ ನಾಟಕ ಮಂಡಳಿ ಅಥವಾ ನಾಟಕ ಸಭಾಗಳಿಗೆ ಅರಮನೆಯ ಶ್ರೀ ಚಾಮರಾಜೇಂದ್ರ ನಾಟಕ ಸಭಾದ ಪ್ರೇರಣೆಯೇ ಕಾರಣ.

ಹಳೇ ಮೈಸೂರು ಭಾಗದಲ್ಲಿ ಮೈಸೂರು ಹೊರತುಪಡಿಸಿದರೆ, ಬೆಂಗಳೂರಿನಲ್ಲಿ ನಾಟಕ ಪ್ರಯೋಗಗಳಾದದ್ದೇ ಹೆಚ್ಚು. ವಿಕ್ಟೋರಿಯಾ ಪಾರ್ಸಿ ಕಂಪನಿ ಬೆಂಗಳೂರಿನಲ್ಲಿ 1876ರಲ್ಲೇ ನಾಟಕಗಳ ಪ್ರದರ್ಶನ ನೀಡಿತ್ತು. ಮೈಸೂರು ಮಹಾರಾಜರು ಸ್ಥಾಪಿಸಿದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ 1882ರಲ್ಲಿ ಹಲವು ನಾಟಕಗಳನ್ನು ಬೆಂಗಳೂರಿನಲ್ಲಿ ಪ್ರದರ್ಶಿಸಿತು. ಮಂಡ್ಯಂ ರಂಗಾಚಾರ್ ಸ್ನೇಹಿತರು ಸ್ಥಾಪಿಸಿದ ರಾಜಧಾನಿ ಸಂಗೀತ ಮೇಳ 1883ರಲ್ಲಿ ಸತ್ಯವರ್ಮ, ಹರಿಶ್ಚಂದ್ರ, ಶಾಕುಂತಲಾ, ಚಂದ್ರಹಾಸ, ಕಾಮಪಲ ಚರಿತೆ ಮುಂತಾದ ನಾಟಕಗಳನ್ನು ಬೆಂಗಳೂರಿನಲ್ಲಿ ಪ್ರಯೋಗಿಸಿತು. ಮೈಸೂರು ಯುವರಾಜ ನಂಜರಾಜ ಬಹದ್ದೂರ್ ನಾಟಕ ಕಂಪನಿ 1884–85ರಲ್ಲಿ ಹಲವಾರು ನಾಟಕಗಳನ್ನು ಪ್ರದರ್ಶಿಸಿತು. 1899ರಲ್ಲಿ ದಿ ಪಾರ್ಸಿ ಒಪೆರಾ ಟ್ರೂಪ್ ಬೆಂಗಳೂರಿನ ತುಳಸಿತೋಟದಲ್ಲಿ ಪ್ರದರ್ಶಿಸಿದ ಡಾಡಿ ಡೇರಿಯಾ ಅರ್ಥಾತ್ 'ಖುದಾದಾದ್' ಭಾರೀ ಹೆಸರು ಗಳಿಸಿತು.

ಬೆಂಗಳೂರಿನಲ್ಲಿ ಪ್ರದರ್ಶನ ನೀಡಿದ ಈ ಮೇಲಿನ ತಂಡಗಳೆಲ್ಲ ಹೊರಗಿನವುಗಳಾದರೆ, ಅದೇ ಕಾಲಕ್ಕೆ ಬೆಂಗಳೂರಿನಲ್ಲೇ ಶುರುವಾದ ಮೊದಲ ನಾಟಕ ಕಂಪನಿಗಳಲ್ಲಿ ಸಿದ್ದಿಕಟ್ಟೆಯ ರಸಿಕ ಮಾನಸೋಲ್ಲಾಸಿನಿ ನಾಟಕ ಸಭಾ(ಪೆರಿಸ್ವಾಮಿ ಅಯ್ಯಂಗಾರ್ 1883) ಮತ್ತು ಗೊಲ್ಲರಪೇಟೆ ನಾಟಕಸಭಾ(1883–85) ಮುಖ್ಯವಾದವು. ಆ ಕಾಲದ ಹೆಸರಾಂತ ನಟರಾದ ಎಸ್ ಎಸ್ ಸೆಟಲೂರ ಹಾಗೂ ಎನ್ ಟಿ ಗೋಪಾಲ ಅಯ್ಯಂಗಾರ್ ಮತ್ತೊಂದು ವೃತ್ತಿ ನಾಟಕ ಕಂಪನಿ ಸ್ಥಾಪಿಸಿದರು. ವೀಣೆ ವಿದ್ವಾನ್ ಗೋಪಾಲರಾವ್, ಗೌರಿನರಸಿಂಹಯ್ಯ, ಧರ್ಮದೇವಿ ನರಸಿಂಹಮೂರ್ತಿ, ತಿಮ್ಮಪ್ಪ ಮೊದಲಾದ ಹೆಸರಾಂತ ಕಲಾವಿದರು ನಟಿಸುತ್ತಿದ್ದರು. ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವರ ಆಶ್ರಯದಲ್ಲಿ ಹುಟ್ಟಿದ ರಸಿಕ ಮಾನಸೋಲ್ಲಾಸಿನಿ 1886ರಲ್ಲಿ ನಿಂತಿತು. ಗೊಲ್ಲರಪೇಟೆ ನಾಟಕ ಸಭಾದಲ್ಲಿ ಮುಖ್ಯರಾದವರು ಸಂಗೀತ ವಿದ್ವಾನ್ ತಾಯಪ್ಪನವರು, ಬಿ ರಾಚಪ್ಪ, ಪೆದ್ದ ಮುನಿಸ್ವಾಮಿ ಹಾಗೂ ಕೈವಾರ ಸಹೋದರರು. ಬಹಳ ಬೇಗ ಪ್ರಖ್ಯಾತಿಗೆ ಬಂದ ಈ ತಂಡ ಅಷ್ಟೇ ಬೇಗ ಒಡೆದು ಎರಡಾಯಿತು. ಸಂಗೀತ ವಿದ್ವಾನ್ ತಾಯಪ್ಪ, ತಿಮ್ಮಪ್ಪ ಮತ್ತಿತರ ಕಲಾವಿದರು ಸಂಗೀತ ಸಾಗರ ಚಂದ್ರೋದಯ ಸಭಾ ಕಟ್ಟಿಕೊಂಡರೆ, ಕೈವಾರ ಕೃಷ್ಣರಾವ್, ರಾಮರಾವ್ ಸಹೋದರರು ಸಿಟಿ ಒಪೆರಾ ಟ್ರೂಪ್ ಕಟ್ಟಿಕೊಂಡು, 'ಪ್ರಭಾವತಿ ದರ್ಬಾರ್', ಮನುಚರಿತೆ, ಹರಿಶ್ಚಂದ್ರ' ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು. ಬಿ ರಾಚಪ್ಪ, ನಕಲಿ ವೆಂಕಟಾಚಲಯ್ಯ ಈ ಕಂಪನಿಯ ಹೆಸರಾಂತ ನಟರು. ಸ್ವಲ್ಪ ಸಮಯದಲ್ಲೇ ಇದು ಸ್ಥಗಿತಗೊಂಡು ಪೆರಿಶಾಮಯ್ಯಂಗಾರರ ಸಂಗೀತ ಸಾಗರ ಚಂದ್ರೋದಯ ಸಭಾ ಮತ್ತು ಕೈವಾರ ಸಹೋದರರ ಸಿಟಿ ಅಪೇರಾ ಟ್ರೂಪ್ ಅಸ್ತಿತ್ವಕ್ಕೆ ಬಂದಿತು.

ಇದೇ ಅವಧಿಯಲ್ಲಿ ಬೆಂಗಳೂರಿನವರೇ ಸ್ಥಾಪಿಸಿ ತುಸು ಹೆಚ್ಚು ಕಾಲ ತನ್ನ ಅದ್ದೂರಿ ಪ್ರದರ್ಶನಗಳೊಂದಿಗೆ ಅಸ್ತಿತ್ವದಲ್ಲಿದ್ದ ಕಂಪನಿ ಎಂದರೆ ವ್ಯಾಪಾರಿ ಬುಳ್ಳಪ್ಪ ಸ್ಥಾಪಿಸಿದ ನಾಟಕ ಕಂಪನಿ. ಇದರ ಕಾಲವನ್ನು 1876–89ರ ಮಧ್ಯೆ ಎಂದು ಹೇಳಲಾಗುತ್ತದೆಯಾದರೂ ಎಚ್.ಕೆ. ರಂಗನಾಥ್ ಪ್ರಕಾರ ಟ್ರೂತ್ ಪತ್ರಿಕೆಯ ಮಾಲೀಕರಾಗಿದ್ದ ಸಾಹುಕಾರ ಬುಳ್ಳಪ್ಪನವರು ಬಹುದ್ರವ್ಯವನ್ನು ವಿನಿಯೋಗಿಸಿ 1895–96ರಲ್ಲಿ ಸಂಘವೊಂದನ್ನು ಕಟ್ಟಿ ಆರೆಂಟು ವರ್ಷ ತುಂಬಾ ಯಶಸ್ವಿಯಾಗಿ ನಡೆಸಿಕೊಂಡು ಬಂದರು (ವೃತ್ತಿ ರಂಗದರ್ಶನ–ಕಸಾಪ 1993).

ಗುಬ್ಬಿ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಸಂಘ ಮೊದಲಿಗೆ ಯಕ್ಷಗಾನ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಯಕ್ಷಗಾನವನ್ನು ಅದೇ ತಾನೇ ಆರಂಭವಾದ ಪಾರ್ಸಿ ನಾಟಕಗಳು ಪ್ರಭಾವಿಸಿದ್ದವು. ಹಾಗಾಗಿ ಅವು ಯಕ್ಷಗಾನ ಹಾಗೂ ನಾಟಕಗಳ ಮಿಶ್ರಣವಾಗಿ ಯಕ್ಷಗಾನ ನಾಟಕ ಎನಿಸಿಕೊಂಡಿದ್ದವು. ಕುಮಾರ ರಾಮನ ಕತೆ ಅಂತಹ ಒಂದು ಯಕ್ಷಗಾನ ನಾಟಕ. 1886ರಲ್ಲಿ ಬೆಂಗಳೂರಿನಲ್ಲಿ ಇದರ ಪ್ರದರ್ಶನದ ದಾಖಲೆಗಳು ಸಿಗುತ್ತವೆ (ಆಗಿನ್ನೂ ಗುಬ್ಬಿ ವೀರಣ್ಣನವರು ಈ ಕಂಪನಿ ಸೇರಿರಲಿಲ್ಲ). ವೀರಪ್ಪಶಾಸ್ತ್ರಿ ರಚಿಸಿದ ಚೋರ ಕತೆ, ಜಗನ್ಮೋಹನ ಚರಿತೆ, ಪಾಂಡವ ವಿಜಯ, ಹರಿಶ್ಚಂದ್ರ, ಇಂದ್ರಸಭಾ, ಧರ್ಮಪಾಲ ಚರಿತೆ, ಸತ್ಯವರ್ಮ ಚರಿತೆ ಮುಂತಾದ ಪೌರಾಣಿಕ ನಾಟಕಗಳು ಮುಂದಿನ ದಿನಗಳಲ್ಲಿ ಪ್ರದರ್ಶನ ಕಂಡವು. ಇವು ಪ್ರಯೋಗವಾಗುವ ಹೊತ್ತಿಗೆ ಯಕ್ಷಗಾನವು ನಾಟಕವಾಗಿ ಪರಿವರ್ತನೆಯಾಗಿದ್ದವು. ಇಲ್ಲಿ ಯಕ್ಷಗಾನ ಎಂದರೆ ಮೂಡಲಪಾಯವೂ ಹೌದು. ಮತ್ತೊಂದೆಡೆ ಯಕ್ಷಗಾನ ಪ್ರಯೋಗ ಕರಾವಳಿ ಜಿಲ್ಲೆಗಳಲ್ಲಿ ಎಂದಿನಂತೆಯೇ ಇದ್ದವು. ಮುಂದಿನ ಒಂದೆರಡು ದಶಕಗಳವರೆಗೆ ನಾಟಕಗಳಲ್ಲಿ ಮೂಡಲಪಾಯ ಅಥವಾ ಯಕ್ಷಗಾನದ ದಟ್ಟಛಾಯೆ ಇದ್ದೇ ಇತ್ತು. ಮಿಠಾಯಿ ಸಾಹುಕಾರದಂತಹ ನಗೆ ನಾಟಕವೂ ಅದೇ ಕಾಲಕ್ಕೆ ಪ್ರದರ್ಶನಗೊಂಡಿದ್ದು ಕುತೂಹಲಕಾರಿ ಬೆಳೆವಣಿಗೆಯಾಗಿ ಕಾಣುತ್ತದೆ.

ರಸಿಕ ಮಾನಸೋಲ್ಲಾಸಿನಿಯಿಂದ ಗುಬ್ಬಿ ಕಂಪನಿವರೆಗೆ ಬೆಂಗಳೂರಿನಲ್ಲಿ ಪ್ರದರ್ಶನಗೊಂಡ ಎಲ್ಲ ನಾಟಕ ಕಂಪನಿಗಳಿಗೂ ಅದು ಸಂಕ್ರಮಣದ ಕಾಲವಾಗಿರಬೇಕು. ಬಣ್ಣದ ಪರದೆಗಳು, ವೇಷ–ಭೂಷಣ, ಪೆಟ್ರೋಮ್ಯಾಕ್ಸ್ ಲೈಟುಗಳು, ಸಂಗೀತಮಯವೇ ಆಗಿದ್ದ ಜಾಗದಲ್ಲಿ ಸಂಭಾಷಣೆಗೆ ಆದ್ಯತೆ ನೀಡಿದ್ದು ಈ ಎಲ್ಲ ಹೊಸತುಗಳಿಂದ ಮೈಸೂರು ಸೀಮೆಯ ರಂಗಭೂಮಿ ಸ್ಥಿತ್ಯಂತರ ಪಡೆದ ಕಾಲ ಅದಾಗಿರಬೇಕು.

ಬೆಂಗಳೂರು ನಾಟಕ ಸಂಘ, ಸೀಡೆಡ್ ಡಿಸ್ಟ್ರಿಕ್ಟ್ ಅಸೋಸಿಯೇಶನ್ 1900ರಲ್ಲಿ, ಶ್ರೀಕಂಠೇಶ್ವರ ಕರ್ನಾಟಕ ನಾಟಕ ಸಂಘ 1907ರಲ್ಲಿ, ನಂಜಾಸಾನಿಯವರ ನಾಟಕ ಕಂಪನಿ 1908ರಲ್ಲಿ ಅಸ್ತಿತ್ವಕ್ಕೆ ಬಂತು. ನಂಜಾಸಾನಿಯವರ ನಾಟಕ ಕಂಪನಿ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲವಾದರೂ ಕಂಪನಿ ನಾಟಕ ಪರಂಪರೆ ಆರಂಭವಾದ ಎರಡು ದಶಕಗಳಲ್ಲೇ ಸ್ತ್ರೀಯರೂ ಅದರ ಸಾರಥ್ಯ ವಹಿಸಿದ್ದಕ್ಕೆ ಇದು ಉದಾಹರಣೆಯಾಗಿದೆ.

ಕವಳಪ್ಪನವರ ಶ್ರೀ ಗಂಧರ್ವ ನಾಟಕ ಮಂಡಳಿ, ಅಣ್ಣಯ್ಯಪ್ಪ, ಲಕ್ಷ್ಮೀನರಸಿಂಹರಾವ್ ನಾಟಕ ಸಂಘಗಳು, ಶ್ರೀ ಶಾರದಾ ವಿಲಾಸ ನಾಟಕ ಸಭಾ ಅನಂತರದಲ್ಲಿ ಅಸ್ತಿತ್ವಕ್ಕೆ ಬಂದ ಹಲವು ನಾಟಕ ತಂಡಗಳು. ಆದರೆ ಇವುಗಳ ಕಾಲಘಟ್ಟ ಸರಿಯಾಗಿ ತಿಳಿದುಬಂದಿಲ್ಲ.

1902ರಲ್ಲಿ ರತ್ನಾವಳಿ ಥಿಯೇಟ್ರಿಕಲ್ ಕಂಪನಿ ಸ್ಥಾಪಿಸಿ ಬೆಂಗಳೂರಿನಿಂದ ತಮ್ಮ ನಾಟಕ ಪ್ರದರ್ಶನ ಆರಂಭಿಸಿದ ನಾಟಕ ಶಿರೋಮಣಿ ವರದಾಚಾರ್ಯರು ಅದಕ್ಕೂ ಕೆಲ ಸಮಯ ಮೊದಲು ಬೆಂಗಳೂರು ಯೂನಿಯನ್ ಕಲಾವಿಲಾಸಿಗಳ ಸಂಘದಲ್ಲಿ ಅಭಿನಯಿಸಿದ್ದರ ಬಗ್ಗೆ ದಾಖಲೆ ಸಿಗುತ್ತದೆ. ಮಹಾರಾಷ್ಟ್ರದ ಕಂಪನಿ ಬೆಂಗಳೂರು ನಗರದಲ್ಲಿ ತನ್ನ ಮೊಟ್ಟ ಮೊದಲ ಕ್ಯಾಂಪ್ ಮಾಡಿದ್ದು 1905ರಲ್ಲಿ. ಇವರ ನಾಟಕಗಳ ದೃಶ್ಯ ಸಂಯೋಜನೆ, ಪರಿಕರಗಳಿಂದ ಪ್ರಭಾವ ಹೊಂದಿದ ವರದಾಚಾರ್ಯರು ಈ ಕಂಪನಿಯಲ್ಲಿ ಅನುಭವ ಪಡೆದಿದ್ದ ಕಪನೀಪತಿರಾವ್ ಅವರನ್ನು ತಮ್ಮ ಕಂಪನಿಗೆ ಕರೆದೊಯ್ದರು. ಈ ಹಂತದಲ್ಲಿ ಪ್ರಯೋಗವಾದ ಶಾಕುಂತಲ, ರತ್ನಾವಳಿ, ಮನ್ಮಥ ವಿಜಯ, ಹರಿಶ್ಚಂದ್ರ, 'ಸತ್ಯವರ್ಮ', 'ಮಂದಾರದಲ್ಲಿ ಪರಿಣಯ', ಮಾಲವಿಕಾಗ್ನಿಮಿತ್ರ, ನಿರುಪಮಾ, 'ರಾಮವರ್ಮ ಲೀಲಾವತಿ', ಕಾಮಪಾಲ, 'ಪ್ರತಾಪ ಸಿಂಹ', 'ಸದಾರಮೆ'–ಮುಂತಾದ ಜನಪದ–ಪೌರಾಣಿಕ ನಾಟಕಗಳು ಪಕ್ಕಾ ಪಾರ್ಸಿ ಶೈಲಿಯಲ್ಲಿ ಪ್ರದರ್ಶನ ಕಂಡವು. 1876ರಿಂದ ನಿರಂತರ ಪ್ರಯೋಗಶೀಲತೆ ಮುಖಾಂತರ ಸ್ಥಿತ್ಯಂತರಕ್ಕೆ ಒಳಗಾದ ಕಂಪನಿ ನಾಟಕ ಶೈಲಿಯ ಒಂದು ನಿರ್ದಿಷ್ಟ ಹಂತ ತಲುಪಿದ್ದು ಈ ಅವಧಿಗೆ; ಅಂದರೆ 20ನೆಯ ಶತಮಾನದ ಆರಂಭಕ್ಕೆ.

**ವರದಾಚಾರ್ಯ ಯುಗ :** ಈ ಹಂತದಲ್ಲಿ ವರದಾಚಾರ್ಯ ಎಂಬ ಮಹಾನ್ ನಟನ ರಂಗಪ್ರವೇಶವಾಯಿತು. ತಮ್ಮ ನಟನಾ ಕೌಶಲ್ಯದ ಜತೆಗೆ ಶಿಸ್ತುಬದ್ಧವಾಗಿ ಕಂಪನಿ ನಡೆಸುವ ಕಲಾವಿದರಿಗೆ ಸೂಕ್ತ ಅವಕಾಶ ನೀಡುವ ನಾಯಕತ್ವ ಗುಣ, ರಂಗಸಂಗೀತದಲ್ಲಿ ಔಚಿತ್ಯ, ನಾಟಕದ ಪರದೆಗಳನ್ನು ಬರೆಸುವ ಚಾತುರ್ಯ ಇವೆಲ್ಲವನ್ನೂ ವರದಾಚಾರ್ಯರು ಕರಗತ ಮಾಡಿಕೊಂಡಿದ್ದರು. ನಾಯಕನ ಪಾತ್ರಕ್ಕೆ ಬೇಕಾದ ಅಂಗಸೌಷ್ಠವ, ಗಾಂಭೀರ್ಯ ಅವರಿಗಿತ್ತು. ರೂಪಕ್ಕೆ ತಕ್ಕ ಪಾಂಡಿತ್ಯವೂ ಇದ್ದಿತು. ಇದಕ್ಕೆ ಮೆರಗು ಬಂದದ್ದು ಅವರ ಕಂಠಬಲ. ಹಾಗಾಗಿ ರತ್ನಾವಳಿ ನಾಟಕ ಕಂಪನಿ ಎರಡು ದಶಕಗಳ ಕಾಲ ನಾಡಿನಾದ್ಯಂತ ಮನೆಮಾತಾಗಿತ್ತು. ರಂಜನೆ ಜತೆಗೆ ಚಿಂತನೆಗೂ ಅವರ ನಾಟಕಗಳು ಅವಕಾಶ ಮಾಡಿಕೊಟ್ಟವು.

ದಂತಕತೆಯಾದ ವರದಾಚಾರ್ಯರ ಜೀವನಶೈಲಿಯನ್ನು ಆಧರಿಸಿ ಕನ್ನಡ ಕಾದಂಬರಿ ಸಾರ್ವಭೌಮ ಅನಕೃ 'ನಟಸಾರ್ವಭೌಮ' ಎಂಬ ಬೃಹತ್ ಕಾದಂಬರಿ ರಚಿಸಿದ್ದಾರೆ. ಕನ್ನಡ ಕಾದಂಬರಿ ಪ್ರಕಾರದ ಕ್ಲಾಸಿಕ್ಸ್‌ಗಳಲ್ಲಿ ಒಂದಾದ ಈ ಕೃತಿ ರಚನೆಗೆ ವರದಾಚಾರ್ಯರ ವರ್ಣಮಯ ವ್ಯಕ್ತಿತ್ವವೇ ಕಾರಣ.

ಹರಿಶ್ಚಂದ್ರ, ದುಷ್ಯಂತ, ಕೀಚಕ, ಅರ್ಜುನ, ಶಿಶುಪಾಲ, ರಾವಣ, ಹಿರಣ್ಯಕಶಿಪು ಮುಂತಾದ ಧೀರೋದ್ದಾತ ಪಾತ್ರಗಳಲ್ಲಿ ವರದಾಚಾರ್ಯರು; ಹಾಸ್ಯಪಾತ್ರಗಳಿಗೆ ಕೃಷ್ಣಮೂರ್ತಿರಾಯರೂ, ಸ್ತ್ರೀ ಪಾತ್ರಗಳಲ್ಲಿ ನಾಗೇಂದ್ರರಾಯರೂ, ಬೋಧರಾಯರು, ವಿದೂಷಕ ಪಾತ್ರಗಳಲ್ಲಿ ಮರಿರಾಯರು, ಶಾಮರಾಯರು, ಜಯರಾಯರು ದಂತಕತೆಯಾಗಿಬಿಟ್ಟರು.

**ಗುಬ್ಬಿ ವೀರಣ್ಣ ಯುಗ :** ವರದಾಚಾರ್ಯರ ಅನಂತರ ಗುಬ್ಬಿ ವೀರಣ್ಣನವರ ಯುಗ ಆರಂಭವಾಯಿತು. ಕನ್ನಡ ರಂಗಭೂಮಿಯ ದೊಡ್ಡಣ್ಣನಾಗಿ ಬಹು ದೀರ್ಘಕಾಲ ಆಳಿದ ಗುಬ್ಬಿ ವೀರಣ್ಣನವರ ನಾಟಕ ಕಂಪನಿ ವೃತ್ತಿರಂಗಭೂಮಿಯ ಒಂದು ಮಾದರಿಯಾಗಿ ಉಳಿಯಿತು. ವೀರಣ್ಣನವರ ಸಂಘಟನಾ ಕುಶಲತೆಯೇ ಇದಕ್ಕೆ ಕಾರಣ. ವೀರಣ್ಣನವರ ಪ್ರವೇಶಕ್ಕೆ ಮುಂಚೆ ಅಂದರೆ 19ನೆಯ ಶತಮಾನದ ಅಂತ್ಯದಲ್ಲಿಯೇ ಗುಬ್ಬಿ ಚನ್ನಬಸವೇಶ್ವರ ನಾಟಕ ಕಂಪನಿ ಅಸ್ತಿತ್ವದಲ್ಲಿತ್ತು. ಆಗ ಚಂದಣ್ಣನವರ ನೇತೃತ್ವದಲ್ಲಿ ಯಕ್ಷಗಾನ ಹಾಗೂ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಆದರೆ ಗುಬ್ಬಿ ಕಂಪನಿಗೆ ವೈಭವದ ದಿನಗಳು ಬಂದದ್ದು ವೀರಣ್ಣನವರ ಪ್ರವೇಶದ ಅನಂತರ.

ಪರದೆ ಎಳೆಯುವ ಕಾರ್ಮಿಕನಾಗಿ ಗುಬ್ಬಿ ಕಂಪನಿ ಪ್ರವೇಶಿಸಿದ ವೀರಣ್ಣ ಕ್ರಮೇಣ ಕಂಪನಿಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಅಸಂಖ್ಯಾತ ನಟ–ನಟಿಯರಿಗೆ ತರಬೇತು ನೀಡಿ, ಹಲವಾರು ನಾಟಕಕಾರರಿಂದ ಹೊಸ ನಾಟಕಗಳನ್ನು ಬರೆಯಿಸಿ, ಅದ್ದೂರಿ ಪರಿಕರಗಳಿಂದ ನಾಟಕಗಳನ್ನು ಕಳೆ ಕಟ್ಟಿಸಿದರು.

1919ರಲ್ಲಿ ಅವರು ಬಹುದೀರ್ಘ ಅವಧಿಯ ಬೆಂಗಳೂರು ಕ್ಯಾಂಪು ಐತಿಹಾಸಿಕ. ಆ ಕಾಲದಲ್ಲೇ ಕುರುಕ್ಷೇತ್ರ ನಾಟಕಕ್ಕೆ 35 ಸಾವಿರ ಖರ್ಚುಮಾಡಿ ರಂಗ ಸಜ್ಜಿಕೆ ಮಾಡಿದ ದಿಗ್ಗಜ. ಆನೆ, ಕುದುರೆ ಮುಂತಾದ ಜೀವಂತ ಪ್ರಾಣಿಗಳನ್ನು ಪ್ರಥಮ ಬಾರಿಗೆ ರಂಗದ ಮೇಲೆ ತಂದ ವೀರಣ್ಣ ಪ್ರೇಕ್ಷಕರು ಉಸಿರು ಬಿಗಿಹಿಡಿದು ನಾಟಕ ನೋಡುವಂತೆ ಮಾಡಿದರು.

ರಂಗಸಜ್ಜಿಕೆ, ಉಡುಗೆ–ತೊಡುಗೆ, ಪ್ರಸಾಧನ, ಬೆಳಕಿನ ಸಂಯೋಜನೆ, ಪ್ರಯೋಗ ತಂತ್ರ ಎಲ್ಲದರಲ್ಲೂ ವೀರಣ್ಣನವರು ಅಚ್ಚುಕಟ್ಟು. ಅದ್ದೂರಿ ರಂಗಸಜ್ಜಿಕೆ ನಿರ್ಮಿಸುವಲ್ಲಿ ವೀರಣ್ಣನವರಿಗೆ ವೀರಣ್ಣನವರೇ ಸಾಟಿ. ಬೆಂಗಳೂರು ನಗರದಲ್ಲಿ ಮೂರು ಬಾರಿ ರಂಗಮಂದಿರ ಕಟ್ಟಿಸಿದ ಕೀರ್ತಿ ಗುಬ್ಬಿ ವೀರಣ್ಣ ಕಂಪನಿಗೆ ಸಲ್ಲುತ್ತದೆ.

ಪ್ರೇಕ್ಷಕರ ನಾಡಿಮಿಡಿತ ಅರಿತಿದ್ದ ವೀರಣ್ಣ ಕಾಲಕಾಲಕ್ಕೆ ಹೊಸ ನಾಟಕಗಳನ್ನು ಬರೆಸಿದರು. ಬೆಳ್ಳಾವೆ ನರಹರಿಶಾಸ್ತ್ರಿ, ಬಿ. ಪುಟ್ಟಸ್ವಾಮಯ್ಯ, ಎಚ್.ಟಿ. ಮಹಾಂತೇಶಶಾಸ್ತ್ರಿಗಳಂತಹ ಪ್ರಖ್ಯಾತ ನಾಟಕಕಾರರು ಗುಬ್ಬಿ ವೀರಣ್ಣರಿಗಾಗಿಯೇ ಹಲವಾರು ನಾಟಕಗಳನ್ನು ರಚಿಸಿಕೊಟ್ಟರು.

ಎಂ.ಎನ್. ಗಂಗಾಧರರಾಯ, ಸುಬ್ಬಯ್ಯ ನಾಯ್ಡು, ಮಳವಳ್ಳಿ ಸುಂದರಮ್ಮ, ಜಿ. ನಾಗೇಶರಾಯ, ವಾಸುದೇವರಾವ್, ಸಿ.ಬಿ. ಮಲ್ಲಪ್ಪ, ಅಶ್ವತ್ಥಮ್ಮ, ಜಯಮ್ಮ, ಗುರುಮೂರ್ತಪ್ಪ ಜಿ.ವಿ. ಸುಂದರಮ್ಮ, ಜಿ.ವಿ. ಸ್ವರ್ಣಮ್ಮ, ಜಿ.ವಿ. ಮಾಲತಮ್ಮ, ರಂಗನಾಯಕಮ್ಮ, ಚಿಕ್ಕ ಬಸವರಾಜು, ದೊಡ್ಡ ಬಸವರಾಜು, ಕೊಟ್ಟೂರಪ್ಪ, ಸಿಂಗನಲ್ಲೂರು ಪುಟ್ಟಸ್ವಾಮಯ್ಯ, ಬಿ ವಿ ಕಾರಂತ, ಜಿ ವಿ ಐಯ್ಯರ್, ಮುತ್ತುರಾಜ್, ರಾಜ್‌ಕುಮಾರ್ ಗುಬ್ಬಿ ಕಂಪನಿಯಲ್ಲಿ ಅರಳಿದ ಪ್ರತಿಭೆಗಳು. ಇಂತಹ ಅಸಾಮಾನ್ಯ ಕಲಾವಿದರು ತಮ್ಮ ಇಡೀ ಪ್ರತಿಭೆಯನ್ನು ಧಾರೆ ಎರೆದು ಗುಬ್ಬಿ ಕಂಪನಿಯ ಕೀರ್ತಿ ಆಚಂದ್ರಾರ್ಕವಾಗುವಂತೆ ಮಾಡಿದರು.

ಜಾನಪದ ಕಥಾವಸ್ತುವುಳ್ಳ ಸದಾರಮೆ, ಗುಲೇಬಕಾವಲಿ, ಪ್ರಭಾಮಣಿ ವಿಜಯ; ಮಹಾಭಾರತ–ರಾಮಾಯಣ ಆಧರಿಸಿದ ಕುರುಕ್ಷೇತ್ರ, ಸುಭದ್ರಾ ಕಲ್ಯಾಣ, ದಶಾವತಾರ, ಲವಕುಶ, ಶ್ರೀಕೃಷ್ಣಲೀಲೆ, ಸಾಮಾಜಿಕ ನಾಟಕಗಳಾದ ಸಾಹುಕಾರ, ಅಣ್ಣತಮ್ಮ; ಕನ್ನಡದ ಪ್ರಥಮ ಕವಯಿತ್ರಿ ಅಕ್ಕನ ಕುರಿತ ಅಕ್ಕಮಹಾದೇವಿ–ಮುಖ್ಯವಾದ ನಾಟಕಗಳು. ಐತಿಹಾಸಿಕ ನಾಟಕಗಳ ಪ್ರಯೋಗ ತುಸು ಕಡಿಮೆಯಾದರೂ ಎಲ್ಲ ಪ್ರಕಾರದ ನಾಟಕಗಳು ಗುಬ್ಬಿ ವೀರಣ್ಣ ಮಂಡಳಿಯಲ್ಲಿ ಅಭಿನಯಿಸಲ್ಪಟ್ಟವು.

ಮಕ್ಕಳ ರಂಗಭೂಮಿಯಲ್ಲಿ ಇಂದಿಗೂ ನಿರೀಕ್ಷೆಯಷ್ಟು ಕೆಲಸ ಆಗಿಲ್ಲ. ಆದರೆ ವೀರಣ್ಣನವರು 1925ರಲ್ಲೇ ಮಕ್ಕಳಿಗಾಗಿ ಬಾಲಕಲಾವಿವರ್ಧಿನಿ ಎಂಬ ತಂಡ ಕಟ್ಟಿದ್ದರು. ಬೆಳ್ಳಾವೆ ಅವರು ಮಕ್ಕಳಿಗಾಗಿ ಶ್ರೀಕೃಷ್ಣ ಪಾರಿಜಾತ, ಜಲಂಧರ, ಕೃಷ್ಣ ಗಾರುಡಿ, ಭಾಮಾ ಪರಿಣಯ ಎಂಬ ನಾಟಕಗಳನ್ನು, ಭೀಮರಾಜು ಅವರು ಸಾವಿತ್ರಿ, ಕಬೀರ್‌ಲೀಲೆ ನಾಟಕಗಳನ್ನು ರಚಿಸಿಕೊಟ್ಟಿದ್ದರು.

ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮುಂಬೈ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಹಲವು ಬಾರಿ ಪ್ರವಾಸ ಮಾಡಿ ಹಲವು ತಿಂಗಳುಗಳ ಕಾಲ ನಾಟಕ ಪ್ರದರ್ಶಿಸಿದ ವೀರಣ್ಣ ತಮ್ಮ ಕಂಪನಿಗೆ ಅಖಿಲ ಭಾರತದ ವ್ಯಕ್ತಿತ್ವ ನೀಡಿದರು.

1919ರಿಂದ 7 ವರ್ಷಗಳ ಕಾಲ ಚೆನ್ನೈ, ಮಹಾರಾಷ್ಟ್ರದಲ್ಲಿ ಹಲವು ಬಾರಿ ಪ್ರವಾಸ ಮಾಡಿದ್ದರು. ಕೊಯಮತ್ತೂರು, ಚೆನ್ನೈ, ಮದುರೆ, ಈರೋಡು ಸುತ್ತಲಿನ ಹಲವಾರು ಪಟ್ಟಣಗಳಲ್ಲಿ ಸದಾರಮೆ, ಸುಭದ್ರಾ ಪರಿಣಯ, ಪ್ರಹ್ಲಾದ ಚರಿತ್ರೆ ಜನಪ್ರಿಯವಾದವು.

ಸದಾರಮೆ, ಕುರುಕ್ಷೇತ್ರ, ಕೃಷ್ಣಲೀಲೆ ನಾಟಕಗಳು 1935ರಲ್ಲಿ ಮುಂಬಯಿ ಕನ್ನಡಿಗರ ಮನೆ ಮಾತಾಯಿತು. ಆಂಧ್ರಪ್ರದೇಶದ ವಾರಂಗಲ್, ಬೆಜವಾಡ, ರಾಜಮಹೇಂದ್ರಿ, ವಿಜಯನಗರ, ಗುಂಟೂರು ಮುಂತಾದ ಕಡೆ ಕನ್ನಡ ನಾಟಕಗಳಿಗೆ ಸಿಕ್ಕ ಪ್ರೋತ್ಸಾಹದಿಂದ ಉತ್ಸುಕರಾದ ವೀರಣ್ಣನವರು ತೆಲುಗು ಭಾಷೆಗೆ ಅನುವಾದಿಸಿ ನಾಟಕ ಪ್ರದರ್ಶಿಸಿದರು. ತೆಲುಗು ಪ್ರದೇಶದಲ್ಲಿ ಕನ್ನಡ ನಾಟಕಗಳಿಗೇ ಇಷ್ಟೊಂದು ಬೆಲೆ ಇರುವಾಗ ತೆಲುಗು ಭಾಷೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಗಬಹುದು ಎಂಬ ಅವರ ಊಹೆ ನಿಜವಾಯಿತು. ಹೈದರಾಬಾದ್‌ನಲ್ಲಿ ಸತತ 5 ತಿಂಗಳು ನಾಟಕ ಪ್ರದರ್ಶಿಸಿ ಕರ್ನಾಟಕಾಂಧ್ರ ನಾಟಕ ಸಾರ್ವಭೌಮ ಬಿರುದಾಂಕಿತರಾದರು.

ವೀರಣ್ಣ ಸಂಘಟನಾ ಚತುರರು ಮಾತ್ರವಲ್ಲ, ಉತ್ತಮ ನಟರೂ ಹೌದು. ಅವರ ಅಭಿನಯದಲ್ಲಿ ಒಂದು ವಿಶೇಷತೆ ಇತ್ತು. ಸದಾರಮೆಯಲ್ಲಿ ಕಳ್ಳ ಮತ್ತು ಆದಿಮೂರ್ತಿ ಪಾತ್ರಗಳಿಗೆ ವೀರಣ್ಣನವರೇ ಒಂದು ವಿಶೇಷ ಶೈಲಿ ನಿರ್ಮಿಸಿದರು. 'ಗುಲೇಬಕಾವಲಿ'ಯಲ್ಲಿ ವೀರಣ್ಣನವರು ಅಭಿನಯಿಸುತ್ತಿದ್ದ ಮುತ್ತುಸ್ವಾಮಿ, ಜಯಮ್ಮನವರ ಮೋಹಶಾಸನೆ ಪಾತ್ರಕ್ಕೆ ಜನ ಮುಗಿಬೀಳುತ್ತಿದ್ದರು. ಪ್ರಭಾಮಣಿ ವಿಜಯದ ಅವರ ವೀರೋಚನ ಹಾಗೂ ಜಯಮ್ಮನವರ ತಾರಾಮಂಜರಿ ಪಾತ್ರವೂ ಅಷ್ಟೇ ಪ್ರಸಿದ್ಧಿ. ಸುಭದ್ರಾ ಪರಿಣಯದಲ್ಲಿ ವೀರಣ್ಣನವರ ಬ್ರಾಹ್ಮಣ ಪಾತ್ರದ್ದು ಮತ್ತೊಂದು ವಿಶೇಷ.

'ಕನ್ನಡ ವೃತ್ತಿ ರಂಗಭೂಮಿ ಇತಿಹಾಸದಲ್ಲಿ ಗುಬ್ಬಿ ಕಂಪನಿಯ ಆಯಸ್ಸು ದೊಡ್ಡದು, ಅಷ್ಟೇ ದೊಡ್ಡದು ಅವರ ಸಾಧನೆ. ಇಷ್ಟು ದೀರ್ಘಕಾಲ ಒಬ್ಬ ವ್ಯಕ್ತಿ ನೇತೃತ್ವದಲ್ಲಿ ಬಾಳಿದ ವೃತ್ತಿ ನಾಟಕ ಕಂಪನಿ ಭಾರತದಲ್ಲಿ ಅಷ್ಟೇ ಅಲ್ಲ, ಪ್ರಪಂಚದಲ್ಲಿಯೇ ಇಲ್ಲ ಎಂದರೆ ಅತಿಶಯೋಕ್ತಿ ಆಗಲಾರದು' ಎನ್ನುತ್ತಾರೆ ಗುಬ್ಬಿ ಕಂಪನಿ ಕುರಿತು ಸಂಶೋಧನಾ ಪ್ರಬಂಧ ಮಂಡಿಸಿರುವ ಸಿಂಧುವಳ್ಳಿ ಅನಂತಮೂರ್ತಿ.

ಕವಲಪ್ಪನವರ ಶ್ರೀಗಂಧರ್ವ ನಾಟಕ ಮಂಡಳಿ, ರಂಗನಾಥ ಮೊದಲಿಯಾರರ ಶ್ರೀಶಾರದಾ ವಿಲಾಸ ನಾಟಕ ಮಂಡಳಿ (1917), ದೊಡ್ಡಮಲ್ಲಪ್ಪನವರ ಶ್ರೀಸಾಮ್ರಾಜ್ಯ ನಾಟಕ ಮಂಡಳಿ(1920), ರಸಿಕ ಜನಾನಂದ ನಾಟಕ ಸಭಾ(1922), ಕನಕಲಕ್ಷ್ಮಮ್ಮ ಮತ್ತು ಪ್ರೇಮಿಗಳು ಸ್ಥಾಪಿಸಿದ ಶ್ರೀ ವರದಾಚಾರ್ಯ ಸ್ಮಾರಕ ಕಲಾಸಂಘ(1926), ಸುಗುಣ ಬೋಧಕ ಸಮಾಜ, ಬೆಂಗಳೂರು(1932), ತುಮಕೂರು ಸೀತಾರಾಮಯ್ಯನವರ ಸೀತಾಮನೋಹರಿ ಕಂಪನಿ(1934), ಪೈಲ್ವಾನ್ ಅಣ್ಣಯ್ಯಪ್ಪ ಮತ್ತು ತಮಾಷ್ ಮಾಧವರಾವ್ ಅವರ ಕಲಾಸೇವಾ ಮಂಡಳಿ(1934), ಡಿ.ಮುರಾರಾಚಾರ್ಯರ ಶ್ರೀ ಚಂದ್ರಮೌಳೇಶ್ವರ ನಾಟಕ ಮಂಡಳಿ (1940), ಗುರುರಾಜ ನಾಟಕ ಮಂಡಳಿ, ಕುಕನೂರು ಕಂಪನಿ, ಕಂಠೀರವ ಕಲಾವಿದರು, ಸಾಮ್ರಾಜ್ಯ ಲಕ್ಷ್ಮೀ ನಾಟಕ ಸಭಾ, ಆನಂದ ಕಲಾಮಿತ್ರ ಮಂಡಳಿ, ಶ್ರೀರಂಗ ಕಲಾನಾಟಕ ಸಂಘ, ಬೇಗೂರು ಕೃಪಾಪೋಷಿತ ನಾಟಕ ಸಭಾ, ಕೆಂಪೇಗೌಡ ನಾಟಕ ಮಂಡಳಿ, ಆನಂದರಾಮ ಸೇವಾ ಸಂಘ–ಇವೇ ಮುಂತಾದವು ಆ ಕಾಲದಲ್ಲಿ ನಾಟಕ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸಿದ ತಂಡಗಳು.

**ರಂಗೇರಿದ ಭಕ್ತಿ ಪ್ರಧಾನ ನಾಟಕಗಳು :** ಕಬೀರದಾಸ ಗುಬ್ಬಿ ಕಂಪನಿಯ ಮತ್ತೊಂದು ಪ್ರಸಿದ್ಧ ನಾಟಕ. ಸಿ.ಬಿ. ಮಲ್ಲಪ್ಪನವರ ಕಬೀರದಾಸನ ಪಾತ್ರ ಅದಕ್ಕೆ ಕಾರಣ. ಕಬೀರನ ಪ್ರಸಿದ್ಧಿಯನ್ನು ನೆಚ್ಚಿಕೊಂಡೇ ಮಲ್ಲಪ್ಪ ಶ್ರೀಚಂದ್ರಮೌಳೇಶ್ವರ ನಾಟಕ ಸಭಾ ಎಂಬ ಮತ್ತೊಂದು ಕಂಪನಿ ಮಾಡಿದ್ದರು. ಗುಬ್ಬಿ ಕಂಪನಿ ಮೂಲಕ ಹಾಗೂ ಮಲ್ಲಪ್ಪನವರ ಕಂಪನಿ ಮೂಲಕ ಹಳೇ ಮೈಸೂರು ಭಾಗದ ರಂಗರಸಿಕರಿಗೆ ಭಕ್ತಿ ಪ್ರಧಾನ ನಾಟಕವನ್ನು ಹೇಗೆ ಕಳೆಗಟ್ಟಿಸಬಹುದು ಎಂಬುದರ ಪರಿಚಯವಾಯಿತು. ಕಬೀರದಾಸ, ತುಕಾರಾಮ, ತುಳಸೀದಾಸ ಪಾತ್ರಗಳನ್ನು ಅತ್ಯಂತ ಮನೋಜ್ಞವಾಗಿ ಅಭಿನಯಿಸುತ್ತಿದ್ದ ಮಲ್ಲಪ್ಪನವರಿಗೆ ಅಭಿನವ ಭಕ್ತಶಿರೋಮಣಿ ಎಂದು ಪ್ರೇಕ್ಷಕರು ಗೌರವ ಸಲ್ಲಿಸಿದರು.

ರಂಗಗೀತೆಗಳನ್ನು ಹಾಡುವುದರಲ್ಲೂ ಮಲ್ಲಪ್ಪನವರದು ದೊಡ್ಡ ಹೆಸರು. ಅವರ ಹಾಡುಗಳಿಗೆ ಮಾರುಹೋದ ಮೈಸೂರು ಮಹಾರಾಜರು ಹಲವು ಬಾರಿ ತಮ್ಮ ಆಸ್ಥಾನಕ್ಕೆ ಕರೆಸಿಕೊಂಡು ಸಂಗೀತ ಕಚೇರಿಗಳನ್ನೇ ಮಾಡಿಸಿದ್ದರು.

ಮಹಮ್ಮದ್ ಪೀರ್ ವೃತ್ತಿ ಕಂಪನಿಯ ಮತ್ತೊಂದು ದಂತಕತೆ. ಷಹಜಹಾನ್ ನಾಟಕ ಪ್ರದರ್ಶನದೊಂದಿಗೆ ಅವರು ತಮ್ಮ ಚಂದ್ರಕಲಾ ನಾಟಕ ಕಂಪನಿ ಆರಂಭಿಸಿದರು. ಗೌತಮ ಬುದ್ಧ ಅವರ ಕಂಪನಿಯ ಮತ್ತೊಂದು ಯಶಸ್ವಿ ನಾಟಕ. ಶ್ರೇಷ್ಠ ನಟರ ಸಾಲಿಗೆ ಸೇರಿದ ಪೀರ್ ಅವರು ಅಭಿನಯ, ಸಂಗೀತ, ಪರಿಕರ ಬಳಕೆಯಲ್ಲಿ ಔಚಿತ್ಯ ತಂದು ಕನ್ನಡ ನಾಟಕ ಕಂಪನಿ ಪರಂಪರೆಗೆ ಘನತೆ ತಂದುಕೊಟ್ಟರು. ಪೌರಾಣಿಕ ಪಾತ್ರಗಳ ವಿಜೃಂಭಣೆಯ ಕಾಲದಲ್ಲಿ ಷಹಜಹಾನ್, ಬುದ್ಧನಂತಹ ಪಾತ್ರಗಳನ್ನು ಅದೇ ಪ್ರಥಮ ಬಾರಿಗೆ ರಂಗದ ಮೇಲೆ ಅಜರಾಮರಗೊಳಿಸಿದರು. ಪೀರ್ ಅಕಾಲ ಮರಣವನ್ನಪ್ಪಿದರೂ ತಮ್ಮ ಅಲ್ಪ ಜೀವಿತ ಕಾಲದಲ್ಲೇ ರಂಗಭೂಮಿಯ ಶಾಶ್ವತ ಉನ್ನತಿಗೆ ಶ್ರಮಿಸಿದರು.

ಅಭಿನಯ ಮಾದರಿಗೆ ಒಂದು ಗತ್ತುಗಾರಿಕೆ ಮತ್ತು ಘನತೆ ತಂದುಕೊಟ್ಟ ಮತ್ತೊಬ್ಬ ನಟ ಸುಬ್ಬಯ್ಯ ನಾಯ್ಡು. ಬೆಂಗಳೂರಿನಲ್ಲಿ ಇವರು ಸ್ಥಾಪಿಸಿದ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ತನ್ನ ಚಟುವಟಿಕೆ ಆರಂಭಿಸಿದ್ದು 1932ರಲ್ಲಿ. ಆರ್ ನಾಗೇಂದ್ರರಾಯರು, ಎಂ.ಎಸ್. ಸುಬ್ಬಣ್ಣ, ಲಕ್ಷ್ಮೀಬಾಯಿ, ಕಮಲಾಬಾಯಿ ಮುಂತಾದ ಅಭಿನೇತ್ರಿಗಳನ್ನು ಚಿತ್ರರಂಗದಿಂದ ನಾಯ್ಡು ವಾಪಸ್ ಕರೆತಂದರು. ಭೂಕೈಲಾಸ, ಕೀಚಕವಧೆ, ರಾಮಾಯಣ, ದಕ್ಷಯಜ್ಞ, ಸದಾರಮೆ, ನಿರುಪಮಾ, ಲಂಕಾದಹನ ಇವರ ಕಂಪನಿಯ ಅತ್ಯಂತ ಜನಪ್ರಿಯ ನಾಟಕಗಳು. ಸೊಲ್ಲಾಪುರ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಹಲವು ಬಾರಿ ಕ್ಯಾಂಪ್ ಮಾಡಿದ ಹೆಗ್ಗಳಿಕೆ ಈ ಕಂಪನಿಯದು. ಸುಬ್ಬಯ್ಯನಾಯ್ಡು ಕಂಪನಿಯ ಬಣ್ಣದ ಸೀನರಿ. ವಿವಿಧ ವರ್ಣದ ನೆರಳು–ಬೆಳಕಿನ ವೈಖರಿಯನ್ನು ಹಳೇ ಮೈಸೂರಿನ ಹಳೆ ತಲೆಮಾರಿನ ಜನ ಇನ್ನೂ ಮರೆತಿಲ್ಲ. ತಿರುಗುವ ರಂಗಭೂಮಿ ಶ್ರೀ ಸುಬ್ಬಯ್ಯನಾಯ್ಡು ಅವರ ಅದ್ಭುತ ಪ್ರಯೋಗ. ಒಂದು ದೃಶ್ಯ ಆದ ಬಳಿಕ ಇನ್ನೊಂದು ದೃಶ್ಯಕ್ಕೆ ಸ್ಟೇಜ್ ತಿರುಗಿಕೊಳ್ಳುವುದು. ಪರದೆ ಎಳೆವ ತೆಗೆವ ಅಗತ್ಯವಿರಲಿಲ್ಲ. ಶ್ರೀರಾಮ ಜನನ ಇಲ್ಲಿ ಪ್ರಯೋಗಗೊಂಡ ನಾಟಕ. ಮತ್ತೂ ಮರೆಯಲಾರದ ಸಂಗತಿ ಎಂದರೆ ಆಕರ್ಷಕ ಶರೀರ, ಶಾರೀರ ಹೊಂದಿದ್ದ ಸುಬ್ಬಯ್ಯನಾಯ್ಡು ಅವರ ಅಭಿನಯದ ಮಾದರಿ.

ಮೈಸೂರು ಮಹಾರಾಜರು ಸ್ಥಾಪಿಸಿದ್ದ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾದ ಮಾಲೀಕತ್ವವನ್ನು ರಾಜರು ಬಿಟ್ಟುಕೊಟ್ಟ ಅನಂತರ 1946ರ ವರೆಗೂ ಹಲವಾರು ಕಲಾವಿದರು ಆ ಕಂಪನಿಯನ್ನು ನಡೆಸಿಕೊಂಡು ಬಂದರು. ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮ ಅವರೂ ಒಮ್ಮೆ ಈ ಕಂಪನಿಯ ಸಾರಥ್ಯ ವಹಿಸಿಕೊಂಡು ಯಶಸ್ವಿಯಾಗಿ ನಡೆಸಿದರು.

ಈ ಮೂಲಕ ಕಂಪನಿ ಮಾಲೀಕತ್ವವನ್ನು ಯಶಸ್ವಿಯಾಗಿ ನಿಭಾಯಿಸಿದ ಉತ್ತರ ಕರ್ನಾಟಕದ ರಂಗನಟಿಯರ ಉಜ್ವಲ ಇತಿಹಾಸದ ಸಾಲಿನಲ್ಲಿ ಸುಂದರಮ್ಮ ಅವರೂ ಸೇರಿದರು (ಪುರುಷನಿಗೆ ಸರಿಸಾಟಿಯಾಗಿ ಕಂಪನಿ ಮಾಲೀಕತ್ವ ವಹಿಸಿಕೊಂಡು ಹೆಣಗಿದ ಪರಂಪರೆ ಉತ್ತರ ಕರ್ನಾಟಕದಲ್ಲಿ 20ನೆಯ ಶತಮಾನದ ಆರಂಭದಿಂದಲೇ ಇತ್ತು).

ಸಂಪೂರ್ಣ ಆಡುಭಾಷೆಯಲ್ಲೇ ನಾಟಕ: ಸೀತಾಮನೋಹರ ನಾಟಕ ಕಂಪನಿ, ಗುಬ್ಬಿ ಕಂಪನಿ, ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಗಳಲ್ಲಿ 15 ವರ್ಷ ನಟನಾಗಿ ಅನುಭವ ಪಡೆದ ಹಿರಣ್ಣಯ್ಯನವರು ಮೈಸೂರಿನಲ್ಲಿ 1942ರಲ್ಲಿ ಮಿತ್ರಮಂಡಳಿ ಸ್ಥಾಪಿಸಿದರು. 1944ರಲ್ಲಿ ಪ್ರಥಮ ಪ್ರಯೋಗ ಕಂಡ ಕೆ ಹಿರಣ್ಣಯ್ಯನವರ ದೇವದಾಸಿ ವೃತ್ತಿರಂಗಭೂಮಿಯ ಮತ್ತೊಂದು ಮೈಲಿಗಲ್ಲು. ತಾವೇ ರಚಿಸಿದ ಈ ನಾಟಕದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ ಹಿರಣ್ಣಯ್ಯ ಪ್ರೇಕ್ಷಕರ ಮನೋಭಿತ್ತಿಯಲ್ಲಿ ಅಚ್ಚಳಿಯದೆ ಉಳಿದಿತ್ತು.

ಇದರ ಬೆನ್ನ ಹಿಂದೆಯೇ ಬಂದ ಪಂಗನಾಮ, ಮಕ್ಮಲ್ ಟೋಪಿ ನಾಟಕಗಳು ಹಾಸ್ಯ, ವಿಡಂಬನೆಯ ಹೊಸದೊಂದು ಪ್ರಕಾರಕ್ಕೆ ನಾಂದಿಯಾಯಿತು. ಕೈಲಾಸಂರಂತೆ ನಾಟಕದಲ್ಲಿ ಆಡುಭಾಷೆಯನ್ನು ಕೆ. ಹಿರಣ್ಣಯ್ಯನವರು ಯಶಸ್ವಿಯಾಗಿ ಬಳಸಿದರು.

ಕೆ. ಹಿರಣ್ಣಯ್ಯ ಆರಂಭಿಸಿದ ಈ ಹಾಸ್ಯ ನಾಟಕ ಪರಂಪರೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದವರು ಅವರ ಪುತ್ರ ಮಾಸ್ಟರ್ ಹಿರಣ್ಣಯ್ಯವರು. ನಾಟಕ ಕಂಪನಿ ಎಂದರೆ ಏಳು–ಬೀಳು ಸಹಜವಾದದ್ದು. ಹಿರಣ್ಣಯ್ಯನವರೂ ಇದಕ್ಕೆ ಹೊರತಾಗಿರಲಿಲ್ಲ. ತಂದೆಯ ನಾಟಕ ಕಂಪನಿಯ ಏರಿಳಿತ ಕಂಡು ಮಗ ಬೆಚ್ಚಿಹೋದರು. ತಂದೆಯ ನಾಟಕ ಕಂಪನಿ ತೀವ್ರ ಸಂಕಟಕ್ಕೆ ಸಿಲುಕಿದಾಗ ಮಾಸ್ಟರ್ ನಲುಗಿಹೋದರು. ಈ ನಾಟಕದ ಸಹವಾಸವೇ ಬೇಡ ಎಂದು ದೂರ ಸರಿದರು.

ಅಂತಹ ಹೊತ್ತಿನಲ್ಲಿ ಮಾಸ್ಟರ್ ಹಿರಣ್ಣಯ್ಯನವರಲ್ಲಿ ಧೈರ್ಯ ತುಂಬಿ ಮತ್ತೆ ನಾಟಕಕ್ಕೆ ಕರೆ ತಂದವರು ಸಾಹಿತಿಗಳಾದ ಅನಕೃ, ಬೀಚಿ, ರಾಮಮೂರ್ತಿ ಹಾಗೂ ಕಿಡಿ ಶೇಷಪ್ಪನವರು. ಈ ಘಟನೆ ನಡೆದದ್ದು 1953ರಲ್ಲಿ. ನಟನಾಗಿ ಬಳ್ಳಾರಿ ಲಲಿತಮ್ಮನವರ ಕಂಪನಿಯಲ್ಲಿ ಮತ್ತೆ ಪ್ರವೇಶ ಮಾಡಿದ್ದ ಹಿರಣ್ಣಯ್ಯ ಅನಂತರ ಅದರ ಪಾಲುದಾರರೂ ಆದರು. ಮುನಿರಂಗಪ್ಪನವರ ಸಹಭಾಗಿತ್ವದಲ್ಲಿ ಮತ್ತೊಂದು ಕಂಪನಿ ತೆರೆದು ಕೆಲ ಕಾಲ ನಡೆಸಿದರು. 1960ರ ಹೊತ್ತಿಗೆ ಮತ್ತೆ ಹಿರಣ್ಣಯ್ಯ ಮಿತ್ರಮಂಡಳಿಯನ್ನು ಪುನರಾರಂಭಿಸಿದರು.

1963ರಲ್ಲಿ ತಾವೇ ರಚಿಸಿ, ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ 'ಲಂಚಾವತಾರ' ರಾಜಕೀಯ ವಿಡಂಬನೆಯ ಹೊಸ ಹಾದಿ ನಿರ್ಮಿಸಿತು. ಇದು ಹಿರಣ್ಣಯ್ಯ ಮಿತ್ರ ಮಂಡಳಿಯ ಅತ್ಯಂತ ಯಶಸ್ವಿ ನಾಟಕ. ಕಳೆದ 40 ವರ್ಷಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಪ್ರಯೋಗ ಕಂಡಿದೆ.

ಹಾಸ್ಯ, ವಿಡಂಬನೆಯ, ಸಂಭಾಷಣಾ ಪ್ರಧಾನವಾದ ತಮ್ಮದೇ ಆದ ಶೈಲಿಯೊಂದನ್ನು ನಿರ್ಮಿಸಿದವರು ಮಾಸ್ಟರ್ ಹಿರಣ್ಣಯ್ಯ. ಅವರು ಆಕರ್ಷಕ ಮಾತುಗಾರರು. ಪ್ರಚಲಿತ ಘಟನಾವಳಿಗೆ ಆಧರಿಸಿ, ಟೀಕಾಸ್ತ್ರಗಳ ಪ್ರಯೋಗ, ಪುನರಾವರ್ತನೆಯಲ್ಲಿ ವಿನೂತನ ಅನುಭವ ಎನ್ನಲಾಗುತ್ತದೆಯೇ ಎನ್ನುವವರಿದ್ದಾರೆ. ಆದರೆ ಮಾತುಗಾರಿಕೆಯೇ ಒಂದು ನಾಟಕವೂ ಆಗಬಹುದು ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

ಮಹಿಳೆಯರೇ ನಾಟಕ ಕಂಪನಿ ನಡೆಸಿದ ಉಜ್ವಲ ಪರಂಪರೆಯ ಮುಂದುವರಿಕೆಯಾಗಿ ಆರ್. ನಾಗರತ್ನಮ್ಮನವರು 1958ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದ ಸ್ತ್ರೀ ನಾಟಕ ಮಂಡಳಿ ಪ್ರಮುಖವಾದುದು. ಆದರೆ ಸರಿಯಾದ ಮಾಹಿತಿ ಇಲ್ಲದೇ ನಾಗರತ್ನಮ್ಮನವರದೇ ಮೊದಲ ಮಹಿಳಾ ನಾಟಕ ಕಂಪನಿ ಎಂದವರಿದ್ದಾರೆ.

ಪುರುಷ ಪಾತ್ರಗಳು ಸೇರಿದಂತೆ ಎಲ್ಲ ಪಾತ್ರಗಳಲ್ಲೂ ಮಹಿಳೆಯರದೇ ಅಭಿನಯ. ನಾಟಕಗಳಲ್ಲಿ ಭಾಗವಹಿಸುವ ಇಚ್ಛೆ ಇದ್ದರೂ ಹಿಂದೇಟು ಹಾಕುತ್ತಿದ್ದ ನಗರದ ಮಹಿಳೆಯರಲ್ಲಿ ಪರೋಕ್ಷವಾಗಿ ಸ್ಥೈರ್ಯ ತಂದುಕೊಟ್ಟದ್ದು ಈ ಮಂಡಳಿಯ ಹೆಚ್ಚುಗಾರಿಕೆ, ಭೀಮ, ಕಂಸ, ರಾವಣನ ಪಾತ್ರದಲ್ಲಿ ನಾಗರತ್ನಮ್ಮ ಮನೆಮಾತಾದರೆ ಅವರ ತಂಗಿ ಆರ್. ಮಂಜುಳ ಹಾಸ್ಯಪಾತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದವರು. ಮತ್ತೊಬ್ಬ ಸಹೋದರ ಆರ್. ಪರಮಶಿವನ್ ಹೆಸರಾಂತ ಸಂಗೀತ ನಿರ್ದೇಶಕರು.

ಆರು ಮಂದಿ ಅಕ್ಕ-ತಂಗಿಯರು ಸೇರಿ 40ರ ದಶಕದಲ್ಲಿ ಬಾಲ ಸರಸ್ವತಿ ನಾಟಕ ಕಂಪನಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಸಹೋದರಿಯರಲ್ಲಿ ಮಧ್ಯದವರಾದ ಲಕ್ಷ್ಮಮ್ಮ ಇದರ ಮಾಲೀಕರು. ಆಂಜನೇಯನ ಪಾತ್ರದಲ್ಲಿ ಅವರು ಪ್ರಸಿದ್ಧಿ ಪಡೆದವರು. ರಾಮಕ್ಕ, ಸಾವಿತ್ರಮ್ಮ ಇತರ ಪಾತ್ರಗಳಲ್ಲಿ ಅಭಿನಯಿಸಿದರೆ, ಸಕ್ಕೂಬಾಯಮ್ಮ ಎಂಬುವರು ಹಾರ್ಮೋನಿಯಂ ನುಡಿಸುತ್ತಿದ್ದರು. ಆವಶ್ಯಕತೆ ಇದ್ದ ಕಡೆ ಪುರುಷರು ಕೈ ಜೋಡಿಸಿದರೂ ಪ್ರಧಾನವಾಗಿ ಇದು ಮಹಿಳೆಯರ ನಾಟಕ ತಂಡ. 'ಸತಿ ಸಾವಿತ್ರಿ', 'ಹರಿಶ್ಚಂದ್ರ', 'ರಾಮಾಂಜನೇಯ ಯುದ್ಧ', 'ಸಾರಂಗಧರ' – ಪ್ರಮುಖವಾಗಿ ಅಭಿನಯಿಸುತ್ತಿದ್ದ ನಾಟಕಗಳು, ಸತ್ಯವಾನ, ರಾಮ, ರಾವಣ, ಆಂಜನೇಯ ಮುಂತಾದ ಎಲ್ಲ ಪುರುಷ ಪಾತ್ರಗಳಲ್ಲಿ ಕ್ವಚಿತ್ತಾಗಿ ಪುರುಷರು ಅಭಿನಯಿಸಿದ್ದು ಹೊರತುಪಡಿಸಿದರೆ ಇದೂ ಮತ್ತೊಂದು ಪ್ರಮೀಳಾ ರಾಜ್ಯ.

ಶೇಷಾದ್ರಿ ನಾಟಕ ಮಂಡಳಿ 60ರ ದಶಕದಲ್ಲಿ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿತ್ತು. ಇದರಲ್ಲೂ ಸ್ತ್ರೀಯರು ಪ್ರಧಾನ ಪಾತ್ರ ವಹಿಸಿದರು. ಇವರು ಆಂಧ್ರಪ್ರದೇಶದ ಸುರಭಿ ಸಂಬಂಧಿಕರು (ಒಂದೇ ಕುಟುಂಬದ ನೂರಾರು ಕಲಾವಿದರನ್ನು ಒಳಗೊಂಡ ಆಂಧ್ರಪ್ರದೇಶದ ಸುರಭಿ ನಾಟಕ ತಂಡ ಈ ದೇಶದ ಅತಿ ಬೃಹತ್ತಾದ ನಾಟಕ ಕಂಪನಿ). ಮೈಸೂರು ಜಿಲ್ಲೆಯವರಾದ ಪಂಕಜಾ ರವಿಶಂಕರ್ ಎಂಬುವರು ಬೆಂಗಳೂರಿನಲ್ಲಿ ನೆಲೆ ನಿಂತಿದ್ದು ಒಂದು ಮಹಿಳಾ ತಂಡ ಕಟ್ಟಿಕೊಂಡಿದ್ದಾರೆ. ಆಗಾಗ ನಾಟಕಗಳನ್ನು ಪ್ರದರ್ಶಿಸುತ್ತಾರೆ.

ಒಂದೊಂದು ಕುಟುಂಬದ ಮೂರ್‍ನಾಲ್ಕು ಅಥವಾ ಒಂದೆರಡು ತಲೆಮಾರುಗಳು ನಾಟಕಕ್ಕೆ ಸಮರ್ಪಿಸಿಕೊಂಡ ಉದಾಹರಣೆಗಳು ದಕ್ಷಿಣ ಕರ್ನಾಟಕದಲ್ಲಿ ಸಿಗುತ್ತವೆ. ಬೆಂಗಳೂರಿನ ಬಾಲ ಸರಸ್ವತಿ ನಾಟಕ ಕಂಪನಿಯ ಆರು ಸಹೋದರಿಯರ ಪೈಕಿ ಒಬ್ಬರಾದ ಸುಮಿತ್ರಮ್ಮ ಅವರ ಮಗ ಕೃಷ್ಣರಾವ್ ಈಗಲೂ ಹೆಸರಾಂತ ಹಾರ್ಮೋನಿಯಂ ಮಾಸ್ಟರ್. ಕೃಷ್ಣರಾವ್ ಸ್ವತಃ ಕಂಪನಿ ಮಾಡದಿದ್ದರೂ ಇವರ ಮನೆಯಲ್ಲಿರುವ ಕಲಾವಿದರನ್ನೆಲ್ಲ ಒಟ್ಟುಗೂಡಿಸಿದರೆ ಅದೇ ಒಂದು ಕಂಪನಿಯಾಗುತ್ತದೆ. 80ರ ದಶಕದಿಂದ ಇಲ್ಲಿವರೆಗೂ ಬೆಂಗಳೂರಿನ ಪೌರಾಣಿಕ ನಾಟಕಗಳಿಗೆ ಅನಿವಾರ್ಯವಾದ ಪ್ರತಿಭಾ ನಾರಾಯಣ್, ಭಾಗ್ಯಶ್ರೀ, ಸರಸ್ವತಿ, ಮಂಜುಳ, ಇಂದ್ರಾಣಿ ಎಲ್ಲರೂ ಕೃಷ್ಣರಾವ್ ಮಕ್ಕಳು.

60ರ ದಶಕದಲ್ಲಿ ಹಳೇ ಮೈಸೂರು ಪ್ರದೇಶದಲ್ಲಿ ನಾಟಕ ಪ್ರಯೋಗಗಳಿಗೆ ಕೊರತೆ ಇರಲಿಲ್ಲ. ಗುಬ್ಬಿ ಕಂಪನಿಯ ದಶಾವತಾರ, ಕುರುಕ್ಷೇತ್ರ, ಲವಕುಶ, ಎಡೆಯೂರು ಸಿದ್ಧಲಿಂಗೇಶ್ವರ ಮಹಾತ್ಮೆ ನಾಟಕಗಳ ಪ್ರಯೋಗ ನಿರಂತರ ಇದ್ದವು. 60ರ ದಶಕದ ಈಚೆಗೆ ಘಟಾನುಘಟಿ ಕಲಾವಿದರನ್ನು ಇಟ್ಟುಕೊಂಡು ವೈಭವದ ಪೌರಾಣಿಕ, ತದನಂತರ ಸಾಮಾಜಿಕ ನಾಟಕಗಳನ್ನು ಪ್ರಯೋಗಿಸಿದ ಇಬ್ಬರು ಪ್ರಮುಖ ವ್ಯಕ್ತಿಗಳೆಂದರೆ ಮಹದೇವಸ್ವಾಮಿ ಮತ್ತು ಶ್ರೀಕಂಠಮೂರ್ತಿ.

ಮಹದೇವಸ್ವಾಮಿ ಅವರು ಕನ್ನಡ ಥಿಯೇಟರ್ಸ್ ಕಂಪನಿಯನ್ನು 1963, 64, 65, 67ರಲ್ಲಿ ವೈಭವದಿಂದ ನಡೆಸಿ 70ರ ದಶಕದಲ್ಲಿ ತುಸು ನೇಪಥ್ಯಕ್ಕೆ ಸರಿದರೆ, ಶ್ರೀಕಂಠಮೂರ್ತಿಗಳು ತಮ್ಮ ಶ್ರೀಕಂಠೇಶ್ವರ ನಾಟ್ಯ ಸಂಘದ ಮೂಲಕ ಅದನ್ನು ಮುಂದುವರಿಸಿದರು. ಅಲ್ಲಿದ್ದ ಮಹಾನ್ ನಟರುಗಳೇ ಇಲ್ಲಿಗೆ ಬಂದರು. 'ರಾಜಾ ವಿಕ್ರಮ, ಚಂದ್ರಹಾಸ–ನಾಟಕಗಳನ್ನು ರಚಿಸಿದ ಯೋಗಾನರಸಿಂಹಮೂರ್ತಿ ಅವರೇ ತಮ್ಮ ಎರಡೂ ನಾಟಕಗಳಿಗೆ ಹಾಡುಗಳನ್ನು ಬರೆದು, ಅತ್ಯಂತ ಮುತುವರ್ಜಿಯಿಂದ ಸಂಗೀತ ನಿರ್ದೇಶನ ಮಾಡಿದ್ದಾರೆ.

ಭಾಷಾಡಂಬರವಿಲ್ಲದ ಸರಳ, ಆದರೆ ಅದ್ಭುತ ನಾಟಕೀಯ ಗುಣಗಳನ್ನೊಳಗೊಂಡ ಈ ನಾಟಕಗಳು ಪಳಗಿದ ಕಲಾವಿದರ ಅಭಿನಯ ಕಾರಣವಾಗಿ ಪ್ರೇಕ್ಷಕರು ಮುಗಿಬಿದ್ದರು. ಅದರಲ್ಲೂ ಶ್ರೀಕಂಠಮೂರ್ತಿಯವರ ವಿಕ್ರಮ ಹಾಗೂ ಎಚ್.ಟಿ. ಅರಸು ಅವರ ದುರ್ಜಯ ಪಾತ್ರಗಳು ಜನಪ್ರಿಯವಾಗಿದ್ದವು. ಪೌರಾಣಿಕ ಪಾತ್ರಗಳಿಗೆ ಜೀವ ತುಂಬಿ ಅಭಿನಯಿಸುತ್ತಿದ್ದ ಮಹದೇವಪ್ಪ ಹೆಸರಿನ ಇಬ್ಬರು ನಟರುಗಳಲ್ಲಿ ಶನಿ ಪಾತ್ರ ಮಾಡುತ್ತಿದ್ದ ಮಹದೇವಪ್ಪ ಶನಿ ಮಹದೇವಪ್ಪ ಎಂದೂ, ರಾಜಾ ವಿಕ್ರಮದಲ್ಲಿ ಭಟ್ಟಿ ಪಾತ್ರ ಮಾಡುತ್ತಿದ್ದ ಮಹದೇವಪ್ಪ ಭಟ್ಟಿ ಮಹದೇವಪ್ಪ ಎಂದೇ ಮುಂದೆ ಪರಿಚಿತರಾದರು. ನಟ(ಟಿ) ಪ್ರಧಾನವಾದ, ನಟ ಪರಂಪರೆಯನ್ನೇ ಸೃಷ್ಟಿಸಿದ ಕಂಪನಿ ನಾಟಕಗಳಲ್ಲಿ ಹೀಗೆ ಒಂದೊಂದು ಪಾತ್ರಗಳ ದಂತಕತೆಯಾದವರು ಅಸಂಖ್ಯಾತ ಜನ. ಪುಟ್ಟಬಸಪ್ಪ ಎಂಬ ದೊಡ್ಡ ಸಂಗೀತ ವಿದ್ವಾಂಸರು, ಸುಬ್ರಮಣ್ಯಶಾಸ್ತ್ರಿ, ಕೀರ್ತನ ಕೇಸರಿ ಗುರುರಾಜುಲು ನಾಯ್ಡು, ಲಕ್ಷ್ಮಣದಾಸ್, ಚಿತ್ರನಟ ಉಮೇಶ್, ಆರ್. ನಾಗರತ್ನಮ್ಮ ಮುಂತಾದ ಹೆಸರಾಂತ ಕಲಾವಿದರುಗಳು ಈ ಎರಡೂ ಕಂಪನಿಗಳ ವೈಭವಕ್ಕೆ ಕಾರಣರಾದರು. ನಾದಮಹರ್ಷಿ ಎಂದೇ ಪ್ರತೀತಿಯಾಗಿದ್ದ ಶ್ರೀಕಂಠಮೂರ್ತಿಗಳು ದೊಡ್ಡ ಸಂಗೀತ ವಿದ್ವಾಂಸರು.

1962–66ರ ವರೆಗೆ ಅಸ್ತಿತ್ವದಲ್ಲಿದ್ದ ಹೊನ್ನಪ್ಪ ಭಾಗವತರ್ ಅವರ ಉಮಾ ಮಹೇಶ್ವರಿ ಸಂಗೀತ ನಾಟಕ ಮಂಡಳಿಯ ಶ್ರೀನಿವಾಸ ಕಲ್ಯಾಣ ನಾಟಕ ಒಂದು ಅಭೂತಪೂರ್ವ ಪ್ರಯೋಗ. ಶ್ರೀನಿವಾಸನ ಪಾತ್ರದಲ್ಲಿ ಹೊನ್ನಪ್ಪನವರದು ಅಮೋಘ ಅಭಿನಯ. ಚಿತ್ರನಟರಾದ ದಿನೇಶ್, ಮುಸುರಿ ಕೃಷ್ಣಮೂರ್ತಿ ಹಾಗೂ ಚಂದ್ರಯ್ಯಸ್ವಾಮಿ, ಸಿದ್ದಲಿಂಗಪ್ಪನವರಂತಹ ಅನುಭವಿ ನಟರು ಇದರಲ್ಲಿ ಇದ್ದರು. 1966ರಲ್ಲಿ ಕಣಗಾಲ್ ಪ್ರಭಾಕರಶಾಸ್ತ್ರಿ ಅವರು ಆರಂಭಿಸಿದ ಪಂಪಾ ಥಿಯೇಟರ್ಸ್ ಕಂಪನಿಯ ಜನಪ್ರಿಯ ನಾಟಕ ಪ್ರಚಂಡ ರಾವಣ. 1968ರಲ್ಲಿ ಸತತ 100 ಪ್ರಯೋಗ ಕಂಡಿತು. ರಾವಣನ ಪಾತ್ರ ವಹಿಸಿದ್ದ ಚಿತ್ರನಟ ವಜ್ರಮುನಿಗೆ ಜನಪ್ರಿಯತೆ ತಂದುಕೊಟ್ಟ ನಾಟಕ.

ನಾಟಕ ಕಂಪನಿಗಳ ಮೂಲಕವೇ ಹೆಸರು ಮಾಡಿದ ಇತರ ಕಲಾವಿದರುಗಳೆಂದರೆ ಎ.ಎನ್. ಶೇಷಾಚಾರ್, ಮುನಿರಂಗಪ್ಪ, ಲಕ್ಷ್ಮೀಬಾಯಿ, ರಂಗನಾಯಕಮ್ಮ, ಬಿ.ಎಸ್. ಮಂಜುಳಮ್ಮ, ಪಾರ್ಥಸಾರಥಿ, ಮುಸುರಿ ಕೃಷ್ಣಮೂರ್ತಿ, ಸುಶೀಲಮ್ಮ ಮುಸುರಿ, ಶೇಷಗಿರಿರಾವ್, ಜಿ.ವಿ. ಅಯ್ಯರ್, ಬಾಲಕೃಷ್ಣ, ರಾಜಕುಮಾರ್, ನರಸಿಂಹರಾಜು, ಬಿ.ಎನ್. ಚಿನ್ನಪ್ಪ, ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ, ಕೆ.ವಿ. ಆಚಾರ್, ಬಿ.ಎಂ. ನಾರಾಯಣದಾಸ್, ಅಚ್ಯುತದಾಸ್ ಮೊದಲಾದವರು.

ಹಳೇ ಮೈಸೂರು ಭಾಗದ ಎಲ್ಲ ಪಟ್ಟಣಗಳಲ್ಲಿ ನಾಟಕ ಕಂಪನಿಗಳು ನಿರಂತರ ಕ್ಯಾಂಪ್ ಮಾಡುತ್ತಿದ್ದವಾದರೂ ಅತಿ ಹೆಚ್ಚು ನಾಟಕಗಳು ಪ್ರಯೋಗವಾಗುತ್ತಿದ್ದುದು ಬೆಂಗಳೂರು ನಗರದಲ್ಲಿ. ಅಂತೆಯೇ ನಾಟಕ ಕಂಪನಿ ಉತ್ತರ ಕರ್ನಾಟಕದ್ದಿರಲಿ, ಹಳೇ ಮೈಸೂರಿನದಿರಲಿ ಬೆಂಗಳೂರಿನಲ್ಲಿ ಕ್ಯಾಂಪ್ ಮಾಡುವುದೆಂದರೆ ಪ್ರತಿಷ್ಠೆಯ ವಿಷಯವಾಗಿತ್ತು.

ಪ್ರತಿಭಾ ನಾರಾಯಣ್ ಎಂಬ ವೃತ್ತಿ ಕಲಾವಿದರು ಬೆಂಗಳೂರಿನಲ್ಲಿ ಪ್ರತಿಭಾ ಕಲಾನಿಕೇತನವನ್ನು 70ರ ದಶಕದಲ್ಲಿ ಸ್ಥಾಪಿಸಿಕೊಂಡಿದ್ದು, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಸೇರಿದಂತೆ ಎಲ್ಲ ಬಗೆಯ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾರೆ.

ಪ್ರಸಿದ್ಧ ನಟರಾಗಿದ್ದ ಮಾರಪ್ಪ ಅವರ ಪುತ್ರ ಹಾಗೂ ಹೆಸರಾಂತ ನಟ ಮಾ.ನ. ಮೂರ್ತಿ ಜಯಚಾಮರಾಜೇಂದ್ರ ಕಲಾಸಂಘ ಕಟ್ಟಿಕೊಂಡಿದ್ದು ಎಂಬತ್ತರ ದಶಕದಿಂದಲೂ ನಿರಂತರವಾಗಿ ನಾಟಕ ಪ್ರದರ್ಶನ ಮಾಡುತ್ತ ಬಂದಿದ್ದಾರೆ.

ಬೆಂಗಳೂರಿನ ಗುಬ್ಬಿ ರಂಗಮಂದಿರದಲ್ಲಿ, ಹಿರಣ್ಣಯ್ಯ ಹಾಗೂ ಮುನಿರಂಗಪ್ಪನವರ ಒಡೆತನದಲ್ಲಿ ಸುಭಾಷ್ ಮೈದಾನದ ಕೆಂಪಾಂಬುಧಿ ಕೆರೆಯಲ್ಲಿದ್ದ ರಂಗಮಂದಿರದಲ್ಲಿ 50, 60ರ ದಶಕದಲ್ಲಿ ನಿರಂತರ ನಾಟಕ ಪ್ರಯೋಗಗಳು ನಡದೇ ಇದ್ದವು. ಆ ಕಾಲಕ್ಕೆ ಆಗಲೇ ನಗರದ ಹವ್ಯಾಸಿ ರಂಗಭೂಮಿ ಕ್ರಿಯಾಶೀಲವಾಗಿದ್ದರೂ ವೃತ್ತಿ ಕಂಪನಿಯ ದಟ್ಟ ಪ್ರಭಾವ ಅಳಿಸಿರಲಿಲ್ಲ. ಪರ್ವತವಾಣಿಯವರ ಅಬ್ಬಾ ಏನ್ ಹೆಂಡ್ತಿ ನಾಟಕದ ಕುರಿತು 1952ರಲ್ಲಿ ವಾಕ್ಚಿತ್ರ ಪತ್ರಿಕೆಯ ಚಿತ್ರಕಲಾವಿದರ ಚೌಚೌ ಕಾಲಂನಲ್ಲಿ ದಾಶರಥಿ ದೀಕ್ಷಿತ್ ಹೀಗೆ ಬರೆಯುತ್ತಾರೆ: ಇದು ಜಟ್ಟಪ್ಪನವರ (ಹೆಸರಾಂತ ವೃತ್ತಿ ನಾಟಕ ಕಂಪನಿ) ಸ್ತ್ರೀ ನಾಟಕ ನೆನಪಿಗೆ ತರುತ್ತದೆ. ಅದೇ ಛಾಯೆ ಇಲ್ಲಿದೆ. 1953ರಲ್ಲಿ ಪ್ರದರ್ಶನ ಕಾಣುತ್ತಿದ್ದ ಪರ್ವತವಾಣಿಯವರ 'ಸುಂದ್ರೋಪಸುಂದ್ರ' ನಾಟಕಕ್ಕೆ ವೃತ್ತಿ ನಾಟಕ ಕಂಪನಿಗಳಿಗೆ ಪ್ರಕಟಿಸುವ ಕರಪತ್ರದ ಮಾದರಿಯಲ್ಲಿ 'ಇಂಪಾದ ಗಾನ, ಮನರಂಜನೆಯ ನಾಟಕ' ಎಂದೇ ಮುದ್ರಿಸಲಾಗಿದೆ.

20ನೆಯ ಶತಮಾನದ ಮೊದಲ 50 ವರ್ಷಗಳ ಕಾಲ ಕ್ಯಾಂಪ್ ಮಾಡಿದ ನಾಡಿನ ಎಲ್ಲ ಪ್ರತಿಷ್ಠಿತ ನಾಟಕ ಕಂಪನಿಗಳಿಗೆ ಆ ಕಾಲದ ಹಳೇ ಮೈಸೂರು ಪ್ರಾಂತದ ಜನಸಂಖ್ಯೆಯ ಒಟ್ಟು ರಂಗಾಸಕ್ತರೆಲ್ಲರನ್ನು ಸೆಳೆಯಲು ಸಾಧ್ಯವಾಗಿದ್ದು ಒಂದು ಇತಿಹಾಸವಾದರೆ, ಈ ಕಾಲಘಟ್ಟ ಹಾಗೂ ನಂತರದ ದಿನಗಳಲ್ಲಿ ಇದು ಹುಟ್ಟು ಹಾಕಿದ ವೃತ್ತಿಶೈಲಿಯ ಹವ್ಯಾಸಿ ನಾಟಕಗಳದ್ದೇ ಪ್ರತ್ಯೇಕವಾದ ದೊಡ್ಡದಾದ ಅಧ್ಯಾಯ. ಕಂಪನಿಗಳಲ್ಲಿ ನಾಟಕ ನೋಡಿದ ಹಳ್ಳಿ, ಪಟ್ಟಣದ ಆಸಕ್ತರೆಲ್ಲರೂ ಅದೇ ಮಾದರಿಯಲ್ಲಿ ತಾವಾಗೆ ನಾಟಕವಾಡಲು ಆರಂಭಿಸಿದರು. ಪ್ರತಿ ಹಳ್ಳಿ, ಪಟ್ಟಣಗಳಲ್ಲಿ ಹವ್ಯಾಸಿ ನಾಟಕ ತಂಡ ಹುಟ್ಟಿಕೊಂಡವು. ಇದು ನಾಟಕ ಕಂಪನಿಗಳ ಬಹುದೊಡ್ಡ ಕೊಡುಗೆಯೂ ಹೌದು. ಚರ್ಚೆಗಳಲ್ಲಿ ಬರೆಹದಲ್ಲಿ ದಾಖಲಾಗದ ಇನ್ನೊಂದು ವ್ಯಾಪಕವಾದ ರಂಗ ಚಟುವಟಿಕೆ.

ಕಂಪನಿಯನ್ನು ತೊರೆದು ಬಂದಿದ್ದ ಹಾರ್ಮೋನಿಯಂ ಮಾಸ್ತರುಗಳು ಹಾರ್ಮೋನಿಯಂ ಶೇಷಗಿರಿರಾವ್ ಇವರ ಗುರುಗಳಾದರು ಅಥವಾ ಒಂದಿಷ್ಟು ಶಾಸ್ತ್ರೀಯವಾಗಿ ಹಾರ್ಮೋನಿಯಂ ವಾದ್ಯ ಕಲಿತುಕೊಂಡು ನಾಟಕ ಕಂಪನಿಗಳ ಪ್ರದರ್ಶನಗಳನ್ನು ಸತತವಾಗಿ ನೋಡುವ ಮೂಲಕ ರಂಗಗೀತೆ, ಕಂದ, ಸೀಸ ಪದ್ಯಗಳಿಗೆ ಸಾಥ್ ಕೊಡುವಷ್ಟು ವಿದ್ಯೆ ಕಲಿತ ಮಾಸ್ತರುಗಳು ತಾವಾಗೆ ನಾಟಕವಾಡಲು ಸಿದ್ಧತೆ ಮಾಡಿಕೊಂಡವರಿಗೆ ನಾಟಕ ಕಲಿಸಲು ಮುಂದೆ ಬಂದರು. ಅವು ಸಂಗೀತ ಪ್ರಧಾನವಾಗಿದ್ದ ನಾಟಕದ ದಿನಗಳು. ಸಂಗೀತ ನಿರ್ದೇಶಕರೇ ನಾಟಕ ನಿರ್ದೇಶಕರು. ರಂಗಾಸಕ್ತರಲ್ಲಿ ನಾಟಕ ಪ್ರಯೋಗದ ಸಾಧ್ಯತೆಯನ್ನು ಒಡಮೂಡಿಸಿದವರು ಈ ಸಂಗೀತ ಮಾಸ್ತರುಗಳು.

ಹವ್ಯಾಸಿಗಳಿಗೆ ಎದುರಾಗುವ ಮೊದಲ ಕೊರತೆ ಮಹಿಳಾ ಕಲಾವಿದರದು. ವೃತ್ತಿ ಶೈಲಿಯ ಈ ನಾಟಕಗಳಿಗೆ ಅಂತಹ ಕೊರತೆ ಉಂಟಾಗಲಿಲ್ಲ. ಕೆಲ ದಿನಮಟ್ಟಿಗೆ ವೃತ್ತಿ ಕಂಪನಿಯ ಅನುಭವ ಪಡೆದಿದ್ದ, ವೃತ್ತಿ ಕಂಪನಿ ಸ್ಥಗಿತಗೊಂಡಾಗ ಅಥವಾ ಕ್ಯಾಂಪು ಬದಲಾಯಿಸಿದಾಗ ಅವನ್ನು ತೊರೆದು ಬರುತ್ತಿದ್ದ ಮಹಿಳಾ ಕಲಾವಿದರು ತಕ್ಕಮಟ್ಟಿಗೆ ಎಲ್ಲ ಕಡೆಗೂ ಲಭ್ಯವಿರುತ್ತಿದ್ದರು. ಇಂತಹವರು ಈ ಕೊರತೆ ತುಂಬಿದರು.

ಸಂಗೀತ ಮಾಸ್ತರುಗಳು ಹಾಗೂ ಮಹಿಳಾ ಕಲಾವಿದರು ವೃತ್ತಿಯವರಾದರೆ, ಅವರೊಂದಿಗೆ ನಟಿಸುವ ಪುರುಷರು ಹಾಗೂ ಸಂಘಟಕರೆಲ್ಲರು ಹವ್ಯಾಸಿಗಳು. ಪಾತ್ರಧಾರಿಗಳೇ ಕೈಯಿಂದ ದುಡ್ಡು ಹಾಕಿಕೊಂಡು, ಸೀನರಿ, ಲೈಟು, ಸ್ಟೇಜು ಬಾಡಿಗೆ, ಮಹಿಳಾ ಕಲಾವಿದರ ಹಾಗೂ ಸಂಗೀತ ಮಾಸ್ತರುಗಳ ಸಂಭಾವನೆಯ ಖರ್ಚಿನ ಹೊಣೆ ಹೊತ್ತರು. ಅವರ ಉತ್ಸಾಹದಿಂದ ಉತ್ತರೋತ್ತರವಾಗಿ ನಾಟಕ ಪ್ರಯೋಗಗಳಾಗುತ್ತಲೇ ಹೋದವು. ಕೆಲವೊಮ್ಮೆ ನಾಟಕಕ್ಕೆ ಟಿಕೆಟಿಟ್ಟು ಆ ಖರ್ಚನ್ನು ಭರಿಸುವ ವಿಫಲ ಯತ್ನಗಳಾದವು. ಇನ್ನು ಹಲವು ಸಂದರ್ಭಗಳಲ್ಲಿ ನಾಟಕ ಪ್ರೇಮಿಗಳಾಗಿದ್ದು ತಕ್ಕಮಟ್ಟಿಗೆ ಸ್ಥಿತಿವಂತರಾದವರು ಇದರ ಪ್ರಾಯೋಜಕರಾದರು. ನಾಟಕಗಳಿಗೆ ಬಾಡಿಗೆಗೆ ವೇಷ ಭೂಷಣ ಒದಗಿಸುವ ಅಂಗಡಿಗಳು ತೆರೆದದ್ದು ಇದೇ ಸಂದರ್ಭದಲ್ಲಿ. 60 ಮತ್ತು 70ರ ದಶಕ ಹಳ್ಳಿಗರಿಗೆ ಮಾತ್ರವಲ್ಲ, ನಗರದ ಹವ್ಯಾಸಿಗಳಿಗೂ ಅದು ಪೌರಾಣಿಕ ನಾಟಕಗಳ ವೈಭವದ ಕಾಲ. ಕುರುಕ್ಷೇತ್ರ, ಶನಿಪ್ರಭಾವ, ಸುಭದ್ರಾ ಕಲ್ಯಾಣ, ಪಾಂಡವ ವಿಜಯ, ವಿರಾಟಪರ್ವ, ಸಂಪೂರ್ಣ ರಾಮಾಯಣ, ನಾಟಕಗಳಂತೂ ಮೇಲಿಂದ ಮೇಲೆ ಪ್ರಯೋಗ ಕಂಡವು.

ನಗರದಲ್ಲಿ ಚದುರಿ ಹೋದ ವೃತ್ತಿ ಕಲಾವಿದರು ಒಂದೆಡೆ ಸೇರಿ ನಾಟಕ ಸಿದ್ಧಪಡಿಸಿಕೊಂಡು ಪ್ರಾಯೋಜಕರನ್ನು ಹೊಂದಿಸಿಕೊಳ್ಳುವುದು ಒಂದೆಡೆ ನಡೆದಿದ್ದರೆ, ಅಭಿನಯದಲ್ಲಿ ಆಸಕ್ತಿ ಇರುವ, ತಕ್ಕ ಮಟ್ಟಿಗೆ ಹಾಡಬಲ್ಲ, ಹೇಳಿಕೊಟ್ಟರೆ ಕಂದ, ಸೀಸ ಪದ್ಯಗಳನ್ನು ನುಡಿಯಬಲ್ಲ ಒಂದು ಹಳ್ಳಿಯ ಹಾಗೂ ಪಟ್ಟಣ–ನಗರಗಳ ಒಂದು ವಸತಿ ಪ್ರದೇಶದ ಹವ್ಯಾಸಿಗಳು ಒಟ್ಟಿಗೆ ಕೂಡಿಕೊಂಡು ನಾಟಕದ ಸಿದ್ಧತೆ ಮತ್ತೊಂದೆಡೆ ನಡೆದಿರುತ್ತಿತ್ತು. ಮಹಿಳಾ ಪಾತ್ರಗಳಿಗೆ ಹಾಗೂ ಸಂಗೀತ ನಿರ್ದೇಶನಕ್ಕೆ (ಇವರೇ ನಾಟಕ ನಿರ್ದೇಶಕರು ಸಹ) ಮಾತ್ರ ವೃತ್ತಿ ಕಲಾವಿದರನ್ನು ನಿರ್ದಿಷ್ಟ ಸಂಭಾವನೆಗೆ ಆಹ್ವಾನಿಸುತ್ತಿದ್ದರು. ಇದರಿಂದಾಗಿ ವೃತ್ತಿ ಕಂಪನಿ ನಿಂತ ಕಾರಣಕ್ಕೋ ಅಥವಾ ಬೇರಾವುದೋ ಕಾರಣಕ್ಕೋ ಅದನ್ನು ತೊರೆದು ಬಂದ ಮಹಿಳಾ ಕಲಾವಿದರು ನಿರುದ್ಯೋಗಿಗಳಾಗಲಿಲ್ಲ. ಸಂಗೀತವನ್ನು ನೆಚ್ಚಿದವರು ಕೀರ್ತನೆ ಹಾಡುವ ಅಥವಾ ನಾಟಕ ಕಲಿಸುವ ಮೂಲಕವೋ ಒಂದು ನೆಲೆ ಕಂಡುಕೊಂಡರು. ಆದರೆ ಬರೀ ಅಭಿನಯ ಬಲ್ಲ ಪುರುಷ ಕಲಾವಿದರು ಬಹುತೇಕ ನಿರುದ್ಯೋಗಿಗಳಾದರು ಅಥವಾ ಮತ್ತೆ ನಾಟಕ ಕಂಪನಿಗಳಿಗೆ ವಾಪಸಾದರು.

ಕೆಲವು ಮಹಿಳಾ ಕಲಾವಿದರು ಕಂಪನಿಗಳಿಗೆ ಬದಲಾಗಿ ಹಳ್ಳಿ–ನಗರದ ಹವ್ಯಾಸಿ ನಾಟಕಗಳ ಕಲಾವಿದರಾಗಿ ಮುಂದುವರಿದರು. ಅಭಿನಯ ಅವರಿಗೆ ವೃತ್ತಿಯಾದ್ದರಿಂದ ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದರೂ ಅವರೆಲ್ಲ ವೃತ್ತಿ ಕಲಾವಿದರು. ಆದರೆ ನಾಟಕಗಳನ್ನು ಸಂಘಟಿಸಿ, ಅಭಿನಯಿಸಿದ ಇತರೆಲ್ಲ ರಂಗಕರ್ಮಿಗಳು ಹವ್ಯಾಸಿಗಳು. ನಾಟಕ ಮಾತ್ರ ವೃತ್ತಿ ಕಂಪನಿ ಶೈಲಿ. ಆದ್ದರಿಂದಲೇ ಇದು ವೃತ್ತಿ ಅಥವಾ ಹವ್ಯಾಸಿ ಎಂಬ ಸುಲಭ ವಿಂಗಡನೆಗೆ ದಕ್ಕುವುದಲ್ಲ. ಇಂತಹದೊಂದು ವ್ಯಾಪಕ ರಂಗ ಚಟುವಟಿಕೆ ಮುಂದಿನ ಅರ್ಧ ಶತಮಾನ ಕಾಲ ಹಳೆ ಮೈಸೂರಿನ ಎಲ್ಲ ಊರುಗಳಲ್ಲಿ ನಾಟಕವನ್ನು ಜೀವಂತವಾಗಿಟ್ಟಿತು. ನಾಟಕದ ಸಮಕಾಲೀನತೆ, ಅದರ ಗುಣಮಟ್ಟದ ಬಗ್ಗೆ ಏನೇ ಮಾತಿರಲಿ, ಆದರೆ ಅಸಂಖ್ಯಾತ ನಾಟಕ ಪ್ರಯೋಗಗಳಾದವು. ಪುರಾಣದ ಪಾತ್ರಗಳ ಕಲ್ಪನೆಗಳು ಜನಮಾನಸದಲ್ಲಿ ಅಚ್ಚೊತ್ತಿದ ಹಾಗೆ ಉಳಿದುಕೊಂಡು ಬಂದವು.

ಗಣೇಶ ಉತ್ಸವ, ರಾಜ್ಯೋತ್ಸವದ ವೇದಿಕೆಗಳಲ್ಲಿ ಪ್ರಯೋಗ ಕಾಣುತ್ತಿದ್ದುದು ಇವೇ ವೃತ್ತಿ ನಾಟಕ ಕಂಪನಿ ಶೈಲಿಯ ನಾಟಕಗಳು. ಒಂದು ಬಡಾವಣೆಯಲ್ಲಿ ಅಥವಾ ಒಂದು ಊರಿನಲ್ಲಿ ಯಾವುದಾದರೂ ಒಂದು ದೇವರ ಹೆಸರಿನ ಸಂಘದ ಅಡಿಯಲ್ಲಿ ನಾಟಕ ಪ್ರಯೋಗವಾಗುತ್ತವೆ. ನಾಟಕದ ಅನಂತರ ಆ ಸಂಘ ಯಾವುದೂ ಅಸ್ತಿತ್ವದಲ್ಲಿರುವುದಿಲ್ಲ. ಮತ್ತೊಮ್ಮೆ ನಾಟಕ ಏರ್ಪಟ್ಟಾಗ ಅದೇ ಹೆಸರಿರಬಹುದು ಅಥವಾ ಬೇರೆ ಹೆಸರಿರಬಹುದು. ಒಟ್ಟಿನಲ್ಲಿ ನಾಟಕವಾಡುವುದಷ್ಟೇ ಇಲ್ಲಿ ಮುಖ್ಯ.

ಹೊಸದಾಗಿ ಅಸ್ತಿತ್ವಕ್ಕೆ ಬಂದ ಈ ನಾಟಕ ಪ್ರಯೋಗದಿಂದ ವೃತ್ತಿ ನಾಟಕಗಳೇನೂ ಅಳಿಸಿಹೋಗಲಿಲ್ಲ. ತುಸು ಇಳಿಮುಖವಾದರೂ ಕಂಪನಿಗಳು ಮತ್ತೊಂದೆಡೆ ನಡದೇ ಇದ್ದವು. ಹಾಗಾಗಿ ವೃತ್ತಿ ನಾಟಕಕ್ಕೆ ಇದೊಂದು ಸೇರ್ಪಡೆ.

1994ರಲ್ಲಿ ಬೆಂಗಳೂರಿನಲ್ಲಿ ಗುಬ್ಬಿ ವೀರಣ್ಣ ರಂಗಮಂದಿರ ಆರಂಭವಾದ ಅನಂತರ ಸತತವಾಗಿ ವೃತ್ತಿ ನಾಟಕ ಪ್ರದರ್ಶನಗಳು ನಡೆಯುತ್ತಿವೆ. ಚಿಂದೋಡಿ ವೀರಪ್ಪನವರ ಪುತ್ರಿ ಚಿಂದೋಡಿ ಲೀಲಾ ಅವರ ಕೆಬಿಆರ್ ಡ್ರಾಮಾ ಕಂಪನಿ 'ಪೊಲೀಸನ ಮಗಳು' ನಾಟಕವನ್ನು ನಿರಂತರವಾಗಿ 1200ಕ್ಕೂ ಅಧಿಕ ಪ್ರದರ್ಶನ ನೀಡಿ ಗಿನ್ನಿಸ್ ದಾಖಲೆ ಸ್ಥಾಪಿಸಿತು. ಕರ್ನಾಟಕದಲ್ಲಿ ಮಾತ್ರ ಈಗ ನಾಟಕ ಕಂಪನಿಗಳು ಹೆಚ್ಚಾಗಿ ಅಸ್ತಿತ್ವದಲ್ಲಿರುವುದರಿಂದ ಸಹಜವಾಗಿ ಅವೇ ಇಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತವೆ.

ಚಿತ್ರದುರ್ಗದ ಕುಮಾರಸ್ವಾಮಿ ಸಾರಥ್ಯದ ಶ್ರೀ ಕುಮಾರೇಶ್ವರ ನಾಟ್ಯ ಸಂಘ ಹಾಗೂ ಮಾಸ್ಟರ್ ಹಿರಣ್ಣಯ್ಯನವರ ಮಿತ್ರಮಂಡಳಿ ಹೊರತುಪಡಿಸಿದರೆ, ಹಳೇ ಮೈಸೂರು ಭಾಗದಲ್ಲಿ ಮತ್ತಾವ ನಾಟಕ ಕಂಪನಿಗಳು ಈಗ ಉಳಿದಿಲ್ಲ. ಕಂಪನಿ ಹೆಸರು ಉಳಿಸಿಕೊಂಡು ಆಗಾಗ ನಾಟಕ ಪ್ರದರ್ಶಿಸುವ ಇತರ ಹತ್ತಾರು ನಾಟಕ ಕಂಪನಿಗಳನ್ನು ಅರೆ ವೃತ್ತಿ ತಂಡಗಳು ಎಂದು ಕರೆಯಬಹುದಾಗಿದೆ.

ಒಂದು ಕಾಲದಲ್ಲಿ ಗಾರೆ ಕೆಲಸ ಮಾಡುತ್ತಿದ್ದ, ಹೆಚ್ಚಿನ ವಿದ್ಯಾಭ್ಯಾಸ ಮಾಡಿರದ ಚಿತ್ರದುರ್ಗದ ಕುಮಾರಸ್ವಾಮಿಯವರದು ತಾಜಾ ಆಶು ಪ್ರತಿಭೆ. ಹಾಸ್ಯ ಪಾತ್ರವನ್ನು ಬೆಳೆಸುತ್ತ ಹೋಗುವ ಅವರ ಅಭಿನಯದ ವೈಖರಿಗೆ ಮಾರುಹೋಗದವರಿಲ್ಲ. ಈ ವಿಷಯದಲ್ಲಿ ಮಾಸ್ಟರ್ ಹಿರಣ್ಣಯ್ಯನವರಿಗೆ ಹೋಲಿಸಬಹುದಾದ ಪ್ರತಿಭೆ ಅವರದು. ಹಾಸ್ಯ ಪಾತ್ರದ ಹೆಸರಾಂತ ನಟರು ಅವರು. ಕಳೆದ 35 ವರ್ಷಗಳಿಂದ ಕುಮಾರೇಶ್ವರ ನಾಟ್ಯಸಂಘವನ್ನು ಅವರು ನಡೆಸಿಕೊಂಡು ಬರುತ್ತಿದ್ದಾರೆ. ಹಳೇ ಮೈಸೂರಿನ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಕಲೆಕ್ಷನ್ ಇರಲಿ–ಬಿಡಲಿ ನಿರಂತರವಾಗಿ ನಾಟಕ ಪ್ರದರ್ಶನ ಮಾಡಿಕೊಂಡು ಬರುತ್ತಿದ್ದಾರೆ. ಶ್ರೀದೇವಿ ಮಹಾತ್ಮೆ, ಮದಕರಿ ನಾಯಕ, 'ನಾಯಕನಹಟ್ಟಿ ತಿಪ್ಪೇಸ್ವಾಮಿ', 'ಮುದುಕನ ಮದುವೆ'– ಈ ಕಂಪನಿಯ ಹೆಸರಾಂತ ನಾಟಕಗಳು.

ಹಾಸನದ ಶಿವಕುಮಾರ್ ಎಂಬುವವರ ಮತ್ತೊಂದು ನಾಟಕ ಕಂಪನಿ 5–6 ವರ್ಷಗಳ ಹಿಂದೆ ನಿಂತು ಹೋಯಿತು. ಹಾಸನ ಕಡೆಯವರದೇ ದಲಿತ ಕೂಲಿಕಾರರ ಮತ್ತೊಂದು ನಾಟಕ ಕಂಪನಿ ಇತ್ತೀಚಿನ ನಾಲ್ಕೈದು ವರ್ಷಗಳ ಹಿಂದೆ ಅಸ್ತಿತ್ವದಲ್ಲಿ ಇತ್ತು. ಅವರ ಬಳಿ ಹೆಚ್ಚಿನ ನಾಟಕ ಪರಿಕರಗಳು ಇರಲಿಲ್ಲ. ಹಳ್ಳಿ ಜನರ ಬಳಿ ವಿನಂತಿಸಿ ಉಚಿತ ಜಾಗ, ರಂಗಮಂದಿರಕ್ಕೆ ಬೇಕಾದ ಕನಿಷ್ಠ ಸಾಮಾನುಗಳನ್ನು ಹೊಂದಿಸಿಕೊಂಡು ಸರಳ ರಂಗಸಜ್ಜಿಕೆಯಲ್ಲಿ ನಾಟಕವಾಡುತ್ತಿದ್ದರು. ನಾಟಕ ಪ್ರಯೋಗ ಸಾಧ್ಯವಾಗದಿದ್ದ ದಿನಗಳಲ್ಲಿ ಹೊಲ–ಗದ್ದೆಗಳಲ್ಲಿ ಕೂಲಿಗಳಾಗಿ ದುಡಿಯುತ್ತಿದ್ದರು. ನಾಟಕವಾಡಲು ಒಳ್ಳೆಯ ವಾತಾವರಣ ನಿರ್ಮಾಣವಾದಾಗ ಮತ್ತೆ ನಾಟಕ ಪ್ರದರ್ಶನಕ್ಕೆ ಅಣಿಯಾಗುತ್ತಿದ್ದರು. ಇವರು ಉತ್ತರ ಕರ್ನಾಟಕದಲ್ಲೂ ಸಾಕಷ್ಟು ಪ್ರವಾಸ ಮಾಡಿದ್ದಾರೆ. ಹಾಲಿ ಉತ್ತರ ಕರ್ನಾಟಕದ ನಾಟಕ ಕಂಪನಿಗಳಲ್ಲಿ ಹೆಚ್ಚಾಗಿ ಪ್ರದರ್ಶನ ಕಾಣುವ ಸಾಮಾಜಿಕ ನಾಟಕಗಳನ್ನು ಇವರು ಪ್ರದರ್ಶನ ಮಾಡುತ್ತಿದ್ದರು. ಇವರಿಗೆ ನಾಟಕದ ಮೂಲ ಪ್ರತಿಯೇ ಬೇಕೆಂದೇನೂ ಇಲ್ಲ. ನಾಟಕ ಕಂಪನಿಗಳ ನಾಟಕ ನೋಡಿ ಕಲಿತದ್ದನ್ನೇ ಅನುಕರಿಸಿ ತಮ್ಮ ಸಹಜ ಪ್ರತಿಭಾಪೂರ್ಣ ಅಭಿನಯದ ಮೂಲಕ ನಾಟಕವನ್ನು ಕಳೆಗಟ್ಟಿಸುತ್ತಿದ್ದರು.

ಹಳ್ಳಿಗಳಲ್ಲಿ ಹಾಗೂ ನಗರದ ಗಲ್ಲಿ ಗಲ್ಲಿಗಳಲ್ಲಿ ನಾಟಕವಾಡುವ ಪೌರಾಣಿಕ ಅಥವಾ ಸಾಮಾಜಿಕ ನಾಟಕ ಪ್ರದರ್ಶಿಸುವ ಹವ್ಯಾಸಿಗಳು ನಾಟಕದ ಹಸ್ತಪ್ರತಿ ಹುಡುಕುವ ಗೋಜಿಗೆ ಹೋಗುವುದಿಲ್ಲ. ಅವರು ಮಾಸ್ತರುಗಳನ್ನು ಹುಡುಕುತ್ತಾರೆ. ಮಾಸ್ತರುಗಳಿಗೆ ಇಡೀ ನಾಟಕವೇ ಬಾಯಿಪಾಠವಾಗಿರುತ್ತದೆ. ಕಲಾವಿದರಲ್ಲೂ ಕೆಲವರಿಗೆ ಅವರು ಮಾಡುವ ನಿರ್ದಿಷ್ಟ ಪಾತ್ರ ಅಷ್ಟೇ ಏಕೆ ಇಡೀ ನಾಟಕವೇ ಬಾಯಲ್ಲಿರುತ್ತದೆ. ಜಾನಪದದ ಮಾದರಿಯಲ್ಲಿ ಇದು ಒಂದು ರೀತಿ ಮೌಖಿಕ ಪರಂಪರೆಯಾಗಿ ಬೆಳೆದಿದೆ. ಒಂದು ಕೃತಿ ಮೌಖಿಕ ಪರಂಪರೆಗೆ ಸಂದು ಹೋದರೆ ಅದು ಅಮರವೆಂದೇ ಅರ್ಥ. ಮಹಾಭಾರತದ ಕತೆಯನ್ನು ಸಾಂದ್ರವಾಗಿ ಹೇಳುವ ಬಿ. ಪುಟ್ಟಸ್ವಾಮಯ್ಯನವರ ಕುರುಕ್ಷೇತ್ರ, ಕಣಗಾಲ್ ಪ್ರಭಾಕರಶಾಸ್ತ್ರಿಯವರ ಪ್ರಚಂಡ ರಾವಣ ಇದೇ ಪ್ರತೀತಿಗೆ ಸೇರಿಬಿಟ್ಟಿವೆ. ಅನೇಕರ ಬಾಯಲ್ಲಿ ನಮ್ಮ ಮಹಾಭಾರತ, ರಾಮಾಯಣ, ಭಾಗವತದ ಕತೆಗಳು ಗೊತ್ತಿರುತ್ತವೆ. ಬೆಂಗಳೂರಿನ ವಜ್ರಪ್ಪನವರಂತಹ ಖ್ಯಾತ ಹಾರ್ಮೋನಿಯಂ ಮಾಸ್ತರುಗಳು ನಾಟಕಕಾರರಾಗಿರುವುದೂ ಇದೇ ಕಾರಣಕ್ಕೆ.

ಮಹಿಳಾ ಕಲಾವಿದರ ಹಾಗೂ ಹಾರ್ಮೋನಿಯಂ ಮಾಸ್ತರ್‌ಗಳ ಲಭ್ಯತೆ ಈ ನಾಟಕದ ಪ್ರಯೋಗ ಹೆಚ್ಚಾಗಲು ಒಂದು ಪ್ರಬಲವಾದ ಕಾರಣ. ವಜ್ರಪ್ಪ ಅತ್ಯಂತ ಜನಪ್ರಿಯ ಹಾರ್ಮೋನಿಯಂ ಮಾಸ್ತರ್. ಕಳೆದ ಐದು ದಶಕಗಳಲ್ಲಿ ಬೆಂಗಳೂರು ಹಾಗೂ ಸುತ್ತಲಿನ ಸಾವಿರಾರು ಪ್ರದರ್ಶನಗಳಿಗೆ ಇವರೇ ಮಾಸ್ತರ್. ಪುಟ್ಟಸ್ವಾಮಯ್ಯ, ಬೆಳ್ಳಾವೆ ಅವರ ನಾಟಕಗಳನ್ನು ಕಲಿಸುವ ಜತೆಗೆ ಇವರೇ ಸ್ವತಃ ನಾಟಕಗಳನ್ನು ರಚಿಸಿ, ಕಲ್ಪಿಸಿದ್ದಾರೆ.

ಶಾಸ್ತ್ರೀಯ ಹಿನ್ನೆಲೆಯ ರಂಗಸಂಗೀತವನ್ನು, ಕ್ಲಿಷ್ಟಕರವಾದ ಕಂದ, ಸೀಸ ಪದ್ಯಗಳನ್ನು ಹಾಡಲು ಎಲ್ಲ ಹವ್ಯಾಸಿ ಕಲಾವಿದರಿಗೆ ಸಾಧ್ಯವಿಲ್ಲ. ಅವರಿಗೆ ಹಾಡಲು ಬಂದಷ್ಟನ್ನೇ, 'ಸರಿ, ಭೇಷ್' ಎಂದು ಬೆನ್ನು ತಟ್ಟಿ ಹಾಡಿಸಿದರು ಮಾಸ್ತರುಗಳು. ನಿಮ್ಮ ಹಾಡುಗಾರಿಕೆ ಶಾಸ್ತ್ರೀಯ ನಿಯಮಗಳಿಗೆ ಬದ್ಧವಾಗಿಲ್ಲ ಎಂದು ಎದೆಗುಂದಿಸಿಬಿಟ್ಟಿದ್ದರೆ ಈಗ ನಾಟಕವಾಡಲು ಬಂದವರ ಪೈಕಿ ಅರ್ಧಕ್ಕಿಂತ ಹೆಚ್ಚು ಮಂದಿ 'ನಮಗೆ ನಾಟಕ ಬೇಡ, ಏನೂ ಬೇಡ...' ಎಂದು ಬೆನ್ನು ತಿರುಗಿಸಿಬಿಡುತ್ತಿದ್ದರು. ನಾಟಕದ ಪರಿಕರ ಬಾಡಿಗೆ ಕೊಡುವವರು, ಹಾರ್ಮೋನಿಯಂ ಮಾಸ್ತರುಗಳು, ಮಹಿಳಾ ಕಲಾವಿದರು ಎಷ್ಟೋ ಪಾಲು ನಿರುದ್ಯೋಗಿಗಳಾಗಿಬಿಡುತ್ತಿದ್ದರು. ಅದೆಲ್ಲಕ್ಕಿಂತ ಹೆಚ್ಚಾಗಿ ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ನಾಟಕ ಪ್ರಯೋಗಗಳೇ ಆಗುತ್ತಿರಲಿಲ್ಲ.

ಕೀರ್ತನ ಕಲೆ ಮೊದಲೂ ಇತ್ತು. ಆದರೆ ನಾಟಕದ ಸಂಸ್ಕಾರ ಪಡೆದು ಕೀರ್ತನಕ್ಕೆ ಮರಳಿದವರ ಪ್ರತಿಭೆ ಇಮ್ಮಡಿಗೊಂಡಿತು. ಅವರು ಪ್ರಸಿದ್ಧ ಕೀರ್ತನಕಾರರಾದರು. ಕೀರ್ತನಕ್ಕೆ ಸಾಹಿತ್ಯ, ಸಂಗೀತದ ಜತೆಗೆ ಅಭಿನಯವೂ ಬೇಕಲ್ಲವೇ? ನಾಟಕದ ಅನುಭವ ಅದನ್ನು ಧಾರಾಳವಾಗಿ ನೀಡಿತು. ಹರಿಕಥಮ್ಮ, ಗುರುರಾಜುಲು ನಾಯ್ಡು, ಬಿ.ಪಿ. ರಾಜಮ್ಮ, ಗುರುಸಿದ್ಧಪ್ಪ(ಕನಕದಾಸ), ನಾರಾಯಣದಾಸ್, ಲಕ್ಷ್ಮಣದಾಸ್ ಅವರುಗಳ ಕೀರ್ತನ ಮತ್ತಷ್ಟು ಕಳೆಗಟ್ಟಲು ಅವರುಗಳ ನಾಟಕದ ಹಿನ್ನೆಲೆ ಕೂಡ ಕಾರಣ. ಬುದ್ಧ, ಗಾಂಧೀಜಿ, ಅಂಬೇಡ್ಕರ್, ಗುಬ್ಬಿ ವೀರಣ್ಣನವರ ಕುರಿತೂ ಲಕ್ಷ್ಮಣದಾಸ್ ಅವರು ಕೀರ್ತನ ಮಾಡಲು ನಾಟಕದ ಅನುಭವ ಪ್ರೇರೇಪಣೆ ನೀಡಿತು ಎನ್ನುವುದು ಈ ನಾಟಕಗಳ ಹೆಚ್ಚುಗಾರಿಕೆ.

ಹಳೇ ಮೈಸೂರಿನ ಹಳ್ಳಿಗಳಲ್ಲಿ ವೃತ್ತಿ ನಾಟಕ ಕಂಪನಿ ಶೈಲಿಯ ನಾಟಕವಾಡುವ ಪರಿಪಾಠ ತುಸು ಕಡಿಮೆಯಾಗಿದ್ದರೂ ನಿಂತು ಹೋಗಿಲ್ಲ. ನಾಗಮಂಗಲ, ಮಂಡ್ಯ, ಕೊಳ್ಳೇಗಾಲ, ಕೋಲಾರ, ಮೈಸೂರು ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ನಿರಂತರವಾಗಿ ನಾಟಕ ಪ್ರಯೋಗ ನಡೆಯುತ್ತಲೇ ಇವೆ. ತುಮಕೂರು ಜಿಲ್ಲೆಯಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನ ಹೆಚ್ಚಿನ ಸಂಖ್ಯೆಯಲ್ಲಿ ಆಗುತ್ತದೆ. ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಮಾತ್ರ ವೃತ್ತಿ ಶೈಲಿ ನಾಟಕ ಪ್ರಯೋಗಗಳ ಸಂಖ್ಯೆ ತೀರಾ ಕಡಿಮೆ. ಹೊಸಕೋಟೆಯಲ್ಲಿ ತೆಲುಗು ಪೌರಾಣಿಕ ನಾಟಕಗಳ ಪ್ರದರ್ಶನಗಳಾಗುತ್ತವೆ.

ಬೆಳ್ಳಾವೆ ನರಹರಿಶಾಸ್ತ್ರಿಗಳ 'ಸಂಪೂರ್ಣ ರಾಮಾಯಣ', 'ಕೃಷ್ಣಗಾರುಡಿ' ನಾಟಕಗಳ ಪ್ರದರ್ಶನ ತುಮಕೂರು ಜಿಲ್ಲೆಯಲ್ಲಿ ಅಧಿಕ. ತೋರಣಗಲ್ಲು ರಾಜಾರಾವ್ ರಚಿಸಿ, ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಪರಿಷ್ಕರಿಸಿ, ಮಳವಳ್ಳಿ ಸುಬ್ಬಣ್ಣ ಮತ್ತಷ್ಟು ಪರಿಷ್ಕರಿಸಿ, ಬಿ.ಎಂ. ನಾರಾಯಣದಾಸ್ ಪ್ರಕಟಿಸಿದ 'ಸುಭದ್ರ ಕಲ್ಯಾಣ' ನಾಟಕವಂತೂ ತುಮಕೂರು ಜಿಲ್ಲೆಯಲ್ಲಿ ಸೀಜನ್‌ನಲ್ಲಿ ಭಾರಿ ಪ್ರದರ್ಶನ ಕಾಣುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಪುಟ್ಟಾಚಾರಿ ರಚಿಸಿದ ಶನಿಮಹಾತ್ಮೆ ನಾಟಕದ ಪ್ರದರ್ಶನ ಹೆಚ್ಚು. ಪುಟ್ಟಸ್ವಾಮಯ್ಯನವರ 'ಕುರುಕ್ಷೇತ್ರ' ನಾಟಕವಂತೂ ಎತ್ತಿಕೊಂಡವರ ಕೈಗೂಸಾಗಿದೆ. ಮೂಲ ಪ್ರತಿ ಉಳಿದೇ ಇಲ್ಲ. ಅದನ್ನು ಆಧಾರವಾಗಿಟ್ಟುಕೊಂಡು ಸಾವಿರ ತರಹದ ಭಿನ್ನ ಪ್ರಯೋಗಗಳಿವೆ. ಉಳಿದಂತೆ ಹಳೇ ಮೈಸೂರಿನ ಎಲ್ಲ ಜಿಲ್ಲೆಗಳಲ್ಲಿ ಈಗಲೂ ಉತ್ತರ ಕರ್ನಾಟಕದ ಕವಿಗಳಾದ (ವೃತ್ತಿ ನಾಟಕಕಾರರು) ಧುತ್ತರಗಿ, ಮಾಂಡ್ರೆ, ಹೂಗಾರ, ಅರಿಷಿಣಗೋಡಿ ರಚಿಸಿದ ನಾಟಕಗಳು ಪ್ರದರ್ಶನವಾಗುತ್ತವೆ.

ಉತ್ತರ ಕರ್ನಾಟಕದ ಬಹುತೇಕ ಎಲ್ಲ ಪ್ರಮುಖ ನಾಟಕ ಕಂಪನಿಗಳು ಹಳೇ ಮೈಸೂರಿನ ಬಹಳಷ್ಟು ಪ್ರದೇಶದಲ್ಲಿ ಅದರಲ್ಲೂ ಹೆಚ್ಚಾಗಿ ಬೆಂಗಳೂರಿನಲ್ಲಿ ಪ್ರದರ್ಶನ ನೀಡಿವೆ. ಶಿರಹಟ್ಟಿ ವೆಂಕೋಬರಾಯ, ಗುಳೇದಗುಡ್ಡ ಗಂಗೂಬಾಯಿ, ಯಿರಾಸಿ ಭರಮಪ್ಪ, ಗರುಡ ಸದಾಶಿವರಾವ್, ವಾಮನರಾವ್ ಮಾಸ್ತರ, ಚಿಂದೋಡಿ ವೀರಪ್ಪ, ಗೋಕಾಕ ಬಸವಣ್ಣೆಪ್ಪ, ಏಣಗಿ ಬಾಳಪ್ಪ ಮೊದಲಾದವರ ನಾಟಕ ಕಂಪನಿಗಳು ಬೆಂಗಳೂರು ನಗರದಲ್ಲಿ ದಾಖಲೆಯ ಪ್ರದರ್ಶನ ನೀಡಿವೆ.

ವೃತ್ತಿ ನಾಟಕ ಕಂಪನಿಗಳ ಕೊಡುಗೆಯನ್ನು ಪಟ್ಟಿ ಮಾಡುವಾಗ ಮಹಾಕಾವ್ಯಗಳನ್ನು, ಶಾಸ್ತ್ರೀಯ ಗಾಯನವನ್ನು ಸಾಮಾನ್ಯ ಜನತೆಯ ಮಧ್ಯೆ ಪಸರಿಸುವಂತೆ ಮಾಡಿದ್ದು, ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕಾಣಿಕೆ, ಅಕ್ಷರಸ್ಥ ಇರಲಿ, ಅನಕ್ಷರಸ್ಥ ಇರಲಿ ಅವನಲ್ಲಿ ನಾನೂ ನಾಟಕದಲ್ಲಿ ಭಾಗವಹಿಸಬಲ್ಲೆ ಎಂಬ ಆತ್ಮ ವಿಶ್ವಾಸವನ್ನು ತುಂಬಿದ್ದು–ಇವೇ ಮೊದಲಾದ ಅಂಶಗಳನ್ನು ಪಟ್ಟಿ ಮಾಡಲಾಗುತ್ತದೆ. ಹಳೇ ಮೈಸೂರಿನ ವೃತ್ತಿ ಮಾದರಿ ನಾಟಕಗಳಿಗೂ ಇವೇ ಮಾತು ಬಹುಪಾಲು ಅನ್ವಯಿಸುತ್ತವೆ.

ಇತ್ತೀಚಿನ ವರ್ಷಗಳ ಇವರ ಪೌರಾಣಿಕ ನಾಟಕಗಳಲ್ಲಿ ಸಮಕಾಲೀನ ಶೋಧನೆ ಇಲ್ಲವೆನ್ನುವ ಕಾರಣಕ್ಕೆ (ಇಲ್ಲಿಯೂ ಗಮನ ಸೆಳೆಯಲಾರದಷ್ಟು ವಿರಳ ಪ್ರಯತ್ನಗಳು ನಡೆದಿವೆ), ಪರಿಕರ, ಬೆಳಕಿನ ವ್ಯವಸ್ಥೆಯಲ್ಲಿ ಉಂಟಾದ ಸುಧಾರಣೆಯನ್ನು ನಾಟಕಗಳಲ್ಲಿ ತರಲಿಲ್ಲ ಎಂಬ ಕಾರಣಕ್ಕೆ ಮಾಧ್ಯಮದಲ್ಲಿ ಈ ನಾಟಕಗಳು ಚರ್ಚೆಯಾಗಲಿಲ್ಲ, ದಾಖಲಾಗಲಿಲ್ಲ. ಆದರೆ ಕಳೆದ ಶತಮಾನದಲ್ಲಿ ನೂರಾರು ವೃತ್ತಿ ಕಲಾವಿದರು, ಇದರೊಂದಿಗೆ ಅಸಂಖ್ಯಾತ ಹವ್ಯಾಸಿ ಕಲಾವಿದರು ಓಣಿ ಓಣಿಗಳಲ್ಲಿ ನಾಟಕವನ್ನು ಜೀವಂತವಾಗಿಟ್ಟರು. ಸಾಂಸ್ಕೃತಿಕವಾಗಿ ಬಹುದೊಡ್ಡ ನಿರ್ವಾತವನ್ನು ತುಂಬಿದರು.

**ಹವ್ಯಾಸಿ ರಂಗಭೂಮಿ :** ಹೊಟ್ಟೆಪಾಡಿಗೆ ಬೇರೆ ವೃತ್ತಿಯಲ್ಲಿದ್ದುಕೊಂಡು, ನಾಟಕವನ್ನು ಹವ್ಯಾಸವಾಗಿಸಿಕೊಂಡು ಆಗಾಗ ನಾಟಕ ಪ್ರದರ್ಶಿಸುವ ತಂಡಗಳನ್ನು ಹವ್ಯಾಸಿ ರಂಗಭೂಮಿ ಎಂದು ಕರೆಯಲಾಗಿದೆ. ಇಂತಹ ತಂಡಗಳು ನಗರ, ಹಳ್ಳಿಗಳೆರಡರಲ್ಲೂ ಅಸ್ತಿತ್ವದಲ್ಲಿವೆ. ಹಳ್ಳಿ ಹವ್ಯಾಸಿಗಳು ಜಾನಪದ ಬಯಲಾಟ ಹಾಗೂ ಕಂಪನಿ ಶೈಲಿಯ ನಾಟಕಗಳನ್ನು ಕಳೆದ ಶತಮಾನದುದ್ದಕ್ಕೂ ಪ್ರದರ್ಶಿಸುತ್ತಲೇ ಬಂದಿದ್ದಾರೆ. ಬಹು ವ್ಯಾಪಕವಾದ ರಂಗಕ್ರಿಯೆ ಇದು.

ನಗರ, ಪಟ್ಟಣಗಳ ಶಿಕ್ಷಿತ ಮಧ್ಯಮವರ್ಗದ ಜನ ಕಟ್ಟಿಕೊಂಡ ತಂಡಗಳು ಹತ್ತಿರತ್ತಿರ ಒಂದು ನೂರು ವರ್ಷಗಳಿಂದ ಹಲವು ವಿಭಿನ್ನ ಪ್ರಯೋಗಗಳನ್ನು ಮಾಡುತ್ತಲೇ ಬಂದಿವೆ. ತಂತ್ರಜ್ಞಾನದ ಬೆಳವಣಿಗೆಯನ್ನು ರಂಗದ ಮೇಲೆ ಬಳಸಿಕೊಂಡ ಕಾರಣ ಇವರ ನಾಟಕಗಳು ನವೀನ ಎನಿಸಿವೆ. ಅದರಲ್ಲೂ ಕಳೆದ 50 ವರ್ಷಗಳ ಕಾಲ ಕನ್ನಡ ಹವ್ಯಾಸಿ ರಂಗಭೂಮಿ ಹೆಚ್ಚು ಪ್ರಯೋಗಶೀಲವಾಗಿತ್ತು. ನಾನಾ ತರಹದ ನಾಟಕಗಳು ರಂಗದ ಮೇಲೆ ಬಂದವು. ಇಂತಹದೊಂದು ಪ್ರಯೋಗಶೀಲತೆಯಲ್ಲಿ ಹಳ್ಳಿಯೂ ಕೈಗೂಡಿಸಿದ್ದು ಇತ್ತೀಚಿನ ಮೂರು ದಶಕಗಳ ಬೆಳವಣಿಗೆ, ಹಳ್ಳಿ ಮೂಲದಿಂದಲೇ ರಂಗಭೂಮಿಯಲ್ಲಿ ಅದ್ಭುತ ಎನ್ನುವ ಸಾಧನೆಯೂ ಸಾಧ್ಯವಾಯಿತು. ರೆಪರ್ಟರಿಗಳು ಹುಟ್ಟಿಕೊಂಡದ್ದೇ ಹೆಗ್ಗೋಡು, ಸಾಣೇಹಳ್ಳಿ, ತಿಪಟೂರು, ತುಮರಿಯಂತಹ ಹಳ್ಳಿಗಳಲ್ಲಿ, ಅರೆಪಟ್ಟಣ ಪ್ರದೇಶಗಳಲ್ಲಿ.

ಮೊದಲು ವರ್ತಕರು ಮುಂದೆ ತುಸು ದಿನಗಳಲ್ಲೇ ಸರ್ಕಾರಿ ಹಾಗೂ ಖಾಸಗಿರಂಗದ ನೌಕರರು ನಗರದ ಹವ್ಯಾಸಿ ತಂಡಗಳನ್ನು ಕಟ್ಟಿದರು. ಸ್ವಾತಂತ್ರ್ಯೋತ್ತರ ನೆಹರೂ ಭಾರತದಲ್ಲಿ ಕೈಗಾರಿಕರಣ ತೀವ್ರಗೊಂಡು, ಅದರಲ್ಲೂ ಬೆಂಗಳೂರು ನಗರದಲ್ಲಿ ಸಾರ್ವಜನಿಕ ವಲಯದ (ಪಬ್ಲಿಕ್ ಸೆಕ್ಟರ್) ಕೈಗಾರಿಕೆಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯಾದ ಅನಂತರ ಇಲ್ಲಿನ ಕಾರ್ಮಿಕರು ಶಿಕ್ಷಿತ ವಲಯದ ಇಂತಹ ಹವ್ಯಾಸಿ ತಂಡಗಳನ್ನು ಸೇರಿಕೊಂಡು ಅವುಗಳನ್ನು ಬಲಪಡಿಸಿದರು. ಮತ್ತೆ ಹಲವರು ತಮ್ಮ ತಮ್ಮ ವಸತಿ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಪ್ರಯೋಗ ಕಾಣುತ್ತಿದ್ದ ಕಂಪನಿ ಶೈಲಿಯ ಹವ್ಯಾಸಿ ಪೌರಾಣಿಕ, ಸಾಮಾಜಿಕ ನಾಟಕಗಳಲ್ಲೂ ಭಾಗವಹಿಸಿದರು. ಹವ್ಯಾಸಿ ತಂಡಗಳಿಗೆ ಕಾರ್ಖಾನೆಗಳ ಆಡಳಿತ ಮಂಡಳಿಗಳಿಂದಲೂ ಹೆಚ್ಚಿನ ಉತ್ಸಾಹ ಉತ್ತೇಜನ ದೊರೆಯಿತು. ಶಾಲೆ–ಕಾಲೇಜುಗಳೂ ಹವ್ಯಾಸಿ ರಂಗಭೂಮಿಯ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿವೆ.

ಬೆಂಗಳೂರಿನಲ್ಲಿ 1909ರಲ್ಲಿ ಆರಂಭವಾದ ಅಮೆಚೂರ್ ಡ್ರಾಮ್ಯಾಟಿಕ್ ಅಸೋಸಿಯೇಷನ್ (ಎಡಿಎ)ನ್ನು ಹಳೆ ಮೈಸೂರು ಭಾಗದ ಮೊದಲ ನಗರ ಹವ್ಯಾಸಿ ತಂಡ ಎಂದು ಕರೆಯಬಹುದು. ಅದಾಗಲೇ ಅಸ್ತಿತ್ವದಲ್ಲಿದ್ದ ಮದ್ರಾಸಿನ ಸುಗುಣ ವಿಲಾಸಿ ಸಭಾ ನಾಟಕ ಸಂಸ್ಥೆಯ ಕಾರ್ಯಚಟುವಟಿಕೆಗಳು ಇದಕ್ಕೆ ಮಾದರಿಯಾದದ್ದು ಆರಂಭ ಘಟ್ಟದಲ್ಲಿ ಮಾತ್ರ. ಅದನ್ನು ಮೀರಿ ಎಡಿಎ ಬೆಳೆಯಿತು. ತನ್ನ ಕಾಲದಲ್ಲಿ ಪ್ರಚಲಿತವಿದ್ದ ಕಂಪನಿ ಶೈಲಿಯ ಪೌರಾಣಿಕ, ಐತಿಹಾಸಿಕ ನಾಟಕಗಳ ಪ್ರದರ್ಶನದಿಂದ ಆರಂಭಿಸಿ, ಎಲ್ಲ ಹೊಸ ಪ್ರಯೋಗಗಳಿಗೆ ತನ್ನನ್ನು ತಾನು ತೆರೆದುಕೊಂಡಿತು. ಪ್ರತಿಭಾವಂತರ ಹಿಂಡೇ ಈ ಸಂಸ್ಥೆಯನ್ನು ಸೇರಿಕೊಂಡಿತು. ಪಾರಂಪರಿಕ ಹಾಗೂ ಪಾಶ್ಚಾತ್ಯ ಅಭಿನಯ ಮಾದರಿಗಳ ಪರಿಚಯ ಪಡೆದಿದ್ದ ಬಳ್ಳಾರಿ ರಾಘವ ಎಂಬ ದೈತ್ಯ ಪ್ರತಿಭೆಯ ನಟ ಈ ಸಂಸ್ಥೆ ಸೇರಿಕೊಂಡ ಮೇಲೆ ಇದರ ಚಟುವಟಿಕೆಗಳು ನಾಡಿನಾದ್ಯಂತ ವಿಸ್ತಾರ ಪಡೆದುಕೊಂಡವು. ಪಂಡಿತ್ ತಾರಾನಾಥರು ರಚಿಸಿದ 'ದೀನಬಂಧು ಕಬೀರ್' ನಾಟಕವಾಗಿ ಯಶಸ್ವಿ ಪ್ರಯೋಗ ಕಂಡಿತು. ಖ್ಯಾತ ಅಭಿನೇತ್ರಿಗಳನ್ನೊಳಗೊಂಡಿದ್ದ ಈ ತಂಡ ಹಿಂದಿ, ಇಂಗ್ಲಿಷ್, ತೆಲುಗು ಭಾಷೆಯಲ್ಲೂ ನಾಟಕಗಳನ್ನು ಪ್ರದರ್ಶಿಸುತ್ತಿತ್ತು.

ರವೀಂದ್ರನಾಥ ಟ್ಯಾಗೋರ್(1919), ಸರೋಜಿನಿ ನಾಯ್ಡು(1921) ಸ್ವತಃ ಎಡಿಎ ನಾಟಕಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ವರದಾಚಾರ್ಯರ ರತ್ನಾವಳಿ, ಅರಮನೆ ಕಂಪನಿಗೆ ಸರಿಸಾಟಿಯಾಗಿ ಇದರ ಪ್ರದರ್ಶನಗಳು ಇದ್ದವೆಂಬುದು ಈ ಹವ್ಯಾಸಿ ತಂಡದ ಹೆಗ್ಗಳಿಕೆ. ಇಂಗ್ಲಿಷ್‌ನಲ್ಲಿ 'ಥಿಯೇಟರ್' ಕನ್ನಡದಲ್ಲಿ 'ರಂಗಭೂಮಿ' ಎಂಬ ಪತ್ರಿಕೆಗಳನ್ನು ಆರಂಭಿಸಿತು. ಎಂ.ಎಲ್.ಎಸ್. ಶಾಸ್ತ್ರೀ, ಬಿ ಶ್ರೀನಿವಾಸಯ್ಯಂಗಾರ್ ಪಾತ್ರ ಗಣನೀಯ. ಈ ಸಂಸ್ಥೆ ಇಂದಿಗೂ ಕಾರ್ಯನಿರತವಾಗಿದೆ. ಶತಮಾನೋತ್ಸವ ಆಚರಣೆಗೆ ಸಜ್ಜಾಗುತ್ತಿರುವ ಸಂಸ್ಥೆ, ನಗರದ ರವೀಂದ್ರ ಕಲಾಕ್ಷೇತ್ರದ ಮುಂಭಾಗದಲ್ಲಿ ರಂಗಮಂದಿರವನ್ನು ನಿರ್ಮಿಸಿದೆ.

1918ರಲ್ಲಿ ಎಡಿಎ ಸಂಸ್ಥೆ ಏರ್ಪಡಿಸಿದ್ದ ನಾಟಕ ರಚನಾ ಸ್ಪರ್ಧೆಯಲ್ಲಿ ಭಾಗವಹಿಸಿದ ಟಿ.ಪಿ. ಕೈಲಾಸಂರ ಟೊಳ್ಳುಗಟ್ಟಿ ನಾಟಕ ಕನ್ನಡ ಹವ್ಯಾಸಿ ರಂಗಭೂಮಿ ಚರಿತ್ರೆಯಲ್ಲಿ ಸಾಮಾಜಿಕ ಪ್ರಹಸನದ ದಾರಿಯನ್ನು ತೆರೆಯಿತು.

ಮುಂದೆ ಬೆಂಗಳೂರಿನಲ್ಲಿ 1930ರಲ್ಲಿ ಅಸ್ತಿತ್ವಕ್ಕೆ ಬಂದ ಮಲ್ಲೇಶ್ವರಂ ಅಮೆಚೂರ್ ಅಸೋಸಿಯೇಷನ್ ಕೈಲಾಸಂರ ನಾಟಕಗಳನ್ನೇ ಹೆಚ್ಚಾಗಿ ಪ್ರದರ್ಶಿಸಿತು. ಸಿ.ಕೆ. ನಾಗರಾಜರಾಯರು 1936ರಲ್ಲಿ ಅಸ್ತಿತ್ವಕ್ಕೆ ತಂದ ಯುನೈಟೆಡ್ ಆರ್ಟಿಸ್ಟ್ ತಂಡ ಮತ್ತೆ ವೈವಿಧ್ಯಮಯ ನಾಟಕಗಳತ್ತ ಮುಖ ಮಾಡಿತು. 40ರ ದಶಕದಲ್ಲಿ ಸ್ಥಾಪಿತವಾದ ಛಾಯಾ ಆರ್ಟಿಸ್ಟ್ ತಂಡ ಪರ್ವತವಾಣಿ

ನಾಟಕಗಳನ್ನು ಹೆಚ್ಚು ಪ್ರದರ್ಶಿಸಿತು. ಪರ್ವತವಾಣಿ ಅವರು ವಿಶ್ವದ ಪ್ರಸಿದ್ಧ ಕ್ಲಾಸಿಕ್‌ಗಳನ್ನು ಅದರಲ್ಲೂ ವಿಶೇಷವಾಗಿ ಶೇಕ್ಸ್‌ಪಿಯರ್ ನಾಟಕಗಳನ್ನು ಕನ್ನಡದ ಜಾಯಮಾನಕ್ಕೆ ಅನುಗುಣವಾಗಿ ರೂಪಾಂತರಿಸಿದರು. ಅವು ಪರ್ವತವಾಣಿಯವರ ಸ್ವಂತ ರಚನೆ ಎನಿಸುವಷ್ಟು ತಾಜಾ ಆಗಿದ್ದವು. ಶೇಕ್ಸ್‌ಪಿಯರ್‌ನ ಟೇಮಿಂಗ್ ಆಫ್ ದಿ ಶ್ರ್ಯೂ ಆಧರಿಸಿ ರಚಿಸಿದ ಬಹುದ್ದೂರು ಗಂಡು ಹಾಗೂ ಉಂಡಾಡಿ ಗುಂಡ ಆ ಕಾಲಕ್ಕೆ ಅತಿ ಹೆಚ್ಚು ಪ್ರದರ್ಶನ ಕಂಡ ಜನಪ್ರಿಯ ನಾಟಕ ಎನಿಸಿದವು. ಕೆ.ವಿ. ಅಯ್ಯರ್ ಅವರು 1954–55ರಲ್ಲಿ ತಮ್ಮ ಗರಡಿ ಮನೆಯಲ್ಲಿ ಆರಂಭಿಸಿದ ರವಿ ಕಲಾವಿದರು ತಂಡ ಎರಡು ತಿಂಗಳಿಗೊಮ್ಮೆ ಹೊಸ ನಾಟಕ ನೀಡುವ ಯೋಜನೆ ಆರಂಭಿಸಿತು. ಮರಾಠಿ ನಾಟಕಕಾರ ಪು.ಲ. ದೇಶಪಾಂಡೆ ಅವರ ತನುವೂ ನಿನ್ನದೇ ಈ ತಂಡದ ಹೆಸರಾಂತ ನಾಟಕ. ಹವ್ಯಾಸಿ ರಂಗಭೂಮಿಗೆ ರಂಗಪರಿಕರ, ಮೈಕ್ ಸೆಟ್‌ಗಳು ಅಸ್ತಿತ್ವಕ್ಕೆ ಬಂದ ಕಾಲಘಟ್ಟ ಅದು. ವೃತ್ತಿ ರಂಗಭೂಮಿಯ ಹಾಗೆ ಹವ್ಯಾಸಿ ರಂಗಭೂಮಿಗೆ ಮಹಿಳೆ ಪ್ರವೇಶ ಬೇಗ ಆಗಲಿಲ್ಲ. 1940–50ರ ದಶಕದವರೆಗೆ ಕಾಯಬೇಕಾಯಿತು.

ಬೆಂಗಳೂರಿನಲ್ಲಿ ನಡೆದ ರಂಗ ಚಟುವಟಿಕೆಗಳು ಶಿಕ್ಷಿತ ಮಧ್ಯಮವರ್ಗಕ್ಕೆ ಸೀಮಿತ ಎನಿಸಿದಾಗಿ ಆ ಕುಂದುಕೊರತೆಯನ್ನು ಮೀರಿ ವ್ಯಾಪಕವಾದದ್ದು ಪ್ರಭಾತ್ ಕಲಾವಿದರ ಅದ್ದೂರಿ ಪ್ರದರ್ಶನಗಳು. ಜನಪ್ರಿಯ ಧಾಟಿಗಳನ್ನು ಹಾಕಿಕೊಂಡು ಸಂಯೋಜಿಸಿದ ನೃತ್ಯ, ಕಣ್ಣು ಕೋರೈಸುವ ಬೆಳಕು, ವೇಷ–ಭೂಷಣದಿಂದಾಗಿ ಸಿಂಡ್ರೆಲಾ, ಗೋವಿನ ಕಥೆ ಮುಂತಾದವು ಬಹುಬೇಗ ಜನಪ್ರಿಯವಾದವು.

1951ರಲ್ಲಿ ಬೆಂಗಳೂರಿನಲ್ಲಿ ಅ.ನ. ಸುಬ್ಬರಾಯರು ಲಲಿತಕಲೆಗಳಿಗೆ ಸಂಬಂಧಿಸಿದ ಕಲಾ ಮಾಸ ಪತ್ರಿಕೆ ಆರಂಭಿಸುವ ಜತೆಗೆ ಚಿತ್ರಾ ಎಂಬ ತಂಡ ಹುಟ್ಟುಹಾಕಿ ಚಿತ್ರಕಲೆ, ನಾಟಕಗಳನ್ನು ವ್ಯವಸ್ಥಿತವಾಗಿ ಸಂಘಟಿಸಿದರು. ವೈವಿಧ್ಯಮಯ ನಾಟಕಗಳು ಈ ಹಂತದಲ್ಲಿ ಪ್ರದರ್ಶನಗೊಂಡವು.

ದುಡಿಯುವ ವರ್ಗದ ನೋವು–ನಲಿವುಗಳಿಗೆ ಸಾಹಿತ್ಯ ಸ್ಪಂದಿಸಬೇಕೆನ್ನುವ ಪ್ರಗತಿಶೀಲ ಚಳವಳಿಯ ಉತ್ತುಂಗದ ಕಾಲ ಅದು. ನಾಟಕವೂ ಇದರಿಂದ ಹೊರತಾಗಲಿಲ್ಲ. ಪ್ರಗತಿಶೀಲ ಚಳವಳಿಯ ಅಧ್ವರ್ಯುಗಳಲ್ಲೊಬ್ಬರಾದ ನಿರಂಜನ ಅವರು ರಚಿಸಿದ 'ಕವಿಪುಂಗವ' ನಾಟಕವನ್ನು ಚಿತ್ರಾ ಪ್ರದರ್ಶಿಸಿತು. ಕವಿಪುಂಗವ ಕೂಲಿಕಾರರ ಬದುಕನ್ನು ಅನಾವರಣಗೊಳಿಸುವ ನಾಟಕ.

ಪೈಲ್ವಾನ್ ಅಣ್ಣಯ್ಯಪ್ಪನವರ ಕಲಾಜ್ಯೋತಿ, ಉಮೇಶರುದ್ರರ ಸಾಧನಾ ತಂಡ, ಕಲಾಭೂಷಿಣಿ, ಕಮಲ ಕಲಾಮಂದಿರ, ಕಲಾಕುಂಜ ಇಂತಹ ಹತ್ತಾರು ತಂಡಗಳು ಬೆಂಗಳೂರಿನ ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಟ್ಟವು. ಟಿ ಪಿ ಕೈಲಾಸಂರ ಪ್ರಹಸನಗಳು, ಪರ್ವತವಾಣಿಯವರ ನಾಟಕಗಳ ಜತೆಗೆ ಹಲವಾರು ಅನುವಾದಗಳೂ ಈ ಹಂತದಲ್ಲಿ ಪ್ರಯೋಗಗೊಂಡವು. ಹವ್ಯಾಸಿ ನಾಟಕಗಳ ಆರಂಭದ ಕಾಲಘಟ್ಟದಲ್ಲಿ ನಾ. ಕಸ್ತೂರಿ, ದಾಶರಥಿ ದೀಕ್ಷಿತ್, ಕೈವಾರ ರಾಜಾರಾವ್, ಕ್ಷೀರಸಾಗರ ಅವರ ನಾಟಕಗಳೂ ಅನಂತರದ ದಿನಗಳಲ್ಲಿ ವೈನತೇಯ, ಎ.ಎಸ್. ಮೂರ್ತಿ, ಗುಂಡಣ್ಣ, ನಾ.ಕ. ಸತ್ಯನಾರಾಯಣರ ನಾಟಕಗಳು ಹವ್ಯಾಸಿ ರಂಗಭೂಮಿಯನ್ನು ಪೋಷಿಸಿಕೊಂಡು ಬಂದವು.

ಈ ಹಂತದಲ್ಲಿ ಹತ್ತಾರು ನಾಟಕ ತಂಡಗಳು ಬೆಂಗಳೂರು ಹಾಗೂ ಹಳೇ ಮೈಸೂರು ಪ್ರಾಂತದ ಪಟ್ಟಣಗಳಲ್ಲಿ ಹುಟ್ಟಿಕೊಂಡವು. ಆದರೆ ನಾಟಕಕ್ಕೆ ಸಾಂಘಿಕ ಶಕ್ತಿ ತಂದುಕೊಟ್ಟದ್ದು ನಾಟ್ಯ ಸಂಘ. ರಾಷ್ಟ್ರದ ಹಲವೆಡೆ ಘಟಕಗಳನ್ನು ಹೊಂದಿದ್ದ ತಂಡ ಇದು. ಬೆಂಗಳೂರಿನಲ್ಲಿ ಇದರ ಒಂದು ಶಾಖೆ ಅಸ್ತಿತ್ವಕ್ಕೆ ಬಂದಿತು.

20ನೆಯ ಶತಮಾನದ ಮೂರನೆಯ ದಶಕದಲ್ಲಿ ಕಾಲೇಜಿನ ರಂಗಚಟುವಟಿಕೆಗಳು ಗಮನಾರ್ಹವಾಗಿ ಕಾಣಿಸತೊಡಗಿದವು. ಈ ನಿಟ್ಟಿನಲ್ಲಿ 1927ರಲ್ಲಿ ಎಂ.ಎಸ್. ನಾರಾಯಣಶಾಸ್ತ್ರಿಗಳ ನೇತೃತ್ವದಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಸ್ಥಾಪನೆಗೊಂಡ ಯೂನಿವರ್ಸಿಟಿ ಅಮೆಚೂರ್ಸ್ ಅಸೋಸಿಯೇಷನ್ ಮೊದಲಿಗೆ ಮುಖ್ಯವಾಗುತ್ತದೆ. ಈ ತಂಡವು ಅಲ್ಲಿಯ ಅಧ್ಯಾಪಕರೇ ರಚಿಸಿಕೊಡುತ್ತಿದ್ದ ನಾಟಕಗಳನ್ನು ತೆಗೆದುಕೊಳ್ಳುತ್ತಿದ್ದವು. ಅಂತಹ ನಾಟಕಗಳಲ್ಲಿ ಬಿ ಎಂ ಶ್ರೀ ಯವರ ಗದಾಯುದ್ಧಂ, ಅಶ್ವತ್ಥಾಮನ್, ಪಾರಸಿಕರು, ಕುವೆಂಪುರವರ ಯಮನ ಸೋಲು, ಬೆರಳ್ಗೆ ಕೊರಳ್ ಮುಂತಾದವು ಗಮನಾರ್ಹವೆನಿಸುತ್ತವೆ. 1928ರಲ್ಲಿ ಪ್ರದರ್ಶನಗೊಂಡ ಯಮನಸೋಲು ನಾಟಕದಲ್ಲಿ ಕುವೆಂಪುರವರೇ ಸ್ವತಃ ಸತ್ಯವಾನನ ಪಾತ್ರವನ್ನು ಅಭಿನಯಿಸಿದ್ದರು. ಈ ಸಂಘದಲ್ಲಿ ಪ್ರಸಿದ್ಧಿಗೆ ಬಂದವರೆಂದರೆ ಸಿ.ಬಿ. ಜಯರಾವ್, ವಿ.ಕೆ. ಶ್ರೀನಿವಾಸನ್(ಬುಳ್ಳಿ), ಬಿ. ಕೃಷ್ಣ, ಎ.ಸಿ. ನರಸಿಂಹಮೂರ್ತಿ, ಎಂ. ನಟೇಶ್, ಎಂ. ಅಮೀರ್, ಎ.ಎನ್. ಮೂರ್ತಿರಾವ್, ಹೆಚ್.ಕೆ. ರಂಗನಾಥ ಮೊದಲಾದವರು. ಮಹಾರಾಜ ಕಾಲೇಜಿನ ಈ ಸಂಘ 1945ರಲ್ಲಿ ಒಡೆಯಿತು. ಎರಡು ಸಂಸ್ಥೆಗಳಾಯಿತು.

ಇದೇ ರೀತಿಯಲ್ಲಿ ಬೆಂಗಳೂರಿನ ಕಾಲೇಜು ರಂಗ ಚಳವಳಿಯಲ್ಲಿ ದೊಡ್ಡ ಪಾತ್ರ ನಿರ್ವಹಿಸಿದ ಬೆಂಗಳೂರಿನ ಮೆಡಿಕಲ್ ಕಾಲೇಜು, ಲಾ ಕಾಲೇಜು, ರೇಣುಕಾಚಾರ್ಯ ಕಾಲೇಜು, ಬಸವನಗುಡಿ ನ್ಯಾಷನಲ್ ಕಾಲೇಜು ಮತ್ತು ಎಂ ಇ ಎಸ್ ಕಾಲೇಜುಗಳು ಮುಖ್ಯವಾದವು. ಈ ಚಟುವಟಿಕೆಗಳಿಂದ ಹೊರಬಂದ ಅನೇಕರು ರಂಗಭೂಮಿಯಲ್ಲಿ ಮುಖ್ಯರಾಗಿದ್ದಾರೆ. ಅವರಲ್ಲಿ ನಾಣಿ, ಪದ್ದಣ್ಣ, ಕಪ್ಪಣ್ಣ, ನಾಗೇಶ್, ಲೋಕೇಶ್ ಮೊದಲಾದ ಅನೇಕರನ್ನು ಹೆಸರಿಸಬಹುದು.

ಸ್ವಾತಂತ್ರ್ಯಾನಂತರದ ಕರ್ನಾಟಕದಲ್ಲಿ ಕಾಲೇಜುಗಳ ಸಂಖ್ಯೆ ಜಾಸ್ತಿಯಾಯಿತು. ಅವುಗಳಲ್ಲಿ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ನಾಟಕ ಪ್ರದರ್ಶನಗಳು ಮೊದಲಾದವು. ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರದ ಅಧೀನಕ್ಕೊಳಪಟ್ಟು ಸ್ಥಾಪನೆಯಾದ ನಾಟ್ಯ ಸಂಘ ಥಿಯೇಟರ್ ಸಂಸ್ಥೆಯು, ಅಂತರ ಕಾಲೇಜು ನಾಟಕ ಸ್ಪರ್ಧೆಗೆ ವೇದಿಕೆಯನ್ನು ಸೃಷ್ಟಿಸಿತು. ಈ ನೆಲೆಯಲ್ಲಿ ಕಾಲೇಜಿನ ರಂಗ ಚಟುವಟಿಕೆಗಳು ಇನ್ನಷ್ಟು ವ್ಯಾಪಕವಾಯಿತು. ಕರಾವಳಿಯ ಉಡುಪಿಯ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಇದರೊಂದಿಗೆ ಮಂಗಳೂರಿನ ಮಾನಸ ಗಂಗೋತ್ರಿಯ ಹಿಮಕರ ನಾಟಕ ಸಂಘ, ಉಡುಪಿಯ ಪೂರ್ಣಪ್ರಜ್ಞ ಕಾಲೇಜು, ಕೊಡಗು ಜಿಲ್ಲೆ ಗೋಣಿಕೊಪ್ಪಲಿನ ಕಾವೇರಿ ಕಾಲೇಜು, ಚಿತ್ರಕಲಾ ಪರಿಷತ್ತು, ಎಂ ಇ ಎಸ್ ಕಾಲೇಜು, ನ್ಯಾಷನಲ್ ಕಾಲೇಜುಗಳು ಮುಖ್ಯವಾಗುತ್ತವೆ.

ನಾಟ್ಯ ಸಂಘದ ನೇತೃತ್ವದಲ್ಲಿ 1950ರಿಂದ ಬೆಂಗಳೂರಿನಲ್ಲಿ ಆರಂಭಿಸಿದ ಉಲ್ಲಾಳ್‌ಶೀಲ್ಡ್ ಕಾಲೇಜು ನಾಟಕ ಸ್ಪರ್ಧೆಯು ಕಾಲೇಜುಗಳಲ್ಲಿ ಅತ್ಯುತ್ತಮ ನಾಟಕಗಳ ಹುಟ್ಟಿಗೆ ಕಾರಣವಾಯಿತು. ನಾಟಕ ಚಟುವಟಿಕೆಯನ್ನು ಇದು ತೀವ್ರಗೊಳಿಸಿತು.

ಈ ಮಧ್ಯೆ ಬಂದು ಹೋದದ್ದೇ ಅಸಂಗತ ನಾಟಕ ಪರಂಪರೆ. ಬೆಂಗಳೂರಿನ ರಂಗತಂಡಗಳಲ್ಲದೇ ಮೈಸೂರು, ಧಾರವಾಡಗಳಲ್ಲೂ ಅಸಂಗತ ನಾಟಕಗಳ ಪ್ರಯೋಗ–ಚರ್ಚೆ ಕೆಲಕಾಲ ನಡೆಯಿತು. ಚಂದ್ರಕಾಂತ ಕುಸನೂರು, ನ.ರತ್ನ, ಚಂದ್ರಶೇಖರ ಪಾಟೀಲರ ಅಸಂಗತ ನಾಟಕಗಳು ಯಶಸ್ವಿಯಾದವು. ಆದರೆ ಅಸಂಗತ ನಾಟಕಗಳ ಪರಂಪರೆ ಬಹುಕಾಲ ಬಾಳಲಿಲ್ಲ.

ಕನ್ನಡ ಕಲಾಸಂಘ ಬೆಂಗಳೂರಿನಲ್ಲೂ ಶ್ರೀರಂಗರ ನಾಟಕಗಳ ಪ್ರದರ್ಶನಕ್ಕೆ ವೇದಿಕೆಯೊದಗಿಸಿಕೊಟ್ಟಿತು. 1956ರಲ್ಲಿ ಶ್ರೀರಂಗರು ಬೆಂಗಳೂರಿಗೆ ಬಂದು ನೆಲೆಸಿದರು. ಹರಿತ ಸಂಭಾಷಣೆಯ, ಬುದ್ಧಿ ಪ್ರಧಾನವಾದ ಅವರ ನಾಟಕಗಳು ಆ ನಂತರದಿಂದ ಬೆಂಗಳೂರಿನಲ್ಲಿ ಹೆಚ್ಚಾಗಿ ಪ್ರದರ್ಶನಗೊಂಡವು. ಶ್ರೀರಂಗರು ರಂಗಶಿಕ್ಷಣಕ್ಕೆ ಒತ್ತು ನೀಡಿ ಆ ನಿಟ್ಟಿನಲ್ಲಿ ಒಂದು ಪರಿಪಾಠ ಹಾಕಿಕೊಟ್ಟದ್ದು, ಅವರು ನಾಟಕಗಳಿಗೆ ನೀಡಿದ ಕೊಡುಗೆಗಿಂತ ದೊಡ್ಡದು. ಮೊದಲ ಬಾರಿಗೆ ಶಿಕ್ಷಕರಿಗೆ ರಂಗ ತರಬೇತಿ ಕಾರ್ಯಾಗಾರ ಏರ್ಪಡಿಸಿದರು. ದೆಹಲಿಯಲ್ಲಿ ಅದೇ ತಾನೇ ಆರಂಭವಾಗಿದ್ದ ರಾಷ್ಟ್ರೀಯ ನಾಟಕ ಶಾಲೆಗೆ (1959) ಕರ್ನಾಟಕದಿಂದ ಹೆಚ್ಚು ಜನ ಸೇರಿಕೊಳ್ಳುವಂತೆ ಒತ್ತಾಯಿಸಿದರು. ಭರತನ ನಾಟ್ಯಶಾಸ್ತ್ರದ ಅನುವಾದದ ಜತೆಗೆ, ಭಾರತೀಯ ರಂಗಭೂಮಿಯ ಪರಿಚಯವನ್ನು ಅವರ ಕೃತಿಗಳು ಹಾಗೂ ಸಂಪಾದಿತ ಕೃತಿಗಳು ಕಟ್ಟಿಕೊಡುತ್ತವೆ. ನಾಟಕಗಳ ಪ್ರಯೋಗಗಳಿಗೆ ಬೇಕಾದ ಬೌದ್ಧಿಕ ಪರಿಸರವನ್ನು ಕಟ್ಟಿಕೊಡುವಲ್ಲಿ ಅವರ ಕೊಡುಗೆ ಗಣನೀಯವಾದುದು.

ನಾಟಕದಲ್ಲಿ ಅಭಿನಯದ ಜತೆ ಬೆಳಕು ರಂಗಪರಿಕರವನ್ನು ಹೆಚ್ಚಿನ ಶಿಸ್ತಿಗೆ ಒಳಪಡಿಸಿದ ಬಿ. ಚಂದ್ರಶೇಖರ್ (ಬಿಸಿ) ಅವರ ಪ್ರಯತ್ನಗಳ ಅನಂತರ ನಾಣಿ, ಆರ್. ನಾಗೇಶ್, ಎಲ್. ಕೃಷ್ಣಪ್ಪನಂತಹ ನೇಪಥ್ಯಕರ್ಮಿಗಳು ಹೆಚ್ಚು ಕ್ರಿಯಾಶೀಲರಾದರು. ರಾಷ್ಟ್ರೀಯ ನಾಟಕಶಾಲೆಯ ಪದವಿ ಪಡೆದ ನಂತರ ಹಿಂದೀ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ಬಿ.ವಿ. ಕಾರಂತರನ್ನು ಕರೆಸಿ(1969) ಅವರಿಂದ 'ಏವಂ ಇಂದ್ರಜಿತ್' ನಾಟಕ ಪ್ರಯೋಗಿಸಲಾಯಿತು. ರಾಷ್ಟ್ರೀಯ ನಾಟಕ ಶಾಲೆಯ ಮೊದಲ ತಂಡದಲ್ಲಿ ಅಭ್ಯಾಸ ಮಾಡಿದ ಜಿ.ವಿ. ಶಿವಾನಂದ, ವಿ. ರಾಮಮೂರ್ತಿ, ಕಾರಂತರು ತಮ್ಮ ಹೊಸ ಚಿಂತನೆಗಳಿಗೆ ಬೆಂಗಳೂರನ್ನು ವೇದಿಕೆ ಮಾಡಿಕೊಂಡರು. ಬೆಂಗಳೂರಿಗೆ ಸ್ಪಾಟ್‌ಲೈಟ್‌ಗಳ ಬಳಕೆ ಬಂದಾಗ ಅದನ್ನು ಮೊದಲು ಮೆಡಿಕೋಸ್ ತಂಡದವರು ಬಳಸಿದರು. ಅಲ್ಲಿಂದ ಮುಂದೆ ಬೆಂಗಳೂರಿನ ಹವ್ಯಾಸಿ ರಂಗಭೂಮಿ ತಾಂತ್ರಿಕವಾಗಿ ಅಪಾರ ಪ್ರಗತಿ ಸಾಧಿಸಿತು.

ಬೆಂಗಳೂರಿನಲ್ಲಿ ಕೈಗಾರಿಕೆಗಳ ಆಡಳಿತಮಂಡಳಿಯವರು ಸ್ವತಃ ನಾಟಕಗಳ ಬೆಂಬಲಕ್ಕೆ ನಿಂತದ್ದು ಮತ್ತೊಂದು ಬೆಳವಣಿಗೆ. ಕಾರ್ಖಾನೆಯ ಕಾರ್ಮಿಕರು ನಾಟಕ ಸಂಘಗಳನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದರಷ್ಟೇ ಅಲ್ಲ. ನಾಟಕಗಳಿಗೆ ಪ್ರಾಯೋಜಕತ್ವವನ್ನೂ ನೀಡಿದರು. ಅನ್ಯನಿಮಿತ್ತ ರಜೆ, ಪಾಳಿ ಕೆಲಸದ ವೇಳೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಸಹಕರಿಸಿದರು. ಮಾಲೀಕರು ನೀಡಿದ ಈ ಸೌಲಭ್ಯ ಬಳಸಿಕೊಂಡು ಬಿನ್ನಿಮಿಲ್, ಕಿರ್ಲೋಸ್ಕರ್, ಬಿಇಎಲ್, ಎಚ್‌ಎಎಲ್, ಎಚ್‌ಎಂಟಿ, ಐಟಿಐ, ಬಿಇಎಂಎಲ್, ಎನ್‌ಜಿಇಎಫ್‌ಗಳಲ್ಲಿ ನಾಟಕ ತಂಡಗಳು ಹುಟ್ಟಿಕೊಂಡವು.

1972ರಲ್ಲಿ ರವೀಂದ್ರ ಕಲಾಕ್ಷೇತ್ರದ ಬಯಲುರಂಗಮಂದಿರದಲ್ಲಿ ಏರ್ಪಡಿಸಿದ್ದ ಬಯಲು ನಾಟಕೋತ್ಸವ ಹವ್ಯಾಸಿ ರಂಗಭೂಮಿ ಬೆಳವಣಿಗೆಯಲ್ಲಿ ಒಂದು ಪ್ರಮುಖ ಘಟ್ಟ. ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ನವ್ಯದ ಉಚ್ಛ್ರಾಯ ಕಾಲ ಅದು. ಕನ್ನಡ ಸಾಹಿತ್ಯ ಪ್ರಪಂಚಕ್ಕೆ

ನವ್ಯ ಪಂಥ ಬಂದ ಹತ್ತು ವರ್ಷಗಳ ಅನಂತರ ಅದು ನಾಟಕಕ್ಕೆ ಬಂತು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಜಿ.ಎಸ್. ಶಿವರುದ್ರಪ್ಪ ಅವರು ಏರ್ಪಡಿಸಿದ್ದ ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ ವಿಚಾರ ಸಂಕಿರಣ ಇದಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಟ್ಟಿತು. ಇಲ್ಲಿ ಪ್ರದರ್ಶನಗೊಂಡ ಕಂಬಾರರ ಜೋಕುಮಾರಸ್ವಾಮಿ, ಲಂಕೇಶರ ಸಂಕ್ರಾಂತಿ ಹಾಗೂ ಅವರೇ ಅನುವಾದಿಸಿದ ಈಡಿಪಸ್ ನಾಟಕ ಕನ್ನಡ ರಂಗಭೂಮಿಯಲ್ಲಿ ಹೊಸ ಸಂಚಲನ ಉಂಟುಮಾಡಿತು. ಮೂರೂ ನಾಟಕಗಳನ್ನು ನಿರ್ದೇಶಿಸಿದ ಕಾರಂತರು ಸಂಗೀತ, ನೃತ್ಯಗಳಿಂದ ನಾಟಕವನ್ನು ಮತ್ತೆ ಕಳೆಗಟ್ಟಿಸಬಹುದಾದ ಸೂಚನೆ ನೀಡಿದರೆ, ಈ ಉತ್ಸವದ ಯಶಸ್ಸಿನ ಸೂತ್ರಧಾರರಾಗಿ ಲಂಕೇಶ್ ಕೆಲಸ ಮಾಡಿದರು.

ಟಿಕೆಟ್ ತೆಗೆದುಕೊಂಡು ನಾಟಕ ನೋಡುವ ಪರಿಪಾಠ ಹವ್ಯಾಸಿ ರಂಗಭೂಮಿಯಲ್ಲಿ ಗಟ್ಟಿಯಾಗಿ ನೆಲೆಯೂರಿದ್ದು ಈ ಹಂತದಿಂದ. ಈ ಬಯಲು ನಾಟಕೋತ್ಸವದ ಮತ್ತೊಂದು ಪ್ರಮುಖ ಬೆಳವಣಿಗೆ ಎಂದರೆ ಯಾವುದೋ ಒಬ್ಬ ನಟ ಅಥವಾ ನಾಟಕಕಾರನ ಹಿಂದೆ ಇರುತ್ತಿದ್ದ ಕಲಾವಿದರು, ರಂಗಕರ್ಮಿಗಳು ಒಂದು ತಂಡದ ವ್ಯಾಪ್ತಿಗೆ ಬಂದರು. ನಿರ್ದೇಶಕನೂ ಪ್ರಮುಖ ಸ್ಥಾನ ಪಡೆದ. ಗಂಭೀರ ಕಥಾವಸ್ತು ಹಾಗೂ ಅದನ್ನು ಅಷ್ಟೇ ಆಕರ್ಷಕವಾಗಿ ರಂಗದ ಮೇಲೆ ತರುವ ಪ್ರಯತ್ನಗಳು ತೀವ್ರಗೊಂಡವು. ಬೆನಕ, ರಂಗಸಂಪದ, ಅಂತರಂಗ, ಕಲಾಗಂಗೋತ್ರಿ, ರಂಗ ಸಂಪದ, ನಟರಂಗದಂತಹ ನಾಟಕ ತಂಡಗಳು ಈ ಹಂತದಿಂದ ಪ್ರಾಮುಖ್ಯತೆ ಗಳಿಸಿಕೊಂಡವು. ಸತ್ತವರ ನೆರಳು, ಕದಡಿದ ನೀರು, ಸಂಗ್ಯಾ ಬಾಳ್ಯಾ, 'ಹರಕೆಯ ಕುರಿ', 'ಯಯಾತಿ', 'ಹ್ಯಾಮ್ಲೆಟ್', 'ಒಡಲಾಳ', 'ಮಹಾಚೈತ್ರ', ಸುಲ್ತಾನ ಟಿಪ್ಪು, ತುಘಲಕ್‌ನಂತಹ ವಿಶ್ವದ ಯಾವುದೇ ಶ್ರೇಷ್ಠ ನಾಟಕಗಳನ್ನು ಸರಿಗಟ್ಟುವಂತಹ ನಾಟಕಗಳು ರಂಗದ ಮೇಲೆ ಬಂದವು.

1975ರಲ್ಲಿ ಜನ್ಮ ತಾಳಿದ ಸಮುದಾಯ ತಂಡವು ನಾಟಕವನ್ನು ಮಧ್ಯಮವರ್ಗದಿಂದ ಶ್ರಮಜೀವಿಗಳ ಬಳಿಗೆ ಕೊಂಡೊಯ್ಯಿತು. ತಾಯಿ, ಗೆಲಿಲಿಯೋ, ಹುತ್ತವ ಬಡಿದರೆ, ಪಂಚಮ, ಬೆಲ್ಚಿ, ಏಕಲವ್ಯ, ದಂಗೆಯ ಮುಂಚಿನ ದಿನಗಳು ನಾಟಕಗಳು ದುಡಿಯುವ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸಿದವು.

ಬೀದಿ ನಾಟಕಗಳ ದೊಡ್ಡ ಆಂದೋಲನ ಈ ಹಂತದಲ್ಲಿ ನಡೆಯಿತು. ಚಿತ್ರಾ ತಂಡ ರಾಗ್ ಕಲಾವಿದರು ಬೀದಿ ನಾಟಕಗಳನ್ನು ಬೆಂಗಳೂರಿಗೆ ಪರಿಚಯಿಸಿದರೆ, ಸಮುದಾಯ ಅವನ್ನು ಮೂಲೆ ಮೂಲೆಗಳಿಗೆ ಕೊಂಡೊಯ್ದಿತು. ಸಮುದಾಯದ ರೈತನತ್ತ ಜಾಥಾದಂತಹ ರಾಜ್ಯವ್ಯಾಪಿ ಕಾರ್ಯಕ್ರಮಗಳು ಬೀದಿನಾಟಕವನ್ನು ಮನೆ ಮಾತಾಗಿಸಿತು.

ಸಮುದಾಯ ಬೆಂಗಳೂರಿನಲ್ಲಿ ಸಂಘಟಿಸಿದ್ದ ರಂಗ ತರಬೇತಿ ಕಾರ್ಯಾಗಾರವನ್ನು ಬಾದಲ್ ಸರ್ಕಾರ್ ನಡೆಸಿಕೊಟ್ಟ(1979) ಮೇಲೆ ಬೀದಿ ನಾಟಕಕ್ಕೆ ಒಂದು ಸೈದ್ಧಾಂತಿಕ ಸ್ವರೂಪ ಪ್ರಾಪ್ತವಾಯಿತು. ಮುಂದೆ ಇಲ್ಲಿನ ಎಲ್ಲ ಜನಪರ ಚಳವಳಿಗೆ ಬೀದಿ ನಾಟಕಗಳನ್ನು ಬಳಸಿಕೊಳ್ಳಲಾಯಿತು. ತುರ್ತುಪರಿಸ್ಥಿತಿಯನ್ನು ಘೋಷಿಸಿ, ಪ್ರಜಾಸತ್ತೆಯ ಕತ್ತು ಹಿಚುಕಿದ ಕಾರಣಕ್ಕೆ ಇಂದಿರಾ ಗಾಂಧಿ ಮೇಲೆ ಜನತೆಗೆ ಅಪಾರವಾದ ಸಿಟ್ಟಿದ್ದ ಕಾಲಘಟ್ಟ ಅದು. ಅದರ ಬೆನ್ನಿಗೇ ಇಂದಿರಾಗಾಂಧಿ ಚಿಕ್ಕಮಗಳೂರಿಗೆ ಬಂದು ಲೋಕಸಭೆಗೆ ಸ್ಪರ್ಧಿಸಿದರು. ಇಂದಿರಾ ವಿರುದ್ಧ ಬೀದಿ ನಾಟಕಗಳ ಆಂದೋಲನವೇ ನಡೆಯಿತು.

ಕನ್ನಡ ಹವ್ಯಾಸಿ ರಂಗಭೂಮಿಯ ಮುಂದಿನ ದಿನಗಳು ಪ್ರಯೋಗಶೀಲತೆ ಮತ್ತಷ್ಟು ತೀವ್ರಗೊಂಡ ಕಾಲ. ಪ್ರತಿ ಪ್ರಯೋಗದ ಅನಂತರ ಹುಟ್ಟಿಕೊಳ್ಳುತ್ತಿದ್ದ ಹೊಸ ಸವಾಲುಗಳಿಗೆ ಪರಿಹಾರವನ್ನು ಹುಡುಕುವ ದಾರಿಯಲ್ಲಿ ಮತ್ತಷ್ಟು ಒಳ್ಳೆಯ ಪ್ರಯೋಗಗಳೇ ಮೂಡಿಬಂದವು. ಕನ್ನಡದಲ್ಲಿ ನಾಟಕಗಳ ಕೊರತೆ ಎಂದಾಗ ಕತೆ, ಕಾದಂಬರಿಗಳನ್ನು ನಾಟಕಕ್ಕೆ ಅಳವಡಿಸಲಾಯಿತು. ಇಂತಹದೊಂದು ಪರಿಪಾಠ ಕಳೆದ ನಾಲ್ಕು ದಶಕಗಳ ಕಾಲ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ.

ಕನ್ನಡದ ಬಹುಮುಖ್ಯ ಕತೆ, ಕಾದಂಬರಿಗಳು (ಲಂಕೇಶರ ರೊಟ್ಟಿ, ಮುಸ್ಸಂಜೆಯ ಕಥಾ ಪ್ರಸಂಗ, ತೇಜಸ್ವಿಯವರ ತಬರನ ಕತೆ, ಕೃಷ್ಣೇಗೌಡನ ಆನೆ, ಕುಂ. ವೀರಭದ್ರಪ್ಪನವರ ಬೇಲಿ ಮತ್ತು ಹೊಲ–ಇತ್ಯಾದಿ) ನಾಟಕಗಳಾಗಿ ಕಳೆಕಟ್ಟಿದವು.

ನಾಟಕಗಳಲ್ಲಿ ಬರೀ ಮಾತಾಯಿತು. ನೀರಸವಾಯಿತು ಎನಿಸಿದಾಗ ಹಾಡು, ನೃತ್ಯಗಳಿಂದ ಸಮೃದ್ಧಗೊಳಿಸಲಾಯಿತು. ಗುಬ್ಬಿ ಕಂಪನಿ ಹಿನ್ನೆಲೆಯ ಕಾರಂತರೇ ಸಂಗೀತ ಪ್ರಧಾನ ನಾಟಕಗಳಿಗೆ ನಾಂದಿ ಹಾಡಿಬಿಟ್ಟಿದ್ದರು. ಒಳ್ಳೆಯ ಹಾಡುಗಾರರಾದ ಬಿ ಜಯಶ್ರೀ ಸ್ಪಂದನ ತಂಡದ ಮೂಲಕ ಸಂಗೀತ, ಕುಣಿತ ಪ್ರಧಾನವಾದ ಜಾನಪದ ನಾಟಕಗಳ ಪ್ರತೀತಿಯನ್ನು ಹುಟ್ಟುಹಾಕಿದರು. ಲಕ್ಷಾಪತಿ ರಾಜನ ಕತೆ, ಕರಿಮಾಯಿ, ಚಿತ್ರಪಟ ರಾಮಾಯಣ ಜಾನಪದ ಸೊಗಡಿನ ನಾಟಕಗಳು.

ಸಿ.ಆರ್. ಸಿಂಹ, ಮುಖ್ಯಮಂತ್ರಿ ಚಂದ್ರು, ಏಣಗಿ ನಟರಾಜ, ಹುಲುಗಪ್ಪ ಕಟ್ಟೀಮನಿ, ಉಷಾಭಂಡಾರಿ, ಮಂಜುನಾಥ ಬೆಳಕೆರೆಯಂತಹ ಅಪ್ರತಿಮ ನಟರ ಪಡೆ ನಿರ್ಮಾಣ ವಾಯಿತು. ಮೂಕಾಭಿನಯದಲ್ಲಿ ವಿ. ರಾಮಮೂರ್ತಿ, ಜಿ.ವಿ. ಶಿವಾನಂದ, ವಾಲ್ಟರ್ ಡಿಸೋಜ. ಬಿ.ವಿ. ರಾಜಾರಾಂ ಮಾಡಿದ ಸಾಧನೆ, ಏಕವ್ಯಕ್ತಿ ನಾಟಕ ಪ್ರದರ್ಶಗಳಲ್ಲಿ ಸಿ.ಆರ್. ಸಿಂಹ (ಟಿಪಿಕಲ್ ಟಿ.ಪಿ. ಕೈಲಾಸಂ, ಬಿ. ಜಯಶ್ರೀ(ಉರಿಯ ಉಯ್ಯಾಲೆ), ಕೃಷ್ಣಮೂರ್ತಿ ಕವತ್ತಾರ್(ಸಾಯುವನೇ ಚಿರಂಜೀವಿ), ಲಕ್ಷ್ಮೀ ಚಂದ್ರಶೇಖರ(ಹೆಣ್ಣಲ್ಲವೇ?), ಎನ್. ಮಂಗಳಾ(ಊರ್ಮಿಳಾ), ರಮಾನಂದಸ್ವಾಮಿ(ತುಘಲಕ್) ಅವರ ಸಾಧನೆ ಗಮನಾರ್ಹವಾದುದು.

ಮುಂಬಯಿನ ಪೃಥ್ವಿ ಥೇಟರ್ ಮಾದರಿಯಲ್ಲಿ ಅರುಂಧತಿ ನಾಗ್ ರಂಗಶಂಕರ ನಿರ್ಮಿಸಿದ್ದು, ನಂದನದಿಂದ ಸತತ ನೂರು ಗಂಟೆ ನಾಟಕ ಪ್ರದರ್ಶನ, ವಿಶ್ವರಂಗಭೂಮಿ ಆಚರಣೆ ಪರಿಪಾಠ–ಇವೆಲ್ಲ ಹವ್ಯಾಸಿ ರಂಗಭೂಮಿಯ ಕೆಲವು ಮೈಲುಗಲ್ಲುಗಳು.

ತಮ್ಮ ಅಸಾಧಾರಣ ರಂಗವಿನ್ಯಾಸದಿಂದ ಸುರೇಶ ಅನಗಳ್ಳಿ ಗಮನಾರ್ಹ ನಿರ್ದೇಶಕನೆನಿಸಿದರೆ, ಪಾತ್ರಗಳ ಚಲನ–ವಲನಕ್ಕೆ ತುಡಿಯುವ ಜೀವಂತಿಕೆ ನೀಡಿ ರಂಗದ ಮೇಲೆ ಅನನ್ಯ ಲವಲವಿಕೆಯನ್ನೇ ಉಂಟುಮಾಡುವ ಇಕ್ಬಾಲ್ ಅಹ್ಮದ್, ಪ್ರಯೋಗಕ್ಕೆ ವೈಭವದ ಮೆರುಗು ತರುವ ಬಸವಲಿಂಗಯ್ಯ, ಜನಪದ ರೂಪಕಗಳ ಮೂಲಕ ಸಂಸ್ಕೃತ ನಾಟಕಗಳಿಗೆ ಮರುಜೀವ ನೀಡಿರುವ ಗೋಪಾಲಕೃಷ್ಣ ನಾಯಿರಿ, ದೇಶೀ ರಂಗಭೂಮಿಯ ಹುಡುಕಾಟದಲ್ಲಿರುವ ರಘುನಂದನ, ಈಗಾಗಲೇ ತಮ್ಮ ಅತ್ಯುತ್ತಮ ರಂಗ ಪ್ರಯೋಗಗಳನ್ನು ನೀಡಿರುವ ಪ್ರಸನ್ನ, ಚಿದಂಬರರಾವ್ ಜಂಬೆ ಮೊದಲಾದವರು ಭರವಸೆದಾಯಕ ನಿರ್ದೇಶಕರಾಗಿದ್ದಾರೆ.

ನಿರ್ಲಕ್ಷ್ಯಕ್ಕೆ ಒಳಗಾದ ಕಥಾವಸ್ತು, ಅವಕಾಶ ವಂಚಿತರನ್ನು ರಂಗದ ಮೇಲೆ ತರುವ ಮೂಲಕ ಸಿ.ಜಿ. ಕೃಷ್ಣಸ್ವಾಮಿ (ಸಿಜಿಕೆ) ರಂಗಭೂಮಿಯ ಮೂಲಸ್ವರೂಪವಾದ ಜಾತ್ಯಾತೀತತೆಯನ್ನು ಪೋಷಿಸಿ–ಬೆಳೆಸಿದರು. ಹಲವಾರು ರಂಗಕರ್ಮಿಗಳನ್ನು ಅವರು ಬೆಳೆಸಿದರು. ಸಿದ್ಧ ನಾಟಕಗಳಿಗೆ ಕಟ್ಟುಬೀಳದೆ ಹತ್ತಾರು ಹೊಸ ನಾಟಕಗಳನ್ನು ಬರೆಯಿಸಿದ ಶ್ರೇಯಸ್ಸು ಅವರದು.

90ರ ದಶಕದಿಂದ ನಾಟಕಗಳಿಗೆ ಅತಿಹೆಚ್ಚು ಹೊಸಬರನ್ನು ಆಕರ್ಷಿಸಿದ ಕೆ.ವಿ. ನಾಗರಾಜಮೂರ್ತಿ ಮತ್ತೊಬ್ಬ ದೈತ್ಯ ಸಂಘಟಕ. ಪ್ರಯೋಗರಂಗ, ಭಾರತ ಯಾತ್ರಾಕೇಂದ್ರದ ಮೂಲಕ ಕಾಲೇಜು ನಾಟಕಗಳಿಗೆ ಮತ್ತೆ ಜೀವ ತುಂಬಿದ ಅವರು ಈ ಮೂಲಕ ಕಾಲೇಜುಗಳಿಂದ ಹಲವು ಪ್ರತಿಭೆಗಳು ರಂಗಮಂದಿರಕ್ಕೆ ಹರಿದು ಬರುವಂತೆ ಮಾಡಿದ್ದಾರೆ.

ಗಿರೀಶ್ ಕಾರ್ನಾಡ್, ಎಚ್.ಎಸ್. ಶಿವಪ್ರಕಾಶ್, ಜಿ.ವಿ. ಜೋಷಿ 70 ಹಾಗೂ 80ರ ದಶಕದ ನಾಟಕಗಳನ್ನು ಕಳೆಗಟ್ಟಿಸಿದ್ದರೆ, ಹೂಲಿ ಶೇಖರ್, ನಿಸರ್ಗಪ್ರಿಯ, ರಾಜೇಂದ್ರ ಕಾರಂತ ಇತ್ತೀಚಿನ ಭರವಸೆ ಮೂಡಿಸುವ ನಾಟಕಕಾರರು. ಮಕ್ಕಳ ರಂಗಭೂಮಿಯಲ್ಲಿ ಆಗಿರುವ ಕೆಲಸ ಕಡಿಮೆ. ಈ ಕೊರತೆಯನ್ನು ನೀಗಲು ಬೆನಕ, ಬಿಂಬ, ರಂಗಕಹಳೆಯಂತಹ ತಂಡಗಳ ಮೂಲಕ ಪ್ರೇಮಾ ಕಾರಂತ, ಎನ್ ಎಸ್ ವೆಂಕಟರಾಂ, ಮಾಧವರಾವ್, ಸಿ ಲಕ್ಷ್ಮಣ, ಇಕ್ಬಾಲ್ ಅಹ್ಮದ್ ಮೊದಲಾದವರು ಗಣನೀಯ ಕೆಲಸ ಮಾಡಿದ್ದಾರೆ.

ರಂಗಭೂಮಿಯ ಇತಿಹಾಸವನ್ನು ದಾಖಲಿಸುವ ಪ್ರಯತ್ನಗಳು ಯಶಸ್ವಿಯಾಗಿ ಆಗಿಲ್ಲ. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ರಂಗಭೂಮಿ ಕುರಿತೇ ಹುಟ್ಟಿಕೊಂಡ ಕೆಲವು ಪತ್ರಿಕೆಗಳು ಈ ಕೆಲಸವನ್ನು ಸ್ವಲ್ಪಮಟ್ಟಿಗೆ ಮಾಡಿವೆ. ಎಸ್.ವಿ. ವೆಂಕಟಸುಬ್ಬಯ್ಯ ನಂತಹವರು ವೈಯಕ್ತಿಕ ಮಟ್ಟದಲ್ಲಿ ದಾಖಲೀಕರಣದ ಕೆಲಸ ಮಾಡಿದ್ದಾರೆ.

ರಂಗಭೂಮಿಯ ಇತಿಹಾಸವನ್ನು ದಾಖಲಿಸುವ ಪ್ರಯತ್ನಗಳು ಯಶಸ್ವಿಯಾಗಿ ಆಗಿಲ್ಲ. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ರಂಗಭೂಮಿ ಕುರಿತೇ ಹುಟ್ಟಿಕೊಂಡ ಕೆಲವು ಪತ್ರಿಕೆಗಳು ಈ ಕೆಲಸವನ್ನು ಸ್ವಲ್ಪಮಟ್ಟಿಗೆ ಮಾಡಿವೆ. ಎಸ್.ವಿ. ವೆಂಕಟಸುಬ್ಬಯ್ಯ ನಂತಹವರು ವೈಯಕ್ತಿಕ ಮಟ್ಟದಲ್ಲಿ ದಾಖಲೀಕರಣದ ಕೆಲಸ ಮಾಡಿದ್ದಾರೆ.

ನವ್ಯ ಸಾಹಿತ್ಯ ಸಂದರ್ಭದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ವೃತ್ತಿ, ಗ್ರಾಮೀಣ ನಾಟಕಗಳ ದಾಖಲೆ, ವಿಶ್ಲೇಷಣೆ ಇತ್ತೀಚಿನ ಕೆಲವರ್ಷಗಳಿಂದಷ್ಟೇ ಆರಂಭವಾಗಿದೆ. ಇವುಗಳನ್ನು ಆಧರಿಸಿ ರಂಗ ಇತಿಹಾಸ ಕಟ್ಟಬೇಕಾಗಿದೆ. ಹವ್ಯಾಸಿ ನಾಟಕ ಚಟುವಟಿಕೆಗಳ ದಾಖಲೆ, ಚರ್ಚೆಗೆಂದೇ ಕಾಲಕಾಲಕ್ಕೆ ಪತ್ರಿಕೆಗಳು ಜನ್ಮ ತಾಳಿವೆ. ರಂಗಭೂಮಿ, ನಾಂದಿ, ಮುಕ್ತ, ನಟನ, ಛಾಯಾ, ಸಮುದಾಯ ವಾರ್ತಾಪತ್ರ, ಬೀದಿ, ಈ ಮಾಸ ನಾಟಕ, 'ರಂಗತೋರಣ', 'ರಂಗವಾಣಿ' ಇವುಗಳಲ್ಲಿ ಪ್ರಮುಖವಾದವುಗಳು.

ಹಳೇ ಮೈಸೂರಿನಲ್ಲಿ ಹವ್ಯಾಸಿ ರಂಗಭೂಮಿಯ ದೀರ್ಘ ಇತಿಹಾಸವಾಗಲೀ ಪ್ರಯೋಗಶೀಲತೆಯಲ್ಲಾಗಲೀ ಆದ್ಯತೆ ಇರುವುದು ಬೆಂಗಳೂರು ನಗರಕ್ಕೆ, ಅನಂತರದ ಸ್ಥಾನ ಮೈಸೂರಿಗೆ.

**ಮೈಸೂರು :** ಮೈಸೂರು ನಗರದಲ್ಲಿ 1919ರಲ್ಲಿ ಟಿ. ಲಕ್ಷ್ಮಣಯ್ಯ ನೇತೃತ್ವದಲ್ಲಿ ಪ್ರಾರಂಭವಾದ ದಿ ಲಿಟರರಿ ಅಂಡ್ ಡ್ರಮಾಟಿಕ್ ಅಸೋಸಿಯೇಷನ್ 1944ರವರೆಗೂ ಕಾರ್ಯಶೀಲವಾಗಿತ್ತು. ಮಹಾರಾಜ ಕಾಲೇಜಿನ ಯಾಕೂಬ್ಸ್, ಮಿತ್ರಮೇಳ, ಕರ್ನಾಟಕ ಸಂಘ ಹವ್ಯಾಸಿ ರಂಗಭೂಮಿಗೆ ಉತ್ತಮ ನಟರನ್ನು ನೀಡಿತು. ಸಂಪತ್ (ಚೆಲುವಯ್ಯಂಗಾರ್) ನೇತೃತ್ವದ ಸ್ವಾಮ್ಸ್ ಲಿಟಲ್ ಥಿಯೇಟರ್ ಕೊಡುಗೆ ಕೂಡ ಗಣನೀಯ.

ಇಲ್ಲಿನ ಹಳೆಯ ಹವ್ಯಾಸಿ ತಂಡವೆಂದರೆ ಅಮರ ಕಲಾಸಂಘ. ವಾಸು (ವಾಸುದೇವಮೂರ್ತಿ) ಆರಂಭಿಸಿದ ಈ ರಂಗತಂಡ ಸಾಕ್ರೆಟಿಸ್, ಭ್ರಮೆ, ತುಘಲಕ್, ಹಾವು ಹರಿದಾಡತಾವ–ಮುಂತಾದ ಎಲ್ಲ ರೀತಿಯ ನಾಟಕಗಳನ್ನು ಪ್ರದರ್ಶಿಸುತ್ತ ಬಂದಿದೆ. ಸರಳ ಹಾಗೂ ಖುಷಿ ಕೊಡುವ ನಾಟಕಗಳಿಗೆ ಇದು ಆದ್ಯತೆ ನೀಡಿದೆ. ಸಿಂಧುವಳ್ಳಿ ಅನಂತಮೂರ್ತಿ ಆರಂಭಿಸಿದ ಸಮತೆಂತೋ (ಸರಸ್ವತಿಪುರದ ಮಧ್ಯದ ತೆಂಗಿನ ತೋಟ) ಎಲ್ಲರಂತವನಲ್ಲ ನನಗಂಡ, ಹುಯ್ಯಲವೋ ಡಂಗುರವ, ಘಾಸಿರಾಂ ಕೊತ್ವಾಲ ಮುಂತಾದ ನಾಟಕಗಳನ್ನು ಅಭಿನಯಿಸುತ್ತ ಬಂದಿದೆ. ಕಲಾಪ್ರಿಯ, ನಾಟ್ಯರಂಗ, ಅಂತರಂಗ, ಸ್ನೇಹಸಂಪದ ಇಲ್ಲಿನ ಮತ್ತೆ ಕೆಲವು ತಂಡಗಳು. ರಾಜಶೇಖರ ಕದಂಬರ ಕದಂಬ ರಂಗವೇದಿಕೆ ವೃತ್ತಿ, ಆಧುನಿಕ ಶೈಲಿಯ ಎಲ್ಲ ರೀತಿಯ ನಾಟಕಗಳನ್ನು ಪ್ರದರ್ಶಿಸಿದೆ. ಹಲವು ನಾಟಕ ಪ್ರದರ್ಶನಗಳಿಗೆ ವೇದಿಕೆ ಒದಗಿಸಿಕೊಟ್ಟಿದೆ.

ಅತಿ ಹೆಚ್ಚು ಬೀದಿ ನಾಟಕ ಪ್ರದರ್ಶಿಸಿದ ತಂಡ ಹೆಜ್ಜೆಗೆಜ್ಜೆ, ರಮಾನಂದ, ಶಿವಕುಮಾರ, ಉದಯಕುಮಾರ ಈ ತಂಡದ ಮೂಲಕ ರಾಜ್ಯದ ಹಲವೆಡೆ ಬೀದಿ ನಾಟಕ ಅಭಿಯಾನ ಕೊಂಡೊಯ್ದಿದ್ದಾರೆ.

ಮಂಗಳೂರಿನ ಅಭಿವ್ಯಕ್ತಿ ತಂಡ ನಾಟಕೋತ್ಸವ, ರಂಗ ತರಬೇತಿಗಳಿಗೆ ಆದ್ಯತೆ ನೀಡಿದೆ. ಮಕ್ಕಳ ರಂಗಭೂಮಿಗೆ ತನ್ನನ್ನು ತೊಡಗಿಸಿಕೊಂಡಿದೆ. ಉಡುಪಿಯ ರಥಬೀದಿ ಗೆಳೆಯರು, ಸಮುದಾಯ ಕಲಾವಿದರು ಅಲ್ಲಿನ ಹವ್ಯಾಸಿ ಚಟುವಟಿಕೆಯನ್ನು ಜೀವಂತವಾಗಿಟ್ಟಿದ್ದರೆ, ರಂಗಭೂಮಿ ತಂಡ ಕಳೆದ ಎರಡು ದಶಕಗಳಿಂದ ನಿರಂತರವಾಗಿ ರಾಜ್ಯಮಟ್ಟದ ನಾಟಕ ಸ್ಪರ್ಧೆಯನ್ನು ಏರ್ಪಡಿಸುತ್ತ ಬಂದಿದೆ. ಕರ್ನಾಟಕದ ಎಲ್ಲ ಭಾಗಗಳಿಂದ ಅದರಲ್ಲೂ ಹೆಚ್ಚಾಗಿ ಹಳೇ ಮೈಸೂರಿನ ಬಹುತೇಕ ಹವ್ಯಾಸಿ ನಾಟಕ ತಂಡಗಳು ಇದರಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಗೆದ್ದುಕೊಂಡಿವೆ. ಆನಂದ ಗಾಣಿಗ ಈ ತಂಡಕ್ಕೆ ತಮ್ಮನ್ನು ಸಮರ್ಪಿಸಿಕೊಂಡು ದುಡಿಯುತ್ತಿರುವ ರಂಗಕರ್ಮಿ.

ಮಾಸೂರರ ನೇತೃತ್ವದ ಸಾಗರದ ಉದಯ ಕಲಾವಿದರು ಶ್ರೀರಂಗರ ನಾಟಕ ಪ್ರದರ್ಶನಕ್ಕೆಂದೇ ಮೀಸಲಾಗಿರುವ ತಂಡ. ಶ್ರೀರಂಗರ ಬಹುತೇಕ ಎಲ್ಲ ನಾಟಕಗಳ ಪ್ರದರ್ಶನ, ಮರು ಪ್ರದರ್ಶನಗಳನ್ನು ಈ ತಂಡ ಮಾಡುತ್ತಲೇ ಬಂದಿದೆ.

ಬೆಂಗಳೂರು, ಮೈಸೂರಂತಹ ಕಡೆಯ ಪ್ರಯೋಗಶೀಲತೆಯನ್ನು ಅರಗಿಸಿಕೊಂಡು ವೃತ್ತಿ ಶೈಲಿಯ ಹಳೇ ನಾಟಕಗಳಿಂದ ಹಿಡಿದು ಹೊಸ ನಾಟಕಗಳನ್ನು ಕಾಸರಗೋಡಿನ ಯವನಿಕಾ, ಮಂಡ್ಯದ ಗೆಳೆಯರ ಬಳಗ, ಜನದನಿ, ಶಿವಮೊಗ್ಗದ ಅಭಿನಯ, ದೊಡ್ಡ ಬಳ್ಳಾಪುರದ ನಟ ಗಂಗೋತ್ರಿ, ಭದ್ರಾವತಿಯ ನವೋದಯ ಕಲಾಸಂಘ, ವಿಕಸಂ ಕಲಾವಿದರು, ಶ್ರೀರಾಮ ಕಲಾವಿದರು, ಹಾಸನದ ಅಭಿನಯ, ರಂಗಸಿರಿ, ಸಕಲೇಶಪುರ ತಾಲ್ಲೂಕು ಬೆಳ್ಳೇಕೆರೆಯ ಜೈ ಕರ್ನಾಟಕ ಸಂಘ, ದಾವಣಗೆರೆಯ ಪ್ರತಿಮಾ, ತುಮಕೂರಿನ ಶೃಂಗರಂಗ, ಅಮರೇಶ್ವರ ವಿಜಯ ನಾಟ್ಯ ಸಂಘ, ಚಿಕ್ಕಮಗಳೂರಿನ ರಂಗಶ್ರೀ, ಕೆಳದಿಯ ಭಾರತಿ ಕಲಾವಿದರು, ಸಿರಿಗೆರೆಯ ತರಳುಬಾಳು ಕಲಾಸಂಘ, ಸಾಣೇಹಳ್ಳಿಯ ಶಿವಕುಮಾರ ಕಲಾಸಂಘ, ಸಕಲೇಶಪುರ, ನಾಗಮಂಗಲ ತಂಡಗಳನ್ನು ಪ್ರಮುಖವಾಗಿ ಹೆಸರಿಸಬಹುದು.

ಬೆಂಗಳೂರಿನ ಹೊರಗೆ ನಟರಾಗಿ, ಸಂಘಟಕರಾಗಿ ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಟ್ಟವರ ಪೈಕಿ ಭದ್ರಾವತಿಯ ಶಾಮಮೂರ್ತಿ, ಮೈಸೂರಿನ ರಾಜಶೇಖರ ಕದಂಬ, ದಾವಣಗೆರೆಯ ಎಸ್ ಹಾಲಪ್ಪ, ಮಂಡ್ಯದ ಜಯಪ್ರಕಾಶಗೌಡ, ಶಿವರಾಂ, ಮಂಡ್ಯ ರಮೇಶ್, ಸಿರಿಗೆರೆಯ ಮೌನೇಶಾಚಾರ್, ಪಂಡಿತಾರಾಧ್ಯ ಸ್ವಾಮೀಜಿ ಮೊದಲಾದವರು ಎದ್ದು ಕಾಣುತ್ತಾರೆ.

ದಕ್ಷಿಣ ಕರ್ನಾಟಕದ ಹವ್ಯಾಸಿ ರಂಗ ಚಟುವಟಿಕೆ ಹಲವು ರಂಗಶಾಲೆಗಳ ಹುಟ್ಟಿಗೆ ಕಾರಣವಾಯಿತು. ಬೆಂಗಳೂರಿನ ಅಭಿನಯ ತರಂಗ, ಹೆಗ್ಗೋಡಿನ ನೀನಾಸಂ ರಂಗಶಾಲೆಗಳ ಜತೆಗೆ ಚಿತ್ರದುರ್ಗದ ಮುರುಘಾಮಠ ಶಿಕ್ಷಣ ಸಂಸ್ಥೆ, ಬೆಂಗಳೂರಿನ ಎಂಇಎಸ್ ಕಾಲೇಜು ಶಿಕ್ಷಣ ಸಂಸ್ಥೆ ಮುಂತಾದವು ನಾಟಕ ಡಿಪ್ಲೊಮಾ ತರಗತಿಗಳನ್ನು ಆರಂಭಿಸಿ ಹಲವು ಆಸಕ್ತರು ನಾಟಕದಲ್ಲಿ ತರಬೇತಿ ಪಡೆಯಲು ಕಾರಣವಾಗಿದೆ. 80–90ರ ದಶಕದಲ್ಲಿ ಹಳೇ ಮೈಸೂರಿನಲ್ಲಿ ಎರಡು ಪ್ರಮುಖ ರೆಪರ್ಟರಿ (ಸಂಚಾರಿ ವೃತ್ತಿ ನಾಟಕ ತಂಡ) ಸೇರಿದಂತೆ, ಹಲವಾರು ರೆಪರ್ಟರಿಗಳು ಹುಟ್ಟಿಕೊಂಡದ್ದು ಹವ್ಯಾಸಿ ರಂಗಭೂಮಿಯ ತೀವ್ರತೆ ದೃಷ್ಟಿಯಿಂದ ಪ್ರಮುಖ ಬೆಳವಣಿಗೆ. ಹವ್ಯಾಸಿ ಒಡಲೊಳಗಿನಿಂದ ಜನಿಸಿದ ಈ ರೆಪರ್ಟರಿಗಳು ರಂಗಭೂಮಿಗೆ ವೃತ್ತಿಪರತೆ ಒದಗಿಸಿಕೊಟ್ಟಿವೆ. ಉತ್ತರ ಕರ್ನಾಟಕಕ್ಕೆ ಹೊಂದಿಕೊಂಡಿರುವ ಸಾಗರ ತಾಲ್ಲೂಕಿನ ಹೆಗ್ಗೋಡು ನೀಲಕಂಠೇಶ್ವರ ನಾಟ್ಯಸಂಘಕ್ಕೆ (ನೀನಾಸಂ) ಮರುಜೀವ ನೀಡಿದ ಲೇಖಕ ಕೆ.ವಿ. ಸುಬ್ಬಣ್ಣ ಅವರು ನಿರಂತರ ನಾಟಕ ಪ್ರಯೋಗ, ಸಿನಿಮಾ ಪ್ರದರ್ಶನ, ಸಾಹಿತ್ಯಕ ಚರ್ಚೆಯ ಒಟ್ಟಾರೆ ಸಾಂಸ್ಕೃತಿಕ ಚಟುವಟಿಕೆಗಳ ಮಧ್ಯೆಯೇ ತಿರುಗಾಟ ಸಂಚಾರಿ ರಂಗತಂಡಕ್ಕೆ ಒಂದು ರೂಪು ನೀಡಿದರು.

1985ರಿಂದ ಈ ತಿರುಗಾಟ ಆರಂಭವಾಯಿತು. ನೀನಾಸಂನಲ್ಲಿ ರಂಗ ತರಬೇತಿ ಹೊಂದಿದ ವಿದ್ಯಾರ್ಥಿಗಳಿಂದ 3–4 ತಿಂಗಳ ಕಾಲ ಮೂರು ನಾಟಕಗಳನ್ನು ಸಿದ್ಧಪಡಿಸಿ ಕೊಂಡು ಮುಂದಿನ 5–6 ತಿಂಗಳು ರಾಜ್ಯದ ಹಲವಾರು ಪಟ್ಟಣ, ಊರು, ನಗರಗಳಲ್ಲಿ ಪ್ರದರ್ಶನ ನೀಡುತ್ತ ಬಂದದ್ದೇ ಈ ನೂತನ ಯೋಜನೆ. ಪ್ರತಿ ವರ್ಷ 40–50 ಊರುಗಳಲ್ಲಿ 100–150 ಪ್ರದರ್ಶನ ಆಗುತ್ತವೆ. ಕಳೆದ ಮೂರು ವರ್ಷಗಳಿಂದ ಮೂರು ನಾಟಕಗಳನ್ನು ಎರಡು ನಾಟಕಗಳಿಗೆ ಕಡಿಮೆ ಮಾಡಲಾಗಿದೆ. ಆದರೆ ಮರು ತಿರುಗಾಟ ಎಂಬ ಮತ್ತೊಂದು ಸಂಚಾರಿ ನಾಟಕ ಪ್ರದರ್ಶನಗಳನ್ನು ರೂಪಿಸಲಾಗಿದೆ. ಪ್ರತಿ ವರ್ಷ ಮೂರು ನಾಟಕಗಳ ಪೈಕಿ ವಿಶ್ವದ ಯಾವುದಾದರೂ ಶ್ರೇಷ್ಠ ಕೃತಿ, ಒಂದು ಸಂಸ್ಕೃತ ನಾಟಕ, ಒಂದು ಕನ್ನಡ ನಾಟಕ ಇರುತ್ತವೆ.

ಸಂಸ್ಕೃತ, ಇಂಗ್ಲಿಷ್ ಸೇರಿದಂತೆ ವಿಶ್ವದ ಹಲವು ಭಾಷೆಗಳ ಕ್ಲಾಸಿಕ್‌ಗಳನ್ನು ಪರಿಚಯಿಸಿದ್ದು, ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಳ್ಳುವಂತಹ ಹತ್ತಾರು ರಂಗಕರ್ಮಿಗಳಿಗೆ ತರಬೇತಿ ನೀಡಿ ಸಿದ್ಧಪಡಿಸಿದ್ದು ನೀನಾಸಂನ ಕೊಡುಗೆ.

ತುಮರಿಯ ಕೆ.ಜಿ. ಕೃಷ್ಣಮೂರ್ತಿ ಅವರು ಶಾಲೆ, ಕಾಲೇಜುಗಳಲ್ಲಿ ನಾಟಕ ಪ್ರದರ್ಶನಕ್ಕಾಗಿಯೇ ರೆಪರ್ಟರಿ ತುಮರಿ ಮೇಳವನ್ನು ಆರಂಭಿಸಿದರು. ತಿಪಟೂರಿನ ನಟರಾಜ ಪ್ರೊಥಿಯು ಎಂಬ ರೆಪರ್ಟರಿ ಹುಟ್ಟು ಹಾಕಿದರು.

ಹೊಸದುರ್ಗ ತಾಲ್ಲೂಕು ಸಾಣೇಹಳ್ಳಿಯ ಮಠಾಧೀಶರೂ ಲೇಖಕರೂ ಆದ ಪಂಡಿತಾರಾಧ್ಯ ಸ್ವಾಮಿಗಳು ತಮ್ಮ ಶಿವಕುಮಾರ ಹವ್ಯಾಸಿ ಕಲಾಸಂಘದ ಮೂಲಕ 1997ರಲ್ಲಿ ಆರಂಭಿಸಿದ ಶಿವಸಂಚಾರ ರೆಪರ್ಟರಿ ರಾಜ್ಯದ ಮತ್ತೊಂದು ಪ್ರಮುಖ ಸಂಚಾರಿ ತಂಡ. ಪ್ರತಿವರ್ಷ 25 ಕಲಾವಿದರಿಗೆ ತರಬೇತಿ ನೀಡಿ ಮೂರು ನಾಟಕಗಳನ್ನು ಸಿದ್ಧಪಡಿಸಿಕೊಂಡು ರಾಜ್ಯದ ಪ್ರವಾಸ ಹೊರಡುವ ಶಿವಸಂಚಾರ ಕನಿಷ್ಠ 40–50 ಊರುಗಳಲ್ಲಿ ತಲಾ ಮೂರು ನಾಟಕಗಳ ಪ್ರದರ್ಶನ ನೀಡುತ್ತದೆ.

ವ್ಯವಸ್ಥಿತವಾದ ಜನಸಂಘಟನೆಯೂ ಶಿವಸಂಚಾರಕ್ಕೆ ಲಭ್ಯವಾಗಿರುವುದರಿಂದ ಅಪಾರ ಸಂಖ್ಯೆಯ ಪ್ರೇಕ್ಷಕರು ಈ ನಾಟಕ ಪ್ರದರ್ಶನಗಳಿಗೆ ಸೇರುತ್ತಾರೆ. ಕಳೆದ ಎಂಟು ವರ್ಷಗಳಲ್ಲಿ 24 ವಿಭಿನ್ನ ನಾಟಕಗಳನ್ನು ಸು. 340 ಊರುಗಳಲ್ಲಿ 1250 ಪ್ರದರ್ಶನ ನೀಡಿದೆ.

2005ರಲ್ಲಿ ಶಿವಸಂಚಾರ ತನ್ನ 9ನೆಯ ವರ್ಷದ ಪ್ರವಾಸವನ್ನು ಯಥಾ ಪ್ರಕಾರ ಮೂರು ನಾಟಕಗಳೊಂದಿಗೆ ಹೊರಟಿದೆ. ಶಿವಸಂಚಾರ ಇದುವರೆಗೂ ಬಹುತೇಕ ಕನ್ನಡ ನಾಟಕಗಳನ್ನೇ ಪ್ರದರ್ಶಿಸಿದೆ. ಹೊಸ ನಾಟಕಕಾರರು ಶಿವಸಂಚಾರದ ಮೂಲಕ ಸೃಷ್ಟಿಯಾಗಿದ್ದಾರೆ. ಶಿವಸಂಚಾರ ನಾಟಕ ಸಿದ್ಧತೆಯ ಹಂತದಲ್ಲಿ ಹಲವು ಯುವಕರು ರಂಗ ತರಬೇತಿ ಪಡೆದು ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ.

20ನೆಯ ಶತಮಾನ ಉತ್ತರಾರ್ಧದ ಹವ್ಯಾಸಿ ರಂಗಭೂಮಿಯ ಬಹಳ ಪ್ರಮುಖ ಲಕ್ಷಣವೆಂದರೆ ಅದರ ಪ್ರಯೋಗಶೀಲತೆ. ಹೆಗ್ಗೋಡು, ಸಾಣೇಹಳ್ಳಿ, ಸಿರಿಗೆರೆಯಂತಹ ಅಪ್ಪಟ ಗ್ರಾಮೀಣ ಪ್ರದೇಶಗಳ ಜತೆ ಉಡುಪಿ, ಮೈಸೂರಿನಂತಹ ನಗರಗಳಲ್ಲೂ ಹಲವು ಪ್ರಯೋಗಶೀಲತೆಯನ್ನು ಪರೀಕ್ಷೆಗೆ ಒಡ್ಡಲಾಗಿದೆ. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ಹೆಚ್ಚಿನ ಪ್ರಯೋಗಶೀಲತೆ ಬೆಂಗಳೂರಿನಿಂದಲೇ ಆಗಿದೆ. ಮಾದರಿಗಳು ಅಲ್ಲಿಂದಲೇ ರೂಪುಗೊಂಡಿವೆ. ಆದರೆ ರೆಪರ್ಟರಿ ಯೋಜನೆ ಮೊಳಕೆಯೊಡೆದು, ಹೆಗ್ಗೋಡು, ಸಾಣೇಹಳ್ಳಿಯಂತಹ ಕುಗ್ರಾಮಗಳಲ್ಲಿ ಮಾತ್ರ ಅದು ಸಫಲವಾಗಿದೆ.

ಬಿ.ವಿ. ಕಾರಂತರ ವಿಶೇಷ ಪ್ರಯತ್ನದಿಂದಾಗಿ ಮೈಸೂರಿನಲ್ಲಿ ರಂಗಾಯಣ ಸ್ಥಾಪನೆಯಾಯಿತು. ಇದು ಹವ್ಯಾಸಿಗಳ ಕಲ್ಪನೆಯ ಕೂಸಾದರೂ ನಾಟಕ ತಂಡವಾಗಿ ನೆಲೆ ನಿಂತಿತು. ನಾಟಕ ಹವ್ಯಾಸಿ ಆಗಿರಲು ಸಾಧ್ಯವಿಲ್ಲ. ವೃತ್ತಿಪರತೆ ಬೇಕು ಎಂದು 21ನೆಯ ಶತಮಾನದ ಆರಂಭದಲ್ಲೇ ಎದ್ದ ಪ್ರತಿಪಾದನೆಗೆ ಸಂವಾದಿಯಾಗಿ ತಿರುಗಾಟ, ಶಿವಸಂಚಾರ, ರಂಗಾಯಣ–ಅಷ್ಟೇ ಏಕೆ ಇಂದು ರಂಗಶಿಕ್ಷಣ ಪಡೆದ ಹಲವರು ನಾಟಕವನ್ನೇ ವೃತ್ತಿಯಾಗಿ ಮಾಡಿಕೊಂಡು ನೆಲೆ ನಿಲ್ಲುವ ಹಂತದಲ್ಲಿದ್ದಾರೆ. 20ನೆಯ ಶತಮಾನದ ನಿರಂತರ ಪ್ರಯೋಗಶೀಲತೆ 21ನೆಯ ಶತಮಾನದಲ್ಲಿ ಹೀಗೆ ಫಲ ಕೊಟ್ಟಿದೆ. (ಜಿ.ಎನ್.)

**ಕನ್ನಡ ಲಿಪಿ :** ಕನ್ನಡ ಲಿಪಿ ಭಾರತ ದೇಶದ ಇತರ ಲಿಪಿಗಳಂತೆ ಪ್ರ.ಶ.ಪೂ. 3ನೆಯ ಶತಮಾನದ ಅಶೋಕನ ಬ್ರಾಹ್ಮೀಲಿಪಿಯಿಂದ (ನೋಡಿ– ಬ್ರಾಹ್ಮೀಲಿಪಿ) ಉದ್ಭವಿಸಿದೆ. ಈ ಬ್ರಾಹ್ಮೀ ಲಿಪಿ ಭಾರತದಲ್ಲಿ ಇದುವರೆಗೆ ಓದಿ ಗುರುಸಿಲ್ಪಟ್ಟಿರುವ ಅತ್ಯಂತ ಪ್ರಾಚೀನ ಲಿಪಿಯಾಗಿದೆ. ಇದಕ್ಕಿಂತ ಪ್ರಾಚೀನವಾದ ಸಿಂಧೂಕೊಳ್ಳದ ಮುದ್ರೆಗಳ ಲಿಪಿಯನ್ನು ಇದುವರೆಗೆ ವಿದ್ವಾಂಸರು ಸಮರ್ಪಕವಾಗಿ ಓದಿ ಅರ್ಥಮಾಡಿರುವುದಿಲ್ಲ. ಅಶೋಕನ ಬ್ರಾಹ್ಮೀ ಲಿಪಿ ಉತ್ತರಕ್ಕೆ ಕಾಲಸಿ ಮತ್ತು ಭಾರತ–ನೇಪಾಲ ಗಡಿಯಲ್ಲಿರುವ ರುಮ್ಮಿಂದೈಯಿಂದ ದಕ್ಷಿಣಕ್ಕೆ ಮೈಸೂರುವರೆಗೂ ಪೂರ್ವಕ್ಕೆ ಒರಿಸ್ಸದಿಂದ ಪಶ್ಚಿಮಕ್ಕೆ ಜುನಾಗಢ ಮತ್ತು ಮುಂಬಯಿವರೆಗೂ ದೊರೆತ ಅಶೋಕ ಸಾಮ್ರಾಟನ ಧರ್ಮಶಾಸನಗಳಲ್ಲಿ ಕಂಡುಬರುತ್ತದೆ. ಈ ಲಿಪಿ ಸಂಸ್ಕೃತ ಭಾಷೆಯಿಂದ ಪ್ರಭಾವಿತವಾಗಿದ್ದು ಅಶೋಕನ ಕಾಲದಲ್ಲಿ ಪ್ರಚಲಿತವಿದ್ದ ಪ್ರಾಕೃತ ಬಾಷೆಯಾಗಿ ಉಪಯೋಗಿಸಲ್ಪಟ್ಟಿದೆ. ಆ ಕಾಲಕ್ಕಾಗಲೇ ಅದು ಪರಿಪೂರ್ಣತೆಯನ್ನು ಪಡೆದಿದ್ದು ಪ್ರಾಕೃತ ಭಾಷೆಯ ಪ್ರತಿಯೊಂದು ಶಬ್ದ ಅಥವಾ ಧ್ವನಿಗೆ ಪ್ರತ್ಯೇಕವಾದ ಅಕ್ಷರ ಅಥವಾ ಸಂಜ್ಞೆಯನ್ನು ಅದರಲ್ಲಿ ಕಲ್ಪಿಸಲಾಗಿದೆ. ಈ ಲಿಪಿ ಎಡದಿಂದ ಬಲಕ್ಕೆ ಬರೆಯಲ್ಪಟ್ಟಿದ್ದು ಅದರಲ್ಲಿಯ ಸರಳ ಸುಂದರ, ಅಕ್ಷರಗಳು ಸುಲಭವಾಗಿ ಗುರುತಿಸುವಂತಿವೆ. ಈ ಅಕ್ಷರಗಳಿಗೆ ತಲೆಕಟ್ಟು

ಇರುವುದಿಲ್ಲ. ಥ, ಪ, ಮ, ವ. ಲ, ಹ ಮುಂತಾದ ಅಕ್ಷರಗಳ ಬುಡಕಟ್ಟು ದುಂಡಾಗಿರುತ್ತವೆ. ಸಂಸ್ಕೃತ ಬಾಷೆಯ ಖುಕಾರ, ವಿಸರ್ಗ, ಜಿಹ್ವಾ ಮೂಲೀಯ ಮತ್ತು ಉಪಧ್ಮಾನೀಯಗಳನ್ನು ನಿರ್ದೇಶಿಸುವ ಸಂಜ್ಞೆಗಳಿರುವುದಿಲ್ಲ. ಅದರಂತೆ ಪದಾದಿಯ ದೀರ್ಘ ಈ ಕಾರವಿಲ್ಲ. ಕರ್ನಾಟಕದಲ್ಲಿ ಅಶೋಕನ ಬ್ರಾಹ್ಮೀ ಲಿಪಿಯ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರ ಎಂಬ ಸ್ಥಳಗಳಲ್ಲಿಯೂ ರಾಯಚೂರು ಜಿಲ್ಲೆಯ ಮಾಸ್ಕಿ, ಪಾಲ್ಕಿಗುಂಡು ಮತ್ತು ಗವಿಮಠ ಎಂಬ ಸ್ಥಳಗಳಲ್ಲಿಯೂ ದೊರೆತಿವೆ.

ಅಶೋಕನ ಬ್ರಾಹ್ಮೀ ಲಿಪಿ ಮುಂದೆ 3ನೆಯ ಶತಮಾನದ ವರೆಗೆ ಶುಂಗ, ಕುಶಾನ, ಕ್ಷತ್ರಪ, ಆಂಧ್ರ, ಶಾತವಾಹನ ಮುಂತಾದ ಅರಸರ ಶಾಸನಗಳಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ವಿಕಾಸ ಹೊಂದಿರುತ್ತದೆ. ಕುಶಾನ ಕಾಲದ ಲಿಪಿಯ ಅಕ್ಷರಗಳು ಕಡಿಮೆ ಎತ್ತರವಾಗಿಯೂ ಅಗಲವಾಗಿಯೂ ದಪ್ಪವಾಗಿಯೂ ಇರುತ್ತವೆ. ಕ್ಷತ್ರಪ ಹಾಗೂ ಶಾತವಾಹನರ ಕಾಲದ ಲಿಪಿಗಳೂ ಹೆಚ್ಚು ಕಡಿಮೆ ಇದೇ ವೈಶಿಷ್ಟ್ಯಗಳನ್ನೊಳಗೊಂಡಿವೆ. ಕರ್ನಾಟಕದಲ್ಲಿ ಅಶೋಕನ ಬ್ರಾಹ್ಮೀ ಲಿಪಿಯ ಮುಂದಿನ ಹಂತವನ್ನು 2–3ನೆಯ ಶತಮಾನದ ಮಳವಳ್ಳಿ ಮತ್ತು ಬನವಾಸಿಯ ಸಾತಕರ್ಣಿಯ ಶಾಸನಗಳಲ್ಲಿ ಕಾಣುತ್ತೇವೆ. ಇಲ್ಲಿಯೂ ಅಕ್ಷರಗಳ ಎತ್ತರ ಕಡಿಮೆಯಾಗಿದ್ದು ಕೆಲವು ಅಕ್ಷರಗಳಿಗೆ ತ್ರಿಕೋಣಾಕೃತಿಯುಳ್ಳ ತಲೆಕಟ್ಟು ಇರುತ್ತದೆ. ಅಗಲವಾದ ತುದಿಯುಳ್ಳ ಲೇಖನಿಯನ್ನು ಉಪಯೋಗಿಸಿದ್ದರಿಂದ ಇಂಥ ತಲೆಕಟ್ಟುಗಳು ತಲೆದೋರಿವೆಯೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಅ, ಕ, ರ ಮುಂತಾದ ಅಕ್ಷರಗಳ ಲಂಬರೇಖೆಯ ಕೆಳಭಾಗ ವೃತ್ತಾಕಾರವಾಗಿ ಎಡಗಡೆ ಹೊರಳಿದೆ. ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬ ಸ್ಥಳದಲ್ಲಿ ದೊರೆತ 3ನೆಯ ಶತಮಾನದ ಶಾನಗಳಲ್ಲಿಯ ಕೆಲವು ಅಕ್ಷರಗಳು ಆಂಧ್ರಪ್ರದೇಶದ ನಾಗಾರ್ಜುನ ಕೊಂಡದ ಇಕ್ಷ್ವಾಕು ಅರಸರ ಶಾಸನಗಳ ಅಕ್ಷರಗಳಂತೆ ಸುಂದರವಾಗಿಯೂ ಅಂಕಾರಯುತವಾಗಿಯೂ ಕೆತ್ತಲ್ಪಟ್ಟಿವೆ.

4–5ನೆಯ ಶತಮಾನದ ಕದಂಬ ಅಸರಸ ಶಾಸನಗಳಲ್ಲಿ ಕಂಡುಬರುವ ಕನ್ನಡ ಲಿಪಿ ಮುಂದಿನ ಬೆಳೆವಣಿಗೆಗೆ ತಳಹದಿಯಾಗಿದೆಯೆಂದು ಹೇಳಬಹುದು. ಈ ಕಾಲದಿಂದ ಕರ್ನಾಟಕದಲ್ಲಿ ಬಾಳಿ ಬೆಳಗಿದ ಗಂಗ, ಬಾದಾಮಿ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಳುಕ್ಯ, ಕಳಚುರಿ, ಯಾದವ, ಹೊಯ್ಸಳ ಮತ್ತು ವಿಜಯನಗರದ ಅರಸರ ಸಾವಿರಾರು ಶಾಸನಗಳು ದೊರೆತಿದ್ದರಿಂದ ಕನ್ನಡ ಲಿಪಿಯ ಅವಿಚ್ಛಿನ್ನವಾದ ಬೆಳೆವಣಿಗೆಯನ್ನು ತಿಳಿದುಕೊಳ್ಳಲಿಕ್ಕೆ ಸಾಧ್ಯವಾಗಿದೆ. ಕದಂಬ ಕಾಲದ ಕನ್ನಡ ಲಿಪಿಯ ಮುಖ್ಯವಾದ ವೈಶಿಷ್ಟ್ಯವೆಂದರೆ ಕೆಲವು ಶಾಸನಗಳ ಅಕ್ಷರಗಳಲ್ಲಿ ಕಂಡುಬರುವ ಚೌಕಾಕೃತಿಯ ತಲೆಕಟ್ಟು. ಇಂತ ತಲೆಕಟ್ಟು ಇದೇ ಕಾಲದ ಗುಪ್ತ ಅರಸರ ಮಾಳವದಲ್ಲಿರುವ ಶಾಸನಗಳಲ್ಲೂ ವಾಕಾಟಕ ಅರಸರ ಮಧ್ಯ; ಪ್ರದೇಶದಲ್ಲಿರುವ ಶಾಸನಗಳಲ್ಲೂ ಕಂಡುಬರುತ್ತದೆ. ಈ ತಲೆಕಟ್ಟು ಪೆಟ್ಟಿಗೆಯ ಆಕಾರವಿರುವುದರಿಂದ ಇಂಥ ಅಕ್ಷರಗಳಿಗೆ ಪೆಟ್ಟಿಗೆಯ ತಲೆಕಟ್ಟುಳ್ಳ ಅಕ್ಷರಗಳೆಂದು ಹೇಳುವುದುಂಟು. ಕದಂಬ ಲಿಪಿಯ ಅಕ್ಷರಗಳು ಎತ್ತರದಲ್ಲಿ ಕಡಿಮೆಯಿದ್ದು ಹೆಚ್ಚಿಗೆ ದುಂಡಾಗುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಇದರಲ್ಲಿ ಸಂಸ್ಕೃತ ಭಾಷೆಯ ವಿಸರ್ಗ, ಜಿಹ್ವಾಮೂಲೀಯ, ಉಪಧ್ಮಾನೀಯ ಮುಂತಾದುವನ್ನು ಸೂಚಿಸುವ ಸಂಜ್ಞೆಗಳನ್ನೂ ಕನ್ನಡ ಭಾಷೆಯ ಶಕಟರೇಫ, ಳಿ ಳಿ, ಮುಂತಾದುವನ್ನು ಸೂಚಿಸುವ ಸಂಜ್ಞೆಗಳನ್ನೂ ಸೇರಿಸಲಾಗಿದೆ. 6–8ನೆಯ ಶತಮಾನದಲ್ಲಾಳಿದ ಬಾದಾಮಿ ಚಳುಕ್ಯರ ಶಾಸನಗಳಲ್ಲಿ ಕನ್ನಡ ಲಿಪಿಯ ಮುಂದಿನ ಬೆಳೆವಣಿಗೆಯನ್ನು ಕಾಣುತ್ತೇವೆ. ಈ ಲಿಪಿಯಲ್ಲಿ ಅಕ್ಷರಗಳ ತಲೆಕಟ್ಟು ಬಹು ಚಿಕ್ಕದಾದ ಸರಳರೇಖೆಯಿಂದೊಡಗೂಡಿರುತ್ತದೆ. ಕೆಲವು ಶಾಸನಗಳಲ್ಲಿ ಕ ಮತ್ತು ರ ಅಕ್ಷರಗಳ ಲಂಬ ರೇಖೆಯ ಎಡಭಾಗ ಮೇಲಕ್ಕೆ ಹೋಗಿ ಮೇಲ್ಭಾಗದ ಅಡ್ಡಗೆರೆಗೆ ಹೊಂದಿಕೊಂಡಿರುತ್ತದೆ. 8–10ನೆಯ ಶತಮಾನದ ರಾಷ್ಟ್ರಕೂಟರ ಶಾಸನಗಳಲ್ಲಿ ಪದಾದಿಯ ಅ ಮತ್ತು ಇ ಅಕ್ಷರಗಳು ಹೆಚ್ಚಿನ ಬೆಳೆವಣಿಗೆಯನ್ನು ವ್ಯಕ್ತಪಡಿಸುತ್ತವೆ.

ಕನ್ನಡ ಲಿಪಿ 10–12ನೆಯ ಶತಮಾನದಲ್ಲಿ ಕಲ್ಯಾಣಿ ಚಾಳುಕ್ಯರ ಶಾಸನಗಳಲ್ಲಿ ವಿಶೇಷ ಬದಲಾವಣೆಯನ್ನು ಹೊಂದಿ ಒಂದು ಮುಖ್ಯವಾದ ಹಂತವನ್ನು ಸೂಚಿಸುತ್ತಿವೆ. ಈ ಕಾಲದ ಕೆಲವು ಅಕ್ಷರಗಳು ಇನ್ನಷ್ಟು ದುಂಡಾಗಿದ್ದು ಆಧುನಿಕ ಕನ್ನಡ ಲಿಪಿಯ ಅಕ್ಷರಗಳ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಉದಾಹರಣೆಗಾಗಿ ಕ, ರ, ಯ ಮುಂತಾದ ಅಕ್ಷರಗಳ ಮೈಕಟ್ಟು ಹೆಚ್ಚು ಕಡಿಮೆ ಈಗಿನಂತೆಯೇ ಇದೆ. ಕೆಲವು ಅಕ್ಷರಗಳ ತಲೆಕಟ್ಟು ಕೋನಾಕೃತಿಯುಳ್ಳದಾಗಿದೆ. ಚ, ವ, ಮ ಮುಂತಾದ ಅಕ್ಷರಗಳ ತಲೆಕಟ್ಟಿನ ಭಾಗ ಎರಡು ಭಾಗವಾಗಿ ಬೇರ್ಪಡೆಯಾಗಿದ್ದು ತಲೆಕಟ್ಟು ಬಲಭಾಗದ ರೇಖೆಗೆ ಹೊಂದಿಕೊಂಡಿರುತ್ತದೆ. ಅನೇಕ ಅಕ್ಷರಗಳ ತಲೆಕಟ್ಟು ಸ್ಪಷ್ಟವಾಗಿ ಎದ್ದುಕಾಣುವಂತಿದೆ. ಮುಂದೆ 12–13ನೆಯ ಶತಮಾನದಲ್ಲಿ ಹೊಯ್ಸಳ ಅರಸರ ಅನೇಕ ಶಾಸನಗಳನ್ನು ನುಣುಪಾದ ಕಲ್ಲಿನ ಹಲಗೆಗಳ ಮೇಲೆ ಅಲಂಕಾರಯುತವಾಗಿಯೂ ಕಲಾತ್ಮಕವಾಗಿಯೂ ಬರೆಯಲ್ಪಟ್ಟಿದ್ದು ಅಲ್ಲಿಯ ಅಕ್ಷರಗಳು ಬಹು ಸುಂದರವಾಗಿ ಕಾಣುತ್ತವೆ. ಈ ಅಕ್ಷರಗಳನ್ನು ಸ್ಪಷ್ಟವಾಗಿಯೂ ಹೆಚ್ಚು ದುಂಡಾಗಿಯೂ ಬರೆಯಲಾಗಿದೆ. ಇಲ್ಲಿ ಕನ್ನಡ ಲಿಪಿ ಊರ್ಜಿತಾವಸ್ಥೆಯನ್ನು ಹೊಂದಿದೆಯೆಂದು ಹೇಳಬಹುದು. ಆದರೆ ಮುಂದಿನ 2–3 ಶತಮಾನಗಳ ಕಾಲದಲ್ಲಿ ಅಂದರೆ 14–16ನೆಯ ಶತಮಾನದ ವಿಜಯನಗರ ಅರಸರ ಶಾಸನಗಳಲ್ಲಿ ಅಕ್ಷರಗಳನ್ನು ಡೊಂಕು ಡೊಂಕಾಗಿ ಬರೆಯಲಾಗಿದ್ದು ಅವುಗಳ ಜೋಡಣೆಯ ವಿಷಯದಲ್ಲಿ ಅಷ್ಟು ಗಮನವನ್ನಿತ್ತಿಲ್ಲ. ಆದುದರಿಂದ ಕಲ್ಯಾಣಿ ಚಾಳುಕ್ಯ ಹಾಗೂ ಹೊಯ್ಸಳರ ಕಾಲದ ಲಿಪಿಯ ಅಕ್ಷರಗಳಂತೆ ವಿಜನಗರ ಕಾಲದ ಲಿಪಿಯ ಅಕ್ಷರಗಳು ಅಂದವಾಗಿ ಕಾಣುವುದಿಲ್ಲ. ಆದರೂ ಈ ಕಾಲದ ಲಿಪಿಯ ಅಕ್ಷರಗಳು ಕನ್ನಡ ಲಿಪಿಯ ಬೆಳೆವಣಿಗೆಯ ದೃಷ್ಟಿಯಿಂದ ಗಮನಾರ್ಹವಾಗಿದೆ. ಅ, ಇ, ಣ, ಷ, ಳ ಮುಂತಾದ ಅಕ್ಷರಗಳು ಈಗಿನ ರೂಪಗಳನ್ನು ಹೆಚ್ಚಾಗಿ ಹೋಲುತ್ತವೆ. ದ, ಡ, ಪ ಮುಂತಾದ ಅಲ್ಪಪ್ರಾಣದ ಅಕ್ಷರಗಳಿಗೆ ಕೆಳಗಡೆ ಒಂದು ರೇಖೆಯನ್ನು ಸೇರಿಸಿ ಧ, ಢ, ಫ, ಮುಂತಾದ ಮಹಾಪ್ರಾಣಗಳ ಸಂಜ್ಞೆಗಳನ್ನು ಸೂಚಿಸಲಾಗಿದೆ. ಇದುವರೆಗೆ ಅಕ್ಷರಗಳ ಮೇಲ್ಭಾಗದಲ್ಲಿ ಒಂದು ಚುಕ್ಕೆ ಅಥವಾ ಚಿಕ್ಕ ಬಿಂದುವಿನಿಂದ ಸೂಚಿಸಲ್ಪಡುತ್ತಿದ್ದ ಅನುಸ್ವಾರವನ್ನು ಆಯಾ ಅಕ್ಷರಗಳ ಬಲಗಡೆಗೆ ಅಷ್ಟೇ ಗಾತ್ರದ ಬಿಂದುವಿನಿಂದ ತೋರಿಸಲಾಗಿದೆ. 18ನೆಯ ಶತಮಾನದಲ್ಲಿ ಮೈಸೂರು ಅರಸರ ಕಾಲದಲ್ಲಿ ಕನ್ನಡ ಲಿಪಿ ವಿಜಯನಗರ ಕಾಲದ ಅಕ್ಷರಗಳ ಕೆಲವು ಲಕ್ಷಣಗಳನ್ನು ಉಳಿಸಿಕೊಂಡಿದ್ದರೂ ಆಧುನಿಕ ಕನ್ನಡ ಲಿಪಿಗೆ ಬಹಳ ಹತ್ತಿರಬಾಗಿ ತೋರುತ್ತದೆ. ಇತ್ತೀಚೆಗೆ ಮುದ್ರಣ ಬಂದಮೇಲೆ ಇತರ ಲಿಪಿಗಳಂತೆ ಕನ್ನಡ ಲಿಪಿಯಾದರೂ ಒಂದು ಸ್ಥಿರತೆಯನ್ನು ಹೊಂದಿದ್ದರಿಂದ ಹೆಚ್ಚಿನ ವಿಕಾಸಕ್ಕೆ ಅಸ್ಪದವಿಲ್ಲದಂತಾಗಿದೆ. ಆದರೂ ಮುದ್ರಣದ ಲಿಪಿಯಲ್ಲಿ ಸಹ ಕಾಲಕಾಲಕ್ಕೆ ಕೆಲವು ಸುಧಾರಣೆಗಳನ್ನು ಮಾಡಿಕೊಂಡು ಹೆಚ್ಚಿನ ಅಂದವಾದ ಅಕ್ಷರಗಳನ್ನು ಅಚ್ಚು ಹಾಕುತ್ತಿರುವುದನ್ನು ನೋಡುತ್ತೇವೆ.

ಕನ್ನಡ ಲಿಪಿಯ ಒಂದು ವೈಶಿಷ್ಟ್ಯವೆಂದರೆ ಪ್ರಾಚೀನಕಾಲದಿಂದಲೂ ಕಾಗುಣಿತಾಕ್ಷರದ ಹ್ರಸ್ವ ಮತ್ತು ದೀರ್ಘ ಎ ಮತ್ತು ಏ ಕಾರಗಳನ್ನು ಹಾಗೂ ಒ ಮತ್ತು ಓ ಕಾರಗಳನ್ನು ಒಂದೇ ಸಂಜ್ಞೆಯಿಂದ ಸೂಚಿಸುತ್ತಿದ್ದು ಅವುಗಳಲ್ಲಿಯ ಹ್ರಸ್ವ ಮತ್ತು ದೀರ್ಘ ವರ್ಣಗಳ ಭೇದವನ್ನು ಸಂದರ್ಭಾನುಸಾರವಾಗಿ ತಿಳಿದುಕೊಳ್ಳಬೇಕಾಗಿತ್ತು. ಇತ್ತೀಚೆಗೆ ಅಂದರೆ 17–18ನೆಯ ಶತಮಾನದಂದೀಚೆಗೆ ಮಾತ್ರ ಕಾಗುಣಿತಾಕ್ಷರದ ದೀರ್ಘ ಏ ಕಾರ, ದೀರ್ಘ, ಓ ಕಾರ ಮತ್ತು ದೀರ್ಘ ಈ ಕಾರಗಳನ್ನು ಆಯಾ ಅಕ್ಷರಗಳ ಬಲಗಡೆ ಕೊಂಡಿಯುಳ್ಳ ಒಂದು ರೇಖೆಯಿಂದ ಸೂಚಿಸಲಾಗಿದೆ.

ಇನ್ನು 4–5ನೆಯ ಶತಮಾನದಿಂದ 13–14ನೆಯ ಶತಮಾನದವರೆಗೆ ಕರ್ನಾಟಕ ಮತ್ತು ಆಂಧ್ರಪ್ರದೇಶದ ಶಾಸನಗಳಲ್ಲಿ ಸುಮಾರು ಒಂದೇ ಮಾದರಿಯ ಲಿಪಿಯನ್ನು ಉಪಯೋಗಿಸಿದ್ದುದರಿಂದ ಇವೆರಡೂ ಭಾಗದ ಲಿಪಿಗಳಿಗೆ ಕನ್ನಡ ತೆಲುಗು ಲಿಪಿಯೆಂದು ಹೇಳುವುದುಂಟು, ಅದರಲ್ಲೂ ವಿಶೇಷವಾಗಿ ಬಾದಾಮಿ ಚಳುಕ್ಯ, ರಾಷ್ಟ್ರಕೂಟ ಮತ್ತು ಕಲ್ಯಾಣಿ ಚಾಳುಕ್ಯರ ಕಾಲದ ಕನ್ನಡ ತೆಲುಗು ಲಿಪಿ ಒಂದೇ ಸ್ವರೂಪದ್ದಾಗಿದೆಯೆಂದು ಹೇಳಬಹುದು. 14–15ನೆಯ ಶತಮಾನಗಳಲ್ಲಿ ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಕೆಲವು ವ್ಯತ್ಯಾಸಗಳು ತಲೆದೋರಿದ್ದು ಮುಂದಿನ ಎರಡು ಮೂರು ಶತಮಾನಗಳಲ್ಲಿ ಗಮನಾರ್ಹವಾದ ಭೇದಗಳು ಕಂಡುಬರುತ್ತವೆ. ಆದರೂ ಅಲ್ಪ ಪ್ರಯತ್ನದಿಂದ ಕನ್ನಡಿಗರು ತೆಲುಗು ಲಿಪಿಯನ್ನೂ ಅದರಂತೆ ಆಂಧ್ರರು ಕನ್ನಡ ಲಿಪಿಯನ್ನೂ ಸುಲಭವಾಗಿ ತಿಳಿದುಕೊಳ್ಳಬಹುದು. ಬಾದಾಮಿ ಚಳುಕ್ಯರ ಕಾಲದಲ್ಲ ಕನ್ನಡ ಲಿಪಿ ಮಹಾರಾಷ್ಟ್ರ ಮತ್ತು ಗುಜರಾತ್ ಪ್ರಾಂತ್ಯಗಳಲ್ಲಿಯೂ ಪ್ರಚಲಿತವಿದ್ದು ಮುಂದೆ ಅಲ್ಲಿ ನಾಗರೀ ಲಿಪಿ ಬಳಕೆಗೆ ಬಂತು. ಅಂತೂ ಮೇಲಿನ ವಿವೇಚನೆಯಿಂದ ಕನ್ನಡ ಲಿಪಿ ಸು. 2000 ವರ್ಷಕ್ಕೂ ಹೆಚ್ಚಿನ ಪರಂಪರೆಯುಳ್ಳದ್ದಾಗಿದೆಯೆಂದು ವಿಶದವಾಗುತ್ತದೆ. ಒಂದು ಲಿಪಿಯ ಹುಟ್ಟು ಮತ್ತು ಬೆಳೆವಣಿಗೆ ಅದನ್ನು ಉಪಯೋಗಿಸುವ ಜನರ ಸಂಸ್ಕೃತಿಯ ಪ್ರತೀಕವಾಗಿರುತ್ತದೆ. ಒಂದು ಆದರ್ಶ ಲಿಪಿಯಲ್ಲಿ ಪ್ರತಿಯೊಂದು ಶಬ್ದದ ಉಚ್ಚಾರಣೆಗೆ ಅಸಂದಿಗ್ಧವಾದ ಸಂಜ್ಞೆಯಿರಬೇಕು. ಬರೆದಂತೆ ಓದುವಂತಿರಬೇಕು. ಓದಿದಂತೆ ಬರೆಯುವಂತೆಯೂ ಇರಬೇಕು. ಅಂದರೆ ಉಚ್ಚಾರಿತ ಅಕ್ಷರ ಹಾಗೂ ಲಿಖಿತ ವರ್ಣ ಇವುಗಳ ಸಂಬಂಧ ಸಂಪೂರ್ಣವಿರಬೇಕು. ಈ ದೃಷ್ಟಿಯಿಂದ ವಿಚಾರಿಸಿದರೆ ಕನ್ನಡ ಲಿಪಿ ಪರಿಪೂರ್ಣತೆಯನ್ನು ಪಡೆದಿದೆಯೆಂದು ಹೇಳಬಹುದು. ಈ ಲಿಪಿಯಲ್ಲಿ ಸ್ವರ ಮತ್ತು ವ್ಯಂಜನಗಳು ಪೂರ್ಣವಾಗಿದ್ದು ಆರ್ಯ ಮತ್ತು ದ್ರಾವಿಡ ಭಾಷೆಗಳ ಧ್ವನಿಗಳನ್ನು ಕೊರತೆಯಿಲ್ಲದೆ ಸೂಚಿಸಲಿಕ್ಕೆ ಉಪಯುಕ್ತವಾದ ಸಂಕೇತಗಳಿವೆ. ವ್ಯಂಜನಾಕ್ಷರಗಳೊಡನೆ ಸ್ವರಗಳ ಸುಂದರವಾದ ಸಂಯೋಗವಿದೆ. ಹೀಗೆ ಕನ್ನಡ ಲಿಪಿ ಅಶೋಕನ ಬ್ರಾಹ್ಮೀಲಿಪಿಯಿಂದ ಉದ್ಭವಿಸಿ ಕಾಲಕ್ರಮದಿಂದ ಅನೇಕ ಮಾರ್ಪಾಟುಗಳನ್ನು ಹೊಂದಿ ವೈವಿಧ್ಯಪೂರ್ಣವಾದ ವಿಕಾಸವನ್ನು ಪಡೆದು ಸಾಹಿತ್ಯ–ಸಂಸ್ಕೃತಿಗಳ ಹಿರಿಮೆಯನ್ನು ವ್ಯಕ್ತಪಡಿಸುತ್ತದೆ. ಕನ್ನಡ ವರ್ಣಮಾಲೆಯ ಪ್ರತಿಯೊಂದು ಅಕ್ಷರದ ಉಗಮ, ವಿಕಾಸ, ಉಚ್ಚಾರಣೆ ಮುಂತಾದ ವಿವರಗಳು ಆಯಾ ಅಕ್ಷರಗಳ ಶೀರ್ಷಿಕೆಗಳಲ್ಲಿ ಬಂದಿವೆ. ಅವನ್ನು ನೋಡಬಹುದು.

ಈಚೆಗೆ ಪರಭಾಷೆಯ ಪದಗಳನ್ನು ಎರವಲಾಗಿ ತೆಗೆದುಕೊಳ್ಳಬೇಕಾದ ಅಗತ್ಯ ಒದಗಿಬಂದುದರಿಂದ Father, Faisal, Zoo, Man ಮೊದಲಾದುವನ್ನು; ಬರೆಯಲು ವಿಶಿಷ್ಟ ಸಂಜ್ಞೆಗಳನ್ನು ಬಳಸಲಾಗುತ್ತಿದೆ. ಉದಾ : ಫಾದರ್, ಫೈಸಲ್ ಜ಼ೂ, ಮ್ಯಾನ್– ಹೀಗೆ. (ನೋಡಿ– ಕನ್ನಡ–ಭಾಷೆ) (ಜಿ.ಎಸ್.ಜಿ.)

**ಕನ್ನಡ ವಾಮನ :** ಸು.1870–1925. ಹೊಸಗನ್ನಡ ಸಾಹಿತ್ಯದ ಉದಯ ಕಾಲದ ಒಬ್ಬ ಕವಿ. ಪೂರ್ಣ ಹೆಸರು ಉಪೇಂದ್ರ ಹಣಮಂತ ಕುಲಕರ್ಣಿ. ಇವರು ಬಾಗಲಕೋಟೆಯ ಹತ್ತಿರದ ತೋಳಮಟ್ಟಿಯವರು. ಇವರ ಆರಾಧ್ಯದೈವ ಬಾಗಲಕೋಟೆಯ ಹತ್ತಿರದ ಯಲಗುಂದದ ಶ್ರೀ ಹಣಮಂತ ದೇವರು. ಆ ಕಾಲಕ್ಕೆ ಮರಾಠಿಯಲ್ಲಿ ಪ್ರಸಿದ್ಧವಾದ ಯಮಕ್ಯಾ ವಾಮನ ಎಂಬವನನ್ನು ಅನುಸರಿಸಿ ಇವರು ಕನ್ನಡ ವಾಮನ ಎಂದು ಹೆಸರಿಟ್ಟುಕೊಂಡಂತೆ ಕಾಣುತ್ತದೆ. ಇವರು ಧಾರವಾಡದ ಶಿಕ್ಷಣ ತರಬೇತಿ ಕಾಲೇಜಿನಲ್ಲಿ ಶಿಕ್ಷಣ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾದರು. ಕೆಲವು ಕಾಲ ಬಾಗಲಕೋಟೆಯ ಹತ್ತಿರದ ಮುರನಾಳದಲ್ಲಿ ಕನ್ನಡ ಶಾಲಾಶಿಕ್ಷಕರೂ ಅಲ್ಲಿಯ ಸಹಕಾರಿ ಸಂಘದ ಕಾರ್ಯದರ್ಶಿಗಳೂ ಆಗಿದ್ದರು. ಇವರು ಹಲವು ಗದ್ಯ ಪ್ರಬಂಧಗಳನ್ನೂ ಹೆಚ್ಚಾಗಿ ಬಿಡಿಕವನಗಳನ್ನೂ ಬರೆದರು. ಪ್ರಾಸರಹಿತವಾದ 1000 ಪದ್ಯಗಳನ್ನೂ ಪ್ರಾಸಸಹಿತವಾದ 2000 ಪದ್ಯಗಳನ್ನೂ ತಾವು ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ಇವರ ಕವನಗಳು ಹೆಚ್ಚಾಗಿ ಶುಭೋದಯ, ಸಚಿತ್ರ ಭಾರತ, ಕರ್ನಾಟಕ ವೈಭವ, ಶಾಲಾಪತ್ರಕ, ವಾಗ್ಭೂಷಣ, ಪ್ರಭಾತ, ಕರ್ನಾಟಕ ವೃತ್ತ, ಕರ್ನಾಟಕ ಧನಂಜಯಗಳಲ್ಲಿ ಪ್ರಕಟವಾಗಿವೆ.

ಇವರು ಕಾವ್ಯ ಪ್ರಪಂಚಕ್ಕೆ ಸಲ್ಲಿಸಿದಸೇವೆ ಮೂರು ವಿಧದಲ್ಲಿ ಮನನೀಯವಾಗಿದೆ. 1 ಪ್ರಾಸರಹಿತವಾಗಿ ಕಾವ್ಯವನ್ನು ಬರೆಯಲು ಬರುತ್ತದೆಂಬುದನ್ನು ಹಿಂದೆಯೇ ತೋರಿಸಿಕೊಟ್ಟದ್ದು. ಇವರು ಬರೆದ ಪೃಥ್ವೀರಾಜ ಎಂಬ ಖಂಡಕಾವ್ಯ ಪ್ರಾಸರಹಿತವಾಗಿದೆ. 2 ಕಾವ್ಯ ರಚನೆಗೆ ವಿಶಿಷ್ಟವಾದ ಕಾವ್ಯವಸ್ತುಗಳೇ ಬೇಕೆಂದೇನಿಲ್ಲ. ಇವರು ಕಲ್ಲಿಮೀಸೆ, ಪಂಚೆ, ಗ್ರಾಮೀಣ ಜನರಾದ ಗೌಡ ಕುಲಕರ್ಣಿಯರ ಬಗ್ಗೆ ಕವನಗಳನ್ನು ರಚಿಸಿದ್ದಾರೆ. 3 ಪ್ರಾಯಶಃ ಹಳೆಯ ತಲೆಮಾರಿನಲ್ಲಿ ಪ್ರಾದೇಶಿಕ ಉಲ್ಲೇಖಗಳನ್ನು ತಂದವರೂ ಇವರೇ ಎಂದು ಕಾಣುತ್ತದೆ. ತೋಳಮಟ್ಟಿ, ಯಲಗುರ, ಬಾಗಲಕೋಟೆ ಮುಂತಾದ ಸ್ಥಳಗಳ ವರ್ಣನೆಗಳೂ ಸೊಲಬಣ್ಣ ಮೊದಲಾದ ವ್ಯಾಪಾರಸ್ಥರ ಉಲ್ಲೇಖಗಳೂ ಇವರ ಕವನದಲ್ಲಿ ಬರುತ್ತವೆ. ಇವರು ಕೆರೂರ ವಾಸುದೇವಾಚಾರ್ಯರ ನಿಧನದ ಕಾಲಕ್ಕೆ ಬರೆದ ಒಂದು ಕವಿತೆ ಭಾವಪೂರ್ಣವಾಗಿದೆ. (ಆರ್.ವೈ.ಡಿ.)

**ಕನ್ನಡ ವಿಲಾಸಿ ರಂಗಭೂಮಿ :** ನಾಟಕ ಕಲೆಯನ್ನು ಕಸಬಿಗಾಗಿ ಅಥವಾ ಸಂಪಾದನೆಗಾಗಿ ಕಲಿಯದೆ ಆತ್ಮವಿನೋದಕ್ಕಾಗಿ ಅಭ್ಯಾಸ ಮಾಡಿ ಅಭಿನಯಿಸುವವರ ವಿಲಾಸಿ ರಂಗಭೂಮಿ ಅಥವಾ ಹವ್ಯಾಸಿ ರಂಗಭೂಮಿ ಕನ್ನಡದಲ್ಲಿ ಈ ಕಲೆಯ ಬೆಳೆವಣಿಗೆಗೆ ತಕ್ಕಮಟ್ಟಿಗೆ ಕಾರಣವಾಗಿದೆ. ಕನ್ನಡ ರಂಗಭೂಮಿಯ ಬೆಳೆವಣಿಗೆಯಲ್ಲಿ ಒಂದು ಕಾಲದಲ್ಲಿ ವೃತ್ತಿನಿರತರ ಕಂಪನಿಗಳು ಪ್ರಮುಖ ಪಾತ್ರ ವಹಿಸಿ ಜನತೆಯಲ್ಲಿ ಅಭಿಮಾನ ಮೂಡಿಸಿದ್ದುವು.

ಸಾಮಾಜಿಕ ನಾಟಕ ಒಂದರಲ್ಲಿ ಸಂಪತ್ ಮತ್ತು ಇತರರು

ಸು. 1930ರ ದಶಕದಲ್ಲಿ ವೃತ್ತಿ ರಂಗಭೂಮಿಯ ಇಳಿಮುಖದ ಸೂಚನೆಗಳು ಕಾಣತೊಡಗಿದುವು. ಬದಲಾಗುತ್ತಿದ್ದ ಸಮಾಜಕ್ಕೆ ಕಂಪನಿ ನಾಟಕಗಳು ರುಚಿಸದೇ ಹೋದವು. ಆ ನಾಟಕಗಳ ವಸ್ತು ಮತ್ತು ಶೈಲಿ, ಅವುಗಳಿಗೆ ವ್ಯಯವಾಗುತ್ತಿದ್ದ ಕಾಲ, ಚಲನಚಿತ್ರಗಳ ಪ್ರವೇಶ ಮುಂತಾದವು ಕಂಪನಿ ನಾಟಕಗಳು ರುಚಿಸದೆ ಇದ್ದುದಕ್ಕೆ ಕಾರಣಗಳು. ಇದೇ ಸಮಯಕ್ಕೆ ಸರಿಯಾಗಿ ಕಾಲೇಜುಗಳಲ್ಲಿ ಇಂಗ್ಲಿಷ್ ನಾಟಕಗಳು ಪ್ರಯೋಗಿಸಲ್ಪಡುತ್ತಿದ್ದವು. ವಿದ್ಯಾವಂತ ಜನಕ್ಕೆ ತಾವೂ ಕನ್ನಡದಲ್ಲಿ ನಾಟಕಗಳನ್ನು ಪ್ರಯೋಗಿಸಬೇಕೆಂಬ ಅಭಿಲಾಷೆ ಉಂಟಾಯಿತು. ಕಾಲೇಜು ದಿನಾಚರಣೆ ಇತ್ಯಾದಿಗಳಲ್ಲಿ ನಾಟಕ ಪ್ರಯೋಗ ಅನಿವಾರ್ಯವೆನಿಸಿತ್ತು. ಇದಕ್ಕಾಗಿ ಆಡಲು ಹೊಸ ನಾಟಕಗಳು ಬೇಕಾದುವು. ಈ ನಾಟಕಗಳ ಬರೆವಣಿಗೆ ಪ್ರಧಾನವಾಗಿ ಗದ್ಯ. ಪೌರಾಣಿಕ ಐತಿಹಾಸಿಕ ನಾಟಕಗಳಿಗೆ ಬೇಕಾಗುವಂತೆ ಹೆಚ್ಚು ಪಾಲು ನಾಟಕಗಳಿಗೆ ಉಡಿಗೆತೊಡಿಗೆಗಳಾಗಲಿ, ರಂಗಸಜ್ಜಿಕೆಯಾಗಲಿ, ದೀಪಾಲಂಕಾರವಾಗಲೀ ಬೇಕಿರಲಿಲ್ಲ. ಇದರಿಂದಾಗಿ ಹಲವು ನಾಟಕಗಳು ಕನ್ನಡದಲ್ಲಿ ಬಂದುವು. ಈ ರೀತಿಯಾದ ಬೆಳೆವಣಿಗೆ ಕಾಲೇಜುಗಳಿಗೇ ಸೀಮಿತವಾಗಿರಲಿಲ್ಲ. ಬೇರೆ ಬೇರೆ ರೀತಿಯ ನಾಗರಿಕ ಸಂಘ ಸಂಸ್ಥೆಗಳು ಈ ದಿಸೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ್ದುವು. ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ಒಂದು ಕಾಲಕ್ಕೆ ವೃತ್ತಿನಿರತ ನಾಟಕ ಕಂಪನಿಗಳು ಹುಟ್ಟಿಕೊಂಡಂತೆ ವಿಲಾಸಿ ತಂಡಗಳು ಹುಟ್ಟಿಕೊಂಡದ್ದು ಆಗ.

20ನೆಯ ಶತಮಾನದ ಆದಿಭಾಗದಲ್ಲಿ ಪ್ರಾರಂಭವಾದ ಭರತ ಕಲೋತ್ತೇಜಕ ಸಂಗೀತ ಸಮಾಜ ಮೊದಲ ವಿಲಾಸಿ ತಂಡವೆಂದು ಹೇಳಬಹುದು. ಇದು ಹೆಚ್ಚು ಕಾಲ ಬಾಳದೆ ಹೋದರೂ ಉತ್ತರ ಕರ್ನಾಟಕದಲ್ಲಿ ಅನೇಕ ವಿಲಾಸಿ ತಂಡಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಆದ್ದರಿಂದ ಭರತ ಕಲೋತ್ತೇಜಕ ಸಂಗೀತ ಸಮಾಜಕ್ಕೆ ಐತಿಹಾಸಿಕ ಮಹತ್ತ್ವವಿದೆ. ಈ ತಂಡದ ಪ್ರಭಾವದಿಂದ ಹುಟ್ಟಿಕೊಂಡ ವಿಲಾಸಿ ತಂಡಗಳಲ್ಲಿ ಪ್ರಮುಖವಾದದ್ದು ಗದಗಿನ ದಿ ಯಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ ಅಸೋಸಿಯೇಷನ್. ಹುಯಿಲಗೋಳ ನಾರಾಯಣರಾಯರು ಈ ವಿಲಾಸಿ ತಂಡದ ಉಸಿರಾಗಿದ್ದರು. ಈ ತಂಡದ ಮೂಲಕ ಹೊಸ ಹೊಸ ತಂತ್ರ ಹಾಗೂ ಹೊಸ ಹೊಸ ವಸ್ತುಗಳುಳ್ಳ ನಾಟಕಗಳನ್ನು ಹುಯಿಲಗೋಳರು ರಂಗದ ಮೇಲೆ ತಂದರು. ಬಾಗಲಕೋಟೆಯ ವಾಸುದೇವ ವಿನೋದಿನೀ ಸಭಾವನ್ನೂ ಪ್ರಮುಖ ವಿಲಾಸೀ ತಂಡಗಳ ಸಾಲಿನಲ್ಲಿ ಹೆಸರಿಸುವುದು ಆವಶ್ಯಕ. ಈ ವಿಲಾಸಿ ತಂಡ ಪ್ರಮುಖವಾಗಿ ಮೊದಲಿಗೆ ಕೆರೂರು ವಾಸುದೇವಾಚಾರ್ಯರ, ಅನಂತರ ಶ್ರೀರಂಗರ ನಾಟಕಗಳನ್ನೇ ಪ್ರದರ್ಶಿಸಿತು. ಈ ತಂಡ ಕರ್ನಾಟಕದ ವಿವಿಧ ಭಾಗಗಳಲ್ಲಿ ನಾಟಕಗಳ ಪ್ರದರ್ಶನವನ್ನು ಏರ್ಪಡಿಸುತ್ತಿತ್ತು ಎಂಬುದು ತಿಳಿದುಬರುತ್ತದೆ. ಕನ್ನಡ ನಾಟ್ಯ ವಿಲಾಸಿ ಸಂಘ ಧಾರವಾಡದಲ್ಲಿ ಶ್ರೀರಂಗರ ನೇತೃತ್ವದಲ್ಲಿ ಆರಂಭವಾಯಿತು. ಶ್ರೀರಂಗರೇ ಈ ತಂಡಕ್ಕೆ ನಾಟಕಗಳನ್ನು ಬರೆದರು ; ಭಾರತದ ವಿವಿಧ ಭಾಗಗಳಲ್ಲಿ ಆಡಿಸಿದರು. ಧಾರವಾಡದ ಕಲೋಪಾಸಕ ಮಂಡಳಿಯೂ ಧಾರವಾಡದ ವಿಲಾಸಿ ತಂಡಗಳಲ್ಲಿ ಮುಖ್ಯವಾದದ್ದು. ಈ ತಂಡ ದ. ರಾ. ಬೇಂದ್ರೆಯವರ, ಎಲ್. ಈ. ಬೇಂದ್ರೆಯವರ ಮತ್ತು ಹುಯಿಲಗೋಳ ನಾರಾಯಣ ರಾಯರ ನಾಟಕಗಳನ್ನು ಅಭ್ಯಾಸ ಮಾಡಿ, ಉತ್ತರ ಕರ್ನಾಟಕದ ಪ್ರಮುಖ ಊರುಗಳಲ್ಲಿ ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಪ್ರದರ್ಶಿಸಿದೆ. ಈ ರೀತಿ ದುಡಿದ ವಿಲಾಸಿ ತಂಡಗಳಲ್ಲಿ ಕನ್ನಡ ಕಲೋದ್ಧಾರಕ ಸಂಘವೂ ಒಂದು. ಧಾರವಾಡದ ಕರ್ನಾಟಕ ಕಾಲೇಜು ಆ ಭಾಗದ ಸಾಂಸ್ಕೃತಿಕ ಜೀವನದ ಕೇಂದ್ರವಾಗಿದ್ದು, ಅನೇಕ ನಟರನ್ನು ವಿಲಾಸಿ ರಂಗಭೂಮಿಗೆ ಕೊಟ್ಟಿದೆ. ಮನೋಹರ ಗ್ರಂಥಮಾಲೆಯ ಜಿ. ಬಿ. ಜೋಶಿಯವರು ವಿಲಾಸಿಗಳಿಂದ ನಾಟಕಾಭ್ಯಾಸ ಮಾಡಿಸಿ, ಉತ್ತರ ಕರ್ನಾಟಕದ ವಿವಿಧ ಭಾಗಗಳಲ್ಲಿ ಹಾಗೂ ಪೂನ, ಮುಂಬಯಿ ಮುಂತಾದ ಪ್ರಮುಖ ಊರುಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದುದನ್ನು ಇಲ್ಲಿ ಉಲ್ಲೇಖಿಸಬಹುದು. ಧಾರವಾಡದ ಆಕಾಶವಾಣಿ ವಿಭಾಗದಲ್ಲಿ ನಾಟಕ ನಿರ್ದೇಶಕರಾಗಿರುವ ಎನ್. ಎಸ್. ವಾಮನ್ ಆಕಾಶವಾಣಿಯ ಹೊರಗೂ ಕೆಲಸ ಮಾಡುತ್ತಿದ್ದರು. ತಮ್ಮ ಸ್ನೇಹಿತರೊಡಗೂಡಿ ಅಲ್ಲಲ್ಲೆ ನಾಟಕಗಳನ್ನು ಪ್ರದರ್ಶಿಸುವುದರ ಜೊತೆಗೆ ನಾಟಕ ತಂಡಗಳಿಗೆ ಸಹಾಯ ಮಾಡುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಅಧ್ಯಾಪಕ ಮಿತ್ರರು ಈಚೆಗೆ ಅಂತರಂಗವೆಂಬ ಒಂದು ವಿಲಾಸಿ ತಂಡವನ್ನು ರಚಿಸಿಕೊಂಡಿದ್ದರು.

ಬೆಂಗಳೂರಿನ ಅಮೆಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ (ಎ.ಡಿ.ಎ.) ಬಹಳ ಹಳೆಯ ಹಾಗೂ ಬಹುಮುಖ್ಯ ವಿಲಾಸಿತಂಡ. ಆಧುನಿಕ ಕನ್ನಡ ನಾಟಕಗಳ ಜನಕ ಕೈಲಾಸಂ ಅವರ ಮೊದಲ ನಾಟಕವಾದ ಟೊಳ್ಳುಗಟ್ಟಿಯ ಜನನಕ್ಕೆ ಎ. ಡಿ. ಎ. ಕಾರಣ.

ಸಿಂಧುವಳ್ಳಿ ಅನಂತಮೂರ್ತಿ ಅವರ ಕಾಡುಪ್ರಾಣಿ ನಾಟಕದ ಒಂದು ದೃಶ್ಯ

1943ರಲ್ಲಿ ಬೆಂಗಳೂರಿನಲ್ಲಿ ಛಾಯಾ ಕಲಾವಿದರ ತಂಡದ ಜನನವಾಯಿತು. ಇವರು ಮೊದಲಿಗೆ ಕೈಲಾಸಂ ನಾಟಕಗಳನ್ನೂ ಅನಂತರ ಪರ್ವತವಾಣಿಯವರ ನಾಟಕಗಳನ್ನೂ ಪ್ರದರ್ಶಿಸಿದರು. ಅಲ್ಲದೆ ಬೆಂಗಳೂರಿನ ರವಿ ಕಲಾವಿದರು, ಶಶಿ ಕಲಾವಿದರು, ಚಿತ್ರಕಲಾವಿದರು, ಕಮಲ ಕಲಾಮಂದಿರ ಇವೇ ಮೊದಲಾದ ತಂಡಗಳು ವಿಲಾಸಿ ರಂಗಭೂಮಿಯಲ್ಲಿ ಸಾಕಷ್ಟು ಕೆಲಸಮಾಡಿವೆ. ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಬೆಂಗಳೂರಿನ ಕಲಾಕುಂಜ, ಕಲಾಪೋಷಿಣಿ, ಮಿತ್ರಬಳಗ, ಸಾಧನಾ ಕಲಾವಿದರು, ಕನ್ನಡ ಸಾಹಿತ್ಯ ಕಲಾಸಂಘ, ಪ್ರತಿಮಾ ನಾಟಕರಂಗ ಇವೇ ಮೊದಲಾದವು ಇತರ ಭಾಷೆಗಳ ಅನುವಾದಗಳನ್ನು, ಅಸಂಗತ ನಾಟಕಗಳನ್ನು, ಕನ್ನಡದ ಉತ್ತಮ ನಾಟಕಗಳನ್ನು ರಂಗದ ಮೇಲೆ ತಂದು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿವೆ. ಬೆಂಗಳೂರಿನಲ್ಲಿರುವ ನಾಟ್ಯಸಂಘ ವಿಲಾಸಿ ತಂಡಗಳಿಂದ ಪ್ರದರ್ಶನಗಳನ್ನು ಏರ್ಪಡಿಸುವುದರ ಜೊತೆಗೆ ಉಲ್ಲಾಳ್ ಪಾರಿತೋಷಕ ಸ್ಪರ್ಧೆಯನ್ನೂ ವರ್ಷಕ್ಕೊಮ್ಮೆ ಏರ್ಪಡಿಸಿ ವಿಲಾಸಿ ರಂಗಭೂಮಿಯ ಶ್ರೇಯಸ್ಸಿಗೆ ಕಾರಣವಾಗಿದೆ.

ನಾಟಕ ರಂಗದಲ್ಲಿ ಕ್ರಾಂತಿಯನ್ನುಂಟು ಮಾಡಿದ ಇನ್ನೊಂದು ಹೆಸರು ಶ್ರೀರಂಗ, ಶ್ರೀರಂಗರ ಹೊಸ ರೀತಿಯ ನಾಟಕಗಳು ಬೆಂಗಳೂರಿನ ರಂಗಭೂಮಿಯ ಮೇಲೆ ಆಗಾಗ ಕಾಣಿಸಿಕೊಳ್ಳುತ್ತಿವೆ. ಹೊಸ ಹೊಸ ತಂತ್ರ ಹಾಗೂ ಹೊಸ ಹೊಸ ಪ್ರಯೋಗಗಳನ್ನು ಮಾಡುವುದರಲ್ಲಿ ಇವರು ಎತ್ತಿದ ಕೈ. ಉತ್ತಮ ನಟರೂ ನಾಟಕಕಾರರೂ ಆದ ಪರ್ವತವಾಣಿ ಮತ್ತು ಎಚ್. ಕೆ. ರಂಗನಾಥ್ ಅವರೂ ಬೆಂಗಳೂರಿನ ವಿಲಾಸಿ ರಂಗಭೂಮಿಯ ಮೇಲೆ ಆಗಾಗ್ಗೆ ಕಾಣಿಸಿಕೊಳ್ಳುವುದೇ ಅಲ್ಲದೆ, ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಮಾರ್ಗದರ್ಶಕರಾಗಿದ್ದರು. ಬಿ.ಎಸ್. ರಾಮರಾವ್, ಬಿ.ಎಸ್. ನಾರಾಯಣರಾವ್, ಬಿ.ಎಸ್. ವೆಂಕಟರಾಂ, ಬಿ. ಚಂದ್ರಶೇಖರ್, ಬಿ.ಎನ್. ನಾರಾಯಣರಾವ್, ಎಂ.ವಿ. ಕೃಷ್ಣಸ್ವಾಮಿ, ಎಂ.ಎಸ್. ಶ್ರೀನಿವಾಸ್, ಪಿ. ಲಂಕೇಶ್, ಎಸ್.ಜಿ. ರಾಮಚಂದ್ರ, ಬಿ. ಕೃಷ್ಣ, ನಾಗರತ್ನ, ಜಿ.ವಿ. ಶಿವಾನಂದ, ಉಮೇಶ ರುದ್ರ, ಪಿ.ಎ. ವೇಣುಗೋಪಾಲ್, ನಾಗೇಶ್, ಕ.ವೆಂ. ರಾಜಗೋಪಾಲ್, ಎ.ಎಸ್. ಮೂರ್ತಿ ಇವರೇ ಮೊದಲಾದ ನಟರೂ ನಿರ್ದೇಶಕರೂ ವಿಲಾಸಿ ರಂಗಭೂಮಿಯನ್ನು ಜೀವಂತಗೊಳಿಸಿಕೊಂಡು ಬರುತ್ತಿರುವುದರ ಜೊತೆಗೆ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ; ವಿಲಾಸಿ ರಂಗಭೂಮಿಯಲ್ಲಿ ಹೊಸ ಬೆಳಕನ್ನು ಚೆಲ್ಲಿದ್ದಾರೆ.

ಮೈಸೂರು ನಗರದಲ್ಲಿ 1919ರಲ್ಲಿ ಡಿ. ಲಕ್ಷ್ಮಣಯ್ಯನವರ ನೇತೃತ್ವದಲ್ಲಿ ಪ್ರಾರಂಭವಾದ ದಿ ಲಿಟರರಿ ಅಂಡ್ ಡ್ರಮಾಟಿಕ್ ಅಸೋಸಿಯೇಷನ್ 1944ರವರೆಗೂ ಕೆಲಸ ಮಾಡಿತು. ಮಹಾರಾಜ ಕಾಲೇಜಿನಲ್ಲಿದ್ದ ಯಾಕೂಬ್ಸ್, ಮಿತ್ರಮೇಳ ಮತ್ತು ಕರ್ಣಾಟಕ ಸಂಘ–ಇವು ಹವ್ಯಾಸಿ ರಂಗಭೂಮಿಗೆ ಉತ್ತಮ ನಟರನ್ನು ಕೊಡುವುದರ ಜೊತೆಗೆ ಉತ್ತಮ ನಾಟಕಕಾರರನ್ನೂ ಕೊಟ್ಟಿವೆ. ಮೈಸೂರು ನಗರದ ಪ್ರಮುಖ ವಿಲಾಸಿ ತಂಡ ಸ್ಯಾಮ್ಸ್ ಲಿಟಲ್ ಥಿಯೇಟರ್ ಅಂದು ಸಂಪತ್ ಅವರ ನೇತೃತ್ವದಲ್ಲಿ ಕೆಲಸ ಮಾಡಿಕೊಂಡು ಬಂದಿದೆ. ಅನಂತರ ಜನ್ಮತಾಳಿದ ಸಮತಂತೋ, ಅಮರ ಕಲಾವಿದರು– ಈ ತಂಡಗಳೂ ಬೆಂಗಳೂರಿನ ತಂಡಗಳಂತೆ ಮೈಸೂರು ನಗರದಲ್ಲಿ ಅನುವಾದಿತ ನಾಟಕಗಳನ್ನು ಅಸಂಗತ ನಾಟಕಗಳನ್ನೂ ರಂಗದ ಮೇಲೆ ತಂದು ಹೊಸ ಹೊಸ ಪ್ರಯೋಗಗಳನ್ನು ಮಾಡಿ ತಂದಿವೆ ಹಳೆಯ ಉತ್ತಮ ನಾಟಕಗಳನ್ನು ರಂಗದ ಮೇಲೆ ತರುತ್ತಿವೆ. ಆರ್. ಗುರುರಾಜರಾವ್ ಅವರು ವಿಲಾಸಿ ತಂಡಗಳು ಪ್ರದರ್ಶಿಸುವ ನಾಟಕಗಳಿಗೆ ಸಹಾಯ ಮಾಡುತ್ತಿದ್ದಾರೆ.

ದಕ್ಷಿಣ ಕನ್ನಡದಲ್ಲಿ ಹವ್ಯಾಸಿ ರಂಗಭೂಮಿಗಾಗಿ ಶಿವರಾಮ ಕಾರಂತರು ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಕನ್ನಡ ನಾಡಿನ ಉಳಿದ ಭಾಗಗಳಲ್ಲೂ ವಿಲಾಸಿ ತಂಡಗಳು ಕೆಲಸ ಮಾಡಿಕೊಂಡು ಬರುತ್ತಿವೆ. ಹೆಗ್ಗೋಡಿನ ಶ್ರೀ ನೀಲಕಂಠೇಶ್ವರರ ನಾಟ್ಯ ಸೇವಾ ಸಂಘ, ಸಾಗರದ ಎನ್. ಆರ್. ಮಾಸೂರ್ ಮತ್ತು ಮಿತ್ರರು ಧಾರವಾಡದ ಎನ್. ವಿ. ಜಗನ್ನಾಥರಾವ್ ಮತ್ತು ಮಿತ್ರರು ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ಕನ್ನಡ ನಾಡಿನಲ್ಲಿ ಅಲ್ಲದೆ ಭಾರತದ ಪ್ರಮುಖ ನಗರಗಳಾದ ದೆಹಲಿ, ಬೊಂಬಾಯಿ, ಪೂನ, ನಾಗಪುರ, ಹೈದರಾಬಾದ್, ಮದರಾಸು–ಮುಂತಾದ ಕಡೆಗಳಲ್ಲಿ ಕನ್ನಡ ನಾಟಕಗಳು ವಿಲಾಸಿ ತಂಡಗಳಿಂದ ಪ್ರದರ್ಶಿತವಾಗುತ್ತಿವೆ. ಅಲ್ಲದೆ ಭಾರತದ ವಿವಿಧ ಭಾಗಗಳಲ್ಲಿರುವ ಕೈಗಾರಿಕಾ ನಗರಗಳಲ್ಲಿ ಕರ್ಣಾಟಕ ಸಂಘಗಳ ಮೂಲಕ ವಿಲಾಸಿ ನಾಟಕಗಳು ಬೆಳಕು ಕಾಣುತ್ತಿವೆ.

ಎಚ್.ಕೆ. ರಾಮಚಂದ್ರಮೂರ್ತಿ ಅವರ ಮನವೆಂಬ ಮರ್ಕಟ ನಾಟಕದ ಒಂದು ದೃಶ್ಯ

ಈ ದಿಸೆಯಲ್ಲಿ ಪ್ರಮುಖವಾಗಿ ಮುಂಬಯಿಯ ಕನ್ನಡ ಥಿಯೇಟರ್ಸ್, ದೆಹಲಿಯ ಕನ್ನಡ ಭಾರತಿ ಮುಂತಾದ ಸಂಸ್ಥೆಗಳಲ್ಲದೆ, ಬೊಂಬಾಯಿಯಲಿರುವ ಕೆ.ಕೆ. ಸುವರ್ಣ, ವಿ.ಕೆ. ಮೂರ್ತಿ ಕೆ.ಎಂ. ಮುತಾಲಿಕ್, ದೆಹಲಿಯಲ್ಲಿರುವ ಬಿ.ವಿ. ಕಾರಂತ, ಪ್ರೇಮಾ ಕಾರಂತ, ಯು. ಪ್ರಭಾಕರರಾವ್, ಎಂ.ವಿ. ನಾರಾಯಣರಾವ್, ಡಿ. ರಮೇಶ್, ಎಂ.ಎಸ್. ಸತ್ಯ, ಚೆನ್ನೈನಲ್ಲಿರುವ ಪಿ. ಶೇಷಗಿರಿರಾವ್ ಇವರೇ ಮೊದಲಾದವರು ಹವ್ಯಾಸಿ ನಾಟಕಗಳಲ್ಲಿ ಆಸ್ಥೆ ತೋರಿಸುತ್ತಿದ್ದಾರೆ. ಬಿ.ವಿ. ಕಾರಂತ ಅವರ ಕಾರ್ಯವ್ಯಾಪ್ತಿ ಈಗ ದೆಹಲಿಗೆ ಸೀಮಿತವಾಗಿರುವ ಕನ್ನಡ ನಾಡಿನ ಇತರ ಭಾಗಗಳಲ್ಲಿ ವ್ಯಾಪಿಸಿದೆ.

ಈ ಖಾಸಗಿ ಸಂಸ್ಥೆಗಳು, ತಂಡಗಳು ಮತ್ತು ವ್ಯಕ್ತಿಗಳು ವಿಲಾಸಿ ರಂಗಭೂಮಿಗಾಗಿ ಕೆಲಸ ಮಾಡುತ್ತಿದ್ದಂತೆಯೇ ಸರ್ಕಾರವೂ ಈ ದಿಸೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಸಕ್ತಿ ತೋರಿಸುತ್ತಿದೆ. ಸಂಗೀತ ನಾಟಕ ಅಕೆಡಮಿಯ ಆಶ್ರಯದಲ್ಲಿ ಹವ್ಯಾಸಿ ರಂಗಭೂಮಿಗೆ ಪ್ರೋತ್ಸಾಹವಿದೆ. ದೇಶದ ಪ್ರಮುಖ ವಿಲಾಸಿ ತಂಡಗಳಿಂದ ಪ್ರಯೋಗಗಳನ್ನು ಏರ್ಪಡಿಸುವುದರ ಮೂಲಕ ಇದು ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಟ್ಟಿದೆ ಎನ್ನಬಹುದು. ನಾಟಕ ಕೇವಲ ಹವ್ಯಾಸವಷ್ಟೇ ಅಲ್ಲ. ಅದೊಂದು ಶಾಸ್ತ್ರ; ಅದರ ಅಭ್ಯಾಸ ಹಾಗೂ ಪ್ರಯೋಗ ವೈಜ್ಞಾನಿಕ-ಎಂಬುದನ್ನು ಮೈಸೂರು ವಿಶ್ವವಿದ್ಯಾನಿಲಯವೂ ಗಮನಿಸಿ, ಆ ಶಾಸ್ತ್ರವನ್ನು ಅಭ್ಯಾಸಕ್ಕಿಟ್ಟಿದೆ. ಇದರಿಂದ ಉತ್ಸಾಹೀ ಹವ್ಯಾಸಿಗಳನ್ನು ಈ ದಿಸೆಯಲ್ಲಿ ಪ್ರೋತ್ಸಾಹಿಸುತ್ತಿದೆ ಎನ್ನಬಹುದು. ಕೇಂದ್ರ ಸರ್ಕಾರದ ವಿದ್ಯಾ ಇಲಾಖೆ ಎರಡು ಮೂರು ಬಾರಿ ದೇಶದ ಬೇರೆ ಬೇರೆ ಭಾಗಗಳಲ್ಲಿ ನಾಟಕ ತರಬೇತಿ ಶಿಬಿರಗಳನ್ನು ವಿಶ್ವವಿದ್ಯಾನಿಲಯಗಳ ಅಧ್ಯಾಪಕರಾಗಿ ನಡೆಸಿದುದುಂಟು, ಅಲ್ಲಿ ತರಬೇತಿ ಪಡೆದ ಅಧ್ಯಾಪಕರು ತಮ್ಮ ತಮ್ಮ ವಿದ್ಯಾರ್ಥಿಗಳಿಗೆ ಇದರಿಂದ ಸಹಾಯ ಮಾಡಿದ್ದೂ ಉಂಟು. ಕೆಲವು ವರ್ಷಗಳಿಂದ ಆ ಕಾರ್ಯಕ್ರಮ ನಿಂತುಹೋದಂತಿದೆ. ರಾಜ್ಯ ಸರ್ಕಾರದ ಸಂಗೀತ ನಾಟಕ ಅಕೆಡೆಮಿ ಪ್ರೌಢಶಾಲೆಯ ಅಧ್ಯಾಪಕರಿಗೆ ಹಾಗೂ ಹವ್ಯಾಸಿಗಳಿಗೆ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ ಹವ್ಯಾಸಿ ರಂಗಭೂಮಿ ವ್ಯವಸ್ಥಿತ ರೀತಿಯಲ್ಲಿ ಬೆಳೆಯಲು ಇದರಿಂದ ಸಹಾಯವಾಗುವುದರಲ್ಲಿ ಸಂದೇಹವಿಲ್ಲ.

ವಿಲಾಸಿ ನಾಟಕಗಳಲ್ಲಿ ಅಭಿನಯಿಸುವುದರ ಮೂಲಕ ಹವ್ಯಾಸಿ ರಂಗಭೂಮಿಗೆ ವರ್ಚಸ್ಸು ತಂದುಕೊಡಲು ನಾಡಿನ ಹಲವಾರು ಸುಶಿಕ್ಷಿತರೂ ಸಾಹಿತಿಗಳೂ ಕಾರಣರಾಗಿದ್ದಾರೆ, ಕೈಲಾಸಂ. ಶಿವರಾಮ ಕಾರಂತ, ಶ್ರೀರಂಗ, ದೇವುಡು ನರಸಿಂಹಶಾಸ್ತ್ರಿ, ಬಳ್ಳಾರಿ ರಾಘವಾಚಾರಿ, ಎಂ.ಎಲ್. ಶ್ರೀನಿವಾಸಶಾಸ್ತ್ರಿ, ಡಿ. ಲಕ್ಷ್ಮಣಯ್ಯ, ಸಿ. ಆನಂದರಾವ್, ಎನ್.ಎಸ್. ನಾರಾಯಣ ಶಾಸ್ತ್ರಿ, ಎ.ಎಂ. ನಟೇಶ್, ನಾ. ಕಸ್ತೂರಿ, ವಿ.ಕೆ. ಶ್ರೀನಿವಾಸನ್, ಎ.ಸಿ. ನರಸಿಂಹಮೂರ್ತಿ, ಸಿ.ಬಿ. ಜಯರಾವ್, ಸಂಪತ್, ಆರ್. ಗುರುರಾಜರಾವ್, ಟಿ.ಎಂ. ಅಮೀರ್, ಸಿ.ಕೆ. ನಾಗರಾಜರಾವ್, ಟಿ. ಸದಾಶಿವಯ್ಯ, ಎಸ್.ಎಚ್. ಪಾರ್ವತಿ, ಹೇಮಾ, ಯಮುನಾ, ವಿಜಯಾ, ಬಿ.ಎಸ್. ವೆಂಕಟರಾಂ. ಮಂಗಳವೇಡೆ, ಸಿ.ಎಸ್. ಬೆನ್ನೂರ, ಕೆ.ಜಿ. ಹಲಸಗಿ, ಜಿ.ವಿ. ಹಿರೇಮಠ, ವಿ.ಎಂ. ಇನಾಂದಾರ್, ಜೋಳದ ರಾಶಿ ದೊಡ್ಡನಗೌಡ, ವೈ.ಎಂ. ಚಂದ್ರಯ್ಯ ಇವರೇ ಮೊದಲಾದವರೂ ವಿಲಾಸಿ ರಂಗಭೂಮಿಗಾಗಿ ವಿವಿಧ ರೀತಿಯಲ್ಲಿ ಕೆಲಸ ಮಾಡಿದವರೂ ಬಹಳ ಹಿಂದೆಯೇ ನಾಟಕಗಳಲ್ಲಿ ಅಭಿನಯಿಸಿ ಹವ್ಯಾಸೀ ರಂಗಭೂಮಿಗೆ ಒಂದು ಅಸ್ತಿತ್ವವನ್ನು ತಂದುಕೊಟ್ಟರು. ಇತ್ತೀಚೆಗೆ ಹವ್ಯಾಸಿ ರಂಗಭೂಮಿಯಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿರುವ ಹಲವಾರು ನಟರೂ ನಟಿಯರೂ ನೇಪಥ್ಯ ವರ್ಗದವರೂ ಈ ರಂಗಭೂಮಿಯನ್ನು ಪ್ರಗತಿಪಥದತ್ತ ಒಯ್ಯುತ್ತಿದ್ದಾರೆ. ನಾಡಿನ ಬಹಳೆಡೆಗಳಲ್ಲಿ ವಿಲಾಸಿ ನಾಟಕಗಳ ಪ್ರಯೋಗ ನಡೆಯುತ್ತಿದ್ದು, ಪ್ರಮುಖ ನಗರಗಳಾದ ಬೆಂಗಳೂರು, ಮೈಸೂರುಗಳಲ್ಲಿ ಈ ಚಟುವಟಿಕೆ ಹೆಚ್ಚಾಗಿ ಕಾಣಬರುತ್ತಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಹಲವು ಉತ್ತಮ ನಟನಟಿಯರನ್ನೂ ನೇಪಥ್ಯ ವರ್ಗದವರನ್ನೂ ಇಲ್ಲಿ ಹೆಸರಿಸಬಹುದು. ಅವರುಗಳೆಂದರೆ (ಈ ಹಿಂದೆ ಹೆಸರಿಸಿದವರಲ್ಲದೆ) ಬೆಂಗಳೂರಿನಲ್ಲಿ-ಸಿಂಹ, ನಾಗರತ್ನ, ಲೋಕನಾಥ್, ಬಿ.ಆರ್. ಜಯರಾಂ, ಸೀತಾರಾಂ. ಲೋಕೇಶ್, ವಿಮಲಾ ರಂಗಾಚಾರ್, ಶಿವರಾಮಯ್ಯ, ನೀಲಿ, ಜಿ. ನೀಲಕಂಠರಾವ್, ಜಿ.ವಿ. ಜಯಶ್ರೀ, ಎಚ್.ಜಿ. ಸೋಮೇಶೇಖರರಾವ್, ಪದ್ಮನಾಭ್ (ಪದ್ದು), ವೆಂಕಟಸುಬ್ಬರಾವ್, ಲಲಿತಾ ಕುಪ್ಪಸ್ವಾಮಿ, ಮಾಲತಿ, ವಿಜಯಲಕ್ಷ್ಮಿ, ಶಾಂತಾ, ಶಾಂತ ದೇವುಡು, ರಾಮಮೂರ್ತಿ, ಜಯಶ್ರೀ, ಸುಶೀಲ ಭಾರ್ಗವಿ ಇವರೇ ಮೊದಲಾದವರು, ಮೈಸೂರಿನಲ್ಲಿ ಚಲನಚಿತ್ರ ನಟ ಕೆ.ಎಸ್. ಅಶ್ವತ್ಥ, ಬಿ.ಎ. ಸತ್ಯನಾರಾಯಣರಾವ್, ಎಚ್.ಎನ್. ದೊಡ್ಡನಾರಾಣಪ್ಪ, ವಾಸು, ಬಸವರಾಜ್, ಕೆ. ಇಂದಿರಾ, ನ. ರತ್ನ, ವಿಶ್ವನಾಥ ಮಿರ್ಲೆ, ಎಚ್.ಎಂ. ಚನ್ನಯ್ಯ, ಸಿಂಧುವಳ್ಳಿ ಅನಂತಮೂರ್ತಿ, ರಾಮೇಶ್ವರೀ ವರ್ಮ ನರಸಿಂಹನ್, ರಾಮನಾಥ್, ಬಿ.ಆರ್. ವೆಂಕಟರಾಂ ಇವರೇ ಮೊದಲಾದವರು, ಹವ್ಯಾಸಿ ರಂಗಭೂಮಿಯ ಕೊಡುಗೆಗಳು ಗಮನಾರ್ಹ, ಬಿ.ಎಂ.ಶ್ರೀ., ಕುವೆಂಪು, ಕೈಲಾಸಂ, ಶ್ರೀರಂಗ, ಸಂಸ, ಎಸ್.ಜಿ. ಶಾಸ್ತ್ರಿ, ಎಂ.ಆರ್. ಶ್ರೀ ವೆಂಬಾರ್, ವೆಂಕಣ್ಣಚಾರ್, ಪು.ತಿ.ನ., ಮಾಸ್ತಿ, ಶಿವರಾಮ ಕಾರಂತ, ಪರ್ವತವಾಣಿ, ಕ್ಷೀರಸಾಗರ, ಎ.ಎನ್. ಮೂರ್ತಿರಾವ್, ನಾ. ಕಸ್ತೂರಿ, ಚಿ. ಸದಾಶಿವಯ್ಯ, ಜಿ.ಬಿ. ಜೋಶಿ ಕೀರ್ತಿನಾಥ ಕುರ್ತಕೋಟಿ, ದ.ರಾ. ಬೇಂದ್ರೆ, ಜಿ.ಪಿ. ರಾಜರತ್ನಂ; ಗಿರೀಶ ಕಾರ್ನಾಡ ಲಂಕೇಶ್, ಚಂದ್ರಶೇಖರ ಪಾಟೀಲ್, ಚಂದ್ರಶೇಖರ ಕಂಬಾರ, ಎಚ್.ಕೆ. ರಾಮಚಂದ್ರಮೂರ್ತಿ, ರಾಮಚಂದ್ರಶರ್ಮ, ನ. ರತ್ನ ಮೊದಲಾದ ನಾಟಕಕಾರರನ್ನು ಕೊಟ್ಟಿದೆ. ಸಾಹಿತ್ಯಿಕವಾಗಿ, ವೈಚಾರಿಕವಾಗಿ ನಾಟಕ ಪ್ರದರ್ಶನವನ್ನು ನೋಡಲು ಸಾಧ್ಯವಾಗಿದೆ. ಹಿನ್ನೆಲೆ, ರಂಗಸಜ್ಜಿಕೆ ದೀಪದ ವ್ಯವಸ್ಥೆ, ನಿರ್ದೇಶನ, ಅಭಿನಯ ಇವೇ ಮೊದಲಾದವುಗಳಲ್ಲಿ ಪ್ರಯೋಗ ಶೀಲತೆ ಕಂಡುಬರುತ್ತದೆ. ಪ್ರೇಕ್ಷಕರು ಹಣ ಕೊಟ್ಟು ನಾಟಕ ನೋಡುವ ಪ್ರವೃತ್ತಿ ಬೆಳೆಯುತ್ತಿದೆ. ಹವ್ಯಾಸಿ ರಂಗಭೂಮಿಯಲ್ಲಿ ಹಿಂದೆಂದೂ ಕಾಣದಷ್ಟು ಲವಲವಿಕೆ ಇಂದು ಕಂಡು ಬರುತ್ತಿದ್ದು, ಕನ್ನಡ ರಂಗಭೂಮಿಯ ಭವಿಷ್ಯದ ಬಗ್ಗೆ ಭರವಸೆ ಉಂಟಾಗಿದೆ.

(ಎಸ್.ಎ.ಎಂ.)

**ಕನ್ನಡ ವಿಶ್ವವಿದ್ಯಾಲಯ :** ಕನ್ನಡ ನಾಡು, ನುಡಿ, ಸಂಸ್ಕೃತಿಗಳ ವಿಶೇಷ ಅಧ್ಯಯನಕ್ಕಾಗಿ 1991ರಲ್ಲಿ ಸ್ಥಾಪಿತವಾದ ಒಂದು ವಿಶ್ವವಿದ್ಯಾಲಯ. ಕನ್ನಡದ ಕೆಲಸಗಳು ವಿವಿಧ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಕೇಂದ್ರಗಳು, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿವಿಧ ಅಕಾಡೆಮಿಗಳ ಮೂಲಕ ನಡೆಯುತ್ತಿದ್ದರೂ ಕನ್ನಡ ನಾಡುನುಡಿಯ ಬಗ್ಗೆ, ಕನ್ನಡ ಭಾಷಾ ಪುರೋಭಿವೃದ್ಧಿಯ ಬಗ್ಗೆ ಆಳವಾದ ಕೆಲಸ ಕಾರ್ಯಗಳು ನಡೆಯಬೇಕೆಂಬ ಮಹೋದ್ದೇಶದಿಂದ ಕರ್ನಾಟಕ ಸರ್ಕಾರ ಈ ವಿಶ್ವವಿದ್ಯಾಲಯವನ್ನು ಅಸ್ತಿತ್ವಕ್ಕೆ ತಂದಿತು. ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಮಹತ್ತ್ವವುಳ್ಳ ಹಂಪೆಯ ಪರಿಸರದಲ್ಲಿ ಈ ವಿಶ್ವವಿದ್ಯಾಲಯ ನೆಲೆಗೊಂಡಿದೆ. ಹಂಪಿಯ ಹೊರವಲಯದಲ್ಲಿರುವ ಈ ವಿಶ್ವವಿದ್ಯಾಲಯದ ಆವರಣಕ್ಕೆ ವಿದ್ಯಾರಣ್ಯವೆಂದು ಹೆಸರಿದೆ. ವಿಜಯನಗರ ಕಾಲದ ವಿಶಿಷ್ಟ ವಾಸ್ತುಶೈಲಿಯಲ್ಲಿ ಕಟ್ಟಡಗಳನ್ನು ರೂಪಿಸಲಾಗಿದೆ. ಇಲ್ಲಿನ ಕಟ್ಟಡಗಳನ್ನು ರೂಪಿಸಿದವರು ವಾಸ್ತುಶಿಲ್ಪಿ ಲಾರಿ ಬೇಕರ್ ಅವರ ಶಿಷ್ಯ ಗೋವಾದ ಡಿಕುನ್ಹಾ ಮತ್ತು ಗುಲ್ಬರ್ಗದ 'ಆಕೃತಿ' ವಾಸ್ತುಶಿಲ್ಪಿಗಳು. ಇವರೊಂದಿಗೆ ನವದೆಹಲಿಯ ವಿನ್ಯಾಸ್ ಆರ್ಕಿಟೆಕ್ಟ್‌ನ ಕಬೀರ್ ವಾಜಪೇಯಿ, ತಮಿಳುನಾಡಿನ ಸ್ಥಪತಿ ಗಣಪತಿಯವರ ಶಿಷ್ಯವರ್ಗದವರು ಕನ್ನಡ ವಿಶ್ವವಿದ್ಯಾಲಯದ ಬೇರೆ ಬೇರೆ ವಿನ್ಯಾಸ ರಚನೆಗೆ ಕಾರಣರಾಗಿದ್ದಾರೆ.

ಸು.650 ಎಕರೆ ಪ್ರದೇಶವನ್ನೊಳಗೊಂಡ ವಿಸ್ತಾರವಾದ ಆವರಣವನ್ನು ಹೊಂದಿರುವ ಕನ್ನಡ ವಿಶ್ವವಿದ್ಯಾಲಯ ತಂಜಾವೂರಿನ ತಮಿಳು ವಿಶ್ವವಿದ್ಯಾಲಯ ಹಾಗೂ ಹೈದರಾಬಾದಿನ ತೆಲುಗು ವಿಶ್ವವಿದ್ಯಾಲಯಗಳ ಅಂತಃಪ್ರೇರಣೆಯಿಂದ ರೂಪಿತಗೊಂಡಿತು. ಕನ್ನಡದ ಅತ್ಯಂತ ಪ್ರಾಚೀನ ಶಾಸನವೆನಿಸಿರುವ ಹಲ್ಮಿಡಿ ಶಾಸನದ ಮೇಲ್ಭಾಗದ ಮಾದರಿಯ ಕೆತ್ತನೆಯನ್ನು ಬಳಸಿ ವಿಶ್ವವಿದ್ಯಾಲಯದ ಲಾಂಛನವನ್ನು ರೂಪಿಸಲಾಗಿದೆ. ಮಾತೆಂಬುದು ಜ್ಯೋತಿರ್ಲಿಂಗ ಈ ಲಾಂಛನದ ಧ್ಯೇಯ ವಾಕ್ಯ.

ಕರ್ನಾಟಕ ಸಂಸ್ಕೃತಿಯ ಶೋಧನೆ, ಪ್ರಸಾರ ಹಾಗೂ ಸಂರಕ್ಷಣೆ ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ. ಮೇಲ್ನೋಟಕ್ಕೆ ಇದು ಕರ್ನಾಟಕದ ಭೌಗೋಳಿಕ ವ್ಯಾಪ್ತಿಗೆ ಸೀಮಿತ ಅನ್ನಿಸಿದರೂ ಕನ್ನಡ ಭಾಷೆ ಮತ್ತು ಸಂಸ್ಕೃತಿ ಕುರಿತಾದ ಯಾವುದೇ ವಿಷಯವೂ ಈ ವಿಶ್ವವಿದ್ಯಾಲಯದ ಪರಿಧಿಯಲ್ಲಿ ಬರುತ್ತದೆ. ಸಮಗ್ರ ಕನ್ನಡ ಸಂಸ್ಕೃತಿಯ ಅಧ್ಯಯನ, ಸಂಶೋಧನೆ ಹಾಗೂ ಪ್ರಕಟಣೆ ವಿಶ್ವವಿದ್ಯಾಲಯದ ಮುಖ್ಯ ಗುರಿ. ಇಲ್ಲಿ ಇತರ ವಿಶ್ವವಿದ್ಯಾಲಯಗಳಲ್ಲಿರುವಂತೆ ಬೋಧನೆ ಇರುವುದಿಲ್ಲ. ಸಂಶೋಧನೆಯೇ ಪ್ರಧಾನ. ಸಂಶೋಧನೆಗೆ ಒತ್ತು ನೀಡಿರುವಂತೆಯೇ ಎಂ.ಫಿಲ್; ಡಿ.ಲಿಟ್ ಹಾಗೂ ಪಿಎಚ್.ಡಿ.; ಎಂ.ಎ.ಪಿಎಚ್.ಡಿ. ಗಳಂಥ ಸಂಶೋಧನ ಪದವಿಗಳನ್ನೂ ಪ್ರದಾನ ಮಾಡಲಾಗುತ್ತದೆ. ಕನ್ನಡ ನಾಡುನುಡಿಗೆ ವಿಶೇಷವಾಗಿ ಶ್ರಮಿಸಿದವರನ್ನು ಗುರುತಿಸಿ ನಾಡೋಜ ಗೌರವ ಪದವಿಯನ್ನೂ ನೀಡಲಾಗುತ್ತಿದೆ. ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮವನ್ನು

ನುಡಿಹಬ್ಬ ಎಂದು ಕರೆಯಲಾಗುತ್ತದೆ. ಅಧ್ಯಯನ, ಸಂಶೋಧನೆ, ಆಡಳಿತ ಮುಂತಾದ ಉದ್ದೇಶಗಳಿಗೆ ಪ್ರತ್ಯೇಕ ಕಟ್ಟಡಗಳಿದ್ದು ಅವುಗಳನ್ನು ಪರಂಪರೆಯ ವಿಶಿಷ್ಟ ಹೆಸರುಗಳಿಂದ ಕರೆಯಲಾಗಿದೆ. 'ಕ್ರಿಯಾಶಕ್ತಿ' ಆಡಳಿತ ಕಟ್ಟಡವಾಗಿದ್ದರೆ, 'ಕೂಡಲ ಸಂಗಮ' ಭಾಷಾಂತರ ಹಾಗೂ ದ್ರಾವಿಡ ಸಂಸ್ಕೃತಿ ಅಧ್ಯಯನ ಕಟ್ಟಡ. ಕನ್ನಡ ಭಾಷಾಭಿವೃದ್ಧಿ, ಶಾಸನ ವಿಭಾಗಗಳು 'ತುಂಗಭದ್ರಾ'ದಲ್ಲಿದೆ. ಮಹಿಳಾ ಅಧ್ಯಯನ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಗಳು 'ತ್ರಿಪದಿ' ಕಟ್ಟಡದಲ್ಲಿವೆ. ಪುಸ್ತಕ ಪ್ರಕಟಣಾಲಯಕ್ಕೆ 'ಕಾರ್ಯಕ'ವೆನ್ನಲಾಗಿದೆ. ಗ್ರಂಥಾಲಯವನ್ನು 'ಅಕ್ಷರ'ವೆಂದೂ ಇತಿಹಾಸ, ಪುರಾತತ್ತ್ವ ವಿಭಾಗಗಳಿಗೆ 'ಘಟಿಕಾಲಯ'ವೆಂದೂ ವಿಚಾರ ಸಂಕಿರಣ, ಸಂಗೀತ, ನೃತ್ಯ ಪ್ರದರ್ಶನ ಸ್ಥಳಕ್ಕೆ 'ಭುವನ ವಿಜಯ'ವೆಂದೂ ನಾಟಕದ ಬಯಲು ರಂಗಭೂಮಿಗೆ 'ನವರಂಗ'ವೆಂದೂ ಅಧ್ಯಯನಾಂಗಕ್ಕೆ 'ಜಕ್ಕಣ ಮಂಟಪ'ವೆಂದೂ ಹೆಸರಿಸಿದೆ. 'ಮಾನಸೋಲ್ಲಾಸ' ಕುಲಪತಿಗಳ ನಿವಾಸದ ಹೆಸರಾಗಿದ್ದರೆ 'ನಿತ್ಯೋತ್ಸವ' ಅಧ್ಯಾಪಕರ ವಸತಿ ಸಂಕೀರ್ಣದ ಹೆಸರಾಗಿದೆ. ಅತಿಥಿ ಗೃಹಕ್ಕೆ 'ಶ್ರೀಶೈಲ' ವೆಂದು ಹೆಸರು. ವಿವಿಧ ಬುಡಕಟ್ಟುಗಳ ವಾಸ್ತುವಿನ್ಯಾಸವನ್ನು ಅಳವಡಿಸಿಕೊಂಡಿರುವ ಅಧ್ಯಯನ ವಿಭಾಗಗಳಿವೆ. ಗಿರಿಸೀಮೆ, ಚಾವಡಿ, ಹಾಲಕ್ಕಿ, ಒಕ್ಕಲಿಗರ ಮನೆ, ದೀವರ ಮನೆ, ಸಿದ್ಧಿಯರ ಮನೆ, ಕುಣಬಿಯರ ಮನೆ, ಗೊಂಡರ ಮನೆ, ಸೋಲಿಗರ ಮನೆ, ಕಾಡು ಮತ್ತು ಜೇನು ಕುರುಬರ ಮನೆ, ಮಲೆಕುಡಿಯರ ಮನೆ ಮುಂತಾದವು ಆಯಾ ಬುಡಕಟ್ಟುಗಳ ವಿಶಿಷ್ಟ ಮನೆ ಮಾದರಿಗಳ ಪ್ರತಿರೂಪಗಳಾಗಿವೆ.

ವಿಶ್ವವಿದ್ಯಾಲಯದಲ್ಲಿ ದಾನಿಗಳಿಂದ ದತ್ತಿ ಪಡೆದು ವಿವಿಧ ವಿಷಯಗಳಲ್ಲಿ ಅಧ್ಯಯನ ನಡೆಸಲಾಗುತ್ತಿದೆ. ಇವುಗಳಲ್ಲಿ ಶಂಬಾ ಜೋಶಿ ಅಧ್ಯಯನ ಪೀಠ, ರಾಮಮನೋಹರ ಲೋಹಿಯಾ ಅಧ್ಯಯನ ಪೀಠ, ದಲಿತ ಸಂಸ್ಕೃತಿ ಅಧ್ಯಯನ ಪೀಠ, ಪುರಂದರದಾಸ ಅಧ್ಯಯನ ಪೀಠ, ಕೆ.ವಿ.ತಿರುಪಾಲಕ್ಷಪ್ಪ ದತ್ತಿ ಪೀಠ, ಶ್ರೀಮತಿ ಅಲ್ಲಂ ಸುಮಂಗಳಮ್ಮ ಮತ್ತು ಶ್ರೀ ಅಲ್ಲಂ ಕರಿಬಸಪ್ಪ ದತ್ತಿ ನಿಧಿ, ಕೆ.ಎಲ್.ಇ. ಸೊಸೈಟಿ, ದತ್ತಿ ನಿಧಿ, ಬೆಳಗಾಂವಿ, ಹಿರೇಹಾಳ್ ಇಬ್ರಾಹಿಂ ದತ್ತಿ ನಿಧಿ, ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ ದತ್ತಿ ನಿಧಿ ಹಾಗೂ ಶ್ರೀಮತಿ ಉಮಾದೇವಿ ಕಲಬುರ್ಗಿ ಮಹಿಳಾ ಕ್ಷೇಮನಿಧಿ ಮುಖ್ಯವಾದವು. ಇವುಗಳ ಮೂಲಕ ದತ್ತಿ ಉಪನ್ಯಾಸಗಳು, ಪ್ರಕಟಣೆ, ಶೈಕ್ಷಣಿಕ, ಸಾಂಸ್ಕೃತಿಕ ವ್ಯಕ್ತಿಗಳಿಗೆ ಸನ್ಮಾನ ಮುಂತಾದವನ್ನು ನಡೆಸಲಾಗುತ್ತದೆ.

ದೂರಶಿಕ್ಷಣ ಕಾರ್ಯಕ್ರಮವನ್ನೂ ವಿಶ್ವವಿದ್ಯಾಲಯ ಹಮ್ಮಿ ಕೊಂಡಿದ್ದು ಇದರಲ್ಲಿ ಕರ್ನಾಟಕ ಅಧ್ಯಯನ, ಕ್ರಿಯಾತ್ಮಕ ಕನ್ನಡ, ದಲಿತ ಅಧ್ಯಯನ, ಪುರಾತತ್ತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಮತ್ತು ಮಹಿಳಾ ಅಧ್ಯಯನಗಳನ್ನು ಸ್ನಾತಕೋತ್ತರ ಡಿಪ್ಲೊಮಾಗಳೆಂದೂ ಆಡಳಿತ ಕನ್ನಡ, ಜನಪದ ಕಲೆಗಳು ಇವನ್ನು ಮೆಟ್ರಿಕ್ ಅನಂತರದ ಡಿಪ್ಲೊಮಾಗಳೆಂದೂ ನಡೆಸಲಾಗುತ್ತಿದೆ.

ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಪುರಾತತ್ತ್ವ, ಜಾನಪದ, ಬುಡಕಟ್ಟು ಮುಂತಾದವನ್ನು ಪ್ರದರ್ಶಿಸುವ ಇಲ್ಲಿನ ವಸ್ತುಸಂಗ್ರಹಾಲಯವನ್ನು 1994ರಲ್ಲಿ ಆರಂಭಿಸಲಾಯಿತು. ಬಿತ್ತರ ಎಂಬ ಮಾಹಿತಿಕೇಂದ್ರ ಕನ್ನಡ ಪತ್ರಿಕೆಗಳಿಗೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹೊಂದಿದೆ. ವಿಶ್ವವಿದ್ಯಾಲಯದ ಪ್ರಸಾರಾಂಗ ಕಳೆದ ಹತ್ತು ವರ್ಷಗಳಲ್ಲಿ 550ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ (2003). ಜೊತೆಗೆ ಪುಸ್ತಕ ಮಾಹಿತಿ, ಚೆಲುವ ಕನ್ನಡ, ವಿಜ್ಞಾನ ಸಂಗಾತಿ, ಕನ್ನಡ ಅಧ್ಯಯನ ಹಾಗೂ ಮಹಿಳಾ ಅಧ್ಯಯನ ಎಂಬ ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ. ವಿಶ್ವವಿದ್ಯಾಲಯದ ಮುಖ್ಯ ಪ್ರಕಟಣೆಗಳಲ್ಲಿ ವೃತ್ತಿಪದಕೋಶ, ಬುಡಕಟ್ಟು ಹಾಗೂ ಜನಪದ ಮಹಾಕಾವ್ಯಗಳು, ಶಾಸನ ಸಂಪುಟಗಳು, ಬಿಡಿ ವಿಶ್ವಕೋಶಗಳು, ಕರ್ನಾಟಕ ಚರಿತ್ರೆಯ ಸಂಪುಟಗಳು, ದೇವಾಲಯ ಕೋಶಗಳು ಮುಖ್ಯವಾದವು.

ಜ್ಞಾನ ಪ್ರಸಾರ ಕಾರ್ಯಕ್ಕೆ ಅನುಕೂಲವಾಗುವಂತೆ ಮಂಟಪ ಮಾಲೆ, ವಿಶೇಷ ಉಪನ್ಯಾಸ ಮಾಲೆ, ಮೂಲಭೂತ ಉಪನ್ಯಾಸ ಮಾಲೆ ಹಾಗೂ ಉಪೇಕ್ಷಿತ ಸಾಹಿತ್ಯ ಮಾಲೆಗಳಂಥ ಉಪನ್ಯಾಸ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗಾಗಿ ವಿಶ್ವವಿದ್ಯಾಲಯ ಆಯೋಜಿಸಿದೆ. 'ನವಸಾಕ್ಷರ ಮಾಲೆ' ಅಕ್ಷರ ಕಲಿಸುವ ಪ್ರಯತ್ನವಾಗಿದೆ. ಪುಸ್ತಕ ಪ್ರೀತಿಯನ್ನು ಜನರಲ್ಲಿ ಹುಟ್ಟಿಸುವ ಕಾರಣದಿಂದ ಪುಸ್ತಕ ಸಂಸ್ಕೃತಿ ಯಾತ್ರೆಯನ್ನು ಕೈಗೊಳ್ಳುವ ವಿಶ್ವವಿದ್ಯಾಲಯ ಜನರ ಬಳಿಗೆ ವಿಚಾರ ಸಾಮಗ್ರಿಯನ್ನು ಒಯ್ಯುತ್ತದೆ. ಅಧ್ಯಯನ ಕಮ್ಮಟ, ಶಿಬಿರ, ವಿಶೇಷ ಉಪನ್ಯಾಸ, ವಿಚಾರ ಸಂಕಿರಣಗಳನ್ನು ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ಮುಂತಾದ ಎಲ್ಲ ವಿಷಯಗಳಲ್ಲೂ ಹಮ್ಮಿಕೊಂಡು ಕರ್ನಾಟಕದ ವೈವಿಧ್ಯಮಯ ಸಮಾಜ, ಸಂಸ್ಕೃತಿ ಹಾಗೂ ಬಹುಮುಖ ಜ್ಞಾನವನ್ನು ಒಂದು ಸೂರಿನ ಅಡಿಯಲ್ಲಿ ಜಗತ್ತಿಗೆ ಪರಿಚಯಿಸುತ್ತಿದೆ. 2001ರಲ್ಲಿ ವಿಶ್ವವಿದ್ಯಾಲಯ ದಶ ಮಾನೋತ್ಸವವನ್ನು ಆಚರಿಸಿಕೊಂಡಿತು. ಗಡಿನಾಡ ಕನ್ನಡ, ನೆಲ ಜಲ ಸಂರಕ್ಷಣೆ, ಅಖಂಡ ಕರ್ನಾಟಕದ ಕಲ್ಪನೆ, ಪರಿಸರ ಜಾಗೃತಿ, ಕನ್ನಡ ಪ್ರಜ್ಞೆಯ ಜಾಗೃತಿ ಮುಂತಾದವುಗಳ ಬಗ್ಗೆ ಕನ್ನಡ ವಿಶ್ವವಿದ್ಯಾಲಯ ಗಂಭೀರ ಪ್ರಯತ್ನಗಳನ್ನು ನಡೆಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿ ಚಂದ್ರಶೇಖರ ಕಂಬಾರ (1991–97). ಅನಂತರ ಎಂ.ಎಂ.ಕಲಬುರ್ಗಿ (1997–99), ಎಚ್.ಜೆ.ಲಕ್ಕಪ್ಪಗೌಡ ಕುಲಪತಿಗಳಾಗಿದ್ದರು (1999–03). ಬಿ.ಎ.ವಿವೇಕ ರೈ ಈಗಿನ ಕುಲಪತಿ (2004).

(ಎಸ್.ಬಿಎಚ್.ಎ.)

**ಕನ್ನಡ ವೃತ್ತಿ ರಂಗಭೂಮಿಯ ನಟರು :** ಕನ್ನಡ ನಾಡಿನ ನಟವರ್ಗದಲ್ಲಿ ಹಿರಿಯರು ಕೆಲವರು ಪ್ರಸಕ್ತಶಕದ ಆದಿಯಲ್ಲೆ ನೀಲಗಿರಿಯಲ್ಲಿ ತಮಿಳು ದೊರೆ ಶೆಂಗುಟ್ಟವನ್ ಎಂಬಾತನ ಸಮಕ್ಷದಲ್ಲಿ ನಾಟಕವಾಡಿ ತೋರಿಸಿದ್ದರೆಂದು ಶಿಲಪ್ಪದಿಗಾರಂ ಎಂಬ ತಮಿಳು ಗ್ರಂಥದಲ್ಲಿ ಉಲ್ಲೇಖವಾಗಿರುವುದನ್ನು ಆಧಾರವಾಗಿಟ್ಟುಕೊಳ್ಳುವುದಾದರೆ ಕನ್ನಡ ನಟವರ್ಗಕ್ಕೂ ಒಂದು ಪ್ರಾಚೀನ ಪರಂಪರೆ ಇದೆಯೆಂದು ಊಹಿಸಬಹುದು.

ವಿಜಯನಗರದ ಉಚ್ಛ್ರಾಯಕಾಲದಲ್ಲಿ ಮೆರೆದ ಭಾರತದ ಆರ್ಯ ಸಂಸ್ಕೃತಿಯ ಪ್ರಾದೇಶಿಕ ಸ್ವರೂಪದಲ್ಲಿ ಕನ್ನಡ ನಾಟಕಗಳಿಗೂ ಯೋಗ್ಯಪಾತ್ರ ಬಂದಿತ್ತೆಂಬುದರಲ್ಲಿ ಸಂದೇಹವಿಲ್ಲ. ಮೈಸೂರಿನ ಒಡೆಯರ ಕಾಲದಲ್ಲಿ ಮತ್ತು ಹೈದರನ ಆಡಳಿತದಲ್ಲಿ ಕನ್ನಡ ನಾಟಕಗಳನ್ನು ಅಭಿನಯಿಸಿ ದೊರೆಗಳ ಮತ್ತು ಜನಗಳ ಮನವನ್ನೊಲಿಸುತ್ತಿದ್ದ ನಟ ನಟಿಯರಿದ್ದರೆಂದು ಕಾಣುತ್ತದೆ. ಚಿಕ್ಕದೇವರಾಜ ಒಡೆಯರ ಕಾಲದ ಮಿತ್ರವಿಂದಗೋವಿಂದ ನಾಟಕ ಯೋಗ್ಯ ನಟರಿಂದ ಅಭಿನಯಿಸಲ್ಪಟ್ಟಿದ್ದರಿಂದಲೇ ಬೆಳಕಿಗೆ ಬರುವುದು ಸಾಧ್ಯವಾಯಿತು. ಬರಬರುತ್ತ ರಾಜಾಶ್ರಯ ಕ್ಷಯಿಸಲು ಈ ನಟರು ಹಳ್ಳಿಯನ್ನು ಸೇರಿ ಅಥವಾ ತಮ್ಮ ಹುಟ್ಟೂರನ್ನು ಸೇರಿ, ಹರಿಕಥೆ ಮಾಡಿಯೋ, ಬಯಲಾಟ ನಡೆಸಿಯೋ, ಯಕ್ಷಗಾನ ಪ್ರಸಂಗ ತೋರಿಸಿಯೋ, ತಮ್ಮ ಹೊಟ್ಟೆ ಹೊರೆಯಬೇಕಾದ ಸ್ಥಿತಿ ಬಂತು.

**ಆದ್ಯ ಪ್ರವರ್ತಕರು:** ಕನ್ನಡ ನಾಡಿನಲ್ಲಿ ಹೀಗೆ ಮೂಲೆ ಗುಂಪಾದ ನಟರಿಗೆ ಅದೃಷ್ಟದ ಬೆಳಕು ಬಂದುದು 19ನೆಯ ಶತಮಾನದ ಉತ್ತರಾರ್ಧದ ಸುಮಾರಿಗೆ ಮೈಸೂರರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ನಾಟಕ ನೋಡುವುದೆಂದರೆ ಬಹು ಪ್ರಿಯ. ಒಳ್ಳೆಯ ನಟನಟಿಯರಿಗೆ ಆಹ್ವಾನವಿತ್ತು. ತಮ್ಮ ರಾಣಿವಾಸ, ಪರಿವಾರ, ಬಂಧು ಜನರು, ಪುರಜನರಲ್ಲಿ ಗಣ್ಯರು ಇವರನ್ನು ಕರೆಸಿಕೊಂಡು ಅರಮನೆಯ ಅಂಗಳದಲ್ಲಿ ಅವರೆದುರಿಗೆ ನಾಟಕವಾಡುತ್ತಿದ್ದರಂತೆ. ಆ ಜನ ಮೆಚ್ಚಿದರೆಂದರೆ ದೊರೆಗೂ ಆನಂದ, ನಟರಿಗೆ ಯೋಗ್ಯ ಪುರಸ್ಕಾರ. ದೊರೆಯ ರಸಿಕ ಪ್ರಿಯತಮೆಯ ಕಥೆ ಕೇಳಿದ್ದ ಮಂಗಳೂರಿನ ದಶಾವತಾರದ ನಟರ ಗುಂಪೊಂದು ಮೈಸೂರಿಗೆ ಬಂದಿಳಿಯಿತು. ಊರ ಜನರೆಲ್ಲ ನೋಡಲೆಂದು ದೊರೆಯ ಆಸೆ. ಅರಮನೆಯ ಮುಂಭಾಗದಲ್ಲೇ ಒಂದು ಚಪ್ಪರ ನಿರ್ಮಾಣವಾಯಿತು. ನಾಟಕ ನೋಡಿ ಆನಂದಿಸಿದವರಲ್ಲಿ ನಗರದ ತರುಣರ ಗುಂಪೊಂದು ಸೇರಿ ಒಂದು ನಾಟಕವನ್ನು ಆರಿಸಿಕೊಂಡು ದೊರೆಯ ಮುಂದೆ ಅದೇ ರೀತಿ ಆಡಿ ಮೆಚ್ಚಿಸಿದಾಗ ಜನತೆಗೂ ಅದನ್ನು ತೋರಿಸಲು ಈಗಿನ ಪುರಭವನದ ಮುಂದಿನ ಮೈದಾನದಲ್ಲಿ ದೊಡ್ಡ ಚಪ್ಪರ ನಿರ್ಮಿಸಿ ನಾಟಕವಾಡಿದರಂತೆ. ಹೀಗೆ ಆಡಿದ ನಾಟಕ ದ್ರೌಪದೀ ಸ್ವಯಂವರ; ವಸ್ತು ಕುಮಾರವ್ಯಾಸನ ಭಾರತದ್ದು; ರಚಿಸಿದವರು ಗಿರಿಭಟ್ಟರ ತಮ್ಮಯ್ಯ. ಅನಂತರ ಬಂದದ್ದು ಜೈಮಿನಿ ಭಾರತದ ಆಧಾರದ ಮೇಲೆ ಬರೆದ ಸುಧನ್ವಕಾಳಗ. ಸು. 1860ರಲ್ಲಿ ಸುಮಾರಿಗೆ ಮೈಸೂರು ನಗರದ ನಟರೂ ಇದೇ ಕಾಲಕ್ಕೆ ಧಾರವಾಡದಲ್ಲಿ ಶೇಷಗಿರಿರಾಯ ರೆಂಬುವವರು ಬರೆದ ಕನ್ನಡ ಶಾಕುಂತಲವಾಡಿದ ಮಂಡಲಿಯ ನಟರೂ ಹೆಸರಿಗೆ ಆಸೆಪಡದೆ ಎಲೆಮರೆಯ ಕಾಯಿಯಂತೆ ಜನ ಸೇವೆಗೈದರು. ಇವರೇ ಕನ್ನಡ ನಾಡಿನ ಈಚಿನ ಪ್ರಪ್ರಥಮ ನಟನಟಿಯರು.

ಜಿ.ಎಚ್. ವೀರಣ್ಣ

ಆ ವೇಳೆಗೆ ಮೈಸೂರಿನಲ್ಲಿ ಇನ್ನೂ ಅನೇಕ ತರುಣರಿಗೆ ನಾಟಕದಲ್ಲಿ ಅಭಿರುಚಿ ಬೆಳೆಯಿತು. ಮಹಾರಾಜರ ಪ್ರೋತ್ಸಾಹದಿಂದ ಇಂಗ್ಲಿಷ್ ಸಂಸ್ಕೃತ ನಾಟಕಗಳ ಅನುವಾದಗಳ ಅಭಿನಯ ಯಶಸ್ವಿಯಾಯಿತು. ನಾಟಕದ ತಂಡ ಕಂಪನಿಯಾಗಿ ಬೆಳೆಯಲು ಒಬಿಬ್ಬ ಮುಖ್ಯ ನಟರು ಕಾರಣರಾಗಲೇಬೇಕಷ್ಟೆ. ಸಂಗೀತದಿಂದಲೇ ಗದ್ಯಭಾಗವನ್ನು ಸ್ಪಷ್ಟವಾಗಿ ಅಭಿನಯಪೂರ್ವಕವಾಗಿ ನಟಿಸುವುದರಿಂದಲೇ ಜನಮನ ಮೆಚ್ಚಿಸುವುದು ಆಗಿನ ಪದ್ಧತಿ. ಸಂಗೀತದಿಂದ ಜನರನ್ನು ಮೆಚ್ಚಿಸಿದ ಮೈಸೂರಿನ ಮೊಟ್ಟ ಮೊದಲಿನ ನಟರು ಜುಂಜೋಟಿ ರಂಗಾಚಾರ್ಯ. ಒಳ್ಳೆಯ ಶಾರೀರ; ಹಾಡಿನ ಜೊತೆಗೇ ಗಂಭೀರವಾಗಿ ಔಚಿತ್ಯದ

ಮೇರೆಯನ್ನು ಎಲ್ಲಿಯೂ ಮೀರದ ಹಾವಭಾವ ವಿಲಾಸವಿನ್ಯಾಸ; ಆ ವಿನ್ಯಾಸವನ್ನು ಎತ್ತಿ ಕಾಣಿಸುವಂಥ ಮನೋಹರವಾದ ಮುದ್ದಾದ, ಮಾಟವಾದ ಶರೀರ, ರೂಪ; ನಾಟಕದಲ್ಲಿ ನಾಯಕನ ಪಾತ್ರವನ್ನು ಅಚ್ಚೊತ್ತಿದಂತೆ ಅಭಿನಯಿಸಿ ತೋರಿಸುವ ಉತ್ಸಾಹ – ಇವು ರಂಗಾಚಾರ್ಯರ ಲಕ್ಷಣಗಳು. ಹಣವಂತರಿಗೂ ಆಚಾರ್ಯರನ್ನು ಕಂಡರೆ ಮೆಚ್ಚು. ಮೈಸೂರಿನ ಸಂತೆ ಪೇಟೆಯ ದೇವಸ್ಥಾನದ ಮುಂದಿನ ಚಪ್ಪರದಲ್ಲಿ ಅವರ ನಾಟಕಮಂದಿರ ವಿತ್ತು. ಅವರು ಜುಂಜೋಟಿ ರಾಗ ಹಾಡುತ್ತಿದ್ದುದು ಅರ್ಧ ಗಂಟೆ. ಆ ಸ್ವರ ಕೇಳಿಸುತ್ತಿದ್ದುದು ಅರ್ಧಮೈಲಿಗೆ. ಕೇಳಿದ ಜನ ರೋಮಾಂಚನಗೊಳ್ಳುತ್ತಿದ್ದರು. ಇವರ ಅನಂತರದವರು ಗೌರೀ ನರಸಿಂಹಯ್ಯ: ಒಳ್ಳೆಯ ನಟರಾಗಿ, ಗಾಯನಪಟುಗಳಾಗಿ ಕಂಪನಿಯ ನಾಯಕರಾಗಿ, ನಟರಿಗೂ ನಾಟಕಕ್ಕೂ ನಿರ್ದೇಶಕ ರಾಗಿ, ವಿಜೃಂಭಿಸಿದರು. ಗೌರೀನರಸಿಂಹಯ್ಯ ನವರಿಗೆ ದೈವದತ್ತವಾದ ಶರೀರ, ಶಾರೀರ; ನಾಯಗಕರಾಗಿ ಒಂದು ಗುಂಪನ್ನು ತಯಾರಿಸಿ ಶಿಸ್ತಿನಿಂದ ನಡೆಸಲು ಬೇಕಾದ ಆತ್ಮಶಕ್ತಿ ಮತ್ತು ಸತ್ತ್ವ ಇದ್ದುವು. ಈ ಸಂಪತ್ತಿನ ಯೋಗ್ಯ ಪ್ರದರ್ಶನದಿಂದಲೇ ಇವರು ನಡೆಸುತ್ತಿದ್ದ ಕಂಪನಿ ಜೀವಂತವಾಗಿತ್ತು.

ಬಿ. ಜಯಮ್ಮ

**ವರದಾಚಾರ್ಯರ ಯುಗ:** ಗೌರೀನರಸಿಂಹಯ್ಯನವರ ಶಿಷ್ಯರಲ್ಲಿ ವರದಾಚಾರ್ಯ ಅಗ್ರಗಣ್ಯ. ವರದಾಚಾರ್ಯರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿದ್ದವರು. ಚಿಕ್ಕಂದಿನಿಂದಲೂ ಇವರಿಗೆ ನಾಟಕ ನೋಡುವ ಆಸೆ. ನಟರನ್ನು ಅನುಕರಿಸುವ ಹಂಬಲ. ಕ್ರಮೇಣ ಈ ಆಸೆ ಬಲವಾಗಿ ಇವರು ಕಾಲೇಜು ಬಿಟ್ಟು ಗೌರೀನರಸಿಂಹಯ್ಯ ನವರನ್ನು ಗುರುವಾಗಿ ಆರಿಸಿದರು. ಮುಂದೆ ಕೀರ್ತಿವಂತ ನಟನಾಗುವ ಲಕ್ಷಣವನ್ನು ವರದಾಚಾರ್ಯರಲ್ಲಿ ಕಂಡ ಗೌರೀನರಸಿಂಹಯ್ಯನವರು ವರದಾ ಚಾರ್ಯರಿಗೆ ಸಂಗೀತ ಶಾಸ್ತ್ರಾಭ್ಯಾಸ ಮಾಡಿಸಿ, ಅಭಿನಯ ದೊಂದಿಗೆ ಸಂಗೀತವನ್ನೂ ಹಿತಮಿತವಾಗಿ ಜೋಡಿಸುವ ಸೂಕ್ಷ್ಮತೆಯನ್ನು ಕಲಿಸಿದರು. ಅತ್ಯಂತ ಪ್ರತಿಭಾಶಾಲಿ ಗಳಾಗಿದ್ದ ವರದಾಚಾರ್ಯರಿಗೆ ಕೀರ್ತಿಯು ಹೆದ್ದಾರಿ ತೆರೆಯಿತು. ಗೌರೀನರಸಿಂಹಯ್ಯನವರಲ್ಲಿ ಶಿಷ್ಯವೃತ್ತಿ ಮುಗಿದಂತೆ ವರದಾಚಾರ್ಯರು ರತ್ನಾವಳೀ ಥಿಯೇಟ್ರಿಕಲ್ ಕಂಪನಿ ಯನ್ನು ಹುಟ್ಟುಹಾಕಿದರು. ಕಂಪನಿಯ ಆಡಳಿತವನ್ನು ನಿರ್ದುಷ್ಟವಾಗಿ ನಡೆಸಬಲ್ಲ ಕುಶಲತೆ, ನಾಟಕದಲ್ಲಿ ಜೊತೆಗೆ ಬರುವ ನಟವರ್ಗವನ್ನು ತಯಾರಿಸುವ ಸಾಮರ್ಥ್ಯ, ಯಥೋಚಿತವಾಗಿ ಬಾರಿಸುವ ವಾದ್ಯಗಾರರು, ನಾಟಕಕ್ಕೆ ಬೇಕಾದ ಪರದೆಗಳನ್ನು ಬರೆಸುವ ಚಾತುರ್ಯ ಇವೆಲ್ಲ ಆಚಾರ್ಯರಿಗೆ ಕರಗತವಾಗಿದ್ದುವು. ನಾಯಕನ ಪಾತ್ರಕ್ಕೆ ಬೇಕಾದ ಅಂಗಸೌಷ್ಠವ, ಗಾಂಭೀರ್ಯ ಎಲ್ಲ ಅವರಿಗೆ ಒಲಿದಿತ್ತು. ರೂಪಕ್ಕೆ ತಕ್ಕ ಪಾಂಡಿತ್ಯ ಅವರಿಗೆ ಪರಂಪರಾಗತ. ಅವರ ರೂಪ ಪಾಂಡಿತ್ಯ ಘನತೆಗಳು ಮರೆದುದು ಅವರ ಕಂಠಬಲದಿಂದ. 1904ರಲ್ಲಿ ಹೀಗೆ ಅವರಿಂದ ಆರಂಭವಾದ ರತ್ನಾವಳೀ ನಾಟಕ ಕಂಪನಿ ಒಳ್ಳೆಯ ದೆಸೆಯಲ್ಲೆ ಸುಮಾರು ಎರಡು ದಶಕಗಳ ಕಾಲ ಮುನ್ನಡೆಯಿತು. ಈ ಅವಧಿಯನ್ನು ವರದಾಚಾರ್ಯರ ಯುಗವೆನ್ನಬಹುದು.


ವರದಾಚಾರ್ಯ, ಎ.ವಿ.

ವರದಾಚಾರ್ಯರು ತಮ್ಮ ಕಂಪನಿಯಲ್ಲಿ ಅನೇಕಾನೇಕ ನಟರನ್ನು ತಯಾರಿಸಿ ಕೀರ್ತಿಭಾಜನರಾದರು. ವರದಾಚಾರ್ಯರ ಶಿಷ್ಯರು ರಂಗಭೂಮಿಯ ಮೇಲೆ ಬರುತ್ತಾರೆಂದರೆ, ಅವರ ಅಭಿನಯದ ಮಟ್ಟದ ಔನ್ನತ್ಯದ ಬಗ್ಗೆ ಜನತೆಯ ಮನಸ್ಸಿನಲ್ಲಿ ಆಗಲೇ ಒಂದು ನಿಶ್ಚಿತಾಭಿಪ್ರಾಯವಿರುತ್ತಿತ್ತು. ವರದಾಚಾರ್ಯರ ಯುಗದಲ್ಲಿ ಬೋಧಾರಾವ್, ಶಾಮರಾವ್, ಕೃಷ್ಣಮೂರ್ತಿ, ಜಯರಾವ್, ನಾಗೇಂದ್ರರಾವ್, ಮರಿರಾವ್, ದೊಡ್ಡ ಶೇಷಗಿರಿ, ಚಿಕ್ಕ (ಹಾರ್ಮೋನಿಯಂ) ಶೇಷಗಿರಿ, ಶಂಕರನಾರಾಯಣ, ವೆಂಕಟರಾಮು, ನರಸಿಂಹಮೂರ್ತಿ, ನರಸಿಂಹಯ್ಯ ಮುಂತಾದ ಶ್ರೇಷ್ಠ ನಟರು ಬಂದರು. ಆಚಾರ್ಯರು ರಂಗಸ್ಥಳದ ಮೇಲೆ ಕಾಣಿಸಿಕೊಂಡರೆಂದರೆ, ಜನ ಉಸಿರು ಕಟ್ಟಿದಷ್ಟು ನಿಶ್ಶಬ್ದವಾಗಿ ಅವರ ಮಾತು ಹಾಡುಗಳನ್ನು ಆಲಿಸುತ್ತಿದ್ದರು. ಆಚಾರ್ಯರು ನಟಿಸುತ್ತಿದ್ದರೆ ನಾಟಕ ಪ್ರಪಂಚದಲ್ಲಿ ಮೈಮರೆಯುತ್ತಿದ್ದರು. ಹಾಗೆಂದು ಅವರು ನೇಪಥ್ಯಕ್ಕೆ ತೆರಳಿದೊಡನೆ ಆ ಅನುಭವ ಮಾಯವಾಗುತ್ತಿತ್ತೆಂದಲ್ಲ. ಉಳಿದ ನಟರೂ ಜನದ ಮನವನ್ನು ನಾಟಕ ಪೂರ್ತಿ ಸೆರೆಹಿಡಿದಿಟ್ಟು ಆಚಾರ್ಯರ ಪ್ರಭಾವ ಪ್ರತಿ ದೃಶ್ಯದಲ್ಲೂ ಮುಂದುವರಿಯುವಂತೆ ನಟಿಸು ತ್ತಿದ್ದರು. ವರದಾಚಾರ್ಯರ ನಾಟಕಕ್ಕೆ ಹೋಗುವುದೆಂದರೆ ಒಂದು ಸಣ್ಣ ಯಾತ್ರೆಯಲ್ಲಿ ಭಾಗವಹಿಸಿದಂತೆ: ಪುಣ್ಯಕ್ಷೇತ್ರದ ದಿವ್ಯದರ್ಶನಕ್ಕೆ ಹೋದಂತೆ. ಹೀಗೆ ಅವರ ನಾಟಕ ಜನತೆಗೆ ರಂಜನೆ ಯೊಂದನ್ನೇ ಒದಗಿಸುವ ವಸ್ತು ವಾಗಿರಲಿಲ್ಲ; ಅದು ಮಿದುಳಿಗೂ ಕೆಲಸ ಕೊಡುತ್ತಿತ್ತು. ಅನೇಕಾನೇಕ ವಿಷಯಗಳನ್ನು ಕುರಿತು ಚಿಂತನೆಗೆ ಅವಕಾಶ ಮಾಡಿಕೊಡುತ್ತಿತ್ತು. ನಾಟಕವೆಂದರೆ ಒಂದು ಊರಿಂದ ಇನ್ನೊಂದು ಊರಿಗೆ ಚಲಿಸಿ ಬುದ್ಧಿ ಕಲಿಸುವ ಜಾಙ್ಮೆಯ ವಿಶ್ವವಿದ್ಯಾ ನಿಲಯ ಎನ್ನಬಹುದಾಗಿತ್ತು. ನಾಟಕವೇ ವಿಶ್ವವಿದ್ಯಾನಿಲಯ ವಾಗಿದ್ದುದು ವರದಚಾರ್ಯರ ಯುಗದ ವೈಶಿಷ್ಟ್ಯ. ವರದಾಚಾರ್ಯರು ಕನ್ನಡ ನಾಟಕ ಅಭಿನಯವೊಂದರಿಂದ ರವೀಂದ್ರನಾಥ ಠಾಕೂರರನ್ನು ಮೆಚ್ಚಿಸಿದರು. ಡಾ. ಆನಿ ಬೆಸೆಂಟರು ಕೂಡ ಆಚಾರ್ಯರನ್ನು ಪ್ರತಿಭಾನ್ವಿತ ನಟನೆಂದು ಹೊಗಳಿದ್ದರು.

ವರದಾಚಾರ್ಯರ ರತ್ನಾವಳೀ ನಾಟಕ ಕಂಪನಿಗೆ ಮಹಾಜನತೆಯ ಆಶ್ರಯವಿತ್ತು. ಅರಮನೆ ಕಂಪನಿಗೆ ರಾಜಾಶ್ರಯವಿತ್ತು. ಆ ಆಶ್ರಯದಲ್ಲಿ ದೇವರಾಜ್, ಸುಬ್ಬಣ್ಣ, ಲಕ್ಷ್ಮೀಪತಿಶಾಸ್ತ್ರಿ, ಶಾಮಣ್ಣ, ಮಲ್ಲಪ್ಪ, ಚಿಕ್ಕ ರಾಮರಾವ್ ಮುಂತಾದವರು ಕೀರ್ತಿವಂತರಾದರು. 19ನೆಯ ಶತಮಾನದ ಅಂತ್ಯದಲ್ಲಿ ಆರಂಭವಾದ ಅರಮನೆ ಕಂಪನಿಯ ಕೀರ್ತಿಯನ್ನು ವರದಾಚಾರ್ಯರ ಕೀರ್ತಿ ಮರುಕಳಿಸುವ ಸ್ಥಿತಿ ಬಂತು. ರತ್ನಾವಳೀ ನಾಟಕ ಕಂಪನಿಗೆ ಆರಂಭವಾದ ಶುಕ್ರದೆಸೆ ಹನ್ನೆರಡು ವರ್ಷಗಳಿಗೂ ಮಿಕ್ಕು ನಡೆದು ಬಂತು. ಹರಿಶ್ಚಂದ್ರ, ದುಷ್ಯಂತ, ಸಂತಾಪಕ ಕೀಚಕ, ಅರ್ಜುನ, ಶಿಶುಪಾಲ, ರಾವಣ, ಹಿರಣ್ಯಕಶಿಪು ಪಾತ್ರಗಳಲ್ಲಿ ವರದಾಚಾರ್ಯರೂ ಹಾಸ್ಯ ಪಾತ್ರಗಳಲ್ಲಿ ವಿದೂಷಕವಾಗಿ ಕೃಷ್ಣಮೂರ್ತಿ ರಾಯರೂ ಭೂದೇವಿ, ನಿರುಪಮ, ಸೀತೆಯರ ಪಾತ್ರಗಳಲ್ಲಿ ನಾಗೇಂದ್ರರಾಯರೂ ಮಗುವಾಗಿದ್ದಾಗ ಪ್ರಹ್ಲಾದ, ಧ್ರುವ, ಲೋಹಿತಾಶ್ವ ಪಾತ್ರಗಳಲ್ಲಿ ಮತ್ತು ದೊಡ್ಡವರಾದ ಮೇಲೆ ವಿದೂಷಕ, ನಂದನಕ ಪಾತ್ರಗಳಲ್ಲಿ ಮರಿರಾಯರೂ ಶಕುಂತಲೆ, ಕಮಲೆ, ವಾಸವದತ್ತೆ, ಕಯಾದು ಪಾತ್ರಗಳಲ್ಲಿ ಬೋಧರಾಯರೂ ವಿಶ್ವಾಮಿತ್ರ ಮುಂತಾದವರ ಪಾತ್ರಗಳಲ್ಲಿ ಶಾಮರಾಯರೂ ನಾರದ, ವಿಜಯವರ್ಮರ ಪಾತ್ರಗಳಲ್ಲಿ ಜಯರಾಯರೂ ಕೀರ್ತಿ ಗಳಿಸಿದರು.

ಲಕ್ಷ್ಮೀಬಾಯಿ

ಅರಮನೆ ಕಂಪನಿಯಾಗಿ ಮುಂದೆ ಶಾಕುಂತಲ ಕರ್ನಾಟಕ ನಾಟಕ ಸಭೆ ಮತ್ತು ಚಾಮುಂಡೇಶ್ವರಿ ಕರ್ನಾಟಕ ಸಭೆಗಳಲ್ಲಿದ್ದಾಗ ಲಕ್ಷ್ಮೀಪತಿ ಶಾಸ್ತ್ರಿಗಳು ವಿದೂಷಕನ ಪಾತ್ರದಲ್ಲೂ ರಾಯಚೂಟಿ, ಚಿಕ್ಕ ರಾಮರಾವ್, ಶ್ರೀಕಂಠಯ್ಯ, ನರಸಿಂಹಯ್ಯ, ರಾಮಕೃಷ್ಣ ಮುಂತಾದವರು ವಿವಿಧ ನಾಯಕ ನಾಯಕಿಯರ ಪಾತ್ರಗಳಲ್ಲೂ ಬೆಳಗಿದರು. ಸುಬ್ಬಣ್ಣನವರ ಮೋಹಿನೀ ಮತ್ತು ಕೃಷ್ಣ, ಮಹಾಲಿಂಗಪ್ಪನವರ ದ್ರೌಪದಿ ಪಾತ್ರ – ಇವು ಅನ್ಯಾದೃಶವಾಗಿದ್ದುವು.

**ಗುಬ್ಬಿ ವೀರಣ್ಣನವರ ಯುಗ:** ವರದಾಚಾರ್ಯರ ಯುಗದ ಅನಂತರ ಇನ್ನೊಂದು ಯುಗ ಆರಂಭವಾಯಿತು. ಅದು ಗುಬ್ಬಿವೀರಣ್ಣನವರ ಯುಗ. ಗುಬ್ಬಿ ಕಂಪನಿ ಚಂದ್ರಣ್ಣನವರಿಂದ ವೀರಣ್ಣನವರ ಕೈಗೆ ಬಂದದ್ದೇ ತಡ, ಬೆಂಗಳೂರಲ್ಲಿ ಖ್ಯಾತಿ ಗಳಿಸಿ ಮೈಸೂರಿಗೆ ಬಂದು, ಅಲ್ಲಿಯ ಜನರನ್ನು ಮೆಚ್ಚಿಸಿ ಹಿರಿಯರ ಕಂಪನಿಯ ಜೊತೆಗೆ ಕಿರಿಯ ನಟನಟಿಯರನ್ನು ಕಲೆಹಾಕಿ ಎರಡೂ ಕಂಪನಿಗಳನ್ನು ನಡೆಸಿಕೊಂಡು ಬಂದ ಕೀರ್ತಿ ವೀರಣ್ಣನವರದು. ವೀರಣ್ಣನವರು ಜನರನ್ನು ಅನಾಯಾಸವಾಗಿ ನಗಿಸಬಲ್ಲರು. ಸದಾರಮೆಯ ಕಳ್ಳನ ಪಾತ್ರದಲ್ಲಂತೂ ಇವರನ್ನು ಮೀರಿಸಿ ದವರಿಲ್ಲ. ಉತ್ತಮ ನಟರಾದದ್ದೇ ಅಲ್ಲದೆ ಹಲವಾರು ನಟ ನಟಿಯರನ್ನು ತಯಾರಿಸಿ ಇತರ ನಾಟಕ ಕಂಪನಿಗಳಿಗೆ ಕೊಟ್ಟ ಕೀರ್ತಿ ವೀರಣ್ಣನವರದು. ಕನ್ನಡ ನಾಡು ದಾಟಿ ತಮಿಳು, ತೆಲುಗು, ಮಹಾರಾಷ್ಟ್ರ

ಪ್ರಾಂತ್ಯಗಳಲ್ಲೂ ಜಯಭೇರಿ ಬಾರಿಸಿದವರು ವೀರಣ್ಣ. ಚಲನಚಿತ್ರ ರಂಗದಲ್ಲೂ ಜಯಪ್ರದರು. ಇವರಿಂದಾಗಿ ಈ 20–25 ವರ್ಷಗಳಲ್ಲಿ ನೂತನ ದೃಶ್ಯ ಪರಿಕರಗಳು ಬಂದಿವೆ. ನವೀನ ರಂಗಸ್ಥಳಗಳೆದ್ದಿವೆ. ಇವೆಲ್ಲಕ್ಕೂ ವೀರಣ್ಣನವರ ಮೂಲವೆಂದರೆ ಸರಿಯಾದ ಮಾತು. ವೀರಣ್ಣನವರ ಕಂಪನಿ ನಡೆಯುತ್ತಿದ್ದ ಕಾಲದಲ್ಲೆ ಷಹಜಹಾನ್ ನಾಟಕದಲ್ಲಿ ದಾರಾಷಿಕೋನ ಪಾತ್ರವಹಿಸಿ ಕರುಳು ಕರಗಿಸುತ್ತಿದ್ದ ಮಹಮದ್ ಪೀರ್, ಸಂಸಾರ ನೌಕ ನಾಟಕದಲ್ಲಿ ಸಿಂಹ ಮತ್ತು ಡಿಕ್ಕಿ ಮಾಧವರಾವ್, ಚಾಮುಂಡೇಶ್ವರಿ ಕಂಪನಿಯ ದಾನಶೂರ್ಣದಲ್ಲಿ ಕೊಟ್ಟೂರಪ್ಪ, ರಾಜಸೂಯ ಯಾಗದಲ್ಲಿ ಬಸವರಾಜ್ ಸೋದರರು ಮತ್ತು ಗಂಗಾಧರರಾಯರು ಉತ್ತಮ ವರ್ಗದ ನಟರಾಗಿ ಖ್ಯಾತಿಗಳಿಸಿದರು. ಗಂಗಾಧರರಾಯರು ಹಿರಣ್ಯ ಕಶಿಪುವಿನ ಪಾತ್ರವಹಿಸಿ ನಟ ಭಯಂಕರರೆನಿಸಿ ಕೊಂಡವರು. ನಾಗೇಶರಾಯರು ಕಂದವೃತ್ತಗಳ ಹಾಡಿಕೆಯಲ್ಲಿ ವರದಾಚಾರ್ಯರಿಗಿಂತ ಒಂದು ಕೈ ಮೇಲೆನಿಸಿಕೊಂಡರು.

ಮಹಮದ್ ಪೀರ್

ಮಹಿಳಾ ವೃಂದದವರ ಪೈಕಿ ಮಳವಳ್ಳಿ ಸುಂದರಮ್ಮನವರು ಕಾಳಿದಾಸ ನಾಟಕದಲ್ಲಿ ರಾಜಕುಮಾರಿಯ ಪಾತ್ರದಲ್ಲೂ ಲಕ್ಷ್ಮೀಬಾಯಿಯವರು ಭೂಕೈಲಾಸದಲ್ಲಿ ಪಾರ್ವತಿ ಮಂಡೋದರಿಗಳ ಪಾತ್ರಗಳಲ್ಲೂ ಜಯಮ್ಮನವರೂ ಸುಂದರಮ್ಮನವರೂ ವೀರಣ್ಣನವರ ಜೊತೆಗೆ ಅನೇಕಾನೇಕ ನಾಯಕಿಯರ ಪಾತ್ರಗಳಲ್ಲೂ ವಿಜೃಂಭಿಸಿದ್ದಾರೆ.

ಇದೇ ಅವಧಿಯಲ್ಲಿ ಉತ್ತರ ಕರ್ನಾಟಕದಿಂದ ಮೈಸೂರು ಕಡೆ ಬಂದು ಒಂದೊಂದು ನಾಟಕವನ್ನೂ ಹತ್ತಿಪ್ಪತ್ತು ಬಾರಿ ಜನತೆಗೆ ತೋರಿಸಿದರೂ ಇನ್ನೂ ಒಮ್ಮೆ ನೋಡಬೇಕಾದುದು ಎನ್ನಿಸುವಂತೆ ಅಭಿನಯಿಸಿದ ವಾಮನರಾವ್ ಮಾಸ್ತರರು ಒಬ್ಬ ಕೀರ್ತಿವಂತ ನಟ. ಅವರ ಜೊತೆಗೇ ಗಂಗೂಬಾಯಿ ಗುಳೇದಗುಡ್ಡ ಅವರು ಸತಿ ಸಕ್ಕೂಬಾಯಿ ಪಾತ್ರದಲ್ಲಿ ಜನರನ್ನು ಮೈಮರೆಸುತ್ತಿದ್ದರು.

**ಕಂಪನಿಗಳು :** ಗೌರೀನರಸಿಂಹಯ್ಯನವರಿಗಿಂತಲೂ ಮುಂಚೆ, ಅಂದರೆ 19ನೆಯ ಶತಮಾನದ ಕೊನೆಯ ಎರಡು ದಶಕಗಳ ಅವಧಿಯಲ್ಲಿ, ಕೆಲವು ಸಾಹಸಿಗಳು ಕಂಪನಿಗಳನ್ನು ಕಟ್ಟಿ ನಡೆಸಿದ ದಾಖಲೆಗಳು ಇವೆ. ಆದರೆ ಈ ಕಂಪನಿಗಳು ಒಬ್ಬೊಬ್ಬ ನಟರ ಅದೃಷ್ಟವನ್ನು ಮಾತ್ರ ಅವಲಂಬಿಸಿಕೊಂಡು ಬೆಳೆದುವು, ಕ್ಷೀಣಿಸಿದುವು, ಅಳಿದೂ ಹೋದುವು. ಅರಮನೆ ಕಂಪನಿಯ ಹುಟ್ಟಿನೊಂದಿಗೇ, ಬುಳ್ಳಪ್ಪ (1881) ರಸಿಕ ಮನೋಲ್ಲಾಸಿನೀ–ನಾಟಕ ಸಭಾದ ಪೇರಿ ಶಾಮ ಅಯ್ಯಂಗಾರ್ (1884) ಗೊಲ್ಲರ ಪೇಟೆಯ ನಾಟಕ ಕಂಪೆನಿಯ ನಟರು. ಶ್ರೀಕಂಠೇಶ್ವರ ನಾಟಕ ಸಭಾದ ಎಂ.ಎಲ್. ಶ್ರೀಕಂಠೇಶಗೌಡ ಇವರೆಲ್ಲ ನಟರಾಗಿದ್ದುದರ ಜೊತೆಗೆ ಕಂಪನಿಗಳನ್ನೂ ಕಟ್ಟಿ ನಡೆಸಿದರು. 1920ರ ವರೆಗೂ ಈ ಕಂಪನಿಗಳು ಮತ್ತು ಈ ನಟರ ಹೆಸರುಗಳು ಅಲ್ಲಲ್ಲಿ ಕೇಳಿಬರುತ್ತಿದ್ದುವು.

ಅರಮನೆ ಕಂಪನಿಗೆ ಸವಾಲು ಎಂಬಂತೆ ಬೆಳೆದ ರತ್ನಾವಳೀ ಕಂಪನಿ ಆರಂಭಿಸಿದವರು ಮಂಡ್ಯಂ ರಂಗಾಚಾರ್ಯ. ಸುಶಿಕ್ಷಿತರಾದ ವಕೀಲರ, ಅಧಿಕಾರಿಗಳ ನೆರವಿನಿಂದ ಈ ಕಂಪನಿ ಕೆಲಕಾಲ ಬೆಳೆಯಿತು. ಆದರೆ ಮಂಡ್ಯಂ ಅರಮನೆಕಂಪನಿ ಸೇರಿಬಿಟ್ಟರು. ರಂಗಾಚಾರ್ಯರ ಜೊತೆಗೆ ಸ್ತ್ರೀಪಾತ್ರಗಳನ್ನು ಬಹು ಯಶಸ್ವಿಯಾಗಿ ಅಭಿನಯಿಸುತ್ತಿದ್ದರೂ ಗೌರೀನರಸಿಂಹಯ್ಯನವರು ಕಂಪನಿಯ ಅವಶೇಷವನ್ನು ಕಲೆಹಾಕಿ 1886ರಲ್ಲಿ ಸರಸ್ವತೀ ವಿಲಾಸ ನಾಟಕ ಸಭಾ ಸ್ಥಾಪಿಸಿ ನಡೆಸಿದರು. 1889ರಲ್ಲಿ ನಾಟಕರಂಗದಲ್ಲಿ ಕಾಲಿಟ್ಟ ವರದಾಚಾರ್ಯರು ಇದನ್ನು 1904ರಲ್ಲಿ ರತ್ನಾವಳೀ ನಾಟಕ ಕಂಪನಿಯೆಂದೇ ಪುನರುಜ್ಜೀವನಗೊಳಿಸಿದರು. 1912ರಲ್ಲಿ ದಕ್ಷಿಣ ಭಾರತದ ಈರೋಡು, ಕೊಯಮತ್ತೂರು, ಕಾರೈಕುಡಿ, ಸೇಲಂ, ಕುಂಭಕೋಣಂ, ಮಂಗಳೂರು, ಉಡುಪಿ, ಕುಂದಾಪುರ, ತೀರ್ಥಹಳ್ಳಿ, ಶಿವಮೊಗ್ಗ, ಬಳ್ಳಾರಿಗಳಲ್ಲಿ ಪ್ರವಾಸ ಮಾಡಿದರು. ತಮ್ಮ ಎರಡು ದಶಕಗಳಿಗಿಂತಲೂ ಹೆಚ್ಚಿನ ರಂಗಭೂಮಿಯ ಸೇವೆಯಲ್ಲಿ 50ಕ್ಕೂ ಮಿಕ್ಕು ಮೊದಲ ವರ್ಗದ ನಟರನ್ನು ತಯಾರಿಸಿ ರಂಗಭೂಮಿಗೆ ಕಾಣಿಕೆಯಾಗಿ ಕೊಟ್ಟರು. ಕರ್ನಾಟಕದಲ್ಲಿ ಸುಶಿಕ್ಷಿತ ಗೌರವಯುತ ನಾಟಕರಂಗ ಎಂಬುದೇ ಇಲ್ಲದಿದ್ದಾಗ ವರದಾಚಾರ್ಯರು ನಾಯಕನಾಗಿ, ಕೃಷ್ಣಮೂರ್ತಿ ರಾಯರು ವಿದೂಷಕನಾಗಿ ಕನ್ನಡಕ್ಕೆ ಅದನ್ನು ರಚಿಸಿಕೊಟ್ಟರು. ಚಾಮುಂಡೇಶ್ವರೀ ಕರ್ನಾಟಕ ನಾಟಕ ಸಭೆಯ ನೇತಾರ ಎನ್. ಸುಬ್ಬಣ್ಣ (1919–1946). ಅನಂತರ ಅಲ್ಲಿಗೆ ತೆರಳಿ ಯಾಜಮಾನ್ಯ ವಹಿಸಿದ ಆರ್. ನಾಗೇಂದ್ರರಾವ್ ಅವರ ಹೆಸರು ಮೈಸೂರಿನಲ್ಲಿ ಮನೆಮಾತು. ಚಂದ್ರಕಲಾ ನಾಟಕಮಂಡಳಿ ಸ್ಥಾಪಿಸಿದ ಮಹಮದ್ ಪೀರ್ ಅಪೂರ್ಣ ಪ್ರತಿಭಾವಂತರು. ಇವರ ಜೊತೆಗೆ ಚಂದ್ರಮ್ಮ ತೇಜೋವಂತ ನಟಿ. ಪೀರ್ ಕಂಪನಿ ಬಿ. ಪುಟ್ಟಸ್ವಾಮಯ್ಯನವರ ಷಹಜಹಾನ್ ನಾಟಕದಲ್ಲಿ ಬಹಳ ಕೀರ್ತಿ ಗಳಿಸಿತು. ಸುಬ್ಬಣ್ಣ, ನಾಗೇಂದ್ರರಾಯರ ಕಂಪನಿಯ ಜಿ. ನಾಗೇಶರಾವ್, ಟಿ. ಮಲ್ಲಪ್ಪ, ಕೃಷ್ಣಮೂರ್ತಿ, ಮರಿರಾವ್, ಬಿ. ರಾಚಪ್ಪ, ಕೊಟ್ಟೂರಪ್ಪ ಮುಂತಾದವರು ನಾಟಕ ವೃತ್ತಿಗೊಂದು ಭೂಷಣವಾಗಿದ್ದರು. ಮಹಮದ್ ಪೀರರ ಜೊತೆಗೆ ಅಭಿನಯಿಸಿ ಎಚ್.ಎಲ್.ಎನ್. ಸಿಂಹ, ಡಿಕ್ಕಿ ಮಾಧವರಾವ್ ಮತ್ತು ಎಂ.ವಿ. ರಾಜಮ್ಮ ಹೆಸರು ಗಳಿಸಿದರು.

ಅನಂತರ ಸಿ.ಬಿ. ಮಲ್ಲಪ್ಪನವರ ಶ್ರೀ ಚಂದ್ರಮೌಳೇಶ್ವರ ನಾಟಕ ಸಭೆ ಕಬೀರದಾಸ್, ತುಕಾರಾಮ್, ತುಲಸೀದಾಸ್ ನಾಟಕಗಳನ್ನಾಡಿ, ಮಲ್ಲಪ್ಪನವರಿಗೆ ಅಭಿನವ ಭಕ್ತಶಿರೋಮಣಿ ಎಂಬ ಪ್ರಶಸ್ತಿ ತಂದಿತ್ತಿತು. ಇವರಾದ ಮೇಲೆ ಮತ್ತೆ ನಾಟಕ ರಂಗಕ್ಕೆ ಹೊಸ ಹಾದಿ ಹಾಕಿಕೊಟ್ಟು ಜಯ ಗಳಿಸಿದವರು ಹಿರಣ್ಣಯ್ಯ. ಬೆಂಗಳೂರಿನ ಸುಗುಣಬೋಧಕ ಸಮಾಜ (1932), ತುಮಕೂರು ಟಿ. ಸೀತಾರಾಮಯ್ಯನವರ ಸೀತಾಮನೋಹರ ಕಂಪನಿ (1934), ಗುಬ್ಬಿ ಕಂಪನಿ (1935), ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಗಳೇ ಮುಂತಾದ ನಾಟಕ ಸಂಸ್ಥೆಗಳಲ್ಲಿ 15 ವರ್ಷಕಾಲ ಪಾಲುದಾರರಾಗೋ ಸಂಬಳದಾರರಾಗೋ ಬಿಟ್ಟಿಯಾಗೋ ಕೆಲಸ ಮಾಡಿ ಪೂರ್ಣಾನುಭವ ಪಡೆದ ಹಿರಣ್ಣಯ್ಯನವರು ಎಚ್ಚಮನಾಯಕ, ಆಶಾಪಾಶ ನಾಟಕಗಳಿಂದ ಹೆಸರಾಂತವರಾಗಿದ್ದರು. 1942ರಲ್ಲಿ ತಮ್ಮದೇ ಆದ ಮಿತ್ರಮಂಡಳಿ ಸ್ಥಾಪಿಸಿದರು. 1954ರ ವರೆಗೆ 12 ವರ್ಷಕಾಲ ನಾಟಕರಂಗದಲ್ಲಿ ತಮ್ಮ ಧ್ವಜ ಸ್ಥಾಪಿಸಿ ಮೆರೆದರು. ಸ್ವಂತ ಕಲ್ಪನೆಯಾದ ದೇವದಾಸಿಯನ್ನು ಇವರು ಪ್ರದರ್ಶಿಸಿದ್ದು 1944ರಲ್ಲಿ. 1 ವರ್ಷ 22 ದಿನಗಳ ಕಾಲ–ಎಂದರೆ 387 ಬಾರಿ–ದೇವದಾಸಿ ಪ್ರದರ್ಶಿತವಾಯಿತು. ಜೊತೆಗೆ ಪಂಗನಾಮ ಮತ್ತು ಮಖಮಲ್ ಟೋಪಿ ಯಶಸ್ವಿ ಯಾದುವು. ಕೈಲಾಸಂರಂತೆ ಆಡುಭಾಷೆ ಯನ್ನು ನಾಟಕದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದವರಲ್ಲಿ ಹಿರಣ್ಣಯ್ಯ ಅಗ್ರಗಣ್ಯ. ಇವರ ಜೊತೆಗೇ ಕನ್ನಡ ರಂಗಭೂಮಿಯ ಸೇವೆ ನಡೆಸಿದವರೆಂದರೆ ಸುಬ್ಬಯ್ಯ ನಾಯ್ಡು. ಎಂ.ಸಿ. ಮಹಾದೇವಸ್ವಾಮಿ, ಎ.ಎನ್. ಶೇಷಾಚಾರ್ಯ ಮೊದಲಾದವರು. ಕನ್ನಡ ನಾಟಕವನ್ನು ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ಚೇತೋಹಾರಿಯಾಗಿಸುವುದಕ್ಕೆ ಶ್ರಮಿಸಿದರು. ಮೇಲ್ಕಂಡವರಲ್ಲದೆ ಗರೂಡ ಸದಾಶಿವರಾವ್, ವಾಮನರಾವ್ ಮಾಸ್ತರ್, ಹಂದಿಗನೂರು ಸಿದ್ದರಾಮಪ್ಪ, ಬಸವರಾಜ ಮನ್ಸೂರ್, ಗಂಗೂಬಾಯಿ ಗುಳೇದಗುಡ್ಡ, ಪಂತುಲು, ಕರೆನಾಡಿನ ರಂಗನಾಥ ಭಟ್ಟ ಮತ್ತು ಕೆ. ಸೀತಾರಾಮಶಾಸ್ತ್ರಿ; ಬಳ್ಳಾರಿಯಲ್ಲಿ ಟಿ. ರಾಘವಾಚಾರಿ ಮತ್ತು ವಟ್ಟಂ ಶಾಮರಾವ್. 1890ರಿಂದ ಪ್ರಯೋಗಯುಗವಾಗಿಯೂ 1900ರ ಸುಮಾರಿನಿಂದ ಸ್ವರ್ಣಯುಗವಾಗಿಯೂ 1950ರಿಂದ ಹತ್ತು ವರ್ಷಗಳ ಕಾಲ ಗೊಂದಲಸ್ಪರ್ಧೆಯ ಯುಗವಾಗಿಯೂ 1950ರಿಂದ ಈಚೆಗೆ ಸ್ವಾತಂತ್ರ್ಯದ ಸ್ಫೂರ್ತಿಯಿಂದ ಹೊಮ್ಮಿದ ನವಯುಗದ ಪ್ರತೀಕವಾಗಿಯೂ ಕನ್ನಡ ರಂಗಭೂಮಿಯ ಇತಿಹಾಸ ಬೆಳೆದಿದೆ.



ಎಂ.ವಿ. ಸುಬ್ಬಯ್ಯನಾಯ್ಡು

**ಇತರ ಕೆಲವು ನಟರು :** ಎಳೆತನದಲ್ಲಿ ರಂಗಭೂಮಿಯಿಂದ ಆಕರ್ಷಿತರಾದ ಹಂದಿಗನೂರು ಸಿದ್ಧರಾಮಪ್ಪನವರ ದೈವದತ್ತ ವರವೆಂದರೆ ಅವರ ಕಂಠ. ಧ್ವನಿಯನ್ನು ಏರಿಸಿ ಇಳಿಸುವ ಕಲೆ ಅವರಿಗೆ ಲೀಲಾಜಾಲ. ತೂಕ ಮಾಡಿ ಮಾತನಾಡಿ ರಂಗವನ್ನೂ ಪ್ರೇಕ್ಷಕರನ್ನೂ ತಮ್ಮ ಕಿರುಬೆರಳ ಮೇಲಾಡಿಸುವ ಪ್ರತಿಭೆ ಅವರದು. ಅವರ ಭೀಷ್ಮ, ಕರ್ಣ ಪಾತ್ರಗಳಂತೂ ಆ ಮಹಾವ್ಯಕ್ತಿಗಳನ್ನು ಕಣ್ಣ ಮುಂದೆ ಕಡೆದು ನಿಲ್ಲಿಸುವಂತಿತ್ತು.

ಸದಾಶಿವರಾವ್ ಗರೂಡರಿಂದ ಶಿಕ್ಷಣ ಪಡೆದ ಪ್ರತಿಭಾವಂತ ನಟರು ಬಿಜಾಪುರದ ಮಧ್ವರಾಜ ಉಮರ್ಜಿ. ಎಳೆತನದಲ್ಲೇ ರಂಗಭೂಮಿಗೆ ಕಾಲಿಟ್ಟು ಹತ್ತು ವರ್ಷ ಸೇವೆ ಸಲ್ಲಿಸಿದರು. ಹರಿಶ್ಚಂದ್ರ, ಅರ್ಜುನ, ಕೃಷ್ಣರ ಪಾತ್ರಗಳಲ್ಲಿ ಮೇಲುಗೈಯಾಗಿದ್ದ ಇವರು ತಮ್ಮ 38ನೆಯ ವಯಸ್ಸಿನಲ್ಲೇ ತೀರಿಕೊಂಡರು. 1947ರಲ್ಲಿ ಹಂದಿಗನೂರರ ಮರಣ, 1954ರಲ್ಲಿ ಉಮರ್ಜಿಯವರ ಮರಣ – ಇವುಗಳಿಂದ ರಂಗಭೂಮಿಯ ಎರಡು ತಾರೆಗಳು ಕಣ್ಮರೆಯಾದಂತಾಯಿತು.

ಸುಬ್ಬಯ್ಯನಾಯ್ಡು ಇನ್ನೊಬ್ಬ ಸಮರ್ಥನಟ. ಭೂಕೈಲಾಸ ನಾಟಕದ ರಾವಣನ ಪಾತ್ರ ಅವರಿಗೆ ಚೆನ್ನಾಗಿ ಒಪ್ಪುತ್ತಿತ್ತು. ಚಿಕ್ಕಂದಿನಲ್ಲಿ ದನ ಕಾದು, ಬಾಲ್ಯದಲ್ಲಿ ಕೈಗೆಲಸದ ಕೂಲಿಯ ಕಾಳು ತಿಂದು ತಾಯಿಯನ್ನೂ ಸಾಕಿ, ಬೆಳೆದಂತೆ ಮರಗೆಲಸ ಮಾಡುತ್ತ, ಒಮ್ಮೊಮ್ಮೆ ಕೊಟ್ಟಣ ಕುಟ್ಟಿ ಹೊಟ್ಟೆ ಹೊರೆದು ಸಂಕಟದಿಂದ ಬೆಳೆದ ಜೀವ ಅದು. ಅನಂತರ ಸಂಗೀತದ ಗೀಳು, ನಾಲ್ಕಾಣೆ ನಾಟಕಕ್ಕೆಂದು ಕೂಲಿ ಮಾಡಿ ನಾಟಕದಲ್ಲಿ ಪಾತ್ರ ವಹಿಸಿ, ನಾಟಕದ ಗೀಳೂ ವೃದ್ಧಿಯಾಗಿ ಗುಬ್ಬಿ ಕಂಪನಿ ಸೇರಿದರು. ರಾಜಭಕ್ತಿಯಲ್ಲಿ ವಿಕ್ರಾಂತನ, ಕರ್ನಾಟಕ ಸಾಮ್ರಾಜ್ಯದಲ್ಲಿ ತಿರುಮಲರಾಯನ, ಸ್ವಾಮಿನಿಷ್ಠೆಯಲ್ಲಿ ಶಿವಾಜಿಯ ಪಾತ್ರಗಳನ್ನು ನಿರ್ವಹಿಸಿ ನಾಟಕದಿಂದ ನಾಟಕಕ್ಕೆ ತಮ್ಮ ಕಲೆಯನ್ನು ಬೆಳೆಸಿಕೊಂಡು ದಕ್ಷಿಣ ಭಾರತ ತಮ್ಮ ಕಡೆಗೆ ನೋಡುವಂತೆ ಮಾಡಿಕೊಂಡವರು ಇವರು. ಪಾತ್ರದ ಔನ್ನತ್ಯಕ್ಕೆ ತಕ್ಕಂತೆ ಧ್ವನಿ ಏರಿಸಿ, ಇಳಿಸಿ, ಸ್ಪಷ್ಟವಾದ ಉಚ್ಚಾರಣೆಯಿಂದ ಕೂಡಿದ ಇವರ ಕನ್ನಡ ನಾಟಕವನ್ನು ನೋಡಿ ತಮಿಳರೂ ತಲೆದೂಗುವಂತೆ ಮಾಡಿದರು. **(ಬಿ.ಎಸ್.ಆರ್.ಆರ್.)**

**ಕನ್ನಡ ಶಾಸನಗಳು :** ಕನ್ನಡ ಭಾಷೆ ಕನ್ನಡನಾಡಿನಲ್ಲಿ ಯಾವ ಕಾಲದಲ್ಲಿ ಜನಗಳಾಡುವ ಭಾಷೆಯಾಗಿತ್ತು. ಹೇಗೆ ಬೆಳೆಯಿತು ಎಂದು ತಿಳಿಯಲು ನಮಗೆ ದೊರೆಯುವ ಆಧಾರಗಳಲ್ಲಿ ಶಾಸನಾಧಾರವೇ ಬಹುಮುಖ್ಯವಾದದ್ದು. ಕರ್ನಾಟ ಶಬ್ದ ಪ್ರಯೋಗ ಮಹಾಭಾರತದಲ್ಲಿ ಕಂಡುಬಂದರೂ ಅದರ ಸ್ವರೂಪವೇನು ಎಂಬುವುದು ತಿಳಿಯುವುದಿಲ್ಲ. ದಕ್ಷಿಣ ಇಂಡಿಯದ ಪಶ್ಚಿಮತೀರದಲ್ಲಿ ನಡೆದಂತೆ ಊಹಿಸಿರುವ ಆಕ್ಸಿರಿಂಕಸ್ ಪಪ್ಪೈರಸ್ ಎಂಬ ಗ್ರೀಕ್ ಪ್ರಹಸನದಲ್ಲಿ ಬರುವ ಸಂವಾದಗಳೆಲ್ಲ ಕನ್ನಡ ಭಾಷೆಯೆಂದು ಆರ್. ಶಾಮಾಶಾಸ್ತ್ರಿಗಳು ಪ್ರತಿಪಾದಿಸಿರುವರು. ಈ ಗ್ರೀಕ್ ಪ್ರಹಸನದ ಕಾಲ 2ನೆಯ ಶತಮಾನ. 5ನೆಯ ಶತಮಾನಕ್ಕೆ ಮೊದಲು ಬರೆದ ಕೆಲವು ಸಂಸ್ಕೃತ ಪ್ರಾಕೃತ ಶಾಸನಗಳಲ್ಲಿ ಕೆಲವು ಕನ್ನಡ ಶಬ್ದಗಳು ಬರುವುವು. ಆದರೆ ಕನ್ನಡ ಭಾಷೆಯಲ್ಲಿಯೇ ಬರೆದ ಬರೆವಣಿಗೆ 5ನೆಯ ಶತಮಾನಕ್ಕೆ ಮೊದಲು ಇದುವರೆವಿಗೂ ಎಲ್ಲಿಯೂ ದೊರೆತಿಲ್ಲ. ಮೊಟ್ಟ ಮೊದಲು ಕನ್ನಡ ಭಾಷೆಯಲ್ಲೇ ಬರೆದ ಬರೆವಣಿಗೆ ಎಂದರೆ ಹಲ್ಮಿಡಿಯ ಶಿಲಾ ಲೇಖನವೇ. ಈ ಶಿಲಾಶಾಸನದ ಮಂಗಳಶ್ಲೋಕ ಸಂಸ್ಕೃತ ಭಾಷೆಯಾಗಿದ್ದು ಉಳಿದದ್ದು ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ ಇಲ್ಲಿಂದ ಮುಂದೆ ಕನ್ನಡ ಭಾಷೆಯಲ್ಲಿ ರಚಿತವಾದ ಕವಿರಾಜಮಾರ್ಗ ಗ್ರಂಥದ ಕಾಲದವರೆಗೆ ಸಿರಿಗುಂದದ ದುರ್ವಿನೀತನ ಶಾಸನ, ಬಾದಾಮಿಯ ಮಂಗಳೇಶನ ಶಾಸನವೇ ಮೊದಲಾದ ಶಾಸನಗಳು, ವೀರಗಲ್ಲುಗಳು, ಶ್ರವಣಬೆಳಗೊಳದ ನಿಸಿದಿಕಲ್ಲುಗಳು ಕನ್ನಡ ಭಾಷೆಯಲ್ಲಿವೆ.

**ಶಾಸನ ಸಂಗ್ರಹ :** ಭಾರತದ ಎಲ್ಲ ಪ್ರಾಂತ್ಯಗಳಿಗಿಂತಲೂ ಅಂದಿನ ಮೈಸೂರು ಸರ್ಕಾರ ಪ್ರಾಚೀನಕಾಲದ ಶಿಲಾಲೇಖನ ತಾಮ್ರಶಾಸನಗಳನ್ನು ಒಂದು ಕ್ರಮವರಿತು ಸಂಗ್ರಹಿಸಿ ಪ್ರಕಟಿಸಿತು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿಯೇ ಅನೇಕ ಶಾಸನಗಳ ಪ್ರತಿಮಾಡಿಸಿ ಅರಮನೆಯಲ್ಲಿ ಇಟ್ಟಿದ್ದುದಾಗಿಯೂ ಮುಂದೆ ಬಂದ ಟಿಪ್ಪುಸುಲ್ತಾನನ ಕಾಲದಲ್ಲಿ ಅವುಗಳೆಲ್ಲವೂ ನಾಶವಾದುವೆಂದು ತಿಳಿದುಬರುವುದು. ಪ್ರಾಚೀನಕಾಲದ ಬರೆವಣಿಗೆಯ ಈ ವಿಧವಾದ ಶಿಲಾಲೇಖನಗಳ ಪ್ರತಿಗಳನ್ನು ಸಂಗ್ರಹಿಸಿ ಅವುಗಳಲ್ಲಿ ಹೇಳಿರುವ ದಾನ, ಧರ್ಮ, ತ್ಯಾಗ, ಚರಿತ್ರಾಂಶಗಳನ್ನು ಬೆಳಕಿಗೆ ತಂದ ಕೀರ್ತಿ ಪಾಶ್ಚಾತ್ಯ ವಿದ್ವಾಂಸರಿಗೆ ಸೇರಿದುದು. 1879ರಲ್ಲಿ ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದ ಬಿ.ಎಲ್. ರೈಸ್‌ರ ನೇತೃತ್ವದಲ್ಲಿ ಶಾಸನಗಳ ಸಂಗ್ರಹಕಾರ್ಯ ಪ್ರಾರಂಭವಾಯಿತು. ಈ ಪುರಾತನ ಬರೆವಣಿಗೆ ಇರುವ ಲೇಖನಗಳು ಹೆಚ್ಚು ಹೆಚ್ಚಾಗಿ ಕಣ್ಣಿಗೆ ಬೀಳಲು ಸರ್ಕಾರದವರು ಪ್ರತ್ಯೇಕವಾಗಿ ಒಂದು ಇಲಾಖೆಯನ್ನೇ ತೆರೆದರು. ಅದರ ಮುಖ್ಯಾಧಿಕಾರಿಯನ್ನಾಗಿ ಬಿ.ಎಲ್. ರೈಸ್ ಅವರನ್ನೇ ನೇಮಿಸಲಾಯಿತು. ಇವರು ಅಧಿಕಾರಕ್ಕೆ ಬಂದಕೂಡಲೇ ಹಳೆಯ ಮೈಸೂರಿನ ಪ್ರತಿಯೊಂದು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಒಂದು ಸರ್ಕಾರಿ ಆಜ್ಞೆ ಹೊರಡಿಸಿ ಆಯಾಯ ಡಿಸ್ಟ್ರಿಕ್ಟಿನ ಪ್ರತಿಯೊಂದು ತಾಲ್ಲೂಕು ಅಮಲ್ದಾರರು ಶಾನುಭೋಗ ಪಟೇಲರ ಸಹಾಯದಿಂದ ತಮ್ಮ ಗ್ರಾಮಗಳಲ್ಲಿರುವ ಪ್ರಾಚೀನ ಬರೆವಣಿಗೆಗಳಿರುವ ಕಲ್ಲುಗಳ ಪಟ್ಟಿಗಳನ್ನು ಶಾಸನದ ಇಲಾಖೆಗೆ ತಿಳಿಸುವಂತೆ ಅಪ್ಪಣೆ ಮಾಡಿದರು. ಈ ರೀತಿಯಿಂದ ಬಂದ ಪಟ್ಟಿಗಳಲ್ಲಿ ಕೆಲವು ಬಾಂದು ಕಲ್ಲು, ಮೈಲಿಕಲ್ಲುಗಳ ವಿಳಾಸಗಳೂ ಇದ್ದವೆಂದು ತಿಳಿದುಬಂದಿದೆ. ಈ ಪಟ್ಟಿಯ ಸಹಾಯದಿಂದ ಬಿ.ಎಲ್. ರೈಸ್ ಅವರು ಅನೇಕ ಕನ್ನಡ ಸಂಸ್ಕೃತ ಪಂಡಿತರ ತಂಡದೊಡನೆ ಪ್ರತಿಯೊಂದು ತಾಲ್ಲೂಕಿನಲ್ಲೂ ಸಂಚರಿಸಿ ಸಂಗ್ರಹಿಸಿ ಪ್ರಕಟಿಸಿದ ಶಾಸನಗಳ ಪುಸ್ತಕವೇ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು (ನೋಡಿ–ಎಪಿಗ್ರಾಫಿಯ–ಕರ್ನಾಟಕ). ಅಲ್ಲಿಂದ ಮುಂದೆ ನಿರ್ದೇಶಕರಾಗಿ ಆರ್. ನರಸಿಂಹಾಚಾರ್, ಆರ್. ಶಾಮಾಶಾಸ್ತ್ರಿಗಳು, ಎಂ.ಎಚ್. ಕೃಷ್ಣ ಇವರುಗಳ ಕಾಲದಲ್ಲಿ ಸಂಗ್ರಹವಾದ ಶಾಸನಗಳ ಪಟ್ಟಿಯನ್ನು ಕೆಳಗೆ ಕೊಡಬಹುದು.

| | |
|---|---|
| ಮೈಸೂರು ಸಂಸ್ಥಾನದಲ್ಲಿ | ಸಂಗ್ರಹಿಸಿದ ಶಾಸನಗಳ ಸಂಖ್ಯೆ |
| 1879 – 1906 ರ ವರೆಗೆ | ಸು. 9,000 |
| 1906 – 1922 ರ ವರೆಗೆ | " 5,000 |
| 1922 – 1944 ರ ವರೆಗೆ | " 1,817 |
| ಮದರಾಸ್ ಕರ್ನಾಟಕದಲ್ಲಿ | |
| 1892 – 1944 ರ ವರೆಗೆ | " 1,418 |
| ಮುಂಬಯಿ ಕರ್ನಾಟಕದಲ್ಲಿ | |
| 1926 – 1944ರ ವರೆಗೆ | " 2,164 |

ಇವುಗಳಲ್ಲದೆ ಹೈದರಾಬಾದ್ ಕನ್ನಡ ಪ್ರಾಂತ್ಯಗಳಲ್ಲಿ ಅನೇಕ ಕನ್ನಡ ಶಾಸನಗಳನ್ನು ಸಂಗ್ರಹಿಸಿ ಕೊಪ್ಪಳದ ಕನ್ನಡ ಶಾಸನಗಳು ಎಂಬ ಅಂಕಿತದಿಂದ ಪ್ರಕಟಿಸಿದ್ದಾರೆ. 1944ರಿಂದ ಈಚೆಗೂ ಶಾಸನ ಸಂಗ್ರಹಗಳಾಗುತ್ತಿವೆ. ಈಚೆಗೆ ಭಾರತದಲ್ಲಿ ವಿಲೀನವಾದ ಗೋವೆಯಲ್ಲಿಯೂ ಹೈದರಾಬಾದ್ ಕರ್ನಾಟಕದಲ್ಲಿಯೂ ಇನ್ನೂ ಹೊರಬೀಳದ ಶಿಲಾ ಲೇಖನಗಳಿವೆ ಎಂದು ಅನೇಕರು ಅಭಿಪ್ರಾಯಪಡುವರು.

**ಪ್ರಕಟಣೆ :** 1879–1906ರ ವರೆಗೆ ಬಿ.ಎಲ್. ರೈಸ್ ಅವರು ಸಂಗ್ರಹಿಸಿದ ಶಾಸನಗಳೆಲ್ಲ ಎಪಿಗ್ರಾಫಿಯ ಕರ್ನಾಟಿಕ ಎಂಬ ಅಂಕಿತದ 12 ಸಂಪುಟಗಳಲ್ಲಿ ಪ್ರಕಟವಾಗಿವೆ. ಅವರ ಅನಂತರ ಬಂದ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು ತಮ್ಮ ಕಾಲದಲ್ಲಿ ಸಂಗ್ರಹಿಸಿದ ಶಾಸನಗಳನ್ನೆಲ್ಲ ಮೈಸೂರು ಶಾಸನ ಇಲಾಖಾ ವರದಿಗಳಲ್ಲಿ ಮುದ್ರಿಸಿರುವುದಲ್ಲದೆ ಹಿಂದಿನ ರೈಸ್ ಪ್ರಕಟಿಸಿದ ಕೆಲವು ಶಾಸನಗಳ ತಿದ್ದುಪಡಿ ಮಾಡಿರುವರು. ಅವರ ಅನಂತರ ಶಾಮಾಶಾಸ್ತ್ರಿ ಮತ್ತು ಎಂ.ಎಚ್. ಕೃಷ್ಣರವರು ಸಂಗ್ರಹಿಸಿದ ಶಾಸನಗಳು 1954ರವರೆಗೆ ಮೈಸೂರು ಶಾಸನದ ಇಲಾಖಾ ವರದಿಗಳಲ್ಲಿ ಮುದ್ರಿತವಾಗಿವೆ. ಮದರಾಸ್ ಪ್ರಾಂತದ ಕನ್ನಡ ಶಾಸನಗಳು ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ ಎಂಬ ಗ್ರಂಥದಲ್ಲಿಯೂ ಮುಂಬಯಿ ಕನ್ನಡ ಪ್ರಾಂತ್ಯದ ಶಾಸನಗಳು ಧಾರವಾಡದ ಪ್ರಾಚ್ಯವಸ್ತು ಸಂಶೋಧನಾಲಯಗಳ ವರದಿಗಳಲ್ಲೂ ಪ್ರಕಟವಾಗಿವೆ. ಅಲ್ಲದೆ ಐತಿಹಾಸಿಕ ದೃಷ್ಟಿಯಿಂದ ಮುಖ್ಯವಾದ ಅನೇಕ ಶಾಸನಗಳು ಏಷಿಯಾಟಿಕ್ ಸೊಸೈಟಿ ಜರ್ನಲ್, ಎಪಿಗ್ರಾಫಿಯ ಇಂಡಿಕ, ಇಂಡಿಯನ್ ಆಂಟಿಕ್ವೆರಿ ಮುಂತಾದ ವಿದ್ವತ್ಪೂರ್ಣ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಎಪಿಗ್ರಾಫಿಯ ಕರ್ನಾಟಿಕದ ಎಲ್ಲ ಸಂಪುಟಗಳನ್ನೂ ಮತ್ತೆ ಪರಿಶೀಲಿಸಿ, ಶುದ್ಧೀಕರಿಸಿ, ಹೊಸತಾಗಿ ದೊರೆತಿರುವ ಶಾಸನಗಳನ್ನು ಸೇರಿಸಿ ಪುನರ್ ಮುದ್ರಿಸುವ ಕೆಲಸವನ್ನು ಕರ್ನಾಟಕ ಸರ್ಕಾರ 1971ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಿದೆ.

**ಕನ್ನಡ ಶಾಸನಗಳ ವ್ಯಾಪ್ತಿ :** ಮೇಲೆ ಕೊಟ್ಟಿರುವ ಶಾಸನ ಸಂಗ್ರಹಗಳ ಪಟ್ಟಿಯಂತೆ ಇದುವರೆಗೂ ಕನ್ನಡನಾಡಿನಲ್ಲಿ 20 ಸಾವಿರ ಶಾಸನಗಳು ಸಿಕ್ಕಿವೆ. ಇವುಗಳಲ್ಲಿ ಶೇ. 80 ಭಾಗ ಕನ್ನಡ ಲಿಪಿ ಮತ್ತು ಭಾಷೆಯಲ್ಲಿವೆ. ಕನ್ನಡಭಾಷೆಯ ಶಾಸನಗಳು ಕೆಲವು ಈಗ ವಿಂಗಡವಾಗಿರುವ ಭಾಷಾವಾರು ರಾಜ್ಯಗಳಲ್ಲಿ ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ ದೊರೆಯುತ್ತವೆ. ಕನ್ನಡ ಪ್ರಾಂತ್ಯಗಳೆಂದೇ ಹೇಳಬಹುದಾದ ಕೆಲವು ಸ್ಥಳಗಳು ಹಳೆಯ ಕನ್ನಡ ಶಾಸನಗಳಿರುವ ಪ್ರದೇಶಗಳು ಕನ್ನಡ ನಾಡಿಗೆ ಈಗ ಎಂದರೆ 1956ರಲ್ಲಿ ಭಾಷಾವಾರು ಪ್ರಾಂತ್ಯ ವಿಂಗಡಣೆಯಾದ ಮೇಲೆ–ಸೇರಿಲ್ಲ. ಕನ್ನಡ ಹೆಸರಿನ ಊರುಗಳು ಮತ್ತು ವೀರಗಲ್ಲುಗಳಿರುವ, ಈಗಲೂ ಕನ್ನಡ ಭಾಷೆ ಬಳಕೆಯಲ್ಲಿರುವ ಸೇಲಂ ಜಿಲ್ಲೆಯ ಧರ್ಮಪುರಿ, ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳು, ನೀಲಗಿರಿ– ಈ ಭಾಗಗಳಲ್ಲಿ ಬಹಳ ಪ್ರಾಚೀನಕಾಲದ ಕನ್ನಡ ಭಾಷೆಯ ಶಿಲಾಲೇಖಗಳಿವೆ. ಮಧ್ಯಪ್ರಾಂತ್ಯದಲ್ಲೂ ಒಂದು ಕನ್ನಡ ಶಿಲಾಲೇಖನವಿದೆ. ಈಗ ನಿರ್ಮಾಣವಾಗಿರುವ ವಿಶಾಲಕರ್ನಾಟಕವಲ್ಲದೆ ಸೀಮಾಂತರದಲ್ಲಿರುವ ಅನೇಕ ಗ್ರಾಮಗಳಲ್ಲಿ ಕನ್ನಡ ಶಾಸನಗಳು ದೊರೆಯುತ್ತವೆ. ನೃಪತುಂಗ ಹೇಳುವಂತೆ ಕಾವೇರಿಯಿಂದ ಗೋದಾವರಿ ನದಿಯ ವರೆಗಿನ ನಾಡೇ ಹಿಂದೆ ಕನ್ನಡನಾಡಾಗಿತ್ತು.

**ತಾಮ್ರಶಾಸನಗಳು :** ಕೆಲವು ಕನ್ನಡ ಶಿಲಾಶಾಸನಗಳ ಪ್ರತಿಗಳು ಭಾರತ ಮತ್ತು ಪಾಶ್ಚಾತ್ಯದೇಶಗಳ ವಸ್ತುಪ್ರದರ್ಶನಾಲಯಗಳಲ್ಲಿವೆ. ಸರ್ ವಾಲ್ಟರ್ ಎಲಿಯಟ್ ಕರ್ನಾಟಕ ಪ್ರಾಂತ್ಯ ನಿಜಾಮ ರಾಜ್ಯದ ಪಶ್ಚಿಮಭಾಗ ಮತ್ತು ಮೈಸೂರು ಪ್ರಾಂತ್ಯದ ಉತ್ತರಭಾಗದಲ್ಲಿ ಸಂಗ್ರಹಿಸಿದ 1300 ಶಿಲಾ ಮತ್ತು ತಾಮ್ರಶಾಸನಗಳಲ್ಲಿ 595 ಲೇಖನಗಳು ಕರ್ನಾಟಕದ ಲೇಖನಗಳು ಎಂಬ ಹೆಸರಿನಿಂದ ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ಎರಡು ಸಂಪುಟಗಳಾಗಿ ದೊರಕುತ್ತವೆ. ಕೋಲ್ಕತ್ತದ ನಹರ್ ವಸ್ತುಪ್ರದರ್ಶನಾಲಯದಲ್ಲಿ ಕನ್ನಡ ಬರೆವಣಿಗೆಯಿರುವ ಕೆಲವು ಮೂರ್ತಿಗಳಿವೆ. ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ವಸ್ತುಪ್ರದರ್ಶನಾಲಯದಲ್ಲಿ ಕೆಲವು ಕನ್ನಡದ ಶಿಲಾಲೇಖನಗಳು ಪ್ರದರ್ಶಿತವಾಗಿವೆ.

**ಕನ್ನಡ ರಾಜಮನೆತನಗಳು ಕಾಲ :** ಕನ್ನಡ ಮಾತನಾಡುತ್ತಿದ್ದ ಮೊತ್ತಮೊದಲನೆಯ ರಾಜಮನೆತನದವರು ಕದಂಬರು, ಅವರ ಅನಂತರ ಗಂಗ, ಬಾದಾಮಿ ಚಳುಕ್ಯ, ರಾಷ್ಟ್ರಕೂಟ, ವೈದುಂಭ, ಬಾಣ, ಸೇನಾವರ, ನೊಳಂಬ, ಪಶ್ಚಿಮ ಚಳುಕ್ಯ, ಹೊಯ್ಸಳ, ದೇವಗಿರಿಯಾದವ,

ಕಳಚುರ್ಯ, ಉಚ್ಚಂಗಿ ಪಾಂಡ್ಯ–ಮೊದಲಾದ ಪ್ರಸಿದ್ಧ ರಾಜಮನೆತನದ ಅರಸರು ಕನ್ನಡಿಗರು. ದಕ್ಷಿಣಾಪಥೇಶ್ವರನಾದ ಬಾದಾಮಿಯ ಇಮ್ಮಡಿ ಪುಲಿಕೇಶಿ, ರಾಷ್ಟ್ರಕೂಟರ ಮೂರನೆಯ ಗೋವಿಂದ, ಕಲ್ಯಾಣಿ ಚಾಳುಕ್ಯವಂಶಜನಾದ ವಿಕ್ರಮಾದಿತ್ಯ–ಇವರ ಹೆಸರು ಕರ್ನಾಟಕಕ್ಕೆ ಹೆಮ್ಮೆ ತರತಕ್ಕವುಗಳಾಗಿವೆ. 14ನೆಯ ಶತಮಾನದಲ್ಲಿ ಹುಟ್ಟಿದ ವಿಜಯನಗರ ಸಾಮ್ರಾಜ್ಯದ ರಾಜಭಾಷೆ ಕನ್ನಡ, ವಿಜಯನಗರ ಸಾಮ್ರಾಜ್ಯ ಕ್ಷೀಣದೆಶೆಗೆ ಬಂದಮೇಲೆ ಆ ಸರ್ಕಾರದ ಅಧೀನದಲ್ಲಿದ್ದ ಪ್ರಾಂತ್ಯಾಧಿಕಾರಿಗಳಾದ ಅನೇಕ ಜನ ಪಾಳೆಯಗಾರರು ತಾವೇ ಸ್ವತಂತ್ರರೆಂದು ಆಳಲು ಆರಂಭಿಸಿದರು. ಮೈಸೂರು, ಚಿತ್ರದುರ್ಗ, ಕೆಳದಿ, ಇಕ್ಕೇರಿ, ಮಾಗಡಿ, ಉಮ್ಮತ್ತೂರು, ಕಿತ್ತೂರು ಮುಂತಾದ ಸಣ್ಣಸಣ್ಣ ಪಾಳೆಪಟ್ಟುಗಳು ಹುಟ್ಟಿಕೊಂಡವು. ಈ ರಾಜಮನೆತನಗಳ ಭಾಷೆ ಕನ್ನಡ. ಹೀಗೆ 3ನೆಯ ಶತಮಾನದಿಂದ ಆಧುನಿಕ ಕಾಲದವರೆಗೆ ಅನೇಕ ರಾಜಮನೆತನಗಳನ್ನು ರಾಜಭಾಷೆಯಾಗಿ ಹೊರಡಿಸಿರುವ ಸಾವಿರಾರು ಶಾಸನಗಳು ದೊರೆಯುತ್ತವೆ.

ಕದಂಬ ಮೃಗೇಶನ ದಾನ ಶಾಸನ

**ಲಿಪಿ :** ಕನ್ನಡನಾಡಿನಲ್ಲಿ ದೊರೆಯುವ ತಾಮ್ರಶಾಸನ, ಶಿಲಾಶಾಸನಗಳಲ್ಲಿ ತಾಮ್ರ ಶಾಸನಗಳ ಭಾಷೆ (ಪಾಳೆಗಾರರ ಕಾಲದ ಹಿಂದಿನವು) ಸಂಸ್ಕೃತ, ಲಿಪಿ ಕನ್ನಡ, ದೇವನಾಗರಿ, ನಂದಿನಾಗರಿ, ಸಾಮಾನ್ಯವಾಗಿ ಶಿಲಾಶಾಸನಗಳು ಕನ್ನಡ ಲಿಪಿಯಲ್ಲಿಯೇ ಇವೆ. ಇವುಗಳಲ್ಲಿ ರಾಜಪ್ರಶಂಸೆ ಇರುವ ಕೆಲವು ಕನ್ನಡ ಶಾಸನಗಳಲ್ಲಿ ಸಂಸ್ಕೃತ ಶ್ಲೋಕಗಳಿವೆ. ತಾಮ್ರಶಾಸನಗಳ ಕೊನೆಯಲ್ಲಿ ದಾನಕೊಟ್ಟ ಗ್ರಾಮ, ಭೂಮಿಗಳ ಎಲ್ಲೆಗಳನ್ನು ತಿಳಿಸುವ ಶಬ್ದಗಳು ಕನ್ನಡ ಭಾಷೆಯವು. ಶುದ್ಧ ಸಂಸ್ಕೃತ ಭಾಷೆಯಲ್ಲಿಯೇ ಬರೆಯಲ್ಪಟ್ಟ ಐಹೊಳೆಯ ಶಾಸನದಲ್ಲಿ ಶುದ್ಧ ಕನ್ನಡ ಲಿಪಿಗಳಾದ, ಱ, ೞ ಪ್ರಯೋಗಗಳಿವೆ. ಸಾಮಾನ್ಯವಾಗಿ ವೀರಗಲ್ಲು, ಮಾಸ್ತಿಕಲ್ಲು, ಶುರುಗಲ್ಲು, ರಕ್ತಕೊಡಿಗೆ ಕಲ್ಲು ಮೊದಲಾದುವುಗಳ ಭಾಷೆ ಮತ್ತು ಲಿಪಿ ಕನ್ನಡ, ಕನ್ನಡನಾಡಿನಲ್ಲಿ ಚೋಳರ ಆಳ್ವಿಕೆಗೆ ಒಳಪಟ್ಟ ಭಾಗಗಳಲ್ಲಿ ತಮಿಳು ಗ್ರಂಥಾಕ್ಷರದ ತಮಿಳು ಶಾಸನಗಳೂ ಕನ್ನಡ ಲಿಪಿಯಲ್ಲಿ ಬರೆದ ತಮಿಳು ಶಾಸನಗಳೂ ದೊರೆಯುತ್ತವೆ. ವಿಜಯನಗರ ಸಾಮ್ರಾಜ್ಯಕಾಲದ ಸಂಗಮ ರಾಜಮನೆತನದ ಕನ್ನಡ ಶಾಸನಗಳು ದೇವನಾಗರಿ ಲಿಪಿಗಳಲ್ಲಿವೆ. ಕನ್ನಡ ಲಿಪಿ ಚರಿತ್ರೆಯನ್ನು ತಿಳಿಯಲು ಅಂದಂದಿನ ಕೈಬರೆಹದ ಗ್ರಂಥಗಳಂತೆ ಶಾಸನಗಳ ಬರೆಹಗಳೂ ಸಾಧನವಾಗಿವೆ. ಅಶೋಕನ ಕಾಲದ (ಪ್ರ.ಶ.ಪೂ. 3ನೆಯ ಶತಮಾನ) ಬ್ರಾಹ್ಮೀ ಲಿಪಿ ಶಾತವಾಹನರ ಕಾಲದಲ್ಲೂ (2ನೆಯ ಶತಮಾನ) ಸರಿಸುಮಾರಾಗಿ ಅದೇ ಮಾದರಿಯಲ್ಲಿಯೇ ಮುಂದುವರಿಯುತ್ತದೆ. ಅನಂತರ ಕದಂಬ (5ನೆಯ ಶತಮಾನ) ಮತ್ತು ಗಂಗರ (6ನೆಯ ಶತಮಾನ) ಕಾಲಗಳಲ್ಲಿ ಅಕ್ಷರ ರಚನೆಯೂ ಚುಕ್ಕೆಯಾಗಿದ್ದುದು ಗೆರೆಯಾಗಿಯೂ ಗೆರೆ ಬಳುಕು, ಕೊಂಡಿಯಾಗಿ ಮಾರ್ಪಡುವುದನ್ನು ಕಾಣಬಹುದು. ಬಾದಾಮಿ ಚಳುಕ್ಯ (6ನೆಯ ಶತಮಾನ) ಮತ್ತು ಕಲ್ಯಾಣಿ ಚಾಳುಕ್ಯರ (11ನೆಯ ಶತಮಾನ) ಕಾಲದಲ್ಲಿ ಬಿಡಿಬಿಡಿಯಾದ ಅಕ್ಷರ ಭಾಗಗಳನ್ನು ಸೇರಿಸುವ ಪ್ರಯತ್ನ ನಡೆದಂತೆ ತೋರುತ್ತದೆ. ಬರವಣಿಗೆಯ ವೇಗ ಹೆಚ್ಚಿದಂತೆಲ್ಲ ಚೌಕಾಕಾರಗಳು ಗುಂಡಾಗುವುದೂ ಬಿಡಿ ಬಿಡಿಯಾದುವು ಒಂದಾಗುವುದೂ ಅನಿವಾರ್ಯ. ಕಳಚೂರಿ, ಹೊಯ್ಸಳ, ಸೇವುಣರ (13ನೆಯ ಶತಮಾನ) ಮತ್ತು ವಿಜಯನಗರದ (15ನೆಯ ಶತಮಾನ) ಕಾಲಗಳಲ್ಲಿ ಬಿಡಿ ಭಾಗಗಳೆಲ್ಲ ಸಂಪೂರ್ಣ ಒಂದಾಗಿ ಲಿಪಿಗೆ ಈಗಿನ ರೂಪ ಬಂದುದನ್ನು ಗಮನಿಸಬಹುದು. ಹೊಸಗನ್ನಡದ ಅನೇಕ ಅಕ್ಷರ ರೂಪಗಳು ವಿಜಯನಗರ ಕಾಲಕ್ಕಾಗಲೇ ಕಾಣಿಸಿಗುತ್ತದೆ. ಈ ಕೆಲಸ ಪೂರ್ಣವಾದದ್ದು ಮೈಸೂರು ಅರಸರ (18ನೆಯ ಶತಮಾನ) ಕಾಲದಲ್ಲಿ.

ಹೆಚ್ಚಿನ ವಿವರಗಳಿಗೆ, ಚಿತ್ರಗಳಿಗೆ ಅ. ಆ, ಇ, ಈ – ಮೊದಲಾದ ಶೀರ್ಷಿಕೆಗಳನ್ನೂ ಕನ್ನಡ ಲಿಪಿ ಎಂಬ ಲೇಖನವನ್ನು ನೋಡಿ.



ಬಾದಾಮಿಯ ಜಂಬುಲಿಂಗ ದೇವಾಲಯದಲ್ಲಿನ ಒಂದು ಹಳೆಯ ಶಾಸನ. ಅಲ್ಲಿನ ಕಲ್ಲು ಕಂಬವೊಂದರ ಮೇಲಿದೆ. ಇಲ್ಲಿನ ಹಳಗನ್ನಡ ಲಿಪಿ ಸು. 8ನೆಯ ಶತಮಾನದ್ದು

**ಭಾಷೆ :** ಶಾಸನಗಳ ಭಾಷೆ ವ್ಯಾಸಂಗಾರ್ಹವಾದ ವಿಷಯವೇ ಆಗಿದೆ. ಇಲ್ಲಿನದು ಆಡುಮಾತಿಗೆ ತೀರ ಹತ್ತಿರವಾದುದೆಂದು ಹೇಳುತ್ತಾರಾದರೂ ಆಯಾಕಾಲದ ಪ್ರಸಿದ್ಧ ಕವಿಗಳ, ಕಾವ್ಯಗಳ ಪ್ರಭಾವ ಶಾಸನ ಭಾಷೆಯ ಮೇಲೂ ಆಗಿರುವುದನ್ನು ಕಡೆಗಣಿಸುವಂತಿಲ್ಲ. ಮೊದಮೊದಲಿಗೆ ಸಂಸ್ಕೃತ ಶ್ಲೋಕಗಳ, ಸಂಸ್ಕೃತ ಸಮಾಸಗಳ ಬಳಕೆ ಹೆಚ್ಚಾಗಿರುವುದು ಕಂಡುಬರುತ್ತದೆ. ಕೆಲವು ಶಾಸನಗಳಲ್ಲಿ ಪ್ರಸಿದ್ಧ ಕವಿಗಳ ರಚನೆಗಳನ್ನು ಅನಾಮತ್ತಾಗಿ ಎತ್ತಿ ಬಳಸಿರುವುದುಂಟು, ಕನ್ನಡಕ್ಕೆ ಪ್ರಾಧಾನ್ಯ ಬಂದಾಗಲೂ ಖ್ಯಾತ ಕರ್ಣಾಟಕಗಳ ಒಲವೇ ಹೆಚ್ಚಾಗಿರುವುದನ್ನು ಕಡೆಗಣಿಸಲಾಗದು. ಗದ್ಯ ಶುದ್ಧವಾಗಿರುವಂತೆ ಗ್ರಾಮ್ಯವಾಗಿರುವುದಕ್ಕೆ ನೂರಾರು ನಿದರ್ಶನಗಳನ್ನು ಕೊಡಬಹುದು. ಗೌಡ, ಅಯ್ದು, ಅದು, ಇದು, ಯಾವನು– ಮೊದಲಾದ ಪದಗಳ ರೂಪವ್ಯತ್ಯಾಸಗಳಂತೂ ಹೇರಳವಾಗಿ ಸಿಗುತ್ತವೆ. ಸು. 597–750ರ ವರೆಗಿನ ಕೆಲವು ಶಾಸನಗಳಲ್ಲಿ ಕಂಡು ಬರುವ ಕೆಲವು ವಿಚಿತ್ರ ರೂಪಗಳಿಂದಾಗಿ ಹಳಗನ್ನಡಕ್ಕೂ ಹಿಂದೆ ಒಂದು ರೀತಿಯ ಕನ್ನಡವಿದ್ದಿರಬೇಕೆಂದೂ ಅದನ್ನು ಪೂರ್ವದ ಹಳಗನ್ನಡವೆನ್ನಬಹುದೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಸ್ವರ್ಗಾಗ್ರಮಾವೇಱುದಾರ್ (700), ಏಱನೆಯಾ ನರಕದಾ ಪುಱು ಅಕ್ಕುಂ (597), ವೈಶಾಖಮಾಸದುಳ್ (725)– ಮುಂತಾದುವು ಅವರು ಕೊಡುವ ಉದಾಹರಣೆಗಳು.

ಲಿಪಿಯಲ್ಲಿ ಆಗಿರುವ ಮಾರ್ಪಾಡು, ಪದರಚನೆ, ವಾಕ್ಯರಚನೆ, ಱ, ೞ ಕಾರಗಳ ಪ್ರಯೋಗ–ಇತ್ಯಾದಿ ಹಲವು ದೃಷ್ಟಿಯಿಂದ ಶಾಸನಗಳ ಭಾಷೆ ವ್ಯಾಸಂಗಯೋಗ್ಯವಾಗುತ್ತದೆ.

**ಕನ್ನಡ ಶಾಸನಗಳ ವೈವಿಧ್ಯ :** ಕನ್ನಡ ನಾಡಿನ ಶಾಸನಗಳನ್ನು ಕನ್ನಡ ಭಾಷೆಯ ಶಾಸನಗಳು, ಇತರ ಭಾಷೆಯ ಶಾಸನಗಳೆಂದು ಎರಡು ಗುಂಪು ಮಾಡಬಹುದು. ರಾಜಾಸ್ಥಾನದ ಪಂಡಿತರಿಂದ ರಚಿತವಾದ ದಾನಪತ್ರಗಳೆಲ್ಲವೂ ಸಂಸ್ಕೃತ ಭಾಷೆಯವು; ಸಾರ್ವಜನಿಕ ಗಮನಕ್ಕೆ ತರಲು ಹಾಕಿರುವ ವೀರಗಲ್ಲು ಮುಂತಾದ ಶಾಸನಗಳು ಕನ್ನಡ ಭಾಷೆಯವು. ಕೋಲಾರ ಪ್ರಾಂತ್ಯದ ಕೆಲವು ಕಡೆ ತೆಲುಗು ಭಾಷೆಯ ಶಾಸನಗಳು ದೊರೆತಿವೆ. ಬಿಜಾಪುರ ಸುಲ್ತಾನರ, ಔರಂಗಜ಼ೇಬನ ಕಾಲದ ಕೆಲವು ಬರೆವಣಿಗೆಗಳು, ಉರ್ದುಭಾಷೆ ಮತ್ತು ಲಿಪಿಯಲ್ಲಿವೆ. ಪೇಷ್ವೆಗಳ ಕಾಲದಲ್ಲಿ ಕನ್ನಡನಾಡಿನಲ್ಲಿ ಮರಾಠಿ, ಉರ್ದು, ಕನ್ನಡ ಮೂರು ಭಾಷೆಗಳಲ್ಲೂ ರಾಜಾಜ್ಞೆಗಳನ್ನು ಬರೆದು ಪ್ರಕಟಿಸುತ್ತಿದ್ದರು.

ಮೊದಮೊದಲು ಬರವಣಿಗೆ ಸಾಧನವಾದುದು ಭೂರ್ಜಪತ್ರ, ತಾಳೆಗರಿ, ಮರದ ತೊಗಟೆ. ಅನಂತರ ತಾವು ಕೊಟ್ಟ ದಾನ ಶಾಶ್ವತವಾಗಿ ಉಳಿಯಬೇಕೆಂದು ಕಲ್ಲುಗಳ ಮೇಲೂ ಲೋಹಗಳ ಕಂಬ, ತಗಡುಗಳ ಮೇಲೂ ಬರೆಸಿ ಅವನ್ನು ಎಲ್ಲ ಜನರಿಗೂ ತಿಳಿಯುವ ಸ್ಥಳಗಳಲ್ಲಿ ನಡೆಸಿದರು. ಕೊನೆ ಕೊನೆಗೆ ಬರೆವಣಿಗೆಗೆ ಅವಕಾಶ ಸಿಕ್ಕಿದ ಕಡೆಗಳಲ್ಲಿ ತಮ್ಮ ಕೀರ್ತಿ ಬೆಳೆಗಬೇಕೆಂದು ಬರೆಸಿದವರುಂಟು. ದೇವಸ್ಥಾನ, ಮಠಗಳ ಚಿನ್ನ, ಬೆಳ್ಳಿ, ಮುಂತಾದ ಲೋಹಗಳ ಪಾತ್ರೆಗಳು, ಮಡಕೆಗಳು ಲೋಹದ ತಗಡುಗಳು ಕಬ್ಬಿಣದ ಕಂಬ, ದೇವರ ಪೀಠಗಳು, ಮೂರ್ತಿಗಳ ಬೆನ್ನು ಭಾಗ ದೇವಸ್ಥಾನಗಳ ತಳಪಾಯದಕಲ್ಲು, ಕಂಬ ಗೋಡೆ ಬಲಿಪೀಠ ಗೋಪುರದ ಕಲಶ ಇವೇ ಮುಂತಾದ

ಕಡೆಗಳಲ್ಲಿ ಬರೆವಣಿಗೆಗಳಿವೆ. ಇವುಗಳಲ್ಲದೆ ಹಳೆಯ ಊರುಗಳ ಮುಂಭಾಗದಲ್ಲಿ, ಕಾಡುಗಳಲ್ಲಿ ನೆಟ್ಟ ಬೋರುಕಲ್ಲು, ಯಂತ್ರಕಲ್ಲು, ವೀರಗಲ್ಲು, ತುರುಗಲ್ಲು, ಲಿಂಗಮುದ್ರೆಕಲ್ಲು, ವಾಮನ ಮುದ್ರೆಕಲ್ಲು ಮಾಸ್ತಿಕಲ್ಲುಗಳೆಂದು ಕರೆಯಲ್ಪಡುವ ಅನ್ವರ್ಥವಾದ ಶಿಲಾಲೇಖನಗಳಿವೆ. ಪುಣ್ಯಕ್ಷೇತ್ರ ಮತ್ತು ಬೆಟ್ಟಗಳ ಬಂಡೆಗಳಲ್ಲಿ, ನದೀತೀರಗಳಲ್ಲಿ, ಕೊಳಗಳ ಪಕ್ಕದಲ್ಲಿ ಅಲ್ಲಿಗೆ ಬಂದ ಯಾತ್ರಾರ್ಥಿಗಳು, ರಾಜರ, ಕವಿಗಳ ಸ್ಮಾರಕ ಬರೆವಣಿಗೆಗಳಿವೆ. ಕೆರೆ ಕಟ್ಟಿಸಿ ತೂಬಿನ ಮೇಲೆ ಬರೆಸಿರುವ ಶಾಸನಗಳೂ ಸಿಕ್ಕಿವೆ. ಅನಶನ ವ್ರತದಿಂದ ಪ್ರಾಣಾರ್ಪಣೆ ಮಾಡಿದವರ ಜ್ಞಾಪಕಾರ್ಥವಾದ ನಿಸಿಧಿಕಲ್ಲು ತಮ್ಮ ಸ್ವಾಮಿಗೆ ಭಕ್ತಿ ಸಲ್ಲಿಸಲು ಶರೀರ ತ್ಯಾಗಮಾಡಿದ ಭೃತ್ಯರ ತ್ಯಾಗಿಗಳ ಗರುಡಕಲ್ಲುಗಳು ಇವೆ.



ಗಂಗ ಅರಸ ಹರಿವರ್ಮನ ಕೂಡಲೂರು ಶಾಸನದ ಒಂದು ಭಾಗ

ಈ ಎಲ್ಲ ಬಗೆಗಳ ಶಾಸನಗಳನ್ನೂ ಅವುಗಳಲ್ಲಿ ಬರೆದಿರುವ ಬರೆವಣಿಗೆಗನುಸಾರವಾಗಿ ಮೂರು ಗುಂಪು ಮಾಡಬಹುದು.

1. ದಾನಪತ್ರಗಳು 2. ಪತಿಯ ಮೇಲಿನ ಪ್ರೇಮಕ್ಕಾಗಿ, ಸ್ವಾಮಿಭಕ್ತಿಗಾಗಿ, ಸಂಸಾರತ್ಯಾಗಕ್ಕಾಗಿ, ಪ್ರಾಣಾರ್ಪಣ ಮಾಡಿದ ವಿಷಯ ತಿಳಿಸುವ ಮಾಸ್ತಿಕಲ್ಲು, ಗರುಡಗಲ್ಲು, ನಿಸಿದಿಕಲ್ಲು, ಹೀಗೆಯೇ ದೇಶರಕ್ಷಣೆ ರಾಜ್ಯರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿದ ವೀರಗಲ್ಲುಗಳು, 3. ಇತರ ಸ್ಮಾರಕಗಳು.

**1. ದಾನಪತ್ರಗಳು :** ಸಾಮಾನ್ಯವಾಗಿ ಶ್ರೋತ್ರಿಯರಿಂದ ಬ್ರಾಹ್ಮಣರ ಜೀವಿಕೆಗಾಗಿ ರಾಜರುಗಳು ಮತ್ತು ಧನಿಕರು ಭೂ, ಗೃಹ, ಮುಂತಾದುವನ್ನು ದಾನ ಮಾಡಿದ ವಿವರ ತಿಳಿಸುವ ತಾಮ್ರಶಾಸನ ಮತ್ತು ಶಿಲಾಶಾಸನಗಳಿವೆ. ವೈಯಕ್ತಿಕವಾಗಿ ದಾನಮಾಡಿದ ವಿಷಯ ತಿಳಿಸುವ ಶಾಸನಗಳು ಸಾಮಾನ್ಯವಾಗಿ ತಾಮ್ರದ ಹಲಗೆಗಳ ಮೇಲೆ ಬರೆಯಲ್ಪಟ್ಟಿವೆ. ಮಠ ದೇವಸ್ಥಾನಗಳನ್ನು ಕಟ್ಟಿಸಿ ದಿನವಹಿ ನಡೆಯುವ ಅವುಗಳ ಪೂಜಾದಿಗಳಿಗೆ ಬಿಟ್ಟಿರುವ ದತ್ತಿಗಳು ವಿಶೇಷವಾಗಿ ಶಿಲಾಶಾಸನಗಳು, ಕೆಲವು ಪುಸ್ತಕರೂಪದಲ್ಲಿರುವ ತಾಮ್ರ ಶಾಸನಗಳು ಇವೆ. ಇವು ಚಂಪೂ ಕಾವ್ಯದಷ್ಟು ಪ್ರೌಢವಾಗಿವೆ. ಇವುಗಳ ಸೂಕ್ತ ಪರಿಚಯವನ್ನು ಕೆಳಗೆ ಕೊಟ್ಟಿದೆ.

**ತಾಮ್ರಶಾಸನಗಳು :** ಕದಂಬ, ಗಂಗ, ರಾಷ್ಟ್ರಕೂಟ, ಚಾಳುಕ್ಯ ಮೊದಲಾದ ರಾಜಮನೆತನಗಳ ಶಾಸನಗಳು ತಾಮ್ರದ ಹಲಗೆಗಳ ಮೇಲಿವೆ. ಗಂಗರಾಜರ ತಾಮ್ರ ಶಾಸನಗಳು ಅತ್ಯಧಿಕವಾಗಿ ಕನ್ನಡನಾಡಿನಲ್ಲೇ ದೊರಕಿವೆ. ಇವುಗಳ ಸಂಖ್ಯೆ 70. ಮೊದಮೊದಲು ಬರೆಸಿದ ತಾಮ್ರಶಾಸನಗಳು ತಾಳೆಗರಿಯ ಹಾಗೆಯೇ ಉದ್ದ ಅಗಲಗಳಿದ್ದು ತಾಳೆಗರಿಗಿಂತ ದಪ್ಪನಾಗಿ ನಾಲ್ಕು ಕಡೆಯೂ ಉಬ್ಬಾಗಿ ಒಳಮೈ ಒಂದೇ ಮಟ್ಟದ ಹಲಗೆಗಳ ಎರಡು ಪಕ್ಕಗಳಲ್ಲೂ 4–5 ಪಕ್ತಿಗಳಿದ್ದು ಕನ್ನಡ ಲಿಪಿಗಳಲ್ಲಿ ಬರೆಯಲ್ಪಟ್ಟಿವೆ. ಒಂದು ಕಟ್ಟಿನಲ್ಲಿ 3, 5, 7 ಹಲಗೆಗಳಿರುವುದುಂಟು. ಮೊದಲನೆಯ ಹಲಗೆಯ ಮತ್ತು ಕೊನೆ ಹಲಗೆಯ ಹೊರಮೈಗಳಲ್ಲಿ ಬರೆವಣಿಗೆ ಇರುವುದಿಲ್ಲ. ಒಂದೇ ಪ್ರಮಾಣದ ಈ ಹಲಗೆಗಳನ್ನೆಲ್ಲ ಎಡಗಡೆ ಅಂಚಿನಲ್ಲಿ ಅರ್ಧ ಅಂಗುಲವರ್ತುಲಗಳ ರಂಧ್ರಮಾಡಿ ತಾಮ್ರದ ಬಳೆಗಳನ್ನು ಪೋಣಿಸಿ ಬಳೆಯ ಎರಡು ತುದಿಗಳನ್ನೂ ಬೆಸೆದು, ಬೆಸೆದಿರುವ ಭಾಗದಲ್ಲಿ ಆಯಾರಾಜ ರಾಜಚಿಹ್ನೆಗಳುಳ್ಳ ಮುದ್ರಿಕೆಗಳನ್ನು ಹಾಕಿರುವುದಲ್ಲದೆ ಒಳಗಡೆ ರಾಜನ ಹೆಸರನ್ನೂ ಬರೆಸಿರುವುದು ಕಂಡುಬರುತ್ತದೆ. ಗಂಗರ ಆನೆ, ಚಾಳುಕ್ಯರ ವರಾಹ, ಹೊಯ್ಸಳರ ವ್ಯಾಘ್ರ ಮುಂತಾದ ಪ್ರಾಣಿಗಳ ಸುಂದರ ಚಿತ್ರಗಳನ್ನುಳ್ಳ ಈ ಮುದ್ರಿಕೆ ಗಳು ಸುಮಾರು ಈಗಿನ ರೂಪಾಯಿಯಷ್ಟು ಅಥವಾ ಅದಕ್ಕಿಂತ ಸ್ವಲ್ಪ ದೊಡ್ಡದಾಗಿರುವುದುಂಟು.

10–11ನೆಯ ಶತಮಾನಗಳ ಅನಂತರ ಬರೆಸಿರುವ ತಾಮ್ರಶಾಸನಗಳ ಆಕಾರ, ಹಲಗೆಗಳ ಸಂಖ್ಯೆ ಬದಲಾವಣೆ ಹೊಂದಿ ಕ್ರಮೇಣ ಉದ್ದ ಅಗಲ ದಪ್ಪ ಹೆಚ್ಚಿರುವುದು ಕಂಡುಬರುತ್ತದೆ. ಉಂಗುರ, ಮುದ್ರೆಗಳಿಲ್ಲದ ಶಾಸನಗಳು ನಂಬಲರ್ಹವಾದುವುಗಳಲ್ಲ.

ಗಂಗರ ಎಲ್ಲ ತಾಮ್ರಶಾಸನಗಳಲ್ಲಿಯೂ ಸ್ವಸ್ತಿ ಜಿತಂ ಭಗವತಾ ಎಂದು ಪ್ರಾರಂಭವಾಗುವ ವಾಕ್ಯವೂ ಇತರ ರಾಜಮನೆತನಗಳ ಶಾಸನಗಳಲ್ಲಿ ದೇವತಾ ಸ್ತುತಿಯೂ ಇರುತ್ತದೆ. ಮುಂದೆ ರಾಜರ ಪೀಳಿಗೆ ಆಯಾ ರಾಜರು ಮಾಡಿದ ಮಹತ್ಕಾರ್ಯ– ಇವನ್ನು ತಿಳಿಸಿ ಕೊನೆಗೆ ದಾನ ತೆಗೆದುಕೊಳ್ಳುವವನ ಯೋಗ್ಯತೆ, ಅವನ ಪಾಂಡಿತ್ಯ, ಗೋತ್ರ, ಪ್ರವರ, ದಾನಕೊಟ್ಟ. ಗ್ರಾಮಭೂಮಿಗಳನ್ನೂ ಅದರ ಎಲ್ಲೆಕಟ್ಟುಗಳನ್ನೂ ನಮೂದಿಸಿರುತ್ತದೆ. ಸಾಮಾನ್ಯವಾಗಿ ತಾಮ್ರಶಾಸನಗಳು ಸಂಸ್ಕೃತಭಾಷೆಯಲ್ಲಿವೆ. ನಾಯಕರ ಕಾಲದ ಶಾಸನಗಳಾದರೋ ದೇಶಭಾಷೆಯಲ್ಲಿವೆ. ಎಲ್ಲೆಗಳನ್ನು ತಿಳಿಸುವಾಗ ಮಾತ್ರ ಸಂಸ್ಕೃತ ಶಾಸನಗಳ ಕೊನೆಯಲ್ಲಿ ದೇಶ ಭಾಷೆ ಬರುತ್ತದೆ. ಪ್ರಾಚೀನ ತಾಮ್ರಶಿಲಾಶಾಸನಗಳು ಗದ್ಯದಲ್ಲಿವೆ. ತಾಮ್ರಶಾಸನದ ಕೊನೆಯಲ್ಲಿ ಫಲಶ್ರುತಿ ದಾನಕೊಟ್ಟವನ ಹಸ್ತಾಕ್ಷರಗಳಿರುತ್ತವೆ. ಗಂಗರ ಮಾರಸಿಂಘನ ಶಾಸನ ಒಂದು ಸಣ್ಣ ಪುಸ್ತಕದಷ್ಟು ದೊಡ್ಡದಾಗಿದೆ. ಮೈಸೂರು ಅರಸರು ಕೊಟ್ಟ ಹದಿನೈದು ಹಲಗೆಯ ತಾಮ್ರಶಾಸನವೇ ಇದುವರೆಗೂ ಸಿಕ್ಕಿರುವುವುಗಳಲ್ಲಿ ದೊಡ್ಡದು ಎಂದು ಹೇಳಬಹುದು.



ಗಂಗ ಶ್ರೀಪುರುಷನ ಶಾಸನ. ಕೋಲಾರ ತಾಲ್ಲೂಕು

**ಶಿಲಾಶಾಸನಗಳು :** ಶಿಲಾಶಾಸನಗಳು ವಿಪುಲವಾಗಿವೆ. ಬಂಡೆಗಳು, ಗೋಡೆಗಳು, ತಳಪಾಯಕಲ್ಲು, ಬೋದಿಗೆಕಲ್ಲು, ಕಲ್ಲಿನ ತೊಲೆಗಳು ಕಂಬಗಳು ಇವುಗಳ ಮೇಲೆಲ್ಲ ಬರೆವಣಿಗೆಗಳಿವೆ. ಸಾಮಾನ್ಯವಾಗಿ 8´ x 10´ ಚದುರವಿರುವ ದೊಡ್ಡ ಕಲ್ಲಿನ ಒಳಭಾಗವನ್ನೆಲ್ಲ ಒಂದೇ ಮಟ್ಟಕ್ಕೆ ತಂದು ಅಂಚುಕಟ್ಟಿ ಮೇಲ್ಗಡೆ ಭಾಗವನ್ನು ಅರ್ಧ ಚಂದ್ರಾಕೃತಿಯಿರುವಂತೆ ಮಾಡಿಕೊಂಡು ಅಂದವಾಗಿ, ಕಲ್ಲಿನ ಒಳಭಾಗದಲ್ಲಿ ಬರೆಸಿರುವ ಶಾಸನಗಳೇ ಹೆಚ್ಚು. ಶಾಸನಗಳ ಮೇಲ್ಗಡೆ ಅರ್ಧಚಂದ್ರಾಕೃತಿಯ ಭಾಗದಲ್ಲಿ ಶೈವದೇವಸ್ಥಾನದ ದಾನಪತ್ರವಾದರೆ, ಲಿಂಗ ಬಸವ ಪೂಜಾರಿ ಹಸುಕರುಗಳು ಎಡಬಲ ಭಾಗಗಳಲ್ಲಿ ಸೂರ್ಯಚಂದ್ರರ ಚಿತ್ರಗಳಿರುತ್ತವೆ. ವೈಷ್ಣವ ದೇವಸ್ಥಾನಗಳದ್ದಾದರೆ ವಾಮನನ ಚಿತ್ರ, ಗೋಪಾಲಕೃಷ್ಣ ಅಥವಾ ಆ ದೇವಸ್ಥಾನದಲ್ಲಿ ಪ್ರತಿಷ್ಠಿತವಾದ ಮೂರ್ತಿಯ ಚಿತ್ರ ಕೆತ್ತಲ್ಪಟ್ಟಿರುತ್ತದೆ. ಜೈನ ಶಾಸನವಾದರೆ ಜಿನ ಬಿಂಬವಿರುತ್ತದೆ. ಈ ಎಲ್ಲ ಶಾಸನಗಳ ಪ್ರಾರಂಭದಲ್ಲಿ ಶೈವರಾದರೆ ನಮಸ್ತುಂಗ ಶಿರಶ್ಚುಂಬಿ ಎಂಬ ಶ್ಲೋಕವನ್ನೂ ವೈಷ್ಣವರಾದರೆ ಹರೇರ್ಲೀಲಾವರಾಹಸ್ಯ ಎಂಬ ಶ್ಲೋಕವನ್ನೂ ಜೈನರಾದರೆ ಶ್ರೀಮತ್ಪರಮಗಂಭೀರ ಎಂಬ ಶ್ಲೋಕವನ್ನೂ ಬರೆದು ಮುಂದೆ ವಿಷಯವನ್ನು ಪ್ರಾರಂಭಿಸುವರು. ಮುಂದೆ, ದಾನಕೊಟ್ಟವನು ರಾಜನಾದರೆ

ಅವನ ಪೀಳಿಗೆ ಅವನ ಶೌರ್ಯಪರಾಕ್ರಮಾದಿಗಳು ಅವನ ದಿಗ್ವಿಜಯಗಳನ್ನು ತಿಳಿಸಿ ಕಾಲವನ್ನು ಸೂಚಿಸಿ ತಾನು ಮಾಡಿದ ಪ್ರಕೃತ ಧರ್ಮವನ್ನೂ ತಿಳಿಸಲಾಗುವುದು. ಕೊನೆಗೆ ದಾನಕೊಟ್ಟ ಗ್ರಾಮಭೂಮಿಗಳ ಎಲ್ಲೆಕಟ್ಟು ಸಾಕ್ಷಿಗಳು ಫಲಶ್ರುತಿ ಮುಂತಾದುವುಗಳು



ಬೀರನೊಳಂಬನ ಶಾಸನ. ಕೋಲಾರ ತಾಲ್ಲೂಕು

ಇರುವುವು. ಕೊನೆಯಲ್ಲಿ ರಾಜನ ಅಥವಾ ಅಧಿಕಾರಿಯ ಹಸ್ತಾಕ್ಷರವಿರುವುದು. ಸಾಮಾನ್ಯವಾಗಿ ಸ್ವದತ್ತಾಂ ಪರದತ್ತೇಂ ವಾಯೋ ಹರೇತ ವಸುಂಧರಾ । ಷಷ್ಟಿರ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ –ಎಂಬ ಶ್ಲೋಕ ಮತ್ತು ಇತರ ಫಲಶ್ರುತಿ ಇರುತ್ತವೆ. ಕೆಲವು ಶಾಸನಗಳ ಕೊನೆಯಲ್ಲಿ ಶಾಸನದ ಸಾಹಿತ್ಯ ರಚನೆ ಮಾಡಿದ ಕವಿಯ ಹೆಸರೂ ಕಲ್ಲುಕೊರೆದ ಬಡಗಿಯ ಹೆಸರೂ ಸೂಚಿಸಲ್ಪಟ್ಟಿರುತ್ತವೆ. ಈ ರೀತಿಯಾಗಿ ಬರೆಸಿರುವ ಶಿಲಾಶಾಸನಗಳಲ್ಲಿ ಹೊಯ್ಸಳರ ಕಾಲದ ಲೇಖನಗಳ ಅಂದವಾಗಿದ್ದು ಓದಲು ನೋಡಲು ರಮ್ಯವಾಗಿವೆ. ವಿಜಯನಗರದ ಕಾಲದ ಶಾಸನಗಳು ಒರಟುಕಲ್ಲಿನ ಮೇಲೆ ಇರುವುದೂ ಉಂಟು. ಹೊಯ್ಸಳರ ಶಾಸನಗಳೆಲ್ಲ ಸಾಮಾನ್ಯವಾಗಿ ಬಳಪದಕಲ್ಲಿನ ಮೇಲೆಯೇ ಇವೆ.

**2. ಆತ್ಮಾರ್ಪಣೆಮಾಡಿದ ತ್ಯಾಗಿಗಳ ಶಾಸನಗಳು :** ಇವನ್ನು ವೀರಗಲ್ಲುಗಳೆಂದು ಕರೆಯುವರು. ಅನೇಕ ಪುರಾತನ ಪಟ್ಟಣಗಳ, ರಾಜಧಾನಿಗಳ, ಹಳೆ ಊರುಗಳ ಮುಂಭಾಗದಲ್ಲಿ ಸಾಲಾಗಿ ನೆಡಿಸಿರುವ ಚಿತ್ರಗಳುಳ್ಳ ಕಲ್ಲುಗಳವು. ಈ ಕಲ್ಲುಗಳ ಆಯ 8´ X 10´ ಅಡಿಗಳಿರುವುದುಂಟು. ಕೆಲವು 3´ X 6´ ಪ್ರಮಾಣದ ಕಲ್ಲುಗಳೂ ಇವೆ. ಚಪ್ಪಡಿಗಳ ಹೊರಮೈಯನ್ನು ನುಣಪಾಗಿ ಮಾಡಿಕೊಂಡು ಸುತ್ತಲೂ ಉಬ್ಬಿರುವಂತೆ ಮಾಡಿ ಮೇಲ್ಭಾಗ ಕಮಾನಿನ ಆಕಾರಮಾಡಿಕೊಂಡು ಒಳಮೈಯಲ್ಲಿ ಮೂರು ಅಥವಾ ಐದು ಅಪರೂಪವಾಗಿ ಏಳು ಚಚ್ಚೌಕನಾದ ಭಾಗಗಳನ್ನು ವಿಂಗಡಿಸಿಕೊಂಡು ಅದರಲ್ಲಿ ಕಾಳಗದಲ್ಲಿ ಪ್ರಾಣಾರ್ಪಣ ಮಾಡಿದವನ ವಿಷಯ, ಅವನಿಗೆ ಉಂಟಾಗುವ ಫಲ–ಎಲ್ಲವನ್ನೂ ಚಿತ್ರಗಳ ಮೂಲಕ ತೋರಿಸಿರುತ್ತಾರೆ. ಕೆಲವು ಕಲ್ಲುಗಳಲ್ಲಿ ಅಡ್ಡಪಟ್ಟಿ ತಳಭಾಗದಲ್ಲಿ ಜಾಗವಿದ್ದರೆ ಅಲ್ಲಿ ಆ ಕದನದ ವಿಷಯ, ಕಕ್ಷಿ ಪ್ರತಿಕಕ್ಷಿಯ ಅದರಲ್ಲಿ ಪ್ರಾಣಾರ್ಪಣ ಮಾಡಿದವನ ತ್ಯಾಗ, ಅವನ ಕುಟುಂಬಕ್ಕೆ ಕೊಟ್ಟ ದಾನದ ವಿಷಯ–ಇವುಗಳ ಉಲ್ಲೇಖವಿರುವುದು.

ಕೆಳಗಡೆ ಪಟ್ಟಿಯಲ್ಲಿ ಎರಡೂ ಪಕ್ಷದವರು ಆಯಾ ಕಾಲದಲ್ಲಿ ಬಳಕೆಯಲ್ಲಿದ್ದ ಆಯುಧ ಹಿಡಿದು ಜಗಳವಾಡುವುದು, ಅದರ ಮೇಲುಗಡೆ ಪಟ್ಟಿಯಲ್ಲಿ ಅಪ್ಸರ ಸ್ತ್ರೀಯರು ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವುದು, ಕೊನೆಗೆ ಮೇಲ್ಗಡೆ ಕಮಾನಾಗಿ ವಿಂಗಡಿಸಿರುವ ಭಾಗದಲ್ಲಿ ಲಿಂಗ, ಬಸವ, ಪೂಜಾರಿ, ವೀರ, ಕೆಲವು ಕಡೆ ವೀರನ ಹೆಂಡತಿಯ ಚಿತ್ರಗಳೂ ಇರುತ್ತವೆ. ವೀರಗಲ್ಲುಗಳಲ್ಲಿ ಶೈವ, ವೈಷ್ಣವ, ಜೈನಧರ್ಮದ ವೀರಗಲ್ಲುಗಳೆಂದು ಕಲ್ಲುಗಳನ್ನು ನೋಡಿದ ತತ್‌ಕ್ಷಣವೇ ತಿಳಿಯಲು ಅದರ ಮೇಲ್ಭಾಗದಲ್ಲಿರುವ ಲಿಂಗ ಬಸವನ ಚಿತ್ರ, ಗೋಪಾಲಕೃಷ್ಣ, ಹಸುಕರು ಮುಂತಾದ ಚಿತ್ರಗಳಿಂದಲೇ ತಿಳಿಯಬಹುದು.

ಈ ವೀರಗಲ್ಲುಗಳ ಮೊದಲಲ್ಲಿ ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ ಕ್ಷಣವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇ ರಣೇ ॥ ಎಂಬ ಶ್ಲೋಕವಿರುವುದು. ಮುಂದೆ ಕಕ್ಷಿ ಪ್ರತಿಕಕ್ಷಿಗಳು, ಕಾಳಗಕ್ಕೆ ಕಾರಣ, ಕಾಲ, ಸತ್ತವನ ಹೆಸರು, ದಾನಕೊಟ್ಟ ಭೂಮಿ ಮೊದಲಾದ ವಿಷಯಗಳ ವಿವರಣೆ ಇರುತ್ತವೆ. ಈ ವಿಧವಾದ ವೀರಗಲ್ಲುಗಳು ಗಂಗರ ಕಾಲದಲ್ಲಿ ಹೆಚ್ಚಾಗಿ ಸಿಕ್ಕುವುವು. ಶಿವಮೊಗ್ಗ ಜಿಲ್ಲೆಯಲ್ಲಿ ಹಾಕಿಸಿರುವ ಕೆಲವು ವೀರಗಲ್ಲುಗಳು ಕಲಾದೃಷ್ಟಿಯಿಂದ ಬಹಳ ಭವ್ಯವಾಗಿವೆ. ಹಿರೆಗುಂಡುಗಲ್ಲು ಎಂಬ ಪ್ರದೇಶದಲ್ಲಿ ಗಂಗರ ಕಾಲದ ಸು. ಹದಿನೇಳು ವೀರಗಲ್ಲುಗಳು ಒಂದೇ ಜಾಗದಲ್ಲಿವೆ. ಬಹಳ ಪ್ರಾಚೀನವಾದ

ಹೊಯ್ಸಳರ ಸಾಮಂತ ಸೇನವಾರರ ಶಾಸನ. ಚಿಕ್ಕಮಗಳೂರು ತಾಲ್ಲೂಕು

ಕನ್ನಡ ಶಿಲಾಶಾಸನಗಳೆಲ್ಲ ವೀರಗಲ್ಲುಗಳು ಹಲ್ಮಿಡಿ, ತಮಟಕಲ್ಲು, ಅಣಜಿ, ಗದ್ದೆಮನೆ, ಹಿರೆಗುಂಡುಗಲ್ಲು, ಚಿಕ್ಕಮಧುರೆ, ಆಸಂದಿ ಮೊದಲಾದ ಕಡೆ ಇರುವ ವೀರಗಲ್ಲುಗಳು 8ನೆಯ ಶತಮಾನಕ್ಕೆ ಮುಂಚೆ ಹುಟ್ಟಿದವೆಂದು ತೋರುತ್ತದೆ.

ಈ ವೀರಗಲ್ಲುಗಳಲ್ಲಿ ಊರಿನ ಗೋವುಗಳನ್ನು ಕಾಪಾಡಲು ಪ್ರಾಣ ಬಿಟ್ಟವನ ಜ್ಞಾಪಕಾರ್ಥವಾಗಿ ಹಾಕಿರುವ ಕಲ್ಲಿಗೆ ತುರುಕಲ್ಲೆಂದು ಹೆಸರು. ಹೆಂಗಸರು ತಮ್ಮ ಗಂಡ ಸತ್ತಾಗ ಪ್ರಾಣ ಬಿಟ್ಟಿದ್ದಕ್ಕೆ ಹಾಕಿರುವ ಕಲ್ಲುಗಳೇ ಮಾಸ್ತಿಕಲ್ಲುಗಳು. ಮಹಾಸತಿ ಎಂಬುದು ಮಾಸ್ತಿ ಆದಂತೆ ತೋರುತ್ತದೆ. ಹುಲಿಯೊಡನೆ ಕಾಳಗ, ನಾಯಿ ಕಾಳಗ ಮುಂತಾದುವುಗಳನ್ನು ಸೂಚಿಸುವ ಚಿತ್ರವಿರುವ ವೀರಗಲ್ಲುಗಳೂ ಇವೆ. ಮಂಡ್ಯದ ತಾಲ್ಲೂಕು ಆತಕೂರಿನಲ್ಲಿರುವ ವೀರಗಲ್ಲು ಗಮನಾರ್ಹವಾದುದು. ಕಾಡುಹಂದಿ ಮತ್ತು ತನ್ನ ಸಾಕುಪ್ರಾಣಿಯಾದ ನಾಯಿಗಳ ಜಗಳದಲ್ಲಿ ನಾಯಿ ಸತ್ತು ಹೋದುದಕ್ಕಾಗಿ ಗಂಗರಾಜ ದೇವಾಲಯವನ್ನು ಕಟ್ಟಿಸಿ ದೇವರ ಮುಂದೆ ಆ ನಾಯಿಯ ಶ್ರೇಯಸ್ಸಿಗಾಗಿ ನಂದಾದೀವಿಗೆ ಇಡಲು ದಾನಕೊಟ್ಟಿದ್ದಾನೆ. ಗಂಗ, ಹೊಯ್ಸಳ ರಾಜರ ಕಾಲಗಳಲ್ಲಿ ರಾಜ ಸತ್ತಾಗ ಅವನೊಡನೆ ಆತ್ಮಾರ್ಪಣ

ಮಾಡಿರುವ ವೀರರ ಸ್ಮಾರಕಗಳನ್ನು ಗರುಡಗಲ್ಲುಗಳೆಂದು ಕರೆಯುವರು. ಜೈನರಲ್ಲಿ ಅವಸಾನಕಾಲ ಪ್ರಾಪ್ತವಾದಾಗ ಅಥವಾ ಜೀವನದಲ್ಲಿ ಜುಗುಪ್ಸೆತೋರಿ ವೈರಾಗ್ಯ ಬಂದಾಗ ಅನಶನವ್ರತ ಮಾಡಿ ಪ್ರಾಣಾರ್ಪಣ ಮಾಡಿರುವುದಕ್ಕಾಗಿ ಹಾಕಿಸಿರುವ ಕಲ್ಲುಗಳಿಗೆ ನಿಸಿದಿಕಲ್ಲುಗಳೆಂದು ಹೆಸರು. ನಿಸಿದಿಕಲ್ಲುಗಳ ಮೇಲ್ಗಡೆ ಜೈನಯತಿ, ವ್ಯಾಸಪೀಠ, ತಮಟೆಕೋಲು–ಇವುಗಳ ಚಿತ್ರಗಳೂ ಶಿಷ್ಯನ ಚಿತ್ರವೂ ಇರುತ್ತವೆ. ಕೆಳಗಡೆ ವ್ಯಕ್ತಿ ಮತ್ತು ಕಾಲಗಳ ಮಾಹಿತಿಯೇ ಮುಂತಾದ ವಿವರಣೆಗಳನ್ನೂ ಪ್ರಾಣಾರ್ಪಣೆಯ ವಿಷಯವನ್ನೂ ತಿಳಿಸಿರುತ್ತದೆ. ಶ್ರವಣಬೆಳಗೊಳ ಒಂದರಲ್ಲಿಯೇ ಇಂಥ 60 ನಿಸಿದಿಕಲ್ಲುಗಳಿವೆ.

ಬೇಲೂರು ದೇವಾಲಯದ 1117ರ ತಾಮ್ರಶಾಸನ

**3. ಇತರ ಸ್ಮಾರಕಗಳು :** ರಾಜರು ಕವಿಗಳು ಪುಣ್ಯಕ್ಷೇತ್ರ ತೀರ್ಥಕ್ಷೇತ್ರಗಳಿಗೆ ಹೋದಾಗ ಶ್ರೀಮಂತರು ಕೆರೆ ಕಟ್ಟಿಸಿದುದಕ್ಕೂ ತೂಬನ್ನು ಇಡಿಸಿದುದಕ್ಕೂ ಬರೆಸಿರುವ ಶಾಸನಗಳು, ರಾಜ್ಯದ ಎರಡು ಮತದವರ ವೈಮನಸ್ಯವನ್ನು ಹೋಗಲಾಡಿಸಿ ಒಪ್ಪಂದ ಮಾಡಿಸಿರುವಂಥವು (ಬುಕ್ಕರಾಯನ ಶಾಸನ) ಮೊದಲಾದ ಅನೇಕ ಶಾಸನಗಳಿವೆ. ರಾಜ್ಯದಲ್ಲಿ ಶ್ರವಣರಿಗೂ ಬ್ರಾಹ್ಮಣರಿಗೂ ಆದ ಜಗಳವನ್ನು ಹರಿಹರ ಪರಿಹಾರ ಮಾಡಿದ ವಿಷಯ ಪ್ರಸ್ತಾಪಿತವಾಗಿರುವ ಈ ಶಾಸನದ ಪ್ರತಿಯನ್ನು ಶ್ರವಣಬೆಳಗೊಳದಲ್ಲಿಡಲಾಗಿದೆ (ಶ್ರ, ಬೆ. 344). ಹಳೇಬೂದನೂರು ಶಾಸನದಲ್ಲಿ ಸಾವರಾಶಿ ಭಟ್ಟಾರಕ ಒಂದು ಕೆರೆಯನ್ನು ನಿರ್ಮಿಸಿದ ವಿಷಯವನ್ನು ಹೇಳಲಾಗಿದೆ. ಕೆರೆಯಲ್ಲಿದ್ದ ಮಣ್ಣನ್ನು ತೆಗೆದು ಹೆಚ್ಚು ನೀರು ಅಲ್ಲಿ ಸಂಗ್ರಹವಾಗುವಂತೆ ಮಾಡಿದುದಕ್ಕಾಗಿ ಚಟ್ಟಲದಾಸ ಬೋಯಿಗೆ ಮುಮ್ಮಡಿ ಕೆಂಪೇಗೌಡ ಒಂದು ಕೆರೆಯ ಭಂಡಿಯನ್ನು ಬಿಟ್ಟಂತೆ ಮಾಗಡಿಯ ಶಾಸನವೊಂದು ತಿಳಿಸುತ್ತದೆ. ಇದಲ್ಲದೆ ಕನ್ನಡದ ಅರಸರು ಯಾತ್ರಾರ್ಥಿಗಳಾಗಿ ಹೊರದೇಶಗಳಿಗೆ ಹೋಗಿದ್ದಾಗ ಅದರ ಸ್ಮಾರಕಾರ್ಥವಾಗಿ ಕೆತ್ತಿಸಿದ್ದ ಹಲವಾರು ಶಾಸನಗಳು ಕನ್ನಡನಾಡಿನ ಹೊರಭಾಗಗಳಲ್ಲಿ ಕಂಡುಬಂದಿವೆ. ಹೊಯ್ಸಳ ಅರಸರು ಗಯ ಕ್ಷೇತ್ರಕ್ಕೆ ಹೋಗಿದ್ದ ಘಟನೆಯನ್ನು ಅಲ್ಲಿ ಕಂಡುಬಂದಿರುವ ಕನ್ನಡ ಶಾಸನವೊಂದು ತಿಳಿಸಿದರೆ, ಅದೇ ವಂಶದ ಬಲ್ಲಾಳ ಕೊಲ್ಲಾಪುರದ ಶಾಸನವೊಂದರಿಂದ ತಿಳಿದುಬರುತ್ತದೆ. ಕನ್ನಡದ ಅನೇಕ ಶಾಸನಗಳು ತಮಿಳುನಾಡು, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲೂ ಪಾಶ್ಚಾತ್ಯ ದೇಶಗಳಲ್ಲಿರುವ ವಸ್ತು ಪ್ರದರ್ಶನಾಲಯ ಗಳಲ್ಲಿರುವ ಕಲ್ಲಿನ ವಿಗ್ರಹಗಳ ಮೇಲೂ ಕಂಡುಬಂದಿವೆ. ಭಾರತೀಯರ ಪ್ರಾಚೀನ ಚರಿತ್ರೆ ಬರೆಯಲು ಶಿಲಾ ಲೇಖನಗಳು ಅತ್ಯಂತ ನಂಬಿಕೆಗೆ ಅರ್ಹವಾದ ಮುಖ್ಯವಾದ ಸಾಧನಗಳು. ಈ ಎಲ್ಲ ಶಾಸನಗಳಿಂದ ಅಂದಂದಿನ ರಾಜಕೀಯ, ಸಾಮಾಜಿಕ, ಚಾರಿತ್ರಿಕ, ಸಾಂಸ್ಕೃತಿಕ ವಿಷಯಗಳು ತಿಳಿಯುವುದು. ಅಲ್ಲದೆ, ಭಾಷೆ, ಲಿಪಿ, ಬರವಣಿಗೆಯ ರೀತಿ– ಮೊದಲಾದ ಅಂಶಗಳನ್ನು ತಿಳಿಯಲು ಇವು ಸಾಧನಗಳಾಗಿವೆ. (ಆರ್.ಸಿ.)



ಚಿತ್ರದುರ್ಗದ ಮದಕರಿನಾಯಕನ ಪೊಂಬಳಲ ಶಾಸನ

**ಕನ್ನಡ ಶೀಘ್ರಲಿಪಿ :** ಕನ್ನಡ ಶೀಘ್ರಲಿಪಿ ಇಂಗ್ಲಿಷ್ ಶೀಘ್ರಲಿಪಿ ಯಂತೆಯೇ ಕನ್ನಡ ಬೆರಳಚ್ಚಿನ ಯಂತ್ರಗಳು ಬಳಕೆಗೆ ಬರುವುದಕ್ಕಿಂತ ಬಹಳ ಹಿಂದಿನಿಂದಲೇ ರೂಢಿಯಲ್ಲಿತ್ತು.

ಇದರ ಇತಿಹಾಸ ಸು.1906ರಿಂದ ಪ್ರಾರಂಭವಾಗುತ್ತದೆ. ಆ ವರ್ಷದಲ್ಲಿ ರೆವರೆಂಡ್ ಬಿ.ಲೂಥಿ ಎಂಬುವರು 'ಕನ್ನಡ ಹಿಡಿನುಡಿ' ಎಂಬ ಸಂಕ್ಷಿಪ್ತ ಲಿಪಿಕ್ರಮವನ್ನು ರೂಢಿಸಿ, ಮಂಗಳೂರಿನ ಬಾಸೆಲ್ ಮಿಷನ್ ಬುಕ್ ಮತ್ತು ಟ್ರಾಕ್ಟ್ ಡಿಪಾಸಿಟರಿ ಸಂಸ್ಥೆಯ ವತಿಯಿಂದ ಪ್ರಕಟಿಸಿದ್ದರೆಂದೂ ಆದರೆ ಪ್ರಯೋಗದಲ್ಲಿ ಅದರಿಂದ ಕನ್ನಡ ಭಾಷಣಗಳನ್ನು ಮಾತನಾಡುವ

ವೇಗಕ್ಕನುಸಾರವಾಗಿ ಬರೆದುಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲವಾಗಿ ಅದು ಜನಪ್ರಿಯವಾಗಲಿಲ್ಲವೆಂದೂ ತಿಳಿದುಬರುತ್ತದೆ. ಸು. 1924ರಲ್ಲಿ ಚತುರ್ಭಾಷಾ ಶೀಘ್ರಲಿಪಿ ವಿಶಾರದರಾದ ವೆಲ್ಲೂರಿನ ರಾವ್ ಸಾಹೇಬ್ ಶ್ರೀನಿವಾಸರಾಯರು ಕ್ಯಾನರೀಸ್ ಶಾರ್ಟ್‌ಹ್ಯಾಂಡ್ ಮ್ಯಾನ್ಯುಯಲ್ ಎಂಬ ಪ್ರಥಮ ಪುಸ್ತಕವನ್ನು ಪ್ರಕಟಿಸಿದರು.

ಸ್ವಾತಂತ್ರ್ಯ ಸಂಗ್ರಾಮ ಪ್ರಖರವಾಗುತ್ತಿದ್ದ ಆ ಕಾಲದಲ್ಲಿ ಹಲವು ದೇಶಭಕ್ತರು ದೇಶಪ್ರೇಮದ ವಿಷಯದಲ್ಲಿ ಕೆಲವು ವೇಳೆ ಬ್ರಿಟಿಷರ ವಿರುದ್ಧ ಮಾಡುತ್ತಿದ್ದ ಭಾಷಣಗಳನ್ನು ವರದಿ ಮಾಡಬೇಕಾಗಿದ್ದುದರಿಂದ ಆಗಿನ ಮೈಸೂರು, ಹೈದರಾಬಾದು ಮತ್ತು ಬೊಂಬಾಯಿ ಸರ್ಕಾರದವರು, ಪೊಲೀಸ್ ಅಧಿಕಾರಿಗಳನ್ನು ವೆಲ್ಲೂರಿನ ಪೊಲೀಸ್ ತರಬೇತಿ ಶಾಲೆಗೆ ಕಳುಹಿಸುತ್ತಿದ್ದರು. ಅಲ್ಲಿ ಶ್ರೀನಿವಾಸರಾವ್ ಅವರಿಂದ ರಚಿತವಾದ ಕನ್ನಡ ಶೀಘ್ರಲಿಪಿಯನ್ನು ಬೋಧಿಸಲಾಗುತ್ತಿತ್ತು. ಅವರ ಶೀಘ್ರಲಿಪಿ ಕ್ರಮ ಇಂಗ್ಲಿಷ್ ಭಾಷೆಗೆ ಸೂಕ್ತವಾದ ಪಿಟ್‌ಮನ್‌ರ ಕ್ರಮದಂತೆಯೇ ಇತ್ತು. ಅಲ್ಲದೆ ಕನ್ನಡಕ್ಕೆ ಹೊಂದಿಸಲು ವಿಪುಲಸೂತ್ರಗಳನ್ನು ರೂಪಿಸಿ ಕೊಂಡಿದ್ದರೂ ಕೆಲವು ಪದಗಳ ಶೀಘ್ರಲಿಪಿಯ ವಿನ್ಯಾಸ ತೊಡಕಾಗಿದ್ದರಿಂದ ಕನ್ನಡ ಭಾಷಣಗಳನ್ನು ಪೂರ್ಣವಾಗಿ ಅಕ್ಷರಶಃ ಬರೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ವೇಗ ಸಾಲುತ್ತಿರಲಿಲ್ಲ. ಈ ಕಾರಣದಿಂದ 1933ರಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮುಖ್ಯ ವರದಿಗಾರರಾಗಿದ್ದ ಎನ್. ದೇವರಾವ್ ಅವರು ಪಿಟ್‌ಮನ್ ಪದ್ಧತಿಯಿಂದ ಭಿನ್ನವಾದ ತಮ್ಮದೆ ಆದ ಶೀಘ್ರಲಿಪಿಯನ್ನು ರಚಿಸಿ, ಕೆಲವರಿಗೆ ಬೋಧಿಸಿ, ತರಪೇತು ಕೊಟ್ಟರು. ಮೈಸೂರು ಮತ್ತು ಬೊಂಬಾಯಿ ಸರ್ಕಾರಗಳು ಇದಕ್ಕೆ ಮನ್ನಣೆ ಇತ್ತುವು. ದೇವರಾಯರು ರಚಿಸಿದ 'ಎ ಮ್ಯಾನ್ಯುಯಲ್ ಆಫ್ ಕನ್ನಡ ಶಾರ್ಟ್‌ಹ್ಯಾಂಡ್' ಪುಸ್ತಕವನ್ನು ಮೈಸೂರು ಸರ್ಕಾರ ಪ್ರಕಟಿಸಿತು. ಈ ಶೀಘ್ರಲಿಪಿ ಮೈಸೂರು ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆ ಮೊದಲಾದೆಡೆಗಳಲ್ಲಿ ಬಳಕೆಯಾಗುತ್ತಿತ್ತು.



ಕನ್ನಡ ಶೀಘ್ರಲಿಪಿಯ ನಮೂನೆ

ದೇವರಾಯರ ಶೀಘ್ರಲಿಪಿಯನ್ನು ಕಲಿತವರು ಇಂಗ್ಲಿಷ್ ಶೀಘ್ರಲಿಪಿಯನ್ನು ಕಲಿಯಲು ಸಾಧ್ಯವಾಗುತ್ತಿರಲಿಲ್ಲ. ಕಾರಣವೇನೆಂದರೆ ಪಿಟ್‌ಮನ್ನರ ಇಂಗ್ಲಿಷ್ ಶೀಘ್ರಲಿಪಿಯ ಅಕ್ಷರಗಳಿಗೂ ದೇವರಾಯರ ಕನ್ನಡ ಶೀಘ್ರಲಿಪಿಯ ಅಕ್ಷರಗಳಿಗೂ ಬಹಳ ವ್ಯತ್ಯಾಸವಿತ್ತು. ಇಂಗ್ಲಿಷ್ ಶೀಘ್ರಲಿಪಿಯ ಪ ಅಕ್ಷರ ದೇವರಾಯರ ಶೀಘ್ರಲಿಪಿಯ ಪ್ರಕಾರ ಷ ಕಾರವನ್ನು ಸೂಚಿಸುವುದು. ಹೀಗೆ ಅಕ್ಷರಗಳಲ್ಲಿಯೇ ಅನೇಕ ವ್ಯತ್ಯಾಸಗಳಿದ್ದವು. ಈ ನ್ಯೂನತೆಯನ್ನು ಮನಗಂಡು, ಬ್ರೈಟ್ ವಾಣಿಜ್ಯ ವಿದ್ಯಾ ಕಾಲೇಜಿನ ಪ್ರಾಂಶುಪಾಲರಾದ ಕೆ.ಸೀತಾರಾಮರಾವ್ ಮತ್ತು ಅವರ ಸಹೋದರರಾದ ಎಸ್.ಸುಬ್ಬರಾವ್ ಅವರು ಇಂಗ್ಲಿಷ್ ಶೀಘ್ರಲಿಪಿಯಷ್ಟೇ ವೇಗವನ್ನು ಗಳಿಸಬಹುದಾದ ಒಂದು ಪದ್ಧತಿಯನ್ನು ರಚಿಸಲು ಉದ್ದೇಶಿಸಿದರು. ಸು.1944ರ ವೇಳೆಗೆ ಸೀತಾರಾಮರಾವ್ ಅವರು ಸುಪ್ರಸಿದ್ಧ ಪಿಟ್‌ಮನ್ ಪದ್ಧತಿಯನ್ನು ಮೂಲಾಧಾರವಾಗಿಟ್ಟುಕೊಂಡು ಇಂಗ್ಲಿಷ್ ಒಕ್ಕಣೆಯನ್ನೊಳಗೊಂಡ ಕನ್ನಡ ಶೀಘ್ರಲಿಪಿ ಪುಸ್ತಕವೊಂದನ್ನು ಪ್ರಕಟಿಸಿದರು. ಈ ಪದ್ಧತಿ ಆ ಕಾಲಕ್ಕೆ ಕೊರತೆಯಿಂದ ಮುಕ್ತವಾಗಿದ್ದರೂ ಹಲವರು ಅಭ್ಯಾಸಮಾಡಿ ಆಚರಣೆಗೆ ತಂದಿದ್ದರೂ ಪ್ರೋತ್ಸಾಹದ ಅಭಾವದಿಂದಾಗಿ ವ್ಯಾಪಕವಾಗಿರಲಿಲ್ಲ. ನಲವತ್ತರ ದಶಕದ ಅಂತ್ಯದ ಹೊತ್ತಿಗೆ ಅಂದಿನ ಮೈಸೂರು ಸರ್ಕಾರದ ಪ್ರಜಾಪ್ರತಿನಿಧಿಸಭೆ ಸೀತಾರಾಮರಾಯರ ಪದ್ಧತಿಯನ್ನು ಅನುಸರಿಸುವ ಕನ್ನಡ ಶೀಘ್ರಲಿಪಿಕಾರರನ್ನೂ ನೇಮಿಸಿಕೊಳ್ಳಬಹುದೆಂದು ಒಂದು ನಿರ್ಣಯವನ್ನು ಕೈಕೊಂಡಿತ್ತು. ಅಂದಿನಿಂದ ಸೀತಾರಾಮರಾಯರ ಕನ್ನಡ ಶೀಘ್ರಲಿಪಿ ದಿನೇ ದಿನೇ ಪ್ರಾಮುಖ್ಯಕ್ಕೆ ಬರಲು ಪ್ರಾರಂಭವಾಯಿತು. ತತ್ಪರಿಣಾಮವಾಗಿ ಕನ್ನಡ ಶೀಘ್ರಲಿಪಿಗೆ ಸಂಬಂಧಿಸಿದ ಪುಸ್ತಕಗಳು ಅಲ್ಲೊಂದು ಇಲ್ಲೊಂದರಂತೆ ಇಣುಕತೊಡಗಿದ್ದವು. 1969 ಮತ್ತು 1972ರ ವೇಳೆಗೆ ಬೆಂಗಳೂರಿನ ಸಿದ್ಧರಾಜು ಮತ್ತು ಹೆಬ್ಬಾರ್ ಅವರು ತಮ್ಮ ಪುಸ್ತಕಗಳನ್ನು ಈ ದಿಶೆಯಲ್ಲಿ ಕ್ರಮವಾಗಿ ಹೊರತಂದರು.

1974ರಲ್ಲಿ ಸೀತಾರಾಮರಾಯರು ತಮ್ಮ ಕನ್ನಡ ಶೀಘ್ರಲಿಪಿಯ ಪುಸ್ತಕದ ಸರ್ವ ಹಕ್ಕನ್ನೂ ಕರ್ನಾಟಕ ವಾಣಿಜ್ಯ ವಿದ್ಯಾಶಾಲೆಗಳ ಸಂಘಕ್ಕೆ ಮಾರಿಬಿಟ್ಟರು. ಈ ಸಂಘ ಹೆಬ್ಬಾರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ, ಕನ್ನಡ ಶೀಘ್ರಲಿಪಿಯ ಪಠ್ಯಪುಸ್ತಕವನ್ನು ರಚಿಸಿ ಪ್ರಕಟಿಸಿತು. ರಾಜ್ಯದ ಹಲವು ವಾಣಿಜ್ಯ ಶಿಕ್ಷಣ ಸಂಸ್ಥೆಗಳು ಈ ಪದ್ಧತಿಯನ್ನು ಅನುಸರಿಸಿದವು. ವಿದ್ಯಾಇಲಾಖೆ ಪ್ರತಿವರ್ಷವೂ ಮೂರು ಹಂತಗಳಲ್ಲಿ ಪರೀಕ್ಷೆ ನಡೆಸುತ್ತಿದೆ.

(ಎಸ್.ಆರ್.,ಬಿ.ಎಸ್.ಬಿ.)

**ಕನ್ನಡ ಸಂಶೋಧನ ಸಂಸ್ಥೆ :** ಹಿಂದಿನ ಮುಂಬಯಿ ಪ್ರಾಂತ್ಯದ ಕನ್ನಡ ಜಿಲ್ಲೆಗಳಾಗಿದ್ದ ಬೆಳಗಾಂವಿ, ಬಿಜಾಪುರ, ಧಾರವಾಡ ಮತ್ತು ಕಾರವಾರ ಪ್ರದೇಶಗಳ ಇತಿಹಾಸ. ಸಂಸ್ಕೃತಿ ಮತ್ತು ಸಾಹಿತ್ಯಗಳ ಅಭ್ಯಾಸ ಮತ್ತು ಸಂಶೋಧನೆಯ ಕಾರ್ಯಗಳಿಗಾಗಿ 1939ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ ಸಂಸ್ಥೆ (ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್).

**ಇತಿಹಾಸ :** ಕನ್ನಡ ಸಂಶೋಧನ ಸಂಸ್ಥೆ ಸ್ಥಾಪಿತವಾಗುವ ವೇಳೆಗೆ ಆಗಲೇ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿಗಳು (ಕರ್ನಾಟಕ ಹಿಸ್ಟಾರಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) ಧಾರವಾಡದಲ್ಲಿದ್ದರೂ ಅವುಗಳ ಕಾರ್ಯಕ್ಷೇತ್ರ ಸೀಮಿತವಾಗಿತ್ತು. ಆದ್ದರಿಂದ ಇಂಥ ವ್ಯಾಪಕೋದ್ದೇಶವುಳ್ಳ ಸಂಸ್ಥೆಯೊಂದರ ಆವಶ್ಯಕತೆಯನ್ನು ಮನಗಂಡ ಜನತೆಯ ಆಶೋತ್ತರಗಳನ್ನು ಪೂರೈಸುವ ಸಲುವಾಗಿ ಆಗಿನ ಮುಂಬಯಿ ಸರ್ಕಾರ 1938ರಲ್ಲಿ ಕರ್ನಾಟಕ ಕಾಲೇಜಿನ ಪ್ರಾಂಶುಪಾಲ ಎ.ಸಿ. ಫ್ಯಾರನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಕನ್ನಡ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಬೇಕೆಂದೂ ಅದು ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನಕ್ಕೆ ಸಹಾಯಕವಾದ ಮೂಲಸಾಮಗ್ರಿಗಳನ್ನು ಸಂಗ್ರಹಿಸಿ, ಅಭ್ಯಸಿಸುವ ಕಾರ್ಯದಲ್ಲಿ ತೊಡಗಬೇಕೆಂದೂ ಆ ಸಮಿತಿ ಸಲಹೆಮಾಡಿತು. ಈ ಸಲಹೆಗೆ ಅನುಗುಣವಾಗಿ ಅಸ್ತಿತ್ವಕ್ಕೆ ಬಂದ ಕನ್ನಡ ಸಂಶೋಧನ ಸಂಸ್ಥೆಗೆ ಆರ್.ಎಸ್. ಪಂಚಮುಖಿಯವರು ನಿರ್ದೇಶಕರಾಗಿ ನೇಮಕವಾದರು. ಮುಂಬಯಿ ಸರ್ಕಾರದಿಂದ ಈ ಸಂಸ್ಥೆಗೆ ಮಂಜೂರಾದ ಸಹಾಯಧನ ವರ್ಷಕ್ಕೆ 12,000 ರೂಪಾಯಿಗಳು; ಜೊತೆಗೆ ಮೊದಲನೆಯ ವರ್ಷಕ್ಕೆ 8,000 ರೂ.ಗಳ ಅಧಿಕ ಧನವೂ ದೊರೆಯಿತು. ನಿರ್ದೇಶಕರಿಗೆ ಸೂಕ್ತ ಸಲಹೆಗಳನ್ನು ನೀಡಲು ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಎಸ್.ಸಿ. ನಂದೀಮಠ, ಕೆ.ಜಿ. ಕುಂದಣಗಾರ, ಡಿ.ಪಿ. ಕರಮರ್‌ಕರ್. ದ.ರಾ. ಬೇಂದ್ರೆ, ವಿ.ಕೆ. ಗೋಕಾಕ್, ಎಸ್.ಎಸ್. ಮಾಳವಾಡ, ಎ.ಡಿ. ಧೋಪೇಶ್ವರಕರ–ಇವರು ಈ ಮೊಟ್ಟಮೊದಲ ಸಮಿತಿಯಲ್ಲಿ ಸದಸ್ಯರು. ಈ ಸಂಸ್ಥೆ ಮೊದಲ ಎರಡು ವರ್ಷಗಳ ಕಾಲ ಕರ್ನಾಟಕ ಕಾಲೇಜಿನ ಕಟ್ಟಡದಲ್ಲೂ ಅನಂತರ ಸು. 1947ರವರೆಗೆ ಸಾರಸ್ವತ ಪುರದಲ್ಲೂ 1947–1959ರ ವರೆಗೆ ಮಾಳಮಡ್ಡಿಯ ಧಾರಾಮಹಲಿನಲ್ಲೂ ಇತ್ತು.

ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ. ವಸ್ತು ಸಂಗ್ರಹಾಲಯದ ಒಳಗಣ ದೃಶ್ಯ

1956ರಲ್ಲಿ ವಿಶಾಲ ಮೈಸೂರು ರಾಜ್ಯವಾದಾಗ ಉತ್ತರ ಕರ್ನಾಟಕದ ಜಿಲ್ಲೆಗಳು ಮೈಸೂರಿಗೆ ಸೇರಿದುವು. ಅದುವರೆವಿಗೂ ಮುಂಬಯಿ ಸರ್ಕಾರದ ಅಧೀನದಲ್ಲಿದ್ದ ಈ ಸಂಸ್ಥೆ ಮೈಸೂರು ಸರ್ಕಾರಕ್ಕೆ ಸೇರಿತು. ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾಗಿ ಆರು ವರ್ಷಗಳಾಗಿದ್ದುವು. ಕರ್ನಾಟಕ ವಿಶ್ವವಿದ್ಯಾಲಯವೇ ಈ ಸಂಸ್ಥೆಯನ್ನು ನಡೆಸಿಕೊಂಡು ಹೋಗಲು ಮೈಸೂರು ಸರ್ಕಾರ ಒಪ್ಪಿ ಇದನ್ನು ವಿಶ್ವವಿದ್ಯಾಲಯಕ್ಕೆ

ಒಪ್ಪಿಸಿತು. ಆ ವೇಳೆಗಾಗಲೇ ಸಂಸ್ಥೆ ಹಿರಿದಾಗಿ ಬೆಳೆದಿತ್ತು. ಅನೇಕ ಶಾಸನಗಳ ಪಡಿಯಚ್ಚುಗಳು, ಹಸ್ತಪ್ರತಿಗಳು, ಶಿಲಾ ಹಾಗೂ ತಾಮ್ರ ಶಾಸನಗಳು, ಪ್ರಾಚ್ಯವಸ್ತು ಶೋಧನದಲ್ಲಿ ಸಂಗ್ರಹಿಸಲಾದ ಇತರ ಅವಶೇಷಗಳು, ನಾಣ್ಯಗಳು, ಕಲ್ಲು ಮತ್ತು ಧಾತುಗಳಲ್ಲಿ ನಿರ್ಮಿತವಾದ ಸುಂದರ ಮೂರ್ತಿಗಳು ಮತ್ತು ವೀರಗಲ್ಲುಗಳು ಸಂಸ್ಥೆಯಲ್ಲಿ ಸಂಗ್ರಹವಾಗಿದ್ದು, ಅವನ್ನು ವ್ಯವಸ್ಥಿತ ರೀತಿಯಲ್ಲಿ ಪ್ರದರ್ಶಿಸಲು ಒಂದು ವಸ್ತುಸಂಗ್ರಹಾಲಯ ಅವಶ್ಯವಾಗಿತ್ತು. ಧಾರಾಮಹಲಿನ ಆವರಣದಲ್ಲಿ ಸಣ್ಣದಾದ ಒಂದು ಸಂಗ್ರಹಾಲಯವನ್ನು ರೂಪಿಸಿದ್ದರೂ ಅದು ಸಾಕಾಗಿರಲಿಲ್ಲ. ಈ ಸಂಸ್ಥೆಗಾಗಿ ಸು. 3 ಲಕ್ಷ ರೂ. ಗಳ ವೆಚ್ಚದಲ್ಲಿ ಒಂದು ಪ್ರತ್ಯೇಕ ಭವನವನ್ನು ಕಟ್ಟಿಸಲಾಯಿತು. ವಿಶ್ವವಿದ್ಯಾಲಯದ ಪ್ರಮುಖ ಕಟ್ಟಡಕ್ಕೆ ಹೊಂದಿದಂತೆ ನಿರ್ಮಿಸಲಾದ ತನ್ನದೇ ಆದ ಕಲೆ ಮತ್ತು ಪುರಾತತ್ತ್ವಶಾಸ್ತ್ರ ವಸ್ತು ಸಂಗ್ರಹಾಲಯದ (ಮ್ಯೂಸಿಯಂ ಆಫ್ ಆರ್ಟ್ ಅಂಡ್ ಆರ್ಕಿಯಾಲಜಿ) ಕಟ್ಟಡವನು ಈ ಸಂಸ್ಥೆ ಪ್ರವೇಶಿಸಿದ್ದು 1964ರಲ್ಲಿ. ವಿಶ್ವವಿದ್ಯಾಲಯ 1962ರ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನ ವಿಭಾಗವನ್ನು ಆರಂಭಿಸಿತು. ಅದು ಕನ್ನಡ ಸಂಶೋಧನ ಸಂಸ್ಥೆಯೊಡನೆ ಕೂಡಿ ಕೆಲಸ ಮಾಡತೊಡಗಿತು.

ಕನ್ನಡ ಸಂಶೋಧನ ಸಂಸ್ಥೆಯ ಮೊದಲ ನಿರ್ದೇಶಕರಾದ ಆರ್.ಎಸ್. ಪಂಚಮುಖಿಯವರು ಈ ಸಂಸ್ಥೆಯಿಂದ ನಿವೃತ್ತರಾದಾಗ (1953) ಈ ಸ್ಥಾನಕ್ಕೆ ಬಂದವರು ಕರ್ನಾಟಕದ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊ. ಎಸ್.ಎಸ್. ಮಾಳವಾಡರು. ಕರ್ನಾಟಕದ ಖ್ಯಾತ ಇತಿಹಾಸತಜ್ಞ, ಬಿ.ಎ. ಸಾಲೆತೊರೆ ಅನಂತರ ಈ ಅಧಿಕಾರ ನಿರ್ವಹಿಸಿದರು (1957–62). ಕರ್ನಾಟಕ ವಿಶ್ವವಿದ್ಯಾಲಯ ಈ ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡದ್ದು ಇವರ ಕಾಲದಲ್ಲೇ. ಅನಂತರ ಈ ಹೊಣೆ ಹೊತ್ತವರು ಪಿ. ಬಿ. ದೇಸಾಯಿಯವರು.

ಕನ್ನಡ ಸಂಶೋಧನ ಸಂಸ್ಥೆಯ ಕಾರ್ಯಕ್ಷೇತ್ರ ವರ್ಷೇ ವರ್ಷೇ ವಿಸ್ತರಿಸುತ್ತಿದೆ. 1970–71ರಲ್ಲಿ ಈ ಸಂಸ್ಥೆಗಾಗಿ ವಿಶ್ವವಿದ್ಯಾಲಯ ಮಾಡಿದ ವೆಚ್ಚ 1,50,000 ರೂ. ವಿಶ್ವವಿದ್ಯಾಲಯದ ಅಂಗವಾಗಿ ಈ ಸಂಸ್ಥೆ ಕಾರ್ಯನಿರ್ವಹಣೆ ಮುಂದುವರಿಸಿದಾಗ ಇದರ ಕಾರ್ಯಕ್ಷೇತ್ರದಲ್ಲೂ ಬದಲಾವಣೆಗಳಾಗಿವೆ. ಆರಂಭದಲ್ಲಿ ಕರ್ನಾಟಕದ ಇತಿಹಾಸವಲ್ಲದೆ ಸಾಹಿತ್ಯ, ಸಂಸ್ಕೃತಿ ಮತ್ತು ಜನಪದ ಸಾಹಿತ್ಯಗಳಲ್ಲೂ ಈ ಸಂಸ್ಥೆ ಆಸಕ್ತಿ ವಹಿಸಿತ್ತು. ಇತಿಹಾಸ ಕನ್ನಡ ಮತ್ತು ಸಮಾಜವಿಜ್ಞಾನಗಳ ಅಧ್ಯಯನ ಅಧ್ಯಾಪನಗಳಿಗೆ ಇಲ್ಲಿ ಅನುಕೂಲ ಕಲ್ಪಿಸಲಾಗಿತ್ತು. ಈ ಸಂಸ್ಥೆ ವಿಶ್ವವಿದ್ಯಾಲಯಕ್ಕೆ ಸೇರಿದ ಮೇಲೆ ಸಮಾಜವಿಜ್ಞಾನ ಹಾಗೂ ಕನ್ನಡ ವಿಭಾಗಗಳು ಪ್ರತ್ಯೇಕವಾಗಿ ಕಾರ್ಯದಲ್ಲಿ ತೊಡಗಿದ್ದರಿಂದ ಕರ್ನಾಟಕದ ಮತ್ತು ಭಾರತದ ಇತಿಹಾಸ, ಸಂಸ್ಕೃತಿ, ಕಲೆ ಮತ್ತು ಪ್ರಾಕ್ತನವಿಜ್ಞಾನಗಳಿಗೆ ಸಂಬಂಧಿಸಿದಂತೆ ಇದರ ಕ್ಷೇತ್ರ ಈಗ ಮಿತಗೊಂಡಿದೆ.

**ಸಾಧನೆಗಳು :** ಈ ಸಂಸ್ಥೆ ನಾಡಿಗೆ ಮೂವತ್ತು ವರ್ಷಗಳಲ್ಲಿ ಬಹುಮುಖ ಸೇವೆಸಲ್ಲಿಸಿದೆ. ಕರ್ನಾಟಕದ ಈ ಭಾಗದಲ್ಲಿನ ಸಾವಿರಾರು ಶಾಸನಗಳ ಪ್ರತಿಗಳನ್ನು ಪಡೆದು, ಅವನ್ನು ಪ್ರಕಟಿಸುವುದು ಇದರ ಹೊಣೆಗಳಲ್ಲಿ ಒಂದು. 1500ಕ್ಕೂ ಹೆಚ್ಚು ಶಾಸನಗಳ ಪ್ರತಿಗಳು ಸಂಸ್ಥೆಯಲ್ಲುಂಟು. ಇದನ್ನು ಸಂಸ್ಥೆಯ ವಾರ್ಷಿಕ ವರದಿಗಳಲ್ಲಿ ಸೂಕ್ಷ್ಮವಾಗಿ ಅವಲೋಕಿಸಲಾಗಿದೆಯಲ್ಲದೆ ಶಾಸನಗಳ ಪಾಠ, ಸಾರಾಂಶ, ಮಹತ್ತ್ವದ ವಿವೇಚನೆ ಇವನ್ನು ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಎಂಬ ಸಂಪುಟಗಳಲ್ಲಿ ಪ್ರಕಟಿಸುತ್ತ ಬರಲಾಗಿದೆ. ಇದುವರೆಗೆ ಹೊರಬಿದ್ದಿರುವ ಇಂಥ ಸಂಪುಟಗಳು ಐದು. ಮೊದಲ 3ಕ್ಕೆ ಪಂಚಮುಖಿಯವರೂ 4ನೆಯದಕ್ಕೆ ಎಂ.ಎಂ. ಅಣ್ಣಿಗೇರಿಯವರೂ 5 ಮತ್ತು 6ಕ್ಕೆ ಬಿ.ಆರ್. ಗೋಪಾಲರೂ ಸಂಪಾದಕರು. ಉತ್ತರ ಕರ್ನಾಟಕಕ್ಕೆ ಸೇರಿದ ಗುಲ್ಬರ್ಗ, ಬಿದರೆ, ರಾಯಚೂರು ಜಿಲ್ಲೆಗಳಲ್ಲಿ ಅನೇಕ ಶಾಸನಗಳಿವೆ. ಸಂಸ್ಥೆ ಅವನ್ನು ಪ್ರತಿಮಾಡಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದೆ. ಒಟ್ಟು 6 ಸಂಪುಟಗಳನ್ನು ಪ್ರಕಟಿಸಿದೆ.

ಸಂಸ್ಥೆ ಕಂಡುಹಿಡಿದ ಶಾಸನಗಳಲ್ಲಿ ಅತಿ ಪ್ರಾಚೀನವಾದದ್ದು ವಡಗಾಂವ–ಮಾಧವಪುರದಲ್ಲಿ ದೊರೆತ ಷಟ್ಕೋಣಾಕಾರದ ಸ್ತಂಭಶಿಲಾಲಿಪಿ. ಇದರದು ಪ್ರಾಕೃತ ಭಾಷೆ, ಬ್ರಾಹ್ಮೀಲಿಪಿ. ಶಾಸನದ ಕಾಲ ಪ್ರ.ಶ.ಪೂ. 1ನೆಯ ಶತಮಾನ. ಬಾದಾಮಿಯಲ್ಲಿ ಬಂಡೆಗಲ್ಲಿನ ಮೇಲೆ ಕೊರೆಯಲಾದ ಶಕವರ್ಷ 456ರ (ಪ್ರ.ಶ. 543) ಮೊದಲನೆಯ ಪುಲಿಕೇಶಿಯ ಶಾಸನ ಇನ್ನೊಂದು ಮಹತ್ತ್ವದ ಶೋಧ. ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬ ಗ್ರಾಮದಲ್ಲಿ ಕೈಕೊಂಡ ಅನ್ವೇಷಣೆಯಲ್ಲಿ 2ನೆಯ ಶತಮಾನಕ್ಕೆ ಸೇರಿದ ಬೌದ್ಧ ಸಂಸ್ಕೃತಿಯ ಅವಶೇಷಗಳೂ ಕೆಲವು ಬ್ರಾಹ್ಮೀಲಿಪಿಯ ಶಾಸನಗಳು ದೊರೆತಿವೆ. ಚಾಳುಕ್ಯ ಮಂಗಳೇಶನ ಮತ್ತು ಗಂಗವಂಶದ ಮಾರಸಿಂಗನ ತಾಮ್ರಪಟಗಳು ಐತಿಹಾಸಿಕ ದೃಷ್ಟಿಯಲ್ಲಿ ಬಹಳ ಮುಖ್ಯವಾದುವು. ಮಂಗಳೇಶನ ಶಾಸನದ ರಾಜಮುದ್ರೆಯಲ್ಲಿ ತನ್ನ ಮರಿಗೆ ಹಾಲು ಕುಡಿಸುತ್ತಿರುವ ಹೆಣ್ಣು ಹುಲಿಯ ಆಕೃತಿ ಇದೆ. ಇದುವರೆಗೆ ದೊರೆತ ಎಲ್ಲ ತಾಮ್ರಶಾಸನಗಳಲ್ಲಿ ಇದು ಅಪೂರ್ವವಾದದ್ದು. 6–7ನೆಯ ಶತಮಾನಗಳಲ್ಲಿ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಆಳಿದ ಸಾಮಂತ ಅರಸರಾದ ಮೌರ್ಯ ಮತ್ತು ಭೋಜನ ಮನೆತನಗಳ ಅರಸರ ತಾಮ್ರಪಟಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಪುರಾತತ್ತ್ವ ಶೋಧನೆಯಲ್ಲಿ ಈ ಸಂಸ್ಥೆ ಸಾಕಷ್ಟು ಕೆಲಸಮಾಡಿದೆ. ಪ್ರಾಚೀನ ಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ (ಧಾತುಯುಗ)ಗಳಿಗೆ ಸೇರಿದ ಅನೇಕ, ನಿವೇಶನಗಳನ್ನು ಗುರುತಿಸಲಾಗಿದೆ. ಮಲಪ್ರಭಾ, ಘಟಪ್ರಭಾ ಮತ್ತು ಕೃಷ್ಣಾನದಿಗಳ ತೀರಗಳಲ್ಲಿ ದೊರೆತ ಅನೇಕ ಶಿಲಾಯುಧಗಳನ್ನು ಸಂಗ್ರಹಿಸಲಾಗಿದೆ. ಕೆಲವು ನಿವೇಶನಗಳಲ್ಲಿ ಉತ್ಖನನ ಕಾರ್ಯ ನಡೆದಿದೆ.

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿನ ಮಹಾಲಕ್ಷ್ಮೀ ದೇವಾಲಯದ ಸಮೀಪದ ಬ್ರಹ್ಮಪುರಿ ಒಂದು ಪ್ರಾಚೀನ ನಿವೇಶನ. ಈ ಸ್ಥಳದಲ್ಲಿ ಮೊದಲ ಬಾರಿ ಕನ್ನಡ ಸಂಶೋಧನೆ ಸಂಸ್ಥೆ ಅನ್ವೇಷಣೆ ನಡೆಸಿ ಅನೇಕ ಮಹತ್ತ್ವದ ಐತಿಹಾಸಿಕ ವಿಷಯಗಳನ್ನು ಬೆಳಕಿಗೆ ತಂದಿತು. ಪುಣೆಯಲ್ಲಿ ಡೆಕ್ಕನ್ ಕಾಲೇಜಿನಲ್ಲಿರುವ ಸಂಶೋಧನ ಸಂಸ್ಥೆಯೊಡನೆ ಕೂಡಿಕೊಂಡು, ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟ ಗ್ರಾಮದಲ್ಲಿ ಉತ್ಖನನ ಕಾರ್ಯವನ್ನು ಕೈಗೊಳ್ಳಲಾಯಿತು. ಹಾಗೆಯೇ ಧಾರವಾಡ ಜಿಲ್ಲೆಯ ಹಳ್ಳೂರಿನಲ್ಲೂ ಒಂದು ನಿವೇಶನವನ್ನು ವೈಜ್ಞಾನಿಕ ರೀತಿಯಲ್ಲಿ ಅಗೆಯಲಾಗಿದೆ. ಈ ಅಗೆತಗಳಿಂದ ಕರ್ನಾಟಕದ ನವಶಿಲಾಸಂಸ್ಕೃತಿಗೆ ಸಂಬಂಧಿಸಿದ ಅನೇಕ ಹೊಸ ವಿಷಯಗಳು ಗೋಚರವಾಗಿವೆ.



**ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ. ವಸ್ತುಸಂಗ್ರಹಾಲಯದಲ್ಲಿರುವ ಶಿಲ್ಪಗಳು, ವೀರಗಲ್ಲುಗಳು**

ಕರ್ನಾಟಕದ ಕಲೆ ವಾಸ್ತುಶಿಲ್ಪಗಳ ಅಭ್ಯಾಸಕ್ಕಾಗಿ ಅನೇಕ ವಿಗ್ರಹಗಳನ್ನೂ ವೀರಗಲ್ಲು, ಮಕರತೋರಣ ಮುಂತಾದವನ್ನೂ ಸಂಸ್ಥೆ ತನ್ನ ಸಂಗ್ರಹಾಲಯದಲ್ಲಿ ಪ್ರದರ್ಶಿಸಿದೆ. ಜೈನರ ತೀರ್ಥಂಕರರ ವಿಗ್ರಹಗಳನ್ನು ಇಲ್ಲಿ ಕಾಣಬಹುದು. ಇವುಗಳಲ್ಲೆಲ್ಲ ಬಹಳ ಮುಖ್ಯವಾದುದು ಪಟ್ಟದಕಲ್ಲಿನಲ್ಲಿ ದೊರೆತ ನಟರಾಜನ ವಿಗ್ರಹ. ಕೆಂಪು ಶಿಲೆಯ ಈ ವಿಗ್ರಹ ಸಾಮಾನ್ಯವಾಗಿ ಕಾಣಬರುವ ಇಂಥ ಮೂರ್ತಿಗಳಿಗಿಂತ ಭಿನ್ನವಾದದ್ದು. ಅನೇಕ ಶಿಲಾಶಾಸನಗಳು ಇಲ್ಲಿವೆ. ಬಸವೇಶ್ವರರನ್ನು ಕುರಿತ ಖಚಿತವಾದ ಶಾಸನಾಧಾರವೆನಿಸಿದ ಅರ್ಜುನವಾಡದ ಶಿಲಾಸಾಸನ ಈಗ ಈ ಸಂಸ್ಥೆಯಲ್ಲುಂಟು. ಇಲ್ಲಿಯ ವಸ್ತುಸಂಗ್ರಹಾಲಯವನ್ನು ಇತ್ತೀಚೆಗೆ ಆಧುನಿಕ ರೀತಿಯಲ್ಲಿ ಪುನರ್ ರೂಪಿಸಲಾಗಿದೆ. ಹರಪ್ಪ–ಮೊಹೆಂಜೊದಾರೊಗಳಲ್ಲಿ ದೊರೆತ ಅವಶೇಷಗಳಲ್ಲಿ ಕೆಲವನ್ನೂ ಕೆಲವು ಪ್ರತಿಕೃತಿಗಳನ್ನು (ಪ್ಲಾಸ್ಟರ್‌ಕ್ಯಾಸ್ಟ್) ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಶಿಲಾಯುಧಗಳು, ಮಡಕೆಗಳು, ಕಬ್ಬಿಣದ ಆಯುಧಗಳು ಮುಂತಾದುವನ್ನೂ ಇಲ್ಲಿ ಕಾಣಬಹುದು. ಕನ್ನಡಲಿಪಿಯ ಬೆಳೆವಣಿಗೆಯನ್ನು ತೋರಿಸುವ ಮೂಲಶಾಸನ ಪ್ರತಿಗಳನ್ನೂ ಚಿತ್ರಗಳನ್ನೂ ಅಲ್ಲದೆ ಕರ್ನಾಟಕದ ಕಲೆಯನ್ನು ರೂಪಿಸುವ ಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಇಲ್ಲಿನ ವಸ್ತುಸಂಗ್ರಹಾಲಯ ಉತ್ತಮ ಗುಣ ಮೌಲ್ಯ ಹೊಂದಿದೆ ಎಂಬ ಕೀರ್ತಿಗೆ ಪಾತ್ರವಾಗಿದೆ.

ಸಂಸ್ಥೆಯಲ್ಲಿ ಅನೇಕ ವಿದ್ಯಾರ್ಥಿಗಳು ಸಂಶೋಧನ ಕಾರ್ಯದಲ್ಲಿ ತೊಡಗಿದ್ದಾರೆ. ಅವರಿಗೂ ಇತರರಿಗೂ ಸಹಾಯವಾಗುವಂತೆ ಪ್ರತಿವರ್ಷ ಪಂಡಿತರಿಂದ ವಿವಿಧ ವಿಷಯಗಳ ಮೇಲೆ ಪಾಂಡಿತ್ಯಪೂರ್ಣ ಸಂಶೋಧನ ಉಪನ್ಯಾಸಗಳನ್ನೇರ್ಪಡಿಸಿ ಅನಂತರ ಅವನ್ನು ಪ್ರಕಟಿಸುವುದು ಈ ಸಂಸ್ಥೆಯ ಕಾರ್ಯಗಳಲ್ಲಿ ಒಂದು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ತಲಾ 8 ಉಪನ್ಯಾಸಗಳು ಪ್ರಕಟವಾಗಿವೆ.

ಕರ್ನಾಟಕದಲ್ಲಿನ ಅನೇಕ ಕಡೆ ಮಠಗಳಲ್ಲೂ ವಿದ್ವಾಂಸರ ಪುರಾತನ ಮನೆತನಗಳಲ್ಲೂ ಓಲೆಗರಿಯಲ್ಲಿ ಬರೆದ ಗ್ರಂಥಗಳು ಸಿಗುತ್ತವೆ. ಇವುಗಳಲ್ಲಿ ಪ್ರಾಚೀನ ಸಾಹಿತ್ಯ ಗ್ರಂಥಗಳನೇಕವಿವೆ. ಸರಿಯಾದ ರಕ್ಷಣೆಯಿಲ್ಲದೆ ನಾಶವಾಗುತ್ತಿರುವ ಈ ಗ್ರಂಥಗಳನ್ನು ಸಂಗ್ರಹಿಸಿ ಸುಸ್ಥಿತಿಯಲ್ಲಿ ಕಾಪಾಡುವ ಕಾರ್ಯವನ್ನು ಸಂಸ್ಥೆ ಕೈಗೊಂಡಿತು. ಈಗ ಸಂಸ್ಥೆಯಲ್ಲಿ ಇಂಥ ಸು. 2,000 ಗ್ರಂಥಗಳಿವೆ. ಇವನ್ನು ಪರೀಕ್ಷಿಸಿ, ವ್ಯಾಕರಣ, ನಿಘಂಟು, ಪುರಾಣ ಮತ್ತು ಕಾವ್ಯ,

ಜೀವನ ವೃತ್ತಾಂತ, ವೇದಾಂತ, ಧರ್ಮಶಾಸ್ತ್ರ, ತತ್ತ್ವಜ್ಞಾನ, ಲೌಕಿಕಶಾಸ್ತ್ರಗಳು, ಐತಿಹಾಸಿಕ–ಹೀಗೆ ವಿಷಯಾನುಗುಣವಾಗಿ ವಿಂಗಡಿಸಿ ಈ ಗ್ರಂಥಗಳ ವಿವರಣಾತ್ಮಕ ಗ್ರಂಥಸೂಚಿಗಳನ್ನು (ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ಸ್) ಪ್ರಕಟಿಸಲಾಗುತ್ತಿದೆ. ಇಂಥ ಒಂಬತ್ತು ಸಂಪುಟಗಳು ಈಗಾಗಲೇ ಪ್ರಕಟವಾಗಿವೆ. ಅವುಗಳಲ್ಲಿ ಐದು ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಲಾಗಿದೆ. ಕವಿಜಿಹ್ವಾಬಂಧನ, ಮದನತಿಲಕ, ಐರಾವತ, ವಿರೂಪಾಕ್ಷ ವಸಂತೋತ್ಸವ ಚಂಪೂ ಮತ್ತು ಸಮಯಪರೀಕ್ಷೆ–ಇವೇ ಆ ಗ್ರಂಥಗಳು. ಅದಲ್ಲದೆ ಕಲೆ, ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನಾತ್ಮಕವಾದ 11 ಪ್ರಬಂಧಗಳನ್ನೂ ಪ್ರಕಟಿಸಲಾಗಿದೆ.

ಕರ್ನಾಟಕದ ಇತಿಹಾಸವನ್ನು ಆಧಾರಭೂತವಾಗಿ ಸವಿಸ್ತಾರವಾಗಿ 12 ಸಂಪುಟಗಳಲ್ಲಿ ರಚಿಸಬೇಕೆಂಬುದು ಸಂಸ್ಥೆಯ ಇತ್ತೀಚಿನ ಯೋಜನೆ. ಈ ದಿಶೆಯಲ್ಲಿ ಮೊದಲ ಹೆಜ್ಜೆಯಾಗಿ, ಸಾಮಾನ್ಯ ಓದುಗರಿಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಸಮಗ್ರ ಇತಿಹಾಸ ಗ್ರಂಥವೊಂದನ್ನು ಹೊರತರಲಾಗಿದೆ. ಪಿ.ಬಿ. ದೇಸಾಯಿ ನಿರ್ದೇಶನದಲ್ಲಿ ಬಿ.ಆರ್. ಗೋಪಾಲ್ ಮತ್ತು ಶ್ರೀನಿವಾಸ ರಿತ್ತಿಯವರು ಕೂಡಿ ಈ ಗ್ರಂಥವನ್ನು ಬರೆದಿದ್ದಾರೆ.

ಕರ್ನಾಟಕದ ಪ್ರತಿ ಗ್ರಾಮದಲ್ಲೂ ಸಾಮಾನ್ಯವಾಗಿ ಒಂದೆರಡಾದರೂ ಶಿಲಾ ಶಾಸನಗಳು ಸಿಗುತ್ತವೆ. ಕನ್ನಡ ನಾಡಿನ ಇತಿಹಾಸ ಸಂಸ್ಕೃತಿಗಳನ್ನು ಅರಿಯಲು ಇವು ಮೂಲಾಧಾರ. ಸಂಶೋಧನೆಯಲ್ಲಿ ತೊಡಗಿರುವವರು ಮೂಲಶಾಸನಗಳನ್ನು ತಾವೇ ಓದಿಕೊಳ್ಳಬಹುದೆಂಬ ಆಶಯದಿಂದ 1965ರಲ್ಲಿ ಲಿಪಿಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ಶಿಕ್ಷಣ ತರಗತಿಯನ್ನು (ಡಿಪ್ಲೊಮ ಕೋರ್ಸ್ ಇನ್ ಎಪಿಗ್ರಫಿ) ತೆರೆಯಲಾಯಿತು. ಅನೇಕ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಭಾರತದ ಬೇರೆ ಯಾವ ವಿಶ್ವವಿದ್ಯಾಲಯದಲ್ಲೂ ಈ ಬಗೆಯ ಶಿಕ್ಷಣ ನೀಡುತ್ತಿಲ್ಲ.

ಇದಕ್ಕೆ ಒಂದು ಗ್ರಂಥಾಲಯ ಆವಶ್ಯಕವೆಂಬುದನ್ನು ಮನಗಂಡು ಸಂಸ್ಥೆ ಆರಂಭವಾದಾಗಲೇ ಇದನ್ನು ಆರಂಭಿಸಲಾಯಿತು. ಇಂದು ಗ್ರಂಥಾಲಯದಲ್ಲಿ ಇತಿಹಾಸ, ಕಲೆ, ಸಂಸ್ಕೃತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸು. 10,000ಕ್ಕೂ ಹೆಚ್ಚು ಗ್ರಂಥಗಳಿವೆ. (ಜಿ.ಬಿ.ಆರ್.)

**ಕನ್ನಡ ಸಾಹಿತ್ಯ :** ಶ್ರೀಮಂತವೂ ವೈವಿಧ್ಯಪೂರ್ಣವೂ ಆದ ಕನ್ನಡ ಸಾಹಿತ್ಯಕ್ಕೆ 2 ಸಾವಿರ ವರ್ಷಗಳಿಗೂ ಮೇಲ್ಪಟ್ಟ ಸುದೀರ್ಘ ಇತಿಹಾಸವಿದೆ. ಅಧ್ಯಯನದ ದೃಷ್ಟಿಯಿಂದ ಕನ್ನಡ ಸಾಹಿತ್ಯವನ್ನು ಮತ ಪ್ರಾಬಲ್ಯ, ಭಾಷೆಯ ಅವಸ್ಥೆಗಳು, ಪ್ರಮುಖ ಕವಿಗಳು, ಸಾಹಿತ್ಯ ರೂಪಗಳು, ಆಯಾ ಯುಗಮನೋಧರ್ಮ, ಶತಮಾನಾನುಪೂರ್ವಿ – ಈ ಮುಂತಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅನೇಕ ವಿಧದಲ್ಲಿ ವಿಭಾಗಿಸಿ ವಿಶ್ಲೇಷಿಸುವ ಕಾರ್ಯ ಇದುವರೆಗೆ ಸಾಕಷ್ಟು ನಡೆದಿದೆ. ಮತೀಯ ದೃಷ್ಟಿಯನ್ನನುಸರಿಸಿ ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗವೆಂದೂ ಪ್ರಮುಖ ಕವಿಗಳನ್ನಾಧರಿಸಿ ಪಂಪಯುಗ, ಬಸವಯುಗ, ಹರಿಹರಯುಗ, ಕುಮಾರವ್ಯಾಸಯುಗವೆಂದೂ ಸಾಹಿತ್ಯ ರೂಪಗಳನ್ನಾಧರಿಸಿ ಚಂಪೂ, ವಚನ, ರಗಳೆ, ತ್ರಿಪದಿ, ಸಾಂಗತ್ಯ ಯುಗಗಳೆಂದೂ ಭಾಷಾವಸ್ಥೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪೂರ್ವದ ಹಳಗನ್ನಡಕಾಲ, ಹಳಗನ್ನಡಕಾಲ, ನಡುಗನ್ನಡಕಾಲ, ಹೊಸಗನ್ನಡಕಾಲವೆಂದೂ ಆಯಾ ಯುಗಮನೋಧರ್ಮ ಮತ್ತು ಕವಿಕರ್ಮಕ್ಕೆ ಸಿಕ್ಕ ಮೂಲ ಪ್ರಚೋದನೆಯನ್ನು ಮುಖ್ಯವಾಗಿ ಆಧರಿಸಿ ಕ್ಷಾತ್ರಯುಗ, ಧರ್ಮಪ್ರಚಾರಯುಗ, ಸಾರ್ವಜನಿಕಯುಗ, ಆಧುನಿಕಯುಗವೆಂದೂ ಶತಮಾನಾನು ಪೂರ್ವಿಯನ್ನನುಸರಿಸಿ 10ನೆಯ ಶತಮಾನದ ಸಾಹಿತ್ಯ, 11ನೆಯ ಶತಮಾನದ ಸಾಹಿತ್ಯ – ಇತ್ಯಾದಿಯಾಗಿಯೂ –ಹೀಗೆ ಒಬ್ಬೊಬ್ಬ ವಿದ್ವಾಂಸರು ಒಂದೊಂದು ಕ್ರಮವನ್ನನುಸರಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕನ್ನಡ ಸಾಹಿತ್ಯದ ಪ್ರಾಚೀನತೆ, ಪಂಪಯುಗ, ವಚನಯುಗ, ಹರಿಹರಯುಗ, ಕುಮಾರವ್ಯಾಸಯುಗ, ಆಧುನಿಕಯುಗ ಎಂಬ ಶೀರ್ಷಿಕೆಗಳ ಅಡಿಯಲ್ಲಿ ಕನ್ನಡ ವಾಙ್ಮಯವನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳು ಮುಖ್ಯ ಕವಿಗಳನ್ನು ಕುರಿತ ಪ್ರತ್ಯೇಕ ಲೇಖನಗಳಲ್ಲಿ, ರಾಜವಂಶಗಳನ್ನು ಕುರಿತಾದ (ಉದಾ: ಚಾಳುಕ್ಯವಂಶ, ರಾಷ್ಟ್ರಕೂಟವಂಶ) ಸಮೀಕ್ಷಾ ಲೇಖನಗಳಲ್ಲಿ ಮತ್ತು ಈ ಕೆಳಕಂಡ ಸಮೀಕ್ಷಾ ಲೇಖನಗಳಲ್ಲಿ ನಿರೂಪಿತವಾಗಿವೆ. ಕನ್ನಡದಲ್ಲಿ ಕಾದಂಬರಿ ಸಾಹಿತ್ಯ; ಕನ್ನಡದಲ್ಲಿ ಗದ್ಯ ಸಾಹಿತ್ಯ; ಕನ್ನಡದಲ್ಲಿ ಗಾಂಧೀ ಸಾಹಿತ್ಯ; ಕನ್ನಡದಲ್ಲಿ ಗ್ರಂಥಸಂಪಾದನೆ; ಕನ್ನಡದಲ್ಲಿ ಜೀವನ ಚರಿತ್ರೆಗಳು; ಕನ್ನಡದಲ್ಲಿ ನವ್ಯಕಾವ್ಯ; ಕನ್ನಡದಲ್ಲಿ ನಾಟಕ ಸಾಹಿತ್ಯ; ಕನ್ನಡದಲ್ಲಿ ಪ್ರಬಂಧ ಸಾಹಿತ್ಯ; ಕನ್ನಡದಲ್ಲಿ ಪ್ರವಾಸ ಸಾಹಿತ್ಯ; ಕನ್ನಡದಲ್ಲಿ ಭಾವಗೀತೆ; ಕನ್ನಡದಲ್ಲಿ ಭಾಷಾಂತರಗಳು; ಕನ್ನಡದಲ್ಲಿ ಮಕ್ಕಳ ಸಾಹಿತ್ಯ; ಕನ್ನಡದಲ್ಲಿ ವಿಚಾರ ಸಾಹಿತ್ಯ; ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ; ಕನ್ನಡದಲ್ಲಿ ವಿಡಂಬನ ಸಾಹಿತ್ಯ; ಕನ್ನಡದಲ್ಲಿ ವಿಮರ್ಶೆ; ಕನ್ನಡದಲ್ಲಿ ವಿಶ್ವಕೋಶಗಳು; ಕನ್ನಡದಲ್ಲಿ ಶತಕ ಸಾಹಿತ್ಯ; ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯ; ಕನ್ನಡದಲ್ಲಿ ಸಂಕಲನ ಗ್ರಂಥಗಳು; ಕನ್ನಡದಲ್ಲಿ ಸಣ್ಣಕಥೆಗಳು; ಕನ್ನಡದಲ್ಲಿ ಹಾಸ್ಯ ಸಾಹಿತ್ಯ; ಕನ್ನಡ ಭಾಷೆ; ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿ.

**ಕನ್ನಡ ಸಾಹಿತ್ಯದ ಪ್ರಾಚೀನತೆ :** ಕನ್ನಡ ಸಾಹಿತ್ಯ ಕ್ರಿಸ್ತಶಕದಷ್ಟೇ ಪ್ರಾಚೀನ ವಾಗಿದ್ದಿರಬೇಕೆಂಬುದು ಹಲವು ವಿದ್ವಾಂಸರ ಅಭಿಮತ. ಬೌದ್ಧರು ಕನ್ನಡದ ಆದಿಕವಿಗಳೆಂದೂ ಬೌದ್ಧಧರ್ಮದ ನಾಶದೊಂದಿಗೇ ಬೌದ್ಧ ಗ್ರಂಥಗಳೂ ನಾಶವಾಗಿದ್ದಿರಬೇಕೆಂದೂ ವಿದ್ವಾಂಸರು ಊಹಿಸಿದ್ದಾರೆ. ಕನ್ನಡ ಭಾಷೆ ಸಾಹಿತ್ಯದ ಗದ್ದುಗೆಯೇರಿ ಬರೆಹ ರೂಪದಲ್ಲಿ ಪ್ರಪ್ರಥಮವಾಗಿ ಕಾಣಿಸಿಕೊಂಡಿರುವುದು ಸದ್ಯಕ್ಕೆ ತಿಳಿದಿರುವಂತೆ ಹಲ್ಮಿಡಿಯ ಶಾಸನದಲ್ಲಿ. ಇದರ ಮಂಗಳ ಶ್ಲೋಕ ಸಂಸ್ಕೃತದಲ್ಲಿದ್ದು, ಉಳಿದುದೆಲ್ಲ ಕನ್ನಡ ಲಿಪಿಯಲ್ಲಿ ಗದ್ಯ ರೂಪದಲ್ಲಿದೆ. ಭಾಷಾಶೈಲಿ ಸಂಸ್ಕೃತ ಪ್ರಚುರವಾಗಿ ಪ್ರೌಢವಾಗಿದೆ. ಇದನ್ನು ನೋಡಿದರೆ, ಇದಕ್ಕೂ ಪೂರ್ವದಲ್ಲಿಯೇ ಕನ್ನಡ ಸಾಹಿತ್ಯ ಸಾಕಷ್ಟು ಬೆಳೆದಿರಬೇಕೆಂದೂ ಈ ಶಾಸನ ಹುಟ್ಟುವ ವೇಳೆಗೆ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಗಾಢವಾಗಿದ್ದಿರಬೇಕೆಂದೂ ಊಹಿಸಲು ಅವಕಾಶವಿದೆ.

ಹಾಗೆಯೇ ಪ್ರಾಚೀನಕಾಲದ ಇತರ ಹಲವು ಶಾಸನಗಳೂ ಅತ್ಯಂತ ಕಾವ್ಯಮಯವಾಗಿವೆ. ಸು.7ನೆಯ ಶತಮಾನದ ಬಾದಾಮಿಯ ಶಾಸನ ಕಪ್ಪೆ ಅರಭಟ್ಟ ಎಂಬ ಕಲಿಯ ಶಕ್ತಿ ಸಾಹಸಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಅಚ್ಚಕನ್ನಡ ಛಂದಸ್ಸಾದ ತ್ರಿಪದಿಯಲ್ಲಿರುವ ಈ ಶಾಸನ ಭಾವಭಾಷೆಗಳ ವಿದ್ಯುದಾಲಿಂಗನದಿಂದ ಉದಿಸಿದ ಸುಂದರ ಭಾವಗೀತೆಯಂತಿದೆ. ಸುಮಾರು ಇದೇ ಕಾಲದಲ್ಲಿಯೇ ಹುಟ್ಟಿದ ಶ್ರವಣಬೆಳಗೊಳದ ಶಾಸನವೊಂದು ನಂದಿಸೇನನೆಂಬ ಜೈನಮುನಿಯ ವೈರಾಗ್ಯವನ್ನು ಹೃದಯಂಗಮವಾಗಿ ವರ್ಣಿಸುತ್ತದೆ. ಕವಿಹೃದಯವುಳ್ಳ ಇಂಥ ಶಾಸನಕರ್ತೃಗಳು ಕಾವ್ಯಕರ್ತೃಗಳಾಗಿಯೂ ಇದ್ದಿರಬಹುದು.

ಈಗ ದೊರಕಿರುವ ಕೆಲವು ಕನ್ನಡ ಗ್ರಂಥಗಳಲ್ಲಿ ಹಲವು ಕನ್ನಡ ಕೃತಿಕಾರರ ಪ್ರಸ್ತಾಪ ದೊರಕುತ್ತದೆ. ಅಂಥ ಕೆಲವು ಕೃತಿಕಾರರನ್ನು 7, 8, 9ನೆಯ ಶತಮಾನದವರೆಂದು ತೀರ್ಮಾನಿಸಬಹುದು. ಆದರೆ ಅವರ ಗ್ರಂಥಗಳು ಯಾವುವೂ ದೊರಕಿಲ್ಲ. ಈ ಸಂದರ್ಭದಲ್ಲಿ ತುಂಬಲೂರಾಚಾರ್ಯರು ಬರೆದ ಚೂಡಾಮಣಿ ಎಂಬ ತತ್ತ್ವಾರ್ಥ ಮಹಾಶಾಸ್ತ್ರದ ಮೇಲಿನ ವ್ಯಾಖ್ಯಾನ ಗ್ರಂಥವೂ ಗುಣಗಾಂಕಿಯಂ ಎಂಬ ಛಂದಶ್ಶಾಸ್ತ್ರದ ಗ್ರಂಥವೂ ಉಲ್ಲೇಖಾರ್ಹವಾದುವು. ತುಂಬಲೂರಾಚಾರ್ಯರ ಗ್ರಂಥ ತೊಂಬತ್ತಾರು ಸಹಸ್ರ ಗ್ರಂಥ ಪರಿಮಿತಿಯುಳ್ಳದ್ದೆಂದು ಭಟ್ಟಾಕಳಂಕನಿಂದ ತಿಳಿದುಬರುತ್ತದೆ. ಇಂಥ ಬೃಹತ್ತಾದ ಶಾಸ್ತ್ರಗ್ರಂಥವೊಂದು ಹುಟ್ಟಬೇಕಾದರೆ ಅದಕ್ಕೂ ಪೂರ್ವದಲ್ಲಿ ಸಾಹಿತ್ಯ ಸಮೃದ್ಧವಾಗಿ ಬೆಳೆದು ಬಂದಿರಬಹುದು. 'ಗುಣಗಾಂಕಿಯಂ' ಕವಿರಾಜಮಾರ್ಗದ ಸಮಕಾಲೀನ ವಾದುದೆಂದೂ ನಾಗವರ್ಮನ ಛಂದೋಂಬುಧಿಗೆ ಮಾದರಿಯೆಂದೂ ತಿಳಿದುಬರುತ್ತದೆ. ಇದು ಶಾಸ್ತ್ರಗ್ರಂಥವಾದುದರಿಂದ ಇದಕ್ಕೂ ಪೂರ್ವದಲ್ಲಿ ಸಾಹಿತ್ಯ ಬೆಳೆದಿರಬೇಕು. ತುಂಬಲೂರಾಚಾರ್ಯನ ಸಮಕಾಲೀನನಾದ ಶ್ಯಾಮಕುಂದಾಚಾರ್ಯ ಕನ್ನಡದಲ್ಲಿ ಪ್ರಾಭೃತವನ್ನು ರಚಿಸಿದನೆಂದು ತಿಳಿದುಬಂದಿದೆ. ಗಂಗರಾಜನಾದ ಸೈಗೊಟ್ಟ ಶಿವಮಾರ (ಸು.788–812) ಗಜಾಷ್ಟಕವನ್ನು ಕನ್ನಡದಲ್ಲಿ ಬರೆದಿದ್ದನೆಂದೂ ಅದು ಓವನಿಗೆಯೂ ಒನಕೆವಾಡೂ ಆಗಿದ್ದು ಜನಪ್ರಿಯವಾಗಿತ್ತೆಂದೂ ತಿಳಿದುಬರುತ್ತದೆ. ಇದು ದಾಖಲೆಗೊಂಡಿರುವ ಮೊಟ್ಟಮೊದಲ ಕನ್ನಡ ಜನಪದ ಕಾವ್ಯ.

ಈಗ ನಮಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಕವಿರಾಜಮಾರ್ಗ ಮೊಟ್ಟಮೊದಲನೆಯದು. ನೃಪತುಂಗನ ಆಸ್ಥಾನಕವಿ ಶ್ರೀ ವಿಜಯ ಇದರ ಕರ್ತೃ. ಇದು ಕನ್ನಡ ಭಾಷೆ ವ್ಯಾಕರಣ ಅಲಂಕಾರಗಳನ್ನು ನಿರೂಪಿಸುವ ಬಹುಮುಖ್ಯವಾದ ಲಕ್ಷಣ ಗ್ರಂಥವಾಗಿದ್ದು ಕನ್ನಡಿಗರ ಕೈಪಿಡಿಯಂತಿದೆ. ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಇದರ ಕರ್ತೃ ಆಡಿರುವ ನುಡಿಗಳು ಅತ್ಯಮೂಲ್ಯವಾಗಿವೆ. ಕವಿರಾಜ ಮಾರ್ಗಕಾರ ಕೊಡುವ ಕೆಲವು ಉದಾಹರಣ ಪದ್ಯಗಳು ಕಾವ್ಯಮಯ ವಾಗಿವೆಯಾಗಿ ಶಾಸ್ತ್ರಗ್ರಂಥವೊಂದು ಆ ರೀತಿ ಇರಬೇಕಾದರೆ ಆ ವೇಳೆಗೆ ಸಾಹಿತ್ಯ ಸಾಕಷ್ಟು ಬೆಳೆದು, ಪಳಗಿ ಹದಗೊಂಡಿರಬೇಕೆಂಬುದು ಸ್ವಯಂವೇದ್ಯ ವಾಗುತ್ತದೆ. ಆದ್ದರಿಂದ ಕನ್ನಡ ಸಾಹಿತ್ಯ ಕವಿರಾಜಮಾರ್ಗಕ್ಕಿಂತಲೂ ನಾಲ್ಕೈದು ಶತಮಾನಗಳಷ್ಟಾದರೂ ಪ್ರಾಚೀನವಾಗಿರಬೇಕು. ಕವಿರಾಜಮಾರ್ಗಕಾರ ತನ್ನ ಗ್ರಂಥಗಳಲ್ಲಿ ತನಗಿಂತ ಹಿಂದಿನ ಅನೇಕ ಕವಿಗಳನ್ನು ಹೆಸರಿಸಿದ್ದಾನೆ. ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರೂ ಗದ್ಯಕವಿಗಳೆಂದೂ ಪರಮ ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಪದ್ಯಕವಿಗಳೆಂದೂ ಹೇಳಿದ್ದಾನೆ. ಇವನ ಮಾತಿನ ಧೋರಣೆಯನ್ನು ನೋಡಿದರೆ ಈತ ಹೆಸರಿಸಿರುವ ಕವಿಗಳೆಲ್ಲರೂ ಪ್ರಸಿದ್ಧ ಕವಿಗಳಾಗಿದ್ದಂತೆ ತೋರುತ್ತದೆ. ಆದರೆ ಅವರು ಬರೆದ ಕಾವ್ಯಗಳಾವುವೆಂಬುದನ್ನು ಈತ ಹೇಳಿಲ್ಲ; ಅವರ ಗ್ರಂಥಗಳಾವುವೂ ಈಗ ನಮಗೆ ಸಮಗ್ರವಾಗಿ ದೊರೆತಿಲ್ಲ. ಆದರೂ ಇವರಲ್ಲಿ ಕೆಲವರ ಹೆಸರು ನಮಗೆ ಪರಿಚಿತವಾಗಿದೆ. ಗದ್ಯಕವಿಗಳಲ್ಲಿ ಒಬ್ಬನಾದ ದುರ್ವಿನೀತ (ಸು.529–79) ಗಂಗವಂಶದ ದೊರೆಯೆಂದೂ ಈತ ಬಹುಶ್ರುತನೂ ಮೇಧಾವಿಯೂ ಆಗಿದ್ದನೆಂದೂ ಶಾಸನಗಳಿಂದ ತಿಳಿಯುತ್ತದೆ. ಕಿರಾತಾರ್ಜುನೀಯದ ಹದಿನೈದನೆಯ ಸರ್ಗಕ್ಕೆ ಇವನು ಕನ್ನಡ ಟೀಕನ್ನು ಬರೆದಿರುವಂತೆ ತಿಳಿದುಬರುತ್ತದೆ. ಪೈಶಾಚೀ ಭಾಷೆಯಲ್ಲಿದ್ದ ಬೃಹತ್ಕಥೆಯನ್ನು ವಡ್ಡಕಥಾ ಎಂಬ ಹೆಸರಿನಿಂದ ಈತ ಕನ್ನಡಕ್ಕೆ

ತಂದಿದ್ದಾನೆಂದೂ ಊಹೆ. ಕವಿರಾಜಮಾರ್ಗದಲ್ಲಿ ಹೇಳಿರುವ ಪದ್ಯಕವಿಗಳಲ್ಲಿ ಚಂದ್ರನನ್ನು ಹಲವು ಕನ್ನಡ ಕವಿಗಳು ಸ್ತುತಿಸಿದ್ದಾರೆ. ಇಷ್ಟೇ ಅಲ್ಲ, ಕವಿರಾಜಮಾರ್ಗದಲ್ಲಿ ಉದಾಹರಿಸಿರುವ ಹಲವಾರು ಪದ್ಯಗಳು ಎಲ್ಲಿಂದ ಎತ್ತಿಕೊಂಡವುಗಳೆಂಬ ವಿಷಯ ಗೊತ್ತಾಗುವುದಿಲ್ಲ. ಇವುಗಳಲ್ಲಿ ಹತ್ತಾರು ಪದ್ಯಗಳು ರಾಮಾಯಣದ ಹಲವಾರು ಸನ್ನಿವೇಶಗಳನ್ನು ಸೂಚಿಸುವುದರಿಂದ, ಆ ಕಾಲಕ್ಕಾಗಲೇ ಒಂದು ರಾಮಾಯಣ ಕನ್ನಡದಲ್ಲಿ ಹುಟ್ಟಿದ್ದಿತೆಂದು ಊಹಿಸಲವಕಾಶವಿದೆ. ಇದೇ ಗ್ರಂಥದಲ್ಲಿ ಕನ್ನಡ ಕಾವ್ಯ ಪ್ರಕಾರಗಳಲ್ಲಿ ಉನ್ನತ ಗುಣವುಳ್ಳ ಗದ್ಯಪದ್ಯ ಸಮ್ಮಿಶ್ರಣದ ಪ್ರಕಾರವನ್ನು 'ಗದ್ಯ ಕಥೆ' ಎಂಬ ಹೆಸರಿನಿಂದ ಪ್ರಾಚೀನ ಆಚಾರ್ಯರು ರಚಿಸಿದ್ದಾರೆ ಎಂದು ಹೇಳಿದೆ. ಅಲ್ಲದೆ ಕನ್ನಡಕ್ಕೇ ವಿಶಿಷ್ಟವಾದ ಚತ್ತಾಣ ಮತ್ತು ಬೆದಂಡೆಗಳಂಥ ಪದ್ಯಕಾವ್ಯಪ್ರಕಾರಗಳಿದ್ದುವೆಂದೂ ಇದರಲ್ಲಿ ಪ್ರಾಚೀನರಾದ ಕವಿಗಳು ಕೃತಿರಚನೆ ಮಾಡಿದ್ದರೆಂದೂ ತಿಳಿಯುತ್ತದೆ.

ಕವಿರಾಜಮಾರ್ಗ ಹುಟ್ಟಿದ ಹಿಂಚುಮುಂಚಿನಲ್ಲಿಯೇ ಅಸಗ, ಗುಣನಂದಿ ಮತ್ತು ಗುಣವರ್ಮ ಎಂಬ ಮೂವರು ಕವಿಗಳು ಕಾಣಬರುತ್ತಾರೆ. ಅಸಗನ ವರ್ಧಮಾನ ಚರಿತಂ ಎಂಬ ಸಂಸ್ಕೃತ ಗ್ರಂಥದಿಂದ ಈತ ಸು.853ರಲ್ಲಿ ಇದ್ದನೆಂಬುದು ಮಾತ್ರವಲ್ಲದೆ ಶ್ರೀ ಅಸಗಭೂಪಕೃತೇ ಎಂಬ ಅಲ್ಲಿನ ಹೇಳಿಕೆಯಿಂದ ಈತ ರಾಜನೂ ಆಗಿದ್ದಿರಬೇಕೆಂದು ಭಾವಿಸುವುದಕ್ಕೂ ಅವಕಾಶವಿದೆ. ಕನ್ನಡದ ಹಲವಾರು ಕವಿಗಳು ಈತನನ್ನು ಸ್ತುತಿಸಿದ್ದಾರೆ. ಈತನ 'ಕರ್ನಾಟ ಕುಮಾರಸಂಭವ' ಕನ್ನಡ ಕಾವ್ಯವೆಂದು ಜಯಕೀರ್ತಿಯ ಗ್ರಂಥದಿಂದ ತಿಳಿಯುತ್ತದೆ. ಗುಣನಂದಿಯನ್ನು ಭಟ್ಟಾಕಳಂಕ ಬಹು ಭಕ್ತಿಯಿಂದ ಭಗವಾನ್ ಗುಣನಂದಿ ಎಂದು ಕರೆದು ಗೌರವಿಸಿದ್ದಾನೆ. ಈತನ ಕಾವ್ಯದ ತುಣುಕೊಂದು ಕೇಶಿರಾಜನ ವ್ಯಾಕರಣದಲ್ಲಿದೆ. ಅದನ್ನು ನೋಡಿದರೆ ಈತ ಉತ್ತಮ ಕವಿಯೆಂದು ಭಾಸವಾಗುತ್ತದೆ. ಈತನ ಗ್ರಂಥವಾವುದೂ ಸಿಕ್ಕಿಲ್ಲ. ಗುಣವರ್ಮನು ಹರಿವಂಶ, ಶೂದ್ರಕ ಎಂಬ ಎರಡು ಉದ್ಗ್ರಂಥಗಳ ಕರ್ತೃವೆಂದು ಹೇಳುವುದಕ್ಕೆ ಅವಕಾಶವಿದೆ. ನಾಗವರ್ಮ, ಕೇಶಿರಾಜರು ಈತನ ಕಾವ್ಯಗಳನ್ನು ಹೆಸರಿಸಿದ್ದಾರೆ. ಮಲ್ಲಿಕಾರ್ಜುನ ಕವಿಯ ಸೂಕ್ತಿ ಸುಧಾರ್ಣವದಲ್ಲಿ ಗುಣವರ್ಮನ ಶೂದ್ರಕ ಕಾವ್ಯದ ಭಾಗಗಳು ದೊರೆಯುತ್ತವೆ. ಮೇಲಿನ ವಿವರಣೆಯಿಂದ ಕನ್ನಡ ಸಾಹಿತ್ಯ ಬಹುಶಃ ಕ್ರಿಸ್ತಶಕದ ಆರಂಭದಲ್ಲಿ ಪ್ರಾರಂಭವಾಗಿ ಐದು ಆರು ಶತಮಾನಗಳ ವೇಳೆಗಾಗಲೇ ಸಮೃದ್ಧಿಯಾಗಿ ಬೆಳೆದುಕೊಂಡು ಬಂದಿರಬಹುದೆಂದು ಹೇಳಬಹುದಾಗಿದೆ.

**ಪಂಪಯುಗ :** ಸು.900–1150. ಕನ್ನಡ ಸಾಹಿತ್ಯದ ಪ್ರಥಮ ಘಟ್ಟ ಪಂಪ ಯುಗ. ಪಂಪನಿಂದ ಬಸವಣ್ಣನವರೆಗೆ ಈ ಯುಗದ ವ್ಯಾಪ್ತಿಯಿದೆ. ಕನ್ನಡ ಸಾಹಿತ್ಯ ವಿಚ್ಛಿತ್ತಿಯಿಲ್ಲದೆ ಹರಿದುಕೊಂಡು ಹೋಗಿರುವುದು 10ನೆಯ ಶತಮಾನದಿಂದ ಮುಂದೆ. ಈ ಯುಗದ ಪ್ರಮುಖ ಕೊಡುಗೆಯೆಂದರೆ ಚಂಪೂಕಾವ್ಯಗಳು. ಈ ಯುಗದಲ್ಲಿ ಪಂಪ, ರನ್ನ, ಪೊನ್ನ– ಈ ಮೂವರು ಮಹಾಕಾವ್ಯಗಳನ್ನು ರಚಿಸಿ ಮಹಾಕವಿಗಳು ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. 10ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಪಂಪ ಕನ್ನಡದ ಆದಿಕವಿಯೆಂದು ಪ್ರಸಿದ್ಧನಾಗಿದ್ದಾನೆ. ಚಾಳುಕ್ಯ ಅರಿಕೇಸರಿಯ ಆಸ್ಥಾನದಲ್ಲಿ ಕವಿಯೂ ಕಲಿಯೂ ಆಗಿದ್ದ ಈತ ಕಾಲದ ದೃಷ್ಟಿಯಿಂದ ಮಾತ್ರವಲ್ಲ, ಯೋಗ್ಯತೆಯ ದೃಷ್ಟಿಯಿಂದಲೂ ಕನ್ನಡದ ಆದಿಕವಿ. ಚಂಪೂ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿ ಅದು ಸು. 2–3 ಶತಮಾನಗಳ ಕಾಲ ಪ್ರಭಾವೀ ಸಾಹಿತ್ಯ ಮಾಧ್ಯಮವಾಗಿ ಬಳಕೆಯಾಗುವಂತೆ ಮಾಡಿದವನು ಈತ. ಚಂಪೂ ಪರಂಪರೆಯಲ್ಲಿ ಲೌಕಿಕ ಧಾರ್ಮಿಕ ಎಂಬ ಎರಡು ರೀತಿಯ ಕಾವ್ಯಮಾರ್ಗಗಳಿಗೆ ಪಂಪನೇ ಸದ್ಯಕ್ಕೆ ಮೊದಲಿಗನೆನ್ನಬಹುದು. ಈತನ ಎರಡು ಕಾವ್ಯಗಳಾದ ವಿಕ್ರಮಾರ್ಜುನ ವಿಜಯ ಹಾಗೂ ಆದಿಪುರಾಣಗಳಿಗೆ ಕ್ರಮವಾಗಿ ವ್ಯಾಸರ ಮಹಾಭಾರತ ಮತ್ತು ಜಿನಸೇನಾಚಾರ್ಯರ ಪೂರ್ವಪುರಾಣ ಆಕರ ಗ್ರಂಥಗಳು. ವಿಕ್ರಮಾರ್ಜುನ ವಿಜಯದಲ್ಲಿ ತನ್ನ ಆಶ್ರಯದಾತ ಅರಿಕೇಸರಿಯನ್ನು ಮಹಾಭಾರತದ ಅರ್ಜುನನೊಂದಿಗೆ ಸಮೀಕರಿಸಿ ಪೌರಾಣಿಕ, ಐತಿಹಾಸಿಕ ಅಂಶಗಳನ್ನು ಸ್ವಾರಸ್ಯವಾಗಿ ಹೊಂದಿಸಿ ಮಹಾಭಾರತದ ಕಥೆಯನ್ನು ಮೆಯ್ಗುಡಲೀಯದೆ ನಿರೂಪಿಸಿದ್ದಾನೆ. ಆದಿಪುರಾಣ ಪ್ರಥಮಜಿನನಾದ ವೃಷಭನಾಥನ ಕಥೆಯನ್ನೊಳಗೊಂಡ, ಕಾವ್ಯಧರ್ಮ ಹಾಗೂ ಧರ್ಮ ಎರಡೂ ಸಮರಸವಾಗಿ ಬೆರೆತಿರುವ ಧಾರ್ಮಿಕ ಕಾವ್ಯ. ವಸ್ತು, ಭಾಷೆ, ಭಾವ, ಶೈಲಿ ಈ ಎಲ್ಲ ರೀತಿಯಿಂದ ಪಂಪನ ಕಾವ್ಯಗಳು ಕನ್ನಡ ಭಾಷೆಗೆ ಕೊಟ್ಟ ಅದ್ವಿತೀಯ ಕೊಡುಗೆಗಳಾಗಿವೆ.

ಪಂಪನಿಂದ ಮುಂದೆ ಸು. 2 ಶತಮಾನಗಳಷ್ಟು ಕಾಲ ಕಾವ್ಯಕರ್ಮಕ್ಕೆ ಕೈಹಾಕಿದವರೆಲ್ಲರೂ ವಸ್ತು ರೀತಿಗಳಲ್ಲಿ, ಭಾವ ಭಾಷೆಗಳಲ್ಲಿ ಪಂಪನನ್ನೇ ಅನುಕರಿಸಿದ್ದಾರೆ; ಅನುಸರಿಸಿದ್ದಾರೆ. ಆದ್ದರಿಂದ ಈ ಕಾಲಮಾನವನ್ನು ಪಂಪಯುಗವೆಂದೇ ಕರೆಯುತ್ತಾರೆ. ಈ ಕಾಲದ ಸಾಹಿತ್ಯ ಅತ್ಯಂತ ಪ್ರೌಢವಾಗಿ, ಸತ್ತ್ವಯುಕ್ತವಾಗಿ, ರಸವತ್ತಾಗಿ ಇರುವುದರಿಂದ ಇದನ್ನು ಕನ್ನಡ ಸಾಹಿತ್ಯದ ಸುವರ್ಣಯುಗ ಎಂದೂ ಕರೆಯುವುದುಂಟು. ಈ ಯುಗದಲ್ಲಿ ಚಂಪೂಕಾವ್ಯಗಳು ಪ್ರಚುರವಾಗಿರುವುದರಿಂದ ಚಂಪೂಯುಗವೆಂದೂ ಈ ಕಾವ್ಯಗಳಲ್ಲಿ ಸಾಮಾನ್ಯವಾಗಿ ವೀರರಸ ನೊರೆಗಟ್ಟಿ ಹರಿಯುತ್ತಿರುವುದರಿಂದ ವೀರಯುಗವೆಂದೂ ಹೆಸರಿಸುವ ವಾಡಿಕೆಯಿದೆ. ಈ ಯುಗದ ಕವಿಗಳೆಲ್ಲರೂ ಬಹುಮಟ್ಟಿಗೆ ರಾಜಾಶ್ರಿತರು.

ಪಂಪನಂತೆಯೇ ಜೈನಧರ್ಮಾನುಯಾಯಿಗಳಾದ ಮತ್ತಿಬ್ಬರು ಕವಿಗಳು ಪೊನ್ನ ಮತ್ತು ರನ್ನ. ಇಬ್ಬರೂ ರಾಜಪೂಜಿತರಾದ ಆಸ್ಥಾನಕವಿಗಳು. ಪಂಪನಂತೆಯೇ ತಮ್ಮ ಕಾವ್ಯಗಳಲ್ಲಿ ಒಂದನ್ನು ಧರ್ಮಕ್ಕೂ ಮತ್ತೊಂದನ್ನು ಲೌಕಿಕಕ್ಕೂ ಮೀಸಲು ಮಾಡಿದ್ದಾರೆ. ಲೌಕಿಕ ಕಾವ್ಯಗಳಲ್ಲಿ ಆಯಾ ಕವಿಗಳ ಪೋಷಕರು ಪುರಾಣಪುರುಷರ ವೇಷವನ್ನು ಧರಿಸಿ, ಆಯಾ ಕಾವ್ಯಗಳ ನಾಯಕರಾಗಿ ಮೆರೆದಿದ್ದಾರೆ. ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ಆಸ್ಥಾನಕವಿಯಾಗಿದ್ದ, ಕವಿಚಕ್ರವರ್ತಿ ಎಂಬ ಬಿರುದನ್ನು ಹೊಂದಿದ್ದ ಪೊನ್ನನ ಶಾಂತಿಪುರಾಣ ಜೈನ ಧಾರ್ಮಿಕ ಗ್ರಂಥ. ಈತನ 'ಭುವನೈಕರಾಮಾಭ್ಯುದಯ' ಈಗ ಉಪಲಬ್ಧವಿಲ್ಲ. ಇದು ರಾಮಾಯಣದ ಕಥೆಯನ್ನು ಆಧರಿಸಿ ರಚಿತವಾದ ಲೌಕಿಕ ಕಾವ್ಯವೆಂದು ಊಹಿಸಲು ಅವಕಾಶವಿದೆ.

ರನ್ನನೂ ಪಂಪನ ಮೇಲ್ಪಂಕ್ತಿಯಲ್ಲಿ ಕಾವ್ಯರಚನೆ ಮಾಡಿದವನಾದರೂ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಈತನ ಸಾಹಸಭೀಮವಿಜಯಕ್ಕೆ (ಗದಾಯುದ್ಧ) ಪಂಪನ ಕೃತಿಯೇ ಪ್ರಮುಖ ಆಕರವಾದರೂ ರನ್ನನ ವ್ಯಕ್ತಿತ್ವದ ಅಚ್ಚು ಈ ಕಾವ್ಯದಲ್ಲಿ ಮೂಡಿಬಂದಿದೆ. ಕಥಾವಸ್ತು ಭೀಮ–ದುರ್ಯೋಧನರ ಗದಾಯುದ್ಧವಾದರೂ ಇಡೀ ಭಾರತದ ಕಥೆಯೇ ಸಿಂಹಾವಲೋಕನಕ್ರಮದಿಂದ ಇಲ್ಲಿ ದಿಗ್ದರ್ಶಿತವಾಗಿದೆ. ಇದಕ್ಕೆ ವಾಹಕವಾಗಿರುವ ನಾಟಕೀಯ ಶೈಲಿ ರನ್ನ ಕನ್ನಡಕ್ಕಿತ್ತಿರುವ ಕಾಣಿಕೆ. ಈತನ ಅಜಿತಪುರಾಣಕ್ಕೆ ಜೈನಧಾರ್ಮಿಕ ಕಾವ್ಯಗಳಲ್ಲಿ ಪಂಪನ ಆದಿಪುರಾಣವನ್ನು ಬಿಟ್ಟರೆ ಉನ್ನತಸ್ಥಾನ ದೊರಕಿದೆ.

ವಡ್ಡಾರಾಧನೆ ಇದೇ ಕಾಲದಲ್ಲಿ ರಚಿತವಾದ ಒಂದು ವಿಶಿಷ್ಟ ಕೃತಿ. ಶಿವಕೋಟ್ಯಾಚಾರ್ಯ (ಸು.920) ಇದರ ಕರ್ತೃ. ಗದ್ಯದಲ್ಲಿರುವ ಈ ಕೃತಿ ಈಗ್ಗೆ ಸಹಸ್ರ ವರ್ಷಗಳ ಹಿಂದಿನ ಭಾಷಾಸ್ವರೂಪಕ್ಕೂ ಜನಜೀವನಕ್ಕೂ ಕನ್ನಡಿ ಹಿಡಿಯುತ್ತದೆ. ಸರಳ ಸುಂದರ ಶೈಲಿ, ಪ್ರಾಸಾದಿಕ ಗುಣ, ಕಥನಕಲೆ– ಇವು ಈ ಕೃತಿಯ ವೈಶಿಷ್ಟ್ಯಗಳು. ಕನ್ನಡ ಗದ್ಯ ಇತಿಹಾಸದಲ್ಲಿ ವಡ್ಡಾರಾಧನೆ ಒಂದು ಮೈಲಿಗಲ್ಲು.

ಈ ಯುಗದ ಮತ್ತೊಬ್ಬ ಹಿರಿಯ ಕವಿ ಒಂದನೆಯ ನಾಗವರ್ಮ. ಕರ್ನಾಟಕ ಕಾದಂಬರಿ, ಛಂದೋಂಬುಧಿಗಳು ಈತನ ಗ್ರಂಥಗಳು. ಈತನೂ ಪಂಪನಂತೆಯೇ ತನ್ನ ಸ್ವಾಮಿ ಚಂದ್ರರಾಜನನ್ನು ಕಾವ್ಯದ ಕಥಾನಾಯಕನೊಡನೆ ಸಮೀಕರಿಸಿ, ತನ್ನ ಕರ್ನಾಟಕ ಕಾದಂಬರಿಯನ್ನು ರಚಿಸಿದನೆಂದು ತೋರುತ್ತದೆ. ಆದರೆ ಇದನ್ನು ಸ್ಪಷ್ಟಪಡಿಸುವಷ್ಟು ಸಾಧನಗಳಿಲ್ಲ. ಈತನ ಛಂದೋಂಬುಧಿ ಕನ್ನಡದ ಮೊಟ್ಟ ಮೊದಲ ಛಂದೋಗ್ರಂಥ. ಕರ್ನಾಟಕ ಕಾದಂಬರಿ ಬಾಣಭಟ್ಟನ ಸಂಸ್ಕೃತ ಕಾದಂಬರಿಯ ಅನುವಾದ. ಮೂಲವನ್ನು ಕವಿ ಕನ್ನಡ ಚಂಪೂರೂಪಕ್ಕೆ ತಿರುಗಿಸಿದ್ದಾನೆ. ಮೂಲದ ಪದಗಳು ಕನ್ನಡ ರೂಪಾಂತರದಲ್ಲಿ ಕಂಡುಬರುವುವಾದರೂ ನಾಗವರ್ಮ ಬರಿಯ ಭಾಷಾಂತರಕಾರನಲ್ಲ. ಸಂಸ್ಕೃತದ ಉತ್ತಮ ಕಾವ್ಯವೊಂದನ್ನು ಸ್ವತಂತ್ರ ಕೃತಿಯೆಂಬಂತೆ ಕನ್ನಡದಲ್ಲಿ ರಚಿಸಿ, ಅದೊಂದು ಸಂಪ್ರದಾಯವನ್ನು ಬೆಳೆಸಿದವರಲ್ಲಿ ಈತ ಮೊದಲಿಗ.

ಈ ಯುಗದಲ್ಲಿ 11ನೆಯ ಶತಮಾನದ ಕನ್ನಡ ಸಾಹಿತ್ಯ ಹಿಂದಿನದಷ್ಟು ಉಜ್ಜ್ವಲವಾಗಿಲ್ಲ. ಆದರೆ ಹೆಚ್ಚು ವೈವಿಧ್ಯಮಯವಾಗಿದೆ. ಕಾವ್ಯಗಳ ಜೊತೆಯಲ್ಲಿ ಇಲ್ಲಿ ಹಲವು ಶಾಸ್ತ್ರ ಗ್ರಂಥಗಳೂ ಕಾಣಿಸಿಕೊಂಡಿವೆ. ಅನೇಕ ವೇಳೆ ಈ ಶಾಸ್ತ್ರಗ್ರಂಥಗಳು ಕಾವ್ಯಮಯ ವಾಗಿಯೂ ಇರುತ್ತವೆ. ಚಾವುಂಡರಾಯನ (ಸು.1025) ಲೋಕೋಪಕಾರ ಇಂಥ ಒಂದು ಗ್ರಂಥ. ಜೋತಿಷ್ಯದಿಂದ ವಿಷವೈದ್ಯದವರೆಗೆ ಹಲವಾರು ವಿಷಯಗಳನ್ನು ಒಳಗೊಂಡ ಈ ಗ್ರಂಥ ತನ್ನ ಹೆಸರನ್ನು ಸಾರ್ಥಕ ಪಡಿಸಿಕೊಂಡಿದೆ. ಚಂದ್ರರಾಜನ (ಸು.1025) ಮದನತಿಲಕ ಎಂಬ ಕಾಮಶಾಸ್ತ್ರವೂ ಶ್ರೀಧರಾಚಾರ್ಯನ (ಸು.1049) ಜಾತಕತಿಲಕವೆಂಬ ಜೋತಿಷ್ಯ ಗ್ರಂಥವೂ ಇದೇ ಜಾತಿಗೆ ಸೇರಿದ ಶಾಸ್ತ್ರಗ್ರಂಥಗಳು. ಇವೆಲ್ಲವೂ ಚಂಪೂ ಶೈಲಿಯಲ್ಲಿವೆ. ನಾಗವರ್ಮಾಚಾರ್ಯನ (ಸು.1071) ಚಂದ್ರಚೂಡಾಮಣಿಶತಕ ಕನ್ನಡದ ಮೊಟ್ಟಮೊದಲ ಶತಕ ಗ್ರಂಥವಾಗಿದೆ. ಮೇಲಿನ ಕವಿಗಳಲ್ಲಿ ಶ್ರೀಧರಾಚಾರ್ಯನನ್ನು (ಜೈನಕವಿ) ಬಿಟ್ಟರೆ ಉಳಿದವರೆಲ್ಲ ವೈದಿಕ ಕವಿಗಳೆಂಬುದು ಗಮನಾರ್ಹ.

ಒಂದನೆಯ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿಯಾಗಿದ್ದ ದುರ್ಗಸಿಂಹ (ಸು.1031) ಪಂಚತಂತ್ರವೆಂಬ ಕಾವ್ಯವನ್ನು ಬರೆದಿದ್ದಾನೆ. ಇದು ಸಂಸ್ಕೃತದಲ್ಲಿ ಬರೆದ ಪಂಚತಂತ್ರದ ಕನ್ನಡ ಅನುವಾದ, ಚಂಪೂರೂಪದಲ್ಲಿದೆ. ಹಲವು ಉಪಕಥೆಗಳು ಇಲ್ಲಿ ಗದ್ಯರೂಪದಲ್ಲಿ ಕಾಣಿಸಿಕೊಂಡಿವೆ. ಕನ್ನಡ ಗದ್ಯ ಸಾಹಿತ್ಯದ ಇತಿಹಾಸದಲ್ಲಿ ದುರ್ಗಸಿಂಹನಿಗೆ ಒಂದು ಪ್ರಮುಖ ಸ್ಥಾನ ಸಲ್ಲುತ್ತದೆ.

ಹೊಯ್ಸಳ ಒಂದನೆಯ ಬಲ್ಲಾಳನ ಆಸ್ಥಾನ ಕವಿಯಾಗಿದ್ದನೆನ್ನಲಾದ ನಾಗಚಂದ್ರ ಈ ಯುಗದಲ್ಲಿ ಕೃತಿರಚನೆ ಮಾಡಿದ ಇನ್ನೊಬ್ಬ ಅತ್ಯುತ್ತಮ ಕವಿ. ತನ್ನನ್ನು ಅಭಿನವಪಂಪನೆಂದು ಕರೆದುಕೊಂಡಿರುವ ಈತ ಮಲ್ಲಿನಾಥಪುರಾಣ, ರಾಮಚಂದ್ರಚರಿತಪುರಾಣ ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ಎರಡೂ ಧರ್ಮಗ್ರಂಥಗಳೇ. ಮೊದಲನೆಯದು 19ನೆಯ

ತೀರ್ಥಂಕರನ ಕಥೆಯನ್ನೂ ಎರಡನೆಯದು ಜೈನ ಪುರಾಣಾನುಸಾರಿಯಾದ ರಾಮಾಯಣ ಕಥೆಯನ್ನೂ ನಿರೂಪಿಸುತ್ತದೆ. ಇಲ್ಲಿನ ಧರ್ಮನಿರೂಪಣೆ ಅತ್ಯಂತ ಕಾವ್ಯಮಯವಾಗಿದ್ದು ಅಭಿನವಪಂಪನ ಆತ್ಮಸಾರ ಎಂಬ ಕೀರ್ತಿಗೆ ಪಾತ್ರವಾಗಿದೆ.

12ನೆಯ ಶತಮಾನದ ಮಧ್ಯಭಾಗದಲ್ಲಿ ಸಾಹಿತ್ಯದಲ್ಲಿ ಹೊಸ ತಿರುವು ಕಾಣಿಸಿಕೊಂಡಿತು. ನಯಸೇನ, ಬ್ರಹ್ಮಶಿವ ಮೊದಲಾದ ಜೈನಕವಿಗಳು ಸಂಸ್ಕೃತ ಭೂಯಿಷ್ಠವಿವಾದ ಮಾರ್ಗೀ ಶೈಲಿಯನ್ನು ಪ್ರತಿಭಟಿಸಿ, ಸುಲಲಿತ ದೇಶೀ ಶೈಲಿಯಲ್ಲಿ ಕೃತಿರಚನೆ ಮಾಡತೊಡಗಿದರು. ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯ ಪರೀಕ್ಷೆ ಈ ಮಾದರಿಯಲ್ಲಿ ರಚಿತವಾದ ಮುಖ್ಯ ಗ್ರಂಥಗಳು. ಇವರ ಕಾವ್ಯಗಳಲ್ಲಿ ಪಂಪ ಹಾಕಿಕೊಟ್ಟ ಮಾರ್ಗದ ಪ್ರಭಾವವಿದ್ದರೂ ಇವರು ಭಾಷಾದೃಷ್ಟಿಯಿಂದ ಹೊಸದನ್ನು ಕಾವ್ಯದಲ್ಲಿ ತರಬೇಕೆಂದು ಹೊರಟು ಕಥೆಗಳ ಮೂಲಕ ತಮ್ಮ ಧರ್ಮಪ್ರಸಾರ ಮಾಡಿದರು. ಇವರ ಕಾವ್ಯಗಳಲ್ಲಿ ಪರಮತ ವಿಡಂಬನೆ ಎದ್ದು ಕಾಣುತ್ತದೆ. ಇದು ಬುದ್ಧಿಪೂರ್ವಕವಾದುದಾದರೂ ವಿವೇಚನಾ ರಹಿತವಾದುದಲ್ಲ.

12ನೆಯ ಶತಮಾನದ ಪೂರ್ವಾರ್ಧದಲ್ಲಿ ರಾಜಾದಿತ್ಯನ ವ್ಯವಹಾರ ಗಣಿತ, ಕೀರ್ತಿವರ್ಮನ ಗೋವೈದ್ಯ, ಜಗದ್ದಳ ಸೋಮನಾಥನ ಕಲ್ಯಾಣಕಾರಕ, ಉದಯಾದಿತ್ಯನ ಉದಯಾದಿತ್ಯಾಲಂಕಾರ, ಎರಡನೆಯ ನಾಗವರ್ಮನ ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ, ವಸ್ತುಕೋಶ ಮುಂತಾದ ಗಮನಾರ್ಹ ಶಾಸ್ತ್ರಗ್ರಂಥಗಳು ರಚಿತವಾದವು. ಎರಡನೆಯ ನಾಗವರ್ಮನ ವರ್ಧಮಾನಪುರಾಣ ಎಂಬ ಕಾವ್ಯ ಸಿಕ್ಕಿದೆ.

**ವಚನಯುಗ:** 12ನೆಯ ಶತಮಾನದ ಉತ್ತರಾರ್ಧ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ನಡೆದ ದೊಡ್ಡದೊಂದು ವಿಪ್ಲವವನ್ನು ಒಳಗೊಂಡಿದೆ. ಇಲ್ಲಿಂದ ಮುಂದೆ ಕನ್ನಡ ಸಾಹಿತ್ಯ ಚರಿತ್ರೆಯ ನೂತನ ಯುಗವೊಂದು ಪ್ರಾರಂಭವಾಗುತ್ತದೆ. ಇಲ್ಲಿಯವರೆಗೆ ಕಾವ್ಯಕರ್ಮಕ್ಕೆ ಕೈಹಾಕಿದವರೆಲ್ಲರೂ ಬಹುಮಟ್ಟಿಗೆ ರಾಜಾಶ್ರಯದಲ್ಲಿದ್ದವರು. ಇವರ ಹೆಗ್ಗುರಿ ರಾಜಾನುಗ್ರಹ ಮತ್ತು ರಾಜಾಸ್ಥಾನ ಪಂಡಿತರ ಮೆಚ್ಚುಗೆ. ಇವರ ಕಾವ್ಯರಚನೆಗೆ ಸಂಸ್ಕೃತ ಕಾವ್ಯಗಳು ಆಧಾರ. ವಸ್ತುರೀತಿಗಳಲ್ಲಿ, ಭಾವ ಭಾಷೆಗಳಲ್ಲಿ ಇವರದು ಸಂಸ್ಕೃತ ಕಾವ್ಯಗಳ ಅನುಕರಣ. ಪಾಂಡಿತ್ಯ ಹೆಪ್ಪುಗಟ್ಟಿ ಕುಳಿತಿದ್ದ ಈ ಕಾವ್ಯಗಳು ಶ್ರೀಸಾಮಾನ್ಯನಿಗೆ ಎಟುಕುವಂತಿರಲಿಲ್ಲ. ಅವುಗಳ ಭಾಷಾಶೈಲಿಗಳಲ್ಲಿ ಪರಿಷ್ಕರಣವಾಗಬೇಕೆಂಬ ಕೂಗು ಕವಿರಾಜಮಾರ್ಗ ಕರ್ತೃವಿನ ಕಾಲದಿಂದಲೂ ಇತ್ತು. ಅದನ್ನು ಕಾರ್ಯತಃ ನೆರವೇರಿಸಿ, ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯನ್ನುಂಟುಮಾಡಿದ ಕೀರ್ತಿ ವೀರಶೈವ ಕವಿಗಳಿಗೆ ಸಲ್ಲಬೇಕು. ಈ ಕವಿಗಳಿಗೆ ಸ್ಫೂರ್ತಿಯನ್ನು ನೀಡಿದವರು ವೀರಶೈವ ವಚನಕಾರರು.

ವಚನವಾಙ್ಮಯದ ಹುಟ್ಟಿಗೆ ಅಂದಿನ ಕಾಲದ ಸಾಮಾಜಿಕ ಸ್ಥಿತಿಯೂ ಬಹುಮಟ್ಟಿಗೆ ಕಾರಣವಾಗಿದೆ. ಈ ವೇಳೆಗಾಗಲೇ ಕನ್ನಡ ನಾಡಿನಲ್ಲಿ ಜೈನಮತ ಅವನತಿ ಹೊಂದುತ್ತಿತ್ತು. ಅನಾದಿಕಾಲದಿಂದಲೂ ಹರಿದು ಬಂದಿದ್ದ ವೈದಿಕಮತ ತನ್ನ ಸತ್ತ್ವವನ್ನು ಕಳೆದುಕೊಂಡು ಮೂಢನಂಬಿಕೆ, ಅಂಧಶ್ರದ್ಧೆ, ಡಾಂಭಿಕತೆ, ಜಾತೀಯತೆ, ಮಡಿವಂತಿಕೆಗಳಲ್ಲಿ ಮುಳುಗಿಹೋಗಿತ್ತು. ಇದನ್ನು ಪ್ರತಿಭಟಿಸಿ ಸರ್ವಸಮಾನತೆ, ಮಾನವಪ್ರೇಮ, ದೈವಭಕ್ತಿ, ನೈತಿಕ ಜೀವನಗಳಿಗೆ ಸ್ಥಾನಕೊಡುವ ಹೊಸ ಸಮಾಜವೊಂದರ ಸೃಷ್ಟಿ ಅತ್ಯವಶ್ಯವಾಗಿತ್ತು. ಇದರ ಪೂರೈಕೆಯೋ ಎಂಬಂತೆ ಕರ್ನಾಟಕದಲ್ಲಿ ವೀರಶೈವ ಧರ್ಮ ಕಾಣಿಸಿಕೊಂಡಿತು. ಅಧ್ಯಾತ್ಮ ಜ್ಞಾನವೆಲ್ಲ ಸಂಸ್ಕೃತದಲ್ಲಿದ್ದುದರಿಂದ ಅದು ಶ್ರೀಸಾಮಾನ್ಯನ ಸ್ವತ್ತಾಗುವಂತೆ ಮಾಡಲು ವಚನವಾಙ್ಮಯ ಹುಟ್ಟಿಕೊಂಡಿತು.

ಅಧ್ಯಾತ್ಮ, ಧರ್ಮ, ನೀತಿಗಳ ನಿರೂಪಣೆ ವಚನಗಳ ತಿರುಳು. ಚಿಲುಮೆಯಿಂದ ನೀರು ಉಕ್ಕುವಂತೆ ಸಂತರ ಅನುಭವದಿಂದ ಅಭಿವ್ಯಕ್ತವಾಗುವ ಈ ವಾಙ್ಮಯಕ್ಕೆ ಪುರಸ್ಕಾರ ದೊರೆತಿರುವುದು ಇಲ್ಲಿನ ಪಾಂಡಿತ್ಯದಿಂದಲ್ಲ. ಧರ್ಮ ದರ್ಶನದಿಂದ ಮಹಾತತ್ತ್ವಗಳು ತಿಳಿಯಾದ ಭಾಷೆಯಲ್ಲಿ ಕಾಣಿಸಿಕೊಂಡಿರುವ ವಚನ ವಾಙ್ಮಯಕ್ಕೆ ಕನ್ನಡದ ಉಪನಿಷತ್ತುಗಳೆಂಬ ಹೆಸರೂ ಬಂದಿದೆ. ಸರಳ ಹಾಗೂ ಶಕ್ತಿಯುತವಾದ ಈ ವಾಙ್ಮಯ ಕನ್ನಡಕ್ಕೇ ಮೀಸಲಾದ, ಕನ್ನಡಕ್ಕೆ ಹೆಗ್ಗಳಿಕೆಯನ್ನು ತಂದುಕೊಟ್ಟಿರುವ, ಕನ್ನಡಿಗರ ಹಿರಿಯ ಸ್ವತ್ತು. ಇದರ ವಸ್ತು ರೀತಿಗಳು ಭಾವಭಾಷೆಗಳು ಕನ್ನಡ ನೆಲದಲ್ಲಿ ಹುಟ್ಟಿ ಅಪ್ಪಟ ಕನ್ನಡತನದಿಂದ ತುಂಬಿವೆ. ಈ ಕಾಲವನ್ನು ಕನ್ನಡ ಸಾಹಿತ್ಯದ ಪ್ರಜಾಪ್ರಭುತ್ವದ ಕಾಲ ಎಂದು ಕರೆದರೆ ತಪ್ಪಾಗಲಾರದು. ಸರ್ವಸಮತೆಯನ್ನು ಸಾರಿದ ವೀರಶೈವಧರ್ಮ ಎಲ್ಲ ಜಾತಿ, ಧರ್ಮ, ಪಂಥದ ಜನರಿಗೂ ತನ್ನ ಧರ್ಮಧ್ವಜದ ಅಡಿಯಲ್ಲಿ ಎಡೆಯಿತ್ತಿತು. ಗಂಡು ಹೆಣ್ಣುಗಳೆಂಬ ಭೇದಭಾವವಿಲ್ಲದೆ ಎಲ್ಲರೂ ಸತ್ಯ ಸಾಕ್ಷಾತ್ಕಾರಕ್ಕೆ ಅವಕಾಶ ಪಡೆದರು. ಬ್ರಾಹ್ಮಣನಿಂದ ಶೂದ್ರನವರೆಗೆ ಎಲ್ಲರೂ ಅನುಭಾವಿಗಳಾಗಿ ತಮಗೆ ಸ್ಫುರಿಸಿದುದನ್ನು ವಚನರೂಪದಲ್ಲಿ ಅಭಿವ್ಯಕ್ತಿಸಿದರು. ನೂರಾರು ಜನ ವಚನಕಾರರು ಏಕಕಾಲದಲ್ಲಿ ಕಾಣಿಸಿಕೊಂಡರು. ಇವರು ಕಾಯಕಕ್ಕೆ ಮನ್ನಣೆಯನ್ನು ಕೊಟ್ಟರೇ ಹೊರತು ಜಾತಿಗಲ್ಲ, ಐಶ್ವರ್ಯಕ್ಕಲ್ಲ, ಅಧಿಕಾರಕ್ಕಲ್ಲ. ಶೂನ್ಯಸಿಂಹಾನದ ಮೇಲೆ ಮಂಡಿಸಿದ್ದ ಪ್ರಭುದೇವನ ಅನುಭವಮಂಟಪದಲ್ಲಿ ಈ ವಚನಗಳು ಒಪ್ಪಿಗೆಯ ಮುದ್ರೆಯನ್ನು ಪಡೆದವು. ಈ ವಚನಕಾರರೆಲ್ಲರ ಆದರ್ಶ ಆಶೋತ್ತರಗಳು ಒಂದೇ ಆಗಿದ್ದರೂ ಅವರ ಬುದ್ಧಿ, ಜ್ಞಾನ, ಸಂಸ್ಕಾರ, ಸಂಸ್ಕೃತಿ, ಪ್ರತಿಭೆಗಳಲ್ಲಿ ಸಾಕಷ್ಟು ಏರುಪೇರುಗಳಿರುವುದು ಸಹಜವಾಗಿಯೆ ಇದೆ. ಆದ್ದರಿಂದ ವಚನವಾಙ್ಮಯದಲ್ಲಿ ಸಾಕಷ್ಟು ಭಾಗ ಸಂಪ್ರದಾಯಶೀಲವಾಗಿ, ಅನುಕರಣ ಲೋಲವಾಗಿ ಚರ್ವಿತಚರ್ವಣವಾಗಿದೆ.

ಮಾದಾರ ಚನ್ನಯ್ಯ, ಡೋಹರಕಕ್ಕಯ್ಯ ಕೊಂಡುಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ ಇವರು ಆದ್ಯವಚನಕಾರರೆಂದು ಕೇಳಿಬರುತ್ತದೆ. ದೇವರ ದಾಸಿಮಯ್ಯನ ವಚನಗಳ ಮುಖ್ಯ ಲಕ್ಷಣ ಪ್ರಾಸಾದಿಕ ಗುಣ. ಬಸವಣ್ಣನ ಸಮಕಾಲೀನನಾದರೂ ಆತನಿಗಿಂತ ಹಿರಿಯನೆನಿಸಿದ ಸಕಲೇಶ ಮಾದರಸನ ವಚನಗಳು ಹೆಚ್ಚು ಸೂತ್ರಬದ್ಧವಾಗಿ ಮಾರ್ಮಿಕವಾಗಿವೆ. ವಚನಕಾರರ ಸಾಲಿನಲ್ಲಿ ಪ್ರಭುದೇವ ಅತ್ಯುನ್ನತ ಸ್ಥಾನವನ್ನು ಗಳಿಸಿದ್ದಾನೆ. ಈತನ ನುಡಿಗಳು ಪ್ರಾಮಾಣಿಕವಾದುವು, ಸತ್ಯನಿಷ್ಠವಾದುವು, ನಿರ್ದಾಕ್ಷಿಣ್ಯವಾದವು. ಬಸವಣ್ಣ ಈ ಯುಗದ ಮಹತ್ತ್ವದ ವಚನಕಾರ. ಈತ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಕ್ರಾಂತಿಯ ನೇತಾರನೂ ಹೌದು. ಪ್ರಭುದೇವನದು ಜ್ಞಾನಮಾರ್ಗವಾದರೆ ಬಸವಣ್ಣನದು ಭಕ್ತಿಮಾರ್ಗ. ಮಾನವ ಬಯಸಬಹುದಾದ ಅಧಿಕಾರ, ಐಶ್ವರ್ಯ, ಕಾಮಿನಿ, ಕೀರ್ತಿ, ರೂಪು, ಯೌವನ, ವೈಭವಗಳ ಮಧ್ಯದಲ್ಲಿಯೂ ಈತನ ಚೇತನ ಊರ್ಧ್ವಮುಖವಾಯಿತು. ಸಾಧನೆಯ ಹೆದ್ದಾರಿಯಲ್ಲಿ ಹೆಜ್ಜೆ ಹೆಜ್ಜೆಯಾಗಿ ಮುಂದುವರೆದು ಈತ ಹೇಗೆ ದೇವಮಾನವನಾದನೆಂಬುದು ಈತನ ವಚನಗಳಲ್ಲಿ ಒಡಮೂಡಿದೆ. ಸಮಾಜದ ಕೊಳೆಕಸಗಳನ್ನು, ಅಂಧಕಾರ ಅಜ್ಞಾನಗಳನ್ನು, ಓರೆಕೋರೆಗಳನ್ನು ಕಂಡು ಬಸವಣ್ಣ ಕನಿಕರಯುಕ್ತವಾದ ರೋಷ ಉಕ್ಕಿ ಅವುಗಳನ್ನು ಖಂಡಿಸಿದ್ದಾನೆ. ಈತನ ಬೋಧನಾವಿಧಾನ ಸುಂದರವಾದ ಸಾಹಿತ್ಯದ ರೂಪದಲ್ಲಿದೆ.

ವೀರಶೈವ ಧರ್ಮದ ಉದಾರ ತತ್ತ್ವದಿಂದ ಮೂಡಿಬಂದ ಹಲವು ವಚನಕಾರ್ತಿಯರಲ್ಲಿ ಮಹಾದೇವಿಯಕ್ಕ ಅಗ್ರಗಣ್ಯಳು. ಬಸವಣ್ಣನ ವಚನಗಳಂತೆ ಈಕೆಯ ವಚನಗಳೂ ಸತ್ತ್ವಯುಕ್ತವಾಗಿ ಸಾಹಿತ್ಯಮಯವಾಗಿ, ಭಾವಗೀತೆಯ ಮಾಧುರ್ಯದಿಂದ ತುಂಬಿವೆ. ಮುಕ್ತಾಯಕ್ಕ, ಮಹಾದೇವಿಯಮ್ಮ, ಲಕ್ಕಮ್ಮ ಮೊದಲಾದ ವಚನಕಾರ್ತಿಯರ ಹೆಸರುಗಳೂ ಇಲ್ಲಿ ಸ್ಮರಣಾರ್ಹವಾದುವು.

ಈ ಯುಗದಲ್ಲಿ ವಚನ ರಚನೆಗೆ ಕೈಹಾಕಿದ ವಚನಕಾರರ ಸಂಖ್ಯೆ ಅಪರಿಮಿತ. ಅವರಲ್ಲಿ ಚೆನ್ನಬಸವಣ್ಣ, ಆದಯ್ಯ, ಹಡಪದ ಅಪ್ಪಣ, ಮಡಿವಾಳ ಮಾಚಯ್ಯ, ಸೊಡ್ಡಳಬಾಚರಸ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ, ಮೇದರ ಕೇತಯ್ಯ, ಕೋಲ ಶಾಂತಯ್ಯ ಮೊದಲಾದ ಸಂತರು ತಮ್ಮ ವಚನ ರಚನೆಯಿಂದ ಕನ್ನಡದ ಆಧ್ಯಾತ್ಮಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

**ಹರಿಹರ ಯುಗ :** 12ನೆಯ ಶತಮಾನದ ಉತ್ತರಾರ್ಧದಿಂದ ಮುಂದಕ್ಕೆ ನಡೆದ ಸಾಹಿತ್ಯ ಸೃಷ್ಟಿಯಲ್ಲಿ ವಚನಕಾರರ ಪ್ರಭಾವ ನಿಚ್ಚಳವಾಗಿ ಕಂಡುಬರುತ್ತದೆ. ಇದೇ ಕಾಲದಲ್ಲಿ ಪಂಪ ಹರಿಯಬಿಟ್ಟ ಚಂಪುವಿನ ಚಕ್ರ ಮುಂದುವರಿಯುತ್ತ ಹೋಯಿತಾದರೂ ಶುದ್ಧ ಕನ್ನಡದ ದೇಶೀ ಶೈಲಿಯಲ್ಲಿ ಕನ್ನಡ ಕಾವ್ಯರಚನೆಯನ್ನು ಮಾಡುವ ಒಂದು ಹೊಸ ಹೆದ್ದಾರಿಯೂ ಆಗ ಹುಟ್ಟಿಕೊಂಡಿತು. ಭಾವ ಭಾಷೆ ವಸ್ತು ರೀತಿಗಳಲ್ಲಿ ಹಿಂದಿನ ಕಾವ್ಯಗಳಿಂದ ಭಿನ್ನವಾಗಿ ಸರ್ವತಂತ್ರಸ್ವತಂತ್ರವಾದ ಚಿರನೂತನತೆಯನ್ನು ಮೆರೆದು ಅದ್ಭುತ ಕ್ರಾಂತಿಯೊಂದನ್ನು ನಡೆಸಿ ಕನ್ನಡ ಸಾಹಿತ್ಯದ ಸ್ವತಂತ್ರಯುಗವೊಂದನ್ನು ಸ್ಥಾಪಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾ ಕಲ್ಯಾಣ, ಶಿವಶರಣರ ರಗಳೆಗಳು ಇವು ಈತನ ಕಾವ್ಯಗಳು.

'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠವಿರ ಮೇಲೆ ಅಕ್ಕಟಾ ತನತನಗಿಂದ್ರಚಂದ್ರರವಿಕರ್ಣದಧೀಚಿಬಲೀಂದ್ರರೆಂದು ಮೇಣ್ ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ ನೆನೆ ಪೊಗಳರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ' ಎಂಬ ಮಾತುಗಳಲ್ಲಿ ಊಳಿಗದಲ್ಲಿ ಈತನಿಗಿದ್ದ ಜಿಹಾಸೆಯೊಡನೆ ಪಂಪಯುಗದ ಸಾಹಿತ್ಯ ಸ್ವರೂಪದ ಖಂಡನೆಯೂ ಕಂಡುಬರುತ್ತದೆ. ಈತನ ಸ್ವತಂತ್ರ ಮನೋವೃತ್ತಿ ಇಲ್ಲಿ ಸೂಚಿತವಾಗಿದೆ. ರಾಜಮಹಾರಾಜರನ್ನು ಕುರಿತು, ಮಹಾಕವಿಗಳನ್ನು ಕುರಿತು ನಡೆಯುತ್ತಿದ್ದ ಕಾವ್ಯರಚನೆ ಸಾಮಾನ್ಯವ್ಯಕ್ತಿಗಳನ್ನು ಕುರಿತು ನಡೆಯುವಂತಾದುದು ಹರಿಹರನಿಂದ. ಈತನ ಗಿರಿಜಾಕಲ್ಯಾಣದ ಕಥಾವಸ್ತು ಮತ್ತು ನಿರೂಪಣಾ ವಿಧಾನಗಳು ಹಳೆಯವಾದರೂ ಸಂಪ್ರದಾಯಕ್ಕೆ ವಿರುದ್ಧವಾಗಿ, ಸಿಡಿದೆದ್ದಿರುವ ಆತನ ಸ್ವತಂತ್ರ ಮನೋವೃತ್ತಿ ಇಲ್ಲಿ ಕಂಡುಬರುತ್ತದೆ. ಈತನ ಈ ಸ್ವತಂತ್ರ ಮನೋವೃತ್ತಿ ಸಂಪೂರ್ಣ ಅರಳಿರುವುದು ಇವನ ರಗಳೆಗಳಲ್ಲಿ.

ಹರಿಹರ ಬಳಸಿದ ರಗಳೆಯ ಛಂದಸ್ಸು ಒಂದು ರೀತಿಯಲ್ಲಿ ಅಚ್ಚ ಕನ್ನಡದ್ದು. ಸಾಹಿತ್ಯದಲ್ಲಿ ಕ್ವಚಿತ್ತಾಗಿ ಬಳಕೆಯಲ್ಲಿದ್ದ ಆ ಛಂದಸ್ಸನ್ನು ಸಮಗ್ರ ಗ್ರಂಥರಚನೆಗೆ ಬಳಸಿಕೊಂಡ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ರಗಳೆಗಳನ್ನು ಸ್ಥೂಲವಾಗಿ ಭಾವಗೀತಾತ್ಮಕ ಮತ್ತು ಕಥನಾತ್ಮಕ ಎಂದು ವಿಭಾಗಿಸಬಹುದು. ಕವಿಯ ಭಾವಗೀತಾತ್ಮಕ ರಗಳೆಗಳಲ್ಲಿ ವಿಭೂತಿ,

ರುದ್ರಾಕ್ಷಿ ಮೊದಲಾದವುಗಳ ಮಹಾತ್ಮೆಗಳು ವಸ್ತುನಿಷವಿ. ಪಿಂಡೋತ್ಪತ್ತಿ, ಪುಷ್ಪ ಇತ್ಯಾದಿ ಕೆಲವು ವ್ಯಕ್ತಿನಿಷ್ಠ ಈ ವ್ಯಕ್ತಿನಿಷ್ಠವಿವಾದವುಗಳಲ್ಲಿ ಹರಿಹರನ ಆತ್ಮಕಥೆ ಸ್ವಲ್ಪಮಟ್ಟಿಗೆ ಸೇರಿಕೊಂಡಿದೆ. ಕಥನಾತ್ಮಕವಾದ ರಗಳೆಗಳು ವೀರಶೈವ ಧರ್ಮದ 63 ಪುರಾತನರ ಕಥೆಗಳನ್ನೂ ಬಸವಾದಿ ಪ್ರಮಥರ ಕಥೆಗಳನ್ನೂ ಒಳಗೊಂಡಿದೆ. ಈತನ ಕಥನಾತ್ಮಕ ರಗಳೆಗಳಲ್ಲಿ ಕಾಣಬರುವ ಜಗತ್ತು ವಿಶಾಲವಾಗಿ, ವೈವಿಧ್ಯಮಯವಾಗಿದೆ. ಅಮಿತ ಉತ್ಸಾಹದಿಂದ ಹೊರಹೊಮ್ಮಿದ ಕಥಾಪ್ರವಾಹ ಉತ್ಸಾಹಶೈಲಿಯ ತುಂಬುನೆಲೆಯಲ್ಲಿ ಓದುಗರನ್ನು ಸೆಳೆದೊಯ್ಯುತ್ತದೆ. ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ ಮುಂತಾದವುಗಳಲ್ಲಿ ಬರುವ ಭಕ್ತಿಯ ವರ್ಣನೆ ನಮ್ಮನ್ನು ಭವ್ಯತೆಗೆ ಒಯ್ಯುತ್ತದೆ. ಕಥೆ ದೀರ್ಘವಾದಾಗ ಅದನ್ನು ಸ್ಥಲಗಳಾಗಿ ವಿಂಗಡಿಸಿ ಒಂದು ಸ್ಥಲವನ್ನು ರಗಳೆಯಲ್ಲೂ ಮತ್ತೊಂದನ್ನು ಗದ್ಯದಲ್ಲೂ ಬರೆಯುತ್ತಾನೆ. ಈತನ ಗದ್ಯವೆಂದರೆ ಚಂಪೂ ಗದ್ಯವಲ್ಲ; ವಚನಕಾರರು ಬಳಸಿರುವ ಹೃದ್ಯವಾದ ಗದ್ಯ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗದ್ಯ ಬಳಕೆಯಲ್ಲಿ ಈತನೊಂದು ಮೈಲಿಗಲ್ಲು.

ಸ್ವತಂತ್ರಯುಗಪ್ರವರ್ತಕನಾದ ಹರಿಹರನ ಕಾರ್ಯವನ್ನು ಅತ್ಯಂತ ಸಮರ್ಥವಾಗಿ ಮುಂದುವರಿಸಿದ ಕೀರ್ತಿ ಈತನ ಸೋದರಳಿಯನೂ ಶಿಷ್ಯನೂ ಆದ ರಾಘವಾಂಕನಿಗೆ (ಸು.1225) ಸಲ್ಲುತ್ತದೆ. ರಾಘವಾಂಕನಿಗಿಂತಲೂ ಮುಂಚೆಯೇ ಷಟ್ಪದಿ ಛಂದಸ್ಸಿನ ಬಳಕೆ ಕ್ವಚಿತ್ತಾಗಿ ಕಂಡುಬರುತ್ತಿದ್ದಿತಾದರೂ ಶುದ್ಧ ದೇಶೀಯ ಛಂದಸ್ಸಾದ ಇದರಲ್ಲಿ ಅಖಂಡ ಕಾವ್ಯಸೃಷ್ಟಿ ಮಾಡ ಹೊರಟವರಲ್ಲಿ ರಾಘವಾಂಕನೇ ಮೊದಲಿಗ. ಈತನ ಹರಿಶ್ಚಂದ್ರ ಕಾವ್ಯ ಈ ಯುಗದಲ್ಲಿ ಮೂಡಿಬಂದ ಒಂದು ಉತ್ಕೃಷ್ಟ ಕೃತಿ. ಈ ಕಾವ್ಯದಿಂದ ರಾಘವಾಂಕ ಷಟ್ಪದಿಯುಗಕ್ಕೆ ನಾಂದಿ ಹಾಡಿದನೆನ್ನಬಹುದು. ಮುಂದೆ ಬಂದ ಕವಿಗಳು ಈತನಿಂದ ಪ್ರಭಾವಿತರಾಗಿ ಇವನನ್ನು ಅನುಸರಿಸಿರುವುದು ಕಂಡುಬರುತ್ತದೆ.

ಹರಿಹರ ಹರಿಯಬಿಟ್ಟ ದೇಶೀಯ ಛಂದಸ್ಸು 15ನೆಯ ಶತಮಾನದವರೆಗೆ ಹೆಚ್ಚು ವೇಗವನ್ನು ಪಡೆಯಲಿಲ್ಲ. ರಗಳೆಯ ಛಂದಸ್ಸಿನಲ್ಲಿ ಹರಿಹರ ಅದ್ವಿತೀಯನಾದಂತೆ ಮುಂದಿನ ಯಾವನೇ ಕವಿ ಆಗಲು ಸಾಧ್ಯವಾಗಲಿಲ್ಲ. ರಗಳೆ ಅಂದಿನ ಸಾಹಿತ್ಯ ಪ್ರಕಾರದಲ್ಲಿ ವಿಶಿಷ್ಟವಾಗಿಯೇ ಉಳಿಯಿತು. ಆದರೆ ಷಟ್ಪದಿಯಲ್ಲಿ ಹಲವಾರು ಗ್ರಂಥಗಳು ರಚನೆಗೊಂಡವು. ಕುಮಾರ ಪದ್ಮರಸ (ಸು.1180) ಸಾನಂದ ಚರಿತೆಯನ್ನು ಕುಸುಮ, ಭಾಮಿನೀಷಟ್ಪದಿಗಳಲ್ಲಿ ಬರೆದ. ಪಾಲ್ಕುರಿಕೆ ಸೋಮನಾಥ (ಸು.1200) ಹಲವು ಸ್ತೋತ್ರರೂಪದ ಪುಟ್ಟ ಕೈಹೊತ್ತಿಗೆಗಳನ್ನು ರಗಳೆಯಲ್ಲಿ ಬರೆದಿದ್ದಾನೆ. ಕುಮುದೇಂದು (ಸು.1275) ಎಂಬ ಜೈನಕವಿ ಮೊಟ್ಟಮೊದಲ ಬಾರಿಗೆ ತನ್ನ ರಾಮಾಯಣವನ್ನು ಷಟ್ಪದಿಯಲ್ಲಿ ಬರೆದ. ಈಗ ಉಪಲಬ್ಧವಾಗಿರುವ ಈ ಕಾವ್ಯದ ನಾಲ್ಕು ಸಂಧಿಗಳಲ್ಲಿ ಒಂದೊಂದೂ ಒಂದೊಂದು ಬಗೆಯಾದ ಷಟ್ಪದಿಯಲ್ಲಿವೆ. ಭೀಮಕವಿ (ಸು.1370) ಪಾಲ್ಕುರಿಕೆ ಸೋಮನಾಥನ ಬಸವಪುರಾಣವನ್ನು ಭಾಮಿನೀಷಟ್ಪದಿಯಲ್ಲಿ ಕನ್ನಡಕ್ಕೆ ತಂದುಕೊಟ್ಟ ಲಲಿತವಾದ ಶೈಲಿಯಲ್ಲಿರುವ ಈ ಗ್ರಂಥ ಮುಂದಿನ ವೀರಶೈವ ಪುರಾಣಕರ್ತೃಗಳಿಗೆ ಮಾರ್ಗದರ್ಶಕವಾಯಿತು. ಈತ ನೂರೆಂಟು ಚರಣಗಳ ಭೀಮೇಶ್ವರ ರಗಳೆಯನ್ನೂ ಬರೆದಿದ್ದಾನೆ. ಪದ್ಮಣಾಂಕನ (ಸು.1420) ಪದ್ಮರಾಜಪುರಾಣ ಕೆರೆಯ ಪದ್ಮರಸನ ಜೀವನಕಥೆಯನ್ನೊಳಗೊಂಡಿದ್ದು ವಾರ್ಧಕ ಷಟ್ಪದಿಯಲ್ಲಿದೆ. ಆದರೆ ದೇಶೀ ಛಂದಸ್ಸಿನಲ್ಲಿರುವ ಈ ಗ್ರಂಥದಲ್ಲಿ ಮಾರ್ಗೀಶೈಲಿಯನ್ನು ಬಳಸಲಾಗಿದೆ.

ಈ ಯುಗದಲ್ಲಿ ಕಾಣಿಸಿಕೊಂಡ ಮತ್ತೊಂದು ಸಾಹಿತ್ಯ ಪ್ರಕಾರವಾದ ದಾಸವಾಙ್ಮಯ ಹಲವು ದೃಷ್ಟಿಯಿಂದ ಗಮನಾರ್ಹವಾದುದು. 12ನೆಯ ಶತಮಾನದ ಧಾರ್ಮಿಕ ಕ್ರಾಂತಿ ಸನಾತನವಾದ ವೈದಿಕಧರ್ಮವನ್ನು ಬುಡಮಟ್ಟ ಅಲ್ಲಾಡಿಸಿದಾಗ ಜನ ಸಾಮಾನ್ಯರು ತಂಡತಂಡವಾಗಿ ವೀರಶೈವಧರ್ಮವನ್ನು ಅವಲಂಬಿಸಿದರು; ಅದನ್ನು ಕಂಡು ವೈದಿಕಧರ್ಮ ಅಳಿದು ಹೋಗುವುದೆಂಬ ಭಯ ವೈದಿಕರಿಗೆ ಹುಟ್ಟಿರಬೇಕು. ವೀರಶೈವಧರ್ಮ ತನ್ನ ಅನುಭವಮಂಟಪ, ಶೂನ್ಯ ಸಿಂಹಾಸನಗಳ ಸ್ಥಾಪನೆಯಿಂದ ಸಂಘಟಿತವಾಗಿ ವಚನಗಳ ಪ್ರಚಾರ ಪ್ರಸಾರಗಳ ಮೂಲಕ ಜನಮನವನ್ನು ಆಕರ್ಷಿಸಿದುದನ್ನು ಕಂಡು, ಅಂಥದೆ ಒಂದು ಉಪಾಯದಿಂದ ಹರಿವ ಹೊಳೆಗೆ ಅಡ್ಡಗಟ್ಟೆ ಹಾಕುವ ಕಾರ್ಯ ವೈದಿಕರಿಗೆ ಅಗತ್ಯವೆನಿಸಿರಬೇಕು. ಇದರ ಫಲವೆ ದಾಸವಾಙ್ಮಯದ ಉದಯ. ವಚನಗಳಲ್ಲಿ ಹರಪಾರಮ್ಯ, ದಾಸರ ಹಾಡುಗಳಲ್ಲಿ ಹರಿಪಾರಮ್ಯ; ಅಲ್ಲಿನಂತೆ ಇಲ್ಲಿಯೂ ಭಕ್ತಿಗೆ ಪ್ರಥಮಸ್ಥಾನ; ಧರ್ಮಪ್ರಚಾರಕ್ಕೆ ಎರಡು ಕಡೆಯೂ ಜನರ ನುಡಿಯೇ ವಾಹಕ; ಅಲ್ಲಿ ಕಾವ್ಯಮಯವಾದ ಗದ್ಯದಲ್ಲಿ ವಚನಗಳನ್ನು ಹಾಡಿದರೆ, ಇಲ್ಲಿ ಕೀರ್ತನೆ ನರ್ತನಗಳು; ಶೂನ್ಯಸಿಂಹಾಸನ ಅನುಭವ ಮಂಟಪಗಳಿಗೆ ಬದಲು ವ್ಯಾಸಕೂಟ ದಾಸಕೂಟಗಳು ನಿರ್ಮಾಣಗೊಂಡವು. ವಚನಕಾರರಂತೆ ಹರಿದಾಸರೂ ತಮ್ಮ ಇಷ್ಟದೈವವನ್ನು ಕೃತಿಗಳಲ್ಲಿ ಅಂಕಿತವಾಗಿ ಬಳಸಿದರು; ಎರಡರ ಹೆಗ್ಗುರಿಯೂ ಧರ್ಮತತ್ತ್ವ ಪ್ರತಿಪಾದನೆ ಮತ್ತು ಪ್ರಚಾರ; ಸಂಸ್ಕೃತದಲ್ಲಿದ್ದ ಆಧ್ಯಾತ್ಮಿಕ ತತ್ತ್ವಗಳನ್ನು ಜನರ ಮಾತಿನಲ್ಲಿ ಅಳವಡಿಸಿಕೊಂಡು ಮನೆ ಮನೆಗೂ ಕೊಂಡೊಯ್ದು ಹಂಚುವ ಸತ್ಕಾರ್ಯದಲ್ಲಿ ಈ ಎರಡೂ ಬಗೆಯ ವಾಙ್ಮಯಗಳಿಗೆ ಸಮಾನವಾದ ಪ್ರಶಸ್ತಿ ಸಲ್ಲುತ್ತದೆ. ದ್ವೈತಮತ ಸ್ಥಾಪಕರಾದ ಮಧ್ವಾಚಾರ್ಯರೆ ದಾಸಪಂಥಕ್ಕೆ ಮೂಲಪುರುಷರೆಂದು ಹೇಳಲಾಗುತ್ತದೆ. ಅವರು ಪಶ್ಚಿಮ ಸಮುದ್ರತೀರದಿಂದ ಚಂದನದ ಗೆಡ್ಡೆಗಳನ್ನು ಉಡುಪಿಗೆ ಹೊತ್ತು ತರುತ್ತ ಆನಂದ ಮುಕುಂದ ಅರವಿಂದ ನಯನ ಇತ್ಯಾದಿಯಾಗಿ ಹಾಡಿದ ದ್ವಾದಶಸ್ತೋತ್ರಗಳೇ ದಾಸವಾಙ್ಮಯದ ಮೂಲವೆಂಬ ಅಭಿಪ್ರಾಯವಿದೆ. ಕನ್ನಡದಲ್ಲಿ ಕೀರ್ತನೆಗಳನ್ನು ಮೊದಲು ಕಟ್ಟಿ ಹಾಡಿದವರು ನರಹರಿತೀರ್ಥರು (ಸು.1280). ಇವರ ಎರಡು ಕೃತಿಗಳು ಮಾತ್ರ ಈಗ ಉಪಲಬ್ಧವಾಗಿವೆ.

ಹರಿಹರ ದೇಶೀ ಶೈಲಿಯ ಹೊಸ ಹೆದ್ದಾರಿಯೊಂದನ್ನು ನಿರ್ಮಿಸುತ್ತಿರುವಾಗಲೇ ಹೆಚ್ಚು ಕಡಿಮೆ ಆತನ ಸಮಕಾಲೀನರೆನಿಸಿದ ನೇಮಿಚಂದ್ರ (12ನೆಯ ಶತಮಾನ), ರುದ್ರಭಟ್ಟ (ಸು.1185), ಅಗ್ಗಳ (12ನೆಯ ಶತಮಾನ), ಆಚಣ್ಣ (ಸು.1200), ಕವಿಕಾಮ (ಸು.1200), ಬಂಧುವರ್ಮ (ಸು.1200) ಮೊದಲಾದ ಕವಿಗಳು ಚಂಪೂ ಸಂಪ್ರದಾಯವನ್ನು ಮುಂದುವರಿಸುತ್ತಿದ್ದರು. ಇವರೆಲ್ಲರೂ ರಾಜಾಶ್ರಿತರೇ. ನೇಮಿಚಂದ್ರ ರಟ್ಟವಂಶದ ಲಕ್ಷ್ಮಣರಾಜನ ಆಶ್ರಯದಲ್ಲಿ ಲೀಲಾವತಿಯನ್ನೂ ಬಲ್ಲಾಳರಾಜನ ಪಡೆವಳ ಪದ್ಮನಾಭನ ಆಶ್ರಯದಲ್ಲಿ ನೇಮಿನಾಥ ಪುರಾಣವನ್ನೂ ಬರೆದ. ರುದ್ರಭಟ್ಟ ವೀರಬಲ್ಲಾಳನ ಮಂತ್ರಿ ಚಂದ್ರಮೌಳಿಯನ್ನು ಆಶ್ರಯಿಸಿ ಜಗನ್ನಾಥ ವಿಜಯವನ್ನು ಬರೆದಿದ್ದಾನೆ. ಶ್ರೀಕೃಷ್ಣನ ಜನನದಿಂದ ಬಾಣಾಸುರನ ವಧೆಯವರೆಗಿನ ಭಾಗವತ ಕಥೆ ಇಲ್ಲಿದೆ. ರುದ್ರಭಟ್ಟ ರಸಾಸ್ವಾದನೆಗಿಂತ ಪಾಂಡಿತ್ಯಾರ್ಜನೆಗೆ ಹೆಚ್ಚು ಗಮನ ನೀಡಿದ್ದಾನೆ. ನಿರ್ವಾಣ ಲಕ್ಷ್ಮೀಪತಿ ನಕ್ಷತ್ರಮಾಲಿಕೆ, ಗೊಮ್ಮಟಸ್ತುತಿ ಎಂಬ ಜಿನಸ್ತೋತ್ರಗಳನ್ನು ಬೊಪ್ಪಣಪಂಡಿತ ಬರೆದಿದ್ದಾನೆ. ಇವುಗಳಲ್ಲಿ ಅಸಾಧಾರಣವಾದ ಕವಿತಾಶಕ್ತಿ ಕಂಡುಬರುವುದರಿಂದ ಈತ ಉದ್ಗ್ರಂಥಗಳನ್ನೂ ಬರೆದಿರಬಹುದು. ಆದರೆ ಅವು ಉಪಲಬ್ಧವಾಗಿಲ್ಲ. ಅಗ್ಗಳ ಕವಿಯ ಚಂದ್ರಪ್ರಭಪುರಾಣ ಮತ್ತು ಆಚಣ್ಣನ ವರ್ಧಮಾನಪುರಾಣ ಇವೆರಡೂ ಸಂಸ್ಕೃತ ಭೂಯಿಷ್ಠವಾಗಿ ಪ್ರೌಢವಾಗಿವೆ. ಇವೆರಡೂ ತೀರ್ಥಂಕರರ ಕಥೆಗಳೆಂದು ಗೌರವಾರ್ಹವಾದವು. ಕವಿಕಾಮನ ಶೃಂಗಾರರತ್ನಾಕರ ಅಥವಾ ರಸವಿವೇಕ ರಸಪ್ರಕರಣವನ್ನು ವಿವರಿಸಹೊರಟ ಮೊದಲ ಗ್ರಂಥ. ಹರಿವಂಶಾಭ್ಯುದಯ, ಜೀವಸಂಬೋಧನೆಗಳನ್ನು ಬಂಧುವರ್ಮ ಬರೆದಿದ್ದಾನೆ. ಹರಿವಂಶಾಭ್ಯುದಯ 22ನೆಯ ತೀರ್ಥಂಕರನ ಕಥೆ. ಕಥೆ ಹಳೆಯದಾದರೂ ನಿರೂಪಣೆ ನವೀನವಾಗಿದೆ. ಜೀವಸಂಬೋಧನೆ ದ್ವಾದಶಾನುಪ್ರೇಕ್ಷೆಗಳ ಕನ್ನಡ ನಿರೂಪಣೆ. ಇದು ವೈರಾಗ್ಯ ಬೋಧಕವಾದರೂ ಲಲಿತಸುಂದರವಾಗಿದೆ.

13ನೆಯ ಶತಮಾನದ ಕವಿಗಳಲ್ಲಿ ಜನ್ನ (ಸು.1300) ಅಗ್ರಗಣ್ಯನಾದವನು. ಈತನ ಅನಂತನಾಥಪುರಾಣ ಜೈನಪುರಾಣಗಳ ಹಾದಿಯಲ್ಲೇ ಸಾಗುವ ಪ್ರೌಢಕಾವ್ಯವಾದರೂ ಗ್ರಂಥದ ಅಂತ್ಯದಲ್ಲಿ ಬರುವ ಸುನಂದೆ ಚಂಡಶಾಸನರ ಉಪಾಖ್ಯಾನ ಕಾವ್ಯದೃಷ್ಟಿಯಿಂದ ಅತ್ಯಂತ ರಮ್ಯವಾಗಿದೆ. ಈತನ ಮತ್ತೊಂದು ಕಾವ್ಯ ಯಶೋಧರಚರಿತೆ. ವಾದಿರಾಜನ ಸಂಸ್ಕೃತ ಯಶೋಧರಚರಿತೆ ಇದಕ್ಕೆ ಆಕರ. ಸಂಪೂರ್ಣವಾಗಿ ಕಂದದಲ್ಲಿ ರಚಿತವಾಗಿರುವ ಈ ಕೃತಿ ಜಿನಮತದ ಮುಖ್ಯ ತತ್ತ್ವವಾದ ಪ್ರಾಣಿದಯೆಯನ್ನು ಬೋಧಿಸುತ್ತದೆ. ಜನ್ನನ ವರ್ಣನಾ ಕೌಶಲ, ಸನ್ನಿವೇಶ ರಚನಾಸಾಮರ್ಥ್ಯ, ಪಾತ್ರಸೃಷ್ಟಿಯಲ್ಲಿ ಕಾಣಬರುವ ಕವಿಪ್ರತಿಭೆ ಇವನ ಕವಿಚಕ್ರವರ್ತಿಯೆಂಬ ಬಿರುದನ್ನು ಸಾರ್ಥಕಗೊಳಿಸಿವೆ. ಈ ಧರ್ಮಗ್ರಂಥ ಗಳೆರಡರಲ್ಲಿಯೂ ಪ್ರಣಯಜೀವನದ ಎರಡು ಮುಖಗಳು ಉಜ್ಜ್ವಲವಾಗಿ ಚಿತ್ರಿತವಾಗಿವೆ. ಅಮೃತಮತಿ ಮನ್ಮಥನಂಥ ಗಂಡ ಯಶೋಧರನನ್ನು ಬಿಟ್ಟು ಅಷ್ಟಾವಂಕನಂಥ ಪರಮಕುರೂಪಿಯಲ್ಲಿ ಅನುರಕ್ತಳಾಗಿ ದುರಂತವನ್ನು ಅಪ್ಪಿದರೆ, ಚಂಡಶಾಸನ ತನ್ನ ಪ್ರಿಯಸ್ನೇಹಿತ ವಸುಷೇಣನ ಹೆಂಡತಿ ಸುನಂದೆಯಲ್ಲಿ ಮೋಹಗೊಂಡು ಅವಳನ್ನು ಕದ್ದೊಯ್ದು ದುರಂತಕ್ಕೀಡಾಗುತ್ತಾನೆ. ಈ ಎರಡೂ ಕಾವ್ಯಗಳಲ್ಲಿರುವ ಮೂಲತತ್ತ್ವ ಒಂದೇ 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎಂಬುದು. ಕಾವ್ಯಧರ್ಮ ಹಾಗೂ ಧರ್ಮದ ಪ್ರತಿಪಾದನೆಯಲ್ಲಿ ಯಶೋಧರ ಚರಿತೆ ಕನ್ನಡದ ಮಹತ್ತ್ವಪೂರ್ಣ ಕಾವ್ಯಗಳಲ್ಲೊಂದಾಗಿದೆ.

ಎರಡನೆಯ ಗುಣವರ್ಮನ (ಸು.1215) ಪುಷ್ಪದಂತ ಪುರಾಣ, ಕಮಲಭವನ (ಸು.1235) ಶಾಂತೀಶ್ವರ ಪುರಾಣ ಇದೇ ಕಾಲದಲ್ಲಿ ರಚಿತವಾದ ಪಾಂಡಿತ್ಯ ಪೂರ್ಣವಾದ ಉದ್ಧಕೃತಿಗಳು. ಎರಡರಲ್ಲಿಯೂ ಪರಂಪರಾಗತವಾದ ವಸ್ತುವಿನ ಚರ್ವಿತಚರ್ವಣವಿದೆ. ಇದರ ಬೇಸರವನ್ನು ನೀಗುವಂತೆ ಇದೇ ಕಾಲದಲ್ಲಿದ್ದ ಆಂಡಯ್ಯ ಕಬ್ಬಿಗರಕಾವವನ್ನು ಬರೆದಿದ್ದಾನೆ. ಕನ್ನಡ ಕವಿಗಳು ಸಂಸ್ಕೃತವನ್ನು ಬಳಸದೆ ಕಾವ್ಯಸೃಷ್ಟಿ ಮಾಡಲಾರರೆಂಬ ಅಪವಾದವನ್ನು ನಿವಾರಿಸುವುದಕ್ಕಾಗಿ ಹುಟ್ಟಿದ ಈ ಕಾವ್ಯಕ್ಕೆ ಕಬ್ಬಿಗರ ಕಾವ (ಕವಿಗಳ ರಕ್ಷಕ) ಎಂದು ನಾಮಕರಣ ಮಾಡಿರುವುದು ಅರ್ಥವತ್ತಾಗಿದೆ. ಇದರಲ್ಲಿ ಸಂಸ್ಕೃತ ಪದಗಳ ಬಳಕೆ ಇಲ್ಲ, ಆದರೆ ತದ್ಭವಗಳು ಹೇರಳವಾಗಿವೆ. ಕವಿಯ ಸ್ವಕಪೋಲಕಲ್ಪಿತವಾದ ಈ ಕಾವ್ಯಕಥೆಯಲ್ಲಿ ಕನ್ನಡ ಭಾಷೆಯ ಬಗ್ಗೆ ಕವಿ ತಾಳಿದ ಅಭಿಮಾನ ಕೆಚ್ಚು ಮೆಚ್ಚುವಂಥದ್ದು.

ವೀರಶೈವಕವಿಯೊಬ್ಬನು ಸ್ವತಂತ್ರ ಯುಗದಲ್ಲಿ ಚಂಪೂಕಾವ್ಯವನ್ನು ರಚಿಸಹೊರಟಿದ್ದು ಸಂಪ್ರದಾಯದ ಮಹತ್ತನ್ನು, ಪ್ರಭಾವವನ್ನು ಸೂಚಿಸುತ್ತದೆ. ಸೋಮರಾಜನ ಉದ್ಭಟದೇವನ ಕಥೆ ಇದಕ್ಕೆ ಉದಾಹರಣೆ. ಇದರ ಶೈಲಿ ಲಲಿತವಾಗಿದ್ದು ವರ್ಣನೆ ನವೀನವಾಗಿದೆ. ಅಲ್ಲಮಪ್ರಭುವನ್ನು ಸ್ತೋತ್ರ ಮಾಡುವ ಸಮಯದಲ್ಲಿ ಕವಿ ಧರ್ಮಸಮನ್ವಯ ದೃಷ್ಟಿಯನ್ನು ಮೆರೆದಿದ್ದಾನೆ.

ಇದೇ ಅವಧಿಯಲ್ಲಿ ಜೀವಿಸಿದ್ದ ಮಲ್ಲಿಕಾರ್ಜುನ (ಸು.1240), ಕೇಶಿರಾಜ (ಸು.1260) ಈ ಇಬ್ಬರೂ ಕನ್ನಡಕ್ಕೆ ಸಲ್ಲಿಸಿರುವ ಸೇವೆ ಅಮೂಲ್ಯವಾದದ್ದು. ಮಲ್ಲಿಕಾರ್ಜುನಕವಿ ತನ್ನ ಕಾಲದವರೆಗೆ ಬೆಳೆದು ಬಂದಿದ್ದ ಕನ್ನಡ ಸಾಹಿತ್ಯದಿಂದ ಹದಿನೆಂಟು ಬಗೆಯಾದ ವರ್ಣನೆಗಳಿಗೆ ಸಂಬಂಧಿಸಿದ ಉತ್ತಮವಾದ ಪದ್ಯಗಳನ್ನು ಹದಿನೆಂಟು ಅಧ್ಯಾಯಗಳಲ್ಲಿ ಸೂಕ್ತಿಸುಧಾರ್ಣವ ಎಂಬ ಹೆಸರಿನಿಂದ ನೀಡಿದ್ದಾನೆ. ಇನ್ನೂ ಅಜ್ಞಾತವಾಗಿರಬಹುದಾದ ಎಷ್ಟೋ ಕವಿಗಳ ಕಾವ್ಯಭಾಗಗಳು ಇಲ್ಲಿ ದೊರೆಯುತ್ತವೆ. ಇದರಿಂದ ಕನ್ನಡ ಸಾಹಿತ್ಯ ಚರಿತ್ರೆಯ ನಿರ್ಮಾಣಕ್ಕೆ ಅಮೂಲ್ಯವಾದ ಸಾಧನಸಾಮಗ್ರಿ ದೊರೆತಂತಾಗಿದೆ. ಮಲ್ಲಿಕಾರ್ಜುನನಲ್ಲಿದ್ದ ಈ ಕವಿಕಾವ್ಯ ಸಂಪತ್ತನ್ನು ಸದುಪಯೋಗಪಡಿಸಿಕೊಂಡು ಕೇಶಿರಾಜ ಶಬ್ದಮಣಿದರ್ಪಣ ಎಂಬ ಸಪ್ರಮಾಣವಾದ ಹಳಗನ್ನಡ ವ್ಯಾಕರಣ ಗ್ರಂಥವನ್ನು ನೀಡಿದ್ದಾನೆ.

ಈ ಶತಮಾನದ ಕಡೆಯ ಭಾಗದಲ್ಲಿ ಕಾಣಬರುವ ಚೌಂಡರಸ (ಸು.13ನೆಯ ಶತಮಾನ) ಅಭಿನವದಶಕುಮಾರಚರಿತೆ, ನಳಚರಿತೆ ಎಂಬ ಕಾವ್ಯಗಳನ್ನು ಬರೆದಿದ್ದಾನೆ. ಇವನ ಕೃತಿಗಳಿಗೆ ಸಂಸ್ಕೃತ ಕೃತಿಗಳೆ ಮೂಲ. ದಶಕುಮಾರಚರಿತೆಯಲ್ಲಿ ಹತ್ತು ಜನ ರಾಜಕುಮಾರರ ಕಾಮರಾಜ್ಯ ವಿಹಾರ ವರ್ಣಿತವಾಗಿದೆ. ಮೂಲದಲ್ಲಿ ಸಂಕ್ಷೇಪವಾಗಿರುವುದನ್ನು ಚೌಂಡರಸ ಹಿಗ್ಗಲಿಸಿದ್ದಾನೆ. ಇಲ್ಲಿನ ಕಥೆಗಳು ಬಿಡಿಬಿಡಿಯಾಗಿ ರಮ್ಯವಾಗಿವೆ.

14ನೆಯ ಶತಮಾನದಲ್ಲಿ ಕಾಣಬರುವ ನಾಗರಾಜ (ಸು.1331) ತನ್ನ ಪುಣ್ಯಾಸ್ರವದಲ್ಲಿ ಸ್ವರ್ಗಾಪವರ್ಗವನ್ನು ಪಡೆದ ಹಲವು ಪುಣ್ಯಪುರುಷರ ಕಥೆಗಳನ್ನು ಚಿತ್ರಿಸಿದ್ದಾನೆ. ವಡ್ಡಾರಾಧನೆಯಲ್ಲಿ ಬರುವ ಕೆಲವು ಕಥೆಗಳೂ ಇಲ್ಲಿವೆ. ಲಲಿತವಾದ ಶೈಲಿ, ನೈಜವಾದ ವರ್ಣನೆ, ನಿರೂಪಣಾಕೌಶಲದಿಂದ ಈ ಗ್ರಂಥ ಆದರಣೀಯವಾಗಿದೆ. ಬಾಹುಬಲಿ ಪಂಡಿತ (ಸು.1352), ಮಧುರಕವಿ (ಸು.1385) ಈ ಇಬ್ಬರೂ 15ನೆಯ ತೀರ್ಥಂಕರನಾದ ಧರ್ಮನಾಥನ ಪುರಾಣವನ್ನು ಬರೆದಿದ್ದಾರೆ. ಈ ಶತಮಾನದ ಕವಿಗಳಲ್ಲಿ ಖಗೇಂದ್ರಮಣಿದರ್ಪಣ ಎಂಬ ವಿಷವೈದ್ಯಗ್ರಂಥವನ್ನು ಬರೆದ ಒಂದನೆಯ ಮಂಗರಸ (ಸು.1350) ಕವಿ ಮಂಗಾಭಿದಾನವೆಂಬ ನಿಘಂಟನ್ನು ಬರೆದ ಎರಡನೆಯ ಮಂಗರಸ (ಸು.1398) – ಇವರೂ ಉಲ್ಲೇಖಾರ್ಹರು.

**ಕುಮಾರವ್ಯಾಸ ಯುಗ :** 15–19ನೆಯ ಶತಮಾನದ ಅಂತ್ಯದವರೆಗೆ ಅಂದರೆ ಆಧುನಿಕ ಯುಗದ ಆರಂಭಕಾಲದವರೆಗೆ ಈ ಯುಗದ ವ್ಯಾಪ್ತಿಯಿದೆ.ಹರಿಹರ ಸಾಹಿತ್ಯಕ್ಷೇತ್ರದಲ್ಲಿ ಬಿತ್ತಿದ ಹೊಸ ಬೆಳೆ ಅತ್ಯಂತ ಹುಲುಸಾಗಿ ಬೆಳೆದು ಫಲಭರಿತವಾದುದು 15ನೆಯ ಶತಮಾನದಲ್ಲಿ. ಈ ಶತಮಾನದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡ ಕುಮಾರವ್ಯಾಸನು ಮಹಾಕವಿ ಎಂಬ ಹೆಸರಿಗೆ ಪಾತ್ರನಾದವನು. ಈತನಿಂದ ಮುಂದೆ ಆಧುನಿಕ ಕನ್ನಡ ಸಾಹಿತ್ಯ ಉದಿಸುವವರೆಗೆ ಬಂದ ಎಲ್ಲ ಕವಿಗಳೂ ಈತನ ಪ್ರಭಾವಕ್ಕೆ ಒಳಗಾಗಿದ್ದಾರೆ. ಈ ಯುಗದಲ್ಲಿ ಎಲ್ಲ ಧರ್ಮದ ಕವಿಗಳೂ ಕಾಣಿಸಿಕೊಂಡಿರುವುದು ಇನ್ನೊಂದು ವೈಶಿಷ್ಟ್ಯ. ಹಾಗೆಯೇ ಷಟ್ಪದಿ, ಸಾಂಗತ್ಯ, ತ್ರಿಪದಿ – ಈ ಎಲ್ಲ ಬಗೆಯ ಛಂದಸ್ಸೂ ಬಳಕೆಯಾಗಿದೆ. ಆದ್ದರಿಂದ ಇದನ್ನು ಸಂಕೀರ್ಣಯುಗ ಎಂದೂ ಕರೆಯುವುದುಂಟು. ಈ ಯುಗದಲ್ಲಿ ದೇಶೀಯ ಛಂದಸ್ಸಾದ ಷಟ್ಪದಿಗೆ ಅಗ್ರಮಾನ್ಯತೆ ದೊರೆತಿರುವುದರಿಂದ ಇದನ್ನು ಷಟ್ಪದಿ ಯುಗವೆಂದೂ ಕರೆಯುವುದುಂಟು. ಷಟ್ಪದಿಯ ಜೊತೆಗೆ ಸಾಂಗತ್ಯವೂ ಈ ಯುಗದಲ್ಲಿ ಪ್ರಮುಖ ಕಾವ್ಯ ಮಾಧ್ಯಮವಾಗಿ ರತ್ನಾಕರವರ್ಣಿಯಲ್ಲಿ ತನ್ನ ಉನ್ನತಿಕೆಯನ್ನು ಕಂಡುಕೊಂಡಿತು.

ಕುಮಾರವ್ಯಾಸ (ಸು.1400) ಈ ಯುಗದ ಪ್ರತಿನಿಧಿ. ಈತ ಸಂಸ್ಕೃತ ಮಹಾಭಾರತವನ್ನು ಸಂಗ್ರಹಿಸಿ ಅದರ ಮೊದಲ ಹತ್ತು ಪರ್ವಗಳನ್ನು ಕರ್ಣಾಟ ಭಾರತ ಕಥಾಮಂಜರಿ ಎಂಬ ಹೆಸರಿನಿಂದ ಕನ್ನಡಿಸಿದ್ದಾನೆ. ಪಂಪನ ಪ್ರಭಾವ ಇವನ ಮೇಲೆ ಆಗಿರುವಂತೆ ಕಂಡುಬಂದರೂ ಇಬ್ಬರ ದೃಷ್ಟಿಕೋನಗಳೂ ಜೀವನದ ಬಗ್ಗೆ ಅವರು ತಾಳುವ ಧೋರಣೆಗಳೂ ವಿಭಿನ್ನವಾಗಿವೆ. ಇವನು ಮಹಾಭಾರತದ ಕಥೆಯನ್ನು ಹೇಳಹೊರಟಿದ್ದರೂ ತನ್ನ ಕಾವ್ಯ ಕೃಷ್ಣಕಥೆ ಎಂದಿದ್ದಾನೆ. ಇವರ ಭಾಷಾಶೈಲಿಗಳು ಅದ್ವಿತೀಯವಾದುವು ಮತ್ತು ಅನನುಕರಣೀಯವಾದುವು. ಇವನ ಕಾವ್ಯದಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ; ಭಾಮಿನೀಷಟ್ಪದಿ ಹೆಚ್ಚು ಜೀವಂತವಾಗಿದೆ.

ಈ ಯುಗದ ಕನ್ನಡ ಸಾಹಿತ್ಯ ಸಾಕಷ್ಟು ಹುಲುಸಾಗಿ ಬೆಳೆಯಲು ಕಾರಣರಾದವರು ಬಹುಮಟ್ಟಿಗೆ ವೀರಶೈವ ವಚನಕಾರರು ಮತ್ತು ಪುರಾಣಕರ್ತೃಗಳು. 12ನೆಯ ಶತಮಾನದ ಕೊನೆಯಲ್ಲಿ ಇದ್ದಕ್ಕಿದ್ದಂತೆಯೆ ಇಂಗಿಹೋಗಿದ್ದ ವಚನವಾಙ್ಮಯದ ಹೊಳೆ ವಿಜಯನಗರದ ಪ್ರೌಢದೇವರಾಯ (ಸು.1424–46) ಮತ್ತು ತೋಂಟದ ಸಿದ್ಧಲಿಂಗಯತಿ (ಸು.1530) ಇವರ ಅರಮನೆ ಗುರುಮನೆಗಳ ದಂಡೆಯನ್ನು ಆಶ್ರಯಿಸಿ ಮತ್ತೆ ಹರಿಯತೊಡಗಿತು. ಪ್ರೌಢದೇವರಾಯನ ದಂಡನಾಯಕನಾದ ಜಕ್ಕಣಾರ್ಯನೂ ರಾಜಕೃಪಾಪೋಷಿತರಾದ ನೂರೊಂದು ವಿರಕ್ತರೂ ವೀರಶೈವ ಧರ್ಮದ ಪ್ರಚಾರದಲ್ಲಿ ಪ್ರವೃತ್ತರಾಗಿ, ವಚನವಾಙ್ಮಯದ ಪುರುಜ್ಜೀವನಕ್ಕಾಗಿ ಶ್ರಮಿಸಿದರು. ಹೊಸ ವಚನಗಳ ಸೃಷ್ಟಿಗಿಂತಲೂ ಹಳೆಯ ವಚನಗಳ ಸಂಕಲನ ಸಂಪಾದನೆಗಳೂ ಅವುಗಳ ಟೀಕೆ ಟಿಪ್ಪಣಿ ವ್ಯಾಖ್ಯಾನಗಳೂ ಹುಟ್ಟಿಕೊಂಡಿದ್ದು ಈ ಕಾಲದ ವೈಶಿಷ್ಟ್ಯ. ಮಹಲಿಂಗದೇವ (ಸು.1425), ಕುಮಾರ ಬಂಕನಾಥ (ಸು.1430), ಕಲ್ಲುಮಠದ ಪ್ರಭುದೇವ (ಸು.1430), ಗುಬ್ಬಿಯ ಮಲ್ಲಣ್ಣ (ಸು.1475) ಇವರು ಪುರಾತನ ವಚನಗಳ ಸಂಗ್ರಹಕಾರರು ಅಥವಾ ಭಾಷ್ಯಕಾರರು, ಈ ಕಾಲದ ಕಿರೀಟಪ್ರಾಯ ಕೃತಿಯಾಗಿ ಶೂನ್ಯಸಂಪಾದನೆ ಕಾಣಿಸಿಕೊಂಡಿತು. 12ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಶರಣರ ಗೋಷ್ಠಿ ನಡೆಯುತ್ತಿದ್ದ ಅನುಭವಮಂಟಪವನ್ನು 300 ವರ್ಷಗಳ ಆಚೆ ನಿಂತು ಛಾಯಾಚಿತ್ರ ತೆಗೆದುಕೊಳ್ಳುವ ಕಾರ್ಯ ಇಲ್ಲಿ ನಡೆದಿದೆ. ಶೂನ್ಯಸಿಂಹಾಸನದಲ್ಲಿ ಪ್ರಭುದೇವ, ಬಸವಣ್ಣ ಮೊದಲಾದ ಅಸಂಖ್ಯಾತ ಶಿವಶರಣರು, ಅವರ ವಿಚಾರದಲ್ಲಿ ಮೂಡಿರುವ ಸತ್ವದ ನವನೀತ – ಇದು ಈ ಗ್ರಂಥದ ತಿರುಳು. ವೀರಶೈವ ಧರ್ಮಯಾತ್ರಿಕರಿಗೆ ಬೆಳಗುಗಂಬದಂತಿರುವ ಈ ಗ್ರಂಥವನ್ನು 15ನೆಯ ಶತಮಾನದಲ್ಲಿದ್ದ ಶಿವಗಣಪ್ರಸಾದಿ ಮಹಾದೇವಯ್ಯ ರಚಿಸಿದ. ಹಲವು ಹಿರಿಯ ಶರಣರ ವಚನಗಳನ್ನು ಸಂಕಲಿಸಿ ಈ ಕೃತಿ ರಚನೆಯಾಗಿದೆ. ತೋಂಟದ ಸಿದ್ಧಲಿಂಗಯತಿ ಹಾಗೂ ಆತನ ಶಿಷ್ಯರಲ್ಲಿ ಕೆಲವರು ಸ್ವತಂತ್ರವಾಗಿ ವಚನ ರಚನೆ ಮಾಡಿದ್ದಾರೆ. ಇವುಗಳಲ್ಲಿ ಭಕ್ತನ ನಿಷ್ಠೆ, ಶ್ರದ್ಧಾಭಾವಗಳಿಗೆ ಲೋಪವಿಲ್ಲವಾದರೂ ಪುರಾತನ ವಚನಗಳ ಸಾಹಿತ್ಯಗುಣ, ಕಾವು, ಸ್ವಾರಸ್ಯಗಳು ಅಷ್ಟಾಗಿ ಕಂಡುಬರುವುದಿಲ್ಲ.

ಈ ಶತಮಾನದಲ್ಲಿ ಹುಟ್ಟಿದ ವೀರಶೈವ ಗ್ರಂಥಗಳೆಲ್ಲವೂ ಬಹುಮಟ್ಟಿಗೆ ಪುರಾಣಗಳೆ. ಈ ನಿಯಮಕ್ಕೆ ಹೊರತಾದುದೆಂದರೆ ದೇಪರಾಜನ (ಸು.1410) ಸೊಬಗಿನ ಸೋನೆ. ಸಾಂಗತ್ಯದಲ್ಲಿ ರಚಿತವಾದ ಮೊಟ್ಟಮೊದಲನೆಯ ಗ್ರಂಥವೆಂಬ ದೃಷ್ಟಿಯಿಂದ ಇದಕ್ಕೆ ಪ್ರಾಮುಖ್ಯತೆ ದೊರಕಿದೆ. ಇದೇ ಕಾಲದಲ್ಲಿ ರಚಿತವಾದ ಷಟ್ಪದಿ ಕಾವ್ಯಗಳಲ್ಲಿ ಲಕ್ಕಣ್ಣದಂಡೇಶನ ಶಿವತತ್ತ್ವಚಿಂತಾಮಣಿ, ಚಾಮರಸನ ಪ್ರಭುಲಿಂಗಲೀಲೆ ಗಮನಾರ್ಹವಾದುವು. ಚಾಮರಸನಲ್ಲಿ ಅದ್ಭುತವಾದ ಕವಿತಾಶಕ್ತಿಯಿದೆ. ಪ್ರಭುಲಿಂಗಲೀಲೆ ಅಲ್ಲಮನ ಜೀವನಚರಿತ್ರೆಯನ್ನು ಆದರ್ಶಯುತವಾಗಿ ಚಿತ್ರಿಸಹೊರಟ ಮಹಾಗ್ರಂಥ. ಅತ್ಯಂತ ಜನಪ್ರಿಯವಾದ ಈ ಕಾವ್ಯ ತೆಲುಗು, ತಮಿಳು, ಮರಾಠಿ, ಸಂಸ್ಕೃತಗಳಿಗೆ ಭಾಷಾಂತರವಾಗಿದೆ. ಕಾವ್ಯ ಧರ್ಮ, ಧರ್ಮಗಳು ಸಮರಸವಾಗಿ ಬೆರೆತು ಸಾಗುವ ಈ ಕಥಾಪ್ರವಾಹ ಇತರ ಪುರಾಣಕರ್ತರ ಕಾವ್ಯಗಳಂತೆ ಕವಲೊಡೆದು ಕಥಾಕೋಶವಾಗದೆ, ನೇರವಾಗಿ ಹರಿದು ಹೆಗ್ಗುರಿಯನ್ನು ಮುಟ್ಟುತ್ತದೆ. ಹಿತಮಿತವಾದ ವರ್ಣನೆ, ಸಜೀವವಾದ ಪಾತ್ರರಚನೆ, ಸರಳವಾದರೂ ಶಿಥಿಲವಲ್ಲದ ಧೀರಗಂಭೀರ ಶೈಲಿ – ಇವುಗಳಿಂದ ಕೂಡಿದ ಈತನ ಭಾಮಿನೀಷಟ್ಪದಿ ಹಿತವಾಗಿದೆ, ಮನೋಹರವಾಗಿದೆ.

ಸೌಂದರಪುರಾಣವನ್ನು ಬರೆದ ಬೊಮ್ಮರಸ (ಸು.1450), ಆರಾಧ್ಯ ಚಾರಿತ್ರವನ್ನು ಬರೆದ ನೀಲಕಂಠಾಚಾರ್ಯ (ಸು.1488), ರೇವಣಸಿದ್ಧೇಶ್ವರ ಪುರಾಣವನ್ನು ಬರೆದ ಚತುರ್ಮುಖ ಬೊಮ್ಮರಸ (ಸು.1500). ಅಮಲಬಸವಚಾರಿತ್ರ ಅಥವಾ ಸಿಂಗಿಪುರಾಣವನ್ನು ಬರೆದ ಸಿಂಗಿರಾಜ (ಸು.1500), ಇವರು ಈ ಶತಮಾನದ ಪುರಾಣಕರ್ತರಲ್ಲಿ ಪ್ರಮುಖರಾದವರು. ಸುರಂಗನನ್ನು ಬಿಟ್ಟು ಉಳಿದವರೆಲ್ಲ ವಾರ್ಧಕಷಟ್ಪದಿಯ ಛಂದಸ್ಸಿನಲ್ಲಿ ತಮ್ಮ ಕಾವ್ಯಗಳನ್ನು ಬರೆದಿದ್ದಾರೆ. ತ್ರಿಷಷ್ಟಿಪುರಾತನಚರಿತೆ ಚಂಪೂರೂಪದಲ್ಲಿದೆ, 63 ಪುರಾತನರ ಕಥೆಗಳು ಅರುವತ್ತು ಮೂರು ಅಧ್ಯಾಯಗಳಲ್ಲಿ ಕಾಣಿಸಿಕೊಂಡಿವೆ. ಇಲ್ಲಿನ ಕಥೆಗಳು ರಮ್ಯವಾಗಿವೆ.

ಈ ಶತಮಾನದ ಉಳಿದ ವೀರಶೈವ ಕವಿಗಳಲ್ಲಿ ಮಗ್ಗೆಯ ಮಾಯಿದೇವ, ಗುರುಬಸವ, ನಿಜಗುಣಶಿವಯೋಗಿ ಇವರು ಮುಖ್ಯರು. ಮಗ್ಗೆಯ ಮಾಯಿದೇವ ನಾನಾ ಛಂದಸ್ಸಿನಲ್ಲಿ ಹಲವಾರು ಗ್ರಂಥಗಳನ್ನು ರಚಿಸಿರುವನೆಂದು ತಿಳಿದುಬಂದಿದೆಯಾದರೂ ಈಗ ಉಪಲಬ್ಧವಾಗಿರುವುದು ಮೂರು ಶತಕಗಳು ಮಾತ್ರ. ಗುರುಬಸವ (ಸು.1430) ಕವಿಯೂ ಗುರುಶಿಷ್ಯಸಂವಾದ ರೂಪದಲ್ಲಿರುವ ಕೆಲವು ವೇದಾಂತ ಗ್ರಂಥಗಳನ್ನು ಷಟ್ಪದಿಗಳಲ್ಲಿ ರಚಿಸಿದ್ದಾನೆ. ನಿಜಗುಣಶಿವಯೋಗಿಯ ಗ್ರಂಥಗಳು ವಸ್ತುರೀತಿಗಳಲ್ಲಿ ವೈವಿಧ್ಯಮಯವಾಗಿವೆ. ತ್ರಿಪದಿ, ಸಾಂಗತ್ಯ, ರಗಳೆ, ಹಾಡು, ಗದ್ಯಗಳಲ್ಲಿ ಈತನ ಅಧ್ಯಾತ್ಮಜ್ಞಾನ ಹೊರಹೊಮ್ಮಿದೆ. ಈತನ ಗ್ರಂಥಗಳಲ್ಲೆಲ್ಲ ವಿವೇಕಚಿಂತಾಮಣಿ ವಿಶ್ವಕೋಶದ ಮಾದರಿಯಲ್ಲಿರುವ ಅತ್ಯಮೂಲ್ಯವಾದ ಗ್ರಂಥ. ಈತನ ಸಮಕಾಲೀನನಾದ ಮುಪ್ಪಿನ ಷಡಕ್ಷರಿಯ (ಸು.1500) ಸಂಬೋಧನಸಾರದಲ್ಲಿರುವ ಹಾಡುಗಳು ಸುಂದರವಾದ ಭಾವಗೀತೆಗಳಾಗಿದ್ದು ಧರ್ಮಸಮನ್ವಯದಿಂದ ಕೂಡಿದವುಗಳಾಗಿವೆ. 16ನೆಯ ಶತಮಾನದ ವೀರಶೈವ ಕವಿಗಳಲ್ಲಿ ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ ಭಕ್ತಿರಸ ಭರಿತವಾಗಿದ್ದು ಪ್ರೌಢವಾಗಿದೆ.

ಈ ಕಾಲದಲ್ಲಿ ರಚಿತವಾದ ಸಾಂಗತ್ಯಗ್ರಂಥಗಳಲ್ಲಿ ನಂಜುಂಡಕವಿಯ (ಸು.1525) ರಾಮನಾಥ ಚರಿತೆ ಅಥವಾ ಕುಮಾರರಾಮನ ಸಾಂಗತ್ಯ ಒಂದು ವಿಶಿಷ್ಟ ಐತಿಹಾಸಿಕ ಕಾವ್ಯ. ದೆಹಲಿಯ ಸುಲ್ತಾನನಾದ ಮಹಮ್ಮದ್ ಬಿನ್ ತುಗಲಕನ ಸೈನ್ಯದೊಡನೆ ಹೋರಾಡಿ ಮಡಿದ ದುರಂತ ವೀರನೊಬ್ಬನ ಕಥೆ ಇದರ ವಸ್ತು. ಒಬ್ಬ ಸಾಮಾನ್ಯ ವ್ಯಕ್ತಿಯನ್ನು (ಐತಿಹಾಸಿಕ ವೀರನನ್ನು) ಕುರಿತು ಕಾವ್ಯರಚನೆಯಾದುದು ಇದೇ ಮೊದಲು. ಕವಿಯ ವರ್ಣನೆಗಳು ಮನೋಹರವಾಗಿದ್ದು ಅಂದಿನ ಇತಿಹಾಸದ ಮೇಲೂ ಜನಜೀವನದ ಮೇಲೂ ಬೆಳಕನ್ನು ಚೆಲ್ಲುತ್ತವೆ. ಪಾಂಚಾಳಗಂಗನ (ಸು.1650) ಚನ್ನರಾಮನ ಸಾಂಗತ್ಯ ನಂಜುಂಡನ ಕಾವ್ಯಕ್ಕಿಂತ ಐತಿಹಾಸಿಕ ದೃಷ್ಟಿಯಿಂದ ಹೆಚ್ಚು ವಾಸ್ತವಿಕವಾಗಿಯೂ ಆತ್ಮೀಯವಾಗಿಯೂ ಇದೆ. ಆದರೆ ಕಾವ್ಯಶಕ್ತಿಯಲ್ಲಿ ನಂಜುಂಡನದೇ ಮೇಲುಗೈ.

16ನೆಯ ಶತಮಾನದ ಕವಿಗಳಲ್ಲಿ ಚೇರಮಾಂಕ, ವೀರಭದ್ರ ಕವಿ, ಗುರುಲಿಂಗವಿಭು, ಕಿಕ್ಕೇರಿ ಆರಾಧ್ಯ ನಂಜುಂಡ, ಶಾಂತೀಶ, ಅದೃಶ್ಯಕವಿ, ವಿರೂಪಾಕ್ಷ ಪಂಡಿತ – ಇವರು ಮುಖ್ಯರು. ಕಿಕ್ಕೇರಿ ಆರಾಧ್ಯ ನಂಜುಂಡನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ 127 ಸಾಂಗತ್ಯ ಪದ್ಯಗಳ ಚಿಕ್ಕ ಕಾವ್ಯ. ವೀರಶೈವ ಪುರಾಣವೊಂದನ್ನು ಸಾಂಗತ್ಯದಲ್ಲಿ ಬರೆದ ಕವಿಗಳಲ್ಲಿ ಈತ ಅಗ್ರಗಣ್ಯ. ಕಾವ್ಯದೃಷ್ಟಿಗಿಂತಲೂ ಪುರಾಣ ದೃಷ್ಟಿಯಿಂದ ಇದಕ್ಕೆ ಮಹತ್ತ್ವ ಹೆಚ್ಚು. ಶಾಂತೇಶ ಭಾಮಿನೀಷಟ್ಪದಿಯಲ್ಲಿ ಸಿದ್ಧೇಶ್ವರ ಪುರಾಣವನ್ನು ಬರೆದಿದ್ದಾನೆ. ಅದೃಶ್ಯಕವಿಯ ಪ್ರೌಢರಾಯನ ಕಾವ್ಯ ಹಲವು ಶಿವಶರಣರ ಕಥೆಗಳನ್ನು ಒಳಗೊಂಡಿದೆ. ಪ್ರೌಢರಾಯನ ಕಾಲದ ಸಾಹಿತ್ಯೇತಿಹಾಸದ ಮೇಲೆ ಇಲ್ಲಿ ಸಾಕಷ್ಟು ಬೆಳಕು ಬಿದ್ದಿದೆ. ಈ ಶತಮಾನದ ಕವಿಗಳಲ್ಲಿ ಕಡೆಯವನಾದ ವಿರೂಪಾಕ್ಷಪಂಡಿತ ವಾರ್ಧಕಷಟ್ಪದಿಯಲ್ಲಿ ರಚಿಸಿರುವ ಚೆನ್ನಬಸವಪುರಾಣ ಹಲವು ದೃಷ್ಟಿಗಳಿಂದ ಗಮನಾರ್ಹವಾದುದು. ಇದು ಬರಿಯ ಚೆನ್ನಬಸವಣ್ಣನ ಜೀವನ ಚರಿತ್ರೆಯನ್ನಲ್ಲದೆ, ಹಲವಾರು ಶರಣರ ಕಥೆಗಳನ್ನೂ ವೀರಶೈವಧರ್ಮದ ಆಚಾರಗಳನ್ನೂ ಒಳಗೊಂಡಿದೆ. ವೀರಶೈವ ಪುರಾತನರ ಮತ್ತು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೆ ಈ ಗ್ರಂಥ ಬಹು ಉಪಯುಕ್ತವಾಗಿದೆ.

17ನೆಯ ಶತಮಾನದಲ್ಲಿ ಸಿದ್ಧನಂಜೇಶ (ಸು.1650), ಷಡಕ್ಷರದೇವ (ಸು.1655), ಸರ್ವಜ್ಞ (ಸು.1700) ಎಂಬ ಮೂವರು ದೊಡ್ಡಕವಿಗಳು ಕಂಡುಬರುತ್ತಾರೆ. ಸಿದ್ಧನಂಜೇಶನ ರಾಘವಾಂಕಚಾರಿತ್ರ, ಗುರುರಾಜಚಾರಿತ್ರಗಳು ವಾರ್ಧಕಷಟ್ಪದಿಯಲ್ಲಿವೆ. ಇವುಗಳಲ್ಲಿ ಕಾವ್ಯಾಂಶಕ್ಕಿಂತ ವೀರಶೈವ ಧರ್ಮಬೋಧನೆಯೇ ಹೆಚ್ಚಾಗಿದೆ. ಕವಿಯ ಕಾವ್ಯಗಳೆರಡೂ ಸಾಹಿತ್ಯ ಚರಿತ್ರೆಗೆ ತುಂಬ ಸಹಾಯಕವಾಗಿವೆ. ಹಲವಾರು ಕವಿಗಳು ಇಲ್ಲಿ ಸ್ತುತ್ಯರಾಗಿರುವುದರಿಂದ ಕವಿಕಾಲ ನಿರ್ಧಾರಕ್ಕೆ ಈ ಕಾವ್ಯಗಳು ಒಂದು ಗಡಿಕಲ್ಲನ್ನು ಒದಗಿಸಿಕೊಟ್ಟಿವೆ.

ಷಡಕ್ಷರದೇವ ಬಳಕೆ ತಪ್ಪಿಹೋಗಿದ್ದ ಚಂಪೂವನ್ನು ಮತ್ತೆ ಬಳಕೆ ಮಾಡಿ ಅದಕ್ಕೆ ಹೊಸ ಶಕ್ತಿಯನ್ನು ತಂದುಕೊಟ್ಟವನು. ಈತ ಕನ್ನಡ ಸಂಸ್ಕೃತಗಳೆರಡರಲ್ಲಿಯೂ ಕಾವ್ಯರಚನೆ ಮಾಡಿದ್ದಾನೆ. ಈತನ ಕೃತಿಗಳಲ್ಲಿ ರಾಜಶೇಖರವಿಲಾಸ ಒಂದು ಉತ್ಕೃಷ್ಟಕೃತಿ.

ವಚನಸಾಹಿತ್ಯದ ಬಗ್ಗೆ ಹೇಳುವಾಗ ಸರ್ವಜ್ಞ ಅದ್ವಿತೀಯನಾಗಿ ನಿಲ್ಲುತ್ತಾನೆ. ಆಡುಭಾಷೆಯನ್ನು ಬಳಸಿಕೊಂಡು ವಚನ ರಚನೆ ಮಾಡಿ ತ್ರಿಪದಿ ಛಂದಸ್ಸಿಗೆ ಹೆಚ್ಚಿನ ಪ್ರಸಿದ್ಧಿ ದೊರಕೊಳ್ಳುವಂತಾದುದು ಈತನಿಂದ. ಈತನ ಪದ್ಯಗಳಲ್ಲಿ ಕಾಣಬರುವ ವಸ್ತುವಿಪುಲತೆ, ಸರಳತೆ, ಸೌಲಭ್ಯಗಳಂತೆಯೆ ಈತನ ವಾಗ್ದಾರ್ಢ್ಯ, ಅಪಾರ ಜ್ಞಾನ, ನಿಶಿತಮತಿಗಳು ಅದ್ವಿತೀಯವಾದುವು.

ಕುಮಾರವ್ಯಾಸಯುಗದ ವೀರಶೈವ ಕವಿಗಳಲ್ಲಿ ಬೊಂಬೆಯ ಲಕ್ಕನ ಹರಿಶ್ಚಂದ್ರ ಸಾಂಗತ್ಯ, ಓದುವಗಿರಿಯನ (ಸು.1525) ಸಾನಂದಗಣೇಶ ಸಾಂಗತ್ಯ, ಹರಿಶ್ಚಂದ್ರ ಸಾಂಗತ್ಯ, ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ಅಣ್ಣಾಜಿಯ (17ನೆಯ ಶತಮಾನ) ಸೌಂದರ್ಯವಿಲಾಸ, ಉತ್ತರದೇಶದ ಬಸವಲಿಂಗನ (ಸು.1600) ಬಸವೇಶ್ವರ ಪುರಾಣದ ಕಥಾಸಾಗರ, ಭೈರವೇಶ್ವರ ಕಾವ್ಯದ ಕಥಾಸಾಗರ ಮತ್ತು ಉಚಿತ ಕಥೆಗಳು, ಹರೀಶ್ವರ ಕವಿಯ (ಸು.1606) ಪ್ರಭುದೇವರ ಪುರಾಣ, ಚನ್ನಣ್ಣನ (ಸು.1650) ವೀರೇಶ್ವರ ಚರಿತೆ ಇವು ಗಮನಾರ್ಹವಾಗಿವೆ.

ನರಹರಿತೀರ್ಥರ ಅನಂತರ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಸ್ಥಗಿತಗೊಂಡಿದ್ದ ದಾಸಪಂಥ 15ನೆಯ ಶತಮಾನದಲ್ಲಿ ಮತ್ತೆ ಮೇಲೆದ್ದು ದಾಂಗುಡಿಯಿಟ್ಟು ಹಬ್ಬಿ ಹರಡಿತು. ಅದನ್ನು ಮುಂದುವರಿಸಿದ ಕೀರ್ತಿ ಶ್ರೀಪಾದರಾಜರದು (ಸು.1450). ಇವರ ಕೀರ್ತನಾಭಿಮಾನ ಸ್ತುತ್ಯವಾದುದು. ಇವರು ಕನ್ನಡ ಗೀತೆಗಳಿಗೆ ಆಧ್ಯಾತ್ಮಿಕ ತತ್ತ್ವಗಳ ಸ್ಥಾನಮಾನಗಳನ್ನು ಕಲ್ಪಿಸಿದರು. ಹಾಡುವುದರ ಜೊತೆಗೆ ನರ್ತನವನ್ನೂ ಅಳವಡಿಸಿದವರು ಇವರೇ. ನರ್ತನಕ್ಕಾಗಿಯೆ ವಿಶಿಷ್ಟವಾದ ಕೃತಿಗಳನ್ನು ಸಹ ಇವರು ರಚಿಸಿದ್ದಾರೆ. ಇವರ ಶಿಷ್ಯ ವ್ಯಾಸರಾಯರು ಮಠದ ಸ್ವಾಮಿಯಾಗಿದ್ದು ರಾಜಗುರುವಾಗಿದ್ದು ಅನೇಕ ಸಂಸ್ಕೃತ ಗ್ರಂಥಗಳನ್ನೂ ನೂರಾರು ಕನ್ನಡ ಕೀರ್ತನೆಗಳನ್ನೂ ರಚಿಸಿದ್ದಾರೆ. ಕೊಳಲನೂದುವ ಚದುರನಾರೆ ಪೇಳಮ್ಮಯ್ಯ ಎಂಬ ಸುಪ್ರಸಿದ್ಧ ಕೀರ್ತನೆ ಇವರದೇ. ಮುಂದೆ 16ನೆಯ ಶತಮಾನದಲ್ಲಿ ವ್ಯಾಸರಾಯರ ನೇತೃತ್ವದಲ್ಲಿ ಪುರಂದರದಾಸರು, ಕನಕದಾಸರು, ವಾದಿರಾಜರು ಮೊದಲಾದವರು ದಾಸವಾಙ್ಮಯವನ್ನು ಉಳಿಸಿ ಬೆಳೆಸಿದರು. ಪುರಂದರದಾಸ ಕನಕದಾಸರಂತೂ ದಾಸವಾಙ್ಮಯದಲ್ಲಿ ಅದ್ವಿತೀಯರಾಗಿ ನಿಂತರು. ಪುರಂದರದಾಸರ ಲೋಕಾನುಭವ ಆಳವಾದುದು, ವಿಸ್ತಾರವಾದುದು. ಇವರ ಕೀರ್ತನೆಗಳಲ್ಲಿ ವೈವಿಧ್ಯವಿದ್ದು ಅವು ರಸಸ್ಯಂದಿಯಾಗಿವೆ. ಸಂಗೀತಶಾಸ್ತ್ರಕ್ಕೆ ಇವರು ನೀಡಿರುವ ಕೊಡುಗೆಯೂ ಅಸಾಮಾನ್ಯವಾದುದು. ಪಿಳ್ಳಾರಿಗೀತಗಳೆಂದು ಪ್ರಸಿದ್ಧವಾಗಿರುವ ಕೀರ್ತನೆಗಳು ಇವರವೇ. ಸಂಗೀತಕ್ಕೆ ಭಕ್ತಿಯುಕ್ತವಾದ ಸಾಹಿತ್ಯವನ್ನು ಒದಗಿಸಿದುದಲ್ಲದೆ ಅದಕ್ಕೆ ಕರ್ಣಾಟಕ ಸಂಗೀತ ಎಂಬ ಕೀರ್ತಿಯ ಕೋಡನ್ನೂ ಇವರು ಮೂಡಿಸಿದರು. ಅದ್ವಿತೀಯ ಕೀರ್ತನಕಾರರಾದ ತ್ಯಾಗರಾಜರಿಗೆ ಪ್ರೇರಣೆ ಪೋಷಣೆಗಳನ್ನು ನೀಡಿದ ಕೀರ್ತಿಯೂ ಇವರದೇ. ಇವರ ಸಮಕಾಲೀನರೇ ಆಗಿದ್ದ ಕನಕದಾಸರು ಹಲವು ಕೀರ್ತನೆಗಳನ್ನು ಮಾತ್ರವೇ ಅಲ್ಲದೆ, ಮೋಹನ ತರಂಗಿಣಿ (ಸಾಂಗತ್ಯ), ರಾಮಧಾನ್ಯ ಚರಿತ್ರೆ (ಭಾಮಿನೀಷಟ್ಪದಿ), ನಳಚರಿತ್ರೆ (ಭಾಮಿನೀಷಟ್ಪದಿ), ಹರಿಭಕ್ತಿಸಾರ (ಭಾಮಿನೀ ಷಟ್ಪದಿ) ಎಂಬ ಕಾವ್ಯಗಳನ್ನು ರಚಿಸಿದ್ದಾರೆ. ಇವರ ಕಾವ್ಯಗಳ ನಿರೂಪಣೆ ತಿಳಿಯಾಗಿ, ಸರಳವಾಗಿ, ಹೃದಯಸ್ಪರ್ಶಿಯಾಗಿದೆ; ಹಿತಮಿತವಾದ ವರ್ಣನೆಗಳಿಂದ ಕೂಡಿ ಸರಸವಾಗಿದೆ.

ವಾದಿರಾಜರು ಹಯವದನ ಎಂಬ ಅಂಕಿತದಿಂದ ಕೀರ್ತನೆಗಳನ್ನು ರಚಿಸಿರುವರಲ್ಲದೆ ವೈಕುಂಠವರ್ಣನೆ, ಸ್ವಪ್ನಗದ್ಯ, ಲಕ್ಷ್ಮಿಯ ಶೋಭಾನೆ, ಭಾರತತಾತ್ಪರ್ಯನಿರ್ಣಯಟೀಕೆ ಮುಂತಾದ ಗ್ರಂಥಗಳನ್ನೂ ರಚಿಸಿದ್ದಾರೆ. ಇವೆಲ್ಲದರ ಹೆಗ್ಗುರಿಯೂ ದ್ವೈತಮತ ತತ್ತ್ವನಿರೂಪಣೆಯೇ. ವಾದಿರಾಜರು ಮೇಧಾವಿಯಾದ ತಾರ್ಕಿಕರು. ಇವರ ಕವಿತೆಯೂ ತರ್ಕಬದ್ಧವಾದುದೇ ಇವರ ಸಮಕಾಲೀನರಾದ ವೈಕುಂಠದಾಸರು ಶ್ರೀವೈಷ್ಣವರಾದರೂ ದಾಸಪಂಥಕ್ಕೆ ಸೇರಿ ವೈಕುಂಠಕೇಶವ ಎಂಬ ಅಂಕಿತದಿಂದ ಹಲವು ಹಾಡುಗಳನ್ನು ಬರೆದಿದ್ದಾರೆ. ಇಲ್ಲಿಂದ ಮುಂದೆ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರತಿಭಾಶಾಲಿಗಳಾಗಿ ಅಪರೋಕ್ಷ ಜ್ಞಾನಿಗಳಾದ ದಾಸರಾರೂ ಕಾಣಿಸಿಕೊಳ್ಳುವುದಿಲ್ಲ. ಮಂತ್ರಾಲಯದ ರಾಯರು ಎಂದು ಪ್ರಸಿದ್ಧರಾಗಿರುವ ರಾಘವೇಂದ್ರತೀರ್ಥರೂ ಪ್ರಸನ್ನ ವೆಂಕಟದಾಸ, ವಿಜಯದಾಸ, ಗೋಪಾಲದಾಸ ಮೊದಲಾದವರೂ ದಾಸಸಾಹಿತ್ಯದ ಹೊಳೆ ತಡೆಯಿಲ್ಲದೆ ಹರಿದುಕೊಂಡು ಹೋಗಲು ಸಹಾಯಕರಾದರು. ಈ ಹರಿದಾಸರ ಸಾಲಿನಲ್ಲಿ ಕಾಣಬರುವ ಕಡೆಯ ಹಿರಿಯ ಹೆಸರೆಂದರೆ ಜಗನ್ನಾಥದಾಸರದು (ಸು.1728–1809). ಇವರು ಕೀರ್ತನೆಗಳನ್ನಲ್ಲದೆ ಹರಿಕಥಾಮೃತಸಾರವೆಂಬ ಷಟ್ಪದಿ ಗ್ರಂಥವನ್ನು ಬರೆದಿದ್ದಾರೆ. ಹರಿದಾಸ ಕೀರ್ತನೆಯ ರಚನೆ ಅಂದಿನಿಂದ ಇಂದಿನವರೆಗೆ ಬಂದು ಇಂದು ಕೂಡ ವಿಚ್ಛಿತ್ತಿಯಿಲ್ಲದೆ ಹರಿದುಕೊಂಡು ಹೋಗುತ್ತಿದೆ.

ಕುಮಾರವ್ಯಾಸ ಯುಗದ ವೈದಿಕ ಕವಿಗಳಲ್ಲಿ ಕುಮಾರವ್ಯಾಸನನ್ನು ಬಿಟ್ಟರೆ ನಮಗೆ ಕಾಣಬರುವ ಪ್ರಮುಖ ಕವಿ ಕುಮಾರವಾಲ್ಮೀಕಿಯೊಬ್ಬನೆ. ಈತ ರಾಮಾಯಣ ಕಥೆಯನ್ನು ಸರಳವಾದ ಭಾಷೆಯಲ್ಲಿ ನಿರರ್ಗಳವಾಗಿ ನಿರೂಪಿಸಿದ್ದಾನೆ. ಈತ ಕುಮಾರವ್ಯಾಸನಿಂದ ಸಾಕಷ್ಟು ಪ್ರಭಾವಿತನಾಗಿದ್ದಾನೆ. ಆದರೆ ಕುಮಾರವ್ಯಾಸನ ದರ್ಶನ, ಧ್ವನಿಗಳು ಇವನಲ್ಲಿ ಕಂಡುಬರುವುದಿಲ್ಲ. ಭಾಸ್ಕರ ಕವಿ (ಸು.1424) ಜೀವಂಧರಚರಿತೆ ಎಂಬ ಗ್ರಂಥವನ್ನು ಬರೆದಿದ್ದಾನೆ. ಈತನ ಕಾವ್ಯದ ಮೇಲೆ ಕುಮಾರವ್ಯಾಸನ ಪ್ರಭಾವ ನಿಚ್ಚಳವಾಗಿ ಬಿದ್ದಿದೆ. ಕಲ್ಯಾಣಕೀರ್ತಿ (ಸು.1439) ಎಂಬುವನು ಜ್ಞಾನಚಂದ್ರಾಭ್ಯುದಯ, ಕಾಮನ ಕಥೆ ಮೊದಲಾದ ಗ್ರಂಥಗಳನ್ನು ದೇಶೀ ಛಂದಸ್ಸಿನಲ್ಲಿ ರಚಿಸಿದ್ದಾನೆ.

ವಿಜಯನಗರದ ಕೃಷ್ಣದೇವರಾಯನ ಆಶ್ರಯದಲ್ಲಿದ್ದ ತಿಮ್ಮಣ್ಣಕವಿ (ಸು.1550) ಕುಮಾರವ್ಯಾಸ ಬರೆಯದೇ ಬಿಟ್ಟ ವ್ಯಾಸಭಾರತದ ಭಾಗವನ್ನು ಕೃಷ್ಣರಾಯ ಭಾರತ ಕಥಾಮಂಜರೀ ಎಂಬ ಹೆಸರಿನಿಂದ ಬರೆದಿದ್ದಾನೆ. ಷಟ್ಪದಿಯಲ್ಲಿ ಬರೆದಿದ್ದರೂ ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುವ ಎತ್ತರ ಬಿತ್ತರಗಳು ಇವನಲ್ಲಿ ಕಂಡುಬರುವುದಿಲ್ಲ.

ಷಟ್ಪದಿ ಕಾವ್ಯಗಳಲ್ಲಿ ಲಕ್ಷ್ಮೀಶನ (ಸು.1550) ಜೈಮಿನಿ ಭಾರತಕ್ಕೆ ಒಂದು ಪ್ರಮುಖ ಸ್ಥಾನ ಸಂದಿದೆ. ಈತ ಸಂಸ್ಕೃತದ ಜೈಮಿನಿ ಭಾರತದ ಕಥೆಯನ್ನು ಕನ್ನಡದಲ್ಲಿ, ವಾರ್ಧಕ ಷಟ್ಪದಿಯಲ್ಲಿ ಸುಂದರವಾಗಿ ಬರೆದಿದ್ದಾನೆ. ಈತನ ಕಾವ್ಯ ನವರಸಭರಿತವಾಗಿದ್ದು ಕಥನಕಲೆಗೆ, ವಾರ್ಧಕ ಷಟ್ಪದಿಯ ಉತ್ಕೃಷ್ಟ ಶೈಲಿಗೆ ಉದಾಹರಣೆಯಾಗಿದೆ. ಈತನ ವರ್ಣನೆಗಳಲ್ಲಿ ಕಣ್ಣಿಗೆ ಕಟ್ಟಬಲ್ಲ ಚಿತ್ರಕಾರನ ಕಲಾಕುಶಲತೆಯ ಜೊತೆಗೆ ಕಿವಿಗೆ ಹಿತವನ್ನುತರುವ ಸಂಗೀತಗಾರನ ಸ್ವರಜ್ಞಾನವೂ ಸೇರಿದೆ. ಮನೋಜ್ಞನವಾದ ಉಪಮೆಗಳ ಬಳಕೆಯಿಂದ ಈತ ಉಪಮಾಲೋಲನೆಂಬ ಕೀರ್ತಿಗೆ ಪಾತ್ರನಾಗಿದ್ದಾನೆ.

16ನೆಯ ಶತಮಾನದ ಉಳಿದ ಕವಿಗಳೆಂದರೆ ಶ್ರೀರಂಗಮಾಹಾತ್ಮ್ಯವನ್ನು ಬರೆದ ರಂಗಾಚಾರ್ಯ (ಸು.1570), ನಂದಿಮಾಹಾತ್ಮ್ಯ ಮತ್ತು ಚಿತ್ರಭಾರತ ಎಂಬ ಎರಡು ಬೃಹದ್ಗ್ರಂಥಗಳನ್ನು ರಚಿಸಿರುವ ಗೋವಿಂದಕವಿ, ಶಿವಗೀತೆಯನ್ನು ವಾರ್ಧಕ ಷಟ್ಪದಿಯಲ್ಲಿ

ಬರೆದ ತಿರುಮಲಭಟ್ಟ, ಅಕ್ರೂರಚರಿತೆಯನ್ನು ಭಾಮಿನೀಷಟ್ಪದಿಯಲ್ಲಿ ಬರೆದ ಸೋಮನಾಥಕವಿ (ಸು.1600). ರಂಗಾಚಾರ್ಯ ಕನ್ನಡದಲ್ಲಿ ಕಾವ್ಯರಚನೆ ಮಾಡಹೊರಟ ಶ್ರೀವೈಷ್ಣವರಲ್ಲಿ ಮೊದಲನೆಯವನು. ಗೋವಿಂದನ ಕಾವ್ಯಬಂಧ ಪ್ರೌಢ, ಬಿಗಿ, ಬಿರುಸು. ಈತನ ಚಿತ್ರಭಾರತ ದೈವಭಕ್ತಿಯಿಂದ ತುಂಬಿದೆ. ತಿರುಮಲಭಟ್ಟನ ಕವಿತೆ ಪ್ರಸಾದಗುಣದಿಂದ ತುಂಬಿದೆ. ಸೋಮನಾಥನ ಅಕ್ರೂರ ಚರಿತೆಯಲ್ಲಿ ಅಕ್ರೂರನ ಕಥೆಗಿಂತ ಶ್ರೀಕೃಷ್ಣನ ಕಥೆಯೇ ಪ್ರಮುಖವಾಗಿದೆ. ಕಾವ್ಯವನ್ನು ಮನೋಹರವಾಗಿ ಬರೆಯಲು ಸಾಕಷ್ಟು ರಸಸ್ಥಾನಗಳಿದ್ದರೂ ಅದಕ್ಕೆ ಅಗತ್ಯವಾದ ಪ್ರತಿಭೆ ಕಲ್ಪನಾ ಶಕ್ತಿಗಳು ಈ ಕವಿಗಳಲ್ಲಿ ಇಲ್ಲ.

17ನೆಯ ಶತಮಾನದ ವೈದಿಕ ಕವಿಗಳಲ್ಲಿ ಭಾಮಿನೀ ಷಟ್ಪದಿಯಲ್ಲಿ ಪ್ರಹ್ಲಾದ ಚರಿತೆಯನ್ನು ಬರೆದ ನರಹರಿ (ಸು.1650), ವೆಂಕಟೇಶ್ವರ ಪ್ರಬಂಧವನ್ನು ಚಂಪೂವಿನಲ್ಲಿ ಬರೆದ ವೆಂಕಕವಿ (ಸು.1650), ಭಗವದ್ಗೀತೆಯನ್ನು ವಾಸುದೇವ ಕಥಾಮೃತ ಎಂಬ ಹೆಸರಿನಿಂದ ಭಾಮಿನೀ ಷಟ್ಪದಿಯಲ್ಲಿ ಬರೆದ ನಾಗರಸ ಮುಖ್ಯರು. ಮಹಲಿಂಗರಂಗ (ಸು.1675) ಇದೇ ಅವಧಿಯಲ್ಲಿ ಗ್ರಂಥರಚನೆ ಮಾಡಿದ ಇನ್ನೊಬ್ಬ ಪ್ರಮುಖ ಕವಿ. ಇವನ ಅನುಭವಾಮೃತ ಭಾಮಿನೀಷಟ್ಪದಿಯಲ್ಲಿದೆ. ಇದರಲ್ಲಿ ಅಖಿಲ ವೇದಾಂತಾರ್ಥವನ್ನು ಸಂಗ್ರಹಿಸಿಕೊಟ್ಟಿದ್ದಾನೆ. ಈತನ ಕನ್ನಡಾಭಿಮಾನ ಸ್ತೋತ್ರಾರ್ಹವಾದುದು. ಸುಲಿದ ಬಾಳೆಯ ಹಣ್ಣಿನಂದದಿ ಅತ್ಯಂತ ಸುಲಭವಾದ, ಮನೋಹರವಾದ ಕನ್ನಡದಲ್ಲಿ ಆತ್ಮಜ್ಞಾನವನ್ನು ಪಡೆದುಕೊಂಡರೆ ಸಾಲದೇನು ಸಂಸ್ಕೃತದಲ್ಲಿನ್ನೇನು ಎಂದು ಸವಾಲು ಹಾಕಿದ ಮಹಲಿಂಗರಂಗ ಒಳ್ಳೆಯ ಕವಿಹೃದಯವುಳ್ಳವನು. ವಸ್ತು ಮತ್ತು ನಿರೂಪಣೆ ಎರಡರಲ್ಲೂ ಕವಿಯು ಅಪೂರ್ವವಾದ ಪ್ರತಿಭೆಪಾಂಡಿತ್ಯಗಳನ್ನು ಮೆರೆದಿದ್ದಾನೆ. ಬಾಲಕೃಷ್ಣ ಬ್ರಹ್ಮಾನಂದ ಯೋಗಿ ಎಂಬುವರು ಈ ಕಾವ್ಯವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾರೆ.

ಬೊಬ್ಬೂರು ರಂಗ (ಸು.1750) ಮತ್ತು ಚಿದಾನಂದಾವಧೂತ (ಸು.1750) ಹೆಸರಿಸಬೇಕಾದ ಮತ್ತಿಬ್ಬರು ಕವಿಗಳು. ಬೊಬ್ಬೂರು ರಂಗ ಭಾಮಿನೀಷಟ್ಪದಿಯಲ್ಲಿ ಅಂಬಿಕಾವಿಜಯವನ್ನೂ ವಾರ್ಧಕದಲ್ಲಿ ಪರಶುರಾಮ ರಾಮಾಯಣವನ್ನು ಬರೆದಿದ್ದಾನೆ. ಚಿದಾನಂದಾವಧೂತ ಜ್ಞಾನಸಿಂಧು ಎಂಬ ಗ್ರಂಥದಲ್ಲಿ ಅದ್ವೈತ ವೇದಾಂತವನ್ನು ಪ್ರತಿಪಾದಿಸಿದ್ದಾನೆ. ಈ ಗ್ರಂಥ ಮಹಲಿಂಗರಂಗನ ಅನುಭವಾಮೃತವನ್ನು ಬಹುಮಟ್ಟಿಗೆ ಅನುಸರಿಸಿರುವುದಲ್ಲದೆ ಅದರಂತೆಯೇ ಲಲಿತವಾಗಿದೆ. ಇದು ಭಾಮಿನೀ ಷಟ್ಪದಿಯಲ್ಲಿದೆ. ಈತ ಇನ್ನು ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಇದೇ ಅವಧಿಯಲ್ಲಿ ಲಿಂಗಣ್ಣ ಕವಿ (ಸು.1750) ಚಂಪೂ ರೂಪದಲ್ಲಿ ಕೆಳದಿ ನೃಪವಿಜಯವನ್ನು ಬರೆದಿದ್ದಾನೆ. ಇದರಲ್ಲಿ ಕಾವ್ಯಾಂಶಕ್ಕಿಂತ ಚರಿತ್ರಾಂಶವೆ ಹೆಚ್ಚು.

ವಿಜಯನಗರ ಪತನಾನಂತರ ಮೈಸೂರೊಡೆಯರ ಕಾಲದಲ್ಲಿ ಸಾಹಿತ್ಯ ರಚನೆಗೆ ಹೆಚ್ಚಿನ ಆಶ್ರಯ ದೊರಕಿತು. ಈ ಕಾಲದಲ್ಲಿ ಹಳೆಯ ಚಂಪೂಶೈಲಿಯನ್ನೂ ಹಳಗನ್ನಡ ಗದ್ಯವನ್ನೂ ಪುನರುಜ್ಜೀವಿಸುವ ಕಾರ್ಯ ನಡೆಯಿತು. ರಾಜಒಡೆಯರ ಕಾಲದಲ್ಲಿ ಅವರ ದಂಡನಾಯಕನಾದ ತಿರುಮಲಾರ್ಯ ಕರ್ಣವೃತ್ತಾಂತ ಕಥೆಯನ್ನು ಸಾಂಗತ್ಯದಲ್ಲಿ ಬರೆದ. ರಾಜ ಒಡೆಯರ ಅನಂತರ ಪಟ್ಟಕ್ಕೆ ಬಂದ ಚಾಮರಾಜ ಒಡೆಯರು (1617–37) ಸ್ವತಃ ಕವಿಯಾಗಿದ್ದು ಚಾಮರಾಜೋಕ್ತಿ ವಿಳಾಸ, ಮಣಿಪ್ರಕಾಶ ಎಂಬೆರಡು ಗ್ರಂಥಗಳನ್ನು ಬರೆದಂತೆ ಪ್ರತೀತಿ. ಈ ರಾಜನ ಆಸ್ಥಾನದಲ್ಲಿದ್ದ ರಾಮಚಂದ್ರನೆಂಬ ಕವಿ ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಗದ್ಯರೂಪದಲ್ಲಿ ಕನ್ನಡಕ್ಕೆ ಭಾಷಾಂತರಿಸಿದ. ರಾಜನ ಮತ್ತೊಬ್ಬ ಆಶ್ರಿತನಾದ ಪದ್ಮಣಪಂಡಿತ ಚಾಮರಾಜೀಯ ಎಂಬ ಹೆಸರಿನಿಂದ ಹಯಸಾರ ಸಮುಚ್ಚಯವನ್ನು ಕಂದದಲ್ಲಿ ಬರೆದಿದ್ದಾನೆ. ಕಂಠೀರವ ನರಸರಾಜ (1638–59) ಕವಿ, ಗಮಕಿ, ವಾದಿ, ವಾಗ್ಮಿಗಳಿಗೆ ಆಶ್ರಯದಾತನಾಗಿದ್ದ. ಈತನ ಆಸ್ಥಾನ ಕವಿಯಾದ ಭಾಸ್ಕರಕವಿ ಬೇಹಾರಗಣಿತವನ್ನು ರಚಿಸಿದ. ಮತ್ತೊಬ್ಬ ಕವಿ ಗೋವಿಂದವೈದ್ಯ ಕಂಠೀರವನರಸರಾಜ ವಿಜಯವನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಇದರಲ್ಲಿ ಕನ್ನಡ ಭಾಷೆಯ ಮೇಲೆ ಉರ್ದು ಭಾಷೆಯ ಪ್ರಭಾವ ಬಿದ್ದಿರುವುದನ್ನು ಕಾಣಬಹುದು.

ಚಿಕ್ಕದೇವರಾಜ ಒಡೆಯರ (1673–1704) ಕಾಲ ಮೈಸೂರಿನ ಇತಿಹಾಸದಲ್ಲಿ, ಒಡೆಯರ ಕಾಲದ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸುವರ್ಣಯುಗ. ಸಂಗೀತ ಸಾಹಿತ್ಯಗಳೆರಡರಲ್ಲಿಯೂ ಅಪಾರವಾದ ಆದರ, ಅಭಿರುಚಿ, ಪರಿಶ್ರಮಗಳಿದ್ದ ಇವರು ಕನ್ನಡದಲ್ಲಿ ಚಿಕದೇವರಾಯ ಬಿನ್ನಪ, ಗೀತಗೋಪಾಲ, ಭಾರತ, ಭಾಗವತ, ಶೇಷಧರ್ಮ ಎಂಬ ಗ್ರಂಥಗಳನ್ನು ಬರೆದಿರುವರೆಂದು ಪ್ರತೀತಿ.

ಚಿಕ್ಕದೇವರಾಜ ಒಡೆಯರ ಆಶ್ರಯದಲ್ಲಿ ತಿರುಮಲಾರ್ಯ, ಚಿಕುಪಾಧ್ಯಾಯ, ಸಿಂಗರಾರ್ಯ, ತಿಮ್ಮಕವಿ, ಮಲ್ಲಿಕಾರ್ಜುನ, ವೇಣುಗೋಪಾಲ, ವರಪ್ರಸಾದ ಕವಿ, ಚಿದಾನಂದ, ಮಲ್ಲರಸ ಮೊದಲಾದವರು ಕಾವ್ಯರಚನೆ ಮಾಡಿದರು. ಇದೇ ಸಂದರ್ಭದಲ್ಲಿ ಹೊನ್ನಮ್ಮ, ಶೃಂಗಾರಮ್ಮ ಮೊದಲಾದ ಕಬ್ಬಿಗಿತ್ತಿಯರೂ ಸಾಹಿತ್ಯ ರಚನೆಯಲ್ಲಿ ಕೈಹಾಕಿದ್ದು ಗಮನಾರ್ಹವಾದ ಸಂಗತಿ. ತಿರುಮಲಾರ್ಯನು ಚಿಕದೇವರಾಜವಿಜಯ, ಚಿಕದೇವರಾಜ ವಂಶಾವಳಿ, ಚಿಕದೇವರಾಜಶತಕ, ಅಪ್ರತಿಮವೀರ ಚರಿತೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಅಪ್ರತಿಮವೀರ ಚರಿತೆ ನಾಲ್ಕು ಪ್ರಕರಣಗಳನ್ನುಳ್ಳ ಒಂದು ಅಲಂಕಾರ ಗ್ರಂಥ. ಚಿಕುಪಾಧ್ಯಾಯ ಚಿಕ್ಕದೇವರಾಜನ ಕರಣಿಕಾಗ್ರೇಸರನೂ ಮಂತ್ರಿಯೂ ಆಗಿದ್ದವನು. ಈತ ಗದ್ಯ ಪದ್ಯಗಳಲ್ಲಿ ವಿಪುಲ ಗ್ರಂಥರಚನೆ ಮಾಡಿದ್ದಾನೆ.ಈತನ ಕಾವ್ಯವಸ್ತುವಿನಲ್ಲಿ, ಛಂದಸ್ಸಿನಲ್ಲಿ ವೈವಿಧ್ಯ ಕಂಡುಬರುತ್ತದೆ. ಇವನ ಕೃತಿಗಳು ವೈಷ್ಣವ ಧರ್ಮವನ್ನು ಕುರಿತವು. ಈತನ ಗದ್ಯ ಮನೋಹರವಾಗಿದೆ. ಕನ್ನಡ ಗದ್ಯಚರಿತ್ರೆಯಲ್ಲಿ ಈತನಿಗೆ ಒಂದು ಪ್ರಮುಖಸ್ಥಾನ ಸಲ್ಲುತ್ತದೆ.

ಸಿಂಗರಾರ್ಯ ಬರೆದಿರುವ ಮಿತ್ರವಿಂದಾಗೋವಿಂದ ಕನ್ನಡದ ಮೊಟ್ಟಮೊದಲ ನಾಟಕವೆಂಬ ಪ್ರಶಸ್ತಿಗೆ ಪಾತ್ರವಾಗಿದೆ. ರಾಜನ ಸಂಚಿಯ ಊಳಿಗದವಳಾಗಿದ್ದ ಹೊನ್ನಮ್ಮನ ಹದಿಬದೆಯ ಧರ್ಮ ಸರಳ ಸುಂದರವಾದ ಸಾಂಗತ್ಯಕಾವ್ಯ. ನೀತಿಬೋಧೆಯನ್ನು ಗುರಿಯಾಗಿಟ್ಟುಕೊಂಡು ಕಾವ್ಯರಚನೆಮಾಡಿದ ಕವಯಿತ್ರಿಯರಲ್ಲಿ ಈಕೆ ಅಗ್ರಗಣ್ಯಳಾಗಿದ್ದಾಳೆ. ಶೃಂಗಾರಮ್ಮನ ಪದ್ಮಿನೀಕಲ್ಯಾಣ ಸಾಂಗತ್ಯದಲ್ಲಿದೆ. ದೊಡ್ಡಕೃಷ್ಣರಾಜನ (1713–32) ಆಳಿಕೆಯಲ್ಲಿ ರಚಿತವಾದ ಶಾಸ್ತ್ರಗ್ರಂಥಗಳಲ್ಲಿ ಬಾಲವೈದ್ಯದ, ಚೆಲುವನ ಕನ್ನಡ ಲೀಲಾವತೀ ಎಂಬ ಗಣಿತಶಾಸ್ತ್ರ (ಕಂದ ಮತ್ತು ವಾರ್ಧಕ), ರತ್ನಶಾಸ್ತ್ರ ಷಟ್ಪದಿ ಪ್ರಮುಖವಾದವುಗಳು. ರಾಜನ ಪಟ್ಟಮಹಿಷಿಯಾದ ಚೆಲುವಾಂಬೆ ಎಂಬ ಕವಯಿತ್ರಿ ಇದೇ ಕಾಲದಲ್ಲಿ ವರನಂದೀ ಕಲ್ಯಾಣವನ್ನು ರಚಿಸಿದ್ದಾಳೆ. ಈಕೆಯ ಶೈಲಿ ಲಲಿತಮಧುರವಾಗಿದೆ.

ದೊಡ್ಡಕೃಷ್ಣರಾಜನ ಅನಂತರ ಕೆಲಕಾಲ ಮಂಕಾಗಿದ್ದ ಸಾಹಿತ್ಯರಚನೆ 19ನೆಯ ಶತಮಾನದ ಆದಿಭಾಗದಲ್ಲಿ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಮತ್ತೆ ಪ್ರಜ್ವಲಿಸಿತು. ಮುಮ್ಮಡಿ ಕೃಷ್ಣರಾಜ ಸ್ವತಃ ಕವಿಯಾಗಿದ್ದು ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಈತನ ಆಶ್ರಯದಲ್ಲಿದ್ದ ಅನೇಕ ಕವಿಗಳು ಸಂಸ್ಕೃತ ಕನ್ನಡಗಳಲ್ಲಿ ನೂರಾರು ಗ್ರಂಥಗಳನ್ನು ಬರೆದಿದ್ದಾರೆ. ಅಂದಿನ ಕೃತಿಗಳಲ್ಲಿ ಕೆಂಪುನಾರಾಯಣನ ಮುದ್ರಾಮಂಜೂಷ ಎಂಬ ಗದ್ಯಕೃತಿ ಅತ್ಯಂತ ಜನಪ್ರಿಯವಾಗಿದ್ದು ಗಮನಾರ್ಹವಾದುದಾಗಿದೆ. ನಡುಗನ್ನಡ ಹೊಸಗನ್ನಡವಾಗಿ ಮಾರ್ಪಾಟಾಗುತ್ತಿದ್ದ ಸಂಕ್ರಮಣಕಾಲವನ್ನು ಈ ಕೃತಿ ಪ್ರತಿನಿಧಿಸುತ್ತದೆ. ಈ ಕೃತಿಯ ಗದ್ಯ ಪ್ರೌಢವಾದರೂ ಲಲಿತವಾಗಿ ಶಕ್ತಿಯುತವಾಗಿ ಸಾರವತ್ತಾಗಿದೆ. ಗದ್ಯಸಾಹಿತ್ಯದ ಬೆಳೆವಣಿಗೆಯಲ್ಲಿ ಆಧುನಿಕ ಸಾಹಿತ್ಯದ ಹಿಂದಿನ ಮಜಲೇ ಮುದ್ರಾಮಂಜೂಷ ವೆಂದು ಹೇಳಬಹುದು.

ಇದೇ ಕಾಲದಲ್ಲಿ ಅಳಿಯ ಲಿಂಗರಾಜ ಸು. 50 ಗ್ರಂಥಗಳನ್ನು ಬರೆದಿದ್ದಾನೆ. ವಿವಿಧ ಛಂದಸ್ಸಿನಲ್ಲಿರುವ ಈ ಗ್ರಂಥಗಳು ಕವಿಯ ಸರ್ವತೋಮುಖವಾದ ಪ್ರತಿಭೆಗೆ ಸಾಕ್ಷಿಯಾಗಿವೆ. ಈತನ ನರಪತಿಚರಿತೆ ಒಂದು ಅಲಂಕಾರ ಗ್ರಂಥ. ಮುಮ್ಮಡಿ ಕೃಷ್ಣರಾಜ ಒಡೆಯರ ಅನಂತರ ಪಟ್ಟಕ್ಕೆ ಬಂದ ಚಾಮರಾಜರ ಕಾಲದಲ್ಲಿ ಕನ್ನಡ ಸಾಹಿತ್ಯದ ಆಧುನಿಕ ಯುಗ ಪ್ರಾರಂಭವಾಯಿತು.

ಕುಮಾರವ್ಯಾಸ ಯುಗದ ಜೈನಕವಿಗಳು ಈ ಯುಗದಲ್ಲಿ ಯುಗಧರ್ಮಕ್ಕೆ ಶರಣಾಗಿ ದೇಶೀಯ ಛಂದಸ್ಸಿನಲ್ಲಿ ಕಾವ್ಯಸೃಷ್ಟಿಯನ್ನು ಕೈಕೊಂಡರು. ಪಾಂಡಿತ್ಯ ಪ್ರಚುರವಾಗಿ ರಾಜಸಭೆಯ ಮನ್ನಣೆ ಪಡೆಯುತ್ತಿದ್ದ ಅವರ ಕಾವ್ಯಶಕ್ತಿ ಅಂದು ಷಟ್ಪದಿ ಸಾಂಗತ್ಯಗಳ ಧಾಟಿಯನ್ನು ಪಡೆದು ಜನಸಾಮಾನ್ಯರ ಸ್ವತ್ತಾಯಿತು. ಈ ಯುಗದಲ್ಲಿ ಜೈನಕವಿಗಳ ಪ್ರಭಾವ ಇತರ ಕವಿಗಳ ಮೇಲಾಗುವುದಕ್ಕಿಂತ, ಇತರ ಕವಿಗಳ ಪ್ರಭಾವ ಇವರ ಮೇಲೆ ಬಿದ್ದಿದೆ. ಈ ಯುಗದಲ್ಲಿ ಜೈನಕವಿಗಳ ಸಂಖ್ಯೆ ಕಡಿಮೆ. ಅವರಲ್ಲಿಯೂ ಕೆಲವರನ್ನು ಬಿಟ್ಟರೆ ಉಳಿದವರೆಲ್ಲ ಕಾವ್ಯರಚನೆಯ ದೃಷ್ಟಿಯಿಂದ ಸಾಮಾನ್ಯರು.

ಈ ಯುಗದ ಜೈನಕವಿಗಳಲ್ಲಿ ರತ್ನಾಕರವರ್ಣಿ (16ನೆಯ ಶತಮಾನ) ಅದ್ವಿತೀಯನಾದವನು. ಈತನ ಭರತೇಶ ವೈಭವ ಸಾಂಗತ್ಯದಲ್ಲಿ ರಚಿತವಾದ ಕನ್ನಡದ ಮಹಾಕಾವ್ಯಗಳಲ್ಲೊಂದು. ಭೋಗಮೂಲವಾದ ಶೃಂಗಾರವೂ ಯೋಗಮೂಲವಾದ ತ್ಯಾಗವೂ ಇಲ್ಲಿ ಪರಸ್ಪರ ವಿರುದ್ಧವಾಗದೆ ಭೋಗಯೋಗಗಳ ಸಮನ್ವಯ ತತ್ತ್ವ ಈ ಕಾವ್ಯದಲ್ಲಿ ಪ್ರತಿಪಾದಿತವಾಗಿದೆ. ಇಲ್ಲಿ ಬರುವ ನಿರ್ದಿಷ್ಟ ಶೃಂಗಾರ ಚಿತ್ರಣವೂ ಸಂಗೀತ ನರ್ತನಗಳ ವರ್ಣನೆಯೂ ಕನ್ನಡದಲ್ಲಿಯೆ ಅದ್ವಿತೀಯವಾದುವು.

ಶಿಶುಮಾಯಣನ (ಸು.1472) ಅಂಜನಾಚರಿತ್ರೆ, ತ್ರಿಪುರದಹನ ಸಾಂಗತ್ಯಗಳೆರಡೂ ಸಾಂಗತ್ಯದಲ್ಲಿವೆ. ಸಾಂಗತ್ಯದ ಇತಿಹಾಸದಲ್ಲಿ ಈ ಕವಿಗೆ ಒಂದು ಉನ್ನತ ಸ್ಥಾನವಿದೆ. ತೆರಕಣಾಂಬಿಯ ಬೊಮ್ಮರಸ (ಸು.1485) ಸನತ್ಕುಮಾರ ಚರಿತೆ ಮತ್ತು ಜೀವಂಧರ ಚರಿತೆಗಳ ಕರ್ತೃ. ಮೊದಲನೆಯದು ಭಾಮಿನೀ ಷಟ್ಪದಿಯಲ್ಲೂ ಎರಡನೆಯದು ಸಾಂಗತ್ಯದಲ್ಲೂ ಇದೆ.

16ನೆಯ ಶತಮಾನದ ಆರಂಭದಲ್ಲಿ ಕಾಣಬರುವ ಮೂರನೆಯ ಮಂಗರಸ (ಸು.1508) ಜಯನೃಪಕಾವ್ಯ, ಸೂಪಶಾಸ್ತ್ರಗಳನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ. ಇವನ ಉಳಿದಗ್ರಂಥಗಳು ಸಾಂಗತ್ಯದಲ್ಲಿವೆ. ಜಯನೃಪಕಾವ್ಯದಲ್ಲಿ ಕಥೆಗಿಂತಲೂ ವರ್ಣನೆ ಹೆಚ್ಚು.

ಅಭಿನವವಾದಿವಿದ್ಯಾನಂದನ (ಸು.1533) ಕಾವ್ಯಸಾರ, ಸಾಳ್ವಕವಿಯ (ಸು.1560) ಸಾಳ್ವ ಭಾರತ ಈ ಕಾಲದ ಪ್ರಮುಖ ಗ್ರಂಥಗಳು. ಸಾಳ್ವಭಾರತ ಭಾಮಿನೀಷಟ್ಪದಿಯಲ್ಲಿದೆ. ಸಾಳ್ವನು ರಸರತ್ನಾಕರ, ವೈದ್ಯಸಾಂಗತ್ಯ ಎಂಬ ಇನ್ನೆರಡು ಗ್ರಂಥಗಳನ್ನು ಬರೆದಿದ್ದಾನೆ. ರಸರತ್ನಾಕರ ರಸಪ್ರಕ್ರಿಯೆಯನ್ನು ಪ್ರತಿಪಾದಿಸುವ ಒಂದು ಅಲಂಕಾರ ಗ್ರಂಥ. ಈ ಗ್ರಂಥದಲ್ಲಿ ನವರಸಗಳ ಸ್ವರೂಪವನ್ನು ದಿಗ್ದರ್ಶಿಸಿದ್ದಾನೆ. ದೊಡ್ಡಯ್ಯ (ಸು.1550) ಮತ್ತು ಬಾಹುಬಲಿ (ಸು.1560) ಕ್ರಮವಾಗಿ ಚಂದ್ರಪ್ರಭಚರಿತೆ, ನಾಗರಕುಮಾರಚರಿತೆ ಎಂಬ ಗ್ರಂಥಗಳನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ.

17ನೆಯ ಶತಮಾನದಿಂದ ಮುಂದಕ್ಕೆ ಜೈನಕವಿಗಳು ಕಾವ್ಯಕರ್ಮಕ್ಕೆ ಕೈಹಾಕಿರುವುದು ವಿರಳವಾಗಿ ಕಂಡುಬರುತ್ತದೆ. ಇದೇ ಶತಮಾನದ ಜೈನಗ್ರಂಥಕರ್ತರಲ್ಲಿ ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕ ಬಹುಮುಖ್ಯನಾದವನು. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ದೇವಚಂದ್ರ (ಸು.1770–1841) ರಾಜಾವಳೀ ಕಥೆಯನ್ನು ಬರೆದಿದ್ದಾನೆ. ಇದರಲ್ಲಿ ಜೈನಮತಕ್ಕೆ ಸಂಬಂಧಿಸಿದ ಹಲವು ಇತಿಹಾಸಗಳೂ ರಾಜರ ಮತ್ತು ಕವಿಗಳ ಚರಿತೆಗಳೂ ಇವೆ. ಮೈಸೂರು ರಾಜರ ವಂಶಾವಳಿಯೂ ಇಲ್ಲಿ ಸಂಗ್ರಹವಾಗಿ ಬಂದಿದೆ. ಕವಿ ಚರಿತ್ರೆಯ ದೃಷ್ಟಿಯಿಂದ ಇದು ಬಹುಮುಖ್ಯವಾದುದು.

**ಆಧುನಿಕ ಯುಗ :** ಕನ್ನಡ ಸಾಹಿತ್ಯವಾಹಿನಿ 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಬತ್ತಿಯೇ ಹೋಗುವುದೇನೊ ಎನ್ನುವಷ್ಟು ತೆಳುವಾಯಿತು. ಆ ವೇಳೆಗಾಗಲೇ ಕರ್ನಾಟಕ ಬ್ರಿಟಿಷರ ಆಳಿಕೆಗೆ ಸೇರಿಹೋಗಿತ್ತು. ಇಂಗ್ಲಿಷ್ ಶಿಕ್ಷಣದ ಮೂಲಕ ಕನ್ನಡ ಭಾಷೆಯ ಅಭ್ಯಾಸ ಕುಂಠಿತಗೊಂಡಿತು. ಬುದ್ಧಿಜೀವಿಗಳ ಮಾತೃಭಾಷಾಪ್ರೇಮ ಇಂಗ್ಲಿಷ್ ಭಾಷೆಯ ಮೋಹದಲ್ಲಿ ಮುಳುಗಿ ಹೋಯಿತು. ಆದರೆ ಅದೇ ಇಂಗ್ಲಿಷ್ ಭಾಷೆ ಸಾಹಿತ್ಯಗಳ ಅಧ್ಯಯನವೇ ಕನ್ನಡ ಜನರ ಆತ್ಮಾಭಿಮಾನವನ್ನು ಕೆರಳಿಸಿ, ದೇಶಭಾಷೆಗಳ ಅದ್ಭುತ ಕ್ರಾಂತಿಗೂ ಮೂಲವಾಯಿತು. ಇಂಗ್ಲಿಷ್ ಸಾಹಿತ್ಯದಲ್ಲಿನ ಸ್ವಾತಂತ್ರ್ಯ, ಸೌಲಭ್ಯ, ರೀತಿ, ರಸಪುಷ್ಟಿಗಳನ್ನು ಕಂಡು ಕನ್ನಡದಲ್ಲಿಯೂ ಅಂಥ ಸಾಹಿತ್ಯವನ್ನು ಸೃಷ್ಟಿಸಬೇಕೆಂಬ ಉತ್ಸಾಹ ಮೂಡಿತು. ಮೊದಲಿಗೆ ಈ ಕಾರ್ಯ ಅನುವಾದಗಳ ಮೂಲಕ ನಡೆಯಿತು. ಕಾಲಕ್ರಮದಲ್ಲಿ ಕನ್ನಡ ಸಾಹಿತ್ಯದೊಡನೆ ಅದನ್ನು ಸಮನ್ವಯಗೊಳಿಸಿಕೊಳ್ಳುವ ಶಕ್ತಿ ಪರಿಣತಗೊಂಡು, ಅರ್ಧ ಶತಮಾನದಿಂದ ಈಚೆಗೆ ಉತ್ತಮ ಕಾವ್ಯಗಳು ರಚನೆಗೊಳ್ಳುತ್ತ ಬಂದಿವೆ.

ಆಧುನಿಕ ಕನ್ನಡ ಸಾಹಿತ್ಯದ ಆರಂಭದೆಸೆಯಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ಕನ್ನಡಕ್ಕೆ ದೊರೆತ ಪ್ರೇರಣೆ, ಪ್ರಯೋಜನಗಳು ಚಿರಸ್ಮರಣೀಯವಾದುವು. ಇವರು ಕರ್ನಾಟಕದ ಜನಜೀವನದಲ್ಲಿ ಸಮರಸವಾಗಿ ಬೆರೆತು, ಇಲ್ಲಿನ ಸಾಹಿತ್ಯ ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಲವು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದುದಲ್ಲದೆ, ಕನ್ನಡ ಭಾಷಾಸ್ವರೂಪವನ್ನು ದಿಗ್ದರ್ಶಿಸಬಲ್ಲ ವ್ಯಾಕರಣ, ಛಂದಸ್ಸು, ನಿಘಂಟು ಮೊದಲಾದ ಗ್ರಂಥಗಳ ರಚನೆಗೆ ಕೈಹಾಕಿದರು. ಜಾನ್‌ಹ್ಯಾಂಡ್, ವಿಲಿಯಂ ರೀವ್, ಕಿಟ್ಟೆಲ್, ಜೀಗ್ಲರ್, ಬಿ.ಎಲ್.ರೈಸ್, ಇ.ಪಿ.ರೈಸ್ ಮೊದಲಾದವರಿಂದ ಕನ್ನಡ ಭಾಷಾಸಾಹಿತ್ಯಗಳಿಗೆ ಆಗಿರುವ ಸೇವೆ ಅಪಾರ. ಪಾದ್ರಿಗಳು ಕನ್ನಡ ಸಾಹಿತ್ಯದ ಹಲವು ಹೊಸಮುಖಗಳಿಗೆ ಅಂಕುರಾರ್ಪಣೆ ಮಾಡಿದರು: ವಸ್ತುನಿಷ್ಠವಾದ ಆಧುನಿಕ ಸಾಹಿತ್ಯ ವಿಮರ್ಶೆಗೆ ತಳಹದಿ ಹಾಕಿದರು. ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದ ಕೀರ್ತಿ ಇ.ಪಿ.ರೈಸ್ (ಮೊದಲ ಮುದ್ರಣ 1915) ಅವರಿಗೆ ಸಲ್ಲುತ್ತದೆ. ಕನ್ನಡ ಶಾಸನಗಳನ್ನು ಕಲೆಹಾಕಿದ ಕೀರ್ತಿ ಫ್ಲೀಟ್ (ಮೊದಲ ಮುದ್ರಣ 1878) ಅವರದಾದರೆ, ಮೈಸೂರು ಗೆಜೆಟಿಯರಿನ ಎರಡು ಸಂಪುಟಗಳನ್ನೂ ಎಪಿಗ್ರಾಫಿಯ ಕರ್ನಾಟಿಕದ 12 ಸಂಪುಟಗಳನ್ನೂ ಹೊರತಂದ ಕೀರ್ತಿ ಬಿ.ಎಲ್.ರೈಸ್ ಅವರಿಗೆ ಸಲ್ಲುತ್ತದೆ. ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣ ನೀಡಿದ ಕಾಲ್ಡ್‌ವೆಲ್ಲರು ಹಲವು ದೃಷ್ಟಿಗಳಿಂದ ಚಿರಸ್ಮರಣೀಯರು.

ಆಧುನಿಕ ಸಾಹಿತ್ಯದ ಅಂಕುರಾರ್ಪಣೆಗೆ ಮೈಸೂರು ಅರಸರಿಂದ ದೊರೆತ ಸಹಾಯವೂ ಬಹುಮುಖ್ಯವಾದದ್ದು. ಚಾಮರಾಜ ಒಡೆಯರು ತಮ್ಮ ಆಶ್ರಯದಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾವನ್ನು ಸ್ಥಾಪಿಸಿ, ತಮ್ಮ ಆಸ್ಥಾನಪಂಡಿತರನ್ನು ನಾಟಕ ರಚನೆಗೆ ಕೈ ಹಾಕುವಂತೆ ಪ್ರೋತ್ಸಾಹಿಸಿದರು. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳು ಶಾಕುಂತಲ ಮೊದಲಾದ ಸಂಸ್ಕೃತ ನಾಟಕಗಳ ಭಾಷಾಂತರಗಳನ್ನೂ ಶೂರಸೇನಚರಿತೆ ಎಂಬ ಹೆಸರಿನಿಂದ ಒಥೆಲೊ ಎಂಬ ಇಂಗ್ಲಿಷ್ ನಾಟಕದ ಭಾಷಾಂತರವನ್ನೂ ಕನ್ನಡಕ್ಕೆ ಕೊಟ್ಟರು. ಆಸ್ಥಾನಕವಿಗಳಾದ ಜಯರಾಯಾಚಾರ್ಯ, ಸುಬ್ಬಾಶಾಸ್ತ್ರಿ, ಅನಂತನಾರಾಯಣ ಶಾಸ್ತ್ರಿ ಮೊದಲಾದವರೂ ಈ ಕಾರ್ಯರಂಗದಲ್ಲಿ ದುಡಿದು ಕೀರ್ತಿಶೇಷರಾದರು. ಚಾಮರಾಜರ ಅನಂತರ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜರು ಆಧುನಿಕ ಕನ್ನಡದ ಸ್ವರ್ಣಯುಗಕ್ಕೆ ತಳಹದಿ ಹಾಕಿದವರೆಂದು ಹೇಳಬಹುದು. ಅವರ ಆಸ್ಥಾನಕವಿಗಳಾದ ಶ್ರೀಕಂಠಶಾಸ್ತ್ರಿಗಳೂ ನರಹರಿಶಾಸ್ತ್ರಿಗಳೂ ನೂರಾರು ಸ್ವತಂತ್ರ ನಾಟಕಗಳನ್ನು ರಚಿಸಿ ನಾಟಕ ರಂಗಸ್ಥಳಗಳ ದಿಗ್ವಿಜಯಕ್ಕೆ ಕಾರಣರಾದುದಲ್ಲದೆ ಹಲವು ಕಾವ್ಯಗಳ ಕರ್ತೃಗಳಾಗಿ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ಅದರಲ್ಲಿಯೂ ಶ್ರೀಕಂಠಶಾಸ್ತ್ರಿಗಳ ಬಹುಮುಖ ಪ್ರತಿಭೆ ಅಚ್ಚರಿಯನ್ನುಂಟುಮಾಡುತ್ತದೆ. ಹಲವು ಕಾದಂಬರಿಗಳು, ವ್ಯಂಗ್ಯಚಿತ್ರಗಳು, ವಿಡಂಬನಾತ್ಮಕ ಪ್ರಬಂಧಗಳು, ಸಂಸ್ಕೃತ, ತೆಲುಗು ಗ್ರಂಥಗಳ ಅನುವಾದಗಳು ಇವರಿಂದ ಮೂಡಿಬಂದವು. ಇದೇ ಸಂದರ್ಭದಲ್ಲಿ ಶ್ರೀಕೃಷ್ಣರಾಜ ಒಡೆಯರು ಕನ್ನಡ ನವೋದಯಕ್ಕಾಗಿ ನೀಡಿದ ಎರಡು ಮುಖ್ಯ ಕಾಣಿಕೆಗಳೆಂದರೆ ಕನ್ನಡ ಸಾಹಿತ್ಯ ಪರಿಷತ್ತು (1915) ಮತ್ತು ಮೈಸೂರು ವಿಶ್ವವಿದ್ಯಾನಿಲಯ (1916). ಈ ಎರಡು ಸಂಸ್ಥೆಗಳಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂದಿರುವ ಸೇವೆ ಅಪಾರ.

ಚಿಕ್ಕದೇವರಾಯ ಒಡೆಯರು

ಕನ್ನಡ ಸಾಹಿತ್ಯದಲ್ಲಾದ ನವೋದಯ ಕ್ರಾಂತಿ ನಮಗೆ ನಿಚ್ಚಳವಾಗಿ ಕಾಣುವುದು 20ನೆಯ ಶತಮಾನದ ಆದಿಭಾಗದಿಂದ. ಈ ಕ್ರಾಂತಿ 12ನೆಯ ಶತಮಾನದಲ್ಲಿ ಆದ ಕನ್ನಡಸಾಹಿತ್ಯದ ಕ್ರಾಂತಿಯಿಂದ ಸಂಪೂರ್ಣ ಭಿನ್ನವಾದುದು. ಅಂದಿನ ಕ್ರಾಂತಿ ಬಹುಮುಖ್ಯವಾದ ಧರ್ಮಮೂಲವಾದುದಾಗಿದ್ದರೆ ಇಂದಿನದು ವಿಶ್ವವಿಶಾಲವಾದ ಲೌಕಿಕ ಜ್ಞಾನ ಸಾಧನೆಯನ್ನು ಹೆಗ್ಗುರಿಯಾಗಿಟ್ಟುಕೊಂಡಿತು. ಇದರ ಮುಖ್ಯ ಲಕ್ಷಣ ವೈಜ್ಞಾನಿಕ ಮನೋಭಾವನೆ. ಈ ಮನೋಭಾವನೆಗೆ ಬೀಜಭೂತವಾದುದು ಸ್ವತಂತ್ರ ವಿವೇಚನೆ. ಬುದ್ಧಿಗೆ ಇಲ್ಲಿ ಪ್ರಾಧಾನ್ಯ. ಮತಸೂಚಕ ಭಾವನೆಗಳಿಗೆ ಪ್ರಾಧಾನ್ಯತೆ ತಗ್ಗಿ ವಿಶಾಲ ಭಾವನೆಗಳಿಗೆ ಇಂಬು ದೊರಕಿತು. ನಮ್ಮ ಪ್ರಾಚೀನ ಸಾಹಿತ್ಯದ ಸತ್ತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡು ಹೊಸತು ಹಳತು, ನಮ್ಮದು ಹೆರರದು ಎಲ್ಲವನ್ನೂ ಹೊಂದಿಸಿಕೊಂಡು, ಸಮನ್ವಯಗೊಳಿಸಿಕೊಂಡು ಆಧುನಿಕ ಸಾಹಿತ್ಯ ಶ್ರೀಮಂತವಾಯಿತು. ಹಿಂದೆಂದೂ ಕಾಣಬರದಷ್ಟು ಅಪಾರ ಸಂಖ್ಯೆಯ ಕವಿಗಳೂ ಗ್ರಂಥಕರ್ತರೂ ಈ ಯುಗದಲ್ಲಿ ಕಾಣಿಸಿಕೊಂಡರು. ಇಲ್ಲಿನ ಸಾಹಿತ್ಯದ ವೈಪುಲ್ಯ ವೈವಿಧ್ಯ, ವೈಶಾಲ್ಯಗಳು ಚಕಿತಗೊಳ್ಳುವಷ್ಟು ಅಪಾರವಾದುವು. ಈ ಸಾಹಿತ್ಯ ರಾಶಿಯನ್ನು ಪದ್ಯ ಮತ್ತು ಗದ್ಯ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಹೊಸ ಸಾಹಿತ್ಯ ಬೆಳೆಯುವುದರ ಜೊತೆ ಜೊತೆಯಲ್ಲೇ ಸಂಪ್ರದಾಯಬದ್ಧವಾದ ಕಾವ್ಯಪ್ರಕಾರ – ವಸ್ತು, ರೀತಿಗಳಲ್ಲಿ ಪ್ರಾಚೀನ ಸಾಹಿತ್ಯವನ್ನು ಅನುಸರಿಸುತ್ತಿರುವ ಕಾವ್ಯಗಳು ಬೆಳೆದುಕೊಂಡು ಬಂದುವು. ಸೋಸಲೆ ಅಯ್ಯಾಶಾಸ್ತ್ರಿ, ಹೊಸಕೆರೆ ಚಿದಂಬರಯ್ಯ, ನಂಜನಗೂಡು ಶ್ರೀಕಂಠಶಾಸ್ತ್ರಿ, ಬೆಳ್ಳಾವೆ ನರಹರಿಶಾಸ್ತ್ರಿ, ಶ್ರೀನಿವಾಸ ರಂಗಾಚಾರ್ಯ, ಡಿ.ವಿ.ಗುಂಡಪ್ಪ, ಹೆಮ್ಮಿಗೆ

ದೇಶಿಕಾಚಾರ್ಯ, ಘನಪಾಠಿ ನಾರಾಯಣ ಮೊದಲಾದವರು ಚಂಪೂಕಾವ್ಯಗಳನ್ನು ರಚಿಸಿದ್ದಾರೆ. ಮುದ್ದಣನ ಶ್ರೀ ರಾಮಪಟ್ಟಾಭಿಷೇಕ, ವೆಂಕಟಸುಬ್ಬಯ್ಯನವರ ವಿನಾಯಕವಿಜಯ, ಸೋಸಲೆ ಅಯ್ಯಾಶಾಸ್ತ್ರಿಗಳ ಶೇಷರಾಮಾಯಣಂ, ಮುಳಿಯ ತಿಮ್ಮಪ್ಪಯ್ಯನವರ ಸೊಬಗಿನ ಬಳ್ಳಿ, ಸೇಡಿಯಾಪು ಕೃಷ್ಣಭಟ್ಟರ ಕೃಷ್ಣಾಕುಮಾರಿ, ಮೈ.ಶೇ.ಅನಂತ ಪದ್ಮನಾಭರಾಯರ ಶ್ರೀಕೃಷ್ಣಚರಿತಾಮೃತಂ, ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರ ಶ್ರೀನಿವಾಸ ಲೀಲಾವಾಸ ಇತ್ಯಾದಿ ಗ್ರಂಥಗಳು ವಿವಿಧ ಷಟ್ಪದಿಗಳಲ್ಲಿವೆ. ಜಯದೇವಿತಾಯಿ ಲಿಗಾಡೆಯವರು ಸಿದ್ಧರಾಮಪುರಾಣವನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ. ಕಾವ್ಯಗುಣದ ದೃಷ್ಟಿಯಿಂದಲೂ ಇವು ಗಮನಾರ್ಹವಾಗಿವೆ. ಆಧುನಿಕ ಸಾಹಿತ್ಯಪ್ರಕಾರದಲ್ಲಿ ಬಹುಮಟ್ಟಿಗೆ ಭಾವಗೀತೆ

ಮುಮ್ಮಡಿ ಕೃಷ್ಣರಾಜ ಒಡೆಯರು

ಪ್ರಮುಖವಾಯಿತು. ಖಂಡಕಾವ್ಯಗಳು, ಕಥನಕವನಗಳು, ಗೀತನಾಟಕಗಳು ಇತ್ಯಾದಿ ಕಾವ್ಯಮುಖಗಳು ಕಾಣಿಸಿಕೊಂಡಿದ್ದರೂ ಅವುಗಳ ಸಂಖ್ಯೆ ಅಲ್ಪ. ವಸ್ತುರೀತಿಗಳಲ್ಲಿ ಹಿಂದಿನ ಕಾವ್ಯಗಳು ಅನುಸರಿಸಬೇಕಾಗಿದ್ದ ಕಠಿಣವಾದ ನಿಯಮಗಳ ಶೃಂಖಲೆಗಳನ್ನು ಈ ಸಾಹಿತ್ಯ ಪ್ರಕಾರ ಸಡಿಲಗೊಳಿಸಿತು. ಚ.ವಾಸುದೇವಯ್ಯ, ಶ್ರೀನಿವಾಸರಾವ್, ಎಸ್.ಜಿ.ನರಸಿಂಹಾಚಾರ್, ಪಂಜೆ ಮಂಗೇಶರಾವ್ ಮೊದಲಾದ ಕವಿಗಳು ಈ ಶತಮಾನದ ಆರಂಭ ಕಾಲದಲ್ಲಿಯೆ ಈ ಪ್ರಕಾರಕ್ಕೆ ಕೈಹಾಕಿದ್ದರೂ ಇವುಗಳ ಪ್ರಭಾವವನ್ನು ಜನರ ಮೇಲೆ ಅಚ್ಚೊತ್ತಿ, ಹೊಸ ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಬಿ.ಎಂ.ಶ್ರೀ ಅವರಿಗೆ ಸಲ್ಲುತ್ತದೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಕವನಗಳ ಭಾಷಾಂತರಗಳನ್ನು ಒಳಗೊಂಡ ಅವರ ಇಂಗ್ಲಿಷ್ ಗೀತಗಳು ಸ್ವಭಾವ ಸುಂದರವಾಗಿವೆ, ಲಲಿತ ರಮಣೀಯವಾಗಿವೆ. ಅಸಂಖ್ಯಾತ ಕವಿಗಳು ಈ ಪ್ರಕಾರಕ್ಕೆ ಕೈಹಾಕಿರುವರಾದರೂ ಕುವೆಂಪು, ಬೇಂದ್ರೆ ಇವರಿಬ್ಬರೂ ಆಧುನಿಕ ನವೋದಯ ಸಾಹಿತ್ಯಕ್ಕೆ ಒತ್ತುಕೊಟ್ಟ ಕವಿಗಳು. ಕುವೆಂಪು ಅವರು ಕನ್ನಡಕ್ಕೆ ನೀಡಿರುವ ಕೊಡುಗೆ ಅಸದೃಶವಾದುದು. ಅವರ ಶ್ರೀ ರಾಮಾಯಣದರ್ಶನಂ ಆಧುನಿಕ ಕನ್ನಡ ಸಾಹಿತ್ಯದ ಮೇರುಕೃತಿ. ಈ ಕಾವ್ಯದಲ್ಲಿ ಕುವೆಂಪು ಅವರ ಕಾವ್ಯಾಸಕ್ತಿ ಅಪೂರ್ವವಾದುದು. ಆಧುನಿಕ ಕನ್ನಡ ಕವಿಗಳಲ್ಲಿ ಅಗ್ರಗಣ್ಯರಾದ ಇವರ ಭಾವಗೀತೆಗಳನ್ನು ಕುರಿತು ವಿವೇಚಿಸುವಾಗ ಮಾತ್ರ ಇವರ ಕಾವ್ಯಶಕ್ತಿ ಇಂಗ್ಲಿಷ್‌ನಲ್ಲಿ ಮೊದಲು ಇಣಿಕಿ ಹಾಕಿ, ಆಮೇಲೆ ಕನ್ನಡದ ಭಾವಗೀತೆಗಳಲ್ಲಿ ಅಭಿವ್ಯಕ್ತವಾಗಿದೆ ಎನ್ನಬೇಕು. ಇವರ ಕವಿತೆಗಳಲ್ಲಿ ಸರ್ವತೋಮುಖವಾದ ಆಸಕ್ತಿ ಕಂಡುಬರುವುದಾದರೂ ಪ್ರಕೃತಿ ಪ್ರೇಮ, ಅಧ್ಯಾತ್ಮ, ಭಕ್ತಿ –ಇವು ಸ್ಥಾಯೀಭಾವವನ್ನು ಪಡೆದಿವೆ. ಇವರ ನಾಟಕಗಳು ಕೂಡ ಭಾವ ಗೀತಾತ್ಮಕವಾದುವು. ದ.ರಾ.ಬೇಂದ್ರೆಯವರು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ವಿಪುಲವಾಗಿ ಕವನಗಳನ್ನು ಬರೆದಿರುವರು. ಇವರ ಕವನಗಳಲ್ಲಿ ವಿಷಯ ಮತ್ತು ಅದರ ನಿರೂಪಣೆಯಲ್ಲಿ ಕಾಣಬರುವ ವೈವಿಧ್ಯ, ಮಾತಿನ ಚಮತ್ಕಾರ, ಅಧ್ಯಾತ್ಮ ವಿಚಾರ ಲಹರಿ, ಜನಪದ ಧಾಟಿ, ನಾದಮಾಧುರ್ಯಗಳು ಅತ್ಯಂತ ಹೃದ್ಯವಾಗಿವೆ. ಇವರಿಬ್ಬರೂ ಆಧುನಿಕ ಕನ್ನಡ ಸಾಹಿತ್ಯದ ಎರಡು ವಿಶಿಷ್ಟ ಪಂಥಗಳ ನಿರ್ಮಾತೃಗಳು. ಪು.ತಿ.ನ. ಅವರು ಪ್ರಕೃತಿವರ್ಣನೆಯಲ್ಲಿ, ಭಕ್ತಿಪಾರಮ್ಯದಲ್ಲಿ, ಭಾರತಸಂಸ್ಕೃತಿಯ ದಿಗ್ದರ್ಶನದಲ್ಲಿ, ಭಾವಭಾಷೆಗಳ ಕುಸುರಿಗೆಲಸ ಮಾಡುವುದರಲ್ಲಿ ಅಗ್ರಗಣ್ಯರು. ವಿ.ಸೀ., ಡಿ.ವಿ.ಜಿ., ಶ್ರೀನಿವಾಸ, ವಿನಾಯಕ, ರಾಜರತ್ನಂ. ಕೆ.ಎಸ್.ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಚೆನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ, ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ ಮೊದಲಾದ ಹಿರಿಯ ಕಿರಿಯ ಕವಿಗಳು ಒಬ್ಬೊಬ್ಬರೂ ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡಿರುವ ಶ್ರೇಷ್ಠ ಕವಿಗಳಾಗಿದ್ದಾರೆ.

ಸು. 1950ರಿಂದ ಈಚೆಗೆ ನವ್ಯಕಾವ್ಯ ಎಂಬ ಹೆಸರಿನಿಂದ ಹೊಸದೊಂದು ಶಾಖೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. ಟಿ.ಎಸ್.ಎಲಿಯೆಟ್, ಆಡೆನ್, ಸೆಸಿಲ್ ಡೆ ಲೂಯಿ ಮೊದಲಾದ ಸಮಕಾಲೀನ ಇಂಗ್ಲಿಷ್ ಕವಿಗಳಿಂದ ಸ್ಫೂರ್ತಿಗೊಂಡ ಹಲವು ಕವಿಗಳು ಹೊಸರೀತಿಯ ಪ್ರಯೋಗಗಳ ಮೂಲಕ ಹೊಸ ಹಾದಿಯೊಂದನ್ನು ನಿರ್ಮಿಸಲು ಹೊರಟರು. ವ್ಯಕ್ತಿನಿಷ್ಠವಾಗಿ ಹೊಸ ವಸ್ತು, ಹೊಸ ಭಾಷೆ, ಹೊಸ ಶೈಲಿ, ಹೊಸ ಧೋರಣೆಗಳಿಂದ ಹೊರಟಿರುವ ಈ ಕವಿ ಕಾವ್ಯಗಳಲ್ಲಿ ಕವಿಮನದ ಸಂಕೀರ್ಣತೆಯನ್ನು ಅಭಿವ್ಯಕ್ತಗೊಳಿಸಲು ಬಳಸುವ ರೂಪಕಗಳೂ ಸಾಮತಿಗಳೂ ಅನೇಕ ವೇಳೆ ಓದುಗರನ್ನು ಚಕಿತಗೊಳಿಸುತ್ತವೆ. ಸಾಂಕೇತಿಕವಾಗಿರುವ ಹಲವು ಮಾತುಗಳು ಅವುಗಳ ಪರಿಚಯ ವಿಲ್ಲದವರಿಗೆ ಕ್ಲಿಷ್ಟವೆನಿಸಿವೆ. ಈ ಪರಂಪರೆಯನ್ನು ಪ್ರಾರಂಭಿಸಿದ ಕೀರ್ತಿ ವಿ.ಕೃ. ಗೋಕಾಕರಿಗೆ ಸಲ್ಲುತ್ತದೆ. ಆದರೆ ಇವರ ಕವನಗಳಲ್ಲಿ ಸಂಪ್ರದಾಯ, ನವ್ಯತೆಗಳು ಸಮರಸವಾಗಿ ಬೆರೆತಿವೆ. ನವ್ಯಮಾರ್ಗದಲ್ಲಿ ಗೋಪಾಲಕೃಷ್ಣ ಅಡಿಗರ ಹೆಸರು ಅತ್ಯಂತ ಗಣ್ಯವಾದುದು. ಇವರ ಕವಿತೆಗಳು ಪ್ರತಿಭೆ, ಕಲ್ಪನಾಶಕ್ತಿಗಳ ಮಹತ್ತಿಗೆ ಸಾಕ್ಷಿಗಳಾಗಿವೆ. ಗಂಗಾಧರ ಚಿತ್ತಾಲ, ಶಂಕರ ಮೊಕಾಶಿ, ಕೆ.ಎಸ್.ನ., ರಾಮಚಂದ್ರ ಶರ್ಮ, ಎ.ಕೆ.ರಾಮಾನುಜನ್, ಜಿ.ಎಸ್.ಸಿದ್ಧಲಿಂಗಯ್ಯ, ಅರವಿಂದನಾಡಕರ್ಣಿ, ಪಿ.ಲಂಕೇಶ್, ಎಚ್.ಎಂ.ಚನ್ನಯ್ಯ, ಸುಮತೀಂದ್ರ ನಾಡಿಗ, ಕೆ.ಎಸ್.ನಿಸಾರ್ ಅಹಮದ್, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಶ್ರೀಕೃಷ್ಣ ಅಲನಹಳ್ಳಿ ಮೊದಲಾದವರು ನವ್ಯಕಾವ್ಯ ಜಗತ್ತಿನಲ್ಲಿ ಗಣ್ಯರಾದವರು. ನವ್ಯರೆಂದು ಮುದ್ರೆಯೊತ್ತದ ಕವಿ ಕುವೆಂಪು, ಬೇಂದ್ರೆ, ಪುತಿನ ಇವರಲ್ಲಿಯೂ ಈಚಿನ ಕೆಲವು ಕೃತಿಗಳಲ್ಲಿ ನವ್ಯತೆಯ ಸೊಗಡನ್ನು ಕಾಣಬಹುದು.

ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ನಮ್ಮಲ್ಲಿ ಜಾನಪದದತ್ತ ಆಸಕ್ತಿ ಮೂಡಿ ಜನಪದ ಸಾಹಿತ್ಯ ಸಂಗ್ರಹದ ಕೃಷಿ ಕಳೆದ ಏಳು ದಶಕಗಳ ಹಿಂದಿನಿಂದ ಪ್ರಾರಂಭವಾಯಿತು. ಹಲಸಂಗಿ ಸೋದರರಾದ ರೇವಪ್ಪ, ಮಧುರ ಚೆನ್ನ, ಸಿಂಪಿ ಲಿಂಗಣ್ಣ– ಈ ಮೂವರು ಹೊರತಂದ ಗರತಿಯ ಹಾಡು ಕನ್ನಡದ ಮೊಟ್ಟಮೊದಲ ಜನಪದ ಸಂಗ್ರಹ. ರೇವಪ್ಪನವರು ಹೊರತಂದ ಮಲ್ಲಿಗೆ ದಂಡೆ ಜನಪದ ಸಾಹಿತ್ಯದ ಎಲ್ಲ ಮುಖಗಳನ್ನೂ ಒಳಗೊಂಡ ಅಮೂಲ್ಯ ಸಂಗ್ರಹ. ಇವೆರಡೂ ತ್ರಿಪದಿಗಳಲ್ಲಿವೆ. ಸಿಂಪಿ ಲಿಂಗಣ್ಣ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ, ಗದ್ದಗಿಮಠ, ಕರಾಕೃ, ಜೀ.ಶಂ.ಪ., ರಾಗೌ, ಧವಳಶ್ರೀ, ಪಿ.ಕೆ.ರಾಜಶೇಖರ ಮೊದಲಾದ ನೂರಾರು ಜನ ತಮ್ಮ ಸಂಗ್ರಹಗಳಿಂದ ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕ್ಕೆ ಅವಕಾಶ ದೊರೆತು ಜಾನಪದ ವಸ್ತುಸಂಗ್ರಹಾಲಯವೂ ಸ್ಥಾಪನೆಯಾಗಿದ್ದು ಜಾನಪದದ ವೈಜ್ಞಾನಿಕ ಅಧ್ಯಯನ ನಡೆಯುತ್ತಿದೆ.

ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಉದಿಸಿದ ಆಧುನಿಕ ಕನ್ನಡ ಸಾಹಿತ್ಯದ ಇನ್ನೊಂದು ವಿಶೇಷ ಪ್ರಕಾರವೆಂದರೆ ಗದ್ಯಸಾಹಿತ್ಯ. ಪಾಶ್ಚಾತ್ಯ ಸಾಹಿತ್ಯದಲ್ಲಿ ಕಾಣಬರುವ ಎಲ್ಲ ಗದ್ಯಪ್ರಕಾರಗಳೂ – ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ನಾಟಕ, ವ್ಯಕ್ತಿಚಿತ್ರ, ಪ್ರಬಂಧ – ಹರಟೆ, ಪ್ರವಾಸ ಸಾಹಿತ್ಯ, ಪತ್ರ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಮರ್ಶೆ, ಹಾಸ್ಯ ಪ್ರಬಂಧ ಇತ್ಯಾದಿ – ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಬೆಳೆದು ನಿಂತಿವೆ. ಹೊಸಗನ್ನಡ ಗದ್ಯ ಸಾಹಿತ್ಯಕ್ಕೆ ಕೆಂಪುನಾರಾಯಣ (ಸು.1823) ತನ್ನ ಮುದ್ರಾಮಂಜೂಷದಿಂದ ನಾಂದಿ ಹಾಡಿದನೆಂದು ಹೇಳಬಹುದು. ಇದೇ ಸಂದರ್ಭದಲ್ಲಿ ಸಂಪ್ರದಾಯಕ್ಕೂ ಆಧುನಿಕತೆಗೂ ಕಟ್ಟಿದ ರಸಸೇತುವೆಯಂತಿರುವ ಮುದ್ದಣನನ್ನು ಹೆಸರಿಸಬಹುದು. ಈತ ಅದ್ಭುತ ರಾಮಾಯಣ, ರಾಮಾಶ್ವಮೇಧ ಎಂಬ ಎರಡು

ಗದ್ಯಗ್ರಂಥಗಳನ್ನು ಬರೆದಿದ್ದಾನೆ. ಹಳಗನ್ನಡ–ನಡುಗನ್ನಡ ಬೆರೆತ ಇವನ ಗದ್ಯಶೈಲಿ ಹೊಸಗನ್ನಡಕ್ಕೆ ನಾಂದಿ ಹಾಡಿತೆಂದು ಹೇಳಬಹುದು. ಭಾಷಾಶೈಲಿಯ ದೃಷ್ಟಿಯಿಂದ ಈತನ ಗದ್ಯ ವಿಶಿಷ್ಟವಾಗಿದೆ. ಇವೆರಡರ ವಸ್ತುವೂ ಹಳೆಯದು. ಬಳಸಿರುವ ಭಾಷೆ ಹಳಗನ್ನಡ, ಆದರೆ ಕವಿಯ ಮನೋಭಾವ ಆಧುನಿಕ. ರಾಮಾಶ್ವಮೇಧದ ಮುದ್ದಣ ಮನೋರಮೆಯರ ಸಂಭಾಷಣೆ ಸ್ವಾರಸ್ಯಪೂರ್ಣವಾಗಿದೆ.

ಆಧುನಿಕ ಕನ್ನಡ ಗದ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದುದು. ಈ ಪ್ರಕಾರ ಕನ್ನಡದಲ್ಲಿ 19ನೆಯ ಶತಮಾನದ ಪೂರ್ವಾರ್ಧದಲ್ಲಿಯೆ ಕ್ವಚಿತ್ತಾಗಿ ಕಾಣಿಸಿಕೊಂಡಿತಾದರೂ ನಮ್ಮ ಜನರಲ್ಲಿ ಇದರ ವಾಚನಾಭಿರುಚಿಯನ್ನು ನೆಲೆಗೊಳಿಸಿದವರು ಬಿ.ವೆಂಕಟಾಚಾರ್ಯ ಮತ್ತು ಗಳಗನಾಥರು. ಗುಲ್ವಾಡಿ ವೆಂಟರಾಯ, ಬೋಳಾರ ಬಾಬುರಾಯ, ಕೆರೂರ ವಾಸುದೇವಾಚಾರ್ಯ ಮೊದಲಾದವರು ಸುಂದರವಾದ ಸ್ವತಂತ್ರ ಕಾದಂಬರಿಗಳನ್ನು ರಚಿಸಿದ್ದಾರೆ. ಅವು ಕೇವಲ ಒಂದೋ ಎರಡೋ ಅಷ್ಟೇ. ವಾಸ್ತವಿಕತೆಯನ್ನು ಕಾದಂಬರಿಯಲ್ಲಿ ತರುವ ಸಂಪ್ರದಾಯಕ್ಕೆ ಎಂ.ಎಸ್.ಪುಟ್ಟಣ್ಣನವರು ಆದ್ಯರಾದರು. 1930ರಿಂದ ಈಚೆಗೆ ಕಾದಂಬರಿಕಾರರ ಸಂಖ್ಯೆ ಅಪರಿಮಿತವಾಗಿದೆ. ಇವರ ಸಾಲಿನಲ್ಲಿ ಶಿವರಾಮ ಕಾರಂತ, ಕುವೆಂಪು, ರಾವಬಹಾದ್ದೂರ ಇವರ ಹೆಸರುಗಳು ಅಗ್ರಗಣ್ಯವಾದವು. ಆಧುನಿಕ ಕಾದಂಬರಿಕಾರರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳನ್ನು ಬರೆದವರಲ್ಲಿ ಅ.ನ.ಕೃ. ಪ್ರಸಿದ್ಧರು. ಅ.ನ.ಕೃ. ಅವರ ಪರಂಪರೆಗೆ ಸೇರಿದವರು ತ.ರಾ.ಸು. ಚಿತ್ರದುರ್ಗದ ಇತಿಹಾಸವನ್ನು ಆಧರಿಸಿ ಬರೆದಿರುವ ಇವರ ಐತಿಹಾಸಿಕ ಕಾದಂಬರಿಗಳು ಸುಪ್ರಸಿದ್ಧವಾಗಿವೆ. ವಿನಾಯಕ, ಮಿರ್ಜಿ ಅಣ್ಣಾರಾಯ, ಶ್ರೀರಂಗ, ಶ್ರೀನಿವಾಸ, ಕೆ.ವಿ.ಅಯ್ಯರ್, ಬಿ.ಪುಟ್ಟಸ್ವಾಮಯ್ಯ, ಕೃಷ್ಣಮೂರ್ತಿ ಪುರಾಣಿಕ, ಎಸ್.ಎಲ್.ಭೈರಪ್ಪ, ತ್ರಿವೇಣಿ, ಎಂ.ಕೆ.ಇಂದಿರಾ ಮೊದಲಾದ ಕಾದಂಬರಿಕಾರರು ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ.

ಹೊಸಗನ್ನಡ ಗದ್ಯಸಾಹಿತ್ಯದಲ್ಲಿ ಕಾದಂಬರಿಯನ್ನು ಬಿಟ್ಟರೆ ಎರಡನೆಯ ಸ್ಥಾನ ಸಣ್ಣಕಥೆಗೆ ಸಲ್ಲುತ್ತದೆ. ಈ ಪ್ರಕಾರದಲ್ಲಿ ಕೆಲಸ ಮಾಡಿರುವವರ ಸಂಖ್ಯೆಯೂ ಅಪಾರ. ಕನ್ನಡದಲ್ಲಿ ಸಣ್ಣಕಥೆಯನ್ನು ಆರಂಭಿಸಿದವರು ಯಾರೇ ಆಗಲಿ ಅದನ್ನು ಸ್ಥಾಯಿಯಾಗಿ ಮಾಡಿದವರು ಶ್ರೀನಿವಾಸರು. ಕೆರೂರ ವಾಸುದೇವಾಚಾರ್ಯ, ಎಂ.ಎನ್.ಕಾಮತ್, ಪಂಜೆಮಂಗೇಶರಾವ್ – ಇವರು ಶ್ರೀನಿವಾಸರ ಸಮಕಾಲೀನರು. ಈ ಪ್ರಕಾರವನ್ನು ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಚದುರಂಗ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಅಶ್ವತ್ಥ, ಅ.ನ.ಕೃ. ಗೌರಮ್ಮ, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ, ತೇಜಸ್ವಿ, ಸದಾಶಿವ, ಬಿ. ಶಾಮಸುಂದರ, ದೇವನೂರು ಮಹಾದೇವ, ಮೊಗಳ್ಳಿಗಣೇಶ ಮೊದಲಾದವರು ಸಮರ್ಥವಾಗಿ ಮುಂದುವರಿಸಿದರು.

ಗದ್ಯಪ್ರಕಾರಗಳಲ್ಲಿ ಜೀವನಚರಿತ್ರೆ ಮತ್ತೊಂದು. ಕನ್ನಡದಲ್ಲಿ ಇದುವರೆಗೆ ಸುಮಾರು ಒಂದು ಸಾವಿರದಷ್ಟು ಜೀವನಚರಿತ್ರೆಗಳು ಪ್ರಕಟಗೊಂಡಿವೆ. ಈ ಸಾಹಿತ್ಯ ಪ್ರಕಾರ ಅತ್ಯಂತ ಹುಲುಸಾಗಿ ಬೆಳೆದಿದೆ. ಈ ಪ್ರಕಾರವನ್ನು ಜನಪ್ರಿಯವಾಗಿ ಮಾಡಿದವರು ಸುಬೋಧ ರಾಮರಾಯರು. ಡಿ.ವಿ.ಜಿ., ಕುವೆಂಪು, ಸಿ.ಕೆ.ವೆಂಕಟರಾಮಯ್ಯ, ದೇಜಗೌ ಮೊದಲಾದ ಅನೇಕರು ಶ್ರೇಷ್ಠವಾದ ಜೀವನಚರಿತ್ರೆಗಳನ್ನು ಬರೆದಿದ್ದಾರೆ.

ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದ ಕನ್ನಡದಲ್ಲಿ ಕಾಣಿಸಿಕೊಂಡ ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಬಹುಮುಖ್ಯವಾದುದು. 19ನೆಯ ಶತಮಾನದ ಕಡೆಯ ಭಾಗದಿಂದ ಮುಂದೆ ಈ ಪ್ರಕಾರ ಅತ್ಯಂತ ಹುಲುಸಾಗಿ ಬೆಳೆಯುತ್ತಾ ಬಂದಿದೆ. ಮೊದಮೊದಲು ಸಂಸ್ಕೃತದಿಂದ ಭಾಷಾಂತರ ಮಾಡಿಕೊಳ್ಳುವ ಪರಿಪಾಠವಿದ್ದುದು ಈ ಶತಮಾನದ ಆರಂಭದಿಂದ ಸ್ವತಂತ್ರ ನಾಟಕ ರಚನೆಗೆ ಎಡೆಮಾಡಿಕೊಟ್ಟಿತು. ಶುದ್ಧ ಗದ್ಯದಲ್ಲಿ ಸಾಮಾಜಿಕ ನಾಟಕಗಳನ್ನು ರಚಿಸಿ, ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಕೈಲಾಸಂ ಅವರಿಗೆ ಸಲ್ಲುತ್ತದೆ. ನಾಟಕದ ಎಲ್ಲ ಪ್ರಕಾರಗಳಲ್ಲಿಯೂ ಗದ್ಯ ಬಳಕೆಯಾಗಿರುವ ನಾಟಕಗಳು ವಿಪುಲ ಸಂಖ್ಯೆಯಲ್ಲಿ ಈಗ ಕಾಣಿಸಿಕೊಂಡಿವೆ. ಶ್ರೀರಂಗ, ಕುವೆಂಪು, ಮಾಸ್ತಿ, ಶಿವರಾಮ ಕಾರಂತ, ಪರ್ವತವಾಣಿ, ಪು.ತಿ.ನ., ವಿ.ಸೀತಾರಾಮಯ್ಯ, ಎಚ್.ಕೆ.ರಂಗನಾಥ, ಗಿರೀಶಕಾರ್ನಾಡ ಮೊದಲಾದ ನಾಟಕ ಕರ್ತೃಗಳು ಪ್ರಸಿದ್ಧರಾಗಿದ್ದಾರೆ. (ಟಿ.ಎಸ್.ಎಸ್.)

**ಕನ್ನಡ ಸಾಹಿತ್ಯ ಪರಿಷತ್ತು :** ಕನ್ನಡ ಭಾಷೆ ಮತ್ತು ಸಾಹಿತ್ಯದ ಸರ್ವತೋಮುಖವಾದ ಬೆಳೆವಣಿಗೆ, ಕನ್ನಡದ ಸ್ಥಾನಮಾನ ಹಾಗೂ ಅಮೂಲ್ಯ ಗ್ರಂಥಗಳ ಪ್ರಕಟಣೆ, ಕನ್ನಡ ಜನಜಾಗೃತಿ ಮೊದಲಾದ ಮಹತ್ಕಾರ್ಯಗಳನ್ನು ನಡೆಸುತ್ತಿರುವ ಪ್ರಮುಖ ಸಂಸ್ಥೆ. ಸು. 98 ವರ್ಷಗಳಿಂದಲೂ ಉದ್ದೇಶಿತ ಧ್ಯೇಯಕ್ಕಾಗಿ ಅವಿರತವಾಗಿ ಶ್ರಮಿಸುತ್ತಿದೆ. ಈ ಮಹಾಸಂಸ್ಥೆ ಹುಟ್ಟಿದಂದಿನ ಸಾಮಾಜಿಕ ಹಿನ್ನೆಲೆ, ಸಂಸ್ಥೆಯ ಕಾರ್ಯಕಲಾಪಗಳು, ಸಾಧನೆಗಳು ಮುಂತಾದ ವಿಷಯಗಳನ್ನಿಲ್ಲಿ ಪ್ರಸ್ತಾಪಿಸಿದೆ.

**ಹಿನ್ನೆಲೆ :** 'ಕಾವೇರಿಯಿಂದ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' ಎಂದು ಕವಿರಾಜಮಾರ್ಗಕಾರ ಪ್ರಾಚೀನ ಕರ್ನಾಟಕದ ಎಲ್ಲೆಕಟ್ಟನ್ನು ನಿರ್ದೇಶಿಸಿದ್ದಾನಷ್ಟೆ. ರಾಷ್ಟ್ರಕೂಟರ ನೃಪತುಂಗನ ಕಾಲದ (814–77) ಈ ಕನ್ನಡ ನಾಡು ಕಾಲಕಾಲಕ್ಕೆ ಕುಗ್ಗುತ್ತ ಬಂದರೂ ಮೈಸೂರು ರಾಜ್ಯದ ಹೈದರ್ ಟಿಪ್ಪುಸುಲ್ತಾನರ ಕಾಲದಲ್ಲಿಯೂ ತಕ್ಕಮಟ್ಟಿಗೆ ಉದ್ದಗಲವನ್ನು ಪಡೆದಿತ್ತು. 1799ರಲ್ಲಿ ಇಂಗ್ಲಿಷರು ಟಿಪ್ಪುವನ್ನು ಸೋಲಿಸಿದ ಮೇಲೆ, ತಾವು ಗೆದ್ದ ರಾಜ್ಯದ ಕೆಲವು ಭಾಗಗಳನ್ನು ತಾವೇ ಉಳಿಸಿಕೊಂಡರು. ಸ್ವಲ್ಪ ಭಾಗವನ್ನು ತಮಗೆ ಯುದ್ಧದಲ್ಲಿ ನೆರವಾಗಿದ್ದ ಹೈದರಾಬಾದು ನಿಜಾಮನಿಗೆ ಕೊಟ್ಟರು; ಹೈದರನಿಗೆ ಮುಂಚೆ ಮತ್ತು ಅವನ ಕಾಲದಲ್ಲಿ–ಮೈಸೂರು ಒಡೆಯರ ವಶದಲ್ಲಿದ್ದ ರಾಜ್ಯದ ಬಹುಭಾಗ ಅವರಿಗೇ ಹಿಂದಿರುಗಿ ಬಂದಿತು. ಪುನರುದಯವಾದ ಮೈಸೂರು ಸಂಸ್ಥಾನ ಮೈಸೂರು ಅರಸರ ಆಳ್ವಿಕೆಯಲ್ಲಿ ಬಹುಮುಖವಾದ ಏಳಿಗೆಯನ್ನು ಹೊಂದುತ್ತ ಬಂದಿತು.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಮೈಸೂರು ಅರಸರ ಆಶ್ರಯದಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ಏಳಿಗೆಗೆ ಉದಾರವಾದ ಆಶ್ರಯವಿತ್ತು. ನಾಲ್ವಡಿ ಕೃಷ್ಣರಾಜರ ಆಳ್ವಿಕೆಯಲ್ಲಿ ಅವರ ಪ್ರೋತ್ಸಾಹದಿಂದಲೂ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರ ಪ್ರೇರಣೆಯಿಂದಲೂ ಸಂಪದಭ್ಯುದಯ ಸಮಾಜ (ಮೈಸೂರು ಎಕನಾಮಿಕ್ ಕಾನ್ಫರೆನ್ಸ್) ಸ್ಥಾಪಿತವಾಯಿತು. ರಾಜಮಂತ್ರ ಪ್ರವೀಣ ಎಚ್.ವಿ. ನಂಜುಂಡಯ್ಯನವರು ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿಗಳಾದರು. ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆಗೆ ಪ್ರೋತ್ಸಾಹ ಕೊಡುವುದು, ಕನ್ನಡದ ಮೂಲಕ ವಿದ್ಯೆ ಮತ್ತು ಜ್ಞಾನಗಳ ಪ್ರಸಾರ ಮಾಡುವುದು–ವಿಶ್ವವಿದ್ಯಾನಿಲಯದ ಧ್ಯೇಯವಾಗಿದ್ದುವು. ಇದಕ್ಕೂ ಮುಂಚೆ ಚಾಮರಾಜ ಒಡೆಯರ ಕಾಲದಲ್ಲಿ ಕರ್ಣಾಟಕ ಭಾಷೋಜ್ಜೀವಿಯ ಸಭೆ ಸ್ಥಾಪಿತವಾಗಿತ್ತು; ಪ್ರಾಚ್ಯವಿದ್ಯಾಸಂಶೋಧನಾಲಯ (ಒರಿಯಂಟಲ್ ಲೈಬ್ರರಿ) ಏರ್ಪಟ್ಟಿತ್ತು. ಕಿಟ್ಟೆಲ್, ರೈಸ್, ಆರ್. ನರಸಿಂಹಾಚಾರ್, ಎಸ್.ಜಿ. ನರಸಿಂಹಾಚಾರ್, ಬಿ.ಎಂ. ಶ್ರೀಕಂಠಯ್ಯ, ಶಾಂತಕವಿ, ವೆಂಕಟರಂಗೋಕಟ್ಟಿ, ಪಂಜೆ ಮಂಗೇಶರಾವ್ ಮೊದಲಾದ ವಿದ್ವಾಂಸರು ಕನ್ನಡ ಪ್ರಾಚೀನ ಗ್ರಂಥಗಳ ಪ್ರಕಟಣೆ, ಲೇಖನ, ಭಾಷಣ, ಮುಂತಾದ ಕಾರ್ಯಗಳ ಮೂಲಕ ಕನ್ನಡ ಭಾಷಾ ಸಾಹಿತ್ಯಗಳ ಸೇವೆ ಮಾಡುತ್ತಿದ್ದರು. 1890ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡ ನಿರ್ಮಾಣಕ್ಕೆ ಮೈಸೂರು ಸರ್ಕಾರ ಉದಾರವಾಗಿ ಧನಸಹಾಯ ಮಾಡಿತು (1905); ಅಸ್ತಿವಾರ ಹಾಕುವಾಗ, ಆ ಸಹಾಯದ ಸ್ಮರಣಾರ್ಥವಾಗಿ ಕಟ್ಟಡಕ್ಕೆ ಚಾಮರಾಜ ಮಂದಿರ ಎಂದು ಹೆಸರಿಡಲಾಯಿತು. ವಿದ್ಯಾವರ್ಧಕ ಸಂಘ ತನ್ನ ಸಾಹಿತ್ಯ ಪರೀಕ್ಷೆಗಳಿಗೆ ಮೈಸೂರು ಸರ್ಕಾರದ ಮೂಲಕ ಮೈಸೂರಿನ ಕನ್ನಡ ವಿದ್ವಾಂಸರ ನೆರವು ಪಡೆಯುತ್ತಿತ್ತು. ಸಂಘ 1908, 1909ನೆಯ ವರ್ಷಗಳಲ್ಲಿ, ಕರ್ಣಾಟಕ ಗ್ರಂಥಗಳಲ್ಲಿ ಉಪಯೋಗಿಸುವ ಭಾಷೆಯಲ್ಲಿ ಏಕರೂಪತೆಯನ್ನುಂಟುಮಾಡುವ ಉದ್ದೇಶದಿಂದ, ಅಖಿಲ ಕರ್ಣಾಟಕ ಪ್ರಾತಿನಿಧ್ಯವುಳ್ಳ ಗ್ರಂಥಕರ್ತರ ಸಮ್ಮೇಳನಗಳನ್ನು ಕೂಡಿಸಿತ್ತು. ಹೀಗೆ ಕರ್ಣಾಟಕ ವಿದ್ಯಾವರ್ಧಕ ಸಂಘದ ಬೆಳೆವಣಿಗೆಯಲ್ಲೂ ಕಾರ್ಯಕಲಾಪಗಳಲ್ಲೂ ಅಖಿಲ ಕರ್ಣಾಟಕ ದೃಷ್ಟಿಯೇ ಇತ್ತು. ಎರಡನೆಯ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಕರೆಯಬೇಕೆಂಬ ಆಲೋಚನೆಯಿದ್ದು, ಅದನ್ನು ಆಗಿನ ವಿದ್ಯಾಧಿಕಾರಿಗಳಾದ ಎಂ. ಶಾಮರಾಯರು ಅನುಮೋದಿಸಿದ್ದರೂ ಅದು ಕಾರ್ಯಗತವಾಗಲಿಲ್ಲ. ಆದರೆ ಎರಡೂ ಕಡೆಯ ವಿದ್ವಾಂಸರಲ್ಲಿ ಈ ಬಯಕೆ ಬತ್ತಿರಲಿಲ್ಲ. 1915ರಲ್ಲಿ ಈ ಬಯಕೆ ಹಸಿರೊಡೆದು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಯಿತು.

**ಸ್ಥಾಪನೆ :** ಮೈಸೂರಿನ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಏರ್ಪಟ್ಟಿದ್ದ ಸಂಪದಭ್ಯುದಯ ಸಮಾಜ ಕನ್ನಡದ ಏಳಿಗೆಯನ್ನು ಸಾಧಿಸುವ ಉದ್ದೇಶದಿಂದ 1914ರಲ್ಲಿ ಕೂಡಿಸಿದ ವಾರ್ಷಿಕ ಸಮ್ಮೇಳನದಲ್ಲಿ ಭಾಷಾಸಂಸ್ಕರಣ ವಿಷಯವೂ ಕರ್ಣಾಟಕ ಗ್ರಂಥಾವಳಿಯ ವೃದ್ಧಿಯ ವಿಷಯವೂ ಚರ್ಚಿತವಾದುವು. ಕರ್ಣಾಟಕ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು

ಇರಬೇಕು ಮತ್ತು ಸರ್ಕಾರದವರು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ಎಲ್ಲ ಬಗೆಯ ಸಹಾಯವನ್ನು ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ತೀರ್ಮಾನವಾಯಿತು. ಈ ತೀರ್ಮಾನಕ್ಕೆ ಅನುಗುಣವಾಗಿ 31–10–1914ರಂದು, ಕನ್ನಡನಾಡುಗಳ ಪ್ರಮುಖರನ್ನು ಬೆಂಗಳೂರಿಗೆ ಆಹ್ವಾನಮಾಡಿ, ಕರ್ಣಾಟಕ ಭಾಷಾ ಪರಿಷ್ಕರಣಕ್ಕೂ ಕರ್ಣಾಟಕ ಗ್ರಂಥಾಭಿವೃದ್ಧಿಗೂ ಅನುಕೂಲವಾಗುವಂತೆ ಸಂಘವೊಂದನ್ನು ಏರ್ಪಡಿಸುವ ಕಾರ್ಯವನ್ನು ನಿರ್ವಹಿಸಲು ಒಂದು ಉಪ ಸಮಿತಿಯನ್ನು ಸಮಾಜದ ವಿದ್ಯಾವಿಷಯಕ ಮಂಡಲಿ ನೇಮಕ ಮಾಡಿತು. ಎಂ. ಶಾಮರಾವ್, ಕರ್ಪೂರ ಶ್ರೀನಿವಾಸರಾವ್, ಡಾ. ಪಿ.ಎಸ್. ಅಚ್ಯುತರಾವ್– ಇವರು ಉಪಸಮಿತಿಯ ಸದಸ್ಯರು. ಉಪಸಮಿತಿಯ ಕೋರಿಕೆಯಂತೆ, ಮೇಲ್ಕಂಡ ಉದ್ದೇಶ ಸಾಧನೆಗೆ ಸಲಹೆಗಳನ್ನೊಳ ಗೊಂಡ 31 ಲೇಖನಗಳು ವಿದ್ವಾಂಸರಿಂದ ಬಂದುವು. ಉಪ ಸಮಿತಿಯ 22–3–1915ರ ಸಭೆಯಲ್ಲಿ, ಸಮ್ಮೇಳನ ಕಾರ್ಯ ಪ್ರಾರಂಭವಾಗ ಬೇಕೆಂದು ತೀರ್ಮಾನವಾಯಿತು. ಅದರಂತೆ, 3–5–1915ರಂದು ಅಪರಾಹ್ನ 3 ಗಂಟೆಗೆ ಬೆಂಗಳೂರು ಸರ್ಕಾರಿ ಪ್ರೌಢ ವಿದ್ಯಾಶಾಲೆಯ ವಿಶಾಲ ವಾದ ಹಜಾರದಲ್ಲಿ ಸಮ್ಮೇಳನ ಪ್ರಾರಂಭವಾಯಿತು. ಧಾರವಾಡ, ಬಿಜಾಪುರ, ಬೆಳಗಾಂ, ಕಾರವಾರ, ಬೊಂಬಾಯಿ ನಗರ, ಬಳ್ಳಾರಿ ದಕ್ಷಿಣ ಕನ್ನಡ, ಮೈಸೂರು ಸಂಸ್ಥಾನದ ಜಿಲ್ಲೆಗಳು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ವಿದ್ಯಾವ್ಯಾಸಂಗ ಸಮಾಜದ ಬೊಂಬಾಯಿ ನಗರದ ಕಾಲೇಜು ಮತ್ತು ಹೈಸ್ಕೂಲುಗಳು–ಇವುಗಳ ಪ್ರತಿನಿಧಿಗಳೂ ಧಾರವಾಡದ ಕರ್ನಾಟಕ ವೃತ್ತ ಮತ್ತು ಧನಂಜಯ, ಹುಬ್ಬಳ್ಳಿಯ ಸಚಿತ್ರಭಾರತ ಮಂಗಳೂರಿನ ಸ್ವದೇಶಾಭಿಮಾನಿ ಮತ್ತು ಮೈಸೂರು ಸಂಸ್ಥಾನದ ವೃತ್ತಾಂತ ಪತ್ರಿಕೆಗಳ ಸಂಪಾದಕರೂ ಹಾಜರಿದ್ದರು. ಆ ಸಮ್ಮೇಳನಕ್ಕೆ ಕನ್ನಡ ನಾಡುಗಳ ಎಲ್ಲ ಕಡೆಗಳಿಂದಲೂ ಪ್ರತಿನಿಧಿಗಳು ಬಂದಿದ್ದಂತೆ ಭಾವಿಸಬಹುದು. ಆ ಪ್ರಥಮ ಸಮ್ಮೇಳನದ ಪ್ರಥಮ ಸಭೆಯ ಅಗ್ರಸ್ಥಾನಾಧಿಪತಿಯಾಗಿ ರಾಜಮಂತ್ರಪ್ರವೀಣ ಎಚ್.ವಿ. ನಂಜುಂಡಯ್ಯನವರನ್ನು ನೆರೆದಿದ್ದ ಮಹಾಜನರು ಒಮ್ಮತದಿಂದ ಚುನಾಯಿಸಿದರು. ಮೂರನೆಯ ದಿನದ ಸಭೆಯಲ್ಲಿ ಪರಿಷತ್ತಿನ ರಚನಾಕ್ರಮ ಮತ್ತು ನಿಬಂಧನೆಗಳು ಜಿಜ್ಞಾಸಾಪೂರ್ವಕವಾಗಿ ತೀರ್ಮಾನಿಸಲ್ಪಟ್ಟುವು.

ಕರ್ಪೂರ ಶ್ರೀನಿವಾಸರಾವ್

ಸಂಘಕ್ಕೆ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು ಹೆಸರಿರತಕ್ಕದ್ದಲ್ಲದೆ ಪರಿಷತ್ತಿನ ಮುಖ್ಯ ಕಾರ್ಯಸ್ಥಾನ ಬೆಂಗಳೂರಿನಲ್ಲಿರತಕ್ಕದ್ದು. ಕರ್ಣಾಟಕ ಭಾಷಾ ಪರಿಷ್ಕರಣವೂ ಭಾಷೋನ್ನತಿಯೂ ಕರ್ಣಾಟಕ ಗ್ರಂಥಾಭಿವೃದ್ಧಿಯೂ ಪರಿಷತ್ತಿನ ಮುಖ್ಯ ಉದ್ದೇಶಗಳು. ಈ ಮುಖ್ಯೋದ್ದೇಶವನ್ನು; ಸಾಧಿಸುವ ಮಾರ್ಗಗಳು: 1. ಕನ್ನಡ ವ್ಯಾಕರಣ, ಭಾಷಾಚರಿತ್ರೆ, ನಿಘಂಟುಗಳು–ಇವುಗಳ ರಚನೆ, ರಚನೆಗೆ ಸಹಾಯ. 2. ಕನ್ನಡಶಾಸ್ತ್ರಗ್ರಂಥಗಳ ಪಾರಿಭಾಷಿಕ ಶಬ್ದಕೋಶಗಳ ನಿರ್ಮಾಣ. 3. ತತ್ತ್ವ ವಿಚಾರ, ಭೌತಿಕಶಾಸ್ತ್ರ ಚರಿತ್ರೆ, ಸಾಹಿತ್ಯ ಗ್ರಂಥಗಳ ಲೇಖನಕ್ಕೆ ಪ್ರೋತ್ಸಾಹ; ಅವುಗಳ ಪ್ರಕಟಣೆ. 4. ಕನ್ನಡ ಭಾಷೆ, ಕನ್ನಡ ಗ್ರಂಥಗಳು–ಇವುಗಳ ವಿಷಯವಾಗಿ ಚರ್ಚೆ, ನಿರ್ಣಯಗಳ ಅಂಗೀಕಾರ. 5. ಇತರ ಭಾಷೆಗಳ ಉತ್ತಮ ಗ್ರಂಥಗಳ ಭಾಷಾಂತರಗಳ ಪ್ರಕಟಣೆ. 6. ಉತ್ಕೃಷ್ಟ ಪ್ರಾಚೀನ ಗ್ರಂಥಗಳ ಪ್ರಕಟನೆ; ಕನ್ನಡ ಸಂಸ್ಥಾನಗಳ ಚರಿತ್ರೆಗಳ ಸಂಗ್ರಹ, ಪ್ರಕಟಣೆ; ಪ್ರಾಚೀನ ವಸ್ತುಸಂಗ್ರಹಾಲಯ. 7. ಕರ್ಣಾಟಕ ಭಾಷಾ ಸಂಸ್ಕರಣ, ಗ್ರಂಥಾಭಿವೃದ್ಧಿ–ಈ ವಿಷಯಕ ಉಪನ್ಯಾಸಗಳನ್ನು ಒಳಗೊಂಡ ಪತ್ರಿಕೆಗಳ ಪ್ರಕಟಣೆ. 8. ಗ್ರಂಥಪ್ರತಿಗಳನ್ನು ಅಥವಾ ಗ್ರಂಥಸ್ವಾಮ್ಯಗಳನ್ನು ಕೊಳ್ಳುವ ಮೂಲಕ, ಸ್ವಂತವಾಗಿ ಗ್ರಂಥಪ್ರಕಟಣೆ ಮಾಡುವ ಗ್ರಂಥಕರ್ತರಿಗೆ ಬಿರುದುಗಳನ್ನೋ ಸಂಭಾವನೆಯನ್ನೋ ಕೊಡುವ ಮೂಲಕ ಪ್ರೋತ್ಸಾಹ ನೀಡಿಕೆ, 9. ಕನ್ನಡ ಭಾಷಾಸಾಹಿತ್ಯ ಸಂಬಂಧವಾದ ಪರಿಶೋಧನ ಕಾರ್ಯನಿರತ ವಿದ್ವಾಂಸರಿಗೆ ಪಂಡಿತ ವೇತನ. 10. ಮೇಲ್ಕಂಡ ಮುಖ್ಯೋದ್ದೇಶ ಸಾಧನಕ್ಕೆ ಆಯಾ ಸರ್ಕಾರದವರ ಸಹಾಯ ಸಂಪಾದನ. 11. ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಕನ್ನಡ ವಾಚನಾಲಯ ಮತ್ತು ಪುಸ್ತಕ ಭಂಡಾರಗಳ ಏರ್ಪಾಡು. 12. ಕನ್ನಡ ನಾಡುಗಳ ಪ್ರಮುಖರ ಸಭೆಗಳನ್ನೂ ವಿದ್ವಾಂಸರ ಉಪನ್ಯಾಸಗಳನ್ನೂ ಏರ್ಪಡಿಸುವುದು. 13. ಉದ್ದೇಶಕ್ಕೆ ಸಾಧಕಗಳಾದ ಇತರ ಪ್ರಯತ್ನಗಳು.

**ಪರಿಷತ್ತಿನ ರಚನೆ :** ಪೋಷಕ, ಉಪಪೋಷಕ, ಪ್ರದಾತೃ, ಆಶ್ರಯದಾತ, ಆಜೀವ, ಸಾಮಾಜಿಕ ಒಂದನೆಯ ಮತ್ತು ಎರಡನೆಯ ವರ್ಗದ ಸಾಮಾನ್ಯ ಸಾಮಾಜಿಕರು, ರಾಜ್ಯಗಳನ್ನಾಳುವ ಪ್ರಸಿದ್ಧ ವಂಶೀಯರು–ಇವರು ಮಾತ್ರ ಪೋಷಕರೂ ಉಪಪೋಷಕರೂ ಆಗತಕ್ಕದ್ದು.

ಕಾರ್ಯನಿರ್ವಾಹಕ ಮಂಡಳಿ: ಒಟ್ಟು 30 ಮಂದಿ ಸದಸ್ಯರು: ಅಧ್ಯಕ್ಷರು, ಉಪಾಧ್ಯಕ್ಷರು, ಕೋಶಾಧಿಕಾರಿ, ಕಾರ್ಯದರ್ಶಿಗಳು. ಪ್ರಾತಿನಿಧ್ಯ: ಮೈಸೂರು ಸಂಸ್ಥಾನ (12 ಮಂದಿ); ಬೊಂಬಾಯಿ ಆಧಿಪತ್ಯ (8); ಮದರಾಸು (5) ; ಹೈದರಾಬಾದು (2); ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು (2); ಕೊಡಗು (1).

ವಾರ್ಷಿಕ ಸಮ್ಮೇಳನ ಕಾಲದಲ್ಲಿ ವಿದ್ವಾಂಸರು ಉಪನ್ಯಾಸ ಮಾಡುವಂತೆಯೂ ಪ್ರೌಢ ಲೇಖನಗಳನ್ನು ಓದುವಂತೆಯೂ ಕಾರ್ಯನಿರ್ವಾಹಕ ಮಂಡಲಿಯವರು ಏರ್ಪಡಿಸತಕ್ಕದ್ದು. ಪ್ರಸಿದ್ಧ ಪಂಡಿತರನ್ನು ಪರಿಷತ್ತಿಗೆ ಸನ್ಮಾನ್ಯ ಸಾಮಾಜಿಕರನ್ನಾಗಿ ಸೇರಿಸಿಕೊಳ್ಳಲು ಪರಿಷತ್ತಿನ ಸಾಮಾನ್ಯ ಸಭೆಗೆ ಶಿಫಾರಸು ಮಾಡುವುದಕ್ಕೆ ಕಾರ್ಯನಿರ್ವಾಹಕ ಮಂಡಲಿಗೆ ಸ್ವಾತಂತ್ರ್ಯವಿರತಕ್ಕದ್ದು ಎಂಬಿವು ಇತರ ನಿಬಂಧನೆಗಳಲ್ಲಿ ಮುಖ್ಯವಾದುವು.

ಪ್ರಥಮ ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರಿವರ್ಗ ಇದು: ಅಧ್ಯಕ್ಷ–ರಾಜಮಂತ್ರಪ್ರವೀಣ ಎಚ್.ವಿ. ನಂಜುಂಡಯ್ಯ. ಉಪಾಧ್ಯಕ್ಷ–ಎಂ. ಶಾಮರಾವ್. ಕಾರ್ಯದರ್ಶಿ–ಬಿ. ಕೃಷ್ಣಪ್ಪ. ಕೋಶಾಧಿಕಾರಿ–ಡಾ. ಪಿ. ಎಸ್. ಅಚ್ಯುತರಾವ್. ಅದರ ಸದಸ್ಯರಲ್ಲಿ ಕೆಲವರನ್ನು ಹೆಸರಿಸಬಹುದು. ಸರ್ದಾರ್ ಎಂ. ಕಾಂತರಾಜ ಅರಸರು, ಕೆ.ಪಿ. ಪುಟ್ಟಣ್ಣ ಶೆಟ್ಟರು, ಕರ್ಪೂರ ಶ್ರೀನಿವಾಸರಾಯರು, ಎಂ. ವೆಂಕಟಕೃಷ್ಣಯ್ಯ, ಆರ್. ನರಸಿಂಹಾಚಾರ್, ಆರ್. ರಘುನಾಥರಾಯರು, ಬಾಪೂ ಸುಬ್ಬರಾಯರು, ಚ. ವಾಸುದೇವಯ್ಯ ನವರು, ಕವಿತಿಲಕ ಸೋಸಲೆ ಅಯ್ಯಶಾಸ್ತ್ರಿಗಳು, ಪಿ.ಜಿ. ಹಳಕಟ್ಟಿ, ಆಲೂರು ವೆಂಕಟರಾಯರು, ಬೆನಗಲ್ ರಾಮರಾಯರು, ರಾಜಗೋಪಾಲಕೃಷ್ಣರಾಯರು, ಎಂ.ಡಿ, ಅಳಸಿಂಗರಾಚಾರ್ಯರು, ಎ. ವೆಂಕಟರಾವ್, ಆರ್. ತಾತಾ, ರಾಜಕಾರ್ಯಪ್ರಸಕ್ತ, ಎಂ. ಮುತ್ತಣ್ಣ.

**ಮಾರ್ಪಾಡುಗಳು :** ಅಂಗರಚನೆಯ ದೃಷ್ಟಿಯಿಂದ, ಕಾಲಾನುಗುಣವಾದ ಮಾರ್ಪಾಡುಗಳು ಆಗಿವೆ. ಇವು ಮುಖ್ಯವಾಗಿ ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ಅಖಿಲ ಕರ್ಣಾಟಕಕ್ಕೆ ಅನ್ವಯಿಸುವುದಕ್ಕೆ ಸಂಬಂಧಿಸಿದವು. ಧಾರವಾಡದಲ್ಲಿ ಪರಿಷತ್ತಿನ ಶಾಖೆಯೊಂದು ಆಗಬೇಕೆಂಬ ಸೂಚನೆ 1934ರಲ್ಲಿ ರಾಯಚೂರು ಸಮ್ಮೇಳನದ ಕಾಲದಲ್ಲಿ ನಡೆದ ಸದಸ್ಯ ಸಭೆಯಲ್ಲಿ ಚರ್ಚೆಗೆ ಬಂದಿತು. ಇದು ಆಗ ಕಾರ್ಯಸಾಧ್ಯವಾಗಿ ಕಂಡುಬರಲಿಲ್ಲ. ಶಾಖಾ ರಚನೆಯ ಉದ್ದೇಶವನ್ನು, ಎಂದರೆ ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ, ಪರಿಷತ್ತು ಕೇವಲ ಪಂಡಿತರ ಸಂಸ್ಥೆ ಎಂದೆನಿಸದೆ ಜನಕ್ಕೂ ಸೇರಿದ ಸಂಸ್ಥೆ ಎನಿಸುವ ಉದ್ದೇಶವನ್ನು, ಕಾರ್ಯಗತ ಮಾಡಲು ಪ್ರಾಂತಸಮಿತಿಗಳನ್ನು ರಚಿಸಿ, ಸದಸ್ಯ ಸಂಪತ್ತನ್ನು ಹೆಚ್ಚಿಸುವ ಪ್ರಯತ್ನಗಳು ನಡೆದವು.

ಇನ್ನೊಂದು ಮುಖ್ಯ ಮಾರ್ಪಾಡು, ಪರಿಷತ್ತಿನ ಹೆಸರಿನದು: ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು ಇದ್ದದ್ದು ಬಳ್ಳಾರಿಯಲ್ಲಿ (1939) ನಡೆದ ಸದಸ್ಯ ಸಭೆಯಲ್ಲಿ ಬಹುಮತದಿಂದ ಕನ್ನಡ ಸಾಹಿತ್ಯ ಪರಿಷತ್ತು ಎಂದು ಮಾರ್ಪಾಡಾಯಿತು.

**ಪರಿಷನ್ಮಂದಿರ ನಿರ್ಮಾಣ :** ಪರಿಷತ್ತು ಸ್ಥಾಪಿತವಾದ ಮೇಲೆ ಹತ್ತಾರು ವರ್ಷಗಳವರೆಗೆ ಅದು ಬಾಡಿಗೆ ಕಟ್ಟಡಗಳಲ್ಲೇ ಕಾಲಕ್ಷೇಪ ಮಾಡಿತು. ಅಖಿಲ ಕರ್ಣಾಟಕ ವ್ಯಾಪ್ತಿಯುಳ್ಳ ಪ್ರಮುಖ ಸಾಂಸ್ಕೃತಿಕ ಸಂಸ್ಥೆಯಾದ ಪರಿಷತ್ತಿಗೆ ಅದರ ಘನತೆಗನುಗುಣವಾದ ಸ್ವಂತ ಕಟ್ಟಡ ಇಲ್ಲದ್ದು ದೊಡ್ಡ ಕೊರತೆಯಾಗಿತ್ತು. ಈ ಅಂಶವನ್ನು ಮನಗಂಡು ಕಾರ್ಯೋನ್ಮುಖ ರಾದವರೆಂದರೆ, ಪರಿಷತ್ತಿನ ಸಂಸ್ಥಾಪಕ ಸದಸ್ಯರೂ 1920 ರಿಂದ ಹದಿಮೂರು ವರ್ಷಗಳ ಕಾಲ ಪರಿಷತ್ತಿನ ಉಪಾಧ್ಯಕ್ಷರೂ ಆಗಿದ್ದ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು. ವೃತ್ತಿ ಯಿಂದ ಎಂಜಿನಿಯರ್ ಆಗಿದ್ದ ಇವರು ಕಟ್ಟಡ ವಿನ್ಯಾಸ, ರಚನೆ ಮುಂತಾದ ಹಲವಾರು ವಿವರಗಳಿಗೆ ಸ್ವತಃ ಗಮನ ಕೊಟ್ಟು ಅವನ್ನು ನಿರ್ಧರಿಸಿದರು; ಕಟ್ಟಡದ ನಿರ್ಮಾಣಕ್ಕೆ ಅವಶ್ಯಕವಾಗಿದ್ದ ನಿವೇಶನ ಮತ್ತು ಹಣವನ್ನು ಸಂಗ್ರಹಿಸಿದರು. ಈ ಮಹನೀಯರ ಪರಿಶ್ರಮದ ಫಲವಾಗಿ ಈಗ ಪರಿಷತ್ತಿನ ಕಟ್ಟಡವಿರುವ ನಿವೇಶನ ಉಚಿತವಾಗಿ ದೊರೆಯಿತು. ಕಟ್ಟಡದ ನಿಧಿಗಾಗಿ ಶ್ರೀ ಮನ್ಮಹಾರಾಜ ಕೃಷ್ಣರಾಜ ಒಡೆಯರವರು ಐದು ಸಾವಿರ ರೂಪಾಯಿ ಗಳನ್ನೂ ಅಂದು ಪರಿಷತ್ತಿನ ಅಧ್ಯಕ್ಷರಾಗಿದ್ದ ರಾಜಬಂಧು, ರಾಜಸೇವಾಧುರೀಣ ಎಂ. ಕಾಂತರಾಜ ಅರಸರು ಐದು ಸಾವಿರ ರೂಪಾಯಿಗಳನ್ನೂ ದಾನಮಾಡಿದರು; ಮೈಸೂರು ಸರ್ಕಾರ ಹದಿನಾರು ಸಾವಿರ ರೂಪಾಯಿಗಳನ್ನು ಸಹಾಯಧನವಾಗಿ ಕೊಟ್ಟಿತು. ಈ ನಿಧಿಗೆ ಪರಿಷತ್ತು ತನ್ನ ಸಂಪನ್ಮೂಲಗಳಿಂದ ಮೂರು ಸಾವಿರ ರೂಪಾಯಿಗಳನ್ನು ಸೇರಿಸಿ ಕಟ್ಟಡವನ್ನು ನಿರ್ಮಿಸಿತು. 1931 ಏಪ್ರಿಲ್ 12ನೆಯ ತಾರೀಖಿನಂದು ಕರ್ಪೂರ ಶ್ರೀನಿವಾಸರಾಯರೇ ಕಟ್ಟಡದ ಶಂಕುಸ್ಥಾಪನೆ ಮಾಡಿದರು. ವಿಶೇಷ ಪರಿಶ್ರಮದಿಂದ ಸಿದ್ಧವಾದ ಈ ಕಟ್ಟಡಕ್ಕೆ ಶ್ರೀಕೃಷ್ಣರಾಜ ಪರಿಷನ್ಮಂದಿರ ಎಂದು ನಾಮಕರಣ ಮಾಡಿ ಬಾಡಿಗೆ ಕಟ್ಟಡದಲ್ಲಿದ್ದ ಪರಿಷತ್ತಿನ ಕಚೇರಿಯನ್ನು 1933ರಲ್ಲಿ ಅಲ್ಲಿಗೆ ವರ್ಗಾಯಿಸಲಾಯಿತು. ಈ ಭವ್ಯ ಭವನದ ಕಟ್ಟಣಿಕೆಯ ಮೇಲ್ವಿಚಾರಣೆಯನ್ನು ಅತ್ಯಂತ ಶ್ರದ್ಧೆಯಿಂದ ನಡೆಸಿದ ಎಕ್ಸಿಕ್ಯುಟಿವ್ ಎಂಜಿನಿಯರ್ ಎ. ತಾಂಡೋಣಿರಾವ್ ಅವರ ನಿಷ್ಠಾಪೂರ್ಣ ಸೇವೆ ಚಿರಸ್ಮರಣೀಯ.

**ಪರಿಷತ್ತಿನ ಏಳಿಗೆ ವ್ಯಕ್ತಿಗಳ ಸೇವೆ:** ಪರಿಷತ್ತು ತನ್ನ ಮೂಲೋದ್ದೇಶಗಳಿಗೆ ಅನುಗುಣವಾಗಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆಯಲ್ಲದೆ, ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಬರುತ್ತಿದೆ. ಒಂದು ದೇಶದ ಏಳಿಗೆ ಅದರ ನಾಯಕರನ್ನೂ ವ್ಯಕ್ತಿ ಮಹಿಮೆಯನ್ನೂ ಅವಲಂಬಿಸಿರುವಂತೆ, ಸಂಸ್ಥೆಯ ಏಳಿಗೆಯೂ ವ್ಯಕ್ತಿಯ ಸಾಮರ್ಥ್ಯ ವನ್ನವಲಂಬಿಸಿರುತ್ತದೆ. ಆ ವ್ಯಕ್ತಿಯಾದರೂ ಕಾಲಧರ್ಮಕ್ಕೆ ತಕ್ಕಂತೆ ಕಾರ್ಯ ನಡೆಸಿಕೊಂಡು

ಪರಿಷತ್ತಿನ ಲಾಂಛನ

ಹೋಗುವುದು ಅನಿವಾರ್ಯವಾಗುತ್ತದೆ. ಪರಿಷತ್ತಿನ ಚರಿತ್ರೆಯಲ್ಲಿಯೂ ಈ ಅಂಶ ವ್ಯಕ್ತಪಟ್ಟಿದೆ. 1933ರವರೆಗೆ, ಪರಿಷತ್ತಿನ ಅಧ್ಯಕ್ಷರುಗಳೂ ಉಪಾಧ್ಯಕ್ಷರುಗಳೂ (ಮೈಸೂರಿನ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರು ಅಧ್ಯಕ್ಷರು; ಕರ್ಪೂರ ಶ್ರೀನಿವಾಸರಾಯರೂ ಎಂ. ಶಾಮರಾಯರೂ ಉಪಾಧ್ಯಕ್ಷರುಗಳು) ಕಾರ್ಯ ಚಟುವಟಿಕೆಯ ದೃಷ್ಟಿಯಿಂದ ಕೇವಲ ಸ್ಥಾನಗೌರವಕ್ಕೆ ಪಾತ್ರರಾಗಿದ್ದರು.

ಬೆಳ್ಳಾವೆ ವೆಂಕಟನಾರಾಯಣಪ್ಪನವರು ಒಂದೆರಡು ಸಲ ಕಾರ್ಯದರ್ಶಿಯಾಗಿದ್ದರು, ಅಷ್ಟೇ; 1933ರವರೆಗೆ ಸತತವಾಗಿ ಗೌರವ ಕೋಶಾಧಿಕಾರಿಗಳಾಗಿದ್ದರು. ಮಾಸ್ತಿ ವೆಂಕಟೇಶ ಅಯ್ಯಂಗಾರರು (ಬೆಳ್ಳಾವೆಯವರು ತೀರಿಕೊಂಡಾಗ) ಹೇಳಿದಂತೆ, ಕಸ ಗುಡಿಸುವ ಕೆಲಸದಿಂದ ಹಿಡಿದು ಗ್ರಂಥ ಸಂಪಾದನ ಕಾರ್ಯದವರೆಗೆ ಪರಿಷತ್ತಿನ ಸಕಲ ಕಾರ್ಯಗಳನ್ನೂ ಬೆಳ್ಳಾವೆಯವರು ನಿರ್ವಹಿಸುತ್ತಿದ್ದರು. ಕಚೇರಿಯ ಕೆಲಸ, ಪರಿಷತ್ ಪತ್ರಿಕಾ ಸಂಪಾದನೆ, ಪ್ರಾಚೀನ ಗ್ರಂಥಗಳ ಸಂಪಾದನೆ, ವಾರ್ಷಿಕ ಸಮ್ಮೇಳನ ಸದಸ್ಯಾಧಿವೇಶನಗಳ ಸಿದ್ಧತೆ–ಮುಂತಾದ ಸಕಲ ಕಾರ್ಯಗಳಿಗೂ ಅವರೇ ಹೃದಯ, ಮಿದುಳು, ಕೈಕಾಲು ಎಲ್ಲ. ಈ ಕಾಲದಲ್ಲಿ ಪಂಪಭಾರತ, ಪಂಪ ರಾಮಾಯಣ, ಚಾವುಂಡರಾಯ ಪುರಾಣ, ಸೋಮೇಶ್ವರ ಶತಕ, ಕುಸುಮಾವಳಿ ಕಾವ್ಯ–ಇವುಗಳ ಸಂಪಾದನೆಯ ಕಾರ್ಯ ಅವರ ಸಂಪಾದಕತ್ವದಲ್ಲಿ ಮೇಲುಪಂಕ್ತಿಯಾಗುವಂತೆ ನಡೆಯಿತು. ಜ್ಯೋತಿರ್ವಿನೋದಿನಿ, ಜೇಮ್ಸ್ ಎಬ್ರಹಮ್ ಗಾರ್‌ಫೀಲ್ಡನ ಚರಿತ್ರೆ ಇವನ್ನು ಪ್ರಕಟಿಸಿ, ಕಾವ್ಯೇತರ ಗದ್ಯಸಾಹಿತ್ಯ ಪ್ರಕಟಣೆಗೆ ಮೇಲುಪಂಕ್ತಿ ಹಾಕಿದವರೂ ವೆಂಕಟನಾರಾಯಣಪ್ಪನವರೇ. ಇವರು ಬಹು ಶ್ರಮವಹಿಸಿ ಸಿದ್ಧಪಡಿಸಿದ ಷಟ್ಪದಿ ಕಾವ್ಯಗಳ ನಿಘಂಟು–ಒಂದು ವಿಧದಲ್ಲಿ ಪರಿಷತ್ತಿನ ನಿಘಂಟು ಕಾರ್ಯರಚನೆಗೆ ನಾಂದಿಯಾಯಿತೆನ್ನಬಹುದು. ಈ ಕಾಲದಲ್ಲಿ ಪರಿಷತ್ತಿನೊಂದಿಗೆ ಸಂಪರ್ಕವಿಟ್ಟುಕೊಂಡ ಜನ ಬಹುಮಟ್ಟಿಗೆ ಭಾಷಾಪಂಡಿತರು, ವಿದ್ವಾಂಸರು, ಸರ್ಕಾರದ ಉನ್ನತಾಧಿಕಾರಿಗಳು. ಅಂದಿಗೆ ಇದು ತೀರ ಸಹಜವೆನ್ನಿಸಿತ್ತು.

ಡಿ.ವಿ. ಗುಂಡಪ್ಪನವರು (1934–37) ಮೂರು ವರ್ಷ ಉಪಾಧ್ಯಕ್ಷರಾಗಿದ್ದರು. ಇವರ ಕಾಲದಲ್ಲಿ ನೂತನ ಮಂದಿರದ ನೂತನ ಸಭಾಮಂಟಪದಲ್ಲಿ ಉಪನ್ಯಾಸ, ಕಾವ್ಯ ವಾಚನ (ಗಮಕ), ಸಂಗೀತ, ನಾಟಕ, ನೃತ್ಯ ಇತ್ಯಾದಿ ಸಾಹಿತ್ಯ ಸಂಸ್ಕೃತಿಸಂಬಂಧವಾದ ಕಾರ್ಯ ಕಲಾಪಗಳೇ ಮೊದಲಾದವಲ್ಲಿ ಏನಾದರೊಂದು ಪ್ರತಿವಾರವೂ ನಡೆಯುತ್ತಿತ್ತು. ಪ್ರತಿವರ್ಷವೂ ಬೇಸಿಗೆಯ ರಜಾಕಾಲದಲ್ಲಿ ಆಧುನಿಕ ವಿಚಾರೋಪನ್ಯಾಸಗಳು ಹಾಗೂ ವಿವಿಧ ಮನೋರಂಜನೆಯ ಕಾರ್ಯಗಳನ್ನೊಳಗೊಂಡ ವಿಶೇಷ ಸಾಹಿತ್ಯೋತ್ಸವ ಎಂಬ ಜ್ಞಾನಪ್ರಸಾರ ಕಾರ್ಯಕ್ರಮ ಪ್ರಾರಂಭವಾಯಿತು. ಗಮಕ ಕಲಾ ಶಿಕ್ಷಣ ತರಗತಿಗಳು ಪ್ರಾರಂಭವಾದದ್ದು ಇವರ ಕಾಲದಲ್ಲಿಯೇ. ಕರ್ಣಾಟಕಕ್ಕೆ ವಿಶಿಷ್ಟವೆನ್ನಬಹುದಾದ ಗಮಕ ಕಲೆ ಪ್ರಾಚೀನ ಕನ್ನಡ ಕಾವ್ಯಗಳನ್ನು ಜನಪ್ರಿಯವಾಗಿ ಮಾಡಲು ಉತ್ತಮ ಸಾಧನ ಎಂಬುದನ್ನು ಮನಗಂಡ ಗುಂಡಪ್ಪನವರು ದೂರದೃಷ್ಟಿಯಿಂದ ಪ್ರಾರಂಭಿಸಿದ ಈ ಏರ್ಪಾಡು ಇಂದಿಗೂ ನಡೆದುಕೊಂಡು ಬರುತ್ತಿದ್ದು, ಉತ್ತಮ ಫಲವನ್ನು ಕೊಟ್ಟಿದೆ. ಗಮಕ ಶಿರೋಮಣಿ ಎಸ್.ಜಿ. ಬಿಂದೂರಾಯರು ಪ್ರಥಮ ಶಿಕ್ಷಕರಾಗಿ ನೇಮಕಗೊಂಡರು. ಈಗ ಜನಪ್ರಿಯ ರಾಗಿರುವ ಅನೇಕ ಮಂದಿ ಗಮಕಿಗಳು ಪರಿಷತ್ತಿನ ಗಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾದವರು.

ಸಮ್ಮೇಳನಗಳಿಗೂ ಪರಿಷತ್ತಿನ ವಾರ್ಷಿಕ ಸಭೆಗಳಿಗೂ ಪರಿಷತ್ತಿನ ಕಾರ್ಯಾಲಯಕ್ಕೂ ಈ ಕಾಲದಲ್ಲಿ ಹೆಚ್ಚು ವ್ಯವಸ್ಥಿತ ರೂಪ ಬಂದಿತು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ನೋಡಿ–ಕನ್ನಡ–ಸಾಹಿತ್ಯ–ಪರಿಷತ್ಪತ್ರಿಕೆ) ವಿದ್ವತ್‌ಪೂರ್ಣವಾಗಿರುವುದರ ಜೊತೆಗೆ, ವೈವಿಧ್ಯಪೂರ್ಣವೂ ಆಧುನಿಕ ವಿದ್ವತ್‌ದೃಷ್ಟಿಯನ್ನು ಪ್ರತಿಬಿಂಬಿಸತಕ್ಕ ಮಾಧ್ಯಮವೂ ಆಗಿ ರೂಪುಗೊಂಡಿತು. ಇದರ ಶ್ರೇಯಸ್ಸು ಅದರ ಸಂಪಾದಕರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳಿಗೆ ಸಲ್ಲಬೇಕು. (ಈಗ ಇದು ತ್ರೈಮಾಸಿಕವಾಗಿದೆ.)

ಬಿ.ಎಂ. ಶ್ರೀಕಂಠಯ್ಯನವರು ಪರಿಷತ್ತಿನ ಉಪಾಧ್ಯಕ್ಷರಾದ ಮೇಲೆ ಪರಿಷತ್ತಿಗೂ ಸಾಮಾನ್ಯ ಪ್ರಜಾವರ್ಗಕ್ಕೂ ಸಂಪರ್ಕ ಇನ್ನಷ್ಟು ಬಲಪಟ್ಟಿತು; ವಿಸ್ತಾರಗೊಂಡಿತು. ಮಹಿಳಾ ಶಾಖೆಯೊಂದು ಏರ್ಪಟ್ಟು, ಅದು ಈಗಲೂ ಕೆಲಸ ಮಾಡಿಕೊಂಡು ಬರುತ್ತಿದೆ. ಬಿ.ಎಂ. ಶ್ರೀಯವರ ಗಮನಾರ್ಹ ಕೊಡುಗೆ ಎಂದರೆ, ಕನ್ನಡ ಬಾವುಟದ ಕಲ್ಪನೆ; ಕನ್ನಡ ನಾಡಿನ ಭೂಪಟದ ಮುದ್ರಿಕೆಯ ಲಾಂಛನವೊಂದನ್ನು ಕಲ್ಪಿಸಿ, ಪರಿಷತ್ತಿನ ಪುಸ್ತಕ ಪ್ರಕಟಣೆಗಳಲ್ಲಿ ಮುದ್ರಿಸುವ ಏರ್ಪಾಡು (ಈ ಲಾಂಛನವನ್ನು ಈಗ ಸ್ವಲ್ಪ ಮಾರ್ಪಡಿಸಿ, ಮತ್ತೆ ಬಳಕೆಗೆ ತಂದಿದೆ). ಕನ್ನಡ ಬಾವುಟ ಎಂಬ ತಮ್ಮ ಕಲ್ಪನೆಗೆ ಅವರು ಜೀವ ತುಂಬಿ, ಆ ಹೆಸರಿನ ಕಾವ್ಯ ಸಂಕಲನವನ್ನು ಹೊರತಂದರು. ಕನ್ನಡ ನಾಡಿನ ಚರಿತ್ರೆಯನ್ನು ತಕ್ಕ ಲೇಖಕರಿಂದ ಬರೆಯಿಸಿ ಪ್ರಕಟಿಸಿದರು. ಕನ್ನಡ ನುಡಿ (ನೋಡಿ– ಕನ್ನಡನುಡಿ) ಎಂಬ ವಾರಪತ್ರಿಕೆಯನ್ನು (4–10–1938ರ ವಿಜಯದಶಮಿಯಂದು) ಪ್ರಾರಂಭಿಸಿದರು. ಅ.ನ. ಕೃಷ್ಣರಾಯರು ಅದರ ಮೊದಲ ಸಂಪಾದಕರು (ಈ ಪತ್ರಿಕೆ ಈಗಲೂ ಮಾಸಿಕವಾಗಿ ನಡೆದು ಬರುತ್ತಿದೆ). ಈ ಕನ್ನಡನುಡಿಯ ಪ್ರಕಟನೆಗೆಂದೇ ಅವರು 6,000 ರೂಪಾಯಿ ದಾನ ಮಾಡಿ ಸ್ಥಾಪಿಸಿದ ಅಚ್ಚುಕೂಟ ಈಗ ವಿಸ್ತಾರವಾಗಿ, ಪರಿಷತ್ತಿನ ಮುದ್ರಣ ಕಾರ್ಯವನ್ನು ನಿರ್ವಹಿಸುತ್ತಿದೆ. 1998ರಲ್ಲಿ ಆಧುನಿಕ 'ಆಫ್‌ಸೆಟ್' ಯಂತ್ರವನ್ನು ಸ್ಥಾಪಿಸಲಾಗಿದೆ. ಪರಿಷತ್ತಿನ ಅಖಿಲ ಕರ್ಣಾಟಕ ಸ್ವರೂಪವನ್ನು ಪ್ರತಿಬಿಂಬಿಸಲೆಂದು ಪ್ರಾಂತಸಮಿತಿಗಳನ್ನು ಏರ್ಪಡಿಸಿ, ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ನಾಡಿಗೆಲ್ಲ ಶ್ರೀ ಅವರು ಹರಡಿದರು. ಕನ್ನಡ ಬಾವುಟವನ್ನು (ಸಾಂಕೇತಿಕವಾಗಿ) ಕೈಯಲ್ಲಿ ಹಿಡಿದು ನಾಡನ್ನೆಲ್ಲ ಸುತ್ತಾಡಿ, ಕನ್ನಡದ ಮತ್ತು ಪರಿಷತ್ತಿನ ಸಂದೇಶವನ್ನು ಎಲ್ಲೆಲ್ಲೂ ಹರಡಿ, ಕನ್ನಡಿಗರಿಗೆ ಕನ್ನಡ ತಾಯನೋಟವನ್ನು ಕಾಣಿಸಿದರು. ಒಂದು ಮಾತಿನಲ್ಲಿ, ಶ್ರೀಯವರು ತನುಮನಧನವನ್ನರ್ಪಿಸಿ ಪರಿಷತ್ತಿನ ಸೇವೆ ಮಾಡಿದರು. ಪರಿಷತ್ತಿನ ಮೂಲೋದ್ದೇಶಗಳಲ್ಲಿ ಒಂದಾದ ಪಾಂಡಿತ್ಯ ಸಂವರ್ಧನೆಗಾಗಿ ಅವರು ಕೈಗೊಂಡ ಮುಖ್ಯ ಕಾರ್ಯಕ್ರಮ ಎಂದರೆ ಕನ್ನಡ ಸಾಹಿತ್ಯ ಪರೀಕ್ಷೆಗಳು (ಈ ಏರ್ಪಾಡು ಈಗಲೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ). ಶ್ರೀಯವರು ಉಪಾಧ್ಯಕ್ಷರಾಗಿದ್ದಾಗ (1940 ಜೂನ್ 30–ಜುಲೈ 1 ರಂದು) ಪರಿಷತ್ತಿನ ಬೆಳ್ಳಿಯ ಹಬ್ಬ ವಿಜೃಂಭಣೆಯಿಂದ ನಡೆಯಿತು. ಆಗ ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಉತ್ಸವವನ್ನು ಉದ್ಘಾಟಿಸಿದರು.

ಶ್ರೀ ಯವರ ಅನಂತರ ಉಪಾಧ್ಯಕ್ಷರಾದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು (1943–47). ಹಿಂದಿನ ಇಬ್ಬರು ಉಪಾಧ್ಯಕ್ಷರುಗಳು ಏರ್ಪಾಡು ಮಾಡಿದ್ದ ಎಲ್ಲ ಕಾರ್ಯಕ್ರಮಗಳನ್ನೂ ಇವರು ನಿಷ್ಠೆಯಿಂದ ಮುಂದುವರಿಸಿಕೊಂಡು ಬಂದರು. ಈ ಕಾಲದಲ್ಲಿ ಪರಿಷತ್ತಿನ ಸದಸ್ಯ ಸಂಪತ್ತು ಗಮನಾರ್ಹವಾಗಿ ಬೆಳೆಯಿತು. ಅನೇಕ ದತ್ತಿಗಳನ್ನು ಸಂಪಾದಿಸಿ, ದತ್ತಿ ಉಪನ್ಯಾಸಗಳು ಸಾರೋದ್ಧಾರವಾಗಿ ನಡೆಯುವಂತೆ ಇವರು ಏರ್ಪಾಡು ಮಾಡಿದರು. 1941ರಲ್ಲಿಯೇ ಕನ್ನಡ–ಕನ್ನಡ ನಿಘಂಟು ನಿರ್ಮಾಣದ ಸಂಕಲ್ಪವನ್ನು ಪರಿಷತ್ತು ಕೈಗೊಂಡಿತ್ತು; ಅದು ಕಾರ್ಯರೂಪಕ್ಕೆ ಬಂದು, ಅದಕ್ಕಾಗಿ ಪ್ರತ್ಯೇಕ ಕಾರ್ಯಾಲಯ ಆರಂಭವಾದದ್ದು ಇವರ ಕಾಲದಲ್ಲಿ. ಶ್ರೀಯವರಂತೆ ಮಾಸ್ತಿಯವರೂ ಕನ್ನಡ ನಾಡನ್ನೆಲ್ಲ ಸುತ್ತಾಡಿ ಪರಿಷತ್ತಿನ ಅಖಿಲ ಕರ್ಣಾಟಕ ಸ್ವರೂಪವನ್ನು ಬಲಪಡಿಸಿದರು; ಕರ್ಣಾಟಕ ಏಕೀಕರಣ ಚಳವಳಿಗೆ ಪುಷ್ಟಿ ಕೊಟ್ಟರು.

**ಅಧ್ಯಕ್ಷರುಗಳು:** ರಾಜಮನೆತನದವರು ಮತ್ತು ಉನ್ನತ ಪದವಿಯಲ್ಲಿರುವವರು ಪರಿಷತ್ತಿನ ಅಧ್ಯಕ್ಷರಾಗಬೇಕೆಂಬ ನಿಬಂಧನೆಗೆ ಅನುಗುಣವಾಗಿ, ಎಚ್.ವಿ. ನಂಜುಂಡಯ್ಯನವರು (1915–20), ಸರ್ ಎ. ಕಾಂತರಾಜ ಅರಸರು (1920–23), ಕಂಠೀರವ ನರಸಿಂಹರಾಜ ಒಡೆಯರ್(1923–40), ಜಯಚಾಮರಾಜ ಒಡೆಯರ್ (1940), ಒಂಟಮುರಿಯ ರಾಜಾ ಲಖಮನಗೌಡ ಸರದೇಸಾಯಿ(1941–46), ಲೋಕೂರ ನಾರಾಯಣರಾವ್ ಸ್ವಾಮಿರಾವ್(1947)–ಇವರು ಕ್ರಮವಾಗಿ ಪರಿಷತ್ತಿನ ಅಧ್ಯಕ್ಷರುಗಳಾದರು. 1947ರಲ್ಲಿ, ವಾರ್ಷಿಕ ಸಮ್ಮೇಳನದ ಅಧ್ಯಕ್ಷರೇ ಪರಿಷತ್ತಿನ ಅಧ್ಯಕ್ಷರೂ ಆಗಿರಬೇಕೆಂದು ನಿಬಂಧನೆ ಮಾರ್ಪಾಡಾಯಿತು. ಇದರ ಮೇರೆಗೆ ತಿರುಮಲೆ ತಾತಾಚಾರ್ಯ ಶರ್ಮರೂ ಎ.ಆರ್. ಶ್ರೀನಿವಾಸ ಮೂರ್ತಿಯವರು (1950ರಲ್ಲಿ) ಅಧ್ಯಕ್ಷರಾದಾಗ, ನಿಬಂಧನೆ ಮತ್ತೆ ಮಾರ್ಪಾಡಾಗಿ ಅಧ್ಯಕ್ಷಪದವಿಯ ಅವಧಿ ಮೂರುವರ್ಷ ಎಂದಾಯಿತು. ಈ ಹೊಸ ನಿಯಮದಂತೆ ಅಧ್ಯಕ್ಷರುಗಳಾಗಿ ಪರಿಷತ್ತನ್ನು ಯಥಾಶಕ್ತಿ ಮುನ್ನಡೆಸಿಕೊಂಡು ಬಂದವರೆಂದರೆ: ಎ.ಎನ್.ಮೂರ್ತಿರಾವ್ (1954–56), ಬಿ.ಶಿವಮೂರ್ತಿಶಾಸ್ತ್ರಿಗಳು (1956–64); ಜಿ. ವೆಂಕಟಸುಬ್ಬಯ್ಯ ನವರು (1964–69); ಜಿ.ನಾರಾಯಣರು (1969–78). ಹಂಪ, ನಾಗರಾಜಯ್ಯನವರು (1978–86); ಹೆಚ್.ಬಿ.ಜ್ವಾಲನಯ್ಯನವರು (1986–87), ಜಿ.ಎಸ್. ಸಿದ್ಧಲಿಂಗಯ್ಯನವರು (1989–92), ಶ್ರಿ ಗೊ.ರು. ಚನ್ನಬಸಪ್ಪನವರು (1992–95), ಸಾ. ಶಿ. ಮರುಳಪ್ಪನವರು (1995–98), ಎನ್. ಬಸವರಾಧ್ಯರು (1998–2001), ಧರ್ಮದರ್ಶಿಕ ಹರಿಕೃಷ್ಣಪುನರೂರು (2001–04), ಚಂದ್ರಶೇಖರಪಾಟೀಲ 2004ರಿಂದ.

ತೀ.ನಂ. ಶ್ರೀಕಂಠಯ್ಯ

**ಕನ್ನಡ ನಿಘಂಟು:** ಎಂ.ಆರ್. ಶ್ರೀನಿವಾಸಮೂರ್ತಿಯವರು ಅಧ್ಯಕ್ಷರಾಗಿದ್ದಾಗ ನಿಘಂಟುವಿನ ರಚನಾಕಾರ್ಯಕ್ಕೆ ವ್ಯವಸ್ಥಿತ ರೂಪ ಬಂದಿತು. ಹಸ್ತಪ್ರತಿ ಸಿದ್ಧವಾಗತೊಡಗಿದ ಮೇಲೆ, ಮುದ್ರಣಕಾರ್ಯಕ್ಕೆ ಸರ್ಕಾರದಿಂದ ವಿಶೇಷ ಧನಸಹಾಯ ದೊರಕಿಸಿಕೊಟ್ಟವರು ಬಿ. ಶಿವಮೂರ್ತಿ ಶಾಸ್ತ್ರಿಗಳು. 26–4–1964ರಲ್ಲಿ ಅದರ ಮೊದಲ ಸಂಚಿಕೆ ಪ್ರಕಟವಾಯಿತು. ನಿಘಂಟು ರಚನೆಯ ಕಾರ್ಯದ ಸಂಪಾದಕ ಮಂಡಲಿ ಅಖಿಲ ಕರ್ನಾಟಕ ಪ್ರಾತಿನಿಧ್ಯ ವುಳ್ಳದ್ದು. ಎ.ಆರ್. ಕೃಷ್ಣಶಾಸ್ತ್ರಿ, ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್– ಇವರು ಅನುಕ್ರಮವಾಗಿ ಸಂಪಾದಕ ಮಂಡಲಿಯ ಅಧ್ಯಕ್ಷರುಗಳು. ಡಿ.ಎಲ್. ನರಸಿಂಹಾಚಾರ್ ಮತ್ತು ಎಲ್. ಗುಂಡಪ್ಪ ಕೆಲಕೆಲವು ವರ್ಷ ಸಂಪಾದಕರಾಗಿ ಕೆಲಸ ಮಾಡಿದರು. ಪರಿಷತ್ತಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ (1970) 12 ಸಂಚಿಕೆಗಳುಳ್ಳ ಅದರ ಪ್ರಥಮ ಸಂಪುಟ ಪ್ರಕಟವಾಯಿತು. ನಿಘಂಟು ಆಧುನಿಕ ನಿಘಂಟುಶಾಸ್ತ್ರಕ್ಕೆ ಅನುಗುಣವಾಗಿ ರಚನೆಯಾಗಿದೆ. ಒಟ್ಟು ಎಂಟು ಸಂಪುಟಗಳಲ್ಲಿ 9020 ಪುಟಗಳಲ್ಲಿ ಸಿದ್ಧವಾಗಿದೆ. ಇದರ ಸಿ.ಡಿ ಸಿದ್ಧಪಡಿಸುವ ಕಾರ್ಯವೂ ಪ್ರಾರಂಭವಾಯಿತು. ಈ ಬಗೆಯ ಶಾಸ್ತ್ರೀಯವೂ ಸರ್ವಾಂಗ ಪರಿಪೂರ್ಣವೂ ಆದ ನಿಘಂಟು ಭಾರತೀಯ ಭಾಷೆಗಳಲ್ಲಿ ಯಾವುದರಲ್ಲೂ ಪ್ರಕಟವಾಗಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ.


ಡಿ.ಎಲ್. ನರಸಿಂಹಾಚಾರ್

ಎಂದಿನಿಂದಲೂ ಕರ್ನಾಟಕ ಸರಕಾರವು ಪರಿಷತ್ತಿಗೆ ಉದಾರವಾಗಿ ಧನಸಹಾಯ ಮಾಡಿಕೊಂಡು ಬರುತ್ತಿದೆ. ತ್ರೈವಾರ್ಷಿಕ ಯೋಜನೆಯಂತೆ, 1920 ಡಿಸೆಂಬರ್ 26ರಂದು ಪರಿಷತ್ತಿನ ಸುವರ್ಣಮಹೋತ್ಸವ ನಡೆಯಿತು. ಇದರ ಸವಿನೆನಪಾಗಿ ಚಿನ್ನದ ಬೆಳಸು ಎಂಬ ಬೃಹತ್ ಸ್ಮರಣ ಸಂಪುಟ ಪ್ರಕಟವಾಯಿತು. ಪರಿಷತ್ತಿನ ಆವರೆಗಿನ ಜೀವಿತಾವಧಿಯ 55 ವರ್ಷಗಳಲ್ಲಿ ಕನ್ನಡ ಭಾಷಾಸಾಹಿತ್ಯಗಳಲ್ಲಿ ಆದ ಬಹುಮುಖವಾದ ಬೆಳವಣಿಗೆಯನ್ನು ಪ್ರತಿಬಿಂಬಿಸುವ ಈ ಸಂಪುಟಕ್ಕೆ ಎಂ. ವಿ. ಸೀತಾರಾಮಯ್ಯನವರು ಸಂಪಾದಕರು. ಉತ್ಸವದ ಅಂಗವಾಗಿ, ರಂ. ಶ್ರೀ. ಮುಗಳಿಯವರ ಸಂಪಾದಕತ್ವದಲ್ಲಿ 25 ಗ್ರಂಥಗಳು ಏಕಕಾಲದಲ್ಲಿ ಪ್ರಕಟಗೊಂಡದ್ದು ಇನ್ನೊಂದು ವಿಶೇಷ. ಇದೇ ಸಂದರ್ಭದಲ್ಲಿ 47ನೆಯ ಸಾಹಿತ್ಯ ಸಮ್ಮೇಳನವೂ ನಡೆಯಿತು;

1940ನೆಯ ಇಸವಿಯಲ್ಲಿ ರಜತಮಹೋತ್ಸವವೂ 1970ರಲ್ಲಿ ಸುವರ್ಣ ಮಹೋತ್ಸವವೂ 1977ರಲ್ಲಿ ವಜ್ರಮಹೋತ್ಸವವೂ 1991ರಲ್ಲಿ ಅಮೃತ ಮಹೋತ್ಸವವೂ ನಡೆದವು.

ಈವರೆಗೆ (2005) ಸು. 1000ಕ್ಕೂ ಮಿಕ್ಕು ಮೌಲಿಕ ಪುಸ್ತಕಗಳು ಪ್ರಕಟವಾಗಿವೆ. ಬೃಹತ್ ನಿಘಂಟು, ಸಂಕ್ಷಿಪ್ತ ನಿಘಂಟು, ರತ್ನಕೋಶ, ಸುಭಾಷಿತ ಮಂಜರಿ, ಸರ್ವಜ್ಞನ ವಚನಗಳು ಮುಂತಾದವು ಬಹು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಆಧುನಿಕ ಕಾಲಕ್ಕೆ ಅಗತ್ಯಕ್ಕೆ ತಕ್ಕಹಾಗೆ ಪರಿಷತ್ತಿನ ಆಡಳಿತವನ್ನು ಕಂಪ್ಯೂಟರೀಕರಣ ಮಾಡುವ ಕಾರ್ಯ ಆರಂಭವಾಗಿದೆ. ಪರಿಷತ್ತು ರೂಪಿಸಿದ ಬಾವುಟ ಹಾಗೂ ಕರ್ನಾಟಕ ಮಾತೆಯ ತೈಲವರ್ಣಚಿತ್ರವು ರಾಜ್ಯದಾದ್ಯಂತ ಬಳಕೆ ಆಗುತ್ತಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿರುವವರಿಗೆ ಗೌರವ ಸದಸ್ಯತ್ವ, ಚಾವುಂಡರಾಯ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ, ನೃಪತುಂಗ ಸಾಹಿತ್ಯ ಪ್ರಶಸ್ತಿ ಮುಂತಾದ ಪ್ರಶಸ್ತಿ ಗೌರವಗಳನ್ನು ಪರಿಷತ್ತು ಕೊಡುತ್ತಿದೆ.

ಪರಿಷತ್ತು ಏರ್ಪಡಿಸುತ್ತಿರುವ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಅತ್ಯಂತ ಮಹತ್ತ್ವ ಬಂದಿದೆ. ಸಮ್ಮೇಳನಾಧ್ಯಕ್ಷತೆ ವಹಿಸುವ ಗಣ್ಯ ಸಾಹಿತಿಗಳಿಗೆ ಹೆಚ್ಚಿನ ಪ್ರತಿಷ್ಠೆ, ಮನ್ನಣೆಯನ್ನು ತಂದುಕೊಡುತ್ತಿದೆ. ಈವರೆಗೆ 72 ಇಂತಹ ಸಮ್ಮೇಳನಗಳು ಜರುಗಿವೆ. ದೇಶವಿದೇಶಗಳಲ್ಲಿ ಸಾವಿರಾರೂ ಕನ್ನಡಿಗರೂ ಸೇರಿದಂತೆ ಪರಿಷತ್ತಿಗೆ ಈಗ (2005) 65ಸಾವಿರ ಮಂದಿ ಸದಸ್ಯರಿದ್ದಾರೆ. ಪ್ರತಿತಿಂಗಳು ಎಲ್ಲ ಸದಸ್ಯರಿಗೆ 'ಕನ್ನಡನುಡಿ' ಮಾಸಪತ್ರಿಕೆಯನ್ನು ಉಚಿತವಾಗಿ ಕಳುಹಿಸಲಾಗುತ್ತಿದೆ. ವೆಬ್‌ಸೈಟ್ ನಿರ್ಮಾಣವಾಗಿದೆ (www.kasapa.org). ಪರಿಷತ್ತಿಗೆ ಕರ್ನಾಟಕದಲ್ಲಿ ಅಧಿಕೃತವಾದ ಜಿಲ್ಲಾಘಟಕ, ತಾಲ್ಲೂಕು ಘಟಕ, ಹೋಬಳಿ ಘಟಕಗಳಿವೆ. ಗಡಿ ರಾಜ್ಯಗಳಲ್ಲಿ ನಾಲ್ಕು (ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ) ಗಡಿನಾಡ ಘಟಕಗಳಿವೆ. ಹೀಗಾಗಿ ಪರಿಷತ್ತು ನಿಜವಾದ ಅರ್ಥದಲ್ಲಿ ಸಮಸ್ತ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿದೆ. (ನೋಡಿ– ಕನ್ನಡ–ಸಾಹಿತ್ಯ–ಸಮ್ಮೇಳನಗಳು) (ಎಂ.ವಿ.ಎಸ್.)

**ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ :** 1915ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಧಾನ ಮುಖಪತ್ರ. 1916 ಏಪ್ರಿಲ್‌ನಿಂದ ಪ್ರಕಟವಾಗುತ್ತಿದೆ. ಪರಿಷತ್ತಿನ ಧ್ಯೇಯವೇ ಪತ್ರಿಕೆಯ ಧ್ಯೇಯವೂ ಆಗಿದೆ. ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಪುನರುಜ್ಜೀವನ, ಜ್ಞಾನಪ್ರಸಾರ, ಕನ್ನಡ ಏಕೀಕರಣದ ಬಗ್ಗೆ ಪ್ರಚಾರ, ವಿದ್ವತ್ ಪ್ರೌಢಿಮೆಯಿಂದ ಕೂಡಿದ ಲೇಖನಗಳ ಪ್ರಕಟಣೆ–ಮುಂತಾದವು ಈ ಪತ್ರಿಕೆಯ ಧ್ಯೇಯಗಳು. ಇದರ ಮೊದಲ ಹೆಸರು ಕರ್ನಾಟಕ ಸಾಹಿತ್ಯಪರಿಷತ್‌ಪತ್ರಿಕೆ. 1938ರಲ್ಲಿ ಬಿ.ಎಂ. ಶ್ರೀಕಂಠಯ್ಯನವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಂದು ಪರಿಷತ್ತಿನ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಾಯಿಸಿದಾಗ ಈ ಪತ್ರಿಕೆಯ ಹೆಸರನ್ನೂ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಎಂದು ಮಾರ್ಪಡಿಸಲಾಯಿತು. ಪರಿಷತ್ಪತ್ರಿಕೆಯ ಮೊತ್ತಮೊದಲ ಸಂಚಿಕೆ ಡೆಮ್ಮಿ $\frac{1}{8}$ರ ಆಕಾರದಲ್ಲಿದ್ದು ಅದರಲ್ಲಿ ನೂರು ಪುಟಗಳಿದ್ದವು. ಮೊದಲ ಸಂಚಿಕೆಯಲ್ಲಿ ಕರ್ನಾಟಕ ಭಾಷಾ ಸಾಹಿತ್ಯಗಳು, ಗ್ರಾಂಥಿಕ ಪ್ರಯೋಗಗಳ ಏಕೀಕರಣ, ಸದುದ್ದೇಶಪಂಚಕ ಮುಂತಾದ ಉಪಯುಕ್ತ ಲೇಖನಗಳಿವೆ.

ಕೆಲವು ಕಾಲ ಈ ಪತ್ರಿಕೆ ತ್ರೈಮಾಸಿಕವಾಗಿ ಮುಂದುವರಿಯಿತಾದರೂ ಸ್ವಲ್ಪ ಕಾಲಾನಂತರ ಅದು ನಿರಂತರವಾಗಿ ವರ್ಷಕ್ಕೆ ಎರಡು ಸಂಚಿಕೆಗಳಂತೆ ಷಾಣ್ಮಾಸಿಕ ಪತ್ರಿಕೆಯಾಗಿ ಪ್ರಕಟವಾಗುತ್ತ ಬಂದಿದೆ. ಪತ್ರಿಕೆಯ ಮುಖಪುಟದಲ್ಲಿ ಇತ್ತೀಚೆಗೆ ವ್ಯತ್ಯಾಸವಾಗಿದೆ. ಮೊದಲಿನಿಂದಲೂ ಪರಿಷತ್ಪತ್ರಿಕೆಯ ರಕ್ಷಾಪುಟದ ಮೇಲೆ ನಾಟ್ಯಸರಸ್ವತಿಯ ದೊಡ್ಡ ಚಿತ್ರವಿರುತ್ತಿತ್ತು. ಈಗ ಅದರ ಬದಲು ಪರಿಷತ್ತಿನ ಕಟ್ಟಡದ ರೇಖಾಚಿತ್ರವಿದೆ. ಪತ್ರಿಕೆಯ ಆಕಾರ ಕೂಡ ಸ್ವಲ್ಪ ಕಿರಿದಾಗಿದೆ. ಈಗ ಅದು ಪ್ರಬುದ್ಧ ಕರ್ನಾಟಕದ ಅಳತೆಗೆ ಹೊಂದಿಕೆಯಾಗಿದೆ.

ಪರಿಷತ್ಪತ್ರಿಕೆಯನ್ನು ಪ್ರಾರಂಭದಲ್ಲಿ ಒಂದು ಸಂಪಾದಕ ಮಂಡಲಿ ನಡೆಸುತ್ತಿತ್ತು. ಅನಂತರ ಸಂಪಾದಕ ಮಂಡಲಿಯ ಜೊತೆಗೆ ಪ್ರತ್ಯೇಕ ಸಂಪಾದಕರನ್ನು ನೇಮಿಸಲಾಯಿತು. ಬೆಳ್ಳಾವೆ ವೆಂಕಟನಾರಾಯಣಪ್ಪ, ಎಂ.ಆರ್. ಶ್ರೀನಿವಾಸಮೂರ್ತಿ, ಡಿ.ಎಲ್. ನರಸಿಂಹಾಚಾರ್, ರಾಜಸೇವಾಸಕ್ತ ಡಿ.ಸಿ ಸುಬ್ಬರಾಯಪ್ಪ, ಡಾ.ಬಿ.ಶಿವಮೂರ್ತಿ, ಪ್ರೊ.ಕೆ.ಕೇಶವ ಭಟ್ಟ, ಲಕ್ಷ್ಮಣ ತೆಲಗಾವಿ, ಎಸ್. ಶ್ರೀನಿವಾಸನ್ ಮೊದಲಾದವರು ಪರಿಷತ್ಪತ್ರಿಕೆಯ ಸಂಪಾದಕರಾಗಿದ್ದರು.

ಪರಿಷತ್ಪತ್ರಿಕೆ ಅನೇಕ ಜನ ಹಿರಿಯ ಸಾಹಿತಿಗಳ, ವಿಚಾರವಂತರ, ಕವಿಗಳ ಬರೆಹಗಳನ್ನು ಪ್ರಕಟಿಸಿದೆ. ಇಂದು ಗ್ರಂಥರೂಪದಲ್ಲಿ ಹೊರಬಂದಿರುವ ಹಲವು ಕೃತಿಗಳು ಮೊದಲು ಲೇಖನ ರೂಪದಲ್ಲಿ ಬಿಡಿಯಾಗಿ ಪರಿಷತ್ಪತ್ರಿಕೆಯಲ್ಲಿ ಬೆಳಕು ಕಂಡಿವೆ. ಅವುಗಳಲ್ಲಿ ಕವಿಚರಿತೆ ಹಾಗೂ ವಡ್ಡಾರಾಧನೆಗಳನ್ನು ಸ್ಮರಿಸಬಹುದು. ಹೀಗೆಯೇ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತ ಬರೆಹಗಳು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅಲ್ಲಿಯ ಪತ್ರವ್ಯವಹಾರ, ಟೀಕೆ ಟಿಪ್ಪಣಿ, ವಿಮರ್ಶೆ, ಸಾಹಿತ್ಯ ಸಮ್ಮೇಳನಗಳ ವಿವರವಾದ ವರದಿ, ಭಾಷಣಗಳು, ನಿರ್ಣಯಗಳು–ಮುಂತಾದವು ಅಲ್ಲಿ ಮಾತ್ರ ಸಿಗುವ ವಿವರಗಳಾಗಿವೆ. ಕನ್ನಡನಾಡಿನ ಹೊರಗಿರುವ ಇತರ ಭಾಷಾ ಪಂಡಿತರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಹಿಂದಿನಿಂದಲೂ ಇದರಲ್ಲಿ ಪ್ರಕಟವಾಗುವ ಪ್ರತಿಯೊಂದು ಬರೆಹದ ಸಂಕ್ಷಿಪ್ತವಾದ ಇಂಗ್ಲಿಷ್ ಅನುವಾದವನ್ನು ಕೊಡುತ್ತಿದ್ದರು.

ಕಳೆದ ಅರ್ಧ ಶತಮಾನದ ಅವಧಿಯಲ್ಲಿ ವಿದ್ವತ್ ಪ್ರಪಂಚಕ್ಕೆ, ಸಂಶೋಧನ ವಿಭಾಗಕ್ಕೆ, ವಿಮರ್ಶೆಯ ಕ್ಷೇತ್ರಕ್ಕೆ ಪರಿಷತ್ಪತ್ರಿಕೆ ಸಲ್ಲಿಸಿರುವ ಸೇವೆ ಅಸದಳ. ಇಂದಿಗೂ ಪತ್ರಿಕೆಯ ಹಳೆಯ ಸಂಚಿಕೆಗಳು ಕನ್ನಡಕ್ಕೆ ಸಂಬಂಧಿಸಿದ ವಿದ್ವತ್ಪೂರ್ಣ ಬರೆಹಗಳಿಗೆ ಅತ್ಯಗತ್ಯ ಆಕರಗ್ರಂಥಗಳಾಗಿವೆ. (ಎಚ್.ಪಿ.ಎನ್.;ಎಸ್.ವಿ.ಎಸ್.)

**ಕನ್ನಡ ಸಾಹಿತ್ಯ ಸಮ್ಮೇಳನಗಳು :** ಕರ್ನಾಟಕ ಭಾಷಾ ಸಂಸ್ಕರಣಕ್ಕಾಗಿಯೂ ಕರ್ನಾಟಕ ಗ್ರಂಥಾವಳಿಯ ಅಭಿವೃದ್ಧಿಗಾಗಿಯೂ ಬೆಂಗಳೂರಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬ ಹೆಸರಿನ ಪ್ರಧಾನ ಸಭೆಯೊಂದನ್ನು ಸ್ಥಾಪಿಸಬೇಕೆಂದು ಬೆಂಗಳೂರಿನಲ್ಲಿ

ಮೊದಲ 24 ಸಾಹಿತ್ಯ ಸಮ್ಮೇಳನಾಧ್ಯಕ್ಷರುಗಳು

1915 ಮೇ 3ರಂದು ಸರ್ಕಾರಿ ಪ್ರೌಢಶಾಲೆಯ ವಿಶಾಲವಾದ ಹಜಾರದಲ್ಲಿ ಸೇರಿದ ಸಮ್ಮೇಳನದಲ್ಲಿ ತೀರ್ಮಾನವಾಯಿತು. ಆ ಸಮ್ಮೇಳನದ ಅಧ್ಯಕ್ಷತೆಯನ್ನು ರಾಜಮಂತ್ರಪ್ರವೀಣ ಎಚ್.ವಿ. ನಂಜುಂಡಯ್ಯನವರು ವಹಿಸಿದ್ದರು. ಕರ್ನಾಟಕ ಭಾಷಾಸಂಸ್ಕರಣಕ್ಕೂ ಕರ್ನಾಟಕ ಗ್ರಂಥಾಭಿವೃದ್ಧಿಗೂ ಅನುಕೂಲವಾಗುವಂಥ ಸಂಘವನ್ನು ಸ್ಥಾಪಿಸಲೋಸುಗ ಕನ್ನಡ ನಾಡಿನ ಪ್ರಮುಖರೆಲ್ಲ ಈ ಸಮ್ಮೇಳನಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದರು. ಅಂದೇ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂದದ್ದು. ಅದೇ ಪ್ರಪ್ರಥಮ ಸಾಹಿತ್ಯ ಸಮ್ಮೇಳನ. ಅಂದಿನ ಸಮ್ಮೇಳನದಲ್ಲಿ ಭಾಷಾಸಾಹಿತ್ಯಗಳ ಅಭಿವೃದ್ಧಿ ಮಾರ್ಗವನ್ನು ಕುರಿತು ಅನೇಕ ಮಂದಿ ವಿದ್ವಾಂಸರಿಂದ ಲೇಖನಗಳನ್ನು ತರಿಸಿ ಸಭೆಯಲ್ಲಿ ಓದಿ ಚರ್ಚಿಸಲಾಯಿತು.

ಎಂ. ಗೋವಿಂದ ಪೈ

ಈ ಸಂಪ್ರದಾಯವನ್ನು ಅನುಸರಿಸಿ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷವೂ ಕನ್ನಡ ನಾಡಿನ ಒಂದೊಂದು ಮುಖ್ಯ ಪಟ್ಟಣಗಳಲ್ಲಿ ಕನ್ನಡ ಭಾಷಾಭಿಮಾನಿಗಳ ಸಮ್ಮೇಳನಗಳನ್ನು ನಡೆಯಿಸುತ್ತ ಬಂದಿದೆ. 2003 ವರೆಗೆ 76 ಸಮ್ಮೇಳನಗಳು ನಡೆದಿವೆ. ಸಮ್ಮೇಳನಗಳು ನಡೆದ ಸ್ಥಳ, ಅಧ್ಯಕ್ಷರುಗಳ ಪಟ್ಟಿಯನ್ನು ಮುಂದೆ ಕೊಡಲಾಗಿದೆ.

ಸಮ್ಮೇಳನಗಳ ಕಾರ್ಯವಿವರಣೆ ಸ್ಥೂಲವಾಗಿ ಈ ರೀತಿಯಿದೆ : ಈ ಸಮ್ಮೇಳನಗಳ ಅಧ್ಯಕ್ಷತೆಗೆ ಪ್ರಮುಖರಾದ ಕನ್ನಡ ಭಾಷಾಭಿಮಾನಿಗಳೊಬ್ಬರನ್ನು ಆರಿಸಲಾಗುತ್ತದೆ. ಅಧ್ಯಕ್ಷರಾಗಿ ಆಯ್ಕೆಯಾದವರು ಸಾಮಾನ್ಯವಾಗಿ ತಮ್ಮ ಭಾಷಣದಲ್ಲಿ ಕನ್ನಡ ಭಾಷೆಯ ಸದ್ಯದ ಪರಿಸ್ಥಿತಿಯನ್ನು ವಿವರಿಸಿ ಕನ್ನಡ ಭಾಷೆಯ ಮತ್ತು ದೇಶದ ಅಭಿವೃದ್ಧಿಸ್ಥಿತಿಯನ್ನು ಕುರಿತು ಕರ್ನಾಟಕದ ನಾನಾ ಭಾಗಗಳಲ್ಲಿಯ ಕನ್ನಡಿಗರಲ್ಲಿ ಸೌಹಾರ್ದ ಹುಟ್ಟುವಂತೆ ಉಪನ್ಯಾಸ ಮಾಡುವರು. ಇದಲ್ಲದೆ. ನಾನಾ ಪ್ರಾಂತ್ಯಗಳಿಂದ ಸಮ್ಮೇಳನಕ್ಕೆ ಬಂದ ಕನ್ನಡಿಗರು ಕನ್ನಡ ಭಾಷೆಯ ಮತ್ತು ದೇಶದ ಏಳಿಗೆಗಾಗಿ ಆವಶ್ಯಕವೆಂದು ತೋರುವ ಅನೇಕ ಗೊತ್ತುವಳಿಗಳನ್ನು ಮಾಡುವರು. ಇದನ್ನು ಪರಿಷತ್ತು ಆಯಾ ಅಧಿಕಾರಿಗಳಿಗೆ ತಿಳಿಯಪಡಿಸಿ ಅವರಿಂದ ಬಂದ ಉತ್ತರಗಳನ್ನು ಮುಂದಿನ ಸಮ್ಮೇಳನದ ಮುಂದೆ ಇಡುತ್ತದೆ. ಈ ಮೂರು ದಿನಗಳ ಸಮ್ಮೇಳನದಲ್ಲಿ ನಾನಾ ಪ್ರಾಂತ್ಯಗಳಿಂದ ವಿದ್ವಾಂಸರು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತ ವಿದ್ವತ್ಪೂರಿತ ಪ್ರಬಂಧಗಳನ್ನು ಬರೆದೋದುವರು. ಇದರ ಜೊತೆಗೆ ಕನ್ನಡ ಲೇಖಕರ ಗೋಷ್ಠಿ, ನಾಟ್ಯ ನಾಟಕ ಗೋಷ್ಠಿ, ಇತಿಹಾಸ ಗೋಷ್ಠಿ, ಮಹಿಳಾ ಗೋಷ್ಠಿ, ವೃತ್ತಪತ್ರಿಕಾ ಕರ್ತರ ಗೋಷ್ಠಿ ಮುಂತಾದ ಹಲವಾರು ಗೋಷ್ಠಿಗಳು ನಡೆಯುತ್ತವೆ. ಈ ಎಲ್ಲ ಗೋಷ್ಠಿಗಳಲ್ಲೂ ಸಮ್ಮೇಳನಾಧ್ಯಕ್ಷರು ಅಗ್ರಸ್ಥಾನದಲ್ಲಿರುತ್ತಾರೆ. ಇವುಗಳ ಜೊತೆಗೆ ಮನೋರಂಜನೆ ಕಾರ್ಯಕ್ರಮದ ಅಂಗವಾಗಿ ಕನ್ನಡ ಲಾವಣಿ, ಸಂಗೀತ, ನಾಟಕ ಮುಂತಾದವೂ ಪ್ರದರ್ಶಿಸಲ್ಪಡುತ್ತವೆ.

ಹಿಂದೆ ಸಮ್ಮೇಳನಾಧ್ಯಕ್ಷರಿಗೂ ಪರಿಷತ್ತಿನ ಕಾರ್ಯಕಾರಿ ಸಮಿತಿಗೂ ನಿಕಟ ಸಂಬಂಧವಿರಲಿಲ್ಲ. ಸಮ್ಮೇಳನದಲ್ಲಾದ ಗೊತ್ತುವಳಿಗಳನ್ನು ಆಚರಣೆಗೆ ತರುವುದರಲ್ಲಾಗಲಿ, ಪರಿಷತ್ತಿನ ಧೋರಣೆಯನ್ನು ರೂಪುಗೊಳಿಸುವುದರಲ್ಲಾಗಲಿ ಅವರಿಗೆ ಸ್ಥಾನವಿರಲಿಲ್ಲ. ಈಚೆಗೆ ಈ ಸ್ಥಿತಿ ಮಾರ್ಪಟ್ಟಿದೆ. ಸಮ್ಮೇಳನದ ಅಧ್ಯಕ್ಷರು ಕಾರ್ಯಸಮಿತಿಯ ಸದಸ್ಯರಾಗಿರಬೇಕೆಂಬ ಒಂದು ತೀರ್ಮಾನವನ್ನು 1939ರಲ್ಲಿ ಅಂಗೀಕರಿಸಲಾಯಿತು. ಎರಡನೆಯದಾಗಿ ಪರಿಷತ್ತಿನ ಅಧ್ಯಕ್ಷರು ತಾವು ನಡೆಸುವ ಮುಖ್ಯ ಕಾರ್ಯಗಳ ವಿವರಗಳನ್ನು ಆಗಿಂದಾಗ್ಗೆ ಸಮ್ಮೇಳನಾಧ್ಯಕ್ಷರಿಗೆ ತಿಳಿಸಿ, ಅವರ ಸಲಹೆ ಪಡೆಯುವುದು ರೂಢಿಗೆ ಬಂದಿದೆ. ಇವರು ಸ್ವತಂತ್ರವಾಗಿಯೋ ಅಧ್ಯಕ್ಷರ ಜೊತೆಯಲ್ಲಿಯೋ ನಾಡಿನಲ್ಲಿ ಪ್ರವಾಸ ಮಾಡಿ ಪರಿಷತ್ತಿನ ಧ್ಯೇಯಗಳನ್ನು ಜನಸಾಮಾನ್ಯರಲ್ಲಿ ಹರಡುತ್ತಿದ್ದಾರೆ.

ಸಮ್ಮೇಳನಗಳು ಕರ್ನಾಟಕದ ಎಲ್ಲ ಪ್ರಮುಖ ಸ್ಥಳಗಳಲ್ಲೂ ನಡೆದಿವೆ. ಕನ್ನಡಿಗರು ಅಧಿಕ ಸಂಖ್ಯೆಯಲ್ಲಿರುವ ಹೊರನಾಡಿನಲ್ಲೂ ನಡೆದಿವೆ. ನಾಡಿನ ಸುಪ್ರಸಿದ್ಧ ಸಾಹಿತಿಗಳು ಅಧ್ಯಕ್ಷರಾಗಿದ್ದಾರೆ. ಸಹಸ್ರ ಸಂಖ್ಯೆಯಲ್ಲಿ ಜನ ಸೇರಿ ಸಮ್ಮೇಳನಗಳ ಕಾರ್ಯ ಕಲಾಪಗಳನ್ನು ವೀಕ್ಷಿಸಿದ್ದಾರೆ; ಶುದ್ಧ ಮಾದರಿಯ ಮನೋರಂಜನ ಕಾರ್ಯಕ್ರಮಗಳನ್ನು ನೋಡಿ ಆನಂದಿಸಿದ್ದಾರೆ. ಅನೇಕ ಸ್ಥಳೀಯರು ಸಕ್ರಿಯವಾಗಿ ಭಾಗವಹಿಸಿದ್ದಾರೆ.

## ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧಿವೇಶನಗಳು

| ಕ್ರಮ ಸಂಖ್ಯೆ | ಅಧಿವೇಶನ ಸ್ಥಳ | ಅಧ್ಯಕ್ಷರು | ವರ್ಷ |
|---|---|---|---|
| 1. | ಬೆಂಗಳೂರು | ಎಚ್. ವಿ. ನಂಜುಂಡಯ್ಯ | 1915 |
| 2. | ಬೆಂಗಳೂರು | ಎಚ್. ವಿ. ನಂಜುಂಡಯ್ಯ | 1916 |
| 3. | ಮೈಸೂರು | ಎಚ್. ವಿ. ನಂಜುಂಡಯ್ಯ | 1917 |
| 4. | ಧಾರವಾಡ | ಆರ್. ನರಸಿಂಹಚಾರ್ | 1918 |
| 5. | ಹಾಸನ | ಕರ್ಪೂರ ಶ್ರೀನಿವಾಸರಾಯರು | 1919 |
| 6. | ಹೊಸಪೇಟೆ | ರೊದ್ದ ಶ್ರೀನಿವಾಸರಾಯರು | 1920 |
| 7. | ಚಿಕ್ಕಮಗಳೂರು | ಕೆ. ಪಿ. ಪುಟ್ಟಣ್ಣಶೆಟ್ಟರು | 1921 |
| 8. | ದಾವಣಗೆರೆ | ಎಂ. ವೆಂಕಟಕೃಷ್ಣಯ್ಯ | 1922 |
| 9. | ಬಿಜಾಪುರ | ಸಿದ್ಧಾಂತಿ ಶಿವಶಂಕರ ಶಾಸ್ತ್ರೀ | 1923 |
| 10. | ಕೋಲಾರ | ಹೊಸಕೋಟೆ ಕೃಷ್ಣಶಾಸ್ತ್ರೀ | 1924 |
| 11. | ಬೆಳಗಾಂವಿ | ಬೆನಗಲ್ ರಾಮರಾವ್ | 1925 |
| 12. | ಬಳ್ಳಾರಿ | ಫ. ಗು. ಹಳಕಟ್ಟಿ | 1926 |
| 13. | ಮಂಗಳೂರು | ಆರ್. ತಾತಾಚಾರ್ಯ | 1927 |
| 14. | ಕಲಬುರ್ಗಿ | ಬಿ. ಎಂ. ಶ್ರೀಕಂಠಯ್ಯ | 1928 |
| 15. | ಬೆಳಗಾಂವಿ | ಮಾಸ್ತಿ ವೆಂಕಟೇಶ ಅಯ್ಯಂಗಾರ್ | 1929 |
| 16. | ಮೈಸೂರು | ಆಲೂರು ವೆಂಕಟರಾಯರು | 1930 |
| 17. | ಕಾರವಾರ | ಮುಳಿಯ ತಿಮ್ಮಪ್ಪಯ್ಯ | 1931 |
| 18. | ಮಡಿಕೇರಿ | ಡಿ. ವಿ. ಗುಂಡಪ್ಪ | 1932 |
| 19. | ಹುಬ್ಬಳ್ಳಿ | ವೈ. ನಾಗೇಶಶಾಸ್ತ್ರೀ | 1933 |
| 20. | ರಾಯಚೂರು | ಪಂಜೆ ಮಂಗೇಶರಾಯರು | 1934 |
| 21. | ಮುಂಬಯಿ | ಎನ್. ಎಸ್. ಸುಬ್ಬರಾಯರು | 1935 |
| 22. | ಜಮಖಂಡಿ | ಬೆಳ್ಳಾವೆ ವೆಂಕಟನಾರಣಪ್ಪ | 1937 |
| 23. | ಬಳ್ಳಾರಿ | ರಂ. ರಾ. ದಿವಾಕರ್ | 1938 |
| 24. | ಬೆಳಗಾಂವಿ | ಮುದವೀಡು ಕೃಷ್ಣರಾಯರು | 1939 |
| 25. | ಧಾರವಾಡ | ವೈ. ಚಂದ್ರಶೇಖರಶಾಸ್ತ್ರೀ | 1940 |
| 26. | ಹೈದರಾಬಾದ್ | ಎ. ಆರ್. ಕೃಷ್ಣಶಾಸ್ತ್ರೀ | 1941 |
| 27. | ಶಿವಮೊಗ್ಗ | ದ. ರಾ. ಬೇಂದ್ರೆ | 1943 |
| 28. | ರಬಕವಿ | ಎಸ್.ಎಸ್. ಬಸವನಾಳರು | 1944 |
| 29. | ಮದರಾಸು (ಚೆನ್ನೈ) | ಟಿ. ಪಿ. ಕೈಲಾಸಂ | 1945 |
| 30. | ಹರಪನಹಳ್ಳಿ | ಸಿ.ಕೆ. ವೆಂಕಟರಾಮಯ್ಯ | 1947 |
| 31. | ಕಾಸರಗೋಡು | ತಿರುಮಲೆ ತಾತಾಚಾರ್ಯ ಶರ್ಮ | 1948 |
| 32. | ಕಲಬುರ್ಗಿ | ಉತ್ತಂಗಿ ಚನ್ನಪ್ಪ | 1949 |
| 33. | ಸೊಲ್ಲಾಪುರ | ಎಂ. ಆರ್. ಶ್ರೀನಿವಾಸ ಮೂರ್ತಿ | 1950 |
| 34. | ಮುಂಬಯಿ | ಎಂ. ಗೋವಿಂದಪೈ | 1951 |
| 35. | ಬೇಲೂರು | ಎಸ್. ಸಿ. ನಂದೀಮಠ | 1952 |
| 36. | ಕುಮಟ | ವಿ. ಸೀತಾರಾಮಯ್ಯ | 1954 |
| 37. | ಮೈಸೂರು | ಕೋಟ ಶಿವರಾಮಕಾರಂತ | 1955 |
| 38. | ರಾಯಚೂರು | ಆದ್ಯ ರಂಗಚಾರ್ಯ | 1955 |
| 39. | ಧಾರವಾಡ | ಕೆ. ವಿ. ಪುಟ್ಟಪ್ಪ | 1957 |
| 40. | ಬಳ್ಳಾರಿ | ವಿ. ಕೆ. ಗೋಕಾಕ್ | 1958 |
| 41. | ಬಿದರೆ | ಡಿ.ಎಲ್. ನರಸಿಂಹಚಾರ್ | 1960 |
| 42. | ಮಣಿಪಾಲ | ಅ. ನ. ಕೃಷ್ಣರಾಯರು | 1960 |
| 43. | ಗದಗ | ಕೆ. ಜಿ. ಕುಂದಣಗಾರ | 1961 |
| 44. | ಸಿದ್ಧಗಂಗಾ | ರಂ. ಶ್ರೀ. ಮುಗಳಿ | 1963 |
| 45. | ಕಾರವಾರ | ಕಡೆಂಗೋಡ್ಲು ಶಂಕರಭಟ್ಟ | 1965 |
| 46. | ಶ್ರವಣಬೆಳಗೊಳ | ಆ. ನೇ. ಉಪಾಧ್ಯೆ | 1967 |
| 47. | ಬೆಂಗಳೂರು | ದೇ. ಜವರೇಗೌಡ | 1970 |
| 48. | ಮಂಡ್ಯ | ಜಯದೇವಿತಾಯಿ ಲಿಗಾಡೆ | 1974 |
| 49. | ಶಿವಮೊಗ್ಗ | ಎಸ್.ವಿ. ರಂಗಣ್ಣ | 1976 |
| 50. | ನವದೆಹಲಿ | ಜಿ.ಪಿ. ರಾಜರತ್ನಂ | 1978 |
| 51. | ಧರ್ಮಸ್ಥಳ | ಎಂ.ಗೋಪಾಲಕೃಷ್ಣ ಅಡಿಗ | 1979 |
| 52. | ಬೆಳಗಾಂವಿ | ಬಸವರಾಜ ಕಟ್ಟೀಮನಿ | 1980 |
| 53. | ಚಿಕ್ಕಮಗಳೂರು | ಪು.ತಿ.ನರಸಿಂಹಾಚಾರ್ | 1981 |
| 54. | ಮಡಿಕೇರಿ | ಶಂಬಾ ಜೋಶಿ | 1981 |
| 55. | ಶಿರಸಿ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | 1982 |
| 56. | ಕೈವಾರ | ಎ.ಎನ್.ಮೂರ್ತಿರಾವ್ | 1984 |
| 57. | ಬೀದರ್ | ಹಾ.ಮಾ.ನಾಯಕ | 1985 |
| 58. | ಕಲಬುರ್ಗಿ | ಸಿದ್ಧಯ್ಯ ಪುರಾಣಿಕ | 1987 |
| 59. | ಹುಬ್ಬಳ್ಳಿ | ಆರ್.ಸಿ.ಹಿರೇಮಠ | 1990 |
| 60. | ಮೈಸೂರು | ಕೆ.ಎಸ್.ನರಸಿಂಹಸ್ವಾಮಿ | 1990 |
| 61. | ದಾವಣಗೆರೆ | ಜಿ.ಎಸ್.ಶಿವರುದ್ರಪ್ಪ | 1992 |
| 62. | ಕೊಪ್ಪಳ | ಸಿಂಪಿ ಲಿಂಗಣ್ಣ | 1992 |
| 63. | ಮಂಡ್ಯ | ಚದುರಂಗ | 1994 |
| 64. | ಮುಧೋಳ | ಎಚ್.ಎಲ್.ನಾಗೇಗೌಡ | 1995 |
| 65. | ಹಾಸನ | ಚೆನ್ನವೀರ ಕಣವಿ | 1996 |
| 66. | ಮಂಗಳೂರು | ಕಯ್ಯಾರ ಕಿಞ್ಞಣ್ಣರೈ | 1997 |
| 67. | ಕನಕಪುರ | ಎಸ್.ಎಲ್. ಭೈರಪ್ಪ | 1999 |
| 68. | ಬಾಗಲಕೋಟೆ | ಶಾಂತಾದೇವಿ ಮಾಳವಾಡ | 2000 |
| 69. | ತುಮಕೂರು | ಯು.ಆರ್.ಅನಂತಮೂರ್ತಿ | 2002 |
| 70. | ಬೆಳಗಾಂವಿ | ಪಾಟೀಲ ಪುಟ್ಟಪ್ಪ | 2003 |
| 71. | ಮೂಡಬಿದರೆ | ಕಮಲಾ ಹಂಪನಾ | 2003 |
| 72. | ಬೀದರ್ | ಶಾಂತರಸ ಹೆಂಬೇರಾಳು | 2006 |
| 73. | ಶಿವಮೊಗ್ಗ | ಕೆ.ಎಸ್. ನಿಸಾರ್ ಅಹ್ಮದ್ | 2006 |
| 74. | ಉಡುಪಿ | ಎಲ್.ಎಸ್. ಶೇಷಗಿರಿರಾವ್ | 2007 |
| 75. | ಚಿತ್ರದುರ್ಗ | ಎಲ್. ಬಸವರಾಜು | 2009 |
| 76. | ಗದಗ | ಗೀತಾ ನಾಗಭೂಷಣ | 2010 |
| 77. | ಬೆಂಗಳೂರು | ಜಿ. ವೆಂಕಟಸುಬ್ಬಯ್ಯ | 2011 |
| 78. | ಗಂಗಾವತಿ | ಸಿ.ಪಿ. ಕೃಷ್ಣಕುಮಾರ್ | 2011 |
| 79. | ಬಿಜಾಪುರ | ಕೋ. ಚೆನ್ನಬಸಪ್ಪ | 2013 |
| 80. | ಕೊಡಗು | ನಾ. ಡಿಸೋಜ | 2014 |
| 81. | ಶ್ರವಣಬೆಳಗೊಳ | ಸಿದ್ಧಲಿಂಗಯ್ಯ (ನಿಯೋಜಿತ) | 2015 |

## ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಗಳು

| ಕ್ರ.ಸಂ | ಹೆಸರು | ಅವಧಿ |
|---|---|---|
| 1. | ಎಚ್. ವಿ. ನಂಜುಂಡಯ್ಯ | 1915–1920 |
| 2. | ಸರ್.ಎಂ.ಕಾಂತರಾಜ್ ಅರಸ್ | 1920–1923 |
| 3. | ಕಂಠೀರವ ನರಸಿಂಹರಾಜ ಒಡೆಯರ್ | 1924–1940 |
| 4. | ಜಯಚಾಮರಾಜೇಂದ್ರ ಒಡೆಯರ್ | 1940–1940 |
| 5. | ಬಸವ ಪ್ರಭು ಸರದೇಸಾಯಿ | 1941–1946 |
| 6. | ಜಸ್ಟೀಸ್ ಲೋಕೂರ್ ನಾರಾಯಣರಾವ್ ಸ್ವಾಮಿರಾವ್ | 08.06.1947 – 29.12.1947 |
| 7. | ತಿರುಮಲೆ ತಾತಾಚಾರ್ಯ ಶರ್ಮ | 29.12.1947 – 06.03.1949 |
| 8. | ರೆವರೆಂಡ್ ಉತ್ತಂಗಿ ಚೆನ್ನಪ್ಪ | 06.03.1949 – 17.02.1950 |
| 9. | ಎಂ.ಆರ್. ಶ್ರೀನವಾಸಮೂರ್ತಿ | 17.02.1950 – 09.05.1953 |
| 10. | ಮಾಸ್ತಿ ವೆಂಕಟೇಶ ಅಯ್ಯಂಗಾರ್ | 30.09.1953 – 09.05.1954 |
| 11. | ಎ.ಎನ್. ಮೂರ್ತಿರಾವ್ | 09.05.1954 – 17.05.1956 |
| 12. | ಬಿ. ಶಿವಮೂರ್ತಿ ಶಾಸ್ತ್ರಿ | 17.05.1956 – 25.10.1964 |
| 13. | ಜಿ. ವೆಂಕಟಸುಬ್ಬಯ್ಯ | 25.10.1964 – 11.06.1969 |
| 14. | ಜಿ. ನಾರಾಯಣ | 11.06.1969 – 23.07.1978 |
| 15. | ಹಂಪ ನಾಗರಾಜಯ್ಯ | 23.07.1978 – 19.02.1986 |
| 16. | ಹೆಚ್.ಬಿ.ಜ್ವಾಲನಯ್ಯ | 19.02.1986 – 01.01.1987 |
| 17. | ಅ.ರಾ. ಚಂದ್ರಹಾಸ ಗುಪ್ತ (ಆಡಳಿತಾಧಿಕಾರಿ) | 02.11.1987 – 31.03.1988 |
| 18. | ಐ.ಎಂ. ವಿಠಲಮೂರ್ತಿ (ಆಡಳಿತಾಧಿಕಾರಿ) | 31.03.1988 – 02.02.1989 |
| 19. | ಜಿ. ಎಸ್. ಸಿದ್ಧಲಿಂಗಯ್ಯ | 02.02.1989 – 14.05.1992 |
| 20. | ಗೊ.ರು. ಚನ್ನಬಸಪ್ಪ | 14.05.1992 – 22.06.1995 |
| 21. | ಸಾ.ಶಿ. ಮರುಳಯ್ಯ | 22.06.1995 – 06. 1998 |
| 22. | ಎನ್. ಬಸವಾರಾಧ್ಯ | 06.1998 – 07.2001 |
| 23. | ಹರಿಕೃಷ್ಣ ಪುನರೂರು | 11.07.2001 – 02.11.2004 |
| 24. | ಚಂದ್ರಶೇಖರ ಪಾಟೀಲ (ಚಂಪಾ) | 02.11.2004 – 30.04.2008 |
| 25. | ನಲ್ಲೂರು ಪ್ರಸಾದ್, ಆರ್.ಕೆ. | 27.08.2008 – 27.02.2012 |
| 26. | ಪುಂಡಲೀಕ ಹಾಲಂಬಿ | 03.05.2012 – ಈಗಿನವರೆಗೆ |

**ಸಮ್ಮೇಳನಾಧ್ಯಕ್ಷರ ನುಡಿಗಳು**

ಕನ್ನಡದ ಸರ್ವತೋಮುಖವಾದ ಬೆಳವಣಿಗೆಯ ಬಗ್ಗೆ ಅಧ್ಯಕ್ಷರು ನೀಡಿರುವ ವಿಸ್ತೃತವೂ ವಿದ್ವತ್ಪೂರ್ಣವೂ ಆದ ಭಾಷಣಗಳಿಂದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.

ಕನ್ನಡ ಭಾಷೆಯು ಮೈಸೂರು ಸಂಸ್ಥಾನದವರಿಗೆ ಮಾತ್ರವೇ ಸೇರಿರುವುದಾಗಿಲ್ಲ. ಕನ್ನಡವನ್ನು ಮಾತನಾಡುವುದರಲ್ಲಿ ಅರ್ಧಪಾಲಿಗಿಂತಲೂ ಹೆಚ್ಚು ಮಂದಿ ಸಂಸ್ಥಾನದ ಸುತ್ತಮುತ್ತಲೂ ಇವರು ಬ್ರಿಟಿಷ್ ಇಂಡಿಯಾದಲ್ಲಿಯೂ ಹೈದರಾಬಾದ್ ಸಂಸ್ಥಾನದಲ್ಲಿಯೂ ವಾಸಿಸುತ್ತಿರುವರು. ರಾಜಕೀಯ ವಿಷಯಗಳಲ್ಲಿ ಮೂರು ನಾಲ್ಕು ಸರ್ಕಾರದವರಿಗೆ ಅಧೀನವಾಗಿದ್ದರೂ ಬೇರೆಬೇರೆಯಾಗಿ ಕಾಣುವ ಕನ್ನಡ ನಾಡುಗಳಲ್ಲಿಯೂ ಕನ್ನಡ ಮಾತನಾಡುವವರಲ್ಲಿಯೂ ಕೆಲವು ಸಾಮಾನ್ಯ ಲಕ್ಷಣಗಳು ಕಾಣಬರುತ್ತವೆ. ಆದುದರಿಂದ ಭಾಷಾಭಿವೃದ್ಧಿ, ಗ್ರಂಥರಚನೆ ಇವುಗಳ ವಿಷಯದಲ್ಲಿ ಕನ್ನಡಿಗರೆಲ್ಲರನ್ನೂ ಒಟ್ಟುಗೂಡಿಸಿದರೆ, ವಿಶೇಷ ಪ್ರಯೋಜನವುಂಟು. ಈ ಉದ್ದೇಶದಿಂದಲೇ, ಕನ್ನಡ ಭಾಷಾಭಿವೃದ್ಧಿಯಲ್ಲಿ ಆಸಕ್ತರಾಗಿಯೂ ಸಮರ್ಥರಾಗಿಯೂ ಕಾರ್ಯಭಾರವನ್ನು ವಹಿಸಲು ತಕ್ಕವರಾಗಿಯೂ ಇರುವ ಜನಗಳು ಸೇರಿ, ಅನ್ಯೋನ್ಯ ಸಹಾಯದಿಂದ ಒಟ್ಟುಗೂಡಿ ಕೆಲಸ ಮಾಡತಕ್ಕ ಒಂದು ಸಭೆಯನ್ನು ಸರ್ಕಾರದ ಸಂಬಧವಿಲ್ಲದೆ ನಿರ್ಮಿಸಬೇಕೆಂದು ಈ ಸಮ್ಮೇಳನವನ್ನು ಏರ್ಪಾಡು ಮಾಡಲಾಗಿದೆ. – ಎಚ್. ವಿ. ನಂಜುಂಡಯ್ಯ

ಪೂರ್ವದಂತೆ ಉದ್ದಾಮಕವಿಗಳು ಹುಟ್ಟಬೇಕೆಂದಾಗಲಿ, ಪೂರ್ವದಂತೆ ರಾಜರೂ ಮಾಂಡಲಿಕರೂ ಅಧಿಕಾರಿಗಳೂ ಪ್ರೋತ್ಸಾಹಕರಾಗಬೇಕೆಂದಾಗಲಿ ಹಾರೈಸುವುದರಿಂದ ಫಲವಿಲ್ಲ. ಪ್ರಕೃತ ಕಾಲಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಅಸಡ್ಡೆಯನ್ನು ತೊಲಗಿಸಿ ಭಾಷಾಸೇವೆಯಲ್ಲಿ ನಿರತರಾಗಬೇಕು. ಪಂಡಿತರನ್ನು ಗೌರವಿಸಬೇಕು. ಕನ್ನಡ ನುಡಿಗಾಗಿ ಶ್ರಮಪಡುವವರಿಗೆ ಮರ್ಯಾದೆಯನ್ನು ಮಾಡಬೇಕು. ಸಾಹಿತ್ಯವನ್ನು ವೃದ್ಧಿಗೊಳಿಸುವುದಕ್ಕಾಗಿ ಶಾಸ್ತ್ರೀಯ ಗ್ರಂಥಗಳೇ ಮೊದಲಾದುವನ್ನು ಅನ್ಯಭಾಷೆಗಳಿಂದ ಪರಿವರ್ತಿಸಬೇಕು. ಕೋಶಗಳನ್ನೂ ಸಾಂಕೇತಿಕ ಶಬ್ದಗಳ ಪಟ್ಟಿಯನ್ನೂ ಏರ್ಪಡಿಸಬೇಕು. ಗ್ರಂಥಸ್ಥ ಭಾಷೆಗೆ ಏಕರೂಪತೆಯನ್ನು ಉಂಟುಮಾಡಬೇಕು. ವಿದ್ಯಾವಂತನಾದ ಪ್ರತಿಯೊಬ್ಬ ಕನ್ನಡಿಗನೂ ತನಗಿಂತ ವಿದ್ಯೆಯಲ್ಲಿ ಕಡಿಮೆಯಾದ ಕನ್ನಡಿಗರ ಉಪಯೋಗಾರ್ಥವಾಗಿ ಗ್ರಂಥ ನಿರ್ಮಾಣವನ್ನು ಮಾಡುವುದು ತನ್ನ ಕರ್ತವ್ಯವೆಂದು ತಿಳಿಯಬೇಕು. ಜ್ಞಾನವೃದ್ಧಿಕರವಾದ ಪತ್ರಿಕೆಗಳನ್ನು ಹೊರಡಿಸಬೇಕು. ಭಾಷೆಯ ಏಕೀಭಾವ, ಪರಸ್ಪರ ಮೈತ್ರಿ, ಮುದ್ರಣ ಸೌಕರ್ಯ, ಗ್ರಂಥ ಪ್ರಚಾರಕ್ಕೆ ಅನುಕೂಲ್ಯ ಇವುಗಳನ್ನು ಉಂಟು ಮಾಡುವುದಕ್ಕಾಗಿ ಗ್ರಂಥಕರ್ತರ ಮತ್ತು ಪತ್ರಿಕಾ ಸಂಪಾದಕರ ಒಂದು ಸಂಘವನ್ನು ಏರ್ಪಡಿಸಬಹುದು. ಎಲ್ಲ ಕರ್ಣಾಟಕ ಭಾಗಗಳ ವಿದ್ವಾಂಸರನ್ನು ಸೇರಿಸಿ ಒಂದು ಗ್ರಂಥಪರಿಶೀಲಕ ಮಂಡಲಿಯನ್ನೂ ಏರ್ಪಡಿಸಬಹುದು.

ಈಗಲಾದರೋ ಕನ್ನಡ ನುಡಿ, ನಾವು ಪೂರ್ವದಲ್ಲಿ ಭಾಷೋನ್ನತಿಗಾಗಿ ಉತ್ಕಟೇಚ್ಛೆಯಿಂದ ಕೃತಿ ಮಾಡಿದ ಕನ್ನಡಿಗರ ಸಂತತಿಯವರೋ ಅಲ್ಲವೋ ಎಂದು ಸಂದೇಹಪಡಬಹುದಾದಷ್ಟು ಹೀನ ಸ್ಥಿತಿಗೆ ಬಂದಿದೆ. ಈ ಹೀನ ಸ್ಥಿತಿಯನ್ನು ನೋಡಿ ಯಾವ ನಿಜವಾದ ಕನ್ನಡಿಗರ ಹೃದಯ ತಾನೇ ಶೋಕರಸಪೂರಿತವಾಗದು? ಯಾವ ಭಾಷಾಭಿಮಾನಿಯಾದ ಕನ್ನಡಿಗನ ಕಣ್ಣು ತಾನೇ ನೀರಿನಿಂದ ತುಂಬದು?

– ಆರ್. ನರಸಿಂಹಾಚಾರ್ಯ

ಇಟ್ಟಿಗೆಗಳು ಒಂದಕ್ಕೊಂದನ್ನಂಟಿಸಿ ಭದ್ರಪಡಿಸುವ ಗಾರೆಯಂತೆ ಭಾಷೆಯು ಜನರನ್ನು ಸೇರಿಸತಕ್ಕ ಒಂದು ಅಂಟು. ಮಂಗಳೂರಿನವರಿಗೂ ಧಾರವಾಡದವರಿಗೂ ಮೈಸೂರಿನವರಿಗೂ ಸಂಬಂಧವೇನು ? ಅವರನ್ನು ಇಲ್ಲಿ ಸೇರುವಂತೆ ಮಾಡಿದುದಾವುದು ? ಕನ್ನಡ ನುಡಿಯಲ್ಲವೆ ? ಇಟ್ಟಿಗೆಯ ಬಲವೂ ಗಾರೆಯ ಅಂಟೂ ಹೆಚ್ಚಿದಷ್ಟೂ ಗೋಡೆಯ ಬಲವೂ ಹೆಚ್ಚುವುದಷ್ಟೆ ! ಕನ್ನಡ ನುಡಿಯ ಅಭಿವೃದ್ಧಿಯಾದಷ್ಟೂ ಕನ್ನಡಿಗರ ಬಲವೂ ಅಧಿಕವಾಗುವುದರಲ್ಲಿ ಸಂದೇಹವೇಕೆ ? – ಕೆ. ಪಿ. ಪುಟ್ಟಣ್ಣಶೆಟ್ಟಿ

ಭಾಷೆಗೆ ಕುಲವಿಲ್ಲ. ಗೋತ್ರವಿಲ್ಲ, ಮತವಿಲ್ಲ; ಅದು ಎಲ್ಲರಿಗೂ ಸೇರಿದ, ಎಲ್ಲರಿಗೂ ಬೇಕಾದುದು. ಪೂರ್ವಕಾಲದಲ್ಲಿ ಎಲ್ಲ ಮತಜಾತಿಗಳವರೂ ಅದರ ಸೇವೆ ಮಾಡಿ ಅದನ್ನು ಬೆಳೆಯಿಸಿದರು. ಈಗಲೂ ನಾವು ನಮ್ಮ ಭೇದಗಳನ್ನು ಬಿಟ್ಟು ಒಮ್ಮನಸ್ಸಿನಿಂದ ಭಾಷಾಸೇವೆಗೆ ನಿಂತರೆ, ಬೇಗನೆ ನಮ್ಮ ಸಾಹಿತ್ಯವು ಪ್ರಪಂಚದಲ್ಲಿ ಮಾನ್ಯ ಸ್ಥಾನವನ್ನು ಪಡೆದು ನಮ್ಮ ದೇಶವು ಸುಖಸಂಪತ್ತುಗಳಿಗೆ ಆವಾಸ ಸ್ಥಾನವಾಗುವುದರಲ್ಲಿ ಸಂದೇಹವಿಲ್ಲ.

– ಎಂ. ವೆಂಕಟಕೃಷ್ಣಯ್ಯ

ಸಾಹಿತ್ಯದಲ್ಲಿ ನಡೆಯಬೇಕಾಗಿರುವ ಊಳಿಗವನ್ನು ಮಾತ್ರ ನಾವೆಲ್ಲರೂ ಕೂಡಿ ಮಾಡಿದಲ್ಲದೆ ಸಾಹಿತ್ಯದ ಉತ್ತರೋತ್ತರವು ನೆಟ್ಟಗಾಗಲಾರದು. ಆದುದರಿಂದ ಈವರೆಗೆ ಅಶ್ರದ್ಧೆಯೋ ಸಮಯವಿರೋಧವೋ ವ್ಯಕ್ತಿವೈರವೋ ದೇಶಾಂತರ ವಿವಾದವೋ ವಿಷಯಾಂತರಾಳವೋ ಮತವಿರೋಧವೋ ಏನಿದ್ದರೂ ತೊರೆದು ಮರೆತು ನಮ್ಮ ಸಜ್ಜನಿಕೆಯನ್ನೂ, ಕಾರ್ಯದಕ್ಷತೆಯನ್ನೂ ನೈಪುಣ್ಯವನ್ನೂ ಸಾಹಿತ್ಯವನ್ನೂ ಮರೆಯಲು ನಾವೆಲ್ಲರೂ ನೆರೆಯಬೇಕೆಂಬುದು ನನ್ನ ಸವಿನಯಪ್ರಾರ್ಥನೆ. – ಆರ್. ತಾತಾಚಾರ್ಯ

ಇಂಗ್ಲಿಷ್ ಸಂಸ್ಕಾರದಿಂದ ಅಂಜನ ಹಾಕಿ ಪರೆ ತೆಗೆದ ಹೊಸ ಕಣ್ಣಿನಿಂದ, ಹೊಸ ಬೆಳಗಳ ತಿಳಿವಳಿಕೆಯಿಂದ, ವಿಮರ್ಶನ ಮಿಳಿತವಾದ ಶ್ರದ್ಧೆಯಿಂದ, ವೇದಗಳು, ಉಪನಿಷತ್ತುಗಳು, ಇತಿಹಾಸ ಪುರಾಣಗಳು, ದರ್ಶನಗಳು, ಶಾಸ್ತ್ರಗಳು, ಕಲೆಗಳು, ವೈದಿಕ ಬೌದ್ಧ ಜೈನ ವೈಷ್ಣವ ಧರ್ಮಗಳು–ಇವುಗಳ ಪವಿತ್ರ ಮೂಲಗಳನ್ನು ಪರಿಶೋಧನೆ ಮಾಡಿ ಹಸಿದು ಕಂಗೆಟ್ಟಿರುವ ನಮ್ಮ ಜನಸಾಮಾನ್ಯಕ್ಕೆ ಶುದ್ಧಹಾರವನ್ನು ದೇಹಪುಷ್ಟಿ, ಆತ್ಮಪುಷ್ಟಿ ಆಗುವ ನಿರ್ಮಲಾಹಾರವನ್ನು ಒದಗಿಸುವುದು ವಿದ್ಯಾವಂತರ ಕರ್ತವ್ಯವಲ್ಲವೆ?

– ಬಿ. ಎಂ. ಶ್ರೀಕಂಠಯ್ಯ

"ಇಂಗ್ಲೀಷು ಮುಖ್ಯ ಭಾಷೆ ಎನ್ನುವುದನ್ನು ಬಿಡುವ ತನಕ ಕನ್ನಡ ಬೆಳೆಯುವುದಿಲ್ಲ. ಗ್ರಂಥಕಾರನು ಸಮಸ್ತ ಪ್ರಜೆಗಾಗಿ ದುಡಿಯುತ್ತಾನೆ. ಸಮಸ್ತ ಪ್ರಜೆಯೂ ಅವನಿಗೆ ಜೀವನವನ್ನು ಕೊಡಬೇಕು. ಬರೆದರಿಗೆಲ್ಲ ಹಿಡಿಹೊನ್ನು ಕೊಡಿ ಎಂದು ನಾನು ಹೇಳುವುದಿಲ್ಲ. ಒಳ್ಳೆಯ ಪುಸ್ತಕವೆಂದು ತೋರಿದರೆ ಒಂದೊಂದು ಪ್ರತಿಗಳನ್ನು ಕೊಳ್ಳಿರಿ ಅಷ್ಟೆ.

– ಮಾಸ್ತಿ ವೆಂಕಟೇಶ ಐಯ್ಯಂಗಾರ್

ಚತುರ್ಮುಖವಾದ ಕರ್ನಾಟಕವು ಏಕಮುಖವಾಗಿದೆ. ಈಗ ಅದರ ನಾಲ್ಕು ಮೋರೆಗಳನ್ನು ಏಕಮುಖವಾಗಿ ಮಾಡುವುದಕ್ಕೋಸ್ಕರ ಅಖಿಲ ಕನಾಟಕ ವಿಶ್ವ ವಿದ್ಯಾಲಯವು ಅವಶ್ಯವಾಗಿ ಬೇಕಾಗಿದೆ. – ಆಲೂರ ವೆಂಕಟರಾಯರು

"ನಮ್ಮ ಕರ್ನಾಟಕದಲ್ಲಿ ಪ್ರಾಂತ ಭೇದದಿಂದಾಗಿ ನೆಲೆಗೊಂಡ ಕನ್ನಡದ ಕವಲುಗಳು ಹಲವಿರುತ್ತವೆ. ಭಿನ್ನ ಭಾಷೆಗಳ ಸಂಪರ್ಕವೂ ಹಲವಿರುತ್ತದೆ, ಈ ಸ್ಥಿತಿ ಸಾಹಿತ್ಯಾಭಿವೃದ್ಧಿಗೊಂಡು ಬಂದಣಿಕೆಯಂತೆ ಪ್ರಥಮ ದೃಷ್ಟಿಗೆ ತೋರಬಹುದು. ಆ ದೃಷ್ಟಿ ದೋಷಕ್ಕೆ ಹೆದರಬಾರದು. ಕನ್ನಡದ ಕವಲುಗಳನ್ನೆಲ್ಲ ಕರಗಿಸಿ 'ದೇಶಿ' ಯನ್ನಾಗಿ ಮಾಡಬೇಕು. ಪರಭಾಷೆಗಳ ಸಾರವವನ್ನೆಲ್ಲ ಕನ್ನಡದಲ್ಲಿ ತುಂಬಬೇಕು'.

– ಮುಳಿಯ ತಿಮ್ಮಪ್ಪಯ್ಯ

ನಮ್ಮಲ್ಲಿ ಹಳೆಯ ತೆರದ ಪಾಂಡಿತ್ಯವು ಕಡಮೆಯಾಗಕೂಡದೆಂದು ನನ್ನ ಕೋರಿಕೆ. ಲೋಕೋಪಕಾರದ ವಿಸ್ತೀರ್ಣವನ್ನು ಅಳೆದು ನೋಡಿದರೆ ಬಸವಣ್ಣ, ಪುರಂದರ, ಕನಕರುಗಳಿಂದಲೂ ಈಗಿರುವಷ್ಟು ವೇದಾಂತ ತತ್ವ ಪ್ರಚಾರವು ಅನೇಕ ಉಪನಿಷದ್ವ್ಯಾಖ್ಯಾತರುಗಳಿಂದ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಕುಮಾರವ್ಯಾಸ, ಕುಮಾರ ವಾಲ್ಮೀಕಿಗಳಿಂದ ಆಗಿರುವಷ್ಟು ಭಾರತ ರಾಮಾಯಣ ಕಥಾ ಪ್ರಸಾರವು ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದ ನೀಲಕಂಠ ಗೋವಿಂದ ರಾಜರುಗಳಿಂದ ಆಗಿಲ್ಲವೆಂದು ಹೇಳಬಹುದು. .......ಹಿಂದೆ ಸಂಸ್ಕೃತದಿಂದ ಕನ್ನಡ ಬದುಕಿತು. ಮುಂದಕ್ಕೆ ಕನ್ನಡದಲ್ಲಿ ಸಂಸ್ಕೃತ ಬದುಕಬೇಕು.

– ಡಿ. ವಿ. ಗುಂಡಪ್ಪ

'ಮಾಧ್ಯಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿಯೇ ಕೊಡಬೇಕೆಂದರೆ ಅದಕ್ಕೆ ಅಡ್ಡಿ ಬರುವವರು ಅನೇಕ ಮಂದಿ. ಇಂಥವರಿಗೆ ಇಂಗ್ಲಿಷ್ ಭಾಷೆಯ ಮೋಹ ಇನ್ನೂ ತಪ್ಪಿಲ್ಲ. ಆದರೆ ಅನೇಕ ವಿಷಯಗಳನ್ನು ತಲೆಯಲ್ಲಿ ತುಂಬಿ ಯಾವುದೂ ಚೆನ್ನಾಗಿ ಹತ್ತದಂತೆ ಮಾಡುವುದಕ್ಕಿಂತ ಕೆಲವು ಉಪಯುಕ್ತ ವಿಷಯಗಳನ್ನು ಮಾತ್ರ ಚೆನ್ನಾಗಿ ಕಲಿಸುವುದು ಉತ್ತಮ. ಇಷ್ಟಪಟ್ಟವರಿಗೆಲ್ಲ ಈ ಮೆಟ್ಟಲವರೆಗೂ ಶಿಕ್ಷಣ ಕೊಡುವುದು ಆವಶ್ಯಕವೆಂದು ತೋರುವುದು. ಇದಕ್ಕೆ ಮುಂದೆ ಹೋಗಬೇಕೆನ್ನುವವರಿಗೆ ಯೋಗ್ಯತೆಯಿದ್ದಲ್ಲಿ ಮಾತ್ರ ಪ್ರವೇಶ ದೊರೆಯುವಂತೆ ಮಾಡಬೇಕು' – ಬೆಳ್ಳಾವೆ ವೆಂಕಟನಾರಾಯಣಪ್ಪ

ಮಾತೃಭಾಷೆಗೆ ಮೊದಲನೆಯ ಸ್ಥಾನ, ದೇಶಭಾಷೆ ಎರಡನೆಯದು, ಇಂಗ್ಲಿಷು ಮೂರನೆಯದು. ಮಾತೃಭಾಷೆಯ ಮೂಲಕ ಕಲಿತದ್ದೇ ಮೈ ಹತ್ತುವುದು. ಮಾತೃಭಾಷೆಯಲ್ಲಿ ಬಂದದ್ದೇ ನಿಲ್ಲುವುದು, ಮಹಿಳೆಯರು ಕನ್ನಡವನ್ನು ಕಾಪಾಡಿಕೊಂಡು ಬಂದರೆ ಅದು ತಾಯಿ ನುಡಿಯಾಗಿ ಉಳಿಯುತ್ತದೆ. ಕನ್ನಡಿಗರಿಗೆ ಕನ್ನಡ ದೇಶದಲ್ಲಿ ಹಿರಿಯ ಆಸ್ತಿಯಾಗಿ ಉಳಿದಿರುವುದು ಅವರ ಕನ್ನಡ ಭಾಷೆ, ಕನ್ನಡ ದೇಶದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡದೆ ಹೋದರೆ ಮೆಕ್ಸಿಕೋದೇಶದವರೋ, ನ್ಯೂಜಿಲ್ಯಾಂಡಿನವರೋ ಕೊಡುತ್ತಾರೆಯೆ. . . . .?

– ಎ. ಆರ್. ಕೃಷ್ಣಶಾಸ್ತ್ರೀ

'ಪರಿಷತ್ತು ಕನ್ನಡದ ಹೃದಯ, ಅದು ಬರಿಯ ಯಂತ್ರವಾಗಬಾರದು. ಒಂದು ಸಂಸ್ಥೆಯೆನಿಸಿಕೊಳ್ಳಬಾರದು. ಎಂಟು ದಿಕ್ಕಿನ ಕನ್ನಡಿಗರಿಂದ ಕೂಡಿ ಅದು ಎಂಟು ಭುಜ, ಎಂಟೆದೆ ಪಡೆಯಬೇಕು.......' – ದ. ರಾ. ಬೇಂದ್ರೆ

ಕನ್ನಡ ಜನದ ಮೋಕ್ಷ ಕನ್ನಡದ ಮೂಲಕವೇ ಆಗಬೇಕೆಂಬುದು ಸಹಜವಾಗಿದೆ. 'ನಮ್ಮವರಿಗೆ ಕನ್ನಡ ನುಡಿ, ಕನ್ನಡ ನಾಡು, ಕನ್ನಡ ಕಲೆ, ಕನ್ನಡ ಹಾಡು ಯಾವುದರ ಮೇಲೂ ಅಭಿಮಾನವಿಲ್ಲ, ನನ್ನದೆಂಬ ಹೆಮ್ಮೆ ಇಲ್ಲ. ಆದಕಾರಣದಿಂದಲೇ ನಮ್ಮ ಕಡೆಗೆ

ನಾವು ಸಣ್ಣವರಾಗಿ ಕಾಣಬಂದೆವು. ಅಂದ ಮೇಲೆ ನಮ್ಮನ್ನು ಕುರಿತು ನೆರೆಹೊರೆಯವರರು ಮತ್ತಾವ ಕಣ್ಣಿಂದ ಕಂಡಾರು? ಅವರ ಕಣ್ಣಿಗೆ ಮತ್ತಾವ ಭವ್ಯತೆಯನ್ನು ತೋರಿಸಬಲ್ಲೆವು? ನಾವಿಂದು ನಮ್ಮ ನುಡಿಯ, ನಮ್ಮ ನಾಡ, ನಮ್ಮ ದುರವಸ್ಥೆಯನ್ನು ಕಂಡು ವ್ಯಸನ ಪಡುತ್ತಿದ್ದೇವೆ. ಮಾಡದ ಕೆಲಸಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದೇವೆ. ಕಣ್ಣೀರಿಡುತ್ತಾ ಕೂತು ಫಲವಿಲ್ಲ. –ತಿರುಮಲೆ ತಾತಾಚಾರ್ಯ ಶರ್ಮ

ನಾವು ಯಾವ ಕಾರ್ಯವನ್ನೇ ಮಾಡಲಿ, ಅದು ಕನ್ನಡದ ಸೇವೆಯೆಂದಾಗಬೇಕು –ಚನ್ನಪ್ಪ ಉತ್ತಂಗಿ

ಲೋಕದ ಆಯಾ ಪ್ರಧಾನ ಭಾಷೆಗಳ ಅಮೂಲ್ಯವಾದ ಗ್ರಂಥಗಳನ್ನು (ಎಲ್ಲವನ್ನಲ್ಲ, ಶ್ರೇಷ್ಠವಾದುವನ್ನು ಮಾತ್ರ) ಕನ್ನಡದಲ್ಲಿ ಅನುವಾದಿಸಬೇಕು. –ಎಂ. ಗೋವಿಂದ ಪೈ

ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸಾಹಿತ್ಯ ಪರಿಷತ್ತು ಇವೆಲ್ಲ ಪರಸ್ಪರ ಸಹಕಾರದಿಂದ ನಾಡುನುಡಿಗಳ ಹಿತಕ್ಕಾಗಿ ದುಡಿಯಬೇಕಾಗಿದೆ. ಸಾಹಿತ್ಯಕ್ಷೇತ್ರದಲ್ಲಿ ಮಾಡತಕ್ಕ ಕೆಲಸವು ಬಹಳವಿದೆ. ಈಗ ಸಾಧಿಸಿದುದು ಅತ್ಯಲ್ಪ. ಈಗ ಕನ್ನಡ ವಿಷಯವನ್ನು ಎಂ.ಎ. ವರ್ಗದವರಿಗೆ ಕಲಿಸುವ ವ್ಯವಸ್ಥೆ ಮುಂಬಯಿ, ಪೂನಾ, ಮೈಸೂರು, ಮದ್ರಾಸ್, ಉಸ್ಮಾನಿಯಾ–ಈ ವಿಶ್ವವಿದ್ಯಾನಿಲಯಗಳಲ್ಲಿ ಆಗಿದೆ. ಈ ವಿಷಯದಲ್ಲಿ ತಜ್ಞರಾದ ಪ್ರಾಧ್ಯಾಪಕರು ಕೆಲಸಮಾಡುತ್ತಿರುವರು. ಈ ಎಲ್ಲ ಪ್ರಾಧ್ಯಾಪಕರೂ ಕೂಡಿ ವಿಶ್ವವಿದ್ಯಾನಿಲಗಳಲ್ಲಿ ಕನ್ನಡ ಮಟ್ಟವನ್ನು ಏರಿಸಬೇಕಾಗಿದೆ. ಇವೆಲ್ಲ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳೂ ಈ ಕಾರ್ಯದಲ್ಲಿ ಸಹಾಯ ಮಾಡಬೇಕು. ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಮೇಲೆ ಹೆಚ್ಚಿನ ಹೊಣೆಯಿದೆ. ಮೈಸೂರು ಸರ್ಕಾರದವರು ಬಹುಕಾಲದಿಂದ ಕನ್ನಡದ ಪ್ರಗತಿಗಾಗಿ ಪ್ರಯತ್ನಪಟ್ಟಿರುವರು. ಇದರಂತೆ ಮುಂಬಯಿ ಸರ್ಕಾರವೂ ಕರ್ನಾಟಕ ವಿಶ್ವವಿದ್ಯಾಲಯದ ಮುಖಾಂತರ ಕನ್ನಡವನ್ನು ಪ್ರೋತ್ಸಾಹಿಸಬೇಕು. –ಎಸ್. ಸಿ. ನಂದಿಮಠ

ಬಂಧುಗಳೇ, ನಾವು ಎಂಥ ಅಮೂಲ್ಯವಾದ ಪಿತ್ರಾರ್ಜಿತ ಆಸ್ತಿಗೆ ಹಕ್ಕುದಾರರೆನ್ನುವುದು ಮರೆಯದಿರೋಣ. ಅದರ ಹಿರಿಮೆಗರಿಮೆಗಳನ್ನು ನೆನೆದಾಗ ಮೈಪುಳಕಗೊಳ್ಳುತ್ತದೆ. ನಮ್ಮ ನುಡಿ ಅತ್ಯಂತ ಪ್ರಾಚೀನವಾದದ್ದು; ಇಂದು ಅಂತಾರಾಷ್ಟ್ರೀಯ ಖ್ಯಾತಿಗೆ ಪಾತ್ರವಾಗಿ ಮೆರೆಯುತ್ತಿರುವ ಭಾಷೆಗಳು ಇನ್ನೂ ಭ್ರೂಣಾವಸ್ಥೆಯಲ್ಲಿದ್ದಾಗಲೇ ವಿಶ್ವಸಾಹಿತ್ಯದ ಮಟ್ಟಕ್ಕೇರಬಲ್ಲ ಮೇರುಕೃತಿಗಳಿಗೆ ಜನ್ಮನೀಡಿದ ಭಾಷೆಯಿದು; ಇನ್ನೂ ನೆರೆಹೊರೆಯ ರಾಜ್ಯಗಳು ಕಣ್ಣುಬಿಡದಿದ್ದಾಗ ಭರತಖಂಡದಲ್ಲಿ ನಾಯಕ ಸ್ಥಾನದಲ್ಲಿದ್ದ ನಾಡು ನಮ್ಮದು; ಹಿಂದೂ ಸಂಸ್ಕೃತಿಯನ್ನು ರಕ್ಷಿಸಿದ ವಿಜಯನಗರ ಸಾಮ್ರಾಜ್ಯವನ್ನು ಸೃಷ್ಟಿಸಿದ ಹಿರಿಯ ನಾಡು ಇದಲ್ಲದೆ ಸರ್ವಮತಧರ್ಮಗಳ ಆಡುಂಬೊಲವಾಗಿ ಮತಸಹಿಷ್ಣುತೆಗೆ ಹೆಸರಾದ ನಾಡು ಇದಲ್ಲದೆ ಬೇರೊಂದಿಲ್ಲ; ಕರ್ನಾಟಕ ಸಂಗೀತದ ಜನ್ಮಭೂಮಿ, ಶಿಲ್ಪಕಲೆಯ ತವರು, ಚಿತ್ರಕಲೆಯ ಸೀಮೆ ನಮ್ಮದು; ಇಮ್ಮಡಿ ಪುಲಿಕೇಶಿ ವಿಷ್ಣುವರ್ಧನ ಶಾಂತಲೆ ನೃಪತುಂಗ ಕೃಷ್ಣ ಮೂರನೆಯ ಗೋವಿಂದರ, ಬಸವ ವಿದ್ಯಾರಣ್ಯರ, ಶಾರ್ಙ್ಗದೇವ ವಿಜ್ಞಾನೇಶ್ವರರ, ಜಿನಸೇನ ಗುಣಭದ್ರರ, ಡಂಕಣ ಜಕಣರ, ಪಂಪ ರನ್ನ ಹರಿಹರ ರಾಘವಾಂಕ ನಾರಣಪ್ಪ ಪುರಂದರದಾಸ ಕನಕದಾಸರ, ಇನ್ನೂ ಎಷ್ಟೆಷ್ಟೋ ಕವಿಗಳ ಕಲೆಗಳ ದೊರೆಗಳ ಕಲಾವಿದರ ಸಂತರ ಶರಣರ ದಾಸರ ಕರ್ನಾಟಕ ಸಂಸ್ಕೃತಿಯನ್ನು ಬೆಳೆಸಿ, ಭಾರತೀಯ ಸಂಸ್ಕೃತಿಯನ್ನು ಬೆಳಗಿದ ಮಹಾಮಹಿಮರ ಪೀಳಿಗೆಗೆ ಸೇರಿದವರೆಂಬ ಹೆಮ್ಮೆ ನಮ್ಮದು; ಈ ಹೆಮ್ಮೆಗೆ ಪಾತ್ರರಾದ ನಾವು ಯಾರಿಗೂ ಕೀಳಲ್ಲ, ಯಾರಿಗೂ ಅಂಜಬೇಕಾಗಿಲ್ಲ, ಯಾರಿಗೂ ತಲೆಬಾಗಬೇಕಾಗಿಲ್ಲ. ಅವರು ಹಿಂದೆ ಬಿಟ್ಟುಹೋಗಿರುವ ತಪಶ್ಶಕ್ತಿ ನಮಗಿಂದು ರಕ್ಷೆಯ ಪರಿವೇಷವಾಗಿದೆ; ಇಂಥ ಆಸ್ತಿಗೆ ಹಕ್ಕುದಾರರಾದ ನಾವು ದರಿದ್ರರಲ್ಲ, ಆಗರ್ಭ ಶ್ರೀಮಂತರು. ನುಡಿಯ ಅಳಿವುಳಿವು. ನಮ್ಮ ಅಳಿವುಳಿವು ; ನಾಡುನುಡಿಗಳಿಗೊದಗುವ ಅನ್ಯಾಯ ಅಪಚಾರಗಳನ್ನು ಸಹಿಸೆವು. ನಾಡುನುಡಿಗಳ ಅಭ್ಯುದಯವೊಂದೇ ನಮ್ಮ ಬಾಳಿನ ಏಕೈಕ ಗುರಿ; ಇದಕ್ಕಾಗಿ ನಾವು ಎಂಥ ತ್ಯಾಗಕ್ಕಾದರೂ ಸಿದ್ಧವೆಂದು ಈ ಎಲ್ಲ ಪೂರ್ವಜರ ಹೆಸರಿನಲ್ಲಿ, ಜ್ಯೋತಿಶ್ಶರೀರಿಗಳಾಗಿ ಈ ಮಹೋತ್ಸವವನ್ನು ದರ್ಶಿಸುತ್ತಿರುವ ಅವರ ನೇತೃತ್ವದಲ್ಲಿ ನಾವು ದೀಕ್ಷಾಬದ್ಧರಾಗೋಣ. –ದೇ. ಜವರೇಗೌಡ.

'ಭಾರತಕ್ಕೆಲ್ಲ ಒಂದೇ ರಾಷ್ಟ್ರಭಾಷೆ, ಅದು ಹಿಂದೀ' ಎಂಬ ಬಿಸಿಲು ಕುದುರೆಯನ್ನು ಬೆನ್ನಟ್ಟಿ ಹೋದರೆ ಅದರಿಂದ ಯಾರ ಬಾಯಾರಿಕೆಯೂ ಆರುವುದಿಲ್ಲ'. 'ಕರ್ನಾಟಕದಲ್ಲಿ ಇರುವವರೆಲ್ಲರಿಗೂ ಕನ್ನಡದಲ್ಲಿ ಓದುವುದೂ, ಬರೆಯುವುದೂ, ಮಾತನಾಡುವುದೂ ಚೆನ್ನಾಗಿ ಬರಬೇಕು. ಇದು ಅತ್ಯಂತ ಅಗತ್ಯ'. – ಜೆ.ಪಿ. ರಾಜರತ್ನಂ.

'ಸಾಹಿತ್ಯ ಮನುಷ್ಯನಿಗೆ ಕೇವಲ ಮನುಷ್ಯನಾಗಿರುವವನಿಗೆ ಸಂಬಂಧಪಟ್ಟ ಕ್ರಿಯೆ ಅಲ್ಲದೆ ಯಾವುದೇ ಜಾತಿಗೇ ಆಗಲಿ ಪಂಗಡಕ್ಕೇ ಆಗಲಿ, ವರ್ಗಕ್ಕೇ ಆಗಲಿ ಸೀಮಿತವಾದಂಥವುಗಳಲ್ಲ. ತನ್ನ ವರ್ಗದ, ತನ್ನ ಪರಿಸರದ, ತನ್ನ ಸಂಸ್ಕೃತಿಯ, ತನ್ನ ಭಾಷೆಯ ಮೂಲಕವೇ ಸಹಜವಾಗಿ ವ್ಯಕ್ತಗೊಳ್ಳುವ ಅನುಭವ ಎಲ್ಲ ಭಿನ್ನತೆಗಳನ್ನೂ ಮೀರಿ ನಿಲ್ಲುವಂಥದ್ದು. ಆದ ಕಾರಣವೇ ಪುರಾತನ ಕಾಲದ ಸಾಹಿತ್ಯ ಬೇರೆ ಬೇರೆ ದೇಶ ಭಾಷೆಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ರಚಿತವಾದ ಸಾಹಿತ್ಯ. ನಮ್ಮ ಭಾಷೆ ಯಾವುದೇ ಇರಲಿ ಇಂದೂ ನಾವು ಓದಿ ಸಂತೋಷ ಪಡಲು ಸ್ಫೂರ್ತಿ ಪಡೆಯುವುದು ಸಾಧ್ಯ. ಆದ ಕಾರಣ ಇದು ಬ್ರಾಹ್ಮಣ ಸಾಹಿತ್ಯ, ಇದು ಜೈನ ಸಾಹಿತ್ಯ, ಇದು ವೀರಶೈವ ಸಾಹಿತ್ಯ ಎಂದು ಭೇದ ಹೇಳುವ ಮಾತು ಅರ್ಥಹೀನ ಮಾತ್ರವಲ್ಲ, ಒಂದಾಗಬೇಕಾದ ಸಮಾಜವನ್ನು ಭಗ್ನಗೊಳಿಸುವ ಪ್ರಯತ್ನ ಎಂದೂ ಹೇಳಬೇಕು. – ಗೋಪಾಲಕೃಷ್ಣ ಅಡಿಗ

ನಮ್ಮ ಬದುಕನ್ನು ನಮ್ಮ ಭಾಷೆ ಬಿಂಬಿಸುತ್ತದೆ. ಅದಕ್ಕೆ ಪರಭಾಷೆಗಳ ಪೀಡೆ ತಪ್ಪಬೇಕು. ಪುಷ್ಟಿ ತುಷ್ಟಿಗಳು ದೊರೆಯಬೇಕು. – ಡಾ॥ ಪು.ತಿ.ನ.

'ಕಂನಡ ಪ್ರಥಮ ಭಾಷೆಯಾಗಲು ಕಾಲ್ತೊಡಕು ಉಳಿಯಬಾರದು. ಈ ನೆಲದ ಶಿಕ್ಷಣ ಕ್ರಮದಲ್ಲಿ ಕಂನಡವೇ ಪ್ರಥಮ ಭಾಷೆಯಾಗಿರಬೇಕಾದುದು ನ್ಯಾಯ. ಸಂಸ್ಕೃತವನ್ನು, ಇಂಗ್ಲೀಷನ್ನು ಪ್ರಥಮ ಭಾಷೆಗೆ ಎಳೆದು ತಂದು ಕಂನಡದ ಪ್ರಗತಿಗೆ ಅಡ್ಡಗಾಲು ಹಾಕುವುದು ಸಮಂಜಸವಲ್ಲ' – ಶಂ.ಬಾ. ಜೋಷಿ

ಭಾಷೆಯಿರುವುದೇ ಮಾನವನಿಗಾಗಿ, ಅದು ಅಂತಿಮ ಗುರಿಯಲ್ಲ. ಅಂತಿಮ ಗುರಿ ಮಾನವನ ಸಮಾಜದ ಶ್ರೇಯಸ್ಸು, ಭಾಷೆ ಎನ್ನುವುದು ಮಾನವನ ಸಂಸರ್ಗಕ್ಕೆ ಸಾಧನ. ಸಾಹಿತ್ಯ ಎನ್ನುವುದು ಭಾಷೆಯ ಸುಂದರತಮ ರೂಪ...... ಕನ್ನಡ ಪುಷ್ಟವಾಗಬೇಕಾದರೆ ಅದನ್ನು ಎಲ್ಲ ಕ್ಷೇತ್ರಗಳಲ್ಲೂ ಬೆಳೆಸಬೇಕು 'ಇಂಗ್ಲಿಷಿನಿಂದಾಗಿ ನಾವು ಪರಕೀಯ ಸಂಸ್ಕೃತಿಗೆ ದಾಸರಾದೆವು. ಅದು ನಮ್ಮ ಸಂಸ್ಕೃತಿಗೆ ಮಾರಕ ಎಂಬ ವಾದವನ್ನು ನಾನು ಇದುವರೆಗೆ ವಿರೋಧಿಸಿದ್ದೇನೆ. ಆದರೆ ಇನ್ನೊಂದು ಆಪಾದನೆಯನ್ನು ಭಾಗಶಃ ಆದರೂ ಒಪ್ಪದಿರಲಾರೆ. ನಾವು ಪಾಶ್ಚಾತ್ಯ ಸಂಸ್ಕೃತಿಗೆ ದಾಸರಾಗದಿದ್ದರೂ ಇಂಗ್ಲಿಷ್ ಭಾಷೆಗೆ ಸ್ವಲ್ಪ ದಾಸರದದ್ದುಂಟು. – ಎ.ಎನ್.ಮೂರ್ತಿರಾವ್

'ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿ ನೋಡಲಾರಿರಿ. ನೀವು ಅದನ್ನು ಎತ್ತಿ ಹಿಡಿಯಲಾರರೆ. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ ಈ ಕಡೆ ಬಂಗಾಲ ಕೊಲ್ಲಿ ಇದೆ, ಆ ಕಡೆ ಅರಬ್ಬಿ ಸಮುದ್ರ ಇದೆ, ಗುಡಿಸಿ ಹಾಕಿ ಬಿಡಿ, ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ'. – ಹಾ.ಮಾ.ನಾಯಕ

'ಮನುಷ್ಯನಿಂದ ಹುಟ್ಟಿದುದು ಮಾತು. ಆದರೆ ನರನನ್ನು ಮಾನವನನ್ನಾಗಿ ಮಾಡಿದುದು ಮಾತು.......... ಜ್ಞಾನ–ವಿಜ್ಞಾನ ಕಲೆಗಳೆಲ್ಲ ಮಾತಿನಲ್ಲಿಯೇ ಮೈದಾಳಬೇಕು. ಮಾತುಗಳಲ್ಲೆಲ್ಲ ಮಾತೆ ಕಲಿಸಿದ ಮಾತೇ ಅವರವರಿಗೆ ಜೀವಾತು......... ಮಾತೃಭಾಷೆಯಾದ ಕನ್ನಡ ನಮ್ಮೆಲ್ಲರ ಪುಣ್ಯಾಭ್ಯುದಯಕ್ಕೆ, ಸರ್ವಾಂಗೀಣ ಪ್ರಗತಿಗೆ ಮೂಲಾಧಾರ, ಪ್ರಯತ್ನ ಬಲದಿಂದ ಮಾನವನ ಬುದ್ಧಿಯ ಭಾಷೆ ಯಾವುದಾದರೂ ಆಗಬಹುದು........ ಅದೂ ಅಪೂರ್ಣವಾಗಿ ಆದರೆ ಅವನ ಹೃದಯದ ಭಾಷೆಯಾಗಬಲ್ಲದು 'ಒಂದೇ ಒಂದು', ಅದೇ ಅವನ ಮಾತೃಭಾಷೆ' ಇಷ್ಟೇ ಅಲ್ಲ. ಬೇರೆ ಭಾಷೆಯನ್ನು ಕಲಿಯಲು ಪಡಬೇಕಾದ ಕಷ್ಟದ ನೂರರಲ್ಲೊಂದು ಪಾಲು ಕಷ್ಟ ಪಟ್ಟರೂ ಅದು ಹೃದಯದ ಭಾಷೆಯ ಜೊತೆಗೆ ಬುದ್ಧಿಯ ಭಾಷೆಯೂ ಆಗುವುದು. ಆದುದರಿಂದಲೇ ಕನ್ನಡೀಕರಣವೇ ಕನ್ನಡಿಗರ ಸಮುದ್ಧರಣಕ್ಕೆ ಸಂಜೀವಿನೀ ಶಕ್ತಿ'. – ಸಿದ್ಧಯ್ಯ ಪುರಾಣಿಕ್

'ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಮುಂತಾದ ಕಾವ್ಯ ಪ್ರಕಾರಗಳು ಒಂದೇ ಹೊಳೆಯ ಹಲವಾರು ಘಟ್ಟಗಳು. ನೀರು ಶುಚಿಯಾಗಿದ್ದರೆ ಎಲ್ಲಿ ಮಿಂದರೂ ಪುಣ್ಯ ಲಭಿಸುತ್ತದೆ. ಇನ್ನು ಈ ಶತಮಾನದ ಮುಗಿವಿನೊಳಗೆ ಇನ್ನೆಷ್ಟು ಪ್ರಕಾರಗಳು ಬರುತ್ತವೋ ಯಾರು ಬಲ್ಲರು?' – ಕೆ.ಎಸ್.ನರಸಿಂಹಸ್ವಾಮಿ

'ಜಗತ್ತಿನಲ್ಲಿ ಅನ್ಯ ಭಾಷೆಗಳ ಬಗ್ಗೆ ಪ್ರೇಮ ತಮ್ಮ ಭಾಷೆಯ ಬಗ್ಗೆ ನಿರಭಿಮಾನ ಯಾರಲ್ಲಿಯಾದರೂ ಇದ್ದರೆ ಅದು ಕನ್ನಡಿಗರಲ್ಲಿ ಎಂದು ಧಾರಾಳವಾಗಿ ಹೇಳಬಹುದು' – ಸಿಂಪಿ ಲಿಂಗಣ್ಣ

'ಒಟ್ಟಿನಲ್ಲಿ ಜನಮನದಿಂದ ತೇಲಿ ಬಂದ ಬೆಣ್ಣೆ ಕೈಗೆ ಸಿಕ್ಕುವ ಮೊದಲೇ ಕರಗಿ ಹರಿದು ಹೋಗುತ್ತಿದೆ. ಹಾಡುವವರು ಕಣ್ಮರೆಯಾದರೆ ಜಾನಪದ ಸಾಹಿತ್ಯವೂ ಕಣ್ಮರೆಯಾದಂತೆ. ಹಾಗೆ ಕಣ್ಮರೆಯಾಗುವ ಮುನ್ನ ಅದನ್ನು ಸಂಗ್ರಹಿಸುವುದು ನಮ್ಮ ಆದ್ಯ ಕರ್ತವ್ಯ. ಜಾನಪದ ಸಾಹಿತ್ಯವನ್ನು ಕಳೆದುಕೊಂಡ ಕನ್ನಡ ಭಾಷೆ ಹಾಗೂ ಸಾಹಿತ್ಯ ತಾಯಿ ತಂದೆಗಳನ್ನು ಕಳೆದುಕೊಂಡ ತಬ್ಬಲಿಯಂತಾಗುತ್ತದೆ. ಹಣ ಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜಾನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು'. – ಎಚ್.ಎಲ್.ನಾಗೇಗೌಡ

'ಕರ್ನಾಟಕದಲ್ಲಿ ಭಾಷಾ ಅಲ್ಪ ಸಂಖ್ಯಾತರಿಗೆ ಕೊಡುತ್ತಿರುವ ಸೌಲಭ್ಯಗಳು ಬೇರೆ ಯಾವ ರಾಜ್ಯದಲ್ಲಿಯೂ ಕಂಡು ಬರುವುದಿಲ್ಲವೆನ್ನುವುದನ್ನು ಭಾಷಾ ಆಯೋಗ ಒಪ್ಪಿಕೊಂಡಿದೆ. ಧಾರವಾಡ, ಕಲಬುರ್ಗಿ, ಆಕಾಶವಾಣಿ ನಿಲಯಗಳು ನಿಷ್ಠೆಯಿಂದ ಮರಾಠಿ

ಕಾರ್ಯಕ್ರಮಗಳನ್ನು ಬಿತ್ತರಿಸುವುದಷ್ಟೇ ಅಲ್ಲದೆ ವಂದನಾ ಗೀತೆಗಳಲ್ಲಿ ನೆರೆಹೊರೆಯ ಭಾಷಾ ಗೀತೆಗಳಿಗೆ ಧಾರಾಳವಾಗಿ ಎಡೆಗೊಡಲಾಗುತ್ತಿದೆ. ನೆರೆಹೊರೆಯ ರಾಜ್ಯಗಳು ಈ ನೀತಿಯನ್ನು ಅನುಸರಿಸಿದರೆ ಪರಸ್ಪರ ಬಾಂಧವ್ಯ ಬೆಳೆಯಲು ಸಾಧ್ಯ'.

– ಚೆನ್ನವೀರ ಕಣವಿ

'ಇಂಗ್ಲಿಷಿನಲ್ಲಿ ಓದುವ ನಮ್ಮ ಮಕ್ಕಳು, ಮೊಮ್ಮಕ್ಕಳಲ್ಲಿ ಯಾರಿಗಾದರೂ ಸಾಹಿತ್ಯ ಸೃಷ್ಟಿಯ ಶಕ್ತಿ ಇದ್ದರೆ ಅವರು ಮುಂದೆ ಕನ್ನಡದಲ್ಲಿ ಬರೆಯಲು ಸಾಧ್ಯವಿಲ್ಲ. ಹೀಗಾಗಿ ಸಾವಿರದ ಐನೂರು ವರ್ಷಗಳ ಲಿಖಿತ ಇತಿಹಾಸವುಳ್ಳ ಕನ್ನಡ ಸಾಹಿತ್ಯದ ಸೃಜನಶೀಲತೆಯು ಇನ್ನು ಕೆಲವೇ ದಶಕಗಳಲ್ಲಿ ನಿಂತು ಹೋಗುವ ಸಂಭವ ಇದೆ. ಈ ಮುಂದಿನ ತಲೆಮಾರು ಇಂಗ್ಲಿಷಿನಲ್ಲಾದರೂ ಸಾಹಿತ್ಯ ಸೃಷ್ಟಿಸುವುದು ಸಾಧ್ಯವಿಲ್ಲ. ಏಕೆಂದರೆ ಅದು ಅವರ ಇಡೀ ಜನಾಂಗದ ಸಂಸ್ಕೃತಿಯನ್ನು ಅಭಿವ್ಯಕ್ತಿಸಿರುವ ಭಾಷೆಯಲ್ಲ, ಭಾವ, ಬುದ್ಧಿ ಮನಸ್ಸುಗಳು ಕೊನೆಯ ಪಕ್ಷ ಬಾಲ್ಯ ಕಳೆಯುವ ತನಕವಾದರೂ ಎಂದರೆ ಎಸ್.ಎಸ್.ಎಲ್.ಸಿ. ಕಳೆಯುವವರೆಗಾದರೂ ಪರಿಸರದ ಭಾಷೆಯ ಮೂಲಕ ಬೆಳೆಯದಿದ್ದರೆ ಭಾವೀ ಜೀವನದಲ್ಲಿ ಆ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿಲ್ಲ. ಎಸ್.ಎಸ್.ಎಲ್.ಸಿ. ಮುಗಿಯುವವರೆಗಾದರೂ ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು'

– ಎಸ್.ಎಲ್.ಭೈರಪ್ಪ

ಭಾರತದ ಬಹುತೇಕ ರಾಜ್ಯಗಳು, ಕರ್ನಾಟಕವಂತೂ ಮುಖ್ಯವಾಗಿ, ಬಹುಭಾಷಾ ವಲಯಗಳು. ನಾವು ಯೂರೋಪಿನಂತೆ ಒಂದೇ ಭಾಷೆ, ಒಂದೇ ಮತ, ಒಂದೇ ರೇಸಿನ ರಾಷ್ಟ್ರವು ಅಲ್ಲ. ರಾಜ್ಯಗಳೂ ಅಲ್ಲ, ಆದ್ದರಿಂದ ಯೂರೋಪಿನಲ್ಲಿರುವಂತೆ ನಮ್ಮಲ್ಲಿ ಖಚಿತವಾದ ಮಾತೃಭಾಷೆಯೆಂಬುದಿಲ್ಲ. ಅದರ ಬದಲಾಗಿ ನಮ್ಮಲ್ಲಿ ಹಲವರಿಗೆ ಮನೆ ಮಾತೊಂದು ಇರುತ್ತದೆ, ದೇಶದ ಮಾತೊಂದು ಇರುತ್ತದೆ. ದೇಶದ ಆಚೆಗಿನ ಸಂಪರ್ಕಕ್ಕಾಗಿ ಇನ್ನೊಂದು ಮಾತು ಇರುತ್ತದೆ. ಮಾತೃಭಾಷೆಯೆಂಬುದು 'ಮದರ್ ಟಂಗ್'ನ ಅನುವಾದ, ಕನ್ನಡ ರಾಜ್ಯ ಭಾಷೆಯಾಗದಂತೆ, ಶಿಕ್ಷಣ ಮಾಧ್ಯಮವಾಗದಂತೆ ತಡೆಯಲು ಇಂಗ್ಲಿಷ್ ಭಾಷೆಯ ವ್ಯಾಮೋಹಿಗಳು ಬಳಸುವ ಅಸ್ತ್ರವೇ 'ಮದರ್ ಟಂಗ್' ಕಲ್ಪನೆ.

– ಯು.ಆರ್.ಅನಂತಮೂರ್ತಿ

ಕನ್ನಡದ ಆಚಾರ್ಯಪುರುಷರಾದ ಬಿ.ಎಂ.ಶ್ರೀಕಂಠಯ್ಯ ಅವರು ತೊಂಬತ್ತು ವರ್ಷಗಳ ಹಿಂದೆ 1911ರಲ್ಲಿ ತಮ್ಮ ಮೊದಲ ಸಾರ್ವಜನಿಕ ಭಾಷಣವನ್ನು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಕೊಟ್ಟರು. ಆಗ ಅವರು ತಮ್ಮ ಭಾಷಣಕ್ಕೆ ಆರಿಸಿಕೊಂಡ ವಿಷಯ "ಕನ್ನಡ ಮಾತು ತಲೆಯೆತ್ತುವ ಬಗೆ" ಅವರು ಆ ಮಾತು ಹೇಳಿ ಒಂದು ಶತಮಾನವೇ ಸಮೀಪಿಸುತ್ತ ಬಂದಿದ್ದರೂ, ಅಂದು ಬಿ.ಎಂ.ಶ್ರೀ. ಅವರು ಆಡಿದ ಮಾತನ್ನೇ ಬಿಡಲಾಗದ ಒಂದು ಧಾರ್ಮಿಕ ವಿಧಿಯಂತೆ ಇಂದೂ ಹೇಳುತ್ತಿದ್ದೇವೆ........'

ಆ ಮಾತು ತನ್ನ ಪ್ರಸ್ತುತತೆಯನ್ನು ಇನ್ನೂ ಕಳೆದುಕೊಂಡಿಲ್ಲ. ಕನ್ನಡಕ್ಕೋಸುಗ ಕೈಎತ್ತಿ ನಿಲ್ಲಬೇಕೆಂದು ಕರ್ನಾಟಕ ಸರಕಾರಕ್ಕೆ, ಕನ್ನಡಿಗರು ಕೈಯೆತ್ತಿ ಹೇಳಬೇಕಾದ ಪ್ರಸಂಗ ಇನ್ನೂ ಇದೆಯೆನ್ನುವುದು ನಾವೆಲ್ಲರೂ ವ್ಯಸನಪಡಬೇಕಾದ ದುರದೃಷ್ಟಕರ ಸಂಗತಿ.

– ಪಾಟೀಲ ಪುಟ್ಟಪ್ಪ

"ಇದು ವೈಜ್ಞಾನಿಕ ಯುಗ, ಹೈಟೆಕ್ ಕಾಲ. ಕೈಗಾರಿಕಾದಿ ಉದ್ಯಮಗಳಿಗೆ, ಗಣಕ ಯಂತ್ರಗಳಿಗೆ, ತಂತ್ರಾಂಶಗಳಿಗೆ, ಕಂಪ್ಯೂಟರಿಗೆ ಆದ್ಯತೆ. ಅದರಿಂದ ಸಾಹಿತ್ಯದ ಅಗತ್ಯ ಇದೆಯೆ"– ಎಂಬ ಪ್ರಶ್ನೆ ಎದ್ದಿದೆ. ಯಾವ ಯುಗದಲ್ಲೂ ಸಾಹಿತ್ಯವನ್ನು ಗೌಣವೆಂದು ಗುಡಿಸಿ ಹಾಕುವಂತಿಲ್ಲ. ಸಾಹಿತ್ಯ ಶಾಸ್ತ್ರವೂ ಹೌದು, ವಿಜ್ಞಾನವೂ ಹೌದು, ಮನೋವಿಜ್ಞಾನವೂ ಹೌದು. ವಿಜ್ಞಾನ, ತಂತ್ರಜ್ಞಾನ ಹಾಗೂ ಸಮಸ್ತ ಜ್ಞಾನಗಳ ಕಲಿಕೆಗೆ ಕನ್ನಡ ಸಶಕ್ತವಾಗಿದೆಯೆಂದು ಜಗತ್ತಿಗೆ ತೋರಿಸಲು ವಿಜ್ಞಾನಿಗಳು ಕನ್ನಡವನ್ನು ಬಳಸಬೇಕು.

ತಂತ್ರಜ್ಞಾನದ ನಿರಾಕರಣೆ ಸಲ್ಲದು. ಕನ್ನಡ ಜಗತ್ತಿಗೆ ತಂತ್ರಜ್ಞಾನದ ಪ್ರವೇಶ ಸ್ವಾಗತಾರ್ಹ. ಎರಡು ದಶಕಗಳಿಂದಲೂ ಈ ನಿಟ್ಟಿನಲ್ಲಿ ಕೆಲಸ ನಡೆಯುತ್ತಿರುವುದು ಸಂತಸದಾಯಕ ಸಂಗತಿ. ತಂತ್ರಜ್ಞಾನವನ್ನು ಒಂದು ಭಾಷೆಗೆ ತರುವಾಗ ತಂತ್ರಜ್ಞಾನದ ಸಲಕರಣೆಗಳ(ಟೆಕ್ನಾಲಜಿ ಟೂಲ್ಸ್) ನಿರ್ಮಾಣ ಆಯಾ ಭಾಷೆಯ ಜಾಯಮಾನ ಮತ್ತು ಸಾಂಸ್ಕೃತಿಕ ವಿನ್ಯಾಸಕ್ಕೆ ಧಕ್ಕೆಯಾಗದಂತೆ ನಿರ್ಮಿಸಬೇಕು. ಜೊತೆಗೆ ತಂತ್ರಜ್ಞಾನವೆಂದಾಕ್ಷಣ ಕನ್ನಡತನವನ್ನು ಕ್ಲಿಷ್ಟಗೊಳಿಸಲಾಗಲಿ ನಷ್ಟಗೊಳಿಸಲಾಗಲಿ ಸಂಯೋಜಿಸಲಾಗುತ್ತಿಲ್ಲ ಎಂಬ ಅಂಶ ಆದರ್ಶವಾಗಿರಬೇಕು.

ಬಹುತಾಂತ್ರಿಕ ಆಧುನೀಕರಣ ಮತ್ತು ಜಾಗತೀಕರಣದ ತುಡಿತದಿಂದಾಗಿ ಪ್ರಾದೇಶಿಕ ಭಾಷೆಯ ಯುವ ಪ್ರತಿಭೆಗಳು ಮಾತೃಭಾಷೆಯನ್ನು ತೊರೆದು ಇ–ಶಿಕ್ಷಣಕ್ಕೆ ಪಲಾಯನ ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ ಮೊದಲೇ ಪರಿಮಿತವಾಗಿದ್ದ ಪ್ರಾದೇಶಿಕ ಭಾಷೆಗಳ ಓದುಗರ ಪ್ರಮಾಣ ಈಗ ಮತ್ತಷ್ಟು ಇಳಿಮುಖಗೊಂಡಿದೆ. ಇಂಥ ಇಳಿಗಾಲದಲ್ಲಿ ಕನ್ನಡಕ್ಕೆ ಉಳಿಗಾಲ ಎಲ್ಲಿ, ಹೇಗೆ ಎಂಬುದು ಗಂಭೀರ ಪರಿಭಾವನೆಯ ಸಮಸ್ಯೆ. ಇದನ್ನು ಮತ್ತಷ್ಟು ಉಲ್ಬಣಗೊಳಿಸಿರುವುದು ಹೊಸ ಪೀಳಿಗೆ ತಾಯಿಭಾಷೆಯ ಹೊಕ್ಕಳ ಬಳ್ಳಿಯಿಂದ ಕಳಚಿಕೊಳ್ಳುತ್ತಿರುವುದಲ್ಲದೆ ತಾಯಿಭಾಷೆಯ ಸಾಹಿತ್ಯದಿಂದಲೂ ದೂರ ಸರಿಯುತ್ತಿರುವುದು. ಸವಾಲುಗಳು ಹೀಗೆ ಸಂಕೀರ್ಣಗೊಳ್ಳುತ್ತ ಸಾಗುತ್ತಿರುವಾಗ ಅದಕ್ಕೆ ಸಡ್ಡು ಹೊಡೆದು ಸಜ್ಜಾಗಿ ನಿಲ್ಲುವ ಕಸುವು ಇದೆಯೆ ಎಂಬ ಶೋಧನೆಯ ತುರ್ತು ಒದಗಿದೆ.

– ಕಮಲಾ ಹಂಪನಾ

**ಕನ್ನಡಿ :** ಪ್ರತಿಫಲನದಿಂದ ವಸ್ತುಗಳ ಪ್ರತಿಬಿಂಬವನ್ನು ಉಂಟುಮಾಡುವ ಉಪಕರಣ (ಮಿರರ್). ಸಾಮಾನ್ಯವಾಗಿ ಬೆಳಕನ್ನು ಪ್ರತಿಫಲಿಸುವ ಉಪಕರಣವನ್ನು ಕನ್ನಡಿ ಎಂದರೂ ಶಬ್ದ ರೇಡಿಯೋ ತರಂಗ ಮುಂತಾದುವನ್ನು ಪ್ರತಿಫಲಿಸುವ ಕನ್ನಡಿಗಳೂ ಇವೆ. ವಸ್ತುಗಳು ನಮಗೆ ಕಾಣಿಸಬೇಕಾದರೆ ಬೆಳಕು ಅಗತ್ಯ. ಸ್ವಪ್ರಕಾಶವಿರುವ ವಸ್ತುವಿನ ಬೆಳಕು ನಮ್ಮ ಕಣ್ಣನ್ನು ಪ್ರವೇಶಿಸುವುದರಿಂದ ಆ ವಸ್ತು ನಮಗೆ ಕಾಣಿಸುತ್ತದೆ. ಉದಾಹರಣೆಗೆ ದೀಪ. ಆದರೆ ಪ್ರಕಾಶರಹಿತವಾದ ವಸ್ತು ನಮಗೆ ಕಾಣಿಸುವುದು.

ಅದರ ಮೇಲೆ ಬಿದ್ದು, ಅದರಿಂದ ಚದುರಿಸಲ್ಪಟ್ಟ ಬೆಳಕು ನಮ್ಮ ಕಣ್ಣನ್ನು ಪ್ರವೇಶಿಸುವುದರಿಂದ. ಉದಾಹರಣೆಗೆ ಈ ಪುಟ. ಇದು ಬೆಳಕನ್ನು ಚದುರಿಸುತ್ತದೆಯಾದರೂ ಇದನ್ನು ಕನ್ನಡಿ ಎನ್ನುವುದಿಲ್ಲ. ಆದರೆ ಬೆಳಕನ್ನು ಕ್ರಮವಾಗಿ ಪ್ರತಿಫಲಿಸುವಂಥ, ಮೇಲ್ಮೈಗೆ ಹೊಳಪು ಕೊಟ್ಟಿರುವ ಲೋಹ ಫಲಕ ಅಥವಾ ಹಿಂಭಾಗದಲ್ಲಿ ಲೋಹದ ತೆಳುಲೇಪನ ಇರುವ ನಯವಾದ ಗಾಜನ್ನು ಕನ್ನಡಿ ಎನ್ನುತ್ತೇವೆ. ಯೋಗ್ಯ ಪ್ರತಿಫಲನ ಕೊಡಲು ಕನ್ನಡಿಯ ಮೇಲ್ಮೈ ನಯವಾಗಿರಬೇಕು ಅಥವಾ ಅದರಲ್ಲಿನ ಉಬ್ಬುತಗ್ಗುಗಳು ಅದು ಪ್ರತಿಫಲಿಸುವ ಬೆಳಕಿನ ತರಂಗದೂರಕ್ಕಿಂತ ಕಡಿಮೆಯಾಗಿರಬೇಕು. ಬೆಳಕಿನ ತರಂಗದೂರ ಸು. 2x10–4 ಸೆಂ.ಮೀ.ನಷ್ಟು, ಶಬ್ದದ ತರಂಗದೂರ ಸು. 100 ಸೆಂ.ಮೀ.ನಷ್ಟು. ಹೀಗಿರುವಾಗ ಶಬ್ದಕ್ಕೆ ಕನ್ನಡಿಯಾಗುವಂಥ ಮೇಲ್ಮೈ ಬೆಳಕಿಗೆ ತೀರ ಒರಟಾಗಿರುವುದರಿಂದ ಅದೆಂದೂ ಬೆಳಕಿಗೆ ಕನ್ನಡಿಯಾಗಲಾರದು. ಬೆಳಕು ವಸ್ತುವಿನ ಮೇಲೆ ಬಿದ್ದಾಗ ಅದರ ಸ್ವಲ್ಪ ಭಾಗ ಪ್ರತಿಫಲಿತವಾಗಬಹುದು; ಮತ್ತೆ ಸ್ವಲ್ಪ ಭಾಗ ವಸ್ತುವಿನ ಮೂಲಕ ಹಾದುಹೋಗಬಹುದು; ಮತ್ತೆ ಸ್ವಲ್ಪ ಭಾಗ ವಸ್ತುವಿನಲ್ಲಿ ಹೀರಲ್ಪಡಬಹುದು. ಆದ್ದರಿಂದ ಒಂದು ನುಣುಪಾದ ಮೇಲ್ಮೈ ಇರುವ ವಸ್ತು ಕನ್ನಡಿಯಾಗಬೇಕಾದರೆ ಅದರ ಮೇಲ್ಮೈ ತುಂಬ ಹೊಳಪಾಗಿದ್ದು ಬೆಳಕಿನ ಬಹುಭಾಗವನ್ನು ಪ್ರತಿಫಲಿಸುವಂತಿರಬೇಕು.



ಚಿತ್ರ 1

**ಸಮತಲ ಕನ್ನಡಿ :** ಚಿತ್ರ 1ರಲ್ಲಿ MM' ಎಂಬುದು ಕನ್ನಡಿ, 0A ಯು 0ವಸ್ತುವಿನಿಂದ ಹೊರಟು ಕನ್ನಡಿ ಮೇಲೆ ಬೀಳುತ್ತಿರುವ ಕಿರಣ, ಅಂದರೆ ಪತನಕಿರಣ. ಇದು ಕನ್ನಡಿಯಲ್ಲಿ ಪ್ರತಿಫಲಿತವಾದ ತರುವಾಯ ಹೋಗುವ ದಾರಿ AR, ಅಂದರೆ AR ಪ್ರತಿಫಲಿತ ಕಿರಣ. ವಸ್ತುವಿನಿಂದ ಹೊರಟ ಕಿರಣಾವಳಿ ಪ್ರತಿಫಲಿತವಾಗಿ ನಮ್ಮ ಕಣ್ಣನ್ನು ಪ್ರವೇಶಿಸುವುದರಿಂದ


ಚಿತ್ರ 2

ನಾವು ಪ್ರತಿಬಿಂಬವನ್ನು ಕಾಣುತ್ತೇವೆ. ಆದರೂ ಸಮಸ್ಯೆಯ ಸರಳತೆಗೋಸ್ಕರ ಒಂದೇ ಕಿರಣವನ್ನು ಪರಿಶೀಲಿಸಿದರೆ ತಪ್ಪಾಗುವುದಿಲ್ಲ. ಪತನಬಿಂದು Aಯಲ್ಲಿ ಕನ್ನಡಿಗೆ ಲಂಬವಾಗಿ ANಅನ್ನು ಎಳೆದು ∠OAN ಕೋನವನ್ನು ಪತನಕೋನವೆಂದು ∠RAN ಕೋನವನ್ನು

ಪ್ರತಿಫಲನಕೋನ ಎಂದೂ ಕರೆಯುತ್ತೇವೆ. ಯಾವಾಗಲೂ ಪತನಕೋನದ ಪ್ರತಿಫಲನಕೋನಕ್ಕೆ ಸಮವಾಗಿರುತ್ತದೆ.ಇದು ಪ್ರತಿಫಲನೆ ಮೂಲನಿಯಮ. ಪ್ರತಿಫಲನ ನಿಯಮದ ನಿರೂಪಣೆಗೆ ಒಂದು ಕನ್ನಡಿಯನ್ನು ಒಂದು ಗಾಜಿನ ಅಗಲವಾದ ಪೆಟ್ಟಿಗೆಯ ತಳದಲ್ಲಿಟ್ಟು ಒಂದು ಕೋನಮಾಪಕವನ್ನು ಚಿತ್ರ 2ರಲ್ಲಿ ತೋರಿಸಿರುವಂತೆ ಇಡಬೇಕು.

ಒಂದು ಕಾಗದದ ಚೂರನ್ನು ಸುಟ್ಟು ಪೆಟ್ಟಿಗೆಯಲ್ಲಿ ಹೊಗೆ ತುಂಬುವಂತೆ ಮಾಡಿ ಪೆಟ್ಟಿಗೆಯ ಮೇಲ್ಭಾಗವನ್ನು ಒಂದು ಸಣ್ಣ ರಂಧ್ರವಿರುವ ದೊಡ್ಡ ರಟ್ಟಿನಿಂದ ಮುಚ್ಚಬೇಕು. ಈಗ ಆ ತೂತಿನ ಮೂಲಕ ಬೆಳಕನ್ನು ಕಳುಹಿಸಿದರೆ ಪತನ ಕಿರಣಾವಳಿ ಮತ್ತು ಪ್ರತಿಫಲನ ಕಿರಣಾವಳಿಗಳನ್ನು ಕಾಣಬಹುದು. ಕೋನಮಾಪಕದ ಸಹಾಯದಿಂದ ಅಳೆದು ಪತನಕೋನ ಮತ್ತು ಪ್ರತಿಫಲನಕೋನ ಯಾವಾಗಲೂ ಸಮವಾಗಿರುವುದನ್ನು ಪರಿಶೀಲಿಸಬಹುದು.

ಚಿತ್ರ 3ರಲ್ಲಿ O ವಸ್ತುವಿನಿಂದ ಹೊರಟ ಕಿರಣಾವಳಿ ಪ್ರತಿಫಲನ ನಿಯಮದ ಪ್ರಕಾರ ಪ್ರತಿಫಲನಗೊಂಡು ಕಣ್ಣನ್ನು ಪ್ರವೇಶಿಸುವುದನ್ನು ತೋರಿಸದೆ. ಪ್ರತಿಫಲಿತ ಕಿರಣಗಳನ್ನು ಹಿಂದಕ್ಕೆ ವೃದ್ಧಿಸಿದರೆ ಅವು Iಯಲ್ಲಿ ಸಂಧಿಸುತ್ತವೆ, ಅಂದರೆ ಪ್ರತಿಫಲಿತ ಕಿರಣಾವಳಿ Iಯಿಂದ ಬರುತ್ತಿರುವ ಹಾಗೆ ಕಾಣಿಸುತ್ತದೆ. Iಯಲ್ಲಿ Oನಂಥ ವಸ್ತು ಇದ್ದ ಹಾಗೆ ಕಾಣುತ್ತದೆ. Iಯನ್ನು Oನ ಪ್ರತಿಬಿಂಬ ಅಥವಾ ಸರಳವಾಗಿ ಬಿಂಬ ಎನ್ನುತ್ತೇವೆ. ವಾಸ್ತವಿಕವಾಗಿ, Iಯ ಮೂಲಕ ಪ್ರತಿಫಲಿತ ಕಿರಣಗಳು ಹಾದು ಹೋಗುವುದಿಲ್ಲ. ಅಂದರೆ, I ಬಿಂಬವನ್ನು ತೆರೆಯ ಮೇಲೆ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ I ಯು ಮಿಥ್ಯಬಿಂಬ




ಚಿತ್ರ 3

ಚಿತ್ರ 3ರಲ್ಲಿ OA ಪತನಕಿರಣದ ಪತನ ಬಿಂದುವಾದ A ನಲ್ಲಿ ಕನ್ನಡಿಗೆ ಲಂಬವಾಗಿ AN ಅನ್ನು ಎಳೆದರೆ ಆಗ ಪತನಕೋನ $\angle$OAN=ಪ್ರತಿಫಲನ ಕೋನ $\angle$RAN. ಆದರೆ $\angle$OAN = $\angle$AOM ಮತ್ತು $\angle$RAN = $\angle$AIM ಆದ್ದರಿಂದ $\angle$AOM = $\angle$AIM. ಅಲ್ಲದೆ $\angle$OMA = $\angle$IMA = $90^o$ ಮತ್ತು AM ರೇಖೆ OAM ಮತ್ತು IAM ತ್ರಿಕೋಣಗಳೆರಡಕ್ಕೂ ಸಾಮಾನ್ಯ. ಆದ್ದರಿಂದ OAM' ಮತ್ತು IAM ತ್ರಿಕೋಣಗಳು ಸರ್ವಸಮ. ಆದ್ದರಿಂದ OM = IM. ಅಂದರೆ ವಸ್ತು ಕನ್ನಡಿಯ ಮುಂದೆ ಎಷ್ಟು ದೂರದಲ್ಲಿದೆಯೋ ಅದರ ಬಿಂಬ ಕನ್ನಡಿಯ ಹಿಂದೆ ಅಷ್ಟೇ ದೂರದಲ್ಲಿದೆ.

ವಸ್ತುವಿನ ಎಡಭಾಗ ಬಿಂಬದ ಬಲಭಾಗ ಬಿಂಬದ ಎಡಭಾಗವಾಗಿಯೂ ಕಾಣಿಸುತ್ತವೆ. ಅಂದರೆ ಕನ್ನಡಿಗೆ ಸಮಾನಾಂತರ ಸಮತಲದಲ್ಲಿರುವ ವಸ್ತುಬಿಂದುಗಳು ಅದರ ಪರಸ್ಪರ ಸ್ಥಾನಗಳನ್ನು ಉಳಿಸಿಕೊಳ್ಳುತ್ತವೆ. ಆದರೆ ಕನ್ನಡಿಗೆ ಲಂಬವಾಗಿರುವ ಸಮತಲದಲ್ಲಿರುವ ಬಿಂದುಗಳು ಸ್ಥಾನಗಳನ್ನು ಅದಲುಬದಲು ಮಾಡಿಕೊಳ್ಳುತ್ತವೆ. ಪ್ರತಿಫಲನದಿಂದ ಉಂಟಾಗುವ ಈ ಎಡಬಲ ವ್ಯತ್ಯಾಸ ಅಥವಾ ಪಾರ್ಶ್ವ ವಿಪರ್ಯಾಸ (ಲ್ಯಾಟರಲ್ ಇನ್ವರ್ಶನ್) ಈ ಮುದ್ರಿತ ಹಾಳೆಗಳನ್ನು ಕನ್ನಡಿಯ ಮುಂದಿಟ್ಟು ನೋಡಿದಾಗ ಅರಿವಾಗುತ್ತದೆ.

ಎರಡು ಕನ್ನಡಿಗಳನ್ನು ಅವುಗಳ ಮಧ್ಯೆ ಒಂದು ಕೋನ ಉಂಟಾಗುವಂತೆ ಜೋಡಿಸಬೇಕು. ಅವುಗಳ ಎದುರು ಒಂದು ವಸ್ತುವನ್ನು ಇಟ್ಟು ನೋಡಿದಾಗ ಅದರ ಹಲವಾರು ಪ್ರತಿಬಿಂಬಗಳು ಕಾಣಿಸುತ್ತವೆ. ವಸ್ತುವಿನಿಂದ ಹೊರಟ ಕಿರಣಗಳು ಈ ಕನ್ನಡಿಗಳಲ್ಲಿ ಹಲವಾರು ಸಲ ಪ್ರತಿಫಲನ ಮತ್ತು ಪುನರ್ ಪ್ರತಿಫಲನಗೊಳ್ಳುವುದೇ ಇದರ ಕಾರಣ. ಎರಡು ಕನ್ನಡಿಗಳ ನಡುವೆ ಕೋನ $90^o$ ಇದ್ದಾಗ 3 ಬಿಂಬಗಳೂ $60^o$ ಇದ್ದಾಗ 5 ಬಿಂಬಗಳೂ $30^o$ ಇದ್ದಾಗ 11 ಬಿಂಬಗಳೂ ಕಾಣುತ್ತವೆ (ಎಲ್ಲ ಬಿಂಬಗಳೂ ಒಂದೇ ಸ್ಥಾನದಿಂದ ಒಟ್ಟಿಗೇ ಕಾಣಿಸಬೇಕೆಂದೇನೂ ಇಲ್ಲ). ಸಾಮಾನ್ಯವಾಗಿ ಆ ಕನ್ನಡಿಗಳ ನಡುವಿನ ಕೋನ $X^o$ ಯು $360^o$ ಯನ್ನು ವಿಶೇಷವಾಗಿ ಭಾಗಿಸಿದರೆ ಆಗ ಒಟ್ಟು ಕಾಣಿಸುವ ಬಿಂಬಗಳ ಸಂಖ್ಯೆ $\left(\frac{360}{x}-1\right)$. ಇಲ್ಲಿ ಪ್ರತಿಬಿಂಬದ ಸ್ಥಾನ, ವಸ್ತುವಿನ ಸ್ಥಾನ ಕನ್ನಡಿಗಳ ನಡುವಣ ಕೋನ ಮತ್ತು ಆ ಕನ್ನಡಿಗಳ ಛೇದ ರೇಖೆಯ ದಿಕ್ಕನ್ನು ಮಾತ್ರ ಅವಲಂಬಿಸಿದೆ. ಕನ್ನಡಿಗಳ ನಡುವಣ ಕೋನವನ್ನು ಬದಲಾಯಿಸದೇ ಆ ಛೇದರೇಖೆಯ ಸುತ್ತಲೂ ಆ ಕನ್ನಡಿಗಳನ್ನು ತಿರುಗಿಸಿದರೆ ಬಿಂಬದ ಸ್ಥಾನ ಬದಲಾಯಿಸುವುದಿಲ್ಲ. ಒಂದು ಸ್ವಾರಸ್ಯ ಸಂಗತಿಯೆಂದರೆ X=0 ಆದಾಗ, ಅಂದರೆ ಕನ್ನಡಿಗಳು ಒಂದಕ್ಕೊಂದು ಸಮಾನಾಂತರವಾಗಿದ್ದಾಗ ಬಿಂಬಗಳ ಸಂಖ್ಯೆ ಅನಂತ.




ಚಿತ್ರ 4

ಚಿತ್ರ 4ರಲ್ಲಿ MM1 ಮತ್ತು MM2 ಕನ್ನಡಿಗಳ ನಡುವೆ $90^o$ ಇದೆ. 0 ವಸ್ತುವಿನ I1 ಬಿಂಬ MM1 ಕನ್ನಡಿಯಿಂದಲೂ I2 ಬಿಂಬ MM2 ಕನ್ನಡಿಯಿಂದಲೂ I3 ಬಿಂಬ ಇವೆರಡು ಕನ್ನಡಿಗಳಲ್ಲಿ ಪ್ರತಿಫಲಿತವಾದ ಕಿರಣಗಳಿಂದಲೂ ಉಂಟಾಗಿವೆ. I1 ಮತ್ತು I2 ಬಿಂಬಗಳಲ್ಲಿ ಪಾರ್ಶ್ವ ವಿಪರ್ಯಾಸವಿದೆ. ಆದರೆ I3 ಬಿಂಬದಲ್ಲಿ ಪಾರ್ಶ್ವ ವಿಪರ್ಯಾಸ ಇರುವುದಿಲ್ಲ. ಇಲ್ಲಿ ಕನ್ನಡಿಗಳ ಛೇದರೇಖೆಗೆ ಲಂಬವಾಗಿರುವ ಸಮತಲದಲ್ಲಿರುವ ಬಿಂದುಗಳೆಲ್ಲವೂ ಆಯಾ ಬಿಂದುವನ್ನು ಛೇದರೇಖೆಗೆ ಸೇರಿಸಿ ವೃದ್ಧಿಸಿದ್ದ ಗೆರೆಯ ಮೇಲೆ ಛೇದರೇಖೆಗೆ ಹಿಂದೆ ಬಿಂಬಗಳನ್ನು ಕೊಡುತ್ತವೆ ಮತ್ತು ವಸ್ತು ಬಿಂದುವಿನಿಂದ ಛೇದರೇಖೆಗೆ ಇರುವಷ್ಟೇ ದೂರ ಬಿಂಬಬಿಂದುವಿಗೂ ಛೇದರೇಖೆಗೂ ಇರುತ್ತದೆ.

ಮೂರು ಕನ್ನಡಿಗಳನ್ನು ಪರಸ್ಪರ ಲಂಬವಾಗಿರುವಂತೆ ಜೋಡಿಸಿದಾಗ ಆ ತ್ರಿವಳಿ ಕನ್ನಡಿಯಲ್ಲಿ ಆಗುವ ಪ್ರತಿಫಲನ ಸ್ವಾರಸ್ಯಕರ. ತ್ರಿವಳಿ ಕನ್ನಡಿಯ ಸಾಮಾನ್ಯ ಬಿಂದುವಿನ ಹೆಸರು ಶೃಂಗ. ಒಂದು ಬಿಂದುವಸ್ತುವನ್ನು ಈ ಶೃಂಗಕ್ಕೆ ಜೋಡಿಸುವ ರೇಖೆಗೆ ಬಿಂದು–ಶೃಂಗ ರೇಖೆ ಎಂದು ಹೆಸರು. ಈಗ, ವಸ್ತುವಿನ ಪ್ರತಿಫಲನ ಬಿಂದು ಶೃಂಗ ರೇಖೆಯ ಮೇಲೆ ಬಿಂದು–ಶೃಂಗ ಅಂತರದಷ್ಟು ದೂರದಲ್ಲಿದೆ. ವಸ್ತುವಿನ ಸ್ಥಾನವನ್ನು ಬದಲಾಯಿಸದೆ ತ್ರಿವಳಿ ಕನ್ನಡಿಯನ್ನು ಶೃಂಗದ ಸುತ್ತ ತಿರುಗಿಸಿದರೆ ಬಿಂಬದ ಸ್ಥಾನ ಬದಲಾಗುವುದಿಲ್ಲ,




ಚಿತ್ರ 5

ತ್ರಿವಳಿ ಕನ್ನಡಿಯಲ್ಲಿ ನಮ್ಮನ್ನೇ ನಾವು ನೋಡಿದಾಗ ಯಾವ ಕಣ್ಣಿನಿಂದ ನೋಡುತ್ತೇವೆಯೋ ಆ ಕಣ್ಣು ಶೃಂಗದಲ್ಲಿದ್ದಂತೆ ತೋರುತ್ತದೆ. ನೋಡುತ್ತಿರುವ ಕಣ್ಣನ್ನು ಮುಚ್ಚಿ ಮತ್ತೊಂದು ಕಣ್ಣನ್ನು ತೆರೆದರೆ ಶೃಂಗ ಆ ನೇರಕ್ಕೆ ಹಾರಿದಂತೆ ತೋರುತ್ತದೆ. ಎರಡು ಕಣ್ಣುಗಳಿಂದಲೂ ಒಟ್ಟಿಗೆ ನೋಡಿದರೆ ಒಂದೊಂದು ಕಣ್ಣಿನ ನೇರಕ್ಕೆ ಒಂದೊಂದರಂತೆ ಎರಡು ಶೃಂಗಗಳು ಕಾಣಿಸುತ್ತವೆ. ಈ ತ್ರಿವಳಿ ಕನ್ನಡಿಯ ಮೂರು ಕನ್ನಡಿಗಳಲ್ಲೂ ಪ್ರತಿಫಲನಗೊಂಡ ಕಿರಣ ಪತನದಿಕ್ಕಿನಲ್ಲೇ ಹಿಂತಿರುಗುತ್ತದೆ. ಈ ತತ್ತ್ವವನ್ನು ಉಪಯೋಗಿಸಿ ದಾರಿಯ ತೋರುಫಲಕದ ಅಕ್ಷರಗಳಿಗೆ ತ್ರಿವಳಿ ಕನ್ನಡಿಯಂತೆ ಹಳ್ಳಗಳಿರುವ ಕನ್ನಡಿಯನ್ನು ಉಪಯೋಗಿಸುತ್ತಾರೆ.

ಚಲಿಸುತ್ತಿರುವ ವಾಹನದ ತಲೆದೀಪದ ಬೆಳಕು ತೋರುಫಲಕದ ಮೇಲೆ ಬಿದ್ದು ಪುನಃ ವಾಹನದ ಕಡೆಗೇ ಹಿಂತಿರುಗುವುದರಿಂದ ವಾಹನ ಆ ಫಲಕದ ಮುಂದೆ ಎಲ್ಲೇ ಇರಲಿ ಆ ಫಲಕ ಪ್ರಕಾಶಮಾನವಾಗಿ ಕಾಣುತ್ತದೆ.

ಒಂದು ಬೆಳಕಿನ ಕಿರಣ ಕನ್ನಡಿಯಿಂದ ಪ್ರತಿಫಲಿತವಾಗುತ್ತಿರುವಾಗ ಆ ಕನ್ನಡಿಯನ್ನು ನಾವು ಎಷ್ಟು ತಿರುಗಿಸುತ್ತೇವೆಯೋ ಪ್ರತಿಫಲಿತ ಕಿರಣ ಅದರ ಎರಡರಷ್ಟು ತಿರುಗುತ್ತದೆ. ಚಿತ್ರ 5ರಲ್ಲಿ M1 M1 ಕನ್ನಡಿ ಔಂ ಪತನಕಿರಣ ಮತ್ತು AR ಆದರ ಪ್ರತಿಫಲಿತ ಕಿರಣ. ಅಂದರೆ O N = R N. ಈಗ ಕನ್ನಡಿಯನ್ನು M1 M1' = $X^o$ ಯಷ್ಟು ತಿರುಗಿಸಬೇಕು.

ಕನ್ನಡಿಯ ಹೊಸ ಸ್ಥಾನ M'1M'2 ಆಗಿದ್ದು ಹೊಸ ಪ್ರತಿಫಲಿತ ಕಿರಣ AR' ಆದರೆ O N=R' N'. ಇಲ್ಲಿ AN ಮತ್ತು AN'ಗಳು M1M2 ಮತ್ತು M1'M2'ಗೆ ಲಂಬರೇಖೆಗಳು ಪ್ರತಿಫಲಿತ ಕಿರಣ ತಿರುಗಿದ ದೂರ = R R'-O R' = 2(O N – O N') = 2. N N' = 2x. ಕಾರಣ ಕನ್ನಡಿ $x^o$ ಯಷ್ಟು ತಿರುಗಿದಾಗ ಅದರ ಲಂಬವೂ x ನಷ್ಟು ತಿರುಗುತ್ತದೆ. ಆದ್ದರಿಂದ ಪ್ರತಿಲಿತ ಕಿರಣದ ತಿರುಗುವಿಕೆ ಕನ್ನಡಿಯ ತಿರುಗುವಿಕೆಯ ಎರಡರಷ್ಟು.

ಕನ್ನಡಿಗಳನ್ನು ನೋಡಿಕೊಳ್ಳಲು ಉಪಯೋಗಿಸುತ್ತಾರೆ. ಚಿಕ್ಕ ಅಂಗಡಿಯಲ್ಲಿ ಗೋಡೆಗಳನ್ನೆಲ್ಲ ಕನ್ನಡಿಯಿಂದ ಮುಚ್ಚಿ ಅಂಗಡಿ ವಿಶಾಲವಾಗಿ ಕಾಣುವಂತೆ ಮಾಡುತ್ತಾರೆ. ಕನ್ನಡಿಯು ಕಿರಣದೂರವನ್ನು (ಆಪ್ಟಿಕಲ್ ಪಾತ್) ಮಡಚುವಂತೆ ಮಾಡುವುದರಿಂದ ಬೆಳಕಿನ ಉಪಕರಣಗಳ ಉದ್ದ ಕಡಿಮೆ ಮಾಡಲು ಕನ್ನಡಿಯನ್ನು ಉಪಯೋಗಿಸುತ್ತಾರೆ. ದಾರಿಯ ತಿರುವುಗಳಲ್ಲಿ ಕನ್ನಡಿಯಿಟ್ಟು ನಾವು ತಿರುಗುವ ಮೊದಲೇ ತಿರುವಿನ ಆ ಕಡೆಯಿಂದ ಬರುತ್ತಿರುವ ವಾಹನಗಳು ನಮಗೆ ಕಾಣಿಸುವಂತೆ ಮಾಡುತ್ತಾರೆ. ಜಲಾಂತರ್ಗಾಮಿ ನೀರಿನಲ್ಲಿ ಮುಳುಗಿರುವಾಗ ನೀರಿನ ಮೇಲಿರುವ ಹಡಗುಗಳನ್ನೊ ವಸ್ತುಗಳನ್ನೋ ನೋಡಲು ಮತ್ತು ಕಂದಕದಲ್ಲಿ ಅಡಗಿ ಮೇಲೆ ವೈರಿಗಳ ಚಲನವಲನಗಳನ್ನು ನೋಡಲು ಉಪಯೋಗಿಸುವ ಪರಿಸ್ಕೋಪುಗಳಲ್ಲಿ ಚಿತ್ರ 6ರಲ್ಲಿ ತೋರಿಸಿರುವಂತೆ ಉದ್ದವಾದ ಕೊಳವೆಯಲ್ಲಿ ಎರಡು ಕನ್ನಡಿಗಳನ್ನು ಊರ್ಧ್ವ ದಿಕ್ಕಿಗೆ $45^o$ ಕೋನ ಉಂಟುಮಾಡಿ ಪರಸ್ಪರ ಸಮಾನಾಂತರವಾಗಿರುವಂತೆ ಇಟ್ಟಿರುತ್ತಾರೆ.



**ಚಿತ್ರ 6**

ಆಗ ಮೇಲಿರುವ ವಸ್ತುಗಳಿಂದ ಹೊರಟ ಬೆಳಕಿನ ಕಿರಣಗಳು ಎರಡು ಕನ್ನಡಿಗಳಲ್ಲೂ ಪ್ರತಿಫಲನಗೊಂಡು ಕೆಳಗೆ ಇರುವವರ ಕಣ್ಣನ್ನು ಪ್ರವೇಶಿಸುವುದರಿಂದ ಅವರಿಗೆ ಕಾಣಿಸುತ್ತದೆ. ಕಲೈಡೋಸ್ಕೋಪಿನಲ್ಲಿ ಮೂರು ಉದ್ದವಾದ ಕನ್ನಡಿಗಳನ್ನು ಪರಸ್ಪರ $60^o$ ಕೋನ ಉಂಟುಮಾಡುವಂತೆ ಒಂದು ಕೊಳವೆಯಲ್ಲಿ ಜೋಡಿಸಿರುತ್ತಾರೆ. ಇದರ ಒಂದು ತುದಿಯಲ್ಲಿರುವ ಬಣ್ಣಬಣ್ಣದ ಚೂರುಗಳನ್ನು ಇನ್ನೊಂದು ತುದಿಯಿಂದ ನೋಡುತ್ತ ಇದನ್ನು ತಿರುಗಿಸಿದರೆ ಚಿತ್ರವಿಚಿತ್ರ ವಿನ್ಯಾಸಗಳು ಕಾಣಿಸುತ್ತವೆ. ಈ ಕಲೈಡೋಸ್ಕೋಪನ್ನು ಮಕ್ಕಳ ಆಟಕ್ಕೂ ಬಟ್ಟೆಗಳ ಮೇಲೆ ಮುದ್ರಿಸಬೇಕಾದ ಚಿತ್ರ ವಿನ್ಯಾಸಗಳನ್ನು ಕಂಡಹಿಡಿಯಲು ಉಪಯೋಗಿಸುತ್ತಾರೆ.

**ಗೋಳ ಕನ್ನಡಿ :** ಕನ್ನಡಿಯು ಪ್ರತಿಫಲಿಸುವ ಮೈಗೋಳದ ಒಂದು ಭಾಗವಾದಾಗ ಅದಕ್ಕೆ ಗೋಳಕನ್ನಡಿ ಎಂದು ಹೆಸರು. ಗೋಳ ಕನ್ನಡಿ ಯಾವ ಗೋಳದ ಭಾಗವೆಂದು ಪರಿಗಣಿಸಬಹುದೋ ಅದರ ಕೇಂದ್ರವನ್ನು ಕನ್ನಡಿಯ ವಕ್ರತಾಕೇಂದ್ರ ಎಂದೂ ಆ ಗೋಳದ ತ್ರಿಜ್ಯವನ್ನು ವಕ್ರತಾ ತ್ರಿಜ್ಯ ಎಂದೂ ಕರೆಯುತ್ತೇವೆ. ಕನ್ನಡಿಯನ್ನು ನಾವು ನೋಡುವಾಗ ಅದರಲ್ಲಿ ತಗ್ಗು ಇದ್ದಹಾಗೆ ಕಂಡರೆ ಅಥವಾ ಅದರ ಪ್ರತಿಫಲಿಸುವ ಮೈ ಗೋಳ ಕೇಂದ್ರದ ವಿರುದ್ಧ ದಿಕ್ಕಿಗೆ ಇದ್ದರೆ ಅದನ್ನು ಉಬ್ಬು ಕನ್ನಡಿ ಎಂದೂ ಕರೆಯುತ್ತೇವೆ. ಗೋಳ ಕನ್ನಡಿಯ ಮಧ್ಯ ಬಿಂದುವಿನ ಹೆಸರು ಧ್ರುವ; ದೃಶ್ಯಭಾಗದ ವ್ಯಾಸದ ಹೆಸರು ದೃಗ್ವ್ಯಾಸ. ಕನ್ನಡಿಯ ಧ್ರುವವನ್ನು ಅದರ ವಕ್ರತಾಕೇಂದ್ರಕ್ಕೆ ಸೇರಿಸುವ ಸರಳರೇಖೆಗೆ ಕನ್ನಡಿಯ ಪ್ರಧಾನ ಅಕ್ಷ ಎಂದು ಹೆಸರು.

ಪ್ರಧಾನ ಅಕ್ಷಕ್ಕೆ ಸಮಾನಾಂತರವಾದ ಕಿರಣಾವಳಿ ಗೋಳ ಕನ್ನಡಿಯಿಂದ ಪ್ರತಿಫಲನಗೊಂಡು ಅಕ್ಷದ ಮೇಲಿನ ಒಂದು ಬಿಂದುವನ್ನು ಹಾದುಹೋಗುತ್ತದೆ (ತಗ್ಗು ಕನ್ನಡಿಯಲ್ಲಿ); ಅಥವಾ ಪ್ರಧಾನ ಅಕ್ಷದ ಮೇಲಿನ ಒಂದು ಬಿಂದುವಿನಿಂದ ಹೊರಟ ಹಾಗೆ ಕಾಣುತ್ತದೆ (ಉಬ್ಬು ಕನ್ನಡಿಯಲ್ಲಿ). ಆ ಬಿಂದುವಿಗೆ ಕನ್ನಡಿಯ ನಾಭೀಬಿಂದು (ಫೋಕಲ್ ಪಾಯಿಂಟ್) ಎಂದೂ ಧ್ರುವದಿಂದ ಅದಕ್ಕೆ ಇರುವ ದೂರಕ್ಕೆ ಆ ಕನ್ನಡಿಯ ನಾಭೀದೂರ (ಫೋಕಲ್ ಲೆಂತ್) ಎಂದು ಹೆಸರು ನಾಭೀದೂರ ವಕ್ರತಾತ್ರಿಜ್ಯದ ಅರ್ಧದಷ್ಟು ಇರುತ್ತದೆಂದು ಜ್ಯಾಮಿತಿ ಮತ್ತು ಪ್ರತಿಫಲನ ನಿಯಮಗಳಿಂದ ತೋರಿಸಬಹುದು.

ವಸ್ತುವಿನ ಒಂದು ಬಿಂದುವಿನಿಂದ ಪ್ರಧಾನ ಅಕ್ಷಕ್ಕೆ ಸಮಾನಾಂತರವಾಗಿ ಹೊರಟ ಕಿರಣ ಪ್ರತಿಫಲನಗೊಂಡು ನಾಭಿಯನ್ನು ಹಾದುಹೋಗುವುದೆಂಬುದನ್ನೂ ವಸ್ತುವಿನ ಅದೇ ಬಿಂದುವಿನಿಂದ ಕೇಂದ್ರವನ್ನು ಹಾದುಹೋಗುವ ಕಿರಣ ಪ್ರತಿಫಲನಗೊಂಡು ಅದೇ ದಾರಿಯಲ್ಲಿ ಹಿಂತಿರುಗುತ್ತದೆಂಬುದನ್ನೂ ಉಪಯೋಗಿಸಿ ಗೋಳ ಕನ್ನಡಿಯಿಂದ ಉಂಟಾಗುವ ಬಿಂಬದ ಸ್ಥಾನವನ್ನು ಕಂಡುಹಿಡಿಯುತ್ತೇವೆ. ಈ ಎರಡು ಪ್ರತಿಫಲಿತ ಕಿರಣಗಳು ಸಂಧಿಸುವ ಬಿಂದುವೇ ಬಿಂಬಬಿಂದು. ಸಮತಲ ಕನ್ನಡಿಯಲ್ಲಿ ಮಾಡಿದಂತೆ ಇಲ್ಲಿಯೂ ಹೊಗೆಪಟ್ಟಿಗೆಯನ್ನು ಉಪಯೋಗಿಸಿ ಕಿರಣಗಳ ದಾರಿಯನ್ನು ನೋಡಬಹುದು.

ಚಿತ್ರ 7 (a) ಮತ್ತು 7 (b) ಯಲ್ಲಿ P,F,C ಗಳು ಕ್ರಮವಾಗಿ ಧ್ರುವ, ನಾಭಿ ಮತ್ತು ಕೇಂದ್ರಬಿಂದುಗಳು. ಈ ಗೋಳಕನ್ನಡಿಯ ಮುಂದೆ AB ವಸ್ತುವನ್ನು ಇಟ್ಟಿದೆ. B ಯಿಂದ ಪ್ರಧಾನ ಅಕ್ಷಕ್ಕೆ ಸಮಾನಾಂತರವಾಗಿ ಹೊರಟ BM ಕಿರಣ ಪ್ರತಿಫಲನಗೊಂಡು F ಅನ್ನು ಹಾದು ಹೋಗುತ್ತದೆ ಅಥವಾ F ನಿಂದ ಹೊರಟ ಹಾಗೆ ಕಾಣುತ್ತದೆ.




**ಚಿತ್ರ 7 (a)**

B ಯಿಂದ C ಯ ದಿಕ್ಕಿನಲ್ಲಿ ಹೊರಟ ಕಿರಣ ಕನ್ನಡಿಗೆ ಲಂಬವಾಗಿರುವುದರಿಂದ ಪ್ರತಿಫಲನಗೊಂಡ ಮೇಲೆ ಅದೇ ಗೆರೆಯಲ್ಲಿ ಹಿಂತಿರುಗುತ್ತದೆ. ಈ ಎರಡು ಪ್ರತಿಫಲತ ಕಿರಣಗಳು b ಯಲ್ಲಿ ಸಂಧಿಸುತ್ತವೆ ಅಥವಾ b ಯಿಂದ ಹೊರಟ ಹಾಗೆ ಕಾಣುತ್ತವೆ. ಆದ್ದರಿಂದ b ಬಿಂದು Bಯ ಬಿಂಬ. ba ಯನ್ನು ಪ್ರಧಾನ ಅಕ್ಷಕ್ಕೆ ಲಂಬವಾಗಿ ಎಳೆದರೆ ಅದು BA ವಸ್ತುವಿನ ಬಿಂಬವನ್ನು ಸೂಚಿಸುತ್ತದೆ.




**ಚಿತ್ರ 7 (b)**

ಕನ್ನಡಿ ಎಂತಹುದು ಮತ್ತು ಅದರ ಮುಂದೆ ಇರುವ ವಸ್ತುವಿನ ದೂರವೆಷ್ಟು ಎಂಬುದನ್ನು ಅವಲಂಬಿಸಿ ಬಿಂಬದ ಸ್ಥಾನ, ಗಾತ್ರ ಮತ್ತು ಬಿಂಬ ನೆಟ್ಟಗಿದೆಯೋ ತಲೆಕೆಳಗಾಗಿದೆಯೋ ಸತ್ಯವೋ ಮಿಥ್ಯವೋ ಎಂಬ ಅಂಶಗಳು ಇರುತ್ತವೆ. ಮೇಲೆ ನಿರೂಪಿಸಿರುವ ರೀತಿಯಲ್ಲಿ ರೇಖಾಚಿತ್ರಗಳನ್ನೆಳೆದು ಈ ಕೆಳಗಿನ ಪಟ್ಟಿಯಲ್ಲಿರುವ ವಿವರಗಳನ್ನು ಪಡೆಯಬಹುದು.

<table>
<tr><th rowspan="2">ಕನ್ನಡಿಯ ನಮೂನೆ</th><th rowspan="2">ವಸ್ತುವಿನ ಸ್ಥಾನ</th><th colspan="4">ಪ್ರತಿಬಿಂಬ</th></tr>
<tr><th>ಸ್ಥಾನ</th><th>ಗಾತ್ರ</th><th>ನೆಟ್ಟಗೆ / ತಲೆಕೆಳಗೆ</th><th>ಸತ್ಯ / ಮಿಥ್ಯ</th></tr>
<tr><td>ತಗ್ಗು ಕನ್ನಡಿ</td><td>ಅನಂತದೂರದಲ್ಲಿ</td><td>C ನಲ್ಲಿ</td><td>ಬಿಂದು</td><td>–</td><td>ಸತ್ಯ</td></tr>
<tr><td>”</td><td>C ಯ ಆಚೆ</td><td>F ಮತ್ತು C ನಡುವೆ</td><td>ಚಿಕ್ಕದು</td><td>ತಲೆಕೆಳಗೆ</td><td>ಸತ್ಯ</td></tr>
<tr><td>”</td><td>C ಯಲ್ಲಿ</td><td>C ಯಲ್ಲಿ</td><td>ವಸ್ತುವಿನಷ್ಟೆ</td><td>ತಲೆಕೆಳಗೆ</td><td>ಸತ್ಯ</td></tr>
<tr><td>”</td><td>F ಮತ್ತು CC ನಡುವೆ</td><td>C ಯ ಆಚೆ</td><td>ದೊಡ್ಡದು</td><td>ತಲೆಕೆಳಗೆ</td><td>ಸತ್ಯ</td></tr>
<tr><td>”</td><td>F ನಲ್ಲಿ</td><td>ಅನಂತದೂರದಲ್ಲಿ</td><td>–</td><td>–</td><td>–</td></tr>
<tr><td>”</td><td>P ಮತ್ತು F ನಡುವೆ</td><td>ಕನ್ನಡಿಯ ಹಿಂದೆ</td><td>ದೊಡ್ಡದು</td><td>ನೆಟ್ಟಗೆ</td><td>ಮಿಥ್ಯ</td></tr>
<tr><td>ಉಬ್ಬು ಕನ್ನಡಿ</td><td>ಎಲ್ಲಾದರೂ ಸರಿ</td><td>ಕನ್ನಡಿಯ ಹಿಂದೆ</td><td>ಚಿಕ್ಕದು</td><td>ನೆಟ್ಟಗೆ</td><td>ಮಿಥ್ಯ</td></tr>
</table>

ಚಿತ್ರ 7 (a) ಯಲ್ಲಿ ಕನ್ನಡಿಯ ನಾಭೀದೂರ $f$, ಕನ್ನಡಿಯಿಂದ ವಸ್ತುವಿನ ದೂರ $u$ ಮತ್ತು ಬಿಂಬದ ದೂರ $v$ ಆಗಿರಲಿ :

ABC ಮತ್ತು abC ತ್ರಿಕೋಣಗಳು ಸದೃಶ.

ಆದ್ದರಿಂದ $$\frac{ab}{AB}=\frac{aC}{AC} \qquad ...(1)$$

MPF ಮತ್ತು abF ತ್ರಿಕೋನಗಳು ಸದೃಶ. ಆದ್ದರಿಂದ (ಸರಿಸುಮಾರಾಗಿ)

$$\frac{ab}{PM}=\frac{aF}{PF} \qquad ...(2)$$

ಆದರೆ PM = AB. ಆದ್ದರಿಂದ ಸಮೀಕರಣ (1) ಮತ್ತು (2) ರಿಂದ

$$\frac{aC}{AC}=\frac{aF}{PF} \qquad ...(3)$$

ಆದರೆ ಚಿತ್ರ 7(a) ಯಲ್ಲಿ $aC = PC\text{-}Pa=2f\text{-}v$

$AC=PA - PC = u\text{-}2f$, $aF = Pa–PF = v–f$ ಮತ್ತು $PF = f$

ಇವನ್ನು ಸಮೀಕರಣ (3) ಕ್ಕೆ ಅಳವಡಿಸಿದರೆ $\frac{2f-v}{u-2f}=\frac{v-f}{f}$ ಇದನ್ನು ಸರಳೀಕರಿಸಿದರೆ $\frac{1}{f}=\frac{1}{v}+\frac{1}{u}$ ಎಂಬ ಸೂತ್ರ ದೊರೆಯುತ್ತದೆ. ಇದಕ್ಕೆ ಗೋಳಕನ್ನಡಿ ಸೂತ್ರ ಎಂದು ಹೆಸರು. ತಗ್ಗು ಕನ್ನಡಿಯಾಗಲ್ಲಿ, ಉಬ್ಬು ಕನ್ನಡಿಯಾಗಲಿ ಸತ್ಯಬಿಂಬವಾಗಲಿ, ಮಿಥ್ಯಬಿಂಬವಾಗಲಿ ಈ ಸೂತ್ರವನ್ನು ಉಪಯೋಗಿಸಬಹುದು. ಆದರೆ ಸತ್ಯವಾದ ವಸ್ತು ಮತ್ತು ಬಿಂಬಗಳ ದೂರವನ್ನು ಧನ ಚಿಹ್ನೆಯಾದ್ದಾಗಿಯೂ ಮಿಥ್ಯಬಿಂಬದ ದೂರವನ್ನು ಋಣ ಚಿಹ್ನೆಯದ್ದಾಗಿಯೂ ಪರಿಗಣಿಸಿಬೇಕು. ಚಿಹ್ನೆಯ ಈ ನಿಯಮದ ಅನುಸಾರವಾಗಿ ತಗ್ಗು ಕನ್ನಡಿಯ ನಾಭೀದೂರ ಧನ ಚಿಹ್ನೆಯದು, ಉಬ್ಬುಕನ್ನಡಿಯ ನಾಭೀದೂರ ಋಣ ಚಿಹ್ನೆಯದು.

ತಗ್ಗು ಕನ್ನಡಿಯಲ್ಲಿ ಸತ್ಯಬಿಂಬ ಉಂಟಾದಾಗ $u$, $v$ ಮತ್ತು $f$ ಗಳು ಧನ ಚಿಹ್ನೆಯಾದ್ದರಿಂದ $\frac{1}{f}=\frac{1}{v}+\frac{1}{u}$ ಸೂತ್ರದಲ್ಲಿ $v$ ಮತ್ತು $u$ ಗಳನ್ನು ಅದಲು ಬದಲು ಮಾಡಿದರೂ ವ್ಯತ್ಯಾಸವೇನೂ ಆಗುವುದಿಲ್ಲ. ಆದ್ದರಿಂದ ವಸ್ತುಸ್ಥಾನವನ್ನೂ ಬಿಂಬಸ್ಥಾನವನೂ ಅದಲುಬದಲು ಮಾಡಬಹುದು. ಅಂದರೆ O ನಲ್ಲಿನ ವಸ್ತು I ಯಲ್ಲಿ ಬಿಂಬವನ್ನು ಕೊಟ್ಟರೆ I ಯಲ್ಲಿನ ವಸ್ತು Oನಲ್ಲಿ ಬಿಂಬವನ್ನು ಕೊಡುತ್ತದೆ ಎಂದರ್ಥ. ಇಂಥ ಎರಡು ಬಿಂದುಗಳಿಗೆ ಪರ್ಯಾಯ ಬಿಂದುಗಳು ಎಂದು ಹೆಸರು.

ಗೋಳಕನ್ನಡಿಯಲ್ಲಿ ಬಿಂಬದ ಉದ್ದ ಮತ್ತು ವಸ್ತುವಿನ ಉದ್ದ ಇವುಗಳ ಪ್ರಮಾಣಕ್ಕೆ ವರ್ಧನ (ಮ್ಯಾಗ್ನಫಿಕೇಶನ್) ಎಂದು ಹೆಸರು. ಬಿಂಬದೂರ $v$ ಗೂ ವಸ್ತು ದೂರ $u$ ಗೂ ಇರುವ ಪ್ರಮಾಣಕ್ಕೆ ವರ್ಧನ ಸಮವೆಂದು ತೋರಿಸಬಹುದು. ತಗ್ಗು ಕನ್ನಡಿಯ ನಾಭೀದೂರವನ್ನು ಕಂಡುಹಿಡಿಯಲು ಚಿತ್ರ 8ರಲ್ಲಿ ತೋರಿಸಿರುವಂತೆ ಕನ್ನಡಿಯ ಮುಂದೆ ಒಂದು ತಂತಿಬಲೆಯನ್ನು ಇಡಬೇಕು.

ಅದರ ಮೇಲೆ ವಿದ್ಯುದ್ದೀಪದಿಂದ ಬೆಳಕು ಬೀಳಿಸಿ, ಕನ್ನಡಿಯ ಮುಂದೆ ಇಟ್ಟಿರುವ ಒಂದು ಪರದೆಯ ಸ್ಥಾನವನ್ನು ಬದಲಾಯಿಸಿ ಬಲೆಯ ಸ್ಪಷ್ಟವಾದ ಬಿಂಬವನ್ನು ಪರದೆಯ ಮೇಲೆ ಪಡೆಯಬೇಕು. ಆಗ ಕನ್ನಡಿಯಿಂದ ಬಲೆಗೆ ದೂರ $u$ ಮತ್ತು ಪರದೆಗೆ ದೂರ $v$ ಇವನ್ನು ಅಳೆದು ಕನ್ನಡಿ ಸೂತ್ರದ ಸಹಾಯದಿಂದ ನಾಭೀದೂರವನ್ನು ಗಣಿಸಬಹುದು.

ಉಬ್ಬು ಕನ್ನಡಿಯ ನಾಭೀದೂರವನ್ನು ಕಂಡು ಹಿಡಿಯುವುದು ಇಷ್ಟು ಸುಲಭವಲ್ಲ. ಏಕೆಂದರೆ ಅದು ಯಾವಾಗಲೂ ಮಿಥ್ಯ ಬಿಂಬವನ್ನೇ ಕೊಡುತ್ತದೆ. ಚಿತ್ರ 9ರಲ್ಲಿ ತೋರಿಸಿರುವಂತೆ ಉಬ್ಬು ಕನ್ನಡಿಯ ಸು. $\frac{1}{2}$ ದಷ್ಟು ಮುಚ್ಚುವ ಹಾಗೆ ಅದರ ಮುಂದೆ ಒಂದು ಸಮತಲ ಕನ್ನಡಿಯನ್ನು ಇಡಬೇಕು. ಇವೆರಡರ ಮುಂದೆ ಇಟ್ಟಿರುವ ಒಂದು ಉದ್ದವಾದ ಕಡ್ಡಿಯ ಎರಡು ಬಿಂಬಗಳು ಕಾಣಿಸುತ್ತವೆ. ಎರಡು ಕನ್ನಡಿಗಳ ನಡುವಣ ದೂರ $x$ ಮತ್ತು ಸಮತಲ ಕನ್ನಡಿಗೂ ಕಡ್ಡಿಗೂ ನಡುವಣ ದೂರ $y$ ಯನ್ನು ಬದಲಾಯಿಸಿ ಆ ಎರಡು ಬಿಂಬಗಳಿಗೂ ದಿಗಂತರ (ಪ್ಯಾರಲ್ಲೆಕ್ಸ್) ಇಲ್ಲದಂತೆ (ಬೇರೆ ಬೇರೆ ಕಡೆಗಳಿಂದ ನೋಡಿದರೂ ಬಿಂಬಗಳ ಸ್ಥಾನ ಬದಲಾಗದಂತೆ ಇರುವುದು) ಮಾಡಬಹುದು.




**ಚಿತ್ರ 8**

ಹೀಗೆ ಆಗಬೇಕಾದರೆ ಆ ಎರಡು ಕನ್ನಡಿಗಳಿಂದಾದ ಬಿಂಬಗಳೂ ಒಂದೇ ಸ್ಥಳದಲ್ಲಿರಬೇಕು. ಆದ್ದರಿಂದ ಉಬ್ಬು ಕನ್ನಡಿಗೆ $u=x+y$ ಮತ್ತು $v=y\text{-}x$, ಈಗ $x$ ಮತ್ತು $y$ ಗಳನ್ನು ಅಳೆದು ಕನ್ನಡಿ ಸೂತ್ರದ ಸಹಾಯದಿಂದ ಉಬ್ಬು ಕನ್ನಡಿಯ ನಾಭೀದೂರವನ್ನು ಲೆಕ್ಕ ಹಾಕಬಹುದು. ಹೀಗೆ ಲೆಕ್ಕ ಹಾಕುವಾಗ $v$ ಋಣ ಚಿಹ್ನೆಯದು ಎಂಬುದನ್ನು ಮರೆಯಬಾರದು.




**ಚಿತ್ರ 9**

ಹೆಚ್ಚು ನಾಭೀದೂರದ ತಗ್ಗು ಕನ್ನಡಿಗಳನ್ನು ದೂರದರ್ಶಕಗಳಲ್ಲೂ ಉಪಯೋಗಿಸುತ್ತಾರೆ. ಕಾರು, ಬಸ್ಸು, ರೈಲುಗಳ ತಲೆದೀಪ ಮತ್ತು ಶೋಧನದೀಪಗಳ ಹಿಂದೆ ತಗ್ಗುಕನ್ನಡಿ ಅಥವಾ ಪ್ಯರಾಬೋಲಾಕಾರದ ಕನ್ನಡಿಗಳನ್ನು ಅಳವಡಿಸಿರುತ್ತಾರೆ. ನಾಭಿಗೂ ತಗ್ಗು ಕನ್ನಡಿಗೂ ನಡುವೆ ಇರುವ ವಸ್ತುವಿನ ದೊಡ್ಡದಾದ, ನೆಟ್ಟಗಿರುವ ಮಿಥ್ಯಬಿಂಬ ಉಂಟಾಗುವುದರಿಂದ ಮುಖಕ್ಷೌರ ಮಾಡಿಕೊಳ್ಳುವಾಗ ತಗ್ಗು ಕನ್ನಡಿಯನ್ನು ಉಪಯೋಗಿಸುತ್ತಾರೆ. ಉಬ್ಬು ಕನ್ನಡಿ ಯಾವಾಗಲೂ ನೆಟ್ಟಗಿರುವ, ಚಿಕ್ಕದಾದ ಪ್ರತಿಬಿಂಬವನ್ನೇ ಕೊಟ್ಟರೂ ಅದು ಕಾಣುವ ಕ್ಷೇತ್ರದ ವಿಸ್ತೀರ್ಣ ಹೆಚ್ಚಾದ್ದರಿಂದ ಅದನ್ನು ವಾಹನಗಳಲ್ಲಿ ಚಾಲಕರು ಹಿಂದಿನಿಂದ ಬರುತ್ತಿರುವ ಇತರ ವಾಹನಗಳನ್ನು ನೋಡಲು ಉಪಯೋಗಿಸುತ್ತಾರೆ.

**ಕನ್ನಡಿಯ ಲೇಪನ :** ಸಾಮಾನ್ಯವಾಗಿ ಎಲ್ಲ ಕನ್ನಡಿಗಳನ್ನೂ ಸರಿಯಾದ ಆಕಾರದ ಗಾಜಿನ ಮೇಲ್ಮೈ ಪ್ರತಿಫಲಿಸುವ ವಸ್ತುವಿನ ತೆಳು ಲೇಪ ಕೊಟ್ಟು ಮಾಡುತ್ತಾರೆ. ಮೊದಲು ಹಂತ ಹಂತಕ್ಕೂ ಹೆಚ್ಚು ಹೆಚ್ಚು ನಯವಾದ ಘರ್ಷಕಗಳಿಂದ ಉಜ್ಜಿ ನಮಗೆ ಬೇಕಾದ

ವಕ್ರತೆಯುಳ್ಳ ನಯವಾದ ಮೇಲ್ಮೈಯನ್ನು ಪಡೆದು ಅನಂತರ ಅದರ ಮೇಲೆ ಹೊಳಪನ್ನು ಕೊಡುತ್ತಿದ್ದರು; ಅಥವಾ ಲೋಹದ ಲೇಪವನ್ನು ರಾಸಾಯನಿಕ ರೀತ್ಯ ಮಾಡುತ್ತಿದ್ದರು. ಆದರೆ, ಈಗ ಯಾವ ಗಾಜಿಗೆ ಲೇಪನ ಮಾಡಬೇಕೋ ಅದರ ಮುಂದೆ ಹತ್ತಿರದಲ್ಲಿ ಯಾವ ವಸ್ತುವಿನ ಲೇಪನವನ್ನು ಕೊಡಬೇಕೋ ಆ ವಸ್ತುವಿನ ಚೂರನ್ನು ಟಂಗ್‌ಸ್ಟನ್ ತಂತಿಗಳಿಗೆ ಜೋಡಿಸಿ ಇಡುತ್ತಾರೆ. ಇದನ್ನು ಒಂದು ಪಾತ್ರೆಯಲ್ಲಿಟ್ಟು ಆ ಪಾತ್ರೆಯಲ್ಲಿ ನಿರ್ವಾತ ಉಂಟಾಗುವಂತೆ ಅದರಲ್ಲಿನ ಗಾಳಿಯನ್ನೆಲ್ಲ ಪಂಪಿನ ಸಹಾಯದಿಂದ ಹೊರತೆಗೆಯುತ್ತಾರೆ. ಆಮೇಲೆ ವಿದ್ಯುತ್ ಪ್ರವಾಹದಿಂದ ಆ ಲೇಪನ ವಸ್ತುವನ್ನು ಹಬೆಯಾಗಿಸಿದರೆ ಗಾಳಿಯ ಅಣುಗಳ ತಡೆ ಸಹ ಇಲ್ಲದೆ ಆ ಹಬೆ ಗಾಜಿನ ಮೇಲೆ ಬಿದ್ದು, ಘನೀಕರಿಸಿ ಅತಿ ಪ್ರತಿಫಲನ ಶಕ್ತಿ ಹೊಂದಿರುವ ಸು. $10^{-5}$ ಸೆಂ.ಮೀ. ದಪ್ಪದ ಲೇಪ ಉಂಟಾಗುತ್ತದೆ. ಈ ರೀತಿಯ ನಿರ್ವಾತ ಲೇಪಗಳ ಪ್ರತಿಫಲನ ಶಕ್ತಿ ಲೇಪನ ಮಾಡುವ ವಿಧಾನವನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಹೆಚ್ಚು ಬಾಳಿಕೆ ಮತ್ತು ಹೆಚ್ಚು ಪ್ರತಿಫಲನ ಶಕ್ತಿ ಹೊಂದಲು ಆ ಗಾಜಿನ ಮೇಲ್ಮೈ ಶುದ್ಧವಾಗಿರಬೇಕು. ನಿರ್ವಾತ ಆದಷ್ಟೂ ಪೂರ್ಣ ($10^{-5}$ ಮಿಮೀ ಪಾದರಸ) ಆಗಿರಬೇಕು ಮತ್ತು ಲೇಪನ ಆದಷ್ಟೂ ಕ್ಷಿಪ್ರವಾಗಿ ಆಗಬೇಕು. ಲೇಪನ ವಸ್ತುವನ್ನು ಆ ಕನ್ನಡಿಯನ್ನು ಉಪಯೋಗಿಸುವ ರೋಹಿತ ವ್ಯಾಪ್ತಿಯನ್ನು (ಸ್ಪೆಕ್ಟ್ರಲ್ ರೇಂಜ್) ಅನುಸರಿಸಿ ಆಯ್ಕೆ ಮಾಡುತ್ತಾರೆ.

ಕಣ್ಣಿಗೆ ಕಾಣುವ ಬೆಳಕಿನ (3500–7000°A) ಕನ್ನಡಿಗಳಲ್ಲಿ ಬಳಸಲು ಅತಿ ಹೆಚ್ಚು ಪ್ರತಿಫಲನ ಶಕ್ತಿ ಇರುವ ಬೆಳ್ಳಿ ಉತ್ತಮ. ಆದರೂ ಸಾಮಾನ್ಯವಾಗಿ ಅಲ್ಯೂಮಿನಿಯಮನ್ನೇ ಉಪಯೋಗಿಸುತ್ತಾರೆ. ಏಕೆಂದರೆ ಗಾಳಿಯ ಸಂಪರ್ಕದಿಂದ ಅದರ ಮೇಲೆ ಉಂಟಾಗುವ ಅತಿ ತೆಳುವಾದ, ರಾಸಾಯನಿಕ ನಿಷ್ಕ್ರಿಯದ ಆಕ್ಸೈಡ್ ಪದರದಿಂದ ಅದರ ಬಾಳಿಕೆ ಹೆಚ್ಚಾಗುತ್ತದೆ. ಅತಿರಕ್ತ ಕಿರಣಗಳ ಕನ್ನಡಿಯಲ್ಲಿ ಬಳಸಲು ಅತಿ ಹೆಚ್ಚು ಪ್ರತಿಫಲನ ಶಕ್ತಿ ಇರುವ ಚಿನ್ನವಿದ್ದರೂ ಅಲ್ಯೂಮಿನಿಯಂ ಅಥವಾ ನಿಕ್ಕಲ್‌ಅನ್ನು ಉಪಯೋಗಿಸುವುದು ವಾಡಿಕೆ. ಅಲ್ಯೂಮಿನಿಯಂ ಹೆಚ್ಚು ಗಟ್ಟಿಯಾಗಿರುವುದೇ ಇದರ ಕಾರಣ. ಅತಿನೇರಳೆ ಕಿರಣಗಳ ಕನ್ನಡಿಗೆ ಅಲ್ಯೂಮಿನಿಯಮ್ಮೇ ಅತ್ಯುತ್ತಮ. ಆದರೆ ತರಂಗದೂರ 1000°A ಗಿಂತ ಕಡಿಮೆಯಾದರೆ ಅಲ್ಯೂಮಿನಿಯಂ ಪಾರದರ್ಶಕವಾಗುವುದರಿಂದ ಅತಿ ಹೆಚ್ಚು ಪ್ರತಿಫಲನ ಶಕ್ತಿ ಇರುವ ಪ್ಲಾಟಿನಮ್‌ಅನ್ನು ಉಪಯೋಗಿಸುತ್ತಾರೆ.

ಗಾಜಿನಲ್ಲಿನ ಅವಶೋಷಣೆ (ಅಬ್‌ಸಾರ್ಪ್‌ಷನ್) ಮತ್ತು ವಕ್ರೀಭವನವನ್ನು ತಪ್ಪಿಸಬೇಕಾದಲ್ಲಿ ಮುಂದುಗಡೆಯ ಮೈಮೇಲೆ ಲೇಪನ ಮಾಡುತ್ತಾರೆ. ಮೈಕಲ್‌ಸನ್ ಆತಂಕಮಾಪಕ ಮುಂತಾದ ಉಪಕರಣಗಳಲ್ಲಿ ಹೀಗೆ ಮೇಲ್ಮೈ ಲೇಪನವಿರುವ ಕನ್ನಡಿಗಳನ್ನು ಉಪಯೋಗಿಸುತ್ತಾರೆ. (ಟಿ.ಎನ್.ಎನ್.)

**ಕನ್ನಡೇತರ ಭಾಷೆಗಳು ಮತ್ತು ಸಾಹಿತ್ಯ :** ಕರ್ನಾಟಕದಲ್ಲಿ ಕನ್ನಡ ವಲ್ಲದೆ ಇತರ 165 ಭಾಷೆಗಳು ಪ್ರಚಲಿತವಾಗಿವೆ. ಆದರೆ ಇವುಗಳಲ್ಲಿ ಹೆಚ್ಚಿನವು (ಉದಾ:ಆರ್ಮೇನಿಯನ್,ಇಂಡೋನೇಷ್ಯನ್) ಉದ್ಯೋಗ ಇತ್ಯಾದಿಗಳಿಗಾಗಿ ಬೇರೆ ದೇಶಗಳಿಂದ ಬಂದು ನೆಲಸಿದ ಕೆಲವೇ ವ್ಯಕ್ತಿ ಅಥವಾ ಕುಟುಂಬಗಳಿಗಷ್ಟೇ ಸೀಮಿತವಾಗಿವೆ. ಹೆಚ್ಚಿನ ಜನರ ಮಾತೃಭಾಷೆಯಾಗುಳ್ಳ ಕನ್ನಡೇತರ ಭಾಷೆಗಳಿವು: ತಮಿಳು, ಕೊಂಕಣಿ, ಮಲಯಾಳಂ, ಲಂಬಾಣಿ, ಹಿಂದೀ, ಉರ್ದು, ಕೊಡವ, ಬಂಜಾರಿ, ಗುಜಕ್ಷತ್ರಿಯ, ಇಂಗ್ಲಿಷ್, ಮಾರ್ವಾರಿ, ಎರವ, ಟಿಬೆಟನ್, ಸಿಂಧಿ, ಬಂಗಾಲಿ, ಪಂಜಾಬಿ, ಅರಬ್ಬೀ, ಹಿಂದುಸ್ಥಾನೀ, ರಾಜಸ್ತಾನೀ, ಕುರುಂಬ, ಕೊರಚ, ವಡರಿ, ಕೊರವ, ಕೊಂಗರ್, ವ್ರಜಭಾಷಾ, ನೇಪಾಲಿ.

ಬಹು ಹಿಂದಿನ ಕಾಲದಿಂದ ಸಂಸ್ಕೃತ, ಪ್ರಾಕೃತ ಮುಂತಾದ ಭಾಷೆಗಳು ಕರ್ನಾಟಕದಲ್ಲಿ ಪ್ರಚಲಿತಗೊಂಡಿದ್ದುವಾಗಿ ಆಯಾ ಭಾಷೆಗಳ ಪ್ರಭಾವ ಕನ್ನಡದ ಮೇಲಾಗಿರುವುದಲ್ಲದೆ ಹಲವು ಸಂದರ್ಭಗಳಲ್ಲಿ ಕನ್ನಡದ ಪ್ರಭಾವ ಸಹ ಅವುಗಳ ಮೇಲಾಗಿದೆ. ಅಲ್ಲದೆ ಆ ಕನ್ನಡೇತರ ಭಾಷೆಗಳಲ್ಲಿ ಸಾಹಿತ್ಯಸೃಷ್ಟಿಯೂ ಸ್ವಲ್ಪಮಟ್ಟಿಗೆ ಕರ್ನಾಟಕದಲ್ಲಿ ಜರುಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಸ್ಥೂಲ ಸಮೀಕ್ಷೆಯನ್ನು ಇಲ್ಲಿ ಕೊಡಲಾಗಿದೆ. *

**ಪ್ರಾಕೃತ:** ಕರ್ನಾಟಕಕ್ಕೆ ಮೌರ್ಯ ಚಕ್ರವರ್ತಿ ಚಂದ್ರಗುಪ್ತನೊಡನೆ ಭದ್ರಬಾಹು ಶ್ರುತಕೇವಲಿ ಉತ್ತರಾಪಥದಿಂದ ಬಂದ ಕಾರಣ ಜೈನ ಧರ್ಮವೂ ಪ್ರಾಕೃತಭಾಷೆಯೂ ಇಲ್ಲಿ ಹರಡುವಂತಾಗಿರಬೇಕು. ಮೌರ್ಯ, ಸಾತವಾಹನರ ಕಾಲದಲ್ಲಿ ಕನ್ನಡನಾಡಿನಲ್ಲಿ ಪ್ರಾಕೃತಭಾಷೆ ಕೆಲಮಟ್ಟಿಗೆ ವ್ಯವಹಾರದಲ್ಲಿದ್ದ ಭಾಷೆಯಾಗಿದ್ದು ಅದಕ್ಕೆ ತಕ್ಕ ಮನ್ನಣೆಯೂ ಇದ್ದಿರಬಹುದು. ಕರ್ನಾಟಕದ ಬ್ರಹ್ಮಗಿರಿ, ಮಸ್ಕಿ, ಕೊಪ್ಪಳ – ಈ ಸ್ಥಳಗಳಲ್ಲಿ ಅಶೋಕನ (ಪ್ರ.ಶ.ಪೂ.272–32) ಶಾಸನಗಳು ದೊರಕಿವೆ. ಇವೇ ಕರ್ನಾಟಕದಲ್ಲಿ ದೊರಕುವ ಅತ್ಯಂತ ಪ್ರಾಚೀನ ಪ್ರಾಕೃತ ದಾಖಲೆಗಳು. ಆ ಕಾಲದಲ್ಲಿ ಈ ಶಾಸನಗಳನ್ನು ಓದಿ ಅರ್ಥೈಸುವ ಜನ ಕನ್ನಡ ನಾಡಿನಲ್ಲಿ ಕೆಲವರಾದರೂ ಇದ್ದಿರಬಹುದೆಂದು ತಿಳಿಯುವುದು ಸಂಭವನೀಯವೇ ಆಗಿದೆ. ಪ್ರ.ಶ.ಪೂ.2 – ಪ್ರ.ಶ.3ನೆಯ ಶತಮಾನ ದವರೆಗೂ ಆಳಿದ ಸಾತವಾಹನ ಅರಸರ ಕಾಲದಲ್ಲಿ ಅವರ ರಾಜ್ಯದಲ್ಲಿ ಪ್ರಾಕೃತಭಾಷೆ ವಿಶೇಷವಾಗಿ ಪ್ರಚಲಿತವಾಗಿತ್ತು. ಕರ್ನಾಟಕದ ಸನ್ನತಿ, ವಡಗಾಂವ್–ಮಾಧವಪುರ, ಮಳವಳ್ಳಿ, ಬನವಾಸಿ – ಈ ಸ್ಥಳಗಳಲ್ಲಿ ಆ ಕಾಲದ ಪ್ರಾಕೃತ ಶಾಸನಗಳಿವೆ. ಮುಂದೆ ಕರ್ನಾಟಕದಲ್ಲಿ ರಾಜ್ಯವಾಳಿದ ಕದಂಬವಂಶದ ಆದ್ಯಮಯೂರಶರ್ಮನ ಒಂದು ಶಾಸನ ಸಹ ಚಂದ್ರವಳ್ಳಿಯಲ್ಲಿ ದೊರಕಿದೆ. ಬಹುಶಃ ಪ್ರಾಕೃತ ಆ ಕಾಲದಲ್ಲಿ ಆಡಳಿತಭಾಷೆಯಾಗಿಯೂ ಶಿಷ್ಟಭಾಷೆಯಾಗಿಯೂ ಇಲ್ಲಿ ಪ್ರಚಲಿತ ವಾಗಿದ್ದಿರಬಹುದು.

ಕನ್ನಡನಾಡಿನಲ್ಲಿ ಜೈನಧರ್ಮ ಉನ್ನತಸ್ಥಿತಿಯಲ್ಲಿದ್ದಾಗ ಪ್ರಾಕೃತ ಸಾಹಿತ್ಯಕ್ಕೆ ಒಳ್ಳೆಯ ಪೋಷಣೆ ದೊರೆಯಿತು. ಅಖಿಲಭಾರತ ಪ್ರಾಮುಖ್ಯದ ಪ್ರಾಕೃತಗ್ರಂಥಗಳ ರಚನೆ ನಡೆಯಿತು. ಪ್ರಾಕೃತ ಪಕ್ಷಪಾತಿಗಳಾಗಿದ್ದ ಸಾತವಾಹನರ ಕಾಲದಲ್ಲಿಯೇ ಗುಣಾಢ್ಯ (1ನೆಯ ಶತಮಾನ) ಬೃಹತ್ಕಥೆಯನ್ನು ಪೈಶಾಚೀಪ್ರಾಕೃತದಲ್ಲಿಯೂ ಹಾಲ (1ನೆಯ ಶತಮಾನ) ಗಾಥಾಸಪ್ತಶತಿಯನ್ನು ಮಹಾರಾಷ್ಟ್ರೀ ಪ್ರಾಕೃತದಲ್ಲಿಯೂ ರಚಿಸಿದರೆಂದು ತಿಳಿಯುವುದು. ಪ್ರಾಭೃತತ್ರಯಾದಿ ಗ್ರಂಥಗಳನ್ನು ರಚಿಸಿದ ಕುಂದಕುಂದಾ ಚಾರ್ಯ, ಭಗವತಿ ಆರಾಧನದ ಶಿವಕೋಟ್ಯಾಚಾರ್ಯ (ಶಿವಾರ್ಯ), ಮೂಲಾಚಾರವೆಂಬ ಶೌರಸೇನೀ ಪ್ರಾಕೃತ ಗ್ರಂಥದ ಕರ್ತೃ ವಟ್ಟಕೇರ, ಕರಕುಂಡಚರಿ ಎಂಬ ಅಪಭ್ರಂಶ ಗ್ರಂಥದ ಕರ್ತೃ ಕನಕಾಮರಮುನಿ – ಈ ಮೊದಲಾದವರು ಪ್ರಾಚೀನ ಕರ್ನಾಟಕದಲ್ಲಿದ್ದು ಕೃತಿರಚನೆ ಮಾಡಿದ ಪ್ರಾಕೃತ ಕವಿಗಳೆಂಬುದಾಗಿ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಕುಂದಕುಂದಾಚಾರ್ಯ, ವಟ್ಟಕೇರ, ಶಿವಾರ್ಯ ಮೊದಲಾದ ಕೆಲವರು ಪ್ರತ್ಯಕ್ಷವಾಗಿ ಕನ್ನಡನಾಡಿಗೆ ಸೇರಿದ್ದವರೆಂಬುದು ವಿವಾದಾಸ್ಪದವಾಗಿದ್ದರೂ ಅವರ ಕೃತಿಗಳು ಕನ್ನಡನಾಡಿನ ಜೈನಸಮುದಾಯಕ್ಕೆ ಪೂಜ್ಯವೂ ಪ್ರಿಯವೂ ಆಗಿದ್ದವೆಂಬುದರಲ್ಲಿ ಸಂದೇಹವಿಲ್ಲ.

ಸರ್ವನಂದಿಯ ಲೋಕ ವಿಭಾಗ ಮತ್ತು ಯತಿವೃಷಭನ ತಿಲೋಯಪಣ್ಣತ್ತಿ ಬಲುಮಟ್ಟಿಗೆ ಕನ್ನಡನಾಡಿನಲ್ಲಿಯೇ ರಚಿತವಾದವು. ಕುಂದುಕುಂದ, ಸಮಂತಭದ್ರ ಮತ್ತು ಬಪ್ಪದೇವರ ಸಂಸ್ಕೃತ ಪ್ರಾಕೃತ ವ್ಯಾಖ್ಯಾನ ಗ್ರಂಥಗಳೂ ಇಲ್ಲಿಯೇ ರಚನೆಗೊಂಡವು. ಕುಂದಕುಂದಾಚಾರ್ಯರ ಪ್ರಸಿದ್ಧ ಪ್ರಾಕೃತ ಗ್ರಂಥಗಳಿಗೆ ಸಂಸ್ಕೃತದಲ್ಲಿ ವ್ಯಾಖ್ಯೆಗಳನ್ನು ರಚಿಸಿರುವ ಬಾಲಚಂದ್ರ ಮತ್ತು ಪದ್ಮಪ್ರಭರು ಕರ್ನಾಟಕದವರು. ಯಾಪನೀಯಸಂಘಕ್ಕೆ ಸೇರಿದ್ದಂತೆ ತಿಳಿಯುವ ಅಪಭ್ರಂಶ ಕವಿ ಸ್ವಯಂಭುವಿಗೆ ಕರ್ನಾಟಕದೊಡನೆ ಸಂಬಂಧವಿತ್ತೆಂದು ತೋರುವುದು. ಆತನ ಬಂಧುಗಳ ಹೆಸರು ಇದನ್ನು ಎತ್ತಿ ತೋರಿಸುವಂತಿದೆ. ಸಿರಿಭೂವಲಯದ ಕರ್ತೃ ಕುಮುದೇಂದು (9ನೆಯ ಶತಮಾನ) ಕನ್ನಡನಾಡಿನ ಯಲವಳ್ಳಿಯೆಂಬ ಗ್ರಾಮದವನೆಂದು ಹೇಳಲಾಗಿದೆ. ಪ್ರಾಕೃತ ವೈಯಾಕರಣನಾದ ತ್ರಿವಿಕ್ರಮ (ಸು.1236) ಕೂಡ ಕನ್ನಡ ನಾಡಿನವನು. ಈತನ ವ್ಯಾಕರಣವಾದರೋ ದಾಕ್ಷಿಣಾತ್ಯ ಸಂಪ್ರದಾಯದ ಪ್ರಾಕೃತ ವ್ಯಾಕರಣಗಳಲ್ಲಿ ಆದ್ಯಕೃತಿ, ವರರುಚಿಯ ಪ್ರಾಕೃತ ಪ್ರಕಾಶದೊಡನೆ ಇಡೀ ದಕ್ಷಿಣದಲ್ಲಿ ಪ್ರಮಾಣಭೂತವಾದ ವ್ಯಾಕರಣವಾಗಿದೆ. ಅಪಭ್ರಂಶ ಭಾಷಾಕವಿ ಪುಷ್ಪದಂತ (ಸು.10ನೆಯ ಶತಮಾನ) ಮಾನ್ಯಖೇಟದಲ್ಲಿ ನಿಂತು ತನ್ನ ಮಹಾಪುರಾಣವನ್ನು ಬರೆದ. ಇದರಲ್ಲಿ ಹಲವು ಕನ್ನಡ ಶಬ್ದಗಳು ಬಳಕೆಯಾಗಿವೆಯೆಂದು ತಿಳಿಯುತ್ತದೆ.

ದಿಗಂಬರ ಜೈನಸಂಪ್ರದಾಯದ ಆಚಾರ್ಯರಾಗಿ ಪ್ರಸಿದ್ಧರಾಗಿರುವ ರಾಷ್ಟ್ರಕೂಟ ಚಕ್ರವರ್ತಿಗಳ ಆಳಿಕೆಯ ಕಾಲದಲ್ಲಿದ್ದ ವೀರಸೇನ, ಜಿನಸೇನ ಮತ್ತು ಗುಣಭದ್ರರೆಂಬ ಆಚಾರ್ಯರು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಕವಿಗಳೂ ವಿದ್ವಾಂಸರೂ ಆಗಿದ್ದವರು. ಸೇನಗಣದ ವೀರಸೇನ, ಜಿನಸೇನಾಚಾರ್ಯರು (9ನೆಯ ಶತಮಾನ) ದಿಗಂಬರರ ಮಹತ್ತ್ವಪೂರ್ಣ ಗ್ರಂಥವಾದ ಷಟ್ಖಂಡಾಗಮಕ್ಕೆ ಧವಲಾ (1816), ಜಯಧವಲಾ (837) ಮತ್ತು ಮಹಾಧವಲಾ ಎಂಬ ಪ್ರಖ್ಯಾತವಾದ ಟೀಕೆಗಳನ್ನು ಬರೆದಿದ್ದಾರೆ. ಇದರ ಸ್ವಲ್ಪಭಾಗ ಸಂಸ್ಕೃತದಲ್ಲಿಯೂ ಸ್ವಲ್ಪಭಾಗ ಪ್ರಾಕೃತದಲ್ಲಿಯೂ ರಚಿತವಾಗಿದೆ. ಈ ಟೀಕೆಗಳ ಅಭ್ಯಾಸದ ಮೂಲಕ ಕರ್ನಾಟಕ ದೇಶದ ಜೈನಯತಿಗಳಲ್ಲಿ ಪ್ರಾಕೃತ ಭಾಷೆ ರೂಢಿಯಲ್ಲಿತ್ತೆನ್ನಬಹುದು. ಎಷ್ಟೋ ಹಿಂದಿನಿಂದ ಜೈನಸೂತ್ರ ಗ್ರಂಥಗಳ ರಕ್ಷಣೆ ಮತ್ತು ಸಿದ್ಧಾಂತಗ್ರಂಥಗಳಿಗೆ ವ್ಯಾಖ್ಯಾನ ರಚನೆ ಕನ್ನಡನಾಡಿನಲ್ಲಿ ನಡೆದುಕೊಂಡು ಬಂದಿತ್ತೆನ್ನುವುದಕ್ಕೆ ಈ ಮಹಾಗ್ರಂಥಗಳೇ ಸಾಕ್ಷಿ. 12ನೆಯ ಶತಕದಷ್ಟು ಹಿಂದಿನದಾಗಿ ಹಳಗನ್ನಡ ಲಿಪಿಯಲ್ಲಿ ತಾಳೆಯೋಲೆಯ ಮೇಲೆ ಮಸಿಯಿಂದ ಬರೆಯಲ್ಪಟ್ಟಿರುವ ಈ ವ್ಯಾಖ್ಯಾನ ಗ್ರಂಥಗಳ ಹಸ್ತಪ್ರತಿಗಳು ಅನ್ಯತ್ರ ಅನುಪಲಬ್ಧವಾಗಿದ್ದಾಗ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಸಿದ್ಧಾಂತಬಸದಿಯಲ್ಲಿ ಮಾತ್ರವೇ ಸುರಕ್ಷಿತವಾಗಿ ನಿಕ್ಷಿಪ್ತವಾಗಿದ್ದುವು. ದಕ್ಷಿಣದಲ್ಲಿಯ ಜೈನಗ್ರಂಥಕಾರರು ಪ್ರಾಕೃತ ಭಾಷೆಯನ್ನು ಮುಖ್ಯವಾಗಿ ಧಾರ್ಮಿಕ ಗ್ರಂಥಗಳಲ್ಲಿಯೇ ಬಳಸಿದ್ದಾರೆ. ಭಾರತೀಯ ಜೈನ ಸಾಹಿತ್ಯಕ್ಕೆ ಈ ಕಾಲದಲ್ಲಿ ನಡೆದ ಕರ್ನಾಟಕದ ಸೇವೆ ಅಮೂಲ್ಯವಾದುದೆಂದು ಹೇಳಬಹುದಾಗಿದೆ.

ಒಂದನೆಯ ಚಾವುಂಡರಾಯನ ಗುರು ದೇಶಿಯಗಣದ ನೇಮಿಚಂದ್ರಯತಿ (10ನೆಯ ಶತಮಾನ) ಗೊಮ್ಮಟಸಾರ, ತ್ರಿಲೋಕಸಾರ ಮುಂತಾದ ಕೆಲವು ಪ್ರಾಕೃತ ಗ್ರಂಥಗಳನ್ನು ರಚಿಸಿ ಪ್ರಖ್ಯಾತನಾಗಿದ್ದಾನೆ. ಪ್ರಾಕೃತ ಸಾಹಿತ್ಯದಲ್ಲಿ ಈತನ ಗ್ರಂಥಗಳಿಗೆ ಮಹತ್ತ್ವದ ಸ್ಥಾನವಿದೆ. ಗೊಮ್ಮಟಸಾರದಲ್ಲಿಯ ಕರ್ಮಕಾಂಡದ ಕೆಲವು ಗಾದೆಗಳು ಚಾವುಂಡರಾಯನ ಚರಿತ್ರೆಯ ವಿಚಾರವಾಗಿ ಕೆಲವು ಉಪಯುಕ್ತ ಸಂಗತಿಗಳನ್ನು ತಿಳಿಸುತ್ತವೆ. ಚಾವುಂಡರಾಯನ ಪ್ರತಿಬೋಧನಾರ್ಥವಾಗಿ ರಚಿತವಾದಂತೆ ತಿಳಿಯುವ ಗೊಮ್ಮಟಸಾರಕ್ಕೆ ಚಾವುಂಡರಾಯ ಮತ್ತು ಕೇಶವವರ್ಣಿಗಳು ಕನ್ನಡದಲ್ಲಿ ಟೀಕೆಗಳನ್ನು ಬರೆದಿದ್ದಾರೆ. ಉಪಲಬ್ಧ ಟೀಕೆಗಳಲ್ಲಿ ಕೇಶವವರ್ಣಿಯದೇ ಪ್ರಾಚೀನವಾದುದು. ಈ ಕನ್ನಡ ಟೀಕೆಯನ್ನು ಸಾಳುವ ಮಲ್ಲಿರಾಯನ (16ನೆಯ ಶತಮಾನ) ಸಮಕಾಲೀನನಾದ ನೇಮಿಚಂದ್ರನೆಂಬೊಬ್ಬ ಕವಿ ಸಂಸ್ಕೃತಕ್ಕೆ ಪರಿವರ್ತಿಸಿದ್ದಾನೆ. ಚಾವುಂಡರಾಯನ ಗುರು ನೇಮಿಚಂದ್ರಯತಿಗೂ ದೇವಸೇನನೆಂಬೊಬ್ಬ ಪ್ರಾಕೃತ ಕವಿಗೂ ಮಾತೃಭಾಷೆ ಕನ್ನಡವಾಗಿದ್ದಿತೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಕನ್ನಡನಾಡಿನವರಾಗಿ ಕನ್ನಡದಲ್ಲಿ ಕೃತಿರಚನೆ ಮಾಡಿದವರಾಗಿ ತಿಳಿದುಬಂದಿರುವ ತುಂಬಲೂರಾಚಾರ್ಯ ಮತ್ತು ಶ್ಯಾಮಕುಂದಾಚಾರ್ಯ (ಸು.650) ಇವರು ಪ್ರಾಕೃತದಲ್ಲಿ ಸಿದ್ಧಾಂತ ಗ್ರಂಥಗಳನ್ನು ಬರೆದಿದ್ದರೆಂದು ಕೂಡ ತಿಳಿಯುತ್ತದೆ. ಉಭಯಭಾಷಾಕವಿ ಅಸಗನನ್ನು (ಸು.853) ಧವಲನೆಂಬ ಅಪಭ್ರಂಶ ಕವಿಯೊಬ್ಬ ತನ್ನ ಹರಿವಂಶಪುರಾಣದಲ್ಲಿ ಸ್ತುತಿಸಿರುವುದರಿಂದ ಅಸಗ ಪ್ರಾಕೃತಕವಿಗಳಿಂದಲೂ ಗಣ್ಯನಾಗಿದ್ದನೆಂಬ ವಿಷಯ ವಿಶದವಾಗುತ್ತದೆ. ಆತನ ಕೆಲವು ಕೃತಿಗಳು ಪ್ರಾಕೃತಕವಿಗಳಿಗೆ ಆಕರಗಳಾಗಿಯೋ ಮಾದರಿಗಳಾಗಿಯೋ ಇದ್ದಿರಬಹುದು.

ಅಂತೂ 10ನೆಯ ಶತಮಾನದವರೆಗಾದರೂ ಕನ್ನಡನಾಡು ಪ್ರಾಕೃತ ಸಾಹಿತ್ಯಕ್ಕೆ ಮಹತ್ತ್ವಪೂರ್ಣವಾದ ಕಾಣಿಕೆಯನ್ನು ಸಲ್ಲಿಸಿದೆಯೆಂಬುದು ಮೇಲಿನ ಕೆಲವಂಶಗಳಿಂದ ಸ್ಪಷ್ಟವಾಗುತ್ತದೆ.

ಇಂಥ ಹಿನ್ನೆಲೆಯಲ್ಲಿ ಕನ್ನಡನಾಡಿನಲ್ಲಿ ಪ್ರಾಕೃತಭಾಷೆ ಸಾಹಿತ್ಯಗಳಿಗೆ ದೊರೆತ ಸ್ಥಾನಮಾನಗಳಿಂದ ಕನ್ನಡಿಗರಾದ ಪ್ರಾಕೃತ ಕವಿಗಳ ಪರಿಶ್ರಮದಿಂದ ಪ್ರಾಕೃತ ಭಾಷೆಯ ಮರ್ಯಾದೆಗನುಸಾರವಾಗಿ ಕನ್ನಡ ಶಬ್ದಗಳು ಪ್ರಾಕೃತ ಭಾಷಾ ಸಾಹಿತ್ಯಗಳೊಳಗೆ ಕೆಲಮಟ್ಟಿಗೆ ಸೇರುವಂತಾಯಿತು. ಕೋಶಕಾರರು ಅವನ್ನು ದೇಶೀ ಶಬ್ದಗಳೆಂದು ನಿರ್ದೇಶಿಸಿದ್ದಾರೆ. ಹಾಲನ ಗಾಥಾಸಪ್ತಶತಿಯಲ್ಲಿ ಕಂಡುಬರುವ ಅತ್ತಾ, ತುಪ್ಪ, ಪೊಟ್ಟ, ಫಲಹಿ, ತೀರಇ ಎಂಬ ಪ್ರಾಕೃತ ಶಬ್ದಗಳು, ಅತ್ತೆ, ತುಪ್ಪ, ಪೊಟ್ಟೆ, ಪತ್ತೆ, ತೀರ ಎಂಬ ಕನ್ನಡ ಶಬ್ದಗಳ ಪ್ರತಿರೂಪಗಳೆಂದು ವಿದ್ವಾಂಸರು ಕಂಡುಹಿಡಿದಿದ್ದಾರೆ. ಹೇಮಚಂದ್ರನ ದೇಶೀನಾಮಮಾಲೆ ಮುಂತಾದ ಕೋಶಗಳಲ್ಲಿ ಕಂಡುಬರುವ ಕೆಲವು ಕನ್ನಡ ಶಬ್ದಗಳನ್ನೂ ಹೀಗೆಯೇ ಗುರುತಿಸಲಾಗಿದೆ. ಒಂದು ಪಟ್ಟಿಯ ಪ್ರಕಾರ ಪ್ರಾಕೃತ ದೇಶೀಕೋಶಗಳಲ್ಲಿಯ ಅಕ್ಕಾ, ಉಡೂ, ಉಮ್ಮಲ್ಲೋ, ಉಲ್ಲೀ, ಊಲೋ, ಎತ್ತೊಪ್ಪಂ–ಇಲ್ತೊಪ್ಪಂ, ಒಕ್ಕಿಅ, ಒಪ್ಪಾ, ಕಲೀಂ, ಕುಂಡಿಓ–ಕೊಂಡಿಓ, ಕುರುಡ, ಕೋಲೋ–ಕುಲ್ಲ, ಖಡ್ಡಂ, ಚಿಕ್ಕ, ಣೀಸರೋ ತುಪ್ಪೋ, ಪಾಮೋ, ಪಾಲೊ, ಪುಲ್ಲೀ, ಪೊಚ್ಚಂ, ಮರುಲೋ, ಸೂಲಾ – ಈ ಶಬ್ದಗಳು ಕ್ರಮವಾಗಿ ಪ್ರಾಯಃ ಅಕ್ಕ, ಉಡು, ಉಮ್ಮಳ, ಒಲೆ, ಉರುಳ್, ಎಂತಪ್ಪ ಇಂತಪ್ಪ, ಒಕ್ಕು, ಒಪ್ಪ, ಕಲಿ, ಗಾವುಂಡ – ಗೌಡ, ಕುರುಡ, ಕೊರಲ್, ಗಡ್ಡ, ಚಿಕ್ಕ, ನೇಸರ್, ತುಪ್ಪ, ಪಾವು, ಪಾವ್, ಪುಲಿ, ಪೊಚ್ಚ, ಮರುಳ್, ಸೂಳೆ –ಈ ಕನ್ನಡ ಶಬ್ದಗಳ ಪ್ರಾಕೃತ ರೂಪಗಳೆಂದು ತಿಳಿಯುತ್ತದೆ. ಇನ್ನೊಂದು ಪಟ್ಟಿಯ ಪ್ರಕಾರ (ಹೇಮಚಂದ್ರನ ದೇಶೀನಾಮಮಾಲೆ) ಕಂಡುಬರುವ ಆಲಂಬಂ (ನಾಯಿಕೊಡೆ), ಇಗ್ಗೋ, ಉಂಡಲಂ, (ಗಂಭೀರಮ್, ಉಬ್ಬುಕ್ಕುಂ, ಸಂಕಟಮ್), ಕಾಹಲ್ಲೀ, ಕುಣಾ (ವೃತ್ತಿ ವಿವರಮ್ ಗುಳಿ), ತುಂಬಿಲ್ಲೀ ಈ ಶಬ್ದಗಳು ಕ್ರಮವಾಗಿ ಪ್ರಾಯಃ ಅಣಂಬೆ, ಎಗ್ಗ, ಹೊಂಡ, ಉಬ್ಬಸ, ಕಾವಲಿ, ಕುಣಿ ಕುಟೆ, ತುಂಬಿಯ ಇಲ್ ಈ ಕನ್ನಡ ಶಬ್ದಗಳ ಪ್ರಾಕೃತ ರೂಪಗಳೆಂದು ಭಾವಿಸಲಾಗಿದೆ. ಹೀಗೆಯೇ ಓಲಗ, ಕಾವರ, ಪೋಟ (ಪೊಟ್ಟೆ) ಶಬ್ದಗಳು ಪ್ರಾಕೃತ ದೇಶೀಕೋಶಗಳಲ್ಲಿ ಸೇರಿಕೊಂಡಿರುವ ಶಬ್ದಗಳು ಕೆಲಮೊಮ್ಮೆ ನೇರವಾಗಿ ಕನ್ನಡದಿಂದ ಹೋಗಿದ್ದಿರಬಹುದು. ಇಲ್ಲವೆ ಯಾವ ದ್ರಾವಿಡ ಭಾಷಾಮೂಲದಿಂದಾದರೂ ಹೋಗಿರಬಹುದು. ಎಷ್ಟೋ ಶಬ್ದಗಳು ಬೇರೆ ಬೇರೆ ದ್ರಾವಿಡ ಭಾಷಾ ಮೂಲಗಳಿಂದ ಪ್ರಾಕೃತಕ್ಕೆ ಹೋಗಿರಬಹುದಾದರೂ ಕನ್ನಡದಿಂದಲೇ ನೇರವಾಗಿ ಹೋಗಿರುವ ಸಾಧ್ಯತೆಯಂತೂ ಇದ್ದೇ ಇದೆ. (ಟಿ.ವಿ.ವಿ.)

ಕನ್ನಡದ ಬಗ್ಗೆ ಹೇಳುವುದಾದರೆ ದಕ್ಷಿಣಕ್ಕೆ ಬಂದ ಪ್ರಾಕೃತ ಮಾತನಾಡುವವರಾಗಿದ್ದ ಜೈನಮುನಿಗಳ ಸಂಪರ್ಕ ಕನ್ನಡಿಗರೊಡನೆ ಆದ ಕೂಡಲೇ ಭಾಷಿಕ ಕೊಡುಕೊಳ್ಳುವ ವ್ಯವಹಾರ ನಡೆದಿರಬೇಕು. ಹೊಸ ನಾಡಿಗೆ ಬಂದ ಜೈನಯತಿಗಳಿಗೆ ತಮ್ಮ ಧರ್ಮವನ್ನು ಕರ್ನಾಟಕದ ಜನತೆಗೆ ಬೋಧಿಸುವ ಪ್ರಸಂಗ ಬಂದಾಗ ಅವರು ಕನ್ನಡವನ್ನು ಕಲಿತು, ಅದರಲ್ಲಿ ಪ್ರಾಕೃತ ಶಬ್ದಗಳನ್ನು ಬೆರೆಸಿ ಮಾತನಾಡಲೂ ಆರಂಭಿಸಿರಬೇಕು. ಕಾಲಾಂತರದಲ್ಲಿ ಇವರಲ್ಲಿ ಕೆಲವರು ಕನ್ನಡಭಾಷೆಯ ಮೇಲೆ ಪ್ರಭುತ್ವವನ್ನು ಪಡೆದು, ಕನ್ನಡದಲ್ಲಿ ಧಾರ್ಮಿಕ ಗ್ರಂಥಗಳನ್ನು ಬರೆಯುವ ಪ್ರಯತ್ನ ಮಾಡಿರಬಹುದು. ಕನ್ನಡದ ಆರಂಭದ ಕಾವ್ಯಗಳು ಈ ಮಾತಿಗೆ ನಿದರ್ಶನ. ಕನ್ನಡ ಭಾಷೆಯಲ್ಲಿ ಪ್ರಚಲಿತವಾದ ಮತ್ತು ಹೊಸದೆಂದೆನಿಸುವ ಆಂಡಯ್ಯನ ಭಾಷಾ ಪ್ರವೃತ್ತಿಯ ಮೂಲಕ ಪ್ರಾಕೃತ ಭಾಷೆಗಳ ಒಲವಿನಿಂದಾದುದೆನ್ನಬಹುದು. ಕನ್ನಡ ವ್ಯಾಕರಣಕಾರರ ಮೇಲೆ ಪ್ರಾಕೃತ ವ್ಯಾಕರಣಗಳ ಪ್ರಭಾವ ಆಗಿತ್ತೆಂಬುದು ಕೇಶಿರಾಜ, ಭಟ್ಟಾಕಳಂಕರ ಕೃತಿಗಳಿಂದ ಸ್ಪಷ್ಟವಾಗುತ್ತದೆ. ಪ್ರಾಕೃತ ವ್ಯಾಕರಣವನ್ನು ಓದಿದವರಿಗೆ, ಕನ್ನಡ ವ್ಯಾಕರಣಗಳ ತದ್ಭವ ಪ್ರಕರಣಗಳನ್ನೂ ಕೃತ್ಪ್ರತ್ಯಯ ಮತ್ತು ತದ್ಧಿತಪ್ರತ್ಯಯಗಳನ್ನು ಓದುವಾಗ ಪ್ರಾಕೃತ ಭಾಷೆ ಕನ್ನಡಕ್ಕೆ ಎಷ್ಟು ಕಾಣಿಕೆಯಿತ್ತಿದೆಯೆಂಬ ಸಂಗತಿ ತಿಳಿಯುತ್ತದೆ. ವಡ್ಡಾರಾಧನೆ ಮತ್ತು ಕನ್ನಡದ ಇತರ ಹಲವಾರು ಜೈನಗ್ರಂಥಗಳಿಗೆ ಪ್ರಾಕೃತ ಕೃತಿಗಳು ಆಕರವಾಗಿರಬಹುದು. ಪ್ರಾಕೃತ ಛಂದಸ್ಸಿನ ಕೆಲವು ಪ್ರಕಾರಗಳ ಉಪಯೋಗ ಕನ್ನಡದಲ್ಲಿ ತೋರುತ್ತದೆ. ಕನ್ನಡದ ಮಾತ್ರಾವೃತ್ತಗಳು ಸಂಸ್ಕೃತ ಪ್ರಾಕೃತದಿಂದ ಹುಟ್ಟಿದವುಗಳು. ಸಂಸ್ಕೃತದ ಆರ್ಯಾಗೀತೆ, ಪ್ರಾಕೃತದಲ್ಲಿ ಸ್ಕಂದವಾಗಿ ಕನ್ನಡದಲ್ಲಿ ಕಂದವಾಯಿತು. ಪ್ರಾಕೃತದ ರಘಟಾ ಕನ್ನಡದ ರಗಳೆಯಾಯಿತು.

ಹಿಂದೆ ಪ್ರಾಕೃತ ಆಡಳಿತ ಭಾಷೆಯಾಗಿ ಪ್ರಚಲಿತವಾಗಿದ್ದ ಕಾಲದಿಂದಲೂ ಪ್ರಾಕೃತ ಶಬ್ದಗಳು ಕನ್ನಡಕ್ಕೆ ಸೇರ್ಪಡೆಯಾಗಿರಬೇಕು. ಕನ್ನಡದ ಪ್ರಾಚೀನ ಕಾವ್ಯಗಳನ್ನು ರಚಿಸಿದ ಪ್ರಾಕೃತ ಬಲ್ಲವರಾಗಿದ್ದ ಜೈನಕವಿಗಳ ಪರಿಶ್ರಮದಿಂದ ಹಾಗೂ ಆ ಕಾಲದಲ್ಲಿದ್ದ ಜೈನರ ಪ್ರಭಾವದಿಂದ ಪ್ರಾಕೃತ ಶಬ್ದಗಳ ಬಳಕೆ ಕನ್ನಡದಲ್ಲಿ ವಿಶೇಷವಾಗಿ ನಡೆದಿರಬೇಕು. ಹಲವು ಶಬ್ದಗಳು ಪ್ರಾಕೃತದಲ್ಲಿದ್ದಂತೆಯೇ ಕನ್ನಡಕ್ಕೆ ಬಂದಿವೆ. ಈ ಶಬ್ದಗಳು ಪ್ರಾಕೃತದಿಂದ ನೇರವಾಗಿ ಕನ್ನಡಕ್ಕೆ ಸೇರಿದುವೆಂಬ ಮಾತು ಸ್ಪಷ್ಟವಾಗುತ್ತದೆ. ಉದಾ: ಅಜ್ಜ, ಅಯ್ಯ, ಸಮಣ, ಸರಿಸ, ಇಂಗಾಲ, ಕಸಾಯ, ನೇಹ, ರನ್ನ, ಜನ್ನ ಇತ್ಯಾದಿ. ಕನ್ನಡದಲ್ಲಿರುವ ತದ್ಭವ ಪದಗಳು ಸಂಸ್ಕೃತದಿಂದ ಬಂದವೆಂಬ ಕಲ್ಪನೆ ಇದೆಯಾದರೂ ಅವುಗಳಲ್ಲಿ ಸಾಕಷ್ಟು ಮಟ್ಟಿನ ಪದಗಳು ಪ್ರಾಕೃತ ಮೂಲದಿಂದಲೇ ರೂಪಾಂತರ ಹೊಂದಿ ಬಂದಿರಬಹುದೆಂದು ಅನೇಕ ವಿದ್ವಾಂಸರ ಊಹೆ. ಇದಲ್ಲದೆ ಆರಂಭ, ಪರಿಸಹ, ಪರಿಗ್ರಹ, ನಿಕ್ಖಮಣ, ಭಿಕ್ಖು, ಆಚಾರ್ಯ, ಚಕ್ರವರ್ತಿ, ತೀರ್ಥಂಕರ, ತಿತ್ಥ ಇತ್ಯಾದಿ ಅನೇಕ ಜೈನ ಪಾರಿಭಾಷಿಕ ಶಬ್ದಗಳನ್ನೂ ಕನ್ನಡದ ಜೈನಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆ.

ಪ್ರಾಕೃತ ವ್ಯಾಕರಣದೊಳಗಿನ ಧ್ವನಿಪರಿವರ್ತನೆಗೆ ಸಂಬಂಧಿಸಿದ ಕೆಲವು ನಿಯಮಗಳು ಕನ್ನಡ ವ್ಯಾಕರಣಗಳಲ್ಲಿ ಅಚ್ಚಳಿಯದೆ ಬಂದಿವೆ. ಈ ನಿಯಮಗಳು ಸ್ವರ, ವ್ಯಂಜನ, ಸಂಯುಕ್ತವ್ಯಂಜನ ಮುಂತಾದುವುಗಳಿಗೆ ಅನ್ವಯಿಸುತ್ತವೆ. ಸಂಸ್ಕೃತದ ಋ ಸ್ವರ ಪ್ರಾಕೃತದಲ್ಲಿ ಅ,ಇ,ಉಮತ್ತುರಿ ರೇಫಕ್ಕೆ ಬದಲಾಗುವಂತೆ ಕನ್ನಡದಲ್ಲಿಯೂ ಬದಲಾಗುವುದು. ಉದಾ: ತೃಣ > ತಿಣ, ಋಣ > ರಿಣ, ವೃಷಭ > ಬಸವ ಇತ್ಯಾದಿ. ಶಬ್ದದ ಆದಿ ಮತ್ತು ಅಂತ್ಯದ ಅ ಕಾರ ಅನುಕ್ರಮವಾಗಿ ಇ ಮತ್ತು ಎ ಅಥವಾ ಉ ಕಾರವಾಗುತ್ತದೆ. ಉದಾ: ಜೀರಕ > ಜೀರಿಗೆ, ಅಂಗಾರ > ಇಂಗಳ, ದಂಡ > ದಂಡು, ಐ ಮತ್ತು ಔ ಸಂಧ್ಯಕ್ಷರಗಳು ಎ ಮತ್ತು ಒ ಆಗುತ್ತವೆ. ಒಮ್ಮೊಮ್ಮೆ ಅ ಇ ಮತ್ತು ಅ ಉ ಆಗುವುದುಂಟು. ಉದಾ: ಸೈಂಧವ > ಸೆಂಧವ, ವೈದ್ಯ > ಬೆಜ್ಜ, ಕೌಂಗು > ಕವುಂಗು ಅಥವಾ ಕೊಂಗು, ಶ ಮತ್ತು ಷ ಗಳು ಸ ಕಾರವಾಗುತ್ತವೆ. ಶಶಿ > ಸಸಿ, ಶಂಕರ > ಸಂಕರ, ವಿಷಯ > ವಿಸಯ. ಆದಿ ಯಕಾರ ಜ ಕಾರವಾಗುತ್ತದೆ. ಉದಾ: ಯಮ > ಜಮ, ಯಜ್ಞ > ಜನ್ನ, ಯತ್ನ > ಜತನ ಇತ್ಯಾದಿ ಅನೇಕ ಉದಾಹರಣೆಗಳನ್ನು ಕೊಡಬಹುದು. ಸಮರೂಪಕರಣದ ಮುಖಾಂತರ ವಿಜಾತಿ ವ್ಯಂಜನಗಳಿಂದ ಉಂಟಾದ ಸಂಯುಕ್ತವ್ಯಂಜನಗಳು ಸಜಾತಿಯ ಸಂಯುಕ್ತ ವ್ಯಂಜನಗಳಾಗುವುದನ್ನು ಕನ್ನಡದಲ್ಲಿಯೂ ಕಾಣಬಹುದು. ಉದಾ: ಕರ್ತೆ > ಕತ್ತೆ, ತರ್ಪು > ತಪ್ಪು, ರತ್ನ > ರನ್ನ ಇತ್ಯಾದಿ. ಕನ್ನಡದಲ್ಲಿ ಕಂಡುಬರುವ ಅನೇಕ ಪ್ರತ್ಯಯಗಳಲ್ಲಿ ಬಹಳಷ್ಟು ಪ್ರಾಕೃತದ ಪ್ರತ್ಯಯಗಳಾಗಿವೆ. ಉದಾ: – ತ, – ಗ, – ಇತ, – ಇಗ, – ತ್ತಾರ, – ತಾರ ಇತ್ಯಾದಿ. ಇವಲ್ಲದೆ ವಿಭಕ್ತಿಪ್ರತ್ಯಯಗಳಲ್ಲಿ – ಉ, – ಕ್ಕೆ, – ಗೆ, – ಎ ಇವು ಪ್ರಾಕೃತದಿಂದ ಕನ್ನಡಕ್ಕೆ ಬಂದಂತೆ ತೋರುತ್ತದೆ. (ಪಿ.ಬಿ.ಬಿ.)

**ಸಂಸ್ಕೃತ:** ಭಾರತದ ಪ್ರಾಚೀನ ಭಾಷೆಗಳಲ್ಲೊಂದಾದ ಸಂಸ್ಕೃತ ಕರ್ನಾಟಕದಲ್ಲಿ ಬಹು ಹಿಂದಿನಿಂದಲೂ ಪ್ರಚಾರದಲ್ಲಿದ್ದು ದೀರ್ಘವಾದ ಇತಿಹಾಸವನ್ನು ಹೊಂದಿದೆ. ಪ್ರತಿಷ್ಠಾನ ನಗರದಲ್ಲಿದ್ದ ಸಾತವಾಹನ ದೊರೆಗೆ ಸಂಬಂಧಿಸಿದ 'ಮೋದಕಂ ತಾಡಯ'ದ ಕಥೆ ಬಹುಶಃ ದಕ್ಷಿಣ ಭಾರತದಲ್ಲಿ ಸಂಸ್ಕೃತದ ಹರಡುವಿಕೆಯ ಪ್ರಾರಂಭವನ್ನು ಸೂಚಿಸುತ್ತದೆ. ಕರ್ನಾಟಕದ ಪ್ರಾಚೀನತಮ ಸಂಸ್ಕೃತ ಶಾಸನವೆಂದರೆ ಕುಬ್ಜ (ನೋಡಿ) ಬರೆದ ತಾಳಗುಂದ ಶಾಸನ (ಸು.450). ಇದರಲ್ಲಿರುವ ರಚನಾ ಪಾಂಡಿತ್ಯ ಆ ಕಾಲಕ್ಕಾಗಲೇ ಸಂಸ್ಕೃತ ಈ ನಾಡಿನಲ್ಲಿ ಚೆನ್ನಾಗಿ ಬೇರೂರಿರಬೇಕೆಂಬುದನ್ನು ತಿಳಿಸುವುದಲ್ಲದೆ, ಅದೇ ಕಾಲದ ಹಲ್ಮಿಡಿ ಶಾಸನದಿಂದ ಸಂಸ್ಕೃತ ಭಾಷೆ ಕನ್ನಡ ರಚನೆಗಳ ಮೇಲೂ ಪ್ರಭಾವ ಬೀರುವ ಸ್ಥಿತಿಯಲ್ಲಿದ್ದಿತೆಂಬುದನ್ನು ತೋರಿಸುತ್ತದೆ. ಇಲ್ಲಿಂದ ಮುಂದೆ ಸಂಸ್ಕೃತ ಶಿಷ್ಟಭಾಷೆಯಾಗಿ

ಬೆಳೆದು ಉನ್ನತ ಸ್ಥಾನವನ್ನು ಗಳಿಸಿ ತತ್ಕಾಲದ ಉನ್ನತ ವರ್ಗಗಳಿಂದ ಪ್ರೋತ್ಸಾಹ ಗಳಿಸಿತು. ನೂರಾರು ಸಂಸ್ಕೃತ ಶಾಸನಗಳು ಕನ್ನಡದಲ್ಲಿ ರಚಿತವಾದವು. ಅನೇಕ ಕವಿಗಳು, ಶಾಸ್ತ್ರಕಾರರು ಈ ನಾಡಿನಲ್ಲಿ ಆಗಿಹೋದರು. ನೂರಾರು ಸಂಸ್ಕೃತ ಗ್ರಂಥಗಳ ರಚನೆಯಾಯಿತು. ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ ಗಣ್ಯವಾದುದು. ಹಾಗೆಯೇ ಸಂಸ್ಕೃತದ ಶ್ರುತಿ ಸ್ಮೃತಿ ಪುರಾಣ ಇತಿಹಾಸಗಳು ಕರ್ನಾಟಕದಲ್ಲಿ ಹರಡಿ ಅವು ಹಾಗೂ ಇತರ ಸಂಸ್ಕೃತ ಕೃತಿಗಳು ಕನ್ನಡ ದೇಶದ ಸಂಸ್ಕೃತಿ ಹಾಗೂ ನುಡಿಯ ಮೇಲೆ ಅಗಾಧ ಪ್ರಭಾವವನ್ನು ಬೀರುತ್ತ ಬಂದಿವೆ.

ಕರ್ನಾಟಕದ ಭಾಗಗಳನ್ನು ಆಳುತ್ತಿದ್ದ ಸಾತವಾಹನರ ಆಸ್ಥಾನಭಾಷೆ ಪ್ರಾಕೃತವಾಗಿದ್ದರೂ ಅವರು ಸಂಸ್ಕೃತ ಭಾಷೆಯನ್ನು ಕೂಡ ಪ್ರೋತ್ಸಾಹಿಸುತ್ತಿದ್ದಿರಬಹುದು. ಇವರ ಕಾಲದಲ್ಲೇ ರಾಮಾಯಣ ಮಹಾಭಾರತಗಳಷ್ಟು ಕವಿಜನಪ್ರಿಯವಾದ ಬೃಹತ್ಕಥೆ ಪೈಶಾಚೀ ಪ್ರಾಕೃತದಲ್ಲಿ ಗುಣಾಢ್ಯನೆಂಬಾತನಿಂದ ರಚಿತವಾದಂತೆ, ಮಹಾರಾಷ್ಟ್ರೀ ಪ್ರಾಕೃತದಲ್ಲಿ ಏಳುನೂರು ಮುಕ್ತಕಗಳ ಸಂಗ್ರಹವಾದ ಸತ್ತಸ ರಾಜನಾದ ಹಾಲನಿಂದಲೇ ಸಂಗೃಹಿತವಾದಂತೆ, ಅವನ ಆಸ್ಥಾನಪಂಡಿತ ನಾದ ಶರ್ವವರ್ಮನಿಂದ ಕಾತಂತ್ರವೆಂಬ ನೂತನ ಸಂಸ್ಕೃತ ವ್ಯಾಕರಣವೂ ನಿರ್ಮಿತವಾಯಿತು. ಮುಂದೆ ಬೃಹತ್ಕಥೆ ಸಂಸ್ಕೃತಕ್ಕೂ ಮೂರುನಾಲ್ಕು ರೂಪಾಂತರಗಳನ್ನು ಉತ್ತರದ ಕವಿಗಳಿಂದ ಪಡೆದುದನ್ನು ನೋಡುತ್ತೇವೆ. ಆದರೆ ಮೂಲ ಬೃಹತ್ಕಥೆ ದಕ್ಷಿಣದ್ದೇ; ಇದರ ಒಂದು ಅಂಶದ ರೂಪಾಂತರವೇ ಸುಪ್ರಸಿದ್ಧವಾದ ಪಂಚತಂತ್ರ ಕೂಡ. ಈ ಪಂಚತಂತ್ರದ ಒಂದು ಆವೃತ್ತಿಯ ಪ್ರವರ್ತಕ ಕೂಡ ಕರ್ನಾಟಕದ ವಸುಭಾಗಭಟ್ಟ (ಈ ಕೃತಿ ಬೃಹತ್ತರ ಭಾರತದ ಲೇಯಾಸ್ ಹಾಗೂ ಜಾವ ದ್ವೀಪದ ಭಾಷೆಗಳಲ್ಲಿಯೂ ಭಾಷಾಂತರಗೊಂಡಿದೆ).

ಭಾಸನ (ಸು.2ನೆಯ ಶತಮಾನ) ದ್ವಿತೀಯಾಕ್ಷರ ಪ್ರಾಸಗಳನ್ನು ಅನುಲಕ್ಷಿಸಿ ಆತ ಕನ್ನಡಿಗನಿದ್ದಿರಬೇಕೆಂದು ಯು.ವೆಂಕಟಕೃಷ್ಣರಾವ್ ಊಹಿಸಿದ್ದಾರೆ (ಈ ಊಹೆಗೆ ಹೆಚ್ಚಿನ ಸಮರ್ಥನೆ ಬೇಕಾಗಿದೆ).

ಪೂಜ್ಯಪಾದ (ಅಥವಾ ದೇವನಂದಿ 5 ಅಥವಾ 6ನೆಯ ಶತಮಾನ) ಪಾಣಿನಿಯ ಸೂತ್ರಗಳಿಗೆ ಶಬ್ದಾವತಾರವೆಂಬ ವ್ಯಾಖ್ಯಾನ ರಚಿಸಿದ್ದನೆಂದು ಶಾಸನಗಳಲ್ಲಿ ಹೇಳಲಾಗಿದೆ. ಈತ ಜೈನೇಂದ್ರ ವ್ಯಾಕರಣವೆಂಬ ಹೊಸ ವ್ಯಾಕರಣ ಪಂಥವನ್ನು ನಿರ್ಮಾಣ ಮಾಡಿದ. ಇದರಲ್ಲಿ ಪ್ರಾಯೋಗಿಕ ದೃಷ್ಟಿಯಿಂದ ಪಾಣಿನಿಯ ಸೂತ್ರಗಳನ್ನು ಸಂಗ್ರಹಿಸಲಾಗಿದೆ.

ಗಂಗರಾಜನಾದ ದುರ್ವಿನೀತ (6ನೆಯ ಶತಮಾನ) ಬೃಹತ್ಕಥೆಯ ಸಂಸ್ಕೃತ ರೂಪಾಂತರಕಾರರಲ್ಲಿ ಒಬ್ಬನೆಂದು ಕೆಲವು ಶಾಸನಗಳು ಹೇಳುತ್ತವೆ. ದುರ್ವಿನೀತನ ಸಮಕಾಲೀನನೂ ಸಂಸ್ಕೃತದ ಪ್ರಸಿದ್ಧ ಮಹಾಕಾವ್ಯವಾದ ಕಿರಾತಾರ್ಜುನೀಯದ ಕರ್ತೃವೂ ಆದ ಭಾರವಿ ದುರ್ವಿನೀತನ ಆಸ್ಥಾನದಲ್ಲಿಯೂ ಕೆಲಕಾಲ ಇದ್ದನೆಂಬ ಐತಿಹ್ಯವನ್ನು ಈಚೆಗೆ ದೊರೆತ ದಂಡಿಯ ಅವಂತಿಸುಂದರೀ ಕಥಾ ಎಂಬ ಗದ್ಯಕೃತಿ ಒಳಗೊಂಡಿದೆ. ದಂಡಿ ಸಹ ಕೆಲವು ಕಾಲ ದುರ್ವಿನೀತನ ಆಸ್ಥಾನದಲ್ಲಿ ಇದ್ದಿರಬೇಕು. ನಾಟಕಕಾರರಲ್ಲಿ ಪ್ರಸಿದ್ಧನಾದ ಮೃಚ್ಛಕಟಿಕಕಾರ ಶೂದ್ರಕನು ಗಂಗರಾಜ ಶಿವಮಾರನಿರಬೇಕೆಂದು ಸಾಲೆತೊರೆ ಎಂಬ ವಿದ್ವಾಂಸರ ಊಹೆ.

ಭಾರವಿ ಮತ್ತು ಕಾಳಿದಾಸ ಮಹಾಕವಿಗಳ ಸ್ಪಷ್ಟ ಶಿಲಾಶಾಸನೋಲ್ಲೇಖ ದೊರೆಯುವುದು ಬಾದಾಮಿ ಚಳುಕ್ಯ ವಂಶದ ಇಮ್ಮಡಿ ಪುಲಕೇಶಿಯ ಕಾಲದ ಐಹೊಳೆಯ ಶಾಸನದಲ್ಲಿ (634). ಆ ಶಾಸನದ ಕರ್ತೃ ರವಿಕೀರ್ತಿ ತನ್ನನ್ನು ಆ ಇಬ್ಬರು ಮಹಾಕವಿಗಳಿಗೆ ಸಮನೆಂದು ಹೊಗಳಿಕೊಂಡಿದ್ದಾನೆ. ಈ ಪ್ರಶಸ್ತಿ ಶಾಸನ ಇಮ್ಮಡಿ ಪುಲಕೇಶಿಯ ಪರಾಕ್ರಮಾದಿಗಳನ್ನು ಕಾವ್ಯಮಯ ಶೈಲಿಯಲ್ಲಿ ವರ್ಣಿಸುತ್ತದೆ. ಇದರ ಭಾಷೆ ಸರಾಗವಾಗಿ ಹರಿಯುತ್ತದೆ. ನಾನಾ ಬಗೆಯ ವೃತ್ತಗಳಲ್ಲಿ ರಚಿತವಾದ ಇದರಲ್ಲಿ ಕಾವ್ಯದ ಹಲವು ಲಕ್ಷಣಗಳು ಕಾಣಬರುತ್ತವೆ. ಇದಕ್ಕೂ ಮುಂಚಿನ ಮಂಗಲೀಶನ ಶಾಸನದಲ್ಲಿ (ಸು.600) ಒಂದನೆಯ ಕೀರ್ತಿವರ್ಮನ ದಿಗ್ವಿಜಯವನ್ನು ವರ್ಣಿಸುವಲ್ಲಿ ಕಾಳಿದಾಸನ ರಘುವಂಶದ ರಘು ದಿಗ್ವಿಜಯವನ್ನೇ ಮಾದರಿಯಾಗಿಟ್ಟುಕೊಳ್ಳಲಾಗಿದೆ. ಇಮ್ಮಡಿ ಪುಲಕೇಶಿಯ ಸೊಸೆ, ಚಂದ್ರಾದಿತ್ಯನ ರಾಣಿ ವಿಜಯಾ ಅಥವಾ ಬಿಜ್ಜಾ ಅಥವಾ ಬಿಜ್ಜಿಕಾ (ವಿಜ್ಜಿಕೆ) ಪ್ರೌಢ ಪಾಂಡಿತ್ಯ ಪಡೆದಿದ್ದಳೆಂದು ತಿಳಿದುಬರುತ್ತದೆ. ಕೌಮುದೀ ಮಹೋತ್ಸವವೆಂಬ ನಾಟಕ ಬರೆದವಳು ಇವಳೇ ಎಂದು ವಿದ್ವಾಂಸರ ಅಭಿಪ್ರಾಯ.

ಬಾದಾಮಿಯ ಚಳುಕ್ಯರ ಕಾಲದಲ್ಲಿಯೇ ಶಂಕರಾಚಾರ್ಯರ ವೇದಾಂತ ಭಾಷ್ಯಗಳೂ ಹುಟ್ಟಿಕೊಂಡಿರಬಹುದು. ಸಮಂತಭದ್ರನ ತತ್ತ್ವಾರ್ಥ ಸೂತ್ರ ಮಹಾಭಾಷ್ಯ, ಆಪ್ತಮೀಮಾಂಸಾ ಮುಂತಾದ ಉದ್ದಾಮ ಧರ್ಮ ಗ್ರಂಥಗಳೂ ಈ ಕಾಲದಲ್ಲಿ ಬಂದವು. ತತ್ತ್ವಾರ್ಥಸೂತ್ರಕ್ಕೆ ಸರ್ವಾರ್ಥಸಿದ್ಧಿ ವ್ಯಾಖ್ಯೆಯನ್ನು ಪೂಜ್ಯಪಾದ ರಚಿಸಿದ. ಮತ್ತೊಬ್ಬ ಜೈನ ಪಂಡಿತ ಅಕಲಂಕ ತತ್ತ್ವಾರ್ಥ ರಾಜವಾರ್ತಿಕ, ಅಷ್ಟಶತೀ, ನ್ಯಾಯವಿನಿಶ್ಚಯ ಮುಂತಾದುವನ್ನು ರಚಿಸಿದ್ದಾನೆ.

ರಾಷ್ಟ್ರಕೂಟರ ಕಾಲದಲ್ಲಿ ಸಂಸ್ಕೃತಕ್ಕೆ ವಿಶೇಷ ಪ್ರೋತ್ಸಾಹ ದೊರಕಿತು. ಒಂದನೆಯ ಅಮೋಘ ವರ್ಷ (814–78) ಸ್ವಯಂ ಗ್ರಂಥಕಾರನಾಗಿದ್ದುದಲ್ಲದೆ (ಪ್ರಶ್ನೋತ್ತರ–ರತ್ನಮಾಲಿಕಾ ಇವನ ಕೃತಿಯೆನ್ನುತ್ತಾರೆ) ಜಿನಸೇನಾಚಾರ್ಯರು ಮಹಾಪುರಾಣ, ಪಾರ್ಶ್ವಾಭ್ಯುದಯಗಳೆಂಬ ಉದ್ಗ್ರಂಥಗಳನ್ನು ಬರೆಯಲು ನೆರವಾದ. ಶಾಕಟಾಯನ ವ್ಯಾಕರಣವೆಂಬ ನವೀನ ಪ್ರಸ್ಥಾನವೂ ಈಗಲೇ ಉದಿಸಿತು. ಅದರ ವೃತ್ತಿಗೆ ಅಮೋಘ ವೃತ್ತಿಯೆಂದೇ ಹೆಸರಿದೆ. ಮಹಾವೀರನೆಂಬ ಪಂಡಿತ ಜ್ಯೋತಿಶಾಸ್ತ್ರದ ಗಣಿತಸಾರ ಸಂಗ್ರಹವನ್ನು ಬರೆದಿದ್ದಾನೆ.

ಮುಮ್ಮಡಿ ಇಂದ್ರನ (914–29) ಆಸ್ಥಾನ ಕವಿಯಾಗಿದ್ದ ತ್ರಿವಿಕ್ರಮಭಟ್ಟ ನಳಚಂಪೂ ಮತ್ತು ಮದಾಲಸಾಚಂಪೂ ಎಂಬ ಎರಡು ಕೃತಿಗಳನ್ನು ರಚಿಸಿದ. ಇವೆರಡು ಸಂಸ್ಕೃತ ಸಾಹಿತ್ಯದ ಚಂಪೂ ಪ್ರಕಾರದ ಉಪಲಬ್ಧ ಪ್ರಾಚೀನತಮ ಕೃತಿಗಳು. ಇವನ ಚಂಪೂಶೈಲಿಯಲ್ಲಿ ಬಾಣನ ಗದ್ಯವೈಭವ ಹಾಗೂ ನಾಟಕಕಾರರ ಪದ್ಯ ಪ್ರಾಗಲ್ಭ್ಯಗಳೆರಡೂ ರಸಮಯವಾಗಿ ಜೊತೆಗೂಡಿವೆ. ಇವನಿಗೆ ಮೊದಲೇ ದಂಡಿ ಚಂಪೂ ಪ್ರಭೇದವನ್ನು ಹೇಳಿ, ಅದರ ಸ್ವರೂಪವನ್ನು ತಿಳಿಸಿದ್ದನಾದರೂ ತ್ರಿವಿಕ್ರಮನಿಗೆ ಮೊದಲು ಯಾವ ಚಂಪೂ ಕೃತಿಯೂ ದೊರೆತಿಲ್ಲ. ಮುಮ್ಮಡಿ ಕೃಷ್ಣನೂ (939–67) ಸ್ವತಃ ವಿದ್ವಾಂಸನಾಗಿದ್ದು ಪಿಂಗಲನ ಛಂದಸ್ಸೂತ್ರದ ಮೇಲೆ ವ್ಯಾಖ್ಯಾನ ಬರೆದ. ಇವನ ಆಶ್ರಯದಲ್ಲಿ ಹಲಾಯುಧ ಒಂದು ಕೋಶವನ್ನೂ ಕವಿಗಳಿಗೆ ಉಪಯುಕ್ತವಾದ ಕೃತಿಗಳನ್ನೂ ರಚಿಸಿದ.

ಅದ್ವೈತವೇದಾಂತ ದೃಷ್ಟಿಯಿಂದ ರಾಷ್ಟ್ರಕೂಟರ ಕಾಲವನ್ನು ಸುವರ್ಣಯುಗವೆಂದು ಕರೆಯಬಹುದು. ಶಂಕರಾಚಾರ್ಯರ ಶಿಷ್ಯರಾದ ಪದ್ಮಪಾದ ಮತ್ತು ಸುರೇಶ್ವರರು ವೇದಾಂತ ಪ್ರಚಾರದಲ್ಲಿ ನಿರತರಾಗಿದ್ದರು. ಸುರೇಶ್ವರರ ಶಿಷ್ಯ ಸರ್ವಜ್ಞಾತ್ಮನ್ 'ಸಂಕ್ಷೇಪ ಶಾರೀರಕ' ವನ್ನು ರಚಿಸಿದ. ಇದೇ ಯುಗದಲ್ಲಿ ಯಾಜ್ಞವಲ್ಕ್ಯಸ್ಮೃತಿಗೆ ವಿಶ್ವರೂಪ ಬರೆದ 'ಬಾಲಕ್ರೀಡಾ ವ್ಯಾಖ್ಯೆ' ಬಹಳ ಪ್ರಸಿದ್ಧವಾಯಿತು.

ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಜೈನರೂ ಅಮೋಘ ಕಾಣಿಕೆಯನ್ನಿತ್ತಿದ್ದಾರೆ. ವೀರಸೇನ ಮತ್ತು ಜಿನಸೇನರು 1,00,000 ಶ್ಲೋಕಗಳ ವಿಸ್ತಾರವಾದ ಧವಲಾ, ಜಯಧವಲಾ ಮತ್ತು ಮಹಾಧವಲಾ ಎಂಬ ಷಟ್ ಖಂಡಾಗಮ ವ್ಯಾಖ್ಯಾನವನ್ನು ಪೂರೈಸಿದರು. ಜಿನಸೇನರು ಆದಿಪುರಾಣ ಮತ್ತು ಪಾರ್ಶ್ವನಾಥಪುರಾಣಗಳನ್ನೂ ಬರೆದು ಪ್ರಸಿದ್ಧರಾದರು. ಅಸಗನಿಗೆ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಸಮಾನವಾದ ಕವಿತಾ ಸಾಮರ್ಥ್ಯವಿತ್ತು. ಸಂಸ್ಕೃತದಲ್ಲಿ ಈತ ವರ್ಧಮಾನಪುರಾಣವನ್ನು ರಚಿಸಿದ್ದಾನೆ. ವಿದ್ಯಾನಂದ ಎಂಬುವನು ಸಮಂತಭದ್ರನ ಆಪ್ತಮೀಮಾಂಸಾ, ಆಪ್ತಪರೀಕ್ಷಾ ಇತ್ಯಾದಿ ಗ್ರಂಥಗಳಿಗೆ ಅಷ್ಟಸಾಹಸ್ರೀ ಎಂಬ ಅದ್ಭುತವಾದ ವ್ಯಾಖ್ಯಾನ ರಚಿಸಿದ್ದಾನೆ.

ವೇಮುಲವಾಡದ ಚಾಳುಕ್ಯರ ಆಶ್ರಯದಲ್ಲಿದ್ದ ಸೋಮದೇವಸೂರಿ (ಸು.959) ಯಶಸ್ತಿಲಕಚಂಪೂ ಎಂಬ ಕೃತಿಯನ್ನೂ ನೀತಿವಾಕ್ಯಾಮೃತವೆಂಬ ಗ್ರಂಥವನ್ನೂ ರಚಿಸಿದ. ಯಶಸ್ತಿಲಕಚಂಪೂವಿನಲ್ಲಿ ಕವಿ ನಾನಾಶಾಸ್ತ್ರದಲ್ಲಿ, ತನಗಿದ್ದ ಪಾಂಡಿತ್ಯ ಹಾಗೂ ಜಾಣ್ಮೆಯನ್ನು ಪ್ರದರ್ಶಿಸಿಕೊಂಡಿದ್ದಾನೆ. ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಈ ಕೃತಿ ಅಮೂಲ್ಯವಾದು ದಾಗಿದೆ. ನೀತಿವಾಕ್ಯಾಮೃತ ರಾಜನೀತಿಶಾಸ್ತ್ರದ ಕೈಪಿಡಿಯಂತಿದೆ. ಇದರಲ್ಲಿ ರಾಜಕೀಯ ವ್ಯವಹಾರಗಳ ಸೂಕ್ಷ್ಮ ನಿರೂಪಣೆಯ ಜತೆಗೆ ಜನಸಾಮಾನ್ಯರಿಗೂ ಸಂಬಂಧಿಸಿದ ನೀತಿಗಳನ್ನು ಎಲ್ಲರಿಗೂ ಅರ್ಥವಾಗುವ ಕ್ರಮದಲ್ಲಿ ನಿರೂಪಿಸಿದ್ದಾನೆ. ಸೋಮದೇವಸೂರಿ ಕವಿಯಷ್ಟೇ ಅಲ್ಲ ತತ್ತ್ವಶಾಸ್ತ್ರದಲ್ಲಿಯೂ ನಿಷ್ಣಾತನಾಗಿದ್ದ 'ಷಣ್ಣವತಿ ಪ್ರಕರಣ' ಇವನ ಕೊಡುಗೆ.

ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಬಂದರೆ ಎರಡನೆಯ ಜಯಸಿಂಹನ ಆಳಿಕೆಯಲ್ಲಿ (1015–44) ವಾದಿರಾಜನ ಯಶೋಧರಚರಿತ ಮತ್ತು ಪಾರ್ಶ್ವನಾಥ ಚರಿತ ಎಂಬ ಸುಂದರ ಕಾವ್ಯಗಳು ಮೂಡಿಬಂದವು. ವಾದಿರಾಜನ ಪಾಂಡಿತ್ಯವನ್ನು ಅನೇಕ ಶಾಸನಗಳು ಕೊಂಡಾಡಿವೆ. ಅಕಲಂಕನ ಮಹಾಗ್ರಂಥವನ್ನು ಕುರಿತ ಸಮಗ್ರ ವ್ಯಾಖ್ಯಾನ 'ನ್ಯಾಯ ವಿನಿಶ್ಚಯ ಟೀಕೆ' ವಾದಿರಾಜನ ಮೇರು ಕೃತಿ. ಇವನು ಉತ್ತಮ ಬರೆಹಗಾರನಾಗಿದ್ದ, ಜೊತೆಗೆ ಸಮರ್ಥ ವಾಗ್ಮಿಯಾಗಿದ್ದನೆಂದು ತಿಳಿದುಬರುತ್ತದೆ. ಲಕುಲೀಶ ಪಂಡಿತ ಅಥವಾ ವಾದಿರುದ್ರಗುಣ ಮಹಾವಿದ್ವಾಂಸನೆಂದೂ ಜೈನ ವಾದಿರಾಜನನ್ನು ವಾದದಲ್ಲಿ ಸೋಲಿಸಿದನೆಂದೂ 1036ರ ಶಾಸನವೊಂದು ತಿಳಿಸುತ್ತದೆ. ವಾದಿರಾಜನ ಸಹಪಾಠಿ ಮತ್ತು ಮತಿಸಾಗರನ ಶಿಷ್ಯನಾದ ದಯಪಾಲ ಎಂಬುವನು ಶಾಕಟಾಯನ ವ್ಯಾಕರಣದ ಉಪಯುಕ್ತವಾದ ಪುನರ್ವಿಮರ್ಶಿತ ಕೈಪಿಡಿಯನ್ನು ಸಿದ್ಧಗೊಳಿಸಿದ. ರೂಪಸಿದ್ಧಿಯೆಂದು ಕರೆಯಲಾದ ಇದನ್ನು ಹಲವು ಶಾಸನಗಳಲ್ಲಿ ಹೊಗಳಲಾಗಿದೆ.

ಇದೇ ಕಾಲದಲ್ಲಿ ಕಾವ್ಯಾವಲೋಕನದ ಕರ್ತೃ ನಾಗವರ್ಮ ಸಂಸ್ಕೃತ ಕೋಶವೊಂದನ್ನು ರಚಿಸಿದ್ದನೆಂದು ತಿಳಿದುಬರುತ್ತದೆ. ಆದರೆ ಇದು ಉಪಲಬ್ಧವಿಲ್ಲ. ಈ ಕಾಲದಲ್ಲಿ ವಾದೀಭಸಿಂಹನ ಗದ್ಯಚಿಂತಾಮಣಿ, ಕ್ಷತ್ರಚೂಡಾಮಣಿ ಎಂಬ ಗದ್ಯಕಾವ್ಯಗಳು ಬಾಣನ ಮಾದರಿಯಲ್ಲಿ ನಿರ್ಮಿತವಾದವು. ಜಯಕೀರ್ತಿಯ ಛಂದೋನುಶಾಸನವೂ ಇದೇ ಕಾಲದ್ದು. ಚಾಳುಕ್ಯ ಆರನೆಯ ವಿಕ್ರಮಾದಿತ್ಯ (1076–1127), ಕರ್ಣ, ಭೋಜಾದಿಗಳ ಆಸ್ಥಾನಗಳನ್ನೆಲ್ಲ ಸುತ್ತಿ ಬಂದಿದ್ದ ಕಾಶ್ಮೀರದ ಬಿಲ್ಹಣ ಮಹಾಕವಿಗೆ ತನ್ನ ಆಸ್ಥಾನದಲ್ಲಿ ವಿದ್ಯಾಪತಿಯೆಂಬ ಪದವಿಯನ್ನಿತ್ತು ಅವನಿಂದ ವಿಕ್ರಮಾಂಕ ದೇವಚರಿತವೆಂಬ ಮನೋಹರ ಐತಿಹಾಸಿಕ

ಕಾವ್ಯವನ್ನು ಬರೆಯಿಸಿದ. ಇದೇ ವಿಕ್ರಮಾದಿತ್ಯನ ಕಾಲದಲ್ಲಿ ವಿಜ್ಞಾನೇಶ್ವರ ಎಂಬ ಪಂಡಿತ ಧರ್ಮಶಾಸ್ತ್ರ ಸಾಹಿತ್ಯದಲ್ಲಿಯೇ ತುಂಬಾ ಮನ್ನಣೆಗಳಿಸಿರುವ ಮಿತಾಕ್ಷರಾ ವ್ಯಾಖ್ಯೆಯನ್ನು ಯಾಜ್ಞವಲ್ಕ್ಯಸ್ಮೃತಿಗೆ ಬರೆದ. ಚಾಳುಕ್ಯ ಅರಸ ಮೂರನೆಯ ಸೋಮೇಶ್ವರ ಭೂಲೋಕಮಲ್ಲ (1127–39) ಅಭಿಲಷಿತಾರ್ಥಚಿಂತಾಮಣಿ ಅಥವಾ ಮಾನಸೋಲ್ಲಾಸ ಎಂಬ ವಿಶ್ವಕೋಶವನ್ನು ರಚಿಸಿದ. ಇದರಲ್ಲಿ ಸಂಸ್ಕೃತ ಕಾವ್ಯ, ಶಾಸ್ತ್ರ, ಕಲೆ, ವಿಜ್ಞಾನ, ಧರ್ಮ ಮುಂತಾದ ಸಕಲ ವಿದ್ಯಾಪ್ರಕಾರಗಳೂ ಸಂಕ್ಷಿಪ್ತವಾಗಿ ಹಾಗೂ ಸಪ್ರಮಾಣವಾಗಿ ಅಂತರ್ಗತವಾಗಿವೆ. ವನಸ್ಪತಿಗಳು, ಪ್ರಾಣಿಗಳು, ಪುಷ್ಪರಚನೆ, ಶಕುನಗಳು, ಕಾಮಶಾಸ್ತ್ರ, ಚಿತ್ರ, ಸಂಗೀತ, ರಾಜನೀತಿ, ಭೂಗೋಳ, ಪಾಕಶಾಸ್ತ್ರ ಮುಂತಾದ ಲೌಕಿಕ ವಿದ್ಯೆಗಳಿಗೂ ಇಲ್ಲಿ ಸಮಾವೇಶ ದೊರೆತಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಇಡೀ ಸಂಸ್ಕೃತ ಸಾಹಿತ್ಯದಲ್ಲೇ ಇಂಥ ಗ್ರಂಥ ಮತ್ತೊಂದಿಲ್ಲ. ಈ ದೊರೆಯ ಆಶ್ರಯದಲ್ಲೇ ಇದ್ದ ಪಾರ್ಶ್ವದೇವ ಸಂಗೀತ ಸಮಯಸಾರವನ್ನು ರಚಿಸಿದ್ದಾನೆ. ಇಮ್ಮಡಿ ಜಗದೇಕಮಲ್ಲ (1139–49) ಸಂಗೀತಕ್ಕೆ ಸಂಬಂಧಿಸಿದಂತೆ ಸಂಗೀತ ಚೂಡಾಮಣಿ ಎಂಬ ಗ್ರಂಥವನ್ನು ಬರೆದಿದ್ದಾನೆ.

ಹೊಯ್ಸಳರ ರಾಜ್ಯದಲ್ಲಿಯ ಎರಡನೆಯ ವೀರಬಲ್ಲಾಳನ ಆಸ್ಥಾನಕವಿ ವಿದ್ಯಾಚಕ್ರವರ್ತಿಯ ರುಕ್ಮೀಣೀಕಲ್ಯಾಣನಾಟಕ ಹಾಗೂ ಅಲಂಕಾರಸರ್ವಸ್ವ ಸಂಜೀವಿನೀ ಮತ್ತು ಕಾವ್ಯಪ್ರಕಾಶ ಸಂಪ್ರದಾಯಪ್ರಕಾಶಿನೀ ಎಂಬ ಅಲಂಕಾರ ಶಾಸ್ತ್ರಗ್ರಂಥಗಳು ಮಹತ್ತ್ವದ್ದಾಗಿದೆ. ಇವನ ಮಗನಾದ ಸಕಲವಿದ್ಯಾಚಕ್ರವರ್ತಿ ಗದ್ಯಕರ್ಣಾಮೃತ ಎಂಬ ಗ್ರಂಥವನ್ನು ಬರೆದಿದ್ದಾನೆ.

ಕರ್ನಾಟಕದಲ್ಲಿಯೇ ಹುಟ್ಟಿಬೆಳೆದ ಮಧ್ವಾಚಾರ್ಯರು ವೇದಾಂತ ಪಂಥವೊಂದನ್ನು ಸ್ಥಾಪಿಸಿ ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನೂ ರಾಮಾಯಣ, ಮಹಾಭಾರತ, ಭಾಗವತಗಳ ತಾತ್ಪರ್ಯ ನಿರ್ಣಯ ಮೊದಲಾದ 37 ಗ್ರಂಥಗಳನ್ನೂ ರಚಿಸಿದರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಸಂಸ್ಕೃತ ವಾಙ್ಮಯ ಉನ್ನತಿಗೆ ಹೆಚ್ಚಿನ ಪ್ರಚೋದನೆ ನೀಡಿತು. ಸಾಮ್ರಾಜ್ಯ ಸ್ಥಾಪಕರಾದ ಮಾಧವ ವಿದ್ಯಾರಣ್ಯರು ಅವರ ಗುರುಗಳಾದ ಭಾರತೀತೀರ್ಥರು ಹಾಗೂ ಅವರ ತಮ್ಮಂದಿರಾದ ಸಾಯಣ ಮತ್ತು ಭೋಗನಾಥ ಇವರಿಂದ ಸಂಸ್ಕೃತ ವಾಙ್ಮಯದ ಎಲ್ಲ ಪ್ರಕಾರಗಳು ಸಮೃದ್ಧವಾದುವು. ತೈತ್ತೀರೀಯ ಸಂಹಿತೆ ಮುಂತಾದ ನಾಲ್ಕು ವೇದ ಸಂಹಿತೆಗಳು, ಅವುಗಳ ಬ್ರಾಹ್ಮಣಗಳು ಹೀಗೆ 18 ವೇದಗ್ರಂಥಗಳಿಗೆ ಮಾಧವಾಚಾರ್ಯ (ವಿದ್ಯಾರಣ್ಯರ) ನೇತೃತ್ವದಲ್ಲಿ ಅನೇಕರ ನೆರವಿನಿಂದ ಸಾಯಣಾಚಾರ್ಯರು ಭಾಷ್ಯ ರಚಿಸಿದರು. ಇವುಗಳಲ್ಲಿ ಒಂದೊಂದು ಸಂಹಿತೆಯ ಪ್ರಾರಂಭದಲ್ಲಿಯೂ ಪೀಠಿಕೆಯಲ್ಲಿ ವೇದಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಪೂರ್ವಮೀಮಾಂಸಾ ಸೂತ್ರಗಳ ಆಧಾರದ ಮೇಲೆ ವಿಸ್ತಾರವಾಗಿ ಚರ್ಚಿಸಲಾಗಿದೆ. ಸಾಯಣರ ಯಜ್ಞತಂತ್ರ ಸುಧಾನಿಧಿ ಮತ್ತು ಪ್ರಯೋಗ ರತ್ನಮಾಲಾ ಗ್ರಂಥಗಳು ಶ್ರೌತಯಜ್ಞಗಳ ಪ್ರಯೋಗವನ್ನು ಸ್ಪಷ್ಟಪಡಿಸುತ್ತವೆ.

ಸ್ಮೃತಿ ಕ್ಷೇತ್ರದಲ್ಲಿ ಪರಾಶರ ಸ್ಮೃತಿಗೆ ಮಾಧವೀಯ ವ್ಯಾಖ್ಯೆ ಮತ್ತು ವ್ಯವಹಾರದ ವಿಷಯದಲ್ಲಿ ಪರಾಶರಮಾಧವೀಯ ಗ್ರಂಥಗಳು ಹೊರಬಂದವು. ಪ್ರಾಯಶ್ಚಿತ್ತ ಸುಧಾನಿಧಿಯೂ ಇದೇ ವಿಭಾಗಕ್ಕೆ ಸೇರಿದ ಕೃತಿ. ದೇವಣ್ಣಭಟ್ಟ (ಸು.1145) ನಾನಾ ಸ್ಮೃತಿಗಳ ಆಧಾರದ ಮೇಲೆ ಸ್ಮೃತಿಚಂದ್ರಿಕೆಯನ್ನು ಮತ್ತು ನರಹರಿ ಎಂಬುವನು ಸ್ಮೃತಿಕೌಸ್ತುಭವನ್ನೂ ರಚಿಸಿದರು. ವ್ಯಾಕರಣದಲ್ಲಿ ಮಾಧವೀಯವಾದ ಧಾತುವೃತ್ತಿಯನ್ನು ಗಮನಿಸಬಹುದು.

ದರ್ಶನ ಪ್ರಪಂಚದಲ್ಲಿ ಮಾಧವ ವಿದ್ಯಾರಣ್ಯರ ಜೈಮಿನೀಯ ನ್ಯಾಯಮಾಲಾವಿಸ್ತರ ಮತ್ತು ವೈಯಾಸಿಕ ನ್ಯಾಯಮಾಲಾವಿಸ್ತರ ಮತ್ತು ಸಾಯಣಾಚಾರ್ಯರ ಸರ್ವದರ್ಶನಸಂಗ್ರಹ ಇವು ಮುಖ್ಯವಾದವು. ಪದ್ಮಪುರಾಣದ ಸೂತಸಂಹಿತೆಯ ವ್ಯಾಖ್ಯೆ ತಾತ್ಪರ್ಯ ದೀಪಿಕೆಯೂ ಇವರದು. ಅಲಂಕಾರಶಾಸ್ತ್ರಕ್ಕೆ ಸೇರಿದ ಅಲಂಕಾರಸುಧಾನಿಧಿಯೂ ಸಾಯಣರ ಹೆಸರಿನಲ್ಲಿದೆ. ಸಾಯಣರು ಸುಭಾಷಿತಸುಧಾನಿಧಿ ಎಂಬ ಸುಭಾಷಿತ ಸಂಗ್ರಹವನ್ನೂ ಸಿದ್ಧಪಡಿಸಿದರು. ಭೋಗನಾಥ ಉತ್ತಮ ಕವಿಯೆಂದೂ ಹಲವು ಕೃತಿಗಳನ್ನು ರಚಿಸಿದನೆಂದೂ ಉಲ್ಲೇಖವಿದೆ. ಆದರೆ ಆತನ ಕೃತಿಗಳು ಯಾವುವೂ ದೊರೆತಿಲ್ಲ.

ತನ್ನ ಪತಿ ಕಂಪಣ ಅಥವಾ ಕಂಪರಾಯ ಮಧುರೆಯನ್ನು ವಶಪಡಿಸಿಕೊಂಡುದನ್ನು ಕಣ್ಣಾರೆ ಕಂಡ ಗಂಗಾದೇವಿ, ಆ ವಿಜಯ ಯಾತ್ರೆಯನ್ನು ಮಧುರಾವಿಜಯ ಅಥವಾ ವೀರಕಂಪಣ ರಾಯಚರಿತವೆಂಬ ಹೆಸರಿನಲ್ಲಿ ಕಾವ್ಯವೊಂದನ್ನು ರಚಿಸಿದ್ದಾಳೆ (ಸು.1360). ವಿಜಯನಗರದ ವಿರೂಪಾಕ್ಷ ನರಕಾಸುರ ವಿಜಯವನ್ನು ರಚಿಸಿದ. ಈ ಕಾಲದಲ್ಲೇ ಮುಂದೆಯೂ ಸಾಲುವಾಭ್ಯುದಯ ಮುಂತಾದ ಅನೇಕ ಕಾವ್ಯಗಳು ರಚಿತವಾದವು.

ವಿಜಯನಗರದ ಅನಂತರ ರಾಜಕೀಯ ಕೇಂದ್ರ ಹಂಚಿಹೋದಂತೆ ವಿದ್ಯಾಕೇಂದ್ರಗಳೂ ಹಂಚಿಹೋದವು. ಆದರೆ ಸಂಸ್ಕೃತಕ್ಕಿದ್ದ ಪ್ರೋತ್ಸಾಹ ಕುಂಠಿತವಾದರೂ ಅಳಿಸಿಹೋಗಲಿಲ್ಲ. ಕೆಳದಿಯ ದೊರೆ ಬಸವ ಭೂಪಾಲ ಸ್ವತಃ ಕವಿಯಾಗಿದ್ದ. ಸೋಮದೇವನ ಅಭಿಲಷಿತಾರ್ಥ ಚಿಂತಾಮಣಿಯ ಮಾದರಿಯನ್ನು ಅನುಸರಿಸಿ ಶಿವತತ್ತ್ವ ರತ್ನಾಕರ ಎಂಬ ಗ್ರಂಥವನ್ನು ಈತ ಸಿದ್ಧಪಡಿಸಿದ. ಇದು 108 ಅಧ್ಯಾಯಗಳುಳ್ಳ ಬೃಹದ್ಗ್ರಂಥ. ಇವನದೇ ಇನ್ನೊಂದು ಉದ್ಗ್ರಂಥ ಸುಭಾಷಿತ ಸುರದ್ರುಮ ಎಂಬ ಸೂಕ್ತಿಕೋಶ. ಶ್ರೀರಂಗಪಟ್ಟಣದ ದಳವಾಯಿ ನಂಜರಾಜ ನಂಜರಾಜಯಶೋಭೂಷಣ ಎಂಬ ಅಲಂಕಾರ ಗ್ರಂಥವನ್ನು ಬರೆದ. ಅಲ್ಲಿಯೇ ಪ್ರಧಾನಿಯಾಗಿದ್ದ ವೆಂಕಟಪ್ಪಯ್ಯ ಭೂಪತಿ ಅಥವಾ ವೆಂಕಾಮಾತ್ಯ ಹಲವಾರು ಗ್ರಂಥಗಳನ್ನು ರಚಿಸಿದ. ಇವನ ಅಲಂಕಾರಮಣಿದರ್ಪಣದಲ್ಲಿ ಅದುವರೆಗೆ ಅಲಂಕಾರ ಶಾಸ್ತ್ರದಲ್ಲಿ ನಡೆದ ಚರ್ಚೆಗಳನ್ನು ಸುಲಲಿತವಾಗಿ ಸಂಗ್ರಹಿಸಲಾಗಿದೆ. ಇವನ ಕುಶಲವ ವಿಜಯಚಂಪೂ ಭಟ್ಟಿಕಾವ್ಯದ ಮಾದರಿಯಲ್ಲಿ ವ್ಯಾಕರಣ ನಿಯಮಗಳಿಗೆ ಉದಾಹರಣೆ ಯಾಗಿರುವಂತೆ ರಚಿಸಲಾದ ಶಾಸ್ತ್ರಕಾವ್ಯ. ಈತ ಇವಲ್ಲದೆ ಹತ್ತು ಬಗೆಯ ರೂಪಕಗಳಿಗೂ ಒಂದೊಂದು ಉದಾಹರಣೆಯಾಗುವಂತೆ ಹತ್ತು ರೂಪಕಗಳನ್ನು ಬರೆದಿದ್ದಾನೆ.

19ನೆಯ ಶತಮಾನದಲ್ಲಿ ಹುಟ್ಟಿದ ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀತತ್ತ್ವನಿಧಿ ಒಂದು ಸಚಿತ್ರ ಗ್ರಂಥ. ಇದರಲ್ಲಿ ಸಂವತ್ಸರಾಭಿಮಾನಿ ದೇವತೆಗಳು ರಾಗಾಭಿಮಾನಿ ದೇವತೆಗಳೇ ಮೊದಲಾಗಿ ನಾನಾ ದೇವತೆಗಳ, ಶಿವವಿಷ್ಣುವಿನ ನಾನಾ ರೂಪಗಳ ಸಂಸ್ಕೃತದ ಧ್ಯಾನ ಶ್ಲೋಕಗಳೊಡನೆ ಅದಕ್ಕೆ ಅನುಗುಣವಾದ ವರ್ಣರಂಜಿತ ಚಿತ್ರಗಳನ್ನು ಕೊಡಲಾಗಿದೆ. ಸಂಖ್ಯಾರತ್ನಮಾಲಾ ಒಂದು ಬಗೆಯ ಕೋಶ. ಪ್ರಪಂಚದಲ್ಲಿ ಕೆಲವೊಂದು ಪದಾರ್ಥಗಳು ಒಂಟಿಯಾಗಿರಬಹುದು, ಜೊತೆಜೊತೆಯಾಗಿರಬಹುದು. ಇಲ್ಲವೇ ಮೂರು ಅಥವಾ ಅದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿನ ಗುಂಪುಗಳಲ್ಲಿರಬಹುದು. ಅಂಥ ಒಂಟಿ ಪದಾರ್ಥಗಳನ್ನೂ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಗುಂಪುಗಳಲ್ಲಿ ಸೇರಿದ ವಸ್ತುಗಳ ಹೆಸರುಗಳನ್ನೂ ಆಯಾ ಸಂಖ್ಯೆಯ ಕ್ರಮದಲ್ಲಿ ಕೊಡಲಾಗಿದೆ. ಹೀಗೆ 127 ಕೊನೆಯ ಸಂಖ್ಯೆ 'ಗ್ರಹಣದರ್ಪಣ' 1841–1902ರ ವರೆಗಿನ ಅವಧಿಯಲ್ಲಿನ ಗ್ರಹಣದ ಬಗ್ಗೆ ಮಾಹಿತಿ ನೀಡುವ ಗ್ರಂಥ.

19ನೆಯ ಶತಮಾನದಲ್ಲಿ ನಡೆದ ಸಾಹಿತ್ಯ ಚಟುವಟಿಕೆಯಲ್ಲಿ ಇನ್ನೂ ಕೆಲವು ಹೆಸರುಗಳನ್ನು ಸೂಚಿಸಬಹುದು. ಯಾದವ ರಾಘವ ಪಾಂಡವೀಯ (1817) ಎಂಬ ತ್ರಿಸಂಧಾನ ಕಾವ್ಯವನ್ನು ಮೈಸೂರು ಅನಂತಾಚಾರ್ಯ ರಚಿಸಿದ್ದಾರೆ. ಭಾಗವತ, ರಾಮಾಯಣ ಹಾಗೂ ಮಹಾಭಾರತ ಕಥೆಗಳನ್ನು ಒಂದೇ ಬಾರಿಗೆ ಹೇಳುವ ಸಾಹಸ ಈ ಕಾವ್ಯದಲ್ಲಿ ನಡೆದಿದೆ. ಏಕಾಂಬರಶಾಸ್ತ್ರಿ ಎಂಬವರು ವೀರಭದ್ರವಿಜಯಚಂಪೂ ಎಂಬ ಕಾವ್ಯದಲ್ಲಿ ಬೆಂಗಳೂರು ಕೆಂಪೇಗೌಡನ ವಂಶದ ಚರಿತ್ರೆ ಹೇಳಲು ಅವಕಾಶ ಮಾಡಿಕೊಂಡಿದ್ದಾರೆ. ಮಲ್ಲಾರಿ ಆರಾಧ್ಯರು ಶಿವಲಿಂಗ, ಸೂರ್ಯೋದಯ ಎಂಬ ನಾಟಕವನ್ನು ಪ್ರಬೋಧ ಚಂದ್ರೋದಯದ ಮಾದರಿಯಲ್ಲಿ ರಚಿಸಿದ್ದರೆ, ಲಿಂಗಭಟ್ಟರು ಅಮರಕೋಶಕ್ಕೆ ಸಂಸ್ಕೃತ ಹಾಗೂ ಕನ್ನಡ ವಿವೃತ್ತಿಯನ್ನು ಬರೆದಿದ್ದಾರೆ. ಮಂಡಿಕಲ್ಲು ರಾಮಶಾಸ್ತ್ರೀ 'ಮೇಘ ಪ್ರತಿಸಂದೇಶ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಸತ್ಯಪ್ರಿಯತೀರ್ಥರು ವ್ಯಾಕರಣ ಮಹಾಭಾಷ್ಯಕ್ಕೆ ವ್ಯಾಖ್ಯಾನ ರಚಿಸಿದ್ದಾರೆ. ಇದರ ಭಾಗಗಳು ಮಾತ್ರ ದೊರೆತಿವೆ.

ಮೇಲುಕೋಟೆಯ ಜಗ್ಗೂಆಳ್ವಾರರು ನಿರ್ಮಿಸಿದ ಪ್ರತಿಜ್ಞಾಕೌಟಿಲ್ಯಂ, ಪ್ರಸನ್ನರಾಘವಂ, ಮಹೀಹರಣಂ ಮುಂತಾದ ಅನೇಕ ಕಾವ್ಯಗಳು ಗಮನಾರ್ಹವಾಗಿವೆ. ಸಂಸ್ಕೃತ ಸಾಹಿತ್ಯ ಕೃತಿಗಳನ್ನು ಇಂಗ್ಲಿಷ್, ಕನ್ನಡ, ಹಿಂದೀಗಳಿಗೆ ಅನುವಾದಿಸಿ ಸಂಸ್ಕೃತ ಸಾಹಿತ್ಯವನ್ನು ಅನ್ಯರಿಗೆ ಪರಿಚಯ ಮಾಡಿಕೊಡುವಲ್ಲಿ ವಿದ್ವಾಂಸರಾದ ಕೆ. ಕೃಷ್ಣಮೂರ್ತಿ, ಎನ್. ರಂಗನಾಥಶರ್ಮ ತುಂಬಾ ಶ್ರಮಿಸಿದ್ದಾರೆ. ಇವರಂತೆಯೇ ಅನೇಕ ಆಧುನಿಕ ವಿದ್ವಾಂಸರು ತಮ್ಮದೇ ಆದ ಕೊಡುಗೆಯನ್ನು ಮೂಲ ಸಾಹಿತ್ಯಕ್ಕಾಗಲೀ ಅಥವಾ ಅನುವಾದ ಸಾಹಿತ್ಯಕ್ಕಾಗಲೀ ಅರ್ಪಿಸುತ್ತ ಬಂದಿದ್ದಾರೆ. ಅವುಗಳಲ್ಲಿ ಅನೇಕ ಕೃತಿಗಳು ಮಹತ್ಕೃತಿಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಹಿಂದು ಸೇವಾ ಪ್ರತಿಷ್ಠಾನದ ಸಂಸ್ಕೃತ ಶಾಖೆ ಸಂಸ್ಕೃತದ ಬೆಳವಣಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಶ್ರಮಿಸುತ್ತಿದೆ.

ವಿಜಯನಗರ ಕಾಲದಾರಭ್ಯ ಆಧುನಿಕ ಕಾಲದ ತನಕ ಸಂಸ್ಕೃತದಲ್ಲಿ ಸೃಜನಾತ್ಮಕ ಕಾರ್ಯ ಎಷ್ಟೊಂದು ಅಗಾಧವಾಗಿ ಸಾಗಿದೆಯೆಂದರೆ ದೊರೆಯುವ ಸಂಸ್ಕೃತ ಹಸ್ತಪ್ರತಿಗಳ ಸಂಖ್ಯೆ ಹತ್ತುಸಾವಿರಕ್ಕೂ ಹೆಚ್ಚಾಗುತ್ತದೆ. ಈ ಗ್ರಂಥಗಳೆಲ್ಲ ಹೆಚ್ಚಾಗಿ ಪೂರ್ವ ಮಹಾಕವಿಗಳ, ಸ್ತೋತ್ರಕಾರರ ಮಾದರಿಯಲ್ಲಿ ಬರೆದ ನೂತನ ರಚನೆಗಳು, ಇಲ್ಲವೆ ನಾನಾ ಶಾಸ್ತ್ರಗ್ರಂಥಗಳಿಗೆ ಟೀಕೆಟಿಪ್ಪಣಿಗಳು, ಇಲ್ಲವೆ ಧರ್ಮಶ್ರದ್ಧೆಯಿಂದ ಬರೆದ ಆಚಾರ್ಯ ಪುರುಷರ ದಿಗ್ವಿಜಯಗಳು, ಬಾಲೋಪಯೋಗಿ ಕಥಾನಕಗಳು ಮತ್ತು ಧರ್ಮಾಚರಣೆಗೆ ಉಪಯುಕ್ತವಾದ ಕೈಪಿಡಿಗಳು, ಮಂತ್ರ–ತಂತ್ರ ಪರಿಷ್ಕಾರಗಳು.

20ನೆಯ ಶತಮಾನದಲ್ಲಿಯೂ ಹಲವು ಕೃತಿಗಳು ಸಂಸ್ಕೃತದಲ್ಲಿ ರಚನೆಗೊಂಡವು. ಸುಂದರವಲ್ಲಿಯ (1900) ರಾಮಾಯಣ ಚಂಪೂ ಒಂದು ಗಮನಾರ್ಹ ಕೃತಿ. ಚಾಮರಾಜನಗರದ ಶ್ರೀಕಂಠಶಾಸ್ತ್ರೀ ಅವರು ಧಾತುರೂಪ ಪ್ರಕಾಶಿಕೆ ಎಂಬ ಗ್ರಂಥವನ್ನು ಬರೆದರಲ್ಲದೆ, ಯವನಯಾಮಿನೀವಿನೋದ ಕಥಾ ಎಂಬ ಹೆಸರಿನಲ್ಲಿ ಅರೇಬಿಯನ್ ನೈಟ್ಸ್ ಕಥೆಗಳನ್ನು ಸಂಸ್ಕೃತಕ್ಕೆ ಅನುವಾದ ಮಾಡಿದ್ದಾರೆ. ಶ್ರೀ ಕೃಷ್ಣಬ್ರಹ್ಮತಂತ್ರ ಪರಕಾಲ

ಸ್ವಾಮಿಗಳು ಅಲಂಕಾರಮಣಿಹಾರ ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದು ಅಲಂಕಾರಗಳನ್ನು ವಿವರಿಸುವ ಗ್ರಂಥ. ಇದರ ಉದಾಹರಣೆಗಳೆಲ್ಲವೂ ಶ್ರೀನಿವಾಸ ದೇವರನ್ನು ಕುರಿತವು. ವೇದಾಂತಾಚಾರ್ಯರು ರಚಿಸಿದ ಕೃತಿ ರಸಾಸ್ವಾದನೆ. ಇದು ಹಂಸಸಂದೇಶದ ವ್ಯಾಖ್ಯೆ.

ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಭಗವದ್ಗೀತಾ ಪ್ರಬಂಧ ಮೀಮಾಂಸಾ (1902), ಮೀಮಾಂಸಾ ಭಾಷಾಭೂಷಣ (1928) ಮುಂತಾದ ಹಲವು ಕೃತಿಗಳನ್ನು ರಚಿಸಿದ್ದಾರೆ. ಮೀಮಾಂಸಾ ಭಾಷಾಭೂಷಣ ಕುಮಾರಿಲಭಟ್ಟನ ತತ್ತ್ವಗಳನ್ನು ಪ್ರತಿಪಾದಿಸುವ ಗ್ರಂಥ. ದರ್ಶನೋದಯ (1933) ನಾನಾದರ್ಶನ ಪದ್ಧತಿಗಳ ವಿಷಯದೃಷ್ಟಿ ಮತ್ತು ವಿಮರ್ಶೆಯಿಂದ ಕೂಡಿದ ಲಲಿತ ಹಾಗೂ ಸ್ಪಷ್ಟ ನಿರೂಪಣೆಗಳನ್ನೊಳಗೊಂಡಿದೆ. ಮೇಲುಕೋಟೆಯ ಜಗ್ಗು ವೆಂಕಟಾಚಾರ್ಯರ ಹೆಸರಿನಲ್ಲಿ ಹತ್ತಾರು ಕೃತಿಗಳಿವೆ. ಕಾರ್ಕಳದ ಪಂಡಿತೆ ರಮಾಬಾಯಿ ಅವರು ಸುಲಲಿತ ಸಂಸ್ಕೃತದಲ್ಲಿ ಗ್ರಂಥರಚಿಸಿ ಖ್ಯಾತಿಪಡೆದಿದ್ದಾರೆ.

ಮುತ್ತಯ್ಯ ಭಾಗವತರ್ ಹುಟ್ಟುಕನ್ನಡಿಗರಲ್ಲದಿದ್ದರೂ ಅವರ ಸಂಗೀತ ಕೃತಿಗಳ ರಚನೆ ಬಹುತೇಕವಾಗಿ ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ನಡೆಯಿತು. ಇಲ್ಲೇ ಮೈಸೂರಿನ ಪ್ರಸಿದ್ಧ ವಾಗ್ಗೇಯಕಾರರಾದ ವಾಸುದೇವಾಚಾರ್ಯರ ಹೆಸರನ್ನು ಹೇಳಬಹುದು. ಇವರಿಬ್ಬರ ಕೃತಿಗಳೂ ಜನಪ್ರಿಯತೆಯನ್ನೂ ಗಳಿಸಿವೆ.

ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಅವರ ಆಳ್ವಿಕೆಯಲ್ಲೂ ಸಂಸ್ಕೃತಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಇವರೇ ಸ್ವತಃ ಹಲವು ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ. ಇವರು ನಿಯೋಜಿಸಿದ ಪುರಾಣ, ವೇದ, ವೇದಾಂತ ಗ್ರಂಥಗಳನ್ನು ಮೂಲ ಮತ್ತು ಕನ್ನಡ ಅನುವಾದದೊಡನೆ ಪ್ರಕಟಿಸುವ ಮಹಾಯೋಜನೆಯಂತೆ 12 ಮಹಾ ಪುರಾಣಗಳು, 12 ಉಪಪುರಾಣಗಳು, 6 ಆಧ್ಯಾತ್ಮಿಕ ಗ್ರಂಥಗಳು (ಆನಂದ ಅಧ್ಯಾತ್ಮ ರಾಮಾಯಣಗಳು, ಯೋಗವಾಸಿಷ್ಠ, ಪ್ರಸ್ಥಾನತ್ರಯ ಭಾಷ್ಯಗಳು), ಒಂದೆರಡು ತಂತ್ರ ಗ್ರಂಥಗಳ ಋಕ್ಸಂಹಿತೆ, ಐತರೇಯ ಬ್ರಾಹ್ಮಣ ಮತ್ತು ಆರಣ್ಯಕ ಮತ್ತು ನಿರುಕ್ತ-ಈ ಗ್ರಂಥಗಳು ಸುಮಾರು 350 ಸಂಪುಟಗಳಲ್ಲಿ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಾಶಿತವಾಗಿವೆ. ಪುರಾಣಗಳ, ವೇದಾಂತ ಗ್ರಂಥಗಳ ಮೂಲ ಮತ್ತು ಅನುವಾದ ಪ್ರಕಟವಾಗಿದ್ದರೆ, ಸಂಹಿತೆ, ಬ್ರಾಹ್ಮಣ ಗ್ರಂಥಗಳು ಸಾಯಣ ಭಾಷ್ಯ ವಿಸ್ತಾರವಾದ ಕನ್ನಡ ವಿವರಣೆಯೊಂದಿಗೆ ಹೊರಬಂದಿವೆ. ನಿರುಕ್ತಕ್ಕೂ ವಿಸ್ತಾರವಾದ ವಿವರಣೆಯಿದೆ. ವೇದಗ್ರಂಥಗಳಿಗೆ ಇಂಗ್ಲಿಷ್ ಅನುವಾದವನ್ನು ಕೊಡಲಾಗಿದೆ. ಈ ಮಾಲೆಯ ಮೂಲಕ ಕನ್ನಡ ಸಾಹಿತ್ಯಕ್ಕೆ, ಸಂಸ್ಕೃತಿ ಪ್ರಚಾರಕ್ಕೆ, ಸಂಸ್ಕೃತ ಭಾಷಾಧ್ಯಯನಕ್ಕೆ ಒಡೆಯರ್ ಅವರು ಇತ್ತ ನೆರವು ಅಪಾರವಾದುದು. ಇತ್ತೀಚೆಗೆ ಜಯಚಾಮರಾಜೇಂದ್ರರ ಕೃತಿಗಳಾದ ಶ್ರೀತತ್ತ್ವನಿಧಿ ಮೊದಲಾದ 9 ಕೃತಿಗಳು ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಕನ್ನಡ ಇಂಗ್ಲಿಷ್ ಅನುವಾದಗಳೊಂದಿಗೆ ಪ್ರಕಟವಾಗಿವೆ.

ವಿದ್ಯಾಭ್ಯಾಸ ಹಾಗೂ ಸಂಸ್ಕೃತ ಪ್ರಚಾರ ಕ್ಷೇತ್ರದಲ್ಲಿಯೂ ಸಾಕಷ್ಟು ಕಾರ್ಯ ಕಳೆದ ಶತಮಾನದ ಕೊನೆಯಿಂದ ನಡೆದು ಬಂದಿದೆ. ಎಚ್. ಸುಬ್ಬರಾವ್ ರಚಿಸಿದ, 'ವಿದ್ಯಾಭ್ಯಾಸ ಪದ್ಧತಿ' ಹರ್ಬರ್ಟ್ ಸ್ಪೆನ್ಸರನ ಗ್ರಂಥದ ಅನುವಾದ. ಪೆರಿಸ್ವಾಮಿ ತಿರುಮಲಾಚಾರ್ ಸದ್ವಿದ್ಯಾ ಆಂಗ್ಲೋ-ಸಂಸ್ಕೃತ ಪಾಠಶಾಲೆಯ ಸ್ಥಾಪಕರಲ್ಲೊಬ್ಬರಾಗಿದ್ದು, ಬಾಲಬೋಧಗಳನ್ನು ಸಿದ್ಧಪಡಿಸಿದರು.

ಹಿಂದಿನಿಂದಲೂ ಉಡುಪಿ, ಶೃಂಗೇರಿ, ಕೂಡ್ಲಿ, ಸಂಕೇಶ್ವರಗಳಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಡೆಗಳಲ್ಲೂ ಸಂಸ್ಕೃತ ಪಾಠಶಾಲೆಗಳಿದ್ದವು. ಪರ್ದಲ, ಕಾರ್ಕಳಗಳಲ್ಲಿ ಮಹಾ ಪಾಠಶಾಲೆಗಳಿದ್ದವು (ಓರಿಯಂಟಲ್ ಕಾಲೇಜು). ಈಚೆಗೆ ಆಧುನಿಕ ವಿದ್ಯಾಭ್ಯಾಸದ ಏರ್ಪಾಡುಗಳಾದಂತೆ ಸಂಸ್ಕೃತ ವಿದ್ಯಾಭ್ಯಾಸ ಪ್ರಗತಿ ಸಾಧಿಸಿದೆ. ಶೃಂಗೇರಿ, ಉಡುಪಿ, ಕಾರ್ಕಳಗಳಲ್ಲಿದ್ದ ಪಾಠಶಾಲೆಗಳು ಸುವ್ಯವಸ್ಥಿತವಾಗಿವೆ. ಮೈಸೂರು, ಬೆಂಗಳೂರುಗಳಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ಉನ್ನತ ಮಟ್ಟದ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಲಾಗಿದೆ. ಶಾಲೆ, ಕಾಲೇಜು ಮತ್ತು ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಸಂಸ್ಕೃತ ಶಿಕ್ಷಣಕ್ಕೆ ಅವಕಾಶವಿದೆ.

ಸಂಸ್ಕೃತದಲ್ಲಿ ಪತ್ರಿಕೆ, ನಿಯತಕಾಲಿಕೆಗಳು ಪ್ರಕಟವಾಗುತ್ತಿವೆ. ಬೆಳಗಾಂವಿಯಿಂದ ಪ್ರಕಟವಾಗುತ್ತಿದ್ದ ಸಂಸ್ಕೃತ ಚಂದ್ರಿಕಾ ಮತ್ತು ಮಧುರವಾಣೀ ನಿಯತಕಾಲಿಕೆಗಳು ಬಹಳ ಪ್ರಭಾವವನ್ನು ಬೀರಿವೆ. ಇದರ ಏಳ್ಗೆಗಾಗಿ ಪಂಡರೀನಾಥ ಗಲಗಲಿಯವರು ಬಹಳ ಶ್ರಮವಹಿಸಿ ದುಡಿದಿದ್ದಾರೆ. ಅಮರ ಭಾರತೀ ನಿಯತಕಾಲಿಕೆ ವಾರಾಣಸಿಯಲ್ಲಿ ಪ್ರಕಾಶಿತವಾದರೂ ಅದರ ಸಂಪಾದಕರಾದ ನರಸಿಂಹಾಚಾರ್ ಕರ್ನಾಟಕದವರು. ಏಕಮಾತ್ರ ದೈನಿಕವಾದ ಸುಧರ್ಮಾ ಮೈಸೂರಿನಲ್ಲಿ ಕೆ.ಎಸ್.ವರದರಾಜ ಅಯ್ಯಂಗಾರ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು.

ಸಂಸ್ಕೃತ-ಕನ್ನಡ ಭಾಷೆಗಳೆರಡೂ ಸು.2000 ವರ್ಷಗಳಿಂದ ಜೊತೆಯಲ್ಲಿಯೇ ಬೆಳೆಯುತ್ತ ಬಂದಿವೆ; ಪರಸ್ಪರ ಪ್ರಭಾವಿತವಾಗಿವೆ. ಕನ್ನಡ ಭಾಷೆಯ ಪ್ರಭಾವವೂ ಸಂಸ್ಕೃತದ ಮೇಲೆ ಆಗಿದೆ ಎಂಬುದಕ್ಕೆ ಸಂಸ್ಕೃತ ಕನ್ನಡದಿಂದ ಎರವಲು ಪಡೆದಿರಬಹುದಾದ ಒಂದೆರಡು ಪದಗಳನ್ನು ಇಲ್ಲಿ ಉದಾಹರಣೆಗಾಗಿ ಹೇಳಬಹುದು. ಆರ್ಬಟ-ಆರ್ಭಟ, ಗುದ್ದಲಿ-ಕುದ್ದಾಲ, ಗೋಟರು-ಕೋಟಕ. ಹೆಂಟೆ-ಹೆಂಡೆ, ಪಿಂಡು-ಪಿಂಡ ಇತ್ಯಾದಿ. ಸಂಸ್ಕೃತ ಪದಗಳು ಕನ್ನಡದಲ್ಲಿ ಧಾರಾಳವಾಗಿ ಬಳಕೆಯಾಗುತ್ತಾ ಬಂದಿವೆ. ಇಂದಿನ ಪಾರಿಭಾಷಿಕ ಪದಗಳನ್ನು ರೂಪಿಸುವುದರಲ್ಲಿಯೂ ಸಂಸ್ಕೃತದ ಉಪಯೋಗ ಬಹಳಷ್ಟಿದೆ. ಆದರೆ ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವುದು ಹೆಚ್ಚು. ಸಂಸ್ಕೃತದಲ್ಲಿದ್ದ ವಿಜ್ಞಾನ, ಕಲೆ ಮತ್ತು ತತ್ತ್ವಶಾಸ್ತ್ರ ಮೊದಲಾದ ವಾಙ್ಮಯ ವಿಭಾಗಗಳ ಬಗೆಗಿನ ಗ್ರಂಥಗಳೆಲ್ಲವನ್ನೂ ಕ್ರಮೇಣ ಕನ್ನಡದಲ್ಲಿಯೂ ಬರೆಯಲಾಯಿತು. ಮೊದಮೊದಲಿಗೆ ವಿಷಯ ನಿರೂಪಣೆಯಲ್ಲಿ ಸಂಸ್ಕೃತ ಗ್ರಂಥಗಳ ಜಾಡನ್ನೇ ಕನ್ನಡ ಅನುಸರಿಸಿಕೊಂಡು ಬಂತು. (ಆರ್‌ಎಸ್‌ಎಸ್.:ಕೆಕೆ.)

**ಉರ್ದು:** ಪಾರಸಿ ಭಾಷೆಯನ್ನು ಆಡುವವರ ಪ್ರಭುತ್ವ ಮತ್ತು ಸಂಪರ್ಕ ಉಂಟಾಯಿತು. ಸೈನಿಕರು, ವರ್ತಕರು ಪಾರಿಸಿ ಹಾಗೂ ಅರಬ್ಬೀ ಭಾಷೆಗಳನ್ನು ಸ್ಥಳೀಯ ಪ್ರಭಾವದಿಂದ ರೂಪಿಸಿದರು. ಅದು ದಖನೀ ಭಾಷೆಯ ಹುಟ್ಟಿಗೆ ಕಾರಣವಾಯಿತು. ಕನ್ನಡ ಮತ್ತು ಮರಾಠಿ ಪದಗಳೂ ಇದರಲ್ಲಿ ನುಸುಳಿದವು. ಈ ಸಂವಹನದಿಂದ ರೇಖ್ತಾ ಎಂಬ ಭಾಷೆ ಹುಟ್ಟಿತು. ಇದೇ ಮುಂದೆ ದಖ್ಖನೀ ಆಯ್ತು. ಈ ಭಾಷೆ ದಕ್ಷಿಣದಲ್ಲಿ ಪ್ರಸಿದ್ಧಿ ಪಡೆದುದರಿಂದ ಅದನ್ನು ದಖನೀಭಾಷೆಯೆಂದು ಕರೆದರು. ಇದು ಉರ್ದುಭಾಷೆಗೆ ಬೇರು.

ಉರ್ದು ಭಾಷೆಯ ವಿಶಿಷ್ಟತೆ ಎಂದರೆ ಅದು ಯಾವುದೇ ಮತ, ಜಾತಿ, ಪಂಥ ಪಂಗಡಗಳಿಗೆ ಸೇರಿದುದಲ್ಲ. ಈ ಭಾಷೆಯಲ್ಲಿ ಅರಬ್ಬೀ ಗಾಂಭೀರ್ಯ, ಪಾರಸಿ ಮಾಧುರ್ಯ, ಸಂಸ್ಕೃತದ ಹಿರಿತನ ಸಮ್ಮಿಳಿತವಾಗಿದೆ. ಈ ಭಾಷೆಯ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯುವುದು ರೂಢಿ.

ಕರ್ನಾಟಕದಲ್ಲಿ 14ನೆಯ ಶತಮಾನದಿಂದ ಇಲ್ಲಿಯವರೆಗೂ ಉರ್ದು ಸಾಹಿತ್ಯ ವ್ಯವಸಾಯ ನಡೆಯುತ್ತ ಬಂದಿದೆ. ಬಹಮನೀಸುಲ್ತಾನರು, ಮೊಗಲರು, ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನ್, ಮೈಸೂರು ಒಡೆಯರು, ಅನಂತರ ಆಧುನಿಕ ಲೇಖಕರು, ಅನುವಾದಕರು ಉರ್ದು ಸಾಹಿತ್ಯವನ್ನು ಬೆಳೆಸಿ ಪುಷ್ಟಿಗೊಳಿಸಿದ್ದಾರೆ.

14ನೆಯ ಶತಮಾನದಲ್ಲಿ ಗುಲ್ಬರ್ಗದ ಖ್ವಾಜಾಬಂದೇನವಾಜ್ ಅವರು ಅರಬ್ಬಿ, ಪಾರಸಿ ಹಾಗೂ ಸಂಸ್ಕೃತ ಭಾಷೆಯಲ್ಲಿ ದೊಡ್ಡ ವಿದ್ವಾಂಸರಾಗಿದ್ದರು. ಇವರು ಅರಬ್ಬಿ, ಪಾರಸಿಭಾಷೆ ತಿಳಿಯದ ಸಾಮಾನ್ಯ ಜನರಿಗೆ ಅವರಾಡುವ ಸರಳ ದಖನೀಭಾಷೆಯಲ್ಲಿ ಮಿರಾಜುಲ್ ಅಷಕೀನ್, ಹಿದಾಯತ್ ನಾಮಾ, ಷಿಕಾರನಾಮಾ ರಿಸಾಲಾ ಸೇಬಾರಾ ಮೊದಲಾದ ಗ್ರಂಥಗಳನ್ನು ರಚಿಸಿದರು. ಇವರೇ ದಖನೀ ಉರ್ದುವಿನ ಮೊದಲನೆಯ ಗದ್ಯ ಮತ್ತು ಪದ್ಯ ಲೇಖಕರು. ಇವರ ಕೃತಿಗಳೆಲ್ಲ ಸೂಫಿಪಂಥಕ್ಕೆ ಸಂಬಂಧಪಟ್ಟಿವೆ. ಇವರ ಮಗ ಸಯ್ಯದ್ ಮೊಹಮದ್ ಅಕ್ಬರ್ ಹುಸೇನಿ ಧರ್ಮಬೋಧನೆಗಾಗಿ ಸೂಫಿ ನೀತಿ ತತ್ತ್ವಗಳಿಗಾಗಿ ದಖ್ಖನೀ ಉರ್ದುವನ್ನೇ ಬಳಸಿದ. ಬಂದೇನವಾಜರ ಶಿಷ್ಯ ಹಫ್‌ಅಸ್ಲೂಕ್ ತನ್ನ ಗುರುವಿನ ಉಕ್ತಿಗಳನ್ನು ಟೀಕಾಸಹಿತ ಸಂಗ್ರಹಿಸಿದ. ಇದು ಬಂದೇನವಾಜರ ಮೊಮ್ಮಗ ಅಬ್ದುಲ್ಲಾಹುಸೇನಿಯ ಅರಬ್ಬಿ ಗ್ರಂಥ ನಿಷಾತಉಲ್ಲಇಷ್ಕ್ ಎಂಬ ಕೃತಿಯ ಭಾಷಾಂತರ (ನೋಡಿ: ಬಂದೇನವಾಜ್‌ಖ್ವಾಜಾ).

ಬಿಜಾಪುರದ ಷಾಮಿರಾನ್ಜಿಷಮುಷುಲ್‌ಉಷ್ಷಾಕ್ ಹಾಗೂ ಅವನ ಪುತ್ರ ಬುರಹಾನುದ್ದೀನ್ ಖಾನಂ ಅನೇಕ ಗ್ರಂಥಗಳನ್ನು ರಚಿಸಿದರು. ಅವುಗಳಲ್ಲಿ ಜಲತರಂಗ, ಗುಲ್‌ದಾಸ್ ಮುಖ್ಯವಾದವು. ಮೀರಾನ್‌ಜೀಯ ಮಗಜೆ ಮರಗೂಬ್, ಚಹಾರ್ ಷಹಾದತ್ ಕೃತಿಗಳು ಪ್ರಸಿದ್ಧವಾಗಿವೆ. ಈ ಗ್ರಂಥಗಳನ್ನು ಇತ್ತೀಚೆಗೆ ಮೊಹಮದ್ ಹಾಷಿಮ್ ಅಲಿಯವರು ಸಂಪಾದಿಸಿ ಕೊಟ್ಟಿದ್ದಾರೆ. ಮೀರಾನ್‌ಜೀಯ ಮಗ ಬುರಹಾನುದ್ದೀನ್ ಖಾನಂ ರಚಿಸಿದ 'ಕಲಮತ್ ಉಲ್ಲ ಹಿಕಾಯತ್' ಉರ್ದು ಸಾಹಿತ್ಯದ ಮೊಟ್ಟ ಮೊದಲನೆಯ ಅಧಿಕೃತ ಗದ್ಯಗ್ರಂಥ. ಇವನು ಇರಷಾದ್ ನಾಮಾ, ಸುಖ ಸಹೇಲಾ ಎಂಬ ಮಸ್ನವಿಗಳನ್ನು ಬರೆದಿದ್ದಾನೆ.

ಬಹಮನೀ ಸುಲ್ತಾನರಲ್ಲಿ ಕೆಲವರು ಸ್ವತಃ ಕವಿಗಳಲ್ಲದೆ ಕವಿಪೋಷಕರೂ ಆಗಿದ್ದರು. ಆದಿಲ್‌ಶಾಹೀ ಮನೆತನದ ಆರನೆಯ ಸುಲ್ತಾನ ಎರಡನೆಯ ಇಬ್ರಾಹಿಂ ಆದಿಲ್‌ಷಾ (1580-1627) ಉರ್ದು ಸಾಹಿತ್ಯದ ಮಹಾನ್ ಪೋಷಕನಾಗಿದ್ದ. ಇವನಿಗೆ ಸಾಹಿತ್ಯದಲ್ಲಿ ತುಂಬಾ ಆಸಕ್ತಿಯಿತ್ತು. ಕಾವ್ಯ ಮತ್ತು ಸಂಗೀತವೆಂದರೆ ಇವನಿಗೆ ಪಂಚಪ್ರಾಣ. ಇವನು ದೊಡ್ಡ ಕವಿ ಹಾಗೂ ಸಂಗೀತ ವಿದ್ವಾಂಸ. ಈತ ನೌರಸ್‌ನಾಮಾ (ಕಿತಾಬೆ ನವರಸ್) ಎಂಬ ಉರ್ದುಗ್ರಂಥವನ್ನು ಸಂಗೀತದ ಬಗ್ಗೆ ರಚಿಸಿ ಲೋಕಪ್ರಖ್ಯಾತನಾದ (ನೋಡಿ: ಇಬ್ರಾಹೀಂ ಆದಿಲ್ ಷಾ II). ಇವನ ಕಾಲದಲ್ಲಿ ರುಸ್ತುಮ್ ಎಂಬ ಕವಿ ದ್ವಿಪದಿ ಕಾವ್ಯವನ್ನು ಬರೆದ. ಮೊಹಮದ್ ನುಸರತ್ ಎಂಬಾತ ಆದಿಲ್‌ಷಾನ ಆಸ್ಥಾನಕವಿ. ಇವನ ಕಾವ್ಯನಾಮ 'ನುಸರತಿ'. ಇವನು ಮೂರು ದ್ವಿಪದಿ ಕಾವ್ಯಗಳನ್ನು ರಚಿಸಿದ. ಇವನ ಗುಲ್ಷನೆ ಇಷ್ಕ್ ಎಂಬ ಗ್ರಂಥದಲ್ಲಿ 8000 ಬೈತ್‌ಗಳಿವೆ. ಕನವರ ಮನೋಹರ್ ಮತ್ತು ಮಧುಮಾಲತಿಯ ಪ್ರಣಯ ಪ್ರಸಂಗವನ್ನು ಹೃದಯಂಗಮವಾಗಿ ವಿವರಿಸಿದ ಕಥೆಯಿದು. ನುಸರತಿಯ ಕಸೀದಾ ಅಂದರೆ ಜೀವಂತ ವ್ಯಕ್ತಿಗಳ ವರ್ಣನೆಗಳು ನಿರರ್ಗಳವಾಗಿ

ಓದಿಸಿಕೊಂಡು ಹೋಗುವಂಥ ಗ್ರಂಥ. ಇವನು ರಚಿಸಿದ ಎರಡು ಪ್ರೇಮಕಥಾ ಸಂಕಲನಗಳಿವೆ. ಮಿರಾಜ್‌ನಾಮಾ ಇವನ ಮತ್ತೊಂದು ಪ್ರಸಿದ್ಧ ಕಾವ್ಯ. ಅಲಿನಾಮಾ ಇವನ ಇನ್ನೊಂದು ಕೃತಿ. ಆಗಿನ ಕಾಲದ ಸುಲ್ತಾನರ ಯುದ್ಧದ ವಿವರಣೆಯನ್ನು ತಿಳಿಸುವ ಚಾರಿತ್ರಿಕ ಗ್ರಂಥವಿದು. ಇದರಲ್ಲಿ 7000 ಮಸ್ನವಿ ಪದ್ಯಗಳಿವೆ. ಸುಲ್ತಾನರ ಕಾಲದಲ್ಲಿ ಮರಸಿಮಾ ಎಂಬ ಶೋಕಗೀತೆಗಳನ್ನು ಬರೆಯುವುದಕ್ಕೆ ಪ್ರಾರಂಭವಾಯಿತು. ನಿಜಾಮಿ, ಮುಷ್ತಾಕ್, ಲುತ್‌ಫಿ, ಅಜುರಿ, ವಜಹಿ, ಗವಾಸಿ, ಕುತುಬಿ, ಇಬ್ನೆನಿಷಾತಿ ಮೊದಲಾದ ಕವಿಗಳೂ ಉರ್ದು ಸಾಹಿತ್ಯ ಸೇವೆಯನ್ನು ಮಾಡಿದರು.

ಸುಲ್ತಾನರ ಆಸ್ಥಾನದಲ್ಲಿದ್ದ ಮುನ್ಷಿಗಳು ಪಾರಸಿ, ಉರ್ದು, ಕನ್ನಡ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಪತ್ರ ವ್ಯವಹಾರ ಆಯಾ ಭಾಷೆಯಲ್ಲಿ ನಡೆಯುತ್ತಿತ್ತು. ರಾಜರಿಗೂ ಸುಲ್ತಾನರಿಗೂ ಮೆಚ್ಚುಗೆಯಾದ ಭಾಷೆಯನ್ನು ಅಧಿಕಾರಿಗಳು, ಸಾಮಾನ್ಯ ಜನರು ಕಲಿಯುತ್ತ ಬಂದರು.ಹೀಗೆ ಉರ್ದು ಭಾಷೆ ಜನ ಸಾಮಾನ್ಯರ ಭಾಷೆಯಾಯಿತು.

ಔರಂಗಜೇಬನ ಆಶ್ರಯದಲ್ಲಿದ್ದ ಬಿಜಾಪುರದ ಜಸವಂತರಾಯ ಮುನ್ಷಿ ಎಂಬ ಅಧಿಕಾರಿ ಪಾರಸಿ ಮತ್ತು ಉರ್ದುವಿನಲ್ಲಿ ಶ್ರೇಷ್ಠಕವಿ. ಇವನಂತೆ ಅನೇಕ ಹಿಂದು ಜನರು ಉರ್ದು ಪಾರಸಿ ಭಾಷೆಗಳಲ್ಲಿ ಅಮೋಘ ಸೇವೆ ಸಲ್ಲಿಸಿದರು. ಈ ಕಾಲದಲ್ಲಿ ದಖ್ಖನೀ ಸಾಹಿತ್ಯಕ್ಕಿಂತ ಉರ್ದು ಸಾಹಿತ್ಯಕ್ಕೆ ಹೆಚ್ಚಿನ ಪ್ರಾಧಾನ್ಯ ದೊರೆಯಿತು. ಅದು ದಕ್ಷಿಣಕ್ಕಿಂತ ಉತ್ತರದಲ್ಲಿ ಹೆಚ್ಚು ಉನ್ನತಿ ಪಡೆಯಿತು. ರಾಯಚೂರಿನ ನೂರ್‌ದರ್ಯಾ ವಂಶಕ್ಕೆ ಸಂಬಂಧಪಟ್ಟ ಮೊಹಮದ್ ಖಾದರಿ ಎಂಬಾತ ಅನೇಕ ಧಾರ್ಮಿಕ ಗ್ರಂಥಗಳನ್ನು ಉರ್ದುವಿನಲ್ಲಿ ರಚಿಸಿದ. 18ನೆಯ ಶತಮಾನದ ಆದಿಯಲ್ಲಿ ಉರ್ದು ಗದ್ಯ ಉತ್ತರ ಭಾರತದಲ್ಲಿ ಪ್ರಾರಂಭವಾಯಿತು. 1803ರಲ್ಲಿ ಷರೀಫ್ ಎಂಬಾತ ಪ್ರಥಮ ಬಾರಿಗೆ ಕುರಾನನ್ನು ಉರ್ದುವಿಗೆ ಅನುವಾದಿಸಿದ. ಇದರ ಭಾಷೆ ಸರಳ, ಸುಲಭ. ಹೈದರಾಬಾದ್, ಔರಂಗಾಬಾದ್, ಗುಲ್ಬರ್ಗ ಮೊದಲಾದ ಎಡೆಗಳಲ್ಲಿ ಉರ್ದು ಸಾಹಿತ್ಯಕ ಚಟುವಟಿಕೆಗಳು ತೀವ್ರಗೊಂಡವು. ಹೈದರಾಬಾದಿನ ನಿಜಾಮರ ಕಾಲದಲ್ಲೂ ಉರ್ದುಭಾಷೆಗೆ ರಾಜಾಶ್ರಯ ದೊರೆತು ಉರ್ದು ಸಾಹಿತ್ಯ ಉಚ್ಛ್ರಾಯ ಸ್ಥಿತಿಗೇರಿತು.

18ನೆಯ ಶತಮಾನದ ಉತ್ತರಾರ್ಧದಲ್ಲಿ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರು ಉರ್ದು ಸಾಹಿತ್ಯ ಹಾಗೂ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನಿತ್ತರು. ಹೈದರ್‌ಅಲಿ ವಿದ್ಯಾವಂತನಾಗಿರದಿದ್ದರೂ ಇವನ ಮಗ ಟಿಪ್ಪುಸುಲ್ತಾನ್ ಸ್ವತಃ ವಿದ್ವಾಂಸನಾಗಿದ್ದ. ಇವನ ಆಶ್ರಯದಲ್ಲಿ ಅನೇಕ ಪಾರಸಿ ಹಾಗೂ ಉರ್ದು ಕವಿಗಳಿದ್ದರು. ಹೈದರ್‌ಅಲಿಯ ಕಾಲದಲ್ಲಿದ್ದ ಲೇಖಕ ಷಾಮೊಹಮದ್‌ಸದರುದ್ದೀನ್ ಎಂಬಾತ ನೆಲಮಂಗಲದವನು. ಮನ್‌ಲಗನ್, ಮಿರಾತುಜಕರ್, ಮಸ್ಗಹಲ್ಲೂರ್ ಇವನ ಕೃತಿಗಳು. ಮನ್‌ಲಗನ್ ಮಸ್ನವಿ ಛಂದಸ್ಸಿನಲ್ಲಿದೆ. ಲಾಲಾ ಮೆಹ್ತಾಬ್‌ರಾಯ್ ಮೈಸೂರು ನಿವಾಸಿ. ಇವನ ಕೃತಿ ಮೆಹ್ತಾಬೆಸುಖುನ್. ಇದರಲ್ಲಿ ಪ್ರೇಮ ಗೀತೆಗಳಿವೆ. ಇದು ಗಜಲ್. ನಜಮ್, ರುಬಾಯತ್, ಖಿತಾತ್ ಮೊದಲಾದವು ಪದ್ಯ ಸಂಕಲನಗಳು. ಖಾದಿಮ್ ಫಕೀರ್, ಷಹಬಾಜ್, ಷೀರಾನಿ, ಷಾಕಿರ್, ಕಮಲ್ ಮೊದಲಾದ ಇತರ ಪ್ರಸಿದ್ಧ ಕವಿಗಳೂ ಈ ಕಾಲದಲ್ಲಿದ್ದರು.

ಟಿಪ್ಪುವಿನ ಮುನ್ಷಿಯಾಗಿದ್ದ ಮೀರ್ ಜೈನುಲ್ ಆಬದೀನ್ ಷೋಸ್ತ್ರೀಯು ಫತಹುಲ್ ಮುಜಾಹಿದೀನ್, ಖುತ್ಬಾತೆ ಜುಮಾ, ಮೋಬಿದುಲ್ ಉಜಾಹಿದೀನ್ ಎಂಬ ಕೃತಿಗಳನ್ನು ಬರೆದಿದ್ದಾನೆ. ಫತಹುಲ್ ಮುಜಾಹಿದೀನ್ ಎಂಬ ಗ್ರಂಥ ಗದ್ಯದಲ್ಲಿದೆ. ಇದರಲ್ಲಿ ಟಿಪ್ಪುವಿನ ರಾಜ್ಯ ವ್ಯವಸ್ಥೆಯನ್ನು ಹೇಳಲಾಗಿದೆ. ಹೈದರ್ ನಾಮಾ, ಬಹದ್ದೂರ್ ನಾಮಾ, ಫತೆ ನಾಮಾ ಎಂಬ ಗ್ರಂಥಗಳು ಇದೇ ಕಾಲದಲ್ಲಿ ರಚನೆಗೊಂಡ ಐತಿಹಾಸಿಕ ಕೃತಿಗಳು. ಹುಸೇನ್ ಅಲಿ ಕಿರ್ಮಾನಿ ಈ ಕಾಲದ ಶ್ರೇಷ್ಠ ಚರಿತ್ರೆಕಾರ. ನಿಷಾನೆ ಹೈದರಿ ಎಂಬ ಪಾರಸಿ ಕೃತಿ ಉರ್ದುವಿಗೆ ತರ್ಜುಮೆಯಾಗಿದೆ. ಇದು ಐತಿಹಾಸಿಕ ವಿಷಯಗಳಿಂದ ಕೂಡಿದ ಗ್ರಂಥ. ತರಬ್ ಎಂಬಾತ ಬರೆದ ಫತೆನಾಮಾ ಎಂಬ ಕೃತಿಯಲ್ಲಿ ಮರಾಠರಿಗೂ ಟಿಪ್ಪುವಿಗೂ ನಡೆದ ಯುದ್ಧದ ಸಾಹಸ ಕಾರ್ಯಗಳನ್ನು ವರ್ಣಿಸಲಾಗಿದೆ. ಹಸನ್ ಅಲಿ ಇಜ್ಜತ್‌ನ ಮಫರುಲ್ಲ ಕಲೂಬ್, ಗಂಜಾಮಿನ ಷೇರ್‌ಮಿಯ್ಯಾ ಫಜಲ್‌ನ ಚಹಾರ್ ಕುರ್ಸಿ ತರೀಕತ್, ಅಬ್ದುಲ್ ಹಕ್‌ನ ಚೋಟಿ ಚಹಾರ್ ಕುರ್ಸಿ ಎಂಬ ಕೃತಿಗಳು ಪ್ರಸಿದ್ಧವಿದೆ. ಷಹರ್ ಬಾನು ಷಾಕಿರಾ 'ಬಯಾಜ್ ಷಾಕಿರಾ' ರಚಿಸಿದ ಮೈಸೂರಿನ ಮೊದಲ ಮಹಿಳೆ.

ಹೈದರ್ ಅಲಿ ಮತ್ತು ಟಿಪ್ಪುವಿನ ಕಾಲದಲ್ಲಿ ಕನ್ನಡ, ಮರಾಠಿ ಪಾರಸಿ ಭಾಷೆಗಳಲ್ಲಿ ಲೆಕ್ಕಪತ್ರಗಳನ್ನು ಇಡುತ್ತಿದ್ದರು. ಕನ್ನಡ ಗ್ರಂಥಗಳಲ್ಲಿ ನಿತ್ಯವ್ಯವಹಾರದ ಭಾಷೆಯಲ್ಲಿ ಅನೇಕ ಉರ್ದು ಪಾರಸಿ ಪದಗಳು ತಲೆದೋರಿದವು. ಈ ಭಾಷೆ ಚಂದ್ರಸಾಗರವರ್ಣಿ (ಸು.1810) ಎಂಬ ಜೈನಕವಿಗೆ ಮುಲ್ಲಾಶಾಸ್ತ್ರವನ್ನು ಬರೆಯಲು ಪ್ರೇರಣೆಯನ್ನಿತ್ತಿತು. ಮುಲ್ಲಾಶಾಸ್ತ್ರ ಭಾಮಿನಿ ಷಟ್ಪದಿಯಲ್ಲಿದೆ.

ಮೈಸೂರು ಒಡೆಯರ ಕಾಲದಲ್ಲಿ ಉರ್ದು ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಸನ್ನದುಗಳಲ್ಲಿ ಪಾರಸಿ ಮತ್ತು ಉರ್ದು ಶಬ್ದಗಳು ಹೇರಳವಾಗಿವೆ. ಬೆಂಗಳೂರು, ಮೈಸೂರು, ಕೋಲಾರ, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಅನೇಕ ಉರ್ದು ಕವಿಗಳು, ಕವಯಿತ್ರಿಯರು ಆಗಿ ಹೋಗಿದ್ದಾರೆ. ಕೋಲಾರದ ಅಸಿಮ್ (ಸು.1831) ಪ್ರಸಿದ್ಧ ಕವಿಯಾಗಿದ್ದ. ಷಾ ಅಬ್ದುಲ್ ಹೈ (ಸು.1884) ಪ್ರವಾದಿ ಪೈಗಂಬರರನ್ನು ಕುರಿತು ಫಿನಾನಸ್‌ಸಿಯರ್ ಎಂಬ ಗ್ರಂಥ ಬರೆದಿದ್ದಾನೆ. ಇದಲ್ಲದೆ ಇವನು ನೂರಾರು ಪದ್ಯಗದ್ಯ ಕೃತಿಗಳನ್ನು ರಚಿಸಿದ್ದಾನೆ. ಹೈದರ್, ಟಿಪ್ಪುವಿನ ಬಗ್ಗೆ ಮಹಮೂದ್‌ಖಾನ್ ಹನ್ನೆರಡು ಐತಿಹಾಸಿಕ ಕೃತಿಗಳನ್ನು ಬರೆದಿದ್ದಾನೆ.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರಾಜಾಜ್ಞೆಗಳನ್ನು ಉರ್ದು ಹಾಗೂ ಕನ್ನಡದಲ್ಲಿ ಹೊರಡಿಸುತ್ತಿದ್ದರು. ಕೃಷ್ಣರಾಜ ಒಡೆಯರು ಕೆಲಮೊಮ್ಮೆ ಉರ್ದುವಿನಲ್ಲೂ ಭಾಷಣ ಮಾಡುತ್ತಿದ್ದರಂತೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉರ್ದು ಹಾಗೂ ಪರ್ಶಿಯನ್ ವಿಭಾಗಗಳನ್ನು ತೆರೆದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕರ್ನಾಟಕದ ಹಳೆಯ ಮೈಸೂರು ವಿಭಾಗದಲ್ಲಿ ಉರ್ದು ಸಾಹಿತ್ಯ ಸೇವೆಗೈದ ಮೊಹಮದ್ ಸಯೀದ ಮೆಹಕಲಿ, ಮೊಹಮದ್ ಮಖದೂಮ್ ಬಿಜಾಪುರಿ, ಸಯ್ಯದ್ ಮೊಹಮದ್ ಮಾರೂಫ್, ಅಹಮದ್ ಖಾನ್ ಷೀರಾನಿ, ಮೊಹಮದ್ ಇಸಹಾಕ್ ಬಿಜಾಪುರಿ, ಮೀರ್ ಹುಸೇನ್ ಅಲಿ ಕಿರಮಾನಿ, ಕಾಜಿ ಗುಲಾಮ ಅಹಮದ್, ಖೈರುಲ್ಲಾಷಾ ಕಾದರಿ, ಹುಸೇನ್ ಬಿನ್ ಖಾದಿರ್, ಸೈಯದ್ ಆರಿಫ್ ಷಾ ಕಾದರಿ, ಅಬ್ದಲ್ ಹೈವಾಜ್, ಮೊಹಮದ್ ಕಾಸಿಮ್ ಷಾಗೋಗಮ್, ಮೊಹಮದ್ ಹುಸೇನ್ ಅಲಿ ಸುಲ್ತಾನ ಬೆಂಕಿನವಾಬ್, ನಸೀಮ್,ಮುನ್ಷಿ ಕಲಂದರ ಹುಸೇನ್, ಮೊಹಮದ್ ಅಬ್ದುಲ್ ರಹಮಾನ್ ದಿಲ್, ಮೊಹಮದ್ ಬಾಕರ್ ಡೆಲ್ವಿ, ಆಯಿಷಾ ಬೇಗಂ, ರಕಿಯಾ ಬೇಗಂ ಮೊದಲಾದ ಸಾಹಿತಿಗಳನ್ನು ಇಲ್ಲಿ ಸ್ಮರಿಸಬಹುದು.

1956ರಲ್ಲಿ ಮೈಸೂರು ರಾಜ್ಯದ ಪುನರ್ ವ್ಯವಸ್ಥೆಯಾದಾಗ ಹಳೆಯ ಹೈದರಾಬಾದ್ ಸಂಸ್ಥಾನದಿಂದ ಕರ್ನಾಟಕಕ್ಕೆ ಬಂದು ಸೇರಿದ ರಾಯಚೂರು, ಗುಲ್ಬರ್ಗ, ಬೀದರ್ ಜಿಲ್ಲೆಗಳ ಸರ್ಕಾರಿ ಕಛೇರಿಗಳಲ್ಲಿ ಆರಂಭದಲ್ಲಿ ಎಲ್ಲ ಕೆಲಸ ಕಾರ್ಯಗಳೂ ಆಡಳಿತವೂ ಉರ್ದುವಿನಲ್ಲೇ ನಡೆಯುತ್ತಿತ್ತು. ಉರ್ದು ಭಾಷೆಯೇ ಶಿಕ್ಷಣ ಮಾಧ್ಯಮವಾಗಿತ್ತು. ಸಿದ್ದಯ್ಯ ಪುರಾಣಿಕ, ಸೇತುಮಾಧವರಾವ್ ಪಗಡಿ, ಜಗನ್ನಾಥರಾವ್ ಚಂಡ್ರಕಿ ಮೊದಲಾದವರು ಉರ್ದುವನ್ನು ಪ್ರಧಾನವಾಗಿ ಕಲಿತಿದ್ದರು. ರಾಯಚೂರಿನ ನ್ಯಾಯಾಧೀಶರಾಗಿದ್ದ ರಾಘವೇಂದ್ರ ರಾವ್ (1894–1974) ಅವರು ಮಾಡಿದ ಉರ್ದು ಸೇವೆಗಾಗಿ ಅವರಿಗೆ ಖಯಾಮ ಐ ಆಂಧ್ರಾ ಎಂಬ ಬಿರುದು ಬಂದಿತ್ತು.

ಕರ್ನಾಟಕದಲ್ಲಿ ಈಗ ಉರ್ದು ಭಾಷೆಯ ಬೆಳವಣಿಗೆ ಹಾಗೂ ಅಭಿವೃದ್ಧಿ ಸಾಕಷ್ಟಾಗಿದ್ದು ಸಾಹಿತ್ಯ, ವೃತ್ತಪತ್ರಿಕೆ, ಭಾಷಾಂತರ, ಕರ್ನಾಟಕ ಉರ್ದು ಅಕಾಡೆಮಿಯ ಸ್ಥಾಪನೆ, ನಿಘಂಟುಗಳ ಸಂಪಾದನೆ ಮುಂತಾದ ಕಾರ್ಯಗಳ ಮೂಲಕ ಕನ್ನಡದೊಡನೆ ಉರ್ದು ಹಿತಮಿತವಾಗಿ ಬೆರೆಯುತ್ತ ನಡೆದಿದೆ. ಇಬ್ರಾಹಿಂ ಜಲೀಸ್ ಅವರ ಭೂಕಾ ಬಂಗಾಲ, ಜರದ್ ಚೆಹರಾ ಎಂಬ ಉರ್ದು ಗ್ರಂಥಗಳು, ಚಿಂಚೋಳಿಯ ಮುಜ್ತಾಬಾ ಹುಸೇನರ ಕಿಸ್ಸಾ ಮುಖ್ತಸಿರ್, ಆಖಿರ್‌ಕಾರ್ (1997), ಮೇರಾ ಕಾಲಂ (1999) ಎಂಬ ಹಾಸ್ಯ ಪ್ರಬಂಧಗಳು, ಅಬ್ದುಲ್ ಕಾದಿರ್ ಅದೀಬ್‌ರ ನಕ್ಕಾರ ಖಾನೆ ಮೆ ತೋತೆ ಎಂಬ ವಿಡಂಬನಾತ್ಮಕ ಸಂಕಲನ, ಹುಬ್ಬಳ್ಳಿಯ ಅನಿಲ್ ಠಕ್ಕರ್ ಅವರ ಮೋಸಮಿ ಪರಿಂದೆ (1998) ಕಥಾಸಂಕಲನ, ಓಸ್ ಕಿ ಝಿಲ್ (2002) ಎಂಬ ಕಾದಂಬರಿ ಕರ್ನಾಟಕದಲ್ಲಿ ಉರ್ದು ಸಾಹಿತ್ಯಕ್ಕೆ ಮೆರುಗನ್ನು ನೀಡಿವೆ.

ಸುಲೇಮಾನ್ ಖತೀಬ್, ಮಹಮೂದ್ ಅಯಾಜ್, ಹಮೀದ್ ಅಲ್ಮಾಸ್, ಮುದ್ದಣ್ಣ ಮಂಜರ್, ಷಾ ಅಬ್‌ಲ್ ಹುಸೇನ್ ಅದೀಬ್, ನಸೀಮ ಮೈಸೂರಿ, ನಫೀಸ್ ಬೆಂಗಳೂರಿ, ಹಜರತ್ ಫೋತ್, ಹುಸನಾ ಸರ್ವರ್, ಜಮೀರ ಆಕಿಲ್‌ಷಾಹಿ, ಷಾಹಿದ್ ಮೈಸೂರಿ, ಜೋಹರ್ ಮೈಸೂರಿ, ಗೋಹರ್ ತರಿಕೆರವಿ, ರಾಹಿಲ್, ರಫಲಾಕ್ ಅಫಸರ್, ಸಲೀಮ ತಮನ್ನಾಯಿ ಮೊದಲಾದ ಸಾಹಿತಿಗಳು ತಮ್ಮ ಸಾಹಿತ್ಯ ಕೃತಿಗಳಿಂದ ಉರ್ದು ಬೆಳೆಯನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

ಉರ್ದು ಭಾಷೆಯ ವಿದ್ವತ್ತಿನ ಕ್ಷೇತ್ರದಲ್ಲಿ ವಹಾಬ್ ಅಂದಲೀಬ್, ಖಾಲಿದ್ ಸಯೀದ್, ತಯ್ಯಬ್ ಅನ್ಸಾರಿ, ಮಹಮದ್ ಹಾಷಿಮ್ ಅಲಿ, ಮಸೂದ ಸಿರಾಜ್, ಹೈದರ್‌ಅಲಿ ಕರಮಡಿ, ಇಕ್ಬಾಲ್ ಹಾಷಿಮಿ, ಖಲೀಲ್ ಮಾಮೂನ್, ಅಬ್ದುಲ್ ಅಹಮದ್ ಮೊದಲಾದವರು ಗಮನಾರ್ಹ ಕೆಲಸಮಾಡಿದ್ದಾರೆ. ಉರ್ದು ಗದ್ಯ ಸಾಹಿತ್ಯಕ್ಕೆ ಕರ್ನಾಟಕದ ಮಹಿಳೆಯರಲ್ಲಿ ಹಬೀಬುನ್ನಿಸಾ, ಅಮೀನಾಖಾನ್, ಫಹಮೀದಾ ಬೇಗಂ, ಜಮೀಲಾ ಬೇಗಂ, ಜಹಾನ್ ಅರಾಬೇಗಂ, ನೀಲೋಫರ ಸಮೀನಾ, ಸುಹಾನಾ ಷಬ್ನಮ್, ಮಹಮೂದಾ ಖಾನಂ, ಮಾಹೆಜಬೀನ್, ವಹಿದಾ ಖಾತೂನ್, ಮುಮತಾಜ್ ಜರೀನಾ ಮೊದಲಾದವರು ವಿಶೇಷ ಸೇವೆ ಸಲ್ಲಿಸಿದ್ದಾರೆ.

ವೃತ್ತಪತ್ರಿಕಾ ಕ್ಷೇತ್ರದಲ್ಲಿಯೂ ಉರ್ದು ಮುಂಚೂಣಿಯಲ್ಲಿದೆ. ಕರ್ನಾಟಕದ ಮಹಬೂಬ್‌ಹುಸೇನ್ ಜಿಗರ್, ಅಬುಲ್ ಹಕ್ ತಹರೀನ್, ಹಾಮಿದ್ ಅಕಮಲ್, ಉಸ್ಮಾನ್ ಸಹರಾಯಿ, ಹಕೀಮ ಲೇಕ, ಅಹಮದ್ ನೇಮಾನಿ, ಮಹಮೂದ್ ಅಯಾಜ್‌ಜಿಯಾಮೀರ್,

ಮಕ್ದೂಮ್ ಅಲಿ ಖಾನ್, ಷಫಿ ಅಹಮದ್ ಷರೀಫ್, ಇಸ್ಮಾಯಿಲ್ ತಾಬಿಷ್, ಅಬ್ದುಲ್‌ಹಾದಿ, ರಫ ಅತ್ ಮೊದಲಾದವರು ಪತ್ರಿಕಾ ಸಂಪಾದಕರುಗಳಾಗಿ ವೃತ್ತಪತ್ರಿಕಾ ವ್ಯವಸಾಯದಲ್ಲಿ ಅಗ್ರಗಣ್ಯರಾಗಿದ್ದಾರೆ.

ಕಾಸಿಮುಲ್ ಅಖ್ತಾರ್, ಮಹಾಫಿಜ್, ಷಮಾಯ ಸುಖಿನ್, ಷಾಹ್‌ರಾಹೆ ತರಕ್ಕಿ, ಮೈಸೂರ್ ಅಖ್ಬಾರ್, ಸಾಲಾರ್ (1964–2004), ಪಾಸ್ಬಾನ್, ಸಿಯಾಸತ್, ನಷೇಮನ್, ತರಜುಮಾನ್ ಜುನೂಬ್, ರಹನುಮಾಯೆ ಕರ್ನಾಟಕ ಮೊದಲಾದ ಪತ್ರಿಕೆಗಳು ಹೊರಬಂದವು. ಸಾಲಾರ್ ಪತ್ರಿಕೆ ಈಗಲೂ ಭಾರತಾದ್ಯಂತ ಪ್ರಸಾರದಲ್ಲಿದೆ.

ಉತ್ತಮ ಕೃತಿಗಳನ್ನು ಉರ್ದುವಿನಿಂದ ಕನ್ನಡಕ್ಕೆ, ಕನ್ನಡದಿಂದ ಉರ್ದುವಿಗೆ ಅನುವಾದಿಸುವ ಕಾರ್ಯ ಬಹಳ ಹಿಂದಿನಿಂದ ಸಾಗಿಬಂದಿದೆ. ರಾಜೇಂದ್ರಸಿಂಗ್ ಅವರ ಏಕ್ ಚಾದರ್ ಮೈಲೀಸಿ ಎಂಬ ಕಾದಂಬರಿಯನ್ನು ಲಿಂಗಸೂರ ವಿಠಲರಾಯರು ಅನುವಾದಿಸಿದ್ದಾರೆ. ರಫಿಯಾ ಮಂಜೂರುಲ್ ಅಮೀನರ ಆಲಮ್ ಪನಾಹ್ ಎಂಬ ಕಾದಂಬರಿಯನ್ನು (1987) ಶ್ಯಾಮಲಾ ಮಾಧವರು ಕನ್ನಡಕ್ಕೆ ಅನುವಾದಿಸಿದ್ದಾರೆ (1994). ಈ ಕೃತಿ ಫರಮಾನ್ ಎಂಬ ಹೆಸರಿನಲ್ಲಿ ಧಾರಾವಾಹಿಯಾಗಿ ದೂರದರ್ಶನದಲ್ಲೂ ಪ್ರಸಾರವಾಗಿದೆ (1992). ಇದಲ್ಲದೆ ರಜಾವುಜಬ್ಬಾರ್, ಫಿಕರ ತೌನ್‌ಸವಿ, ಕೇವಲ್ ಧೀರ್, ಮಸರೂರ್ ಜಹಾನ್, ಅತೀಯಾ ಪರವೀನ್, ನಯೀಮಾಜಾಫರಿ, ಬಾನು ಸರತಾಜ್, ಷಾಕಿರ್ ಕರೀಮಿ, ಎಂ.ಎಚ್. ಖಾನ್, ಬಲವಂತ್ ಸಿಂಗ್, ಜಫರ್ ಅಹಮದ್ ನಿಜಾಮಿ, ಅಜೀಜ್ ಕೈಸಿ, ಇಫತ್ತ ಮೋಹಾನಿ, ಬಷೇಷರ ಪ್ರದೀಪ್, ಜಗದೀಶ್ ಬಿಮಲ್, ಮುಜ್ತಬಾ ಹುಸೇನ್, ಮೀಮ್‌ಕಾಫ್ ಮೆಹ್ತಾಬ್, ರಫೀಯಾ ಮಂಜೂರುಲ್ಲ ಅಮೀನ್, ಅನ್ವರ್ ಇನಾಯತ್‌ಉಲ್ಲಾ, ಅನ್ವರ್‌ನುಜಹತ್, ಅನಿಲ್ ಠಕ್ಕರ್ ಮೊದಲಾದವರ ಉರ್ದುಕಥೆಗಳನ್ನು ಮಾಧವರಾವ್ ಮುಧೋಳ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ (1962–2004). ಸಂಯುಕ್ತ ಕರ್ನಾಟಕ, ಪ್ರಜಾಮತ, ಪ್ರಪಂಚ, ಕಸ್ತೂರಿ, ಕರ್ಮವೀರ, ಸುಧಾ, ಮಯೂರ, ಸಂಕೇತ, ಪುಸ್ತಕ ಪ್ರಪಂಚ, ತರಂಗ ಮೊದಲಾದ ವಿವಿಧ ಪತ್ರಿಕೆಗಳಲ್ಲಿ ಈ ಕಥೆಗಳು ಪ್ರಕಟವಾಗಿವೆ. ಮೌಲಾನಾ ಮೊಹಮ್ಮದ್ ಸಿರಾಜುಲ್ ಹಸನ್‌ರ ಮಾರ್ಗದರ್ಶನದಲ್ಲಿ ಕರ್ನಾಟಕ ಇಸ್ಲಾಮಿ ಸಾಹಿತ್ಯ ಪ್ರಕಾಶನ ಅನೇಕ ಉರ್ದು ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದೆ.

ಕನ್ನಡದಿಂದ ಉರ್ದು ಭಾಷೆಗೂ ಹಲವು ಪುಸ್ತಕಗಳು ಭಾಷಾಂತರಗೊಂಡಿವೆ. ಎಸ್.ಎಲ್.ಭೈರಪ್ಪನವರ ವಂಶವೃಕ್ಷ ಕಾದಂಬರಿಯನ್ನು ಸಯ್ಯದ್ ಷಹಾಬುದ್ದೀನ್ ರೋಷನ್ (1992), ಯು.ಆರ್. ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯನ್ನು ಷಫಿ ಅಹಮ್ಮದ್ ಷರೀಫ್ (1993), ಸರ್ವಜ್ಞನ ನೂರು ವಚನಗಳನ್ನು ಅಕಮಲ್ ಅಲ್ಯೂರಿ (2000), ಶಿವರಾಮ ಕಾರಂತರ ಚೋಮನದುಡಿ ಕಾದಂಬರಿಯನ್ನು ಮಾಹಿರ್ ಮನ್ಸೂರ್ (2003) ಉರ್ದುವಿಗೆ ಅನುವಾದಿಸಿದ್ದಾರೆ.

ಕರ್ನಾಟಕದಲ್ಲಿ ಉರ್ದು ಸೇವೆ ಮತ್ತು ಕನ್ನಡ ಉರ್ದು ಮೈತ್ರಿ ಬೆಳೆಸಲು ಉರ್ದು ಅಕಾಡೆಮಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಿ (1977) ಉರ್ದು ಸಾಹಿತ್ಯವನ್ನು ಬೆಳೆಸುವುದರಲ್ಲಿ ನೆರವಾಗಿದೆ. ಅನೇಕ ಕವಿಗಳಿಗೆ, ಗದ್ಯ ಲೇಖಕರಿಗೆ, ಭಾಷಾಂತರಕಾರರಿಗೆ ಪ್ರೋತ್ಸಾಹವಿತ್ತಿದೆ. ಉರ್ದು ಅಕಾಡೆಮಿಯ ವತಿಯಿಂದ ನಡೆದಿರುವ ಉರ್ದು ಕನ್ನಡ ಹಾಗೂ ಕನ್ನಡ ಉರ್ದು ನಿಘಂಟು ಒಂದು ಮಹತ್ತ್ವದ ಕೆಲಸವಾಗಿದೆ. ಉರ್ದು ಕನ್ನಡ ನಿಘಂಟು 1986ರಲ್ಲಿ ಪ್ರಕಟವಾಯಿತು. 1994ರಲ್ಲಿ ಪರಿಷ್ಕಾರ ಹಾಗೂ ಪುನರ್ ಮುದ್ರಣಗೊಂಡಿದೆ. ಈ ನಿಘಂಟಿನ ರಚನೆಯಲ್ಲಿ ಮೌಲಾನಾ ಅಬ್ದುಲ್ ಗಫಾರ್ (ಸಂಪಾದಕ), ಇಬ್ರಾಹಿಂ ಸಯೀದ್, ಎಂ.ಸಾದುಲ್ಲಾ ಅವರು ದುಡಿದಿದ್ದಾರೆ.

ಕನ್ನಡ – ಉರ್ದು ನಿಘಂಟಿನ ಪ್ರಕಟಣೆಯ (1994) ಕೆಲಸ ಅತ್ಯಂತ ಮಹತ್ತ್ವದ್ದು. ಇದು ಭಾರತದ ಇತಿಹಾಸದಲ್ಲೇ ಪ್ರಪ್ರಥಮವಾಗಿ ಸಿದ್ಧವಾದಂಥದ್ದು. ಇದರ ರಚನೆಯಲ್ಲಿ ನಜಿಮುಸ್ಸಾಕಿಬಂ ಷಹನಾ (ಸಂಪಾದಕ), ಮಾಧವರಾವ್ ಮುಧೋಳ್ (ಸಹಸಂಪಾದಕ), ವೆಂಕಟರಾವ್ ಗಂಗಾವತಿ (ಸಹಾಯಕ ಸಂಪಾದಕ) ದುಡಿದ್ದಾರೆ. ಈ ನಿಘಂಟು 1997ರಲ್ಲಿ ಪುನರ್ ಮುದ್ರಣಗೊಂಡಿದೆ (ನೋಡಿ: ಅಕಾಡೆಮಿಗಳು). (ಎಂ.ಎಂಯು.)

**ತಮಿಳು:** ಕನ್ನಡದ ಸೋದರ ಭಾಷೆಯಾದ ತಮಿಳು ಕನ್ನಡಕ್ಕಿಂತ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಸಾಹಿತ್ಯಕವಾಗಿ ತೆಲುಗಿನೊಂದಿಗೆ ಹೆಚ್ಚು ಬಾಂಧವ್ಯವನ್ನು ಹೊಂದಿರುವ ಕನ್ನಡ ಭಾಷಾವಿಷಯದಲ್ಲಿ ತಮಿಳಿಗೆ ಸಮೀಪವಾಗಿದೆ. ಆದರೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ತಮಿಳು ಸಾಹಿತ್ಯದೊಂದಿಗೆ ತೌಲನಿಕವಾಗಿ ಪರಿಶೀಲಿಸಿದಾಗ ಈ ಎರಡು ಸೋದರ ಭಾಷೆಗಳಿಗಿರುವ ಸಂಬಂಧ ಬಾಂಧವ್ಯಗಳು ಸಾಹಿತ್ಯಕವಾಗಿಯೂ ಬೆಳೆದುಬಂದಿವೆ ಎಂಬ ವಿಷಯ ವ್ಯಕ್ತವಾಗುತ್ತದೆ.

ಹತ್ತನೆಯ ಶತಮಾನಕ್ಕೆ ಮುಂಚೆ ಕನ್ನಡ ಮತ್ತು ತಮಿಳು ಭಾಷಾ ಸಾಹಿತ್ಯಗಳ ನಡುವೆ ಇದ್ದ ಸಂಬಂಧವನ್ನು ನಿರೂಪಿಸುವ ಮಾಹಿತಿಗಳು ಹೆಚ್ಚಾಗಿ ದೊರಕುವುದಿಲ್ಲ. ಪೂರ್ವದ ಹಳಗನ್ನಡದ ಶಾಸನಗಳ ಭಾಷೆ ತಮಿಳು ಶಾಸನಗಳ ಭಾಷೆಯನ್ನು ಹೋಲುತ್ತದೆ ಎಂದು ಹೇಳಬಹುದು. ಹಲ್ಮಿಡಿ ಶಾಸನದ ಕಾಲಕ್ಕೇ ತಮಿಳಿನಲ್ಲಿ ಸಮೃದ್ಧವಾದ ಸಾಹಿತ್ಯವಿತ್ತು. 4–5ನೆಯ ಶತಮಾನಗಳಲ್ಲಿ ಪ್ರಾಚೀನ ತಮಿಳು ಗೀತೆಗಳನ್ನು ಸಂಗ್ರಹಿಸಿ ಕ್ರಮಬದ್ಧವಾದ ಸಂಕಲನಗಳಾಗಿ ವಿಂಗಡಿಸುವ ಕಾರ್ಯ ನಡೆಯಿತು. ಸುಮಾರು ಇದೇ ಕಾಲದಲ್ಲಿ ತೊಲ್‌ಕಾಪ್ಪಿಯರ್ ರಚಿಸಿದ ತೊಲ್‌ಕಾಪ್ಪಿಯಮ್ ಎಂಬ ಲಕ್ಷಣ ಗ್ರಂಥ ಬೆಳಕು ಕಂಡಿತು. ಈ ಕಾಲದಲ್ಲಿ ಕನ್ನಡ ಸಾಹಿತ್ಯದ ಸ್ಥಿತಿಗತಿಗಳು ಹೇಗಿದ್ದವು ಎಂಬುದನ್ನು ತಿಳಿಯಲು ಸರಿಯಾದ ಆಧಾರಗಳಿಲ್ಲ.

ಪ್ರಾಚೀನ ತಮಿಳು ಗ್ರಂಥಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ತಿರುಕ್ಕುರಳ್. ಇದನ್ನು ಬರೆದವನು ತಿರುವಳ್ಳುವರ್. ಇವನ ಕಾಲ ಸು.200. ತಿರುಕ್ಕುರಳ್‌ನಲ್ಲಿ ವೆಣ್ಬಾ ಛಂದಸ್ಸಿಗೆ ಸೇರಿದ 1330 ಗೀತೆಗಳಿವೆ. ಈ ಕಾವ್ಯ ಕನ್ನಡವೂ ಸೇರಿದಂತೆ ಪ್ರಪಂಚದ ಅನೇಕ ಭಾಷೆಗಳಿಗೆ ಭಾಷಾಂತರವಾಗಿದೆ. ಆರ್.ನರಸಿಂಹಾಚಾರ್ಯ, ಬಿ.ಎಂ.ಶ್ರೀ., ಎಲ್.ಗುಂಡಪ್ಪ ಮೊದಲಾದವರು ತಿರುಕ್ಕುರಳ್‌ಅನ್ನು ಕನ್ನಡಕ್ಕೆ ಅನುವಾದ ಮಾಡಿದವರಲ್ಲಿ ಕೆಲವರು.

ಸು.2ನೆಯ ಶತಮಾನದಲ್ಲಿ ರಚಿತವಾದ ಶಿಲಪ್ಪದಿಕಾರಂ ತಮಿಳಿನ ಪಂಚಮಹಾಕಾವ್ಯಗಳಲ್ಲಿ ಒಂದು. ಇದರಲ್ಲಿ ನೀಲಗಿರಿಯ ಕನ್ನಡತಿಯರ ಕುಣಿತದ ಹಾಡಿನ ಪ್ರಸ್ತಾಪ ಬರುತ್ತದೆ. ಇದೇ ಕಾಲದ ಪೆರಿಂದೇವನಾರ್ ವೆಣ್ಬಾ ಛಂದಸ್ಸಿನಲ್ಲಿ ಭಾರತವನ್ನು ಬರೆದಿದ್ದಾನೆ. ಪಂಪ ಈ ತಮಿಳು ಭಾರತವನ್ನು ನೋಡಿರಬಹುದು.

7ನೆಯ ಶತಮಾನದಿಂದ ಸು. 2 ಶತಮಾನಗಳ ಕಾಲ ತಮಿಳಿನಲ್ಲಿ ಭಕ್ತಿ ಪಂಥದ ಸಾಹಿತ್ಯ ಬೆಳೆಯಿತು. ನಾಯನ್ಮಾರರು ಶೈವಪಂಥಕ್ಕೂ ಆಳ್ವಾರರು ವೈಷ್ಣವ ಪಂಥಕ್ಕೂ ಸೇರಿದವರು. ತೇವಾರಮ್ ಎಂಬ ಹೆಸರಿನ ಶೈವಗೀತೆಗಳೂ ದಿವ್ಯಪ್ರಬಂಧಗಳೆಂದು ಹೆಸರು ಪಡೆದ ವೈಷ್ಣವ ಗೀತೆಗಳೂ ದಕ್ಷಿಣ ದೇಶದ ಅನೇಕ ಭಕ್ತಿಕಾವ್ಯಗಳ ಮೇಲೆ ಪ್ರಭಾವ ಬೀರಿವೆ. ನಂಬಿ ಆಂಡಾರ್ ನಂಬಿ ಎಂಬುವನು ಶೈವ ಗೀತೆಗಳನ್ನೂ ನಾದಮುನಿ ಎಂಬುವವನು ವೈಷ್ಣವ ಗೀತೆಗಳನ್ನೂ ಸಂಗ್ರಹಿಸಿ ಸಂಕಲನ ಮಾಡಿದ್ದಾನೆ.

ತಮಿಳಿನಲ್ಲಿ ಬೌದ್ಧ ಜೈನ ಸಾಹಿತ್ಯಗಳು, ಆಮೇಲೆ ಶೈವ ವೈಷ್ಣವ ಸಾಹಿತ್ಯಗಳು ಬೆಳೆಯುತ್ತಿದ್ದ ಕಾಲದಲ್ಲಿ ಕನ್ನಡ ಸಾಹಿತ್ಯದ ಸ್ಥಿತಿಯನ್ನು ಸರಿಯಾಗಿ ನಿರ್ಧರಿಸುವ ಆಧಾರಗಳು ಕಡಿಮೆ. ಆದರೆ ಆ ಕಾಲದ ಶಾಸನಗಳ ಅಧ್ಯಯನದಿಂದ ತಮಿಳಿಗೂ ಇತರ ದ್ರಾವಿಡ ಭಾಷೆಗಳಿಗೂ ಸಮಾನವಾದ ಛಂದಸ್ಸುಗಳು ಕನ್ನಡದಲ್ಲಿ ಪ್ರಚಲಿತವಾಗಿದ್ದುವೆಂದು ಹೇಳಬಹುದು. ತಮಿಳಿನ ಕುಱಳ್, ವೆಣ್ಬಾ ಛಂದಸ್ಸುಗಳು ಕನ್ನಡದ ಏಳೆ, ತ್ರಿಪದಿ ಮುಂತಾದ ದೇಸೀ ಛಂದಸ್ಸುಗಳನ್ನು ಹೋಲುತ್ತವೆ.

10ನೆಯ ಶತಮಾನಕ್ಕೆ ಮುಂಚೆ ಗುಣಗಾಂಕಿಯಂ ಎಂಬ ಕನ್ನಡ ಲಕ್ಷಣ ಗ್ರಂಥ ತಮಿಳಿನ ಯಾಪ್ಪರುಂಗಲಮ್ ಎಂಬ ಛಂದೋಗ್ರಂಥದ ಆಧಾರ ಗ್ರಂಥಗಳಲ್ಲಿ ಒಂದಾಗಿತ್ತು ಎಂಬುದು ಗಮನಾರ್ಹ ಸಂಗತಿ. ಕನ್ನಡದ ಶಿವಶರಣರ ಮೇಲೆ ನಾಯನ್ಮಾರರ ಪ್ರಭಾವವಿತ್ತು ಎಂಬುದರಲ್ಲಿ ಸಂದೇಹವಿಲ್ಲ. 11ನೆಯ ಶತಮಾನದ ಕೊನೆಯ ವೇಳೆಗೆ ತಮಿಳುನಾಡಿನ ಶೈವಧರ್ಮ ಕನ್ನಡನಾಡಿಗೆ ಹರಡತೊಡಗಿತು. ಕನ್ನಡ ನಾಡಿನಲ್ಲಿ ಅದುವರೆಗೂ ಇದ್ದ ಜೈನಧರ್ಮಕ್ಕೆ ಶೈವರಾದ ಚೋಳರಿಂದ ರಾಜಕೀಯ ಆಘಾತಗಳೊಂದಿಗೆ ಧಾರ್ಮಿಕವಾದ ಒತ್ತಡಗಳೂ ಹೆಚ್ಚಿದುವು. ಚೋಳರ ನಾಡಿನಿಂದ ರಾಮಾನುಜಮತದ ಭಕ್ತಿರೀತಿ ಕರ್ನಾಟಕದಲ್ಲೂ ಹರಡಿತು.

12–14ನೆಯ ಶತಮಾನದವರೆಗಿನ ಕಾಲದಲ್ಲಿ ಕನ್ನಡದ ಮೇಲೆ ತಮಿಳಿನ ಪ್ರಭಾವವನ್ನು ಕಾಣಬಹುದು. ಬಸವೇಶ್ವರರ ಧಾರ್ಮಿಕ ಕ್ರಾಂತಿಗೆ ತಮಿಳುನಾಡಿನ ಶೈವ ಕೊಡುಗೆಯೂ ತಕ್ಕಮಟ್ಟಿಗೆ ಇದೆ ಎಂದು ಹೇಳಬಹುದು. ಬಸವಣ್ಣನವರು ಬಾಳಿದ ಯುಗದಲ್ಲಿ ಸಾಹಿತ್ಯ 'ಮಾರ್ಗ'ದಿಂದ 'ದೇಸಿ'ಗೆ ಬದಲಾಗುತ್ತಿದ್ದ ಸಂಕ್ರಮಣ ಕಾಲವಾಗಿತ್ತು. ವಚನ ಸಾಹಿತ್ಯ ತಮಿಳು ಶೈವ ಸಂಪ್ರದಾಯದ ತೇವಾರಮ್ ಎಂಬ ಭಕ್ತಿಗೀತೆಗಳ ಪ್ರಭಾವದಿಂದ ಹುಟ್ಟಿತೆಂಬ ಅಭಿಪ್ರಾಯಮೂ ಇದೆ. ತಮಿಳುನಾಡಿನ ಶೈವಸಿದ್ಧಾಂತಗಳನ್ನೂ ಶಿವಶರಣರ ಚರಿತ್ರೆಗಳನ್ನೂ ತಕ್ಕಮಟ್ಟಿಗೆ ಉಪಯೋಗಿಸಿಕೊಂಡವರಲ್ಲಿ ಹರಿಹರನನ್ನು ಪ್ರಮುಖವಾಗಿ ಗುರುತಿಸಬೇಕು. ಅರವತ್ತುಮೂವರು ಪುರಾತನರು ಎಂದು ಹೆಸರು ಪಡೆದಿರುವ ತಮಿಳನಾಡಿನ ಶಿವಶರಣರನ್ನು ಬಸವಣ್ಣನವರು ಸ್ಮರಿಸಿದ್ದಾರೆ. ಶೇಕ್ಕಿಳಾರ್ ರಚಿತ 'ಪೆರಿಯಪುರಾಣಂ' ಅರವತ್ತುಮೂವರ ಚರಿತ್ರವನ್ನು ಕೀರ್ತಿಸುವ ಗ್ರಂಥ. ಈ ಗ್ರಂಥವನ್ನು ಹರಿಹರ ನೋಡಿ ತನ್ನ ಕೆಲವು ರಗಳೆಗಳಿಗೆ ಕಥಾಭಾಗವನ್ನು ಆರಿಸಿಕೊಂಡಿರಬೇಕು. ಹರಿಹರನ ರಗಳೆಗಳಲ್ಲಿ ಕಂಡುಬರುವ ಕೆಲವು ತಮಿಳು ಪದಗಳನ್ನು ನೋಡಿದರೆ ಅವನಿಗೆ ತಮಿಳು ಭಾಷೆಯ ಪರಿಚಯವಿತ್ತೆಂದು ತೋರುತ್ತದೆ. ಹೀಗೆಯೇ ಆಂಡಯ್ಯ ಕಬ್ಬಿಗರಕಾವವನ್ನು ಬರೆಯಲು ಶೆಂದಮಿಟ್ ಕಾವ್ಯಗಳು ಪ್ರೇರಕವಾಗಿದ್ದುವೇನೋ ಎಂಬುದೊಂದು ಊಹೆ.

ರಾಮಾನುಜಾಚಾರ್ಯರ ಸ್ತೋತ್ರಗಳ ಪ್ರಭಾವ ದಾಸರ ಪದಗಳ ಮೇಲೆ ಇದ್ದಿತೆಂದು ಹೇಳಬಹುದು. ದಾಸರ ಪದಗಳ ರಚನೆಯ ಕಾಲಕ್ಕೆ ಸ್ವಲ್ಪ ಮುಂಚೆ ಹೊರಬಂದ ಸಾಹಿತ್ಯದಲ್ಲಿ ತಮಿಳು ಭಾಷಾಸಾಹಿತ್ಯಗಳ ಸಂಪರ್ಕ ಕಂಡುಬರುತ್ತದೆ. ಚಾಮರಸನ ಪ್ರಭುಲಿಂಗಲೀಲೆ

(ಸು.1430) ತಮಿಳಿಗೆ ಅನುವಾದವಾಗಿದೆ. ಶಿವಪ್ರಕಾಶಸ್ವಾಮಿ (17ನೆಯ ಶತಮಾನ) ಎಂಬುವನು ಈ ಕೃತಿಯ ಅನುವಾದಕ. ನಿಜಗುಣಶಿವಯೋಗಿ ತನ್ನ ಅರವತ್ತುಮೂವರ ತ್ರಿಪದಿಯಲ್ಲಿ ಶಿವಭಕ್ತರಾದ ತಮಿಳುನಾಡಿನ ಅರವತ್ತುಮೂವರನ್ನು ಸ್ತುತಿಸಿದ್ದಾನೆ. ತ್ರಿಷಷ್ಟಿ ಪುರಾತನರ ಚರಿತ್ರೆ ಎಂಬ ಹೆಸರಿನಲ್ಲಿ ಇಂಥದನ್ನೇ ಸುರಂಗಕವಿಯೂ ಬರೆದಿದ್ದಾನೆ. ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನಕ್ಕೆ ತಮಿಳು ಗ್ರಂಥವೇ ಆಧಾರವೆಂದು ತಿಳಿದುಬಂದಿದೆ.

ಚಿಕ್ಕದೇವರಾಯನ ಕಾಲದ ಅನೇಕ ಕವಿಗಳು ತಮಿಳು ಬಲ್ಲವರಾಗಿದ್ದರು. ಗೀತಗೋಪಾಲ ಮುಂತಾದ ಗ್ರಂಥಗಳ ಅಚ್ಚಕನ್ನಡ ಹೊಸಕಳೆಗೆ ಶೆಂದಮಿಳ್ ಪ್ರಭಾವ ಸ್ವಲ್ಪಮಟ್ಟಿಗೆ ಕಾರಣವಾಗಿರಬಹುದು. ಶ್ರೀವೈಷ್ಣವರಾದ ಸಿಂಗರಾರ್ಯ, ತಿರುಮಲಾರ್ಯ ಮೊದಲಾದವರಿಗೆ ತಮಿಳಿನ ಪರಿಚಯ ಇದ್ದಿರಬೇಕು. ಚಿಕುಪಾಧ್ಯಾಯನ ಗ್ರಂಥಗಳಲ್ಲಿ ಬಹುಪಾಲು ವೈಷ್ಣವ ಗ್ರಂಥಗಳಾಗಿವೆ.

ಹೊಸಗನ್ನಡ ಯುಗದ ಮೊದಲನೆಯ ಹಂತದಲ್ಲಿ ತಮಿಳು ಗ್ರಂಥಗಳಿಂದ ಅನುವಾದವಾದ ಅನೇಕ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಕ್ರೈಸ್ತ ಮಿಷನರಿಗಳು ಧಾರ್ಮಿಕ ಗ್ರಂಥಗಳನ್ನೂ ತಮಿಳಿನಿಂದ ಭಾಷಾಂತರ ಮಾಡಿರುತ್ತಾರೆ. ಜಾನ್ ರೀಡ್, ಕೆ.ವಿ.ಜೋಸಿಯಾ, ಇ.ಎಲ್.ಚಾರ್ಬಾ ಮೊದಲಾದವರು ತಮಿಳಿನಲ್ಲಿದ್ದ ಧಾರ್ಮಿಕ ಗ್ರಂಥಗಳನ್ನು ಕ್ರೈಸ್ತಧರ್ಮದ ಪ್ರಚಾರಕ್ಕಾಗಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಕ್ರೈಸ್ತಮಿಷನರಿಗಳೇ ಅಲ್ಲದೆ ದೇಶೀಯ ಪಂಡಿತರೂ ತಮಿಳಿನಿಂದ ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಆರ್.ನರಸಿಂಹಾಚಾರ್ಯರು ಕರ್ನಾಟಕಕ್ಕೆ ಸಂಬಂಧಿಸಿದ ತಮಿಳು ಶಾಸನಗಳನ್ನೂ ಅವ್ವೆಯಾರ್‌ನಿಂದ ಹಿಡಿದು ತಿರುವಳ್ಳುವರ್‌ವರೆಗಿನ ನೀತಿಪದ್ಯಗಳನ್ನು ಅನುವಾದ ಮಾಡಿ ಕನ್ನಡಿಗರಿಗೆ ನೀಡಿದ್ದಾರೆ. ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಮತ್ತೆ ತಮಿಳಿನ ಪ್ರಭಾವ ಕನ್ನಡದ ಮೇಲೆ ಕಾಣಿಸಿಕೊಂಡಿದೆ. ಬಿ.ಎಂ.ಶ್ರೀ. ಅವರ ಸಿರಿಗನ್ನಡಂ ಗೆಲ್ಗೆ ಎಂಬ ಘೋಷಣೆಗೆ ಸ್ಫೂರ್ತಿ ಶೆಂದಮಿಳ್ ಎನ್ನುವ ಅಭಿಪ್ರಾಯವಿದೆ. ಭಾಷಿಕವಾಗಿ ಕಾಲ್ಡ್‌ವೆಲ್ ತಮಿಳು ಕನ್ನಡದ ತೌಲನಿಕ ವಿವೇಚನೆ ಮಾಡಿದ್ದಾನೆ. (ಆರ್.ವಿ.ಎಸ್.ಎಸ್.)

ಇವರಲ್ಲದೆ ಟಿ.ಬರೊ, ಬಿ.ಎಚ್.ಕೃಷ್ಣಮೂರ್ತಿ, ಎಂ.ಬಿ.ಎಮಿನೊ ಮೊದಲಾದ ಭಾಷಾತಜ್ಞರು ತಮಿಳು–ಕನ್ನಡ ಮತ್ತು ಇತರ ಭಾಷೆಗಳ ಬಾಂಧವ್ಯ ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಇತರ ಭಾಷೆಯ ಸಾಹಿತ್ಯ ಕ್ಷೇತ್ರಗಳಲ್ಲಿ ಆದಂತೆ ತಮಿಳಿನಲ್ಲಿ ಕೂಡ ಆಧುನಿಕ ಸಾಹಿತ್ಯದ ರಚನೆಗೆ ಪಾಶ್ಚಾತ್ಯ ಭಾಷೆ ಮತ್ತು ಸಾಹಿತ್ಯಗಳ ಪ್ರಭಾವವೇ ಪ್ರಧಾನವಾಗಿ ಕಂಡುಬರುತ್ತವೆ. 1950ರ ಅನಂತರದ ಕಾಲದಲ್ಲಿ ರಚಿತವಾದ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆ, ಕಾದಂಬರಿ, ನಾಟಕ, ಕಾವ್ಯ ಹಾಗೂ ದಲಿತ ಸಾಹಿತ್ಯ, ಸ್ತ್ರೀವಾದಿ ಸಾಹಿತ್ಯ ಮುಖ್ಯವಾದವು.

ಕರ್ನಾಟಕದಲ್ಲಿ ದಲಿತ ಸಾಹಿತ್ಯದ ಉಗಮಕ್ಕೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿ, ಅಂಬೇಡ್ಕರ್‌ವಾದ, ಲೋಹಿಯಾವಾದ, ಆಫ್ರಿಕನ್ ಕಪ್ಪು ಸಾಹಿತ್ಯ ಮುಂತಾದವು ಕಾರಣವಾದರೆ ತಮಿಳುನಾಡಿನ ದಲಿತ ಸಾಹಿತ್ಯಕ್ಕೆ ಪೆರಿಯಾರ್ ಮತ್ತು ಅಂಬೇಡ್ಕರ್ ಮೊದಲಾದವರ ಚಿಂತನೆಗಳು ಪ್ರೇರಣೆ ನೀಡಿದವು.

ಸ್ತ್ರೀ ಸಮಾನತೆಯನ್ನು ಎತ್ತಿ ಹಿಡಿಯುವ ಸಾಹಿತ್ಯ ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿರುವುದು ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದಲೇ ಎಂಬ ಸಂಗತಿ ಗಮನಾರ್ಹವಾಗಿದೆ. ವಿಶ್ವಸಂಸ್ಥೆಯು 1975ನೆಯ ವರ್ಷವನ್ನು ಅಂತಾರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಿತು. ಅನಂತರ ರೂಪುಗೊಂಡ ಈ ಸಾಹಿತ್ಯಕ್ಕೆ ಪರಂಪರೆಯ ಕೆಲವು ಪ್ರೇರಣೆಗಳಿದ್ದರೂ ಅಂತಾರಾಷ್ಟ್ರೀಯ ಮಹಿಳಾ ವರ್ಷದ ಘೋಷಣೆ ಮತ್ತು 1985ರಲ್ಲಿ ನಡೆದ ಮಹಿಳಾ ದಶಮಾನೋತ್ಸವದ ಆಚರಣೆ ಮುಖ್ಯ ಕಾರಣವಾದವು. ತಮಿಳುನಾಡಿನಲ್ಲಿ ಸ್ತ್ರೀವಾದ ಸಾಹಿತ್ಯ ಅಂಕುರಿಸಲು ಸುಬ್ರಹ್ಮಣ್ಯ ಭಾರತಿ ಮತ್ತು ಪೆರಿಯಾರ್‌ರವರ ಸ್ತ್ರೀಪರ ಹೋರಾಟಗಳು ಪ್ರೇರಣೆ ನೀಡಿದವು.

ಆಧುನಿಕ ಸಾಹಿತ್ಯದಲ್ಲಿ ಸಣ್ಣಕಥೆ, ಕಾದಂಬರಿ, ನಾಟಕ, ಕಾವ್ಯ ಮುಂತಾದ ಪ್ರಕಾರಗಳಲ್ಲಿ ತಮಿಳು ಮತ್ತು ಕನ್ನಡ ಭಾಷೆಗಳ ನಡುವೆ ನಿಕಟವಾದ ಸಂಬಂಧವನ್ನು ಕಲ್ಪಿಸಿಕೊಟ್ಟ ಕ್ಷೇತ್ರವೆಂದರೆ ಅನುವಾದ ಕ್ಷೇತ್ರ. ಅನುವಾದಗಳ ಮೂಲಕ ಈ ಎರಡೂ ಭಾಷೆಗಳಲ್ಲಿ ಸಾಹಿತ್ಯಕ ಕೊಳುಕೊಡುಗೆಗಳು ನಡೆದವು. ಜಯಕಾಂತನ್ ಅವರ ಸಣ್ಣಕತೆಗಳನ್ನು ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆ ಕನ್ನಡಕ್ಕೆ ಅನುವಾದ ಮಾಡಿಸಿದೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ತಮಿಳಿನ ಅನೇಕ ಸಣ್ಣಕಥೆಗಳನ್ನು ಅನುವಾದ ಮಾಡಿಸಿ ತಮಿಳು ಕಥಾಸಂಕಲನ ಎಂಬ ಹೆಸರಿನಲ್ಲಿ ಹೊರತಂದಿದೆ. ಅಖಿಲನ್ ಅವರು ಸಂಕಲಿಸಿದ ತಮಿಳು ಸಣ್ಣಕಥೆಗಳ ಸಂಕಲನವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ತಮಿಳು ಕಥಾ ಸೌರಭ ಎಂಬ ಶೀರ್ಷಿಕೆಯಲ್ಲಿ ಅನುವಾದ ಮಾಡಿಸಿ ಪ್ರಕಟಿಸಿದೆ. ರಾಷ್ಟ್ರಕವಿ ಕುವೆಂಪು ಅವರ ಸಣ್ಣಕಥೆಗಳನ್ನು ಕುವೆಂಪುವಿನ್ ಸಿರುಗತೈಗಳ್ ಎಂಬ ಹೆಸರಿನಲ್ಲಿ ನಟರಾಜನ್ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಅನುವಾದಿಸಿದ್ದಾರೆ. ಮಾಸ್ತಿಯವರ ಸಣ್ಣಕಥೆಗಳನ್ನು ಶೇಷನಾರಾಯಣ ಅವರೂ ಪಿ.ಲಂಕೇಶ್ ಅವರ ಸಣ್ಣ ಕಥೆಗಳನ್ನು ಪಾವಣ್ಣನ್ ಅವರೂ ಕ್ರಮವಾಗಿ ಮಾಸ್ತಿ ಸಿರುಗತೈಗಳ್, ಕಲ್‌ಕರೈಯುಂ ನೇರಂ ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಯಶವಂತ ಚಿತ್ತಾಲರ ಕಥೆಯಾದಳು ಹುಡುಗಿ ಎಂಬ 'ಸಣ್ಣಕಥಾ ಸಂಕಲನ'ವನ್ನು ಸಿದ್ಧಲಿಂಗಯ್ಯನವರು ಒರು ಪೆಣ್ ಗತೈಯಾಗಿರಾಳ್ ಎಂದು ಅನುವಾದಿಸಿದ್ದಾರೆ.

ವೇದನಾಯಗಂ ಪಿಳ್ಳೈ ಎಂಬುವರು ರಚಿಸಿದ (1879) ಪ್ರತಾಪ ಮೊದಲಿಯಾರ್ ಚರಿತಿರಂ ಎಂಬ ತಮಿಳಿನ ಮೊಟ್ಟಮೊದಲ ಕಾದಂಬರಿಯನ್ನು ಮತ್ತೂರು ಕೃಷ್ಣಮೂರ್ತಿ ಯವರು ಅನುವಾದಿಸಿದ್ದಾರೆ. ರಾಜಮಯ್ಯರ್ ರಚಿಸಿದ (1896) ಕಮಲಾಂಬಾಳ್ ಚರಿತಿರಂ ಎಂಬ ಕಾದಂಬರಿಯನ್ನು ಸಂಪತ್ ಗಿರಿರಾಜು ಅವರು, ಕಲ್ಕಿಯವರ ಅಲೈಯೋಸೈ, ಅಖಿಲನ್ ಅವರ ಪಾವೈ ವಿಳಕ್ಕು ಎಂಬ ಕಾದಂಬರಿಗಳನ್ನು ಮತ್ತೂರು ಕೃಷ್ಣಮೂರ್ತಿಯವರು ಕನ್ನಡಕ್ಕೆ ತಂದಿದ್ದಾರೆ. ಅಖಿಲನ್ ಅವರ ಚಿತ್ತಿರಪ್ಪಾವೈ ಎಂಬ ಮತ್ತೊಂದು ಕಾದಂಬರಿಯನ್ನು ಚಿತ್ರಕನ್ಯೆ ಎಂಬ ಹೆಸರಿನಲ್ಲಿ ಅನುವಾದ ಮಾಡಿಸಿ ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸಿದೆ. ವರದರಾಜನ್ ಅವರ ಅಗಳ್‌ವಿಳಕ್ಕು ಎಂಬ ಕಾದಂಬರಿಯನ್ನು ಶೇಷನಾರಾಯಣ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಮಾಸ್ತಿಯವರ ಚಿಕ್ಕವೀರರಾಜೇಂದ್ರ ಎಂಬ ಕಾದಂಬರಿಯನ್ನು ಹೇಮಾ ಆನಂದತೀರ್ಥನ್ ಅವರು ತಮಿಳಿಗೆ ಅನುವಾದಿಸಿದ್ದಾರೆ. ನ್ಯಾಷನಲ್ ಬುಕ್ ಟ್ರಸ್ಟ್ ಈ ಕೃತಿಯನ್ನು ಪ್ರಕಟಿಸಿದೆ. ಪೂರ್ಣಚಂದ್ರ ತೇಜಸ್ವಿಯವರ ಚಿದಂಬರ ರಹಸ್ಯ ಎಂಬ ಕಾದಂಬರಿಯನ್ನು ಚಿದಂಬರ ರಹಸಿಯಂ ಎಂದೂ ಚದುರಂಗರ ವೈಶಾಖ ಎಂಬ ಕಾದಂಬರಿಯನ್ನು ಮೌನ ಓಲಂ ಎಂದೂ ಎಂ.ಕೆ.ಇಂದಿರಾ ಅವರ ಗೆಜ್ಜೆಪೂಜೆ ಎಂಬ ಕಾದಂಬರಿಯನ್ನು ಸಲಂಗೈ ಚಡಂಗು ಎಂದೂ ಶಿವರಾಮ ಕಾರಂತರ ಜೋಮನದುಡಿ ಎಂಬ ಕಾದಂಬರಿಯನ್ನು ಮಣ್ಣೂಮನುಷ್ಯರೂ ಎಂದೂ ಕೆ.ವಿ. ಅಯ್ಯರ್ ಅವರ ಶಾಂತಲೆ ಎಂಬ ಕಾದಂಬರಿಯನ್ನು ಶಾಂತಲೈ ಎಂದೂ ತಮಿಳಿಗೆ ಅನುವಾದಿಸಲಾಗಿದೆ.

ಕೋಮಲಸ್ವಾಮಿನಾಥನ್ ಅವರ ತಣ್ಣೀರ್ ತಣ್ಣೀರ್ ಎಂಬ ಪ್ರಸಿದ್ಧ ನಾಟಕವನ್ನು ಸುಬ್ರಹ್ಮಣ್ಯಂ ಎನ್ನುವವರು ಕನ್ನಡಕ್ಕೆ ತಂದಿದ್ದಾರೆ. ಚಂದ್ರಶೇಖರ ಕಂಬಾರ ಅವರ ಸಿರಿ ಸಂಪಿಗೆ ಎಂಬ ನಾಟಕವನ್ನು ಸದಾಶಿವಂ ಎನ್ನುವವರು ತಿರುಸಂಪಿಗೈ ಎಂದು ತಮಿಳಿಗೆ ಅನುವಾದಿಸಿದ್ದಾರೆ.

ಸುಬ್ರಹ್ಮಣ್ಯ ಭಾರತಿ ಮತ್ತು ಭಾರತಿದಾಸನ್ ಅವರ ಆಯ್ದ ಕವನಗಳನ್ನು ಪಶುಮಲೈ ಅರಸು ಕನ್ನಡಕ್ಕೆ ತಂದಿದ್ದಾರೆ. ಇದಲ್ಲದೆ ಶ್ರೀಲಂಕಾದ ತಮಿಳು ಕವನಗಳು ಎಂಬ ಕವನ ಸಂಕಲನವನ್ನು ಕಾರ್ಲೋಸ್ ಎನ್ನುವವರು ಕನ್ನಡದಲ್ಲಿ ಸಂಪಾದಿಸಿದ್ದಾರೆ. ಸ.ಸ.ಮಾಳವಾಡ ಅವರು ಸಂಕಲಿಸಿದ ಬಸವಣ್ಣನವರ ವಚನಗಳನ್ನು ವಸವಣ್ಣರ್ ವಾಕ್ಕಮುದು ಎಂಬ ಹೆಸರಿನಲ್ಲಿ ಸಿದ್ಧಲಿಂಗಯ್ಯನವರು ಅನುವಾದಿಸಿದ್ದಾರೆ. ಇರೈಯಡಿಯಾನ್ ಎನ್ನುವವರು ಸರ್ವಜ್ಞನ ವಚನಗಳನ್ನು ವಿಶ್ವ ತಮಿಳು ಅಧ್ಯಯನ ಸಂಸ್ಥೆಯ ಪರವಾಗಿ ಅನುವಾದಿಸಿ ಪ್ರಕಟಿಸಿದ್ದಾರೆ. ತಮಿಳಿನ ನನ್ನೂಲ್ ಎಂಬ ವ್ಯಾಕರಣ ಗ್ರಂಥವನ್ನು ಬಿ.ನಂ. ಚಂದ್ರಯ್ಯನವರು ಕನ್ನಡಕ್ಕೆ ತಂದಿದ್ದಾರೆ. ಕನ್ನಡದ ಕವಿರಾಜಮಾರ್ಗವನ್ನು ವೆಂಕಟಾಚಲಂ ಎಂಬುವರು ತಮಿಳು ವಿಶ್ವವಿದ್ಯಾನಿಲಯದ ಪರವಾಗಿ ಅನುವಾದಿಸಿದ್ದಾರೆ. ಅರವಿಂದ ಮಾಲಗತ್ತಿಯವರ ಗೌರ್ನಮೆಂಟ್ ಬ್ರಾಹ್ಮಣ ಎಂಬ ಆತ್ಮಕಥೆಯನ್ನು ಪಾವಣ್ಣನ್‌ರವರು ತಮಿಳಿಗೆ ಅನುವಾದಿಸಿದ್ದಾರೆ. ಹಾಗೆಯೇ ಉ.ವೇ.ಸ್ವಾಮಿನಾಥ ಅಯ್ಯರ್ ಅವರ ಎನ್‌ಚರಿತ್ತಿರಂ ಎಂಬ ಆತ್ಮ ಚರಿತ್ರೆಯನ್ನು ಕನ್ನಡಕ್ಕೆ ತರಲಾಗಿದೆ.

ಹೀಗೆ ತಮಿಳು ಮತ್ತು ಕನ್ನಡ ಭಾಷೆಗಳ ಬಾಂಧವ್ಯ ಒಂದಲ್ಲಾ ಒಂದು ರೀತಿಯಲ್ಲಿ ನಿರಂತರವಾಗಿ ಮುಂದುವರಿದಿದೆ. (ಎಂ.ಟಿ.)

**ತೆಲುಗು:** ಕನ್ನಡ ಮತ್ತು ತೆಲುಗು ಭಾಷೆಗಳ ಬಾಂಧವ್ಯ ಬಹಳ ಹಿಂದಿನಿಂದಲೂ ಅಂದರೆ ಸಾತವಾಹನರು, ಚಾಳುಕ್ಯರು, ಚೋಳರು, ಕಾಕತೀಯರು, ವಿಜಯನಗರದ ಅರಸರು, ಕೊನೆಗೆ ಮೊನ್ನೆಮೊನ್ನೆಯ ಬ್ರಿಟಿಷರ ಕಾಲದಿಂದ ಈಗಿನವರೆಗೂ ನಡೆದುಕೊಂಡು ಬಂದಿದೆ. ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ ಭಾಷಿಕವಾಗಿ ನಾನಾಮುಖಗಳಿಂದ ಬೆಳೆದು ಬರುತ್ತಿರುವ ಈ ಬಾಂಧವ್ಯದ ಗುರುತುಗಳನ್ನು ಈ ಎರಡು ಭಾಷೆಗಳ ಸಾಹಿತ್ಯಕ ಕೃತಿಗಳಲ್ಲಿಯೂ ನಾವು ಕಾಣಬಹುದು. ತೆಲುಗರು ಆಂಧ್ರಪ್ರದೇಶದ ಗಡಿಪ್ರದೇಶಗಳಲ್ಲಿ ಮಾತ್ರವಲ್ಲದೆ ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಕಂಡುಬರುತ್ತಾರೆ. ಮುಖ್ಯವಾಗಿ ಕೋಲಾರ ಮತ್ತು ಬಳ್ಳಾರಿ ಜಿಲ್ಲೆ, ಬೆಂಗಳೂರು ನಗರ ಮುಂತಾದ ಪ್ರದೇಶಗಳಲ್ಲಿ ಇವರು ಬಹುಸಂಖ್ಯೆಯಲ್ಲಿ ನೆಲೆಸಿದ್ದಾರೆ.

ಕರ್ನಾಟಕದಲ್ಲಿ ತೆಲುಗು ಭಾಷೆ ಮಾತ್ರವಲ್ಲದೆ ತೆಲುಗು ಸಾಹಿತ್ಯವೂ ಆಶ್ರಯ ಪಡೆಯಿತು. ಕನ್ನಡದ ಆದಿಮಹಾಕವಿಯಾದ ಪಂಪ ತೆಲುಗಿನಲ್ಲಿ ಜಿನೇಂದ್ರ ಪುರಾಣವನ್ನು ಬರೆದಿದ್ದಾನೆ ಎಂಬ ಒಂದು ಅಭಿಪ್ರಾಯವಿದೆ. ಪೊನ್ನನೂ ತೆಲುಗಿನಲ್ಲಿ ಆದಿಪುರಾಣವನ್ನು ಬರೆದಿದ್ದಾನೆಂದು ಕೆಲವರ ಅಭಿಪ್ರಾಯ. ಆದರೆ ಈ ಅಭಿಪ್ರಾಯಗಳು ಸತ್ಯವಾದುವೆಂದು ಅಂಗೀಕರಿಸಲು ದೃಢ ಆಧಾರಗಳು ದೊರೆತಿಲ್ಲ.

ತೆಲುಗಿನ ಕವಿಯಾದ ಪಾಲ್ಕುರಿಕೆ ಸೋಮನಾಥನ ಜನ್ಮಸ್ಥಳದ ಬಗೆಗೆ ಭಿನ್ನಾಭಿಪ್ರಾಯಗಳಿದ್ದರೂ ಕೆಲವರ ಪ್ರಕಾರ ಈತ ಕನ್ನಡ ದೇಶದವನು. ಈತ ಅತ್ಯಂತ ವಿಶಿಷ್ಟವಾದ ತೆಲುಗುಕಾವ್ಯಗಳನ್ನು ಕರ್ನಾಟಕದಲ್ಲಿ ಸೃಷ್ಟಿಸಿದ್ದಾನೆ ಎಂದು ಹೇಳಬಹುದು. ಪ್ರೌಢದೇವರಾಯನ ಆಸ್ಥಾನದಲ್ಲಿ ಗೌಡ ಡಿಂಡಿಮಭಟ್ಟನನ್ನು ತನ್ನ ಪಾಂಡಿತ್ಯದಿಂದ ಸೋಲಿಸಿ ಶ್ರೀನಾಥನೆಂಬ ತೆಲುಗು ಕವಿ ಕನಕಾಭಿಷೇಕ ಸನ್ಮಾನವನ್ನು ಪಡೆದನೆಂದು ತಿಳಿಯುತ್ತದೆ. ಈತ ಕನ್ನಡ ದೇಶದಲ್ಲೂ ಸಂಚಾರ ಮಾಡಿ ಸನ್ಮಾನಗಳನ್ನು ಪಡೆದನೆಂದು ತಿಳಿಯುತ್ತದೆ. ಕನ್ನಡ ಮತ್ತು ತೆಲುಗು ಭಾಷೆಗಳ ಬಾಂಧವ್ಯ ಕೃಷ್ಣದೇವರಾಯನ ಕಾಲದಲ್ಲಿ ಅತ್ಯಂತ ಉನ್ನತಮಟ್ಟಕ್ಕೆ ಏರಿತು. ಕೃಷ್ಣದೇವರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂಬ ಕವಿಗಳಿದ್ದರು. ಅವರಲ್ಲಿ ಬಹುಪಾಲು ತೆಲುಗು ಕವಿಗಳೇ ಆಗಿದ್ದರು. ಆ ಕಾಲದ ತೆಲುಗು ಕವಿಗಳಿಗೆ ಕನ್ನಡದ ಪರಿಚಯವೂ ಇತ್ತು. ಅವರಲ್ಲಿ ಒಬ್ಬನಾದ ನಂದಿತಿಮ್ಮನ ಎಂಬುವನು ಪಾರಿಜಾತಾಪಹರಣಮು ಎಂಬ ಕಾವ್ಯವನ್ನು ತೆಲುಗಿನಲ್ಲಿ ಬರೆದು ಕೃಷ್ಣದೇವರಾಯನಿಗೆ ಅರ್ಪಿಸಿದ. ಕೃಷ್ಣದೇವರಾಯನ ಆಶ್ರಯದಲ್ಲಿದ್ದ ತಿಮ್ಮಣ್ಣ ತನ್ನ ಭಾರತವನ್ನು ಬರೆಯುವಾಗ ತೆಲುಗಿನ ಮಹಾಕವಿ ತಿಕ್ಕನನನ್ನು (13ನೆಯ ಶತಮಾನ) ಅನುಸರಿಸಿದ್ದಾನೆ. ಕೃಷ್ಣದೇವರಾಯ ಕನ್ನಡ ರಾಜ್ಯ ರಮಾರಮಣನಾದರೂ ಸಾಹಿತ್ಯದ ಮಟ್ಟಿಗೆ 'ಆಂಧ್ರಭೋಜ' ಎನಿಸಿಕೊಂಡಿದ್ದಾನೆ. ಅಮುಕ್ತಮಾಲ್ಯದ ಎಂಬ ಹೆಸರಿನ ಉದ್ಗ್ರಂಥವೊಂದನ್ನು ಬರೆದು ಕೃಷ್ಣದೇವರಾಯ ತೆಲುಗು ಕವಿಗಳಿಗೆ ಸ್ಫೂರ್ತಿ ನೀಡಿದ್ದಾನೆ.

ತೆಲುಗು ಸಾಹಿತ್ಯ ಚರಿತ್ರೆಯಲ್ಲಿ 'ಮೈಸೂರು ತೆಲುಗು' ಸಾಹಿತ್ಯ ಒಂದು ಪ್ರಧಾನ ಘಟ್ಟ. ಈ ಕಾಲಾವಧಿಯಲ್ಲಿ (1700–50) ಕನ್ನಡ ದೇಶದಲ್ಲಿ ತೆಲುಗು ಕವಿಗಳೇ ಅಲ್ಲದೆ, ಕನ್ನಡಿಗರೂ ತೆಲುಗು ಕಾವ್ಯಗಳನ್ನು ರಚಿಸಿದ್ದಾರೆ. ಚಿಕ್ಕದೇವರಾಯನ ಕಾಲದಿಂದ ಮೈಸೂರು ತೆಲುಗು ಸಾಹಿತ್ಯ ಪ್ರಾರಂಭವಾದರೂ ಅದಕ್ಕಿಂತ ಮುಂಚೆಯೇ ಹೆಸರಿಸಬೇಕಾದ ಕೆಲವು ಕಾವ್ಯಗಳಿವೆ. ಬೆಂಗಳೂರು ನಿರ್ಮಾಪಕ ಹಿರಿಯ ಕೆಂಪೇಗೌಡ (1513–69) ತೆಲುಗಿನವನೆಂದು ಕೆಲವರ ಅಭಿಪ್ರಾಯ. ಅವನ ಹೆಸರಿನಲ್ಲಿ ಗಂಗಾಗೌರೀ ವಿಲಾಸಮು ಎಂಬ ಒಂದು ತೆಲುಗು ಯಕ್ಷಗಾನವಿದೆ. ಇದನ್ನು ಕೆಲವರು ಕೆಂಪೇಗೌಡನ ಮೊಮ್ಮಗ ಬರೆದನೆಂದು ಅಭಿಪ್ರಾಯಪಡುತ್ತಾರೆ. ಚನ್ನಪಟ್ಟಣದ ನಿರ್ಮಾಪಕನಾದ ಇಮ್ಮಡಿ ಜಗದೇವರಾಯ ತೆಲುಗಿನಲ್ಲಿ ಅಧ್ಯಾತ್ಮ ರಾಮಾಯಣವನ್ನು ಬರೆದಿದ್ದಾನೆಂದು ಅವನ ಆಸ್ಥಾನಕವಿಯಾಗಿದ್ದ ಪೊನ್ನತೋಟ ಔಬಲಕವಿ ತನ್ನ ವಾಮನಪುರಾಣದಲ್ಲಿ ಹೇಳಿದ್ದಾನೆ. ಸುಗುಟೂರಿನ ಮುಮ್ಮಡಿ ತಮ್ಮಭೂಪಾಲ (17ನೆಯ ಶತಮಾನ) ಸಂಸ್ಕೃತ ಕರ್ನಾಟ ಆಂಧ್ರ ಭಾಷೆಗಳಲ್ಲಿ ಪಂಡಿತನೆಂದೂ ತೆಲುಗಿನಲ್ಲಿ ಅವನು ರಾಜೇಂದ್ರಚೋಳ ಚರಿತ್ರ, ಕುಮಾರಾರ್ಜುನೀಯಮು, ಸೌಂದರೇಶ ಚರಿತ್ರ ಎಂಬ ಮೂರು ಗ್ರಂಥಗಳನ್ನು ಬರೆದಿರುವನೆಂದೂ ತಿಳಿಯುತ್ತದೆ.

ಚಿಕ್ಕದೇವರಾಯನ ಕಾಲದಿಂದ ಕರ್ನಾಟಕದಲ್ಲಿ ತೆಲುಗು ಭಾಷಾ ಸಾಹಿತ್ಯಗಳಿಗೆ ಸಾಕಷ್ಟು ಪ್ರಾಧಾನ್ಯತೆ ದೊರೆಯಿತು. ಚಿಕ್ಕದೇವರಾಯನ ಅಂಕಿತದಲ್ಲಿರುವ ಕೆಲವು ಪದಗಳ ಕರ್ತೃಗಳು ಯಾರೋ ತಿಳಿಯದು. ಚಿಕ್ಕದೇವರಾಯನ ಪುತ್ರ ಕಂಠೀರವ ನರಸರಾಜನ (1704–13) ಹೆಸರಿನಲ್ಲಿ  ಅನೇಕ ತೆಲುಗು ಗ್ರಂಥಗಳಿವೆ. ಈ ಅರಸ ಸಂಸ್ಕೃತ, ಪ್ರಾಕೃತ, ಕರ್ನಾಟಕ, ಆಂಧ್ರ, ದ್ರಾವಿಡ ಭಾಷೆಗಳಲ್ಲಿ ಕವಿ, ಪಂಡಿತನೆಂದು ಹೇಳಲಾಗಿದೆ. ಇವನು ತೆಲುಗಿನಲ್ಲಿ ಆಂಧ್ರ ಕೊಜಿವಂಜಿ, ಪಂಚಾಯುಧ ಕಟ್ಲೆ, ಲಕ್ಷ್ಮೀವಿಲಾಸಮು, ಕಲವಾಣೀ ವಿಲಾಸಮು, ನಾಟ್ಯವಿದ್ಯಾವಿಲಾಸಮು, ವಸಂತೋತ್ಸವ ವಿಲಾಸಮು, ವಿಭಕ್ತಿ ಕಾಂತಾ ವಿಲಾಸಮು, ಅಷ್ಟದಿಕ್ಪಾಲಕ ವಿಲಾಸಮು, ಪಾವಕಿ ನಾಟಕಮು, ವೈವಸ್ವತ ನಾಟಕಮು, ನೈರುತಿ ನಾಟಕಮು, ವಾರುಣಿ ನಾಟಕಮು, ವಾಯವಿ ನಾಟಕಮು, ಕೌಬೇರಿ ನಾಟಕಮು ಎಂಬ ಗ್ರಂಥಗಳನ್ನು ರಚಿಸಿದ್ದಾನೆ.

ಕರ್ನಾಟಕದಲ್ಲಿ ಚಿಕ್ಕದೇವರಾಯನ ಕಾಲದಲ್ಲಿ ಹೆಸರಿಸಬೇಕಾದ ಇನ್ನೊಬ್ಬ ತೆಲುಗು ಕವಿ ಕಳಲೆ ವೀರರಾಜ. ಇವನು ಸೇನಾಪತಿಯಾಗಿದ್ದುದು ಮಾತ್ರವಲ್ಲದೆ ಬಹುಭಾಷಾ ಕೋವಿದನೂ ಸಾಹಿತ್ಯಜ್ಞನೂ ಆಗಿದ್ದ. ಈತ ಮಹಾಭಾರತವನ್ನು ತೆಲುಗು ವಚನರೂಪದಲ್ಲಿ ಬರೆದಿದ್ದಾನೆ. ಆದಿ, ಸಭಾ, ಭೀಷ್ಮಪರ್ವಗಳು ಮಾತ್ರ ಈಗ ಲಭ್ಯವಾಗಿವೆ. ಇವನ ಮಗ ನಂಜರಾಜನೂ (ಸು.1739–73) ತೆಲುಗಿನಲ್ಲಿ ಪಂಡಿತನಾಗಿದ್ದ. ಇವನು ತೆಲುಗಿನಲ್ಲಿ ಕಾಶೀಮಹಿಮಾರ್ಥ ದರ್ಪಣ, ಬ್ರಹ್ಮೋತ್ತರ ಖಂಡ, ಶಿವಭಕ್ತಿವಿಲಾಸ, ಗರಳಪುರಿ ಮಾಹಾತ್ಮ್ಯ, ಹಾಲಾಸ್ಯಮಾಹಾತ್ಮ್ಯ ಎಂಬ ಐದು ಕೃತಿಗಳನ್ನು ರಚಿಸಿದ್ದಾನೆ. ಇವೆಲ್ಲ ವಚನ ಗ್ರಂಥಗಳಾಗಿವೆ. ಇವನು ಪದ್ಯ ರಚನೆಯನ್ನು ಮಾಡಬಲ್ಲನೆಂಬುದಕ್ಕೆ ಪೀಠಿಕಾ ಪದ್ಯಗಳು, ಗ್ರಂಥಾಂತ್ಯ ಪದ್ಯಗಳು ಸಾಕ್ಷಿಯಾಗಿವೆ. ನಂಜರಾಜ ಕನ್ನಡದಲ್ಲೂ ಹಲವು ಗ್ರಂಥಗಳನ್ನು ಬರೆದಿದ್ದಾನೆ. ಮೂಕರಸು ಎಂದು ಖ್ಯಾತನಾಗಿದ್ದ ಕಂಠೀರವ ನರಸರಾಜ ಸ್ವತಃ ಕೆಲವು ತೆಲುಗು ಯಕ್ಷಗಾನಗಳನ್ನು ರಚಿಸಿದ್ದಾನೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿದ್ದ ಕೋಲಾರ ಜಿಲ್ಲೆಯ ಕುಂದಲಕುರ್ತಿ ಚಂದ್ರಕವಿ ಎಂಬ ತೆಲುಗು ಕವಿ ನನ್ನಯ್ಯನ 'ಆಂಧ್ರಶಬ್ದಚಿಂತಾಮಣಿ'ಯನ್ನು ಕೃಷ್ಣಭೂಪಾಲೀಯಮು ಎಂಬ ಹೆಸರಿನಲ್ಲಿ ಕಾವ್ಯರೂಪದಲ್ಲಿ ರಚಿಸಿದಂತೆ ತಿಳಿಯುತ್ತದೆ.

ಕರ್ನಾಟಕದಲ್ಲಿ ತೆಲುಗು ಭಾಷಾ ಸಾಹಿತ್ಯಗಳಿಗೆ ಪ್ರೋತ್ಸಾಹ ದೊರೆಯುತ್ತಿರುವುದರ ಜೊತೆಗೆ ಸುಮಾರು ಸಾವಿರ ವರ್ಷಗಳಿಂದ ಬೆಳೆದು ಬರುತ್ತಿರುವ ಸಾಹಿತ್ಯ ಬಾಂಧವ್ಯವೂ ಗಮನಾರ್ಹವಾಗಿದೆ. ಪಂಪ, ಪೊನ್ನ ಮೊದಲಾದವರು ತೆಲುಗಿನೊಡನೆ ಅಷ್ಟೋ ಇಷ್ಟೋ ಸಂಬಂಧವಿದ್ದವರೆಂಬುದರಲ್ಲಿ ಸಂದೇಹವಿಲ್ಲ. ಪಂಪನ ತಮ್ಮನಾದ ಜಿನವಲ್ಲಭನ ಶಾಸನದಲ್ಲಿ ಕನ್ನಡ ಪದ್ಯಗಳ ಜೊತೆಯಲ್ಲಿ ತೆಲುಗು ಪದ್ಯಗಳೂ ಇರುವುದನ್ನು ಗಮನಿಸಬೇಕು. ಅವು ತೆಲುಗಿನಲ್ಲಿ ಲಭ್ಯವಾದ ಮೊದಲ ಕಂದಪದ್ಯಗಳೆಂಬುದೂ ಗಮನಾರ್ಹ ಸಂಗತಿಯಾಗಿದೆ.

ಆಧುನಿಕ ಕಾಲದಲ್ಲಿ ಕರ್ನಾಟಕದ ಅನೇಕರು ತೆಲುಗು ಸಾಹಿತ್ಯಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಉಲಚನಾಡು ವೆಂಕಟರಮಣಕವಿ 1850 ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲಿ ವಾಸಿಷ್ಠ ರಾಮಾಯಣಮು, ಅಧ್ಯಾತ್ಮ ರಾಮಾಯಣಮು ಎಂಬ ಎರಡು ಕಾವ್ಯಗಳನ್ನು ಬರೆದಿದ್ದಾನೆ. ನ್ಯಾಪತಿ ಲಕ್ಷ್ಮೀನರಸಿಂಹಕವಿಗಳು ತೆಲುಗು ಪದ್ಯಗಳನ್ನು ಬರೆಯುವ ಸಾಮರ್ಥ್ಯವುಳ್ಳವರಾಗಿದ್ದರು. ಸಾಧುಪಲ್ಲಿ ಚಂದ್ರಶೇಖರಶಾಸ್ತ್ರಿ (1890) ಅಮರುಕ ಕಾವ್ಯವನ್ನು ತೆಲುಗಿಗೆ ಅನುವಾದ ಮಾಡಿದ್ದಾರೆ.

ಇತ್ತೀಚಿನ ಕಾಲದಲ್ಲಿ ಆಲೂರು ರಾಮಕವಿ, ಜೋಳದರಾಶಿ ದೊಡ್ಡನಗೌಡ ಮೊದಲಾದವರು ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲೂ ಕೃತಿಗಳನ್ನು ಬರೆದು ಕರ್ನಾಟಕದ ತೆಲುಗು ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಬೆಂಗಳೂರು, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳು ತೆಲುಗು ಭಾಷಾಸಾಹಿತ್ಯಗಳಿಗೆ ಪ್ರೋತ್ಸಾಹ ನೀಡುತ್ತಿವೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತೆಲುಗಿನ ವೇಮನ ಕವಿಯ ಹೆಸರಿನಲ್ಲಿ ಪೀಠವೊಂದು ಸ್ಥಾಪನೆಯಾಗಿದೆ.

ತೆಲುಗಿನ ಆದಿಕವಿ ಎಂದು ಹೆಸರು ಪಡೆದಿರುವ ನನ್ನಯ (11ನೆಯ ಶತಮಾನ) ತನ್ನ ಆಂಧ್ರ ಮಹಾಭಾರತದಲ್ಲಿ ಪಂಪನನ್ನು ಅನುಸರಿಸಿದ್ದಾನೆಂಬುದು ಅನೇಕ ವಿದ್ವಾಂಸರ ಮಾತು. ನನ್ನಯನ ಸಹಾಧ್ಯಾಯಿ ನಾರಾಯಣಭಟ್ಟ ಕನ್ನಡದಲ್ಲಿಯೂ ಪಂಡಿತನಾಗಿದ್ದ.

ತೆಲುಗಿನ ಶೈವಕವಿಗಳು ಕನ್ನಡದಿಂದ ಬಹಳಷ್ಟು ನೆರವು ಪಡೆದಿದ್ದಾರೆ. ಬಸವಣ್ಣ ಅವರಿಗೆ ಸ್ಫೂರ್ತಿಯ ನೆಲೆಯಾಗಿದ್ದ. ಪಾಲ್ಕುರಿಕೆ ಸೋಮನಾಥ ತೆಲುಗಿನ ಮಹಾಕವಿಯಾಗಿದ್ದು ಕನ್ನಡದಲ್ಲಿಯೂ ಗ್ರಂಥ ರಚನೆ ಮಾಡಿದ್ದಾನೆ. ತೆಲುಗು ಕವಿ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿವತತ್ತ್ವಸಾರಮು ಕನ್ನಡಕ್ಕೂ ಭಾಷಾಂತರವಾಗಿದೆ. ತೆಲುಗಿನ ಮತ್ತೊಬ್ಬ ಶೈವಕವಿಯಾಗಿದ್ದ ನನ್ನೆಚೋಡದೇವ ಕನ್ನಡದ ಅನೇಕ ಕಾವ್ಯ ಸಂಪ್ರದಾಯಗಳನ್ನು ಅನುಸರಿಸಿದ್ದಾನೆ. ಪಾಲ್ಕುರಿಕೆ ಸೋಮನಾಥನ ಬಸವಪುರಾಣ ಭೀಮಕವಿಯಿಂದ ಕನ್ನಡಕ್ಕೆ ರೂಪಾಂತರವಾಗಿದೆ. ಪಾಲ್ಕುರಿಕೆ ಸೋಮನಾಥನದೇ ಆದ ಪಂಡಿತಾರಾಧ್ಯ ಚರಿತ್ರೆಯನ್ನು ನೀಲಕಂಠಾಚಾರ್ಯ ಕನ್ನಡಿಸಿದ್ದಾನೆ.

ಕನ್ನಡದಲ್ಲಿ ವೀರಶೈವ ತತ್ತ್ವವನ್ನು ವಿವರಿಸುವ ಕೆರೆಯ ಪದ್ಮರಸನ ದೀಕ್ಷಾಬೋಧೆಯನ್ನು ಪಿಡುಪರ್ತಿ ಬಸವನ ಎಂಬ ತೆಲುಗು ಕವಿ ಆಂಧ್ರೀಕರಿಸಿದ್ದಾನೆ. ಚಾಮರಸನ ಪ್ರಭುಲಿಂಗಲೀಲೆ ಪಿಡುಪರ್ತಿ ಸೋಮನಾಥ ಕವಿಯಿಂದ ತೆಲುಗಿಗೆ ಭಾಷಾಂತರವಾಗಿದೆ.

ಸರ್ವಜ್ಞ ಮತ್ತು ವೇಮನರ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾಗಿದೆ. ಸರ್ವಜ್ಞ ವೇಮನ ಸಂವಾದ ಎಂಬ ಪುಸ್ತಕವೊಂದು ಪ್ರಕಟವಾಗಿದೆ. ಅದರಲ್ಲಿ ಸಮಾನ ಭಾವವಿರುವ ನೂರಾರು ಪದ್ಯಗಳಿವೆ. ಈ ಇಬ್ಬರು ಸಂತಕವಿಗಳು ಒಂದೇ ಕಾಲದವರೆಂದಾಗಲಿ, ಒಬ್ಬರನ್ನೊಬ್ಬರು ಅನುಸರಿಸಿದರೆಂದಾಗಲೀ ಹೇಳಲು ಆಧಾರಗಳಿಲ್ಲದಿದ್ದರೂ ಇಬ್ಬರೂ ಪ್ರಾಯಶಃ ಸಮಾನದೃಷ್ಟಿಯಿಂದ ತಮ್ಮ ಪದ್ಯಗಳಲ್ಲಿ ಕೆಲವನ್ನಾದರೂ ಬರೆದಿದ್ದಾರೆಂಬುದು ಖಚಿತ.

ಈ ಎರಡು ಭಾಷೆಗಳ ಲಿಪಿಯಲ್ಲಿ ಅತ್ಯಂತ ನಿಕಟವಾದ ಸಂಬಂಧವಿದೆ. ಇವುಗಳಿಗೆ ಏಕಲಿಪಿಯನ್ನು ರೂಪಿಸುವ ಪ್ರಯತ್ನಗಳೂ ನಡೆದಿವೆ. ಕನ್ನಡ ತೆಲುಗುಗಳೆರಡೂ ಸಂಸ್ಕೃತ ಭಾಷಾಸಂಪ್ರದಾಯಗಳನ್ನು ಬಹುಮಟ್ಟಿಗೆ ಸ್ವೀಕರಿಸಿರುವುದರಿಂದ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಅನೇಕ ಸಾಮ್ಯಗಳು ಕಂಡುಬರುತ್ತವೆ. ಪದನಿರ್ಮಾಣ, ವಾಕ್ಯನಿರ್ಮಾಣದಿಂದ ಹಿಡಿದು ಕಾವ್ಯರಚನಾ ಸಂಪ್ರದಾಯಗಳವರೆಗೂ ಈ ಎರಡು ಭಾಷೆಗಳ ನಡುವೆ ಬಾಂಧವ್ಯ ಕಂಡುಬರುತ್ತದೆ. ಕೇತನ ಎಂಬ ತೆಲುಗು ವ್ಯಾಕರಣಕಾರ ಆಂಧ್ರ ಭಾಷಾಭೂಷಣವನ್ನು ಬರೆಯುವಾಗ ನಾಗವರ್ಮನ ಕರ್ಣಾಟಕ ಭಾಷಾಭೂಷಣ ಅವನಿಗೆ ನೆರವು ನೀಡಿತು. ಛಂದಸ್ಸಿನಲ್ಲಿ ಈ ಎರಡು ಭಾಷೆಗಳಿಗೂ ಇರುವ ಹೋಲಿಕೆ ಬಹಳ ಹತ್ತಿರವಾದುದು. ಸಂಸ್ಕೃತ ವೃತ್ತಗಳನ್ನು ಕನ್ನಡದವರು ತೆಗೆದುಕೊಂಡಿರುವಂತೆಯೇ ತೆಲುಗರೂ ತೆಗೆದುಕೊಂಡಿದ್ದಾರೆ. ಅಂಶಗಣಗಳಲ್ಲಿ ಕನ್ನಡ ತೆಲುಗುಗಳಿಗೆ ಹತ್ತಿರದ ಸಂಬಂಧವಿದೆ. ಅನೇಕ ಛಂದೋಗ್ರಂಥಗಳು ಪರಸ್ಪರ ಪ್ರಭಾವಕ್ಕೆ ಒಳಗಾಗಿವೆ. ಕನ್ನಡದಲ್ಲಿ ಅತ್ಯಂತ ಪ್ರಚುರವಾಗಿದ್ದ ಚಂಪೂಕಾವ್ಯ ತೆಲುಗಿನಲ್ಲಿಯೂ ಇನ್ನೂ ಹೆಚ್ಚಾಗಿ ಬಳಕೆಯಲ್ಲಿದೆ. ಹೀಗೆ ಈ ಒಂದೇ ಕುಟುಂಬದ ಎರಡು ಭಾಷೆಗಳೂ ತೌಲನಿಕ ಅಧ್ಯಯನಕ್ಕೆ ವಿಷಯವನ್ನು ವಿಸ್ತಾರವಾಗಿ ಒದಗಿಸುವಂಥವಾಗಿವೆ.

20ನೆಯ ಶತಮಾನದ ಪ್ರಾರಂಭಕಾಲದಿಂದಲೇ ಕನ್ನಡದ ಹಲವು ಕೃತಿಗಳು ತೆಲುಗಿಗೆ ಮತ್ತು ತೆಲುಗಿನ ಕೃತಿಗಳು ಕನ್ನಡಕ್ಕೆ ಭಾಷಾಂತರಗೊಂಡಿವೆ. ಕನ್ನಡದ ಮಾಸ್ತಿ, ಡಿವಿಜಿ, ದೇವುಡು, ಶಿವರಾಮ ಕಾರಂತ, ತ್ರಿವೇಣಿ, ಯು.ಆರ್. ಅನಂತಮೂರ್ತಿ, ಆಲನಹಳ್ಳಿ ಕೃಷ್ಣ, ಪೂರ್ಣಚಂದ್ರ ತೇಜಸ್ವಿ ಮೊದಲಾದವರ ಕೃತಿಗಳು ತೆಲುಗಿಗೆ ಭಾಷಾಂತರಗೊಂಡು ಪ್ರಕಟವಾಗಿವೆ. ತೆಲುಗಿನ ಕಂದುಕೂರಿ ವೀರೇಶಲಿಂಗಂ, ಗುರಜಾಡ ಅಪ್ಪಾರಾವ್, ವಿಶ್ವನಾಥ ಸತ್ಯನಾರಾಯಣ, ಚಲಂ, ಶ್ರೀ.ಶ್ರೀ., ಸಿ. ನಾರಾಯಣರೆಡ್ಡಿ, ದಿಗಂಬರ ಕವಿಗಳು, ಯಂಡಮೂರಿ ವೀರೇಂದ್ರನಾಥ್ ಮೊದಲಾದವರ ರಚನೆಗಳು ಕನ್ನಡಕ್ಕೆ ಭಾಷಾಂತರಗೊಂಡಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ಎಂ.ಶೇಷಾಚಲಂ ಅಂಡ್ ಕಂಪನಿ ಮುಂತಾದ ಸಂಸ್ಥೆಗಳು ಇಂಥ ಕೃತಿಗಳ ಪ್ರಕಟಣೆಯನ್ನು ಕೈಗೊಂಡು ಎರಡು ಭಾಷೆಗಳ ನಡುವಿನ ಸಾಹಿತ್ಯ ಬಾಂಧವ್ಯವನ್ನು ಬೆಳೆಸಲು ನೆರವಾಗಿವೆ. (ಆರ್.ವಿ.ಎಸ್.ಎಸ್.)

**ಹಿಂದೀ:** ಆಧುನಿಕ ಯುಗದಲ್ಲಿ ಹಿಂದೀ ಭಾಷೆಯನ್ನು ಅಖಿಲ ಭಾರತ ಮಟ್ಟದಲ್ಲಿ ನೆಲೆಗೊಳಿಸಲು ಹಾಗೂ ಹಿಂದೀಯನ್ನು ಇಡೀ ರಾಷ್ಟ್ರದ ವಾಣಿಯಾಗಿ ಪ್ರಚುರಪಡಿಸಲು ಮಹಾತ್ಮ ಗಾಂಧೀಜಿಯವರು ಹಿಂದೀಯನ್ನು ಒಂದು ಆಂದೋಲನದಂತೆ ತಮ್ಮ ಕೈಗೆತ್ತಿಕೊಂಡರು. ಗಾಂಧೀಜಿ ತಮ್ಮ ಸಮಗ್ರ ಭಾರತ ಯಾತ್ರೆಯ ಸಂದರ್ಭದಲ್ಲಿ ಭಾರತದಂಥ ಬಹುಭಾಷೀಯ ಹಾಗೂ ಬಹು ಸಂಸ್ಕೃತಿಗಳ ದೇಶದಲ್ಲಿ ಭಾವೈಕ್ಯತೆ ಮತ್ತು ವಿಭಿನ್ನ ಭಾಷೀಯರ ನಡುವೆ ಸಂವಾದಗಳನ್ನು ಏರ್ಪಡಿಸಲು ಸಾಧ್ಯವಾಗುವುದು ಹಿಂದೀಯಿಂದ ಮಾತ್ರವೆಂದು ಭಾವಿಸಿದ್ದರು. ಹೀಗಾಗಿ ದೇಶದ ಪ್ರಾಂತೀಯ ಭಾಷೆಗಳ ವಿಕಾಸಕ್ಕೆ ಪೂರ್ಣ ಒತ್ತು ಕೊಟ್ಟು, ಇಂಗ್ಲಿಷ್‌ನ ಸ್ಥಾನದಲ್ಲಿ ಹಿಂದೀಯನ್ನು, ವ್ಯಾಪಕವಾಗಿ ಉಪಯೋಗಿಸಲು ಕಳಕಳಿ ಹಾಗೂ ಒತ್ತಾಸೆಯಿಂದ ಜನರಲ್ಲಿ ನಿವೇದಿಸಿಕೊಂಡರು.

ಗಾಂಧೀಜಿ ತಮ್ಮ ರಚನಾತ್ಮಕ ಕಾರ್ಯಗಳಲ್ಲಿ ಹಿಂದೀ ಪ್ರಚಾರ ಕಾರ್ಯವನ್ನೂ ಒಂದೆಂದು ಸ್ವೀಕರಿಸಿ ಇದರ ವ್ಯಾಪಕ ಪ್ರಯೋಗಕ್ಕೆ ನಾಂದಿ ಹಾಡಿದರು. ಇಂದೂರಿನಲ್ಲಿ 1918ರಲ್ಲಿ ನಡೆದ ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ, ಅವರ ಉದ್ಬೋಧಕ ವಿಚಾರಗಳನ್ನೊಳಗೊಂಡ ಭಾಷಣ ದೇಶದ ಏಕತೆಗೆ ಹಿಂದೀಯನ್ನು ಒಂದು ಪ್ರಬಲ ಶಕ್ತಿಯನ್ನಾಗಿ ಪ್ರತಿಪಾದಿಸುವಲ್ಲಿ ಯಶಸ್ವಿಯಾಯಿತು. ಅವರ ಪ್ರೇರಣೆ ಮತ್ತು ಪ್ರಭಾವದಿಂದಾಗಿ 1918 ಮಾರ್ಚ್ 30ರಂದು ಹಿಂದೀ ಸಾಹಿತ್ಯ ಸಮ್ಮೇಳನ ದಕ್ಷಿಣದ ಹಿಂದೀಯೇತರ ಪ್ರದೇಶಗಳಲ್ಲಿ ಹಿಂದೀ ಪ್ರಚಾರಕ್ಕಾಗಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾವನ್ನು ಸ್ಥಾಪಿಸಬೇಕೆಂಬ ನಿರ್ಣಯವನು` ಅಂಗೀಕರಿಸಿತು. ಅದೇ ವರ್ಷ ಮದರಾಸಿನಲ್ಲಿ ಸ್ಥಾಪಿತವಾದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ದಕ್ಷಿಣದ ಎಲ್ಲ ಭಾಷಾ ಪ್ರದೇಶಗಳ ಮಾತೃ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತ ಬಂದಿದೆ.

ಹಿಂದೀಯನ್ನು ಕುರಿತ ಗಾಂಧೀಜಿಯವರ ವಿಚಾರಗಳು ಕರ್ನಾಟಕದ ಅಂದಿನ ಯುವಕರನ್ನು ಎಷ್ಟರ ಮಟ್ಟಿಗೆ ಆಕರ್ಷಿಸಿದವೆಂದರೆ ಕರ್ನಾಟಕದ ಉದ್ದಗಲಕ್ಕೂ ಹಿಂದಿ ಪ್ರಚಾರಕರು ಹಿಂದೀಯನ್ನು ಭಾವೈಕ್ಯತೆಯನ್ನು ಸಾಧಿಸುವ ಅನನ್ಯ ಶಕ್ತಿಯೆಂದು ಪರಿಭಾವಿಸಿ ಸಮರ್ಪಣ ಭಾವನೆಯಿಂದ ಹಿಂದೀ ಕಲಿತರು. ಕಲಿತ ಹಿಂದೀಯನ್ನು ಸಹಸ್ರಾರು ಮಂದಿಗೆ ಕಲಿಸಿದರು. ಮದರಾಸಿನ ಸಭಾದ ವಿವಿಧ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವುದರ ಮೂಲಕ ಅಧಿಕೃತ ಪ್ರಮಾಣ ಪತ್ರಗಳನ್ನು ಪಡೆಯುವಂತೆ ಪ್ರೋತ್ಸಾಹಿಸಿದರು. ಮದರಾಸು ಸಭಾವನ್ನು ಕಟ್ಟಿ ಬೆಳೆಸಲು ಉತ್ತರದಿಂದ ಬಂದ ಭಾಷಾಪ್ರಚಾರಕರಲ್ಲಿ ಗಾಂಧೀಜಿಯವರ ಪುತ್ರ ದೇವದಾಸ್ ಗಾಂಧೀ, ಸ್ವಾಮಿ ಸತ್ಯದೇವ ಪರಿವ್ರಾಜಕ, ಪ್ರತಾಪ್ ನಾರಾಯಣ್, ವಾಜಪೇಯಿ, ಹೃಷಿಕೇಶ್ ಶರ್ಮರಂಥವರು ಉಲ್ಲೇಖನೀಯರಾಗಿದ್ದಾರೆ. ಹಿಂದೀ ಪ್ರಚಾರಕ್ಕೆ ಇವರೆಲ್ಲ ಹಾಕಿದ ಭದ್ರ ಬುನಾದಿಯ ಮೇಲೆ ದಕ್ಷಿಣದ ರಾಜ್ಯಗಳಲ್ಲಿ ಹಿಂದೀ ವಿಕಾಸಗೊಂಡಿದೆ.

ಕರ್ನಾಟಕದಲ್ಲಿ ಹಿಂದೀ ಪ್ರಚಾರಾಂದೋಲನದ ಮೂಲಕೇಂದ್ರ ಮದರಾಸಿನ ಸಭಾವೇ ಆಗಿದೆ. 1925ರಲ್ಲಿ ಶಿವರಾಮಶಾಸ್ತ್ರಿ, ಟಿ.ಕೃಷ್ಣಸ್ವಾಮಿ, ಜಮುನಾ ಪ್ರಸಾದ್, ಸಿದ್ಧನಾಥಪಂತ್, ಸಿದ್ಧಗೋಪಾಲ್ ಮೊದಲಾದವರು ಕರ್ನಾಟಕದ ನಾನಾ ಭಾಗಗಳಲ್ಲಿ ಹಿಂದೀ ಪ್ರಚಾರ ಕಾರ್ಯವನ್ನು ಆರಂಭಿಸಿದರು. ಮುಂದೆ 1927ರಲ್ಲಿ ಗಾಂಧೀಜಿ ಕರ್ನಾಟಕಕ್ಕೆ ಬಂದಿದ್ದಾಗ ಬೆಂಗಳೂರಿನಲ್ಲಿ ಹಿಂದೀ ಪ್ರಚಾರಕರ ಸಮಾವೇಶ ನಡೆದು ಇದರ ಅಧ್ಯಕ್ಷತೆಯನ್ನು ಗಾಂಧೀಜಿ ವಹಿಸಿದ್ದರು. ಸಮಾವೇಶವನು` ಪಂಡಿತ ಮದನ ಮೋಹನ ಮಾಳವೀಯರು ಉದ್ಘಾಟಿಸಿದರು. ಈ ಅಧಿವೇಶನದಲ್ಲಿ ಗಾಂಧೀಜಿಯವರ ಭಾಷಾ ವಿಷಯಕ ವಿಚಾರಗಳು ಪ್ರಚಾರಕರ ಉತ್ಸಾಹವನ್ನು ಇಮ್ಮಡಿಗೊಳಿಸಿದವು. ಈ ಹಿಂದೆಯೇ ಉಲ್ಲೇಖಿಸಿದ ವ್ಯಕ್ತಿಗಳ ಜೊತೆಗೆ ವೆಂಕಟಾಚಲಶರ್ಮಾ, ಟಿ.ಕೆ.ಸುಬ್ಬರಾವ್, ಎಂ.ವಿ.ಜಂಬುನಾಥನ್, ವೆಂಕಟಾಚಲಯ್ಯ, ರಾಘವಾಚಾರ್ಯ, ಡಿ.ಕೆ.ಭಾರದ್ವಾಜ್, ಎ.ಟಿ.ಶ್ರೀನಿವಾಸ ರಾಘವಾಚಾರ್ಯ ಮೊದಲಾದವರು ಕರ್ನಾಟಕದಲ್ಲಿ ಮೊದಲ ಪೀಳಿಗೆಯ ಹಿಂದೀ ಕಾರ್ಯಕರ್ತರಾಗಿ ದುಡಿದರು. ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಾದ ಅಂಶವೆಂದರೆ ಹಿಂದೀ ಪ್ರಚಾರಕರಷ್ಟೇ ಅಲ್ಲ, ಸಾರ್ವಜನಿಕ ಬದುಕಿನ ಗಣ್ಯ ವ್ಯಕ್ತಿಗಳಾದ ಎನ್.ಎಸ್.ಹರ್ಡೀಕರ್, ಗಂಗಾಧರ್‌ರಾವ್ ದೇಶಪಾಂಡೆ, ತಾತಯ್ಯ ಎಂದೇ ಪ್ರಸಿದ್ಧರಾದ ಮೈಸೂರಿನ ವೆಂಕಟಕೃಷ್ಣಯ್ಯ, ಬೆಂಗಳೂರಿನ ಕೆ.ಪಿ.ಪುಟ್ಟಣ್ಣಚೆಟ್ಟಿ, ಸಿ.ಬಿ.ರಾಮರಾವ್, ಸಂಪದ್ಗಿರಿರಾವ್ ಮೊದಲಾದವರು ರಾಷ್ಟ್ರೀಯ ಬದುಕಿನಲ್ಲಿ ಹಿಂದಿನ ಮಹತ್ತ್ವವನ್ನು ಮನಗಂಡು ಹಿಂದೀಯ ಪ್ರಚಾರ ಕಾರ್ಯಕ್ಕೆ ಬೆಂಗಾವಲಾಗಿ ನಿಂತರು. ಈ ಪರಂಪರೆಯಲ್ಲಿ ಇಂದಿಗೂ ಅನೇಕ ಮಹನೀಯರು ಹಿಂದೀ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಹಿಂದೀ ಪ್ರಚಾರ ಕಾರ್ಯದಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ತೊಡಗಿಕೊಂಡಲ್ಲಿ ಹಿಂದೀ ಪ್ರಚಾರಕ್ಕೆ ತೀವ್ರತೆ ಮತ್ತು ಗತಿಶೀಲತೆ ಬರುವುದೆಂದು ಗಾಂಧೀಜಿ ಹೇಳಿದ್ದರು. ಗಾಂಧೀಜಿಯವರ ಆಶಯದಂತೆ ಕರ್ನಾಟಕದ ಮಹಿಳೆಯರು ಹಿಂದೀ ಪ್ರಚಾರದ ಮೂಲಕ ಸಮಾಜದಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಹುರಿದುಂಬಿಸುವಲ್ಲಿ ನೆರವಾದರು. ಕರ್ನಾಟಕದಲ್ಲಿ ಹಿಂದೀ ಪ್ರಚಾರಾಂದೋಲನದ ಆರಂಭದ ವರ್ಷಗಳಲ್ಲಿ ಕೆಲಸ ಮಾಡಿದ ಸುಶೀಲಾ ಬಾಯಿ, ರುಕ್ಮಿಣಿದೇವಿ, ಕಾಮಾಕ್ಷಿದೇವಿ, ಉಮಾಬಾಯಿ ಕುಂದಾಪುರಕರ್, ಇಂದಿರಾ ಕೃಷ್ಣಮೂರ್ತಿ ಮೊದಲಾದವರ ಸೇವೆ ಉಲ್ಲೇಖನೀಯವಾದುದು.

ಈ ಅವಧಿಯಲ್ಲಿಯೇ ಕರ್ನಾಟಕದ ಯುವಕರು ಹಿಂದೀ ಸಾಹಿತ್ಯದಲ್ಲಿ ಉಚ್ಚ ಶಿಕ್ಷಣ ಪಡೆಯಲು ಉತ್ತರ ಭಾರತದ ವಿಶ್ವವಿದ್ಯಾಲಯಗಳಿಗೆ ಹೋದದ್ದು ಮಹತ್ತ್ವದ ಸಂಗತಿಯಾಗಿದೆ. ನಾ.ನಾಗಪ್ಪ, ಹಿರಣ್ಮಯ, ಮೇ.ರಾಜೇಶ್ವರಯ್ಯ – ಇವರು ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದು ಹಿಂದಿ ಎಂ.ಎ. ಪದವಿ ಪಡೆದರು. ನಾ.ನಾಗಪ್ಪನವರು ಆಗ ದಕ್ಷಿಣ ಭಾರತದಲ್ಲಿ ಹಿಂದಿ ಎಂ.ಎ. ಮಾಡಿದ ಮೊದಲ ವಿದ್ಯಾರ್ಥಿ ಎಂಬ ಹೆಗ್ಗಳಿಕೆಗೆ ಪಾತ್ರರಾದರೆ, ಹಿರಣ್ಮಯ ಅವರು ಹಜಾರಿ ಪ್ರಸಾದ ದ್ವಿವೇದಿಯವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿ ಪಡೆದ ಕರ್ನಾಟಕದ ಮೊದಲ ವಿದ್ಯಾರ್ಥಿ ಎಂಬ ಗೌರವಕ್ಕೆ ಪಾತ್ರರಾದರು.

ಹಿಂದೀ ಸಾಹಿತ್ಯದತ್ತ ಜನರ ಚಿತ್ತವನ್ನು ಸೆಳೆಯಲು ಅಂದಿನ ಹಿರಿಯರು ಸೃಜನಾತ್ಮಕ ಹಾಗೂ ರಚನಾತ್ಮಕವಾದ ಎಷ್ಟೋ ಪ್ರಯೋಗಗಳನ್ನು ನಡೆಸಿದರು. ಬಹುಭಾಷಾವಿದರೂ ಪ್ರಸಿದ್ಧ ವೈದ್ಯರೂ ಆಗಿದ್ದ ಪಂಡಿತ ತಾರಾನಾಥರು ಹಿಂದೀ ಪ್ರೇಮಿಗಳೂ ಲೇಖಕರೂ ಆಗಿದ್ದರು. ಇವರು ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಕನ್ನಡ ಲಿಪಿಯಲ್ಲಿ ಬರೆದ ದೀನಬಂಧು ಕಬೀರ್ ಎಂಬ ಹಿಂದೀ ನಾಟಕವನ್ನು ಬೆಂಗಳೂರಿನಲ್ಲಿ ಗಾಂಧೀಜಿಯವರ ಸಮ್ಮುಖದಲ್ಲಿ ಅಭಿನಯಿಸಿದಾಗ ಅವರು ತುಂಬಾ ಪ್ರಭಾವಿತರಾದರು. ಅಂತೆಯೇ ಪಂಡಿತ ತಾರಾನಾಥರ ಈ ಪ್ರಯತ್ನವನ್ನು ಶ್ಲಾಘಿಸಿದರು. ಈ ನಿಟ್ಟಿನಲ್ಲಿ ಹಿಂದೀಯ ಪ್ರಸಿದ್ಧ ನಾಟಕಗಳಾದ ಮೇವಾಡ್ ಪತನ್, ವೀರ್ ಅಭಿಮನ್ಯು ಮುಂತಾದ ಹಿಂದೀ ನಾಟಕಗಳನ್ನು ಮೈಸೂರು, ಬೆಂಗಳೂರು, ಮದರಾಸು ಮುಂತಾದ ಸ್ಥಳಗಳಲ್ಲಿ ಅಭಿನಯಿಸುವಲ್ಲಿ ಆಕಾಶವಾಣಿಯ ನಟೇಶ್ ಮೊದಲಿಯಾರ್, ಚಲನಚಿತ್ರ ಸಾಹಿತಿ ಜಿ.ಸದಾಶಿವಯ್ಯ ಹಾಗೂ ಸಿ.ಕೆ.ನಾಗರಾಜರಾವ್ ಮೊದಲಾದವರು ಅನನ್ಯ ಸಹಕಾರ ನೀಡಿದರು. ಜೊತೆಗೆ ಹಿಂದೀ ಕಲಿಯುವವರ ಅನುಕೂಲಕ್ಕಾಗಿ ಅನಿವಾರ್ಯವಾಗಿ ಬೇಕಾದ ಪುಸ್ತಕಗಳ ರಚನೆಯಾದದ್ದು ಮಹತ್ತ್ವದ ಕಾರ್ಯವಾಗಿದೆ. ಈ ನಿಟ್ಟಿನಲ್ಲಿ ಪಂಡಿತ ಸಿದ್ಧನಾಥ ಪಂತರ ಹಿಂದೀ – ಕನ್ನಡ ಸ್ವಯಂಬೋಧಿನಿ, ಜಂಬುನಾಥನ್‌ರ ಹಿಂದೀ ವ್ಯಾಕರಣ, ಹಿಂದೀ – ಕನ್ನಡ ಶಬ್ದಕೋಶ ಮುಂತಾದ ಇತರೆ ಉಪಯೋಗಿ ಕೃತಿಗಳು, ಡಿ.ಕೆ.ಭಾರದ್ವಾಜರ ಹಿಂದೀ ಪ್ರಚಾರಕ್ಕೆ ಪೂರಕವಾದ ಗ್ರಂಥಗಳನ್ನು ಇಲ್ಲಿ ನೆನೆಯಬಹುದು.

1935–47ರ ಮಧ್ಯೆ ಕರ್ನಾಟಕದಲ್ಲಿ ಹಿಂದೀ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಬೆಂಗಳೂರ್ ಹಿಂದೀ ಪ್ರಚಾರಕ್ ಗಿಲ್ಡ್, ಹಿಂದೀ ಪ್ರಚಾರ್ ಸಮ್ಮೇಲನ ಸ್ಥಾಯಿ ಸಮಿತಿ ಹಾಗೂ ಹಿಂದೀ ಸಾಹಿತ್ಯ ಪರಿಷತ್‌ಗಳು ಕ್ರಿಯಾಶೀಲವಾಗಿದ್ದುವು. ಜೊತೆಗೆ ಕರ್ನಾಟಕದಲ್ಲಿನ ಹಿಂದೀ ಪ್ರೇಮಿಗಳು ಈ ರಾಜ್ಯದಲ್ಲಿ ಹಿಂದೀ ಪ್ರಚಾರವನ್ನು ಸಂಘಟನಾತ್ಮಕವಾಗಿ ಮಾಡಲು ಒಂದು ಸಂಸ್ಥೆಯನ್ನು ಸ್ಥಾಪಿಸಲು ನಿರ್ಧರಿಸಿದರು. 1936ರಲ್ಲಿ ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭಾ ಎಂಬ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಆರಂಭಿಸಿದರು. ಮೊದಲ ಹಂತದಲ್ಲಿ ಕೆ.ಪಿ.ಪುಟ್ಟಣಚೆಟ್ಟಿಯವರು ಗೌರವಾಧ್ಯಕ್ಷರಾಗಿ, ಸಿ.ಬಿ.ರಾಮರಾವ್ ಅವರು ಅಧ್ಯಕ್ಷರಾಗಿ, ಕೆ.ಸಂಪದ್ಗಿರಿರಾವ್, ನಾರಾಯಣ್‌ನಾಯಕ್ ಮತ್ತು ಸಿದ್ಧನಾಥ ಪಂತ್‌ರು ಕೋಶಾಧ್ಯಕ್ಷರೂ ಸಂಚಾಲಕರೂ ಆಗಿ ಆಯ್ಕೆಯಾದರು. 1937ರಲ್ಲಿ ಈ ಸಭಾವನ್ನು ಧಾರವಾಡಕ್ಕೆ ವರ್ಗಾಯಿಸಲಾಯಿತು. ಸು. 70 ವರ್ಷಗಳಿಂದ ಈ ಪ್ರಾಂತೀಯ ಸಭಾ ಹಿಂದೀ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಈ ಮಧ್ಯೆ ಇದು ಕರ್ನಾಟಕದ ಸ್ವತಂತ್ರ ಸಂಸ್ಥೆಯೋ ಅಥವಾ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಅಂಗಸಂಸ್ಥೆಯೋ ಎಂಬ ವಿವಾದ ತಲೆಎತ್ತಿ ಈಗ ಇದು ಮದರಾಸು ಸಭಾದ ಅಂಗಸಂಸ್ಥೆಯೆಂದೇ ತೀರ್ಮಾನವಾಗಿದೆ.

ಕರ್ನಾಟಕದ ಪ್ರಾಂತೀಯ ಹಿಂದೀ ಪ್ರಚಾರ ಸಭಾದ (1936) ಸ್ಥಾಪನೆಯೊಂದಿಗೆ ಕರ್ನಾಟಕದಲ್ಲಿ ಹಿಂದೀ ಪ್ರಚಾರ–ಪ್ರಸಾರಕ್ಕೆ ಹೊಸ ಆಯಾಮಗಳು ತೆರೆದುಕೊಂಡವು. ಅಂದಿನ ಅನುಭವಿ ಪ್ರಚಾರಕ ಕಾರ್ಯಕರ್ತರು ತಮ್ಮದೇ ಆದ ಸಂಸ್ಥೆಗಳನ್ನು ಸ್ಥಾಪಿಸಿದರು. ಇವೆಂದರೆ ಮೈಸೂರು ರಿಯಾಸತ್ ಹಿಂದೀ ಪ್ರಚಾರ್ ಸಮಿತಿ (1938), ಮೈಸೂರು ಹಿಂದಿ ಪ್ರಚಾರ್ ಪರಿಷದ್ (1942), ಕರ್ನಾಟಕ ಮಹಿಳಾ ಹಿಂದೀ ಸೇವಾ ಸಮಿತಿ (1943). ಗುಲ್ಬರ್ಗದಲ್ಲಿ ಸಹ ಹಿಂದೀ ಪ್ರಚಾರ ಸಮಿತಿ ಆರಂಭವಾಗಿದೆ. ಹೀಗೆ ಈ ಐದು ಸಂಸ್ಥೆಗಳು ಇಡೀ ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ನಿರಂತರವಾಗಿ ಹಿಂದೀ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿವೆ.

ಕರ್ನಾಟಕದಲ್ಲಿ ಹಿಂದೀಯನ್ನು ಶಾಲಾ ಮಟ್ಟದಲ್ಲಿ ಕಲಿಸಲು ಅವಕಾಶ ಕಲ್ಪಿಸಿಕೊಡುವುದರ ಮೂಲಕ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆ ಹಿಂದೀ ಭಾಷೆ ಮತ್ತು ಸಾಹಿತ್ಯ ಪ್ರಸಾರ ಕಾರ್ಯದಲ್ಲಿ ಅತ್ಯಮೂಲ್ಯ ಕೊಡುಗೆಯನ್ನಿತ್ತಿದೆ. 1930ರಲ್ಲಿ ಹಿಂದೀ ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಪ್ರವೇಶಿಸಿತು. ಆ ದಿನಗಳಲ್ಲಿ ಶಾಲಾ ಹಂತದಲ್ಲಿ ಸ್ವಂತ ಅಭ್ಯಾಸ ಮಾಡಿ ಪರೀಕ್ಷೆಗಳನ್ನು ಬರೆಯುವ ಅವಕಾಶವಿತ್ತು. ಆದರೆ ಆರಂಭದ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ದ್ವಿತೀಯ ಭಾಷೆಯ ರೂಪದಲ್ಲಿ ಹಿಂದೀಯನ್ನು ಅಭ್ಯಾಸ ಮಾಡಲು ಅನುಕೂಲ ಕಲ್ಪಿಸಲಾಯಿತು. ಈ ಅನುಕೂಲ ಬಹಳ ದಿನಗಳ ಕಾಲ ಇರಲಿಲ್ಲ. ಹಿಂದೀಯಿಂದ ಮಾತೃಭಾಷೆಯ ಅಧ್ಯಯನಕ್ಕೆ ಧಕ್ಕೆಯಾಗಬಹುದೆಂಬ ಆತಂಕದಿಂದ ಹಿಂದೀಯನ್ನು ಐಚ್ಛಿಕ ವಿಷಯದ ಪಟ್ಟಿಗೆ ಸೇರಿಸಲಾಯಿತು. 1935ರಲ್ಲಿ ಮಾಧ್ಯಮಿಕ ಶಾಲಾ ಹಂತದಲ್ಲಿ ಹಿಂದೀಕಲಿಸುವಿಕೆಗೆ ವ್ಯವಸ್ಥೆ ಮಾಡಲಾಯಿತು. ಕಾಲ ಬದಲಾದಂತೆ ಹಿಂದೀಯ ಬಗೆಗಿನ ಸರ್ಕಾರದ ದೃಷ್ಟಿಯೂ ಬದಲಾಗುತ್ತ ಬಂದು 1946ರಲ್ಲಿ ಹಿಂದೀಯನ್ನು ಪ್ರೌಢಶಾಲಾ ಹಂತದಲ್ಲಿ ಅನಿವಾರ್ಯ ವಿಷಯವನ್ನಾಗಿ ಮಾಡಿದರಾದರೂ ಪರೀಕ್ಷೆಯ ವಿಷಯವನ್ನಾಗಿ ಮಾಡಲಿಲ್ಲ. 1955ರಲ್ಲಿ ಹಿಂದಿ ವಿದ್ವಾನ್ ಕೋರ್ಸ್‌ನ್ನು ಸರ್ಕಾರ ಮೈಸೂರಿನಲ್ಲಿ ಆರಂಭಿಸಿತು. ಈ ಕೋರ್ಸ್ ನಾಲ್ಕು ವರ್ಷಗಳ ಅವಧಿಯದಾಗಿದ್ದು ಹಿಂದೀಯಲ್ಲಿ ಉನ್ನತ ಶಿಕ್ಷಣವನ್ನು ನೀಡುವ ಉತ್ತಮ ಪಠ್ಯಕ್ರಮವನ್ನು ಹೊಂದಿತ್ತು. ಈಚಿನ ವಿಷಯಗಳಲ್ಲಿ ಈ ಕೋರ್ಸನ್ನು ಸರ್ಕಾರ ಸ್ಥಗಿತಗೊಳಿಸಿತು. ಇದೇ ರೀತಿಯಾಗಿ ಹಿಂದೀ ಶಿಕ್ಷಕರ ಟ್ರೈನಿಂಗ್ ಕಾಲೇಜನ್ನು ಸಹ ಸರ್ಕಾರ ಮೊದಲ ಹಂತದಲ್ಲಿ ಮೈಸೂರಿನಲ್ಲಿ ಸ್ಥಾಪಿಸಿ, ಅನಂತರದ ವರ್ಷಗಳಲ್ಲಿ ಗುಲ್ಬರ್ಗ ಮತ್ತು ಬಾಗಲಕೋಟೆಗಳಲ್ಲೂ ಈ ಬಗೆಯ ಕಾಲೇಜುಗಳನ್ನು ಸ್ಥಾಪಿಸಿ ಸಾವಿರಾರು ಹಿಂದೀ ಶಿಕ್ಷಕರಿಗೆ ತರಬೇತನ್ನು ನೀಡಿತು. ಈಗ ಈ ಮೂರೂ ಕಾಲೇಜುಗಳೂ ಕಾರ್ಯ ನಿರ್ವಹಿಸುತ್ತಿಲ್ಲ. ಕರ್ನಾಟಕದಲ್ಲಿ ಈಚಿನ ವರ್ಷಗಳಲ್ಲಿ ಸಮಿತಿ ಸಭಾಗಳು ಸರ್ಕಾರದ ಅನುಮತಿ ಮಾನ್ಯತೆ ಪಡೆದು ತರಬೇತಿ ಕಾಲೇಜುಗಳನ್ನು ನಡೆಸುತ್ತಿವೆ.

ಕರ್ನಾಟಕ ಸರ್ಕಾರ 1959ರಲ್ಲಿ ಹಿಂದೀ ಪ್ರಚಾರ–ಪ್ರಸಾರದಲ್ಲಿ ತೀವ್ರತೆಯನ್ನು ತರಲು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಿಂದೀ ಅಧಿಕಾರಿ ಹುದ್ದೆಯನ್ನು ಸೃಷ್ಟಿಸಿತು. ಈ ವಿಭಾಗ ಕರ್ನಾಟಕದಲ್ಲಿ ಹಿಂದೀ ಶಿಕ್ಷಣದ ಸರ್ವತೋಮುಖ ಪ್ರಗತಿಗೆ ಆರಂಭದ ವರ್ಷಗಳಲ್ಲಿ ನೀಡಿರುವ ಯೋಜನೆಗಳು ಮಹತ್ತ್ವದ್ದಾಗಿವೆ. ಕರ್ನಾಟಕದ ಹಿಂದೀ ಲೇಖಕರನ್ನು ಹಾಗೂ ಅನುವಾದಕರನ್ನು ಪ್ರೋತ್ಸಾಹಿಸಲು ರೂಪಿಸಿದ್ದ ಬಹುಮಾನ ಯೋಜನೆ ಈಚಿನ ವರ್ಷಗಳಲ್ಲಿ ಸ್ಥಗಿತಗೊಂಡಿದೆ.

ಕರ್ನಾಟಕದಲ್ಲಿ ಹಿಂದೀ ಭಾಷೆ ಮತ್ತು ಸಾಹಿತ್ಯದ ಅಧ್ಯಯನ ಮತ್ತು ಅಧ್ಯಾಪನಕ್ಕೆ ಹೊಸ ಆಯಾಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೀ ಪ್ರವೇಶದ ಐತಿಹಾಸಿಕ ಘಟನೆಯಿಂದ ಆರಂಭವಾಗುತ್ತದೆ. ಸಿ.ವೈ. ಚಿಂತಾಮಣಿಯವರು 1937ರಲ್ಲಿ ಹಿಂದೀಗೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾನ ಸಿಗಬೇಕೆಂದು ಪ್ರತಿಪಾದಿಸಿದ ಹಿನ್ನೆಲೆಯಲ್ಲಿ 1938ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೀಯ ಪ್ರವೇಶ ದೊರೆಯಿತು. ವಿಶ್ವವಿದ್ಯಾನಿಲಯದಲ್ಲಿ ಮೊದಲ ಹಿಂದೀ ಅಧ್ಯಾಪಕರಾಗಿ ಸೇವೆ ಆರಂಭಿಸಿದ ನಾ.ನಾಗಪ್ಪನವರು ಹಿಂದೀ ಶಿಕ್ಷಣವನ್ನು ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಹಂತದಲ್ಲಿ ಪ್ರಾರಂಭಿಸಲು ಕಾರಣಪುರುಷರಾದರು. 1959ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೀ ಎಂ.ಎ. ತರಗತಿಗಳು ಆರಂಭವಾದವು. ಮುಂದೆ 1981ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ ಹಿಂದೀ ಎಂ.ಎ. ತರಗತಿಗಳನ್ನು ಆರಂಭಿಸಿತು. ಮೇ. ರಾಜೇಶ್ವರಯ್ಯನವರ ನೇತೃತ್ವದಲ್ಲಿ ಆರಂಭಗೊಂಡ ಹಿಂದೀ ಎಂ.ಎ., ಕೋರ್ಸ್ ಇಡೀ ದೇಶದಲ್ಲೇ ಜನಪ್ರಿಯವಾಯಿತು. ಹಿಂದೀ ಭಾಷೀಯ ರಾಜ್ಯಗಳ ವಿದ್ಯಾರ್ಥಿಗಳೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೀ ಕಲಿಯಲು ಬಂದದ್ದು ಒಂದು ದಾಖಲೆಯೆಂದೇ ಹೇಳಬೇಕು. ಕರ್ನಾಟಕದಲ್ಲಿ ಇತರ ವಿಶ್ವವಿದ್ಯಾಲಯಗಳು ಸ್ಥಾಪಿತಗೊಂಡಾಗ ಅಲ್ಲೂ ಹಿಂದೀ ವಿಭಾಗಗಳು ಆರಂಭವಾದುವು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 1971ರಲ್ಲಿ ಗುಲ್ಬರ್ಗದ ಹಿಂದೀ ಸ್ನಾತಕೋತ್ತರ ಕೇಂದ್ರ (1976) (ಮುಂದೆ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಈ ಕೇಂದ್ರ ಸ್ವತಂತ್ರ ವಿಭಾಗವಾಗಿ ಕಾರ್ಯ ನಿರ್ವಹಿಸಲಾರಂಭಿಸಿತು), ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 1972ರಲ್ಲಿ, ಈಚೆಗೆ ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಿಂದೀ ಸ್ನಾತಕೋತ್ತರ ವಿಭಾಗಗಳು ಪ್ರಾರಂಭಗೊಂಡು ಕಾರ್ಯನಿರತವಾಗಿವೆ. ಇಲ್ಲೆಲ್ಲ ಹಿಂದೀಯಲ್ಲಿ ಸ್ನಾತಕೋತ್ತರ ಶಿಕ್ಷಣ ಹಾಗೂ ಸಂಶೋಧನೆಗಳು ಯಶಸ್ವಿಯಾಗಿ ಸಾಗಿವೆ. ಈ ಮಧ್ಯೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ಧಾರವಾಡದಲ್ಲಿ ಸ್ನಾತಕೋತ್ತರ ಹಿಂದೀ ಶಿಕ್ಷಣವನ್ನು ಆರಂಭಿಸಿದ್ದು ಇಲ್ಲೂ ಹಿಂದೀಯಲ್ಲಿ ಸಂಶೋಧನೆ ನಡೆಯುತ್ತಿದೆ. ಹೀಗೆ ಕರ್ನಾಟಕದಲ್ಲಿನ ಸಂಶೋಧನೆಗಳು ವಿಶ್ವವಿದ್ಯಾಲಯಗಳಲ್ಲಿ ಹಿಂದೀಗೆ ಸಾಕಷ್ಟು ಪ್ರಮಾಣದಲ್ಲಿ ಉತ್ತೇಜನ ನೀಡಿವೆ. ವಿಶ್ವವಿದ್ಯಾಲಯಗಳ ಹಂತದಲ್ಲಿ ಹಿಂದೀಯನ್ನು ಪ್ರತಿಷ್ಠಾಪಿಸುವುದರಲ್ಲಿ ನಾಗಪ್ಪ, ಮೇ. ರಾಜೇಶ್ವರಯ್ಯ, ರಾಧಾಕೃಷ್ಣ ಮೊದಲಿಯಾರ್, ಹಿರಣ್ಮಯ, ಶಂಕರರಾವ್ ಕೊಪ್ಪೀಕೇರಿ, ಸರಗೂ ಕೃಷ್ಣಮೂರ್ತಿ ಮೊದಲಾದವರ ಕೊಡುಗೆ ಮಹತ್ತ್ವದ್ದಾಗಿದೆ.

ಕರ್ನಾಟಕ ಹಿಂದೀಯೇತರ ಭಾಷಿಕ ರಾಜ್ಯವಾದರೂ ಇಲ್ಲಿ ಹಿಂದೀ ಭಾಷೆಯಲ್ಲಿ ಮೌಲಿಕ ಸಾಹಿತ್ಯವನ್ನು ಸೃಜಿಸಿರುವ ಒಂದು ಪರಂಪರೆಯನ್ನೇ ಕಾಣಬಹುದು. ದಖನೀ ಭಾಷೆ ಗುಲಬರ್ಗ, ಬೀದರ್ ಹಾಗೂ ಬಿಜಾಪುರಗಳಲ್ಲಿ ಮುಸ್ಲಿಂ ದೊರೆಗಳ ಕಾಲದಲ್ಲಿ ಬಳಕೆಯಲ್ಲಿದ್ದು ವಿಪುಲವಾಗಿ ಸಾಹಿತ್ಯ ಸೃಷ್ಟಿಯಾಯಿತು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹಿಂದೀಯಲ್ಲಿ ಸೃಜನಾತ್ಮಕ ಬರವಣಿಗೆ ಸಾಕಷ್ಟು ಪ್ರಮಾಣದಲ್ಲಿ ಆಗಿದೆ. ಹಿಂದೀಯನ್ನು ಕಲಿತ ಕನ್ನಡಿಗರು ಆ ಭಾಷೆಯಲ್ಲಿ ಅಭಿವ್ಯಕ್ತಿ ಮಾಡುವಷ್ಟು ಪ್ರೌಢಿಮೆಯನ್ನು ಸಾಧಿಸಿದ್ದು ಹೆಮ್ಮೆಯ ವಿಷಯವೇ ಸರಿ. ಕರ್ನಾಟಕದ ಹಿಂದೀ ಕವಿಗಳಲ್ಲಿ ಮುಖ್ಯರಾದವರೆಂದರೆ ಸರಗೂ ಕೃಷ್ಣಮೂರ್ತಿ, ಅಪ್ಪಾಸಾಹೇಬ್ (ಶೈಲ್), ಸಿದ್ಧಲಿಂಗಪಟ್ಟಣಶೆಟ್ಟಿ (ಸಾಗರ್), ಕೆ.ಹನುಮಂತರಾವ್ (ರವಿ), ವಜ್ರಮಟ್ಟಿ (ಮೇಘಮಿತ್ರ್), ಟಿ.ಜಿ.ಪ್ರಭಾಶಂಕರ್ (ಪ್ರೇಮಿ). ಕರ್ನಾಟಕದ ಹಿಂದಿ ಕಾದಂಬರಿಕಾರರಲ್ಲಿ ಮ.ಸು.ಕೃಷ್ಣಮೂರ್ತಿ ಅವರ ಕೊಡುಗೆ ದೊಡ್ಡದು. ಇವರು ಹಿಂದಿಯಲ್ಲಿ ನಾಲ್ಕು ಕಾದಂಬರಿಗಳನ್ನು (ಅಪರಾಜಿತ್, ರಾಗ್ ಕಾನಡಾ, ಪರಶುರಾಮ್, ಕೀ ಬಹನೇಂ ಹಾಗೂ ಜ್ಯೋತಿಕಳಶ್) ಪ್ರಕಟಿಸಿ ಮನ್ನಣೆಗಳಿಸಿದ್ದಾರೆ. ಚಂದ್ರಕಾಂತ ಕುಸನೂರ್, ಅಪ್ಪಾ ಸಾಹೇಬ್, ಮ.ಸು.ಕೃಷ್ಣಮೂರ್ತಿ, ಕೇಶವ ಮಳಗಾಂವಕರ್ ಹಿಂದಿ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹಿಂದಿ ನಾಟಕ ಕ್ಷೇತ್ರದಲ್ಲಿ ಜಿ.ಜೆ.ಹರಿಜಿತ್ ವಿಶೇಷ ಉಲ್ಲೇಖಕ್ಕೆ ಅರ್ಹರಾಗಿದ್ದಾರೆ. ಅನೇಕ ಏಕಾಂಕಗಳನ್ನೂ ನಾಟಕಗಳನ್ನೂ ಪ್ರಕಟಿಸಿ ಹಿಂದೀ ಭಾಷೀಯರ ಮೆಚ್ಚುಗೆ ಹಾಗೂ ಪ್ರಶಂಸೆಯನ್ನು ಪಡೆದಿರುವ ಇವರ ಹುಮಾಯೂನ್, ಸಂಭವಾಮಿ ಯುಗೇ ಯುಗೆ, ಉತ್ತರ ಮೃಚ್ಛಕಟಿಕ, ಯೂನಿವರ್ಸಿಟಿ ನಾಟಕಗಳು ಉಲ್ಲೇಖಯೋಗ್ಯ ವಾಗಿವೆ. ನಾಟಕ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಇತರರೆಂದರೆ ಪಂಡಿತ ತಾರಾನಾಥ್, ಎಂ.ವಿ.ಜಂಬುನಾಥನ್, ಆರ್.ಸಿ.ಭೂಸನೂರ್‌ಮಠ, ಚಂದ್ರಕಾಂತ ಕುಸನೂರ್, ಎನ್.ಎಸ್.ದಕ್ಷಿಣಾಮೂರ್ತಿ ಮುಖ್ಯರಾಗಿದ್ದಾರೆ. ಲಲಿತ ಪ್ರಬಂಧದ ಕ್ಷೇತ್ರದಲ್ಲಿ ಸರೋಜಿನಿ ಮಹಿಷಿಯವರು ಪ್ರಕಟಿಸಿರುವ ಅತಿಥಿ ಸತ್ಕಾರ್ ಹಾಗೂ ಯೇ ಹಮಾರೇ ಸಂಗ್ರಹಗಳು, ನಾ.ನಾಗಪ್ಪನವರ ಬುವಾಜಿ ಸಂಗ್ರಹದ ಬರೆಹಗಳು ಗಮನ ಸೆಳೆಯುತ್ತವೆ.

ವ್ಯಾಕರಣ–ಶಬ್ದಕೋಶರಚನಾ ಕ್ಷೇತ್ರದಲ್ಲಿ ಕರ್ನಾಟಕದ ವಿದ್ವಾಂಸರು ಮಾಡಿರುವ ಕೆಲಸ ಬೆರಗುಗೊಳಿಸುವಂಥಾದ್ದಾಗಿದೆ. ಎಂ.ವಿ.ಜಂಬುನಾಥನ್‌ರ ಹಿಂದೀ–ಕನ್ನಡ ಕೋಶ, ಉರ್ದು–ಹಿಂದೀ ಕೋಶ, ಹಿಂದೀ ಮುಹಾವರಾ ಕೋಶ್, ಸರಳ ಹಿಂದೀ ವ್ಯಾಕರಣ, ಗುರುನಾಥ್ ಜೋಶಿಯವರ ಕನ್ನಡ–ಹಿಂದೀ ಕೋಶ, ಮೈಸಾಳೆಯವರ ಕನ್ನಡ–ಹಿಂದೀ ಕೋಶ, ದಕ್ಷಿಣಾಮೂರ್ತಿಯವರ ಕನ್ನಡ–ಹಿಂದೀ ಕೋಶ, ನಾಗಪ್ಪನವರ ಅಭಿನವ್ ಹಿಂದೀ ವ್ಯಾಕರಣ ಇತ್ಯಾದಿ ಗ್ರಂಥಗಳು ಉಲ್ಲೇಖಾರ್ಹವಾಗಿವೆ.

ಕರ್ನಾಟಕದಲ್ಲಿ ಹಿಂದೀ ಪತ್ರಿಕೆಗಳು ಹಿಂದೀ ಪ್ರಚಾರ ಸಭಾ ಸಮಿತಿಗಳ ಮೂಲಕ ಪ್ರಕಟವಾಗುತ್ತಿದ್ದು ಇವು ಆಯಾಯ ಸಂಸ್ಥೆಗಳ ಚಟುವಟಿಕೆಗಳನ್ನೂ ಪರೀಕ್ಷೋಪಯೋಗಿ ಲೇಖನಗಳನ್ನೂ ಪ್ರಕಟಿಸುವ ವೇದಿಕೆಗಳಾಗಿದ್ದರೂ ಕರ್ನಾಟಕದ ಹಿಂದೀ ಲೇಖಕರನ್ನು ಪ್ರೋತ್ಸಾಹಿಸುತ್ತಲೂ ಬಂದಿವೆ. ಭಾರತ್‌ವಾಣಿ, ಹಿಂದೀ ಪ್ರಚಾರ ಪತ್ರಿಕಾ, ಹಿಂದೀ ಪ್ರಚಾರ ವಾಣಿ, ಭಾಷಾ ಪೀಯೂಷ್–ಇವು ಕರ್ನಾಟಕದ ಪ್ರಮುಖ ಹಿಂದೀ ಪತ್ರಿಕೆಗಳಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಹಿಂದೀ ವಿಭಾಗದಿಂದ ಪ್ರಕಟವಾಗಿರುವ ಮಾನಸಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಹಿಂದೀ ವಿಭಾಗದಿಂದ ಪ್ರಕಟವಾಗಿರುವ 'ಕುಂತಲ್ ಭಾರತಿ'ಯ ಕೆಲವು ಸಂಚಿಕೆಗಳು ವಿದ್ವತ್ಪೂರ್ಣವಾಗಿವೆ. ಈಚಿನ ವರ್ಷಗಳಲ್ಲಿ ಇವುಗಳ ಪ್ರಕಟಣೆ ನಿಂತಿದೆ. ವಿಮರ್ಶೆ ಮತ್ತು ಸಂಶೋಧನ ಕ್ಷೇತ್ರಗಳಲ್ಲಿಯೂ ಕರ್ನಾಟಕ ಹಿಂದೀ ಲೇಖಕರ ಕೊಡುಗೆ ಗಣನೀಯವಾಗಿದೆ. ಕರ್ನಾಟಕದ ನಾಲ್ಕು ವಿಶ್ವವಿದ್ಯಾಲಯಗಳಲ್ಲಿರುವ ಹಿಂದೀ ಅಧ್ಯಯನ ವಿಭಾಗಗಳು ಅನೇಕ ಸಂಶೋಧನ ಕಾರ್ಯವನ್ನು ನಡೆಸುತ್ತಿವೆ.

ಕರ್ನಾಟಕದಲ್ಲಿ ಕನ್ನಡ ಮತ್ತು ಹಿಂದೀ ಭಾಷೆಗಳ ಮಧ್ಯೆ ಆಗಿರುವ ಅನುವಾದಕಾರ್ಯ ಸಮೃದ್ಧವಾಗಿದೆ. ಅದರಲ್ಲೂ ಹಿಂದೀಯಿಂದ ಕನ್ನಡಕ್ಕೆ ನೂರಾರು ಕೃತಿಗಳು ಅನುವಾದವಾಗಿದ್ದು ಕನ್ನಡವನ್ನು ಇವು ಪುಷ್ಟಿಗೊಳಿಸಿವೆ. ಪ್ರಾಚೀನ ಹಿಂದೀ ಸಾಹಿತ್ಯದ ಪ್ರಮುಖ ಕೃತಿಗಳ

ಅನುವಾದಗಳಿಂದ ಈಚಿನವರೆಗೆ ಬಹುತೇಕ ಎಲ್ಲ ಪ್ರಮುಖರ ಕೃತಿಗಳು ಕನ್ನಡದಲ್ಲಿ ಬಂದಿವೆ. ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದವರ ಹಾಗೂ ಅನುವಾದಿಸುತ್ತಿರುವವರ ಸಂಖ್ಯೆ ಅಪಾರವಾದುದು. ಪ್ರಾತಿನಿಧಿಕವಾಗಿ ಹೇಳುವುದಾದರೆ ಡಿ.ಕೆ.ಭಾರದ್ವಾಜ, ಗುರುನಾಥ ಜೋಶಿ, ಎಂ.ಎಸ್.ಕೃಷ್ಣ ಮೂರ್ತಿ, ಪ್ರತಾಪ್ ಸುಧಾಕರ್, ಪ್ರಧಾನ್ ಗುರುದತ್ತ, ಸಿದ್ಧಲಿಂಗ ಪಟ್ಟಣಶೆಟ್ಟಿ, ಎಚ್.ಎಸ್.ಪಾರ್ವತಿ, ಎಚ್.ವಿ.ರಾಮಚಂದ್ರರಾವ್, ಎಂ.ವಿ.ನಾರಾಯಣರಾವ್, ತಿಪ್ಪೇಸ್ವಾಮಿ, ಕುಮುದಪ್ರಿಯ, ಬಿ.ನಂ.ಚಂದ್ರಯ್ಯ, ಎಸ್.ಎಂ.ರಾಮಚಂದ್ರ ಸ್ವಾಮಿ, ಪಿ.ವಿ.ನಂಜರಾಜ ಅರಸು, ತೇಜಸ್ವಿ ಕಟ್ಟೀಮನಿ, ಭಾಸ್ಕರ್ ಮಯ್ಯ, ಡಿ.ಎನ್.ಶ್ರೀನಾಥ್, ಕಾಶೀನಾಥ್ ಅಂಬಲಗೆ, ಪಂಚಾಕ್ಷರಿ ಹಿರೇಮಠ್, ಶಶಿಕಲಾ ಸುಬ್ಬಣ್ಣ ಗಮನಾರ್ಹ ಕನ್ನಡ ಅನುವಾದಗಳನ್ನು ಮಾಡಿದ್ದಾರೆ.

ಕನ್ನಡದಿಂದ ಹಿಂದೀಗೆ ಅನುವಾದಿಸುತ್ತಿರುವವರ ಹಾಗೂ ಅನುವಾದಿಸಿರುವವರ ಪಟ್ಟಿಯೂ ದೊಡ್ಡದೇ. ಆದರೆ ಕನ್ನಡದಿಂದ ಹಿಂದೀಗೆ ಅನುವಾದಗೊಂಡಿರುವ ಕೃತಿಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕು. ಕನ್ನಡದಿಂದ ಹಿಂದೀಗೆ ಅನುವಾದಿಸಿ ಕನ್ನಡ ಸಾಹಿತ್ಯ – ಸಂಸ್ಕೃತಿಯ ನಿಜವಾದ ರಾಯಭಾರಿಯಾಗಿದ್ದ ಪ್ರಮುಖ ಅನುವಾದಕರೆಂದರೆ ಬಿ.ಆರ್.ನಾರಾಯಣ್, ಇವರು ಕನ್ನಡದ ನಲ್ವತ್ತಕ್ಕೂ ಹೆಚ್ಚು ಕೃತಿಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಕನ್ನಡದಿಂದ ಹಿಂದೀಗೆ ಅನುವಾದ ಮಾಡಿರುವ ಇತರೆ ಕೆಲವು ಪ್ರಮುಖ ಅನುವಾದಕರೆಂದರೆ ಬಾಲಚಂದ್ರ ಜಯಶೆಟ್ಟಿ, ವಾಸು, ಬಿ.ಪುತ್ರನ್, ಬಾಬುರಾವ್ ಕುಮಠೇಕರ್, ಚಂದ್ರಕಾಂತ ಕುಸನೂರ, ಎಸ್.ಎಂ.ರಾಮಚಂದ್ರಸ್ವಾಮಿ, ಬಿ.ವಿ.ಕಾರಂತ, ಎಸ್.ರಾಮಚಂದ್ರ, ತಿಪ್ಪೇಸ್ವಾಮಿ, ಹಿರಣ್ಣಯ್ಯ, ರಸಿಕಪುತ್ತಿಗೆ, ಎಂ.ರಾಜೇಶ್ವರಯ್ಯ, ಆರಂ.ಸಿ.ಭೂಸನೂರಮಠ, ನಂದಿನಿ ಗುಂಡೂರಾವ್, ಬಿ.ವೈ.ಲಲಿತಾಂಬ, ಪ್ರಧಾನ ಗುರುದತ್ತ, ಎಂ.ಎಸ್.ಕೃಷ್ಣಮೂರ್ತಿ, ಸರೋಜಿನಿ ಮಹಿಷಿ, ಡಿ.ಎನ್.ಶ್ರೀನಾಥ್, ಟಿ.ಆರ್.ಭಟ್, ಜಿ.ಎಂ.ಉಮಾಪತಿ ಶಾಸ್ತ್ರಿ ಮೊದಲಾದವರು. ಪ್ರಧಾನ ಗುರುದತ್ತ ಅವರು ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಹಿಂದೀಗೆ ಅನುವಾದಿಸಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಮುಂತಾದ ಸಂಸ್ಥೆಗಳು ಈಚಿನ ವರ್ಷಗಳಲ್ಲಿ ಅನುವಾದಗಳನ್ನು ಪ್ರಕಟಿಸುವುದರಲ್ಲಿ ಅಪಾರ ಆಸಕ್ತಿಯನ್ನು ತೋರುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉತ್ತರ ಪ್ರದೇಶ ಸರ್ಕಾರ ಸ್ಥಾಪಿಸಿರುವ ದತ್ತಿ ನಿಧಿಯಿಂದ ಹಿಂದೀ ಮತ್ತು ಕನ್ನಡ ಅನುವಾದಗಳನ್ನು ಪ್ರಕಟಿಸುತ್ತಿರುವುದು ವಿಶೇಷವಾಗಿ ನಮೂದಿಸಬೇಕಾಗಿರುವ ಅಂಶವಾಗಿದೆ. (ಟಿ.)

**ಮರಾಠಿ:** ಭೌಗೋಳಿಕವಾಗಿ ನೆರೆಯ ರಾಜ್ಯಗಳಾಗಿರುವ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸಾಮರಸ್ಯ ಶತಮಾನಗಳಿಂದ ಕ್ರಮವಾಗಿ ನಡೆದುಕೊಂಡು ಬಂದಿದೆ. ಮಹಾರಾಷ್ಟ್ರದ ಬಹುಭಾಗ ಕವಿರಾಜಮಾರ್ಗದ ಕಾಲಕ್ಕೆ ಕರ್ನಾಟಕದಲ್ಲಿ ಐಕ್ಯವಾಗಿತ್ತೆಂದು ತಿಳಿಯುತ್ತದೆ. ಮಹಾರಾಷ್ಟ್ರದಲ್ಲಿ ಇಂದಿಗೂ ಇರುವ ಕೆಲವು ಊರುಗಳ ಹೆಸರುಗಳು ಕನ್ನಡ ಹೆಸರಿನ ರೂಪಾಂತರವಾಗಿವೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಉದಾಹರಣೆಗೆ: ಖಾಂಡಿವ್ಲಿ (<ಖಂಡವಳ್ಳಿ), ಬೋರಿವ್ಲಿ (<ಬೋರಿಹಳ್ಳಿ), ಲೋಣಾವ್ಳಾ (<ಲೋಳವಳ್ಳಿ), ಮಲವ್ಳಿ (<ಮಳವಳ್ಳಿ), ಮಲಪಹಳ್ಳಿ, ಪೂನಾ (<ಪುಣಕ), ಪಲಟನ್ (<ಪಳೆಯತಾಣ), ಮೀರಜ್ (<ಮಿರಿಂಜೆ), ಕುರಂದವಾಡ್ (<ಕುಡಲದಾಮವಾಡ) ಇತ್ಯಾದಿ. ಸಿದ್ಧರಾಮನ ಸೊನ್ನಲಪುರ, ಬಿಜ್ಜಳನ ಮಂಗಳವೇಡ, ಅಕ್ಕಲಕೋಟೆ ಮುಂತಾದ ಊರುಗಳೂ ಮಹಾರಾಷ್ಟ್ರದಲ್ಲಿಯೇ ಉಳಿದಿವೆ. ಕನ್ನಡ ಎನ್ನುವ ಹೆಸರಿನ ಒಂದು ತಾಲ್ಲೂಕು ಇಂದಿಗೂ ಔರಂಗಾಬಾದ್ ಜಿಲ್ಲೆಯಲ್ಲಿ ಗೋದಾವರಿಯ ಆಚೆಗಿದೆ.

ವಿಜಯನಗರದ ಪತನಾನಂತರ ಮಹಮ್ಮದೀಯರ ದಕ್ಷಿಣ ಭಾರತ ದಾಳಿಯ ಜೊತೆ ಜೊತೆಯಲ್ಲಿಯೇ ಮಹಾರಾಷ್ಟ್ರೀಯರು ಇನ್ನೂ ದಕ್ಷಿಣವನ್ನು ಆಕ್ರಮಿಸತೊಡಗಿದರು. ಬೆಂಗಳೂರು ಜಹಗೀರಿಯಾಗಿ ದೊರೆತಮೇಲಂತೂ ಶಿವಾಜಿಯ ತಂದೆ ಶಹಾಜಿ ಕೋಲಾರ ಮತ್ತು ದೊಡ್ಡಬಳ್ಳಾಪುರಗಳಲ್ಲಿ ನಿಂತು ಪ್ರಾಬಲ್ಯ ಹೊಂದಿ ಮರಾಠಿ ಭಾಷೆ, ಕಂದಾಯ ಪದ್ಧತಿ ಮತ್ತು ಲೆಕ್ಕಪತ್ರಗಳ ರೀತಿಯನ್ನು ಕರ್ನಾಟಕದಲ್ಲಿ ಅಳವಡಿಸಿದನೆಂದು ತಿಳಿಯುತ್ತದೆ. (ನೋಡಿ: ಮರಾಠರ ಆಳಿಕೆ). ಸು. 1640ರಲ್ಲಿ ಶಿವಾಜಿ ಬೆಂಗಳೂರಿನಲ್ಲಿಯೇ ನೆಲಸಿದ್ದ. ಇಂದಿಗೂ ಶಹಾಜಿಯ ಸಮಾಧಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿದೆ ಎನ್ನಲಾಗಿದೆ. ಮುಗಲ್ ಚಕ್ರವರ್ತಿ ಔರಂಗಜೇಬನ ಬೆದರಿಕೆಯನ್ನು ಅಲಕ್ಷಿಸಿ ಶಿವಾಜಿಯ ಮಗ ರಾಜಾರಾಮನಿಗೆ ಕೆಳದಿಯ ಚೆನ್ನಮ್ಮ ರಕ್ಷಣೆಯನ್ನು ಒದಗಿಸಿದಳು. ಪೇಶ್ವೆಗಳ ಆಡಳಿತ ಬಂದಮೇಲೆಯೂ ಕರ್ನಾಟಕದ ಮೇಲೆ ಮರಾಠಿಯ ಪ್ರಭಾವ ಗಾಢವಾಗಿಯೇ ಇದ್ದಿತು. ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೇಲೆ ಸ್ವಉಪಯೋಗಕ್ಕಾಗಿ ಕರ್ನಾಟಕದ ಹಲವು ಭಾಗಗಳನ್ನು ಮುಂಬಯಿ ಪ್ರಾಂತಕ್ಕೆ ಸೇರಿಸಿದರು.

ಕರ್ನಾಟಕದಲ್ಲಿ ಮರಾಠಿ ಜನರೂ ಮಹಾರಾಷ್ಟ್ರದಲ್ಲಿ ಕನ್ನಡಿಗರೂ ರಾಜನೀತಿಕ ಸಾಮಾಜಿಕ ಸಾಂಸ್ಕೃತಿಕ ಹೀಗೆ ಒಂದಲ್ಲ ಒಂದು ಕಾರಣಕ್ಕಾಗಿ ನೆಲಸಿದ್ದಾರೆ. ಸಿಂಪಿಗ ವೃತ್ತಿಯನ್ನು ಜೀವನವನ್ನಾಗಿ ಮಾಡಿಕೊಂಡ ಮರಾಠಿ ಮನೆಮಾತಿನ ಜನ ಕರ್ನಾಟಕದ ಹಳ್ಳಿಗಳಲ್ಲಿ ನೆಲಸಿದ್ದಾರೆ. ವ್ಯಾವಹಾರಿಕವಾಗಿ ಅವರು ಕನ್ನಡವನ್ನು ಹೊರಗೆ ಬಳಸುತ್ತಾರೆ. ಇಲ್ಲಿಯ ಮಾಧ್ವಪಂಥದ ಅನೇಕ ದೇಶಸ್ಥಮಾಧ್ವರು ಮರಾಠಿ ಮಾತೃಭಾಷೆಯವರು. ಮಹಾರಾಷ್ಟ್ರದಲ್ಲಿರುವ ಕನ್ನಡಿಗರಲ್ಲಿ ಬಹುಪಾಲು ಜನ ಜೈನರು ಮತ್ತು ವೀರಶೈವರು. ಮಹಾರಾಷ್ಟ್ರದಲ್ಲಿನ ಕನ್ನಡ ಶಾಸನಗಳನ್ನು ಕೊಲ್ಲಾಪುರ ಜಿಲ್ಲೆಯ ಶಾಸನಗಳು ಮತ್ತು ನಾಂದೇಡ್ ಜಿಲ್ಲೆಯ ಶಾಸನಗಳು ಎನ್ನುವ ಸಂಪುಟಗಳಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ. ಮಹಾರಾಷ್ಟ್ರದಲ್ಲಿ ಕನ್ನಡ ಸಾಹಿತ್ಯದ ಹಸ್ತಪ್ರತಿಗಳೂ ಕರ್ನಾಟಕದಲ್ಲಿ ಮರಾಠಿ ಸಾಹಿತ್ಯದ ಹಸ್ತಪ್ರತಿಗಳೂ ದೊರೆತಿವೆ. ಅವುಗಳಲ್ಲಿ ಒಂದು ಹಾತಕಣಗಿಲೆ (ಕೊಲ್ಲಾಪುರ ಜಿಲ್ಲೆ) ತಾಲ್ಲೂಕಿನ ಅಲತಗಿಯ ಪಾರ್ಶ್ವನಾಥ ತೀರ್ಥಂಕರ ಮಂದಿರದಲ್ಲಿ ಬರೆಯಲಾದ ಕನ್ನಡ ಪಂಪರಾಮಾಯಣದ ಹಸ್ತಪ್ರತಿ. ಸಮಡೊಳ್ಳಿ, (ಸಾತಾರಾ ಜಿಲ್ಲೆ)ಯಲ್ಲಿ ಉಪಾಧ್ಯಾಯರ ಜಿನ್ನಪ್ಪನ ಮಗ ಆದಪ್ಪನು ಬರೆದ ಪಂಚತಂತ್ರದ ಹಸ್ತಪ್ರತಿ ದೊರೆತಿದೆ. ಕನ್ನಡಿಗರಾದ ಮಹಿಪತಿದಾಸರ ಸಾಹಿತ್ಯಕ್ಕೆ ಮೂಲ ಆಕರವಾಗಿರುವ ಹಸ್ತಪ್ರತಿ ಮರಾಠಿ ಲಿಪಿಯಲ್ಲಿ ಲಿಖಿತವಾಗಿದೆ.

ಕರ್ನಾಟಕದ ಗಡಿಪ್ರಾಂತಗಳಲ್ಲಿ ಮರಾಠಿ ಸು. 10ನೆಯ ಶತಕದಿಂದ ಆಡುಮಾತಾಗಿ ರೂಢಿಯಲ್ಲಿರುವಂತೆ ತೋರುವುದಾಗಿಯೂ ದೇವಗಿರಿಯ ಯಾದವರ ಆಳಿಕೆಯ ಕಾಲದಲ್ಲಿ ಮರಾಠಿ ಭಾಷೆ, ಸಾಹಿತ್ಯಗಳು ಏರ್ಪಟ್ಟಂತೆ ತೋರುವುದಾಗಿಯೂ ಅಭಿಪ್ರಾಯಪಡಲಾಗಿದೆ. ಇಂದಿಗೂ ಕೊಲ್ಲಾಪುರದ ಜನ ಆಡುವ ಮಾತುಗಳಲ್ಲಿ ಹೆಂಟ್ಯಾ, ಕೊಯಿಂಡ್ಯಾ, ಅಳಸುಂದಾ, ಕಾಕವಿ ಮುಂತಾದವು ಹೆಂಡ, ಕೊಂಡೆ, ಅಲಸಂದಿ, ಕಾಕಂಬಿ ಮೊದಲಾದ ಕನ್ನಡ ಪದಗಳ ಪ್ರತಿರೂಪಗಳಾಗಿವೆ. ಜೆಜೂರಿ ಖಂಡೋಬನ ಪೂಜಾವೇಳೆಯಲ್ಲಿ ಹೇಳುವ ಉಧೋ ಶಬ್ದವೂ ಏಲ್ಕೋಟ್ ಮಲ್ಹಾರ್ (ಏಳುಕೋಟೆ ಮಲ್ಲಾರಿ) ಎಂಬ ಮಾತೂ ಕನ್ನಡದವು. ಜೆಜೂರಿಯಲ್ಲಿಯ ಹೆಗಡೆ ಅಥವಾ ಹೇಗಪಾ ಕನ್ನಡ ಹೆಗ್ಗಡೆಯೇ ಅಗಿದೆ. ಅಕ್ಕ, ಅತ್ಯಾ ಇತ್ಯಾದಿ ಸಂಬಂಧಸೂಚಕ ಶಬ್ದಗಳು, ಕನ್ನಡದ ಅಕ್ಕ, ಅತ್ತೆ ಎಂಬವೇ ಆಗಿವೆ. ಮುದಲ್–ಮುದಲ, ಮುದ್ದಲ; ಬಂಬಲ್ ಬಂಬಾಳು, ಬಂಭಾಳ; ಹಡಪ–ಹಡಪಾ, ಹಡಪು ಇತ್ಯಾದಿ ಪದಗಳೂ ಕನ್ನಡದವೇ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಮರಾಠಿಯಲ್ಲಿ ಕನ್ನಡ ಶಬ್ದಗಳು ಬೆರೆತಿರುವಂತೆಯೇ ಕನ್ನಡದಲ್ಲಿಯೂ ಮರಾಠಿ ಶಬ್ದಗಳು ಬೆರೆತಿವೆ. ಶಬ್ದಮಣಿದರ್ಪಣದಲ್ಲಿ ಕೇಶಿರಾಜ ಕನ್ನಡದಲ್ಲಿ ಸಹಜವಾಗಿ ಮಹಾಪ್ರಾಣಾಕ್ಷರಗಳಿವೆಯೆಂದು ಹೇಳಿ ಕೊಟ್ಟಿರುವ ಮಹಾಪ್ರಾಣ ಘಟಿತವಾದ ಕೆಲವು ಶಬ್ದಗಳು ಮರಾಠಿಗೆ ತದ್ಭವಗೊಂಡು ಕನ್ನಡವನ್ನು ಹೊಕ್ಕಿರುವ ಸಂಸ್ಕೃತ ಶಬ್ದಗಳೇ ಆಗಿವೆ. ಗಡಿನಾಡಿನ ಕನ್ನಡಿಗರು ಮರಾಠಿ ಶಬ್ದಗಳನ್ನು ಬಳಸಿದರೂ ಅವುಗಳಿಗೆ ಕನ್ನಡ ಪ್ರತ್ಯಯಗಳನ್ನು ಸೇರಿಸುತ್ತಾರೆ. ಉದಾಹರಣೆಗೆ: ನಾ ವಾಚುಸತ್ಯಾನ–ನಾನು ಓದುತ್ತೇನೆ; ಅವಳ ಲಾಜಾಸ್ಥಾಳ –ಅವಳು ನಾಚುತ್ತಾಳೆ; ಬೈಲನ ಸಿಂಗ ಮೊಡಸ್ತ –ಎತ್ತಿನ ಕೋಡು ಮುರಿಯಿತು; ಬೈಲಗಾಡಿ ಮ್ಯಾಲಿ ಖುಂಡಿಸಿದ್ರು –ಎತ್ತಿನ ಗಾಡಿಯ ಮೇಲೆ ಕೂಡಿಸಿದರು; ಧಾಬೆ (ಕೊಟ್ಟಿಗೆ)ದಾಗ ದನಾ ಕಟ್ಟು; ವೈನಿ (ಅಣ್ಣನ ಹೆಂಡತಿ) ಬಂದಳು; ನಮ್ಮ ಅಬಚಿ (ಅವ್ವನ ಅಕ್ಕ ಅಥವಾ ತಂಗಿ) ಬಯಿಂದಾಳ – ನಮ್ಮ ಅವ್ವನ ಅಕ್ಕ ಬಂದಿದ್ದಾಳೆ ಇತ್ಯಾದಿ ಅನೇಕ ಉದಾಹರಣೆಗಳಲ್ಲಿ ಮರಾಠಿ ಶಬ್ದಗಳು ಕನ್ನಡ ವಾಕ್ಯಗಳೊಳಗೆ ಸೇರಿಕೊಂಡಿವೆ.

ಮರಾಠಿ ಸಾಹಿತ್ಯದ ಮತ್ತು ಮಹಾರಾಷ್ಟ್ರದ ಉಲ್ಲೇಖ ಪಂಪಪೂರ್ವ ಮತ್ತು ಪಂಪನ ಕಾಲದಲ್ಲಿ ದೊರೆಯುತ್ತದೆ. ಸೈಗೊಟ್ಟ ಶಿವಮಾರನ ಗಜಾಷ್ಟಕ ಓವನಿಗೆಯೂ ಒನಕೆವಾಡೂ ಆಗಿದ್ದಿತೆಂದು ತಿಳಿದುಬರುತ್ತದೆ. ಓವನಿಗೆ ಎಂಬ ಶಬ್ದಕ್ಕೂ ಮರಾಠಿಯ ಓವಿ ಶಬ್ದಕ್ಕೂ ಸಂಬಂಧವಿರಬಹುದೆಂದು ಭಾವಿಸಲಾಗಿದೆ. ಸೋಮೇಶ್ವರನ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ ಮರಾಠಿ ಜನಪದ ಗೀತೆಗಳ ತುಣುಕುಗಳು ಅಲ್ಲಲ್ಲಿ ಉದಾಹರಣೆಗಳಾಗಿ ಬಂದಿವೆ ಎಂದು ಅಭಿಪ್ರಾಯಪಡಲಾಗಿದೆ. ಪಂಪನ ಆದಿಪುರಾಣದಲ್ಲಿ ಮಹಾನಾಟಕ ರೆಂಬುದಾಗಿ ಮಹಾರಾಷ್ಟ್ರದ ಸೈನಿಕರ ವಿವರಣೆ ದೊರೆಯುತ್ತದೆ. ಹೊಯ್ಸಳ 2ನೆಯ ವೀರನರಸಿಂಹನ ಕಾಲದ ದಾವಣಗೆರೆ 25ನೆಯ ಶಾಸನದಲ್ಲಿ (1223–24) ಆ ಕಾಲಕ್ಕೆ ಸು. 32–33 ವರ್ಷಗಳ ಹಿಂದೆ ಆಗಿಹೋದ ಸೊರಟೂರಿನ ಕಾಳಗದಲ್ಲಿ ಹೊಯ್ಸಳರ ಸೇನೆ ಸೇವುಣರ ದಂಡನ್ನು ಸೋಲಿಸಿತು ಎನ್ನುವಾಗ ಮರಾಠಿ ಪ್ರತ್ಯಯಗಳನ್ನುಳ್ಳ ಕನ್ನಡ ವೃತ್ತವೊಂದಿದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಮಹಾರಾಷ್ಟ್ರದಲ್ಲಿ 13ನೆಯ ಶತಮಾನದಲ್ಲಿ ಪ್ರಬಲಿಸಿದ ಮಹಾನುಭಾವ ಪಂಥಕ್ಕೂ ಕರ್ನಾಟಕದ ವೀರಶೈವ ಧರ್ಮಕ್ಕೂ ಅನೇಕ ಸಾಮ್ಯಗಳಿವೆ. ಎರಡರಲ್ಲಿಯೂ ವರ್ಣಭೇದವಿಲ್ಲ. ಸ್ತ್ರೀಯರಿಗೆ ಮಹತ್ತ್ವವಿದೆ. ಮಹಾನುಭಾವ ಪಂಥದಲ್ಲಿ ಎಷ್ಟೋ ಜನ ಸ್ತ್ರೀಯರು ಸಂನ್ಯಾಸಿನಿಯ ರಾಗಿದ್ದಾರೆ. ವೀರಶೈವ ಧರ್ಮದಲ್ಲಿಯೂ ಎಷ್ಟೋ ಜನ ಸ್ತ್ರೀಯರು ವಿರಕ್ತೆಯರಾಗಿದ್ದಾರೆ. ಎರಡು ಧರ್ಮದವರೂ ತಾವಾಡುವ ಮಾತಿನಲ್ಲಿ ಧರ್ಮಗ್ರಂಥಗಳನ್ನು ಬರೆದಿದ್ದಾರೆ. ವೀರಶೈವರು ವೇದಕ್ಕೆ ಪ್ರಾಧಾನ್ಯವನ್ನು ಕೊಡುವುದಿಲ್ಲ; ಮಹಾನುಭಾವ

ಪಂಥದವರು ವೇದಗಳನ್ನೂ ಉಪನಿಷತ್ತುಗಳನ್ನೂ ಒಪ್ಪುತ್ತಾರೆ. ವೀರಶೈವರು ಶಿವನೊಬ್ಬನನ್ನೇ ಪೂಜಿಸುವರು. ಮಹಾನುಭಾವಪಂಥದವರು ಕೃಷ್ಣನೊಬ್ಬನನ್ನೇ ಪೂಜಿಸುವರು. ವೀರಶೈವರು ರುದ್ರಾಕ್ಷಿಮಾಲೆ, ವಿಭೂತಿಗಳನ್ನು ಧರಿಸಿದರೆ ಮಹಾನುಭಾವ ಪಂಥದವರು ತುಳಸೀಮಾಲೆ ಚಂದನಗಳನ್ನು ಧರಿಸುತ್ತಾರೆ. ಮಹಾನುಭಾವ ಪಂಥದ ಮೂಲಪುರುಷ ಚಕ್ರಧರನ ಜೀವನಕ್ಕೂ ಬಸವಣ್ಣನವರ ಜೀವನಕ್ಕೂ ಹಲವು ಹೋಲಿಕೆಗಳಿವೆ. ಬಸವಣ್ಣನ ಉಪದೇಶವನ್ನು ವಚನ ಎನ್ನುವಂತೆಯೇ ಚಕ್ರಧರನ ಉಪದೇಶವನ್ನೂ ವಚನ ಎನ್ನುತ್ತಾರೆ. ಬಸವಣ್ಣ ವಿಷಯಪುಷ್ಟಿಗೆ ದೃಷ್ಟಾಂತ ಉಪಮೆಗಳನ್ನು ಕೊಟ್ಟರೆ, ಚಕ್ರಧರ ಬರಿಯ ಸೂತ್ರಗಳನ್ನು ಹೇಳುತ್ತಾನೆ. ಬಸವಣ್ಣನ ವಚನಗಳಿಗೆ ಹೇಗೋ ಹಾಗೆಯೇ ಚಕ್ರಧರನ ಉಪದೇಶಗಳಿಗೂ ದೃಷ್ಟಾಂತಗಳ ಮೂಲಕವಾದ ಸೂತ್ರಾರ್ಥ ವಿವರಣೆಯಿದೆ.

ಚಕ್ರಧರನ ಶಿಷ್ಯ ಭಾಸ್ಕರಭಟ್ಟ ಬೋರಿಕರನ ಶಿಶುಪಾಲವಧ ಮತ್ತು ಉದ್ಧವಗೀತೆಯಲ್ಲಿ ಗುಡಿ, ಗುಂಡಿ, ಹಡಪ, ಗುಡಾರ, ತೋಮ, ಹೇವ, ಅರಲ, ಅಡಣ ಮುಂತಾದ ಶಬ್ದಗಳೂ ಆ ಶಬ್ದಗಳ ರೂಪಾಂತರಗಳೂ ಇವೆ. ಮಹದಾಂಬಾ ಎನ್ನುವ ಚಕ್ರಧರನ ಶಿಷ್ಯೆ ಶ್ರೀಕೃಷ್ಣ ವಿವಾಹ ವಸ್ತುವನ್ನುಳ್ಳ ಧವಳೆ ಎಂಬ ಹೆಸರಿನ ಹಾಡುಗಳನ್ನು ರಚಿಸಿದ್ದಾಳೆ. ಕನ್ನಡದಲ್ಲಿ ವಿವಾಹ ಮುಂತಾದ ಶುಭ ಶೋಭನಗಳಲ್ಲಿ ಹಾಡುವ ಧವಳ ಎಂಬ ಹಾಡುಗಳು ಕೆಲವಿರುವುದನ್ನು ಇಲ್ಲಿ ನೆನೆಯಬಹುದು. ಇವುಗಳಿಗೆ ಇಲ್ಲಿ ಪ್ರಾಚೀನತೆಯೂ ಇರುವಂತೆ ತೋರುವುದರಿಂದ ಈ ಪದ್ಯಪ್ರಕಾರಸಾಮ್ಯ ಪರಿಶೀಲನಾರ್ಹ.

ಮಹಾರಾಷ್ಟ್ರದಲ್ಲಿ ಮಹಾನುಭಾವ ಪಂಥ ಪ್ರಬಲವಾಗಿದ್ದ ಕಾಲದಲ್ಲಿಯೇ ನಾಥ ಸಂಪ್ರದಾಯವೂ ಪ್ರಬಲವಾಗಿದ್ದಿತು. ಮತ್ಸ್ಯೇಂದ್ರ ಸ್ತ್ರೀರಾಜ್ಯದಲ್ಲಿ ನೆಲೆಸಿದ್ದುದಕ್ಕೆ ಸಮಾನವಾಗಿದೆ ಅಲ್ಲಮಪ್ರಭು ಮತ್ತು ಮಾಯಾದೇವಿಯರ ಪ್ರಸಂಗ. ಮತ್ಸ್ಯೇಂದ್ರನಿಗೆ ಮಾಯಾಮತ್ಸ್ಯೇಂದ್ರ ಎನ್ನುವ ಬಿರುದಿರುವಂತೆಯೇ ಅಲ್ಲಮಪ್ರಭುವಿಗೆ ಮಾಯಾಕೋಲಾಹಲ ಎನ್ನುವ ಬಿರುದಿದೆ. ಪ್ರಭುಲಿಂಗಲೀಲೆಯಲ್ಲಿ ಬರುವ ಗೋರಕ್ಷ ಅಲ್ಲಮರ ಸಂವಾದ ಈ ದೃಷ್ಟಿಯಿಂದ ಗಮನಾರ್ಹವಾದುದು. ಶೂನ್ಯಸಂಪಾದನೆಯಲ್ಲಿ ದೊರೆಯುವ ಗೋರಕ್ಷ ಅಂಕಿತದ ವಚನಗಳು ಅವನಿಗೆ ಕನ್ನಡ ಬರುತ್ತಿದ್ದಿರಬಹುದೆಂದು ಸೂಚಿಸುತ್ತದೆ. ಅಲ್ಲದೆ ಮರಾಠಿಯಲ್ಲಿ ಗೋರಕ್ಷನದೆನ್ನಲಾದ ಈ ಮಾತುಗಳು ದೊರೆಯುತ್ತವೆ – ನ್ಯಾ ಹಾಳುನಿ ಸಂಸಾರದಿಲೆ ಪಾಣಿ ನಿಜಲಿಂಗವ ನಿಟ್ಟಿಸಿ ಸಂಸಾರಕ್ಕೆ ನೀರುಕೊಟ್ಟೆ. ಹೀಗೆ ನಾಥ ಸಂಪ್ರದಾಯಕ್ಕೂ ವೀರಶೈವ ಧರ್ಮದ ಪ್ರಮುಖ ವ್ಯಕ್ತಿ ಅಲ್ಲಮಪ್ರಭುವಿಗೂ ಸಂಬಂಧವಿರುವುದನ್ನು ಗಮನಿಸಬಹುದು. ಇದೇ ಕಾಲದ ಚೆನ್ನಬಸವಣ್ಣನ ಕರಣಹಸುಗೆಯನ್ನು 17ನೆಯ ಶತಮಾನದ ಶಾಂತಲಿಂಗಶಿವಯೋಗಿ ಮರಾಠಿಗೆ ಅನುವಾದ ಮಾಡಿದ್ದಾನೆ. ಶಂಕರಾಚಾರ್ಯರ ಅದ್ವೈತ ವೇದಾಂತವನ್ನು ವಿವೇಕ ಸಿಂಧು ಮುಂತಾದ ತನ್ನ ಕೃತಿಗಳಲ್ಲಿ ತಾನು ನೃಸಿಂಹ ಬಲ್ಲಾಳನ ಮಗ ಜಯಂತಪಾಳನ ಅನುಮತಿಯಂತೆ ರಚಿಸಿದುದಾಗಿ ಹೇಳಿಕೊಂಡಿದ್ದಾನೆ. ಆದರೆ ಈ ನೃಸಿಂಹ ಬಲ್ಲಾಳ ಮತ್ತು ಹೊಯ್ಸಳ ನರಸಿಂಹ ಬಲ್ಲಾಳ ಬೇರೆ ಬೇರೆಯವರೆಂದು ಕೆಲವರ ಅಭಿಪ್ರಾಯ.

ಮುಕುಂದರಾಜನ ವಿವೇಕಸಿಂಧುವನ್ನು ಮಹಲಿಂಗರಂಗ (17ನೆಯ ಶತಮಾನ) ಅನುಭವಾಮೃತ ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾನೆ. ಕನ್ನಡ ಕವಿ ನಾಥಪಂಥದವನೆಂದೂ ಆತನ ಕನ್ನಡ ಪ್ರೇಮಕ್ಕೆ ಮುಕುಂದರಾಜನೇ ಪ್ರೇರಣೆಯೆಂದೂ ವಿದ್ವಾಂಸರ ಅಭಿಪ್ರಾಯ. ಮುಕುಂದರಾಜನ ಕಾವ್ಯದ ಕೆಲವು ಪದ್ಯಗಳ ಛಾಯಾನುವಾದವನ್ನು ಅನುಭವಾಮೃತದಲ್ಲಿ ಕಾಣಬಹುದು.

ಮರಾಠಿಯ ಶ್ರೇಷ್ಠಕೃತಿ ಜ್ಞಾನೇಶ್ವರಿಯನ್ನೂ ಅಮೃತಾನುಭವ, ಸ್ವಾತ್ಮಾನುಭವ ಎಂಬ ಕೃತಿಗಳನ್ನೂ ಅನೇಕ ಪದಗಳನ್ನೂ ಅಭಂಗಗಳನ್ನೂ ಬರೆದ ಜ್ಞಾನದೇವ ದೇವಗಿರಿಯ ರಾಮರಾಜದೇವನ ಸಮಕಾಲೀನ. ಈಗಿನ ಜ್ಞಾನೇಶ್ವರಿಯಲ್ಲಿ ಅಕ್ಕಸಾಲಿ, ಅಡತರ, ಅಂಟಿ (ಅಂಟು), ಆಗಲೇ (ಅಗಲು), ಅಡವಾರಾ (ಅಡ್ಡಬರು), ಆರ್ಡಿ (ಆರಡಿ), ಕೆಳವಣಿ, ತೂಕ, ಪಡಗಾ (ಪಡಗ), ಉಗಾಳು (ಉಗುಳು), ಉಳಿಗ (ಊಳಿಗ), ಆರೋಗಿಣೆ (ಆರೋಗಣೆ), ಪೌಳೆ (ಪೌಳಿ), ಭಾಂಗಾರ, ಮದವಿ, ಮಾತು (ಶಬ್ದ), ಮಿರವಣೆ (ಮೆರವಣಿಗೆ), ಸೂಡ, ಹರಳು – ಹೀಗೆ ನೂರಾರು ಕನ್ನಡ ಶಬ್ದಗಳು ದೊರೆಯುತ್ತವೆ ಎಂಬುದು ಕುತೂಹಲಕರವಾಗಿದೆ. ಜ್ಞಾನದೇವನಿಗೆ ಕನ್ನಡದ ಪರಿಚಯವಿದ್ದು ಕನ್ನಡದಲ್ಲಿಯೂ ಒಂದೆರಡು ಅಭಂಗಗಳನ್ನು ರಚಿಸಿದ್ದಾನೆ.

ಅವನ ಅಭಂಗಗಳಲ್ಲಿ ಒಂದು ಈ ರೀತಿ ಇದೆ:

ಆ ಆ ನೀ ಕೇಳೆ ಚಿಕನ ಮಾತು ಕೋಳುಲೆ ಘನಿಗೆ ಮರುಳಾದೆನೆ
ಚಲುವಾನೆ ಚಲುವಾನೆ ಘಂಡರಿರಾಯ ಚಲುವಾನೆ
ಯಲ್ಲೆ ದೊರೆಕನ್ನೇ ಯಲ್ಲೆ ಬಾರನ್ನೆ (ಧ್ರುಪದ)
ಪುಂಡಲೀಕನೆ ಭಕ್ತಿಗೆ ಬಂದಾ
ರಖುಮಾದೇವೀ ವರ ವಿಟ್ಠಲುನೇ
(ಜ್ಞಾನದೇವ ಅಭಂಗ ಹೊಸ ಪ್ರತಿ, ನಂ.345)

ಇದೇ ಅಭ'ಂಗವನ್ನು ಬೇರೊಂದು ಪಾಠಕ್ಕೆ ಅನುಗುಣವಾಗಿ ನಾ.ಶ್ರೀ.ರಾಜಪುರೋಹಿತರು ಹೀಗೆ ಕೊಟ್ಟಿದ್ದಾರೆ:

ಅಕ್ಕಾ ನೀ ಕೇಳೇ ಚಿಕ್ಕನ ಮಾತು
ಕಾರಲೇದಾಸೀಗೆ ಮರುಳಾದನೇ ।
ಚೆಲುವಾನೆ ಚೆಲುವಾನೆ ಪಂಢರಿರಾಯಾ
ಚೆಲುವಾನೆ ಎಲ್ಲಿ ದೊರಕುವನೇ ॥
ಪುಂಡಲೀಕನ ಭಕ್ತಿಗೆ ಬಂದಾ
ರುಖಮಾದೇವೀ । ವರವಿಟ್ಠಲನೇ ॥

ಹೀಗೆ ಮರಾಠಿಯಲ್ಲಿ ಕನ್ನಡ ಪದಗಳೂ ಪದ್ಯಗಳೂ ಜ್ಞಾನೇಶ್ವರಿಯ ಕಾಲಕ್ಕಾಗಲೇ ಸೇರಿದ್ದುವು. ಅದಕ್ಕೆ ಕಾರಣ ಬಹುಶಃ ಸ್ವತಂತ್ರವಾಗಿ ಈಚೆಗೆ ಬೆಳೆಯುತ್ತಿದ್ದ ಮರಾಠಿ ಭಾಷೆ ಆ ಹೊತ್ತಿಗಾಗಲೇ ಪ್ರಬುದ್ಧವಾಗಿದ್ದ ಕನ್ನಡದಿಂದ ಶಬ್ದಗಳನ್ನು ಸ್ವೀಕರಿಸಿದುದು.

ಮಹಾನುಭಾವ ಪಂಥ ಮತ್ತು ನಾಥಸಂಪ್ರದಾಯಗಳಂತೆಯೇ ವಿಟ್ಠಲ ಭಕ್ತಿಯೂ ಮಹಾರಾಷ್ಟ್ರದ ಕೊಡುಗೆ. ಜ್ಞಾನದೇವನು ಕಾನಡಾ ಹೋ ವಿಟ್ಠಲೂ ಕರ್ನಾಟಕಕ್ಕೂ ಎಂದು ಪಂಢರಪುರದ ವಿಟ್ಠಲನನ್ನು ಕರೆಯುತ್ತಾನೆ. ಕೆಲವರು ವಿಠೋಬಾ ಶಬ್ದದ ನಿಷ್ಪತ್ತಿಯನ್ನು ಕನ್ನಡದಿಂದ ಮಾಡುತ್ತಾರೆ. ಪಂಢರಪುರದ ವಿಟ್ಠಲಭಕ್ತಿ ಮತ್ತು ಸಂಪ್ರದಾಯ 13ನೆಯ ಶತಮಾನಕ್ಕಾಗಲೀ ಕರ್ನಾಟಕದಲ್ಲಿ ನೆಲಸಿದ್ದಿತು. ಇದಕ್ಕೆ ನಿದರ್ಶನ ಚೌಂಡರಸ ತನ್ನ ಅಭಿನವದಶಕುಮಾರಚರಿತೆಯಲ್ಲಿ ವಿಟ್ಠಲಸ್ತುತಿ ಮಾಡಿರುವುದು. ಸಂಸ್ಕೃತ ಮೂಲದಲ್ಲಿಲ್ಲದ ಈ ಭಾಗವನ್ನು ಆತ ಸ್ವತಃ ಸೇರಿಸಿದ್ದಾನೆ. ಅಭಿನವದಶಕುಮಾರಚರಿತೆಯ ವಿಟ್ಠಲಾಷ್ಟಕ ಕನ್ನಡದಲ್ಲಿ ದೊರೆಯುವ ವಿಟ್ಠಲಭಕ್ತಿಯ ಮೊದಲ ಸಾಹಿತ್ಯಕೃತಿ.

ವಿಟ್ಠಲನ ಪರಮಭಕ್ತ ಸಂತ ತುಕಾರಾಮನಾದರೋ ಬಸವಣ್ಣನವರನ್ನು ತನ್ನ ಗುರುವೆಂದು ಭಾವಿಸಿದ್ದವ. ತುಕಾರಾಮನ ಗೀತೆಗಳಲ್ಲಿಯ ಬಸವಂತ ಶಬ್ದ ಬಸವಣ್ಣನವರನ್ನು ಕುರಿತದ್ದೆಂಬುದಾಗಿ ಗ್ರಹಿಸಲಾಗಿದೆ. ತ್ರಿಭಂಗೀ ದೇಹುಡೇ ಉಭೇ ವೃಂದಾವನೀ ವೇಣೂ ಚಕ್ರಪಾಣಿ ವಾಜವಿತ ಎನ್ನುವ ನಾಮದೇವನ ಅಭಂಗ ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ ಎನ್ನುವ ವ್ಯಾಸರಾಯರ ಪದವನ್ನು ನೆನಪಿಗೆ ತರುತ್ತದೆ.

ಭಾಗವತ ಸಂಪ್ರದಾಯಕ್ಕೆ ಸೇರಿದ ಕುಮಾರವ್ಯಾಸನ ಭಾರತದಲ್ಲಿ ಪೈಕ, ಪಾರುಖಾಣೆ ಮುಂತಾದ ಮರಾಠಿ ಶಬ್ದಗಳು ದೊರೆಯುತ್ತವೆ. ವೀರಪಣ, ಜಾಣಪಣ, ಶೌರ್ಯಪಣ, ಸಾಮರ್ಥ್ಯಪಣ, ವಿಸ್ತಾರಪಣ ಮುಂತಾದ ಮರಾಠಿಯ ಭಾವನಾಮ ಸೂಚಕ ಪ್ರತ್ಯಯಾಂತ ಪದಗಳೂ ಬಳಕೆಯಾಗಿವೆ. ಪರಭಾಷೆಯ ಪ್ರತ್ಯಯವೊಂದನ್ನು ಕನ್ನಡಕ್ಕೆ ಸೇರಿಸುವ ಪ್ರಯೋಗವೊಂದನ್ನು ಕುಮಾರವ್ಯಾಸ ಮಾಡಿದ್ದಾನೆ. ಇದು ಆತನ ಸ್ವಸ್ಥಳಕ್ಕೆ ನೆರೆಯಲ್ಲಿದ್ದ ಮರಾಠಿ ಭಾಷೆಯ ಗಾಢವಾದ ಪ್ರಭಾವವನ್ನು ತೋರಿಸುತ್ತದೆ. ಕನ್ನಡದ ಅತ್ಯಂತ ಸಮರ್ಥ ಕವಿಯಾದ ಈತನ ಭಾರತವನ್ನು ಮರಾಠಿಯಲ್ಲಿ ಇಬ್ಬರು ಅನುಸರಿಸಿದ್ದಾರೆ. ಇದರಲ್ಲಿ ಮುಕ್ತೇಶ್ವರನ ಕೃತಿ ಮುಖ್ಯವಾದುದು. ಕುಮಾರವ್ಯಾಸ ಭಾರತದ 'ಅರಸುಗಳಿಗಿದು ವೀರ' (ಆದಿಪರ್ವ 1–19) ಪದ್ಯವನ್ನು ಹೋಲುವ ಅನೇಕ ಪದ್ಯಗಳು ಮುಕ್ತೇಶ್ವರನಲ್ಲಿವೆ. ಇನ್ನೊಬ್ಬ ಭಾರತ ಕರ್ತೃವಾದ ಚಂದ್ರಾತ್ಮಜನೆಂಬ ಮರಾಠಿ ಕವಿ ಕೂಡ ಕುಮಾರವ್ಯಾಸನನ್ನು ಅನುಸರಿಸಿರುವುದು ಮಾತ್ರವಲ್ಲದೆ ಮಜಸಂಸ್ಕೃತಿ ನಾಹೀ ಅಭ್ಯಾಸ, ಕರ್ನಾಟಕ ಕವಿ ಕುಮಾರವ್ಯಾಸ ತ್ಯಾಚೇನೀ ಆಧಾರೇ ಗ್ರಂಥ ವಿಲಾಸ ಪಾರಂಭಿಲಾಯಾ ಹೇತು ಎಂದು ಸ್ಪಷ್ಟವಾಗಿ ತನ್ನ ಗ್ರಂಥಋಣವನ್ನು ಹೇಳಿದ್ದಾನೆ. ಹೀಗೆ ಷಟ್ಪದಿ ಕಾವ್ಯಗಳ ಮರಾಠಿ ಅನುವಾದ ಕಾರ್ಯ ಮುಂದುವರಿದು ಚಾಮರಸನ ಪ್ರಭುಲಿಂಗಲೀಲೆಯನ್ನು ಬ್ರಹ್ಮದಾಸನೆಂಬ 18ನೆಯ ಶತಮಾನದ ಕವಿ ವಿಶ್ವಂಭರಲೀಲ ಎನ್ನುವ ಹೆಸರಿನಿಂದ ಪರಿವರ್ತಿಸಿದ್ದಾನೆ. 1581ರಲ್ಲಿ ಚಿತ್ರಭಾರತವನ್ನು ಕನ್ನಡದಲ್ಲಿ ರಚಿಸಿದ ಗೋಪ ಕವಿ ಕೃತಿಯ ಅರ್ಧಭಾಗದಲ್ಲಿ ಭಾರತ ಕಥಾಂಶವನ್ನೂ ಉಳಿದರ್ಧದಲ್ಲಿ ವತ್ಸಲಾ ಹರಣದ ಪ್ರಸಂಗವನ್ನೂ ನಿರೂಪಿಸಿದ್ದು, ಮರಾಠಿಯಲ್ಲಿ ಪ್ರಚಲಿತವಾಗಿದ್ದ ಕಥೆಯನ್ನು ಕನ್ನಡದಲ್ಲಿ ಬರೆದುದಾಗಿ ಹೇಳಿಕೊಂಡಿದ್ದಾನೆ. ಜಗನ್ನಾಥದಾಸರ ಹರಿಕಥಾಮೃತಸಾರ (ಸು. 1755) ಮತ್ತು ಲಕ್ಷ್ಮೀಶನ ಜೈಮಿನಿಭಾರತ (ಸು.1550) ಶೇಷಗಿರಿರಾಯ (1868) ಮತ್ತು ಯಶವಂತ ಭಾಸ್ಕರ ಜಠಾರ (19ನೆಯ ಶತಮಾನ) ಇವರಿಂದ ಮರಾಠಿಗೆ ಅನುವಾದಿತವಾಗಿವೆ.

ಕನ್ನಡದ ಅನುಭಾವ ಕವಿಗಳಲ್ಲಿ ಒಬ್ಬನಾದ ನಿಜಗುಣ ಶಿವಯೋಗಿ ಮತ್ತು ಕಾಡಸಿದ್ಧೇಶ್ವರರ ಪ್ರಭಾವ ಮಹಾರಾಷ್ಟ್ರದಲ್ಲಿ ದಟ್ಟವಾಗಿ ಹರಡಿದೆ. ನಿಜಗುಣ ಶಿವಯೋಗಿ ಮತ್ತು ಶ್ರೇಷ್ಠ ಮರಾಠೀ ಸಂತ ರಾಮದಾಸರನ್ನು ಚಿತ್ರಮಾಲಿಕೆಯೊಂದರಲ್ಲಿ ಒಟ್ಟಿಗೆ ಚಿತ್ರಿಸಲಾಗಿದೆ. ನಿಜುಗುಣಶಿವಯೋಗಿಯ ವಿವೇಕ ಚಿಂತಾಮಣಿಯನ್ನು ಸಾತಾರಾ ಜಿಲ್ಲೆಯ ಸಿಂಗಣಾಪುರದ ಶಾಂತಲಿಂಗ ಶಿವಯೋಗಿ ಅನುವಾದಿಸಿದ್ದಾನೆ (ಸು.1604).

ನಾಮದೇವನಾದ ಮೇಲೆ ಏಕನಾಥನವರೆಗೆ ಮರಾಠಿ ಸಾಹಿತ್ಯದಲ್ಲಿ ಶ್ರೇಷ್ಠ ಕವಿಗಳು ಬರಲಿಲ್ಲ. ಆದರೂ ಈ ಕಾಲದಲ್ಲಿ ದತ್ತ ಸಂಪ್ರದಾಯದ ನೃಸಿಂಹಸರಸ್ವತಿಯ ಶಿಷ್ಯನಾದ ಕಡಗಂಚಿಯ ಸರಸ್ವತಿ ಗಂಗಾಧರ ಬರೆದ ಮರಾಠಿ ಗುರುಚರಿತ್ರೆಯ ಕೊನೆಗೆ ಕನ್ನಡದ

ಆರತಿ ಪದ್ಯವಿದೆ. ಗುರುಚರಿತ್ರೆ ದತ್ತಾತ್ರೇಯನ ಭಕ್ತರಿಗೆ ಪೂಜ್ಯ ಗ್ರಂಥವಾಗಿ ಮಹಾನುಭಾವ ಮತ್ತು ವಾರ್ಕರಿ ಪಂಥಗಳ ಅನುಯಾಯಿಗಳಿಂದ ಸಮಾನವಾಗಿ ಗೌರವಿಸಲ್ಪಟ್ಟಿದೆ. ಈ ಕೃತಿಯ ಹಲವಾರು ಕನ್ನಡ ಅನುವಾದಗಳು ಹೊರಬಂದಿವೆ. ಮಹಾರಾಷ್ಟ್ರದ ಪ್ರಸಿದ್ಧ ಸಂತರಲ್ಲೊಬ್ಬನಾದ ಏಕನಾಥನ ಮೇಲೆ ಪುರಂದರದಾಸರ ಪ್ರಭಾವ ಆಗಿರುವಂತೆ ತೋರುತ್ತದೆ. ಉದಾಹರಣೆಗೆ 'ಹ್ಯಾಗೆ ಇರಬೇಕು ಸಂಸಾರದಲ್ಲಿ ಹ್ಯಾಗೆ ಬರೆದಿದೆ ಪ್ರಾಚೀನದಲ್ಲಿ' ಎನ್ನುವ ಮಾತಿಗೆ ಸದೃಶವಾದ್ದು 'ಐಸೇ ಆಸಾವೀ ಸಂಸಾರೀ ಜೋವರಿ ಪ್ರಾಚೀ ವಾಚೀ ದೋರಿ' ಎನ್ನುವ ಮಾತು ಮೇಲಿನ ಊಹೆಗೆ ಅವಕಾಶ ಕಲ್ಪಿಸುತ್ತದೆ. ಏಕನಾಥ ಮರಾಠಿಯಲ್ಲಿ ಮೈರಾವಣ ಕಾಳಗವನ್ನು ಬರೆದ ಕಾಲಕ್ಕೇ ಕುಮಾರ ವಾಲ್ಮೀಕಿಯೂ ಮೈರಾವಣನ ಕಾಳಗವನ್ನು ಬರೆದಿದ್ದಾನೆ. ಏಕನಾಥನ ಮತ್ತು ಅವನ ಸೋದರಿಯ ಮಗ ಹಾಗೂ ಶಿಷ್ಯನಾದ ಮುಕ್ತೇಶ್ವರ (ರಾಮಾಯಣ ಭಾರತಗಳ ಕರ್ತೃ) ಈ ಇಬ್ಬರ ಜೋಡಿ ಕನ್ನಡದ ಹರಿಹರ – ರಾಘವಾಂಕರ ಜೋಡಿಯನ್ನು ನೆನಪಿಗೆ ತರುತ್ತದೆ.

1615ರಲ್ಲಿ ಬಿಜಾಪುರದಲ್ಲಿ ಹುಟ್ಟಿದ ವಾಮನಪಂಡಿತ ಎಂಬುವನು ರಾಮದಾಸನ ಪ್ರೇರಣೆಯ ಪ್ರಕಾರ ಸಮಶ್ಲೋಕಿ ಗೀತಾ ಎನ್ನುವ ಭಗವದ್ಗೀತೆಯ ನೇರ ಅನುವಾದದ ಜೊತೆಗೆ ಯಥಾರ್ಥದೀಪಿಕೆ ಎನ್ನುವ ಗೀತಾವ್ಯಾಖ್ಯಾನವನ್ನು ರಚಿಸಿದ್ದಾನೆ.

ಮಹಾರಾಷ್ಟ್ರದ ಅತ್ಯಂತ ಉನ್ನತಿಯ ಕಾಲದಲ್ಲಿದ್ದ ಪ್ರಸಿದ್ಧ ಕವಿ ಮೋರೋಪಂತ ಕೊಲ್ಹಾಪುರದ ಸಮೀಪದಲ್ಲಿರುವ ಪಣ್ಹಾಳದಲ್ಲಿ 1729ರಂದು ಜನಿಸಿದವನು. ಈತ ಭಾರತವನ್ನು ಬರೆದಿದ್ದಾನೆ. ಇವನ ಕಾವ್ಯಶೈಲಿ ಕುಮಾರವ್ಯಾಸನ ಕಾವ್ಯಶೈಲಿಯನ್ನು ನೆನಪಿಗೆ ತರುತ್ತದೆ.

ಸುಮಾರು ಇದೇ ಅವಧಿಯಲ್ಲಿ ಕರ್ನಾಟಕದ ಮೂಡಲಗಿ, ಗುರ್ಲಹೊಸೂರು ಮತ್ತು ಬಿಜಾಪುರಗಳಲ್ಲಿ ಮರಾಠಿ ಸಾಹಿತ್ಯ ಬೆಳೆದಿದೆ. ಗೋಕಾಕ ತಾಲ್ಲೂಕಿನ ಮೂಡಲಗಿಯಲ್ಲಿ 16ನೆಯ ಶತಮಾನದಲ್ಲಿ ರಂಗಬೋಧಸ್ವಾಮಿಯೂ 17ನೆಯ ಶತಮಾನದಲ್ಲಿ ಅಧ್ಯಾಯ ಬೋಧಸ್ವಾಮಿಯೂ ನೆಲಸಿದ್ದರು. ಮುಕುಂದರಾಜನ ಸಂಪ್ರದಾಯಕ್ಕೆ ಸೇರಿದ ಇವರು ಮರಾಠಿಯಲ್ಲಿ ಗ್ರಂಥರಚನೆ ಮಾಡಿರುವುದಲ್ಲದೆ ಕನ್ನಡದಲ್ಲಿಯೂ ಹಾಡುಗಳನ್ನು ಬರೆದಿದ್ದಾರೆ. ಗುರ್ಲಹೊಸೂರಿನಲ್ಲಿ 18ನೆಯ ಶತಮಾನದಲ್ಲಿ ಚಿದಂಬರ ದೀಕ್ಷಿತರೆಂಬುವರು ನೆಲಸಿದ್ದರು. ಅವರನ್ನು ಸಮಕಾಲೀನ ಮರಾಠಾ ಸರದಾರರು ಗೌರವಿಸುತ್ತಿದ್ದರು. ಬಿಜಾಪುರದ ರುಕ್ಮಾಂಗದ ಸ್ವಾಮಿ ಮತ್ತು ಕಾಖಂಡಕಿ ಮಹಿಪತಿಸ್ವಾಮಿಗಳ ಜೀವನ ಚರಿತ್ರೆಯನ್ನು 18ನೆಯ ಶತಮಾನದಲ್ಲಿ ರುಕ್ಮಜದಾಸ ತನ್ನ ಗುರುಮಾಲಿಕಾ ಕೃತಿಯಲ್ಲಿ ಸೇರಿಸಿದ್ದಾನೆ. ಮಹಿಪತಿದಾಸರ ಕೀರ್ತನೆಗಳ ಹಸ್ತಪ್ರತಿಯೊಂದು ಮರಾಠಿ ಭಾಷೆಯಲ್ಲಿಯೇ ಲಿಖಿತವಾಗಿದೆ (ಇದುವರೆಗೆ ಅಚ್ಚಾಗಿರುವ ಮಹೀಪತಿದಾಸರ ಕೃತಿಗಳಿಗೆ ಅದೇ ಆಧಾರ). ವಾಮನ ಪಂಡಿತನ ಶಿಷ್ಯ ಹರಿದೀಕ್ಷಿತ ನರಗುಂದದಲ್ಲಿ ನೆಲಸಿ ಸಾಹಿತ್ಯ ರಚಿಸಿದ್ದಾನೆ. ಹೀಗೆ ಮರಾಠಿ ಸಾಹಿತ್ಯ ರಚನೆಗೆ ಕರ್ನಾಟಕ ಕೆಲಕಾಲ ಆಶ್ರಯಸ್ಥಾನವೂ ಸ್ಫೂರ್ತಿಕೇಂದ್ರವೂ ಆಗಿದ್ದುದು ತಿಳಿಯುತ್ತದೆ.

ಮಹಾರಾಷ್ಟ್ರದ ರಾಜಕೀಯ ಪ್ರಾಬಲ್ಯ ಇಳಿಯುವ ಹೊತ್ತಿಗೆ ಕ್ರೈಸ್ತ ಮಿಷನರಿಗಳು ಭಾರತದಲ್ಲಿ ಪದಾರ್ಪಣ ಮಾಡಿ ಮರಾಠಿ ಭಾಷೆಯ ಏಳ್ಗೆಗೆ ಪ್ರೋತ್ಸಾಹ ಕೊಟ್ಟರು. ಅದರ ಫಲವಾಗಿ ಬಾಲಶಾಸ್ತ್ರಿ ಜಾಂಭೇಕರ್ ಪಾಶ್ಚಾತ್ಯ ವಿದ್ಯೆಯ ಪರಿಚಯ ಮತ್ತು ಪ್ರಭಾವ ಪಡೆದು ಸು. 1840ರಲ್ಲಿ ದರ್ಪಣ್ ಮತ್ತು ದಿಗ್ದರ್ಶನ್ ಪತ್ರಿಕೆಗಳನ್ನು ಪ್ರಾರಂಭಿಸಿದರು. ಆ ಕಾಲದಲ್ಲಿನ ಪತ್ರಿಕಾ ಪ್ರಪಂಚವೆಂದರೆ ಮರಾಠೀ ಪತ್ರಿಕಾ ಪ್ರಪಂಚವೆಂದೇ ಹೇಳಬಹುದು. ಕನ್ನಡ ನಾಡಿನಲ್ಲಿ ಕನ್ನಡಿಗರಿಗಾಗಿ ಕನ್ನಡಿಗರೇ ನಡೆಸುತ್ತಿದ್ದ ಪತ್ರಿಕೆಗಳು ಕೂಡ ಮರಾಠಿಯವಾಗಿದ್ದುವು. ಧಾರವಾಡದಿಂದ ಹೊರಡುತ್ತಿದ್ದ ಭಾವಾ (1883), ಜ್ಞಾನ ಬೋಧಕ (1871), ಧಾರವಾಡ ವೃತ್ತ (1873), ಹುಬ್ಬಳ್ಳಿ ವೈಭವ, ಕರ್ನಾಟಕ ವಾರ್ತಿಕ, ಬೆಳಗಾಂವ ಸಮಾಚಾರ (1864), ಹಿತೇಚ್ಛು (1870) ಪತ್ರಿಕೆಗಳಲ್ಲಿ ಕೆಲವು ಮರಾಠಿ ಮತ್ತು ಕೆಲವು ದ್ವಿಭಾಷಾಪತ್ರಿಕೆಗಳಾಗಿದ್ದುವು. ಆಗಿನ ಸಾರ್ವಜನಿಕ ಜೀವನವೆಲ್ಲ ಮರಾಠಿಮಯವಾಗಿದ್ದಿತು. ಇಂಥ ಪರಿಸ್ಥಿತಿಯಿಂದ ಉತ್ತರ ಕರ್ನಾಟಕವನ್ನು ಮರಾಠಿಯ ಪ್ರಭಾವದಿಂದ ಸ್ವಲ್ಪ ಬಿಡಿಸಿದವ ಡಬ್ಲ್ಯು.ಎಚ್.ರೈಟ್ಸ್ ಮಹಾಶಯ. ಆತ ಉತ್ತರ ಕರ್ನಾಟಕದ ಭಾಷೆ ಮರಾಠಿಯಲ್ಲವೆಂದೂ ಕನ್ನಡವೆಂದೂ ಮುಂಬಯಿ ಸರ್ಕಾರಕ್ಕೆ ಮನವಿ ಮಾಡಿಕೊಟ್ಟ. ಆ ಪ್ರಯತ್ನದ ಫಲವಾಗಿ ಡೆಪ್ಯುಟಿ ಚನ್ನಬಸಪ್ಪ, ರಾ.ಹ.ದೇಶಪಾಂಡೆ, ಗಳಗನಾಥ, ಶಾಂತಕವಿ, ಮುದವೀಡು ಕೃಷ್ಣರಾಯ, ರಾಜಪುರೋಹಿತ ನಾರಾಯಣರಾಯ, ಆಲೂರ ವೆಂಕಟರಾಯ ಮೊದಲಾದ ಮಹನೀಯರು ಉತ್ತರ ಕರ್ನಾಟಕದಲ್ಲಿ ಕರ್ನಾಟಕತ್ವದ ವಿಕಾಸವನ್ನು ನಡೆಸಿದರು. ಈ ಸಂದರ್ಭದಲ್ಲಿ ಧಾರವಾಡದ ಟ್ರೇನಿಂಗ್ ಕಾಲೇಜು ಮತ್ತು ವಿದ್ಯಾವರ್ಧಕ ಸಂಘ ವಹಿಸಿದ ಪಾತ್ರ ದೊಡ್ಡದು.

ಇದರ ಪರಿಣಾಮವಾಗಿ ಕನ್ನಡದಲ್ಲಿ ಪಠ್ಯಪುಸ್ತಕ ಮತ್ತು ಕೃತಿರಚನೆ ನಡೆಯಿತು. ರಾ.ಹ.ದೇಶಪಾಂಡೆಯವರು ಚಲತೊಟ್ಟು ಕನ್ನಡದ ಏಳಿಗೆಗಾಗಿ ದುಡಿದರು. ಗಳಗನಾಥರ ಕೃತಿರಚನೆಗೆ ಪ್ರೇರಕರಾಗಿದ್ದರು. ಅನೇಕ ಪಠ್ಯಪುಸ್ತಕಗಳನ್ನು ಸ್ವತಂತ್ರವಾಗಿ ರಚಿಸುವುದರ ಜೊತೆಗೆ ಬಾಯಿಲೆಕ್ಕದ ಮೊದಲನೆಯ ಪುಸ್ತಕ (1896) ಮತ್ತು ಬೀಜಗಣಿತದ ಮೂಲತತ್ತ್ವಗಳು (1897) ಇವನ್ನು ಅನುವಾದಿಸಿದರು. ವಿಧವಾವಪನ ಅನಾಚಾರವನ್ನು ವೆಂಕಟರಂಗೋ ಕಟ್ಟಿ ಮರಾಠಿ ಮತ್ತು ಕನ್ನಡಗಳಲ್ಲಿ ರಚಿಸಿದ್ದಾರೆ. ಪಂಡಿತ ರಮಾಬಾಯಿಯ ಮರಾಠಿ ಸ್ತ್ರೀಧರ್ಮನೀತಿ ಕನ್ನಡಕ್ಕೆ ಅನುವಾದವಾಗಿದೆ.

ಇದೇ ಸಮಯದಲ್ಲಿ ಉತ್ತರ ಕರ್ನಾಟಕದಲ್ಲಿ ನಾಟಕ ಕಲೆ ಸ್ವತಂತ್ರವಾಗಿ ಬೆಳೆಯಿತು. ಕನ್ನಡ ಜಿಲ್ಲೆಗಳಿಂದ ನಾಟಕ ಕಂಪೆನಿಗಳು ಸಾಂಗಲಿಯವರೆಗೆ ಪ್ರಯಾಣ ಬೆಳೆಸಿದ್ದುವು. ಮರಾಠಿ ನಾಟಕಕಾರರಲ್ಲಿ ಪ್ರಸಿದ್ಧರಾದ ಕಿರ್ಲೋಸ್ಕರ್ ಮೊದಲಾದವರು ಪೌರಾಣಿಕ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಕನ್ನಡದ ಶ್ರೀ ಕೃಷ್ಣಪಾರಿಜಾತ ಕೃತಿ ಮುಂತಾದುವು 19ನೆಯ ಶತಮಾನದ ಮರಾಠಿ ನಾಟಕ ಸಾಹಿತ್ಯದ ಮೇಲೆ ಪ್ರಭಾವ ಬೀರಿದವೆಂದು ತಿಳಿದುಬರುತ್ತದೆ.

ಕಿರ್ಲೋಸ್ಕರನ ಮರಾಠಿ 'ಶಾಕುಂತಲ ನಾಟಕ' ಹುಟ್ಟಿದ ಸರಿಸುಮಾರಿನಲ್ಲೇ ಉತ್ತರ ಕರ್ನಾಟಕದಲ್ಲಿ ಚುರಮುರಿ ಶೇಷಗಿರಿರಾಯರ ಕನ್ನಡ ಶಾಕುಂತಲ ದೇಸೀ ಸೊಬಗನ್ನು ತುಂಬಿಕೊಂಡು ರೂಪುಗೊಂಡಿತು. ಮೈಸೂರಿನಲ್ಲಿ ಬಸವಪ್ಪಶಾಸ್ತ್ರಿಗಳ ಶಾಕುಂತಲ ನಾಟಕ ಸಿದ್ಧವಾಯಿತು. ಮಹಾರಾಷ್ಟ್ರದಿಂದ ಬಂದ ಪಾರಸೀಯವರ ಬಾಲೀವಾಲಾ ಕಂಪನಿ ಮೈಸೂರು ಅರಮನೆಯಲ್ಲಿ ನಾಟಕಗಳನ್ನು ಆಡಿತು. ಅದರ ಪ್ರಭಾವದಿಂದ ಮೈಸೂರಿನಲ್ಲಿ ವೃತ್ತಿರಂಗಭೂಮಿ ಬೆಳೆಯಿತು. ಬಾಲೀವಾಲಾ ಕಂಪನಿಯ ಅದ್ಭುತ ರಂಗವೈಭವ, ಸಂಗೀತ ಮತ್ತು ಅಭಿನಯ ಮೈಸೂರಿನ ಜನತೆಯನ್ನು ಬೆರಗುಗೊಳಿಸಿತು. ರಾಜಾಸ್ಥಾನದಲ್ಲಿದ್ದ ಮಂಡ್ಯಂ ರಂಗಾಚಾರ್ಯ ಮರಾಠಿಯ ಬಾಣಾಸುರೋಪಾಖ್ಯಾನವನ್ನೂ ಬಾಲಗಂಧರ್ವ ಖಾಡಿಲ್ಕರರ ಮರಾಠಿ ನಾಟಕಗಳನ್ನೂ ಪ್ರದರ್ಶಿಸಿದರು. ಮೂಲ್ಕಿಯ ನಾರಾಯಣ ರಾಮಪ್ಪ ಕಾಮತ ತನ್ನ ನಾಟಕ ಕಂಪನಿಯಲ್ಲಿ ಕನ್ನಡ ಮರಾಠಿ ನಾಟಕಗಳೆರಡನ್ನೂ ಆಡಿಸಿದ. ಶಾಂತಕವಿಗಳ 'ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ಕೀರ್ತಿ' ಎನ್ನುವ ಪದ್ಯವೊಂದರಲ್ಲಿ ಆ ಕಾಲದಲ್ಲಿ ಕರ್ನಾಟಕದ ಜನತೆಯ ಮೇಲೆ ಮರಾಠಿ ನಾಟಕಗಳು ಬೀರಿದ ಪರಿಣಾಮದ ಅರಿವಾಗುತ್ತದೆ. ಜನತೆ ಮರಾಠಿ ನಾಟಕಗಳಿಗೆ ಕೊಡುತ್ತಿದ್ದ ಪ್ರೋತ್ಸಾಹವನ್ನು ಕಂಡು ಶಾಂತಕವಿಗಳು ಗದಗಿನ ನಾಟ್ಯ ವಿಲಾಸಿಗಳ ಸಹಕಾರದಿಂದ ಉಷಾಹರಣವೆಂಬ ನಾಟಕವನ್ನು ರಚಿಸಿ ಆಡಿಸಿದರು. ಪುಣೆಯ ಕಾಲೇಜಿನಲ್ಲಿ ಕಲಿತ ಕನ್ನಡಿಗ ವೆಂಕಟರಂಗೋ ಕಟ್ಟಿ 'ಸವಾಯಿ ಮಾಧವ ರಾಯಾಂಚೆ ನಾಟಕ' ಎನ್ನುವ ಸ್ವತಂತ್ರ ಮರಾಠಿ ಐತಿಹಾಸಿಕ ನಾಟಕವನ್ನು ಬರೆದಿದ್ದಾರೆ. ಇತ್ತೀಚೆಗೆ ಮುಕ್ತಾಬಾಯಿ ದೀಕ್ಷಿತ್ ಮೊದಲಾದ ಹಲವರ ಮರಾಠಿ ನಾಟಕಗಳು ಕನ್ನಡಕ್ಕೆ ಅನುವಾದಗೊಂಡಿವೆ. ಕೀರ್ತನಕಾರರು ಕೀರ್ತನೆಗಳನ್ನು ಮಾಡುವಾಗ ಮರಾಠಿ ಅಭಂಗಗಳನ್ನೂ ಕಟಾವ್‌ಗಳನ್ನೂ ಹೇಳಿ ಅರ್ಥ ವಿವರಿಸುತ್ತಿದ್ದರು. ಅದರಿಂದ ಉಂಟಾಗುತ್ತಿದ್ದ ರಸಾಭಾಸವನ್ನು ಕಂಡು ಶಾಂತಕವಿ ಹರಿಕೀರ್ತನೆ ಎನ್ನುವ ಕೃತಿಯನ್ನು ರಚಿಸಿದರು.

ಕನ್ನಡದಲ್ಲಿ ಕಾದಂಬರಿಗಳ ರಚನೆಗೆ ಮರಾಠಿ (ಮತ್ತು ಬಂಗಾಲಿ) ಕಾದಂಬರಿಗಳಿಂದ ಮಾರ್ಗದರ್ಶನ ದೊರೆಯಿತು. ಲಕ್ಷ್ಮಣರಾವ್ ಗದಗಕರನ ಸೂರ್ಯಕಾಂತ (1892) ಎನ್ನುವ ಕೃತಿ ಕನ್ನಡದ ಮೊದಲ ಕಾದಂಬರಿ ಎಂದು ಕೆಲವರ ಅಭಿಪ್ರಾಯ. ಇಲ್ಲಿ ಮೊದಲ ಬಾರಿಗೆ ಕಾದಂಬರಿ ಎನ್ನುವ ಮಾತನ್ನು ಬಳಸಿದೆ. ಇದು ಬಹುಶಃ ಮರಾಠಿಯ ಪರಿಚಯದ ಪ್ರಭಾವವಿರಬಹುದು. ಮುಂದೆ ಗಳಗನಾಥರು ಹರಿನಾರಾಯಣ ಆಪ್ಟೆಯವರ ಮಹಾರಾಷ್ಟ್ರ ಮತ್ತು ರಾಜಸ್ಥಾನದ ಇತಿಹಾಸವನ್ನೊಳಗೊಂಡ ಕೃತಿಗಳನ್ನು ಆಧರಿಸಿ ಕೃತಿರಚನೆ ಮಾಡಿದರಲ್ಲದೆ ವಿಜಯನಗರ ಮತ್ತು ಮೈಸೂರು ಇತಿಹಾಸದ ವಸ್ತುವಿನ ಕೃತಿಗಳನ್ನು ರಚಿಸಿದ್ದಾರೆ.

ಹೀಗೆಯೇ ಕೆರೂರ ವಾಸುದೇವಾಚಾರ್ಯರು ಮರಾಠಿ ಕಥೆಗಳನ್ನು ಆಧರಿಸಿ ತಮ್ಮ ಕೆಲವು ಕಥೆಗಳನ್ನು ಬರೆದಿದ್ದಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ ಮತ್ತು ಅ.ನ.ಕೃಷ್ಣರಾಯರ ಕಥೆಗಳು ಮರಾಠಿಗೆ ಅನುವಾದವಾಗಿವೆ. ಅಲ್ಲದೆ ವಿನೋಬಾ, ಸಾವರ್‌ಕರ್, ಸಾನೆ ಗುರೂಜಿ ಮೊದಲಾದವರ ಬರೆಹಗಳೂ ಈಗಾಗಲೇ ಕನ್ನಡಕ್ಕೆ ಬಂದಿವೆ.

ಶತಮಾನಗಳಿಂದ ಬೆಳೆದುಬಂದ ಕನ್ನಡ ಮರಾಠಿ ಸಾಹಿತ್ಯದ ಕೊಳುಕೊಡೆ ಇಂದು ಇನ್ನೂ ದಟ್ಟವಾಗಿದೆ. ಕನ್ನಡ ಮರಾಠಿ ಕಾವ್ಯಪ್ರಪಂಚದಲ್ಲಿ ಪ್ರಸಿದ್ಧರಾದ ಬೇಂದ್ರೆಯವರ ಮಾತೃಭಾಷೆ ಮರಾಠಿ. ಮರಾಠಿ ಕಾವ್ಯ ಪ್ರಪಂಚದ ಉನ್ನತಿಗೆ ಕಾರಣರಾದ ಕೇಶವಸುತರು ಕರ್ನಾಟಕದಲ್ಲಿದ್ದವರು (ಧಾರವಾಡದಲ್ಲಿ ಶಿಕ್ಷಕರಾಗಿದ್ದು ಹುಬ್ಬಳ್ಳಿಯಲ್ಲಿ ದಿವಂಗತರಾದರು). ಅವರ ಮರಾಠಿ ಕವನ ಒಂದನ್ನು (ತುತಾರಿ) ಗೋವಿಂದ ಪೈ ಅನುವಾದಿಸಿದ್ದಾರೆ.

ಕೆ.ಜಿ.ಕುಂದಣಗಾರ, ಪಿ.ಬಿ.ದೇಸಾಯಿ, ಶಂ.ಬಾ.ಜೋಶಿ, ಆ.ನೇ.ಉಪಾಧ್ಯೆ, ವಿ.ಕೃ.ಗೋಕಾಕ, ರಂ.ಶ್ರೀ.ಮುಗಳಿ, ಶ್ರೀರಂಗ ಮೊದಲಾದ ಸಾಹಿತಿಗಳು ಈ ಉಭಯ ಸಂಸ್ಕೃತಿಗಳ ಹಾಗೂ ಭಾಷೆ ಮತ್ತು ಸಾಹಿತ್ಯಗಳ ಬಾಂಧವ್ಯವನ್ನು ಹಲವು ವಿಧದಲ್ಲಿ ಬೆಳೆಸಿದ್ದಾರೆ.

(ಜಿ.ಜಿ.ಎಂ.)

**ಕೊಂಕಣಿ:** ಕೊಂಕಣಿ ಭಾಷೆ ಕರ್ನಾಟಕಕ್ಕೆ ಹಿಂದಿನಿಂದ ಪರಿಚಿತವಾಗಿದೆ. ಉತ್ತರ ಭಾರತದಲ್ಲಿ ಹುಟ್ಟಿದ ಈ ಭಾಷೆ ಪಶ್ಚಿಮ ಕರಾವಳಿಯ ದಾರಿಯಾಗಿ ಇಳಿದು ಉತ್ತರ ಕನ್ನಡದ ಗಂಗಾವತಿ ನದಿಯವರೆಗೆ ಬಂತು. ಕೊಂಕಣಿ ಭಾಷೆಯಲ್ಲಿ ಅನೇಕ ಸುಧಾರಣೆಗಳನ್ನು ತಂದ ಸಾರಸ್ವತರು ಗೋವೆಗೆ ಬಂದು ನೆಲೆನಿಂತಾಗ ಅದು ಗೋವ ಕದಂಬರ ಆಳಿಕೆಗೆ ಒಳಪಟ್ಟಿತ್ತು. ಅವರ ಆಡಳಿತ ಭಾಷೆ ಕನ್ನಡವಾಗಿದ್ದುದರಿಂದ ಕನ್ನಡಕ್ಕೂ ಕೊಂಕಣಿಗೂ ಸಂಬಂಧ ಏರ್ಪಟ್ಟಿತು. ಇದರಿಂದಾಗಿ ಈ ಶೆಣ್ವೈ (ಸಾರಸ್ವತ ವರ್ತಕರು) ವ್ಯಾಪಾರಿಗಳು ಹಾಗೂ ದಲಾಲರು ಕನ್ನಡ ಲಿಪಿಯನ್ನು ಬಳಸಿಕೊಂಡು ಕೊಂಕಣಿ ಭಾಷೆಯಲ್ಲಿ ತಮ್ಮ ಅಂಗಡಿಯ ಲೆಕ್ಕಪತ್ರಗಳನ್ನು ಬರೆದರು. ಹೀಗೆ ಆರಂಭವಾದ ಕನ್ನಡ–ಕೊಂಕಣಿ ಸಂಬಂಧ ಕನಿಷ್ಠ ಪಕ್ಷ ಲಿಪಿಯ ಮಟ್ಟದಲ್ಲಾದರೂ ಪೋರ್ಚುಗೀಸರ, ಡಚ್ಚರ ಕಾಲದಲ್ಲಿ ಉಳಿದಿತ್ತು.

ಗೋವೆಯ ಕೊಂಕಣಿ ಜನ ಭಾರೀ ಪ್ರಮಾಣದಲ್ಲಿ ಕರ್ನಾಟಕಕ್ಕೆ ವಲಸೆ ಬಂದ ಮೇಲೆ ಕನ್ನಡದ ಪ್ರಭಾವ ಕೊಂಕಣಿಯ ಮೇಲೆ ಇನ್ನಷ್ಟು ಹೆಚ್ಚಾಯಿತು. 16–17ನೆಯ ಶತಮಾನಗಳಲ್ಲಿ ಬಿದನೂರು ಮತ್ತು ಸೋದೆ ರಾಜ್ಯಗಳ ವಿವಿಧ ಭಾಗಗಳಲ್ಲಿ ಕೊಂಕಣಿ ಹಿಂದು ಜನ ಭಾರಿ ಪ್ರಮಾಣದಲ್ಲಿ ಬಂದು ನೆಲೆನಿಂತರು. ಅನಂತರ ಕೊಂಕಣಿ ಮರಾಠರೆಂದು ಕರೆಯಲಾಗುವ ಗಾಂವಕರರು ಬಹುಪಾಲು ಕಾರವಾರ ತಾಲ್ಲೂಕಿನಲ್ಲಿ ನೆಲೆಸಿದರು. ಇವರ ಜೊತೆಗೆ ಭಂಡಾರಿಗಳು, ಪಟ್ಟೆಗಳು, ಕುಮಾರ ಪಂಥದವರು ಅಕ್ಕಸಾಲಿಗರು ಬಂದರು. ಕ್ರೈಸ್ತರು ಬಿದನೂರು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಕುಮಟ, ಹೊನ್ನಾವರ ತಾಲ್ಲೂಕುಗಳಲ್ಲಿ ನೆಲೆನಿಂತರು.

ಕರ್ನಾಟಕಕ್ಕೆ ಬಂದ ಮೇಲೆ ಶೆಣ್ವೆಗಳು ಕನ್ನಡ ಲಿಪಿಯನ್ನು ಉಪಯೋಗಿಸುವುದನ್ನು ಮುಂದುವರಿಸಿದರು. ಈ ನಡವಳಿಕೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲೂ ಕಂಡುಬಂತು. ಇದೆಲ್ಲವೂ ಕನ್ನಡವೆಂದು ಭಾವಿಸಿದ್ದ ಆಂಗ್ಲ ಆಡಳಿತಗಾರರು ಕನ್ನಡ ಜಿಲ್ಲೆಗಳಲ್ಲಿ ಕನ್ನಡವನ್ನೇ ಆಡಳಿತ ಭಾಷೆಯಾಗಿ ಮಾಡಿದರು. ಕನ್ನಡವನ್ನು ಶಾಲೆಗಳಲ್ಲಿ ಜಾರಿಗೆ ತರುವವರೆಗೆ, ಶೆಣ್ವೆಗಳು ತಮ್ಮ ಈ ಪದ್ಧತಿಯನ್ನು ಮುಂದುವರಿಸಿದರು. ಆದರೆ ಕ್ರೈಸ್ತರು ಇಂದಿಗೂ ಇದೇ ಪದ್ಧತಿಯನ್ನು ಮುಂದುವರಿಸುತ್ತಾರೆ. ಅವರ ಎಲ್ಲಾ ಧಾರ್ಮಿಕ ಬರೆವಣಿಗೆಗಳೂ ಅವರ ಪತ್ರಿಕೆಗಳೂ ಕನ್ನಡ ಲಿಪಿಯನ್ನೊಳಗೊಂಡಿದ್ದು ಕೊಂಕಣಿ ಭಾಷೆಯಲ್ಲಿವೆ. ಇದೇ ಕಾಲದಲ್ಲಿ ಕೊಂಕಣಿ ಭಾಷೆಗೆ ಬೇಕಾದ ಲಿಪಿಯೆಂದು ಕನ್ನಡ ಲಿಪಿಯ ಅಚ್ಚಿನ ಮೊಳೆಗಳನ್ನು ಸಿದ್ಧಪಡಿಸಲು ಜೆಸುಯಿಟರೆಂಬ ಕ್ರೈಸ್ತ ಧಾರ್ಮಿಕ ಸಂಸ್ಥೆಯವರು ಮುಂದೆ ಬಂದರು. ಇವರ ಪ್ರಥಮ ಪ್ರಯತ್ನ ಗುರಿಮುಟ್ಟಿದಂತೆ ಕಾಣುವುದಿಲ್ಲ. ಒಂದು ವೇಳೆ ಗುರಿ ಮುಟ್ಟಿದ್ದರೆ ಭಾರತದ ಮುದ್ರಣದ ಇತಿಹಾಸದಲ್ಲಿ ಕನ್ನಡಕ್ಕೆ ಲಿಪಿಯ ಮಟ್ಟದಲ್ಲಾದರೂ ಪ್ರಪ್ರಥಮ ಸ್ಥಾನ ಸಲ್ಲುತ್ತಿತ್ತು. ಮಂಗಳೂರಿನ ಕೊಡಿಯಾಲಬೈಲ ಮುದ್ರಣಾಲಯ ಕೊಂಕಣಿಯನ್ನು ಕನ್ನಡ ಲಿಪಿಯಲ್ಲಿ ಮುದ್ರಿಸತೊಡಗಿತು. ಕರ್ನಾಟಕದಲ್ಲಿ ಈ ಲಿಪಿಗಳನ್ನು ಮೊದಲಿಗೆ ರೂಢಿಸಿದವರು ಇವರೆ ಇದ್ದಿರಬೇಕು.

ಕೊಂಕಣಿಯನ್ನು ಈಗಲೂ ದಕ್ಷಿಣ ಕನ್ನಡದಲ್ಲಿ ಕನ್ನಡ ಲಿಪಿಯಲ್ಲಿಯೇ ಬರೆಯುತ್ತಾರೆ. ಹೀಗೆ ಬರೆಯುವಾಗ ಅಲ್ಪಪ್ರಾಣ ಮಹಾಪ್ರಾಣಗಳು, ಹ್ರಸ್ವ ದೀರ್ಘ ಸ್ವರಗಳು ಎಷ್ಟೋ ವೇಳೆ ಕನ್ನಡ ಲಿಪಿ ವ್ಯವಸ್ಥೆಯಲ್ಲಿ ಇದ್ದ ಹಾಗೆಯೇ ಇರುವುದುಂಟು. ಆಡುನುಡಿಯಲ್ಲಿರುವ ಮಹಾಪ್ರಾಣಗಳು ಬರೆಹದಲ್ಲಿ ಬಂದ ಉದಾಹರಣೆಗಳಿವೆ. ಇದರ ಪರಿಣಾಮವಾಗಿ ಶಿಷ್ಟರೆಂದೆನ್ನಿಸಿಕೊಳ್ಳುವವರು ಬರೆಹದ ಉಚ್ಚಾರ ಕ್ರಮವನ್ನೇ ಪ್ರಮಾಣವಾಗಿ ಇಟ್ಟುಕೊಂಡು ಆಡುನುಡಿಯ ರೀತಿಯನ್ನೇ ವ್ಯತ್ಯಾಸಗೊಳಿಸುತ್ತಿದ್ದಾರೆ. ಹೀಗೆ ವ್ಯತ್ಯಸ್ತವಾದ ಭಾಷೆ ಆಧುನಿಕರ ಪೈಕಿ ಕೆಲವರಲ್ಲಿ ರೂಢಿಗೆ ಬರುತ್ತಿದೆ.

ಮಂಗಳೂರಿನ ಕೊಂಕಣಿ ಜನರ ಮೇಲೆ, ಹೆಚ್ಚಾಗಿ ಕ್ರೈಸ್ತರ ಮೇಲೆ ಇಂಗ್ಲಿಷ್ ಪ್ರಭಾವ ದಟ್ಟವಾಗಿದ್ದಾಗ, ಈಗ್ಗೆ ಸು. 20–30 ವರ್ಷಗಳ ಹಿಂದೆ, ಇಂಗ್ಲಿಷ್ ಹೆಸರುಗಳನ್ನು ಬರೆಯುವಲ್ಲಿ ಒಂದು ವಿಶಿಷ್ಟತೆ ಇರುತ್ತಿತ್ತು. ಉದಾ. ಜೊನ್ಸನ್, ಈಗ ಕನ್ನಡದ ಪ್ರಭಾವ ಬೆಳೆದಂತೆ ಜಾನ್ಸನ್ ಎಂದು ಬರೆಯುವ ರೂಢಿ ಬಂದಿದೆ. ಕನ್ನಡದ ಪ್ರಭಾವ ಕೊಂಕಣಿಯ ಲಿಪಿ ವ್ಯವಸ್ಥೆಯನ್ನು ಮಾರ್ಪಡಿಸಿದೆ ಎನ್ನುವುದಕ್ಕೆ ಇದೊಂದು ನಿದರ್ಶನ.

ಕನ್ನಡ–ಕೊಂಕಣಿ ಸಂಬಂಧ ಲಿಪಿಯೊಂದಕ್ಕೆ ಸೀಮಿತವಾಗಿಲ್ಲ. ವ್ಯಾಕರಣ ಪದಕೋಶಗಳ ಮೇಲಾದ ಪರಸ್ಪರ ಪ್ರಭಾವಗಳನ್ನು ಗುರುತಿಸುವ ಪ್ರಯತ್ನಗಳೂ ನಡೆದಿವೆ. ಕೊಂಕಣಿಯಲ್ಲಿ ಸೇರಿದ ಕನ್ನಡ ಪದಗಳು, ಗಾದೆಗಳು ಮತ್ತು ಲಾಲಿ ಹಾಡುಗಳು ಮುಂತಾದವನ್ನು ಸಂಗ್ರಹಿಸುವ ಪ್ರಯತ್ನವೂ ಕೆಲಮಟ್ಟಿಗೆ ನಡೆದಿದೆ.

ಕೊಂಕಣಿ ಗಾದೆ ಒಗಟುಗಳ ಒಂದು ಸಂಗ್ರಹದಲ್ಲಿ 136 ಕನ್ನಡ ಗಾದೆಗಳಿವೆ. ಇವುಗಳಲ್ಲಿ ಎಷ್ಟೋ ಗಾದೆಗಳು ಇಂದು ಕನ್ನಡದಲ್ಲಿ ಅಷ್ಟಾಗಿ ಪ್ರಚುರವಾಗಿರದೆ ಕೊಂಕಣಿಯಲ್ಲಿಯೇ ಇದ್ದ ಹಾಗೆ ಕಾಣುತ್ತದೆ. ಉದಾ. ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ; ಮೂವರ ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ; ಯಾವ ದೇವರ ಗುಡಿಯಾದರೇನು ನಿದ್ದೆ ಬಿದ್ದರೆ ಲೆಕ್ಕ ಇತ್ಯಾದಿ. ಬರಗಾಲಾಂಕ ಬುತ್ತಿ ಮೇಕಳ್ಳಿ; ನೋಟಕ ನಾ ನುಡಿಯಾಕ ನಾ: ಆಶಾ ಆಶಿಲ್ಯಾ ಸಾಧುಕ, ಮಿಶೋ ಆಶಿಲ್ಯಾ ಸನ್ಯಾಶಾಕ ನಂಬುನಯೇ – ಇತ್ಯಾದಿ ಕೊಂಕಣಿ ಗಾದೆಗಳಲ್ಲಿ ಕನ್ನಡ ಮಾತುಗಳು ಬೆರೆತಿರುವುದು ಸ್ಪಷ್ಟವಾಗಿದೆ. ಹೀಗೆಯೇ ಬಾವಲಿ, ಬಾವಲಕ್ಕಿ, ಮಣಗಟ್ಟು, ಬೇಗಡಿ, ಭಾಂಗಾರ್, ಬ್ರಹ್ಮಗುಡಿ, ತಲವಾರ, ದುಡ್ಡು, ಹೂವ, ನತ್ತು, ಬಡ್ಡಿ, ಕೊಪ್ಪರು, ಗುಪಚೀ (ಗುಬ್ಬಚ್ಚಿ), ಬಾಗಿಲು, ಅಂಗಡಿ, ಕಬ್ಬು – ಈ ಮುಂತಾದ ಕನ್ನಡ ಮಾತುಗಳು ಕೊಂಕಣಿಯ ಪದಕೋಶವನ್ನು ಪ್ರವೇಶಿಸಿರುವುದು ಕಾಣುತ್ತದೆ.

ವ್ಯಾಕರಣದ ದೃಷ್ಟಿಯಿಂದ ಕನ್ನಡ ಕೊಂಕಣಿಯ ಮೇಲೆ ಪ್ರಭಾವವನ್ನು ಬೀರಿದೆ. ಕನ್ನಡದ ಪದಗಳನ್ನು ಸ್ವೀಕರಿಸಿದಾಗ ಕೊಂಕಣಿ ತನ್ನಲ್ಲಿಯ ದೀರ್ಘ ಏ ಓ ಗಳನ್ನು ಹ್ರಸ್ವಗೊಳಿಸುತ್ತದೆ. ಕೊಂಕಣಿ ಶಬ್ದಗಳು ಮರಾಠಿಯಂತೆ ವ್ಯಂಜನಾಂತವಾಗಿರದೆ ಸ್ವರಾಂತವಾಗಿರುವುದು ಹೆಚ್ಚು. ಕೊಂಕಣಿ ಸಪ್ತಮೀ ವಿಭಕ್ತಿಯಾದ ಆ ಕಾರಾಂತವು ಉ ಕಾರಾಂತವಾಗುತ್ತದೆ. ಉದಾ: ಪಾನಾಂತು, ಝಾಡಾಂತು. ಮರಾಠಿಯ ಕ್ರಿಯಾಪದಗಳು ಓ ಕಾರಾಂತರವಾಗಿದ್ದರೆ, ಕೊಂಕಣಿಯಲ್ಲಿ ಆ, ಆಂ ಗಳು ಬರುತ್ತವೆ. ಉದಾ: ಧಾವತೊ (ಮರಾಠಿ) ಧಾವತಾಂ (ಕೊಂಕಣಿ). ಇದು ಹಳಗನ್ನಡದಲ್ಲಿ ಪ್ರಾಚೀನ ಕ್ರಿಯಾರೂಪಗಳಲ್ಲಿ ಸೇರುವ ಒನ್, ಆನ್ ಆಖ್ಯಾತ ಪ್ರತ್ಯಯಗಳ ಪ್ರಭಾವದ ಫಲವಿರಬಹುದು. ಮರಾಠಿಯ ಚತುರ್ಥಿ ವಿಭಕ್ತಿಯ ಲಾ ಪ್ರತ್ಯಯದ ಪ್ರತಿಯಾಗಿ, ಕೊಂಕಣಿಯಲ್ಲಿ ಕ ಬರುತ್ತದೆ. ಇದು ಕನ್ನಡದ 'ಕೆ' ಪ್ರತ್ಯಯಕ್ಕೆ ಸಮೀಪತರ. ಕೆಲವರು ಭಾವಿಸುವಂತೆ ಹಿಂದಿ 'ಕೊ' ಪ್ರಭಾವವಿರುವುದು ಇಲ್ಲಿ. ಕೊಂಕಣಿಯ ವಾಕ್ಯಗಳ ಧ್ವನಿಯೂ ಇದನ್ನು ಸೂಚಿಸುತ್ತದೆ. ದಮಡಿ, ಮಾಲಾಕ, ದುಗಾಣೀ (ದುಗ್ಗಾಣಿ), ದಲಾಲಿ ಇತ್ಯಾದಿ. ಪಂಚಮೀ ವಿಭಕ್ತಿಯಲ್ಲಿ ಮರಾಠಿ ಹೂನ್ ಪ್ರತ್ಯಯ ಕೊಂಕಣಿಯಲ್ಲಿಲ್ಲ. 'ಥಾಮನ್', 'ಥಾಮೂನ್' ಇದೆ. ಅಂತ್ ಮತ್ತು ಹೂನ್ ಇವುಗಳ ಸೇರಿಕೆಯನ್ನು ಕೆಲವರು ಇಲ್ಲಿ ಭಾವಿಸುತ್ತಾರೆ. ಕನ್ನಡ ಪಂಚಮಿಯ ಅತ್ತಣ ಇಲ್ಲಿ ಪ್ರತ್ಯಯದ ಮೂಲವಿರಬಹುದೆ ಎಂಬ ಸಂದೇಹವಿದೆ.

ಈ ವಿಚಾರದ ಮಂಡನೆಯಲ್ಲಿ ಕೊಂಕಣಿ ಮರಾಠಿಯಿಂದ ಕೆಲವೆಡೆ ಭಿನ್ನವಾಗಿದೆ ಯೆಂದೂ ಈ ಭಿನ್ನತೆಗಳಿಗೆ ಕನ್ನಡದ ಪ್ರಭಾವವೇ ಕಾರಣವೆಂದೂ ತರ್ಕಿಸಲಾಗಿದೆ. ಕೊಂಕಣಿ ಮರಾಠಿಯಿಂದ ಬಂದಿದೆ, ಆದುದರಿಂದ ಇದರಲ್ಲಿ ಭಿನ್ನತೆಗಳಿರಬಾರದು ಎಂಬುದು ಪೂರ್ವಪಕ್ಷ. ಆದರೆ ಕೊಂಕಣಿಯ ಉಗಮದ ಬಗೆಗಿನ ಈ ಹೇಳಿಕೆ ಇನ್ನೂ ವಾದಗ್ರಸ್ತವಾಗಿದೆ. ಕನ್ನಡ ಪ್ರಭಾವದ ಪರಿಣಾಮಗಳು ಎಂದು ಹೇಳಲಾದ ಮಾರ್ಪಾಟುಗಳು ಕೂಡ ಕೊಂಕಣಿಯ ಸ್ವಾಭಾವಿಕ ಲಕ್ಷಣಗಳೇ ಆಗಿರುವುದು ಅಸಾಧ್ಯವೇ ಎಂದು ವಿಚಾರ ಮಾಡಬೇಕು. ಕೊಂಕಣಿಯ ಕೆಲವು ಪ್ರಭೇದಗಳ ಮೇಲೆ ಕನ್ನಡದ ಪ್ರಭಾವ ಹೆಚ್ಚಾಗಿ ಬಿದ್ದಿದೆ ಎಂದು ಪ್ರಾಯಃ ಹೇಳಬಹುದು. ಸ್ವರಾಂತ ಕೊಂಕಣಿ ಶಬ್ದಗಳು ಮಂಗಳೂರಿನ ಕ್ರೈಸ್ತೇತರ ಕೊಂಕಣಿಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಈ ಜನರಿಗೆ ಕನ್ನಡದೊಡನೆ ಸಂಪರ್ಕ ಹೆಚ್ಚಿದ್ದು ಅಷ್ಟು ಸಂಪರ್ಕವಿರದ ಅವರ ಕ್ರೈಸ್ತ ಭಾಷಾಬಾಂಧವರ ಮಾತುಗಳು ವ್ಯಂಜನಾಂತವಾಗಿಯೇ ಉಳಿದಿವೆ ಎಂಬುದನ್ನೂ ಗಮನಿಸಬೇಕು. ಉದಾ: ದೇವ್, ದೀಸ್, ಮನಿಸ್ ಇತ್ಯಾದಿ.

ಹಿಂದೆ ಬಳಕೆಯಲ್ಲಿದ್ದ ಕೆಲವು ಕೊಂಕಣಿ ಪದಗಳು ತಮ್ಮ ಸ್ಥಾನವನ್ನು ಈಗ ಕನ್ನಡ ಪದಗಳಿಗೆ ಬಿಟ್ಟುಕೊಟ್ಟಿವೆ. ಬಾಗಿಲ್ (ಬಾಗಿಲು– ಕನ್ನಡ)–ದಾರ್ (ಕೊಂಕಣಿ), ಗುಡೊ (ಗುಡ್ಡ–ಕ) – ದೊಂಗೊರ್ (ಕೊಂ) ಗಾದೊ (ಗದ್ದೆ–ಕ) – ಶೆತ್ (ಕೊಂ), ಶಾಯಿ (ಕಾಯಿ–ಕ) – ತೀಂತ್ (ಕೆಲಾಂ), ಪಾತ (ಪಾತ್ರ–ಕ) – ಲಿಸಾಂವ್ (ಕೊಂ), ತರ್ಕಾರಿ (ತರಕಾರಿ–ಕಂ) – ರಾಂದ್ವೊಯ್ (ಕೊಂ), ಮುಕ್ಕಾಲ್ (ಮುಕ್ಕಾಲು–ಕ) – ಡೆಕ್ಕಿ (ಕೊಂ), ಕೊಂಕಣಿ ಪದಗಳನ್ನು ಬಹಳ ಅಪೂರ್ವವಾಗಿ ಮಾತ್ರ ಕೇಳುತ್ತೇವೆ. ಹೀಗೆಯೇ ಕನ್ನಡದ ಮೇಲಾದ ಕೊಂಕಣಿಯ ಪ್ರಭಾವ ಸಿಗರೇಟ್ ಎಳೆ–ಸಿಗರೇಟ್ ಮೋಡ್, ನಿದ್ದೆತೆಗಿ–ನೀದ್‌ಕಾಡ್ (ಕೊಂ) ಮುಂತಾದ ನುಡಿಗಟ್ಟುಗಳಲ್ಲಿ ಹೊಳಹು ತೋರಿದೆ.

(ಇ.ಎನ್.)

**ಇಂಗ್ಲಿಷ್:** ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡ ಮೇಲೆ ಇಂಗ್ಲಿಷ್ ಭಾಷೆ ಭಾರತದಲ್ಲಿ ಪ್ರಚಾರಕ್ಕೆ ಬಂತು. ಭಾಷೆಯೊಂದಿಗೆ ಆ ಭಾಷೆಯ ಸಾಹಿತ್ಯವೂ ಭಾರತೀಯರಿಗೆ ಪರಿಚಿತವಾಯಿತು. ಕರ್ನಾಟಕ ಇದಕ್ಕೆ ಹೊರತಾಗಿಲ್ಲ. ಶ್ರೀಮಂತವೂ ಸಂಕೀರ್ಣವೂ ಆದ ಇಂಗ್ಲಿಷ್ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯಕ್ಕೆ ನೀಡಿದ ಸ್ಫೂರ್ತಿ ಅಪಾರ. ಕನ್ನಡ ವಾಙ್ಮಯದಲ್ಲಿ ಇಂಗ್ಲಿಷಿನ ಪ್ರಭಾವ ಪ್ರತ್ಯೇಕಿಸಿ ತೋರಿಸುವುದು ಕಠಿಣ ಎನ್ನುವಷ್ಟರಮಟ್ಟಿಗೆ ಹಾಸುಹೊಕ್ಕಾಗಿದೆ. ಇಂದಿನ ಅನೇಕ ಸಾಹಿತ್ಯ ಪ್ರಕಾರಗಳು ನೇರವಾಗಿ ಇಂಗ್ಲಿಷಿನಿಂದ ಬಂದವು ಅಥವಾ ಅದರ ಸಂಪರ್ಕದಿಂದ ಸಿದ್ಧವಾದವು. ಪ್ರಭಾವದ ಜೊತೆಗೆ ಅನುಕರಣ ಅನುವಾದಗಳನ್ನೂ ಲೆಕ್ಕಿಸಿದರೆ ಇಂಗ್ಲಿಷ್ ಸಾಹಿತ್ಯ ಕನ್ನಡವನ್ನು ಶ್ರೀಮಂತಗೊಳಿಸಿರುವುದು ತಿಳಿಯುತ್ತದೆ.

ಇಂಗ್ಲಿಷ್ ಸಾಹಿತ್ಯದ ಮೂಲಕ ಕನ್ನಡಕ್ಕೆ ಐರೋಪ್ಯಸಾಹಿತ್ಯದ ಪರಿಚಯವಾಯಿತು. ಕನ್ನಡ ಸಾಹಿತ್ಯದ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವವೆಂದರೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೆಂದೇ ಅರ್ಥ. ಗ್ರೀಕ್, ಲ್ಯಾಟಿನ್, ಫ್ರೆಂಚ್, ಜರ್ಮನ್, ಇಟಾಲಿಯನ್, ರಷ್ಯನ್ ಮುಂತಾದ ಸಾಹಿತ್ಯಗಳೆಲ್ಲ ಇಂಗ್ಲಿಷಿನ ಮೂಲಕ ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರಭಾವಿಸಿವೆ. ಪೂರ್ವ–ಪಶ್ಚಿಮಗಳ ಸಂಗಮವೇ ಕನ್ನಡದ ಹೊಸ ಸಾಹಿತ್ಯಕ್ಕೆ ಹೇತುವೂ ಮೂಲಧಾತುವೂ ಆಯಿತು.

19ನೆಯ ಶತಮಾನದಲ್ಲಿ ಪಾಶ್ಚಾತ್ಯ ಸಂಸರ್ಗದ ಹೊಸ ಪ್ರವಾಹ ಬಂದು ಸೇರಿದ ಮೇಲೆ ಕನ್ನಡ ಸಾಹಿತ್ಯವಾಹಿನಿ ನವೋನವವಾಗಿ ಜೀವಂತವಾಗಿ ಹರಿಯತೊಡಗಿತು. ಆಧುನಿಕ ಕನ್ನಡ ಸಾಹಿತ್ಯ ತಲೆ ಎತ್ತಿತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ಬಗೆಬಗೆಯ ಪಾಶ್ಚಾತ್ಯ ನಾಗರಿಕ ಸೌಲಭ್ಯಗಳನ್ನು ಭರತಖಂಡಕ್ಕೆ ಒದಗಿಸತೊಡಗಿದರು. ಈ ಪಾಶ್ಚಾತ್ಯ ಸಂಪರ್ಕ ನಾಲ್ಕು ರೀತಿಯಲ್ಲಿ ಉಂಟಾಯಿತೆಂದು ಹೇಳಲಾಗಿದೆ: ಆಡಳಿತ–ವ್ಯವಹಾರ, ಮುದ್ರಣ ಯಂತ್ರ, ಕ್ರೈಸ್ತಮತ ಪ್ರಚಾರ, ಹೊಸ ಶಿಕ್ಷಣ ಪದ್ಧತಿ–ಹೊಸ ವಿಚಾರಸರಣಿ. ಪಾಶ್ಚಾತ್ಯ ನಾಗರಿಕತೆಯ ಪ್ರಭಾವದಿಂದ ಭಾರತೀಯರ ಜೀವನದೃಷ್ಟಿ ಹಾಗೂ ಮೌಲ್ಯಗಳು ಬದಲಾದುವು; ಪಾಶ್ಚಾತ್ಯರ ವೈಚಾರಿಕ ಪ್ರವೃತ್ತಿ, ವ್ಯಾವಹಾರಿಕ ಲೌಕಿಕ ಮನೋಧರ್ಮ ಭಾರತೀಯರಲ್ಲಿ ಹರಡತೊಡಗಿದುವು. ಬ್ರಿಟಿಷರು ಜಾರಿಗೆ ತಂದ ಹೊಸ ಶಿಕ್ಷಣ ಪದ್ಧತಿ ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿತು. ಅದರಿಂದ ಭಾರತೀಯರ ಪಾಲಿಗೆ ನವದಿಗಂತಗಳು ತೆರೆದುಕೊಂಡವು. ಹೊಸದೊಂದು ಪ್ರಪಂಚದ ಪರಿಚಯವಾಯಿತು. ವಿಜ್ಞಾನ, ಇಂಗ್ಲಿಷ್ ಸಾಹಿತ್ಯ ಪ್ರಪಂಚದ ಪರಿಜ್ಞಾನ ಅವರಿಗೆ ಹಿಂದಿಲ್ಲದ ಅನುಭವಗಳನ್ನೂ ಸಂವೇದನೆಗಳನ್ನೂ ತಂದುಕೊಟ್ಟವು. ಬದುಕಿನ ರೀತಿನೀತಿಗಳನ್ನು ಮಾರ್ಪಡಿಸಿದುವು. ಇದುವರೆಗೆ ಮತಧರ್ಮದ ಆವರಣದಲ್ಲಿ ಬೆಳೆದುಬಂದಿದ್ದ ಭಾರತೀಯರ ಸಮಷ್ಟಿಪ್ರಜ್ಞೆ, ಲೌಕಿಕವಾದ ವ್ಯಷ್ಟಿಪ್ರಜ್ಞೆಯಾಗಿ ಸಂಕ್ರಮಣಗೊಂಡು, ಸ್ವತಂತ್ರ ವಿಚಾರಶಕ್ತಿ ಕುದುರತೊಡಗಿತು. ಭಾರತೀಯರಲ್ಲಿ ಸ್ವಾತಂತ್ರ್ಯಪ್ರೇಮ, ರಾಷ್ಟ್ರೀಯ ಭಾವನೆ, ಸ್ವಾಭಿಮಾನ, ಸ್ವತಂತ್ರ ವಿಚಾರಸರಣಿಗಳು ಬೆಳೆಯಲು ಅದು ಕಾರಣವಾಯಿತು. ಇಂಗ್ಲಿಷ್ ಶಿಕ್ಷಣವೆಂತೊ ಅಂತೆ ಕ್ರೈಸ್ತ ಮಿಷನರಿಗಳು ತಂದ ಮುದ್ರಣಯಂತ್ರವೂ ಒಂದು ಕ್ರಾಂತಿ ಸಾಧನವಾಯಿತು, ವಾಚಕವರ್ಗವನ್ನು ಸೃಜಿಸಿ, ಬರೆಹಗಾರರಿಗೆ ಸ್ಫೂರ್ತಿ ಸಾಧನವಾಯಿತು.

ಈ ಎಲ್ಲ ಸಂಕ್ರಾಂತಿ ಭರತಖಂಡದ ಇತರ ಭಾಗಗಳನ್ನು ಹೇಗೋ ಹಾಗೆಯೇ ಕರ್ನಾಟಕವನ್ನೂ ವ್ಯಾಪಿಸಿ ಹೊಸ ಸಾಹಿತ್ಯ ಸೃಷ್ಟಿಗೆ ಪ್ರಚೋದಕವಾಯಿತು. ನಾಡು ನುಡಿಗಳ ಪ್ರೇಮ ಕನ್ನಡಿಗರಲ್ಲೂ ಜಾಗೃತವಾಯಿತು. ಇಂಗ್ಲಿಷ್ ಶಿಕ್ಷಣ ಪಡೆದ ಹೊಸ ಪೀಳಿಗೆಯ ಸಾಮಾನ್ಯ ಜನ ನವೀನ ಸಾಹಿತ್ಯದ ಹರಿಕಾರರಾದರು. ರೂಪ ವಸ್ತು ಭಾವ ಭಾಷೆಗಳಲ್ಲಿ ಸಾಹಿತ್ಯ ಹೊಸತನವನ್ನು ತಾಳಿತು.

ಹೊಸಗನ್ನಡದ ಅರುಣೋದಯವಾದುದು ಕ್ರೈಸ್ತ ಮಿಷನರಿಗಳಿಂದ. ಈ ಅರುಣೋದಯ ಕಾಲದಲ್ಲಿ ಮೂರು ಘಟ್ಟಗಳನ್ನು ಗುರುತಿಸಬಹುದು. ಸು. 1810–50 ನಸುಕಿನ ಕಾಲ. ಈ ಅವಧಿಯಲ್ಲಿ ಪಾಶ್ಚಾತ್ಯ ಶಿಕ್ಷಣ ಪದ್ಧತಿ ಇನ್ನೂ ನೆಲೆಗೊಂಡಿರಲಿಲ್ಲ. ಕ್ರೈಸ್ತ ಮಿಷನರಿಗಳು ಮಾತ್ರ ಗ್ರಂಥ ರಚನೆಯಲ್ಲಿ ತೊಡಗಿದ್ದರು. ದೇಶೀಯರು ಆ ಕಡೆ ಗಮನ ಹರಿಸಿರಲಿಲ್ಲ. 1851–80ರ ವರೆಗಿನ ಕಾಲವನ್ನು ಮುಂಬೆಳಗಿನ ಕಾಲವೆನ್ನಬಹುದು. ಆ ಅವಧಿಯಲ್ಲಿ ದೇಶೀಯರೂ ಗ್ರಂಥರಚನೆಯ ಕಡೆಗೆ ಮನಸ್ಸು ಕೊಟ್ಟು, ಅನುವಾದ ಕಾರ್ಯದಲ್ಲಿ ಮತ್ತು ಹಳೆಯ ಗ್ರಂಥಗಳ ಪರಿಷ್ಕರಣದಲ್ಲಿ ತೊಡಗಿದರು. 1881 ರಿಂದ 1899ರವರೆಗಿನ ಕಾಲವನ್ನು ಹೊಂಬೆಳಗಿನ ಕಾಲ ಅಥವಾ ನವೋದಯ ಕಾಲವೆನ್ನಬಹುದು. ಈ ಅವಧಿಯಲ್ಲಿ ಮತ್ತು ಅನಂತರ ಅನುವಾದ ಕೃತಿಗಳ ಜೊತೆಗೆ ಸ್ವತಂತ್ರ ಕೃತಿಗಳೂ ಕಾಣಿಸಿಕೊಂಡುವು. ಇಂಗ್ಲಿಷ್ ಶಿಕ್ಷಣ ಕ್ರಮ ಎಲ್ಲೆಲ್ಲೂ ರೂಢವಾಗಿ, ನವೀನ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಿದ ಕಾಲಾವಧಿಯಿದು. ಈ ಶಿಕ್ಷಣದ ಫಲವಾಗಿ ಹೊಸ ಧೋರಣೆಯುಂಟಾಗಿ, ಸಮಾಜ ಸುಧಾರಣೆಯೇ ಮೊದಲಾದ ಸ್ವತಂತ್ರ ವಿಚಾರಗಳು ಸ್ಫುರಿಸಿ ಅಭಿವ್ಯಕ್ತಿಗಾಗಿ ಹಾತೊರೆದುವು. ಇಂಥ ಅಭಿವ್ಯಕ್ತಿಯಲ್ಲಿ ವೈಯಕ್ತಿಕ ವಿಚಾರಧಾರೆ, ಲೌಕಿಕ ದೃಷ್ಟಿ, ವಾಸ್ತವಿಕತೆಯ ಪ್ರಜ್ಞೆ ತಲೆದೋರಿದುವು.

ಕ್ರೈಸ್ತಮಿಷನರಿಗಳ ಸಾಹಿತ್ಯಕಾರ್ಯ ಭಾಷಾಭ್ಯಾಸದ ಸಾಧನಗಳ ಮೂಲಕ ಪ್ರಾರಂಭವಾಯಿತು. ಕನ್ನಡ ವ್ಯಾಕರಣ, ನಿಘಂಟು, ಛಂದಸ್ಸುಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಅವರು ಹೊರತಂದರು. ಈ ದಿಶೆಯಲ್ಲಿ ವಿಲಿಯಂ ಕೇರಿಯ ವ್ಯಾಕರಣ (1817) ಆದ್ಯಕೃತಿ. ಮಿಷನರಿಗಳು ಕ್ರೈಸ್ತ ಸಾಹಿತ್ಯವನ್ನು ಕನ್ನಡಕ್ಕೆ ತಂದುದು ಮುಖ್ಯವಾದ ಕಾರ್ಯ. 19ನೆಯ ಶತಮಾನದ ಪೂರ್ವಾರ್ಧದಲ್ಲಿ ಇವೇ ಹೊಸಗನ್ನಡದ ಮುಖ್ಯ ಬರೆಹಗಳು. ಪಠ್ಯಪುಸ್ತಕ ರಚನೆ, ಪ್ರಾಚೀನ ಕೃತಿಗಳ ಶಾಸ್ತ್ರೀಯ ಸಂಪಾದನೆ ಹಾಗೂ ಮುದ್ರಣಾಲಯ ಸ್ಥಾಪನೆ ಮಿಷನರಿಗಳ ಮತ್ತು ಬ್ರಿಟಿಷ್ ಅಧಿಕಾರಿಗಳ ಇತರ ಕಾರ್ಯಗಳು.

ವಿದೇಶೀಯರು ಹೀಗೆ ಕನ್ನಡ ಸಾಹಿತ್ಯ ಸೇವೆಯನ್ನು ಹಿಂದೆಯೇ ಪ್ರಾರಂಭಿಸಿದ್ದರೂ ದೇಶೀಯರು ಆ ಬಗ್ಗೆ ಮೊದಮೊದಲು ನಿರ್ಲಿಪ್ತರಾಗಿದ್ದರು. ಇದಕ್ಕೆ ಮುಖ್ಯ ಕಾರಣ ವೇನೆಂದರೆ, ನಾಡು ಆಡಳಿತ ದೃಷ್ಟಿಯಿಂದ ವಿಭಜಿತವಾಗಿದ್ದು, ಶೈಕ್ಷಣಿಕವಾಗಿ ಹಿಂದೆ ಬಿದ್ದಿತ್ತು. ಅಲ್ಲದೆ, ಮೈಸೂರಿನಲ್ಲಿ ರಾಜಾಸ್ಥಾನದಲ್ಲಿದ್ದವರು ಹೊಸತನವನ್ನು ಅಷ್ಟಾಗಿ ಸ್ವಾಗತಿಸದೆ ಸಂಪ್ರದಾಯದ ಜಾಡಿನಲ್ಲೆ ಸಾಗಿದ್ದರು. ಕರ್ನಾಟಕದ ಉಳಿದ ಭಾಗಗಳಲ್ಲೂ ನವೋದಯಕ್ಕೆ ಅವಕಾಶ ಸಿಗುವುದು ತಡವಾಯಿತು. ಆದ್ದರಿಂದ ಬಂಗಾಲಿ, ಮರಾಠಿ ಮುಂತಾದ ಸಾಹಿತ್ಯಗಳಲ್ಲಿ ಬೇಗ ಕಾಣಿಸಿಕೊಂಡ ದೇಶಾಭಿಮಾನ, ಸಮಾಜ ಸುಧಾರಣೆಯ ಪ್ರವೃತ್ತಿ, ಪ್ರಗತಿಪರ ವಿಚಾರ ಧೋರಣೆಗಳು ಕನ್ನಡದಲ್ಲಿ ವಿಲಂಬಿತವಾಗಿ ಕಾಣಿಸಿಕೊಂಡುವು. ಏನಿದ್ದರೂ 1890ನೆಯ ದಶಕದಲ್ಲಿ ಸ್ವತಂತ್ರ ಕಾದಂಬರಿ ನಾಟಕಗಳು ಕನ್ನಡದಲ್ಲಿ ಹೊಮ್ಮಿದುವು. 1899ರಲ್ಲಿ ಪ್ರಥಮ ಸಾಮಾಜಿಕ ಕಾದಂಬರಿ ಹೊರಬಂತು. ಈ ನಡುವಣ ಅವಧಿ ಹೊಸಗನ್ನಡದ ಇತಿಹಾಸದಲ್ಲಿ ಮಹತ್ತ್ವದ ಶಕವೆನ್ನಲಾಗಿದೆ. ಹೊಸತು ನಿಚ್ಚಳವಾಗಿ, ಉಜ್ವಲವಾಗಿ ಕಾಣಿಸಿಕೊಂಡ ಕಾಲವದು.

ಹೊಸಗನ್ನಡ ಗದ್ಯದಲ್ಲಿ ಬೈಬಲ್ಲನ್ನು ಅನುವಾದಿಸಿದ (1812) ಜಾನ್ ಹ್ಯಾಂಡ್ಸ್ ಕರ್ನಾಟಕಕ್ಕೆ ಬಂದುದು 1810ರಲ್ಲಿ. ಆ ವರ್ಷವನ್ನು ಪಾಶ್ಚಾತ್ಯ ಪ್ರಭಾವದ ದೃಷ್ಟಿಯಿಂದ ಹೊಸಗನ್ನಡ ಸಾಹಿತ್ಯದ ಆರಂಭವರ್ಷವೆನ್ನಬಹುದು. ಲಿಯೊನಾರ್ಡೊ ಸಿನ್ನಾಮಿ ಎಂಬ ಮಿಷನರಿ 17ನೆಯ ಶತಮಾನದಲ್ಲೆ ಕರ್ನಾಟಕಕ್ಕೆ ಬಂದಿದ್ದ; ಅವನೇ ಹೊಸಗನ್ನಡದ ಪ್ರಪ್ರಥಮ ಗ್ರಂಥಕರ್ತ ಎನ್ನಲಾಗಿದೆ. ಆದರೆ ಅವನ ಕೃತಿಗಳು ದೊರೆತಿಲ್ಲ. ಜಾನ್ ಹ್ಯಾಂಡ್ಸ್ ಬೈಬಲ್ಲಿನ ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳನ್ನು 1820ರಲ್ಲಿ ಹೊರತಂದ. ಅನಂತರ ಹೊಸ ಒಡಂಬಡಿಕೆಯ ಮುಂದಿನ ಭಾಗವನ್ನೂ ಹಳೆಯ ಒಡಂಬಡಿಕೆಯ ಅನುವಾದವನ್ನೂ ಸಿದ್ಧಗೊಳಿಸಿದ. ಸಮಗ್ರ ಬೈಬಲನ್ನು ಮೊದಲ ಬಾರಿಗೆ ಕನ್ನಡದಲ್ಲಿ ಹೊರತಂದವನು ಹ್ಯಾಂಡ್ಸ್. ಅವನಿಗಿಂತ ಮೊದಲೇ ವಿಲಿಯಂ ಕೇರಿ 1809ರಲ್ಲಿ ಬೈಬಲನ್ನು ಕನ್ನಡಕ್ಕೆ ತಂದಿದ್ದ. ಆದರೆ ಅದರ ಹಸ್ತಪ್ರತಿ 1812ರಲ್ಲಿ ಸುಟ್ಟು ಹೋಯಿತು. ಕೇರಿ ಮತ್ತೆ ಅದನ್ನು ಪ್ರತಿಮಾಡಿ 1823ರಲ್ಲಿ ಪ್ರಕಟಿಸಿದ. ಇದೇ ಹೊಸಗನ್ನಡದ ಮೊದಲ ಗದ್ಯಗ್ರಂಥವೆನ್ನಲಾಗಿದೆ. ಎ.ಬೌಥೆಲೊ ಬೈಬಲ್ಲಿನ ಸಂಕ್ಷಿಪ್ತ ರೂಪವನ್ನು ಕನ್ನಡದಲ್ಲಿ ಪ್ರಕಟಿಸಿದ. ರೀವ್ ಎಂಬಾತ ಯೇಸುಕ್ರಿಸ್ತನ ಅವತಾರ ಎಂಬ ಅನುವಾದವನ್ನೂ ಹಳೆಯ ಒಡಂಬಡಿಕೆಯ ಅನೇಕ ಪರ್ವಗಳನ್ನೂ ಕನ್ನಡದಲ್ಲಿ ಹೊರತಂದ (1820). ಜಾನ್ ಬನ್ಯನ್ 'ಪಿಲ್ಗ್ರಿಮ್ಸ್‌ಪ್ರೋಗ್ರೆಸ್' ಕೃತಿಯನ್ನು ದೇಶಾಂತ್ರಿಯ ಪಯಣ ಎಂಬ ಹೆಸರಿನಲ್ಲಿ ಅನುವಾದಿಸಿದ. ಬಿ.ಎಚ್.ರೈಸ್ ತನ್ನ ಸಹೋದ್ಯೋಗಿ ಸಿವೆಲ್‌ನೊಡನೆ ಬೈಬಲ್ಲಿನ ನೂರು ಮುಖ್ಯಾಂಶಗಳನ್ನು ಟಿಪ್ಪಣಿ ಸಹಿತ ಪ್ರಕಟಿಸಿದ (ವೇದ ಸಂಗ್ರಹ, 1844). ಸ್ಯಾಂಡರ್ಸನ್ 'ಕಂ ಟು ಜೀಸಸ್' ಎಂಬ ಕೃತಿಯನ್ನು (ಮೂಲ: ಸಿ.ಎನ್.ಹಾಲ್) ಅನುವಾದಿಸಿದ (1862). ಹೀಗೆಯೇ ಚಾರ್ಬೋನಾ ಎಂಬಾತ ದೈವಪರೀಕ್ಷೆ (1863), ಸತ್ಯವೇದ ಪರೀಕ್ಷೆ (1852), ದಿವ್ಯಮಾತೃಕೆ (1862), ಸುಕೃತ ಮಂತ್ರಗಳು (1866) ಇತ್ಯಾದಿಗಳನ್ನು ಅನುವಾದಿಸಿದ. ಹೆನ್ರಿ ಹೇಗ್ ಜಿಗ್ಲರನೊಡನೆ ಹೊಸ ಒಡಂಬಡಿಕೆಯ ಲ್ಯೂಕ್ ಮತ್ತು ಮಾರ್ಕರ ಸುವಾರ್ತೆಗಳನ್ನು ಭಾಷಾಂತರಿಸಿದ. ಮೊಗ್ಲಿಂಗನ ಜಾತಿ (ಮತ) ವಿಚಾರಣೆ (1845), ದೇವ ವಿಚಾರಣೆ (1852) ಇವು ಸ್ವತಂತ್ರ ಕೃತಿಗಳು. ಇವು ಹೊಸಗನ್ನಡದ ಆದ್ಯ ಪ್ರಬಂಧಗಳು. 'ಪಿಲ್ಗ್ರಿಮ್ಸನು ಪ್ರೋಗ್ರೆಸ್'ನ ಅನುವಾದವಾದ ಯಾತ್ರಿಕನ ಸಂಚಾರವನ್ನು ಮೊಗ್ಲಿಂಗನು ವೈಗಲ್‌ನೊಡನೆ 1849ರಲ್ಲಿ ಹೊರತಂದ. 'ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೇ ಮೊದಲನೆಯದು. 1838ರಲ್ಲಿ ಲಿಟ್ಲ್ ವಿಲಿಯಂ ಎಂಬ ಕ್ರೈಸ್ತ ಕಥನದ ಅನುವಾದ ಪ್ರಕಟವಾಗಿತ್ತು. ಪ್ರವಚನಕ್ಕೆ ಬೇಕಾದ ಕ್ರೈಸ್ತ ಗೀತೆಗಳನ್ನು ಅನುವಾದಿಸಿದ ಆರಂಭಕಾರರಲ್ಲೊಬ್ಬ ವೈಗಲ್. ಮೊಗ್ಲಿಂಗನೊಡನೆ ಹಾಕ್ ಅನೇಕ ಪ್ರಾರ್ಥನಾಗೀತೆಗಳನ್ನು ರಚಿಸಿದ. ಎಫ್. ಕಿಟ್ಟೆಲ್ ಕಥಾಮಾಲೆ (1862) ಎಂಬ ಹೆಸರಿನಲ್ಲಿ ಬೈಬಲ್ಲಿನ ಹೊಸ ಒಡಂಬಡಿಕೆಯನ್ನು ಕಥನ ರೂಪಕ್ಕೆ ತಿರುಗಿಸಿದ. ಇದರಲ್ಲಿ ಭಾಮಿನಿ, ವಾರ್ಧಕ ಮುಂತಾದ ಛಂದೋರೂಪಗಳನ್ನು ಬಳಸಲಾಗಿದೆ. ಬೇರಾವ ಮಿಷನರಿಯೂ ಇಷ್ಟೊಂದು ಕನ್ನಡ ಪದ್ಯಗಳನ್ನು ರಚಿಸಿಲ್ಲವಂತೆ. ಮಿಷನರಿಗಳು ಬರಿಯ ಮತೀಯ ಸಾಹಿತ್ಯವನ್ನೆ ರಚಿಸಲಿಲ್ಲ. ಮಹಾಪುರುಷರ ಜೀವನಚರಿತ್ರೆಗಳು ಮುಂತಾಗಿ ಜೀವನೋಪಯೋಗಿ ಗ್ರಂಥಗಳನ್ನೂ ರಚಿಸಿದ್ದರು.

ಉಳಿದವರಿಗಿಂತ ಬಾಸೆಲ್ ಮಿಷನ್‌ಗೆ ಸೇರಿದ ಮಿಷನರಿಗಳು ಕನ್ನಡಕ್ಕಿತ್ತ ಕೊಡುಗೆ ಮಿಗಿಲಾದುದು. ಅವರು ತಮ್ಮ 60 ವರ್ಷಗಳ ಕಾಲಾವಧಿಯಲ್ಲಿ ಅನೇಕ ಹೊಸ ವಿಚಾರಗಳನ್ನೂ ನವೀನ ರೂಪಗಳನ್ನೂ ಸಾಹಿತ್ಯ ರಂಗದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಕನ್ನಡಕ್ಕೆ ಮ್ಯಾಕೆರಲ್, ಕಾಲ್ಡ್‌ವೆಲ್, ಬಿ.ಎಲ್.ರೈಸ್, ರೀಡ್ ಮೊದಲಾದವರ ಸೇವೆಯೂ ಗಮನಾರ್ಹವಾದುದು. ಒಂದು ಕಡೆ ಪ್ರಾಚೀನ ನಿಕ್ಷೇಪದ ಅನಾವರಣ, ಇನ್ನೊಂದು ಕಡೆ ಹೊಸ ಸಾಹಿತ್ಯಕ್ಕೆ ಪ್ರೇರಣೆ ಈ ಎರಡೂ ಪರಸ್ಪರ ಪೂರಕವಾದ ಕೆಲಸಗಳನ್ನು ವಿದೇಶೀಯರು ಮಾಡಿದರು.

19ನೆಯ ಶತಮಾನದ ಉತ್ತರಾರ್ಧದಲ್ಲಿ, ಪಾಶ್ಚಾತ್ಯ ಶಿಕ್ಷಣಪಡೆದ ಹೊಸ ತಲೆಮಾರೊಂದು ಸಾಹಿತ್ಯ ರಚನೆಯಲ್ಲಿ ತೊಡಗಿ ನವ ಮನ್ವಂತರವನ್ನು ಆರಂಭಿಸಿತು. ಮೊದಮೊದಲು ಇಂಗ್ಲಿಷ್ ಕೃತಿಗಳ ಅನುವಾದಗಳು, ಅನುಕರಣಗಳು ಮತ್ತು ರೂಪಾಂತರಗಳು ಅನಂತರ ಸ್ವತಂತ್ರ ಕೃತಿಗಳು ಹೊರಬಂದುವು. ಚಾಮರಾಜ ಒಡೆಯರು ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯನ್ನು ಸ್ಥಾಪಿಸಿ ನಾಟಕಗಳ ಹುಟ್ಟಿಗೆ ಅನುವು ಮಾಡಿಕೊಟ್ಟದ್ದು ಒಂದು ಮಹತ್ತ್ವದ ಸಂಗತಿ. ಆಗ ಕೆಲವರು ಸಂಸ್ಕೃತದಿಂದ, ಕೆಲವರು ಇಂಗ್ಲಿಷಿನಿಂದ ನಾಟಕಗಳನ್ನು ಕನ್ನಡಿಸಿದರು. ಇಂಗ್ಲಿಷಿನಿಂದ ವಿಶೇಷವಾಗಿ ಷೇಕ್ಸ್‌ಪಿಯರನ ನಾಟಕಗಳನ್ನು ಭಾಷಾಂತರ ಅಥವಾ ರೂಪಾಂತರದ ಮೂಲಕ ತರಲಾಯಿತು. ಕನ್ನಡದಲ್ಲಿ ಐತಿಹಾಸಿಕ ನಾಟಕ ನಿರ್ಮಾಣಕ್ಕೆ ಅದೇ ಬುನಾದಿ. ಷೇಕ್ಸ್‌ಪಿಯರನನ್ನು ಕನ್ನಡಿಗರಿಗೆ ಮೊತ್ತಮೊದಲು ಪರಿಚಯಿಸಿದವರು ಚನ್ನಬಸಪ್ಪ ಎಂಬುವರೆಂದು ಹೇಳಲಾಗಿದೆ. ಅವರು 1821ರಷ್ಟು ಹಿಂದೆಯೇ ಕಾಮಿಡಿ ಆಫ್ ಎರರ್ಸ್, ಮ್ಯಾಕ್‌ಬೆತ್ ನಾಟಕಗಳ ಕಥೆಗಳನ್ನು ಪ್ರಕಟಿಸಿದ್ದರಂತೆ.

ಈ ದಿಕ್ಕಿನಲ್ಲಿ ಎಂ.ಎಲ್.ಶ್ರೀಕಂಠೇಶಗೌಡರ ಹೆಸರೂ ಮುಖ್ಯವಾದುದು. ಅವರು ಮ್ಯಾಕ್‌ಬೆತ್ ನಾಟಕವನ್ನು ಪ್ರತಾಪರುದ್ರದೇವ (1895) ಎಂದು ರೂಪಾಂತರಿಸಿದರು. ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ನಾಟಕವನ್ನು ಪ್ರಮೀಳಾರ್ಜುನೀಯ ಎಂದೂ ರೂಪಾಂತರಿಸಿದರು. ಅಲ್ಲದೆ ಹೆನ್ರಿ ಫೀಲ್ಡಿಂಗನ ಎ ಸಿಲಿಕನ್ ಸಮ್ಮರ್ (ಕನ್ಯಾವಿತಂತು), ಮೇರಿಯಾ ಎಜ್‌ವರ್ತಳ ಲಿಟಲ್ ಮರ್ಚೆಂಟ್ಸ್ (ಚಿಕ್ಕ ಬಣಜಿಗರು) ಕೃತಿಗಳನ್ನು ಕನ್ನಡಿಸಿದರು. ಎ.ಆನಂದರಾಯರು ರೋಮಿಯೋ ಜೂಲಿಯಟ್ ನಾಟಕವನ್ನು ರಾಮವರ್ಮ ಲೀಲಾವತಿ ಎಂದೂ ಮರ್ಚೆಂಟ್ ಆಫ್ ವೆನಿಸ್ ನಾಟಕವನ್ನು ಪಾಂಚಾಲೀ ಪರಿಣಯ ಎಂದೂ ರೂಪಾಂತರಿಸಿದರು. ಬಸವಪ್ಪಶಾಸ್ತ್ರಿಗಳಿಗೆ ಸ್ವತಃ ಇಂಗ್ಲಿಷ್ ಬರದಿದ್ದರೂ ಅನ್ಯರ ನೆರವಿನಿಂದ ಒಥೆಲೋ ನಾಟಕವನ್ನು ಶೂರಸೇನಚರಿತ ಎಂದು ಕನ್ನಡಕ್ಕೆ ತಂದರು. ಎಂ.ಎಸ್.ಪುಟ್ಟಣ್ಣನವರ ಹೇಮಚಂದ್ರ ರಾಮವಿಲಾಸ ಕಿಂಗ್ ಲಿಯರ್ ನಾಟಕದ ಗದ್ಯ ರೂಪಾಂತರ, ಆರ್. ಅಣ್ಣಾಜಿರಾಯರು, ಚುರಮುರಿ ಶೇಷಗಿರಿರಾಯರು, ಗುಂಡೋ ಕೃಷ್ಣ ಚುರಮುರಿಯವರು, ವೆಂಕಟಾದ್ರಿ ಶಾಮರಾಯರು ಮೊದಲಾದವರೂ ಹಲವಾರು ಇಂಗ್ಲಿಷ್ ನಾಟಕಗಳನ್ನು ಕನ್ನಡೀಕರಿಸಿದರು.

ಇಂಗ್ಲಿಷಿನಿಂದ ಕನ್ನಡಕ್ಕೆ ಬಂದ ಮೊದಲ ಕಾದಂಬರಿಯೆಂದರೆ ಎಸ್.ವಿ.ಕೃಷ್ಣಸ್ವಾಮಿ ಅಯ್ಯಂಗಾರ್ ಭಾಷಾಂತರಿಸಿದ ರಾಬಿನ್‌ಸನ್ ಕ್ರೂಸೋ (1858). ಬಾಪು ಸುಬ್ಬರಾಯರ ನಿರ್ಭಾಗ್ಯ ಮುರಾದ ಅಂಥದೇ ಮತ್ತೊಂದು ಕಾದಂಬರಿ. ಥಾಮಸ್ ಡೇಯ 'ದಿ ಹಿಸ್ಟರಿ ಆಫ್ ಸ್ಯಾಂಡ್‌ಫೋರ್ಡ್ ಅಂಡ್ ಮಾರ್ಟನ್' ಎಂಬ ಕೃತಿಯನ್ನು ಎಂ.ಎಸ್.ಪುಟ್ಟಣ್ಣನವರು ಸುಮತಿ ಹಾಗೂ ಮದನಕುಮಾರರ ಚರಿತ್ರೆ ಎಂಬುದಾಗಿ ಕನ್ನಡಿಸಿದರು.

ಸ್ಥೂಲವಾಗಿ 19ನೆಯ ಶತಮಾನದ ಮೂರನೆಯ ದಶಕದಲ್ಲಿ ನಸುಕಾಗಿ, ಮಧ್ಯದಪ್ಪರ ಹೊತ್ತಿಗೆ ಬೆಳಕಾಗಿ ಹೊಸಗನ್ನಡ ಸಾಹಿತ್ಯ ತನ್ನ ವಿವಿಧ ಪ್ರಕಾರಗಳೊಡನೆ ಉದಯವಾಯಿತೆಂದು ಹೇಳಬಹುದು. ಆದರೆ ಅದರ ಸ್ಪಷ್ಟ ರೂಪ ಕಾಣಿಸಿಕೊಂಡದ್ದು 20ನೆಯ ಶತಮಾನದಲ್ಲಿಯೇ ಎನ್ನಬೇಕು. ಭಾವಗೀತೆ, ನಾಟಕ, ಕಾದಂಬರಿ, ಕಥೆ, ವಿಮರ್ಶೆ, ಪ್ರಬಂಧ ಮುಂತಾದ ಪ್ರಕಾರಗಳೆಲ್ಲ ಕನ್ನಡದಲ್ಲಿ ಸುಪ್ರತಿಷ್ಠಿತವಾದುದು ಪ್ರಚಲಿತ ಶತಮಾನದಲ್ಲಿಯೇ. ಈ ಪ್ರತಿಷ್ಠಾಪನಾ ಕಾರ್ಯದಲ್ಲಿ ಇಂಗ್ಲಿಷ್ ವಾಙ್ಮಯದ ಕೊಡುಗೆ ಅಪರಿಮಿತವಾದುದು.

1820–1920ರವರೆಗಿನ ಕಾಲವನ್ನು ಹೊಸಗನ್ನಡದ ಮೊದಲ ಹಂತವೆಂದಿಟ್ಟುಕೊಂಡರೆ, 1921ರ ಮುಂದಿನ ಕಾಲವನ್ನು ಎರಡನೆಯ ಹಂತವೆಂದು ಭಾವಿಸಬಹುದು. ಈ ಎರಡನೆಯ ಹಂತ ದೇಶಾದ್ಯಂತ ಅಪೂರ್ವ ಜಾಗೃತಿಯನ್ನು ಕಂಡ ಕಾಲ. ಆಗ ದೇಶದ ಸ್ವಾತಂತ್ರ್ಯಕ್ಕಾಗಿ ಪರಕೀಯ ಸತ್ತೆಯೊಡನೆ ಅಸಹಕಾರ ಮಾಡಿದಂತೆ ಸ್ವಭಾಷೆಯ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕಾಗಿ ಲೇಖಕರು ಹಳೆಯ ಸಂಪ್ರದಾಯದ ಸತ್ತೆಯೊಡನೆ ಅಸಹಕಾರ ಹೂಡಿದರು. ಸಾಹಿತ್ಯ ಕ್ಷೇತ್ರದಲ್ಲಿ ಸಹ ಇಂಗ್ಲಿಷ್ ವಾಙ್ಮಯದ ನಿತಾಂತಪ್ರಭಾವ ಭಾರತೀಯ ಸಾಹಿತ್ಯದ ಹೊಸ ಸ್ವರೂಪಕ್ಕೆ ಕಾರಣವಾಯಿತು. ಮೆಕಾಲೆ ಪ್ರಾರಂಭ ಮಾಡಿದ ವಿದ್ಯಾಭ್ಯಾಸ ಪದ್ಧತಿಯ ಮೂಲಕ ನಮ್ಮ ನಾಡಿನ ವಿದ್ಯಾವಂತರಿಗೆ ಷೇಕ್ಸ್‌ಪಿಯರ್ ಮತ್ತು ಮಿಲ್ಟನ್ ಇವರ ಮಹಾಕೃತಿಗಳೂ ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್ ಮೊದಲಾದ ಕವಿಗಳ ಭಾವಗೀತೆಗಳೂ ಪರಿಚಿತವಾದವು. ಇವುಗಳ ಜೊತೆಗೆ ಮಿಲ್, ಮಾರ್ಲೆಯವರಂಥ ವಿಚಾರವಂತರ ವಿಚಾರ –ವಿವೇಕದಿಂದ ಪರಿಪುಷ್ಟರಾದರು. ಸ್ಕಾಟ್, ಡಿಕನ್ಸ್ ಅವರ ಕಾದಂಬರಿಗಳಿಂದ ಸ್ಫುರಣ ಹೊಂದಿದರು. ಅವರ ಮನೋಲೋಕ ಇಂಗ್ಲಿಷ್ ಸಾಹಿತ್ಯದ ಚಿತ್ರಗಳಿಂದಲೂ ಕಿಕ್ಕಿರಿಯಿತು. ಕೆಲವು ಕಾಲದ ಮೇಲೆ ಇದಕ್ಕೆ ಪ್ರತಿಕ್ರಿಯೆಯಾಗಿ ಪ್ರಾಚೀನ ಭಾರತೀಯ ಸಂಸ್ಕೃತಿಯ ಪರಿಚಯಕ್ಕಾಗಿ ಮನಸ್ಸು ಹಾತೊರೆಯಿತು. ವೇದೋಪನಿಷತ್ತುಗಳ ವ್ಯಾಸಂಗದಿಂದ ಇನ್ನೊಂದು ಆಳವಾದ ದೃಷ್ಟಿ ತೆರೆಯಿತು. ಪೌರ್ವಾತ್ಯ –ಪಾಶ್ಚಿಮಾತ್ಯ ದೃಷ್ಟಿಗಳ ಸಮನ್ವಯದತ್ತ ಹಲವರ ಮನಸ್ಸು ಹೊರಳಿತು. ಸಮಗ್ರ ದೇಶದಲ್ಲಿ ಪ್ರಕಟವಾದ ನೂತನಶಕ್ತಿ ಕರ್ನಾಟಕದಲ್ಲಿಯೂ ಸಂಚರಿಸಿತು.

1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದುದೂ ಹೊಸ ಸಾಹಿತ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ನವೀನ ಸಾಹಿತ್ಯದ ಪ್ರಧಾನ ಅಧ್ವರ್ಯುವಾಗಿ ನಿಂತವರು ಬಿ.ಎಂ.ಶ್ರೀಕಂಠಯ್ಯನವರು; ಅವರಿಗೆ ಬೆಂಬಲವಾಗಿ ಕೆಲಸ ಮಾಡಿದವರು ತ.ಸು.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರೀ. ಮೈಸೂರಿನ ಕಡೆ ಶ್ರೀಯವರ ನಾಯಕತ್ವದಲ್ಲಿ ತಳಿರು ತಂಡ, ಮಂಗಳೂರು ಕಡೆ ಪಂಜೆಯವರ ನೇತೃತ್ವದಲ್ಲಿ ಮಿತ್ರಮಂಡಳಿ, ಧಾರವಾಡದ ಕಡೆ ಬೇಂದ್ರೆಯವರ ನೇತೃತ್ವದಲ್ಲಿ ಗೆಳೆಯರ ಗುಂಪು ತಲೆಯೆತ್ತಿದುವು.

ಕಾವ್ಯಪ್ರಕಾರದಲ್ಲಿ 1921ರಲ್ಲಿ ಹೊರಬಂದ ಶ್ರೀಯವರ ಇಂಗ್ಲಿಷ್ ಗೀತಗಳು ಹೊಸಗನ್ನಡ ಕಾವ್ಯದ ಚರಿತ್ರೆಯಲ್ಲಿ ಒಂದು ಪ್ರಮುಖವಾದ ಮಜಲು. ಆದರೆ ಶ್ರೀಯವರಿಗಿಂತಲೂ ಹಿಂದೆಯೇ ಕೆಲಸ ಮಾಡಿದವರಿದ್ದರು ಎಂಬುದನ್ನು ಮರೆಯುವಂತಿಲ್ಲ. ಹೊಸಗನ್ನಡ ಕವಿತೆಗೆ ಕಳೆದ ಶತಮಾನದಲ್ಲೇ ನಾಂದಿ ಹಾಡಿದವರು ಕ್ರೈಸ್ತ ಮಿಷನರಿಗಳು. 1845ರಲ್ಲಿ ಪ್ರಕಟವಾದ ಬಾಸೆಲ್ ಮಿಶನ್ನಿನ ಪದ್ಯ ಸಂಕಲನದಲ್ಲಿ 68 ಕನ್ನಡ ಗೀತೆಗಳಿವೆ. 1847ರಲ್ಲಿ ಪ್ರಕಟವಾದ ಯಾತ್ರಿಕನ ಸಂಚಾರದಲ್ಲಿ ವೈಗಲ್ ಅನುವಾದಿಸಿದ ಅನೇಕ ಪದ್ಯಗಳಿವೆ. ಕೆಲವು ಭಾಮಿನಿ ಷಟ್ಪದಿಯಲ್ಲಿದ್ದರೆ, ಕೆಲವು ಚೌಪದಿಯ ರೂಪದಲ್ಲಿವೆ. ಸುಮಾರು ಇದೇ ಕಾಲದಲ್ಲಿ ಬೆಳಕಿಗೆ ಬಂದ ಗೀತ ಪುಸ್ತಕಗಳು ಎಂಬ ಮಿಷನರಿ ಕೃತಿಯಲ್ಲಿ ಇಂಗ್ಲಿಷ್, ಜರ್ಮನ್ ಗೀತಗಳ ಕನ್ನಡಾನುವಾದವಿದ್ದು ಅವುಗಳಲ್ಲಿ ಕೆಲವೆಡೆ ಆದಿ ಅಂತ್ಯಪ್ರಾಸಗಳನ್ನೂ ಕೆಲವೆಡೆ ಅಂತ್ಯಪ್ರಾಸವನ್ನೂ ಕಾಣಬಹುದು. ಮಿಷನರಿಗಳ ಈ ಪ್ರಾರ್ಥನಾ ಪದ್ಯಗಳು ಹಳೆಯ ಧಾಟಿಯಿಂದ ಮುಕ್ತವಾಗಿವೆ. ಕೆಲವು ಕಡೆ ಅಂತ್ಯಪ್ರಾಸ ಅನಿಯತವಾಗಿ ಬಂದಿರುವುದುಂಟು. ವಾಸ್ತವವಾಗಿ ಅಂತ್ಯಪ್ರಾಸ ಆಂಗ್ಲ ಕಾವ್ಯದ ವೈಶಿಷ್ಟ್ಯ. ಅದು ಹೊಸಗನ್ನಡ ಕವಿತೆಗೆ ಇಂಗ್ಲಿಷಿನಿಂದ ಬಂದು ಸೇರಿಕೊಂಡಿತು.

ಕ್ರೈಸ್ತಗೀತೆಗಳಲ್ಲೂ ಎರಡು ವರ್ಗಗಳನ್ನು ಕಾಣಬಹುದು. ಹಳೆಯ ಧಾಟಿಯಲ್ಲಿರತಕ್ಕವು ಮತ್ತು ಪಾಶ್ಚಾತ್ಯ ಗೀತಗಳ ಧಾಟಿಯಲ್ಲಿರತಕ್ಕವು. ಎರಡನೆಯ ವರ್ಗದಲ್ಲಿ ಹೊಸ ಛಂದಸ್ಸು ಕಾಣದೊರೆಯುತ್ತದೆ. ಮಿಷನರಿಗಳು ವಿರಳವಾಗಿ ಸ್ವತಂತ್ರ ಕವಿತೆಯನ್ನೂ ಬರೆದುದುಂಟು. ಹೀಗೆ ಕ್ರೈಸ್ತ ಮಿಷನರಿಗಳ ರಚನೆಗಳಲ್ಲಿ ಹೊಸಗನ್ನಡ ಕಾವ್ಯ ಪರಿಮಿತವಾಗಿ ಮೈದೋರಿತ್ತು. ಅದು 19ನೆಯ ಶತಮಾನದ ಕೊನೆಯಲ್ಲಿ ಮತ್ತು 20ನೆಯ ಶತಮಾನದ ಮೊದಲೆರಡು ದಶಕಗಳಲ್ಲಿ ಹೆಚ್ಚಾಗಿ ಅನುವಾದರೂಪದಲ್ಲಿ ಮುಂದುವರಿಯಿತು. ಇಂಗ್ಲಿಷ್ ಕವಿತೆಗಳ ಭಾಷಾಂತರಕ್ಕೆ ಪಠ್ಯಪುಸ್ತಕಗಳೂ ನಿಮಿತ್ತವಾದುವು. ಹಾಗೆಯೇ ಕನ್ನಡದಲ್ಲಿ ಆಧುನಿಕ ಕಾವ್ಯ ಸ್ವತಂತ್ರವಾಗಿ ತಲೆಯೆತ್ತಿದ್ದು ಈ ಶತಮಾನದ ಆರಂಭದಲ್ಲಿ; ಇಂಗ್ಲಿಷ್ ಕಾವ್ಯವಿತ್ತ ಸ್ಫೂರ್ತಿಯಿಂದ.

ಶ್ರೀಯವರು ಹೊಸಗನ್ನಡವನ್ನು ಉದ್ಘಾಟಿಸಿದ ಕ್ರಾಂತಿ ಪುರುಷರಾದರೂ ಅವರಿಗಿಂತ ಹಿಂದೆಯೇ ಮುಂಬೆಳಗಿನ ಮೊದಲಿಗರಿದ್ದರು. ಈ ಮುಂಬೆಳಗಿನ ಕವಿಗಳೆಲ್ಲ ಬಹುಮಟ್ಟಿಗೆ ಹಳೆಯ ಛಂದೋರೂಪಗಳಲ್ಲಿ ಕಾವ್ಯರಚನೆ ಮಾಡಿದರೇ ಹೊರತು ಹೊಸ ಛಂದಸ್ಸನ್ನು ಸೃಷ್ಟಿಸಲಿಲ್ಲ. ಎಸ್.ಜಿ.ನರಸಿಂಹಾಚಾರ್, ಪಂಜೆಮಂಗೇಶರಾಯ, ಗೋವಿಂದಪೈ, ಹಟ್ಟಿಯಂಗಡಿ ನಾರಾಯಣರಾಯ, ಜಯರಾಯಾಚಾರ್ಯ, ಶಾಂತಕವಿ ಮೊದಲಾದವರು ಹೊಸ ಕವಿತೆಗೆ ಹಳೆಯ ಛಂದೋರೂಪಗಳನ್ನೇ ಬಳಸಿಕೊಂಡರು. ಸ್ವಂತ ರಚನೆಗಳಲ್ಲಾಗಲೀ ಅನುವಾದಗಳಲ್ಲಾಗಲೀ ಹೊಸತನ ಹೆಚ್ಚಾಗಿರಲಿಲ್ಲ. ಗೋವಿಂದ ಪೈಯವರು ಆದಿಪ್ರಾಸತ್ಯಾಗದ ನಿರ್ಧಾರ ಕೈಕೊಂಡದ್ದು ಒಂದು ಮಹತ್ತ್ವದ ಹೆಜ್ಜೆ.

ಹಟ್ಟಿಯಂಗಡಿ ನಾರಾಯಣರಾಯರು ಇಂಗ್ಲಿಷಿನಿಂದ ಕನ್ನಡಕ್ಕೆ ಕವಿತೆಗಳನ್ನು ಭಾಷಾಂತರಿಸಿದವರಲ್ಲಿ ಮೊದಲಿಗರು. ಅವರ ಆಂಗ್ಲಕವಿತಾವಳಿ ಅನುವಾದಿತ ಕವನಗಳ ಸಂಕಲನ (1919). ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದ ಹೇಗೆ ಕನ್ನಡ ಕಾವ್ಯಕ್ಕೆ ನಾವೀನ್ಯವುಂಟಾಗುವುದೆಂಬುದನ್ನು ನಾರಾಯಣರಾಯರು ಕನ್ನಡ ಕವಿತೆಯ ಭವಿತವ್ಯ ಎಂಬ ತಮ್ಮೊಂದು ಭಾಷಣದಲ್ಲಿ ಸೂಚಿಸಿದ್ದಾರೆ. 'ಇಂಗ್ಲಿಷ್ ಮಾರ್ಗಗಳ ಅನುಸರಣದಿಂದ ............ ಕವಿಗಳು ಪಾರಮಾರ್ಥಿಕ ವಿಷಯಗಳಿಗಿಂತ ರಾಷ್ಟ್ರೀಯ, ಸಾಮಾಜಿಕ, ಚಾರಿತ್ರಿಕ ಮುಂತಾದ ಲೌಕಿಕ ಪ್ರಮೇಯಗಳಿಗೆ ಹೆಚ್ಚು ಗಮನ ಕೊಡುವರೆಂದೂ ದೀರ್ಘ ಪುರಾಣಗಳ ಬದಲಾಗಿ ಲಘುಕೃತಿಗಳನ್ನು ರಚಿಸುವರೆಂದೂ ಛಂದಸ್ಸಿನಲ್ಲಿ ಹೊಸ ಮಾದರಿಗಳನ್ನು ಕಲ್ಪಿಸಬಹುದೆಂದೂ ಅಲಂಕಾರದಲ್ಲಿ ಅಚೇತನ ಪದಾರ್ಥಗಳಿಗೆ ವಾಕ್‌ಶಕ್ತಿಯನ್ನೂ ಮಾನಸಿಕ ಭಾವಗಳಿಗೆ ಮೂರ್ತಿತ್ವವನ್ನೂ ಆರೋಪಿಸುವ ಉತ್ಪ್ರೇಕ್ಷೆಯು ರೂಢಿಯಾಗಬಹುದೆಂದೂ ಹಳಗನ್ನಡಕ್ಕಿಂತ ನಡುಗನ್ನಡವನ್ನೆ ಹೆಚ್ಚಾಗಿ ಪ್ರಯೋಗಿಸುವರೆಂದೂ' ಅವರ ನಿರೀಕ್ಷೆಯಾಗಿತ್ತು. ಅದು ಮುಂದೆ ನಿಜವಾಯಿತು. ಕನ್ನಡ ಕಾವ್ಯವು ಛಂದಸ್ಸು, ರೂಪ, ವಸ್ತು, ಶೈಲಿ, ಭಾಷೆಗಳಲ್ಲಿ ಹೊಸತನವನ್ನು ತಳೆಯಿತು. ಎಸ್.ಜಿ.ನರಸಿಂಹಾಚಾರ್ಯರೂ ಇಂಗ್ಲಿಷಿನಿಂದ ಕವನಗಳನ್ನು ಅನುವಾದಿಸಿದ್ದಲ್ಲದೆ ಪಠ್ಯಪುಸ್ತಕಗಳಿಗಾಗಿ ಸ್ವತಂತ್ರ ಕವಿತೆಗಳನ್ನೂ ರಚಿಸಿದರು. ಆದರೆ ಅವರ ಕವಿತೆಗಳ ವಸ್ತುಭಾವಗಳೂ ಹೊಸವಾದರೂ ಛಂದೋರೂಪಗಳು ಮಾತ್ರ ಹಳೆಯವೇ. ಪಂಜೆಯವರೂ ತಮ್ಮ ಅನುವಾದಗಳಲ್ಲಿ ಮತ್ತು ಸ್ವತಂತ್ರ ಕವನಗಳಲ್ಲಿ ಹಳೆಯ

ಛಂದೋರೂಪಗಳನ್ನೇ ಅವಲಂಬಿಸಿದರು. ಆದಿಪ್ರಾಸವನ್ನು ಬಿಡಲಿಲ್ಲ. ಇಂಗ್ಲಿಷ್ ಕವನಗಳ ವರ್ಚಸ್ಸು ಕನ್ನಡಕ್ಕೆ ಬರುವಂತೆ ಮಾಡಿದವರಲ್ಲಿ ಅವರು ಮೊದಲಿಗರು. ಗೋವಿಂದ ಪೈಯವರು ಪಂಜೆಯವರಿಗಿಂತ ಮುಂದೆ ಹೋಗಿ ಕೆಲವು ಹೊಸ ರೂಪಗಳನ್ನು ಸೃಷ್ಟಿಸಿಕೊಂಡರು. ಮೊಟ್ಟಮೊದಲು ಸಾನೆಟ್ ಬರೆದವರು ಪೈ ಅವರೇ. ಇಂಗ್ಲಿಷಿನಿಂದ ಗ್ರಂಥಗಳನ್ನು ಕನ್ನಡಿಸುವುದು ಲಾಭದಾಯಕವೆಂದು ನಂಬಿದ್ದವರಲ್ಲಿ ಶಾಂತಕವಿಗಳೂ ಒಬ್ಬರಾಗಿದ್ದರು. ಹೀಗೆ ಹಿಂದಿನವರ ಈ ಎಲ್ಲ ಪ್ರಯತ್ನಗಳು ಶ್ರೀಯವರ ಇಂಗ್ಲಿಷ್ ಗೀತಗಳಿಗೆ ಸಮರ್ಥವಾದ ಮುನ್ನುಡಿಯಾದುದು ನಿಶ್ಚಿತ.

ಶ್ರೀ ಅವರ ಇಂಗ್ಲಿಷ್ ಗೀತಗಳಲ್ಲಿ ಹೊಸತನ ಸಮಗ್ರವಾಗಿ ಆವಿರ್ಭವಿಸಿತು. ವಸ್ತು, ಭಾವ, ಭಾಷೆ, ಛಂದಸ್ಸು ಎಲ್ಲದರಲ್ಲೂ ಈ ಹೊಸತನವನ್ನು ಸ್ಫುಟವಾಗಿ ಗುರುತಿಸಬಹುದು. ಅವರು ಹಳೆಯ ಮಾತ್ರಾಗಣಗಳನ್ನೇ ಇಟ್ಟುಕೊಂಡು ಹೊಸ ಛಂದಃಪ್ರಕಾರಗಳನ್ನು ಮೊದಲ ಬಾರಿಗೆ ಕಲ್ಪಿಸಿದರು. ಮುಂದಿನ ಕವಿಗಳಿಗೆ ಇದು ಹೆದ್ದಾರಿಯಾಗಿ ಪರಿಣಮಿಸಿತು; ಕನ್ನಡದಲ್ಲಿ ಸ್ವತಂತ್ರ ಭಾವಗೀತೆಗಳ ಸುಗ್ಗಿಗೆ ಕಾರಣವಾಯಿತು. ಇಂಗ್ಲಿಷ್ ಕಾವ್ಯದಲ್ಲಿ 19ನೆಯ ಶತಮಾನದ ಆರಂಭದಲ್ಲಿ ಎಂಥ ನವೋದಯವುಂಟಾಯಿತೊ ಅಂಥದೇ ನವೋದಯವನ್ನು ತಮ್ಮ ಕೃತಿಯ ಮೂಲಕ ಕನ್ನಡ ಕಾವ್ಯದಲ್ಲಿ ಶ್ರೀಯವರು ಉಂಟುಮಾಡಿದರು. ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಕೋಲ್‌ರಿಜ್, ಬೈರನ್, ಬ್ರೌನಿಂಗ್, ಟೆನಿಸನ್, ಬರ್ನ್ಸ್ ಮೊದಲಾದ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಕವಿತೆಗಳನ್ನು ಕನ್ನಡಿಸಿ, ಕನ್ನಡದಲ್ಲಿ ರೊಮ್ಯಾಂಟಿಕ್ ಕಾವ್ಯದ ಬೆಳೆಗೆ ಪ್ರೇರಕಶಕ್ತಿಯಾದರು. ಹೊಸಗನ್ನಡದಲ್ಲಿ ಇಂದು ಹೆಸರಾಗಿರುವ ಕವಿಗಳಲ್ಲಿ ಬಹುಮಂದಿ ಇಂಗ್ಲಿಷ್‌ಗೀತಗಳ ನೆರಳಲ್ಲಿ ಬೆಳೆದವರು. 1930ರವರೆಗೆ ಶ್ರೀಯವರೂ ಅವರ ಮಿತ್ರರೂ ನಡೆಸಿದ ಸಾಧನೆಯಿಂದ ಕನ್ನಡದಲ್ಲಿ ಹೊಸ ಕಾವ್ಯ ಬೇರೂರಿ ನಿಂತಿತು. ಇಂಗ್ಲೆಂಡಿನಲ್ಲಿ ವರ್ಡ್ಸ್‌ವರ್ತ್, ಕೋಲ್‌ರಿಜ್ ಮೊದಲಾದ ರೊಮ್ಯಾಂಟಿಕ್ ಕವಿಗಳಿಗೆ ಜನಪದ ಸಾಹಿತ್ಯ ಸ್ಫೂರ್ತಿ ಕೊಟ್ಟಂತೆ, ಅಲ್ಲಿಯ ರೊಮ್ಯಾಂಟಿಕ್ ಕಾವ್ಯ ಜನಪದ ಸಾಹಿತ್ಯದಿಂದ ಪ್ರೇರಣೆ ಪಡೆದಂತೆ ಕನ್ನಡದಲ್ಲೂ ಇಂಥ ಪ್ರಕ್ರಿಯೆ ನಡೆಯಿತು. ಉತ್ತರ ಕರ್ನಾಟಕದಲ್ಲಿ ಗೆಳೆಯರ ಗುಂಪಿನವರು ಜನಪದ ಗೀತೆಗಳ ಧಾಟಿಯನ್ನು ತಮ್ಮ ಕವಿತೆಗಳಲ್ಲಿ ಬಳಸಿಕೊಂಡರು. ಗೆಳೆಯರ ಗುಂಪಿಗೆ ಸೇರಿದ ಮಧುರಚೆನ್ನರ ಅನುಭಾವ ಸಾಹಿತ್ಯ ಎ.ಇ.ಏಟ್ಸ್ ಮೊದಲಾದ ಆಂಗ್ಲ ಅನುಭಾವ ಕವಿಗಳ ವ್ಯಾಸಂಗದಿಂದ ಪ್ರಭಾವಗೊಂಡದ್ದೆಂಬುದನ್ನು ಇಲ್ಲಿ ಗಮನಿಸಬಹುದು. ಆಶಯ ಮುಕ್ತ ಅಭಿವ್ಯಕ್ತಿಯಲ್ಲಿ ಸ್ವಾತಂತ್ರ್ಯ, ನಾವೀನ್ಯ, ವೈವಿಧ್ಯ ಹೊಸಗನ್ನಡ ಭಾವಗೀತೆಗಳ ಪ್ರಧಾನ ಲಕ್ಷಣಗಳು. ಇದು ಬಂದುದು ನಿಸ್ಸಂದೇಹವಾಗಿ ಇಂಗ್ಲಿಷ್ ಕಾವ್ಯದಿಂದ; ಇಂಗ್ಲಿಷ್ ಗೀತಗಳ ಮೂಲಕ. ಈ ಸಂದರ್ಭದಲ್ಲಿ ಭಾವಗೀತೆಯ ಪ್ರಕಾರಗಳೆಲ್ಲ ಇಂಗ್ಲಿಷಿನಿಂದ ಕನ್ನಡಕ್ಕೆ ಬಂದುವು. ಜೊತೆಗೆ ಕಥನಕಾವ್ಯ, ತಾತ್ತ್ವಿಕ ಕಾವ್ಯ, ವಿಡಂಬನ ಕಾವ್ಯಗಳೂ ನೆಲೆಗೊಂಡುವು. ಸರಳ ರಗಳೆ, ಮುಕ್ತ ಛಂದಗಳಂಥ ರೂಪಗಳೂ ಇಂಗ್ಲಿಷಿನ ಪ್ರಭಾವದಿಂದಲೆ ಸೃಜನಗೊಂಡುವು.

ಸಾನೆಟ್ ಭಾವಗೀತೆಯ ಮುಖ್ಯ ಪ್ರಕಾರಗಳಲ್ಲೊಂದು. ಮೂಲತಃ ಇದು ಇಟಲಿಯಲ್ಲಿ ಹುಟ್ಟಿ ಬೆಳೆದದ್ದು; 16ನೆಯ ಶತಮಾನದಲ್ಲಿ ಇಂಗ್ಲಿಷಿಗೆ ಬಂದು, ಅಲ್ಲಿಂದ ಕನ್ನಡಕ್ಕೆ ಬಂದು, ಅಲ್ಲಿ ಒಗ್ಗಿಹೋಯಿತು. ಸಾನೆಟ್ಟಿನಲ್ಲಿ ಎರಡು ಬಗೆ ಪೆಟ್ರಾರ್ಕನ್ ಸಾನೆಟ್ ಮತ್ತು ಷೇಕ್ಸ್‌ಪೀರಿಯನ್ ಸಾನೆಟ್, ಕನ್ನಡದಲ್ಲಿ ಈ ಎರಡೂ ಬಗೆಗಳು ಪ್ರಚುರವಾಗಿವೆ. ಬೇರೆ ರೀತಿಯ ಸಾನೆಟ್ಟುಗಳೂ ಉಂಟು. ಕನ್ನಡ ಪ್ರಗಾಥಗಳು ಇಂಗ್ಲಿಷಿನ ಓಡ್‌ಗಳಿಂದ ಸ್ಫೂರ್ತವಾದವು. ಕನ್ನಡಕ್ಕೆ ಈ ಪ್ರಕಾರವನ್ನು ವಿಶೇಷವಾಗಿ ತಂದವರು ಶ್ರೀಯವರೇ.

ಪಾಮರರ ಮನಸ್ಸಿಗೆ ಒಪ್ಪುವ ಕಥೆಗಳನ್ನು ಬರೆಯುವ ಕ್ರಾಂತಿ ಇಂಗ್ಲಿಷ್ ಕಥನ ಕವನಗಳ ಅಭ್ಯಾಸದಿಂದ ಅಂತೆಯೇ ಕನ್ನಡಕ್ಕೆ ಕಥನ ಕವನಗಳನ್ನು ಕೊಡಬೇಕು ಎನ್ನುವ ಸ್ಫೂರ್ತಿಯಿಂದ ಬಂದಿತೆಂದು ಹೇಳಿದರೆ ತಪ್ಪಾಗಲಾರದು. ಮಾಸ್ತಿಯವರ 'ನವರಾತ್ರಿ'ಯ ಕಥನಕವನಗಳಿಗೆ ಮಾದರಿ ಛಾಸರನ ಕ್ಯಾಂಟರ್ಬರಿ ಕಥೆಗಳು. ಎಲ್.ಗುಂಪಡಪ್ಪನವರ ಸೋಹ್ರಾಬ್–ರುಸ್ತುಂ (ಮೂಲ: ಮ್ಯಾಥ್ಯು ಅರ್ನಾಲ್ಡ್) ಪಾಶ್ಚಾತ್ಯರ ಮಹೋಪಮೆಗಳನ್ನು ಕನ್ನಡಕ್ಕೆ ಪರಿಚಯ ಮಾಡಿಕೊಟ್ಟಿತು. ಕುವೆಂಪು ಅವರ ಚಿತ್ರಾಂಗದಾ ಹಾಗೂ ಶ್ರೀರಾಮಾಯಣ ದರ್ಶನಂನಲ್ಲೂ ಮಹೋಪಮೆಗಳಿವೆ. ಇವು ಬಂದುದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ.

ಸರಳ ರಗಳೆಗೆ ಮೂಲ ಕನ್ನಡದ ಲಲಿತರಗಳೆಯೇ ಆದರೂ ಅದು ರೂಪುಗೊಂಡುದು ಇಂಗ್ಲಿಷ್ ಕಾವ್ಯದ ಪ್ರಭಾವದಿಂದ. ಬ್ಲಾಂಕ್‌ವರ್ಸ್‌ಗೆ ಸಂವಾದಿಯಾಗಿ ಲಲಿತರಗಳೆಯ ಆದ್ಯಂತ ಪ್ರಾಸಗಳನ್ನು ತೆಗೆದುಹಾಕಿ ಚರಣಗಳನ್ನು ತಡೆಯಿಲ್ಲದೆ ಹರಿಯಬಿಡುವುದರಿಂದ ಹುಟ್ಟುತ್ತದೆ ಸರಳರಗಳೆ. 1924ರಲ್ಲಿ ಇದು ರೂಪುಗೊಂಡಿತು. ಮಾಸ್ತಿಯವರು ಇದನ್ನು ಮೊದಲು ಬಳಸಿದರು. ಈ ಸರಳ ರಗಳೆ ಕಥನಕವನಗಳಲ್ಲಿ, ವರ್ಣನಾತ್ಮಕ ಕವಿತೆಯಲ್ಲಿ, ಪದ್ಯನಾಟಕಗಳಲ್ಲಿ ಯಶಸ್ವಿಯಾಗಿ ಬಳಕೆಗೊಂಡಿತು. ಮಹಾಛಂದಸ್ಸಿಗೆ ತಳಹದಿ ಈ ಸರಳ ರಗಳೆಯೇ. ಇಂಗ್ಲಿಷ್ ಬ್ಲಾಂಕ್‌ವರ್ಸಿನ ಪ್ರಯೋಗಗಳಿಂದ ಮಿಲ್ಟನ್ ಕವಿ ಹೇಗೆ ತನ್ನ ಮಹಾಕಾವ್ಯಕ್ಕೆ ಸರಿಯಾದ ಛಂದೋರೂಪವನ್ನು ಹೊಂದಿಸಿಕೊಂಡನೋ ಅದೇ ಬಗೆಯಲ್ಲಿಯೆ ಇಂಗ್ಲಿಷ್ ಬ್ಲಾಂಕ್‌ವರ್ಸಿನ ನೂತನ ಪ್ರಯೋಗಗಳಂತೆಯೇ ಸರಳ ರಗಳೆಯಲ್ಲಿಯೂ ಹೊಸ ಪ್ರಯೋಗಗಳನ್ನು ನಡೆಸಿ ಕುವೆಂಪು ಅವರು ತಮ್ಮ ಮಹಾಕಾವ್ಯಕ್ಕೆ ಸರಿಹೋಗುವ ಮಹಾಛಂದಸ್ಸನ್ನು ರೂಪಿಸಿಕೊಂಡರು. ಮಿಲ್ಟನ್ನನ ಛಂದಸ್ಸನ್ನು ಗ್ರಾಂಡ್‌ಸ್ಟೈಲ್ ಎನ್ನಲಾಗಿದೆ; ಅದಕ್ಕೆ ಸಂವಾದಿಯಾಗಿ ತಮ್ಮ ಛಂದಸ್ಸನ್ನು ಕುವೆಂಪು ಮಹಾಛಂದಸ್ಸು ಎಂದು ಕರೆದರು.

ಕುವೆಂಪು ತಮ್ಮ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ ಮೊದಲಾದವರನ್ನು ಸ್ಮರಿಸಿದ್ದಾರೆ. ಇವರೆಲ್ಲರ ಪ್ರಭಾವ ಕುವೆಂಪು ಅವರ ಮೇಲಾಗಿದೆ; ಮುಖ್ಯವಾಗಿ ಮಿಲ್ಟನ್ನನಿಂದ ಅವರು ಪ್ರಭಾವಗೊಂಡಿದ್ದಾರೆ. ಕುವೆಂಪು ಅವರ ಶೈಲಿಗೂ ಮಿಲ್ಟನ್ನನ ಶೈಲಿಗೂ ಸಾದೃಶ್ಯವುಂಟು; ತಾಂತ್ರಿಕ ಸಿದ್ಧಿಯಲ್ಲೂ ಸಾಮ್ಯವಿದೆ. ಅವರು ಪಾಶ್ಚಾತ್ಯ ಮಹಾಕಾವ್ಯಗಳ ಗುಣಗಳನ್ನು ಶ್ರೀರಾಮಯಣ ದರ್ಶನಂನಲ್ಲಿ ಗ್ರಹಿಸಿದ್ದಾರೆ. ಉದಾಹರಣೆಗೆ, ಪಾಶ್ಚಾತ್ಯ ಕಾವ್ಯಗಳಲ್ಲಿ ಹೇಗೋ ಹಾಗೆ ಅವರ ಮಹಾಕಾವ್ಯದಲ್ಲಿ ದೇವತಾಪ್ರಾರ್ಥನೆ ಅಲ್ಲಲ್ಲಿ ನಡುನಡುವೆ ಕಂಡುಬರುತ್ತದೆ. ಹಾಗೆಯೇ ಮಹೋಪಮೆಗಳನ್ನೂ ನಾವು ಪರಿಗಣಿಸಬಹುದು.

ರೊಮ್ಯಾಂಟಿಕ್ ಕಾವ್ಯಕ್ಕೆ ಪ್ರತಿಕ್ರಿಯೆಯಾಗಿ ಪ್ರಗತಿಶೀಲ ಚಳವಳಿಯೊಂದು ಕನ್ನಡದಲ್ಲಿ 1944ರ ಹೊತ್ತಿಗೆ ತಲೆಯೆತ್ತಿತು. ರೈತರ, ಕಾರ್ಮಿಕರ ಬಾಳನ್ನು ಚಿತ್ರಿಸುವ ಕವಿತೆ, ಕಥೆ, ಕಾದಂಬರಿಗಳು ರಚಿತವಾದುವು. ಕಾರ್ಮಿಕರ ಮತ್ತು ದೀನದಲಿತರ ಉದ್ಧಾರ, ಬಂಡವಾಳಶಾಹಿಯ ವಿರೋಧ – ಇದು ಪ್ರಗತಿಶೀಲ ಲೇಖಕರ ಧೋರಣೆ. ಸಾಮಾಜಿಕ ಪ್ರಜ್ಞೆ, ವಾಸ್ತವಿಕತೆಗಳನ್ನು ಸಾಹಿತ್ಯದಲ್ಲಿ ಮೂಡಿಸುವಲ್ಲಿ ಪ್ರಗತಿಶೀಲಧೋರಣೆ ಸಾಕಷ್ಟು ಯಶಸ್ವಿಯಾದರೂ ಅದರ ಉದ್ದೇಶಗಳು ಸೀಮಿತವಾಗಿದ್ದುವು.

ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ 1947ರಿಂದ ಮುಂದಕ್ಕೆ ಕನ್ನಡದಲ್ಲಿ ನವ್ಯಕಾವ್ಯದ ಉಗಮ, ಬೆಳವಣಿಗೆಗಳನ್ನು ಕಾಣುತ್ತೇವೆ. ವಸ್ತು, ಶೈಲಿ, ಜೀವನ ಮೌಲ್ಯಗಳು, ಸಾಹಿತ್ಯದ ಮೇಲೆ ಮನಶ್ಶಾಸ್ತ್ರ ಮತ್ತು ಲೈಂಗಿಕ ಶಾಸ್ತ್ರ ಬೀರಿದ ಪ್ರಭಾವಗಳು– ಈ ಎಲ್ಲ ದೃಷ್ಟಿಗಳಿಂದ 1950ರಿಂದ ಈಚಿನ ಕಾವ್ಯಮಾರ್ಗ ನವ್ಯವಾಗಿದೆ. ವಿ.ಕೃ.ಗೋಕಾಕರು 1950ರಲ್ಲಿ ನವ್ಯ ಎಂಬ ಮಾತನ್ನು ಮೊದಲು ಬಳಸಿದರು. ನವ್ಯತೆಯ ಪರಂಪರೆಯನ್ನು ಆರಂಭಿಸಿದವರು ಪೇಜಾವರ ಸದಾಶಿವರಾಯರು ಮತ್ತು ಗೋಕಾಕರು. ಮುಂದೆ ಅಡಿಗರು ಮೊದಲಾದವರು ಅದನ್ನು ಬೆಳೆಸಿದರು. ಎರಡನೆಯ ಮಹಾಯುದ್ಧಾನಂತರದ ಪ್ರಮುಖ ಇಂಗ್ಲಿಷ್ ಕವಿಗಳಾದ ಟಿ.ಎಸ್.ಎಲಿಯಟ್, ಆಡೆನ್, ಸೀಡೇ ಲೂಯಿ, ಮೆಕ್ನೀಸ್, ಡೈಲಾನ್ ಥಾಮಸ್ ಮೊದಲಾದವರಿಂದ ಪ್ರಭಾವಿತವಾದುದು ಕನ್ನಡ ನವ್ಯಕಾವ್ಯ. ಅಮೆರಿಕನ್ ಕವಿ ಎಜ್ರಾಪೌಂಡನಿಗೂ ಅದು ಋಣಿಯಾಗಿದೆ. ಅದರ ಪ್ರೇರಣೆ ಅರ್ಧ ದೇಶೀಯವಾದರೆ ಅರ್ಧ ವಿದೇಶೀಯವೆನ್ನಬಹುದು. ನವ್ಯಕಾವ್ಯ ಬಹುಮಟ್ಟಿಗೆ ವ್ಯಕ್ತಿನಿಷ್ಠ. ಕವಿಯ ಅನುಭವದ ಸಂಕೀರ್ಣತೆಗೇ ಅದರಲ್ಲಿ ಪ್ರಾಧಾನ್ಯ, ಸುಪ್ತಚಿತ್ತದ ಜಟಿಲತೆಯ ಆವಿಷ್ಕಾರ, ಆಡುಮಾತಿನ ವಿನ್ಯಾಸ, ಮುಕ್ತಛಂದ ಅದರ ಲಕ್ಷಣಗಳು. ಅದರ ತಂತ್ರ, ಶೈಲಿ ಮುಂತಾದುವೆಲ್ಲಾ ಬಹುಮಟ್ಟಿಗೆ ಇಂಗ್ಲಿಷ್ ನವ್ಯಕಾವ್ಯದ ಅನುಕರಣವೆಂದರೂ ತಪ್ಪಲ್ಲ.

ಕನ್ನಡದಲ್ಲಿ ಮೊದಮೊದಲು ಬಂದ ನಾಟಕಗಳೆಲ್ಲ ಅನುವಾದ ಅಥವಾ ರೂಪಾಂತರಗಳೇ ಆಗಿದ್ದು ಸ್ವತಂತ್ರ ನಾಟಕಗಳು ಹುಟ್ಟಿದುದು ತಡವಾಗಿ, ಶ್ರೀಯವರು ಇಂಗ್ಲಿಷ್ ಗೀತಗಳು ಸಂಕಲನದಿಂದ ಹೊಸ ಕಾವ್ಯಕ್ಕೆ ಸ್ಫೂರ್ತಿಕೊಟ್ಟಂತೆ ಗದಾಯುದ್ಧ ನಾಟಕ, ಅಶ್ವತ್ಥಾಮನ್, ಪಾರಸಿಕರು ನಾಟಕಗಳ ರಚನೆಯಿಂದ ಪದ್ಯ ನಾಟಕಗಳ ನಿರ್ಮಿತಿಗೆ ಅಡಿಪಾಯ ಹಾಕಿದರು. ಅವರ ಗದಾಯುದ್ಧ ನಾಟಕ ಗ್ರೀಕ್ ರುದ್ರನಾಟಕದ ಸ್ವರೂಪವನ್ನು ಮೊದಲ ಬಾರಿಗೆ ಪರಿಚಯಿಸಿತು. ಷೇಕ್ಸ್‌ಪಿಯರನ ರುದ್ರನಾಟಕಗಳ ಪರಿಚಯ ಈ ಹಿಂದೆಯೇ ಆಗಿತ್ತು.

ಕನ್ನಡ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿ ಹೊಸ ಯುಗವನ್ನೇ ಆರಂಭಿಸಿದ ಶ್ರೇಯಸ್ಸು ಕೈಲಾಸಂ ಹಾಗೂ ಶ್ರೀರಂಗರದು. ಇಬ್ಬರೂ ಪ್ರೌಢಶಿಕ್ಷಣಕ್ಕಾಗಿ ಪಶ್ಚಿಮಕ್ಕೆ ಹೋಗಿ ಅಲ್ಲಿ ಪ್ರವಾಸ ಮಾಡಿದ್ದರಿಂದ ಪಾಶ್ಚಾತ್ಯ ರಂಗಭೂಮಿಯ ಪ್ರಭಾವ ಅವರ ಮೇಲುಂಟಾಯಿತು; ಹೊಸ ಜೀವನದ ದರ್ಶನವೂ ಲಭಿಸಿತು. ಅದರ ಲಾಭವನ್ನು ಇಬ್ಬರೂ ಕನ್ನಡಕ್ಕೆ ತಮ್ಮ ನಾಟಕಗಳ ಮೂಲಕ ದೊರಕಿಸಿ ಕೊಟ್ಟರು. ಇಂಗ್ಲೆಂಡಿನಲ್ಲಿ ಇಬ್ಸನ್ನನ ನಾಟಕಗಳಿಂದ ಪ್ರೇರಿತರಾಗಿದ್ದ ಷಾ, ಗಾಲ್ಸ್‌ವರ್ದಿ ಮೊದಲಾದವರು ಕೈಲಾಸಂ, ಶ್ರೀರಂಗರ ಮೇಲೆ ಪ್ರಭಾವ ಬೀರಿದರು. ಈ ಪ್ರಭಾವ ಕನ್ನಡ ನಾಟಕ ಸಾಹಿತ್ಯದಲ್ಲಿ ಹೊಸ ಹುಟ್ಟಿಗೆ ಹೇತುವಾಯಿತು. ಏಕಾಂಕ ನಾಟಕ, ಗೀತನಾಟಕ, ರೇಡಿಯೊ ನಾಟಕ ಮುಂತಾದ ಪ್ರಕಾರಗಳೆಲ್ಲ ಪಾಶ್ಚಿಮಾತ್ಯ ಪ್ರಭಾವದಿಂದಲೇ ಕನ್ನಡದಲ್ಲಿ ನೆಲೆಗೊಂಡುವು.

ಈಚೆಗೆ ಅಸಂಗತ (ಅಬ್ಸರ್ಡ್) ನಾಟಕಗಳನ್ನು ಕನ್ನಡ ಸಾಹಿತ್ಯದಲ್ಲಿ ಕಾಣುತ್ತಿದ್ದೇವೆ. ಇಂಗ್ಲಿಷ್ ಹಾಗೂ ಫ್ರೆಂಚ್ ನಾಟಕಕಾರರಾದ ಆಸ್ಬರ್ನ್, ಪಿಂಟರ್, ಅಯನೆಸ್ಕೊ, ಆಲ್ಬರ್ಟ್‌ಕಾಮು ಮೊದಲಾದವರು ಇವುಗಳ ಹಿಂದಿದ್ದಾರೆ.

ಅಸ್ತಿತ್ವವಾದ ನಾಟಕಗಳನ್ನು ಬರೆದಿರುವ ಫ್ರೆಂಚ್ ನಾಟಕಕಾರ ಬೆಕೆಟ್, ಇಟಲಿಯ ನಾಟಕಕಾರ ಪಿರಾಂಡೆಲೊ ಮೊದಲಾದವರ ಪ್ರಭಾವ ಇಂದಿನ ಕನ್ನಡ ನಾಟಕಗಳ ಮೇಲಿದೆ. ಪ್ರಬಂಧ, ಲಲಿತ ಪ್ರಬಂಧ ಅಥವಾ ಆತ್ಮೀಯ ಪ್ರಬಂಧ – ಕನ್ನಡಕ್ಕೆ ಸಂಪೂರ್ಣವಾಗಿ ಹೊಸದು; ಇದು ಕೂಡ ಪಶ್ಚಿಮದ ಕೊಡುಗೆ. ಭಾವಗೀತೆ, ಕಥೆ ಮುಂತಾದುವುಗಳಿಗಿದ್ದಂತೆ ಇದಕ್ಕೆ ನಮ್ಮಲ್ಲಿ ಪೂರ್ವಪರಂಪರೆ ಇರಲಿಲ್ಲ. ಪ್ರಬಂಧ ಪ್ರಕಾರದ ತೌರುಮನೆ ಫ್ರಾನ್ಸ್; ಮಾಂಟೇನ್ ಇದರ ಜನಕ. ಅವನನ್ನು ಅನುಸರಿಸಿದವರು ಇಂಗ್ಲಿಷ್ ಪ್ರಬಂಧಕಾರರು; ಬೇಕನ್, ಅಡಿಸನ್, ಸ್ಟೀಲ್, ಜಾನ್ಸನ್, ಗೋಲ್ಡ್‌ಸ್ಮಿತ್, ಲ್ಯಾಂಬ್, ಲ್ಯೂಕಾಸ್, ಚೆಸ್ಟರ್ಟನ್, ರಾಬರ್ಟ್ ಲಿಂಡ್, ಎ.ಜಿ.ಗಾರ್ಡಿನರ್ ಮೊದಲಾದವರು. ಇವರೆಲ್ಲರ ಪ್ರಭಾವ ಕನ್ನಡ ಪ್ರಬಂಧಗಳ ಮೇಲಿದೆ. ಅನೇಕ ಪ್ರಂಬಧಗಳು ಕನ್ನಡಕ್ಕೆ ಅನುವಾದಗೊಂಡಿರುವುದೂ ಉಂಟು.

ಕಥೆ–ಕಾದಂಬರಿ ಪಶ್ಚಿಮದ ಸಂಸರ್ಗದಿಂದ ನಮ್ಮಲ್ಲಿ ರೂಪುಗೊಂಡ ಪ್ರಕಾರಗಳು. ಇವುಗಳ ಚರಿತ್ರೆಯಲ್ಲಿ ನವೋದಯ, ಪ್ರಗತಿಶೀಲ ಮತ್ತು ನವ್ಯ ಎಂದು ಮೂರು ಹಂತಗಳನ್ನು ಗುರುತಿಸಬಹುದು.

ನವೋದಯ ಕಾಲದ ಕಥೆಗಾರರು ಮತ್ತು ಕಾದಂಬರಿಕಾರರು ಪರಂಪರಾಗತ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ಅನ್ವೇಷಿಸಿದರು. ನವೋದಯ ಸಾಹಿತ್ಯಕ್ಕೆ ಪ್ರತಿಭಟನೆಯಾಗಿ ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಂಡಿತು. ಎರಡನೆಯ ಮಹಾಯುದ್ಧ ಕಾಲಕ್ಕೆ ಆರಂಭವಾಗಿ, ಮಾರ್ಕ್ಸ್‌ವಾದವನ್ನು ಆಧರಿಸಿದ ಪ್ರಗತಿಶೀಲ ಚಳವಳಿ ರಷ್ಯನ್ ಸಾಹಿತ್ಯದಿಂದ ಹಿಂದೀಯ ಮೂಲಕ ಕನ್ನಡಕ್ಕೆ ಅವತರಿಸಿತು. ಅದು ಮೊದಲು ಕಾಣಿಸಿಕೊಂಡಿದ್ದು ಸಣ್ಣಕಥೆಗಳಲ್ಲಿ. 1936–42ರವರೆಗೆ ನಡೆದ ರಾಜಕೀಯ ಕ್ರಾಂತಿಗಳು, ಪತ್ರಿಕೆಗಳಲ್ಲಿ ನಡೆಯುತ್ತಿದ್ದ ಪ್ರಗತಿಶೀಲತೆಯ ಪ್ರಚಾರ, ರಷ್ಯನ್ ಹಾಗೂ ಹಿಂದೀ ಕಥೆಗಳ ಅನುವಾದ –ಇವುಗಳ ಫಲಿತಾಂಶವೇ ಪ್ರಗತಿಶೀಲಪಂಥ.

ಇಂದಿನ ಸಣ್ಣಕಥೆ ಕವಿತೆಗೆ ಹತ್ತಿರವಾದುದು. ನವ್ಯಕಾವ್ಯ ಹಾಗೂ ನವ್ಯಕಥೆ ಒಂದೇ ಪ್ರಜ್ಞೆಯ ಮೂಲದಿಂದ ಹೊರಟವೆಂದು ಹೇಳಲಾಗಿದೆ. ಇದನ್ನು ಒಂದೇ ಮಾತಿನಲ್ಲಿ ಅನಾಥಪ್ರಜ್ಞೆ ಎಂದು ಕರೆಯಬಹುದು. ಇದು ತಕ್ಕಮಟ್ಟಿಗೆ ಪಶ್ಚಿಮದ ಬಳುವಳಿಯೇ. ಪಶ್ಚಿಮದಿಂದ ಬಂದಿರುವ ಸಾಹಿತ್ಯಕ, ವೈಜ್ಞಾನಿಕ, ಸಾಮಾಜಿಕ, ಮನೋವೈಜ್ಞಾನಿಕ ವಿಚಾರಗಳೆಲ್ಲ ಇಂದಿನ ಲೇಖಕನ ಮೇಲೆ ಪ್ರಭಾವಬೀರಿವೆ. ಹೊಸ ಮೌಲ್ಯಗಳ ಶೋಧ ಅವನ ಗುರಿ. ಇಂದಿನ ಕಥೆಗಾರ ಫ್ರಾಯ್ಡ್, ಯೂಂಗ್, ಆ್ಯಡ್ಲರ್ ಮೊದಲಾದವರ ಸಂಶೋಧನೆಯ ಫಲಗಳನ್ನು ಪಡೆದುಕೊಂಡು ಮಾನಸಿಕ ವಿಶ್ಲೇಷಣೆಯಲ್ಲಿ ತೊಡಗುತ್ತಾನೆ; ಅಂತರಂಗ ಸಂಬಂಧವಾದ ವಾಸ್ತವಿಕತೆಗೆ ಮಹತ್ತ್ವ ಕೊಡುತ್ತಾನೆ. ಅನುಭವದ ಸಂಕೀರ್ಣತೆಯನ್ನು ಹೊರಗೆಡಹುವ ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿಕೊಳ್ಳುತ್ತಾನೆ. ಈ ತಂತ್ರ ವರ್ಜೀನಿಯವುಲ್ಫ್, ಜೇಮ್ಸ್‌ಜಾಯ್ಸ್ ಮೊದಲಾದವರಿಂದ ಪ್ರಚುರವಾದುದು. ನವ್ಯಕಾವ್ಯದಲ್ಲಿ ಹೇಗೋ ಹಾಗೆ ನವ್ಯಕಥೆಯಲ್ಲೂ ಪ್ರತಿಮೆ ಪ್ರತೀಕ ಸಂಕೇತಗಳು ತುಂಬಿರುತ್ತವೆ.

ಕನ್ನಡದಲ್ಲಿ ನವ್ಯಸಾಹಿತ್ಯ ಸಂದರ್ಭದಲ್ಲಿ ಬಂದ ಕಥೆಕಾದಂಬರಿಗಳ ಮೇಲೆ ಪಾಶ್ಚಾತ್ಯ ಅಸ್ತಿತ್ವವಾದದ ಪ್ರಭಾವ ದಟ್ಟವಾಗಿದೆ. ಫ್ರೆಂಚ್ ಲೇಖಕ ಜೀನ್‌ಪಾಲ್ ಸಾರ್ತೃ ಅಸ್ತಿತ್ವವಾದದ ಮೂಲಪುರುಷ. ಅಂತೆಯೇ ಫ್ರೆಂಚ್ ಲೇಖಕ ಆಲ್ಬರ್ಟ್ ಕಾಮು, ಜರ್ಮನ್ ಲೇಖಕ ಕಾಫ್ಕಾ, ಐರಿಷ್ ಲೇಖಕ ಜೇಮ್ಸ್ ಜಾಯ್ಸ್, ಜರ್ಮನ್ ಲೇಖಕ ಬ್ರೆಕ್ಟ್, ಸ್ವೀಡಿಷ್ ಲೇಖಕ ಸ್ಟ್ರಿಂಡ್‌ಬರ್ಗ್ ಮೊದಲಾದವರ ಕೃತಿಗಳೆಲ್ಲ ಕನ್ನಡ ಕಥನ ಲೇಖಕರನ್ನು ಸೆಳೆದಿವೆ.

ಹೊಸಗನ್ನಡದ ಇತರ ಪ್ರಕಾರಗಳು ಹೇಗೋ ಹಾಗೆ ವಿಮರ್ಶೆಯೂ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲೇ ರೂಢವಾದದ್ದು. ಆಂಗ್ಲ ವಿಮರ್ಶೆ ಕನ್ನಡ ವಿಮರ್ಶೆಯ ಮೇಲೆ ಮಾತ್ರವಲ್ಲದೆ ಸೃಷ್ಟಿ ಸಾಹಿತ್ಯದ ಮೇಲೂ ಪ್ರಭಾವ ಬೀರಿದೆ. ಪಾಶ್ಚಾತ್ಯ ಕಾವ್ಯತತ್ತ್ವಗಳ ಅಭ್ಯಾಸ, ಪ್ರಾಚೀನ ಗ್ರಂಥಗಳ ಸಂಶೋಧನೆ ಪರಿಷ್ಕಾರ ಮತ್ತು ವಿಮರ್ಶಾತ್ಮಕವಾಗಿ ಬೆಲೆ ಕಟ್ಟುವುದು, ಸಂಸ್ಕೃತ ಕಾವ್ಯಮೀಮಾಂಸೆಯ ವ್ಯವಸ್ಥಿತ ಅಭ್ಯಾಸ, ಕನ್ನಡಕ್ಕೆ ಆ ವಿಷಯಕವಾದ ಗ್ರಂಥಗಳನ್ನು ತರುವುದು ಇಂಥವುಗಳಿಗೆ ಕಾರಣವಾಯಿತು.

ಚಾರಿತ್ರಿಕವಾಗಿ ನೋಡಿದರೆ ಕನ್ನಡದಲ್ಲಿ ವಿಮರ್ಶೆಗೆ ತಳಹದಿ ಹಾಕಿದವರು ವಿದೇಶೀಯರು, ಕ್ರೈಸ್ತಮಿಷನರಿಗಳು ಎನ್ನಬಹುದು. ಕಳೆದ ಶತಮಾನದಲ್ಲಿಯೇ ಕಿಟ್ಟೆಲ್ ಕನ್ನಡ ಸಾಹಿತ್ಯದ ಸಂಕ್ಷಿಪ್ತ ಸಮೀಕ್ಷೆಯನ್ನು ಛಂದೋಂಬುಧಿಯ ಪೀಠಿಕೆಯ ಭಾಗವಾಗಿ ಇಂಗ್ಲಿಷಿನಲ್ಲಿ ಪ್ರಕಟಿಸಿದ. ಅನಂತರ ಬೆನಗಲ್ ರಾಮರಾಯರ ರೆನೇಸಾನ್ಸ್ ಇನ್ ಮಾಡರ್ನ್ ಕನ್ನಡ ಹೊಸಗನ್ನಡದ ಮೊದಲ ಸಮೀಕ್ಷೆಯೆನ್ನಲಾಗಿದೆ.

ಹೊಸಗನ್ನಡ ಸಾಹಿತ್ಯಕ್ಕೆ ಶ್ರೀಯವರು ಆಚಾರ್ಯಪುರುಷರಾದಂತೆ ಆಧುನಿಕ ವಿಮರ್ಶೆಗೂ ಅವರೇ ಆದ್ಯರೆನ್ನಬೇಕು. ನವೋದಯ ಕಾಲದ ಕನ್ನಡ ಕವಿಗಳಿಗೂ ಆಂಗ್ಲ ರೊಮ್ಯಾಂಟಿಕ್ ಕವಿಗಳಿಗೂ ಸ್ಫೂರ್ತಿಯಲ್ಲಿ ಮತ್ತು ಕಾವ್ಯ ತತ್ತ್ವಗಳಲ್ಲಿ ಸಾಮ್ಯವಿದೆ. ನವೋದಯ ಕಾಲದಲ್ಲಿ ಸಾಹಿತ್ಯದ ಸಿದ್ಧಾಂತಗಳಿಗೆ ಒಂದು ರೂಪವನ್ನು ಕೊಡಲು ಪ್ರಯತ್ನಿಸಿದ ಮಾಸ್ತಿಯವರ ಸಾಹಿತ್ಯ ಗ್ರಂಥವನ್ನು ನೋಡಿದರೆ ಸಾಮ್ಯ ಸ್ಪಷ್ಟವಾಗುತ್ತದೆ. ಈ ಕೃತಿಯ ಮೇಲೆ ವರ್ಡ್ಸ್‌ವರ್ತನ ವಿಚಾರಗಳ ಪ್ರಭಾವವುಂಟು.

ಡಿ.ವಿ.ಜಿ., ಕುವೆಂಪು ಮೊದಲಾದವರ ವಿಮರ್ಶೆಗಳಲ್ಲಿ ಶೆಲ್ಲಿ, ವರ್ಡ್ಸ್‌ವರ್ತ್, ಅರ್ನಾಲ್ಡ್, ಅರಿಸ್ಟಾಟಲ್ ಮೊದಲಾದವರ ವಿಚಾರಗಳು ಒಂದು ಕಡೆ ಭಾರತೀಯ ಕಾವ್ಯತತ್ತ್ವಗಳು ಇನ್ನೊಂದು ಕಡೆ ಸಮ್ಮಿಲಿತವಾಗಿವೆ. ಎಸ್.ವಿ.ರಂಗಣ್ಣನವರ ಶೈಲಿಯಲ್ಲಿ ಹರ್ಬರ್ಟ್ ರೀಡ್, ಮಿಡ್ಲ್‌ಟನ್ ಮರ್‍ರಿ, ಎಫ್.ಎಲ್.ಲ್ಯೂಕಾಸರ ಶೈಲಿ ಸಿದ್ಧಾಂತಗಳ ಅಳವಡಿಕೆಯಿದೆ. ಕುವೆಂಪು ಅವರ ಕಾವ್ಯಮೀಮಾಂಸೆಯ ಮೇಲೆ ಇಂಗ್ಲಿಷ್ ವಿಮರ್ಶಕರಾದ ಐ.ಎ.ರಿಚರ್ಡ್ಸ್, ಎ.ಸಿ.ಬ್ರಾಡ್ಲೆ ಮೊದಲಾದವರು ಮಾತ್ರವಲ್ಲದೆ ಸ್ವೀಡಿಷ್ ಮನೋವಿಜ್ಞಾನಿ ಯೂಂಗ್ ಪ್ರಭಾವ ಬೀರಿದ್ದಾರೆ. ಕುವೆಂಪು ಅವರ ಭವ್ಯತಾ ಮೀಮಾಂಸೆ ಪಾಶ್ಚಾತ್ಯ ವಿಮರ್ಶೆಯಿಂದ ಪ್ರೇರಿತವಾದುದು.

ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಕಾವ್ಯಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಂತಿದೆ. ನಮ್ಮ ಮುಂದಿನ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯ ಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯ ಮೀಮಾಂಸೆ ಮತ್ತು ಮನಶ್ಶಾಸ್ತ್ರ ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ ಸ್ವತಂತ್ರವಾಗಿ ಪೂರ್ಣದೃಷ್ಟಿಯ ಕಡೆಗೆ ಮುನ್ನಡೆಯಬೇಕಾಗುತ್ತದೆ ಎಂದು ಕುವೆಂಪು ಅವರು ವ್ಯಕ್ತಪಡಿಸಿದ ನಿರೀಕ್ಷೆ ತಕ್ಕಮಟ್ಟಿಗೆ ಫಲಿಸಿದೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಜೀವನಚರಿತ್ರೆ, ಆತ್ಮಕಥೆ, ಹಾಸ್ಯಸಾಹಿತ್ಯ ಮುಂತಾದ ಪ್ರಕಾರಗಳೂ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲೇ ಮೂಡಿದುವು.

ಒಟ್ಟಿನಲ್ಲಿ ಹೇಳುವುದಾದರೆ ಈ ಹೊತ್ತು ಆಧುನಿಕ ಕನ್ನಡ ಸಾಹಿತ್ಯ ಏನಾಗಿದೆಯೊ ಅದಕ್ಕೆ ಪಾಶ್ಚಾತ್ಯ ಸಾಹಿತ್ಯ – ಅರ್ಥಾತ್ ಇಂಗ್ಲಿಷ್ ಸಾಹಿತ್ಯ –ವಿಶೇಷವಾಗಿ ಕಾರಣವಾಗಿದೆ. ಇಂಗ್ಲಿಷಿನ ಪ್ರಭಾವವನ್ನು ಕನ್ನಡ ಅರಗಿಸಿಕೊಂಡು ರಕ್ತಗತ ಮಾಡಿಕೊಂಡಿದೆ. (ಸಿ.ಪಿ.ಕೆ.)

**ಕನ್ನೆಸೊಪ್ಪಿನ ಕುಟುಂಬ :** ಏಕದಳ ಸಸ್ಯಗಳ ಗುಂಪಿಗೆ ಸೇರಿದ ಕಮ್ಮಲ್ನೇಸೀ ಎಂಬ ಶಾಸ್ತ್ರೀಯ ಹೆಸರಿನ ಒಂದು ಕುಟುಂಬ. ಇದರಲ್ಲಿ 28 ಜಾತಿಗಳು, ಸು. 400 ಪ್ರಭೇದಗಳು ಇವೆ. ಬಹುಪಾಲು ಸಸ್ಯಗಳು ಉಷ್ಣವಲಯದ ಏಷ್ಯ ಖಂಡದ ಪ್ರದೇಶಗಳಲ್ಲೂ ಮತ್ತು ಯುರೋಪಿನ ಕೆಲವು ದೇಶಗಳಲ್ಲೂ ಬೆಳೆಯುತ್ತವೆ.

ಸಸ್ಯಗಳು ರಸಭರಿತವಾದ ವಾರ್ಷಿಕ ಅಥವಾ ಬಹುವಾರ್ಷಿಕ ಮೂಲಿಕೆಗಳು, ಕೆಲವು ಹಂಬಿನಂತೆ ಬೆಳೆಯುತ್ತವೆ. ಕಾಂಡದಲ್ಲಿ ಹಲವಾರು ಗಿಣ್ಣುಗಳಿವೆ. ಬೇರುಗಳಿವೆ ತೊಡಕು ಬೇರಿನ ವರ್ಗಕ್ಕೆ ಸೇರಿವೆ.

ಎಲೆಗಳು ಸರಳ ರೀತಿಯವು, ಪರ್ಯಾಯವಾಗಿ ಜೋಡಣೆಗೊಂಡಿವೆ. ಎಲೆಗಳ ಬುಡದ ಸುತ್ತ ಒಂದು ರೀತಿಯ ಕವಚವಿದೆ. ಎಲೆಯ ನರವಿನ್ಯಾಸ ಸಮಾನಾಂತರ ಮಾದರಿಯದು.

ಹೂಗೊಂಚಲು ಮಧ್ಯಾರಂಭಿ (ಸೈಮೋಸ್) ರೀತಿಯದು. ಇದು ಗಿಡದ ತುದಿಯಲ್ಲೋ ಎಲೆಯ ಕಂಕುಳುಗಳಲ್ಲೋ ಇರುತ್ತದೆ. ಕೆಲವು ಸಸ್ಯಗಳಲ್ಲಿ ಏಕಪಾರ್ಶ್ವ ಮಧ್ಯಾರಂಭಿಯಾಗಿಯೂ ಕೆಲವು ವೇಳೆ ಪರ್ಯಾಯ ಪಾರ್ಶ್ವ ಮಧ್ಯಾರಂಭಿಯಾಗಿಯೂ ಮತ್ತೆ ಕೆಲವು ಸಸ್ಯಗಳಲ್ಲಿ ಸಂಕೀರ್ಣ ಮಾದರಿಯಂತೆಯೂ ಇರುವುದುಂಟು.

ಹೂಗಳು ದ್ವಿಲಿಂಗಿಗಳು. ಬಹುಪಾಲು ದೋಣಿಯಾಕಾರದವು. ಬಣ್ಣ ನಸುನೀಲಿ, ಬಿಳುಪು ಅಥವಾ ನಸುಗೆಂಪು. ಪ್ರತಿಯೊಂದು ಹೂವು ಪರಿಪೂರ್ಣವಾಗಿದ್ದು ಬ್ರ್ಯಾಕ್ಟ್ ಮತ್ತು ಬ್ರ್ಯಾಕ್ಟಿಯೋಲುಗಳನ್ನು ಪಡೆದಿರುತ್ತದೆ. ಹೂಗಳು ಆರೀಯ ಸಮಾಂಗತೆ ಅಥವಾ ಉಭಯಪಾರ್ಶ್ವಸಮಾಂಗತೆ ಉಳ್ಳವು.

ಹೂಗಳಲ್ಲಿ ಪುಷ್ಪಪತ್ರಗಳಾಗಲೀ ದಳಗಳಾಗಲೀ ಬೇರೆ ಬೇರೆಯಾಗಿಲ್ಲ. ಒಂದೇ ಬಗೆಯ ಪೆರಿಯಾಂತುಗಳೆಂಬ 6 ಬಿಡಿ ಭಾಗಗಳುಂಟು. ಇವು ಎರಡು ಸುತ್ತುಗಳಲ್ಲಿ ಜೋಡಣೆಗೊಂಡಿದ್ದು ಒಂದೊಂದು ಸುತ್ತಿನಲ್ಲಿ ಮೂರು ಭಾಗಗಳಿವೆ. ಹೊರಸುತ್ತಿನ ದಳಗಳು ಹಸಿರು ಬಣ್ಣದವು. ಒಳಸುತ್ತಿನವು ನೀಲಿ, ಬಿಳುಪು ಅಥವಾ ನಸುಗೆಂಪು ಬಣ್ಣದವು. ಹೂವಿನಲ್ಲಿ ಸಾಮಾನ್ಯವಾಗಿ 6 ಕೇಸರಗಳಿವೆ. ಒಂದೊಂದು ವಲಯದಲ್ಲಿ ಮೂರು ಮೂರರಂತೆ ಎರಡು ವಲಯಗಳಲ್ಲಿ ಜೋಡಣೆಯಾಗಿವೆ. ಸಾಧಾರಣವಾಗಿ ಎಲ್ಲ ಕೇಸರಗಳೂ ಫಲಕಾರಿಯಾಗಿರುವುದುಂಟು. ಆದರೆ ಕೆಲವು ಸಾರಿ 3 ಕೇಸರಗಳೂ ಫಲಕಾರಿಯಾಗಿದ್ದು, ಉಳಿದ ಮೂರು ಬರಡಾಗಿರುತ್ತವೆ. ಅಪರೂಪಕ್ಕೆ ಒಂದೇ ಒಂದು ಕೇಸರ ಮಾತ್ರ ಫಲಕಾರಿಯಾಗಿರುವುದೂ ಉಂಟು. ಕೇಸರ ತಂತುವಿಗೆ (ದಂಡ) ಅನೇಕ ವೇಳೆ ರೋಮಮಯವಾದ ಮಣಿಯಂಥ ಉಪಾಂಗಗಳ (ಅಪೆಂಡೇಜ್) ಬೆಳೆವಣಿಗೆಗಳಿರುತ್ತವೆ. ಪರಾಗಕೋಶಗಳು ಎರಡು. ಇವು ಬಲಿತಾಗ ಅವುಗಳ ತುದಿಯಲ್ಲಿರುವ ರಂಧ್ರದಿಂದಲೋ ಅಥವಾ ಉದ್ದುದ್ದಕ್ಕೆ ಬಿರಿದೋ ಪರಾಗವನ್ನು ಹೊರಚೆಲ್ಲುತ್ತವೆ. ಅಂಡಾಶಯ ಮೂರು ಕಾರ್ಪೆಲುಗಳಿಂದಾದ ಸಂಯುಕ್ತ ಮಾದರಿಯದು. ಕೆಲವು ವೇಳೆ ಒಂದೇ ಕಾರ್ಪೆಲಿರುವುದೂ ಉಂಟು. ಉಚ್ಚಸ್ಥಾನದ ಇದರಲ್ಲಿ ಮೂರು ಕೋಣೆಗಳಿವೆ. ಅಪರೂಪಕ್ಕೆ ಎರಡೇ ಕೋಣೆಗಳಿರಬಹುದು. ಒಂದೊಂದು ಕೋಣೆಯಲ್ಲೂ ಹಲವಾರು ಅಂಡಕಗಳಿವೆ. ಶಲಾಕೆ ಸರಳರೂಪದ್ದು. ಶಲಾಕಾಗ್ರ 3 ಭಾಗಗಳಾಗಿ ಒಡೆದಿದೆ.

ಫಲ ಒಡೆಯುವ ಅಥವಾ ಒಡೆಯದಿರುವ ಸಂಪುಟ (ಕ್ಯಾಪ್ಸ್ಯೂಲ್) ಮಾದರಿಯದು. ಕೆಲವೊಮ್ಮೆ ಫಲದ ಸುತ್ತ ರಸಭರಿತವಾದ ಪುಷ್ಪಪತ್ರಗಳಿರುವುದುಂಟು. ಬೀಜಗಳು ಅನೇಕ. ಎಲ್ಲವೂ ಭ್ರೂಣಾಹಾರಪೂರಿತ.

ಕನ್ನೆಗಿಡದ ಕುಟುಂಬದ ಕೆಲವು ಮುಖ್ಯ ಪ್ರಭೇದಗಳು ಇವು : ಕಮಲೈನ ಕಮ್ಯೂನಿಸ್ (ಕನ್ನೆಸೊಪ್ಪು, ಗುಬ್ಬಚ್ಚಿಬಾಳೆ), ಕಮಲೈನ ಒಬ್ಲಿಕ (ಕಲ್ಡಾಳು), ಕಮಲೈನ ಸ್ಯಾಲಿಸಿಫೋಲಿಯ, ಏನಯಿಲಿಮ ನ್ಯೂಡಿಫ್ಲೋರಮ್ (ನೆಲಚೇಳು ಸೊಪ್ಪು). ರಿಯೋ ಡಿಸ್ಕಲರ್, ಟ್ರಾಡೆಸ್‌ಕ್ಯಾನ್ಶಿಯ ಡಿಸ್ಕಲರ್ ಮತ್ತು ಸೈನೋಟಿಸ್ ಅಕ್ಸಿಲ್ಯಾರಿಸ್.

ಆರ್ಥಿಕವಾಗಿ ಈ ಕುಟುಂಬದ ಸಸ್ಯಗಳೇನೂ ಅಷ್ಟೊಂದು ಉಪಯುಕ್ತವಾಗಿಲ್ಲ. 8–10 ಜಾತಿಗಿಡಗಳನ್ನು ಅಲಂಕಾರದ ಸಸ್ಯಗಳಾಗಿ ತೋಟಗಳಲ್ಲಿ ಬೆಳೆಸುತ್ತಾರೆ. (ಎಚ್.ಕೆ.ಎಂ.)

**ಕನ್ನೆಸೊಪ್ಪು :** ಕಮಲ್ಯನೇಸೀ ಕುಟುಂಬಕ್ಕೆ ಸೇರಿದ ಒಂದು ಸಣ್ಣ ಸಸ್ಯ. ಇದರ ವೈಜ್ಞಾನಿಕ ನಾಮ ಕಮಲೈನ ಕಮ್ಯೂನಿಸ್. ಹೊಲ ಮತ್ತು ತೋಟಗಳಲ್ಲಿ ಕಳೆಯಂತೆ ಸ್ವಾಭಾವಿಕವಾಗಿ ಬೆಳೆಯುವ ಏಕವಾರ್ಷಿಕ ಸಸ್ಯ ಇದು.

ಇದು ಮೂಲಿಕೆಯ (ಶಾಕ) ರೂಪದಲ್ಲಿ ಸು. 1' ಎತ್ತರಕ್ಕೆ ಬೆಳೆಯುತ್ತದೆ. ನೆಲದಲ್ಲಿಯೇ ಹರಡಿ ಬಹುವಾಗಿ ಕವಲೊಡೆದು ಬೆಳೆಯುವ ಗಿಣ್ಣುಗಳಿಂದ ಕೂಡಿದ ಕಾಂಡವಿದೆ. ಎಲೆಗಳು ಸರಳ, ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಅವುಗಳ ಆಕಾರ ಕರನೆಯಂತೆ ಅಥವಾ ದೀರ್ಘವೃತ್ತದಂತೆ. ಎಲೆಯ ಅಂಚು ಅಲೆಯಂತಿದೆ. ತುದಿ ಮೊನಚಾಗಿದೆ. ಎಲೆಗಳ ಬುಡವನ್ನು ಪೊರೆಯಂಥ ರಚನೆ ಆವರಿಸಿರುತ್ತದೆ.

ಹೂ ಬಿಡುವ ಕಾಲದಲ್ಲಿ ಕಾಂಡದ ಬುಡದ ಗಿಣ್ಣುಗಳಿಂದ ಹೂಗೊಂಚಲುಗಳು ಮೂಡುತ್ತವೆ. ಅವು ಮಧ್ಯಾರಂಭಿ (ಸೈಮೋಸ್) ಮಾದರಿಯವು. ಹೂ ಗೊಂಚಲನ್ನು ಆಲಿಕೆಯಾಕಾರದ ಕವಚ (ಸ್ಪೇತ್) ಆವರಿಸಿದೆ. ಹೂಗಳು ದ್ವಿಲಿಂಗಿಗಳು; ನೀಲಿ ಬಣ್ಣದವು. ಪುಷ್ಪಪತ್ರಗಳು ಮೂರು, ಬಿಡಿಬಿಡಿಯಾಗಿವೆ. ಹೂದಳಗಳು ಮೂರು. ಇವುಗಳಲ್ಲಿ ಎರಡು ದೊಡ್ಡವು. ಕೆಲವೊಮ್ಮೆ ಮೂರನೆಯ ದಳ ಇಲ್ಲದಿರಬಹುದು. ಕೇಸರಗಳು 3, ಇವುಗಳಲ್ಲಿ ಸಾಮಾನ್ಯವಾಗಿ ಎರಡು ಬರಡು ಕೇಸರಗಳು ಅಂಡಾಶಯ ಉಚ್ಚಸ್ಥಾನದ್ದು (ಸುಪೀರಿಯರ್) ಮೂರು ಕೋಣೆಗಳನ್ನೊಳಗೊಂಡಿದೆ. ಪ್ರತಿಕೋಣೆಯಲ್ಲಿ 1–2 ಅಂಡಕಗಳಿವೆ. ಕೆಲವು ಬಗೆಗಳಲ್ಲಿ ಒಂದು ಕೋಣೆ ಇರುವುದಿಲ್ಲ. ಫಲ ಕೋಣೆಗಭಿಮುಖವಾಗಿ ಒಡೆಯುವಂಥ ಸಂಪುಟ ಮಾದರಿಯದು (ಕ್ಯಾಪ್ಸ್ಯೂಲ್).

ಕನ್ನೆಗಿಡದ ಎಳೆಯ ಎಲೆ ಮತ್ತು ಕಾಂಡವನ್ನು ಸೊಪ್ಪು ತರಕಾರಿಯಾಗಿ ಉಪಯೋಗಿಸುತ್ತಾರೆ. ಆಯುರ್ವೇದ ಔಷಧಿಗಳಲ್ಲೂ ಇದರ ಬಳಕೆಯಿದೆ. ಇದು ಜಾನುವಾರುಗಳಿಗೆ ಉತ್ತಮವಾದ ಮೇವೂ ಹೌದು. (ಡಿ.ಎಂ.)

**ಕನ್ಯಕಾಪರಮೇಶ್ವರಿ :** ವೈಶ್ಯರ ಕುಲದೇವತೆ. ವಾಸವಾಂಬಾ ಈಕೆಯ ನಾಮಾಂತರ. ಒಮ್ಮೆ ಬ್ರಹ್ಮ ಇಂದ್ರನ ಮಗನಾದ ಜಯಂತನಿಗೆ ಶತಜಿಹ್ವನೆಂಬ ರಾಕ್ಷಸನನ್ನು ಕೊಲ್ಲುವಂತೆ ಆಜ್ಞೆ ಮಾಡಿದಾಗ ಶಚೀದೇವಿ ಮಗನನ್ನು ತಡೆದುದರ ಸಲುವಾಗಿ ಬ್ರಹ್ಮಶಾಪಕ್ಕೊಳಗಾಗಿ ಭೂಲೋಕದಲ್ಲಿ ವೈಶ್ಯಜಾತಿಯಲ್ಲಿ ಜನಿಸಿದಳು. ವಿಷ್ಣುವರ್ಧನನೆಂಬ ಅರಸು ಇವಳನ್ನು ತನಗೆ ಕೊಟ್ಟು ಮದುವೆ ಮಾಡಬೇಕೆಂದು ವಾಸವಾಂಬೆಯ ತಂದೆ ಕುಸುಮಶ್ರೇಷ್ಠಿಯನ್ನು ಬಲವಂತಪಡಿಸಿದ. ಅದಕ್ಕೆ ಒಪ್ಪದೆ ಆ ಕುಟುಂಬದವರೆಲ್ಲ ವಾಸವಾಂಬೆಯ ಜೊತೆಗೂಡಿ ಅಗ್ನಿಪ್ರವೇಶ ಮಾಡಲು ನಿಶ್ಚಯಿಸಿದರು. ವಾಸವಾಂಬೆ ತನಗೆ ಬಂದ ಶಾಪಾದಿ ವಿಷಯಗಳನ್ನು ತಿಳಿಸಿ ನಿಜಸ್ವರೂಪವನ್ನು ಪಡೆಯಲು ಅಗ್ನಿಯಲ್ಲಿ ಧುಮುಕಿದಳು. ಇತರರೂ ಹಾಗೆಯೆ ಮಾಡಿದರು. ವೈಶ್ಯರು ಅಂದಿನಿಂದ ವಾಸವಾಂಬೆಯನ್ನು ತಮ್ಮ ಕುಲದೇವತೆಯೆಂದು ಭಾವಿಸಿ ಕನ್ಯಕಾಪರಮೇಶ್ವರಿ ಎಂಬ ಹೆಸರಿನಿಂದ ಪೂಜಿಸುತ್ತಾರೆ. ಈ ದೇವತೆಯ ಹೆಸರಿನಲ್ಲಿ ದಕ್ಷಿಣ ಭಾರತದಲ್ಲಿ ದೇವಾಲಯಗಳೂ ಕಲ್ಯಾಣಮಂಟಪಗಳೂ ಇವೆ. (ಜಿ.ಎಸ್.)

**ಕನ್ಯಾಕೀಟ :** ಓಡೊನೇಟ ಗಣದ ಜೈಗಾಪ್ಟೆರ ಉಪಗಣಕ್ಕೆ ಸೇರಿದ ಅನೇಕ ಜಾತಿಯ ಕೀಟಗಳಿಗಿರುವ ಸಾಮಾನ್ಯ ಹೆಸರು. ಪ್ರಪಂಚದಲ್ಲೆಲ್ಲ ಇವುಗಳ ವ್ಯಾಪ್ತಿಯಿದ್ದರೂ ಉಷ್ಣವಲಯದಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ. ಸಾಧಾರಣ ಗಾತ್ರದ ಇವುಗಳ ದೇಹ ತೆಳುವಾಗಿ ಕೋಮಲವಾಗಿವೆ. ಎರಡು ಜೋಡಿ ಸಮರೂಪದ ನವಿರಾದ ಪೊರೆಯಂಥ ರೆಕ್ಕೆಗಳಿವೆ. ಇವುಗಳ ಹಾರಾಟ ದುರ್ಬಲವಾದದ್ದು. ಪ್ರೌಢಜೀವಿಗಳ ಬಣ್ಣ ಮಬ್ಬಾಗಿರುವುದು ಸಾಮಾನ್ಯ ಲಕ್ಷಣವಾದರೂ ಕೆಲವು ಕೀಟಗಳ ರೆಕ್ಕೆಗಳ ಮೇಲೆ ಕೆಂಪು ಅಥವಾ ಕಪ್ಪು ಬಣ್ಣದ ಪಟ್ಟೆಗಳಿರುತ್ತವೆ. ದೇಹ ಮತ್ತು ರೆಕ್ಕೆಗಳು ಮಿರುಗುವ ಹಚ್ಚಹಸುರಿನ ಬಣ್ಣದಿಂದ ಕೂಡಿರುವುದೂ ಉಂಟು.




ಕನ್ಯಾಕೀಟ : A. ಪ್ರೌಢಜೀವಿ; B. ಅಪ್ಸರೆ ಕೀಟ

ಕನ್ಯಾಕೀಟಗಳ ದೇಹವನ್ನು ತಲೆ, ವಕ್ಷ ಮತ್ತು ಉದರ ಭಾಗಗಳೆಂದು ವಿಭಾಗಿಸಬಹುದು. ತಲೆಯಲ್ಲಿ ಗುಂಡಗಿನ, ಚೆನ್ನಾಗಿ ಬೆಳೆದ, ಕೊಂಚ ಹೊರಚಾಚಿರುವಂತಿರುವ ಎರಡು ಸಂಯುಕ್ತ ಕಣ್ಣುಗಳೂ ಬಲಯುತವಾದ ಎರಡು ದವಡೆಗಳೂ ಇವೆ. ವಕ್ಷ ಭಾಗದಲ್ಲಿ ಮೂರು ಖಂಡಗಳಿವೆ. ಎರಡನೆಯ ಮತ್ತು ಮೂರನೆಯ ಖಂಡಗಳು ಆಯತಾಕಾರವಾಗಿದ್ದು ಸ್ವಲ್ಪ ಹಿಂದಕ್ಕೆ ಚಾಚಿರುತ್ತವೆ. ಸಮರೂಪದ ರೆಕ್ಕೆಗಳಿವೆ. ರೆಕ್ಕೆಗಳ ಬುಡ ಮಾತ್ರ ಸ್ವಲ್ಪ ಕಿರಿದು. ತೆಳುವಾಗಿ ಪಾರದರ್ಶಕವಾಗಿರುವ ಈ ರೆಕ್ಕೆಗಳ ಮೇಲೆ ಬಲೆಯಂಥ ನರವಿನ್ಯಾಸವಿದೆ. ಕನ್ಯಾಕೀಟಗಳು ನೆಲದ ಮೇಲೆ ಕುಳಿತಾಗ ರೆಕ್ಕೆಗಳು ಅಗಲವಾಗಿ ಹರಡದೆ ಮಡಿಚಿಕೊಂಡು ಎದೆಯ ಭಾಗದಿಂದ ಹಿಂಚಾಚಿಕೊಳ್ಳುವುದು ಇವುಗಳ ವಿಶಿಷ್ಟ ಲಕ್ಷಣ. ವಕ್ಷದ ಮೂರು ಖಂಡಗಳಲ್ಲೂ ಒಂದೊಂದು ಜೊತೆ ಸಂಧಿಪಾದಗಳಿವೆ. ಉದರ ಭಾಗ ಹತ್ತು ಖಂಡಗಳಿಂದ ಕೂಡಿದೆ. ಗಂಡಿನಲ್ಲಿ ಉದರದ ಕೊನೆಯ ಖಂಡದ ತುದಿಯಲ್ಲಿ ಆದಿಗುದದ ತಟ್ಟೆ ಇಲ್ಲ. ಗಂಡಿನ ಉದರದ ಎರಡನೆಯ ಮತ್ತು ಮೂರನೆಯ ಖಂಡಗಳ ತಳಭಾಗದಲ್ಲಿ ಒಂದು ಮೈಥುನಾಂಗ ಮತ್ತು ಅದಕ್ಕೆ ಸಂಬಂಧಿಸಿದ ಒಂದು ಚೀಲವಿದೆ. ಅಲ್ಲದೆ ಸಂಭೋಗಕಾಲದಲ್ಲಿ ಹೆಣ್ಣನ್ನು ಆಲಂಗಿಸಿ ಹಿಡಿದುಕೊಳ್ಳಲು ಸಹಾಯಕವಾಗುವ ಆಲಿಂಗಕಗಳು (ಕ್ಲಾಸ್ಪರ್) ಕೊನೆಯ ಖಂಡದಲ್ಲಿವೆ. ಹೆಣ್ಣಿನ ಉದರಭಾಗದ ಕೊನೆಯಲ್ಲಿ ಜನನೇಂದ್ರಿಯದ ದ್ವಾರದ ಬಳಿ ಚೆನ್ನಾಗಿ ರೂಪುಗೊಂಡ ಅಂಡನಿಕ್ಷೇಪವಿದೆ (ಓವಿಪಾಸಿಟರ್). ಸಂಭೋಗಕಾಲದಲ್ಲಿ ಗಂಡು ತನ್ನ ಜನನೇಂದ್ರಿಯ ದ್ವಾರದ ಮೂಲಕ ಬಂದ ಶುಕ್ರಾಣುಗಳನ್ನು ಮೈಥುನಾಂಗದ ಬಳಿಯಿರುವ ಚೀಲಕ್ಕೆ ತುಂಬಿಕೊಳ್ಳುತ್ತದೆ. ಅನಂತರ ಅದು ತನ್ನ ಆಲಿಂಗಕಗಳ ಸಹಾಯದಿಂದ ಹೆಣ್ಣಿನ ಕುತ್ತಿಗೆಯನ್ನು ಬಿಗಿಯಾಗಿ ಹಿಡಿದು ಯಾವುದಾದರೂ ಜಲಸಸ್ಯದ ರೆಂಬೆಗಳನ್ನು ತನ್ನ ಕಾಲುಗಳಿಂದ ಬಿಗಿಯಾಗಿ ಹಿಡಿಯುತ್ತದೆ. ಹೆಣ್ಣುಕೀಟ ತನ್ನ ದೇಹವನ್ನು ಕಮಾನಿನಂತೆ ಬಾಗಿಸಿಕೊಂಡು ತನ್ನ ಜನನೇಂದ್ರಿಯ ದ್ವಾರವನ್ನು ಗಂಡಿನ ಮೈಥುನಾಂಗದ ಬಳಿಗೆ ಸಾಗಿಸಿ ಅದರ ಮೂಲಕ ಶುಕ್ರಾಣುಗಳನ್ನು ಸ್ವೀಕರಿಸುತ್ತದೆ. ಅನಂತರ ಹೆಣ್ಣು ಅದೇ ಭಂಗಿಯಲ್ಲಿ ತನ್ನ ಉದರವನ್ನು ಬೇರ್ಪಡಿಸಿಕೊಂಡು ಗಿಡದ ರೆಂಬೆಯನ್ನು ಬಲವಾಗಿ ಹಿಡಿದುಕೊಂಡು ತನ್ನ ಅಂಡನಿಕ್ಷೇಪದ ಸಹಾಯದಿಂದ ಗಿಡದ ಮೃದುತೊಗಟೆಯನ್ನು ತೂತುಮಾಡಿ ತನ್ನ ಗರ್ಭಾಂಕುರಿತ ಅಂಡಾಣುಗಳನ್ನು ಇಡುತ್ತದೆ. ಹೆಣ್ಣು ಮೊಟ್ಟೆಗಳನ್ನು ಇಡುವವರೆಗೂ ಗಂಡು ತನ್ನ ಹಿಡಿತವನ್ನು ಸಾಮಾನ್ಯವಾಗಿ ಸಡಿಲಿಸುವುದಿಲ್ಲ.

ಮೊಟ್ಟೆಯಿಂದ ಹೊರಬಂದ ಮರಿಗಳು ಅಥವಾ ಡಿಂಭಗಳು ನೀರಿನ ಪರಿಸರ ದಲ್ಲಿಯೇ ಜೀವಿಸುತ್ತವೆ. ಇವುಗಳಿಗೆ ನೆಯಾಡ್‌ಗಳೆಂದು ಹೆಸರು. ಮಾಂಸಾಹಾರಿಗಳಾದ ಇವು ಸೊಳ್ಳೆಮರಿ, ಇತರ ಸೂಕ್ಷ್ಮ ಕಠಿಣಚರ್ಮಿಗಳನ್ನು ತಿಂದು ಜೀವಿಸುತ್ತವೆ. ಇವುಗಳ ದೇಹವೂ ಬಹಳ ತೆಳುವಾಗಿದ್ದು ದುರ್ಬಲವಾಗಿರುತ್ತದೆ. ಈ ಜಲಜೀವನ ಸು. 1 ವರ್ಷ

ಕಾಲ ಸಾಗುತ್ತದೆ. ಈ ಕಾಲದಲ್ಲಿ 10–15 ಬಾರಿ ಇವು ತಮ್ಮ ಹೊರಕವಚವನ್ನು ವಿಸರ್ಜಿಸಿಕೊಂಡು ದೊಡ್ಡದಾಗುತ್ತವೆ. ರೆಕ್ಕೆಗಳಿಲ್ಲದ ಈ ಡಿಂಭಗಳ ದೇಹದ ಕೊನೆಯಲ್ಲಿ ದೋಣಿಯ ಹುಟ್ಟಿನ ಆಕಾರದ ಮೂರು ದೊಡ್ಡ ಶ್ವಸನನಾಲಿ ಕಿವಿರು (ಟ್ರಾಕಿಯಲ್ ಗಿಲ್ಸ್) ಗಳಿರುವುದು ಒಂದು ವೈಶಿಷ್ಟ್ಯ. ಇವು ನೀರಿನಲ್ಲಿ ಉಸಿರಾಡಲು ನೆರವಾಗುತ್ತವೆ. ಪ್ರೌಢಜೀವಿ ರೂಪುಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ಈ ಜಲವಾಸಿ ಡಿಂಭದ ಜೀವನ ಚಟುವಟಿಕೆ ಕುಂಟುತ್ತದೆ. ಪ್ರೌಢಜೀವಿಯ ರೆಕ್ಕೆಗಳು ಒಳಗೆ ರೂಪುಗೊಂಡ ಮೇಲೆ ಹಾಗೂ ಇತರ ಅಂಗಗಳ ರಚನೆಯಾದ ಮೇಲೆ ಡಿಂಭ ನೀರಿನಿಂದ ಹೊರಬಂದು ಒಂದು ಮರದ ನೆಲೆಯ ಮೇಲೆ ತಂಗುತ್ತದೆ. ಅದರ ಕವಚದ ಪರೆ ಒಣಗಿದ ಮೇಲೆ ಅದು ಬಿರಿದು ಅದರೊಳಗಿನಿಂದ ಪ್ರೌಢಜೀವಿ ಹೊರಬಂದು ಹಾರಲಾರಂಭಿಸುತ್ತದೆ.

(ಬಿ.ಎನ್.ಬಿ.)

**ಕನ್ಯಾಕುಮಾರಿ :** ಭಾರತದ ದಕ್ಷಿಣತಮ ಭೂಶಿರ ಇದೇ ಹೆಸರಿನ ಜಿಲ್ಲೆ ತಮಿಳುನಾಡಿಗೆ ಸೇರಿದೆ. ಭೂಶಿರ ಉ. ಅ. 8° 4´ ಮತ್ತು ಪೂ. ರೇ. 77° 35´ ನಲ್ಲಿ ಪಶ್ಚಿಮಘಟ್ಟಗಳ

ಕನ್ಯಾಕುಮಾರಿ ದೇವಸ್ಥಾನ

ಶಾಖೆಯಾದ ಏಲಕ್ಕಿ ಗುಡ್ಡದ ದಕ್ಷಿಣತುದಿಯಲ್ಲಿದೆ. ಇಲ್ಲಿ ಕನ್ಯಾಕುಮಾರಿಯ ದೇಗುಲವಿರುವುದರಿಂದ ಈ ಸ್ಥಳಕ್ಕೆ ಕನ್ಯಾಕುಮಾರಿ ಎಂಬ ಹೆಸರು ಬಂದಿದೆ. ತಿರುವನಂತಪುರದಿಂದ ಇದು 87 ಕಿಮೀ ದೂರದಲ್ಲಿದೆ. ಇಲ್ಲಿಯ ಭೂಭಾಗ ಬಹು ಕಿರಿದಾಗಿದ್ದು

ಗಾಂಧಿಭವನ – ಕನ್ಯಾಕುಮಾರಿ

ಸಮುದ್ರದೊಳಕ್ಕೆ ನಾಲಗೆಯಂತೆ ಚಾಚಿಕೊಂಡಿರುವುದರಿಂದ ಸೂರ್ಯೋದಯ ಸೂರ್ಯಾಸ್ತಗಳೆರಡೂ ಇಲ್ಲಿಂದ ನೋಡಲು ಬಲು ಚೆಲುವು, ವರ್ಣಮಯ. ಇದನ್ನು ನೋಡಲೆಂದೇ ಸಹಸ್ರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಇದು ಹಿಂದೂಗಳ ಪುಣ್ಯಕ್ಷೇತ್ರ. ಭೂಭಾಗದ ದಕ್ಷಿಣತುದಿಯಲ್ಲಿ ಕನ್ಯಾಕುಮಾರಿಯ ಪುರಾತನ ದೇವಾಲಯವಿದೆ. ಇದು ಬಹು ಹಿಂದಿನಿಂದಲೂ ಕನ್ಯಾತೀರ್ಥವೆಂದು ಪ್ರಸಿದ್ಧವಾಗಿದ್ದಿತೆಂದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಕನ್ಯಾಕುಮಾರಿಯ ಬಳಿಯ ಸಮುದ್ರದಲ್ಲಿ ಸ್ನಾನ ಮಾಡಿ ಕನ್ನಿಕಾಪರಮೇಶ್ವರಿಯನ್ನು ಪೂಜಿಸಿದರೆ ಸರ್ವಪಾಪಗಳಿಂದ ವಿಮೋಚನೆಯಾಗುತ್ತದೆಂದು ನಂಬಿಕೆ. ಕಾಶಿಯ ಒಬ್ಬ ಬ್ರಾಹ್ಮಣನ ಹೆಂಡತಿ ಪಾತಿವ್ರತ್ಯ ಕೆಡಿಸಿಕೊಂಡು ಪಶ್ಚಾತ್ತಾಪಹೊಂದಿ ಕನ್ಯಾಕುಮಾರಿಗೆ ನಡೆದು ಬಂದು ಅಲ್ಲಿ ದೇವರ ಪೂಜೆ ಮಾಡಿ ಪಾಪವಿಮುಕ್ತಳಾದಳೆಂಬ ಒಂದು ಸ್ಥಳಪುರಾಣವಿದೆ. ದೇವಾಲಯದ ಸಮೀಪದಲ್ಲಿರುವ ಗಾಂಧೀಸ್ಮಾರಕ ಇತ್ತೀಚೆಗೆ ಕಟ್ಟಿದ ಒಂದು ಸುಂದರ ಕಟ್ಟಡ. ಭೂಭಾಗದ ಅಂಚಿನಿಂದ ಕೆಲವೇ ಮೀ ಗಳ ದೂರದಲ್ಲಿ ವಿವೇಕಾನಂದರ ಬಂಡೆ ಎಂಬ ನಡುಗಡ್ಡೆಯಿದೆ. ಇಲ್ಲಿ ವಿವೇಕಾನಂದರ ಬೃಹತ್ ಸ್ಮಾರಕವೊಂದರ ನಿರ್ಮಾಣವಾಗಿದೆ. ಕನ್ಯಾಕುಮಾರಿ ಮೀನುಗಾರಿಕೆ ಕೇಂದ್ರ ಕೂಡ. ಕಡಲ ದಂಡೆಯ ಮರಳಿನಲ್ಲಿ ಇಲ್ಮನೈಟ್ ಮತ್ತು ಮೊನಾಜೈಟ್ ನಿಕ್ಷೇಪಗಳಿವೆ.

ಕನ್ಯಾಕುಮಾರಿ ಜಿಲ್ಲೆಯ ವಿಸ್ತೀರ್ಣ 1669 ಚ.ಕಿಮೀ. ಜನಸಂಖ್ಯೆ 16,69,763, ನಗರದ ಜನಸಂಖ್ಯೆ 19,678. ಈ ಪ್ರದೇಶ ಮೊದಲು ಕೇರಳಕ್ಕೆ ಸೇರಿತ್ತು. 1956ರಲ್ಲಿ ಇದನ್ನು ಮದ್ರಾಸಿಗೆ (ಈಗಿನ ತಮಿಳುನಾಡು) ಸೇರಿಸಿ ಕನ್ಯಾಕುಮಾರಿ ಜಿಲ್ಲೆಯನ್ನು ನಿರ್ಮಿಸಲಾಯಿತು. ನಾಗರ್ ಕೋಯಿಲ್ ಈ ಜಿಲ್ಲೆಯ ಮುಖ ಪಟ್ಟಣ (ನೋಡಿ– ನಾಗರ್‌ಕೋಯಿಲ್). (ಎನ್.ಎ.ಎಸ್.ಎನ್.ಜಿ.ಎಚ್.)

**ಕನ್ಯಾದಾನ :** ಹಿಂದೂ ವಿವಾಹ ಸಂಸ್ಕಾರಗಳಲ್ಲಿ ಅತಿಮುಖ್ಯವಾದ ಸಂಸ್ಕಾರ. ಕನ್ಯೆ ಎಂದರೆ ಎಂಟು ಹತ್ತು ವರ್ಷಗಳ ಬಾಲಕಿ. ಮನುಧರ್ಮಶಾಸ್ತ್ರ ಹಿಂದೂ ಸಮಾಜದಲ್ಲಿ ಪ್ರಚಲಿತವಾಗುವ ಹೊತ್ತಿಗೆ ಬಾಲ್ಯವಿವಾಹ ಪದ್ಧತಿ ರೂಢಿಯಲ್ಲಿತ್ತು. ಮನುವಿನ ಪ್ರಕಾರ ಸ್ತ್ರೀ ಬಾಲ್ಯದಲ್ಲಿ ತಂದೆಯ ವಶದಲ್ಲಿಯೂ ವಿವಾಹಾನಂತರ ಪತಿಯ ಅಧೀನದಲ್ಲಿಯೂ ವೃದ್ಧಾಪ್ಯದಲ್ಲಿ ಪುತ್ರನ ವಶದಲ್ಲಿಯೂ ಪೋಷಿಸಲ್ಪಡತಕ್ಕವಳು. ಬಾಲ್ಯದಲ್ಲಿ ಅವಳು ಮಾತಾಪಿತೃಗಳಿಗೆ ಸೇರಿದವಳಾದ್ದರಿಂದ ಪ್ರಾಪ್ತ ವಯಸ್ಕಳಾದಾಗ ಸಕಾಲದಲ್ಲಿ ಅವಳನ್ನು ಯೋಗ್ಯ ವರನಿಗೆ ದಾನ ಮಾಡಬೇಕಾದದ್ದು ಅವರ ಕರ್ತವ್ಯವೆಂದು ಧರ್ಮಶಾಸ್ತ್ರಕಾರರು ವಿಧಿಸಿದರು. ವಿವಾಹಕಾಲದಲ್ಲಿ ಕನ್ಯಾದಾನವನ್ನು ಮಾಡಲಾಗುತ್ತದೆ.

ಪಿತನೇ ಕನ್ಯಾದಾನ ಮಾಡಲು ಅಧಿಕಾರವುಳ್ಳವನೆಂದು ಗೃಹ್ಯಸೂತ್ರ ಹೇಳುತ್ತದೆ. ಸ್ಮೃತಿಗಳು ಈ ಅಧಿಕಾರವನ್ನು ತಂದೆಯ ಅನಂತರ ಪಿತಾಮಹನಿಗೆ, ಅಣ್ಣನಿಗೆ, ಮಾತೆಗೆ ಕ್ರಮವಾಗಿ ಕೊಟ್ಟಿವೆ. ನಾರದನಾದರೋ ಪಿತಾಮಹನಿಗೆ ಅಧಿಕಾರವನ್ನು ಕೊಡದೆ ಮಾತಾಮಹನಿಗೂ ರಾಜ್ಯಕ್ಕೂ ಕೊಟ್ಟಿದ್ದಾನೆ.

ಕನ್ಯೆಯನ್ನು ದಾನ ಮಾಡುವುದು ಕೇವಲ ಒಂದು ಹೊಣೆಗಾರಿಕೆಯನ್ನು ಕಳೆದುಕೊಳ್ಳುವ ಉದ್ದೇಶದಿಂದಲ್ಲ. ಕನ್ಯೆಯ ಪೋಷಕ ಅವಳನ್ನು ದಾನ ಮಾಡುವಾಗ ಅರ್ಥಗರ್ಭಿತವಾದ ಮಂತ್ರೋಚ್ಚಾರಣೆಯ ಮೂಲಕ ಧರ್ಮ ಅರ್ಥ ಕಾಮಗಳ ಪೂರೈಕೆಗಾಗಿ ಈ ದಾನವನ್ನು ಮಾಡುತ್ತಿರುವುದಾಗಿ ತಿಳಿಸಿ ಅವಳನ್ನು ಧರ್ಮ ಅರ್ಥ ಕಾಮಗಳ ಸಾಧನೆಯಲ್ಲಿ ತನ್ನ ಸಹಧರ್ಮಿಣಿಯಾಗಿರಲು ನಾನು ಸ್ವೀಕರಿಸುತ್ತಿದ್ದೇನೆಂದು ವರನಿಂದ ಮೂರು ಬಾರಿ ವಚನ ತೆಗೆದುಕೊಳ್ಳುತ್ತಾನೆ.

ಕನ್ಯೆಯನ್ನು ಸಾಲಂಕೃತಳಾಗಿ ದಾನ ಮಾಡಬೇಕೆಂಬ ಸಂಪ್ರದಾಯ, ಹಿಂದೂ ಸಮಾಜದಲ್ಲಿ ರೂಢಿಗೆ ಬಂತು. ವಿವಾಹಸಂಸ್ಕಾರವನ್ನು ಇತರ ಸಂಸ್ಕಾರಗಳಂತೆ ಒಂದು ಯಜ್ಞವೆಂದು ಭಾವಿಸಲಾಗಿತ್ತು. ಯಜ್ಞಕಾಲದಲ್ಲಿ ಮಾಡುವ ದಕ್ಷಿಣಾಸಹಿತವಾದ ದಾನವನ್ನು ಮಾತ್ರ ಶ್ರೇಷ್ಠವೆಂದು ಪರಿಗಣಿಸಲಾಗಿದ್ದುದರಿಂದ, ಕನ್ಯಾದಾನದಲ್ಲಿ ದಕ್ಷಿಣೆಗೆ ಬದಲಾಗಿ ಆಭರಣಾದಿಗಳನ್ನು ಕನ್ಯೆಯೊಂದಿಗೆ ನೀಡುವ ಪದ್ಧತಿಯನ್ನು ಸ್ಥಾಪಿಸಲಾಯಿತು. ಅಲ್ಲದೆ ಸ್ತ್ರೀಯ ಸ್ಥಾನಮಾನಗಳು ಭದ್ರಪಡಿಸುವ ಉದ್ದೇಶದಿಂದಲೂ ಅವಳಿಗೆ ಆಭರಣಗಳನ್ನು ಆಸ್ತಿಯಂತೆ ಪಡೆಯುವ ಹಕ್ಕನ್ನು ಕೊಡಲಾಯಿತು. ಅದನ್ನು ಸ್ತ್ರೀಧನವೆಂದು ಕರೆಯಲಾಯಿತು.

ದಾನಗಳೆಲ್ಲಲ್ಲ ಕನ್ಯಾದಾನ ಅತಿಶ್ರೇಷ್ಠವಾದುದೆಂಬ ದೃಢವಾದ ನಂಬಿಕೆ ಹಿಂದೂ ಸಮಾಜದಲ್ಲಿ ಬೆಳೆದು ಬಂತು. ಸತ್ಕುಲಪ್ರಸೂತಳಾದ ಕನ್ಯೆಯನ್ನು ಸತ್ಕುಲ ಪ್ರಸೂತನಾದ ವರನಿಗೆ ದಾನ ಮಾಡಿದರೆ ಅವಳು ಸತ್ಪುತ್ರನನ್ನು ಪಡೆದು, ಹುಟ್ಟಿದ ಕುಲವನ್ನೂ ಸೇರಿದ ಕುಲವನ್ನೂ ಉದ್ಧಾರ ಮಾಡುವಳೆಂಬ ನಂಬಿಕೆ ಇದೆ. ಆದ್ದರಿಂದ ಅವಳನ್ನು ದಾನ ಮಾಡುವಾಗ ವಧೂವರರ ಪ್ರವರ ಮತ್ತು ಗೋತ್ರಗಳನ್ನು ಪಠಿಸಿದ ಅನಂತರ ದಾನ ಮಾಡಲಾಗುತ್ತದೆ. ಹೆಣ್ಣು ಶಿಶುವನ್ನು ಪಡೆಯುವುದು ಒಂದು ಭಾಗ್ಯವೆಂದು ಎಣಿಸಿ, ಅದಕ್ಕಾಗಿ ಯಜ್ಞವನ್ನು ಸಹ ಮಾಡುತ್ತಿದ್ದರೆಂದು ಧರ್ಮಶಾಸ್ತ್ರಗಳಿಂದ ತಿಳಿದುಬಂದಿದೆ. ಆ ಶಿಶುವಿನಿಂದ ಎರಡು ಕುಲಗಳು ಉದ್ಧಾರವಾಗುವುದೆಂಬುದೇ ಇದರ ಮಹತ್ತ್ವಕ್ಕೆ ಕಾರಣವೆನ್ನಬಹುದು. (ಪಿ.ಎಸ್.ಬಿ.)

**ಕನ್ಯಾಮೇರಿ :** ಯಹೂದ್ಯ ಜನಾಂಗದವಳಾದ ಈಕೆ ಪ್ಯಾಲೆಸ್ಟೈನಿನ ಸಂತ ಜೋಸೆಫನ ಧರ್ಮಪತ್ನಿ. ಹೀಬ್ರೂ ಭಾಷೆಯಲ್ಲಿ ಮೇರಿ (ಮಿರಿಯಮ್) ಎಂದರೆ ಸಚ್ಚಸ್ತ್ರೀ ಎಂದರ್ಥ. ಯಹೂದ್ಯ ಜನಾಂಗದಲ್ಲಿ ಸುಪ್ರಸಿದ್ಧ ರಾಜನಾದ ದಾವೀದನ ವಂಶದವಳಾದ ಈಕೆ

ಹುಟ್ಟಿದ್ದು ನಝ಼ಾರತ್ (ನಜರೇತು) ಎಂಬ ಹಳ್ಳಿಯಲ್ಲಿ ತಂದೆ ಜೋರೆಂ ಎಂದೂ ತಾಯಿ ಅನ್ನಾ ಎಂದೂ ಪರಂಪರೆ ಹೇಳುತ್ತದೆ. ಜೀವಮಾನವಿಡೀ ಬ್ರಹ್ಮಚರ್ಯವನ್ನು ಪಾಲಿಸುವ ವ್ರತವಿಟ್ಟುಕೊಂಡಿದ್ದ ಈಕೆ ದೇವರ ಏಕಮಾತ್ರಪುತ್ರ ಭಗವಾನ್ ಯೇಸೂಕ್ರಿಸ್ತನ ಮಾತೆಯಾಗುವ ಅತ್ಯುನ್ನತ ಹಾಗೂ ವಿಸ್ಮಯಕಾರಕ ಗೌರಕ್ಕೆ ಪಾತ್ರಳಾದಳು. ದೇವರಿಂದ ಸೃಷ್ಟಿಸಲ್ಪಟ್ಟ ಎಲ್ಲ ಮಾನವರಲ್ಲಿ ಉತ್ತಮಳಾದ ಈಕೆ ಜೀವಿತಕಾಲವೆಲ್ಲ ಸರ್ವರಿಗೂ ಅಂಟಿಬರುವ ಆದಿಪಾಪದಿಂದ ವಿಮೋಚಿತಳಾಗಿದ್ದಳು. ಇದೂ ಅಲ್ಲದೆ ಮಾತೃವರ್ಗಕ್ಕೇ ಆದರ್ಶಪ್ರಾಯವಾದ ಸಜ್ಜೀವನವನ್ನು ನಡೆಸಿ, ಗತಿಸಿದೊಡನೆ ಇತರರಂತೆ ಕೊಳೆಯದೆ. ದೈವಕೃಪೆಯಿಂದ ಸಶರೀರೆಯಾಗಿ ಸ್ವರ್ಗಕ್ಕೆತ್ತಲ್ಪಟ್ಟಳೆಂದು ಕೆಥೊಲಿಕರು ನಂಬುತ್ತಾರೆ.

ಕ್ರೈಸ್ತ ಮಂಡಲಿಯಲ್ಲಿ ಮೇರಿಗೆ ಗೌರವದ ಸ್ಥಾನವಿದೆ. ಯೇಸುವಿನ ಲೋಕಹಿತ ಕಾರ್ಯದಲ್ಲಿ ಇವಳೂ ಭಾಗಿಯಾಗಿ ಸಲ್ಲಿಸಿದ ಸೇವೆಯ ಫಲವಾಗಿ ಕೆಥೊಲಿಕರು ಇವಳಲ್ಲಿ ಅನುಪಮ ಭಕ್ತಿಯನ್ನು ತೋರಿಸುತ್ತಾರೆ. ಯೇಸುವಿನ ತರುವಾಯ, ಇವಳಿಗೆ ಇನ್ನೂ ಹೆಚ್ಚಿನ ಗೌರವ ಸಲ್ಲುವಂತಾಯಿತು. ಆಗಾಗ್ಗೆ, ಕೆಲವು ಸ್ಥಳಗಳಲ್ಲಿ ಈಕೆ ಈಗಲೂ ಕಾಣಿಸಿಕೊಂಡು, ಸತ್ಯದ ದಾರಿಯಲ್ಲಿ ನಡೆಯುವಂತೆ ಪ್ರೋತ್ಸಾಹಿಸುತ್ತಿರುವಳೆಂದು ಜನ ನಂಬಿದ್ದಾರೆ. (ಎ.ಪಿ.ಆರ್.; ಡಿ.ಎಸ್.ಓ.)

**ಕನ್ಯಾರಾಶಿ :** ಆಕಾಶದಲ್ಲಿರುವ 88 ನಕ್ಷತ್ರಪುಂಜಗಳಲ್ಲಿ ಒಂದು (ವರ್ಗೊ). ವಿಷುವದಂಶ 11 ಗಂ. 35 ಮಿ–15ಗಂ. ಮೊ. ಘಂಟಾವೃತ್ತಾಂಶ 15° ಉ–22° ದ. ಪ್ರಧಾನ ನಕ್ಷತ್ರ ಚಿತ್ತಾ. ಸಪ್ತರ್ಷಿಮಂಡಲದ ವಕ್ರರೇಖೆಯನ್ನು ಸರಾಗವಾಗಿ ಪೂರ್ವ–



ದಕ್ಷಿಣ ದಿಕ್ಕಿಗೆ ವಿಸ್ತರಿಸಿದಾಗ ಮೊದಲು ಎದುರಾಗುವ ಉಜ್ಜ್ವಲ ಕೆಂಪು ನಕ್ಷತ್ರ ಸ್ವಾತೀ; ತರುವಾಯ ನೀಲಿ ಬಣ್ಣದ ಚಿತ್ತಾ; ಮುಂದೆ ನಾಲ್ಕು ನಕ್ಷತ್ರಗಳು ರಚಿಸುವ ಸ್ಪಷ್ಟ ಚತುಷ್ಕೋನಾಕೃತಿಯಲ್ಲಿ (ಹಸ್ತಾ) ಈ ರೇಖೆ ಅಂತ್ಯವಾಗುವುದು. ರಾಶಿಚಕ್ರ ಮತ್ತು ವಿಷುವದ್ವೃತ್ತ ಇವೆರಡರ ಮೇಲೆಯೂ ಕನ್ಯಾರಾಶಿ ಇದೆ. ಸೂರ್ಯನ ವಾರ್ಷಿಕ ಭೂಪರಿಭ್ರಮಣೆಯಲ್ಲಿ ಕನ್ಯಾರಾಶಿ ಒಂದು ಗಡಿ ಬಿಂದಿ–ಇಲ್ಲಿ ಸೂರ್ಯ ವಿಷುವದ್ವೃತ್ತಣ ಉತ್ತರದಿಂದ ದಕ್ಷಿಣಕ್ಕೆ ಅಡ್ಡಹಾಯುತ್ತದೆ (ಸು. ಸೆಪ್ಟಂಬರ್ 23). ಮುಂದಿನ ದಿವಸಗಳಲ್ಲಿ (ಮಾರ್ಚ್ 21ರ ವರೆಗೆ ಸೂರ್ಯ ದಕ್ಷಿಣಾರ್ಧ ಗೋಳದಲ್ಲಿಯೇ ಇರುವುದರಿಂದ ಉತ್ತರಾರ್ಧಗೋಳದ ಜನರಿಗೆ (ಉದಾಹರಣೆಗೆ ಭಾರತ) ಹಗಲಿನ ಉದ್ದ ರಾತ್ರಿಗಿಂತ ಕಿರಿದು. ಅನೇಕ ರೇಡಿಯೋ ಮತ್ತು ಎಕ್ಸ್ ಕಿರಣಾಕರಗಳನ್ನು ಕನ್ಯಾರಾಶಿಯಲ್ಲಿ ಗುರುತಿಸಲಾಗಿದೆ. (ಬಿ.ಎಸ್.ಎಸ್)

**ಕನ್ಯಾಶುಲ್ಕ :** ಮದುವೆಯ ಕಾಲದಲ್ಲಿ ಗಂಡು ಹೆಣ್ಣಿನ ಕಡೆಯವರಿಗೆ ತೆರುವ ಶುಲ್ಕ. ಸಮಾಜಶಾಸ್ತ್ರಕಾರನಾದ ಮನು ಸಮಾಜಸಮ್ಮತವಾದ ನಾಲ್ಕು ವಿವಾಹಪದ್ಧತಿಗಳನ್ನು; ನಿರೂಪಿಸಿದ್ದಾನೆ. ಅವು ಪ್ರಾಜಾಪತ್ಯ. ಆರ್ಷ, ದೈವ ಮತ್ತು ಬ್ರಾಹ್ಮ ವಿವಾಹಗಳು. ಆರ್ಷವಿವಾಹದಲ್ಲಿ ಕನ್ಯಾಪಿತೃ ವರನ ಕಡೆಯಿಂದ ಒಂದು ಜೊತೆ ಗೋವುಗಳನ್ನು ತೆಗೆದುಕೊಂಡು ಅವಳನ್ನು ಅವನಿಗೆ ಒಪ್ಪಿಸುತ್ತಾನೆ. ಹೀಗೆ ತೆಗೆದುಕೊಳ್ಳುವುದನ್ನು ಕನ್ಯಾಶುಲ್ಕವೆಂದು ಕರೆಯಲಾಗಿದೆ. ಇದರಲ್ಲಿ ಕನ್ಯೆಯನ್ನು ವಿಕ್ರಯಮಾಡುವ ಉದ್ದೇಶವಿದ್ದಂತೆ ಕಾಣುವುದಿಲ್ಲ. ಏಕೆಂದರೆ ಗೋವುಗಳನ್ನು ಯಜ್ಞಕ್ಕಾಗಿ ತೆಗೆದುಕೊಳ್ಳಲಾಗುತ್ತಿತ್ತೇ ಹೊರತು ಲಾಭಕ್ಕಾಗಿ ಅಲ್ಲ. ಮತ್ತು ಅದು ಕನ್ಯೆಯ ಬೆಲೆಯೂ ಅಲ್ಲ. ಅವನ್ನು ಪುನಃ ಕನ್ಯೆಯೊಂದಿಗೆ ದಾನಮಾಡಲಾಗುತ್ತಿತ್ತು. ಆಶ್ವಲಾಯನ, ಬೌಧಾಯನ ಮತ್ತು ಆಪಸ್ತಂಬ ಸ್ಮೃತಿಗಳೂ ಕನ್ಯಾಶುಲ್ಕವನ್ನು ಪ್ರಸ್ತಾಪಿಸಿವೆ.

ಕನ್ಯಾಶುಲ್ಕವನ್ನು ತೆಗೆದುಕೊಳ್ಳುವ ಪದ್ಧತಿ ಯಜ್ಞಯಾಗಾದಿಗಳ ಪ್ರಾಬಲ್ಯ ಕಡಿಮೆಯಾದ ಮೇಲೆ ಕ್ರಮೇಣ ನಿಂತುಹೋದಂತೆ ತೋರುತ್ತದೆ. ದಾನವನ್ನು ಕೊಡುವಾಗ ಯಾವ ನಿಬಂಧನೆಯೂ ಇರಕೂಡದೆಂಬ ಭಾವನೆ ಬಂದದ್ದೂ ಇದು ನಿಂತುಹೋಗುವುದಕ್ಕೆ ಕಾರಣವೆನ್ನಬಹುದು. ತ್ರಿವರ್ಣಗಳಲ್ಲಿ ಕಾಣಬರದಿದ್ದರೂ ಶೂದ್ರವರ್ಣದಲ್ಲಿ ಇದು ಈಗ ವಾಡಿಕೆಯಲ್ಲಿದೆ ಎನ್ನಬಹುದು.

ಉತ್ತರ ಅಮೆರಿಕದ ಅನೇಕ ಪ್ರಾಚೀನ ಜನರಲ್ಲಿ ವಿವಾಹದ ಎರಡು ಕುಲಗಳೂ ಸಮಾನಬೆಲೆಯುಳ್ಳ ವಸ್ತ್ರಾಭರಣಗಳನ್ನು ವಿನಿಮಯ ಮಾಡಿಕೊಳ್ಳುತ್ತವೆ. ಕನ್ಯಾಶುಲ್ಕವನ್ನೂ ವರದಕ್ಷಿಣೆಯನ್ನೂ ಸರಿಹೊಂದಿಸುವ ಈ ಪದ್ಧತಿಯನ್ನು ಕನ್ಯಾವಿಕ್ರಯವೆನ್ನಲಾಗುವುದಿಲ್ಲ. ಕನ್ಯಾಶುಲ್ಕಕ್ಕೆ ಬದಲಾಗಿ ಏನನ್ನೂ ಪಡೆಯದಿದ್ದಲ್ಲಿ, ಪತಿಗೆ ಕೆಲವು ವಿಶೇಷ ಹಕ್ಕುಗಳು ದೊರೆಯುತ್ತವೆ. ನ್ಯೂ ಗಿನಿಯಲ್ಲಿ, ಪತ್ನಿ ದ್ರೋಹ ಮಾಡಿದರೆ ಪತಿ ಕನ್ಯಾಶುಲ್ಕವನ್ನು ಹಿಂದಕ್ಕೆ ಪಡೆಯುತ್ತಾನೆ. ಆದರೆ ಅವಳಿಗೆ ಸೇರಿದ ಆಸ್ತಿ ಮತ್ತು ಮಕ್ಕಳ ಮೇಲೆ ಅವನಿಗೆ ಯಾವ ಅಧಿಕಾರವೂ ಇಲ್ಲ.

ಉತ್ತರ ನೈಲ್ ಪ್ರದೇಶದಲ್ಲಿ, ಮಕ್ಕಳನ್ನು ಪಡೆಯುವವರೆಗೂ ವಧುವನ್ನು ಪತ್ನಿಯೆಂದು ಪರಿಗಣಿಸಲಾಗುವುದಿಲ್ಲ. ಅನಂತರ ಅವಳಿಗೆ ಕೊಡಬೇಕಾದ ಶುಲ್ಕವನ್ನು ಅವಳ ತಾಯಿಗೆ ಕೊಡಲಾಗುತ್ತದೆ. ಅದನ್ನು ಅವಳ ಸಹೋದರ ಕ್ರಮವಾಗಿ ತನ್ನ ವಧುವಿಗೆ ಕೊಡಬೇಕಾಗುತ್ತದೆ. ಸ್ತ್ರೀ ಪತಿವಂಚಕಳಾದರೆ ಅವಳ ಶುಲ್ಕವನ್ನು ಹಿಂತಿರುಗಿಸಬೇಕಾಗುತ್ತದೆ. ಅಥವಾ ಅವಳ ಸಹೋದರನ ಮಕ್ಕಳನ್ನೋ ಮಕ್ಕಳಿಲ್ಲದ ಪಕ್ಷದಲ್ಲಿ ಅವನ ಪತ್ನಿಯನ್ನೋ ಒಪ್ಪಿಸಬೇಕಾಗುತ್ತದೆ. ಕನ್ಯಾವಿಕ್ರಯ ಸ್ತ್ರೀಯ ಸ್ಥಾನಮಾನಗಳಿಗೆ ಅವಹೇಳನ ಮಾಡಿದಂತಾಗಿರದೆ ಒಂದು ವಿಧದಲ್ಲಿ ಗೌರವಾರ್ಹವೆಂದೆಣಿಸಲಾಗಿದೆ. ಮಂಟಾನ ಪಂಗಡದಲ್ಲಿ ಕನ್ಯಾಶುಲ್ಕವನ್ನು ನೀಡುವುದು ಅವಳ ಸೌಶೀಲ್ಯಕ್ಕೆ ಪ್ರಶಸ್ತಿಪತ್ರದಂತೆ ಎಂದು ಪರಿಗಣಿಸಲಾಗಿದೆ.

ಆಫ್ರಿಕದಲ್ಲಿ ಕನ್ಯಾಶುಲ್ಕವನ್ನು ಕೊಡುವಷ್ಟು ಹಣವಂತರಾದವರು ಮಾತ್ರ ಅನೇಕ ಪತ್ನಿಯರನ್ನು ಪಡೆಯುವರು.

ಇಸ್ಲಾಂಧರ್ಮದಂತೆ ಸೈಬೀರಿಯದ ತುರ್ಕಿಯವ ತನ್ನ ಪತ್ನಿಯನ್ನು ಇಚ್ಛೆ ಬಂದಾಗ ವಿಚ್ಛೇದ ಮಾಡಬಲ್ಲನಾದರೂ ತನ್ನಿಂದ ಅವಳ ಕಡೆಯವರು ಪಡೆದ ಅನೇಕ ಪಶುಪ್ರಾಣಿಗಳಿಗಾಗಿ ಹೀಗೆ ಮಾಡಲು ಆತ ಹಿಂತೆಗೆಯುತ್ತಾನೆ. ಮತ್ತೊಂದು ಪಂಗಡದಲ್ಲಿ ಕನ್ಯೆಗಾಗಿ ಅನೇಕ ಕುದುರೆಗಳನ್ನು ನೀಡುವ ಪದ್ಧತಿಯೂ ಇದೆ.

ಕೆಲವು ವೇಳೆ ಕನ್ಯಾಶುಲ್ಕ ವಿವಾಹಕ್ಕೆ ಅಡ್ಡಬರುವಷ್ಟು ಅಧಿಕವಾಗಿರಬಹುದು. ಅದನ್ನು ಕೊಡುವುದು ಕಷ್ಟಸಾಧ್ಯವಾಗಿರುವಲ್ಲಿ ವಿವಾಹವಾಗುವವರ ವಯಸ್ಸು ಮೀರಬಹುದು. ಕೆಲವು ಸಮಾಜಗಳಲ್ಲಿ ವರದಕ್ಷಿಣೆಯಂತೆಯೇ ಇದೂ ಎಷ್ಟೋ ಮಂದಿ ಅವಿವಾಹಿತರಾಗಿರುವುದಕ್ಕೆ ಕಾರಣವಾಗಬಹುದು. ಕನ್ಯಾಶುಲ್ಕವನ್ನು ಒಟ್ಟಿಗೆ ಕೊಡಲು ಕಷ್ಟಸಾಧ್ಯವಾಗಿರುವುದರಿಂದ ಕೆಲವು ಪಂಗಡಗಳಲ್ಲಿ ಅದನ್ನು ವಿಭಾಗಿಸಿ, ವಿವಾಹಕಾಲದಲ್ಲಿ ಮತ್ತೆ ಸಂತಾನ ಪಡೆದಾಗ ಕೊಟ್ಟು ತೀರಿಸಲಾಗುತ್ತದೆ. ಕನ್ಯಾಶುಲ್ಕವನ್ನು ಕೊಡಲಾಗದಿದ್ದವರು ಸಮೀಪಬಂಧುಗಳಲ್ಲಿಯೇ ವಿವಾಹವಾಗುವುದೂ ಉಂಟು.

ಭಾರತದಲ್ಲಿ ಮತ್ತು ಯುರೋಪಿನಲ್ಲಿ ಕನ್ಯಾಶುಲ್ಕಕ್ಕಿಂತಲೂ ವರದಕ್ಷಿಣೆಯೇ (ನೋಡಿ– ವರದಕ್ಷಿಣೆ) ಹೆಚ್ಚು ರೂಢಿಯಲ್ಲಿದೆ. (ಸಿ.ಎಸ್.ಬಿ.)

**ಕನ್ಯಾಶ್ರೀ :** ಬೆಸಿಡಿಯೋಮೈಸೀಟೀಸ್ ವರ್ಗ, ಹೋಮೋಬೆಸಿಡಿಯೋ ಮೈಸೀಟೀಸ್ ಉಪವರ್ಗ, ಫೆಲೇಲೀಸ್ ಗಣಕ್ಕೆ ಸೇರಿದ ಹಲವಾರು ಜಾತಿಯ ಶಿಲೀಂಧ್ರಗಳಿಗೆ ಇರುವ ಸಾಮಾನ್ಯ ಹೆಸರು. ಇವುಗಳ ಫಲೋತ್ಪಾದಕಾಂಗಗಳು (ಫ್ರಕ್ಟಿಫಿಕೇಶನ್ಸ್) ಬಹಳ ಕೆಟ್ಟ ವಾಸನೆ ಬೀರುವುದರಿಂದ ಇವನ್ನು ಇಂಗ್ಲಿಷಿನಲ್ಲಿ ಸ್ಟಿಂಕ್ ಹಾರ್ನ್ಸ್ ಎನ್ನುತ್ತಾರೆ. ಪೂತಿಜನ್ಯ ಸಸ್ಯಗಳಾದ ಇವು ಸಾವಯವ ಯುಕ್ತವಾದ ಮಣ್ಣು, ಕೊಳೆಯುತ್ತಿರುವ ಮರ ಮತ್ತು ಸಗಣಿ ಗುಪ್ಪೆಗಳ ಮೇಲೆ ಬೆಳೆಯುತ್ತವೆ.

ಇವುಗಳ ದೇಹ ಬಿಳಿಯ, ಹಳದಿ ಬಣ್ಣದ ಅಥವಾ ಕಿತ್ತಳೆ ಬಣ್ಣದ ಸೂಕ್ಷ್ಮ ಎಳೆಗಳಿಂದ ಕೂಡಿದ ಕವಕಜಾಲವಾಗಿದೆ (ಮೈಸೀಲಿಯ). ಇದರಲ್ಲಿ ಪ್ರೈಮರಿ ಸೆಕೆಂಡರಿ ಮತ್ತು ಟರ್ಶಿಯರಿ ಎಂಬ ಮೂರು ಅವಸ್ಥೆಗಳನ್ನು ಗುರುತಿಸಬಹುದು. ಸಾಧಾರಣವಾಗಿ ಕವಕ ಜಾಲ ಮಣ್ಣಿನಲ್ಲಿ ಹುದುಗಿಕೊಂಡು ಕವಲೊಡೆದು ಬೆಳೆಯುತ್ತದೆ. ಸಂತಾನಾಭಿವೃದ್ಧಿಯ ಕಾಲದಲ್ಲಿ ಸಸ್ಯ ದೇಹದ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಕೋಳಿಮೊಟ್ಟೆಯಾಕಾರದ ಬಿಳಿಯ ಬಣ್ಣದ ರಚನೆಗಳು ಬೆಳೆಯ ತೊಡಗುತ್ತವೆ. ಇವುಗಳೊಳಗೆ ವಿಶಿಷ್ಟ ಬಗೆಯ ಬೆಸಿಡಿಯಗಳೆಂಬ ಸಣ್ಣ ಚೀಲಗಳು ಇವೆ. ಇವುಗಳಿಂದ ಬೆಸಿಡಿಯೋಸ್ಪೋರುಗಳೆಂಬ ಬೀಜಾಣುಗಳು ಉತ್ಪತ್ತಿಯಾಗುತ್ತವೆ. ಮೊದಮೊದಲು ಬೆಸಿಡಿಯಗಳ ಸುತ್ತ ಒಂದು ಬಗೆಯ ಆವೃತಕೋಶ (ಪೆರಿಡಿಯಮ್) ಇರುತ್ತದೆ. ಕ್ರಮೇಣ ಅವು ಬಲಿತಂತೆ ಆವೃತಕೋಶ ಬಿರಿದು ಸ್ಥಂಭಾಕೃತಿಯ ಸ್ಪಂಜಿನಂಥ ಫಲೋತ್ಪಾದಕಾಂಗಗಳು ಹೊರಬರುತ್ತವೆ. ಇವುಗಳಲ್ಲಿ ತುದಿಯಲ್ಲಿರುವ ಪೈಲಿಯಸ್ ಎಂಬ ಟೋಪಿಯಂಥ ಭಾಗವನ್ನೂ ಸ್ಟೈಪ್ ಎಂಬ ಉದ್ದವಾದ ತೊಟ್ಟಿನ ಭಾಗವನ್ನೂ ಕಾಣಬಹುದು. ಬುಡದಲ್ಲಿ ಬಿರಿದ ಆವೃತಕೋಶ ಒಂದು ರೀತಿಯ ಪೊರೆಯಂತೆ ಸುತ್ತಿಕೊಂಡಿದೆ. ಪೈಲಿಯಸ್ ಭಾಗ ಬೇರೆ ಬೇರೆ ಕನ್ಯಾಶ್ರೀಗಳಲ್ಲಿ ಬೇರೆ ಬೇರೆ ಆಕಾರದ್ದಾಗಿರುತ್ತದೆ.' ಪೈಲಿಯಸ್ ಭಾಗದ ಒಳಗಡೆ ಗ್ಲೀಬ ಎಂಬ ಫಲವತ್ತಾದ ವಲಯವಿದೆ. ಇದರಲ್ಲೇ ಬೆಸಿಡಿಯಗಳು ಇರುವುದು. ಬೆಸಿಡಿಯಗಳು ಬಲಿತು ಬೀಜಾಣುಗಳನ್ನು ಉತ್ಪಾದಿಸುತ್ತವೆ. ಕ್ರಮೇಣ ಗ್ಲೀಬ ಕರಗಿಹೋಗಿ ಬೀಜಾಣುಗಳು ಹೊರಬರುತ್ತವೆ. ಜಿಗುಟಾಗಿ ಹಸಿರು ಬಣ್ಣಕ್ಕಿರುವ ಇವು ಸಿಹಿಯಾಗಿದೆ. ಇವು ಹೊರಬರುವ ಕಾಲದಲ್ಲಿ ಒಂದು ಬಗೆಯ ದುರ್ವಾಸನೆಯೂ ಹೊರಡುತ್ತಿದ್ದು ಕೀಟಗಳನ್ನು ಆಕರ್ಷಿಸುತ್ತದೆ. ಕೀಟಗಳು ಪೈಲಿಯಸ್ ಭಾಗದ ಮೇಲೆ ಕುಳಿತಾಗ ಅವಕ್ಕೆ ಬೀಜಾಣುಗಳು; ಅಂಟಿಕೊಳ್ಳುತ್ತವೆ. ಈ ರೀತಿ ಬೀಜಾಣುಗಳ ಪ್ರಸಾರ ನಡೆಯುತ್ತದೆ.



ಫ್ಯಾಲಸ್ ಇಂಪ್ಯೂಡಿಕಸ್ ಎನ್ನುವ ಕನ್ಯಾಶ್ರೀ

ಕನ್ಯಾಶ್ರೀಗಳಲ್ಲಿ ಅನೇಕ ಜಾತಿಗಳಿವೆ. ಅವುಗಳಲ್ಲಿ ಫ್ಯಾಲಸ್ ಇಂಪ್ಯೂಡಿಕಸ್, ಕ್ಲಾತ್ರಸ್, ಡಿಕ್ಟಿಯೋಫೋರ ಮುಂತಾದುವು ಮುಖ್ಯವಾದುವು. (ಎ.ಕೆ.ಕೆ.)

**ಕನ್ವಾಲ್ವುಲಸ್ :** ಕಲ್ವಾಲ್ವುಲೇಸೀ ಕುಟುಂಬಕ್ಕೆ ಸೇರಿದ ಬಳ್ಳಿಯಂಥ ಏಕವಾರ್ಷಿಕ ಅಥವಾ ಬಹುವಾರ್ಷಿಕ ಸಸ್ಯಜಾತಿ. ಸುಂದರವಾದ ಹೂಬಿಡುವ ಈ ಜಾತಿಯಲ್ಲಿ ಅನೇಕ ಪ್ರಬೇಧಗಳಿವೆ. ಇವು ಉಷ್ಣ ಹಾಗೂ ಸಮಶೀತೋಷ್ಣವಲಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆ. ಕೆಲವನ್ನು ತೋಟಗಳಲ್ಲಿ ಅಲಂಕಾರಕ್ಕಾಗಿ ಬೆಳಸುತ್ತಾರೆ. ಬಳ್ಳಿಯಂತೆ ನೆಲದ ಮೇಲೆ ಹರಡಿಕೊಂಡು ಅಥವಾ ಯಾವುದಾದರೂ ಆಸರೆಯನ್ನು ಹಬ್ಬಿ ಬೆಳೆಯುವುದೂ ಸರಳವಾದ ಅಥವಾ ಹಾಲೆಗಳುಳ್ಳ ಬಾಣದ ಮೊನೆಯಂಥ ಅಥವಾ ಹೃದಯದಾಕಾರದ ಎಲೆಗಳೂ ಸಾಧಾರಣವಾಗಿ ಎಲೆಗಳ ಕಂಕುಳಲ್ಲಿ ಒಂದೊಂದೇ ಹೂವಿರುವುದೂ ಹೂದಳ ಗಂಟೆಯಾಕಾರದ್ದೊ ಆಲಿಕೆಯಾಕಾರದ್ದೊ ಆಗಿರುವುದೂ ಈ ಗಿಡದ ಮುಖ್ಯ ಲಕ್ಷಣಗಳು. ಹೂಗಳು ನೀಲಿ ಅಥವಾ ಊದಾ ಬಣ್ಣಕ್ಕಿದ್ದು ಅವುಗಳ ಕೇಂದ್ರಭಾಗ ಬಿಳಿ ಅಥವಾ ಹಳದಿ ಬಣ್ಣದ್ದಾಗಿರುತ್ತದೆ.

ತೋಟಗಾರಿಕೆ ಪ್ರಾಮುಖ್ಯವನ್ನು ಪಡೆದಿರುವ ಪ್ರಭೇದಗಳು ಇವು: ಕ.ಮೇಜಸ್ ಮತ್ತು ಕ.ಮೈನರ್ ಅಥವಾ ಕ. ಟ್ರೈಕಲರ್.

ಇವುಗಳಲ್ಲಿ ಮೊದಲನೆಯದು ಮನೆಗಳ ಮೇಲೆ ಮತ್ತು ಅಲಂಕಾರದ ತಂತಿಗಳ ಮೇಲೆ ಹಬ್ಬಿಸುವುದಕ್ಕೆ ಯೋಗ್ಯವಾದ ಬಳ್ಳಿ. ಪ್ರತಿನಿತ್ಯ ಯಥೇಚ್ಛವಾಗಿ ಹೂಬಿಡುತ್ತದೆ. ಹೂಗಳು ಮುಂಜಾನೆ ಅರಳಿ ಮಧ್ಯಾಹ್ನ ಮುಚ್ಚಿಕೊಳ್ಳುತ್ತವೆಯಾದ್ದರಿಂದ ಈ ಗಿಡವನ್ನು ಮಾರ್ನಿಂಗ್ ಗ್ಲೋರಿ ಎಂದು ಕರೆಯುವುದುಂಟು. ಕ.ಮೈನರ್ ಎಂಬುದು ಚಿಕ್ಕದಾದ ವಾರ್ಷಿಕ ಬಳ್ಳಿ. ಬುಟ್ಟಿಗಳಲ್ಲೊ ಅಂಚುಗಳಲ್ಲೊ ಸುಲಭವಾಗಿ ಬೆಳೆಯಬುಹುದು. ಎರಡೂ ಬಗೆಗಳನ್ನು ಬೀಜದ ಮುಖಾಂತರ ವೃದ್ಧಿಸುತ್ತಾರೆ. ಬೀಜಗಳನ್ನು ಬೇಸಿಗೆಕಾಲ ಬಿಟ್ಟು ಇನ್ನಾವ ಕಾಲದಲ್ಲಾದರೂ ಬಿತ್ತಬಹುದು. (ಕೆ)

**ಕನ್ಹೇರಿ :** ಮುಂಬಯಿಯ ಹತ್ತಿರವಿರುವ ಒಂದು ಸ್ಥಳ. ಬಂಡೆಗಲ್ಲಿನಲ್ಲಿ ಕೊರೆದ ಎಪ್ಪತ್ತಕ್ಕೂ ಮೇಲ್ಪಟ್ಟು ಬೌದ್ಧ ಗುಹಾಂತರ್ದೇವಾಲಯಗಳೂ ವಿಹಾರಗಳೂ ಇಲ್ಲಿ ಇವೆ. ಸು. 180ರಲ್ಲಿ ಕೊರೆಯಲಾದ, ಹೀನಯಾನ ಪಂಥಕ್ಕೆ ಸಂಬಂಧಿಸಿದ ಚೈತ್ಯ ಗುಹಾಂತರ್ದೇವಾಲಯ ಇವುಗಳಲ್ಲಿ ಮಹತ್ತ್ವದ್ದು. ಇದರ ಸುತ್ತಮುತ್ತಲಿನ ಪ್ರದೇಶ ಗಿಡಮರಗಳಿಂದಲೂ ಜುಳುಜುಳು ಹರಿಯುವ ಝರಿಗಳಿಂದಲೂ ಕೂಡಿ ರಮ್ಯವಾಗಿದೆ. ಈ ಚೈತ್ಯ ಕರ್ಲಾ ಚೈತ್ಯಾಲಯದ ಹೀನ ಅನುಕರಣೆ. ಅದರ 2/3 ರಷ್ಟು ಮಾತ್ರ ಇದು ವಿಸ್ತಾರವಾಗಿದೆ. ಇದನ್ನು ಅಪೂರ್ಣವಾಗಿ ಕೆತ್ತಲಾಗಿದ್ದು; 5ನೆಯ ಶತಮಾನದ ವರೆಗೆ ಇದು ಹೀನಯಾನ ಪಂಥೀಯರ ಪ್ರಾರ್ಥನಾಮಂದಿರವಾಗಿತ್ತು. ಮಹಾಯಾನ ಪಂಥದವರು ಬೌದ್ಧ ಧರ್ಮವನ್ನು ಪುರುಜ್ಜೀವನಗೊಳಿಸುವ ಕಾಲಕ್ಕೆ ಇದರ ಹೊರಭಾಗದಲ್ಲಿ ಕೆಲವು ಸುಂದರ ದೇವತಾವಿಗ್ರಹಗಳನ್ನು ನಿರ್ಮಿಸಿದರು.

ಕನ್ಹೇರಿ ಗುಹೆ 3 : ಮಿಥುನ ಶಿಲ್ಪಗಳು

ಈ ಚೈತ್ಯಮಂಟಪವನ್ನು ಪ್ರವೇಶಿಸಲು ಮೂರು ದ್ವಾರಗಳಿವೆ. ಹಿಂಭಾಗದಲ್ಲಿ ಇದು ಅರ್ಧವರ್ತುಳಾಕಾರವಾಗಿದೆ. ಇದರ ಉದ್ದ 86', ಅಗಲ 40' ಮತ್ತು ಎತ್ತರ 59'. ಮಧ್ಯ ಅಂಕಣವನ್ನು; 38 ಕಂಬಗಳು ಬೇರ್ಪಡಿಸುತ್ತವೆ. ಇವು ಕೆಲಮಟ್ಟಿಗೆ ಕಾರ್ಲ ಚೈತ್ಯದ ಕಂಬಗಳನ್ನು ಹೋಲುತ್ತವೆ.

ಕನ್ಹೇರಿ ಗುಹೆ 2 : ಸ್ತೂಪ

ಈ ಗುಹಾಂತರ್ದೇವಾಲಯದ ಮುಂದಿನ ಅಂಗಳದಲ್ಲಿ ಕಾರ್ಲಾ ಚೈತ್ಯದಲ್ಲಿರುವಂತೆ ಎರಡು ಸಿಂಹಸ್ತಂಭಗಳಿವೆ. ಅವು ಇಲ್ಲಿ ಕಲ್ಲಿಗೆ ಹೊಂದಿಕೊಂಡಿವೆ; ಪ್ರತ್ಯೇಕವಾಗಿ ನಿಂತಿಲ್ಲ. (ಎ.ಎಂ.ಎ.)

**ಕಪಿಗಳು :** ಸ್ತನಿವರ್ಗದ ಪ್ರೈಮೇಟುಗಳ ಗಣದ ಆಂತ್ರೊಪಾಯ್ಡಿಯ ಉಪಗಣಕ್ಕೆ ಸೇರಿದ ಪ್ರಾಣಿಗಳು (ಮಂಕೀಸ್). ಮನುಷ್ಯ ಮತ್ತು ವಾನರಗಳನ್ನೂ ಒಳಗೊಂಡಿರುವ ಈ ಉಪಗಣದಲ್ಲಿ ಬಾಲವಿರುವ ಪ್ರಾಣಿಗಳನ್ನು ಮಾತ್ರ ಕಪಿಗಳೆನ್ನಬಹುದು. ಮಂಗ, ಕೋಡಗ, ಕೋತಿ ಮುಂತಾದುವು ಇವುಗಳ ಪರ್ಯಾಯ ನಾಮಗಳು;. ಆಂತ್ರೊಪಾಯ್ಡಿಯ ಉಪಗಣದಲ್ಲಿ ಪ್ಲಾಟಿರೈನಿ ಮತ್ತು ಕ್ಯಾಟರೈನಿ ಎಂಬ ಎರಡು ಬುಡಕಟ್ಟುಗಳಿವೆ. ಮೊದಲನೆಯ ಬುಡಕಟ್ಟಿನ ಕಪಿಗಳಿಗೆ ನವಪ್ರಪಂಚದ (ಅಮೆರಿಕ ಮುಂತಾದ ದೇಶಗಳು,) ಕಪಿಗಳೆಂತಲೂ ಎರಡನೆಯ ಬುಡಕಟ್ಟಿನ ಪ್ರಾಣಿಗಳಿಗೆ ಪ್ರಾಚೀನ ಪ್ರಪಂಚದ ಕಪಿಗಳೆಂತಲೂ ಹೆಸರು.

ನವಪ್ರಪಂಚದ ಕಪಿಗಳು ದಕ್ಷಿಣ ಮತ್ತು ಮಧ್ಯ ಅಮೆರಿಕಗಳಲ್ಲಿ ಹೆಚ್ಚಾಗಿ ಕಾಣಬರುತ್ತವೆ. ದಕ್ಷಿಣ ಮೆಕ್ಸಿಕೊವರೆಗೂ ಇವುಗಳ ಪ್ರಸಾರವುಂಟು. ಈ ಬುಡಕಟ್ಟಿನ ಕೋತಿಗಳಲ್ಲಿ ಮೂಗಿನ ಹೊಳ್ಳೆಗಳು, ಮೇಲ್ಮುಖವಾಗಿ ತೆರೆದಿವೆ. ಅವುಗಳ ಮಧ್ಯೆ ಅಗಲವಾದ ಅಸ್ಥಿತಟ್ಟಿಯ ಗೋಡೆಯಿದೆ.

ಬಹುಪಾಲು ಕಪಿಗಳಲ್ಲಿ ಬಾಲ ಸುರುಳಿ ಸುತ್ತಿಕೊಳ್ಳುವಂತಿದೆ. ಎದುರು ಬದರಾಗಿಲ್ಲದ ಕಾರಣ ಹೆಬ್ಬೆರಳನ್ನು ಅದೇ ಹಸ್ತದ ಇತರ ಬೆರಳುಗಳಿಗೆ ಮುಟ್ಟಿಸಲು ಸಾಧ್ಯವಿಲ್ಲ. ದವಡೆಯಲ್ಲಿ ಆಹಾರ ಶೇಖರಿಸಬಹುದಾದ ಚೀಲಗಳಿಲ್ಲ. ಕುಂಡೆಗಳ ಮೇಲೆ ರೋಮಗಳಿವೆ. ಕಿವಿಯೊಳಗಿನ ಟಿಂಪ್ಯಾನಿಕ್ ಮೂಳೆ ಸರಳವಾಗಿದೆ. ಅದರಲ್ಲಿ ಯಾವ ಬಗೆಯ ಎಲುಬಿನ ಕೊಳವೆಯೂ ಇಲ್ಲ. ಕೆರೋಟಿಡ್ ರಕ್ತನಾಳ ಪರಯಾಟಿಕ್ ಮೂಳೆಯ ಹಿಂಭಾಗದಲ್ಲಿ ಸಾಗಿ ಮೆದುಳನ್ನು ಸೇರುತ್ತದೆ. ಈ ಕಪಿಗಳಲ್ಲಿ ಮೂರು ಮುಂದವಡೆ ಹಲ್ಲುಗಳಿವೆ, ಈ ಬುಡಕಟ್ಟಿನಲ್ಲಿ ಹಪಾಲಿಡೀ ಅಥವಾ ಕ್ಯಾಲ್ಲಿಥ್ರಿಸಿಡೀ (ಹಪಾಲೆ ಮತ್ತು ಮಾರ್ಮೊಸೆಟ್ ಕಪಿಗಳು) ಮತ್ತು ಸೆಬಿಡೀ (ಕಪೂಚಿನ್ ಮತ್ತು ಜೇಡರ ಕೋತಿಗಳು) ಎಂಬ ಎರಡು ಕುಟುಂಬಗಳಿವೆ. ಮೊದಲನೆಯ ಕುಟುಂಬದ ಕೋತಿಗಳಲ್ಲಿ ಮುಂದಿನ ಕಾಲುಗಳು ಹಿಂದಿನವಕ್ಕಿಂತ ಚಿಕ್ಕವು. ಕಿರುಬೆರಳು ಬಿಟ್ಟು ಉಳಿದೆಲ್ಲ ಬೆರಳುಗಳಲ್ಲಿ ಉಗುರುಗಳಿಗೆ ಬದಲಾಗಿ ಪಂಜಗಳಿವೆ. ಕಿವಿಯ ಹಾಲೆ ಕೂದಲಿನಿಂದ ಮುಚ್ಚಿದೆ. ಬಾಲ ಪೊದೆಯಂತಿದೆ; ಸುರಳಿ ಸುತ್ತಲಾರದು. ಹೆಬ್ಬರಳು ಉದ್ದ. ಅದು ಇತರ ಬೆರಳುಗಳಿಗೆ ಅಭಿಮುಖವಾಗಿಲ್ಲ. ಈ ಕಪಿಗಳಿಗೆ ಕೀಟ ಮತ್ತು ಹಣ್ಣುಗಳೇ ಆಹಾರ. ಹೆಣ್ಣು ಸಾಮಾನ್ಯವಾಗಿ ಒಂದು ಸಲಕ್ಕೆ ಎರಡು ಅಥವಾ ಮೂರು ಮರಿಗಳನ್ನು ಹೆರುತ್ತದೆ. ಎರಡನೆಯ ಕುಟುಂಬವಾದ ಸೆಬಿಡೀಗೆ ಸೇರಿದ ಕೋತಿಗಳಲ್ಲಿ ಬಾಲ ಸುರುಳಿ ಸುತ್ತಿಕೊಳ್ಳುವಂತಿದೆ. ಎಲ್ಲ ಬೆರಳುಗಳಲ್ಲೂ ಉಗುರುಗಳಿವೆ. ಹೆಬ್ಬೆರಳು ಇತರ ಬೆರಳುಗಳಿಗೆ ಅಭಿಮುಖವಾಗಿದೆ. ಕಿವಿಯ ಹಾಲೆಯನ್ನು ಕೂದಲು ಆವರಿಸಿಲ್ಲ.

ಪ್ರಾಚೀನ ಪ್ರಪಂಚದ ಕಪಿಗಳಲ್ಲಿ ಮೂಗಿನ ಹೊಳ್ಳೆಗಳು, ಕೆಳಮುಖವಾಗಿವೆ. ಹೊಳ್ಳೆಗಳ ಮಧ್ಯೆ ಕಿರಿದಾದ ಅಸ್ಥಿತಟ್ಟೆಯ ಗೋಡೆಯಿದೆ. ಬಾಲ ಸುರುಳಿ ಸುತ್ತಿಕೊಳ್ಳುವುದೇ ಇಲ್ಲ. ಹೆಬ್ಬೆರಳು ಇತರ ಬೆರಳುಗಳಿಗೆ ಅಭಿಮುಖವಾಗಿದೆ. ವಾನರಗಳನ್ನು (ಏಪ್ಸ್) ಬಿಟ್ಟು ಉಳಿದೆಲ್ಲ ಕಪಿಗಳಲ್ಲಿ ದವಡೆ ಚೀಲವಿದೆ. ಅಂತೆಯೇ ವಾನರ ಹಾಗೂ ಲಂಗೂರ್‌ಗಳನ್ನುಳಿದು ಇತರ ಕಪಿಗಳಲ್ಲಿ ಕುಂಡೆ ರೋಮರಹಿತ. ಕಿವಿಯೊಳಗಿನ ಟಿಂಪ್ಯಾನಿಕ್ ಮೂಳೆಯಲ್ಲಿ ಒಂದು ಎಲುಬಿನ ಕೊಳವೆಯಿದೆ. ಕೆರೋಟಿಡ್ ರಕ್ತನಾಳ ಪರಯಾಟಿಕ್ ಮೂಳೆಯನ್ನು ಕೊರೆದುಕೊಂಡು ಸಾಗಿ ಮೆದುಳನ್ನು ತಲುಪುತ್ತದೆ. ಇವುಗಳಲ್ಲಿ ಮುಂದವಡೆ ಹಲ್ಲುಗಳ ಸಂಖ್ಯೆ ಎರಡು. ಈ ಗುಂಪಿನಲ್ಲಿ ನಾಲ್ಕು ಕುಟುಂಬಗಳಿವೆ. ಅವು : 1 ಸೈನೋಮಾರ್ಫ (ಸರ್ಕೋಪಿಥಿಸಿ) –ಬೆಬೂನ್ ಮತ್ತು ಮ್ಯಾಂಡ್ರಿಲ್‌ಗಳು. 2 ಸಿಮ್ಮೆಯಿಡಿ ಅಥವಾ ಪಾಂಗಿಡೀ ಅಥವಾ ಆಂತ್ರೋಪೋಮಾರ್ಫ–ಗೋರಿಲ್ಲ, ಚಿಂಪಾಂಜಿ, ಗಿಬನ್ ಮತ್ತು ಒರಾಂಗೂಟಾನ್. 3 ಕೊಲೊಬಿಡೀ–ನೀಲಗಿರಿಯ ಲಂಗೂರ್‌ಗಳು ಮತ್ತು 4 ಹೋಮಿನಿಡೀ–ಮಾನವ. ಇವುಗಳ ವಿವರಗಳು ಆಯಾ ಶೀರ್ಷಿಕೆಗಳಲ್ಲಿವೆ (**ನೋಡಿ– ಪ್ರೈಮೇಟುಗಳು**).

(ಎಲ್.ಎಸ್.ಜಿ.)

**ಕಪಿಟ್ ಜಾ, ಪೀಟರ್ :** 1894–1984. ಸೋವಿಯತ್ ರಷ್ಯದ ಭೌತವಿಜ್ಞಾನಿ. ಸೋವಿಯತ್ ರಷ್ಯದ ಕೋನ್‌ಸ್ಟಾಟ್ ನಗರದಲ್ಲಿ 26 ಜೂನ್ 1894ರಂದು ಹುಟ್ಟಿದ. ಇವನ ತಂದೆ ಮತ್ತು ತಾತ ಇಬ್ಬರೂ ಸೈನ್ಯದಲ್ಲಿ ಅಧಿಕಾರಿಗಳಾಗಿದ್ದವರು. ಲೆನಿನ್‌ಗ್ರಾಡ್ (ಹಿಂದೆ ಪೆಟ್ರೋಗ್ರಾಡ್ ಎಂಬ ಹೆಸರಿದ್ದ) ನಗರದಲ್ಲಿರುವ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ 1919ರಲ್ಲಿ ಪದವಿ ಪಡೆದು, ಅಲ್ಲಿಯೇ 1921ರ ವರೆಗೆ ಅಧ್ಯಾಪಕನಾಗಿದ್ದ. ಅನಂತರ ಇಂಗ್ಲೆಂಡಿನಲ್ಲಿರುವ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಕ್ಯಾವೆಂಡಿಷ್ ಪ್ರಯೋಗಶಾಲೆಯಲ್ಲಿ ಲಾರ್ಡ್ ರುದರ್ ಫೋರ್ಡನೊಂದಿಗೆ ಸಂಶೋಧನೆ ನಡೆಸಿದ. 1924ರಲ್ಲಿ ಅದೇ ಪ್ರಯೋಗಶಾಲೆಯಲ್ಲಿ ಕಾಂತತೆಯ ಪ್ರಯೋಗಶಾಲೆಗೆ ಸಹಾಯಕ ನಿರ್ವಾಹಕನಾಗಿ ನೇಮಕಗೊಂಡ 1929ರಲ್ಲಿ ರಾಯಲ್ ಸೊಸೈಟಿಗೆ ಚುನಾಯಿತನಾದ. 200ವರ್ಷಗಳಲ್ಲಿ ಇದಕ್ಕೆ ಸದಸ್ಯರಾದ ಪರಕೀಯರಲ್ಲಿ ಈತನೇ ಮೊದಲನೆಯವ. ಅನಂತರ ಅದೇ ಸೊಸೈಟಿಯ ಮೆಸ್ಸೆಲ್ ಪ್ರಾಧ್ಯಾಪಕನಾದಾಗ ಸೊಸೈಟಿ ಈತನಿಗೋಸ್ಕರವೇ ಮಾಂಡ್ ಪ್ರಯೋಗಶಾಲೆಯನ್ನು ಕಟ್ಟಿಸಿತು (1933).

ಯಾವಾಗಲೂ ಹೋಗುವಂತೆ 1934ರಲ್ಲೂ ಕೆಪಿಟ್‌ಜಾ ತನ್ನ ಉದ್ಯೋಗಕ್ಕೆ ಸಂಬಂಧಪಟ್ಟ ಸಭೆಗೆಂದು ಸೋವಿಯತ್ ರಷ್ಯಕ್ಕೆ ಹೋದ; ಆದರೆ ಮತ್ತೆ ಅಲ್ಲಿಂದ ಆತ ವಾಪಸ್ಸು ಬರಲಿಲ್ಲ. 1935ರಲ್ಲಿ ಮಾಂಡ್ ಪ್ರಯೋಗಶಾಲೆಯನ್ನು ಸೋವಿಯತ್ ಸರ್ಕಾರ ಅಸಲುಬೆಲೆಗೆ ಕೊಂಡುಕೊಂಡು ಮಾಸ್ಕೊ ನಗರದ ವಿಜ್ಞಾನ ಅಕಾಡೆಮಿಯ ಭೌತವಿಜ್ಞಾನ ಸಮಸ್ಯೆಗಳ ಇನ್‌ಸ್ಟಿಟ್ಯೂಟಿಗೆ ವರ್ಗ ಮಾಡಿತು. ಅಲ್ಲಿ ಕಪಿಟ್‌ಜಾ ಅದರ ಕಾರ್ಯ ನಿರ್ವಾಹಕನಾದ. ಅಲ್ಲದೆ ಆತನಿಗೆ ಮಿತಿಯಿಲ್ಲದಷ್ಟು ಅನುಕೂಲತೆಗಳೂ ದೊರೆತವು.

ಕೆಳ ಉಷ್ಣತಾ ಭೌತವಿಜ್ಞಾನ ಮತ್ತು ಕಾಂತತೆಗಳ ಮೇಲೆ ಕಪಿಟ್‌ಜಾ ಬಹಳ ಸಂಶೋಧನೆಗಳನ್ನು ನಡೆಸಿದ್ದಾನೆ. ಈತ ಹೀಲಿಯಂ ಅನಿಲವನ್ನು ಹೊಸ ರೀತಿಯಲ್ಲಿ ದ್ರವೀಕರಣ ಮಾಡುವುದನ್ನು ಆವಿಷ್ಕರಿಸಿದ (**ನೋಡಿ– ಅನಿಲ-ದ್ರವೀಕರಣ**). ಗಾಳಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಮತ್ತು ಕಡಿಮೆ ಬೆಲೆಯಲ್ಲಿ ದ್ರವೀಕರಿಸು ತಿರುಬಾನಿಯನ್ನು ಕಂಡುಹಿಡಿದ. ಆಕ್ಸಿಜನ್ ದ್ರವೀಕರಣದ ಸಂಬಂಧವಾಗಿ ಈತ ಮಾಡಿದ ಸಂಶೋಧನೆಗಳಿಂದ ಕೈಗಾರಿಕೆಗಳ ಬೆಳೆವಣಿಗೆಗೆ, ಅದರಲ್ಲೂ ಸೋವಿಯತ್ ರಷ್ಯದ ಉಕ್ಕು ತಯಾರಿಕೆಗೆ ಬಹಳ ಅನುಕೂಲವಾಯಿತು. ಸೋವಿಯತ್ ದೇಶದ ಪರಮಾಣು ಮತ್ತು ಹೈಡ್ರೊಜನ್ ಬಾಂಬುಗಳ ತಯಾರಿಕೆಯಲ್ಲಿ ಈತನ ಪಾತ್ರ ಬಲು ದೊಡ್ಡದೆಂದು ಹಲವರು ಅಭಿಪ್ರಾಯ ಪಡುತ್ತಾರೆ. ಪ್ಲಾಸ್ಮ ಭೌತವಿಜ್ಞಾನದಲ್ಲಿಯೂ ಕಪಿಟ್‌ಜಾ ಸಂಶೋಧನೆಗಳನ್ನು ನಡೆಸಿದ್ದಾನೆ. ಸೋವಿಯತ್ ರಷ್ಯದಲ್ಲಿ 1955ರಂದು ಸ್ಥಾಪಿಸಲ್ಪಟ್ಟ ಅಂತರಗ್ರಹ ಮಂಡಲಿಗೆ ಈತ ಮುಖ್ಯಸ್ಥನಾಗಿದ್ದ. 1957ರಲ್ಲಿ ಉಡಾಯಿಸಿದ ಎರಡು ಕೃತಕ ಉಪಗ್ರಹಗಳಿಗೆ ಈತನೇ ಹೆಚ್ಚು ಕಾರಣ ಎಂದು ನಂಬಿಕೆ.

ಕಪಿಟ್‌ಜಾನಿಗೆ ಹಲವಾರು ಗೌರವ ಪದವಿಗಳು ಬಂದಿದೆ. 1946ರಲ್ಲಿ ಈತ ವಿಜ್ಞಾನದ ರಾಷ್ಟ್ರೀಯ ಅಕಡೆಮಿಯ ಸದಸ್ಯನಾಗಿ ಚುನಾಯಿತನಾದ. ಸೋವಿಯತ್ ಸರ್ಕಾರದಿಂದ ಈತನಿಗೆ ಸ್ಟಾಲಿನ್ ಪ್ರಶಸ್ತಿ, ಆರ್ಡರ್ ಆಫ್ ಲೆನಿನ್ ಪ್ರಶಸ್ತಿ ಮತ್ತು ಇತರ ಬಹುಮಾನಗಳು ಬಂದಿವೆ. ಕಾಂತತೆ ಮತ್ತು ಅತಿಶೈತ್ಯ ಭೌತವಿಜ್ಞಾನ ಕ್ಷೇತ್ರಗಳಲ್ಲಿ ನಡೆಸಿದ ಸಂಶೋಧನೆಗಳಿಗಾಗಿ 1978ರಲ್ಲಿ ಭೌತವಿಜ್ಞಾನದ ನೊಬೆಲ್ ಪಾರಿತೋಷಕವನ್ನು ಕಪಿಟ್‌ಜಾ ಪಡೆದನು. ವೈಜ್ಞಾನಿಕ ಸಂಶೋಧನೆಗಳು ವಿನಾಶಕಾರಿ ಉದ್ದೇಶಗಳ ಬದಲು ರಚನಾತ್ಮಕ ಉದ್ದೇಶಗಳಿಗೆ ಒದಗಬೇಕೆಂದು ಆಶಿಸಿದ ಕಪಿಟ್‌ಜಾ ಆ ದಿಸೆಯಲ್ಲಿ ದುಡಿದ. (ಎನ್.ಜಿ.ಪಿ.,ಎ.ಕೆ.ಬಿ.)

**ಕಪಿಲ :** ಸಾಂಖ್ಯದರ್ಶನ ಪ್ರವರ್ತಕ. ಕಾಲ ಯಾವುದೆಂದು ತೀರ್ಮಾನವಾಗಿಲ್ಲ ಐತಿಹಾಸಿಕ ವ್ಯಕ್ತಿಯೋ ಅಥವಾ ಕೇವಲ ಪೌರಾಣಿಕ ವ್ಯಕ್ತಿಯೋ ಹೇಳಲು ಸಾಧ್ಯವಿಲ್ಲ ಅಂತೂ ವೈದಿಕ ಋಷಿಗಳ ಪರಂಪರೆಯಲ್ಲಿ ಯಾರೂ ಇವನನ್ನು ಸ್ಮರಿಸಿಲ್ಲ, ಭಾಗವತ ಪುರಾಣದ ಪ್ರಕಾರ ಕಪಿಲ ಮಹಾವಿಷ್ಣುವಿನ ಅವತಾರ. ಸಿದ್ಧರಲ್ಲಿ ತಾನು ಕಪಿಲನೆಂದು ಕೃಷ್ಣ ಭಗವದ್ಗೀತೆಯಲ್ಲಿ ಹೇಳಿಕೊಂಡಿದ್ದಾನೆ. ಸಗರಪುತ್ರರನ್ನು ತನ್ನ ತಪಃ ಪ್ರಭಾವದಿಂದ ಸುಟ್ಟವ ಈತನೇ ಇರಬಹುದೆಂದು, ಹಲವರ ಮತ. ಅಂತೂ ಕಪಿಲ ಸಾಂಖ್ಯಮತ ಪ್ರವರ್ತಕನೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ವಿದ್ವಾಂಸರ ಅಭಿಪ್ರಾಯದ ಪ್ರಕಾರ ಕಪಿಲಸೂತ್ರ ಅಥವಾ ಸಾಂಖ್ಯಸೂತ್ರವೆಂಬ ಗ್ರಂಥ 12ನೆಯ ಶತಮಾನದ್ದು. ಬಹುಶಃ ಈ ಸೂತ್ರಗ್ರಂಥ ಕಪಿಲ ಋಷಿಯ ಸ್ವಂತಕೃತಿಯಲ್ಲ. ತತ್ತ್ವಸಮಾಸ ಎಂಬ ಸಾಂಖ್ಯಗ್ರಂಥದ ಪ್ರಸ್ತಾವನೆಯಲ್ಲಿ ಈತ ಆಸುರಿ (**ನೋಡಿ**) ಎನ್ನುವವನಿಗೆ ಪ್ರತ್ಯಕ್ಷನಾಗಿ ತತ್ತ್ವ ಸಮಾಸವನ್ನು ಬೋಧಿಸಿದ ವಿವರಣೆಯುಂಟು. ಬಹುಶಃ ಗಾತ್ರದಲ್ಲಿ ಬಹು ಚಿಕ್ಕದಾದ ತತ್ತ್ವಸಮಾಸವೇ ಸಾಂಖ್ಯದರ್ಶನದ ಆದಿಯಾಗಿರಬಹುದು. ಈ ದರ್ಶನದ ಅತ್ಯುತ್ತಮ ಹಾಗೂ ಶಾಸ್ತ್ರಯುಕ್ತವಾದ ಗ್ರಂಥ ಈಶ್ವರಕೃಷ್ಣನೆಂಬಾತ ಬರೆದ ಸಾಂಖ್ಯಕಾರಿಕಾ. ಈ ಗ್ರಂಥದ ಕೊನೆಯಲ್ಲಿ ಸಾಂಖ್ಯದರ್ಶನ ಕಪಿಲ ಮುನಿಯಿಂದ ಬೋಧಿಸಲ್ಪಟ್ಟು ಆಸುರಿ, ಪಂಚಶಿಖಾದಿಗಳಿಂದ ವಿಸ್ತೃತವಾಗಿ ಶಿಷ್ಯಪರಂಪರಾನುಗತವಾಗಿ ತನ್ನವರೆಗೆ ಬಂದು ತಾನು ಕಾರಿಕಾರೂಪದಲ್ಲಿ ತನ್ನ ಸಾಂಖ್ಯಕಾರಿಕಾ ಗ್ರಂಥವನ್ನು ಬರೆದೆನೆಂದು ಈಶ್ವರಕೃಷ್ಣ ಹೇಳುತ್ತಾನೆ (**ನೋಡಿ: ಸಾಂಖ್ಯದರ್ಶನ**). (ಕೆ.ಬಿ.ಆರ್.)

**ಕಪಿಲರ್ :** ತಮಿಳು ಸಾಹಿತ್ಯ ಚರಿತ್ರೆಯಲ್ಲಿ ಈ ಹೆಸರಿರುವ ನಾಲ್ಕು ಕವಿಗಳಿದ್ದಾರೆ. ಸಂಗಂ ಕಾಲದಲ್ಲೊಬ್ಬನೂ ಅನಂತರದ ಕತ್ತಲ ಯುಗ (3–6ನೆಯ ಶತಮಾನ) ದಲ್ಲೊಬ್ಬನೂ ಮಧ್ಯಕಾಲದಲ್ಲೊಬ್ಬನೂ (6ನೆಯ ಶತಮಾನದ ಅನಂತರ) ಇದ್ದಾರೆ. ಈ ನಾಲ್ವರೂ ಒಬ್ಬರೇ ಎಂದು ಈ ಶತಮಾನದ ಆರಂಭದ ತನಕವೂ ಪಂಡಿತರು ಎಣಿಸಿದ್ದರು. ಆದರೆ ಈಗ ಆ ಹೆಸರಿನ ನಾಲ್ವರಿದ್ದಾರೆಂದು ಎಲ್ಲರೂ ಒಪ್ಪುತ್ತಾರೆ.

ತೊಲ್‌ಕಪಿಲರ್ ಸಂಗಂ ಸಾಹಿತ್ಯದಲ್ಲಿ 20 ಹಾಡುಗಳನ್ನು ರಚಿಸಿದ್ದಾನೆ. ಕತ್ತಲ ಯುಗದ ಕಪಿಲರ್ ಇನ್ನಾನಾರ್ಪದ್ ಎಂಬ (ಯಾವಾವುದು ಕೆಟ್ಟುದು ಎಂದು ಹೇಳುವ) ನಲವತ್ತು ಪದ್ಯಗಳನ್ನು ಹಾಡಿದ್ದಾನೆ. ಮಧ್ಯಕಾಲದ ಕಪಿಲದೇವರ್ ಇರಟ್ಟೈ ಮಣಿಮಾಲೈ ಎಂಬ ಭಕ್ತಿಕೃತಿಯನ್ನು ರಚಿಸಿದ್ದಾನೆ. ಇವರು ಮೂವರಲ್ಲದೆ ಸಂಗಂ ಸಾಹಿತ್ಯದಲ್ಲಿ ಹೆಚ್ಚು ಸಂಖ್ಯೆಯ ಹಾಡುಗಳನ್ನು ಹಾಡಿರುವ ಕಪಿಲರ್ ಅನ್ನು ಕುರಿತು ಇಲ್ಲಿ ವಿವೇಚಿಸಲಾಗುತ್ತದೆ. ಈ ಕಪಿಲರ್ ಬರೆದವೆಂದು ಹೇಳಲಾದ 206 ಹಾಡುಗಳು ಸಂಗಂ ಕಾಲದ ಕಾವ್ಯ ಸಂಗ್ರಹದಲ್ಲಿ ದೊರೆಯುತ್ತವೆ.

ಈತನೇ ತನ್ನನ್ನು ಅಂದಣನ್–ಎಂದು ಹೇಳಿಕೊಂಡಿದ್ದಾನೆ. ಇತರ ಕವಿಗಳೂ ಅದನ್ನೇ ಹೇಳುತ್ತಾರೆ. ಅಂದಣನ್ ಎಂಬುದು ಇಂದಿನ ಬ್ರಾಹ್ಮಣ ಪದಕ್ಕೆ ಸಮಾನಾರ್ಥಕ. ಈತನ ಹಾಡುಗಳಲ್ಲಿ ಬರುವ ರಾಮಾಯಣ ಭಾರತ ಕಥಾಸನ್ನಿವೇಶಗಳನ್ನೊಳಗೊಂಡ ಉಪಮೆಗಳು, ಕುದುರೆಯ ಕುತ್ತಿಗೆಯ ಮೇಲಿನ ಕೂದಲನ್ನು ಬ್ರಾಹ್ಮಣ ಕುಮಾರನ ಜುಟ್ಟಿನಂತಿತ್ತೆಂದು ವರ್ಣಿಸಿರುವುದು, ಈ ವಿಷಯಗಳನ್ನು ಪುಷ್ಟೀಕರಿಸುತ್ತವೆಂಬುದು ಗಮನಿಸತಕ್ಕ ವಿಷಯ. ಈತನ ಜೀವನಚರಿತ್ರೆಯನ್ನು ಕುರಿತು ಬೇರೆ ವಿವರಗಳು ದೊರೆಯುವುದಿಲ್ಲ. ಆದರೂ ಈತನ ಹಾಡುಗಳಿಂದ ಇವನ ಬಾಳಿನ ಕೆಲ ಸನ್ನಿವೇಶಗಳನ್ನು ಎತ್ತಿ ಹೇಳಬಹುದು.

ಈತ ವೇಳ್‌ಪಾರಿ ಎಂಬ ಅರಸನ ಪ್ರಾಣಸ್ನೇಹಿತನಾಗಿಯೂ ಆಸ್ಥಾನಕವಿಯಾಗಿಯೂ ಇದ್ದ. ಆದರೂ ಇತರ ಕೆಲವು ರಾಜರಲ್ಲಿಗೆ ಹೋಗಿ ಅವರನ್ನು ಕುರಿತೂ ಈತ ಹಾಡಿದ್ದುಂಟು. ತಿರುಮುಡಿಕ್ಕಾರಿ ಎಂಬೊಬ್ಬ ಅರಸನ ಉದಾರತೆಯನ್ನು ಈತ ಹೊಗಳಿದ್ದಾನೆ. ಪೇಗನ್ ಎಂಬ ಇನ್ನೊಬ್ಬ ಅರಸ ತನ್ನ ಪತ್ನಿಯಾದ ಕಣ್ಣಗಿಯನ್ನು ತೊರೆದಿದ್ದಾಗ ಅವರಿಬ್ಬರನ್ನೂ ಕಪಿಲರ್ ಪುನಃ ಸೇರಿಸಿದನೆಂದು ಕಥೆ ಇದೆ. ವೇಳ್‌ಪಾರಿಯ ಕುಮಾರಿಯರು ಮದುವೆಯ ವಯಸ್ಕರಾಗಲು; ಚೇರ, ಚೋಳ, ಪಾಂಡ್ಯರೆಂಬ ರಾಜತ್ರಯರು (ಮೂವೇಂದರ್) ಅವರನ್ನು, ಮದುವೆ ಮಾಡಿಕೊಳ್ಳಲು ಬಯಸಿದರು. ಆದರೆ ವೇಳ್‌ಪಾರಿ ಅವರಿಗೆ ತನ್ನ ಕುಮಾರಿಯರನ್ನು ಮದುವೆ ಮಾಡಿಕೊಡಲೊಪ್ಪಲಿಲ್ಲ. ಆದುದರಿಂದ ಕುಪಿತರಾದ ರಾಜರು ವೇಳ್‌ಪಾರಿಯ ಪರಂಬುಮಲೆಯೆಂಬ ರಾಜಧಾನಿಯನ್ನು ಮುತ್ತಿ, ಯುದ್ಧಮಾಡಿ, ಅದನ್ನು ವಶಮಾಡಿಕೊಂಡರು. ಆಮೇಲೆ ವೇಳ್‌ಪಾರಿಯೂ ಸತ್ತುಹೋದ. ಕಪಿಲರ್ ಇವನ ಕುಮಾರಿಯರಿಗೆ ವಿವಾಹಮಾಡಲು ಯೋಚಿಸಿ ಹಲವು ರಾಜರ ಹತ್ತಿರ ಹೋದ. ಮಲೆನಾಡಿಗೆ ಹೋಗಿ ಶೆಲ್ವಕಡುಂಗೋವಾಳಿಯಾದನ್ ಎಂಬವನನ್ನು ಹೊಗಳಿ ಹತ್ತು ಕವಿತೆಗಳನ್ನು ಹಾಡಿ, ಬಹುಮಾನ ಪಡೆದ. ಇತರ ಕೆಲವು ರಾಜರ ಹತ್ತಿರವೂ ಹೋದನಾದರೂ ಎಲ್ಲಿಯೂ ತನ್ನ ಉದ್ದೇಶ ಸಫಲವಾಗದಿರಲು ಆ ಕುಮಾರಿಯರನ್ನು ಬ್ರಾಹ್ಮಣರ ವಶಕ್ಕೆ ಕೊಟ್ಟು, ತಾನು ಉತ್ತರಾಭಿಮುಖಿಯಾಗಿ ಪ್ರಯಾಣ ಮಾಡುತ್ತ ಉಪವಾಸವ್ರತಮಾಡಿ ಜೀವ ಬಿಟ್ಟನೆಂದು ಹೇಳುತ್ತಾರೆ.

ಈತ ಕುರಿಂಜಿತ್ತಿಣೈ (ವಿವಾಹಪೂರ್ವದ ಪ್ರೇಮದ ವರ್ಣನೆ. ಇದರಲ್ಲಿ ಬೆಟ್ಟಸ್ಥಳ, ಚಳಿಗಾಲ ಮತ್ತು ಮಧ್ಯರಾತ್ರಿಯ ವರ್ಣನೆಗಳಿರುತ್ತವೆ) ಹಾಡುವುದರಲ್ಲಿ ಬಲ್ಲಿದ. ಈತನ ಹಾಡುಗಳಲ್ಲಿ 91 ಕುರಿಂಜಿತ್ತಿಣೈ ಜಾತಿಗೆ ಸೇರಿದವು. ಕುರಿಂಜಿಪಾಟ್ಟು ಎಂಬ 261 ಚರಣಗಳುಳ್ಳ ಒಂದು ನೀಳ್ಗವಿತೆಯನ್ನೂ ಈತ ರಚಿಸಿದ್ದಾನೆ. ಈ ಕವಿತೆ ಆರ್ಯರಾಜನಾದ ಬೃಹದತ್ತನಿಗೆ ತಮಿಳು ಸಾಹಿತ್ಯರಸವನ್ನು ತಿಳಿಸಿಕೊಡುವುದಕ್ಕಾಗಿ ರಚಿತವಾದುದೆನ್ನುತ್ತಾರೆ. ಪ್ರಣಯಕಾರಣದಿಂದ ಶರೀರಕ್ಷೀಣತೆಯನ್ನು ಪಡೆದಿದ್ದ ನಾಯಿಕೆಯ ಸ್ಥಿತಿಯ ವರ್ಣನೆ ಇದರಲ್ಲಿ ಇದೆ. ನಾಯಿಕೆ ಸಖಿಯೊಡನೆ ಸ್ನಾನಮಾಡಿ, ಹಲವು ಬಗೆಯ ಹೂಗಳನ್ನು ಕೊಯ್ದು ಬೆಟ್ಟದಲ್ಲಿ ರಾಶಿಹಾಕಿದಳು ಎಂಬುದನ್ನು ಬಣ್ಣಿಸುವಾಗ 99 ಹೂಗಳ ಹೆಸರು ಬರುತ್ತದೆ.

ಸಾಮಾನ್ಯವಾಗಿ ಈತ ಸರಳವಾದ ಉಪಮೆಗಳ ಮೂಲಕ ಮಹತ್ತಾದ ವಿಷಯಗಳನ್ನು ಬಣ್ಣಿಸುವುದರಲ್ಲಿ ಬಲ್ಲಿದ. ನಾಯಿಕೆಯ ಆತ್ಮ ಕಿರಿದು, ಆದರೆ ಕಾಮ ಹಿರಿದು ಎಂಬುದನ್ನು, ಹಲಸಿನ ಮರದಲ್ಲಿಯ ಚಿಕ್ಕ ಕೊಂಬೆಯಲ್ಲಿ ದೊಡ್ಡ ಹಣ್ಣು ತೂಗುತ್ತಿರುವಂತೆ ಎಂದು ವರ್ಣಿಸುತ್ತಾನೆ.

ಪರ್ವತಪ್ರದೇಶದಲ್ಲಿಯ ಹಲವು ಪ್ರಕೃತಿದೃಶ್ಯಗಳನ್ನು ಅಲ್ಲಲ್ಲಿ ರಸವತ್ತಾಗಿ ವರ್ಣಿಸಲಾಗಿದೆ. ಕಿರಿಯ ಬೆಟ್ಟದಲ್ಲಿರುವ ಹೊಂಡದಲ್ಲಿ ಹಲವು ಹಣ್ಣುಗಳಿಂದುಂಟಾದ ಜೇನನ್ನು ನೀರೆಂದು ಕುಡಿದ ನವಿಲು ಆಯಾಸಗೊಂಡು ನಿಲ್ಲುತ್ತದೆ; ಅವರೆಯನ್ನು ತುಂಬ ತಿಂದ ಮಂಗ ಹಲವು ಸಾಮಾನುಗಳನ್ನು ಮಾರುವವರ ಚೀಲದಂತೆ ತೋರುತ್ತದೆ; ಹುಲಿಯನ್ನೆದುರಿಸಿದ ಆನೆ ಕನಸಿನಲ್ಲೂ ಅದನ್ನು ನೋಡಿ ಬೆಚ್ಚಿ ಎದ್ದು ಹೊಸದಾಗಿ ಹೂಬಿಟ್ಟ ಬೇಂಗೆಯ ಮರವನ್ನು ನೋಡಿ ಹುಲಿಯೆಂದು ಭ್ರಮಿಸಿ, ಹಾಯ್ದು, ಕೋಪ ತಣಿದ ಅನಂತರ ಅದನ್ನು ಮರವೆಂದು ತಿಳಿದು ನಾಚುತ್ತದೆ.–ಎಂಬಂಥ ಹಲವು ದೃಶ್ಯಗಳು ಇಲ್ಲಿಯ ಹಾಡುಗಳಲ್ಲಿ ಕಾಣಬರುತ್ತವೆ.

ಕಪಿಲರ್ ತಾನು ಬಾಳಿದ ಕಾಲದಲ್ಲಿಯೇ ಇತರ ಕವಿಗಳ ಹೊಗಳಿಕೆಗೆ ಪಾತ್ರನಾದವ. ಈತನ ಜ್ಞಾನವನ್ನೂ ಕವಿತಾಸಾಮಾರ್ಥ್ಯವನ್ನೂ ಯಶಸ್ಸನ್ನೂ ಅನೇಕ ಕವಿಗಳು ಕೊಂಡಾಡಿದ್ದಾರೆ. (ಎಸ್.ವಿ.ಎಸ್.)

**ಕಪಿಲವಸ್ತು :** ಪ್ರಾಚೀನ ಭಾರತದ ಪ್ರಸಿದ್ಧ ಪಟ್ಟಣಗಳಲ್ಲಿ ಒಂದು, ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯ ಉತ್ತರಕ್ಕೆ ನೇಪಾಲ ತರ್ರೈ ಭೂಮಿಯಲ್ಲಿದೆ. ಕಪಿಲನ ನಿವಾಸ ಎಂದು ಇದರ ಅರ್ಥ. ಸಾಂಖ್ಯದರ್ಶನದ ಪ್ರತಿಪಾದಕನಾದ ಕಪಿಲನಿಗೂ ಈ ಸ್ಥಳಕ್ಕೂ ಏನಾದರೂ ಸಂಬಂಧವಿತ್ತೇ ಎಂಬುದು ಐತಿಹಾಸಿಕವಾಗಿ ಸ್ಥಿರಪಟ್ಟಿಲ್ಲ. ಇಕ್ಷ್ವಾಕುವಂಶದ ರಾಜನಾದ ವಿರುದ್ಧಕನ ನಾಲ್ವರು ಪುತ್ರರು ಅವನಿಂದ ಉಚ್ಚಾಟನೆಹೊಂದಿ ಹಿಮಾಲಯದ ತಪ್ಪಲಿನಲ್ಲಿ ಅಲೆದಾಡುತ್ತಿದ್ದಾಗ ಭಾಗೀರಥೀ ನದಿಯ ದಂಡೆಯಲ್ಲಿ ಆಶ್ರಮ ಕಟ್ಟಿಕೊಂಡು ವಾಸಿಸುತ್ತಿದ್ದ ಕಪಿಲ ಮಹರ್ಷಿಯನ್ನು ಸಂದರ್ಶಿಸಿದರೆಂದೂ ಋಷಿ ಅವರನ್ನು ಸತ್ಕರಿಸಿದನಲ್ಲದೆ ಅವರಿಗೆ ಒಂದು ನಿವೇಶವನ್ನು ತೋರಿಸಿದನೆಂದೂ ಅಲ್ಲಿ ಆ ರಾಜಪುತ್ರರು ಆ ಋಷಿಯ ನೇತೃತ್ವದಲ್ಲಿ ಒಂದು ಪಟ್ಟಣವನ್ನು ನಿರ್ಮಾಣಮಾಡಿದರೆಂದೂ ಐತಿಹ್ಯವಿದೆ. ಕಪಿಲ ಮಹರ್ಷಿ ದಾನಮಾಡಿದ ನೆಲದಲ್ಲಿ ಕಟ್ಟಲಾದ ಆ ಪಟ್ಟಣಕ್ಕೆ ಕಪಿಲವಸ್ತು ಎಂದು ಹೆಸರು ಬಂತೆಂದು ಹೇಳಲಾಗಿದೆ.

ಕಪಿಲವಸ್ತು ಬುದ್ಧನ ಜನ್ಮಸ್ಥಳ. ಬಾಲ್ಯ ಮತ್ತು ಯೌವನಗಳನ್ನು ಆತ ಇಲ್ಲೇ ಕಳೆದ. ಇದರಿಂದಾಗಿ ಈ ನಗರ ಬೌದ್ಧರಿಗೆ ಒಂದು ಪವಿತ್ರ ಯಾತ್ರಾಸ್ಥಳವಾಯಿತು. ಶಾಕ್ಯಪಂಗಡದ ನಾಯಕನೂ ಗೌತಮಬುದ್ಧನ ತಂದೆಯೂ ಆದ ಶುದ್ಧೋಧನನಿಗೆ ಕಪಿಲವಸ್ತುವೇ ರಾಜಧಾನಿಯಾಗಿತ್ತು. ಬುದ್ಧನ ಕಾಲದಲ್ಲಿ ಕೋಸಲ ದೇಶದ ರಾಜನಾಗಿದ್ದ ವಿರೂಪಾಕ್ಷ ಕಪಿಲವಸ್ತುವಿನ ಮೇಲೆ ದಾಳಿ ಮಾಡಲು ಪ್ರಯತ್ನ ನಡೆಸಿ ವಿಫಲನಾಗಿದ್ದ. ಆದರೆ ಗೌತಮಬುದ್ಧನ ಮರಣಾನಂತರ ಆತ ಕಪಿಲವಸ್ತುವಿನ ಮೇಲೆ ಮತ್ತೊಮ್ಮೆ ದಾಳಿ ನಡೆಸಿ ಶಾಕ್ಯಕುಲವನ್ನೇ ನಾಶಮಾಡಿದ.

ಅಶೋಕ ಚಕ್ರವರ್ತಿ ಕಪಿಲವಸ್ತುವಿಗೆ ಭೇಟಿ ಕೊಟ್ಟಿದ್ದರ ಜ್ಞಾಪಕಾರ್ಥವಾಗಿ ಅಲ್ಲಿ ಅನೇಕ ಸ್ಮಾರಕಗಳನ್ನು ಸ್ಥಾಪಿಸಿದ. ಚೀನದ ಯಾತ್ರಿಕನಾದ ಹ್ಯುಯೆನ್ ತ್ಸಾಂಗ್ ಭಾರತಕ್ಕೆ ಬರುವ ವೇಳೆಗೆ (620–45) ಈ ಇತಿಹಾಸಪ್ರಸಿದ್ಧ ಪಟ್ಟಣ ಸಂಪೂರ್ಣವಾಗಿ ನಾಶವಾಗಿತ್ತೆಂದು ಆತನ ಬರೆವಣಿಗೆಯಿಂದಲೇ ತಿಳಿಯುತ್ತದೆ. (ಎಸ್.ಕೆ.ಎನ್.)

**ಕಪಿಲಾ :** ಕಪಿನಿ, ಕಬಿನಿ ಎಂಬ ಹೆಸರುಗಳೂ ಇರುವ ಈ ನದಿ ಕಾವೇರಿ ನದಿಯ ಪ್ರಧಾನ ಉಪನದಿಗಳಲ್ಲಿ ಒಂದು. ನದಿಯ ಉಗಮಸ್ಥಾನ ಕೇರಳದ ವೈನಾಡು ತಾಲ್ಲೂಕಿನ ಪಶ್ಚಿಮ ಘಟ್ಟಗಳ ಸಾಲಿನಲ್ಲಿ 2,100ಮೀ.ಗಳಿಗಿಂತಲೂ ಎತ್ತರ ಪ್ರದೇಶದಲ್ಲಿದೆ. ಅಲ್ಲಿಂದ ಅಲ್ಪ ದೂರ ವೈನಾಡಿನಲ್ಲಿ ಪ್ರವಹಿಸಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ನೈಋತ್ಯ ಮೂಲೆಯಲ್ಲಿ ಬಾವಲಿಯ ಬಳಿ ಕರ್ನಾಟಕ ರಾಜ್ಯವನ್ನು ಪ್ರವೇಶಿಸುತ್ತದೆ. ನದಿಯ ಹರಿವಿನ ಹೆಚ್ಚು ಭಾಗ ಮೈಸೂರು ಜಿಲ್ಲೆಯಲ್ಲಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಮೊದಲು ಮಗ್ಗೆ, ನಿಸನ ಗ್ರಾಮಗಳ ಮೂಲಕ ಸರಗೂರಿನವರೆಗೆ ಈಶಾನ್ಯಾಭಿಮುಖವಾಗಿ ಹರಿದು ಅಲ್ಲಿಂದ ಉತ್ತರಕ್ಕೆ ಚಕ್ಕೂರಿನವರೆಗೆ ಸಾಗಿ ಅನಂತರ ಪೂರ್ವಾಭಿಮುಖವಾಗಿ ಹರಿಯುತ್ತ ನಂಜನಗೂಡು ತಾಲ್ಲೂಕನ್ನು ಪ್ರವೇಶಿಸುತ್ತದೆ. ಇಲ್ಲಿ ಹುಲ್ಲಹಳ್ಳಿಯ ಮುಖಾಂತರ ನಂಜನಗೂಡಿನವರೆಗೆ ಬಂದು ಮತ್ತೆ ಈಶಾನ್ಯಕ್ಕೆ ತಿರುಗಿ ತಿರುಮಕೂಡಲು ನರಸೀಪುರದಲ್ಲಿ ಕಾವೇರಿಯನ್ನು ಸಂಧಿಸುತ್ತದೆ. ಹರಿವಿನ ಅಂತ್ಯದ ಸ್ವಲ್ಪ ಭಾಗ ಮಾತ್ರ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿದೆ. ನದಿಯ ಹರಿವಿನ ಒಟ್ಟು ಉದ್ದ ಸು.214ಕಿಮೀ.

ನದಿಯ ಪಾತ್ರದ ಅಗಲ ಸಾಮಾನ್ಯವಾಗಿ 150–200ಮೀಗಳಿದ್ದು ಪಕ್ಕದಲ್ಲಿ ಎತ್ತರದ ದಂಡೆಗಳಿರುವುದು ಸಾಮಾನ್ಯ. ನದಿಯಲ್ಲಿ ವರ್ಷಪೂರ್ತ ನೀರಿರುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಬೇಸಗೆಯಲ್ಲೂ ಇದರಲ್ಲಿ ಸಾಗುವ ನೀರಿನ ಪ್ರಮಾಣ ಕಾವೇರಿಯದಕ್ಕಿಂತಲೂ ಕಡಿಮೆಯಿರುವುದಿಲ್ಲ. ತಾರಕಾ, ನುಗು ಮತ್ತು ಗುಂಡ್ಲುಹೊಳೆ ಕಪಿಲಾ ನದಿಯ ಮುಖ್ಯ ಉಪನದಿಗಳು. ತಾರಕಾ ಹೆಗ್ಗಡದೇವನಕೋಟೆಯ ಮೂಲಕ ಹರಿದು ಬಂದು ಹಂಪಾಪುರದ ಪಶ್ಚಿಮಕ್ಕೆ ಸು.12ಕಿಮೀ ದೂರದಲ್ಲಿ ಮಟಕೆರೆಯ ಬಳಿ ಸೇರುತ್ತದೆ. ಮಿಕ್ಕೆರಡೂ ದಕ್ಷಿಣ ದಂಡೆಯಿಂದ ಬಂದು ಸೇರುವುವು. ನುಗುನದಿ ಹುಲ್ಲಹಳ್ಳಿಯಿಂದ ಸು.8ಕಿಮೀ ಪಶ್ಚಿಮದಲ್ಲಿರುವ ಮಲಾರದ ಹುಂಡಿ ಬಳಿಯೂ ಗುಂಡ್ಲುಹೊಳೆ ನಂಜನಗೂಡಿನ ಬಳಿಯೂ ಸೇರುತ್ತದೆ. ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ (ಹತ್ವಾಳ) ಅಣೆಕಟ್ಟಿನಿಂದ ಹೊರಡುವ ಎರಡು ನಾಲೆಗಳು ನದಿಯ ಎಡ ಮತ್ತು ಬಲದಂಡೆಯಲ್ಲಿ ಸಾಗಿ ತಾಲ್ಲೂಕಿನ ಬಹುಭಾಗಕ್ಕೆ ನೀರಾವರಿ ಸೌಕರ್ಯವನ್ನು ಒದಗಿಸುತ್ತವೆ. ಹೆಗ್ಗಡದೇವಕೋಟೆ ತಾಲ್ಲೂಕಿನ ತುಮ್ಮಸೋಗೆ, ಮಾದಾಪುರ, ಹೊಮ್ಮರಗಳ್ಳಿ – ಈ ಸ್ಥಳಗಳಲ್ಲೂ ಮುಂದೆ ಹುಲ್ಲಹಳ್ಳಿ, ನಂಜನಗೂಡು ಮತ್ತು ತಿರುಮಕೂಡಲು ನರಸೀಪುರಗಳ ಬಳಿಯೂ ಈ ನದಿಗೆ ಸೇತುವೆಗಳಿವೆ. ನದಿಯ ದಕ್ಷಿಣ ದಂಡೆಯಲ್ಲಿರುವ ನಂಜನಗೂಡು ಮತ್ತು ಕಾವೇರಿ ಸಂಗಮದ ಬಳಿ ಇರುವ ತಿರುಮಕೂಡಲು ನರಸೀಪುರ ದೊಡ ಊರುಗಳು ಹಾಗೂ ಪುಣ್ಯಕ್ಷೇತ್ರಗಳು. *

**ಕಪಿಲಾ ಯೋಜನೆ :** ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ಬಿದರಹಳ್ಳಿ–ಬೀಚನಹಳ್ಳಿ ಸಮೀಪದಲ್ಲಿ ಕಪಿಲಾ ನದಿಗೆ ಅಡ್ಡವಾಗಿ ನಿರ್ಮಿಸಿದ ಕಟ್ಟೆ; ಅದರಿಂದ ಸಂಗ್ರಹವಾಗುವ ನೀರು; ಅದರ ನೀರಾವರಿ ಉಪಯೋಗ–ಇಷ್ಟೂ ಈ ಯೋಜನೆಯಲ್ಲಿ ಅಡಕವಾಗಿವೆ (ಕಬಿನಿ ರಿಸರ್ವಾಯರ್ ಪ್ರೋಜೆಕ್ಟ್).

**ಕಪಿಲಾನದಿ :** ಕಾವೇರಿ ನದಿಯ ಪ್ರಧಾನ ಉಪನದಿಗಳಲ್ಲಿ ಒಂದು. ನದಿಯ ಉಗಮಸ್ಥಾನ ಕೇರಳದ ವೈನಾಡು, ತಾಲ್ಲೂಕಿನ ಪಶ್ಚಿಮಘಟ್ಟಗಳ ಸಾಲಿನಲ್ಲಿದೆ. ಇದರ ಎತ್ತರ ಸಮುದ್ರಮಟ್ಟದಿಂದ 2100 ಮೀ ನದಿ 212 ಕಿಮೀಗಳಷ್ಟು ದೂರಕ್ಕೆ ಹರಿದು ತಿರುಮಕೂಡಲು ನರಸೀಪುರದಲ್ಲಿ ಕಾವೇರಿಯನ್ನು ಸೇರುತ್ತದೆ. ಉಗಮಸ್ಥಾನದಲ್ಲಿ ವಾರ್ಷಿಕ ಮಳೆ 175–310 ಸೆಂಮೀ. ತಳದ ಅರಣ್ಯ ಪ್ರದೇಶದಲ್ಲಿ ಇದು 75–175 ಸೆಂಮೀಗಳಷ್ಟು ಕಡಿಮೆ. ಮುಂದೆ ಮೈಸೂರು ಜಿಲ್ಲೆಯ ಬಯಲು ಪ್ರದೇಶವನ್ನು ಪ್ರವೇಶಿಸುವ ಹೊತ್ತಿಗೆ

ಹಲವಾರು ಉಪನದಿಗಳು ನೀರಿನಿಂದ ಕಪಿಲಾ ನದಿ ಪುಷ್ಟಿಗೊಳ್ಳುತ್ತದೆ. ಕೂಡಲು ನರಸೀಪುರ, ಯಳಂದೂರು, ಚಾಮರಾಜನಗರ, ಕೊಳ್ಳೇಗಾಲ ತಾಲ್ಲೂಕುಗಳಲ್ಲಿನ ಪರಿಸ್ಥಿತಿ ಯೋಜನೆಯ ನಿರ್ವಹಣೆಗೆ ಅತ್ಯಂತ ಅನುಕೂಲವಾದದ್ದು–ಕಡಿಮೆ ಮಳೆ, ಬಯಲನಾಡು, ಗುಂಬುನೀರಿನ ನದಿ. ಅಂಕೆಗೆ ಒಳಪಡುವ ನದಿಯ ನೀರು ಇಲ್ಲಿ ಹೊಸ ನೆಲ, ಹೊಸ ಪರಿಸರವನ್ನೇ ಸೃಷ್ಟಿಸಿವೆ.

ಯೋಜನೆಯ ರೂಪರೇಖೆಗಳು : ಮೊದಲು 1959ರಲ್ಲಿ ಸರ್ಕಾರದ ಆಡಳಿತ ಅಂಗೀಕಾರ ಪಡೆದ ಈ ಯೋಜನೆಯಲ್ಲಿ ಕಾಲಕ್ರಮೇಣ ಹಲವಾರು ಮಾರ್ಪಾಡುಗಳಾಗಿ; ಇಂದಿನ ಪರಿಷ್ಕೃತ ರೂಪದಲ್ಲಿ ನಿರ್ಮಾಣಗೊಂಡಿವೆ. ಕೆಲವು ವಿವರಗಳು:

| | |
|---|---|
| ಜಲಾನಯನ ಪ್ರದೇಶ | . . . 2,232 ಚ.ಕಿಮೀ |
| ಜಲಾಯನದ ಘನಗಾತ್ರ | . . . 19,200 ಮಿಲಿಯನ್ ಘನ ಅಡಿಗಳು |
| ಪ್ರಧಾನ ಉಪಯೋಗ | . . . 49,606 ಹೆ. ಜಮೀನಿನ ವ್ಯವಸಾಯ, ಮಿಶ್ರ ಬೆಳೆ ಕ್ರಮೇಣ 72,835 ಹೆ. ಗಳಿಗೆ ವಿಸ್ತರಿಸುವ ಯೋಜನೆ. |
| ಇತರ ಉಪಯೋಗಗಳು | . . . 32,000 ಕಿ.ವಾ ವಿದ್ಯುಚ್ಛಕ್ತಿಯ ಉತ್ಪಾದನೆ. ಬೆಂಗಳೂರು ನಗರಕ್ಕೆ 2,800 ಮಿಲಿಯನ್ ಘನ ಅಡಿಗಳಷ್ಟು ನೀರಿನ ಸರಬರಾಜು |
| ನೀರಾವರಿ ಉಪಯೋಗ ಹೊಂದುವ ಪ್ರದೇಶಗಳು | . . . ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ಪ್ರದೇಶಗಳು ನಂಜನಗೂಡು, ಮೈಸೂರು, ತಿರುಮಕೂಡಲು, ನರಸೀಪುರ, ತಾಲ್ಲೂಕುಗಳಿಗೂ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ತಾಲ್ಲೂಕುಗಳಿಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿಗೂ ಈ ಯೋಜನೆಯ ನೆರವು ಭಾಗಶಃ ದೊರೆಯುವುದು. |
| ನಾಲೆಗಳು | . . . ಕಪಿಲಾ ಬಲದಂಡೆ ನಾಲೆ, ಕಪಿಲಾ ಎಡದಂಡೆ ನಾಲೆ ಮತ್ತು ಕೃಷ್ಣರಾಜಸಾಗರದಿಂದ ಬಲದಂಡೆ ಎತ್ತರಮಟ್ಟದ ನಾಲೆ |
| ನಡುವಿನ ಗಾರೆ ಕಟ್ಟಡದ ಕಟ್ಟೆಯ ಉದ್ದ | . . . 250 ಮೀ |
| ಕಟ್ಟೆಯ ಒಟ್ಟು ಉದ್ದ | . . . 2692 ಮೀ |
| ನದಿಪಾತ್ರದ ಸರಾಸರಿ ಮಟ್ಟದಿಂದ ಕಟ್ಟೆಯ ಎತ್ತರ | . . . 27 ಮೀ |
| ಜಲಾಶಯದ ಪಾತ್ರದಿಂದ ಅಡಿಪಾಯ ಸಾಗಿರುವ ಗರಿಷ್ಠ ಆಳ | . . . 28 ಮೀ |
| ಜಲಾಶಯದ ವಿಸ್ತಾರದಿಂದ ಮುಳುಗಡೆ ಯಾಗುವ ಪ್ರದೇಶ | . . . 6076 ಹೆ |
| ಕಟ್ಟೆಯ ಮೇಲಣ ರಸ್ತೆಯ ಅಗಲ | . . . 8 ಮೀ |
| ಕಟ್ಟೆಯ ನಿವೇಶನದಲ್ಲಿ ಹರಿಯುವ ನೀರಿನ ಗರಿಷ್ಠ ಬೆಲೆ | . . . ಸು. 1,94,000 ಕ್ಯೂಸೆಕ್ಸುಗಳು . . . (ಕ್ಯೂಬಿಕ್ ಫೀಟ್ ಪರ್ ಸೆಕೆಂಡ್) |
| ಯೋಜನೆಯ ಒಟ್ಟು ಅಂದಾಜು ಖರ್ಚು | . . . ರೂ. 24.80 ಕೋಟಿ |

ನೀರಾವರಿ : ಯೋಜನೆ ಪೂರ್ಣವಾದಾಗ ಲಭಿಸುವ ಕೆಲವು ಮುಖ್ಯ ಪ್ರಯೋಜನಗಳನ್ನು ಮುಂದಿನ ಯಾದಿ ತೋರಿಸುತ್ತದೆ (ಸಂಖ್ಯೆಗಳು ಎಕರೆಗಳನ್ನು ಸೂಚಿಸುತ್ತವೆ).

| ಕ್ರ ಸಂ. | ವಿವರಗಳು | ಬತ್ತ | ಅರೆಶುಷ್ಕ | ಎರಡನೆಯ ಬೆಳೆ | ಜುಮ್ಲ |
|---|---|---|---|---|---|
| 1. | ಕಪಿಲಾ ಬಲದಂಡೆ ನಾಲೆ | 30,000 | 47,000 | .... | 77,000 |
| 2. | ಕಪಿಲಾ ಬಲದಂಡೆ ನಾಲೆ | 5,000 | .... | .... | 5,000 |
| 3. | ಕೃಷ್ಣರಾಜಸಾಗರದಿಂದ ಬಲದಂಡೆ ಎತ್ತರ ನಾಲೆ | 24,000 | .... | .... | 24,000 |
| 4. | ಬಲ ಮತ್ತು ಎಡೆದಂಡೆ ನಾಲೆಗಳು (ಕಪಿಲಾ ಜಲಾಶಯ ಯೋಜನೆಯಲ್ಲಿ) ಮತ್ತು ಹಳೆಯ ಕಟ್ಟೆಯ ನಾಲೆಗಳು | .... | .... | 20,000 | 20,000 |
| | ಜುಮ್ಲಾ | 59,000 | 47,000 | 20,000 | 1,26,000 |

ನೀರಾವರಿ ಸೌಕರ್ಯವನ್ನು ಕ್ರಮೇಣ 1,85,000 ಎಕರೆಗಳಿಗೆ ವಿಸ್ತರಿಸುವ ಯೋಜನೆ ಇದೆ. ಅದು ಕಾರ್ಯರೂಪಕ್ಕೆ ಬಂದಾಗ ಬೇಸಾಯದಲ್ಲಿ ಆಗುವ ಪ್ರಗತಿಯ ಅಂದಾಜು ಮುಂದಿನ ಯಾದಿಯಲ್ಲಿದೆ.

| ಕ್ರ. ಸಂ. | ವಿವರಗಳು | ಮುಂಗಾರು ಬೆಳೆ | ಬೇಸಗೆ ಬೆಳೆ | | ಜುಮ್ಲ |
|---|---|---|---|---|---|
| | | | ಜಲಾಶಯ | ಕಟ್ಟೆ ಕಾಲುವೆ | |
| 1. | ಕಪಿಲಾ ಬಲದಂಡೆ ನಾಲೆ | 1,16,000 | 15,000 | .... | 1,31,000 |
| 2. | ಕಪಿಲಾ ಬಲದಂಡೆ ನಾಲೆ | 5,000 | 2,500 | .... | 7,500 |
| 3. | ಕೃಷ್ಣರಾಜಸಾಗರದಿಂದ ಬಲದಂಡೆ ಎತ್ತರ ಮಟ್ಟದ ನಾಲೆ | 24,000 | ..... | ..... | 24,000 |
| 4. | ಕಪಿಲಾ ಬಲದಂಡೆ ಎತ್ತರ ಮಟ್ಟದ ನಾಲೆ | 1,000 | ...... | ....... | 1,000 |
| 5. | ಕಪಿಲಾ ಎಡದಂಡೆ ಎತ್ತರ ಮಟ್ಟದ ನಾಲೆ | 1,500 | ...... | ...... | 1,500 |
| 6. | ಕಟ್ಟೆಯ ಕಾಲುವೆಗಳು | .... | ..... | 20,000 | 20,000 |
| | ಜುಮ್ಲ | 1,47,500 | 17,500 | 20,000 | 1,85,000 |

ಯೋಜನೆಯಲ್ಲಿ ಮುಖ್ಯವಾಗಿ ವಿವಿಧ ಹಂತಗಳಿವೆ ಕಟ್ಟೆಯ ನಿವೇಶನದ ಆಯ್ಕೆ. ಪ್ರಾದೇಶಿಕ ಬೆಳೆಯ ಸಮಗ್ರ ವಿವರ ಸಂಗ್ರಹಣೆ, ಯೋಜನೆಯ ನೀಲನಕಾಶೆ ಮತ್ತು ಅಂದಾಜುಪತ್ರ, ಸರ್ಕಾರದ ಮಂಜೂರಾತಿ, ಕಾಮಗಾರಿಯನ್ನು ಕುರಿತಂತೆ ಟೆಂಡರನ್ನು ಕರೆದು ಒಪ್ಪುವುದು, ಜಲಾಶಯದಿಂದ ಮುಳುಗಡೆಯಾಗುವ ಪ್ರದೇಶಗಳ ಜನರ ಪುನರ್ನಿವೇಶನ, ಯೋಜನೆಯ ಕಾರ್ಯ.

**1. ನಿವೇಶನದ ಆಯ್ಕೆ :** ಕಪಿಲಾ ಯೋಜನೆಯ ಪ್ರಧಾನ ಉಪಯೋಗ ನೀರಾವರಿ. ವಿದ್ಯುದುತ್ಪಾದನೆ ಇಲ್ಲಿ ಆನುಷಂಗಿಕ (ಶರಾವತಿ ಯೋಜನೆಯ ಪ್ರಧಾನ ಉದ್ದೇಶ ವಿದ್ಯುದುತ್ಪಾದನೆ). ಆದ್ದರಿಂದ ಈ ಯೋಜನೆಯ ನಿವೇಶನದ ಆಯ್ಕೆಯಲ್ಲಿ ಗಮನಿಸಿದ ಅಂಶಗಳು ಹೀಗಿವೆ– (I) ನೀರಾವರಿಯ ಪ್ರಯೋಜನ ಬಹುಭಾಗಕ್ಕೆ ಲಭ್ಯವಾಗಬೇಕು; (ii) ಕಟ್ಟೆ ಹಾಗೂ ನಾಲೆ ವ್ಯವಸ್ಥೆಯ ಖರ್ಚು ಮತ್ತು ನೀರನ್ನು ನಿಯಂತ್ರಿಸಲು ಯುಕ್ತ ಸ್ಥಳಪರಿಶೀಲನೆಯಾಯ್ತು. ನಂಜನಗೂಡು ಪಟ್ಟಣದಿಂದ ಮೇಲುಭಾಗದಲ್ಲಿರುವ ಒಂಬತ್ತು ಸ್ಥಳಗಳನ್ನು ಆಯ್ದು ಪರಿಶೀಲಿಸಿ ಅಂತಿಮವಾಗಿ ಈಗಿನ ಸ್ಥಳವನ್ನು ಒಪ್ಪಲಾಯಿತು. ಈ ಕಟ್ಟೆಯನ್ನು ಬಿದರಹಳ್ಳಿ–ಬೀಚನಹಳ್ಳಿಯ ಈಗಿನ ಸ್ಥಳಕ್ಕಿಂತ ಮೇಲುನದಿಯಲ್ಲೆ ಕಟ್ಟಿದರೆ ಕೇರಳರಾಜ್ಯದಲ್ಲಿ ಇನ್ನಷ್ಟು ಪ್ರದೇಶ ಮುಳಗಡೆ ಆಗುತ್ತಿತ್ತು, ಕೆಳನದಿಯಲ್ಲಿ ಎಲ್ಲಿಯಾದರೂ ಸ್ಥಳವನ್ನು ಆರಿಸಿದ್ದರೆ ಆಗ ಕಟ್ಟೆಯ ವಿಸ್ತಾರ ಏರುತ್ತಿತ್ತು. ಜೊತೆಯಲ್ಲೇ ನೀರಾವರಿಯಿಂದ ಉಪಯೋಗ ಪಡೆಯುವ ಪ್ರದೇಶಗಳ ವ್ಯಾಪ್ತಿ ಕುಂಠಿತವಾಗುತ್ತಿತ್ತು. ಇದರಿಂದ ಆಗುತ್ತಿದ್ದುದು ಉಭಯನಷ್ಟ. ಹೀಗೆ ಸ್ಥಳದ ಆಯ್ಕೆ ಪರ ಮತ್ತು ವಿರುದ್ಧಗಳ ನಡುವೆ ಒಂದು ವಿಧದ ಸಮತೋಲನ.

**2 ಪ್ರಾದೇಶಿಕ ಬೆಳೆ :** ಕಪಿಲಾಯೋಜನೆಯ ಇಂಜಿನಿಯರಿಂಗ್ ವಿಭಾಗ ವ್ಯವಸಾಯ ಇಲಾಖೆಯಿಂದ ಪ್ರಾದೇಶಿಕ ಬೆಳೆಗಳ ಸಮಗ್ರ ವಿವರಗಳನ್ನು ಸಂಗ್ರಹಿಸಿತು. ನೀರಾವರಿಯ ಗರಿಷ್ಠ ಲಾಭ ಪಡೆಯಲು ಈ ಅಂಶಗಳು ಅಗತ್ಯ. ಕಟ್ಟೆಯ ಎತ್ತರ, ನಾಲೆಗಳ ವಿನ್ಯಾಸ ಮುಂತಾದುವನ್ನು ನಿರ್ಧರಿಸುವಲ್ಲಿ ಭೌಗೋಳಿಕ ಸನ್ನಿವೇಶದಷ್ಟೇ ಮಹತ್ತ್ವ ಪ್ರಾದೇಶಿಕ

ಕಪಿಲಾ ಯೋಜನೆಯ ನಿವೇಶನವನ್ನು ತೋರಿಸುವ ನಕ್ಷೆ

ಬೆಳೆಗಳನ್ನು ಕುರಿತ ವಿವರಗಳಿಗೂ ಇದೆ; ನಾಲೆಗಳ ವ್ಯವಸ್ಥೆ ವ್ಯಾಪಿಸುವ ಒಟ್ಟು ಪ್ರದೇಶದಲ್ಲಿ ಭಿನ್ನದರ್ಜೆಯ ಮಣ್ಣುಗಳಿವೆ. ಇವುಗಳಲ್ಲಿ ಪ್ರಧಾನವಾದವು ಕಂಕರೆ, ಕೆಂಪು ಮತ್ತು ಕಪ್ಪು ಮಣ್ಣುಗಳು. ಮಳೆ ಕಡಿಮೆ. ಆ ನೀರನ್ನೇ ಆಶ್ರಯಿಸಿ ರಾಗಿ, ಜೋಳ ಮುಂತಾದ ಬೆಳೆಗಳನ್ನು ಮಾತ್ರ ಬೆಳೆಸುತ್ತಿದ್ದರು. ಇಲ್ಲಿಗೆ ಜಲಾಶಯದಿಂದ ವ್ಯವಸ್ಥಿತವಾಗಿ ಮತ್ತು ನಿರಂತರವಾದ ನೀರು ಪೂರೈಕೆಯಿಂದ ಬತ್ತ, ಹಿಪ್ಪು ನೇರಳೆ ಮುಂತಾದ ಬೆಳೆಗಳನ್ನು ಬೆಳೆಸಬಹುದಾಗಿದೆ. ಇದರಿಂದ ಈ ಪ್ರದೇಶಗಳು ಆರ್ಥಿಕವಾಗಿ ಮುಂದುವರಿದಿವೆ.

**3 ನೀಲನಕ್ಷೆ ಮತ್ತು ಅಂದಾಜುಪತ್ರ :** ಕಟ್ಟೆಯ ಸ್ಥೂಲ ಚಿತ್ರ ಮೇಲೆ ಹೇಳಿದ ಎರಡು ಪ್ರಧಾನ ಅಂಶಗಳಿಂದ ನಿರ್ಧರಿತವಾಗುತ್ತದೆ. ಈಗ ಕಟ್ಟೆಯ ತಳಪಾಯ, ಉದ್ದ, ಅಗಲ, ಎತ್ತರ ಮತ್ತು ಮಾದರಿ. ಕಟ್ಟೆಯ ಎರಡು ಬದಿಗಳ ಒಡ್ಡುಗಳ ರಚನೆ ಹಾಗೂ ವಿನ್ಯಾಸ. ದಿಡ್ಡಿಬಾಗಿಲುಗಳು (ಕ್ರಸ್ಟ್ ಗೇಟ್ಸ್) ತೂಬುಗಳು (ಸ್ಲೂಸಸ್) ಮತ್ತು ನಾಲೆಗಳು ಇವುಗಳಿಗೆ ಸಂಬಂಧಿಸಿದ ವಿವರಗಳು–ಇವನ್ನೆಲ್ಲ ಲಕ್ಷ್ಯದಲ್ಲಿರಿಸಿ ಯೋಜನೆಯ ಒಂದು ಸಮಗ್ರ ನೀಲನಕ್ಷೆಯನ್ನೂ ಅದರ ಜೊತೆಯಲ್ಲೇ ಒಂದು ಅಂದಾಜುಪತ್ರವನ್ನೂ ಸಿದ್ಧಗೊಳಿಸುತ್ತಾರೆ. ಗಾರೆಕಟ್ಟಡದ ಕಟ್ಟೆ ಹಾಗೂ ಮಣ್ಣಿನ ಒಡ್ಡುಗೋಡೆಗಳು ಇವುಗಳ ವಿನ್ಯಾಸ ರಚನೆಯಲ್ಲಿ ಲಕ್ಷಿಸಿದ ಪ್ರಧಾನ ಅಂಶಗಳೆಂದರೆ–(I) ಮೇಲುನದಿಯಲ್ಲಿ ನೀರಿನ ಹಾಗೂ ಗೋಡುಮಣ್ಣಿನ ತೂಕ; (ii) ಗಾರೆ ಕೆಲಸದ ತೂಕ; (iii) ಮೇಲುನದಿಯ ನೀರು ಹಾಗೂ ತೆರೆಗಳಿಂದ ಉತ್ಪನ್ನವಾಗುವ ಮಟ್ಟಸ ಬಲಗಳು (ಹಾರಿಜಾಂಟಲ್ ಫೋರ್ಸಸ್); (iv) ಜಲಾಶಯದ ನೀರಿನ ಮೇಲೊತ್ತಡ.

ಅಂದಾಜುಪತ್ರದಲ್ಲಿ ಪ್ರಧಾನವಾಗಿ ಎರಡು ವಿಭಾಗಗಳಿವೆ–ಕಪಿಲಾಕಟ್ಟೆ ಮತ್ತು ಮುಳುಗಡೆ ಪ್ರದೇಶಗಳ ಒಟ್ಟು ವೆಚ್ಚ ರೂ. 11.80 ಕೋಟಿ; ನಾಲೆಗಳ ಒಟ್ಟು ವೆಚ್ಚ ರೂ. 13.00 ಕೋಟಿ. ಆದ್ದರಿಂದ ಯೋಜನೆಯ ಒಟ್ಟುವೆಚ್ಚದ ಅಂದಾಜು ರೂ. 24.80 ಕೋಟಿ. ನೀಲನಕ್ಷೆ ಮತ್ತು ಅಂದಾಜುಪತ್ರದ ತಯಾರಿಕೆಯಲ್ಲಿ ಹಲವಾರು ಅಂಶಗಳನ್ನು ಆಧಾರವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಕಟ್ಟೆಯ ತಳಪಾಯ; ಇಂತಿಷ್ಟು ಅಡಿಗಳು ಇದ್ದರೆ ಸಾಕೆಂದು, ತೀರ್ಮಾನಿಸಿ ಆ ಆಧಾರದ ಮೇಲೆ ಸಮಗ್ರ ನೀಲನಕ್ಷೆಯನ್ನೂ ಅದರ ಅಂದಾಜುಪತ್ರವನ್ನೂ ತಯಾರಿಸುತ್ತಾರೆ. ಆದರೆ ವಾಸ್ತವಿಕವಾಗಿ ಕಾರ್ಯಕ್ಕೆ ತೊಡಗಿದಾಗ ತಳಪಾಯದ ಆಳ ಸಾಲದೆಂದಾದರೆ ಅಥವಾ ರಚನೆಯಲ್ಲಿ ವ್ಯತ್ಯಾಸ ಅನಿವಾರ್ಯವೆನ್ನಿಸಿದರೆ ಇಡೀ ನೀಲನಕ್ಷೆಯನ್ನು ಬದಲಾಯಿಸಬೇಕಾಗುತ್ತದೆ. ಬದಲಾಗುತ್ತಿರುವ ದೇಶದ ಆರ್ಥಿಕ ಹವೆಯಿಂದಲೂ ಅಂದಾಜುಪತ್ರದ ಮೇಲೆ ಸಾಕಷ್ಟು ಪರಿಣಾಮವಾಗುತ್ತದೆ. ಉದಾಹರಣೆಗೆ ಸಾಮಗ್ರಿಗಳ ಹಾಗೂ ಕಾಮಗಾರಿಯ ಬೆಲೆಗಳು ವರ್ಷದಿಂದ ವರ್ಷಕ್ಕೆ ಏರುತ್ತಿವೆ. ಇಲ್ಲೆಲ್ಲ ವಾಸ್ತವಿಕ ಪರಿಸ್ಥಿತಿಯನ್ನು ಗಮನಿಸಿ ಯೋಜನೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಲು ಎಡೆ ಇದ್ದೇ ಇರುತ್ತದೆ.

ನೀಲನಕ್ಷೆ ಮತ್ತು ಅಂದಾಜುಪತ್ರ ಯೋಜನೆ ಕೇವಲ ದಾರಿಸೂಚಕಗಳು

**4. ಸರ್ಕಾರದ ಮಂಜೂರಾತಿ :** ರೂ.320 ಲಕ್ಷದ ಮೊದಲ ಯೋಜನೆಗೆ ಸರ್ಕಾರ 1959ರಲ್ಲಿ ಅಂಗೀಕಾರ ನೀಡಿತು. ಆದರೆ ಪರಿಶೀಲನೆ ಮುಂದುವರಿದಂತೆ ಹೊಸ ಸಮಸ್ಯೆಗಳೂ ಅವುಗಳಿಗೆ ಪರಿಹಾರಗಳೂ ಕಂಡುಕೊಂಡಂತೆ ರೂ.24.80 ಕೋಟಿ ವೆಚ್ಚದ ಯೋಜನೆಗೆ ಬೇರೆ ಬೇರೆ ಹಂತಗಳಲ್ಲಿ ಸರ್ಕಾರ ಒಪ್ಪಿತು.

**5. ಕಾಮಗಾರಿ ಟೆಂಡರುಗಳು :** ಇಂಥ ಬೃಹದ್ಯೋಜನೆಯನ್ನು ನಿರ್ವಹಿಸಲು ಸ್ಥಾಪಿಸಿದ ಎಂಜಿನಿಯರಿಂಗ್ ವಿಭಾಗ ಕಾಮಗಾರಿಯನ್ನು ವಿವಿಧ ಕಾರ್ಯಕಾರಿ ವಿಭಾಗಗಳಾಗಿ ವಿಭಜಿಸಿ ಒಂದೊಂದನ್ನೂ ಪ್ರತ್ಯೇಕವಾಗಿ ನೆರವೇರಿಸಲು ಟೆಂಡರುಗಳನ್ನು ಕರೆಯಿತು. ಉದಾಹರಣೆಗೆ ಸ್ಥಳಕ್ಕೆ ಲಾರಿಸಾಗುವ ದಾರಿಯ ರಚನೆ, ಒಡ್ಡುಗಳಿಗೆ ಮಣ್ಣು ಸಾಗಿಸುವ ಕೆಲಸ, ಕಟ್ಟೆಯ ತಳಪಾಯದ ರಚನೆ, ದಿಡ್ಡಿ ಬಾಗಿಲುಗಳ ನಿರ್ಮಾಣ ಮುಂತಾದ ವಿವಿಧ ಬಿಡಿ ಕೆಲಸಗಳು. ಎಂಜಿನಿಯರಿಂಗ್ ವಿಭಾಗ ಒಪ್ಪಿದ ಟೆಂಡರುದಾರರು ಅವರಿಗೆ ವಿಧಿಸಿದ ಕಾರ್ಯಗಳನ್ನು ಗೊತ್ತಾದ ವಿಧಿ, ನಿಯಮ, ದರಗಳ ಅನುಸಾರ ನಡೆಸಬೇಕು. ಇದು ಆಗುತ್ತಿರುವಾಗ ಹೆಜ್ಜೆಹೆಜ್ಜೆಗೂ ಉಸ್ತುವಾರಿ ನೋಡಿಕೊಳ್ಳಲು, ಎಲ್ಲವೂ ನೀಲಿನಕ್ಷೆ ಪ್ರಕಾರ ಮುಂದುವರಿಯುತ್ತಿವೆಯೇ ಎಂದು ದೃಢಪಡಿಸಿಕೊಳ್ಳಲು, ಅಲ್ಲಿ ನಮೂದಿಸಿರದ ಹೊಸ ಪರಿಸ್ಥಿತಿ ಕಾರ್‍ಯರಂಗದಲ್ಲಿ ತಲೆದೋರಿದರೆ ಸೂಕ್ತಪರಿಹಾರ ಅರಸಿ ಟೆಂಡರುದಾರನಿಗೂ ಸರ್ಕಾರಕ್ಕೂ ಅನ್ಯಾಯವಾಗದಂತೆ ಕೆಲಸ ಮುಂದುವರಿಸಿ ಕೊಂಡು ಹೋಗಲು–ಇವೇ ಮುಂತಾದ ಕಾರ್ಯನಿರ್ವಹಣೆಗೋಸ್ಕರ ಎಂಜಿನಿಯರಿಂಗ್ ವಿಭಾಗ ತನ್ನ ಒಂದು ದೊಡ್ಡ ಪಡೆಯನ್ನೇ ಯೋಜನೆಯ ವಿವಿಧ ಪ್ರದೇಶಗಳಲ್ಲಿ ವಿವಿಧ ಹಂತಗಳಿಗೆ ನಿಯೋಜಿಸಿತು.

**6. ಮುಳುಗಡೆ ಪ್ರದೇಶದ ಪುನರ್ನಿವೇಶನ :** ನದೀಪಾತ್ರದ ಇಕ್ಕೆಲಗಳಲ್ಲೂ ಜನ, ಕೃಷಿ ವಿಪುಲವಾಗಿ ಹಬ್ಬಿರುವುದು ವಾಡಿಕೆ. ಆದ್ದರಿಂದ ಕಟ್ಟೆಯ ನಿರ್ಮಾಣದಿಂದ ಮೇಲುನದಿಯ ದಂಡೆಗಳ ಬಹುಭಾಗ ನೀರಿನಿಂದ ಮುಳುಗಿಹೋಗಿ ಅಲ್ಲಿನ ಜನರಿಗೂ

ಅವರ ಸಂಪತ್ತಿಗೂ ಅಪಾರ ಹಾನಿ ಆಗುವುದು ಸಹಜ. ಈ ಜನವನ್ನು ಒಂದು ಯೋಜನಾನುಸಾರ ಸ್ಥಾನಾಂತರಿಸಿ ಪುನರ್ನಿವೇಶನಗೊಳಿಸಬೇಕು; ಅಲ್ಲದೇ ಅವರಿಗೆ ಆಗುವ ಸಂಪತ್ತುನಷ್ಟಕ್ಕೆ ಯುಕ್ತ ಪರಿಹಾರ ನೀಡಬೇಕು. ಕಪಿಲಾ ಜಲಾಶಯದಿಂದ ಮುಳುಗಡೆಯಾಗುವ ಪ್ರದೇಶಗಳ ವಿವರ ಹೀಗಿದೆ–

| | | |
|---|---|---|
| ಕರ್ನಾಟಕ ರಾಜ್ಯದಲ್ಲಿ | | |
| ವ್ಯವಸಾಯಯೋಗ್ಯ ಭೂಮಿ | . . . | 5,650 ಎಕರೆಗಳು |
| ಅರಣ್ಯ ಪ್ರದೇಶ | . . . | 6,530 ಎಕರೆಗಳು |
| ಕೇರಳ ರಾಜ್ಯದಲ್ಲಿ | | |
| ವ್ಯವಸಾಯಯೋಗ್ಯ ಭೂಮಿ | . . . | 254 ಎಕರೆಗಳು |

ಕರ್ನಾಟಕ ರಾಜ್ಯದಲ್ಲಿ 20 ಹಳ್ಳಿಗಳನ್ನು ಸ್ಥಾನಾಂತರಿಸಿ ಪುನರ್ನಿವೇಶನ ಮಾಡಬೇಕಾಯ್ತು. ಈ ಕಡೆ ನಡೆಯಬೇಕಾದ ಕೆಲಸ ಭರದಿಂದ ಮುಂದುವರಿಯಿತು. ಜಲಾಶಯ ಪೂರ್ತಿ ಆಗುವ ಮೊದಲೇ ಇದು ಮುಗಿದಿರುವುದು. ಇಂಥ ಪುನರ್ನಿವೇಶನ ಗಳಿಂದ ಒದಗುವ ಒಂದು ಅನುಕೂಲತೆ ಎಂದರೆ ಹೊಸ ವಸತಿಯಲ್ಲಿ ಜನ ಹೊಸ ಮಾದರಿಯ ಆಧುನಿಕ ಜೀವನದಲ್ಲಿ ತೊಡಗಬಹುದು.

**7. ಯೋಜನೆಯ ಕಾರ್ಯ :** ಕಟ್ಟೆ ರಚಿಸಬೇಕೆಂದು ಉದ್ದೇಶಿಸಿದ ಸ್ಥಳದಲ್ಲಿ ತಳಪಾಯದ ರಚನೆ ಆರಂಭಿಸಿದಾಗ ಒಂದು ಹೊಸ ಸಂಗತಿ ಗೊತ್ತಾಯ್ತು–ಕೆಲವು ಕಡೆ 100 ಅಡಿಗಳ ವರೆಗೆ ಗುಂಡಿ ತೋಡಿದಾಗ ಮಾತ್ರ ಕಲ್ಲಿನ ಭದ್ರ ನೆಲ ದೊರೆಯಿತು. ಪೂರ್ವಭಾವೀ ಯೋಜನೆಯಲ್ಲಿ ಇಲ್ಲದ ಈ ಅಂಶದಿಂದ ಕಟ್ಟೆಯ ರಚನೆ ಮತ್ತು ಖರ್ಚುಗಳಲ್ಲಿ ಸಹಜವಾಗಿ ವ್ಯತ್ಯಾಸ ಉಂಟಾಯಿತು. ಕಟ್ಟೆಯಲ್ಲಿ ಐದು ಪ್ರಧಾನ ವಿಭಾಗಗಳಿವೆ– ತಳಪಾಯ, ಸ್ಥಿರವಾದ ತಡೆಕಟ್ಟೆ, ದಿಡ್ಡಿಬಾಗಿಲುಗಳು, ತೂಬುಗಳು, ಕಟ್ಟೆಮೇಲಿನ ರಸ್ತೆ, ಗಾರೆಕಟ್ಟಡದ ಕಟ್ಟೆಯ ಅಡಿಪಾಯದ ರಚನೆ (ಉದ್ದ 835 ಅಡಿಗಳು) 1971ರಲ್ಲಿ ಪೂರ್ಣವಾದುವು. ಕಟ್ಟೆಯ ಉಳಿದ ಭಾಗ, ತೂಬಿನ ರಚನೆ, ತಡೆಬಾಗಿಲಿನ ಅಳವಡಿಕೆ, ನಾಲೆಗಳ ನಿರ್ಮಾಣ ಇವೆಲ್ಲವೂ ತ್ವರಿತಗತಿಯಿಂದ ಸಾಗಿದವು. ಸರ್ಕಾರದ ಹಲವಾರು ಇಲಾಖೆಗಳು ಸಹಕರಿಸಿ ಏಕೋದ್ದೇಶ ಪ್ರೇರಿತವಾಗಿ ನಡೆಸಬೇಕಾದ ಈ ಮಹಾಕಾರ್ಯದ ಮುನ್ನಡೆ ಉತ್ಸಾಹದಾಯಕವಾಗಿತ್ತು. ಸು. 1974ರಲ್ಲೇ ಈ ಯೋಜನೆ ಪೂರ್ಣಗೊಳ್ಳ ಬೇಕೆಂಬುದು ಸರಕಾರದ ಆಶಯವಾಗಿತ್ತು.

ಕಪಿಲಾ ಜಲಾಶಯ ಹಾಗೂ ಕಪಿಲಾ ನಾಲೆಗಳ ವ್ಯವಸ್ಥೆ ಪೂರ್ಣವಾದಾಗ ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ವಿಶೇಷವಾದ ವ್ಯಾವಸಾಯಿಕ ಮತ್ತು ಆರ್ಥಿಕ ಚಟುವಟಿಕೆಗಳು ತಾವಾಗಿಯೇ ತಲೆದೋರುತ್ತವೆ. ಬತ್ತದ ಬೆಳೆಗೆ ಅಧಿಕ ವೇಗ ದೊರೆತರೆ ಹಿಪ್ಪುನೇರಳೆಯ ಅಧಿಕ ವ್ಯವಸಾಯದಿಂದ ರೇಷ್ಮೆ ಉದ್ಯಮಕ್ಕೆ ಹೆಚ್ಚಿನ ಚಾಲನೆ ಲಭಿಸಿತು. ಹೆಚ್ಚು ಜನರಿಗೆ ಅಧಿಕ ಉದ್ಯೋಗಾವಕಾಶ ದೊರೆತು ದೇಶದ ಸರ್ವಾಂಗೀಣ ಆರ್ಥಿಕಾಭ್ಯುದಯಕ್ಕೆ ಕಪಿಲಾ ಯೋಜನೆ ಒಂದು ವಿಶಿಷ್ಟ ಕೊಡುಗೆ. (ಎಚ್.ಸಿ.ಕೆ.)

**ಕಪಿಲೇಶ್ವರ ಗಜಪತಿ :** ಸು.1435–70. ಒರಿಸ್ಸವನ್ನಾಳಿದ ಗಜಪತಿ ರಾಜವಂಶದ ಮೊದಲನೆಯ ದೊರೆ. ಪೂರ್ವ ಗಂಗರ ಕೊನೆಯ ರಾಜನಾದ ನಾಲ್ಕನೆಯ ಭುವನೇಂದ್ರನ ಅನಂತರ ಒರಿಸ್ಸದ ಸಿಂಹಾಸನವನ್ನಾಕ್ರಮಿಸಿಕೊಂಡ (1453) ಕಪಿಲೇಂದ್ರನೆಂದೂ ಈತನ ಹೆಸರು. ಗಜಪತಿ, ಗೌಡೇಶ್ವರ ಮತ್ತು ನವಕೋಟಿ ಕರ್ನಾಟ ಕಲವರಗೇಶ್ವರ ಎಂಬವು ಈತನ ಬಿರುದುಗಳು. ಈತ ಬಲು ಶಕ್ತ, ದಕ್ಷ, ಆಡಳಿತಕ್ಕೆ ಬಂದ ಕೂಡಲೇ ಆಂತರಿಕ ದಂಗೆಗಳನ್ನೆಲ್ಲ ಅಡಗಿಸಿದನಲ್ಲದೆ ರಾಜ್ಯವನ್ನು ಹೂಗ್ಲಿಯ ತಡಿಯಿಂದ ಕಾವೇರಿಯ ಮಡಿಲವರೆಗೂ ಹಬ್ಬಿಸಿ ಒರಿಸ್ಸದ ಕೀರ್ತಿ ಬೆಳೆಸಿದ. ಬಂಗಾಲದ ಕೆಲವು ಭಾಗಗಳು ಸು.1450ರಲ್ಲಿ ಇವನಿಗೆ ವಶವಾಗಿದ್ದವು. ಅನಂತರ ಈತ ಬಹಮನೀ ರಾಜ್ಯವನ್ನು ಮುತ್ತಿದ. 1465ರಲ್ಲಿ ಕಂಚಿಯನ್ನು ವಶಪಡಿಸಿಕೊಂಡು ತಿರುಚನಾಪಳ್ಳಿಯವರೆಗೂ ನುಗ್ಗಿದ. ಕಪಿಲೇಶ್ವರ ಪಗೋಡ ಎಂಬ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದ. ಕಪಿಲೇಶ್ವರನ ಮರಣಾನಂತರ ಪುರುಷೋತ್ತಮ (1470–97) ಪಟ್ಟಕ್ಕೆ ಬಂದ. **(ನೋಡಿ– ಪುರುಷೋತ್ತಮ–ಗಜಪತಿ)** ಅನಂತರ ಬಂದ ದೊರೆ ಅವನ ಮಗನಾದ ಪ್ರತಾಪರುದ್ರ (1497–1540). **(ನೋಡಿ– ಪ್ರತಾಪರುದ್ರದೇವ)** ಸು. 1541ರಲ್ಲಿ ಈ ವಂಶದ ಆಡಳಿತ ಕೊನೆಗೊಂಡಿತು. ಭೋಯಿ ವಂಶ ಪ್ರಬಲವಾಯಿತು. **(ನೋಡಿ– ಭೋಯಿ).** (ಜಿ.ಆರ್.ಆರ್.)

**ಕಪೀಶಿಯನರು :** ಫ್ರೆಂಚ್ ಮೂಲದ ರಾಜವಂಶ. ಫ್ರಾನ್ಸಿನಲ್ಲೂ ಯುರೋಪಿನ ಇತರ ಕೆಲವೆಡೆಗಳಲ್ಲೂ ಈ ವಂಶದ ದೊರೆಗಳು ಆಳಿದರು. ಫ್ರಾನ್ಸಿನಲ್ಲಿ (987–96) ಆಳಿದ ಹ್ಯೂ ಕಾಪೆಟನಿಂದ ಶಾಖೋಪಶಾಖೆಗಳಾಗಿ ಒಡೆದ ವಂಶದ ದೊರೆಗಳನ್ನೆಲ್ಲ ಕಪೀಶಿಯನರೆಂದೇ ಕರೆಯಲಾಗಿದೆ. ಮೆರೊವಿಂಗಿಯನ್, ಕೆರೊಲಿಂಗಿಯನ್ ವಂಶಗಳ ಅನಂತರದ್ದು ಈ ರಾಜವಂಶ. ಆಂಜೂ ಮತ್ತು ಬ್ಲ್ವಾ ಪ್ರದೇಶಗಳ ಕೌಂಟ್ ಆಗಿದ್ದ ರಾಬರ್ಟ್ ದಿ ಸ್ಟ್ರಾಂಗ್ ಈ ವಂಶದ ಮೂಲಪುರುಷ. ಇವನ ಮಕ್ಕಳಾದ ಯೂಡ್ಸ್ ಮತ್ತು ಒಂದನೆಯ ರಾಬರ್ಟರಿಗೆ ಅನುಕ್ರಮವಾಗಿ 888 ಮತ್ತು 922ರಲ್ಲಿ ಫ್ರಾಂಕರ ದೊರೆಗಳೆಂದು ಪಟ್ಟಕಟ್ಟಲಾಗಿತ್ತು. ರಾಬರ್ಟನ ಅನಂತರ ಅವನ ಮಗ ಹ್ಯೂದಿ ದಿ ಗ್ರೇಟ್ ಕ್ಯಾರೊಲಿಂಜಿಯನ್ ವಂಶವನ್ನು ಮತ್ತೆ ಅಧಿಕಾರಕ್ಕೆ ತಂದ (936). ಆದರೆ 987ರಲ್ಲಿ ಕ್ಯಾರೊಲಿಂಜಿಯನ್ ಉತ್ತರಾಧಿಕಾರಿಯ ಹಕ್ಕನ್ನು ಕಡೆಗಣಿಸಿ ಹ್ಯೂ ದಿ ಗ್ರೇಟನ ಮಗ ಹ್ಯೂ ಕಾಪೆಟ್ ದೊರೆಯಾಗಿ ಆಯ್ಕೆ ಹೊಂದಿದ. ಪ್ಯಾರಿಸ್ ಇವನ ಕಾಲದಲ್ಲಿ ರಾಜಧಾನಿಯಾಯಿತು. ಆರಂಭದಲ್ಲಿ ಕೇವಲ ಒಂದು ಊಳಿಗಮಾನ್ಯ ಪದ್ಧತಿಯಾಗಿದ್ದ ತಮ್ಮ ರಾಜ್ಯವನ್ನು ಒಂದು ಪ್ರಬಲರಾಷ್ಟ್ರವಾಗಿ ಈ ವಂಶಜರು ಕಟ್ಟಿದರು. ಫ್ರಾನ್ಸಿನಲ್ಲಿ ಹ್ಯೂ ಕಾಪೆಟನಿಂದ ಕ್ರಮವಾಗಿ ವಂಶಪಾರಂಪರ್ಯವಾಗಿ ಬಂದ 13 ದೊರೆಗಳು ಕಪೀಶಿಯನರ ನೇರ ವಂಶೀಯರೆಂದು ಹೇಳಲಾಗಿದೆ. ಇವರ ಅನಂತರ ವ್ಯಾಲಾಯಿ ವಂಶದ 13 ಮಂದಿ ಕಪೀಶಿಯನ್ ದೊರೆಗಳು ಆಳಿದರು. ಆ ಮೇಲೆ ಬೌರ್ಬನಿನ ಕಪೀಶಿಯನರು ಬಂದರು.

ಫ್ರೆಂಚ್ ರಾಜವಂಶದ ಉಪಶಾಖೆಗಳವರು ಬರ್ಗಂಡಿಯ ಡ್ಯೂಕರಾಗಿದ್ದರು. ಪೂರ್ವದ ರೋಮನ್ ಸಾಮ್ರಾಜ್ಯದ ಮೂವರು ಸಾಮ್ರಾಟರಾದ (1216–61) ಪೀಟರನೂ (ಈತ ಫ್ರಾನ್ಸಿನ ಆರನೆಯ ಲೂಯಿಯ ಮೊಮ್ಮಗ) ಅವನ ಮಕ್ಕಳಾದ ರಾಬರ್ಟ್ ಮತ್ತು ಎರಡನೆಯ ಬಾಲ್ಡ್‌ವಿನ್ ಇವರೂ ಕಪೀಶಿಯನರೇ.

ನೇಪಲ್ಸಿನಲ್ಲಿ 1266–1435ರ ವರೆಗೆ ಆಳಿದ ಎಂಟು ಮಂದಿಯೂ ಕಪೀಶಿಯನರು. ಈ ಶಾಖೆಯ ಮೊದಲ ದೊರೆ ಚಾರಲ್ಸ್ ಫ್ರಾನ್ಸಿನ ಒಂಬತ್ತನೆಯ ಲೂಯಿಯ ಸೋದರನ ವಂಶಜ. ಇವನ ಮರಿಮಗ ಚಾರಲ್ಸ್ ರಾಬರ್ಟ್ 1310ರಲ್ಲಿ ಹಂಗರಿಯ ಅರಸನಾದ. ಈ ವಂಶ 1382ರ ವರೆಗೆ ಅಲ್ಲಿ ಆಳುತ್ತಿತ್ತು. ಅಲ್ಲಿ ಆಳಿದ ಇನ್ನೊಬ್ಬ ದೊರೆ ಲೂಯಿ. ಫ್ರಾನ್ಸಿನ ದಕ್ಷಿಣದಲ್ಲಿದ್ದ ನವಾಬರನ್ನು ಇದೇ ವಂಶದ ಮೂವರು ದೊರೆಗಳು 1425ರವರೆಗೆ ಆಳಿದರು. ಮೊದಲ ದೊರೆ ಮೂರನೆಯ ಫಿಲಿಪ್ ಫ್ರಾನ್ಸಿನ ಮೂರನೆಯ ಫಿಲಿಪ್‌ನ ಮೊಮ್ಮಗ. (ಎನ್.ಎನ್.ಕೆ.ಎ.)

**ಕಪೂಚಿನ್ ಕೋತಿ :** ಸಿಬಸ್ ಕಪೂಸಿನಸ್ ಎಂಬ ಶಾಸ್ತ್ರೀಯ ಹೆಸರಿನ ಕೋತಿ. ಪ್ರೈಮೇಟುಗಳ ಗಣದ ಪ್ಲಾಟಿರೈನಿ ಬುಡಕಟ್ಟಿನ ಸಿಬಿಡೀ ಕುಟುಂಬಕ್ಕೆ ಸೇರಿದೆ. ಅಮೆರಿಕದ ಉಷ್ಣವಲಯಗಳಲ್ಲಿ ಸಿಕ್ಕುವ ಇದು ನಿಕರಾಗುವದಿಂದ ಪರಗ್ವೆಯವರೆಗೂ ಹರಡಿದೆ. ಬಾಲ ಸುರುಳಿ ಸುತ್ತಿಕೊಳ್ಳಬಲ್ಲುದು. ಇದೇ ಕುಟುಂಬದ ಇತರ ಕೋತಿಗಳೊಂದಿಗೆ ಹೋಲಿಸಿದರೆ ಇದರ ಬಾಲ ಬಹಳ ಚಿಕ್ಕದು ಮತ್ತು ಇದರಲ್ಲಿ ಕುಂಡೆಗಳ ಮೇಲೆ ರೋಮಗಳಿವೆ. ಗಾತ್ರದಲ್ಲಿ ಇದು ಬೆಕ್ಕಿನಂತಿದೆ. ಮೈ ಮೇಲಿನ ಕೂದಲು ಉಣ್ಣೆಯಂತಿಲ್ಲ.

ಸಾಮಾನ್ಯವಾಗಿ ಇವು ಗುಂಪು ಗುಂಪಾಗಿ ಎತ್ತರವಾದ ಮರಗಳ ಮೇಲೆ ಓಡಾಡಿಕೊಂಡಿರುತ್ತವೆ. ಹಣ್ಣು, ಎಳೆಯ ಕಾಂಡ, ಮೊಗ್ಗುಗಳು, ಕೀಟಗಳು, ಮೊಟ್ಟೆ ಮತ್ತು ಮರಿಹಕ್ಕಿಗಳು ಇವುಗಳ ಪ್ರಧಾನ ಆಹಾರ. ಇವನ್ನು ಹಿಡಿದು ಸುಲಭವಾಗಿ ಪಳಗಿಸಬಹುದು. ಬಹಳ ಸಾಧು ಪ್ರಾಣಿಗಳಾದ ಇವು ಮನೆಯಲ್ಲಿ ಹಾಗೂ ಪ್ರಾಣಿ ಸಂಗ್ರಹಾಲಯಗಳಲ್ಲಿ ಸಾಕಲು ಯೋಗ್ಯವಾದುವು. **(ನೋಡಿ– ಪ್ರೈಮೇಟುಗಳು)** (ಎಚ್.ಬಿ.ಡಿ.)

**ಕಪೂರ್ಥಲ :** ಪಂಜಾಬ್ ರಾಜ್ಯದ ಜಲಂಧರ್ ವಿಭಾಗದಲ್ಲಿರುವ ಒಂದು ಪಟ್ಟಣ. ಇದೇ ಹೆಸರಿನ ಜಿಲ್ಲೆಯ ಮುಖ್ಯ ಪಟ್ಟಣ, ತಹಸೀಲಿನ ಕೇಂದ್ರ. ಜಲಂಧರ್ ನಗರದಿಂದ ಪಶ್ಚಿಮಕ್ಕೆ 18 ಕಿಮೀ ದೂರದಲ್ಲಿದೆ. ಜಲಂಧರ್ ನಗರದೊಂದಿಗೆ ರೈಲ್ವೇ ಮತ್ತು ರಸ್ತೆ ಸಂಪರ್ಕವಿದೆ. ಈ ಪಟ್ಟಣದ ಜನಸಂಖ್ಯೆ 84,361(2001). ಇಲ್ಲಿ ಸುಂದರವಾದ

ಅರಮನೆ ಮತ್ತು ಉದ್ಯಾನಗಳೂ ಕಾಲೇಜು ಮತ್ತು ಆಸ್ಪತ್ರೆಗಳೂ ಇವೆ. ಈ ಪಟ್ಟಣ 11ನೆಯ ಶತಮಾನದಲ್ಲಿ ಸ್ಥಾಪಿತವಾಯಿತು. 1780ರಲ್ಲಿ ಸರ್ದಾರ್ ಜಸ್ಸಾಸಿಂಗ್ ಇದನ್ನು ಗೆದ್ದುಕೊಂಡ. ಅಂದಿನಿಂದ 1948ರ ವರೆಗೆ ಇದು ಕಪೂರ್ಥಲ ಸಂಸ್ಥಾನದ ರಾಜಧಾನಿಯಾಗಿತ್ತು.

ಕಪೂರ್ಥಲ ಜಿಲ್ಲೆಯ ವಿಸ್ತೀರ್ಣ 902.09 ಚ.ಕಿಮೀ. ಹಿಂದಿನ ಕಪೂರ್ಥಲ ಸಂಸ್ಥಾನದ ವಿಸ್ತೀರ್ಣ ಈ ಜಿಲ್ಲೆಯಷ್ಟೇ ಇತ್ತು. ಇದು ಜಲಂಧರ್ ಜಿಲ್ಲೆಯ ವಾಯವ್ಯಕ್ಕೆ ಬೀಯಾಸ್ ನದಿಯಗುಂಟ ಹಬ್ಬಿದೆ. ಇದು ವ್ಯವಸಾಯ ಪ್ರಧಾನವಾದ ಜಿಲ್ಲೆ. ಗೋದಿ, ಕಡಲೆ, ಹತ್ತಿ ಮತ್ತು ಕಬ್ಬು ಮುಖ್ಯ ಬೆಳೆ.

ಸುಲ್ತಾನ್‍ಪುರ ಮತ್ತು ಫಗ್ವಾರ ಈ ಜಿಲ್ಲೆಯ ಇನ್ನೆರಡು ಪಟ್ಟಣಗಳು. ಜನಸಂಖ್ಯೆ ಕ್ರಮವಾಗಿ 52,389 ಮತ್ತು 95,626 (2001). ಫಗ್ವಾರ ಮುಖ್ಯ ವ್ಯಾಪಾರ ಕೇಂದ್ರ. ವ್ಯವಸಾಯದ ಉಪಕರಣ, ಹತ್ತಿ ಮತ್ತು ಸಕ್ಕರೆ ಕಾರ್ಖಾನೆಗಳಿವೆ. ಸುಲ್ತಾನ್‍ಪುರ ಕೈಮಗ್ಗದ ಬಟ್ಟೆಗಳಿಗೆ ಪ್ರಸಿದ್ಧ. (ಎಂ.ಎ.ಎಚ್.)

**ಕಪೆಲ್ಲಾ :** ಆರಿಗಾ (**ನೋಡಿ– ಆರಿಗಾ**) ನಕ್ಷತ್ರ ಪುಂಜದ ಅತ್ಯಂತ ಉಜ್ವಲ ನಕ್ಷತ್ರ. ಶಾಸ್ತ್ರನಾಮ "$\alpha$–ಆರಿಗಾ". ಇದೊಂದು ರೋಹಿತ ಯಮಳ ನಕ್ಷತ್ರ (ಸ್ಪೆಕ್ಟ್ರೋಸ್ಕೋಪಿಕ್ ಬೈನರಿ ಸ್ಟಾರ್). ಇದರ ಪರಿಭ್ರಮಕಾವಧಿ 104 ದಿವಸಗಳು. ಘಟಕ ನಕ್ಷತ್ರಗಳ ದ್ರವ್ಯರಾಶಿಗಳು ಸೂರ್ಯ ದ್ರವ್ಯರಾಶಿಯ 4.3 ಮತ್ತು 3.3 ಪಾಲಿನಷ್ಟು ಇವೆ. ಬರಿಗಣ್ಣಿಗೆ ಕಾಣುವ ನಕ್ಷತ್ರಗಳನ್ನು ಉಜ್ವಲತೆಯ ರೀತಿ ಪಂಕ್ತಿಸಿದಾಗ ಸೂರ್ಯನಿಗೆ ಮೊದಲ ಮಣೆ: ಕಪೆಲ್ಲಾ ನಕ್ಷತ್ರಕ್ಕೆ ಐದನೆಯದು. ಈ ನಕ್ಷತ್ರದ ವಿಷುವದಂಶ 5 ಗಂ. 13 ಮಿ. 0 ಸೆ. ಮತ್ತು ಘಂಟಾವೃತ್ತಾಂಶ $45^0$ ಮತ್ತು $57^0$ ಉ. ಇದಕ್ಕೆ ಬ್ರಹ್ಮಹೃದಯ ಎಂದೂ ಹೆಸರಿದೆ.

**ಕಪೋತ[1] :** ಕೊಲಂಬಿಡೀ ಕುಟುಂಬಕ್ಕೆ ಸೇರಿದ ಹಕ್ಕಿಗಳು. ಇವನ್ನು ಬೆಳವಗಳೆಂದೂ ಕರೆಯುವುದುಂಟು. ಪಾರಿವಾಳಗಳೂ ಇದೇ ಕುಟುಂಬಕ್ಕೆ ಸೇರಿವೆ, ಕಪೋತಗಳಿಗೂ ಪಾರಿವಾಳಗಳಿಗೂ ಗುಣಲಕ್ಷಣಗಳಲ್ಲಿ ಅಷ್ಟೇನೂ ಭಿನ್ನತೆ ಕಂಡುಬರುವುದಿಲ್ಲ. ಈ ಹಕ್ಕಿಗಳನ್ನು ಪಾರಿವಾಳಗಳಿಂದ ಬೇರೆ ಮಾಡಲು ತಾಂತ್ರಿಕ ಭೇದಗಳೂ ಇಲ್ಲ. ಇವು ಸಾಧಾರಣವಾಗಿ ಪಾರಿವಾಳಗಳಿಗಿಂತ ಗಾತ್ರದಲ್ಲಿ ಸಣ್ಣವು. ನಸುನೀಲಿ, ಕಂದು, ಬೂದು ಅಥವಾ ಈ ಬಣ್ಣಗಳ ಮಿಶ್ರಣ ಇವುಗಳ ಬಣ್ಣ. ಯಾವ ಬಣ್ಣವಿದ್ದರೂ ಹೊಳಪು ಕಾಣುವುದು. ಕೊಕ್ಕು, ತಲೆ, ಕತ್ತು, ದೇಹ, ರೆಕ್ಕೆ, ಕಾಲುಗಳು ಸಾಧಾರಣವಾಗಿ ಪಾರಿವಾಳದ ಹಾಗೇ ಇರುತ್ತವೆ. ಇವು ಸಣ್ಣ ದನಿಯಲ್ಲಿ ಅಥವಾ ಕೂ ಎಂಬ ಶಬ್ದದಲ್ಲಿ ಕೂಗುತ್ತವೆ. ಅನೇಕ ಪ್ರಭೇದಗಳು ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಗುಡ್ಡ ಮತ್ತು ಬಯಲು ಪ್ರದೇಶಗಳಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ಜೊತೆಯಾಗಿ ನೆಲದ ಮೇಲೆ ಅಥವಾ ಮರಗಳ ಮೇಲೆ ವಾಸಿಸುತ್ತವೆ. ಬೀಜ, ಕಾಳು, ಹಣ್ಣು, ಕೀಟ ಮತ್ತು ಹುಳುಗಳು ಇವುಗಳ ಆಹಾರ.

ಇವು ಗೂಡುಗಳನ್ನು ಸಣ್ಣ ಕಡ್ಡಿಗಳಿಂದ ಕಟ್ಟುತ್ತವೆ. ಗೂಡನ್ನು ಗುಡ್ಡ, ಮರದ ತುದಿ, ದೊಡ್ಡ ಕಟ್ಟಡಗಳು, ಮರದ ಪೊಟರೆ ಅಥವಾ ನೆಲದ ಮೇಲಿನ ಸಸ್ಯಗಳ ಮಧ್ಯೆ ನಿರ್ಮಿಸುವುದು ವಾಡಿಕೆ. ಮೊಟ್ಟೆಗಳು ಸಾಮಾನ್ಯವಾಗಿ ಬಿಳುಪು. ಕೆಲವು ಸಾರಿ ಮಾಸಲು ಬಿಳುಪಾಗಿರುತ್ತವೆ. ಪ್ರತಿಯೊಂದು ಸಾರಿಗೂ 1–3 ಮೊಟ್ಟೆಗಳನ್ನಿಡುತ್ತವೆ. ಸಾಧಾರಣವಾಗಿ ಗಂಡು ಹೆಣ್ಣುಗಳೆರಡೂ ಮೊಟ್ಟೆಗಳ ಮೇಲೆ ಕೂತು ಕಾವನ್ನು ಕೊಡುತ್ತವೆ.

ಬಹುಮಟ್ಟಿಗೆ ಬಾಳಿನ ಉದ್ದಕ್ಕೂ ಒಂದು ಗಂಡು ಒಂದೇ ಹೆಣ್ಣಿನೊಡನೆ ವಾಸಿಸುತ್ತದೆ. ಅವುಗಳಲ್ಲೊಂದು ಆಕಸ್ಮಿಕಕ್ಕೊಳಗಾದಾಗ ಇನ್ನೊಂದು ಎಷ್ಟೋ ಕಾಲ ಸುಮ್ಮನಿದ್ದು ಅನಂತರ ಇನ್ನೊಂದನ್ನು ವರಿಸುವುದು. ಕಪೋತಗಳಲ್ಲಿ ಅನೇಕ ವಿಧಗಳುಂಟು. ಬೆಟ್ಟದ ಕಪೋತದ ಬಣ್ಣ ನಸುಬೂದು. ಮರುಗುವ ಕಪೋತದ (ಮೌರ್ನಿಂಗ್ ಡವ್–ಜನೈಡೂರ ಮ್ಯಾಕ್ರೂರ) ವಿಚಾರವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಇದರ ಹೃದಯದ ಬಡಿತ ಒಂದು ನಿಮಿಷಕ್ಕೆ 135. ಇದರ ರೆಕ್ಕೆ ಬಡಿತದಿಂದ ಈ ಪಕ್ಷಿಯನ್ನು ಗುರುತಿಸಬಹುದು. ಗಂಡು ಹಕ್ಕಿ ಹೆಣ್ಣು ಹಕ್ಕಿಗೆ ಗೂಡು ಕಟ್ಟುವ ಸ್ಥಳವನ್ನು ತೋರಿಸುತ್ತದೆ ಮತ್ತು ಗೂಡಿಗೆ ಬೇಕಾಗುವ ಪದಾರ್ಥಗಳನ್ನು ಒದಗಿಸುತ್ತದೆ. ಇದು ಮೊಟ್ಟೆಗಳಿಗೆ 21 ದಿನ ಕಾವು ಕೊಡುವುದು. ಋತುಮಾಸ ಮಾರ್ಚಿಯಿಂದ ಅಕ್ಟೋಬರ್ ವರೆಗೆ ವ್ಯಾಪಿಸುತ್ತದೆ. ಚಕ್ರ ಅಥವಾ ಆಮೆ ಕಪೋತ (ರಿಂಗ್ ಡವ್ ಅಥವಾ ಟರ್ಟ್ಲ್‍ಡವ್) ಬೇರೆ ಜಾತಿಯ ಕಪೋತಗಳ ಮೊಟ್ಟೆಗಳಿಗೆ ಕಾವನ್ನು ಕೊಡುವುದು. ಹಣ್ಣು ತಿನ್ನುವ ಕಪೋತ (ಫ್ರೂಟ್ ಡವ್–ಟೆಲಿನೋಪಸ್) ದಕ್ಷಿಣ ಪೆಸಿಫಿಕ್ ದ್ವೀಪಗಳಲ್ಲಿದೆ.

ಅನೇಕ ಹೆಸರಿನ ಆಮೆ ಕಪೋತಗಳು (ಟರ್ಟ್ಲ್ ಡವ್) ಮತ್ತು ಕೋಗಿಲೆ ಕಪೋತಗಳೂ (ಕಕೂ ಡವ್) ನಮ್ಮ ದೇಶದಲ್ಲಿವೆ. ಇವು ಮ್ಯಾಕ್ರೊಪೈಜಿಯ ಮತ್ತು ಸ್ಟ್ರೆಪ್ಟೊಪೇಲಿಯ ಜಾತಿಗೆ ಸೇರಿವೆ.

ಭಾರತ, ನೇಪಾಲ, ಭೂತಾನ, ಪಾಕಿಸ್ತಾನ ದೇಶಗಳಲ್ಲಿ ಸು. 20 ಪ್ರಭೇದಗಳಿವೆ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಎರಡು ಪ್ರಭೇದಗಳನ್ನು ವಿವರಿಸಿದ್ದಾರೆ.

ಮಾನವ ಪ್ರ.ಶ.ಪೂ 3 ಸಹಸ್ರ ವರ್ಷಗಳ ಹಿಂದೆಯೆ ಪಾರಿವಾಳವನ್ನು ಪಳಗಿಸಲು ಆರಂಭಿಸಿದ. ಆದಿಕಾಲದ ಆ ಕಾಡು ಪಾರಿವಾಳದ ಪೂರ್ವಜನಿಂದ ಇಂದಿಗೆ ಸು.200ಕ್ಕೂ ಹೆಚ್ಚು ವಿವಿಧ ರೀತಿಯ ತಳಿಗಳು ರೂಪುಗೊಂಡಿವೆ. ಈ ವಿಚಾರವಾಗಿ ಸುದೀರ್ಘವಾದ ಅಧ್ಯಯನವನ್ನು ನಡೆಸಿ ಮೊದಲು ಪರಿಚಯ ಮಾಡಿಕೊಟ್ಟ ಕೀರ್ತಿ ಚಾರ್ಲ್ಸ್ ಡಾರ್ವಿನ್ನನಿಗೆ ಸಲ್ಲುತ್ತದೆ.

ಪಾರಿವಾಳಗಳಲ್ಲಿ ಕೆಲವು ಪ್ರಭೇದಗಳಿಗೆ ವಿವಿಧ ರೀತಿಯ ತರಪೇತು ನೀಡಬಹುದು. ದೂರ ಪ್ರಯಾಣದಲ್ಲಿ ನಿರ್ದಿಷ್ಟ ಸ್ಥಳವನ್ನು ಗುರುತಿಟ್ಟುಕೊಂಡು ಹೋಗುವುದು ಮತ್ತು ಹೊರಟ ಸ್ಥಳಕ್ಕೆ ಸರಿಯಾಗಿ ಹಿಂದಿರುಗುವುದು, ಪಂದ್ಯಾಟಗಳಿಗೆ (ರೇಸಿಂಗ್) ಪಳಗಿಸುವುದು. ಟಪಾಲು ಸಾಗಿಸುವುದು ಇತ್ಯಾದಿ ಕಾರ್ಯಗಳನ್ನು ಅವಕ್ಕೆ ಕಲಿಸುವುದು ಸಾಧ್ಯ. ಇಂದಿಗೂ ಕೆಲವು ಸಂದರ್ಭಗಳಲ್ಲಿ ಅಂಚೆಯನ್ನು ಸಾಗಿಸಲು ಪಳಗಿದ ಪಾರಿವಾಳಗಳನ್ನು ಬಳಸುವುದುಂಟು (**ನೋಡಿ– ಪಾರಿವಾಳ**). (ಎನ್.ವಿ.ಎ.)

**ಕಪೋತ[2] :** ಕಟ್ಟಡದ ಗೋಡೆಗಳ ಮೇಲುಭಾಗದಲ್ಲಿ ಉದ್ದಕ್ಕೂ ಕಟ್ಟಿರುವ ಚಿಡಿ (ಕಾರ್ನಿಸ್). ಪ್ರಧಾನ ಉದ್ದೇಶ ಗೋಡೆಗಳ ಮೇಲೆ ನೀರು ಸೋರದಿರಲೆಂದು, ಗಾರೆ, ಕಾಂಕ್ರೀಟ್, ಕಲ್ಲುಚಪ್ಪಡಿ, ಪ್ಲಾಸ್ಟರ್ ಆಫ್ ಪ್ಯಾರಿಸ್, ಕಂಬಿ, ಮರ ಮುಂತಾದವುಗಳಿಂದ ಕಟ್ಟುತ್ತಾರೆ. ಕಪೋತಗಳನ್ನು ವೈವಿಧ್ಯಪೂರ್ಣವಾಗಿ ಸೌಂದರ್ಯಯುಕ್ತವಾಗಿ ರಚಿಸಿ ಕಟ್ಟಡದ ಅಂದವನ್ನು ಹೆಚ್ಚಿಸುವುದು ವಾಡಿಕೆ. ಇವನ್ನು ಕಟ್ಟಡದ ಮುಂಭಾಗ, ಅಕ್ಕಪಕ್ಕ



ಕಪೋತದ ಒಂದು ಬಗೆ

ಮತ್ತು ಕೆಲವು ಸಂದರ್ಭಗಳಲ್ಲಿ ಸುತ್ತಲೂ ಕಟ್ಟುತ್ತಾರೆ. ಕಟ್ಟಡದ ಮೇಲ್ಛಾವಣಿಯ ಕೆಳಮಟ್ಟದಿಂದ ಅರ್ಧ ಅಡಿಯಿಂದ ಮೂರು ಅಥವಾ ನಾಲ್ಕು ಅಡಿಗಳವರೆಗೆ ಮುಂದಕ್ಕೆ ಅಡ್ಡಲಾಗಿ ನೂಕಿ ಅದರ ಕೆಳಭಾಗದಲ್ಲಿ ವಿವಿಧ ರೀತಿಯ ಆಕಾರಗಳನ್ನು ಮಾಡುತ್ತಾರೆ. ಕಪೋತಗಳ ಅಗಲಕ್ಕೂ ಆಳಕ್ಕೂ ಸಂಬಂಧವಿದೆ. ಇವುಗಳ ಗಾತ್ರ ಕಟ್ಟಡದ ಗಾತ್ರವನ್ನು ಅನುಸರಿಸಿ ಇರುವುದು. ಇವು ಕಟ್ಟಡದ ಯಾವ ತೂಕವನ್ನೂ ಹೊರಲಾರವು. ಸಾಮಾನ್ಯವಾಗಿ ಮುಖ್ಯ ಹಾಗೂ ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ವಿಶ್ವವಿದ್ಯಾಲಯ ಕಚೇರಿ, ಶಾಲಾಕಾಲೇಜುಗಳು, ಪುಸ್ತಕಭಂಡಾರ, ವಸ್ತುಸಂಗ್ರಹಾಲಯ ನಾಟಕ ಮತ್ತು ಸಿನಿಮಾ ಮಂದಿರಗಳ ಕಟ್ಟಡಗಳಲ್ಲಿ ಕಪೋತಗಳನ್ನು ಕಾಣಬಹುದು. ರೋಮ್, ಗ್ರೀಸ್, ಈಜಿಪ್ಟ್, ಭಾರತಗಳಲ್ಲಿ ಹಿಂದಿನ ಕಾಲದಲ್ಲಿ ಕಟ್ಟಿರುವ ಕಟ್ಟಡಗಳಲ್ಲಿ ಕಪೋತಗಳಿವೆ. (ಜಿ.ಟಿ.ಜಿ.)

**ಕಪೋತವಾಕ್ಯ :** ಮಹಾಭಾರತದ ಶಾಂತಿಪರ್ವದಲ್ಲಿ ಬರುವ ಒಂದು ನೀತಿ ಕಥೆ. ಈ ವ್ಯಾಧ–ಕಪೋತೋಪಾಖ್ಯಾನದಲ್ಲಿ ಮುಚುಕುಂದನನ್ನು ಕುರಿತು ಭಾರ್ಗವ ಹೇಳಿದ ಅತಿಥಿಸತ್ಕಾರದ ಹಿರಿಮೆಯ ವರ್ಣನೆ ಇದೆ.

ಒಂದು ಮಹಾರಣ್ಯದಲ್ಲಿ ಒಬ್ಬ ಕ್ರೂರಿಯಾದ ಬೇಡರವನು ಬೇಟೆಯಾಡಲು ಸಂಚಾರ ಮಾಡುತ್ತಿರುವಾಗ ಭಯಂಕರವಾದ ಮಹಾವೃಷ್ಟಿಯಾಗಿ ಎಡೆಬಿಡದೆ ಧಾರಾಕಾರವಾಗಿ ಮಳೆ ಹುಯ್ದು ಅಸಾಧ್ಯವಾದ ಚಳಿ ಉಂಟಾಯಿತು. ಮರೆಯಾದ ಒಂದು ಆಸರೆಯೂ ಸಿಕ್ಕದೆ ಒದ್ದಾಡುತ್ತ ಕಳವಳಗೊಂಡ ವ್ಯಾಧ ಒಂದು ಮರದಡಿಗೆ ಬಂದು ಅಲ್ಲಿ ವಾಸಿಸಬೇಕೆಂದು ನಿಶ್ಚಯಿಸಿ ಅಲ್ಲಿಯ ವನದೇವತೆಗೆ ನಮಸ್ಕರಿಸಿ ತನ್ನನ್ನು ಆ ಕಷ್ಟದಿಂದ ಪಾರು ಮಾಡಬೇಕೆಂದು ಪ್ರಾರ್ಥಿಸಿ ಒಂದು ಶಿಲೆಯ ಮೇಲೆ ತಲೆಯನ್ನಿಟ್ಟುಕೊಂಡು ಎಲೆ ಹಾಸಿಗೆಯ ಮೇಲೆ ಮಹತ್ತರ ದುಃಖದೊಡನೆ ಮಲಗಿದ. ಅದೇ ಮರದ ಕೊಂಬೆಯೊಂದರಲ್ಲಿ ಒಂದು ಕಪೋತ ಅನೇಕ ಗೆಳೆಯ ಪಕ್ಷಿಗಳೊಡನೆ ವಾಸವಾಗಿತ್ತು. ಅದರ ಮಡದಿ ಕಪೋತಿ ಬೆಳಗ್ಗೆ ಆಹಾರಕ್ಕೋಸ್ಕರ ಹೊರಕ್ಕೆ ಹೋದುದು ಅಲ್ಲಿಯವರೆವಿಗೂ ಗೂಡಿಗೆ ಬರದೇ ಇದ್ದುದನ್ನು ಕಂಡು ಗಂಡು ಹಕ್ಕಿ ಬಹಳಮಟ್ಟಿಗೆ ನೊಂದು ಹೆಂಡತಿಯ ಅಗಲಿಕೆಯ ದುಃಖವನ್ನು ತೋಡಿಕೊಳ್ಳುತ್ತಿತ್ತು. ಇತ್ತ ಮರದ ಕೆಳಗೆ ಮಲಗಿದ್ದ ಬೇಡರವನ ಬುಟ್ಟಿಯಲ್ಲಿ

ಸಿಕ್ಕಿಬಿದ್ದಿದ್ದ ಕಪೋತಿ ತನ್ನ ಪತಿಯ ಮಾತುಗಳನ್ನು ಕೇಳಿ ಪ್ರತ್ಯಕ್ಷ ಪರೋಕ್ಷಗಳಲ್ಲಿ ಏಕರೂಪವಾಗಿ ಪತಿಯಿಂದ ಸ್ತುತಿಸಲ್ಪಡುವ ಸ್ತ್ರೀಯೇ, ಧನ್ಯಳು, ಪತಿಯ ಸಂತೋಷವೇ ಪ್ರಿಯೆಯ ಜೀವನ ಸರ್ವಸ್ವ–ಎಂದು ಹೇಳಿಕೊಂಡು ತನ್ನ ಪತಿಯನ್ನು ಕೂಗಿ ಪ್ರಾಣವಲ್ಲಭನೇ! ನಾವು ಜಾತಿಯಲ್ಲಿ ಕಪೋತಗಳಾದರೂ ಧರ್ಮರಕ್ಷಣಾ ಕಾರ್ಯವನ್ನು ಮರೆಯಬಾರದು. ಆದ್ದರಿಂದ ನಿನ್ನ ಶರೀರಮೋಹವನ್ನು ತೊರೆದು ಮನೆಬಾಗಿಲಿಗೆ ಬಂದಿರುವ ಅತಿಥಿಯ ಪೂಜೆಯನ್ನು ಯತ್ನಪೂರ್ವಕವಾಗಿ ಮಾಡು. ಈ ದೇಹ ಸ್ಥಿರವಲ್ಲ. ಧರ್ಮ ಶಾಶ್ವತಫಲ ಕೊಡುವುದು–ಎಂದು ಹೇಳಲಾಗಿ, ಆ ಮಾತನ್ನು ಕೇಳಿ ಹರ್ಷಗೊಂಡ ಕಪೋತ ಬೇಡರವನನ್ನು ಕಂಡು ಶಾಸ್ತ್ರೀಯ ವಿಧಾನದಿಂದ ಮನಃಪೂರ್ವಕವಾದ ಸ್ವಾಗತವನ್ನು ಬಯಸಿ ಅವನನ್ನು ಪೂಜಿಸಿತು. ಅವನ ಇಚ್ಛೆಯಂತೆ ಒಣ ಎಲೆಗಳ ಹಾಸಿಗೆಯನ್ನು ಮಾಡಿಕೊಟ್ಟು ಎಲ್ಲಿಂದಲೋ ಉರಿಯುವ ಕೊಳ್ಳಿಯನ್ನು ತಂದು ಕಾಸಿಕೊಳ್ಳಲು ಬೆಂಕಿ ಮಾಡಿಕೊಟ್ಟಿತು. ಬೇಡರವನು ಹಸಿವೆಂದು ಹೇಳಿದಾಗ ಎರಡು ಯೋಚಿಸದೆ ತನ್ನನ್ನೇ ಆಹಾರವಾಗಿ ಉಪಯೋಗಿಸೆಂದು ಬೇಡನಿಗೆ ಹೇಳಿ ಅಗ್ನಿಪ್ರವೇಶ ಮಾಡಿ ಅಸು ನೀಗಿತು. ಈ ಕೊನೆಯ ಭಾಗದಲ್ಲಿ ಅತಿಥಿಸತ್ಕಾರದ ವರ್ಣನೆ, ಉಪದೇಶ ಬರುತ್ತದೆ.

ಕನ್ನಡದಲ್ಲಿ ಬಹಳ ಹಿಂದೆಯೇ ಈ ಕಥೆ ಸಾಂಗತ್ಯರೂಪದಲ್ಲಿ ರಚನೆಗೊಂಡಿದೆ. ಇದರ ಕರ್ತೃ ನಂಜಕವಿ (ಸು.1700). ಸಂಪಿಗೆ ಸಿದ್ದೇಶ್ವರನ ಭಕ್ತ. ಇದರ ರಚನೆ ಬಹು ಸೊಗಸಾಗಿದೆ.

ಒಂದು ಕಪೋತಿಯು ಸಂದ ಕಪೋತಿಯೊ
ಳೊಂದು ವನದಿ ಸುಖವಾಗಿ
ಕಂದನ ಪಡೆದುಕೊಂಡಂದದಲಿರುತಿರೆ
ಮುಂದೊಂದು ವಿಘ್ನ ಪ್ರಾಪ್ತಿಸಿತು.

ಎಂದು ಮೊದಲಾಗುವ ಈ ಸಾಂಗತ್ಯ ಹಿಂದಿನ ಪಠ್ಯಪುಸ್ತಕಗಳಲ್ಲಿ ಸೇರಿತ್ತಾಗಿ ಎಲ್ಲ ಮಕ್ಕಳಿಗೂ ಇದರ ಪರಿಚಯವಿತ್ತು. ನಿರರ್ಗಳವಾದ ಸಾಂಗತ್ಯ ಶೈಲಿಯಲ್ಲಿ ಹಿತಮಿತವಾದ ವಿವರ. ವರ್ಣನೆಗಳೊಂದಿಗೆ ಕವಿ ಇಲ್ಲಿ ಕಥೆ ಹೇಳುತ್ತಾನೆ. ಮೂಲದಂತೆ ನೀತಿಯ ಅತಿರೇಕ ಇಲ್ಲಿ ಕಾಣದು. (ಎನ್.ಎಸ್.ಆರ್.ಬಿ.)

**ಕಪ್ಪಂಗಿಯವರು :** ಒಂದನೆಯ ಮಹಾಯುದ್ಧದ ಅನಂತರದ ಕಾಲದಲ್ಲಿ ಇಟಲಿಯಲ್ಲಿ ಉದ್ಭವಿಸಿದ್ದ ಅನಾಯಕತ್ವದ ಪರಿಸ್ಥಿತಿಯಲ್ಲಿ ಪ್ರಬಲನಾಗುತ್ತಿದ್ದ ಬೆನಿಟೊ ಮುಸೋಲೀನಿ ಸಂಘಟಿಸಿದ ಜನತಾ ಸೈನ್ಯ (ಬ್ಲ್ಯಾಕ್‌ಷರ್ಟ್ಸ್). ನಿವೃತ್ತ ಸೈನಿಕರೂ ಅಧಿಕಾರಿಗಳೂ ವಿಶ್ವವಿದ್ಯಾನಿಲಯದ ಅಧ್ಯಾಪಕರೂ ವಿದ್ಯಾರ್ಥಿಗಳೂ ಕೃಷಿಕರೂ ಕಾರ್ಮಿಕರೂ ಇದ್ದ ಶಿಸ್ತಿನ ಸೇನೆಯ ಸದಸ್ಯರು ಕಪ್ಪನೆಯ ಸಮವಸ್ತ್ರ ಧರಿಸುತ್ತಿದ್ದುದರಿಂದ ಅವರಿಗೆ ಈ ಹೆಸರು ಬಂತು. ಧೈರ್ಯ ಕಷ್ಟಸಹಿಷ್ಣುತೆಗಳಿಗೆ ಕಪ್ಪು ಅಂಗಿ ಸಂಕೇತವೆಂದು ಪರಿಗಣಿಸಲಾಗಿತ್ತು. ವ್ಯಕ್ತಿಗಿಂತ ರಾಷ್ಟ್ರ ಮುಖ್ಯ, ರಾಷ್ಟ್ರೋನ್ನತಿಗಾಗಿ ವ್ಯಕ್ತಿಗಳು ಶ್ರಮಿಸಬೇಕು, ಹೋರಾಟದಿಂದ ಅದನ್ನು ಸಾಧಿಸಬೇಕು ಎಂಬುದೇ ಈ ಸಂಘಟನೆಯ ನೀತಿಯಾಗಿತ್ತು. ಕಪ್ಪಂಗಿಯವರು ಕಮ್ಯೂನಿಸಂ ಮತ್ತು ಪ್ರಜಾಪ್ರಭುತ್ವಗಳ ವಿರೋಧಿಗಳಾಗಿದ್ದರು. (ಪಿ.ಬಿ.ಡಿ.)

**ಕಪ್ಪಿಗಳು ಮತ್ತು ಪಟ್ಟಿಗಳು :** ಒಂದು ಚಾಲಕದಂಡದಿಂದ ಮತ್ತೊಂದು ಚಾಲಕದಂಡಕ್ಕೆ ಭ್ರಾಮಕಶಕ್ತಿಯನ್ನು ರವಾನಿಸುವ ಯಾಂತ್ರಿಕ ವ್ಯವಸ್ಥೆ (ಪುಲ್ಲೀಸ್ ಅಂಡ್ ಬೆಲ್ಟ್ಸ್). ಚಾಲಕ ಕಪ್ಪಿಯ ಬಳಿ ಉತ್ಪತ್ತಿಯಾದ ಭ್ರಾಮಕಶಕ್ತಿಯನ್ನು ಅದು ಪಟ್ಟಿಗೆ ವರ್ಗಾಯಿಸುತ್ತದೆ. ಇದನ್ನು ಪಟ್ಟಿ ಅದರ ಸುತ್ತು ಚಲನೆಯಲ್ಲಿ ಚಾಲಿತ ಕಪ್ಪಿಗೆ ರವಾನಿಸುತ್ತದೆ.

ಪಟ್ಟಿ ಚಾಲನಗಳ (ಬೆಲ್ಟ್ ಡ್ರೈವ್ಸ್) ಬಳಕೆ : ಚಾಲಕದಂಡಗಳ ನಡುವಣ ಅಂತರ ಹೆಚ್ಚು ಇರುವಲ್ಲಿ, ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಆಘಾತಗಳನ್ನು ತಾಳಿಕೊಳ್ಳ ಬೇಕಾದಲ್ಲಿ, ಯಂತ್ರ ಭಾಗಗಳಿಗೆ ಅಪಾಯವಾಗದಂತೆ ಅತಿ ಹೆಚ್ಚಿನ ತೂಕವನ್ನು ತಡೆದುಕೊಳ್ಳಬೇಕಾದಲ್ಲಿ (ತೂಕ ಅತಿ ಹೆಚ್ಚಾದಾಗ ಪಟ್ಟಿ ಜಾರುವುದರಿಂದ ಇದು ಸಾಧ್ಯ), ವೆಚ್ಚ ಕಡಿಮೆ ಆಗಬೇಕಾದಲ್ಲಿ ಮತ್ತು ಕಾರ್ಯಾಚರಣೆಯಲ್ಲಿ ಶಬ್ದ ಕಡಿಮೆ ಇರಬೇಕಾದಲ್ಲಿ ಪಟ್ಟಿ ಚಾಲಿಗಳ ಬಳಕೆ ಇದೆ. ಪಟ್ಟಿ ಚಾಲಿಗಳಿಂದ ನಿಷ್ಕೃಷ್ಟ ವೇಗ ಪರಿಮಾಣ ಪಡೆಯಲು ಸಾಧ್ಯವಿಲ್ಲ. ಏಕೆಂದರೆ ತೂಕ ಹೆಚ್ಚು ಇದ್ದಲ್ಲಿ ಪಟ್ಟಿಯ ಮತ್ತು ಕಪ್ಪಿಯ ಮೇಲ್ಮೈಗಳ ನಡುವೆ ಜಾರುವಿಕೆ ಉಂಟಾಗುತ್ತದೆ. ಒಂದು ಪಕ್ಷ ಇದು ಉಂಟಾಗದಿದ್ದರೂ ಜರುಗು(ಕ್ರೀಪ್) ಇದ್ದೇ ಇರುತ್ತದೆ. ಕಾರಣ, ಪಟ್ಟಿಯ ಪದಾರ್ಥ ಸ್ಥಿತಿಸ್ಥಾಪಕ ಗುಣವುಳ್ಳದ್ದು. ಆದ್ದರಿಂದ ಅದರ ಸಡಿಲ ಭಾಗದ ಉದ್ದಕ್ಕಿಂತ ಬಿಗಿ ಭಾಗದ ಉದ್ದ ಹೆಚ್ಚು ಹಿಗ್ಗುತ್ತದೆ. ಅಂದರೆ ಅಸಮ ಹಿಗ್ಗುವಿಕೆ ಇರುತ್ತದೆ. ಇದರ ಪರಿಣಾಮವನ್ನು ಅಳೆಯುವ ಬಗೆ ಹೀಗೆ– ಪಟ್ಟಿಯ ಏಕಮಾನ ಉದ್ದವನ್ನು ತೆಗೆದುಕೊಳ್ಳೋಣ. ಅದು ಬಿಗಿ ಭಾಗದಲ್ಲಿ $(1+c_1)$ಕ್ಕೂ ಸಡಿಲ ಭಾಗದಲ್ಲಿ $(1+c_2)$ ಕ್ಕೂ ಹಿಗ್ಗಲಿ. ಇಲ್ಲಿ $c_1 > c_2$ ಚಾಲಕ ಕಪ್ಪಿಗೆ ಪಟ್ಟಿ ಬಿಗಿ ಭಾಗದಿಂದ ಬರುತ್ತದೆ. ಆದರೆ ಚಾಲಿತ ಕಪ್ಪಿಗೆ ಪಟ್ಟಿ ಸಡಿಲ ಭಾಗದಿಂದ ಬರುತ್ತದೆ. ಏಕಮಾನ ಉದ್ದವನ್ನು ಪರಿಗಣಿಸಿದಲ್ಲಿ ಚಲಕ ಕಪ್ಪಿ $(1+c_1)$ ಉದ್ದವನ್ನು ಪಡೆದು $(1+c_2)$ ಉದ್ದವನ್ನು ಕೊಡುತ್ತದೆ. ಅಂದರೆ ಹೆಚ್ಚು ಉದ್ದವನ್ನು ಪಡೆದು ಕಡಿಮೆ ಉದ್ದವನ್ನು ಕೊಡುತ್ತದೆ. ಆದ್ದರಿಂದ ಪಟ್ಟಿ $(c_1 - c_2)$ರಷ್ಟು ಹಿಂದೆ ಜರುಗುತ್ತದೆ. ಚಾಲಿತ ಕಪ್ಪಿ ಕಡಿಮೆ ಉದ್ದವನ್ನು ಪಡೆದು ಹೆಚ್ಚು ಉದ್ದವನ್ನು ಕೊಡುತ್ತದೆ. ಎಂದರೆ ಪಟ್ಟಿ $(c_1-c_2)$ ರಷ್ಟು ಮುಂದೆ ಜರಗುತ್ತದೆ. ಕಪ್ಪಿಯ ಹೊರಮೈ ವೇಗ ಅದು ಪಡೆಯುವ ಪಟ್ಟಿಯ ಉದ್ದವನ್ನು ಅವಲಂಬಿಸಿದೆ. ಆದ್ದರಿಂದ ಚಾಲಿತ ಕಪ್ಪಿಯ ಹೊರಮೈ ವೇಗ ಚಾಲಕ ಕಪ್ಪಿಯದಕ್ಕಿಂತ ಕಡಿಮೆ. ಈ ಪ್ರಕರಣವೇ ಜರುಗು. ಜರುಗು ಒಂದೇ ಕಾರ್ಯವೇಗವನ್ನು ಸು. ಶೇ. 1ರಷ್ಟು ಕಡಿಮೆ ಮಾಡುತ್ತದೆ. ಜಾರುವಿಕೆಯಿಂದಾಗಿ ಈ ವೇಗ ಮತ್ತೆ ಶೇ. 2ರಷ್ಟು ಕಡಿಮೆಯಾಗುತ್ತದೆ. ಜೊತೆಗೆ ಅತಿ ಹೆಚ್ಚಿನ ಜಾರುವಿಕೆ ಪಟ್ಟಿಗೆ ಹಾನಿಕರ. ಪಟ್ಟಿಗಳ ವೇಗ ಸಾಮಾನ್ಯವಾಗಿ ಸೆಕೆಂಡಿಗೆ 25 ಮೀ ಗಳು. ಇದಕ್ಕಿಂತ ವೇಗ ಹೆಚ್ಚು ಇದ್ದಲ್ಲಿ ಪಟ್ಟಿಯ ಶಕ್ತಿಗೆ ತೂಕಕ್ಕಿಂತಲೂ ಹೆಚ್ಚಾಗಿ ಕೇಂದ್ರಾಪಗಮನ ಶಕ್ತಿಯ ಹೊಡೆತವೇ ಅಧಿಕ ಆಗುತ್ತದೆ.

ಪಟ್ಟಿ ಮತ್ತು ಕಪ್ಪಿಗಳಿಗೆ ಸಂಸ್ಪರ್ಶವಿರಬೇಕಾದಲ್ಲಿ ಪಟ್ಟಿಯ ಎರಡು ಭಾಗಗಳಲ್ಲೂ ಸಾಕಷ್ಟು ತುಯ್ತ ಇರಬೇಕು. ಪಟ್ಟಿಯ ಬಿಗಿ ಭಾಗದ ತುಯ್ತ $T_1$ ಇರಲಿ. ಸಡಿಲ ಭಾಗದ ತುಯ್ತ $T_2$ ಇರಲಿ. ಈ ತುಯ್ತಗಳ ವ್ಯತ್ಯಾಸ $T_1 - T_2$. ಇದು ಕಪ್ಪಿಯ ಮೇಲ್ಮೈನಲ್ಲಿ ಭ್ರಾಮಕಶಕ್ತಿಯನ್ನು ಉತ್ಪತ್ತಿಮಾಡುತ್ತದೆ. ಭ್ರಾಮಕಶಕ್ತಿ ಪರಿಣಾಮಕಾರಿ ಶಕ್ತಿಯ ಪ್ರಮಾಣವನ್ನು ಅವಲಂಬಿಸಿದೆ. ತಾತ್ತ್ವಿಕವಾಗಿ ಈ ರೀತಿಯ ಸಮೀಕರಣವನ್ನು ಬರೆಯಬಹುದು.

$$\frac{T_1 - T_e}{T_2 - T_e} = e\mu\theta \ \cos \ ee\,\alpha$$

ಇಲ್ಲಿ Tc ಕೇಂದ್ರಾಪಗಮನ ಬಲ: $e$=2.718, $\mu$=ಮೇಲ್ಮೈ ನಡುವಣ ಘರ್ಷಣಾಗುಣಕ, $\alpha$=ತೋಡುಕೋನದ (ಗ್ರೋವ್ ಆಂಗಲ್) ಅರ್ಧಭಾಗ; $\theta$=ಕಪ್ಪಿ ಮತ್ತು ಪಟ್ಟಿಯ ನಡುವಣ ಸ್ಪರ್ಶ ಕೋನ. ಖ್$_1$ರ ಗರಿಷ್ಠ ಬೆಲೆಯ ಪಟ್ಟಿಯ ಕರ್ಷಕ ಬಲವನ್ನು ಅವಲಂಬಿಸಿದೆ. ಶಕ್ತಿ ರವಾನಿಸುವ ಸಾಮರ್ಥ್ಯ ಪರಿಣಾಮಕಾರಿ ಬಲ ( $_{ಜ}$)ವನ್ನು ಅವಲಂಬಿಸಿದೆ. ಆದ್ದರಿಂದ $e\mu\theta \cos ee\alpha$ದ ಬೆಲೆ ಅಧಿಕತಮವಾದಾಗ ಶಕ್ತಿ ರವಾನಿಸುವ ಸಾಮರ್ಥ್ಯವು ಅಧಿಕತಮವಾಗುತ್ತದೆ.

**ಕಪ್ಪಿಯ ರಚನೆ :** ಕಪ್ಪಿಗಳನ್ನು ತಾಂಡವಾಳ, ಉಕ್ಕು, ಮರ ಮತ್ತು ಹಿತ್ತಾಳೆಗಳಿಂದ ಮಾಡುತ್ತಾರೆ. ಅಖಂಡವಾಗಿ ಎರಕ ಹೊಯ್ದ ತಾಂಡವಾಳದ ಕಪ್ಪಿಗೆ ಅಖಂಡ ಅಥವಾ ಹೋಳುಗುಂಬ ಇರುತ್ತದೆ. ಅಖಂಡ ಗುಂಬ ಇರುವ ಕಪ್ಪಿಯನ್ನು ಚಾಲಕಂದಡಕ್ಕೆ ಬೆಣೆ (ಕೀ), ಶಂಕುಬೆಣೆ (ಕೋನ್ ಕೀ) ಮತ್ತು ತಿರುಪೊತ್ತಿಗೆ (ಸೆಟ್ ಸ್ಕ್ರೂಸ್) ಇವುಗಳಿಂದ ಅಥವಾ ಇವುಗಳ ಯಾವುದಾದರೂ ಎರಡರ ಸಹಾಯದಿಂದ ಜೋಡಿಸಬಹುದು. ಹೋಳುಗುಂಬ ಇರುವ ಕಪ್ಪಿಗಳಿಗೆ ಬಂಧಿಸಿ ಬೋಲ್ಟುಗಳಿವೆ. ಇವನ್ನು ಬಿಗಿ ಮಾಡಿದಾಗ ಚಾಲಕ ದಂಡಕ್ಕೆ ಬಿಗಿಯಾಗಿ ಕೂರುವಂತೆ ಅವು ಗುಂಬಗಳ ಭಾಗಗಳನ್ನು ಸೆಳೆಯುತ್ತವೆ. ಅಂಥ ಕಪ್ಪಿಗಳಿಗೆ ಇರುವ ತೋಳುಗಳ ಸಂಖ್ಯೆ ಸಾಮಾನ್ಯವಾಗಿ 6. ಕಪ್ಪಿ ಚಿಕ್ಕದಾದಲ್ಲಿ ತೋಳುಗಳ ಸಂಖ್ಯೆ 4. ಕಪ್ಪಿಯ ವ್ಯಾಸ 5 ಅಡಿಗೂ ಹೆಚ್ಚಿದ್ದಲ್ಲಿ ತೋಳುಗಳ ಸಂಖ್ಯೆ 8 ಇರಬಹುದು. ಕಪ್ಪಿಯನ್ನು ಅಖಂಡವಾಗಿ ಎರಕ ಹೊಯ್ಯುವುದರ ಬದಲು ಎರಡು ಭಾಗಗಳಾಗಿ ಎರಕ ಹೊಯ್ಯಬಹುದು. ಇಂಥ ಕಪ್ಪಿಯೇ ಹೋಳು ಕಪ್ಪಿ. ಎರಡೂ ಹೋಳುಗಳನ್ನು ಗುಂಬ ಮತ್ತು ನೇಮಿಗಳ ಬಳಿ ಬೋಲ್ಟುಗಳಿಂದ ಒಂದಾಗಿ ಬಂಧಿಸಲಾಗುತ್ತದೆ. ಕಪ್ಪಿಯ ಮುಖದ ಅಗಲ 10" ಗಳಿಂಗಿತಲೂ ಹೆಚ್ಚು ಇರುವುದು ಆವಶ್ಯಕವಾದಾಗ ಹೋಳುಕಪ್ಪಿಯನ್ನು ಅಥವಾ ಹೋಳುಗುಂಬವಿರುವ ಕಪ್ಪಿಯನ್ನು ಬಳಸಲು ಅಪೇಕ್ಷಿಸುತ್ತಾರೆ. ಕಪ್ಪಿಯ ಮುಖದ ಅಗಲ 20.24"ಗಳಿಗೂ ಮೀರಿದ್ದಲ್ಲಿ ನೇಮಿಗೆ ಹೆಚ್ಚಿನ ಆಧಾರ ಬೇಕು. ಇದನ್ನು ಎರಡು ಜೊತೆ ಹೋಳುಗಳ ಸಹಾಯ ದಿಂದ ಕೊಡಬಹುದು, ಮರದ ಮುಖದ ಕಪ್ಪಿಗಳು, ತಾಂಡವಾಳವ ಕಪ್ಪಿಗಳಿಗಿಂತಲೂ ಹೆಚ್ಚು ಹಗುರ. ಸಮತಲಪಟ್ಟಿ ಚಾಲಿಗಳಲ್ಲಿ ಇವು ತಾಂಡವಾಳವ ಕಪ್ಪಿಗಳಿಗಿಂತಲೂ ಹೆಚ್ಚು ಶಕ್ತಿಯನ್ನು ರವಾನಿಸುತ್ತವೆ. ಉಕ್ಕಿನ ತಗಡಿನಿಂದ ಮಾಡಿದ ಕಪ್ಪಿ ತೂಕದಲ್ಲಿ ಹಗುರ. ಎರಕ ಹೊಯ್ದ ಕಪ್ಪಿಯಲ್ಲಿ ಉಳಿಕೆ ಒತ್ತಾಯ (ರೆಸಿಡ್ಯೂಅಲ್ ಸ್ಟ್ರೆಸ್) ಇರುವ ಸಾಧ್ಯತೆ ಇದೆ. ಆದರೆ ಉಕ್ಕಿನ ತಗಡಿನಿಂದ ಮಾಡಿದ ಕಪ್ಪಿಯಲ್ಲಿ ಇದು ಇರುವುದಿಲ್ಲ. ಇದು ಮಿತವ್ಯಯದಿಂದ ಕೆಲಸ ಮಾಡುತ್ತದೆ. ಅಲ್ಲದೆ ಅದರಷ್ಟೇ ಇರುವ ತಾಂಡವಾಳದ ಕಪ್ಪಿಗಿಂತಲೂ ಇದರ ಜಾರುವಿಕೆ ಕಡಿಮೆ. ಚಿಕ್ಕ ಕಪ್ಪಿಗಳನ್ನು ಹಿತ್ತಾಳೆಯಿಂದ ಮಾಡಬಹುದು.

ದಾರ ಮತ್ತು ದುಂಡಗಿರುವ ಪಟ್ಟಿಗಳನ್ನು ಉಪಯೋಗಿಸುವಲ್ಲಿ ಇಂಥವು ಉಪಯುಕ್ತ. ಅಖಂಡ ಕಪ್ಪಿಯ ನೇಮಿಯ ಗರಿಷ್ಠ ವೇಗ ಸೆಕೆಂಡಿಗೆ 25 ಮೀ ಗಳು. ಹೋಳುಕಪ್ಪಿಯ ನೇಮಿಯ ವೇಗ ಇದರ ಶೇ. 50–60 ಇರಬಹುದು.




**ಚಿತ್ರ 1 : A. ಚಾಲಕದಂಡ, B. ಚಾಲಿತ ದಂಡ**

ಕಪ್ಪಿಯ ಗುಂಬದ ಹೊರವ್ಯಾಸ ನಾಳದ ವ್ಯಾಸದ (ಬೋರ್) ಎರಡರಷ್ಟಿದೆ. ಗುಂಬದ ಅಗಲ ಹೆಚ್ಚುಕಡಿಮೆ ಕಪ್ಪಿಯ ಅಗಲದಷ್ಟೇ ಇದೆ. ಗುಂಬವನ್ನು ತೋಳುಗಳ ಸಹಾಯದಿಂದ ನೇಮಿಗೆ ಸೇರಿಸಿರುತ್ತಾರೆ. ತೋಳುಗಳ ಒಳನೋಟ ಅಂಡಾಕೃತಿ. ನೇಮಿಯ ಮೇಲ್ಮೈಯನ್ನು ಉಪಯೋಗಿಸುವ ಪಟ್ಟಿಗೆ ಅನುಗುಣವಾಗಿ ಮಾಡಿರುತ್ತಾರೆ. ಕಪ್ಪಿಯ ಮೇಲ್ಮೈನಲ್ಲಿ ತೋಡು ಇದ್ದರೆ ಅದು ಕಪ್ಪಿಚಕ್ರ.

**ಕಪ್ಪಿಯ ಅನ್ವಯ:** ಚಾಲಕ ಮತ್ತು ಚಾಲಕ ದಂಡದ ವೇಗ ಒಂದೇ ಇರಬೇಕು. ಆದರೆ ಅದರಿಂದ ಚಲಿಸಲ್ಪಡುವ ಚಾಲಕ ದಂಡದಿಂದ ವಿವಿಧ ವೇಗಗಳನ್ನು ಪಡೆಯಬೇಕು. ಅಂಥ ಸಂದರ್ಭಗಳಲ್ಲಿ ಹಂತ ಕಪ್ಪಿಗಳನ್ನು (ಸ್ಟೆಪ್ಡ್ ಪುಲ್ಲೀಸ್) ಬಳಸಬಹುದು (ಚಿತ್ರ1). ಅಂಥ ಕಪ್ಪಿಗಳ ವ್ಯಾಸಗಳು ಯಾವುದೇ ಹಂತದಲ್ಲಿ ಬೇಕಾದ ವೇಗ ಪರಿಮಾಣ ಮತ್ತು ಸಾಕಷ್ಟು ಕಟ್ಟಿಯ ತುಯ್ತವನ್ನು ಕಾಯ್ದುಕೊಳ್ಳಬೇಕು. ಹಂತ ಕಪ್ಪಿಗಳಲ್ಲಿ ದಾಟು ಪಟ್ಟಿಗಳನ್ನು ಬಳಸಿದಾಗ ಯಾವುದೇ ಒಂದು ಹಂತದ ವ್ಯಾಸಗಳ ಮೊತ್ತ ಮತ್ತಾವುದೇ ಹಂತದ ವ್ಯಾಸಗಳ ಮೊತ್ತಕ್ಕೆ ಸಮ ಇರಬೇಕು. ಒಂದೇ ಅಳತೆಯ ಒಂದು ಜೊತೆ ಕಪ್ಪಿಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ.

ಶಂಕುಕಪ್ಪಿಗಳನ್ನು (ಕೋನ್ ಪುಲ್ಲೀಸ್) ಬಳಸಿಯೂ ಮೇಲೆ ತಿಳಿಸಿದಂತೆ ವಿವಿಧ ವೇಗಗಳನ್ನು ಪಡೆಯಬಹುದು. ಇವು ಹಂತ ಶಂಕು ವಿನಂತೆಯೇ (ಸ್ಟೆಪ್ಡ್ ಕೋನ್) ಇರುತ್ತವೆ. ಒಂದೇ ವ್ಯತ್ಯಾಸವೆಂದರೆ, ವ್ಯಾಸವ್ಯತ್ಯಾಸ ಹಂತಗಳಲ್ಲಿ ಇರುವುದರ ಬದಲು ಕ್ರಮೇಣ ಇರುತ್ತದೆ, ಇವನ್ನು ಬಳಸುವಲ್ಲಿ ಒಂದು ಅಡಚಣೆ ಉಂಟು. ಪಟ್ಟಿಯು ಕಪ್ಪಿಯ ಗರಿಷ್ಠ ವ್ಯಾಸದ ಕಡೆಗೆ ಹತ್ತಬಹುದು. ಹೇಗಾಗದಂತೆ ಪಟ್ಟಿಯನ್ನು ನಿರ್ದೇಶಿಸುವುದು ಅತ್ಯಗತ್ಯ.



**ಚಿತ್ರ 2. ಬಿಗಿ ಮತ್ತು ಸಡಿಲ ಕಪ್ಪಿಗಳು**

ಚಾಲಕದಂಡಗಳು ಅವು ಇರಬೇಕಾದ ಸ್ಥಳದಿಂದ ಎಳ್ಳಷ್ಟು ಜರುಗಿದ್ದರೂ ಇಲ್ಲವೆ ಪಟ್ಟಿಯಲ್ಲಿ ನ್ಯೂನತೆ ಇದ್ದರೂ ಪಟ್ಟಿ ಕಪ್ಪಿಯಿಂದ ಜಾರಲು ಪ್ರೇರೇಪಣೆ ಉಂಟಾಗುತ್ತದೆ. ನೇಮಿಯಲ್ಲಿ ಪಕ್ಕ ಪಟ್ಟಿಗಳನ್ನು ಬಳಸುವುದರಿಂದ ಪಟ್ಟಿ ಜಾರುವುದನ್ನು ತಡೆಗಟ್ಟಬಹುದಾದರೂ ಉಬ್ಬುಕಪ್ಪಿಗಳನ್ನು ಬಳಸುವುದು ಸೂಕ್ತ. ಏಕೆಂದರೆ ಪಕ್ಕಪಟ್ಟಿಗಳನ್ನು ಬಳಸಿದಲ್ಲಿ ಪಟ್ಟಿಯ ಎರಡು ಪಕ್ಕಗಳು ಪಕ್ಕಪಟ್ಟಿಯನ್ನು ಉಜ್ಜುತ್ತವೆ, ತತ್ಪರಿಣಾಮವಾಗಿ ಪಟ್ಟಿಯ ಸವೆತ ಹೆಚ್ಚು. ಉಬ್ಬುಕಪ್ಪಿಯನ್ನು ಬಳಸಿದಲ್ಲಿ ಈ ತೊಂದರೆ ಇರುವುದಿಲ್ಲ. ಉಬ್ಬು ಬಹಳ ಕಡಿಮೆ ಇರಬೇಕು. ಸಾಮಾನ್ಯವಾಗಿ ಇದು ಕಪ್ಪಿಯ ಒಂದು ಮೀಟರ್ ಅಗಲಕ್ಕೆ 25 ಮಿಮೀ. – 70 ಮಿಮೀ. ವರೆಗೆ ಇರುತ್ತದೆ.

ಚಾಲಿರದಂಡ ನಿಂತರೂ ಚಾಲಕದಂಡ ಚಲಿಸುತ್ತಲೇ ಇರಬೇಕಾದಲ್ಲಿ ಬಿಗಿ ಮತ್ತು ಸಡಿಲ ಕಪ್ಪಿಗಳನ್ನು ಬಳಸಬೇಕು (ಚಿತ್ರ 2). ಬೆಣೆ ಅಥವಾ ತಿರುಪೋತ್ತಿಗೆಗಳಿಂದ ಬಿಗಿ ಕಪ್ಪಿಯನ್ನು ಚಾಲಕದಂಡಕ್ಕೆ ಭದ್ರವಾಗಿ ಸೇರಿಸಲಾಗುತ್ತದೆ. ಆದರೆ ಸಡಿಲಕಪ್ಪಿ ಚಾಲಕಪ್ಪಿ ಚಾಲಿತದಂಡದ ಮೇಲೆ ನಿರ್ಗರ್ಳವಾಗಿ ಸುತ್ತುತ್ತದೆ, ಸೂಕ್ತ ಉಪಕರಣಗಳಿಂದ ಪಟ್ಟಿಯನ್ನು ಬಿಗಿ ಅಥವಾ ಸಡಿಲ ಕಪ್ಪಿಯ ಮೇಲಕ್ಕೆ ತಳ್ಳಬಹುದು.

**ಚಾಲನ ವಿಧಗಳು** (ಟೈಪ್ಸ್ ಆಫ್ ಡ್ರೈವ್): ತೆರೆದ ಪಟ್ಟಿ ಚಾಲನ (ಓಪನ್ ಬೆಲ್ಟ್ ಡ್ರೈವ್) ಮತ್ತು ದಾಟು ಪಟ್ಟಿ ಚಾಲನ (ಕ್ರಾಸ್ಟ್ ಬೆಲ್ಟ್ ಡ್ರೈವ್): ಎರಡು ಸಮಾನಾಂತರ ಚಾಲಕದಂಡಗಳ ನಡುವಣ ಅಂತರ 15 ಮೀ ಗಳ ಒಳಗಿದ್ದಲ್ಲಿ ತೆರೆದ ಪಟ್ಟಿ ಚಾಲಿಗಳನ್ನು




**ಚಿತ್ರ 3. ತೆರೆದ ಪಟ್ಟಿ ಚಾಲಕ : 1. ಚಾಲಕ ಕಪ್ಪಿ, 2. ಚಾಲಿತ ಕಪ್ಪಿ, 3. ತಟಸ್ಥಭಾಗ, 4. ಪರಿಣಾಮಕಾರಿ ತ್ರಿಜ್ಯ**

ಬಳಸುತ್ತಾರೆ. ಈ ರೀತಿಯ ಚಾಲನಗಳಲ್ಲಿ ಸಮಾನಾಂತರ ಚಾಲಕದಂಡಗಳನ್ನು ಸೇರಿಸುವ ಎರಡು ಕಪ್ಪಿಗಳೂ ಒಂದೇ ದಿಕ್ಕಿನಲ್ಲಿ ಸುತ್ತುತ್ತವೆ (ಚಿತ್ರ 3). ಆದರೆ ದಾಟು ಪಟ್ಟಿ ಚಾಲನಗಳಲ್ಲಿ ಕಪ್ಪಿಗಳು ವಿರುದ್ಧ ದಿಕ್ಕಿನಲ್ಲಿ ಸುತ್ತುತ್ತವೆ. ದಾಟು ಪಟ್ಟಿಗಳನ್ನು ಬಳಸುವುದರಿಂದ ಹೆಚ್ಚಿನ ಸಂಸ್ಪರ್ಶ ಕೋನವನ್ನು ಪಡೆಯಬಹುದಾದರೂ ಪಟ್ಟಿ ದಾಟುವೆಡೆಯಲ್ಲಿ ಉಜ್ಜುವಿಕೆ ಇರುವುದರಿಂದ ಪಟ್ಟಿ ಬೇಗ ಸವೆದು ಹೋಗುತ್ತದೆ(ಚಿತ್ರ4).

ಕಪ್ಪಿಗಳ ವ್ಯಾಸ $d_1$,$d_2$ ಮತ್ತು ಅವುಗಳ ಕೇಂದ್ರಾಂತರ c ಇದ್ದಲ್ಲಿ ತೆರೆದ ಪಟ್ಟಿಯ ಉದ್ದ $L = \frac{\pi}{2}(d_1 + d_2) - 2c + \frac{(d_{1+} d_2)^2}{4c}$

ದಾಟು ಪಟ್ಟಿಯ ಉದ್ದ $L = \frac{\pi}{2}(d_1 + d_2) - 2c + \frac{(d_{1+} d_2)^2}{4c}$




**ಚಿತ್ರ 4. ದಾಟು ಪಟ್ಟಿ : 1. ಚಾಲಕ ಕಪ್ಪಿ, 2. ಚಾಲಿತ ಕಪ್ಪಿ**

ಪಟ್ಟಿಯ ಹೊರ ಮತ್ತು ಒಳ ಮೇಲ್ಮೈಗಳ ಉದ್ದ ಒಂದೇ ಇರುತ್ತದೆ. ಕಪ್ಪಿಗಳ ಮೇಲೆ ಪಟ್ಟಿ ಹಿಗ್ಗಿದಾಗ ಅದರ ಒಳಮೇಲ್ಮೈ ಕುಗ್ಗುತ್ತದೆ ಮತ್ತು ಹೊರ ಮೇಲ್ಮೈ ಹಿಗ್ಗುತ್ತದೆ. ಇವೆರಡರ ನಡುವೆ ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಪಟ್ಟಿ ಹಿಗ್ಗುವುದೂ ಇಲ್ಲ, ಕುಗ್ಗುವುದೂ ಇಲ್ಲ. ಇದೇ ತಟಸ್ಥಭಾಗ. ಇದು ಸರಿಯಾಗಿ ಪಟ್ಟಿಯಹೊರ ಮತ್ತು ಒಳ ಮೇಲ್ಮೈಗಳ ಮಧ್ಯದಲ್ಲಿದೆ. ತಟಸ್ಥಭಾಗ. ಸ್ಪರ್ಶಕವಾಗುವಂತೆ ಕಪ್ಪಿಯ ಮಧ್ಯಭಾಗವನ್ನು ಕೇಂದ್ರವಾಗಿಟ್ಟುಕೊಂಡು ಎಳೆಯಬಹುದಾದ ಕಾಲ್ಪನಿಕ ವೃತ್ತದ ಹೆಸರು ಅಂತರ ಮೇಲ್ಮೈ. ಇದರ ತ್ರಿಜ್ಯವೇ ಕಪ್ಪಿಯ ಪರಿಣಾಮಕಾರಿ ತ್ರಿಜ್ಯ. ತಟಸ್ಥಭಾಗದ ಮೂಲಕ ಹಾಯ್ದು ಹೋಗುವ ರೇಖೆ ಎರಡೂ ಕಪ್ಪಿಗಳ ಅಂತರ ಮೇಲ್ಮೈಗಳನ್ನು ಸೇರಿಸುತ್ತದೆ. ಹಾಗೆ ಸೇರಿಸುವ ರೇಖೆಯೇ ಅಂತರ ರೇಖೆ (ಚಿತ್ರ 3).




ಚಿತ್ರ 5. ಮಧ್ಯವರ್ತಿಕಪ್ಪಿ : 1. ಚಾಲಕಕಪ್ಪಿ, 2. ಚಾಲಿತಕಪ್ಪಿ




ಚಿತ್ರ 6. ಪಾದತಿರುಗುಚಾಲಿ : 1. ಚಾಲಕಕಪ್ಪಿ, 2. ಚಾಲಿತಕಕಪ್ಪಿ




ಚಿತ್ರ 7. ಕೋನಚಾಲಿ : 1. ಚಾಲಿತ ಕಪ್ಪಿ, 2. ಕಾಪು ಕಪ್ಪಿಗಳು, 3. ಚಾಲಕ ಕಪ್ಪಿ

ಮಧ್ಯವರ್ತಿ ಕಪ್ಪಿ (ಇಂಟರ್ಮೀಡಿಯೆಟ್ ಕಪ್ಪಿ) : ಹೆಚ್ಚಿನ ವೇಗ ಪರಿಮಾಣ ಪಡೆಯಲು ಇವನ್ನು ಬಳಸುತ್ತಾರೆ (ಚಿತ್ರ 5).

ಕೋನ ಮತ್ತು ಲಂಬಕೋನ ಚಾಲಿ : ಸಮಾನಾಂತರವಿಲ್ಲದ ಚಾಲಕದಂಡಗಳ ಮೇಲೆ ಸುತ್ತುವ ಕಪ್ಪಿಗಳನ್ನು ಸೇರಿಸಲೂ ಪಟ್ಟಿಯನ್ನು ಉಪಯೋಗಿಸಬಹುದು. ಸಂದರ್ಭ ಯಾವುದೇ ಇರಲಿ, ಕಪ್ಪಿಯನ್ನು ತಲುಪುತ್ತಿದ್ದಂತೆ ಪಟ್ಟಿಯ ಮಧ್ಯರೇಖೆ ಕಪ್ಪಿಯ ಮಧ್ಯ ಮೇಲ್ಮೈನಲ್ಲಿರಬೇಕು. ಪಾದ ತಿರುಚಾಲಿ (ಕ್ವಾರ್ಟರ್ ಟರ್ನ್ ಡ್ರೈವ್) ಇದಕ್ಕೆ ಉತ್ತಮ ನಿರ್ದಶನ (ಚಿತ್ರ 6). ಚಿತ್ರ 7ರಲ್ಲಿ ಕೋನಚಾಲಿಯನ್ನು ತೋರಿಸಿದೆ.




ಚಿತ್ರ 8. ಕಾಪು ಪಟ್ಟಿ : 1. ಚಾಲಕಕಪ್ಪಿ, 2. ಕಾಪು ಕಪ್ಪಿ, 3. ಚಾಲಿತಕಪ್ಪಿ, 4. ಭಾರ

ಕಾಪು ಕಪ್ಪಿ (ಐಡ್ಲ್ ಪುಲ್ಲಿ): ಪಟ್ಟಿಯ ತುಯ್ತವನ್ನು ಹೆಚ್ಚಿಸಲು ಮತ್ತು ಪಟ್ಟಿಯ ಹಿಗ್ಗುವಿಕೆಯಿಂದಾಗುವ ತೊಂದರೆಯನ್ನು ನಿವಾರಿಸಲು ಇದನ್ನು ಬಳಸುತ್ತಾರೆ (ಚಿತ್ರ 8). ಇದು ಜಾರುವಿಕೆಯನ್ನು  ಕಡಿಮೆ ಮಾಡಿ ಪಟ್ಟಿಯ ಆಯಸ್ಸನ್ನು ಹೆಚ್ಚಿಸುತ್ತದೆ. ಅನೇಕ ಕಾಪು ಕಪ್ಪಿಗಳನ್ನು ಬಳಸಿ ಒಂದು ಚಾಲಕ ದಂಡದಿಂದ ಅನೇಕ ಚಾಲಕದಂಡ ಗಳಿಗೆ ಚಲನೆಯನ್ನು ವರ್ಗಾಯಿಸಲು ಸಾಧ್ಯ.

**ಪಟ್ಟಿಯ ಪದಾರ್ಥಗಳು :** ಪಟ್ಟಿಯ ಪದಾರ್ಥಗಳು ಶಕ್ತಿ, ಬಾಗುವಿಕೆ, ಬಾಳಿಕೆಮತ್ತು ಹೆಚ್ಚು ಘರ್ಷಣಗುಣಕವನ್ನು ಹೊಂದಿರಬೇಕು. ಸಾಮಾನ್ಯ ವಾಗಿ ಪಟ್ಟಿಗಳನ್ನು ಧರ್ಮ ಅಥವಾ ನೇದ ವಸ್ತುಗಳಿಂದ ಮಾಡಿ ರಬ್ಬರ್ ಅಥವಾ ಅಂಥದ್ದೆ ಪದಾರ್ಥಗಳಿಂದ ತುಂಬುತ್ತಾರೆ. ಕಪ್ಪಿಯ ಮೇಲ್ಮೈ ರಬ್ಬರಿನಿಂದ ಮಾಡಿದ್ದಲ್ಲಿ ಉಕ್ಕಿನ ಪಟ್ಟಿಗಳನ್ನು ಬಳಸಬಹುದಾದರೂ ಅವು ಅಷ್ಟಾಗಿ ಬಳಕೆಯಲ್ಲಿಲ್ಲ. ಬಹಳವಾಗಿ ಸಮತಲ ಪಟ್ಟಿಗಳನ್ನು ಓಕ್‌ಹದಮಾಡಿದ (ಓಕ್ ಟ್ಯಾನ್ಡ್) ಚರ್ಮದಿಂದ ಮಾಡುತ್ತಾರೆ. ಬಹಳ ಬಾಗುವ ಪಟ್ಟಿ ಬೇಕಾದಲ್ಲಿ ಕ್ರೋಮ್ ಚರ್ಮವನ್ನು ಉಪಯೋಗಿಸಬಹುದು. (ಎಚ್.ಎಲ್.ಕೆ.)

**ಕಪ್ಪಿ ಚಕ್ರ :** ನೇಮಿಯಲ್ಲಿ (ರಿಮ್) ಕುಣಿಯಿರುವ (ಗ್ರೂವ್) ಚಕ್ರ (ಶೀವ್) ಸಾಮಾನ್ಯವಾಗಿ ಇದು ಚಕ್ರದ ಅಕ್ಷಕ್ಕೆ ಅಡ್ಡವಾಗಿರುತ್ತದೆ. ಉತ್ತಮ ಘರ್ಷಣೆಯ ಗುಣಗಳಿಗಾಗಿ ಎರಕದ ಕಬ್ಬಿಣದಿಂದಲೂ ಜಾರುವಿಕೆಯ ಅವಗುಣವಿದ್ದರೂ ಕಡಿಮೆ ವೆಚ್ಚ ಮತ್ತು ಕಡಿಮೆ ತೂಕಕ್ಕಾಗಿ ಒತ್ತಿದ ಉಕ್ಕಿನಿಂದಲೂ (ಪ್ರೆಸ್ಡ್ ಸ್ಟೀಲ್) ಇದನ್ನು ತಯಾರಿಸುತ್ತಾರೆ.

ಕಪ್ಪಿ ಚಕ್ರವನ್ನು ಒಂದೇ ಭಾಗವಾಗಿ ತಯಾರಿಸಿದರೆ, ದಂಡದ (ಷಾಫ್ಟ್) ಕೊನೆಯಿಂದ ಮಾತ್ರ ಅದನ್ನು ತೂರಿಸಲು ಸಾಧ್ಯ. ಅದನ್ನು ಎರಡು ವಕ್ರಕಾಂಡಗಳ (ಕ್ರ್ಯಾಂಕ್ಸ್) ನಡುವೆ ಇರಿಸಲು ಎರಡು ಭಾಗಗಳಲ್ಲಿ ತಯಾರಿಸಿ, ಅವನ್ನು ಬೋಲ್ಟುಗಳಿಂದ ಜೋಡಿಸಬೇಕು.

ಕಪ್ಪಿ ಚಕ್ರಗಳ ನೇಮಿಯಲ್ಲಿ ಅಡ್ಡಲಾಗಿ ಗಿ–ಆಕಾರದ ಕುಣಿಯನ್ನು ಕೊರೆದು, ಹಗ್ಗ ಅಥವಾ ಗಿ –ಆಕಾರದ ಬೆಲ್ಟಿನಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಮರ್ಥ್ಯದ ಪ್ರಸರಣವನ್ನು (ಪವರ್ ಟ್ರಾನ್ಸ್‌ಮಿಶನ್) ಮಾಡಬಹುದು. ಒಂದು ಕಪ್ಪಿ ಚಕ್ರದಲ್ಲಿ ಸು.24ರ ವರೆಗೆ ಕುಣಿಗಳಿರಬಹುದು. ಹಗ್ಗ ಅಥವಾ ಪಟ್ಟಿಗೆ ಹೊಂದಿಕೊಂಡಂತೆ ಕುಣಿಯಿರಬೇಕಾದದು ಆವಶ್ಯಕ. ಹೀಗಿಲ್ಲದೆ ದೊಡ್ಡದಾಗಿದ್ದರೆ ಹಗ್ಗ ಅಥವಾ ಬೆಲ್ಟಿಗೆ

ಸಿಗುವ ಹಿಡಿತ (ಸಪೋರ್ಟ್) ಕಡಿಮೆಯಾಗಿ ಇವು ತಮ್ಮ ಅಡ್ಡಕೊಯ್ತದ ಆಕಾರವನ್ನು ಬದಲಾಯಿಸಬಹುದು. ಕಡಿಮೆಯಿದ್ದರೆ ಹಗ್ಗ ಅಥವಾ ಬೆಲ್ಟಿನ ಸಾಮಾನ್ಯ ಪರಿಭ್ರಮಣಕ್ಕೆ ಅಡ್ಡಿಯಾಗುತ್ತದೆ.



ಚಿತ್ರ 1. ನೇಮಿಗಳು–ಕುಳಿಗಳು : 1. ಕುಣಿಯಿರುವ ನೇಮಿ, 2. ನೇಮಿಯ ಕುಳಿಗಳಲ್ಲಿ ಸರಿಯಾಗಿ ಕುಳಿತಿರುವ ಹಗ್ಗಗಳು, 3. ನೇಮಿಯ ಕುಳಿಗಳಲ್ಲಿ ಸರಿಯಾಗಿ ಕುಳಿತಿರುವ V–ಬೆಲ್ಟುಗಳು

ನೇಮಿಯಲ್ಲಿ ಅಕ್ಷಕ್ಕೆ ಸಮಾನಾಂತರವಾಗಿ ಕುಣಿಗಳುಳ್ಳ ಒಂದು ವಿಧವಾದ ಕಪ್ಪಿ ಚಕ್ರವನ್ನು ಉಬ್ಬುಗಳುಳ್ಳ (ತ್ರೆಡ್ಸ್) ಪಟ್ಟಿಯೊಂದಿಗೆ ಉಪಯೋಗಿಸುವ ವಾಡಿಕೆಯಿದೆ. ಈ ರೀತಿಯ ಕಪ್ಪಿ ಚಕ್ರಗಳನ್ನು ಹೊಲೆಯುವ ಯಂತ್ರ, ಕಾಲನಿರ್ಣಯಚಾಲನೆ (ಟೈಮಿಂಗ್ ಡ್ರೈವ್), ಸಾಮರ್ಥ್ಯ ಪ್ರಸರಣ ಮುಂತಾದುವುಗಳಲ್ಲಿ ಉಪಯೋಗಿಸಬಹುದು.



ಚಿತ್ರ 2. ಕಪ್ಪಿ ಚಕ್ರಗಳು : 1. ಉತ್ಕೇಂದ್ರಕ ಕಪ್ಪಿಚಕ್ರ, 2. ಒಡೆದ ಉತ್ಕೇಂದ್ರಕ ಕಪ್ಪಿ ಚಕ್ರ

ನೇಮಿಯಲ್ಲಿ ಮೆಟ್ಟಲು ಅಥವಾ ಕುಣಿಯಿರುವ ಹಾಗೂ ಕೇಂದ್ರಕ್ಕೆ ದೂರವಾಗಿ ಕೊರೆದ ರಂಧ್ರವುಳ್ಳ ಚಕ್ರಕ್ಕೆ ಉತ್ಕೇಂದ್ರಕ ಕಪ್ಪಿಚಕ್ರವೆಂದು (ಎಕ್ಸೆಂಟ್ರಿಕ್ ಷೀವ್) ಹೆಸರು. ಇದನ್ನು ಆವಿ ಎಂಜಿನ್ನುಗಳ ಕವಾಟಯಂತ್ರದಲ್ಲಿ (ವಾಲ್ವ್‌ಗಿಯರ್) ಪರಿಭ್ರಮಣ ಚಲನೆಯನ್ನು (ರೋಟರಿ ಮೋಷನ್) ಪ್ರತ್ಯಾಗಾಮಿಚಲನೆಯನ್ನಾಗಿ (ರೆಸಿಪ್ರೊಕೇಟಿಂಗ್ ಮೋಷನ್) ಮಾರ್ಪಡಿಸಲು ಉಪಯೋಗಿಸುತ್ತಾರೆ.

ಮೇಲೆ ಹೇಳಿದ ವಿಧಗಳಿಗೆ ವ್ಯತಿರಿಕ್ತವಾಗಿ, ನೇಮಿಯಲ್ಲಿರುವ ಕುಣಿಗಳ ಅಗಲವನ್ನು ಇಷ್ಟಪ್ರಕಾರ ಬದಲಾಯಿಸಲು ಅವಕಾಶವಿರುವ ಕಪ್ಪಿಚಕ್ರಗಳೂ ಉಂಟು. (ಕೆ.ಆರ್.ಎಂಬಿ.)

**ಕಪ್ಪಿನಿ :** ನೀತಿಬೋಧಕವಾದ ನಂಜುಂಡಶತಕವನ್ನು ನಂಜನಗೂಡು ನಂಜುಂಡೇಶ್ವರನ ಅಂಕಿತದಲ್ಲಿ ಬರೆದಿರುವ (1880) ಕವಿ ನಂಜುಂಡಲಿಂಗ ನತಜನ ಸಂಗಾ ಎಂಬುದು ಅಂಕಿತ. ಸಂಸ್ಕೃತಶ್ಲೋಕಗಳ ಪರಿಮಳದಲರುಗಳ ಕಂದ ಪದ್ಯಾಂತರದೊಳ್ ಸರಗಟ್ಟುವೆ ಸುಜನರ ಕಿವಿದುರುಬಿಗೆ–ಎಂಬ ಮಾತಿನಿಂದ ಇವು ಸಂಸ್ಕೃತ ಪದ್ಯಗಳ ಕನ್ನಡ ಭಾಷಾಂತರ ಎಂಬುದು ಸ್ಪಷ್ಟವಾಗುತ್ತದೆ. ಗ್ರಂಥದಲ್ಲಿ 103 ಕಂದಪದ್ಯಗಳಿವೆ. (ಎಂ.ಜಿ.ಎನ್.)

**ಕಪ್ಪುಕೋತಿ :** ಪ್ರೈಮೇಟುಗಳ ಗಣದ ಕ್ಯಾಟರೈನಿ ಬುಡಕಟ್ಟಿನ ಸೈನೋಪಿತಿಕಾಯಿಡೀ ಕುಟುಂಬಕ್ಕೆ ಸೇರಿದ ಸೈನೋಪಿತಿಕಸ್ ನೈಜರ್ ಎಂಬ ಶಾಸ್ತ್ರೀಯ ಕಾಣಬರುತ್ತದೆ. ನೋಡುವುದಕ್ಕೆ ಬೆಬೂನ್ ಕೋತಿಯಂತೆಯೇ ಇದೆ. ದೇಹದ ಗಾತ್ರ, ನಿಲ್ಲುವ ಭಂಗಿ, ದಪ್ಪ ಮತ್ತು ಪ್ರಮುಖವಾದ ಹುಬ್ಬುಗಳು, ನಾಯಿಯಂಥ ಮೂತಿ, ತೆಳುವಾದ ಉದ್ದನೆಯ ನಾಸಿಕ ಮತ್ತು ಕಣ್ಣುಗಳ ಕೆಳಗೆ ಮೂಗಿನ ಎರಡೂ ಪಕ್ಕಗಳಲ್ಲಿ ಇರುವ ರೋಮರಹಿತ ಕಪ್ಪು ಚರ್ಮದ ಉಬ್ಬು–ಇವುಗಳೆಲ್ಲ ಬೆಬೂನ್ ಕೋತಿಯನ್ನು ಹೋಲುತ್ತದೆ. ಮೈ ಕಾಡಿಗೆಗಪ್ಪು ಬಣ್ಣದ್ದು. ಒತ್ತಾಗಿ ಬೆಳೆದ ಕೂದಲುಗಳಿಂದ ಕೂಡಿದ ಚರ್ಮ ಮತ್ತು ತಲೆಯ ಮೇಲೆ ಉದ್ದವಾದ ಬಿರುಸಾದ ಕೂದಲುಗಳು ಇವೆ. ಬೇಕೆಂದಾಗ ಕೋತಿ ಈ ಕೂದಲುಗಳನ್ನು ನಿಮಿರಿಸಿ ಶತ್ರುಗಳನ್ನು ಹೆದರಿಸಲು ವಿಲಕ್ಷಣ ರೂಪ ತಾಳುವುದು. ಇದು ಬಹಳ ಬುದ್ಧಿವಂತ ಪ್ರಾಣಿಯೆಂದು ಹೆಸರಾಗಿದೆ. ನಮ್ಮಲ್ಲಿರುವ ಕೋತಿ ಮೊಸಳೆಯ ಕತೆಯಷ್ಟೆ ಚತುರವಾದ



ಕತೆಗಳು ಇದರ ಬಗ್ಗೆ ಇವೆ. ಸೆಲೆಬಸ್ ದ್ವೀಪವಾಸಿಗಳು ಇವನ್ನು ಬಹಳ ಪೂಜ್ಯಭಾವನೆಯಿಂದ ನೋಡುತ್ತಾರೆ. ಅಲ್ಲದೆ ಮಾನವರಿಗಿಂತಲೂ ಇವು ಶ್ರೇಷ್ಠವೆಂತಲೂ ತಾವು ಇವುಗಳ ವಂಶಜರೆಂದೂ ಹೇಳಿಕೊಳ್ಳುತ್ತಾರೆ. (ಎಚ್.ಬಿ.ಡಿ.)

**ಕಪ್ಪು ವಸ್ತು :** ಒಂದು ವಸ್ತುವಿನ ಮೇಲೆ ಪಾತವಾಗುವ ಉಷ್ಣದ ಅಥವಾ ಬೆಳಕಿನ ವಿಸರಣೆಯನ್ನು ಅದು ಪೂರ್ಣವಾಗಿ ಹೀರಿಕೊಂಡರೆ (ಅವಶೋಷಣೆ–ಅಬ್‌ಸಾರ್ಪ್‌ಷನ್) ಅದಕ್ಕೆ ಕಪ್ಪುವಸ್ತು (ಬ್ಲಾಕ್ ಬಾಡಿ) ಎಂದು ಹೆಸರು. ಇಂಥ ಒಂದು ವಸ್ತು ಇದ್ದರೆ ಅದರ ಮೇಲೆ ಪಾತವಾಗುವ ಎಲ್ಲ ವಿಸರಣೆಯನ್ನೂ ಅದು ಹೀರಿಕೊಂಡು ಒಂದಿಷ್ಟನ್ನೂ ಪ್ರತಿಫಲಿಸದು, ಎಂದರೆ, ಈ ವಸ್ತುವಿನ ಪ್ರತಿಫಲನಗುಣ ಶೂನ್ಯ ಮತ್ತು ಅವಶೋಷಣಗುಣ ಶೇ. 100 ಪಾತವಾಗುವ ಎಲ್ಲ ವಿಸರಣೆಯನ್ನು ಪ್ರತಿಫಲಿಸುವ–ಎಂದರೆ ಪ್ರತಿಫಲನಗುಣ ಶೇ. 100 ಮತ್ತು ಅವಶೋಷಣ ಗುಣ ಶೂನ್ಯವಿರುವ–ವಸ್ತುವಿನ ಹೆಸರು ಬಿಳಿವಸ್ತು. ದಟ್ಟ ಮಸಿಲೇಪಿತವಸ್ತು ಈ ಮಾನಕದಲ್ಲಿ ಕಪ್ಪುವಸ್ತುವಲ್ಲ–ಕಾರಣ, ಅದರ ಅವಶೋಷಣಗುಣ ಶೇ. 100 ಆಗಿರುವುದಿಲ್ಲ.

ಪ್ರಾಯೋಗಿಕವಾಗಿ ಸನ್ನಿಹಿತ ಕಪ್ಪು ವಸ್ತುವನ್ನು ಪಡೆಯುವ ವಿಧಾನ ಹೀಗಿದೆ: ಒಂದು ದಪ್ಪವಾದ ಅಪಾರದರ್ಶಕ ಘನವಸ್ತುವಿನಲ್ಲಿ ಕುಹರವನ್ನು ಕೊರೆಯಬೇಕು; ಕುಹರದ ಒಳ ಮೈಯನ್ನೂ ಬಾಯನ್ನೂ ಪೂರ್ಣವಾಗಿ ಮಸಿಯಿಂದ ಮೆತ್ತಬೇಕು (ಪ್ಲಾಟಿನಂಮಸಿ ಶೇ. 98 ಕಪ್ಪು ವಸ್ತು); ಈ ಕುಹರದ ಪ್ರತಿಫಲನ ಗುಣ ಕನಿಷ್ಠವೂ ಅವಶೋಷಣ ಗುಣ ಗರಿಷ್ಠವೂ ಆಗಿವೆ.

ಕಪ್ಪುವಸ್ತು ವಿಸರಣದ ಬಗ್ಗೆ ಕೆರ್ಚಾಫ್, ವೀನ್ ಮತ್ತು ಲುಮ್ಮರ್ ಮೊದಲಾದ ಭೌತವಿಜ್ಞಾನಿಗಳು ಅಧ್ಯಯನ ಮತ್ತು ಪ್ರಯೋಗಗಳನ್ನು ನಡೆಸಿದ್ದಾರೆ. ಸಮಾನವಾಗಿ ಕಾಯಿಸಿದ ಆವರಣದೊಳಗಿನ ವಿಸರಣೆ ಪೂರ್ಣವಾಗಿ ಕಪ್ಪಾಗಿರುತ್ತದೆ ಎಂದು ಕೆರ್ಚಾಫ್ ಸಾಧಿಸಿದ (1858). ಈ ತತ್ತ್ವವನ್ನೇ ಬಳಸಿಕೊಂಡು ವೀನ್, ಲುಮ್ಮರ್ ಮತ್ತು ಫೆರಿ ಪ್ರಯೋಗಯೋಗ್ಯ ಕಪ್ಪುವಸ್ತುಗಳನ್ನು ಪಡೆದರು. ಇವನ್ನು ವೀನ್ಸ್ ಕಪ್ಪುವಸ್ತು ಮತ್ತು ಫೆರಿ ಕಪ್ಪು ವಸ್ತು ಎಂದು ಕರೆಯಲಾಗಿದೆ. ಇವುಗಳಲ್ಲಿ ಸರಳವಾದ ಫೆರಿ ಕಪ್ಪು ವಸ್ತುವಿನ ವಿವರ ಹೀಗಿದೆ: ಚಿತ್ರದಲ್ಲಿ ತೋರಿಸಿರುವಂತೆ ಉ ಒಂದು ಟೊಳ್ಳಾಗಿರುವ ದುಂಡನೆಯ ಕೋಶ; ಇದನ್ನು ಹಿತ್ತಾಳೆ ಅಥವಾ ಪ್ಲಾಟಿನಂನಿಂದ ತಯಾರಿಸಿರುತ್ತಾರೆ. ಇದು ಆತುಕೊಳ್ಳಬೇಕಾಗಿರುವ




ಉಷ್ಣತೆಗೆ ಅನುಗುಣವಾಗಿ ಇದರ ಒಳಭಾಗಕ್ಕೆಲ್ಲ ಮಸಿ ಬಳಿದಿದೆ. ಇದರ ಒಳಭಾಗದಲ್ಲಿ ಒಂದು ಭಾಗದಲ್ಲಿ ಶಂಕ್ವಾಕೃತಿಯ ಒಂದು ವಿಶೇಷ ರಚನೆ (P) ಇದೆ. ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ಕೋಶದ ಬಾಯಿ (O)ಇದೆ. ರಂಧ್ರದ ಹೊರಗಿನಿಂದ ನೇರವಾಗಿ ಬೀಳುವ ವಿಸರಣೆಯನ್ನು P ಯಿಂದ ತಡೆಯುವುದು ಸಾಧ್ಯವಾಗುತ್ತದೆ. O ಮೂಲಕ ಪ್ರವೇಶಿಸಿದ ಯಾವುದೇ ವಿಸರಣ C ಯ ಒಳಮೈಮೇಲೆ ಬಿದ್ದು ಹಲವು ಸಲ ಪ್ರತಿಫಲನಗೊಳ್ಳುವುದು ಸಾಧ್ಯ. ಹೀಗಾದ ತರುವಾಯ ಮತ್ತೆ C ಗೆ ಬರುವಲ್ಲಿ ಆ ವಿಸರಣೆ ತನ್ನ ಶಕ್ತಿಯನ್ನು ಬಹಳವಾಗಿ ಕಳೆದುಕೊಂಡಿರುತ್ತದೆ. ಆದರೆ C ಯ ಒಳಮೈಯನ್ನು ಕಪ್ಪುಲೇಪನ ಮಾಡಿರುವುದರಿಂದ ಒಳಹೊಕ್ಕ ವಿಸರಣೆ ಒಂದು ಸಲ ಪ್ರತಿಫಲನಗೊಳ್ಳುವಲ್ಲಿಯೇ ಅದು ಪೂರ್ಣವಾಗಿ ಕಪ್ಪುಲೇಪನದಿಂದ ಹೀರಲ್ಪಡುತ್ತದೆ. ಹೀಗೆ ಕೋಶದ ರಂಧ್ರ ಕಪ್ಪುವಸ್ತುವಾಗಿ ವರ್ತಿಸುತ್ತದೆ. ಇದರ ಒಳಗಡೆ ಇಟ್ಟ ಒಂದು ಕನ್ನಡಿಯೂ ಕಪ್ಪುವಸ್ತುವಾಗುತ್ತದೆ.

ಕಪ್ಪುವಸ್ತುವಿನ ವಿಸರಣದ ಅಧ್ಯಯನದಿಂದಾಗಿ ಬೆಳಕಿನ ಪ್ರಭಾಣುತತ್ತ್ವಕ್ಕೂ ಶಕಲ ಬಲವಿಜ್ಞಾನಕ್ಕೂ ಹೆಚ್ಚಿನ ಪುಷ್ಟಿ ದೊರೆತಿದೆ. ಪ್ಲಾಂಕನ ನಿಯಂತಾಕ ಸ್ಥಿರಪಟ್ಟಿದೆ.

(ಬಿ.ಎಸ್.ಎಂ.)

**ಕಪ್ಪು ಸಮುದ್ರ :** ಉತ್ತರ ಮತ್ತು ಪೂರ್ವಗಳಲ್ಲಿ ರಷ್ಯದಿಂದಲೂ ಪಶ್ಚಿಮದಲ್ಲಿ ರೊಮೇನಿಯ ಮತ್ತು ಬಲ್ಗೇರಿಯಗಳಿಂದಲೂ ದಕ್ಷಿಣ ಮತ್ತು ನೈಋತ್ಯಗಳಲ್ಲಿ ಟರ್ಕಿಯಿಂದಲೂ ಆವೃತವಾದ ಭೂ ಮಧ್ಯ ಸಮುದ್ರ, ಬಾಸ್ಪೋರಸ್ ಜಲ ಸಂಧಿಯ ಮೂಲಕವಾಗಿ ಮರ್ಮಾರ ಸಮುದ್ರಕ್ಕೂ ಡಾರ್ಡನಲ್ಸ್ ಮೂಲಕವಾಗಿ ಮೆಡಿಟರೇನಿಯನ್ ಸಮುದ್ರದ ಏಜಿಯನ್ ಶಾಖೆಗೂ ಸಂಬಂಧವಿದೆ. ಈಶಾನ್ಯದ ಅಜ಼ಾಫ್ ಸಮುದ್ರಕ್ಕೂ ಇದಕ್ಕೂ ನಡುವೆ ಕೆರ್ಚ್ ಜಲಸಂಧಿಯಿದೆ.

1008 ಕಿಮೀ ಉದ್ದವಾಗಿಯೂ 528 ಕಿಮೀ ಪರಮಾವಧಿ ಅಗಲವಾಗಿಯೂ ಇರುವ ಈ ಸಮುದ್ರದ ವಿಸ್ತಾರ 4,66,200 ಚ. ಕಿಮೀ. ಇದರ ತಳ ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಕ್ರಿಮಿಯದ ಪಶ್ಚಿಮಕ್ಕೆ ಇದರ ಆಳ 150 ಮೀ ಗಳಿಗಿಂತ ಹೆಚ್ಚಿಲ್ಲ. ಇದರ ಹೆಚ್ಚಿನ ಭಾಗ 50 ಮೀ ಗಿಂತ ಕಡಿಮೆಯೆಂದೇ ಹೇಳಬಹುದು. ಕ್ರಿಮಿಯದ ದಕ್ಷಿಣದಲ್ಲಿ ಇದರ ಆಳ ಶೀಘ್ರವಾಗಿ ಹೆಚ್ಚಿ 1500 ಮೀ ಗಳಾಗಿ ಅನಟೋಲಿಯ ತೀರದ ಸಿನಾಪಿನ ವಾಯವ್ಯದಲ್ಲಿ 2200 ಮೀ ಗಳಿಗೂ ಹೆಚ್ಚು ಆಳವಾಗಿರುತ್ತದೆ. ಇದು ಪರಮಾವಧಿ.

ಪ್ರಾಚೀನ ಭೂ ಯುಗದಲ್ಲಿ ಕಪ್ಪುಸಮುದ್ರ ರೂಪುಗೊಂಡಿತು. ಮೆಡಿಟರೇನಿಯನ್ ಸಮುದ್ರದೊಂದಿಗೆ ಇದರ ಸಂಪರ್ಕವೇರ್ಪಟ್ಟಿತು. ಅದಕ್ಕೆ ಮೊದಲು ಇದೊಂದು ಆಳವಾದ ಉಪ್ಪು ಸರೋವರವಾಗಿತ್ತು. ಆಗ ನೀರಿನ ಮಟ್ಟ ಏರಿ ಉತ್ತರತೀರದ ತಗ್ಗುನೆಲವನ್ನೆಲ್ಲಾ ಆವರಿಸಿ, ನದಿಗಳ ಮುಖಗಳನ್ನೆಲ್ಲಾ ಮುಳುಗಿಸಿತು. ಡ್ಯಾನ್ಯೂಬ್, ನೀಪರ್ ಮುಂತಾದ ನದಿಗಳಿಂದ ಅಗಾಧ ಜಲರಾಶಿ ಇದಕ್ಕೆ ಬಂದು ಸೇರುವುದರಿಂದ ಇದರ ಮೇಲ್ಭಾಗ ಸಾಪೇಕ್ಷವಾಗಿ ಹೆಚ್ಚು ಹೊಸತಾಗಿದ್ದರೂ ಸು. 200 ಮೀ ಕೆಳಗಣ ಭಾಗ ನಿಂತನೀರಿನಿಂದ ಕೂಡಿರುತ್ತದೆ. ಇಲ್ಲಿ ಹೈಡ್ರೋಜನ್ ಸಲ್ಫೈಡ್ ಅಧಿಕವಾಗಿರುವುದಕ್ಕೂ ಆಳದಲ್ಲಿ ವಾಸಿಸುವಂಥ ಜೀವರಾಶಿ ಇಲ್ಲದಿರುವುದಕ್ಕೂ ಇದು ಕಾರಣ. ಪ್ರವಾಹದ ದಿಕ್ಕು ಅಪ್ರದಕ್ಷಿಣೆ. ಮೇಲಣ ನೀರು ಬಾಸ್ಪೋರಸ್ ಮೂಲಕ ಹರಿದುಹೋಗುತ್ತದೆ. 20 ಮೀ ಕೆಳಗೆ ಮೆಡಿಟರೇನಿಯನ್ ನೀರು ಒಳಬರುತ್ತದೆ. ಇಲ್ಲಿ ಉಬ್ಬರಗಳಿಲ್ಲ. ಆದರೆ ಬಿರುಗಾಳಿ ಅನಿರೀಕ್ಷಿತವಾಗಿ ಪದೇಪದೇ ಸಂಭವಿಸಿ ನೀರಿನಮಟ್ಟದ ಏರಿಕೆಗೆ ಕಾರಣವಾಗುತ್ತದೆ.

ಕಪ್ಪುಸಮುದ್ರದ ತೀರಪ್ರದೇಶದಲ್ಲಿ ಭಿನ್ನತೆಗಳುಂಟು. ಪಶ್ಚಿಮದಲ್ಲಿ, ರುಮೇಲಿ ಭೂಶಿರದಿಂದ ಕಲಿಯಾಕ್ರ ಭೂಶಿರದವರೆಗೆ, ಸಮುದ್ರದ ಸುತ್ತಣ ಭಾಗ ಸ್ವಲ್ಪ ಎತ್ತರವಾಗಿದೆ. ಅದರ ಹಿಂದೆ ಭವ್ಯವಾದ ಪರ್ವತಶ್ರೇಣಿಗಳುಂಟು. ವಾಯವ್ಯ ಮತ್ತು ಉತ್ತರ ಭಾಗಗಳಲ್ಲಿ ತೀರಪ್ರದೇಶ ತಗ್ಗು, ವಿಸ್ತಾರವಾಗಿಯೂ ಕಡಿದಾಗಿಯೂ ಇರುವ ಮುಮ್ಮೈಯುಳ್ಳ ಅನೇಕ ದಿಣ್ಣೆಗಳು ರಷ್ಯದ ಬಂದರಾದ ಒಡೆಸ್ಸಕ್ಕೆ ಒಂದು ಆಕರ್ಷಣೀಯವಾದ ಆವರಣವನ್ನು ಒದಗಿಸಿಕೊಟ್ಟಿವೆ. ನದಿಗಳ ಬಾಯಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೆಕ್ಕಲು ಮಣ್ಣು ಶೇಖರಣೆಯಾಗುವುದರಿಂದ ಸಮುದ್ರಯಾನ ಕಷ್ಟಕರ. ಡ್ಯಾನ್ಯೂಬ್ ನದಿಯ ಮುಖಜಭೂಮಿ ವಿಸ್ತಾರವಾಗಿದೆ. ಅದು ಮರಳುರಾಶಿಯನ್ನೇ ನಿರ್ಮಿಸಿದೆ. ತೀರದ ಬಳಿ ಆಳವೂ ಲವಣತ್ವವೂ ಕಡಿಮೆಯಾಗಿರುವುದರಿಂದ ಚಳಿಗಾಲದಲ್ಲಿ ಸಾಮಾನ್ಯವಾಗಿ ನೀರು ಗಡ್ಡೆಕಟ್ಟುವುದುಂಟು. ಅಜ಼ಾಫ್ ಸಮುದ್ರ ಮೂರು ತಿಂಗಳ ಕಾಲ ಗಡ್ಡೆಕಟ್ಟಿರುತ್ತದೆ. ಕ್ರಿಮಿಯದ ದಕ್ಷಿಣತೀರಕ್ಕೆ ಸಮಾನಾಂತರವಾಗಿ ಪರ್ವತಗಳುಂಟು. ಕೆಲವು ಕಡೆಗಳಲ್ಲಿ (ಉದಾಹರಣೆಗೆ:ಮಾಲ್ಟಾ) ಸಣ್ಣ ಆಳಕೊಲ್ಲಿಗಳಿವೆ. ಕ್ರಿಮಿಯ ಪರ್ವತ ಪರ್ಯಾಯದ್ವೀಪಕ್ಕೆ ಪಶ್ಚಿಮದಲ್ಲಿರುವ ಸೆವಾಸ್ತಾಪೋಲ್ ಬಂದರು ಎಲ್ಲ ದೃಷ್ಟಿಗಳಿಂದಲೂ ಬಲು ಪ್ರಶಸ್ತವಾದದ್ದು.

ಕಪ್ಪು ಸಮುದ್ರದ ಪೂರ್ವದ ಕಡೆಗೆ ಕಾಕಸಸ್ ಪರ್ವತಗಳು ಎದ್ದುನಿಂತಿವೆ. ಕೆಲವು ಶ್ರೇಣಿಗಳು ಸಮುದ್ರದವರೆಗೂ ಬಂದಿರುವುದುಂಟು. ತೀರ ಪ್ರದೇಶ ನೇರವಾಗಿದೆ. ಉತ್ತರದಲ್ಲಿ ನವರೊಸಿಕ್ ಒಂದು ದೊಡ್ಡ ಹಡಗುನಿಲ್ದಾಣ. ಆನಟೋಲಿಯಾದ ತೀರದಲ್ಲೂ ಒಳ್ಳೆಯ ಬಂದರುಗಳಿಲ್ಲ. ಉತ್ತರದಿಂದ ಬೀಸುವ ಗಾಳಿಗೆ ಎದುರಾಗಿರುವುದರಿಂದ ಅಲ್ಲಿ ಸಮುದ್ರಯಾನ ಕಷ್ಟಕರ.

ಈ ಸಮುದ್ರಕ್ಕೆ ಕಪ್ಪುಸಮುದ್ರವೆಂದು ನಾಮಕರಣ ಮಾಡಿದವರು ತುರ್ಕರು. ಚಂಡಮಾರುತದಿಂದ ಅಲ್ಲೋಲಕಲ್ಲೋಲವಾಗುತ್ತಿದ್ದ ಸಮುದ್ರವನ್ನು ನೋಡಿ ಹೆದರಿ ಅವರು ಇದಕ್ಕೆ ಆ ಹೆಸರಿಟ್ಟರು. ಇದೊಂದು ಕಪ್ಪಾದ ಅನುಭವವಾದ್ದರಿಂದ ಇದು ಕಪ್ಪುಸಮುದ್ರ ಆಯಿತು. ಪ್ರ.ಶ.ಪೂ. 7 ಶತಮಾನಗಳ ಹಿಂದೆ ಗ್ರೀಕರು ದಕ್ಷಿಣತೀರ ಪ್ರದೇಶದಲ್ಲಿ ತಮ್ಮ ವ್ಯಾಪಾರಕೋಠಿಗಳನ್ನು ಕಟ್ಟಿಕೊಂಡು ಏಜಿಯನ ದ್ವೀಪಗಳೊಡನೆ ವ್ಯಾಪಾರ ನಡೆಸುತ್ತಿದ್ದರು. ಕೆರ್ಚ್ ಜಲಸಂಧಿಯಲ್ಲಿ ಅವರು ವಸಾಹತುಗಳನ್ನು ಸ್ಥಾಪಿಸಿ, ಅಜ಼ಾಫ್ ಪ್ರದೇಶದ ವ್ಯಾಪಾರವೆಲ್ಲವನ್ನೂ ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು.

330ರಲ್ಲಿ ಕಾನ್‌ಸ್ಟಾಂಟಿನೋಪಲ್‌ನ್ನು ಸ್ಥಾಪಿಸಲಾಯಿತು. ಇದರಿಂದ ಕಪ್ಪು ಸಮುದ್ರದ ಪ್ರಾಮುಖ್ಯ ಹೆಚ್ಚಿತು. 8–10ನೆಯ ಶತಮಾನದವರೆಗೆ ತುರ್ಕರ ಬುಡಕಟ್ಟಿಗೆ ಸೇರಿದ್ದ ಖಾಜ಼ರರಿಗೂ ಬೈಜ಼ಾಂಟಿಯನ್‌ರಿಗೂ ವ್ಯಾಪಾರ ಬೆಳೆಯಿತು. 907ರಲ್ಲಿ ಕೀವ್ ದೇಶದ ದೊರೆ ಕಾನ್‌ಸ್ಟಾಂಟಿನೋಪಲಿನ ಮೇಲೆ ಆಕ್ರಮಣ ನಡೆಸಲಾಗಿ ಬೈಜ಼ಾಂಟಿಯನ್‌ರಿಗೂ ಕೀವ್‌ಗೂ ವಾಣಿಜ್ಯ ಒಪ್ಪಂದ ಏರ್ಪಟ್ಟಿತು. ಆದರೆ ಕಪ್ಪುಸಮುದ್ರದ ವ್ಯಾಪಾರವನ್ನು ಕೀವ್, ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. 11ನೆಯ ಶತಮಾನದಲ್ಲಿ ಸೆಲ್ಜುಕ್ ತುರ್ಕರು ಮತ್ತೆ ಕಪ್ಪು ಸಮುದ್ರದ ಆಗ್ನೇಯ ತೀರದ ಮೇಲೆ ದಾಳಿಯಿಟ್ಟು ಆ ಪ್ರದೇಶದ ಜನರನ್ನು ಹಿಂಸಿಸಿದರು. 1453ರಲ್ಲಿ ಆಟೋಮನ್ ತುರ್ಕರು ಕಾನ್‌ಸ್ಟಾಂಟಿನೋಪಲ್‌ನ್ನು ವಶಪಡಿಸಿಕೊಂಡಾಗ ಹೊಸಯುಗ ಪ್ರಾರಂಭವಾಯಿತು. ಅಲ್ಲಿಂದ ಮುಂದೆ ಅದು ತುರ್ಕಿ ಸರೋವರವೆಂದು ಪರಿಗಣಿತವಾಯಿತು. ಇಟಾಲಿಯನರ ಮತ್ತು ಫ್ರೆಂಚರ ಕೈಯಲ್ಲೂ ಅನಂತರದಲ್ಲಿ ಇಂಗ್ಲಿಷರ ಕೈಯಲ್ಲೂ ಇಲ್ಲಿ ವ್ಯಾಪಾರವಿತ್ತು.

ಮಸ್ಕೊವಿ ರಾಜ್ಯ ಬೆಳೆದಾಗ, ರಷ್ಯದ ಪೀಟರ್ ಮಹಾಶಯ ಕಪ್ಪುಸಮುದ್ರದ ಮೇಲೆ ಕಣ್ಣಿಟ್ಟ. ತುರ್ಕರ ದಾಳಿಯಿಂದ ತನ್ನ ದೇಶದ ವ್ಯಾಪಾರ ಹಡಗುಗಳನ್ನು ರಕ್ಷಿಸಲು ಪ್ರಬಲವಾದ ನೌಕಾಪಡೆ ಕಟ್ಟಿದ ಕ್ರಿಮಿಯದಲ್ಲಿ ಅಳಿದುಳಿದಿದ್ದ ಮಂಗೋಲ್ ವಿರುದ್ಧ ದಾಳಿಮಾಡಲು ಅಜ಼ಾಫ್ ಸಮುದ್ರದಲ್ಲಿ ತೋಪುಖಾನೆಗಳನ್ನು ನಿರ್ಮಿಸಲಾಯಿತು. ಕಪ್ಪುಸಮುದ್ರದಿಂದ ಮೆಡಿಟರೇನಿಯನ್ ಸಮುದ್ರಕ್ಕೆ ಸಂಬಂಧ ಕಲ್ಪಿಸುವ ಜಲಸಂಧಿಗಳ ಮೇಲೆ ಹತೋಟಿಗಾಗಿ ರಷ್ಯನ್ನರಿಗೂ ಆಟೋಮನ್ ಸಾಮ್ರಾಜ್ಯಕ್ಕೂ ಯುದ್ಧಗಳು ಜರುಗುತ್ತಲೇ ಇದ್ದುವು. ರಷ್ಯ ಕ್ರಮೇಣ ಸುತ್ತಮುತ್ತಲ ನೆಲವನ್ನು ಆಕ್ರಮಿಸಿಕೊಂಡಿತು.

ಆರ್ಥಿಕ ಅಭಿವೃದ್ಧಿಯಾದಂತೆ ಬಂದರುಗಳು ಬೆಳೆದುವು. ನಿಕಲಯೆಫ್, ಒಡೆಸ್ಸ, ಸೆವಾಸ್ಟೋಲ್ ನೌಕಾನೆಲೆ– ಇವೆಲ್ಲ ನಿರ್ಮಿತವಾದುವು. 18 ಮತ್ತು 19ನೆಯ ಶತಮಾನಗಳಲ್ಲಿ ಬೆಸರೇಬಿಯದ ನೈಋತ್ಯಕ್ಕೆ ಆಟೊಮನ್ ಪ್ರಭಾವ ತಗ್ಗಿತು. ಸ್ವತಂತ್ರ ರೊಮೇನಿಯ ಬಲ್ಗೇರಿಯಗಳು ಜನ್ಮ ತಳೆದುವು. ಕ್ರಿಮಿಯನ್ ಯುದ್ಧವನ್ನು ಕೊನೆಗೊಳಿಸುವ ಪ್ಯಾರಿಸ್ ಒಪ್ಪಂದ (1856) ಆದಾಗ ಕಪ್ಪುಸಮುದ್ರದಲ್ಲಿ ರಷ್ಯದ ಪ್ರಭಾವಕ್ಕೆ ಕುಂದುಂಟಾಯಿತು. ಆದರೆ 1870ರಲ್ಲಿ ರಷ್ಯ ಈ ನಿರ್ಬಂಧಗಳನ್ನು ಕಿತ್ತೊಗೆದದ್ದರಿಂದ 1914ರ ವರೆಗೂ ಅದು ಕಪ್ಪು ಸಮುದ್ರದಲ್ಲಿ ತನ್ನ ಚಟುವಟಿಕೆ ಬೆಳೆಸಿಕೊಳ್ಳಲು ಯಾವ ತಡೆಯೂ ಇರಲಿಲ್ಲ. ಸೋವಿಯತ್ ದೇಶಕ್ಕೆ ಕಪ್ಪು ಸಮುದ್ರದಿಂದ ಸರ್ವಋತುಗಳಲ್ಲೂ ಸಾಗರ ಸಂಬಂಧ ವೇರ್ಪಟ್ಟಿದೆ. ಆದ್ದರಿಂದ ಅದಕ್ಕೆ ಈ ಸಮುದ್ರ ಬಲು ಮುಖ್ಯ. ಬಟೂಂ ಮತ್ತು ನಾವರಸ್ಸೀಸ್ಕ್

ಗಳಿಂದ ತೈಲವೂ ಪಾಟಿಯಿಂದ ಮ್ಯಾಂಗನೀಸೂ ಜ್ದನಫ್‌ನಿಂದ ಕಲ್ಲಿದ್ದಲೂ ಕೆರ್ಚಿನಿಂದ ಕಬ್ಬಿಣದ ಅದಿರೂ ನಾವರಸ್ಸೀಸ್ಕ್‌ನಿಂದ ಸಿಮೆಂಟೂ ಒಡೆಸ್ಸ, ನ್ಯಿಕಲಯೆಫ್, ಕೆರ್ಸನ್ ಮತ್ತು ನಾವರಸ್ಸೀಸ್ಕ್‌ಗಳಿಂದ ಧಾನ್ಯವೂ ಸಾಗುತ್ತವೆ.

ಸಿನಾಪ್ ಮತ್ತು ಟ್ರಾಬ್‌ಜ಼ಾನ್‌ಗಳು ಹಿಂದೆ ತುರ್ಕಿಯ ಪ್ರಮುಖ ಬಂದರುಗಳಾಗಿದ್ದುವು. ಈಗ ಪಶ್ಚಿಮದ ಜಾಂಗುಲ್ಡಾಕ್ ಮುಖ್ಯ. ರೊಮೇನಿಯದ ಕಾನ್‌ಸ್ಟಾಂಟ್ ಮತ್ತು ಬಲ್ಗೇರಿಯದ ವಾರ್ನಾ ಮತ್ತು ಬುರ್ಗಾಸ್‌ಗಳು ಸ್ಥಳೀಯ ಪ್ರಾಮುಖ್ಯ ಪಡೆದಿವೆ. (ಬಿ.ಎಂ.)

**ಕಪ್ಪೆ :** ಕಶೇರುಕಗಳ ಗುಂಪಿನ ದ್ವಿಚರವರ್ಗದ (ಆಂಫಿಬಿಯ) ಎನ್ಯೂರ ಗಣಕ್ಕೆ ಸೇರಿದ ಪ್ರಾಣಿ. ಸಾಮಾನ್ಯವಾಗಿ ಬಾಲವಿಲ್ಲದ ದ್ವಿಚರಿಗಳಿಗೆಲ್ಲ ಈ ಹೆಸರು ಅನ್ವಯವಾಗುತ್ತದೆ. ಇವುಗಳ ವರ್ಗದ ಹೆಸರೇ ಸೂಚಿಸುವಂತೆ ಕಪ್ಪೆಗಳು ನೀರಿನಲ್ಲೂ ನೆಲದ ಮೇಲೂ ಜೀವಿಸಬಲ್ಲುವು. ಇಂಥ ಜೀವನಕ್ಕೆ ತಕ್ಕಂತೆ ದೇಹದ ಮಾರ್ಪಾಟುಗಳನ್ನೂ ಹೊಂದಿವೆ. ಕಪ್ಪೆಗಳಲ್ಲಿ ಹಲವಾರು ವಿಧಗಳಿವೆ. ಇವುಗಳಲ್ಲಿ ನೀರಿನಲ್ಲಿ ವಾಸಿಸುವ ಕಪ್ಪೆ (ಫ್ರಾಗ್), ನೆಲಗಪ್ಪೆ (ಟೋಡ್) ಮತ್ತು ಹಾರುಗಪ್ಪೆ (ಫ್ಲೈಯಿಂಗ್ ಫ್ರಾಗ್) ಮುಖ್ಯವಾದುವು. ಸಾಧಾರಣವಾಗಿ ನೀರಿನಲ್ಲಿ ವಾಸಿಸುವ ಕಪ್ಪೆಗಳು ತಮ್ಮ ಬದುಕನ್ನು ಸಂಪೂರ್ಣವಾಗಿ ನೀರಿನಲ್ಲೇ ಸಾಗಿಸುತ್ತವೆ. ಇವುಗಳ ಚರ್ಮ ನುಣುಪಾಗಿದ್ದು ಲೋಳೆಯಿಂದ ಆವೃತ ವಾಗಿರುತ್ತದೆ. ಅಲ್ಲದೆ ಇವುಗಳ ಭುಜಕಟ್ಟಿನ (ಶೋಲ್ಡರ್ ಗರ್ಡಲ್) ಎರಡು ಭಾಗಗಳು ಕೂಡಿಕೊಂಡು ಒಂದು ದೃಢವಾದ ಪಟ್ಟಿಯಾಗಿವೆ. ನೆಲಗಪ್ಪೆಗಳು ನೀರಿನಲ್ಲೇ ಜನ್ಮ ತಾಳುವುದಾದರೂ ಪ್ರೌಢಾವಸ್ಥೆಯನ್ನು ನೆಲದ ಮೇಲೆ ಕಳೆಯುತ್ತವೆ. ಮೊಟ್ಟೆಯಿಡಲು ಮಾತ್ರ ಅವು ನೀರಿಗೆ ಹೋಗುತ್ತವೆ. ಇವುಗಳ ಚರ್ಮ ಒರಟು ಹಾಗೂ ಒಣಗಿರುತ್ತದೆಯಲ್ಲದೆ ಅದರ ಮೇಲೆಲ್ಲ ಬುಗುಟುಗಳಿವೆ. ಇವುಗಳಲ್ಲಿ ಭುಜಕಟ್ಟಿನ ಎರಡು ಭಾಗಗಳು ಕೂಡಿಕೊಂಡಿರದೆ ಒಂದರ ಮೇಲೊಂದು ಚಾಚಿಕೊಂಡಿವೆ. ಹಾರುಗಪ್ಪೆ ನೀರಿನಲ್ಲಿ ವಾಸಿಸುವ ಕಪ್ಪೆಯಂತೆಯೇ ಇದೆ. ಆದರೆ ಅದಕ್ಕಿಂತ ಗಾತ್ರದಲ್ಲಿ ಚಿಕ್ಕದು. ಕೈಕಾಲುಗಳ ಬೆರಳುಗಳ ಮಧ್ಯೆ ರೆಕ್ಕೆಯಂತೆ ಹರಡಿರುವ ಜಾಲಪಾದವಿದೆ. ಮರದಿಂದ ಮರಕ್ಕೆ ಹಾರುವಾಗ ಈ ಜಾಲಪಾದವನ್ನು ಪ್ಯಾರಾಚೂಟಿನಂತೆ ಬಳಸಿಕೊಳ್ಳಬಲ್ಲುದು.



ನೀರಿನಲ್ಲಿ ವಾಸಿಸುವ ಕಪ್ಪೆಯ ಮೊಟ್ಟೆಗಳು

ಕಪ್ಪೆ ಸಾಮಾನ್ಯವಾಗಿ ಕೆರೆ, ಕುಂಟೆ, ಸಣ್ಣತೊರೆಗಳು ಮತ್ತಿತರ ತೇವಪೂರಿತ ಸ್ಥಳಗಳಲ್ಲಿ ವಾಸಿಸುತ್ತವೆ. ಸಣ್ಣಪುಟ್ಟ ಹುಳುಗಳು, ಬಸವನ ಹುಳುಗಳು ಮತ್ತು ಕೀಟಗಳು ಇದರ ಪ್ರಧಾನ ಆಹಾರ. ಹೀಗೆ ಇಂಥ ಪ್ರಾಣಿಗಳನ್ನು ತಿಂದು ನಾಶಪಡಿಸುವುದರಿಂದ ರೈತನಿಗೆ ಬಹಳ ಸಹಾಯಕವಾಗಿದೆ.

ಕಪ್ಪೆಯ ದೇಹವನ್ನು ತಲೆ, ಮುಂಡ ಮತ್ತು ಕೈಕಾಲುಗಳೆಂದು ವಿಭಾಗಿಸಬಹುದು. ತಲೆ ಚಪ್ಪಟೆಯಾಗಿಯೂ ತ್ರಿಕೋಣಾಕಾರವಾಗಿಯೂ ಇದೆ. ಮೂತಿಯ ತುದಿಯಲ್ಲಿ ಒಂದು ಅಗಲವಾದ ಬಾಯಿಯೂ ಕೊಂಚ ಮೇಲ್ಭಾಗದಲ್ಲಿ ಒಂದು ಜೊತೆ ಹೊರನಾಸಿಕ ರಂಧ್ರಗಳೂ ಇವೆ. ಸ್ವಲ್ಪ ಹಿಂದಕ್ಕೆ ಎರಡು ದೊಡ್ಡ ಉಬ್ಬಿಕೊಂಡ ಕಣ್ಣುಗಳಿವೆ. ಕಣ್ಣುಗಳಿಗೆ ಮನುಷ್ಯರಲ್ಲಿರುವಂತೆಯೇ ಎರಡು ಸಾಮಾನ್ಯ ರೆಪ್ಪೆಗಳೂ ಪಾರದರ್ಶಕವಾದ ನಿಮೇಷಕ ಪಟಲ (ನಿಕ್ಟಿಟೇಟಿಂಗ್ ಮೆಂಬ್ರೇನ್) ಎಂಬ ಮೂರನೆಯ ರೆಪ್ಪೆಯೂ ಇವೆ. ಕಣ್ಣುಗಳ ಹಿಂಬದಿಯಲ್ಲಿ ದುಂಡಾದ ಕಿವಿಯ ತಮಟೆಗಳಿವೆ. ತಲೆಗೂ ಮುಂಡಕ್ಕೂ ನಡುವೆ ಸ್ಪಷ್ಟವಾದ ಕುತ್ತಿಗೆಯಿಲ್ಲ. ಮುಂಡಭಾಗ ಹೆಚ್ಚುಕಡಿಮೆ ಕೊಳವೆಯಾಕಾರವಾಗಿದ್ದು ಎರಡು ಜೊತೆ ಕಾಲುಗಳನ್ನು ಹೊಂದಿದೆ. ಮುಂಡದ ಹಿಂತುದಿಯಲ್ಲಿ ಹಿಂಗಾಲುಗಳ ನಡುವೆ ಮಲ, ಮೂತ್ರ ಹಾಗೂ ಜನನೇಂದ್ರಿಯ ದ್ವಾರವಾದ ಕ್ಲೋಯಕ ಎಂಬ ರಂಧ್ರವಿದೆ. ಮುಂಗಾಲಿನಲ್ಲಿ ನಾಲ್ಕು ಬೆರಳುಗಳೂ ಹಿಂಗಾಲಿನಲ್ಲಿ ಐದು ಬೆರಳುಗಳೂ ಇವೆ. ಹಿಂಗಾಲುಗಳು ಮುಂಗಾಲುಗಳಿಗಿಂತ ಬಹಳ ಉದ್ದ. ಎಲ್ಲ ಬೆರಳುಗಳ ನಡುವೆ ಜಾಲಪಾದವಿದೆ. ಇದು ಈಜುವುದಕ್ಕೆ ಸಹಕಾರಿ. ಗಂಡು ಕಪ್ಪೆಯಲ್ಲಿ ದವಡೆಗಳ ಬಳಿ ಎರಡೂ ಪಕ್ಕಗಳಲ್ಲಿ ಬಾಯ ಅಂಗಳದೊಳಕ್ಕೆ ತೆರೆಯುವಂಥ ಎರಡು ಧ್ವನಿಚೀಲಗಳಿವೆ. ಕಪ್ಪೆಯ ವಿಚಿತ್ರವಾದ ಹಾಗೂ ವಿಶಿಷ್ಟವಾದ ವಟಗುಟ್ಟುವ ಶಬ್ದವನ್ನು ವರ್ಧಿಸಲು ಇವು ಸಹಕಾರಿಯಾಗಿವೆ.

ಕಶೇರುಕಗಳ ರಚನೆಯ ಅಭ್ಯಾಸಕ್ಕೆ ಇದು ಸರಳವಾದ ಮತ್ತು ಮೂಲರಚನೆಯನ್ನು ತೋರುವ ಮಾದರಿಯಾದುದರಿಂದ ಕಶೇರುಕಗಳ ಅಭ್ಯಾಸವನ್ನು ಕಪ್ಪೆಯಿಂದಲೇ ಆರಂಭಿಸುತ್ತಾರೆ.

ಮನುಷ್ಯದೇಹದಲ್ಲಿರುವಂತೆಯೇ ಕಪ್ಪೆಯಲ್ಲಿಯೂ ಚೆನ್ನಾಗಿ ರೂಪುಗೊಂಡ ಅಸ್ಥಿಪಂಜರವಿದೆ. ಇದನ್ನು ಮುಖ್ಯವಾಗಿ ಅಕ್ಷೀಯ ಅಸ್ಥಿಪಂಜರ, ಅನುಬಂಧಿ ಅಸ್ಥಿಪಂಜರ ಮತ್ತು ಅವಯವಭಾಗ ಎಂದು ವಿಭಾಗಿಸಬಹುದು. ಅಕ್ಷೀಯ ಭಾಗದಲ್ಲಿ ಒಂಬತ್ತು ಕಶೇರುಖಂಡವನ್ನೊಳಗೊಂಡ ಬೆನ್ನುಮೂಳೆಯೂ ಭಾಗಶಃ ಮೂಳೆ ಮತ್ತು ಭಾಗಶಃ ಮೃದ್ವಸ್ಥಿಯಿಂದಾದ ತಲೆಬುರುಡೆಯೂ ಇವೆ. ಬೆನ್ನುಮೂಳೆಯ ಹಿಂತುದಿಯಲ್ಲಿ ಅದರಷ್ಟೇ, ಉದ್ದವಾದ ಯೂರೋಸ್ಟೈಲ್ ಎಂಬ ಕಡ್ಡಿಯಂಥ ಭಾಗವಿದೆ. ತಲೆಬುರುಡೆಯಲ್ಲಿ ಹಲವಾರು ಎಲುಬುಗಳಿಂದಾದ ಮಿದುಳುಪೆಟ್ಟಿಗೆ, ಮೇಲಿನ ಹಾಗೂ ಕೆಳಗಿನ ದವಡೆಗಳು ಮತ್ತು ಹೈಯಾಯಿಡ್ ಉಪಕರಣವೆಂಬ ವಿಶೇಷ ರೀತಿಯ ಭಾಗವೂ ಇವೆ. ಈ ಉಪಕರಣ ಕಪ್ಪೆಮರಿಯಲ್ಲಿ ಕಿವಿರುಗಳಿಗೆ ಆಧಾರವಾಗಿರುತ್ತದೆ. ಅನುಬಂಧಿ ಅಸ್ಥಿಪಂಜರದಲ್ಲಿ ಹಲವಾರು ಎಲುಬುಗಳಿಂದಾದ ಭುಜಾಸ್ಥಿ ವಲಯವೂ V–ಆಕಾರದ ಕಟ್ಯಸ್ಥಿವಲಯವೂ ಇವೆ. ಭುಜಾಸ್ಥಿವಲಯಕ್ಕೆ ಮುಂಗಾಲುಗಳ ಆಧಾರಮೂಳೆಗಳೂ ಕಟ್ಯಸ್ಥಿವಲಯಕ್ಕೆ ಹಿಂಗಾಲುಗಳ ಮೂಳೆಗಳೂ ಕೂಡಿಕೊಂಡಿವೆ. ಕಾಲುಗಳ ಮೂಳೆಗಳು ಹೆಚ್ಚು ಕಡಿಮೆ ಮನುಷ್ಯರಲ್ಲಿರುವಂತೆಯೇ ಇವೆ.

ಕಪ್ಪೆಯ ಜೀರ್ಣಾಂಗಗಳು ಮನುಷ್ಯರಲ್ಲಿರುವಂತೆಯೇ ಇವೆ. ಬಹಳ ದೊಡ್ಡ ಬಾಯಿ, ವಿಚಿತ್ರವಾದ ನಾಲಗೆ ಮತ್ತು ದೊಡ್ಡ ದವಡೆಗಳು–ಇವು ಕಪ್ಪೆಯ ವಿಶೇಷ ಲಕ್ಷಣಗಳು. ನಾಲಗೆ ಬಾಯಂಗಳದ ಮುಂಭಾಗದಲ್ಲಿ ಅಂಟಿಕೊಂಡು ಹಿಂದಕ್ಕೆ ಮಡಿಚಿಕೊಂಡಿದೆ. ಈ ನಾಲಗೆಯನ್ನು ಸಾಕಷ್ಟು ದೂರ ಚಾಚಿ, ಹಾರಾಡುವ ಕೀಟಗಳನ್ನು ಅರೆಕ್ಷಣದಲ್ಲಿ ಹಿಡಿದು ಬಾಯಿಗೆ ಹಾಕಿಕೊಳ್ಳಬಲ್ಲುದು. ನಾಲಗೆಯ ತುದಿ ಅಂಟಾಗಿರು ವುದರಿಂದ ಕೀಟಗಳನ್ನು ಹಿಡಿಯುವುದು ಸುಲಭ. ದವಡೆಗಳಲ್ಲಿ ಹಲ್ಲುಗಳಿಲ್ಲ, ಆದ್ದರಿಂದ ತಿಂದ ಆಹಾರವನ್ನು ಅಗಿಯದೆ ಹಾಗೆಯೇ ಗಂಟಲಿನ ಮೂಲಕ ಜಠರಕ್ಕೆ ಸಾಗಿಸುತ್ತದೆ. ಅಲ್ಲಿಂದ ಆಹಾರ ಸಣ್ಣಕರುಳಿಗೂ ಅನಂತರ ದೊಡ್ಡ ಕರುಳಿಗೂ ಸಾಗುತ್ತದೆ. ಪಚನಕ್ರಿಯೆಯಲ್ಲಿ ಸಹಾಯಕವಾಗಲು ಎರಡು ಹಾಲೆಗಳಿಂದಾದ ಯಕೃತ್ತೂ ಹಲವಾರು ಹಾಲೆಗಳುಳ್ಳ ಮೇದೋಜೀರಕವೂ ಇವೆ. ಎರಡರಿಂದ ಹೊರಡುವ ನಾಳಗಳು ಕೂಡಿಕೊಂಡು ದೊಡ್ಡ ಕರುಳಿನೊಳಕ್ಕೆ ತೆರೆಯುತ್ತವೆ. ಕರುಳಿನಿಂದ ಗುದನಾಳ ಹೊರಟು ಕ್ಲೋಯಕ ರಂಧ್ರದೊಡನೆ ಸಂಬಂಧ ಕಲ್ಪಿಸುತ್ತದೆ. ಪಚನಕ್ರಿಯೆ ಮನುಷ್ಯದೇಹದಲ್ಲಿ ನಡೆದಂತೆಯೇ ನಡೆಯುತ್ತದೆ.

ಕಪ್ಪೆಯಲ್ಲಿ ಉಸಿರಾಟ ಬಹುಪಾಲು ಶ್ವಾಸಕೋಶಗಳಿಂದಲೇ ನಡೆಯುತ್ತದೆ. ಶ್ವಾಸಾಂಗದಲ್ಲಿ ಬಾಯಂಗಳದಲ್ಲಿ ತೆರೆಯುವಂಥ ಗ್ಲಾಟಿಸ್ ಭಾಗವೂ ಲ್ಯಾರಿಂಗೊ–ಟ್ರೇಕಿಯಲ್ ಅವಕಾಶವೂ ಒಂದು ಜೊತೆ ಶ್ವಾಸಕೋಶಗಳೂ ಇವೆ. ಹೊರನಾಸಿಕ ರಂಧ್ರದಿಂದ ಬಾಯ ಅಂಗಳದೊಳಕ್ಕೆ ಗಾಳಿ ಬರುತ್ತದೆ. ಆಗ ಬಾಯಿ ಮುಚ್ಚಿಕೊಂಡು ಆ ಗಾಳಿ ಲ್ಯಾರಿಂಗೊ–ಟ್ರೇಕಿಯಲ್ ಕೊಳವೆಯ ಮೂಲಕ ಶ್ವಾಸಕೋಶದೊಳಕ್ಕೆ ಹೋಗುತ್ತದೆ. ಶ್ವಾಸಕೋಶದಲ್ಲಿ ಮನುಷ್ಯರಲ್ಲಿರುವಂತೆ ಅನೇಕ ಸೂಕ್ಷ್ಮ ಗಾಳಿಚೀಲಗಳಿದ್ದು ಅವು ಸೂಕ್ಷ್ಮ ರಕ್ತನಾಳಗಳಿಗೆ ಆಮ್ಲಜನಕವನ್ನು ಕೊಡುತ್ತವೆ. ರಕ್ತನಾಳಗಳಿಂದ ಇಂಗಾಲಾಮ್ಲ ಹೊರಬಿದ್ದು ಅಶುದ್ಧ ಗಾಳಿಯಾಗಿ ಬಂದ ದಾರಿಯಲ್ಲೆ ಹಿಂದಕ್ಕೆ ಬರುತ್ತದೆ. ಕಪ್ಪೆಯ ಚರ್ಮಕ್ಕೂ ಉಸಿರಾಟದ ಶಕ್ತಿಯಿದೆ. ಚರ್ಮದ ಕೆಳಗೆ ಅನೇಕ ಸೂಕ್ಷ್ಮ ರಕ್ತನಾಳಗಳಿದ್ದು ಅವು ನೇರವಾಗಿ ಹೊರಗಿನ ವಾತಾವರಣದಿಂದ ಆಮ್ಲಜನಕವನ್ನು ಹೀರಿಕೊಂಡು ಇಂಗಾಲಾಮ್ಲವನ್ನು ಬಿಟ್ಟುಕೊಡಬಲ್ಲುವು. ಇದರಿಂದಾಗಿ ಕಪ್ಪೆ ನೀರಿನಲ್ಲಿ ಮುಳುಗಿದ್ದಾಗಲೂ ಚರ್ಮದ ಮೂಲಕ ಉಸಿರಾಡಬಲ್ಲುದು. ಕಪ್ಪೆಮರಿಗಳಲ್ಲಿ ಉಸಿರಾಟ ಕಿವಿರುಗಳ ಮೂಲಕ ನಡೆಯುತ್ತದೆ.

ಕಪ್ಪೆಯಲ್ಲಿ ರಕ್ತಪರಿಚಲನೆಗೆ ಸಂಬಂಧಿಸಿದಂತೆ ಹೃದಯ, ಅಪಧಮನಿ ಸಮೂಹ ಮತ್ತು ಅಭಿಧಮನಿ ಸಮೂಹ ಇದೆ. ರಕ್ತಪರಿಚಲನಾಕ್ರಮ ಮನುಷ್ಯರಲ್ಲಿರುವಂತೆ ಇದ್ದರೂ ಹಲವಾರು ಮುಖ್ಯ ವ್ಯತ್ಯಾಸಗಳನ್ನು ಇಲ್ಲಿ ಕಾಣಬಹುದು. ಕಪ್ಪೆಯ ಹೃದಯದಲ್ಲಿ ಮೇಲ್ಭಾಗದಲ್ಲಿ ಎರಡು ಕೋಣೆಗಳೂ (ಆರಿಕಲ್ಸ್) ಕೆಳಭಾಗದಲ್ಲಿ ಒಂದೇ ಕೋಣೆ (ವೆಂಟ್ರಿಕಲ್)ಇವೆ.

ದೇಹದ ಇತರ ಭಾಗಗಳಿಂದ ಹರಿದು ಬರುವ ಅಶುದ್ಧ ರಕ್ತ ಅಭಿಧಮನಿಗಳ ಮೂಲಕ ಹೃದಯದ ಮೇಲಿನ ಬಲ ಕೋಣೆಯನ್ನು ಸೇರುತ್ತದೆ. ಮೇಲಿನ ಎಡಕೋಣೆಯಲ್ಲಿ ಶ್ವಾಸಕೋಶಗಳಿಂದ ಬರುವ ಶುದ್ಧರಕ್ತ ಸೇರುತ್ತದೆ. ಎರಡು ಬಗೆಯ ರಕ್ತಗಳೂ ಮೇಲಿನ ಎರಡು ಕೋಣೆಗಳಿಂದ ಒಂದೇ ಸಾಮಾನ್ಯದ್ವಾರದ ಮೂಲಕ ಕೆಳಕೋಣೆಯನ್ನು ಸೇರುತ್ತವೆ. ಹೀಗೆ ಈ ರಕ್ತ ಹೊರಡುತ್ತಿದ್ದಂತೆಯೇ ಎಡಕೋಣೆಯಿಂದ ಉಳಿದ ಶುದ್ಧರಕ್ತ ಮತ್ತೆ ಕೆಳಕೋಣೆಗೆ ಬರುತ್ತದೆ. ಈ ರಕ್ತ ಪುನಃ ಕೆಳಕೋಣೆಯ ಸಂಕುಚನದಿಂದ ಮಿದುಳುಭಾಗಕ್ಕೆ ಸಾಗುತ್ತದೆ. ಹೀಗೆ ಮಿದುಳುಭಾಗಕ್ಕೆ ಮಾತ್ರ ಸಂಪೂರ್ಣ ಶುದ್ಧರಕ್ತ ಪೂರೈಕೆಯಾಗುತ್ತದೆ. ಈ ರೀತಿಯ ರಕ್ತಪರಿಚಲನೆ ಕಪ್ಪೆಗೆ ವಿಶಿಷ್ಟವಾದುದು.



ನೆಲಗಪ್ಪೆಯ ಮೊಟ್ಟೆಗಳು

ಕಪ್ಪೆಯ ನರಸಮೂಹದಲ್ಲಿ, ಮಿದುಳು, ಬೆನ್ನುಹುರಿ ಮತ್ತು ಅವುಗಳಿಂದ ದೇಹದ ನಾನಾಭಾಗಗಳಿಗೆ ಹೊರಡುವ ನರವ್ಯವಸ್ಥೆಯೂ ಇವೆ. ಇವುಗಳ ಸ್ಥೂಲರಚನೆ ಮತ್ತು ಕೆಲಸದ ರೀತಿ ಸಾಮಾನ್ಯವಾಗಿ ಮನುಷ್ಯದೇಹದಲ್ಲಿರುವಂತೆಯೇ. ನರಕಣಗಳ ಸಂವೇದನಾ ಶಕ್ತಿ, ಸಂವೇದನೆಗಳು ಮಿದುಳನ್ನು ಸೇರುವ ಬಗೆ ಹಾಗೂ ಮಿದುಳಿನಿಂದ ಬರುವ ಪ್ರತಿಕ್ರಿಯೆ ಚಲಿಸುವ ಕ್ರಮ ಎಲ್ಲವೂ ಮನುಷ್ಯರಲ್ಲಿರುವಂತೆಯೆ ಇರುವುದರಿಂದ ಕಪ್ಪೆಯನ್ನು ನರಸಂಬಂಧದ ಪ್ರಯೋಗಗಳಲ್ಲಿ ಬಳಸುತ್ತಾರೆ.

ಕಪ್ಪೆಯ ಮೂತ್ರ ವಿಸರ್ಜನೆಯ ಪ್ರಮುಖ ಅಂಗಗಳು ಉದ್ದುದ್ದನಾದ ಚಪ್ಪಟೆಯಾದ ಒಂದು ಜೊತೆ ಮೂತ್ರಜನಕಾಂಗಗಳು. ಇವು ಬೆನ್ನುಮೂಳೆಯ ಯೂರೋಪಸ್ಟೈಲಿನ ಎರಡು ಪಾರ್ಶ್ವಗಳಲ್ಲಿವೆ. ಇವುಗಳಿಂದ ಒಂದೊಂದು ಮೂತ್ರನಾಳ ಹೊರಟು ಕ್ಲೋಯಕ ರಂಧ್ರವನ್ನು ಸೇರುತ್ತವೆ.

ಕಪ್ಪೆಯಲ್ಲಿ ಲಿಂಗಗಳು ಭಿನ್ನವಾಗಿವೆ. ಗಂಡಿನಲ್ಲಿ ಒಂದು ಜೊತೆ ಹಳದಿ ಬಣ್ಣದ ಅಂಡಾಕಾರದ ವೃಷಣಗಳೂ ಅವುಗಳಿಂದ ಹೊರಡುವ ಎರಡು ವೀರ್ಯಾಣುನಾಳಗಳೂ ಇವೆ. ಈ ನಾಳಗಳು ಮೂತ್ರಜನಕಾಂಗದ ಮೂಲಕ ಸಾಗಿ ಮೂತ್ರನಾಳದೊಂದಿಗೆ ಸೇರುತ್ತವೆ. ಮೂತ್ರನಾಳಗಳು ಕ್ಲೋಯಕ ರಂಧ್ರದ ಮೂಲಕ ಹೊರಕ್ಕೆ ತೆರೆಯುತ್ತವೆ. ವೃಷಣಗಳಲ್ಲಿ ಉತ್ಪತ್ತಿಯಾದ ವೀರ್ಯಾಣುಗಳು ಮೂತ್ರನಾಳದ ಮೂಲಕವೇ ಹೊರ ಬರಬೇಕು. ಹೆಣ್ಣುಕಪ್ಪೆಯಲ್ಲಿ ಒಂದು ಜೊತೆ ಮಡಿಕೆಮಡಿಕೆಯಾದ ಅಂಡಾಶಯಗಳಿವೆ. ಅವುಗಳ ಬಳಿಯಲ್ಲಿ ಆದರೆ ಅವುಗಳೊಂದಿಗೆ ಸಂಬಂಧವಿರುವ ಓವಿಡಕ್ಟ್ ಎಂಬ ಎರಡು ನಾಳಗಳಿವೆ. ಇವುಗಳ ಒಂದು ತುದಿ ಆಲಿಕೆಯಂತಿದ್ದು ಇನ್ನೊಂದು ತುದಿ ಕ್ಲೋಯಕ ರಂಧ್ರದೊಳಕ್ಕೆ ತೆರೆಯುತ್ತದೆ. ಅಂಡಾಶಯಗಳಲ್ಲಿ ಉತ್ಪತ್ತಿಯಾದ ಅಂಡಾಣುಗಳು ಅಂಡಾಶಯಗಳ ಸುತ್ತ ಇರುವ ದೇಹಾವಕಾಶದೊಳಕ್ಕೆ ಬರುತ್ತವೆ. ಅಲ್ಲಿಂದ ಓವಿಡಕ್ಟ್‌ಗಳ ಆಲಿಕೆಯಂಥ ತುದಿಯ ಮುಖಾಂತರ ಅವು ಕ್ಲೋಯಕ ರಂಧ್ರಕ್ಕೆ ಬಂದು ಹೊರಬೀಳುತ್ತವೆ. ಮೊಟ್ಟೆಯಿಡುವುದರಲ್ಲಿ ಕಪ್ಪೆಗಳು ಮತ್ತು ನೆಲಗಪ್ಪೆಗಳು ವೈಶಿಷ್ಟ್ಯಪೂರ್ಣವಾದ ನಡತೆಯನ್ನು ಪ್ರದರ್ಶಿಸುತ್ತವೆ. ಕಪ್ಪೆಗಳು ಅಕ್ರಮವಾದ ಕುಚ್ಚುಗಳ ರೀತಿಯಲ್ಲಿ ಮೊಟ್ಟೆಯನ್ನಿಟ್ಟರೆ ನೆಲಗಪ್ಪೆಗಳು ಮಣಿಸರದಂತೆ ಮೊಟ್ಟೆಯಿಡುತ್ತವೆ. ಎಲ್ಲ ಕಪ್ಪೆಗಳಲ್ಲೂ ಗರ್ಭಾಂಕುರತೆ ದೇಹದ ಹೊರಗೆ ನಡೆಯುತ್ತದೆ. ಆ ಕಾಲದಲ್ಲಿ ಗಂಡುಕಪ್ಪೆ ಹೆಣ್ಣಿನ ಮೇಲೆ ಕೂತು ಅದನ್ನು ಬಲವಾಗಿ ಹಿಡಿದುಕೊಳ್ಳುತ್ತದೆ. ಆಗ ಹೆಣ್ಣು ಮೊಟ್ಟೆಗಳನ್ನು ತನ್ನ ವಿಶಿಷ್ಟರೀತಿಯಲ್ಲಿ ಹೊರಬಿಡುತ್ತದೆ. ಅನಂತರ ಗಂಡುಕಪ್ಪೆ ತನ್ನ ವೀರ್ಯಾಣುಗಳನ್ನು ಮೊಟ್ಟೆಗಳ ಮೇಲೆ ಸೇಚಿಸುತ್ತದೆ. ಹೀಗೆ ಗರ್ಭಾಂಕುಗೊಂಡ ಮೊಟ್ಟೆಗಳು ನೀರಿನ ಮೇಲೆಯೇ ತೇಲುತ್ತಿದ್ದು ಅವುಗಳೊಳಗೆ ಭ್ರೂಣದ ಬೆಳವಣಿಗೆ ಸಾಗುತ್ತದೆ. ಕೆಲವು ದಿನಗಳ ಅನಂತರ ಮೊಟ್ಟೆಯಿಂದ ಪುಟ್ಟಮರಿಯೊಂದು ಹೊರಬಿದ್ದು ತನ್ನ ಉಳಿದ ಬೆಳವಣಿಗೆಯನ್ನು ಬಾಹ್ಯಪರಿಸರದಲ್ಲಿ ನಡೆಸುತ್ತದೆ. ಈ ಮರಿಯಲ್ಲಿ ದೊಡ್ಡ ತಲೆಯೂ ಕೊಳವೆಯಂಥ ಮುಂಡವೂ ಉದ್ದವಾದ ಬಾಲವೂ ಇವೆ. ಮುಂಡ ಮತ್ತು ತಲೆ ಸೇರುವಲ್ಲಿ ಎರಡು ಜೊತೆ ಕವಲೊಡೆದ ಹೊರಕಿವಿರುಗಳಿವೆ. ಈ ಮರಿಯನ್ನು ಗೊದಮೊಟ್ಟೆಯೆನ್ನುತ್ತಾರೆ. ತಲೆಯ ತುದಿಯಲ್ಲಿ ಅಗಲವಾದ ಬಾಯೊಂದು ಕಾಲಕ್ರಮೇಣ ಮೂಡುತ್ತದೆ. ಬಾಲದ ಸಹಾಯದಿಂದ ಈಜುವ ಈ ಮರಿ ಸಸ್ಯಾಹಾರಿ. ನೀರಿನಲ್ಲಿ ಬೆಳೆಯುವ ಸಣ್ಣಪುಟ್ಟ ಗಿಡಗಳನ್ನು ತಿಂದು ಜೀವಿಸುತ್ತದೆ. ನಿಧಾನವಾಗಿ ಹೊರಕಿವಿರುಗಳು ಮಾಯವಾಗಿ ತಲೆಯ ಎರಡೂ ಪಕ್ಕಗಳಲ್ಲಿ ಒಳಕಿವಿರುಗಳು ಹುಟ್ಟುತ್ತವೆ, ಬೆಳವಣಿಗೆ ಮುಂದುವರಿದಂತೆಲ್ಲ ಮುಂದಿನ ಮತ್ತು ಹಿಂದಿನ ಕಾಲುಗಳು ಹುಟ್ಟಿಕೊಳ್ಳುತ್ತವೆ. ದೇಹದ ಒಳಗೂ ಹಲವಾರು ಬದಲಾವಣೆಗಳು ಕಾಣಿಸಿಕೊಂಡು ಗೊದಮೊಟ್ಟೆ ಪ್ರೌಢಜೀವಿಯಾಗುತ್ತದೆ. ಶ್ವಾಸಾಂಗಗಳ ಹುಟ್ಟು, ಕಿವಿರುಗಳು ಮಾಯವಾಗುವಿಕೆ, ಬಾಲ ಚಿಕ್ಕದಾಗುವುದು–ಇವು ಈ ಕಾಲದ ಮುಖ್ಯ ಬದಲಾವಣೆಗಳು.

ಬಹುಪಾಲು ಕಪ್ಪೆಗಳಲ್ಲಿ ಸಂತಾನರಕ್ಷಣೆಯಿಲ್ಲವಾದರೂ ಕೆಲವು ಬಗೆಯ ಕಪ್ಪೆಗಳಲ್ಲಿ ಅದು ಉಚ್ಚಮಟ್ಟದ್ದಾಗಿದೆ. ಅಲೈಟಿಸ್ (ಸೂಲಗಿತ್ತಿ ಕಪ್ಪೆ) ಇದಕ್ಕೆ ಉತ್ತಮ ನಿದರ್ಶನ. ಇದರಲ್ಲಿ ಗಂಡುಕಪ್ಪೆ ಮೊಟ್ಟೆಗಳ ರಕ್ಷಣೆಯನ್ನು ನಿರ್ವಹಿಸುವುದು ಕಂಡುಬರುತ್ತದೆ. ವಸಂತಕಾಲದಲ್ಲಿ ಅನೇಕ ಗಂಡುಕಪ್ಪೆಗಳು ಒಂದೇ ಒಂದು ಹೆಣ್ಣು ಕಪ್ಪೆಯನ್ನು ಸುತ್ತುವರಿದು ಅದಕ್ಕಾಗಿ ಒಂದು ಸಮರವನ್ನೇ ನಡೆಸುತ್ತವೆ. ಯಶಸ್ವಿಯಾದ ಗಂಡು ಹೆಣ್ಣಿನಿಂದ ಹೊರಬಂದ ಮೊಟ್ಟೆಗಳ ಗರ್ಭಧಾರಣೆ ಮಾಡಿ, ಮೊಟ್ಟೆಗಳ ಕುಚ್ಚನ್ನು ತನ್ನ ಹಿಂಗಾಲುಗಳ ಸುತ್ತ ಸುತ್ತಿಕೊಂಡು ನೀರಿನಲ್ಲಿ ಈಜಲು ತೊಡಗುತ್ತದೆ. ಅನಂತರ ಯಾವುದಾದರೂ ಒಂದು ಬಿಲವನ್ನು ಸೇರಿ ಅಡಗಿಕೊಳ್ಳುತ್ತದೆ. ಕಾಲಾನುಕಾಲಕ್ಕೆ ಮೊಟ್ಟೆಗಳನ್ನು ಹೊರತಂದು ನೀರಿನಲ್ಲಿ ಮುಳುಗಿಸಿ ಅವು ಹಸಿಯಾಗಿರುವಂತೆ ಮಾಡುತ್ತಿರುತ್ತದೆ. ಈ ಕಾಲದಲ್ಲಿ ಮೊಟ್ಟೆಗಳಲ್ಲಿ ಭ್ರೂಣ ಬೆಳೆಯುತ್ತಿದ್ದು ಸಂಪೂರ್ಣ ಬೆಳವಣಿಗೆಯಾದ ಮೇಲೆ ಗೊದಮೊಟ್ಟೆಗಳು ಹೊರಬರುತ್ತವೆ. ಇಲ್ಲಿಗೆ ಗಂಡುಕಪ್ಪೆಯ ಕೆಲಸ ಮುಗಿಯಿತು. ಹೈಲ ಜೋಲ್ಡಿ ಎಂಬ ಮರಗಪ್ಪೆಯಲ್ಲಿಯೂ ವಿಚಿತ್ರ ರೀತಿಯ ಸಂತಾನರಕ್ಷಣೆಯ ಕ್ರಮವಿರುವುದನ್ನು ಕಾಣಬಹುದು. ಇದರಲ್ಲಿ ಹೆಣ್ಣುಕಪ್ಪೆಯ ಬೆನ್ನಿನ ಮೇಲೆ ಒಂದು ಬಗೆಯ ಚೀಲವಿದೆ. ಗರ್ಭಧರಿಸಿದ ಮೊಟ್ಟೆಗಳನ್ನು ಈ ಚೀಲದೊಳಕ್ಕೆ ತುಂಬಿಕೊಂಡು ಅವು ಮರಿಯಾಗಿ ಹೊರಬರುವವರೆಗೂ ಪಾಲಿಸುತ್ತದೆ. ಇದೇ ಬಗೆಯ ಚೀಲವನ್ನು ಅಮೆರಿಕದ ಉಷ್ಣಪ್ರದೇಶಗಳಲ್ಲಿ ಕಾಣಬರುವ ಮಾರ್ಸೂಪಿಯಲ್ ನೆಲಗಪ್ಪೆಗಳಲ್ಲಿ (ನೋಟೋಟ್ರೇಮ) ನೋಡಬಹುದು.

ಕಪ್ಪೆಗಳು ಪ್ರಪಂಚದ ಎಲ್ಲ ಪ್ರದೇಶಗಳಲ್ಲೂ ಕಾಣಬರುತ್ತವೆ. ದಕ್ಷಿಣಭಾರತದಲ್ಲಿ ಅನೇಕ ಜಾತಿಯ ಕಪ್ಪೆಗಳು ಸಿಕ್ಕುತ್ತವೆ. ಮುಖ್ಯವಾಗಿ ರಾನ ಎಂಬ ಜಾತಿಗೆ ಸೇರಿದ ಮೂರು ಪ್ರಭೇದಗಳು ಬಹು ಸಾಮಾನ್ಯ. ಇವು– 1. ರಾನ ಹೆಕ್ಸಡ್ಯಾಕ್ಟೈಲ (ಹಸಿರುಕಪ್ಪೆ)– ಇದರ ಹಿಂಗಾಲುಗಳಲ್ಲಿ ಅಂಕುರಾವಸ್ಥೆಯಲ್ಲಿರುವ ಆರನೆಯ ಬೆರಳಿರುವುದು ಇದರ ವೈಶಿಷ್ಟ್ಯ. 2.ರಾನ ಟೈಗ್ರಿನ (ಗೂಳಿಗಪ್ಪೆ), 3.ರಾನ ಸ್ಯಯಾನೋಫ್ಲಿಕ್ಟಿಸ್ (ಬಿಳಿಯ ಕಪ್ಪೆ). ಇವುಗಳಲ್ಲಿ ಮೊದಲೆರಡು ಪ್ರಭೇದಗಳು ಆರ್ಥಿಕ ದೃಷ್ಟಿಯಿಂದ ಮುಖ್ಯವಾದುವು. ಇವುಗಳ ಹಿಂಗಾಲುಗಳು ಪಾಶ್ಚಾತ್ಯ ದೇಶಗಳಲ್ಲಿ ರುಚಿಕರ ಹಾಗೂ ಪ್ರಿಯವಾದ ಭಕ್ಷ್ಯವೆನಿಸಿದೆ. ಇವುಗಳ ರಫ್ತಿನಿಂದ ಭಾರತಕ್ಕೆ ಆವಶ್ಯಕವಾದ ವಿದೇಶೀ ವಿನಿಮಯದ ಗಳಿಕೆಯಾಗುತ್ತಿದೆ. ಬಿಳಿಯ ಕಪ್ಪೆಯನ್ನು ಪ್ರಾಯೋಗಿಕ ಪ್ರಾಣಿಯಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಲವಾರು ವರ್ಷಗಳಿಂದ ಬಳಸುತ್ತಿದ್ದಾರೆ. ರಾನ ಜಾತಿಯಲ್ಲದೆ ಬ್ಯೂಫೊ ಮೆಲನೋಸ್ಟಿಕ್ಟಸ್ ಎಂಬ ನೆಲಗಪ್ಪೆಯೂ ಯೂಪೆರೊಡಾನ್ ಸಿಸ್ಟೆಮ ಎಂಬ ಮರಳುಗಪ್ಪೆಯೂ ರಾಮನೆಲ್ಲ ಮೈಕ್ರೋಹೈಲ ಎಂಬ ಕಪ್ಪೆಯೂ ದಕ್ಷಿಣ ಭಾರತದಲ್ಲಿ ಹೇರಳವಾಗಿ ಕಾಣಬರುತ್ತವೆ. ಇವಲ್ಲದೆ ಯುರೋಪಿನಲ್ಲಿ ವಾಸಿಸುವ ಅಗ್ನಿಉದರದ ನೆಲಗಪ್ಪೆ (**ನೋಡಿ– ಅಗ್ನಿ–ಉದರದ–ನೆಲಗಪ್ಪೆ**) (ಫೈರ್‌ಬೆಲ್ಲೀಡ್ ಟೋಡ್) ಗಯಾನದಲ್ಲಿರುವ ಪೈಪ ಪೈಪ ಎಂಬ ಕಪ್ಪೆ, ಬೋರ್ನಿಯೊ ಮತ್ತು ಮಲಯಗಳಲ್ಲಿ ದೊರಕುವ ರ್‍ಯಾಕೊಫೋರಸ್ ಜಾತಿಯ ಹಾರುಗಪ್ಪೆ–ಇವು ಇನ್ನಿತರ ಮುಖ್ಯ ಬೆಯ ಕಪ್ಪೆಗಳು (**ನೋಡಿ– ದ್ವಿಚರಿಗಳು–ಉಭಯವಾಸಿಗಳು**). (ಎಚ್.ಎಸ್.ಎಸ್.)

**ಕಪ್ಪೆಚಿಪ್ಪುಹುಳು :** ಸಿಹಿ ನೀರಿನಲ್ಲಿ ವಾಸಿಸುವ ಎರಡು ಚಿಪ್ಪು ಹೋಳುಗಳ ಕವಚವನ್ನುಳ್ಳ ಒಂದು ಮೃದ್ವಂಗಿ (ಫ್ರೆಷ್ ವಾಟರ್ ಮಸಲ್). ಇದು ಲ್ಯಾಮೆಲ್ಲಿಬ್ರಾಂಕಿಯ ಅಥವಾ ಪೆಲಿಸಿಪೋಡ ವರ್ಗಕ್ಕೂ ಯೂಲ್ಯಾಮೆಲ್ಲಿ ಬ್ರಾಂಕಿಯ ಗಣದ ಯೂನಿಯೋನಿಡೀ ಕುಟುಂಬಕ್ಕೂ ಸೇರಿದೆ. ಈ ಕುಟುಂಬದಲ್ಲಿ 85 ಜಾತಿಗಳೂ 750 ಪ್ರಭೇದಗಳೂ ಇವೆ. ಮುತ್ತಿನಂತೆ ಮಿರುಗುವ ಚಿಪ್ಪಿನ ಒಳಮೈ, ಸಮಪ್ರಮಾಣದಲ್ಲಿ ಸ್ಫುಟಗೊಂಡ ಸ್ನಾಯು ಕಲೆಗಟ್ಟುಗಳು, ಸುಸ್ಪಷ್ಟವಾದ ಒಂದು ಮ್ಯಾಂಟಲ್ ರೇಖೆ, ಪುಟ್ಟ ಜಲನಾಲೆಗಳು ಮತ್ತು ಮರಳನ್ನು ತೋಡಲು ನೆರವಾಗುವ ಪುಷ್ಟವಾಗಿ ಬೆಳೆದ ಕೈಗೊಡಲಿ ರೂಪದ ಪಾದ–

ಇವು ಈ ಕುಟುಂಬದ ವಿಶೇಷ ಲಕ್ಷಣಗಳು. ಯೂನಿಯೊ, ಅನೊಡಾಂಟ, ಕ್ವಾಡ್ರುಲ, ಲಾಂಪ್ಸಿಲಿಸ್, ಲಾಮೆಲ್ಲಿಡೆನ್ಸ್ ಮುಂತಾದ ಜಾತಿಗಳು ಮುಖ್ಯವಾದುವು. ಇವು ಸಾಧಾರಣವಾಗಿ ದೊಡ್ಡ ಕೆರೆ ಕೊಳಗಳಲ್ಲಿ ಹಾಗೂ ಶಾಂತವಾಗಿ ನೀರು ಹರಿಯುವ ನದಿ ತೊರೆಗಳ ತಳಭಾಗದ ಮೃದುವಾದ ಮಣ್ಣಿನಲ್ಲಿ ಬಿಲ ಮಾಡಿಕೊಂಡು ವಾಸಿಸುತ್ತವೆ. ಇವುಗಳ ದೇಹದ ಸ್ವಲ್ಪ ಭಾಗ ಮಾತ್ರ ಮಣ್ಣಿನ ಮೇಲ್ಭಾಗದಲ್ಲಿರುತ್ತದೆ. ಪ್ರಾಣಿ ಸತ್ತಮೇಲೆ ಚಿಪ್ಪು ಹೋಳುಗಳ ಮಧ್ಯೆ ಇರುವ ಮೃದುದೇಹ ನಶಿಸಿ ಹೋದಮೇಲೆ ಚಿಪ್ಪಿನ ಹೋಳುಗಳು ಅಲೆಗಳ ಹೊಡೆತಕ್ಕೆ ಸಿಕ್ಕಿ ನದಿ ಅಥವಾ ಕೆರೆ ದಂಡೆಗಳಲ್ಲಿ ಬಂದು ಬೀಳುತ್ತವೆ. ಒಮ್ಮೊಮ್ಮೆ ಈ ಚಿಪ್ಪುಗಳ ಮೇಲೆ ಅಥವಾ ಅವುಗಳ ಬಳಿ ಸಣ್ಣ ಸಣ್ಣ ಕಪ್ಪೆಗಳು ಕಂಡು ಬರುವುದರಿಂದ ಈ ಚಿಪ್ಪು ಪ್ರಾಣಿಗಳಿಗೆ ಕನ್ನಡದಲ್ಲಿ ಕಪ್ಪೆಚಿಪ್ಪು ಹುಳು ಎಂದು ಹೆಸರು ಬಂದಿರಬೇಕು.



**ಚಿತ್ರ 1. ಕಪ್ಪೆಚುಪ್ಪು ಹುಳುವಿನ ಸಾಮಾನ್ಯ ನೋಟ : 1. ಆವಾಹಿದ್ವಾರ, 2. ಅಪವಾಹಿದ್ವಾರ, 3. ಪಾದ**

ಕಪ್ಪೆಚಿಪ್ಪು ಹುಳುವಿನ ದೇಹ ಮೃದುವಾಗಿದೆ. ಇದನ್ನು ಚಿಪ್ಪಿನ ಹೋಳುಗಳನ್ನು ಬಿಚ್ಚಿ ನೋಡಬಹುದು. ದೇಹದಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು. 1. ಒಳ ಅಂಗಗಳನ್ನೊಳಗೊಂಡ ಮುದ್ದೆ ಅಥವಾ ವಿಸರಲ್ ಮಾಸ್, 2. ಅದರ ತಳಭಾಗದಿಂದ ಇಳಿಬಿದ್ದು ಮುಂದೆ ಚಾಚಿರುವ ಕೈಗೊಡಲಿ ರೂಪದ ಸ್ನಾಯುಮಯಪಾದ, 3.ದೇಹದ ಇಕ್ಕೆಡೆಗಳಲ್ಲಿ ವಿಸರಲ್ ಮಾಸನ್ನು ಆವರಿಸಿ ಇಳಿಬಿದ್ದಿರುವ ಎರಡು ತೆಳುವಾದ ಮ್ಯಾಂಟಲ್‌ಗಳು–ಇವೇ ಆ ಮೂರು ಭಾಗಗಳು. ಇದರಲ್ಲಿ ಇತರ ಮೃದ್ವಂಗಿಗಳಲ್ಲಿರುವಂತೆ ಸ್ಪಷ್ಟವಾದ ತಲೆ ಇಲ್ಲ. ದೇಹ ದ್ವಿಪಾರ್ಶ್ವ ಸೌಷ್ಟವ ಉಳ್ಳದ್ದು. ದೇಹವನ್ನು ಹಾಯ್ದುಹೋಗುವ ಎರಡು ಅಭಿವರ್ತನಿ ಸ್ನಾಯುಗಳು ಚಿಪ್ಪು ಹೋಳುಗಳನ್ನು ಬಂಧಿಸುತ್ತವೆ. ಇವುಗಳಿಗೆ ಅಗ್ರ ಅಭಿವರ್ತನಿಸ್ನಾಯು ಮತ್ತು ಪಶ್ಚ ಅಭಿವರ್ತನಿ ಸ್ನಾಯು ಎಂದು ಹೆಸರು. ಈ ಪ್ರಾಣಿಯ ಬಾಯಿ ಅಗ್ರ ಅಭಿವರ್ತನಿ ಸ್ನಾಯುವಿನ ತಳಭಾಗದಲ್ಲಿ ಇದೆ. ಬಾಯಿಯ ಎಡಬಲದಲ್ಲಿ ಎರಡೆರಡು ತ್ರಿಕೋನಾಕಾರದ ಜೋಲು ತುಟಿಗಳಿವೆ (ಲೇಬಿಯಲ್ ಪ್ಯಾಲ್ಪ್ಸ್), ಮ್ಯಾಂಟಲ್ ಪಾಲಿಗಳ ನಡುವಣ ಪ್ರದೇಶಕ್ಕೆ ಮ್ಯಾಂಟಲ್ ಕುಹರ (ಮ್ಯಾಂಟಲ್ ಕ್ಯಾವಿಟಿ) ಎಂದು ಹೆಸರು. ಈ ಮ್ಯಾಂಟಲ್ ಕುಹರದಲ್ಲಿ ಪಾದ, ಶ್ವಸನಾಂಗ ವಿಸರ್ಜನಾಂಗಗಳು ಮತ್ತು ಜನನಾಂಗಗಳ ದ್ವಾರಗಳು ಇವೆಲ್ಲ ಇವೆ. ಮ್ಯಾಂಟಲ್ ಪಾಲಿಗಳು ದೇಹದ ಪಶ್ಚಭಾಗದಲ್ಲಿ ಪರಸ್ಪರ ಕೂಡಿಕೊಂಡಿವೆ. ಆ ಭಾಗದಲ್ಲಿ ಎರಡು ದ್ವಾರಗಳಿವೆ. ಒಂದು ಬೆನ್ನುಭಾಗದ ಅಪವಾಹಿ ದ್ವಾರ (ಎಕ್ಸ್ಹೇಲೆಂಟ್ ಸೈಫನ್) ಮತ್ತು ಎರಡನೆಯದು ಉದರಭಾಗದ ಅವಾಹಿ ದ್ವಾರ (ಇನ್ಹೇಲೆಂಟ್ ಸೈಫನ್).

ಶ್ವಸನಾಂಗಗಳಾದ ಕಿವಿರು(ಗಿಲ್ಸ್) ಮತ್ತು ಓಷ್ಠದ ಪ್ಯಾಲ್ಪುಗಳ ಮೇಲೆ ಲೋಮಾಂಗಗಳಿರುತ್ತವೆ (ಸಿಲಿಯ). ಇವುಗಳ ಚಲನೆಯ ಫಲವಾಗಿ ಮ್ಯಾಂಟಲಿನಲ್ಲಿರುವ ನೀರು ಪ್ರವಾಹದಂತೆ ಚಲಿಸಲಾರಂಭಿಸುತ್ತದೆ. ಕಿವಿರಿನ ಮೇಲೆಲ್ಲ ಅಸಂಖ್ಯಾತ ಸೂಕ್ಷ್ಮತಮವಾದ ರಂಧ್ರಗಳಿವೆ. ಆವಾಹಿದ್ವಾರದಿಂದ ಮ್ಯಾಂಟಲ್ ಕುಹರವನ್ನು ಪ್ರವೇಶಿಸಿದ ನೀರು ಕಿವಿರುಗಳ ರಂಧ್ರಗಳ ಮೂಲಕ ಹಾಯ್ದು, ನೀರ್ನಳಿಕೆಗಳ (ವಾಟರ್ ಟ್ಯೂಬ್) ಮೂಲಕ ಸಂಚರಿಸಿ ಅಧಿಕ್ಲೋಮ ಗೂಡನ್ನು (ಸೂಪ್ರಬ್ರಾಂಕಿಯಲ್ ಚೇಂಬರ್) ಹೊಕ್ಕು ಅಪವಾಹಿದ್ವಾರದ ಮೂಲಕ ಹೊರಬರುತ್ತದೆ. ಈ ಪ್ರಾಣಿಯ ಕಿವಿರುಗಳು ಶ್ವಸನ ಕಾರ್ಯದಲ್ಲಿ ನೆರವಾಗುವುದಲ್ಲದೆ, ಸೂಕ್ಷ್ಮ ಆಹಾರಜೀವಿಗಳನ್ನು ಒಳಗೊಂಡ ನೀರಿನ ಪ್ರವಾಹವನ್ನು ಬಾಯಿಯ ಕಡೆ ಸಾಗಿಸುವುದಕ್ಕೂ ಸಹಾಯ ಮಾಡುತ್ತವೆ ಮತ್ತು ಅವು ಕಾವಿನ ಗೂಡಾಗಿಯೂ (ಇಂಕ್ಯುಬೇಷನ್ ಚೇಂಬರ್) ವರ್ತಿಸುತ್ತವೆ. ಚಿಪ್ಪಿನ ಎರಡು ಹೋಳುಗಳು ಪೃಷ್ಠಭಾಗದಲ್ಲಿ ಒರಟು ಹಾಗೂ ಸ್ಥಿತಿಸ್ಥಾಪನಶಕ್ತಿಯುಳ್ಳ ಒಂದು ಅಸ್ಥಿರಜ್ಜುವಿನ (ಹಿಂಜ್ ಲಿಗಮೆಂಟ್) ಸಹಾಯದಿಂದ ಕೂಡಿಕೊಂಡಿರುತ್ತವೆ. ಹೀಗೆ ಕೂಡಿರುವ ಕ್ಷೇತ್ರಕ್ಕೆ ಕೀಲು ರೇಖೆ ಎಂದು ಹೆಸರು. ಈ ಅಸ್ಥಿರಜ್ಜುವಿನ ನೆರವಿನಿಂದ ಚಿಪ್ಪಿನ ಹೋಳುಗಳು ತಳಭಾಗದಲ್ಲಿ ಅಗಲಿಸಿ ಸಂದು ಬಿಟ್ಟುಕೊಳ್ಳುತ್ತವೆ. ಆದರೆ ಜೀವಂತ ಪ್ರಾಣಿಯಲ್ಲಿ ದೇಹದ ಅಗ್ರ ಮತ್ತು ಪಶ್ಚ ಅಭಿವರ್ತಿನಿ ಸ್ನಾಯುಗಳ ಸಂಕೋಚನದಿಂದ ಚಿಪ್ಪಿನ ಹೋಳುಗಳು ಮುಚ್ಚಿಕೊಂಡಿರುತ್ತವೆ. ಸ್ನಾಯುಗಳು ಸಡಿಲಿದಾಗ ಚಿಪ್ಪಿನ ಹೋಳುಗಳು ಬಾಯಿಬಿಟ್ಟುಕೊಳ್ಳುತ್ತವೆ. ಹೀಗೆ ಉಂಟಾದ ಸಂದುವಿನ ಮೂಲಕ ಪ್ರಾಣಿ ತನ್ನ ಪಾದವನ್ನು ಹೊರಚಾಚುತ್ತದೆ. ಕೀಲುರೇಖೆಯ ಸ್ಥಳದಲ್ಲಿ ಎರಡೂ ಹೋಳುಗಳ ಅಂಚಿನಲ್ಲಿ ಹಲ್ಲುಗಳಿದ್ದು ಒಂದು ಹೋಳಿನ ಹಲ್ಲುಗಳು ಮತ್ತೊಂದರ ಹಲ್ಲುಗಳ ನಡುವೆ ಇರುವ ತೆರವುಸ್ಥಳಗಳಲ್ಲಿ ಹೊಂದಿಕೊಳ್ಳುವಂಥ ಏರ್ಪಾಟು ಇದೆ. ಭ್ರೂಣಾವಸ್ಥೆಯಲ್ಲಿ ಚಿಪ್ಪಿನ ಕವಚ ಚಿಪ್ಪು ಗ್ರಂಥಿಯಿಂದ ಸ್ರವಿಸಲ್ಪಡುತ್ತದೆ. ಆದರೆ ದೊಡ್ಡದಾಗಿ ಬೆಳೆದಂತೆ ಮ್ಯಾಂಟಲಿನಲ್ಲಿರುವ ಗ್ರಂಥಿಗಳೂ ಕವಚದ ನಿರ್ಮಾಣಕಾರ್ಯದಲ್ಲಿ ಪಾಲುಗೊಳ್ಳುತ್ತವೆ. ಪ್ರಾಣಿ ಬೆಳೆದಂತೆಲ್ಲ ಚಿಪ್ಪಿನ ಗಾತ್ರ ದೊಡ್ಡದಾಗುತ್ತದೆ. ಮತ್ತು ಅದರ ಹೋಳುಗಳ ಹೊರಮೈ ಮೇಲೆ ಬೆಳವಣಿಗೆಯ ರೇಖೆಗಳು ಹೆಚ್ಚುತ್ತ ಹೋಗುತ್ತವೆ. ಈ ರೇಖೆಗಳು ಚಿಪ್ಪಿನ ಅಂಚಿಗೆ ಸಮಾನಾಂತರವಾಗಿವೆ. ಚಿಪ್ಪಿನ ಅತ್ಯಂತ ಹಳೆಯ ಭಾಗ ದಪ್ಪನಾಗಿದೆ. ಇದಕ್ಕೆ ಅಂಬೊ ಎಂದು ಹೆಸರು. ಇದು ಕೀಲುರೇಖೆಯ ಸಮೀಪದಲ್ಲಿದೆ.

ಚಿಪ್ಪಿನಲ್ಲಿ ಮೂರು ಪದರಗಳಿವೆ. ಇವು ತಮ್ಮ ರಚನೆಯಲ್ಲಿ ವೈವಿಧ್ಯ ತೋರುವುದಲ್ಲದೆ ಬೇರೆ ಬೇರೆ ರಾಸಾಯನಿಕ ವಸ್ತುಗಳಿಂದ ರಚಿತವಾಗಿದೆ. 1. ಪೆರಿಆಸ್ಟ್ರಕಂ ವಸ್ತುವಿನಿಂದ ಕೂಡಿರುವ ಕಪ್ಪು ಮಿಶ್ರವಾದ ಕಂದು ಬಣ್ಣದ ಹೊರಪದರ. 2. ಮಧ್ಯದ ಪ್ರಿಸ್ಮಾಟಿಕ್ ಪದರ; ಇದರಲ್ಲಿ ಅಸಂಖ್ಯಾತ ಸುಣ್ಣದ ಹರಳುಗಳು ಕಾಂಕಿಯೋಲಿನ್ ಎಂಬ ವಸ್ತುವಿನಲ್ಲಿ ಹುದುಗಿರುತ್ತವೆ. 3. ನಾಕ್ರಿಯಸ್ ಪದರ. ಮೊದಲ ಎರಡು ಪದರಗಳು ಮ್ಯಾಂಟಲಿನ ಅಂಚುಗಳಿಂದ ಉತ್ಪಾದನೆಯಾದವು. ಇದರ ಫಲವಾಗಿ ಬೆಳವಣಿಗೆಯ ಸಮಾನ ಕೇಂದ್ರಿಯ ಗುರುತುಗಳನ್ನು ಚಿಪ್ಪಿನ ಮೇಲೆ ಕಾಣಬಹುದು. ಮೂರನೆಯ ಪದರ ಮ್ಯಾಂಟಲಿನ ಇಡೀ ಮೇಲ್ಮೈಯಿಂದ ರಚಿತವಾದ್ದು. ಈ ಪದರಕ್ಕೂ ಮತ್ತು ಮ್ಯಾಂಟಲಿನ ಹೊರಪದರಕ್ಕೂ ನಡುವೆ ಯಾವುದಾದರೊಂದು ಪರಕೀಯ ವಸ್ತು ಅಥವಾ ಪರತಂತ್ರ ಜೀವಿ ಪ್ರವೇಶಿಸಿದರೆ ಅದರ ಸುತ್ತಲೂ ಸುಣ್ಣದ ಪದರಗಳು ಬೆಳೆದು ಅದನ್ನು ಆವರಿಸುತ್ತವೆ. ಮುತ್ತಿನ ಚಿಪ್ಪಿನ ಹುಳುವಿನಲ್ಲಿ ಮುತ್ತು ನಿರ್ಮಾಣವಾಗುವುದು ಈ ವಿಧಾನದಿಂದಲೇ.



**ಚಿತ್ರ 2. ಗ್ಲಾಕಿಡಿಯಂ ಡಿಂಭ : 1. ಚಿಪ್ಪು, 2. ಬೈಸಸ್ ದಾರ, 3. ಕೊಕ್ಕೆ**

ಕಪ್ಪೆಚಿಪ್ಪು ಹುಳುವಿನ ಬೆಳವಣಿಗೆಯ ಕ್ರಮ ಮೃದ್ವಂಗಿಗಳಲೆಲ್ಲ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಗಂಡು ಮತ್ತು ಹೆಣ್ಣುಗಳಲ್ಲಿ ಭೇದವಿದ್ದರೂ ಈ ಭೇದಗಳನ್ನು ಹೊರನೋಟದಲ್ಲಿ ಗುರುತಿಸುವುದು ಕಷ್ಟ. ಹೆಣ್ಣಿನ ಅಂಡಾಶಯದಿಂದ ಪರಿಪಕ್ವವಾದ ಅಂಡಾಣುಗಳು ಹೊರಬಂದು ಕಿವಿರುಗಳ ಜಲನಳಿಕೆಗಳಲ್ಲಿ ಬೀಳುತ್ತವೆ. ಗಂಡಿನ ವೀರ್ಯಾಣುಗಳು ಮ್ಯಾಂಟಲ್ ಕುಹರವನ್ನು ಹೊಕ್ಕು ಕಿವಿರುಗಳ ಮೇಲಿರುವ ರಂಧ್ರಗಳ ಮೂಲಕ ಸಾಗಿ ಕಿವಿರುಗಳ ಒಳಾಂಗಣದಲ್ಲಿರುವ ಅಂಡಾಣುಗಳನ್ನು ಗರ್ಭಾಂಕುರ ಗೊಳಿಸುತ್ತವೆ. ಗರ್ಭಧರಿಸಿದ ಅಂಡಾಣುಗಳು ನೀರು ನಳಿಕೆಗಳಲ್ಲಿ ಬೆಳೆಯಲಾರಂಭಿಸುತ್ತವೆ. ಕೆಲ ದಿನಗಳಲ್ಲಿಯೇ ಅಂಡಾಣು ಕವಚಗಳಿಂದ ಸಣ್ಣ ಸಣ್ಣ ಗ್ಲಾಕಿಡಿಯಂ ಡಿಂಭಗಳು ಹೊರಬರುತ್ತವೆ. ಕೆಲಕಾಲದ ನಂತರ ಇವು ತಾಯಿ ದೇಹದ ಅಪವಾಹಿದ್ವಾರದ ಮೂಲಕ ಹೊರ ಬಂದು ಸ್ವತಂತ್ರ ಜೀವನವನ್ನು ಸಾಗಿಸುತ್ತವೆ. ಈ ಡಿಂಭಕ್ಕೆ ಎರಡು ತ್ರಿಕೋನಾಕಾರದ ತೆಳುವಾದ ಚಿಪ್ಪಿನ ಪಾಲಿಗಳಿವೆ. ಪ್ರತಿ ಚಿಪ್ಪಿನ ಪಾಲಿಯ ಬಿಡುವಾದ ಅಂಚಿನಲ್ಲಿ ಒಳಕ್ಕೆ ಬಾಗಿದ ಮುಳ್ಳಿನಂತಿರುವ ಒಂದು ಹಲ್ಲು ಇದೆ. ಇದರ ಮ್ಯಾಂಟಲ್ ಪಾಲಿಗಳು ಬಹು ಚಿಕ್ಕವು ಮತ್ತು ಅವುಗಳ ಅಂಚಿನಲ್ಲಿ ಮೂರು ಅಥವಾ ನಾಲ್ಕು ಗ್ರಂಥೀಯ ಜೀವಕೋಶಗಳಿವೆ. ಇವುಗಳ ಸ್ರಾವದಿಂದ ಒಂದು ಉದ್ದವಾದ ತಾತ್ಕಾಲಿಕ ಬೈಸಸ್ ಎಂಬ ದಾರ ರೂಪುಗೊಂಡು ಹೊರಚಾಚಿರುತ್ತದೆ. ಮ್ಯಾಂಟಲ್ ಪಾಲಿಗಳ ಒಳಮೈ ಮೇಲೆ ವಿಚಿತ್ರವಾದ ಕುಂಚದಂಥ ಜ್ಞಾನೇಂದ್ರಿಯಗಳಿವೆ. ಈ ಗ್ಲಾಕಿಡಿಯಂ ಡಿಂಭಗಳು ನೀರಿನ ತಳಭಾಗಕ್ಕೆ ಇಳಿಯಬಹುದು

ಅಥವಾ ನೀರಿನ ಪ್ರವಾಹದ ಮೂಲಕ ಬೇರೆಡೆಗೆ ವಿತರಣೆಯಾಗಬಹುದು. ಕೆಲಕಾಲ ನೀರಿನಲ್ಲಿ ಈಜುತ್ತಿದ್ದಂತೆ ತಮ್ಮ ಸುತ್ತಮುತ್ತ ಈಜುವ ಮೀನುಗಳ ಕಿವಿರುಗಳಿಗೆ ತಮ್ಮ ಕೊಕ್ಕೆ ಮತ್ತು ಬೈಸಸ್ ದಾರದ ಸಹಾಯದಿಂದ ಅಂಟಿಕೊಂಡು ತಮ್ಮ ಸುತ್ತಲೂ ಮೀನಿನ ಅಂಗದ ಆವರಣವನ್ನು ಬೆಳೆಸಿಕೊಂಡು ಕಾಯ ಪರಿವರ್ತನೆಯನ್ನು ಹೊಂದುತ್ತವೆ. ಅಂದರೆ ಇವು ತಮ್ಮ ಎರಡನೆಯ ಡಿಂಭಾವಸ್ಥೆಯನ್ನು ಪರತಂತ್ರ ಜೀವನದಲ್ಲಿ ಕಳೆಯುತ್ತವೆ. ಈ ಜೀವನದಲ್ಲಿ ತಮಗೆ ಬೇಕಾದ ಪೌಷ್ಠಿಕಾಂಶವನ್ನು ತಮ್ಮ ಆತಿಥೇಯ ಮೀನಿನಿಂದ ಪಡೆಯುತ್ತವೆ. ಕಾಯ ಪರಿವರ್ತನೆಯ ಕಾಲದಲ್ಲಿ ಬೈಸಸ್ ದಾರ ಮತ್ತು ಜ್ಞಾನೇಂದ್ರಿಯಗಳು ನಶಿಸಿಹೋಗುತ್ತವೆ. ಬಾಯಿ, ಗುದ, ದೇಹದ ತಳಭಾಗದಲ್ಲಿ ಸ್ನಾಯುಮಯವಾದ ಪಾದ ಮತ್ತು ಕಿವಿರುಗಳು ರೂಪುಗೊಳ್ಳುತ್ತವೆ. ಅನಂತರ ಅವು ತಮ್ಮ ಪೋಷಕ ಜೀವಿಯ ದೇಹದಿಂದ ಹೊರಬಂದು ನೀರಿನಲ್ಲಿ ಇಳಿದು ತಳವನ್ನು ಸೇರಿ ಸ್ವತಂತ್ರ ಜೀವನವನ್ನು ಸಾಗಿಸುತ್ತ ಬೆಳೆಯಲಾರಂಭಿಸುತ್ತವೆ. ಯೂನಿಯೋ, ಕ್ವಾಡ್ರಾಲ ಜಾತಿಯ ಕಪ್ಪೆಚಿಪ್ಪು ಹುಳುಗಳು ಬೇಸಗೆಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಅನೊಡಾಂಟ, ಲ್ಯಾಂಪ್ಸಿಲಿಸ್ ಜಾತಿಯವು ಬೇಸಗೆಯ ಕೊನೆಯ ಭಾಗದಲ್ಲಿ ಸಂತಾನೋತ್ಪತ್ತಿ ಮಾಡಿ ತಮ್ಮ ಗ್ಲಾಕಿಡಿಯಂ ಡಿಂಭಗಳನ್ನು ಮುಂಬರುವ ವಸಂತ ಋತುವಿನವರೆಗೂ ತಮ್ಮ ದೇಹದಲ್ಲಿಯೇ ಇಟ್ಟುಕೊಳ್ಳುತ್ತವೆ.

ಉತ್ತರ ಅಮೆರಿಕದ ಒಹಾಯೊ ಮತ್ತು ಆಲಬಾಮ ನದಿ ಮಂಡಲಿಗಳಲ್ಲೂ ಯುರೋಪಿನ ಕೆಲದೇಶಗಳಲ್ಲೂ ಮುತ್ತಿನ ಗುಂಡಿಗಳಿಗಾಗಿ ಯೂನಿಯೋ ಜಾತಿಗೆ ಸೇರಿದ ಕಪ್ಪೆಚಿಪ್ಪು ಹುಳುಗಳನ್ನು ಬೆಳೆಸುವ ಉದ್ಯಮ ಬೆಳೆದಿತ್ತು. ಆದರೆ ಪ್ಲಾಸ್ಟಿಕ್ ಉದ್ಯಮ ಹೆಚ್ಚಾದಂತೆ ಈ ಮುತ್ತಿನ ಗುಂಡಿಗಳ ಬೇಡಿಕೆ ಕಡಿಮೆಯಾಗುತ್ತಾ ಬಂದಿದೆ. ಹಿಂದೆ ಮಾನವನಿಗೆ ಈ ಪ್ರಾಣಿಗಳು ಆಹಾರ ವಸ್ತುವಾದದ್ದುವೆಂದು ತೋರುತ್ತದೆ. ಕೆಲದೇಶಗಳಲ್ಲಿ ಈ ಪ್ರಾಣಿಗಳ ಚಿಪ್ಪು ಮತ್ತು ಮೃದುದೇಹದಿಂದ ಹಂದಿ ಮತ್ತು ಕೋಳಿಗಳ ಆಹಾರವನ್ನು ತಯಾರು ಮಾಡುತ್ತಾರೆ. (ಜಿ.ವಿ.ಎನ್.)

**ಕಪ್ಲಾನ್ ತಿರುಬಾನಿ :** ನೀರಿನ ಎತ್ತರ ಕಡಿಮೆ ಇರುವಾಗ ನೀರೆತ್ತಲು ಬಳಸುವ ಜಲಯಂತ್ರ (ಕಪ್ಲಾನ್ ಟರ್ಬೈನ್). ಇದರ ಚಕ್ರ ಹಡಗು ಇಲ್ಲವೇ ವಿಮಾನದ ಚಾಲಕಗಳ (ಪ್ರೊಪೆಲ್ಲರ್ಸ್) ಮಾದರಿಯಲ್ಲಿ ಇದೆ. ಇದರಲ್ಲಿ ಕಡಿಮೆ ಸಂಖ್ಯೆಯ–ಸಾಧಾರಣವಾಗಿ ನಾಲ್ಕರಿಂದ ಆರರವರೆಗೆ–ಅಲಗುಗಳಿವೆ. ಇವು ಚಲನೆಯಲ್ಲಿದ್ದಂತೆಯೇ ತಮ್ಮ ಅಕ್ಷದ ಮೇಲೆ ತಿರುಗಬಲ್ಲವು. ಆದ್ದರಿಂದ ಸಾಮರ್ಥ್ಯದ ಉತ್ಪನ್ನಕ್ಕೆ ಅನುಸಾರವಾಗಿ ಅಲಗುಗಳ ಕೋನಗಳನ್ನು ಬದಲಾಯಿಸುವುದು ಸಾಧ್ಯ. ಅಲಗುಗಳನ್ನು ತಿರುಗಿಸುವ ಯಂತ್ರ ಸಂವಿಧಾನ ಚಕ್ರದ ನಾಭಿಯೊಳಗೆ ಅಡಕವಾಗಿದೆ. ತಿರುಬಾನಿಯ ನಿಯಾಮಕವು ಸರ್ವೋ ಮೋಟಾರಿನ ಮೂಲಕ ಈ ಯಂತ್ರಭಾಗವನ್ನು ನಿಯಂತ್ರಿಸುವುದು. ಇಂಥ ಸ್ವಯಂಚಾಲಿತ ಯಂತ್ರವ್ಯವಸ್ಥೆ ಇರುವುದರಿಂದ ತಿರುಬಾನಿ ಉತ್ಪಾದಿಸುತ್ತಿರುವ ಸಾಮರ್ಥ್ಯ ಎಷ್ಟೇ ಆಗಿರಲಿ ಅದರ ಕಾರ್ಯ ಕ್ಷಮತೆ ಹೆಚ್ಚು ಕಡಿಮೆ ಏಕಪ್ರಕಾರವಾಗಿರುತ್ತದೆ. ನೀರಿನ ಎತ್ತರ 9'–50' ಗಳಿರುವ ಕಡೆಗಳಲ್ಲಿ ಕಪ್ಲಾನ್ ತಿರುಬಾನಿಯನ್ನು ಉಪಯೋಗಿಸಬಹುದು. 25' ವ್ಯಾಸದ ಚಕ್ರ ಇರುವ 7,000 ಅಶ್ವಸಾಮರ್ಥ್ಯವನ್ನು ಉತ್ಪನ್ನ ಮಾಡುವ ಯಂತ್ರಗಳು ಉಪಯೋಗದಲ್ಲಿವೆ. ಕಪ್ಲಾನ್ ತಿರುಬಾನಿಗಳ ಕಾರ್ಯಕ್ಷಮತೆಯ ಗರಿಷ್ಠ ಪ್ರಮಾಣ ಶೇ. 90 ಕ್ಕಿಂತಲೂ ಹೆಚ್ಚು. (ಬಿ.ಪಿ.ಜಿ.)

**ಕಫಾ[1] : ನೋಡಿ–ತ್ರಿದೋಷಗಳು**

**ಕಫಾ[2] :** ಇಥಿಯೋಪಿಯದ ನೈರುತ್ಯದಲ್ಲಿರುವ ಒಂದು ಪ್ರಾಂತ್ಯ. ಆ ರಾಜ್ಯದ ದಕ್ಷಿಣದಲ್ಲಿ, ಸಮುದ್ರದಿಂದ ಬಲುದೂರ, ರೂಡಾಲ್ಫ್ ಸರೋವರದ ಉತ್ತರದಂಚಿನವರೆಗೆ ಹಬ್ಬಿದೆ. ನಡುನಡುವೆ ಕೊಚ್ಚಿದಂತಿರುವ ಪ್ರಸ್ಥಭೂಮಿಯಿಂದ ಆವೃತವಾದ ಈ ಪ್ರದೇಶದ ಸರಾಸರಿ ಎತ್ತರ 1,818 ಮೀ. ಕೆಲವು ಪರ್ವತ ಶಿಖರಗಳು 3030 ಮೀಗಳಿಗಿಂತಲೂ ಎತ್ತರವಾಗಿವೆ.

ಇದರ ಪೂರ್ವದ ಗಡಿಯಾಗಿ ಹರಿಯುವ ಓಮೋ ನದಿಗೆ ಅಲ್ಲಲ್ಲಿ ಜಲಪಾತಗಳಿರುವುದರಿಂದ ಅದು ನೌಕಾಸಂಚಾರಯೋಗ್ಯವಾಗಿಲ್ಲ. ವಿದ್ಯುದುತ್ಪಾದನೆಯ ಸಾಧ್ಯತೆಗಳನ್ನು ಬಳಸಿಕೊಂಡಿಲ್ಲ.

ಉತ್ತರ ಅಕ್ಷಾಂಶ $5^0$ ಯಿಂದ ಉತ್ತರಕ್ಕಿರುವ ಈ ಪ್ರಾಂತ್ಯದ ವಾಯುಗುಣ ತಂಪಾಗಿದೆ. ಇದರ ಮಧ್ಯಂತರ ಉಷ್ಣತೆ $15.5^0$ ಸೆ. $26.6^0$ ಸೆ. ಅತ್ಯಂತ ಎತ್ತರದ ಪ್ರದೇಶಗಳಲ್ಲಿ ಹಿಮ ಬೀಳುವುದೂ ಉಂಟು. ಉತ್ತರಕ್ಕಿಂತ ದಕ್ಷಿಣದ ಕಡೆಗೆ ಮಳೆ ಕಡಿಮೆ. ನೆಲವೂ ತಗ್ಗು.

ಕಾಫಿ ಇಲ್ಲಿಯ ಮುಖ್ಯ ಉತ್ಪನ್ನ. ಇದು ಇಲ್ಲಿ ಬಹುತೇಕ ಕಾಡು ಸಸ್ಯ. ನೈರುತ್ಯ ಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಕಾಫಿ ಎಂಬ ಹೆಸರು ಬಂದದ್ದೇ ಕಫಾದಿಂದ ಎಂಬುದಾಗಿ ಕೆಲವರು ಭಾವಿಸುತ್ತಾರೆ. ಉಷ್ಣವಲಯದ ಗಟ್ಟಿ ಮತ್ತು ಮೆದುಮರಗಳು ಇತರ ಅರಣ್ಯೋತ್ಪನ್ನಗಳು. ಬತ್ತ, ಬಾರ್ಲಿ, ಎಣ್ಣೆಬೀಜ ಮತ್ತು ಜೋಳ ಮುಖ್ಯ ಬೆಳೆಗಳು. ಪ್ರಸ್ಥಭೂಮಿ ಪ್ರದೇಶದಲ್ಲಿ ಕುದುರೆ ಮತ್ತು ಕುರಿಗಳನ್ನು ಸಾಕುತ್ತಾರೆ. ಚಿನ್ನವೇ ಮುಂತಾದ ಖನಿಜಗಳಿರುವುವಾದರೂ ಅವನ್ನು ಹೆಚ್ಚಾಗಿ ತೆಗೆಯುತ್ತಿಲ್ಲ.

ಜಿಮ್ಮ ಮುಖ್ಯಪಟ್ಟಣ, ವಾಣಿಜ್ಯಕೇಂದ್ರ. ಇಲ್ಲಿಂದ ಆಡಿಸ್ ಅಬಬಕ್ಕೆ ರಸ್ತೆ ಮತ್ತು ವಿಮಾನ ಸಂಪರ್ಕಗಳಿವೆ. ಈ ಪ್ರಾಂತ್ಯದ ಮತ್ತು ನೆರೆಯ ಪ್ರಾಂತ್ಯಗಳ ಪಟ್ಟಣಗಳೊಂದಿಗೂ ವಿಮಾನ ಸಂಪರ್ಕವುಂಟು.

ಈ ಪ್ರಾಂತ್ಯದ ವಿಸ್ತೀರ್ಣ 49210 ಕಿಮೀ. ಇದರ ಈಗಿನ ಹೆಸರು ಥಿಯಾಡೋಸಿಯ.

16ನೆಯ ಶತಮಾನದಲ್ಲಿ ಈ ಪ್ರದೇಶವನ್ನು ಮುಸ್ಲಿಮರು ಆಕ್ರಮಿಸಿಕೊಂಡರು. ಇಲ್ಲಿದ್ದ ಅನೇಕರು ಮುಸ್ಲಿಮರಾದರು. ಕಫಾ ರಾಜ್ಯವನ್ನು ಮೊದಲು ಒಬ್ಬ ನಿರಂಕುಶ ದೊರೆ ಆಳುತ್ತಿದ್ದ. ಇದರ ಸುತ್ತಲೂ, ನಿಸರ್ಗ ಸಹಜವಾದ ಪ್ರತಿಬಂಧಕಗಳಿಲ್ಲದಲ್ಲಿ, ಕಂದಕಗಳನ್ನೂ ಕಾಪುಗೋಡೆಗಳನ್ನೂ ನಿರ್ಮಿಸಲಾಗಿತ್ತು. 1897–99ರಲ್ಲಿ ಈ ಪ್ರಾಂತ್ಯವನ್ನು ಎರಡನೆಯ ಮೆನೆಲಿಕ್ ಜಯಿಸಿ ಇಥಿಯೋಪಿಯನ್ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡ. ಮುಖ್ಯ ಕೇಂದ್ರಗಳ ಜನ ಕ್ರೈಸ್ತಧರ್ಮೀಯರಾದರು. ಆದರೂ ಬಹಳ ಕಾಲ ಇಲ್ಲಿಯ ಜನರನ್ನು ಗುಲಾಮರಂತೆ ಹೊರಕ್ಕೆ ಸಾಗಿಸಿ ಮಾರಾಟ ಮಾಡಲಾಗುತ್ತಿತ್ತು. (ಕೆ.ಆರ್.ಆರ್.)

**ಕಬಂಧ :** ರಾಮನಿಂದ ಹತರಾದ ರಾಕ್ಷಸರಲ್ಲಿ ಒಬ್ಬ. ಕುವೆಂಪು ಅವರು ಈತನನ್ನು ಅಕಶೇರು ಕಶ್ಮಲ ಸರೀಸೃಪ–ಎಂದು ಬಣ್ಣಿಸಿದ್ದಾರೆ. ಶ್ರೀರಾಮ ಸುವರ್ಣಮೃಗ ರೂಪವನ್ನು ಧರಿಸಿದ ಮಾರೀಚನನ್ನು ಕೊಂದು ಹಿಂತಿರುಗಿ ಸೀತಾಶೂನ್ಯವಾದ ಆಶ್ರಮವನ್ನು ಕಂಡು, ನೊಂದು, ಸೀತೆಯನ್ನು ಹುಡುಕುತ್ತ ಮುಂದೆ ಸಾಗುತ್ತಿರಲಾಗಿ ದಂಡಕಾರಣ್ಯದ ದಕ್ಷಿಣ ಭಾಗದಲ್ಲಿ ಮೇಘಾಕೃತಿಯ ಮಹಾಪರ್ವತದಂತೆಯೂ ಸಾಲವೃಕ್ಷದಂತೆ ಹೆಗಲುಳ್ಳವನಾಗಿಯೂ ದೊಡ್ಡದಾದ ಭುಜಗಳುಳ್ಳವನಾಗಿಯೂ ಎದೆಯ ಭಾಗದಲ್ಲಿ ವಿಸ್ತಾರವಾದ ಕಣ್ಣುಳ್ಳವನಾಗಿಯೂ ಇದ್ದ, ಬೃಹದಾಕಾರವಾದ ಹೊಟ್ಟೆಯೆಂಬ ಮುಖವುಳ್ಳ, ಘೋರಾಕೃತಿಯ ಪುರುಷನೊಬ್ಬನನ್ನು ಕಂಡ. ಕೂಡಲೆ ರಾಮ ಅವನ ಎಡಭುಜವನ್ನೂ ಲಕ್ಷ್ಮಣ ಬಲಭುಜವನ್ನೂ ಕತ್ತರಿಸಿದರು. ಕಬಂಧ ಅಸು ನೀಗಿದ. ಒಡನೆಯೆ ಅವನ ದೇಹದಿಂದ ದಿವ್ಯಾಕೃತಿಯ ಪುರುಷನೊಬ್ಬ ಹೊರಬಂದು ಅಂತರಿಕ್ಷದಲ್ಲಿ ಸೂರ್ಯನಂತೆ ಜ್ವಲಿಸುತ್ತ ನಿಂತು, ಹಿಂದೆ ವಿಶ್ವಾವಸುವೆಂಬ ಗಂಧರ್ವನಾದ ತನಗೆ ಬ್ರಾಹ್ಮಣಶಾಪದಿಂದ ರಾಕ್ಷಸ ಸ್ವರೂಪ ಬಂದುದನ್ನೂ ರಾಮಾದಿಗಳಿಂದ ಶಾಪವಿಮೋಚನೆಯಾದುದನ್ನೂ ತಿಳಿಸಿ, ರಾವಣ ಸೀತೆಯನ್ನು ಕದ್ದೊಯ್ದು ಲಂಕಾಪುರಿಯಲ್ಲಿ ಇಟ್ಟಿರುವನೆಂದೂ ಸಮಾನ ವ್ಯಸನಿಯಾದ ಸುಗ್ರೀವನಿಂದ ಸೀತಾಪ್ರಾಪ್ತಿಗೆ ಬೇಕಾದ ಅನುಕೂಲವೆಲ್ಲ ದೊರಕುವುದೆಂದೂ ತಿಳಿಸಿ ಅದೃಶ್ಯನಾದ. ಇದು ವಾಲ್ಮೀಕಿ ರಾಮಾಯಣದ ವಿವರ. (ಎಸ್.ಎಸ್.ಆರ್.ಬಿ.)

**ಕಬಿಂಡ :** ಕಾಂಗೋ ನದಿಮುಖದ ಭೂಮಿಯ ಉತ್ತರದಲ್ಲಿ ಆಫ್ರಿಕದ ಪಶ್ಚಿಮ ತೀರದಲ್ಲಿರುವ ಒಂದು ಪೋರ್ಚುಗೀಸ್ ವಸಾಹತು. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವೂ ಉಳಿದ ಕಡೆಗಳಲ್ಲಿ ಕಾಂಗೋ ಗಣರಾಜ್ಯವೂ ಇವೆ. ಕಬಿಂಡದ ಕರಾವಳಿಯ ಉದ್ದ 90 ಕಿಮೀ. ಈ ಪ್ರದೇಶದ ಗರಿಷ್ಠ ಅಗಲ 112 ಕಿಮೀ. ವಿಸ್ತೀರ್ಣ 7,279 ಕಿಮೀ. ಇವರಲ್ಲಿ 1,992 ಮಂದಿ ಐರೋಪ್ಯರೂ 634 ಮಿಶ್ರ ಜನಾಂಗದವರೂ ಇದ್ದಾರೆ. ಆಡಳಿತ ದೃಷ್ಟಿಯಿಂದ ಕಬಿಂಡ ಅಂಗೋಲದ ಒಂದು ಪ್ರಾಂತ್ಯ. ಕಾಂಗೋ ನದಿಯೂ ಕಾಂಗೋ ಗಣರಾಜ್ಯದ ಒಂದು ತುಣುಕೂ ಇದನ್ನು ಅಂಗೋಲದಿಂದ ಪ್ರತ್ಯೇಕಿಸಿವೆ. ಇದರಲ್ಲಿ ಕಬಿಂಡ, ಕಕಾಂಗೋ, ಮಯೊಂಬೆ ಎಂಬ ವಿಭಾಗಗಳಿವೆ. ಕಬಿಂಡದ ಜನ ಬಂಟು ನೀಗ್ರೋಗಳು. ಕಬಿಂಡರೆಂದೇ ಇವರನ್ನು ಕರೆಯುತ್ತಾರೆ. ಈ ಜನ ಬುದ್ಧಿವಂತರು, ಸಮರ್ಥರು, ಚತುರರು, ಕೆಚ್ಚಿನ ನಾವಿಕರೆಂದೂ ಒಳ್ಳೆಯ ವ್ಯಾಪಾರಿಗಳೆಂದೂ ಹೆಸರು ಗಳಿಸಿದ್ದಾರೆ. ಮಯೊಂಬೆ ಅರಣ್ಯ ಸಂಪತ್ಸಮೃದ್ಧವಾದದ್ದು. ಇದು ಪ್ರವಾಸಿಗಳ ಸ್ವರ್ಗ. ಸಾರಿಗೆಯದೇ ತೊಂದರೆ.

ಕಬಿಂಡದ ಮುಖ್ಯ ಉತ್ಪನ್ನಗಳು ಕಾಫಿ, ಕೋಕೋ, ತಾಳೆ ಎಣ್ಣೆ, ಮತ್ತು ತಿರುಳು ಮತ್ತು ಮರದ ದಿಮ್ಮಿ. ರಬ್ಬರ್ ಮತ್ತು ಹಣ್ಣುಗಳ ಉತ್ಪಾದನೆಗೂ ಹೆಚ್ಚು ಅನುಕೂಲವುಂಟು. ದಂತವೂ ಧಾರಾಳವಾಗಿ ದೊರಕುತ್ತದೆ. ಮಣ್ಣಿನಿಂದ ಚಿನ್ನ ತೆಗೆಯಲಾಗುತ್ತದೆ. ಇಲ್ಲಿಯ ಖನಿಜಸಂಪತ್ತಿನಲ್ಲಿ ಅಮೆರಿಕನ್ ಕಂಪನಿಗಳಿಗೆ ಬಹಳ ಆಸಕ್ತಿಯುಂಟು. 1957ರಲ್ಲಿ ಪೆಟ್ರೋಲ್ ತೆಗೆಯಲು ಒಪ್ಪಂದ ಮಾಡಿಕೊಳ್ಳಲಾಯಿತು. ಇಲ್ಲಿಯ ಮುಖ್ಯಪಟ್ಟಣ ಮತ್ತು ಬಂದರು ಕಬಿಂಡ–ಬಿಲಿ ಎಂಬ ಸಣ್ಣ ನದಿಯ ಬಲದಂಡೆಯ ಮೇಲಿದೆ. (ಬಿ.ಎಸ್.ಎಚ್.)

**ಕಬೀರದಾಸ :** 1440–1518. ಭರತ ವರ್ಷದ ಉತ್ತರ ಭಾಗಗಳಲ್ಲಿ, ಬಹಳವಾಗಿ ಪ್ರಚಾರಕ್ಕೆ ಬಂದ ಒಂದು ಧರ್ಮ ಪಂಥದ ಸ್ಥಾಪಕ. ಹುಟ್ಟಿದ್ದು ವಾರಾಣಸಿಯಲ್ಲಿ. ಅಲ್ಲಿಯ ಮುಸಲ್ಮಾನ ನೇಯ್ಗೆಕಾರ ಒಬ್ಬ ಊರಿಂದ ಕೆಲವು ಮೈಲಿಗಳ ದೂರದ ಲಹರ್ ತಲಾವ್ ಎಂಬ ಕೆರೆಯಲ್ಲಿ ತೇಲುತ್ತಿದ್ದ ಮಗುವೊಂದನ್ನು ಕಂಡು ಎತ್ತಿಕೊಂಡು ಮನೆಗೆ ತಂದನಂತೆ. ಅವನ ಹೆಂಡತಿ ಮಗುವನ್ನು ಸಾಕಿದಳು. ಅವರು ಅದಕ್ಕೆ ಕಬೀರ್ ಎಂದು

ಹೆಸರಿಟ್ಟರು. ಕಬೀರ್ ಎಂದರೆ ಅರಬ್ಬೀಭಾಷೆಯಲ್ಲಿ ಮಹಿಮಾನ್ವಿತ ಎಂದು ಅರ್ಥ. ಬೆಳೆಯುವ ದಿನದಲ್ಲಿ ಗೋಸಾಯಿ ಅಷ್ಟಾವಂದ್ ಎಂಬಾತನ ಪ್ರಭಾವದಿಂದ ಕಬೀರ್ ದೇವರನ್ನು ಹರಿ ಎಂದೂ ರಾಮ ಎಂದೂ ಕರೆದ. ಮುಸ್ಲಿಂ ಜನ ಇವನನ್ನು ಧರ್ಮಭ್ರಷ್ಟ ಎಂದು ದೂರಿದರು. ಧರ್ಮಭ್ರಷ್ಟ ನಾನಲ್ಲ, ಕೆಟ್ಟ ಬಾಳು ನಡೆಸುವ ಜನ ಧರ್ಮಭ್ರಷ್ಟರು ಎಂದು ಪ್ರತಿ ಹೇಳಿದ. ಜಾತಿಮುಖ್ಯವಲ್ಲ. ಗುಣ ಮುಖ್ಯ ಎಂಬ ನಂಬಿಕೆಯಲ್ಲಿ ನಡೆದು ಕಬೀರ್ ಜನರಲ್ಲಿ ಒಬ್ಬ ಪ್ರಮುಖನಾಗಿ ನಿಂತ. ಕಬೀರ್ ಒಮ್ಮೆ ಜನಿವಾರ ಹಾಕಿಕೊಂಡು ತಾನು ದ್ವಿಜನಾದೆ ಎಂದನಂತೆ. ಒಬ್ಬ ಬ್ರಾಹ್ಮಣ ಈ ನಡತೆಯನ್ನು ನಿಷೇಧಿಸಿದ. ಜನಿವಾರ ಹೃದಯದಲ್ಲಿ ದೇವರಿರುವುದರ ಗುರುತು. ನನ್ನ ಹೃದಯದಲ್ಲಿ ದೇವರಿದ್ದಾನೆ. ನಿನ್ನ ಹೃದಯದಲ್ಲಿಲ್ಲ. ಇದನ್ನು ಹಾಕಿಕೊಳ್ಳುವುದಕ್ಕೆ ನಿನಗಿಂತ ನನಗೆ ಹೆಚ್ಚು ಅಧಿಕಾರ–ಎಂದು ಕಬೀರ್ ಕೇಳಿದನಂತೆ. ದಿನ ಕಳೆದಂತೆ ಜನ ಇವನನ್ನು ಒಬ್ಬ ಸಂತನೆಂದು, ಗುರು

ಮಹಾತ್ಮಾ ಕಬೀರ್ ಚಲನಚಿತ್ರದಲ್ಲಿ ಎಂ.ವಿ. ಸುಬ್ಬಯ್ಯನಾಯ್ಡು – ಕಬೀರನ ಪಾತ್ರದಲ್ಲಿ

ಎಂದು ಒಪ್ಪಿಕೊಂಡರು. ಶುಷ್ಕ ಆಚಾರ, ಭಾವಹೀನ ಪೂಜನ ಇಂಥ ವ್ಯರ್ಥವರ್ತನವನ್ನು ಕಬೀರ್ ಖಂಡಿಸಿ, ನಿಷ್ಕಾಮಕರ್ಮದ ಉಪದೇಶಕನಾದ. ರಾಮಾನಂದನಲ್ಲಿಗೆ ಹೋಗಿ ಅವನನ್ನು ಗುರುವಾಗಿ ಸ್ವೀಕರಿಸಿದ. ದೇವರನ್ನು ರಾಮ ಎಂದು ರಹೀಮ್ ಎಂದು ಹೇಗೆ ಕರೆದರೂ ಸರಿಯೇ, ಭಕ್ತಿಯಿಂದ ಕರೆಯಿರಿ, ಎಂದು ಹೇಳಿ ಕಬೀರ್ ಆಚಾರವಂತ ಹಿಂದೂ ಆಚಾರವಂತ ಮುಸಲ್ಮಾನ ಇವರ ಎರಡು ಸಮುದಾಯವನ್ನೂ ಹಗೆ ಮಾಡಿಕೊಂಡ. ಆದರೆ ಇವನನ್ನು ಮೆಚ್ಚಿ ಅನೇಕ ಜನ ಇವನ ಅನುಯಾಯಿಗಳಾದರು. ತನ್ನ ಶುದ್ಧ ಜೀವನದಿಂದ ಕಬೀರ್ ಅನೇಕ ಸಿದ್ಧಿಗಳನ್ನು ಗಳಿಸಿದ. ಇವನ ಮಹಿಮೆಯನ್ನು ಕೇಳಿ ಬಾದಷಹ ಸಿಕಂದರ್ ಲೋದಿ ಇವನಿಗೆ ಹಣವನ್ನು, ನೆಲವನ್ನು ಕೊಡುವೆನೆಂದ. ಕಬೀರ್ ಅವನ್ನು ಸ್ವೀಕರಿಸಲಿಲ್ಲ. ಕಬೀರನನ್ನು ಕುರಿತು ಅನೇಕ ಪವಾಡ ಕಥೆಗಳಿವೆ. ಧರ್ಮವನ್ನು ಕುರಿತು ವಾದಿಸಲು ಬಂದ ಅನೇಕರನ್ನು ಕಬೀರ್ ಸೋಲಿಸಿದ. ಅದಕ್ಕೂ ಹೆಚ್ಚಿನ ಸಂಗತಿ ಇವನ ಹಗೆಗಳು ಇವನಿಗೆ ಒಡ್ಡಿದ ಪ್ರಲೋಭನ, ವಿಷಪರೀಕ್ಷೆಗಳಲ್ಲಿ ಇವನು ಸೋಲದೆ ನಿಂತದ್ದು. ವಾರಾಣಸಿ ಪುಣ್ಯಕ್ಷೇತ್ರ, ಅಲ್ಲಿ ಸತ್ತವರಿಗೆ ಮುಕ್ತಿ–ಎಂಬ ಮಾತಿನಲ್ಲಿ ಹುರುಳಿಲ್ಲ ಎಂದು ತೋರಿಸುವುದಕ್ಕೆ ಕಬೀರ್ ಇಲ್ಲಿ ಸತ್ತವರು ಕತ್ತೆಯಾಗಿ ಹುಟ್ಟುತ್ತಾರೆ ಎಂದು ಪ್ರತೀತಿ ಪಡೆದಿದ್ದ ಮಗಹರ ಎಂಬ ಸ್ಥಳದಲ್ಲಿ ನಿಂತು ಅಲ್ಲಿ ತೀರಿಕೊಂಡನಂತೆ. ಜನ ಮಹನೀಯರೆಂದು ಗಣಿಸಿರುವ ಇಂಥ ಇತರ ಹಿರಿಯರ ವಿಷಯದಲ್ಲಿ ಬೆಳೆದಿರುವಂತೆ ಇವನ ವಿಷಯದಲ್ಲೂ ಒಂದು ಕಥೆ ಬೆಳೆದಿದೆ. ಶಿಷ್ಯರಲ್ಲಿ ಹಿಂದೂಗಳಾದವರು ಇವನ ದೇಹವನ್ನು ಸುಡಬೇಕೆಂದೂ ಮುಸಲ್ಮಾನರು ಹೂಳಬೇಕೆಂದೂ ಅಪೇಕ್ಷಿಸಿದರು. ದೇಹ ಇವರಿಗೂ ಸಿಕ್ಕಲಿಲ್ಲ. ಅವರಿಗೂ ಸಿಕ್ಕಲಿಲ್ಲ. ಅದಕ್ಕೆ ಹೊದಿಸಿದ್ದ ಹಚ್ಚಡವನ್ನು ತೆಗೆದು ನೋಡಿದಾಗ ಅದರಡಿ ಒಂದಿಷ್ಟು ಹೂವಿನ ರಾಶಿ ಮಾತ್ರ ಇತ್ತು. ಶಿಷ್ಯವರ್ಗದವರು ಇದರ ಮೇಲೆ ಒಂದು ಮಂದಿರವನ್ನೂ ಒಂದು ಸಮಾಧಿಯನ್ನೂ ಅಕ್ಕಪಕ್ಕದಲ್ಲಿ ಕಟ್ಟಿದರು. ಮೃತನಾದ ಕಬೀರ್ ಆಮೇಲೆ ಮರಳಿ ಎದ್ದನೆಂದೂ ತನ್ನ ಅನಂತರ ಗುರುವಾಗಿರಲು ತಾನೇ ನೇಮಿಸಿದ ಧರ್ಮದಾಸನಿಗೆ ಇತರ ಕೆಲವು ಶಿಷ್ಯರಿಗೆ, ಕಂಡನೆಂತಲೂ ಇನ್ನೊಂದು ಕಥೆ ಹೇಳುತ್ತದೆ. ಹೀಗೆ ಕಂಡಾಗ ಅವನು ತನ್ನ ಪಂಥದ ಆಧಾರ ಸೂತ್ರಗಳೆಂದು 42 ಸಂಗತಿಗಳನ್ನು ಹೇಳಿ ಅನಂತರ ದಿವ್ಯವನ್ನು ಸೇರಿದನಂತೆ.

ಕಬೀರನ ಗೀತೆಗಳು ನೂರಾರು. ಕನ್ನಡ ದೇಶದಲ್ಲೂ ಭಕ್ತಜನರು ಭಜನೆಗಳಲ್ಲಿ ಇವನ ಗೀತಗಳನ್ನು ಹಾಡುತ್ತಾರೆ. ಕಹತ ಕಬೀರಾ ಸುನೋ ಭೈ ಸಾಧು–ಎಂಬ ಕೊನೆಯ ಪಲ್ಲವಿಯನ್ನುಳ್ಳ ಹಲವು ಹಾಡುಗಳು ನಮಗೆಲ್ಲ ಪರಿಚಿತವಾಗಿವೆ. ಬೆತ್ತಲೆ ನಡೆದಾಡಿ ಸಾಯುಜ್ಯ ಪಡೆಯುವುದಾದರೆ ಅರಣ್ಯದ ಮೃಗಗಳೆಲ್ಲ ಮುಕ್ತ ಜೀವಿಗಳೆ. ಬೆತ್ತಲೆ ನಡೆದೂ ಇಲ್ಲ; ತೊಗಲನ್ನು ಹೊದೆದೂ ಏನೂ ಫಲವಿಲ್ಲ. ಒಳಗೆ ದೈವಸಿದ್ಧಿ ಆಗಬೇಕು. ತಲೆ ಬೋಳಿಸಿಕೊಂಡಷ್ಟಕ್ಕೆ ಒಬ್ಬ ಪೂರ್ಣನಾಗಬಹುದಾದರೆ ಉಣ್ಣೆ ಕತ್ತರಿಸಿದ ಕುರಿಗಳು ಏಕೆ ಪೂರ್ಣ ಅಲ್ಲ? ಇಂದ್ರಿಯ ಸುಖವನ್ನು ಕಾಣದವ ಮುಕ್ತನೆನ್ನುವುದಾದರೆ ಷಂಡರು ಷಂಡರಾದ ಕಾರಣದಿಂದಲೆ ಬ್ರಹ್ಮವನ್ನು ಮುಟ್ಟಿರಬೇಕು. ಕಬೀರ ಹೇಳುತ್ತಾನೆ, ಕೇಳಿ, ಸಾಧು ಸಹೋದರರೆ ಭಗವಂತನ ಪಾವನ ನಾಮದ ಮೂಲಕ ಹೊರತು ಯಾರಿಗೂ ಮುಕ್ತಿ ದೊರಕಿಲ್ಲ. ಇದು ಒಂದು ಕಬೀರವಚನ. (ಎಂ.ವಿ.ಐ.; ಎಚ್.ಆರ್.ಆರ್.ಐ.)

ಕಬೀರನ ಉಪದೇಶಗಳಲ್ಲಿ ಸೂಫಿಪಂಥದ ಮತ್ತು ವೇದಾಂತಧರ್ಮದ ಸಾಮರಸ್ಯವನ್ನು ಕಾಣಬಹುದು. ವೇದಾಂತಿಯಾಗಿದ್ದರೂ ಈತ ಆರಾಧಿಸುತ್ತಿದ್ದ ದೇವರು ನಿರ್ಗುಣಬ್ರಹ್ಮನೇ ಸಗುಣೇಶ್ವರನೆ ಎಂಬ ವಿಷಯದಲ್ಲಿ ವಿವಾದ ಹುಟ್ಟಿದೆ. ಇವನು ನಿರ್ಗುಣ ಪಂಥಕ್ಕೆ ಸೇರಿದವನೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮತ್ತೆ ಕೆಲವರು ಇವನ ಇಷ್ಟದೇವತೆ ರಾಮನಾಗಿದ್ದನೆಂದೂ ಇವನು ಸಗುಣೇಶ್ವರೋಪಾಸಕನೆಂದೂ ಅಭಿಪ್ರಾಯ ಪಡುತ್ತಾರೆ. ಇವನಿಗೆ ಕರ್ಮ ಮತ್ತು ಪುನರ್ಜನ್ಮಗಳಲ್ಲಿ ನಂಬಿಕೆ ಇದ್ದಂತೆ ತೋರುತ್ತದೆ. ಇವನ ಪದ್ಯಗಳಲ್ಲಿ ಭಗವದ್ಭಕ್ತಿ ತುಳುಕಾಡುತ್ತದೆ.

ಕಬೀರನ ಪದ್ಯಗಳು ಹಿಂದೀ ಭಾಷೆಯ ರೂಪಾಂತವಾದ ಅವಧಿ ಭಾಷೆಯಲ್ಲಿದೆ. ಇವನ ಕವಿತೆಗಳು ಕೃತಕ ಶೈಲಿಯಲ್ಲಿದೆ ಸಹಜವಾಗಿ ಹೃದಯದಿಂದ ಹೊರಹೊಮ್ಮಿದ ಮಾತುಗಳಂತೆ ಇವೆ. ಸು. 1570ರಲ್ಲಿ ಕಬೀರನ ಪದ್ಯಗಳ ವಚನಗಳ ಸಂಕಲನ ಬೀಜಕ್ ಎಂಬ ಹೆಸರಿನಿಂದ ಪ್ರಕಟವಾಯಿತು. ಇದಾದ ಸು. 30 ವರ್ಷಗಳ ಅನಂತರ ಇವನ ವಚನಗಳು ಸಿಖ್ಖರ ಗ್ರಂಥದೊಳಗೆ ಅಳವಟ್ಟುವು.

ಕಬೀರನ ಅನುಯಾಯಿಗಳು ಕಬೀರ ಪಂಥಿಗಳೆಂದು ಕರೆದುಕೊಂಡಿದ್ದಾರೆ. ಇದಲ್ಲದೆ ಕಬೀರನ ಸ್ಫೂರ್ತಿಯಿಂದ ಹುಟ್ಟಿದ ಭಕ್ತಿಪಂಥಗಳು ನಾನಾ ಬಗೆಯಾಗಿವೆ. ಇವುಗಳಲ್ಲಿ ಪ್ರಸಿದ್ಧವಾದವು ಸಿಖ್ಖರು, ದಾದುಪಂಥಿಗಳು, ಲಾಲ್‌ದಾಸಿಗಳು ಮೊದಲಾದವರು. ಸಿಖ್ ಧರ್ಮದ ಸ್ಥಾಪಕನಾದ ನಾನಕ್ ಮತ್ತು ದಾದು ಎಂಬ ಸಂತರ ಮೇಲೆ ಕಬೀರನ ಪ್ರಭಾವ ವಿಶೇಷವಾಗಿ ಬಿದ್ದಿದೆ. ಕಬೀರನಿಂದ ಸ್ಫೂರ್ತಿಗೊಂಡ ಈ ಎಲ್ಲ ಪಂಥಗಳಿಗೆ ಸಮಾನವಾದ ಅಭಿಪ್ರಾಯಗಳು ಹೀಗಿವೆ:

1. ಜಗತ್ತಿಗೆಲ್ಲ ದೇವರು ಒಬ್ಬನೇ. ಅವನನ್ನೇ ಆರಾಧನೆ ಮಾಡಬೇಕು. ಅವನ ಪೂಜೆ ವಿಗ್ರಹದ ಮೂಲಕವಾಗಿ ಅಲ್ಲ.
2. ಅಧ್ಯಾತ್ಮ ಸಾಧನೆ ಜಾತಿ ಕುಲ ಭೇದಗಳಿಲ್ಲದೆ ಎಲ್ಲರಿಗೂ ತೆರೆದ ದಾರಿಯಾಗಿದೆ.
3. ಭಕ್ತಿಪಂಥ ಹಿಂದೂಗಳಿಗೂ ಮುಸಲ್ಮಾನರಿಗೂ ಸಮಾನವಾಗಿ ತೆರೆದಿಟ್ಟ ಪಂಥ.
4. ಅಧ್ಯಾತ್ಮ ಜೀವನದಲ್ಲಿ ಮುಂದುವರಿಯಬೇಕಾದರೆ ಸದ್ಗುರುವಿನ ಸಾನ್ನಿಧ್ಯ ಆವಶ್ಯಕ.
5. ಭಕ್ತಿ ಸಾಹಿತ್ಯವೆಲ್ಲ ಪಂಡಿತರ ಭಾಷೆಯಲ್ಲಿಲ್ಲದೆ ಸಾಮಾನ್ಯ ಜನಕ್ಕೆ ಎಟುಕಬಲ್ಲ ಸಾಮಾನ್ಯ ದೇಶಭಾಷೆಯಲ್ಲಿರಬೇಕು.

ಬರಬರುತ್ತ ಕಬೀರನ ಪಂಥ ಹಿಂದೂಧರ್ಮದ ಇತರ ಭಾವ ಭಾವನೆಗಳನ್ನು ಅಳವಡಿಸಿಕೊಂಡು ಹಿಂದೂಧರ್ಮದ ಇತರ ಪಂಥಗಳಂತೆ ಅದರ ಒಂದು ಶಾಖೆಯಾಗಿ ಪರಿವರ್ತಿತವಾಯಿತು.

ರವೀಂದ್ರನಾಥ ಠಾಕೂರರು ಕಬೀರನ 100 ಆರಿಸಿದ ಪದ್ಯಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದ್ದಾರೆ. ಕನ್ನಡಕ್ಕೂ ಅನೇಕ ವಚನಗಳು ಅನುವಾದವಾಗಿವೆ.

(ಎಂ.ವೈ.)

ಕಬೀರ ತನ್ನ ಭಾಷೆಯನ್ನು ಪೂರಬೀ (ಪೂರ್ವದ ಭಾಷೆ) ಎಂದಿದ್ದಾನೆ. ಭೋಜಪುರೀ ಭಾಷೆಗೆ ಪೂರಬೀ ಎಂದು ಹೆಸರಿದೆ. ವಾರಾಣಸಿಯಿಂದ ಗೋರಖ್‌ಪುರದವರೆಗಿನ ಭಾಷೆ ಭೋಜಪುರೀ. ಕಬೀರ ಬಾಳಿ ಬದುಕಿದ್ದುದು ವಾರಾಣಸಿಯಲ್ಲಿ.ಆದರೆ ಇವನ ಭಾಷೆಯ ಮೇಲೆ ಪಂಜಾಬೀ ಭಾಷೆಯ ಪ್ರಭಾವ ಎದ್ದುಕಾಣುತ್ತದೆ. ಈತನ ಪಂಜಾಬದತ್ತಣ ಲಿಪಿಕಾರಶಿಷ್ಯರ ಕಾರ್ಯ ಇದಾಗಿರಬೇಕೆಂದು ರಾಮಕುಮಾರವರ್ಮರ ಅಭಿಮತವಾಗಿದೆ.

ಕಬೀರ ಲೋಕಸಂಚಾರಿ. ಜನತೆಯ ಮಡಿಲಲ್ಲಿಯೇ ಮೆರೆದವ. ಹೋದ ಹೋದ ಕಡೆಯ ಜನಭಾಷೆಯ ಪ್ರಭಾವ ಅವನ ಭಾಷೆಯ ಮೇಲೆ ಬಿದ್ದಿರುವುದು ಸಹಜವಾದದ್ದು. ಹೀಗಾಗಿ ಅವನದು ಭೋಜಪುರೀ, ಪಂಜಾಬೀ, ವ್ರಜ, ಅವಧೀ ಹಾಗೂ ಖಡಿಬೋಲಿಯಗಳ ಸಮ್ಮಿಶ್ರವಾದ ಲೋಕಭಾಷೆಯಾಗಿದೆ. ಇದನ್ನು ರಾಮಚಂದ್ರ ಶುಕ್ಲ ಸಾಧುಕ್ಕಡೀ (ಸಾಧುಗಳ ಭಾಷೆ) ಎಂದಿದ್ದಾರೆ.

ಕಬೀರ ಸರ್ವಜ್ಞನಂತೆ ನಿರಂತರ ವಾಗ್ವಿಭೂತಿಯ ಚೆಲುವನ್ನು ಬೆಳಗುವ ದೇವದೂತನಾಗಿದ್ದ. ಇವನ ಸಾಹಿತ್ಯ ಅಪಾರವಾದದ್ದು. ತಾನೇ ಹೇಳಿಕೊಂಡಿರುವಂತೆ ಈತ ಮಸಿ ಕಾಗದ ಮುಟ್ಟಿಲ್ಲ, ಕರದಲ್ಲಿ ಲೇಖನಿ ಹಿಡಿದಿಲ್ಲ. ಆದರೆ ನಾಲ್ಕು ಯುಗಗಳ ಮಹಾತ್ಮ್ಯವನ್ನು ಬಾಯ ಮಾತಿನಿಂದಲೇ ಸಾರಿದ್ದಾನೆ. ಶಿಷ್ಯರು ಅವನ್ನು ಸಂಗ್ರಹಿಸಿದರು, ಅಷ್ಟೇ.

ಕಬೀರನ ಕೃತಿಗಳು : 1. ಕಬೀರ ಸಾಹಬಕೀ ಶಬ್ದಾವಲಿ, 2. ಕಬೀರನಕೇ ಪದ, 3. ಸಾಖಿಯಾಂ, 4. ಬೀಜಕ್, 5. ಸಂತಕಬೀರ, 6. ಕಬೀರ ವಚನಾವಲಿ ಹಾಗೂ 7. ಕಬೀರ ಗ್ರಂಥಾವಲಿ–ಈ ಗ್ರಂಥಗಳಲ್ಲಿ ಕಬೀರ ಗ್ರಂಥಾವಲಿ ಹೆಚ್ಚು ಪ್ರಾಮಾಣಿಕವೆಂದು ನಂಬಲಾಗಿದೆ. ಇವನ ಕೃತಿಗಳು ಹಾಡುಗಳ ಹಾಗೂ ಪದ್ಯಗಳ ರೂಪವಾಗಿ ರಚಿಸಲ್ಪಟ್ಟಿವೆ. ಅವನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ. 1. ಸಾಖೀ, 2. ಸಬದ ಅಥವಾ ಸಬದೀ 3. ರಮ್ಯೆನೀ.

1.ಸಾಖೀ : ಇದು ಸಾಕ್ಷಿ ಶಬ್ದದ ವಿಕೃತರೂಪ. ಸಾಕ್ಷೀಭೂತವಾಗಿ ಕಂಡು ಅನುಭವಿಸಿದ ಈ ಉಕ್ತಿಗಳಿಗೆ ಸಾಕ್ಷಿ ಎಂದು ಹೆಸರು. ಸಾಕ್ಷಿಯೇ ಜ್ಞಾನದ ಅಕ್ಷಿ ಎಂದು ಈತನೇ ಒಂದೆಡೆ ಘೋಷಿಸಿದ್ದಾನೆ. ಇವೆಲ್ಲ ದೋಹಾ ಹಾಗೂ ಸೋರಠಾ ಎಂಬ ದ್ವಿಪದಿ ಛಂದಗಳಲ್ಲಿ ವ್ಯಕ್ತವಾಗಿದೆ. ಕಬೀರನ ಜ್ಞಾನದ ಭಂಡಾರಗಳೇ ಈ ಸಾಕ್ಷಿಗಳು. ಇವನ್ನು ಗುರುವಿನ ಅಂಗ, ವಿರಹ ವಿಚಾರ, ಸ್ಮರಣೆಯ ವಿಚಾರ–ಎಂದು ಮುಂತಾಗಿ ವಿಭಾಗಿಸಿದ್ದಾರೆ.

2. ಸಬದ್ ಅಥವಾ ಸಬದೀ : ಕಬೀರ ಹಾಡಿದ ಪದಗಳ ಸಂಗ್ರಹಕ್ಕೆ ಸಬದ್ ಅಥವಾ ಸಬದೀ ಎನ್ನುತ್ತಾರೆ. ಕಬೀರನ ನಿಜವಾದ ರಸಸ್ರೋತವಿರುವುದೇ ಇವುಗಳಲ್ಲಿ. ಸಬದೀ ಎಂದರೆ ಧ್ವನಿ. ಅಂತರಂಗಸ್ಫೂರ್ತ ಆ ನಾದಧ್ವನಿಯೇ ಸಬದಿಯಾಗಿ ಹೊರಬಂದಿದೆ–ಎಂಬ ಭಾವ ಇದರದಾಗಿರಬೇಕು.

ದಾಂಪತ್ಯಪ್ರೇಮಶೀಲವಾದ ಕಬೀರನ (ಮಧುರಾ) ಭಕ್ತಿಗೀತೆಗಳು ಲೋಕಪ್ರಸಿದ್ಧವಾಗಿವೆ.

ಘೂಂಘಟಕಾ ಪಟ ಖೋಲರೇ, ಅಬ ಪೀವ ಮಿಲೇಂಗೆ (ಮುಖದ ಸೆರಗನ್ನು ಸರಿಸು ರಮಣೀ, ಈಗ ಪ್ರಿಯತಮನ ಮಿಲನ ಸಮಯ) ಎಂಬ ಲೋಕವಿಖ್ಯಾತ ಗೀತ ಈ ಸಬದಿಯ ಒಂದು ರೂಪವೆನ್ನಬೇಕು.

3. ರಮ್ಯೆನೀ : ಅಧ್ಯಾತ್ಮದಲ್ಲಿ ಸೂಕ್ಷ್ಮ ವಿಚಾರಗಳ ಉದ್ಘಾಟನೆಯೇ ರಮ್ಯೆನೀಯಾಗಿರಬೇಕು. ರಮ್ಯೆನೀಗಳು ದೋಹಾ (ದ್ವಿಪದಿ) ಹಾಗೂ ಚೌತಾಯಿ (ಚೌಪದಿ) ಗಳಲ್ಲಿ ರಚಿಸಲ್ಪಟ್ಟಿವೆ. ಜ್ಞಾನಮಾರ್ಗದ ಅನೇಕ ತತ್ತ್ವಗಳು ಇಲ್ಲಿ ನಿರೂಪಿತವಾಗಿವೆ. (ಆರ್.ಜಿ.ಕೆ.)

**ಕಬೀಲಾ :** ಭಾರತದ ಆದಿವಾಸಿಗಳ ಅಥವಾ ಗಿರಿಜನರ ಬುಡಕಟ್ಟನ್ನು ಸೂಚಿಸುವ ಶಬ್ದ. ಕಬೀಲಿ ಎಂಬುದು ಆ ಬುಡಕಟ್ಟಿಗೆ ಸೇರಿದ ವ್ಯಕ್ತಿಯನ್ನು ಸೂಚಿಸುತ್ತದೆ. ಕಬೀಲ್ ಮತ್ತು ಕಬೀಲಿ ಎಂಬ ರೂಪಗಳು ಗುಣವಾಚಕಗಳ ರೂಪದಲ್ಲಿ ಬಳಕೆಯಲ್ಲಿವೆ. ಇಷ್ಟಾದರೂ ಕಬೀಲಾ ಶಬ್ದಕ್ಕೆ ನಿರ್ದಿಷ್ಟವಾದ ವ್ಯಾಖ್ಯೆದೊರೆತಿಲ್ಲ. ಈ ವಿಚಾರದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇವರ ಜನಸಂಖ್ಯೆ ಮತ್ತಿತರ ವಿವರಗಳ ಬಗ್ಗೆ ಸಂದೇಹಾತೀತವಾದ ನಿರ್ದಿಷ್ಟ ಮಾಹಿತಿಗಳಿಲ್ಲ. ಈ ಬಗೆಯ ವೈಚಾರಿಕ ಧರ್ಮಬೇಧಗಳಿಂದಾಗಿ ಜನಗಣತಿಯ ವರದಿಗಳಲ್ಲಿಯೂ ಕಬೀಲಿಗಳ ಸಾರಣೀಕರಣ, ವರ್ಗೀಕರಣ ಮತ್ತು ವಿಶ್ಲೇಷಣಗಳಲ್ಲಿ ವ್ಯತ್ಯಾಸಗಳು ಕಾಣದೊರೆಯುತ್ತವೆ. ಕೆಲವೊಮ್ಮೆ ನಿಮ್ನ ಮತ್ತು ಅನುಸೂಚಿತ ವರ್ಗಗಳಲ್ಲಿ ಹಲವಾರು ಕಬೀಲಿಗಳನ್ನು ಸೇರಿಸಲಾಗಿದೆ. ಕೆಲವನ್ನು ಈ ಪಟ್ಟಿಯಿಂದ ಹೊರತಾಗಿಸಲಾಗಿದೆ. ಆತ್ಮವಾದವೇ ಭಾರತೀಯ ಆದಿವಾಸಿಗಳೆಲ್ಲರ ಧರ್ಮ ಎಂಬುದಾಗಿ ಒಂದು ಜನಗಣತಿಯ ವರದಿಯಲ್ಲಿ ಉಲ್ಲೇಖ ಕಾಣದೊರೆತರೆ, ಮತ್ತೊಂದು ವರದಿಯಲ್ಲಿ ಕಬೀಲಿ ಧರ್ಮವನ್ನು ಬೇರೊಂದು ಬಗೆಯ ವಿಶಿಷ್ಟ ಧರ್ಮವೆಂದೇ ನಮೂದಿಸಿರುವುದೂ ಉಂಟು. ಕಬೀಲಿ ವೃತ್ತಿಗಳ ವಿಶಿಷ್ಟೀಕರಣ ಕಾಣಬರುವುದಿಲ್ಲ. ಪ್ರಾದೇಶಿಕ ಸೌಲಭ್ಯಾನುಕೂಲಗಳಿಗನುಗುಣವಾಗಿ ಅವು ವ್ಯತ್ಯಾಸ ಹೊಂದುತ್ತ ಬರುತ್ತವೆ. ನಿಶ್ಚಿತ ಭೌಗೋಳಿಕ ಅಥವಾ ಪ್ರಾದೇಶಿಕ ವಲಯಗಳಲ್ಲಿ ವಾಸಮಾಡುವ ಅಂತರ್‌ವಿವಾಹ ವ್ಯವಸ್ಥೆಯುಳ್ಳ ಸಾಮಾಜಿಕ ವರ್ಗವನ್ನು ಸ್ಥೂಲವಾಗಿ ಕಬೀಲಾ ಎಂದು ಕರೆಯಬಹುದಾಗಿದೆ. ಒಂದೊಂದು ಕಬೀಲಾ ಗುಂಪಿಗೂ ಒಂದೊಂದು ಭಾಷೆ ಅಥವಾ ಉಪಭಾಷೆಯಿದ್ದು, ಕಬೀಲಿಗಳ ಸಂಘಟನೆಗೂ ಅದು ಕಾರಣವಾಗಿರುತ್ತದೆ. ಪ್ರತಿ ಕಬೀಲಾಕ್ಕೂ ಒಬ್ಬ ಮುಖಂಡನುಂಟು. ಅವನೇ ಬಹಳ ಮಟ್ಟಿಗೆ ಸರ್ವಾಧಿಕಾರಿಯಂತೆ ಅಲ್ಲಿ ಕಾರ್ಯನಿರ್ವಹಿಸುತ್ತಾನೆ. ಈ ಕೆಲವು ಕಾರಣಗಳಿಂದಾಗಿ, ಒಂದೊಂದು ಕಬೀಲಾ ಮತ್ತು ಕಬೀಲಿ ಜಾತಿಗಳಲ್ಲೂ ಭೇದವೆಣಿಸುವ ಪದ್ಧತಿ ಸಾಮಾನ್ಯವಾಗಿ ಕಾಣದೊರೆಯುತ್ತದೆ. ಇಷ್ಟಾದರೂ ಇದು ಸ್ಪೃಶ್ಯಾಸ್ಪೃಶ್ಯ ಭಾವನೆಗಳಾಗಲೀ ಸಾಮಾಜಿಕ ದ್ವೇಷಾಸೂಯಗಳಿಗಾಗಲೀ ಎಡೆಗೊಟ್ಟಿಲ್ಲವೆಂಬುದು ಗಮನಾರ್ಹವಾದ ಸಂಗತಿ. ಬಹಳ ಮಟ್ಟಿಗೆ ಹೊರಗಣ ಪ್ರಭಾವಕ್ಕೆ ಸುಲಭವಾಗಿ ಒಳಗಾಗದಂಥ ಭೌಗೋಳಿಕ ಪರಿಸರದಲ್ಲಿ, ಗುಡ್ಡಗಾಡುಗಳಲ್ಲಿ ವಾಸಮಾಡುವುದರಿಂದ ಈ ವನ್ಯ ನಿವಾಸಿಗಳ ಜೀವನವಿಧಾನ, ರೀತಿನೀತಿಗಳು, ಸಂಪ್ರದಾಯಗಳು ನಂಬಿಕೆಗಳು ಬೇರೆಬೇರೆಯಾಗಿವೆ.

ಸಂಸ್ಕೃತಿಯ ಪ್ರಭಾವಕ್ಕೊಳಗಾಗಿರುವುದನ್ನೇ ಅಳತೆಗೋಲಾಗಿ ಇಟ್ಟುಕೊಂಡು ಕಬೀಲಾಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ; 1. ಅನ್ಯ ಸಂಸ್ಕೃತಿಯ ಸಂಪೂರ್ಣ ಪ್ರಭಾವಕ್ಕೆ ಒಳಗಾಗಿರುವುವು. 2.ಕೆಲಮಟ್ಟಿಗೆ ಮಾತ್ರ ಇದರ ಪ್ರಭಾವಕ್ಕೆ ಒಳಗಾಗಿರುವವು ಮತ್ತು 3. ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದೆ ಇರುವವು. ನಾಗ, ಕೋಸಿ, ಗಾರೋ, ಬೋಟಿಯ ಮೊದಲಾದವರು ಮೊದಲನೆಯ ವರ್ಗಕ್ಕೂ ಸಂತಾಲರು, ಮುಂಡಾಗಳು, ಕೊರವರು ಮೊದಲಾದವರು ಎರಡನೆಯ ವರ್ಗಕ್ಕೂ, ಬಿಲ್ಲರು ಮತ್ತಿತರ ಹಿಮಾಲಯದ ಕೆಲವು ಆರ್ಯವಂಶೀಜನರು ಮೂರನೆಯ ವರ್ಗಕ್ಕೂ ಸೇರುತ್ತಾರೆ. ಭಾಷಿಕ ದೃಷ್ಟಿಯಿಂದ ಇವನ್ನು ಟಿಬೇಟೋ–ಬರ್ಮನ್ ಮತ್ತು ದ್ರಾವಿಡಭಾಷಾ ಪರಿವಾರಕ್ಕೆ ಸೇರಿದ ಬುಡಕಟ್ಟುಗಳಾಗಿ ವರ್ಗೀಕರಿಸಬಹುದು. ಆದರೆ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಕ್ರಮೇಣ ಹೊಂದಿಕೊಳ್ಳುತ್ತಿರುವ ಈ ಬುಡಕಟ್ಟುಗಳು ತಮ್ಮ ನಿಕಟತಮ ಪ್ರದೇಶಗಳಲ್ಲಿ ಪ್ರಚಲಿತವಾಗಿರುವ ಪ್ರಾದೇಶಿಕ ಭಾಷೆ ಅಥವಾ ಉಪಭಾಷೆಗಳನ್ನೇ ಬಳಸ ತೊಡಗಿವೆ. ಶಸ್ತ್ರ ಸನ್ನದ್ಧವಾಗಿದ್ದು, ಬಹುಮಟ್ಟಿಗೆ ಅಪರಾಧ ಕೃತ್ಯಗಳಲ್ಲೇ ತೊಡಗಿರುತ್ತಿದ್ದ ಕೆಲವು ಬುಡಕಟ್ಟುಗಳೂ ಇದ್ದುವು: ಈಗಲೂ ಇಂಥ ಕೆಲವು ಬುಡಕಟ್ಟುಗಳು ಇವೆ. ಈಚೆಗೆ ಜಾತಿ ಅಥವಾ ವೃತ್ತಿ ಸೂಚಕವಾದ ವಂಶನಾಮ ಮತ್ತು ಉಪನಾಮಗಳನ್ನು ಅಳವಡಿಸಿಕೊಳ್ಳುವ ಪ್ರವೃತ್ತಿ ಕಂಡುಬಂದಿದೆ. ಈ ಕೆಲವು ಕಾರಣಗಳಿಂದಾಗಿ 1961ರಲ್ಲಿ ನಡೆಸಿದ ಜನಗಣತಿಯ ವರದಿಯಲ್ಲಿ ಕಬೀಲಿಗಳ ಒಟ್ಟು ಸಂಖ್ಯೆ ಸು. 2 ಕೋಟಿ ಎಂದು ನಮೂದಿಸಲಾಗಿದೆ. ಆದರೆ ಹಿಂದಿನ ಜನಗಣತಿಗಳಲ್ಲಿ ಈ ಸಂಖ್ಯೆ ಸು. 3 ಕೋಟಿ ಎಂದು ನಮೂದಿತವಾಗಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸಂಸ್ಕೃತಿ ಸ್ವೀಕರಣ ದೃಷ್ಟಿಯಿಂದ ಈ ಬುಡಕಟ್ಟುಗಳನ್ನು ವರ್ಗೀಕರಿಸಿರುವ ಇತರ ಕೆಲವು ವಿದ್ವಾಂಸರು ಕಬೀಲಾಗಳನ್ನು ಅನುಕೂಲಕ(ಅಡಾಪ್ಟಿವ್) ಮತ್ತು ಸಾತ್ಮೀಕಾರಕ (ಅಸ್ಸಿಮಿಲೇಟಿವ್) ವರ್ಗಗಳೆಂದು ವಿಂಗಡಿಸಿದ್ದಾರೆ. ಅನುಕೂಲಕ ವರ್ಗವನ್ನು ಮೂರು ಉಪವರ್ಗವನ್ನಾಗಿ ವಿಭಜಿಸಲಾಗಿದೆ: **ಸಹಭೋಜಿ**, ಸಮಜೀವಿ ಮತ್ತು ಅನ್ಯ ಸಂಸ್ಕೃತಿ ಧಾರಕ. ನೆರೆಹೊರೆಯ ವರ್ಗಗಳೊಡನೆ ಸಮಾನಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉಪವರ್ಗವೇ ಸಹಭೋಜಿ. ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತಮ್ಮ ಕಾಲಮೇಲೆ ನಿಂತಿರುವ ಉಪವರ್ಗಗಳನ್ನು ಸಮಜೀವಿ ಎಂದು ಹೆಸರಿಸಲಾಗಿದೆ. ಹೊರಗಣ ಸಂಸ್ಕೃತಿಯನ್ನು ಒಮ್ಮುಖವಾಗಿ ಸ್ವೀಕರಿಸಿರುವ ವರ್ಗಗಳು ಅನ್ಯಸಂಸ್ಕೃತಿಧಾರಕ ಎಂಬ ಹೆಸರನ್ನು ಪಡೆದಿವೆ. ಕೆಲವಂತೂ, ತಮ್ಮ ಮೂಲ ವೈಷಿಷ್ಟ್ಯಗಳು ಮರೆಯಾಗುವ ಮಟ್ಟಿಗೆ ಅನ್ಯ ಸಂಸ್ಕೃತಿಯಲ್ಲಿ ಲೀನವಾಗಿವೆ. ಹೊಸ ಸಂಸ್ಕೃತಿಗಳು ಹೊಸ ಸಮಸ್ಯೆಗಳನ್ನು ಸೃಷ್ಟಿಸಿವೆ ಎಂಬುದು ನಿಜ. ಇತ್ತ ಹೊರಗಣ ಸಂಸ್ಕೃತಿಯ ಪ್ರಭಾವಕ್ಕೆ ಸುತರಾಂ ಒಳಗಾಗದಿರುವ ಬುಡಕಟ್ಟುಗಳು ಇಂದಿಗೂ ಅಲ್ಲಲ್ಲಿ ಕಾಣಬರುತ್ತವೆ ಎಂಬುದನ್ನು ಇಲ್ಲಿ ಅಗತ್ಯವಾಗಿ ಉಲ್ಲೇಖಿಸಬೇಕು. ಆದರೆ, ಸಾಂಸ್ಕೃತಿಕ ಸಂಪರ್ಕದ ಕ್ಷೇತ್ರದಲ್ಲಿ ಶೂನ್ಯಬಿಂದು ಬಹಳಮಟ್ಟಿಗೆ ಕಾಣದೊರೆಯುವುದಿಲ್ಲ. ಎಂಬುದನ್ನು ಮರೆಯುವಂತಿಲ್ಲ. ಭಾರತದ ಮಟ್ಟಿಗಂತೂ ಈ ಮಾತು ಇನ್ನೂ ಚೆನ್ನಾಗಿ ಅನ್ವಯಿಸುತ್ತದೆ. ದೇಶೀಯ ಮತ್ತು ವಿದೇಶೀಯ ಸಂಸ್ಕೃತಿಗಳ ಸಂಪರ್ಕವನ್ನು ಪಡೆಯದಿರುವ, ತತ್ಪರಿಣಾಮವಾಗಿ ವಿಶಿಷ್ಟ ಸಮಸ್ಯೆಗಳನ್ನು ಎದುರಿಸದಿರುವ ಆದಿವಾಸಿ ಸಮಾಜವಿಲ್ಲ. ಇದ್ದರೆ ಅದು ಕೇವಲ ಅಪವಾದಸ್ವರೂಪವಾಗಿದೆ ಎಂದು ಹೇಳಬೇಕಾಗುತ್ತದೆ. ಧರ್ಮಪ್ರಚಾರಕರ, ಉದ್ಯಮಶೀಲರ ಸಾಹಸ ಮತ್ತು ಪ್ರಯತ್ನಗಳ ಫಲವಾಗಿ ಸೂರ್ಯನ ಕಿರಣವೂ ಸೋಕದ ಎಡೆಗಳಲ್ಲಿ ವಾಸಿಸುತ್ತಿದ್ದ ಗಿರಿಜನರ ಸಾಮಾಜಿಕ ಸಾಂಸ್ಕೃತಿಕ ಜೀವನದಲ್ಲೂ ಏರುಪೇರುಗಳುಂಟಾದುವು. ವಿದೇಶೀ ಸಂಸ್ಕೃತಿ ಕೆಲವೊಂದು ಸಮಸ್ಯೆಗಳನ್ನು ಸೃಷ್ಟಿಸಿತು. ಈ ಬಗೆಯ ಸಂಪರ್ಕ ಸಾಹಚರ್ಯಗಳಿಂದುಂಟಾದ ಲೈಂಗಿಕ ರೋಗಗಳ ಫಲವಾಗಿ ಕೆಲವು ಬುಡಕಟ್ಟುಗಳ ಸಂಖ್ಯೆ ತೀವ್ರವಾಗಿ ಕ್ಷೀಣಿಸಿತು ಎಂಬ ವಾದವೂ ಇದೆ. ಹೀಗಾಗಿ ವಿದೇಶೀ ಸಂಸ್ಕೃತಿ ವರವಾಗಿ ಬಂದಂತೆಯೇ ಅಭಿಶಾಪವೂ ಆಗಿ ಪರಿಣಮಿಸಿತೆನ್ನಬಹುದು.

ಕಬೀಲಿಗಳು ಬಹಳಮಟ್ಟಿಗೆ ಗುಡ್ಡಗಾಡುಗಳಲ್ಲಿಯೇ ವಾಸಿಸುವ ಜನ. ನೈಸರ್ಗಿಕ ಸಾಧನ–ಸೌಲಭ್ಯಗಳನ್ನೇ ಅವಲಂಬಿಸಿಕೊಂಡು ಈ ಜನ ಜೀವನಯಾಪನೆ ಮಾಡಬೇಕಾಗುತ್ತದೆ. ಕೇರಳದ ಕಾಡಾರ್, ಚೆನ್ನೈನ ಪಲಿಯನ್ ಮತ್ತು ವೈನಾಡಿನ ಪಣಿಯನ್ ಮೊದಲಾದ ಬುಡಕಟ್ಟುಗಳು ಈ ವರ್ಗಕ್ಕೆ ಸೇರಿದುವು. ಆಹಾರ ಪದಾರ್ಥಗಳ ಸಂಗ್ರಹ ಮತ್ತು ವ್ಯವಸಾಯ ಕಾರ್ಯಗಳನ್ನು ಕೈಗೊಂಡಿರುವ ಕೆಲವು ಕಬೀಲಾಗಳೂ ಇವೆ. ಸಂಗ್ರಹಕಾರ್ಯದ ಬಗ್ಗೆ ಯಾವುದೋ ಒಂದು ನಂಬಿಕೆ ಈ ಜನರಲ್ಲಿ ಮನೆಮಾಡಿಕೊಂಡಂತೆ ತೋರುತ್ತದೆ. ಏಕೆಂದರೆ, ಕೆಲವು ಬುಡಕಟ್ಟುಗಳು ವ್ಯವಸಾಯವನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದರೂ ಸಂಗ್ರಹಕಾರ್ಯವನ್ನೂ ತಮ್ಮ ಮುಖ್ಯ ವೃತ್ತಿ ಎಂಬಂತೆ ಮುಂದುವರಿಸಿಕೊಂಡು ಬಂದಿವೆ.

ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಬ್ರಿಟಿಷ್ ಸರ್ಕಾರ ಗಿರಿಜನರ ಏಳಿಗೆಯ ಬಗ್ಗೆ ವಿಶೇಷ ಆಸಕ್ತಿಯನ್ನೇನೂ ತೋರಲಿಲ್ಲ. ಆದರೆ, ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಈ ವಿಚಾರದಲ್ಲಿ ತುಂಬ ಆಸಕ್ತಿ ವಹಿಸಿದೆ. ಅದರ ಪ್ರಗತಿಗಾಗಿ ವಿಶೇಷವಾಗಿ ಶ್ರಮಿಸುತ್ತಿದೆ. ಗಿರಿಜನರ ಮರುವಸತಿಕಾರ್ಯ ನಡೆಯುತ್ತದೆ. ಆದರೆ, ಬೇರೆ ಬೇರೆ ರೀತಿಗಳಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಅನ್ಯಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ತತ್ಫಲವಾಗಿ ಅವುಗಳ ಪ್ರಗತಿಯಲ್ಲೂ ಗಮನಾರ್ಹ ವ್ಯತ್ಯಾಸಗಳು ಕಂಡುಬರುವುದರಿಂದ ರೀತಿ ನಿರ್ಧಾರಣ

ಅಷ್ಟೇನೂ ಸುಲಭವಾಗಿ ಪರಿಣಮಿಸಿಲ್ಲ. ಈ ಮರುವಸತಿ ಅಥವಾ ಪುನರ್ನಿವೇಶನ ಕಾರ್ಯದಲ್ಲಿಯ ಉತ್ಸಾಹ ಅವರ ಪರಂಪರಾಗತ ಸಂಸ್ಕೃತಿಯ ವಿನಾಶಕ್ಕೆ ಕಾರಣವಾಗದಂತೆ ಎಚ್ಚರವಹಿಸಲಾಗಿದೆ.

ಕಬೀಲಿ ಜನರು ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದುದೂ ಉಂಟು. ಸಾಹುಕಾರರು ಮತ್ತು ವಿದೇಶೀಯ ವರ್ತಕರು ಕಬೀಲಿ ಜನರ ಆಸ್ತಿಪಾಸ್ತಿಗಳನ್ನು ಒಂದಲ್ಲ ಒಂದು ರೀತಿಯಿಂದ ವಶಪಡಿಸಿಕೊಂಡು ಅವರನ್ನು ಹೊರಗಟ್ಟುತ್ತಿದ್ದುದು, ಸಾಮಾಜಿಕವಾಗಿ ಆರ್ಥಿಕವಾಗಿ ಅವರನ್ನು ಶೋಷಿಸತೊಡಗಿದ್ದು, ಕಬೀಲಿ ಜನರ ನೈಸರ್ಗಿಕ ಸಾಧನ ಸೌಲಭ್ಯಗಳನ್ನು ಹೊರಗಿನವರು ಆಕ್ರಮಿಸಿಕೊಂಡು ಉಪಭೋಗಿಸತೊಡಗಿ ಅವರ ಜೀವನವನ್ನು ಕ್ಲೇಶಪೂರ್ಣವಾಗಿಸಿದ್ದು–ಇವು ಹಿಂಸಾತ್ಮಕ ಚಟುವಟಿಕೆಗಳಿಗೆ ಕಾರಣವಾದುವು. ಹೀಗಾಗಿ, ಬ್ರಿಟಿಷರ ಕಾಲದಲ್ಲಿ ಲೂಟಿ, ದರೋಡೆ, ಕ್ರಾಂತಿಯ ವರದಿಗಳು ಆಗಿಂದಾಗ ಕೇಳಿ ಬರುತ್ತಿದ್ದು, ಕಬೀಲಿ ಜನರೆಂದರೆ ಅಪರಾಧೋಪಜೀವಿಗಳು ಎನ್ನುವ ಭಾವನೆ ಮೂಡುವಂತಾಗಿತ್ತು. ಶಾಸನಬದ್ಧ ರೀತಿಯಲ್ಲಿ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವ ಪ್ರಯತ್ನ ನಡೆಯಲಿಲ್ಲ. ಶಾಸನ ಹಾಗೂ ಶಸ್ತ್ರಾಸ್ತ್ರಗಳ ಬಲದಿಂದ ಅವರನ್ನು ನಿಗ್ರಹಿಸಬೇಕೆಂದು ವರ್ತಕರೂ, ಜಮೀನುದಾರರೂ ಸರ್ಕಾರವನ್ನು ಒತ್ತಾಯಪಡಿಸ ತೊಡಗಿದಾಗ, ಸೈನಿಕರ ನೆರವು ಪಡೆದುಕೊಳ್ಳುವ ಪ್ರಯತ್ನಗಳು ನಡೆದಾಗ, ಹಿಂಸೆಯ ಪ್ರಾಬಲ್ಯ ಹೆಚ್ಚುತ್ತಲೇ ಹೋಯಿತು. ಇಂಥ ಪರಿಸ್ಥಿತಿಗಳಲ್ಲಿ ಕಬೀಲಿ ಜನ ತಮ್ಮ ಮುಖಂಡರಿಗೆ ಕಾರ್ಯಾಚರಣೆಯ ಮತ್ತು ದಂಡನೆಯ ಅಧಿಕಾರಗಳನ್ನು ನೀಡಿದರು. ಈ ದಂಗೆಗಳನ್ನು ಅಡಗಿಸಲು ಕಬೀಲಿ ನಾಯಕರಿಗೆ ಸರ್ಕಾರದವರು ಸನ್ನದುಗಳನ್ನು ಕೊಟ್ಟು ಸೇಡಿನ ಜ್ವಾಲೆ ಶಾಂತವಾಗುವಂತೆ ಮಾಡಿದ್ದೂ ಉಂಟು. ಶಿಸ್ತು, ನ್ಯಾಯ ಮತ್ತು ಶಾಂತಿ ಪಾಲನೆಯ ದೃಷ್ಟಿಯಿಂದ ಕಬೀಲಿ ಜನಕ್ಕೂ ನಾಗರಿಕ ಅಧಿಕಾರಗಳನ್ನು, ಹಕ್ಕುಗಳನ್ನು ಕೊಡಬೇಕೆಂಬ ಸತ್ವವನ್ನು ಅಂದಿನ ಬ್ರಿಟಿಷ್ ಸರ್ಕಾರ ತಡವಾಗಿಯಾದರೂ ಮನಗಂಡಿತು. ವಿಶೇಷಾಧಿಕಾರವುಳ್ಳ ಅಧಿಕಾರಿಯೊಬ್ಬನನ್ನು ನೇಮಿಸಿ, ಗಿರಿಜನರ ಯೋಗಕ್ಷೇಮದ ಭಾರವನ್ನು ಅವನಿಗೆ ವಹಿಸಲಾಯಿತು. ನಾಡಿನ ಇತರ ಭಾಗಗಳಲ್ಲಿ ಪ್ರಚುರವಾಗಿದ್ದ ನಿಯಮಗಳಿಗೂ ಇವಕ್ಕೂ ಸಾಕಷ್ಟು ವ್ಯತ್ಯಾಸಗಳಿದ್ದುವು. ಕಬೀಲಿ ಜನರನ್ನು ಸಾಮಾನ್ಯ ನ್ಯಾಯಾಲಯಗಳ ವ್ಯಾಪ್ತಿಯಿಂದ ಹೊರತಾಗಿಸಲಾಯಿತು. ಈ ವಿಶೇಷಾಜ್ಞೆ 1872ರಲ್ಲಿ ಜಾರಿಗೆ ಬಂದಿತು. ಸಾಮಾಜಿಕ ಅತ್ಯಾಚಾರ ಮತ್ತು ಆರ್ಥಿಕ ಶೋಷಣೆಗಳು ಮುಂದುವರಿದಾಗ 1886ರಲ್ಲಿ ಸಂತಾಲರ ದಂಗೆಯೆಂದು ಪ್ರಸಿದ್ಧವಾಗಿರುವ ದಂಗೆ ನಡೆಯಿತು. ಛೋಟಾ ನಾಗಪುರ ಮತ್ತು ಸಂತಾಲಪರಗಣ ಈ ಕ್ರಾಂತಿಯ ಕೇಂದ್ರಗಳಾಗಿದ್ದುವು. ಕಬೀಲ ಸಮಸ್ಯೆಗಳನ್ನು ಪರಿಹರಿಸುವತ್ತ ತೀವ್ರ ಗಮನಕೊಡುವುದು ಅನಿವಾರ್ಯವಾಯಿತು. ಸಂತಾಲ ಪರಗಣ ಎಂಬ ಹೆಸರಿನಲ್ಲಿ ಒಂದು ಹೊಸಜಿಲ್ಲೆಯನ್ನೇ ಸ್ಥಾಪಿಸಿ ಒಬ್ಬ ವಿಶೇಷ ಆಡಳಿತಾಧಿಕಾರಿಯನ್ನು ನೇಮಿಸಲಾಯಿತು. 1855ರ 38ನೆಯ ಕಾಯಿದೆಯಂತೆ ಈ ಗಿರಿಜನರು ವಾಸಿಸುತ್ತಿದ್ದ ಕ್ಷೇತ್ರಗಳನ್ನು ವಿಶೇಷಾಧಿಕಾರ ವಲಯಗಳೆಂದು ಘೋಷಿಸಲಾಯಿತು. ಪೋರ್ಟ್ ವಿಲಿಯಂ, ಪೋರ್ಟ್ ಸೇಂಟ್ ಜಾರ್ಜ್ ಮತ್ತು ಮುಂಬಯಿಯ ಆಡಳಿತ ಮಂಡಳಿಗಳು ಹೊಸ ಅಧಿನಿಯಮಗಳನ್ನು ಜಾರಿಗೆ ತಂದವು. 1870ರ ಭಾರತ ಸರ್ಕಾರದ ಕಾಯಿದೆ ಗನುಗುಣವಾಗಿ ಈ ಪ್ರಾಂತೀಯ ಅಧಿಕಾರಿಗಳಿಗೆ ವಿಶೇಷ ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಕೊಡಲಾಯಿತು. ಬ್ರಿಟಿಷ್ ಭಾರತದ ಉಳಿದ ಭಾಗಗಳಿಗೆ ಅನ್ವಯವಾಗುತ್ತಿದ್ದ ಕಾನೂನುಗಳನ್ನು ಈ ಗಿರಿಜನರಿಗೆ ಅನ್ವಯಿಸುವಂತೆ ಇರಲಿಲ್ಲ. ಹಾಗೇನಾದರೂ ಮಾಡಬೇಕಾದರೆ ಪೂರ್ವ ಸೂಚನೆ ನೀಡಿ ಪೂರ್ವಾನುಮತಿ ಪಡೆದುಕೊಳ್ಳಬೇಕಾಗುತ್ತಿತ್ತು. 1874ರಲ್ಲಿ ವಿಧಾನಮಂಡಲ ಅಂಗೀಕರಿಸಿದ್ದ 14ನೆಯ ಜಿಲ್ಲಾ ಅನುಸೂಚಿತ ಕಾಯಿದೆಗಳಿಗೆ ಅನುಗುಣವಾಗಿ ಸ್ಥಳೀಯ ವಿಶೇಷಾಧಿಕಾರಗಳನ್ನು ನಿರ್ದಿಷ್ಟ ವಲಯಗಳಲ್ಲಿ ಜಾರಿಗೆ ಕೊಡುವ ಅಧಿಕಾರವನ್ನು ನೀಡಲಾಯಿತು. ಅಗತ್ಯಾನುಸಾರ, ಕಾನೂನುಗಳನ್ನು ಸೀಮಿತ ರೂಪದಲ್ಲಿ ಬಳಸುವುದಾದಲ್ಲಿ ಅಥವಾ ತಿದ್ದುಪಡಿಗಳನ್ನು ಮಾಡಬೇಕಾಗಿದ್ದಲ್ಲಿ ಕೇಂದ್ರಸರ್ಕಾರಕ್ಕೆ ಆ ವಿವರಗಳನ್ನು ತಿಳಿಸುವುದು ಕಡ್ಡಾಯವಾಗಿತ್ತು. ಇಷ್ಟಾದರೂ ಈ ವಿಶಿಷ್ಟ ಆಡಳಿತ ವ್ಯವಸ್ಥೆಯು ಗಿರಿಜನರ ಸಮಸ್ಯೆಗಳನ್ನು ಪೂರ್ಣವಾಗಿ ಪರಿಹರಿಸಲಾರದೆ ಹೋಯಿತು.

ಪ್ರತ್ಯಕ್ಷ, ಪರೋಕ್ಷ ಅನ್ಯಾಯ ಅಥವಾ ಶೋಷಣೆಗಳನ್ನು ತಪ್ಪಿಸುವ ದೃಷ್ಟಿಯಿಂದ 1876ರಲ್ಲಿ ಕಬೀಲಿ ಆಸ್ತಿಪಾಸ್ತಿಗಳ ಪರಭಾರೆ ಮತ್ತು ಮಾರಾಟಗಳ ಮೇಲೆ ವಿಧಿ ನಿಷೇಧಗಳನ್ನು ಹಾಕಲಾಗಿತ್ತು. ವೈಯಕ್ತಿಕವಾಗಿ ಅಥವಾ ನ್ಯಾಯಾಲಯಗಳ ಆಜ್ಞೆಯ ಮೂಲಕ ಕಬೀಲಿ ಆಸ್ತಿಪಾಸ್ತಿಗಳನ್ನು ಕೈಬದಲು ಮಾಡುವುದನ್ನು ನಿಷೇಧಿಸಲಾಗಿತ್ತು. ಜಮೀನುದಾರರಿಂದ ಶೋಷಣೆಗಳಿಗೊಳಗಾಗುವುದನ್ನು ತಪ್ಪಿಸುವ ದೃಷ್ಟಿಯಿಂದ 1917ರಲ್ಲಿ ಮದ್ರಾಸ್ ಸರ್ಕಾರವು ಒಂದು ವಿಶೇಷ ಕಾಯಿದೆಯನ್ನು ಜಾರಿಗೆ ತಂದಿತು. ಕಬೀಲಿಗಳಿಗೆ ನೀಡುವ ಸಾಲದ ಮೇಲೆ ಬಡ್ಡಿಯ ಮಿತಿ ವಿಧಿಸಲಾಯಿತು.

ಕಬೀಲಿ ಸ್ಥಿತಿಗತಿಗಳನ್ನು ಉತ್ತಮ ಪಡಿಸುವ ದೃಷ್ಟಿಯಿಂದ ಮೌಂಟ್‌ಫರ್ಡನ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿ 1916ರ ಕಾಯಿದೆಯ 52ನೆಯ ಕಲಮಿನನ್ವಯ ಆಡಳಿತ ವರ್ಗದ ಹೊಣೆಗಾರಿಕೆ ಎಷ್ಟೆಂಬುದನ್ನು ಸ್ಪಷ್ಟಪಡಿಸಿತು. 1935ರಲ್ಲಿ ಗಿರಿಜನರ ಸಂಖ್ಯೆ ಅನೂಚಾನವಾಗಿ ಮುಂದುವರೆಯುವಂತೆ ಮಾಡಲು ಕೆಲವು ರಕ್ಷಣಾತ್ಮಕ ವಿಧಾನಗಳನ್ನು ಮುಂಜಾಗರೂಕತೆಯ ಕ್ರಮಗಳನ್ನು ಕಾರ್ಯರೂಪಕ್ಕೆ ತರಲಾಯಿತು. ಭಾರತೀಯ ಸಂವಿಧಾನವು ಗಿರಿಜನರ ಏಳಿಗೆಯ ವಿಚಾರಕ್ಕೆ ವಿಶೇಷ ಪ್ರಾಧಾನ್ಯ ನೀಡಿದೆ. ಸಮಾಜ ಕಲ್ಯಾಣ, ಸಮುದಾಯವಿಕಾಸ ಮತ್ತು ಆರೋಗ್ಯ ಹಾಗೂ ಶಿಕ್ಷಣ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಗಿರಿಜನರಿಗೆ ಆಡಳಿತ ಸೇವಾ ವ್ಯವಸ್ಥೆಯಲ್ಲಿ, ಶಾಸನಸಭೆ ಮತ್ತು ಲೋಕಸಭೆಗಳಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿಟ್ಟಿದೆ. ಇವರ ಕಲ್ಯಾಣಸಾಧನೆಗಾಗಿ ಒಬ್ಬ ಕಮೀಷನರನ್ನು ನೇಮಿಸಲಾಗಿದೆ. ಈ ಇಲಾಖೆ ಗಿರಿಜನರ ಜೀವನ ವಿಧಾನಗಳನ್ನು ಉತ್ತಮಪಡಿಸುವ ಸದಾಶಯದಿಂದ ಮುನ್ನಡೆಯುತ್ತಿದೆ.

(ಪಿ.ಜಿ.ಡಿ.)

**ಕಬ್ಬಡ್ಡಿ :** ಕಬ್ಬಡ್ಡಿ ಈ ನೆಲದ ಮೂಲ ಕ್ರೀಡೆ. ನಮ್ಮ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆ ಇರುವ ಕ್ರೀಡೆ. ದೈಹಿಕ ಸಾಮರ್ಥ್ಯದ ಜೊತೆ ಕೌಶಲ್ಯಪೂರ್ಣವೂ ಹೌದು. ಹಳ್ಳಿಗಳಲ್ಲದೇ ಪಟ್ಟಣಗಳಲ್ಲೂ ಇದು ಜನಪ್ರಿಯ ಆಟ. ಹಿಂದೆ ಇದು ಹೆಚ್ಚಾಗಿ ಯುವಕರು ಮತ್ತು ಬಾಲಕರು ಮಾತ್ರ ಆಡುವ ಆಟವಾಗಿತ್ತು. ಆದರೆ ಈ ಆಟದ ಪ್ರಾಮುಖ್ಯವೂ ನಿಯಮಗಳೂ ಬದಲಾದಂತೆ ಮಹಿಳೆಯರೂ ಆಡುವಂತಾಗಿ ಇವರೂ ಪುರುಷರಂತೆಯೇ ಚಾಕಚಕ್ಯತೆಯಿಂದ ಆಡುವ ಮಟ್ಟಿಗೆ ಆಟ ಬೆಳೆದಿದೆ.

ಈ ಆಟವನ್ನು ಕೆಲವು ಕಡೆ ಹುತುತು ಎಂದು, ಮತ್ತೆ ಕೆಲವು ಕಡೆ ಚಡುಗುಡು ಎಂದು, ಕೆಲವು ಕಡೆ ಕಬಡ್ಡಿ ಎಂದು ಕರೆಯಲಾಗುತ್ತದೆ. ಕಬಡ್ಡಿಗೆ ಯಾವ ಸಲಕರಣೆಯೂ ಬೇಕಾಗಿಲ್ಲದಿರುವುದರಿಂದ ಇದನ್ನು ಸುಲಭವಾಗಿ ಎಲ್ಲ ಕಡೆಯೂ ಆಡಬಹುದು. ಈಗ ಇದೊಂದು ರಾಷ್ಟ್ರೀಯ ಆಟ. ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ರಾಜ್ಯ ತಂಡಗಳು ಆಡುತ್ತವೆ. ರಾಜ್ಯ ಮಟ್ಟದಲ್ಲಿ ನಡೆಯುವ ಟೂರ್ನಿಗಳಲ್ಲಿ ಖಾಸಗಿ ಕ್ಲಬ್‌ಗಳು ಆಡುತ್ತವೆ.

ನಾಗಪುರದಲ್ಲಿ ಬೊಂಬಾಯಿ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ನಡುವೆ ನಡೆದ ಕಬ್ಬಡ್ಡಿ ಪಂದ್ಯದ ಸ್ವಾರಸ್ಯ ಘಟ್ಟ

ಮಟ್ಟಸವಾದ, ಕೆಮ್ಮಣ್ಣು ಮತ್ತು ಮರದ ಹೊಟ್ಟು ಮಿಶ್ರಿತವಾದ ಮೃದುವಾದ ಮೈದಾನ ಈ ಆಟಕ್ಕೆ ಅವಶ್ಯ. ಆಟದ ಮೈದಾನ ಪುರುಷರು ಮತ್ತು ಬಾಲಕರಿಗೆ 12.50 ಮೀ. ಉದ್ದ 10 ಮೀ. ಅಗಲ ಇರಬೇಕು. ಮಹಿಳೆಯರು, ಬಾಲಕಿಯರಿಗೆ 11 ಮೀ. ಉದ್ದ 8 ಮೀ ಅಗಲ ಇರಬೇಕು. ಉದ್ದವನ್ನು ಸಮವಾಗಿ ಎರಡಾಗಿ ವಿಭಾಗಿಸಬೇಕು. ಎರಡೂ ಅಂಕಣಗಳಲ್ಲಿ ಮಧ್ಯಗೆರೆಯಿಂದ ಅಡ್ಡಗೆರೆಯನ್ನು (ಬಾಕ್‌ಲೈನ್) ಸಮಾನಾಂತರವಾಗಿ 3.75 ಮೀ ದೂರದಲ್ಲಿ, ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಎಳೆಯಬೇಕು. ಮಹಿಳೆಯರು, ಜೂನಿಯರ್ ಬಾಲಕಿಯರು, ಬಾಲಕರ ಮೈದಾನಗಳಲ್ಲಿ 3 ಮೀ ಅಂತರದಲ್ಲಿ ಅಡ್ಡಗೆರೆ ಎಳೆಯಬೇಕು. ಅಂಕಣದ ಎಲ್ಲ ಗೆರೆಗಳೂ ಗರಿಷ್ಠ 5 ಸೆಂಮೀ ದಪ್ಪ ಇರಬೇಕು ಮತ್ತು ಅಂಕಣದ ಭಾಗವಾಗಿರಬೇಕು.

ಒಂದು ತಂಡದಲ್ಲಿ 12 ಮಂದಿ ಆಟಗಾರರಿರುತ್ತಾರೆ. ಇವರಲ್ಲಿ ಆಟಕ್ಕಿಳಿಯುವವರು 7 ಮಂದಿ ಮಾತ್ರ. ಉಳಿದವರು ಬದಲಿ ಆಟಗಾರರಾಗಿರುತ್ತಾರೆ. ಮುಖ್ಯ ತೀರ್ಪುಗಾರರ ಅಪ್ಪಣೆ ಪಡೆದು ಆಟಗಾರರನ್ನು ಬದಲಿಸಬಹುದು. ಮುಖ್ಯ ತೀರ್ಪುಗಾರ ಆಟ ಆರಂಭಿಸಲು ನಾಣ್ಯ ಚಿಮ್ಮಿಸುತ್ತಾನೆ. ಟಾಸ್ ಗೆದ್ದ ತಂಡದ ನಾಯಕ ದಾಳಿ ಆರಂಭಿಸುವ ಅಥವಾ ಕ್ಷೇತ್ರ ಆಯ್ಕೆ ಮಾಡಿಕೊಳ್ಳುತ್ತಾನೆ. ಆಟದಲ್ಲಿ ಮಾನ್ಯತೆ ನೀಡಲಾಗಿರುವ ಶಬ್ದ 'ಕಬಡ್ಡಿ'ಯನ್ನು

ಸ್ಪಷ್ಟವಾಗಿ, ತಡೆಯಿಲ್ಲದೇ ಓತಪ್ರೋತವಾಗಿ ಒಂದೇ ಉಸಿರಿನಲ್ಲಿ ಹೇಳುವುದಕ್ಕೆ 'ಕ್ಯಾಂಟ್' ಎನ್ನಲಾಗುತ್ತದೆ. ದಾಳಿಕಾರನಿಗೆ ರೈಡರ್ ಎಂದು ಕರೆಯಲಾಗುತ್ತದೆ. ದಾಳಿಗಾರ ನಿಯಮಗಳಿಗನುಸಾರವಾಗಿ ಎದುರಾಳಿ ದೇಹದ ಯಾವುದೇ ಭಾಗವನ್ನು ಅಥವಾ ಬಟ್ಟೆಯನ್ನು ಮುಟ್ಟಿ, ಸುರಕ್ಷಿತವಾಗಿ ತನ್ನ ಅಂಕಣ ತಲುಪಿದಾಗ ಎದುರಾಳಿ ಔಟ್. ಎದುರಾಳಿಗಳು ದಾಳಿಕಾರನನ್ನು ಹಿಡಿದು, ಆತ ಕ್ಯಾಂಟ್ ಕಳೆದುಕೊಳ್ಳುವ ವರೆಗೆ ತನ್ನ ಅಂಕಣಕ್ಕೆ ಮರಳದಂತೆ ನೋಡಿಕೊಂಡಾಗ ದಾಳಿಕಾರ ಔಟ್. ದಾಳಿಕಾರ ವಾಪಸ್ಸಾಗುವಾಗ, ಆತನನ್ನು ಔಟ್ ಮಾಡಲು ಎದುರಾಳಿ ಕ್ಯಾಂಟ್‌ನೊಂದಿಗೆ ಬೆನ್ನಟ್ಟಿದಾಗ ಅದಕ್ಕೆ 'ಪರ್ಸ್ಯೂಟ್' ಎನ್ನಲಾಗುತ್ತದೆ. ಎರಡೂ ತಂಡಗಳು ಸರದಿಯಂತೆ ದಾಳಿ ನಡೆಸುತ್ತವೆ. ಒಬ್ಬ ಆಟಗಾರ ಔಟಾದಾಗ ಎದುರಾಳಿಗೆ ಒಂದು ಅಂಕ ದೊರೆಯುತ್ತದೆ.

ಪೂನದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ನಡುವೆ ನಡೆದ ಕಬಡ್ಡಿ ಪಂದ್ಯ

ಪಂದ್ಯದ ಅವಧಿ: ಪುರುಷರು ಮತ್ತು ಬಾಲಕರಿಗೆ ಪೂರ್ವಾರ್ಧ ಮತ್ತು ಉತ್ತರಾರ್ಧದಲ್ಲಿ ತಲಾ 20 ನಿಮಿಷಗಳು. ಮಹಿಳೆಯರು, ಬಾಲಕಿಯರು ಮತ್ತು ಸಬ್‌ಜೂನಿಯರ್ ವಿಭಾಗದವರಿಗೆ ತಲಾ 15 ನಿಮಿಷಗಳು. ಮಧ್ಯೆ ಐದು ನಿಮಿಷ ವಿರಾಮ. ವಿರಾಮದ ನಂತರ ತಂಡಗಳಿಂದ ಪಕ್ಕ ಬದಲಾವಣೆ.

ಪಂದ್ಯವೊಂದಕ್ಕೆ ಒಬ್ಬ ತೀರ್ಪುಗಾರ (ರೆಫರಿ), ಇಬ್ಬರು ನಿರ್ಣಾಯಕರು (ಅಂಪೈರ್), ಒಬ್ಬ ಅಂಕ ಎಣಿಕೆಗಾರ (ಸ್ಕೋರರ್) ಮತ್ತು ಇಬ್ಬರು ಸಹಾಯಕ ಎಣಿಕೆಗಾರರು ಇರಬೇಕು. ತೀರ್ಪುಗಾರರ ನಿರ್ಣಯವೇ ಅಂತಿಮ.

ಕಬಡ್ಡಿ ಭಾರತದಲ್ಲಿ ಜನಪ್ರಿಯ ಆಟವಾದರೂ ಏಷ್ಯನ್ ಕ್ರೀಡೆಗಳಲ್ಲಿ ಸ್ಥಾನ ಪಡೆದಿದ್ದರೂ ವಿಶ್ವ ಕ್ರೀಡಾರಂಗದ ಮುಖ್ಯವಾಹಿನಿಯಿಂದ ಇನ್ನೂ ದೂರವೇ ಇದೆ. 1982 ಹಾಗೂ 1986 ರ ಏಷ್ಯನ್ ಕ್ರೀಡೆಗಳಲ್ಲಿ ಕಬಡ್ಡಿಯನ್ನು ಪ್ರದರ್ಶನ ಕ್ರೀಡೆಯಾಗಿ ಆಡಿಸಲಾಯಿತಾದರೂ ಅಧಿಕೃತ ಮನ್ನಣೆ ಸಿಕ್ಕಿದ್ದು, 1990ರ ಬೀಜಿಂಗ್ ಏಷ್ಯನ್ ಕ್ರೀಡೆಗಳಲ್ಲಿ. ಏಷ್ಯನ್ ಕ್ರೀಡೆಗಳ ಕಬಡ್ಡಿಯಲ್ಲಿ ಭಾರತವೇ ಚಿನ್ನದ ಒಡೆಯ. 1990 ರಿಂದ ಇಲ್ಲಿಯ ವರೆಗೆ ನಡೆದಿರುವ ನಾಲ್ಕೂ ಏಷ್ಯನ್ ಕ್ರೀಡೆಗಳಲ್ಲಿ ಭಾರತವೇ ಚಿನ್ನದ ಪದಕ ಗೆದ್ದಿದೆ. ಭಾರತ-ಪಾಕಿಸ್ತಾನ-ಶ್ರೀಲಂಕ-ಬಾಂಗ್ಲಾದೇಶ ತಂಡಗಳ ನಡುವೆಯೇ ಹೆಚ್ಚಿನ ಪೈಪೋಟಿ. ಚೀನ, ಜಪಾನ್ ದೇಶಗಳು ಆಡುತ್ತವೆಯಾದರೂ ಅವುಗಳ ಆಟದ ಮಟ್ಟ ಇನ್ನೂ ಏರಿಲ್ಲ. ಸದ್ಯಕ್ಕಂತೂ ಕಬಡ್ಡಿ ಆಟಕ್ಕೆ ಒಲಿಂಪಿಕ್ ಕ್ರೀಡೆಗಳಲ್ಲಿ ಅವಕಾಶ ಸಿಗುವ ಸಾಧ್ಯತೆಗಳು ಕಡಿಮೆ.

ಕರ್ನಾಟಕದ ಸಿ ಹೊನ್ನಪ್ಪ ಮತ್ತು ಬಿ ಸಿ ರಮೇಶ್ 'ಅರ್ಜುನ ಪ್ರಶಸ್ತಿ'ಗೆ ಪಾತ್ರರಾಗಿದ್ದಾರೆ. ಅರ್ಜುನ ಪ್ರಶಸ್ತಿಗೆ ಪಾತ್ರರಾಗಿರುವ ಆಟಗಾರರು ಇಂತಿದ್ದಾರೆ:

1. ಸದಾನಂದ ಮಹದೇವ ಶೆಟ್ಟಿ (ಮುಂಬೈ): 1971-72.
2. ಭೋಲಾನಾಥ್ (ಮುಂಬೈ): 1972-73.
3. ಶಕುಂತಲಾ ಖಟಾವಕರ್ (ಮುಂಬೈ): 1978-79.
4. ಶಾಂತಾರಾಮ ಜಾಧವ (ಮುಂಬೈ): 1979-80.
5. ಮೋನಿಕಾನಾಥ್ ಬನ್ನಿ (ಕೋಲ್ಕತ್ತ): 1980-81.
6. ಮಾಯಾ ಕಾಶೀನಾಥ್ (ಮುಂಬೈ): 1982-83.
7. ರಮಾ ಸರ್ಕಾರ್ (ರೈಲ್ವೇಸ್, ಪಶ್ಚಿಮ ಬಂಗಾಳ): 1985-86.
8. ಹರ್ದೀಪ್ ಸಿಂಗ್ (ಸರ್ವಿಸಸ್): 1989-90.
9. ಎಸ್. ರಾಜರತ್ನಂ (ತಮಿಳುನಾಡು): 1993-94.
10. ಅಶೋಕ್ ಶಿಂಧೆ (ಮುಂಬೈ): 1994-95.
11. ಪಿ. ಗಣೇಶನ್ (ತಮಿಳುನಾಡು): 1994-95.
12. ಶ್ರೀರಾಮ ಭಾವಸಾರ (ಮಹಾರಾಷ್ಟ್ರ): 1995-96.
13. ನೀತಾ ಮೋಳೇಶ್ವರ ದಾಂಡೆ (ರೈಲ್ವೇಸ್): 1995-96.
14. ಹರ್ದೀಪ್ ಸಿಂಗ್ (ರೈಲ್ವೇಸ್): 1996-97.
15. ಹಸನ್‌ಕುಮಾರ್ (ಸರ್ವಿಸಸ್): 1997-98.
16. ಬಿಸ್ವಜಿತ್ ಪಾಲಿಕತ್ (ರೈಲ್ವೇಸ್): 1997-98.
17. ಬಲ್ವಿಂದರ್ ಸಿಂಗ್ (ಪಂಜಾಬ್): 1998-99.
18. ತೀರ್ಥರಾಜ್ (ದೆಹಲಿ): 1998-99.
19. ಸಿ.ಹೊನ್ನಪ್ಪ (ಕರ್ನಾಟಕ): 2000-01.
20. ಬಿ.ಸಿ. ರಮೇಶ್ (ಕರ್ನಾಟಕ): 2001-02.
21. ಸಂಜೀವಕುಮಾರ್ (ರೈಲ್ವೇಸ್): 2002-03.
22. ರಾಮ್ ಮೆಹರ್ (ಸರ್ವಿಸಸ್): 2003-04.

**ಕಬ್ಬನ್, ಸರ್ ಮಾರ್ಕ್ :** 1785-1861. ಮೈಸೂರು ಸಂಸ್ಥಾನದ ಆಡಳಿತವನ್ನು ಬ್ರಿಟಿಷ್ ಸರ್ಕಾರ ವಹಿಸಿಕೊಂಡಿದ್ದ ಕಾಲದಲ್ಲಿ (1831-81) ಆ ಸಂಸ್ಥಾನದ ಕಮಿಷನರ್ ಆಗಿದ್ದವ (1834-61). ಐರಿಷ್ ಸಮುದ್ರದಲ್ಲಿರುವ ಐಲ್ ಆಫ್ ಮ್ಯಾನ್ ದ್ವೀಪದ ಮ್ಯಾಂಕ್ಸ್‌ನಲ್ಲಿ ಪಾದ್ರಿಯೊಬ್ಬನ ಮಗನಾಗಿ 1785 ಸೆಪ್ಟೆಂಬರಿನಲ್ಲಿ ಜನಿಸಿದ. 1800ರಲ್ಲಿ ಭಾರತಕ್ಕೆ ಬಂದ. ಕರ್ನಲ್ ವಿಲ್ಕ್ಸನ ಸೋದರಸಂಬಂಧಿಯಾದ ಈತ ಮದ್ರಾಸ್ ಇನ್‌ಫೆಂಟ್ರಿಯನ್ನು ಸೇರಿ 1816ರಲ್ಲಿ ಕ್ಯಾಪ್ಟನ್ ಪದವಿಗೇರಿದ. 1817-18ರಲ್ಲಿ ಪಿಂಡಾರಿಗಳ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಪಾತ್ರವಹಿಸಿದ್ದು, 1818ರಲ್ಲಿ ಲೆಫ್ಟಿನೆಂಟ್ ಕರ್ನಲ್ ಆದ. ಮೈಸೂರಿನ ವಿದ್ಯಮಾನಗಳ ಬಗ್ಗೆ ವಿಚಾರಣೆ ನಡೆಸಲು ಲಾರ್ಡ್ ವಿಲಿಯಂ ಬೆಂಟಿಂಕ್ ಏರ್ಪಡಿಸಿದ್ದ ಸಮಿತಿಯಲ್ಲಿ (1831) ಈತನೂ ಒಬ್ಬ ಸದಸ್ಯ, ಮುಮ್ಮಡಿ ಕೃಷ್ಣರಾಜಒಡೆಯರಿಂದ ವಶಪಡಿಸಿಕೊಂಡ ಸಂಸ್ಥಾನಾಡಳಿತವನ್ನು ನಿರ್ವಹಿಸುವುದಕ್ಕಾಗೀ ಈತ ಕಿರಿಯ ಕಮಿಷನರ್

ಕಬ್ಬನ್, ಸರ್ ಮಾರ್ಕನ ಪ್ರತಿಮೆ

ಅಧಿಕಾರಿಯಾಗಿದ್ದು 1834ರಲ್ಲಿ ಅದರ ಏಕೈಕ ಕಮಿಷನರ್ ಆಗಿ ನೇಮಕವಾದ. 27 ವರ್ಷಗಳ ಕಾಲ ಈ ಹುದ್ದೆಯಲ್ಲಿದ್ದ ಈತ ಸಂಸ್ಥಾನದ ಆಡಳಿತ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಬಹಳ ಮಟ್ಟಿಗೆ ಸುಧಾರಿಸಿದ. ಸಂಸ್ಥಾನವನ್ನು ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ ಮತ್ತು ನಗರಗಳೆಂಬ ನಾಲ್ಕು ವಿಭಾಗಗಳನ್ನಾಗಿ ಮಾಡಿ ಅವಕ್ಕೆ ಮೇಲಧಿಕಾರಿಗಳನ್ನು ನೇಮಿಸಿದ. ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ಅಮಲ್ದಾರನನ್ನೂ ಪ್ರತಿ ಹೋಬಳಿಗೂ ಒಬ್ಬ ಶೇಕ್‌ದಾರನನ್ನೂ ನೇಮಿಸಲಾಯಿತು. ತನ್ನ ಆಪ್ತಕಾರ್ಯದರ್ಶಿಯನ್ನೆ ಪ್ರಮುಖ ಕಾರ್ಯದರ್ಶಿಯನ್ನಾಗಿ ನೇಮಿಸಿ ಆಡಳಿತವನ್ನು ಬಿಗಿಗೊಳಿಸಿದ್ದಲ್ಲದೆ ಸರ್ಕಾರದ ಚಟುವಟಿಕೆಗಳನ್ನು ಜನರಿಗೆ ತಿಳಿಯಪಡಿಸುವ ವ್ಯವಸ್ಥೆಯನ್ನು ವಿಸ್ತರಿಸಿದ. 85 ತಾಲ್ಲೂಕು ನ್ಯಾಯಾಲಯಗಳು, 8 ಪ್ರಧಾನ ಸದರ್ ಮುನ್ಸಿಫ್ ನ್ಯಾಯಾಲಯಗಳು, 3 ಸೂಪರಿಂಟೆಂಡೆಂಟ್ ನ್ಯಾಯಾಲಯಗಳು ಮತ್ತು ಮೂವರು ನ್ಯಾಯಾಧೀಶರಿರುವ ಒಂದು ಹುಜೂರ್ ಅದಾಲತ್ ನ್ಯಾಯಾಲಯ ಇರುವಂತೆ ನ್ಯಾಯಾಂಗವನ್ನು ಪುನರ್ವ್ಯವಸ್ಥೆಗೊಳಿಸಿ ದೃಢಗೊಳಿಸಿದ. ಒಟ್ಟು 2560 ಕಿಮೀ ಉದ್ದದ ರಸ್ತೆಗಳೂ ಅನೇಕ ಸೇತುವೆಗಳೂ ಈತನ ಕಾಲದಲ್ಲಿ

ರಚಿತವಾಗಿ ಬೆಂಗಳೂರಿಗೂ ಜಿಲ್ಲಾ ಕೇಂದ್ರಗಳಿಗೂ ಸಂಪರ್ಕ ಸುಲಭವಾಯಿತು. ಜಾಲಾರ್‌ಪೇಟೆ–ಬೆಂಗಳೂರು ರೈಲುಮಾರ್ಗ ನಿರ್ಮಾಣವಾದದ್ದು ಈತನ ಕಾಲದಲ್ಲೇ (1859). ಸಂಸ್ಥಾನದ ಆದಾಯವೂ ಹೆಚ್ಚಿತು. 1834ರಲ್ಲಿ 68ಲಕ್ಷ ರೂ ಇದ್ದ ವಾರ್ಷಿಕ ಆದಾಯ 1855–56ರಲ್ಲಿ 85 ಲಕ್ಷ ರೂ.ಗಳಿಗೆ ಏರಿತು. ಸರ್ಕಾರದ ಎಲ್ಲ ಸಾಲಗಳನ್ನೂ ತೀರಿಸಲು ಸಾಧ್ಯವಾಗಿ, ಹಣಕಾಸಿನ ಸ್ಥಿತಿ ಸುಧಾರಿಸಲು ಸಾಧ್ಯವಾದದ್ದು ಈತನ ದಕ್ಷ ಆಡಳಿತದಿಂದ.

ಕಬ್ಬನ್ ಕೊನೆಯ ತನಕವೂ ಅವಿವಾಹಿತನಾಗಿಯೇ ಇದ್ದ. 60 ವರ್ಷಗಳ ಕಾಲ ಭಾರತದಲ್ಲಿ ಸೇವೆ ಸಲ್ಲಿಸಿದ. ಈತ ಈ ಕಾಲದಲ್ಲಿ ಒಮ್ಮೆಯೂ ಭಾರತವನ್ನು ಬಿಟ್ಟುಹೋಗಲಿಲ್ಲ. 1861ರಲ್ಲಿ ಅನಾರೋಗ್ಯದ ನಿಮಿತ್ತ ಕೆಲಸಕ್ಕೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಹಿಂದಿರುಗುತ್ತಿದ್ದಾಗ ಹಾದಿಯಲ್ಲಿ ಸೂಯೆಜ್‌ನಲ್ಲಿ ತೀರಿಕೊಂಡ. ಇವನ ಪಾರ್ಥಿವ ಶರೀರವನ್ನು ಐಲ್ ಆಫ್ ಮ್ಯಾನ್‌ಗೆ ಕೊಂಡೊಯ್ದು ಅಲ್ಲಿ ಸಮಾಧಿ ಮಾಡಲಾಯಿತು. ಹಲವು ಶತಮಾನಗಳಲ್ಲಿ ಆ ದ್ವೀಪದಲ್ಲಿ ಹುಟ್ಟಿದವರ ಪೈಕಿ ಅತಿ ದೊಡ್ಡ ವ್ಯಕ್ತಿ ಈತನೆಂದು ಅಲ್ಲಿಯ ಜನ ಘೋಷಿಸಿದರು.

ಕಮೀಷನರ್ ಆಗಿ ಕೆಲಸ ಮಾಡುತ್ತಿದ್ದಾಗ 1852ರಲ್ಲಿ ಈತನಿಗೆ ಸೈನ್ಯದ ಹುದ್ದೆಯಲ್ಲಿ ಲೆಫ್ಟಿನೆಂಟ್ ಜನರಲ್ ಆಗಿ ಬಡ್ತಿ ಸಿಕ್ಕಿತ್ತು. ಬ್ರಿಟಿಷ್ ರಾಣಿ ಈತನಿಗೆ 1856ರಲ್ಲಿ ಸಿ.ಬಿ. ಪ್ರಶಸ್ತಿಯನ್ನೂ 1859ರಲ್ಲಿ ಕೆ.ಸಿ.ಬಿ ಪ್ರಶಸ್ತಿಯನ್ನೂ ನೀಡಿದಳು. (ಎಸ್.ಎನ್.ಕೆ.ಎ.)

**ಕಬ್ಬಾರೆ ಹಕ್ಕಿ :** ಸಿಕೋನಿಫಾರ್ಮಿಸ್ ಗಣದ ಆರ್ಡೆಯಿಡೀ ಕುಟುಂಬಕ್ಕೆ ಸೇರಿದ ನೀಳಗಾಲಿನ ನೀರಿನಲ್ಲಿ ನಡೆದಾಡುವ ಹಕ್ಕಿಗಳು (ಹೆರಾನ್). ಒಂದು ಬಗೆಯ ಕಬ್ಬಾರೆಯನ್ನು ಕನ್ನಡ ನಾಡಿನ ಕೆಲವೆಡೆ ನಾರಾಯಣಿ ಪಕ್ಷಿ ಎಂದು ಕರೆಯುತ್ತಾರೆ.

ಇವು ಪ್ರಪಂಚದ ಉಷ್ಣ ಹಾಗೂ ಸಮಶೀತೋಷ್ಣ ವಲಯಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. ಇವುಗಳ ದೇಹದ ಗಾತ್ರ ಕೋಳಿಯ ಗಾತ್ರದಿಂದ ಹಿಡಿದು ರಣಹದ್ದಿನ ಗಾತ್ರಕ್ಕೂ ಸ್ವಲ್ಪ ದೊಡ್ಡದಾಗಿರುತ್ತದೆ. ಇವುಗಳ ಕೊಕ್ಕು ನೀಳ ಮತ್ತು ಚೂಪು, ಭಲ್ಲೆಯ ಆಕಾರ; ಕೆಲವು ಪ್ರಭೇದಗಳಲ್ಲಿ ಕೊಕ್ಕಿನ ಅಂಚು ಸ್ವಲ್ಪಮಟ್ಟಿಗೆ ದಂತಿತವಾಗಿರುತ್ತದೆ. ಕುತ್ತಿಗೆ ಅನೇಕ ಪ್ರಭೇದಗಳಲ್ಲಿ ನೀಳ, ತೆಳು ಹಾಗೂ ಬಳುಕುವಂಥದ್ದು, ಕುತ್ತಿಗೆಯ ಮಧ್ಯಭಾಗ ಕೊಂಕಾಗಿರುವುದರಿಂದ ಇವು ಹಾರುವಾಗ ಅಥವಾ ಕಾಲುಗಳ ಮೇಲೆ ನಿಂತಾಗ, ಕುತ್ತಿಗೆ S ಆಕಾರದಂತಿರುವುದು ಈ ಹಕ್ಕಿಗಳ ಮತ್ತೊಂದು ವೈಶಿಷ್ಟ್ಯ. ಇವುಗಳ ಕಾಲುಗಳಲ್ಲಿ ಟಿಬಿಯ ಎಲುಬು ಇರುವ ಭಾಗ ನೀಳ ವಾಗಿದ್ದು, ಭಾಗಶಃ ಬೋಳಾಗಿರುತ್ತದೆ. ಬೆರಳುಗಳು ನೀಳವಾಗಿ ತೆಳುವಾಗಿವೆ. ಮಧ್ಯದ ಮತ್ತು ಹೊರ ಬೆರಳುಗಳ ಮಧ್ಯೆ ಒಂದು ಚಿಕ್ಕ ಜಲಪಾದವಿದೆ. ಮಧ್ಯದ ಬೆರಳಿನ ಸ್ವಲ್ಪ ಬಾಗಿದ ಚೂಪು ನಖದ ಮೇಲೆ ಬಾಚಣಿಗೆಯಂಥ ರಚನೆಯಿದೆ. ಹಿಂಬೆರಳು ಚೆನ್ನಾಗಿ ಬೆಳೆದು ಇತರ ಬೆರಳುಗಳ ಮಧ್ಯದಲ್ಲಿಯೇ ಇರುವುದರಿಂದ ಹಕ್ಕಿ ನಿಂತು ಕೊಂಡಾಗ ದೇಹದ ಭಾರ ಎಲ್ಲ ಬೆರಳುಗಳ ಮೇಲೆ ಬೀಳುತ್ತದೆ. ದೇಹವನ್ನು ಆವರಿಸಿರುವ ತುಪ್ಪಳ ಮೃದು ಮತ್ತು ಸಾಮಾನ್ಯವಾಗಿ ವಿರಳ. ದೇಹದ ಬಣ್ಣ ಬಿಳುಪು. ಬೂದು, ಕಂದು ಅಥವಾ ಪಾಟಲ. ಕೆಲವು ಪ್ರಭೇದಗಳಲ್ಲಿ ಗರಿಗಳು ಮಚ್ಚೆ ಮತ್ತು ಪಟ್ಟೆಗಳಿಂದ ಕೂಡಿರುವುದೂ ಉಂಟು. ಸಂತಾನವೃದ್ಧಿಯ ಕಾಲದಲ್ಲಿ ಕೆಲವು ಬಗೆಯ ಪಕ್ಷಿಗಳ ತಲೆಯ ಮತ್ತು ಬೆನ್ನಿನ ಮೇಲೆ ಉದ್ದದ, ನಾರು ರೂಪದ ಅಲಂಕಾರದ ಗರಿಗಳು ಮೂಡುತ್ತವೆ. ಗಂಡು ಮತ್ತು ಹೆಣ್ಣು ಪಕ್ಷಿಗಳು ಹೊರನೋಟಕ್ಕೆ ಒಂದೇ ಬಗೆ. ಇವು ಸಾಮಾನ್ಯವಾಗಿ ಕೆರೆ, ಕೊಳ, ತೊರೆ, ಖಾರಿ ಮತ್ತು ಅಳಿವೆಗಳಲ್ಲಿ ಕಂಡುಬಂದರೂ ಕೆಲವು ಸಂದರ್ಭಗಳಲ್ಲಿ ಒಣ ಭೂ ಪ್ರದೇಶದ ಮೇಲೂ ನಡೆದಾಡುವುದನ್ನು ಕಾಣಬಹುದು. ಇವುಗಳ ರೆಕ್ಕೆ ಅಗಲ, ಬಾಲ ಮೋಟಕು. ಇವು ನೀರಿನ ಮೇಲೆ ಕೆಳಮಟ್ಟದಲ್ಲಿಯೇ ಹಾರುತ್ತವೆ. ಉತ್ತಳ ನೀರಿನಲ್ಲಿ ನಿಶ್ಚಲವಾಗಿ ನಿಲ್ಲುವುದು ಇವಕ್ಕೆ ಪ್ರಿಯ. ಈ ಭಂಗಿಯಲ್ಲಿಯೇ



ಇವು ತಮ್ಮ ಆಹಾರ ಜೀವಿಯನ್ನು ಹೊಂಚು ಹಾಕಿ ಸಮಯ ಸಿಕ್ಕಿದಾಗ ತಮ್ಮ ಚೂಪಾದ ಕೊಕ್ಕಿನಿಂದ ಹಿಡಿದು ಇಡಿಯಾಗಿ ಗಬಕ್ಕನೆ ನುಂಗುತ್ತವೆ. ಅಜೀರ್ಣವಾದ ಆಹಾರವನ್ನು ತುತ್ತುಗಳ ರೂಪದಲ್ಲಿ ಹೊರಕ್ಕೆ ಹಾಕುತ್ತವೆ. ನೀರಿನಲ್ಲಿ ವಾಸಿಸುವ ಮೀನು, ಕಪ್ಪೆ, ಏಡಿ, ಸೀಗಡಿ ಮುಂತಾದುವು ಇವುಗಳ ಮುಖ್ಯ ಆಹಾರ. ಬಯಲಿನಲ್ಲಿದ್ದಾಗ ಕೀಟ ಮತ್ತು ಹಲ್ಲಿಗಳನ್ನು ಹಿಡಿಯುವುದೂ ಉಂಟು. ಆಹಾರಾರ್ಜನೆ ಮಾಡುವಾಗ ಇವು ಒಂಟೊಂಟಿಯಾಗಿ ಕಂಡು ಬಂದರೂ ಸಂತಾನೋತ್ಪತ್ತಿ ಕಾಲದಲ್ಲಿ ಗುಂಪುಗೂಡಿ ಸಾಮೂಹಿಕವಾಗಿ ಮರಗಳ ಮೇಲೆ, ಪೊದೆಗಳಲ್ಲಿ ಅಥವಾ ಭೂಮಿಯ ಮೇಲೆ ಮರದ ಕಡ್ಡಿಗಳ ಒರಟು ಗೂಡುಗಳನ್ನು ಕಟ್ಟುತ್ತವೆ. ಒಂದು ಗೂಡಿನಲ್ಲಿ 3–6 ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳ ಬಣ್ಣ ಮಾಸಲು ಕಂದು ಅಥವಾ ನೀಲಿಮಿಶ್ರಿತ ಬೂದು. 21–26 ದಿನಗಳವರೆಗೆ ಕಾವು ಕೊಟ್ಟಮೇಲೆ ಮೊಟ್ಟೆಯಿಂದ ಮರಿಗಳು ಹೊರಬರುತ್ತವೆ. ಗೂಡು ಕಟ್ಟುವುದರಲ್ಲಿ ಕಾವು ಕೊಡುವುದರಲ್ಲಿ ಮತ್ತು ಮರಿಗಳಿಗೆ ಗುಟುಕು ಕೊಟ್ಟು ಪಾಲನೆ ಮಾಡುವುದರಲ್ಲಿ ಗಂಡು ಹೆಣ್ಣು ಎರಡೂ ಭಾಗಿಯಾಗುತ್ತವೆ.

ನಮ್ಮ ದೇಶದಲ್ಲಿ ಕಬ್ಬಾರೆ ಎಂದು ಕರೆಯುವ ಹಕ್ಕಿಗಳು ಬೇರೆ ಬೇರೆ ಜಾತಿಗೆ ಸೇರಿವೆ. ಅಲ್ಲದೆ ಇವುಗಳ ಬೇರೆ ಬೇರೆ ಪ್ರಭೇದಗಳು ಅಮೆರಿಕ, ಯುರೋಪು, ಆಫ್ರಿಕ ಖಂಡಗಳಲ್ಲೂ ವ್ಯಾಪಿಸಿವೆ. ಭಾರತದಲ್ಲಿ ಅರ್ಡೆಯ ಜಾತಿಯಲ್ಲಿ ಆರ್ಡೆಯ ಇನ್ಸಿಗ್ನಿಸ್ (ಬಿಳಿ ಹೊಟ್ಟೆ ಕಬ್ಬಾರೆ), ಆರ್ಡೆಯ ಗೋಲಿಯಾಸ್ (ಐದಡಿ ನಿಲುವಿನ ಪಕ್ಷಿ), ಆರ್ಡೆಯ ಸಿನೇರಿಯ (ನಾರಾಯಣಿ ಪಕ್ಷಿ) ಮತ್ತು ಆರ್ಡೆಯ ಪರ್ಪ್ಯೂರಿಯ (ಕೆಂಪು ನಾರಾಯಣಿ ಪಕ್ಷಿ)–ಇವು ಪ್ರಮುಖ ಪ್ರಭೇದಗಳು. ಬೂಟೊರಿಡಿಸ್ ಸ್ಟ್ರಯೇಟಸ್ (ಪುಟ್ಟ ಹಸಿರು ಕಬ್ಬಾರೆ), ಆರ್ಡಿಯೋಲ ಗ್ರಾಯಿ (ಬತ್ತದ ಗದ್ದೆಯ ಅಥವಾ ಕೊಳದ ಕಬ್ಬಾರೆ), ನಿಕ್ಟಿಕೊರಾಕ್ಸ್ ನಿಕ್ಟಿಕೊರಾಕ್ಸ್ (ಇರುಳ ಕಂಕ)–ಈ ಜಾತಿ ಪ್ರಭೇದಗಳೂ ಕಂಡುಬರುತ್ತವೆ. (ಬಿ.ಎನ್.ಬಿ.)

**ಕಬ್ಬಾಳ ದುರ್ಗ :** ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿರುವ ಒಂದು ಬೆಟ್ಟ. ಸಮುದ್ರಮಟ್ಟದಿಂದ 3,507' ಎತ್ತರವಿದ್ದು ಶಂಖುವಿನಾಕಾರದಲ್ಲಿದೆ. ಕಡಿದಾದ ಪಕ್ಕಗಳಿಂದ ಕೂಡಿದ ಈ ಬೆಟ್ಟದ ಮೇಲೆ ದುರ್ಭೇದ್ಯವಾದ ಕೋಟೆಯೊಂದನ್ನು ಕಟ್ಟಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಕೋಟೆಯನ್ನು ಕಟ್ಟಿಸಿದವ ಗಾಥಿಕ್ ರಾಜ ಎಂಬ ಹೆಸರಿನ ಪಾಳೆಯಗಾರನೆಂಬ ಪ್ರತೀತಿಯಿದೆ. ಒಂದು ಕಡೆಯಿಂದ ಮಾತ್ರ ಈ ಬೆಟ್ಟದ ಮೇಲೇರಿಹೋಗುವುದು ಸಾಧ್ಯ. ಅಲ್ಲೂ ಮೆಟ್ಟಿಲುಗಳು ಬಲು ಕಡಿದು; ಅದನ್ನು ಬಂಡೆಯಲ್ಲೇ ಕೊರೆಯಲಾಗಿದೆ. ಕೆಲವು ಕಡೆಗಳಲ್ಲಿ ಮೆಟ್ಟಿಲುಗಳು ಆರು ಅಂಗುಲಗಳಿಗೂ ಕಿರಿದಾಗಿವೆ. ಆದ್ದರಿಂದ ಇದನ್ನು ಹತ್ತುವುದು ಬಲುಕಷ್ಟ. ಸಾಕಷ್ಟು ಆಹಾರ ನೀರುಗಳನ್ನೊದಗಿಸಿಕೊಂಡು ಇಲ್ಲಿ ಉಳಿದರೆ ಶತ್ರುವಿನ ಆಕ್ರಮಣದ ಭಯವಿಲ್ಲದೆ ಇರುವುದು ಸಾಧ್ಯವಿತ್ತು. ಈ ಪ್ರದೇಶವನ್ನಾಳುತ್ತಿದ್ದ ಹಿಂದೂ ಮುಸ್ಲಿಂ ಆಡಳಿತಗಾರರೂ ಮುಮ್ಮಡಿ ಕೃಷ್ಣರಾಜ ಒಡೆಯರ ಸರ್ಕಾರದವರೂ ಅಪಾಯಕಾರಿಗಳಾದ ರಾಜದ್ರೋಹಿಗಳನ್ನು ಇಲ್ಲಿ ಇಡುತ್ತಿದ್ದರು. ಇಲ್ಲಿಯ ನೀರು ಕೂಡ ವಿಷಮಯವೆಂದು ಪರಿಗಣಿತವಾಗಿತ್ತು. ಅಹಿತಕರ ವಾತಾವರಣವೂ ಅತೃಪ್ತಿಕರ ಆಹಾರವೂ ಖೈದಿಯ ಬಂಧನದ ನೋವಿನ ಅವಧಿಯನ್ನು ಮೊಟಕುಮಾಡಿ ಬೇಗ ಅವನನ್ನು ಪರಲೋಕಕ್ಕೆ ಅಟ್ಟುತ್ತಿತ್ತೆಂದು ಕರ್ನಲ್ ವಿಲ್ಕ್ಸ್ ಬರೆದಿದ್ದಾನೆ. ಮೈಸೂರನ್ನಾಳುತ್ತಿದ್ದ (1731–34) ಏಳನೆಯ ಚಾಮರಾಜ ಒಡೆಯರನ್ನೂ ಅವರ ಪತ್ನಿಯನ್ನೂ ದಳವಾಯಿ ದೇವರಾಜ ಸೆರೆಯಲ್ಲಿಟ್ಟಿದ್ದದ್ದು ಈ ದುರ್ಗದಲ್ಲೇ. ಅವರು ಇಲ್ಲಿ ಬಹುಕಾಲ ಬದುಕಲಿಲ್ಲ. ಹೈದರ್‌ಆಲಿ ಇಲ್ಲಿಯ ಕೋಟೆಯನ್ನು ದುರಸ್ತುಗೊಳಿಸಿ ಇದಕ್ಕೆ ಜಾಫರಾಬಾದ್ ಎಂದು ಹೆಸರಿಟ್ಟ. ಆದರೆ ಇಂದು ಯಾರೂ ಇದನ್ನು ಆ ಹೆಸರಿನಿಂದ ಕರೆಯುವುದಿಲ್ಲ. 1864ರಲ್ಲಿ ಇಲ್ಲಿಯ ಫಿರಂಗಿಗಳನ್ನೂ ಮದ್ದನ್ನೂ ನಾಶಗೊಳಿಸಲಾಯಿತಲ್ಲದೆ ಇಲ್ಲಿದ್ದ ಸಿಬ್ಬಂದಿಯನ್ನು ಸ್ಥಳಾಂತರಗೊಳಿಸಲಾಯಿತು.

**ಕಬ್ಬಿಣ :** ಆವರ್ತಕೋಷ್ಟಕದಲ್ಲಿ 8ನೆಯ ಗುಂಪಿನ ಸಂಕ್ರಾಂತಿಲೋಹ ಪರಮಾಣು ತೂಕ 55.847±0.003. ರಾಸಾಯನಿಕ ಸಂಕೇತ Fe (ಲ್ಯಾಟಿನ್ನಿನಲ್ಲಿ Ferrum). ನೈಸರ್ಗಿಕವಾಗಿ ದೊರೆಯುವ ಸಮಸ್ಥಾನಿಗಳು 54, 56, 57, 58. ಎಲೆಕ್ಟ್ರಾನಿಕ್ ವಿನ್ಯಾಸ $1s^2\ 2s^2\ 2p^6\ 3s^2\ 3p^6\ 3d^6\ 4s^2$ ಅಯಾನಿಕ್ ತ್ರಿಜ್ಯ $Fe^{+2}$ 0.80 Å ; $Fe^{+3}$ 0.67 Å ಲೋಹ ತ್ರಿಜ್ಯ 1.2412 Å ಪ್ರಥಮ ಅಯಾನೀಕರಣ ವಿಭವ 7.896 eV; ದ್ವಿತೀಯ 16.5 eV.

ವಿಪುಲತೆಯಲ್ಲಿ ಲೋಹಗಳ ಪೈಕಿ ಕಬ್ಬಿಣಕ್ಕೆ ಎರಡನೆಯ ಸ್ಥಾನ (ಮೊದಲನೆಯದು ಅಲ್ಯೂಮಿನಿಯಮ್). ಭೂಮಿಯ ತಿರುಳಿನ ಬಹ್ವಂಶವೂ ಕಬ್ಬಿಣ ಲೋಹದಿಂದ ಕೂಡಿದೆ. ಹೊರಕವಚಕ್ಕೆ ಬಂದಂತೆ ಈ ಲೋಹ ಇತರ ಪದಾರ್ಥಗಳೊಡನೆ ಬೆರೆತು ರಾಸಾಯನಿಕ ಕ್ರಿಯೆಗಳು ಜರುಗಿ ಶುದ್ಧ ಕಬ್ಬಿಣವೆಂಬುದೊಂದು ವಿರಳ ವಸ್ತು ಎನ್ನಿಸಿದೆ. ಬಾಹ್ಯಾಕಾಶದಿಂದ ಭೂಮಿಗೆ ಕೆಡೆಯುವ ಉಲ್ಕಾಪಿಂಡಗಳೇ ಪ್ರಾಚೀನ ಮಾನವನಿಗೆ ಶುದ್ಧ ಕಬ್ಬಿಣ ಲೋಹದ

ಮೂಲಗಳಾಗಿದ್ದುವು. ಆದ್ದರಿಂದ ಮಾನವ ಮೊತ್ತಮೊದಲು ಬಳಸಿದ ಕಬ್ಬಿಣ ಪ್ರಾಯಶಃ ಉಲ್ಕಾಪಿಂಡ ಮೂಲದ್ದಾಗಿರಬೇಕು. ಭೂಮಿಯಲ್ಲಿ ನಮಗೆ ದೊರೆಯುವ ಕಬ್ಬಿಣ ಸಂಯುಕ್ತ ರೂಪದಲ್ಲಿದೆ. ಕಬ್ಬಿಣದ ಪ್ರಮಾಣ ಹೆಚ್ಚಾಗಿರುವ ಕಬ್ಬಿಣದ ಅದಿರುಗಳ ನಿಕ್ಷೇಪಗಳು ಸಾಕಷ್ಟು ಇವೆ. ಇವುಗಳಿಂದ ಲೋಹವನ್ನು ಸುಲಭವಾಗಿಯೂ ಅಗ್ಗವಾಗಿಯೂ ಪಡೆಯುವ ಸಾಧ್ಯತೆಯೂ ಕಬ್ಬಿಣವನ್ನು ಇಂಗಾಲ ಮತ್ತು ಇತರ ವಿಶೇಷ ಲೋಹಗಳೊಡನೆ ಸೂಕ್ತ ಪ್ರಮಾಣಗಳಲ್ಲಿ ಮಿಶ್ರಿಸುವುದರಿಂದ ಮತ್ತು ಉಷ್ಣ ನಿಯಂತ್ರಣದಿಂದ ಅಪೇಕ್ಷಿತ ದೃಢತೆ, ಕಾಠಿನ್ಯ ಮತ್ತು ಇತರ ಗುಣಗಳಿರುವ ವಿವಿಧ ರೀತಿಯ ಉಕ್ಕುಗಳ ತಯಾರಿಕೆಯ ಸೌಲಭ್ಯವೂ ಕಬ್ಬಿಣಕ್ಕೆ ಲೋಹಗಳ ಪೈಕಿ ಅಗ್ರಸ್ಥಾನವನ್ನು ತಂದುಕೊಟ್ಟಿವೆ.

**ಕಬ್ಬಿಣದ ಅದಿರುಗಳು :** ಅದಿರುಗಳಾಗಿ ಉಪಯೋಗಿಸಲು ಯೋಗ್ಯವಾದ ಕಬ್ಬಿಣದ ಖನಿಜಗಳಲ್ಲಿ ಈ ಕೆಳಗಿನವು ಮುಖ್ಯವಾದವು– ಹೆಮಟೈಟ್ $Fe_2O_3$ (ಕಬ್ಬಿಣದ ಅಂಶ 70%); ಮ್ಯಾಗ್ನಟೈಟ್ $Fe_3O_4$ (ಕಬ್ಬಿಣದ ಅಂಶ 72.4%); ಅಮೊನೈಟ್ $x\,Fe_2O_3.\,y\,H_2O$ (ಕಬ್ಬಿಣದ ಅಂಶ 52.3–66.3%). ಸಿಡರೈಟ್ $FeCO_3$(ಕಬ್ಬಿಣದ ಅಂಶ 48.38%). ಈ ಅದಿರುಗಳು ಬೃಹತ್ ಪ್ರಮಾಣದಲ್ಲಿ ಶುದ್ಧರೂಪದಲ್ಲಿ ದೊರಕುವುದು ವಿರಳ. ಸಾಮಾನ್ಯವಾಗಿ ಇದರೊಡನೆ ಕಲ್ಲುಮಣ್ಣುಗಳು–ವಿಶೇಷವಾಗಿ ಸಿಲಿಕೇಟುಗಳು ಮಿಶ್ರಿತವಾಗಿರುವುವು. ಅನೇಕ ವೇಳೆ ಸಲ್ಫೈಡುಗಳು, ಫಾಸ್ಫೇಟುಗಳು ಈ ಅದಿರುಗಳಲ್ಲಿ ಅಪದ್ರವ್ಯಗಳಾಗಿರುವುದುಂಟು. ಹೇರಳವಾಗಿ ದೊರೆಯುವ ಆದರೆ ಕಬ್ಬಿಣದ ತಯಾರಿಕೆಗೆ ಉಪಯೋಗವಲ್ಲದ ಇನ್ನೊಂದು ಖನಿಜ ಪಿರೈಟೀಸ್ $FeS_2$. ಸಲ್ಫ್ಯೂರಿಕ್ ಆಮ್ಲದ ತಯಾರಿಕೆಗೆ ಅವಶ್ಯವಾದ ಸಲ್ಫರ್ ಡೈ ಆಕ್ಸೈಡಿನ ತಯಾರಿಕೆಗೆ ಇದನ್ನು ಉಪಯೋಗಿಸುವರು. ಬ್ಯಾಕೋನೈಟ್ ಎಂಬ ಸಿಲಿಕೇಟ್ ಅದಿರು ಭಾರಿ ಪ್ರಮಾಣದಲ್ಲಿ ಸಂಯುಕ್ತ ಸಂಸ್ಥಾನದಲ್ಲಿರುವ ಇನ್ನೊಂದು ಕಬ್ಬಿಣದ ಅದಿರು. ಆದರೆ ಇದರಲ್ಲಿ ಕಬ್ಬಿಣದ ಅಂಶ ಶೇ.20–30 ಆಗಿದ್ದು, ಇದರಿಂದ ಲೋಹವನ್ನು ಲಾಭದಾಯಕ ರೀತಿಯಲ್ಲಿ ಪಡೆಯುವ ವಿಧಾನವನ್ನು ಇನ್ನೂ ಕಂಡುಹಿಡಿಯಲಾಗಿಲ್ಲ. ಇದಕ್ಕಾಗಿ ಪ್ರಯತ್ನಗಳು ನಡೆಯುತ್ತಿವೆ. ಪ್ರಾಯಶಃ ಭವಿಷ್ಯದಲ್ಲಿ ಇದು ಕಬ್ಬಿಣದ ಮುಖ್ಯ ಮೂಲಗಳಲ್ಲಿ ಒಂದಾಗಬಹುದು.

**ಕಬ್ಬಿಣದ ತಯಾರಿಕೆ :** ಈಗ್ಗೆ ಸು. 4,000 ವರ್ಷಗಳ ಹಿಂದೆಯೇ ಮಾನವ ಕಬ್ಬಿಣವನ್ನು ಉಪಯೋಗಿಸುತ್ತಿದ್ದನೆಂಬುದಕ್ಕೆ ಸಾಕ್ಷ್ಯಗಳು ದೊರಕಿವೆ. ಪ್ರಾಚೀನರು ಕಬ್ಬಿಣವನ್ನು ಅದಿರುಗಳಿಂದ ಒಂದು ರೀತಿಯ ಒರಟು ಕುಲುಮೆಗಳಲ್ಲಿ ತಯಾರಿಸುತ್ತಿದ್ದರು. ಕಬ್ಬಿಣದ ಅದಿರನ್ನು ಇದ್ದಲಿನೊಡನೆ ಮಿಶ್ರಮಾಡಿ ಈ ರಾಶಿಯ ಮೂಲಕ ಗಾಳಿ ಬೀಸುವಂತೆ ತಳದಲ್ಲಿ ಒಂದು ರಂಧ್ರ ಮತ್ತು ಮೇಲ್ಭಾಗದಲ್ಲಿ ಒಂದು ರಂಧ್ರವನ್ನಿಟ್ಟು ಅನಂತರ ಇದ್ದಲನ್ನು ಹೊತ್ತಿಸುತ್ತಿದ್ದರು. ಒಂದು ಭಾಗ ಇದ್ದಲು ಉರಿದು ಕಾರ್ಬನ್ ಡೈ ಆಕ್ಸೈಡ್ ಆಗುತ್ತಿತ್ತು. ಇದು ಮೇಲೇರಿ ಇದ್ದಲಿನಿಂದ ಅಪಕರ್ಷಿತವಾಗಿ ಕಾರ್ಬನ್ ಮಾನಾಕ್ಸೈಡ್ ಆಗಿ ಕಬ್ಬಿಣದ ಆಕ್ಸೈಡನ್ನು ಕಬ್ಬಿಣವಾಗಿ ಅಪಕರ್ಷಿಸುತ್ತಿತ್ತು.

ಆಧುನಿಕ ರೀತಿಯಲ್ಲಿ ಕಬ್ಬಿಣದ ತಯಾರಿಕೆ 1620ರಿಂದ ಆರಂಭವಾಯಿತೆನ್ನಬಹುದು. ಈಗ ಕಬ್ಬಿಣದ ಅದಿರುಗಳನ್ನು ಊದು ಕುಲುಮೆಗಳಲ್ಲಿ ಕರಗಿಸಿ ಕಬ್ಬಿಣವನ್ನು ತಯಾರಿಸುವರು **(ನೋಡಿ–ಉಕ್ಕು)**.

ಕುಲುಮೆಯಲ್ಲಿ ಅನೇಕ ರಾಸಾಯನಿಕ ವರ್ತನೆಗಳಾಗುವ ಪರಿಣಾಮವಾಗಿ ಕರಗಿದ ಕಬ್ಬಿಣ ಮತ್ತು ಕರಗಿದ ಕಿಟ್ಟಗಳು (ಸ್ಲ್ಯಾಗ್) ಉತ್ಪನ್ನವಾಗುವುವು. ಹೆಚ್ಚು ಸಾಂದ್ರವಾದ ಕರಗಿದ ಕಬ್ಬಿಣ ಕುಲುಮೆಯ ತಳದಲ್ಲಿ ಶೇಖರವಾಗುವುದು. ಇದರ ಮೇಲ್ಭಾಗದಲ್ಲಿ ಕಿಟ್ಟ ಶೇಖರವಾಗುವುದು. ನಿರ್ದಿಷ್ಟ ಅವಧಿಗಳಲ್ಲಿ ಕುಲುಮೆಯ ತಳದಲ್ಲಿರುವ ಲೋಹದ್ವಾರವನ್ನು ತೆರೆದು ಕಬ್ಬಿಣವನ್ನು ಈಚೆಗೆ ಹರಿಸಿ ಇದನ್ನು ಮರಳಿನಿಂದ ಮಾಡಿದ ಅಚ್ಚುಗಳಿಗೆ ಹಾಯಿಸಿ ಕಬ್ಬಿಣದ ತುಂಡುಗಳನ್ನಾಗಿ ಮಾಡುವರು. ಸ್ವಲ್ಪ ಮೇಲಿರುವ ಇನ್ನೊಂದು ರಂಧ್ರದ ಮೂಲಕ ಕಿಟ್ಟ ಸಂತತವಾಗಿ ಹೊರಹರಿಯುವುದು.

**ಕುಲುಮೆಯಲ್ಲಿ ನಡೆಯುವ ರಾಸಾಯನಿಕ ವರ್ತನೆಗಳು :** ತಳದಿಂದ ಕುಲುಮೆಯನ್ನು ಪ್ರವೇಶಿಸುವ ಗಾಳಿ ಕೋಕ್‌ನ ಒಂದು ಭಾಗವನ್ನು ಉರಿಸಿ ಕಾರ್ಬನ್ ಡೈ ಆಕ್ಸೈಡಿಗೆ ಪರಿವರ್ತಿಸುವುದು. ಈ ಪ್ರದೇಶದಲ್ಲಿ ಉಷ್ಣತೆ ಸು. $1600^0$. ಸೆಂ. ಇಲ್ಲಿಂದ ಮೇಲಕ್ಕೆ ಹೋದಂತೆಲ್ಲ ಉಷ್ಣತೆ ಕಡಿಮೆಯಾಗುತ್ತ ಹೋಗುವುದು. ಅದು $1300^0$– ಸೆಂ. ಇರುವ ಭಾಗದಲ್ಲಿ ಸುಣ್ಣ ಕಲ್ಲು ವಿಭಜಿಸಿ ಸುಟ್ಟ ಸುಣ್ಣ (CaO) ಮತ್ತು ಕಾರ್ಬನ್ ಡೈ ಆಕ್ಸೈಡುಗಳು ($CO_2$) ಉಂಟಾಗುವುವು. ಈ ಪ್ರದೇಶದಲ್ಲಿಯೂ ಇಲ್ಲಿಂದ ಕೆಳಗೂ ಅದಿರಿನ ಅಪದ್ರವ್ಯಗಳಾದ ಮರಳು ಮತ್ತು ಫಾಸ್ಫೇಟುಗಳು ಸುಟ್ಟಸುಣ್ಣದೊಡನೆ ವರ್ತಿಸಿ, ಕ್ಯಾಲ್ಸಿಯಂ ಸಿಲಿಕೇಟ್ ಮತ್ತು ಕ್ಯಾಲ್ಸಿಯಂ ಫಾಸ್ಫೇಟುಗಳಾಗಿ ಪರಿವರ್ತಿತವಾಗುವುವು. ಸುಮಾರು ಇದೇ ಪ್ರದೇಶದಲ್ಲಿ ಕಾರ್ಬನ್ ಡೈ ಆಕ್ಸೈಡ್ ಕೋಕ್ ನಿಂದ ಕಾರ್ಬನ್ ಮಾನಾಕ್ಸೈಡಿಗೆ ಅಪಕರ್ಷಿತವಾಗುವುದು. ಕಬ್ಬಿಣದ ಆಕ್ಸೈಡನ್ನು ಕಬ್ಬಿಣಕ್ಕೆ ಅಪಕರ್ಷಿಸುವ ಮುಖ್ಯ ಅಪಕರ್ಷಣಾಕಾರಿ ಕಾರ್ಬನ್ ಮಾನಾಕ್ಸೈಡ್. ಕಬ್ಬಿಣದ ಮಾನಾಕ್ಸೈಡಿನ ಅಪಕರ್ಷಣ ಕಾರ್ಯ ಉಷ್ಣತೆ ಸು. 400–ಸೆಂ. ಇರುವ ಕುಲುಮೆಯ ಮೇಲ್ಭಾಗದಲ್ಲಿಯೇ ಆರಂಭವಾಗುವುದು. ಕಾರ್ಬನ್ ಮಾನಾಕ್ಸೈಡ್ ಫೆರಿಕ್ ಆಕ್ಸೈಡನ್ನು ಮೊದಲು ಫೆರಸ್ ಆಕ್ಸೈಡಿಗೂ ಅನಂತರ ಕಬ್ಬಿಣಕ್ಕೂ ಅಪಕರ್ಷಿಸುವುದು. ಈ ವರ್ತನೆಗಳು ಹಿಮ್ಮರುಳುವ ವರ್ತನೆಗಳಾಗಿದ್ದು, ಪರಿವರ್ತನಾನಂತರವೂ ಗಣನೀಯ ಪ್ರಮಾಣದಲ್ಲಿ ಕಾರ್ಬನ್ ಮಾನಾಕ್ಸೈಡ್ ಇರುವುದು. ಅಲ್ಪ ಭಾಗ ಫೆರಿಕ್ ಆಕ್ಸೈಡ್ ಇದ್ದಲಿನಿಂದ ನೇರವಾಗಿ ಅಪಕರ್ಷಿತವಾಗುವುದು. ಹೀಗೆ ಉಂಟಾದ ಕಬ್ಬಿಣದ ಮೇಲೆ ಇಂಗಾಲ ಶೇಖರಿಸುವುದು. ಈ ಇಂಗಾಲ ಶೇಖರಣೆ ಕಾರ್ಬನ್ ಮಾನಾಕ್ಸೈಡ್, ಕಾರ್ಬನ್ ಡೈ ಆಕ್ಸೈಡ್ ಮತ್ತು ಕಾರ್ಬನ್ ಆಗಿ ವಿಭಜಿಸುವುದರಿಂದ ಆದದ್ದು. ಈ ಕಬ್ಬಿಣ ಸು. $1200^0$– ಸೆಂ. ಉಷ್ಣತೆಯ ಪ್ರದೇಶಕ್ಕೆ ಬಂದಾಗ ಕರಗಿ ದ್ರವವಾಗುವುದು. ಕರಗಿದ ಕಬ್ಬಿಣದಲ್ಲಿ ಶೇ. 3–4 ಭಾಗ ಇಂಗಾಲ ವಿಲೀನವಾಗುವುದು. ಕುಲುಮೆಯಲ್ಲಿ ನಡೆಯುವ ಮುಖ್ಯ ರಾಸಾಯನಿಕ ಕ್ರಿಯೆಗಳನ್ನು ಕೆಳಗಿನ ಸಮೀಕರಣಗಳು ಸೂಚಿಸುತ್ತವೆ.

$$(i)\quad C + O_2 \rightarrow CO_2$$

$$(ii)\quad CaCO_3 \rightarrow CaO + CO_2$$

$$(iii)\quad CO_2 + C \Leftrightarrow 2CO$$

$$(iv)\quad CaO + SiO_2 \rightarrow CaSiO_3$$

$$(v)\quad 3CaO + P_2O_5 - Ca_3(PO4)_2$$

$$(vi)\quad Fe_2O_3 + 3CO - 2Fe + 3CO_2$$

$$(vii)\quad FeO + CO \Leftrightarrow Fe + CO_2$$

$$(viii)\quad Fe_2O_3 + 3C \Leftrightarrow 2Fe + 3CO$$

**ತಾಂಡವಾಳ (ಕ್ಯಾಸ್ಟ್ ಐರನ್):** ಊದು ಕುಲುಮೆಯಿಂದ ಹೊರಬಂದ ಕಬ್ಬಿಣಕ್ಕೆ ತಾಂಡವಾಳವೆಂದು ಹೆಸರು. ಇದರಲ್ಲಿ ಶೇ.3–4.5 ಭಾಗದಷ್ಟು ಇಂಗಾಲವೂ ಅಲ್ಪಪ್ರಮಾಣದಲ್ಲಿ ಸಿಲಿಕಾನ್, ಮ್ಯಾಂಗನೀಸ್, ಸಲ್ಫರ್ ಮತ್ತು ಫಾಸ್ಫರಸುಗಳೂ ಇವೆ. ಕರಗಿದ ತಾಂಡವಾಳವನ್ನು ದೊಡ್ಡ ದೊಡ್ಡ ಮೂಸೆಗಳಿಗೆ ಹಾಯಿಸಿ ಅದನ್ನು ನೇರವಾಗಿ ಉಕ್ಕಿನ ತಯಾರಿಕೆಗೆ ಉಪಯೋಗಿಸುವರು. ಅಥವಾ ಇದನ್ನು ಕಬ್ಬಿಣದ ತುಂಡುಗಳಾಗಿ ಅಚ್ಚು ಹಾಕಿ ಅದನ್ನು ಇತರ ಕಾರ್ಯಗಳಿಗೆ ಉಪಯೋಗಿಸುವರು.

ತಾಂಡವಾಳದಲ್ಲಿ ಎರಡು ವಿಧಗಳು : 1. ಬೂದು ತಾಂಡವಾಳ, 2. ಬಿಳಿಯ ತಾಂಡವಾಳ. ಮರಳಿನ ಅಚ್ಚುಗಳಲ್ಲಿ ಅಚ್ಚು ಹಾಕಿ ಪಡೆದ ತಾಂಡವಾಳ ಬೂದು ತಾಂಡವಾಳ. ಇದನ್ನು ಬೆಸೆಯಲಾಗಲಿ ತಗಡಾಗಿ ಮಾಡಲಾಗಲಿ ಸಾಧ್ಯವಿಲ್ಲ. ಇದು ತುಂಬ ಪೆಡಸು (ಬ್ರಿಟಲ್) ಆಗಿರುವುದು. ಅಚ್ಚು ಹಾಕಿ ತಯಾರಿಸುವ ಕಬ್ಬಿಣದ ಒಲೆಗಳು, ಗ್ರೇಟಿಂಗುಗಳು ಮುಂತಾದ ಸಾಮಾನುಗಳನ್ನು ಮಾತ್ರ ಇದರಿಂದ ತಯಾರಿಸಬಹುದು. ಕರಗಿದ ಕಬ್ಬಿಣ ಘನವಾದಾಗ ಇದರಲ್ಲಿರುವ ಇಂಗಾಲದ ಬಹುಭಾಗ ಸಿಮೆಂಟೈಟ್ ಎಂಬ ಕಬ್ಬಿಣದ ಕಾರ್ಬೈಡ್ ರೂಪದಲ್ಲಿರುವುದು. ಕಾದ ಕಬ್ಬಿಣ ನಿಧಾನವಾಗಿ ತಣ್ಣಗಾದಾಗ, ಈ ಕಾರ್ಬೈಡು ವಿಭಜಿಸಿ, ಇಂಗಾಲವು ಗ್ರಾಫೈಟ್ ರೂಪದಲ್ಲಿ ಹೊರಸೂಸುವುದು. ಬೂದು ತಾಂಡವಾಳ ಬಣ್ಣ ಮತ್ತು ಅದರ ಇತರ ಗುಣಗಳಿಗೆ ಹೀಗೆ ಉಂಟಾದ ಗ್ರಾಫೈಟು ಮುಖ್ಯ ಕಾರಣ.

ಕಬ್ಬಿಣ ನಿಧಾನವಾಗಿ ತಣ್ಣಗಾಗುವುದನ್ನು ತಡೆದು ಥಟ್ಟನೆ ಶೈತ್ಯಗೊಳಿಸಿದರೆ ಅದರಲ್ಲಿರುವ ಇಂಗಾಲದ ಬಹುಭಾಗ ಸಿಮೆಂಟೈಟ್ ರೂಪದಲ್ಲಿಯೇ ಇರುವುದು. ಇದೇ ಬಿಳಿಯ ತಾಂಡವಾಳ. ಇದಕ್ಕೆ ಹೆಚ್ಚಿನ ಕಾಠಿಣ್ಯ ಮತ್ತು ಪೆಡಸುತನವಿದ್ದು ಇದು ಸವೆತವನ್ನು ನಿರೋಧಿಸುತ್ತದೆ. ಬಿಳಿಯ ತಾಂಡವಾಳವನ್ನು 50–70 ಗಂಟೆಗಳವರೆಗೆ ಕೆಂಗಾವಿನಲ್ಲಿಟ್ಟು ನಿಧಾನವಾಗಿ ತಣಿಸಿದರೆ, ಮೆದು ತಾಂಡವಾಳ (ಮ್ಯಾಲಿಯೇಬಲ್ ಕ್ಯಾಸ್ಟ್ ಐರನ್) ಉಂಟಾಗುವುದು. ಈ ವಿಧವಾದ ತಾಂಡವಾಳದಲ್ಲಿ ಭಾರಿ ಪ್ರಮಾಣದ ಯಂತ್ರಗಳ ಕೆಲವು ಭಾಗಗಳ ಮತ್ತು ಕೃಷಿ ಸಾಧನಗಳ ತಯಾರಿಕೆಗೆ ಅಪೇಕ್ಷಣೀಯವಾದ ಗುಣಗಳು ಇವೆ. ಇದು ಅಷ್ಟೊಂದು ಕಠಿಣವಾಗಿಲ್ಲ, ಆದರೂ ಹೆಚ್ಚು ಬಲಯುತವಾಗಿದೆ. ಇದನ್ನು ಬೆಸೆಯಲಾಗುವುದಿಲ್ಲ. ತಾಂಡವಾಳದ ಕರಗುವ ಉಷ್ಣತೆ ಶುದ್ಧ ಕಬ್ಬಿಣದ ಕರಗುವ ಉಷ್ಣತೆಗಿಂತ ಕಡಿಮೆ. ತಾಂಡವಾಳವನ್ನು ಕರಗಿಸಿ ಅಚ್ಚು ಹಾಕುವುದು ಸುಲಭ.

**ಮೆದು ಕಬ್ಬಿಣ :** (ರಾಟ್ ಐರನ್): ಇದು ತಕ್ಕ ಮಟ್ಟಿಗೆ ಶುದ್ಧವಾಗಿರುವ ಕಬ್ಬಿಣ. ಊದು ಕುಲುಮೆಯ ಉತ್ಪನ್ನದ ಕಬ್ಬಿಣದಲ್ಲಿರುವ ಅಪದ್ರವ್ಯಗಳನ್ನು ಉರಿಸಿ ತೆಗೆದು ಇದನ್ನು ತಯಾರಿಸುವರು. ಇದರ ತಯಾರಿಕೆಗೆ ಪ್ರತಿವರ್ತಕ ಕುಲುಮೆಯನ್ನು

ಉಪಯೋಗಿಸುತ್ತಾರೆ. ಹೀಗೆ ತಯಾರಿಸಿದ ಕಬ್ಬಿಣದಲ್ಲಿ ಇಂಗಾಲ ಶೇ. 0.2 ಕ್ಕಿಂತ ಕಡಿಮೆ ಇರುವುದು. ಇದು ನಾರಾಗಿದ್ದು, ತಾಂಡವಾಳಕ್ಕಿಂತ ಬಿಗಿಯಾಗಿಯೂ ಮೆದುವಾಗಿಯೂ ಇರುವುದು. ಆದರೆ ಇದು ಉಕ್ಕಿನಷ್ಟು ಬಲವಾಗಿಲ್ಲ. ಇದನ್ನು ಕೊಡತಿಯಿಂದ ತಟ್ಟಬಹುದು, ಬೆಸೆಯಬಹುದು, ತಗಡಾಗಿ ಮಾಡಬಹುದು. ಕೆಂಗಾವಿನಲ್ಲಿ ತಟ್ಟಿ ಮಾಡಬಹುದಾದಂಥ ನೇಗಿಲಕುಳ, ಕುದುರೆಯ ಲಾಳ ಮುಂತಾದ ಸಾಮಾನುಗಳನ್ನು ಇದರಿಂದ ತಯಾರಿಸುತ್ತಾರೆ.

**ಶುದ್ಧ ಕಬ್ಬಿಣ :** ಶುದ್ಧ ಕಬ್ಬಿಣವನ್ನು ಕೈಗಾರಿಕಾ ಪ್ರಮಾಣದಲ್ಲಿ ತಯಾರಿಸುವುದಿಲ್ಲ. ಪ್ರಯೋಗಶಾಲೆಗಳಲ್ಲಿಯೂ ಇದೇನೂ ಹೆಚ್ಚಿನ ಬಳಕೆಯಲ್ಲಿಲ್ಲ. ಶುದ್ಧವಾದ ಫೆರಿಕ್ ಆಕ್ಸೈಡನ್ನು ಕಾಯಿಸಿ ಅದನ್ನು ಹೈಡ್ರೋಜನಿನಿಂದ ಅಪಕರ್ಷಿಸಿ ಶುದ್ಧವಾದ ಕಬ್ಬಿಣವನ್ನು ಪಡೆಯಬಹುದು. ಮಾರಿಕೆಯ ಕಬ್ಬಿಣಗಳ ಪೈಕಿ ಮೆದುಕಬ್ಬಿಣ ಶುದ್ಧ ಕಬ್ಬಿಣಕ್ಕೆ ಅತಿ ನಿಕಟವರ್ತಿಯಾಗಿರುವುದು. ಶುದ್ಧ ಕಬ್ಬಿಣ $1530^0$ಸೆಂ. ನಲ್ಲಿಯೂ ಮೆದು ಕಬ್ಬಿಣ $1500^0$ ಸೆಂ.ನಲ್ಲಿಯೂ, ತಾಂಡವಾಳ $1100^0$ ಸೆಂ.ನಲ್ಲಿಯೂ ಕರಗುತ್ತವೆ. ಶುದ್ಧ ಕಬ್ಬಿಣಕ್ಕೆ ಬೆಳ್ಳಿಯ ಬಿಳುಪಿನ ಪ್ರಕಾಶ ಇದೆ. ಇದು ತಕ್ಕಮಟ್ಟಿಗೆ ಮೃದುವಾಗಿದೆ. ಇದನ್ನು ತಗಡಾಗಿ ತಟ್ಟಬಹುದು, ತಂತಿಯಾಗಿ ಎಳೆಯಬಹುದು. ಮಾರಿಕೆಯ ಯಾವ ಕಬ್ಬಿಣಕ್ಕಿಂತಲೂ ಹೆಚ್ಚಿನ ಕಾಂತತ್ವಗುಣ ಇದಕ್ಕೆ ಉಂಟು.

ಶುದ್ಧ ಕಬ್ಬಿಣದ ಆಲ್ಫ ಮತ್ತು ಗ್ಯಾಮ ಎಂಬ ಎರಡು ಭಿನ್ನ ಭೌತರೂಪಗಳಿವೆ. ಕಬ್ಬಿಣ ಮತ್ತು ಉಕ್ಕುಗಳ ಗುಣಗಳು ಅವುಗಳಲ್ಲಿ ಕಬ್ಬಿಣ ಯಾವ ಭೌತರೂಪದಲ್ಲಿದೆ ಮತ್ತು ಅದರಲ್ಲಿರುವ ಇಂಗಾಲ ಯಾವ ಸ್ಥಿತಿಯಲ್ಲಿದೆ ಎನ್ನುವುದನ್ನು ಅವಲಂಬಿಸಿವೆ; ಸಾಮಾನ್ಯ ಉಷ್ಣತೆಗಳಲ್ಲಿ ದೃಢವಾದ ಕಬ್ಬಿಣದ ರೂಪವನ್ನು ಆಲ್ಫ ಕಬ್ಬಿಣ ಅಥವಾ ಫೆರೈಟ್ ಎನ್ನುತ್ತಾರೆ. ಫೆರೈಟ್ ಮೃದುವಾದದ್ದು ಮತ್ತು ಇದರಲ್ಲಿ ಇಂಗಾಲ ಅದ್ರಾವ್ಯ. $900^0$ ಸೆಂ. ಉಷ್ಣತೆಗಿಂತ ಮೇಲಿನ ಉಷ್ಣತೆಗಳಲ್ಲಿ ಆಲ್ಫ ಕಬ್ಬಿಣ ಗ್ಯಾಮ ಕಬ್ಬಿಣವೆಂಬ ಇನ್ನೊಂದು ರೂಪಕ್ಕೆ ಪರಿವರ್ತಿತವಾಗುತ್ತದೆ. ಮೇಲಿನ ಉಷ್ಣತೆಗೆ ಕಾಯಿಸಿದ ಉಕ್ಕುಗಳಲ್ಲಿ ಗ್ಯಾಮ ಕಬ್ಬಿಣವಿದೆ. ಗ್ಯಾಮ ಕಬ್ಬಿಣದಲ್ಲಿ ಇಂಗಾಲ ಶೇ. 1.5–2 ರಷ್ಟು ದ್ರಾವ್ಯ. ಹೀಗೆ ಮೇಲಿನ ಅಥವಾ ಎಣ್ಣೆಯಲ್ಲಿ ಅದ್ದಿ ಶೈತ್ಯಗೊಳಿಸಿದರೆ ಉಂಟಾಗುವ ಕಬ್ಬಿಣ ಸಿಮೆಂಟೈಟ್ $Fe_3C$ ಎಂಬ ಕಬ್ಬಿಣದ ಕಾರ್ಬೈಡ್ ವಿಲೀನವಾದ ಗ್ಯಾಮ ಕಬ್ಬಿಣ. ಸಿಮೆಂಟೈಟ್ ವಿಲೀನವಾದ ಗ್ಯಾಮ ಕಬ್ಬಿಣಕ್ಕೆ ಆಸ್ಟನೈಟ್ ಎಂದು ಹೆಸರು. ಥಟ್ಟನೆ ಶೈತ್ಯಗೊಳಿಸುವುದರಿಂದ ಕಬ್ಬಿಣದ ರಚನೆಯಲ್ಲಿ ವ್ಯತ್ಯಾಸ ಉಂಟಾಗುವುದಿಲ್ಲ. ಏಕೆಂದರೆ ಗ್ಯಾಮ ಕಬ್ಬಿಣ ಆಲ್ಫ ಕಬ್ಬಿಣವಾಗಿ ಪರಿವರ್ತಿಸುವ ಕ್ರಿಯೆ ಬಹಳ ನಿಧಾನವಾಗಿ ನಡೆಯುತ್ತದೆ. ಥಟ್ಟನೆ ಶೈತ್ಯಗೊಳಿಸಿದಾಗ ಗ್ಯಾಮ ಕಬ್ಬಿಣ ಆಲ್ಫ ಕಬ್ಬಿಣವಾಗಿ ಪರಿವರ್ತನೆ ಹೊಂದಲು ಮತ್ತು ಇಂಗಾಲದ ಸ್ಥಿತಿ ಮಾರ್ಪಾಡಾಗಲು ಕಾಲಾವಕಾಶವಿರುವುದಿಲ್ಲ. 900°ಸೆಂ.ಗಿಂತ ಮೇಲಿನ ಉಷ್ಣತೆಗೆ ಉಕ್ಕನ್ನು ಕಾಯಿಸಿ ಅನಂತರ ನಿಧಾನವಾಗಿ ಅದನ್ನು ಶೈತ್ಯಗೊಳಿಸಿದರೆ ಆಲ್ಫ ರೂಪದ ಕಬ್ಬಿಣ ಉಂಟಾಗುವುದು. ಇನ್ನು 1400° ಸೆಂ.ಗಿಂತ ಮೇಲಿನ ಉಷ್ಣತೆಯಲ್ಲಿ ದೃಢವಾದ ಡೆಲ್ಟರೂಪ ಬರುತ್ತದೆ.

ಹೋಲಿಕೆಯ ದೃಷ್ಟಿಯಿಂದ ಕಬ್ಬಿಣ ರಾಸಾಯನಿಕವಾಗಿ ಪಟುವಾದ ಲೋಹ. ತೇವದ ಗಾಳಿಯಲ್ಲಿ ಇದಕ್ಕೆ ತುಕ್ಕುಹಿಡಿಯುವುದು. ಅಂದರೆ ನೀರು, ಆಕ್ಸಿಜನ್ ಕಾರ್ಬನ್ ಡೈ ಆಕ್ಸೈಡ್ ಇವುಗಳ ವರ್ತನೆಯಿಂದ ಕಬ್ಬಿಣ ಅಂತ್ಯದಲ್ಲಿ ಹೈಡ್ರೇಟೆಡ್ ಫೆರಿಕ್ ಆಕ್ಸೈಡ್ ಆಗಿ ಕೊರೆದುಕೊಂಡು ಹೋಗುವುದು. ಕಬ್ಬಿಣಕ್ಕೆ ತುಕ್ಕು ಹಿಡಿಯುವುದರಿಂದ ಕೋಟ್ಯಂತರ ರೂಪಾಯಿಗಳ ನಷ್ಟ ಆಗುವುದೆಂದು ಅಂದಾಜು ಮಾಡಲಾಗಿದೆ. ಇದನ್ನು ತಪ್ಪಿಸಲು ಅನೇಕ ಕ್ರಮವನ್ನು ಕೈಗೊಂಡಿರುತ್ತಾರೆ. ಇವುಗಳ ಪೈಕಿ ಕಬ್ಬಿಣದ ಮೇಲೆ ಸತುವಿನ ಅಥವಾ ತವರದ ಒಂದು ತೆಳ್ಳನೆಯ ಪದರದ ಲೇಪ ಕೊಡುವುದು ಮುಖ್ಯವಾದದ್ದು. ಸಣ್ಣ ಕಣರೂಪದಲ್ಲಿ ಅಥವಾ ತೆಳ್ಳನೆಯ ತಂತಿರೂಪದಲ್ಲಿ ಇದು ಆಕ್ಸಿಜನಿನಲ್ಲಿ ಉರಿಯುವುದು. ಕೆಂಗಾವಿಗೆ ಕಾದ ಕಬ್ಬಿಣದ ಮೇಲೆ ನೀರಿನ ಹಬೆಯನ್ನು ಹಾಯಿಸಿದರೆ, ಕಬ್ಬಿಣದ ಆಕ್ಸೈಡು ($Fe_3O_4$) ಮತ್ತು ಹೈಡ್ರೊಜನುಗಳುಂಟಾಗುವುವು. ಹೈಡ್ರೊಕ್ಲೋರಿಕ್ ಆಮ್ಲ ಮತ್ತು ಸಾರರಿಕ್ತ ಸಲ್ಫ್ಯೂರಿಕ್ ಆಮ್ಲಗಳು ಇದರ ಮೇಲೆ ವರ್ತಿಸಿ ಹೈಡ್ರೊಜನ್ ಬಿಡುಗಡೆಯಾಗುವುದು. ಧೂಮಿಸುವ (ಫ್ಯೂಮಿಂಗ್) ನೈಟ್ರಿಕ್ ಆಮ್ಲದಲ್ಲಿ ಕಬ್ಬಿಣವನ್ನು ಅದ್ದಿದರೆ ಅದು ನಿಷ್ಕ್ರಿಯಗೊಳ್ಳುವುದು. ಅದನ್ನು ಕೊಡತಿಯಿಂದ ಹೊಡೆದರೆ ಅಥವಾ ಮೇಲ್ಮೈಯನ್ನು ಕೆರೆದರೆ ಪುನಃ ಪಟುವಾಗುವುದು. ಒದ್ದೆಯಾದ ಕಬ್ಬಿಣದ ಪುಡಿಯೊಡನೆ ಕ್ಲೋರಿನ್, ಬ್ರೋಮಿನ್ ಮತ್ತು ಅಯೊಡೀನುಗಳು ವರ್ತಿಸಿ ಕ್ರಮವಾಗಿ ಫೆರಿಕ್ ಕ್ಲೋರೈಡ್, ಬ್ರೋಮೈಡ್ ಮತ್ತು ಅಯೊಡೈಡುಗಳನ್ನು ಕೊಡುವುವು. ಕಾದ ಕಬ್ಬಿಣ ಗಂಧಕದೊಡನೆ ವರ್ತಿಸಿ ಫೆರಸ್ ಸಲ್ಫೈಡನ್ನು ಕೊಡುವುದು.

**ಕಬ್ಬಿಣದ ಸಂಯುಕ್ತಗಳು:** ಸಂಯುಕ್ತಗಳಲ್ಲಿ ಕಬ್ಬಿಣ $Fe_2+$ ಮತ್ತು $Fe_3+$ ಉತ್ಕರ್ಷಣ ಸ್ಥಿತಿಯಲ್ಲಿರುವುದು. ಇವನ್ನು ಫೆರಸ್ ಮತ್ತು ಫೆರಿಕ್ ಸಂಯುಕ್ತಗಳೆನ್ನುವರು.

**ಕಬ್ಬಿಣದ ಆಕ್ಸೈಡುಗಳು ಮತ್ತು ಹೈಡ್ರಾಕ್ಸೈಡುಗಳು ಫೆರಸ್ FeO**: ಇದೊಂದು ಕಪ್ಪು ಬಣ್ಣದ ಪುಡಿ. ಫೆರಿಕ್ ಆಕ್ಸೈಡನ್ನು 300° ಸೆಂ. ಉಷ್ಣತೆಗಿಂತ ಕಡಿಮೆ ಉಷ್ಣತೆಯಲ್ಲಿ ಹೈಡ್ರೋಜನಿನಿಂದ ಅಪಕರ್ಷಿಸುವುದರಿಂದ ಅಥವಾ ಫೆರಸ್ ಆಕ್ಸಲೇಟನ್ನು ($FeC_2O_4$) ಕಾಯಿಸುವುದರಿಂದ ತಯಾರಿಸಬಹುದು. ಇದು ಗಾಳಿಯಲ್ಲಿ ಉರಿದು ಫೆರಿಕ್ ಆಕ್ಸೈಡು ಆಗುವುದು. ಫೆರಸ್ ಹೈಡ್ರಾಕ್ಸೈಡು $Fe(OH)_2$ ಇದಕ್ಕೆ ಅನುಗುಣವಾದ ಹೈಡ್ರಾಕ್ಸೈಡು. ಫೆರಸ್ ಲವಣದ ದ್ರಾವಣಕ್ಕೆ ಸೋಡಿಯಂ ಹೈಡ್ರಾಕ್ಸೈಡನ್ನು ಗಾಳಿಯ ರಾಹಿತ್ಯದಲ್ಲಿ ಹಾಕಿದರೆ ಇದು ಒತ್ತರಿಸುವುದು. ಇದೊಂದು ಬಿಳಿಯ ಘನವಸ್ತು. ಗಾಳಿಯಲ್ಲಿ ಬಿಟ್ಟರೆ ಉತ್ಕರ್ಷಣ ಹೊಂದಿ ಮೊದಲು ಹಸಿರು ಬಣ್ಣಕ್ಕೂ ಆಮೇಲೆ ಕಂದುಬಣ್ಣಕ್ಕೂ ತಿರುಗುವುದು. ಗಾಳಿಯು ಫೆರಸ್ ಹೈಡ್ರಾಕ್ಸೈಡನ್ನು ಫೆರಿಕ್ ಹೈಡ್ರಾಕ್ಸೈಡಿಗೆ ($Fe_2O_3.xH_2O$) ಉತ್ಕರ್ಷಿಸುವುದು.

**ಫೆರಿಕ್ ಆಕ್ಸೈಡ್ $Fe_2O_3$:** ಪಿರೈಟೀಸನ್ನು ($FexS_2$) ಉರಿಸಿದಾಗ ಇದು ಉಂಟಾಗುವುದು. ಫೆರಿಕ್ ಲವಣದ ದ್ರಾವಣಕ್ಕೆ ಸೋಡಿಯಂ ಹೈಡ್ರಾಕ್ಸೈಡ್ ಹಾಕಿ ಬಂದ ಒತ್ತರವನ್ನು ಕಾಯಿಸಿ ಇದನ್ನು ಪಡೆಯಬಹುದು. ಇದು ಕೆಂಪುಪುಡಿ. ಪ್ರಕೃತಿಯಲ್ಲಿ ಇದು ಹಿಮಟೈಟ್ ಎಂಬ ಒಂದು ಪ್ರಮುಖ ಕಬ್ಬಿಣದ ಅದುರಾಗಿ ದೊರೆಯುವುದು. ಕಬ್ಬಿಣದ ತುಕ್ಕು ಮತ್ತು ಲಿಮೊನೈಟ್ ಎಂಬ ಕಬ್ಬಿಣದ ಅದುರು ಈ ಆಕ್ಸೈಡಿನ ಹೈಡ್ರೇಟುಗಳು ($Fe_2O_3.xH_2O$).

ಅತಿಶುದ್ಧವಾದ ಸ್ವಲ್ಪವೂ ತರಕಲಿಲ್ಲದ ನಯವಾಗಿರುವ ಫೆರಿಕ್ ಆಕ್ಸೈಡನ್ನು ಸ್ವರ್ಣಕಾರರು ಚಿನ್ನಬೆಳ್ಳಿಗೆ ಹೊಳಪು ಕೊಡಲು ಉಪಯೋಗಿಸುವರು. ಇದನ್ನು ವಿನೀಷಿಯನ್ ಕೆಂಪು ಎಂಬ ಹೆಸರಿನಿಂದ ವರ್ಣದ್ರವ್ಯವಾಗಿ ಧಾನ್ಯದ ಕಣಜಗಳು, ಸೇತುವೆಗಳು, ಸಾಗಣೆಯ ರೈಲುಗಾಡಿಗಳು, ಮಣ್ಣಿನ ಪಾತ್ರೆಗಳು, ರಬ್ಬರ್ ಮುಂತಾದುವುಗಳಿಗೆ ಕೆಂಪು ಕಂದು ಬಣ್ಣಕೊಡಲು ಉಪಯೋಗಿಸುವರು. ಫೆರಿಕ್ ಲವಣಗಳ ದ್ರಾವಣಕ್ಕೆ ಸೋಡಿಯಂ ಹೈಡ್ರಾಕ್ಸೈಡನ್ನು ಹಾಕಿದರೆ, ಹೆಚ್ಚು ಗಾತ್ರದ ಲೋಳೆಯಂಥ (ಜಿಲೇಟಿನಸ್) ಕೆಂಪು–ಕಂದು ಬಣ್ಣದ ಒತ್ತರ ಬರುವುದು. ಇದಕ್ಕೆ ಫೆರಿಕ್ ಹೈಡ್ರಾಕ್ಸೈಡ್ ಎಂದು ಹೆಸರು. ಇದರ ಸಂಕೇತ $Fe(OH)_3$. ಪ್ರಾಯಶಃ ಇದು $Fe(OH)_3$ ಎಂಬ ನಿರ್ದಿಷ್ಟ ಸಂಯುಕ್ತವಾಗಿರದೆ ಅನಿಶ್ಚಿತ ಜಲಹೊಂದಿದ ಹೈಡ್ರೇಟೆಡ್ ಫೆರಿಕ್ ಆಕ್ಸೈಡ್ ಆಗಿರುವುದು. ಇದು ಆಮ್ಲಗಳಲ್ಲಿ ಸುಲಭವಾಗಿ ದ್ರಾವ್ಯ, ಕ್ಷಾರಗಳಲ್ಲಿ ಅದ್ರಾವ್ಯ.

ಇವಲ್ಲದೆ ಪ್ರಕೃತಿಯಲ್ಲಿ ಮ್ಯಾಗ್ನಟೈಟ್ $Fe_3O_4$ ಎಂಬ ಇನ್ನೊಂದು ಕಬ್ಬಿಣದ ಖನಿಜ ದೊರೆಯುವುದು. ಇದರ ರಚನೆ $Fe_OFe_2O_3$. ಕಬ್ಬಿಣವು ಆಕ್ಸಿಜನಿನಲ್ಲಿ ಉರಿದಾಗ, ನೀರಿನ ಹಬೆಯನ್ನು ಕೆಂಗಾವಿಗೆ ಕಾದ ಕಬ್ಬಿಣದ ಮೇಲೆ ಕಾಯಿಸಿದಾಗ ಈ ಆಕ್ಸೈಡ್ ಉಂಟಾಗುವುದು.

**ಫೆರಸ್ ಸಲ್ಫೇಟ್ ($FeSO_4$):** ಇದು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲ್ಪಡುವ ಸಂಯುಕ್ತ. ಕಬ್ಬಿಣವನ್ನು ಸಜಲ ಸಲ್ಫ್ಯೂರಿಕ್ ಆಮ್ಲದಲ್ಲಿ ವಿಲೀನಗೊಳಿಸಿ ದ್ರಾವಣವನ್ನು ಇಂಗಿಸಿ ಇದನ್ನು ತಯಾರಿಸುವರು. ಇದಕ್ಕೆ ಕಳಪೆ ಕಬ್ಬಿಣದ ಚೂರುಗಳನ್ನು ಉಪಯೋಗಿಸುವರು. ಕಬ್ಬಿಣಕ್ಕೆ ಸತು ಮತ್ತು ತವರಗಳ ಲೇಪ ಕೊಡುವ ಮುಂಚೆ ಕಬ್ಬಿಣದ ತಗಡುಗಳನ್ನು ಶುದ್ಧಮಾಡಲು ಸಲ್ಫ್ಯೂರಿಕ್ ಆಮ್ಲದಲ್ಲಿ ಅದ್ದುವರು. ಈ ದ್ರಾವಣದಿಂದಲೂ ಗಣನೀಯ ಪ್ರಮಾಣ ಫೆರಸ್ ಸಲ್ಫೇಟನ್ನು ತಯಾರಿಸುವರು. ಕಬ್ಬಿಣದ ಪಿರೈಟೀಸ್ ($FeS_2$) ಒದ್ದೆಮಾಡಿ ಗಾಳಿಯ ಸಂಪರ್ಕದಲ್ಲಿ ಫೆರಸ್ ಸಲ್ಫೇಟಾಗಿ ಇದನ್ನು ಉತ್ಕರ್ಷಿಸಿ, ಅನಂತರ ಅದನ್ನು ನೀರಿನಲ್ಲಿ ವಿಲೀನಗೊಳಿಸಿ ಪಡೆಯುವರು. ದ್ರಾವಣಗಳಿಂದ ಇದು $FeSO_47H_2O$ ಎಂಬ ಹೈಡ್ರೇಟ್ ರೂಪದಲ್ಲಿ ಸ್ಫಟಿಕೀಕರಿಸುವುದು. ಗಾಳಿಯ ಸಂಪರ್ಕದಲ್ಲಿ ಇದು ಸ್ಫಟಿಕ ಜಲವನ್ನು ಕಳೆದುಕೊಂಡು ಗಾಳಿಯಿಂದ ಉತ್ಕರ್ಷಿತವಾಗಿ ಕಂದು ಬಣ್ಣಕ್ಕೆ ತಿರುಗುವುದು. ಫೆರಸ್ ಸಲ್ಫೇಟಿನ ದ್ರಾವಣ ಗಾಳಿಯ ಸಂಪರ್ಕದಲ್ಲಿ $Fe(OH)SO_4$ ಆಗಿ ಉತ್ಕರ್ಷಿತವಾಗುವುದು. ಇದರ ದ್ರಾವಣ ಉತ್ಕರ್ಷಿತವಾಗದೆ ಇರಲು ದ್ರಾವಣವನ್ನು ಸಲ್ಫ್ಯೂರಿಕ್ ಆಮ್ಲ ಮಿಶ್ರಮಾಡಿ ದ್ರಾವಣದಲ್ಲಿ ಸ್ವಲ್ಪ ಕಬ್ಬಿಣದ ಚೂರನ್ನು ಹಾಕಿಡಬೇಕು. ಫೆರಸ್ ಸಲ್ಫೇಟನ್ನು ನೀರಿನ ಶುದ್ಧೀಕರಣದಲ್ಲಿಯೂ ಕಪ್ಪುಮಸಿ ಮತ್ತು ಕೆಲವು ವರ್ಣದ್ರವ್ಯಗಳ ತಯಾರಿಕೆಯಲ್ಲಿಯೂ ಔಷಧದಲ್ಲಿಯೂ ಕಳೆನಾಶಕ ಮತ್ತು ಮರದ ರಕ್ಷಕವಾಗಿಯೂ ಉಪಯೋಗಿಸುವರು. ಮಸಿಯ ತಯಾರಿಕೆಯಲ್ಲಿ ಫೆರಸ್ ಸಲ್ಫೇಟಿನ ದ್ರಾವಣಕ್ಕೆ ಸ್ವಲ್ಪ ಟ್ಯಾನಿನ್ ಮತ್ತು ಒಂದು ನೀಲಿವರ್ಣದ್ರವ್ಯ, ಸ್ವಲ್ಪ ಗಮ್ ಅರ್‍ಯಾಬಿಕ್‍ಗಳನ್ನು ಹಾಕುವರು. ಈ ಮಸಿಯಿಂದ ಬರೆದಾಗ ಅಕ್ಷರ ವರ್ಣದ್ರವ್ಯದ ನೀಲಿಬಣ್ಣವಾಗಿರುವುದು. ಗಾಳಿಯ ಸಂಪರ್ಕದಲ್ಲಿ ಫೆರಸ್ ಟ್ಯಾನೇಟು ಫೆರಿಕ್ ಟ್ಯಾನೇಟು ಆಗುವುದು. ಫೆರಿಕ್ ಟ್ಯಾನೇಟಿನ ಬಣ್ಣ ಕಪ್ಪು. ಆದ್ದರಿಂದ ಅಕ್ಷರ ಕಪ್ಪು ಬಣ್ಣಕ್ಕೆ ತಿರುಗುವುದು.

ಸಮಾನ ಅಣುಪ್ರಮಾಣ ಫೆರಸ್ ಸಲ್ಫೇಟ್ ಮತ್ತು ಅಮೋನಿಯಂ ಸಲ್ಫೇಟ್ ಇರುವ ದ್ರಾವಣದಿಂದ ನಸುಹಸಿರು ಬಣ್ಣದ ಫೆರಸ್ ಅಮೋನಿಯಂ ಸಲ್ಫೇಟು $FeSO_4(NH_4)SO4_6H2_O$ ಸ್ಫಟಿಕೀಕರಿಸುವುದು. ಇದು ಗಾಳಿಯಲ್ಲಿ ಉತ್ಕರ್ಷಿಸುವುದಿಲ್ಲ. ಈ ಕಾರಣಕ್ಕಾಗಿ ಪರಿಮಾಣಾತ್ಮಕ ವಿಶ್ಲೇಷಣಗಳಲ್ಲಿ ಇದನ್ನು ವಿಶೇಷವಾಗಿ ಬಳಸುವರು.

**ಫೆರಿಕ್ ಸಲ್ಫೇಟ್ $Fe(SO4)_3$ :** ಫೆರಸ್ ಸಲ್ಫೇಟನ್ನು ಉತ್ಕರ್ಷಿಸಿ ಇದನ್ನು ಪಡೆಯಬಹುದು. ದ್ರಾವಣದಿಂದ ಇದು ಸುಲಭವಾಗಿ ಸ್ಫಟಿಕೀಕರಿಸುವುದಿಲ್ಲವಾದ್ದರಿಂದ ಇದನ್ನು ಸಾಮಾನ್ಯವಾಗಿ ಪಟಿಕದ ರೂಪದಲ್ಲಿ-ಫೆರಿಕ್ ಅಮೋನಿಯಂ ಸಲ್ಫೇಟ್ $(NH4)_2SO_4\,Fe_2(SO_4)32_4H_2O$ ಅಥವಾ ಫೆರಿಕ್‌ಆಲಂ $K_2SO_4\,Fe_2(SO_4)_3\,24\,H_2O$ ಆಗಿ ಸ್ಫಟಿಕೀಕರಿಸುವರು.

**ಫೆರಸ್ ಕ್ಲೋರೈಡ್ $FeCl_2$:** ಕಬ್ಬಿಣವನ್ನು ಹೈಡ್ರೊಕ್ಲೋರಿಕಾಮ್ಲದಲ್ಲಿ ವಿಲೀನಮಾಡಿದ ದ್ರಾವಣದಿಂದ $FeCl_24H_2O$ ಸ್ಫಟಿಕೀಕರಿಸುವುದು. ಶುದ್ಧವಾದ ಹೈಡ್ರೇಟೆಡ್ ಫೆರಸ್ ಕ್ಲೋರೈಡಿನ ಬಣ್ಣ ನೀಲಿ. ಇದು ಗಾಳಿಯ ಸಂಪರ್ಕದಲ್ಲಿ ಉತ್ಕರ್ಷಣಹೊಂದಿ ಹಸಿರು ಬಣ್ಣಕ್ಕೆ ತಿರುಗುವುದು. ಈ ಲವಣವನ್ನು ಅಪಕರ್ಷಣ ಕಾರಿಯಾಗಿಯೂ ಅಲ್ಪ ಪ್ರಮಾಣದಲ್ಲಿ ಬಣ್ಣಗಚ್ಚಾಗಿಯೂ ಉಪಯೋಗಿಸುವರು.

**ಫೆರಿಕ್ ಕ್ಲೋರೈಡ್ $FeCl_3$:** ಇದು ಅತ್ಯಂತ ಮುಖ್ಯವಾದ ಫೆರಿಕ್ ಲವಣ. ಕಬ್ಬಿಣದ ಮೇಲೆ ಕ್ಲೋರಿನ್ನಿನ ವರ್ತನೆಯಿಂದ ಇದನ್ನು ತಯಾರಿಸುವರು. ಈ ಪರಿವರ್ತನೆ ವಿಜಲ ಫೆರಿಕ್ ಕ್ಲೋರೈಡಿನ ಕಪ್ಪು ಹರಳುಗಳನ್ನು ಕೊಡುವುದು. ಈ ಲವಣ ಕರ್ಪೂರೀಕರಿಸುವುದು (ಸಬ್ಲೈಮ್ಸ್). ನೀರಿನಲ್ಲಿ ಇದು ವಿಶೇಷ ದ್ರಾವ್ಯ. ಇದರ ದ್ರಾವಣದಿಂದ ಅನೇಕ ಹೈಡ್ರೇಟುಗಳನ್ನು ಪಡೆಯಬಹುದು. ಇವುಗಳ ಪೈಕಿ $FeCl_3.6H_2O$ ಸುಪರಿಚಿತವಾದುದು. ನೀರಿನಲ್ಲಿ ಇದು ಜಲವಿಶ್ಲೇಷಣ ಹೊಂದುವುದು. ಈ ಲವಣವನ್ನು ಬಣ್ಣಗಚ್ಚಾಗಿಯೂ ರಾಸಾಯನಿಕ ವಿಶ್ಲೇಷಣಗಳಲ್ಲಿಯೂ ಔಷಧಗಳಲ್ಲಿಯೂ (ಕ್ರಿಮಿನಾಶಕ ಮತ್ತು ರಕ್ತಸ್ರಾವಬಂಧಕ) ಉಪಯೋಗಿಸುವರು.

**ಕಬ್ಬಿಣದ ಸಂಕೀರ್ಣ ಸಯನೈಡುಗಳು :** ಪೊಟ್ಯಾಸಿಯಂ ಫೆರೊಸಯನೈಡು ಫೆರಿಕ್ ಲವಣಗಳೊಡನೆ ವರ್ತಿಸಿ ಪ್ರಷ್ಯನ್ ನೀಲಿ ಎಂಬ ದಟ್ಟನೀಲಿಯನ್ನು ಕೊಡುವುದು.

$$3K_4\,Fe(CN)_6 + 4FeCl_3\ ?\ Fe_4\,[Fe(CN)_6]_3 + 12KCl$$

ಇದನ್ನು ವರ್ಣದ್ರವ್ಯವನ್ನಾಗಿಯೂ ಮತ್ತು ಬಟ್ಟೆ ಒಗೆಯುವ ನೀಲಿಯನ್ನಾಗಿಯೂ ಉಪಯೋಗಿಸುವರು. ಈ ಸಂಯುಕ್ತ ಫೆರಿಕ್ ಫೆರೊಸಯನೈಡ್. ಪೊಟಾಸಿಯಂ ಫೆರಿಸಯನೈಡು ಫೆರಸ್ ಲವಣಗಳೊಡನೆ ವರ್ತಿಸಿ ಟರ್ನ್‌ಬುಲ್ ನೀಲಿ ಎಂಬ ದಟ್ಟ ನೀಲಿಯ ಇನ್ನೊಂದು ಒತ್ತರವನ್ನು ಕೊಡುವುದು. ಇದು ಫೆರಸ್ ಫೆರಿಸಯನೈಡ್.

$$2K_3\,Fe(CN)_6 + 3FeSO_4\ ?\ Fe_3\,[Fe(CN)6]_2 + 3K_2SO_4$$

ಈ ಪರಿವರ್ತನೆಗಳನ್ನು ಫೆರಸ್ ಮತ್ತು ಫೆರಿಕ್ ಲವಣಗಳ ಗುಣಾತ್ಮಕ ವಿಶ್ಲೇಷಣೆಗಳಲ್ಲಿ ಉಪಯೋಗಿಸುವರು.

ಫೆರಿಕ್ ಲವಣಗಳು ಪೊಟ್ಯಾಸಿಯಂ ಥಯೋಸಯನೇಟಿನೊಡನೆ ವರ್ತಿಸಿ ದ್ರಾವ್ಯವಾದ ರಕ್ತಗೆಂಪಿನ $K_3Fe(CNS)_6$ ಎಂಬ ಸಂಯುಕ್ತವನ್ನು ಕೊಡುವುದು. ಈ ಪರಿವರ್ತನೆಯನ್ನು ಸಹ ಫೆರಿಕ್ ಲವಣಗಳನ್ನು ಗುರುತಿಸಲು ಉಪಯೋಗಿಸಬಹುದು.

**ನೀಲಿನಕ್ಷೆಗಳು (ಬ್ಲೂಪ್ರಿಂಟ್ಸ್) :** ಇವನ್ನು ಮಾಡುವ ಕಾಗದಗಳನ್ನು ಫೆರಿಕ್ ಅಮೋನಿಯಂ ಸಿಟ್ರೇಟ್ ಮತ್ತು ಪೊಟ್ಯಾಸಿಯಂ ಫೆರಿಸಯನೈಡುಗಳನ್ನು ಒಳಗೊಂಡ ದ್ರಾವಣದಲ್ಲಿ ಅದ್ದಿ ಕತ್ತಲೆಯಲ್ಲಿ ಒಣಗಿಸುವರು. ಈ ಕಾಗದದ ಮೇಲೆ ಇವೆರಡು ಲವಣಗಳೂ ಫೆರಿಕ್ ಫೆರಿಸಯನೈಡೂ ಇರುವುವು. ಕೊನೆಯ ಲವಣ ಕಾಗದಕ್ಕೆ ಹಸಿರು ಬಣ್ಣ ಕೊಡುವುದು. ಈ ರೀತಿ ಸಿದ್ಧಮಾಡಿದ ಒಂದು ಕಾಗದದ ಹಾಳೆಯ ಮೇಲೆ ನೀಲನಕ್ಷೆ ತಯಾರಿಸಬೇಕಾದ ಆಕೃತಿಗಳನ್ನು ಚಿತ್ರಿಸಿರುವ ಟ್ರೇಸಿಂಗ್ ಬಟ್ಟೆಯನ್ನಿಟ್ಟು ಇದನ್ನು ಬಿಸಿಲಿನಲ್ಲಿಡುವರು. ಆಗ ಬೆಳಕು ಬಿದ್ದಜಾಗದಲ್ಲೆಲ್ಲ ಫೆರಿಕ್ ಲವಣ ಫೆರಸ್ ಲವಣವಾಗಿ ಅಪಕರ್ಷಿತವಾಗುವುದು. ಕಪ್ಪು ಗೆರೆಗಳ ತಳಭಾಗದಲ್ಲಿ ಈ ಪರಿವರ್ತನೆ ಆಗುವುದಿಲ್ಲ. ಅನಂತರ ಕೆಳಗಿನ ಕಾಗದವನ್ನು ನೀರಿನಲ್ಲಿ ಅದ್ದಿದಾಗ ಕಾಗದದ ಮೇಲೆ ಬಿಸಿಲು ಬಿದ್ದ ಜಾಗದಲ್ಲಿ ಆದ ಫೆರಸ್ ಲವಣ ಫೆರಿಸಯನೈಡಿ ನೊಡನೆ ವರ್ತಿಸಿ ಅದ್ರಾವ್ಯವಾದ ಟರ್ನ್‌ಬುಲ್ ನೀಲಿಯನ್ನು ಕೊಡುವುದು. ಬಿಸಿಲು ಬೀಳದಿರುವ ಕಪ್ಪು ಗೆರೆಗಳ ಕೆಳಗೆ ಯಾವ ವರ್ತನೆಯೂ ಆಗದೆ, ಅಲ್ಲಿರುವ ಲವಣಗಳು ನೀರಿನಲ್ಲಿ ವಿಲೀನವಾಗಿ ಹೋಗುವುವು. ಹೀಗೆ ನೀಲಿ ಹಿನ್ನೆಲೆಯಲ್ಲಿ ಬಿಳಿಯ ರೇಖೆಯ ಚಿತ್ರವಾಗುವುದು.

(ಕೆ.ಎಸ್.ಬಿ.; ಜಿ.ಬಿ.)

**ಕಬ್ಬಿಣದ ಅದಿರು ನಿಕ್ಷೇಪಗಳು :** ಕಬ್ಬಿಣ ಭೂಮಿಯ ಮೇಲೆ ಹೇರಳವಾಗಿ ದೊರೆಯುವಂಥ ಲೋಹ, ಬಲು ಹಿಂದೆಯೇ ಮಾನವಕುಲ ಈ ಲೋಹದ ಉಪಯುಕ್ತತೆಯನ್ನು ಗುರುತಿಸಿ ಅದನ್ನು ಬಳಕೆ ತಂದುದಕ್ಕೆ ಸಾಕಷ್ಟು ಪ್ರತ್ಯಕ್ಷ ಹಾಗೂ ಪರೋಕ್ಷ ನಿದರ್ಶನಗಳು ಇವೆ. ಕಬ್ಬಿಣದ ಅಂಶ ಅನೇಕ ವರ್ಗದ ಖನಿಜಗಳಲ್ಲಿ ಸೇರಿದ್ದರೂ ಲೋಹದ ಉತ್ಪಾದನೆಯ ದೃಷ್ಟಿಯಿಂದ ಮುಖ್ಯವಾದ ಖನಿಜಗಳೆಂದರೆ ಮೂರು ಮಾತ್ರ; ಅವುಗಳಲ್ಲಿರುವ ಕಬ್ಬಿಣದ ಅಂಶವನ್ನು ಪಕ್ಕದಲ್ಲಿ ತೋರಿಸಿದೆ.

| | | |
|---|---|---|
| ಮ್ಯಾಗ್ನಟೈಟ್ | ... | ಶೇ. 72.00 |
| ಹಿಮಟೈಟ್ | ... | ಶೇ. 70.00 |
| ಲೈಮೊನೈಟ್ | ... | ಶೇ. 59.63 |

ಮ್ಯಾಗ್ನಟೈಟ್ : ಇದು ಕಪ್ಪು ಬಣ್ಣದ್ದು. ಅದರಿಂದಲೇ ಕಪ್ಪು ಅದಿರು ಎಂದು ಕರೆಯುತ್ತಾರೆ. ಕಬ್ಬಿಣದ ಅಂಶ ಇದರಲ್ಲಿ ಅತಿ ಹೆಚ್ಚು (ಶೇ.72). ಇದಕ್ಕೆ ಅಯಸ್ಕಾಂತ ಶಕ್ತಿ ಇದೆ. ಭಾರತದ ಅನೇಕ ಭಾಗಗಳಲ್ಲಿ ಮ್ಯಾಗ್ನಟೈಟನ್ನು ಒಳಗೊಂಡಿರುವ ಕಬ್ಬಿಣದ ಸ್ತರಗಳು ಇವೆ.

ಹಿಮಟೈಟ್ : ಕಬ್ಬಿಣದ ಉತ್ಪಾದನೆಯಲ್ಲಿ ಅತಿ ಮುಖ್ಯವಾದ ಸ್ಥಾನವನ್ನು ಪಡೆದಿರುವ ಖನಿಜ ಇದು. ಸಾಮಾನ್ಯವಾಗಿ ಕಪ್ಪು ಬಣ್ಣ ಪ್ರದರ್ಶಿಸಿದರೂ ಪುಡಿ ಮಾಡಿದಾಗ ಕೆಂಪು ಬಣ್ಣದ್ದಾಗಿ ಕಾಣುತ್ತದೆ.

ಲೈಮೊನೈಟ್ : ಕಬ್ಬಿಣದ ಅಂಶ ಇದರಲ್ಲಿ ತೀರ ಕಡಿಮೆ. ಖನಿಜ ಕೂಡ ಹಳದಿ ಬಣ್ಣವಾಗಿರುತ್ತದೆ. ಖನಿಜದಲ್ಲಿ ನೀರಿನ ಅಂಶವಿರುವುದರಿಂದ ಇದು ಸಾಮಾನ್ಯವಾಗಿ ಹಳದಿ ಮಣ್ಣಿನಂತಿರುತ್ತದೆ.

ಈ ಮೂರು ಖನಿಜಗಳಲ್ಲಿ ಕಬ್ಬಿಣ ತಯಾರಿಕೆಯಲ್ಲಿ ಮುಖ್ಯವಾಗಿ ಉಪಯೋಗವಾಗುತ್ತಿರುವ ಖನಿಜ ಹಿಮಟೈಟ್. ಭಾರತದಲ್ಲಿ ಹೇರಳವಾಗಿ ದೊರೆಯುವ ಕಬ್ಬಿಣದ ಖನಿಜವೆಂದರೆ ಇದೇ. ಕಬ್ಬಿಣ ನಿಕ್ಷೇಪಗಳಲ್ಲಿ ಮೂರು ಮುಖ್ಯ ವರ್ಗಗಳನ್ನು ಗುರುತಿಸಬಹುದು.

1. ಭೂಮಿಯ ಒಳಗಿನ ಉಷ್ಣದಿಂದ ಕರಗಿ ಶಿಲಾಪಾಕದ ಅವಸ್ಥೆಯಲ್ಲಿದ್ದು ಕೆನೆಗಟ್ಟುತ್ತ ಹೋದಂತೆ ತೂಕವಾದ ಕಬ್ಬಿಣದ ಖನಿಜ ಕೆಳಗೆ ದಟ್ಟೈಸಿ ರೂಪುಗೊಂಡ ಕಬ್ಬಿಣದ ನಿಕ್ಷೇಪ ಮೊದಲ ವರ್ಗದ್ದು. ಈ ರೀತಿ ರೂಪುಗೊಂಡ ಅದಿರಿನಲ್ಲಿ ಟೈಟೇನಿಯಂ ಮತ್ತು ವೆನೆಡಿಯಂ ಲೋಹಾಂಶಗಳು ಸೇರಿರುತ್ತವೆ. ಟೈಟೇನಿಯಂ ಬೆರೆತಿರುವ ಅದಿರನ್ನು ಕರಗಿಸುವುದಕ್ಕೆ ಅತಿ ಹೆಚ್ಚು ಉಷ್ಣತೆ ಬೇಕಾಗುವುದರಿಂದ ಈ ಬಗೆಯ ಅದಿರುಗಳು ಕಬ್ಬಿಣ ಕೈಗಾರಿಕೆಯಲ್ಲಿ ಈವರೆಗೂ ಉಪಯೋಗಕ್ಕೆ ಬಂದಿಲ್ಲ.

2.ಪ್ರಕೃತಿ ವ್ಯಾಪಾರಗಳಾದ ಮಳೆ, ಬಿಸಿಲು, ಗಾಳಿ-ಇವುಗಳ ಹೊಡೆತಕ್ಕೆ ಸಿಕ್ಕಿ ಕಲ್ಲುಗಳು ಬೀಳುಬಿದ್ದು, ಪುಡಿಯದ್ದು ಮಣ್ಣಾಗಿ, ನೀರಿನಲ್ಲಿ ಬಹುದೂರ ಸಾಗಿ ಸಾಗರದ ಪಾಲಾಗುತ್ತವೆ. ಆಗ ಕಲ್ಲಿನಲ್ಲಿದ್ದ ಕಬ್ಬಿಣದ ಅಂಶವೇ ಬೇರೆಯಾಗಿ ಸಮುದ್ರದ ತಳದಲ್ಲಿ ಕೆನೆಯಂತೆ ಪದರಪದರವಾಗಿ ನಿಕ್ಷೇಪಗೊಳ್ಳುತ್ತದೆ. ಅನೇಕ ವರ್ಷಕಾಲ ತಡೆಯಿಲ್ಲದ ಈ ಬಗೆಯ ವ್ಯಾಪಾರದಿಂದ ಕಬ್ಬಿಣದ ಒಂದು ಸ್ತರಪಂಕ್ತಿಯೇ ಸಾಗರದ ತಲದಲ್ಲಿ ಶೇಖರವಾಗುತ್ತದೆ. ಕ್ರಮೇಣ ಭೂವ್ಯಾಪಾರಗಳ ದೆಸೆಯಿಂದ ನೆಲ ಜಲವಾಗಿ, ಜಲ ನೆಲವಾದಾಗ ನೀರಿನಲ್ಲಿ ಶೇಖರಗೊಂಡ ಕಬ್ಬಿಣದ ಸ್ತರಗಳು ನೆಲದ ಮೇಲೆ ಕಾಣಿಸಿಕೊಳ್ಳುತ್ತವೆ. ಈ ರೀತಿ ರೂಪು ಹೊಂದಿದ ಕಬ್ಬಿಣದ ಸ್ತರಗಳು ಮುಖ್ಯವಾಗಿ ಕರ್ನಾಟಕ, ಗೋವ, ಬಿಹಾರ, ಒರಿಸ್ಸ, ಮಧ್ಯಪ್ರದೇಶ ರಾಜ್ಯಗಳಲ್ಲಿ ಮೈಲಿಗಟ್ಟಲೆ ಹರಡಿವೆ. ಭಾರತದ ಮುಖ್ಯ ಕಬ್ಬಿಣ ನಿಕ್ಷೇಪಗಳಿರುವುದು ಈ ಬಗೆಯ ಜಲದಲ್ಲಿ ನಿಕ್ಷೇಪಗೊಂಡ ಸ್ತರಗಳಲ್ಲಿ.

3 ಜಲದಲ್ಲಿ ನಿಕ್ಷೇಪಗೊಂಡ ಸ್ತರಪಂಕ್ತಿ ನೇರವಾಗಿ ಮೇಲೆದ್ದು ನಿಂತಾಗ, ಮಳೆಗಾಳಿಗಳ ಹೊಡೆತಕ್ಕೆ ಸಿಕ್ಕುತ್ತದೆ. ಕಲ್ಲಿನಲ್ಲಿದ್ದ ಸುಲಭವಾಗಿ ಕರಗಿಹೋಗುವಂಥ ವಸ್ತುವೆಲ್ಲವೂ ಹೋಗಿ, ಕಬ್ಬಿಣ ಅಂಶ ಮಾತ್ರ ಕೆನೆಗಟ್ಟಿ ಹೆಪ್ಪುಹೆಪ್ಪಾಗಿ ಶೇಖರವಾಗುತ್ತದೆ. ಈ ರೀತಿ ಸಂಗ್ರಹವಾದ ನಿಕ್ಷೇಪಗಳು ಕಬ್ಬಿಣದ ಅದಿರಿಗೆ ಮುಖ್ಯ ಆಕರಗಳು.

ಈ ಬಗೆಯ ನಿಕ್ಷೇಪಗಳು ಬೆಟ್ಟದ ನೆತ್ತಿಯ ಮೇಲಿರುತ್ತವೆ. ಬಹು ದೊಡ್ಡದಾಗಿರುತ್ತವೆ; ಇವುಗಳಲ್ಲಿನ ಕಬ್ಬಿಣದ ಅಂಶ ಶೇ.60 ಕ್ಕೂ ಹೆಚ್ಚಿರುತ್ತದೆ. ಪ್ರಪಂಚದ ಮುಖ್ಯ ಕಬ್ಬಿಣದ ನಿಕ್ಷೇಪಗಳೆಲ್ಲವೂ ಈ ರೀತಿಯವು.

**ಭಾರತದಲ್ಲಿ ಕಬ್ಬಿಣದ ಅದಿರು ನಿಕ್ಷೇಪಗಳು :** ಇವು ಸುಮಾರಾಗಿ ಎಲ್ಲ ರಾಜ್ಯಗಳಲ್ಲಿಯೂ ಇವೆ. ಆದರೆ ದೊಡ್ಡ ಪ್ರಮಾಣದವು ಮಧ್ಯ ಪ್ರದೇಶದ ಶ್ರೇಣಿ, ಒರಿಸ್ಸ, ಸುಂದರಘಡ್ ಜಿಲ್ಲೆಯ ಬೋನಾಯ ಶ್ರೇಣಿ. ಕಟಕ್ ಜಿಲ್ಲೆಯ ದಯತೌರಿ, ಗಂಧಮಾದನ ಪರ್ವತಗಳು, ಬಿಹಾರದ ಸಿಂಗ್‌ಭೂಂ ಜಿಲ್ಲೆ, ಕರ್ನಾಟಕದ ಹೊಸಪೇಟೆ, ಕುದುರೆಮುಖ, ಬಾಬಾಬುಡನ್ ಶ್ರೇಣಿಗಳು, ಪಶ್ಚಿಮ ಕರಾವಳಿಯ ಗೋವ-ಈ ಪ್ರದೇಶಗಳಲ್ಲಿವೆ. ದೊಡ್ಡ ಪ್ರಮಾಣದಲ್ಲಿ ಗಣಿ ಕೆಲಸ ನಡೆಯುತ್ತಿರುವುದು ಸಹ ಇವೇ ಸ್ಥಳಗಳಲ್ಲಿ.

**ಮಧ್ಯಪ್ರದೇಶ ಬೈಲದಿಲ :** ಮಧ್ಯಪ್ರದೇಶದ ಬಸ್ತರ್ ಜಿಲ್ಲೆಯ ಒಳಭಾಗದಲ್ಲಿರುವ ಈ ಶ್ರೇಣಿಯ ನೆತ್ತಿಯ ಮೇಲೆ ಪ್ರಪಂಚದಲ್ಲೇ ಅತಿ ದೊಡ್ಡದೆಂದು ಪರಿಗಣಿಸಲಾದ ಕಬ್ಬಿಣ ನಿಕ್ಷೇಪವಿದೆ. ಸು. 64 ಕಿಮೀ ಗಳಷ್ಟು ದೂರ ಹಬ್ಬಿರುವ ಈ ಬೆಟ್ಟದ ಸಾಲಿನಲ್ಲಿ 14 ಮುಖ್ಯ ನಿಕ್ಷೇಪಗಳನ್ನು ಗುರುತಿಸಿದ್ದಾರೆ. ಒಂದೊಂದೂ ಸು. 3.2 ಕಿಮೀ ಉದ್ದ, ಸಾವಿರ 303.33 ಮೀ ಗಳಷ್ಟು ಅಗಲವಿದೆ. ಕೆಲವು ಕಡೆಗಳಂತೂ 100–200 ಅಡಿಯವರೆಗೂ ಕಡಿದಾಗಿ ನಿಂತಿರುವ ದರಿಗಳು ಪೂರ್ತಿಯಾಗಿ ಕಬ್ಬಿಣದ ಅದಿರನ್ನೇ ತೋರಿಸುತ್ತವೆ.

ಇಲ್ಲಿನ ಅದಿರು ಅತ್ಯುತ್ತಮವಾದದ್ದು. ಕಬ್ಬಿಣದ ಅಂಶ ಸರಾಸರಿ ಶೇ. 65ಕ್ಕೂ ಮೇಲಿದೆ. ನಿರ್ಜನವಾದ ಈ ಪ್ರದೇಶಕ್ಕೆ ಸಂಬಂಧ ಕಲ್ಪಿಸಲು ಹೊಸದೊಂದು ರೈಲುಮಾರ್ಗವನ್ನು ಹಾಕಿದ್ದಾರೆ. ಇದರ ಮೂಲಕ ಬೈಲದಿಲ ಅದಿರನ್ನು ವಿಶಾಖಪಟ್ಟಣ ಬಂದರಿಗೆ ಕಳುಹಿಸುತ್ತಾರೆ. ಅಲ್ಲಿಂದ ಅದು ಜಪಾನಿಗೆ ರಫ್ತಾಗುತ್ತದೆ. ಈ ಪ್ರದೇಶದಲ್ಲಿ 1000 ಮಿಲಿಯನ್ ಟನ್‌ಗಳಷ್ಟು ಉತ್ತಮವಾದ ಕಬ್ಬಿಣದ ಅದಿರು ದೊರೆಯುವುದೆಂದು ಅಂದಾಜು ಮಾಡಲಾಗಿದೆ.

ಕುದುರೆಮುಖದ ಕಬ್ಬಿಣದಅ ನಿಕ್ಷೇಪ

**ಬಿಹಾರ ಮತ್ತು ಒರಿಸ್ಸ ಜಿಲ್ಲೆ :** ಪಕ್ಕಪಕ್ಕದಲ್ಲಿರುವ ದಕ್ಷಿಣ ಸಿಂಗ್‌ಭೂಂ, ಸುಂದರಘಡ್, ಕೆಯಾಂಜಾರ್ ಜಿಲ್ಲೆಗಳು ಕಬ್ಬಿಣದ ಅದಿರಿನ ನಿಕ್ಷೇಪಗಳಿಗೆ ಪ್ರಸಿದ್ಧಿಯಾಗಿವೆ. ಎರಡು ರಾಜ್ಯಗಳಲ್ಲಿಯೂ ಹರಡಿರುವ ಬೊನಾಯ್ ಶ್ರೇಣಿ ಸು. 48 ಕಿಮೀ ದೂರ ಹಬ್ಬಿದೆ. ಈ ಉದ್ದಕ್ಕೂ ಗುಡ್ಡದ ನೆತ್ತಿಯಲ್ಲಿ ಹೇರಳವಾಗಿ ಕಬ್ಬಿಣದ ಅದಿರು ದೊರೆಯುತ್ತದೆ. ದೇಶದ ಮುಖ್ಯವಾದ ಗಣಿಗಳಿರುವುದು ಈ ಸರಹದ್ದಿನಲ್ಲಿ. ಜಮ್‌ಷಡ್‌ಪುರದಲ್ಲಿರುವ ಟಾಟಾ ಕಬ್ಬಿಣ ಕಂಪನಿ, ದುರ್ಗಾಪುರ, ಬೊಕಾರೊ ಇವುಗಳಲ್ಲಿ ಅಗಾಧ ಪ್ರಮಾಣದ ಕಬ್ಬಿಣ ಕೈಗಾರಿಕೆಗಳು ಬೊನಾಯ್ ಶ್ರೇಣಿಯ ಅದಿರನ್ನು ಅವಲಂಬಿಸಿವೆ.



ಮಡಿಕೆ ಬಿದ್ದಿರುವ ಕಬ್ಬಿಣದ ಪದರುಕಲ್ಲು – ಕುದುರೆಮುಖ ಶ್ರೇಣಿ

ಇವಲ್ಲದೆ ಕಟಕ್ ಜಿಲ್ಲೆಯಲ್ಲಿನ ದಯತಾರಿ, ಗಂಧಮಾದನ ಶ್ರೇಣಿಯಲ್ಲಿ ಮತ್ತು ಬನಸಪಾಣಿಯ ಸುತ್ತಮುತ್ತ ಅನೇಕ ಸಣ್ಣ ಪ್ರಮಾಣದ ಕಬ್ಬಿಣದ ಗಣಿಗಳಿವೆ. ಇಲ್ಲಿ ಉತ್ಪತ್ತಿಯಾಗುವ ಅದಿರು ಕೊಲ್ಕತ್ತ ಮತ್ತು ಪರದೀಪ ಬಂದರುಗಳ ಮೂಲಕ ಜಪಾನ್ ದೇಶಕ್ಕೆ ರಫ್ತಾಗುತ್ತದೆ.

**ಗೋವ :** 1300 ಚ.ಮೈ ಪಶ್ಚಿಮ ಕರಾವಳಿಗೆ ಅಂಟಿಕೊಂಡಿರುವ ಈ ಪ್ರದೇಶದಲ್ಲಿ ಪ್ರಧಾನವಾದದ್ದು ಕಬ್ಬಿಣ ಕೈಗಾರಿಕೆಯೊಂದೇ. ಇಲ್ಲಿನ ನಿಕ್ಷೇಪಗಳು ಬಂದರಿಗೆ ಅತಿ ಸಮೀಪವಾಗಿರುವುದರಿಂದಲೂ ನದಿಗಳು, ಕಾಲುವೆಗಳ ಮೂಲಕ ಅದಿರನ್ನು ಸಾಗಿಸಲು ಸೌಲಭ್ಯ ಇರುವುದರಿಂದಲೂ ಲಾಭದಾಯಕವಾಗಿ ಅದುರು ವ್ಯಾಪಾರವನ್ನು ಮಾಡಲು ಸಾಧ್ಯವಾಗಿದೆ. ಅದಿರಿನಲ್ಲಿರುವ ಕಬ್ಬಿಣದ ಅಂಶಹೆಚ್ಚೇನೂ ಅಲ್ಲ; ಶೇ. 58–60ರ ವರೆಗೆ ಮಾತ್ರ. ನವೀನ ಯಂತ್ರೋಪಕರಣಗಳ ಸಹಾಯದಿಂದ ಹೇರಳ ಪ್ರಮಾಣದಲ್ಲಿ ಅದಿರನ್ನು ಉತ್ಪಾದಿಸಿ ದೂರ ದೇಶಗಳಿಗೆ ಕಳುಹಿಸುತ್ತಾರೆ. 300 ಮಿಲಿಯನ್ ಟನ್‌ಗಳಷ್ಟು ಕಬ್ಬಿಣದ ಅದಿರು ಇಲ್ಲಿದೆಯೆಂದು ಅಂದಾಜು. ವರ್ಷಂಪ್ರತಿ ಐದಾರು ದಶಲಕ್ಷ ಟನ್‌ಗಳು ಜಪಾನ್ ದೇಶಕ್ಕೆ ರಫ್ತಾಗುತ್ತವೆ.

**ಕರ್ನಾಟಕ** : ಕಬ್ಬಿಣ ನಿಕ್ಷೇಪಗಳು ಈ ಕೆಳಕಂಡ ಜಿಲ್ಲೆಗಳಲ್ಲಿವೆ :

| | | |
|---|---|---|
| ಬಳ್ಳಾರಿ | ... | ಹೊಸಪೇಟೆ, ಬಳ್ಳಾರಿ |
| ಬಿಜಾಪುರ | ... | ಬಾಗಲಕೋಟೆ ಬಳಿಯಿರುವ ಕಮತಗಿ |
| ಚಿಕ್ಕಮಗಳೂರು | ... | ಬಾಬಾಬುಡನ್ ಶ್ರೇಣಿಯ ಕೆಮ್ಮಣ್ಣುಗುಂಡಿ, ಕುದುರೆಮುಖ, ಗಂಗಮೂಲ |
| ಚಿತ್ರದುರ್ಗ | ... | ವಜ್ರ, ಸಾಸಲು, ಹೊಸದುರ್ಗ |
| ಉತ್ತರಕನ್ನಡ | ... | ಅನಮೋಡು, ಸೂಪ, ಹೊನ್ನಾವರ |
| ದಕ್ಷಿಣ ಕನ್ನಡ | ... | ಸುಬ್ರಹ್ಮಣ್ಯ, ಪುತ್ತೂರು |
| ಶಿವಮೊಗ್ಗ | ... | ಕುಂಸಿ, ಶಂಕರಗುಡ್ಡ |
| ತುಮಕೂರು | ... | ಚಿಕ್ಕನಾಯಕನ ಹಳ್ಳಿ |



ಹೊನ್ನಾವರದ ಬಳಿಯ ಕಬ್ಬಿಣದ ಅದಿರಿನ ಗಣಿಯ ಒಂದು ದೃಶ್ಯ

**ಬಳ್ಳಾರಿ–ಹೊಸಪೇಟೆ :** ಕರ್ನಾಟಕ ರಾಜ್ಯದಲ್ಲಿ ಮುಖ್ಯವಾದ ಕಬ್ಬಿಣದ ಅದಿರು ವಲಯದಲ್ಲಿದೆ. ಪ್ರಪಂಚದ ಅತ್ಯುತ್ತಮ ಕಬ್ಬಿಣದ ಅದಿರು ಇಲ್ಲಿನದೆಂದು ಹೆಸರುವಾಸಿಯಾಗಿದೆ. 1952ರಲ್ಲಿ ವರ್ಷಕ್ಕೆ ಹತ್ತು ಸಾವಿರ ಟನ್ ಮಾತ್ರ ಉತ್ಪಾದನೆಯಿತ್ತು. ಅಲ್ಲಿಂದೀಚೆಗೆ ಉತ್ಪಾದನೆ ವರ್ಷವರ್ಷವೂ ಹೆಚ್ಚುತ್ತಹೋಗಿ ಈಗ 30 ಲಕ್ಷಟನ್ ಮುಟ್ಟಿದೆ. ಜಂಬುನಾಥನ ಹಳ್ಳಿ, ಪಾಪನಾಯಕನ ಹಳ್ಳಿ, ಎತ್ತಿನಹಟ್ಟಿ, ಉಬ್ಬಲಗಂಡಿ, ದೋಣಿಮಲೆ, ದೇವದಾರ ಗುಡ್ಡ, ರಾಮನ ದುರ್ಗ, ಕುಮಾರಸ್ವಾಮಿ ಈ ಗುಡ್ಡ ಸಾಲುಗಳಲ್ಲಿ 10,000 ಟನ್ ಅದಿರನ್ನು ವಾರ್ಷಿಕ ಉತ್ಪಾದಿಸುತ್ತಿದ್ದುದು ಈಗ ಅದು 86,000 ಟನ್‌ಗಳಿಗೆ ಏರಿದೆ. ಅತ್ಯುತ್ತಮವಾದ ಅದಿರು ಹೇರಳವಾಗಿ ದೊರೆಯುವುದರಿಂದಲೂ ರೈಲು, ನೀರು, ವಿದ್ಯುಚ್ಛಕ್ತಿ ಸೌಕರ್ಯಗಳಿರುವುದರಿಂದಲೂ ಹೊಸಪೇಟೆಯಲ್ಲಿ ದೊಡ್ಡ ಪ್ರಮಾಣದ ಉಕ್ಕಿನ ಯಂತ್ರಾಗಾರವನ್ನು ನಿರ್ಮಿಸುವುದು ಸಾಧ್ಯ. ಸಂಡೂರಿಗೆ ಸಮೀಪದಲ್ಲಿರುವ ದೋಣಿಮಲೆಯ ಬಳಿ ಬೃಹತ್ ಪ್ರಮಾಣದಲ್ಲಿ ಗಣಿ ಉದ್ಯಮ ಪ್ರಾರಂಭವಾಗಿದೆ. ವರ್ಷಂಪ್ರತಿ ಸು. 4 ಮಿಲಿಯನ್ ಟನ್‌ಗಳಷ್ಟು ಅದಿರನ್ನು ಈ ಗುಡ್ಡಸಾಲಿನಲ್ಲಿ ತೆಗೆದು ಚೆನ್ನೈ ಬಂದರಿಗೆ ಸಾಗಿಸಲಾಗುತ್ತದೆ. ಇಷ್ಟು ಹೇರಳವಾದ ಪ್ರಮಾಣದಲ್ಲಿ ಅದಿರನ್ನು ಪಡೆಯಲು ಅತ್ಯಾಧುನಿಕವಾದ ಯಂತ್ರೋಪಕರಣಗಳು ಆವಶ್ಯಕ.

**ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣು ಗುಂಡಿ** : ಈ ಜಿಲ್ಲೆಯಲ್ಲಿರುವ ಬಾಬಾಬುಡನ್ ಶ್ರೇಣಿ ಪ್ರಸಿದ್ಧಿಯಾದುದು. ಈ ಪರ್ವತಪಂಕ್ತಿಯ ನೆತ್ತಿಯ ಪ್ರದೇಶವೆಲ್ಲ ಕಬ್ಬಿಣದ ಅದಿರಿನಿಂದ ಕೂಡಿದೆ. ಕೆಮ್ಮಣ್ಣುಗುಂಡಿಯ ಬಳಿ ದೊರೆಯುವ ಅದಿರನ್ನು ಭದ್ರಾವತಿಗೆ ಸಾಗಿಸಿ ಕಬ್ಬಿಣ ಉಕ್ಕನ್ನು ತಯಾರಿಸಲಾಗುತ್ತದೆ.



**ಕಬ್ಬಿಣದ ಅದುರು ನಿಕ್ಷೇಪಗಳು : 1. ರಾಣಿಗಂಜ್, 2. ರಾಜಮಹಲ್, 3. ಪಲಮೌ, 4. ಸಿಂಘಭೂಮ್, 5. ಮಯೂರ ಭಂಜ್, 6. ಬೊನ್ನೈ, 7. ಕಿಯೊಂಜಾರ್, 8. ಜಬಲ್‌ಪುರ, 9. ದ್ರುಗ್, 10. ಬೈಲಾದಿಲಾ, 11. ರೌಘಾಟ್, 12. ಅದಿಲಾಬಾದ್, 13. ಕರ್ನೂಲು, 14. ಗುಂಟೂರು, 15. ನೆಲ್ಲೂರು, 16. ಸೇಲಂ, 17. ತಿರುಚಿನಾಪಳ್ಳಿ, 18. ಚಿಕ್ಕಮಗಳೂರು, 19. ಹಿರಿಯೂರು, 20. ಬಳ್ಳಾರಿ, 21. ಸಂಡೂರು, 22. ಧಾರವಾಡ, 23. ಗೋವ, 24. ರತ್ನಗಿರಿ, 25. ನವನಗರ, 26. ಚಾಂದ, 27. ಆಳ್ವಾರ್, 28. ಜೈಪುರ, 29. ನಾರ್‌ನೌಲ್, 30. ಮಂಡಿ. 31. ಕುಮಾವ್.**

**ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು : 1. ದುರ್ಗಾಪುರ, 2. ಬರ್ನ್‌ಪುರ, 3. ಜೆಂಷೆಡ್‌ಪುರ, 4. ರೂರ್ಕೆಲ, 5. ಭಿಲೈ, 6. ಭದ್ರಾವತಿ**

**ಉದ್ದೇಶಿತ ಉಕ್ಕಿನ ಕಾರ್ಖಾನೆಗಳು : 1. ಹೊಸಪೇಟೆ, 2. ಸೇಲಂ, 3. ವಿಶಾಖಪಟ್ಟಣ, 4. ಬೊಕಾರೊ**

**ಕುದುರೆಮುಖ :** ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ಕುದುರೆಮುಖ ಗಂಗಮೂಲ ಪರ್ವತಶ್ರೇಣಿ ಮೈಸೂರು ದೇಶದಲ್ಲಿ ಹೆಸರುವಾಸಿಯಾಗಿದೆ. ಪ್ರಕೃತಿ ಸಂಪತ್ತಿನ ತವರಾದ ಈ ಶ್ರೇಣಿಯ ಉದ್ದಕ್ಕೂ ಕಬ್ಬಿಣದ ಸ್ತರ ಪಂಕ್ತಿಯಿದೆ. ಕಬ್ಬಿಣದ ಅಂಶ ಕಡಿಮೆ ಇದ್ದುದರಿಂದ ಇವುಗಳನ್ನು ಈವರೆಗೆ ಗಣನೆಗೆ ತಂದು ಕೊಂಡಿರಲಿಲ್ಲ. ಬೆಳೆಯುತ್ತಿರುವ ಮಂಗಳೂರು ಬಂದರಿಗೆ ಕುದುರೆಮುಖ ಸಮೀಪವಾಗಿರುವುದರಿಂದ ಹೆಚ್ಚು ಖರ್ಚಿಲ್ಲದೆ ಅದುರನ್ನು ಅಲ್ಲಿಗೆ ಸಾಗಿಸುತ್ತಾರೆ. ಇಲ್ಲಿ ದೊರೆಯುವ ಅದಿರಿಗೆ ಅಯಸ್ಕಾಂತಶಕ್ತಿ ಇರುವುದರಿಂದ ಅದಿರನ್ನು ಶುದ್ಧಿಮಾಡಿ ಉತ್ತಮ ದರ್ಜೆಯ ಅದಿರನ್ನು ವಿಂಗಡಿಸಲು ಸಾಧ್ಯವಾಗಿದೆ. ಸುಮಾರು ಅರುವತ್ತು ಕೋಟಿ ರೂಪಾಯಿ ಬಂಡವಾಳ ಹೂಡಿ ಇಲ್ಲಿನ ನಿಕ್ಷೇಪಗಳನ್ನು ರೂಢಿಸುವ ಬೃಹತ್ ಯೋಜನೆಯೊಂದು ಸಿದ್ಧವಾಗಿ, 1987ರಲ್ಲೇ ಕಬ್ಬಿಣದ ಅದಿರನ್ನು ಉಂಡೆರೂಪಕ್ಕೆ ತರುವ 3 ದಶಲಕ್ಷ ಟನ್ನು ಸಾಮರ್ಥ್ಯದ ಸ್ಥಾವರನ್ನು ಇಲ್ಲಿ ಸ್ಥಾಪಿಸಲಾಯಿತು. ನಿರ್ಜನವಾದ, ದುರ್ಗಮವಾದ ಈ ಪ್ರದೇಶ ಅನೇಕ ಬಗೆಯ ಕಾರ್ಯಚಟುವಟಿಕೆಗಳಿಂದ ಜೀವಂತವಾಗಿದೆ. ವಾರ್ಷಿಕ ಅದಿರು ಉತ್ಪಾದನೆ ಒಂದು ಲಕ್ಷ ಟನ್ನುಗಳು.

**ಚಿತ್ರದುರ್ಗ ಜಿಲ್ಲೆ** : ಮುಖ್ಯವಾದ ಕಬ್ಬಿಣದ ನಿಕ್ಷೇಪಗಳು ಹುಲಿಯೂರಿನ ಬಳಿಯ ವಜ್ರ, ಕುದುರೆಕಣಿವೆ, ಮಾರಿಕಣಿವೆ ಬಳಿಯ ಲಕ್ಕಿಹಳ್ಳಿ, ಕೆಂಕೆರೆ, ಚಿತ್ರದುರ್ಗ ಬಳಿಯ ಭೀಮಸಮುದ್ರ, ಸಿರಿಗೆರೆ ಬಳಿಯ ಮದಕರಿಪುರ ಇವುಗಳ ಹತ್ತಿರ ಇವೆ. ಇಲ್ಲಿನ ನಿಕ್ಷೇಪಗಳು ಚೆನ್ನೈ ಬಂದರಿಗೆ ದೂರವಾಗಿರುವುದರಿಂದ ದೊರೆಯುವ ಹಣವೆಲ್ಲವೂ ಅದಿರು ಸಾಗಾಣಿಕೆಗೇ ವ್ಯಯವಾಗುವ ಕಾರಣ, ಹೆಚ್ಚಿನ ಪ್ರಮಾಣದಲ್ಲಿ ಇಲ್ಲೆಲ್ಲೂ ಕೆಲಸ ನಡೆಯುತ್ತಿಲ್ಲ. ಉದ್ದೇಶಿತ ಉಕ್ಕಿನ ಕಾರ್ಖಾನೆಗಳು. 1.ಹೊಸಪೇಟೆ, 2.ಸೇಲಂ, 3.ವಿಶಾಖಪಟ್ಟಣ 4.ಬೊಕಾರೊ

**ಶಿವಮೊಗ್ಗ ಜಿಲ್ಲೆ** : ಇಲ್ಲಿ ಕಬ್ಬಿಣದ ಅದಿರು ಕುಂಸಿ, ಶಂಕರಗುಡ್ಡ, ಚಟ್ಟನಹಳ್ಳಿ, ಗಂಗೂರು, ಸಿದ್ಧರಹಳ್ಳಿ, ಆಗುಂಬೆ, ನಿಶಾನಿಗುಡ್ಡ, ಹೊಸದುರ್ಗದ ಕೊಡಚಾದ್ರಿ ಈ ಬಳಿ ದೊರೆಯುತ್ತದೆ. ಆದರೆ ಇವುಗಳೆಲ್ಲವೂ ರೈಲುಮಾರ್ಗಗಳಿಗೆ ಅತಿ ದೂರವಿರುವುದರಿಂದ ಇದುವರೆವಿಗೆ ಎಲ್ಲಿಯೂ ಕೆಲಸ ನಡೆದಿಲ್ಲ. ಕೊಡಚಾದ್ರಿ ಕೋಟೆ ನಿಕ್ಷೇಪಗಳು ಕುದುರೆಮುಖದ ನಿಕ್ಷೇಪಗಳಂತೆಯೇ ಕುಂದಾಪುರ ಬಂದರಿಗೆ ಅತಿ ಸಮೀಪವಾದವು.

**ದಕ್ಷಿಣ ಕನ್ನಡ ಜಿಲ್ಲೆ** : ಕಬ್ಬಿಣದ ಸ್ತರಗಳು ಪುತ್ತೂರು ತಾಲ್ಲೂಕಿನ ಆರ್ಬದ ಗುಡ್ಡದಲ್ಲಿವೆ. ಈ ಗುಡ್ಡದ ಸಾಲು ಸುಬ್ರಹ್ಮಣ್ಯದಿಂದ ಧರ್ಮಸ್ಥಳದವರೆಗೂ ಹರಡಿದೆ. ಹಾಸನ–ಮಂಗಳೂರು ರೈಲುಮಾರ್ಗ ಈ ನಿಕ್ಷೇಪಗಳ ಬಳಿಯೇ ಹಾದುಹೋಗುವುದರಿಂದ ಇನ್ನು ಕೆಲವು ವರ್ಷಗಳಲ್ಲೇ ಇವುಗಳಿಗೂ ಬೆಲೆ ಬರಬಹುದು.

**ಉತ್ತರಕನ್ನಡ ಜಿಲ್ಲೆ** : ಗೋವೆಯ ಅಂಚಿಗಿರುವ ಅನಮೋಡಸೂಪ, ದಾಂಡೇಲಿ, ಎಲ್ಲಾಪುರ, ತಲಗಿನಕೇರಿ, ಮಾವಿನಗುಂಡಿ, ಈ ಸ್ಥಳಗಳಲ್ಲಿ ಕಬ್ಬಿಣದ ನಿಕ್ಷೇಪಗಳಿವೆ. ಎಲ್ಲೆಲ್ಲೂ ದಟ್ಟವಾದ ಕಾಡು ಹಬ್ಬಿರುವುದರಿಂದಲೂ ಮಾರ್ಗಾನುಕೂಲತೆಗಳು ಇಲ್ಲದಿರುವುದರಿಂದಲೂ ಇವುಗಳಿಗೆ ಪ್ರಾಮುಖ್ಯ ಬಂದಿಲ್ಲ. ಕಾರವಾರ ಬಂದರು ಅಭಿವೃದ್ಧಿಗೊಂಡು ಸೇತುವೆಗಳು, ರೈಲುಮಾರ್ಗಗಳು ನಿರ್ಮಿತವಾದರೆ ಉತ್ತರಕನ್ನಡ ಜಿಲ್ಲೆಯ ಅದಿರು ನಿಕ್ಷೇಪಗಳು ಪ್ರಾಮುಖ್ಯಕ್ಕೆ ಬರುತ್ತವೆ.

**ತುಮಕೂರು ಜಿಲ್ಲೆ** : ದಕ್ಷಿಣದಲ್ಲಿ ಹತ್ಯಾಳಿನಿಂದ ಹಿಡಿದು, ಹುಳಿಯಾರಿನವರೆಗೆ ಚಿಕ್ಕನಾಯಕನಹಳ್ಳಿಯ ಪೂರ್ವಕ್ಕೆ ಹಬ್ಬಿರುವ ಗುಡ್ಡಸಾಲಿನಲ್ಲಿ ಕಬ್ಬಿಣದ ನಿಕ್ಷೇಪಗಳು ಹಲವಾರಿವೆ. ಸಣ್ಣಪ್ರಮಾಣದಲ್ಲಿ ಅದಿರನ್ನು–ಮಂಗಳೂರು ಬಂದರಿಗೂ ಭದ್ರಾವತಿಯ ಉಕ್ಕಿನ ಕಾರ್ಖಾನೆಗೂ ಕಳುಹಿಸಲಾಗುತ್ತಿದೆ.

ದೊರೆಯಬಹುದಾದ ಅದಿರಿನ ಪ್ರಮಾಣದ ಅಂದಾಜು : ಭಾರತದಲ್ಲಿ ದೊರೆಯಬಹುದಾದ ಕಬ್ಬಿಣದ ಅದಿರಿನ ಒಟ್ಟು ಪರಿಮಾಣ 20,000 ಮಿಲಿಯನ್ ಟನ್‌ಗಳೆಂದು ಅಂದಾಜು. ಇದರಲ್ಲಿ ಸಿದ್ಧಪಡಿಸಿ ತೋರಿಸಿದ ಹಾಗೂ ಇರಬಹುದೆಂದು ಅನುಮಾನಿಸಿದ ಅದಿರಿನ ಮೊತ್ತಗಳೆರಡೂ ಸೇರಿವೆ. ವರ್ಷಂಪ್ರತಿ ನಡೆಯುತ್ತಿರುವ ಅನ್ವೇಷಣೆಗಳಿಂದ ಹೊಸ ನಿಕ್ಷೇಪಗಳು ಗಮನಕ್ಕೆ ಬಂದು ನಿಕ್ಷೇಪಗಳ ಒಟ್ಟು ಅಂದಾಜು ಹೆಚ್ಚುತ್ತ ಹೋಗುತ್ತಿದೆ. ನಮ್ಮ ಬಳಕೆಗೆ ಸಾಕಾಗಿ ಬೇರೆ ದೇಶಗಳಿಗೆ ನಾವು ಅದಿರನ್ನು ರಫ್ತು ಮಾಡಬಹುದಾಗಿದೆ.

ಇತ್ತೀಚೆಗೆ ನಡೆಸಿರುವ ಶೋಧನೆಗಳ ಪ್ರಕಾರ ಬಳ್ಳಾರಿ ಹೊಸಪೇಟೆ ಪ್ರಾಂತದಲ್ಲಿ ದೊರೆಯಬಹುದಾದ ಅದಿರಿನ ಮೊತ್ತ 1500 ಮಿಲಿಯನ್ ಟನ್‌ಗಳು ಎಂದು ಪರಿಗಣಿಸಲಾಗಿದೆ. ಇದೇ ರೀತಿ ಕುದುರೆಮುಖದ ಬಳಿ ಮ್ಯಾಗ್ನಟೈಟ್ ಅದಿರಿನ ಪ್ರಮಾಣ 3000 ಮಿಲಿಯನ್ ಟನ್‌ಗಳಿಗೂ ಹೆಚ್ಚಿದೆಯೆಂದು ಅಂದಾಜುಮಾಡಲಾಗಿದೆ (**ನೋಡಿ–ಕರ್ನಾಟಕದ ಖನಿಜ ನಿಕ್ಷೇಪಗಳು**). (ಬಿ.ಪಿ.ಆರ್.)

**ಕಬ್ಬಿಣದ ಮಿಶ್ರಲೋಹಗಳು :** ಕಬ್ಬಿಣವನ್ನು ಬೇರೆ ಬೇರೆ ಧಾತುಗಳೊಡನೆ ಲೀನ ಮಾಡಿ ತಯಾರಿಸಿದ ಮಿಶ್ರಲೋಹಗಳು (ಫೆರ್ರೊಅಲಾಯ್ಸ್). ಲೀನ ವಸ್ತುಗಳು ಮುಖ್ಯವಾದವು ಮ್ಯಾಂಗನೀಸ್, ನಿಕ್ಕಲ್, ಕ್ರೋಮಿಯಂ, ಟಂಗ್ ಸ್ಟನ್, ಸಿಲಿಕಾನ್, ತಾಮ್ರ, ವೆನೇಡಿಯಂ ಮತ್ತು ಮಾಲಿಬ್ಡಿನಂ. ಸಾಧಾರಣವಾಗಿ ಕಬ್ಬಿಣದ ಎಲ್ಲ ಮಿಶ್ರಲೋಹ ಗಳಲ್ಲಿಯೂ ಇಂಗಾಲ ಇದ್ದೇ ಇರುತ್ತದೆ. ಅದರ ಅಂಶ ಶೇ. 0.1ಕ್ಕಿಂತ ಹೆಚ್ಚು ಇರುವಾಗ ಆ ಮಿಶ್ರಲೋಹವನ್ನು ಉಕ್ಕಿನ ಮಿಶ್ರಲೋಹವೆಂದೂ ಕಡಿಮೆ ಇರುವಾಗ ಮಾತ್ರ ಕಬ್ಬಿಣದ

ಮಿಶ್ರಲೋಹವೆಂದೂ ಕರೆಯುವುದು ವಾಡಿಕೆ. ಕಬ್ಬಿಣದ ಮಿಶ್ರಲೋಹದಲ್ಲಿರುವ ಧಾತುಗಳು ಕಬ್ಬಿಣದಲ್ಲಿ ಇಲ್ಲವೇ ಕಬ್ಬಿಣದ ಕಾರ್ಬೈಡಿನಲ್ಲಿ ವಿಲೀನಗೊಂಡು ಅಥವಾ ಕಬ್ಬಿಣದಲ್ಲಿರುವ ಇಂಗಾಲದ ಜೊತೆ ವಿಲೀನಗೊಂಡು ಮಿಶ್ರಲೋಹಗಳಾಗುತ್ತವೆ. ಕೋಬಾಲ್ಟ್ ಮತ್ತು ನಿಕ್ಕಲುಗಳು ಸ್ವಂತರೂಪದಲ್ಲಿಯೇ ಕಬ್ಬಿಣದಲ್ಲಿ ವಿಲೀನಗೊಂಡಿರುವುವು. ಮ್ಯಾಂಗನೀಸ್, ಕ್ರೋಮಿಯಂ, ಟಂಗ್‌ಸ್ಟನ್, ವೆನೆಡಿಯಂ ಮತ್ತು ಮಾಲಿಬ್ಡಿನಂಗಳು ಸ್ವಂತರೂಪದಲ್ಲಿ ಅಥವಾ ಕಾರ್ಬೈಡುಗಳಾಗಿ ಕಬ್ಬಿಣ ಅಥವಾ ಕಬ್ಬಿಣದ ಕಾರ್ಬೈಡಿನಲ್ಲಿ ವಿಲೀನಗೊಳ್ಳುತ್ತವೆ.

ಉಕ್ಕು ಮತ್ತು ಅದರ ಮಿಶ್ರಲೋಹಗಳನ್ನು ತಯಾರಿಸುವುದರ ಸಲುವಾಗಿ ಕಬ್ಬಿಣದ ಮಿಶ್ರಲೋಹಗಳನ್ನು ಉಪಯೋಗಿಸುತ್ತಾರೆ. ಉಕ್ಕಿನ ಮಿಶ್ರಲೋಹಗಳ ತಯಾರಿಕೆಯಲ್ಲಿ ಮೇಲೆ ಹೇಳಿರುವ ಮ್ಯಾಂಗನೀಸ್ ಮುಂತಾದ ಧಾತುಗಳನ್ನು ದ್ರವಿಸಿದ ಉಕ್ಕಿನೊಡನೆ ನೇರವಾಗಿ ಲೀನಗೊಳಿಸುವಂತಿಲ್ಲ. ಇಲ್ಲಿ ಕಬ್ಬಿಣದ ಮಿಶ್ರಲೋಹ ಅತ್ಯುಪಯುಕ್ತವಾಗುವುದು.

ಉಕ್ಕಿನೊಡನೆ ನಿಕ್ಕಲನ್ನು ಲೀನಗೊಳಿಸಿ ತತ್ಸಂಬಂಧ ಉಕ್ಕಿನ ಮಿಶ್ರಲೋಹವನ್ನು ತಯಾರಿಸಬೇಕೆಂದು ಭಾವಿಸೋಣ. ಆಗ ದ್ರವಿಸಿದ ಉಕ್ಕಿಗೆ ಕಬ್ಬಿಣದ (ನಿಕ್ಕಲ್) ಮಿಶ್ರಲೋಹವನ್ನು ಲೀನಗೊಳಿಸುತ್ತಾರೆ. ಈ ಕ್ರಿಯೆಯಲ್ಲಿ ಕಬ್ಬಿಣದ ಮತ್ತು ಉಕ್ಕಿನಲ್ಲಿ ಸಹಜವಾಗಿಯೇ ಇರುವ ಕಲ್ಮಷಗಳೊಡನೆ ಧಾತುವಿನ (ನಿಕ್ಕಲ್) ಸ್ವಲ್ಪಾಂಶ ಬೆರೆತು ಕಿಟ್ಟರೂಪದಲ್ಲಿ ಪ್ರತ್ಯೇಕಗೊಂಡು ಹೊರಬರುತ್ತದೆ. ಉಳಿದ ಅಂಶ ಉಕ್ಕಿನೊಡನೆ ಲೀನಗೊಂಡು ಅದು ಘನೀಭವಿಸುವಾಗ ನಮಗೆ ಬೇಕಾದ ಉಕ್ಕಿನ ಮಿಶ್ರಲೋಹ ದೊರೆಯುವುದು.

ದೋಷಗಳು ಮತ್ತು ಅವುಗಳ ನಿರ್ಮೂಲನೆ : ಕಬ್ಬಿಣ ಮತ್ತು ಉಕ್ಕು ಇವುಗಳಲ್ಲಿ ಇಂಗಾಲದ ಜೊತೆಗೆ ಗಂಧಕ, ರಂಜಕ, ಆಮ್ಲಜನಕಗಳು ಕಲ್ಮಷ ರೂಪದಲ್ಲಿರುತ್ತವೆ. ಇದರಿಂದಾಗಿ ಕಬ್ಬಿಣ ಮತ್ತು ಉಕ್ಕಿನ ಯಾಂತ್ರಿಕ ಗುಣಲಕ್ಷಣಗಳಲ್ಲಿ ಬದಲಾವಣೆಗಳುಂಟಾಗುವುವು. ಆಮ್ಲಜನಕದಿಂದ ಉತ್ಪನ್ನವಾಗುವ ದೋಷಗಳನ್ನು ಮ್ಯಾಂಗನೀಸ್ ಅಥವಾ ಸಿಲಿಕಾನನ್ನು ಲೀನಗೊಳಿಸುವುದರಿಂದ ನಿರ್ಮೂಲಿಸಬಹುದು. ಈ ಎರಡೂ ಧಾತುಗಳು ಆಯಾ ಧಾತುಗಳ ಕಬ್ಬಿಣದ ಮಿಶ್ರಲೋಹಗಳ ರೂಪದಲ್ಲಿ ಉಕ್ಕಿನಲ್ಲಿ ಲೀನವಾಗುತ್ತದೆ. ಗಂಧಕ ಮತ್ತು ರಂಜಕಗಳಿಂದ ಉಕ್ಕಿನಲ್ಲಿ ಪೆಡಸುತನ ಉಂಟಾಗುವುದು. ಗಂಧಕದ ದೋಷಗಳನ್ನು ನಿರ್ಮೂಲಿಸಲು ಮ್ಯಾಂಗನೀಸನ್ನೂ ರಂಜಕದ ದೋಷಗಳನ್ನು ನಿರ್ಮೂಲಿಸಲು ಮ್ಯಾಂಗನೀಸ್, ನಿಕ್ಕಲ್, ತಾಮ್ರ, ಟಂಗ್‌ಸ್ಟನ್ ಸಿಲಿಕಾನ್ ಇವುಗಳ ಪೈಕಿ ಯಾವುದೇ ಎರಡನ್ನೂ ಕಬ್ಬಿಣದ ಮಿಶ್ರಲೋಹದ ರೂಪದಿಂದ ಉಕ್ಕಿನಲ್ಲಿ ಲೀನಗೊಳಿಸುತ್ತಾರೆ.

ತಯಾರಿಕೆಯ ವಿಧಾನಗಳು : ಕಬ್ಬಿಣದ ಮಿಶ್ರಲೋಹಗಳನ್ನು ತಯಾರಿಸುವ ವಿಧಾನಗಳಲ್ಲಿ ಕೆಳಗಿನವು ಮುಖ್ಯವಾದವು.

1. ಕಬ್ಬಿಣ ಮತ್ತು ಬೇಕಾದ ಧಾತು ಇವೆರಡನ್ನು ಬೇಕಾದ ಭಾಗದಲ್ಲಿ ತೂಕಮಾಡಿ ಒಟ್ಟು ಗೂಡಿಸಿ ಮೂಸೆಯಲ್ಲಿ ಕರಗಿಸುವುದು.

2. ಹೆಚ್ಚು ಉಷ್ಣತೆಗೆ ಕರಗುವ ಧಾತುವನ್ನು ಕರಗಿಸಿ ಅದಕ್ಕೆ ಕಡಿಮೆ ಉಷ್ಣತೆಗೆ ಕರಗುವ ಧಾತುವನ್ನು ಲೀನಗೊಳಿಸಿ ಮಿಶ್ರಲೋಹವನ್ನು ತಯಾರಿಸುವುದು.

3. ಕಬ್ಬಿಣದ ಅದಿರು ಮತ್ತು ಬೇರೆ ಧಾತುವಿನ ಅದಿರು ಇವನ್ನು ಮಿಶ್ರಣಮಾಡಿ ಅವನ್ನು ಒಟ್ಟುಗೂಡಿಸಿ ಅಪಕರ್ಷಿಸಿ ಮಿಶ್ರಲೋಹವನ್ನು ತಯಾರಿಸುವುದು.

4. ಕಬ್ಬಿಣದ ಒಂದು ಸಂಯುಕ್ತದ ದ್ರಾವಣ ಮತ್ತು ಬೇರೆ ಒಂದು ಧಾತುವಿನ ಸಂಯುಕ್ತದ ದ್ರಾವಣ ಮಿಶ್ರಣವನ್ನು ತಯಾರಿಸಿ ಈ ಮಿಶ್ರಣದಿಂದ ಎರಡೂ ಧಾತುಗಳ ವಿದ್ಯುನ್ನಿಕ್ಷೇಪ ಮಾಡಿ ಮಿಶ್ರಲೋಹವನ್ನು ತಯಾರಿಸುವುದು.

ಗುಣಲಕ್ಷಣಗಳು ಮತ್ತು ಉಪಯೋಗಗಳು : ಕೆಲವು ಮುಖ್ಯವಾದ ಕಬ್ಬಿಣದ ಮಿಶ್ರಲೋಹಗಳು ಅವುಗಳ ಗುಣಲಕ್ಷಣಗಳು ಮತ್ತು ಕೈಗಾರಿಕೆಯ ಕ್ಷೇತ್ರದಲ್ಲಿ ಅವುಗಳ ಉಪಯೋಗಗಳನ್ನು ಮುಂದೆ ಬರೆದಿವೆ.

1.ಫೆರೊ ಬೊರಾನ್ : ಉಕ್ಕಿನ ತಯಾರಿಕೆಯಲ್ಲಿ ಆಮ್ಲಜನಕವನ್ನು ನಿರ್ಮೂಲಿಸಲು ಮತ್ತು ಉಕ್ಕಿನ ಕಾಠಿನ್ಯವನ್ನು ಹೆಚ್ಚಿಸಲು ಇದರ ಉಪಯೋಗವಿದೆ.

2. ಫೆರೊ ಕ್ರೋಮಿಯಂ: ಉಕ್ಕಿಗೆ ಕ್ರೋಮಿಯಮನ್ನು ಲೀನಗೊಳಿಸುವುದರ ಸಲುವಾಗಿ ಇದರ ಉಪಯೋಗವಿದೆ. ಇದರಿಂದ ಉಕ್ಕಿನ ಕಾಠಿನ್ಯ ಹೆಚ್ಚಾಗಿ ಅದು ತುಕ್ಕು ನಿರೋಧಕವಾಗುತ್ತದೆ. ಇಂಥ ಉಕ್ಕನ್ನು ತಿಜೋರಿ, ಜೆಜ್ಜುವ ಯಂತ್ರ ಮುಂತಾದ ಔದ್ಯೋಗಿಕ ಉಪಕರಣಗಳನ್ನು ಮತ್ತು ಸ್ಟೇನ್‌ಲೆಸ್ ಸ್ಟೀಲ್ ತಯಾರಿಸಲು ಉಪಯೋಗಿಸುತ್ತಾರೆ.

3. ಫೆರೊ ಮ್ಯಾಂಗನೀಸ್ : ಉಕ್ಕಿಗೆ ಮ್ಯಾಂಗನೀಸನ್ನು ಲೀನಗೊಳಿಸುವುದರ ಸಲುವಾಗಿ ಇದನ್ನು ಉಪಯೋಗಿಸುತ್ತಾರೆ. ಇದು ಉಕ್ಕಿನಲ್ಲಿಯ ಗಂಧಕ ಮತ್ತು ಆಮ್ಲಜನಕದಿಂದ ಉಂಟಾದ ದೋಷಗಳನ್ನು ನಿರ್ಮೂಲಿಸುತ್ತದೆ. ಇದನ್ನು ಉಕ್ಕಿಗೆ ಲೀನ ಮಾಡುವುದರಿಂದ, ಉಕ್ಕಿನ ಕಾಠಿನ್ಯ ಮತ್ತು ಧಾರಣಸಾಮರ್ಥ್ಯ ಬೆಳೆಯುತ್ತವೆ. ಇಂಥ ಉಕ್ಕನ್ನು ಶಿರಸ್ತ್ರಾಣ, ಯುದ್ಧಕವಚ ಮುಂತಾದುವುಗಳನ್ನು ತಯಾರಿಸುವುದಕ್ಕಾಗಿ ಉಪಯೋಗಿಸುತ್ತಾರೆ.

4. ಫೆರೊ ಟಂಗ್‌ಸ್ಟನ್ ಮತ್ತು ಫೆರೊ ಮಾಲಿಬ್ಡಿನಂ : ಉಕ್ಕಿಗೆ ಟಂಗ್‌ಸ್ಟನ್ ಮತ್ತು ಮಾಲಿಬ್ಡಿನಮ್ ಲೀನಗೊಳಿಸುವುದರ ಸಲುವಾಗಿ ಇವನ್ನು ಉಪಯೋಗಿಸುತ್ತಾರೆ. ಇವುಗಳ ಮಿಶ್ರಣದಿಂದ ಉಕ್ಕಿಗೆ ಕಾಠಿನ್ಯ ಬರುತ್ತದೆ. ಇಂಥ ಉಕ್ಕನ್ನು ಕೊಯ್ಯುವ ಉಪಕರಣ ಮತ್ತು ಬೈರಿಗೆಗಳನ್ನು ಮಾಡಲು ಉಪಯೋಗಿಸುತ್ತಾರೆ.

5. ಫೆರೊ ಕೊಬಾಲ್ಟ್ : ಉಕ್ಕಿಗೆ ಕೊಬಾಲ್ಟನ್ನು ಲೀನಮಾಡುವುದರ ಹಾಗೂ ಶಾಶ್ವತಕಾಂತತೆ ನೀಡುವುದರ ಸಲುವಾಗಿ ಈ ಮಿಶ್ರಲೋಹವನ್ನು ಉಪಯೋಗಿಸುತ್ತಾರೆ.

ಫೆರೊ ಸಿಲಿಕಾನ್ : ಈ ಮಿಶ್ರಲೋಹದ ಮೇಲೆ ಆಮ್ಲದ ಕ್ರಿಯೆ ಆಗುವುದಿಲ್ಲ. ಆಮ್ಲಗಳನ್ನು ಇಡುವ ಪಾತ್ರೆಗಳನ್ನು ಮಾಡುವುದರ ಸಲುವಾಗಿ ಇದನ್ನು ಉಪಯೋಗಿಸುತ್ತಾರೆ.

(ಎಸ್.ಪಿ.ಡಬ್ಲ್ಯೂ.)

**ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (ಭಾರತದಲ್ಲಿ) :** ಭಾರತದಲ್ಲಿ ಕಬ್ಬಿಣದ ಕೈಗಾರಿಕೆ ಮೂರು ಸಾವಿರ ವರ್ಷಗಳಿಗೂ ಹಿಂದಿನದು. ಇಲ್ಲಿ ತಯಾರಾದ ಉಕ್ಕು ಅನೇಕ ದೇಶಗಳಿಗೆ ರಫ್ತಾಗುತ್ತಿತ್ತು. ಸು. 19ನೆಯ ಶತಮಾನದಲ್ಲಿ ದೇಶದಲ್ಲಿದ್ದ ಕುಲುಮೆಗಳೆಲ್ಲವೂ ತಣ್ಣಗಾಗಿ ಹೋದವು. ಅಲ್ಪಸ್ವಲ್ಪ ಉತ್ಪಾದನೆ ಮಾತ್ರ ಆಗುತ್ತಿತ್ತು. ಬ್ರಿಟಿಷರು ದೇಶವನ್ನು ಆಕ್ರಮಿಸಿಕೊಂಡ ಮೇಲೆ ಶಾಂತಿ ನೆಲೆಸಿತು: ಹೊರಗಡೆಯಿಂದ ಸುಲಭದರದಲ್ಲಿ ಹೇರಳವಾಗಿ ಕಬ್ಬಿಣ ಈ ದೇಶಕ್ಕೆ ಬರತೊಡಗಿದಂತೆ ನಾಡ ಕೈಗಾರಿಕೆ ಪೈಪೋಟಿಯನ್ನು ಎದುರಿಸಲಾಗದೆ ಮೂಲೆ ಪಾಲಾಯಿತು.

ಈಚೆಗೆ ಮತ್ತೆ ಕಬ್ಬಿಣದ ಕೈಗಾರಿಕೆ ದೇಶದಲ್ಲಿ ತಲೆಯೆತ್ತಲು ಕಾರಣರಾದವರು ಸುಪ್ರಸಿದ್ಧರಾದ ಜೆಮ್‌ಶೇಟ್‌ಜಿ ನಸರವಾನ್‌ಜಿ ತಾತಾ. ಅವರು 1899ರಲ್ಲಿ ಉಕ್ಕಿನ ತಯಾರಿಕೆಗೆ ಒಂದು ಬೃಹತ್ ಯೋಜನೆಯನ್ನು ಸಿದ್ಧಪಡಿಸಿದರು. 1906ರಲ್ಲಿ ಬಿಹಾರದ ಸಾಕ್ಚಿಯ (ಈಗಿನ ಜಮ್‌ಷಡ್‌ಪುರ) ಬಳಿ ತಾತಾ ಐರನ್ ಅಂಡ್ ಸ್ಟೀಲ್ ಕಂಪನಿ (TISCO) ಎಂಬ ನಾಮದಿಂದ ಕೈಗಾರಿಕೆ ಮೊದಲು ಸ್ಥಾಪಿತವಾಯಿತು. ಮೊದಲ 30 ವರ್ಷಗಳ ಕಾಲದಲ್ಲಿ ಬೆಳೆಯುತ್ತ ಮುಂದೆ ಇನ್ನಷ್ಟು ವಿಸ್ತೃತವಾಗಿ 1939ರ ಹೊತ್ತಿಗೆ ಬ್ರಿಟಿಷ್ ರಾಜ್ಯದಲ್ಲೇ ಅತಿದೊಡ್ಡದಾದ ಯಂತ್ರಾಗಾರವೆನ್ನುವ ಪ್ರಶಸ್ತಿಯನ್ನು ಇದು ಗಳಿಸಿತು. 1918ರ ಕೊಲ್ಕೊತ್ತ ನಗರದಲ್ಲಿನ ಕೆಲವು ಮುಖ್ಯ ವ್ಯಾಪಾರಿಗಳು ಸೇರಿ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿ (IISCO) ಎಂಬ ಹೆಸರಿನಲ್ಲಿ ಬಂಗಾಳದಲ್ಲಿರುವ ಬರ್ನ್‌ಪುರದ ಹತ್ತಿರ ಇನ್ನೊಂದು ಕೈಗಾರಿಕೆಯನ್ನು ಸ್ಥಾಪಿಸಿದರು. ಇಲ್ಲಿ ಮೊದಲು ಬೀಡು ಕಬ್ಬಿಣ ತಯಾರಾಗುತ್ತಿದ್ದು 1939ರಲ್ಲಿ ಉಕ್ಕಿನ ಉತ್ಪಾದನೆ ಮೊದಲಾಯಿತು.

ಇದೇ ಸುಮಾರಿಗೆ ಆಧುನಿಕ ಮೈಸೂರಿನ ನಿರ್ಮಾಪಕರಾದ ಸರ್.ಎಂ. ವಿಶ್ವೇಶ್ವರಯ್ಯನವರು ದಿಟ್ಟತನದಿಂದ ಮೈಸೂರಿನಲ್ಲಿಯೂ ಒಂದು ಕಬ್ಬಿಣದ ಕುಲುಮೆಯನ್ನು ಸ್ಥಾಪಿಸಿದರು. ಕಲ್ಲಿದ್ದಲು ದೊರೆಯದೆ ಹೋದ ಕಾರಣ ಮರಸುಟ್ಟ ಇದ್ದಲನ್ನು ಅವಲಂಬಿಸಿಯೇ ಇಲ್ಲಿ ಬೀಡುಕಬ್ಬಿಣವನ್ನು ತಯಾರಿಸಲಾಗುತ್ತಿತ್ತು. 1925ರಲ್ಲಿ ಉಕ್ಕಿನ ತಯಾರಿಕೆ ಮೊದಲಾಯಿತು. ಎರಡನೆಯ ಮಹಾಯುದ್ಧದಿಂದೀಚೆಗೆ ವಿದ್ಯುಚ್ಛಕ್ತಿಯ ಉಪಯೋಗದಿಂದ ಬೀಡುಕಬ್ಬಿಣ ತಯಾರಾಗುತ್ತಿದೆ. ಅನೇಕ ಬಗೆಯ ಮಿಶ್ರಲೋಹಗಳ ತಯಾರಿಕೆಗೂ ಭದ್ರಾವತಿ ಪ್ರಸಿದ್ಧಿಯಾಗಿದೆ.

1954 ರಿಂದೀಚೆಗೆ ದೇಶದಲ್ಲಿ ಉಕ್ಕಿನ ಬಳಕೆ ಹೆಚ್ಚುತ್ತ ಹೋಗಿ ಹೇರಳವಾಗಿ ಉಕ್ಕನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಒದಗಿತು. ಇದನ್ನು ಸರಿಪಡಿಸಲು ಮತ್ತು ಕೈಗಾರಿಕೆ ಯಾವ ರೀತಿ ಮುಂದುವರಿಯಬೇಕೆನ್ನುವ ರೂಪುರೇಖೆಯನ್ನು ಗುರುತಿಸಲು ತಜ್ಞರ ಮಂಡಳಿಯೊಂದನ್ನು ಭಾರತ ಸರ್ಕಾರ ನೇಮಿಸಿತು. 1946ರಲ್ಲಿ ಈ ಸಮಿತಿ ವರ್ಷಂಪ್ರತಿ 5 ಲಕ್ಷ ಟನ್ ಉತ್ಪಾದಿಸುವ ಎರಡು ಹೊಸ ಸ್ಥಾವರಗಳನ್ನು ಕಟ್ಟಬೇಕೆಂದು ಸಲಹೆ ಮಾಡಿತು. ಅದರ ಸಲಹೆ ಕಾರ್ಯಗತವಾಗಲು ಬಹಳ ಕಾಲ ಹಿಡಿಯಿತು. 1953ರಲ್ಲಿ ಜರ್ಮನ್ ಕಂಪನಿಯೊಂದು ಒರಿಸ್ಸದ ರೂರ್ಕೆಲಾ ಬಳಿ ಒಂದು ಕಾರ್ಖಾನೆಯನ್ನು ಕಟ್ಟಲು ಒಪ್ಪಿತು. 1955ರಲ್ಲಿ ಸೋವಿಯತ್ ಸರ್ಕಾರ ಮಧ್ಯ ಪ್ರದೇಶದ ಭಿಲ್ಯೆ ಬಳಿ ದೊಡ್ಡ ಉಕ್ಕು ಉತ್ಪಾದಿಸುವ ಯಂತ್ರವನ್ನು ಕಟ್ಟಲು ಮುಂದೆ ಬಂತು. ಅದೇ ವರ್ಷ ಬ್ರಿಟಿಷ್ ಕಂಪನಿಗಳು ಕೆಲವು ಸೇರಿ ಪಶ್ಚಿಮ ಬಂಗಾಳದ ದುರ್ಗಾಪುರದ ಬಳಿ ಇನ್ನೊಂದು ಉಕ್ಕಿನ ಯಂತ್ರವನ್ನು ಸ್ಥಾಪಿಸಲು ಒಪ್ಪಂದ ಮಾಡಿಕೊಂಡವು. ಈ ಮೂರು ಯಂತ್ರಸ್ಥಾವರಗಳಿಗೆ ಬೇಕಾದ ವಿದೇಶೀ ವಿನಿಮಯ ಹಣವನ್ನು ಕೊಡಲು ಜರ್ಮನ್ ಸೋವಿಯತ್ ಮತ್ತು ಬ್ರಿಟಿಷ್ ಸರ್ಕಾರಗಳು ಒಪ್ಪಿದವು. ಈ ರೀತಿಯಾಗಿ ಮೂರು ಮುಖ್ಯ ಯಂತ್ರಸ್ಥಾವರಗಳು ಎರಡನೆಯ ಯೋಜನೆಯ ಅವಧಿಯಲ್ಲಿ (1956–61) ದೇಶದ ನಾನಾ ಭಾಗಗಳಲ್ಲಿ ಅಸ್ತಿತ್ವಕ್ಕೆ ಬಂದುವು. ಈ ಮೂರೂ ಸರ್ಕಾರಿ ಸಂಸ್ಥೆಗಳಾಗಿ ರೂಪುಗೊಂಡವು. ಮೂರನೆಯ ಯೋಜನೆಯ ಅವಧಿಯಲ್ಲಿ ಇವೆಲ್ಲ ಸ್ಥಾವರಗಳಲ್ಲಿಯೂ ಉತ್ಪಾದನೆ ಹೆಚ್ಚಿದುದಲ್ಲದೆ ಬೊಕಾರೊ ಬಳಿ ಹೊಸದೊಂದು ಕಬ್ಬಿಣ ಕುಲುಮೆಯನ್ನು ಕಟ್ಟುವ ಕೆಲಸ ಮಾಡಲಾಯಿತು. ಎಲ್ಲ ಸ್ಥಾವರಗಳು ಉತ್ತರ ಭಾರತದಲ್ಲಿಯೇ ಕೇಂದ್ರೀಕೃತವಾದ

ಕಾರಣ ದಕ್ಷಿಣದಲ್ಲಿ ಒಂದು ಬೃಹತ್ ಪ್ರಮಾಣದ ಕಬ್ಬಿಣ ಕೈಗಾರಿಕೆಯನ್ನು ನಾಲ್ಕನೆ ಯೋಜನೆ ಅವಧಿಯಲ್ಲಿ ನಿರ್ಮಿಸಬೇಕೆಂದು ಸೂಚಿಸಲಾಯಿತು. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲೂ ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿಯೂ ತಮಿಳುನಾಡಿನ ಸೇಲಂನಲ್ಲಿಯೂ ತಲಾ ಒಂದೊಂದು ಕಾರ್ಖಾನೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಮಂಜೂರಾತಿ ನೀಡಿತು.

ದೇಶ ಪ್ರಗತಿ ಪಥದಲ್ಲಿ ಮುಂದುವರಿಯುವುದಕ್ಕೆ ದಕ್ಷ ಆಡಳಿತ ಹೇಗೆ ಮುಖ್ಯವೋ ಆ ದೇಶದಲ್ಲಿನ ಖನಿಜ ಸಂಪತ್ತೂ ಅಷ್ಟೇ ಮುಖ್ಯ. ಪ್ರಕೃತಿದತ್ತವಾದ ಈ ಸಂಪತ್ತನ್ನು ಯಾವರೀತಿ ಉಪಯೋಗಿಸಿಕೊಂಡು ದೇಶದ ಆಡಳಿತವನ್ನು ಸುಭದ್ರವಾದ ತಳಹದಿಯ ಮೇಲೆ ಕಟ್ಟಿ ಪ್ರಗತಿಪಥದಲ್ಲಿ ಮುಂದೆ ತೆಗೆದುಕೊಂಡು ಹೋಗಬೇಕೆನ್ನುವುದಕ್ಕೆ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಬೆಳೆವಣಿಗೆಗಿಂತ ಬೇರೆ ಉತ್ತಮ ನಿದರ್ಶನ ಸಿಕ್ಕಲಾರದು. ಜಪಾನ್ ದೇಶ ತನ್ನಲ್ಲಿ ಕಬ್ಬಿಣದ ಅದಿರು ಲವಲೇಶ ಇಲ್ಲದಿದ್ದರೂ ಪ್ರಪಂಚದಲ್ಲೇ ಹಿರಿದಾದ ಕಬ್ಬಿಣ ಕೈಗಾರಿಕೆಯನ್ನು ಸ್ಥಾಪಿಸಿ, ನಾಗರಿಕ ಜನಾಂಗಗಳಲ್ಲಿ ಬಹು ಮುಂದುವರಿದ ರಾಷ್ಟ್ರವೆಂದು ಹೆಸರುಗಳಿಸಿದೆ. ಪ್ರಪಂಚದ ಯಾವ ರಾಷ್ಟ್ರಕ್ಕೂ ಕಡಿಮೆ ಇಲ್ಲದಂತೆ ಖನಿಜಸಂಪತ್ತನ್ನು ಪಡೆದಿರುವ ಭಾರತ ದೇಶವೂ ಕಬ್ಬಿಣ ಕೈಗಾರಿಕೆಯಲ್ಲಿ ಹಿರಿಮೆಯ ಸ್ಥಾನವನ್ನು ಗಳಿಸಿ ಮುಂದುವರಿಯುವಂತಾಗಬೇಕು. (ಬಿ.ಪಿ.ಆರ್.)

**ಕಬ್ಬಿಣ ಯುಗ :** ಗ್ರೀಕ್ ಪುರಾಣಗಳ ಪ್ರಕಾರ ಮಾನವ ಯುಗಗಳ ಪೈಕಿ ಕೊನೆಯದು. ಪುರಾತತ್ತ್ವದೃಷ್ಟಿಯಿಂದ ಕೂಡ ಇದು ಕಲ್ಲಿನ ಮತ್ತು ಕಂಚಿನ ಯುಗಗಳ ಅನಂತರದ, ಕೊನೆಯ ಆದರೂ ಪ್ರಮುಖವಾದ, ಯುಗ. ಪ್ರಾಚ್ಯವಸ್ತು ಸಂಶೋಧಕರು ಪ್ರಾಚೀನ ಸಾಂಸ್ಕೃತಿಕ ನಿವೇಶನಗಳನ್ನು ಶೋಧಮಾಡಿ ಅವುಗಳ ಶಾಸ್ತ್ರೀಯ ಅಗೆತಗಳಿಂದ ದೊರೆತ ಅವಶೇಷಗಳ ಪರೀಕ್ಷೆಯಿಂದ ಮಾನವನ ಈ ನಾನಾ ಸಂಸ್ಕೃತಿಗಳ ಯುಗಗಳನ್ನು ಗುರುತಿಸಿದ್ದಾರೆ. ಆಯಾ ಸಂಸ್ಕೃತಿಗಳ ವಿಶಿಷ್ಟ ಲಕ್ಷಣಗಳಿಂದ ಜಾಗತಿಕ ಸಂಸ್ಕೃತಿ ವನ್ಯಸ್ಥಿತಿಯಿಂದ ಕ್ರಮೇಣ ಕಬ್ಬಿಣಯುಗಕ್ಕೆ ಮುಟ್ಟುವ ವೇಳೆಗೆ ಅತ್ಯುನ್ನತ ಮಟ್ಟವನ್ನು ಮುಟ್ಟಿತೆಂದು ಉತ್ಕ್ರಾಂತಿವಾದದ ತತ್ತ್ವದ ಆಧಾರದ ಮೇಲೆ ಪುರಾತಜ್ಞರು ಹೇಳುತ್ತಾರೆ. ಮೊದಲು ಮಾನವರು ಕಾಡುಗಲ್ಲುಗಳಿಂದ ಆಯುಧಗಳನ್ನು ಮಾಡಿ ಅವುಗಳಿಂದ ಬೇಟೆಯಾಡುತ್ತ, ಅಡವಿಯಲ್ಲಿ ಕಾಡುಮೃಗಗಳ ಜೊತೆಯಲ್ಲಿ ಇದ್ದು ತಮ್ಮ ಉಪಜೀವನ ಸಾಗಿಸುತ್ತಿದ್ದರು. ಮುಂದೆ ಅವರು ಕಲೆಗಳಲ್ಲಿ ನುರಿತು, ನುಣುಪಾದ ಕಲ್ಲಿನ ಸಾಮಗ್ರಿಗಳನ್ನು ಬಳಕೆಗೆ ತಂದುಕೊಂಡು ಜೀವನದ ಮಟ್ಟವನ್ನು ಹೆಚ್ಚಿಸಿಕೊಂಡರು. ಕಾಲಕ್ರಮದಲ್ಲಿ ಕಲ್ಲುಗಳಿಂದಲೂ ಖನಿಜಗಳಿಂದಲೂ ಧಾತುಗಳನ್ನು ಶೋಧಿಸಿ ಅವುಗಳಿಂದ ಬಗೆಬಗೆಯ ಉಪಕರಣಗಳನ್ನು ಮಾಡಿ ಉಪಯೋಗಿಸುವ ಕಾಲ ಪ್ರಾಪ್ತವಾಯಿತು. ಪಶ್ಚಿಮ ಏಷ್ಯ ಮತ್ತು ಆಗ್ನೇಯ ಏಷ್ಯಗಳಲ್ಲಿ ಕಬ್ಬಿಣ ಯುಗ ಸಂಪೂರ್ಣವಾಗಿ ಬಳಕೆಗೆ ಬಂದದ್ದು–ಕಂಚಿನ ಉಪಕರಣಗಳ ಮತ್ತು ಆಯುಧಗಳ ಬದಲು ಕಬ್ಬಿಣವೇ ಬಂದದ್ದು–ಪ್ರ.ಶ.ಪೂ. ಸು. 1200ರಲ್ಲಿ. ಆದರೆ ಅದಕ್ಕೂ ಮುಂಚೆಯೂ ಕಬ್ಬಿಣದ ಬಳಕೆಯಿತ್ತು ಎಂದು ಹೇಳಲಾಗಿದೆ. ಆಗ ಬಳಕೆಯಲ್ಲಿದ್ದುದು ಬಹುತೇಕ ಉಲ್ಕಾಪಾತದ ಕಬ್ಬಿಣ, ಕಂದುಕಂಚಿನಿಂದ ಭಿನ್ನವಾದ ಕಬ್ಬಿಣದ ಗುಣಗಳ ಸ್ಪಷ್ಟ ಅರಿವು ಆಗಿನ ಜನಕ್ಕೆ ಇನ್ನೂ ಆಗಿರಲಿಲ್ಲ. ಪ್ರಯೋಗಗಳಿಂದಲೂ ಆಕಸ್ಮಾತ್ತಾಗಿಯೂ ಅವರು ಇವನ್ನು ಕ್ರಮೇಣ ಅರಿತುಕೊಂಡರು.

ಕಬ್ಬಿಣ ಯುಗೀನ ಸಂಸ್ಕೃತಿಯನ್ನು ಪೌರ್ವಾತ್ಯ ವಲಯದ ಪ್ರಾಕೃತಿಕ ಸಂಪತ್ತಿನಿಂದ ಮಾನವ ಸಾಧಿಸಿದ ಪುರೋಗಾಮಿತ್ವದ ಹೆಗ್ಗುರುತೆನ್ನಬಹುದು. ತಾಮ್ರದ ಅದಿರಿಗಿಂತ ಕಬ್ಬಿಣದ ಅದಿರು ಪ್ರಕೃತಿಯಲ್ಲಿ ಹೇರಳವಾಗಿ ಮತ್ತು ಹೆಚ್ಚು ಪ್ರದೇಶಗಳಲ್ಲಿ ದೊರಕುತ್ತಿದ್ದರೂ ತಾಮ್ರ–ಕಂಚುಗಳು ಬಳಕೆಗೆ ಬಂದ ಬಹುಕಾಲಾನಂತರವೇ ಮೊತ್ತ ಮೊದಲಿಗೆ ಪಶ್ಚಿಮ ಏಷ್ಯದ ಕೆಲವು ಪ್ರದೇಶಗಳಲ್ಲಿ, ಮುಖ್ಯವಾಗಿ ಕಪ್ಪುಸಮುದ್ರದ ದಕ್ಷಿಣ ತೀರದಲ್ಲಿ, ಕಬ್ಬಿಣದ ಉಪಯೋಗವನ್ನು ಕಂಡು ಹಿಡಿದುದಾಗಿ ತಿಳಿದು ಬರುತ್ತದೆ. ಆಕಾಶದಿಂದ ಉಲ್ಕಾಪಾತಗಳ ರೂಪದಲ್ಲಿ ಬೀಳುತ್ತಿದ್ದ ಕಬ್ಬಿಣವನ್ನು ಆಭರಣ ವಸ್ತುಗಳನ್ನಾಗಿ ಮೆಸೊಪೊಟೇಮಿಯ, ಈಜಿಪ್ಟ್ ಮುಂತಾದ ಪ್ರಾಚೀನ ನಾಗರಿಕತೆಗಳಲ್ಲಿ ಉಪಯೋಗಿಸುತ್ತಿದ್ದ ಮಾಹಿತಿಗಳು ದೊರಕಿವೆ. ಉಲ್ಕಾಪಾತ ಮೂಲದ ಕಬ್ಬಿಣವನ್ನು ಸುಮೇರಿಯನ್ನರು ಸ್ವರ್ಗದ ಲೋಹವೆಂದೂ ಈಜಿಪ್ಷಿಯನ್ನರು ಆಕಾಶದಿಂದ ಬಂದ ಕಪ್ಪು ತಾಮ್ರವೆಂದೂ ತಮ್ಮ ಬರವಣಿಗೆಗಳಲ್ಲಿ ಕರೆದಿರುವುದು ಗಮನಾರ್ಹ. ಮೆಸೊಪೊಟೇಮಿಯದ ಟೆಲ್‍ಅಸ್ಮಾರ್ ಮತ್ತು ಮಾರಿ, ಸಿರಿಯದ ಛಗರ್ ಬಜಾರ್ ನೆಲೆಗಳಲ್ಲಿ ಪ್ರ.ಶ.ಪೂ. 2500ರ ಸುಮಾರಿಗೆ ನಿರ್ದೇಶಿಸಬಹುದಾದ ಪದರಗಳಿಂದ ಇದ್ದಲಿನ ಕುಲುಮೆಗಳಲ್ಲಿ ಕರಗಿಸಿದ ಕೀಳ್ದರ್ಜೆಯ ಕಬ್ಬಿಣದಿಂದ ಮಾಡಲಾದ ವಸ್ತುಗಳು ದೊರಕಿವೆ. ಚಿನ್ನದ ಪಟ್ಟಿಯುಳ್ಳ ಸುಂದರವಾದ ಕಬ್ಬಿಣದ ಚಾಕುವೊಂದು ಆನಟೋಲಿಯದ (ಈಗಿನ ತುರ್ಕಿ) ಅಲಾಕಾ ಹುಯುಕ್ ನೆಲೆಯಲ್ಲಿ ದೊರಕಿದೆ.

ಪ್ರ.ಶ.ಪೂ. 2ನೆಯ ಸಹಸ್ರಮಾನದ ಪ್ರಾರಂಭದಲ್ಲಿ ಹಿಟ್ಟೈಟ್ ಸಾಮ್ರಾಜ್ಯ ಪ್ರಬಲಿಸಿದಾಗ ನೆರೆಯ ಪ್ರದೇಶವಾದ ಆರ್ಮೇನಿಯ ಪ್ರಾಂತ್ಯದಲ್ಲಿ ವಿಶೇಷವಾಗಿದ್ದ ಕಬ್ಬಿಣದ ಅದಿರನ್ನು ಉಪಯೋಗಿಸಿಕೊಂಡು ಕಬ್ಬಿಣದ ಲೋಹವಿದ್ಯೆ ಬೆಳೆಯಲಾರಂಭಿಸಿತು. ಪ್ರ.ಶ. ಸು. 1900ರಲ್ಲಿ ಮೆದು ಕಬ್ಬಿಣವನ್ನು (ರಾಟ್ ಐರನ್) ತಯಾರಿಸಲಾಗುತ್ತಿತ್ತು. ಪ್ರ.ಶ.ಪೂ. 2ನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ ನಿಜವಾದ ಕಬ್ಬಿಣಯುಗದ ತಂತ್ರಗಳೆಲ್ಲವೂ ಬಳಕೆಯಲ್ಲಿದ್ದವು.

ಮೊದಮೊದಲು ಕಬ್ಬಿಣ ಲೋಹವಿದ್ಯೆ ಹಿಟ್ಟೈಟ್ ಜನಾಂಗದವರಲ್ಲಿ ಗುಪ್ತವಾಗಿ ಉಳಿದಿತ್ತು. ಈ ಲೋಹದ ಆಯುಧಗಳು ಯುದ್ಧದಲ್ಲಿ ಬಹಳ ಪರಿಣಾಮಕಾರಿಗಳಾಗಿದ್ದುದರಿಂದ ಅವರು ಈ ಗುಟ್ಟನ್ನು ಇತರರಿಗೆ ಬಿಟ್ಟುಕೊಡಲಿಲ್ಲ. ತಮ್ಮ ಮಿತ್ರವರ್ಗಕ್ಕೆ ಸೇರಿದ ಈಜಿಪ್ಟಿನ ಮತ್ತಿತರ ರಾಜಮನೆತನಗಳಿಗೆ ಕಬ್ಬಿಣದ ಬಾಕು ಮತ್ತು ಆಭರಣಗಳನ್ನು ಅಮೂಲ್ಯವಾದ ಉಡುಗೊರೆಗಳಾಗಿ ಅರ್ಪಿಸುತ್ತಿದ್ದುದಕ್ಕೆ ಅನೇಕ ದಾಖಲೆಗಳು ದೊರಕಿವೆ. ಟುಟಾನ್‍ಖಮುನ್ನನ ಸಮಾಧಿಯಲ್ಲಿ ದೊರಕಿರುವ, ಕಂಚಿನ ಹಿಡಿಯುಳ್ಳ, ಚಿನ್ನ ಮತ್ತು ಹರಳುಗಳಿಂದ ಅಲಂಕೃತವಾದ ಬಾಕು ಹಿಟ್ಟೈಟ್ ಪಂಗಡಕ್ಕೆ ಸೇರಿದ್ದ, ನೆರೆಯ ಪ್ರದೇಶವಾದ ಸಿರಿಯದಲ್ಲಿ ಆಳುತ್ತಿದ್ದ ಮಿಟಾನಿ ರಾಜರ ಬಳುವಳಿಯಾಗಿದ್ದಿರಬೇಕೆಂದು ಟೆಲ್ ಅಮಾರ್ನಾದ ಲೇಖನಗಳು ತಿಳಿಸುತ್ತವೆ. ಮೂರನೆಯ ಹಟ್ಟೂ ಸಿಲಿಸ್ ದೊರೆ (ಪ್ರ.ಶ.ಪೂ. 1281–1260) 2ನೆಯ ರ್‍ಯಾಮ್ಸೆಸ್ ದೊರೆಗೆ ಬರೆದ ಪತ್ರವೊಂದರಲ್ಲಿ ಕಬ್ಬಿಣದ ಬಾಕುವೊಂದರ ಉಲ್ಲೇಖವಿರುವುದಲ್ಲದೆ, ಉರರ್ಟುಸರೋವರದ ಬಳಿ ಆರ್ಮೇನಿಯ ಪ್ರಾಂತ್ಯದ ಹೊರಗೆ ಕಬ್ಬಿಣದ ತಯಾರಿಕೆಯನ್ನು ನಿಷೇಧಿಸಿರುವ ಸಂಗತಿಯ ಪ್ರಸ್ತಾಪವಿದೆ. ಇದೇ ಸುಮಾರಿನಲ್ಲಿ ಹಿಟ್ಟೈಟರ ಮಿತ್ರವರ್ಗಕ್ಕೆ ಸೇರಿದ ಫಿಲಿಸ್ಟೀನರು ಸಿರಿಯ ಪ್ರದೇಶದಲ್ಲಿ ಕಬ್ಬಿಣದ ನಿಕ್ಷೇಪಗಳನ್ನು ರೂಢಿಸಲು ಬೇಕಾದ ತಾಂತ್ರಿಕ ಜ್ಞಾನವನ್ನು ಹಿಟ್ಟೈಟರಿಂದ ದೊರಕಿಸಿಕೊಂಡುದಕ್ಕೆ ಆಧಾರಗಳಿವೆ. ಪ್ರ.ಶ.ಪೂ. 1300ರ ಸುಮಾರಿನಲ್ಲಿ ಸಿರಿಯದ ರಾಸ್ ಷಮ್ರಾ ನೆಲೆಯಲ್ಲಿ ಚಿನ್ನದಿಂದಲಂಕೃತವಾದ ಹೆಚ್ಚು ನಿಕಲ್ ಬೆರಕೆಯುಳ್ಳ ಕಬ್ಬಿಣದ ಬಾಕುವೊಂದು ಸಿಕ್ಕಿದೆ. ಇದು ಟುಟಾನ್ ಖಮುನ್ ಸಮಾಧಿಯ ಬಾಕುವನ್ನು ಹೋಲುತ್ತದೆ.

ಪ್ರ.ಶ.ಪೂ. 12ನೆಯ ಶತಮಾನದಲ್ಲಿ ಸಮುದ್ರ ಜನರ ದಾಳಿಗಳಿಂದ ಹಿಟ್ಟೈಟ್ ಸಾಮ್ರಾಜ್ಯದ ಪತನವಾದ ಅನಂತರ ಕಬ್ಬಿಣದ ಲೋಹಗಾರಿಕೆ ಪಶ್ಚಿಮ ಏಷ್ಯದ ಅನೇಕ ಭಾಗಗಳಲ್ಲಿ ಹರಡಿತು. ಇದರ ಫಲವಾಗಿ ಕಬ್ಬಿಣದ ಉಪಕರಣಗಳನ್ನು ವ್ಯವಸಾಯ, ಕೈಗಾರಿಕೆ ಮತ್ತಿತರ ನಿತ್ಯಜೀವನ ರಂಗಗಳಲ್ಲಿ ಬಳಸುವಂತಾಯಿತು. ಪ್ರ.ಶ.ಪೂ. 1180ರಲ್ಲಿ ಪ್ಯಾಲೆಸ್ಟೀನಿನ ಗೆರಾರಿನಲ್ಲಿ ದೊಡ್ಡದೊಂದು ಕಬ್ಬಿಣದ ಕಾರ್ಖಾನೆ ಸ್ಥಾಪಿತವಾಗಿತ್ತು. ಅನಂತರ ಅಸ್ಸೀರಿಯನ್ನರು ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಉತ್ಪಾದನೆ ಮಾಡಲಾರಂಭಿಸಿದರು. ಪ್ರ.ಶ.ಪೂ. 8ನೆಯ ಶತಮಾನಕ್ಕೆ ಸೇರುವ 2ನೆಯ ಸಾರ್ಗಾನ್ ದೊರೆಯ ಅರಮನೆಯಲ್ಲಿ 3,00,000 ಪೌಂಡು ತೂಕದ ಕಬ್ಬಿಣದ ಗಟ್ಟಿಗಳನ್ನು ಶೇಖರಿಸಲಾಗಿತ್ತು. ಬಹುಶಃ ಈ ಸುಮಾರಿನಲ್ಲಿ ಈಜಿಪ್ಟಿನಲ್ಲೂ ಕಬ್ಬಿಣ ಲೋಹವಿದ್ಯೆ ಬಳಕೆಗೆ ಬಂದಿತು. ನೈರುತ್ಯ ಇರಾನಿನಲ್ಲಿ ಸಿಯಾಲ್ಕ್ ಎ ಮತ್ತು ಬಿ ಸಂಸ್ಕೃತಿಗಳ ಕಾಲದಲ್ಲಿ ಪ್ರಾರಂಭವಾಗಿ ಪ್ರ.ಶ.ಪೂ. ಮೊದಲ ಸಹಸ್ರಮಾನದ ಆರಂಭದಲ್ಲಿ ಕಬ್ಬಿಣದ ಉಪಯೋಗ ಪ್ರಬಲವಾಯಿತು.

ಈ ಮಾರ್ಗವಾಗಿ ಕಬ್ಬಿಣದ ಉಪಯೋಗ ಭಾರತದ ಗಡಿಗೆ ಪ್ರ.ಶ.ಪೂ. 12ನೆಯ ಶತಮಾನದ ವೇಳೆಗೆ ಬಂದಿರಬಹುದು. ಉತ್ತರ ಪ್ರದೇಶದ ಅತ್ರಂಜಿಖೇರ, ರಾಜಸ್ಥಾನದ ನ್ಹೋ, ಧಾರವಾಡ ಜಿಲ್ಲೆಯ ಹಳ್ಳೂರು ಮುಂತಾದ ನೆಲೆಗಳಲ್ಲಿ, ಇಂಗಾಲ–14 ಪರಿಕ್ಷಾವಿಧಾನದಿಂದ ತಿಳಿದುಬಂದಿರುವಂತೆ ಪ್ರ.ಶ.ಪೂ. 11ನೆಯ ಶತಮಾನದಲ್ಲಿ ಕಬ್ಬಿಣ ಬಳಕೆಗೆ ಬಂತು. ಅನತಿಕಾಲದಲ್ಲೇ ಗಂಗಾನದೀ ಬಯಲಿನಲ್ಲಿ ವರ್ಣರಂಜಿತ ಬೂದು ಮಡಕೆಗಳ ಮತ್ತು ಮಧ್ಯಭಾರತದಲ್ಲಿ ಕಪ್ಪು ಮತ್ತು ಕೆಂಪು ಮಡಕೆಗಳ ಸಂಸ್ಕೃತಿಗಳೊಂದಿಗೂ ದಕ್ಷಿಣ ಭಾರತದಲ್ಲಿ ಬೃಹತ್‍ಶಿಲಾ ಸಮಾಧಿ ಸಂಸ್ಕೃತಿಯೊಂದಿಗೂ ಕಬ್ಬಿಣದ ಬಳಕೆ ಪ್ರಬಲವಾಗಿ, ಜನರ ನಿತ್ಯಜೀವನ ಕ್ರಮದಲ್ಲಿ ಬೆರೆತು ಕ್ರಾಂತಿಕಾರಿ ಬದಲಾವಣೆಗಳನ್ನು ರೂಪಿಸಿದುದಲ್ಲದೆ ಚಾರಿತ್ರಿಕ ನಾಗರಿಕತೆಗಳಿಗೆ ನಾಂದಿಯಾಗಿ ಪರಿಣಮಿಸಿತು.

ಕ್ರೀಟ್ ದ್ವೀಪದಲ್ಲಿ ಪ್ರ.ಶ.ಪೂ. 2ನೆಯ ಸಹಸ್ರಮಾನದ ಕೊನೆಯ ಕಾಲದಲ್ಲಿ ಕಬ್ಬಿಣದ ಬಳಕೆ ಪ್ರಾರಂಭವಾಯಿತು. ಫೆಯಿಸ್ಟಾಸ್, ವಾಫಿಯೋ ಮತ್ತಿತರ ನೆಲೆಗಳಲ್ಲಿ ಪ್ರ.ಶ.ಪೂ. 1500–1200ರ ಕಾಲದ ಕಬ್ಬಿಣದ ಅವಶೇಷಗಳು ದೊರಕಿವೆ. ಕ್ರೀಟನಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳು ಹೆಚ್ಚಾಗಿಲ್ಲ. ಲೋಹಗಾರಿಕೆಗೆ ಆಮದಾದ ಕಬ್ಬಿಣವನ್ನೇ ಅವಲಂಬಿಸಬೇಕಾಗಿತ್ತು. ಡೆಂಡ್ರಾದ ಸಮಾಧಿಗಳಲ್ಲಿ ದೊರಕಿರುವವೇ ಗ್ರೀಸಿನ ಅತ್ಯಂತ ಪುರಾತನ ಕಬ್ಬಿಣದ ವಸ್ತುಗಳು. ಇವು ಪ್ರ.ಶ.ಪೂ. 13ನೆಯ ಶತಮಾನಕ್ಕೆ ಸೇರುತ್ತವೆ. ಪ್ರ.ಶ.ಪೂ. 12ನೆಯ ಶತಮಾನದಿಂದ ಕಬ್ಬಿಣ ಜನರಲ್ಲಿ ಹೆಚ್ಚಾಗಿ ಬಳಕೆಗೆ ಬಂತು. ದಕ್ಷಿಣ ರಷ್ಯದ ಕೋಬಾನ್ ಸಂಸ್ಕೃತಿ ಈ ಸುಮಾರಿನಲ್ಲೆ ಕಬ್ಬಿಣ ಬಳಸುತ್ತಿತ್ತು. ಈ ಎರಡು ಪ್ರದೇಶಗಳನ್ನು ಬಿಟ್ಟರೆ ಯುರೋಪಿನಲ್ಲಿ ಕಬ್ಬಿಣ ಯುಗ ಪ್ರ.ಶ.ಪೂ. 800ರ ಸುಮಾರಿನಲ್ಲಿ

ಇಟಲಿ ಮತ್ತು ಮಧ್ಯಯುರೋಪು ಪ್ರದೇಶಗಳಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ವಿವಿಧಪ್ರದೇಶಗಳಲ್ಲಿ ಕಬ್ಬಿಣ ಬೇರೆ ಬೇರೆ ಸಮಯಗಳಲ್ಲಿ ಬಳಕೆಗೆ ಬಂದುದರಿಂದ ಈ ಕಾಲಗಣನೆ ಯುರೋಪಿನ ಎಲ್ಲ ಪ್ರದೇಶಗಳಿಗೂ ಅನ್ವಯಿಸುವುದಿಲ್ಲ. ಯುರೋಪಿನ ಕಬ್ಬಿಣ ಯುಗವನ್ನು ಪೂರ್ವಕಾಲೀನ (ಪ್ರ.ಶ.ಪೂ. 800–400) ಮತ್ತು ಉತ್ತರ ಕಾಲೀನ (ಪ್ರ.ಶ.ಪೂ. 400–15) ಕಬ್ಬಿಣ ಯುಗಗಳೆಂದು ವಿಂಗಡಿಸಬಹುದಾಗಿದೆ. ಪ್ರ.ಶ.ಪೂ. 16–15ರಲ್ಲಿ ರೋಮನ್ ಆಕ್ರಮಣದೊಂದಿಗೆ ಆಲ್ಪ್ಸ್ ಪ್ರದೇಶ, ಇಟಲಿ, ಫ್ರಾನ್ಸ್ ಮತ್ತು ಆಗ್ನೇಯ ಸ್ಪೇನ್ ಪ್ರದೇಶಗಳಲ್ಲಿ ಐತಿಹಾಸಿಕ ಯುಗ ಪ್ರಾರಂಭವಾಯಿತು.

ಪೂರ್ವಕಾಲೀನ ಕಬ್ಬಿಣ ಯುಗದಲ್ಲಿ ಇಟಲಿ ಮತ್ತು ಮಧ್ಯ ಯುರೋಪುಗಳಲ್ಲಿ ಕಬ್ಬಿಣದ ಬಳಕೆ ಹೆಚ್ಚಾಯಿತು. ಇಟಲಿಯ ಇಟ್ರುಸ್ಕನ್ ಸಂಸ್ಕೃತಿ ಸ್ಥಳೀಯ ಮತ್ತು ಹೊರಗಿನಿಂದ ವಲಸೆ ಬಂದ ಸಂಸ್ಕೃತಿಗಳ ಮಿಲನದಿಂದ ಹುಟ್ಟಿ ಫಿನೀಷಿಯದ ಮತ್ತು ಈಜಿಪ್ಟಿನ ಹಲವು ಲಕ್ಷಣಗಳಿಂದ ಕೂಡಿದೆ. ಈ ಸಂಸ್ಕೃತಿಯ ಹೆಗ್ಗುರುತುಗಳನ್ನು ಟಾರ್ಕ್ವಿನಿಯ, ವೇಯ್, ಪೆಟುಲೋಯಾ ಮುಂತಾದೆಡೆಗಳಲ್ಲಿಯ ಸಮಾಧಿಗಳಿಂದ ಗುರುತಿಸಬಹುದು. ಇಲ್ಲೂ ಇತರ ಸ್ಥಳಗಳಲ್ಲೂ ಇರುವ ಸಮಾಧಿಗಳಲ್ಲಿ ದೊರಕಿರುವ ಶವಸಂಸ್ಕಾರ ಸಂಬಂಧ ವಸ್ತುಗಳಿಂದ ಪೌರಸ್ತ್ಯ ದೇಶಗಳ ಪ್ರಭಾವಗಳನ್ನೂ ಸಂಸ್ಕೃತಿಯ ರೂಪುರೇಷೆಗಳನ್ನೂ ತಿಳಿಯಬಹುದು.

ಇಟಲಿಯ ಉತ್ತರ ಭಾಗದಲ್ಲಿ ಈ ಕಾಲದಲ್ಲಿ ವಿಲ್ಲನೋವನ್ ಸಂಸ್ಕೃತಿ ರೂಢಿಗೆ ಬಂತು. ಸರೋವರವಾಸಿಗಳ ಸಂಸ್ಕೃತಿ ಮತ್ತು ಶವಜಾಡಿ ಕ್ಷೇತ್ರ ಸಂಸ್ಕೃತಿಗಳ ಮಿಲನದಿಂದ ಪ್ರ.ಶ.ಪೂ. ಮೊದಲ ಸಹಸ್ರಮಾನದ ಪ್ರಾರಂಭದಲ್ಲಿ ಹುಟ್ಟಿದ ಈ ಕಂಚಿನ ಯುಗದ ಸಂಸ್ಕೃತಿಯಲ್ಲಿ ಕ್ರಮೇಣ ಕಬ್ಬಿಣದ ಬಳಕೆ ಆರಂಭವಾಯಿತು. ಕಾಲಕ್ರಮದಲ್ಲಿ ಇಟ್ರುಸ್ಕನ್ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿ ಅದರೊಂದಿಗೆ ಲೀನವಾಯಿತು. ಪ್ರ.ಶ.ಪೂ. 400ರಲ್ಲಿ ಕೆಲ್ಟರ ದಾಳಿಗಳ ಫಲವಾಗಿ ಈ ಸಂಸ್ಕೃತಿಯ ಅಂತ್ಯವಾಯಿತು.

ಪೂರ್ವ ಫ್ರಾನ್ಸಿನಿಂದ ಆಸ್ಟ್ರಿಯದ ವರೆಗೂ ಹರಡಿದ್ದ ಹಾಲ್‌ಸ್ಟಾಟ್ ಸಂಸ್ಕೃತಿ ಮಧ್ಯಯುರೋಪಿನ ಕಬ್ಬಿಣ ಯುಗದ ಸಂಸ್ಕೃತಿಗಳಲ್ಲಿ ಮುಖ್ಯವಾದುದು. ಪ್ರ.ಶ.ಪೂ. 5–2ನೆಯ ಶತಮಾನಗಳಲ್ಲಿ ಪ್ರಬಲವಾಗಿದ್ದ ಈ ಸಂಸ್ಕೃತಿ ಆಲ್ಪ್ಸ್ ಪ್ರದೇಶಗಳಲ್ಲಿ ಪ್ರ.ಶ.ಪೂ. 400ರಲ್ಲಿ ಕೆಲ್ಟರ ದಾಳಿಗಳಿಂದ ನಾಶವಾದರೂ ಕೆಲಭಾಗಗಳಲ್ಲಿ ಕ್ರಿಸ್ತಶಕದ ಆರಂಭದ ವರೆಗೂ ಉಳಿದಿತ್ತು. ಜರ್ಮನಿ, ಸೈಲೀಷಿಯ, ಬಾಲ್ಕನ್ ಪ್ರದೇಶ, ಹಂಗರಿ ಮತ್ತು ರೂಮೇನಿಯಗಳಲ್ಲೂ ಹಾಲ್‌ಸ್ಟಾಟ್ ರೀತಿಯ ಸಂಸ್ಕೃತಿಗಳು ಪ್ರ.ಶ.ಪೂ. 7–4ನೆಯ ಶತಮಾನಗಳವರೆಗೂ ರೂಢಿಯಲ್ಲಿದ್ದವು.

ಪಶ್ಚಿಮ ಯುರೋಪಿನ ಇನ್ನು ಕೆಲವು ಪ್ರದೇಶಗಳಲ್ಲಿ ಕಂಚಿನ ಯುಗದ ಮತ್ತು ಹಾಲ್‌ಸ್ಟಾಟ್ ಸಂಸ್ಕೃತಿಗಳ ಸಂಪರ್ಕದಿಂದ ಕಬ್ಬಿಣ ಯುಗೀನ ಸಂಸ್ಕೃತಿಯೊಂದು ವಿಕಾಸಗೊಂಡಿತು. ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಈ ಪ್ರದೇಶಗಳಲ್ಲಿ ಲಾಟೆನೆ ಸಂಸ್ಕೃತಿಯ ಅಂಶಗಳು ಕಾಣಿಸಿಕೊಂಡವು. ಉತ್ತರ ಫ್ರಾನ್ಸ್ ಮತ್ತು ಬ್ರಿಟಿಷ್ ದ್ವೀಪಗಳಲ್ಲಿ ಕಂಚಿನ ಯುಗದ ಸಂಸ್ಕೃತಿಗಳು ಮುಂದುವರಿಯುತ್ತಿದ್ದು, ಪ್ರ.ಶ.ಪೂ. 5ನೆಯ ಶತಮಾನದ ಅಂತ್ಯದಲ್ಲಿ ಕೆಲ್ಟರ ಆಕ್ರಮಣದಿಂದ ಅಲ್ಲಿಗೂ ಕಬ್ಬಿಣದ ಪ್ರವೇಶವಾಯಿತು.

ಪ್ರ.ಶ.ಪೂ. 5ನೆಯ ಶತಮಾನದ ಅಂತ್ಯಕಾಲದಲ್ಲಿ ಯುರೋಪಿನ ಅನೇಕ ಭಾಗಗಳಲ್ಲಿ ಕೆಲ್ಟರ ಪ್ರಭಾವದಿಂದ ಉತ್ತರಕಾಲೀನ ಕಬ್ಬಿಣ ಯುಗ ಲಾ ಟೆನೆ ಸಂಸ್ಕೃತಿಯೊಂದಿಗೆ ಆರಂಭವಾಗುತ್ತದೆ. ಬ್ರಿಟನ್ನಿನಲ್ಲಿ ಈ ಕಾಲದ ಯುಗದ ಸಂಸ್ಕೃತಿಗಳನ್ನು ಎ, ಬಿ ಮತ್ತು ಸಿ ಎಂಬ ಮೂರು ಹಂತಗಳಾಗಿ ವಿಂಗಡಿಸಲಾಗಿದೆ. ಈ ಕಾಲದ ಐರೋಪ್ಯ ಸಂಸ್ಕೃತಿಗಳಲ್ಲಿ ಗ್ರೀಕ್ ಸಂಸ್ಕೃತಿ ಅಂಶಗಳನ್ನು ಹೋಲುವ ಮತ್ತು ಹಾಲ್‌ಸ್ಟಾಟ್ ಸಂಸ್ಕೃತಿಯ ರೀತಿಯಲ್ಲಿ ನಿರ್ಮಿತವಾದ ಕಲಾವಸ್ತುಗಳು ಕಾಣಬರುತ್ತವೆ. ಪ್ರಾಣಿಚಿತ್ರಣದಲ್ಲಿ ಸ್ಕಿಥಿಯನರ ಪ್ರಭಾವ ಎದ್ದು ಕಾಣುತ್ತದೆ. ಪಶ್ಚಿಮ ಸ್ವಿಟ್ಜರ್ಲೆಂಡಿನಲ್ಲಿ ತಲೆದೋರಿದ ಈ ಸಂಸ್ಕೃತಿ ಕ್ರಮೇಣ ಡ್ಯಾನ್ಯೂಬ್ ಕಣಿವೆಯಲ್ಲೂ ಫ್ರಾನ್ಸ್ ಮತ್ತು ಬ್ರಿಟಿಷ್ ದ್ವೀಪಗಳಲ್ಲೂ ಹರಡಿ ರೋಮನರ ದಾಳಿಯ ಕಾಲದ (ಕ್ರಿಸ್ತಶಕೆಯ ಆರಂಭಕಾಲ)ವರೆಗೂ ಪ್ರಬಲವಾಗಿತ್ತು.ರೋಮನರ ದಾಳಿಗಳೊಂದಿಗೆ ಯುರೋಪಿನ ಹಲವಾರು ಪ್ರದೇಶಗಳಲ್ಲಿ ಇತಿಹಾಸ ಯುಗದ ಪ್ರಾರಂಭವಾಯಿತು. (ಬಿ.ಕೆ.ಜಿ.ಆರ್.ಎಸ್.ಪಿ.)

**ಕಬ್ಬಿಣಲೋಹ ತಂತ್ರಗಾರಿಕೆ :** ಲೋಹ ಪ್ರಾಚೀನತೆಯು ಪ್ರಪಂಚದ ಎಲ್ಲ ಪ್ರದೇಶಗಳಲ್ಲಿಯ ತಾಮ್ರ–ಶಿಲಾ (ಚಾಲ್ಕೋಲಿಥಿಕ್) ಸಂಸ್ಕೃತಿಗಳಷ್ಟು ಹಿಂದಿನದಾಗಿದೆ. ಭಾರತದಲ್ಲಿ ವಿಶೇಷವಾಗಿ ದಖನ್‌ದಲ್ಲಿಯೂ ಮಧ್ಯ ಮತ್ತು ಪಶ್ಚಿಮ ಭಾಗಗಳಲ್ಲಿಯ ಅನೇಕ ಸ್ಥಳಗಳಲ್ಲಿಯೂ ಇಂತಹ ತಂತ್ರಗಾರಿಕೆಯ ಅವಶೇಷಗಳು ಕಂಡುಬರುತ್ತವೆ. ಪ್ರ.ಶ.ಪೂ.ಸು. 2ನೆಯ ಸಹಸ್ರಮಾನದಿಂದ ಹಿಡಿದು ಕಬ್ಬಿಣಯುಗದ ಪ್ರಾರಂಭದ ಕಾಲಾವಧಿ ಯವರೆಗೂ ಸಂಬಂಧಿಸಿದಂತೆ ಈ ಅವಶೇಷಗಳು ಇದ್ದಿರಬಹುದು ಎಂದು ತರ್ಕಿಸಲಾಗಿದೆ.

ಗಣಿಗಾರಿಕೆ, ಅದಿರು ಸಂಗ್ರಹಿಸುವುದು, ಅದಿರಿನಿಂದ ಲೋಹವನ್ನು ಬೇರ್ಪಡಿಸುವುದು ಹಾಗೂ ಇನ್ನಿತರ ಕ್ಲಿಷ್ಟತರವಾದ ಕೆಲ ಹಂತಗಳಲ್ಲಿಯ ಕ್ರಮಗಳು ಲೋಹತಂತ್ರಗಾರಿಕೆಯಲ್ಲಿ ಅಡಕವಾಗಿವೆ. ಲೋಹ ಉಪಕರಣಗಳು ಬಳಕೆಯಲ್ಲಿ ಬಂದ ಅನಂತರ ಮಾತ್ರವೇ ಕೃಷಿ ಮತ್ತು ಪಶುಸಂಗೋಪನೆಗಳ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ತನ್ನ ಸಂರಕ್ಷಣೆಯನ್ನು, ಆರ್ಥಿಕ ಸೌಖ್ಯವನ್ನು ಕೂಡ ಭದ್ರಪಡಿಸಿಕೊಳ್ಳಲು ಅವನಿಗೆ ಸಾಧ್ಯವಾಯಿತು. ಲೋಹತಂತ್ರಗಾರಿಕೆಯಲ್ಲಿ ಹಂತಗಳ ಕ್ರಮವನ್ನು ತಿಳಿದುಕೊಳ್ಳಬೇಕಾದರೆ ಈ ಕೆಳಕಂಡ ಕೆಲ ಅಂಶಗಳತ್ತ ಗಮನ ಹರಿಸಬೇಕಾಗುವುದು: (ಅ) ಅದಿರು ಲಭ್ಯ ಪ್ರದೇಶಗಳಲ್ಲಿ ಗಣಿಗಳು: (ಬ) ಲೋಹವನ್ನು ಬೇರ್ಪಡಿಸುವ ಇಲ್ಲವೆ ಅದಿರನ್ನು ಕರಗಿಸುವ ವಿಧಾನದ ಪೂರ್ವಸಿದ್ಧತೆ: (ಕ) ವಿಶಿಷ್ಟ ರೀತಿಯ ಪ್ರಯೋಜನಗಳಿಗಾಗಿ ಬಳಸಲು ಬೇಕಾದ ಉಪಕರಣ ಉತ್ಪಾದನೆ: ಕಂಬಾರಿಕೆಯ ವಿಧಾನಗಳನ್ನು ರೂಪಿಸುವುದು. ಈ ಅಂಶಗಳು ತಾಮ್ರ ಮತ್ತು ಕಬ್ಬಿಣ ಈ ಎರಡೂ ಲೋಹಗಳ ತಯಾರಿಕೆಗೆ ಸಂಬಂಧಪಟ್ಟಿರುತ್ತವೆ.

ತಾಮ್ರದ ತಯಾರಿಕೆ ಕರ್ನಾಟಕದಲ್ಲಿ ನವಶಿಲಾಯುಗದ ಒಂದು ಹಂತದಲ್ಲಿ ಪ್ರಾರಂಭ ವಾಯಿತು. ಕರ್ನಾಟಕದಲ್ಲಿ ಕಬ್ಬಿಣದ ನಿಕ್ಷೇಪ ವಿಪುಲವಾಗಿದೆ. ತಾಮ್ರದ ನಿಕ್ಷೇಪ ಅಷ್ಟಿಲ್ಲ. ಚಿತ್ರದುರ್ಗದ ಹತ್ತಿರದ ಇಂಗಳದಾಳು, ಕಲ್ಯಾಡಿ (ಹಾಸನ ಜಿಲ್ಲೆ), ದೇವಗೊಂಡನಹಳ್ಳಿ (ಚಿಕ್ಕಮಗಳೂರು), ತಿಂಥಿಣಿ (ಗುಲ್ಬರ್ಗ), ಸೋಮನಹಳ್ಳಿ (ಮೈಸೂರು), ಮಾಚನೂರು (ರಾಯಚೂರು), ಜಂಬಾನಿ (ಶಿವಮೊಗ್ಗ) ಹಾಗೂ ಬಳ್ಳಾರಿ ಜಿಲ್ಲೆಯ ನೈಋತ್ಯ ಭಾಗ ಈ ಸ್ಥಳಗಳಲ್ಲಿ ತಾಮ್ರದ ಅದಿರಿನ ನಿಕ್ಷೇಪಗಳಿವೆ. ತಾಮ್ರ ಅದಿರಿನ ಗಣಿಗಾರಿಕೆ ಇತ್ಯಾದಿ ಕೆಲಸಗಳು ನಡೆದ ಕುರುಹುಗಳಾದ ಅದಿರಿನ ಕಿಟ್ಟ ಅಥವಾ ಗಸಿ, ಶಾಖಕ್ಕೆ ಒಗ್ಗದ ಬಿರುಸು ಅದಿರು ಹಾಗೂ ಕಚ್ಚಾ ಅದಿರು ಇವು ಕಲ್ಯಾಡಿ ಗಣಿ ಪ್ರದೇಶದಲ್ಲಿ ಇಂದಿಗೂ ಕಂಡುಬರುತ್ತವೆ. ಚಿತ್ರದುರ್ಗ ಜಿಲ್ಲೆಯ ಇಂಗಳದಾಳದಲ್ಲಿ ಬೃಹತ್‌ಶಿಲಾಯುಗಕ್ಕೆ ಶವಸಂಸ್ಕಾರ ನೆಲೆಯೊಂದರಲ್ಲಿ ಅನುಕ್ರಮವಾಗಿ ನವಶಿಲಾಯುಗ, ತಾಮ್ರ–ಶಿಲಾಯುಗ ಹಾಗೂ ಕಬ್ಬಿಣ ಯುಗ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಸ್ತರಗಳು ಕಂಡುಬರುತ್ತದೆ. ಇಲ್ಲಿಯ ಕಬ್ಬಿಣ ಸರಕುಗಳು ತೀರ ಜಂಗುಗಟ್ಟಿವೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನಲ್ಲಿಯ ಕೊಮಾರನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಗಳಲ್ಲಿಯೂ ರಾಯಚೂರು ಜಿಲ್ಲೆಯ ಪಿಕ್ಲಿಹಾಳ ಮತ್ತು ಮಸ್ಕಿಗಳಲ್ಲಿಯೂ ಧಾರವಾಡ ಜಿಲ್ಲೆಯ ಹಳ್ಳೂರು ಎಂಬಲ್ಲಿಯೂ ಹಾಗೂ ಇನ್ನಿತರ ಕೆಲವೆಡೆಗಳಲ್ಲಿಯೂ ಸೂಚಿಸುವ ಸ್ತರಗಳು ಕಂಡುಬರುತ್ತವೆ. ಹಾಗೆಯೇ ಬಿಜಾಪುರ ಜಿಲ್ಲೆಯ ಹಿಂಗಣಿ, ಇಂಗಳಗಿ ಹಾಗೂ ಬೆಳಗಾಂವಿ ಜಿಲ್ಲೆಯ ಕುಡಚಿ ಎಂಬಲ್ಲಿಯೂ ತಾಮ್ರ–ಶಿಲಾಯುಗ, ಬೃಹತ್ ಶಿಲಾಯುಗದ ನೆಲೆಗಳು ಕಂಡುಬಂದಿವೆ. ಆದ್ದರಿಂದ ತಾಂತ್ರಿಕ ಪ್ರಗತಿಗೆ ಸಂಬಂಧಿಸಿದ ಯಾವುದೇ ಅಧ್ಯಯನ ನಡೆದರೂ ತಾಮ್ರ–ಶಿಲಾಯುಗ ಮತ್ತು ಬೃಹತ್ ಶಿಲಾಯುಗಗಳನ್ನು ಒಟ್ಟಾಗಿ ಗಮನಿಸಬೇಕಾದುದು ಅವಶ್ಯ.

**ಗಣಿಗಾರಿಕೆ:** ಖನಿಜಗಳ ಪ್ರಯೋಜನ ಪಡೆಯಲು ಮಾನವ ನಡೆಸಿದ ಪ್ರಯತ್ನಗಳಿಗೆ ದೀರ್ಘ ಇತಿಹಾಸವಿದೆ. ದಕ್ಷಿಣ ಆಫ್ರಿಕದಲ್ಲಿ ಮಧ್ಯಶಿಲಾಯುಗದಲ್ಲಿ ವರ್ಣದ್ರವ್ಯ ಪಡೆಯಲ್ಲಿ ಕಬ್ಬಿಣದ ಅದಿರನ್ನು ತೋಡಿ ತೆಗೆಯುವ ಗಣಿ ಕೆಲಸ ನಡೆಯುತ್ತಿತ್ತು ಎಂದು ತೋರುತ್ತದೆ. ಆದ್ದರಿಂದ ಹಲವಾರು ಪ್ರಾಗೈತಿಹಾಸಿಕ ಜನ ಸಮುದಾಯಗಳಿಗೆ ಕಬ್ಬಿಣದ ಗಣಿಗಾರಿಕೆಯ ತಂತ್ರ ಪರಿಚಿತವಾಗಿತ್ತು ಎಂಬುದು ವಿಸ್ಮಯಕಾರಕವಾದ ಸಂಗತಿಯಾಗಿದ್ದರೂ ಈ ಗಣಿಗಾರಿಕೆಯಿಂದ ಕಬ್ಬಿಣದ ಲೋಹವನ್ನು ತಯಾರಿಸುವ ಉದ್ದೇಶವಿರಲಿಲ್ಲ. ತಾಮ್ರದ ಲೋಹವನ್ನೇ ಪಡೆಯಬೇಕೆಂಬ ಉದ್ದೇಶದಿಂದ ತಾಮ್ರದ ಅದಿರನ್ನು ಕರಗಿಸಿ ಲೋಹವನ್ನು ಪಡೆಯುವ ತಂತ್ರವು ಕಬ್ಬಿಣದ ಅದಿರನ್ನು ಕರಗಿಸಿ ಕಬ್ಬಿಣವನ್ನು ತಯಾರಿಸುವ ತಂತ್ರಕ್ಕಿಂತ ಹೆಚ್ಚು ಪ್ರಾಚೀನವಾದುದು. ಕಾರಣ ತಾಮ್ರವನ್ನು $1200^0$ಗಳಿಗಿಂತಲೂ ಕಡಿಮೆ ಶಾಖದಲ್ಲಿ ಕರಗಿಸಬಹುದು. ಆದರೆ ಕಬ್ಬಿಣ $1540^0$ಗಳಿಗಿಂತ ಹೆಚ್ಚಿನ ಶಾಖದಲ್ಲಿ ಮಾತ್ರ ಕರಗಬಲ್ಲದು. ಇಷ್ಟೊಂದು ಶಾಖವನ್ನು ಉತ್ಪನ್ನಗೊಳಿಸಬಲ್ಲಂತಹ ತಿದಿಗಳನ್ನು ತಯಾರಿಸುವುದು ಆ ಹಿಂದಿನ ಜನರಿಗೆ ಸಾಧ್ಯವಾಗಿರಲಿಲ್ಲವೆಂದು ತೋರುತ್ತದೆ.

ತಾಮ್ರ–ಶಿಲಾಯುಗದ ಜನರು ಗಣಿಗಾರಿಕೆಯ ಕೆಲಸದಲ್ಲಿ ಎರಡು ಬಗೆಯ ವಿಧಾನಗಳನ್ನು ಬಳಸುತ್ತಿದ್ದರು: ಹೆಚ್ಚು ಆಳವಿರದ ತಗ್ಗುಗಳ ಗಣಿ ಅಗೆಯುವುದು. ಅದಿರು ಇದ್ದ ದಿಕ್ಕಿನತ್ತ ಆಳವಾದ ತೋಡುದಾರಿಗಳನ್ನು ನಿರ್ಮಿಸುವುದು. ಅರಾವಳಿ ಬೆಟ್ಟಗಳ ಮಧ್ಯ ಮತ್ತು ನೈರುತ್ಯ ವಲಯಗಳಲ್ಲಿಯ ತಾಮ್ರದ ಅದಿರಿನ ಪಟ್ಟಿಯಲ್ಲಿ ಆಳವಿರದ ತಗ್ಗುಗಳ ಗಣಿಗಳಿವೆ. ರಾಜಸ್ತಾನದ ಖೇತ್ರಿ, ಅಂಬಾಜಿ ಹಾಗೂ ಇನ್ನಿತರೆಡೆಗಳಲ್ಲಿ ಆಳವಾದ ತೋಡುದಾರಿಗಳಿವೆ. ಆಳವಿರದ ತಗ್ಗುಗಣಿಗಳು ಆಳವಾದ ತೋಡುದಾರಿಯ ಗಣಿಗಳಿಗಿಂತ ಹೆಚ್ಚು ಪ್ರಾಚೀನವಾದವು.

ಕರ್ನಾಟಕದಲ್ಲಿ ಕಲ್ಯಾಡಿ ಮತ್ತು ಚಿತ್ರದುರ್ಗಗಳ ತಾಮ್ರ ಅದಿರಿನ ವಲಯಗಳಲ್ಲಿ ಕೆಲವು ಪ್ರಾಚೀನ ಕಾರ್ಯಾಗಾರಗಳ ಕುರುಹುಗಳಿವೆ. ಇವುಗಳಲ್ಲಿಯ ಒಂದು ಗಣಿಯಲ್ಲಿ ಮರದ ಸನ್ನೆ ದೊರೆತಿದ್ದು, ಇದರ ಕಾಲಮಾನ ಪ್ರ.ಶ.ಪೂ.ಸು. 3ನೆಯ ಶತಮಾನವೆಂದು

ಇಂಗಾಲ–14ರ ವಿಧಾನದಿಂದ ತಿಳಿದಿದೆ. ಬಿಸ್ನಾಳದಲ್ಲಿ ಬೃಹದಾಕಾರದ ಕಬ್ಬಿಣದ ಗಣಿಗಳ ತಗ್ಗುಗಳಿವೆ. ಇದರ ಬಳಿಯಲ್ಲಿಯೆ ಕಬ್ಬಿಣವನ್ನು ಕರಗಿಸಿದ ಒಂದು ಸ್ಥಳವೂ ಇದೆ. ಈ ಸ್ಥಳಗಳು ತೇರದಾಳ, ಹಳಿಂಗಳಿ ಬೃಹತ್‌ಶಿಲಾ ಗೋರಿಗಳ ನೆಲೆಯಿಂದ ಸು. 40 ಕಿಮೀ ದೂರದಲ್ಲಿದೆ. ಒಟ್ಟಿನಲ್ಲಿ ಕರ್ನಾಟಕದಲ್ಲಿ ಆಳವಿರದ ತಗ್ಗು–ಗಣಿ ಪದ್ಧತಿ ಈ ಎರಡೂ ವಿಧಾನಗಳನ್ನು ಬಳಸಲಾಗುತ್ತಿತ್ತು ಎಂಬುದಕ್ಕೆ ಇವೆಲ್ಲಾ ಸಾಕ್ಷ್ಯಗಳು.

**ಅದಿರು ಶುದ್ಧೀಕರಣ:** ಲೋಹವನ್ನು ಬೇರ್ಪಡಿಸುವ ಮೊದಲು ಅದಿರನ್ನು ಪುಡಿಗೊಳಿಸಿ ಸುಡುವ ಕ್ರಿಯೆ ನಡೆಯಬೇಕಾಗುತ್ತದೆ. ಈ ಕ್ರಿಯೆಯಿಂದ ಬೇಗನೆ ಭಾಷ್ಪೀಭವಗೊಳ್ಳಬಲ್ಲಂತಹ ಗಂಧಕ ಮತ್ತು ಆರ್ಸೆನಿಕ್ (ಪಾಷಾಣ)ಗಳು ತಾಮ್ರದ ಅದಿರಿನಿಂದ ಬೇರ್ಪಡುತ್ತವೆ. ಅದಿರು ಶುದ್ಧೀಕರಣಕ್ಕಾಗಿ ಬಳಸುವ ಒಂದು ವಿಶಿಷ್ಟ ವಿಧಾನವೆಂದರೆ ಸಾಂದ್ರತೆ ಪ್ರತ್ಯೇಕೀಕರಣ ಪದ್ಧತಿ. ಈ ಕಾರ್ಯ ಅದಿರನ್ನು ಕರಗಿಸುವ ಸ್ಥಳದ ಹತ್ತಿರವೇ ನಡೆಯುತ್ತಿತ್ತು. ಬಹುತೇಕ ಇವು ಬೆಟ್ಟಗಳಲ್ಲಿ ಹರಿಯುವ ಹಳ್ಳಗಳ ಸಮೀಪದಲ್ಲಿಯೆ ಇರುತ್ತಿದ್ದವು. ರಾಜಸ್ತಾನದಲ್ಲಿಯ ಅಂಬುಜಾದ ಹತ್ತಿರ ಇಂತಹ ಸಾಂದ್ರತೆ ಪ್ರತ್ಯೇಕೀಕರಣದ ನೆಲೆಗಳು ಇವೆ. ಸೂಕ್ಷ್ಮವಾಗಿ ಶುದ್ಧೀಕರಿಸಲ್ಪಟ್ಟ ಅದಿರಿನ ಹುಡಿಯನ್ನು ಇಳಿಜಾರಿನಲ್ಲಿ ನೀರಿನೊಂದಿಗೆ ಹರಿಬಿಡುತ್ತಿದ್ದರು. ಈ ವಿಧಾನದಿಂದ ತಾಮ್ರದ ಆಮ್ಲಜನಕ ಧಾತು ಸಂಯುಕ್ತ ಈ ತಗ್ಗುಗಳಲ್ಲಿ ಸಂಗ್ರಹಗೊಳ್ಳುತ್ತಿತ್ತು. ಈ ವಿಧಾನ ಗಮನೀಯವಾದುದು. ವಿಶೇಷವಾಗಿ ಮಸ್ಕಿ, ಹೊಸಪೇಟೆ, ಕೊಪ್ಪಳ ಮುಂತಾದ ನೆಲೆಗಳನ್ನೊಳಗೊಂಡಂತೆ ಇಡೀ ಉತ್ತರ ಕರ್ನಾಟಕದಲ್ಲಿ ಕಲ್ಲಿನ ಬೆಟ್ಟದ ಭಾಗಗಳಲ್ಲಿ ಇಂತಹ ವಿಧಾನವನ್ನು, ಅಂದರೆ ಇಳಿಜಾರುಗಳ ವಿಧಾನವನ್ನು ಅನುಸರಿಸಿದ್ದ ಇನ್ನೂ ಹಲವಾರು ಸ್ಥಳಗಳು ಕಂಡುಬರಬಹುದು. ಈ ದೃಷ್ಟಿಯಿಂದ ಕಪ್ಪತಗುಡ್ಡದ ಶ್ರೇಣಿಗೂ ಔಚಿತ್ಯವಿದೆ. ಕೋಲಾರ ಜಿಲ್ಲೆಯ ಬನಹಳ್ಳಿಯಲ್ಲಿ ಬೃಹತ್‌ಶಿಲಾಯುಗ ಕಾಲದ ಜನರು ಕಬ್ಬಿಣ ಅದಿರನ್ನು ಚಿಕ್ಕಪುಟ್ಟ ತುಂಡುಗಳನ್ನಾಗಿ ಒಡೆಯುತ್ತಿದ್ದರು. ಇಂಥ ಸ್ಥಳದಲ್ಲಿಯ ಪ್ರಾಚೀನ ಕಾಲದ ಕುಲುಮೆಯ ಒಂದು ಕಲ್ಲಿನ ತುಂಡು ಮತ್ತು ರಸ್ತೆ ಜಲ್ಲಿಕಲ್ಲಿನ ಗಾತ್ರದ ಅದಿರು ಈ ಸಂಗತಿಗೆ ಪುರಾವೆಗಳಾಗಿವೆ. ಆದರೆ ಅದಿರನ್ನು ಶುದ್ಧೀಕರಣ ಉದ್ದೇಶದಿಂದ ಸುಟ್ಟಿದ್ದರ ಸಾಕ್ಷ್ಯಗಳು ಕರ್ನಾಟಕದಲ್ಲಿ ಇದುವರೆಗೂ ದೊರೆತಿರುವುದಿಲ್ಲ.

**ಸ್ರಾವಕ ಕ್ರಿಯೆ (ದ್ರವಕಾರಿ):** ಕರಗಿಸುವ ಕ್ರಿಯೆಯಲ್ಲಿ ಹೆಚ್ಚು ಪ್ರವಾಹಾತ್ಮಕ ಗುಣವನ್ನುಂಟು ಮಾಡುವುದಕ್ಕಾಗಿ ಸ್ರಾವಕ ವಸ್ತು ಅಥವಾ ದ್ರವ್ಯವನ್ನು ಸೇರಿಸುವುದೂ ಒಂದು ಮಹತ್ತ್ವದ ಹಂತ. ರಾಜಸ್ತಾನದ ಅಹಾರ್ ಎಂಬಲ್ಲಿ ಸಿಲಿಕ ಇವನ್ನು ತಾಮ್ರದ ಅದಿರಿನೊಂದಿಗೆ ಉದ್ದೇಶಪೂರ್ವಕವಾಗಿ ಸೇರಿಸುತ್ತಿದ್ದುದು ಕಂಡುಬಂದಿದೆ. ಆದ್ದರಿಂದ ತಾಮ್ರ–ಶಿಲಾಯುಗದ ಹಂತದಲ್ಲಿ ತಾಮ್ರಲೋಹ ತಂತ್ರಗಾರಿಕೆ ಸಾಕಷ್ಟು ಮುಂದುವರೆದಿತ್ತು ಎಂದು ಹೇಳಬಹುದು.

ಸ್ರಾವಕ ಕ್ರಿಯೆಯನ್ನು ಬಳಸುತ್ತಿದ್ದುದರ ಕುರುಹುಗಳು ಕರ್ನಾಟಕದಲ್ಲಿ ಕಂಡುಬಂದಿಲ್ಲ. ಆದರೆ ಸ್ರಾವಕ ಕ್ರಿಯೆ ತಂತ್ರವು ಇವರಿಗೆ ಅಪರಿಚಿತವಾಗಿರಲಿಲ್ಲ. ಕಲ್ಯಾಡಿ ಗಣಿಗಳಲ್ಲಿಯ ಕಿಟ್ಟ ಇಲ್ಲವೆ ಗಸಿಯನ್ನು ವಿಶ್ಲೇಷಿಸಿದರೆ ತಾಮ್ರವನ್ನು ಶುದ್ಧಗೊಳಿಸಲು ಕಬ್ಬಿಣದ ಅದಿರನ್ನು ಸ್ರಾವಕ ವಸ್ತುವಾಗಿ ಬಳಸುತ್ತಿದ್ದುದು ಕಂಡುಬಂದಿದೆ. ಬನಹಳ್ಳಿಯಲ್ಲಿದ್ದ ಬೃಹತ್‌ಶಿಲಾಯುಗದ ಜನರು ಕಬ್ಬಿಣದ ಅದಿರನ್ನು ಶುದ್ಧಗೊಳಿಸಲು ಸುಣ್ಣವನ್ನು ಸ್ರಾವಕವಾಗಿ ಬಳಸುತ್ತಿದ್ದರು. ಬೃಹತ್‌ಶಿಲಾಯುಗದ ಹಂತದಲ್ಲಿ ತಾಂತ್ರಿಕತೆ ಪ್ರಬುದ್ಧಮಟ್ಟಕ್ಕೇರಿ ಬೆಳೆದಿತ್ತು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ. ಮಹಾರಾಷ್ಟ್ರದ ನಾಯ್‌ಕುಂಡ್ ಮತ್ತು ಗುಜರಾತಿನ ಧತ್ವಾ ಎಂಬ ಸ್ಥಳಗಳಲ್ಲಿ ಪ್ರಾಚೀನ ಕಾಲದ ಕುಲುಮೆಗಳಿವೆ. ನಾಯ್‌ಕುಂಡ್‌ನಲ್ಲಿ ಬೃಹತ್‌ಶಿಲಾಯುಗದ ಕುರುಹುಗಳೂ ಇವೆ. ಗುಜರಾತದ ಧತ್ವಾ ಸ್ಥಳವು ಇತಿಹಾಸದ ಆದಿಕಾಲಕ್ಕೆ ಸೇರಿದ್ದು. ಇವೆರಡೂ ಸ್ಥಳಗಳಲ್ಲಿ ದೊರೆತ ಕುಲುಮೆಗಳಿಗೆ ಒಂದು ವಿಶೇಷತೆ. ಏಕೆಂದರೆ ಇವುಗಳಲ್ಲಿ ಸ್ರಾವಕ ವಸ್ತುವನ್ನು ಬಳಸುತ್ತಿದ್ದ ಚಿಹ್ನೆಗಳಿಲ್ಲ. ಆದರೆ ನಾಯ್‌ಕುಂಡ್‌ನ ಕುಲುಮೆಯನ್ನು ಒಂದು ವಿಶಿಷ್ಟ ಬಗೆಯಲ್ಲಿ ಕಟ್ಟಿದ್ದರಿಂದ ಇದು ಹೆಚ್ಚು ಕಾರ್ಯಕ್ಷಮತೆಯುಳ್ಳದ್ದಾಗಿತ್ತು.

ಲೋಹವನ್ನು ಬೇರ್ಪಡಿಸುವುದು ಇವೆಲ್ಲವುಗಳ ಮುಂದಿನ ಹಂತ. ಕುಲುಮೆಗಳಲ್ಲಿ ಮಾತ್ರ ಲೋಹವನ್ನು ಬೇರ್ಪಡಿಸುವುದು ಸಾಧ್ಯ. ಆದ್ದರಿಂದ ತಾಮ್ರ–ಶಿಲಾಯುಗದಲ್ಲಿಯೂ ಹಾಗೂ ಬೃಹತ್‌ಶಿಲಾಯುಗದಲ್ಲಿಯೂ ಬಳಕೆಯಲ್ಲಿದ್ದ ಕೆಲವೊಂದು ಕುಲುಮೆಗಳನ್ನು ಪರಿಶೀಲಿಸಬೇಕಾದುದು ಅವಶ್ಯ. ಮದರಾಸು–ಮೈಸೂರು ಭಾಗದಲ್ಲಿಯ ಮಾಗಡಿ ಎಂಬಲ್ಲಿ ಕಿಟ್ಟ ರಹಿತ ಇಲ್ಲವೆ ಗಸಿಸಹಿತವಾದ ರಂಧ್ರವೊಂದನ್ನುಳ್ಳ ದೊಡ್ಡದಾದ ಕುಲುಮೆಯನ್ನು ಬಳಸುತ್ತಿದ್ದರು ಎಂದು ಬುಕಾನನ್ ವಿವರಿಸಿದ್ದಾನೆ. ಅಂಬಾಜಿ ಸ್ಥಳದಲ್ಲಿ ತಾಮ್ರ–ಶಿಲಾಯುಗದಲ್ಲಿ ಇದ್ದ ಕುಲುಮೆಯ ಒಡೆದ ಭಾಗಗಳ ಅಂದರೆ ಅದರ ಗಾಳಿಯ ಕೊಳವೆಯ ಮೂತಿ, ಕಿಟ್ಟ ಮೊದಲಾದ ಭಾಗಗಳ ಅವಶೇಷಗಳನ್ನು ಜೋಡಿಸಿ ಹೊಂದಿಸಿ ಆ ಕುಲುಮೆಯನ್ನು ಪುನರ್ನಿಮಿಸಿದ ಸಂಗತಿ ಇತ್ತೀಚಿನ ವರ್ಷಗಳಲ್ಲಿಯ ಒಂದು ಮಹತ್ತ್ವದ ಶೋಧ. ಸ್ಥಳೀಯ ಹಳ್ಳಗಳ ದಂಡೆಯ ಮೇಲಿನ ಮಣ್ಣನ್ನೇ ಉಪಯೋಗಿಸಿ ಈ ಹಳ್ಳಗಳ ದಂಡೆಗಳ ಕುಲುಮೆಗಳನ್ನು ರಚಿಸಲಾಗಿತ್ತು. ಇದರ ರಚನೆಯಲ್ಲಿ ಮೂರು ಭಾಗಗಳಿದ್ದವು. ಒಂದು ಗಾಳಿಯ ಕೊಳವೆಯ ಮೂತಿ, ಎರಡನೆಯದು ಗಸಿಯನ್ನು ಹೊರಚೆಲ್ಲಲು ರಚಿಸಿದ ರಂಧ್ರ. ಮೂರನೆಯದು ಕುಲುಮೆಯ ಇತರ ಭಾಗ. ಒಂದು ಬಿದಿರಿನ ಕೊಳವೆಗೆ ಮಣ್ಣು ಮೆತ್ತಿ ಕುಲುಮೆಯ ಗಾಳಿ – ಕೊಳವೆಯನ್ನು ರಚಿಸಲಾಗುತ್ತಿತ್ತು. ಒಡೆದ ಭಾಗಗಳ ಅವಶೇಷಗಳನ್ನು ಪರಿಶೀಲಿಸಿದರೆ ಇವೆಲ್ಲವುಗಳ ತಿರುವುಗಳಲ್ಲಿಯೂ ಬಾಗುಗಳ ದಪ್ಪದಲ್ಲಿಯೂ ಏಕರೂಪತೆ ಇದ್ದುದು ಕಂಡುಬರುತ್ತದೆ. ಬಹುಶಃ ಈ ಭಾಗಗಳನ್ನು ತಯಾರಿಸಲು ಆಗಿನವರು ಅಚ್ಚು ಪಟ್ಟಿಗಳನ್ನು ಬಳಸುತ್ತಿರಬಹುದು. ಈಗ ಸದ್ಯ ಉಪಲಬ್ಧವಿದ್ದ ಭಾಗಗಳನ್ನು ನೋಡಿದರೆ ಈ ಎಲ್ಲ ಕುಲುಮೆಗಳ ತಳಗಳು ಒಡೆದದ್ದು ಕಾಣುತ್ತದೆ. ಎರಕ ಹೊಯ್ದ ನಂತರ ಬರುವ ಲೋಹದ ಗಟ್ಟಿಗಳನ್ನು ಹೊರ ತೆಗೆಯಲು ಬಹುಶಃ ಈ ಕುಲುಮೆಗಳ ತಳಗಳನ್ನು ಒಡೆಯುತ್ತಿದ್ದಿರಬಹುದು. ಅಂದರೆ, ಈ ಕುಲುಮೆ ಒಂದೆ ಸಲ ಮಾತ್ರ ಎರಕ ಹಾಕಲು ಬಳಸಲಾಗುತ್ತಿತ್ತು. ಪ್ರಾಚೀನ ಕಾಲದಲ್ಲಿ ತಾಮ್ರವನ್ನು ಕರಗಿಸಲು ಬಳಸುತ್ತಿದ್ದ ಕುಲುಮೆಗಳು ಆಕಾರದಲ್ಲಿ ಚಿಕ್ಕವಾಗಿದ್ದರೂ ಈ ವಿಧಾನ ಮಾತ್ರ ಸಾಕಷ್ಟು ಕಾರ್ಯಕ್ಷಮತೆಯುಳ್ಳದ್ದಾಗಿತ್ತು. ಈ ವಿಧಾನದನ್ವಯ ಕುಲುಮೆಯಲ್ಲಿ ಗಾಳಿಯನ್ನು ಬಲವಂತವಾಗಿ ನುಗ್ಗಿಸುವುದಕ್ಕೆ ಮಹತ್ತ್ವ ಇದ್ದಿತು. ಪುಡಿ ಮಾಡದ ಸುಟ್ಟ ಅದಿರನ್ನು ಚಿಕ್ಕ ಚಿಕ್ಕ ಮುದ್ದೆಗಳನ್ನಾಗಿ ಮಾಡಿ ಅವುಗಳನ್ನು ಈ ಕುಲುಮೆಗಳಲ್ಲಿ ಹಾಕುತ್ತಿದ್ದರು.

ಮಹಾರಾಷ್ಟ್ರದಲ್ಲಿಯ ನಾಯ್‌ಕುಂಡ್‌ನ ಬೃಹತ್‌ಶಿಲಾಯುಗ ನೆಲೆಯಲ್ಲಿ ಕಬ್ಬಿಣ ಕರಗಿಸುವ ಕಟ್ಟಿದ ಕುಲುಮೆಯ ಅವಶೇಷಗಳು ದೊರೆತಿವೆ. ಈ ಸಂಸ್ಕೃತಿಯ ಕಾಲಮಾನ ಪ್ರ.ಶ.ಪೂ.ಸು. 6–4ನೆಯ ಶತಮಾನ.

ಬನಹಳ್ಳಿಯಲ್ಲಿ ಬೃಹತ್‌ಶಿಲಾಯುಗದ ಸಾಂಸ್ಕೃತಿಕ ಸ್ತರಗಳಲ್ಲಿ ಈ ಹಂತದ ಕಬ್ಬಿಣದ ಹಲವಾರು ಉಪಕರಣಗಳು ಹಾಗೂ ಕಬ್ಬಿಣ ಕರಗಿಸುವ ಕುಲುಮೆಯೂ ದೊರೆತಿದೆ. ಈ ಬೃಹತ್ ಶಿಲಾಯುಗದ ಸಂಸ್ಕೃತಿಯು ಪ್ರ.ಶ.ಪೂ.400–300ರ ಅವಧಿಯಲ್ಲಿ ಇದ್ದಿರಬಹುದೆಂದು ತರ್ಕಿಸಲಾಗಿದೆ. ಈ ಕುಲುಮೆಯು ಬಟ್ಟಲಿನ ಆಕಾರದಲ್ಲಿಯ ನೆಲದಲ್ಲಿರುವ ಒಂದು ಕುಣಿ. ಇದಕ್ಕೂ ಇಂಗ್ಲೆಂಡ್‌ನ ಇತಿಹಾಸಪೂರ್ವ ಕಾಲದ ಕುಲುಮೆಗಳಿಗೂ ಸಾಮ್ಯವಿದೆ. ನೆಲದ ಒಂದು ಕುಣಿಯನ್ನು ತೋಡಿ ಇದಕ್ಕೆ ಸುತ್ತ ಶಾಖಕ್ಕೆ ಜಗ್ಗದಂತಹ ಮಣ್ಣನ್ನು ಮೆತ್ತಲಾಗಿದೆ. ಇದರಲ್ಲಿ ಗಾಳಿಹಾಕುವ ಕೊಳವೆಯ ಮೂತಿಯ ಹಾಗೂ ಕಿಟ್ಟ ಇಲ್ಲವೆ ಗಸಿಯನ್ನು ಹೊರತೆಗೆಯುವ ವ್ಯವಸ್ಥೆಗಳೂ ಇವೆ. ಗಣಿಗಳ ತಗ್ಗುಗಳಲ್ಲಿ ಕಿಟ್ಟ ಇಲ್ಲವೆ ಗಸಿ, ಬೂದಿ, ಕಲ್ಲಿದ್ದಲು ಮತ್ತು ಇತರ ಅವಶೇಷಗಳಿವೆ. ಮೂಲ ಅದಿರಿನ ಅವಶೇಷಗಳಿಲ್ಲ. ಮೇಲುಸ್ತರದಲ್ಲಿ ಗಸಿಯ ದಪ್ಪ ಪದರು ಹಬ್ಬಿದೆ. ಆದ್ದರಿಂದ ಗಸಿಯು ಕುಲುಮೆಯಿಂದ ಹೊರಗೆ ಹೋಗುವಂತೆ ಬಿಡಲಾಗುತ್ತಿತ್ತೆಂದು ತೋರುತ್ತದೆ. ಕುಲುಮೆಯ ಕೆಳಭಾಗದಲ್ಲಿ ಕಬ್ಬಿಣದ ವಡೆ ದೊರೆತಿದೆ. ಸಾಕಷ್ಟು ಪ್ರಮಾಣದಲ್ಲಿ ಉಳಿದ ಗಸಿಯು ಶೇಖರವಾಗಿದೆ. ಈ ತರಹದ ಎರಡುಮೂರು ಕುಲುಮೆಗಳನ್ನು ಜೋಡಿಸಿ ಇವೆಲ್ಲವೂ ಏಕಕಾಲಕ್ಕೆ ಕೆಲಸ ನಡೆಸಬಲ್ಲಂಥ ವ್ಯವಸ್ಥೆ ಇದ್ದಿರಬಹುದಾದ ಸಾಧ್ಯತೆಯೂ ಉಂಟು. ಇದು ನಿಜವಿದ್ದರೆ, ಈ ಬಗೆಯ ವ್ಯವಸ್ಥೆಯು 19ನೆಯ ಶತಮಾನದ ವರೆಗೂ ಮುಂದುವರೆಯಿತು ಎಂದು ಹೇಳಬಹುದು. ಈ ವಿಷಯದಲ್ಲಿ ಬುಕಾನನ್‌ನ ಅಭಿಪ್ರಾಯ ಗಮನೀಯ. ಇವೆಲ್ಲ ಒಂದೇ ಚಪ್ಪರದ ಕೆಳಗೆ 2.10–2.40 ಮೀ ಇರುತ್ತಿದ್ದವು. ಎರಡು ಕುಲುಮೆಗಳ ಗಾಳಿ ಕೊಳವೆ ಮೂತಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇವು ಶಾಖಕ್ಕೆ ಒಳಪಡದಂಥ ಮಣ್ಣಿನಿಂದ ಕೂಡಿದ್ದು, ಇವುಗಳಲ್ಲಿ ಶೇ. 66ರಷ್ಟು ಸಿಲಿಕ ಮತ್ತು ಶೇ. 14ರಷ್ಟು ಅಲ್ಯುಮಿನಾ ಅಂಶ ಕಂಡುಬಂದಿದೆ. ಅಂದರೆ ಅಂಬಾಜಿ, ನಾಯ್‌ಕುಂಡ್ ಮತ್ತು ಬನಹಳ್ಳಿ ಕುಲುಮೆಗಳಲ್ಲಿ ಗಾಳಿಯನ್ನು ಹಾಕುವುದಕ್ಕಾಗಿ ಗಾಳಿ ಕೊಳವೆ ಮೂತಿಗಳೂ ಇರುತ್ತಿದ್ದವು. ಗಸಿಯನ್ನು ಹಿಡಿಯಲು ರಂಧ್ರಗಳೂ ಇರುತ್ತಿದ್ದವು. ಈ ಮೂರು ಸ್ಥಳಗಳಲ್ಲಿಯ ಕುಲುಮೆಗಳಲ್ಲಿ ಮೂಲ ಯಾಂತ್ರಿಕ ವ್ಯವಸ್ಥೆ ಒಂದೇ ಬಗೆಯದ್ದಾಗಿರುತ್ತಿತ್ತು. ತಾಮ್ರ ಮತ್ತು ಕಬ್ಬಿಣದಂತಹ ಅದಿರುಗಳನ್ನು ಕರಗಿಸುವ ಮೂಲ ತತ್ತ್ವಗಳಲ್ಲಿ ತಾಮ್ರ–ಶಿಲಾಯುಗದಿಂದ ಮೊದಲುಗೊಂಡು ಕಬ್ಬಿಣದ ಯುಗದ ವರೆಗೂ ವಿಶೇಷ ಬದಲಾವಣೆಗಳು ಆಗಿರಲಿಲ್ಲ. ಕುಲುಮೆಗಳನ್ನು ಬೇರೆ ಬೇರೆ ಪ್ರಕಾರಗಳಲ್ಲಿ ರಚಿಸುವುದಕ್ಕೆ ಸ್ಥಳೀಯ ಸ್ಥಿತಿಗತಿಗಳೇ ಕಾರಣವಾಗಿರಬಹುದು ಮತ್ತು ಅದಿರನ್ನು ಕರಗಿಸುವ ವಿಧಾನದಲ್ಲಿ ಪರಿಣತರಾದ ಆ ಜನ ತಮಗೆ ಬೇಕಾದ ಕುಲುಮೆಗಳನ್ನು ರಚಿಸಿಕೊಳ್ಳುವುದರಲ್ಲಿಯೂ ಸಮರ್ಥರಾಗಿದ್ದರು. ಆದ್ದರಿಂದ ಭಾರತದಲ್ಲಿ ಕಬ್ಬಿಣ ಯುಗದ ಪ್ರಾರಂಭದ ಕಾಲದಿಂದ ನಾನಾ ಬಗೆಯ ಕುಲುಮೆಗಳು ಇದ್ದವು. ಕರ್ನಾಟಕದ ವಿಷಯದಲ್ಲಿಯೂ ಈ ಮಾತು ಅಷ್ಟೇ ನಿಜವಾಗಿದೆ.

ಕರ್ನಾಟಕದಲ್ಲಿ ತಾಮ್ರವನ್ನು ಹೇಗೆ ಬೇರ್ಪಡಿಸುತ್ತಿದ್ದರು ಎಂಬ ಬಗೆಗಿನ ವಿವರಗಳು ಇನ್ನೂ ಬೆಳಕಿಗೆ ಬಂದಿಲ್ಲ. ಅರಾವಳಿ ಬೆಟ್ಟದಲ್ಲಿರುವ ನಿಕ್ಷೇಪಗಳಲ್ಲಿಯ ತಾಮ್ರದ ಅದಿರಿನಲ್ಲಿ ತಾಮ್ರದ ಅಂಶ ಕಡಿಮೆ ಪ್ರಮಾಣದಲ್ಲಿದೆ. ಗಣಿಯಿಂದ ಹೊರತೆಗೆದ ಮೇಲೆ ಇದನ್ನು

ಮುಂದಿನ ಕೆಲಸಕ್ಕೆ ಅಣಿ ಮಾಡಲಾಗುತ್ತಿತ್ತು. ತಾಮ್ರದ ಅದಿರಿಗೆ ಬಂಗಾರದಂತಹ ಹಳದಿ ಬಣ್ಣ ಇರುತ್ತದೆ. ಆದ್ದರಿಂದ ಇಂತಹ ಅದಿರನ್ನು ಕೈಯಿಂದಲೇ ಹೆಕ್ಕಿ ಕೂಡಿ ಹಾಕಿ ಕೆಲಸಕ್ಕೆ ಅಣಿ ಮಾಡಲು ಸುಲಭವಾಗುತ್ತದೆ. ಇಲ್ಲಿಯ ಲೋಹವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಇದರಲ್ಲಿ ಆಂಟಿಮನಿ, ಆರ್ಸೆನಿಕ್ ಮತ್ತು ಸಲ್ಫರ್‌ಗಳು ಮಾತ್ರ ಇದ್ದದ್ದು ಕಂಡುಬಂದಿದೆ. ಏಕೆಂದರೆ ಅರಾವಳಿ ಬೆಟ್ಟಗಳಲ್ಲಿ ತಾಮ್ರದ ಅದಿರಿನಲ್ಲಿ ಈ ಮೂಲವಸ್ತುಗಳು ವಿಪುಲ ಪ್ರಮಾಣದಲ್ಲಿ ದೊರೆಯುತ್ತವೆ. ಬೇರ್ಪಡಿಸಲ್ಪಟ್ಟ ಲೋಹದಲ್ಲಿ ಈ ಘಟಕಗಳು ಶೇ. 2ಕ್ಕಿಂತಲೂ ಹೆಚ್ಚಾದರೆ ಈ ಲೋಹವು ಸಡಿಲವಾಗುತ್ತದೆ. ಅಂದರೆ ಒಡೆಯುವ ಇಲ್ಲವೆ ಸೀಳುವ ಸ್ವಭಾವವನ್ನು ಹೊಂದುತ್ತದೆ. ಕತ್ತರಿಸುವ, ಕೊಯ್ಯುವ ಮುಂತಾದ ಕೆಲಸಕ್ಕಾಗಿ ಬೇಕಾಗುವ ಉಪಕರಣಗಳನ್ನು ತಯಾರಿಸಲು ಇಂತಹ ಸಡಿಲ ಲೋಹ ಪ್ರಯೋಜನಕ್ಕೆ ಬರುವುದಿಲ್ಲ. ಆದರೆ ಅದಿರನ್ನು ಸುಟ್ಟರೆ ಈ ಅಪ್ರಯೋಜನಕಾರಿ ಮೂಲವಸ್ತುಗಳನ್ನು ಅದಿರಿನಿಂದ ಬೇರ್ಪಡಿಸಬಹುದು. ಏಕೆಂದರೆ $500^0$ ಸೆ ಗಳಿಂದ $600^0$ ಸೆ ಗಳವರೆಗಿನ ಶಾಖಕ್ಕೆ ಒಳಗಾದರೆ ಈ ಮೂಲವಸ್ತುಗಳು ಆಮ್ಲಜನಕಗಳಾಗಿ ಬಾಷ್ಪೀಭವನಗೊಳ್ಳುತ್ತವೆ. ಈ ರೀತಿಯಾಗಿ ತಾಮ್ರದ ಅದಿರನ್ನು ಸಂಯುಕ್ತದಲ್ಲಿ ಏಕಪ್ರಮಾಣ ತಾಮ್ರ ದ್ವಿಯೋಗ ಶಕ್ತಿವಂತ ರೂಪವನ್ನುಳ್ಳ ಕಬ್ಬಿಣ ಸಲ್ಫೈಡುಗಳ ಮಿಶ್ರಣವನ್ನಾಗಿ ಪರಿವರ್ತಿಸ ಬಹುದು. ಇದೇ ಬಗೆಯಾಗಿ ಕಲ್ಯಾಡಿಯಲ್ಲಿ ಹಳೆಯ ಕಾರ್ಯಾಗಾರಗಳ ಅಧ್ಯಯನಗಳಿಂದ ಈ ಕುತೂಹಲಕಾರಿ ಸಂಗತಿಗಳೆ ಬೆಳಕಿಗೆ ಬಂದಿವೆ. ಹಾಗೂ ಈ ಕಾಲದ ತಾಮ್ರವನ್ನು ಕರಗಿಸುವವರ ಕಾರ್ಯಕ್ಷಮತೆಯನ್ನು ಇವು ಸೂಚಿಸುತ್ತವೆ. ಇದೇ ಪ್ರದೇಶದಲ್ಲಿ ಬೃಹತ್‌ಶಿಲಾಯುಗ ಗೋರಿಗಳ ನೆಲೆಯು ಇರುವುದು ಗಮನಾರ್ಹ.

ಕಬ್ಬಿಣ ವಸ್ತುಗಳ ಒಳ ರಚನೆ ಇಲ್ಲವೆ ಲೋಹದಿಂದ ವಸ್ತುಗಳನ್ನು ತಯಾರಿಸುವ ತಂತ್ರ ಇವುಗಳನ್ನು ಅರಿತುಕೊಳ್ಳುವ ಮೊದಲು ಕಬ್ಬಿಣವನ್ನು ಕರಗಿಸುವ ವಿಧಾನದ ಬಗ್ಗೆ ಒಂದೆರಡು ಮಾತುಗಳನ್ನು ಅರಿತುಕೊಳ್ಳುವುದು ಅವಶ್ಯ. ಇದರಲ್ಲಿ ಎರಡು ವಿಧಾನಗಳು ಔಚಿತ್ಯಪೂರ್ಣವಾಗಿ ತೋರುತ್ತವೆ. (1) ಪ್ರತ್ಯಕ್ಷ ಇಲ್ಲವೆ ಕಮ್ಮಾರ ಸಾಲೆಯ ವಿಧಾನ (2) ಅಪ್ರತ್ಯಕ್ಷ ವಿಧಾನ. ಪ್ರತ್ಯಕ್ಷ ವಿಧಾನದಲ್ಲಿ ಅದಿರಿನಿಂದ ಕಬ್ಬಿಣವನ್ನು ಇದ್ದಲಿನ $1200^0$ ಸೆ ಕಾವಿನಲ್ಲಿ ಕರಗಿಸುತ್ತಾರೆ. ಆದರೆ ಇದರ ದ್ರವೀಕರಣಕ್ಕೆ ಬೇಕಾಗುವ ಕಾವು $1500^0$ ಸೆಲ್ಷಿಯಸ್ ಇರುತ್ತದೆ. ಈ ಹಂತದಲ್ಲಿ ಸಿದ್ಧವಾಗುವ ವಸ್ತು ಪಾಚಿಯ ರಚನೆಯಂತಿರುತ್ತದೆ. ಕಬ್ಬಿಣ ಮುದ್ದೆಯ ರೂಪದಲ್ಲಿ ಇರುವುದಿಲ್ಲ ಅಥವಾ ದ್ರವರೂಪದಲ್ಲಿಯೂ ಇರುವುದಿಲ್ಲ. ಆಗ ಹೊರಡುವ ಕಬ್ಬಿಣದ ಕಿಟ್ಟ ಅಥವಾ ಗಸಿಯು ಅರ್ಧಾವ್ಯಸ್ಥೆಯಲ್ಲಿದ್ದು ಜಿಗುಟಾಗಿರುತ್ತದೆ. $1170^0$ ಸೆಲ್ಷಿಯಸ್‌ನ ಕಾವಿನಲ್ಲಿ ಈ ಗಸಿ (ಕಬ್ಬಿಣ ಸಿಲಿಕೇಟ್)ಯನ್ನು ಸುತ್ತಿಗೆಯ ಪೆಟ್ಟುಗಳನ್ನು ಕೊಟ್ಟು ಬೇರ್ಪಡಿಸಲಾಗುವುದು. ಲೋಹದಲ್ಲಿ ಗಸಿಯು ಸೂಕ್ಷ್ಮ ಪ್ರಮಾಣದಲ್ಲಿ ಕಂಡುಬರುತ್ತಿದ್ದರೆ, ಕಬ್ಬಿಣವನ್ನು ಪ್ರತ್ಯಕ್ಷ ವಿಧಾನದಿಂದ ಬೇರ್ಪಡಿಸಲಾಗಿದೆ ಎಂದು ಅರ್ಥವಾಗುತ್ತದೆ. ಈ ರೀತಿಯಾಗಿ ಪಡೆದ ಕಬ್ಬಿಣವನ್ನು ಮೆದು ಕಬ್ಬಿಣ ಎಂದೆನ್ನುತ್ತಾರೆ. ಇದು ಕೊಂಚ ಮಿದುವಾಗಿರುತ್ತದೆ. ಬಿಳುಪುಮಿಶ್ರಿತ ಬೂದಿ ಬಣ್ಣದಲ್ಲಿರುತ್ತದೆ ಮತ್ತು ಇದರಲ್ಲಿ ಅಲ್ಪ ಮೊತ್ತದಲ್ಲಿ ಇಂಗಾಲವು ಇರುತ್ತದೆ.

ಅಪ್ರತ್ಯಕ್ಷ ವಿಧಾನದಲ್ಲಿ ಕಬ್ಬಿಣವನ್ನು ಕರಗಿಸುವ ಇನ್ನೊಂದು ಪದ್ಧತಿ ಇದೆ. ಈ ಬಗೆ ಕರಗಿಸುವುದರಲ್ಲಿ ಶುದ್ಧ ಕಬ್ಬಿಣ $1140^0$ ಸೆ ಕಾವಿನಲ್ಲಿ ಕರಗುತ್ತದೆ. ಗಾಳಿಯಿಂದ ಪ್ರಜ್ವಲಿತವಾದ ಇದ್ದಿಲಿನ ಬೆಂಕಿಯಲ್ಲಿ ಇಷ್ಟು ಕಾವನ್ನು ಉಂಟುಮಾಡಬಹುದು. ಈ ರೀತಿಯಾಗಿ ಪಡೆದ ಕಬ್ಬಿಣವನ್ನು ಉಕ್ಕನ್ನಾಗಿ ಪರಿವರ್ತಿಸಬಹುದು. ಇದರಲ್ಲಿಯ ಇಂಗಾಲವನ್ನೆಲ್ಲ ಹೊರಗೆಡಹುವಂತೆ ಮಾಡಬಹುದು. ಇದರಲ್ಲಿಯ ಕಶ್ಮಲವನ್ನು ಹೊರತೆಗೆಯಬಹುದು. ಈ ಪದ್ಧತಿಯಲ್ಲಿ ಕಬ್ಬಿಣವನ್ನು ಹೊರತೆಗೆಯಬಹುದು. ಈ ಪದ್ಧತಿಯಲ್ಲಿ ಕಬ್ಬಿಣವನ್ನು ಕರಗುವ ಹಂತ ಮುಟ್ಟಿದಾಗಲೆ ಪಡೆಯಬಹುದು. ಆದರೆ ಸ್ಪಂಜ್ ಇಲ್ಲವೆ ಕಬ್ಬಿಣದ ಮುದ್ದೆಯನ್ನು ಹೀಗೆ ಪಡೆಯುವುದು ಸಾಧ್ಯವಿಲ್ಲ. ಇದರಲ್ಲಿ ಗಸಿ ಸೂಕ್ಷ್ಮ ಪ್ರಮಾಣದಲ್ಲಿ ಉಳಿದುಕೊಳ್ಳುತ್ತದೆ. ಸ್ಪಂಜ್ ಮುದ್ದೆ ಅಥವಾ ಮೆದು ಕಬ್ಬಿಣದಿಂದ ಬೇಕಾದ ವಸ್ತುಗಳನ್ನು ಸಿದ್ಧಪಡಿಸಲಾಗುವುದಿಲ್ಲ. ಏಕೆಂದರೆ ಇದರಲ್ಲಿ ಕಾಠಿಣ್ಯ ಇರುವುದಿಲ್ಲ. ಆದ್ದರಿಂದ ಇದರಲ್ಲಿ ಕಾಠಿಣ್ಯವನ್ನು ತರಬೇಕಾದರೆ ಇದರ ಕನಿಷ್ಠ ಅಂಶವನ್ನಾದರೂ ಉಕ್ಕಿನಲ್ಲಿ ಪರಿವರ್ತಿಸ ಬೇಕಾಗುವುದು. ನಿಯಂತ್ರಿತವಾದ ಶೈತ್ಯೀಕರಣ ಮತ್ತು ಶಾಖವನ್ನು ಒದಗಿಸುವ ಕ್ರಿಯೆಗಳಿಂದ ಇಂಗಾಲದ ಅಣುಗಳನ್ನು ಕಬ್ಬಿಣದೊಂದಿಗೆ ಬೆರೆಸುವುದರಿಂದ ಉಕ್ಕು ಆಗುವುದು. ಇದರಿಂದಾಗಿ ಉಕ್ಕಿನ ಭೌತಿಕ ಗುಣಗಳು ಬದಲುಗೊಳ್ಳುತ್ತವೆ. ಮತ್ತು ಇದೊಂದು ಬಿರುಸಾದ ಬಲಯುತವಾದ ಕಠಿಣ ಲೋಹವಾಗುತ್ತದೆ. ಉಕ್ಕಿಗೆ ತೀಕ್ಷ್ಣವಾದ ಧಾರೆಯನ್ನು ಒದಗಿಸುವುದು ಸಾಧ್ಯ. ಆದರೆ ಉಕ್ಕಿನ ಕೆಲಸ ಮಾಡುವುದು ಅಷ್ಟು ಸುಲಭವಲ್ಲ. ಮತ್ತು ಉಕ್ಕು ಬೇಗನೆ ಜಂಗುಗಟ್ಟುವ ಗುಣವನ್ನೂ ಹೊಂದಿರುತ್ತದೆ. ಕಬ್ಬಿಣ ವಿಷಯ ಬೇರೆ, ಕಬ್ಬಿಣಕ್ಕೆ ತೀಕ್ಷ್ಣತೆಯನ್ನು ಒದಗಿಸುವುದು ಕಠಿಣ. ಆದರೆ ಇದಕ್ಕೆ ಕಪ್ಪು ಮಿಶ್ರಿತ ಕಂದುಬಣ್ಣದ ಒಂದು ಕವಚ ಇರುವುದರಿಂದ ಅದು ಬೇಗನೆ ಜಂಗುಗಟ್ಟುವುದಿಲ್ಲ.

ಉಕ್ಕನ್ನು ಉತ್ಪಾದಿಸಲು ಪ್ರಾಚೀನ ಕಾಲದಲ್ಲಿ ಮೂರು ವಿಧಾನಗಳನ್ನು ಅನುಸರಿಸುತ್ತಿದ್ದರು. ಮೊದಲನೆಯ ವಿಧಾನದಂತೆ ಉಕ್ಕನ್ನು ನೇರವಾಗಿ ಕುಲುಮೆಯಲ್ಲಿಯೇ ಉತ್ಪಾದಿಸಲಾಗುತ್ತಿತ್ತು. ಮ್ಯಾಂಗನೀಸ್‌ನ ಅಂಶವನ್ನುಳ್ಳ ಅದಿರನ್ನು ಕುಲುಮೆಯ ಬಾಯಿಗೆ ಕೊಟ್ಟರೆ – ಈ ಬಗೆಯಾಗಿ ಉಕ್ಕನ್ನು ಪಡೆಯುವುದು ಸಾಧ್ಯ. ಈ ಬಗೆಯಾಗಿ ಸಿದ್ಧಗೊಂಡ ಲೋಹ ಉಕ್ಕು ಆಗುತ್ತದೆ. ಆದರೆ ಈ ಅದಿರುಗಳಲ್ಲಿ ಗಂಧಕ, ಸಲ್ಫರ್ ಮತ್ತು ಆರ್ಸೆನಿಕ್‌ಗಳು ಇರಬಾರದು. ಅಂದರೆ ಸುಲಭ ಸಾಧ್ಯವಾದ ಉಕ್ಕನ್ನು ತಯಾರಿಸಬಹುದು. ಆದರೆ ಈ ರೀತಿಯ ಉಕ್ಕನ್ನು ಪಡೆದ ಸಂಗತಿ ಒಂದು ಆಕಸ್ಮಿಕವಾಗಿತ್ತೆ ಹೊರತು ಉದ್ದೇಶಪೂರ್ವಕವಾದ ವಿಧಾನದಿಂದಲೂ ಉತ್ಪಾದನೆಯಾಗಿರಲಿಲ್ಲ.

ಎರಡನೆಯದು ಬೆಸುಗೆಯ ಅಥವಾ ಮೂಸೆಯ ವಿಧಾನ. ಈ ರೀತಿಯಾಗಿ ಪಡೆದ ಲೋಹಕ್ಕೆ ವೂಟ್ಸ್ ಎಂದು ಹೆಸರು. ವೂಟ್ಸ್ ಶಬ್ದವು ಕನ್ನಡ–ತೆಲುಗುಗಳ ವುಕ್ಕೆ ಅಥವಾ ಉಕ್ಕು ಶಬ್ದದ ಅಪಭ್ರಂಶವಾಗಿದೆ ಎಂಬ ಮಾತು ಕುತೂಹಲಕಾರಿ. ಕಾಂತಾಕರ್ಷಣದ ಕಪ್ಪುಬಣ್ಣದ ಅದಿರು, ಬಿದಿರು ಕಟ್ಟಿಗೆಯಿಂದಾದ ಇದ್ದಿಲು ಹಾಗೂ ಇಂಗಾಲಾತ್ಮಕವಾದ ಕೆಲವೊಂದು ಜಾತಿಯ ಸಸ್ಯಗಳು ಇವನ್ನೆಲ್ಲ ಒಂದು ಮೂಸೆಯಲ್ಲಿ ಮುಚ್ಚಿಹಾಕಿ ಇದಕ್ಕೆ ಅತಿ ಉಷ್ಣತೆಯನ್ನು ಕೊಟ್ಟು ಈ ಬಗೆಯ ಉಕ್ಕನ್ನು ಉತ್ಪಾದಿಸಲಾಗುತ್ತಿತ್ತು. ಪ್ರಾಚೀನ ಭಾರತೀಯರು ಕಂಡುಹಿಡಿದ ಅತ್ಯಂತ ಮಹತ್ತ್ವದ ಸಂಗತಿಗಳಲ್ಲಿ ಈ ವಿಧಾನವೂ ಒಂದು.

ವೂಟ್ಸ್‌ದಲ್ಲಿ ಒಂದು ವಿಶಿಷ್ಟವಾದ ಯಾಂತ್ರಿಕ ಗುಣವಿದೆ. ಅತ್ಯಂತ ಬಿರುಸುತನವು ಇದರಲ್ಲಿ ಮೃದುತ್ವದೊಂದಿಗೆ ಕೂಡಿಕೊಂಡಿರುತ್ತದೆ. ಇದಕ್ಕೆ ಬೇಕಾದ ರೂಪವನ್ನು ಕೊಡುವುದೂ ಸಾಧ್ಯ. ಇದರಲ್ಲಿ ಶೇ. 1.3–1.7ರವರೆಗೆ ಇಂಗಾಲಾಂಶ ಇರುತ್ತದೆ. ಉಕ್ಕಿನಲ್ಲಿ ಇವೆಲ್ಲ ಕಂಡುಬರುವುದಿಲ್ಲ. ಶಾಖವನ್ನು ಒದಗಿಸುವ ಕ್ರಿಯೆಯ ಹೊಸ ವಿಧಾನದಿಂದ ಉಕ್ಕಿಗೆ ಈ ವಿಶೇಷ ಗುಣವನ್ನು ಸೇರಿಸುವುದು ಸಾಧ್ಯ. ತಮಗೆ ಬೇಕಾದ ಉಕ್ಕನ್ನೆಲ್ಲ ರೋಮನ್ನರು ಭಾರತದಿಂದ ಆಯಾತ ಮಾಡಿಕೊಳ್ಳುತ್ತಿದ್ದರು ಎಂಬ ಸಂಗತಿ ಗಮನಾರ್ಹ. ಭಾರತದಿಂದ ತರಿಸಿದ್ದ ವೂಟ್ಸ್ ಉಕ್ಕಿನಿಂದಲೆ ದಮಾಸ್ಕಸ ಪ್ರಪಂಚ ವಿಖ್ಯಾತ ಖಡ್ಗಗಳು ತಯಾರಾಗುತ್ತಿದ್ದವು.

ವೂಟ್ಸ್ ಉಕ್ಕನ್ನು ಉತ್ಪಾದನೆ ಮಾಡುವ ವಿಧಾನದಲ್ಲಿ ಮೂಸೆ ಮುಖ್ಯವಾದುದು. ಮಣ್ಣಿನ ಮೂಸೆಯಲ್ಲಿ ಕಬ್ಬಿಣದ ಒಂದು ಬೆಣೆಯನ್ನು ಇರಿಸುತ್ತಾರೆ. ಭಾರತದ ಸಸ್ಯದ ಎಲೆಗಳನ್ನು ಮತ್ತು ಅಗಲವಾದ ಮೆತ್ತಗಿನ ಎಲೆಯನ್ನು ಇದರಲ್ಲಿ ಇಡಲಾಗುತ್ತದೆ. ಅನಂತರ ಮೂಸೆಯ ಬಾಯನ್ನು ಮಣ್ಣಿನಿಂದ ಮುಚ್ಚಲಾಗುತ್ತದೆ. ಇಂತಹ ಅನೇಕ ಮೂಸೆಗಳನ್ನು ಕುಲುಮೆಯೊಂದರಲ್ಲಿ ಕಮಾನಿನಾಕಾರದಲ್ಲಿ ಜೋಡಿಸಿ ಇಡಲಾಗುತ್ತದೆ. ಕುಲುಮೆಯಲ್ಲಿಯ ಅಗ್ನಿಸ್ಥಾನದಲ್ಲಿಯೂ ಮತ್ತು ಮೂಸೆಗಳ ಸುತ್ತಲೂ ಕಾಡುಮರಗಳ ಇದ್ದಿಲನ್ನು ತುಂಬುತ್ತಾರೆ. ಆದರೆ ಫಿಕಸ್ ಬೆಂಗಾಲೆನೆಸಿಸ್ ಎಂಬ ಜಾತಿಯ ಮರದ ಇದ್ದಿಲನ್ನು ಮಾತ್ರ ಬಳಸುವುದಿಲ್ಲ. ಈ ರೀತಿಯಾಗಿ ಉತ್ಪಾದಿತವಾದ ಉಕ್ಕಿನ ಮೇಲೆ ಗುರುತುಗಳು ಇರುತ್ತವೆ ಮತ್ತು ಆ ಉಕ್ಕನ್ನು ಮೂಸೆಯ ಕೆಳಬದಿಯಿಂದ ಸಂಗ್ರಹಿಸಲಾಗುತ್ತದೆ.

ಕರ್ನಾಟಕದಲ್ಲಿ ದೊರೆತ ಉಕ್ಕಿನ ಗಟ್ಟಿಗಳ ಮೇಲಸ್ತರಗಳು ಇಂಗಾಲೀಕರಣ ಗೊಂಡಿರುತ್ತವೆ. ಗಟ್ಟಿಯ ಅಂಚಿನಲ್ಲಿ ಇಂಗಾಲದ ಪ್ರಮಾಣ ಹೆಚ್ಚು ಇರುತ್ತದೆ. ಗಟ್ಟಿಭಾಗದಿಂದ ಕೇಂದ್ರದತ್ತ ಬಂದಂತೆ ಅದರ ಪ್ರಮಾಣ ಕಡಿಮೆಯಾಗುತ್ತದೆ.

ಆದರೆ ಪ್ರಾಚೀನ ಕಾಲದಲ್ಲಿ ಉಕ್ಕು ತಯಾರಿಕೆಗೆ ಮತ್ತೊಂದು ವಿಧಾನವನ್ನೇ ಹೆಚ್ಚು ವ್ಯಾಪಕವಾಗಿ ಅನುಸರಿಸುತ್ತಿದ್ದರು. ಈ ವಿಧಾನಕ್ಕೆ ಸಿಮೆಂಟೇಷನ್ ಅಥವಾ ಬಂಧನಕ್ರಿಯಾ ವಿಧಾನವೆಂದೂ ಇಲ್ಲವೆ ಮೆದು ಕಬ್ಬಿಣದ ಇಂಗಾಲೀಕರಣ ವಿಧಾನವೆಂದೂ ಹೆಸರು. ಪ್ರಾಚೀನ ಕಾಲದ ಮೆದು ಕಬ್ಬಿಣ ಶುದ್ಧ ಇರುವುದೇ ಇಲ್ಲ. ಎಷ್ಟೋ ಸಂದರ್ಭದಲ್ಲಿ ಅದರಲ್ಲಿ ಗಸಿಯ ಅಥವಾ ಕಿಟ್ಟದ ಅಲ್ಪಾಂಶ ಇರುತ್ತದೆ. ಇಂಗಾಲದ ಅಂಶಗಳೂ ಇರುತ್ತವೆ. ಈ ಅಂಶಗಳು ಒಂದೇ ವಸ್ತುವಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಇರುತ್ತಿದ್ದವು. ಅಂದರೆ ಶುದ್ಧಗೊಳಿಸದ ಮೆದು ಕಬ್ಬಿಣದ ಮುದ್ದೆಯ ಅಂಕಿತ ಸಾಮಾನ್ಯವಾಗಿ ಉಕ್ಕು ಎನಿಸುವಂತಹ ವಸ್ತುವಾಗಿರುತ್ತಿತ್ತು.

ಭಾರತದಲ್ಲಿ ಉಕ್ಕು ಉತ್ಪಾದನೆಯ ಇತಿಹಾಸವನ್ನು ಪ್ರ.ಶ.ಪೂ.ಸು.10ನೆಯ ಶತಮಾನಕ್ಕೂ ಹಿಂದೆ ಒಯ್ಯಬಹುದು. ಆಗ ಅದು ಬಂಧನಕ್ರಿಯಾ ವಿಧಾನದಿಂದಲೇ ಉತ್ಪನ್ನವಾಗುತ್ತಿತ್ತು. ಮಧ್ಯಭಾರತದ ಉರಿಕಾಗಾಂವ ಎಂಬಲ್ಲಿ ವೂಟ್ಸ್ – ಉಕ್ಕಿನ ಆಯುಧಗಳು ದೊರೆಯುತ್ತವೆ. ಆದರೆ ವೂಟ್ಸ್ ಮೂಸೆವಿಧಾನದಿಂದ ಋಗ್ವೇದದ ಕಾಲದಲ್ಲಿಯ ಭಾರತದಲ್ಲಿ ಉಕ್ಕನ್ನು ಉತ್ಪಾದಿಸುತ್ತಿದ್ದರೆಂದು ಬ್ಯಾನರ್ಜಿಯವರು ವಾದಿಸಿದ್ದಾರೆ.

**ತಯಾರಿಕೆ ತಂತ್ರ:** ಮಧ್ಯಪ್ರದೇಶದ ನವ್ದತೋಲಿ, ಮಹಾರಾಷ್ಟ್ರದ ಚಂದೋಲಿ, ಗುಜರಾತ್‌ನ ಸೋಮನಾಥದ ಪ್ರಾಚೀನ ನೆಲೆಗಳಲ್ಲಿ ತಾಮ್ರದ ವಿವಿಧ ಆಕಾರದ ಕೊಡಲಿಗಳು ದೊರೆತಿವೆ. ಇವುಗಳ ಅಧ್ಯಯನದಿಂದಲೇ ಲೋಹ ತಯಾರಕರು ಅಚ್ಚು ಹಾಕುವುದರಲ್ಲಿಯೂ

ಶಾಖೋತ್ಪನ್ನದ ಹಾಗೂ ಶೈತ್ಯೀಕರಣ ವಿಧಾನಗಳಲ್ಲಿ ಹಾಗೂ ಹದಗೊಳಿಸುವಂತಹ ಇನ್ನಿತರ ಕ್ರಿಯೆಗಳಲ್ಲಿಯೂ ಪರಿಣತರಾಗಿದ್ದರು. ಮೆದು ಕಬ್ಬಿಣವನ್ನು ತಯಾರಿಸಿದ ಅನಂತರ ಅದನ್ನು ತೆಳುವಾದ ಪಟ್ಟಿಗಳನ್ನಾಗಿ ಪರಿವರ್ತಿಸಿ, ಅನಂತರ ಈ ಪಟ್ಟಿಗಳನ್ನು ಒಂದಕ್ಕೊಂದು ಬೆಸೆದು ಸಿದ್ಧಮಾಡಬೇಕಾಗಿದ್ದ ವಸ್ತುವಿಗನುಗುಣವಾಗಿ ಬೆಸೆಯುವ ಮೊದಲು ಅಥವಾ ಅನಂತರ ಅವುಗಳು ಇಂಗಾಲೀಕರಣಗೊಳ್ಳುತ್ತಿದ್ದವು. ಸು. $1000^0$ ಸೆ ನಲ್ಲಿ ಮೆದು ಕಬ್ಬಿಣವು ಬೆಸೆದುಕೊಳ್ಳುತ್ತದೆ. ಬೆಸುಗೆ ಎಂದೇ ಪರಿಚಿತವಾದ ಈ ನೇರ ವಿಧಾನದ ಕಬ್ಬಿಣ ಉತ್ಪಾದನೆಯ ಪದ್ಧತಿಗೂ ಕಬ್ಬಿಣದ ವಸ್ತುಗಳನ್ನು ಮಾಡುವುದಕ್ಕೂ ಪರಸ್ಪರ ಸಂಬಂಧಗಳಿವೆ. ಮೆದು ಕಬ್ಬಿಣದಲ್ಲಿ ಸೇರಿಕೊಂಡ ಗಸಿ ಭಾಗಗಳು ವಿಧಾನದಲ್ಲಿ ಸ್ರಾವಕ ವಸ್ತುಗಳಂತೆ ಕಾರ್ಯ ಮಾಡುತ್ತವೆ. ಕಬ್ಬಿಣದ ವಿವಿಧ ವಸ್ತುಗಳನ್ನು, ಉಪಕರಣಗಳನ್ನು ತಯಾರಿಸುವಾಗ ಅಗಾರಿಯಾ ಜನರು ಈ ಪದ್ಧತಿಯನ್ನು ಅನುಸರಿಸುತ್ತಿದ್ದರು. ಶಾಖಕ್ರಿಯೆಗೆ ಒಳಪಟ್ಟಾಗ ಉಕ್ಕು ಬದಲಿಸುವ ಬಣ್ಣಗಳನ್ನು ನೋಡಿ ಅದರ ಗುಣಧರ್ಮಗಳು ಮತ್ತು ಯಾವ ಬದಲಾವಣೆಗಳು ನಡೆದಿವೆ ಎಂಬುದನ್ನು ಒಬ್ಬ ಸಾಮಾನ್ಯ ಕಮ್ಮಾರನೂ ಹೇಳಬಲ್ಲನೆಂಬ ಸಂಗತಿಯು ವಿಸ್ಮಯಕಾರಕ. ಇದಕ್ಕೆ ಟಿಂಟ್ ಪದ್ಧತಿ ಇಲ್ಲವೆ ಛಾಯಾ ಪದ್ಧತಿ ಎಂದು ಹೆಸರು. ಇದು ಹಿಂದಿನ ಕಾಲದ ಕಮ್ಮಾರರಿಗೆ ಬಹಳ ಉಪಯುಕ್ತವಾಗಿತ್ತು. ಬಣ್ಣದಲ್ಲಿಯ ಬದಲಾವಣೆ ಆ ಲೋಹ ವಸ್ತುವಿನ ಕಾಠಿಣ್ಯ ಮತ್ತು ಹದವನ್ನು ಸೂಚಿಸಬಲ್ಲದು. ಬೈರಿಗೆ (ಸ್ಕ್ರೂಡ್ರೈವರ್)ಗಳನ್ನು ಒಣಹುಲ್ಲಿನ ಬಣ್ಣಕ್ಕೂ ಹದಗೊಳಿಸುತ್ತಾರೆ. ಚೌಶ ಅಂದರೆ ಉಳಿ ಮತ್ತು ಬೈರಿಗೆ ಯಂತ್ರ ಅಂದರೆ ಡ್ರಿಲ್‌ಗಳನ್ನು ಕಡುಕೆಂಪು ಬಣ್ಣಕ್ಕೂ ಹದಗೊಳಿಸಲಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಹಳಿಂಗಳಿ, ಹಳ್ಳೂರು, ತಡಕನಹಳ್ಳಿ ನೆಲೆಗಳಲ್ಲಿಯ ಬೃಹತ್‌ಶಿಲಾ ಸಂಸ್ಕೃತಿಯ ವಸ್ತುಗಳನ್ನು ನೋಡಬಹುದು.

ಹಳಿಂಗಳಿಯ ಉತ್ಖನನ ಮಾಡಿದ ಬೃಹತ್‌ಶಿಲಾಯುಗದ ಮೂರನೆಯ ಶಿಲುಬೆಯಾಕಾರದ ಕಲ್ಗೋರಿಯಲ್ಲಿ ಕಬ್ಬಿಣದ ಸಣ್ಣ ಸಣ್ಣ ಉಪಕರಣಗಳಿದ್ದವು. ಇವುಗಳಲ್ಲಿ ದೀಪದ ಹಣತೆಗಳು, ಪಟ್ಟಿಗಳು, ಕೊಂಡಿಗಳು, ಕೊಕ್ಕೆಗಳು, ಅರ್ಧವರ್ತುಲದ ಅಲಗುಗಳು, ಹಿಡಿಕೆಗಳು, ಸರಳುಗಳು, ನಿರ್ದಿಷ್ಟ ಆಕಾರವಿಲ್ಲದ ವಸ್ತುಗಳಿವೆ. ಚೌಕಾಕಾರದ ಒಂದು ತಾಮ್ರದ ತಗಡು ಕೂಡಾ ಇದ್ದಿತು. ಇದ್ದಿಲಿನ ತುಣುಕುಗಳ ಇಂಗಾಲ 14 ಕಾಲಮಾಪನ ಪ್ರ.ಶ.ಪೂ.80ನ್ನು ಸೂಚಿಸುತ್ತದೆ. ತುಕ್ಕು ಹಿಡಿದ ಈ ಕಬ್ಬಿಣ ಉಪಕರಣಗಳಲ್ಲಿ ಎರಡು ಕಬ್ಬಿಣ ಸರಳುಗಳನ್ನು ಲೋಹರಚನಾಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿದಾಗ ಕೆಳಕಂಡ ಕುತೂಹಲಕಾರಿ ಸಂಗತಿಗಳು ಬೆಳಕಿಗೆ ಬಂದಿವೆ.

ಎರಡು ಸರಳು (ನಂ.1 ಮತ್ತು 2)ಗಳಿಗೆ ಕ್ಯಾಲ್ಸಿಯಮ್ ಕಾರ್ಬೋನೇಟ್ ಮತ್ತು ಫೆರಿಕ್ ಆಕ್ಸೈಡ್‌ಗಳಿಂದ ಮಾಡಿದ ಬಿಳಿ ಮಿಶ್ರಿತ ಕಂದುಬಣ್ಣವನ್ನು ಹಚ್ಚಲಾಯಿತು. ಅವುಗಳ ಉದ್ದಗಲಗಳನ್ನೆಲ್ಲ ತಿಕ್ಕಿ ನುಣುಪುಗೊಳಿಸಲಾಯಿತು. ಎರಡೂ ಸರಳುಗಳ ಅಂತರ ಭಾಗಗಳ ಲೋಹವು ಕೂಡ ಇನ್ನೂ ಹೊಳೆಯುತ್ತಿರುವ ಸ್ಥಿತಿಯಲ್ಲಿಯೆ ಕಂಡುಬಂತು. ಒಂದನೆಯ ಸರಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಶೇಕಡವಾರು 0.13ರಷ್ಟು ಗಂಧಕ, 0.15ರಷ್ಟು ಫಾಸ್ಫರಸ್, 0.9ರಷ್ಟು ಸಿಲಿಕಾನ್ ಹಾಗೂ 0.14ರಷ್ಟು ಟಿಟ್ಯಾನಿಯಮ್ ಅದರಲ್ಲಿದ್ದುದು ಕಂಡುಬಂತು. ಕಬ್ಬಿಣವೆ ಶೇ.98.8ರಷ್ಟು, ಕಾರ್ಬನ್ ಶೇ.0.18ರಷ್ಟಿತ್ತು. ಎರಡನೆಯ ಸರಕಿನಲ್ಲಿ ಶೇಕಡವಾರು 0.11ರಷ್ಟು ಸಲ್ಫರ್, 0.12ರಷ್ಟು ಫಾಸ್ಫರಸ್, 0.9ರಷ್ಟು ಸಿಲಿಕಾನ್, 0.8ರಷ್ಟು ಮೆಗ್ನೀಶಿಯಮ್, 0.1ರಷ್ಟು ಕ್ಯಾಲ್ಸಿಯಮ್ ಮತ್ತು 0.13ರಷ್ಟು ಟಿಟ್ಯಾನಿಯಮ್‌ಗಳನ್ನು ಹೊಂದಿದೆ. ಕಬ್ಬಿಣದ ಶುದ್ಧತೆಯ ಶೇ.0.13ರಷ್ಟಿದೆ. ಎರಡೂ ಸರಳುಗಳ ಕೆಲ ಭಾಗಗಳ ಸೂಕ್ಷ್ಮರಚನೆಗಳು ಬಹಳ ಸಾಮ್ಯವನ್ನು ಹೊಂದಿವೆ. ಎಲ್ಲ ಭಾಗಗಳಲ್ಲಿ ಗಸಿಯ ಪ್ರಮಾಣ ಅಲ್ಪಸ್ವಲ್ಪವಾಗಿ ಇದ್ದದ್ದು ಕಂಡುಬಂದಿತು. ಕೆಲವು ಆಕ್ಸೈಡ್ ಗುಣಗಳೂ ಕಂಡುಬಂದಿವೆ. ಶೇ.98ರಷ್ಟಿನ ಇಥಿಲ್ ಇಲ್ಲವೆ ಮೀಥೈಲ್ ಆಲ್ಕೊಹಾಲಿನಲ್ಲಿ ಶೇ.2ರಷ್ಟಿದ್ದ ನಿತಾಲದಿಂದ ಕೆತ್ತಿದಾಗ ಬಿರುಸಾದ ಭಾಗವೂ ಸರಕುಗಳಲ್ಲಿ ಕಂಡುಬಂದಿದೆ. ವಸ್ತುವಿನ ವಿವಿಧ ಹಂತಗಳನ್ನು ಆಯ್ಕೆ ಮಾಡಬೇಕಾದರೆ ಈ ಬಗೆಯ ಕೆತ್ತುವಿಕೆ ಅವಶ್ಯವಾಯಿತು. ಹಾಗೆ ಮಾಡುವುದರಿಂದ ಈ ವಸ್ತು ಅಥವಾ ಲೋಹ ಯಾವ ಬಗೆಯ ಉಷ್ಣಕ್ರಿಯೆಗೆ ಒಳಗಾಗಿದೆ ಎಂಬುದನ್ನು ತಿಳಿಯಬಹುದು. ಬಿರುಸಾದ ಕಪ್ಪು ಪುಡಿಯ ಬಣ್ಣವನ್ನು ಆಳವಾಗಿ ಹೊಂದಿತ್ತು. ಈ ಎರಡು ವಸ್ತುಗಳನ್ನು ಮೆದು ಕಬ್ಬಿಣದಿಂದಲೇ ಮಾಡಲಾಗಿತ್ತು. ಒಂದನೆಯದು ಸರಳಿನ ತುದಿಯು ಇಂಗಾಲೀಕರಣದ ಕವಚವನ್ನು ಹೊಂದಿತ್ತು. ಇದಕ್ಕೂ ಮೊದಲು ಇದಕ್ಕೆ ಕುಲುಮೆಯಲ್ಲಿ ಕಾಯಿಸಿ ಬೇಕಾದ ಆಕಾರವನ್ನು ತರಲಾಯಿತು. ಇದರ ತುದಿಯ ಒಂದು ಭಾಗದ ಅಂಚಿನಲ್ಲಿ ಇಂಗಾಲದ ಅಂಶ ಹೆಚ್ಚು. ಇದಕ್ಕೆ ಮಾರ್ಟೆನ್ಸೈಟ್ ಮತ್ತು ಬೈನೈಟದ ಮಿಶ್ರಣದಿಂದೊಡಗೂಡಿದ ಲೋಹರಚನೆಯಿದ್ದರೆ ಹೀಗಾಗುತ್ತದೆ. ಇವೆರಡಕ್ಕೂ ಕಾರಣವೆಂದರೆ ಈ ವಸ್ತುವನ್ನು ಇದರ ಕಾಯ್ದ ಸ್ಥಿತಿಯಿಂದ ತಣ್ಣಗಾಗಿಸುವ ವೇಗವೂ ಹೆಚ್ಚಿರುತ್ತದೆ. ಈ ವಸ್ತುವಿನ ಫೆರೈಟ್ ಭಾಗ ಸಾಧಾರಣವಾಗಿ ಒತ್ತೊತ್ತಾಗಿರುತ್ತದೆ. ಅಂದರೆ ಮೆದು ಕಬ್ಬಿಣದ ಚಿಕ್ಕದಾದ ಒಂದು ಮುದ್ದೆಗೆ ಒರಟು ಆಕಾರವನ್ನು ಕೊಟ್ಟು ಆ ಮೇಲೆ ಅದನ್ನು ಇಂಗಾಲೀಕರಣಗೊಳಿಸಿದಂತೆ ತೋರುತ್ತದೆ. ಈ ಕಬ್ಬಿಣವೂ ಇಂಗಾಲೀಕರಣಗೊಂಡ ಭಾಗದತ್ತ ಹೆಚ್ಚು ಹೆಚ್ಚು ಬಿರುಸಾಗುತ್ತ ಬರುತ್ತದೆ.

ಎರಡನೆಯ ಸರಳಿನ ಒಂದು ತುದಿಗೆ ಪದರುಳ್ಳ ರಚನೆಯಿತ್ತು. ಇಂಗಾಲೀಕರಣಗೊಂಡ ಪಟ್ಟಿಗಳನ್ನು ಜೋಡಿಸಿ ಈ ಭಾಗವನ್ನು ಮಾಡಿರಬಹುದು. ಫೆರೈಟ್ ಅಚ್ಚಿನಲ್ಲಿ ಸಿಮೆಂಟೈಟ್ ಅನ್ನು (ಫೆರಿಕ್ ಕಾರ್ಬೈಡ್–ಎಫ್ ಇ 3 ಸಿ) ಗೋಲಾಕಾರಕ್ಕೆ ಇಳಿಸಿದಂತೆ ತೋರುತ್ತದೆ. ಈ ಸರಳನ್ನು ಅಡ್ಡ ಕತ್ತರಿಸಿ ನೋಡಿದಾಗ ಅಲ್ಲಿ ಒಂದು ಭಾಗದಲ್ಲಿ ಒರಟು ಕಣಗಳು ಕಾಣುತ್ತಿತ್ತು. ಈ ವಸ್ತು ಸು.$1000^0$ ಸೆ ನಲ್ಲಿ ಕಾಯಿಸಿದಾಗ ಇದನ್ನು ತಂಪುಗೊಳಿಸಿದಂತೆ ತೋರುತ್ತದೆ. ಮೇಲೆ ಅದನ್ನು ಶೀಘ್ರವಾಗಿ ಕಡಿಮೆ ಆಗುತ್ತಿದ್ದ ಶಾಖದಲ್ಲಿ ರೂಪಗೊಳಿಸಿರಬಹುದು. ಇದರಲ್ಲಿಯ ನ್ಯೂಮನ್ ಸಮೂಹಗಳು ಮತ್ತು ಅಸಮಾನ ಕಣಗಳು ಇದನ್ನು ಸೂಚಿಸುತ್ತಿದ್ದುವು. ಉಕ್ಕಿನಲ್ಲಿ ಸಲ್ಫರ್ ಮತ್ತು ಫಾಸ್ಫರಸ್‌ಗಳು ಅಲ್ಪ ಪ್ರಮಾಣದಲ್ಲಿ ಇವೆಯಾದ್ದರಿಂದ ಈ ಉಕ್ಕನ್ನು ತಯಾರಿಸಲು ಬಳಸಿದ ಅದಿರು ಬಹಳ ಉತ್ತಮ ಗುಣಮಟ್ಟದ್ದಾಗಿರಬೇಕು. ಆದರೆ ಈ ವಸ್ತುವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಈ ಮೊದಲೇ ಹೇಳಿದಂತೆ ಸಲ್ಫರ್ ಮತ್ತು ಫಾಸ್ಫರಸ್‌ಗಳು ಕೊಂಚ ಹೆಚ್ಚಿನ ಮಟ್ಟದಲ್ಲಿಯೇ ಇದ್ದದ್ದು ಕಾಣುತ್ತಿತ್ತು. ಆದ್ದರಿಂದ ಈ ವಸ್ತುವನ್ನು ಕೆಳ ಗುಣಮಟ್ಟದ ಅದಿರಿನಿಂದ ತಯಾರಿಸಬಹುದೆಂದು ಹೇಳಬಹುದು. ಈ ಎರಡೂ ವಸ್ತುಗಳಲ್ಲಿ ಕಶ್ಮಲಗಳ ರಚನೆ ಇನ್ನೂ ಕುತೂಹಲಕಾರಿಯಾಗಿದೆ. ಈ ಎರಡೂ ವಸ್ತುಗಳನ್ನು ಒಂದೇ ಮೆದು ಕಬ್ಬಿಣದಿಂದ ಮಾಡಿದ್ದನ್ನು ಅದು ಸೂಚಿಸುತ್ತದೆ. ಆ ಮೆದು ಕಬ್ಬಿಣವಾದರೂ ಟಿಟೈನಿಫೆರಸ್ ಅದಿರಿನಿಂದ ಉತ್ಪಾದಿಸಬಹುದಾಗಿದೆ. ಈ ವಸ್ತುವನ್ನು ಲೋಹರಚನಾ ಶಾಸ್ತ್ರೀಯವಾಗಿ ಪರೀಕ್ಷಿಸಿದಾಗ ವಿಶೇಷತಃ ಇಂಗಾಲೀಕರಣಗೊಂಡ ಅದರ ತುದಿಭಾಗವನ್ನು ಇಂಥ ಪರೀಕ್ಷೆಗೆ ಒಳಪಡಿಸಿದಾಗ ಇದು ಒಂದು ಚಿಕ್ಕ ಮೊನೆ ಇಲ್ಲವೆ ಬಾಣದ ತುದಿಯಾಗಿರಬಹುದೆಂದು ತೋರುತ್ತದೆ. ಬೃಹತ್‌ಶಿಲಾಯುಗದ ಒಂದೇ ಸ್ಮಾರಕದಲ್ಲಿ 13ರಷ್ಟು ಸಂಖ್ಯೆಯಲ್ಲಿ ಸರಳುಗಳು ಒಂದೇ ಎಡೆಯಲ್ಲಿ ಇದ್ದುದ್ದನ್ನು ನೋಡಿದರೆ ಈ ಸರಳುಗಳು ಅಪೂರ್ಣಾವಸ್ಥೆಯಲ್ಲಿ ಇದ್ದ ಉತ್ಪಾದನೆಗಳಾಗಿರಬಹುದು ಎಂದೆನಿಸುತ್ತದೆ.

ಬಾಣದ ಮೊನೆಯನ್ನು ಶಾಸ್ತ್ರೀಯವಾಗಿ ಪರೀಕ್ಷಿಸಲಾಯಿತು. ಅದೊಂದು ಅತಿಯಾಗಿ ಜಂಗುಗಟ್ಟಿದ ವಸ್ತು. ಅದರಲ್ಲಿ ಲೋಹಗರ್ಭವನ್ನೆ ಕಾಣುವುದು ಸಾಧ್ಯವಿಲ್ಲ. ಆದ್ದರಿಂದ ಕಾರ್ಬೈಡ್ ಕಣಗಳ ಅವಶೇಷಗಳ ಆಧಾರದಿಂದ ಅದರ ತಯಾರಿಕೆಯ ತಂತ್ರವನ್ನು ತಿಳಿಯಲು ಯತ್ನಿಸಲಾಯಿತು.

ಉಕ್ಕಿನಲ್ಲಿ ಪರ್ಲೈಟ್ ಎಂಬ ಒಂದು ಸಾಮಾನ್ಯ ಘಟಕವಿರುತ್ತದೆ. ಕಬ್ಬಿಣದಲ್ಲಿ ಮಾತ್ರ ಪರ್ಲೈಟ್‌ನಿಂದ ವ್ಯಾಪ್ತವಾಗುವ ಕ್ಷೇತ್ರದ ಪ್ರಮಾಣವೂ ಶೂನ್ಯದಷ್ಟು ಕೂಡ ಇರಬಲ್ಲದು. ಆದರೆ ಇಂಗಾಲವು ಶೇ.0.8ರಷ್ಟಿದ್ದರೆ, ಆ ವಸ್ತುವಿನ ಭಾಗವು ಪರ್ಲೈಟ್ ಕ್ಷೇತ್ರವನ್ನು ಮಾತ್ರ ತೋರಿಸುತ್ತದೆ. ಈ ಪರ್ಲೈಟ್ ತನ್ನ ಸೂಕ್ಷ್ಮರಚನೆಯ ಪ್ರತಿರೂಪಗಳನ್ನು ಕಬ್ಬಿಣದ ಆಕ್ಸೈಡ್‌ನಲ್ಲಿ ಬಿಡಬಹುದು. ಇದೊಂದು ಬಹಳ ಜಂಗುಗಟ್ಟಿದ ವಸ್ತುವಾಗಿರುತ್ತದೆ. ಇಂಗಾಲದ ಅಂಶ ಹೆಚ್ಚಾಗಿದ್ದರೆ ಸೂಕ್ಷ್ಮ ರಚನೆಯಲ್ಲಿ ಮುಕ್ತ ಸಿಮೆಂಟೈಟಿನ (ಫೆರಿಕ್ ಕಾರ್ಬೈಡ್) ಸಣ್ಣ ಸಣ್ಣ ಗೋಲಿಗಳು ಕಾಣುತ್ತವೆ. ಇದಲ್ಲದೆ ಪರ್ಲೈಟಿನಲ್ಲಿ ಅಡಕಗೊಂಡ ಸಿಮೆಂಟೈಟ್ ಅಂತೂ ಇದ್ದೇ ಇರುತ್ತದೆ.

ಸಂಪೂರ್ಣವಾಗಿ ಆಕ್ಸೈಡೀಕರಣಗೊಂಡ ಮತ್ತು ಉಕ್ಕಿನದೆಂದು ತರ್ಕಿಸಲಾದ ಉಪಕರಣಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಇಂತಹ ಸಿಮೆಂಟೈಟ್ ರಚನೆಗಳ ಅಥವಾ ಪರ್ಲೈಟ್‌ಗಳ ಸುಳಿಯನ್ನು ಹುಡುಕಿ ತೆಗೆಯಬೇಕಾದುದು ಅವಶ್ಯ. ಗೋಲಿಗಳು ಕಾರ್ಬೈಡುಗಳ ಪ್ರತಿರೂಪಗಳ ಅವಶೇಷಗಳಾಗಿರಬಹುದು. ಜಂಗುಗಟ್ಟುವಿಕೆಯಿಂದಾಗಿ ಇವು ಇಂಗಾಲಾಂಶ ವಸ್ತುಗಳಿಂದ ಕಪ್ಪಾಗಿರಲು ಸಾಧ್ಯ. ಇಂತಹ ವಸ್ತುಗಳು ರೂಪವಿಹೀನ ಇಂಗಾಲ ಮತ್ತು ಆಕ್ಸೈಡ್‌ಗಳ ದಟ್ಟ ಮಿಶ್ರಣಗಳೂ ಆಗಿರಬಹುದು. ಇಂತಹ ವಸ್ತುಗಳಲ್ಲಿಯ ಆಕ್ಸೈಡ್ ಅವಶೇಷಗಳಲ್ಲಿ ಕಾರ್ಬೈಡುಗಳ ಪ್ರತಿರೂಪಗಳ ಅಸ್ತಿತ್ವ ಇದ್ದರೆ ಈ ವಸ್ತುವನ್ನು ಉಕ್ಕಿನ ಮೇಲೆ ಮಾಡಲಾಗಿದೆ ಎಂದು ಅರ್ಥ.

ಮೇಲೆ ಹೇಳಿದ ವಿಷಯಗಳಿಂದ ಕೆಲವೊಂದು ಸಂಗತಿಗಳನ್ನು ಅರಿತುಕೊಳ್ಳಬಹುದು. ಹಳ್ಳೂರಿನ ಬಾಣದ ಮೊನಚನ್ನು ಪದರು ಬೆಸುಗೆಯ ತಂತ್ರದಿಂದ (ಲ್ಯಾಮಿನೇಶನ್ ತಂತ್ರ) ಮಾಡಿರಬಹುದು. ಅಂದರೆ ಇಂಗಾಲೀಕರಣಗೊಂಡ ಇಲ್ಲವೆ ಉಕ್ಕಿನಲ್ಲಿ ಪರಿವರ್ತಿತವಾದ ಮೆದು ಕಬ್ಬಿಣದ ಪಟ್ಟಿಗಳನ್ನು ಒಂದರಲ್ಲೊಂದು ಬೆಸೆದು ನಿರ್ದಿಷ್ಟ ಆಕಾರವನ್ನಿತ್ತಿರಬಹುದು. ಇದರಲ್ಲಿ ಲೋಹದ ಹರಳುಗಳಿಲ್ಲ. ಆದರೆ ಕಾರ್ಬೈಡ್ ಕಣಗಳು ಅವಶೇಷಗಳ ಜಾಲದಲ್ಲಿ ವ್ಯವಸ್ಥಿತವಾಗಿರುವ ಸಂಗತಿಯನ್ನು ಗಮನಿಸಿದರೆ ಈ ವಸ್ತುವು ಉಕ್ಕಿನಿಂದ ಆಗಿರಬಹುದೆಂದು ತರ್ಕಿಸಬಹುದು. ತಡಕನಹಳ್ಳಿಯಲ್ಲಿಯ ಕೆಲ ಕಬ್ಬಿಣದ ವಸ್ತುಗಳನ್ನು ಪರೀಕ್ಷಿಸಿದಾಗ ಇವುಗಳನ್ನು ಕೂಡ ಉಕ್ಕಿನ ಮೇಲೆಯೆ ಮಾಡಿದ್ದಾಗಿ ಕಂಡುಬಂದಿದೆ. ಅವಶೇಷ ರೂಪದಲ್ಲಿ ಪರ್ಲೈಟ್ ಕಣಗಳನ್ನು ಕಂಡು ಈ ತರ್ಕವನ್ನು ಮಾಡಲಾಗಿದೆ.

ಒಟ್ಟಿನಲ್ಲಿ ತಾಮ್ರ ಮತ್ತು ಕಬ್ಬಿಣದ ಲೋಹಗಳನ್ನು ಉತ್ಪಾದಿಸುವುದರಲ್ಲಿ ಪ್ರಾಗೈತಿಹಾಸಿಕ ಕರ್ನಾಟಕದಲ್ಲಿಯ ಲೋಹಗಾರರು ಸಾಕಷ್ಟು ಪರಿಣತರಾಗಿದ್ದರು ಎಂಬ ಮಾತನ್ನು ಈ ಮೇಲೆ ವಿವರಿಸಲಾದ ಸಂಗತಿಗಳಿಂದ ನಿರ್ಣಯಿಸಬಹುದು. ಕಬ್ಬಿಣದ ವಸ್ತುಗಳ ಬಗ್ಗೆ ಹೇಳಬೇಕೆಂದರೆ ಈ ಕೆಲಸದಲ್ಲಿ ತೊಡಗಿದ ಕಮ್ಮಾರರು ತಮ್ಮ ಸರಕುಗಳ ಬಗ್ಗೆಯೂ ಇವುಗಳ ಗುಣಧರ್ಮಗಳ ಬಗ್ಗೆಯೂ ಸಂಪೂರ್ಣವಾದ ಅರಿವು ಮತ್ತು ತಿಳುವಳಿಕೆಯನ್ನು ಉಳ್ಳವರಾಗಿದ್ದರು. ಕಬ್ಬಿಣಕ್ಕೆ ಕಾವು ಕೊಡುವ ಕೆಲಸವನ್ನು ಕರಾರುವಾಕ್ಕಾಗಿ ಮಾಡುತ್ತಿದ್ದರು. ವಸ್ತುಗಳ ಅಂಚನ್ನು ರೂಪಿಸುವದರಲ್ಲಿಯೂ ತುದಿ ಅಥವಾ ಮೊನಚುಗಳನ್ನು ರೂಪಿಸುವದರಲ್ಲಿಯೂ ಆಶ್ಚರ್ಯಕರ ಪರಿಣತಿಯನ್ನು ಸಂಪಾದಿಸಿದ್ದರು. ಮೆದುಕಬ್ಬಿಣದ ಪಟ್ಟಿಗಳ ಮೇಲ್ಪದರುಗಳನ್ನು ಇವರು ಇಂಗಾಲೀಕರಣಗೊಳಿಸಿದ್ದನ್ನು ನೋಡಿದರೆ, ವ್ಯವಸ್ಥಿತವಾಗಿ ಉಕ್ಕನ್ನು ತಯಾರಿಸುವುದನ್ನು ಇವರು ಬಲ್ಲವರಾಗಿದ್ದರು ಎಂಬುದನ್ನು ತೋರಿಸಿ ಕೊಡುತ್ತದಲ್ಲದೆ ಈ ಕಮ್ಮಾರರ ಕರ್ಮಪ್ರಾವೀಣ್ಯತೆಯನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿಯ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ವಸ್ತುಗಳನ್ನು ಮತ್ತು ನಮೂನೆಗಳನ್ನೂ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಇವುಗಳಲ್ಲಿಯ ಕಶ್ಮಲಗಳಲ್ಲಿ ಟಿಟ್ಯಾನಿಯಮ್ ಇದ್ದದ್ದು ಕಂಡುಬರುತ್ತದೆ. ಆದರೆ ಅದೇ ಕಾಲಕ್ಕೆ ಸಂಬಂಧಿಸಿದ ಆಂಧ್ರದಲ್ಲಿ ನಮೂನೆಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಟಿಟ್ಯಾನಿಯಮ್ ಲಭ್ಯವಾಗುವುದಿಲ್ಲ. ಇದರಿಂದ ಕಮ್ಮಾರರು ತಮ್ಮ ಸುತ್ತಮುತ್ತಲು ಇದ್ದ, ಇಲ್ಲವೆ ಬೇರೆ ಬೇರೆ ವಿಶಿಷ್ಟವಾದ ಅದಿರುಗಳನ್ನು ಬಳಸುತ್ತಿದ್ದರು ಎಂಬುದು ಸಿದ್ಧವಾಗುತ್ತದೆ. ಆಂಧ್ರಪ್ರದೇಶದ ನಮೂನೆಗಳಲ್ಲಿ ಅಲ್ಯುಮಿನಾ ಕೂಡ ಹೆಚ್ಚಿನ ಅಂಶದಲ್ಲಿತ್ತು ಎಂಬುದನ್ನು ದೃಢಪಡಿಸುತ್ತದೆ ಮತ್ತು ಅನುಮಾನಕ್ಕೆ ಎಡೆ ಕೊಡುತ್ತದೆ. ಆದ್ದರಿಂದ ಕರ್ನಾಟಕದಲ್ಲಿಯ ಲೋಹಶಾಸ್ತ್ರ ತಂತ್ರ ಪ್ರತ್ಯೇಕವಾಗಿಯೂ ಸ್ವತಂತ್ರವಾಗಿಯೂ ಬೆಳೆಯಿತು ಎಂದು ಹೇಳಬಹುದಾಗಿದೆ. ಪ್ರಶ.ಪೂ.ಸು.1200 ವರ್ಷಗಳ ಪೂರ್ವದಲ್ಲಿಯೆ ಕರ್ನಾಟಕದಲ್ಲಿಯ ಬೃಹತ್‌ಶಿಲಾಯುಗದ ಜನರಿಗೆ ಉಕ್ಕು ತಯಾರಿಸುವ ತಂತ್ರ ಚೆನ್ನಾಗಿ ತಿಳಿದಿತ್ತು. (ಜಿ.ಎಬಿ.)

**ಕಬ್ಬಿಣ (ವೈದ್ಯದಲ್ಲಿ) :** ಗಿಡ ಮರಗಳಲ್ಲಿ ಇದ್ದೇ ತೀರುವ ಪತ್ರಹರಿತ್ತಿನಲ್ಲಿ (ಕ್ಲೋರೊಫಿಲ್) ಕಬ್ಬಿಣದ ಅಂಶ ಇಲ್ಲವಾದರೂ ಜೀವಕಣದ ಕಿರಿಯಂಗದಲ್ಲಿ (ಆರ್ಗನೆಲ್) ಅದರೊಂದಿಗಿದ್ದು ಅದರ ತಯಾರಿಕೆಗೆ ಇದು ಬೇಕು. ರಕ್ತದ ಕೆಂಪು ಕಣಗಳಲ್ಲಿರುವ ರಕ್ತಬಣ್ಣಕದ (ಹಿಮೊಗ್ಲಾಬಿನ್) ಮುಖ್ಯ ಜೀವಾಳದ ಭಾಗ ಕಬ್ಬಿಣಾಂಶ. ಆದ್ದರಿಂದ ಕೆಲವು ಬಗೆಗಳ ರಕ್ತಕೊರೆಗಳಲ್ಲಿ( ಅನೀಮಿಯಾಸ್) ವೈದ್ಯಚಿಕಿತ್ಸೆಯಲ್ಲಿ ಕಬ್ಬಿಣದ ಲವಣಗಳ ಬಳಕೆಯಾಗುತ್ತಿದೆ. ಬದ್ಧಕವಾಗೂ (ಅಸ್ಟ್ರಿಂಜೆಂಟ್). ರಕ್ತತಡೆಕವಾಗೂ ರಕ್ತಸುರಿತದ ನಿಲುಗಡೆಗಾಗಿ ಕಬ್ಬಿಣದ ಲವಣಗಳನ್ನು ಬಳಸುವುದೂ ಉಂಟು. ಉಸಿರಾಟದ ಬಣ್ಣ ವಸ್ತುವಾಗಿ ಇದು ಊತಕಗಳಿಗೆ ಆಮ್ಲಜನಕದ ಒದಗಣೆಗೆ ಮುಖ್ಯವಾಗಿ ನೆರವಾಗುವುದು. ಕಣಬಣ್ಣಕ (ಸೈಟೊಕ್ರೋಂ) ಮಂಡಲದ ತೆರನ ಕೆಲವು ಉಸಿರಾಟದ ದೊಳೆಗಳಲ್ಲೂ ಇದು ಇದ್ದೇ ತೀರಬೇಕು. ಮೇಲ್ತೊರೆಗಳ ಪುಷ್ಟಿಗೂ ಇದು ಬೇಕೇಬೇಕು. ಸು. 2–6 ಗ್ರಾಂಗಳಷ್ಟು ಕಬ್ಬಿಣಾಂಶ ಮೈಯಲ್ಲಿರುತ್ತದೆ. ಇದರಲ್ಲಿ ಶೇ.65 ರಕ್ತಬಣ್ಣಕ ಸ್ನಾಯುಬಣ್ಣಕದಲ್ಲೂ (ಮೈಯೊಗ್ಲೋಟಿಸ್) ಶೇ.15 ರಲ್ಲಿ, ಈಲಿ, ತೊರಳೆ, ಎಲುಮಜ್ಜೆಗಳಂಥ ನವಿರ್ಜಾಲೊಳ್ಪೊರೆಯ (ರೆಟಿಕ್ಯುಲೊ ಎಂಡೊಥೀಲಿಯಲ್) ಊತಕಗಳಲ್ಲೂ ಶೇ.20 ಉಳಿದ ಊತಕಗಳಲ್ಲೂ ಹಂಚಿರುತ್ತದೆ. ಊತಕಗಳಲ್ಲಿ ಮುಖ್ಯವಾಗಿ ಫೆರಿಟಿನ್ನಾಗಿ ಪ್ರೋಟೀನೊಡಗೂಡಿ ದಾಸ್ತಾನಾಗಿರುವುದು. ಆಹಾರದಿಂದ ಕಬ್ಬಿಣ ಕರುಳಿನ ಮೂಲಕ ರಕ್ತಗೂಡುತ್ತದೆ. ಎಲುಮಜ್ಜೆಯಲ್ಲಿ ಕೆಂಪು ರಕ್ತಕಣಗಳ ತಯಾರಿಕೆಗೆ ಒದಗುವುದು. ಕೆಲವು ವಾರಗಳು ರಕ್ತದಲ್ಲಿ ಸುತ್ತಾಡಿದ ಮೇಲೆ ಕೆಂಪು ರಕ್ತಕಣಗಳು ಈಲಿಯಲ್ಲಿ ಒಡೆದು ಹಾಳಾಗುತ್ತವೆ. ಇವುಗಳಲ್ಲಿದ್ದ 20–25 ಮಿಲಿಗ್ರಾಂ ಕಬ್ಬಿಣಾಂಶ ಮಾತ್ರ ದಿನವೂ ಮತ್ತೆ ಬಳಕೆಗೆ ಬರುತ್ತದೆ. ಸಾಮಾನ್ಯವಾಗಿ ಹೆಂಗಸು ಒಂದು ಬಾರಿ ಮುಟ್ಟಾದಾಗ ಕೇವಲ ಸು. 10–12 ಮಿಲಿಗ್ರಾಂನಷ್ಟು ಕಬ್ಬಿಣಾಂಶವನ್ನು ಕಳೆದುಕೊಳ್ಳುತ್ತಾಳೆ.

ಆಹಾರದಲ್ಲಿನ ಕಬ್ಬಿಣ ಮೈಗೂಡಲು ತಾಮ್ರ, ಮ್ಯಾಂಗನೀಸ್, ಕೊಬಾಲ್ಟ್ ಅಂಶಗಳೂ ಕೊಂಚ ಇರಬೇಕು. ಮೈಗೂಡಿದ ಕಬ್ಬಿಣ ಅಲ್ಲಿಯೇ ಇದ್ದು ಮೇಲಿಂದ ಮೇಲೆ ಬಳಕೆಗೆ ಒದಗುತ್ತಿರುವುದು. ಗರ್ಭದಲ್ಲಿ ಬೆಳೆವ ಪಿಂಡಗೂಸಿಗೆ ಕಬ್ಬಿಣದ ಕೊರತೆ ಹೆಚ್ಚು, ಅದಕ್ಕೆ ಬೇಕಿರುವ ಕಬ್ಬಿಣದ ಅಂಶವೆಲ್ಲ ತಾಯಿಯಿಂದಲೇ ಬರಬೇಕು. ಆರು ತಿಂಗಳ ಕೂಸು ಬಸುರಿಯ ಇಡೀ ಕಬ್ಬಿಣಾಂಶವನ್ನು ಎತ್ತಿಕೊಳ್ಳಬಲ್ಲುದು. ಇದರಿಂದಲೇ ಬಸುರಿ ದಿನವೂ ಸಾಕಷ್ಟು ಕಬ್ಬಿಣಾಂಶವನ್ನು ಆಹಾರದಲ್ಲಿ ಸೇವಿಸದಿದ್ದಲ್ಲಿ ವಿಪರೀತ ರಕ್ತಕೊರೆ ಅನುಭವಿಸುವಳು. ಸಾಮಾನ್ಯರಿಗೆ ದಿನವೂ ಆಹಾರದ ಮೂಲಕ 1–2 ಮಿಲಿಗ್ರಾಂನಷ್ಟು ಕಬ್ಬಿಣಾಂಶ ಮೈಗೂಡುತ್ತಿರಲೇಬೇಕು. ಇದು ದಿನದ ಎಂದಿನ ತಿಂಡಿ, ತಿನಿಸು, ಊಟಗಳಲ್ಲಿ 15 ಮಿಲಿಗ್ರಾಂ ನಷ್ಟಾದರೂ ದೊರಕುತ್ತದೆ. ರಕ್ತಕೊರೆಯಾಗಿದ್ದರೆ 25–30 ಮಿಲಿಗ್ರಾಂಗಳಾದರೂ ದಿನವೂ ಸಲ್ಲಬೇಕು. ಕೊಕ್ಕೆಹುಳುಬೇನೆಯಲ್ಲಿ ಕರುಳಲ್ಲಿ ಸೇರಿಬಿಟ್ಟ ಕೊಕ್ಕೆಹುಳುಗಳು ರಕ್ತಹೀರಿ ಹಾಕುತ್ತಿರುವಾಗಂತೂ ರಕ್ತದಲ್ಲಿ ಕಬ್ಬಿಣದ ಕೊರೆ ಅಪಾರ.

ಕಬ್ಬಿಣಾಂಶವನ್ನು, ಹಲವಾರು ಲವಣರೂಪಗಳಲ್ಲಿ ಮದ್ದಾಗಿ ಬಳಸುವುದುಂಟು. ಫೆರಸ್ ಲವಣವೇ ಬಲು ಒಳ್ಳೆಯದು. ಚೆನ್ನಾಗಿ ಮೈಗೂಡುತ್ತದೆ. ಅಗ್ಗ, ತುರ್ತಿನ ಹೊತ್ತಿನಲ್ಲಿ ಬೇಗನೆ ಕಬ್ಬಿಣ ಒದಗಿಸಲು ರೋಗಿಗೆ ಚುಚ್ಚಿಹೊಗಿಸುವ ಸಮ್ಮಿಶ್ರ ರೂಪಗಳು ಇವೆ.

ಕಬ್ಬಿಣಾಂಶ ಮೈಗೂಡುವಾಗ ಏನೋ ತೊಂದರೆಯಾಗಿ ಕಬ್ಬಿಣವಿರುವ ಬಣ್ಣವಸ್ತುವಾದ ರಕ್ತಗಬ್ಬಿಣಕ (ಹೀಮೋಸೈಡೆರಿನ್) ಊತಕಗಳಲ್ಲಿ ಉಳಿದುಬಿಟ್ಟು ರಕ್ತಗಬ್ಬಿಣತೆ (ಹೀಮೊಸೈಡೆರೋಸಿಸ್) ರೋಗವೇಳುತ್ತದೆ. ಕೆಂಪು ರಕ್ತಕಣಗಳು ಒಡೆದು ವಿಪರೀತ ಹಾಳಾದಾಗ ಹೀಗಾಗುವುದು ಸಾಮಾನ್ಯ.

ಬಾದಾಮಿ, ಸೀಮೆ ಆಷಾಢಿ (ಆಸ್ಪರ್‍ಯಾಗಸ್), ತವುಡು, ಹುರುಳೀಕಾಯಿ, ಕೋಸುಹೂ, ಸೆಲರಿ ಸೊಪ್ಪು, ತತ್ತಿಬಂಡಾರ, ಮೂತ್ರಪಿಂಡ, ಈಲಿ, ಲೆಟೀಸ್ ಸೊಪ್ಪು, ತೋಕೆ ಗೋಡಿ ಹಿಟ್ಟು, ಮೋಳಿ, ಸೋಯಅವರೆ, ಗೋದಿ ಹಿಟ್ಟು, ಹಸಿರುಸೊಪ್ಪುಗಳು, ದಂಟು, ನುಗ್ಗೆಕಾಯಿ, ಬೀಟ್‌ಗೆಡ್ಡೆ, ಕೋಸುಗೆಡ್ಡೆ, ಕಾಕಂಬಿ, ಕಿತ್ತಳೆ, ಮೆಣಸು, ಬಟಾಣಿ, ಉರುಳುಗೆಡ್ಡೆ, ಮೂಲಂಗಿ, ಅನಾನಸು, ಕಲ್ಲಂಗಡಿ, ತಕ್ಕಾಳಿ, ನಾಯಿಕೊಡೆಗಳಲ್ಲಿ ಕಬ್ಬಿಣಾಂಶವಿದೆ. ಗಜ್ಜರಿಯಲ್ಲೂ ಹಾಲಿನಲ್ಲೂ ಕಬ್ಬಿಣಾಂಶ ಕಡಿಮೆ, ಕೆಲವೇಳೆ ಆಹಾರದಲ್ಲಿರುವ ಕಬ್ಬಿಣಾಂಶವೆಲ್ಲ ಮೈಗೂಡದು. ಮೈಗೆ ಬೇಕಿಲ್ಲದಾಗ ಸೇವಿಸಿದ ಕಬ್ಬಿಣಾಂಶ ಹಾಗೇ ಹೊರಬೀಳುತ್ತದೆ.

ಕಬ್ಬಿಣ ಲವಣಗಳಿರುವ ಮಾತ್ರೆಗಳಿಗೆ ಸಕ್ಕರೆ ಸವರಿದ್ದರಂತೂ ಮಕ್ಕಳು ಪೆಪ್ಪರ್‌ಮಿಂಟೆಂದು ತಿನ್ನುವ ಅವಕಾಶವಿದೆ. ಚಿಕ್ಕಮಕ್ಕಳಿಗೆ ಅಂಥ ಮಾತ್ರೆಗಳು ವಿಷಕರವಾದ್ದರಿಂದ ಅವರಿಗೆ ಸಿಗದಂತೆ ಎತ್ತಿರಿಸಿರಬೇಕು. (ಡಿ.ಎಸ್.ಎಸ್.)

**ಕಬ್ಬು :** ಪೋಯೇಸೀ (ಗ್ರಾಮಿನೀ) ಕುಟುಂಬಕ್ಕೆ ಸೇರಿದ ಅತಿ ಉಪಯುಕ್ತ ಬಹುವಾರ್ಷಿಕ ದೈತ್ಯಾಕಾರದ ಹುಲ್ಲು; ಸ್ಯಾಕಾರಮ್ ಅಫಿಸಿನೇರಮ್ ಇದರ ಸಸ್ಯವೈಜ್ಞಾನಿಕ ಹೆಸರು. ಭೂ ವೈವಿಧ್ಯಕ್ಕೆ ಹೊಂದಿಕೊಂಡು ಬೆಳೆಯಬಲ್ಲ ಉಷ್ಣವಲಯದ ಸಸ್ಯವೆನಿಸಿದೆ. ಸಮಭಾಜಕ ವೃತ್ತದ ಇಕ್ಕೆಡೆಗಳಲ್ಲೂ ಸು. $35^0$ ವರೆಗಿನ ಪ್ರದೇಶದಲ್ಲಿ ಎರಡು ಗೋಳಗಳಲ್ಲೂ ನೂರಾರು ಬಗೆಯ ಕಬ್ಬನ್ನು ಬೆಳೆಯಲಾಗುತ್ತಿದೆ.

ಸಿಹಿ ಪದಾರ್ಥಗಳನೇಕವಿದ್ದರೂ ಮಾನವರಿಗೆ ಇಷ್ಟವಾದಂಥ ಸಿಹಿ ಪದಾರ್ಥಗಳನ್ನು ತಯಾರಿಸಲು ಬೆಲ್ಲ ಮತ್ತು ಸಕ್ಕರೆಯೇ ಮುಖ್ಯ. ಸಕ್ಕರೆ ಹೊಂದಿರುವ ಸಸ್ಯಗಳು ಹಲವು ಇವೆ. ಆದರೆ ಸಕ್ಕರೆಯ ಅಧಿಕ ಉತ್ಪನ್ನಕ್ಕೆ ಸಹಾಯಕವಾಗುವುದು ಕಬ್ಬು ಮತ್ತು ಸಕ್ಕರೆ ಬೀಟ್ ಗೆಡ್ಡೆಗಳು ಮಾತ್ರ. ತಾಳೆ, ತೆಂಗು ಮುಂತಾದ ಮರಗಳ ಹೊಂಬಾಳೆಗಳನ್ನು ಕಡಿದು, ರಸ ಶೇಖರಿಸಿ, ಅದರಿಂದಲೂ ಬೆಲ್ಲ ತಯಾರಿಸಲಾಗುತ್ತದೆಯಾದರೂ ಪರಿಮಾಣದಲ್ಲಿ ಅದು ಅತಿ ಸ್ವಲ್ಪ. ಪ್ರಪಂಚದ ಒಟ್ಟು ಸಕ್ಕರೆ ಉತ್ಪತ್ತಿಯ ಶೇ.67–68 ಭಾಗ ಕಬ್ಬಿನಿಂದಲೇ ಆಗುತ್ತದೆ; ಉಳಿದದ್ದು ಬೀಟ್‌ಗೆಡ್ಡೆಯಿಂದ.

**ಬೆಳೆ ವಿಸ್ತೀರ್ಣ :** ಭಾರತ, ಪಾಕಿಸ್ತಾನ, ಇಂಡೋಚೀನ, ಚೀನ, ಜಪಾನ್, ಫಾರ್ಮೋಸ, ಫಿಲಿಪೀನ್ಸ್ ಮತ್ತು ಜಾವಗಳಲ್ಲೂ ಮೆಡಿಟರೇನಿಯನ್ ಸಮುದ್ರತೀರ ಪ್ರದೇಶಗಳಲ್ಲೂ ಲೂಯಿಸಿಯಾನ, ಫ್ಲಾರಿಡ, ಜಾರ್ಜಿಯ, ಕ್ಯೂಬ, ಮೆಕ್ಸಿಕೊ ಮುಂತಾದ ಪ್ರದೇಶಗಳಲ್ಲೂ ಬಾರ್‌ಬಡಾಸ್, ಟ್ರೆನಿಡಾಡ್, ಜಮೈಕ ದ್ವೀಪಗಳಲ್ಲೂ ಪೆರು, ಕೊಲಂಬಿಯ, ವೆನಿಜ್ವೇಲ, ಬ್ರಿಟಿಷ್ ಗಯಾನ, ಡಚ್, ಗಯಾನ, ಎಕ್ವಡಾರ್, ಬೊಲೀವಿಯ, ಬ್ರೆಜಿಲ್, ಅರ್ಜೆಂಟೀನ ಮತ್ತು ಪರಗ್ವೆ ರಾಷ್ಟ್ರಗಳಲ್ಲೂ ಹಾಂಡುರಾಸ್, ಗ್ವಾಟಿಮಾಲ, ನಿಕರಾಗುವ, ಪನಾಮ ಮತ್ತು ಕಾಸ್ಟರೀಕ ರಾಜ್ಯಗಳಲ್ಲೂ ಮೆಡೀರ, ಅಂಗೋಲ, ಕ್ಯಾನರಿ ದ್ವೀಪಗಳು, ಈಜಿಪ್ಟ್ ಮಾಜಾಂಬಿಕ್ ಮಾರಿಷಸ್ ದೇಶಗಳಲ್ಲೂ ಆಸ್ಟ್ರೇಲಿಯ ಖಂಡದ ಪೂರ್ವತೀರ ಮತ್ತು ತಾಹಿತಿ ದ್ವೀಪಗಳಲ್ಲೂ ಹೆಚ್ಚಾಗಿ ಕಬ್ಬನ್ನು ಬೆಳೆಸುತ್ತಾರೆ.

**ಪ್ರಾಚೀನತೆ :** ಕಬ್ಬು ಅತ್ಯಂತ ಪ್ರಾಚೀನ ಬೆಳೆ ಎನ್ನಲಾಗಿದೆ. ಅಥರ್ವಣ ವೇದದಲ್ಲಿ ಕಬ್ಬಿನ ಉಲ್ಲೇಖವಿದೆ. ಆದ್ದರಿಂದ ವೇದಗಳ ಕಾಲದಿಂದಲೂ ಅದು ಭಾರತದಲ್ಲಿ ಹೆಚ್ಚಾಗಿ ಹರಡಿತ್ತೆಂದು ವ್ಯಕ್ತವಾಗುತ್ತದೆ. ಪ್ರಸಕ್ತಶಕದ ಪ್ರಾರಂಭದ ವೇಳೆಗೆ ಭಾರತದಿಂದ ಚೀನ ಚಕ್ರವರ್ತಿಗೆ ಕಬ್ಬನ್ನು ಕಾಣಿಕೆಯಾಗಿ ಕಳುಹಿಸಲಾಯಿತೆಂದೂ ಮುಂದೆ 424ರ ವೇಳೆಗೆ ದಕ್ಷಿಣ ಚೀನದಲ್ಲಿ ಅದನ್ನು ಬೆಳೆಸಲು ಉಪಕ್ರಮಿಸಿದ ಮೇಲೆ ಕ್ರಮೇಣ ಜಾವ, ಫಿಲಿಪೀನ್ಸ್, ಶಾಂತಿಸಾಗರದ ದ್ವೀಪಗಳು ಮತ್ತು ಹವಾಯ್ ಪ್ರದೇಶಗಳಿಗೆ ಅದು ಹರಡಿತೆಂದೂ ತಿಳಿದುಬಂದಿದೆ. ಅಲೆಕ್ಸಾಂಡರನೊಡನೆ ದಂಡಯಾತ್ರೆಯಲ್ಲಿ ಭಾಗವಹಿಸಿದ್ದ ಅಧಿಕಾರಿ ನಿಯಾರ್‌ಟಿಸ್ ಪ್ರ.ಶ.ಪೂ. 325ರಲ್ಲೇ ಕಬ್ಬು ಭಾರತದಲ್ಲಿ ಎಲ್ಲೆಲ್ಲೂ ಬೆಳೆಯುತ್ತಿತ್ತೆಂದೂ ಅದು ಎಲ್ಲರಿಗೂ ಚೆನ್ನಾಗಿ ಪರಿಚಿತವಿತ್ತೆಂದೂ ವಿವರಿಸಿದ್ದಾನೆ. 6ನೆಯ ಶತಮಾನದಲ್ಲಿ ಭಾರತದಿಂದ ಪರ್ಷಿಯಕ್ಕೂ ಅಲ್ಲಿಂದ ಅರಬ್ಬೀಯರ ಮೂಲಕ ಈಜಿಪ್ಟ್, ಮೊರಾಕೊ, ಸ್ಪೇನ್ ಮತ್ತು ಸಿಸಿಲಿಗೂ ಹರಡಿತು. 12ನೆಯ ಶತಮಾನದ ಮೊದಲಿನಲ್ಲಿ ಜಾಂಜಿಬಾರ್ ದೇಶದಲ್ಲಿ ಅದನ್ನು ಬೆಳೆಸಲಾಯಿತು. ಅದರ ಹೆಚ್ಚಿನ ವಿಸ್ತರಣೆಗೆ ಸ್ಪೇನಿಶರೂ ಪೋರ್ಚುಗೀಸರೂ ಕಾರಣರಾಗಿ, 15ನೆಯ ಶತಮಾನದಲ್ಲಿ ಕ್ಯಾನರಿ, ಕೇಪ್‌ವರ್ಡ್ ದ್ವೀಪಗಳಲ್ಲೂ ಪಶ್ಚಿಮ ಆಫ್ರಿಕದಲ್ಲೂ ಕೊಲಂಬಸನ ಎರಡನೆಯ ಪ್ರವಾಸದ ಮೂಲಕ

ಅಮೆರಿಕದಲ್ಲೂ ಅದು ನೆಲೆಯೂರಿತು. ಮುಂದೆ ಕೇವಲ 1–1 1/2 ಶತಮಾನಗಳಲ್ಲೇ ಮಧ್ಯ ಮತ್ತು ದಕ್ಷಿಣ ಅಮೆರಿಕಗಳ ಬಹುತೇಕ ಭಾಗದಲ್ಲಿ ಅದರ ಬೆಳೆಸು ವಿಸ್ತರಿಸಿತು. ಇದರಿಂದ ಬ್ರೆಜಿಲ್, ಪೆರು ಮತ್ತು ಮಧ್ಯ ಅಮೆರಿಕ ಹಾಗೂ ವೆಸ್ಟ್ ಇಂಡೀಸಿನ ವಿವಿಧ ದ್ವೀಪಗಳಲ್ಲಿ ಅದು ಮುಖ್ಯ ಬೆಳೆಸಾಯಿತು. ಅದೇ ಶತಮಾನದ ಅಂತ್ಯದಲ್ಲಿ ಮಾರಿಷಸ್ ಮತ್ತು ಆಸ್ಟ್ರೇಲಿಯದ ವಿವಿಧ ಪ್ರದೇಶಗಳಿಗೆ ಹರಡಿತು. ಹೀಗೆ ಪ್ರಪಂಚದ ಉಷ್ಣವಲಯದ ಎಲ್ಲ ಮುಖ್ಯ ರಾಷ್ಟ್ರಗಳಲ್ಲೂ ಕಬ್ಬು ಒಂದು ಮುಖ್ಯ ಬೆಳೆಯಾಯಿತು.

ಆದರೂ ಇತ್ತೀಚಿನ ಹಲವು ಸಂಶೋಧನೆಗಳು, ಕಬ್ಬಿನ ವಿವಿಧ ಜಾತಿಗಳು ಎರಡು ಮುಖ್ಯ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿ ಅಭಿವೃದ್ಧಿ ಹೊಂದಿ ಅಲ್ಲಿಂದ ಉಳಿದೆಡೆಗೆ ಹರಡಿರಬಹುದೆಂಬ ಊಹೆಗೆ ಎಡೆಗೊಟ್ಟಿವೆ: ಸ್ಯಾಕರಂ ಅಫಿಸಿನೇರಂ ಪ್ರಭೇದದ ದಪ್ಪಗಾತ್ರದ ಕಬ್ಬಿನ ಬಗೆಗಳು ಪಾಲಿನೇಷಿಯದಲ್ಲಿ ಇದ್ದು ಅಲ್ಲಿಂದ ಜಾವ, ಮಾರಿಷಸ್ ಮತ್ತು ಭಾರತಗಳಲ್ಲಿ ಹರಡಿರಬಹುದೆಂದೂ ಸಣ್ಣ ಕಬ್ಬು ಪ್ರಭೇದಗಳಾದ ಸಾ.ಬರ್ಬೆರಿ ಮತ್ತು ಸಾ.ಸೈನೆನ್ಸಿ ಭಾರತದಲ್ಲಿದ್ದು ಇತರ ಪ್ರದೇಶಗಳಿಗೆ ಪಸರಿಸಿರಬಹುದೆಂದೂ ಅಭಿಪ್ರಾಯಪಡಲಾಗಿದೆ.

ಸಾಮಾನ್ಯವಾಗಿ ಕಬ್ಬನ್ನು ಕಬ್ಬು ಜಲ್ಲೆಯ ತುಂಡಿನಿಂದಲೇ ಬೆಳೆಸಿ ವೃದ್ಧಿಪಡಿಸುತ್ತಾರೆ. 19ನೆಯ ಶತಮಾನದ ಮಧ್ಯಾವಧಿಯವರೆಗೂ ಕಬ್ಬಿಗೆ ಬೀಜವಿದೆಯೆಂದು ಯಾರಿಗೂ ತಿಳಿದಿರಲಿಲ್ಲ. ಬಾರ್‌ಬಡಾಸಿನ ಪಾರಿಸ್ ಮತ್ತು ಆತಸ್ ಹಾಗೂ ಜಾವದ ನೋಟೋಹಾಮಿಪ್ರಾಡ್‌ಜೋ ಎಂಬುವರು ಕಬ್ಬಿಗೆ ಬೀಜವಿದೆಯೆಂದು ಮೊದಲು ವಿವರಿಸಿದ್ದರೂ ಯಾರೂ ಅದಕ್ಕೆ ಹೆಚ್ಚಿನ ಗಮನವೀಯಲಿಲ್ಲ. ಮುಂದೆ ಜಾವದ ಸೋಲ್ಟವೇಡೆಲ್ ಎಂಬಾತ ಬೀಜಗಳನ್ನು ಶೇಖರಿಸಿ ಹೊಸ ಕಬ್ಬುಜಾತಿಯನ್ನು ಬೆಳೆಸಿ ತೋರಿಸಿದಾಗಲೇ ಇದರಲ್ಲಿ ಜನರಿಗೆ ನಂಬಿಕೆಯಾದದ್ದು. ಸಾಮಾನ್ಯವಾಗಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಕಬ್ಬಿನ ತುದಿಯಲ್ಲಿ ಸುಂದರವಾದ ನೀಳವಾದ ಗರಿಯಂತೆ ಕಂಡುಬರುವ ಸೂಲಂಗಿಯೇ ಅದರ ಪುಷ್ಪಗುಚ್ಛ. ಬೀಜ ಮತ್ತು ಹೊಸ ಕಬ್ಬು ತಳಿ ಉತ್ಪಾದನೆಗೆ ತಳಹದಿ. ಆದರೆ ಬೀಜ ಶೇಖರಿಸಿ ಬಿತ್ತುವುದು ಹೊಸ ತಳಿಗಳ ಉತ್ಪನ್ನಕ್ಕಾಗಿ ಮಾತ್ರ. ಇತ್ತೀಚೆಗೆ ವಿವಿಧ ಉತ್ತಮ ತಳಿಗಳ ನಡುವೆ ಅಡ್ಡತಳಿಯೆಬ್ಬಿಸಿ ಬೀಜೋತ್ಪಾದನೆ ಮಾಡಿ ಹೊಸ ತಳಿಗಳನ್ನು ಪಡೆಯಲಾಗುತ್ತಿದೆ. ತಂದೆ ತಾಯಿಗಳ ಗುಣಗಳೆಲ್ಲ ಪೂರ್ಣ ತಿಳಿದಿರುವುದರಿಂದ ನಮಗೆ ಆವಶ್ಯಕವಾದ ಗುಣಗಳುಳ್ಳ ಹೊಸತಳಿಗಳ ಉತ್ಪಾದನೆಗೆ ಇದು ಅನುಕೂಲ ಮಾರ್ಗ. ಆದರೆ ಬೀಜದ ಮುಖಾಂತರ ಕಬ್ಬನ್ನು ಬೆಳೆಸುವ ವಿಧಾನದಲ್ಲಿನ ಮುಖ್ಯ ಅನಾನುಕೂಲತೆಯೆಂದರೆ ಪ್ರತಿ ಬೀಜದ ಗಿಡವೂ ಬೇರೆ ಬೇರೆಯಾಗಿದ್ದು, ಅವು ಯಾವ ರೀತಿಯವು ಮತ್ತು ಅವು ಉಪಯುಕ್ತವೇ ಅಲ್ಲವೇ ಎಂಬುದನ್ನು ಮೊದಲೇ ಹೇಳಲಾಗುವುದಿಲ್ಲ. ಕಬ್ಬಿನ ಜಲ್ಲೆಯ ತುಂಡುಗಳನ್ನು ನೆಟ್ಟು ಬೆಳೆಸುವುದು ಸುಲಭ, ಈ ಮಾರ್ಗಾನುಸರಣೆಯಿಂದ ಜಾತಿಯ ವ್ಯತ್ಯಾಸವಿಲ್ಲದೆ ಗೊತ್ತಾದ ಮಿತಿಯಲ್ಲೇ ಬೆಳೆ ಕೈಸೇರುತ್ತದೆ.

ಕಬ್ಬು ಸಾಕರಂ ಎಂಬ ಜಾತಿಗೂ ಪೋಯೇಸೀ ಅಥವಾ ಗ್ರಾಮಿನೀ ಕುಟುಂಬಕ್ಕೂ ಸೇರಿದೆ ಎಂದು ಹೇಳಲಾಗಿದೆ. ಈ ಜಾತಿಯಲ್ಲಿ ಮುಖ್ಯವಾಗಿ 5 ಪ್ರಭೇದಗಳಿವೆ. 1. ಸ್ಯಾಕರಂಅಫಿಸೀನೇರಂ–ಪಾಲಿನೇಷಿಯ ದ್ವೀಪಗಳ ಮೂಲವಾಸಿ. ದಪ್ಪಗಾತ್ರದ ಮೃದು ಕಬ್ಬು ಇದು. 2. ಸ್ಯಾಕರಂ ಬರ್ಬೆರಿ–ಪುರಾತನಕಾಲದಿಂದಲೂ ಭಾರತದ ಗಂಗಾನದಿ ಬಯಲಿನಲ್ಲಿ ಬೆಳೆಯಲಾಗುತ್ತಿರುವ ಸಣ್ಣ ಗಾತ್ರದ ಕಬ್ಬು. ವಾತಾವರಣದ ವೈವಿಧ್ಯವನ್ನು ಕ್ರಿಮಿಕೀಟಗಳ ಉಪದ್ರವವನ್ನು ತಡೆಯಬಲ್ಲ ಶಕ್ತಿ ಇದಕ್ಕೆ ಇದೆ. ಜೌಗು ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇಳುವರಿ ಕಡಿಮೆ. 3. ಸ್ಯಾಕರಂ ಸೈನೆನ್ಸಿ–ಸಾ. ಬರ್ಬೆರಿಯಂಥದೇ ಆದರೆ ಹೆಚ್ಚು ಮಂದವಾದ ಪ್ರಭೇದ. 4. ಸ್ಯಾಕರಂ ಸ್ಪಾಂಟೇನಿಯಂ–ಪಶ್ಚಿಮವಲಯಗಳಲ್ಲೆಲ್ಲ ಕಂಡುಬರುವ ಕಾಡುಜಾತಿ. ಸಮಶೀತೋಷ್ಣವಲಯಗಳ ವಾತಾವರಣದಲ್ಲಿ ಬೆಳೆಯಲು ಉತ್ತಮವಾದದ್ದು. 5.ಸಾಕರಂ ರೋಬ–ನ್ಯೂಗಿನಿ ಪ್ರದೇಶದಲ್ಲಿನ ಕಾಡುಜಾತಿ. ಇವಲ್ಲದೆ ಪ್ರಪಂಚದಾದ್ಯಂತ ವ್ಯವಸಾಯದಲ್ಲಿರುವ ಇನ್ನೂ ಅನೇಕ ತಳಿಗಳು ಇವೆ. ಇವುಗಳಲ್ಲಿ ಬಹುಪಾಲು ಅಡ್ಡ ತಳಿಯೆಬ್ಬಿಕೆಯಿಂದ ಪಡೆಯಲಾದುದು. ಇವು ಬಹುಸಂಖ್ಯಾಗುಣಿತ ವರ್ಣತಂತು (ಕ್ರೋಮೋಸೋಮು)ಗಳನ್ನು ಹೊಂದಿವೆ. ಏಕಗುಣಿತ ಕ್ರೋಮೋಸೋಮುಗಳ ಸಂಖ್ಯೆ ಕಬ್ಬಿನ ವಿವಿಧ ಬಗೆಗಳಲ್ಲಿ 15–68ರ ವರೆಗೂ ವ್ಯತ್ಯಾಸವಾಗಬಹುದು.

ಕಬ್ಬಿನ ವಿವಿಧ ತಳಿಗಳು ತಮ್ಮ ಬೆಳವಣಿಗೆಯ ರೀತಿ, ಎತ್ತರ, ಕಾಂಡದ ದಪ್ಪ, ಬಣ್ಣ ಸಿಪ್ಪೆಯ ಕಾಠಿಣ್ಯ, ರಸದ ಮಾದುರ್ಯ, ರಸಗೂಡಿ ಪಕ್ವಕ್ಕೆ ಬರುವ ಕಾಲ, ರೋಗನಿರೋಧಕ ಗುಣಗಳು ಇತ್ಯಾದಿ ಲಕ್ಷಣಗಳಲ್ಲಿ ವೈವಿಧ್ಯ ತೋರುತ್ತವೆ. ಮೈಸೂರಿನಲ್ಲಿ ಬೆಳೆಯುತ್ತಿರುವ ಕಬ್ಬುಗಳನ್ನು ಹಳೆಯ ತಳಿ ಹಾಗೂ ಹೊಸ ತಳಿಗಳೆಂದು ವಿಂಗಡಿಸಬಹುದು. ಹಳೆಯ ಬಗೆಯ ಕಬ್ಬುಗಳು ಹೆಚ್ಚು ರಸದಿಂದ ತುಂಬಿದವು ಮತ್ತು ಮೆದುವಾದವು. ಇವನ್ನು ಅರೆಯುವುದು ಮತ್ತು ಅಗಿದು ತಿನ್ನುವುದು ಸುಲಭ. ಇವುಗಳಲ್ಲಿ ಮುಖ್ಯವಾದವು ರಸದಾಳಿ ಮತ್ತು ಪಟ್ಟಾಪಟ್ಟಿ ಎಂಬುವು. ರಸದಾಳಿ ಕಬ್ಬು ತುಂಬಾ ಮೆದುವಾದ ರಸಭರಿತ ಹಸಿರುಮಿಶ್ರಿತ ಹಳದಿ ಸಿಪ್ಪೆಯ ಕಬ್ಬು. 10 ತಿಂಗಳಲ್ಲಿ ಪಕ್ವವಾಗುವ ಇದು ಸಾಧಾರಣ ಇಳುವರಿಯ ಜಾತಿ. ಪಟ್ಟಾಪಟ್ಟಿ ಎನ್ನುವುದು ರಸದಾಳಿಗಿಂತ ಗಟ್ಟಿಯಾದುದು. ಅದರ ಕಾಂಡದ ಮೇಲೆ ಉದ್ದ ಪಟ್ಟಿಗಳಿವೆ. ಸು. 12 ತಿಂಗಳಲ್ಲಿ ಪಕ್ವವಾಗುವ ಇದು ಚೆನ್ನಾಗಿ ಇಳುವರಿ ಕೊಡಬಲ್ಲುದು. ಇದರ ಸಕ್ಕರೆಯ ಅಂಶವೂ ರಸದಾಳಿಗಿಂತ ಹೆಚ್ಚು. ಇವಲ್ಲದೆ ಚೇಣಿ ಅಥವಾ ಮರಕಬ್ಬು ಎಂಬ ಬಗೆಯೂ ಉಂಟು. ಚೀನ ದೇಶದಿಂದ ಬಂದುದೆಂದು ಹೇಳಲಾದ ಇದು ಉಳಿದೆರಡಕ್ಕಿಂತ ತೆಳುವಾದುದು ಗಟ್ಟಿಯಾದುದು ಆಗಿದೆ. ನೀರಿನ ಪೂರೈಕೆ ಕೊಂಚ ಕಡಿಮೆಯಿರುವ ಪ್ರದೇಶಗಳಲ್ಲೂ ಕ್ಷಾರೀಯ ಭೂಮಿಗಳಲ್ಲೂ ಚೆನ್ನಾಗಿ ಬೆಳೆಯಬಲ್ಲುದು. 18ತಿಂಗಳುಗಳಲ್ಲಿ ಪಕ್ವವಾಗುತ್ತದೆ. ಇದರ ಇಳುವರಿಯೂ ಹೆಚ್ಚು. ಈಚೆಗೆ ಮಾರಿಷಸ್ ದ್ವೀಪಗಳಿಂದ ತಂದು ರೂಢಿಸಲಾದ ನಾಲ್ಕು ಬಗೆಯ ಕಬ್ಬುಗಳನ್ನು ಬೆಳೆಸುತ್ತಿದ್ದಾರೆ. ಇವೆಲ್ಲಾ ಬಹಳ ಗಟ್ಟಿ ಕಬ್ಬುಗಳಾಗಿದ್ದು, ಎತ್ತರ ಹಾಗೂ ನೇರವಾಗಿ ಬೆಳೆಯುತ್ತವೆ. ಇವುಗಳ ಇಳುವರಿಯೂ ಹೆಚ್ಚು. ಇವುಗಳಲ್ಲಿ ಬಹಳ ಮುಖ್ಯವಾದುದು ರೆಡ್ ಮಾರಿಷಸ್ ತಳಿ. ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲೂ ಚೆನ್ನಾಗಿ ಬೆಳೆಯುವ ಇದು ಮೈಸೂರಿನಲ್ಲಿ ಹಲವಾರು ಸಸಿ ಕಬ್ಬುಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈಗೀಗ ತಳೀಕರಣ ಪ್ರಯೋಗಗಳಿಂದ ಅಭಿವೃದ್ಧಿಪಡಿಸಲಾದ ಸಸಿಕಬ್ಬುಗಳು ಬಳಕೆಗೆ ಬಂದಿರುವುದರಿಂದ ಹಳೆಯ ಬಗೆಯ ಕಬ್ಬುಗಳ ಪ್ರಾಮುಖ್ಯ ಕಡಿಮೆಯಾಗಿದೆ. ಸಸಿಕಬ್ಬುಗಳನ್ನು ಬೀಜ ಬಿತ್ತನೆಯ ಮುಖಾಂತರ ಪಡೆಯುತ್ತಾರೆ. ವಿವಿಧ ಬಗೆಯ ಕಬ್ಬುಗಳನ್ನು ಒಂದೆಡೆ ಬೆಳೆಸಿ ಅವುಗಳಲ್ಲಿ ಸೂಲಂಗಿ ಬಂದಾಗ ಅವನ್ನು ಸಹಜವಾಗಿಯೋ ಅಥವಾ ಕೈಯಿಂದ ಪರಾಗಸ್ಪರ್ಶಕ್ರಿಯೆ ನಡೆಸಿಯೋ ಬೀಜೋತ್ಪಾದನೆ ಮಾಡುತ್ತಾರೆ. ಹೀಗೆ ಉತ್ಪತ್ತಿಯಾದ ಬೀಜಗಳನ್ನು ಬಿತ್ತಿ ಅದರಿಂದ ಬರುವ ಸಸಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವುಗಳಲ್ಲಿ ಯಾವುದಾದರೂ ಒಳ್ಳೆಯ ಗುಣಗಳುಳ್ಳ ಸಸಿಗಳಿದ್ದರೆ ಅವನ್ನು ಆರಿಸಿ ಬೇರೆ ಮಾಡಿ ವ್ಯವಸಾಯಕ್ಕೆ ಉಪಯೋಗಿಸುತ್ತಾರೆ. ಕೆಲವುಬಾರಿ ಎಕ್ಸ್‌ರೇ ಅಥವಾ ರಾಸಾಯನಿಕಗಳನ್ನು ಬಳಸಿ ಸಸಿಗಳಲ್ಲಿ ಒಳ್ಳೆಯ ಗುಣ ಲಕ್ಷಣಗಳು ಬರುವಂತೆ ಮಾಡಲು ಪ್ರಯತ್ನಿಸುವುದು ಉಂಟು. ಹೀಗೆ ಪಡೆದ ಕಬ್ಬುಗಳಲ್ಲಿ ಹಲವಾರು ಬಗೆಗಳಿದ್ದು ಮುಖ್ಯವಾದುವು, ಬಬ್ಬೂರು ಪಟ್ಟಿ, ಹೆಚ್.ಎಂ.544, ಹೆಚ್.ಎಂ.320, ಹೆಚ್.ಎಂ 661, ಇತ್ಯಾದಿ. ಕೊಯಮತ್ತೂರಿನ ಕಬ್ಬು ಸಂಶೋಧನ ಕೇಂದ್ರದಲ್ಲೂ ಕಬ್ಬಿನ ತಳೀಕರಣ ಪ್ರಯೋಗಗಳು ನಡೆಯುತ್ತಿದ್ದು, ಅಲ್ಲಿ ಹಲವಾರು ವಿಶ್ವವಿಖ್ಯಾತ ಕಬ್ಬಿನ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವೆಲ್ಲಾ ತಮ್ಮ ಗಟ್ಟಿತನಕ್ಕೂ ರೋಗನಿರೋಧಕ ಶಕ್ತಿಗೂ ಹೆಚ್ಚಿನ ಪ್ರಮಾಣದ ಇಳುವರಿಗೂ ವಿವಿಧ ಭೂ ಗುಣಗಳಿಗೆ ಹೊಂದಿಕೊಳ್ಳುವ ಶಕ್ತಿಗೂ ಹೆಸರಾಗಿವೆ. ಇವುಗಳಲ್ಲಿ ಮುಖ್ಯವಾದವು ಕೊ, 213, ಕೊ.290, ಕೊ.312, ಕೊ.347, ಕೊ.331, ಕೊ.419, ಕೊ.421, ಮುಂತಾದುವು. ಬರಿಯ ಕಬ್ಬಿನ ವಿವಿಧ ತಳಿಗಳ ನಡುವೆಯಲ್ಲದೆ ಕಬ್ಬಿಗೂ ಜೋಳ, ಬಿದಿರು ಮುಂತಾದ ಜಾತಿಗಳಿಗೂ ನಡುವೆ ಅಡ್ಡತಳಿಯೆಬ್ಬಿಕೆಯ ಪ್ರಯೋಗಗಳು ನಡೆಯುತ್ತಿವೆ. ಕೊ.351, ಕೊ.352, ಕೊ.357, ಮುಂತಾದುವು ಕಬ್ಬು ಮತ್ತು ಜೋಳಗಳ ನಡುವಣ ಅಡ್ಡ ತಳಿಯೆಬ್ಬಿಕೆಯಿಂದ ಪಡೆಯಲಾದ ಕಬ್ಬಿನ ತಳಿಗಳು.

**ಸಸ್ಯ ವಿವರಣೆ :** ಕಬ್ಬಿನ ಗಿಡವನ್ನು ಕಾಂಡ, ಬೇರು, ಮತ್ತು ಎಲೆಗಳೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಕಾಂಡವನ್ನು ಜಲ್ಲೆಯೆಂದು ಕರೆಯುತ್ತಾರೆ. ಕಾಂಡದಲ್ಲಿ ಭೂಮಿಯ ಒಳಗಿರುವ ಕೂಳೆ ಎಂಬ ಭಾಗ ಮತ್ತು ನೆಲದ ಮೇಲೆ ನೇರವಾಗಿ ಬೆಳೆಯುವ ಭಾಗಗಳನ್ನು ಗುರುತಿಸಬಹುದು. ಎರಡು ಭಾಗಗಳಲ್ಲಿಯೂ ಅನೇಕ ಗಿಣ್ಣುಗಳನ್ನು ನೋಡಬಹುದು. ಈ ಗಿಣ್ಣುಗಳು ನೆಲದ ಮೇಲಿನ ಕಾಂಡಭಾಗದಲ್ಲಿ ದೂರದೂರವಾಗಿದ್ದು, ನಿರ್ದಿಷ್ಟ ಅಂತರವನ್ನು ಹೊಂದಿರುತ್ತವೆ. ನೆಲದೊಳಗಿನ ಭಾಗದಲ್ಲಿ ಅವುಗಳ ನಡುವಣ ಅಂತರ ಕಡಿಮೆ. ಗಿಣ್ಣುಗಳಲ್ಲಿ ಕಾಂಡವನ್ನು ಸುತ್ತುವರಿದಂತೆ ಬಿಳಿಯ ಪಟ್ಟಿ ಇದೆ. ಇದರ ಮೇಲೆಲ್ಲಾ ಅನೇಕ ಚುಕ್ಕೆಗಳಿವೆ. ಒಂದೊಂದು ಚುಕ್ಕೆಯೂ ಒಂದೊಂದು ಬೇರಿನ ಮೊಳಕೆಯನ್ನು ಪ್ರತಿನಿಧಿಸುತ್ತದೆ. ಅಲ್ಲದೆ ಒಂದೊಂದು ಗಿಣ್ಣಿನಲ್ಲೂ ಒಂದೊಂದು ಕಣ್ಣು ಇದೆ. ಪರ್ಯಾಯವಾಗಿ ಜೋಡಣೆಗೊಂಡಿರುವ ಈ ಕಣ್ಣುಗಳು ವಿವಿಧ ಬಗೆಯ ಕಬ್ಬುಗಳಲ್ಲಿ ವಿವಿಧ ಆಕಾರಗಳನ್ನು ಹೊಂದಿವೆ. ಒಂದೊಂದು ಕಣ್ಣು ಒಂದೊಂದು ಕಂಕುಳು ಮೊಗ್ಗು. ಜಲ್ಲೆಯನ್ನು ತುಂಡುಗಳಾಗಿ ಕತ್ತರಿಸಿ ನೆಲದಲ್ಲಿ ನೆಟ್ಟು ಬೆಳೆಸಿದಾಗ ಬೇರಿನ ಮೊಳಕೆಗಳು ಬೇರುಗಳಾಗಿಯೂ ಕಣ್ಣು ಹೊಸ ಕಬ್ಬಿನ ಕಾಂಡವಾಗಿಯೂ ಬೆಳೆಯುತ್ತವೆ. ಕಾಂಡ ಸಾಮಾನ್ಯವಾಗಿ 3–4 ಮೀ ಎತ್ತರ ಬೆಳೆಯುತ್ತದೆ. ವ್ಯವಸಾಯದ ರೀತಿ ಹಾಗೂ ಭೂಗುಣ ಉತ್ತಮವಾಗಿದ್ದರೆ ಸು. 9 ಮೀ ವರೆಗೂ ಬೆಳೆಯುವುದುಂಟು. ಅದರ ಅಗಲ 1–8 ಸೆಂ.ಮೀ ವರೆಗೂ ವ್ಯತ್ಯಾಸವಾಗುತ್ತದೆ. ಸಾಧಾರಣವಾಗಿ ಬುಡಭಾಗದಲ್ಲಿ ದಪ್ಪ ಹೆಚ್ಚು. ಮೇಲಕ್ಕೆ ಹೋದಂತೆಲ್ಲಾ ಕ್ರಮೇಣ ಸಣ್ಣದಾಗುತ್ತದೆ. ಕಾಂಡದ ಬಣ್ಣದಲ್ಲೂ ವೈವಿಧ್ಯವಿದೆ. ವಿವಿಧ ರೀತಿಯ ಹಸಿರು ಛಾಯೆ, ಹಳದಿ, ನಸುಗೆಂಪು, ಕೆಂಪು–ಇವು ಸಾಮಾನ್ಯ. ಕೆಲವು ಕಬ್ಬುಗಳಲ್ಲಿ ಉದ್ದುದ್ದನೆಯ ಪಟ್ಟಿಗಳೂ ಇವೆ. ಅಂತರ ಗಿಣ್ಣುಗಳ

ಮೇಲೆಲ್ಲಾ ತೆಳುವಾದ ಮಯಣದ ಲೇಪವಿದೆ. ಸಾಮಾನ್ಯವಾಗಿ ಒಂದು ಗಿಡಕ್ಕೆ ಒಂದೇ ಪ್ರಮುಖ ಕಾಂಡವಿದೆಯಾದರೂ ಕೆಲವು ಭಾರಿ ಕೆಳಭಾಗದ ಗಿಣ್ಣುಗಳಿಂದ ಹಲವಾರು ರೆಂಬೆಗಳಂಥ ದ್ವಿತೀಯ ಮತ್ತು ತೃತೀಯ ಶ್ರೇಣಿಯ ಜಲ್ಲೆಗಳು ಬೆಳೆಯುತ್ತವೆ.

ಬೇರು ತೊಡಕು ಬೇರಿನ ಸಮೂಹಕ್ಕೆ ಸೇರಿದ್ದು. ಸ್ಥೂಲವಾಗಿ ಎಲ್ಲಾ ಬೇರುಗಳು ಒಂದೇ ರೀತಿಯವಾಗಿದ್ದರೂ ಮೂರು ಬಗೆಯವನ್ನು ಗುರುತಿಸಬಹುದು. 1. ಆಳಕ್ಕೆ ಬೆಳೆಯದೆ ಮೇಲ್ಮಟ್ಟದಲ್ಲೇ ಹರಡಿ ಕವಲೊಡೆದು ಬೆಳೆಯುವ ಮೇಲ್ಪದರದ ಬೇರುಗಳು. 2. ದಪ್ಪಗಾತ್ರದ ಬಿಳಿಯ ಬಣ್ಣದ ಆನಿಕೆ ಬೇರುಗಳು–ಇವು ಕಬ್ಬು ದೃಢವಾಗಿ ಬೆಳೆದು ನಿಲ್ಲಲು ಆಸರೆ ಒದಗಿಸುತ್ತವೆ. 3. ಕಾಂಡದ ತಳಭಾಗದಿಂದ ಭೂಮಿಯೊಳಕ್ಕೆ 3–4 ಮೀ. ಆಳಕ್ಕೆ ಇಳಿದು ಬೆಳೆಯಬಲ್ಲ ಹುರಿಬೇರುಗಳು–ಇವೇ ಭೂಮಿಯಿಂದ ನೀರು ಮತ್ತು ಆಹಾರವನ್ನು ಹೀರಿಕೊಳ್ಳುವ ಬೇರುಗಳು. ಕಾಂಡದ ಎರಡೂ ಪಾರ್ಶ್ವಗಳಲ್ಲಿ ಪರ್ಯಾಯ ಜೋಡಣೆಗೊಂಡಿರುವ ನೀಳವಾದ ಕತ್ತಿಯಂಥ ಎಲೆಗಳಿವೆ. ಒಂದು ಗಿಡಕ್ಕೆ ಸಾಮಾನ್ಯವಾಗಿ 10 ಎಲೆಗಳಿರುತ್ತವೆ. ಒಂದೊಂದು ಎಲೆಯೂ 1–1.3 ಮೀ. ಉದ್ದ ಮತ್ತು 5–7 ಸೆಂಮೀ ಅಗಲ ಇದೆ. ಎಲೆಯಲ್ಲಿ ಕವಚದಂಥ ಬುಡಭಾಗವೂ ನೀಳವಾದ ಅಲಗುಭಾಗವೂ ಇವೆ. ಇವೆರಡೂ ಕೂಡುವ ಸ್ಥಳದಲ್ಲಿ ಕಿವಿಯ ಆಲೆಯಂಥ ಆರಿಕಲ್ ಮತ್ತು ಡ್ಯೂಲ್ಯಾಪ್ ಎಂಬ ಬೆಳೆವಣಿಗೆಗಳಿವೆ. ಎಲೆಯ ಅಂಚು ಬಹುಸೂಕ್ಷ್ಮವಾದ ಗರಗಸದ ಹಲ್ಲಿನಂತಿದೆ. ಎಲೆಗಳ ನಾಳವಿನ್ಯಾಸ ಸಮಾನಾಂತರ ಮಾದರಿಯದು. ಎಲೆಯ ಬುಡ ಕಾಂಡದ ಸ್ವಲ್ಪಭಾಗವನ್ನು ಸುತ್ತಿಕೊಂಡಿದೆ. ಗಿಡ ಪೂರ್ಣ ಬೆಳೆದ ಮೇಲೆ ಅದರ ತುದಿಯಿಂದ ನೀಳವಾದ ಹೂ ಗೊಂಚಲು ಹೊರಬರುತ್ತದೆ. ವಿಪುಲವಾಗಿ ಕವಲೊಡೆದ ಇದು ಸಂಕೀರ್ಣ ಪುಷ್ಪಗುಚ್ಛ ಮಾದರಿಯದು. ಇದನ್ನು ಸೂಲಂಗಿ ಎನ್ನುತ್ತಾರೆ. ಹೂಗೊಂಚಲಿನ ಮಧ್ಯೆ ಒಂದು ಮುಖ್ಯ ಕಾಂಡವೂ(ರೇಕೀಸ್) ಅದರಿಂದ ಎಲ್ಲಾ ದಿಕ್ಕುಗಳಲ್ಲಿಯೂ ಹೊರಟುಬರುವ ಕವಲು, ಉಪಕವಲುಗಳೂ ಇವೆ. ಪ್ರತಿಯೊಂದು ಉಪಕವಲಿನ ಮೇಲೂ ಜೊತೆಜೊತೆಯಾಗಿ ಜೋಡಣೆಗೊಂಡಿರುವ ಅನುಷೂಕಿಗಳಿವೆ. (ಸ್ಪೈಕ್ ಲೆಟ್ಸ್) ಇವುಗಳಲ್ಲಿ ಒಂದಕ್ಕೆ ತೊಟ್ಟಿಲ್ಲ. ಇನ್ನೊಂದಕ್ಕೆ ಉದ್ದನೆಯ ತೊಟ್ಟಿದೆ. ಒಂದೊಂದು ಅನುಷೂಕಿಯಲ್ಲೂ ಎರಡು ಹೂಗಳಿವೆ. ಇವುಗಳಲ್ಲಿ ಒಂದು ಬರಡು ಇನ್ನೊಂದು ಫಲವತ್ತಾದುದು ಆಗಿವೆ. ಫಲವತ್ತಾದ ಹೂವಿನಲ್ಲಿ ಮೂರು ಕೇಸರಗಳು, ಒಂದು ಉಚ್ಚ ಸ್ಥಾನದ ಏಕಕೋಶಿ ಅಂಡಾಶಯವೂ ಇವೆ. ಶಲಾಕೆ ಎರಡಾಗಿ ಕವಲೊಡೆದಿದೆಯಲ್ಲದೆ ಹಕ್ಕಿಗಳ ಗರಿಯಂತಿದೆ. ಅನುಷೂಕಿಗಳ ಬುಡದಲ್ಲಿ ಉದ್ದನೆಯ ನಯವಾದ ಬಿಳಿಯ ಬಣ್ಣದ ಕೂದಲುಗಳಿವೆ. ಅಂಡಾಶಯದಲ್ಲಿ ಒಂದೇ ಅಂಡಕವಿದೆ. ಹೂಗಳು ಸಾಮಾನ್ಯವಾಗಿ ರಾತ್ರಿ ಅಥವಾ ಬೆಳಗಿನ ಜಾವ ಅರಳುತ್ತವೆ. ಹೂಗಳು ಅರಳಿದಾಗ ಮೊದಲು ಶಲಾಕೆ ಹೊರಬರುತ್ತದೆ. ಅನಂತರ ಕೇಸರಗಳು ಪರಾಗವನ್ನು ಹೊರಚೆಲ್ಲುತ್ತವೆ. ಅಲ್ಲದೆ ಕಬ್ಬಿನಲ್ಲಿ ಅಂಡಕಗಳು ಪರಾಗವೂ ಬಹುತೇಕ ಬಂಜೆಯಾಗಿರುತ್ತವೆ. ಪರಾಗದ ಮೊಳೆಯುವ ಸಾಮರ್ಥ್ಯವೂ ಬಹಳ ಸ್ವಲ್ಪ ಸಮಯ ಮಾತ್ರವಿರುತ್ತದೆ. ತತ್ಪರಿಣಾಮವಾಗಿ ಕಬ್ಬಿನಲ್ಲಿ ಬೀಜೋತ್ಪಾದನೆ ಕಡಿಮೆ. ಬೀಜಗಳು ಉತ್ಪತ್ತಿಯಾದರೂ ಅವು ಬಹಳ ಸೂಕ್ಷ್ಮವಾದವು ಮತ್ತು ಅವುಗಳ ಮೊಳಕೆಯೊಡೆಯುವ ಸಾಮರ್ಥ್ಯ ಬಹಳ ದಿನ ಇರದು. ಇವೆಲ್ಲಾ ಕಾರಣಗಳಿಂದಾಗಿ ಕಬ್ಬಿನಲ್ಲಿ ಬೇರೆ ಬೇರೆ ತಳಿಗಳ ನಡುವೆ ಅಡ್ಡತಳಿಯೆಬ್ಬಿಕೆಯ ಪ್ರಯೋಗಗಳನ್ನು ನಡೆಸುವುದು ಬಹಳ ಕಷ್ಟ.

**ವ್ಯವಸಾಯ :** ಕಬ್ಬನ್ನು ವರ್ಷದ ಯಾವ ಕಾಲದಲ್ಲಾದರೂ ನೆಡಬಹುದು. ಆದರೆ ಚಳಿ ಹೆಚ್ಚಾಗಿದ್ದಾಗ ನೆಟ್ಟರೆ ಮೊಳಕೆ ಹೊರಡುವುದು ನಿಧಾನ. ಭೂಮಿ ಬಹಳ ಫಲವತ್ತಾಗಿರಬೇಕು. ಗೊಬ್ಬರವನ್ನು ಚೆನ್ನಾಗಿ ಹಾಕಿ ಅಧಿಕಪ್ರಮಾಣದಲ್ಲಿ ನೀರು ಹಾಯಿಸಿದರೆ ಬಹಳ ಉತ್ತಮ. ಸುತ್ತಮುತ್ತಲಿನ ಉಷ್ಣತೆಯೂ $80^0$ ಫಾ.ಗಿಂತ ಹೆಚ್ಚಾಗಿದ್ದರೆ ಚೆನ್ನ. ಭೂಮಿಯನ್ನು ಸಾಧ್ಯವಾದಷ್ಟು ಆಳವಾಗಿ ಉಳಬೇಕು. ಮೊದಲು 30–40 ಸೆಂ.ಮೀ. ಆಳಕ್ಕೆ ಉಳುಮೆಮಾಡುವುದು ಉತ್ತಮ. ಇದರಿಂದ ಕಬ್ಬಿನ ಬಿತ್ತನೆಯನ್ನು ಪೂರ್ಣವಾಗಿ ಮುಚ್ಚಿದಂತೆ ನೆಡಲು ಮುಂದೆ ಅದಕ್ಕೆ ಸಾಕಷ್ಟು ಮಣ್ಣನ್ನು ವಾರಿ ಹಾಕಲು ಅನುಕೂಲ. ಹೀಗೆ ಸಾಲುತೆಗೆದ ಅನಂತರ ನೀರು ಬಸಿಯಲು ಕಡಗುಗಳನ್ನು ನೀರು ಕಟ್ಟಲು ಅನುಕೂಲವಾಗುವಂತೆ ಅಲ್ಲಲ್ಲಿ ನೀರು ಕಾಲುವೆಗಳನ್ನು ತೆಗೆಯಬೇಕು. ಸಾಲುಗಳಲ್ಲಿ ನೀರು ಬಿಟ್ಟು ನೀರು ನಿಂತಿರುವಾಗಲೇ ಕಬ್ಬಿನ ಬಿತ್ತನೆಗಳನ್ನು ಒಂದರ ಪಕ್ಕ ಒಂದರಂತೆ ಜೋಡಿಸಿ ಕೆಸರಿನಲ್ಲಿ ತುಳಿದುಬಿಡಬಹುದು. ಇದೇ ಸಾಮಾನ್ಯ ಬಳಕೆಯಲ್ಲಿರುವ ಪದ್ಧತಿ. ಕೆಲವೆಡೆ ಪೂರ್ಣ ಕಬ್ಬನ್ನೇ ನೆಡಲಾಗುತ್ತದೆ. ಇತರೆಡೆ ಸಾಲಿನಲ್ಲಿ 10–15 ಸೆಂ.ಮೀ. ಅಂತರಕ್ಕೆ ಒಂದರಂತೆ 7–10 ಸೆಂ.ಮೀ. ಆಳದ ಗುಂಡಿಮಾಡಿ ಅದರಲ್ಲಿ 3–4 ಬಿತ್ತನೆ ನೆಡುವುದು ಉಂಟು. ಹಲವು ಪ್ರದೇಶಗಳಲ್ಲಿ ಗುಳಿ ಬಿತ್ತನೆ ಮಾಡುವ ಅಭ್ಯಾಸವಿದೆ. ಕಬ್ಬು ನೆಡುವ ಗದ್ದೆಗಳನ್ನು ಉತ್ತು ಹಸನುಗೊಳಿಸಿದ ಮೇಲೆ 1–1.3 ಮೀ. ಅಗಲದ ಮತ್ತು ಅನುಕೂಲಕ್ಕೆ ತಕ್ಕಂಥ ನೀಳದ ಮಡಿಗಳನ್ನು ಮಾಡಿ, ಅದರಲ್ಲಿ ಅಡಿಗೆ ಒಂದರಂತೆ ಗುಳಿ ತೋಡಿ, ಗುಳಿಗೊಂದರಂತೆ ಬಿತ್ತನೆ ಮಾಡುತ್ತಾರೆ. ಬಿತ್ತನೆ 2–5 ಸೆಂ.ಮೀ. ಆಳಕ್ಕಿಂತ ಹೆಚ್ಚಾಗಿರಕೂಡದು. ಬಿತ್ತನೆಯನ್ನು ಸರಿಯಾದ ರೀತಿಯಲ್ಲಿ ಇಟ್ಟು ತೇವಮಾಡಿದ ಸಾಲಿನಲ್ಲಿ ಕೈಯಿಂದ ಅಥವಾ ಕಾಲಿನಿಂದ ತುಂಡುಗಳನ್ನು ಅದುಮಬಹುದು. ಅವು ಒಂದು ಪಕ್ಕಕ್ಕೆ ಇರಬೇಕು. ರೀತಿ ಯಾವುದೇ ಇರಲಿ, ಗಿಣ್ಣಿನ ಕಣ್ಣು ಪಕ್ಕದಲ್ಲಿರುವಂತೆ ನೆಡುವುದು ಮುಖ್ಯ. ಇದರಿಂದ ಬಿತ್ತನೆಯಲ್ಲಿನ ಮೂರು ಕಣ್ಣುಗಳು ಅರಳಲು ಅನುಕೂಲವಾಗುತ್ತದೆ. ತುದಿಭಾಗದಲ್ಲಿರುವ ಮೊಗ್ಗು ಚೆನ್ನಾಗಿ ಬೆಳೆದು ಉತ್ತಮ ಕಬ್ಬಾಗುತ್ತದೆ. ತಳದಲ್ಲಿನ ಮೊಗ್ಗು ಬೆಳೆಯುವುದು ಬಹು ನಿಧಾನ. ಆದ್ದರಿಂದ ತುದಿಭಾಗದ ಕಬ್ಬು ತುಂಡುಗಳನ್ನು ಬಿತ್ತನೆಗಾಗಿ ಉಪಯೋಗಿಸಿದಲ್ಲಿ ಒಳ್ಳೆಯದು. ಹೆಚ್ಚು ಫಲವತ್ತಾದ ಭೂಮಿಯಲ್ಲಿ 4' ಅಂತರದ ಸಾಲುಗಳಲ್ಲಿಯೂ ಸಾಮಾನ್ಯ ಫಲವತ್ತಾದ ಭೂಮಿಯಲ್ಲಿ ಎರಡೂವರೆ ಅಡಿ ಅಂತರದ ಸಾಲುಗಳಲ್ಲಿಯೂ ನೆಡುವುದು ಉತ್ತಮವೆಂದು ಅನುಭವದಿಂದ ಕಂಡುಬಂದಿದೆ. ಒಂದು ಎಕರೆ ಪ್ರದೇಶಕ್ಕೆ ಉತ್ತಮವಾಗಿ ಆರಿಸಿದ 10,000 ಬಿತ್ತನೆ ತುಂಡುಗಳು ಸಾಕು.

ಕಬ್ಬಿನ ತಾಕು ಕಳೆರಹಿತವಾಗಿರುವುದು ಮುಖ್ಯ. ಬಿತ್ತನೆ ನೆಟ್ಟ ಎರಡು ವಾರಗಳಲ್ಲಿ ಮೊದಲ ಕಳೆ ತೆಗೆಯಬೇಕು. ಮುಂದೆಯೂ ಕಳೆಯಿಲ್ಲದಂತೆ ಎಚ್ಚರವಹಿಸಬೇಕು. ಹೋತುಬಂದಿದ್ದಲ್ಲಿ ಮೊಳೆತ ಬಿತ್ತನೆಗಳನ್ನು ನೆಟ್ಟು ಸರಿಪಡಿಸಬೇಕು. 6 ವಾರಗಳ ಅನಂತರ ಕಳೆ ತೆಗೆದು ನೀರು ಕಟ್ಟಿ ಹದವಿದ್ದಾಗ ಮೊದಲ ಮೇಲುಗೊಬ್ಬರ ಒದಗಿಸಿ ಸಾಲನ್ನು ಉತ್ತು ಮಣ್ಣು ಏರಿ ಹಾಕಬೇಕು. ಇದು ಬುಡಕ್ಕೆ ದೃಢತೆ ಒದಗಿಸುವುದಲ್ಲದೆ, ಗೊಬ್ಬರವನ್ನು ಮುಚ್ಚಿ, ಕಾಂಡಕೊರೆಯುವ ಹುಳದ ಬಾಧೆಯನ್ನು ಸ್ವಲ್ಪಮಟ್ಟಿಗೆ ತಡೆಗಟ್ಟಲು ಸಹಾಯಕವಾಗುತ್ತದೆ. 4 ವಾರಗಳ ಅನಂತರ ಇನ್ನೊಂದು ಸಲ ಅದೇ ರೀತಿ ಮುಂದೆ ಸೂಚಿಸಿರುವ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಒದಗಿಸಬೇಕು. ಕೊನೆಯದಾಗಿ, ಮೂರನೆಯ ಸಲ ಹೆಚ್ಚು ಪ್ರಮಾಣದಲ್ಲಿ ಸಾರಜನಕ ಗೊಬ್ಬರ ಒದಗಿಸಿ ಮಣ್ಣು ವಾರಿಹಾಕಬೇಕು. ನೀರು ಪೂರೈಕೆ ಸಂಪೂರ್ಣವಾಗಿರಬೇಕು. ಇಲ್ಲದಿದ್ದರೆ ಇಳುವರಿ ತಗ್ಗುತ್ತದೆ. ಅದರಲ್ಲೂ ಗೊಬ್ಬರ ಕೊಟ್ಟು, ಕೊನೆಯ ಸಲ ಮುರಿ ಮಾಡಿರುವ ಕಬ್ಬಿಗೆ ಮುಂದೆ 4–5 ತಿಂಗಳ ಕಾಲ ಹೆಚ್ಚು ನೀರಿನ ಆವಶ್ಯಕತೆ ಇದೆಯಾಗಿ ಒಣಗಲು ಬಿಡಕೂಡದು. ನೀರಿನ ಪೂರೈಕೆಗೆ ಗಮನವಿತ್ತಂತೆ ಹೆಚ್ಚಿನ ನೀರು ಬಸಿಯಲು ಅನುಕೂಲವೇರ್ಪಡಿಸಿ ಕಡಗುಗಳು ಪೂರ್ಣ ತೆರವಾಗಿದ್ದು, ಅಡಚಣೆಯಾಗದಂತೆ ಎಚ್ಚರವಹಿಸಬೇಕು. ಕಬ್ಬು ಬೆಳೆದಂತೆಲ್ಲಾ ತಳದ ಒಣ ತರಗನ್ನು ಕಬ್ಬಿನ ತೆಂಡೆಗೆ ಸುತ್ತಿ ಕಟ್ಟುತ್ತಾರೆ. ಇದರಿಂದ ಇಲಿಗಳ ಕಾಟ ಕಡಿಮೆಯಾಗಿ ಒಂದಕ್ಕೊಂದು ಆಸರೆಯಾಗಿ ಕಬ್ಬುಗಳು ಒರಗಿಬೀಳುವುದಿಲ್ಲ. ತಳದ ಎಲೆ ಗರಿಗಳು ಒಣಗುತ್ತಿದ್ದಂತೆಲ್ಲಾ ಅವನ್ನು ತೆಗೆದು ಕಬ್ಬು ಕಾಣುವಂತೆ ಏರ್ಪಡಿಸುವುದು ಸಾಮಾನ್ಯವಾಗಿದೆ. ನರಿ, ಇಲಿ ಮುಂತಾದುವು ಒಳಗೆ ಸೇರದಿರಲು ಇದರಿಂದ ಸಹಾಯಕವಾಗುತ್ತದೆ.

ಕಬ್ಬು ತನ್ನ ಪೂರ್ಣ ಬೆಳೆವಣಿಗೆಗೆ ಹೆಚ್ಚಿನ ಗೊಬ್ಬರದ ಅಂಶಗಳನ್ನು ಉಪಯೋಗಿಸುತ್ತದೆ. 40 ಟನ್ನಿನಷ್ಟು ಕಬ್ಬಿನ ಬೆಳೆ ಭೂಮಿಯಿಂದ 105 ಪೌಂಡು ನೈಟ್ರೋಜನ್; 63 ಪೌಂಡ್ ರಂಜಕ; 315 ಪೌಂಡ್ ಪೊಟ್ಯಾಷ್; 75 ಪೌಂಡು ಸುಣ್ಣ ಮತ್ತು ವಿವಿಧ ಅಂತರದ ಇತರ ಆಹಾರಾಂಶವನ್ನು ಉಪಯೋಗಿಸಿಕೊಳ್ಳುತ್ತವೆಂದು ನೋಯಿಲ್ಬೀರ್ ವಿವರಿಸಿದ್ದಾರೆ.

ಸಾಮಾನ್ಯವಾಗಿ ಕಬ್ಬು ಬೆಳೆದ ಜಮೀನುಗಳಲ್ಲಿ ಅದರ ಬೇರುಗಳಿಂದಲೇ ಅರ್ಧದಿಂದ ಒಂದು ಟನ್ನು ಸಾವಯವ ವಸ್ತುಗಳು ಉತ್ಪನ್ನವಾಗುತ್ತವೆಂದು ತಿಳಿದುಬಂದಿದೆ. ತಳಭಾಗಗಳನ್ನು ಭೂಮಿಗೆ ಉತ್ತುಬಿಟ್ಟಲ್ಲಿ ಅದರಿಂದಲೇ ಸಾಕಷ್ಟು ಸಾವಯವ ವಸ್ತುಗಳು ಉತ್ಪನ್ನವಾಗುತ್ತದೆ. ಸಾಧ್ಯವಾದಲ್ಲೆಲ್ಲಾ ಹಸಿರೆಲೆ ಗೊಬ್ಬರದ ಬೆಳೆಗಳನ್ನು ಬೆಳೆಸಿ ಉತ್ತು ಬಿಡಬೇಕು. ಇದಕ್ಕೆ ದೈಂಚ, ಅಪಸಣಬು ಅಥವಾ ಸಸ್ಬೇನಿಯ ಅನುಕೂಲವಾದದ್ದು. ಬಿತ್ತನೆಗೆ ಮುಂಚೆ ಎಕರೆಗೆ 20–25 ಗಾಡಿ ಕಾಂಪೋಸ್ಟ್ ಗೊಬ್ಬರವನ್ನು ಚೆಲ್ಲಿ ಉತ್ತುಬಿಡಬೇಕು. ಆ ನಂತರ ಸಾಲು ತೆಗೆಯಬೇಕು. ಸೂಪರ್ ಫಾಸ್ಫೇಟ್ ಮತ್ತು ಪೊಟ್ಯಾಷ್ ಗೊಬ್ಬರಗಳನ್ನು ಬಿತ್ತನೆ ನೆಡುವ ಮುನ್ನ ಸಾಲುಗಳಲ್ಲಿ ಹರಡಬೇಕು.

ಸಾಮಾನ್ಯವಾಗಿ ಎಕರೆಗೆ 200ಪೌಂಡು ಸಾರಜನಕ, 100 ಪೌಂಡು ರಂಜಕ ಮತ್ತು 100 ಪೌಂಡು ಪೊಟ್ಯಾಷ್ ಒದಗಿಸುವುದು ಉತ್ತಮ. ಈ ಪ್ರಮಾಣ ವಿವಿಧ ಭೂ ಗುಣಗಳಿಗನುಸಾರವಾಗಿ ಮಾರ್ಪಾಡಬಹುದು.

**ಬೆಳೆವಣಿಗೆಯ ಹಂತಗಳು :** ಕಬ್ಬಿನ ಪೂರ್ಣ ಬೆಳೆವಣಿಗೆಯನ್ನು 4 ಮುಖ್ಯ ಹಂತಗಳನ್ನಾಗಿ ವಿಂಗಡಿಸಬಹುದು. 1. ಮೊಳಕೆ ಹಂತ : ಕಬ್ಬಿನ ಬಿತ್ತನೆಯಲ್ಲಿ ಸಾಧಾರಣವಾಗಿ 3 ಕಣ್ಣುಗಳಿರುತ್ತವೆ. ಬಿತ್ತನೆ ಸರಿಯಾಗಿದ್ದಲ್ಲಿ ಆ ಮೂರೂ ಮೊಳೆತು ಕಬ್ಬಾಗಿ ಬೆಳೆಯುತ್ತವೆ. ಆ ಕಣ್ಣುಗಳಲ್ಲಿ ಬೆಳೆಯುವ ಕಬ್ಬಿನ ಅಂಕುರಾಂಶವಿರುವುದರಿಂದ ಅದು ಬೆಳೆಯಲು ಸುಲಭವಾಗುತ್ತದೆ. ಬಿತ್ತನೆ ಸರಿಯಾಗಿದ್ದು, ಕಣ್ಣುಗಳು ದೃಢವಾಗಿದ್ದಲ್ಲಿ ಮೊಳಕೆ ಚೆನ್ನಾಗಿ ಹೊರಟು ಗಿಡ ಬೆಳೆಯುತ್ತದೆ. ಇದಕ್ಕೆ ಬಿತ್ತನೆಯಲ್ಲಿನ ಆಹಾರಾಂಶ ಮುಖ್ಯ. ಕಬ್ಬು

ಹಳೆಯದಾಗಿ ಬಿತ್ತನೆಯ ಬಹುಭಾಗ ಬೆಂಡಾಗಿದ್ದರೆ, ಗಿಡ ದೃಢವಾಗಿ, ಆರೋಗ್ಯವಾಗಿ ಬೆಳೆಯುವುದಿಲ್ಲ. ಜಲ್ಲೆಯ ಮೇಲ್ಭಾಗ ಬಿತ್ತನೆಗೆ ಸಮಂಜಸವಾಗಿದ್ದು, ಮೊಳಕೆಯೂ ಉತ್ತಮವಾಗಿರುತ್ತವೆ. ತಳದ ಬಿತ್ತನೆ ಉಪಯೋಗಿಸಿದಲ್ಲಿ ಮೊಳಕೆ ಸರಿಯಾಗಿ ಹೊರಡುವುದಿಲ್ಲ. ಬಿತ್ತನೆಯನ್ನು ನೆಡುವಾಗ ಕಣ್ಣುಗಳೂ ಪಕ್ಕಕ್ಕಿರುವಂತೆ ಎಚ್ಚರಿಸಬೇಕು. ವಾತಾವರಣದ ವ್ಯತ್ಯಾಸ ಬೆಳೆಯಮೇಲೆ ಪ್ರಭಾವ ಬೀರುತ್ತವೆ. ಅತಿ ಶೀತ ವಾತಾವರಣವೂ ಭೂಮಿಯಲ್ಲಿ ತೇವವಿಲ್ಲದಿರುವಿಕೆಯೂ ಉತ್ತಮ ವ್ಯವಸಾಯವಿಲ್ಲದೆ ಭೂಮಿಯಲ್ಲಿ ಬೇರುಗಳಿಗೆ ಉಸಿರಾಡಲು ಅನುಕೂಲವಿಲ್ಲದಿರುವುದೂ ಆಳವಾದ ನೆಡುವಿಕೆಯೂ ಮೊಳಕೆಯನ್ನು ನಿಧಾನಗೊಳಿಸಿ ಅಡಚಣೆಯುಂಟುಮಾಡುತ್ತದೆ.

**2. ತೆಂಡೆಹಂತ :** ಉತ್ತಮ ಫಸಲು ದೊರಕಲು ಹೆಚ್ಚಾಗಿ ಮರಿಕಬ್ಬು ಉತ್ಪನ್ನವಾಗಬೇಕು. ಮರಿಕಬ್ಬಿನ ಉತ್ಪನ್ನವನ್ನು ತೆಂಡೆಹೊಡೆಯುವುದು ಎನ್ನುತ್ತಾರೆ. ಕಬ್ಬಿನ ಜೀವನವಿಡೀ ಸತತವಾಗಿ ಮರಿಕಬ್ಬುಗಳು ಉತ್ಪನ್ನವಾಗುತ್ತಲೇ ಇರುತ್ತವೆ. ಇವು ಭೂಮಿಯ ಒಳಗಿನ ಕಾಂಡಭಾಗದಿಂದ ಹೊರಗಾಣುತ್ತವೆ. ಮೊದಲು ಪಕ್ಕಕ್ಕೆ ಹರಡಿದಂತಿದ್ದರೂ ಮುಂದೆ ನೇರವಾಗಿ ಬೆಳೆಯುತ್ತವೆ. ಗಿಡಗಳು ಎಳೆಯ ವಯಸ್ಸಿನವಾಗಿರುವಾಗ ಈ ಹೊಸ ಕಾಂಡಗಳಿಗೆ ಬೆಳೆಯಲು ಯಾವ ತೊಡಕೂ ಇರುವುದಿಲ್ಲ. ಆದರೆ ಹೆಚ್ಚಾಗಿ ಬೆಳೆದ ಅನಂತರ ಹೊಸತಾಗಿ ಉತ್ಪನ್ನವಾಗುವ ಮರಿಕಬ್ಬುಗಳು ಸೂರ್ಯರಶ್ಮಿ ಸಾಕಾಗದೆ ನಶಿಸಬಹುದು. ಕಬ್ಬು ಮುಕ್ಕಾಲುಭಾಗ ಬೆಳೆದಿರುವಾಗ, ಹುಟ್ಟುವ ಮರಿಕಬ್ಬುಗಳು ಬಹುದಪ್ಪವಾಗಿ ಆಕರ್ಷಕವಾಗಿ ಕಂಡರೂ ಅದರಲ್ಲಿ ಸಕ್ಕರೆ ಅಂಶ ಬಹಳ ಕಡಿಮೆಯಾಗಿದ್ದು ಅವನ್ನು ನೀರುಕಬ್ಬು ಎಂದು ಕರೆಯುತ್ತಾರೆ. ಇದು ಸಕ್ಕರೆ ಉತ್ಪಾದನೆಗೆ ಅನುಕೂಲವಲ್ಲ ದಿದ್ದರೂ ಉತ್ತಮ ಬಿತ್ತನೆಯಾಗುತ್ತದೆ. ಮರಿಕಬ್ಬುಗಳು ಹೆಚ್ಚಾಗಿ ಉತ್ಪನ್ನವಾಗಲು ಅನೇಕ ಅಂಶಗಳು ಸಹಾಯಕವಾಗುತ್ತದೆ. ಬಿಸಿಲಿನ ಬೇಗೆ ಹೆಚ್ಚಾದಲ್ಲಿ ಮರಿ ಕಬ್ಬುಗಳು ಹೆಚ್ಚುತ್ತವೆ. ಉತ್ತಮ ಗೊಬ್ಬರಗಳ ಪೂರೈಕೆ ಅದರಲ್ಲೂ ರಂಜಕಾಂಶದ ಹೆಚ್ಚಳ ಹೆಚ್ಚಿನ ಮರಿ ಕಬ್ಬುಗಳು ಉತ್ಪನ್ನವಾಗುವುದಕ್ಕೆ ಸಹಾಯಕ.

**3. ರಸತುಂಬುವ ಹಂತ :** ಕಬ್ಬಿನ ಬೆಳೆವಣಿಗೆ ಅದರ ವಯಸ್ಸನ್ನನುಸರಿಸಿದೆ. ಪ್ರಾರಂಭದಲ್ಲಿ ಕಬ್ಬಿನ ಆಹಾರ ಉತ್ಪಾದನೆಯೆಲ್ಲ, ಅದರ ಬೆಳೆವಣಿಗೆಗಾಗಿಯೇ ಖರ್ಚಾಗುತ್ತದೆ. ಆಗ ಸಾರಜನಕಾಂಶ ಮಾತ್ರ ಹೆಚ್ಚಾಗಿದ್ದಲ್ಲಿ ಕಾಂಡಕ್ಕೆ ದೃಢತೆ ಒದಗಿ ಗಿಣ್ಣುಗಳು ದಪ್ಪನಾಗಲು ಸಹಾಯಕವಾಗುತ್ತದೆ. ಭೂಮಿಯಲ್ಲಿನ ತೇವಾಂಶ ಬೆಳೆವಣಿಗೆಗೆ ಸಹಾಯಕ. ಉಷ್ಣಾಂಶವೂ ಹೆಚ್ಚಿನ ಪ್ರಭಾವ ಬೀರುತ್ತದೆ. ಉಷ್ಣತೆ $60^0$ ಫಾ ಗಿಂತ ಕಡಿಮೆ ಅಥವಾ $90^0$ ಫಾ ಗಿಂತ ಹೆಚ್ಚಾಗಿದ್ದಲ್ಲಿ ಕಬ್ಬಿನ ಬೆಳೆವಣಿಗೆ ಕುಂಠಿತವಾಗುತ್ತದೆ. ಬಲಿತು ರಸಗೂಡುತ್ತಿದ್ದಂತೆ ಕಬ್ಬಿನ ಎಲೆಗಳಿಂದ ಉತ್ಪನ್ನವಾದ ಆಹಾರಾಂಶಗಳಲ್ಲಿ ಸ್ವಲ್ಪಭಾಗ ಹೊಸ ಅಂಗಾಂಗಳ ರಚನೆಗೂ ಸ್ವಲ್ಪ ಭಾಗ ಶಕ್ತಿರೂಪವಾಗಿ ಉಪಯುಕ್ತವಾಗಿ, ಮಿಕ್ಕಂಶವೆಲ್ಲ ಸಕ್ಕರೆಯಾಗಿ ಕಾಂಡದಲ್ಲಿ ಹೆಚ್ಚಾದಂತೆ ಕಬ್ಬು ಪಕ್ವವಾಯಿತೆಂದು ಪರಿಗಣಿಸಲಾಗುತ್ತದೆ. ಸಕ್ಕರೆಯ ಅಂಶ ಗಿಣ್ಣಿನಿಂದ ಗಿಣ್ಣಿಗೆ ವ್ಯತ್ಯಾಸಹೊಂದುತ್ತದೆ. ತಳಭಾಗದ ವಯಸ್ಸಾದ ಗಿಣ್ಣುಗಳಲ್ಲಿ ಹೆಚ್ಚು ಸಕ್ಕರೆ ಶೇಖರವಾಗುತ್ತದೆ. ಮೇಲ್ಭಾಗದ ಎಳಸು ಗಿಣ್ಣುಗಳ ಮಧ್ಯೆ ಸಕ್ಕರೆ ಹೆಚ್ಚಾಗಿರುವುದಿಲ್ಲ. ಕಬ್ಬು ಪಕ್ವವಾಗಲು ಜಾತಿ, ಗೊಬ್ಬರ ಪೂರೈಕೆ ನೀರು ಮತ್ತು ನಾಟಿಯ ಕಾಲಾವಧಿ ಸಹಾಯಕ.

**4. ಸೂಲಂಗಿ ಹಂತ :** ಕಬ್ಬಿನ ಬೆಳಸು ಕಾಂಡದ ತುಂಡುಗಳಿಂದಾಗುವುದರಿಂದ ಸೂಲಂಗಿ ಮುಖ್ಯವಲ್ಲ. ಅಲ್ಲದೆ, ಎಲ್ಲದರಲ್ಲೂ ಸೂಲಂಗಿ ಬರುವುದಿಲ್ಲ. ಸೂಲಂಗಿ ಬರುವ ಜಾತಿಗಳಲ್ಲಿ ಸೂಲಂಗಿ ಉಂಟಾದರೆ ಕಬ್ಬಿನ ಬೆಳೆವಣಿಗೆ ಪೂರ್ಣ ನಿಂತಂತೆಯೇ. ಅದು ಕಾಲಮಿತಿಗೆ ಒಳಪಟ್ಟು, ಅಕ್ಟೋಬರ್–ನವೆಂಬರ್ ವೇಳೆ ಮಾತ್ರ ಹೊರಬೀಳುತ್ತದೆ. ಸೂಲಂಗಿ ಬರಲು ಕಬ್ಬಿನ ವಯಸ್ಸು ಮುಖ್ಯ.

**ರೋಗಗಳು :** ಕಬ್ಬಿನ ಬೆಳೆಗೆ ಹಲವಾರು ಬಗೆಯ ಕೀಟಗಳು ತಗಲುತ್ತವೆ. ಇವುಗಳಲ್ಲಿ ಕಾಂಡ ಕೊರೆಯುವ ಹುಳು, ಪೈರಿಲ್ಲ ಮತ್ತು ಸುಳಿ ಅಥವಾ ತುದಿ ಕೊರೆಯುವ ಹುಳುಗಳು ಮುಖ್ಯವಾದುವು. ಕಾಂಡ ಕೊರೆಯುವ ಹುಳುಗಳಲ್ಲಿ ಹಲವಾರು ಜಾತಿಗಳಿವೆ. ಮುಖ್ಯವಾದುವು ಅರ್ಗೈರಿಯ ಸ್ಟಿಕ್ಟಿಕ್ರಾಸ್ಸಿಸ್, ಡೈಯಾಟ್ರಿಯ ಮತ್ತು ಸ್ಕಿರ್ಪೋಫೇಗ ನಿವೆಲ್ಲ ಎಂಬುವು. ಇವೆಲ್ಲ ಕಬ್ಬಿನ ಕಾಂಡವನ್ನು ಕೊರೆದು, ಮಧ್ಯ ಸುಳಿ ಒಣಗುವಂತೆ ಮಾಡಿ ಎಳೆಯ ಪೈರಿಗೆ ಅತಿ ಹೆಚ್ಚಿನ ನಷ್ಟವುಂಟುಮಾಡುತ್ತವೆ. ಸುಳಿ ಕೊರೆಯುವ ಹುಳು ಸಾಮಾನ್ಯವಾಗಿ ಕಬ್ಬಿನ ಎಳೆಯ ತುದಿಗಳನ್ನು ಕೊರೆದು ಅದರ ಬೆಳೆವಣಿಗೆಯನ್ನು ಕುಂಠಿತಗೊಳಿಸುತ್ತದೆ. ತುದಿಯಲ್ಲಿರುವ ಎಲೆಗಳು ನಾಶವಾಗುವುದಲ್ಲದೆ ಮಧ್ಯ ಎಲೆಗಳಲ್ಲಿ ತೂತುಗಳು ಉಂಟಾಗಿ, ಉಳಿದೆಲ್ಲ ಎಲೆಗಳ ಅಂಚುಗಳಲ್ಲೂ ಕುಚ್ಚುಗಳು ಕಾಣಬರುತ್ತವೆ. ಸುಳಿ ಹಾಳಾಗುವುದರಿಂದ ಕಬ್ಬಿನ ತುದಿಯಲ್ಲಿರುವ ಮೊಗ್ಗುಗಳು ಮೊಳೆಯಲಾರಂಭಿಸುತ್ತವೆ. ಇದರಿಂದ ಕಬ್ಬಿನ ತುದಿ ಕುಚ್ಚಿನಂತೆ ಕಾಣುತ್ತದೆ. ಇವನ್ನು ನಿರ್ಮೂಲ ಮಾಡುವುದು ಕಷ್ಟವಾದರೂ ಇವುಗಳ ಮೇಲೆ ಪರಾವಲಂಬಿಯಾದ ಒಂದು ಬಗೆಯ ಕಣಜವನ್ನು ಕಬ್ಬಿನ ಗದ್ದೆಗಳಲ್ಲಿ ಬಿಟ್ಟು ಅದು ಈ ಹುಳುಗಳನ್ನು ತಿಂದು ನಾಶಪಡಿಸುವಂತೆ ಮಾಡುವ ಕ್ರಮವೂ ಇದೆ. ಪೈರಿಲ್ಲ ಹುಳುವೂ ಕಬ್ಬಿನ ಒಂದು ಮುಖ್ಯ ಕೀಟ ಪಿಡುಗೆನಿಸಿದೆ. ಇದು ಸಾಮಾನ್ಯವಾಗಿ ಎಲೆಗಳ ತಳಭಾಗದಲ್ಲಿದ್ದು ಸಸಿಗಳ ರಸವನ್ನು ಹೀರಿ ಜೀವಿಸುತ್ತದೆ. ಹೀಗೆ ಲಕ್ಷಾಂತರ ಕೀಟಗಳು ರಸ ಹೀರುವುದರಿಂದ ಎಲೆಗಳೆಲ್ಲ ಹಳದಿಯಾಗಿ ಸುಕ್ಕುಗಟ್ಟುತ್ತವೆ. ಅಲ್ಲದೆ ಕಬ್ಬಿನ ಮೈಯಿಂದ ರಸ ಜಿನುಗುವುದರಿಂದ ಅದರ ಮೇಲೆಲ್ಲ ಬೂಷ್ಟು ಬೆಳೆಯುವ ಸಂಭವವೂ ಉಂಟು. ಇದರಿಂದಾಗಿ ಕಬ್ಬುಗಳಲ್ಲಿನ ಸಕ್ಕರೆ ಅಂಶ ಕಡಿಮೆಯಾಗುತ್ತದೆ. ರಸ ಹೀರಿದಾಗ ಕೀಟಗಳೂ ತಮ್ಮ ದೇಹದಿಂದ ಸಿಹಿರಸವನ್ನು ಜಿನುಗಿಸುತ್ತವೆ. ಇವನ್ನು ಹಲವು ಜಾತಿ ಇರುವೆಗಳು ಹೀರುತ್ತವೆ. ಅದಕ್ಕಾಗಿ ಇರುವೆಗಳು ಕೀಟದ ಮರಿಗಳನ್ನು ಕಬ್ಬಿನಿಂದ ಕಬ್ಬಿಗೆ ಕೊಂಡೊಯ್ಯುವುದುಂಟು. ಇವಲ್ಲದೆ ಕಬ್ಬಿನ ಮಿಡತೆ, ಬಿಳಿನೊಣ, ಗೆದ್ದಲು, ನುಸಿ ಮುಂತಾದ ಕೀಟಗಳೂ ಗಣನೀಯ ಪ್ರಮಾಣದಲ್ಲಿ ಕಬ್ಬಿನ ಬೆಳೆಯನ್ನು ನಷ್ಟಗೊಳಿಸುವುದುಂಟು. ಬರಿಯ ಕೀಟಗಳಲ್ಲದೆ ಇಲಿ, ನರಿ, ಆನೆ, ಹಂದಿ ಮುಂತಾದುವೂ ಕಬ್ಬಿನ ಬೆಳೆಯ ಪ್ರಮುಖ ಶತ್ರುಗಳೆನಿಸಿವೆ.

ಕಬ್ಬಿಗೆ ಹಲವು ಬೂಷ್ಟು ರೋಗಗಳೂ ತಗಲುತ್ತವೆ. ಮುಖ್ಯವಾದುವು ತುಕ್ಕುರೋಗ (ರಸ್ಟ್), ಕಾಡಿಗೆರೋಗ (ಸ್ಮಟ್), ಕೆಂಪುಕೊಳೆರೋಗ (ರೆಡ್ ರಾಟ್), ಬಾಡುವ ರೋಗ (ವಿಲ್ಟ್), ಕಂದುಚುಕ್ಕೆರೋಗ, ಕಪ್ಪುಕೊಳೆರೋಗ ಮುಂತಾದುವು. ತುಕ್ಕುರೋಗ ಬಂದಾಗ ಎಲೆಗಳ ಮೇಲೆ ಕಿತ್ತಳೆವರ್ಣದ ಚುಕ್ಕೆಗಳು ಮೂಡುತ್ತವೆ. ಈ ಚುಕ್ಕೆಗಳು ಎಲೆಯನ್ನು ಪೂರ್ಣ ಆವರಿಸಿರುವುದರಿಂದ ಎರಡು ಕಡೆಯಲ್ಲೂ ಎದ್ದುಕಾಣುತ್ತವೆ. ಕಾಡಿಗೆರೋಗ (ಸ್ಮಟ್) ಹೊಂದಿರುವ ಕಬ್ಬಿನ ತುದಿಯಿಂದ ನೀಳವಾಗಿ ಕೆಳಬಾಗಿರುವ ಚಾಟಿಯಂಥ ಅಚ್ಚಕಪ್ಪು ಬೆಳೆವಣಿಗೆ ಕಂಡು ಬರುತ್ತದೆ. ಇದು ಎಲೆಯಲ್ಲಿ ರೋಗದಿಂದ ಉಂಟಾದ ಮಾರ್ಪಾಟು. ಪ್ರಾರಂಭದಲ್ಲಿ ಅದರ ಸುತ್ತ ಬಿಳಿಯ ಬಣ್ಣದ ಪೊರೆಯೊಂದಿದ್ದು, ಅದು ಬೆಳೆದಂತೆಲ್ಲ ಆ ಪೊರೆ ಸೀಳಿ ಕಪ್ಪು ಪುಡಿಯಂಥ ಬೀಜಾಣುಗಳು ಹೊರಬರುತ್ತವೆ. ಕೆಂಪುಕೊಳೆರೋಗದಿಂದ ಕಬ್ಬಿನ ತುದಿಯಲ್ಲಿನ ಎಲೆಗಳಲ್ಲಿ 2 ಅಥವಾ 4ನೆಯ ಎಲೆ ಇದ್ದಕ್ಕಿದ್ದಂತೆ ಮಾಸಲು ಹಳದಿ ಬಣ್ಣಕ್ಕೆ ತಿರುಗಿ ಬಾಡಲಾರಂಭಿಸುತ್ತದೆ. ಆದರೆ ಅವುಗಳ ಮಧ್ಯಭಾಗ ಮಾತ್ರ ಅಚ್ಚಹಸಿರಾಗಿಯೇ ಉಳಿಯಬಹುದು. ರೋಗಪೀಡಿತ ಕಬ್ಬನ್ನು ಸೀಳಿನೋಡಿದಲ್ಲಿ ತಳದ ಗಿಣ್ಣುಗಳ ಬಳಿ ಕೆಂಪು ಬಣ್ಣವಿದ್ದು ಕಬ್ಬಿನಿಂದ ಕೊಳೆತ ಹುಳಿವಾಸನೆ ಬರುತ್ತಿರುತ್ತದೆ. ಹೀಗಾದಾಗ ನರಿ ಹೂಸಿದೆ ಎಂದು ಹೇಳುವುದು ಹಳ್ಳಿಗರಲ್ಲಿ ವಾಡಿಕೆ. ಬಾಡುವ ರೋಗದಲ್ಲೂ ಕಬ್ಬಿನ ಮಧ್ಯೆ ಕೆಂಪು ವರ್ಣವಾಗುತ್ತದೆ. ಆದರೆ ರೋಗ ಹರಡಿ ಬಹುಬೇಗ ಕಬ್ಬಿನ ಒಳಭಾಗವೆಲ್ಲ ಪೂರ್ಣ ಕೆಂಪಾಗಿ, ಮುಂದೆ ಟೊಳ್ಳಾಗುತ್ತದೆ. ಕಬ್ಬು ಇದರಿಂದ ಹಗುರವಾಗುತ್ತದೆ. ಕಂದುಚುಕ್ಕೆರೋಗ ಎಲೆಯ ಅಲಗುಗಳಲ್ಲಿ ಮಾತ್ರ ಕಂಡುಬರುತ್ತದೆ. ಪ್ರಾರಂಭದಲ್ಲಿ ಸುಮಾರು 1/8" ನೀಳವಾಗಿದ್ದು ಎಲೆಯ ಇಕ್ಕಡೆಗಳಲ್ಲೂ ಕೆಂಪಗೆ ಕಾಣುವಂತಿರುತ್ತದೆ. ಮುಂದೆ ಅದು ಅಗಲವಾಗಿ ಬೆಳೆದು, ಮಧ್ಯಭಾಗ ಕಂದುಬಣ್ಣವಾಗಿ, ಸುತ್ತಲೂ ಹಳದಿಯಾಗುತ್ತದೆ. ಕಂದುಭಾಗ ಮುಂದೆ ಪೂರ್ಣ ಒಣಗುತ್ತದೆ. ಕಪ್ಪುಕೊಳೆರೋಗದಿಂದ ಹೆಚ್ಚಿನ ನಷ್ಟವಾಗುವುದಿಲ್ಲ. ಕಬ್ಬುಗಳಿಗೆ ಗಾಯವಾದಾಗ ಅಥವಾ ಕಬ್ಬುಗಳನ್ನು ಕಡಿದು ತೆಗೆದಾಗ, ಗಾಯವಾದೆಡೆ ಅಥವಾ ಕಡಿದು ಬಿಟ್ಟೆಡೆಯಲ್ಲಿ ಕಪ್ಪು ಬೂಷ್ಟು ಬೆಳೆದು ಆ ಭಾಗವನ್ನು ಕೊಳೆಯುವಂತೆ ಮಾಡುತ್ತದೆ. ಕಬ್ಬಿಗೆ ಇನ್ನೂ ಹಲವು ರೋಗಗಳು ತಗಲುವುದುಂಟು. ಆದರೆ ಅವು ಯಾವ ರೀತಿಯಲ್ಲೂ ಹೆಚ್ಚಿನ ನಷ್ಟ ಮಾಡುವುದಿಲ್ಲ. ಗೋಂದುರೋಗ ಎಲೆಯ ರೋಗವಾಗಿ, ಪ್ರಾರಂಭವಾಗಿ ಹಾಗೇ ಬಿಟ್ಟಲ್ಲಿ ಕಬ್ಬಿನ ಜಲ್ಲೆಗೂ ಹರಡುತ್ತದೆ. ಮೊದಲು ಎಲೆಗಳ ಮೇಲೆ ಹಳದಿ ಪಟ್ಟಿಗಳು ಕಾಣಿಸಿಕೊಂಡು, ಅದರ ಮಧ್ಯೆ ಕೆಂಪು ಚುಕ್ಕೆಗಳು ಮೂಡುತ್ತವೆ. ಕೆಂಪುಪಟ್ಟಿರೋಗ ಕೂಡ ಎಲೆಯ ರೋಗವೇ. ಆದರೆ ಹಲವು ತಳಿಗಳಲ್ಲಿ ಅದು ಕಾಂಡಕ್ಕೂ ಬೇಗ ಹರಡಿ, ಅದರ ತುದಿ ಸುಲಭವಾಗಿ ಕೊಳೆತು ನಾರುತ್ತದೆ. ಎಲೆಯ ತಳಭಾಗದಲ್ಲಿ ನರಗಳ ಮಧ್ಯೆ ಕೆಂಪುಪಟ್ಟೆಯುಂಟಾಗಿ ಎದ್ದುಕಾಣುತ್ತದೆ. ಮೊಸಾಯಿಕ್ ರೋಗದಲ್ಲಿ ಎಲೆಗಳ ಮೇಲೆಲ್ಲ ತಿಳಿಹಸಿರು ಅಥವಾ ಹಳದಿ ಮಚ್ಚೆಗಳಿರುತ್ತವೆ. ಇದು ತಗಲಿದಲ್ಲಿ ಕಬ್ಬು ಗಿಡ್ಡವಾಗಿ ತೆಳುವಾಗಿ ಬೆಳೆದು ಸಣ್ಣಗೆ ಸುಲಿದಂತಾಗಿ ಜಡೆಕಟ್ಟಿದಂತಿರುತ್ತದೆ. ತುದಿಯ ಬೆಳೆವಣಿಗೆ ಪೂರ್ಣ ನಿಂತು ಹೋಗುವುದರಿಂದ ಮೊಗ್ಗುಗಳು ಅಡ್ಡ ಬೆಳೆದು ನೀಳವಾಗುತ್ತವೆ. ಕೀಟ ಹಾಗೂ ಬೂಷ್ಟು ರೋಗವನ್ನು ಅದರ ನಿವಾರಣೆಗೆ ಅನುಕೂಲವಾಗುವ ಔಷಧಗಳ ಬಳಕೆಯಿಂದಲೂ ರೋಗರಹಿತ ಹಾಗೂ ರೋಗನಿರೋಧಕ ಶಕ್ತಿಯುತ ತಳಿಗಳ ಬಳಕೆಯಿಂದಲೂ ನಿವಾರಿಸಬಹುದು.

**ಕಟಾವು :** ಕಬ್ಬು ಕಟಾವಿಗೆ ಸಿದ್ಧವಾಗಲು ಅದರಲ್ಲಿನ ಸಕ್ಕರೆ ಅಂಶವೇ ಮುಖ್ಯ. ಕಬ್ಬು ಬೆಳೆಯುವುದೆಂದರೆ ಅದರಲ್ಲಿನ ಸಕ್ಕರೆ ಅಂಶ ಹೆಚ್ಚಾಗುತ್ತಿದೆಯೆಂದರ್ಥ. ಸಾಮಾನ್ಯವಾಗಿ ಕಬ್ಬು ಪೂರ್ಣ ಬೆಳೆಯಲು 13–14 ತಿಂಗಳ ಅವಧಿ ಸಾಕೆಂದು ಹೇಳಬಹುದು. ಮಾಗಿದ ಕೊ.419 ತಳಿಯ ರಸದಲ್ಲಿನ ವಿವಿಧಾಂಶ ಈ ಕೆಳಗಿನಂತಿದೆ.

1. ನೀರು ಶೇ.77.9 ಭಾಗ
2. ಸುಕ್ರೋಸ್ ಶೇ.20.2 ಭಾಗ
3. ಗ್ಲೂಕೋಸ್ ಶೇ.0.57 ಭಾಗ
4. ಇತರ ಸಾವಯವ ಮತ್ತು ನಿರವಯವ ವಸ್ತುಗಳು ಶೇ. 1.29 ಭಾಗ ಇದರಲ್ಲಿ ಸುಕ್ರೋಸ್ ಮುಖ್ಯವಾದುದು. ಇದೇ ಸಕ್ಕರೆ ಮತ್ತು ಬೆಲ್ಲ ಉತ್ಪನ್ನಕ್ಕೆ ಕಾರಣ. ಗ್ಲೂಕೋಸ್ ಅಂಶವನ್ನೂ ಸಕ್ಕರೆಯೆಂದೇ ಪರಿಗಣಿಸಲಾಗಿದ್ದರೂ ಅದು ಅಪರಿಪೂರ್ಣ ಸಕ್ಕರೆ ಅಂಶ. ಪೂರ್ಣ ಮಾಗಿದ ಕಬ್ಬಿನಲ್ಲಿ ಸಾಮಾನ್ಯವಾಗಿ ಶೇ. 22 ಭಾಗದಷ್ಟು ಘನವಸ್ತುಗಳಿರುತ್ತವೆ. ಅದರಲ್ಲಿ ಸುಕ್ರೋಸ್ ಅಂಶವೇ ಅತಿಹೆಚ್ಚು. ಸುಕ್ರೋಸ್ ಸ್ವಲ್ಪ ಕಾಲ ಮಾತ್ರ ಕಬ್ಬಿನಲ್ಲಿ ಅತಿಯಾಗಿ ಶೇಖರವಾಗುತ್ತದೆ. ಮುಂದೆ ಸೂಲಂಗಿ ಹೊರಟರೂ ಬೇಸಗೆಯ ದಗೆ ಹೆಚ್ಚಾದರೂ ಅದರ ಪರಿಮಾಣ ಕಡಿಮೆಯಾಗತೊಡಗುತ್ತದೆ. ಕಬ್ಬು ಕಟಾವಿಗೆ ಸಿದ್ಧವಾಗಿದೆಯೆಂದು ನಿರ್ಧರಿಸಿದ ಅನಂತರ 10–15 ದಿನ ಅದಕ್ಕೆ ನೀರು ಒದಗಿಸಬಾರದು. ಕಟಾವು ಮಾಡುವಾಗ ಹರಿತವಾದ ಮಚ್ಚುಗಳಿಂದ ನೆರಿಮಟ್ಟಕ್ಕೆ ಕಬ್ಬುಗಳನ್ನು ಕಡಿದು ತೆಗೆಯಬೇಕು. ಕಡಿದ ಕಬ್ಬನ್ನು ಪೂರ್ಣವಾಗಿ ಅದೇ ಮಚ್ಚಿನಿಂದ ಸವರಿ, ಎಲ್ಲ ಎಲೆಗಳನ್ನೂ ತೆಗೆದು, ತುದಿಯ ಅಪಕ್ವ ಭಾಗವನ್ನು ಕತ್ತರಿಸಿ ಬೇರ್ಪಡಿಸಬೇಕು. ಕಬ್ಬಿನ ತಳ ಭಾಗದಲ್ಲಿ ಅಂಟಿರಬಹುದಾದ ಮಣ್ಣನ್ನೂ ಬೆಳೆದಿರಬಹುದಾದ ಬೇರುಗಳನ್ನೂ ಪೂರ್ಣವಾಗಿ ಸವರಿ ತೆಗೆದು ಜಲ್ಲೆಯನ್ನು ಸಾಗಿಸಲು ಅನುಕೂಲವಾಗುವಂತೆ ತುಂಡರಿಸಿ ಹೊರೆ ಕಟ್ಟಬೇಕು. ಕಟಾವಾದ ಕಬ್ಬನ್ನು ದೀರ್ಘಕಾಲ ಶೇಖರಿಸಿಡಬಾರದು. ಹಾಗಾದಲ್ಲಿ ಅದರಲ್ಲಿನ ಸಕ್ಕರೆ ಅಂಶ ಕಡಿಮೆಯಾಗುತ್ತದೆ; 24 ಗಂಟೆಗಳೊಳಗಾಗಿ ಅದನ್ನು ಗಾಣಕ್ಕೆ ಕೊಟ್ಟುಬಿಡಬೇಕು.

ಕಬ್ಬಿನಿಂದ ಬೆಲ್ಲ, ಸಕ್ಕರೆಗಳನ್ನು ತಯಾರಿಸುವುದರ ಜೊತೆಗೆ ಕಾಕಂಬಿಯಿಂದ ಮದ್ಯವನ್ನೂ ತರಗಿನಿಂದ ಉತ್ತಮ ಗೊಬ್ಬರವನ್ನೂ ಸಿಪ್ಪೆಯಿಂದ ಕಾಗದ ಮತ್ತು ಮೇಣವನ್ನೂ ಉಳಿಕೆಗಳಿಂದ ಮೇವನ್ನೂ ತಯಾರಿಸುತ್ತಾರೆ **(ನೋಡಿ– ಆಲೆಮನೆ; ಕಾಕಂಬಿ; ಸಕ್ಕರೆ)**

(ಜೆ.ಎ.ಬಿ.ಎನ್.)

**ಕಮಡೋಳಿ, ಅಮೀನ್‌ಸಾಹೇಬ :** 1900–95. ಚಿತ್ರ ಕಲಾವಿದ. ಇಂದಿನ ಗದಗ ಜಿಲ್ಲೆ ಲಕ್ಷ್ಮೇಶ್ವರದಲ್ಲಿ 1900ರಲ್ಲಿ ಜನಿಸಿದರು. ತಂದೆ ತಾಯಿಯನ್ನು ಕಳೆದುಕೊಂಡ ಬಳಿಕ ಕಲಾಭ್ಯಾಸಕ್ಕಾಗಿ ಮುಂಬೈಗೆ ತೆರಳಿದರು (1918). ಇದಕ್ಕೆ ಅಣ್ಣನ ಪ್ರೋತ್ಸಾಹವೂ ದೊರೆಯಿತು. ಮುಂಬೈಯಲ್ಲಿ ಜೆ.ಜೆ.ಕಲಾ ಶಾಲೆಯನ್ನು ಸೇರಿದರು. ಚಿತ್ರಕಲೆಯ ಅಭ್ಯಾಸ ನಡೆಸುತ್ತಿದ್ದಾಗ ಭಿತ್ತಿರಚನಾ ಕಲೆಯನ್ನೂ ಅಧ್ಯಯನ ಮಾಡಿದರು. ಅಲ್ಲಿಯೇ ಫೆಲೋ ಆಗಿ ನೇಮಕಗೊಂಡರು; ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇವರು ರಚಿಸಿದ ಸ್ಕೆಚ್‌ಇನ್ ಲಗಾರ್ಡನ್, ತಾಜ್ ಆಟ್ ಆಗ್ರಾ, ಜುಮ್ಮಾಮಸೀದಿ, ಬಾಂಬ್ ಪ್ರಮ್ ಮಲ್‌ಬಾರ್ ಹಿಲ್ಸ್ ಈ – ಕೃತಿಗಳು ಚಿತ್ರಕಲಾಪ್ರದರ್ಶನಗಳಲ್ಲಿ ಜನಮೆಚ್ಚಿಗೆ ಗಳಿಸಿದುವು. ಇವರ ಪ್ರೀತಿಯ ಕ್ಷೇತ್ರ ಜಲವರ್ಣ ಮಾಧ್ಯಮ. ತಮ್ಮ ಕುಂಚದ ಮೂಲಕ ಈ ಮಾಧ್ಯಮದಲ್ಲಿ ಅನೇಕ ಅಪೂರ್ವ ನಿಸರ್ಗ ಚಿತ್ರಗಳನ್ನು ಸೆರೆಹಿಡಿದಿದ್ದಾರೆ.

ಹಳ್ಳಿಯ ಸಂತೆ, ಟಿಪ್ಪು ಸಮಾಧಿ, ರಸ್ತೆ ಬದಿಯ ಸರ್ಕಸ್ ಮುಂತಾದ ತೈಲವರ್ಣದ ಕೃತಿಗಳು ಇವರ ಕಲಾ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ಇವರು ರಚಿಸಿದ ರಾವಣ–ಜಟಾಯು ಕೃತಿ ರವಿವರ್ಮನ ಕೃತಿಗಿಂತ ಭಿನ್ನವಾಗಿದೆ. ಇವರೊಬ್ಬ ಛಾಯಾ ಚಿತ್ರಕಾರರೂ ಆಗಿದ್ದರು. ಧಾರವಾಡದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕಲೆಯನ್ನು ಕಲಿಸುತ್ತಿದ್ದರು. ಆ ಸಂದರ್ಭದಲ್ಲಿ ಮಾಡಲಿಂಗ್ ತರಬೇತಿಯನ್ನು ತೆಗೆದುಕೊಳ್ಳುತ್ತಿದ್ದರು. ಇವರ ಕೃತಿಗಳು ಮುಂಬಯಿಯ ಆರ್ಟ್ ಸೊಸೈಟಿ, ಆಲ್ ಇಂಡಿಯ ಫೈನ್ ಆರ್ಟ್ ಸೊಸೈಟಿ, ಸಿಮ್ಲಾ ಫೈನ್ ಆರ್ಟ್ ಸೊಸೈಟಿ ಹಾಗೂ ಮೈಸೂರು ದಸರಾ ಪ್ರದರ್ಶನಗಳಲ್ಲಿ ಪ್ರದರ್ಶನಗೊಂಡಿದ್ದವು. ಇವರು ಅನೇಕ ಗೌರವ–ಪುರಸ್ಕಾರಗಳಿಗೆ ಪಾತ್ರರಾಗಿದ್ದರು.

*

**ಕಮಠ :** ಹಾರೀತನೆಂಬ ಬ್ರಾಹ್ಮಣನ ಮಗ. ಮಹಾತತ್ತ್ವಜ್ಞನೆಂದು ಪ್ರಸಿದ್ಧನಾಗಿದ್ದಾನೆ. ತಂದೆ ಮಹೀನಗರವೆಂಬ ಪುಣ್ಯಕ್ಷೇತ್ರದಲ್ಲಿದ್ದವ. ಅಲ್ಲಿಯ ಜನರೆಲ್ಲರೂ ನಿತ್ಯಕರ್ಮಾಚರಣೆಯಲ್ಲೂ ಅತಿಥಿ, ಅಭ್ಯಾಗತರ ಪೂಜೆಯಲ್ಲೂ ನಿರತರಾಗಿದ್ದು ದೇವತೆಗಳ ಹೊಗಳಿಕೆಗೆ ಪಾತ್ರರಾದವರು. ಒಮ್ಮೆ ಹಾರೀತನ ಮನೆಗೆ ಬಂದ ಒಬ್ಬ ಅತಿಥಿ ತನಗೆ ಪ್ರಾಕೃತ ಭೋಜನಕ್ಕಿಂತ ಪರಮ ಭೋಜನವೇ ಬೇಕೆಂದು ಕೇಳಿದ. ಕಮಠ ಹಾಗೆ ಮಾಡಲು ಒಪ್ಪಿದ. ಆರು ರಸಗಳಿಂದ ಕೂಡಿ,ಐದು ಪ್ರಭೇದ ಉಳ್ಳದ್ದಾಗಿದ್ದು ಇಪ್ಪತ್ತುನಾಲ್ಕು ತತ್ತ್ವಗಳ ಗುಂಪಿನ ರೂಪದಲ್ಲಿರುವ ದೇಹರೂಪವಾದ ಕ್ಷೇತ್ರದ ತೃಪ್ತಿಯನ್ನು ಯಾವುದು ಕೊಡುವುದೋ ಅದು ಪ್ರಾಕೃತವೆನಿಸುವುದು. ಯಾವುದು ಕ್ಷೇತ್ರಜ್ಞನಾದ ಆತ್ಮನಿಗೆ ತೃಪ್ತಿಯನ್ನು ಕೊಡುವುದೋ ಅಂದರೆ ಪರಮಾತ್ಮಪ್ರೀತಿಕರವೋ ಅದು ಪರಮ ಭೋಜನವಾಗುವುದು. ಅದನ್ನೇ ಅತಿಥಿಗೆ ಕೊಡುವೆನೆಂದು ಕಮಠ ಹೇಳಿ ತಂದೆಗೆ ತೃಪ್ತಿಯಾಗುವಂತೆ ವರ್ತಿಸಿ ಅತಿಥಿಯೊಡನೆ ಜೀವದ ಉತ್ಪತ್ತಿ ವಿಚಾರವಾಗಿ ತತ್ತ್ವಾರ್ಥ ಚರ್ಚೆಯನ್ನು ಮಾಡಿದ.

ಈ ಕಥೆಯನ್ನು ನಾರದ ಸೂರ್ಯದೇವನಿಗೆ ಹೇಳುತ್ತಾನೆ. (ಎನ್.ಎಸ್.ಆರ್.ಬಿ.)

**ಕಮರ :** ಫ್ಯಾಬೇಸೀ (ಲೆಗ್ಯೂಮಿನೋಸೀ) ಕುಟುಂಬದ ಸೀಸಾಲ್‌ಪಿನಿಯಾಯ್ಡೀ ಹಾರ್ಡ್ವಿಲಿಯ ಬೈನೇಟ ಎಂಬ ವೈಜ್ಞಾನಿಕ ಹೆಸರಿನ ಮಧ್ಯಮ ಪ್ರಮಾಣದಿಂದ ದೊಡ್ಡ ಪ್ರಮಾಣದವರೆಗೂ ಬೆಳೆಯುವ ಮರ. ವಾಣಿಜ್ಯ ಪ್ರಪಂಚದಲ್ಲಿ ಇದನ್ನು ಅಂಜನ್ ಎಂದು ಕರೆಯುವರು. ಎಳೆಯ ಗಿಡದಲ್ಲಿ ಇದರ ಹಂದರ ಶಂಖುವಿನಾಕಾರದಲ್ಲಿದ್ದು ದೊಡ್ಡದಾದಂತೆ ಹರಡಿಕೊಳ್ಳುವುದು. ಎಲೆಗಳು ಗೊರಸಿನಾಕಾರ, ಶುಷ್ಕತೆಯಿರುವ ಪ್ರದೇಶಗಳಲ್ಲಿ ಅಲ್ಲಲ್ಲಿ ಕಂಡುಬರುವುದು. ಚಿತ್ರದುರ್ಗ ಜಿಲ್ಲೆಯ ಕಮರಾಕಾವಲ್ ಇದಕ್ಕೆ ಹೆಸರಾದುದು. ಬೆಂಗಳೂರು, ತುಮಕೂರು, ಕೊಳ್ಳೇಗಾಲ, ಬೆಳಗಾಂವಿ, ಧಾರವಾಡ ಜಿಲ್ಲೆಗಳಲ್ಲೂ ಇದರ ವ್ಯಾಪನೆಯಿದೆ. ದೀರ್ಘಕಾಲದ ಶುಷ್ಕತೆಯನ್ನು ತಡೆದುಕೊಳ್ಳಬಲ್ಲ ಇದರಲ್ಲಿ ಫೆಬ್ರವರಿ–ಮಾರ್ಚ್ ತಿಂಗಳ ಸುಮಾರಿಗೆ ಎಲೆಗಳು ಉದುರಿ ಕೆಂಪು ಛಾಯೆಯ ಹೊಸ ಚಿಗುರು ಏಪ್ರಿಲ್ ತಿಂಗಳಲ್ಲಿ ಬರುವುದು. ಹಳದಿಮಿಶ್ರಿತ ಹಸಿರು ಛಾಯೆಯ ಸಣ್ಣ ಹೂಗೊಂಚಲುಗಳು ಜುಲೈಯಿಂದ ಸೆಪ್ಟೆಂಬರ್ ವರೆಗೂ ಮೂಡಿ, ಕಾಯಿಗಳು ಏಪ್ರಿಲ್ ತಿಂಗಳ ಸುಮಾರಿಗೆ ಬಲಿಯುತ್ತವೆ. ಚಪ್ಪಟೆಯಾದ ಕಾಯಿಗಳು ಗಾಳಿಯಲ್ಲಿ ಸ್ವಲ್ಪ ದೂರ ತೂರಿಹೋಗಬಲ್ಲವು–3–5 ವರ್ಷಗಳಿಗೊಮ್ಮೆ ಹೆಚ್ಚಿನ ಪ್ರಮಾಣದಲ್ಲಿ ಕಾಯಿ ಬಿಟ್ಟು ಮಿಕ್ಕ ವರ್ಷಗಳಲ್ಲಿ ಸಾಧಾರಣವಾಗಿ ಫಲ ಬಿಡುತ್ತದೆ. ಇದರ ಸಸಿಗಳು ಗಟ್ಟಿ ನೆಲದಲ್ಲಿಯೂ ತಾಯಿಬೇರನ್ನು ಆಳವಾಗಿ ಇಳಿಸಬಲ್ಲವು. ಇದರಿಂದಲೇ ಇವು ಶುಷ್ಕತೆಯ ಪ್ರದೇಶಗಳಲ್ಲಿಯೂ ಬೆಳೆಯುವ ಶಕ್ತಿ ಪಡೆದಿರುವುದು. ಬುಡ ಕತ್ತರಿಸಿದಾಗ ಕಾಂಡ ಚಿಗುರದಿದ್ದರೂ ರೆಂಬೆಗಳನ್ನು ಕತ್ತರಿಸಿದರೆ ಚೆನ್ನಾಗಿ ಚಿಗುರುತ್ತದೆ. ದನ, ಮೇಕೆ, ಜಿಂಕೆಗಳಿಗೆ ಇದರ ಎಲೆ ಬಹಳ ಇಷ್ಟ. ಎಳೆಯ ಸಸಿಗಳಿಗೆ ಬೆಂಕಿ ಬಹು ಅಪಾಯಕಾರಿ. ಈ ಸಸ್ಯಗಳ ಸ್ವಾಭಾವಿಕ ಪುನರುತ್ಪತ್ತಿಗೆ ಬೆಂಕಿ, ಜಾನುವಾರುಗಳ ಉಪಟಳ ಹಾಗೂ ಹುಲ್ಲು, ಕಳೆ ಮಾರಕವಾಗಿ ಪರಿಣಮಿಸುತ್ತವೆ. ಆದ್ದರಿಂದ ಬೀಜ ಬಿತ್ತಿ ಬೆಳೆಸುವಾಗ ಎಳೆಯದರಲ್ಲಿ ಬೆಂಕಿ ಜಾನುವಾರುಗಳಿಂದ ಕಾಪಾಡಬೇಕು. ಅರಣ್ಯಶಾಖೆಯವರು ಮೈದಾನಪ್ರದೇಶಗಳಲ್ಲಿ ಬೆಳೆಸುವ ತೋಪುಗಳ ಕಾರ್ಯಕ್ರಮದಲ್ಲಿ ಬಳಸುವ ಮರಗಳಲ್ಲಿ ಇದೂ ಒಂದು ಮುಖ್ಯ ಜಾತಿ.

ಇದರ ಚೌಬೀನೆ ಕೆಂಪುಮಿಶ್ರಿತ ಕಂದುಬಣ್ಣದ್ದು. ಭಾರವಾಗಿಯೂ ಗಡುಸಾಗಿಯೂ ಬಲಯುತವಾಗಿಯೂ ಇರುವುದರಿಂದ ಇದನ್ನು ಹದಮಾಡುವುದು ಕಷ್ಟ. ಹಸಿಯ ಮರವನ್ನೇ ಕೊಯ್ದು ನಿಧಾನವಾಗಿ ಆರಲು ಬಿಡಬೇಕು. ಗೆದ್ದಲು ಹತ್ತುವುದಾಗಲೀ ಕೊಳೆಯುವುದಾಗಲೀ ಬಹು ವಿರಳ. ಕೊರೆಯುವ ಹುಳುಗಳಿಂದ ಸ್ವಲ್ಪ ಹಾನಿ ಉಂಟು. ಒಣಮರವನ್ನು ಕೊಯ್ಯುವುದು ಕಷ್ಟವಾದರೂ ಹಸಿಯದರಲ್ಲಿ ಮರಗೆಲಸ ಸುಲಭ. ಗಡುಸು ಮರವಾದುದರಿಂದ ಗಾಡಿಯ ಗುಂಭ, ಒನಕೆ, ನೇಗಿಲು, ಯಂತ್ರಘರ್ಷಣಾ ಭಾಗಗಳಿಗೂ (ಬೇರಿಂಗ್ಸ್) ಗಣಿಗಳ ಊರುಗಂಧ ತೊಲೆಗಳು, ನೆಲಹಾಸುಗಳು ಇತ್ಯಾದಿಗಳಿಗೆ ಬಳಸುವರು. (ಎ.ಕೆ.ಎಸ್.)

**ಕಮರಾಕ್ಷಿ :** ಆಕ್ಸಾಲಿಡೇಸೀ ಕುಟುಂಬಕ್ಕೆ ಸೇರಿದ ಅವರೋಹ ಎಂಬ ಜಾತಿಯ ನಿತ್ಯಹರಿದ್ವರ್ಣದ ಮರ. 15'–20' ಎತ್ತರಕ್ಕೆ ಬೆಳೆಯುವ ಈ ಮರವನ್ನು ಮೊದಲು ಪೋರ್ಚುಗೀಸರು ಅಮೆರಿಕದಿಂದ ಭಾರತಕ್ಕೆ ತಂದರೆಂದು ಹೇಳುವರು. ಈಗ ಇದನ್ನು ಭಾರತದಲ್ಲಿ ತೋಟಗಳಲ್ಲೂ ಉದ್ಯಾನಗಳಲ್ಲೂ ಬೆಳೆಸಲಾಗುತ್ತದೆ.

ಇದರಲ್ಲಿ ಅವರೋಹ ಕರಂಬೋಲ ಮತ್ತು ಅವರೋಹ ಬಿಲಿಂಬಿ ಎಂಬ 2 ಪ್ರಭೇದಗಳಿವೆ. ಮೊದಲನೆಯದರಲ್ಲಿ ಫಲ ಚಿಕ್ಕದಾಗಿದ್ದು ಸಿಹಿಯಾಗಿದೆ. ಇನ್ನೊಂದರಲ್ಲಿ ಫಲ ದೊಡ್ಡದೂ ಒರಟೂ ಅತಿ ಹುಳಿಯೂ ಆಗಿದೆ. ಸಾಮಾನ್ಯವಾಗಿ ಎರಡು ಬಗೆಯವೂ ವರ್ಷಕ್ಕೆ 2 ಸಲ ಫಲ ಬಿಡುತ್ತವೆ–ಬೇಸಿಗೆಯಲ್ಲಿ ಒಮ್ಮೆ ಮತ್ತು ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ಒಮ್ಮೆ; ಗರಿ ರೂಪದ ಎಲೆಗಳು ಸ್ವಲ್ಪಮಟ್ಟಿಗೆ ಸ್ಪರ್ಶಕ್ಕೆ ಶೀಘ್ರವೇದಿಯಾಗಿರುತ್ತವೆ.

ಅವರೋಹ ಎಂಬ ಪದ ಅವಿರೋಯಿಜ್ ಎಂಬ ಅರೇಬಿಯದ ವೈದ್ಯನ ಹೆಸರಿನಿಂದ ಬಂದಿದೆ. ಏಷ್ಯದ ಉಷ್ಣವಲಯ ಪ್ರದೇಶಗಳಲ್ಲಿ ದೀರ್ಘಕಾಲದಿಂದಲೂ ಹಣ್ಣಿಗಾಗಿ ಇದರ ವ್ಯವಸಾಯ ಸಾಗಿ ಬಂದಿದೆ. ಸಾಮಾನ್ಯವಾಗಿ ಇದನ್ನು ಬೀಜಗಳಿಂದಲೇ ವೃದ್ಧಿಗೊಳಿಸುವುದು ಹೆಚ್ಚು. ಆದರೆ ಉತ್ತಮ ತಳಿಗಳನ್ನು ಬಡಿಂಗ್ ಅಥವಾ ಗೂಟಿ ವಿಧಾನದಿಂದ ಪಡೆಯಬಹುದು.

ಇದರ ಎಲೆ, ಬೇರು ಮತ್ತು ಫಲಗಳಿಗೆ ಸ್ಕರ್ವಿ ರೋಗ ನಿವಾರಕ ಗುಣವಿರುವುದರಿಂದ ಔಷಧಿಯಾಗಿಯೂ ದೇಹವನ್ನು ತಂಪುಗೊಳಿಸುವುದಕ್ಕೂ ಬಳಸಲಾಗುತ್ತದೆ. ಫಲಗಳನ್ನು ಜೆಲ್ಲಿ, ಉಪ್ಪಿನಕಾಯಿ ಮುಂತಾದುವನ್ನು ತಯಾರಿಸಲು ಬಳಸುತ್ತಾರೆ. ಅದರಿಂದ ಉತ್ತಮ ಪೇಯವನ್ನೂ ತಯಾರಿಸುತ್ತಾರೆ. ಅಪಕ್ವ ಫಲಗಳು ಒಗರು, ಅವನ್ನು ಬಟ್ಟೆಗಳಿಗೆ ಬಣ್ಣ ಹಾಕುವುದಕ್ಕೂ ಲಿನೆನ್ ಅರಿವೆಗಳ ಮೇಲಿನ ತುಕ್ಕಿನ ಕಲೆಗಳನ್ನು ಅಳಿಸುವುದಕ್ಕೂ ಒಂದು ಆಮ್ಲ ವಸ್ತುವಿನ ರೂಪದಲ್ಲಿ ಬಳಸುವುದುಂಟು. ಅಲ್ಲದೆ ಹಿತ್ತಾಳೆ ಪಾತ್ರೆಗಳಿಗೆ ಹೊಳಪು ಕೊಡುವುದಕ್ಕೂ ಬಳಸುತ್ತಾರೆ. ಕಚ್ಚಾ ಫಲಗಳನ್ನು ಬೇಯಿಸಿ ತರಕಾರಿಯಂತೆಯೂ ಉಪಯೋಗಿಸುವುದುಂಟು. ಈ ಮರದ ಕಟ್ಟಿಗೆಗಳನ್ನು ಬಂಗಾಳದಲ್ಲಿ ಕಟ್ಟಡಗಳಿಗೂ ಪೀಠೋಪಕರಣಗಳಿಗೂ ಬಳಸುವರು.

ಇದರ ಎಲೆಗಳು ಸಂಯುಕ್ತ ಮಾದರಿಯವು ಒಂದೊಂದು ಎಲೆಯೂ ಸು. 20–30 ಸೆಂ.ಮೀ. ಉದ್ದವಿದೆ. ಅದರಲ್ಲಿ ಒಂದು ನೀಳವಾದ ನಡುನಾಳ (ರೇಕೀಸ್), ಅದರ ಮೇಲೆ ಪರ್ಯಾಯವಾಗಿ ಜೋಡಣೆಗೊಂಡ 6–12 ಕಿರು ಎಲೆಗಳು ಇವೆ. ಕಿರುಎಲೆಗಳ ತುದಿ ಉದ್ದ ಮತ್ತು ಮೊನಚು ಬುಡ ದುಂಡು ಅಥವಾ ಓರೆಯಾಗಿದೆ. ಹೂಗೊಂಚಲುಗಳು ಎಲೆಗಳ ಕಂಕುಳಲ್ಲೊ ಇಲ್ಲವೆ ಮರದ ತೊಗಟೆಯ ಮೇಲೂ ಹುಟ್ಟುತ್ತವೆ. ಹೂಗಳು ಬಹಳ ಚಿಕ್ಕವು. ಪುಷ್ಪಪತ್ರ ಮತ್ತು ದಳಗಳು ಐದೈದು ಇವೆ, ಫಲ 7–12 ಸೆಂ.ಮೀ. ಉದ್ದವಿದ್ದು ಆಯತಾಕಾರವಾಗಿದೆ. ಅದರಲ್ಲಿ 5–6 ಚೂಪಾದ ಏಣುಗಳಿವೆ. ಮಾಗಿದಾಗ ಹಣ್ಣು ಹಳದಿ ಬಣ್ಣಕ್ಕೆ ತಿರುಗುತ್ತದೆ.

ಅವರೋಹ ಬಿಲಿಂಬಿ ಪ್ರಭೇದ 5–20 ಸೆಂ.ಮೀ. ಎತ್ತರ ಬೆಳೆಯುತ್ತದೆ. ಎಲೆಗಳೆಲ್ಲ ಕೊಂಬೆಗಳ ತುದಿಯಲ್ಲೇ ಹೆಚ್ಚು ದಟ್ಟವಾಗಿರುತ್ತವೆ. ನಿತ್ಯಹರಿದ್ವರ್ಣದ ಇದರ ಎಲೆಗಳು ಸಂಯುಕ್ತಪತ್ರಗಳಾಗಿದ್ದು ಉದ್ದ ಇವೆ. ಕಿರು ಎಲೆಗಳ ಸಂಖ್ಯೆ 11–35. ಅವು ನೀಳವಾದ ನಡುನಾಳದ ಮೇಲೆ ಅಭಿಮುಖವಾಗಿ ಜೋಡಣೆಗೊಂಡಿದ್ದು ತುದಿಯಲ್ಲಿ ಒಂದೇ ಕಿರು ಎಲೆ ಇದೆ. ಕಿರುಎಲೆಗಳು ಆಯತಾಕಾರದವು. ಅವುಗಳ ತುದಿ ಚೂಪಾಗಿಯೋ ಉದ್ದವಾಗಿಯೋ ಇದೆ. ಹೂಗೊಂಚಲು ದಪ್ಪ ಕಾಂಡ ಮತ್ತು ಕೊಂಬೆಗಳಿಂದ, ಚಿಕ್ಕ ಹಾಗೂ ಮೃದುರೋಮಗಳಿಂದ ಆವೃತವಾದ ಮಿಶ್ರಮಂಜರಿಯಾಗಿ ಹುಟ್ಟುತ್ತವೆ. ಪುಷ್ಪಪತ್ರ–5; ಪುಷ್ಪದಳ–5; ಕೇಸರಗಳು–5. ಎಲ್ಲ ಕೇಸರಗಳೂ ಫಲವತ್ತಾಗಿವೆ. ಫಲ ಆಯತಾಕಾರವಾಗಿ 7–10 ಸೆಂ.ಮೀ. ಉದ್ದ ಇದೆ. ಅದರ ಮೇಲೆ ನಾಲ್ಕಾರು ಏಣುಗಳಿವೆ. ಏಣುಗಳು ಚೂಪಾಗಿಲ್ಲ.

ಅವರೋಹದ 2 ಪ್ರಭೇದಗಳೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿ ಕಾಣುವುದರಿಂದ ಒಂದನ್ನೊಂದು ಗುರುತಿಸುವುದು ಕಷ್ಟ. ಆದರೆ ಅವರೋಹ ಕರಂಬೋಲದಲ್ಲಿ ಫಲದ ಮೂಲೆಯಂಚುಗಳು ಅಷ್ಟು ಸ್ಪಷ್ಟವಾಗಿಲ್ಲ. ಅದನ್ನು ಹಸಿಯಾಗಿಯೇ ಸೇವಿಸಲು ಅತ್ಯಂತ ಹುಳಿಯಾಗಿರುತ್ತದೆ. ಫಲ ಸ್ವಲ್ಪ ಉದ್ದುದ್ದವಾಗಿದ್ದು ಕೈಯಿಂದ ಸುಲಭವಾಗಿ ಜಾರುವಂತಿರುತ್ತದೆ. ಇದನ್ನು ವಿಶೇಷವಾಗಿ ಉಪ್ಪಿನಕಾಯಿಗಾಗಿಯೇ ಬಳಸುವುದುಂಟು.

ಫಲ ಬಿಡದಿದ್ದಾಗ ಕಮರಾಕ್ಷಿ ಮರವನ್ನು ಕಿರು ನೆಲ್ಲಿಮರವೆಂದು ತಪ್ಪಾಗಿ ಭಾವಿಸಬಹುದು. ಏಕೆಂದರೆ ಮೇಲುನೋಟಕ್ಕೆ ಎರಡೂ ಒಂದೇ ರೀತಿಯವಾಗಿ ಕಾಣುತ್ತದೆ. ಆದರೆ ಅವರೋಹದಲ್ಲಿ ಕಿರುಎಲೆಗಳು ಎದುರುಬದರಾಗಿದ್ದರೆ ಕಿರುನೆಲ್ಲಿಯಲ್ಲಿ ಕಿರುಎಲೆಗಳು ಸ್ಪಷ್ಟವಾಗಿ ಪರ್ಯಾಯವಾಗಿ ಜೋಡಣೆಯಾಗಿರುತ್ತವೆ. ಈ ವ್ಯತ್ಯಾಸದಿಂದ ಅವೆರಡು ಮರಗಳನ್ನು ಗುರುತಿಸಿ ಪ್ರತ್ಯೇಕಿಸಬಹುದು. (ಎಂ.ಎಸ್.ಎಸ್.ಆರ್.)

**ಕಮರಿ :** ವೇಗವಾಗಿ ಹರಿಯುವ ನೀರಿನ ಗತಿಯಿಂದ ಆದ ನೆಲದ ಕೊರೆತ (ರೆವಾಯ್ನ್). ಕೊರಕಲಿಗಿಂತ ಕಿರಿಯದು. ಇದೊಂದು ಚಿಕ್ಕ ಇಕ್ಕಟ್ಟಾದ ಕಡಿದು ಬದಿಗಳಿರುವ ಕಣಿವೆ. ಕಮರಿಗಳು ಭೂಮಿಯ ಮೇಲ್ಭಾಗದಲ್ಲಿ ಸ್ತರಭಂಗವಾದ ಜಾಗಗಳಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುತ್ತವೆ. ಪ್ರತಿಯೊಂದು ಜಲಪಾತಗಳ ನಂತರ ಈ ತೆರನ ಕಮರಿಗಳನ್ನು ಭೂಮಿಯ ಮೇಲ್ಮೈಯಲ್ಲಿ ಕಾಣಬಹುದು (**ನೋಡಿ– ಕಣಿವೆ; ಕೊರಕಲು**). *

**ಕಮಲ :** ನಿಂಫೇಸೀ ಕುಟುಂಬಕ್ಕೆ ಸೇರಿದ ನಿಲಂಬೊ ನ್ಯೂಸಿಫೆರ ಎಂಬ ಶಾಸ್ತ್ರೀಯ ಹೆಸರಿನ ಜಲಸಸ್ಯ. ಇದನ್ನು ನಿಲಂಬಿಯಂ ಸ್ಪೀಶಿಯೋಸಂ ಎಂದೂ ಕರೆಯುತ್ತಾರೆ. ತಾವರೆ ಇದರ ಪರ್ಯಾಯ ನಾಮ. ಬಹಳ ಸುಂದರವಾದ ವಿವಿಧ ಬಣ್ಣಗಳ ಹೂ ಬಿಡುವ ಈ ಸಸ್ಯ ಭಾರತೀಯರಿಗೆ ಪವಿತ್ರವೆನಿಸಿದೆ. ಭಾರತದ ಎಲ್ಲ ಪ್ರದೇಶಗಳಲ್ಲೂ ಕೆರೆ, ಕೊಳ ಮುಂತಾದುವುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಉದ್ಯಾನಗಳ ಕೃತಕ ಸರೋವರಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುವರು. ಆದ್ದರಿಂದಲೇ ಬಹು ಹಿಂದಿನಿಂದಲೂ ಕವಿಗಳು ಸರೋವರವನ್ನು ಕಮಲಾಕರ, ಅಬ್ಜಿಷಂಡ ಎಂದೇ ವರ್ಣಿಸುತ್ತ ಬಂದಿದ್ದಾರೆ.

ಸಸ್ಯದ ಬುಡದಲ್ಲಿ ವಿಪುಲವಾಗಿ ಕವಲೊಡೆದ ಪ್ರಕಂದ (ರೈಜೋಮ್) ಉಂಟು.; ಇದರ ಕವಲುಗಳು ಎಲ್ಲ ದಿಕ್ಕಿಗೂ ಬೆಳೆದು 30'–40' ಅಗಲಕ್ಕೆ ಹರಡುತ್ತವೆ. ಕವಲುಗಳಿಂದ ಹಲವಾರು ದೊಡ್ಡ ಎಲೆಗಳು ಹುಟ್ಟುತ್ತವೆ. ಸಾಮಾನ್ಯವಾಗಿ ಎಲೆಗಳೆಲ್ಲ ನೀರಿನಿಂದ ಮೇಲಕ್ಕೆ ಹೊರಟಿರುತ್ತವೆ. ಒಂದೊಂದು ಎಲೆಯೂ ತುಂಬ ಅಗಲ (60–90 ಸೆಂ.ವ್ಯಾಸವುಳ್ಳದ್ದು) ಮತ್ತು ವೃತ್ತಾಕಾರ. ತಟ್ಟೆಯಂತೆ ಹರಡಿದ ಎಲೆಯ ಅಲಗಿನ ತಳಭಾಗದಲ್ಲಿ ಮಧ್ಯ ಭಾಗಕ್ಕೆ ಅಂಟಿಕೊಂಡಿರುವ ಉದ್ದನೆಯ ತೊಟ್ಟಿದೆ. ಅಲಗಿನ ಬಣ್ಣ ಮಾಸಲು ಹಸಿರು; ಅಂಚು ನಯ, ಹೂ ದೊಡ್ಡದು, ಬಿಳಿ ಅಥವಾ ಗುಲಾಬಿ ಬಣ್ಣದ್ದು, ಅದಕ್ಕೆ ನವುರಾದ ಸುವಾಸನೆಯಿದೆ. ಹೂವಿನಲ್ಲಿ ಬಟ್ಟಲಿನಾಕಾರದ ಪುಷ್ಪ ಪೀಠವೂ ಅದರ ಸುತ್ತ ಅನಿರ್ದಿಷ್ಟ ಮತ್ತು ಹೆಚ್ಚು ಸಂಖ್ಯೆಯ ಹೂದಳಗಳೂ ಇವೆ. ಪುಷ್ಪಪೀಠದಲ್ಲಿ ಅನೇಕ ಅಂಡಕೋಶಗಳು ಅಡಗಿದ್ದು ಅವುಗಳ ಶಲಾಕಾಗ್ರ ಮಾತ್ರ ಪೀಠದ ಸಮತಳದ ಮೇಲೆ ಕಾಣಿಸುತ್ತವೆ. ದಳಗಳಿಗೂ ಪೀಠದ ಸಮತಳಕ್ಕೂ ನಡುವೆ ಅಸಂಖ್ಯಾತವಾದ ಕೇಸರಗಳು ಜೋಡಿಸಿಕೊಂಡಿವೆ. ಒಂದೊಂದು ಅಂಡಕೋಶದಲ್ಲಿ ಒಂದೊಂದೇ ಅಂಡಕವಿದೆ. ಗರ್ಭಾಂಕುರವಾದನಂತರ ಅಂಡಕೋಶಗಳು ಏಕೀನ್ ಮಾದರಿಯ ಫಲಗಳಾಗುತ್ತವೆ.

ಕಮಲವನ್ನು ಅದರ ಪ್ರಕಂದದ ತುಂಡುಗಳಿಂದ ವೃದ್ಧಿ ಮಾಡುತ್ತಾರೆ; ಬೀಜಗಳಿಂದಲೂ ವೃದ್ಧಿ ಮಾಡಬಹುದು. ಸಾಧಾರಣವಾಗಿ ಪ್ರಕಂದವನ್ನು ಕೊಟ್ಟಿಗೆ ಗೊಬ್ಬರ ಮತ್ತು ಮಣ್ಣು ತುಂಬಿದ ಮಕರಿ, ಕುಂಡ ಅಥವಾ ಯಾವುದಾದರೂ ಪಾತ್ರೆಯಲ್ಲಿ ನೆಟ್ಟು, ಕಾಂಡವನ್ನು, ಪ್ರಕಂದದ ತುದಿ ನೀರಿನ ಮಟ್ಟಕ್ಕಿಂತ ಸ್ವಲ್ಪ ಮೇಲಿರುವಂತೆ, ಸರೋವರ ಅಥವಾ ಕಲ್ಯಾಣಿಗಳಲ್ಲಿ ಇಡುತ್ತಾರೆ. ನೀರಿನ ಮಟ್ಟ ಜಾಸ್ತಿ ಇದ್ದಲ್ಲಿ ಕೆಳಗೆ ಇಟ್ಟಿಗೆಗಳನ್ನು ಇಟ್ಟು ಅವುಗಳ ಮೇಲೆ ಕುಂಡವನ್ನಿಡುತ್ತಾರೆ. ಸಸಿ ಬೆಳೆದಂತೆಲ್ಲ ಕುಂಡವನ್ನು ಕೆಳಗಿಳಿಸುತ್ತ ಹೋಗುತ್ತಾರೆ. ನೇರವಾಗಿ ಸರೋವರದಲ್ಲೇ ಕಮಲವನ್ನು ಬೆಳೆಸಬೇಕಾದರೆ, ಸರೋವರದ ತಳಕ್ಕೆ ಒಂದು ಅಡಿ ಆಳದಷ್ಟು ಮಣ್ಣು ಮತ್ತು ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರವನ್ನು ಹರಡಿ ಕಮಲದ ಪ್ರಕಂದದ ತುಂಡುಗಳನ್ನು ನಾಟಿ ಮಾಡುತ್ತಾರೆ. ಅನಂತರ ಅವುಗಳ ತುದಿ ನೀರಿನ ಮಟ್ಟಕ್ಕಿಂತ ಕೊಂಚ ಮೇಲಕ್ಕಿರುವಂತೆ ನೀರನ್ನು ಹಾಯಿಸುತ್ತಾರೆ. ಸಸಿ ಬೆಳೆದಂತೆಲ್ಲ ನೀರಿನ ಮಟ್ಟವನ್ನು ಹೆಚ್ಚಿಸುತ್ತ ಹೋಗುತ್ತಾರೆ. ಹೀಗೆ 6–8 ವಾರಗಳಲ್ಲಿ ಸರೋವರದ ತುಂಬ ಕಮಲ ಹರಡಿಕೊಳ್ಳುತ್ತದೆ.

ಕೆಂಪು ಕಮಲ

ಕಮಲ ಭಾರತೀಯ ಸಂಸ್ಕೃತಿ ಸಾಹಿತ್ಯಗಳಲ್ಲಿ ಹಾಸು ಹೊಕ್ಕಾಗಿ ಹೆಣೆದುಕೊಂಡು ಬಂದಿರುವ ಪವಿತ್ರ ಪುಷ್ಪ. ವೇದಗಳಲ್ಲೂ ಪ್ರಾಚೀನ ಸಂಸ್ಕೃತ ಕೃತಿಗಳಲ್ಲೂ ಇದರ ಉಲ್ಲೇಖಗಳಿವೆ. ಇದನ್ನು ಲಕ್ಷ್ಮಿಯ ಆವಾಸಸ್ಥಾನವೆನ್ನಲಾಗಿದೆ. ಅಗಲವಾಗಿ ಸುಂದರವಾಗಿರುವ ಮುಖವನ್ನು ಕಮಲಕ್ಕೆ ಹೋಲಿಸಿರುವುದೂ ಉಂಟು. ಕಮಲವನ್ನು ಮನ್ಮಥನ ಐದು ಬಾಣಗಳಲ್ಲಿ ಒಂದು ಎನ್ನಲಾಗಿದೆ.

ಕಮಲ ಸೌಂದರ್ಯಕ್ಕಾಗಿ ಮಾತ್ರವಲ್ಲದೆ ಆಹಾರ ವಸ್ತುವಾಗಿಯೂ ಹೆಸರಾಗಿದೆ. ಇದರ ಪ್ರಕಂದದಲ್ಲಿ ಯಥೇಚ್ಛವಾಗಿ ಪಿಷ್ಟ ಸಂಗ್ರಹವಾಗಿರುವುದರಿಂದ ತರಕಾರಿಯಾಗಿಯೂ ಉಪ್ಪಿನಕಾಯಿಗೂ ಇದನ್ನು ಉಪಯೋಗಿಸುತ್ತಾರೆ. ಇದರಲ್ಲಿ ಶೇ. 2.70 ಪ್ರೋಟೀನು, ಶೇ.9.25 ಪಿಷ್ಟ, ಶೇ.0.11 ಕೊಬ್ಬು, ಶೇ.1.56 ಸಕ್ಕರೆಯ ಭಾಗ ಇದೆಯೆಂದು ತಿಳಿದುಬಂದಿದೆ. ಅಲ್ಲದೆ ಬಿ ಮತ್ತು ಸಿ ಜೀವಾತುಗಳು ಕೂಡ ಇವೆ. ಕಮಲದ ಕಾಯಿಗಳನ್ನು ಹುರಿದು ಅಥವಾ ಹುರಿಯದೆಯೇ ತಿನ್ನುವುದುಂಟು. ಎಳೆಯ ಎಲೆಗಳು, ಕಾಂಡ (ದಂಟು) ಮತ್ತು ಹೂಗಳನ್ನೂ ತರಕಾರಿಯಾಗಿ ಬಳಸುವ ರೂಢಿಯಿದೆ. ಎಲೆಗಳು ಅಗಲವಾಗಿರುವುದರಿಂದ ಊಟದ ಎಲೆಯಾಗಿ ಬಳಸುತ್ತಾರೆ.

ಒಂದು ಕಾಲದಲ್ಲಿ ಕಮಲದ ಹೂಗಳಿಂದ ಒಂದು ಬಗೆಯ ಸುಗಂಧ ದ್ರವ್ಯವನ್ನು ತಯಾರಿಸುತ್ತಿದ್ದರು. ಹೂಗಳಿಂದ ಬರುವ ಜೇನು ಶಕ್ತಿವರ್ಧಕವೆನ್ನುತ್ತಾರೆ. ಅಲ್ಲದೆ ಅದನ್ನು ಕಣ್ಣಿನ ಕೆಲವು ರೋಗಗಳಿಗೆ ನಿವಾರಕವಾಗಿ ಉಪಯೋಗಿಸುತ್ತಾರೆ. ಪ್ರಕಂದಗಳಿಂದ ಒಂದು ಬಗೆಯ ಹಿಟ್ಟನ್ನು ತಯಾರಿಸಬಹುದು. ಶಕ್ತಿವರ್ಧಕವೆಂದು ಹೆಸರಾಗಿರುವ ಇದನ್ನು ಅತಿಸಾರ, ಆಮಶಂಕೆಗಳಿಂದ ಬಳಲುವ ಮಕ್ಕಳಿಗೆ ಆಹಾರವಾಗಿ ಕೊಡುತ್ತಾರೆ. ಪ್ರಕಂದಗಳಿಂದ ಒಂದು ರೀತಿಯ ಲೇಪವನ್ನು ತಯಾರಿಸಿ ಗಜಕರ್ಣ ಮತ್ತಿತರ ಚರ್ಮರೋಗಗಳಿಗೆ ಬಳಸುತ್ತಾರೆ. (ಎಂ.ಎಚ್.ಎಂ.; ಕೆ.ಎಂ.)

**ಕಮಲಭವ :** ಶಾಂತೀಶ್ವರಪುರಾಣವೆಂಬ ಚಂಪೂಕಾವ್ಯವನ್ನು ಬರೆದ ಕವಿ ಕಾಲ ಸು.1235. ಜೈನಧರ್ಮದವ; ದೇಶೀಯಗಣ ಪುಸ್ತಕಗುಚ್ಛದ ಕೊಂಡಕುಂದಾನ್ವಯದ ಮಾಘನಂದಿ ಪಂಡಿತ ಮುನೀಶ್ವರನ ಶಿಷ್ಯ. ಈತನಿಗೆ ಕವಿಕಂಜಗರ್ಭ, ಸೂಕ್ತಿಸಂದರ್ಭಗರ್ಭ ಎಂಬ ಬಿರುದುಗಳಿದ್ದಂತೆ ಕಾಣುತ್ತದೆ. ದೇವಗಿರಿಯ ಯಾದವ ರಾಜನಾದ ಸಿಂಹಣನ

ಕಾಲದಲ್ಲಿ (1210–1247) ಇದ್ದನೆಂದು ಅವನ ಸಿಂಹಣೋರ್ವೀಶ್ವರಂ ವಿನಮನ್ಮಸ್ತಕ ನಾದಂ ಎಂಬ ಉಕ್ತಿಯಿಂದ ಊಹಿಸಬಹುದಾಗಿದೆ. ತನ್ನ ಕಾವ್ಯದಲ್ಲಿ ಪೂರ್ವ ಕವಿಗಳಾದ ಪಂಪ, ಪೊನ್ನ, ನಾಗಚಂದ್ರ, ರನ್ನ, ಬಂಧುವರ್ಮ, ನೇಮಿಚಂದ್ರ, ಜನ್ನ, ಅಗ್ಗಳ– ಮೊದಲಾದವರ ಕೃತಿಸೌಂದರೀಸುಭಗಮಾವಗಮಿರ್ಕೆ– ಎಂದು ಹೇಳಿಕೊಂಡಿದ್ದಾನೆ. ಈ ಕಾರಣದಿಂದ ಜನ್ನಕವಿಯ (1230) ಈಚೆಗೂ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ (ಸು. 1243) ಇವನ ಗ್ರಂಥದಿಂದ ಪದ್ಯಗಳು ಉದ್ಧರಿಸಲ್ಪಟ್ಟಿರುವುದರಿಂದ ಇದಕ್ಕೆ ಮೊದಲೂ ಕಮಲಭವ ಇದ್ದಿರಬೇಕು. ದೇವಕವಿಯ ಕುಸುಮಾವಳೀಕಾವ್ಯದ ಕವಿಕಮಳಜ ಸೂಕ್ತಿ ಸುಧಾರ್ಣವ ಸೋಮಂ ಎಂಬ ಉಕ್ತಿಯಿಂದ ದೇವಕವಿಯಿಂದ ಈತ ಪ್ರೋತ್ಸಾಹ ಪಡೆದವನೆಂದು ಊಹಿಸಲಾಗಿದೆ.

ಶಾಂತೀಶ್ವರಪುರಾಣವನ್ನು ರಚಿಸಿದ ಕನ್ನಡ ಕವಿಗಳಲ್ಲಿ ಈತ ಎರಡನೆಯವ. ಹದಿನಾರನೆಯ ತೀರ್ಥಂಕರನನ್ನು ಕುರಿತ ಈ ಪುರಾಣದಲ್ಲಿ ಹದಿನಾರು ಆಶ್ವಾಸಗಳಿರುವುದು ಸಾರ್ಥಕವಾಗಿದೆ. ಪುರಾಣಕಾವ್ಯದ ಲಕ್ಷಣಗಳನ್ನೆಲ್ಲ ಒಳಗೊಂಡ ಪರಿಪೂರ್ಣದ ಚಂಪೂಕೃತಿ ಇದು. ಕಥನವಿಸ್ತಾರ ಮತ್ತು ವರ್ಣನಾ ವಿಸ್ತಾರಗಳಲ್ಲಿ ಪೊನ್ನನ ಕಾವ್ಯವನ್ನು ಇದು ಮೀರಿಸುತ್ತದೆ.

ಲಲಿತಪದಬಂಧ, ಕಥೆಯ ನಿರರ್ಗಳ ಓಟ, ಉಕ್ತಿ ಪ್ರೌಢಿಮೆ, ಭಾವತತ್ಪರತೆ, ಸುಂದರ ಕಲ್ಪನೆಗಳಿಂದ ಕೂಡಿದ ವರ್ಣನೆಗಳು, ಕವಿಸಮಯ ಮತ್ತು ಅಲಂಕಾರಗಳಿಂದ ತುಳುಕುವ ಪಾಂಡಿತ್ಯ–ಇವುಗಳಿಂದ ಇದು ಗಣ್ಯ ಚಂಪೂಕೃತಿ ಎನ್ನಿಸುತ್ತದೆಯಾದರೂ ರಸದ ನಿರರ್ಗಳ ಪ್ರವಾಹವಿಲ್ಲದುದರಿಂದ, ಅಂಶ ಅಂಶಗಳಲ್ಲಿ ಸುಂದರವಾಗಿದ್ದರೂ ಒಟ್ಟಾರೆ ನೋಡಿದಾಗ ಸಮಷ್ಟಿ ಸೌಂದರ್ಯದ ಕೊರತೆ ಎದ್ದುಕಾಣುತ್ತದೆ. (ಕೆ.ಜಿ.ಕೆ.)

**ಕಮಲಶೀಲ :** ಶಾಂತರಕ್ಷಿತನ ಪ್ರತ್ಯಕ್ಷ ಶಿಷ್ಯ. ಗುರುವಿನಂತೆ ಬೌದ್ಧತತ್ತ್ವಜ್ಞಾನಿ ಮತ್ತು ತಂತ್ರಶಾಸ್ತ್ರವಿಶಾರದ. ಈತ ನಲಂದ ವಿದ್ಯಾಪೀಠದಲ್ಲಿ ತಂತ್ರಶಾಸ್ತ್ರದಲ್ಲಿ ಪಾಠ ಹೇಳುವ ಆಚಾರ್ಯನಾಗಿದ್ದನೆಂದು ತಿಳಿದುಬರುತ್ತದೆ. ಜನ್ಮಸ್ಥಾನ ಗೊತ್ತಿಲ್ಲ. ಕಾಲ ಸು.713–63; ಈತನ ಹಲವು ಗ್ರಂಥಗಳು ಟಿಬೆಟನ್ ಭಾಷೆಯಲ್ಲಿ ಅನುವಾದವಾಗಿವೆ. ಸಂಸ್ಕೃತ ಮೂಲದಲ್ಲಿ ದೊರೆತ ಈತನ ಗ್ರಂಥವೆಂದರೆ ಶಾಂತರಕ್ಷಿತನ ತತ್ತ್ವಸಂಗ್ರಹದ ಮೇಲಿನ ಪಂಜಿಕೆಯೆಂಬ ಟೀಕೆ. ಇಲ್ಲಿ ಈತನ ವಿಶಾಲವಾದ ಅಧ್ಯಯನದ ಪರಿಚಯವಾಗುತ್ತದೆ. ಶಾಂತರಕ್ಷಿತನ ಶೈಲಿ ಮತ್ತು ಆತನ ಕಾರಿಕೆಗಳು ಅಷ್ಟು ಸುಲಭದವಲ್ಲ. ಆದರೂ ಕಮಲಶೀಲ ಅತ್ಯಂತ ವಿಸ್ತೃತವಾದ ಟೀಕೆಯನ್ನು ಬರೆದು ಅವುಗಳ ಅರ್ಥವನ್ನು ಸ್ಪಷ್ಟವಾಗಿ ನಿರೂಪಿಸಿದ್ದಾನೆ. ಖಂಡಿಸುವುದಕ್ಕಾಗಿ ಶಾಂತರಕ್ಷಿತ ಬೇರೆಬೇರೆಯವರ ಮತಗಳನ್ನು ಸೂಚಿಸಿದ ಕಡೆಗಳಲ್ಲೆಲ್ಲ ಕಮಲಶೀಲ ಆಯಾ ಆಚಾರ್ಯರ ಹೆಸರುಗಳನ್ನು ಹೇಳಿದ್ದಾನೆ. ಇದು ನ್ಯಾಯಶಾಸ್ತ್ರದ ಇತಿಹಾಸದ ದೃಷ್ಟಿಯಿಂದ ಬಹಳ ಮಹತ್ತ್ವದ ಸಂಗತಿ. ಎಷ್ಟೋ ಸಂದರ್ಭಗಳಲ್ಲಿ ಶಾಂತರಕ್ಷಿತನಿಗಿಂತ ಹೆಚ್ಚು ವಿಷಯಗಳನ್ನು ಹೇಳಿ ಪರಮತಖಂಡನೆ ಮಾಡುತ್ತಾನೆ, ಶಿಷ್ಯ ಕಮಲಶೀಲ.

ಶಾಂತರಕ್ಷಿತನಂಥ ಗುರುವಿಗೆ ಕಮಲಶೀಲ ಯೋಗ್ಯ ಶಿಷ್ಯ ಮತ್ತು ತತ್ತ್ವಸಂಗ್ರಹಕ್ಕೆ ಒಪ್ಪುವ ವ್ಯಾಖ್ಯಾನಕಾರ. (ಎ.ಎನ್.ಯು.)

**ಕಮಲಾ ದೇವಿ :** ವಾಘೇಲ ಮನೆತನಕ್ಕೆ ಸೇರಿದ ಗುಜರಾತಿನ ರಾಜನಾದ ಎರಡನೆಯ ಕರ್ಣದೇವನ ರಾಣಿ. ಅಲ್ಲಾವುದ್ದೀನ್ ಖಿಲ್ಜಿ ದೆಹಲಿ ಸುಲ್ತಾನನಾದ ಅನಂತರ ಗುಜರಾತ್ ರಾಜ್ಯವನ್ನು ವಶಪಡಿಸಿಕೊಳ್ಳಲು ತನ್ನ ತಮ್ಮನಾದ ನಸರತ್‌ಖಾನ್ ಮತ್ತು ಉಲಘ್ ಖಾನರ ಮುಖಂಡತ್ವದಲ್ಲಿ 1298ರಲ್ಲಿ ಸೈನ್ಯವನ್ನು ಕಳುಹಿಸಿದ. ಯುದ್ಧದಲ್ಲಿ ಕರ್ಣದೇವ ಸೋತು ತನ್ನ ನಾಲ್ಕು ವರ್ಷದ ಪುತ್ರಿ ದೇವಲದೇವಿಯೊಡನೆ ದೇವಗಿರಿಗೆ ಓಡಿಹೋದ. ಕರ್ಣದೇವನ ರಾಣಿಯಾದ ಕಮಲಾದೇವಿ ಶತ್ರುಗಳ ಕೈಗೆ ಸಿಕ್ಕಿಬಿದ್ದಳು. ಅವಳನ್ನು ದೆಹಲಿಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಅಲ್ಲಾವುದ್ದೀನ್ ಖಿಲ್ಜಿ ಆಕೆಯನ್ನು ತನ್ನ ಪ್ರೀತಿಯ ಮಡದಿಯಾಗಿ ಮಾಡಿಕೊಂಡ. ಅಲ್ಲಾವುದ್ದೀನ್ ಮುಂದೆ ಮಲ್ಲಿಕ್ ಕಾಫರನ ನೇತೃತ್ವದಲ್ಲಿ ದಕ್ಷಿಣ ಭಾರತದ ದಂಡಯಾತ್ರೆಗೆ ಸೈನ್ಯ ಕಳುಹಿಸಿದಾಗ, ಕಮಲಾದೇವಿ ದೇವಗಿರಿಯಲ್ಲಿದ್ದ ತನ್ನ ಪುತ್ರಿ ದೇವಲದೇವಿಯನ್ನು ದೆಹಲಿಗೆ ತರುವಂತೆ ಕೇಳಿಕೊಂಡಳು. ಕಾಫರ್ ದೇವಗಿರಿಯ ಯಾದವರನ್ನು ಸೋಲಿಸಿ ದೇವಲದೇವಿಯನ್ನು ಪಡೆದು ದೆಹಲಿಗೆ ತಂದು ಕಮಲಾದೇವಿಗೆ ಒಪ್ಪಿಸಿದ. (ಜಿ.ಆರ್.ಆರ್.)

**ಕಮಲಾದೇವಿ, ಚಟ್ಟೋಪಾಧ್ಯಾಯ :** 1903–88. ಭಾರತ ಸ್ವಾತಂತ್ರ್ಯ ಹೋರಾಟಗಾರ್ತಿಯರಲ್ಲೊಬ್ಬರು. ಕಲಾಭಿಜ್ಞೆ, ಸಾಮಾಜಿಕ ಕಾರ್ಯಕರ್ತೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1903 ಏಪ್ರಿಲ್ 3ರಂದು ಜನಿಸಿದರು. ಇವರ ತಂದೆ ಮದರಾಸು ಸಿವಿಲ್ ಸರ್ವಿಸಿನಲ್ಲಿ ಉನ್ನತ ದರ್ಜೆಯ ಅಧಿಕಾರಿಯಾಗಿದ್ದರು. ಕಮಲಾದೇವಿ ಮಂಗಳೂರಿನ ಕೆಥೊಲಿಕ್ ಕಾನ್ವೆಂಟ್ ಮತ್ತು ಸೇಂಟ್ ಮೇರೀಸ್ ಕಾಲೇಜಿನಲ್ಲೂ ಆಮೇಲೆ ಲಂಡನ್ನಿನ ಬೆಡ್‌ಫರ್ಡ್ ಕಾಲೇಜು ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲೂ ವಿದ್ಯಾಭ್ಯಾಸ ಮಾಡಿದರು. ಬಾಲ್ಯದಲ್ಲೆ ಇವರ ವಿವಾಹವಾಗಿದ್ದೂ ಶಾಲಾ ವಿದ್ಯಾರ್ಥಿನಿಯಾಗಿದ್ದಾಗಲೇ ಇವರಿಗೆ ವೈಧವ್ಯ ಪ್ರಾಪ್ತವಾಯಿತು. ಆಗ ಇವರು ಹಳೆಯ ಕಂದಾಚಾರವನ್ನು ಮುರಿದು, ತಾವು ಒಪ್ಪಿದ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಮದುವೆಯಾದರು. ಪತಿಯೊಂದಿಗೆ ಯುರೋಪಿನಲ್ಲಿ ಪ್ರವಾಸಮಾಡಿ ಕಲಾವಿದರನ್ನು ಸಂದರ್ಶಿಸುತ್ತ ರಂಗಭೂಮಿಯ ಅಧ್ಯಯನ ಮಾಡಿದರು. ಅದರ ಪ್ರಯೋಗತಂತ್ರವನ್ನು ಕಲಿತರು. ಭಾರತಕ್ಕೆ ಮರಳಿದ ಮೇಲೆ ತಾವೇ ಮುಖ್ಯಪಾತ್ರಗಳನ್ನು ವಹಿಸಿ, ಕಲಾತ್ಮಕ ನಾಟಕಗಳನ್ನು ರಂಗಭೂಮಿಯ ಮೇಲೆ ತರಲು ತಮ್ಮ ಪತಿಯೊಂದಿಗೆ ಶ್ರಮಿಸಿದರು.

ಗಾಂಧೀಜಿ, ಜವಹರಲಾಲ್ ನೆಹರೂ, ಸರೋಜಿನಿ ನಾಯ್ಡು, ಕಸ್ತೂರ ಬಾ – ಇವರ ಪ್ರಭಾವ ಕಮಲಾದೇವಿಯ ಮೇಲೆ ವಿಶೇಷವಾಗಿ ಆಯಿತು. ಓದುತ್ತಿದ್ದಾಗಲೇ ಇವರು ಕಾಲೇಜು ವಿದ್ಯಾಭ್ಯಾಸ ತೊರೆದು ಅಸಹಕಾರ ಚಳವಳಿಯಲ್ಲಿ ದುಮುಕಿದರು. ಯರವಾಡಾ, ಬೆಳಗಾಂವಿ ಮತ್ತು ವೆಲ್ಲೂರುಗಳಲ್ಲಿ ಜೈಲು ಶಿಕ್ಷೆ ಅನುಭವಿಸಿದರು. ಅನಂತರವೂ ಅನೇಕ ಸಾರಿ ಸೆರೆಮನೆ ಶಿಕ್ಷೆಗೆ ಗುರಿಯಾದರು. ಕರ್ನಾಟಕದ ಯುವಕರಲ್ಲಿ ರಾಷ್ಟ್ರಸೇವೆಯ ಜಾಗೃತಿ ಉಂಟುಮಾಡುವುದರಲ್ಲಿ ಇವರ ಪಾತ್ರ ಹಿರಿದು. ಕೃಷಿಕರ ಸಮಸ್ಯೆಗಳ ಪರಿಹಾರದಿಂದಲೇ ಜನತೆಯ ಉದ್ಧಾರ ಸಾಧ್ಯವೆಂದು ನಂಬಿ ಇವರು ಕೃಷಿ ಕ್ಷೇತ್ರದಲ್ಲಿ ತೀವ್ರ ಆಸಕ್ತಿ ತಳೆದರು. ಜಮೀನುದಾರಿ ಪದ್ಧತಿ ರದ್ದಾಗಿ ಭೂಮಿ ಸಮಾನವಾಗಿ, ನ್ಯಾಯಸಮ್ಮತವಾಗಿ ಹಂಚಿಕೆಯಾಗಬೇಕೆಂಬುದು ಇವರ ಆಶಯವಾಗಿತ್ತು. ಕಾಂಗ್ರೆಸ್ಸಿನ ಭೂ ಸುಧಾರಣೆಯ ಕ್ರಮಗಳು ಇವರಿಗೆ ಸಮರ್ಪಕವೆನಿಸಲಿಲ್ಲ.

ಕಮಲಾದೇವಿಯವರು 1948ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸೇರಿದರು. ಬಡತನದ ವಿರುದ್ಧ ಘೋಷಣೆಗಳನ್ನು ಕೂಗುವುದಕ್ಕಿಂತ ಸುಖಮಯ ಮಾನವ ಸಂಬಂಧಗಳಿಗಾಗಿ ಕ್ರಿಯಾ ಶೀಲವಾದ ಕಳಕಳಿಯೇ ಸಮಾಜವಾದದ ಸತ್ತ್ವವೆಂಬುದು ಇವರ ನಂಬಿಕೆ. ಬ್ರಿಟಿಷ್‌ಸಾಮ್ರಾಜ್ಯ ಶಾಹಿಯ ವಿರುದ್ಧ ಹೋರಾಡುವುದಕ್ಕಾಗಿ ಕಾಂಗ್ರೆಸ್ಸನ್ನು ಬಲಪಡಿಸುವ ಕರೆ ಕೊಟ್ಟ ಇವರು ಸಮಾಜವಾದದ ಧ್ಯೇಯ ನಿರೂಪಣೆಯಿಂದ ಒಮ್ಮೆಲೆ ಭಾರತದ ಮುಂಚೂಣಿ ನಾಯಕರ ಮಟ್ಟಕ್ಕೇರಿದರು. ಕಾರ್ಮಿಕರ ಹಿತರಕ್ಷಣೆಗಾಗಿ ಕಾರ್ಮಿಕ ಸಂಸ್ಥೆಗಳಲ್ಲಿ ಸಂಘಟನೆಗೂ ಚಳವಳಿಗೂ ನಾಯಕತ್ವ ನೀಡಿ ಉತ್ತೇಜನ ನೀಡಿದರು.

ಭಾರತದ ಮಹಿಳಾ ಆಂದೋಲನದ ಪ್ರಮುಖ ಮುಂದಾಳಾಗಿ ದೇಶಾದ್ಯಂತ ಸಂಚರಿಸಿ, ಭಾಷಣಗಳಿಂದ, ಸಂದರ್ಶನಗಳಿಂದ ಸ್ಫೂರ್ತಿ ನೀಡಿ, ಅಖಿಲ ಭಾರತ ಮಹಿಳಾ ಸಮ್ಮೇಳನವನ್ನು ಬೆಳೆಸಿದರು. ಬಿಳಿಯ ಒರಟು ಖಾದಿಗೆ ಕಲಾತ್ಮಕತೆ ತಂದುಕೊಟ್ಟು, ಅರಿವೆಗೆ ಬಣ್ಣ ಹಾಕುವ ಭಾರತೀಯ ಕಲೆಗೆ ಸ್ಫೂರ್ತಿ ನೀಡಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಕಾರ್ಯಕಾರಿ ಸಮಿತಿಯ, ಅಖಿಲ ಭಾರತ ಮಹಿಳಾ ಸಮ್ಮೇಳನದ ಸಂಘಟನಾ ಕಾರ್ಯದರ್ಶಿತ್ವ, ಉಪಾಧ್ಯಕ್ಷತೆ ಮತ್ತು ಅಧ್ಯಕ್ಷತೆ, ಭಾರತೀಯ ಸಹಕಾರ ಯೂನಿಯನ್ನಿನ ಅಧ್ಯಕ್ಷತೆ, ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್‌ನ ಉಪಾಧ್ಯಕ್ಷತೆ, ಅಖಿಲ ಭಾರತ ಕರಕುಶಲ ಮಂಡಳಿಯ ಅಧ್ಯಕ್ಷತೆ, ಅಖಿಲ ಭಾರತ ಡಿಸೈನ್ ಸೆಂಟರಿನ ಅಧ್ಯಕ್ಷತೆ– ಇವು ಕಮಲಾದೇವಿಯವರು ನಿರ್ವಹಿಸಿದ ಕೆಲವು ಅಧಿಕಾರಗಳು. ಇವರು ಅಂತಾರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ವತಿಯಿಂದ ಭಾರತ ರಾಷ್ಟ್ರೀಯ ರಂಗಭೂಮಿ ಕೇಂದ್ರದ ಸಂಸ್ಥಾಪಕರಾಗಿದ್ದರು.

ಇವರು ಇಂಗ್ಲಿಷಿನಲ್ಲಿ ಹತ್ತು ಪುಸ್ತಕಗಳನ್ನು ಬರೆದಿದ್ದಾರೆ: ಭಾರತೀಯ ಕರ ಕುಶಲ ಕೈಗಾರಿಕೆಗಳು, ಭಾರತೀಯ ಕಂಬಳಿಗಳು ಮತ್ತು ನೆಲಾವರಣಗಳು, ಸಮಾಜವಾದ ಮತ್ತು ಸಮಾಜ, ಭಾರತೀಯ ಮಹಿಳಾ ಜಾಗೃತಿ, ರಾಷ್ಟ್ರೀಯ ರಂಗಭೂಮಿ ಮುಂತಾದವು ಇವರ ವೈವಿಧ್ಯಪೂರ್ಣ ಆಸಕ್ತಿಯನ್ನು ಪ್ರತಿ ಫಲಿಸುತ್ತವೆ. ಸಾಮಾಜಿಕ ಧುರೀಣತ್ವಕ್ಕಾಗಿ ವಾಟ್ಟುಮಲ್ (1962) ಮತ್ತು ಮ್ಯಾಗ್ಸೇಸೆ (1966) ಪ್ರಶಸ್ತಿಗಳನ್ನುಗಳಿಸಿದರು. 1970ರಲ್ಲಿ ಶಾಂತಿ ನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಿಂದ ಇವರಿಗೆ ದೇಶಿಕೋತ್ತಮಾ ಎಂಬ ಪ್ರಶಸ್ತಿ ದತ್ತವಾಯಿತು. ಭಾರತ ಸರ್ಕಾರ ಇವರಿಗೆ ಪದ್ಮ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಇವರು 1988ರಲ್ಲಿ ನಿಧನರಾದರು. (ಜಿ.ಆರ್.ಪಿ.)

**ಕಮಲಾ ನೆಹರು :** 1899–1936. ಜವಹರಲಾಲ ನೆಹರುರವರ ಧರ್ಮಪತ್ನಿ. 1899 ಆಗಸ್ಟ್ 1ರಂದು ಕಾಶ್ಮೀರಿ ಬ್ರಾಹ್ಮಣ ಮನೆತನವೊಂದರಲ್ಲಿ ಜನ್ಮತಳೆದರು. ತಂದೆ ದೆಹಲಿಯಲ್ಲಿ ಪ್ರಸಿದ್ಧ ವರ್ತಕರಾಗಿದ್ದ ಜವಹರ್‌ಲಾಲ್ ಕೌಲ್. 1916ರ ವಸಂತ ಪಂಚಮಿಯಂದು ಕಮಲಾ ಜವಹರರ ಕೈಹಿಡಿದರು. ಆಗ ಈಕೆಯ ವಯಸ್ಸು 16. ನೋಡಲು ತುಂಬ ಸುಂದರಿಯಾಗಿದ್ದ ಈಕೆ ತುಸು ತೆಳ್ಳಗೆ, ಉದ್ದವಾಗಿದ್ದರು. ತುಂಬ ಸೌಮ್ಯಸ್ವಭಾವದ ಈಕೆಯಲ್ಲಿ ಸೌಂದರ್ಯ, ಮಾಧುರ್ಯಗಳ ಜೊತೆಗೆ ಆರೋಗ್ಯದ ಕಾಂತಿಯೂ ಮೇಳವಿಸಿತ್ತು. ಸಂಪ್ರದಾಯಸ್ಥ ಮನೆತನದಿಂದ ಬಂದ ಕಮಲಾ ಅಲ್ಪಸ್ವಲ್ಪ ಶಾಲೆಯ ವಿದ್ಯಾಭ್ಯಾಸವನ್ನು ಬಿಟ್ಟರೆ ಹೆಚ್ಚು ಓದಿರಲಿಲ್ಲ. ಪಾಶ್ಚಾತ್ಯ ರೀತಿಯಲ್ಲಿ ನಡೆಯುತ್ತಿದ್ದ ನೆಹರು ಕುಟುಂಬಕ್ಕೆ ಹೊಂದಿಕೊಳ್ಳಲು ಮೊದಮೊದಲು ಕಷ್ಟವಾದರೂ ಬಹುಬೇಗನೆ

ಎಲ್ಲವನ್ನು ಕಲಿತುಕೊಂಡರು. ಅತ್ತೆಮಾವಂದಿರಿಗೆ ಅಚ್ಚುಮೆಚ್ಚಿನವರಾಗಿ, ನಾದಿನಿಯರಿಗೆ ಅಕ್ಕರೆಯ ಅತ್ತಿಗೆಯಾಗಿ, ಪತಿಯ ಪ್ರೀತಿಗೆ ಪಾತ್ರರಾದರು. ಮದುವೆಯಾದ ಮರುವರ್ಷವೇ ಅಂದರೆ 1917ರಲ್ಲಿ ಇವರ ಒಬ್ಬಳೇ ಮಗಳು ಇಂದಿರಾ ಹುಟ್ಟಿದಳು.

ಭಾರತದ ರಾಜಕೀಯದಲ್ಲಿ ಉತ್ಕ್ರಾಂತಿಯ ಕಾವೇರುತ್ತಿದ್ದ ಕಾಲದಲ್ಲಿ ಕಮಲಾ ಜವಹರರ ಕೈಹಿಡಿದರು. ಹೋಂ ರೂಲ್ ಚಳವಳಿ, ಪಂಜಾಬಿನ ಮಾರ್ಷಲ್ ಲಾ,ಅಸಹಕಾರ ಮುಂತಾದ ಘಟನಾಪರಂಪರೆಗಳ ಕಾಲವದು. ಆಗ ಜವಹರರು ಸಂಪೂರ್ಣವಾಗಿ ಸ್ವಾತಂತ್ರ್ಯ ಚಳವಳಿಯ ಆಂದೋಲನದಲ್ಲಿ ಮುಳುಗಿ ಹೋಗಿದ್ದರು. ಇದರಿಂದ ಕಮಲಾ ಮದುವೆಯಾದ ಕೆಲದಿನಗಳಲ್ಲಿಯೇ ಪತಿಯಿಂದ ಅಗಲಿರಬೇಕಾಯಿತು. ಪ್ರತಿ ಹೆಂಗಳೆಯೂ ನಿರೀಕ್ಷಿಸಬಹುದಾದ ವೈವಾಹಿಕಜೀವನದ ಸುಖ ಸಂತೋಷಗಳಿಂದ ಕಮಲಾ ವಂಚಿತರಾದರೂ ತಾಳ್ಮೆಗೆಡದೆ ಎಲ್ಲವನ್ನೂ ಸಹಿಸಿದರು. ದೇಶಸೇವೆಗಾಗಿ ಪತಿಯನ್ನು ಬಿಟ್ಟುಕೊಟ್ಟು ಅನನ್ಯ ತ್ಯಾಗವನ್ನು ಮೆರೆದರು.

ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವ ಅವಕಾಶ ದೊರೆತಾಗ ಕಮಲಾ ತಾವೂ ಸಂತೋಷದಿಂದ ಮುನ್ನುಗ್ಗಿದರು. ಮಹಿಳಾ ಸ್ವಾತಂತ್ರ್ಯವನ್ನು ಉಗ್ರವಾಗಿ ಪ್ರತಿಪಾದಿಸುತ್ತಿದ್ದ ಅವರು ಸ್ವಯಂಸೇವಿಕೆಯರ ತಂಡವನ್ನು ಕಟ್ಟಿ ತಾವೂ ಗಂಡು ಉಡುಗೆಯನ್ನು ತೊಟ್ಟರು. ಹಳ್ಳಿಹಳ್ಳಿಗಳನ್ನು ಸುತ್ತಿ ವಿದೇಶೀ ವಸ್ತ್ರಬಹಿಷ್ಕಾರ, ಮದ್ಯಪಾನನಿರೋಧ ಮುಂತಾದ ವಿಷಯಗಳ ಬಗ್ಗೆ ಭಾಷಣ ಮಾಡಿದರು. ಮಾವ ಮತ್ತು ಪತಿ ಇಬ್ಬರೂ ಸೆರೆಗೆ ಹೋದಾಗ ಅವರ ಸ್ಥಾನದಲ್ಲಿ ನಿಂತು ಚಳವಳಿಯನ್ನು ಮುಂದುವರಿಸಿದರು. ಅನಾರೋಗ್ಯದಿಂದ ನರಳುತ್ತಿದ್ದರೂ ಲೆಕ್ಕಿಸದೆ ಸುಡುಬಿಸಿಲಿನಲ್ಲಿ ಅಂಗಡಿಗಳ ಮುಂದೆ ನಿಂತು ವಿದೇಶೀ ವಸ್ತ್ರಬಹಿಷ್ಕಾರದ ಪ್ರಚಾರ ಕೈಗೊಂಡರು. ಸಹಸ್ರಾರು ಜನರನ್ನು ಸಂಘಟಿಸಿ ಮೆರವಣಿಗೆಯಲ್ಲಿ ಕರೆದೊಯ್ದು ಸರ್ಕಾರವನ್ನು ಪ್ರತಿಭಟಿಸಿದರು. ಕೆಲವು ಕಾಲ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಕೆಲಸಗಳನ್ನೆಲ್ಲ ದಕ್ಷತೆಯಿಂದ ನಿರ್ವಹಿಸಿದರು. ತಮ್ಮ ಧೈರ್ಯ, ಸಾಹಸ, ಸಂಘಟನ ಶಕ್ತಿಗಳಿಂದ ಅಲಹಾಬಾದಿನಲ್ಲಿ ಜನಪ್ರಿಯ ನಾಯಿಕೆಯಾದರು. ಇವರ ಅಸಾಧಾರಣ ಕಾರ್ಯಶಕ್ತಿಯನ್ನು ನೋಡಿ ಪತಿ ಮತ್ತು ಮಾವಂದಿರೇ ನಿಬ್ಬೆರಗಾದರು. ಚಳವಳಿಯಲ್ಲಿ ಗಾಯಗೊಂಡವರಿಗಾಗಿ ಆನಂದಭವನದ ಒಂದು ದೊಡ್ಡ ಕೋಣೆಯನ್ನೇ ಆಸ್ಪತ್ರೆಯನ್ನಾಗಿ ಪರಿವರ್ತಿಸಿ ಸಹಸ್ರಾರು ಜನರಿಗೆ ಶುಶ್ರೂಷೆ ನೀಡಿದರು. ಈ ಎಲ್ಲ ಚಟುವಟಿಕೆಗಳಿಗಾಗಿ 1931 ಜನವರಿ 1ರಂದು ಸರ್ಕಾರ ಈಕೆಯನ್ನು ಬಂಧಿಸಿತು. ಸೆರೆಗೆ ಕರೆದೊಯ್ಯುವಾಗ ಕಮಲಾ ಹೇಳಿದ ಮಾತುಗಳು ಆಕೆಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ; ನನಗೀಗ ಹಿಡಿಸಲಾರದಷ್ಟು ಸಂತೋಷವಾಗಿದೆ; ನಾನು ಪತಿಯ ಹಾದಿಯಲ್ಲೇ ಸಾಗುತ್ತಿದ್ದೇನೆ; ಜನತೆ ಈ ಬಾವುಟವನ್ನು ಎತ್ತಿಹಿಡಿಯುವುದೆಂದು ಆಶಿಸುತ್ತೇನೆ.

1924ರಲ್ಲಿ ಕಮಲಾ ಒಂದು ಗಂಡುಮಗುವಿಗೆ ಜನ್ಮವಿತ್ತರು. ಆದರೆ ಆ ಮಗು ಉಳಿಯಲಿಲ್ಲ. ಅಂದಿನಿಂದ ಅವರ ಆರೋಗ್ಯ ಕ್ಷೀಣಿಸುತ್ತ ಬಂತು. ವೈದ್ಯರು ಕ್ಷಯವೆಂದರು. 1926ರಲ್ಲಿ ಕಾಯಿಲೆ ಉಲ್ಬಣಿಸಿದಾಗ ವೈದ್ಯರ ಸಲಹೆಯಂತೆ ಪತಿ ಮತ್ತು ಪುತ್ರಿಯರೊಂದಿಗೆ ಸ್ವಿಟ್ಸರ್ಲೆಂಡಿಗೆ ತೆರಳಿದರು. 1927ರ ಹೊತ್ತಿಗೆ ಆರೋಗ್ಯ ತುಸು ಸುಧಾರಿಸಿತು. ಆ ಸಮಯದಲ್ಲಿ ಪತಿಯೊಂದಿಗೆ ಪ್ಯಾರಿಸ್, ಬರ್ಲಿನ್ ಮಾಸ್ಕೊ ಮುಂತಾದೆಡೆಗಳಲ್ಲಿ ಸಂಚರಿಸಿ ತಾಯ್ನಾಡಿಗೆ ಹಿಂತಿರುಗಿದರು. ಅನಾರೋಗ್ಯವನ್ನೂ ಲೆಕ್ಕಿಸದೆ ಸ್ವಾತಂತ್ರ್ಯ ಚಳವಳಿಯಲ್ಲಿ ಮೈಮರೆತರು. ಇದರಿಂದ ಮತ್ತೊಮ್ಮೆ ಹಾಸಿಗೆ ಹಿಡಿಯಬೇಕಾಯಿತು. ಆಗಲೂ ಚಳವಳಿಯಲ್ಲಿ ಭಾಗವಹಿಸಲಾಗದುದಕ್ಕಾಗಿ ಚಡಪಡಿಸುತ್ತಿದ್ದರು. 1934ರ ಹೊತ್ತಿಗೆ ರೋಗ ವಿಷಮಿಸಿತು. ಆ ಸಮಯದಲ್ಲಿ ಜವಹರರು ಎರಡು ವರ್ಷ ಕಾರಾಗೃಹವಾಸದಲ್ಲಿದ್ದರು. ಕಾಯಿಲೆ ಮತ್ತಷ್ಟು ಉಲ್ಬಣಿಸಿದಾಗ ವೈದ್ಯರ ಹೇಳಿಕೆಯಂತೆ ಕಮಲಾ ಜರ್ಮನಿಯ ಬೇಡನ್‌ವೇಲರ್‌ಗೆ ತೆರಳಬೇಕಾಯಿತು. ಆಗ ಇಂದಿರಾ ಇವರ ಜೊತೆಗಿದ್ದಳು. ಮೂರುನಾಲ್ಕು ತಿಂಗಳಾದರೂ ಸ್ಥಿತಿ ಉತ್ತಮವಾಗಲಿಲ್ಲ. ಇವರ ತೀವ್ರಪರಿಸ್ಥಿತಿಯನ್ನು ಗಮನಿಸಿ 1935 ಸೆಪ್ಟೆಂಬರ್ 4ರಂದು ಜವಹರರನ್ನು ಬಿಡುಗಡೆ ಮಾಡಿದರು. ಐದು ದಿನಗಳಲ್ಲಿಯೇ ಅವರು ಮಡದಿಯ ಬಳಿ ಸೇರಿದರು. ಎಂದಿನಂತೆ ಧೈರ್ಯ ತುಂಬಿದ ಮುಗುಳ್ನಗೆಯಿಂದ ಪತ್ನಿ ಪತಿಯನ್ನು ಸ್ವಾಗತಿಸಿದರು. ಪತಿಯ ಸಾನ್ನಿಧ್ಯದಿಂದ ಸಮಾಧಾನಗೊಂಡಂತೆ ತೋರಿತು. ಆದರೂ ವಿಷಗಳಿಗೆ ದೂರವಾಗಲಿಲ್ಲ. 1936 ಜನವರಿ 30ರಂದು ಕಮಲಾ ಅವರನ್ನು ಸ್ವಿಟ್ಸರ್ಲೆಂಡಿನ ಲಾಸೆನ್ನಿಗೆ ಕರೆದೊಯ್ಯಲಾಯಿತು. ಸಾವು ಬದುಕುಗಳಂಚಿನಲ್ಲಿ ಉಯ್ಯಾಲೆಯಾಡುತ್ತಿದ್ದ ಪ್ರಾಣ ಫೆಬ್ರವರಿ 28ರ ಮುಂಜಾನೆ ಅನಂತದಲ್ಲಿ ಲೀನವಾಗಿ ಹೋಯಿತು. ಲಾಸೆನ್ನಿನ ರುದ್ರಭೂಮಿಯಲ್ಲಿ ಕಮಲಾ ನೆಹರು ಅವರ ಸುಂದರ ದೇಹ, ಸದಾ ಮುಗುಳ್ನಗೆ ಸೂಸುತ್ತಿದ್ದ ವದನ ಹಿಡಿಬೂದಿಯಲ್ಲಿ ಅಡಗಿಹೋಯಿತು. ಮರ್ತ್ಯ ದೇಹವಳಿದರೂ ಅವರ ಬಾಳಿನ ತ್ಯಾಗ ಆದರ್ಶಗಳು ಜನಮನದಲ್ಲಿ ಸ್ಥಿರವಾಗಿ ನಿಂತವು.

ಜವಾಹರರು ಅನಂತರ ಬರೆದು ಮುಗಿಸಿದ ತಮ್ಮ ಆತ್ಮಕಥೆಯನ್ನು ಅಗಲಿದ ತಮ್ಮ ಧರ್ಮಪತ್ನಿಗೆ ಅರ್ಪಿಸಿದರು. ಅದರಲ್ಲಿ ಅವರು ಕಮಲಾರವರನ್ನು ಕುರಿತು ಹೀಗೆ ಹೇಳುತ್ತಾರೆ; ಆಕೆಯದು ಸರಳ ಹಾಗೂ ನಿಷ್ಕಪಟ ಮನೋಭಾವ. ಅವಳಲ್ಲಿದ್ದ ಕನ್ಯಾಸಹಜ ಮುಗ್ಧತೆ, ಪಾವಿತ್ರ್ಯಗಳು ಕೊನೆಯವರೆಗೂ ಮಾಸಲಿಲ್ಲ. ಅವಳು ಗೃಹಿಣಿಯಾಗಿ ಬೆಳೆದಂತೆ ಅವಳ ಕಣ್ಣುಗಳಲ್ಲಿ ಗಾಂಭೀರ್ಯ, ಓಜಸ್ಸುಗಳು ತುಳುಕುತ್ತಿದ್ದವು. ಅವು ಮೇಲುನೋಟಕ್ಕೆ ನಿಶ್ಚಲವಾದ ಕೊಳಗಳಂತಿದ್ದರೂ ಹಿಂದೆ ಬಿರುಗಾಳಿಯ ಮೊರೆತವಿತ್ತು. ಅಪರಿಚಿತರೊಡನೆ ಬಿಗಿಯಾಗಿ ವರ್ತಿಸುತ್ತಿದ್ದರೂ ಪರಿಚಿತರೊಡನೆ ತುಂಬ ಸಲುಗೆಯಿಂದ, ಉಲ್ಲಾಸದಿಂದ ವರ್ತಿಸುತ್ತಿದ್ದಳು. ಸೂಕ್ಷ್ಮಗ್ರಾಹಿಯಾದ ಅವಳಲ್ಲಿ ಅದ್ಭುತವಾದ ಆತ್ಮಗೌರವವಿತ್ತು. ಅವಳೆಂದೂ ನನ್ನ ಸಹಾಯವನ್ನಪೇಕ್ಷಿಸಿದವಳಲ್ಲ; ತನ್ನ ಆತ್ಮ ಒಪ್ಪುವಂತೆ, ಜನ ಮೆಚ್ಚುವಂತೆ ನಡೆಯ ಬೇಕೆಂದಾಶಿಸಿದಳು. ತನಗವಕಾಶ ದೊರೆತಾಗ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ತನ್ನ ಶಕ್ತಿಯನ್ನು ತೋರಿದಳು. ಮದುವೆಯಾದ ಮೊದಲ ವರ್ಷಗಳಲ್ಲಿ ನಮ್ಮ ನಡುವೆ ವಯಸ್ಸಿನ ಅಂತರಕ್ಕಿಂತ ಮಿಗಿಲಾಗಿ ಮಾನಸಿಕ ಅಂತರ ಹಿರಿದಾಗಿತ್ತು. ಇದರಿಂದ ನಮ್ಮಲ್ಲಿ ಸಣ್ಣಪುಟ್ಟ ಜಗಳಗಳಾಗುತ್ತಿದ್ದರೂ ಬಹುಬೇಗ ರಾಜಿಯಾಗುತ್ತಿದ್ದೆವು. ಬರಬರುತ್ತ ನಾನವಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಇದರಿಂದ ಒಬ್ಬರನ್ನೊಬ್ಬರು ಹೆಚ್ಚು ಹೆಚ್ಚಾಗಿ ಅರಿತುಕೊಂಡೆವು. ನಾವಿಬ್ಬರೂ ಪರಸ್ಪರ ಹತ್ತಿರಬಂದ ಕಾಲದಲ್ಲಿಯೇ ವಿಧಿ ಅವಳನ್ನು ನನ್ನಿಂದಗಲಿಸಿತು. ಮದುವೆಯಾದ ಹೊಸತರಲ್ಲಿ ನನ್ನಿಂದಾಕೆ ಯಾವ ಸುಖಸಂತೋಷಗಳನ್ನು ನಿರೀಕ್ಷಿಸಬಹುದಾಗಿದ್ದಿತೋ ಅವನ್ನು ನಾನು ನೀಡಲಿಲ್ಲ. ಆಗ ನನ್ನೆಲ್ಲ ಆಸಕ್ತಿಯೂ ಬೇರೆಡೆಗೆ ಕೇಂದ್ರೀಕೃತವಾಗಿತ್ತು. ನಮ್ಮ ಬಾಳು ಬಹುಪಾಲು ಅಗಲಿಕೆಯಲ್ಲಿಯೇ ಕಳೆಯಿತು. ಇದರಿಂದಾಕೆ ತುಂಬ ನೊಂದಿರಬೇಕು. ಆದರೆ ನಾನವಳನ್ನು ಸಂಪೂರ್ಣವಾಗಿ ಮರೆಯಲಿಲ್ಲ. ದಣಿದ ನನ್ನ ಚೇತನ ಅವಳ ಆಶ್ರಯವನ್ನು ಮತ್ತೆ ಮತ್ತೆ ಬಯಸುತ್ತಿತ್ತು. ಅವಳಿಂದ ದೂರವಿದ್ದಾಗ ಅವಳ ನೆನಪೇ ನನ್ನ ಮನಸ್ಸಿಗೇ ತಂಪೀಯುತ್ತಿತ್ತು. ಅವಳು ಬಳಲಿದ ನನ್ನ ಮೈಮನಗಳಿಗೆ ಸಾಂತ್ವನ ನೀಡಿ ಮುಂದಿನ ಕೆಲಸಕ್ಕೆ ಶಕ್ತ್ಯುತ್ಸಾಹಗಳನ್ನು ತುಂಬದಿರುತ್ತಿದ್ದರೆ ನಾನೇನು ತಾನೆ ಸಾಧಿಸುತ್ತಿದ್ದೆ? ಅವಳಿಂದ ನಾನು ಬೇಕಾದಷ್ಟು ಪಡೆದೆ ನಿಜ, ಆದರೆ ನಾನವಳಿಗೆ ಕೊಟ್ಟಿದ್ದೇನು?. . .

ಕಮಲಾ ಸಾಮಾನ್ಯರಂತೆ ಏನನ್ನೂ ನಿರೀಕ್ಷಿಸಲಿಲ್ಲ. ಆಕೆಯದು ಯಾವ ಪ್ರತಿಫಲವನ್ನೂ ಅಪೇಕ್ಷಿಸದ ಅನನ್ಯ ತ್ಯಾಗ. ಆ ತ್ಯಾಗ ಭಾರತೀಯ ಮಹಿಳೆಯ ಉಚ್ಚ ಆದರ್ಶದ ಪ್ರತೀಕ.

(ಜಿ.ಎಸ್.ಸಿ.)

**ಕಮಲಾಪುರ :** ವಿಜಯನಗರದ ವೈಭವದ ಕಾಲದಲ್ಲಿ ಆ ರಾಜಧಾನಿಯ ಒಂದು ವಿಸ್ತರಣ. ಈಗ ಇದು ಪ್ರತ್ಯೇಕ ಸ್ಥಳ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿಗೆ ಸೇರಿದ್ದು. ಹೊಸಪೇಟೆಯಿಂದ 13 ಕಿಮೀ ದೂರದಲ್ಲಿದೆ. ರಾಣಿವಾಸಕ್ಕೆಂದು ಚಿಕ್ಕದಾಗಿಯೂ ಚೊಕ್ಕವಾಗಿಯೂ ಸಮಸ್ತ ಸೌಲಭ್ಯಗಳನ್ನೊಳಗೊಂಡು ರಚಿತವಾಯಿತು. ರಾಣಿಯ ಹೆಸರೇ (ಕಮಲಾದೇವಿ) ಈ ಊರಿಗೂ ಬಂತೆಂದು ಹೇಳಲಾಗಿದೆ.

ಸ್ವಲ್ಪ ತಗ್ಗಿನ ಪ್ರದೇಶದಲ್ಲಿರುವ ಈ ಊರಿನ ಮುಂಭಾಗದಲ್ಲಿ 476 ಎಕರೆ ಒಳ ಆಯ ಹೊಂದಿರುವ ಸುಂದರವಾದ ಕೆರೆ ಇದೆ. ಅಕ್ಕಪಕ್ಕ ಕಲ್ಲುಗುಡ್ಡಗಳೇ ಹೆಚ್ಚು. ಕಮಲಾಪುರದ 5000 ಮನೆಗಳೂ ಸುತ್ತುಗಟ್ಟಿದ ಕೋಟೆಯ ಒಳಗಡೆಯೇ ಇವೆ. ಊರ ಸುತ್ತಳತೆ 6.4 ಕಿಮೀ. ಜನಸಂಖ್ಯೆ 25,552 (2011) ಎಂದು ಅಂದಾಜು. ಇಲ್ಲಿಯ ಕೆಂಪು ಮಿಶ್ರಿತ ಮಣ್ಣುನೆಲ ಫಲವತ್ತು. ಕಬ್ಬನ್ನು ಯಥೇಚ್ಛವಾಗಿ ಬೆಳೆಸುತ್ತಾರೆ. ಬತ್ತ ಮತ್ತು ಬಾಳೆ ಇತರ ಬೆಳೆಗಳು. ಜನರ ಉಡಿಗೆ-ತೊಡಿಗೆ ಅತ್ಯಂತ ಸರಳ. ಭಾಷೆ ಕನ್ನಡ, ತೆಲುಗೂ ಬಳಕೆಯಲ್ಲಿ ಉಂಟು.

ಚಾರಿತ್ರಿಕವಾಗಿ ಈ ಊರಿಗೆ ಪ್ರಾಮುಖ್ಯವಿದೆ. ಅರಸರ ಕಾಲದ ಅನೇಕ ಭವ್ಯ ದೇವಾಲಯಗಳು ಇಲ್ಲಿವೆ. ಮೊದಲನೆಯದಾಗಿ ಶ್ರೀನಗರೇಶ್ವರ ದೇವಾಲಯ, ವಿಜಯನಗರ ರಾಜ್ಯದ ಲಾಂಛನವಾದ ಗಂಡಭೇರುಂಡ ಪಕ್ಷಿಯನ್ನು ಕೋಟೆಯ ಪ್ರಮುಖ ದ್ವಾರದ ಮೇಲೆ ಕಡೆದಿದ್ದಾರೆ. ಈ ದೇವಾಲಯ ಬಹಳ ಪ್ರಸಿದ್ಧ. ವೈಶಾಖ ಮಾಸದಲ್ಲಿ ಇಲ್ಲಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಶ್ರೀ ಪಟ್ಟಾಭಿರಾಮ ದೇವಾಲಯವೂ ಪ್ರೇಕ್ಷಣೀಯ. ಕಂಪ್ಲಿಗೆ ಹೋಗುವ ದಾರಿಯಲ್ಲಿ ಒಂದು ಗುಡ್ಡದ ಮೇಲೆ ಮಾಲ್ಯವಂತ ರಘುನಾಥ ದೇವಸ್ಥಾನವಿದೆ. ಇಲ್ಲಿಯದು ಪ್ರೇಕ್ಷಣೀಯ ಸನ್ನಿವೇಶ. ಇಲ್ಲಿ ಶ್ರೀರಾಮದೇವರ ವಿಗ್ರಹದ

ಸುಖಾಸೀನ ಭಂಗಿ ಆಕರ್ಷಕವಾಗಿದೆ. ಇನ್ನೂ ಅನೇಕ ಸಣ್ಣಪುಟ್ಟ ದೇವಾಲಯಗಳು ಇಲ್ಲುಂಟು. ಹಂಪಿ 4 ಕಿಮೀ ದೂರದಲ್ಲಿದೆ. ಈ ಊರಿನಿಂದ ಪೂರ್ವಾಭಿಮುಖವಾಗಿ ಪಯಣ ಬೆಳೆಸಿದರೆ ಅಕ್ಕತಂಗಿಯರ ಕಲ್ಲು, ಮಹಾನವಮಿ ದಿಬ್ಬ, ರಾಣಿಯ ಸ್ನಾನಗೃಹ, ವಾಸಗೃಹ, ಪ್ರಸಿದ್ಧವಾದ ಕಮಲಮಹಲ್, ಅರಮನೆಯ ನಿವೇಶನ, ಹಜಾರರಾಮನ ಗುಡಿ–ಮುಂತಾದವು ಸಿಗುತ್ತವೆ. ಇಲ್ಲಿಂದ ಕೊಂಚ ದೂರ ಸಾಗಿದರೆ ಹಂಪಿಯ ಗತವೈಭವದ ಪೂರ್ಣದರ್ಶನವಾಗುತ್ತದೆ.

ಕಮಲಾಪುರ ಕೈಗಾರಿಕೆಯಲ್ಲೂ ತಕ್ಕಮಟ್ಟಿಗೆ ಮುಂದುವರಿದಿದೆ. ಊರಿಗೆ ಸಮೀಪದಲ್ಲಿ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಆ ಸ್ಥಳದಲ್ಲಿ ಕಾರ್ಮಿಕರೂ ಸೇರಿದಂತೆ 3,000 ಜನರಿದ್ದಾರೆ. ಇಲ್ಲಿ ನೀರಾವರಿ ಸೌಲಭ್ಯವಿರುವುದರಿಂದ ಸು. 2,000 ಎಕರೆಗಳಲ್ಲಿ ಕಬ್ಬು ಯಥೇಚ್ಛವಾಗಿ ಬೆಳೆದು ಬೆಲ್ಲ ತಯಾರಿಸಲಾಗುತ್ತಿದೆ. ಹತ್ತಿರದ ಹೊಸಪೇಟೆಯ ಸಕ್ಕರೆ ಕಾರ್ಖಾನೆಗೂ ಕಬ್ಬು ಸಾಗುತ್ತದೆ. ನೀರೆತ್ತುವ ಯಂತ್ರದ ಸಹಾಯದಿಂದಲೂ ಕೃಷಿಕಾರ್ಯ ನಡೆಯುತ್ತಿದೆ. ಹೊಸಪೇಟೆಯ ಬಳಿ ನಿರ್ಮಿಸಿರುವ ತುಂಗಭದ್ರಾ ಅಣೆಕಟ್ಟಿನಿಂದ ದೊರಕುವ ಸದಾಕಾಲದ ನೀರಿನ ಸಹಾಯದಿಂದ ಊರಿಗೆ ಹೆಚ್ಚು ಪ್ರಯೋಜನವಾಗಿದೆ. ವಿಜಯನಗರ ಕಾಲೇಜ್ ಉಂಟು.

ಕಮಲಾಪುರನಗರ ಪಂಚಾಯಿತಿ ಕೇಂದ್ರ, ವಸ್ತುಸಂಗ್ರಹಾಲಯ ಮತ್ತು ಸಣ್ಣಪುಟ್ಟ ಗೃಹಕೈಗಾರಿಕೆಗಳೂ ವಿದ್ಯುತ್ ಮತ್ತು ರಕ್ಷಿತನೀರಿನ ಸರಬರಾಜು ವ್ಯವಸ್ಥೆಗಳೂ ಇವೆ.

(ಎಸ್.ಎಸ್.ಎ.)

**ಕಮಲಾ, ಹಂಪನಾ :** 1935–. ಕನ್ನಡ ಲೇಖಕಿ. ಬೆಂಗಳೂರು ಜಿಲ್ಲೆ ದೇವನಹಳ್ಳಿಯಲ್ಲಿ 1935 ಅಕ್ಟೋಬರ್ 28ರಂದು ಜನಿಸಿದರು. ತಂದೆ ಸಿ.ರಂಗಧಾಮ ನಾಯಕ್, ತಾಯಿ ಲಕ್ಷ್ಮಮ್ಮ. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ.ಆನರ್ಸ್ (ಕನ್ನಡ) ಮತ್ತು ಎಂ.ಎ. (ಕನ್ನಡ) ಪದವಿ ಪಡೆದರು. ತುರಂಗ ಭಾರತವನ್ನು ಕುರಿತ ಅಧ್ಯಯನಕ್ಕೆ ಪಿಎಚ್.ಡಿ. ಪದವಿ ಗಳಿಸಿದರು. 1961ರಲ್ಲಿ ತಮ್ಮ ಸಹಪಾಠಿ ಹಂಪ ನಾಗರಾಜಯ್ಯ (ಹಂಪನಾ) ಅವರನ್ನು ವಿವಾಹವಾದರು.

ಬೆಂಗಳೂರು ಮತ್ತು ಮೈಸೂರಿನ ಮಹಾರಾಣಿ ಕಾಲೇಜು ಹಾಗೂ ಬೆಂಗಳೂರು ಸರ್ಕಾರಿ ವಿಜ್ಞಾನ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು (1959–96). ಅನಂತರ ಬೆಂಗಳೂರಿನ ವಿಜಯ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಪ್ರಾಕೃತ ಅಧ್ಯಯನ ವಿಭಾಗದ ಪ್ರಾಧ್ಯಾಪಕರೂ ಅಧ್ಯಕ್ಷರೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂದರ್ಶನ ಪ್ರಾಧ್ಯಾಪಕರೂ ಆಗಿದ್ದರು.

ದಲಿತರ ಹಾಗೂ ಮಹಿಳೆಯರ ಪರವಾದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಹತ್ತಾರು ಸಂಘ ಸಂಸ್ಥೆಗಳಲ್ಲಿ ಇವರು ದುಡಿದರೂ ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿ ಅನೇಕ ಕೃತಿಗಳನ್ನು ರಚಿಸಿದರು. ಇವರು ರಚಿಸಿದ ಕೃತಿಗಳು 48ಕ್ಕೂ ಹೆಚ್ಚು. ಶಾಂತಿನಾಥ, ಆದರ್ಶ ಜೈನ ಮಹಿಳೆಯರು, ಮಹಾವೀರರ ಜೀವನ ಸಂದೇಶ, ಜೈನ ಸಾಹಿತ್ಯ ಪರಿಸರ, ಅನೇಕಾಂತವಾದ, ತುರಂಗಭಾರತ: ಒಂದು ಅಧ್ಯಯನ ಮುಂತಾದವು ಇವರಕೃತಿಗಳು. ಸುಕುಮಾರ ಚರಿತೆಯಸಂಗ್ರಹ, 'ಭರತೇಶ ವೈಭವ', ಚಾವುಂಡರಾಯ ಪುರಾಣ, ಡಿ.ಎಲ್.ಎನ್. ಆಯ್ದ ಲೇಖನಗಳು, ಜೈನ ಧರ್ಮ ಮುಂತಾದವು ಸಂಪಾದಿತ ಕೃತಿಗಳು.ಬಾಸಿಂಗ, ಬಾಂದಳ, ಬಡಬಾಗ್ನಿ– ಇವು ವೈಚಾರಿಕ ಕೃತಿಗಳು.ಬೀಜಾಕ್ಷರ ಮಾಲೆ, ಜಾತಿ ನಿರ್ಮೂಲನೆ, ಭಾರತದಲ್ಲಿ ಜಾತಿಗಳು, ಏಷಿಯಾದ ಹಣತೆಗಳು – ಅನುವಾದಗಳು. ನಕ್ಕಿತು ಹಾಲಿನ ಬಟ್ಟಲು, ರೆಕ್ಕೆ ಮುರಿದಿತ್ತು, ಬಣವೆ, ಚಂದನಾ– ಕಥಾ ಸಂಕಲನಗಳು. ಬಿಂದಲಿ, ಬುಗುಡಿ – ಆಧುನಿಕ ವಚನ ಸಂಕಲನಗಳು. ಶಿಶು ಸಾಹಿತ್ಯಕ್ಕೆ ಸಂಬಂಧಿಸಿದಂತೆಯೂ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ನಿರಂತರ ಅಧ್ಯಾಪನ, ಲೇಖನ, ಭಾಷಣಗಳ ಮೂಲಕ ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳೆರಡರಲ್ಲೂ ಸಮಾನ ದುಡಿಮೆ ಮಾಡಿರುವ ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರೆತಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬಾಬಾ ಆಮ್ಟೆ ರಾಷ್ಟ್ರೀಯ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ರನ್ನಕವಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಐಐಟಿ ಮದರಾಸು ಕನ್ನಡ ಸಂಘದ ರಜತೋತ್ಸವ ಪುರಸ್ಕಾರ, ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕದ ರಾಷ್ಟ್ರೀಯ ಪುರಸ್ಕಾರ –ಇವುಗಳನ್ನು ಹೆಸರಿಸಬಹುದು. ಇವರು ಮೂಡಬಿದಿರೆಯಲ್ಲಿ ನಡೆದ 71ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (2003). (ಕೆ.ಆರ್.ಎಸ್.ಆರ್)

**ಕಮಾಂಡ್ :** ಒಬ್ಬ ಸೇನಾಪತಿಯ ಕೈಕೆಳಗಿರುವ ಅನೇಕ ಪಡೆಗಳನ್ನು ಒಟ್ಟಾಗಿ ನಿರ್ದೇಶಿಸುವ ಪದ. ಅನೇಕ ವೇಳೆ ಈ ಪದವನ್ನು ಬಗೆಬಗೆಯ ಸೇನಾವಿಭಾಗಗಳ (ಡಿವಿಶನ್ಸ್) ಪಡೆಗಳು (ಯೂನಿಟ್ಸ್) ಇರುವ ಪ್ರದೇಶವನ್ನು ಸೂಚಿಸುವುದಕ್ಕೆ ಬಳಸುತ್ತಾರೆ. ಉದಾಹರಣೆಗೆ ಪಶ್ಚಿಮ ಸೇನಾವಲಯ (ವೆಸ್ಟರ್ನ್ ಕಮಾಂಡ್), ದಕ್ಷಿಣ ಸೇನಾವಲಯ (ಸದರ್ನ್ ಕಮಾಂಡ್), ಪೂರ್ವ ಸೇನಾವಲಯ (ಈಸ್ಟರ್ನ್ ಕಮಾಂಡ್)–ಈ ಪ್ರಕಾರ ನಮ್ಮ ಸೇನೆ ಪ್ರಾದೇಶಿಕವಾಗಿ ವಿಭಾಗಗೊಂಡಿದೆ. ಅಲ್ಲದೆ ಈ ಶಬ್ದವನ್ನು ಒಬ್ಬ ಅಧಿಕಾರಿ ಯಾವುದಾದರೊಂದು ಕಾರ್ಯವನ್ನು ಮಾಡುವಂತೆ ಕೊಡುವ ಆಜ್ಞೆಗೂ ಬಳಸುತ್ತಾರೆ. *

**ಕಮಾಚಿ ಹುಲ್ಲು :** ಪೋಯೇಸಿ ಕುಟುಂಬಕ್ಕೆ ಸೇರಿದ ಒಂದು ವಾರ್ಷಿಕ ಹುಲ್ಲು. ಇದರ ಶಾಸ್ತ್ರೀಯ ನಾಮ ಸಿಂಬೋಪೋಗಾನ್ ನಾರ್ಡಸ್ ಎಂದು. ಇದರಲ್ಲಿ ಮುಖ್ಯವಾಗಿ ಎರಡು ಭೇದಗಳಿವೆ–ಸಿಂಬೋಪೋಗಾನ್ ನಾರ್ಡಸ್ ಲೀನಾಬಾಟು ಮತ್ತು ಸಿ. ನಾರ್ಡಸ್ ಮಹಾವೆಂಗಿನಿ. ಸಿ.ನಾರ್ಡಸ್ ಮಹಾವೆಂಗಿನಿ ಭೇದವನ್ನು ಕೆಲವರು ಸಿಂಬೋಪೋಗಾನ್ ವಿಂಟರೇನಿಯಸ್ ಪ್ರಭೇದ ಎಂದೂ ಕರೆಯುತ್ತಾರೆ. ಎರಡು ಬಗೆಗಳನ್ನೂ ಶ್ರೀಲಂಕ ಮತ್ತು ಜಾವ ದ್ವೀಪಗಳಲ್ಲಿ ಯಥೇಚ್ಛವಾಗಿ ಬೆಳೆಸುತ್ತಾರೆ. ಅಲ್ಲದೆ ಆಫ್ರಿಕ, ಆಸ್ಟ್ರೇಲಿಯ ಮತ್ತು ಏಷ್ಯದ ಉಷ್ಣವಲಯಗಳಲ್ಲಿ ಇವು ಸ್ವಾಭಾವಿಕವಾಗಿ ಬೆಳೆಯುತ್ತವೆ. ಇದರ ಇನ್ನೊಂದು ವಿಧವಾದ ಸಿಂಬೋಪೋಗಾನ್ ಕನ್‌ಫರ್ಟಿಫ್ಲೋರಸ್ ಎಂಬ ಹುಲ್ಲು ನೀಲಗಿರಿ, ಅಣ್ಣಾಮಲೈ ಹಾಗೂ ಅಸ್ಸಾಮಿನ ಈಶಾನ್ಯ ಭಾಗಗಳ ಬೆಟ್ಟಪ್ರದೇಶಗಳಲ್ಲಿ ಬೆಳೆಯುತ್ತದೆ. ಮೈಸೂರು ಮತ್ತು ಪಂಜಾಬ್‌ಗಳಲ್ಲಿಯೂ ಕಾಣಬರುವ ಈ ಪ್ರಭೇದ ಸ್ಥಳೀಯವಾಗಿರಬಹುದು ಇಲ್ಲವೆ ಯಾವುದೋ ಒಂದು ಕಾಲದಲ್ಲಿ ಬೇರೆ ಕಡೆಯಿಂದ ತಂದು ರೂಢಿಸಿದ್ದಾಗಿರಬಹುದು.

ಕಮಾಚಿ ಹುಲ್ಲು ಸು. 4'–6' ಎತ್ತರ ಬೆಳೆಯುತ್ತದೆ. ಇತರ ಹುಲ್ಲುಗಳಲ್ಲಿರುವಂತೆಯೇ ಇದರಲ್ಲೂ ತೊಡಕುಬೇರೂ ಉದ್ದವಾದ ಎಸಳಿನಂತಿರುವ ಎಲೆಗಳೂ ಇವೆ. ಎಲೆಗಳಲ್ಲಿ ಸಮಾನಾಂತರ ನಾಳವಿನ್ಯಾಸವಿದೆ. ಹೂಗೊಂಚಲು ಸಂಕೀರ್ಣಪುಷ್ಪಗುಚ್ಛ ಮಾದರಿಯದು. ಬಹುವಾಗಿ ಕವಲೊಡೆದು ವಿಪುಲ ಸಂಖ್ಯೆಯ ಪುಟ್ಟ ಪುಟ್ಟ ಹೂಗುಂಪುಗಳನ್ನು (ಸ್ಪೈಕ್‌ಲೆಟ್) ಹೊಂದಿರುತ್ತದೆ.

ಈ ಹುಲ್ಲಿನಿಂದ ಸಿಟ್ರೊನೆಲ ತೈಲವನ್ನು ತೆಗೆಯುತ್ತಾರೆ. ನಸುಹಳದಿ ಬಣ್ಣದ ಈ ಎಣ್ಣೆಯನ್ನು ಶ್ರೀಲಂಕ ಮತ್ತು ಜಾವ ದ್ವೀಪಗಳಲ್ಲಿ ಒಣಗಿಸಿದ ಎಲೆಗಳಿಂದ ಆಸವೀಕರಣದ (ಆವಿ ಬಟ್ಟಿಯಿಳಿಸುವಿಕೆಯ) ಮೂಲಕ ಹೊರ ತೆಗೆಯುತ್ತಾರೆ. ಸಾಧಾರಣವಾಗಿ ಕೃಷಿ ಮಾಡಿದ 8 ತಿಂಗಳ ಅನಂತರ ಹುಲ್ಲು ಎಣ್ಣೆ ತೆಗೆಯಲು ಯೋಗ್ಯವಾಗುತ್ತದೆ. ಹುಲ್ಲನ್ನು ವರ್ಷಕ್ಕೆ ನಾಲ್ಕು ಸಲ ಕಟಾವು ಮಾಡುತ್ತಾರೆ. ಎಣ್ಣೆಯ ಸರಾಸರಿ ವಾರ್ಷಿಕ ಉತ್ಪನ್ನ ಎಕರೆಗೆ 68 ಪೌಂಡುಗಳು. ಈ ಎಣ್ಣೆಯಲ್ಲಿ ಹಲವಾರು ಬಗೆಯ ಸಂಯುಕ್ತಗಳಿವೆ. ಇವುಗಳಲ್ಲಿ ಆಲ್ಕೊಹಾಲ್, ಜಿರಾನಿಯಾಲ್, ಸಿಟ್ರೊನೆಲ್ಲಾಲ್, ಮೀಥೈಲ್ ಯೂಜಿನಾಲ್, ಬೊರಿನಿಯಾಲ್, ಮೀಥೈಲ್ ಹೆಪ್‌ಟೋನ್ ಮತ್ತು ಫಾರ್ನೆಸಾಲ್ ಇವು ಮುಖ್ಯವಾದುವು.

ಸಿಂಬೋಪೋಗಾನ್ ನಾರ್ಡಸಿನಿಂದ ದೊರೆತ ಎಣ್ಣೆ ಬೇರೆ ಪ್ರಭೇದಗಳಿಂದ ದೊರೆತ ಎಣ್ಣೆಗಿಂತ ಅಷ್ಟು ಉತ್ತಮವಾದುದೇನಲ್ಲ. ಆದ್ದರಿಂದ ಇದನ್ನು ಕಡಿಮೆ ದರ್ಜೆಯ ಸುಗಂಧದ್ರವ್ಯಗಳನ್ನೂ ಸಾಬೂನುಗಳನ್ನೂ ಪಾಲಿಷ್ ಮತ್ತು ಕೀಟ ನಿರೋಧಕಗಳನ್ನೂ ತಯಾರಿಸಲು ಉಪಯೋಗಿಸುತ್ತಾರೆ. ಅಲ್ಲದೆ ಸಾಮಾನ್ಯವಾಗಿ ಸೊಳ್ಳೆಗಳ ನಿರ್ಮೂಲನಕ್ಕೆ ಪ್ರತಿರೋಧಕವಾಗಿಯೂ ಬಳಸುತ್ತಾರೆ. ಜಾವದಲ್ಲಿ ಇದನ್ನು ಕ್ಲಿಷ್ಟಸಾವಯವ ಸಂಯುಕ್ತಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಅಲ್ಲದೆ ಸಾಬೂನುಗಳಿಗೆ ಸುವಾಸನೆ ಕೊಡಲೂ ಬಳಸುತ್ತಾರೆ.

(ಡಿ.ಆರ್.)

**ಕಮಾನಿನ ಸೇತುವೆ :** ಕಮಾನಿನಾಕಾರದ ಕಪ್ಪಿತದ ಆಕೃತಿಯನ್ನು ಬಳಸಿ ನಿರ್ಮಿಸಿದ ಸೇತುವೆ (ಆರ್ಚ್‌ಬ್ರಿಡ್ಜ್). ಸೇತುವೆಗಳಲ್ಲೆಲ್ಲ ಅತ್ಯಂತ ಲಾವಣ್ಯಮಯವಾದ ಮಾದರಿ. ಇದನ್ನು ಮರ, ಇಟ್ಟಿಗೆ, ಕಲ್ಲು, ಉಕ್ಕು, ಪ್ರಬಲಿತ ಕಾಂಕ್ರೀಟ್–ಈ ಸಾಮಗ್ರಿಗಳಿಂದ ಕಟ್ಟಬಹುದು. ಹಿಂದೆ 4.32 ಮೀ. ಕಣ್ಣಿನ ಮರದ ಕಮಾನಿನ ಸೇತುವೆಯನ್ನು ಕಟ್ಟಿದ್ದರು. ಬೆಂಕಿಯ ಭಯಕ್ಕಾಗಿ ಈಗ ಎಲ್ಲಿಯೂ ಮರದ ಕಮಾನುಗಳನ್ನು ಕಟ್ಟುತ್ತಿಲ್ಲ.

ಇಟ್ಟಿಗೆಯ ಕಮಾನುಗಳ ಮೇಲೆ ಒತ್ತು ತ್ರಾಸ ಮಾತ್ರ ಬರುವುದರಿಂದ ಇವನ್ನು ಸೇತುವೆಗಳಲ್ಲಿ ವಿಶೇಷವಾಗಿ ಉಪಯೋಗಿಸುತ್ತಿದ್ದರು. ಸಾಮಾನ್ಯವಾದ ಇಟ್ಟಿಗೆಗಳು ಚದರ ಸೆಂಟಿಮೇಟರಿನ 10 ಕಿಗ್ರಾಂ/ಚಸೆಂಮಿ ಭಾರವನ್ನೂ ಸಾಮರ್ಥ್ಯವಿರುವ ಇಟ್ಟಿಗೆಗಳು 15 ಕಿಗ್ರಾಂ/ಚಸೆಂಮಿಮೀ ಮೀರಿ ತಡೆಯಬಲ್ಲವು. 1858 ರಲ್ಲಿ ಶಿವಮೊಗ್ಗದಲ್ಲಿ ತುಂಗಾನದಿಯ ಮೇಲೂ ಭದ್ರಾವತಿಯಲ್ಲಿ ಭದ್ರಾನದಿಯ ಮೇಲೂ ಮೂರು ಕೇಂದ್ರಗಳಿಂದ ವೃತ್ತಖಂಡಗಳನ್ನೆಳೆದು ಸುಮಾರಾಗಿ ಅರ್ಧದೀರ್ಘ ವೃತ್ತಾಕಾರವಾದ 15ಮೀ ಕಣ್ಣಿನ ಬಹು ಕಮಾನುಗಳ ಸೇತುವೆಗಳನ್ನು ಕಟ್ಟಿದ್ದಾರೆ. ಅವು ಇಂದಿಗೂ ಬಸ್ಸು ಲಾರಿಗಳ ತೂಕಗಳನ್ನು ತಡೆದು ನಿಂತಿವೆ. ದೊಡ್ಡ ರಸ್ತೆಗಳ ಮೇಲೆ ಅಲ್ಲದಿದ್ದರೂ ಹಳ್ಳಿಗಳ ರಸ್ತೆಗಳ ಮೇಲಿನ ಸೇತುವೆಗಳಲ್ಲಿ ಇಟ್ಟಿಗೆಯ ಸಾಮಾನುಗಳನ್ನು ಬಳಸಿ ಸಿಮೆಂಟ್ ಮತ್ತು ಉಕ್ಕಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬಹುದು.

ಸಾಧಾರಣವಾದ ಕಲ್ಲು ಸೆಂ.ಮೀ.ಗೆ 21 ಕಿಲೋ ಗ್ರಾಂಗಳನ್ನೂ ಗ್ರಾನೈಟ್ ಕಲ್ಲು ಸು. 30 ಕಿಲೋ ಗ್ರಾಂಗಳನ್ನು ಹೊರಬಲ್ಲದು. 1817ರಲ್ಲಿ ಲಂಡನ್ನಿನ ಥೇಮ್ಸ್ ನದಿಯ ಮೇಲೆ ಕಟ್ಟಿದ ವಾಟರ್ಲೂ ಸೇತುವೆಯಲ್ಲಿ 36.6ಮೀಗಳ ಕಣ್ಣುಗಳಿವೆ. ಭಾರತದಲ್ಲಿ ಅನುಕೂಲವಾದ ಕಡೆಗಳಲ್ಲಿ 30ಮೀ ಕಣ್ಣಿನ ವರೆಗೆ ಕಲ್ಲಿನ ಕಮಾನುಗಳನ್ನು ಸೇತುವೆಗಳಲ್ಲಿ ಧಾರಾಳವಾಗಿ ಬಳಸಬಹುದು. ಆದರೆ ಮೈಸೂರು ಸೀಮೆಯ ರಾಮನಾಥಪುರದಲ್ಲಿ ಕಾವೇರಿ ನದಿಯ ಮೇಲೆ 1937ರಲ್ಲಿ ಕಟ್ಟಿ ಮುಗಿಸಿದ 9.15ಮೀ ಅಗಲದ 21 ಕಣ್ಣಿನ ಕಲ್ಲಿನ ಕಮಾನಿನ ಸೇತುವೆಯೇ ಈ ನಮೂನೆಯ ಕೊನೆಯ ಸೇತುವೆ ಎಂದು ತೋರುತ್ತದೆ. ಇದು ಶ್ಲಾಘ್ಯವಾದ ಪ್ರವೃತ್ತಿಯೆಂದು ಹೇಳಲಾಗುವುದಿಲ್ಲ. ಯಂತ್ರಶಿಲ್ಪದ ಕೌಶಲ ಬೆಳೆಯುತ್ತಿರುವ ಸ್ವತಂತ್ರ ಭಾರತದಲ್ಲಿ ಸೂಕ್ತವಾದ ಸಂಶೋಧನೆಗಳನ್ನು ನಡೆಸಿ ಹೇರಳವಾಗಿ ದೊರಕುವ ಕಲ್ಲನ್ನು ಸೇತುವೆಯ ಕಮಾನುಗಳಿಗೆ ಉಪಯೋಗಿಸಿಕೊಳ್ಳುವುದು ರಾಷ್ಟ್ರದ ದೃಷ್ಟಿಯಿಂದ ಹಿತಕರ.

ಕಮಾನಿನ ಸೇತುವೆಯಲ್ಲಿ ಕಲ್ಲುಗಾರೆಯ ಕಂಬಗಳ ಉದ್ದದಲ್ಲಿ 1.80ಮೀ ಅಂತರದಲ್ಲಿ ಒಂದರಂತೆ ಕಂಬಗಳಿಗೆ ನಡುವೆ ಕಮಾನಿನ ಒಳಭಾಗದ (ಇಂಟ್ರೇಡಾಸ್) ಆಕಾರಕ್ಕೆ ಹೊಂದುವ ಮರದ ಸರಕಟ್ಟುಗಳನ್ನು (ಸೆಂಟ್ರಿಂಗ್ಸ್) ಕಂಬಗಳ ಪಕ್ಕಗಳಿಂದ ಚಾಚುವ ಕಲ್ಲುಗಳ ಮೇಲೆ ಎಳೆದ ಮರದ ತೊಲೆಯ ಮೇಲೆ ಇಟ್ಟ ತಾಂಡವಾಳದ ಮರಳು ಪೆಟ್ಟಿಗೆಗಳ ಮೇಲೆ ನಿಲ್ಲಿಸುತ್ತಾರೆ. ಒಂದು ಸರಕಟ್ಟಿಗೂ ಇನ್ನೊಂದಕ್ಕೂ ನಡುವೆ 8 ಸೆಂಮೀ ಅಂತರದಲ್ಲಿ ಸರಕಟ್ಟುಗಳ ಮೇಲುಭಾಗದಲ್ಲಿ ಭದ್ರಪಡಿಸುವ ಪಟ್ಟಿಗಳ ಮಧ್ಯೆ ಮರದ ತೀರುಗಳನ್ನು ಜೋಡಿಸುತ್ತಾರೆ. ಇವುಗಳ ಮೇಲೆ ಕಮಾನಿನ ಕಲ್ಲುಗಳು ಕೂರುತ್ತವೆ. ಕಮಾನಿನ ಆಕಾರಕ್ಕೂ ದಪ್ಪಕ್ಕೂ ಸರಿಯಾಗಿ ಸು. 30 ಸೆಂಮೀ ಅಗಲದ ಬೆಣೆಕಲ್ಲುಗಳನ್ನೂ ಕೊಂಚ ಅಗಲವಾದ ಎತ್ತರವಾದ ನೆತ್ತಿಯ ಕಲ್ಲುಗಳನ್ನೂ ಕ್ವಾರಿಮಾಡಿ ನಯವಾಗಿಸಿ ಮೊದಲೇ ಶೇಖರಿಸುತ್ತಾರೆ.

ಸೇತುವೆಯಲ್ಲಿ ಗುದ್ದುಗಂಬದಿಂದ ಹಿಡಿದು ಪ್ರತಿ ನಾಲ್ಕನೆಯ ಕಂಬವನ್ನು ಕಟ್ಟುವಾಗ ಒಂದೇ ಕಡೆಯಿಂದ ಬರುವ ಒದೆತವನ್ನು ತಡೆದು ನಿಲ್ಲುವುದಕ್ಕಾಗಿ ಕೊಂಚ ದಪ್ಪವಾಗಿ ಮಾಡಬೇಕು. ಕಂಬಗಳು ಕಮಾನು ಚಿಮ್ಮುವ ಮಟ್ಟಕ್ಕೆ ಬಂದ ಮೇಲೆ ಅದರ ಎರಡು ಕಡೆಗಳಲ್ಲಿಯೂ ಕಮಾನಿನ ಆಕಾರಕ್ಕೆ ಹೊಂದುವ ಬೆನ್ನಿನ ಕಲ್ಲುಗಳನ್ನು ಗಾರೆಯಲ್ಲಿ ಕೂರಿಸುತ್ತಾರೆ. ಕಮಾನುಗಳನ್ನು ಒಂದು ಗುದ್ದುಗಂಬದಿಂದ ಪ್ರಾರಂಭಿಸಿ ಒಂದಾದಮೇಲೊಂದನ್ನು ಕ್ರಮವಾಗಿ ಕಟ್ಟುತ್ತ ಹೋಗುತ್ತಾರೆ. ಒಂದು ಕಮಾನಿನಲ್ಲಿ ಬೆಣೆಕಲ್ಲುಗಳನ್ನು ಕೂರಿಸುವಾಗ ಮುಂದಿನ ಎರಡು ಕಣ್ಣುಗಳಿಗೂ ಸರಕಟ್ಟುಗಳನ್ನು ಜೋಡಿಸಿರಬೇಕು. ಪೂರ್ವ ಸಿದ್ಧತೆಗಳೆಲ್ಲವೂ ಮುಗಿದ ಮೇಲೆ ಸರಕಟ್ಟಿನ ತೀರುಗಳ ಮೇಲೆ ಪಕ್ಕದ ಕಂಬಗಳ ಬೆನ್ನುಕಲ್ಲುಗಳಿಂದ ಪ್ರಾರಂಭಿಸಿ ಮಟ್ಟವಾಗಿ ಕಂಬದ ಪಕ್ಕದಲ್ಲಿ ಕಮಾನಿನ ನಡುಗಲ್ಲನ್ನು ಹೊಡೆಯುವಾಗ ಅದರ ಒದೆಯನ್ನು ತಡೆಯುವುದಕ್ಕಾಗಿ ಮುಂದಿನ ಕಮಾನಿನಲ್ಲಿ ಮೂರನೆಯ ಎರಡು ಭಾಗ ಕಲ್ಲುಗಳನ್ನೂ ಅದರ ಮುಂದಿನದರಲ್ಲಿ ಮೂರನೆಯ ಒಂದು ಭಾಗವನ್ನು ಎರಡು ಪಕ್ಕಗಳಲ್ಲಿಯೂ ಜೋಡಿಸಿರಬೇಕು. ಈಗ ಪೂರ್ತಿಯಾದ ಕಮಾನಿನಲ್ಲಿ ನಡುಗಲ್ಲುಗಳನ್ನು ದೊಡ್ಡ ಮರದ ದಿಮ್ಮಿಗಳನ್ನು ಮೇಲಕ್ಕೆತ್ತಿ ಒಂದೊಂದು ನಡುಗಲ್ಲಿನ ಮೇಲೂ 20–30 ಏಟುಗಳನ್ನು ಹೊಡೆದು ಬಿಗಿಯಾಗಿ ಗಾರೆಯಲ್ಲಿ ಕೂರಿಸಬೇಕು. ಆಗ ಕಮಾನು ಎರಡೂ ಪಕ್ಕಗಳನ್ನು ಒದೆದು ಸ್ವತಂತ್ರವಾಗಿ ನಿಲ್ಲುತ್ತದೆ. ಆಮೇಲೆ ಕೆಳಗಿನ ಸರಕಟ್ಟುಗಳನ್ನು ಮರಳು ಪೆಟ್ಟಿಗೆಗಳ ಮರಳನ್ನು ತೆಗೆದು ಕೊಂಚ ಕೆಳಕ್ಕೆ ಇಳಿಸಿ, ಮುಂದೆ ಮೂರನೆಯ ಕಮಾನಿಗೆ ಸಾಗಿಸಬಹುದು. ಹೀಗೆ ಒಂದಾದ ಮೇಲೊಂದು ಕಮಾನನ್ನು ಪೂರೈಸಿ ನೆತ್ತಿಯ ಕಲ್ಲುಗಳನ್ನು ಹೊಡೆಯಬೇಕು. ಕಮಾನುಗಳೆಲ್ಲವೂ ಪೂರೈಸಿದ ಮೇಲೆ ಸೇತುವೆಯ ಕೆಲಸ ಮುಗಿದಂತೆ. ಮೇಲುಗಡೆ ಕಮಾನಿನ ಬೆನ್ನುಗಳಲ್ಲಿ ಹಗುರವಾದ ಕಲ್ಲುಗಾರೆಯನ್ನೋ ಕಾಂಕ್ರೀಟನ್ನೋ ತುಂಬಿ ಸೇತುವೆಯ ಎರಡು ಪಕ್ಕಗಳಲ್ಲಿಯೂ ಗೋಡೆಗಳನ್ನೆತ್ತಿ ಪ್ಯಾರಾಪೆಟ್ಟನ್ನು ಕಟ್ಟಿದರಾಯಿತು. ಇಂದಿನ ಭಾರವಾದ ವಾಹನಗಳನ್ನು ಹೊರುವುದಕ್ಕೆ ಸೇತುವೆಯ ಮೇಲಿನ ರಸ್ತೆಗೆ ಸಿಮೆಂಟ್ ಕಾಂಕ್ರೀಟನ್ನು ಹಾಕಬೇಕು.

**ಉಕ್ಕಿನ ಕಮಾನುಗಳು :** ಸಂಪೂರ್ಣವಾಗಿ ಉಕ್ಕಿನಿಂದ ಸೇತುವೆಯನ್ನು ಮೊದಲು ಕಟ್ಟಿದ್ದು 1879ರಲ್ಲಿ. ಉಕ್ಕು ತುಯ್ತದಲ್ಲಿ ಚ. ಸೆಂಮೀಗೆ 1300 ಕಿಗ್ರಾಂಗಳನ್ನು, ಜಾರುವ ತ್ರಾಸದಲ್ಲಿ 930 ಕಿಗ್ರಾಂಗಳನ್ನು ಕಟ್ಟಡಗಳಲ್ಲಿ ಹೊರಬಲ್ಲದು. ಈ ಶತಮಾನದಲ್ಲಿ ಉಕ್ಕಿನ ಕಮಾನುಗಳ ಅಗಲವನ್ನು ಹೆಚ್ಚಿಸುವುದಕ್ಕಾಗಿ ಹೆಚ್ಚು ತುಯ್ತವನ್ನು ತಡೆಯಬಲ್ಲ ಉಕ್ಕನ್ನು ತಯಾರಿಸಿದ್ದಾರೆ. ಇದಕ್ಕಾಗಿ ಉಕ್ಕಿಗೆ ಕೊಂಚ ಸಿಲಿಕಾನ್, ನಿಕ್ಕಲ್, ಕ್ರೋಮಿಯಮ್ ಇಲ್ಲವೆ ಇಂಗಾಲವನ್ನು ಬೆರೆಸುತ್ತಾರೆ. ಇಂಗಾಲ ಮಿಶ್ರವಾದ ಉಕ್ಕುಗಳು ಚ. ಸೆಂಮೀಗೆ 1400 ಕಿಗ್ರಾಂ ತುಯ್ತವನ್ನು ತಡೆಯಬಲ್ಲವು. ನ್ಯೂಯಾರ್ಕಿನ ಹೆಲ್‌ಗೇಟ್ ಸೇತುವೆಯಲ್ಲಿ ಉಕ್ಕಿಗೆ ಇಂಗಾಲವನ್ನು, ಆಸ್ಟ್ರೇಲಿಯದ ಸಿಡ್ನಿ ಬಂದರಿನ ಸೇತುವೆಯಲ್ಲಿ ಸಿಲಿಕಾನನ್ನು, ಕೆನಡದ ಕ್ವಿಬೇಕ್ ಚಾಚುತೊಲೆಯ ಸೇತುವೆಯಲ್ಲಿ ನಿಕ್ಕಲ್ಲನ್ನು ಕೊಂಚ ಬೆರೆಸಿದ್ದಾರೆ.

ಸ್ವತಂತ್ರವಾದ ಕಮಾನುಗಳಲ್ಲಿ ತ್ರಾಸಗಳನ್ನು ಲೆಕ್ಕ ಹಾಕುವುದು ಸುಲಭವಲ್ಲ. ಕೆಲವು ವಿಚಾರಗಳನ್ನು ಸಾಕಷ್ಟು ಪ್ರಮಾಣವಿಲ್ಲದೆ ಅಂಗೀಕರಿಸಬೇಕಾಗುತ್ತದೆ. ಅದಕ್ಕಾಗಿ ದೊಡ್ಡ ಉಕ್ಕಿನ ಕಮಾನುಗಳ ನೆತ್ತಿಯಲ್ಲಿ ಒಂದು ಆಣಿಯನ್ನೋ ಬೆನ್ನುಗಳಲ್ಲಿ ಎರಡು ಆಣಿಗಳನ್ನೋ ನೆತ್ತಿಯಲ್ಲಿಯೂ ಬೆನ್ನುಗಳಲ್ಲಿಯೂ ಒಟ್ಟು ಮೂರು ಆಣಿಗಳನ್ನೋ ಹೊಡೆಯುತ್ತಾರೆ. ಆಗ ತ್ರಾಸಗಳನ್ನು ಸರಿಯಾಗಿ ಲೆಕ್ಕಹಾಕಬಹುದು.

ಕಮಾನಿನ ಕಣ್ಣಿಗೂ ಏರಿಕೆಗೂ ಇರುವ ದಾಮಾಷೆ 4ಕ್ಕೆ 1ರಿಂದ ಹಿಡಿದು 10ಕ್ಕೆ ಒಂದರವರೆಗೂ ವ್ಯತ್ಯಾಸವಾಗುತ್ತದೆ. ಕಮಾನಿನ ದಪ್ಪ 10ಕ್ಕೆ 1ರಿಂದ, 40ಕ್ಕೆ 1ರ ವರೆಗೂ ಕಡಿಮೆಯಾಗುತ್ತದೆ.

1917ರಲ್ಲಿ ನ್ಯೂಯಾರ್ಕಿನಲ್ಲಿ ಕಟ್ಟಿದ ಹೆಲ್‌ಗೇಟ್ ಉಕ್ಕಿನ ಕಮಾನಿನ ಸೇತುವೆಯಲ್ಲಿ ಬೆನ್ನುಗಳ ಮೇಲೆ ಎರಡು ಆಣಿಗಳಿವೆ. ಗೋಪುರಗಳ ನಡುವಿನ ಅಗಲ 310ಮೀ. ಆಣಿಗಳ ನಡುವಿನ ಅಗಲ 298 ಮೀ. ಒಳಮುಖದ ನೆತ್ತಿಯ ಎತ್ತರ 67.8 ಮೀ ಸೇತುವೆಯ ಒಟ್ಟು ಉದ್ದ 549 ಕಿಮೀ. ಈ ಕಮಾನಿನ ಎರಡು ಕಡೆಗಳಲ್ಲಿಯೂ ಕಾಂಕ್ರೀಟಿನ ಕಮಾನುಗಳನ್ನು, ಉಕ್ಕಿನ ಗರ್ಡರಿನ ಸೇತುವೆಗಳು, ಬ್ಯಾಸ್ಕ್ಯೂಲ್ ಸೇತುವೆಗಳು, 305 ಮೀ ಉದ್ದದ ಬೋಸ್ಟಿಪ್ರಿಂಗ್ ಗರ್ಡರ್ ಸೇತುವೆ–ಇವು ಸೇರಿವೆ. ಕಮಾನಿನ ಎರಡು ಕೊನೆಗಳಲ್ಲಿಯೂ ಪ್ರಬಲಿತ ಕಾಂಕ್ರೀಟಿನಿಂದ ಗೋಪುರಗಳನ್ನು ಕಟ್ಟಿ ಹೊರಗಡೆ ನಯವಾದ ಗ್ರಾನೈಟ್ ಕಲ್ಲಿನ ಹೊದಿಕೆಯನ್ನೂ ಕೊಟ್ಟಿದ್ದಾರೆ. ಈ ಗೋಪುರಗಳ ತಳಪಾಯದಲ್ಲಿ ನೀರಿನ ಮಟ್ಟದ ಕೆಳಗೆ 33.25 ಮೀ ಆಳದಲ್ಲಿ 5.50 ಮೀ ವ್ಯಾಸದ 21 ಕಾಂಕ್ರೀಟಿನ ಕೇಸಾನುಗಳನ್ನು ಹೂಳಿದ್ದಾರೆ. ಮೇಲುಗಡೆ ಸೇತುವೆಯ ಅಗಲ 28.4 ಮೀ ಇದರ ಮೇಲೆ ನಾಲ್ಕು ವಾಹನಗಳ ದಾರಿಗಳಿವೆ.

ಆಸ್ಟ್ರೇಲಿಯದ ಸಿಡ್ನಿ ಬಂದರಿನ ಮೇಲೆ 503.25 ಮೀ ಕಣ್ಣಿನ ಉಕ್ಕಿನ ಕಮಾನಿನ ಸೇತುವೆ ಪ್ರಾರಂಭವಾದ 5 ವರ್ಷಗಳ ಮೇಲೆ ನ್ಯೂಯಾರ್ಕಿನಲ್ಲಿ ಇದಕ್ಕಿಂತ 63.5 ಸೆಂಮೀ ಅಗಲವಾದ ಕಣ್ಣಿನ 503.89 ಮೀ ಬೆಯಾನ್ ಸೇತುವೆಯನ್ನು ಪ್ರಾರಂಭಿಸಿ ಆಸ್ಟ್ರೇಲಿಯದ ಸೇತುವೆ ಮುಗಿಯುವುದಕ್ಕಿಂತ ನಾಲ್ಕು ತಿಂಗಳ ಮುಂಚೆ 1931ರಲ್ಲಿ ಕಟ್ಟಿ ಮುಗಿಸಿ ಆ ದಾಖಲೆಯನ್ನು ಮುರಿದರು. ಈಗ ಇದು ಪ್ರಪಂಚದ ಉಕ್ಕಿನ ಕಮಾನಿನ ಸೇತುವೆಗಳಲ್ಲೆಲ್ಲಾ ಅತ್ಯಂತ ಅಗಲವಾದ ಕಣ್ಣಿನ ಸೇತುವೆ.

1932ರಲ್ಲಿ ಮುಗಿದ ಸಿಡ್ನಿ ಬಂದರಿನ ಸೇತುವೆಯಲ್ಲಿ ಕಮಾನು ಚಿಮ್ಮುವ ಕಡೆ (ಸ್ಪ್ರಿಂಗಿಂಗ್) ನೀರಿನ ಮಟ್ಟದ ಮೇಲೆ 8.23 ಮೀ ಯಷ್ಟು ಎತ್ತರವಾಗಿದೆ. ಅದರ ಮೇಲೆ ಕಮಾನು 106.75ಮೀ ಎತ್ತರಕ್ಕೆ ಏರುತ್ತದೆ. ಈ ಸೇತುವೆಯಲ್ಲಿ ಬೆನ್ನುಗಳ ಮೇಲೆ ಎರಡು ಆಣಿಗಳಿವೆ. ನೆತ್ತಿ ಸ್ವತಂತ್ರ್ಯವಾಗಿದೆ. ಕಮಾನಿನ ಸರಕಟ್ಟಿನ ಎತ್ತರ ಮಧ್ಯದಲ್ಲಿ 18.3 ಮೀ ಗಳಷ್ಟಿದೆ. ಎಂದರೆ ಕಮಾನಿನ ನೆತ್ತಿಯ ಮೇಲುಭಾಗ ನೀರಿನ ಮಟ್ಟದಿಂದ 133.28ಮೀ ಎತ್ತರವಾಯಿತು. ಕಮಾನಿನ ನಡುವಿನ ಸರಕಟ್ಟು 'ಎನ್' ಆಕಾರದಲ್ಲಿದೆ. ಒಂದು ಸರಕಟ್ಟಿನ ಮಧ್ಯದಿಂದ ಇನ್ನೊಂದರ ಮಧ್ಯಕ್ಕೆ 30.04 ಮೀ ಅಂತರವಿದೆ. ಒಂದೊಂದು ಸರಕಟ್ಟಿನ ಒಳಗೂ ಹೊರಗೂ ಒಂದೊಂದು ರೈಲ್ವೆ ದಾರಿಯಿದೆ, ಎಂದರೆ ನಾಲ್ಕು ಪ್ರತ್ಯೇಕವಾದ ರೈಲ್ವೆ ದಾರಿಗಳಾಯಿತು. ಇನ್ನೂ ಆಚೆಗೆ ಎರಡು ಕೊನೆಗಳಲ್ಲಿಯೂ 3.05ಮೀ ಅಗಲದ ಕಾಲುದಾರಿಗಳಿವೆ. ಸೇತುವೆಯ ಮಧ್ಯದಲ್ಲಿ 17.38 ಮೀ ಅಗಲದ ರಸ್ತೆ ಇದೆ. ಒಟ್ಟು 488ಮೀ ಅಗಲವಾದ ಈ ರಸ್ತೆ ನೀರಿನ ಗರಿಷ್ಠಮಟ್ಟದ ಮೇಲೆ 51.85ಮೀ ಎತ್ತರವಾಗಿದೆ. ಸೇತುವೆಯ ಎರಡು ಕಡೆಗಳಲ್ಲಿಯೂ ಈ ಕಡೆ ಒಂದು, ಆ ಕಡೆ ಒಂದು–ಹೀಗೆ ಎರಡು ಕಾಂಕ್ರೀಟಿನ ಗೋಪುರಗಳಿವೆ. ಮೇಲು ಮುಖದಲ್ಲಿ ನಯವಾದ ಕಲ್ಲಿನ ಚಪ್ಪಡಿಗಳಿಂದ ಮುಚ್ಚಿದ ಗೋಪುರಗಳು ತಳಹದಿಯ ಮೇಲೆ 83.88ಮೀ ಎತ್ತರಕ್ಕೆ ಏರಿ ಸೇತುವೆಯ ಅಂದವನ್ನು ಹೆಚ್ಚಿಸುತ್ತವೆ. ಈ ಸೇತುವೆಯಲ್ಲಿ 51,000 ಟನ್ ಉಕ್ಕು ಉಪಯೋಗವಾಗಿದೆ. (ಇದರ ಮೂರರಷ್ಟು ಉದ್ದವಾದ ಫೋರ್ತ್ ಚಾಚುತೊಲೆಯ ಸೇತುವೆಯಲ್ಲಿ 51.500 ಟನ್ ಉಕ್ಕಿದೆ). ಆ ಪೈಕಿ 38,000 ಟನ್ ಗಳು ಕಮಾನುಗಳಲ್ಲಿವೆ. ಇಲ್ಲಿ ಉಪಯೋಗಿಸುವ ಕೆಲವು ತಗಡುಗಳು 5.40ಸೆಂಮೀ ದಪ್ಪವಾಗಿವೆ. ಇವನ್ನು ಎರಡೂ ಕಡೆಗಳಲ್ಲಿಯೂ

0.305ಮೀ ಅಗಲ, 3.17ಸೆಂಮೀ ದಪ್ಪದ ಸಮಕೋನಗಳಿಂದ ಜೋಡಿಸಿದ್ದಾರೆ. ಕಮಾನಿನ ಆಕಾರದ ಬೆಡಗು, ಹಿರಿದಾದ ಅಳತೆಯ ಪ್ರಮಾಣ, ಗಾಂಭೀರ್ಯ ಮತ್ತು ಇದರ ನಿರ್ಮಾಣದಲ್ಲಿ ತೋರಿಸಿರುವ ಕಲ್ಪನಾಚಾತುರ್ಯ ನೈಪುಣ್ಯಗಳಿಂದ ಇದೊಂದು ಕಲಾಕೃತಿಯಾಗಿದೆ.

ಎರಡನೆಯ ಮಹಾಯುದ್ಧ ಮುಗಿದ ಮೇಲೆ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಭಾಟಾ ಮಾರ್ಗಗಳನ್ನು ರಸ್ತೆಗಳನ್ನೂ ಮೇಲ್ವಾಡು ಮಾಡುವ ಸಂದರ್ಭದಲ್ಲಿ ಸಿಮೆಂಟ್ ಕಾಂಕ್ರೀಟಿನಿಂದಲೂ ಪ್ರಬಲಿತ ಕಾಂಕ್ರೀಟಿನಿಂದಲೂ ಅನೇಕ ಕಮಾನಿನ ಸೇತುವೆಗಳನ್ನು ಕಟ್ಟಿದ್ದಾರೆ. ಪ್ರಪಂಚದಲ್ಲಿಯೇ ಅತ್ಯಂತ ಅಗಲವಾದ ಸಾದಾ ಕಾಂಕ್ರೀಟಿನ ಸೇತುವೆ ಕ್ಲೀವ್ ಲ್ಯಾಂಡಿನಲ್ಲಿ ರಾಖೀ ನದಿಯ ಮೇಲೆ 1910ರಲ್ಲಿ ಕಟ್ಟಿದ 85.4ಮೀ ಅಗಲದ ಕಮಾನಿನ ಸೇತುವೆ. ಆಮೇಲೆ ಪ್ರಬಲಿತ ಕಾಂಕ್ರೀಟಿನಲ್ಲಿ 122ಮೀ ಕಣ್ಣಿನಿಂದ 196.725ಮೀ ಕಣ್ಣಿನವರೆಗೂ ಅನೇಕ ಕಮಾನಿನ ಸೇತುವೆಗಳು ನಿರ್ಮಾಣವಾಗಿವೆ. ಸ್ವೀಡನ್ನಿನಲ್ಲಿ ಸ್ಯಾಂಡೋ ನದಿಯ ಮೇಲೆ ಕಟ್ಟಿದ 264.13ಮೀ ಕಣ್ಣಿನ ಕಮಾನಿನ ಸೇತುವೆ ಈವರೆಗೆ ಕಟ್ಟಿರುವ ಸೇತುವೆಗಳಲ್ಲಿ ಅತ್ಯಂತ ಅಗಲವಾದ ಕಣ್ಣುಳ್ಳದ್ದು. (ಎಚ್.ಸಿ.ಕೆ.)

ಸ್ವಲ್ಪ ಅವಧಿ, ನಿರ್ಮಾಣದ ಜಟಿಲತೆಯಿಂದಾಗಿ ಕಮಾನು ಸೇತುವೆಗಳ ನಿರ್ಮಾಣವು ಸ್ಥಗಿತಗೊಂಡಿತ್ತು. ಈಚೆಗೆ ಸುಧಾರಿತ ನಿರ್ಮಾಣ ವಿಧಾನಗಳಿಂದ ಕಮಾನು ಸೇತುವೆಗಳ ನಿರ್ಮಾಣವು ಪ್ರಾರಂಭವಾಗಿ, ಚೀನ ದೇಶವು ಮುಂಚೂಣಿಯಲ್ಲಿದೆ. ಚೀನ ದೇಶದಲ್ಲಿ ವಿಶ್ವದ ಅತೀ ಅಗಲ ಕಣ್ಣಿನ ಕಾಂಕ್ರೀಟು ಕಮಾನು ಸೇತುವೆ ಇದ್ದು, ಇದರ ಕಣ್ಣಿನ ಅಗಲ 420ಮೀ ಇದೆ. (ಎಂ.ಜಿ.ಎಸ್.)

**ಕಮಾನು :** ಆರೀಯಾ ದಿಕ್ಕಿನಲ್ಲಿ ಎಸೆಗಳುಳ್ಳ ಆಪಿನ ಆಕಾರದ ಇಟ್ಟಿಗೆ, ಕಲ್ಲು ಇಲ್ಲವೆ ಕಾಂಕ್ರೀಟಿನ ದಿಂಡುಗಳ ಜೋಡಣೆ (ಆರ್ಚ್). ಕಮಾನಿನ ಒಳಭಾಗವೂ ಹೊರಭಾಗವೂ ವಕ್ರಾಕಾರವಾಗಿವೆ. ದಿಂಡುಗಳೇ ಇಲ್ಲದ ಪ್ರಬಲಿತ ಕಾಂಕ್ರೀಟಿನ ಮತ್ತು ಉಕ್ಕಿನ ಈ ಆಕಾರದ ರಚನೆಗಳನ್ನು ಈಚೆಗೆ ಕಮಾನು ಎಂದೇ ಕರೆಯುತ್ತಾರೆ. ಕಮಾನಿನ ತತ್ತ್ವ (ಎಂದರೆ ಬಾಗಿದ ರಚನಾವಿನ್ಯಾಸದಲ್ಲಿ) ಇಟ್ಟಿಗೆಗಳನ್ನಾಗಲಿ, ಕಲ್ಲುಗಳನ್ನಾಗಲೀ ಒಂದಕ್ಕೊಂದು ಆಸರೆಯಾಗಿರುವಂತೆ ಜೋಡಿಸುವುದು ಪ್ರಾಚೀನ ಐಗುಪ್ತರಿಗೂ ಬ್ಯಾಬಿಲೋನಿಯನ್ನರಿಗೂ ಗ್ರೀಕರಿಗೂ ತಿಳಿದಿತ್ತು. ಕ್ರಮವಾದ ಕಮಾನು ಮೊದಲು ನಿರ್ಮಾಣವಾದದ್ದು ಪ್ರ.ಶ.ಪೂ. 4,000ರಲ್ಲಿ, ಯೂಫ್ರಟಿಸ್ ಟೈಗ್ರಿಸ್ ನದಿ ಕಣಿವೆಯಲ್ಲಿ. ಪ್ರಾಚೀನ ಈಜಿಪ್ಟಿನಲ್ಲಿಯೂ ಭಾರತದಲ್ಲಿಯೂ ಕಮಾನು ತಿಳಿದಿತ್ತು. ಆದರೆ ಅದನ್ನು ಹೆಚ್ಚಾಗಿ ಕಟ್ಟಡಗಳಲ್ಲಿ ಬಳಸಲಿಲ್ಲ. ನಗರಗಳ ಮಹಾದ್ವಾರಗಳ ಮೇಲೆ ಸ್ಮಾರಕ ಕಮಾನುಗಳ ರಚನೆ ಮೊದಲು ಆದದ್ದು ಏಷ್ಯದ ಅಸ್ಸೀರಿಯದಲ್ಲಿ. ಆದರೆ ವಾಸ್ತುಶಿಲ್ಪದಲ್ಲಿ ಮೊದಲು ಇದನ್ನು ಬಳಸಿದವರು ಇಟ್ರಸ್ಕನರು. ರೋಮನ್ನರು ಇವರಿಂದ ಈ ಕಲೆಯನ್ನು ಕಲಿತು ಅದನ್ನು ಪರಿಪೂರ್ಣತೆಗೆ ತಂದು ದೊಡ್ಡ ಕಟ್ಟಡಗಳಲ್ಲಿ ಉಪಯೋಗಿಸಿ ರೋಮನ್ ಚಕ್ರಾಧಿಪತ್ಯದಲ್ಲಿಯೇ ಅಲ್ಲದೆ ನಾಗರಿಕ ಪ್ರಪಂಚದಲ್ಲೆಲ್ಲಾ ಹರಡಿದರು. ಇವರು ತಲೆಗಟ್ಟಡ ಮತ್ತು ಜಂತಿಗಳಿಗೆ ಬದಲಾಗಿ ಕಂಬಗಳ ಮೇಲೆ ಕಮಾನುಗಳನ್ನು ಕಟ್ಟಿದರು. ವಾಸ್ತುಶಿಲ್ಪದಲ್ಲಿ ಮಟ್ಟರೇಖೆಗಳ ಪ್ರಾಧಾನ್ಯ ಕ್ರಮೇಣ ಕಡಿಮೆಯಾಗಿ ಕಂಬದ ತಲೆಗಟ್ಟಡ (ಎಂಟಾಬ್ಲಟ್ಯೂರ್) ಕಣ್ಮರೆಯಾಯಿತು. 19ನೆಯ ಶತಮಾನದ ಮಧ್ಯ ಭಾಗದವರೆಗೂ ಕಟ್ಟಡದ ಒಂದು ಮುಖ್ಯಭಾಗವಾಗಿ ಕಮಾನು ಇತ್ತು. ಈಚೆಗೆ ಉಕ್ಕು ಮತ್ತು ಪ್ರಬಲಿತ ಕಾಂಕ್ರೀಟ್‌ನ ಆವಿಷ್ಕಾರವಾದ ನಂತರ ಕಮಾನಿನ ಆಕಾರವನ್ನು ದೊಡ್ಡ ಸೇತುವೆಗಳ ನಿರ್ಮಾಣದಲ್ಲಿ ಬಳಸುತ್ತಿದ್ದಾರೆ.

ಕಮಾನಿನಲ್ಲಿ ಒಳಮುಖವನ್ನು ಒಳಬಾಗು (ಇಂಟ್ರೇಡಾಸ್) ಎಂದೂ ಹೊರಮುಖವನ್ನು ಹೊರಬಾಗು (ಎಕ್ಸ್‌ಟ್ರೇಡಾಸ್) ಎಂದು ಕರೆಯುತ್ತಾರೆ. ಇವುಗಳ ನಡುವೆ ಇರುವ ಆಪಿನ ಆಕಾರದ ಕಲ್ಲುಗಳನ್ನು ಬೆಣೆಕಲ್ಲು ಎಂದು ಮಧ್ಯದ ಕಲ್ಲನ್ನು ನೆತ್ತಿಯ ಕಲ್ಲೆಂದು ಕರೆಯುವುದು ವಾಡಿಕೆ. ಚಿಮ್ಮುವ ಕಲ್ಲಿನಿಂದ (ಸ್ಪ್ರಿಂಗೀ) ಕಮಾನು ಸಾಮಾನ್ಯವಾಗಿ ಚಿಮ್ಮುತ್ತದೆ. ಆದರೆ ನಿಜವಾದ ಕಮಾನಿನ ಅಡಿಗೂ ಕಂಬದ ಮೇಲುವರಸೆಗೂ ನಡುವೆ ಒಂದು ವರಸೆ ಲಂಬವಾದ ಕಟ್ಟಡವನ್ನು ಕಟ್ಟಿ ವೃತ್ತಕಂಡಾಕಾರದ ಕಮಾನನ್ನು ಚಿಮ್ಮಿಸುವುದು (ಸ್ಟಿಲ್ಟೆಡ್ ಆರ್ಚ್) ಉಂಟು. ಸುರಂಗದ ಹಾಗೆ ನಿರಂತರವಾದ ಕಮಾನುಗಳ ಸಾಲನ್ನು ಚಾವಣಿ (ವಾಲ್ಟ್) ಎನ್ನುತ್ತಾರೆ.

ಆಪಿನ ಆಕಾರದ ಕಲ್ಲುಗಳಿಂದ, ಅದರ ರಚನೆಯ ಸ್ವಭಾವದಿಂದಲೇ, ಕಮಾನಿನಲ್ಲಿ ಬುಡದ ಕಲ್ಲಿನ ಮೇಲೆ ಕೆಳಕ್ಕೆ ಎಳೆಯುವ ತೂಕವೇ ಅಲ್ಲದೆ ಮಟ್ಟವಾಗಿ ಹೊರಕ್ಕೆ ನೂಕುವ ಪ್ರವೃತ್ತಿಯೂ ಇರುತ್ತದೆ. ಕಮಾನು ಭದ್ರವಾಗಿರಬೇಕಾದರೆ ಈ ನೂಕನ್ನು ಗುದ್ದುಗಂಬಲಿಂದಲೋ ಊರೆಗಳಿಂದಲೋ ಎದುರಿಸಬೇಕು. ಒಂದು ಸೇತುವೆಯ ನಡುವಿನ ಕಂಬದಲ್ಲಿ ಎರಡು ಪಕ್ಕಗಳಲ್ಲಿಯೂ ಒಂದೇ ಅಗಲದ ಕಮಾನುಗಳಿರುವುದರಿಂದ ಒಂದು ಪಕ್ಕದ ಕಮಾನಿನ ಮಟ್ಟವಾದ ನೂಕು ಇನ್ನೊಂದು ಪಕ್ಕದ್ದರ ನೂಕಿಗೆ ಸಮಾನವಾಗಿ ಎದುರು ದಿಕ್ಕಿನಲ್ಲಿರುವುದರಿಂದ ಒಂದನ್ನೊಂದು ಸಮತೂಕ ಮಾಡಿ ಕಂಬವನ್ನು ಸುರಕ್ಷಿತವಾಗಿ ಮಾಡುತ್ತದೆ.

ಕಮಾನಿನಲ್ಲಿ ಅನೇಕ ರೂಪಗಳಿವೆ. ಅನೇಕ ನಮೂನೆಯ ಕಟ್ಟಡಗಳಲ್ಲಿ ಇವು ಉಪಯೋಗವಾಗುತ್ತಿವೆ. ಅರ್ಧವೃತ್ತಾಕೃತಿಯ ಕಮಾನಿನಲ್ಲಿ ಮೇಲೆ ಬಿದ್ದ ತೂಕ ಲಂಬವಾಗಿ ಕಂಬಕ್ಕೆ ಇಳಿಯುವುದರಿಂದ ಇದು ಬಲಿಷ್ಠವಾದ ನಮೂನೆ. ಇದನ್ನು ರೋಮನ್ನರು ಕಟ್ಟಡಗಳಲ್ಲಿಯೂ ನಗರಕ್ಕೆ ನೀರನ್ನು ತರುವ ಮೇಲುಗಾಲುವೆಗಳಲ್ಲಿಯೂ ರಚಿಸುತ್ತಿದ್ದರು. ಅರ್ಧವೃತ್ತಾಕೃತಿಯ ಮತ್ತು ತಪ್ಪಲೆ ಕಮಾನುಗಳನ್ನು ಮನೆ ಕಟ್ಟುವುದರಲ್ಲಿ ಉಪಯೋಗಿಸುವುದೇ




A : ಅರ್ಧಗೋಳಾಕಾರದ ಕಮಾನಿನ ನಕ್ಷೆ 1. ನೆತ್ತಿಗಲ್ಲು, 2. ಅಂಕಣ, 3. ಎತ್ತರ, 4. ಕಂಬದ ಮೇಲುವರಸೆಗಳು, 5. ಕಂಬಗಳು, 6. ಕಮಾನಿನ ಹೊರಬಾಗು, 7. ಕಮಾನಿನ ಒಳಬಾಗು, B: ಕುದುರೆಲಾಳದ ಆಕಾರದ ಕಮಾನು, C. ಗಾಥಿಕ್ ಮಾದರಿಯದು, D. ಟ್ಯೂಡರ್ ಮಾದರಿಯದು, E. ಓಗೀ ಮಾದರಿಯದು, F. ಇನ್ನೊಂದು ಮಾದರಿಯ ಕಮಾನು

ಹೆಚ್ಚು. ಚೂಪಾದ ಗಾಥಿಕ್ ಕಮಾನು ಯುರೋಪಿನಲ್ಲಿ ಮಧ್ಯಯುಗದಲ್ಲಿ ಇಗರ್ಜಿಗಳನ್ನು ಕಟ್ಟುವಾಗ ವಿಕಾಸವಾಯಿತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕಟ್ಟಡಗಳಲ್ಲಿ ಈ ಆಕಾರದ ಕಮಾನು ಸಾಲುಗಳನ್ನು ನೋಡಬಹುದು. ಓಗೀ ಆಕಾರದ ಚೂಪಾದ ಕಮಾನುಗಳನ್ನು ಹಿಂದೆ ಮನೆಗಳ ಕಿಟಕಿ, ಬಾಗಿಲುಗಳ ಮೇಲೂ ಬಳಸುತ್ತಿದ್ದರು. ಭಾರತದಲ್ಲಿ ಮೊಗಲರ ಕಾಲದ ಭವ್ಯವಾದ ಕೋಟೆಗಳಲ್ಲಿ ಇಂಡೋಸ್ಯಾರೆಸಾನಿಕ್ ಕಮಾನನ್ನು ವಿಶೇಷವಾಗಿ ಉಪಯೋಗಿಸಿದ್ದಾರೆ. ಮೂರು ಕೇಂದ್ರಗಳಿಂದ ಎಳೆದ ವೃತ್ತಖಂಡಗಳನ್ನೆಳೆದು ಅರ್ಧ ಅಂಡಾಕಾರವಾದ (ಸೆಮಿ ಎಲ್ಲಿಪ್ಟಿಕ್) ಕಮಾನುಗಳನ್ನು ಇಟ್ಟಿಗೆ ಗಾರೆಯಿಂದ ಕಟ್ಟಿದ ಸೇತುವೆಗಳಲ್ಲಿ ಬಳಸಿದ್ದಾರೆ. 1858ರಲ್ಲಿ ಕಟ್ಟಿದ ಶಿವಮೊಗ್ಗದ ತುಂಗಾನದಿಯ ಸೇತುವೆ ಭದ್ರಾವತಿಯ ಸೇತುವೆಗಳನ್ನು 50 ಕಣ್ಣಿನ ಇಟ್ಟಿಗೆಯ ಈ ನಮೂನೆಗಳಿಂದ ಕಟ್ಟಿದ್ದಾರೆ. ಉತ್ತರ ದೇಶದ ಮೆಕ್ಕಲು ಮಣ್ಣಿನ ಬಯಲುಗಳಲ್ಲಿ ಕಲ್ಲೇ ಸಿಕ್ಕುವುದಿಲ್ಲ. ಹರಿದ್ವಾರದಿಂದ ರೂರ್ಕೀಯ ಕಡೆಗೆ ಹೋಗುವ ಮೇಲಿನ ಗಂಗಾನಾಲೆಯಲ್ಲಿ 10,500 ಕ್ಯೂಸೆಕ್ಸ್ ಎಂದರೆ ನಮ್ಮ ವಿಶ್ವೇಶ್ವರಯ್ಯನಾಲೆಯ ಐದರಷ್ಟು ನೀರು ಹರಿಯುತ್ತದೆ. ಈ ನಾಲೆ 80,000 ಕ್ಯೂಸೆಕ್ಸುಗಳ ಪ್ರವಾಹವನ್ನು ಸಾಗಿಸುವ ಸೋಲಾನಿ ನದಿಯನ್ನು 15 ಮೀ ಕಣ್ಣಿನ 11 ಇಟ್ಟಿಗೆ ಗಾರೆಯ ಕಮಾನುಗಳ ಮೇಲುಗಾಲುವೆಯಲ್ಲಿ ದಾಟುತ್ತದೆ.

ನದಿಗಳ ಮೇಲೆ ರಸ್ತೆಗಳನ್ನು ರೈಲು ದಾರಿಗಳನ್ನು ಸಾಗಿಸುವ ಸೇತುವೆಗಳಲ್ಲಿ ವೃತ್ತ ಖಂಡಾಕಾರವನ್ನು ಬಳಸಿದ್ದಾರೆ. ಬಿಲ್ಲಿನ ಹುರಿಯ ಆಕಾರವನ್ನು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ತುಂಗಾನದಿಯ ಮೇಲಿನ ಸೇತುವೆಯಲ್ಲಿ ಉಪಯೋಗಿಸಿದ್ದಾರೆ. 243 ಮೀಗಳ ಒಂದು ಕಣ್ಣಿನ ತೂಗು ಸೇತುವೆಯಲ್ಲಿ ಉಕ್ಕಿನ ಹೊರಜಿ ಮಾಲಾಕಾರವಾಗಿ (ಕ್ಯಾಟೆನರಿ) ಇದೆ.

ಚಪ್ಪಡಿಯಂತೆ ಕಮಾನು ಸಹ ಇಂಜಿನಿಯರಿಂಗ್‌ನಲ್ಲಿ ಸರ್ವತ್ರ ಉಪಯೋಗವಾಗುವ ನಮೂನೆ. ಕಮಾನಿಗೆ ಜೀವಕಳೆ ಇದೆ. ಅದು ಪಕ್ಕದ ದಿಮ್ಮಿಗಳನ್ನು ತಳ್ಳಿ ಜೀವಂತ ಪ್ರಾಣಿಯಂತೆ ಎಚ್ಚರವಾಗಿದ್ದು, ವಿಲಾಸದಿಂದ ಭಾರವನ್ನು ಹೊತ್ತಿರುವಂತೆ ಕಾಣುತ್ತದೆ. ಕಮಾನು ನಿದ್ದೆ ಮಾಡುವುದಿಲ್ಲ. ಕಟ್ಟಡದ ಆಕಾರಗಳಲ್ಲೆಲ್ಲ ಕಮಾನು ಅತ್ಯಂತ ಮನೋಹರವಾದದ್ದು.

**ಓಗೀ:** ಕಮಾನಿನಲ್ಲಿ ಒಂದು ಬಗೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕಾಲಾರ‍್ಯಾಡೊ ನದಿಯ ಮೇಲಿನ ಆಸ್ಟಿನ್ ಅಣೆ ಒಂದು ಓಗೀ ಆಕಾರದ ಅಣೆ. ಇದರ ಮೇಲುಭಾಗವನ್ನು ಮೇಲಿನಿಂದ ಬೀಳುವ ನೀರಿನ ದಾರಿಯನ್ನು ಅನುಸರಿಸಿ ಕಟ್ಟಿದ್ದಾರೆ. ಆದರೆ 1900ರಲ್ಲಿ ಬಂದ ಮಹಾಪ್ರವಾಹದಲ್ಲಿ ಈ ಅಣೆ ತಳಪಾಯದ ಸುಣ್ಣಕಲ್ಲಿನ

ಬಿಜಾಪುರ ಜಿಲ್ಲೆಯ ಆಸಾರ್–ಮಹಲ್ ಬಳಿಯಿರುವ ಚಂಪಾಮಹಲ್ ದ್ವಾರಕಮಾನಿಗೊಂದು ನಿದರ್ಶನ

ಮಟ್ಟವಾದ ಹಾಳೆಹಾಳೆಯಾದ ಪದರಗಳಲ್ಲಿ ಸಾಕಷ್ಟು ಅಂಟಿಕೊಳ್ಳುವ ಗುಣವಿಲ್ಲದೆ ಜಾರಿ ಕೆಳಕ್ಕೆ ಉರುಳಿತು. ಇದರ ತಲೆಯ ಭಾಗವನ್ನು ಅಣೆಯ ಮೇಲಿನಿಂದ ಕೆಳಕ್ಕೆ ಉರುಳುವ ನೀರಿನ ದಾರಿಯನು ಅನುಸರಿಸಿ ಕಟ್ಟಿದ್ದರು. ಹಾಗೆಯೇ ತಳದಲ್ಲಿ ನೀರನ್ನು ಹೆಚ್ಚು ಕಡಿಮೆ ಲಂಬವಾದ ದಾರಿಯಿಂದ ಮಟ್ಟವಾದ ದಾರಿಗೆ ತಿರುಗಿಸಿದ್ದರು. ಓಗೀ ಕಮಾನನ್ನು ಹಿಂದೆ ಭಾರತದಲ್ಲಿ ವಿಶೇಷವಾಗಿ ಉಪಯೋಗಿಸುತ್ತಿದ್ದರು. ಆದರೆ ಮೇಲಿನಿಂದ ಉರುಳುವ ನೀರು ಕೆಳಗಡೆ ಮಟ್ಟವಾಗಿ ಹೊರಬೀಳುವಾಗ ಮಿತಿಮೀರಿದ ವೇಗದಿಂದ ಉರುಳುವುದರಿಂದ ಹೊಳೆಯ ತಳದಲ್ಲಿಯೂ ಅಂಚುಗಳಲ್ಲಿಯೂ ನೆಲ ಕೊರೆದು ಹೋಗುತ್ತದೆ. ಅದಕ್ಕಾಗಿ ತಗ್ಗಾದ ಅಣೆಕಟ್ಟುಗಳಲ್ಲಿ ಈ ಓಗೀ ಆಕಾರವನ್ನು ಹೆಚ್ಚಾಗಿ ಬಳಸುತ್ತಿಲ್ಲ. (ಹೆಚ್.ಸಿ.ಕೆ)

**ಕಮಾನು ಛಾವಣಿ :** ಕಮಾನು ಕಟ್ಟುವ ವಿಧಾನವೇ ಕಮಾನು ಛಾವಣಿಗೂ ಅನ್ವಯಿಸುತ್ತದೆ. ಇಟ್ಟಿಗೆ, ಕಲ್ಲು ಅಥವಾ ಇನ್ನಾವುದಾದರೂ ಕಟ್ಟಡದ ಸಾಮಾನನ್ನು ಉಪಯೋಗಿಸಿ, ಕಮಾನಿನ ಆಕಾರದಲ್ಲಿ ಕಟ್ಟಿದ ಛಾವಣಿ ಭಾಗಕ್ಕೆ ಕಮಾನು ಛಾವಣಿ ಎನ್ನುತ್ತಾರೆ. ಇಂಥ ಛಾವಣಿಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು.

1. ಪೀಪಾಯಿ : ಈ ವಿಧವಾದ ಛಾವಣಿ ಉದ್ದಕ್ಕೂ ಒಂದೇ ವಿಧವಾಗಿ ಸುರಂಗದ ಛಾವಣಿಯಂತಿರುತ್ತದೆ.

2. ಆನ್ನುಲರ್ : ಒಂದೇ ವಿಧವಾಗಿ ತೋರುವ ಈ ಛಾವಣಿಯಲ್ಲಿ ಇದನ್ನು ಹೊತ್ತಿರುವ ಗೋಡೆಗಳು ನಕ್ಷೆಯಲ್ಲಿ ಏಕಬಿಂದು ವೃತ್ತಾಕಾರದಲ್ಲಿರುತ್ತದೆ.

3. ಗ್ರಾಯಿನ್ : ಇವನ್ನು ಕ್ರಾಸ್‌ವಾಲ್ಟ್ ಎಂದು ಕರೆಯುತ್ತಾರೆ. ಎರಡು ಪೀಪಾಯಿ ಆಕಾರದ ಛಾವಣಿಗಳು ಒಂದನ್ನೊಂದು ಲಂಬವಾಗಿ ಸಂಧಿಸಿದರೆ ಈ ವಿಧವಾದ ಛಾವಣಿಯಾಗುತ್ತದೆ. ಹೀಗೆ ಸಂಧಿಸಿದ ಜಾಗದಲ್ಲಿ ಛಾವಣಿಯ ಭಾರ ಬೀಳುತ್ತದೆ. ಸಂಧಿಸುವ ರೇಖೆಗೆ ಗ್ರಾಯಿನ್ ಎಂದು ಹೆಸರು (**ನೋಡಿ– ಸೇತುವೆ**). (ಕೆ.ಎಸ್.ಆರ್.)

**ಕಮಿಂಗ್ಸ್ ಎಡ್ವರ್ಡ್ ಎಸ್ಟ್‌ಲಿನ್ :** 1894–1902. ಅಮೆರಿಕದ ಕವಿ ಮತ್ತು ಚಿತ್ರಕಾರ. ಜನನ ಕೇಂಬ್ರಿಜ್‌ನ ಮೆಸಚೂಸೆಟ್ಸ್‌ನಲ್ಲಿ. ಹಾರ್ವರ್ಡ್ ವಿಶ್ವವಿದ್ಯಾನಿಲಯದಿಂದ ಪದವೀಧರನಾದ ಮೇಲೆ (1915) ಒಂದನೆಯ ಮಹಾ ಯುದ್ಧ ಕಾಲದಲ್ಲಿ ಫ್ರೆಂಚ್ ಸೈನ್ಯವಿಭಾಗದ ಆಸ್ಪತ್ರೆ ಗಾಡಿಯ (ಆಂಬ್ಯುಲೆನ್ಸ್) ಚಾಲಕನಾಗಿ ಸೇವೆಸಲ್ಲಿಸಿದ. ಅನಂತರ ಮೆಸಚೂಸೆಟ್ಸ್‌ನ ಕ್ಯಾಂಪ್ ಡೇವೆನ್ಸ್ ಎಂಬಲ್ಲಿ ಸಾಮಾನ್ಯ ಸೈನಿಕನಾಗಿ ಕೆಲಸ ಮಾಡಿದ. ಫ್ರಾನ್ಸಿನಲ್ಲಿದ್ದಾಗ ಈತ ಸೈನಿಕ ಬಂಧನ ಶಿಬಿರದಲ್ಲಿ ಮೂರು ತಿಂಗಳ ಕಾಲವಿದ್ದು ತನಗಾದ ಅನುಭವಗಳನ್ನು ದಿ ಎನಾರ್ಮಸ್ ರೂಮ್ (1922) ಎಂಬ ಪುಸ್ತಕದಲ್ಲಿ ಬರೆದ. 1920 ಮತ್ತು 1930ರ ದಶಕಗಳಲ್ಲಿ ಈತ ಪ್ಯಾರಿಸ್ ಮತ್ತು ಗ್ರೀನಿಚ್‌ಗಳಲ್ಲಿ ಬಹುಮಟ್ಟಿನ ಖ್ಯಾತಿಗಳಿಸಿದ. ಅಮೆರಿಕದ ಆಧುನಿಕ ಕವಿಗಳಲ್ಲಿ ಅತಿ ನಿಷ್ಠಾವಂತ ಪ್ರಯೋಗಕಾರ ನೆನಸಿಕೊಂಡವನೀತ. ಐಹಿಕ ಭೋಗಪ್ರವೃತ್ತಿಯ ಕಟುವಿಮರ್ಶೆಯನ್ನೂ ಕವನಗಳಲ್ಲಿ ಈತನದೇ ಆದ ಅಕ್ಷರಜೋಡಣೆಯ ವಿನ್ಯಾಸವನ್ನೂ ಕಾಣಬಹುದು. ಈತ ನಿಸರ್ಗಪ್ರೇಮಿ. ಪ್ರೇಮ ಮತ್ತು ಯೌವ್ವನಗಳ ವಿಚಾರವಾಗಿ ತನ್ನ ಕವನಗಳಲ್ಲಿ ಹೆಚ್ಚಿನ ವಿವರಗಳನ್ನು ಇತ್ತಿದ್ದಾನೆ. ದಬ್ಬಾಳಿಕೆಯನ್ನು ಕಟುವಾಗಿ ಟೀಕಿಸಿ ಖಂಡಿಸಿದ್ದಾನೆ. ಈತ ಹುಟ್ಟು ಭಾವಗೀತೆಕಾರ. ಇವನ ಟೂಲಿಫ್ಸ್ ಅಂಡ್ ಚಿಮ್ನೀಸ್ 1923ರಲ್ಲಿ ಪ್ರಕಟವಾಯಿತು. ಅಮೆರಿಕದ ಸಾಹಿತ್ಯಕ್ಷೇತ್ರದಲ್ಲಿ ವಿಶಿಷ್ಟ ಸೇವೆಸಲ್ಲಿಸಿದ ಕಾರಣ ಈತನಿಗೆ ಡಯಲ್ ಬಹುಮಾನ ದೊರಕಿತು (1925). ನಕ್ಷಾನಿರೂಪಣೆಯ ವೈಚಿತ್ರ್ಯದಲ್ಲಿ ತನ್ನದೇ ಆದ ಒಂದು ವಿಶಿಷ್ಟತೆಯನ್ನು ಈತ ಕೋರಿದ್ದಾನೆ. ಇವನ ರಚನೆಗಳಲ್ಲಿ ಮುಖ್ಯವಾದುವೆಂದರೆ : XLI ಪೊಯೆಮ್ಸ್ (1925), ಈಸ್ 5 (1926), ಹಿಮ್ (1928), CIOPW (1931), ವೀವ (1931), ಈಮಿ (1933), ನೋ ಥ್ಯಾಂಕ್ಸ್ (1935), 1/20 (1937), ಫಿಫ್ಟಿ ಪೊಯೆಮ್ಸ್ (1940), I x I (1944) ಮತ್ತು Ì : ನಾಮೆಕ್‌ಕ್ಲೇಚರ್ಸ್ (1953), ಈತನ ಕವನ ಸಂಕಲನಕ್ಕೆ (1954) ಒಂದು ರಾಷ್ಟ್ರೀಯ ಪುಸ್ತಕ ಬಹುಮಾನ ಪ್ರಶಸ್ತಿ ಬಂದಿದೆ (1955). ಇವನ ಹಿಮ್ ಎಂಬುದು 21 ದೃಶ್ಯಗಳನ್ನೊಳಗೊಂಡ, ಕಾಲ್ಪನಿಕ ಆಕೃತಿಗಳ ದೃಶ್ಯಪರಂಪರೆ. ಸಿಕ್ಸ್ ನಾನ್ ಲೆಕ್ಚರ್ಸ್ (1953)–ಒಂದು ವಿಮರ್ಶಕ ಕೃತಿ.

CIOPW ಎಂಬುದು ಚಾರ್‌ಕೋಲ್, ಇಂಕ್, ಆಯಿಲ್, ಪೆನ್ಸಿಲ್ ಮತ್ತು ವಾಟರ್‌ಕಲರ್ ಎಂಬ ಇಂಗ್ಲಿಷ್ ಪದಗಳ ಮೊದಲ ಅಕ್ಷರಗಳಿಂದ ಆದುದು. ಈ ಗ್ರಂಥ ಕಮಿಂಗ್ಸ್‌ನ ರೇಖಾ ಹಾಗೂ ವರ್ಣಚಿತ್ರಗಳ ಸಂಕಲನವಾಗಿದೆ. (ಎಂ.ಕೆ.ಎನ್.;ಕೆ.ಬಿ.ಪಿ.)

**ಕಮೆರ್ಲಿಂಗ್ ಓನ್ಸ್, ಹೈಕ್ :** 1853–1926. ವಿಖ್ಯಾತ ಡಚ್ ಭೌತವಿಜ್ಞಾನಿ. ಹುಟ್ಟಿದ್ದು ಹಾಲೆಂಡಿನ ಗ್ರ್ಯೂನಿಂಗೆನ್ ನಗರದಲ್ಲಿ, 1853 ಸೆಪ್ಟೆಂಬರ್ 21ರಂದು. ಅಲ್ಲೇ ಬೆಳೆದು ಭೌತವಿಜ್ಞಾನ ಮತ್ತು ಗಣಿತ ವಿಜ್ಞಾನಗಳನ್ನು ಓದಿದ. 1871ರಂದು ಜರ್ಮನಿಯ ಹೈಡೆಲ್ ಬರ್ಗ್ ನಗರಕ್ಕೆ ಹೋಗಿ ಬುನ್‌ಸೆನ್ ಮತ್ತು ಕಿರ್ಕ್‌ಫರೊಂದಿಗೆ ಓದಿ ಮತ್ತೆ ಗ್ರ್ಯೂನಿಂಗಿಗೆ ಹಿಂತಿರುಗಿ ಅಲ್ಲಿ 1879ರಂದು ಡಾಕ್ಟೊರೇಟನ್ನು ಪಡೆದ. ಅನಂತರ ಹಾಲೆಂಡಿನ ಲೈಡನ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಯೋಗಿಕ ಭೌತವಿಜ್ಞಾನದ ಪ್ರಾಧ್ಯಾಪಕನಾಗಿ(1882–1923) ಸಾಯುವುದಕ್ಕೆ ಕೆಲವು ವರ್ಷ ಮುಂಚಿನವರೆಗೂ ಇದ್ದ. ಅಲ್ಲಿ 1894ರಂದು ಉಪಕರಣಗಳಿಂದ ಸಜ್ಜಿತವಾದ ಒಂದು ಪ್ರಯೋಗಶಾಲೆಯನ್ನು ಸ್ಥಾಪಿಸಿ ದ್ರವ ಮತ್ತು ಅನಿಲಗಳ ಮೇಲೆ ಒತ್ತಡದ ಮತ್ತು ಅಲ್ಪತಾಪದ ಪರಿಣಾಮಗಳನ್ನು ಕಂಡುಹಿಡಿಯಲು ಪ್ರಾರಂಭಿಸಿದ **ನೋಡಿ–(ಅಲ್ಪತಾಪ ಮತ್ತು ಅತಿವಾಹಕತ್ವ)**. ಇದರ ಫಲವಾಗಿ 1908ರಂದು ಹೀಲಿಯಂ ಅನಿಲವನ್ನು ದ್ರವೀಕರಿಸಿದ (**ನೋಡಿ–ಅನಿಲ ದ್ರವೀಕರಣ**) ಮತ್ತು $269^{\circ}$ ಸೆಂ. ಅಥವಾ $1^{\circ}K$ ತಾಪವನ್ನು ಉಂಟುಮಾಡಿದ. ಇಂಥ ಅಲ್ಪತಾಪದಲ್ಲಿ ಲೋಹಗಳ ಮೇಲೆ ಪ್ರಯೋಗಗಳನ್ನು ನಡೆಸಿ ಅತಿವಾಹಕತ್ವವನ್ನು ಕಂಡುಹಿಡಿದ. ಈ ರೀತಿ ಓನ್ಸ್ ನಡೆಸಿದ ಅತ್ಯುತ್ತಮ ಅಲ್ಪತಾಪ ಭೌತವಿಜ್ಞಾನದ ಪ್ರಯೋಗಗಳಿಗಾಗಿ ಮತ್ತು ಹೀಲಿಯಂ ಅನಿಲವನ್ನು ದ್ರವೀಕರಿಸಿದ್ದಕ್ಕಾಗಿ ಅವನಿಗೆ 1913ರಂದು ಭೌತವಿಜ್ಞಾನದ ನೊಬೆಲ್ ಪಾರಿತೋಷಕವನ್ನು ಕೊಡಲಾಯಿತು. ಓನ್ಸ್ ಭೌತವಿಜ್ಞಾನದ ವಿಷಯಗಳ ಮೇಲೆ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ. 1926 ಫೆಬ್ರವರಿ 21ನೆಯ ತಾರೀಖು ಲೈಡನ್ ನಗರದಲ್ಲಿ ಈತ ಅಸುನೀಗಿದ. (ಎನ್.ಜಿ.ಪಿ.)

**ಕಮೆಲಿಯ :** ತಿಯೇಸೀ ಕುಟುಂಬಕ್ಕೆ ಸೇರಿದ ಹಲವಾರು ಪ್ರಭೇದಗಳನ್ನೊಳಗೊಂಡ ಅಲಂಕಾರ ಸಸ್ಯ ಜಾತಿ. ಇದರಲ್ಲಿ ಸು. 45 ಪ್ರಭೇದಗಳಿವೆ. ಎಲ್ಲವೂ ನಿತ್ಯ ಹರಿದ್ವರ್ಣದ ಪೊದೆಗಳು ಮತ್ತು ಮರಗಳು. ಏಷ್ಯದ ಉಷ್ಣ ವಲಯಗಳಲ್ಲಿ ಇವು ಹೇರಳ. ಮುಖ್ಯವಾದ ಪ್ರಭೇದಗಳು 4–ಕ.ಜಪಾನಿಕ, ಕ.ಕಾಡೇಟ, ಕ.ಡ್ರುಪಿಫೆರ ಮತ್ತು ಕ.ಸೈನೆನ್ಸಿಸ್.

ಕ.ಜಪಾನಿಕ ಉದ್ಯಾನ ಪ್ರಾಮುಖ್ಯ ಪಡೆದಿರುವ ಪೊದೆ ಸಸ್ಯ. ಕೆಲವೊಮ್ಮೆ ಮರದಂತೆ ಬೆಳೆಯುವುದು ಉಂಟು. ಸಾಮಾನ್ಯವಾಗಿ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುವ ಇದನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಇದರಲ್ಲಿ ನುಣುಪಾದ, ಹೊಳೆಯುವ ಎಲೆಗಳಿವೆ. ಪರ್ಯಾಯವಾಗಿ ಜೋಡಣೆಗೊಂಡಿರುವ ಇವು ಅಂಡಾಕಾರವಾಗಿವೆ. ಇವುಗಳ ಅಂಚು ಗರಗಸದ ಹಲ್ಲಿನಂತೆ. ಹೂಗಳು ಒಂಟಿ ಪುಷ್ಪಗಳು; ಎಲೆಗಳ ಕಂಕುಳಲ್ಲೋ

ರೆಂಬೆಗಳ ತುದಿಯಲ್ಲೋ ಅರಳುತ್ತವೆ. ಅವುಗಳ ಬಣ್ಣ ಬಿಳಿ, ಕೆಂಪು, ಗುಲಾಬಿ, ಪಾಟಲ– ಹೀಗೆ ವಿವಿಧ ಬಗೆಯದು. ಪುಷ್ಪಪತ್ರಗಳು, ದಳಗಳು ಐದ್ಯೆದು ಇದೆ. ಕೇಸರಗಳು ಅನೇಕ. ಅಂಡಾಶಯ ಮೂರು–ಐದು ಕೋಣೆಗಳುಳ್ಳದ್ದು. ಫಲ ಒಡೆಯುವ ಸಂಪುಟಮಾದರಿಯದು.

ಕಮೇಲಿಯ ಜಪಾನಿಕದಲ್ಲಿ ಹಲವಾರು ತಳಿಗಳಿವೆ. ಇವುಗಳಲ್ಲಿ ಅಬಿ ವೈಲ್ಡರ್, ಲೂಸಿಡ, ಡೌನಿಂಗ್, ಪ್ರೆಸಿಡೆಂಟ್ ಕ್ಲಾರ್ಕ್ ಮುಂತಾದುವು ಮುಖ್ಯವಾದುವು. ಇದನ್ನು ಸಾಮಾನ್ಯವಾಗಿ ಬೀಜತುಂಡು ಹಾಗೂ ಲೇಯರುಗಳ ಮುಖಾಂತರ ವೃದ್ಧಿ ಮಾಡುತ್ತಾರೆ.

ಇನ್ನೆರಡು ಪ್ರಭೇದಗಳಾದ ಕ.ಡ್ರೂಪಿಫೆರ ಮತ್ತು ಕ.ಕಾಡೇಟಾಗಳನ್ನು ಕೆಲಮಟ್ಟಿಗೆ ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಕ.ಸೈನೆನ್ಸಿಸ್ ಎಂಬುದೇ ಎಲ್ಲರಿಗೂ ಪರಿಚಿತವಿರುವ ಟೀ ಗಿಡ. (ಎ.ಕೆ.ಕೆ.)

**ಕಮೋಡೋ :** ಒಂದು ಜಾತಿಯ ಸರೀಸೃಪ. ಉಡದ ಜಾತಿಗೆ ಹತ್ತಿರದ ಸಂಬಂಧಿ. ಜೀವಂತವಾಗಿರುವ ಹಲ್ಲಿಗಳಲ್ಲಿ ಅತಿ ದೊಡ್ಡದೆನಿಸಿದ ಇದು 12' ಉದ್ದ ಬೆಳೆಯುತ್ತದೆ ಹಾಗೂ 300 ಪೌಂಡು ತೂಗುತ್ತದೆ. ಬಣ್ಣ ಕಪ್ಪು, ಚರ್ಮ ಮೂಳೆಯಷ್ಟು ಗಟ್ಟಿಯಾಗಿದೆ. ಹವಾಗುಣವನ್ನು ಪರೀಕ್ಷಿಸಲು ತನ್ನ ಹಳದಿ ಬಣ್ಣದ ನಾಲ್ಕು ಕವಲುಗಳಾಗಿ ಸೀಳಿದ ನಾಲಗೆಯನ್ನು ಆಗಾಗ ಹೊರಚಾಚುತ್ತದೆ. ಹೀಗೆ ನಾಲಗೆಯನ್ನು ಹೊರಕ್ಕೂ ಒಳಕ್ಕೂ ಆಡಿಸುವಾಗ ಅದು ದೀಪದ ಜ್ವಾಲೆಯ ಹಾಗೆ ಕಾಣುತ್ತದೆ. ಇದು ಮಾಂಸಾಹಾರಿ. ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದಲ್ಲದೆ ಬದುಕಿರುವ ಕೀಟಗಳನ್ನು ಕಶೇರುಕಗಳನ್ನು ತಿನ್ನುತ್ತದೆ. ಸಾಮಾನ್ಯವಾಗಿ ನೆಲದಮೇಲೆಯೇ ವಾಸ. ಕೆಲವು ವೇಳೆ ನೀರಿನಲ್ಲಿ ಈಜುವುದು ಉಂಟು. ರಾತ್ರಿಯನ್ನು ಬಿಲಗಳಲ್ಲಿ ಕಳೆಯುತ್ತದೆ. ಕೆಲವು ಸಾರಿ ಬಿಲದಲ್ಲೇ ಹಲವಾರು ದಿನಗಳನ್ನು ಕಳೆಯುವುದು ಉಂಟು. ಈ ಪ್ರಾಣಿಯ ವಿಚಾರ ಬಹಳ ದಿನಗಳವರೆಗೂ ತಿಳಿದಿರಲಿಲ್ಲ. ಕೇವಲ 50ವರ್ಷಗಳಿಂದೀಚೆಗೆ ಇದರ ಇರುವಿಕೆ ಗೊತ್ತಾಗಿದೆ. ಇದರ ಸಂತತಿ ಪ್ಲಿಸ್ಟೋಸಿನ್ ಕಾಲದ ಆದಿಯಿಂದ ಬೆಳೆದುಬಂದಿದೆ ಎಂದು ತಜ್ಞರು ಹೇಳಿದ್ದಾರೆ. ಇದು ಸೆಲೆಬಸ್ ದ್ವೀಪದ ದಕ್ಷಿಣಕ್ಕಿರುವ ಸುಂದ ದ್ವೀಪಗಳಲ್ಲಿ ಕಂಡುಬರುತ್ತದೆ. (ಎಸ್.ಎ.ಎ.)

**ಕಮೋಯೆನ್ಜ್, ಲೂಯಿಷ್ ಡ :** 1524–80. ಲೂಸಿಯಡ್ಸ್ ಎಂಬ ಭವ್ಯಕಾವ್ಯದ ಕರ್ತೃ. ಈ ಕೃತಿ ಪೋರ್ಚುಗಲ್ಲಿನ ರಾಷ್ಟ್ರೀಯ ಕಾವ್ಯವೆನಿಸಿದೆ. ಪ್ರಾಸಂಗಿಕವಾಗಿ ಪೋರ್ಚುಗೀಸ್ ಚರಿತ್ರೆಯ ಅನೇಕ ಪ್ರಸಂಗಗಳು ಬರುತ್ತವೆಯಾದರೂ ಈ ಕಾವ್ಯದ ಪ್ರಧಾನ ವಸ್ತು ವಾಸ್ಕೊ ಡ ಗಾಮನ ಸಮುದ್ರಯಾನ ಸಾಹಸ. ತನ್ನ ದೇಶದ ಔನ್ನತ್ಯವನ್ನೂ ಲ್ಯಾಟಿನ್ ಸಂಸ್ಕೃತಿಯನ್ನೂ ಹರಡುವಲ್ಲಿ ಪೋರ್ಚುಗೀಸರು ವಹಿಸಿದ ಪಾತ್ರದ ಪ್ರಾಮುಖ್ಯವನ್ನು ಕವಿ ಇಲ್ಲಿ ಶ್ಲಾಘಿಸಿದ್ದಾನೆ. ಲ್ಯಾಟಿನ್ ಭಾಷೆಯ ಪ್ರಾಚೀನ ಭವ್ಯ ಕಾವ್ಯಗಳಿಂದ ಕವಿ ಸ್ಫೂರ್ತಿಪಡೆದಂತಿದೆ. ವರ್ಜಿಲನಂತೆ ಈತನೂ ದೇವತಾಪ್ರಾರ್ಥನೆ, ದೇವತೆಗಳು, ದೈವಸಂಕಲ್ಪ, ವಿಸ್ತಾರವಾದ ಸಂವಾದಗಳು, ಆಲಂಕಾರಿಕ ಶೈಲಿ ಮುಂತಾದುವನ್ನು ತಂದು ತನ್ನ ವಸ್ತುವನ್ನು ಬೆಳೆಸಿದ್ದಾನೆ. (ಎಂ.ಕೆ.ಕೆ.ಆರ್.ಜಿ.ಕೆ.)

**ಕಮ್ಮಾರಿಕೆ :** ಕಬ್ಬಿಣ ಲೋಹವನ್ನು ಉಪಕರಣಗಳನ್ನಾಗಿ ಮಾಡಿ, ಅವುಗಳ ಉಪಯೋಗ ಮಾನವನಿಗೆ ದೊರಕುವಂತೆ ಮಾಡಲೆತ್ನಿಸಿದ ಕಲೆಯೇ ಕಮ್ಮಾರಿಕೆ (ಸ್ಮಿತರಿ). ಬರಿಯ ಲೋಹ ವ್ಯರ್ಥ. ಕಮ್ಮಾರಿಕೆ ಅಸ್ತಿತ್ವಕ್ಕೆ ಬಂದ ಅನಂತರ ವ್ಯವಸಾಯಕ್ಕೆ, ಯುದ್ಧಕ್ಕೆ, ವಾಹನಗಳಿಗೆ ಮತ್ತಿತರ ಮಾನವೋಪಯೋಗಿ ಕಾರ್ಯಗಳಿಗೆ ಅದರ ಬಳಕೆ ಪ್ರಾರಂಭವಾಯಿತು. ಮೊದಮೊದಲು ಕಬ್ಬಿಣದ ಲೋಹ ಹೇಗೆ ದೊರಕಿತೋ ಅದೇ ರೂಪದಲ್ಲಿ ಮಾನವ ಅದನ್ನು ಕುಟ್ಟಿ, ಬಡಿದು ಸಾಧ್ಯವಾದಷ್ಟು ಹರಿತ ಮಾಡಿಕೊಂಡಿದ್ದಾನೆ. ಅನಂತರ ಕಾಯಿಸಿದ ಕಬ್ಬಿಣವನ್ನು ಯಾವ ರೂಪಕ್ಕಾದರೂ ತಿದ್ದಬಹುದೆಂಬ ಅಂಶ ಅರಿವಿಗೆ ಬಂದಾಗ ಹೊಸ ದಿಗಂತವೇ ಕಾಣಿಸಿತೆಂದು ಹೇಳಬಹುದು.

ಕಮ್ಮಾರ ಕಬ್ಬಿಣವನ್ನು ತಯಾರಿಸುವುದಿಲ್ಲ. ಸಿದ್ಧವಾದ ಲೋಹವನ್ನು ಉಪಕರಣಗಳನ್ನಾಗಿ ಪರಿವರ್ತಿಸುವುದೇ ಅವನ ಪ್ರಧಾನ ಉದ್ದೇಶ. ಕರ್ಮಕಾರ ಅರ್ಥಾತ್ ಕಮ್ಮಾರ ಲೋಹವನ್ನು ಕಾಯಿಸಿ, ತನ್ಮೂಲಕ ಅದಕ್ಕೆ ಆವಶ್ಯಕ ರೂಪಗಳನ್ನು ಕೊಡುತ್ತಾನೆ. ಈ ಕಾರ್ಯ ಮಾನವಶಕ್ತಿಯಿಂದ ಮತ್ತು ಯಂತ್ರ ಶಕ್ತಿಯಿಂದ ಸಾಧ್ಯ. ಯಂತ್ರಗಳು ಬರುವ ಮೊದಲು ಮನುಷ್ಯನೇ ಎಲ್ಲ ಕಾರ್ಯಗಳನ್ನೂ ಮಾಡಬೇಕಾಗಿತ್ತು. ಅದಕ್ಕೆ ಬೇಕಾದ ಗಾಳಿಯನ್ನು ನೀಡುವ ತಿದಿ ಮತ್ತು ಇದ್ದಲು ಇವೆರಡನ್ನು ಬಳಸಿ ಆತ ಕಬ್ಬಿಣವನ್ನು ಕಾಯಿಸುತ್ತಾನೆ. ಚರ್ಮದಿಂದ ಮಾಡುವ ಕೋಶವೇ ತಿದಿ. ಅದರ ಒಂದು ತುದಿ ಪೂರ್ಣ ಮುಚ್ಚಿದ್ದು ಮತ್ತೊಂದು ಕಡೆ ಗಾಳಿ ಹೊರಬರಲು ಕೊಳವೆಯಿರುತ್ತದೆ. ಎರಡು ಗಟ್ಟಿಯಾದ ಮರದ ಹಲಗೆಯಿಂದ ಅದರ ರಕ್ಷೆಯ ಮಧ್ಯದಲ್ಲಿ ಚರ್ಮದ ಚೀಲವುಂಟು. ಮೇಲ್ಭಾಗದ ಹಲಗೆಯಲ್ಲಿ ರಂಧ್ರವಿದ್ದು ಅದರ ಮೂಲಕ ಒಳನುಗ್ಗಿದ ಗಾಳಿಯನ್ನು ಒತ್ತುವುದರ ಮೂಲಕ ಅದು ಕೊಳವೆಯ ಮುಖಾಂತರ ಇದ್ದಲಿನ ಗುಣಿಯನ್ನು ಪ್ರವೇಶಿಸುವಂತೆ ಮಾಡಲಾಗುತ್ತದೆ. ಕೆಂಡ ಪ್ರಜ್ವಲಿಸಿ ಹೆಚ್ಚು ಶಾಖ ಒದಗಿಬರುತ್ತದೆ. ಕೆಂಡದ ಮಧ್ಯೆ ಇದ್ದ ಲೋಹ ಅಥವಾ ಮೊಂಡಾದ ಉಪಕರಣ ಕೆಂಪು ಬಣ್ಣಕ್ಕೆ ತಿರುಗಿದಾಗ ಅದನ್ನು ಇಕ್ಕುಳದಿಂದ ಹಿಡಿದು ಎತ್ತಿ ಅಡಿಗಲ್ಲಿನ ಮೇಲಿಟ್ಟು ಗೂಡ ಅಥವಾ ಸುತ್ತಿಗೆಯಿಂದ ಬಡಿಯುತ್ತಾರೆ. ಒಬ್ಬರು ಅಥವಾ ಇಬ್ಬರು ಬಡಿಯುತ್ತಿದ್ದಂತೆ ಉಪಕರಣವಾಗಲಿರುವ ಲೋಹವನ್ನು ಹೊರಳಿಸಿ ಬೇರೆ ಬೇರೆ ಕೋನಗಳಲ್ಲಿ ಇಡುತ್ತ ಬರುತ್ತಾರೆ. ಕೆಲಸ ಮುಗಿಯುವ ಮೊದಲೇ ಅದು ಬಿಸಿಯನ್ನು ಕಳೆದುಕೊಂಡು ತಣ್ಣಗಾದರೆ ಮತ್ತೆ ಅಗ್ಗಿಷ್ಟಿಕೆಯಲ್ಲಿಟ್ಟು ಕಾಯಿಸಿ ಪುನಃ ಬಡಿಯುತ್ತಾರೆ. ಹಾಗೆ ಬಡಿದ ಅನಂತರ ಉದ್ದೇಶಿತ ಆಕಾರ ಬಂದ ಮೇಲೆ ಅದನ್ನು ಆರಲು ಬಿಡುತ್ತಾರೆ. ಹಿಡಿ ಹಾಕಬೇಕಾದರೆ ಅದರ ಒಂದು ಭಾಗ ಕೆಂಪಾಗಿದ್ದಾಗಲೇ ಮರದ ಹಿಡಿಗೆ ಅದನ್ನು ಪೋಣಿಸುತ್ತಾರೆ. ಗಾಡಿಯ ಗಾಲಿಗೆ ಕಬ್ಬಿಣದ ಪಟ್ಟಿಯನ್ನು ಕಟ್ಟುವಾಗಲೂ ಹೀಗೆ ಮಾಡುವುದನ್ನು ನೋಡಿರಬಹುದು.

ಕಮ್ಮಾರಿಕೆಯ ಪ್ರಯೋಜನ ಹಿಂದಿನಿಂದಲೂ ತಿಳಿದ ವಿಷಯವೇ ಆಗಿದೆ. ಮುಖ್ಯವಾಗಿ ವ್ಯವಸಾಯ ಮತ್ತು ಯುದ್ಧಗಳಿಗೆ ಬೇಕಾದ ಉಪಕರಣ, ಆಯುಧಗಳನ್ನು ತಯಾರಿಸುವುದು ಅಂದಿನಿಂದಲೂ ನಡೆದುಬಂದ ವಾಡಿಕೆ. ವ್ಯವಸಾಯಕ್ಕೆ ಬೇಕಾದ ಕುಡುಗೋಲು, ಕಳೆಕುಡುಗೋಲು, ಗುಳ, ಜಿಗಣಿ, ಕೊಡಲಿ, ಕೈಬಾಚಿ ಮುಂತಾದ ಉಪಕರಣಗಳ ಜೊತೆಗೆ ಆಗಾಗ್ಗೆ ತಟ್ಟಬೇಕಾಗಿ ಬರುವ ನೇಗಿಲಿನ ಗುಳ, ಕಬ್ಬಿಣ ನೇಗಿಲಿನ ಹಲ್ಲೆ, ಹಾರೆಯ ತುದಿ, ಪಿಕಾಸಿಯ ಮೊನೆ ಇತ್ಯಾದಿಗಳು ಸದಾ ಕಮ್ಮಾರನ ಬಳಿ ಬಿದ್ದಿರುತ್ತವೆ. ಇವೆಲ್ಲಕ್ಕೂ ಮಕುಟಪ್ರಾಯವಾಗಿ ಎತ್ತಿನ ಗಾಡಿಯೊಂದು ಚಕ್ರಗಳನ್ನು ಕಳಚಿಕೊಂಡು ಅವನ ದಯೆಯನ್ನು ಹಾರೈಸಿ ಮಲಗಿರುತ್ತದೆ. ಚಕ್ರಗಳಿಗೆ ಹಾಕುವ ಕಬ್ಬಿಣದ ಪಟ್ಟಿ ಸಡಿಲವಾದಾಗ, ಅದನ್ನು ತೆಗೆದು ಕಾಯಿಸಿ ಕಟ್ಟಿ ಮರದ ಚಕ್ರಕ್ಕೆ ಕೂಡಿಸಿ ನೀರು ಹೊಯ್ಯುತ್ತಾರೆ. ಆಗ ಸಂಕೋಚಗೊಂಡ ಕಬ್ಬಿಣದ ಪಟ್ಟಿ ಬಿಗಿಯಾಗಿ ಹಿಡಿದುಕೊಳ್ಳುತ್ತದೆ. ಮುರಿದ ಕಬ್ಬಿಣದ ಗುಳಗಳನ್ನು ಸೇರಿಸುವುದೂ ಉಂಟು. ಎರಡನ್ನೂ ಚೆನ್ನಾಗಿ ಕಾಯಿಸಿ ಸೇರಿಸಿ ಬಡಿಯುವುದೇ ಅದರ ಕೆಲಸ. ಇದೇ ಮುಂತಾದ ಕೆಲಸಗಳು ಅನಿವಾರ್ಯವಾದುದರಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಕಡೆಯ ಪಕ್ಷ ಒಬ್ಬನಾದರೂ ಕಮ್ಮಾರ ಇರುವುದು ರೂಢಿ. ಆದರೆ ಇತ್ತೀಚೆಗೆ ಕೆಲವು ಗ್ರಾಮಗಳಲ್ಲಿ ಕಮ್ಮಾರ ಕಣ್ಮರೆಯಾಗುತ್ತಿದ್ದಾನೆ. ಇದಕ್ಕೆ ಕಾರಣ ಕಮ್ಮಾರಿಕೆಯಿಂದ ಜೀವನೋಪಾಯ ಅವನಿಗೆ ಸುಗಮವಾಗಿ ಸಾಗದು.

ಆಧುನಿಕ ಜಗತ್ತಿನಲ್ಲಿ ಯಾಂತ್ರಿಕ ಪ್ರಗತಿಯಾದಂತೆಲ್ಲ ಕಮ್ಮಾರನ ಕಸಬಿಗೆ ಧಕ್ಕೆಯುಂಟಾಗಿರುವುದು ಸಹಜ. ಕಮ್ಮಾರಿಕೆ ಇದ್ದೇ ಇರುತ್ತದಾದರೂ ಕಮ್ಮಾರನ ಆದಾಯ ಮಾತ್ರ ಕಡಿಮೆಯಾಗುತ್ತಿದೆ. ಕಬ್ಬಿಣವನ್ನು ಕಾಯಿಸಲು ಯಾಂತ್ರಿಕ ಸೌಲಭ್ಯಗಳು ಒದಗಿ ತಿದಿಯೊತ್ತುವ ಕಾರ್ಯ ಮೂಲೆ ಸೇರುತ್ತಿದೆ. ವಿದ್ಯುಚ್ಚಾಲಿತ ಯಂತ್ರ ಎಷ್ಟು ಗಾಳಿ ಬೇಕೋ ಅಷ್ಟನ್ನು ಯಾವ ಒತ್ತಡದಲ್ಲಿರಬೇಕೋ ಅಷ್ಟರಲ್ಲಿ ಸರಬರಾಯಿ ಮಾಡುತ್ತದೆ. ಇದ್ದಲಿಗೆ ಬದಲು ಕೋಕ್, ಕಲ್ಲಿದ್ದಲು ಮುಂತಾದ ಇಂಧನಗಳು ಬಳಕೆಗೆ ಬಂದಿವೆ. ಮಾನವ ಶಕ್ತಿಯಿಂದ ಬಡಿದು ಸಿದ್ಧಪಡಿಸುವ ಕೆಲಸವನ್ನು ಯಂತ್ರಗಳೇ ಮಾಡತೊಡಗಿವೆ. ದೊಡ್ಡ ದೊಡ್ಡ ಕೊಂತಗಳಿಗೆ ಸೇರಿಸಿದ ಲೋಹಗಟ್ಟಿಗಳು ಮೇಲೆ ಕೆಳಗೆ ಚಲಿಸುತ್ತ ಇದ್ದು ಬೇಕೆಂದಾಗ ಕುಟ್ಟುತ್ತವೆ. ಒಬ್ಬ ಕೆಲಸಗಾರಮಾತ್ರ ಕುಳಿತು, ನಿಂತು ಪದಾರ್ಥವನ್ನು ಹೇಗೆ ರೂಪಿಸಬೇಕೋ ಹಾಗೆ ನೋಡಿಕೊಂಡರಾಯಿತು. ಕಾಯಿಸಿದ ವಸ್ತುವನ್ನು ಕೆಳಭಾಗದ ಅಚ್ಚಿನ ಮನೆಯೊಳಗಿಟ್ಟು ಮೇಲಿನಿಂದ ತೂಕದ ಗಟ್ಟಿಯನ್ನು ಎತ್ತರದಿಂದ ಬಿಡುವುದು ಒಂದು ವಿಧವಾದರೆ, ಎರಡೂ ಭಾಗಗಳನ್ನು ಒಂದರ ಮೇಲೊಂದನ್ನಿಟ್ಟು ಬಲವಾಗಿ ಒತ್ತುವುದು ಇನ್ನೊಂದು ವಿಧ. ನೂರು ಜನರು ಮಾಡುವ ಕೆಲಸವನ್ನು ಒಂದೇ ಮಾಡಬಹುದಾದಾಗ ಅಷ್ಟು ಜನರಿಗೂ ನಿರುದ್ಯೋಗ ಕಟ್ಟಿಟ್ಟಿದ್ದೆ. ಆದ್ದರಿಂದಲೇ ಯಂತ್ರಗಳು ಆಧುನಿಕ ಜಗತ್ತಿನ ಒಂದು ಶಾಪವೆನ್ನುವವರೂ ಉಂಟು. ಕಬ್ಬಿಣದ ತಯಾರಿಕೆ 17ನೆಯ ಶತಮಾನದಲ್ಲಿ ಕುಲುಮೆಗಳ ಮೂಲಕ ಪ್ರಾರಂಭವಾದಂದಿನಿಂದಲೂ ಯಾಂತ್ರಿಕ ಆಚರಣೆ ಬಳಕೆಗೆ ಬರತೊಡಗಿತು ಎನ್ನಬಹುದು. ವ್ಯವಸಾಯಕ್ಕೆ ಬೇಕಾದಂತೆಯೇ ಯುದ್ಧಕ್ಕೂ ಸಲಕರಣೆಗಳು ಬೇಕಾಗಿದ್ದುವು. ಕತ್ತಿ, ಕಠಾರಿ, ಶೂಲ, ಈಟಿ, ಸಬಳ, ಕೊಂತ ಭಿಂಡಿವಾಳ, ಮುದ್ಗರ, ಲಾಳವಿಂಡಿ, ಗುರಾಣಿ ಮುಂತಾದ ಆಯುಧಗಳೂ ಕುದುರೆಯ ಕಡಿವಾಣವೇ ಮುಂತಾದ ಉಪಕರಣಗಳೂ ಅನಿವಾರ್ಯವಾಗಿದ್ದುವು. ಆಗ ಕಮ್ಮಾರನ ಕಾರ್ಯ ಹಗಲಿರುಳೂ ನಡೆಯಬೇಕಾಗಿತ್ತು. ವರ್ಷವಿಡೀ ಬಿಡುವಿಲ್ಲದ ದುಡಿಮೆ ಅವರದಾಗಿತ್ತು. ಅದಕ್ಕೆ ರಾಜಪ್ರೋತ್ಸಾಹ ಇದ್ದೇ ಇತ್ತು. ಕ್ರಮೇಣ ಯುದ್ಧದ ಸ್ವಭಾವವೇ ಬದಲಾಗತೊಡಗಿತು. ಕತ್ತಿ ಹಿಡಿದು ಹೋರಾಡುವುದು ತಪ್ಪಿ ಬಂದೂಕುಗಳು ಬಂದುವು. ಅನಂತರ ಬಾಂಬುಗಳು ಬಂದುವು. ಹೀಗಾಗಿ ಆಯುಧಗಳ ತಯಾರಿಕೆ ಬೇರೊಂದು ದಿಕ್ಕನ್ನು ಹಿಡಿದು ಸಹಜವಾಗಿ ಕಮ್ಮಾರನಿಗೆ ಪೆಟ್ಟು ಬಿತ್ತು. ಬದಲಾಗುವ ಜಗತ್ತಿನೊಡನೆ ಪ್ರತಿಕ್ಷೇತ್ರವೂ ಬದಲಾಗಲೇ ಬೇಕಾಯಿತು. ಇದರಿಂದಾಗಿ ವಂಶಪಾರಂಪರ್ಯವಾಗಿ ಬರುತ್ತಿದ್ದ ಕಮ್ಮಾರಿಕೆ ಹರಿಗಡಿಯುವಂತಾಗಿದೆ. ಕಮ್ಮಾರನ ಮಗ ಅದೇ ಕಸಬನ್ನು ಹಿಡಿಯದೆ ಬೇರೆ ಜೀವನೋಪಾಯ ಮಾರ್ಗವನ್ನು ಹುಡುಕಬೇಕಾಗಿದೆ. ಅಂದರೆ ಕಮ್ಮಾರಿಕೆ ಎನ್ನುವ

ಗ್ರಾಮಕಲೆ ಮಾಯವಾಗುತ್ತಿದೆ. ಇದೇ ತತ್ತ್ವ ಎಲ್ಲ ಕಸುಬಿನವರಿಗೂ ಅನ್ವಯಿಸುತ್ತದೆ. ಯಂತ್ರ ಪ್ರವೇಶವಾದ ಕಡೆಯೆಲ್ಲ ಗ್ರಾಮಕಲೆಯ ಸ್ವರೂಪ ಕಣ್ಮರೆಯಾಗುವುದು ಸಹಜವೇ. ಆದರೆ ಎಲ್ಲ ಸಣ್ಣಪುಟ್ಟ ಉಪಕರಣಗಳಿಗೂ ಯಂತ್ರವನ್ನೇ ಆಶ್ರಯಿಸುವುದು ಕಷ್ಟವಾಗುವುದರಿಂದ ಸಣ್ಣ ಪ್ರಮಾಣದಲ್ಲಿಯಾದರೂ ಕಮ್ಮಾರಿಕೆ ಉಳಿದುಬರುವುದರಲ್ಲಿ ಸಂಶಯವಿಲ್ಲ. (ಎಂ.ಆರ್.ಕೆ.)

**ಕಮ್ಯೂನ್ :** ಮಧ್ಯಯುಗದ ಪಶ್ಚಿಮ ಯುರೋಪಿನ ಪಟ್ಟಣಗಳ ಸಾಮಾನ್ಯ ನಾಮ. 1793 ಮತ್ತು 1794ರಲ್ಲೂ 1871ರಲ್ಲೂ ಸ್ಥಾಪಿತವಾಗಿದ್ದ ಪ್ಯಾರಿಸಿನ ಕ್ರಾಂತಿಯುತ ನಗರಸರ್ಕಾರಗಳ ವಿಶಿಷ್ಟ ನಾಮ.

ರೋಮನ್ ಸಾಮ್ರಾಜ್ಯದ ಪತನದ ಪರಿಣಾಮವಾಗಿ ವಾಣಿಜ್ಯ ಸಂಪೂರ್ಣವಾಗಿ ಸ್ಥಗಿತವಾದಾಗ ನಗರಜೀವನ ಬಹಳಮಟ್ಟಿಗೆ ಕ್ಷೀಣಿಸಿತ್ತು. ಪ್ಯಾರಿಸ್, ಲಿಯಾನ್, ಕೊಲೋನ್ ಮುಂತಾದ ಕೆಲವು ಪ್ರಸಿದ್ಧ ಪಟ್ಟಣಗಳು ಅತಂತ್ರವಾಗಿ ಉಳಿದುಕೊಂಡಿದ್ದವು. 11ನೆಯ ಶತಮಾನದಲ್ಲಿ ವ್ಯಾಪಾರದ ಪುನರುಜ್ಜೀವನವಾದಾಗ ಅದರಿಂದಾಗಿ ವರ್ತಕ ವರ್ಗಗಳ ಉದಯಕ್ಕೆ ಪ್ರೋತ್ಸಾಹ ಸಿಕ್ಕಿದಂತಾಯಿತು. ಗ್ರಾಮಪ್ರಧಾನವಾದ ಊಳಿಗಮಾನ್ಯ ಜಗತ್ತಿನೊಳಕ್ಕೆ ವರ್ತಕರ ಪ್ರವೇಶವನ್ನು ಶ್ರೀಮಂತರು ಸಹಿಸಲಿಲ್ಲ. ಮುಂದಿನ ಎರಡು ಶತಮಾನಗಳ ಕಾಲ ನಗರಗಳು ರಾಜಾಧಿಕಾರ, ಊಳಿಗಮಾನ್ಯಾಧಿಕಾರ ಮತ್ತು ಮತೀಯ ಅಧಿಕಾರಗಳೊಂದಿಗೆ ಪದೇಪದೇ ಘರ್ಷಣೆಯಲ್ಲಿ ನಿರತವಾಗಿದ್ದವು. ಹೊರಗಿನ ಕೋಟಲೆಗಳಿಲ್ಲದೆ ತನ್ನನ್ನು ತಾನೇ ಆಳಿಕೊಳ್ಳಲು ಫ್ರೆಂಚ್ ಪಟ್ಟಣವೊಂದಕ್ಕೆ ಆ ಸ್ಥಳದ ಕೌಂಟ್ ಅಥವಾ ಬಿಷಪ್ ಸನ್ನದು ನೀಡಿದಾಗ ಆ ಪಟ್ಟಣ ಕಮ್ಯೂನ್ ಎಂದು ಕರೆದುಕೊಳ್ಳಲು ಅರ್ಹತೆ ಗಳಿಸುತ್ತಿತ್ತು. ಪಶ್ಚಿಮ ಐರೋಪ್ಯ ಪೌರಸಭಾ ಚಳವಳಿಗೇ ಕಮ್ಯೂನ್ ಎಂಬ ಪದವನ್ನು ಈಗ ಬಲು ಸಡಿಲವಾಗಿ ಬಳಸಲಾಗುತ್ತಿದೆ. ಕೊನೆಗೆ ಫ್ರಾನ್ಸಿನ ಕಮ್ಯೂನುಗಳೂ ಸನ್ನದು ಪಡೆದ ಇತರ ಪಟ್ಟಣಗಳೂ ದೊರೆಯ ಅಧಿಕಾರದೊಳಕ್ಕೆ ಬಂದಾಗ ಅವು ತಮ್ಮ ವಿಶಿಷ್ಟ ಹಕ್ಕುಗಳಲ್ಲಿ ಹಲವನ್ನು ಕಳೆದುಕೊಂಡವು.

1791ರ ಫ್ರೆಂಚ್ ಸಂವಿಧಾನದಲ್ಲಿ ಕಮ್ಯೂನ್ ಎಂಬ ಶಬ್ದವನ್ನು ಮತ್ತೆ ಬಳಸಲಾಯಿತು. ತಮ್ಮ ಮೇಯರುಗಳನ್ನೂ ಇತರ ಅಧಿಕಾರಿಗಳನ್ನೂ ಚುನಾಯಿಸಿಕೊಳ್ಳುವ ಅಧಿಕಾರವಿರುವ 40,000 ಪೌರವ್ಯಕ್ತಿಗಳ ಘಟಕಗಳನ್ನು ಈ ಹೆಸರಿನಿಂದ ಕರೆಯಲಾಯಿತು. ಇಂಥ ಕ್ರಾಂತಿಕಾರಿ ಕಮ್ಯೂನುಗಳ ಪೈಕಿ ಪ್ಯಾರಿಸಿನ ಕಮ್ಯೂನ್ ಅತ್ಯಂತ ಪ್ರಸಿದ್ಧವಾದದ್ದು. ಕಾರ್ಮಿಕ ವರ್ಗಕ್ಕೂ ಇದಕ್ಕೂ ಇದ್ದ ನಿಕಟಸಂಬಂಧ, ರಾಷ್ಟ್ರೀಯ ಸರ್ಕಾರದೊಂದಿಗೆ ಇದಕ್ಕಿದ್ದ ಸಾಮೀಪ್ಯ, ಫ್ರೆಂಚ್ ನಾಗರಿಕತೆಯಲ್ಲಿ ಈ ನಗರಕ್ಕಿದ್ದ ವಿಶಿಷ್ಟ ಸ್ಥಾನ–ಈ ಕಾರಣಗಳಿಂದಾಗಿ ಇದಕ್ಕೆ ಈ ಪ್ರಸಿದ್ಧಿ ಬಂತು. 1789ರ ಚುನಾವಣೆಗಳಿಗಾಗಿ ಪ್ಯಾರಿಸನ್ನು 60 ಉಪವಿಭಾಗಗಳಾಗಿ ಮಾಡಲಾಗಿತ್ತು. ಆದರೆ 1790ರ ಪೌರಸಭಾ ಕಾನೂನಿನ ಪ್ರಕಾರ ಇವುಗಳ ಸಂಖ್ಯೆ 48ಕ್ಕೆ ಇಳಿಯಿತು. ಪ್ರತಿಯೊಂದು ಉಪವಿಭಾಗದಲ್ಲೂ 17,000–18,000ದವರೆಗೆ ಪ್ರಜೆಗಳಿರುತ್ತಿದ್ದರು. ಪ್ಯಾರಿಸಿನ ಕಮ್ಯೂನಿನ ಆಡಳಿತ ನಡೆಸಲು ಆಯ್ಕೆಯಾಗುತ್ತಿದ್ದ ಮಂಡಲಿಯ ಸದಸ್ಯರ ಸಂಖ್ಯೆ 148. 14 ವಿಭಾಗಗಳಲ್ಲಿ ಕಾರ್ಮಿಕರು ಒತ್ತಾಗಿ ವಾಸಿಸುತ್ತಿದ್ದರು. 1793 ಮತ್ತು 1794ರ ಕ್ರಾಂತಿಯ ಮೇಲೆ ಈ ಜನರ ಪ್ರಭಾವ ಅಗಾಧ. 1793 ಆಗಸ್ಟಿನಲ್ಲಂತೂ ಪರಿಸ್ಥಿತಿ ಬಹಳ ಬಿಕ್ಕಟ್ಟಿನದಾಗಿತ್ತು. ಸೈನಿಕ ಹಿನ್ನಡೆಗಳಿಂದಾಗಿ ರಾಷ್ಟ್ರದ ಜನ ಎಚ್ಚೆತ್ತಿದ್ದರು. ಕಮ್ಯೂನಿನ ಕಾನೂನುಬದ್ಧ ಸರ್ಕಾರದ ಸ್ಥಾನದಲ್ಲಿ ತಮಗೆ ಅನುಕೂಲವಾದ ಸರ್ಕಾರವನ್ನೇ ಸ್ಥಾಪಿಸಬೇಕೆಂದು ಕೂಡ ಕೆಲವರು ಯೋಚಿಸಿದ್ದರು. ರಾಜತ್ವವನ್ನು ಕಿತ್ತೊಗೆಯುವ ಹಂಚಿಕೆಯೂ ಸಾಗಿತ್ತು. ಆಗಸ್ಟ್ 9, 10ರ ವೇಳೆಗೆ ಇವೆರಡೂ ಸಾಧಿಸಿದವು. ರಾಜಗದ್ದುಗೆಯನ್ನುರುಳಿಸಿ ಅದರ ಮೇಲೆ ಸ್ಥಾಪಿಸಲಾಗಿದ್ದ ಪ್ರಥಮ ಫ್ರೆಂಚ್ ಗಣರಾಜ್ಯ ಸರ್ಕಾರ ಅನಂತರ ಒಂದು ವರ್ಷಕಾಲ ಪ್ಯಾರಿಸ್ ಕಮ್ಯೂನಿನ ಬಂಡಾಯಗಾರ ಸರ್ಕಾರದ ಒತ್ತಡಕ್ಕೆ ಮಣಿಯಬೇಕಾಗಿತ್ತು. ಆರ್ಥಿಕ ಬಿಕ್ಕಟ್ಟಿನ ಫಲವಾಗಿ ಅಶಾಂತಿಯಿಂದ ಕೂಡಿದ್ದ ಕಾರ್ಮಿಕರ ಆಂದೋಲನದಿಂದಾಗಿ ರಾಷ್ಟ್ರೀಯ ಸರ್ಕಾರ ಕೈಗೊಂಡ ಹಲವಾರು ಆರ್ಥಿಕ ಸಾಮಾಜಿಕ ಕ್ರಮಗಳು ಬಲು ತೀವ್ರವಾಗಿದ್ದವು. 1794ರ ಬೇಸಗೆಯಲ್ಲಿ ಈ ಸರ್ಕಾರ ಉರುಳಿದಾಗ ಕಮ್ಯೂನಿನ ಪ್ರಭಾವ ತಗ್ಗಿತು. ಸರ್ಕಾರದ ಮೇಲೆ ಹತೋಟಿ ಹೊಂದಿದ್ದ ಸಂಪ್ರದಾಯವಾದಿಗಳು ಮುಂದಿನ ಕೆಲವೇ ತಿಂಗಳುಗಳಲ್ಲಿ ಕಮ್ಯೂನನ್ನು ಕಾನೂನು ಬಾಹಿರಗೊಳಿಸಿದರು.

19ನೆಯ ಶತಮಾನದ ಕ್ರಾಂತಿಕಾರಿ ಜನಕ್ಕೆ ಕಮ್ಯೂನಿನ ನೆನಪು ಬಹಳ ಪವಿತ್ರವೆನಿಸಿತ್ತು. ಇತರ ಕ್ರಾಂತಿಕಾರಿ ಚಳವಳಿಗಳಿಗೆ ಇದೇ ಪ್ರೇರಕಶಕ್ತಿ. 1870–71ರ ಫ್ರಾಂಕೋ–ಪ್ರಷ್ಯನ್ ಯುದ್ಧದಲ್ಲಿ ಫ್ರಾನ್ಸಿಗೆ ಆಘಾತವಾದಾಗ ಪ್ಯಾರಿಸಿಗೂ ವರ್ಸೇಲ್ಸಿನ ಹೊಸ ಸರ್ಕಾರಕ್ಕೂ ನಡುವೆ ವಿರಸ ಸಂಶಯಗಳು ಮೂಡಿದವು. ಪ್ಯಾರಿಸಿನಲ್ಲಿದ್ದ ಕೆಲವು ಫಿರಂಗಿ ದಳಗಳನ್ನು ಅಲ್ಲಿಂದ ವಾಪಸು ತೆಗೆಯಲು ಸರ್ಕಾರ ಯೋಚಿಸಿದಾಗ ಕೆಳವರ್ಗದ ಜನರಲ್ಲಿ ಹಳೆಯ ಕ್ರಾಂತಿಕಾರಿ ಭಾವನೆಗಳು ಮರುಕಳಿಸಿದವು. 1871 ಮಾರ್ಚ್ 26ರಂದು ಆಯ್ಕೆಯೊಂದಿದ ಪೌರಸಭೆ ತಾನೇ ಪ್ಯಾರಿಸಿನ ಕಮ್ಯೂನ್ ಎಂದು ಸಾರಿಕೊಂಡಿತಲ್ಲದೆ ಆಗಿದ್ದ ತಾತ್ಕಾಲಿಕ ಸರ್ಕಾರವನ್ನು ಪ್ರತಿಭಟಿಸಿತು. ಇನ್ನೂ ಕೆಲವು ನಗರಗಳಿಗೂ ಕ್ರಾಂತಿಯ ಕಿಡಿ ಹಬ್ಬಿತಾದರೂ ಅಲ್ಲಿ ಅದು ಫಲಿಸಲಿಲ್ಲ. ಇದು ಪ್ಯಾರಿಸಿಗೂ ರಾಷ್ಟ್ರಕ್ಕೂ ನಡುವಣ ಘರ್ಷಣೆಯಾಗಿ ಪರಿಣಮಿಸಿತೆನ್ನಬಹುದು. ಆದರೂ ಈ ಹೊಸ ಕಮ್ಯೂನಿನ ವಿರುದ್ಧ ರಾಷ್ಟ್ರವನ್ನು ಸಂಘಟಿಸುವುದು ಸುಲಭವಾಗಿರಲಿಲ್ಲ. ಕಮ್ಯೂನ್ ಈ ಕಾಲದಲ್ಲಿ ಸರ್ಕಾರದ ಮೇಲೆ ಆಕ್ರಮಣ ನಡೆಸಿ ಗೆಲ್ಲಬಹುದಾಗಿತ್ತು. ಆದರೆ ವ್ಯರ್ಥವಾದ ಚರ್ಚೆಗಳಲ್ಲಿ ತೊಡಗಿ ಅದು ಈ ಅವಕಾಶ ಕಳೆದುಕೊಂಡಿತು. ಏಪ್ರಿಲ್ 2 ರಂದು ಸರ್ಕಾರ ಪ್ಯಾರಿಸಿನ ಉಪನಗರವೊಂದನ್ನು ಹಿಡಿದುಕೊಂಡಿತು. ಅಂತರ್ಯುದ್ಧ ಆರಂಭವಾಯಿತು. ಪ್ರಷ್ಯದ ಮೇಲೆ ಯುದ್ಧಮಾಡಿ ಬಸವಳಿದಿದ್ದ ರಾಷ್ಟ್ರಕ್ಕೆ ಆಗ ಶಾಂತಿ ಬೇಕಿತ್ತು. ಪ್ಯಾರಿಸಿನ ಕಮ್ಯೂನೇ ಅದಕ್ಕೆ ಅಡ್ಡಿಯೆಂಬ ಭಾವನೆಯೂ ಇಲ್ಲದಿರಲಿಲ್ಲ. ಎರಡು ಪಕ್ಷಗಳೂ ಉಗ್ರಕದನ ನಡೆಸಿದವು. ಎರಡೂ ಪಕ್ಷಗಳು ತಮ್ಮ ಖೈದಿಗಳನ್ನು ಗುಂಡಿಕ್ಕಿ ಕೊಂದವು. ನಗರದ ಹಲವು ಭಾಗಗಳು ಭಸ್ಮೀಭೂತವಾದವು. ಕಮ್ಯೂನ್ ಪತನಹೊಂದಿತು. ಆ ವೇಳೆಗೆ ಪ್ರಾಣ ತೆತ್ತ ಪ್ಯಾರಿಸಿನವರ ಸಂಖ್ಯೆ 20,000. (ಡಿ.ಎಸ್.ಎ.)

**ಕಮ್ಯೂನಿಸಂ :** ಎಲ್ಲ ಸ್ವತ್ತೂ ಸಮುದಾಯಕ್ಕೆ ಸೇರಿದುದೆಂದೂ ಪ್ರತಿಯೊಬ್ಬ ವ್ಯಕ್ತಿಯೂ ಶಕ್ತ್ಯನುಸಾರವಾಗಿ ದುಡಿದು ಆವಶ್ಯಕತೆಗೆ ಅನುಸಾರವಾಗಿ ಪ್ರತಿಫಲ ಪಡೆಯಬೇಕೆಂದೂ ಪ್ರತಿಪಾದಿಸುವ ತತ್ತ್ವ (ಸಾಮ್ಯವಾದ). ಮಾರ್ಕ್ಸ್ ಮತ್ತು ಎಂಗೆಲ್ಸ್‌ರಿಂದ ಪ್ರಪ್ರಥಮವಾಗಿ ಶಾಸ್ತ್ರೀಯವಾಗಿ ಪ್ರತಿಪಾದಿತವಾದ ಈ ತತ್ತ್ವಕ್ಕೆ ವೈಜ್ಞಾನಿಕ ಸಮಾಜವಾದವೆಂದೂ ಹೆಸರಿದೆ. 19ನೆಯ ಶತಮಾನದ ಪೂರ್ವಾರ್ಧದ ಹೊತ್ತಿಗೆ ಜನರಿಗೆ ಸಮಾಜವಾದವೆಂಬ ಹೆಸರೂ ಅದರ ಸ್ವರೂಪವೂ ಪರಿಚಯವಾಗಿದ್ದುವು. ಆದರೂ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಸಮಾಜವಾದವನ್ನು ಸಮಾಜವಾದವೆಂದೇ ಕರೆಯದೆ ಕಮ್ಯೂನಿಸಂ ಎಂದು ಕರೆದುದಕ್ಕೆ ಕಾರಣವೂ ಇತ್ತು. 1848ರಲ್ಲಿ ಪ್ರಕಟಿಸಿದ ಕಮ್ಯೂನಿಸ್ಟ್ ಪ್ರಣಾಳಿಕೆಯ ಇಂಗ್ಲಿಷ್ ಆವೃತ್ತಿಗೆ 1888ರಲ್ಲಿ ಎಂಗೆಲ್ಸ್ ಬರೆದ ಮುನ್ನುಡಿಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದಾನೆ;ನಾವು ಇದನ್ನು ಸಮಾಜವಾದಿಗಳ ಪ್ರಣಾಳಿಕೆ ಎಂದು ಕರೆಯಲು ಸಾಧ್ಯವಿರಲಿಲ್ಲ. 1847ರ ಹೊತ್ತಿಗೆ ಒಂದು ಕಡೆ ಸಮಾಜವಾದಿಗಳೆಂದು ಹೇಳಿಕೊಳ್ಳುವ ಭಾವನಾವಾದಿಗಳ ಗುಂಪಿಗೆ ಸೇರಿದ ತಂಡಗಳಿದ್ದುವು–ಇಂಗ್ಲೆಂಡಿನ ಓವೆನ್‌ನ ಹಿಂಬಾಲಕರೂ ಫ್ರಾನ್ಸಿನ ಫೂರ್ಯೇನ ಹಿಂಬಾಲಕರೂ ಇಂಥವರು. ಈ ಎರಡು ತಂಡಗಳೂ ಆಗಲೇ ಕೇವಲ ಬೋಧಕ ಗುಂಪುಗಳಾಗಿ ಕ್ಷೀಣಿಸುತ್ತ ಕೊನೆಯುಸಿರು ಎಳೆಯುತ್ತ ಇದ್ದುವು. ಇನ್ನೊಂದು ಕಡೆ ಕಾರ್ಮಿಕ ವರ್ಗದೊಡನೆ ಯಾವ ಸಂಪರ್ಕವೂ ಇಲ್ಲದಿದ್ದ, ಬಂಡವಾಳಕ್ಕಾಗಲೀ ಲಾಭಕ್ಕಾಗಲೀ ಯಾವ ಚ್ಯುತಿಯೂ ಇಲ್ಲದ ರೀತಿಯಲ್ಲಿ ಸಮಾಜದ ಕುಂದುಕೊರತೆಗಳನ್ನು ವಿದ್ಯಾವಂತರ ಬೆಂಬಲದಿಂದ ಗುಣಪಡಿಸಬಲ್ಲೆವೆಂದು ಹೇಳುತ್ತಿದ್ದ ಹಲವು ಬಗೆಯ ಸಮಾಜ ಸುಧಾರಕರ ವೇಷಧಾರಿ ಗುಂಪುಗಳಿದ್ದವು. ಆದರೆ ಕೇವಲ ರಾಜಕೀಯ ಕ್ರಾಂತಿಯ ಮಿತಿಯನ್ನು ಅರಿತಿದ್ದ ಮತ್ತು ಸಂಪೂರ್ಣವಾಗಿ ಸಮಾಜದ ಬದಲಾವಣೆಯ ಆವಶ್ಯಕತೆಯನ್ನು ಘೋಷಿಸಿದ್ದ ಕಾರ್ಮಿಕ ವರ್ಗದ ಕೆಲವರು ಮಾತ್ರ ಕಮ್ಯೂನಿಸ್ಟ್ ಎಂದು ಕರೆದುಕೊಂಡಿದ್ದರು. ನೋಡುವುದಕ್ಕೆ ಇದು ಒರಟಾದ, ಸೂಕ್ಷ್ಮವಲ್ಲದ, ಸುಲಭಸಹಜವೇದ್ಯವೆನಿಸುವಂಥ ಕಮ್ಯೂನಿಸ್ಟ್ ಪಂಥ. ಆದರೂ ಇದು ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಿದ್ದಲ್ಲದೆ, ಕಾರ್ಮಿಕ ವರ್ಗದಲ್ಲಿ ಪ್ರವೇಶಿಸಿ, ಫ್ರಾನ್ಸಿನಲ್ಲಿ ಕ್ಯಾಬೇ, ಜರ್ಮನಿಯಲ್ಲಿ ವೈಟಲಿಂಗ್ ಮೊದಲಾದವರ ಭಾವನಾಸಮಾಜವಾದಕ್ಕೆ ದಾರಿಮಾಡಿತ್ತು. ಹೀಗಾಗಿ 1847ರ ಹೊತ್ತಿಗೆ ಸಮಾಜವಾದ ಮಧ್ಯಮವರ್ಗದ ಚಳವಳಿಯಾಯಿತು. ಕಮ್ಯೂನಿಸಂ ಕಾರ್ಮಿಕ ವರ್ಗದ ಚಳವಳಿ; ವಾಸ್ತವವಾಗಿ ಯುರೋಪ್ ಖಂಡದಲ್ಲಿ ಸಮಾಜವಾದ ಸ್ವಲ್ಪಮಟ್ಟಿಗಾದರೂ ಸಂಭಾವಿತ ಚಳವಳಿಯಾಗಿದ್ದರೆ, ಕಮ್ಯೂನಿಸಂ ಮಾತ್ರ ಇದಕ್ಕೆ ಪ್ರತಿಯಾಗಿತ್ತು. ಕಾರ್ಮಿಕ ವರ್ಗದ ವಿಮೋಚನೆ ಕಾರ್ಮಿಕ ವರ್ಗದವರಿಂದ ಮಾತ್ರವೇ ಸಾರ್ಧ್ಯಯ ಎಂಬುದೇ ಮೊದಲಿನಿಂದಲೂ ನಮ್ಮ ನಂಬಿಕೆಯಾಗಿತ್ತು. ಆದ್ದರಿಂದ ಈ ಎರಡು ಹೆಸರುಗಳಲ್ಲಿ ಯಾವುದನ್ನು ನಾವು ಅಂಗೀಕರಿಸಬೇಕೆನ್ನುವುದರಲ್ಲಿ ಸಂದೇಹವೇ ಇರಲಿಲ್ಲ; ಅದೂ ಅಲ್ಲದೆ, ಇದನ್ನು ನಿರಾಕರಿಸುವುದಕ್ಕೂ ನಾವು ಇಚ್ಛಿಸಲಿಲ್ಲ. ಹೀಗೆ ಕಮ್ಯೂನಿಸಂ ಎಂಬ ನಾಮಾಂಕಿತದಿಂದ ಮಾರ್ಕ್ಸ್ ಎಂಗೆಲ್ಸರು ತಮ್ಮದೇ ಆದ ಹೊಸ ರೂಪದ ಸಮಾಜವಾದವನ್ನು ಕಮ್ಯೂನಿಸಂ ಎಂದು ಕರೆದರಲ್ಲದೆ ಅದೊಂದು ಮಾತ್ರ ವೈಜ್ಞಾನಿಕ ಸಮಾಜವಾದವೆಂದು ಹೇಳಿದರು. ಈ ಪ್ರಣಾಳಿಕೆಯ ಪ್ರಕಟಣೆ ವಿಶ್ವದ ಒಂದು ಮುಖ್ಯ ಘಟನೆ, ಸಮಾಜವಾದದ ತತ್ತ್ವ ಪರಂಪರೆಯಲ್ಲಿ ಇದಕ್ಕೊಂದು ವಿಶಿಷ್ಟಸ್ಥಾನವಿದೆ. ಈ ಪ್ರಣಾಳಿಕೆಯಲ್ಲಿ ಉಕ್ತವಾಗಿರುವ ಸೂತ್ರಗಳನ್ನೂ ಇವುಗಳ ವ್ಯಾಖ್ಯಾನರೂಪವಾಗಿ ಮಾರ್ಕ್ಸ್–ಎಂಗೆಲ್ಸ್ ಮತ್ತು ಅವರ ಅನುಯಾಯಿಗಳು ರಚಿಸಿರುವ ಇತರ ಗ್ರಂಥಗಳನ್ನೂ ಹೆರೆನಂಬಿ ಅವನ್ನು ಅನುಸರಿಸುವವರು ಕಮ್ಯೂನಿಸ್ಟರೆನಿಸಿಕೊಂಡಿದ್ದಾರೆ. ಅದರಲ್ಲಿ ಉದಾಹರಿಸಿರುವ

ತತ್ತ್ವಗಳನ್ನು ವಿಶದಪಡಿಸುವ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಮಾರ್ಕ್ಸ್–ಎಂಗೆಲ್ಸ್ ರ ತತ್ತ್ವಗಳನ್ನು ಅನುಷ್ಠಾನಕ್ಕೆ ತಂದಿರುವ ಸೋವಿಯತ್ ರಷ್ಯ, ಪೋಲೆಂಡ್, ಪೂರ್ವಜರ್ಮನಿ, ಜೆಕೋಸ್ಲವಾಕಿಯ, ಯುಗೋಸ್ಲಾವಿಯ, ಹಂಗರಿ, ಬಲ್ಗೇರಿಯ, ರೊಮೇನಿಯ, ಆಲ್ಬೇನಿಯ, ಕ್ಯೂಬ, ಚೀನ ಉತ್ತರಕೊರಿಯ, ಉತ್ತರ ವಿಯೆಟ್‌ನಾಮ್ ಇವನ್ನು ಕಮ್ಯೂನಿಸ್ಟ್ ದೇಶಗಳೆಂದು ಕರೆಯುವ ವಾಡಿಕೆಯಿದೆ. ಉಳಿದವು ಕಮ್ಯೂನಿಸ್ಟೇತರ ದೇಶಗಳು.

**ಪೂರ್ವಸ್ಥಿತಿ :** ಮಾರ್ಕ್ಸ್–ಎಂಗೆಲ್ಸ್‌ರು ತಮ್ಮ ವೈಜ್ಞಾನಿಕ ಸಮಾಜವಾದವನ್ನು ಪ್ರತಿಪಾದಿಸುವ ಮುನ್ನವೂ ಪ್ರಚಾರದಲ್ಲಿದ್ದ ಹಲವು ಸಮಾಜವಾದಿ ತತ್ತ್ವಗಳನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ನೊಂದ ಜೀವಿಗಳ ಪರವಾಗಿ ವಾದಿಸುತ್ತಿದ್ದವರೂ ಸಮಾಜದಲ್ಲಿಯ ಶೋಷಣೆ–ಅಸಮತೆಗಳನ್ನು ಪ್ರತಿಭಟಿಸುತ್ತಿದ್ದವರೂ ಸಮಾಜ ಸುಧಾರಣಾಪ್ರಿಯರೂ ಸಮಾಜವಾದದಿಂದ ಆಕರ್ಷಿತರಾಗಿದ್ದರು. ಥಾಮಸ್ ಮೋರ್, ಕೆಂಪನೆಲ್ಲ ಮತ್ತು ಇತರರು ಆದರ್ಶ ಸಮಾಜವನ್ನು ಚಿತ್ರಿಸಿದ್ದಾರೆ. ಇಂಗ್ಲೆಂಡಿನ ಜರಾಲ್ಡ್‌ವಿನ್ ಸ್ಟಾನ್‌ಲೇ, ರಾಬರ್ಟ್ ಓವೆನ್, ಫ್ರಾನ್ಸಿನ ಫೂರ್ಯೆ, ಸೇಂಟ್ ಸೈಮನ್, ಜರ್ಮನಿಯ ವೈಟ್‌ಲಿಂಗ್ ಮೊದಲಾದವರೂ ಅವರ ಅನುಯಾಯಿಗಳೂ ಸಾಮಾಜಿಕ ಅಸಮಾನತೆ, ವರ್ಗವಿರಸ, ಶೋಷಣೆ, ದಬ್ಬಾಳಿಕೆ, ತಾರತಮ್ಯ ಮುಂತಾದವನ್ನು ತೊಡೆದುಹಾಕಿ, ಸುಧಾರಿತ ಸಮಾಜ ನಿರ್ಮಾಣವಾಗಬೇಕೆಂದು ತಮ್ಮ ಬರೆಹಗಳ ಮೂಲಕ ಪ್ರಚಾರ ನಡೆಸಿದ್ದರು. ಇಂಥ ಸುಧಾರಣಾಕಾಂಕ್ಷಿಗಳನ್ನೆಲ್ಲ ಒಂದಲ್ಲ ಒಂದು ಬಗೆಯ ಸಮಾಜವಾದಿಗಳೆಂದು ಕರೆಯುವುದು ರೂಢಿಯಾಗಿತ್ತು.

ಇಂಥವರು ಸಮಾಜವಾದಿ ಸಮಾಜದ ಸ್ಥಾಪನೆಗೆ ಆರಿಸಿಕೊಂಡ ಕ್ರಮಗಳೂ ಗಮನಾರ್ಹ. ಆಸ್ತಿಕರೆಲ್ಲರೂ ದೇವರಲ್ಲಿ ಮೊರೆ ಹೊಕ್ಕಿದ್ದರು. ಅನನ್ಯ ದೈವಭಕ್ತಿ, ಇಹಪ್ರಪಂಚದ ಬಂಧನಗಳಾದ ಹೆಣ್ಣು ಹೊನ್ನು ಮಣ್ಣುಗಳ ತ್ಯಾಗ, ವಿರಕ್ತ ಜೀವನ, ತಪಸ್ಸು, ಪೂಜೆ, ದಾನ ಇವುಗಳ ಪ್ರತಿಪಾದಕರಿವರು. ವ್ಯಕ್ತಿಗಳು ಸೇರಿ ಸಮಾಜವಾಗಿರುವುದರಿಂದ ವ್ಯಕ್ತ ಪರಿಪಕ್ವತೆಯಿಂದ ಸಮಾಜದ ಪರಿಪಕ್ವತೆಯಾಗುವುದೆಂದೂ ಆಗ ಸಮಾಜವನ್ನು ಕಾಡುತ್ತಿರುವ ಲಾಲಸೆ, ಈರ್ಷೆ ಅಸಮಾನತೆ ಮೋಹಗಳಿಂದ ಬಿಡುಗಡೆಯಾಗುವುದೆಂದೂ ಸುಧಾರಿತ ಸಮಾಜದ ಜನನವಾಗುವುದೆಂದೂ ಇವರ ಭಾವನೆಯಾಗಿತ್ತು. ಇದಕ್ಕಾಗಿ ಹಲವು ನೀತಿಸೂತ್ರಗಳೂ ಪೂಜಾವಿಧಿಗಳೂ ಧ್ಯಾನವಿಧಿಗಳೂ ರಚಿತವಾದುವು. ಇನ್ನು ಕೆಲವರು ಸಮಾಜದಲ್ಲಿ ಕಂಡುಬರುವ ಅನಿಷ್ಟವೆಲ್ಲವೂ ದೈವಲೀಲೆ ಎಂದು ಬಗೆದು, ಮನುಷ್ಯನ ಪರೀಕ್ಷೆಗಾಗಿಯೆ ಎಲ್ಲವೂ ಉಂಟಾಗಿವೆಯೆಂದು ತಿಳಿಸಿ, ವಿರಕ್ತ ಜೀವನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರು. ಪರಲೋಕಸೃಷ್ಟಿ, ಪಾಪವಿಮೋಚನೆ, ದೇವರ ಪುನರಾಗಮನ, ದೇವದೂತರ ಸಂದೇಶ–ಇವಕ್ಕೆ ಅವರಿಂದ ಹೆಚ್ಚಿನ ಪುರಸ್ಕಾರ ಲಭ್ಯವಾಯಿತು. ಮತ್ತೆ ಕೆಲವರು ಪಾರಮಾರ್ಥಿಕ–ಲೌಕಿಕ ಸಮನ್ವಯಸಾಧನೆಗಾಗಿ ಯತ್ನಿಸಿ, ದೇವದೂತರಿಂದಲೂ ಋಷಿಗಳಿಂದಲೂ ಪ್ರೋಕ್ತವಾದ ಬೋಧನೆಗಳ ಪಾಲನೆ, ದಾನ, ಪೂಜೆ, ಧ್ಯಾನ–ಇವು ಮೋಕ್ಷಸಮಾಜಕ್ಕೆ ಹೆದ್ದಾರಿ ಎಂದರು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಗಳಿಕೆಯನ್ನೂ ಸಂಪತ್ತನ್ನೂ ತನ್ನದೆಂದು ಬಗೆಯದೆ, ತಾನು ಅದರ ಧರ್ಮದರ್ಶಿಯೆಂದು ತಿಳಿದು ಅವನ್ನು ಅನುಭವಿಸುವುದಾದರೆ ಮತ್ತು ನಿರ್ವಹಿಸುವುದಾದರೆ ಆಗ ಬಡವ–ಶ್ರೀಮಂತರೆಂಬ ಭೇದಗಳಿಗೂ ಒಡೆತನದಿಂದ ಬರುವ ಆರ್ಥಿಕ ಸೌಲಭ್ಯಗಳಿಗೂ ಅಧಿಕಾರ ಶೇಖರಣೆಗಳಿಗೂ ವಿಲಾಸಗಳಿಗೂ ಬಡಜನರಲ್ಲಿ ಮೂಡಿಸುವ ದಾಸ್ಯ ಯಾಚನೆಗಳಿಗೂ ಇರಬಹುದಾದ ವರ್ಗವಿರಸಕ್ಕೂ ಅವಕಾಶವೇ ಉಂಟಾಗುವುದಿಲ್ಲವೆಂಬುದು ಇನ್ನು ಕೆಲವರ ವಾದ. ಕೆಲವರು ಇಷ್ಟಕ್ಕೆ ತೃಪ್ತರಾಗಲಿಲ್ಲ. ಎಲ್ಲರೂ ದೇವರ ಮಕ್ಕಳು. ಆದ್ದರಿಂದ ಸಮಾನತೆ, ಭ್ರಾತೃತ್ವ, ಸಹಜೀವನ ಇವು ಮನುಷ್ಯನ ಆಜನ್ಮಸಿದ್ಧ ಹಕ್ಕುಗಳು. ಆದ್ದರಿಂದ ಸಮಾಜದಲ್ಲಿ ಕಂಡುಬರುವ ಎಲ್ಲ ವಿಧದ ಅಸಮಾನತೆ, ಶೋಷಣೆ, ಸ್ವಾಮ್ಯ, ಒಡೆತನ ಎಲ್ಲವನ್ನೂ ದೇವರ ಹೆಸರಿನಲ್ಲೇ ಇವರು ಪ್ರಶ್ನಿಸಿದರು. ವಿರೋಧಿಸಿದರು. ಆಸ್ತಿಯ ವೈಯಕ್ತಿಕ ಸ್ವಾಮ್ಯಕ್ಕೂ ಒಡೆತನಕ್ಕೂ ಆಸ್ಪದವಿಲ್ಲದಂಥ ಸಮಾಜ ವ್ಯವಸ್ಥೆಗೆ ಇವರು ಕರೆಕೊಟ್ಟರು. ಇವರದು ಧಾರ್ಮಿಕ ಸಮಾಜವಾದ. ಈ ಹಲವು ಬಗೆಯ ವಾದಗಳನ್ನು ಭಾರತದಲ್ಲೂ ಕಾಣಬಹುದು. ರಾಜಕೀಯವಾಗಿ, ಇಂಗ್ಲೆಂಡಿನಲ್ಲಿ 1688ರಲ್ಲಿ ನಡೆದ ಕ್ರಾಂತಿಯ ಸಂದರ್ಭದಲ್ಲಿ ಲೆವೆಲರ್ಸ್ ಮತ್ತು ಡಿಗ್ಗರ್ ಎಂಬ ಉಗ್ರವಾದಿಗಳು ಜೆರಾಲ್ಡ್ ವಿನ್ ಸ್ಟಾನ್ಲೆಯ ನೇತೃತ್ವದಲ್ಲಿ ಕ್ರಿಶ್ಚಿಯನ್ ಧರ್ಮಬೋಧಕರ ಮೂಲತತ್ತ್ವಗಳನ್ನು ಪುನಃ ಉದ್ಧರಿಸಿ ಸಮಾನ ಸಮಾಜ ಸ್ಥಾಪನೆಯೇ ಧರ್ಮದ ಪುನರುತ್ಥಾನವೆಂದು ವಾದಿಸಿದರು.

ಈ ಬಗೆಯ ಸಮಾಜವಾದಿಗಳಿಗೆ ಸಮಾಜವ್ಯವಸ್ಥೆಯ ವಿಮರ್ಶೆ ಅಷ್ಟು ಕಠಿಣವಾದ ಸಮಸ್ಯೆಯಾಗಲಿಲ್ಲ. ಎಲ್ಲವೂ ದೈವದತ್ತವಾಗಿ ಉದ್ಭವವಾಗಿರುವುದರಿಂದ ಸಮಾಜದ ಆರ್ಥಿಕ ಮತ್ತು ರಾಜಕೀಯ ಸಂದರ್ಭಗಳ ವಿನ್ಯಾಸವನ್ನಾಗಲೀ ಅಂತರಾಳವನ್ನಾಗಲೀ ಪ್ರಶ್ನಿಸಲು ಯತ್ನಿಸಲಿಲ್ಲ. ಇದ್ದ ಮತ್ತು ಇರುವ ಸಂಕಷ್ಟಗಳೆಲ್ಲವೂ ಅಧರ್ಮದಿಂದ ಉಂಟಾಗಿರುವುದರಿಂದ ಸನ್ಮಾರ್ಗದಲ್ಲಿ ಪ್ರವರ್ತಿಸಲು ಸದ್ಬುದ್ಧಿ ಕೊಡುವಂತೆ ದೇವರಲ್ಲಿ ಮೊರೆಹೋಗುವುದೇ ಮಾರ್ಗವೆಂಬುದು ಇವರ ಭಾವನೆ. ಮನುಷ್ಯ ಇಷ್ಟು ಮಾಡುವುದಾದರೆ ಧರ್ಮ ಕ್ಷೀಣಿಸದೆ ಸಮಾಜದ ಉತ್ಕರ್ಷ ತಾನಾಗಿ ಉಂಟಾಗುವುದೆಂದು ಇವರು ನಂಬಿದ್ದರು.

ಕೇವಲ ಬುದ್ಧಿಶಕ್ತಿಯ ಸಹಾಯದಿಂದ ಸಮಾಜವಾದಿ ವ್ಯವಸ್ಥೆಯ ಸ್ಥಾಪನೆ ಸುಲಭವೆಂದು ಸಾರುವ ಅನೇಕ ಪಂಥಗಳು 18ನೆಯ ಶತಮಾನದ ಅನಂತರ ಜನಿಸಿದುವು. ಇವು ಬುದ್ಧಿಯನ್ನು ದೇವರಸ್ಥಾನದಲ್ಲಿ ಕುಳ್ಳಿರಿಸಿದುವು. ಸಮಾಜದ ಸಕಲ ನಡೆವಳಿಕೆಗಳ ಸೂಕ್ತತೆ, ಗ್ರಾಹ್ಯಗುಣ, ವರ್ಜನೆ ಎಲ್ಲವನ್ನೂ ಬುದ್ಧಿಯ ತೀರ್ಪಿಗೆ ಒಳಪಡಿಸಿದುವು. ಬುದ್ಧಿಶಕ್ತಿ ಮಾನವನಿಗೆ ಮೀಸಲಾದದ್ದು. ಇದರಿಂದ ಸಾಧಿಸಲಸಾಧ್ಯವಾದ ಅಂಶವೇ ಇಲ್ಲ. ಇದುವರೆವಿಗೂ ನಿಗೂಢವಾಗಿದ್ದ ವಸ್ತು ಚಲನೆಗಳನ್ನೂ ವಿನ್ಯಾಸಗಳನ್ನೂ ವಿಜ್ಞಾನದ ಮೂಲಕ ಬಹಿರಂಗಗೊಳಿಸಲಾಗಿದೆ. ಈ ಜ್ಞಾನಕ್ಕೆಲ್ಲ ಬುದ್ಧಿಶಕ್ತಿಯೇ ಮೂಲ. ಹೀಗಿರುವಾಗ ಸಮಾಜದ ನಡೆವಳಿಕೆಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಯಾವುದು ಮಾನವನಿಗೆ ಅನುಕೂಲ, ಯಾವುದು ಪ್ರತಿಕೂಲ–ಇತ್ಯಾದಿಗಳನ್ನು ತೀರ್ಮಾನಿಸಲು ಸಾಧ್ಯ. 18ನೆಯ ಶತಮಾನದಲ್ಲಿ ಜನಿಸಿದ ಇಂಥ ಯೋಚನೆಯ ಕಾಲವನ್ನು ವಿಮರ್ಶನಕಾರರು ವಿಮರ್ಶನ ಯುಗ ಎಂದು ಕರೆದಿದ್ದಾರೆ. ಇದರಲ್ಲಿ ನಾನಾ ಮುಖಗಳಿವೆ. ಸಮಾಜದರ್ಶನವನ್ನು ಪ್ರಕೃತಿದರ್ಶನದ ರೀತಿಯಲ್ಲಿ ವ್ಯವಸ್ಥೆಗೊಳಿಸುವುದು ಇವುಗಳಲ್ಲಿ ಅತಿ ಮುಖ್ಯವಾದದ್ದು.

ಬುದ್ಧಿಯ ಆರಾಧಕರು ಸಮಾಜದಲ್ಲಿ ಅನ್ಯಾಯವೆಂದು ಬಗೆದದ್ದನ್ನು ಹೊರಹಾಕಲು ತಮ್ಮ ಬುದ್ಧಿಯನ್ನು ಬಳಸಿಕೊಂಡರು. ಸಮಾಜದಲ್ಲಿ ಕಂಡುಬಂದ ಅಸಮಾನತೆ, ಪ್ರತ್ಯೇಕ ಹಕ್ಕುಬಾಧ್ಯತೆ, ಅಂತರ ಶೋಷಣೆ ಎಲ್ಲವೂ ಅಸಮರ್ಥನೀಯ. ಆದ್ದರಿಂದ ಅವನ್ನು ನಾವು ಒಪ್ಪಬೇಕಾಗಿಲ್ಲ; ಅವು ಅಸಂಬದ್ಧ–ಎಂಬುದು ಅವರ ತರ್ಕ. ಆದ್ದರಿಂದ ಇವರಲ್ಲೊಬ್ಬೊಬ್ಬರೂ ತಮಗೆ ನ್ಯಾಯವೆಂದು ಕಂಡುಬಂದ ರೀತಿಯಲ್ಲಿಸಮಾಜದ ಪುನರ್ರಚನೆಯಲ್ಲಿ ತೊಡಗಿದರು. ಬಗೆಬಗೆಯ ಮಾದರಿಗಳನ್ನು ಕಡೆದಿಟ್ಟರು. ಬುದ್ಧಿವಂತರು ಇದನ್ನು ಅಂಗೀಕರಿಸಬೇಕೆಂದು ಕರೆಕೊಟ್ಟರು. ಇನ್ನು ಕೆಲವರು ತಾವು ರಚಿಸಿದ ಕರಡುಯೋಜನೆಗಳನ್ನು ಸಹೃದಯ ರಾಜಮಹಾರಾಜರಿಗೆ ಅರ್ಪಿಸಿ ಅವರ ಬೆಂಬಲದಿಂದ ಅವನ್ನು ಕಾರ್ಯಗತಗೊಳಿಸಲು ಉದ್ಯುಕ್ತರಾದರು. ಆದರೆ ಯಾವುದರಿಂದಲೂ ಏನೂ ಲಾಭವಾಗಲಿಲ್ಲ. ಅವನ್ನು ಕಾರ್ಯಗತ ಮಾಡಲು ಯಾರೂ ಮುಂದೆ ಬರಲಿಲ್ಲ. ಆಗ ಇವರಿಗೆ ಹತಾಶೆ ಕಾದಿತ್ತು. ಇವರಲ್ಲಿ ಉಗ್ರಗಾಮಿಗಳಾದವರನ್ನು ಸಮಾಜಕಂಟಕರೆಂದು ದಮನ ಮಾಡಲಾಯಿತು. ಇನ್ನು ಕೆಲವರು ಪ್ರಯೋಗಾರ್ಥವಾಗಿ ರಚಿಸಿದ್ದ ಆಶ್ರಮ, ನಿಕೇತನ ಸಹಜೀವನ ಕೇಂದ್ರ, ಕುಟೀರಗಳು ಮುರಿದುಬಿದ್ದವು. ಮಿಗಿಲಾಗಿ ಯಾವುದು ಅಂಗೀಕಾರಯೋಗ್ಯವಾದದ್ದು, ಯಾವುದನ್ನು ತ್ಯಜಿಸುವುದರಿಂದ ಸಮಾಜಕ್ಕೆ ಕ್ಷೇಮ ಉಂಟಾಗುತ್ತದೆ ಎಂಬ ಬಗ್ಗೆ ಈ ವಿನ್ಯಾಸಕಾರರಲ್ಲೇ ಒಮ್ಮತವಿರಲಿಲ್ಲ. ಒಬ್ಬನಿಗೆ ನ್ಯಾಯವಾಗಿ ಕಂಡುಬಂದದ್ದು ಇನ್ನೊಬ್ಬನಿಗೆ ವಿಪರೀತವಾಗಿ ಕಂಡುಬಂದಿತ್ತು. ಬುದ್ಧಿಯ ಕುಂಚದಿಂದ ನಿರ್ಮಿತವಾದ ಈ ಅನೇಕ ಕ್ಷೇಮಸಮಾಜಗಳು ಆಕರ್ಷಣೀಯವಾಗಿ ಕಂಡರೂ ಸರ್ವಸಮ್ಮತವಾದ ಒರೆಗಲ್ಲು ಅಥವಾ ಅಳತೆಕೋಲಿನಿಂದ ಅವುಗಳಲ್ಲಿ ಯಾವುದಾದ ರೊಂದನ್ನೂ ಅಂಗೀಕಾರಯೋಗ್ಯವೆಂದು ತೀರ್ಮಾನಿಸುವುದು ಕಷ್ಟದ ಕೆಲಸವಾಗಿತ್ತು.

ಆದರೆ ಈ ಕಾಲಾವಧಿಯಲ್ಲಿ ಈ ಪಂಗಡಕ್ಕೆ ಸೇರಿದ ಬರೆಹಗಾರರಿಂದ ಹಲವು ಅಮೂಲ್ಯ ಸಂಶೋಧನೆಗಳು ಹೊರಬಿದ್ದವು. ಹಲವೆಡೆ ಅಸ್ಪಷ್ಟವಾಗಿ ಕೆಲವು ಕಡೆ ಸ್ಪಷ್ಟವಾಗಿ ಇನ್ನು ಕೆಲವು ಕಡೆ ಸೂಚ್ಯವಾಗಿ. ಇತಿಹಾಸ ಯಾವುದೋ ಒಂದು ಕ್ರಮಕ್ಕೆ ಒಳಪಟ್ಟು ವಿಕಾಸ ಹೊಂದಿರುವ ಚಿತ್ರವನ್ನು ಅವರು ಮುಂದಿಟ್ಟರು. ಸಮಾಜವೂ ಈ ವಿಕಾಸದ ನಿಯಮದಲ್ಲಿ ಸೇರಿ ಒಂದೊಂದು ಕಾಲದಲ್ಲಿ ಒಂದೊಂದು ವಿಧವಾಗಿ ವಿಶಿಷ್ಟ ಚರ್ಯೆಗಳನ್ನು ಪ್ರದರ್ಶಿಸಿರುವುದಾಗಿ ತಿಳಿಸಿದರು. ಒಂದೊಂದು ಘಟ್ಟವೂ ವಿಶಿಷ್ಟವಾದದ್ದೆಂಬುದನ್ನು ಇವರು ಕಂಡಿದ್ದರು. ಅತ್ಯಂತ ಅನಾಗರಿಕತೆಯಿಂದ ಆರಂಭವಾದ ಸಮಾಜ ಕ್ರಮವಾಗಿ ಪ್ರಾಚೀನ ಮತ್ತು ಊಳಿಗಮಾನ್ಯ ಘಟ್ಟಗಳನ್ನು ದಾಟಿ ಪ್ರಜಾಸಮಾಜದ (ಸಿವಿಲ್ ಸೊಸೈಟಿ) ಹಂತ ಮುಟ್ಟಿದೆ. ಈ ಘಟ್ಟಗಳ ಪರಿವರ್ತನೆ ಏತಕ್ಕೆ ಉಂಟಾಯಿತೆಂದು ಅನೇಕರು ಕಾರಣಗಳನ್ನು ಹುಡುಕುತ್ತಿದ್ದಾಗ, ಜರ್ಮನಿಯ ತತ್ತ್ವಜ್ಞಾನಿಯಾದ ಹೆಗೆಲ್ ಹೊಸ ಸಿದ್ಧಾಂತವೊಂದರ ಮೂಲಕ ಇತಿಹಾಸದ ಸಮಾಜದ ಚಲನೆ ಮತ್ತು ವಿಕಾಸಗಳನ್ನು ಸಮರ್ಥಿಸಿ ಅವೆಲ್ಲವೂ ಭಾವನೆಗಳ (ಐಡಿಯ) ಚಲನೆಯ ಪ್ರತಿರೂಪವೆಂದು ಹೇಳಿದ. ಒಂದೊಂದು ಕಾಲದಲ್ಲಿ ಒಂದೊಂದು ರೂಪದಲ್ಲಿ ಭಾವನೆಗಳು ವ್ಯಕ್ತಗೊಂಡಿವೆ. ಈಗ ಅವು ತಮ್ಮ ಗುರಿ ಮುಟ್ಟಿವೆ. ಇಂದಿನ ಪ್ರಜಾಸಮಾಜದ ರೂಪ ತಾಳಿವೆ–ಎಂದು ಆತ ತಿಳಿಸಿದ. ಇನ್ನು ಕೆಲವರು ಈ ಭಾವನಾತ್ಮಕ ವಿಕಾಸವಾದವನ್ನು ವಿರೋಧಿಸಿದರು. ಸಮಾಜದಲ್ಲಿ ಕಂಡುಬರಬಹುದಾದ ಚಲನೆ, ವಿಕಾಸ ಮತ್ತು ವಿವಿಧ ಘಟ್ಟಗಳು ವಿಕಾಸ ಹೊಂದುತ್ತಿರುವ ಭಾವನೆಯ ಪ್ರತಿರೂಪವಲ್ಲವೆಂಬುದು ಅವರ ವಾದ. ಸಮಾಜದಲ್ಲಿ ಕಂಡುಬರುವ ಬದಲಾವಣೆ, ಪರಿವರ್ತನೆ, ಹಳೆಯ, ಹೊಸ ಭಾವನೆಗಳು–ಎಲ್ಲವೂ

ಸಮಾಜದಲ್ಲೇ ಹುದುಗಿರುವ ಸ್ವಯಂಚಲನೆಗೆ ಒಳಪಟ್ಟಿವೆಯೆಂದೂ ಸಮಾಜವಿಕಾಸದಲ್ಲಿ ದೈವಿಕ ಅಥವಾ ಭಾವನೆಯ ಕೈವಾಡವಿಲ್ಲವೆಂದೂ ವಿಕಾಸವೆಂಬುದು ಭಾವನೆಯ ಬೆಳವಣಿಗೆಯ ಪ್ರತಿರೂಪವಾಗಿರದೆ, ಭಾವನೆಯೇ ವಿಕಾಸಹೊಂದುತ್ತಿರುವ ಸ್ಥಿತಿಗತಿಗಳ ಪ್ರತಿರೂಪವಾಗಿ ವ್ಯಕ್ತಗೊಂಡಿದೆಯೆಂದೂ ತಿಳಿಸಿದರು.

ಎರಡನೆಯದಾಗಿ, ಸಮಾಜದಲ್ಲಿ ಉಂಟಾಗಿರುವ ಕ್ಷೋಭೆಗೂ ವಿರಸಕ್ಕೂ ಬಡಜನರ ಚೀತ್ಕಾರಕ್ಕೂ ಮುಖ್ಯವಾಗಿ ಅದರ ಆರ್ಥಿಕ ವ್ಯವಸ್ಥೆಯೆ ಮುಖ್ಯ ಕಾರಣವೆಂಬುದು ಇವರ ವಾದ. ಪ್ರಾಚೀನ ಕಾಲದ ಸ್ವಾಮ್ಯರಹಿತ ಅಥವಾ ಒಡೆತನರಹಿತ ವ್ಯವಸ್ಥೆಗಳ ಮಾದರಿಗಳನ್ನು ಇವರು ಮುಂದಿಟ್ಟರು. ಉತ್ಪಾದನ ವಸ್ತುಗಳ ಖಾಸಗಿ ಸ್ವಾಮ್ಯ ಮತ್ತು ಒಡೆತನಪದ್ಧತಿಯಿಂದಾಗಿ ಕೆಲವರು ಅಧಿಪತಿಗಳಾಗುತ್ತಾರೆ. ಬಹುತೇಕ ಜನ ಕೇವಲ ದುಡಿಮೆಗಾರರಾಗಿ ಪರಿವರ್ತನೆ ಹೊಂದುತ್ತಾರೆ. ಉತ್ಪಾದನ ವಸ್ತುಗಳ ಖಾಸಗಿ ಸ್ವಾಮ್ಯಪದ್ಧತಿ ಆರ್ಥಿಕವಾಗಿ ಸಮಾಜದಲ್ಲಿ ವರ್ಗಗಳ ಉದಯಕ್ಕೂ ವರ್ಗ ಘರ್ಷಣೆಗೂ ಎಡೆಕೊಟ್ಟಿವೆ. ಉತ್ಪಾದನ ವಸ್ತುಗಳ ಮೇಲೆ ಕೇವಲ ಸ್ವಲ್ಪ ಜನ ಹೊಂದಿರುವ ಸ್ವಾಮ್ಯ ಅಥವಾ ಒಡೆತನ ಹಣವಂತರನ್ನು ಇನ್ನೂ ಹಣವಂತರನ್ನಾಗಿಯೂ ಬಡಜನರನ್ನು ಇನ್ನೂ ಬಡವರನ್ನಾಗಿಯೂ ಮಾಡುತ್ತಿದೆ. ಆರ್ಥಿಕ ಸಮಾನತೆಯೇ ಮಿಕ್ಕೆಲ್ಲ ಸಮಾನತೆಗಳಿಗೂ ತಳಹದಿ. ಹೀಗೆ ಸಮಾಜದ ಆರ್ಥಿಕ ವ್ಯವಸ್ಥೆಯ ಹಲವು ಸೂಕ್ಷ್ಮ ವಿಷಯಗಳನ್ನು ಈ ಬರೆಹಗಾರರು ಬಯಲುಪಡಿಸಿದರು. ಶೋಷಣೆಯನ್ನು ಖಂಡಿಸಿದರು. ಉತ್ಪಾದನ ವಸ್ತುಗಳು ಖಾಸಗಿ ಸ್ವಾಮ್ಯಕ್ಕೆ ಒಳಪಟ್ಟಿರಬಾರದೆಂದರೆ ಖಾಸಗೀ ಸ್ವಾಮ್ಯ ಹೋದ ಹೊರತು ಶೋಷಣೆ ಅಳಿಯುವುದಿಲ್ಲವೆಂಬುದು ಇವರ ವಾದ. ಆರ್ಥಿಕ ಅಸಮಾನತೆಗೆ ಶೋಷಣೆಯೇ ಮೂಲ. ಅದರ ನಿರ್ಮೂಲನಕ್ಕಾಗಿ ಉತ್ಪಾದನವಸ್ತುಗಳ ಸಾಮಾಜೀಕರಣ ಆವಶ್ಯಕ. ಆದರೆ ಶೋಷಣೆ ಯಾವ ರೀತಿಯಲ್ಲಿ ಆಗುತ್ತಿದೆ, ಆರ್ಥಿಕ ವ್ಯವಸ್ಥೆಯಲ್ಲಿ ಶೋಷಣೆ ಯಾವ ರೂಪದಲ್ಲಿ ಮನೆಮಾಡಿಕೊಂಡಿದೆ. ವರ್ಗಗಳಿಗೂ ವರ್ಗಗಳ ಉತ್ಪತ್ತಿಗೂ ಆರ್ಥಿಕ ವ್ಯವಸ್ಥೆಗೂ ಇರುವ ಸಂಬಂಧವೇನು, ಶೋಷಣೆಗೂ ವರ್ಗಗಳ ಜನನಕ್ಕೂ ಏನು ಸಂಬಂಧ, ಶೋಷಣೆಯನ್ನು ನಿರ್ಮೂಲ ಮಾಡುವವರು ಯಾರು? ಯಾವ ರೀತಿಯಲ್ಲಿ–ಎಂಬುದನ್ನು ಇವರು ವಿಶದಪಡಿಸಲಾರದೆ ಹೋದರು.

**ಮಾರ್ಕ್ಸ್–ಎಂಗೆಲ್ಸ್ ದೃಷ್ಟಿ:** ಇಂಥ ಸಂದರ್ಭದಲ್ಲಿ ಹೊಸದಾಗಿ ಉದ್ಭವವಾಗಿರುವ ಬಂಡವಾಳ ಅರ್ಥವ್ಯವಸ್ಥೆ ಶೋಷಿತ ಕಾರ್ಮಿಕ ವರ್ಗವೊಂದಕ್ಕೆ ಜನ್ಮಕೊಟ್ಟಿದೆ. ಈಗ ಸಮಾಜವಾದಿ ವ್ಯವಸ್ಥೆಯ ಉದಯ ಅನಿವಾರ್ಯವಾಗಿದೆ. ಈ ಬಂಡವಾಳ ವ್ಯವಸ್ಥೆಯ ದಮನವನ್ನು ಕಾರ್ಮಿಕವರ್ಗ ಮಾಡುತ್ತದೆ. ಕಾರ್ಮಿಕವರ್ಗದ ವಿಮೋಚನೆ ಕಾರ್ಮಿಕ ವರ್ಗದವರಿಂದಲೇ ಸಾಧ್ಯ. ಬಂಡವಾಳ ಅರ್ಥವ್ಯವಸ್ಥೆಯ ಮೂಲೋಚ್ಚಾಟನಕ್ಕಾಗಿ ಕಾರ್ಮಿಕವರ್ಗ ಸಂಘಟಿತರಾಗಿ ಕ್ರಾಂತಿ ನಡೆಸಬೇಕು. ಕಾರ್ಮಿಕರ ಇಂಥ ಪ್ರಜ್ಞಾಪೂರಿತ ಹೋರಾಟವೇ ಸಮಾಜವಾದಿ ಹೋರಾಟ. ಮಿಕ್ಕೆಲ್ಲ ವರ್ಗಗಳ ಹೋರಾಟವೂ ಕಟ್ಟಕಡೆಯದಾಗಿ ಬಂಡವಾಳ ಅರ್ಥವ್ಯವಸ್ಥೆಯ ಪುನರಾವರ್ತನೆಗೆ ದಾರಿ ಮಾಡಿಕೊಡುತ್ತದೆ–ಹೀಗೆಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ಕರೆಕೊಟ್ಟರು. ಆ ವೇಳೆಗಾಗಲೆ ಹಲಕೆಲವು ಕಾರ್ಮಿಕವರ್ಗದ ಜನ ಪ್ರತಿಭಟನಾ ಚಳವಳಿ ಕೈಗೊಂಡಿದ್ದರು. ತಮ್ಮ ಗುರಿಸಾಧನೆಗಾಗಿ ಸಣ್ಣಪುಟ್ಟ ಗುಂಪುಗಳನ್ನು ರಚಿಸಿಕೊಂಡು ಕಮ್ಯೂನಿಸ್ಟರೆಂದು ಹೋರಾಟ ನಡೆಸುತ್ತಿದ್ದರು. ಪ್ರತಿಭಟನೆ ಇತ್ತೇ ವಿನಾ ಯಾವ ತತ್ತ್ವಾಧಾರವಾಗಲಿ ಸಮಾಜವಾದದ ಆವಶ್ಯಕತೆ ಮತ್ತು ವಿನ್ಯಾಸಗಳ ಬಗ್ಗೆ ಯಾವ ತಿಳಿವಳಿಕೆಯಾಗಲೀ ಈ ಗುಂಪುಗಳಿಗೆ ಇರಲಿಲ್ಲ. ಮಾರ್ಕ್ಸ್‌ಮತ್ತು ಎಂಗೆಲ್ಸ್ ಈ ತ್ರೀವ್ರ ಅಥವಾ ಕ್ರಾಂತಿಕಾರಿ ಗುಂಪುಗಳಿಗೆ ಒಂದು ತತ್ತ್ವಾಧಾರವನ್ನು ಒದಗಿಸಿಕೊಟ್ಟರು.



ಕಾರ್ಲ್‌ಮಾರ್ಕ್ಸ್

ಮಾರ್ಕ್ಸ್‌ಮತ್ತು ಎಂಗೆಲ್ಸ್ ತಮ್ಮದು ಮಾತ್ರ ವೈಜ್ಞಾನಿಕ ಸಮಾಜವಾದವೆಂದೂ ಉಳಿದವೆಲ್ಲ ಕಲ್ಪನಾ ಸಮಾಜವಾದಗಳೆಂದೂ (ಯುಟೋಪಿಯನ್)ವಾದಿಸಿದರು. ವೈಜ್ಞಾನಿಕ ಸಮಾಜವಾದಕ್ಕೂ ಕಲ್ಪನಾಸಮಾಜವಾದಕ್ಕೂ ಇರುವ ಮೂಲ ವ್ಯತ್ಯಾಸವನ್ನು ಎಂಗೆಲ್ಸ್ ಹೀಗೆ ಹೇಳಿದ್ದಾನೆ; ಇದು ಇತ್ತೀಚೆಗೆ ಬಲು ಬುದ್ಧಿವಂತನೆನಿಸಿಕೊಂಡವನಿಂದ ಆಕಸ್ಮಾತ್ತಾಗಿ ಹೊರಬಿದ್ದ ಶೋಧನೆಯಲ್ಲ; ಇದು ಐತಿಹಾಸಿಕ ಬೆಳವಣಿಗೆ, ಸ್ವಾಮ್ಯವರ್ಗ ಮತ್ತು ಕಾರ್ಮಿಕವರ್ಗಗಳ ನಡುವಣ ಘರ್ಷಣೆಯಿಂದ ಅನಿವಾರ್ಯವಾಗಿ ಜನಿಸಿದ್ದು. ಆದಷ್ಟು ಮಟ್ಟಿಗೆ, ಸಾಕಷ್ಟು ಪರಿಪೂರ್ಣವಾದ ಸಮಾಜ ರಚಿಸುವುದೇ ಇದರ ಗುರಿಯಲ್ಲ. ಐತಿಹಾಸಿಕ ಮತ್ತು ಆರ್ಥಿಕ ಘಟನಾಪರಿವರ್ತನೆಗಳನ್ನೂ ಜನ್ಮತಳೆದಿರುವ ವರ್ಗಗಳನ್ನೂ ಅವುಗಳ ಘರ್ಷಣೆಗಳನ್ನೂ ಸಂಶೋಧಿಸುವುದು ಕೂಡ ಇದರ ಉದ್ದೇಶ. ಹೀಗೆ ಉದ್ಭವಿಸಿರುವ ಆರ್ಥಿಕ ಪರಿಸ್ಥಿತಿಯಿಂದ ತಲೆದೋರಿರುವ ಘರ್ಷಣೆಗಳ ಪರಿಹಾರದ ಮಾರ್ಗಾನ್ವೇಷಣೆಯೂ ಇದರ ಗುರಿ. ತಮ್ಮ ಸಮಾಜವಾದವೊಂದೇ ವೈಜ್ಞಾನಿಕವೆನಿಸಿರುವುದಕ್ಕೆ ಮಾರ್ಕ್ಸನ ಎರಡು ಮುಖ್ಯ ಪ್ರತಿಪಾದನೆಗಳು ಕಾರಣವೆಂಬುದು ಎಂಗೆಲ್ಸನ ಮತ. ಇವುಗಳಲ್ಲಿ ಮೊದಲನೆಯದು ಐತಿಹಾಸಿಕ ಭೌತವಾದ (ಹಿಸ್ಟಾರಿಕಲ್ ಮೆಟೀರಿಯಲಿಸಂ). ಇನ್ನೊಂದು, ಬಂಡವಾಳವಾದಿ ಉತ್ಪಾದನಕ್ರಮದಲ್ಲಿ ಅಡಗಿರುವ ಅತಿರಿಕ್ತಮೌಲ್ಯದ (ಸರ್ಪ್ಲಸ್ ವ್ಯಾಲ್ಯೂ) ರಹಸ್ಯ.

ಸಮಾಜವಾದದ ಬಗ್ಗೆ ಮಾರ್ಕ್ಸ್‌ಮತ್ತು ಎಂಗೆಲ್ಸರು ಕೊಟ್ಟಿರುವ ವಿವರಣೆಯನ್ನೂ ವೈಜ್ಞಾನಿಕ ಸಮಾಜವಾದಕ್ಕೂ ಕಲ್ಪನಾಸಮಾಜವಾದಕ್ಕೂ ಇರುವ ಮೂಲ ವ್ಯತ್ಯಾಸಗಳನ್ನೂ ಹೀಗೆ ವಿವರಿಸಬಹುದು; ವಾಸ್ತವ ಪರಿಸ್ಥಿತಿಯಲ್ಲಿ ಏನಾದರೂ ಇರಲಿ, ತಾವು ಆಸೆಪಟ್ಟ ರೀತಿಯಲ್ಲಿ ಸಮಾಜದ ಪುನರ್ನಿರ್ಮಾಣ ಆಂತರ್ಯ ಕಾರ್ಯಕ್ಕೆ ತೊಡಗುವುದಾದರೆ ಅದು ಕಲ್ಪನೆಯಾಗುತ್ತದೆಯೇ ಹೊರತು ವಾಸ್ತವ ಪರಿಸ್ಥಿತಿಯಿಂದ ಅನಿವಾರ್ಯವಾಗಿ ಮೂಡುವ ವ್ಯವಸ್ಥೆಯಾಗುವುದಿಲ್ಲ. ವೈಜ್ಞಾನಿಕ ಸಮಾಜವಾದ ಈ ತಪ್ಪು ಮಾಡುವುದಿಲ್ಲ. ಅದು ವಾಸ್ತವ ಪರಿಸ್ಥಿತಿಯನ್ನವಲೋಕಿಸುತ್ತದೆ. ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಆಗುವ ಅನಿವಾರ್ಯವಾದ ವ್ಯತ್ಯಾಸದ ಹಿಂದಿನ ಕ್ರಮ ಅಥವಾ ನಿಯಮವನ್ನು ಅನುಷ್ಠಾನಿಸುತ್ತದೆ. ಬಂಡವಾಳ ಸಮಾಜದ ಹಲವೆಂಟು ಚಟುವಟಿಕೆಗಳೇ ಹೇಗೆ ಅದನ್ನು ಸಮಾಜವಾದದ ಕಡೆಗೆ ತಳ್ಳುತ್ತಿದೆಯೆಂಬುದನ್ನೂ ಇದು ಹೇಗೆ ನಿಯಮಬದ್ಧವೆಂಬುದನ್ನೂ ತಿಳಿಸುವುದರಿಂದ ಇದು ವೈಜ್ಞಾನಿಕ ಸಮಾಜವಾದ. ಈ ವಿಶ್ಲೇಷಣೆಯಲ್ಲಿ ವೈಯಕ್ತಿಕ ಇಚ್ಛಾನಿಚ್ಛೆಗಳ ಪ್ರಶ್ನೆಯೇ ಇಲ್ಲ. ಪ್ರಕೃತಿ ಮತ್ತು ದುಡಿಮೆಗಳ ಸಂಯೋಗಫಲವೇ ಉತ್ಪಾದನೆ. ಇದರಿಂದ ಬಂದ ಫಲ ಹೋಗಬೇಕಾದ್ದು ದುಡಿಮೆ ಮಾಡಿದ ಕಾರ್ಮಿಕನಿಗೆ. ಆದರೆ ಆತನ ದುಡಿಮೆಗೆ ಪ್ರತಿಯಾಗಿ ಕೂಲಿ ಕೊಟ್ಟು, ಕೂಲಿಗೂ ನಿಜವಾದ ಪ್ರತಿಫಲಕ್ಕೂ ಇರುವ ಅಂತರವನ್ನು ಉದ್ಯಮಿಯಾದವನು ಉಳಿಸಿಕೊಳ್ಳುತ್ತಾನೆ. ಇದು ಉತ್ಪತ್ತಿಯಾದ ಪದಾರ್ಥದ ಅತಿರಿಕ್ತಮೌಲ್ಯ. ಇದು ನ್ಯಾಯವಾಗಿ ಸಲ್ಲಬೇಕಾದ್ದು ಕಾರ್ಮಿಕನಿಗೆ; ಇದು ಅವನದೇ, ಅನ್ಯರದಲ್ಲ. ಹೀಗೆ ಅವನಿಗೆ ತಲುಪಿಸದೆ ಉಳಿಸಿಕೊಂಡ ಮೌಲ್ಯಗಳು ಶೇಖರವಾಗಿ ಬಂಡವಾಳವಾಗಿ ಪರಿಣಮಿಸಿವೆ. ಇದರಿಂದಾಗಿ ಉದ್ಯಮಗಳು ಬೆಳೆದಿವೆ. ವಾಸ್ತವವಾಗಿ ಇವೆಲ್ಲವೂ ಕಾರ್ಮಿಕನವೇ. ಉತ್ಪಾದನೆಯ ಗಾತ್ರ ದೊಡ್ಡದಾಗಿದೆ. ಬಂಡವಾಳದ ಉದ್ಯಮ ಬೆಳೆಯುವ ಮುನ್ನ ಸ್ವತಂತ್ರರಾಗಿದ್ದ ಕಾರ್ಮಿಕರು ಈಗ ಬಹುಸಂಖ್ಯೆಯಲ್ಲಿ ಉದ್ಯೋಗಿಗಳಾಗಿ ಉದ್ಯಮಪತಿಗಳ ಒಡೆತನಕ್ಕೊಳಪಟ್ಟ ಬೃಹತ್ ಕಾರ್ಖಾನೆಗಳಲ್ಲಿ ಒಟ್ಟಿಗೆ ಸೇರಿ–ಒಂದೇ ಕಡೆಯಲ್ಲಿ–ಒಂದೇ ಸೂರಿನ ಅಡಿಯಲ್ಲಿ– ಕೆಲಸ ಮಾಡುತ್ತಾರೆ. ಆದರೆ ಉದ್ಯಮಗಳ ನಡುವಣ ಸ್ಪರ್ಧೆ ಕ್ರಮೇಣ ತೀವ್ರವಾಗುತ್ತ ಮುಂದುವರಿದು, ಒಂದು ಉದ್ಯಮ ಇನ್ನೊಂದನ್ನು ನುಂಗುವ, ನುಚ್ಚುನುರಿ ಮಾಡುವ ಪ್ರವೃತ್ತಿ ಬೆಳೆದು, ಕೊನೆಗೆ ಇಡೀ ಸಮಾಜದ ಸಂಪತ್ತು ಕೆಲವೇ ಮಂದಿಯ ಕೈಯಲ್ಲಿ ಸೇರಿರುತ್ತದೆ. ಉಳಿದವರೆಲ್ಲ ಉದ್ಯೋಗಿಗಳಾಗಿ ಪರಿವರ್ತನೆ ಗೊಳ್ಳುತ್ತಾರೆ. ಈ ಜನರೇ ಸರ್ಕಾರವನ್ನೂ ತಮ್ಮ ಹತೋಟಿಗೆ ಒಳಪಡಿಸಿಕೊಂಡಿರುತ್ತಾರೆ. ಆದರೆ ಇಂಥ ವ್ಯವಸ್ಥೆಯ ಬೆಳವಣಿಗೆಗೆ ಕಾರಣವಾದ ಸ್ಪರ್ಧೆಗಳೇ– ಆಂತರಿಕ ಘರ್ಷಣೆಗಳೇ– ವಿರೋಧಾಭಾಸಗಳೇ–ಅದರ ಪತನಕ್ಕೂ ಕಾರಣವಾಗುತ್ತವೆ. ಒಂದೇ ಎಡೆಯಲ್ಲಿ ಸೇರಿದ ಕಾರ್ಮಿಕರು ಸಂಘಟಿತರಾಗಿ ಶಕ್ತಿಗಳಿಸಿ ಕೊನೆಗೆ ಈ ಅಸಮವ್ಯವಸ್ಥೆಯನ್ನು ಕೊನೆ ಗೊಳಿಸುತ್ತಾರೆ. ಆರ್ಥಿಕ ರಾಜಕೀಯ ಶಕ್ತಿಗಳನ್ನೆಲ್ಲ ತಾವು ವಶಪಡಿಸಿಕೊಳ್ಳುತ್ತಾರೆ. ಬಂಡವಾಳ ವ್ಯವಸ್ಥೆ ನಾಶಗೊಳ್ಳುತ್ತದೆ ಎಂದರೆ ಇದು ಖಾಸಗಿ ಸ್ವಾಮ್ಯದ ಅಂತ್ಯ; ಸಮಾಜವಾದೀ ವ್ಯವಸ್ಥೆಯ–ಸಾಮೂಹಿಕ ಒಡೆತನದ–ಉಗಮ. ವೈಜ್ಞಾನಿಕ ತಾಂತ್ರಿಕ ಮುನ್ನಡೆಯ ಫಲವಾದ ಆಧುನಿಕ ಉತ್ಪಾದನ ಶಕ್ತಿಗಳು ನಾಶಗೊಳ್ಳದೆ ಉಳಿದುಕೊಳ್ಳಬೇಕಾದರೆ ಎಲ್ಲ ಉತ್ಪಾದನ ಸಾಧನಗಳ ಸಾಮೂಹಿಕ ಒಡೆತನವೇ ಸಮಾಜೀಕರಣವೇ ಏಕೈಕಮಾರ್ಗ. ಇದು ಯಾರೊಬ್ಬರ ಬುದ್ಧಿಯ ಫಲವಲ್ಲ. ಹಾಗಿದ್ದರೆ ಎಂದೋ ಇದನ್ನು ನಿರ್ಮಿಸಬಹುದಾಗಿತ್ತು. ಇದುವರೆಗಿನ ಸಂಕಟವನ್ನೆಲ್ಲ ತಡೆಗಟ್ಟಬಹುದಾಗಿತ್ತು. ಆದರೆ ಸಮಾಜವ್ಯವಸ್ಥೆ ತನ್ನಂತೆ ತಾನೇ ಬೆಳೆದು, ಕೊನೆಗೆ ಅನಿವಾರ್ಯವಾಗಿ ಈ ಕೊನೆಯ ಹಂತ ಮುಟ್ಟುವುದೆಂಬುದು ಮಾರ್ಕ್ಸ್‌ಮತ್ತು ಎಂಗೆಲ್ಸ್‌ರ ವೈಜ್ಞಾನಿಕ ದೃಷ್ಟಿ. ಕಮ್ಯೂನಿಸಮಿನ ತಿರುಳನ್ನರಿಯುವ ಮುನ್ನ ಇದನ್ನರಿತುಕೊಳ್ಳಬೇಕಾದುದು ಅವಶ್ಯ.

ಸಮಾಜದಲ್ಲಿ ಸಂಭವಿಸಿದ್ದ ಪರಿಸ್ಥಿತಿಯ ನೈಜಚಿತ್ರವನ್ನು ಅರಿಯಲು ಮಾರ್ಕ್ಸ್–ಎಂಗೆಲ್ಸ್‌ರಿಗೆ ಆಗ ಐತಿಹಾಸಿಕ ಭೌತವಾದ ಬಹಳಮಟ್ಟಿಗೆ ಸಹಾಯಕ್ಕೆ ಬಂದಿತ್ತು. ಇದರ ಸ್ವರೂಪವನ್ನು ಮಾರ್ಕ್ಸ್–ಎಂಗೆಲ್ಸ್ ಹೀಗೆ ವಿವರಿಸಿದ್ದಾರೆ: ಪ್ರತಿಯೊಂದು ಸಮಾಜವ್ಯವಸ್ಥೆ

ಕೈಗೊಂಡಿರುವ ಉತ್ಪಾದನೆಯ ವಿಧಾನವೂ ಉತ್ಪಾದನೆಯೊಡನೆ ಸಂಭವಿಸುವ ಉತ್ಪಾದಿತ ವಸ್ತುಗಳ ವಿನಿಮಯವೂ ಆ ಸಮಾಜ ವ್ಯವಸ್ಥೆಯ ಅಡಿಗಲ್ಲೆಂದು ಭೌತಾತ್ಮಕ ಭಾವನೆಗಳು ಇತಿಹಾಸ ತನ್ನ ಆರಂಭ ಸೂತ್ರವನ್ನಾಗಿ ಇಟ್ಟುಕೊಂಡಿದೆ; ಮತ್ತು ಈ ವರೆಗೆ ಇತಿಹಾಸದಲ್ಲಿ ಅವತರಿಸಿರುವ ಸಮಾಜಗಳಲ್ಲಿನ ಉತ್ಪಾದನೆಯ ವಿಧಾನಗಳೇ ಉತ್ಪಾದನೆಯಾದ ವಸ್ತುಗಳ ವಿನಿಮಯದ ರೀತಿ. ಉತ್ಪಾದಿತ ಸಂಪತ್ತಿನ ವಿತರಣೆಯ ವಿಧಾನ, ಅದರಿಂದಾಗಿ ಸಂಭವಿಸಿರುವ ಸಮಾಜ ವಿಭಜನೆ, ವರ್ಗವಿಭೇದ–ಇತ್ಯಾದಿಗಳನ್ನು ನಿರ್ಧರಿಸಿದೆ. ಸಾಮಾಜಿಕ ಬದಲಾವಣೆಗಳಿಗೆ ರಾಜಕೀಯ ಕ್ರಾಂತಿಗಳಿಗೆ ಅಂತಿಮವಾಗಿ ಕಾರಣವಾಗುವುದು ಉತ್ಪಾದನ ವಿಧಾನ ಮತ್ತು ವಿನಿಮಯ ವ್ಯವಸ್ಥೆ. ಪರಿವರ್ತನೆಗೆ ಕಾರಣವನ್ನು ಧರ್ಮ ಅಥವಾ ಶಾಶ್ವತ ಸತ್ಯದ ಚಿಂತನೆಯಲ್ಲಿ ಹುಡುಕಬಾರದು; ಆಯಾ ಕಾಲದ ಅರ್ಥವ್ಯವಸ್ಥೆಯಲ್ಲಿ ಹುಡುಕಬೇಕು. ಸಮಾಜವ್ಯವಸ್ಥೆಯಲ್ಲಿಯ ನ್ಯೂನತೆಗಳಿಗೆ ಅವಕಾಶ ಕೊಟ್ಟ ಪರಿಸ್ಥಿತಿಯಲ್ಲೆ ಅವನ್ನು ನಿವಾರಿಸುವ ಪರಿಸ್ಥಿತಿಗಳೂ ಅಡಗಿರಲೇಬೇಕು. ಅಂದರೆ ಬದಲಾವಣೆಗೊಂಡಿರುವ ಉತ್ಪಾದನ ಕ್ರಮದಲ್ಲಿ ಈ ಪರಿಹಾರಗಳನ್ನು ಮನುಷ್ಯ ತನ್ನ ಬುದ್ಧಿಬಲದಿಂದ ನಿರ್ಮಿಸುವಂತಿಲ್ಲ; ಇವನ್ನು ಬುದ್ಧಿಯ ಸಹಾಯದಿಂದ ಸಂಶೋಧಿಸಬೇಕು, ವಾಸ್ತವವಾದ ಉತ್ಪಾದನಾಂಗಗಳಿಂದ ಪತ್ತೆ ಹಚ್ಚಬೇಕು.

ಮಾರ್ಕ್ಸ್, ಎಂಗೆಲ್ಸರು ಈ ನಿಯಮದ ಅನ್ವಯದಿಂದ ಆಧುನಿಕ ಸಮಾಜದ ಅಥವಾ ಬಂಡವಾಳಶಾಹೀ ಅರ್ಥವ್ಯವಸ್ಥೆಯ ಚಲನೆಯ ನಿಯಮಗಳನ್ನು ಬಹಿರಂಗಪಡಿಸಿದರು. 16ನೆಯ ಶತಮಾನದಿಂದೀಚೆಗೆ ಬೆಳೆದುಬಂದಿರುವ ಬಂಡವಾಳ ಉತ್ಪಾದನ ವಿಧಾನವನ್ನು ವಿವರಿಸಿ ಇದು ಸಹ ಹಿಂದೆ ಗತಿಸಿಹೋದ ಪ್ರಾಚೀನ ಮತ್ತು ಊಳಿಗಮಾನ್ಯ ವ್ಯವಸ್ಥೆಗಳಂತೆ ಅಂತ್ಯಗೊಳ್ಳುವುದೆಂದೂ ಹಿಂದಿನ ವ್ಯವಸ್ಥೆಗಳು ಅಂತ್ಯಗೊಳ್ಳಲು ಅವೇ ಜನ್ಮಕೊಟ್ಟ ವರ್ಗ ಮತ್ತು ವರ್ಗವಿರಸಗಳೇ ಕಾರಣವಾದಂತೆ ಆಧುನಿಕ ಬಂಡವಾಳ ವ್ಯವಸ್ಥೆ ಜನ್ಮಕೊಟ್ಟಿರುವ ಹೊಸ ಕಾರ್ಮಿಕವರ್ಗವೇ ಈ ವ್ಯವಸ್ಥೆಯ ಅಂತ್ಯಕ್ಕೂ ಕಾರಣವಾಗುವುದೆಂದೂ ಹಿಂದಿನ ಅರ್ಥವ್ಯವಸ್ಥೆಗಳ ಪತನಕ್ಕೆ ಅವುಗಳ ಉತ್ಪಾದನ ಕ್ರಮದಲ್ಲಿ ಆದ ಬದಲಾವಣೆಯೂ ಹೊಸ ಉತ್ಪಾದನಶಕ್ತಿಗಳೂ ಕಾರಣವಾದಂತೆ ಬಂಡವಾಳ ಅರ್ಥವ್ಯವಸ್ಥೆಯು ಪತನಕ್ಕೂ ಅದರ ಹೊಸ ಉತ್ಪಾದನಕ್ರಮ ಮತ್ತು ಆಧುನಿಕ ಉತ್ಪಾದನಶಕ್ತಿಗಳೂ ಕಾರಣವಾಗುವುದೆಂದೂ ತಿಳಿಸಿದರು. ಆರ್ಥಿಕ ಬದಲಾವಣೆ ಮತ್ತು ಹೊಸ ಸಮಾಜವಾದಿ ಸಮಾಜದ ಉದಯ–ಇವು ಭಾವನೆಯ ವಿಕಾಸದಿಂದ ಉಂಟಾಗದೆ ಭೌತಿಕವಾಗಿ ಒಂದು ಚಲನೆಯ ನಿಯಮಕ್ಕೆ ಒಳಪಟ್ಟಂತೆ ಸಂಭವಿಸುತ್ತವೆ. ಬಂಡವಾಳ ವ್ಯವಸ್ಥೆಯಲ್ಲಿರುವ ದ್ವಂದ್ವವಿರೋಧಗಳೇ ಚಲನೆಯನ್ನು ತಂದು ಹೊಸಮಟ್ಟದಲ್ಲಿ ಸಮನ್ವಯಗೊಳ್ಳಲು ಮುನ್ನುಗ್ಗುವುವೆಂಬುದು ಇವರ ವಾದ. ಎಂಗೆಲ್ಸ್ ನುಡಿದಿರುವಂತೆ ಆಧುನಿಕ ಸಮಾಜವಾದದ ವಿಶ್ಲೇಷಣೆಯೆಂದರೆ ಒಂದು ಅರ್ಥದಲ್ಲಿ ಅದು ಉಳ್ಳವರಿಗೂ ಇಲ್ಲದವರಿಗೂ ಕೂಲಿಗಾರರಿಗೂ ಬಂಡವಾಳಿಗರಿಗೂ ನಡುವಣ–ಎಂದರೆ ಆಧುನಿಕ ಸಮಾಜದಲ್ಲಿಯ ವರ್ಗಗಳ ನಡುವಣ–ಘರ್ಷಣೆಯ ಅವಲೋಕನವೇ ಆಗಿದೆ. ಇನ್ನೊಂದು ಅರ್ಥದಲ್ಲಿ ಇದು ಉತ್ಪಾದನವ್ಯವಸ್ಥೆಯಲ್ಲಿ ನೆಲೆಸಿರುವ ಅವ್ಯವಸ್ಥೆಯ (ಅನಾರ್ಕಿ) ಅಧ್ಯಯನವಾಗಿದೆ.

ಬಂಡವಾಳ ಅರ್ಥವ್ಯವಸ್ಥೆಯ ಲಕ್ಷಣಗಳು ಹಿಂದೆ ಇದ್ದು ಅಳಿದುಹೋಗಿರುವ ಯಾವ ವ್ಯವಸ್ಥೆಯಲ್ಲೂ ಇರಲಿಲ್ಲ. ಹಿಂದೆ ಉತ್ಪಾದನೆ ನಡೆಯುತ್ತಿದ್ದುದು ಲಾಭಗಳಿಕೆಗಾಗಿಯಲ್ಲ; ಬಯಕೆಗಳ ಪೂರೈಕೆಗಾಗಿ. ಈ ಉದ್ದೇಶ ನೆರವೇರಿದ ಮೇಲೆ ಉಳಿದ (ಹೆಚ್ಚಿಗೆ) ಪದಾರ್ಥಗಳು ಮಾರುಕಟ್ಟೆಗೆ ಬರುತ್ತಿದ್ದುವು. ವಿನಿಮಯಗೊಳ್ಳುತ್ತಿದ್ದುವು; ಆಗಿನ ಅರ್ಥವ್ಯವಸ್ಥೆ ಸ್ವಯಂಪೂರ್ಣವಾದದ್ದು. ಉತ್ಪಾದಕರು ಒಂದೆಡೆ ಸೇರಿ ಮಾರುಕಟ್ಟೆಯ ದೃಷ್ಟಿಯಿಂದ ಉತ್ಪಾದಿಸುತ್ತಿರಲಿಲ್ಲ; ಉತ್ಪಾದಿತವಾದ ಪದಾರ್ಥಗಳು ಉತ್ಪಾದಕನಿಗೆ ಸೇರಿದ್ದುವು ಮಾತ್ರವಲ್ಲದೆ ಉತ್ಪಾದನೆಗೆ ಸಹಾಯಕವಾದ ವಸ್ತುಗಳೂ ಉತ್ಪಾದಕನಿಗೇ ಸೇರಿದ್ದುವು. ಬಂಡವಾಳ ವ್ಯವಸ್ಥೆಯಲ್ಲಿ ಇವೆಲ್ಲವೂ ಬದಲಾವಣೆಯಾಗಿದೆ. ಲಾಭವನ್ನು ಗಳಿಸುವ ದೃಷ್ಟಿಯಿಂದ ಕೂಲಿಗಾರರನ್ನು ಬಂಡವಾಳಿಗ ಒಂದೆಡೆ ಸೇರಿಸುತ್ತಾನೆ. ಇವರು ಕೂಲಿಗಾಗಿ ಇಲ್ಲಿ ದುಡಿಮೆ ಮಾಡುತ್ತಾರೆ ಮತ್ತು ಉತ್ಪಾದನೆಗೆ ಆವಶ್ಯಕವಾದ ಸಾಮಗ್ರಿ, ಯಂತ್ರೋಪಕರಣ ಮುಂತಾದ ಎಲ್ಲವನ್ನೂ ಮಾಲೀಕ ಒದಗಿಸುತ್ತಾನೆ. ದಿನ ತುಂಬಿದರೆ ದುಡಿಮೆಗಾರನಿಗೆ ಕೂಲಿ ಮಿಾಸಲೇ ಹೊರತು, ಉತ್ಪಾದನೆಯಾದ ವಸ್ತುಗಳ ಮೇಲೆ ಆತನ ಒಡೆತನವಿಲ್ಲ; ಅವು ಮಾಲೀಕನಿಗೆ ಸೇರಿದವು. ಹೀಗೆ ನಾನಾ ಭಾಗಗಳಲ್ಲಿ ಉತ್ಪಾದನೆ ನಡೆಯುತ್ತಿದೆ. ಎಲ್ಲರೂ ಮಾರುಕಟ್ಟೆಗಾಗಿ ಉತ್ಪಾದನೆ ಕೈಗೊಂಡಿರುತ್ತಾರೆ. ಮಾರುಕಟ್ಟೆಯ ಆವಶ್ಯಕತೆಯಾಗಲೀ ಯಾರು ಎಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕೆಂಬುದಾಗಲೀ ಯಾರಿಗೂ ತಿಳಿಯದ ವಿಷಯ. ಅನೇಕ ವೇಳೆ ಹೆಚ್ಚು ಉತ್ಪಾದನೆಯಾಗಿ ಅದಕ್ಕೆ ಮಾರಾಟವಿಲ್ಲದೆ ಹೋಗಬಹುದು; ಅಥವಾ ಪದಾರ್ಥದ ಆವಶ್ಯಕತೆ ಇದ್ದರೂ ಅದರ ಉತ್ಪಾದನೆ ಆಗದಿರಬಹುದು. ಇದಕ್ಕೆ ಗೊತ್ತುಗುರಿಯಿಲ್ಲದ ಯೋಜನೆಗೊಳಪಡದ ಉತ್ಪಾದನೆಯೇ ಒಂದು ಕಾರಣ. ಲಾಭಗಳಿಕೆಯಿಂದ ಉತ್ಪಾದನೆ ನಡೆಸುತ್ತಿರುವುದೇ ಇನ್ನೊಂದು ಕಾರಣ. ಲಾಭಸಿಗುವ ದೃಷ್ಟಿಯಿಂದ ಲಾಭಗಳಿಸಿ ಕೊಡಬಲ್ಲ ಪದಾರ್ಥಗಳ ಉತ್ಪಾದನೆಗೆ ಮಾಲೀಕ ಸದಾ ಯತ್ನಿಸುತ್ತಾನೆ. ಆದರೆ ಈ ಲಾಭದ ಆಸೆಯಿಂದ ಬಂಡವಾಳ ಅರ್ಥವ್ಯವಸ್ಥೆಯನ್ನೇ ಆಕ್ರಮಿಸಿಕೊಳ್ಳಲು, ದೃಷ್ಟಿಹರಿಸುತ್ತಾನೆ. ಹೆಚ್ಚು ಹೆಚ್ಚು ಲಾಭವನ್ನು ಗಳಿಸುವ ದೃಷ್ಟಿಯಿಂದ ಯಂತ್ರೋಪಕರಣಗಳ ವೃದ್ಧಿಗೆ ಗಮನಕೊಡುತ್ತಾನೆ. ಒಂದು ಕಡೆ ವಸಾಹತುಗಳ ಹಗಲು ದರೋಡೆ ನಡೆದರೆ, ಇನ್ನೊಂದು ಕಡೆ ವಿಪರೀತ ಬಂಡವಾಳ ಶೇಖರಣೆಯಾಗುತ್ತ ಬಂದು ಹಾಕಿರುವ ಬಂಡವಾಳದ ಮೇಲೆ ಲಾಭಗಳಿಕೆ ಕ್ಷೀಣಿಸುತ್ತದೆ. ಹೀಗಾಗಿ ಬಂಡವಾಳ ಅರ್ಥವ್ಯವಸ್ಥೆ ಒಂದು ತೆರನಾದ ಪೀಕಲಾಟಕ್ಕೆ ಸಿಕ್ಕುತ್ತದೆ; ಬಂಡವಾಳ ಹೂಡಬೇಕು, ಹೆಚ್ಚು ಹೆಚ್ಚು ಬಂಡವಾಳ ಹೂಡಬೇಕು. ಲಾಭ ದೊರೆಯುತ್ತಿರಬೇಕು. ಆದರೆ ಉತ್ಪಾದನೆ ಕೈಗೊಂಡರೆ ಲಾಭ ದೊರಕುವುದಿಲ್ಲ. ದೊರೆಯುವುದಾದರೂ ಕ್ಷೀಣಿಸುತ್ತ ಬರುತ್ತಿರುತ್ತದೆ. ಬಂಡವಾಳ ವ್ಯವಸ್ಥೆಗೆ ಅಂಟಿರುವ ಈ ಜಾಡ್ಯದ ಜೊತೆಗೆ ಈ ಉತ್ಪಾದನ ವ್ಯವಸ್ಥೆಗೆ ಅಂಟಿರುವ ಇನ್ನೊಂದು ಜಾಡ್ಯವೂ ಸದಾ ಇದನ್ನು ಪೀಡಿಸುತ್ತಲೇ ಇರುತ್ತದೆ. ಅವ್ಯವಸ್ಥಿತ ಉತ್ಪಾದನ ಪರಿಸ್ಥಿತಿ ಆಗಾಗ್ಗೆ ಆರ್ಥಿಕ ಮುಗ್ಗಟ್ಟನ್ನು ತಂದು ಚಾಚುತ್ತಿರುತ್ತದೆ. ಈ ಮುಗ್ಗಟ್ಟುಗಳು ಸಮಾಜದ ಮೇಲೆ ವರ್ಣಿಸಲಾರದ ದುಸ್ಥಿತಿಯನ್ನು ತರುತ್ತವೆ. ಈ ಕಾಲದಲ್ಲಿ ನುಚ್ಚುನುರಿಯಾದವರೆಷ್ಟೋ, ದಿವಾಳಿಯಾದವರೆಷ್ಟೋ, ಆತ್ಮಹತ್ಯೆ ಮಾಡಿಕೊಂಡವರೆಷ್ಟೋ, ಪ್ರವಾಹಕ್ಕೆ ಸಿಕ್ಕಿದ ಉತ್ತ ಭೂಮಿಯಂತೆ ಉತ್ಪಾದನ ವ್ಯವಸ್ಥೆಯೇ ಕೊಚ್ಚಿಹೋಗುತ್ತದೆ. ಅಪಾರ ಉತ್ಪಾದನಶಕ್ತಿಗಳು ಕಂಗಾಲಾಗಿ ಬೀಳುತ್ತವೆ. ಬೆಲೆ ಇಳಿಯದಂತೆ ತಡೆಗಟ್ಟಲು ಉತ್ಪಾದಿತವಾದ ಪದಾರ್ಥಗಳನ್ನು ನಾಶಪಡಿಸಲಾಗುತ್ತದೆ. ಇಷ್ಟುಮಾತ್ರವಲ್ಲ. ಈ ವಿಷಮ ಪರಿಸ್ಥಿತಿಯಿಂದ ಪಾರಾಗಲು ಬಂಡವಾಳ ಅರ್ಥವ್ಯವಸ್ಥೆ ಸದಾ ಪರಿಹಾರ ಮಾರ್ಗಗಳನ್ನು ಹುಡುಕುತ್ತಲೇ ಇರಬೇಕು. ಇವು ಬಂಡವಾಳ ವ್ಯವಸ್ಥೆ ಉಸಿರೆಳೆಯುವುದಕ್ಕೆ ತಾತ್ಕಾಲಿಕವಾಗಿ ಅವಕಾಶ ಮಾಡಿಕೊಟ್ಟರೂ ವಿಪತ್ತುಗಳಿಂದ ಅದಕ್ಕೆ ಪಾರೇ ಇಲ್ಲ. ಬಂಡವಾಳ ಶೇಖರಣೆ, ಬಂಡವಾಳದ ರಫ್ತು, ಉತ್ಪಾದನೆ, ವ್ಯಾಪಾರದಲ್ಲಿ ಏಕಸ್ವಾಮ್ಯ, ಮಾರುಕಟ್ಟೆಗಳ ಸಂಪಾದನೆ, ವಸಾಹತು ಯುದ್ಧ, ಪರಸ್ಪರ ಆಕ್ರಮಣಕಾರೀ ಯುದ್ಧ ಮುಂತಾದವು ಇದರ ಫಲ.

ಬಂಡವಾಳ ಅರ್ಥವ್ಯವಸ್ಥೆ ಇಂಥ ಬಿಕ್ಕಟ್ಟಿಗೆ ಸಿಕ್ಕಲು ಮತ್ತು ಕಾರ್ಮಿಕವರ್ಗದ ಕೊಳ್ಳುವ ಶಕ್ತಿಯನ್ನು ಕುಗ್ಗಿಸಲು ಅದು ನಡೆಸುತ್ತಿರುವ ಕಾರ್ಮಿಕವರ್ಗದ ಶೋಷಣೆಯೇ ಮುಖ್ಯಕಾರಣ. ಈ ಶೋಷಣೆ ಹೇಗೆ ನಡೆಯುತ್ತಿದೆ?–ಎಂಬುದೂ ಪರಿಶೀಲನಾರ್ಹ. ಲಾಭದ ಇನ್ನೊಂದು ಅರ್ಥವೇ ಶೋಷಣೆ. ನಿರೀಕ್ಷಿಸಿದಂತೆ ಬಂಡವಾಳಗಾರನಿಗೂ ದುಡಿಯುವವನಿಗೂ ವಿನಿಮಯ ವ್ಯಾಪಾರ ನಡೆಯುತ್ತದೆ. ಬಂಡವಾಳಗಾರ ದುಡಿಮೆಗಾಗಿ ಕೂಲಿ ಕೊಡುತ್ತಾನೆ. ಕೂಲಿಗಾರ ಕೂಲಿಗೆ ಪ್ರತಿಯಾಗಿ ದುಡಿಮೆ ಮಾಡುತ್ತಾನೆ. ಮೇಲು ನೋಟಕ್ಕೆ ಮೌಲ್ಯಕ್ಕೆ ಮೌಲ್ಯದ ವಿನಿಮಯವಾದಂತೆ ಕಾಣುತ್ತದೆ. ಆದರೆ ಶೋಷಣೆಯ ಅಥವಾ ಲಾಭಗಳಿಕೆಯ ರಹಸ್ಯ ಅಡಗಿರುವುದೇ ಇಲ್ಲಿ. ಬಂಡವಾಳಗಾರ ತಾನು ಪಡೆದ ದುಡಿಮೆಗೆ ಅನುಗುಣವಾದ ಕೂಲಿಯನ್ನು ಕೊಟ್ಟಂತೆ ಕಂಡರೂ ಕೂಲಿಗಾರ ತನ್ನ ದುಡಿಮೆಯಲ್ಲಿ ತಾನು ಪಡೆದಿರಬಹುದಾದ ಮೌಲ್ಯಕ್ಕಿಂತ ಎರಡು ಅಥವಾ ಮೂರು ಪಟ್ಟು ಹೆಚ್ಚಾಗಿ ಉತ್ಪಾದಿಸುತ್ತಾನೆ. ಆದರೆ ಒಪ್ಪಂದದ ಪ್ರಕಾರ ನಿಗದಿಯಾದ ಘಂಟೆಗಳ ದುಡಿಮೆಗೆ, ನಿಗದಿಯಾದ ಪರಿಮಾಣದ ಉತ್ಪನ್ನಕ್ಕೆ ನಿಗದಿಯಾದ ಕೂಲಿ, ಆದರೆ ವಾಸ್ತವವಾಗಿ ಕೂಲಿಗಿಂತ ಹೆಚ್ಚಿನ ಮೌಲ್ಯವೇ ಉತ್ಪತ್ತಿಯಾಗುತ್ತದೆ. ಆದರೆ ಈ ಅಧಿಕ ಮೌಲ್ಯ–ಅತಿರಿಕ್ತಮೌಲ್ಯ–ಕೂಲಿಗಾರನಿಗೆ ಲಭಿಸುವುದಿಲ್ಲ. ಮಾಲೀಕನಿಗೆ ಸಲ್ಲುತ್ತದೆ; ಇದು ಮಾಲೀಕನ ಲಾಭ.ಈ ಹೆಚ್ಚಿನ ಲಾಭ ಗಳಿಕೆಯ ರೂಪದಲ್ಲಿ ಬಂಡವಾಳವಾಗುತ್ತದೆ. ಇದೇ ರೀತಿಯಲ್ಲಿ ಹೆಚ್ಚಿಗೆ ಲಾಭಗಳಿಸಲು ಬಂಡವಾಳಗಾರ ಗಳಿಸಿರುವ ಬಂಡವಾಳವನ್ನು ಹೂಡುತ್ತಾನೆ. ಆದರೆ ಈ ಶೋಷಣೆಯನ್ನು ಕಾರ್ಮಿಕವರ್ಗ ವಿರೋಧಿಸುತ್ತದೆ. ಇದಕ್ಕೆ ತಾವಿಲ್ಲದಂತೆ ನಿರುದ್ಯೋಗ ನೋಡಿಕೊಳ್ಳುತ್ತದೆ. ಬಂಡವಾಳ ವ್ಯವಸ್ಥೆ ಸದಾ ಲಾಭ ಗಳಿಸುತ್ತಿರಬೇಕಾದರೆ ಅದಕ್ಕೆ ಆಸರೆಯಾಗಿ ಸದಾ ನಿರುದ್ಯೋಗ ಸಮೂಹ ಇರಲೇಬೇಕು. ಬಂಡವಾಳಗಾರ ತನ್ನ ಲಾಭಕ್ಕೆ ಧಕ್ಕೆ ಬರದಂತೆ ಇನ್ನೂ ಕಡಿಮೆ ದರದಲ್ಲಿ ದುಡಿಮೆಯನ್ನು ಕೊಂಡುಕೊಳ್ಳಲು ನಿರುದ್ಯೋಗಿಗಳಲ್ಲಿರುವ ಪೈಪೋಟಿ ಸಹಾಯಕ್ಕೆ ಬರುತ್ತದೆ. ಇದೇ ಬಂಡವಾಳ ಅರ್ಥವ್ಯವಸ್ಥೆಯಲ್ಲಿ ನಡೆಯುತ್ತಿರುವ ಶೋಷಣೆಯ ಅಥವಾ ಲಾಭಗಳಿಕೆಯ ಒಳಗುಟ್ಟು ಎನ್ನುತ್ತಾರೆ. ಮಾರ್ಕ್ಸ್ ಮತ್ತು ಎಂಗೆಲ್ಸ್.

ಈ ವಿರಸಗಳಿಗೆ ಬಂಡವಾಳ ಉತ್ಪಾದನ ಕ್ರಮದಲ್ಲಿ ತಲೆದೋರಿರುವ ದ್ವಂದ್ವ ಮತ್ತು ಪರಸ್ಪರ ವಿರೋಧಿ ಪ್ರವೃತ್ತಿಗಳೇ ಕಾರಣವೆಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ಮತ. ಈ ವ್ಯವಸ್ಥೆಯಲ್ಲಿ ಉತ್ಪಾದನಕಾರ್ಯವೊಂದು ಸಾಮಾಜಿಕ ಪ್ರಕ್ರಿಯೆ; ಆದರೆ ಅದರ ಫಲವನ್ನು ಅಪಹರಿಸುವವರು ಬಂಡವಾಳಿಗರು. ಈ ಪರಿಸ್ಥಿತಿಯಿಂದಾಗಿಯೇ ಎಲ್ಲ ತಳಮಳ.

ಬಂಡವಾಳ ಅರ್ಥವ್ಯವಸ್ಥೆ ತಂದುಕೊಟ್ಟಿರುವ ಅಪಾರ ಉತ್ಪಾದನಶಕ್ತಿಗಳಿಗೆ ಖಾಸಗೀ ಆಪೋಷಣೆಯೇ ಶೃಂಖಲೆಯಾಗಿ ಪರಿಣಮಿಸಿದೆ. ಈ ಶೃಂಖಲೆಯಿಂದ ಆಧುನಿಕ ಉತ್ಪಾದನ ಶಕ್ತಿಗಳನ್ನು ವಿಮೋಚನೆಗೊಳಿಸುವುದಕ್ಕೂ ಗೊತ್ತುಗುರಿಯಿಲ್ಲದೆ ಲಾಭಗಳಿಕೆಗಾಗಿ ಸ್ವೇಚ್ಛೆಯಿಂದ

ವರ್ತಿಸುತ್ತಿರುವ ವ್ಯವಸ್ಥೆಯನ್ನು ಸಮಾಜದ ಆವಶ್ಯಕತೆಗಳ ಪೂರೈಕೆಗಾಗಿ ನಡೆಯುವ ವ್ಯವಸ್ಥೆಯನ್ನಾಗಿ ಮಾಡುವುದಕ್ಕೂ ಶೋಷಣೆಯಿಂದ ಪಾರಾಗುವುದಕ್ಕೂ ಯೋಜನಾಬದ್ಧ ಉತ್ಪಾದನೆ ಮತ್ತು ಬೆಳೆವಣಿಗೆಗಳ ಮೂಲಕ ನಿರುದ್ಯೋಗ, ಆರ್ಥಿಕ ಮುಗ್ಗಟ್ಟು ಮುಂತಾದವುಗಳನ್ನು ನಿವಾರಿಸುವುದಕ್ಕೂ ಬಂಡವಾಳ ಉತ್ಪಾದನಕ್ರಮದಲ್ಲಿರುವ ಖಾಸಗಿ ಒಡೆತನ ಮತ್ತು ಅಪಹರಣಗಳ ದಮನಕ್ಕೂ ಕಾರ್ಮಿಕವರ್ಗ ಚಳವಳಿ ಮಾಡುತ್ತದೆ. ಇದೇ ಸಮಾಜವಾದಿ ಚಳವಳಿ, ಮಾನವಕೋಟಿ, ಅನಿವಾರ್ಯತೆಯ ಸೆರೆಯಿಂದ ಸ್ವಾತಂತ್ರ್ಯದ ಸೀಮೆಗೆ ನೆಗೆಯಲು ಆಧುನಿಕ ಅರ್ಥವ್ಯವಸ್ಥೆ ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟಿದೆ. ಅಡ್ಡ ಬಂದಿರುವುದು ಉತ್ಪಾದನಕ್ರಮದಲ್ಲಿ ಹುದುಗಿರುವ ಖಾಸಗಿ ಸ್ವಾಮ್ಯಪದ್ಧತಿ ಮಾತ್ರ. ಇದನ್ನು ತೊಡೆದು ಹಾಕುವುದೇ ಸಮಾಜೀಕರಣ. ಈ ಕಾರ್ಯವೇ ವ್ಯವಸ್ಥಿತ ಹೋರಾಟದ ಸಮಾಜವಾದೀ ಪ್ರಜ್ಞೆ.

ಕಾರ್ಮಿಕವರ್ಗ ನಡೆಸುವ ಸಮಾಜವಾದಿ ಆಂದೋಲನ ಮತ್ತು ಇದರಿಂದ ಸ್ಥಾಪಿತವಾಗುವ ಸಮಾಜವಾದಿ ವ್ಯವಸ್ಥೆ, ಆಡಳಿತ ಮುನ್ನಡೆ–ಇವುಗಳ ಬಗ್ಗೆ ಇನ್ನೂ ಕೆಲವು ಅಂಶಗಳನ್ನು ಗಮನಿಸಬೇಕು. ಪ್ರಪ್ರಥಮವಾದ ಮತ್ತು ಅತ್ಯಂತ ಪ್ರಧಾನವಾದ ಅಂಶವೆಂದರೆ ಕಾರ್ಮಿಕವರ್ಗದ ಸರ್ವಾಧಿಕಾರ (ಡಿಕ್ಟೇಟರ್‌ಷಿಪ್ ಆಫ್ ದಿ ಪ್ರೋಲಿಟೇರಿಯೆಟ್) ಕೇವಲ ಬಂಡಾಯ ನಡೆಸುವುದಕ್ಕೆ ಈ ಚಳವಳಿಯನ್ನು ಸೀಮಿತಗೊಳಿಸುವುದರ ಅಪಾಯದ ಬಗ್ಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ಎಚ್ಚರಿಕೆ ನೀಡಿದ್ದಾರೆ. ಸಮಾಜವಾದಿ ಕ್ರಾಂತಿ ಮಿಕ್ಕೆಲ್ಲ ಕ್ರಾಂತಿಗಳಂತಲ್ಲ. ಅರ್ಥವ್ಯವಸ್ಥೆಯಲ್ಲಿ ಬೇರೂರಿರುವ ಖಾಸಗಿ ಸ್ವಾಮ್ಯಪದ್ಧತಿ ಮತ್ತು ಅದರ ಶ್ರೇಷ್ಠತೆಯ ಬಗ್ಗೆ ಇರುವ ಭಾವನೆಯ ವಿರುದ್ಧ ಈ ಕ್ರಾಂತಿ ನಡೆದಿರುವುದರಿಂದ ಉಳಿದಿರುವ ಎಲ್ಲ ಸ್ವಾಮ್ಯ ವರ್ಗದ ಹಿತಾಸಕ್ತಿಗಳೂ ಈ ಆಂದೋಲನವನ್ನು ವಿರೋಧಿಸುವುದಲ್ಲದೆ, ನಾನಾ ಮಾರ್ಗಗಳಿಂದ ಇದನ್ನು ಹತ್ತಿಕ್ಕಲೂ ಯತ್ನಿಸುತ್ತವೆ. ಆದ್ದರಿಂದ ಈ ಹಿತಾಸಕ್ತಿಗಳ ದಮನಮಾಡುವುದೂ ಇವುಗಳ ಕೈಗೊಂಬೆಯಾದ ರಾಜ್ಯಶಕ್ತಿಯನ್ನು ವಶಪಡಿಸಿಕೊಳ್ಳುವುದೂ ಕಾರ್ಮಿಕವರ್ಗ ಕೈಗೊಳ್ಳಬೇಕಾದ ಪ್ರಥಮ ಕರ್ತವ್ಯ. ಇದು ಕಾರ್ಮಿಕ ವರ್ಗದ ಸರ್ವಾಧಿಕಾರದಿಂದ ಮಾತ್ರ ಸಾರ್ಥಯ. ಇದಕ್ಕಾಗಿ ಕಾರ್ಮಿಕವರ್ಗ ರಾಜ್ಯ ಶಕ್ತಿಯನ್ನು ಈ ಹಿತಾಸಕ್ತಿಗಳ ದಮನಕ್ಕಾಗಿ ಕ್ರೋಢೀಕರಿಸಬೇಕು. ಇಲ್ಲವಾದರೆ, ಪ್ರತಿಕ್ರಾಂತಿ ನಡೆದು ಆಂದೋಲನ ಅಲ್ಪಾಯುವಾದೀತು. ಈ ಕಾರ್ಮಿಕ ಸರ್ವಾಧಿಕಾರ ನಿರಂಕುಶ ಪ್ರಭುತ್ವವಲ್ಲ; ವರ್ಗಗಳ ದಮನಕ್ಕಾಗಿ ಜನಿಸಿರುವ ಈ ಪ್ರಭುತ್ವ ಸಾಮ್ಯವಾದಿಗಳ ಬಗ್ಗೆ ಸರ್ವಾಧಿಕಾರವಾಗಿ ಕಂಡುಬಂದರೆ ಅದು ವಿಧಿಯಿಲ್ಲದೆ ಕೈಗೊಳ್ಳಬೇಕಾದ ಕ್ರಮ; ಸಮಾಜವಾದಿ ಸಮಾಜದ ರಕ್ಷಣೆ ಅನವಶ್ಯವೆನಿಸುವಂಥ ಸ್ಥಿತಿ ಇರುವವರೆಗೂ ಇದು ನಡೆಯಲೇಬೇಕಾಗುತ್ತದೆ. ಈ ತೆರನಾದ ಪ್ರಭುತ್ವವನ್ನು ಸಾಮ್ಯ ವಾದಿಗಳು ಪ್ರಜಾಪ್ರಭುತ್ವದ ನಾಶವೆಂದೂ ನಿರಂಕುಶ ಪ್ರಭುತ್ವವೆಂದೂ ಕೂಗಿದರೆ ಅದು ಸ್ವಾರ್ಥ ಹಿತರಕ್ಷಣೆಯ ಸಾಧನಗಳನ್ನು ಕಳೆದುಕೊಂಡವರು ಎಬ್ಬಿಸುವ ಕೂಗು ಮಾತ್ರ; ನೈಜ ಪ್ರಜಾಪ್ರಭುತ್ವಕ್ಕೆ ಇದರಿಂದ ಯಾವ ಹಾನಿಯೂ ಇಲ್ಲ.

ಕಾರ್ಮಿಕವರ್ಗದ ಸರ್ವಾಧಿಕಾರ ಒಂದು ಸಾಧನ ಮಾತ್ರ. ವರ್ಗಗಳು, ವರ್ಗ ಮನೋಭಾವ, ವರ್ಗೋತ್ಪತ್ತಿಕಾರಕವಾದ ಬಂಡವಾಳ–ಅರ್ಥವ್ಯವಸ್ಥೆಯ ಅವಶೇಷಗಳು–ಇವು ಸಂಪೂರ್ಣವಾಗಿ ನಿರ್ಮೂಲವಾದ ಕಾಲಕ್ಕೆ ಕಾರ್ಮಿಕರ ಸರ್ವಾಧಿಕಾರ ಪ್ರಭುತ್ವವೂ ರಾಜ್ಯದ ದಮನಶಕ್ತಿಯ ಆವಶ್ಯಕತೆಯೂ ಇಲ್ಲದಂತಾಗುತ್ತದೆ. ಆಗ ಆಡಳಿತ ವ್ಯವಸ್ಥೆ ಮಾತ್ರ ಉಳಿಯುತ್ತದೆ. ಎರಡನೆಯದಾಗಿ, ಸಮಾಜವಾದಿ ಕ್ರಾಂತಿಯಾದ ಕೂಡಲೆ ಸಮಾಜವಾದಿ ವ್ಯವಸ್ಥೆಯ ಲಕ್ಷಣಗಳೆಲ್ಲವೂ ಸಿದ್ಧಪಡಿಸಿದ ರೀತಿಯಲ್ಲಿ ಲಭಿಸುವುದಿಲ್ಲ. ಈ ವ್ಯವಸ್ಥೆಯ ರಚನೆಗಾಗಿ ಸತತವಾಗಿ ದಿಟ್ಟ ಮತ್ತು ಯೋಜಿತ ಕಾರ್ಯಕ್ರಮಗಳಿಂದ ಶ್ರಮಿಸಬೇಕು. ಮೊದಮೊದಲು ಬಂಡವಾಳ ಅರ್ಥವ್ಯವಸ್ಥೆಯ ಅನೇಕ ಲಕ್ಷಣಗಳು ಇರುತ್ತವೆ. ಪ್ರತಿಯೊಬ್ಬನಿಂದಲೂ ಆತನ ಶಕ್ತ್ಯನುಸಾರದ ದುಡಿಮೆ ಪಡೆದು ಆತನ ದುಡಿಮೆಗೆ ತಕ್ಕ ಪ್ರತಿಫಲಕೊಡುವಷ್ಟು ಮಾತ್ರ ವ್ಯವಸ್ಥೆ ಮಾಡುವುದು ಸಾಧ್ಯ. ಈ ಕಾಲದಲ್ಲಿ ಪೂರ್ಣ ಸಮಾಜವಾದಿ ವ್ಯವಸ್ಥೆಯ ನಿರ್ಮಾಣಕ್ಕೆ ಆಧಾರಸ್ತಂಭಗಳನ್ನು ಮಾತ್ರ ಏರ್ಪಡಿಸಿಕೊಳ್ಳಬಹುದು. ನಿರ್ದೇಶನ ದೃಷ್ಟಿಯಿಂದ ಈ ಘಟ್ಟವನ್ನು ಮೊದಲನೆಯ ಅಥವಾ ಸಾಮಾನ್ಯ ಸಮಾಜವಾದಿ ಘಟ್ಟವೆಂದು ಹೇಳಬಹುದು. ಕ್ರಮೇಣ ಸಾಮೂಹಿಕ ಉತ್ಪಾದನಶಕ್ತಿ ವೃದ್ಧಿಗೊಂಡು, ವಿಪುಲ ಉತ್ಪಾದನೆ ಗಳಿಸಿದ ಅನಂತರ, ಮುಂದಿನ ಪೀಳಿಗೆಗಳಲ್ಲಿ ಸಮಾಜವಾದೀ ಜಾಗೃತಿ ವೃದ್ಧಿಗೊಂಡಂತೆ. ಸಮತಾ ಸಮಾಜದ ಘಟ್ಟ (ಕಮ್ಯೂನಿಸ್ಟ್ ಸೊಸೈಟಿ) ಬರುತ್ತದೆ. ಈ ಘಟ್ಟದಲ್ಲಿ ಪ್ರತಿಯೊಬ್ಬನೂ ತನ್ನ ಶಕ್ತ್ಯನುಸಾರ ದುಡಿಯಲಿಕ್ಕೂ ಆವಶ್ಯಕತೆಗಳಿಗೆ ಅನುಗುಣವಾಗಿ ಪ್ರತಿಫಲ ಗಳಿಸಿಕೊಳ್ಳಲಿಕ್ಕೂ ಸಾಧ್ಯವಾಗುತ್ತದೆ.

**ಮಾರ್ಕ್ಸ್–ಎಂಗೆಲ್ಸ್ ಅನಂತರದ ಕಾಲ :** ಮಾರ್ಕ್ಸ್ 1883ರಲ್ಲೂ ಎಂಗೆಲ್ಸ್ 1895ರಲ್ಲೂ ಮರಣಹೊಂದಿದರು. 1871ರಲ್ಲಿ ಶೋಷಿತ ಜನರ ನೇತೃತ್ವದಲ್ಲಿ ಫ್ರಾನ್ಸ್ ದೇಶದಲ್ಲಿ ಸ್ವಲ್ಪ ಕಾಲದವರೆಗೆ ಯಶಸ್ವಿಯಾಗಿ ವಿರಾಜಿಸಿದ ಪ್ಯಾರಿಸ್ ಕಮ್ಯೂನ್ ಎಂಬ ಕ್ರಾಂತಿಕಾರಿ ಮತ್ತು ಸಮಾಜವಾದಿ ಆಂದೋಲನವನ್ನು ಬಿಟ್ಟರೆ, ಒಂದನೆಯ ಮಹಾಯುದ್ಧ (1914–18) ಮುಗಿಯುವವರೆಗೂ ಯಾವ ಸಮಾಜವಾದಿ ಕ್ರಾಂತಿಯೂ ಯುರೋಪ್ ಖಂಡದಲ್ಲಾಗಲೀ ಪ್ರಪಂಚದ ಇತರ ಭಾಗಗಳಲ್ಲಾಗಲೀ ನಡೆಯಲಿಲ್ಲ. ಈ ಕಾರಣದಿಂದ ಅನೇಕ ಸಮಾಜವಾದಿ



ವಿ.ಐ. ಲೆನಿನ್

ಮುಖಂಡರು ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಸಿದ್ಧಾಂತವನ್ನು ತೀಕ್ಷ್ಣವಾದ ವಿಮರ್ಶೆಗೆ ಒಳಪಡಿಸಿದರು. ಸುಧಾರಣಾ ಸಮಾಜವಾದಿ ತತ್ತ್ವಕ್ಕೆ (ರಿಫಾರ್ಮಿಸ್ಟ್ ಸೋಷಿಯಲಿಸಂ) ಬೆಂಬಲ ಕೊಟ್ಟರು. ಇಷ್ಟಲ್ಲದೆ, ಬಂಡವಾಳ ವ್ಯವಸ್ಥೆಯ ಆರ್ಥಿಕ ಚಲನವಲನದ ಬಗ್ಗೆ ಅದು ವ್ಯಕ್ತಪಡಿಸುವ ಘರ್ಷಣೆಗಳ ಬಗ್ಗೆ, ಕಾರ್ಮಿಕವರ್ಗದ ಪಾತ್ರದ ಬಗ್ಗೆ–ಮಾರ್ಕ್ಸ್–ಎಂಗೆಲ್ಸ್ ರೂಪಿಸಿರುವ ಸಿದ್ಧಾಂತದಲ್ಲಿ ಅಪನಂಬಿಕೆ ವ್ಯಕ್ತಪಡಿಸಿದರು. ಮಾರ್ಕ್ಸ್–ಎಂಗೆಲ್ಸ್ ಸಿದ್ಧಾಂತ ತಪ್ಪು ಸೂಚನೆಗಳನ್ನು ಕೊಟ್ಟಿದೆಯೆಂದೂ ಬಂಡವಾಳ ಅರ್ಥವ್ಯವಸ್ಥೆ–ಯಾವ ವಿಪ್ಲವಕ್ಕೂ ಸಿಗದೆ ಸುಗಮವಾಗಿ ಬೆಳೆಯಬಲ್ಲುದೆಂದೂ ಬಂಡವಾಳ ಅರ್ಥವ್ಯವಸ್ಥೆಯ ಸುಗಮ ಬೆಳೆವಣಿಗೆಯಿಂದ ಕ್ರಾಂತಿಯ ಚಿಹ್ನೆಗಳು ಹತ್ತಿಕ್ಕಲು ಸಾಧ್ಯವಾಗಿರುವುದಲ್ಲದೆ ಅದರ ಸಾಧ್ಯತೆಯೂ ಸುಳ್ಳಾಗಿದೆಯೆಂದೂ ಸಾರಿದರು. ಇಂಥ ಪರಿಸ್ಥಿತಿಯಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ವಿಮರ್ಶನ ದಿಕ್ಸೂಚಿ ನಿಷ್ಪ್ರಯೋಜಕವಾಗಿ ಕಂಡುಬಂತು.

ಇದನ್ನು ನಂಬಬೇಕೆ ಅಥವಾ ತ್ಯಜಿಸಬೇಕೆ ಎಂಬುದನ್ನು ಹೇಳುವುದು ಕಷ್ಟವೆಂಬಷ್ಟು ಮಟ್ಟಿಗೆ ಒಂದನೆಯ ಮಹಾಯುದ್ಧ ಮುಕ್ತಾಯಕ್ಕೆ ಬರುತ್ತಿದ್ದಂತೆ ಇತಿಹಾಸವೇ ಹುಚ್ಚೆದ್ದು ಕುಣಿಯುವಂತೆ ಯುರೋಪ್ ಖಂಡದ ನಾನಾ ಮೂಲೆಗಳಲ್ಲಿ ಸಮಾಜವಾದೀ ಕ್ರಾಂತಿಯ ಆಸ್ಫೋಟನೆಗಳು ನಡೆದವೆಂಬುದನ್ನು ಗಮನಿಸಬೇಕು. ಇವುಗಳಲ್ಲಿ ಅತ್ಯಂತ ಪ್ರಾಮುಖ್ಯವಾದದ್ದು ರಷ್ಯದಲ್ಲಿ ಲೆನಿನನ ಮುಖಂಡತ್ವದಲ್ಲಿ ನಡೆದ ಸಮಾಜವಾದಿ ಕ್ರಾಂತಿ (1917). ಪ್ರಪಂಚದಲ್ಲಿ ಮೊಟ್ಟಮೊದಲನೆಯ ಬಾರಿಗೆ ಕಾರ್ಮಿಕರ ಪ್ರಭುತ್ವದ ಆಶ್ರಯದಲ್ಲಿ ಸಮಾಜವಾದಿ ಸಮಾಜದ ಘೋಷಣೆ ಆಯಿತು; ಕಮ್ಯೂನಿಸ್ಟ್ ರಾಜ್ಯವೊಂದರ ಉದಯವಾಯಿತು. ಆಕಸ್ಮಿಕವಾಗಿ ಸಮಾಜದ ಕ್ರಾಂತಿಯೊಂದು ನಡೆದಿದೆಯೆಂದೂ ಇದರಿಂದ ಸಮಾಜವಾದದ ವಿರೋಧಿಗಳು ಯಾವ ಬಗೆಯಲ್ಲೂ ಹೆದರಬೇಕಿಲ್ಲವೆಂದು ಅನೇಕರು ಸಾರುತ್ತಿದ್ದಂತೆಯೇ ಎರಡನೆಯ ಮಹಾಯುದ್ಧದ ಅನಂತರ ಪುನಃ ಪ್ರಪಂಚದಾದ್ಯಂತ ಅನೇಕ ರಾಷ್ಟ್ರಗಳು ಇಂಥ ಕ್ರಾಂತಿಯ ಸೆಳೆತಕ್ಕೆ ಸಿಕ್ಕಿದುವು. ಅನೇಕ ಸ್ವತಂತ್ರ ರಾಷ್ಟ್ರಗಳಲ್ಲಿ ಸಮಾಜವಾದಿ ಚಳವಳಿ ಯಶಸ್ವಿಯಾದರೆ, ವಸಾಹತುಗಳಲ್ಲಿ ರಾಷ್ಟ್ರೀಯ ವಿಮೋಚನ ಚಳವಳಿಗಳು ನಡೆದವು. ಈ ಚಳವಳಿಗಳು ತಳೆದ ರೂಪ ಯಾವುದೇ ಇರಲಿ, ಬಂಡವಾಳ ಅರ್ಥವ್ಯವಸ್ಥೆಯ ಸುಗಮ ನಿರ್ವಹಣೆಯ ತತ್ತ್ವಕ್ಕೆ ಇವುಗಳಿಂದ ತಿಲಾಂಜಲಿ ನೀಡಿದಂತಾಗಿದೆ. ಕಮ್ಯೂನಿಸ್ಟ್ ತತ್ತ್ವದ ಪ್ರಭಾವಕ್ಕೆ ಒಳಗಾಗಿವೆಯೋ ಎಂಬಂತೆ ಸಮಾಜವಾದಿ ವ್ಯವಸ್ಥೆಯ ಅನೇಕ ಮೂಲ ತತ್ತ್ವಗಳು–ಯೋಜನೆ, ಯೋಜಿತ ಉತ್ಪಾದನೆ ಮತ್ತು ಆರ್ಥಿಕ ಬೆಳೆವಣಿಗೆ, ಖಾಸಗಿ ಉತ್ಪಾದನೆಯ ಮೇಲೆ ಹತೋಟಿ, ಸರ್ಕಾರದ ವತಿಯಿಂದ ಕೈಗಾರಿಕೆಗಳ ಸ್ಥಾಪನೆ, ರಾಷ್ಟ್ರೀಕರಣ, ಭೂ ಸುಧಾರಣೆ ಮುಂತಾದವನ್ನು ಆಚರಣೆಗೆ ತರಲಾಗಿದೆ. ಬಂಡವಾಳ ವ್ಯವಸ್ಥೆಗೆ ಹೊಂದಿಕೊಂಡಿದ್ದ ಮತ್ತು ಶಾಶ್ವತವು ಸ್ವತಂತ್ರ ಸಮಾಜದ ಹೆಗ್ಗುರುತುಗಳು ಎಂದೆನ್ನಲಾದ ಅನೇಕ ಹಕ್ಕು ಮತ್ತು ಹಿತಗಳ ಮೇಲೆ ದಾಳಿ ನಡೆದಿದೆ. ಮಾರ್ಕ್ಸ್–ಎಂಗೆಲ್ಸರು ಆಧುನಿಕ ಸಮಾಜವಾದವನ್ನು ಬೋಧಿಸುವುದಕ್ಕೂ ಮುಂಚೆಯೇ ತಮ್ಮಲ್ಲಿ ಸಮಾಜವಾದದ ಪರಂಪರೆ ಬೆಳೆದು ಬಂದಿತ್ತೆಂದು ಸಮಾಜವಾದಿ ವ್ಯವಸ್ಥೆಯ ಕಟ್ಟಾ ವಿರೋಧಿಗಳು ಹೇಳಲಾರಂಭಿಸಿದ್ದಾರೆ. ಮಾರ್ಕ್ಸ್–ಎಂಗೆಲ್ಸರ ಸಿದ್ಧಾಂತದಲ್ಲಿ ಅಡಗಿರುವ ನಿಜಾಂಶಕ್ಕೆ ವೈಜ್ಞಾನಿಕ ಸಮಾಜವಾದಿ ತತ್ತ್ವದ ಇಷ್ಟೊಂದು ಯಶಸ್ವಿ ಮುನ್ನೋಟಕ್ಕೆ ಮತ್ತು ಅದು ಬೀರಿರುವ ಪ್ರಭಾವಕ್ಕೆ ಬೇರೊಂದು ಸಾಕ್ಷ್ಯ ಚಿತ್ರವನ್ನು ಕೊಡುವುದು ಅನವಶ್ಯಕವೆಂಬುದು ಸಮಾಜವಾದಿಗಳು ಇದಕ್ಕೆ ನೀಡುವ ಉತ್ತರ. (ಎಲ್.ಎಸ್.)

**ಕಮ್ಯೂನಿಸಂ, ಆದಿಮ :** ಮಾನವನ ಇತಿಹಾಸದ ಆದಿಕಾಲದಲ್ಲಿ ಇತ್ತೆಂದು ಹೇಳಲಾದ ವ್ಯವಸ್ಥೆ. ನೆಲವೇ ಮುಂತಾಗಿ ಎಲ್ಲ ಆಸ್ತಿಗಳ ಸಮಾನ ಒಡೆತನವಿದ್ದ ಆಗಿನ ವ್ಯವಸ್ಥೆ ಕಾರ್ಲ್‌ಮಾರ್ಕ್ಸ್ ಬೋಧಿತ ಕಮ್ಯೂನಿಸಂ ಅನ್ನೇ ಹೋಲುತ್ತದಾದ್ದರಿಂದ ಇದನ್ನು

ಆದಿಮ ಕಮ್ಯೂನಿಸಂ ಎಂದು ಕರೆಯಲಾಗಿದೆ. ಸಮಾಜ ವಿಕಾಸದ ಬಗ್ಗೆ 19ನೆಯ ಶತಮಾನದಲ್ಲಿ ಪ್ರತಿಪಾದಿತವಾದ ಸಿದ್ಧಾಂತಗಳ ಫಲವಾಗಿ ಈ ಪರಿಕಲ್ಪನೆ ಪ್ರಪ್ರಥಮವಾಗಿ ರೂಪುಗೊಂಡಿತು. ಸಮಕಾಲೀನರಾದ ಕೆಲವು ಆದಿಮ ಜನರ ಜೀವನ ವಿಧಾನಗಳನ್ನು ಗಮನಿಸಿ, ಇವು ಕಮ್ಯೂನಿಸಂ ಅನ್ನು ಹೋಲುವುದೆಂದು ಆದ್ದರಿಂದ ಮಾನವ ಇತಿಹಾಸದ ಆದಿ ಕಾಲದಲ್ಲಿ ಈ ಬಗೆಯ ಜೀವನ ಸಾರ್ವತ್ರಿಕವಾಗಿದ್ದಿರಬೇಕೆಂದು ಅನೇಕರು ವಾದಿಸಿದರು. ಇವರ ಪೈಕಿ ಡಬ್ಲ್ಯೂ.ಹೆಚ್. ಆರ್.ರಿವರ್ಸ್ ಮುಖ್ಯ. ಓಷಿಯಾನಿಯದ ಮೆಲನೇಷ್ಯದಲ್ಲಿರುವ ಜನರಲ್ಲಿ ಎರಡು ಬಗೆಯ ಕಮ್ಯೂನಿಸಂ ಅಥವಾ ಸಾಮೂಹಿಕ ಪದ್ಧತಿಗಳು ಇವೆಯೆಂದು ಆತ ಹೇಳಿದ್ದಾನೆ. ಒಂದು ಆಸ್ತಿಯ ಸಾಮೂಹಿಕ ಒಡೆತನ. ಲೈಂಗಿಕ ವಿಚಾರವನ್ನು ಕುರಿತದ್ದು ಇನ್ನೊಂದು. ನೆಲ, ದೋಣಿ ಮುಂತಾದುವುಗಳ ಒಡೆತನದ ವಿಚಾರದಲ್ಲಿ ಈ ಪದ್ಧತಿಯನ್ನನುಸರಿಸುತ್ತಿದ್ದ ಜನಾಂಗಗಳನ್ನು ಆತ ಗುರುತಿಸಿದ್ದಾನೆ. ವ್ಯಕ್ತಿಯನ್ನು ಸಮಷ್ಟಿಯಲ್ಲಿ ಅಂತರ್ಗತಗೊಳಿಸುವ ಪ್ರಯತ್ನದಲ್ಲಿ ಆಸ್ತಿಯ ಸಾಮೂಹಿಕ ಒಡೆತನ ವ್ಯವಸ್ಥೆ ಒಂದು ಅನಿವಾರ್ಯ ಕ್ರಮವಾಗಿತ್ತೆಂದು ಇ.ಡರ್ಖೀಮ್ ವಾದಿಸಿದ್ದಾನೆ.

ಇತಿಹಾಸಪೂರ್ವ ಮಾನವ ಸಮಾಜ ಸ್ವರೂಪವನ್ನು ಕುರಿತು ಮಾರ್ಗನ್ ನಡೆಸಿದ ಸಂಶೋಧನೆಗಳ ಆಧಾರದ ಮೇಲೆ ಮಾರ್ಕ್ಸ್–ಎಂಗೆಲ್ಸರು ಈ ಪರಿಕಲ್ಪನೆಗೆ ಹೆಚ್ಚಿನ ಪ್ರಾಮುಖ್ಯ ನೀಡಿದರು. ಪ್ರಾಚೀನ ಕಾಲದಲ್ಲಿದ್ದು ಅನಂತರ ರೂಢಿಚ್ಯುತವಾದ ಮಾನವ ಸಮಾಜದ ಉತ್ಕರ್ಷಕಾಲದಲ್ಲಿದ್ದ ಪದ್ಧತಿಯ ಕಡೆಗೆ ಈಗಿನ ಸಮಾಜವು ಅನಿವಾರ್ಯವಾಗಿ ಸಾಗುತ್ತಿದೆ ಎಂಬುದು ಆದರೆ ಈಗಿನದು ಪ್ರಜ್ಞಾಪೂರ್ವಕವಾದ ವಿಕಾಸವೆಂದು ಇದು ಶಾಶ್ವತ ವ್ಯವಸ್ಥೆ ಎಂಬುದು ಇವರ ಭಾವನೆಯಾಗಿತ್ತು. ಈ ಅಭಿಪ್ರಾಯಕ್ಕೆ 20ನೆಯ ಶತಮಾನದ ಮಾನವಶಾಸ್ತ್ರಜ್ಞರನೇಕರು ಅಷ್ಟೇನು ಪ್ರಾಶಸ್ತ್ಯ ನೀಡಲಿಲ್ಲ. ಆದಿಮ ಜನರ ಜೀವನ ಸ್ಥಿತಿಯ ಬಗ್ಗೆ ಸಾಕಷ್ಟು ವಿವರಗಳಿಲ್ಲದೆ ಯಾವುದೇ ಸಮಗ್ರ ಚಿತ್ರವನ್ನು ರೂಪಿಸುವುದು ಸಾಧ್ಯವಿಲ್ಲವೆಂಬುದು ಕೆಲವರ ವಾದ. ಆದರೆ ಸೋವಿಯತ್ ವಿದ್ವಾಂಸರನೇಕರು ಮಾರ್ಗನನ ದೃಷ್ಟಿಯನ್ನು ಎತ್ತಿ ಹಿಡಿದಿದ್ದಾರೆ. ಗುಂಪಿನ ಜೀವನ ಆಸ್ತಿಯ ಸಾಮೂಹಿಕ ಒಡೆತನ–ಇವು ಆರಂಭ ಕಾಲದಲ್ಲಿ ಸಾರ್ವತ್ರಿಕವಾಗಿದ್ದುವೆಂದು ಕ್ರಮೇಣ ಖಾಸಗಿ ಆಸ್ತಿ, ಕೌಂಟುಂಬಿಕ ಜೀವನ ಇವೆಲ್ಲವೂ ಬಂತೆಂದು ಇವರು ವಾದಿಸುತ್ತಾರೆ.

ಕಮ್ಯೂನಿಸಂ ಕುರಿತು ಈಗಿನವರ ಪರಿಕಲ್ಪನೆಗೆ ಅನುಸಾರವಾದ ಒಂದು ಸಮಗ್ರ ವ್ಯವಸ್ಥೆ ಮಾನವನ ನಾಗರಿಕತೆಯ ಇತಿಹಾಸದ ಆರಂಭಕಾಲದಲ್ಲಿ ಇತ್ತೆಂಬುದಾಗಿ ವಾದಿಸಲು ನೀಡಬಹುದಾದ ಆಧಾರಗಳು ಪರಿಪೂರ್ಣವಲ್ಲವೆಂದು ಕೆಲವರು ವಾದಿಸಿದರೆ, ಇಂಥ ವ್ಯವಸ್ಥೆ ಇರಲಿಲ್ಲವೆನ್ನುವುದಕ್ಕೂ ಆಧಾರಗಳು ಅಷ್ಟೆ ಅಪರಿಪೂರ್ಣವೆಂದು ಇನ್ನೂ ಕೆಲವರು ವಾದಿಸುತ್ತಾರೆ. ಈಗಲೂ ವಿಶ್ವದ ಹಲವೆಡೆಗಳ ಆದಿವಾಸಿ ಜನಾಂಗಗಳಲ್ಲಿರುವ ನಾನಾ ಪದ್ಧತಿಗಳಲ್ಲಿ ಕೆಲವನ್ನು ಆದಿಮ ಕಮ್ಯೂನಿಸಂ ಸಮರ್ಥನೆಗೆ ಉದಾಹರಿಸಬಹುದಾದರೆ ಇನ್ನೂ ಕೆಲವನ್ನು ಅದಕ್ಕೆ ವಿರುದ್ಧವಾದ ಪ್ರತಿಪಾದನೆಗೂ ಉದಾಹರಿಸಬಹುದಾಗಿದೆ. ಈ ಬಗ್ಗೆ ಇದಮಿತ್ಥಂ ಎಂದು ನಿರ್ಣಯ ನುಡಿಯುವುದು ಅಸಾಧ್ಯ. (ಬಿ.ಎಸ್.ಎಚ್.)

**ಕಮ್ಯೂನಿಸ್ಟ್, ದಿ :** ಮಾರ್ಕ್ಸ್ ವಾದ, ಲೆನಿನ್ ವಾದದ ತಾತ್ತ್ವಿಕ ಪ್ರತಿಪಾದನೆಯೇ ಮುಖ್ಯ ಉದ್ದೇಶವೆಂದು ಘೋಷಿಸಿಕೊಂಡು ಕೆ.ದಾಮೋದರನ್ ಸಂಪಾದಕತ್ವದಲ್ಲಿ 1945ರಲ್ಲಿ ಆರಂಭವಾದ ಕೇರಳೀಯ ಪತ್ರಿಕೆ. ಇದರ ಪ್ರಾರಂಭದ ಕೆಲವು ಸಂಚಿಕೆಗಳಲ್ಲಿ ಕೆ.ದಾಮೋದರನ್, ಇ.ಎಂ.ಎಸ್. ನಂಬೂದಿರಿಪಾದ್, ಎಂ.ಎಸ್.ದೇವದಾಸ್, ಸಿ.ಉನ್ನಿರಾಜ ಮೊದಲಾದವರ ಲೇಖನಗಳು ಪ್ರಕಟವಾದವು. ಪತ್ರಿಕೆಯಲ್ಲಿ ದಿನವಹಿ ವಿಚಾರ ವ್ಯವಹಾರಗಳಲ್ಲದೆ ಕಮ್ಯೂನಿಸ್ಟ್ ಪಕ್ಷದ ತಾತ್ತ್ವಿಕ ಸಮಸ್ಯೆಗಳ ಬಗ್ಗೆ ಪಕ್ಷದ ಸದಸ್ಯರ ದೀರ್ಘ ಚರ್ಚೆಗಳು ಬರುತ್ತಿದ್ದುವು. 1946ರ ಹೊತ್ತಿಗೆ ಎಲ್ಲಾ ಕಮ್ಯೂನಿಸ್ಟ್ ಮುಖಂಡರು ಭೂ ಮಾಲೀಕರಿಂದ ಬತ್ತ ವಶಪಡಿಸಿಕೊಳ್ಳುವ ಹೋರಾಟದ ಸಂಬಂಧದಲ್ಲಿ ಬಂಧನಕ್ಕೊಳಗಾಗಿದ್ದರು. 1947 ಆಗಸ್ಟ್‌ನಲ್ಲಿ ಅವರೆಲ್ಲ ಸೆರೆಯಿಂದ ಬಿಡುಗಡೆ ಹೊಂದಿದರಾದರೂ 1948 ಮಾರ್ಚ್‌ನಲ್ಲಿ ಬಿ.ಟಿ.ರಣದೀವೆಯಿಂದ ಸಂಘಟಿತವಾದ ಕಾನೂನುಬಾಹಿರ ಕಾರ್ಯಕ್ರಮಗಳ ಸಂಬಂಧವಾಗಿ ಅವರಲ್ಲಿ ಅನೇಕರು ಭೂಗತರಾದರು; ಉಳಿದವರು ಬಂಧಿತರಾದರು. ಏತನ್ಮಧ್ಯೆ ಕಮ್ಯೂನಿಸ್ಟ್ ಪತ್ರಿಕೆ ಅವಸಾನ ಹೊಂದಿತು. ಪತ್ರಿಕೆಯನ್ನು ಪೋಷಿಸುವವರೇ ಇಲ್ಲವಾದದ್ದು ಕಮ್ಯೂನಿಸ್ಟ್ ಪಕ್ಷದವರು ಕೋಲ್ಕೊತ್ತದಲ್ಲಿ ಸ್ವೀಕರಿಸಿದ ಉಗ್ರ ನೀತಿಯೂ ಇದರ ಅವನತಿಗೆ ಕಾರಣ. (ಟಿ.)

**ಕಮ್ಯೂನಿಸ್ಟ್ ಪಕ್ಷಗಳು, ವಿಶ್ವದ :** 1917 ಅಕ್ಟೋಬರ್ ಕ್ರಾಂತಿ ಜಯಪ್ರದವಾಗಿ, ರಷ್ಯದಲ್ಲಿ ಕಮ್ಯೂನಿಸ್ಟ್ ಸರ್ಕಾರ ಸ್ಥಾಪಿತವಾದಾಗ, ಇದೇ ವಿಧಾನಗಳಿಂದ ತಮ್ಮತಮ್ಮ ದೇಶಗಳಲ್ಲಿ ರಾಜಕೀಯ ಆರ್ಥಿಕ ಸಾಮಾಜಿಕ ಪರಿವರ್ತನೆಗಳನ್ನು ಸಾಧಿಸುವ ಉದ್ದೇಶದಿಂದ ವಿಶ್ವದ ಹಲವು ರಾಷ್ಟ್ರಗಳಲ್ಲಿ ಸ್ಥಾಪಿತವಾದ ಪಕ್ಷಗಳು. ಈ ಎಲ್ಲ ಪಕ್ಷಗಳಿಗೂ ಕಮ್ಯೂನಿಸ್ಟ್ ಸಿದ್ಧಾಂತದ ಮೂಲ ಪುರುಷರಾದ ಮಾರ್ಕ್ಸ್ ಮತ್ತು ಎಂಗೆಲ್ಸರೇ ಅಲ್ಲದೆ ಅನಂತರ ಬಂದ ಲೆನಿನ್, ಸ್ಟಾಲಿನ್, ಮಾವೋತ್ಸೆ–ಟುಂಗ್ ಮೊದಲಾದ ಅನೇಕ ನಾಯಕರು ಕಾಲದಿಂದ ಕಾಲಕ್ಕೆ ಮಾರ್ಗದರ್ಶನ ನೀಡಿದ್ದಾರಲ್ಲದೆ, ಮಾರ್ಕ್ಸ್–ಎಂಗೆಲ್ಸ್ ಪ್ರತಿಪಾದಿತವಾದ ಮೂಲ ತತ್ತ್ವಗಳನ್ನು ಪರಿಷ್ಕರಿಸಿ, ಅಗತ್ಯವಿದ್ದೆಡೆಗಳಲ್ಲಿ ಪುನಃ ರೂಪಿಸಿ ಬೆಳೆಸಲು ಕಾರಣರಾಗಿದ್ದಾರೆ. ಮೂಲತಃ ಎಲ್ಲಾ ಪಕ್ಷಗಳಿಗೂ ಸೂಕ್ತ ನಿರ್ದೇಶನ ನೀಡುವ ಹೊಣೆಯನ್ನು ಸೋವಿಯತ್ ಕಮ್ಯೂನಿಸ್ಟ್ ಪಕ್ಷವೇ ನಿರ್ವಹಿಸುತ್ತಿತ್ತಾದರೂ ಎರಡನೆಯ ಮಹಾಯುದ್ಧದ ಅನಂತರದ ಕಾಲದಲ್ಲಿ ಅನೇಕ ಕಮ್ಯೂನಿಸ್ಟ್ ಪಕ್ಷಗಳು ಹೆಚ್ಚು ಹೆಚ್ಚು ಸ್ವತಂತ್ರ ಧೋರಣೆ ತಳೆದಿವೆ. ಪ್ರಾದೇಶಿಕ ಸನ್ನಿವೇಶಗಳು ವಿಶಿಷ್ಟ ಐತಿಹಾಸಿಕ ಕಾರಣಗಳು ಇವುಗಳ ಮೇಲೆ ಪ್ರಬಲ ಪ್ರಭಾವ ಬೀರುತ್ತಿವೆ. ಉತ್ಪಾದನಾ ಸಾಧನಗಳ ಸರ್ಕಾರಿ ಒಡೆತನ, ಸಾಮೂಹಿಕ ಬೇಸಾಯ, ಯೋಜನಾಬದ್ಧ ಆರ್ಥಿಕಾಭಿವೃದ್ಧಿ, ಬಲಪ್ರಯೋಗದಿಂದ ಅಧಿಕಾರ ಸ್ವಾಧೀನ, ಕಾರ್ಮಿಕ ಸರ್ವಾಧಿಕಾರದ ಅನಿವಾರ್ಯತೆ, ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಸಾಮ್ರಾಜ್ಯ ಸ್ಥಾಪನೆ – ಮುಂತಾದ ಅದರ ನಾನಾ ಆದರ್ಶಗಳಲ್ಲಿ ಕಾಲದಿಂದ ಕಾಲಕ್ಕೆ ವ್ಯತ್ಯಾಸ ಗಳುಂಟಾಗಿವೆ. ಬಂಡವಾಳ ವ್ಯವಸ್ಥೆಯ ಅಡಿಯಲ್ಲೇ–ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕವೇ–ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದು, ಪ್ರತಿಗಾಮಿ ಶಕ್ತಿಗಳನ್ನು ಹತ್ತಿಕ್ಕಿ, ಪ್ರಗತಿ ಶಕ್ತಿಗಳನ್ನು ಸಂಘಟಿಸಿ ಪ್ರಬಲಗೊಳಿಸಿ ಸಮಾಜವಾದ ಸ್ಥಾಪಿಸುವ ಸಾಧ್ಯತೆಯನ್ನು ಪ್ರಯೋಗಿಸಿ ನೋಡಲಾಗುತ್ತಿದೆ. ಬಂಡವಾಳವಾದಿ ರಾಷ್ಟ್ರಗಳ ನಡುವೆ ಭದ್ರಕೋಟೆಯಂತೆ ಸೋವಿಯತ್ ದೇಶದ ಸ್ಥಾಪನೆಯಾಗಿರುವುದರಿಂದ ಈ ಹಿರಿಯಣ್ಣನ ಶಕ್ತಿ ದಕ್ಷತೆಗಳು ಸಮಾಜವಾದಿ ವ್ಯವಸ್ಥೆಯ ಹಿರಿಮೆಯನ್ನು ಮನದಟ್ಟು ಮಾಡಿಕೊಟ್ಟು, ಸಂದೇಹಗ್ರಸ್ತರ ಮನಃಪರಿವರ್ತನೆಗೆ ಸಾಧಕವಾಗಬಹುದೆಂಬ ಅಭಿಪ್ರಾಯವೂ ಉಂಟು. ಎರಡನೆಯ ಮಹಾಯುದ್ಧವಾದ ಮೇಲೆ ಪೂರ್ವ ಯುರೋಪಿನ ರಾಷ್ಟ್ರಗಳಲ್ಲೂ ಚೀನ, ಉತ್ತರ ಕೊರಿಯ, ಉತ್ತರ ವಿಯೆಟ್ನಾಂಗಳು ಕಮ್ಯೂನಿಸ್ಟ್ ಸರ್ಕಾರಗಳು ಬಂದಿರುವುದೇ ಅಲ್ಲದೆ ದೂರದ ಕ್ಯೂಬವು ಕಮ್ಯೂನಿಸ್ಟ್ ಹೊರಸ್ತಂಭಗಳಲ್ಲೊಂದಾಗಿವೆ. ಈ ಕಾರಣಗಳಿಂದಾಗಿ ಭವಿಷ್ಯ ಜಗತ್ತು ಕಮ್ಯೂನಿಸ್ಟರಾದ ತಮ್ಮದು; ತಮ್ಮದು ಬೆಳೆಯುತ್ತಿರುವ ವ್ಯವಸ್ಥೆ; ಆದ್ದರಿಂದ ಹಿಂಸಾತ್ಮಕ ಕ್ರಾಂತಿ ಯಾವಾಗಲೂ ಎಲ್ಲೆಡೆಗಳಲ್ಲೂ ಅನಿವಾರ್ಯವೇನೂ ಅಲ್ಲ–ಎಂಬ ಭಾವನೆಯೂ ಇದೆ. ಆದರೆ ಚೀನಿ ಪಕ್ಷ ಇದಕ್ಕೆ ಸೊಪ್ಪು ಹಾಕುವುದಿಲ್ಲ. ಬಂದೂಕದ ನಳಿಕೆಯೊಳಗಿಂದ ಶಕ್ತಿಯ ಉದ್ಭವವಾಗುವುದೆಂಬುದು ಮಾವೋವಾಣಿ. ಕೈಗಾರಿಕೆಯಲ್ಲಿ ಆತ್ಯಂತಿಕ ಪ್ರಗತಿ ಸಾಧಿಸಿರುವ ಸೋವಿಯತ್ ದೇಶವೀಗ ಕ್ರಮವಾಗಿ ಪರಿಷ್ಕರಣಾವಾದಿಯಾಗಿ ಬಂಡವಾಳ ವ್ಯವಸ್ಥೆಯ ಕಡೆಗೆ ಜಾರಿಹೋಗುತ್ತಿದೆಯೆಂದು ಪಟ್ಟಭದ್ರ ಆಡಳಿತವರ್ಗದ ಕಟ್ಟುಕಟ್ಟಳೆಗಳಿಂದಾಗಿ ಕಮ್ಯೂನಿಸ್ಟ್ ಸರಳ ಸಿದ್ಧಾಂತವೇ ಅಲ್ಲಿ ಬಡವಾಗುತ್ತಿವೆ ಎಂದು ಜಡವಾಗುತ್ತಿದೆ ಎಂದು ಚೀನಿ ಪಕ್ಷದ ವಾದ. ನಾನಾ ಸಿದ್ಧಾಂತಿಕ ಭಿನ್ನತೆಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ವಿಶ್ವ ಕಮ್ಯೂನಿಸ್ಟ್ ಪಕ್ಷಗಳ ಸಹಭಾವ ಕ್ಷಿಪ್ರಾತಿಕ್ಷಿಪ್ರವಾಗಿ ಕ್ಷಯಿಸಿಹೋಗುತ್ತಿದೆ. ಸೋವಿಯತ್ ದೇಶವೇ ಕಮ್ಯೂನಿಸ್ಟರ ಪುಣ್ಯ ಭೂಮಿ, ಪಿತೃಭೂಮಿ; ಮಾಸ್ಕೋ ಅವರ ತೀರ್ಥಕ್ಷೇತ್ರ–ಎಂಬ ವಾದವನ್ನೊಪ್ಪದೆ 1948ರಲ್ಲಿ ಸಿಡಿದೆದ್ದ ಯುಗೋಸ್ಲೋವಿಯಾದ ಕಮ್ಯೂನಿಸ್ಟ್ ಪಕ್ಷದ ನಿಲುವಿಗೆ ಈಗ ಆ ಪಕ್ಷವೇ ನಿರೀಕ್ಷಿಸದಿದ್ದ ಮತ್ತು ಬಯಸದಿದ್ದ ರೀತಿಯಲ್ಲಿ ಚೀನೀ ಪಕ್ಷದ ಸಮರ್ಥನೆ ದೊರಕಿದೆ. ಯುಗೋಸ್ಲೋವಿಯವಾದರೋ ಈಗ ಸೋವಿಯತ್ ಪಕ್ಷದ ಕಡೆಗೆ ಹಿಂದಿಗಿಂತ ಹೆಚ್ಚಾಗಿ ಸರಿದುಬಂದಿದೆ.

ಕಮ್ಯೂನಿಸ್ಟ್ ಚಳವಳಿಯ ಅಂಕುರಾರ್ಪಣವಾದದ್ದು 19ನೆಯ ಶತಮಾನದ ಅಂತ್ಯಕಾಲದಲ್ಲಿ. ಕೈಗಾರಿಕಾ ಕ್ರಾಂತಿಯ ವೈಪರೀತ್ಯಗಳ ಪರಿಣಾಮವಾಗಿ ಪಶ್ಚಿಮ ಯುರೋಪಿನಲ್ಲೆಲ್ಲ ಆಗ ಕಾರ್ಮಿಕ ಅಶಾಂತಿ ಹಬ್ಬಿತ್ತು. ರಷ್ಯದಲ್ಲಿ ಕೈಗಾರಿಕೆಗಳು ಅಷ್ಟೇನು ಬೆಳೆದಿರಲಿಲ್ಲ. ಆದರೆ ಅಲ್ಲಿ ಕ್ರಾಂತಿಗೆ ಎಲ್ಲವೂ ಅಣಿಯಾಗಿತ್ತು. ಇಡೀ ರಷ್ಯದಲ್ಲಿ ಆಗ ಕೇವಲ 24 ಲಕ್ಷ ಮಂದಿ ಕಾರ್ಮಿಕರಿದ್ದರೂ ಅವರಲ್ಲಿ ಪಶ್ಚಿಮದಿಂದ ಬಂದ ಮಾರ್ಕ್ಸಿಸ್ಟ್ ಸಾಹಿತ್ಯ ಪ್ರಚಾರವಾಗಿತ್ತು. 1889ರಲ್ಲಿ ಐರೋಪ್ಯಕಾರ್ಮಿಕರು ರಚಿಸಿಕೊಂಡಿದ್ದ ದ್ವಿತೀಯ ಅಂತಾರಾಷ್ಟ್ರೀಯದಲ್ಲಿ ರೂಪಿತವಾಗಿದ್ದ ಭಾವನೆಗಳು ರಷ್ಯದಲ್ಲೂ ಹಬ್ಬಿದ್ದುವು. ಶಾಂತಿಯುತ ವಿಧಾನಗಳಿಂದ ಸಮಾಜವಾದದ ಸ್ಥಾಪನೆ ಸಾಧ್ಯವಾದೀತೆಂದೇ ಇವರ ಆಸೆ. ಆದರೆ ರಷ್ಯದ ಪರಿಸ್ಥಿತಿಗಳು ಈ ನಿರೀಕ್ಷೆಯನ್ನು ಸುಳ್ಳಾಗಿಸಿದುವು. 1895ರಲ್ಲಿ ಸೇಂಟ್ ಪೀಟರ್ಸ್ ಬರ್ಗಿನಲ್ಲಿ ಕಾರ್ಮಿಕ ವರ್ಗ ವಿಮೋಚನಾ ಸಮರ ಸಂಘದ ಸ್ಥಾಪನೆಯಾದಾಗ ಅದರ ದಾರಿ ಬೇರೆಯಾಯಿತು. ಲೆನಿನ್ ಇದರ ಸ್ಥಾಪಕರಲ್ಲೊಬ್ಬ.

ಇತರ ನಗರಗಳಲ್ಲೂ ಈ ಬಗೆಯ ಸಂಘಗಳು ಸ್ಥಾಪಿತವಾದವು. 1898ರಲ್ಲಿ ಮಿನ್ಸ್ಕನಲ್ಲಿ ಸೇರಿದ್ದ ಈ ನಾನಾ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ರಷ್ಯನ್ ಸಮಾಜವಾದಿ ಪ್ರಜಾಸತ್ತಾತ್ಮಕ ಕಾರ್ಮಿಕ ಪಕ್ಷದ ಸ್ಥಾಪನೆಯಾಯಿತು. ಆಗಲೇ ಕಮ್ಯೂನಿಸ್ಟ್ ಪಕ್ಷ ಜನ್ಮ ತಳೆಯಿತೆನ್ನಬಹುದು. ದಬ್ಬಾಳಿಕೆ ಮತ್ತು ಬಂಡವಾಳಗಳ ವಿರುದ್ಧ ಹೋರಾಟ ನಡೆಸಬೇಕೆಂದು ಆ ಸಭೆಯಿಂದ ಒಂದು ಪ್ರಣಾಳಿಕೆ ಹೊರಬಿತ್ತು. ಆದರೆ ಅನಂತರ ಪಕ್ಷದ ನಾಯಕರನೇಕರು ಸೆರೆಯಾದರು. ಉಳಿದ ಕೆಲವರು ಭೂಗತರಾದರು.

19ನೆಯ ಶತಮಾನದ ಅವಸಾನಕಾಲದಲ್ಲಿ ಯುರೋಪಿನಲ್ಲೆಲ್ಲ ವ್ಯಾಪಿಸಿದ ಕೈಗಾರಿಕಾ ಮುಗ್ಗಟ್ಟು ರಷ್ಯಕ್ಕೆ ಹೊರತಾಗಿಲ್ಲ. ದಿವಾಳಿತನ ನಿರುದ್ಯೋಗಗಳು ಸಾರ್ವತ್ರಿಕವಾದವು. ಪ್ರದರ್ಶನಗಳು ಪ್ರತಿಭಟನೆಗಳು, ಮುಷ್ಕರಗಳು ಪರಿಸ್ಥಿತಿಯನ್ನು ವಿಷಮಗೊಳಿಸಿದವು. 1897ರಲ್ಲಿ ಸೈಬೀರಿಯಕ್ಕೆ ಗಡಿಪಾರಾಗಿದ್ದ ಲೆನಿನ್ ರಷ್ಯಕ್ಕೆ ಹಿಂದಿರುಗಿ ಮತ್ತೆ ತನ್ನ ಕಲಾಪಗಳಲ್ಲಿ ತೊಡಗಿದ. ರಷ್ಯನ್ ಸಮಾಜವಾದಿ ಪ್ರಜಾಸತ್ತಾತ್ಮಕ ಪಕ್ಷ ಮತ್ತೆ ಸ್ಥಾಪನೆಯಾಯಿತು (1903). ಇದಾದದ್ದು ರಷ್ಯದಲ್ಲಲ್ಲ, ಬೆಲ್ಜಿಯಂನ ಬ್ರೆಸೆಲ್ಸಿನಲ್ಲಿ. ರಷ್ಯದಲ್ಲಿ ನಾಯಕರು ಮತ್ತೆ ದಸ್ತಗಿರಿಯಾಗುವ ಸಂಭವವಿತ್ತು. ಬ್ರೆಸಲ್ಸಿನ ಅಧಿವೇಶನವು ಪೋಲೀಸರ ಕಣ್ಣಿಗೆ ಬಿದ್ದುದ್ದರಿಂದ ಕಲಾಪಗಳ ಮಧ್ಯದಲ್ಲೇ ಲಂಡನ್ನಿಗೆ ಹೋದರು.

ಆದರೆ ಆಗಲೂ ಈ ಪಕ್ಷವನ್ನು ಎಡಬಲ ಗುಂಪುಗಳು ಕಾಡಿಸದಿರಲಿಲ್ಲ. ಲೆನಿನ್ನನದು ವಾಮಪಕ್ಷ. ಕೇಂದ್ರ ಶಿಸ್ತಿನ ಹೋರಾಟ ಪಡೆಯಂತೆ ಪಕ್ಷದ ವ್ಯವಸ್ಥೆಯಾಗಬೇಕೆಂಬುದು ಲೆನಿನ್ ಅಭಿಪ್ರಾಯ. ಪಕ್ಷದ ಶಿಸ್ತಿಗೆ ಬದ್ಧರಾದವರು ಅದರ ಕಾರ್ಯಕ್ರಮಗಳನ್ನು ನಿರ್ವಹಿಸುವವರು ಚಂದಾ ಸಲ್ಲಿಸುವವರು ಸದಸ್ಯರು. ಪಕ್ಷದ ನೀತಿಯಲ್ಲಿ ಕೇವಲ ಸಹಾನುಭೂತಿಯಿರುವವರು ಸದಸ್ಯರಾಗತಕ್ಕದ್ದಲ್ಲ. ಇದು ಲೆನಿನ್ ವಾದ. ಟ್ರಾಟ್ಸ್ಕಿಯದು ಇದಕ್ಕೆ ವಿರೋಧವಾದ ಅಭಿಪ್ರಾಯ. ಆತ ಬಲಗುಂಪಿನ ನಾಯಕ. ಪಕ್ಷದ ಕಾರ್ಯಕ್ರಮವನ್ನೊಪ್ಪುವ, ಅದಕ್ಕೆ ಪ್ರತ್ಯಕ್ಷ, ಪರೋಕ್ಷ ನೆರವು ನೀಡುವ ಎಲ್ಲರು ಸದಸ್ಯರಾಗಬಹುದೆಂದು ಅವನ ವಾದ. ತತ್ಕಾಲದಲ್ಲಿ ಬಲಗುಂಪಿಗೆ ಬಹುಮತವಿತ್ತು. ಆದರೆ ಮುಂದೆ ಅದರ ಕೆಲವು ಧೋರಣೆಗಳನ್ನೊಪ್ಪದವರು ಹೊರಬಂದಿದ್ದರಿಂದ ಕೇಂದ್ರಸಮಿತಿಯಲ್ಲಿ ಎಡಗುಂಪಿನ ಕೈ ಮೇಲಾಯಿತು. ಬಹುಸಂಖ್ಯಾತರಾದ ಈ ಗುಂಪಿನವರು ತಮ್ಮನ್ನು ಬಾಲ್ಷಿವಿಸ್ಟರೆಂದು ಕರೆದುಕೊಂಡರು. ಅಲ್ಪಸಂಖ್ಯಾತರಾದ ಬಲಗುಂಪಿನವರು ಮೆನ್ಷೆವಿಷ್ಟರು. ಮುಂದೆ ಅನೇಕ ಸಾರಿ ಅಧಿಕಾರ ಇವುಗಳ ನಡುವೆ ಲಾಳಿಯಂತೆ ಅಡ್ಡಾಡುತ್ತಿತ್ತು. ಕೊನೆಗೆ 1905ರ ವೇಳೆಗೆ ಈ ಭಿನ್ನತೆ ಬಹಳ ಹೆಚ್ಚಿ, ಇವೆರಡೂ ಪ್ರತ್ಯೇಕವಾಗಿ–ಮೆನ್ಷೆವಿಸ್ಟರು ಜಿನೀವದಲ್ಲೂ ಬಾಲ್ಷಿವಿಸ್ಟರು ಲಂಡನ್ನಿನಲ್ಲೂ – ಸಭೆ ಸೇರಿದರು. ಲಂಡನ್ ಸಭೆಯಲ್ಲಿ ಲೆನಿನ್ ಸೂತ್ರಕ್ಕೆ ಒಪ್ಪಿಗೆಯ ಮುದ್ರೆ ಬಿತ್ತು. ಈ ಎರಡೂ ಪಕ್ಷಗಳು ಪ್ರತ್ಯೇಕವಾಗಿ ಮುಂದುವರಿದುವು. ರಷ್ಯದಲ್ಲಿ ಕ್ರಾಂತಿ ಸಂಭವಿಸಿ ಬಾಲ್ಷಿವಿಸ್ಟರ ಅಧಿಕಾರ ಸ್ಥಾಪಿತವಾದಾಗ ಕೆಲವು ಮೆನ್ಷೆವಿಸ್ಟ ನಾಯಕರು ಬಾಲ್ಷಿವಿಸ್ಟರ ಕಡೆ ಸೇರಿದರು. ಸೋವಿಯತ್ ದೇಶದಲ್ಲಿ ಮೆನ್ಷೆವಿಸ್ಟ್ ಗುಂಪು ಅಂತರ್ದಾನವಾಯಿತು. ಪಕ್ಷದ ಹೆಸರು 1918ರಲ್ಲಿ ರಷ್ಯನ್ ಕಮ್ಯೂನಿಸ್ಟ್ ಪಕ್ಷವೆಂದೂ 1924ರಲ್ಲಿ ಅಖಿಲ ಒಕ್ಕೂಟ ಕಮ್ಯೂನಿಸ್ಟ್ ಪಕ್ಷ (ಬಾಲ್ಷೆವಿಕ್) ಎಂದೂ 1952ರಲ್ಲಿ ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷ ಎಂದು ಬದಲಾವಣೆಯಾಯಿತು.

ರಷ್ಯನ್ ಕ್ರಾಂತಿಯ ಪರಿಣಾಮವಾಗಿ ಅನೇಕ ದೇಶಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಉದಯವಾದವು. ಇವುಗಳಲ್ಲಿ ಕೆಲವು ರಷ್ಯನ್ ಕ್ರಾಂತಿಪೂರ್ವಕಾಲದ ಮಾರ್ಕ್ಸಿಸ್ಟ್ ಪ್ರಭಾವವನ್ನೇ ತಳೆದಿದ್ದವು. 1917ರಲ್ಲಿ ಸ್ವೀಡನ್ನಿನ ಕೆಲವರು ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿದರು. ಜರ್ಮನಿ, ಆಸ್ಟ್ರಿಯ, ಹಂಗೇರಿ, ಗ್ರೀಸ್, ಯುಗೋಸ್ಲೋವಿಯ, ಪೋಲೆಂಡ್, ಬಲ್ಗೇರಿಯ, ಅರ್ಜೆಂಟೈನ, ಮೆಕ್ಸಿಕೊ, ಡೆನ್ಮಾರ್ಕ್, ಸಂಯುಕ್ತ ಸಂಸ್ಥಾನಗಳಲ್ಲಿ ಪಕ್ಷಗಳು ಸ್ಥಾಪನೆಯಾದವು. 1919ರಲ್ಲಿ ಲೆನಿನ್ ರಷ್ಯದಲ್ಲಿ ಕಮ್ಯೂನಿಸ್ಟ್ ಅಂತಾರಾಷ್ಟ್ರೀಯವನ್ನು ಸ್ಥಾಪಿಸಿದ್ದರಿಂದ ಕಮ್ಯೂನಿಸ್ಟ್ ವಿಧಾನದಲ್ಲಿ ನುರಿತ ಕಾರ್ಯಕರ್ತರ ಸರಬರಾಜು ವರ್ಧಿಸಿತು. ವಿಶ್ವದಾದ್ಯಂತ ಕಮ್ಯೂನಿಸ್ಟ್ ಕ್ರಾಂತಿಗೆ ಸೂಕ್ತ ತಳಹದಿ ಹಾಕುವುದು ಇದರ ಉದ್ದೇಶವಾಗಿತ್ತು.

1920ರ ಅನಂತರ ಕಮ್ಯೂನಿಸ್ಟ್ ಪಕ್ಷಗಳ ಸಂಖ್ಯೆ ಅಧಿಕಗೊಂಡುವು. ಆ ವರ್ಷ ಫ್ರಾನ್ಸ್, ಬ್ರಿಟನ್, ತುರ್ಕಿ, ಆಸ್ಟ್ರೇಲಿಯ, ಇರಾನ್, ಈಸ್ಟ್ ಇಂಡೀಸ್, ಉರುಗ್ವೆಗಳಲ್ಲೂ ಮರುವರ್ಷ ಇಟಲಿ, ಸ್ಪೇನ್, ಬ್ರೆಜಿಲ್, ಚಿಲಿ, ಸ್ವಿಟ್ಜರ್ಲೆಂಡ್, ರೊಮೇನಿಯ, ಜೆಕೊಸ್ಲೋವಾಕಿಯ, ಚೀನ, ಮಂಗೋಲಿಯಗಳಲ್ಲೂ 1922ರಲ್ಲಿ ಜಪಾನ್, ನಾರ್ವೆಗಳಲ್ಲೂ ಎರಡು ವರ್ಷಗಳ ಅನಂತರ ನ್ಯೂಜಿಲೆಂಡಿನಲ್ಲೂ 1925ರಲ್ಲಿ ಕ್ಯೂಬ ಮತ್ತು ಕೊರಿಯಗಳಲ್ಲೂ 1928ರಲ್ಲಿ ಏಕ್ವಾಡಾರ್ ಮತ್ತು ಪೆರಗ್ವೇಗಳಲ್ಲೂ 1930ರಲ್ಲಿ ಸಿರಿಯ–ಲೆಬನನ್, ಕಾಸ್ಟರೀಕ, ಇಂಡೋ–ಚೀನಗಳಲ್ಲೂ 1934ರಲ್ಲಿ ಆಲ್ಜೀರಿಯದಲ್ಲೂ 1934ರಲ್ಲಿ ಶ್ರೀಲಂಕ, ಮೊರಾಕ್ಕೋಗಳಲ್ಲೂ 1946ರಲ್ಲಿ ಪೂರ್ವಜರ್ಮನಿಯಲ್ಲೂ 1948ರಲ್ಲಿ ಇಸ್ರೇಲಿನಲ್ಲೂ 1949ರಲ್ಲಿ ಬೊಲೀವಿಯದಲ್ಲೂ 1951ರಲ್ಲಿ ನೇಪಾಲ ಮತ್ತು ವಿಯೆಟ್ನಾಂಗಳಲ್ಲೂ ಕಮ್ಯೂನಿಸ್ಟ್ ಪಕ್ಷಗಳ ಸ್ಥಾಪನೆಯಾಯಿತು.

ಬ್ರಿಟನಿನ ಕಾರ್ಮಿಕರಿಗೆ ತಮ್ಮ ವರ್ಗಶಕ್ತಿಯ ಮನವರಿಕೆಯಾಗಿರುವುದಾದರೂ ಅವರ ಒಲವು ಹೆಚ್ಚಾಗಿ ಫೇಬಿಯನ್ ಸಮಾಜವಾದದಲ್ಲಿ ನಂಬಿಕೆ ಇಟ್ಟಿರುವ ಕಾರ್ಮಿಕ ಪಕ್ಷದತ್ತ. ಚುನಾವಣೆಗಳಲ್ಲಿ ಅದು ಸ್ಪರ್ಧಿಸುತ್ತದೆಯಾದರೂ ಗಮನಾರ್ಹ ಸಂಖ್ಯೆಯ ಸ್ಥಾನಗಳನ್ನು ಅದು ಪಡೆಯಲಾಗಲಿಲ್ಲ. ಜರ್ಮನಿಯ ಕಮ್ಯೂನಿಸ್ಟ್ ಪಕ್ಷ ಬೆಳೆದು ತಮ್ಮ ಪಕ್ಷಕ್ಕೆ ಬೆಂಬಲ ನೀಡುವುದೆಂದು ಲೆನಿನನ ಭಾವನೆಯಾಗಿತ್ತು. ಆದರೆ 1919ರಲ್ಲಿ ಅದು ಸಂವಿಧಾನಸಭೆಯ ಮೇಲೆ ಹತೋಟಿ ಪಡೆಯಲು ಅಸಮರ್ಥವಾಯಿತು. 1919ರಲ್ಲಿ ಅದರ ನಾಯಕರಾದ ರೋಸಾ ಲಕ್ಸೆಂಬರ್ಗ್ ಮತ್ತು ಕಾರ್ಲ್ ಲೀಪ್‌ನೆಕ್ಟರ ಕೊಲೆಯಾಯಿತು. ಆಗ ಅದರ ಶಕ್ತಿ ಕ್ಷೀಣಿಸತೊಡಗಿತ್ತು; ಮುಂದೆ ಜರ್ಮನಿಯ ಆರ್ಥಿಕ ದುಸ್ಥಿತಿಯ ಕಾಲದಲ್ಲಿ ಜನಸಾಮಾನ್ಯರಲ್ಲಿ ಮತ್ತೆ ಅದು ಪ್ರಭಾವ ಗಳಿಸಲಾರಂಭಿಸಿತು. 1933ರ ವೇಳೆಗೆ ಅದಕ್ಕೆ ಅಲ್ಲಿಯ ಶಾಸನ ಸಭೆಯಲ್ಲಿ 81 ಸ್ಥಾನಗಳು ದೊರಕಿದ್ದವು. ಅಡಾಲ್ಫ್ ಹಿಟ್ಲರ್ ಅಧಿಕಾರಕ್ಕೆ ಬಂದಮೇಲೆ ಕಮ್ಯೂನಿಸ್ಟ್ ಪಕ್ಷವನ್ನಡಗಿಸಿದ. ಅದು ಭೂಗತವಾಯಿತು. ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಗೆ ಪರಾಜಯವಾದಾಗ(1945) ಜರ್ಮನಿಯ ವಿಭಜನೆಯಾಯಿತು. ಸೋವಿಯತ್ ರಾಜ್ಯದ ಬೆಂಬಲದಿಂದ ಕಮ್ಯೂನಿಸ್ಟರು ಪೂರ್ವ ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದರು. ಪಶ್ಚಿಮ ಜರ್ಮನಿಯಲ್ಲಿ ಕಮ್ಯೂನಿಸ್ಟ್ ಪಕ್ಷ ಕಾನೂನುಬಾಹಿರವೆಂದು ಪರಿಗಣಿತವಾಯಿತು. 1954ರಲ್ಲಿ ಸಂವಿಧಾನ ನ್ಯಾಯಾಲಯವು ಈ ತೀರ್ಮಾನವನ್ನೇ ಎತ್ತಿ ಹಿಡಿಯಿತು. ಇಟಲಿಯಲ್ಲಿ 1921ರಲ್ಲಿ ಕಮ್ಯೂನಿಸ್ಟ್ ಪಕ್ಷ ಪ್ರಭಾವಶಾಲಿಯಾಗಿ ಅಲ್ಲಿಯ ಸಂಸತ್ತಿನಲ್ಲಿ 13 ಸ್ಥಾನ ಗಳಿಸಿತ್ತು. ಆದರೆ ಅನಂತರ ಬಂದ ಬೆನಿಟೊ ಮುಸ್ಸೋಲಿನಿ ಇದನ್ನು ಅಡಗಿಸಿದ (1924). ಎರಡನೆಯ ಮಹಾಯುದ್ಧದ ನಂತರ ಇದು ಮತ್ತೆ ತಲೆಯೆತ್ತಿ ಪಾಲ್ಮಿರೋಟೊಲ್ಯಾಟಿಯ ನಾಯಕತ್ವದಲ್ಲಿ ವಾಮಪಕ್ಷವಾಗಿ ಪ್ರಬಲವೂ ಜನಪ್ರಿಯವೂ ಆಗಿ ಬೆಳೆಯಿತು. ಇಟಲಿಯದು ವಿಶ್ವದ ಮುಖ್ಯ ಕಮ್ಯೂನಿಸ್ಟ್ ಪಕ್ಷಗಳಲ್ಲೊಂದು. ಮಾರಿಸ್ ಥಾರೆಜ್ಹನ ನೇತೃತ್ವದಲ್ಲಿ ಫ್ರೆಂಚ್ ಕಮ್ಯೂನಿಸ್ಟ್ ಪಕ್ಷ 1934ರಲ್ಲಿ ಸಮಾಜವಾದಿ ಮತ್ತು ತೀವ್ರಗಾಮಿ ಸಮಾಜವಾದಿ ಪಕ್ಷಗಳೊಂದಿಗೆ ಸೇರಿ ಬಲಪಕ್ಷಗಳನ್ನೆದುರಿಸಿತು. ಈ ರಂಗಕ್ಕೆ 1963ರ ಚುನಾವಣೆಗಳಲ್ಲಿ ಜಯ ಲಭಿಸಿದಾಗ ಸಮಾಜವಾದಿ ನಾಯಕ ಲಿಯಾನ್ ಬ್ಲೂಮ್ ಪ್ರಧಾನಿಯಾದ. ಕಮ್ಯೂನಿಸ್ಟರು ಮಂತ್ರಿಗಳಾಗದಿದ್ದರೂ ಸರ್ಕಾರಕ್ಕೆ ಬೆಂಬಲ ನೀಡಿದರು. ಒಂದು ವರ್ಷವಾದ ಮೇಲೆ ಬ್ಲೂಮ್ ಸರ್ಕಾರದ ಪತನವಾಯಿತು. ತೀವ್ರಗಾಮಿ ಸಮಾಜವಾದಿಗಳು ಕಮ್ಯೂನಿಸ್ಟ್ ಮೈತ್ರಿಯನ್ನು ಮುಂದುವರಿಸಲೊಪ್ಪಲಿಲ್ಲ. ಎರಡನೆಯ ಮಹಾಯುದ್ಧ ಕಾಲದಲ್ಲಿ ಹಿಟ್ಲರ್ ಸೋವಿಯತ್ ದೇಶದ ಆಕ್ರಮಣ ನಡೆಸಿದಾಗ ಫ್ರೆಂಚ್ ಕಮ್ಯೂನಿಸ್ಟರೂ ಫ್ರಾನ್ಸಿನ ವಿಮೋಚನಾ ಚಳವಳಿಗೆ ದುಮುಕಿ, ಯುದ್ಧಾಂತ್ಯದ ವೇಳೆಗೆ ಜನಪ್ರಿಯತೆ ಗಳಿಸಿದರು. ಅವರದು ಫ್ರಾನ್ಸಿನ ಪ್ರಧಾನ ರಾಜಕೀಯ ಪಕ್ಷಗಳಲ್ಲೊಂದಾಯಿತು. 1958ರಲ್ಲಿ ಜನರಲ್ ಡ ಗಾಲ್ ಚುನಾವಣೆಯಲ್ಲಿ ಗೆದ್ದು ಬಂದ. ಚುನಾವಣಾ ಪದ್ಧತಿಯಲ್ಲಿ ಬದಲಾವಣೆಗಳಾದವು. ಇದರಿಂದಾಗಿ ಶಾಸನ ಸಭೆಯಲ್ಲಿ ಕಮ್ಯೂನಿಸ್ಟರ ಬಲ ಕುಂದಿತು.ಆದರೂ ಫ್ರಾನ್ಸಿನ ಕಮ್ಯೂನಿಸ್ಟ್ ಪಕ್ಷ ತಕ್ಕಮಟ್ಟಿಗೆ ಪ್ರಭಾವಶಾಲಿಯಾಗಿದೆ.

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಸಮಾಜವಾದಿ ಪಕ್ಷದಲ್ಲಿದ್ದ ವಾಮಪಂಥೀಯರು ರಷ್ಯನ್ ಕ್ರಾಂತಿಯ ಅನಂತರ ಅಲ್ಲಿಯ ಕಮ್ಯೂನಿಸ್ಟರ ಪ್ರೋತ್ಸಾಹದ ಬಲದಿಂದ ಪ್ರತ್ಯೇಕವಾದರು. ಅದರ ಅಮೆರಿಕೇತರ ಸದಸ್ಯರು ಅಮೆರಿಕದಿಂದ ಗಡಿಪಾರಾದರು. 1921ರಲ್ಲಿ ಕಾನೂನುಬದ್ಧವಾಗಿ ವ್ಯವಹರಿಸುವ ಉದ್ದೇಶದಿಂದ ಕರ್ಮಚಾರಿಗಳ (ವರ್ಕರ್ಸ್) ಪಕ್ಷವೆಂಬ ಬಹಿರಂಗ ಪಕ್ಷವೊಂದು ಸ್ಥಾಪಿತವಾಯಿತು. ಕಮ್ಯೂನಿಸ್ಟ್ ಪಕ್ಷ ರಹಸ್ಯ ಪಕ್ಷವಾಗಿ ಮುಂದುವರಿಯಿತು. ಇದನ್ನು ಸಂಪೂರ್ಣವಾಗಿ ವಿಸರ್ಜಿಸಬೇಕೆಂದು 1923ರಲ್ಲಿ ಮಾಸ್ಕೋ ನಿರ್ದೇಶನ ನೀಡಿತು. ಕಾನೂನುಬದ್ಧ ಪಕ್ಷದಲ್ಲಿ ಒಳಜಗಳಗಳಿದ್ದೇ ಇದ್ದವು. 1929ರಲ್ಲಿ ಮಾಸ್ಕೋ ನಡುವೆ ಪ್ರವೇಶಿಸಿ ಶಿಸ್ತನ್ನು ಸ್ಥಾಪಿಸಿತು. ಕಮ್ಯೂನಿಸ್ಟ್ ಅಂತಾರಾಷ್ಟ್ರೀಯದ ಅಂಗವಾಗಿ ಅಮೆರಿಕ ಸಂಯುಕ್ತಸಂಸ್ಥಾನದ ಕಮ್ಯೂನಿಸ್ಟ್ ಪಕ್ಷವನ್ನು ಆಗ ಮತ್ತೆ ರಚಿಸಲಾಯಿತು.

ಎರಡನೆಯ ಮಹಾಯುದ್ಧಕಾಲದಲ್ಲಿ ಪಶ್ಚಿಮದ ರಾಷ್ಟ್ರಗಳೂ ಸೋವಿಯತ್ ರಾಜ್ಯವೂ ಒಂದಾಗಿ ಹಿಟ್ಲರನನ್ನೆದುರಿಸಬೇಕಾದಾಗ ಕಮ್ಯೂನಿಸ್ಟ್ ಅಂತಾರಾಷ್ಟ್ರೀಯವನ್ನು ವಿಸರ್ಜಿಸಿದ್ದರ (1943) ಫಲವಾಗಿ ಅಮೆರಿಕನ್ ಕಮ್ಯೂನಿಸ್ಟ್ ಪಕ್ಷದ ಅಂಗರಚನೆಯಲ್ಲೂ ಸೂಕ್ತ ಬದಲಾವಣೆಗಳಾದವು. ಎರಡನೆಯ ಮಹಾಯುದ್ಧದ ಅನಂತರದ ಕಾಲದಲ್ಲಿ ಅಮೆರಿಕದ ಕಮ್ಯೂನಿಸ್ಟ್ ಪಕ್ಷದ ಕಲಾಪಗಳು ಸರ್ಕಾರದ ತೀವ್ರಗಮನ ಸೆಳೆದವು. ಅಮೆರಿಕ–ಚೀನ ವಿರಸ, ಕೊರಿಯ ಯುದ್ಧ ಮುಂತಾದ ಕಾರಣಗಳಿಂದಾಗಿ ಅಮೆರಿಕನ್ ಕಮ್ಯೂನಿಸ್ಟರು ಉಗ್ರ ಕ್ರಮಗಳಿಗೊಳಗಾದರು. ಸ್ಟಾಲಿನ್ ಅನುಸರಿಸುತ್ತಿದ್ದ ಅನೇಕ ವಿಪರೀತ ಕ್ರಮಗಳು ಆತನ ಮರಣಾನಂತರ ಬಯಲಾದಾಗ ಅನೇಕ ಕಮ್ಯೂನಿಸ್ಟರು ಭ್ರಮನಿರಸನಗೊಂಡು ಪಕ್ಷಕ್ಕೆ ರಾಜೀನಾಮೆಯಿತ್ತರು. ಅಮೆರಿಕದ ಹಲವಾರು ಕಾಯಿದೆಗಳೂ ಅಮೆರಿಕಾನುಚಿತ ಕಲಾಪಗಳ (ಅನ್–ಅಮೆರಿಕನ್ ಆಕ್ಟಿವಿಟೀಸ್) ವಿಚಾರಣೆಗಳೂ ನಡೆದವು. ಕಮ್ಯೂನಿಸ್ಟ್ ಪಕ್ಷಕ್ಕೂ ಸರ್ಕಾರಕ್ಕೂ ನಡುವೆ ದೀರ್ಘ ಹೋರಾಟವೇ ನಡೆಯಿತು. ಬುಡಮೇಲು ಮಾಡುವ ಚಳವಳಿಯ ನಿವಾರಣೆಗಾಗಿ ಸರ್ಕಾರ ತಂದ ನಿರ್ಬಂಧ ಕಾಯಿದೆಯನ್ನು (1950) ಅಲ್ಲಿಯ ಪರಮೋಚ್ಚನ್ಯಾಯಾಲಯವೂ ಎತ್ತಿಹಿಡಿಯಿತು (1961).ಆ ಕಾಯಿದೆಗೆ ಅನುಸಾರವಾಗಿ ನೋಂದಾಯಿಸಿಕೊಳ್ಳಲು ಪಕ್ಷ ನಿರಾಕರಿಸಿತು. ಅನೇಕ ನಾಯಕರು ಭೂಗತರಾದರು.

ಚೀನದಲ್ಲಿ: ರಷ್ಯದ ನಿರ್ದೇಶನದಲ್ಲಿ ಚೀನೀ ಕಮ್ಯೂನಿಸ್ಟ್ ಪಕ್ಷ 1921ರಲ್ಲಿ ಸ್ಥಾಪಿತವಾಯಿತು. ಅಧ್ಯಕ್ಷ ಸುನ್ ಯಾತ್‌ಸೇನನ ಕೌಮಿಂಟಾಂಗ್ ಪಕ್ಷದೊಂದಿಗೆ ಕಮ್ಯೂನಿಸ್ಟರು ಸಹಕರಿಸುತ್ತಿದ್ದರಾದರೂ ಅವನ ಮರಣದ (1925) ಅನಂತರ ಅಧಿಕಾರಕ್ಕೆ ಬಂದ ಬಲಪಂಥೀಯರ ಆಡಳಿತಕ್ಕೂ ಕಮ್ಯೂನಿಸ್ಟ್ ಪಕ್ಷಕ್ಕೂ ವಿರಸ ಬೆಳೆಯಿತು. ಚಿಯಾಂಗ್ ಕೈ-ಷೆಕ್ ಸರ್ಕಾರ ಕಮ್ಯೂನಿಸ್ಟ್ ಪಕ್ಷವನ್ನು ಬಹಿಷ್ಕರಿಸಿತು. ಚೀನೀ ಕಮ್ಯೂನಿಸ್ಟ್ ಪಕ್ಷದ ಸ್ಥಾಪಕರಲ್ಲೊಬ್ಬನಾದ ಮಾವೊ ಒಳನಾಡಿಗೆ ಹೋಗಿ, ಗ್ರಾಮಗಳನ್ನು ವಿಮೋಚನೆಗೊಳಿಸಿ ಕೊನೆಗೆ ನಗರವನ್ನು ಸುತ್ತುವರಿದು ಆಕ್ರಮಿಸಿಕೊಳ್ಳಬೇಕೆಂಬುದಾಗಿ ಯೋಜನೆ ಹೂಡಿದ. ಈತನ ಗ್ರಾಮೀಣ ಕಮ್ಯೂನಿಸಂ ವಿಧಾನ ಏಷ್ಯನ್ ಮತ್ತು ಇತರ ಹಿಂದುಳಿದ ರಾಷ್ಟ್ರಗಳ ಕಮ್ಯೂನಿಸ್ಟ್ ಚಳವಳಿಗೆ ಮೇಲ್ಪಂಕ್ತಿಯಾಯಿತು. ಕಮ್ಯೂನಿಸ್ಟರ ಪ್ರಭಾವವನ್ನು ಹತ್ತಿಕ್ಕಲು ಕೌಮಿಂಟಾಂಗ್ ಸರ್ಕಾರ ನಾನಾ ಬಗೆಯ ಸಾಹಸಮಾಡಿ ಅವರನ್ನು ಉತ್ತರ ಷೆನ್ಸಿ ಪ್ರಾಂತ್ಯಕ್ಕೆ ಹಿನ್ನಡೆಯುವಂತೆ ಮಾಡಿತು. ಈ ಘಟನೆ ದೀರ್ಘಯಾತ್ರೆ (ಲಾಂಗ್ ಮಾರ್ಚ್) ಎಂದು ಚೀನೀ ಐತಿಹಾಸಿಕ ಪ್ರಾಮುಖ್ಯಗಳಿಸಿದೆ.

ಆ ವೇಳೆಗೆ ಜಪಾನ್ ಚೀನದ ಆಕ್ರಮಣದಲ್ಲಿ ತೊಡಗಿತು. ಮಾವೊ ಜಪಾನ್ ವಿರೋಧಿ ಚಳವಳಿ ಹೂಡಿದ. ಜಪಾನನ್ನೆದುರಿಸಲು ಕಮ್ಯೂನಿಸ್ಟರು ಚಿಯಾಂಗನ ಸರ್ಕಾರದೊಂದಿಗೆ ಸಹಕರಿಸಿದರು. ಸರ್ಕಾರದೊಂದಿಗೆ ಹೊಸ ಒಪ್ಪಂದವಾಯಿತು. ಚಿಯಾಂಗ್ ಸರ್ಕಾರದ ಸೈನ್ಯದಲ್ಲಿ ಚೀನೀಕೆಂಪುಸೇನೆಯೂ ಸೇರಿತಾದರೂ ಅದು ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಂಡಿತು. ಎರಡು ಪಕ್ಷಗಳೂ ತಂತಮ್ಮ ಶಕ್ತಿ ಬೆಳೆಸಿಕೊಳ್ಳಲು ಪರಸ್ಪರ ಸ್ಪರ್ಧಿಸಿದುವು. ಎರಡನೆಯ ಮಹಾಯುದ್ಧದ ಕೊನೆಯ ಘಟ್ಟಮುಟ್ಟಿ, ಜಪಾನು ಶರಣಾಗತವಾದಾಗ ಕಮ್ಯೂನಿಸ್ಟ್ ಪಕ್ಷದ ಜನತಾ ವಿಮೋಚನಾ ಸೇನೆ ಪ್ರಬಲವಾಗಿ, ಚಿಯಾಂಗ್ ಸರ್ಕಾರದ ವಿರುದ್ಧ ವ್ಯಾಪಕ ಯುದ್ಧ ಹೂಡಿತು. 1949ರಲ್ಲಿ ಚೀನದಲ್ಲಿ ಕಮ್ಯೂನಿಸ್ಟರ ಅಧಿಕಾರ ಸ್ಥಾಪಿತವಾಯಿತು. ಅಲ್ಲಿಂದೀಚೆಗೆ ಚೀನೀ ಕಮ್ಯೂನಿಸ್ಟ್ ಪಕ್ಷದ ಧೋರಣೆ ಮಾಸ್ಕೋವಿನಿಂದ ಪ್ರತ್ಯೇಕವಾಗಿ ತನ್ನ ವಿಶಿಷ್ಟ ಸಂಸ್ಕಾರಗಳಿಗೆ ಅನುಗುಣವಾಗಿ ರೂಪುಗೊಳ್ಳುತ್ತಿದೆ. ಚೀನ-ಸೋವಿಯತ್ ಕಮ್ಯೂನಿಸ್ಟ್ ಗುಂಪುಗಳ ಸಿದ್ಧಾಂತಿಕ ಭಿನ್ನತೆಯನ್ನು ಈ ಲೇಖನದ ಆದಿಯಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ **(ನೋಡಿ- ಕಮ್ಯೂನಿಸಂ; ಕಮ್ಯುನಿಸ್ಟ್ ಪಕ್ಷಗಳು,-ಭಾರತದಲ್ಲಿ).** (ಬಿ.ಎಸ್.ಎಚ್.)

**ಕಮ್ಯುನಿಸ್ಟ್ ಪಕ್ಷಗಳು, ಭಾರತದಲ್ಲಿ :** ಭಾರತದ ರಾಜಕೀಯ ಇತಿಹಾಸದಲ್ಲಿ 70ರ ದಶಕವನ್ನು ಅನೇಕ ಮಹತ್ತರ ಘಟನೆಗಳಿಂದ ಕೂಡಿದ ಕಾಲ ಎಂದು ಕರೆಯಬಹುದಾಗಿದೆ.

ಆಂತರಿಕ ಭಿನ್ನಾಭಿಪ್ರಾಯಗಳು ಉಲ್ಬಣಗೊಂಡು 1969ರಲ್ಲಿ ಕಾಂಗ್ರೆಸ್ ಪಕ್ಷವು ಒಡೆದು ಇಬ್ಭಾಗವಾಗಿ ಕಾಂಗ್ರೆಸ್ (ಇಂದಿರಾ) ಮತ್ತು ಸಂಸ್ಥಾ ಕಾಂಗ್ರೆಸ್ ಎಂಬ ಎರಡು ಪ್ರತ್ಯೇಕ ಪಕ್ಷಗಳು ಅಸ್ತಿತ್ವಕ್ಕೆ ಬಂದವು. ಈ ಬೆಳೆಣಿಗೆಯಿಂದಾಗಿ ಇಂದಿರಾ ಗಾಂಧಿಯವರು ರಾಷ್ಟ್ರ ರಾಜಕಾರಣದಲ್ಲಿ ಪ್ರಬಲ ನಾಯಕಿಯಾಗಿ ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಯಿತು. ಅಂದಿನ ಕಾಲಘಟ್ಟದ ಹಲವು ರಾಜಕೀಯ ಅನಿವಾರ್ಯತೆಗಳಿಂದಾಗಿ ಇಂದಿರಾ ಗಾಂಧಿಯವರು ಕೆಲವು ಜನಪರ ಯೋಜನೆಗಳನ್ನು ಮುಂದಿಟ್ಟು ಅಪಾರ ಜನಪ್ರಿಯತೆ ಗಳಿಸಿದರು. ದಿಟ್ಟ ಹಾಗೂ ಪ್ರಗತಿಶೀಲ ಚಿಂತನೆಗಳುಳ್ಳ ರಾಜಕೀಯ ಧುರೀಣೆ ಎಂಬ ಖ್ಯಾತಿಗೆ ಪಾತ್ರರಾದರು. ಅವರನ್ನು ವಿರೋಧಿಸಿದ ಇತರೆ ಹಿರಿಯ ಕಿರಿಯ ಕಾಂಗ್ರೆಸ್ ನಾಯಕರನ್ನು ಬಲಪಂಥೀಯರು ಎಂಬುದಾಗಿ ಗುರುತಿಸಲಾಯಿತು.

ಈ ಸಂದರ್ಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳೆರಡೂ ಇಂದಿರಾಗಾಂಧಿಯವರ ಪರ ನಿಲುವು ತಾಳಿದವು. ಅವರ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡಿದವು. ಬಂಡವಾಳಶಾಹಿ ಮತ್ತು ಭೂಮಾಲಿಕ ವರ್ಗಗಳಿಂದ ದೂರವಾಗಿ ಕ್ರಿಯಾತ್ಮಕ ಸ್ವರೂಪವುಳ್ಳ ಹೊಸ ಯೋಜನೆಗಳನ್ನು ಕಾಂಗ್ರೆಸ್ ಜಾರಿಗೊಳಿಸುತ್ತದೆಂಬ ನಂಬಿಕೆ ಕೆಲವೆಡೆ ಮೂಡಿದ್ದಿತು. ಅದು ಹಾಗಾಗಲಿಲ್ಲ. ಆ ನಂತರ 1971ರಲ್ಲಿ ಪಾಕಿಸ್ತಾನದ ವಿರುದ್ಧ ನಡೆದ ಯುದ್ಧ ಮತ್ತು ಆ ಸಂದರ್ಭದಲ್ಲೇ ಪೂರ್ವ ಪಾಕಿಸ್ತಾನ ಪ್ರತ್ಯೇಕಗೊಂಡು ಬಾಂಗ್ಲಾದೇಶವು ರಚನೆಗೊಂಡ ಹಿನ್ನೆಲೆಯಲ್ಲಿ ಜರುಗಿದ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷಕ್ಕೆ ದೊರಕಿದ ಪ್ರಚಂಡ ವಿಜಯ, ಗರೀಬಿ ಹಟಾವೋ ಘೋಷಣೆ ಮತ್ತು ಇಪ್ಪತ್ತು ಅಂಶಗಳ ಕಾರ್ಯಕ್ರಮ, ಇವು ಆ ಪಕ್ಷವನ್ನು ಒಂದು ಪ್ರಗತಿಶೀಲ ರಾಜಕೀಯ ಶಕ್ತಿ ಎಂಬುದಾಗಿ ಬಿಂಬಿಸಿದವು. ಈ ಕಾಲಾವಧಿಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ಇಂದಿರಾ ಕಾಂಗ್ರೆಸ್‌ನೊಂದಿಗೆ ಚುನಾವಣಾ ಹೊಂದಾಣಿಕೆ ಏರ್ಪಡಿಸಿಕೊಂಡಿತು. ಮಾರ್ಕ್ಸಿಸ್ಟ್ ಪಕ್ಷವು ಈ ಕುರಿತು ತದ್ವಿರುದ್ಧ ನಿಲುವನ್ನು ತಾಳಿತು.

ಕಮ್ಯುನಿಸ್ಟ್ ಚಳವಳಿಯಲ್ಲಿ ಒಂದು ಪ್ರಶ್ನೆ ಪ್ರಮುಖವಾಗಿ ಮುಂದೆಬಂದು ಚಳವಳಿಯು ಹಲವು ವಿಭಾಗಗಳಾಗಿ ಒಡೆಯಲು ಕಾರಣವಾಗಿದೆ. ಅದು ರಾಷ್ಟ್ರದ ಪ್ರಭುತ್ವವು ಯಾವ ವರ್ಗದ್ದೆಂದು ಅರ್ಥೈಸುವುದಕ್ಕೆ ಸಂಬಂಧಿಸಿದೆ. ರಾಷ್ಟ್ರೀಯ ಬಂಡವಾಳಶಾಹಿ ಯೆಂಬುದೊಂದಿದೆ ಮತ್ತು ಅದು ಪ್ರಸ್ತುತ ಆಳುವ ವರ್ಗದಲ್ಲಿ ಸೇರ್ಪಡೆ ಹೊಂದಿದೆಯೆಂದು ಭಾವಿಸಿದ ಭಾರತೀಯ ಕಮ್ಯುನಿಸ್ಟ್ ಪಕ್ಷವು ಸಾಮ್ರಾಜ್ಯಶಾಹಿ ವಿರೋಧದ ಕಾರ್ಯಚರಣೆಯಲ್ಲಿ ಇದಕ್ಕೆ ನಿರ್ದಿಷ್ಟ ಪಾತ್ರವಿದೆಯೆಂದು ವ್ಯಾಖ್ಯಾನಿಸುತ್ತದೆ. ಅದಕ್ಕೆ ಪ್ರತಿಯಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ್ರಭುತ್ವವಿರುವುದು ಸಾಮ್ರಾಜ್ಯಶಾಹಿಗೆ ಶರಣುಹೋಗುವ ಭಾರಿ ಬಂಡವಾಳಿಗ ಮತ್ತು ಭೂಮಾಲಿಕ ವರ್ಗಗಳ ಕೈಯಲ್ಲಿ ಎಂದು ತನ್ನ ಪ್ರಣಾಳಿಕೆಯಲ್ಲಿ ಒತ್ತಿ ಹೇಳುತ್ತದೆ. ಆದಾಗ್ಯೂ ಕೆಲವು ಜಂಟಿ ಕಾರ್ಯಕ್ರಮಗಳಲ್ಲಿ ಅವು ಭಾಗಿಗಳಾಗಿವೆ.

1974ರ ಹೊತ್ತಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಏರಿದ ತೈಲ ಬೆಲೆಗೆ ತತ್ತರಿಸಿದ ಭಾರತ, ಅನೇಕ ಜನಾಂದೋಳನಗಳ ಬೀಡಾಯಿತು. ಬೆಲೆ ಏರಿಕೆ, ಕಾಂಗ್ರೆಸ್ ಪಕ್ಷದ ದುರಾಡಳಿತದ ವಿರುದ್ಧದ ಬಿಹಾರ್ ರಾಜ್ಯದಲ್ಲಿ ಜಯಪ್ರಕಾಶ್ ನಾರಾಯಣ್ ಅವರ ನೇತೃತ್ವದಲ್ಲಿ ಪ್ರಾರಂಭವಾದ ಸಾಮಾಜಿಕ ಚಳವಳಿ ದೇಶವಿಡೀ ವ್ಯಾಪಕವಾಗಿ ಹರಡಿತು. ರೈಲ್ವೇ ಕಾರ್ಮಿಕರ ಮುಷ್ಕರವು ಇಡೀ ರಾಷ್ಟ್ರವನ್ನೇ ನಿಷ್ಕ್ರಿಯಗೊಳಿಸಿತು. ಕಮ್ಯುನಿಸ್ಟ್ ಪಕ್ಷಗಳು ಈ ಮುಷ್ಕರಕ್ಕೆ ಬೆಂಬಲ ನೀಡಿದವು. ದೇಶದಾದ್ಯಂತ ಬೃಹತ್ ಅಲೆಗಳೋಪಾದಿ ಯಲ್ಲಿ ಗಲಭೆ, ಪ್ರತಿಭಟನೆ ಮತ್ತು ಮುಷ್ಕರಗಳನ್ನು ದೇಶದ ಮೂಲೆಮೂಲೆಗಳಲ್ಲಿ ಸಂಘಟಿಸಲಾಯಿತು. ಈ ಸಂದರ್ಭದಲ್ಲೇ ಇಂದಿರಾಗಾಂಧಿಯವರು ಲೋಕಸಭೆಗೆ ಆಯ್ಕೆಯಾದದ್ದನ್ನು ಅಸಿಂಧುವೆಂದು ಅಲಹಾಬಾದ್ ಉಚ್ಚನ್ಯಾಯಾಲಯ ತೀರ್ಪಿತ್ತಿತು.

ಈ ಅನಿರೀಕ್ಷಿತ, ಬೆಳೆವಣಿಗೆಗಳಿಂದಾಗಿ ಇಂದಿರಾ ಗಾಂಧಿಯವರೇ ಅಲ್ಲದೆ ಕಾಂಗ್ರೆಸ್ ಪಕ್ಷವೂ ತತ್ತರಿಸಿತು. ಕೆಲವು ಶಕ್ತಿಗಳು ಇಡೀ ಆಡಳಿತ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಸಂಚು ಹರಡುತ್ತಿದ್ದರೆಂದು ಆರೋಪಿಸಿ ಅಂದಿನ ಗಂಭೀರ ಪರಿಸ್ಥಿತಿಯನ್ನು ನಿಭಾಯಿಸಲು ಸರಕಾರ ದೇಶದಾದ್ಯಂತ ತುರ್ತುಪರಿಸ್ಥಿತಿ ಘೋಷಿಸಿತು. ಪತ್ರಿಕಾ ಸ್ವಾತಂತ್ರ್ಯ, ಕಾರ್ಮಿಕರ ಮುಷ್ಕರದ ಹಕ್ಕು ಮತ್ತು ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಲಾಯಿತು. ತುರ್ತುಪರಿಸ್ಥಿತಿಯನ್ನು ವಿರೋಧಿಸಿದವರು ಸೆರೆಮನೆ ಸೇರಿದರು. ನ್ಯಾಷನಲ್ ಸೆಕ್ಯೂರಿಟಿ ಕಾಯಿದೆ, ಮೀಸಾ ಇತ್ಯಾದಿ ಕರಾಳ ಶಾಸನಗಳನ್ನು ಜಾರಿಗೆ ತಂದು ಚಳವಳಿಕಾರರ ವಿರುದ್ಧ ಬಳಸಲಾಯಿತು. ಇದೇ ಸಂದರ್ಭದಲ್ಲಿ ಸಂವಿಧಾನದ ಮುನ್ನುಡಿಯಲ್ಲಿ 'ಸಮಾಜವಾದ'ದ ಪರಿಕಲ್ಪನೆಯಲ್ಲಿ ಅಳವಡಿಸಿ, ಅದಕ್ಕೆ ಹೊಸ ಆಯಾಮ ಮತ್ತು ಆಶಯಗಳನ್ನು ನೀಡಲಾಯಿತು. ಅನೇಕ ಕಾನೂನು ಕಾಯಿದೆಗಳನ್ನು ಪರಿಷ್ಕರಿಸಿ ಉದ್ಯಮಗಳ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಹೇರಲಾಯಿತು. ಒಟ್ಟಾರೆಯಾಗಿ, 1975-76ರ ಹದಿನೆಂಟು ತಿಂಗಳ ಅವಧಿಯ ತುರ್ತುಪರಿಸ್ಥಿತಿಯನ್ನು ಭಾರತದ ರಾಜಕಾರಣದಲ್ಲಿ ಸಂಭವಿಸಿದ ಒಂದು ತಲ್ಲಣದ ಅಧ್ಯಾಯ ಎಂಬುದಾಗಿ ಗುರುತಿಸಬಹುದಾಗಿದೆ. ಭಾರತ ಕಮ್ಯುನಿಸ್ಟ್ ಪಕ್ಷವು ತನ್ನದೇ ಅದ ಸೈದ್ಧಾಂತಿಕ ಕಾರಣಗಳಿಂದಾಗಿ ಈ ಅವಧಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದು ಗಮನಾರ್ಹ. ಆ ಬಗೆಯ ಕಾರಣಗಳಿಂದಾಗಿ ಮಾರ್ಕಿಸ್ಟ್ ಪಕ್ಷವು ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಆ ಪಕ್ಷದ ಸಾವಿರಾರು ಕಾರ್ಯಕರ್ತರು, ಹಿರಿಯನಾಯಕರು ಬಂಧನಕ್ಕೊಳಗಾದರು. ಜನತೆಯ ತೀವ್ರ ಪ್ರತಿರೋಧ, ಆಕ್ರೋಶಗಳಿಗೆ ಮಣಿದು 1977ರಲ್ಲಿ ತುರ್ತು ಪರಿಸ್ಥಿತಿಯನ್ನು ಕೊನೆಗೊಳಿಸಿ ಚುನಾವಣೆ ಘೋಷಿಸಿದ ಕಾಂಗ್ರೆಸ್ ಪಕ್ಷಕ್ಕೆ ಮತಗಟ್ಟೆಯಲ್ಲಿ ತೀವ್ರ ಮುಖಭಂಗವಾಯಿತು. ಸರಕಾರ ಎಷ್ಟೇ ಜನಪರ ಕಾರ್ಯಕ್ರಮಗಳನ್ನು ಘೋಷಿಸಿತಾದರೂ ಮತದಾರರು ಕಾಂಗ್ರೆಸ್ ಪಕ್ಷದ ಸರ್ವಾಧಿಕಾರಿ ಧೋರಣೆಯ ವಿರುದ್ಧ ಪ್ರತಿಭಟಿಸಿ ತಕ್ಕ ಪ್ರತಿಕ್ರಿಯೆ ನೀಡಿದರು. ಕಾಂಗ್ರೆಸ್‌ನೊಂದಿಗೆ ಚುನಾವಣಾ ಮೈತ್ರಿ ಹೊಂದಿದ ಭಾರತ ಕಮ್ಯುನಿಸ್ಟ್ ಪಕ್ಷವೂ ಭಾರಿ ಸೋಲು ಅನುಭವಿಸಿತು; ಆದರೆ ಜನತಾ ಪಕ್ಷವನ್ನು ಬೆಂಬಲಿಸಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಬಲವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿಕೊಂಡಿತು. ಆನಂತರ ಗದ್ದುಗೆಯೇರಿದ ಜನತಾಪಕ್ಷವು ವ್ಯಕ್ತಿ ಪ್ರತಿಷ್ಠೆ ವೈಯಕ್ತಿಕ ಭಿನ್ನಾಭಿಪ್ರಾಯಗಳು ಹಾಗೂ ಆಂತರಿಕ ಮತ್ತು ಸೈದ್ಧಾಂತಿಕ ವಿರೋಧಾಭಾಸಗಳಿಂದ ಕೂಡಿದ ಒಂದು ಅಸಹಜ ರಾಜಕೀಯ ಒಕ್ಕೂಟವಾಗಿತ್ತು. ಕೈಗಾರಿಕಾ ಬಂಡವಾಳದ ಪ್ರತಿನಿಧಿಗಳಾಗಿದ್ದ ಹಳೆಯ ಕಾಂಗ್ರೆಸ್ ನಾಯಕರು, ವ್ಯಾಪಾರಿ ವರ್ಗದ ಪ್ರತಿನಿಧಿಗಳಾಗಿದ್ದ ಜನಸಂಘ, ಶ್ರೀಮಂತ ಭೂಮಾಲೀಕರ ರಾಜಕೀಯ ಧ್ವನಿಯಾಗಿದ್ದ ಲೋಕದಳ ಇವು ನಿರಂತರ ಕಚ್ಚಾಟ ಮತ್ತು ಪರಸ್ಪರ ಮೂದಲಿಕೆಗಳಲ್ಲೇ ತೊಡಗಿಕೊಂಡು ಆಡಳಿತ ನಡೆಸಲು ಸಾಧ್ಯವಾಗದೆ ಜನತಾ ಪಕ್ಷ ಅಧಿಕಾರ ಕಳೆದುಕೊಂಡಿತು.

ಈ ಮಧ್ಯೆ 1978ರಲ್ಲಿ ಜರುಗಿದ ಭಂಟಿಡಾ ಅಧಿವೇಶನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಇಂದಿರಾ ಕಾಂಗ್ರೆಸ್‌ಗೆ ತಾನು ಬೆಂಬಲ ನೀಡಿ ತಪ್ಪು ಎಸಗಿತು ಎಂದು ಹೇಳಿಕೆ ನೀಡಿತು. ಆ ಪಕ್ಷದ ಹಿರಿಯ ನಾಯಕರೊಲ್ಲಬ್ಬರಾಗಿದ್ದ ಶ್ರೀಪಾದ ಆಮೃತ್ ಡಾಂಗೆಯವರು ಆ ನಿಲುವನ್ನು ಸಮರ್ಥಿಸಲಿಲ್ಲ. ಕಾಂಗ್ರೆಸ್ ಪಕ್ಷವನ್ನು ದೂರವಿರಿಸಿದ್ದೇ ಆದರೆ ಬಲಪಂಥೀಯ ಹಾಗೂ ಮತೀಯ ಶಕ್ತಿಗಳು ಬೆಳೆಯಲು ಅವಕಾಶ ಮಾಡಿಕೊಟ್ಟಂತಾಗುವುದು ಎಂಬ ತಮ್ಮದೇ ರಾಜಕೀಯ ವಿಮರ್ಶೆಯನ್ನು

ಮುಂದಿಟ್ಟರು. ಪಕ್ಷವು ಅವರ ವಾದವನ್ನು ತಿರಸ್ಕರಿಸಿತು. ಮತ್ತು ಕ್ರಮೇಣ ಅವರು ಪಕ್ಷದಿಂದ ಹೊರಗುಳಿಯುವಂತಾಯಿತು. ಜನತಾ ಪಕ್ಷದಲ್ಲಿ ಲೀನವಾಗಿದ್ದ ಭಾರತೀಯ ಜನಸಂಘವು ಕೆಲಕಾಲದಲ್ಲೇ ಹೊರಸಿಡಿದು ಭಾರತೀಯ ಜನತಾ ಪಕ್ಷವೆಂಬ ಹೆಸರಿನಡಿಯಲ್ಲಿ ಮತೀಯ ರಾಜಕೀಯಕ್ಕೆ ಹೊಸ ಆಯಾಮ ರಚಿಸಿಕೊಡಲು ಮುಂದಾದದ್ದು ಈಗ ಇತಿಹಾಸ. ಇದರಿಂದಾಗಿ ಭಾರತದ ಕಮ್ಯುನಿಸ್ಟ್ ಚಳವಳಿಗೆ ವರ್ಗ ಹೋರಾಟ ಮತ್ತು ಮತೀಯ ಶಕ್ತಿಗಳ ವಿರುದ್ಧದ ಹೋರಾಟ ಎರಡೂ ನಿರ್ಧಾರಕ ಅಂಶಗಳಾಗಿ ಪರಿಣಮಿಸಿವೆ.

ಈ ಹೊತ್ತಿಗೆ 1979ರಲ್ಲಿ ರಾಜ್ಯಮಟ್ಟದ ವಿಧಾನಸಭಾ ಚುನಾವಣೆಗಳು ಜರುಗಿ, ಪಶ್ಚಿಮ ಬಂಗಾಲದಲ್ಲಿ ಎಡರಂಗವು ಭಾರಿ ಜಯಗಳಿಸಿ ಅಲ್ಲಿನ ರಾಜಕಾರಣದಲ್ಲಿ ಒಂದು ಬೃಹತ್ ಶಕ್ತಿಕೇಂದ್ರವಾಗಿ ರೂಪುಗೊಳ್ಳಲು ಸಾಧ್ಯವಾಯಿತು. ಮಾರ್ಕಿಸ್ಟ್ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ ಕ್ರಾಂತಿಕಾರಿ ಸಮಾಜವಾದಿ ಪಕ್ಷ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷ ಎಲ್ಲವೂ ಜೊತೆಗೂಡಿ ರಚಿಸಿಕೊಂಡ ಈ ಎಡರಂಗವು ಒಂದು ಸಮರ್ಥ ಜನಪರ ವೇದಿಕೆಯಾಗಿ ಇಂದಿಗೂ ಮತ್ತೆ ಮತ್ತೆ ಚುನಾವಣೆಗಳಲ್ಲಿ ಗೆದ್ದುಬರುತ್ತಿದೆ. ಭೂಸುಧಾರಣೆ ಯಂತಹ ಹಲವಾರು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಎಡರಂಗದ ಸರ್ಕಾರವನ್ನು ಅಲ್ಲಿನ ಜನತೆಯ ಮನ್ನಣೆ ಗಳಿಸಿದೆ. ಅಂದಿನಿಂದ ಇಂದಿನವರೆಗೂ ಪ್ರತಿ ಚುನಾವಣೆಯಲ್ಲೂ ಎಡರಂಗವೂ ಗೆದ್ದುಬರುತ್ತಿರುವುದು ಇಡೀ ಜಗತ್ತಿನ ರಾಜಕೀಯ ವಿದ್ಯಮಾನಗಳಲ್ಲಿ ಒಂದು ದಾಖಲೆಯೆನಿಸಿದೆ. ಕೇರಳ, ತ್ರಿಪುರ ರಾಜ್ಯಗಳಲ್ಲೂ ಎಡಪಕ್ಷಗಳ ಸರ್ಕಾರಗಳನ್ನು ರಚಿಸಲು ಸಾಧ್ಯವಾಗಿರುವುದು 1979–80ರ ಅನಂತರದ ಪ್ರಮುಖ ಬೆಳೆವಣಿಗೆಗಳಲ್ಲಿ ಒಂದು ಎನ್ನಬಹುದು.

1980ರಲ್ಲಿ ಪುನಃ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಇಂದಿರಾ ಕಾಂಗ್ರೆಸ್‌ನ್ನು ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಬೆಂಬಲಿಸಲಿಲ್ಲ. ಇಂದಿರಾಗಾಂಧಿ ಹತ್ಯೆಯ ನಂತರ ಪ್ರಧಾನಿಯಾದ ರಾಜೀವ ಗಾಂಧಿಯವರ ಸರ್ಕಾರವನ್ನೂ ಕಮ್ಯುನಿಸ್ಟ್ ಪಕ್ಷಗಳು ಬೆಂಬಲಿಸಲಿಲ್ಲ. ಒಟ್ಟಾರೆಯಾಗಿ, ರಾಷ್ಟ್ರದ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷದ ಸಖ್ಯವನ್ನು ಬಯಸದೆ ಅದನ್ನು ದೂರವಿಡುವ ರಾಜಕೀಯ ಪಕ್ಷಗಳ ಮನೋವೃತ್ತಿ ಈ ಅವಧಿಯಲ್ಲಿನ ಗಮನಾರ್ಹವಾದ ಬೆಳೆವಣಿಗೆ.

1989ರಲ್ಲಿ ಜರುಗಿದ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲು ಅನುಭವಿಸಿದ ರಾಜೀವಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷವು ಅಧಿಕಾರ ಕಳೆದುಕೊಂಡಿತು. ವಿಶ್ವನಾಥ್ ಪ್ರತಾಪ್ ಸಿಂಗ್‌ರವರ ನೇತೃತ್ವದಲ್ಲಿ ರಾಷ್ಟ್ರೀಯ ರಂಗ ಬಿ.ಜೆ.ಪಿ.ಯ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದಿತು. ಆದರೆ ಕೆಲವೇ ತಿಂಗಳ ಅವಧಿಯಲ್ಲಿ ಅವರ ಸರಕಾರ ಅಧಿಕಾರ ಕಳೆದುಕೊಂಡಿತು. ಆ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬಂದಿತು. ಈ ಅವಧಿಯಲ್ಲಿ ಬಲಪಂಥೀಯ ಮತ್ತು ಮತೀಯ ಶಕ್ತಿಗಳು ದೊಡ್ಡ ಪ್ರಮಾಣದಲ್ಲಿ ತಲೆಯೆತ್ತಿದ್ದನ್ನು ಕಾಣಬಹುದು. ಹೊಸ ಆರ್ಥಿಕ ನೀತಿಯ ಹುಟ್ಟಿನ ಮೂಲಗಳನ್ನು ಈ ಅವಧಿಯಲ್ಲಿನ ಆಗುಹೋಗುಗಳಲ್ಲಿ ಗುರುತಿಸಬಹುದಾಗಿದೆ. ಇದೇ ಸಂದರ್ಭದಲ್ಲಿ ಮತೀಯ ಶಕ್ತಿಗಳು ಕೋಮು ಸೌಹಾರ್ದವನ್ನು ನಾಶಗೊಳಿಸಿ ತಮ್ಮ ಅಟ್ಟಹಾಸವನ್ನು ಮೆರೆದವು. ಕಾಂಗ್ರೆಸ್ ಪಕ್ಷವೂ ಹಿಂದುತ್ವದ ಪ್ರತಿಪಾದಕರನ್ನು ವಿರೋಧಿಸುವುದಿರಲಿ, ಅವರನ್ನು ನಿಯಂತ್ರಿಸುವ ಗೋಜಿಗೂ ಹೋಗಲಿಲ್ಲ. ಕಮ್ಯುನಿಸ್ಟ್ ಪಕ್ಷಗಳು ಮಾತ್ರ ಹೊಸ ಆರ್ಥಿಕ ನೀತಿಯನ್ನು ಎಂದರೆ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳನ್ನು ಪ್ರಬಲವಾಗಿ ವಿರೋಧಿಸಿದ್ದವು. ಅಲ್ಲದೆ ಕೋಮುವಾದದ ವಿರುದ್ಧದ ಹೋರಾಟಗಳಲ್ಲಿಯು ಪ್ರಮುಖ ಪಾತ್ರ ವಹಿಸುತ್ತಲಿವೆ. ಇತ್ತೀಚಿನ ದಿನಗಳಲ್ಲಿ ಈ ನೀತಿಗಳಿಗೆ ಹೊಂದಿಕೊಳ್ಳುತ್ತಿವೆ.

1996ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಕಳೆದುಕೊಂಡು, ಆ ಸ್ಥಾನದಲ್ಲಿ ತೃತೀಯ ರಂಗವೆಂಬ ಹೊಸ ಸಮ್ಮಿಶ್ರ ಸರಕಾರ ರಚನೆಯಾಯಿತು. ಭಾರತ ಕಮ್ಯುನಿಸ್ಟ್ ಪಕ್ಷದ ಇಬ್ಬರು ನಾಯಕರು ಕೇಂದ್ರದಲ್ಲಿ ಮಂತ್ರಿಗಳಾದರು. ಅದರಿಂದ ಕಮ್ಯುನಿಸ್ಟ್ ಚಳವಳಿಗೆ ಹೊಸ ತಿರುವೇನೂ ಮೂಡಿಬರಲಿಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜ್ಯೋತಿಬಸು ಅವರು ಪ್ರಧಾನ ಮಂತ್ರಿಯಾಗಬಹುದಾಗಿದ್ದ ಅವಕಾಶವನ್ನು ಪಕ್ಷವು ಸೈದ್ಧಾಂತಿಕ ಕಾರಣಗಳನ್ನು ಮುಂದೊಡ್ಡಿ ನಿರಾಕರಿಸಿತು. ಆ ನಿರ್ಧಾರವು ಒಂದು ಚಾರಿತ್ರಿಕ ಪ್ರಮಾದ ಎಂಬುದಾಗಿ ಪಕ್ಷದ ಕೆಲವು ಧುರೀಣರು ವ್ಯಾಖ್ಯಾನಿಸಿದ್ದಾರೆ.

1989–90ರ ವೇಳೆಗೆ ಸೋವಿಯೆತ್ ಒಕ್ಕೂಟದಲ್ಲಿ ಮತ್ತು ಪೂರ್ವ ಯುರೋಪ್ ರಾಷ್ಟ್ರಗಳಲ್ಲಿ ಜರುಗಿದ ವಿದ್ಯಮಾನಗಳು ಹಾಗೂ ಅಲ್ಲಿನ ಸಮಾಜವಾದಿ ವ್ಯವಸ್ಥೆಯ ಪತನವು ಅಂತಾರಾಷ್ಟ್ರೀಯ ರಾಜಕೀಯ ಮತ್ತು ಭಾರತದಲ್ಲಿನ ಕಮ್ಯುನಿಸ್ಟ್ ಚಳವಳಿಯ ಮೇಲೆ ಆಗಾಧವಾದ ಪರಿಣಾಮವನ್ನು ಬೀರಿತು. ಭಾರತ ಕಮ್ಯುನಿಸ್ಟ್ ಪಕ್ಷ ಇದರಿಂದ ತಲ್ಲಣಗೊಂಡರೂ ತನ್ನ ಹೋರಾಟಗಳನ್ನು ಮುಂದುವರೆಸಿಕೊಂಡು ಬಂದಿರುವುದು ವಿಶೇಷ ಸಂಗತಿ. ಚೀನದ ಕಮ್ಯುನಿಸ್ಟ್ ಪಕ್ಷದ ಆರ್ಥಿಕ ಮತ್ತು ಅಂತಾರಾಷ್ಟ್ರೀಯ ನೀತಿ ನಿಲುವುಗಳು ಎಂದಿಗೂ ಅದರ ಪರವಾಗಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಬಹುಮಟ್ಟಿಗೆ ಮುಜುಗರ ಉಂಟುಮಾಡಿದೆಯೆಂಬ ಅಂಶವನ್ನು ತಳ್ಳಿಹಾಕಲಾಗದು. ಎರಡೂ ಪಕ್ಷಗಳು ಜನತೆಯ ಮುಂದಿಟ್ಟಿರುವ ತಮ್ಮ ಕಾರ್ಯಕ್ರಮಗಳನ್ನು ತುಲನೆಮಾಡಿ ನೋಡಿದರೆ ಅವರಿಬ್ಬರ ನಡುವೆ ಇದೆಯೆನ್ನಲಾಗಿದ್ದ ಎಷ್ಟೋ ತಾತ್ತ್ವಿಕ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಈಗ ಇರುವಂತಿಲ್ಲ. ರಾಷ್ಟ್ರದ ಮತ್ತು ದುಡಿವ ಜನತೆಯ ಹಿತದೃಷ್ಟಿಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎರಡೂ ಪಕ್ಷಗಳು ಐಕಮತ್ಯ ಸಾಧಿಸುವಂತಾದರೆ ಭಾರತದ ರಾಜಕಾರಣ ಒಂದು ಹೊಸ ದಿಕ್ಕಿನತ್ತ ಸಾಗಬಹುದಾಗಿದೆ. ಇಲ್ಲಿನ ಪ್ರಭುತ್ವದ ವರ್ಗಸ್ವರೂಪ, ಹೋರಾಟದ ಮಾರ್ಗಗಳು ಮತ್ತು ಕ್ರಾಂತಿಯನ್ನು ಸಾಧಿಸುವ ನಿಟ್ಟಿನಲ್ಲಿ ರೂಪಿಸಬೇಕಾದ ತಂತ್ರಗಳು, ಇವೇ ಕುರಿತಂತೆ ವಿಭಿನ್ನ ವ್ಯಾಖ್ಯಾನ ಮತ್ತು ತಿಳಿವಳಿಕೆಗಳಿಂದಾಗಿ ಕಮ್ಯುನಿಸ್ಟ್ ಚಳವಳಿಯಿಂದ, ಅದರಲ್ಲೂ ಹೆಚ್ಚಿನ ಮಟ್ಟದಲ್ಲಿ ಮಾರ್ಕ್ಸ್‌ವಾದಿ ಪಕ್ಷದಿಂದ ಸಿಡಿದುಹೋದ ಹಾಗೂ ಸಂವಿಧಾನ ಬಾಹಿರ ಮತ್ತು ಹಿಂಸಾತ್ಮಕ ಹೋರಾಟಗಳಲ್ಲಿ ನಿರತರಾಗಿರುವ ನಕ್ಸಲ್ ಬಾರಿ, ಪೀಪಲ್ಸ್‌ವಾರ್ ಗ್ರೂಪ್‌ನಂತಹ ಹಲವು ತೀವ್ರಗಾಮಿ ಬಣಗಳು ಜನಸಾಮಾನ್ಯರ, ಕಾರ್ಮಿಕರ, ರೈತ ಸಮುದಾಯಗಳಲ್ಲಿ ತಮ್ಮನ್ನು ಗುರುತಿಸಿಕೊಂಡು ಪ್ರಗತಿಪರ ಹೋರಾಟಗಳ ಮುಖ್ಯವಾಹಿನಿಗೆ ಹಿಂತಿರುಗಿಬಂದು ಪ್ರಭುತ್ವದ ಬದಲಾವಣೆಗಾಗಿ ಸಂಘಟಿಸಲಾಗುತ್ತಿರುವ ಸಂಘರ್ಷದಲ್ಲಿ ಭಾಗವಹಿಸುವುದಾದರೆ ಕಮ್ಯುನಿಸ್ಟ್ ಚಳವಳಿಯು ಭಾರತದಲ್ಲಿ ಒಂದು ಪ್ರಬಲ ಹಾಗೂ ನಿರ್ಣಾಯಕ ಶಕ್ತಿಯಾಗಿ ರೂಪುಗೊಳ್ಳುವು ಕಾಲ ದೂರ ಉಳಿದಿಲ್ಲ.

**ಕಯಥ :** ಮಧ್ಯಪ್ರದೇಶ ರಾಜ್ಯದ ಉಜ್ಜಯನಿ ಜಿಲ್ಲೆಯಲ್ಲಿ ಉಜ್ಜಯನಿಯಿಂದ ಸು. 25 ಕಿಮೀ ಪೂರ್ವಕ್ಕೆ ಛೋಟಿ ಕಾಲಿಸಿಂಧ್ ನದಿಯ ಬಲದಂಡೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಈಗಿರುವ ಹಳ್ಳಿ ಪುರಾತನ ಅವಶೇಷಗಳ ದಿಬ್ಬದ ಮೇಲೆಯೇ ಇದೆ. ಪ್ರಖ್ಯಾತ ಖಗೋಳವಿಜ್ಞಾನಿ ವರಾಹಮಿಹಿರನ ಹುಟ್ಟೂರಾದ ಕಪಿಥಕ ಇದೇ ಸ್ಥಳವೆಂದು ಹೇಳುತ್ತಾರೆ. 1964–65 ರಲ್ಲಿ ವಿಕ್ರಮ್ ವಿಶ್ವವಿದ್ಯಾಲಯದ ವಿ.ಎಸ್. ವಾಕಣಕರ್ ಈ ನಿವೇಶನವನ್ನು ಶೋಧಿಸಿ 1965–67ರಲ್ಲಿ ಸಣ್ಣ ಪ್ರಮಾಣದ ಉತ್ಖನನವನ್ನು ನಡೆಸಿದರು. ಅನಂತರ ಡೆಕ್ಕನ್ ಕಾಲೇಜ್, ವಿಕ್ರಮ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ 1968ರಲ್ಲಿ ಉತ್ಖನನ ನಡೆಸಿ ಐದು ಸಾಂಸ್ಕೃತಿಕ ಹಂತಗಳನ್ನು ಗುರುತಿಸಿತು.

ಮೊದಲನೆಯ ಹಂತವಾದ ತಾಮ್ರ–ಶಿಲಾಯುಗದ ಸಾಂಸ್ಕೃತಿಕ ಅವಶೇಷಗಳು ಭಾರತೀಯ ಉಪಖಂಡದ ಇತರ ತಾಮ್ರ–ಶಿಲಾಯುಗ ಸಂಸ್ಕೃತಿಗಳಿಗಿಂತ ಭಿನ್ನವಾಗಿವೆ. ಮೂರು ವಿಧದ ಮಣ್ಪಾತ್ರೆಗಳು ಈ ಸಂಸ್ಕೃತಿಯ ಮುಖ್ಯ ಲಕ್ಷಣವಾಗಿವೆ. ತಾಮ್ರದ ಉಪಕರಣಗಳು ಹಾಗೂ ಬೆಣಚುಕಲ್ಲಿನ ನೀಳ ಚಕ್ಕೆಗಳು ಇತರ ತಾಮ್ರ–ಶಿಲಾಯುಗ ಸಂಸ್ಕೃತಿಗಳಲ್ಲಿರುವಂತಿವೆ. ಇಲ್ಲಿಯ ಜನರು ಮಣ್ಣು ಮತ್ತು ಹುಲ್ಲಿನ ಸಣ್ಣ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಮಣ್ಪಾತ್ರೆಗಳಲ್ಲಿ ಒಂದು ಅತಿ ವಿಶಿಷ್ಟವಾಗಿದೆ. ನಯವಾಗಿ ಗಟ್ಟಿಮುಟ್ಟಾಗಿಯೂ ಇರುವ ಈ ಪಾತ್ರೆಗಳು ದಪ್ಪ ಕಂದುಬಣ್ಣದ ಲೇಪನವನ್ನು ಅಂಚಿನಿಂದ ಭುಜದವರೆಗೂ ಕೆಲವೊಮ್ಮೆ ತಳಭಾಗದವರೆಗೂ ಹೊಂದಿವೆ. ಲೇಪನದ ಮೇಲೆ ನೇರಳೆ ವರ್ಣದ ವಿವಿಧಾಕೃತಿಯ ವಕ್ರವಾದ, ನೀಳವಾದ ಹಾಗೂ ಏರಿಳಿತಗಳಿಂದ ಕೂಡಿದ ದಪ್ಪವಾದ ಚಿತ್ರಗಳನ್ನು ಬಿಡಿಸಲಾಗಿದೆ. ದುಂಡಾದ ಜಾಡಿಗಳು ಹಾಗೂ ದಪ್ಪ ಬಟ್ಟಲುಗಳು ವಿಶೇಷವಾಗಿವೆ. ಹರಪ್ಪ ಸಂಸ್ಕೃತಿಯ ಮಡಕೆಯನ್ನು ಹೋಲುವ ದೊಡ್ಡ ಶೇಖರಣಾ ಜಾಡಿಗಳು ಇವೆ. ಎರಡನೆಯ ಮಾದರಿಯ ಮಣ್ಪಾತ್ರೆಗಳು ಮಾಸಲು ಕಂದುಬಣ್ಣದ ಮೇಲೆ ಕೆಂಪುವರ್ಣದಿಂದ ಅಲಂಕರಿಸಲ್ಪಟ್ಟಿವೆ. ಇವು ನಯವಾಗಿ ತೆಳುವಾಗಿ ಇವೆ. ಇವುಗಳಲ್ಲಿ ಚೆಂಬು ಸರ್ವೆಸಾಮಾನ್ಯವಾಗಿದ್ದು ತಟ್ಟೆ ಹಾಗೂ ನೀಳ್ಗತ್ತಿನ ದುಂಡನೆಯ ಜಾಡಿಗಳು ಪ್ರಮುಖವಾಗಿವೆ. ಮೂರನೆಯ ಮಾದರಿಯ ಮಣ್ಪಾತ್ರೆಗಳನ್ನು ಲೇಪನ ಮಾಡದೆಯೇ ಅಂಕುಡೊಂಕಾದ ಕೊರೆದ ಚಿತ್ರಗಳಿಂದ ಚಿತ್ರಿಸಲಾಗಿದೆ. ಇವುಗಳಲ್ಲಿ ಬಟ್ಟಲು ಹಾಗೂ ಪಾತ್ರೆಗಳು ಪ್ರಮುಖ ಮಾದರಿಗಳು. ಈ ಮಣ್ಪಾತ್ರೆಗಳ ಜೊತೆಗೆ ಕೈಯಿಂದ ಮಾಡಿದ ಒರಟಾದ ಕೆಂಪು–ಬೂದು ಬಣ್ಣದ, ಕೆಲವೊಮ್ಮೆ ಕೊರೆದ ಚಿತ್ರಗಳಿಂದ ಚಿತ್ರಿಸಲ್ಪಟ್ಟ ಪಾತ್ರೆಗಳು, ಶೇಖರಣಾ ಜಾಡಿಗಳು, ಬೋಗುಣಿ, ಹರಿವಾಣ ದೊರೆತಿವೆ. ಇತರ ತಾಮ್ರ–ಶಿಲಾಯುಗ ಸಂಸ್ಕೃತಿಗಳ ಮಣ್ಪಾತ್ರೆಗಳಿಗಿಂತ ಭಿನ್ನವಾದ ಇವು ಪ್ರಥಮ ಬಾರಿಗೆ ಈ ನೆಲೆಯಲ್ಲಿ ಕಂಡುಬಂದಿರುವುದರಿಂದ ಈ ಹಂತದ ಸಂಸ್ಕೃತಿಯನ್ನು ಕಯಥ ಸಂಸ್ಕೃತಿಯೆಂದು ಉತ್ಖನನಕಾರರು ಹೆಸರಿಸಿದ್ದಾರೆ.

ಕಯಥ ಸಂಸ್ಕೃತಿಯ ಜನರು ತಾಮ್ರ ಲೋಹ ತಂತ್ರಗಾರಿಕೆಯಲ್ಲಿ ನಿಪುಣರಾಗಿದ್ದರು. ಇಲ್ಲಿ ದೊರೆತ ತಾಮ್ರದ ಎರಡು ಕೊಡಲಿ ಮತ್ತು 28 ಬಳೆಗಳು ಇವರ ನೈಪುಣ್ಯಕ್ಕೆ ಸಾಕ್ಷಿಯಾಗಿವೆ. 160–175 ಮಂದಗೆಂಪಿನ ಕಲ್ಲು ಹಾಗೂ ಅಗೇಟ್ ಮಣಿಗಳಿಂದ ಮಾಡಿದ ಎರಡು ಕೊರಳ ಹಾರಗಳು ಹಾಗೂ ಸ್ಟಿಯಟೈಟ್‌ನಲ್ಲಿ ಮಾಡಿದ 40,000 ಸೂಕ್ಷ್ಮಮಣಿಗಳು ದೊರೆತಿವೆ. ಕಯಥ ಸಂಸ್ಕೃತಿ ಮರೆಯಾದ ಒಂದು ಶತಮಾನದ ಅನಂತರ (ಪ್ರ.ಶ.ಪೂ. 1800) ಈ ನೆಲೆಯಲ್ಲಿ ಬಾಣಾಸ್ ಸಂಸ್ಕೃತಿಯ ಜನ ಬಂದು ನೆಲೆಸಿದರು.

ಬಾಣಾಸ್ ಸಂಸ್ಕೃತಿ ತಾಮ್ರಯುಗ ಸಂಸ್ಕೃತಿಯಾದರೆ ಕಯಥ ಕಲ್ಲಿನ ಚಕ್ಕೆಯ ಅಲಗುಗಳ ಬಳಕೆಯಿಂದಾಗಿ ತಾಮ್ರ–ಶಿಲಾಯುಗ ಸಂಸ್ಕೃತಿಯಾಗಿದೆ. ಬಾಣಾಸ್ ಸಂಸ್ಕೃತಿಯ ಸುಡಾವೆ ಮಣ್ಣಿನ ಗೂಳಿಯ ನೈಜತೆ ಹಾಗೂ ಅಂಗಾಂಗಗಳ ವಿಶಿಷ್ಟ ನಿಲುವು ಆಕರ್ಷಕವಾಗಿದೆ. ಬಹುತೇಕ ಆಕೃತಿಗಳಲ್ಲಿ ತಲೆ, ಕೊಂಬು, ಹಾಗೂ ಇಣಿ ಮಾತ್ರ ಎದ್ದು ಕಾಣುವಂತೆ ರೂಪಿಸಿ ಇವುಗಳಿಗೆ ವೃತ್ತಾಕಾರದ ಪೀಠವನ್ನು ಒದಗಿಸಲಾಗಿದೆ. ಕೆಲವು ಆಕೃತಿಗಳ ಕೊಂಬುಗಳನ್ನು ಮಾತ್ರ ಪೀಠದ ಮೇಲೆ ತೋರಿಸಲಾಗಿದೆ. ಇವುಗಳನ್ನು ಪೂಜೆಗಾಗಿ ಉಪಯೋಗಿಸುತ್ತಿದ್ದಿರಬಹುದು. ಇಂತಹ ಮಾದರಿಗಳು ಇಲ್ಲಿಯವರೆಗೂ ಬೇರೆ ಎಲ್ಲಿಯೂ ದೊರೆತಿಲ್ಲ.

ಮೂರನೆಯ ಹಂತದಲ್ಲಿ ಬಾಣಾಸ್ ಸಂಸ್ಕೃತಿ ಮಾಳ್ವ ಸಂಸ್ಕೃತಿಯೊಂದಿಗೆ ಮಿಶ್ರಗೊಳ್ಳುತ್ತದೆ. ಮಾಳ್ವ ಸಂಸ್ಕೃತಿಯ ವಿಶಿಷ್ಟವಾದ ಮಣ್ಪಾತ್ರೆ ವರ್ಣಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ. ಇವುಗಳ ಜೊತೆಗೆ ಬಿಳಿಯ ಚಿತ್ರಗಳಿಂದ ಅಲಂಕೃತವಾದ ಕಪ್ಪು–ಕೆಂಪು ದ್ವಿವರ್ಣ ಮಡಕೆಗಳು ದೊರೆತಿದ್ದು ಇವು ಬಾಣಾಸ್ ಸಂಸ್ಕೃತಿಯ ಉಳಿಕೆಗಳು. ಕೈಯಿಂದ ಮಾಡಿದ ಒರಟಾದ ಮಡಕೆಗಳೂ ಹಿಂದಿನ ಸಂಸ್ಕೃತಿಯಿಂದ ಮುಂದುವರೆದಿವೆ. ಸುಟ್ಟಮಣ್ಣಿನ ಗೂಳಿಯ ಗೊಂಬೆಗಳೂ ಈ ಹಂತದಲ್ಲಿವೆ. ಈ ಹಂತದ ಅನಂತರ ಇಲ್ಲಿ ಯಾರೂ ನೆಲೆಸಿದಂತೆ ಕಾಣುವುದಿಲ್ಲ. 30ಸೆಂಮೀ ನಷ್ಟು ಕಪ್ಪು ಮಣ್ಣಿನ ಬರಡು ಪದರ ಇದನ್ನು ಸೂಚಿಸುತ್ತದೆ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಕಬ್ಬಿಣ ಲೋಹ ತಯಾರಿಕೆಯ ತಾಂತ್ರಿಕಜ್ಞಾನ ಮತ್ತು ಪರಿಣತಿ ಇದ್ದ ಜನರು ಇಲ್ಲಿ ನೆಲೆಸಿದರು. ಈ ಹಂತದಲ್ಲಿ ವಿವಿಧ ರೀತಿಯ ಕಬ್ಬಿಣದ ಸಾಮಾನುಗಳು ಹಾಗೂ ಆಯುಧಗಳು ದೊರೆತಿವೆ. ಔತ್ತರೇಯ ಮೆರುಗಿನ ಕಪ್ಪುಬಣ್ಣದ ಪಾತ್ರೆ ಹಾಗೂ ವರ್ಣಚಿತ್ರಿತ ಬೂದುಬಣ್ಣದ ಮಡಕೆಯ ಚೂರುಗಳು ದೊರೆತಿವೆ. ಜೊತೆಗೆ ಬೂದುಬಣ್ಣದ ಹಾಗೂ ಒರಟಾದ ಕಪ್ಪು–ಕೆಂಪು ಮಡಕೆಗಳು ಸಹ ಲಭ್ಯವಾಗಿವೆ. ಸುಟ್ಟಮಣ್ಣಿನ ಕಿವಿಯೋಲೆ, ಬಳೆ, ತಕಲಿ ಮತ್ತು ಗಾಜಿನ ಹಾಗೂ ಅರೆ ಅಮೂಲ್ಯ ಹರಳಿನ ಮಣಿಗಳು ದೊರೆತಿವೆ. ಇದರ ಮುಂದಿನ ಹಂತದಲ್ಲಿ ಶುಂಗ, ಕುಷಾಣ ಹಾಗೂ ಗುಪ್ತ ಕಾಲದ ಕೆಂಪು ಲೇಪನ ಮಾಡಿದ ಮಣ್ಪಾತ್ರೆ ದೊರೆತಿವೆ. ಕೆಂಪುಮಣ್ಣಿನ ಬಟ್ಟಲುಗಳು, ಸುಟ್ಟಮಣ್ಣಿನ ತಕಲಿ, ಕಿವಿಯೋಲೆ, ಆಟಿಕೆಯ ಎತ್ತಿನ ಬಂಡಿಯ ಚೌಕಟ್ಟು ಮತ್ತು ಶಂಖದ ಬಳೆಗಳು ಈ ಕಾಲದ ಇತರ ಅವಶೇಷಗಳು. (ಪಿ.ಸಿ.ಬಿ.)

**ಕಯನೈಟ್ :** ಸಿಲಿಕೇಟ್ ಜಾತಿಗೆ ಸೇರಿದ ರೂಪಾಂತರಿತ ಶಿಲೆಗಳಲ್ಲಿ ದೊರೆವ ಒಂದು ಖನಿಜ. ಅಣುಸೂತ್ರ $Al_2SiO_5$. ಇದೊಂದು ಅಲ್ಯೂಮಿನಿಯಮ್ಮಿನ ಸಿಲಿಕೇಟ್. ಪ್ರಾದೇಶಿಕ ರೂಪ ಪರಿವರ್ತನೆಯಿಂದ ಉದ್ಭವಿಸಿದ ನೈಸುಗಳು ಮತ್ತು ಶಿಷ್ಟುಗಳ ಜೊತೆಗಿರುವುದು ಇದರ ವಿಶಿಷ್ಟ ಲಕ್ಷಣ. ಕಯನೈಟ್ ಎಂಬ ಶಬ್ದ ಗ್ರೀಕ್ ಶಬ್ದವಾದ ಕುಅನೋಸ್ ಎಂಬುದರಿಂದ ನಿಷ್ಪನ್ನವಾಗಿದೆ. ಇದರ ಅರ್ಥ ಕಪ್ಪುನೀಲಿಯ ವಸ್ತು ಎಂದು. ಇದು ಈ ಖನಿಜದ ನೀಲವರ್ಣವನ್ನು ಸೂಚಿಸುತ್ತದೆ. ಕಯನೈಟಿನ ಬಣ್ಣ ಸಾಮಾನ್ಯವಾಗಿ ನೀಲಿಯಿಂದ ಹಿಡಿದು ಬಿಳಿಯ ಬಣ್ಣದವರೆಗೂ ಹರಡಿದೆಯಲ್ಲದೆ ಇದು ಬೂದು, ಹಸಿರು, ಹಳದಿಯಾಗಿರುವುದೂ ಉಂಟು. ಉದ್ದವಾದ ಅಲಗಿನಾಕಾರದಿಂದ ಹಿಡಿದು ಸ್ತಂಭಾಕಾರದ ಹರಳುಗಳ ರೂಪದಲ್ಲಿ ಇದು ದೊರೆಯುತ್ತದೆ. ಚೆನ್ನಾಗಿ ಸೀಳಲು ಬರುವಂತಿದೆ. ಈ ಖನಿಜದ ಗಡಸುತನ (ಹಾರ್ಡ್‌ನೆಸ್) ಹರಳಿನ ಮುಖವನ್ನು ಅವಲಂಬಿಸಿ 5–7ರ ವರೆಗಿದೆ. ಸಾಪೇಕ್ಷಸಾಂದ್ರತೆ 3.56–3.66 ವರೆಗಿದೆ. ಕಯನೈಟ್ ಖನಿಜ ಮೃತ್ತಿಕಾ ಶಿಲೆಗಳ (ಪೆಲಿಟಿಕ್ ಶಿಲೆಗಳ) ಪ್ರಾದೇಶಿಕ ರೂಪಾಂತರೀಕರಣದಿಂದ ಉದ್ಭವಿಸಿದೆ. 600 ಡಿಗ್ರಿ ಸೆಂ.ಉಷ್ಣತೆ ಮತ್ತು 5000 ವಾಯುಮಾನ ಒತ್ತಡದಲ್ಲಿ ಇದನ್ನು ಸಂಶ್ಲೇಷಿಸಬಹುದು. ಸಾಮಾನ್ಯವಾಗಿ ಮೈಕ, ಗಾರನೆಟ್, ಕೋರಂಡಂ ಮತ್ತು ಸಿಲ್ಲಿಮನೈಟ್ ಜೊತೆಗೆ ಕಯನೈಟ್ ಇರುವುದು. ಈ ಖನಿಜವನ್ನು ರಿಫ್ರಾಕ್ಟರಿಗಳಲ್ಲಿನ ಬಗೆಬಗೆಯ ಕುಲುಮೆಗಳಲ್ಲಿ ಒಳಲೇಪಕ್ಕಾಗಿ ಬಳಸುತ್ತಾರೆ. ಕೆಲವು ಗಾಜು ಮತ್ತು ಪಿಂಗಾಣಿ ಸಾಮಾನುಗಳ ಉದ್ಯೋಗಗಳಲ್ಲೂ ಮತ್ತು ಕಿಡಿಬೆಣೆಗಳನ್ನು ತಯಾರಿಸಲೂ ಇದರ ಉಪಯೋಗವಿದೆ. ಪಾರಕ ಮತ್ತು ನಿಷ್ಕಲ್ಮಷ ಕಯನೈಟನ್ನು ರತ್ನಗಳಂತೆ ಉಪಯೋಗಿಸುತ್ತಾರೆ. ಕಯನೈಟ್ ನಿಕ್ಷೇಪಗಳು ಬಿಹಾರ್, ಒರಿಸ್ಸ, ಮಧ್ಯಪ್ರದೇಶ, ಅಸ್ಸಾಂಗಳಲ್ಲಿ ದೊರೆಯುತ್ತದೆ. ಕರ್ನಾಟಕದಲ್ಲಿ ಇದು ಸಿಕ್ಕುವ ಸ್ಥಳಗಳು ಹಾಸನ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆ. (ಎಸ್.ಬಿ.ಎಲ್.)

**ಕಯಾಕ್ :** ಉತ್ತರ ಏಷ್ಯ ಮತ್ತು ಉತ್ತರ ಯುರೋಪಿನಲ್ಲಿ ಪೂರ್ವೇತಿಹಾಸ ಯುಗದಲ್ಲಿ ಸಮುದ್ರ ಮತ್ತು ನದಿಗಳ ಸಾರಿಗೆಗೆ ಉಪಯೋಗಿಸುತ್ತಿದ್ದ ಚರ್ಮದ ದೋಣಿಯ ಎಸ್ಕಿಮೋ ಹೆಸರು. ಐತಿಹಾಸಿಕಯುಗದಲ್ಲಿ ಸಹ ಇದು ಕೆಲವು ಜನಾಂಗಗಳಲ್ಲಿ ಉಳಿದು ಬಂದಿತ್ತು. ಜಲಚರಗಳ ಬೇಟೆಗಾಗಿ ಒಬ್ಬೊಬ್ಬ ಎಸ್ಕಿಮೋವೂ ಒಂದೊಂದು ದೋಣಿ ಬಳಸುವುದು ವಾಡಿಕೆಯಾಗಿತ್ತಾದರೂ ಕೆಲವುಬಾರಿ ಇಬ್ಬರು ಅಥವಾ ಮೂವರು ಬಳಸುವಂಥ ಕಯಾಕುಗಳೂ ಇದ್ದವು. ಹಗುರಾದ ಮರದ ಚೌಕಟ್ಟಿಗೆ ಸೀಲ್ ಮೃಗದ ಚರ್ಮವನ್ನು ಹೊದ್ದಿಸಿ ಹೊಲಿದು ಈ ದೋಣಿಗಳನ್ನು ನಿರ್ಮಿಸುತ್ತಿದ್ದರು. ನಾವಿಕನೂ ಸೀಲ್ ಮೃಗದ ಚರ್ಮದ ಉಡುಪನ್ನು ಧರಿಸಿ ಸಮುದ್ರದ ನೀರಿನಿಂದ ರಕ್ಷಣೆ ಪಡೆಯುತ್ತಿದ್ದ. ಈ ದೋಣಿಯಲ್ಲಿ ಜೋಡಿಸಿಟ್ಟ ತಟ್ಟೆ, ಈಟಿಗಾಳವನ್ನು ಭದ್ರವಾಗಿ ಹಿಡಿದಿಡುವ ಪಟ್ಟಿ, ಇತರ ಒಂದೆರಡು ಆಯುಧಗಳು– ಇವನ್ನು ಮಾತ್ರ ಒಯ್ಯಬಹುದಾಗಿತ್ತು. ಇದು ಬಹಳ ಹಗುರಾದ ಮತ್ತು ಸುಲಭವಾಗಿ ನಡೆಸಬಹುದಾಗಿದ್ದ ದೋಣಿ. *

**ಕಯಾಕೆಂಟ್ – ಖೊರೋಚೋಯ್ ಸಂಸ್ಕೃತಿ :** ರಷ್ಯದ ಕಾಕೇಷಿಯ ಪ್ರದೇಶದಲ್ಲಿ ಕೋಬಾನ್ ಸಂಸ್ಕೃತಿಯೊಂದಿಗೆ ನೆಲಸಿದ್ದ ಕಂಚಿನ ಯುಗ ಸಂಸ್ಕೃತಿ. ಇದನ್ನು ಕೋಬಾನ್ ಸಂಸ್ಕೃತಿಯ ಪ್ರಾದೇಶಿಕ ವೈಪರೀತ್ಯವೆಂದು ಪರಿಗಣಿಸಲಾಗಿದೆ. 1936–39ರಲ್ಲಿ ಎ.ಸಿ. ಕ್ರುಗ್ಲಾಪ್ ಈ ಸಂಸ್ಕೃತಿಯನ್ನು ಬೆಳಕಿಗೆ ತಂದ. ಡಗೆಸ್ತಾನದ, ಕರಾವಳಿ ಮತ್ತು ಬೆಟ್ಟಪ್ರದೇಶಗಳಲ್ಲಿ ಈ ಸಂಸ್ಕೃತಿಗೆ ಸೇರಿದ ಅನೇಕ ಶ್ಮಶಾನಗಳೂ ವಸತಿಗಳೂ ಕಂಡುಬಂದಿವೆ. ಈ ಸಂಸ್ಕೃತಿಯನ್ನು ಪ್ರ.ಶ.ಪೂ. 9–7ನೆಯ ಶತಮಾನಗಳಿಗೆ ನಿರ್ದೇಶಿಸಲಾಗಿದೆ. ಉದ್ದನಾದ ಮತ್ತು ಬಾಗಿದ ಕಂಚಿನ ಕೊಡಲಿಗಳು, ತಾಮ್ರದ ಉಪಕರಣಗಳು ಮತ್ತು ವೈವಿಧ್ಯಮಯ ಆಭರಣಗಳು ಈ ಸಂಸ್ಕೃತಿಯ ಲಕ್ಷಣಗಳು. ಈ ಜನ ಕಲ್ಲಿನ ಶವತೊಟ್ಟಿಗಳಲ್ಲಿ ಮೃತರ ದೇಹವನ್ನು ಹೂತಿಡುತ್ತಿದ್ದರು. ಈ ಸಮಾಧಿಸ್ಥಳಗಳನ್ನು ಶಿಲಾವರ್ತುಲಗಳಿಂದ ಗುರುತಿಸಬಹುದಾಗಿತ್ತು. ವೃತ್ತಾಕಾರದ ಮರದ ತೊಟ್ಟಿಗಳನ್ನು ಉಪಯೋಗಿಸುತ್ತಿದ್ದುದೂ ಉಂಟು. ಮೃತರ ವೈಯಕ್ತಿಕ ಆಭರಣಗಳನ್ನೂ ಕೊರೆದ ಜ್ಯಾಮಿತೀಯ ಚಿತ್ರಗಳಿಂದ ಅಲಂಕೃತವಾದ ಮೃಣ್ಪಾತ್ರೆಗಳನ್ನೂ ಸಮಾಧಿಗಳಲ್ಲಿ ನಿಕ್ಷೇಪಿಸುತ್ತಿದ್ದರು. ಒಂದೊಂದು ಪಂಗಡಗಳಿಗೆ ಒಂದೊಂದು ಸ್ಮಶಾನಗಳಿದ್ದವು. ಗಂಡಸರ ಸಮಾಧಿಗಳ ಸುತ್ತ ಹೆಂಗಸರ ಮತ್ತು ಮಕ್ಕಳ ಸಮಾಧಿಗಳನ್ನು ನಿರ್ಮಿಸಲಾಗುತ್ತಿತ್ತು. ಇವರ ಮುಖ್ಯ ವೃತ್ತಿ ಪಶುಪಾಲನೆ. *

**ಕಯಾಕೆಂಟ್ ಸಂಸ್ಕೃತಿ :** ರಷ್ಯದ ಕಾಕೇಷಿಯ ಪ್ರಾಂತ್ಯದ ಈಶಾನ್ಯ ಭಾಗದಲ್ಲಿ ದಘೆಸ್ತಾನ್ ಜಿಲ್ಲೆಯ ಕರಾವಳಿಯಲ್ಲಿಯ ಕಯಾಕೆಂಟ್ ನೆಲೆಯಲ್ಲಿದ್ದ ಸಂಸ್ಕೃತಿ. ಇದನ್ನು ಎ. ಸಿ. ಕ್ರುಗ್ಲಾಫ್ 1939ರಲ್ಲಿ ಪರಿಶೋಧಿಸಿದ. ಇದು ಪ್ರ.ಶ.ಪೂ. 3ನೆಯ ಸಹಸ್ರಮಾನದ ಉತ್ತರಾರ್ಧಕ್ಕೆ ಸೇರಿದ್ದು ಇಲ್ಲಿಯ ವಸತಿಗಳು ಕೋಟೆಯಿಂದ ರಕ್ಷಿತವಾಗಿದ್ದುವು. ಮನೆಗಳನ್ನು ಕಲ್ಲು ಮತ್ತು ಮಣ್ಣಿನಿಂದ ಲೇಪಿತವಾಗಿದ್ದ ತಡಿಕೆಗಳಿಂದ ನಿರ್ಮಿಸುತ್ತಿದ್ದರು. ವ್ಯವಸಾಯ ಈ ಜನರ ಮುಖ್ಯ ವೃತ್ತಿ. ಪಶುಪಾಲನೆ, ಕುರಿಸಾಕಣೆ ಇತರ ಪ್ರಮುಖ ಉದ್ಯೋಗಗಳು. ಕಲ್ಲಿನಲ್ಲಿ ಮಾಡಿದ ಕೈಗಾಣಗಳೂ ಅರೆಯುವ ಕಲ್ಲುಗಳೂ ಚಕಮಕಿ ಕಲ್ಲಿನ ಹಲ್ಲುಗಳಿದ್ದ ಕುಡುಗೋಲುಗಳೂ ಇವರ ವ್ಯವಸಾಯದ ಉಪಕರಣಗಳಾಗಿದ್ದುವು. ಮಣ್ಗಾರೆಯಲ್ಲಿ ಮತ್ತು ಪಾತ್ರೆಗಳನ್ನು ಮಾಡುವ ಮಣ್ಣಿನಲ್ಲಿ ಹಲವಿಧ ಧಾನ್ಯಗಳು ಕಂಡು ಬಂದಿವೆ. *

**ಕಯಾಧು :** ಭಕ್ತ ಪ್ರಹ್ಲಾದನ ತಾಯಿ, ಹಿರಣ್ಯಕಶಿಪುವಿನ ಹೆಂಡತಿ, ಜಂಭಾಸುರನ ಮಗಳು. ಗರ್ಭಧರಿಸಿದ್ದ ಈಕೆಯನ್ನು ಸಮಯ ಕಾದು ಹಿರಣ್ಯ ಕಶಿಪು ತಪಸ್ಸಿಗೆ ಹೋಗಿದ್ದಾಗ ಇಂದ್ರ ಸೆರೆಹಿಡಿಯುತ್ತಾನಾದರೂ ನಾರದನ ಸಲಹೆಯಂತೆ, ಪೀಡಿಸದೆ ಅವನ ಬಳಿಯೇ ಬಿಡುತ್ತಾನೆ. ನಾರದ ಆಕೆಗಾಗಿ ಗಂಗಾತೀರದ ಬಳಿ ಒಂದು ಆಶ್ರಮವನ್ನು ನಿರ್ಮಿಸಿ ಅಲ್ಲಿ ಈಕೆಗೆ ಮಂತ್ರೋಪದೇಶ ಮಾಡುತ್ತಾನೆ. ಮಂತ್ರೋಪದೇಶ ಪಡೆದ ಈಕೆ ಮಹಾವಿಷ್ಣುವಿನ ಧ್ಯಾನದಲ್ಲಿ ನಿರತಳಾಗುತ್ತಾಳೆ. ಅಷ್ಟರಲ್ಲಿ ಹಿರಣ್ಯಕಶಿಪು ತಪಸ್ಸಿನಿಂದ ಹಿಂತಿರುಗುತ್ತಾನಾಗಿ ನಾರದ ಕಯಾಧುವನ್ನು ಒಪ್ಪಿಸುತ್ತಾನೆ. ಇವರ ಮಗ ಪ್ರಹ್ಲಾದ ನಾರದನ ಮಂತ್ರೋಪದೇಶದಿಂದಾಗಿ ಮುಂದೆ ಮಹಾವಿಷ್ಣುಭಕ್ತನಾಗುತ್ತಾನೆ. *

**ಕಯ್ಯಾರ ಕಿಞ್ಞಣ್ಣರೈ :** 1915–. ಕಾಸರಗೋಡಿನಲ್ಲಿ ನೆಲೆಸಿರುವ ಕನ್ನಡ ಲೇಖಕರು. ಈಗ ಕೇರಳ ರಾಜ್ಯದಲ್ಲಿರುವ ಕಾಸರಗೋಡು ಜಿಲ್ಲೆಯ ಪೈವಳಿಕೆಯಲ್ಲಿ 1915 ಜೂನ್ 8ರಂದು ಜನಿಸಿದರು. ತಂದೆ ದುಗ್ಗಪ್ಪರೈ, ತಾಯಿ ದೆಯ್ಯಕ್ಕ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಪೆರಡಾಲದಲ್ಲಿ ಪಡೆದ ಇವರು ರಾಮಾಯಣ, ಭಾರತ, ಯಕ್ಷಗಾನ, ತಾಳಮದ್ದಲೆಗಳ ಪರಿಸರದಲ್ಲಿ ಬೆಳೆದರು.

ಇವರಿಗೆ ಇಂಗ್ಲಿಷ್ ಶಿಕ್ಷಣ ಪಡೆಯಬೇಕೆಂಬ ಆಸೆಯಿತ್ತು. ಆದರೆ ತಂದೆ ತೀರಿಕೊಂಡಿದ್ದರಿಂದ ಅದಕ್ಕೆ ಅಡಚಣೆಯಾಯಿತು. ಸಂಸ್ಕೃತ ಶಾಲೆ ಸೇರಿದರು. ಸಂಸ್ಕೃತ ಕನ್ನಡಗಳೆರಡನ್ನೂ ಚೆನ್ನಾಗಿ ಕಲಿತರು. ವಿದ್ವಾನ್ ಪದವಿ ಗಳಿಸಿದರು. ಇವರು ಮೊತ್ತಮೊದಲು ಪತ್ರಿಕೋದ್ಯಮದಿಂದ ಆಕರ್ಷಿತರಾದರು. ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆಯ ಮೂಲಕ ದುಡಿದರು. ಈ ನಡುವೆ ಇವರು ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದರಲ್ಲದೆ ಅಧ್ಯಾಪಕ ತರಬೇತಿ ಪದವಿಯನ್ನೂ ಗಳಿಸಿದರು. ಅನಂತರ ಪೆರಡಾಲದ ನವಜೀವನ ಪ್ರೌಢಶಾಲೆಯಲ್ಲಿ ಅಧ್ಯಾಪಕರಾದರು. 1969ರಲ್ಲಿ ಇವರಿಗೆ ಶ್ರೇಷ್ಠ ಅಧ್ಯಾಪಕ ಎಂಬ ರಾಷ್ಟ್ರಪ್ರಶಸ್ತಿ ಲಭ್ಯವಾಯಿತು.

ಸಾಹಿತ್ಯ ಕ್ಷೇತ್ರಕ್ಕೆ ಇವರ ಕಾಣಿಕೆ ಮಹತ್ತ್ವಪೂರ್ಣವಾದದ್ದು. ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಪಂಚಮೀ (5 ಉಪನಿಷತ್ ಕಾವ್ಯಗಳು), ಮಹಾಕವಿ ಕುಮಾರನ್ ಆಶಾನರ ಮೂರು ಖಂಡಕಾವ್ಯಗಳು (ಮಲಯಾಳಂನಿಂದ ಅನುವಾದ), ಕೊರಗ ಮತ್ತು

ಕೆಲವು ಕವನಗಳು, ಶತಮಾನದ ಗಾನ, ಗಂಧವತೀ, ಪ್ರತಿಭಾ ಪಯಸ್ವಿನಿ (ಕವನಗಳ ಬೃಹತ್ ಸಂಪುಟ) ಮತ್ತು ಎನ್ನಪ್ಪೆ ತುಳುವಪ್ಪೆ (ತುಳು) ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ರತ್ನರಾಶಿ (ಜೀವನ ಚರಿತ್ರೆ), ಲಕ್ಷ್ಮೀಶನ ಕಥೆಗಳು, ಅನ್ನದೇವರು ಮತ್ತು ಇತರ ಕಥೆಗಳು, ಪರಶುರಾಮ, ಎಂ.ಬಿ.ಶೆಟ್ಟಿ (ಜೀವನಚರಿತ್ರೆ), ಕನ್ನಡದ ಶಕ್ತಿ (ಸಂಪಾದನೆ), ಕಾರ್ನಾಡು ಸದಾಶಿವರಾವ್ (ಜೀವನ ಚರಿತ್ರೆ), ಗಡಿನಾಡ ಕಿಡಿ(ಸಂಪಾದನೆ) ಮುಂತಾದವು ಇವರ ಗದ್ಯ ಕೃತಿಗಳು. ವಿರಾಗಿಣಿ ಎಂಬುದು ನಾಟಕ. ನಾಲ್ಕು ಭಾಗಗಳಲ್ಲಿ ಇವರು ಬರೆದಿರುವ ವ್ಯಾಕರಣ ಮತ್ತು ಪ್ರಬಂಧ ವಿದ್ಯಾರ್ಥಿಗಳಿಗೆ ಉಪಯುಕ್ತ ವಾಗಿದೆ. ನವೋದಯ ವಾಚನಮಾಲೆ (ಎಂಟು ಭಾಗಗಳು) ಮಕ್ಕಳಿಗಾಗಿ ರಚಿಸಿದ ಸಾಹಿತ್ಯ. ದುಡಿತವೆ ನನ್ನ ದೇವರು ಎಂಬ ಆತ್ಮ ಕಥನವನ್ನೂ ಇವರು ಬರೆದಿದ್ದಾರೆ.

ದೇಶಕ್ಕಾಗಿ ಮತ್ತು ನಾಡಿಗಾಗಿ ಹೋರಾಡಿದ, ಹೋರಾಡುತ್ತಿರುವ ನಿಷ್ಠಾವಂತ ಹೋರಾಟಗಾರ ರಾದ ಇವರು ಗಾಂಧೀಜಿಯವರ ಕಟ್ಟಾ ಅಭಿಮಾನಿ. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು. ಮೊದಲು ಭರತಮಾತೆ, ಅನಂತರ ಕನ್ನಡತಾಯಿ, ತರುವಾಯ ತೌಳವಮಾತೆ ಎಂಬುದು ಇವರ ನಿಲುವು. ಕನ್ನಡಾಂತರ್ಗತಂ ತುಳುನಾಡು ನನ್ನದಿದು, ಭಾರತಾಂತರ್ಗತಂ ಕನ್ನಡದ ಬದುಕು ಎಂಬುದು ಇವರ ಧ್ಯೇಯ.

ಇವರು ಕವಿಯಷ್ಟೇ ಅಲ್ಲ, ವಿಮರ್ಶಕರೂ ಹೌದು. ರಾಷ್ಟ್ರಕವಿ ಗೋವಿಂದ ಪೈ, ಗೋವಿಂದ ಪೈ ಸ್ಮೃತಿ ಕೃತಿ, ಸಾಹಿತ್ಯದೃಷ್ಟಿ, ಮಲಯಾಳಂ ಸಾಹಿತ್ಯ ಚರಿತ್ರಂ, ಮಹಾಕವಿ ಗೋವಿಂದ ಪೈ, ಸಂಸ್ಕೃತಿಯ ಹೆಗ್ಗುರುತು ಮುಂತಾದ ಕೃತಿಗಳಲ್ಲಿ ಇವರ ವಿಮರ್ಶನ ಪ್ರಜ್ಞೆ ವ್ಯಕ್ತವಾಗಿದೆ.

50 ವರ್ಷಗಳಿಂದ ಹಳ್ಳಿಯಲ್ಲೇ ನೆಲಸಿರುವ ಇವರಿಗೆ ಹಳ್ಳಿಯ ನಿರುಮ್ಮಳತೆ ತುಂಬ ಇಷ್ಟ. ನೇಗಿಲಿನ ಸಮಕ್ಕೆ ಲೇಖನಿ ಹಿಡಿದ ಇವರು ಕೃಷಿಯಲ್ಲೂ ಪಳಗಿದವರು. ಸದಾ ಖಾದೀಧಾರಿಯಾದ ಇವರದು ಆರಡಿ ಎತ್ತರದ ಧೀಮಂತ ನಿಲುವು, ಕಂಚಿನ ಕಂಠ. ಇವರೊಬ್ಬ ಶ್ರೇಷ್ಠ ವಾಗ್ಮಿ. ಇವರದು ತುಂಬು ಸಂಸಾರದ ಬದುಕು. ಇವರ ಪತ್ನಿಯ ಹೆಸರು ಉಜ್ಜಕ್ಕೆ. ಆರು ಮಂದಿ ಪುತ್ರರು ಮತ್ತು ಇಬ್ಬರು ಪುತ್ರಿಯರು.

ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಕಯ್ಯಾರರು ಮಹತ್ತ್ವದ ಪಾತ್ರ ವಹಿಸಿದ್ದರು. ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಕಾರ್ಯದರ್ಶಿಯಾಗಿಯೂ ಇವರು ನಿಷ್ಠೆಯ ಸೇವೆ ಸಲ್ಲಿಸಿದ್ದಾರೆ. ಇವರು 1997ರಲ್ಲಿ ಮಂಗಳೂರಿನಲ್ಲಿ ಜರುಗಿದ 66ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕನ್ನಡದ ಹಿರಿಯಣ್ಣ ಎಂಬ ಅಭಿಧಾನಕ್ಕೆ ಪಾತ್ರರಾಗಿರುವ ಕಯ್ಯಾರರಿಗೆ ಅನೇಕ ಪ್ರಶಸ್ತಿ ಗೌರವಗಳು ದೊರೆತಿವೆ. ಶ್ರೇಷ್ಠ ಅಧ್ಯಾಪಕ ರಾಷ್ಟ್ರಪ್ರಶಸ್ತಿಯಲ್ಲದೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸ್ವಾತಂತ್ರ್ಯ ಯೋಧ ಪ್ರಶಸ್ತಿ –ಇವು ಕೆಲವು ಮುಖ್ಯ ಪ್ರಶಸ್ತಿಗಳು. (ಪಿ.ಇ.ವಿ.)

**ಕಯೋಟ್ :** ಸ್ತನಿಗಳ ವರ್ಗದ ಕಾರ್ನಿವೊರ ಗಣದಲ್ಲಿನ ಕೇನಿಡೀ (ನಾಯಿಗಳ) ಕುಟುಂಬಕ್ಕೆ ಸೇರಿದ ಪ್ರಾಣಿ. ಕೇನಿಸ್ ಲೇಟ್ರನ್ಸ್ ಇದರ ವೈಜ್ಞಾನಿಕ ಹೆಸರು. ಇದನ್ನು ಹುಲ್ಲುಗಾವಲಿನ ತೋಳ (ಪ್ರೈರಿ ವುಲ್ಫ್) ಎಂದು ಕರೆಯುವುದುಂಟು. ಉತ್ತರ ಅಮೆರಿಕದಲ್ಲಿ ಅಲಾಸ್ಕದಿಂದ ಹಿಡಿದು ಮೆಕ್ಸಿಕೊ ವರೆಗಿನ ಪ್ರದೇಶಗಳಲ್ಲಿ ಹೇರಳವಾಗಿ ಕಾಣಬರುತ್ತದೆ. ಸಾಮಾನ್ಯವಾಗಿ ಬಯಲುಗಳಲ್ಲಿ ವಾಸಿಸುವುದು ಹೆಚ್ಚು. ಗಾತ್ರದಲ್ಲಿ ತೋಳಕ್ಕಿಂತ ಚಿಕ್ಕದಾಗಿದೆ. ನರಿಯನ್ನು ಹೆಚ್ಚುಕಡಿಮೆ ಹೋಲುವ ಇದು ಸು. 36" ಉದ್ದ, 12"–15" ಎತ್ತರ ಇದೆ. ತಳಭಾಗ ಬಿಳುಪಾಗಿಯೂ ಇದೆ; ಕಾಲುಗಳು ಕೊಂಚ ಕೆಂಪು ಬಣ್ಣದವು. ಬಾಲದ ತುದಿ ಕಪ್ಪು ಬಣ್ಣದ್ದು; ಕುಚ್ಚಿನಂತಿದೆ. ಬಾಲದ ಬುಡದಲ್ಲಿ ಕಪ್ಪು ಬಣ್ಣದ ಗ್ರಂಥಿಗಳುಳ್ಳ ಪ್ರದೇಶವಿದೆ. ಕಯೋಟ್ ಓಡುವಾಗ ಬಾಲ ಕೆಳಮುಖವಾಗಿ ಬಾಗಿರುತ್ತದೆ.

ಕಯೋಟ್ ನಿಶಾಚರಿ. ಮಾಂಸಾಹಾರಿಯಾದ ಇದರ ಆಹಾರ ಮೊಲ, ಇಲಿ, ಹೆಗ್ಗಣ, ಅಳಿಲು, ಜಿಂಕೆ, ಬಾತು ಮತ್ತು ಇತರ ಹಕ್ಕಿಗಳು. ಹೊಂಚುಹಾಕಿ ಬೇಟೆಯನ್ನು ಹಿಡಿಯುವುದೇ ಹೆಚ್ಚು. ಕೆಲವು ವೇಳೆ ಅಟ್ಟಿಸಿಕೊಂಡು ಹೋಗಿ ಬೇಟೆಯಾಡಿ ಹಿಡಿಯುವುದೂ ಉಂಟು. ಬೇಟೆಯಾಡುವಾಗ ಸು. 64 ಕಿಮೀ ವೇಗದಲ್ಲಿ ಓಡಿದ ದಾಖಲೆಗಳುಂಟು. ಗುಂಪುಗುಂಪಾಗಿ ಕೂಡಿಕೊಂಡು ಬೇಟೆಯಾಡುತ್ತದೆ. ಸಾಕುಪ್ರಾಣಿಗಳನ್ನು ಹಿಡಿದು ತಿನ್ನು ವುದೆಂದು ಹೇಳುವರಾದರೂ ಅದು ಬಹಳ ವಿರಳ. ಕೆಲವು ವೇಳೆ ಹಣ್ಣುಹಂಪಲುಗಳನ್ನೂ ತಿನ್ನುವುದುಂಟು. ತಾನೇನೆಲದಲ್ಲಿ ಗೂಡು ಕೊರೆದುಕೊಂಡು ಅಥವಾ ಇತರ ಪ್ರಾಣಿಗಳು ಮಾಡಿರುವ ನೆಲದ ಬಿಲಗಳನ್ನು ಇನ್ನೂ ಅಗಲ ಮಾಡಿಕೊಂಡು ಹಗಲಿನಲ್ಲಿ ಅಡಗಿಕೊಂಡಿರುತ್ತದೆ. ಇಂಥ ಗೂಡುಗಳಲ್ಲಿ, ಸಾಮಾನ್ಯವಾಗಿ ವಸಂತಋತುವಿನಲ್ಲಿ ಮರಿ

ಹಾಕುತ್ತದೆ. ಒಂದು ಸೂಲಿಗೆ 6–8 ಮರಿಗಳನ್ನು ಈಯುತ್ತದೆ. ಗಂಡು–ಹೆಣ್ಣು ಕಯೋಟುಗಳೆರಡೂ ಮರಿಗಳ ಪೋಷಣೆ ಮಾಡುತ್ತವೆ; ಆಜೀವಪರ್ಯಂತ ಗಂಡು ಹೆಣ್ಣುಗಳು ಒಟ್ಟಿಗೆ ವಾಸಿಸುತ್ತವೆ (ಇವುಗಳ ಆಯುಸ್ಸು ಸು. 13 ವರ್ಷಗಳು). ಒಂಟಿಯಾಗಿ ಅಥವಾ ಗುಂಪುಗಳಲ್ಲಿ ಪ್ರತಿ ಸಂಜೆ ಇವು ವಿಚಿತ್ರವಾಗಿ ಕೂಗುತ್ತವೆ. ಬೊಗಳುವಿಕೆ, ಅರಚುವಿಕೆ, ಹುಯ್ಯಲಿಡುವಿಕೆ, ನರಿಗಳಂತೆ ಊಳಿಡುವಿಕೆ ಮುಂತಾಗಿ ಹಲವು ವಿಧದ ಇದರ ಕೂಗು ಮುಸ್ಸಂಜೆಯಲ್ಲಿ ಕಾಡಿನಲ್ಲಿ ಒಂಟಿಯಾಗಿ ಹೋಗುವವರಿಗೆ ಭಯ ಹುಟ್ಟಿಸುವಂಥದು. (ಎ.)

**ಕರಂಡ ಹಣ್ಣಿನ ಗಿಡ :** ಅಪೋಸೈನೇಸೀ ಕುಟುಂಬಕ್ಕೆ ಸೇರಿದ ಕ್ಯಾರಿಸ ಕರಂಡಸ್ ಎಂಬ ವೈಜ್ಞಾನಿಕ ಹೆಸರಿನ ದೊಡ್ಡ ಪೊದೆ ಅಥವಾ ಸಣ್ಣ ಮರ. ಕಬಳಿ ಗಿಡ, ಕಳಾಗಿಡ, ಹೆಜ್ಜಾರಿಗೆ–ಇವು ಇದರ ಪರ್ಯಾಯ ನಾಮಗಳು. ಉಷ್ಣ ಹಾಗೂ ಸಮಶೀತೋಷ್ಣವಲಯ ಗಳಲ್ಲೆಲ್ಲ ಹೇರಳವಾಗಿ ಕಾಣಬರುತ್ತದೆ. ಭಾರತದ ಮೂಲವಾಸಿ ಇದು ಎಂದು ಹೇಳಲಾಗಿದೆ. ಸಾಮಾನ್ಯವಾಗಿ ಮರಳು ಮಿಶ್ರಿತ ನೆಲದಲ್ಲಿ ನೀರಿನ ಸೌಲಭ್ಯ ಕಡಿಮೆ ಇರುವ ಪ್ರದೇಶಗಳಲ್ಲಿ ಬೆಳೆಯುತ್ತದೆ. ಹಣ್ಣಿಗಾಗಿ ಇದನ್ನು ಬೆಳೆಸುವುದು ಉಂಟು. ಇದರ ಕಾಯಿಯ ಬಣ್ಣದ ಆಧಾರದ ಮೇಲೆ ಇದನ್ನು ಕೆಂಪು ಮತ್ತು ಹಸಿರು ಎಂದು 2 ಬಗೆಗಳಾಗಿ ವಿಂಗಡಿಸ ಬಹುದು. ಕರಂಡಹಣ್ಣಿನ ಗಿಡ ಸು. 10'–20' ಎತ್ತರಕ್ಕೆ ಬೆಳೆಯುತ್ತದೆ. ಕಾಂಡದ ಮೇಲೆಲ್ಲ ಸರಳವಾದ ಅಥವಾ ಕವಲೊಡೆದ ದೃಢವಾದ ಮುಳ್ಳುಗಳಿವೆ. ಇದರ ಎಲೆಗಳು ಸರಳ ಮತ್ತು ಅಭಿಮುಖವಾಗಿ ಜೋಡಣೆಗೊಂಡಿವೆ. ಇವುಗಳ ಅಂಚು ನಯ, ತುದಿ ಮೊಂಡು. ಹೂಗಳು ಮಧ್ಯಾರಂಭಿ ಅಥವಾ ಸಂಕೀರ್ಣ ಪುಷ್ಪಗುಚ್ಛಗಳಲ್ಲೊ ಒಂಟಿಯಾಗಿಯೊ ಇರುತ್ತವೆ; ಇವು ದ್ವಿಲಿಂಗಿಗಳು. ಪುಷ್ಪಪತ್ರಗಳು 5, ಬಿಡಿಯಾಗಿವೆ; ಇವು ಹಣ್ಣಿನಲ್ಲೂ ಉಳಿದಿರುತ್ತವೆ. ಹೂದಳಗಳು 5, ಪರಸ್ಪರ ಕೂಡಿಕೊಂಡಿವೆ. ಇವುಗಳ ಬಣ್ಣ ಬಿಳಿ ಅಥವಾ ನಸುಗೆಂಪು. ಹೂದಳಗಳ ಕೂಡುವಿಕೆಯಿಂದಾದ ಕೊಳವೆಯ ಗಂಡಲಿನ ಬಳಿ ಅನುಬಂಧಿಕೆ (ಅಪೆಂಡೇಜ್) ಇದೆ. ಕೇಸರಗಳು 5, ಇವು ಹೂದಳಗಳಿಗೆ ಪರ್ಯಾಯವಾಗಿ ಜೋಡಣೆಗೊಂಡಿರುವುದಲ್ಲದೆ ಅವಕ್ಕೆ ಅಂಟಿಕೊಂಡಿವೆ. ಅಂಡಾಶಯ ಉಚ್ಚಸ್ಥಾನದ್ದು. ಇದರಲ್ಲಿ ಎರಡು ಕಾರ್ಪೆಲುಗಳೂ ಒಂದು ಇಲ್ಲವೆ ಎರಡು ಕೋಣೆಗಳೂ ಇವೆ. ಒಂದೊಂದು ಕೋಣೆಯಲ್ಲೂ ಹಲವಾರು ಅಂಡಕಗಳಿವೆ. ಫಲ ಅಂಡಾಕಾರದ ಬೆರಿ. ಫಲ ಬಿಡುವ ಕಾಲ ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳು. ಅಪಕ್ವ ಕಾಯಿಗಳಲ್ಲಿ ಸಿ ಜೀವಾತು ಅಧಿಕ ಪ್ರಮಾಣದಲ್ಲಿದೆ. ಕಾಯಿಗಳು ಬಲು ಹುಳಿ. ಉಪ್ಪಿನಕಾಯಿಹಾಕಲು, ಚಟ್ನಿ ಮಾಡಲು ಇವನ್ನು ಬಳಸುತ್ತಾರೆ. ಹಣ್ಣು ಸಿಹಿಯಾಗಿದ್ದು ತಿನ್ನಲುಯೋಗ್ಯ. ಅಲ್ಲದೆ ಇದರಿಂದ ಜೆಲ್ಲಿ, ಪುಡಿಂಗ್ ಮುಂತಾದುವನ್ನು ಮಾಡಬಹುದು. ಹಣ್ಣನ್ನು ಚರ್ಮ ಹದ ಮಾಡಲೂ ಬಟ್ಟೆಗಳಿಗೆ ಬಣ್ಣ ಹಾಕುವಾಗಲೂ ಉಪಯೋಗಿಸುವುದುಂಟು. ಈ ಸಸ್ಯಕ್ಕೆ ಔಷಧೀಯ ಮಹತ್ತ್ವವೂ ಉಂಟು. ಬೇರನ್ನು ಜಂತು ಹುಳು ನಾಶಕವಾಗಿಯೂ ಎಲೆಗಳ ಕಷಾಯವನ್ನು ಕೆಲವು ಬಗೆಯ ಜ್ವರನಿವಾರಕವಾಗಿಯೂ ಬಳಸುತ್ತಾರೆ. (ಎನ್.)

**ಕರಂದೈ ತಮಿಳು ಸಂಗಂ ತಾಮ್ರ ಪಟಗಳು : (ಒಂದನೆಯ ರಾಜೇಂದ್ರ ಚೋಳನ)** : ತಮಿಳುನಾಡಿನ ತಂಜಾವೂರು ಜಿಲ್ಲೆಯ ಪಾಪನಾಶಂ ತಾಲ್ಲೂಕಿನಲ್ಲಿರುವ ಪುತ್ತೂರುಗ್ರಾಮದ ಹೊಲವೊಂದರಲ್ಲಿ ನೆಲದಿಂದ ತೆಗೆಯಲಾದ ತಾಮ್ರಪಟಗಳು. ತಂಜಾವೂರಿನ ಬಳಿಯ ಕರಂದೈಯಲ್ಲಿ, ತಮಿಳು ಸಂಗಂ ಆವರಣದಲ್ಲಿ ಅವನ್ನು ಈಗ ರಕ್ಷಿಸಿಡಲಾಗಿದೆ.

ಇವು ಒಟ್ಟು 57 ತಾಮ್ರಪಟಗಳನ್ನು ಎರಡು ಮಜಬೂತಾದ ಉಂಗುರಗಳನ್ನೂ ಒಳಗೊಂಡಿದೆ. ತಾಮ್ರಪಟಗಳ ಸರಾಸರಿ ಅಳತೆ 42x24 ಸೆಂಮೀ. ಇವುಗಳೊಳಗೆ ಉಂಗುರವೊಂದನ್ನು ತೂರಿಸಲು ಸಾಧ್ಯವಾಗುವಂತೆ ರಂಧ್ರಗಳಿವೆ. ಇಡೀ ತಂಡದ ತೂಕ 111.73 ಕಿಗ್ರಾಂ. ಎರಡು ಉಂಗುರಗಳಲ್ಲಿ ಒಂದು ಒಡೆದಿದೆ. ಎರಡು ಉಂಗುರಗಳಿಗೂ ಮುದ್ರೆಯಿದೆ. ಇದರ ತಳವನ್ನು ಉಂಗುರಕ್ಕೆ ಬೆಸೆಯಲಾಗಿದೆ. ಉಂಗುರದ ದಪ್ಪ 6"; ವ್ಯಾಸ 18", ಮುದ್ರೆಯ ವೃತ್ತಾಕಾರ, ಅದರ ಸುತ್ತಳತೆ 5'1". ಉಂಗುರದ ತಳದಿಂದ ಎತ್ತರಕ್ಕೆ ಉಬ್ಬಿರುವ ಮುದ್ರೆಯ ಪೀಠವಾಗಿ ಅರಳಿದ ಕಮಲವಿದೆ. ಕಂಡಿಮಾಡಿ ಕೂರಿಸಿರುವ ಮುದ್ರೆಯ ಭಾಗದಲ್ಲಿಯ ಉಬ್ಬು ಚಿತ್ರಗಳಿವು; ನೊಣತೊಡಪ, ಮೇಲೆ ಚಾಮರ: ಕುಳಿತ ಭಂಗಿಯಲ್ಲಿರುವ ವ್ಯಾಘ್ರ ಮತ್ತು ಮತ್ಸ್ಯ, ಇವುಗಳ ಆಚೀಚೆ ದೀಪಸ್ತಂಭ, ಧ್ವಜ, ಕಠಾರಿ, ಬಲಕ್ಕೆ ಚುಚ್ಚುಗೋಲು. ಇವುಗಳ ಕೆಳಗೆ ಒಂದು ಗೆರೆ ಇದೆ. ಇದರ ಅಡಿಯಲ್ಲಿ, ಎಡದಿಂದ ಬಲಕ್ಕೆ ಸಾಲಾಗಿ ಒಂದು ತಮಟೆಯೂ ತಗ್ಗಾದ ಸಿಂಹಾಸನವೂ ಬಲಮುಖವಾಗಿ ನಿಮತ ವರಾಹವೂ ಸ್ವಾಸ್ತಿಕವೂ ಇವೆ. ಇದರ ತಳದಲ್ಲಿ ಕಮಲ. ಹುಲಿಯ ಚಿತ್ರ ಚೋಳರನ್ನೂ ಮೀನು ಪಾಂಡ್ಯರನ್ನೂ ವರಾಹ ಚಾಳುಕ್ಯರನ್ನೂ ಸಂಕೇತಿಸುತ್ತವೆ. ಉಳಿದ ಚಿತ್ರಗಳ ಪೈಕಿ ಛತ್ರಿ ಮತ್ತು ನೊಣತೊಡಪಗಳನ್ನು ಬಿಟ್ಟರೆ ಮಿಕ್ಕವು ಬಹುಶಃ ಅಷ್ಟ ಮಂಗಲದ ಪ್ರತೀಕಗಳಾಗಿವೆ. ಇವೆಲ್ಲವನ್ನೂ ವೃತ್ತಾಕಾರದಲ್ಲಿ ಕೊರೆಯಲಾಗಿದೆ. ಈ ವೃತ್ತದ ಹೊರೆಗೆ ಆಲೇಖ್ಯವೊಂದಿದೆ. ಇದು ರಾಜೇಂದ್ರಚೋಳನ ಶಾಸನವೆಂದೂ ಅರಸನ ಉಜ್ಜ್ವಲ ಮಣಿಮಕುಟದಲ್ಲಿ ಧರಿಸಿರುವಂಥದೆಂದೂ ಅಲ್ಲಿ ಹೇಳವಾಗಿದೆ.

ಮೊದಲನೆಯ ಮೂರು ಪಟಗಳಲ್ಲಿರುವುದು ಸಂಸ್ಕೃತದಲ್ಲಿ ರಚಿಸಲಾದ ಗ್ರಂಥ ಪಾಠ. ಉಳಿದ ಪಟಗಳದು ತಮಿಳು ಭಾಷೆ, ತಮಿಳುಲಿಪಿ.

ಸಂಸ್ಕೃತ ಪಾಠದಲ್ಲಿ ಚೋಳರ ಪೌರಾಣಿಕ ಮತ್ತು ಐತಿಹಾಸಿಕ ವಂಶಾವಳಿಯನ್ನು ಕೊಡಲಾಗಿದೆ. ನೀಡಲಾದ ದತ್ತಿಯ ವಿವರಗಳನ್ನೂ ಸಂಗ್ರಹವಾಗಿ ಕೊಡಲಾಗಿದೆ. ನರಾಕ್ಕನ್ ಮಾರಾಯನ್ ಜನನಾಥನ್ ಉರುಫ್ ರಾಜೇಂದ್ರಚೋಳ–ಬ್ರಹ್ಮಾಧಿರಾಜನ ಇಚ್ಛೆಯ ಮೇರೆಗೆ ದೊರೆಯು 51 ಗ್ರಾಮಗಳನ್ನು ಕೂಡಿಸಿ ಅಗ್ರಹಾರವೊಂದನ್ನು ರಚಿಸಿದ್ದನ್ನು ತಮಿಳಿನಲ್ಲಿ ಹೇಳಿದೆ. ಇದನ್ನು ದೊರೆಯ ತಾಯಿಯ ಹೆಸರಿನಲ್ಲಿ ತ್ರಿಭುವನ ಮಹಾದೇವಿ–ಚತುರ್ವೇದಿಮಂಗಲಂ ಎಂದು ಕರೆಯಲಾಗಿತ್ತು. ಈ ಅಗ್ರಹಾರಕ್ಕೆ ಒಳಪಟ್ಟ ಜಮೀನುಗಳನ್ನು 1,080 ಬ್ರಾಹ್ಮಣರಿಗೆ ಹಂಚಲಾಗಿತ್ತು. ಅಗ್ರಹಾರದಲ್ಲಿ ಅಗತ್ಯವಾದ ಸೌಲಭ್ಯಗಳನ್ನೆಲ್ಲ ನಿರ್ಮಿಸಲಾಗಿತ್ತು. ಈ ದತ್ತಿಯನ್ನು ನೀಡಲಾದದ್ದು ದೊರೆಯ ಆಳ್ವಿಕೆಯ ಎಂಟನೆಯ ವರ್ಷದಲ್ಲಿ (1019–20).

ಸಂಸ್ಕೃತ ವಿಭಾಗದಲ್ಲಿ ಚೋಳರ ಬಗ್ಗೆ ನೀಡಲಾಗಿರುವ ಹೊಸ ವಿಚಾರಗಳಿವು : 1 ಸಿಂಹಳದ ರಾಜನನ್ನೂ ಪಾಂಡ್ಯದೊರೆಯನ್ನೂ ಅಜೇಯನೆನಿಸಿದ್ದ ಕೇರಳರಾಜನನ್ನೂ ಪಲ್ಲವರಾಜನನ್ನೂ ಪರಾಂತಕ ರಾಜ ಗೆದ್ದನಲ್ಲದೆ ಅವರ ಕೀರ್ತಿಯನ್ನೂ ಪ್ರದೇಶಗಳನ್ನೂ ಐಶ್ವರ್ಯ ವಾಹನಾದಿಗಳನ್ನೂ ವಶಪಡಿಸಿಕೊಂಡ. ಈ ಪಲ್ಲವರಾಜ ನಂದಿವರ್ಮನೇ ಆಗಿದ್ದಿರಬೇಕು. ಈತ ತೆಲ್ಲಾರುಗಳನ್ನು ಜಯಸಿದ್ದವ ( ಮೂರನೆಯ ನಂದಿವರ್ಮನಲ್ಲ). 2 ಸುಂದರ ಚೋಳದೊರೆ ವೀರಪಾಂಡ್ಯನನ್ನು ಸಹ್ಯಾದ್ರಿಗೆ ಓಡಿಸಿದನೆಂದು ಹೇಳಲಾಗಿದೆ. ಈತನೊಡನೆ ಕಾದಾಟ ನಡೆಸಿದ ಸಂಗತಿ ಇದೆ ಮೊದಲ ಬಾರಿಗೆ ಬೆಳಕಿಗೆ ಬಂದಿದೆ. ಸುಂದರ ಚೋಳನ ಮಗನಾದ ಎರಡನೆಯ ಆದಿತ್ಯ ಈ ವೀರಪಾಂಡ್ಯನನ್ನು ಕಾಳಗದಲ್ಲಿ ಕೊಂದನೆಂಬುದು ಸುವಿದಿತವಾಗಿದೆ. 3 ಒಂದನೆಯ ರಾಜರಾಜ ಅಶ್ವಾರೂಢನಾಗಿ ಏಕಾಂಗಿಯಾಗಿ ಸತ್ಯಾಶ್ರಯನ ವಿರುದ್ಧ ಕಾದಾಡಿ, ಅವನನ್ನೋಡಿಸಿ, ಆನೆ ಕುದುರೆ ಐಶ್ವರ್ಯ ವನಿತೆಯರನ್ನೆಲ್ಲ ವಶಪಡಿಸಿಕೊಂಡನೆಂದು ಹೇಳಲಾಗಿದೆ. ಈತ ಐಶ್ವರ್ಯವನ್ನು ವಶಪಡಿಸಿಕೊಂಡನೆಂಬುದು ಇವನ ತಂಜಾವೂರು ಶಾಸನದಿಂದ ದೃಢಪಟ್ಟಿದೆ. ಈ ವಿಜಯದಿಂದಾಗಿ ಸುವರ್ಣಪುಷ್ಪಗಳು ದೊರೆತವೆಂದು ಅಲ್ಲಿ ಹೇಳಲಾಗಿದೆ. ಆದರೂ ಈ ತಾಮ್ರಪಟಗಳು ಹೇಳುವಂತೆ ರಾಜರಾಜ ಮಾನ್ಯಖೇಟವನ್ನು ಗೆಲ್ಲುವ ತನ್ನ ಧ್ಯೇಯದಲ್ಲಿ ಜಯಗಳಿಸಲಾರದೆ ಹೋದ. ರಾಜರಾಜ ಹಳೆಯ ಮೈಸೂರು ರಾಜ್ಯದ ಉತ್ತರದ ಗಡಿಯಿಂದಾಚೆಗೆ ತನ್ನ ಅಧಿಕಾರವನ್ನು ವಿಸ್ತರಿಸಲೂ ಶಕ್ತನಾಗಲಿಲ್ಲವೆಂಬುದು ಈಗಾಗಲೇ ತಿಳಿದಿರುವ ವಿಷಯ. 4 ಮಾನ್ಯಖೇಟದ ವರೆಗೂ ರಾಜೇಂದ್ರ ದಂಡೆತ್ತಿ ಹೋಗಿ ತನ್ನ ತಂದೆಯ ಇಚ್ಛೆಯನ್ನು ಈಡೇರಿಸಿದನಲ್ಲದೆ ಆ ನಗರವನ್ನು ಅಗ್ನಿಗಾಹುತಿ ಮಾಡಿದ. 5 ರಾಜೇಂದ್ರ ಕಂಬುಜದ (ಕಾಂಬೋಡಿನ) ರಾಜನಿಂದ ಒಂದು ರಥವನ್ನು ಪಡೆದುದಾಗಿ ತಿಳಿದಿದೆ. ಆ ಕಂಬುಜರಾಜ ಶತ್ರುಗಳಿಂದ ತನ್ನ ರಾಜ್ಯವನ್ನು ರಕ್ಷಿಸುವ ಸಲುವಾಗಿ ರಾಜೇಂದ್ರನ ನೆರವನ್ನು ಬಯಸುತ್ತಿದ್ದ. ರಾಜೇಂದ್ರ ಮಲೇಷ್ಯ ಮತ್ತು ಇಂಡೊನೇಷ್ಯ ದ್ವೀಪಸ್ತೋಮಗಳ ಮೇಲೆ ನಡೆಸಿದ ಜಯಪ್ರದ ದಾಳಿಯ ಫಲವಿದು. ಈ ಗೆಳೆತನ ಒಂದನೆಯ ಕುಲೋತ್ತುಂಗನ ಕಾಲದವರೆಗೂ ಮುಂದುವರಿಯಿತು. ಆತ ಕಾಣಿಕೆಯಾಗಿ ಪಡೆದ ಅನರ್ಘ್ಯ ಶಿಲೆಯೊಂದನ್ನು ಅವನ ಅಪ್ಪಣೆಯ ಮೇರೆಗೆ ಚಿದಂಬರದ ದೇವಾಲಯದ ಮುಂದಿನ ಮಂಟಪವೊಂದರ ಗೋಡೆಯಲ್ಲಿರಿಸಲಾಯಿತು. 6 ಆನೆಗಳ ಕಾಣಿಕೆಯನ್ನು ಈಗಿನ ಮಧ್ಯಪ್ರದೇಶಕ್ಕೆ ಸೇರಿದ ಬೆಸ್ತರ ಪ್ರದೇಶದಲ್ಲಿದ್ದ ಚಕ್ರಕ್ಕೋಟ್ಟಮ್ (ಚಕ್ರಗೋಷ್ಟ) ಅರಸನಿಂದ ರಾಜೇಂದ್ರ ದೊರೆ ಪಡೆದುದಾಗಿಯೂ ತಿಳಿಯುತ್ತದೆ. 7 ಅರಸ ಈ ದತ್ತಿಯನ್ನು ಕೊಡುವ ಸಮಯದಲ್ಲಿ ವ್ಯಾಘ್ರಾಗ್ರಹಾರವೆಂಬ ಹೆಸರಿದ್ದ ಚಿದಂಬರಂ ಅರಮನೆಯಲ್ಲಿ ರಾಜೇಂದ್ರಚೋಳ ಬ್ರಹ್ಮಾದಿರಾಜನ್ ಎಂಬ ಮಂಟಪದಲ್ಲಿ ಊಟ ಮಾಡುತ್ತಿದ್ದುದಾಗಿ ಹೇಳಲಾಗಿದೆ. ರಾಜನ ಈ ಮೌಖಿಕ ಆಜ್ಞೆಯನ್ನು ತಿರುಮಂದಿರವೋಲೈ ಅಥವಾ ಓಲೈ ಎಳುದುಂ ಎಂಬ ಅಧಿಕಾರಿ ಬರೆದುಕೊಂಡನೆಂದು ಹೇಳಲಾಗಿದೆ. ತೀಟ್ಟು ಎಂಬ ಹೆಸರಿನ ಆಜ್ಞೆಗೆ ಓಲೈನಾಯಗಂ ಎಂಬ ಅಧಿಕಾರಿಗಳು ಸಾಕ್ಷಿಗಳಾಗಿದ್ದರು. ಕರುಮಂ ಆರಾಯುಂ ಮತ್ತು ನಡುವಿರುಕ್ಕುಂ ಎಂಬ ಎರಡು ವಿಭಾಗಗಳ ಅಧಿಕಾರಿಗಳ ಮೂಲಕ ಈ ಆಜ್ಞೆಯನ್ನು ಕರುಮಂ ಪುರವು ವಾರಿ ಇಲಾಖೆಯ ಆರಾಯಂ ಎಂಬ ಕಾರ್ಯನಿರ್ವಾಹಾಧಿಕಾರಿಗಳಿಗೆ ನೀಡಲಾಯಿತು. ಇದನ್ನು ವರಿ ಎಂಬ ರೆವಿನ್ಯೂ ದಾಖಲೆ ಪುಸ್ತಕಗಳಲ್ಲಿ ಪುರಂವರಿ ಇಲಾಖೆಯವರು ದಾಖಲೆ ಮಾಡಲು ಈ ಅಧಿಕಾರಿಗಳು ವ್ಯವಸ್ಥೆ ಮಾಡಿದರು. ಈ ಇಲಾಖೆಯಲ್ಲೂ ಹಲವಾರು ಶ್ರೇಣಿಗಳ ನೌಕರರಿದ್ದರು. ಈ ದತ್ತಿಯಲ್ಲಿ ಸೇರಿರುವ ಸೇರದಿರುವ ಭೂಮಿಗಳ ವಿವರ, ಮೊದಲ ವರ್ಷದಲ್ಲಿ ಕಾಲುಭಾಗ ದಿಂದ ಪ್ರಾರಂಭವಾಗಿ ಕ್ರಮೇಣ ಅಧಿಕವಾಗಿ ನಾಲ್ಕನೆಯ ವರ್ಷದಲ್ಲಿ ಪೂರ್ಣಾಂಶದ ವರೆಗೆ ಸ್ಥಳೀಯ ಅಧಿಕಾರಿಗಳಿಗೆ ಕೊಡಬೇಕಾದ ಬತ್ತರೂಪದ ಕಂದಾಯದ ವಿವರ, ಭೂಮಿಯ ಹಿಡುವಳಿಯನ್ನು ಹಳೆಯ ಪದ್ಧತಿಗೆ ಪರಿವರ್ತಿಸುವ ವಿಧಾನ ಇವನ್ನೆಲ್ಲ ಈ ಶಾಸನದಲ್ಲಿ ಹೇಳಲಾಗಿದೆ. ಈ ನಿರೂಪವನ್ನು ತಿರುಮುಗಂ ಅಥವಾ ಶ್ರೀಮುಖದ ರೂಪದಲ್ಲಿ ಇಲಾಖೆಯಿಂದ ನೀಡಲಾಗುತ್ತಿದೆಯೆಂದು ಹೇಳಲಾಗಿದೆ. ಈ ಉದ್ದೇಶಕ್ಕಾಗಿ ನಿಯೋಜಿಸಲ್ಪಟ್ಟ ಅಧಿಕಾರಿಗಳ ಸಹಿಯಿದೆ. ದತ್ತಿಗೆ ಒಳಪಟ್ಟ ಪ್ರದೇಶದ ಮೇರೆಯನ್ನು ನಿರ್ದೇಶಿಸಲು ಹೆಣ್ಣಾನೆಯೊಂದರಿಂದ ಈ ನೆಲವನ್ನು ಪ್ರದಕ್ಷಿಣೆ ಮಾಡಿಸಲಾಯಿತು. ತಿರುಮುಗಮ್ಮನ್ನು ತಿರುಮಂದಿರವೋಲೈ ಮತ್ತು ತಿರುಮಂದಿರಮೋಲೈನಾಯಗಂ ಎಂಬ ಅಧಿಕಾರಿಗಳು ಸಹಿ ಹಾಕಿ ಇದನ್ನು ದಾನಸ್ವೀಕೃತರಿಗೆ ಕೊಡಲಾಗಿದೆ. ಈ ಆಜ್ಞೆಯನ್ನು ಶಿಲೆ ಮತ್ತು ತಾಮ್ರಪಟಗಳ ಮೇಲೆ ಕೆತ್ತಿಸಬೇಕೆಂದು ಸೂಚಿಸಿ ಇದರ ಪ್ರತಿಗಳನ್ನು ಸ್ಥಳೀಯ ಅಧಿಕಾರಿಗಳಿಗೂ ನೀಡಲಾಗಿದೆ.

ಇಡೀ ವಿಶ್ವದಲ್ಲೇ ದೊರಕಿರುವ ತಾಮ್ರ ಶಾಸನಗಳ ಪೈಕಿ ಇದು ಅತ್ಯಂತ ದೊಡ್ಡದು.

ದತ್ತಿ ನೀಡಲಾದ ಪ್ರದೇಶ ಪುತ್ತೂರಿನ ಸುತ್ತಲೂ ಇದೆ. ಶಾಸನ ದೊರೆತಿರುವುದು ಇಲ್ಲೇ. **(ಕೆ.ಜಿ.ಕೆ.ಆರ್.)**

**ಕರಂಧಮ :** ಮನುವಂಶದ ಸುವರ್ಚಸನೆಂಬ ರಾಜ. ಇವನ ವಿಚಾರ ಮಹಾಭಾರತದಲ್ಲಿ ಬರುತ್ತದೆ. ಕೃತಯುಗದಲ್ಲಿ ನೀತಿಯುಕ್ತವಾದ ಲೋಕ ವ್ಯವಹಾರ ಮುಂದುವರಿಯಲೋಸುಗ ದಂಡಧರನಾದ ಮನುವೆಂಬ ರಾಜನಿದ್ದನಷ್ಟೆ. ಅವನಿಂದ ಬೆಳೆದ ಸಂತಾನದಲ್ಲಿ ಮನುವನ್ನು ಬಿಟ್ಟು ಐದನೆಯ ತಲೆಯವನಾದ ವಿವಿಂಶನೆಂಬ ರಾಜನಿಗೆ ಒಟ್ಟು ಹದಿನೈದು ಮಂದಿ ಮಕ್ಕಳಾದರು. ಎಲ್ಲರೂ ಹಿರಿಯ ಬಿಲ್ಲುಗಾರರೂ ಬ್ರಹ್ಮಪರರೂ ಸತ್ಯವಂತರೂ ದಾನಧರ್ಮಪರರೂ ಪ್ರಿಯ ಭಾಷಿಗಳೂ ಶಾಂತರೂ ಆಗಿದ್ದರು. ಅವರಲ್ಲಿ ಮೊದಲನೆಯವ ಖನೀನೇತ್ರ. ಶತ್ರುಗಳನ್ನು ಗೆದ್ದು ತೊಡಕು ತೊಂದರೆಗಳಿಲ್ಲದಂತೆ ರಾಜ್ಯವಾಳಲು ಸಮರ್ಥನಾಗದ ಕಾರಣ ಪ್ರಜೆಗಳು ಅವನ ರಾಜತ್ವಕ್ಕೆ ಇಷ್ಟಪಡದೆ ಅವನ ಮಗನಾದ ಸುವರ್ಚಸನೆಂಬುವನಿಗೆ ಪಟ್ಟಕಟ್ಟಿದರು. ಈತ ತನ್ನ ತಂದೆಗೆ ಏರ್ಪಟ್ಟು ಪ್ರಜಾಕೋಪವನ್ನೂ ಜ್ಞಾಪಿಸಿಕೊಂಡು ರಾಜನಿಗೆ ಬೇಕಾದ ವಿದ್ವತ್ಸಮ್ಮತವಾದ ಸದ್ಗುಣ ಸಂಪತ್ತಿನಿಂದ ಕೂಡಿ ರಾಜ್ಯವಾಳುತ್ತಿದ್ದ. ದಾನಧರ್ಮಪರತೆಯ ಆಧಿಕ್ಯದಿಂದ ಇವನ ಖಜಾನೆ ಬರಿದಾಗುತ್ತ ಬಂತು. ಅದನ್ನು ಕಂಡು ಛಿದ್ರಾನ್ವೇಷಿಗಳಾದ ಸಾಮಂತರಾಜರು ಇವನನ್ನು ಆಕ್ರಮಿಸಿ ಪೀಡಿಸಲಾರಂಭಿಸಲಾಗಿ, ಶತ್ರು ನಿರ್ನಾಮ ಮಾಡಲು ಈತ ತನ್ನ ಕೈಯನ್ನೇ ಊದಿ ಅದರಿಂದ ಅಪಾರವಾದ ಸೈನ್ಯವನ್ನು ಸೃಷ್ಟಿಸಿ ಅದರ ಮೂಲಕ ಎದುರಾಳಿಗಳನ್ನೆಲ್ಲ ಸಂಪೂರ್ಣವಾಗಿ ಗೆದ್ದು ಧರ್ಮರಾಜ್ಯವನ್ನು ನೆಲೆಗೊಳಿಸಿದ ಕಾರಣ ಈತನಿಗೆ ಕರಂಧಮನೆಂದು ಹೆಸರಾಯಿತು. **(ಎಸ್.ಎಸ್.ಆರ್.ಬಿ.)**

**ಕರಕೊ :** ಜಪಾನಿನ ನಾರಾ ಪ್ರಾಂತ್ಯದಲ್ಲಿ ಷಿಕಿಜಿಲ್ಲೆಯ ಕವಹಿಗಷಿ ಎಂಬ ಗ್ರಾಮದ ಸಾಮೀಪ್ಯದಲ್ಲಿರುವ ಕರಕೊ ನೆಲೆಯಲ್ಲಿ 1936ರಲ್ಲಿ ನಡೆದ ಉತ್ಖನನಗಳಿಂದ ಯಯೋಇ ಸಂಸ್ಕೃತಿಯ ಆದಿಭಾಗಕ್ಕೆ ಸೇರಿದ ಮಾಹಿತಿಗಳು ದೊರಕಿವೆ. ಯಮಟೋ

ಮೈದಾನದ ಕೆಳಪ್ರದೇಶದಲ್ಲಿ ಪ್ರಾಚೀನ ಹುಟ್ಟುಸೆ ನದಿಯ ಬಯಲಿನಲ್ಲಿರುವ ಈ ನೆಲೆಯ ಒದ್ದೆಮಣ್ಣಿನಲ್ಲಿ ಬತ್ತದ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಮರದ ಉಪಕರಣಗಳೂ ಧಾನ್ಯಶೇಖರಣೆಗೆ ಉಪಯೋಗಿಸುತ್ತಿದ್ದ ಪಾತ್ರೆಗಳೂ ಬುಟ್ಟಿಗಳೂ ಮೃತ್ಪಾತ್ರೆಗಳನ್ನು ತೂಗುಹಾಕಲು ಬಳಸುತ್ತಿದ್ದ ನೆಲುಗಳೂ ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಈ ಜನರು ನೀರಿಗಾಗಿ ಆಳವಾದ ಬಾವಿಗಳನ್ನು ಅಗೆದಿರುತ್ತಿದ್ದು ಅಂಥ ಕೆಲ ಬಾವಿಗಳಲ್ಲಿ ಮರದ ದಿಮ್ಮಿಗಳನ್ನು ಕೊರೆದು ಮಾಡಿದ ಪೀಪಾಯಿಗಳನ್ನು ಪಾರ್ಶ್ವಗಳು ಕುಸಿಯದಂತೆ ರಕ್ಷಿಸಲು ಉಪಯೋಗಿಸಿದ್ದರು. ನವಶಿಲಾಯುಗದ ಅನಂತರ ಬಳಕೆಗೆ ಬಂದ ಕಂಚಿನಯುಗಕ್ಕೆ ಸೇರುವ ಈ ಯ ಯೋಇ ಸಂಸ್ಕೃತಿಯಲ್ಲಿ ಪ್ರಪ್ರಥಮವಾಗಿ ಬತ್ತದ ವ್ಯವಸಾಯ ರೂಢಿಗೆ ಬಂದಿತು. ಮರದ ಉಪಕರಣಗಳನ್ನೂ ಮೃತ್ಪಾತ್ರೆಗಳನ್ನೂ ವಿಶೇಷವಾಗಿ ಉಪಯೋಗಿಸುತ್ತಿದ್ದರು. ನೀರಾವರಿ ಪದ್ಧತಿ ಬಳಕೆಯಲ್ಲಿದ್ದಿತು. ತಮ್ಮ ವಸತಿಗಳನ್ನು ಮರದ ಕಂಬ ಮತ್ತು ಗೋಡೆ ಮತ್ತು ಛಾವಣಿಗಳಿಂದ ನಿರ್ಮಿಸುತ್ತಿದ್ದರು. ವೃತ್ತ ಅಥವಾ ಆಯಾಕಾರದ ಈ ಗೃಹಗಳು 24'x21' ಪ್ರಮಾಣದಲ್ಲಿರುತ್ತಿದ್ದವು. ಕಲ್ಲಿನ ಆಯುಧಗಳು ಕೆಲವು ನಯಗೊಳಿಸಿದವುಗಳಾಗಿದ್ದರೆ ಮತ್ತೆ ಕೆಲವು ಸೂಕ್ಷ್ಮಶಿಲಾಯುಗ ರೀತಿಯವು ಗಳಾಗಿದ್ದವು. ಮೂಳೆಯ ಆಯುಧಗಳು ಬಳಕೆಯಲ್ಲಿದ್ದವು. ನೆಯ್ದ ಉಡುಪುಗಳನ್ನು ಉಪಯೋಗಿಸುತ್ತಿದ್ದರು. ಮೃತದೇಹಗಳನ್ನು ತೊಟ್ಟಿಗಳಲ್ಲೊ ಜಾಡಿಗಳಲ್ಲೊ ಹೂಳಿಡುತ್ತಿದ್ದರು. ಚೀನದ ಪ್ರಭಾವದಿಂದ ಕಂಚಿನ ಬಳಕೆ ಪ್ರಾರಂಭವಾಗಿ ಅನೇಕ ವಿಧವಾದ ಆಯುಧಗಳು–ಮುಖ್ಯವಾಗಿ ಕತ್ತಿಗಳು ಮತ್ತು ಚಾಕುಗಳು ಬಳಕೆಗೆ ಬಂದವು. *

**ಕರಗ :** ಆದಿಶಕ್ತಿಯನ್ನು ಆರಾಧಿಸುವ ಹಲವಾರು ಸಂಪ್ರದಾಯಗಳಲ್ಲಿ ಒಂದು. ಕರಗ (ಕರಕ) ಎಂಬ ಮಾತಿಗೆ ಇಲ್ಲಿ ಕುಂಭ ಎಂಬ ಅರ್ಥ ಸರಿಹೋಗುತ್ತದೆ. ಕರಗಪೂಜೆ ಮತ್ತು ಉತ್ಸವಗಳು ತಮಿಳುನಾಡಿನಲ್ಲಿ ಬಹು ಹಿಂದಿನಿಂದಲೂ ವೈಭವದಿಂದ ಆಚರಿಸಲ್ಪಡುತ್ತಿವೆ. ಕರ್ನಾಟಕ ರಾಜ್ಯದಲ್ಲಿ ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ಮತ್ತು ಬೆಂಗಳೂರಿನಲ್ಲಿ ಇದರ ಆಚರಣೆ ಬಳಕೆಯಲ್ಲಿದೆ. ಬೆಂಗಳೂರಿನದಂತೂ ಈಚೆಗೆ ಬಹು ಪ್ರಸಿದ್ಧವೆನಿಸಿದೆ.

ಕರಗದ ಒಂದು ದೃಶ್ಯ

ಕರಗ ಅಚರಣೆಯ ಮೂಲವನ್ನು ಹೇಳುವ ಒಂದು ಐತಿಹ್ಯ ಹೀಗಿದೆ : ಕುರುಕ್ಷೇತ್ರ ಸಮರದ ಅನಂತರ ಪಾಂಡವರ ಸ್ವರ್ಗಾರೋಹಣ ಸಂದರ್ಭದಲ್ಲಿ ದ್ರೌಪದಿ ಮೂರ್ಛಿತಳಾಗಿ ಹಿಂದೆ ಬಿದ್ದಳಂತೆ. ಎಚ್ಚರಗೊಂಡಮೇಲೆ ತನ್ನ ಪತಿಗಳು ಇಲ್ಲದಿರುವುದನ್ನು ಕಂಡು ರೋದಿಸುತ್ತಿರುವಾಗ ತಿಮಿರಾಸುರನೆಂಬ ರಾಕ್ಷಸ ಆಕೆಯನ್ನು ಪೀಡಿಸಲು ಅವನನ್ನು ನಿಗ್ರಹಿಸುವ ಸಲುವಾಗಿ ವಿರಾಟರೂಪ ತಾಳಿ ತಲೆಯ ಮೇಲೆ ಧರಿಸಿದ ಕುಂಭವೇ ಇಂದು ಆರಾಧನೆಗೊಳ್ಳುತ್ತಿರುವ ಕರಗ. ಇದು ಒಂದು ನಂಬುಗೆ. ಬಹುಶಃ ಪಂಪನಲ್ಲಿ ಬರುವ ಕರಗ ಹೋಮ_ಎಂಬ ನುಡಿಗಟ್ಟಿಗೆ ಈ ಕಥೆಯ ಆಧಾರವಿರಬೇಕು. ದ್ವಾಪರಯುಗದಲ್ಲಿ ಸರ್ವಾಲಂಕಾರಭೂಷಿತೆಯಾದ ದ್ರೌಪದಿ ಮಂಗಳಕಲಶವನ್ನು ಹಿಡಿದು ಸ್ವಯಂವರ ಮಂಟಪವನ್ನು ಪ್ರವೇಶಿಸಿದಳು. ಮತ್ಸ್ಯಯಂತ್ರವನ್ನು ಭೇದಿಸಿದ ಅರ್ಜುನನನ್ನೂ ಕುಂತಿಯ ಅಭಿಲಾಷೆಯಂತೆ ಉಳಿದ ನಾಲ್ವರು ಪಾಂಡವ ಸೋದರರನ್ನೂ ಶಾಸ್ತ್ರೋಕ್ತವಾಗಿ ವಿವಾಹವಾದಳು. ಆಗ ಆನಂದಾತಿಶಯದಿಂದ ಕೈಯಲ್ಲಿದ್ದ ಕಲಶವನ್ನು ಶಿರದಲ್ಲಿ ಧರಿಸಿದಳು: ಅದೇ ಕರಗವಾಯಿತು_ಇದು ಮತ್ತೊಂದು ನಂಬುಗೆ.

ಕರಗವನ್ನು ರೂಪಿಸುವ, ಹೊರುವ, ವಹ್ನಿಕುಲ ಕ್ಷತ್ರಿಯ ಮನೆತನದ ಹಿರಿಯರು ಪೂಜಾರಿಗಳು ಈ ಆಚರಣೆಯ ಮೂಲ ರಹಸ್ಯವನ್ನು ಗೋಪ್ಯವಾಗಿಟ್ಟಿದ್ದಾರೆ. ದೈವಿಕ ಆಚರಣೆಯ ಗುಟ್ಟನ್ನು ಬಹಿರಂಗಪಡಿಸುವುದು ಕುಲಕ್ಕೆ ಕೇಡು, ದೇಶಕ್ಕೆ ಹಾನಿ ಎಂಬುದು ಅವರ ನಿಲುವಾಗಿರಬಹುದು.

ಮೆರವಣಿಗೆಗೆ ಹೊರಟಿರುವ ಬೆಂಗಳೂರು ಕರಗ

ಈ ಉತ್ಸವದ ಆರಾಧನೆಯ ಸಂಪ್ರದಾಯವನ್ನು ನಡೆಸಿಕೊಂಡು ಬಂದಿರುವವರು ತಿಗಳರು ಎಂದು ಸಾಮಾನ್ಯವಾಗಿ ಕರೆಯಲ್ಪಡುವ ವಹ್ನಿಕುಲ ಕ್ಷತ್ರಿಯರು. ಇವರು ಮೂಲತಃ ತಮಿಳುನಾಡಿನವರು. ಇವರು 15ನೆಯ ಶತಮಾನದಲ್ಲಿಯೇ ಮೈಸೂರು ಸಂಸ್ಥಾನಕ್ಕೆ ಬಂದು ನೆಲೆಸಿದರೆಂದು ತಿಳಿದುಬರುತ್ತದೆ. ಹೈದರಾಲಿ ದಕ್ಷಿಣ ಭಾರತದ ಮೇಲೆ ದಂಡಯಾತ್ರೆ ಮಾಡಿದಾಗ ವೀರಾವೇಶದಿಂದ ಹೋರಾಡಿದ ಈ ವಹ್ನಿಕುಲ ಕ್ಷತ್ರಿಯರ ಧೈರ್ಯ ಹಾಗೂ ಇವರ ಕುಲವೃತ್ತಿಯಾದ ತೋಟಗಾರಿಕೆಯನ್ನು ಮೆಚ್ಚಿ ತಾನು ಮೈಸೂರಿಗೆ ಹಿಂತಿರುಗುವಾಗ ಈ ಮನೆತನದ ಕೆಲವರನ್ನು ತನ್ನೊಡನೆ ಕರೆತಂದು ಶ್ರೀರಂಗಪಟ್ಟಣದ ಗಂಜಾಂನಲ್ಲೂ ಬೆಂಗಳೂರಿನಲ್ಲೂ ನೆಲೆ ನಿಲ್ಲಿಸಿದನೆಂದು ಪ್ರತೀತಿ ಇದೆ. ಅನಂತರ ಈ ಜನಾಂಗ ಬೆಂಗಳೂರು, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ವಿಸ್ತರಿಸಿದಂತೆ ಕಾಣುತ್ತದೆ.

ಈ ಜನ ಪ್ರಾರಂಭದಿಂದಲೂ ಪಾಂಡವಾರಾಧಕರು. ಇವರ ಮೂಲಪುರುಷ ಬೆಂಕಿಯಲ್ಲಿ ಜನಿಸಿದನೆಂದು ಪ್ರತೀತಿ. ಆದ್ದರಿಂದಲೇ ಅಗ್ನಿಸಂಭವೆವಳೂ ಅಪರಿಮಿತ ಪರಾಕ್ರಮಿಯೂ ಪಾಂಡವರ ಪತ್ನಿಯೂ ಆದ ದ್ರೌಪದಿಯ ಹೆಸರಿನಲ್ಲೇ ಕರಗದ ಆಚರಣೆಯನ್ನು ಇವರು ನಡೆಸುತ್ತ ಬಂದಿದ್ದಾರೆ.

ಬೆಂಗಳೂರಿನ ಧರ್ಮರಾಯನ ದೇವಸ್ಥಾನ ಕರಗಮಹೋತ್ಸವದ ಕೇಂದ್ರ. ಈ ದೇವಾಲಯದ ನಿರ್ಮಾಣ ಯಾವಾಗ ಆಯಿತೆಂಬುದಕ್ಕೆ ಸ್ಪಷ್ಟವಾದ ಆಧಾರಗಳಿಲ್ಲ. ಮಾಗಡಿ ಕೆಂಪೇಗೌಡ ಬೆಂಗಳೂರು ನಗರವನ್ನು ಕಟ್ಟುವ ಕಾಲಕ್ಕಾಗಲೇ ಈ ದೇವಾಲಯ ಇತ್ತೆಂದು

ಕೆಲವರು ಹೇಳಿದರೆ, ಮತ್ತೆ ಕೆಲವರು ವಹ್ನಿಕುಲ ಕ್ಷತ್ರಿಯರು ಬೆಂಗಳೂರಿಗೆ ಬಂದು ನೆಲೆಸಿದ ಮೇಲೆ ನಿರ್ಮಾಣವಾಯಿತೆನ್ನುತ್ತಾರೆ. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಇನಾಂ ಜಮೀನುಗಳನ್ನು ಕೊಟ್ಟುದಕ್ಕೆ ದಾಖಲೆ ಇದೆ.

ಮೂಲಕರಗದ ಮುಂದೆ ಮೆರವಣಿಗೆ ಹೊರಟಿರುವ ಸಣ್ಣ ಕರಗಗಳು, ಕುಣಿತ

ದೇವಾಲಯ ವಿಶಾಲವಾದ ಅಂಗಳ, ಅಶ್ವತ್ಥಕಟ್ಟೆ, ಎತ್ತರವಾದ ಕಂಬಗಳ ತೂಗುಯ್ಯಾಲೆಗಳಿಂದ ಕೂಡಿ ಆಕರ್ಷಕವಾಗಿದೆ. ದ್ರಾವಿಡ ಶೈಲಿಯ ಮೂರು ಸಚಿತ್ರ ಗೋಪುರಗಳಿವೆ. ಮಹಾದ್ವಾರದ ಮೂಲಕ ಒಳಗೆ ಪ್ರವೇಶಿಸಿದರೆ ಮುಖ ಮಂಟಪದ ಎರಡು ಕಡೆಗಳಲ್ಲೂ ಕಲ್ಲಿನ ಆನೆಯ ಸುಂದರಾಕೃತಿಗಳಿವೆ. ಮೊದಲರ್ಧ ಭಾಗದ ಮಂಟಪ ಭದ್ರವಾದ ಕೆತ್ತನೆಯ ಶಿಲಾಸ್ತಂಭಗಳ ಮೇಲೆ ನಿಂತಿದೆ. ಉಳಿದರ್ಧ ಭಾಗ ಗರ್ಭಗುಡಿ. ಈ ದೇವಾಲಯದ ಗರ್ಭಗುಡಿಯೊಳಗೆ ಪ್ರೇಕ್ಷಕರ ಎಡಭಾಗಕ್ಕೆ ಧರ್ಮರಾಯಸ್ವಾಮಿ, ಬಲಭಾಗಕ್ಕೆ ಶ್ರೀಕೃಷ್ಣರ ವಿಗ್ರಹಗಳಿವೆ. ಅವೆರಡರ ಮುಂಭಾಗದಲ್ಲಿ ದಿವ್ಯಶಕ್ತಿಯ ಪೀಠವಿದೆ. ಈ ಪೀಠದ ಮೇಲೆಯೇ ಹಸಿಕರಗವನ್ನು ಅಲಂಕರಿಸಿ ಅರ್ಚಿಸುವುದು. ಇದರ ಜೊತೆಗೆ ಅರ್ಜುನ, ದ್ರೌಪದಿ, ಭೀಮಸೇನರ ಸುಂದರ ಮೂರ್ತಿಗಳಿವೆ.

ಬೆಂಗಳೂರು ಕರಗ ಒಂಬತ್ತು ದಿನಗಳ ಸಮಾರಂಭ. ಹೊಸ ವರ್ಷದ ಯುಗಾದಿ ಹಬ್ಬದ ಅನಂತರ ಸಪ್ತಮಿ ಅಥವಾ ಅಷ್ಟಮಿಯಂದು ಧ್ವಜಾರೋಹಣದಿಂದ ಆರಂಭವಾಗಿ ಬಿದಿಗೆಯಂದು ಧ್ವಜಾರೋಹಣದವರೆಗೆ ವಿವಿಧ ಕಾರ್ಯಕ್ರಮಗಳಿರುತ್ತವೆ. ಇವುಗಳಲ್ಲಿ ದ್ವಾದಶಿಯಂದು ನಡೆಯುವ ಸಮುದಾಯ ಆರತಿಸೇವೆ, ತ್ರಯೋದಶಿಯಂದು ಹಸಿಕರಗದ ರಚನೆ ಮತ್ತು ಸ್ಥಾಪನೆ, ಚತುರ್ದಶಿಯ ಪೊಂಗಲುಸೇವೆ ಮತ್ತು ಪೂರ್ಣಿಮಿಯಂದು ನಡೆಯುವ ಕರಗದ ಉತ್ಸವ-ಈ ಕಾರ್ಯಕ್ರಮಗಳು ಪ್ರಮುಖವಾದವು.

**ಹಸಿಕರಗ :** ಚೈತ್ರಶುದ್ಧ ತ್ರಯೋದಶಿಯ ದಿವಸ ಧರ್ಮರಾಯಸ್ವಾಮಿ ದೇವಾಲಯದ ಪೂರ್ವಕ್ಕೆ ಸ್ವಲ್ಪ ದೂರದಲ್ಲಿರುವ ಸಂಪಂಗಿ ಕೆರೆಯ ಅಂಗಳದಲ್ಲಿ ನಡುರಾತ್ರಿಯ ಹೊತ್ತಿಗೆ ಪೂಜಾರಿ, ಕುಲಪುರೋಹಿತರು, ವೀರಕುಮಾರರು ಮತ್ತು ಕುಲಸ್ಥರು ಸೇರುವರು. ಅಲ್ಲಿ ಒಂದೆಡೆ ಸ್ಥಳ ಶುದ್ಧಿಮಾಡಿ ಕೆಂಪುಬಣ್ಣದ ಛತ್ರಿಯನ್ನು ನೆಡುವರು. ಹಿಂದಿನ ಏಳು ದಿನಗಳಿಂದ ವ್ರತನಿರತರಾಗಿದ್ದ ವೀರಕುಮಾರರು ಹೊಳೆಯುವ ಹರಿತವಾದ ಕತ್ತಿಗಳನ್ನು ಅರ್ಧಚಂದ್ರಾಕಾರವಾಗಿ ಜೋಡಿಸುವರು. ಇವರು ಕರಗದೇವತೆಯ ಹೆಸರಿನಲ್ಲಿ ತಮ್ಮ ಕುಲಪುರೋಹಿತರು ಮತ್ತು ಹಿರಿಯರ ಸಮ್ಮುಖದಲ್ಲಿ ದೀಕ್ಷೆ ಕೈಗೊಂಡವರು. ದೇವಿಯ ಆರಾಧನೆಯಲ್ಲಿ ಅಚಲವಾದ ಶ್ರದ್ಧಭಕ್ತಿಗಳನ್ನು ಇಟ್ಟಿರುವ ಇವರು ಕರಗಕ್ಕೆ ಅಂಗರಕ್ಷಕರು. ಭಕ್ತಿದ್ಯೋತಕವಾಗಿ ಕೈಯಲ್ಲಿರುವ ಅಲಗುಗಳಿಂದ ಎದೆಯ ಮೇಲೆ ಇವರು ಪ್ರಹಾರ ಮಾಡಿಕೊಳ್ಳುತ್ತಿರುತ್ತಾರೆ. ಆಗ ರಕ್ತ ಬಂದರೆ ಔಷಧಿಗೆ ಬದಲಾಗಿ ದೇವಿಯ ಭಂಡಾರವನ್ನು ಗಾಯದ ಮೇಲೆ ಹಾಕಿಕೊಳ್ಳುತ್ತಾರೆ. ಬಿಳಿಯ ಚಲ್ಲಣ, ಸೊಂಟಕ್ಕೆ ಕೆಂಪು ಪಟ್ಟಿ, ತಲೆಯ ಮೇಲೆ ಕಲಾಬತ್ತಿನ ಪೇಟ ಧರಿಸಿರುವ ನೂರಾರು ಸಂಖ್ಯೆಯ ವೀರಕುಮಾರರ ಗುಂಪು ನೋಡಲು ತುಂಬ ಆಕರ್ಷಣೀಯವಾಗಿರುತ್ತದೆ. ಧರ್ಮಕಾರ್ಯನಿರತರಾದ ಈ ಯೋಧರು ಕತ್ತಿ ಹಿಡಿದಿದ್ದರೂ ಶಾಂತಿದೂತರು, ಹಣೆಯಲ್ಲಿ ತ್ರಿನಾಮಧರಿಸಿದ ಇವರ ಮುಖಗಳಲ್ಲಿ ಭಕ್ತಿಭಾವ ತುಂಬಿರುತ್ತದೆ. ಅನಂತರ ಕುಲಪುರೋಹಿತರ ನಿರ್ದೇಶನ ಮತ್ತು ಕುಲವೃದ್ಧರ ನೇತೃತ್ವದಲ್ಲಿ ರಾತ್ರಿ ಸುಮಾರು ಮೂರನೆಯ ಜಾವದ ಹೊತ್ತಿಗೆ ಹಸಿಕರಗ ಸಿದ್ಧವಾಗುತ್ತದೆ. ಕೆಂಪು ಛತ್ರಿಯ ಕೆಳಗೆ, ಅರ್ಧಚಂದ್ರಾಕಾರವಾಗಿ ಜೋಡಿಸಿರುವ ಕತ್ತಿಗಳ ಮಧ್ಯ, ಜಲ ತುಂಬಿದ ಕರಗವನ್ನು ಕೆಂಪು ವಸ್ತ್ರ, ದುಂಡುಮಲ್ಲಿಗೆ ಹಾರ, ಅರಿಶಿನ-ಕುಂಕುಮ ಮುಂತಾದ ಮಂಗಳದ್ರವ್ಯಗಳಿಂದ ಅಲಂಕರಿಸಿ ಪೂಜೆಗೆ ಅಣಿಮಾಡಲಾಗುತ್ತದೆ. ಈ ವೇಳೆಗಾಗಲೇ ಕರಗದ ಪೂಜಾರಿಯನ್ನು ಮಲ್ಲಿಗೆ ಹೂವಿನಿಂದ ಸಿಂಗರಿಸಿರುತ್ತಾರೆ. ಪೂಜಾರಿ ಮಹಾಮಂಗಳಾರತಿ ಮಾಡುತ್ತಾನೆ. ಮಣಗಟ್ಟಲೆ ಸುಡುವ ಕರ್ಪೂರದ ಹೊಗೆಯೊಂದಿಗೆ ಮಲ್ಲಿಗೆಯ ಪರಿಮಳವೂ ಸೇರಿ ಆವರಣವೆಲ್ಲ ಸುಗಂಧಮಯವಾಗುತ್ತದೆ. ದೇವಿಯ ಸೇವೆಗಾಗಿ ನಿಂತಿರುವ ವೀರಕುಮಾರರು ಗೋವಿಂದನಾಮಸ್ಮರಣೆಮಾಡುತ್ತ ಆವೇಶ ತುಂಬಿ ಎದೆಯ ಮೇಲೆ ಪ್ರಹಾರ ಮಾಡಿಕೊಳ್ಳುತ್ತಾರೆ. ಮಹಾಶಕ್ತಿಯ ಪ್ರೀತ್ಯರ್ಥವಾಗಿ ಮಾಡುವ ಈ ಕಾರ್ಯಕ್ಕೆ ಅಲಗುಸೇವೆ ಎನ್ನುವರು.

ಕರಗದ ವೀರಕುಮಾರರು

ಸುತ್ತುವರಿದ ವೀರಕುಮಾರರ ನಡುವೆ ಪೂಜಾರಿ ಭಕ್ತಿಯಿಂದ ಕರಗವನ್ನೆತ್ತಿಕೊಂಡು ತನ್ನ ಸೊಂಟದ ಎಡಭಾಗದಲ್ಲಿ ಗಡಿಗೆ ಇಟ್ಟುಕೊಳ್ಳುವಂತೆ ಇಟ್ಟುಕೊಳ್ಳುತ್ತಾನೆ. ವೀರಕುಮಾರರ ರಕ್ಷಣೆಯಲ್ಲಿ, ಗಂಟೆ ಪೂಜಾರಿಯ ಮಾರ್ಗನಿರ್ದೇಶನದಲ್ಲಿ ಪೂಜಾರಿ ಗಂಭೀರವಾಗಿ, ಒಮ್ಮೊಮ್ಮೆ ನರ್ತನ ಮಾಡುತ್ತ ಮುಂದುವರಿಯುತ್ತಾನೆ. ಕರಗಮಹೋತ್ಸವದಲ್ಲಿ ಗಂಟೆ ಪೂಜಾರಿಯ ಪಾತ್ರ ಮುಖ್ಯವಾದುದು. ಕರಗ ಹೊರಟಾಗ ಈತ ತಾಳಬದ್ಧವಾಗಿ ಗಂಟೆಯ ನಾದ ಮಾಡುತ್ತ, ದೇವಿಯ ಮಹಿಮಾವಳಿಗಳನ್ನು ಉಚ್ಚರಿಸುತ್ತ ಕರಗಕ್ಕೆ ಮಾರ್ಗದರ್ಶನ ಮಾಡುತ್ತ ಮುಂದುವರಿಯುತ್ತಾನೆ. ಈ ಹಕ್ಕೂ ಪೂಜಾರಿಯ ಹಕ್ಕಿನಂತೆ ವಂಶಪಾರಂಪರ್ಯವಾಗಿ ಬಂದುದು. ಮಧ್ಯೆ ಕೆಲವೆಡೆ ಪೂಜಾರಿ ಮಂಡಿಯೂರಿ ಕುಳಿತಾಗ ಅಲಗುಸೇವೆಯ ಕೈಂಕರ್ಯವಾಗುತ್ತದೆ. ಹೀಗೆ ಮುಂದುವರಿದ ಹಸಿಕರಗ ನಗರಸಭೆ ಕಚೇರಿಯ ಉತ್ತರಭಾಗದಲ್ಲಿರುವ ಏಳುಸುತ್ತಿನ ಕೋಟೆಯ ಸಂಕೇತಸ್ಥಳದಲ್ಲಿರುವ ದೊಡ್ಡ ಹುತ್ತವನ್ನು ಏಳು ಅಥವಾ ಒಂಬತ್ತು ಸಲ ಪ್ರದಕ್ಷಿಣೆಮಾಡಿ ದೇವಾಲಯಾಭಿಮುಖವಾಗಿ ಬಂದು ದೇವಸ್ಥಾನ ಮತ್ತು ಹೊರಾಂಗಣದಲ್ಲಿ ಸಿದ್ಧವಾಗಿರುವ ರಥವನ್ನು ಪ್ರದಕ್ಷಿಣೆಮಾಡಿ ನರ್ತನ ಮಾಡುತ್ತದೆ. ಇಷ್ಟಾದ ಮೇಲೆ ಶುಭಮುಹೂರ್ತದಲ್ಲಿ ಸೂರ್ಯೋದಯದ ಒಳಗೆ ಕರಗ ಗರ್ಭಗುಡಿಯನ್ನು ಪ್ರವೇಶಿಸುತ್ತದೆ. ಮೂಲಮೂರ್ತಿಗಳ ಸಮ್ಮುಖದಲ್ಲಿರುವ ಶಕ್ತಿಪೀಠದಲ್ಲಿ ಕರಗವನ್ನು ಪ್ರತಿಷ್ಠಾಪಿಸಿ ಅಲಂಕರಿಸಲಾಗುತ್ತದೆ.

ಮಾರನೆಯ ದಿನ ಚತುರ್ದಶಿ. ಅಂದು ರಾತ್ರಿ ದೇವಾಲಯದಲ್ಲಿ ಮಹಾಭಾರತ ಪ್ರವಚನ, ಸೂರ್ಯೋದಯದ ಹೊತ್ತಿಗೆ ಪೊಂಗಲು ಸೇವೆ ಮುಂತಾದ ಕೈಂಕರ್ಯ ಕಾರ್ಯಗಳಿರುತ್ತವೆ.

**ಕರಗ ಮಹೋತ್ಸವ** : ಚೈತ್ರಶುದ್ಧ ಹುಣ್ಣಿಮೆಯಂದು ಸಾಯಂಕಾಲದ ವೇಳೆಗೆ ಕರಗ ಹೊರುವ ಪೂಜಾರಿಗೆ ವಪನಸಂಸ್ಕಾರಮಾಡಿ, ಕಂಕಣಧಾರಣೆ ಮಾಡಿ. ಕೈತುಂಬ ಕರಿಬಳೆ ತೊಡಿಸುತ್ತಾರೆ. ದೇವಸ್ಥಾನದಲ್ಲಿ ವೈಷ್ಣವಾಗಮ ರೀತಿಯಲ್ಲಿ ಪೂಜೆ, ಹೋಮಗಳು ನಡೆಯುತ್ತವೆ. ಅನಂತರ ಅರ್ಜುನ, ದ್ರೌಪದಿಯರ ಕಲ್ಯಾಣೋತ್ಸವವಾಗುತ್ತದೆ. ರಾತ್ರಿ ಸು. 10 ಗಂಟೆಗೆ ಕರಗ ಹೊರುವ ಪೂಜಾರಿ, ಗಂಟೆ ಪೂಜಾರಿ, ವೀರಕುಮಾರರಾದಿಯಾಗಿ ಸಂಬಂಧಪಟ್ಟವರೆಲ್ಲ ಸಂಪಂಗಿ ಕೆರೆಯಂಗಳದಲ್ಲಿ ಸೇರುತ್ತಾರೆ. ಅಲ್ಲಿ ಪೂಜಾರಿಯನ್ನು ಅಚ್ಚಮಲ್ಲಿಗೆ, ಜಡೆಕುಚ್ಚು, ಹಾರಗಳಿಂದ ಶೃಂಗರಿಸಿ, ಅರಿಶಿನ ಬಣ್ಣದ ಸೀರೆ ಉಡಿಸಿ, ಕುಪ್ಪಸ ತೊಡಿಸಿ, ವಕ್ಷಸ್ಥಲವನ್ನು ಹವಳದ ಹಾರ, ರತ್ನಾಭರಣಗಳಿಂದ ಅಲಂಕರಿಸುತ್ತಾರೆ. ಸ್ತ್ರೀರೂಪ ಧರಿಸಿದ ಪೂಜಾರಿ ನವವಧುವಿನಂತೆ ಕಂಗೊಳಿಸುತ್ತಾನೆ. ಅನಂತರ ದಿವ್ಯಶಕ್ತಿಸ್ವರೂಪನಾದ ಪೂಜಾರಿಗೆ ಧೂಪ, ದೀಪ, ಆರತಿಗಳ ಅರ್ಚನೆಯಾಗುತ್ತದೆ. ವೀರಕುಮಾರರಿಂದ ಅಲಗುಸೇವೆಯಾದ ಮೇಲೆ ಪೂಜಾರಿಯ ಮೈಮೇಲೆ ಆದಿಶಕ್ತಿಯ ಆವಿರ್ಭಾವವಾಗುತ್ತದೆ. ಗಂಟೆಯ ನಾದದ ಮಾರ್ಗದರ್ಶನದಲ್ಲಿ ಮಂಗಳವಾದ್ಯಗಳೊಂದಿಗೆ ಎಲ್ಲರೂ ದೇವಾಲಯವನ್ನು ಸೇರಿದ ಮೇಲೆ ಪೂಜಾರಿ ಮಾತ್ರ ಗರ್ಭಗುಡಿಯನ್ನು ಪ್ರವೇಶಿಸುತ್ತಾನೆ. ಬಾಗಿಲು ಮುಚ್ಚುತ್ತದೆ.

ಈ ವೇಳೆಗೆ ದೇವಾಲಯದ ಸುತ್ತಲೂ ಕಿಕ್ಕಿರಿದ ಜನಸ್ತೋಮದ ಸಹಸ್ರಾರು ಕಣ್ಣುಗಳು ದೇವಾಲಯದ ಕಡೆಗೆ ಕೇಂದ್ರೀಕೃತವಾಗುತ್ತವೆ. ಆವರಣದಲ್ಲಿ ಕುಲಸ್ಥರು ಮತ್ತು ಆಹ್ವಾನಿತರನ್ನು ಗೌರವಿಸಿದ ಅನಂತರ ಅರ್ಜುನ, ದ್ರೌಪದಿಯರ ಉತ್ಸವಮೂರ್ತಿಗಳನ್ನು ಹೊತ್ತು ನಿಂತಿರುವ ಭೀಮಗದಾಕಾರದ ರಥ ಪೂರ್ವಾಭಿಮುಖವಾಗಿ ಸ್ವಲ್ಪ ದೂರ ಚಲಿಸುತ್ತದೆ. ನಾಗಸ್ವರ, ಶಂಖ, ಗಂಟೆಗಳ ನಾದ ಪ್ರತಿಧ್ವನಿಸುತ್ತಿರುವಾಗ ಮಲ್ಲಿಗೆ ಹೂವಿನಿಂದ ಸಿಂಗರಿಸಿರುವ ಕರಗವನ್ನು ಶಿರದಲ್ಲಿ ಧರಿಸಿದ ಪೂಜಾರಿ ದೇವಸುಂದರಿಯಂತೆ ಗರ್ಭಗುಡಿಯಿಂದ ಹೊರಬರುತ್ತಾನೆ. ಮಹಾ ಮಂಗಳಾರತಿಯ ಅನಂತರ ದೇವಸ್ಥಾನವನ್ನು ಬಲವಂದು ಗಂಟೆ ಪೂಜಾರಿಯ ಸ್ತೋತ್ರಯುಕ್ತ ನಿರ್ದೇಶನದಲ್ಲಿ ಅಸಂಖ್ಯಾತ ಭಕ್ತರ ಭಕ್ತಿಕಾಣಿಕೆಯನ್ನು ಸ್ವೀಕರಿಸುತ್ತ ಕರಗದ ಮೆರವಣಿಗೆ ಮೊದಲಾಗುತ್ತದೆ. ಕರಗ ಬರುವ ಮಾರ್ಗವನ್ನು ಮೊದಲೇ ಗೊತ್ತುಪಡಿಸಿ ಪ್ರಕಟಿಸಿರುವುದರಿಂದ ಆ ಮಾರ್ಗಗಳ ಇಕ್ಕೆಲಗಳಲ್ಲೂ ಕಟ್ಟಡಗಳ ಉಪ್ಪರಿಗೆಗಳ ಮೇಲೂ ಅಸಂಖ್ಯಾತ ಪ್ರೇಕ್ಷಕರು ನೆರೆದಿರುತ್ತಾರೆ. ಕರಗ ಬರುವ ಮುನ್ಸೂಚನೆಯಾಗಿ ವೀರಕುಮಾರರು ಬರುತ್ತಾರೆ. ಕುಸ್ತಿ, ಲಾಠಿ, ಕತ್ತಿವರಸೆಗಳಲ್ಲಿ ನಿಪುಣರಾದ ವಹ್ನಿಕುಲದ ಯುವಕರು ಉತ್ಸವದ ಮುಂದೆ ತಮ್ಮ ಕೌಶಲ ಪ್ರದರ್ಶಿಸುತ್ತಾರೆ. ಅಂದು ನಗರದ ದೇವಾಲಯಗಳಲ್ಲೆಲ್ಲ ವಿಶೇಷ ಪೂಜೆ ನಡೆಯುತ್ತದೆ. ಎಲ್ಲೆಲ್ಲೂ ಸಂಭ್ರಮ ಎದ್ದು ಕಾಣುತ್ತದೆ. ಕರಗ ಬರುವ ಮಾರ್ಗದ ದೇವಾಲಯಗಳಲ್ಲಿ ಕರಗಶಕ್ತಿಗೆ ಪೂಜೆ ನಡೆಯುತ್ತದೆ. ಈ ದೇವತೆ ಬರುವ ಹಾದಿಯಲ್ಲಿ ಅರಳೇಪೇಟೆಯಲ್ಲಿರುವ ಮಸ್ತಾನ್ ಸಾಹೇಬರ ದರ್ಗಾದಲ್ಲಿಯೂ ಕರಗಕ್ಕೆ ಪೂಜೆ ಸಲ್ಲುತ್ತದೆ.

ಸೂರ್ಯರಶ್ಮಿ ತನ್ನ ಮೇಲೆ ಬೀಳುವುದಕ್ಕೆ ಮುಂಚೆ ಕರಗ ದೇವಸ್ಥಾನವನ್ನು ತಲುಪಬೇಕೆಂಬುದು ನಿಯಮ. ಅದರಂತೆ ಬೆಳಗಿನ ಆರು ಗಂಟೆಯ ವೇಳೆಗೆ ಕರಗ ದೇವಾಲಯವನ್ನು ಸೇರುತ್ತದೆ. ಅನಂತರ ಕರಗಕ್ಕೆ ಜಾತಿ–ಧರ್ಮಗಳ ಭೇದವಿಲ್ಲದೆ ಪೂಜೆ ನಡೆಯುತ್ತದೆ.

ರಾತ್ರಿ ರಥದ ಜೊತೆಯಲ್ಲೇ ಹೊರಟ ನಗರದ ಅನೇಕ ದೇವರುಗಳ ಪಲ್ಲಕ್ಕಿ, ಮಂಟಪಗಳ ರಂಗುರಂಗಿನ ಉತ್ಸವ ಕರಗದ ಮತ್ತೊಂದು ಆಕರ್ಷಣೆ. ಎಷ್ಟು ದೂರ ನೋಡಿದರೂ ಕಣ್ಣು ಕೋರೈಸುವ ಆ ವೈಭವಪೂರ್ಣ ಮೆರವಣಿಗೆಯಲ್ಲಿ ಭಕ್ತರ ಇಷ್ಟಾರ್ಥ ನೇರವೇರಿಸಲು ದೇವರುಗಳೆಲ್ಲ ಒಮ್ಮೆಲೇ ಸೇರಿರುವಂತೆ ತೋರುತ್ತದೆ.

ಧ್ವಜಾವರೋಹಣದ ದಿನ ಕರಗವನ್ನು ಜಲದಲ್ಲಿ ವಿಸರ್ಜಿಸಲಾಗುತ್ತದೆ.

ಕರಗದ ಆಚರಣೆ ಆರಂಭವಾದಂದಿನಿಂದಲೂ ಅದರ ವಿಜೃಂಭಣೆ–ವೈಭವಗಳು ಹೆಚ್ಚುತ್ತಿವೆ. ಕರಗದಲ್ಲಿ ಶಕ್ತಿಯ ಆವಿರ್ಭಾವವಾಗುವುದು, ಅದನ್ನು ತಲೆಯ ಮೇಲಿಟ್ಟುಕೊಂಡು ಕೈಗಳ ಆಧಾರವಿಲ್ಲದೆ ಪ್ರಜಾರಿ ನಡೆಯುವುದು–ಇವೆಲ್ಲ ಮಹಿಮೆ ಎಂಬಂತೆ ನಡೆದುಕೊಂಡು ಬರುತ್ತಿವೆ. ಸಂಬಂಧಪಟ್ಟವರು ಹಿರಿಮೆಯನ್ನು ಕುರಿತು ಹೇಳಬಲ್ಲರೇ ಹೊರತು ರಹಸ್ಯದ ಬಗ್ಗೆ ಏನನ್ನೂ ಹೇಳರು. ಆ ದಿವ್ಯಶಕ್ತಿಯ ಆರಾಧನೆಯಲ್ಲಿ ಅವರಿಗಿರುವ ಅಚಲವಾದ ನಂಬುಗೆಯೇ ಆ ಮಹಿಮೆಗೆ ಕಾರಣವಾಗಿದೆ.

ಕರಗದ ಆರಾಧನೆಗೆ ಹಿನ್ನೆಲೆಯಾದ ಪಾಂಡವರ ಅರಾಧನೆ ದಕ್ಷಿಣ ಭಾರತದಲ್ಲೇ ಹೆಚ್ಚು ಪ್ರಚಾರದಲ್ಲಿರುವುದು. ತಮಿಳುನಾಡಿನಲ್ಲಿ ಅನೇಕ ಗ್ರಾಮಗಳಲ್ಲಿ ನೂರಾರು ವರ್ಷಗಳಿಂದ ಕರಗವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಆದರೆ, ಕರಗದ ಉತ್ಸವ ಒಂದು ಸಂಪ್ರದಾಯ ರೀತಿಯ ಧಾರ್ಮಿಕ ವೈಭವವಾಗಿ ಕಂಡು ಬರುವುದು ಬೆಂಗಳೂರಿನಲ್ಲಿ ಮಾತ್ರ.

ವಹ್ನಿಕುಲಕ್ಷತ್ರಿಯ ವಂಶದವರಲ್ಲಿ ಕರಗಶಕ್ತಿಯ ವಿಚಾರದಲ್ಲಿ ಅಪಾರವಾದ ಭಕ್ತಿ ಗೌರವಗಳು ತಲೆಮಾರುಗಳಿಂದ ನೆಲೆಯೂರಿ ನಿಂತಿದೆ. (ಸಿ.ಕೆ.ಪಿ.)

**ಕರಡಫ್** : ಅನಟೋಲಿಯದ ಕರಮನ್ ಜಿಲ್ಲೆಯಲ್ಲಿ, ಹಿಟ್ಟೈಟ್ ಸಾಮ್ರಾಜ್ಯ ಕಾಲದ ಅವಶೇಷಗಳನ್ನೊಳಗೊಂಡಿರುವ ಒಂದು ನೆಲೆ. ಸುಪ್ರಸಿದ್ಧವಾಗಿ 1001 ಚರ್ಚುಗಳ ಅವಶೇಷಗಳು ಕರಡಫ್ ಬೆಟ್ಟದ ಇಳಿಜಾರಿನಲ್ಲಿ ಕಂಡುಬರುತ್ತವೆ. ಬೆಟ್ಟದ ಮೇಲೆ ಇರುವ ಅವಶೇಷ ಗುಹಾ ದೇವಾಲಯದ ಗುಂಪಿಗೆ ಸೇರುತ್ತದೆ. ಇಲ್ಲಿಯ ಬಂಡೆಯ ಮೇಲೆ ಒಂದು ಚಿತ್ರಲಿಪಿಯ ದೀರ್ಘವಾದ (ಹೈರೊಗ್ಲಿಫಿಕ್) ಶಾಸನವಿದೆ. ಬೆಟ್ಟದ ಪಶ್ಚಿಮಭಾಗದ ಕಿಜಿಲ್‍ಡಫ್ ಶ್ರೇಣಿಯಲ್ಲಿ ಮತ್ತೊಂದು ದೇವಾಲಯವಿದೆ. ಬೆಟ್ಟದ ಸುತ್ತುಪ್ರದೇಶದ ಸುಂದರ ದೃಶ್ಯ ಕಾಣಬರುವ ಈ ಸ್ಥಳದಲ್ಲಿ ಬೃಹದಾಕಾರದ ಒಂದು ಕಲ್ಲಿನ ಆಸನವನ್ನು ಕೆತ್ತಲಾಗಿದೆ. ಈ ಆಸನದ ಮೇಲೆ ಕುಳಿತಿರುವ ರಾಜನೊಬ್ಬನ ಉಬ್ಬುರೇಖಾಚಿತ್ರವನ್ನೂ ಎರಡು ಚಿತ್ರಲಿಪಿ ಶಾಸನಗಳನ್ನೂ ಕೆತ್ತಲಾಗಿದೆ. ಈ ಎರಡು ಸ್ಥಳಗಳಲ್ಲೂ ಕೆತ್ತಲಾಗಿರುವ ಚಕ್ರವರ್ತಿಯ ಹೆಸರು ಒಂದೇ, ಆ ಚಕ್ರವರ್ತಿಯನ್ನು ಮುನಿಸಿಪಲ್ ಚಕ್ರವರ್ತಿಯ ಮಗನೆಂದು ಹೇಳಲಾಗಿದ್ದರೂ ಆತ ಯಾರೆಂಬುದು ಖಚಿತವಾಗಿ ತಿಳಿದು ಬಂದಿಲ್ಲ. *

**ಕರಡಜ್ವರ** : ಇಸುಬು, ಗೂರಲು, ಕರಡ ಜ್ವರ ಈ ಮೂರು ಬೇನೆಗಳು ಒಂದು ಗುಂಪಿನವು (ಹೇ ಫೀವರ್). ಈ ರೋಗತ್ರಯವನ್ನು ಇ–ಗೂ–ಕ–ಜ್ವ ಸಂಕೀರ್ಣ (E.A.H.F. Complex) ಎಂದೂ ಕರೆಯುವುದುಂಟು. ಏಕೆಂದರೆ ಕೆಲವು ಮನೆತನಗಳಲ್ಲಿ ಒಬ್ಬರಿಗಾದರೂ ಈ ಬೇನೆಗಳಲ್ಲಿ ಒಂದಾದರೂ ಕಾಡುವುದು. ಒಗ್ಗದಿಕೆಯೇ ಇವುಗಳ ಮೂಲಕಾರಣ.

ಕೆಲವು ಹುಲ್ಲುಗಳ ಪರಾಗ ಕಣಗಳಿಗೆ ಮೂಗು ಮೈಗಳ ಒಗ್ಗದಿಕೆಯೇ ಕರಡ ಜ್ವರಕ್ಕೆ ಕಾರಣವಾಗುವುದು. ಸಾಮಾನ್ಯವಾಗಿ ಬೇಸಗೆಯಲ್ಲಿ ಇದ್ದಕ್ಕಿದ್ದ ಹಾಗೆ ರೋಗ ತಲೆದೋರುತ್ತದೆ. ಮೊದ ಮೊದಲು ಕೇವಲ ನೆಗಡಿಯಂತೆ ಮೂಗು ಉರಿಯುತ್ತ ಕೆಂಪಾಗಿ ನೀರು ಸುರಿಯಬಹುದು. ಒಂದೆರಡು ಸೀನು, ಮೈ ತುರಿಕೆ, ಕಣ್ಣಿನಿಂದ ನೀರು ಸುರಿತ ಅಲ್ಲದೆ ಇನ್ನೂ ಜೋರಾದರೆ ಕಣ್ಣುರಿಯಾಗಿ ಊದಿಕೊಂಡು, ಉಬ್ಬಸ ಗೂರಲಿನ ತೆರನಾಗಿ ಸೇದಬಹುದು. ಜೊತೆಗೆ ಸಿಡಿವ ತಲೆನೋವು ಮತ್ತು ಜ್ವರದಿಂದ ರೋಗಿ ನರಳುತ್ತ ಸುಸ್ತು ಬೀಳುತ್ತಾನೆ. ಈ ಜ್ವರಕ್ಕೆ ಈಡಾಗುವವರು ಹಲವಾರು ಬಗೆಯ ಹುಲ್ಲುಗಳ ಪರಾಗಗಳಿಗೆ ಒಗ್ಗದಂತಿರುವರು. ಇನ್ನು ಕೆಲವರು ಗೊತ್ತಾದ ಗಿಡ, ಹೂಗಳ ಪರಾಗಗಳಿಗೆ ಈಡಾಗುವರು. ಮತ್ತೆ ಕೆಲವರು ಉಣಿಸಿನಲ್ಲಿ ಕೆಲವು ಪ್ರೋಟೀನು ವಸ್ತುಗಳನ್ನೂ ಬೆಕ್ಕು, ನಾಯಿ, ಕುದುರೆ, ಇಲಿ ಮತ್ತಿತರ ಪ್ರಾಣಿಗಳ ಕೂದಲ ವಾಸನೆಗಳನ್ನೂ ಸಹಿಸರು. ಇಂಥ ರೋಗಿಗಳಿಗೆ 2–3 ಪರಾಗಕಣಗಳು ತಾಕಿದರೂ ಅವರು ಬೇನೆ ಬೀಳುವರು. ಒಗ್ಗದ ಗಿಡ, ಮರ, ಹೂಗಳು ಒಂದು ಕಿಲೋಮಿಟರ್ ದೂರದಲ್ಲಿದ್ದರೂ ಬೇನೆ ಆರಂಭವಾಗುತ್ತದೆ.

ಮಕ್ಕಳ ಬೇನೆಯಾದ ಇದು, ಸಣ್ಣ ವಯಸ್ಸಿನಲ್ಲಿ ಶುರುವಾಗಿ ಆಮೇಲೆ ಬೇಸಗೆ ಕಾಲದಲ್ಲಿ ಪ್ರತಿ ವರ್ಷವೂ ಕಾಡುತ್ತ ನಡುವಯಸ್ಸಿನಲ್ಲಿ ಇಳಿದು ಹೋಗುತ್ತದೆ. ಕೆಲವರಿಗೆ ಬೇಸಗೆ ಕಾಲದ ಹೊರತಾಗಿ ಎದೆಯಲ್ಲಿ ಯಾವ ಬೇನೆಯ ತೊಡಕೂ ಕಾಣಿಸಿಕೊಳ್ಳದು. ಇನ್ನು ಕೆಲವರಿಗಂತೂ ಯಾವಾಗ ಬೇಕಾದರೂ? ತಲೆದೋರಬಹುದು. ಈ ರೋಗಕ್ಕೆ ಈಡಾಗುವವರಲ್ಲಿ ಮೂರು ಅಂಶಗಳು ಮೇಲುಗೈಯಾಗಿರುತ್ತವೆ–ತಲೆಮಾರಿನ ಗುಣ, ಚಂಚಲ ಮನ, ಸಾಮಾನ್ಯರಲ್ಲಿ ಯಾವ ತೊಡಕನ್ನೂ ತೋರದ ವಸ್ತುಗಳಿಗೆ ಒಗ್ಗದಿರುವುದು. ಅಸಹಜವಾಗಿ ಈಡಾಗುವ ಈ ಗುಣಕ್ಕೆ ಒಗ್ಗದಿಕೆ ಎಂದು ಹೆಸರಿದೆ. ರೋಗಿಗೆ ಒಂದು ವಸ್ತು ಮೊದಲು ತಾಕಿದಾಗ, ಚುಚ್ಚಿಹೊಗಿಸಿದಾಗ, ನುಂಗಿದಾಗ, ಇಲ್ಲವೇ ಉಸಿರಿನ ಮೂಲಕ ಸೇರಿದಾಗ ಅದಕ್ಕೆ ಈಡಾಗುವ ಗುಣವನ್ನು ಪಡೆಯುವರು. ಆಮೇಲೆ ಎರಡನೆಯ ಬಾರಿ ಅದೇ ವಸ್ತು ತಾಕಿದರೆ ತುಂಬ ಪೇಚಾಡಿಸುವುದು. ಒಗ್ಗದಿಕೆಯ ಪರಿಣಾಮ ರಕ್ತ ನಾಳ, ಇಲ್ಲವೇ ನಯ ಸ್ನಾಯುಗಳ ಕೆಲಸದ ವ್ಯತ್ಯಾಸಗಳಿಂದಾಗುವುದು. ಮೈ ಮೇಲಿನ ಇಲ್ಲವೇ ಒಳಗಿನ ತಲಗಳ ಅತಿಸೂಕ್ಷ್ಮ ರಕ್ತನಾಳಗಳ ನಿಜಕೆಲಸ ಕೆಡುವುದರಿಂದ ಈ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಹಾಗೆಯೇ ಶ್ವಾಸನಾಳಗಳು ಅವುಗಳ ನಯ ಸ್ನಾಯುಗಳ ಒಗ್ಗದ ಪರಿಣಾಮವಾಗಿ ಕುಗ್ಗಿ ಗಾತ್ರ ಸಣ್ಣಗಾಗುವುದೇ ಉಬ್ಬಸಕ್ಕೆ ಕಾರಣ.

ಕರಡ ಜ್ವರವನ್ನು ಗುರುತಿಸುವುದು ಸುಲಭ. ಬೇಸಗೆಯಲ್ಲಿ ಬೇರೆ ಯಾವ ಬೇನೆಯೂ ಇದರ ಹಾಗೆ ಕಾಣಿಸಿಕೊಳ್ಳುವುದಿಲ್ಲ. ಕೆಲವು ಪರೀಕ್ಷೆಗಳಿಂದ ಮುಂದೆ ಬರಬಹುದಾದ ಈ ರೋಗದ ಕಾರಣಗಳನ್ನು ಕಂಡು ಹಿಡಿಯಬಹುದು. ಆಯಾ ಊರುಗಳಲ್ಲಿ ಕಾರಣವೆಂದು ಗೊತ್ತಿರುವ ಪರಾಗಗಳ ಸಿದ್ಧಪಡಿಸಿದ ಸಾರಕಗಳನ್ನು ಮದ್ದು ತಯಾರಕರಿಂದ ಪಡೆಯಬಹುದು. ಇವನ್ನು ಕರಡ ಜ್ವರದ ರೋಗಿಗೆ ಕೊಟ್ಟರೆ ಆರೋಗ್ಯವಂತರಿಗಿಂತಲೂ 500 ಪಾಲು ಜೋರಾಗಿ ಇವರು ಅದಕ್ಕೆ ಈಡಾಗುವುದನ್ನು ತೋರಿಸಬಹುದು.

ಯಾವ ವಸ್ತುವಿನ ಒಗ್ಗದಿರುವಿಕೆ ರೋಗಿಗೆ ಹೀಗಾಗುತ್ತದೆ ಎನ್ನುವುದನ್ನು ಕಂಡುಹಿಡಿಯಬಹುದು. ಒಗ್ಗದಿಕೆಯನ್ನುಂಟುಮಾಡಬಲ್ಲ ಪದಾರ್ಥಗಳನ್ನು, ಇಲ್ಲವೇ ಅವುಗಳ ಸಾರಕಗಳನ್ನು ನಿರ್ದಿಷ್ಟ ಅತ್ಯಲ್ಪ ಪ್ರಮಾಣದಲ್ಲಿ ರೋಗಿಯ ಬೆನ್ನು ಅಥವಾ ಮುಂದೋಳಲ್ಲಿ ಚುಚ್ಚಿಹೊಗಿಸಿ 24 ಗಂಟೆಗಳ ಅನಂತರ ಪ್ರತಿಕ್ರಿಯೆಯನ್ನು ನೋಡಬೇಕು. ಚುಚ್ಚಿದೆಡೆ 5 ಮಿಮಿ. ಗಿಂತ ಹೆಚ್ಚು ಅಗಲವಾಗಿ ಕೆಂಪೇರಿ ಊತವೆದ್ದರೆ ರೋಗಿಗೆ ಆ ವಸ್ತು ಒಗ್ಗದೆಂದರ್ಥ.

ಬೇಸಗೆಯಲ್ಲಿ ಕರಡ ಜ್ವರಕ್ಕೆ ಈಡಾಗುವವರು ರೋಗದ ಲಕ್ಷಣಗಳು ಕಾಣಿಸಿಕೊಳ್ಳುವ 5–6 ವಾರಗಳ ಮುಂಚೆಯೇ ಒಗ್ಗದಿಕೆ ತಡೆಯುವ ಕ್ರಮವನ್ನು ಕೈಗೊಳ್ಳಬೇಕು. ರೋಗಿಗೆ ಯಾವ ವಸ್ತು ಒಗ್ಗದೆಂದು ಮೇಲೆ ಹೇಳಿರುವ ಪರೀಕ್ಷೆಯಿಂದ ಗೊತ್ತುಮಾಡಿ, ಅಂಥ ಪರಾಗದ ಸಾರಕದ್ರವದ ಲಕ್ಷಪಾಲಿನ ಒಂದರಷ್ಟನ್ನು ಚರ್ಮದಡಿ ಚುಚ್ಚಿ ಪ್ರಾರಂಭಿಸಬೇಕು. ಬರಬರುತ್ತ ವಾರವಾರವೂ ಪ್ರತಿಕ್ರಿಯೆ ನೋಡಿಕೊಂಡು ಅರೆಪಾಲು ಹೆಚ್ಚಿಸುತ್ತ 8–10 ಚುಚ್ಚುಗೆಗಳನ್ನು ಕೊಡಬೇಕು. ಹೀಗೆ ಮಾಡಿದಾಗ ಎಂದಾದರೂ ಮೈಯೆಲ್ಲ ದದ್ದುಗಳೆದ್ದು ತೊಂದರೆಯಾದರೆ ಮುಂದಿನ ವಾರ ಬಹಳಷ್ಟು ಕಡಿಮೆ ಮಾಡಿ ಚುಚ್ಚಬೇಕು. ಹೀಗೆ ಕ್ರಮವಾಗಿ ಚುಚ್ಚುತ್ತ ಹೋದಂತೆ ಮುಂದಿನ ಬೇಸಗೆಯಲ್ಲಿ ಕರಡ ಜ್ವರದಿಂದ ಆತನಿಗೆ ವಿಮೋಚನ ದೊರೆಯುತ್ತದೆ. ಆದರೆ ಈ ತಡೆ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಇರದು. ಮುಂದಿನ ವರ್ಷ ಅಷ್ಟು ವಾರಗಳ ಚಿಕಿತ್ಸೆ ಬೇಕಿರದು.

ಒಬ್ಬೊಬ್ಬನಿಗೂ ಬೇರೆಯಾಗಿರುವ ಮೇಲಿನ ಚಿಕಿತ್ಸೆಯೊಂದಿಗೆ ಎಲ್ಲ ಬಗೆಯ ಒಗ್ಗದಿಕೆಯ ಚಿಕಿತ್ಸೆಗಾಗಿ ಹಿಸ್ಟಮಿನ್ ರೋಧಕ ಮದ್ದುಗಳಿವೆ. ಮೈಯಲ್ಲಿ ಹಿಸ್ಟಮೀನ್ ವಸ್ತು ಹೊರಬೀಳುವುದೇ ಒಗ್ಗದಿಕೆಯ ಲಕ್ಷಣಗಳಿಗೆ ಮುಖ್ಯಕಾರಣ. ಈ ಮದ್ದುಗಳು ಅದರಿಂದೇಳುವ ಪರಿಣಾಮಗಳನ್ನು ಎದುರಿಸಿ ಕಳೆಯುತ್ತವೆ. ಮಾತ್ರೆ, ಮುಲಾಮು, ತುಂಪುರಿ, ಚುಚ್ಚುಮದ್ದು–ಈ ರೂಪಗಳಲ್ಲಿ ಮದ್ದುಗಳು ಸಿಗುತ್ತವೆ. ಮೂಗು ಗಂಟಲುಗಳು ಕೆಂಪೇರಿದಾಗ ಶಾಮಕಗಳನ್ನು ಬಳಸಬಹುದು. ಆದರೆ ಇವುಗಳ ಶಕ್ತಿ ಕೊಂಚಕಾಲವಿದ್ದು ನಶಿಸುತ್ತದೆ. ಮೂಗಿನಲ್ಲಿ ಒಗ್ಗದಿಕೆ ಈಡಾಗುವ ಕೆಲವೆಡೆ ವಿದ್ಯುತ್ಗುಳದಿಂದ ಸುಡುವುದರಿಂದ ಕೆಲವರಿಗೆ ಅನುಕೂಲವಾಗಬಹುದು.

ಬೇಸಗೆ ಕಾಲ ಕಳೆವ ತನಕ, ಇಲ್ಲವೇ ಮಳೆಯೋ ಮಂಜೋ ಸುರಿದು ಪರಾಗದ ದೂಳು ಹರಡುವುದು ನಿಲ್ಲುವ ತನಕ, ಇಲ್ಲವೇ ಆ ಊರು ಬಿಡುವ ತನಕ ಕರಡ ಜ್ವರ ಕಾಡಬಹುದು. (ಡಿ.ಪಿ.ಜೆ.)

**ಕರಡಿ :** ಕಾರ್ನಿವೊರ ಗಣದ ಅರ್ಸಿಡೀ ಕುಟುಂಬಕ್ಕೆ ಸೇರಿದ ಸ್ತನಿ. ಪ್ರಪಂಚದಲ್ಲಿ ಸು. 7 ಜಾತಿ ಹಾಗೂ 9 ಪ್ರಭೇದಗಳಿಗೆ ಸೇರಿದ ಕರಡಿಗಳಿವೆ. ಇವು ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿರುವುದೇ ಹೆಚ್ಚು. ಉತ್ತರ ಶೀತವಲಯದಲ್ಲೂ ಒಂದು ಜಾತಿಯ ಕರಡಿ ಇದೆ (ಆಫ್ರಿಕ, ಮಡಗಾಸ್ಕರ್ ದ್ವೀಪ, ಆಸ್ಟ್ರೇಲಿಯ ಹಾಗೂ ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಮಾತ್ರ ಕರಡಿ ಇಲ್ಲ). ಬಹುಭಾರವಾದ ದೇಹ, ದೇಹದ ಗಾತ್ರಕ್ಕೆ ಹೋಲಿಸಿದರೆ ಚಿಕ್ಕವಾದ ಆದರೆ ಬಲಯುತವಾದ ಕಾಲುಗಳು, ಮೊಟ್ಟಬಾಲ, ದೊಡ್ಡ ಗಾತ್ರದ ತಲೆ, ದೇಹದ ಮೇಲೆಲ್ಲ ಉದ್ದನೆಯ ಹಾಗೂ ಪೊದೆಯಂಥ ಕೂದಲುಗಳು–ಇವು ಕರಡಿಯ ಪ್ರಮುಖವಾದ ಸಾಮಾನ್ಯ ಲಕ್ಷಣಗಳು. ಸಾಮಾನ್ಯವಾಗಿ ಕರಡಿಗಳ ಕಣ್ಣು ಮತ್ತು ಕಿವಿಗಳು ಬಲು ಚಿಕ್ಕವು–ಕಿವಿಗಳು ಗುಂಡಗಿದ್ದು ನೆಟ್ಟಗೆ ನಿಂತಂತಿವೆ. ಮೂತಿ ಉದ್ದವಾಗಿದೆ. ತುಟಿಗಳು ದವಡೆಗಳಿಗೆ ಅಂಟಿಲ್ಲ. ಎರಡು ಜೊತೆ ಕಾಲುಗಳಲ್ಲೂ ಐದೈದು ಬೆರಳುಗಳಿವೆ. ಇವುಗಳಲ್ಲಿ ಚೂಪಾದ ಬಾಗಿದ ಹಾಗೂ ಗಡುಸಾದ ಉಗುರುಗಳಿವೆ (ಪಂಜ), ಇವು ಆಹಾರವನ್ನು ಸಿಗಿಯಲು ಗುಳಿ ತೋಡಲೂ ಸಹಕಾರಿಯಾಗಿವೆ. ಕರಡಿಗಳು ಊರುಗಾಲಿಗಳು (ಪ್ಲಾಂಟಿಗ್ರೇಡ್). ನಡೆಯುವಾಗ ಅಂಗಾಲನ್ನು ಅದರಲ್ಲೂ ಹಿಮ್ಮಡಿಯನ್ನು ನೆಲಕ್ಕೆ ಊರುವುದರಿಂದ ಇವುಗಳ ನಡಿಗೆ ವಿಚಿತ್ರವಾಗಿದ್ದು ತೊನೆಯುತ್ತ ನಡೆಯುವಂತೆ ಕಾಣುತ್ತದೆ. ಸಾಮಾನ್ಯವಾಗಿ ನಾಲ್ಕು ಕಾಲುಗಳನ್ನು ಊರಿ ನಡೆಯುವುವಾದರೂ ಕೆಲವೊಮ್ಮೆ ಬರಿಯ ಹಿಂಗಾಲುಗಳ ಮೇಲೆ ನಡೆಯುವುದೂ ಉಂಟು. ನಡಿಗೆ ವಿಚಿತ್ರವಾದರೂ ಕರಡಿಗಳು ವೇಗವಾಗಿ ಹಾಗೂ ಅತ್ಯಂತ ಜಾಗರೂಕತೆಯಿಂದ ನಡೆಯಬಲ್ಲವು. ನೆಲದ ಮೇಲೆಯೇ ಸಂಪೂರ್ಣವಾಗಿ ತಮ್ಮ ಚಟುವಟಿಕೆಗಳನ್ನು ನಿರ್ವಹಿಸುವ ಕರಡಿಗಳ ಅಂಗಾಲಿನ ಮೇಲೆ ಕೂದಲು ಇದೆ. ಆದರೆ ಮಲಯದಲ್ಲಿ ಕಂಡುಬರುವ ಬಿಸಿಲು ಕರಡಿಯ ಅಂಗಾಲಿನಲ್ಲಿ ಕೂದಲಿಲ್ಲ. ಇದರ ಕಾರಣ ಬಹುಶಃ ಈ ಕರಡಿ ಸಾಮಾನ್ಯವಾಗಿ ಮರಗಳಲ್ಲೇ ಕಾಲ ಕಳೆಯುವುದಾಗಿರಬಹುದು. ದೇಹದ ಗಾತ್ರದಲ್ಲೂ ತೂಕದಲ್ಲೂ ಬೇರೆ ಬೇರೆ ಬಗೆಯ ಕರಡಿಗಳಲ್ಲಿ ವೈವಿಧ್ಯವಿದೆ. ಕೆಲವು ಸು. 3 ಮೀ ಉದ್ದವಿದ್ದು, ಸು.780 ಕಿಗ್ರಾಂ ತೂಗಿದರೆ (ಉದಾಹರಣೆಗೆ ಅಲಾಸ್ಕದ ಕಂದು ಕರಡಿ) ಇನ್ನು ಕೆಲವು ಕೇವಲ 1 ಮೀ. ಉದ್ದವಿದ್ದು 27–40 ಕಿಗ್ರಾಂ. ತೂಗುತ್ತವೆ (ಉದಾಹರಣೆಗೆ ಮಲಯದ ಬಿಸಿಲು ಕರಡಿ). ದೇಹದ ಬಣ್ಣದಲ್ಲೂ ವೈವಿಧ್ಯವನ್ನು ಕಾಣಬಹುದು, ಕಂದು, ಕಪ್ಪು, ನೀಲಿಮಿಶ್ರಿತ ಕಪ್ಪು, ಬೂದು, ಬಿಳಿ ಇತ್ಯಾದಿ. ಕೆಲವು ಕರಡಿಗಳಲ್ಲಿ ಎದೆಯ ಮೇಲೆ ಅರ್ಧ ಚಂದ್ರಾಕೃತಿಯ ಅಥವಾ ಚಕ್ರದಂಥ ಬಿಳಿಯ ಬಣ್ಣದ ಗುರುತುಗಳುಂಟು.

ಕರಡಿ ನಿಶಾಚರಿ. ಹಗಲೆಲ್ಲ ಗುಡ್ಡಬೆಟ್ಟಗಳಲ್ಲಿನ ಗವಿಗಳಲ್ಲೊ, ದಟ್ಟವಾದ ಪೊದೆಗಳಲ್ಲೊ, ದೊಡ್ಡ ದಿಮ್ಮಿಗಳ ಪೊಟರೆಗಳಲ್ಲೋ ಅಥವಾ ನೆಲವನ್ನು ತೋಡಿ ಮಾಡಿಕೊಂಡ ಬಿಲಗಳಲ್ಲೊ ನಿದ್ರಿಸುತ್ತ ಕಾಲ ಕಳೆಯುತ್ತಿದ್ದು, ಆಹಾರಾರ್ಜನೆಗಾಗಿ ಸಂಜೆ ಅಥವಾ ರಾತ್ರಿ ಹೊರ ಹೊರಡುತ್ತದೆ. ಶೀತವಲಯದ ಕರಡಿ ಮಾತ್ರ ಹಗಲಿನಲ್ಲೆ ತನ್ನ ಚಟುವಟಿಕೆಗಳಲ್ಲಿ ನಿರತವಾಗಿರುತ್ತದೆ. ಸಾಮಾನ್ಯವಾಗಿ ಕರಡಿಗಳೆಲ್ಲ ಆಹಾರವನ್ನು ಹುಡುಕಿಕೊಂಡು ತಾವು ವಾಸಿಸುವ ಸ್ಥಳದಿಂದ ಬಹುದೂರ ಹೋಗುತ್ತವೆ. ಅದಕ್ಕೇ ಬಹಳ ಅಲೆಮಾರಿ ಪ್ರಾಣಿಗಳೆಂದು ಇವು ಹೆಸರಾಗಿವೆ. ಕರಡಿಗಳು ಸರ್ವಭಕ್ಷಕ ಪ್ರಾಣಿಗಳು. ಹುಲ್ಲು, ಎಲೆ, ಬೇರು, ಹಣ್ಣು, ಹಂಪಲು, ಜೇನುತುಪ್ಪ ಮುಂತಾದ ಸಸ್ಯಾಹಾರವನ್ನೂ ಕೀಟಗಳು, ಸಣ್ಣಪುಟ್ಟ ಸ್ತನಿಗಳು ಮುಂತಾದ ಮಾಂಸಾಹಾರವನ್ನೂ ತಿನ್ನುತ್ತವೆ. ಮೀನನ್ನು ಹಿಡಿದು ತಿನ್ನುವುದೂ ಉಂಟು. ಆಹಾರಪ್ರಾಣಿಗಳನ್ನು ತಮ್ಮ ಬಲವಾದ ಪಂಜಗಳಿಂದ ಹೊಡೆದು ಕೊಂದು ತಿನ್ನುವುದೇ ವಾಡಿಕೆ. ಕರಡಿಗಳಿಗೆ ದೃಷ್ಟಿ ಹಾಗೂ ಶ್ರವಣ ಶಕ್ತಿಗಳು ಕಡಿಮೆ. ಆದರೆ ಘ್ರಾಣಶಕ್ತಿ ಅತ್ಯಂತ ಚುರುಕು. ಆಹಾರ ಮತ್ತು ಶತ್ರುಗಳ ಸುಳಿವನ್ನು ವಾಸನೆಯಿಂದಲೇ ಪತ್ತೆಹಚ್ಚುತ್ತವೆ. ಇವುಗಳ ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಶಿಶಿರಸ್ವಾಪತೆ (ಹೈಬರ್ನೇಷನ್) ಬಹುಪಾಲು ಜಾತಿಯ ಕರಡಿಗಳು ಚಳಿಗಾಲದಲ್ಲಿ ತಮ್ಮ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಿ ಯಾವುದಾದರೂ ಗುಹೆಯಲ್ಲಿ 2–3 ತಿಂಗಳ ಕಾಲ ನಿದ್ದೆ ಹೋಗುತ್ತವೆ. ಈ ಕಾಲದಲ್ಲಿ ಉಸಿರಾಡುವುದೊಂದನ್ನು ಬಿಟ್ಟರೆ ಉಳಿದೆಲ್ಲ ದೈಹಿಕವ್ಯಾಪಾರಗಳೂ ನಿಂತಂತೆಯೇ ಇರುತ್ತವೆ. ಆದರೆ ಕೆಲವು ವಿಜ್ಞಾನಿಗಳ ಪ್ರಕಾರ ಈ ಬಗೆಯ ನಿದ್ದೆ ಕೀಟಗಳು ಮುಂತಾದ ಪ್ರಾಣಿಗಳಲ್ಲಿರುವಂತೆ ನಿಜವಾದ ಶಿಶಿರಸ್ವಾಪತೆಯಲ್ಲ. ಏಕೆಂದರೆ ಈ ಕಾಲದಲ್ಲಿ ಕರಡಿಗಳು ಎಚ್ಚರಗೊಳ್ಳುವುದೂ ಗುಹೆಯಿಂದ ಹೊರಬಂದು ಮತ್ತು ಬಂದಂತೆ ನಡೆದಾಡುವುದೂ ಕಂಡುಬಂದಿದೆ. ಶೀತವಲಯದ ಕರಡಿಗಳು (ಗರ್ಭಧರಿಸಿದ ಹೆಣ್ಣುಗಳನ್ನು ಬಿಟ್ಟು), ಮಲಯದ ಬಿಸಿಲು ಕರಡಿ ಮತ್ತು ಭಾರತದ ಕರಡಿ (ಸ್ಲಾತ್ ಬೇರ್)–ಇವು ಶಿಶಿರಸ್ವಾಪತೆ ಮಾಡುವುದಿಲ್ಲ ಎಂದು ಹೇಳಲಾಗಿದೆ.

ಅಮೇರಿಕದ ಕಪ್ಪು ಕರಡಿ

ಕರಡಿಗಳು ಸ್ವಾಭಾವಿಕವಾಗಿ ಶಾಂತಸ್ವಭಾವದ ಪ್ರಾಣಿಗಳು. ತಾವಾಗಿಯೇ ಇತರ ಪ್ರಾಣಿಗಳ ಮೇಲೆ (ಆಹಾರ ಪ್ರಾಣಿಗಳನ್ನು ಬಿಟ್ಟು) ಬಿದ್ದು ಆಕ್ರಮಣ ಮಾಡುವುದಿಲ್ಲ. ಆದಷ್ಟು ಮಟ್ಟಿಗೆ ಬೇರೆ ಪ್ರಾಣಿಗಳೊಂದಿಗೆ ಹೋರಾಡುವುದನ್ನು ತಪ್ಪಿಸಲು ಪ್ರಯತ್ನಿಸುತ್ತವೆ. ಆದರೆ ಸ್ವಂತ ಹಾಗೂ ಮರಿಗಳ ರಕ್ಷಣೆಗಾಗಿ, ಆಹಾರಕ್ಕಾಗಿ, ಇಕ್ಕಟ್ಟಿಗೆ ಸಿಲುಕಿದಾಗ, ಬಹುಕ್ರೂರವಾಗಿ, ಅಪಾಯಕರವಾಗಿ ಹೋರಾಡಬಲ್ಲವು.

ಇವು ಸಾಮಾನ್ಯವಾಗಿ ಒಂಟಿಜೀವನ ನಡೆಸುತ್ತವೆ. ಸಂತಾನಾಭಿವೃದ್ಧಿಯ ಕಾಲದಲ್ಲಿ ಮಾತ್ರ ಒಟ್ಟೊಟ್ಟಿಗೆ ಇರುತ್ತವೆ. ಪ್ರತಿವರ್ಷದ ಅಕ್ಟೋಬರ್ ಮಾರ್ಚ್ ತಿಂಗಳುಗಳ ನಡುವಣ ಕಾಲ ಕರಡಿಗಳು ಮರಿ ಹಾಕುವ ಕಾಲ. 6–9 ತಿಂಗಳುಗಳ ಅವಧಿಯ ಗರ್ಭಧಾರಣೆಯ ಅನಂತರ ಒಂದೊಂದು ಹೆಣ್ಣೂ 1–4 ಮರಿಗಳನ್ನು ಹೆರುತ್ತದೆ. ಆಗತಾನೇ ಹುಟ್ಟಿದ ಮರಿಗಳು ಬಹಳ ಚಿಕ್ಕವಾಗಿದ್ದು ಸು. 230–560 ಗ್ರಾಂ. ಮಾತ್ರ ತೂಗುತ್ತವೆ. ಹುಟ್ಟಿದಾಗ ಕಣ್ಣು ತೆರೆದೇ ಇರುವುದಿಲ್ಲ, ಮರಿಗಳ ಪಾಲನೆಯನ್ನು ತಾಯಿಕರಡಿ ಮಾಡುತ್ತದೆ. 1–2 ವರ್ಷ ತಾಯಿಯೊಡನೆಯೇ ಇದ್ದು ಆಮೇಲೆ ಮರಿಗಳು ತಮ್ಮ ಬದುಕನ್ನು ಸ್ವತಂತ್ರವಾಗಿ ನಡೆಸಲಾರಂಭಿಸುತ್ತವೆ. $2\frac{1}{2}$–6 ವರ್ಷಗಳಲ್ಲಿ ಪ್ರೌಢಾವಸ್ಥೆ ತಲಪುತ್ತವೆ. ಕರಡಿಗಳ ಆಯಸ್ಸು ಸು. 15–30 ವರ್ಷಗಳು, ಸಾಕಿದ ಕರಡಿಗಳು ಇನ್ನೂ ಹೆಚ್ಚುಕಾಲ ಬದುಕಿರುವ ದಾಖಲೆಗಳುಂಟು.

ಪ್ರಪಂಚದಲ್ಲಿ ಕಾಣಬರುವ ಏಳು ಜಾತಿಯ ಕರಡಿಗಳು ಇವು–ಅಮೇರಿಕದ ಕಪ್ಪು ಕರಡಿ, ಅಲಾಸ್ಕದ ಕಂದು ಕರಡಿ, ಏಷ್ಯದ ಕಪ್ಪು ಕರಡಿ, ಬಿಸಿಲು ಕರಡಿ, ಭಾರತದ ಕರಡಿ, ಮಚ್ಚೆ ಕರಡಿ ಮತ್ತು ಶೀತವಲಯದ ಕರಡಿ.

1 ಅಮೆರಿಕದ ಕಪ್ಪು ಕರಡಿ : ಇದರ ಶಾಸ್ತ್ರೀಯ ನಾಮ ಯುಆರ್ಕ್ಟಸ್ ಅಮೆರಿಕಾನಸ್ ಎಂದು. ಉತ್ತರ ಅಮೆರಿಕದ ದಟ್ಟವಾದ ಕಾಡುಗಳಲ್ಲಿ ವಿಶೇಷವಾಗಿ ಕಾಣಬರುತ್ತದೆ. ಸು.1.5–1.8 ಮೀ. ಉದ್ದವಿರುವ ಇದರ ಭಾರ ಸು. 150 ಕಿಗ್ರಾಂ. ದೇಹದ ಬಣ್ಣ ಕಪ್ಪು, ಕಂದು, ನೀಲಿಮಿಶ್ರಿತ ಕಪ್ಪು, ಬಿಳಿ ಇತ್ಯಾದಿ ವಿವಿಧ ಬಗೆಯದು. ಬಹಳ ಚೆನ್ನಾಗಿ ಮರ ಹತ್ತಬಲ್ಲುದು. ಸಹಜವಾಗಿ ಸಾಧುಪ್ರಾಣಿ. ಹಣ್ಣುಹಂಪಲು, ಮೀನು ಇತ್ಯಾದಿ ಇದರ ಆಹಾರ, ಪ್ರೌಢ ಕರಡಿಗಳನ್ನು ಪಳಗಿಸುವುದು ಕಷ್ಟವಾದರೂ ಮರಿಗಳನ್ನು ಹಿಡಿದು ಪಳಗಿಸಿ ಕೆಲವು ಮೋಜಿನ ಆಟಗಳನ್ನು ಕಲಿಸುವುದು ಸಾಧ್ಯ. ಕೆಲವು ಕಡೆ ಇದರ ಮಾಂಸವನ್ನು ತಿನ್ನುವ ರೂಢಿ ಇದೆ.

ಅಮೆರಿಕದ ಕರಡಿ ಮತ್ತು ಮರಿಗಳು (ಬಿಳಿಯ ಬಗೆಯವು)

2 ಅಲಾಸ್ಕದ ಕಂದು ಕರಡಿ : ಅರ್ಸಸ್ ಅರ್ಕ್ಟಸ್ ಎಂಬ ಶಾಸ್ತ್ರೀಯ ಹೆಸರಿನ ಈ ಕರಡಿ ಅಲಾಸ್ಕದ ಅರಣ್ಯವಾಸಿ. ಒಂದು ಕಾಲದಲ್ಲಿ ಉತ್ತರ ಅಮೆರಿಕ, ಯುರೋಪು ಹಾಗೂ ಏಷ್ಯದ ಕಾಡುಗಳಲ್ಲಿ ಹೇರಳವಾಗಿ ಕಾಣಬರುತ್ತಿದ್ದ ಇದು ಇಂದು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಯೆಲ್ಲೊಸ್ಟೋನ್ ಮತ್ತು ಗ್ಲೇಸಿಯರ್ ರಾಷ್ಟ್ರೀಯ ಉದ್ಯಾನಗಳಲ್ಲಿ, ಅಲಾಸ್ಕ ಹಾಗೂ ಕೆನಡಗಳ ಕಾಡುಗಳಲ್ಲಿ ಮಾತ್ರ ವಾಸಿಸುತ್ತದೆ. ಜೀವಂತ ಕರಡಿಗಳಲ್ಲೆಲ್ಲ ಅತ್ಯಂತ ದೊಡ್ಡದೂ ಬಲಶಾಲಿಯೂ ಎಂದು ಹೆಸರಾಗಿದೆ. ಸು. 2.8 ಮೀ. ಉದ್ದವಿದ್ದು 780 ಕಿಗ್ರಾಂ. ವರೆಗೂ ಭಾರವಿರುತ್ತದೆ. ತನ್ನಪಂಜದ ಪ್ರಹಾರದಿಂದ ತನಗಿಂತಲೂ ಭಾರವಾದ ಕಾಡುಕೋಣಗಳನ್ನು ಕೊಂದಿರುವ ನಿದರ್ಶನಗಳಿವೆ. ಇದು ಸರ್ವಭಕ್ಷಕ. ಇದನ್ನು ಸುಲಭವಾಗಿ ಪಳಗಿಸಬಹುದು. ತಾಳ, ಲಯಕ್ಕನುಗುಣವಾಗಿ ಕುಣಿಯುವುದನ್ನು ಕಲಿಸಿ ಸರ್ಕಸ್ಸುಗಳಲ್ಲಿ ಪ್ರದರ್ಶಿಸುತ್ತಾರೆ.

ಮಲಯದ ಬಿಸಿಲು ಕರಡಿ

3 ಏಷ್ಯದ ಕಪ್ಪು ಕರಡಿ : ಹಿಮಾಲಯದ ಕರಡಿಯೆಂದೂ ಕರೆಯಲಾಗುವ ಇದು ಬಲೂಚಿಸ್ತಾನ, ಹಿಮಾಲಯ, ಚೀನ, ಜಪಾನ್ ಮತ್ತು ಕೊರಿಯ ದೇಶಗಳ ಕಾಡುಗಳಲ್ಲೆಲ್ಲ ಹರಡಿದೆ. ಸೆಲೆನಾರ್ಕ್ಟಸ್ ಟಿಬೆಟಾನಸ್ ಎಂಬುದು ಇದರ ವೈಜ್ಞಾನಿಕನಾಮ. ಇದು ಸು.1.6 ಮೀ. ಉದ್ದವುಳ್ಳದ್ದೂ ಸು. 120 ಕಿಗ್ರಾಂ. ತೂಕವುಳ್ಳದ್ದೂ ಆಗಿದೆ. ಇದರ ಬಣ್ಣ ಕಪ್ಪು. ಎದೆಯ ಮೇಲೆ ಅರ್ಧ ಚಂದ್ರಾ ಕೃತಿಯ ಬಿಳಿಯ ಅಥವಾ ಮಾಸಲು ಹಳದಿ ಬಣ್ಣದ ಮಚ್ಚೆ ಇದೆ. ಉಳಿದ ಜಾತಿಯ ಕರಡಿಗಳಿಗಿಂತ ಹೆಚ್ಚು ಅಪಾಯಕಾರಿ ಹಾಗೂ ಆಕ್ರಮಣಕಾರಿ. ವನ್ಯ ಪ್ರಾಣಿಗಳನ್ನಲ್ಲದೆ ಕುರಿ, ಮೇಕೆ, ದನಕರು ಮುಂತಾದ ಸಾಕುಪ್ರಾಣಿಗಳನ್ನೂ ಕೊಂದು ತಿನ್ನುವುದೆಂದು ಹೇಳುತ್ತಾರೆ. ಇದರ ಮಾಂಸದಲ್ಲಿ ಔಷಧೀಯ ಗುಣಗಳಿವೆಯೆಂದು ಚೀನೀಯರು ನಂಬುತ್ತಾರೆ.

4 ಬಿಸಿಲು ಕರಡಿ (ಸನ್ ಬೇರ್) : ಮಯನ್ಮಾರ್, ಮಲಯ, ಸುಮಾತ್ರ, ಬೋರ್ನಿಯೊಗಳ ಗುಡ್ಡಗಾಡುಗಳಲ್ಲಿ ಕಾಣಬರುವ ಇದರ ಶಾಸ್ತ್ರೀಯ ನಾಮ ಹೆಲಾರ್ಕ್ಟಸ್ ಮಲಯಾನಸ್. ಕರಡಿಗಳಲ್ಲೆಲ್ಲ ಅತ್ಯಂತ ಚಿಕ್ಕದು ; 1.1–1.4 ಮೀ. ಉದ್ದವಿದ್ದು ಸು.27–65 ಕಿಗ್ರಾಂ ಭಾರವಿದೆ. ಬಣ್ಣ ಕಪ್ಪು, ಎದೆಯಮೇಲೆ ಕಿತ್ತಳೆ ಅಥವಾ ಬಿಳಿಯ ಮಚ್ಚೆಯಿದೆ. ಮೂತಿ ಬೂದು ಬಣ್ಣದ್ದು ತುಂಬ ಚೆನ್ನಾಗಿ ಮರ ಹತ್ತಬಲ್ಲ ಇದರ ವಾಸ ಬಹುಪಾಲು ಮರದ ಮೇಲೆಯೇ ಬಹಳ ಬುದ್ಧಿವಂತ ಪ್ರಾಣಿಯೆಂದು ಹೆಸರಾಗಿದೆ. ಈ ಕರಡಿಯ ಮರಿಗಳನ್ನು ಮಾತ್ರ ಪಳಗಿಸಬಹುದು.

5 ಭಾರತದ ಕರಡಿ (ಸ್ಲಾತ್ ಬೇರ್): ಭಾರತ ಮತ್ತು ಶ್ರೀಲಂಕ ದೇಶಗಳು ಇದರ ತವರು. ಇದರ ವೈಜ್ಞಾನಿಕ ನಾಮ ಮೆಲರ್ಸಸ್ ಅರ್ಸಿನಸ್. ಜೇನು ಕರಡಿ ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಗುಡ್ಡಗಾಡುಗಳಲ್ಲಿ ವಾಸಿಸುತ್ತದೆ. ಸು. 1.4–1.8 ಮೀ. ಉದ್ದ. 55–136 ಕಿ ಗ್ರಾಂ ಭಾರ ಇದೆ. ದೇಹದ ಬಣ್ಣ ಕಪ್ಪು. ಎದೆಯ ಮೇಲೆ V ಅಥವಾ Y ಆಕಾರದ ಬಿಳಿಯ ಮಚ್ಚೆಯಿದೆ. ಇದರ ಮೂತಿ ಬಹಳ ಉದ್ದ. ತುಟಿಗಳು ಸರಾಗವಾಗಿ ಅಡ್ಡಡ್ಡವಾಗಿ ಚಲಿಸಬಲ್ಲುವು. ಮೂಗಿನ ಹೊಳ್ಳೆಗಳನ್ನು ಬೇಕೆನಿಸಿದಾಗ ಮುಚ್ಚಿಕೊಳ್ಳಬಲ್ಲುದು. ಬಾಚಿಹಲ್ಲುಗಳಿಲ್ಲ. ಗೆದ್ದಲುಗಳನ್ನು ಹಿಡಿದು ತಿನ್ನಲು ಇವೆಲ್ಲ ಲಕ್ಷಣಗಳನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತದೆ. ಹುತ್ತವನ್ನು ಕೆಡವಿ, ಮಣ್ಣನ್ನೂ ಕೊಳೆಯನ್ನೂ ಊದಿ ಹಾರಿಸಿ, ಮೂತಿಯನ್ನು ಕೊಳವೆಯಂತೆ ಮಾಡಿಕೊಂಡು ಹುಳುಗಳನ್ನು ಬಾಯೊಳಕ್ಕೆ ಎಳೆದು ಕೊಳ್ಳುತ್ತದೆ. ಜೇನು ಕಂಡರೂ ಇದಕ್ಕೆ ಬಲು ಇಷ್ಟ. ಜೇನುಗೂಡನ್ನು ಹುಡುಕಿಕೊಂಡು ಹಲವಾರು ಮೈಲಿಗಳು ಅಲೆಯುವುದುಂಟು. ಈ ಕರಡಿಯನ್ನು ಪಳಗಿಸಿ ಸಾಕಬಹುದಲ್ಲದೆ ಇದಕ್ಕೆ ಹಲವಾರು ಆಟಗಳನ್ನು ಕಲಿಸಬಹುದು.

ಭಾರತದ ಕರಡಿ

6 ಮಚ್ಚೆ ಕರಡಿ : ದಕ್ಷಿಣ ಅಮೆರಿಕದ ವೆನಿಜ್ವೆಲ, ಕೊಲಂಬಿಯ, ಎಕ್ವಡಾರ್, ಪೆರು, ಬೊಲೀವಿಯ ಮುಂತಾದ ಪ್ರದೇಶಗಳ ನಿವಾಸಿ. ಶಾಸ್ತ್ರೀಯವಾಗಿ ಇದನ್ನು ಟ್ರೆಮಾರ್ಕ್ಟಸ್ ಆರ್ನೇಟಸ್ ಎಂದು ಕರೆಯುತ್ತಾರೆ. ಇದರ ಉದ್ದ ಸು. 1.5–1.8 ಮೀ; ತೂಕ ಸು. 70 ಕಿಗ್ರಾಂ. ಕಣ್ಣುಗಳ ಸುತ್ತ ಕನ್ನಡಕದ ಆಕೃತಿಯ ಬಿಳಿಯ ಮಚ್ಚೆಯಿರುವುದು ಇದರ ವಿಶಿಷ್ಟ ಲಕ್ಷಣ.

7 ಶೀತವಲಯದ ಕರಡಿ (ಪೋಲಾರ್ ಬೇರ್) : ಥಲಾರ್ಕ್ಟಸ್ ಮ್ಯಾರಿಟಿ ಮಸ್ ಎಂಬ ಶಾಸ್ತ್ರೀಯ ಹೆಸರಿನ ಈ ಕರಡಿ ಉತ್ತರ ಶೀತವಲಯದಲ್ಲಿ ಹೇರಳವಾಗಿದೆ. ಹಿಮಕರಡಿ ಇದರ ಪರ್ಯಾಯ ನಾಮ. ಅಚ್ಚ ಬಿಳಿಯ ಬಣ್ಣ, ನೀಳವಾದ ಕುತ್ತಿಗೆ, ದೇಹದ ಗಾತ್ರಕ್ಕೆ ಹೋಲಿಸಿದರೆ ಚಿಕ್ಕದಾಗಿರುವ ತಲೆ, ರೋಮ ಪೂರಿತ ಅಂಗಾಲು–ಇವು ಇದರ ಮುಖ್ಯ ಲಕ್ಷಣಗಳು. ಇದು ಸು. 2.2–2.5 ಮೀ. ಉದ್ದ ಹಾಗೂ ಸು. 720 ಕಿಗ್ರಾಂ ಭಾರ ಇದೆ. ಕರಡಿಗಳಲ್ಲೆಲ್ಲ ಅತ್ಯಂತ ಹೆಚ್ಚಿನ ಅಲೆಮಾರಿ ಪ್ರಾಣಿ ಇದು. ನೆಲದ ಮೇಲೆ ವೇಗವಾಗಿ ಚಲಿಸಬಲ್ಲುದಲ್ಲದೆ ನೀರಿನಲ್ಲೂ ಸರಾಗವಾಗಿ ಈಜಬಲ್ಲುದು. ಮೀನು, ಸೀಲ್‍ಪ್ರಾಣಿ, ಸಾಗರದ ವಿವಿಧ ಬಗೆಯ ಹಕ್ಕಿಗಳು, ಹಿಮಸಾರಂಗ ಮುಂತಾದುವು ಇದರ ಪ್ರಧಾನ ಆಹಾರ. ಹಣ್ಣು, ಎಲೆ ಇತ್ಯಾದಿ ತಿನ್ನುವ ರೂಢಿಯೂ ಉಂಟು. ಇದರ ಚರ್ಮಕ್ಕಾಗಿ ಮತ್ತು ರುಚಿಕರವಾದ ಮಾಂಸಕ್ಕಾಗಿ ಎಸ್ಕಿಮೋ ಜನ ಇದನ್ನು ಬೇಟೆಯಾಡುತ್ತಾರೆ. ಆದರೆ ಇದರ ಯಕೃತ್ತಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಎ ಜೀವಾತು ಇರುವುದರಿಂದ ಇದು ವಿಷ ಪೂರಿತವೆಂದು ಹೇಳುತ್ತಾರೆ. (ಎಸ್.ಎಚ್.ಒ.)

**ಕರಡಿಗೆ :** ವೀರಶೈವರು ಇಷ್ಟಲಿಂಗವನ್ನು ಇಡುವ ಸಂಪುಟ. ಲಿಂಗಸಜ್ಜಿಕೆ ಎಂದೂ ಹೆಸರು. ಇದನ್ನು ಶಿವಾಲಯ ಎಂದು ಕರೆಯಲಾಗಿದೆ. ಇದನ್ನು ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಅಥವಾ ಶ್ರೀಗಂಧದ ಮರದಿಂದಲೂ ಮಾಡುತ್ತಾರೆ. ನೂಲಿನ ಹಣಿಕೆಯ ಸಂಪುಟಕ್ಕೆ ಕಾಂತಿಕೊಡಿಸಿರುವ ಪುರಾತನ ಕರಡಿಗೆಗಳೂ ಉಂಟು. ಕಂಚು, ಕಬ್ಬಿಣಗಳಲ್ಲಿ ಕರಡಿಗೆಯನ್ನು ಮಾಡಬಾರದೆಂಬ ನಿಷೇಧವಿದೆ.

ವೀರಶೈವರು ಕರಡಿಗೆಗೆ ದಾರವನ್ನು ಪೋಣಿಸಿ ಧರಿಸುತ್ತಾರೆ. ಈ ದಾರಕ್ಕೆ ಶಿವಸೂತ್ರ, ಶಿವದಾರ ಮುಂತಾದ ಹೆಸರುಗಳಿವೆ. ದಾರವನ್ನು ರೇಷ್ಮೆ, ಹತ್ತಿನೂಲು ಮೊದಲಾದವುಗಳಿಂದ ಮಾಡುತ್ತಾರೆ.

ಶಿವದಾರವನ್ನು 36 ಅಥವಾ 63 ಎಳೆಗಳಿಂದ ಸಿದ್ಧಪಡಿಸಬೇಕು. ಜ್ಞಾನ ಮತ್ತು ಕರ್ಮಗಳಿಂದ ಕೂಡಿದ ಗುರು–ಲಿಂಗ–ಜಂಗಮ ತತ್ತ್ವಗಳನ್ನು ಷಟ್‌ಸ್ಥಳಗಳಿಂದ ಗುಣಿಸಿದಲ್ಲಿ 36 ತತ್ತ್ವಗಳಾಗುತ್ತವೆ. ಈ ಮೂವತ್ತಾರು ಎಂಬ ಸಂಖ್ಯೆ ಶಿವತತ್ತ್ವಮೊದಲು ಪೃಥಿವೀ ತತ್ತ್ವದವರೆಗಿನ 36 ತತ್ತ್ವಗಳಿಗೂ ಸಂಕೇತ. 63 ಎಳೆಗಳು ಎಂಬುದು ವೀರಶೈವರಿಗೆ ಪೂಜ್ಯರಾದ 63 ಮುಂದಿ ಪುರಾತನ ಶಿವಭಕ್ತರ ಸವಿನೆನಪಿಗಾಗಿ.

ಕರಡಿಗೆ ಶಿಥಿಲವಾಗಿರಬಾರದು, ದಾರ ಹರಿದಿರಬಾರದು, ಲಿಂಗ ಕಳೆದುಹೋದರೆ ಪ್ರಾಣವನ್ನೇ ಬಿಡಬೇಕು–ಎಂಬುದು ವಿಧಿ. (ಎಂ.ಜಿ.ಎಸ್.)

**ಕರಡಿಮಜಲು :** ಕರಡಿ ಹಾಗೂ ಅದರ ಸಹವಾದ್ಯ ಡೊಳ್ಳುಗಳೆರಡೂ ಚರ್ಮವಾದ್ಯಗಳೇ. ಒಂದು ಕರಡಿಗೆ ಎರಡು ಡೊಳ್ಳು, ಒಂದು ಜೊತೆ ತಾಳಗಳು ಸಹವಾದ್ಯಗಳಾಗಿವೆ.

ಚಿಗರೆ ಅಥವಾ ಆಡಿನ ಚರ್ಮದಿಂದ ಮಾಡಿದ ಕರಡಿ ಎರಡು ಗುಣಿಗಳಿಂದ ಬಾರಿಸುವ ವಾದ್ಯ. ಎತ್ತಿನ ಅಥವಾ ಕೋಣನ ಚರ್ಮದಿಂದ ಮಾಡಿದ ಡೊಳ್ಳು ಒಂದೇ ಗುಣಿಯಿಂದ ಬಾರಿಸುವ ವಾದ್ಯವಾದರೂ ಅದಕ್ಕೆ ಎಡಗೈ ಸಹಾಯಕವಾಗುತ್ತದೆ.



ಕಮಾನುಕಂಟಿಯ ನಿಲುವಂಗಿಯನ್ನು ತೊಟ್ಟು, ಕರಡಿಯನ್ನು ನಡುವಿಗೆ ಕಟ್ಟಿ ಕೊಂಡಾತ ಮಧ್ಯದಲ್ಲಿ, ಬಗಲುಗಸೆಯ ಅಂಗಿತೊಟ್ಟು, ಡೊಳ್ಳುಗಳನ್ನು ಹೆಗಲಿಗೆ ನೇತುಹಾಕಿಕೊಂಡು ಬಾರಿಸುವವರು ಕರಡಿಯವನ ಎಡಬಲಗಳಲ್ಲಿ ನಿಂತಿರುತ್ತಾರೆ. ತಾಳ ಬಾರಿಸುವವನೂ ಕರಡಿಯವನ ಹತ್ತಿರದಲ್ಲೇ ನಿಂತಿರುತ್ತಾನೆ.

ಕರಡಿವಾದನಕ್ಕೆ ಪೂರಕವಾಗಿ ಶ್ರುತಿ, ಸನಾದಿಗಳೆಂಬ ಊದುವಾದ್ಯಗಳಿರುತ್ತವೆ. ಒಬ್ಬ ಶ್ರುತಿಹಿಡಿದರೆ, ಇನ್ನೊಬ್ಬ ಸನಾದಿಯಲ್ಲಿ ರಾಗಾಲಾಪಗಳನ್ನು ನುಡಿಸುತ್ತಾನೆ. ಆ ತಾಳವನ್ನು ಅನುಸರಿಸಿ ಕರಡಿಡೊಳ್ಳಿನವರು ಬಾರಿಸುವರು. ಅದು ಕೇಳುವುದಕ್ಕೆ ಕರಡಿ ಗುಡುಗು ಹಾಕಿದಂತಿರುತ್ತದೆ.

ಸನಾದಿಯವ ಕರಡಿಯವನ ಎದುರಿಗೆ ನಿಂತು, ಶ್ರುತಿಗನುಸರಿಸಿ ರಾಗಾಲಾಪನೆ ಮಾಡಿ ದೀರ್ಘ ಪಲ್ಲವಿಯ ಒಂದು ಮಟ್ಟವನ್ನು ಊದುತ್ತಾನೆ. ಉದಾಹರಣೆಗೆ:

ಶರಣು ಶ್ರೀ ಗುರುವರ, ಮರಣರಹಿತಕರ, ಕರುಣಾಕರಗೆ ದೇವಗೆ ಮಾತ್ರೆಗಳನ್ನು ಎಣಿಸಿಕೊಂಡು ಕರಡಿಯವ ವೀರಗಾಲು ಹೊಡೆದು, ಮೂರು ಮುಕ್ತಾಯಗಳನ್ನು ಹಾಕಿ ಮುಗಿಸುವುದಕ್ಕೂ ಸನಾದಿಯವನ ಕಡೆಯ ಮಾತ್ರೆಯ ಪೆಟ್ಟಿಗೂ ಮೇಳಯಿಸಿತೆಂದರೆ, ಡೊಳ್ಳು, ತಾಳಿನವರು ಸಂದರ್ಭಕ್ಕೆ ತಕ್ಕ ಗತ್ತು ಬಾರಿಸುತ್ತ ಕುಣಿದಾಡುವರು. ಸನಾದಿಯವ ದ್ವಿಗುಣದಲ್ಲಿ ನುಡಿಸುವಂತೆ ಕರಡಿ, ಡೊಳ್ಳಿನವರನ್ನು ಪ್ರೇರಿಸಿದಾಗಲಂತೂ ಅವರೆಲ್ಲರ ಉತ್ಸಾಹ, ಕುಣಿತ, ಕೇಕೆ ಪ್ರೇಕ್ಷಕರ ಮೈತುಂಬಿಸುವುವು. ಆಗ ಕೊನೆಯ ಹಂತದಲ್ಲಿ ಬಂದ ಗತ್ತು ಕೊನೆಗೊಳ್ಳುವುದು. ಅಮೇಲೆ ಮತ್ತೊಂದು.

ಗ್ರಾಮದ ಆಯಕಟ್ಟಿನ ಸ್ಥಳದಲ್ಲಿ ಮಜಲಿನವರು ಬಯಲುಗತ್ತು ಎಂಬ ವಿಶಿಷ್ಟಗತ್ತನ್ನು ಬಾರಿಸುವರು. ಅಲ್ಲಿ ಲಾವಣಿಕಾರ ಬಯಲು ಲಾವಣಿಯನ್ನು ಹಾಡಿ, ಮೇಲೊಂದು ಸಖಿ ಹೇಳುತ್ತಾನೆ. ಲಾವಣಿಕಾರ ಕಾಲಲ್ಲಿ ಗೆಜ್ಜೆ ಕಟ್ಟಿ, ಕೈಯಲ್ಲಿ ತಾಳಹಾಕುತ್ತ, ಬಾಯಲ್ಲಿ ಲಾವಣಿ ಹೇಳುತ್ತ ಕುಣಿಯುವ ಸಂದರ್ಭ ಉತ್ಸಾಹ ದಾಯಕವಾಗಿರುತ್ತದೆ.

ನೀರಜಾಕ್ಷಿ ಬಾರನ್ಯಾತಕೆ ಪ್ರಿಯ । ಕರೆತಾರೆ ಮುಗಿಯುವೆನು ಕೈಯ ॥

ಇಂಥ ಒಂದು ಸಖಿಯ ಮಟ್ಟವನ್ನೇ ಸನಾದಿಯವ ಸ್ವೀಕರಿಸಿ ನುಡಿಸತೊಡಗಲು, ಡೊಳ್ಳಿನವರು ಜಿಗಿದು ನಿಂತು ಮುಕ್ತಾಯ ಹಾಕಿದಾಗ ನೆರೆದವರೆಲ್ಲ ಭಲೆ–ಎಂದು ಉದ್ಗರಿಸದೆ ಇರಲಾರರು.

ಕನ್ನಡನಾಡಿನ ವಾದ್ಯವಿಶೇಷಗಳಾದ ಚೌಡಿಕೆ–ಊಡಕಗಳಂತೆ ಕರಡಿವಾದ್ಯವೂ ಪ್ರಾಣವನ್ನು ಚೇತರಿಸಿ, ಉತ್ಸಾಹಶಕ್ತಿಯನ್ನು ಜಾಗೃತಗೊಳಿಸುವಂಥ ಗಂಡುಗಾಡಿಯಾಗಿದೆ. (ಎಸ್.ಎಲ್.)

**ಕರಡುತಿದ್ದುವಿಕೆ :** ಮುದ್ರಣಾಲಯದಲ್ಲಿ ಒಂದು ವಿಷಯವನ್ನು ಅದರ ಮೂಲಪ್ರತಿಗೆ ಸರಿಹೊಂದುವಂತೆ ಮೊಳೆ ಜೋಡಿಸಿ ಕರಡಚ್ಚನ್ನು ಸಿದ್ಧಪಡಿಸಿದ ತರುವಾಯ ಕರಡಚ್ಚಿನಲ್ಲಿ ಉಳಿದಿರಬಹುದಾದ ದೋಷಗಳ ಪರಿಶೀಲನೆ ಹಾಗೂ ಕ್ರಮಬದ್ಧ ತಿದ್ದುವಿಕೆ (ಪ್ರೂಫ್ ರೀಡಿಂಗ್). ಕರಡಚ್ಚಿನಲ್ಲಿ ದೋಷಗಳು ಉಳಿದಿರುವುದು ತೀರ ಸಹಜ. ಇವುಗಳಲ್ಲಿ ಸ್ಥೂಲವಾಗಿ ಎರಡು ವಿಭಾಗಗಳಿವೆ. ಅಚ್ಚು ಮೊಳೆಗಳಿಗೆ (ಎಂದರೆ ಮುದ್ರಣಾಲಯಕ್ಕೆ) ಸಂಬಂಧಿಸಿದವು; ವಿಷಯಕ್ಕೆ (ಎಂದರೆ ಮೂಲಪ್ರತಿಗೆ) ಸಂಬಂಧಿಸಿದವು. ಕರಡು ತಿದ್ದುವವರು ಇವೆರಡನ್ನೂ ಲಕ್ಷ್ಯದಲ್ಲಿಟ್ಟು ಕೊಂಡು ಗೊತ್ತಾದ ವಿಧಿನಿಯಮಾನುಸಾರ ತಮ್ಮ ಕಾರ್ಯವನ್ನು ನಡೆಸಬೇಕು.

ಅಚ್ಚುಮೊಳೆಗಳಿಗೆ ಸಂಬಂಧಿಸಿದ ಕೆಲವು ಮುಖ್ಯ ದೋಷಗಳು : 1. ಅಕ್ಷರಗಳು ತಲೆಕೆಳಗಾಗುವುದು. 2. ಅಕ್ಷರಗಳು ಸ್ಥಾನಪಲ್ಲಟಗೊಂಡಿರುವುದು. 3. ಅಕ್ಷರಗಳ ಮೊಳೆಗಳ ಅಳತೆಗಳಲ್ಲಿ ವ್ಯತ್ಯಾಸ. 4. ಅಕ್ಷರಗಳು ಇಲ್ಲದಿರುವಿಕೆ. 5. ತಪ್ಪು ಅಕ್ಷರಗಳು. 6. ಒಡೆದ ಮೊಳೆಗಳು ಸೇರಿಕೊಂಡಿರುವುದು. 7. ಎರಡು ಅನುಕ್ರಮ ಪದಗಳ, ಪಂಕ್ತಿಗಳ, ಪರಿಚ್ಛೇದಗಳ ನಡುವೆ ಸಾಕಷ್ಟು ಜಾಗ ಬಿಟ್ಟಿಲ್ಲದಿರುವುದು ಅಥವಾ ಅತಿ ಜಾಗ ಬಿಟ್ಟಿರುವುದು. 8. ಪಂಕ್ತಿಯ ಕೊನೆಯಲ್ಲಿ ಪದವಿಭಜನೆ ಅಸಮರ್ಪಕವಾಗಿರುವುದು. 9. ಪಂಕ್ತಿಗಳು, ಅಂಚುಗಳು, ಪರಿಚ್ಛೇದ ಪ್ರಾರಂಭದ ಅಂಚುಗಳು ನೇರವಾಗಿಲ್ಲದಿರುವುದು. 10. ಸಂಖ್ಯೆಗಳು, ಚಿಹ್ನೆಗಳು, ಕೋಷ್ಟಕಗಳು, ಚಿತ್ರಗಳು, ಅಡಿಟಿಪ್ಪಣಿಗಳು, ಸಮೀಪಕರಣಗಳು ಮುಂತಾದುವುಗಳಲ್ಲಿ ತಲೆದೋರಿರುವ ವಿಶಿಷ್ಟಬಗೆಯ ದೋಷಗಳು.

ವಿಷಯಕ್ಕೆ ಸಂಬಂಧಿಸಿದ ಕೆಲವು ಮುಖ್ಯ ದೋಷಗಳು : 1. ಅಕ್ಷರಗಳಲ್ಲಿ ಅಸ್ಪಷ್ಟತೆ, ಸಂದಿಗ್ಧತೆ ಮತ್ತು ತಪ್ಪುಗಳು. 2. ವಾಕ್ಯರಚನೆಗಳಲ್ಲಿ ಅರ್ಥ ದೋಷ, ವ್ಯಾಕರಣ ದೋಷ ಇತ್ಯಾದಿ. 3. ಶೈಲಿಯಲ್ಲಿಯೂ ಸಂಕೇತಗಳ ಮತ್ತು ಚಿಹ್ನೆಗಳ ಬಳಕೆಯಲ್ಲಿಯೂ ಸಮರೂಪತೆ ಇಲ್ಲದಿರುವಿಕೆ. ಒಂದು ಮೂಲಪ್ರತಿಯನ್ನು ಮುದ್ರಣಾಲಯಕ್ಕೆ ಕೊಡುವ ಮೊದಲು ಇವೆಲ್ಲ ಸ್ಖಾಲಿತ್ಯಗಳನ್ನು ಪರಿಹರಿಸಬೇಕು. ಆದರೆ ವಾಸ್ತವಿಕ ಪರಿಸ್ಥಿತಿಯಲ್ಲಿ ಹೀಗೆ ನಡೆಯುವುದಿಲ್ಲ. ಆದ್ದರಿಂದ ತತ್ಸಂಬಂಧ ದೋಷಗಳು ಕರಡಚ್ಚಿನಲ್ಲಿ ಕಂಡುಬರುತ್ತವೆ.

**ತಿದ್ದುವಿಕೆಯ ವಿಧಿಗಳು:** ಕರಡಚ್ಚಿನಿಂದ ಮೊದಲಸಾರಿ ತೆಗೆಯುವ ಮುದ್ರಣದ ಹೆಸರು ಗ್ಯಾಲಿ ಕರಡುಪ್ರತಿ. ಇದನ್ನು ಮೂಲಪ್ರತಿ ಸಮೇತ ಮುದ್ರಣಾಲಯದ ಕರಡುಪ್ರತಿ ತಿದ್ದುವ ವಿಭಾಗಕ್ಕೆ ಕಳಿಸಲಾಗುವುದು. ಅಲ್ಲಿ ಇಬ್ಬರು ಸಹಕರಿಸಿ ಈ ಕೆಲಸವನ್ನು ಮಾಡುತ್ತಾರೆ. ಒಬ್ಬ ಮೂಲಪ್ರತಿಯನ್ನು ಸಾವಧಾನವಾಗಿ, ಅಕ್ಷರ ಅಕ್ಷರ ಬಿಡಿಸಿ ಪ್ರತಿಯೊಂದು ಚಿಹ್ನೆ ಸಂಕೇತವನ್ನೂ ವಿವರವಾಗಿ ಓದಿ ಹೇಳುತ್ತಾನೆ. ಇನ್ನೊಬ್ಬ ಇದರ ಸಂವಾದಿಯಾಗಿ ಕರಡಚ್ಚಿನಲ್ಲಿ ಎಲ್ಲವೂ ಸರಿಯಾಗಿ ಬಂದಿವೆಯೇ ಎಂದು ಸೂಕ್ಷ್ಮವಾಗಿ ಕಣ್ಣಾಡಿಸುತ್ತಾ ಮುಂದುವರಿಸುತ್ತಾನೆ. ದೋಷ ಬಂದಿರುವಲ್ಲೆಲ್ಲ ಅದನ್ನು ತಿದ್ದುವ ಹೊಣೆಯೂ ಇವನದೇ. ಕರಡಿನ ಎಡ ಮತ್ತು ಬಲ ಅಂಚುಗಳಲ್ಲಿರುವ ಖಾಲಿ ಸ್ಥಳಗಳಲ್ಲಿ ಆಯಾ ಪಂಕ್ತಿಯ ಪಕ್ಕದಲ್ಲಿ ತಪ್ಪುಗಳು ಬಂದಿರುವ ಕ್ರಮದಲ್ಲಿ ನಿರ್ದಿಷ್ಟ ಶಿಷ್ಟೀಕೃತಸಂಕೇತಗಳ ನೆರವಿನಿಂದ ತಪ್ಪುಗಳು ಬಂದಿರುವ ಕ್ರಮದಲ್ಲಿ ನಿರ್ದಿಷ್ಟ ಶಿಷ್ಟೀಕೃತಸಂಕೇತಗಳ ನೆರವಿನಿಂದ ತಪ್ಪುಗಳನ್ನು ಗುರುತಿಸಬೇಕು ಹಾಗೂ ಸರಿಯಾದ ಅಕ್ಷರಗಳನ್ನೂ ಸಂಕೇತಗಳನ್ನೂ ಸೂಚಿಸಬೇಕು. ಈ ಕೆಲಸದಲ್ಲಿ ಬಳಸುವ ಸಂಕೇತಗಳನ್ನೂ ಅವುಗಳ ವಿವರಗಳನ್ನೂ ಪಕ್ಕದ ಮತ್ತು ಅದರ ಹಿಂದಿನ ಕಲಮುಗಳಲ್ಲಿ ಕೊಟ್ಟಿದೆ.

# ಕರಡುತಿದ್ದುವಿಕೆ

| | |
|---|---|
| ¶ | ಹೊರತೆಗೆ |
| ◡¶/ | ಹೊರತೆಗೆ ಮತ್ತು ಬಿಟ್ಟ ಜಾಗವನ್ನು ಹೊಂದಿಸು |
| ;⋏ | ಅರ್ಧವಿರಾಮ ಸೇರಿಸು |
| ;/ | ಇರುವ ಚಿಹ್ನೆಯನ್ನು ತೆಗೆದು ಅರ್ಧವಿರಾಮ ಸೇರಿಸು |
| ⊙ | ಪೂರ್ಣವಿರಾಮ ಸೇರಿಸು |
| ⦶ | ವಿವರಣ ವಿರಾಮ ಸೇರಿಸು |
| ?⋏ | ಪ್ರಶ್ನಾರ್ಥಕ ಚಿಹ್ನೆಯನ್ನು ಸೇರಿಸು |
| (/) | ಆವರಣ ಚಿಹ್ನೆಯನ್ನು ಸೇರಿಸು |
| [/] | ಕಂಸ ಚಿಹ್ನೆಯನ್ನು ಸೇರಿಸು |
| -/ | ಕೂಡುಗೆರೆ ಸೇರಿಸು |
| en/ | ಎನ್ ಅಳತೆಯ ಗೆರೆಪಟ್ಟಿ ಸೇರಿಸು |
| em/ | ಎಮ್ ಅಳತೆಯ ಗೆರೆಪಟ್ಟಿ ಸೇರಿಸು |
| 2 em/ | ಎರಡು ಎಮ್ ಅಳತೆಯ ಗೆರೆಪಟ್ಟಿ ಸೇರಿಸು |
| □⋏ | ಒಂದು ಎಮ್ ಸ್ಥಳ ಬಿಡು |
| □□⋏ | ಎರಡು ಎಮ್ ಸ್ಥಳ ಬಿಡು |
| ⌐ | ಎಡಕ್ಕೆ ಸರಿಸು |
| ¬ | ಬಲಕ್ಕೆ ಸರಿಸು |
| ⊏ | ಪಂಕ್ತಿಯನ್ನು ಎಡಕ್ಕೆ ಸರಿಸು |
| ⊐ | ಪಂಕ್ತಿಯನ್ನು ಬಲಕ್ಕೆ ಸರಿಸು |
| [ ] | ಗುರುತಿಸಿರುವ ಭಾಗದಲ್ಲಿ ಪಂಕ್ತಿಯನ್ನು ಅಳವಡಿಸು |
| take over | ಮುಂದಿನ ಪಂಕ್ತಿಗೆ ವರ್ಗಾಯಿಸು |
| take back | ಹಿಂದಿನ ಪಂಕ್ತಿಗೆ ವರ್ಗಾಯಿಸು |
| ⊤↑ | ಸೂಚಿಸಿರುವ ಭಾಗಕ್ಕೆ ಎತ್ತು |
| ↓⊥ | ಸೂಚಿಸಿರುವ ಭಾಗಕ್ಕೆ ಇಳಿಸು |
| ∥ | ಹಿಂದುಮುಂದಿರುವ ಪಂಕ್ತಿಗಳನ್ನು ಸರಿಪಡಿಸು |
| ⫽ | ಡೊಂಕಾಗಿರುವ ಪಂಕ್ತಿಗಳನ್ನು ಸರಿಪಡಿಸು |
| ⊥ | ಎದ್ದಿರುವ ತೆರಪನ್ನು ಕೆಳಕ್ಕೆ ತಳ್ಳು |
| n.p. | ಹೊಸಪರಿಚ್ಛೇದವನ್ನು ಪ್ರಾರಂಭಿಸು |
| run on | ಮುಂದುವರಿಸು |
| spell out | ಸಂಕೇತಾಕ್ಷರಗಳ ವಿವರಣೆ ಕೊಡು |
| out, see copy | ಬಿಟ್ಟುಹೋಗಿರುವ ಭಾಗವನ್ನು ಸೇರಿಸು |

| | |
|---|---|
| let. # | ಅಕ್ಷರಗಳ ಮಧ್ಯೆ ತೆರಪು ಕೊಡು |
| Stet | ಹಾಗೆಯೆ ಇರಲಿ |
| Caps | ದೊಡ್ಡ ಅಕ್ಷರಗಳಿಗೆ ಬದಲಾಯಿಸು |
| S.C | ಪುಟ್ಟ ದೊಡ್ಡ ಅಕ್ಷರಗಳಿಗೆ ಬದಲಾಯಿಸು |
| Caps & s.c. | ಮೊದಲ ಅಕ್ಷರವನ್ನು ದೊಡ್ಡ ಅಕ್ಷರಕ್ಕೂ ಉಳಿದ ಅಕ್ಷರಗಳನ್ನು ಪುಟ್ಟ ದೊಡ್ಡ ಅಕ್ಷರಗಳಿಗೂ ಬದಲಾಯಿಸು |
| l.c. | ಕೆಳಕಟ್ಟೆಯ ಅಕ್ಷರಗಳಿಗೆ ಬದಲಾಯಿಸು |
| Italic | ಓರೆ ಅಕ್ಷರಗಳಿಗೆ ಬದಲಾಯಿಸು |
| bold | ದಪ್ಪ ಕಪ್ಪುಗೆರೆಯ ಅಕ್ಷರಗಳಿಗೆ ಬದಲಾಯಿಸು |
| rom. | ರೋಮನ್ ಅಕ್ಷರಗಳಿಗೆ ಬದಲಾಯಿಸು |
| w.f | ಬೇರೆ ಜಾತಿಯ ಅಕ್ಷರ ತೆಗೆದು ಸ್ವಜಾತಿಯ ಅಕ್ಷರ ಸೇರಿಸು |
| 9 | ತಲೆಕೆಳಗಾಗಿರುವ ಅಕ್ಷರವನ್ನು ಸರಿಪಡಿಸು |
| X | ಒಡೆದುಹೋಗಿರುವ ಅಕ್ಷರ ಬದಲಾಯಿಸು |
| ⁀‿ | ಬಿಟ್ಟಿರುವ ಸ್ಥಳವನ್ನು ಸೇರಿಸು |
| trs | ಸ್ಥಳಾಂತರಿಸು |
| centre | ಪಂಕ್ತಿಯ ಮಧ್ಯಕ್ಕೆ ಅಳವಡಿಸು |
| ’ | ಷಷ್ಠೀ ವಿಭಕ್ತಿಯ ಚಿಹ್ನೆಯನ್ನು ಸೇರಿಸು |
| ‘ ’ | ಒಂದು ಉದ್ಧರಣ ಚಿಹ್ನೆಯನ್ನು ಸೇರಿಸು |
| “ ” | ಎರಡು ಉದ್ಧರಣ ಚಿಹ್ನೆಯನ್ನು ಸೇರಿಸು |
| ⋎ | ಮೇಲಿನ ಅಂಕಿ (Superior Figure) ಸೂಚಿಸುವ ಚಿಹ್ನೆ |
| ⋏ | ಕೆಳಗಿನ ಅಂಕಿ (Interior Figure) ಸೂಚಿಸುವ ಚಿಹ್ನೆ |
| ....⋏ | ದೃಷ್ಟಿ ಸಹಾಯಕವಾದ ಬಿಂದುಗಳ ಸಾಲನ್ನು ಸೇರಿಸು |
| (...) | ಬಿಂದುಗಳ ಅಚ್ಚಿನ ಮೊಳೆ ಸೇರಿಸು |
| ⦶ | ಮೇಲು ಕೀಳಗೀಟನ್ನು ಸೇರಿಸು |
| (?) | ಅನುಮಾನವಿದ್ದೆಡೆ ಸಂಬಂಧಿಸಿದವರ ಗಮನಕ್ಕೆ ತರುವುದು |
| # | ಹೊರತೆಗೆ ಮತ್ತು ಸ್ಥಳಬಿಡು |
| # | ತೆರಪುಕೊಡು |
| # > | ಪಂಕ್ತಿಗಳ ಮಧ್ಯೆ ಅಥವಾ ಪರಿಚ್ಛೇದಗಳ ಮಧ್ಯೆ ತೆರಪುಕೊಡು |
| eq # | ಸಮನಾದ ತೆರಪುಕೊಡು |
| less # | ತೆರಪನ್ನು ಕಡಿಮೆಮಾಡು |

ಒಂದನೆಯ ಕರಡಿನ ಮೇಲೆ ಸೂಚಿಸಿದ ತಿದ್ದುಪಡಿಗಳನ್ನು ಮುದ್ರಣಾಲಯ ನೆರವೇರಿಸಿ ಎರಡನೆಯ ಕರಡನ್ನು ತಯಾರಿಸಿ ಕೊಡುತ್ತದೆ. ಈಗ ಪ್ರಥಮ ಗಮನ ಮೊದಲಿನ ತಿದ್ದುಪಡಿಗಳೆಲ್ಲವೂ ಸರಿಯಾಗಿ ನಿರ್ವಹಿಸಲ್ಪಟ್ಟಿವೆಯೋ ಎಂಬುದರ ಕಡೆಗೆ; ಇಂಥ ವೇಳೆ ಅಚಾತುರ್ಯದಿಂದ ಸಂಭವಿಸಬಹುದಾದ ಹೊಸ ದೋಷಗಳ ಕಡೆಗೂ ವಿಶೇಷ ಲಕ್ಷ್ಯ ಕೊಡಬೇಕು. ಮೊದಲಿನ ಸಲದ ಓದಿಕೆಯಲ್ಲಿ ಕಣ್ಣುತಪ್ಪಿಸಿ ಉಳಿದಿರಬಹುದಾದ ದೋಷಗಳನ್ನು ಈ ಓದಿಕೆಯಲ್ಲಿ ಸರಿಪಡಿಸಬೇಕು.

ಸಾಮಾನ್ಯವಾಗಿ ಮೂರನೆಯ ಸಲ ಮುದ್ರಣಾಲಯದಿಂದ ಬರುವ ಕರಡುಪ್ರತಿ ಸಿದ್ಧಪಡಿಸಿದ ಪುಟರೂಪದಲ್ಲಿರುವುದು. ಶೀರ್ಷಿಕೆ, ಪುಟಸಂಖ್ಯೆ ಅಡಿಟಿಪ್ಪಣಿಗಳ ಜೋಡಣೆ ಚಿತ್ರಗಳು ಎಲ್ಲವನ್ನೂ ಇಬ್ಬರು ಬೇಕಾದರೆ ಪುಟಕರಡನ್ನು ಓದಲು ನುರಿತ ಒಬ್ಬನೇ ಸಾಕು. ಸಾಮಾನ್ಯವಾಗಿ ಲೇಖಕನೇ ಇದನ್ನು ಓದಿ ತಿದ್ದುವುದು ವಾಡಿಕೆ.

ಮುಂದಿನ ಹಂತ ಯಂತ್ರ ಕರಡು. ಪುಟಕರಡಗಳು ಒಂದು ಫಾರ್ಮಿನಷ್ಟು ಸಿದ್ಧವಾಗುವ ಕರಡಚ್ಚುಗಳನ್ನು ಫಾರಂ ರೂಪದಲ್ಲಿ ಜೋಡಿಸಿ ಮುದ್ರಣ ಚೌಕಟ್ಟನ್ನು ಸಿದ್ಧಪಡಿಸುತ್ತಾರೆ. ಇದನ್ನು ಮುದ್ರಣ ಯಂತ್ರಕ್ಕೆ ಜೋಡಿಸಿ ಯಂತ್ರ ಕರಡನ್ನು ತೆಗೆದು ಪರಿಶೀಲಿಸಲಾಗುವುದು. ಇದರಲ್ಲಿ ಉಳಿದಿರಬಹುದಾದ ಅಲ್ಪಸ್ವಲ್ಪ ತಪ್ಪುಗಳು, ಒಡೆದ ಮೊಳೆಗಳು, ಹಾರಿಹೋದ ಒತ್ತುಗಳು ಮುಂತಾದವನ್ನು ಸರಿಪಡಿಸಿದ ತರುವಾಯ ಮುದ್ರಣಕಾರ್ಯ ಮುಂದುವರಿಯುತ್ತದೆ. ಸಾವಿರಗಟ್ಟಲೆ ಪ್ರತಿಗಳನ್ನು ಮುದ್ರಿಸುವಾಗ ಒಂದು ನಿರ್ದಿಷ್ಟ ಘಟ್ಟದಲ್ಲಿ (ಉದಾಹರಣೆಗೆ 1,000 ಪ್ರತಿಗಳನ್ನು ಮುದ್ರಿಸಿ ಆದಮೇಲೆ) ಮುದ್ರಿತ ಪ್ರತಿಯನ್ನು ಚುರುಕಾಗಿಯಾದರೂ ಓದುವುದು ಒಳ್ಳೆಯದು.

(ಎಂ.ಎ.ಎಸ್.ಎಚ್.ಎನ್.)

**ಕರಡುಸಾಲ ಅಥವಾ ಕರಡುಋಣ :** ಒಂದು ಸಂಸ್ಥೆಗೋ ಒಬ್ಬ ವ್ಯಕ್ತಿಗೋ ತನ್ನ ದೇಣಿದಾರನಿಂದ (ಡೆಟರ್) ಬರಬೇಕಾಗಿದ್ದು, ಅವನಿಂದ ವಸೂಲಾಗುವ ಸಂಭವವಿಲ್ಲವೆಂದು ಕೈಬಿಟ್ಟ ಸಾಲ ಅಥವಾ ಋಣ (ಬ್ಯಾಡ್ ಡೆಟ್). ಇದನ್ನು ಸಾಮಾನ್ಯವಾಗಿ ನಷ್ಟವೆಂದು ಪರಿಗಣಿಸಿ, ಬರಬೇಕಾದ ಸಾಲಗಳ ಮೊತ್ತದಿಂದ ಕಳೆಯಲಾಗುತ್ತದೆ.

ಕೆಲವು ಪರಿಸ್ಥಿತಿಗಳಲ್ಲಿ ಕೆಲವಾರು ಕಾರಣಗಳಿಂದಾಗಿ ಗ್ರಾಹಕರು ತಮ್ಮ ಸಾಲವನ್ನು ನಿಯಮಿತ ಅವಧಿಯೊಳಗೆ ತೀರಿಸದೆ ಹೋಗಬಹುದು. ಆದರೆ ಅವರು ಮುಂದಾದರೂ ಆ ಸಾಲವನ್ನು ಪಾವತಿ ಮಾಡಿಯಾರು ಎಂಬ ಆಸೆ ವ್ಯಾಪಾರಿಗೆ ಇದ್ದರೆ ಅಂಥ ಸಾಲವನ್ನು ಕರಡುಸಾಲವೆಂದು ಪರಿಗಣಿಸುವುದಿಲ್ಲ. ಅಂಥ ಸಾಲವನ್ನು ಸಂದೇಹಾಸ್ಪದವೆಂದು ಪರಿಗಣಿಸಲಾಗುತ್ತದೆ. ಆದರೆ ಯಾವ ಸಾಲ ನಿರ್ದಿಷ್ಟವಾಗಿ ಮತ್ತು ಖಚಿತವಾಗಿ ಹಿಂದಕ್ಕೆ ಬರುವ ಸಂಭವವಿಲ್ಲವೋ ಅಂಥದು ಮಾತ್ರ ಕರಡು ಸಾಲ.

ಯಾವುದೇ ಒಂದು ಸಾಲ ಕರಡು ಸಾಲವೆಂದು ತೀರ್ಮಾನವಾದರೆ ಅದು ವ್ಯಾಪಾರಿಗೆ ಪೂರ್ತಿ ನಷ್ಟ. ಅಂಥ ನಷ್ಟವನ್ನು ವ್ಯಾಪಾರಿ ತನ್ನ ವಾರ್ಷಿಕ ಲಾಭ ನಷ್ಟ ಲೆಕ್ಕದಲ್ಲಿ ನಷ್ಟವೆಂದು ತೋರಿಸಬೇಕಾಗುತ್ತದೆ. ಸಾಮಾನ್ಯವಾಗಿ ಕರಡುಸಾಲ ವ್ಯಾಪಾರಿಯ ಸರಕು ಮಾರಾಟದ ವ್ಯವಹಾರಗಳಿಂದ ಉದ್ಭವಿಸುವುದರಿಂದ ಅಂಥ ನಷ್ಟವನ್ನು ಅದೇ ಬಗೆಯ ವ್ಯವಹಾರಗಳಿಗೆ ಸಂಬಂಧಿಸಿದ ನಷ್ಟವೆಂದು ಪರಿಗಣಿಸಬೇಕು.

ಈ ನಷ್ಟ ಖಾತರಿಯಾದ ವರ್ಷದ ಲೆಕ್ಕಗಳಲ್ಲಿ ಈ ಬಗ್ಗೆ ದಾಖಲೆ ಮಾಡಿ, ಸಂಬಂಧಪಟ್ಟ ದೇಣಿದಾರರ ಲೆಕ್ಕಗಳಲ್ಲಿ ಇದನ್ನು ಕಳೆದ ಮೇಲೆ–ಎಂದರೆ ಅವರ ಲೆಕ್ಕಗಳನ್ನು ಮುಕ್ತಾಯ ಮಾಡಿದ ಮೇಲೆ–ಮುಂದೆ ಎಂದೋ ಅನಿರೀಕ್ಷಿತವಾಗಿ ಈ ಹಣ ಬರಬಹುದು. ಅಗ ಅದನ್ನು ಬಂಡವಾಳ ಲಾಭವೆಂದು ಪರಿಗಣಿಸಬೇಕಾಗುತ್ತದೆ.

ಕೆಲವು ದೊಡ್ಡ ವ್ಯಾಪಾರಿ ಸಂಸ್ಥೆಗಳಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಾಗಿರುವುದರಿಂದ ಕರಡುಸಾಲ ಬಹಳ ಹೆಚ್ಚಿನ ಪರಿಮಾಣದಲ್ಲಿರುತ್ತದೆ. ಭವಿಷ್ಯದಲ್ಲಿ ಉದ್ಭವಿಸಬಹುದಾದ ಕರಡು ಸಾಲದ ಪ್ರಮಾಣವೂ ಅಗಾಧವಾಗಿರುತ್ತದೆ. ದೇಶದ ಆರ್ಥಿಕ ಸ್ಥಿತಿಯಲ್ಲಿ ಉಂಟಾಗುವ ಏರುಪೇರು, ಸರ್ಕಾರದ ಆರ್ಥಿಕ ಧೋರಣೆ ಮತ್ತು ವಾಣಿಜ್ಯಕ್ಷೇತ್ರದಲ್ಲಿ ಉಂಟಾಗುವ ಮಹತ್ತರ ಬದಲಾವಣೆಗಳಿಂದಾಗಿ ಅನೇಕ ಗ್ರಾಹಕರು ತಮ್ಮ ವ್ಯಾಪಾರದ ಮತ್ತು ನಗದು ಜವಾಬ್ದಾರಿಗಳನ್ನು ಪೂರೈಸಲು ಅಸಮರ್ಥರಾಗಬಹುದು. ಈ ಕಾರಣಗಳಿಂದಾಗಿ ಕೆಲವು ವ್ಯವಹಾರ ಸಂಸ್ಥೆಗಳಲ್ಲಿ ವಿಶೇಷ ರೀತಿಯ ಮತ್ತು ಅತಿಹೆಚ್ಚಿನ ಪ್ರಮಾಣದ ಕರಡುಸಾಲ ಸಂಭವಿಸಬಹುದು. ಹಲವು ವರ್ಷಗಳ ವ್ಯವಹಾರದ ಫಲವಾದ ನಷ್ಟವನ್ನು ಅದು ಸಂಭವಿಸಿದ ವರ್ಷದ ಲಾಭ–ನಷ್ಟ ಲೆಕ್ಕದಲ್ಲಿ ತೋರಿಸುವುದು ಅವೈಜ್ಞಾನಿಕವಾಗುತ್ತದೆ. ಇದರಿಂದ ಆ ವರ್ಷದ ಲಾಭಪರಿಸ್ಥಿತಿಯ ಮೇಲೆ ವಿಪರೀತ ಪರಿಣಾಮ ಉಂಟಾಗಬಹುದು. ಆದ್ದರಿಂದ ಇದಕ್ಕೆ ಪ್ರತ್ಯೇಕವಾಗಿ ಕರಡುಸಾಲದ ಮೀಸಲನ್ನು (ಬ್ಯಾಡ್ ಡೆಟ್ಸ್ ರಿಸರ್ವ್) ನಿರ್ಮಿಸಬೇಕಾದ ಆವಶ್ಯಕತೆಯುಂಟಾಗುತ್ತದೆ. ಪ್ರತಿವರ್ಷವೂ ಸಂಸ್ಥೆಯ ದೇಣಿದಾರರಿಂದ ಬರಬೇಕಾದ ಮೊಬಲಗಿನ ಒಂದು ನಿರ್ದಿಷ್ಟ ಶೇಕಡ ಪ್ರಮಾಣವನ್ನು ಮೀಸಲಾಗಿ ತೆಗೆದಿಟ್ಟು ಇದನ್ನು ಲಾಭನಷ್ಟ ಲೆಕ್ಕದಲ್ಲಿ ಋಣಿಸಬೇಕು (ಡೆಬಿಟ್). ಕರಡುಸಾಲದಿಂದ ಸಂಭವಿಸುವ ನಷ್ಟವನ್ನು ಈ ಮೀಸಲಿನಿಂದ ತುಂಬಿಸಿಕೊಳ್ಳಲಾಗುತ್ತದೆ. ಮೀಸಲು ಹಣವನ್ನು ಯಾವಾಗಲೂ ಒಟ್ಟು ದೇಣಿದಾರರಿಂದ ಬರಬೇಕಾದ ಸಾಲದ ಮೊಬಲಗಿನ ನಿರ್ದಿಷ್ಟ ಶೇಕಡ ಪ್ರಮಾಣವಾಗಿ ಮುಂದುವರಿಸಿಕೊಂಡು ಹೋಗಲಾಗುತ್ತದೆ. ಈ ಕ್ರಮದಿಂದ ಯಾವುದೇ ಒಂದು ವರ್ಷದ ಲಾಭ–ನಷ್ಟ ಸ್ಥಿತಿಯ ಮೇಲೆ ಅನುಚಿತ ಭಾರ ಹೇರಿದಂತಾಗುವುದಿಲ್ಲ.

ಕರಡುಸಾಲದ ಸಂಭವವನ್ನು ಕಡಿಮೆ ಮಾಡುವ ಸಲುವಾಗಿ, ಪದಾರ್ಥ ಮಾರುವಾಗಲೇ ಯಾವ ಬಗೆಯ ಗ್ರಾಹಕರಿಗೆ ಉದ್ದರಿ ಮಾರಾಟ ಮಾಡಬಹುದೆಂಬ ಬಗ್ಗೆ ಸಂಸ್ಥೆಯ ಮಾರಾಟವಿಭಾಗ ಮುನ್ನೆಚ್ಚರಿಕೆಯಿಂದ ನಿರ್ಧರಿಸಿಕೊಳ್ಳಬೇಕು. ಈ ದೆಸೆಯಲ್ಲಿ ವಿಶೇಷವಾದ ಸಂಶೋಧನೆ ನಡೆಯುತ್ತಿದೆ. ಗ್ರಾಹಕರ ಹಣಕಾಸಿನ ಪರಿಸ್ಥಿತಿಯನ್ನು ಪರಿಶೋಧಿಸಿ ಮಾಹಿತಿ ಒದಗಿಸುವ ಸಲುವಾಗಿಯೇ ಅನೇಕ ಸಂಸ್ಥೆಗಳು ವಿಶಿಷ್ಟವಾಗಿ ಕೆಲಸ ಮಾಡುತ್ತಿವೆ. ಇವುಗಳ ಸಲಹೆಯಂತೆ ಉದ್ದರಿ ವ್ಯವಹಾರ ನಡೆಸುವುದರಿಂದ ನಷ್ಟ ಸಂಭವ ಕಡಿಮೆ.

ಅಮೆರಿಕ ಸಂಯುಕ್ತ ಸಂಸ್ಥಾನ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಗ್ರಾಹಕರ ಬಗ್ಗೆ ಅಂಕಿ–ಅಂಶ ಒದಗಿಸುವ ಸಂಸ್ಥೆಗಳು ಹಲವಾರಿವೆ. ಆದರೆ ಭಾರತದಲ್ಲಿ ಈ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ನಡೆದಿಲ್ಲ. ಇಲ್ಲೂ ಈ ಬಗೆಯ ಸಂಸ್ಥೆಗಳ ಆವಶ್ಯಕತೆಯ ಮನವರಿಕೆಯಾಗಿದೆ.

(ಸಿ.ಎಂ.ಎಂ.)

**ಕರಣತ್ರಯ :** ಕರಣ ಎಂದರೆ ಸಾಧನ. ಶಾಸ್ತ್ರಗಳಲ್ಲಿ ಮನಸ್ಸು, ವಾಕ್ ಮತ್ತು ಕಾಯ (ಶರೀರ)ಗಳನ್ನು ತ್ರಿಕರಣಗಳೆಂದು ಹೇಳಿದೆ. ಜೀವ ಈ ಮೂರು ಕರಣಗಳಿಂದ ಸುಖದುಃಖಾತ್ಮಕವಾದ ವಿಷಯಗಳನ್ನು ಅನುಭವಿಸುತ್ತಾನೆ. ಕರಣಗಳು ಅಂತಃಕರಣ ಮತ್ತು ಬಾಹ್ಯಕರಣ ಎಂದು ಎರಡು ಬಗೆಯಾಗಿವೆ. ಶರೀರದ ಒಳಗಿರುವುದು ಅಂತಃಕರಣ. ಮನಸ್ಸು, ಚಿತ್ತ, ಬುದ್ಧಿ ಮತ್ತು ಅಹಂಕಾರಗಳನ್ನು ಅಂತಃಕರಣ ಚತುಷ್ಟಯ ಎಂದು ಕರೆಯಲಾಗಿದೆ. ಈ ನಾಲ್ಕೂ ಮನಸ್ಸಿನ ಪ್ರಭೇದಗಳು. ಅವುಗಳಲ್ಲಿ ಸಂಕಲ್ಪಾತ್ಮಕ ಅಥವಾ ವಿಕಲ್ಪಾತ್ಮಕವಾದದ್ದು ಮನಸ್ಸು. ಅದೇ ಚಿಂತನರೂಪವಾಗಿದ್ದರೆ ಚಿತ್ತವೆಂದೂ ಯುಕ್ತಾಯುಕ್ತ ವಿವೇಕರೂಪವಾಗಿದ್ದರೆ ಬುದ್ಧಿಯೆಂದೂ ನಾನು (ಅಹಂಕಾರ), ನನ್ನದು (ಮಮಕಾರ), ರೂಪ ಅಥವಾ ಅಭಿಮಾನವುಳ್ಳದ್ದು ಅಹಂಕಾರವೆಂದೂ ಕರೆಯಲ್ಪಡುತ್ತದೆ. ಬಾಹ್ಯಕರಣಗಳು ವಾಕ್ ಮತ್ತು ಕಾಯಗಳಿಗೆ ಸಂಬಂಧಿಸಿದ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು (**ನೋಡಿ– ಕಂಚುಕಗಳು**). (ಎಂ.ಜಿ.ಎನ್.)

**ಕರಣಹಸಿಗೆ :** ತತ್ತ್ವಗಳನ್ನು (ಕರಣ) ವಿಭಾಗಿಸಿ ತೋರುವುದು (ಹಸಿಗೆ) ಎಂಬ ಅರ್ಥದಲ್ಲಿ ಈ ಪದ ವೀರಶೈವ ಧರ್ಮ ಶಾಸ್ತ್ರದಲ್ಲಿ ಪ್ರಯೋಗವಾಗಿದೆ. ಈ ಹೆಸರಿನ ಗ್ರಂಥಗಳಲ್ಲಿ ಚನ್ನಬಸವಣ್ಣನದು (ಸು. 1150) ಮುಖ್ಯವಾದುದು. ಇದರಲ್ಲಿ ಮೂರು ವಿಭಾಗಗಳಿವೆ. ಮೊದಲನೆಯದು ದೇಹಜ್ಞಾನಕ್ಕೆ ಸಂಬಂಧಿಸಿದ್ದು. ಮಾನವದೇಹರಚನೆ, ಅದರಲ್ಲಡಗಿರುವ ಶಕ್ತಿಗಳು, ಅವುಗಳ ವ್ಯವಹರಣೆ – ಇತ್ಯಾದಿ ವಿಷಯಗಳಿವೆ. ಎರಡನೆಯ ಭಾಗದಲ್ಲಿ ದೈವದತ್ತವಾದ ಆ ಶಕ್ತಿಗಳನ್ನು ಸದುಪಯೋಗ ಮಾಡಿಕೊಳ್ಳುವ ಬಗೆ, ದುರುಪಯೋಗದಿಂದ ಆಗುವ ಅನರ್ಥಗಳು ಇತ್ಯಾದಿ ವಿಷಯಗಳಿವೆ. ಮೂರನೆಯ ವಿಭಾಗದಲ್ಲಿ ಲಿಂಗಾಂಗ ಸಾಮರಸ್ಯವನ್ನು ಪಡೆಯುವ ಕ್ರಮ ವರ್ಣಿತವಾಗಿದೆ. ಷಟ್‌ಸ್ಥಲ ಸಿದ್ಧಾಂತಕ್ಕೆ ಕರಣಹಸಿಗೆ ಪೂರಕವಾಗಿದೆಯೆನ್ನಬಹುದು.

ಕರಣಹಸಿಗೆ 16ನೆಯ ಶತಮಾನದಲ್ಲಿ ಶಾಂತಲಿಂಗ ದೇಶಿಕನಿಂದ ಮರಾಠಿಗೆ ಅನುವಾದವಾಗಿದೆ (**ನೋಡಿ– ಚನ್ನಬಸವಣ್ಣ : ಷಟ್‌ಸ್ಥಲ ಸಿದ್ಧಾಂತ**). (ಬಿ.ಎಸ್.)

**ಕರತೆಪೆ :** ಅನಟೋಲಿಯದ ಅಡನಾ ಪ್ರಾಂತ್ಯಕ್ಕೆ ಸೇರಿದ ಕರತೆಪೆಯಲ್ಲಿ ಹಿಟ್ಟೈಟರ ಸಂಸ್ಕೃತಿಗೆ ಸೇರಿದ ಬಹಳ ಮುಖ್ಯವಾದ ಕೆಲವು ಅವಶೇಷಗಳು ಬೆಳಕಿಗೆ ಬಂದಿವೆ. ಈ ಅವಶೇಷಗಳನ್ನು ತಾತ್ಕಾಲಿಕವಾಗಿ ಪ್ರ.ಶ.ಪೂ. 8ನೆಯ ಶತಮಾನಕ್ಕೆ ನಿರ್ದೇಶಿಸಬಹುದಾಗಿದೆ. 1945ರ ವಸಂತದಲ್ಲಿ ಇಸ್ತಾನ್ ಬುಲ್ ವಿಶ್ವವಿದ್ಯಾಲಯದ ಬಾಸ್ಸರ್ಟ್ ಮತ್ತು ಕ್ಯಾಂಬೆಲ್‌ರವರು ಕಡಿರ್ಲಿಯ ಉಪಾಧ್ಯಾಯನೊಬ್ಬನ ನಿರ್ದೇಶನದ ಮೇರೆಗೆ ಈ ನೆಲೆಯಲ್ಲಿನ ಅವಶೇಷಗಳನ್ನು ದರ್ಶಿಸಿ 1947ರ ಅನಂತರ ದೀರ್ಘಕಾಲದವರೆಗೂ ಇಲ್ಲಿನ ಅವಶೇಷಗಳನ್ನು ಸಂಶೋಧಿಸಿದರು.

ಪ್ರ.ಶ್ರ.ಪೂ. 8ನೆಯ ಶತಮಾನದಲ್ಲಿ ಇಲ್ಲಿನ ಬೆಟ್ಟದ ಸುತ್ತ 5 ಪಾರ್ಶ್ವಗಳಿದ್ದ ಮತ್ತು 28 ಆಯಾಕಾರದ ಕೊತ್ತಳಗಳನ್ನು ಹೊಂದಿದ್ದ ಕೋಟೆಯನ್ನು ನಿರ್ಮಿಸಲಾಗಿತ್ತು. ಈ ಕೋಟೆಗೆ ಒಂದು ಮೇಲಿನ ಮತ್ತೊಂದು ಕೆಳಗಣ ಪ್ರದೇಶ ದ್ವಾರಗಳಿದ್ದವು. ಈ ಪ್ರವೇಶದ್ವಾರಗಳ ಎರಡೂ ಪಾರ್ಶ್ವಗಳಲ್ಲೂ ಮೂರ್ತಿಶಿಲ್ಪಗಳಿದ್ದ ಮತ್ತು ಶಾಸನಗಳಿದ್ದ ಕಲ್ಲು ಚಪ್ಪಡಿಗಳನ್ನು ಉಪಯೋಗಿಸಲಾಗಿತ್ತು. ಈ ಕೆತ್ತನೆಗಳು ಸಾಂಕೇತಿಕತೆಯಿಂದ ಕೂಡಿದ್ದ ವಿಕಟ ಚಿತ್ರಗಳಾಗಿದ್ದು ಕಲಾದೃಷ್ಟಿಯಿಂದಲೂ ಕೆಳಮಟ್ಟದವುಗಳಾಗಿದ್ದರೂ ಜನಜೀವನದ ನೈಜ ಚಿತ್ರವನ್ನೊದಗಿಸುವುದರಿಂದ ಮತ್ತು ಮತೀಯ ಧಾರ್ಮಿಕ

ದೃಶ್ಯಗಳನ್ನೊಳಗೊಂಡಿರುವುದರಿಂದ ಐತಿಹಾಸಿಕವಾಗಿ ಬಹಳ ಮಹತ್ತ್ವವನ್ನು ಪಡೆದಿವೆ. ಮುಳುಗುತ್ತಿರುವ ನಾವಿಕರನ್ನು ತೋರಿಸುವ ನೌಕಾಯುದ್ಧ ದೃಶ್ಯ, ವಿವಿಧ ರೀತಿಯ ಕ್ರೀಡೆಗಳು, ಸಂಗೀತಗಾರರ ಒಂದು ಸಮೂಹ ಮತ್ತು ಸಾಮಾನ್ಯ ಜೀವನದ ಅನೇಕ ಇತರ ದೃಶ್ಯಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಈಜಿಪ್ಟಿನ ಮತ್ತು ಮೆಸಪೊಟೇಮಿಯದ ಕಲೆಗಳೊಂದಿಗೆ ಅನೇಕ ಸಾಮ್ಯಗಳನ್ನು ಕಾಣಬಹುದಾಗಿದ್ದು, ಕಲ್ಲಿನ ಕೆಲಸದ ತಂತ್ರಗಳನ್ನು ಇಲ್ಲಿ ಅಭ್ಯಸಿಸಬಹುದಾಗಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಈ ಕಲ್ಲು ಚಪ್ಪಡಿಗಳ ಮೇಲೆ ಕಡೆದಿರುವ ಶಾಸನಗಳು ಚಾರಿತ್ರಿಕ ಮಹತ್ತ್ವವನ್ನು ಪಡೆದಿವೆ. ದ್ವಾರದ ಒಂದು ಪಾರ್ಶ್ವದಲ್ಲಿ ಹಿಟ್ಟೈಟ್‍ರ ಹಿರೋಗ್ಲಿಫಿಕ್ ಲಿಪಿಯಲ್ಲೂ ಮತ್ತೊಂದು ಪಾರ್ಶ್ವದಲ್ಲಿ ಫಿನಿಷಿಯನ್ ಭಾಷೆಯಲ್ಲೂ ಈ ಶಾಸನಗಳನ್ನು ಕಡೆಯಲಾಗಿದೆ. ಮೂಲತಃ ಹಿಟ್ಟೈಟ್ ಭಾಷೆಯಲ್ಲಿದ್ದ ಈ ಶಾಸನಗಳನ್ನು ನಿರಂತರವಾಗಿ ಅಲ್ಲಿಗೆ ಬರುತ್ತಿದ್ದ ಪ್ರವಾಸಿಗಳ ಅನುಕೂಲಕ್ಕಾಗಿ ದೊರೆಯೇ ಫಿನಿಷಿಯನ್ ಭಾಷೆಗೆ ತರ್ಜುಮೆ ಮಾಡಿಸಿದಂತೆ ತಿಳಿದುಬರುತ್ತದೆ. ಈ ರೀತಿಯ ದ್ವಿಭಾಷಾಶಾಸನಗಳು ದೊರಕಿದುದರಿಂದ ಹಿಟ್ಟೈಟ್ ಹಿರೋಗ್ಲಿಫಿಕ್ ಭಾಷೆಯನ್ನು ಓದಲು ಬಹಳ ಅನುಕೂಲವಾಯಿತು. ಈ ಶಾಸನಗಳ ಮುಖ್ಯಾಂಶಗಳು ಹೀಗಿವೆ. ಅಲ್ಲಿನ ದೊರೆ ಹಿಟ್ಟೈಟ್ ಜನಾಂಗದ ಅಸಿತವಾದ್, ಆತನು ಕರತೆಪೆಯ ಕೋಟೆಯನ್ನು ಕಟ್ಟಿಸಿ ಸಿಲಿಷಿಯಾದ ದೊರೆ ಅವರಿಕುಸ್‍ನ ಆಶ್ರಯದಲ್ಲಿ ಆಳುತ್ತಿದ್ದನು. ಇದಲ್ಲದೆ ಹಲವಾರು ದೇವತೆಗಳ ಹೆಸರುಗಳೂ ಕಂಡುಬರುತ್ತವೆ. ಕೋಟೆಯ ಒಳಭಾಗದಲ್ಲಿ ಹಿಟ್ಟೈಟ್ ವಾಸ್ತುಕಲೆಯ ಪ್ರಮುಖಲಕ್ಷಣವಾದ ಹಿಲಾನಿ ರೀತಿಯ ಮುಖ ಮಂಟಪ (ಪೋರ್ಟಿಕೋ) ದಿಂದೊಡಗೂಡಿರುವ ಅರಮನೆಯಾಗಿದ್ದಿರಬಹುದಾದ ಕಟ್ಟಡದ ಅವಶೇಷಗಳು ಕಂಡುಬಂದಿವೆ. ನದಿಯ ಇನ್ನೊಂದು ಪಾರ್ಶ್ವದಲ್ಲಿರುವ ದೊಮುಝ್‍ತೆಪೆಯಲ್ಲಿ ಇದಕ್ಕೂ ಸ್ವಲ್ಪ ಮೊದಲಿನ ಕಾಲಕ್ಕೆ ಸೇರಿದ ಕಟ್ಟಡಗಳ ಅವಶೇಷಗಳನ್ನು ಶಿಲ್ಪಗಳನ್ನು ಬೆಳಕಿಗೆ ತರಲಾಗಿದೆ. *

**ಕರದ್ :** ಸತಾರಾ ಜಿಲ್ಲೆಯಲ್ಲಿರುವ ಒಂದು ನಗರ ಮತ್ತು ಇದೇ ಹೆಸರಿನ ತಾಲ್ಲೂಕಿನ ಕೇಂದ್ರ. ಉ. ಅ. $17^0$ 17' ಮತ್ತು ಪೂ. ರೇ. $74^0$ 11' ಗಳಲ್ಲಿ ಕೃಷ್ಣಾ ಕೊಯ್ನಾ ನದಿಗಳ ಸಂಗಮದ ಬಳಿ ಇದೆ. ಸತಾರಾ ನಗರ ಇರುವುದು ಇದರಿಂದ ವಾಯವ್ಯಕ್ಕೆ 50 ಕಿಮೀ ದೂರದಲ್ಲಿ. ಜನಸಂಖ್ಯೆ 56,149 (2001) ಬೌದ್ಧಕಾಲೀನ ಗುಹಾಲಯಗಳಿಂದಲೂ ಮುಸಲ್ಮಾನರ ಕಾಲದ ಮಸೀದಿಗಳಿಂದಲೂ ಆಧುನಿಕ ಸಂಸ್ಥಾ ಭವನಗಳಿಂದಲೂ ಕೂಡಿರುವ ಇದು ಪೌರ ಸಭೆಯ ಆಡಳಿತಕ್ಕೊಳ ಪಟ್ಟಿದೆ. ಈ ತಾಲ್ಲೂಕಿನಲ್ಲಿ 115 ಹಳ್ಳಿಗಳಿವೆ.

ಇಲ್ಲಿಯ ಮುಖ್ಯ ನದಿ ಕೃಷ್ಣಾ. ಕರದ್‍ಗೆ 1.6 ಕಿಮೀ ದೂರದಲ್ಲಿರುವ ಖೋಡ್ಸಿಯಿಂದ ಸು. 56 ಕಿಮೀ ಉದ್ದದ ಕೃಷ್ಣಾನಾಲೆಯನ್ನು ನಿರ್ಮಿಸಲಾಗಿದೆ. ತಾಲ್ಲೂಕಿನ ನೈಋತ್ಯ ಭಾಗ ಗುಡ್ಡಗಾಡುಗಳಿಂದ ಕೂಡಿದ್ದು ಸಾಕಷ್ಟು ನೀರಿನ ಅನುಕೂಲ ಪಡೆದಿಲ್ಲ. ಮಿಕ್ಕ ಕಡೆಗಳಲ್ಲಿ ನೀರಿಗೆ ಕೊರತೆಯಿಲ್ಲ. ಇಲ್ಲಿ ಭೂಮಿ ಫಲವತ್ತಾಗಿದೆ. ವ್ಯವಸಾಯಕ್ಕೆ ಅನುಕೂಲಕರ. ಜೋಳ, ರಾಗಿ, ದ್ವಿದಳ ಧಾನ್ಯ, ಕಬ್ಬು, ಹತ್ತಿ, ಹೊಗೆಸೊಪ್ಪು ಮತ್ತು ಹಣ್ಣು ತರಕಾರಿಗಳು ಮುಖ್ಯ ಬೆಳೆಗಳು. (ಎಂ.ಎ.ಎಚ್.)

**ಕರನಿರಾಕರಣ ಚಳವಳಿ :** ಪ್ರಭುತ್ವದ ರೀತಿನೀತಿಗಳು ಪ್ರಜೆಗಳಿಗೆ ಸರಿಯೆನಿಸದಾಗ, ಅವರ ಹಿತಗಳಿಗೆ ವಿರೋಧವಾಗಿ ಸರ್ಕಾರ ವರ್ತಿಸುತ್ತಿದ್ದಾಗ, ಪ್ರಜೆಗಳ ನ್ಯಾಯವಾದ ಆಶೋತ್ತರಗಳನ್ನು ಈಡೇರಿಸಲಿಕ್ಕೂ ಆಳರಸರು ಒಡಂಬಡದಿದ್ದಾಗ, ತಮ್ಮ ಹಕ್ಕಿನ ಸ್ಥಾಪನೆಗಾಗಿ, ಹಿತರಕ್ಷಣೆಗಾಗಿ, ನ್ಯಾಯದ ಪೂರೈಕೆಗಾಗಿ ಅಥವಾ ಆಶೋತ್ತರಗಳ ಈಡೇರಿಕೆಗಾಗಿ ಪ್ರಜೆಗಳು ಕೈಕೊಳ್ಳುವ ತೀವ್ರವಾದ ಮತ್ತು ಸಾಮಾನ್ಯವಾಗಿ ಕೊಟ್ಟಕೊನೆಯ ಅಹಿಂಸಾತ್ಮಕ ಅಸ್ತ್ರ; ಸರ್ಕಾರಕ್ಕೆ ಕೊಡಬೇಕಾದ ಕಂದಾಯವನ್ನು ಕೊಡಲು ನಿರಾಕರಿಸುವ ಸಾಮೂಹಿಕ ಕ್ರಮ. ಮಹಾತ್ಮ ಗಾಂಧಿಯವರ ಸತ್ಯಾಗ್ರಹ ಸಮರ ಕಾಲದಲ್ಲಿ ರೂಪಿತವಾಗಿ ಪ್ರಯೋಗವಾದ ಒಂದು ಮುಖ್ಯ ಅಸ್ತ್ರ (ನೋ–ಟ್ಯಾಕ್ಸ್ ಕ್ಯಾಂಪೇನ್) ಎಂದಿನಿಂದಲೋ ಪ್ರಜೆ ಪ್ರಭುತ್ವಗಳ ಮಧ್ಯೆ ಒಂದು ಬಗೆಯ ಒಪ್ಪಂದವಾಗಿದೆ. ಜನರ ಪ್ರಾಣ, ಮಾನ, ಆಸ್ತಿ–ಪಾಸ್ತಿಗಳ ಸಂರಕ್ಷಣೆ ಮಾಡುವುದೂ ಶಾಂತಿ–ಸಮಾಧಾನಗಳನ್ನು ನೆಲೆಗೊಳಿಸುವುದೂ ನಿತ್ಯ ಜೀವನ ನೆಮ್ಮದಿಯಾಗಿರಲು ಅವಶ್ಯವಾದದ್ದನ್ನೆಲ್ಲ ಮಾಡುವುದೂ ಪ್ರಭುತ್ವದ ಹೊಣೆ. ಈ ಭರವಸೆಗೆ ಪ್ರತಿಯಾಗಿ, ಸರ್ಕಾರದ ಕರ್ತವ್ಯ ನಿರ್ವಹಣೆಗಾಗಿ, ಸಮಾಜದಲ್ಲಿ ಸಮಸ್ಥಿತಿ ಸ್ಥಾಪನೆಗಾಗಿ, ಪ್ರಜೆಗಳು ಪ್ರಭುತ್ವಕ್ಕೆ ನಿಗದಿಯಾದ ಶುಲ್ಕ ಅಥವಾ ತೆರಿಗೆಯನ್ನು ವಸ್ತುರೂಪದಲ್ಲೋ, ಹಣದ ರೂಪದಲ್ಲೋ ಸಲ್ಲಿಸಬೇಕಾಗುತ್ತದೆ. ಕೃಷಿಕೈಗಾರಿಕೆ, ವ್ಯಾಪಾರ ಮುಂತಾದ ನಾನಾ ವೃತ್ತಿಗಳಲ್ಲಿ ತೊಡಗಿರುವವರು ತಮ್ಮ ವೃತ್ತಿಸೌಕರ್ಯ ಮತ್ತು ಸಂರಕ್ಷಣೆಗೆ ಪ್ರತಿಯಾಗಿ ಪ್ರಭುತ್ವಕ್ಕೆ ತಾವು ಗಳಿಸಿದ್ದರಲ್ಲೊಂದು ಭಾಗವನ್ನು ಕೊಡುತ್ತಾರೆ. ರೈತ ಪ್ರಭುತ್ವಕ್ಕೆ ಪ್ರತಿವರ್ಷ ಕೊಡುವ ಕಂದಾಯವನ್ನು ಒಳಗೊಂಡು ಎಲ್ಲ ಬಗೆಯ ತೆರಿಗೆಗಳನ್ನೂ ಕರವೆನ್ನುವುದೂ ಉಂಟು.

ರಾಜ ಪ್ರಜಾಪ್ರಿಯನಾಗದೆ, ಪ್ರಜೆಯ ಹಿತಸಾಧಕನಾಗದೆ ಇದ್ದರೆ, ಪ್ರಜಾಹಿಂಸಕನಾದರೆ, ಪ್ರಜೆ ಪ್ರತಿಭಟಿಸಬಹುದು. ಇದು ಅವನ ಮೂಲಭೂತಹಕ್ಕು. ರಾಜ ದುಷ್ಟನಾದರೆ, ಪ್ರಜಾಪೀಡಕನಾದರೆ ಪ್ರಜೆಗಳು ಅವನನ್ನು ಹುಚ್ಚುನಾಯಿಯಂತೆ ಭಾವಿಸಿ, ಬೇಟೆಯಾಡಿ ಕೊಲ್ಲಬಹುದೆಂದು ಪ್ರತಿಪಾದಿಸುವವರೆಗೂ ಭಾರತದ ರಾಜನೀತಿಶಾಸ್ತ್ರಜ್ಞರು ಹೋಗಿದ್ದಾರೆ. ನ್ಯಾಯವಾದ ಕಾರಣಗಳಿಗಾಗಿ ರೈತರು ಕಂದಾಯ ಸಲ್ಲಿಸದೆ ನಿರಾಕರಿಸಲು ಸಹ ಅಧಿಕಾರ ಉಳ್ಳವರಾಗಿದ್ದಾರೆ. ಅಷ್ಟು ಮಾತ್ರವಲ್ಲ. ಪ್ರಜೆಗಳಿಗೂ ಪ್ರಭುತ್ವಕ್ಕೂ ಘರ್ಷಣೆ ಉಂಟಾದಾಗ ಪ್ರಜೆಗಳು ಪ್ರಭುತ್ವದ ರೀತಿನೀತಿಗಳನ್ನು ಪ್ರತಿಭಟಿಸಿದ್ದಾರೆ. ಸಾಮೂಹಿಕವಾಗಿ ಹಳ್ಳಿಹಳ್ಳಿಗಳನ್ನೇ ಬರಿದುಮಾಡಿ, ದೇಶ ಬಿಟ್ಟುಹೋದ ಉದಾಹರಣೆಗಳಿವೆ. ಅಂಥ ಸಂದರ್ಭಗಳಲ್ಲಿ ಪ್ರಭುತ್ವದವರು ಪ್ರಜೆಗಳನ್ನು ಬರಮಾಡಿಕೊಂಡು, ಮಾತುಕತೆ ನಡೆಸಿ, ಅವರಿಗಾದ ಅನ್ಯಾಯಗಳನ್ನು ಸರಿಪಡಿಸಿ, ಪರಸ್ಪರ ಬಾಂಧವ್ಯವನ್ನು ಸುರಸಗೊಳಿಸಿದ್ದಾರೆ.

ಸ್ವಾತಂತ್ರ್ಯಸಾಧನೆಗಾಗಿ ಭಾರತ ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಹೋರಾಟ ನಡೆಸಿದ್ದ ಕಾಲದಲ್ಲಿ ಮಹಾತ್ಮಗಾಂಧೀಯವರು ಈ ಸಂಗ್ರಾಮದ ನಾಯಕತ್ವ ವಹಿಸಿಕೊಂಡ ಮೇಲೆ ಅವರು ಇದಕ್ಕೆ ಜಗದಾಶ್ಚರ್ಯಕರವಾದ ರೂಪ ಕೊಟ್ಟರು. ಶಸ್ತ್ರಾಸ್ತ್ರಗಳನ್ನು ನಿರಾಕರಿಸಿ, ಅಹಿಂಸೆಯ ಮಾರ್ಗವನ್ನು ಅನುಸರಿಸಿ, ಸತ್ಯವನ್ನಾಶ್ರಯಿಸಿ, ನಡೆಸಿದ ಮಹಾಸಂಗ್ರಾಮವದು. ಒಂದು ಜನಾಂಗ ಶಾಂತಿಯಿಂದ, ತ್ಯಾಗದಿಂದ, ಪ್ರೇಮದಿಂದ ಪರಶತ್ರುವನ್ನು ಗೆಲ್ಲಬಹು ದೆಂಬುದನ್ನು ಮಾನವಕುಲದ ಅನುಭವಕ್ಕೆ ಗಾಂಧಿಯವರು ತಂದುಕೊಟ್ಟರು. ಸತ್ಯ, ತ್ಯಾಗ, ಅಹಿಂಸೆಗಳೆಂಬ ತ್ರಿಮುಖ ಅಸ್ತ್ರಕ್ಕೆ ಅವರು ಸತ್ಯಾಗ್ರಹವೆಂದು ಹೆಸರಿಟ್ಟರು. ಈ ಅಸ್ತ್ರಪ್ರಯೋಗಾರ್ಹತೆ ಪಡೆಯುವುದೂ ಗಾಂಧಿಯವರಿಂದ ಪ್ರಶಸ್ತಿ ಪಡೆಯುವುದೂ ಸಾಮಾನ್ಯವಾಗಿರಲಿಲ್ಲ. ಇಂಥ ಅಸ್ತ್ರಪ್ರಯೋಗ ಮಾಡುವುದರಲ್ಲಿ ಗಾಂಧಿಯವರು ಅನೇಕ ಭಾರತೀಯರನ್ನು ನಿಪುಣರನ್ನಾಗಿ ಮಾಡಿದರು. ಅವರಿಗೊಂದು ನವೀನ ಸಂಸ್ಕಾರವನ್ನೇ ಗಳಿಸಿಕೊಟ್ಟರು. ದುಷ್ಕರ್ಮದಲ್ಲಿ ತೊಡಗುವ ಸರ್ಕಾರದೊಂದಿಗೆ, ತಮಗೆ ಬೇಡವೆನಿಸಿದ ಸರ್ಕಾರದೊಂದಿಗೆ, ಅಸಹಕರಮಾಡುವುದು ಪ್ರತಿಯೊಬ್ಬ ಪ್ರಜೆಯ ಈಶ್ವರದತ್ತವಾದ ಹಕ್ಕೆಂದರು. ದುಷ್ಕರ್ಮದೊಂದಿಗೆ ಸಹಕಾರ ಮಾಡಬಾರದೆಂಬ ತತ್ತ್ವದ ಪ್ರತಿಪಾದನೆ ಮಾಡಿದರು.

ಗಾಂಧೀಜಿಯವರ ಸತ್ಯಾಗ್ರಹಪ್ರಯೋಗಾವಸರದಲ್ಲಿ ನಾನಾಘಟ್ಟಗಳುಂಟು. ಕಟ್ಟಕಡೆಯ ಘಟ್ಟ ಕರನಿರಾಕರಣ. ಗಾಂಧೀಜಿಯವರು ನಡೆಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಅವರ ಒಪ್ಪಿಗೆ ಪಡೆದು, ಒಂದೆರಡು ಪ್ರಾಂತ್ಯಗಳಲ್ಲಿ ಮಾತ್ರ ಸತ್ಯಾಗ್ರಹಿಗಳು ಕರನಿರಾಕರಣ ವನ್ನಾರಂಭಿಸಿದರು. ಗುಜರಾತಿನಲ್ಲೂ ಕರ್ನಾಟಕ ಪ್ರಾಂತ್ಯದ ಕೆಲವು ತಾಲ್ಲೂಕುಗಳಲ್ಲೂ ಮಾತ್ರವೇ ತೃಪ್ತಿಕರವಾಗಿ ಈ ಆಂದೋಲನ ಸಾಗಿತು. ಗುಜರಾತಿನ ಬಾರ್ದೋಲಿಯ ರೈತರು ಕರನಿರಾಕರಣ ಕ್ರಮವನ್ನಾರಂಭಿಸುವ ನಿರ್ಣಯ ಮಾಡಿದರು. ಈ ಸನ್ನಿವೇಶ ಕುರಿತು ಗಾಂಧೀಜಿಯವರೇ 1922 ಜನವರಿ 1ರ ಯಂಗ್ ಇಂಡಿಯ ಪತ್ರಿಕೆಯಲ್ಲಿ ಈ ರೀತಿ ಬರೆದರು: ಸು. 4,000 ಖಾದಿಧಾರಿಗಳು ಸಭೆಸೇರಿದ್ದರು. ಅವರಲ್ಲಿ 500 ಮಂದಿ ಹೆಂಗಸರು. ನಾನು ಪ್ರತಿಯೊಬ್ಬರಿಗೂ ಪ್ರಶ್ನೆಗಳನ್ನು ಹಾಕಿ ಕರನಿರಾಕರಣಮಾಡಲು ಸಿದ್ಧರಾಗಿರುವವರು ಇಂತಿಂಥ ಯೋಗ್ಯತಾಸಿದ್ಧಿ ಪಡೆದಿರಬೇಕೆಂದು ವಿವರಿಸಿ ಹೇಳಿದೆ. ಪ್ರತಿಯೊಬ್ಬರೂ ಅರ್ಥಮಾಡಿಕೊಂಡರು. ಅವರು ಎಲ್ಲ ಕಷ್ಟಗಳನ್ನೂ ಎದುರಿಸಲು ಸಿದ್ಧರಾಗಿದ್ದರು; ಸೆರೆಮನೆವಾಸ ಮಾತ್ರವಲ್ಲ, ಪ್ರಾಣ ಕೊಡಲಿಕ್ಕೂ ಸಿದ್ಧರಾಗಿದ್ದರು. ಗಾಂಧೀಯವರು ಅವರ ಬಗ್ಗೆ ಇಷ್ಟು ಹೇಳಿದಮೇಲೂ ಅವರಿಗೆ ಕರನಿರಾಕರಣ ವನ್ನಾರಂಭಿಸಲು ಒಪ್ಪಿಗೆ ಕೊಡಲಿಲ್ಲ.

1928ರಲ್ಲಿ ಸರ್ದಾರ್ ಪಟೇಲರ ನಾಯಕತ್ವದಲ್ಲಿ ಬಾರ್ದೋಲಿ ತಾಲ್ಲೂಕಿನಲ್ಲಿ ಕರನಿರಾಕರಣ ಸತ್ಯಾಗ್ರಹ ಸಿದ್ಧತೆಗಳಾದವು. ಹಲವು ವರ್ಷಗಳಿಂದ ಈ ತಾಲ್ಲೂಕಿನಲ್ಲಿ ನಾಲ್ಕೈದು ಸೇವಾಸಂಸ್ಥೆಗಳಿದ್ದವು. ಅವುಗಳನ್ನಾಧಾರಮಾಡಿ ಶಿಬಿರಗಳನ್ನೇರ್ಪಡಿಸಲಾಯಿತು. ಒಂದೊಂದು ಶಿಬಿರದಲ್ಲೂ ಇನ್ನೂರುಮಂದಿ ಸ್ವಯಂಸೇವಕರು. ಇವರೆಲ್ಲರಿಗೂ ನಿರ್ಣೀತ ಕರ್ತವ್ಯಭಾರವಿತ್ತು. ಪ್ರತಿಯೊಂದು ಶಿಬಿರವೂ ಶಸ್ತ್ರಸನ್ನದ್ಧರಣಾಂಗಣದಂತಿತ್ತು. ಸುದ್ದಿಯ ಕರಪತ್ರಗಳ ಪ್ರಕಟಣೆಯಾಗುತ್ತಿತ್ತು. ಎಂಥ ಪರಿಸ್ಥಿತಿಯೇ ಉಂಟಾಗಲಿ ಅದನ್ನೆದುರಿಸಲು ರೈತರು ದೃಢಸಂಕಲ್ಪರಾಗಿದ್ದರು.

ನಾವು ಪೂರ್ಣ ಅಹಿಂಸಾವಾದಿಗಳಾಗಿರುತ್ತೇವೆ. ಎಂಥ ಕಷ್ಟವೇ ಬರಲಿ–ನಾವು ಸಹಿಸುತ್ತೇವೆ. ಎದುರಿಸುತ್ತೇವೆ. ನಮ್ಮದೆನ್ನುವುದೆಲ್ಲ ನಾಶವಾಗಿಹೋದರೂ ನಾವು ದುಃಖಪಡುವುದಿಲ್ಲ. ಸಂತೋಷದಿಂದ ಎಲ್ಲವನ್ನೂ ಎದುರಿಸುತ್ತೇವೆ–ಎಂಬುದಾಗಿ ಪ್ರಮಾಣವಚನ ತೆಗೆದುಕೊಂಡರು.

1928 ಫೆಬ್ರುವರಿ 12ರಂದು ಪ್ರಜಾಪ್ರಮುಖರೆಲ್ಲ ಬಾರ್ದೋಲಿಯಲ್ಲಿ ಸಮ್ಮೇಳನ ನಡೆಸಿದರು. ಅಂಗೀಕೃತವಾದ ನಿರ್ಣಯ ಈ ರೀತಿ ಇದೆ: ಕಂದಾಯನಿರ್ಣಯದ ಪುನಃಪರಿಶೀಲನೆ ನಿರಂಕುಶವಾದುದು, ಅನ್ಯಾಯವಾದುದು ಮತ್ತು ಗೋಳುಗುಟ್ಟಿಸುವಂಥದು.

ಆದಕಾರಣ ಎಲ್ಲ ಹಿಡುವಳಿದಾರರೂ ಪುನಃಪರಿಶೀಲನೆಯಿಂದ ನಿಶ್ಚಯವಾಗಿರುವ ಕಂದಾಯವನ್ನು ಕೊಡದೆ ನಿರಾಕರಿಸತಕ್ಕದ್ದು, ಪೂರ್ಣ ಹಣ ಸಂದಾಯವಾಯಿತೆಂದು ಹೇಳಿ ಸರ್ಕಾರ ಹಳೆ ಕಂದಾಯದ ಮೊತ್ತವನ್ನಂಗೀಕರಿಸಲು ಒಪ್ಪಬೇಕು. ಇಲ್ಲವೆ ಸರ್ಕಾರದವರು ನಿಷ್ಪಕ್ಷಪಾತ ವಿಚಾರಣಾ ಸಮಿತಿಯನ್ನು ನೇಮಿಸಿ, ಆ ಸಮಿತಿ ಸ್ಥಳಪರೀಕ್ಷೆ ಮಾಡಿ ವಿಚಾರಣೆ ನಡೆಸಿ ಒಂದು ತೀರ್ಮಾನಕ್ಕೆ ಬರುವವರೆಗೂ ಹಳೆಕಂದಾಯದ ಮೊತ್ತವನ್ನಂಗೀಕರಿಸಲು ಒಪ್ಪಬೇಕು.

ಈ ನಿರ್ಣಯವಾಗುತ್ತಲೇ ರೈತರ ಸತ್ಯಾಗ್ರಹಸಿದ್ಧತೆಯೊಂದು ಕಡೆ, ಪ್ರಭುತ್ವೋದ್ಯೋಗಿಗಳ ಸಮರಸಿದ್ಧತೆಯೊಂದು ಕಡೆ ಆರಂಭವಾದುವು. ಇವೆರಡು ಚಟುವಟಿಕೆಗಳೂ ವಾತಾವರಣವನ್ನು ಕಲಕಿದುವು. ಗಂಡಸರು, ಹೆಂಗಸರು, ಮುದುಕರು, ಮಕ್ಕಳು, ಅವರಿವರೆನ್ನದೆ ಎಲ್ಲರೂ ಎಂಥ ತಾಗ್ಯಕ್ಕಾದರೂ ಬಲಿದಾನಕ್ಕಾದರೂ ಸಿದ್ಧರಾದರು. ಸರ್ದಾರರು ಎಲ್ಲೆಲ್ಲೂ ಜನರನ್ನು ಸೇರಿಸಿ, ಸತ್ಯಾಗ್ರಹದ ಕಠೋರ ಪರಿಣಾಮಗಳನ್ನು ವರ್ಣಿಸುತ್ತ ಬಂದರು. ಜನರಲ್ಲಿ ಮಾತಿಗೆ ನಿಲುಕದಷ್ಟು ಉತ್ಸಾಹ ಶ್ರದ್ಧೆಗಳಿದ್ದವು.

ಸರ್ಕಾರದ ಅಧಿಕಾರಿಗಳು ಶಾಸನ, ಶಸ್ತ್ರ ಇವೆರಡನ್ನು ಆಶ್ರಯಿಸಿ ಕಂದಾಯ ವಸೂಲಿಗಾರಂಭಿಸಿದರು. ಹಲವು ದುರ್ಬಲಹೃದಯಿ ರೈತರನ್ನೇ ಬಳಸಿಕೊಂಡು ಸತ್ಯಾಗ್ರಹ ಚಳವಳಿಯನ್ನು ನಿರ್ಮೂಲಮಾಡಲು ಯತ್ನಿಸಿದರು. ಸರ್ಕಾರಿ ಅಧಿಕಾರಿಗಳು ಹಿಡಿಯದ ಮಾರ್ಗವಿಲ್ಲ. ರೈತರನ್ನು ಹೆದರಿಸಿದರು. ಅವರಿಗೆ ಜುಲ್ಮಾನೆ ಹಾಕಿದರು. ಅವರನ್ನು ಹಿಡಿದು ಸೆರೆಮನೆಗೆ ದೂಡಿದರು. ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲುಹಾಕಿಕೊಂಡರು. ರೈತರು ಜಗ್ಗಲಿಲ್ಲ. ಲಂಚ ಕೊಟ್ಟು ಹಲವರನ್ನು ಬಲೆಗೆ ಸೆಳೆದುಕೊಳ್ಳಲು ನೋಡಿದರು. ಪ್ರಯೋಜನವಾಗಲಿಲ್ಲ. ಒಂದು ಪಂಗಡವನ್ನು ಇನ್ನೊಂದು ಪಂಗಡದ ಮೇಲೆ ಎತ್ತಿಕಟ್ಟುವ ಹಂಚಿಕೆ ಹಾಕಿದರು. ಅದೂ ಯಶಸ್ವಿಯಾಗಲಿಲ್ಲ. ಲಾಠಿಪ್ರಯೋಗ ಆರಂಭವಾಯಿತು. ರೈತರು ಜಗ್ಗಲಿಲ್ಲ, ಎದೆ ಕೊಟ್ಟು ನಿಂತು ಏಟು ತಿಂದರು. ಅಧಿಕಾರಿಗಳು ಕಕ್ಕಾಬಿಕ್ಕಿಯಾದರು. ಹೊರಗಿನಿಂದ ಪಠಾಣರನ್ನು ಆಮದುಮಾಡಿ, ಅವರನ್ನು ರೈತರಮೇಲೆ ಬಿಟ್ಟಾಗಲೂ ಜನ ಹೆದರಲಿಲ್ಲ. ಜಮೀನುಗಳನ್ನು ಹರಾಜಿಗಿಟ್ಟರೆ ಕೊಳ್ಳುವವರೇ ಇರಲಿಲ್ಲ. ಅಧಿಕಾರಿಗಳು 1,400 ಎಕರೆಗಳ ಜಮೀನನ್ನು ವಶಪಡಿಸಿಕೊಂಡರು. ಹೋದಷ್ಟು ಬೆಲೆಗೆ ಹರಾಜುಹಾಕಿದರು.

ರೈತರು ಮಾತ್ರ ಶಾಂತಿಯಿಂದಲೇ ನಡೆದುಕೊಂಡರು. ಸರ್ಕಾರದ ಮೇಲಿನ ಅಧಿಕಾರಿಗಳು, ಕೆಳಗಿನ ನೌಕರರು, ಹರಾಜು ಜಪ್ತಿಗಳೇ ಮುಂತಾದ ಕ್ರಮಗಳಿಗೆ ಸಹಾಯಕರಾದ ಜನರು–ಇವರ ಮೇಲೆಲ್ಲ ಜನರು ಸಾಮಾಜಿಕ ಬಹಿಷ್ಕಾರ ಹಾಕಿದರು, ಪರಮಾಶ್ಚರ್ಯಕರವಾದ ಈ ಕರನಿರಾಕರಣ ಸಂಗ್ರಾಮದಿಂದ ಬಾರ್ದೋಲಿಗೆ ಅಖಿಲಭಾರತ ಕೀರ್ತಿಗೌರವಗಳು ಬಂದವು. ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಸಹ ಬಾರ್ದೋಲಿ ಕರನಿರಾಕರಣದ ವಿಚಾರ ಬಂತು. ಈ ಸಂಗ್ರಾಮ ಐದಾರು ತಿಂಗಳ ಕಾಲ ನಡೆಯಿತು.

ಕಡೆಗೆ ಸರ್ಕಾರ ಶರಣಾಗಬೇಕಾಯಿತು. ಗವರ್ನರ್ ವಿಚಾರಣಾ ಸಮಿತಿಯೊಂದನ್ನು ನೇಮಿಸಿದ. ವಶಪಡಿಸಿಕೊಂಡ ಜಮೀನುಗಳನ್ನೆಲ್ಲ ಸಂಬಂಧಪಟ್ಟವರಿಗೆ ಹಿಂದಕ್ಕೆ ಕೊಡಲಾಯಿತು. ವಜಾ ಮಾಡಲಾಗಿದ್ದ ಗ್ರಾಮೋದ್ಯೋಗಿಗಳನ್ನೆಲ್ಲ ಕರೆಸಿ ಅವರ ದಫ್ತರಗಳನ್ನು ಅವರಿಗೆ ಕೊಟ್ಟು, ಕೆಲಸಗಳಿಗೆ ನೇಮಿಸಿದರು. ಸಮಿತಿಯೂ ವಿಚಾರಣೆ ನಡೆಸಿತು. ರೈತರವಾದ ಯೋಗ್ಯವೆಂದು ಅಂಗೀಕರಿಸಿತು. ಶೇ. 22 ರಷ್ಟು ಏರಿಸಿದ್ದ ಕಂದಾಯವನ್ನು ಶೇ. 6 1/4ಗೆ ಇಳಿಸಲಾಯಿತು. ತಮ್ಮ ಶಿಫಾರಸುಗಳನ್ನು ಸಮಿತಿಯ ಸದಸ್ಯರು ಸರ್ಕಾರಕ್ಕೆ ಕಳುಹಿಸಿದರು.

ಬಾರ್ದೋಲಿಯನ್ನು ಸತ್ಯಾಗ್ರಹದ ಪರಮಲಕ್ಷಣದ ಉದಾಹರಣೆಯನ್ನಾಗಿ ಮಾಡಬೇಕೆಂಬುದು ನಿಮ್ಮ ಕನಸಾಗಿತ್ತು. ಬಾರ್ದೋಲಿಯ ರೈತರು ತಮಗೆ ವಿಶಿಷ್ಟವೆನಿಸಿದ ರೀತಿಯಿಂದ ನಿಮ್ಮ ಕನಸನ್ನು ನಿಜಮಾಡಿದರು ಎಂಬುದಾಗಿ ಸರೋಜಿನಿದೇವಿಯವರು ಗಾಂಧೀಜಿಗೆ ಪತ್ರ ಬರೆದರು.

ಬಾರ್ದೋಲಿಯ ಕರನಿರಾಕರಣ ಚಳವಳಿಯಲ್ಲದೆ ಎಲ್ಲರ ಗಮನ ಸೆಳೆಯುವ ಇನ್ನೊಂದು ಉದಾಹರಣೆಯೆಂದರೆ ಕರ್ನಾಟಕದ ಶಿರಸಿ, ಸಿದ್ದಾಪುರ, ಅಂಕೋಲೆ ಮತ್ತು ಹಿರೇಕೆರೂರು ತಾಲ್ಲೂಕುಗಳದು. ಈ ನಾಲ್ಕೂ ತಾಲ್ಲೂಕುಗಳ ಜನ ಗಾಂಧೀಜಿಯವರ ನಿರ್ಮಲ ಕಲ್ಪನೆ ಮತ್ತು ಪವಿತ್ರಭಾವನೆಗೆ ಲೇಶವೂ ಊನ ಬಾರದಂತೆ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಹುಲ್ಲುಬನ್ನಿ ಕರನಿರಾಕರಣ ಮುಂತಾದವುಗಳನ್ನು ನಡೆಸಿದರು. ಅಂಕೋಲೆಯದು ಒಂದು ಧ್ಯೇಯಕ್ಕಾಗಿ ನಡೆದ (1930 ಏಪ್ರಿಲ್) ಸತ್ಯಾಗ್ರಹವೆನ್ನ ಬಹುದಾದರೂ ಉಳಿದ ತಾಲ್ಲೂಕುಗಳಲ್ಲಿ ನಡೆದದ್ದು ಒಂದು ಅನಿವಾರ್ಯ ಸನ್ನಿವೇಶದಿಂದಲೂ ಪ್ರಭಾವಿತವಾದದ್ದು ಎಂಬುದನ್ನು ಮರೆಯುವಂತಿಲ್ಲ.

1931ರಲ್ಲಿ ಶಿರಸಿ–ಸಿದ್ದಾಪುರ, ಹಿರೇಕೆರೂರು ಈ ಮೂರು ತಾಲ್ಲೂಕುಗಳಲ್ಲೂ ಕ್ಷಾಮ ಆವರಿಸಿತು. ದವಸ ಧಾನ್ಯಗಳ ಧಾರಣೆಗಳು ಬಿದ್ದುವು. ಶಿರಸಿ, ಸಿದ್ದಾಪುರಗಳ ಸುವರ್ಣಾದಾಯದ ಬೆಳೆಯೆಂದರೆ ಅಡಿಕೆ. ಏನೋ ಕಾರಣದಿಂದ ಆ ಬೆಳೆ ಹಾಳಾಯಿತು. ರೂಪಾಯಿಗೆ ನಾಲ್ಕಾಣೆ (ಕಾಲುಭಾಗ) ಬೆಳೆ ಕೂಡ ರೈತರ ಕೈ ಹತ್ತಲಿಲ್ಲ. ಆ ವರ್ಷ ಕಂದಾಯ ವಸೂಲು ಮಾಡಬಾರದೆಂದು ರೈತರು ಸರ್ಕಾರದಲ್ಲಿ ಮೊರೆ ಇಟ್ಟರು. ಅದು ಬರಿಯ ಅರಣ್ಯರೋದನವಾಯಿತು. ಸರ್ಕಾರ ಆ ಮೊರೆಗೆ ಕಿವಿಗೊಡಲಿಲ್ಲ. ಕ್ಷಾಮ ಸಂಭವಿಸಿಲ್ಲವೆಂದೂ ಬೆಳೆಯಾಗಿಲ್ಲವೆಂಬ ಮಾತು ಸುಳ್ಳೆಂದೂ ಇದು ಕರನಿರಾಕರಣ ಚಳವಳಿಯೆಂದೂ ಸರ್ಕಾರ ವಾದಿಸಿತು. ಆದರೆ ಕ್ಷಾಮ ಪ್ರಾಪ್ತಿಯಾಗಿದ್ದುದು ನಿಜ. ರೈತರೂ ಕಂಗಾಲಾಗಿದ್ದುದೂ ನಿಜ. ಚಳವಳಿಯ ನಾಯಕತ್ವವನ್ನು ರಾಜಕಾರಣಿಗಳು (ಹಾಗೆಂದು ಸರ್ಕಾರದವರು ಅವರನ್ನು ಕರೆದರು) ವಹಿಸಿದ್ದರೆಂಬುದೂ ನಿಜ. ಆದರೆ ಕ್ಷಾಮವೇ ಚಳವಳಿಗೆ ಮೂಲ ಕಾರಣವೆಂಬ, ಚಳವಳಿಯ ನಾಯಕರು ರಾಜಕಾರಣಿಗಳೇ ಆದರೂ ರೈತರ ನ್ಯಾಯವಾದ ಬೇಡಿಕೆಯನ್ನು ಈಡೇರಿಸಬೇಕೆಂಬ ವಾದಕ್ಕೆ ಸರ್ಕಾರ ವಿಮುಖವಾಗಿತ್ತು.

ಮೂರೂ ತಾಲ್ಲೂಕುಗಳ ರೈತರೂ ಶಾಸನಬದ್ಧವಾಗಿ, ಶಾಂತಿರೀತಿಯಿಂದ ನಡೆದುಕೊಂಡರು. ಇದು ಸಂಪೂರ್ಣವಾಗಿ ಆರ್ಥಿಕ ದುಃಸ್ಥಿತಿಯ ಹೋರಾಟ, ರಾಜಕೀಯ ಹೋರಾಟವಲ್ಲ–ಎಂಬುದನ್ನು ಸ್ಥಾಪಿಸಿದರು. ಅರ್ಜಿಗಳನ್ನು ಹಾಕಿದರು. ಸಭೆಗಳನ್ನು ನಡೆಸಿದರು, ನಿರ್ಣಯಗಳನ್ನು ಮಾಡಿದರು; ಜಿಲ್ಲೆಯ ಅಧಿಕಾರಿಗಳನ್ನು ಕಂಡರು; ತಮ್ಮ ಕಷ್ಟಗಳನ್ನು ವಿವರಿಸಿದರು; ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಬೇರೆ ದಾರಿಕಾಣದೆ ರೈತರು ಸಾಂಗವಾಗಿ ಕರನಿರಾಕರಣ ಸತ್ಯಾಗ್ರಹವನ್ನಾರಂಭಿಸಿದರು. ಸರ್ಕಾರ ದಂಡದಾರಿಯಾಯಿತು. ರೈತರ ಬೆನ್ನೂಮೂಳೆಗಳನ್ನು ಮುರಿಯಲಾರಂಭಿಸಿತು.

ಶಿರಸಿ–ಸಿದ್ದಾಪುರಗಳ ರೈತರ ವ್ಯವಹಾರ 1923ರಿಂದ ಹಿರಿಯ ರೆವಿನ್ಯೂ ಆಧಿಕಾರಿ ಕಾಲ್ವೆನನ ಪರಿಶೀಲನೆಯಲ್ಲಿತ್ತು. ಇವೆರಡೂ ತಾಲ್ಲೂಕುಗಳಲ್ಲೂ ಈತ ಸಂಚಾರಮಾಡಿ, ಆರ್ಥಿಕ ಪರಿಶೀಲನೆ ನಡೆಸಿದ. ಕಂದಾಯದ ಮೊತ್ತವನ್ನು ಶಾಶ್ವತವಾಗಿ ಕಡಿಮೆಮಾಡಬೇಕೆಂದು ಸರ್ಕಾರಕ್ಕೆ ಸಲಹೆಮಾಡಿದ. ಆದರೆ ಸರ್ಕಾರ ಈ ಸಲಹೆಗಳನ್ನು ಪುರಸ್ಕರಿಸಲಿಲ್ಲ.

ಮೂರು ತಾಲ್ಲೂಕುಗಳ ರೈತರೂ ದೃಢಸಂಕಲ್ಪರಾದರು. ಕಂದಾಯವನ್ನು ಕೊಡುವುದಿಲ್ಲವೆಂದು ಹೇಳಿದರು. ಅಧಿಕಾರಿಗಳು ಜಮೀನುಗಳನ್ನು ಜಪ್ತಿಮಾಡಿದರು; ರೈತರಿಗೆ ಕೊಡಬಾರದ ಹಿಂಸೆ ಕೊಟ್ಟರು. ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡರೂ ಯಾವ ರೈತರೂ ಪ್ರತಿಭಟಿಸಲಿಲ್ಲ. ಜಮೀನು ಹರಾಜಿನಲ್ಲಿ ಸವಾಲು ಕೂಗುವವರೇ ಇರಲಿಲ್ಲ. ಎಂಟುನೂರಕ್ಕೂ ಮೀರಿ ಜಪ್ತಿಗಳಾದವು. ಇನ್ನೂರು ಮಂದಿಗೆ ಮುಟ್ಟುಗೋಲು ನೋಟೀಸ್ ಕೊಡಲಾಯಿತು. ಉಭಯ ಪಕ್ಷಗಳ ಮಧ್ಯೆ ಹೀಗೆ ಹೋರಾಟವಾಗುತ್ತಿದ್ದಾಗ, 1931ರ ಮಾರ್ಚ್ 4 ರಂದು, ಗಾಂಧೀ–ಇರ್ವಿನ್ ಒಡಂಬಡಿಕೆ ಯಾಯಿತು. ಚಳವಳಿ ನಿಂತಿತು.

ಜಮೀನುಗಳು ಹರಾಜಾಗುತ್ತಿದ್ದ ಕಾಲದಲ್ಲಿ ಸ್ವಯಂಸೇವಕರನೇಕರು ಪಿಕೆಟ್ ಮಾಡುತ್ತಿದ್ದರು. ಸರ್ಕಾರದವರು ಇವರ ಮೇಲೆಲ್ಲ ನಾನಾ ಆಪಾದನೆಗಳನ್ನು ಹೊರಿಸಿ ಮೊಕದ್ದಮೆಗಳನ್ನು ಹೂಡಿ, ವಿಚರಣೆಗೊಳಪಡಿಸಿ, ಇವರಿಗೆಲ್ಲ ಶಿಕ್ಷೆ ಕೊಡಿಸಿದ್ದರು. ಸ್ವಯಂಸೇವಕರನೇಕರಿಗೆ ಈ ತಾಲ್ಲೂಕು ಬಿಟ್ಟು ಹೊರಡಬೇಕೆಂದು ತಿಳಿವಳಿಕೆ ಕೊಟ್ಟಿದ್ದರು. ಧಾರವಾಡ, ಬೆಳಗಾಂವಿ ಕಡೆಗಳಲ್ಲಿ ಮನೆಗಳ ಶೋಧನೆ ನಡೆಸಿ ಪಿತೂರಿ ಮತ್ತು ರಾಜದ್ರೋಹ ಆಪಾದನೆಗಳಿಗಾಗಿ ಹಲವರ ಮೇಲೆ ಮೊಕದ್ದಮೆಗಳನ್ನು ಹೂಡುವ ಸಿದ್ಧತೆ ನಡೆದಿತ್ತು. ಆದರೆ ಒಡಂಬಡಿಕೆಯಿಂದಾಗಿ ಅದನ್ನೆಲ್ಲ ಕೈಬಿಡಬೇಕಾಯಿತು.

ಕಟ್ಟಕಡೆಗೆ ರೈತರ ಮೊರೆ ಸಾಧುವಾದದ್ದು ಎಂಬುದು ಸರ್ಕಾರದವರ ಮನಸ್ಸಿಗೆ ಬಂತು. ನಿಜವಾಗಿಯೂ ಇದು ಆರ್ಥಿಕ ದುಃಸ್ಥಿತಿಯ ಚಳವಳಿ ಎಂಬುದನ್ನು ಅಧಿಕಾರಿಗಳು ಗ್ರಹಿಸಿದರು. ಈ ಅಂಶವನ್ನು ಗಾಂಧೀಜಿಯವರು ಲಾರ್ಡ್ ಇರ್ವಿನ್ನನ ಗಮನಕ್ಕೆ ತಂದು ಅವನನ್ನೊಪ್ಪಿಸಿದರು. 1931 ಮೇ ತಿಂಗಳಿನಲ್ಲಿ ರೆವಿನ್ಯೂ ಕಮೀಷನರೊಂದಿಗೆ ಆದ ಒಡಂಬಡಿಕೆಯ ಫಲವಾಗಿ ಹಿರೇಕೆರೂರು ತಾಲ್ಲೂಕಿನ ರೈತರಿಗೆ ತೃಪ್ತಿಕರ ಪರಿಹಾರ ಸಿಕ್ಕಿತು. ಆ ವರ್ಷದ ಕಂದಾಯವನ್ನು ರದ್ದು ಮಾಡಿದರು.

ಆದರೆ ಶಿರಸಿ ಸಿದ್ದಾಪುರಗಳ ರೈತರ ವಿಚಾರದಲ್ಲಿ ಹೀಗಾಗಲಿಲ್ಲ. ರೈತರೊಬ್ಬೊಬ್ಬರೂ ಅರ್ಜಿಹಾಕಿಕೊಂಡರೆ ವಿಚಾರಮಾಡಿ ಸಂದರ್ಭಾನುಸಾರ ಕಂದಾಯಪರಿಹಾರ ಕೊಡುವುದಾಗಿ ಸರ್ಕಾರಿ ಅಧಿಕಾರಿಗಳು ಕೊಸರಾಟ ಮಾಡಿದರಲ್ಲದೆ ರೈತರಿಗೆ ಕಿರುಕುಳ ಕೊಟ್ಟರು. ಸ್ಥಳೀಯ ಅಧಿಕಾರಿಗಳು ಸರ್ಕಾರದ ಆಜ್ಞೆಗಳಿಗೆ ತಮ್ಮದೇ ಆದ ಭಾಷ್ಯ ಮಾಡಿದ್ದರಿಂದ ಬಡರೈತರಿಗೆ ಸಹಿಸಲಾಗದಷ್ಟು ಹಿಂಸೆ ಉಂಟಾಯಿತು. ಕಡೆಗೆ ಇಲ್ಲೂ ರೈತರಿಗೆ ಗೆಲವು ಸಾಧಿಸಿತು. ಬಂಧನದಲ್ಲಿದ್ದವರೆಲ್ಲರ ಬಿಡುಗಡೆಯಾಯಿತು. ನ್ಯಾಯ ಸ್ಥಾನಗಳಲ್ಲಿ ಹೂಡಿದ್ದ ಮೊಕದ್ದಮೆಗಳನ್ನೆಲ್ಲ ಅಧಿಕಾರಿಗಳು ಹಿಂದಕ್ಕೆ ತೆಗೆದುಕೊಂಡರು. ಕಡೆಗೂ ಕರನಿರಾಕರಣ ಸತ್ಯಾಗ್ರಹ ರೈತರಿಗೆ ಜಯದಲ್ಲಿ ಮುಕ್ತಾಯವಾಯಿತು.

1931–32ರ ಕರನಿರಾಕರಣ ಸತ್ಯಾಗ್ರಹದ ಮಾತುಬಂದಾಗ, ಕಾರವಾರ ಜಿಲ್ಲೆಯ ರೈತರ ಸತ್ತ್ವ ಮತ್ತು ಕ್ಷಾತ್ರಗುಣಗಳನ್ನು ಗಣನೆಗೆ ತೆಗೆದುಕೊಂಡಾಗ ಯಾರಿಗಾದರೂ ಹೆಮ್ಮೆಯಾಗುತ್ತದೆ. ಆ ಅಪೂರ್ವ ಸಂಗ್ರಾಮದಲ್ಲಿ ಗಂಡಸರೂ ಹೆಂಗಸರೂ ಸಾಮಾನ್ಯ ಕಲ್ಪನೆಗೆ ಮೀರಿದ ತ್ಯಾಗ ತೋರಿಸಿದರು. ಬೀಳಗಿಯ ಶ್ರೀ ಕೃಷ್ಣ ಬಾಲಕೃಷ್ಣ ಪುರಾಣಿಕರು ಕರನಿರಾಕರಿಸಿದ ಕಾರಣ ಬಂಧನಕ್ಕೊಳಗಾದರು. ಅವರನ್ನು ಜನ ಮೆರವಣಿಗೆ ಮಾಡಿ ಪೊಲೀಸ್ ಠಾಣ್ಯಕ್ಕೆ ಕರೆದೊಯ್ದರು. ಪುರಾಣಿಕರು ಆಗ ತಮ್ಮ ಹೆಂಡತಿಯವರಿಗೆ ಹೇಳಿದ ಮಾತಿದು: ನಮ್ಮ ಹೊಲ, ಮನೆ ಆಸ್ತಿಗಳೆಲ್ಲವನ್ನೂ ಈ ಧರ್ಮಯುದ್ಧದಲ್ಲಿ ನಾವು ಕಳೆದುಕೊಂಡರು ಹೆದರಬೇಕಿಲ್ಲ. ಪಾದಚಾರಿಗಳಾಗಿ ನಾವು ಊರಿಂದೂರಿಗೆ ಭಿಕ್ಷಾಟನೆ ಮಾಡುತ್ತ ಕಾಶೀಯಾತ್ರೆಗೆ ಹೋಗೋಣ. ಸರ್ಕಾರಕ್ಕೆ ಒಂದು ಕಾಸೂ ಕೊಡಬೇಡ. ತೀರ್ವೆ ಕೊಟ್ಟು ಪಾಪ ಕಟ್ಟಿಕೊಳ್ಳಬೇಡ. ಒಂದು ವೇಳೆ ಸರ್ಕಾರದವರು ಒತ್ತಾಯಮಾಡಿ ವಸೂಲುಮಾಡಲು ಪ್ರಯತ್ನಿಸಿದ್ದಾದರೆ ನಮ್ಮ ಕಾಳು ಕಡ್ಡಿ, ಮನೆ ಮಾರು, ಅವರ ಕೈಗೆ ಸಿಗದಂತೆ ಅವುಗಳನ್ನು ಅಗ್ನಿನಾರಾಯಣನಿಗೆ ಆಹುತಿ ಮಾಡಿಬಿಡು.

ಇದಕ್ಕೆ ವ್ಯಾಖ್ಯಾನ ಬೇಕಿಲ್ಲ. ಕರನಿರಾಕರಣ ಸತ್ಯಾಗ್ರಹಿಗಳ ಸ್ವರೂಪ ನಿದರ್ಶನಕ್ಕೆ ಇದೊಂದು ಉದಾಹರಣೆ.

ಊರು ಬಿಟ್ಟು ಶಿಬಿರ ಸೇರಿದ್ದ ಗಂಡಸರ ಸುಳಿವನ್ನು ಪತ್ತೆ ಹಚ್ಚಲು ಪೊಲೀಸರು ಕೈಕೊಂಡ ನಾನಾ ಬೆದರಿಕೆಯ ಕ್ರಮಗಳಿಗೆ ಸ್ತ್ರೀಯರು ಸಗ್ಗದೆ ಸ್ಥೈರ್ಯದಿಂದ ನಿಂತು ಎದುರಿಸಿದ್ದು ಇತಿಹಾಸದ ಪುಟಗಳಲ್ಲಿ ಸ್ಥಿರವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ.

ತಮಗಾಗಲೀ ತಮ್ಮ ಹೆಂಡಿರುಮಕ್ಕಳಿಗಾಗಲೀ ಸ್ವಲ್ಪ ಮಾತ್ರ ಅಪಮಾನವಾದರೆ ಸಹಿಸಲಾರದ ನಾಡಜನರು ಈ ಎಲ್ಲ ಕ್ರಮಗಳ ಎದುರಿನಲ್ಲೂ ತಾಳ್ಮೆ ವಹಿಸಿ ಅಹಿಂಸಾವ್ರತವನ್ನು ಪಾಲಿಸಿದರು. ಇದು ಅವರ ಸತ್ತ್ವಪರೀಕ್ಷೆಯ ಪ್ರಸಂಗವಾಗಿ ಪರಿಣಮಿಸಿತು. ಗಾಂಧೀಜಿಯವರಲ್ಲಿ ಅವರ ಅಹಿಂಸಾತತ್ತ್ವದಲ್ಲಿ ಆಗ ನಾಡವರಿಗಿದ್ದ ನಿಷ್ಠೆಯ ಪರಾಕಾಷ್ಠತೆಯಿಂದಾಗಿಯೇ ಅವರು ಇಂಥ ಉದ್ವೇಗ ಜನಕ ಸನ್ನಿವೇಶದಲ್ಲಿ ತಾಳ್ಮೆ ವಹಿಸುವುದು ಸಾಧ್ಯವಾಯಿತೆನ್ನಬಹುದು. **(ಟಿ.ಟಿ.ಎಸ್.)**

**ಕರಪಾಲ ಮೇಳ :** ಕರ್ನಾಟಕದ ಜನಪದ ಮೇಳಗಳಲ್ಲಿ ಒಂದು. ಯಕ್ಷಗಾನ ಬಯಲಾಟಗಳ ವರ್ಣವೈಭವ, ವೇಷ ಭೂಷಣಗಳ ವೈಖರಿ ಕರಪಾಲಮೇಳದಲ್ಲಿಲ್ಲ. ಹೆಚ್ಚು ಸಂಖ್ಯೆಯ ಕಲಾವಿದರೂ ಇಲ್ಲಿ ಭಾಗವಹಿಸುವುದಿಲ್ಲ. ಮುಖ್ಯಕಥೆಗಾರನೊಬ್ಬ ಇಬ್ಬರು ಸಹನೃತ್ಯದವರೊಡನೆ ಜನಪ್ರಿಯ ಕಥೆಯೊಂದನ್ನು ನಾಟಕೀಯವಾಗಿ ಅಭಿನಯಿಸಿ, ನಿರೂಪಿಸಿ. ಗ್ರಾಮಾಂತರ ಜನತೆಗೆ ಮನೋರಂಜನೆಯನ್ನೊದಗಿಸುವುದು, ಅತ್ಯಂತ ಸರಳರೀತಿಯಲ್ಲಿ ನೃತ್ಯ ಸಂಗೀತ, ವೇಷಭೂಷಣಗಳನ್ನು ಒದಗಿಸಿಕೊಂಡು ತನ್ನ ಕಲೆ ಕಳೆಗಟ್ಟುವಂತೆ ಮಾಡಿಕೊಳ್ಳುವುದು ಇಲ್ಲಿನ ವೈಶಿಷ್ಟ್ಯ. ಎಲ್ಲ ದೃಷ್ಟಿಯಿಂದಲೂ ಕರಪಾಲಮೇಳದಲ್ಲಿ ಎದ್ದುತೋರುವ ಮುಖ್ಯ ವೈಶಿಷ್ಟ್ಯ ಸರಳತೆ. ಕಥೆಯಲ್ಲಿ, ಹಾಡಿನಲ್ಲಿ, ಕುಣಿತದಲ್ಲಿ ಇತರ ಸಾಧನ ಸಲಕರಣೆಗಳಲ್ಲಿ ಈ ಅಂಶವನ್ನು ಗುರುತಿಸಬಹುದು.

ಕರಪಾಲಕ್ಕೆ ಬಯಲಾಟದಂತೆಯೇ ಸಾಕಷ್ಟು ಪ್ರೇಕ್ಷಕರು ಕೂರುವ ಬಯಲು ಪ್ರದೇಶ ಬೇಕು. ಊರ ಚಾವಡಿಯ ಮುಂದೊ ಗುಡಿಯ ಅಥವಾ ರಾಮಮಂದಿರದ ಮುಂದೊ ಬಯಲಾಟದಂತೆಯೇ ಚಪ್ಪರವನ್ನು ಹಾಕಬೇಕು. ಇಲ್ಲಿನ ಚಪ್ಪರ ಬಹಳ ಚಿಕ್ಕದು. ಮೂರು ಮಂದಿ ಒಂದು ಸಾಲಿನಲ್ಲಿ ನಿಂತು ಹಿಂದೆ ಮುಂದೆ ಸರಿಯುತ್ತ ಕುಣಿಯಲು ಆದರೆ ಸಾಕು. ಬಯಲಾಟದಂತೆ ವಿಡಂಗುಗಳು ಇಲ್ಲಿ ಬರುವುದಿಲ್ಲವಾದ್ದರಿಂದ ಚಪ್ಪರದ ಎತ್ತರ ಏಳು ಅಥವಾ ಎಂಟು ಅಡಿಗಳಷ್ಟಿದ್ದರೆ ಸಾಕು. ಚಪ್ಪರದ ಅಗಲ ಹತ್ತು ಅಡಿ, ಉದ್ದ ಹತ್ತು ಅಡಿ ಮಾತ್ರ ಇರುವುದರಿಂದ ಸಾಮಾನ್ಯವಾಗಿ ನೆಲಕ್ಕೆ ಹಲಗೆಯನ್ನು ಹಾಕಿ ಅಟ್ಟಣೆಯನ್ನು ಮಾಡಿಕೊಳ್ಳುವ ಅಗತ್ಯವಿಲ್ಲ. ಯಾವ ರುದ್ರ ನೃತ್ಯವು ಇಲ್ಲಿ ಬರದಿರುವುದರಿಂದ ಇಷ್ಟು ಸರಳವಾದ ವ್ಯವಸ್ಥೆಯಲ್ಲಿ ಕರಪಾಲ ಮೇಳ ಜರಗುತ್ತದೆ.

ಕರಪಾಲ ಮೇಳಕ್ಕೆ ವಾದ್ಯಗಳನ್ನು ನುಡಿಸುವವರು, ಹಿಮ್ಮೇಳವನ್ನು ಹಾಡುವವರು ಚಪ್ಪರದ ಮುಂಭಾಗದಲ್ಲಿ ಹೊರಗೆ ಕುಳಿತಿರುತ್ತಾರೆ. ಅವರನ್ನು ಅನುಸರಿಸಿ ಜನ ಕುಳಿತಿರುತ್ತಾರೆ. ಚಪ್ಪರದ ಒಳಗೆ ಕರಪಾಲದ ಕಥೆಯನ್ನು ಅಭಿನಯಿಸುವ ಮುಖ್ಯನಿರೂಪಕ ಮತ್ತು ಅವನ ಎರಡು ಬದಿಯಲ್ಲಿ ಇಬ್ಬರು ನೃತ್ಯದವರು ನಿಂತಿರುತ್ತಾರೆ. ಕರಪಾಲದ ಮುಖ್ಯ ನಿರೂಪಕ ತಲೆಗೆ ಕೋಡಂಗಿಯ ಕುಲಾವಿಯ ಆಕಾರದ ವಸ್ತ್ರದ ಸಾಧನವನ್ನು ತೊಟ್ಟಿರುತ್ತಾನೆ. ಮುತ್ತು, ಗಾಜಿನ ಕೊಳವೆ, ಬಣ್ಣದ ವಸ್ತ್ರಗಳಿಂದ ಅಲಂಕೃತವಾದ ಆ ಸಾಧನ ಒಂದು ಕಿರೀಟದಂತೆಯೇ ತೋರುತ್ತದೆ. ಅದರ ಬಲಬದಿಯಲ್ಲಿ ತುರಾಯಿ ಇಳಿಬಿದ್ದಿರುತ್ತದೆ. ಕತ್ತಿನಲ್ಲಿ ರುದ್ರಾಕ್ಷಿಯ ಸರ, ಮೈಮೇಲೆ ಕಾವಿಯ ನಿಲುವಂಗಿ ನಡುವಿಗೆ ಮುತ್ತಿನ ಅಂಚಿನಿಂದ ಹೊಳೆಯುವ ಕಾಸೆ, ಶುಭ್ರವಸ್ತ್ರದ ಕಚ್ಚೆಯ ಪಂಚೆ–ಹೀಗೆ ಅಲಂಕೃತವಾದ ಕರಪಾಲದ ಅಯ್ಯ ಕಿವಿಗಳಿಗೆ ಒಂದು ಬಗೆಯ ಕುಂಡಲಗಳನ್ನು ಧರಿಸಿರುತ್ತಾನೆ. ಕಾಲಿಗೆ ಗೆಜ್ಜೆ, ಕೈಯಲ್ಲಿ ತಾಳ, ಮುಖಕ್ಕೆಲ್ಲ ಬಳಿದ ವಿಭೂತಿ, ಸೊಂಟಕ್ಕೆ ಸಿಕ್ಕಿಸಿದ ಕರವಸ್ತ್ರ–ಹೀಗೆ ನಾಟಕದ ಪಾತ್ರಧಾರಿಯಂತೆಯೇ ಸಿದ್ಧನಾಗಿ ನಿಲ್ಲುತ್ತಾನೆ. ಅಯ್ಯನ ಬಲಬದಿಯಲ್ಲಿ ನಿಂತ ಸಹನೃತ್ಯದವ ವೀರಗಾಸೆಯನ್ನು ಹಾಕಿ, ಬಿಳಿಯ ನಿಲುವಂಗಿಯನ್ನು ಧರಿಸಿ ನಡುವಿಗೆ ಒಂದು ಶುಭ್ರವಸ್ತ್ರವನ್ನು ಬಿಗಿದಿರುತ್ತಾನೆ. ತಲೆಗೆ ಸವಾರನಂತೆ ಪೇಟವನ್ನು ಕಟ್ಟಿ ತಾನೂ ಕಾಲಿಗೆ ಗೆಜ್ಜೆಯ ಸರವನ್ನು ಸುತ್ತಿರುತ್ತಾನೆ. ಅವನ ನಡುವಿನಲ್ಲಿ ಮಣ್ಣಿನ ಅಚ್ಚಿನ ಢುಮಿಕಿ ಇರುತ್ತದೆ. ಇದರ ಗತ್ತನ್ನು ಅನುಸರಿಸಿಯೇ ಹಾಡೂ ನೃತ್ಯವೂ ಸಾಗುವುದು. ಇನ್ನೊಂದು ಬದಿಯಲ್ಲೂ ಇಂಥದೇ ವೇಷದ ಮತ್ತೊಬ್ಬ ನೃತ್ಯದವನಿರುತ್ತಾನೆ. ಆತ ಕೈಯಲ್ಲಿ ತಾಳವನ್ನು ಮಾತ್ರ ಹಿಡಿದಿರುತ್ತಾನೆ.

**ಪ್ರಸಿದ್ಧ ಕರಪಾಲ ಕಲಾವಿದ ಸಿದ್ಧಯ್ಯನವರು ಮತ್ತು ಸಂಗಡಿಗರು**

ಚಪ್ಪರದ ಮುಂದೆ ಕುಳಿತವರಲ್ಲಿ ಮುಖ್ಯರಾದವರು ಮೃದಂಗ ಮತ್ತು ಹಾರ್ಮೋನಿಯಂ ನುಡಿಸುವ ಕಲಾವಿದರು. ಅವರ ಜೊತೆ ಕೆಲವು ಮಂದಿ ಹಿಮ್ಮೇಳ ಹಾಡುವವರೂ ಇರಬಹುದು. ಚಪ್ಪರದ ಒಂದು ಕಡೆ ಬಯಲಾಟದಲ್ಲಿನಂತೆಯೇ ದೇವರ ಪಟವನ್ನು ಇಟ್ಟು ಪೂಜಿಸುತ್ತಾರೆ.

ಕರಪಾಲ ಮೇಳ ಬಹುಮಟ್ಟಿಗೆ ಬಯಲಾಟ ಸಂಪ್ರದಾಯವನ್ನು ಹೋಲುತ್ತದೆ. ಬಯಲಾಟದ ಭಾಗವತರು ಹಾಡುಗಾರಿಕೆಯಲ್ಲಿ ಮುಂದಿನ ಸೊಲ್ಲನ್ನು ಎತ್ತಿಕೊಟ್ಟರೆ ಹಿಮ್ಮೇಳದವರು ಪೂರ್ಣಗೊಳಿಸುತ್ತಾರೆ. ಅದೇ ಕ್ರಮವನ್ನು ಇಲ್ಲಿಯೂ ಕಾಣಬಹುದು. ಬಯಲಾಟದಲ್ಲಿ ಭಾಗವತರ ಹಾಡಿಗೆ ಅನುಸಾರವಾಗಿ ಪಾತ್ರಧಾರಿಗಳು ಕುಣಿದರೆ ಇಲ್ಲಿ ಕುಣಿತವೂ ನಿರೂಪಕನ ಪಾಲಿಗೇ ಬರುತ್ತದೆ. ಮಾತುಗಾರಿಕೆಯೂ ಇವನದೇ ಆಗುತ್ತದೆ. ಹರಿಕಥೆ ಒಂದು ದೃಷಿಯಿಂದ ಕರಪಾಲ ಮೇಳದಂತೆಯೇ ನಡೆಯುವ ವಿಶಿಷ್ಟ ಕಲೆ, ಅಲ್ಲಿನ ದಾಸರು ಹಾಡುಗಾರಿಕೆ, ನೃತ್ಯ, ಅಭಿನಯ, ಕಥಾನಿರೂಪಣೆ ಎಲ್ಲವನ್ನೂ ತಾವೇ ನಿರ್ವಹಿಸುವವರು **(ನೋಡಿ– ಕೀರ್ತನ–ಕಲೆ)** ಆದರೆ ಅಲ್ಲಿ ಅವರ ಜೊತೆಗೆ ಇತರ ಕುಣಿತದವರು ಇರುವುದಿಲ್ಲ. ಕುಣಿತ ಸಂಗೀತ ಅಲ್ಲಿ ಪ್ರಧಾನವಲ್ಲ. ಕರಪಾಲ ಮೇಳದಲ್ಲಿ ಕಥೆಗಿಂತ ಕುಣಿತ, ಕುಣಿತಕ್ಕಿಂತ ಹಾಡು, ಹಾಡಿಗಿಂತ ಅಭಿನಯ ಮುಖ್ಯವಾದವು. ಇಲ್ಲಿಯೂ ಉಪಕಥೆಗಳುಂಟು ಅವೆಲ್ಲವೂ ಬಹುಮಟ್ಟಿಗೆ ಗ್ರಾಮಜೀವನದಿಂದಲೇ ಆಯ್ದ ಕಥೆಗಳು. ಭಾಷೆ ಗ್ರಾಮ್ಯ ಹಾಸ್ಯವೂ ಗ್ರಾಮ್ಯ. ಅಲ್ಲಿ ಪಾತ್ರಗಳೂ ಗ್ರಾಮದ ಯಾರೋ ವ್ಯಕ್ತಿಗಳ ಪ್ರತಿನಿಧಿಗಳೇ.

ಕರಪಾಲ ಮೇಳದ ಪ್ರಧಾನ ಕಥೆ ಮಾತ್ರ ಸಾಹಿತ್ಯಿಕ ಶೈಲಿಯಲ್ಲಿ ನಿರೂಪಿಸಲ್ಪಡುತ್ತದೆ. ಇಲ್ಲಿ ಶಿಷ್ಟ ಪುರಾಣ ಮೂಲದ ಕಥೆಗಳು ವಿರಳ. ಜನಪ್ರಿಯ ಮೂಲದ ಕಥೆಗಳೇ ಹೆಚ್ಚು. ಸಾಮಾನ್ಯ ಜನಪದ ಕಥೆಯೊಂದನ್ನು ಆರಿಸಿಕೊಂಡು ಅದಕ್ಕೆ ಜೀವಭಾವಗಳನ್ನು ತುಂಬಿ, ಸಾಕಷ್ಟು ವಿಸ್ತರಿಸಿಕೊಂಡು ನಿರೂಪಿಸಲಾಗುತ್ತದೆ. ಪ್ರಾಣಿ ಕಥೆಗಳು, ಹಾಸ್ಯಕಥೆಗಳು ಮುಂತಾದ ಸರಳಕಥೆಗಳನ್ನು ಕೈಬಿಟ್ಟು ಸಂಕೀರ್ಣ ಕಥೆಗಳನ್ನು ಕಥೆಗಾರ ಆರಿಸಿಕೊಂಡು ಕರಪಾಲ ಮೇಳಕ್ಕೆ ಅಳವಡಿಸಿಕೊಂಡಿರುತ್ತಾನೆ. ಶೋಕಸ್ಥಾಯಿಯ ಹಿನ್ನೆಲೆಯಲ್ಲಿ ಜನಸಾಮಾನ್ಯರ ಮನಸ್ಸನ್ನು ಕಲಕುವ ಕಥೆಗಳೇ ಆಗಬೇಕು. ನಾಯಕ ಅಥವಾ ನಾಯಕಿ ವಿರೋಧಿಗಳಿಂದ ಅನೇಕ ಸಂಕಷ್ಟಗಳಿಗೆ ಒಳಗಾಗಿ ಕ್ರಮೇಣ ಯಾವುದೋ ಅತಿಮಾನುಷ ಶಕ್ತಿಯ ನೆರವಿನಿಂದಲೋ ಇತರ ವ್ಯಕ್ತಿಗಳ ಆಶ್ರಯದಿಂದಲೋ ಚೇತರಿಸಿಕೊಂಡು ಅಡಚಣೆಗಳನ್ನೆಲ್ಲ ದಾಟಿ ಮತ್ತೆ ತಮ್ಮ ಪ್ರಿಯವ್ಯಕ್ತಿಗಳನ್ನು ಕೂಡುವರು. ಅಧರ್ಮಕ್ಕೆ ಸೋಲಾಗಿ ಧರ್ಮಕ್ಕೆ ಜಯವಾಗುವುದು. ಶಿಷ್ಟ ರಕ್ಷಣೆಗಾಗಿ, ದುಷ್ಟರಿಗೆ ಶಿಕ್ಷೆಯೊದಗುವುದು. ಕಾಡಸಿದ್ಧಮ್ಮ, ನೀಲಕಂಠ ರೂಪಾವತಿ, ಬಸವಕುಮಾರ ಲೋಹಿತಕುಮಾರ, ಶಿವಯೋಗಿ ಪರಯೋಗಿ– ಇಂಥ ಜನಪದ ಕಥೆಗಳು ಕರಪಾಲದ ಅಯ್ಯನವರ ಬಾಯಲ್ಲಿ ಅಪೂರ್ವ ಕಲಾಕೃತಿಗಳಾಗಿ ರಂಜಿಸುತ್ತವೆ; ಸೊಟಗಕ್ಕ, ಅಣ್ಣತಮ್ಮ ಎಂಬ ತಮ್ಮ ಮೂಲದ ಸಾಧಾರಣ ಹೆಸರುಗಳನ್ನು ಕಳೆದುಕೊಂಡು ಆಕರ್ಷಕ ಶೀರ್ಷಿಕೆಗಳನ್ನು ಪಡೆದುಕೊಂಡು ಒಂದು ಪ್ರೌಢ ಕಥೆಗಳಾಗುತ್ತವೆ. ಕಥೆಯಲ್ಲಿನ ಪಾತ್ರಗಳಿಗೆಲ್ಲ ಒಳ್ಳೆಯ ಹೆಸರುಗಳು ಪ್ರಾಪ್ತವಾಗುತ್ತವೆ. ಹಳೆಯ ಹಂದರವೇ ಇದ್ದರೂ ಅನೇಕ ಹೊಸ ಘಟನೆಗಳು ಮೈತುಂಬಿ ಬರುತ್ತವೆ.

ಕರಪಾಲ ಮೇಳದಲ್ಲಿ ಬಯಲಾಟದ ಸಂಸ್ಕೃತ ಭೂಯಿಷ್ಠ ಸಂಭಾಷಣೆಯಾಗಲಿ, ಹಾಡುಗಳಾಗಲೀ ಇಲ್ಲ. ಆದರೂ ಕೆಲವು ಪ್ರಾರ್ಥನಾಗೀತೆಗಳಲ್ಲಿ ಮಂಗಳಾರತಿ ಗೀತೆಗಳಲ್ಲಿ ಹಾಡುಗಳ ಪ್ರಭಾವ ಇರುವುದನ್ನು ಕಾಣಬಹುದು.

ಶ್ರೀ ಗುರುವರನೆ ಜಯತು
ಯೋಗಿ ವಿಭೂಷಣ ಬೋಗಿವರನೆ ಜಯತು

ಇಂಥ ಹಾಡುಗಳು ಬಯಲಾಟದಿಂದ ಕರಪಾಲಮೇಳಕ್ಕೆ ಬಂದವು. ಕೆಲವು ವೇಳೆ ಶಿವಶರಣರ ತತ್ತ್ವಗಳಿಂದ ಆಯ್ದ ಹಾಡುಗಳೂ ಬರುತ್ತವೆ.

ಭಿಕ್ಷವ ನೀಡಿರಮ್ಮ ಜಂಗಮರಿಗೆ
ಭಿಕ್ಷವ ನೀಡಿರಮ್ಮ
ಭಿಕ್ಷವ ನೀಡಿರಿ ಮೋಕ್ಷವ ಪಡೆಯಿರಿ
ಭಿಕ್ಷವ ನೀಡಿರಮ್ಮ

ಇಂಥ ಕೆಲವು ಪದಗಳಲ್ಲದೆ ಸಂದರ್ಭಾನುಸಾರವಾಗಿ ರಚಿಸಿಕೊಂಡ ಕೆಲವು ಸ್ವತಂತ್ರ ಗೀತೆಗಳೂ ಇರುತ್ತವೆ.

ನಾನೊಲ್ಲೆ ನಾನೊಲ್ಲೆನೆ
ನೀ ನೀಡುವ ಭಿಕ್ಷವ
ನಾನೊಲ್ಲೆ ನಾನೊಲ್ಲೆನೆ
ಬಂಜೆಕೈಯೊಳ ಭಿಕ್ಷ
ಮಂಜುಳ ದಾನವ–ನಾನೊಲ್ಲೆ ನಾನೊಲ್ಲೆನೆ

ಈ ಬಗೆಯ ಕೆಲವು ಹಾಡುಗಳನ್ನು ಬಿಟ್ಟರೆ ಕರಪಾಲ ಮೇಳಕ್ಕೆ ಮೀಸಲಾದ ವಿಶಿಷ್ಟವರ್ಗದ ದ್ವಿಪದಿಗಳನ್ನು ಹಾಡಲಾಗುತ್ತದೆ. ಬಹುಮಟ್ಟಿಗೆ ಕರಪಾಲದ ಮುಖ್ಯ ಆಕರ್ಷಣೆಯೆಲ್ಲ ಈ ಮೇಳದ ಮೇಲೆಯೇ ನಿಂತಿರುತ್ತದೆ. ಕಥೆಯ ಆರಂಭ, ಬೆಳೆವಣಿಗೆ, ಮುಕ್ತಾಯ–ಹೀಗೆ ಎಲ್ಲ ಘಟ್ಟಗಳಲ್ಲಿಯೂ ಆಯಾ ಸನ್ನಿವೇಶಕ್ಕೆ ತಕ್ಕಂತೆ ಈ ಹಾಡುಗಳನ್ನು ಬಳಸಿಕೊಳ್ಳಲಾಗುತ್ತದೆ. ಹಾಡುಗಳ ಜೋಡಣೆ, ಕಥಾ ಬೆಳೆವಣಿಗೆ ಇವುಗಳಲ್ಲಿ ಮಾರ್ಗಕಾವ್ಯಗಳ ರೀತಿಯೇ ಕಂಡುಬರುತ್ತದೆ. ಆರಂಭದಲ್ಲಿ ಮುಖ್ಯ ಕಥೆಗಾರ ತಮ್ಮ ಕಲಾಜ್ಞಾನದ ಬಗ್ಗೆ ನಮ್ರವಾಗಿ ಸಭಿಕರಲ್ಲಿ ವಿನಂತಿಮಾಡಿಕೊಳ್ಳುತ್ತಾನೆ. ಮೃದು ಮಧುರ ನುಡಿಗಳಲ್ಲಿ

ನಾವು ಬಲವರಲ್ಲ. ನಾವು ತಿಳಿದವರಲ್ಲ
ಯಾವ ತಪ್ಪಿದ್ದರೂ ತಿದ್ದಿಕೊಳಬೇಕು
ತಿದ್ದಿಕೊಳಬೇಕು.

ದೇವತಾಸ್ತುತಿಯೊಡನೆ ಕಥೆಯನ್ನು ಆರಂಭಿಸುವ ಸಂಪ್ರದಾಯ ಗಮನಾರ್ಹವಾದುದು.

ತಪ್ಪುಗಳಿದ್ದರೆ ಒಪ್ಪಿಕೊಳ್ಳಯ್ಯ ದೇವ
ಸಾವಿರದ ಒಂದು ಶರಣಾರ್ಥಿ ನಿನಗೆ

ಹೀಗೆ ತಮ್ಮ ಆರಾಧ್ಯದೈವದ ಪಾದಮೂಲಕ್ಕೆ ಶರಣಾರ್ಥಿಯನ್ನು ಅರ್ಪಿಸಿ ತಾಳ ಮೇಳಗಳೊಡನೆ ಕಂಥಾರಂಭ ಮಾಡುತ್ತಾನೆ. ಮುಖ್ಯ ನಿರೂಪಕ. ವಿಶಿಷ್ಟಭಂಗಿಯಲ್ಲಿ ಹೆಜ್ಜೆಯನ್ನು ಹಾಕುತ್ತ ತಾಳದ ನಾದಕ್ಕೆ ತಕ್ಕಂತೆ ಬಾಗುತ್ತ ಬಳುಕುತ್ತ ಹಿಂದೆ ನಾಲ್ಕು ಗಜ ಸರಿಯುತ್ತ ಮತ್ತೆ ಮುಂದೆ ಚಪ್ಪರದ ಅಂಚನ್ನು ಮುಟ್ಟುತ್ತ ಕುಣಿಯತೊಡಗುತ್ತಾನೆ–

ಮುಂದಣ ಕತೆಯ ಅದರಂದವ ಪೇಳುವೆ
ಚಂದ್ರಶೇಖರ ನಮಗೆ ವರಕೊಡೆಲೊದೇವ

ಕರಪಾಲದ ಹಾಡುಗಳಲ್ಲಿ ಅನೇಕ ವರ್ಣನೆಗಳು ಬರುತ್ತವೆ. ಆದರೂ ಎಲ್ಲಿಯೂ ಅನಗತ್ಯವಾಗಿ ವಿಸ್ತರಿಸುವ ಬಗೆ ಕಾಣುವುದಿಲ್ಲ. ತನ್ನ ಅನುಭವಕ್ಕೆ ಮಾತ್ರ ನಿಲುಕುವ ವರ್ಣನೆಗಳನ್ನು ಕಥೆಗಾರ ತರುತ್ತಾನೆ. ನಗರ ವರ್ಣನೆಯ ವೈಖರಿಯಿದು;

ಹಾಲಮಾರುವ ಬೀದಿ ನೂಲುಮಾರುವ ಬೀದಿ
ಶಾಲು ಸಕಲಾತಿಗಳ ಮಾರುವ ಬೀದಿ

ಪ್ರಕೃತಿ ವರ್ಣನೆಯೂ ಕಥಾಸೂತ್ರದೊಡನೆ ಬೆಸೆದುಕೊಂಡೇ ಬರುತ್ತದೆ–

ಘೋರ ಕಾನನದೊಳಗೆ ನೀರಿಲ್ಲ. ನೆರಳಿಲ್ಲ
ಹಾರುವ ಪಕ್ಷಿಗಳ ಸುಳಿವಿಲ್ಲ ದೇವ
ಅಡವಿಗಿಡಮರದಲ್ಲಿ ಎಡವಿ ಮುಗ್ಗರಿಸುತ್ತ
ತಡವರಿಸಿ ಹೊರಟಳು ಅರಣ್ಯದೊಳಗೆ

ಕರಪಾಲದ ಹಾಡುಗಳು ಅತ್ಯಂತ ಸರಳವಾಗಿ ಕಂಡರೂ ಉತ್ತಮ ಕಾವ್ಯಾಂಶದಿಂದ ಕೂಡಿರದಿದ್ದರೂ ಆಯಾ ಸನ್ನಿವೇಶದ ಹಿನ್ನೆಲೆಯಲ್ಲಿ ಅಪೂರ್ವ ಮಟ್ಟನಲ್ಲಿ ಹಾಡಲ್ಪಡುವುದ ರಿಂದ ಮೃದು ನೃತ್ಯವೂ ಅಲ್ಲಿ ಬೆರೆಯುವುದರಿಂದ ಅತ್ಯಂತ ಸ್ವಾರಸ್ಯಪೂರ್ಣವಾಗಿ ತೋರಿಬರುವುದರ ಜೊತೆಗೆ ನೇರವಾಗಿ ಅರ್ಥವಾಗುವುದರಿಂದ ಜನರ ಆಸಕ್ತಿಯನ್ನು ಸೆಳೆದುಕೊಳ್ಳುತ್ತವೆ. ಆತ್ಮೀಯವಾದ ಶೈಲಿಯಲ್ಲಿ ಅಭಿನಯದೊಂದಿಗೆ ಕಥೆಗಾರ ಹಾಡುಗಳನ್ನೂ ಎತ್ತಿಕೊಳ್ಳುವ ರೀತಿ ಆಕರ್ಷಕವಾಗಿರುತ್ತದೆ; ನೆರೆದವರ ಹೃದಯವನ್ನು ಕರಗಿಸುವಂತಿರುತ್ತದೆ.

ಎನ್ನ ಮಗನೆ ಬಾರೊ ಹೊನ್ನ ಪುತ್ಥಳಿಗೊಂಬೆ
ಬಾರಯ್ಯ ನನಮಗನೆ ಮುದ್ದುಮಗನೆ ಬಾರೊ

ಇಂಥ ಎಷ್ಟೋ ಹಾಡುಗಳು ಕಥೆಯ ಮಧ್ಯೆ ಮಧ್ಯೆ ಬರುತ್ತವೆ. ಯಾವುದೋ ಘಟ್ಟದಲ್ಲಿ ಮುಖ್ಯ ಕಥೆಯನ್ನು ನಿಲ್ಲಿಸಿ ಶೋಕಭಾವದಿಂದೂ ತಣಿದ ಪ್ರೇಕ್ಷಕರನ್ನು ನಗೆಯಲ್ಲಿ ತೇಲಿಸುವ ಉಪಕಥೆ ಮುಗಿದಮೇಲೆ ಮತ್ತೆ ಮುಖ್ಯ ಕಥೆಗೆ ಬರುವ ಬಗೆಯೂ ಸುಂದರವಾಗಿರುತ್ತದೆ.

ಅಲ್ಲಿಗಲ್ಲಿಗೆ ಕಥೆಯು ಮಲ್ಲಿಗೆ ವಾಸನೆಯು
ಬಲ್ಲಂಥ ಜಾಣರಿಗೆ ಇದು ಮಧುರವಯ್ಯಾ
ಅತಿಮಧುರವಯ್ಯಾ
ಮುಂದಲ ಕಥೆಯ ಅದರಂದವ ಪೇಳುವೆನು
ಚಂದ್ರಶೇಖರ ನಮಗೆ ವರಕೊಡೆಲೊ ದೇವ
ವರಕೊಡೆಲೋ ದೇವ

ಕರಪಾಲ ಕಥೆ ಗುರುಶಿಷ್ಯರ ಸಂಭಾಷಣೆಯಲ್ಲಿ ಸಾಗುತ್ತದೆ. ಮುಖ್ಯ ಕಥೆಗಾರ ಗುರು. ತನ್ನ ಪಕ್ಕದ ನೃತ್ಯಗಾರನನ್ನು ಕುರಿತು ಅವನೆನ್ನುತ್ತಾನೆ–

ಅಯ್ಯ ಮಗು ಕೇಳಬೇಕಯ್ಯ
ಆಗಲಿ ಗುರುವೇ. . . . . .
ಶುಭ ದಿನ, ಶುಭಲಗ್ನ, ಶುಭ ತಿಥಿಯಲ್ಲಿ
ಚದುರಂಗರಾಯರು ಹೇಗೆ ಹೊರಟಿದ್ದಾರಯ್ಯ. . . . . .
ಹೇಗೆ ಹೊರಟಿದ್ದಾರೆ ಗುರುವೇ. . . . . .

ಹೀಗೆ ಸಂಭಾಷಣೆಯಿಂದ ತಟ್ಟನೆ ಹಾಡಿಗೆ ಜಿಗಿಯುತ್ತಾನೆ–

ಕುದುರೆಯ ಕುಣಿಸುತ್ತ ಹುರಿಮಿಸೆ ತಿರುವುತ
ಹೊರಟನೇ ರಾಯ ಚದುರಂಗರಾಯ

ಹಾಡನ್ನು ಮುಗಿಸಿ ಮತ್ತೆ ಮನೋಜ್ಞವಾದ ಗದ್ಯಕಥನಕ್ಕೆ ತೊಡಗುತ್ತಾನೆ.

ಅ ಪರಮಾತ್ಮನ ಲೀಲಾಮಯದಿಂದ ಚದುರಂಗರಾಯರು ಹೋಗುತ್ತಿರಬೇಕಾದರೆ; ಮುಂದೆ ಏನಾಯಿತಪ್ಪಾ?

ಏನಾಯಿತು ಗುರುವೆ?

ಪಂಚವರ್ಣದ ಗಿಳಿಯೊಂದುಕಾಣಿಸಿಕೊಂಡಿದೆ. ಆ ಕಾಡಾರಣ್ಯದಲ್ಲಿ ಚದುರಂಗ ರಾಯರು ಆ ಗಿಣಿಯನ್ನು ಹಿಂಬಾಲಿಸಿ ಹೋಗಿದ್ದಾರೆ.

ಕರಪಾಲ ಮೇಳದ ವಚನ ಭಾಗವೂ ಒಂದು ರೀತಿಯಲ್ಲಿ ಪದ್ಯಗಂಧಿಯಾಗಿಯೇ ಇರುತ್ತದೆ. ತನ್ನದೇ ಆದ ಗತ್ತಿನಲ್ಲಿ ನಿರೂಪಿಸುವುದರ ಮೂಲಕ ವಚನಭಾಗವನ್ನು ಆಕರ್ಷಕವಾಗಿರುವಂತೆ ಮಾಡಿರುತ್ತದೆ.

ಕರಪಾಲ ಎಂಬ ಶಬ್ದ ಕರಪಲ್ಲ. ಕರಪಲ್ಲವ ಕರತಾಲ ಎಂಬ ಶಬ್ದಗಳ ರೂಪಾಂತರ ವಿರಬೇಕೆಂದು ಊಹಿಸಲಾಗಿದೆ. ಬೆರಳುಗಳ ಸಂಜ್ಞೆಯ ಮೂಲಕ ಪ್ರೇಕ್ಷಕರ ಹೆಸರನ್ನು ಹೇಳುವ ಒಂದು ಸಂಪ್ರದಾಯ ಕರಪಾಲ ಮೇಳದಲ್ಲಿದ್ದಂತೆ ತೋರುತ್ತದೆ. ಗುರು ನಿರ್ದಿಷ್ಟ

ವ್ಯಕ್ತಿಯ ಹೆಸರನ್ನು ತಿಳಿದು ಜನರ ನಡುವೆ ನಿಂತ ತನ್ನ ಶಿಷ್ಯನಿಗೆ ಬೆರಳುಗಳ ಮೂಲಕ ಕೆಲವು ಸಂಜ್ಞೆಗಳನ್ನು ತೋರುತ್ತಾನೆ. ಅದರ ಮೂಲಕ ಶಿಷ್ಯ ಸಂಬಂಧಪಟ್ಟ ವ್ಯಕ್ತಿಯ ಹೆಸರನ್ನು ಊಹಿಸಿ ಹೇಳುತ್ತಾನೆ. ಹೀಗೆ ಈ ಹೆಸರು ಹೇಳುವ ಸಂಪ್ರದಾಯವೂ ಹಾಡಿನಲ್ಲಿಯೇ ಬೆರೆತು ಬರುತ್ತದೆ. ಗುರು ಸೂಚಿಸಿದ ಹೆಸರು ಕಲ್ಲಪ್ಪ ಅಗಿದ್ದರೆ–

ಕಲ್ಲಪ್ಪ ಹೌದೇನ್ರಿ
ಮತ್ತೀನ್ಯಾರ್ ಹೇಳಯ್ಯಾ
ಸುವ್ವಿಭಾ ಚೆನ್ನಬಸವಯ್ಯಸುವ್ವಿ

ಹೀಗೆ ಕರಪಲ್ಲವ (ಬೆರಳು) ಎಂಬ ಶಬ್ದದಿಂದ ಕರಪಲ್ಲ ಅಥವಾ ಕರತಾಲ ಬಂದಿರಬೇಕು. ಕರತಾಲ ಎಂಬ ಮಾತು ಕೈಯ ತಾಳವನ್ನು ಸೂಚಿಸುವಂತಿದ್ದರೂ ಅಷ್ಟು ಸಮರ್ಪಕವಾಗಿ ತೋರುವುದಿಲ್ಲ.

ಕರಪಾಲ ಮೇಳ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಬಂದ ಒಂದು ಶ್ರೇಷ್ಠ ಜನಪದ ಕಲೆ. ದಕ್ಷಿಣ ಕರ್ನಾಟಕದ ಎಲ್ಲ ಕಡೆಗಳಲ್ಲೂ ಇದು ಕಾಣಬರದಿದ್ದರೂ ತುಮಕೂರು, ಹಾಸನ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಅಲ್ಲಲ್ಲಿ ಇನ್ನೂ ಉಳಿದಿದೆ. ಕೈಬೆರಳಿನ ಸಂಜ್ಞೆಗಳ ಮೂಲಕ ಹೆಸರನ್ನು ಹಾಕುವ ಪದ್ಧತಿ ದೂರವಾಗುತ್ತಿದ್ದರೂ ಮೇಳವನ್ನು ನಡೆಸುವ ಸಂಪ್ರದಾಯ ಮಾತ್ರ ಈಗಲೂ ಉಸಿರಾಡುತ್ತಿದೆ. ಸಾಮಾನ್ಯವಾಗಿ ವೀರಶೈವ ಧರ್ಮದ ಅಯ್ಯಗಳು ಈ ಕರಪಾಲ ಮೇಳವನ್ನು ನಡೆಸಿಕೊಂಡು ಬಂದಿದ್ದರು ಬೇರೆ ಧರ್ಮೀಯರು ಅಲ್ಲಲ್ಲಿ ಭಾಗವಹಿಸಿದ ನಿದರ್ಶನಗಳೂ ಇವೆ. ಮಹಮದೀಯ ಧರ್ಮದವರೂ ಕರಪಾಲ ಮೇಳವನ್ನು ಅತ್ಯಂತ ಆಕರ್ಷಕ ರೀತಿಯಲ್ಲಿ ನಡೆಸಿದ ಸಂದರ್ಭಗಳನ್ನು ತುಮಕೂರು ಜಿಲ್ಲೆಯಲ್ಲಿ ಕಾಣಬಹುದು.

ಹಬ್ಬಹರಿದಿನಗಳಲ್ಲಿ, ಪುಣ್ಯದಿನಗಳಲ್ಲಿ ಕರಪಾಲ ಮೇಳವನ್ನು ನಡೆಸಲಾಗುವುದು ಯಕ್ಷಗಾನ ಬಯಲಾಟಗಳಲ್ಲಿ ತೊಗಲು ಬೊಂಬೆ ಹಾಗೂ ಸೂತ್ರದ ಬೊಂಬೆಯಾಟಗಳಲ್ಲಿ ಆಸಕ್ತಿಯನ್ನು ಕಳೆದುಕೊಂಡಿರುವ ಜನ ಕರಪಾಲ ಮೇಳದಲ್ಲಿನ್ನೂ ಆಸಕ್ತಿಯನ್ನುಳಿಸಿಕೊಂಡು ಬಂದಿರುವುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. (ಜಿ.ಎಸ್.ಪಿ.)

**ಕರಬೂಜ :** ಜನಪ್ರಿಯವೆನಿಸಿರುವ ಬೇಸಗೆಯ ಹಣ್ಣಿನ ಸಸ್ಯ. ಇದರ ಕಾಯಿಗಳನ್ನು ತರಕಾರಿಯಾಗಿ ಉಪಯೋಗಿಸುವುದೂ ಉಂಟು. ಕರಬೂಜದ ಹಣ್ಣಿನಿಂದ ತಂಪಾದ ಪಾನಕ ಮಾಡುತ್ತಾರೆ. ಇದನ್ನು ಏನನ್ನೂ ಹಾಕದೆ ತಿನ್ನಬಹುದು ಅಥವಾ ಸಕ್ಕರೆಯೊಡನೆ ತಿನ್ನಬಹುದು. ಹಳದಿ ಬಣ್ಣದ ಕರಬೂಜ ತಳಿಗಳಲ್ಲಿ ಸಿ ಜೀವಸತ್ವ ಇತರ ತಳಿಗಳಿಗಿಂತ ಅಧಿಕವಾಗಿದೆ. ಇದರ ಬೀಜಗಳನ್ನೂ ಔಷಧಿಗಳಲ್ಲಿ ಉಪಯೋಗಿಸುತ್ತಾರೆ. ಕರಬೂಜ ಕೇವಲ ಹಿತಕರ ಆಹಾರ ಮಾತ್ರವಲ್ಲದೆ, ಮನುಷ್ಯನಿಗೆ ಆರೋಗ್ಯ ಕೊಡುವ ಪುಷ್ಟಿಕರವಾದ ಆಹಾರವೂ ಹೌದು. ಇದರ ಹಣ್ಣಿನಲ್ಲಿರುವ ಆಹಾರಾಂಶಗಳು, ಈ ರೀತಿ ಇವೆ: ತೇವಾಂಶ ಶೇ. 92.76 ಪ್ರೋಟೀನುಗಳು ಶೇ. 0.6 ಕೊಬ್ಬು ಶೇ. 0.2 ಬೂದಿ ಶೇ. 0.6 ಕ್ಯಾಲ್ಸಿಯಂ ಶೇ. 0.016 ನಾರು ಶೇ. 0.5 ಸಕ್ಕರೆ ಶೇ. 0.5 ಕಬ್ಬಿಣ ಶೇ. 0.0004 ಹಾಗೂ ಪ್ರತಿ 100 ಗ್ರಾಮಿಗೆ ಎ ಜೀವಾತು 2400 ಐ. ಯು; ಬಿ ಜೀವಾತು 130 ಗ್ರಾಂ; ಸಿ ಜೀವಾತು 25 ಮಿ. ಗ್ರಾಂ. ಗಳಷ್ಟಿವೆ.

ಕರಬೂಜ ಸಸ್ಯದ ಉಗಮಸ್ಥಾನದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಸಾಮಾನ್ಯವಾಗಿ ಇದು ಇರಾನ್ ಕಣಿವೆ ಮತ್ತು ಭಾರತದ ವಾಯವ್ಯ ದೇಶಗಳ ಮೂಲವಾಸಿ ಎಂಬುದನ್ನು ಬಹಳಮಂದಿ ಸಂಶೋಧಕರು ಒಪ್ಪುತ್ತಾರೆ.

ಕರಬೂಜ ಕುಕುರ್ಬಿಟೇಸೀ ಕುಟುಂಬದ ಕುಕುಮಿಸ್ ಜಾತಿಯ ಮೆಲೊ ಪ್ರಭೇದಕ್ಕೆ ಸೇರಿದೆ. ಇದರ ಕಾಂಡ ಬಲಹೀನವಾಗಿದ್ದು ನೇರವಾಗಿ ಮೇಲಕ್ಕೆ ಬೆಳೆಯಲಾರದು. ಇದು ನೆಲದ ಮೇಲೆಯೇ ಹರಡಿ ಬೆಳೆಯುವ ಹಂಬು ಸಸ್ಯ. ಹಲವಾರು ಏಣುಗಳಿಂದ ಕೂಡಿದ ಇದರ ಮೇಲೆಲ್ಲ ಮೃದುವಾದ ಹಾಗೂ ನವುರಾದ ಕೂದಲುಗಳಿವೆ. ಎಲೆ ವೃತ್ತಾಕಾರ. ಕರನೆಯಾಕಾರ ಅಥವಾ ಮೂತ್ರ ಪಿಂಡಾಕಾರ; ಎಲೆಯಲಗು ನಿರ್ದಿಷ್ಟವಾದ ಭಾಗಗಳಾಗಿ ಸೀಳಿಲ್ಲ. ಅಂಚು ಗರಗಸದಂತೆ; ಎಲೆಯಮೇಲೆ ಕೂದಲುಗಳಿವೆ. ಎಲೆಯ ಕಂಕುಳಲ್ಲಿ ಒಂಟಿಹೂಗಳು ಅರಳುತ್ತವೆ. ಅವು ಭಿನ್ನಲಿಂಗಿಗಳು. ಹೂದಳಗಳು 5. ಪರಸ್ಪರ ಕೂಡಿಕೊಂಡಿವೆ. ಹೂದಳ ಸಮೂಹ ಗಂಟೆಯಾಕಾರದ್ದು, ಅದರ ಬಣ್ಣ ಹಳದಿ. ಗಂಡು ಹೂವಿನಲ್ಲಿ 5 ಕೇಸರಗಳಿವೆ. ಹೆಣ್ಣು ಹೂವಿನಲ್ಲಿ ನೀಚಸ್ಥಾನದ ಅಂಡಾಶಯವಿದೆ. ಮೂರು ಕಾರ್ಪೆಲುಗಳಿರುವ ಇದರಲ್ಲಿ ಹಲವಾರು ಅಂಡಕಗಳಿವೆ. ಫಲ ಗುಂಡು ಅಥವಾ ಆಯತಾಕಾರವೂ ರಸಭರಿತವೂ ಆಗಿದೆ. ಇದನ್ನು ಪೆಪೊ ಎನ್ನುತ್ತಾರೆ. ಇದಕ್ಕೆ ಒರಟಾದ ಸಿಪ್ಪೆಯೂ ಮೆದುವಾದ ತಿರುಳೂ ಇವೆ.

**ಬೇಸಾಯ:** ಕರಬೂಜದ ಬೇಸಾಯಕ್ಕೆ ಹೆಚ್ಚು ಉಷ್ಣತೆ ಮತ್ತು ಒಣ ವಾತಾವರಣ ಅಗತ್ಯ. ಸು. $30^0$ ಸೆಂ. ಉಷ್ಣತೆಯ ಉತ್ತಮ ತಂಪಾದ ಹವಾಗುಣದಲ್ಲಿ ಹಲವಾರು ರೋಗಗಳಿಗೆ ಬಲಿಯಾಗುತ್ತದೆ. ಕಾಯಿಗಳು ಹಣ್ಣಾಗುವ ಸಮಯದಲ್ಲಿ ಮಣ್ಣಿನಲ್ಲಿ ಅಧಿಕ ತೇವಾಂಶವಿದ್ದರೆ ಕೀಳುದರ್ಜೆಯ ಫಲವನ್ನು ಕೊಡುತ್ತದೆ. ಈ ಬೆಳೆ ಯಾವ ಹಂತದಲ್ಲಿಯೂ ಹಿಮವನ್ನು ಸಹಿಸುವುದಿಲ್ಲ. ಸಾಮಾನ್ಯವಾಗಿ ಕರಬೂಜವನ್ನು ನದಿ, ಕೆರೆ ಮುಂತಾದವುಗಳ ದಡದಲ್ಲಿರುವ ಮರಳು ಅಥವಾ ಮರಳು ಗೋಡು ಮಣ್ಣಿನಲ್ಲಿ ಬೆಳೆಸುತ್ತಾರೆ. ಆದರೆ ಇದನ್ನು ರೇವೆಗೋಡು, ಜೇಡಿ ಗೋಡು ಮಣ್ಣುಗಳಲ್ಲಿ ಸಹ ಬೆಳೆಸಬಹುದು. ಆದರೆ ಜಿಗಟಾಗಿರುವ ಜೇಡಿ ಮಣ್ಣಿನಲ್ಲಿ ಇದರ ಬೇಸಾಯ ಯಶಸ್ವಿಯಾಗುವುದಿಲ್ಲ. ಇದರ ಬೇಸಾಯಕ್ಕೆ pH 6.0 ರಿಂದ 6.7ರವರೆಗಿನ ಕ್ಷಾರೀಯ ಮಣ್ಣು ಯೋಗ್ಯವಾದದ್ದು.

ಕರಬೂಜದ ಅನೇಕ ತಳಿಗಳು ಬೇಸಾಯದಲ್ಲಿವೆ. ಸ್ಥಾನೀಯ ತಳಿಗಳು ಇಳುವರಿ ದೃಷ್ಟಿಯಿಂದ ಉತ್ತಮವಲ್ಲ. ಹಣ್ಣಿನ ಗಾತ್ರ, ಆಕಾರ ಮತ್ತು ಬಣ್ಣದ ಮೇಲೆ ತಳಿಗಳ ವಿಂಗಡಣೆ ಮಾಡಿದೆ. ಪಿ. ಎಂ. ಆರ್., 45. ಜುಕುಂಬ ಕ್ಯಾಂಪೊ ಮುಂತಾದ ಹೆಚ್ಚು ಇಳುವರಿ ಕೊಡುವ ವಿದೇಶಿ ತಳಿಗಳು ಹೆಚ್ಚಿನ ಜನಪ್ರಿಯತೆಗಳಿಸಿವೆ. ಆಫ್ಘಾನಿಸ್ತಾನದ ಸರ್ದ ಮೆಲನ್ ಎಂಬ ತಳಿ ಸಿಹಿಯಾದ ದಪ್ಪ ತಿರುಳು ಮತ್ತು ಮಧುರ ವಾಸನೆಯಿಂದ ಕೂಡಿದ್ದೂ ಹೆಚ್ಚು ಇಳುವರಿ ಕೊಡುವುದರಿಂದ ಅದರ ಬೇಸಾಯ ಅಧಿಕ ಪ್ರಮಾಣದಲ್ಲಿ ನಡೆದಿದೆ. ಲಕ್ನೊ ಸಫೇದ್, ಅಲಹಾಬಾದ್, ಹರಿದ್ವಾರ್, ಫೈಜಾಬಾದ್, ಕನೂಜ್ ಮುಂತಾದವುಗಳು ಭಾರತ ದೇಶದ ತಳಿಗಳು. ಕರ್ನಾಟಕ ರಾಜ್ಯದಲ್ಲಿ ಕಾವೇರಿ, ಗಂಜಾಂ ಜಾಮ್ ಮತ್ತು ಬನಾ ಸ್ವತ್ರಿ ಎಂಬ ತಳಿಗಳು ಬೇಸಾಯದಲ್ಲಿವೆ.

ಬಿತ್ತನೆ ಪ್ರಮಾಣ: ಎಕರೆಗೆ ಸು. 750 ಗ್ರಾಂಗಳಿಂದ 1 ಕಿಗ್ರಾಂ ಬೀಜ ಬೇಕಾಗುತ್ತದೆ. ಈ ಪ್ರಮಾಣ ಬೀಜದ ಗಾತ್ರ ಮತ್ತು ತೂಕವನ್ನು ಅನುಸರಿಸಿ ಇದೆ.

ಕರಬೂಜ ಅಪ್ಪಟ ಬೇಸಗೆ ಬೆಳೆ. ಸಾಮಾನ್ಯವಾಗಿ ನವಂಬರ್–ಫೆಬ್ರವರಿ ವರೆಗೆ ಇದರ ಬೀಜವನ್ನು ಬಿತ್ತುವರು. ಉತ್ತರ ಭಾರತದಲ್ಲಿ ಹೆಚ್ಚು ಹಿಮ ಬೀಳುವುದರಿಂದ ಬಿತ್ತನೆಯ ಅವಧಿ ಫೆಬ್ರವರಿ ಮಾರ್ಚ್ ತಿಂಗಳುಗಳಿಗೆ ಸೀಮಿತವಾಗಿದೆ. ಮಣ್ಣನ್ನು 6' ಅಂತರದಲ್ಲಿ 2'–3' ಅಗಲ ಮತ್ತು ಅಷ್ಟೇ ಎತ್ತರದ ದಿಂಡುಗಳನ್ನು ಮಾಡಿ ಅದರ ಮೇಲೆ 1' ಅಂತರದ ಸಾಲುಗಳಲ್ಲಿ ಬೀಜವನ್ನು ಬಿತ್ತುತ್ತಾರೆ. ಕೆರೆ ಮತ್ತು ನದಿಗಳ ಅಂಗಳದಲ್ಲಿ ಇದರ ಬೇಸಾಯ ಮಾಡುವಾಗ ಎಕರೆಗೆ 30–35 ಗಾಡಿ ಕೊಟ್ಟಿಗೆ ಗೊಬ್ಬರವನ್ನು ತಳಗೊಬ್ಬರವಾಗಿ ಹಾಕಿ, ಅನಂತರ ಮಧ್ಯವರ್ತಿ ಬೇಸಾಯ ಮಾಡುವಾಗ ಎಕರೆಗೆ 25

ಕಿಗ್ರಾಂ ಸಾರಜನಕ, 10 ಕಿಗ್ರಾಂ ರಂಜಕ, 45 ಕಿಗ್ರಾಂ ಪೊಟ್ಯಾಷ್ ಮತ್ತು 30 ಕಿಗ್ರಾಂ ಸುಣ್ಣ ಹಾಕಬೇಕು. ತೋಟಗಳಲ್ಲಿ ಬೇಸಾಯ ಮಾಡುವಾಗ 6' ಅಂತರದ ಸಾಲುಗಳಲ್ಲಿ 4' ಅಂತರದಲ್ಲಿ 2' ಅಗಲದ ಗುಣಿಗಳನ್ನು ತೋಡಿ, ಪ್ರತಿ ಗುಣಿಯಲ್ಲಿ 4–5 ಬೀಜಗಳನ್ನು ಬಿತ್ತಬೇಕು. ಕರಬೂಜದ ತೋಟದಲ್ಲಿ ಕಾಲಕಾಲಕ್ಕೆ ಕಳೆ ತೆಗೆಯಬೇಕು. ಸಸಿಗಳ ಹಂಬು ಹರಿಯಲು ಪ್ರಾರಂಭಿಸಿದಾಗ ಹೆಚ್ಚು ನೀರು ನಿಲ್ಲುವಂತೆ ವಿಶಾಲವಾಗಿ ಪಾತಿಮಾಡಬೇಕು.

ಬೀಜ ಬಿತ್ತಿದ ಒಂದುವರೆ ತಿಂಗಳ ಅನಂತರ ಕರಬೂಜದಹಂಬು ಹೂ ಬಿಡುತ್ತದೆ. ಅನಂತರ ಒಂದು ತಿಂಗಳಿಗೆ ಹಣ್ಣು ಕುಯ್ಲಿಗೆ ಬರುತ್ತದೆ. ಕಾಯಿ ಬಲಿತು ಹಣ್ಣಾಗುವ ಕಾಲ ಸಮೀಪಿಸಿದಾಗ ಕಾಯಿಗಳು ಮೊದಲಿನ ಬಣ್ಣವನ್ನು ಬದಲಾಯಿಸಿ ಸ್ವಲ್ಪ ಹಳದಿ ಬಣ್ಣಕ್ಕೆ ತಿರುಗುತ್ತವೆ. ಪಕ್ವವಾದಾಗ ತೊಟ್ಟಿನ ಸುತ್ತಲೂ ತಗ್ಗು ಕಾಣಿಸಿಕೊಳ್ಳುತ್ತದೆ. ಆಗ ಹರಿತವಾದ ಚಾಕುವಿನಿಂದ ತೊಟ್ಟುಗಳನ್ನು ಕೊಯ್ದು ಹಣ್ಣುಗಳನ್ನು ಹಂಬಿನಿಂದ ಬೇರ್ಪಡಿಸಬೇಕು.

**ಇಳುವರಿ:** ಕರಬೂಜದ ಇಳುವರಿಯ ಪ್ರಮಾಣ ಅವುಗಳ ತಳಿ ಮತ್ತು ಬೇಸಾಯ ಕ್ರಮವನ್ನು ಅನುಸರಿಸಿ ಇದೆ. ಆದರೆ ಸರಾಸರಿ ಇಳುವರಿ 8,000–12,000 ಕಿ.ಗ್ರಾಂ ವರೆಗಿನ ಅಂತರವಿದೆ.

ಕರಬೂಜದ ಕೀಟ ಮತ್ತು ರೋಗಗಳ ಬಗ್ಗೆ **(ನೋಡಿ– ಕುಂಬಳ)**. (ಡಿ.ಎಂ.)

**ಕರಮ್‌ಝಿನ್, ನಿಕೊಲೆ :** 1765–1826. ರಷ್ಯನ್ ಸಾಹಿತಿ. ಉತ್ತಮ ವಿದ್ಯಾಭ್ಯಾಸವನ್ನು ಪಡೆದು ಫ್ರೀ ಮೇಸನರ ಪ್ರಭಾವಕ್ಕೆ ಒಳಗಾದ. ರಷ್ಯನ್ ಪ್ರವಾಸಿಯ ಪತ್ರಗಳು ಎಂಬ ಈತನ ಪುಸ್ತಕ ಹೊಸ ವಿಶಾಲ ಸಂಸ್ಕೃತ ಮನೋಭಾವವನ್ನು ವ್ಯಕ್ತಪಡಿಸಿತು. ಮಾಸ್ಕೊ ಪತ್ರಿಕೆ, ಯುರೋಪಿನ ದೂತ ಎನ್ನುವ ಮಾಸಪತ್ರಿಕೆಗಳನ್ನು ಈತ ನಡೆಸಿದ. ಮಾಸ್ಕೊ ಪತ್ರಿಕೆಯ ಪ್ರಕಟಣೆ (1791) ಸೂಕ್ಷ್ಮ ಸಂವೇದನಾ ಪಂಥದ ನಾಂದಿ ಎನ್ನಬಹುದು. ಇವನ ಸಾಹಿತ್ಯ ಬಾಳುವಂಥದಲ್ಲವಾದರೂ ಹೊಸದೊಂದು ಮನೋಧರ್ಮವನ್ನು ಪ್ರಸಾರಗೊಳಿಸಿ ಸಾರ್ಥಕವೆನಿಸಿತು. ಮನುಷ್ಯನ ಸಹಜಪ್ರವೃತ್ತಿಗಳು ಒಳ್ಳೆಯವು ಅಲ್ಲದೆ ಸುಖಕ್ಕೆ ಸಾಧನ ಎನ್ನುವ ದೃಷ್ಟಿ ಇವನದು. ಇವನ ಸಂಸ್ಕೃತಿ ಈ ಅಭಿಪ್ರಾಯಕ್ಕೆ ಮೆರುಗನ್ನು ನೀಡಿತು. ಇವನ ಕಾದಂಬರಿಗಳು ಸತ್ತ್ವಯುತವಾಗಿಲ್ಲವೆನ್ನಬೇಕು. ಉದ್ದೇಶಪೂರ್ವಕವಾದ ಕಲೆಯನ್ನು ಸೇರಿಸಿ ಕಥೆಗೆ ಸಾಹಿತ್ಯದ ಪಟ್ಟವನ್ನು ಕಟ್ಟಿದವನೀತ. ಸಾಹಿತ್ಯದ ಭಾಷೆಯಲ್ಲಿ ಲಾಮನೋಸಫ್ ಉಳಿಸಿಕೊಂಡಿದ್ದ ಚರ್ಚ್‌ಸ್ಲವೊಕ್ ಅಂಶವನ್ನು ತ್ಯಜಿಸಿ, ಅಧುನಿಕ ಭಾವನೆಗಳು ಮತ್ತು ಭಾವಗಳಿಗೆ ಫ್ರೆಂಚ್ ಪದಗಳನ್ನು ಭಾಷಾಂತರ ಮಾಡಿಕೊಂಡು ಬಳಸುವುದು, ವಾಕ್ಯವಿನ್ಯಾಸದಲ್ಲಿಯೂ ಶೈಲಿಯಲ್ಲಿಯೂ ಫ್ರೆಂಚ್ ಮಾದರಿಗಳನ್ನನು ಸರಿಸುವುದು, ಸುಲಲಿತವಾದ ಶೈಲಿ–ಇವು ಕರಮಝಿನ್‌ನ ಮುಖ್ಯ ಯೋಜನೆಗಳು. ಈ ಚಳವಳಿ ರೂಸೊ ಪ್ರತಿಪಾದಿಸಿದ್ದ ನವಸೂಕ್ಷ್ಮಸಂವೇದನಾ ಪಂಥಕ್ಕೆ ಬೆಂಬಲ ನೀಡಿತು. ಇವನ ಅತ್ಯುತ್ತಮ ಕೃತಿ ರಷ್ಯ ದೇಶದ ಚರಿತ್ರೆ (1811). ಸತ್ತ್ವಪೂರ್ಣವೂ ನಿರಾಡಂಬರವೂ ಆದ ತರ್ಕ ಇದನ್ನು ಉತ್ತಮ ಸಾಹಿತ್ಯಕೃತಿಯನ್ನಾಗಿ ಮಾಡಿದೆ. (ಎಲ್.ಎಸ್.ಎಸ್.)

**ಕರಲಿಂಗಿಗಳು :** ಒಂದು ಬಗೆಯ ವಾಮಾಚಾರಿ ಸನ್ಯಾಸಿಗಳು; ಶಿವನ ಉಪಾಸಕರು. ಶಿವನನ್ನು ಶಬರ ಎಂದು ಕರೆಯುತ್ತಾರೆ. ಶಬರನನ್ನು ಪೂಜಿಸುವುದರಿಂದ ಇವರಿಗೆ ಸೇವಾರರು ಎಂಬ ಹೆಸರೂ ಉಂಟು. ಇವರು ಜಟಾಧಾರಿಗಳು ಉಡುಪು ಸಾಧಾರಣವಾಗಿ ಕೆಂಪು ಬಣ್ಣದ್ದು. ಗುಂಪುಗುಂಪಾಗಿ ಸಂಚರಿಸುವುದೇ ಸಾಮಾನ್ಯ. ಕೆಲವರು ಏಕಾಂತದಲ್ಲಿ ಯಾವಾಗಲೂ ನಗ್ನರಾಗಿ ಇರುತ್ತಾರೆ. ಕಾಮವನ್ನು ಗೆದ್ದಿರುವೆವೆಂದು ಪ್ರದರ್ಶಿಸಲು, ಇವರು ಶಿಶ್ನವನ್ನು ಕೊರೆದು ಅದನ್ನು ಬಳೆಯಿಂದ ಮತ್ತು ಸರಪಣಿಯಿಂದ ಬಿಗಿದಿರುತ್ತಾರೆ. ತಮ್ಮ ಜಟೆಯಿಂದ ಗಂಗೆ ಹರಿಯುತ್ತದೆ ಎಂದು ಘೋಷಿಸಿ ತಮ್ಮ ತಲೆಗೂದಲಿಂದ ನೀರು ಹರಿಸಿ ತೋರಿಸುತ್ತಾರೆ. ಮದ್ಯವನ್ನು ಹಾಲಾಗಿ ಪರಿವರ್ತಿಸುತ್ತೇವೆಂದೂ ಬರಿ ಕೈಯಿಂದ ಅಕ್ಕಿ ಗೋದಿಕಾಳುಗಳನ್ನು ಬರಿಸುತ್ತೇವೆಂದೂ ಹೇಳಿ ಜನರಿಂದ ಹಣವನ್ನು ಸಂಪಾದಿಸುತ್ತಾರೆ. (ಜಿ.ಎಚ್.)

**ಕರಸಹರ್ :** ಪ್ರಾಚೀನ ಭಾರತ ಚರಿತ್ರೆಯಲ್ಲಿ ಅಗ್ನಿದೇಶ ಎಂದು ಪ್ರಸಿದ್ಧವಾಗಿದ್ದ ಈ ರಾಜ್ಯ ಭಾರತ–ಚೀನಗಳ ನಡುವೆ, ಮಧ್ಯ ಏಷ್ಯದಲ್ಲಿದ್ದು ಚೀನದಲ್ಲಿ ಭಾರತೀಯ ಸಂಸ್ಕೃತಿ ಹರಡಲು ಬಹಳ ಸಹಾಯಮಾಡಿತು. ಡಾರೀಮ್ ನದೀ ಬಯಲಿಗೆ ಸಮೀಪದಲ್ಲಿ ಕುಚಿ, ತುರ್ಫಾನ್ ಮುಂತಾದ ಕೇಂದ್ರಗಳ ಮಾರ್ಗದಲ್ಲಿದ್ದು ಪ್ರ.ಶ.ಪೂ. ಕಾಲದಿಂದಲೂ ಸಂಸ್ಕೃತಿಯ ಕೇಂದ್ರವಾಗಿತ್ತು. ಕುಚಿ ರಾಜ್ಯದೊಡನೆ ಸೇರಿ ಚೀನದ ಪ್ರಭಾವ ಕಡಿಮೆ ಮಾಡಲು ಮೊದಲಿನಿಂದಲೂ ಯತ್ನಿಸಿತು. ಪ್ರ.ಶ.ಪೂ. 2ನೆಯ ಶತಮಾನದಲ್ಲಿ ಇದು ಚೀನ ದೇಶದ ಆಳ್ವಿಕೆಗೆ ಒಳಪಟ್ಟಿತ್ತಾದರೂ 75ರಲ್ಲಿ ಕರಸಹರ್‌ನ ರಾಜನಾದ ಶುಯೆನ್ ಮತ್ತು ಅವನ ಮಗ ಜೊಂಗ್, ಚೀನಿ ರಾಜನ ಮೇಲೆ ದಂಗೆ ಎದ್ದು ಸ್ವತಂತ್ರರಾದರು. ಆದರೆ ಮುಂದೆ ಕೆಲವೇ ವರ್ಷಗಳಲ್ಲಿ ಚೀನಿಯರು ಆಗ ಕರಸಹರ್‌ನ ದೊರೆಯಾಗಿದ್ದ ಕುವಾಂಗನನ್ನು ಕೊಂದು ನಗರಗಳನ್ನು ಲೂಟಿಮಾಡಿ, ಜನಗಳನ್ನು ಅತೀವ ಹಿಂಸೆಗೆ ಗುರಿಮಾಡಿದರು. ಕರಸಹರ್ ಮತ್ತೆ ಚೀನಿ ಆಳ್ವಿಕೆಗೆ ಒಳಪಟ್ಟಿತು. 8ನೆಯ ಶತಮಾನದ ವರೆಗೆ ಚೀನಿ ಆಡಳಿತದಲ್ಲಿದ್ದ ಕರಸಹರ್ ರಾಜ್ಯದಲ್ಲಿ ಸ್ವಾತಂತ್ರ್ಯಕ್ಕೋಸ್ಕರ ದಂಗೆಗಳು ನಡೆಯುತ್ತಲೇ ಇದ್ದವು. 755ರ ಅನಂತರ ಕರಸಹರ್ ರಾಜ್ಯ ಟಿಬೆಟ್ ರಾಜ್ಯಕ್ಕೆ ಸೇರಿಹೋಯಿತು. ಇದರಿಂದ ಪೂರ್ಣವಾಗಿ ಚೀನಿ ಪ್ರಭಾವ ತಪ್ಪಿಹೋಯಿತು.

ಕರಸಹರ್ ಬೌದ್ಧಧರ್ಮ ಕೇಂದ್ರವಾಗಿತ್ತು. 7ನೆಯ ಶತಮಾನದಲ್ಲಿ, ಸರ್ವಾಸ್ತಿವಾದ ಪ್ರಕಾರಕ್ಕೆ ಸೇರಿದ ಎರಡು ಸಾವಿರ ಬೌದ್ಧಬಿಕ್ಷುಗಳು, ಇಲ್ಲಿದ್ದ ಹತ್ತು ವಿಹಾರಗಳಲ್ಲಿ ವಾಸಿಸುತ್ತಿದ್ದರು. ಸಂಸ್ಕೃತ ಬೌದ್ಧಗ್ರಂಥಗಳನ್ನು ಅವರು ವಿವಿಧ ಭಾಷೆಗಳಿಗೆ ತರ್ಜುಮೆ ಮಾಡುತ್ತಿದ್ದರು. ತುರ್ಫಾನಿಗೆ ಈ ಗ್ರಂಥಗಳನ್ನು ಕಳುಹಿಸಿಕೊಟ್ಟು, ಬೌದ್ಧಧರ್ಮ ಪ್ರಚಾರಕ್ಕೆ ಕಾರಣರಾದರು. ಕುಚಿ ದೇಶದೊಡನೆ ಸಂಪರ್ಕಗಳನ್ನು ಹೊಂದಿದ್ದು, ಭಾರತೀಯ ಸಂಸ್ಕೃತಿಯ ಅನೇಕ ಲಕ್ಷಣಗಳನ್ನು ಕರಸಹರ್ ಜನಗಳು ಅಳವಡಿಸಿಕೊಂಡರು. ಆ ಕಾಲದ ಅನೇಕ ಬೌದ್ಧ ನಿವೇಶನಗಳು ಕರಸಹರ್‌ನಲ್ಲಿ ದೊರಕಿವೆ. ಇಲ್ಲಿ ದೊರಕಿರುವ ಅವಶೇಷಗಳಿಂದ ಹೀನಯಾನ ಬೌದ್ಧಧರ್ಮ ಮತ್ತು ಕಲೆ ಉಚ್ಛ್ರಾಯಸ್ಥಿತಿಯಲ್ಲಿದ್ದುವೆಂದು ವ್ಯಕ್ತವಾಗುತ್ತದೆ. (ಎ.ವಿ.ಎನ್.)

**ಕರಸ್ಥಲ ನಾಗಿದೇವ :** ಪ್ರೌಢದೇವರಾಯನ ಕಾಲದಲ್ಲಿದ್ದ ನೂರೊಂದು ವಿರಕ್ತರೆನಿಸಿದ ವೀರಶೈವ ಶರಣರಲ್ಲಿ ಪ್ರಸಿದ್ಧನಾದ ಪ್ರಥಮ ವಿರಕ್ತ. ಕಾಲ ಸು. 1430. ನಾಗಲಿಂಗನೆಂದೂ ಹೆಸರಿದೆ. ಕಲ್ಲುಮಠದ ಪ್ರಭುದೇವ, ಕುಮಾರ ಬಂಕನಾಥ, ಮೊಗ್ಗೆಯ ಮಾಯಿದೇವ ಜಕ್ಕಣಾರ್ಯ, ಶಂಕರದೇವ, ಬತ್ತಲೇಶ್ವರ ಮೊದಲಾದವರ ಸಮಕಾಲೀನನಾಗಿದ್ದ ವೀರಣ್ಣೊಡೆಯರ ಪ್ರೀತಿಯ ಶಿಷ್ಯನಾಗಿದ್ದ. ಪ್ರಥಮವಾಗಿ ಈ ವಿರಕ್ತನ ಪ್ರಸ್ತಾಪ ಚಿಕ್ಕವೀರ ಜಂಗಮದೇವನ (ಸು. 1500) ಪಟ್ಸ್ಥಲವಲ್ಲಭವೆಂಬ ಗ್ರಂಥದಲ್ಲಿ ಕರಸ್ಥಲ ನಾಗಿದೇವನೇರಿದ ಮೋಹಿನಿಗಜಮಂ ಎಂಬಲ್ಲಿ ಕಂಡುಬಂದು, ಅನಂತರದ ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ (1550), ಅದೃಶ್ಯಕವಿಯ ಪ್ರೌಢದೇವರಾಯನ ಕಾವ್ಯ (1850), ವಿರೂಪಾಕ್ಷ ಪಂಡಿತನ ಚೆನ್ನಬಸವರಾಯನ ಕಾವ್ಯ (1584), ಕಂಬಾಳ ಶಾಂತಮಲ್ಲೇಶನ ಗುಣವಚನ ರತ್ನಾವಳಿ (1600), ಸಿದ್ಧನಂಜೇಶನ ಗುರುರಾಜ ಚರಿತ್ರೆ, ರುದ್ರಕವಿಯ ಕರಸ್ಥಲ ನಾಗಲಿಂಗ ಚರಿತ್ರೆ (1650), ಸಂಪಾದನೆಯ ಪರ್ವತೇಶ್ವರ ಚತುರಾಚಾರ್ಯ ಪುರಾಣ (1698). ಮೋದಿಯ ರುದ್ರನ ನೂರೊಂದು ವಿರಕ್ತರ ಕಾವ್ಯ (1737) ಮುಂತಾದ ಕಾವ್ಯಗಳಲ್ಲಿ ಬರುತ್ತದೆ. ದೊರಕಿರುವ ಇವನ ಕೃತಿಗಳಲ್ಲಿ ಸ್ವವಿಷಯವನ್ನು ಹೇಳಿಕೊಂಡಿಲ್ಲ. ವಿರೂಪಾಕ್ಷ ಪಂಡಿತನಿಂದ ರಚಿತವಾದ ಚನ್ನಬಸವಪುರಾಣದಲ್ಲಿ ಇವನ ಕಥೆ ಸಂಕ್ಷಿಪ್ತವಾಗಿ ಹೀಗೆ ದೊರೆಯುತ್ತದೆ: ನೂರೊಂದು ವಿರಕ್ತದಲ್ಲಿ ಪ್ರಸಿದ್ಧ ವಿರಕ್ತನೆನಿಸಿದ ನಾಗಯ್ಯ ತನ್ನ ಬಾಲ್ಯಾವಸ್ಥೆಯಲ್ಲಿ, ಹಾದರ ಮಾಡಲು ಒಂದು ಮನೆಯನ್ನು ಪ್ರವೇಶಿಸಿದುದನ್ನು ಇತರರು ಕಂಡಾಗ, ಆ ಕ್ಷಣವೇ ಸಂಸಾರದಿಂದ ವಿರಕ್ತನಾಗಿ ಲಿಂಗವನ್ನು ಧರಿಸಿ, ಅದರ ಪೀಠವನ್ನೆಸೆದು, ತಲೆಗೆಲ್ಲ ಭಸಿತವನ್ನು ಬಳಿದುಕೊಂಡು ದಿಗಂಬರನಾಗಿ ಆ ಗೃಹದಿಂದ ನಿಷ್ಕ್ರಮಿಸಿ ತನ್ನ ಗುರು ವೀರಣ್ಣೊಡೆಯನಿಗೆ ನಡೆದ ವೃತ್ತಾಂತವನ್ನು ವಿವರಿಸಲು, ಗುರು ಪೀಠರಹಿತವಾಗಿದ್ದ ಲಿಂಗಕ್ಕೆ ಬೇರೊಂದು ಪೀಠವನ್ನು ಅನುಗೊಳಿಸಿ ಕ್ರಿಯೆಯಳಿವ ಪರಿಯಂತರ ತೊಲಗಲೀಯದಿದು–ಎಂದು ಉಪದೇಶಿಸಿ, ದೇಶಪರ್ಯಟನಕ್ಕೆ ಶಿಷ್ಯನನ್ನು ಬೀಳ್ಕೊಟ್ಟ. ಕೆಲವು ಕಾಲದ ಅನಂತರ ಹಿಂತಿರುಗಿ ಬಂದ ನಾಗಯ್ಯ ತನ್ನನ್ನು ಹಿಂಬಾಲಿಸುವಂತೆ ಗುರುವಿಗೆ ಹೇಳಿ ಹೊರಟ. ಹಾದಿಯಲ್ಲಿ ನಾಗನ ತಲೆಗೂದಲು ಮೆಳೆಯಲ್ಲಿ ಸಿಕ್ಕಿಕೊಂಡಿದ್ದುದನ್ನು ನೋಡಿದ ಗುರು ಬಿಡಿಸಿದ. ಇಬ್ಬರೂ ವಿದ್ಯಾನಗರಿಂಯತ್ತ ಪ್ರಯಾಣ ಬೆಳೆಸಿದರು. ಗುರು ಬಸವೇಶನಿಗೆ ಐಕ್ಯಪದಸ್ವಾನುಭವಮಾರ್ಗವನ್ನೂ ಪಟ್ಸ್ಥಲಮಾರ್ಗವನ್ನೂ ತಿಳಿಸಿಕೊಟ್ಟು ನಿರವಯವನಾಲಿಚ್ಛಿಸಿದ. ನಾಗಿದೇವ ಮೋಹಿನಿ ಗಜದ ಬಳಿಗೆ ಹೋಗಿ ಗಜವನ್ನೇರಲು ಹಗ್ಗಗಳೆಲ್ಲ ಬಂಗಾರವಾದವು. ಹೀಗೆ ಅನೇಕ ಪವಾಡಗಳನ್ನು ಮೆರೆಸಿ ಗುರುವಿನ ಮೇಲೆ ಕರುಣೆದೋರುವಾಗ ಈ ಪವಾಡ ನಡೆಯಿತು: ನಾಗಯ್ಯನೇ ಬಾಲಲಿಂಗಣ್ಣನೆಂಬುವನ ರೂಪದಲ್ಲಿ ಪ್ರೀತಿಯಿಂದ ವೀರಣ್ಣೊಡೆಯನ ಮನೆಗೆ ಬಂದು ಭಿಕ್ಷವನ್ನು ಬೇಡಲಾಗಿ, ಗುರು ಆ ಬಾಲಯೋಗಿಯನ್ನು ಒಳಗೆ ಬರಮಾಡಿ ಮಂಚದ ಮೇಲೆ ಕುಳ್ಳಿರಿಸಿದ. ಬಾಲ ಲಿಂಗಣ್ಣ ಪವಡಿಸಿರುವ ಸಮಯದಲ್ಲಿ ಗುರು ಅವನ ಕರಸ್ಥಲದಲ್ಲಿದ್ದ ಲಿಂಗವನ್ನು ತೆಗೆದುಕೊಂಡ. ಇತರರೊಡನೆ ಭೋಜನವನ್ನು ಮುಗಿಸಿ, ಅನಂತರ ಗುರು ಬಾಲ ಲಿಂಗಣ್ಣನನ್ನು ಕರೆಯಲಾಗಿ ಹರಣವನ್ನುಳಿದು ಡಿಂಬಮಿರಲು ತನ್ನಲ್ಲಿದ್ದ ಲಿಂಗವನ್ನು ಆತನ ಕರೆದೊಳಗೆ ಪುನಃ ಇರಿಸಿದ. ಆಗ ಜೀವ ಮರುಕಳಿಸಿತ್ತು. ಲಿಂಗಣ್ಣ ತನಗೆ ಊಟವಾಗಿದೆಯೆಂದು ಹೇಳಿ ಊಟದ ಕುರುಹುಗಳನ್ನು ತೋರಿದ. ಲಿಂಗಣ್ಣ ನಿಜವಾಗಿ ತನ್ನ ಶಿಷ್ಯನೇ ಎಂದರಿತ ಗುರು ಪ್ರಾಣಲಿಂಗ ಸಂಧಾನಿ ನೀನಹುದು ಎಂದು ಕೊಂಡಾಡಲು ನಾಗಲಿಂಗ ಅವನನ್ನೂ ನಿರವಯವಗೊಳಿಸಿದ.

ಮೂಲಕಥೆ ವಾಸ್ತವವಾಗಿ ಹೀಗೆಯೇ ಇದ್ದಿರಬೇಕು. ಅನಂತರ ಬಂದ ರುದ್ರ ಕವಿ ಸಾಂಗತ್ಯದಲ್ಲಿ ಈ ಶರಣನ ಮೇಲೆ ಉದ್ಗ್ರಂಥವನ್ನು ರಚಿಸಿ, ವ್ಯಭಿಚಾರಾದಿ ಅನೇಕ ಕಡೆಗಳಲ್ಲಿ ಕಥೆಯನ್ನು ಮಾರ್ಪಡಿಸಿದ.

ಕರಸ್ಥಲ ನಾಗಿಲಿಂಗ ಬರೆದ ಕೃತಿಗಳಲ್ಲಿ ದೊರಕಿರುವವು ಕೆಲವು ಮಾತ್ರ. ಮಡಿವಾಳ ಮಾಚಯ್ಯನ ತಾರಾವಳಿ, ಅಕ್ಷರಚೌಪದ (ಒಂಬತ್ತು ವಾರ್ಧಕ ಷಟ್ಪದಿ ಪದ್ಯಗಳು), ಮೂರೇಳು ದೀಕ್ಷೆಯ ಪದ, ತ್ರಿವಿಧಿ. ತ್ರಿವಿಧಿ 31 ಗೂಢಾರ್ಥ ಗ್ರಾಹ್ಯವಲ್ಲದ ಇದಕ್ಕೆ ಸು. 1650ರಲ್ಲಿದ್ದ ಪರ್ವತೇಶ ಟೀಕೆ ಬರೆದಿದ್ದಾನೆ. ನಾಗಲಿಂಗನ ತ್ರಿ ವಿಧಿಗೆ ಒಂದು ಉದಾಹರಣೆ:

ಸರ್ಪನಯಿದಿರೊಳಗಿರ್ಪ ಮಂಡುಕನೆದ್ದು
ಸರ್ಪನ ಮದವ ನಡುಗಿಸಿ ನಡೆದೇನು
ಕರ್ಪುರವನುಂಡ ಉರಿಯಂತೆ

(ಕೆ.ಆರ್.ಎಸ್.ಜಿ.)

**ಕರಹಾಡ್ ತಾಮ್ರಶಾಸನ :** ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಕರಹಾಡಿನಲ್ಲಿ ದೊರಕಿದ ಒಂದು ತಾಮ್ರಶಾಸನ. ಇದು ಮೂರು ತಾಮ್ರಫಲಕಗಳನ್ನೊಳಗೊಂಡಿದೆ. ಫಲಕಗಳ ಉದ್ದಗಲಗಳು ಅನುಕ್ರಮವಾಗಿ ಸು. 34 ಸೆಂ ಮೀ. ಮತ್ತು 22.5 ಸೆಂ ಮೀ. ಶಾಸನದ ಬರೆಹ ಒಂದು ಮತ್ತು ಮೂರನೆಯ ಫಲಕಗಳ ಒಂದು ಪಕ್ಕದಲ್ಲಿಯೂ ಎರಡನೆಯ ಫಲಕದ ಎರಡೂ ಪಕ್ಕಗಳಲ್ಲಿಯೂ ಇದೆ. ಅಕ್ಷರಗಳೂ ಸ್ಪಷ್ಟವಾಗಿವೆ.

ಈ ಶಾಸನ 10ನೆಯ ಶತಮಾನದ ನಾಗರಿ ಲಿಪಿಯಲ್ಲಿದೆ. ಇದರ ಭಾಷೆ ಸಂಸ್ಕೃತ. ಶಾಸನದ ಪಾಠ ಗದ್ಯಪದ್ಯ ಮಿಶ್ರಿತವಾಗಿದೆ.

939–66ರ ವರೆಗೆ ಕರ್ನಾಟಕವನ್ನಾಳಿದ ರಾಷ್ಟ್ರಕೂಟ 3ನೆಯ ಕೃಷ್ಣನ ಆಳ್ವಿಕೆಯಲ್ಲಿ ಈ ಶಾಸನವನ್ನು ಹೊರಡಿಸಲಾಯಿತು. ಇದರ ತೇದಿ, ಶಕನೃಪಕಾಲಾತೀತ ಸಂವತ್ಸರದ 880ನೆಯ ವರ್ಷದ ಫಾಲ್ಗುಣ ಬಹುಳ ತ್ರಯೋದಶಿ, ಬುಧವಾರ (959 ಮಾರ್ಚ್ 9).

ಶಾಸನದ ಪ್ರಾರಂಭದಲ್ಲಿ ಮುರಾರಿ (ವಿಷ್ಣು), ತ್ರಿಪುರವಿಜಯಿ (ಶಿವ) ಮತ್ತು ಕುಮುದಿನೀನಾಥ (ಚಂದ್ರ) ಇವರ ಸ್ತುತಿಗಳಿದ್ದು, ಅನಂತರ 3ನೆಯ ಕೃಷ್ಣನವರೆಗಿನ ರಾಷ್ಟ್ರಕೂಟರ ವಂಶಾವಳಿ ಕಾಣಸಿಗುತ್ತದೆ. ಈ ವಂಶ ದೈತ್ಯರನ್ನು ಸಂಹರಿಸಿದ ಕೃಷ್ಣನ ಯದುವಂಶವೆಂದು ಪ್ರಸಿದ್ಧವಾಯಿತೆಂದೂ ಈ ವಂಶದ ಅರಸರು ಶ್ರೇಷ್ಠ (ತುಂಗ) ಯಶಸ್ಸನ್ನು ಗಳಿಸಿ ತುಂಗ ಎಂಬ ಅಭಿಧೇಯವನ್ನು ಪಡೆದಿದ್ದರೆಂದೂ ಶಾಸನ ತಿಳಿಸುತ್ತದೆ. ಅರಸರ ಪೀಳಿಗೆಯನ್ನೀಯುತ್ತ, ಚಳುಕ್ಯರನ್ನು (ಬಾದಾಮಿಯವರು) ಉನ್ಮೂಲಗೊಳಿಸಿದ ದಂತಿದುರ್ಗ, (ಎಲ್ಲೋರದ) ಕೈಲಾಸ ದೇವಾಲಯವನ್ನು ಕಟ್ಟಿಸಿದ ಅವನ ಕಕ್ಕ ಕೃಷ್ಣರಾಜ (1ನೆಯ ಕೃಷ್ಣ) ಅವನ ಮಗ ಗೋವಿಂದರಾಜ (2ನೆಯ ಗೋವಿಂದ), ಅವನ ತಮ್ಮ ಕಲಿವಲ್ಲಭನೆಂದು ಹೆಸರಾದ ನಿರುಪಮ (ಧ್ರುವ), ಅವನ ಮಗ ಜಗತ್ತುಂಗ (3ನೆಯ ಗೋವಿಂದ), ಮಾನ್ಯಖೇಟವನ್ನು (ಇಂದಿನ ಮಳಖೇಡ ಗುಲ್ಬರ್ಗ ಜಿಲ್ಲೆ) ಸ್ಥಾಪಿಸಿದ ಹಾಗೂ ಚಳುಕ್ಯರನ್ನು ವಿಧ್ವಂಸಗೊಳಿಸಿದ ಅವನ ಮಗ ನೃಪತುಂಗ (1ನೆಯ ಅಮೋಘವರ್ಷ), ಗೂರ್ಜರ, ಲಾಟ, ಗೆಂಡ, ಅಂಗ, ಕಳಿಂಗ, ಗಂಗ ಹಾಗೂ ಮಗಧ ಅರಸರ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಜಯಗಳಿಸಿದ ಅವನ ಮಗ ಕೃಷ್ಣರಾಜ (2ನೆಯ ಕೃಷ್ಣ), ಅವನ ಮಗ (2ನೆಯ) ಜಗತ್ತುಂಗ, ಅವನ ಮಗ ಇಂದ್ರರಾಜ (3ನೆಯ ಇಂದ್ರ), ಅವನ ಮಗ (2ನೆಯ) ಅಮೋಘವರ್ಷ ಹಾಗೂ ಅವನ ತಮ್ಮ ಗೋವಿಂದರಾಜ (4ನೆಯ ಗೋವಿಂದ), ರಟ್ಟಕುಲದ ಮಹತ್ತ್ವ ಹಾಗೂ ಸಾರ್ವಭೌಮತ್ವಕ್ಕೆ ಮಾಂಡಲಿಕರೆಲ್ಲರೂ ತಲೆಬಾಗುವಂತೆ ಮಾಡಿದ. (2ನೆಯ) ಜಗತ್ತುಂಗನ ಮಗ (3ನೆಯ) ಅಮೋಘವರ್ಷ ಹಾಗೂ ಯುವರಾಜನಾಗಿದ್ದಾಗಲೇ ಜಗತ್ತಿನ ಒಡೆಯನೆನಿಸಿಕೊಂಡ ಅವನ ಮಗ ಕೃಷ್ಣರಾಜ (ಈ ಶಾಸನವನ್ನು ಹೊರಡಿಸಿದ ಮೂರನೆಯ ಕೃಷ್ಣ) ಇವರನ್ನು ಉಲ್ಲೇಖಿಸುತ್ತದೆ. ಇವನು ತನ್ನ ತಾಯಿ ಮತ್ತು ಪತ್ನಿ ಇವರಿಗೆ ಹಿರಿಯನಾದ ಸಹಸ್ರಾರ್ಜುನನನ್ನು ಜಯಿಸಿದನೆಂದೂ ಶ್ರೀವಲ್ಲಭನಂತಿದ್ದ ಇವನು (3ನೆಯ ಕೃಷ್ಣನು) ಮಧುಕೈಟಭರಂತಿದ್ದ ದಂತಿಗ ಹಾಗೂ ವಪ್ಪುಗರನ್ನು ಸಂಹರಿಸಿದನೆಂದೂ ರಾಚಮಲ್ಲನನ್ನು ಕಿತ್ತೊಗೆದು ಭೂತಾರ್ಯನನ್ನು ಗಂಗಸಿಂಹಾಸನದ ಮೇಲೆ ಕೂರಿಸಿದನೆಂದೂ ಪಲ್ಲವ ಅಣ್ಣಿಗನನ್ನು ಸೋಲಿಸಿದನೆಂದೂ ಇವನ ದಕ್ಷಿಣ ವಿಜಯವನ್ನು ಪರಿಗಣಿಸಿದ ಗೂರ್ಜರನು, ಕಾಲಿಂಜರ ಹಾಗೂ ಚಿತ್ರ ಕೂಟಗಳನ್ನು ಜಯಿಸುವ ಆಸೆಯನ್ನು ತಾನಾಗಿಯೇ ಬಿಟ್ಟನೆಂದು ಈತ ತನ್ನ ತಂದೆಯ ಆಜ್ಞೆಗೆ ವಿಧೇಯನಾಗಿದ್ದರೂ ಪೂರ್ವ ಪಶ್ಚಿಮ ಸಮುದ್ರ ಹಾಗೂ ಹಿಮಾಲಯ–ಸಿಂಹಳಗಳ ಮಧ್ಯದ ಮಾಂಡಲಿಕರೆಲ್ಲರೂ ಇವನಿಗೆ ಭಯದಿಂದ ತಲೆಬಾಗಿದ್ದರೆಂದೂ ತಂದೆ ಕಾಲವಶವಾದ ಅನಂತರ ಸಿಂಹಾಸನವನ್ನೇರಿದ ಈತ ಮಾಂಡಲಿಕರೆಲ್ಲರನ್ನೂ ತನ್ನ ರಾಜನೀತಿಗನುಗುಣವಾಗಿ ಪುನಃ ವ್ಯವಸ್ಥಿತಗೊಳಿಸಿದನೆಂದೂ ಶಾಸನವು ತಿಳಿಸುತ್ತದೆ.

ದಕ್ಷಿಣದಿಗ್ವಿಜಯವನ್ನು ಬಯಸಿದ ಇವನು, ಚೋಳರನ್ನು ನಿರ್ಮೂಲಗೊಳಿಸಿ ಅವರ ರಾಜ್ಯವನ್ನು ತನ್ನ ಅನುಯಾಯಿಗಳ ಆಧಿಪತ್ಯಕ್ಕೊಳಪಡಿಸಿ, ಚೇರನ್ಮ (ಚೇರ), ಪಾಂಡ್ಯ ಹಾಗೂ ಸಿಂಹಳ ಮೊದಲಾದ ದೇಶಗಳ ಅರಸರನ್ನು ತನಗೆ ವಿಧೇಯರನ್ನಾಗಿ ಮಾಡಿ, ರಾಮೇಶ್ವರದಲ್ಲಿ ತನ್ನ ಕೀರ್ತಿಸ್ತಂಭವನ್ನು ಸ್ಥಾಪಿಸಿದನೆಂದು ಶಾಸನ ಹೇಳುತ್ತದೆ. ಈತ ಪರಮಭಟ್ಟಾರಕ–ಮಹಾರಾಜಾಧಿರಾಜ–ಪರಮೇಶ್ವರ–ಶ್ರೀಮದಮೋಘವರ್ಷದೇವ (ತನ್ನ ತಂದೆ)–ಪಾದನುಧ್ಯಾತನಾಗಿದ್ದನೆಂದೂ ಪರಮಭಟ್ಟಾರಕ, ಮಹಾರಾಜಾಧಿರಾಜ, ಪರಮೇಶ್ವರ, ಪೃಥ್ವೀವಲ್ಲಭ ಮುಂತಾದ ಬಿರುದುಗಳನ್ನೂ ಅಕಾಲವರ್ಷ, ವಲ್ಲಭನರೇಂದ್ರ ಮುಂತಾದ ಅಂಕಿತಗಳನ್ನೂ ಹೊಂದಿದ್ದನೆಂದೂ ಶಾಸನ ವ್ಯಕ್ತಪಡಿಸುತ್ತದೆ.

ತನ್ನ ರಾಜ್ಯದ ದಕ್ಷಿಣಭಾಗದಲ್ಲಿರುವ ಮೇಲ್ಪಾಟಿಯಲ್ಲಿ (ಇಂದಿನ ಮೇಲ್ಪಾಡಿ, ಉತ್ತರ ಆರ್ಕಾಟ್ ಜಿಲ್ಲೆ) ಬೀಡುಬಿಟ್ಟಾಗ ಕಾಲಪ್ರಿಯ, ಗಂಡಮಾರ್ತಾಂಡ ಕೃಷ್ಣೇಶ್ವರ ಮೊದಲಾದ ದೇವಾಲಯವನ್ನು ಕಟ್ಟಿಸಿ (ಮೇಲೆ ಉಲ್ಲಿಖಿತವಾದ ತೇದಿಯಂದು), ಕರಹಾಟ ಪ್ರಾಂತ್ಯದಲ್ಲಿ (ಈಗಿನ ಕರಹಾಡದ ಸುತ್ತಮುತ್ತಲಿನ ಪ್ರದೇಶ) ಕಲ್ಲಿ ಹನ್ನೆರಡಕ್ಕೆ (ಈಗಿನ ಕಲ್ಲಿ ಎಂಬ ಹಳ್ಳಿಯ ಸುತ್ತಮುತ್ತಲಿನ ಹಳ್ಳಿಗಳು) ಸಂಬಂಧಿಸಿದ ಕಂಕೆಂ (ಈಗಿನ ಕಂಕಿ–ಇವೆಲ್ಲ ಕರ್ಹಾಡದ ಸಮೀಪದಲ್ಲಿವೆ) ಎಂಬ ಗ್ರಾಮವನ್ನು, ತಪಸ್ವಿಗಳ ಆಸನ ಹಾಗೂ ಆಚ್ಛಾದನೆಯ ಉದ್ದೇಶಕ್ಕಾಗಿ, ತಾನು (ಕೃಷ್ಣನು) ಕಾರ್ಲೆಯಂದು (ಕಾರ್ತಿಕ ಹುಣ್ಣಿಮೆ) ಸಂಕಲ್ಪಮಾಡಿದಂತೆ, ಶಾಸಶಿವನ ಶಿಷ್ಯನೂ ಮಹಾತಪಸ್ವಿಯೂ ಕರಹಾಟದಲ್ಲಿರುವ ವಲ್ಕಲೇಶ್ವರ (ದೇವಸ್ಥಾನ)ದ ಸ್ಥಾನಾಧಿಪತಿಯೂ ಆದ ಗಗನಶಿವನೆಂಬವನಿಗೆ ದಾನವಾಗಿತ್ತುದಾಗಿಯೂ ಆತ (ಗಗನಶಿವ) ಈ ಗ್ರಾಮವನ್ನು ಉಪಭೋಗಿಸುವುದಕ್ಕೆ ಯಾರೂ ಆತಂಕಮಾಡಬಾರದಾಗಿಯೂ ಆಜ್ಞೆ ವಿಧಿಸಿ, ತನ್ನ ಎಲ್ಲ ಮಾಂಡಲಿಕರಿಗೂ ವಿಶಿಷ್ಟಜನರಿಗೂ ಇದರ ಬಗ್ಗೆ ಸೂಕ್ತ ಆದೇಶವನ್ನಿತ್ತುದಾಗಿಯೂ ಶಾಸನವು ತಿಳಿಸುತ್ತದೆ. ಶಾಸನದ ಕೊನೆಯಲ್ಲಿ ದಾನದ ರಕ್ಷಣೆ ಹಾಗೂ ಆಶೀರ್ವಚನಗಳನ್ನು ಕುರಿತ ಶ್ಲೋಕಗಳಿವೆ.

ಪ್ರಕೃತ ಶಾಸನ ರಾಷ್ಟ್ರಕೂಟದ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮಹತ್ತ್ವದ್ದಾಗಿದೆ. ಚೋಳರನ್ನು ಕೃಷ್ಣ ಸೋಲಿಸಿದ ಮತ್ತು ಇವನ ಪರಾಕ್ರಮದ ಬಗ್ಗೆ ಬೇರೆ ಶಾಸನಗಳ ಆಧಾರವಿದೆ. ವಂಶಾವಳಿಯನ್ನೀಯುವಾಗ ಮುಖ್ಯ ಅರಸರನ್ನು ಮಾತ್ರ ಶಾಸನವು ಉಲ್ಲೇಖಿಸುತ್ತಿದ್ದು, ಈ ವಂಶಪರಂಪರೆ ನಿಜವೆಂಬುದು ಇನ್ನೂ ಅನೇಕ ಶಾಸನಗಳಿಂದ ಪ್ರಮಾಣಸಿದ್ಧವಾಗಿದೆ. 3ನೆಯ ಕೃಷ್ಣನ ತಾಯಿ ಮತ್ತು ಅವನ ಪತ್ನಿ ಚೇದಿ ಮನೆತನದವರಾದುದರಿಂದ, ಅವರಿಗೆ ಹಿರಿಯನೆಂದು ಶಾಸನದಲ್ಲಿ ಉಕ್ತನಾದ ಸಹಸ್ರಾರ್ಜುನನೂ ಅದೇ ಮನೆತನದವನಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಉಲ್ಲೇಖಿತರಾದ ಇನ್ನುಳಿದ ಮುಖ್ಯರಲ್ಲಿ, ರಾಚಮಲ್ಲ ಹಾಗೂ ಭೂತಾರ್ಯರು ಗಂಗಮನೆತನದ ರಾಚಮಲ್ಲ ಹಾಗೂ 2ನೆಯ ಬೂತುಗರ, ಪಲ್ಲವ ಅಣ್ಣಿಗನೆಂಬಾತ ನೊಳಂಬಪಲ್ಲವ ಮನೆತನದ ನನ್ನಿಗನ ಮಗನೆಂದೂ ದಂತಿಗ ಮತ್ತು ವಪ್ಪುಗರೂ ಇದೇ ಮನೆತನದವರಾಗಿರಬೇಕೆಂದೂ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. (ಎಂ.ಎನ್.ಕೆ.)

**ಕರಾಚಿ :** ಪಶ್ಚಿಮ ಪಾಕಿಸ್ತಾನದ ಮುಖ್ಯ ರೇವುಪಟ್ಟಣ. ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರ. ಇದು ಸಿಂಧ್ ಪ್ರಾಂತ್ಯದ ರಾಜಧಾನಿ ಪಾಕಿಸ್ತಾನದ ರಚನೆಯಾದ ಮೇಲೆ ಅದರ ರಾಜಧಾನಿಯಾಗಿತು. ಈಗ ಇದು ಜಿಲ್ಲೆಯ ಮತ್ತು ವಿಭಾಗದ ಮುಖ್ಯಪಟ್ಟಣ. ಜನಸಂಖ್ಯೆ 20,000,000 (2006). ಹಿಂದೆ ಬ್ರಿಟಿಷರು ಸಿಂಧನ್ನು ಆಕ್ರಮಿಸಿಕೊಳ್ಳುವ (1843) ಮುನ್ನ ಇದು ಅಷ್ಟೇನೂ ಪ್ರಸಿದ್ಧವಾಗಿರಲಿಲ್ಲ. ಅಮೆರಿಕನ್ ಅಂತರ್ಯುದ್ಧದ ಫಲವಾಗಿ ಭಾರತದ ಹತ್ತಿಗೆ ಬೇಡಿಕೆಯುಂಟಾದಾಗ ಈ ನಗರದ ವ್ಯಾಪಾರ ಅಧಿಕಗೊಂಡಿತು. 1878ರಲ್ಲಿ ವಾಯವ್ಯ ರೈಲ್ವೆಯ ನಿರ್ಮಾಣವಾದಾಗಿನಿಂದ ಇದರ ಪ್ರಾಮುಖ್ಯ ಅಧಿಕವಾಯಿತು. ಇದರಿಂದಾಗಿ ಅವಿಭಜಿತ ಭಾರತದ ಇಡೀ ಪಂಜಾಬು ಇದರ ಹಿನ್ನಾಡಾಗಿ ಪರಿಣಮಿಸಿತಲ್ಲದೆ ಅಫ್ಘಾನಿಸ್ತಾನದ ವರೆಗಿನ ಪ್ರದೇಶದ ವಿದೇಶೀ ವ್ಯಾಪಾರವೆಲ್ಲ ಇದರ ಮೂಲಕವೇ ಸಾಗುವಂತಾಯಿತು. ಇದು ಯುರೋಪಿಗೂ ಈ ಪ್ರದೇಶಕ್ಕೂ ನಡುವೆ ಅತ್ಯಂತ ಹತ್ತಿರದ ಬಂದರು. ಸುಕ್ಕೂರ್ ಜಲಾಶಯದ ನಿರ್ಮಾಣದಿಂದ ನೀರಾವರಿ ಸೌಲಭ್ಯ ಬೆಳೆದು ಸಿಂಧಿನ ಉತ್ಪಾದನೆ ಹೆಚ್ಚಿದಾಗ ಕರಾಚಿಯ ಪ್ರಾಮುಖ್ಯ ಇನ್ನೂ ಹೆಚ್ಚಿತು. ಈಚೆಗೆ ಅಂತಾರಾಷ್ಟ್ರೀಯ ವಿಮಾನ ಮಾರ್ಗದ ಮುಖ್ಯಕೇಂದ್ರವಾಗಿದೆ. ಕರಾಚಿ ಬಂದರು ಸಿಂಧೂ ನದೀಮುಖದ ವಾಯವ್ಯದಲ್ಲಿದೆ. ಕರೆಯ ಉದ್ದಕ್ಕೂ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಕಡಲ ಪ್ರವಾಹವಿರುವುದರಿಂದ ಸಿಂಧೂ ನದಿಯಿಂದ ಬಂದು ಬೀಳುವ ಮಣ್ಣಿನಿಂದ ಈ ಬಂದರಿಗೇನೂ ಅಪಾಯವಿಲ್ಲ. ಉದ್ದನೆಯ ಮನೋಹರ ನೆಲದ ಚಾಚು ರೇವಿಗೆ ರಕ್ಷಣೆ ನೀಡಿದೆ. ಕಿಯಮಾರಿ ಎಂಬುದು ಹಿಂದೆ ಇದರೊಳಗಿನ ಒಂದು ದ್ವೀಪವಾಗಿತ್ತು. 1850ರಲ್ಲಿ ಇದಕ್ಕೆ ಸೇತುವೆ ಕಟ್ಟಿ ರೈಲ್ವೆ ಸಂಪರ್ಕ ಏರ್ಪಡಿಸಿದ್ದರಿಂದಲೂ ಇದಕ್ಕೂ ಮುಖ್ಯ ಭೂಭಾಗಕ್ಕೂ ನಡುವಣ ಪ್ರದೇಶವನ್ನು ವಸತಿ ಯೋಗ್ಯವಾಗಿ ಪರಿವರ್ತಿಸಿದ್ದರಿಂದಲೂ ಈಗ ಇದು ದ್ವೀಪವಾಗಿ ಉಳಿದಿಲ್ಲ. ಅವಿಭಜಿತ ಭಾರತದ ಸಮುದ್ರಮಾರ್ಗೀಣ ರಫ್ತುವ್ಯಾಪಾರದಲ್ಲಿ ಏಳನೆಯ ಒಂದರಿಂದ ಅರನೆಯ ಒಂದರ ವರೆಗಿನಷ್ಟು ಭಾಗ ಕರಾಚಿಯ ಮೂಲಕ ನಡೆಯುತ್ತಿತ್ತು. ಹತ್ತಿ, ಗೋದಿ, ಅಕ್ಕಿ, ಎಣ್ಣೆಬೀಜ, ಉಪ್ಪು ಇವು ನಿರ್ಯಾತಗಳಾಗಿದ್ದುವು. ಆಗ ಇದರ ಮೂಲಕ ಸಾಗಿಬರುತ್ತಿದ್ದ

ಪದಾರ್ಥಗಳೆಂದರೆ ಪೆಟ್ರೋಲಿಯಂ, ಜವಳಿ, ಯಂತ್ರ ಮತ್ತು ಕಲ್ಲಿದ್ದಲು. ಆಮದಿಗಿಂತ ರಫ್ತೇ ಹೆಚ್ಚಾಗಿತ್ತು. ಪಾಕಿಸ್ತಾನದ ರಚನೆಯಾದಾಗ ಭಾರತದ ವಾಯವ್ಯ ಭಾಗದ ವಿದೇಶೀ ವ್ಯಾಪಾರದ ಹೆಬ್ಬಾಗಿಲಾಗಿದ್ದ ಕರಾಚಿಯೂ ಪಾಕಿಸ್ತಾನಕ್ಕೆ ಸೇರಿತು. ಈ ಪ್ರದೇಶದ ಆವಶ್ಯಕತೆಗಳನ್ನು ಪೂರೈಸಲು ಗುಜರಾತಿನಲ್ಲಿ ಕಾಂಡ್ಲ ರೇವುಪಟ್ಟಣವನ್ನು ನಿರ್ಮಿಸಲಾಗಿದೆ **(ನೋಡಿ– ಕಾಂಡ್ಲಾ)**.

1941ರಲ್ಲಿದ್ದಂತೆ ಕರಾಚಿಯ ಜನಸಂಖ್ಯೆಯಲ್ಲಿ ಶೇ. 57ರಷ್ಟು ಮಂದಿ ಮುಸ್ಲಿಮೇತರರಾಗಿದ್ದರು. ಇದು ಪಾಕಿಸ್ತಾನದ ರಾಜಧಾನಿಯಾಯಿತು. 1948ರಲ್ಲಿ ಇದನ್ನೂ ಇದರ ಸುತ್ತಣ ಹಳ್ಳಿಗಳನ್ನೂ ರೇವಿನ ಬಳಿಯ ದ್ವೀಪಗಳನ್ನೂ ಕೇಂದ್ರಶಾಸಿತ ಪ್ರದೇಶವಾಗಿ ಪರಿವರ್ತಿಸಲಾಯಿತು. ಪಾಕಿಸ್ತಾನದ ರಾಜಧಾನಿಯನ್ನು ಕರಾಚಿಯಿಂದ ರಾವಲ್ಪಿಂಡಿಗೆ ವರ್ಗಾಯಿಸಿದ್ದು 1959 ಅಕ್ಟೋಬರಿನಲ್ಲಿ. ಇದು ಪಶ್ಚಿಮ ಪಾಕಿಸ್ತಾನದ ನೌಕಾಪಡೆಯ ಕೇಂದ್ರ.

ಸದರ್ ಬಜಾ಼ರ್ ಕರಾಚಿಯ ಮುಖ್ಯ ವ್ಯಾಪಾರ ಕೇಂದ್ರ. ಬಂದರ್ ರಸ್ತೆ. ಮೆಕ್‌ಲಿಯಾಡ್ ರಸ್ತೆ ಮತ್ತು ಫ್ರಿಯರ್ ರಸ್ತೆಗಳು ಮುಖ್ಯ ವಾಣಿಜ್ಯ ಪ್ರದೇಶಗಳು. ಕರಾಚಿ ವಿಶ್ವವಿದ್ಯಾಲಯವನ್ನು 1950ರಲ್ಲಿ ಸ್ಥಾಪಿಸಲಾಯಿತು. ಉದ್ಯಾನವೊಂದರ ನಡುವೆ ಇರುವ ಫ್ರಿಯರ್ ಭವನವೊಂದು ರಾಷ್ಟ್ರೀಯ ವಸ್ತುಸಂಗ್ರಹಾಲಯ. ಬರ್ನ್ಸ್ ಉದ್ಯಾನ ಪ್ರಸಿದ್ಧವಾಗಿದೆ. ಅಖಂಡ ಭಾರತದ ವಿಭಜನೆಯಾದ ಮೇಲೆ ಕರಾಚಿ ನಗರದ ಜನಸಂಖ್ಯೆ ಅತಿಯಾಗಿ ಹೆಚ್ಚಿತು. ಇದರ ಬಳಿ ಹಲವು ಉಪನಗರಗಳ ನಿರ್ಮಾಣವಾಗಿವೆ. ಕರಾಚಿ ಅಭಿವೃದ್ಧಿ ಸಂಸ್ಥೆಯ ಸ್ಥಾಪನೆಯಾದದ್ದು 1957ರಲ್ಲಿ.

ಕರಾಚಿಯ ಹಡಗು ತಾಣಗಳ (ಬರ್ತ್) ಬಳಿಯ ಸಮುದ್ರದಾಳವನ್ನು ಹೆಚ್ಚಿಸಲೂ ಬಂದರಿನ ಸ್ಥಳ ವಿಸ್ತರಿಸಲೂ 1958ರಲ್ಲಿ ಅಲ್ಲಿಯ ಬಂದರು ನ್ಯಾಸ ಮಂಡಲಿ ವಿಶೇಷ ಕಾರ್ಯ ಕೈಕೊಂಡಿದ್ದರಿಂದ ಈಗ ಅದರ ಸಾಮರ್ಥ್ಯ ತಕ್ಕಮಟ್ಟಿಗೆ ಅಧಿಕಗೊಂಡಿದೆ.

ಕರಾಚಿಯ ಕೈಗಾರಿಕಾ ಪ್ರದೇಶ ಪೂರ್ವದಲ್ಲಿ 21 ಕಿಮೀ ಗಳವರೆಗೂ ಹಬ್ಬಿದೆ. ಹತ್ತಿ, ರೇಷ್ಮೆ ಮತ್ತು ಉಣ್ಣೆ ಜವಳಿ, ಪ್ಲಾಸ್ಟಿಕ್ ಮತ್ತು ರಸಾಯನ ಪದಾರ್ಥಗಳ ಮತ್ತು ಚರ್ಮದ ವಸ್ತುಗಳ ಕೈಗಾರಿಕೆಗಳು ಮುಖ್ಯವಾದವು.

ಪಶ್ಚಿಮ ಪಾಕಿಸ್ತಾನದ ಮುಖ್ಯ ಸ್ಥಳಗಳಿಗೂ ಕರಾಚಿಗೂ ಪಾಕಿಸ್ತಾನ್ ಪಶ್ಚಿಮ ರೈಲ್ವೆಯ ಸಂಪರ್ಕವಿದೆ. ಇಲ್ಲಿಂದ ಭಾರತದ ರೈಲ್ವೆಯೊಂದಿಗೆ ಗಡಿ ನಗರವಾದ ಮುನಾಬಾದಿನ ಮೂಲಕ ಹಾದು ಸಂಪರ್ಕ ಕಲ್ಪಿಸುವ ರೈಲುಮಾರ್ಗವೊಂದುಂಟು. ಕರಾಚಿ ನಗರ ತೈಲ ನೆಲೆಗಳಿಗೆ ಹತ್ತಿರದಲ್ಲಿರುವುದರಿಂದಲೂ ಇಲ್ಲಿ ಪ್ರವಾಹ ಮತ್ತು ಮಳೆ ಮೋಡೆಗಳಿಲ್ಲದಿರುವುದರಿಂದಲೂ ಸನ್ನಿವೇಶಮಹಿಮೆಯಿಂದಲೂ ಕರಾಚಿಯ ಡ್ರಿಘ್‌ರೋಡ್ ಮುಖ್ಯ ಅಂತಾರಾಷ್ಟ್ರೀಯ ವಿಮಾನದಾಣವಾಗಿದೆ. (ಎಸ್.ಎನ್.ಎ.ಆರ್.)

**ಕರಾರು :** ಒಂದು ಪಕ್ಷ ಇನ್ನೊಂದು ಪಕ್ಷದ ಮೌಲ್ಯಯುಕ್ತ (ವ್ಯಾಲ್ಯುಯಬಲ್) ಪ್ರತಿಫಲಕ್ಕಾಗಿ ಏನನ್ನಾದರೂ ಕೊಡುವುದಾಗಿಯೊ ಮಾಡುವುದಾಗಿಯೊ ಅಥವಾ ವರ್ಜಿಸುವುದಾಗಿಯೊ ಸಮ್ಮತಿಸಿ, ಇಬ್ಬರ ಅಥವಾ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳ ನಡುವೆ ಏರ್ಪಟ್ಟ, ಕಾನೂನುರೀತ್ಯಾ ಚಲಾಯಿಸಬಹುದಾದ, ಒಪ್ಪಂದ (ಕಾಂಟ್ರ್ಯಾಕ್ಟ್). ಪ್ರತಿಯೊಂದು ಕರಾರಿಗೂ ತಳಹದಿಯಾಗಿ ಒಪ್ಪಂದವಿರಬೇಕು. ಇದನ್ನು ಭಾರತದ ಕರಾರು ಕಾಯಿದೆಯಲ್ಲಿ ವಿವರಿಸಲಾಗಿದೆ. ಪ್ರಪ್ರಥಮವಾಗಿ ಒಬ್ಬ ವ್ಯಕ್ತಿ (ಅಥವಾ ಒಂದು ಪಕ್ಷ) ಇನ್ನೊಬ್ಬ ವ್ಯಕ್ತಿಗೆ (ಅಥವಾ ಇನ್ನೊಂದು ಪಕ್ಷಕ್ಕೆ) ಏನನ್ನಾದರೂ ಕೊಡಲು, ಮಾಡಲು ಅಥವಾ ಮಾಡದೆ ಇರಲು ತನ್ನ ಇಚ್ಛೆಯನ್ನು ವ್ಯಕ್ತಪಡಿಸಬೇಕು. ಇದು ಪ್ರಸ್ತಾಪ (ಅಫರ್). ಈ ಪ್ರಸ್ತಾಪಕ್ಕೆ ಇನ್ನೊಬ್ಬ ವ್ಯಕ್ತಿಯ (ಅಥವಾ ಇನ್ನೊಂದು ಪಕ್ಷದ) ಒಪ್ಪಿಗೆ ದೊರಕಿಸಿಕೊಳ್ಳುವ ಉದ್ದೇಶದಿಂದ ಇದನ್ನು ಮಾಡಿರಬೇಕು. ಯಾರಿಗೆ ಈ ಪ್ರಸ್ತಾಪ ಮಾಡಲಾಗಿದೆಯೋ ಆತ ಇದನ್ನು ಸ್ವೀಕರಿಸಬೇಕು ಅಥವಾ ಇದಕ್ಕೆ ಸಮ್ಮತಿಸಬೇಕು (ಅಕ್ಸೆಪ್ಟ್). ಆಗ ಈ ಪ್ರಸ್ತಾಪ ವಾಗ್ದಾನ (ಪ್ರಮಿಸ್) ಎನಿಸಿಕೊಳ್ಳುತ್ತದೆ. ವಾಗ್ದಾನ ಮಾಡಿದವನ ಇಚ್ಛೆಯಂತೆ ಅದಕ್ಕೆ ಪ್ರತಿಯಾಗಿ ವಾಗ್ದಾನ ಸ್ವೀಕರ್ತ ಏನನ್ನಾದರೂ ಕೊಡಲು, ಮಾಡಲು ಅಥವಾ ಮಾಡದಿರಲು ನೀಡಿದ ವಚನವೇ ಪ್ರತಿಫಲ (ಕನ್ಸಿಡರೇಷನ್). ಪ್ರಸ್ತಾಪಕಾರನ ವಾಗ್ದಾನಕ್ಕೆ ಸ್ವೀಕರ್ತನ ಪ್ರತಿ ವಾಗ್ದಾನವೇ ಪ್ರತಿಫಲ; ಸ್ವೀಕರ್ತನ ವಾಗ್ದಾನಕ್ಕೆ ಮೊದಲನೆಯವನ ವಚನವೇ ಪ್ರತಿಫಲ. ಹೀಗೆ ಪರಸ್ಪರ ಪ್ರತಿಫಲಮೂಲವಾದ ಪ್ರತಿಯೊಂದು ವಾಗ್ದಾನವೂ ಅಥವಾ ವಾಗ್ದಾನಗಳ ಮೊತ್ತವೂ ಒಪ್ಪಂದವೆನಿಸಿಕೊಳ್ಳುತ್ತದೆ. ಈ ಒಪ್ಪಂದದಲ್ಲಿ ಯಾರೊಬ್ಬರು ವಾಗ್ದಾನ ಮುರಿದರೂ ಆದರಿಂದ ಭಂಗಪಟ್ಟ ಇನ್ನೊಬ್ಬರು ಕಾಯಿದೆಯ ಮೂಲಕ ಒಪ್ಪಂದವನ್ನು ಚಲಾಯಿಸುವುದು ಸಾಧ್ಯವಾಗದಿದ್ದರೆ ಆಗ ಅದು ಕರಾಕೆನಿಸುವುದಿಲ್ಲ. ಅದು ಶೂನ್ಯ (ವಾಯ್ಡ್) ಒಪ್ಪಂದ. ಸಂಬಂಧಿಸಿದ ಪಕ್ಷ ಅಥವಾ ಪಕ್ಷಗಳ ಇಚ್ಛೆಯಂತೆ ಕಾನೂನುರೀತ್ಯಾ ಚಲಾಯಿಸಬಹುದಾದ ಅಥವಾ ಬಿಡಬಹುದಾದ ಒಪ್ಪಂದವನ್ನು ವಿವರ್ಜ್ಯ (ವಾಯ್ಡಬಲ್) ಕರಾರು ಎನ್ನಲಾಗುತ್ತದೆ. ಕರಾರು ಮಾಡಿಕೊಳ್ಳಲು ಅರ್ಹತೆಯುಳ್ಳ ಪಕ್ಷಗಳು ಕಾನೂನುಬದ್ಧ ಪ್ರತಿಫಲಕ್ಕಾಗಿ, ಕಾನೂನುಬದ್ಧ ಉದ್ದೇಶದಿಂದ, ಖುದ್ದು ರಾಜಿಯಿಂದ ಮಾಡಿಕೊಂಡ, ಶೂನ್ಯವೆಂದು ಅಭಿವ್ಯಕ್ತವಾಗಿ ಘೋಷಿತವಲ್ಲದ ಎಲ್ಲ ಒಪ್ಪಂದಗಳೂ ಕರಾರುಗಳೆಂದು ಭಾರತದ ಕರಾರು ಕಾಯಿದೆಯ 10ನೆಯ ಕಲಮಿನಲ್ಲಿ ಹೇಳಲಾಗಿದೆ.

ಕರಾರು ಮಾಡಿಕೊಳ್ಳುವವರಿಗೆ ಇರಬೇಕಾದ ಅರ್ಹತೆಯ ವಿಚಾರವನ್ನು ಭಾರತದ ಕರಾರು ಕಾಯಿದೆಯ 11ನೆಯ ಕಲಮಿನಲ್ಲಿ ವಿವೇಚಿಸಲಾಗಿದೆ. ಯಥೋಚಿತ ಕಾನೂನಿನ ಪ್ರಕಾರ ಪ್ರಾಪ್ತವಯಸ್ಕನೂ ಸ್ವಸ್ಥಚಿತ್ತನೂ ಆಗಿದ್ದು, ಕರಾರು ಮಾಡಿಕೊಳ್ಳಲರ್ಹನೆಂದು ಆತನಿಗೆ ಸಂಬಂಧಿಸಿದ ಯಾವ ಕಾನೂನಿನಿಂದಲೂ ವರ್ಜಿಸಲ್ಪಡದ ಪ್ರತಿಯೊಬ್ಬನಿಗೂ ಈ ಅರ್ಹತೆಯುಂಟು. 18 ವರ್ಷ ತುಂಬಿದಾತ ಸಾಮಾನ್ಯವಾಗಿ ಪ್ರಾಪ್ತವಯಸ್ಕ. ಅಪ್ರಾಪ್ತವಯಸ್ಕನಿಗೆ ಯಾವುದಾದರೂ ನ್ಯಾಯಾಲಯದಿಂದ ಪಾಲಕನ (ಗಾರ್ಡಿಯನ್) ನೇಮಕವಾಗಿದ್ದರೆ ಅವನನ್ನು (ಪಾಲಿತ) ಪ್ರಾಪ್ತವಯಸ್ಕನೆಂದು ಪರಿಗಣಿಸಲು ಅವನಿಗೆ 21 ವರ್ಷ ತುಂಬಿರಬೇಕು. ಕರಾರಿನ ವ್ಯಕ್ತಿಗಳು ಸ್ವಸ್ಥಚಿತ್ತದಿಂದ ಕೂಡಿರಬೇಕೆಂಬುದು ಇನ್ನೊಂದು ನಿಯಮ, ಎಂದರೆ ತಾನು ಮಾಡಿಕೊಳ್ಳುತ್ತಿರುವ ಕರಾರಿನ ಅಂಶಗಳನ್ನು ತಿಳಿದುಕೊಳ್ಳಲು ಸಮರ್ಥನಾಗಿದ್ದು ತನ್ನ ಹಿತಗಳ ಮೇಲೆ ಅದರ ಪರಿಣಾಮ ಏನಾದೀತು ಎಂಬುದನ್ನು ಬುದ್ಧಿವಂತಿಕೆಯಿಂದ ನಿರ್ಧರಿಸಲು ಶಕ್ತನಾಗಿರಬೇಕು (12ನೆಯ ಕಲಂ). ವ್ಯಕ್ತಿಗೆ ಚಿತ್ತಸ್ವಾಸ್ಥ್ಯವಿಲ್ಲದಾಗ ಅತ ಮಾಡಿಕೊಂಡು ಒಪ್ಪಂದ ಊರ್ಜಿತವಾಗದೆ ಹೋಗಬಹುದು.

ಸ್ವಸ್ಥಚಿತ್ತರು ಮಾಡಿಕೊಂಡ ನಿರುಪಾಧಿಕ ಸಮ್ಮತಿಯಿಂದ (ಫ್ರೀ ಕನ್ಸೆಂಟ್) ಒಪ್ಪಂದವಾಗಿರಬೇಕು. ಇಬ್ಬರು ಅಥವಾ ಹೆಚ್ಚು ಮಂದಿ ಒಂದು ವಿಚಾರದ ಬಗ್ಗೆ ಒಂದೇ ಅರ್ಥದಲ್ಲಿ ಒಪ್ಪಿಗೆ ನೀಡುವುದೇ ಸಮ್ಮತಿ, ಒಂದೇ ಮಾತಿನ ಅರ್ಥ ಒಬ್ಬೊಬ್ಬರಿಗೆ ಒಂದೊಂದು ರೀತಿ ಆಗುವ ಸಂಭವ ಮತ್ತು ಸಾಧ್ಯತೆ ಉಂಟು. ಉದಾ: ಒಬ್ಬ ಇನ್ನೊಬ್ಬನಿಗೆ ಮೈಸೂರಿನಲ್ಲಿರುವ ತನ್ನ ಹೊಸ ಮನೆ ಮಾರುವುದಾಗಿ ಮಾತು ಕೊಟ್ಟ ಪಕ್ಷದಲ್ಲಿ, ಆ ಒಬ್ಬನಿಗೆ ಎರಡು ಮನೆಗಳು ಇರುವ ಸಂಗತಿ ಇನ್ನೊಬ್ಬನಿಗೆ ಗೊತ್ತಿಲ್ಲದಿದ್ದರೆ, ತಾನು ನೋಡಿರುವ ಮನೆಯೇ ಮಾರಾಟಕ್ಕೆ ಇರುವ ಮನೆ ಎಂದು ಇನ್ನೊಬ್ಬ ಭಾವಿಸಬಹುದು. ಆದರೆ ಮಾರಲಿರುವ ಮನೆ ಆ ಇನ್ನೊಬ್ಬ ನೋಡಿಲ್ಲದ ಮನೆಯಾಗಿರಬಹುದು. ಆಗ ಮೊದಲಿನವ ಮಾರುತ್ತೇನೆಂದು ಹೇಳಿದ ಮನೆಯೇ ಒಂದು, ಎರಡನೆಯವ ಕೊಳ್ಳಲು ಒಪ್ಪಿದ ಮನೆಯೇ ಇನ್ನೊಂದು, ಹೀಗೆ ಇವರಿಬ್ಬರೂ ಒಪ್ಪಂದಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಬೇರೆ ಬೇರೆ ಅರ್ಥ ಬರುವಂತಿರುವುದರಿಂದ ಇದು ಕರಾರಾಗಿರಲಾರದು (ಕಲಂ 13).

ಒತ್ತಾಯ (ಕೊಯರ್ಷನ್), ಅನುಚಿತ ಪ್ರಭಾವ (ಅನ್‌ಡೂ ಇನ್‌ಫ್ಲುಯೆನ್ಸ್), ವಂಚನೆ (ಫ್ರಾಡ್), ತಪ್ಪು ನಿರೂಪಣೆ (ಮಿಸ್‌ರೆಪ್ರಸೆಂಟೇಷನ್). ತಪ್ಪು ಗ್ರಹಿಕ (ಮಿಸ್ಟೇಕ್) ಇವುಗಳಿಲ್ಲದ್ದೇ ನಿರುಪಾಧಿಕ ಸಮ್ಮತಿ–ಎಂದು ಭಾರತೀಯ ಕರಾರು ಕಾಯಿದೆಯಲ್ಲಿ ಹೇಳಲಾಗಿದೆ.

ಪ್ರತಿಯೊಂದು ಕರಾರಿಗೂ ಸಾಮಾನ್ಯವಾಗಿ ಪ್ರತಿಫಲ ಇರಬೇಕು. ಒಪ್ಪಂದದ ಪ್ರತಿಫಲ ಅಥವಾ ಉದ್ದೇಶ ನ್ಯಾಯಬದ್ಧವಾಗಿರಬೇಕು. ಕಾನೂನಿನಿಂದ ನಿಷೇಧಿಸಲ್ಪಟ್ಟು, ಜಾರಿಗೆ ಬಂದರೆ ಯಾವುದಾದರೂ ಕಾನೂನಿನ ಅಂಶಗಳನ್ನು ಮುರಿಯುವಂಥ, ವಂಚನೆಯಿಂದ ಕೂಡಿದ, ಇನ್ನೊಬ್ಬರಿಗೆ ಅಥವಾ ಅವರ ಸ್ವತ್ತಿಗೆ ಹಾನಿ (ಇಂಜರಿ)ಕಾರಕವಾದ ಅಥವಾ ಅನೈತಿಕವಾದದ್ದೆಂದೋ ಸಾರ್ವಜನಿಕ ಕಾರ್ಯ ನೀತಿಗೆ ವಿರುದ್ಧವಾದದ್ದೆಂದೋ ನ್ಯಾಯಾಲಯದಿಂದ ಪರಿಗಣಿತವಾದ ಪ್ರತಿಫಲ ಅಥವಾ ಉದ್ದೇಶ ನ್ಯಾಯಬದ್ಧವೆನಿಸುವುದಿಲ್ಲ (ಕಲಂ 23). ಯಾವುದು ಕಾನೂನು ಬದ್ಧ ಪ್ರತಿಫಲ ಅಥವಾ ಉದ್ದೇಶ. ಯಾವುದು ಅಲ್ಲ ಎಂಬ ಬಗ್ಗೆ ಭಾರತೀಯ ಕರಾರು ಕಾಯಿದೆಯಲ್ಲಿ ಅನೇಕ ಉದಾಹರಣೆಗಳನ್ನು ಕೊಡಲಾಗಿದೆ. Bಗೆ ಒಂದು ಮನೆ ಮಾರಲು A ವಾಗ್ದಾನ ಮಾಡುತ್ತಾನೆ. ಅದಕ್ಕೆ B ರೂ 10,000 ಕೊಡಲು ಮಾಡುವ ವಾಗ್ದಾನವೇ A ಮನೆ ಮಾರಲು ಮಾಡುವ ವಾಗ್ದಾನಕ್ಕೆ ಪ್ರತಿಫಲ. Bಯ ವಾಗ್ದಾನಕ್ಕೆ Aಯ ವಾಗ್ದಾನವೇ ಪ್ರತಿಫಲ. ಇವು ನ್ಯಾಯಬದ್ಧ ಪ್ರತಿಫಲಗಳು. ಸರ್ಕಾರದಲ್ಲಿ Bಗೆ ಒಂದು ನೌಕರಿ ಕೊಡಿಸಿಕೊಡಲು A ವಾಗ್ದಾನ ಮಾಡುತ್ತಾನೆ. ಇದಕ್ಕೆ ಪ್ರತಿಯಾಗಿ ರೂ 1,000 ಕೊಡಲು B ವಾಗ್ದಾನ ಮಾಡುತ್ತಾನೆ. ಇದು ಶೂನ್ಯ ಒಪ್ಪಂದ. ಏಕೆಂದರೆ ಇದರ ಪ್ರತಿಫಲ ನ್ಯಾಯಬದ್ಧವಲ್ಲ. Aಯ ಮನೆಯಲ್ಲಿ ದರೋಡೆ ಮಾಡಿ ಪಡೆದ ಮೇಲೆ ಪದಾರ್ಥಗಳನ್ನು ಅವನಿಗೆ ಹಿಂದಿರುಗಿಸಲು Bಗೆ ಬಾಡಿಗೆಗೆ ಕೊಡಲು ಒಪ್ಪುತ್ತಾಳೆ. ಭಾರತೀಯ ದಂಡಸಂಹಿತೆಯ ಪ್ರಕಾರ ಬಾಡಿಗೆಗೆ ಕೊಡುವುದು ದಂಡಾರ್ಹವಲ್ಲವಾದರೂ ಅದು ಅನೈತಿಕವಾದ್ದರಿಂದ ಈ ಒಪ್ಪಂದ ಕರಾರೆನಿಸುವುದಿಲ್ಲ.

ಮುಂದೆ ಕೊಟ್ಟಿರುವ ಸಂದರ್ಭಗಳಲ್ಲಿ ಒಂದು ಒಪ್ಪಂದ ಶೂನ್ಯ (ವಾಯ್ಡ್) ಎನಿಸುತ್ತದೆ:

1 ಒಂದು ಅಥವಾ ಹಲವು ಉದ್ದೇಶಗಳಿಗೆ ಸಂಬಂಧಿಸಿದ ಪ್ರತಿಫಲ ಅಥವಾ ಅದರ ಯಾವುದಾದರೂ ಭಾಗವೋ ಒಂದು ಉದ್ದೇಶಕ್ಕೆ ಸಂಬಂಧಿಸಿದ ಹಲವು ಪ್ರತಿಫಲಗಳಲ್ಲಿ ಯಾವುದಾದರೊಂದೋ ಅಥವಾ ಅದರ ಯಾವುದಾದರೂ ಭಾವೋ ನ್ಯಾಯವಿದ್ಧವಾದಾಗ ಒಪ್ಪಂದ ಶೂನ್ಯವೆನಿಸುತ್ತದೆ (ಕಲಂ 24:)

2 ಪ್ರತಿಫಲವಿಲ್ಲದ ಒಪ್ಪಂದವೂ ಶೂನ್ಯವೇ ಉದಾ: ಏನೂ ಪ್ರತಿಫಲವಿಲ್ಲದೆ Bಗೆ A ರೂ 1,000 ಕೊಡಲು ವಾಗ್ದಾನ ಮಾಡುತ್ತಾನೆ. ಇದು ಶೂನ್ಯ ಆದರೆ ಈ ನಿಯಮಕ್ಕೆ ಮುಂದಿನ ಅಪವಾದಗಳಿವೆ :

(1) ಲಿಖಿತವಾಗಿ ವ್ಯಕ್ತವಾದ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನು ರೀತ್ಯಾ ನೋಂದಣಿಗೊಳಿಸಿದ್ದಾಗಿದ್ದು, ಎರಡೂ ಪಕ್ಷಗಳ ಪರಸ್ಪರ ನಿಕಟ ಬಾಂಧವ್ಯ ಫಲವಾದ ಸಹಜ ಪ್ರೀತಿ ಅಥವಾ ಮಮತೆಯ ಕಾರಣದಿಂದ ಆರದಾದರೆ ಅಂಥ ಒಪ್ಪಂದ ಪ್ರತಿಫಲರಹಿತವೆಂದು ಶೂನ್ಯವಾಗುವುದಿಲ್ಲ ಉದಾ: ತನ್ನ ಮಗನಲ್ಲಿ ಹೊಂದಿರುವ ಸಹಜವಾದ ಪ್ರೀತಿ ಮಮತೆಗಳಿಂದಾಗಿ ತಂದೆ ಅವನಿಗೆ ರೂ 1,000 ಕೊಡಲು ವಾಗ್ದಾನ ಮಾಡಿ ಬರೆಹಕ್ಕಿಳಿಸಿ ನೋಂದಣಿ ಮಾಡಿಸುತ್ತಾನೆ. ಇದು ಕರಾರು.

(2) ಒಬ್ಬನಿಗೆ ಇನ್ನೊಬ್ಬ ಆಗಲೇ ಸ್ವತಃ ಏನನ್ನಾದರೂ ಮಾಡಿದ್ದು, ಅಥವಾ ಮೊದಲನೆಯಾತ ನ್ಯಾಯವಾಗಿ ಮಾಡಬೇಕಾಗಿದ್ದನ್ನು ಎರಡನೆಯಾತ ಮಾಡಿದ್ದು, ಅದಕ್ಕಾಗಿ ಮೊದಲನೆಯಾತ ಎರಡನೆಯವನಿಗೆ ಭಾಗಶಃವಾಗಿಯೋ ಪೂರ್ತಿಯಾಗಿಯೋ ಪರಿಹಾರ ನೀಡಲು ಮಾಡಿದ ವಾಗ್ದಾನ ಶೂನ್ಯವೆನಿಸುವುದಿಲ್ಲ. ಉದಾ: Bಯ ಥೈಲಿ (ಪರ್ಸ್) Aಗೆ ಸಿಕ್ಕಿ, ಆತ ಅದನ್ನು Bಗೆ ಕೊಡುತ್ತಾನೆ. ಇದಕ್ಕಾಗಿ Aಗೆ B ರೂ 50 ಕೊಡಲೊಪ್ಪುತ್ತಾನೆ. ಇದು ಕರಾರು. Bಯ ಕಿರಿ ವಯಸ್ಸಿನ ಮಗನನ್ನು A ಸಲಹುತ್ತಾನೆ. ಇದಕ್ಕಾಗಿ Aಗೆ ತಗಲುವ ಖರ್ಚನ್ನು ಕೊಡಲು B ವಾಗ್ದಾನ ಮಾಡುತ್ತಾನೆ. ಇದೂ ಕರಾರೇ.

(3) ದಾವೆ ಹೂಡುವ ಅವಧಿ ತೀರದಿದ್ದ ಪಕ್ಷದಲ್ಲಿ ಪಾವತಿಗಾಗಿ ಹಕ್ಕು ಚಲಾಯಿಸಬಹುದಾಗಿದ್ದ ಸಾಲಿಗನ (ಕ್ರೆಡಿಟರ್) ಋಣಿಯೋ (ಡೆಟರ್) ಆತನಿಂದ ಸೂಕ್ತ ಅಧಿಕಾರ ಪಡೆದ ಕಾರ್ಯಸ್ಥನೋ (ಏಜೆಂಟ್) ಸಹಿ ಹಾಕಿ ಮಾಡಲಾದ ಲಿಖಿತ ವಾಗ್ದಾನವೂ ಕರಾರೇ.

ದಾನಿಯಾದಾತ ದಾನಸ್ವೀಕೃತನಿಗೆ ಮಾಡಿದ ದಾನ ಕೂಡ ಈ ವಿಧಿಯಿಂದ ಅಬಾಧಿತವಾಗಿರುತ್ತದೆ. ಅಲ್ಲದೆ ಒಂದು ಒಪ್ಪಂದಕ್ಕೆ ವಾಗ್ದಾತ (ಪ್ರಾಮಿಸರ್) ನೀಡಿರುವ ಸಮ್ಮತಿ ಅಬಾಧಿತವಾಗಿರಬೇಕೆಂಬುದು ಮುಖ್ಯವೇ ವಿನಾ, ಅದಕ್ಕೆ ಪ್ರತಿಫಲ ಸಾಕಷ್ಟಿಲ್ಲವೆಂಬ ಕಾರಣದಿಂದಾಗಿಯೇ ಆ ಒಪ್ಪಂದ ಶೂನ್ಯವಾಗುವುದಿಲ್ಲವೆಂಬುದು ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶ. ಉದಾಹರಣೆಗೆ ಒಬ್ಬ ತನ್ನ ರೂ 10,000 ಬೆಲೆಬಾಳುವ ಮನೆಯನ್ನು ರೂ. 10ಕ್ಕೆ ಮಾರಲು ಒಪ್ಪುತ್ತಾನೆ. ಆತನ ಸಮ್ಮತಿ ಅಬಾಧಿತವಾಗಿದ್ದು ಪಕ್ಷದಲ್ಲಿ, ಪ್ರತಿಫಲ ಸಾಕಷ್ಟಿಲ್ಲವಾಗಿದ್ದರೂ ಈ ಒಪ್ಪಂದ ಕರಾರೆನಿಸುತ್ತದೆ. ಒಪ್ಪಂದಕ್ಕೆ ವಾಗ್ದಾತ ನೀಡಲಾದ ಸಮ್ಮತಿ ಅಬಾಧಿತ ಹೌದೇ ಅಲ್ಲವೇ ಎಂಬುದನ್ನು ನಿರ್ಣಯಿಸುವಾಗ ಪ್ರತಿಫಲ ಯಥೋಚಿತವೇ ಅಲ್ಲವೇ ಎಂಬ ವಿಚಾರವನ್ನೂ ನ್ಯಾಯಾಲಯ ಪರಿಗಣಿಸಬಹುದು (ಕಲಂ 25).

3 ಅಪ್ರಾಪ್ತವಯಸ್ಕರ ವಿನಾ ಇತರರ ವಿವಾಹವನ್ನು ಪ್ರತಿಬಂಧಿಸಿಯೋ ನ್ಯಾಯಬದ್ಧವಾದ ಯಾವುದೇ ಬಗೆಯ ವೃತ್ತಿ, ವ್ಯಾಪಾರ ಅಥವಾ ವ್ಯವಹಾರವನ್ನು ಕೈಗೊಳ್ಳಲು ಯಾವೊಬ್ಬ ವ್ಯಕ್ತಿಗೆ ತಡೆಯೊಡ್ಡಿಯೋ ಮಾಡಿಕೊಳ್ಳಲಾದ ಪ್ರತಿಯೊಂದು ಒಪ್ಪಂದವೂ ಶೂನ್ಯವಾಗುತ್ತದೆ. ಆದರೆ ಈ ನಿಯಮಕ್ಕೆ ಒಂದು ಅಪವಾದವುಂಟು. ಒಬ್ಬ ತನ್ನ ವ್ಯವಹಾರ (ಬಿಸಿನೆಸ್) ಸುನಾಮವನ್ನು (ಗುಡ್‌ವಿಲ್) ಮಾರಾಟ ಮಾಡಿದಾಗ, ಅದನ್ನು ಕೊಂಡವನೋ ಅವನಿಂದ ಈ ಹಕ್ಕು ಪಡೆದವನೋ ಈ ಬಗೆಯ ವ್ಯವಹಾರವನ್ನು ಮಾಡುತ್ತಿರುವವರೆಗೂ ಒಂದು ಗೊತ್ತಾದ ಸ್ಥಳೀಯ ಮಿತಿಯೊಳಗೆ ಇಂಥದೇ ವ್ಯಾಪಾರ ಮಾಡುವುದಿಲ್ಲವೆಂದು ಸುನಾಮದ ಸ್ಥಳೀಯ ಮಿತಿಯೊಳಗೆ ಇಂಥದೇ ವ್ಯಾಪಾರ ಮಾಡುವುದಿಲ್ಲವೆಂದು ಸುನಾಮದ ಮಾರಾಟಗಾರ ಒಪ್ಪಬಹುದು. ಅದರ ಆ ವ್ಯವಹಾರದ ಸ್ವರೂಪದ ದೃಷ್ಟಿಯಿಂದ ಇಂಥ ಮಿತಿಗಳು ನ್ಯಾಯವಾದವೆಂಬುದಾಗಿ ನ್ಯಾಯಾಲಯಕ್ಕೆ ವೇದ್ಯವಾಗಬೇಕಾದ್ದು ಅವಶ್ಯ (ಕಲಂ 27).

**ಅವಲಂಬಕ ಕರಾರು (ಕಂಟಂಜೆಂಟ್ ಕಾಂಟ್ರ್ಯಾಕ್ಟ್) :** ಕರಾರುಗಳಲ್ಲಿ ಇದು ಒಂದು ಪ್ರಭೇದ ಅನುಬಂದಿಯಾಗಿ (ಕೊಲ್ಯಾಟರೆಲ್) ಯಾವುದೋ ಒಂದು ಘಟನೆ ಸಂಭವಿಸಿದರೆ ಅಥವಾ ಸಂಭವಿಸದಿದ್ದರೆ ಏನನ್ನಾದರೂ ಮಾಡಲು ಅಥವಾ ಮಾಡದಿರಲು ಮಾಡಿಕೊಂಡ ಕರಾರು ಇದು. Bಯ ಮನೆ ಸುಟ್ಟುಹೋದರೆ ಅವನಿಗೆ ರೂ 10,000 ಕೊಡಲು A ಒಪ್ಪುತ್ತಾನೆ. ಇದು ಅವಲಂಬಕ ಕರಾರು. ವಾಗ್ದಾನವನ್ನು ನೆರವೇರಿಸುವುದೂ ಬಿಡುವುದೂ ಈ ಘಟನೆಯನ್ನೇ ಅವಲಂಬಿಸಿದೆ (ಕಲಂ 31). ಅನಿಶ್ಚಿತವಾದ ಒಂದು ಭಾವೀ ಘಟನೆ ಸಂಭವಿಸಿದರೆ ಏನನ್ನಾದರೂ ಮಾಡಲು ಅಥವಾ ಮಾಡದಿರಲು ಮಾಡಿಕೊಂಡ ಅವಲಂಬಿಕ ಕರಾರನ್ನು ಆ ಘಟನೆ ಸಂಭವಿಸಿದ ವಿನಾ ಮಾಡದಿರಲು ಮಾಡಿಕೊಂಡ ಅವಲಂಬಕ ಕರಾರನ್ನು ಆ ಘಟನೆ ಸಂಭವಿಸಿದ ವಿನಾ ಅಥವಾ ಸಂಭವಿಸುವ ವರೆಗೂ ಚಲಾಯಿಸುವ ಹಾಗಿಲ್ಲ. ಆ ಘಟನೆ ಅಸಾಧ್ಯವಾದಾಗ ಅಂಥ ಕರಾರೂ ಶೂನ್ಯವಾಗುತ್ತದೆ (ಕಲಂ 32). ಅನಿಶ್ಚಿತವಾದ ಒಂದು ಭಾವೀ ಸಂಭವಿಸದಿದ್ದರೆ ಏನನ್ನಾದರೂ ಮಾಡಲು ಅಥವಾ ಮಾಡದಿರಲು ಮಾಡಿಕೊಂಡ ಅವಲಂಬಕ ಕರಾರನ್ನು ಆ ಘಟನೆ ಅಸಾಧ್ಯವಾದಾಗ ಮಾತ್ರವೇ ಚಲಾಯಿಸಬಹುದಲ್ಲದೆ ಅದಕ್ಕೆ ಮುಂಚೆಯಲ್ಲ (ಕಲಂ 33). ಖಚಿತಗೊಳಿಸುವ ಭವಿಷ್ಯತ್‌ಕಾಲದಲ್ಲಿ ಒಬ್ಬ ವ್ಯಕ್ತಿ ಏನು ಮಾಡುವನೆಂಬುದೇ ಅವಲಂಬಕ ಕರಾರಿನ ಭಾವೀ ಘಟನೆಯಾಗಿದ್ದ ಪಕ್ಷದಲ್ಲಿ ಆತನ ಯಾವುದೋ ವರ್ತನೆಯಿಂದಾಗಿ ಮುಂದೆ ಆತ ಹಾಗೆ ಮಾಡುವುದು ಸಾಮಾನ್ಯವಾಗಿ ಅಸಾಧ್ಯವಾಗುವುದಾದರೆ ಕರಾರಿನ ಘಟನೆಯೂ ಅಸಾಧ್ಯವೆಂದು ತಿಳಿಯತಕ್ಕದ್ದು. ಉದಾ: Cಯನ್ನು B ವಿವಾಹವಾಗುವುದಾದರೆ ಅವನಿಗೆ ಎಷ್ಟೋ ಹಣ ಕೊಡುವುದಾಗಿ A ಒಪ್ಪುತ್ತಾನೆ. ಆದರೆ ಆಕೆಯೊಂದಿಗೆ ವಿವಾಹವಾಗುತ್ತದೆ. ಈಗ B ಮತ್ತು D ಗಳ ವಿವಾಹ ಅಸಾಧ್ಯವೆಂದು ತಿಳಿಯಬೇಕು. ಮುಂದೆ ಆ ತೀರಿಕೊಳ್ಳಬಹುದು. ಅನಂತರ Bಯನ್ನು ಆ ವಿವಾಹವಾಗಬಹುದು. ಆದರೂ ಈ ಸಾಧ್ಯತೆಯನ್ನು ಇಲ್ಲಿ ಪರಿಗಣಿಸತಕ್ಕದ್ದಲ್ಲ (ಕಲಂ 34). ನಮೂದಿತವಾದ ಅನಿಶ್ಚಿತ ಘಟನೆಯೊಂದು ಒಂದು ನಿಗದಿಯಾದ ಅವಧಿಯಲ್ಲಿ ಸಂಭವಿಸುವುದು ಅಸಾಧ್ಯವಾಯಿತಾದರೆ, ಆ ಕರಾರು ಶೂನ್ಯವಾಗುತ್ತದೆ. ಉದಾ: ನಿಶ್ಚಿತವಾದ ಹಡಗೊಂದು ಒಂದು ವರ್ಷದೊಳಗೆ ಹಿಂತಿರುಗಿದ ವರ್ಷದಲ್ಲಿ Bಗೆ ಎಷ್ಟೊ ಹಣವನ್ನು ಕೊಡುವುದಾಗಿ A ವಾಗ್ದಾನ ಮಾಡುತ್ತಾನೆ. ಒಂದು ವರ್ಷದೊಳಗಾಗಿ ಆ ಹಡಗು ಮರಳಿದರೆ ಕರಾರನ್ನು ಜಾರಿಗೆ ಕೊಡಬೇಕಾಗುತ್ತದೆ. ಒಂದು ವರ್ಷದೊಳಗಾಗಿ ಆ ಹಡಗು ಸುಟ್ಟು ಹೋದರೆ ಕರಾರು ಶೂನ್ಯವಾಗುತ್ತದೆ. ನಮೂದಿತವಾದ ಅನಿಶ್ಚಿತ ಘಟನೆ ಹೋದರೆ ಕರಾರು ಶೂನ್ಯವಾಗುತ್ತದೆ. ನಮೂದಿತವಾದ ಅನಿಶ್ಚಿತ ಘಟನೆಯೊಂದು ಒಂದು ನಿಗದಿಯಾದ ಅವಧಿಯಲ್ಲಿ ಸಂಭವಿಸದಿದ್ದ ಪಕ್ಷದಲ್ಲಿ ಏನನ್ನಾದರೂ ಮಾಡಲು ಅಥವಾ ಮಾಡದಿರಲು ಅವಲಂಬಕ ಕರಾರು ಮಾಡಿಕೊಂಡಿದ್ದಲ್ಲಿ ಆ ನಿಗದಿತ ಅವಧಿಯಲ್ಲಿ ಅಂಥ ಘಟನೆ ಸಂಭವಿಸಿದ್ದರೆ ಅಥವಾ ಅಷ್ಟರೊಳಗೆ ಅಂಥ ಘಟನೆ ಸಂಭವಿಸುವುದಿಲ್ಲವೆಂಬುದು ಖಂಡಿತವಾಗಿದೆ, ಆ ಕರಾರನ್ನು ಚಲಾಯಿಸಬಹುದು. ನಿಶ್ಚಿತವಾದ ಹಡಗೊಂದು ಒಂದು ವರ್ಷದೊಳಗೆ ಮರಳಿಬಾರದಿದ್ದರೆ Bಗೆ ಎಷ್ಟೊ ಹಣ ಕೊಡುವುದಾಗಿ A ವಾಗ್ದಾನ ಮಾಡುತ್ತಾನೆ. ಒಂದು ವರ್ಷದೊಳಗೆ ಹಡಗು ಹಿಂತಿರುಗದಿದ್ದರೆ ಅಥವಾ ಅಷ್ಟರಲ್ಲಿ ಹಡಗು ಸುಟ್ಟುಹೋದರೆ ಕರಾರನ್ನು ಜಾರಿಗೆ ಕೊಡಬೇಕು (ಕಲಂ 35).

ಅಸಾಧ್ಯವಾದೊಂದು ಘಟನೆ ಸಂಭವಿಸಿದರೆ ಏನನ್ನಾದರೂ ಮಾಡುವುದಾಗಿ ಅಥವಾ ಮಾಡದಿರುವುದಾಗಿ ಅವಲಂಬಕ ಒಪ್ಪಂದ ಮಾಡಿಕೊಂಡಿದ್ದ ಪಕ್ಷದಲ್ಲಿ, ಆ ಘಟನೆ ಅಸಾಧ್ಯವೆಂಬುದು ಆ ಒಪ್ಪಂದ ಮಾಡಿಕೊಂಡ ಸಮಯದಲ್ಲಿ ಪಕ್ಷಗಳಿಗೆ ಗೊತ್ತಿರಲಿ ಗೊತ್ತಿಲ್ಲದಿರಲಿ, ಅದು ಶೂನ್ಯ ಒಪ್ಪಂದವೆನಿಸುತ್ತದೆ. ಉದಾ : ಎರಡು ಸರಳರೇಖೆಗಳು ಒಂದು ಜಾಗವನ್ನು ಸುತ್ತುಗಟ್ಟುವುದಾದರೆ ರೂ 1,000 ಕೊಡುವುದಾಗಿ ಒಬ್ಬ ಇನ್ನೊಬ್ಬನೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಕರಾರು ಎನ್ನಲು ಸಾಧ್ಯವಿಲ್ಲ. ಅದು ಶೂನ್ಯ ಒಪ್ಪಂದ. Aಯ ಮಗಳಾದ C ಯನ್ನು B ಮದುವೆಯಾಗುವುದಾದರೆ Bಗೆ ರೂ 1,000 ಕೊಡುವುದಾಗಿ A ಒಪ್ಪುತ್ತಾನೆ. ಆ ಸಮಯದಲ್ಲಿ C ಜೀವಂತವಾಗಿಲ್ಲವೆಂಬುದು A, B, ಇಬ್ಬರಿಗೂ ಗೊತ್ತಿಲ್ಲ, ಈ ಒಪ್ಪಂದವೂ ಶೂನ್ಯವೇ (ಕಲಂ 36)(**ನೋಡಿ– ವಿಮೆ**).

(ಕೆ.ಪಿ.)

**ಕರಾರು ಟಿಪ್ಪಣಿ :** ಒಬ್ಬ ಷೇರು ದಲ್ಲಾಳಿ ತನ್ನ ಕಕ್ಷಿಗಾರನ ಲೆಕ್ಕದಲ್ಲಿ ಕೊಂಡ ಅಥವಾ ಮಾರಿದ ಷೇರುಗಳ ವಿವರಗಳನ್ನು ನೀಡಿ ಆತನಿಗೆ ಸಲ್ಲಿಸುವ ಪತ್ರ. ಮುಂಬೈ ಮತ್ತು ಕೋಲ್ಕತ್ತ ಷೇರುಪೇಟೆಯ ಒಂದು ಮಾದರಿ ಕರಾರು ಟಿಪ್ಪಣಿಯಲ್ಲಿ ಈ ವಿವರಗಳಿರುತ್ತವೆ: ಷೇರುಗಳ ಬೆಲೆ; ಷೇರು ವರ್ಗಾವಣೆಯನ್ನು ಕಾನೂನುಬದ್ಧವಾಗಿ ಮಾಡಲು ಅಗತ್ಯವಾದ ಸರ್ಕಾರಿ ಮುದ್ರಾಂಕ (ಸ್ಟಾಂಪ್) ಶುಲ್ಕ; ವರ್ಗಾವಣೆಯನ್ನು ದಾಖಲು ಮಾಡಿಕೊಳ್ಳಲೂ ಹೊಸ ಷೇರುಪ್ರಮಾಣ ಪತ್ರವನ್ನು ನೀಡಲೂ ಕಂಪನಿ ವಿಧಿಸುವ ಶುಲ್ಕ; ಮತ್ತು ಷೇರು ದಲ್ಲಾಳಿ ವಿಧಿಸುವ ದಲ್ಲಾಳಿ ಶುಲ್ಕ. ಷೇರುಗಳ ಮೊಬಲಗನ್ನು ಪಾವತಿ ಮಾಡಬೇಕಾದ ಲೆಕ್ಕ ಚುಕ್ತಾದಿನವನ್ನೂ ಇದರಲ್ಲಿ ಸೂಚಿಸಿರುತ್ತದೆ. (ಕೆ.ಎಚ್.)

**ಕರಾವಳಿಯ ರಕ್ಷಣೆ :** ಸಮುದ್ರದ ಕರಾವಳಿಯ ಸ್ವಭಾವ ದಡದ ಭೂಗುಣವನ್ನು ಅವಲಂಬಿಸಿದೆ. ಬಂಡೆಗಳಿದ್ದರೆ ಅಲೆಗಳು ದಡವನ್ನು ಸುಲಭವಾಗಿ ಕೊರೆಯಲಾರವು. ಒಂದೇ ನಮೂನೆಯ ಗಟ್ಟಿಯಾದ ಭೂಮಿಯಿದ್ದರೆ ಕೊರೆತ ಕಮ್ಮಿ, ಆದರೆ ಒಂದು ಗಟ್ಟಿಯಾದ ಪದರದ ಮೇಲೆ ಇನ್ನೊಂದು ಮೆತುವಾದದ್ದಿದ್ದರೆ ಸವೆತ ಹೆಚ್ಚಾಗುತ್ತದೆ. ಸಮುದ್ರದ ಮೇಲೆ ಬಗ್ಗಿರುವ ಬಂಡೆಯ ಮುಖ ಕಡಿದಾಗಿದ್ದರೆ ಅಲೆಗಳ ಬಡಿತದಿಂದ ಕೆಳಭಾಗ ಕೊರೆದು ಮೇಲಿನ ಬಂಡೆ ಕೆಳಕ್ಕೆ ಉರುಳುತ್ತದೆ.

ಅಲೆಗಳು, ಪ್ರವಾಹಗಳು ಮತ್ತು ಮಾರುತಗಳು ಸಮುದ್ರದ ತೆರೆದ ದಡಗಳ ಮೇಲೂ ಕೊಲ್ಲಿಗಳ ಮತ್ತು ಅಳಿವೆಗಳ ತೀರಗಳ ಮೇಲೂ ಬಡಿದಾಗ ದಡದ ಮೇಲಿರುವ ಮಣ್ಣು, ಮರಳು ಗ್ರ್ಯಾವೆಲ್ಲು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುತ್ತವೆ. ಈ ಚಲನೆಯಿಂದ

ಕೆಲವು ಕಡೆ ದಡ ಕೊರೆಯುತ್ತದೆ. ಇನ್ನೂ ಕೆಲವು ಕಡೆ ಮರಳು ತುಂಬಿಕೊಳ್ಳುತ್ತದೆ. ದಡ ಕೊರೆದಾಗ ಬೆಲೆಬಾಳುವ ಭೂಮಿ, ಮನೆಗಳು ಮತ್ತು ರಸ್ತೆಗಳಿಗೆ ತೊಂದರೆಯಾಗುವುದಾದರೆ ಪರಿಹಾರಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಲೆಗಳು ಎರಡು ವಿಧಗಳಲ್ಲಿ ಕೊರೆಯುತ್ತವೆ : 1 ದಡದ ಮರಳನ್ನು ಒಂದು ಜಾಗದಿಂದ ಇನ್ನೊಂದು ಕಡೆಗೆ ಸಾಗಿಸುತ್ತವೆ. 2 ದಡದಿಂದ ಮಣ್ಣನ್ನೋ ಮರಳನ್ನೋ ಆಳವಾದ ದಡದ ಕಡೆಗೆ ಒಯ್ಯುತ್ತವೆ. ಇದನ್ನು ನಿವಾರಿಸುವುದಕ್ಕೆ ಮುಂಚೆ ಅಲೆಗಳ ವಿಚಾರವಾಗಿ ಕೊಂಚ ತಿಳಿದುಕೊಳ್ಳಬೇಕು.

ಮಾರುತಗಳು ನೀರಿನ ಮೇಲ್ಮೈಯ ಮೇಲೆ ಬೀಸಿದಾಗ ಅಲೆಗಳು ಉತ್ಪತ್ತಿಯಾಗುತ್ತವೆ. ಅಲೆಗಳ ಎತ್ತರ (1) ಸಮುದ್ರದ ಮೇಲ್ಮೈ ಒಂದೇ ದಿಕ್ಕಿನಲ್ಲಿ ಬೀಸುವ ಗಾಳಿಗೆ ಮೈಯೊಡ್ಡಿರುವ ಉದ್ದ (ಫೆಚ್), (2) ಗಾಳಿ ಬೀಸುವ ಅವಧಿ ಮತ್ತು (3) ವೇಗ–ಇವಕ್ಕೆ ಅನುಗುಣವಾಗಿದೆ, ನೀರಿನ ಮೇಲೆ ಉತ್ಪನ್ನವಾಗುವ ಅಲೆಗಳು ಒಂದು ಕೊಳದ ಮೇಲೆ ಮಂದಮಾರುತ ಬೀಸಿದಾಗ ಏಳುವ ಕಿರುದೆರೆಗಳಿಂದ ಹಿಡಿದು–ಸಮುದ್ರದ ಮೇಲೆ ಚಂಡಮಾರುತಗಳು, ತುಫಾನು ಮತ್ತು ಬಿರುಗಾಳಿಗಳು ಬೀಸಿದಾಗ ಏಳುವ 60' ಎತ್ತರದ ಅಲೆಗಳ ವರೆಗೂ ವ್ಯತ್ಯಾಸವಾಗುತ್ತವೆ. ಅಲೆಯ ಒಂದು ಶಿಖರದಿಂದ ಇನ್ನೊಂದಕ್ಕೆ ಇರುವ ಅಂತರಕ್ಕೆ ಅಲೆಯ ಉದ್ದವೆನ್ನುತ್ತಾರೆ. ಒಂದೇ ಜಾಗದಲ್ಲಿ ಅಲೆಯ ಒಂದು ಶಿಖರ ಕಾಣಿಸುವುದಕ್ಕೂ ಇನ್ನೊಂದು ಕಾಣಿಸುವುದಕ್ಕೂ ಇರುವ ಕಾಲದ ಅಂತರಕ್ಕೆ ಅಲೆಯ ಅವಧಿಯೆಂದು (ಪೀರಿಯಡ್) ಹೆಸರು. ವಾಸ್ತವವಾಗಿ ಸಮುದ್ರದ ಮೇಲೆ ಬೇರೆ ಬೇರೆ ಉದ್ದಗಳ ಬೇರೆ ಬೇರೆ ಅವಧಿಗಳ ಅಲೆಗಳ ಸಾಲೇ ಕಾಣಿಸುತ್ತವೆ.

ಅಲೆಗಳನ್ನು ಉತ್ಪತ್ತಿ ಮಾಡುವ ಗಾಳಿ ಸ್ಥಳೀಯವಾಗಿದ್ದರೆ ಅವು ಕಡಿದಾಗಿರುತ್ತವೆ. ಎಂದರೆ ಅಲೆಗಳ ಉದ್ದ ಎತ್ತರದ 10–20 ರಷ್ಟಿರುತ್ತವೆ. ಅದಕ್ಕೆ ಪ್ರತಿಯಾಗಿ ಸಮುದ್ರಮಧ್ಯದಲ್ಲಿ ಬಿರುಗಾಳಿಯಿಂದ ಉತ್ಪನ್ನವಾಗಿ ತೀರವನ್ನು ಮುಟ್ಟುವುದಕ್ಕೆ ಮುಂಚೆ ಸಾವಿರಾರು ಕಿಮೀಗಳ ಶಾಂತವಾದ ಗಾಳಿ ಬೀಸುತ್ತಿದ್ದರೆ ಅಲೆಗಳ ಉದ್ದ ಎತ್ತರದ 50–500 ರಷ್ಟಿರುತ್ತವೆ. ಈ ಅಲೆಗಳನ್ನು ಸಮುದ್ರದ ಉಬ್ಬರಗಳು (ಸ್ವೆಲ್) ಎನ್ನುತ್ತಾರೆ.

ಸ್ಥಳೀಯ ಮಾರುತದಿಂದ ಎದ್ದ ಗಿಡ್ಡವೂ ಎತ್ತರವೂ ಆದ ಅಲೆಗಳು ದಡದ ಸಾಮಗ್ರಿಯನ್ನು ನೀರಿನ ಮಟ್ಟದಲ್ಲಿ ಈಚೆಗೆ ಕಿತ್ತು ಎಳೆದು ಆಳವಾದ ಸಮುದ್ರದ ಕಡೆಗೆ ಸಾಗಿಸುತ್ತವೆ. ಆಗ ದಡ ಕೊಚ್ಚಿಹೋಗುತ್ತದೆ. ಆದರೆ ಉಬ್ಬರದ ಅಲೆಗಳು ಮರಳನ್ನು ತಂದು ನೀರಿನ ಮಟ್ಟದಲ್ಲಿ ದಡಕ್ಕೆ ತಂದು ತುಂಬುತ್ತವೆ. ಕೆಲವು ಪ್ರದೇಶಗಳಲ್ಲಿ ಈ ಎರಡು ಕೆಲಸಗಳೂ ಒಂದಾದಮೇಲೊಂದು ನಡೆಯುತ್ತವೆ. ಆಳವಾದ ನೀರಿನಿಂದ ದಡದ ಕಡೆಗೆ ಚಲಿಸುವ ಅಲೆಗಳು ವಕ್ರೀಕರಿಸಿ ದಿಕ್ಕನ್ನು ಬದಲಾಯಿಸುತ್ತವೆ. ಇದರ ಫಲವಾಗಿ ಆಳವಿಲ್ಲದ ನೀರಿನಲ್ಲಿ ಸಮುದ್ರ ತೀರಕ್ಕೆ ಸಮಾಂತರವಾಗಿ ನಿಧಾನವಾಗಿ ಚಲಿಸುವ ಪ್ರವಾಹ ಉತ್ಪನ್ನವಾಗುತ್ತದೆ. ಇದಕ್ಕೆ ಕಡಲ ತೆರೆಯ ಪ್ರವಾಹವೆನ್ನುತ್ತಾರೆ (ಲಿಟೊರಲ್ ಕರೆಂಟ್). ಕೆಲವು ಸಂದರ್ಭಗಳಲ್ಲಿ ಇದು ಆಳವಾದ ಸಮುದ್ರದ ಕಡೆಗೆ ತಿರುಗುತ್ತದೆ.

ಆಳವಿಲ್ಲದ ನೀರಿನ ಅಲೆ ದಡದ ಕಡೆಗೆ ಚಲಿಸಿದಾಗ ನೀರಿನ ಆಳ ತೀರ ಕಡಿಮೆಯಾಗಿ ಅಲೆ ಒಡೆಯಬಹುದು. ಆಗ ಅಲೆಯ ಶಕ್ತಿ ಹೊರಹೊಮ್ಮಿ ನೀರು ಕದಡಿ ತಳದಲ್ಲಿರುವ ಮರಳನ್ನು ಕೆದಕುತ್ತವೆ. ಒಡೆದ ಮೇಲೆ ನೊರೆಗರೆಯುತ್ತ ವೇಗವಾಗಿ ಹರಿದು ದಡವನ್ನು ಅಪ್ಪಳಿಸುತ್ತದೆ.

ಮೇಲೆ ನೋಡಿದ ಎರಡು ಪ್ರವೃತಿಗಳೂ ಸೇರಿ ಆಳವಿಲ್ಲದ ನೀರಿನಲ್ಲಿ ದಡದ ಮುಖದಿಂದ ಸಾಮಗ್ರಿಯನ್ನು ತೆಗೆಯುತ್ತವೆ. ಈ ಚಲನೆಗೆ ಕಡಲ ತೆರೆಯ ಚಲನೆಯೆನ್ನುತ್ತಾರೆ (ಲಿಟೊರಲ್ ಡ್ರಿಫ್ಟ್). ಈ ಚಲನೆ ಮತ್ತು ಹಿಂದೆ ನೋಡಿದ ದಡದ ಕಡೆಗೂ ದಡದಿಂದ ಸಮುದ್ರದ ಕಡೆಗೂ ಹೋಗುವ ಮರಳಿನ ಚಲನೆ. ಇವು ಸಮುದ್ರತೀರದ ಆಕಾರದ ಬದಲಾವಣೆಗೆ ಮುಖ್ಯ ಕಾರಣಗಳು.

ಅಲೆ ದಡಕ್ಕೆ ಬಡೆಯುವ ದಿಕ್ಕು ಮತ್ತು ರಭಸಕ್ಕೆ ಅನುಗುಣವಾಗಿ ಕಡಲ ಕರೆಯ ಚಲನೆಯ ದಿಕ್ಕೂ ಬಿರುಸೂ ಇವೆ. ವಾಸ್ತವವಾಗಿ ಅನೇಕ ಸಮುದ್ರತೀರಗಳಲ್ಲಿ ದಿನದಿಂದ ದಿನಕ್ಕೂ ಋತುವಿನಿಂದ ಋತುವಿಗೂ ಬದಲಾಗುವ ಹವಾಪರಿಸ್ಥಿತಿಗೆ ಅನುಸಾರವಾಗಿ ಕಡಲ ಕರೆಯ ಚಲನೆ ವ್ಯತ್ಯಾಸವಾಗುತ್ತ ಹೋಗುತ್ತದೆ. ಆದರೂ ಒಂದೊಂದು ತೀರದಲ್ಲಿಯೂ ವರ್ಷದ ಕೊನೆಯಲ್ಲಿ ಈ ಚಲನೆ ಯಾವುದಾದರೂ ಒಂದು ದಿಕ್ಕಿಗೆ ತಿರುಗಿರುತ್ತದೆ. ಈ ಚಲನೆಯ ಪ್ರಮಾಣ ಮತ್ತು ಅದರ ದಿಕ್ಕಿಗೆ ಅನುಸಾರವಾಗಿ ತೀರದ ರಕ್ಷಣೆಯ ಕ್ರಮಗಳನ್ನು ನಿಶ್ಚಯಿಸಬೇಕಾಗುತ್ತದೆ.

ಒಂದೇ ಸಮುದ್ರತೀರದಲ್ಲಿ ಈ ಚಲನೆ ವರ್ಷವರ್ಷವೂ ಒಂದೇ ಸಮವಾಗಿದ್ದರೂ ಬೇರೆ ಬೇರೆ ತೀರಗಳಲ್ಲಿ ಇದು ವಿಶೇಷವಾಗಿ ವ್ಯತ್ಯಾಸವಾಗುತ್ತದೆ. ಉತ್ತರ ಅಮೆರಿಕದ ಮಹಾಸರೋವರಗಳು, ಭೂಮಧ್ಯ ಸಮುದ್ರ, ಇಂಥ ಭೂಮಿಯಿಂದ ಸುತ್ತು ವರಿಯಲ್ಪಟ್ಟ ಜಲಭಾಗಗಳಲ್ಲಿ ಈ ಚಲನೆಯ ಪ್ರಮಾಣ ಕಡಿಮೆ. ಆದರೆ ಸಾಗರಗಳ ತೀರದ ತೆರೆದ ದಡಗಳಲ್ಲಿ ಸಾಗಿಹೋಗುವ ಮರಳು ಹೆಚ್ಚು. ಸಮುದ್ರತೀರದ ಆಕಾರ, ತೀರದ ಆಚೆಗೆ ಇರುವ ಮರಳಿನ ದಿಣ್ಣೆಗಳು ಇಲ್ಲವೆ ದ್ವೀಪಗಳು ಮತ್ತು ಅಲೆಗಳ ಹೊಡೆತದ ರಭಸದ ಮೇಲೆ ಒಂದೊಂದು ಜಾಗದಲ್ಲಿಯೂ ಈ ಚಲನೆ ವ್ಯತ್ಯಾಸವಾಗುತ್ತದೆ.

ಅಲೆಗಳಿಂದ ದಡದ ಕೊರೆತ : ಸಮುದ್ರದ ಅಲೆಗಳು ದಡವನ್ನು ತಲುಪಿದಾಗ ಗೋಡು ಮತ್ತು ಮರಳನ್ನು ಕೆದಕಿ ಜೊತೆಗೆ ಸಮುದ್ರತೀರಕ್ಕೆ ಸಮಾಂತರವಾಗಿ ಕಡಲ ತೆರೆಯ ಪ್ರವಾಹವನ್ನು ಹರಿಸುತ್ತವೆಯಷ್ಟೆ. ಈ ಎರಡು ಮಾರ್ಗಗಳಿಂದ ಸಮುದ್ರತೀರದ ಮಣ್ಣು ತೀರದ ಪಕ್ಕದಲ್ಲಿಯೇ ಚಲಿಸುತ್ತದೆ. ಸಾಮಾನ್ಯವಾದ ಅಲೆಗಳೂ ಆ ನೀರನ್ನು ಕಲಕಿದಾಗ ಗೋಡು ಮತ್ತು ಮಣ್ಣು–ಎರಡೂ ಸಮುದ್ರದ ತಳವನ್ನು ಸೇರುತ್ತವೆ. ಕ್ರಮೇಣ ತೀರ ಕೊರೆದು ಹೋಗಿ ದಪ್ಪ ಮರಳು ಮತ್ತು ಸಣ್ಣ ನೊರಜುಕಲ್ಲುಗಳು ಮಾತ್ರ ದಡದಲ್ಲಿ ಉಳಿದುಕೊಳ್ಳುತ್ತವೆ. ದಡದಲ್ಲಿ ಬಂಡೆಗಳಿದ್ದರೆ ಕೊರೆತ ಕೊಂಚ ಕಡಿಮೆಯಾಗುತ್ತದೆ. ಆದರೆ ಮರಳು ಮತ್ತು ಸಣ್ಣ ಕಲ್ಲುಗಳಿರುವ ಸಮುದ್ರತೀರದ ಪಕ್ಕದಲ್ಲಿ ಅಲೆಗಳ ಹೊಡತದಿಂದ ಮರಳಿನಿಂದ ಕೂಡಿದ ನದಿಯೇ ಹರಿಯುವಂತೆ ಇರುತ್ತದೆ. ಈ ವರ್ಷ ಅಲ್ಲಿ ಕಾಣುವ ಮರಳು ಪ್ರವಾಹದಲ್ಲಿ ಹರಿದು ಹೋಗಿ ಮಾರನೆಯ ವರ್ಷ ಮೇಲಿನಿಂದ ಹರಿದುಬರುವ ಬೇರೆ ಮರಳು ಅಲ್ಲಿಗೆ ಬಂದಿರುತ್ತದೆ. ಆದರೆ ಕೆಲವು ಸಮುದ್ರ ತೀರಗಳಲ್ಲಿ ಒಂದು ದಿಕ್ಕಿನಲ್ಲಿ ಹೋಗುವ ಮರಳಿಗೆ ಬದಲಾಗಿ ಎದುರು ದಿಕ್ಕಿನಿಂದ ಮರಳು ಬಂದು ಸಮುದ್ರ ತೀರ ಭದ್ರವಾಗಿರುವುದು. ಹಾಗೆಯೇ ಕೆಲವು ತೀರಗಳಲ್ಲಿ ಬಂದು ಸೇರುವ ಮರಳು ಹೆಚ್ಚಾಗಿಯೂ ಇನ್ನು ಕೆಲವು ತೀರಗಳಲ್ಲಿ ಕೊರೆದು ಹೋಗುವ ಮರಳು ಹೆಚ್ಚಾಗಿಯೂ ಇರಬಹುದು. ತೀರದ ರಕ್ಷಣೆ ಬೇಕಾಗಿರುವುದು ಮರಳು ಕೊರೆಯ ಹೋಗುವಕಡೆಗಳಲ್ಲಿ.

ಗಾಳಿಯಿಂದ ಕೊರೆತ : ಒಣಗಿರುವ ಸಮುದ್ರತೀರದ ಮೇಲೆ ಬೀಸುವ ಗಾಳಿ ಭೂಮಿಯ ಕಡೆಗೆ ಮರಳನ್ನು ಸಾಗಿಸಿ ಮರಳುದಿಣ್ಣೆಗಳನ್ನು ಮಾಡಬಹುದು ಅಥವಾ ಕಡಲ ಕರೆಯ ಪ್ರವಾಹದಿಂದ ಮರಳನ್ನು ಎತ್ತಿ ಕೊರೆತವನ್ನು ಹೆಚ್ಚಿಸಬಹುದು. ಮರಳುದಿಣ್ಣೆಗಳು ದಡಕ್ಕೆ ಹತ್ತಿರವಾಗಿದ್ದರೆ ಬಿರುಗಾಳಿಗಳೊಂದಿಗೆ ಬರುವ ದೊಡ್ಡ ಅಲೆಗಳ ದೆಸೆಯಿಂದ ತೀರವನ್ನು ಕಾಪಾಡುತ್ತವೆ.

ತೀರದ ಕಡೆಗೆ ಬೀಸುವ ಗಾಳಿ ದಡದಲ್ಲಿ ನೀರಿನ ಮಟ್ಟವನ್ನು ಹೆಚ್ಚಿಸುತ್ತದೆ. ಆಗ ಇನ್ನೂ ದೊಡ್ಡ ಅಲೆಗಳು ದಡವನ್ನು ಮುಟ್ಟಿ ದಡದ ಭದ್ರವಾದ ಭಾಗಗಳನ್ನೂ ಕೊರೆಯಬಹುದು. ಅಲೆಗಳು ಹತ್ತು ಅಡಿಗಳ ವರೆಗೂ ಏರಿದ ನಿದರ್ಶನಗಳಿವೆ. ಅಂಥ ಸಂದರ್ಭಗಳಲ್ಲಿ ದಡದ ಮೇಲೆ ಪ್ರಾಣ ನಾಶವಾಗಬಹುದು. ಆಸ್ತಿ ಮುಳುಗಿಹೋಗಬಹುದು.

ಸಮುದ್ರತೀರದ ಒಳಗಂಡಿಗಳು : ತೆರೆದ ಸಮುದ್ರದ ತೀರಗಳಲ್ಲಿ ಉಪನದಿಗಳು ಅಳಿವೆಗಳಲ್ಲಿ ಒಳಗೆ ನುಗ್ಗುತ್ತವೆ. ಅಳಿವೆಗಳಲ್ಲಿ ನದಿಗಳಲ್ಲಿ ಬರುವ ಸಿಹಿನೀರಿನ ಜೊತೆಗೆ ರಭಸದ ಉಬ್ಬರಗಳಲ್ಲಿ ಒಳಗೆ ಬರುವ ಉಪ್ಪುನೀರು ಸೇರಿರುತ್ತದೆ. ಸಿಹಿನೀರಿನ ಪ್ರಮಾಣ ಹೆಚ್ಚಾಗಿದ್ದರೆ ಅದರಲ್ಲಿ ಗೋಡುಮಣ್ಣು ಮತ್ತು ಗ್ರ್ಯಾವೆಲ್ ಸಮುದ್ರತೀರದವರೆಗೂ ಬರಬಹುದು. ಈ ಸಾಮಗ್ರಿ ಕುದುರಗಳಾಗಿಯೋ (ಡೆಲ್ಟ) ದಿಣ್ಣೆಗಳಾಗಿಯೋ ಸಮುದ್ರ ತೀರದಲ್ಲಿ ದಾಸ್ತಾನಾಗಬಹುದು. ಇಂಥ ಸಾಮಗ್ರಿಯಲ್ಲಿ ಇರುವ ಮರಳು ಅಲೆಗಳಿಗೆ ಸಿಕ್ಕಿ ಕಡಲ ಕರೆಯ ಚಲನೆಯಲ್ಲಿ ಸೇರಿ ತೀರದ ಪಕ್ಕದಲ್ಲಿ ಸಮುದ್ರದಲ್ಲಿ ಸಾಗಿ ಹೋಗಬಹುದು.

ಕೆಲವು ಸಂರ್ಭಗಳಲ್ಲಿ ಉಪನದಿಗಳು ಹೆಚ್ಚಿನ ಸಾಮಗ್ರಿಯನ್ನು ಹೊತ್ತು ತರದೆ ಅಳಿವೆಯಿಂದ ಸಮುದ್ರತೀರಕ್ಕೆ ಬರುವ ಗೋಡುಮಣ್ಣು ಕಡಿಮೆಯಾಗುವುದು. ಆಗ ಕಡಲ ಕರೆಯ ಚಲನೆಯಲ್ಲಿ ಬರುವ ಮಣ್ಣನ್ನು ಒಳಗಂಡಿ ತಡೆದು ನಿಲ್ಲಿಸುತ್ತದೆ. ಈ ಮಣ್ಣು ಹೆಚ್ಚಾದರೆ ಒಳಗಂಡಿಯ ಬಾಯಿ ಮುಚ್ಚಿಹೋಗುತ್ತದೆ. ಇದಕ್ಕೆ ಪ್ರತಿಯಾಗಿ ಉಬ್ಬರದ ನೀರೂ ಹೊಳೆಯಲ್ಲಿ ಬರುವ ಸಿಹಿನೀರೂ ಅದರಲ್ಲಿ ದಾರಿಯನ್ನು ಮಾಡಲು ಪ್ರಯತ್ನಿಸುತ್ತವೆ. ಹೀಗಾಗಿ ಅಳಿವೆಯ ಬಾಯಿಯನ್ನು ಮುಚ್ಚುವ ಮತ್ತು ತೆರೆಯುವ ಶಕ್ತಿಗಳು ಉಯ್ಯಾಲೆಯ ಹಾಗೆ ಆಡುತ್ತವೆ. ಇದರ ಪರಿಣಾಮವಾಗಿ ಸ್ಥಳವನ್ನು ಬದಲಾಯಿಸುವ ಮರಳುದಿಣ್ಣೆಗಳಲ್ಲಿ ಸೊಟ್ಟ ಸೊಟ್ಟಾದ ನಾಲೆಗಳು ಬಳಸುತ್ತವೆ. ಕಡಲಕರೆಯ ಚಲನದಲ್ಲಿ ಮರಳು ಹೆಚ್ಚಾಗಿ ಬಂದರೆ ದಿಣ್ಣೆಗಳ ಒಳಕ್ಕೆ ನುಗ್ಗಿ ದಾರಿಯನ್ನು ಮಾಡಬಹುದು.

ಮಾನವ ನಿರ್ಮಿತವಾದ ಕೊರೆತ : ಯಾರೂ ಬೇಕಾಗಿ ಸಮುದ್ರತೀರವನ್ನು ಕೊರೆಯುವ ದೃಷ್ಟಿಯಿಂದ ಏನನ್ನೂ ಮಾಡುವುದಿಲ್ಲ. ಬೇರೆ ಯಾವುದೋ ಮೇಲ್ಪಾಡನ್ನು ಮಾಡಲು ಹೋದಾಗ ಈ ಪರಿಣಾಮವಾಗುತ್ತದೆ. ಕೆಲವು ವೇಳೆ ಹೀಗೆ ಸಮುದ್ರತೀರ ಕೊರೆಯಬಹುದೆಂಬ ನಿರೀಕ್ಷೆಯೂ ಇರುತ್ತದೆ.

ಅಲೆತಡೆಗಳು : ಬಂದರಿನೊಳಗೆ ಬರುವ ಹಡಗುಗಳಿಗೆ ಅಲೆಗಳ ಹೊಡತದಿಂದ ರಕ್ಷಿತವಾದ ಜಾಗವನ್ನು ಕಲ್ಪಿಸುವುದಕ್ಕಾಗಿ ಆಳವಾದ ಜಾಗದಲ್ಲಿ ಕಲ್ಲು ಇಲ್ಲವೆ ಕಾಂಕ್ರೀಟನಿಂದ ಅಲೆತಡೆಗಳನ್ನು ಕಟ್ಟುತ್ತಾರೆ. ಇವು ಕಡಲ ಕರೆಯಲ್ಲಿ ಮರಳು ಚಲಿಸುವುದನ್ನು ತಡೆಯುತ್ತವೆ. ಇದರಿಂದ ಒಂದು ಕಡೆ ಮರಳು ಶೇಖರವಾಗಿ ಇನ್ನೊಂದು ಕಡೆ ಸಮುದ್ರತೀರ ಕೊರೆದುಹೋಗುತ್ತೆ. ಆದರೆ ಸಮುದ್ರತೀರದಲ್ಲಿ ಅಲೆತಡೆಗಳನ್ನು ಕಟ್ಟಿದಾಗ ಹಿಂಭಾಗದಲ್ಲಿ ದಡ ಕೊರೆಯದಂತೆ ಇವು ತಡೆಯುತ್ತವೆ.

ಜೆಟ್ಟಿಗಳು : ಆಳವಿಲ್ಲದ ಸ್ಥಳದಲ್ಲಿ ಕಾಣಿಸುವ ಮರಳು ದಿಬ್ಬಗಳ ಮೂಲಕ ಜಲಯಾನದ ನಾಲೆಯನ್ನು ಭದ್ರಪಡಿಸಿ ಮೇಲ್ಪಾಡನ್ನು ಮಾಡುವುದಕ್ಕಾಗಿ ನದಿಯ ಅಳಿವೆಯ ಬಾಯಲ್ಲಿ ಕಟ್ಟರುವ ಕಟ್ಟಡಗಳಿಗೆ ಜೆಟ್ಟಿಗಳು ಎನ್ನುತ್ತಾರೆ. ಇವುಗಳ ಕ್ರಿಯೆಯೂ ಅಲೆತಡೆಗಳ ಹಾಗೆಯೇ–ಅಳಿವೆಗೆ ಅಡ್ಡಲಾಗಿ ಕಡಲ ಕರೆಯಲ್ಲಿ ಮರಳು ಕೊಚ್ಚಿಹೋಗುವುದನ್ನು ತಡೆಯುತ್ತವೆ.

ಜಲಯಾನದ ನಾಲೆಗಳು : ಸಾಮಾನ್ಯವಾಗಿ ಅಳಿವೆಯ ಬಾಯಿಯಲ್ಲಿ ಮರಳಿನ ದಿಬ್ಬವೊಂದಿರುವುದು. ಇದರ ಮೇಲುಗಡೆ ಕಡಲ ಕರೆಯಲ್ಲಿ ಮರಳು ಹೋಗುತ್ತದೆ. ಜಲಯಾನದ ಸೌಕರ್ಯಕ್ಕಾಗಿ ಈ ದಿಣ್ಣೆಯಲ್ಲಿ ಹೂಳನ್ನು ಎತ್ತಿ ಆಳವಾದ ನಾಲೆಯನ್ನು ತೋಡಬೇಕಾಗುತ್ತದೆ. ಆಮೇಲೆ ನಾಲೆಯಲ್ಲಿ ಶೇಖರವಾಗುವ ಮರಳನ್ನು ಆಗಾಗ ಎತ್ತಿ ಸಮುದ್ರದೊಳಕ್ಕೆ ಹಾಕುತ್ತಾರೆ. ಈ ರೀತಿಯಲ್ಲಿ ಕಡಲ ಕರೆಯ ಮರಳಿಗೆ ದಾರಿಯಲ್ಲಿದೆ ಕೆಳಭಾಗ ಕೊರೆದು ಹೋಗುತ್ತದೆ.

ಮರಳಿನ ರಾಶಿಯ ಸಾಗಣೆ : ಸಾಮಾನ್ಯ ಪರಿಸ್ಥಿತಿಯಲ್ಲಿ ಸಮುದ್ರದ ತೀರದಲ್ಲಿ ಗುಡ್ಡೆಯಾಗಿ ಬಿದ್ದಿರುವ ಮರಳಿನ ರಾಶಿಗಳಲ್ಲಿನ ಸಮುದ್ರದ ಕಡೆಯ ಮುಖಗಳು ಕೊರೆದು ಹೋಗುತ್ತವೆ. ಬಳಿಕ ಆ ಮರಳು ದಡ ಕೊರೆದಲ್ಲಿಗೆ ಹೋಗಿ ತುಂಬಿಕೊಳ್ಳುತ್ತದೆ. ಆಮೇಲೆ ಗಾಳಿ ತೀರದ ಕಡೆಗೆ ಬೀಸುವಾಗ ದಡದ ಮರಳನ್ನು ಹಾರಿಸಿ ಮರಳ ರಾಶಿಗಳನ್ನು ಮತ್ತೆ ತುಂಬಿಸುತ್ತದೆ. ಜನಸಮೃದ್ಧವಾದ ಸಮುದ್ರ ತೀರಗಳಲ್ಲಿ ಈ ರಾಶಿಗಳ ಮರಳನ್ನು ಕಟ್ಟಡಗಳನ್ನು ಕಟ್ಟಲು ಸಾಗಿಸುತ್ತಾರೆ. ಇನ್ನು ಕೆಲವು ಕಡೆ ಜಮೀನಿನ ಮೇಲ್ಪಾಡಿಗೋಸ್ಕರ ಆರಂಭಗಾರರು ಮರಳ ರಾಶಿಗಳನ್ನು ತೆಗೆಯುತ್ತಾರೆ. ಆಗ ಜಮೀನಿನ ಮೇಲೆ ಬಿರುಗಾಳಿಯಲ್ಲಿ ಅಲೆಗಳು ನುಗ್ಗಿ ಅಪಾರವಾದ ನಷ್ಟವನ್ನುಂಟುಮಾಡುತ್ತವೆ.

ಕರಾವಳಿಯ ರಕ್ಷಣೆಯ ಕ್ರಮಗಳು : ಈ ಕ್ರಮಗಳು ಕೊರೆತದ ಕಾರಣಕ್ಕೂ ತೀರದ ಭೂಮಿಯ ಬೆಲೆಗೂ ಅನುಸಾರವಾಗಿರುತ್ತವೆ. ಇವುಗಳಲ್ಲಿ ಮುಖ್ಯವಾದುವನ್ನು ಕೆಳಗೆ ಕೊಟ್ಟಿದೆ.

1 ಕಲ್ಲಿನ ರಾಶಿ : ಸಮುದ್ರತೀರ ಕೊರೆಯದ ಹಾಗೆ ಕಲ್ಲಿನ ಚೂರುಗಳನ್ನು ಮರಳಿನ ಮೇಲುಗಡೆ ಮುಚ್ಚುತ್ತಾರೆ. ಈ ಕಲ್ಲುಗಳು ಅಲೆಗಳು ಮೇಲೆ ಉರುಳಿದಾಗ ಕದಲದಷ್ಟು ದೊಡ್ಡವಾಗಿರಬೇಕು. ಕಲ್ಲುಗಳ ಸಂದುಗಳಲ್ಲಿ ಅಲೆಗಳು ನುಗ್ಗಿ ಮರಗಳನ್ನು ಕೊರೆಯದ ಹಾಗೆ ದೊಡ್ಡ ಕಲ್ಲುಗಳ ಕೆಳಗಡೆ ಸಣ್ಣ ಕಲ್ಲುಗಳ ವರಸೆಯೊಂದಿರಬೇಕು.

2 ದಡದ ಮೇಲೆ ನೆಲಹಾಸು : ಅಲೆಗಳ ಹೊಡೆತವನ್ನು ಎದುರಿಸವುದಕ್ಕಾಗಿ ದಡದ ಮೇಲೆ ಕಲ್ಲು, ಕಾಂಕ್ರೀಟು, ಇಲ್ಲವೆ ಬಿಟ್ಯುಮಿನನ್ನು ಒಂದೇ ಮಟ್ಟವಾಗಿ ಹಾಸುತ್ತಾರೆ.

3 ಸಮುದ್ರದ ಗೋಡೆಗಳು : ಈ ಗೋಡೆಗಳನ್ನು ನೀರಿನ ಅಂಚಿನಲ್ಲಿ ಕಟ್ಟಿ ಅಲೆಗಳ ಸಂಪೂರ್ಣವಾದ ಹೊಡೆತವನ್ನು ತಡೆಯುವಂತೆ ಸಂವಿಧಾನವನ್ನು ಮಾಡಿರುತ್ತಾರೆ. ಇವು ಕಲ್ಲು ಇಲ್ಲವೆ ಕಾಂಕ್ರೀಟಿನ ಭದ್ರವಾದ ಗೋಡೆಗಳಂತೆ ಇರುತ್ತವೆ. ಒಡೆಯುವ ಅಲೆಗಳು ಗೋಡೆಗೆ ಬಡಿದಾಗ ಬೀಳುವ ಆಘಾತವನ್ನು ತಡೆದುಕೊಳ್ಳುವುದಕ್ಕೂ ಗೋಡೆಯ ತಲೆಯ ಮೇಲೆ ಹೆಚ್ಚು ನೀರು ಉರುಳದ ಹಾಗೂ ಗೋಡೆಯ ಸಮುದ್ರದ ಕಡೆಯ ಮುಖಕ್ಕೆ ಬೇರೆಬೇರೆಯ ಆಕಾರಗಳನ್ನು ಕೊಡುತ್ತಾರೆ.

4 ಸಮುದ್ರದ ಅಡ್ಡಕಟ್ಟೆಗಳು : ಈ ಕ್ರಮದಲ್ಲಿ ಸಮುದ್ರತೀರದ ಮೇಲೆ ಮರಳಿನ ಇಲ್ಲವೆ ಮಣ್ಣಿನ ಏರಿಯನ್ನು ಕಟ್ಟಿ ಅದರ ಸಮುದ್ರದ ಕಡೆಯ ಮುಖಕ್ಕೆ ಕಲ್ಲು ಇಲ್ಲವೆ ಕಾಂಕ್ರೀಟಿನಿಂದ ರಕ್ಷಣೆಯನ್ನು ಕೊಡುತ್ತಾರೆ. ಉತ್ತರ ಸಮುದ್ರದ ತೀರದ ಮೇಲೆ ಹಾಲೆಂಡಿನಲ್ಲಿ ಈ ಸಂವಿಧಾನವನ್ನು ವಿಶೇಷವಾಗಿ ಬಳಸಿದ್ದಾರೆ.

5 ಅಲೆತಡೆಗಳು : ಹಿಂದೆ ನೋಡಿದ ಅಲೆತಡೆಗಳನ್ನು ಸಮುದ್ರತೀರದಲ್ಲಿ ಕಟ್ಟಿದಾಗ ಇವು ಹಿಂಭಾಗದಲ್ಲಿ ದಡ ಕೊರೆಯದಂತೆ ತಡೆಯುತ್ತವೆ.

6 ತಡೆಕಟ್ಟು : ಇದನ್ನು ಸಮುದ್ರತೀರದಿಂದ ಅದಕ್ಕೆ ಸಮಕೋನವಾದ ದಿಕ್ಕಿನಲ್ಲಿ ಮರ, ಕಲ್ಲು, ಕಾಂಕ್ರೀಟ್–ಇವುಗಳಿಂದ ಕಟ್ಟುತ್ತಾರೆ. ಇದು ಕಡಲ ಕರೆಯ ಮರಳನ್ನು ತಡೆದು ತೀರದಲ್ಲಿರುವ ಮರಳು ಹೊರಗೆ ಹೋಗುವಂತೆ ಮಾಡುತ್ತದೆ. ಕೆಲವು ಕಡೆ ಅನೇಕ ತಡೆಕಟ್ಟುಗಳನ್ನು ದೂರದೂರವಾಗಿ ಸಮಾಂತರವಾಗಿ ಸಮುದ್ರತೀರದಲ್ಲಿ ಕಟ್ಟುವುದೂ ಉಂಟು.

ಸಮುದ್ರತೀರದ ರಕ್ಷಣೆಗಾಗಿ ತಡೆಗಟ್ಟುಗಳನ್ನು ಬಹಳ ಹಿಂದಿನಿಂದಲೂ ಉಪಯೋಗಿಸುತ್ತಿದ್ದಾರೆ. ಅವು ಮರಳನ್ನು ತಡೆದು ಸಮುದ್ರದ ಕರೆಯನ್ನು ಅಗಲವಾಗಿ ಮಾಡುತ್ತವೆ. ತೀರ ಕೊರೆದು ಹೋಗುತ್ತಿದ್ದರೆ ತಡೆಕಟ್ಟುಗಳು ಕೊರೆತವನ್ನು ಕಡಿಮೆ ಮಾಡುತ್ತವೆ. ತಡೆಕಟ್ಟುಗಳಲ್ಲಿ ಮುಖ್ಯವಾಗಿ ಎರಡು ನಮೂನೆಗಳಿವೆ. ಒಂದರಲ್ಲಿ ಮರಳು ಅದರ ಮೂಲಕ ತೂರಿ ಹೋಗುತ್ತದೆ; ಇನ್ನೊಂದು ಮರಳನ್ನು ತಡೆದು ನಿಲ್ಲಿಸುತ್ತದೆ. ಈ ನಮೂನೆಯೇ ಹೆಚ್ಚಾಗಿ ಬಳಕೆಯಲ್ಲಿದೆ. ಇದು ಮರಳನ್ನು ತಡೆಕಟ್ಟಿನ ಮೇಲುಭಾಗ ದಿಂದಲೂ ಸಮುದ್ರದ ಕಡೆಯ ಕೊನೆಯ ಸುತ್ತಲೂ ಆಚೆಗೆ ಬಿಡುತ್ತದೆ. ತಡೆಕಟ್ಟಿನ ಉದ್ದ ಕಡಲಕರೆಯ ಮರಳನ್ನು ಬಹುಕಾಲ ನಿಲ್ಲಿಸುವಷ್ಟು ಹೆಚ್ಚಾಗಿರಬಾರದು.

ಮರಳನ್ನು ತುಂಬುವುದು : ಸಮುದ್ರದ ಕರೆಯನ್ನು (ಬೀಚ್) ಇಳಿಜಾರಾಗಿ ಮಾಡುವುದಕ್ಕಾಗಿ ತೀರದ ಮೇಲೆ ಕೃತಕವಾಗಿ ಮರಳನ್ನು ತುಂಬುವುದುಂಟು. ಏಕೆಂದರೆ ಅಲೆಗಳ ಶಕ್ತಿಯನ್ನು ಈ ಇಳಿಜಾರಾದ ಮರಳಿನ ತೀರ ನಾಶಪಡಿಸುತ್ತದೆ. ಈ ಮರಳು ಸಮುದ್ರಕ್ಕೂ ತೀರದ ಆಚೆಯ ಕಟ್ಟಡಗಳಿಗೂ ನಡುವೆ ರಕ್ಷಣೆಯನ್ನು ಕೊಡುತ್ತದೆ. ಇದರಿಂದ ಕರೆಯ ಅಗಲವೂ ಹೆಚ್ಚಾಗಿ ಆಟೋಟಗಳಿಗೆ ಅನುಕೂಲವಾಗುತ್ತದೆ. ಚೆನ್ನೈ, ಮುಂಬಯಿಯಂಥ ಸಮುದ್ರತೀರಗಳಲ್ಲಿ ವಿನೋದಕ್ಕಾಗಿ ಸಾವಿರಾರು ಜನರು ಪ್ರತಿದಿನವೂ ಸಾಯಂಕಾಲ ಬರುತ್ತಾರೆ. ವಿಶಾಲವಾದ ಮರಳಿನ ಮೇಲೆ ಅವರು ವಿಶ್ರಮಿಸಿಕೊಳ್ಳಲು ಅನುಕೂಲವಾಗುತ್ತದೆ. ಕೆಲವು ವರ್ಷಗಳ ಹಿಂದೆ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ನ್ಯೂಜೆರ್ಸಿ ಸಮುದ್ರತೀರದ ಮೇಲೆ 10 ಲಕ್ಷ ಸಲೆ ಗಜ ಮರಳನ್ನು ತುಂಬಿ ಅಲ್ಲಿಗೆ ಬರುವ ಜನರಿಗೆ ಸೌಕರ್ಯವನ್ನು ಮಾಡಿಕೊಟ್ಟರು. ಈ ಮರಳಿನ ಸ್ವಲ್ಪ ಭಾಗವನ್ನು ಆಗಾಗ ಭರ್ತಿ ಹಾಕಬೇಕಾಗುತ್ತದೆ.

ಸಂವಿಧಾನದ ಕ್ರಮಗಳು : ಸಾಧ್ಯವಾದಷ್ಟು ಕಡಿಮೆ ಖರ್ಚಿನಲ್ಲಿ ಪರಿಣಾಮಕಾರಿಯಾಗಿ ಸಮುದ್ರತೀರಕ್ಕೆ ರಕ್ಷಣೆಯನ್ನು ಒದಗಿಸಬೇಕಾದರೆ ಮೊದಲು ಕೊರೆತದ ಕಾರಣವನ್ನು ಕಂಡುಹಿಡಿಯಬೇಕು. ನಷ್ಟಕ್ಕೆ ಗುರಿಯಾಗುವ ಆಸ್ತಿಯ ಬೆಲೆಯನ್ನು ನಿರ್ಣಯಿಸಬೇಕು. ಆಹಾರವಿಹಾರಕ್ಕಾಗಿ ಸಮುದ್ರತೀರ ಉಪಯೋಗವಾಗುವ ಹಾಗಿದ್ದರೆ ಅದರ ಮೇಲೆ ಹೆಚ್ಚು ಹಣವನ್ನು ವೆಚ್ಚ ಮಾಡಿದರೂ ಸಾರ್ಥಕವಾಗುತ್ತದೆ. ಅನಂತರ ಆ ಪ್ರದೇಶದಲ್ಲಿ ಸುಲಭವಾಗಿ ದೊರಕುವ ಕಟ್ಟಡಗಳ ಸಾಮಗ್ರಿಗಳನ್ನು ನೋಡಿಕೊಂಡು ಅಂದಾಜುಗಳನ್ನು ತಯಾರಿಸಬಹುದು.

ಎರಡನೆಯ ಮಹಾ ಯುದ್ಧಕ್ಕೆ ಮುಂಚೆ ತೀರದ ಕೊರೆತದ ಎಲ್ಲ ಸಮಸ್ಯೆಗಳನ್ನೂ ಸಮುದ್ರದ ಗೋಡೆಗಳು ಮತ್ತು ತಡೆಕಟ್ಟುಗಳಿಂದ ಎದುರಿಸುತ್ತಿದ್ದರು. ಗೋಡೆಯನ್ನು ಕಟ್ಟುವುದಕ್ಕೆ ವೆಚ್ಚ ಹೆಚ್ಚಾಗುತ್ತದೆ. ಆದರೆ ಬೆಲೆಬಾಳುವ ಆಸ್ತಿಯನ್ನು ಕಾಪಾಡಬೇಕಾದಾಗ ಸಮುದ್ರದ ಗೋಡೆ ಅನಿವಾರ್ಯವಾಗುತ್ತದೆ.

ಈ ಗೋಡೆ ಸಮುದ್ರಕ್ಕೂ ನೆಲಕ್ಕೂ ನಡುವೆ ಎಲ್ಲೆಯನ್ನು ಭದ್ರವಾಗಿ ಗುರುತು ಮಾಡುತ್ತದೆ. ಈ ಅನುಕೂಲತೆ ತಡೆಗಟ್ಟಿನಿಂದ ದೊರೆಯುವುದಿಲ್ಲ. ಅದರ ಖರ್ಚೂ ಕಡಿಮೆ. ತಡೆಗಟ್ಟುಗಳು ಕೂಡಿಹಾಕಿರುವ ಮರಳನ್ನು ಬಲವಾದ ಗಾಳಿ ಎದ್ದಾಗ ನುಗ್ಗುವ ಅಲೆಗಳು ಹೊರಕ್ಕೆ ಎಳೆದು ತಿರುಗಿ ಸಮುದ್ರಕ್ಕೆ ಸಾಗಿಸುತ್ತವೆ. ಮತ್ತೆ ತೆರೆದ ಸಮುದ್ರತೀರದ ಕೊರೆದುಹೋಗಬಹುದು. ಅದಕ್ಕಾಗಿ ತಡೆಗಟ್ಟುಗಳ ಜೊತೆಗೆ ಹಗುರವಾದ ಸಮುದ್ರದ ಗೋಡೆಯನ್ನು ಕಟ್ಟುವುದು ಮೇಲು. ಈ ಕಟ್ಟಡಗಳನ್ನು ಕಟ್ಟುವಾಗ ಬಿರುಗಾಳಿಯಲ್ಲಿ ಸಮುದ್ರತೀರ ಕೊರೆದುಹೋಗುಬಹುದಾದ ಮಟ್ಟಕ್ಕಿಂತ ತಗ್ಗಿನಲ್ಲಿ ತಳಪಾಯವನ್ನು ಹಾಕಬೇಕು. ಈ ಗೋಡೆಗಳ ಸಂವಿಧಾನದಲ್ಲಿ ಬಿರುಗಾಳಿಯಲ್ಲಿ ಏರುವ ಅಲೆಗಳ ಎತ್ತರವೇನು, ಅವು ಈ ಕಟ್ಟಡಗಳ ಮೇಲೆ ಎಷ್ಟು ದೂರ ನುಗ್ಗುತ್ತವೆ ಎಂಬುದನ್ನೂ ಪರಿಶೀಲಿಸಬೇಕು. ಗರಿಷ್ಠ ನೀರಿನ ಮಟ್ಟಕ್ಕೆ ಗೋಡೆಯನ್ನು ಎತ್ತುವುದು ಸಾಧ್ಯವಾಗದೆ ಇದ್ದರೆ ಕಟ್ಟಡದ ಮೇಲೆ ಉರುಳಿ ಹಿಂದುಗಡೆ ರಸ್ತೆಗಳ ಮೇಲೂ ಬೆಲೆಬಾಳುವ ಆಸ್ತಿಯ ಮೇಲೂ ಹರಿಯುವ ನೀರೆಷ್ಟು ಎಂದು ಅಂದಾಜು ಮಾಡಬೇಕು.

ಆ ಪ್ರದೇಶದಲ್ಲಿ ಒಳ್ಳೆಯ ಕಲ್ಲು ಸಾಕಷ್ಟು ಸಿಕ್ಕುತ್ತದೆಯೇ ಅಥವಾ ಬಿಟ್ಯುಮಿನ್ ಇಲ್ಲವೆ ಸಿಮೆಂಟ್ ಸುಲಭವಾಗಿ ದೊರಕುತ್ತದೆಯೇ ಅಲ್ಲಿ ಕುಶಲಿಗಳಾದ ಕೆಲಸಗಾರ ರಿದ್ದಾರೆಯೇ ಅಥವಾ ದೊಡ್ಡ ಯಂತ್ರಗಳನ್ನು ಉಪಯೋಗಿಸಬೇಕೇ–ಇವನ್ನೆಲ್ಲ ವಿಚಾರ ಮಾಡಿ ಸಂವಿಧಾನವನ್ನೂ ಅಂದಾಜನ್ನೂ ತಯಾರಿಸಬೇಕು.

ಸಮುದ್ರತೀರದಲ್ಲಿ ತುಂಬುವುದಕ್ಕೆ ಆದಷ್ಟು ದಪ್ಪವಾದ ಮರಳನ್ನು ಉಪಯೋಗಿಸಬೇಕು. ಮರಳು ನಯವಾಗಿದ್ದರೆ ಆಳವಾದ ನೀರಿನ ಕಡೆಗೆ ತೊಳೆದು ಹೋಗುತ್ತದೆ. ವಿಹಾರಕ್ಕಾಗಿ ಉಪಯೋಗವಾಗುವ ಸಮುದ್ರತೀರಗಳು ಸಾಧ್ಯವಾದಷ್ಟು ಅಗಲವಾಗಿರಬೇಕು. ಆಗ ಪ್ರಬಲವಾದ ಗಾಳಿಯಲ್ಲಿ ಬಂದ ಅಲೆಗಳು ಮರಳನ್ನು ಕೊರೆಯುವುದು ಕಡಿಮೆಯಾಗುತ್ತದೆ. ಇದಕ್ಕೆ ಪ್ರತಿಯಾಗಿ ಹವೆ ಹಿತವಾಗಿದ್ದಾಗ ಬರುವ ಸಣ್ಣ ಅಲೆಗಳು ಮರಳನ್ನು ತಿರುಗಿ ತಂದು ತೀರಕ್ಕೆ ತುಂಬುತ್ತವೆ. ಆಗ ಸಮುದ್ರತೀರದ ಅಗಲ ಮೊದಲಿನಷ್ಟೇ ಆಗುತ್ತದೆ.

(ಎಚ್.ಸಿ.ಕೆ.)

**ಕರಾವಳಿಯ ರಕ್ಷಣೆ (ಸಮರದಲ್ಲಿ) :** ದೇಶ ಸಂರಕ್ಷಣಕಾರ್ಯದಲ್ಲಿ ತೀರ ಪ್ರದೇಶಗಳ ರಕ್ಷಣೆ ಪ್ರಮುಖವಾದುದು ಏಕೆಂದರೆ ಶತ್ರು ಯಾವಾಗ ಬೇಕಾದರೂ ತನ್ನ ಸೈನ್ಯವನ್ನು ತೀರಪ್ರದೇಶಗಳಲ್ಲಿ ತಂದಿಳಿಸಿ ರಾಜ್ಯವನ್ನು ಆಕ್ರಮಿಸಬಹುದು. ಪೂರ್ವಕಾಲದಲ್ಲಿ ಹಡಗುಗಳು ಹೊರಗೆ ಹೊರಡದ ಹಾಗೆ ಮೊದಲು ರೇವುಪಟ್ಟಣಗಳನ್ನೂ ಬಂದರುಗಳನ್ನೂ ಮುತ್ತುವುದು ಶತ್ರುವಿನ ಮುಖ್ಯೋದ್ದೇಶವಾಗಿತ್ತು. ಅಲ್ಲಿನ ನೌಕೆಗಳನ್ನು ನಾಶಮಾಡುವುದಲ್ಲದೆ ಸಮುದ್ರವ್ಯಾಪಾರದಿಂದಲೇ ಜೀವಿಸುತ್ತಿದ್ದ ಆ ರಾಜ್ಯದ ಕೊರಳನ್ನೇ ಹಿಸುಕಲು ಶತ್ರು ಯತ್ನಿಸುತ್ತಿದ್ದ. ಈಗಲಾದರೋ ಪಟಗಳಿಂದ ನಾವೆಗಳನ್ನು ನಡೆಸುತ್ತಿಲ್ಲ; ಯಂತ್ರಗಳ

ಸಹಾಯದಿಂದ ಹಡಗುಗಳು ವೇಗವಾಗಿ ಚಲಿಸಬಲ್ಲವು. ಆದ್ದರಿಂದ ರೇವುಪಟ್ಟಣಗಳೂ ಬಂದರುಗಳೂ ಶತ್ರುವಿನ ಗುರಿಗಳಾಗಬಹುದಾದರೂ ಅವನ್ನು ಆಕ್ರಮಿಸುವುದು ವೈರಿಯ ಮುಖ್ಯೋದ್ದೇಶವಲ್ಲ.

ಶತ್ರು ತೀರಪ್ರದೇಶಗಳಲ್ಲಿ ಬಂದಿಳಿಯುವುದು ಎಂದಿಗೂ ಒಂದು ದೊಡ್ಡ ವಿಪತ್ತೆಂದು ಪೂರ್ವದಿಂದಲೂ ಎಣಿಸಲಾಗಿದೆ. ಆ ರಾಜ್ಯದ ಸರ್ಕಾರವನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳಲು ಶತ್ರುವಿಗೆ ಅದೊಂದೇ ಮಾರ್ಗವಾಗಿತ್ತು. ಪರಮಾಣು ಬಾಂಬಾಗಲೀ ಅಥವಾ ಇನ್ನಾವುದಾದರೂ ಪ್ರಳಯಾಂತಕ ಶಸ್ತ್ರಗಳಾಗಲೀ ಗ್ರಾಮಗಳನ್ನೂ ಪಟ್ಟಣಗಳನ್ನೂ ಧ್ವಂಸ ಮಾಡಿದರೂ ಗೆದ್ದ ರಾಜ್ಯವನ್ನು ಕೈಗೂಡಿಸಿಕೊಳ್ಳಲು ಪದಾತಿಸೈನ್ಯ ಬೇಕೇ ಬೇಕಾಗುತ್ತದೆ. ಈ ಕಾರ್ಯದಲ್ಲಿ ಸಮುದ್ರದ ಕಡೆಯಿಂದ ರಾಜ್ಯದೊಳಕ್ಕೆ ನುಗ್ಗಬೇಕಾಗ ಬಹುದು. ಕಳೆದ ಮಹಾಯುದ್ಧದಲ್ಲಿ ಮಿತ್ರಪಕ್ಷದವರು ನಾರ್ಮಂಡಿ ತೀರದಲ್ಲಿ ಬಂದಿಳಿದು ದೇಶದೊಳಕ್ಕೆ ನುಗ್ಗಿದ ಬಳಿಕವೇ ಆ ಯುದ್ಧ ಕೊನೆಗೊಂಡಿತು. ತಾನು ಗೆದ್ದ ಪ್ರದೇಶಗಳನ್ನು ರೂಢಿಸಿಕೊಳ್ಳುವುದೊಂದಕ್ಕೆ ಅಲ್ಲದೆ, ಶತ್ರುವನ್ನು ದಿಕ್ಕೆಡುವಂತೆ ಮಾಡಲು ನೌಕೆಗಳಿಂದ ತೀರ ಪಟ್ಟಣಗಳ ಮೇಲೆ ಗುಂಡುಗಳನ್ನು ಒಂದೇ ಸಮವಾಗಿ ಹಾರಿಸುವುದೂ ಮತ್ತು ಕೆಲವು ವೇಳೆ ತೀರಪ್ರದೇಶದಲ್ಲಿ ಸೈನ್ಯವನ್ನು, ತಂದಿಳಿಸುವುದೂ ಉಂಟು.

ಒಂದನೆಯ ಮಹಾಯುದ್ಧದಲ್ಲಿ ಜರ್ಮನಿಯ ಯುದ್ಧನೌಕೆ ಎಮ್‍ಡನ್ ಎಂಬುದು ಮದರಾಸಿನ ಹೈಕೋರ್ಟ್ ಕಟ್ಟಡದ ಮೇಲೆ ಸಿಡಿ ಚಿಪ್ಪನ್ನೆಸೆದು ಜನರನ್ನು ಹೇಗೆ ಗಾಬರಿಗೊಳಿಸಿತು ಎಂಬುದನ್ನು ಸ್ಮರಿಸಬಹುದು. ಎರಡನೆಯ ಮಹಾಯುದ್ಧದಲ್ಲಿ ಪೂರ್ವತೀರದಲ್ಲಿ ಕೆಲವು ಜಪಾನೀ ಯುದ್ಧನೌಕೆಗಳು ಹಾಯ್ದು ಹೋಗುವುದನ್ನು ಕಂಡು ಶತ್ರುಗಳ ಪಡೆ ತೀರದಲ್ಲಿ ಇಳಿಯುತ್ತದೆಯೋ ಏನೋ ಎಂದು ಜನ ಎಷ್ಟು ಕಾತರಗೊಂಡರೆಂದರೆ, ಮದರಾಸಿನ ಅನೇಕ ಸರ್ಕಾರಿ ಕಚೇರಿಗಳನ್ನು ಒಳಭಾಗಕ್ಕೆ ರವಾನಿಸಿದರು ಮತ್ತು ಹಿಂದೆಂದೂ ಕಾಣದಷ್ಟು ಮಂದಿ ಒಳಗಡೆಯ ಹಳ್ಳಿಹಳ್ಳಿಗಳಿಗೂ ಗ್ರಾಮಗಳಿಗೂ ಸಾಗಿದರು.

ತೀರಪ್ರದೇಶಗಳಲ್ಲಿ ಸೈನ್ಯವನ್ನು ತಂದಿಳಿಸುವುದು ಕೆಲವು ವೇಳೆ ಜಯನಿಶ್ಚಯಕ್ಕಾದರೂ ಅದರ ಉದ್ದೇಶ ಶತ್ರುವನ್ನು ಗಾಬರಿಗೊಳಿಸುವುದು. ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಯೂ ಬ್ರಿಟನ್ ದೇಶವನ್ನು ಸಮುದ್ರದ ಕಡೆಯಿಂದ ಆಕ್ರಮಿಸಲು ಯತ್ನಿಸಿತು. ಮತ್ತು ಜರ್ಮನ್ ಸೈನ್ಯವನ್ನು ಬ್ರಿಟಿಷ್ ನೌಕಾಬಲ ತಡೆಯಲಾರದೆಂದೂ ಘೋಷಿಸಿತು. ಆದರೆ ಮಿತ್ರಪಕ್ಷದವರು ಜರ್ಮನ್ನರ U ಬೋಟುಗಳನ್ನೂ ಲಿಟ್‍ವಾಫೆ ಎಂಬ ಪ್ರಬಲ ವೈಮಾನಿಕ ದಳವನ್ನೂ ಕಡೆಗಣಿಸಿ ಕಡಲ್ಗಾಲುವೆಯನ್ನು ದಾಟಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಅಲ್ಲದೆ ಹಿಟ್ಲರ್ ಯಾವುದನ್ನು ಅಟ್ಲಾಂಟಿಕ್ ಗೋಡೆ ಎಂದು ಭಾವಿಸಿದನೋ ಆ ವ್ಯೂಹವನ್ನೂ ಭೇದಿಸಿದರು.

ನಾರ್ಮಂಡಿ ತೀರದಲ್ಲಿ ಸೈನ್ಯವನ್ನು ತಂದಿಳಿಸಿದ ಮಹತ್ಕಾರ್ಯಕ್ಕಾಗಿ ಮಿತ್ರ ಪಕ್ಷದವರ ಜಯಭೇರಿ ಎಲ್ಲೆಲ್ಲೂ ಮೊಳಗಿತಲ್ಲದೆ ಜರ್ಮನ್ನರು ಅಷ್ಟೂ ಕಳೆಗುಂದಿದರು. ಅಟ್ಲಾಂಟಿಕ್ ಗೋಡೆ ಕುಸಿಯಿತು.

ಆದ್ದರಿಂದ ಎಂಥ ಯುದ್ಧತಂತ್ರದಲ್ಲಿಯೂ ಶತ್ರುವಿನ ಮುತ್ತಿಗೆಗೆ ಎಡೆಗೊಡದ ಹಾಗೆ ತೀರವನ್ನು ಸಂರಕ್ಷಿಸುವುದು ಬಹಳ ಮುಖ್ಯವಾದ ಕೆಲಸವೆಂದು ಪರಿಗಣಿಸಬೇಕು. ದಡದ ಸಾಲೊಂದು ಬಂಗಾಲ ಕೊಲ್ಲಿ ಅಥವಾ ಅರಬ್ಬೀ ಸಮುದ್ರವಂಥ ವಿಶಾಲವಾದ ಕಡಲಿಗೆ ಎದುರಾಗಿದ್ದರೆ ಅದರ ಸಂರಕ್ಷಣೆಯಂತೂ ಬಹಳ ಮುಖ್ಯ, ಭಾರತ ದೇಶ ಪರ್ಯಾಯದ್ವೀಪವಾಗಿರುವುದರಿಂದ ಅದು ತನ್ನ ತೀರಪ್ರದೇಶಗಳಲ್ಲಿ ಬಗೆಬಗೆಯಾಗಿರುವ ಪ್ರಶಸ್ತ ರಕ್ಷಣಸ್ಥಾನಗಳನ್ನು ಸ್ಥಾಪಿಸಿ ಅವುಗಳ ಸಂರಕ್ಷಣೆಗೆ ಏರ್ಪಡಿಸುವುದು ಶಕ್ಯ. ಪೂರ್ವಕಾಲದಲ್ಲಿ ರೇವುಪಟ್ಟಣಗಳನ್ನೂ ಬಂದರುಗಳನ್ನೂ ಅವುಗಳ ಸುತ್ತಲೂ ಗೋಡೆಯನ್ನು ಹಾಕಿಯೋ ಕೋಟೆಯನ್ನು ಕಟ್ಟಿಯೋ ಸಂರಕ್ಷಿಸುವುದು ಸುಲಭವಾಗಿತ್ತು. ಈಗ ಹಡಗುಗಳು ಯಂತ್ರಗಳಿಂದ ಚಲಿಸುವುದರಿಂದಲೂ ಅವುಗಳನ್ನು ಬಹುದೂರಕ್ಕೆ ಗುಂಡುಗಳನ್ನು ಎಸೆಯಬಲ್ಲ ಭಾರಿ ಫಿರಂಗಿಗಳಿರುವುದರಿಂದಲೂ ಕೋಟೆಗೋಡೆಗಳು ಅಷ್ಟಾಗಿ ಪ್ರಯೋಜನಕ್ಕೆ ಬರುವುದಿಲ್ಲ. ಆದ್ದರಿಂದ ಈಗ ತೀರಪ್ರದೇಶದ ರಕ್ಷಣೆಗಾಗಿ ಸಮೀಪಿಸುತ್ತಿರುವ ಶತ್ರುನೌಕೆಗಳನ್ನು ಅವು ಅಷ್ಟು ದೂರದಲ್ಲಿರುವಾಗಲೇ ಧ್ವಂಸ ಮಾಡಲು ದೊಡ್ಡ ದೊಡ್ಡ ಫಿರಂಗಿಗಳು ಆವಶ್ಯಕವೆನಿಸಿವೆ. ಇದ್ದಕ್ಕಿದ್ದ ಹಾಗೆ ಶತ್ರು ಮೇಲೆಬಿದ್ದರೆ ಅವನನ್ನು ನಿಗ್ರಹಿಸಲು ಸಮರ್ಥರಾದ ಭಂಟರಿಂದ ಈ ಫಿರಂಗಿ ಸೈನ್ಯ ಕೂಡಿರಬೇಕಲ್ಲದೆ ಬೇಗ ಚಲಿಸಲೂ ಸಮರ್ಥವಾಗಿರಬೇಕು. ಅವರ ಆಯುಧಗಳು ಶತ್ರುನೌಕಾಬಲದ ಯಾವ ಶಸ್ತ್ರವನ್ನಾಗಲೀ ಎದುರಿಸಲು ತಕ್ಕವಾಗಿರಬೇಕು.

ಶತ್ರುನೌಕೆಯಿಂದ ಹೊರಡುವ ಗುಂಡಿನ ಸುರಿಮಳೆಗೆ ಉತ್ತರವಾಗಿ ತೀರದಲ್ಲಿರುವ ಭಾರಿ ಭಾರಿ ಫಿರಂಗಿಗಳಿಂದ ಗುಂಡುಗಳನ್ನು ಹೊಡದರೆ ಮಾತ್ರ ಸಾಲದೆಂಬ ಅಂಶ ನಾರ್ಮಂಡಿ ತೀರದ ಆಕ್ರಮಣದಲ್ಲಿ ವಿಶದವಾಯಿತು. ಆ ಶೂನ್ಯ ದಿನದ ನಿಶ್ಚಿತ ಸಮಯದಲ್ಲಿ ಮಿತ್ರಪಕ್ಷದವರು ದಡದಲ್ಲಿ ಇಳಿಯುವುದಕ್ಕೆ ಮುಂಚೆ ಬಾಂಬಿನ ಮಳೆಗರೆಯಲು ಪ್ರಾರಂಭಿಸಿದಾಗ, ಜರ್ಮನ್ನರ ಫಿರಂಗಿಗಳ ಸಾಲು ನಿರುಪಯುಕ್ತವಾಯಿತು. ತೀರಾವತರಣ ಸೈನ್ಯ ಆಗಮಿಸುವುದಕ್ಕೆ ಮುಂಚೆ, ಬಂದಿಳಿದ ಮೇಲೆ ಅದರ ತರುವಾಯ ಕೂಡ ಹತ್ತು ಸಾವಿರ ಟನ್ನುಗಳಷ್ಟು ಬಾಂಬುಗಳನ್ನು ಅಂತರಿಕ್ಷ ಸಿಡಿಚಿಪ್ಪುಗಳನ್ನು ನೌಕೆಯ ಫಿರಂಗಿಗಳಿಂದಲೂ ಶತ್ರುವಿನ ಫಿರಂಗಿಸಾಲುಗಳ ಮೇಲೆ ಎಸೆಯಲಾಯಿತು. ಜರ್ಮನಿಯ ಸೈನ್ಯದ ಮುಖ್ಯಕಚೇರಿಗೂ ಬೆರಗು ಬಡಿಯುವಂತೆ ಈ ಆಕ್ರಮಣ ಹಗಲಲ್ಲೇ ಜರುಗಿತು. ಶತ್ರುಗಳ ಫಿರಂಗಿಗಳ ಸದ್ದನ್ನಡಗಿಸಲೂ ಮಲೆಕೋಡುಗಳನ್ನು ಹತ್ತಲೂ ಸಾಧ್ಯವಾಗುವಂತೆ ಕೆಲವು ರೇಂಜರುಗಳೂ ಕಮಾಂಡೋಗಳೂ ಬೆಳಕು ಹರಿಯುವುದಕ್ಕೆ ಮುಂಚೆ ದಡದಲ್ಲಿ ಬಂದಿಳಿದರೇ ಹೊರತು, ಮಿಕ್ಕವರು ನೆಲದೊಳಗೆ ಸಿಡಿಯುವ ಮೈನುಗಳೆಂಬ ಮದ್ದುಗಳನ್ನು ಗುಡಿಸಿ ಹಾಕಲೂ ಇರುಳಿನಲ್ಲಿ ಬಾಂಬುಗಳ ಮತ್ತು ಸಿಡಿಚಿಪ್ಪುಗಳ ಹೊಡೆತದಿಂದ (ತಪ್ಪಿಸಿಕೊಂಡ ಅಲ್ಪಸ್ವಲ್ಪ ಫಿರಂಗಿಗಳನ್ನು ಶಾಂತಗೊಳಿಸಲೂ) ಉಷಃಕಾಲದ ಬೆಳಕಿನಲ್ಲಿಯೇ ದಡಕ್ಕೆ ಬಂದಿಳಿದರು.

ತೀರ ಪ್ರದೇಶದ ಮೇಲೆ ಶತ್ರುವಿನ ದಾಳಿ ನೆಲದ ಕಡೆಯಿಂದಾಗಲೀ ಕಡಲ ಕಡೆಯಿಂದಾಗಲೀ ಅಥವಾ ಅಂತರಿಕ್ಷದಿಂದಾಗಲೀ ನಡೆಯಬಹುದು. ಇತೋಪ್ಯತಿಶಯವಾಗಿ, ಈ ದಾಳಿ ಬೇರೆಬೇರೆಯಾಗಿರಬಹುದು ಅಥವಾ ಕಲೆತಿರಲೂಬಹುದು; ಆಧುನಿಕ ತೀರಾಕ್ರಮಣದಲ್ಲಿ. ನೆಲದಿಂದಲಾಗಲೀ ಕಡಲಿನಿಂದಾಗಲೀ ದಾಳಿ, ನಡೆಯುವುದು ಸಾಧ್ಯವಾಗದಿರಬಹುದು. ಆದರೆ ನೆಲ ಮತ್ತು ಅಂತರಿಕ್ಷ ಇವೆರಡು ಕಡೆಗಳಿಂದಲೂ ಒಟ್ಟಿಗೆ ಅಥವಾ ಕಡಲು ಮತ್ತು ಅಂತರಿಕ್ಷ ಇವೆರಡು ಕಡೆಗಳಿಂದಲೂ ಒಟ್ಟಿಗೆ ಅಥವಾ ಬರಿ ಅಂತರಿಕ್ಷದಿಂದ ಮಾತ್ರವೇ ದಾಳಿ ನಡೆಸುವ ಕ್ರಮ ಸಲ್ಲದೆನ್ನುವಂತಿಲ್ಲ. ನಮ್ಮ ಹಡಗುಪಡೆಗಳೂ ವಿಮಾನಬಲ್ಲವೂ ಶತ್ರುವಿನ ನೌಕೆಗಳನ್ನು ಸಮುದ್ರದಲ್ಲಿ ಧ್ವಂಸ ಮಾಡಬಹುದಾದರೂ ನಮ್ಮ ತೀರ ಸಂರಕ್ಷಣೆಯ ಬಹಳ ಪಾಲು ಹೊಣೆ ಭೂಸೈನ್ಯದ ಮೇಲೆ ಸಹಜವಾಗಿಯೇ ಬೀಳುತ್ತದೆ. ನಮ್ಮ ರಕ್ಷಣಾದಳ ತೀರದುದ್ದಕ್ಕೂ ಬಹಳ ಜಾಗರೂಕವಾಗಿರುವುದು ಅತ್ಯವಶ್ಯಕ. ಯಂತ್ರಮಯವಾಗಿರುವ ಆಧುನಿಕ ಯುದ್ಧದಲ್ಲಿ, ತೀರಪ್ರದೇಶದಲ್ಲಿ ಇಂಥ ಜಾಗದಲ್ಲೇ ಶತ್ರು ಬಂದಿಳಿಯುತ್ತಾನೆಂದು ಬೆರಳಿಟ್ಟು ಹೇಳುವ ಹಾಗಿಲ್ಲ. ಯಾವ ಸ್ಥಳದಲ್ಲಿ ಇಳಿಯುವುದು ಅಸಂಭವವೆಂದು ನಾವು ಭಾವಿಸಿದ್ದೆವೋ ಅದೇ ಸ್ಥಳದಲ್ಲಿ ಹಗೆ ಬಂದಿಳಿಯಬಹುದು. ಆದರೂ ತೀರದುದ್ದಕ್ಕೂ ಚೀನ ಗೋಡೆಯ ಹಾಗೆ ಒಂದು ಗೋಡೆಯನ್ನು ಕಟ್ಟುವುದೂ ಹುಚ್ಚುತನದ ಕೆಲಸ. ಇಂಥ ದುರ್ಗಗಳನ್ನು ಕಟ್ಟುವುದಕ್ಕೆ ಅತ್ಯಧಿಕವಾಗಿ ಹಣ ಖರ್ಚಾಗುವುದಲ್ಲದೆ ಅವುಗಳ ಸಂರಕ್ಷಣೆಗೆ ಜನವೂ ಬೇಕಾಗುತ್ತದೆ. ಇಷ್ಟಾದರೂ ಆಧುನಿಕ ಯುದ್ಧಕ್ರಮದಲ್ಲಿ ಅವು ಫ್ರೆಂಚರು ಕಟ್ಟಿದ ಮಾಜಿನೊಲೈನಿನಂತೆ ನಿರರ್ಥಕವಾಗುತ್ತದೆ.

ಆದ್ದರಿಂದ ಕರಾವಳಿ ಪ್ರದೇಶದ ಸಂರಕ್ಷಣೆಗೆ ಮುಖ್ಯವಾಗಿ ಅಂಶಗಳಿಷ್ಟು : 1 ಸೈನ್ಯದ ಸಮಸ್ತಾಂಗದ ಪಡೆಗಳನ್ನು ಆಯಕಟ್ಟಾದ ಜಾಗಗಳಲ್ಲಿರಿಸಿ, ಅವುಗಳು ವೇಗದಿಂದ ಚಲಿಸುವ ಹಾಗೆ ಚಲನಸಾಧನೆಗಳಿಂದ ಸಜ್ಜುಗೊಳಿಸಿ, ಬೇಕಾದಾಗ ವಿಮಾನ ಮತ್ತು ನೌಕಾಬಲದೊಡನೆ ಹೊಂದಿಕೊಳ್ಳುವ ಹಾಗೆ ಶಿಕ್ಷಣವನ್ನು ಕೊಡಬೇಕು. 2 ರೈಲು ಕಂಬಿಗಳ ಮೇಲೆ ಚಲಿಸಬಲ್ಲಂಥ ಫಿರಂಗಿಗಳೂ ವಿಮಾನಗಳನ್ನೂ ಗುಂಡಿಟ್ಟು ಹೊಡೆಯುವ ಸಾಧನಗಳನ್ನೂ ಇರಬೇಕು. 3 ರಾಡರುಗಳೂ ಶೋಧಕ ದೀಪಗಳೂ ಬೇಕು. 4 ಎಚ್ಚರಿಕೆಯನ್ನು ಕೊಡಲು ತಕ್ಕ ವ್ಯವಸ್ಥೆ ಪೋಣಿಕೆಗೊಂಡಿರಬೇಕು. 5 ಅಂತರಿಕ್ಷದಲ್ಲೂ ಸಮುದ್ರದಲ್ಲೂ ಕಾಪುದಳ ಗಸ್ತು ತಿರುಗುತ್ತಿರಬೇಕು. 6 ನೀರಿನಲ್ಲೂ ನೆಲದಲ್ಲೂ ಗುಪ್ತವಾಗಿ ಸಿಡಿಮದ್ದನ್ನು ಅವಿತಿಡುವ ಏರ್ಪಾಡಾಗಬೇಕು. 7 ನೌಕಾ ಮತ್ತು ವಿಮಾನಗಳ ಪಡೆಗಳು ಹೊಂಚುಹಾಕುತ್ತ ಪ್ರತಿಕ್ರಿಯೆಯನ್ನು ಕೈಗೊಳ್ಳುವಂತಿರಬೇಕು. ಇವಿಷ್ಟು ತೀರ ಪ್ರದೇಶ ಸಂರಕ್ಷಣೆಗೆ ಕನಿಷ್ಠ ಪಕ್ಷ ಬೇಕೇ ಬೇಕು. (ಎ.ಎನ್.ಎಸ್.ಎಂ.)

**ಕರಿಕಾಲ :** ಪ್ರ.ಶ.ಪೂ. 1ನೆಯ ಶತಮಾನದಲ್ಲಿ ಆರಂಭವಾಗಿ 1ನೆಯ ಶತಮಾನದವರೆಗೂ ಅಥವಾ ಅದರ ಅನಂತರ ಸ್ವಲ್ಪಕಾಲದವರೆಗೂ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡಸುತ್ತಿದ್ದಿರಬಹುದಾದ ಚೋಳ ಮನೆತನದ ಅತ್ಯಂತ ಪ್ರಸಿದ್ಧನಾದ ದೊರೆ. ಸು.100ರಲ್ಲಿ ಈತ ಆಳುತ್ತಿದ್ದನೆಂದು ಹೇಳಲಾಗಿದೆ. ದೀಕ್ಷಿತರ್ ಮೊದಲಾದ ಪಂಡಿತರು ಇವನ ಕಾಲವನ್ನು 2ನೆಯ ಶತಮಾನವೆಂದು ಹೇಳಿದರೆ ಶ್ರೀನಿವಾಸ ಅಯ್ಯಂಗಾರ್ ಮತ್ತಿತರರು ಇವನನ್ನು 4ನೆಯ ಶತಮಾನದ ಕೊನೆಗೆ ಕೊಂಡೊಯ್ಯುತ್ತಾರೆ. ಈತ ಶಿಲಪ್ಪದಿಕಾರಂ ಗ್ರಂಥದ ನಾಯಕನಾದ ಸೆಂಗುಟ್ಟುವನ್ ರಾಜನ ಸಮಕಾಲೀನನಾಗಿದ್ದನೆಂದೂ ಹೇಳಲಾಗಿದೆ. ಈತ ರೋಮನ್ ಚಕ್ರವರ್ತಿ ಜ್ಯೂಲಿಯನನ ಕಾಲದವನೆಂದೂ ಅವನ ಆಸ್ಥಾನಕ್ಕೆ ಈತ ತನ್ನ ರಾಯಭಾರಿಯನ್ನು ಕಳಿಸಿದ್ದಿರಬೇಕೆಂದೂ ಒಂದು ಅಭಿಪ್ರಾಯವುಂಟು.

ಕರಿಕಾಲ ಚೋಳನ ಹೆಸರಿನ ಸುತ್ತ ಅನೇಕ ಐತಿಹ್ಯಗಳು ಹಬ್ಬಿಕೊಂಡಿವೆ. ಈತ ಚಿಕ್ಕಂದಿನಲ್ಲಿ ತನ್ನ ಕಾಲು ಸುಟ್ಟುಕೊಂಡಿದ್ದರಿಂದ ಇವನಿಗೆ ಕರಿಕಾಲನೆಂಬ ಹೆಸರು ಬಂತೆಂದೂ ಮುಂದೆ ಈತ ಅರಿಗಳನ್ನು ಜಯಸಿದಾಗ ವೈರಿಗಳ ಅಂತಕನೆಂದು ಇದು ಸಾರ್ಥಕವಾಯಿತೆಂದೂ ಹೇಳಲಾಗಿದೆ. ಶತ್ರುಗಳ ಬಂಧನದಿಂದ ತಪ್ಪಿಸಿಕೊಂಡು ಈತ

ತಾನೇ ದೊರೆಯೆಂದು ಘೋಷಿಸಿಕೊಂಡದ್ದಲ್ಲದೆ ತಂಜಾವೂರಿಗೆ 24 ಕಿಮೀ ದೂರದಲ್ಲಿರುವ ವೆಣ್ಣಿಯಲ್ಲಿ ನಡೆದ ಕಾಳಗದಲ್ಲಿ ಪಾಂಡ್ಯ ಚೇರ ರಾಜರ ಸಂಯುಕ್ತ ಪಡೆಗಳನ್ನು ಸೋಲಿಸಿ ಅಟ್ಟಿದನಂತೆ. ಅನಂತರ ಅನೇಕ ಸಣ್ಣಪುಟ್ಟ ದೊರೆಗಳನ್ನೂ ಈತ ಮಣಿಸಿ ಇಡೀ ತಮಿಳುನಾಡಿನ ಏಕೈಕ ಅಧಿಪತಿಯಾದ. ಕಾವೇರಿಯ ಮುಖದ ಬಳಿ ಪುಹಾರವೆಂಬ ನಗರವನ್ನು ಕಟ್ಟಿಸಿದ.

ಕರಿಕಾಲ ಸಿಂಹಳ ದೇಶದ ಮೇಲೆ ಕೂಡ ದಂಡೆತ್ತಿ ಹೋಗಿದ್ದನೆಂದು ಹೇಳಲಾಗಿದೆ. ಅಲ್ಲಿಯ ಮಹಾವಂಶದಲ್ಲಿ ಈ ಘಟನೆಯ ಬಗ್ಗೆ ಉಲ್ಲೇಖವಿಲ್ಲವಾದರೂ ಅನಂತರದ ಉದಂತಗಳಲ್ಲಿ ಇದರ ಪ್ರಸ್ತಾಪವಿದೆ. ಒಮ್ಮೆ ಈತ ಅಲ್ಲಿಂದ 12,000 ಮಂದಿ ಸಿಂಹಳೀಯರನ್ನು ಹೊತ್ತು ತಂದು ಅವರನ್ನು ಪುಹಾರದ ಕೋಟೆ ಕಟ್ಟಲು ನೇಮಿಸಿದನಂತೆ. ಕಾವೇರಿಯ ದಂಡೆಯ ಮೇಲೆ 160 ಕಿಮೀಗಳಷ್ಟು ಉದ್ದಕ್ಕೆ ಈ ನಗರ ಹಬ್ಬಿತ್ತೆಂದು ಪ್ರತೀತಿ. ಕರಿಕಾಲ ಚೋಳ ಇಡೀ ಭಾರತವನ್ನೇ ಜಯಿಸಿದನೆಂದು ಅನೇಕ ತಮಿಳು ಕವಿತೆಗಳು ಕೊಂಡಾಡುತ್ತವೆ. ಕಾವೇರಿಯ ಮುಖಜ ಭೂಮಿಯಲ್ಲಿ, ಆ ನದಿ ಕವಲೊಡೆಯುವಲ್ಲೇ, ಕಟ್ಟೆಯೊಂದನ್ನು ಕಟ್ಟಿ ಅಲ್ಲಿಂದ ನದಿಯ ನೀರನ್ನು ಸಾಗುವಳಿಗೆ ಬಳಸಿಕೊಳ್ಳುವ ಯೋಜನೆಯನ್ನು ರೂಪಿಸಿದವನು ಇವನೇ ಎಂದು ಹೇಳಲಾಗಿದೆ. ಶ್ರೀರಂಗದ ಬಳಿ ಆಣೆಕಟ್ಟು ನಿರ್ಮಿಸಿ ವೆಣ್ಣಾರ್ ಕಾಲುವೆಯ ಮೂಲಕ ತಂಜಾವೂರ್ ಜಿಲ್ಲೆಯ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ ರೂಪಿಸಿದಾತ ಕರಿಕಾಲನೇ ಎಂದೂ ನಂಬಲಾಗಿದೆ. ತಂಜಾವೂರು ಜಿಲ್ಲೆಯ ಅನೇಕ ಕಾಲುವೆಗಳು ಚೋಳನ ಕಾಲದಲ್ಲೇ ನಿರ್ಮಿತವಾದುವೆಂಬುದಂತೂ ನಿಜ.

ಕರಿಕಾಲ ಚೋಳ ಕಲೆಗೆ ಆಶ್ರಯದಾತನಾಗಿದ್ದ. ವ್ಯಾಪಾರ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿದ. ಸನಾತನ ಧರ್ಮದಲ್ಲಿ ಇವನಿಗೆ ಅತೀವ ಶ್ರದ್ಧೆ ಇತ್ತು. ಈತ ಯುದ್ಧ ಕುಶಲಿ ಹೇಗೋ ಹಾಗೆ ಶಾಂತಿ ಸಾಧಕನೂ ಆಗಿದ್ದ. ಅನೇಕ ತಮಿಳು ಕಾವ್ಯಗಳು ಕರಿಕಾಲ ಚೋಳನನ್ನು ಕೊಂಡಾಡುತ್ತವೆಯಾದರೂ ಇವನ ವೈಯಕ್ತಿಕ ಜೀವನದ ಬಗ್ಗೆ ಖಚಿತವಾದ ವಿವರಗಳಿಲ್ಲ. ಕಂಚಿಯಲ್ಲಿ ಆಳುತ್ತಿದ್ದ ತೊಂಡೈಮನ್ ಇಳಂದಿರೈಯನ್ ಕರಿಕಾಲನ ಮೊಮ್ಮಗನಾಗಿದ್ದಿರಬೇಕು ಅಥವಾ ಕಂಚಿಯನ್ನಾಳಲು ಕರಿಕಾಲನಿಂದ ನೇಮಕವಾದ ಮಾಂಡಲಿಕನಾಗಿದ್ದಿರಬೇಕು–ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಇಳಂದಿರೈಯನ್ ಕಂಚಿ ಮತ್ತು ಅದರ ಸುತ್ತಣ ಪ್ರದೇಶವನ್ನು ಸ್ವತಂತ್ರವಾಗಿ ಆಳುತ್ತಿದ್ದ ದೊರೆಯೆಂದು ಇನ್ನು ಕೆಲವರು ಹೇಳುತ್ತಾರೆ. ಕರಿಕಾಲನಿಗೆ ಆದಿಮಂಡಿ ಎಂಬ ಮಗಳೂ ಇಬ್ಬರ ಗಂಡು ಮಕ್ಕಳೂ ಇದ್ದರೆಂದೂ ಅಟ್ಟನ್ ಅಟ್ಟಿ ಎಂಬ ಪೇರರಾಜಕುಮಾರ ಇವನ ಅಳಿಯನಾಗಿದ್ದನೆಂದೂ ಹೇಳಲಾಗಿದೆ. ಅನಂತರ ಬಂದ ಚೋಳ ರಾಜರು ಕರಿಕಾಲ ಎಂಬುದನ್ನು ತಮ್ಮ ವಂಶದ ಬಿರುದಾಗಿ ಬಳಸುತ್ತಿದ್ದರು. (ಡಿ.ಎಚ್.ಕೆ.)

**ಕರಿಗೇರು :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಮರ, ಇದರ ಶಾಸ್ತ್ರೀಯ ನಾಮ ಸೆಮಿಕಾರ್ಪಸ್ ಅನಕಾರ್ಡಿಯಮ್ ಭಾರತ, ಈಸ್ಟ್ ಇಂಡೀಸ್ ದ್ವೀಪಗಳು, ಉತ್ತರ ಆಸ್ಟ್ರೇಲಿಯಗಳಲ್ಲಿ ಹರಡಿದೆ. ಇದು ಚಳಿಗಾಲದಲ್ಲಿ ಎಲೆ ಉದುರುವ ಮಧ್ಯಮ ಎತ್ತರದ ಮರ. ಎಲೆಗಳು ಸರಳ, ಪರ್ಯಾಯವಾಗಿ ಜೋಡಣೆಗೊಂಡಿವೆ. ಇವುಗಳ ಉದ್ದ 7'–24", ಅಗಲ 4"–12". ಅಂಡಾಕಾರವಾಗಿವೆ; ತುದಿ ಗುಂಡಗಿದೆ. ತೊಗಲಿನಂತೆ ಗುಡುಸಾಗಿರುವ ಇವುಗಳ ಮೇಲ್ಭಾಗ ತುಪ್ಪುಳರಹಿತ; ತಳಭಾಗದಲ್ಲಿ ಬೂದುಬಣ್ಣದ ತುಪ್ಪುಳವಿದೆ. ಅಲಗಿನ ಮೇಲೆ 15–25 ಜೋಡಿಗಳ ನಾಳವಿನ್ಯಾಸವಿದೆ ಹೂಗಳು ರೆಂಬೆಗಳ ತುದಿಗಳಲ್ಲಿರುವ ಸಂಕೀರ್ಣ ಪುಷ್ಪಗುಚ್ಛಗಳಲ್ಲಿ ಸಮಾವೇಶಗೊಂಡಿವೆ. ಹೂಗಳು ಹಸಿರು ಮಿಶ್ರಿತ ಬಿಳಿ ಬಣ್ಣದವೂ ಏಕಲಿಂಗಿಗಳು ಆಗಿವೆ. ಗಂಡು ಹೂಗಳು ಹೆಣ್ಣು ಹೂಗಳಿಗಿಂತ ಚಿಕ್ಕವು. ಎರಡು ಬಗೆಯ ಹೂಗಳಲ್ಲೂ ಈಟಿಯಾಕಾರದ ಬ್ರ್ಯಾಕ್ಟುಗಳೂ ಪುಷ್ಪ ಪತ್ರದ ಹೊರಭಾಗದಲ್ಲಿ ಕೂದಲುಗಳೂ ಇವೆ. ಪುಷ್ಪಪಾತ್ರೆ 3 ಹಾಲೆಗಳಿಂದಾಗಿದೆ. ಹೂದಳಗಳು 5. ಗಂಡು ಹೂಗಳಲ್ಲಿ ಕೇಸರಗಳಿಗೂ ಹೂದಳಗಳಿಗೂ ನಡುವೆ ದುಂಡಾಗಿರುವ ತಟ್ಟೆಯಿದೆಯಲ್ಲದೆ ಅಪೂರ್ಣಾವಸ್ಥೆಯಲ್ಲಿರುವ ಅಂಡಾಶಯವೊಂದಿದೆ. ಹೆಣ್ಣುಹೂವಿನಲ್ಲಿ ಉಚ್ಛಸ್ಥಾನದ ಗುಂಡಗಿನ ಅಂಡಾಶಯವಿದೆ, ಮೂರು ಕಾರ್ಪೆಲುಗಳಿಂದಾದ ಇದರಲ್ಲಿ ಒಂದೇ ಅಂಡಕವಿದೆ. ಶಲಾಕೆಗಳು 3. ಹಣ್ಣು ಅಷ್ಟಿಫಲ ಮಾದರಿಯದು; ಅದರ ಆಕಾರ ದೀರ್ಘವೃತ್ತದಂತೆ. ನಯವಾಗಿಯೂ ಹೊಳಪುಳ್ಳದ್ದೂ ಆಗಿದೆ. ಬಲಿತಾಗ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಹಣ್ಣಿನ ಕೆಳಗಿರುವ ಅಕ್ಷಕಾಂಡ ಕಾಲಕ್ರಮೇಣ ಹಳದಿಬಣ್ಣಕ್ಕೆ ತಿರುಗಿ ರಸಭರಿತವಾಗುತ್ತದೆ. ಇದು ತಿನ್ನಲು ಯೋಗ್ಯ.

ಇಂಗ್ಲಿಷಿನಲ್ಲಿ ಈ ಮರಕ್ಕೆ ಮಾರ್ಕಿಂಗ್ ನಟ್ ಎಂಬ ಹೆಸರಿದೆ. ಹಣ್ಣಿನಿಂದ ಒಂದು ಬಗೆಯ ಕಟುವಾದ ಸ್ನಿಗ್ಧವಾದ ರಸವನ್ನು ತೆಗೆಯುತ್ತಾರೆ. ಅಗಸರು ಇದನ್ನು ಹತ್ತಿ ಬಟ್ಟೆಗಳಿಗೆ ಗುರುತುಮಾಡಲು ಉಪಯೋಗಿಸುತ್ತಾರೆ. ಅಲ್ಲದೆ ಮರುಗೆಣ್ಣೆ ತಯಾರಿಕೆಯಲ್ಲೂ ಬಳಸುತ್ತಾರೆ. ಅಕ್ಷಕಾಂಡವನ್ನು ಹುರಿದು ತಿನ್ನುವುದುಂಟು. (ಎಸ್.ಆರ್.ಜಿ.)

**ಕರಿಜೇಡ :** ತೆರಿಡೈಯಿಡೀ ಕುಟುಂಬದ ಲ್ಯಾಟ್ರೊಡೆಕ್ಟಸ್ ಜಾತಿಯ ಜೇಡ. ಪ್ರೌಢ ಹೆಣ್ಣು ಜೇಡ ಸು.½" ಉದ್ದವಾಗಿದೆ. ಉದರ ದುಂಡಾಗಿ ದೇಹ ಮಿರುಗುವ ಕಪ್ಪು ಬಣ್ಣದಿಂದ ಕೂಡಿದೆ. ತಳಭಾಗದಲ್ಲಿ ಕಡು ಗೆಂಪು ಬಣ್ಣದ ಬುಡುಬುಡುಕೆ ಆಕಾರದ ಗುರುತಿದೆ. ಕೆಲವು ಅಪ್ರಬುದ್ಧ ಹೆಣ್ಣು ಜೇಡಗಳ ಬೆನ್ನಿನ ಮೇಲೆ ಒಂದು ಸಾಲು ಕೆಂಪು ಬಣ್ಣದ ಚುಕ್ಕೆಗಳಿವೆ ಕೆಲವಕ್ಕೆ ಈ ತರಹ ಚುಕ್ಕೆಗಳು ಇರುವುದಿಲ್ಲ. ಗಂಡು ಜೇಡ ಹೆಣ್ಣಿಗಿಂತ ಚಿಕ್ಕದು. ಇದರಲ್ಲೂ ಉದರದ ತಳ ಭಾಗದಲ್ಲಿ ಬುಡುಬುಡಕ್ಕೆ ಆಕಾರದ ಗುರುತಿದೆ. ಬೆನ್ನಿನ ಮೇಲೆ ವಿವಿಧ ಮಾದರಿಯ ಕೆಂಪು ಚುಕ್ಕೆಗಳೂ ಇವುಗಳ ಪಾರ್ಶ್ವದಲ್ಲಿ ಬಿಳಿಯ ಗೆರೆಗಳೂ ಇವೆ.

ಸಂಯುಕ್ತ ಸಂಸ್ಥಾನಗಳ ಸಮಶೀತೋಷ್ಣ ವಲಯದ ಭಾಗಗಳಲ್ಲಿ ಇದರ ಮರಿಗಳು ಕೋಶಾವಸ್ಥೆ ಘಟ್ಟವನ್ನು ಚಳಿಗಾಲದಲ್ಲಿ ಕಳೆದು, ವಸಂತ ಕಾಲದಲ್ಲಿ ಹೊರಕಾಣಿಸಿಕೊಳ್ಳುತ್ತವೆ. ಪ್ರೌಢ ಜೇಡಗಳು ಏಪ್ರಿಲ್ ತಿಂಗಳುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅದರೆ ಗಂಡು ಜೇಡಗಳು ಕಣ್ಣಿಗೆ ಬೀಳುವುದು ಅಪರೂಪ.

ಗಂಡುಜೇಡ ಏಕಾಂಗಿಯಾಗಿ ಬಲೆಯಲ್ಲಿ ಕುಳಿತು ರೇತಸ್ಸನ್ನು ಸುರಿಸಿ ಎರಡನೆಯ ಉಪಾಂಗವಾದ ಪ್ಯಾಲ್ಪುಗಳಲ್ಲಿನ ಒಂದು ಚೀಲದಲ್ಲಿ ಶೇಖರಿಸಿ ಸಂಭೋಗ ಕಾಲದಲ್ಲಿ ಇದನ್ನು ಒಂದು ಪ್ಯಾಲ್ಪಿನ ಮೂಲಕ ಹೆಣ್ಣು ಜೇಡದ ಜನನೇಂದ್ರಿಯದ ದ್ವಾರದ ಒಳಗೆ ತಳ್ಳುವುದು. ಸಂಭೋಗವಾದ ಅನಂತರ ಹೆಣ್ಣು ಜೇಡ ಗಂಡುಜೇಡವನ್ನು ತಿಂದುಬಿಡುತ್ತದೆ!



ಹೆಣ್ಣು ಗರ್ಭಧರಿಸಿದ ಮೇಲೆ 250–750 ಮೊಟ್ಟೆಗಳನ್ನು 0–5" ಅಗಲವುಳ್ಳ ರೇಷ್ಮೆಯಂಥ ಮೃದುವಾದ ಕೋಶದಲ್ಲಿ ಇಟ್ಟು ರಕ್ಷಿಸುತ್ತದೆ. ಈ ಭ್ರೂಣಕೋಶಗಳನ್ನು ಜುಲೈ–ಸೆಪ್ಟೆಂಬರ್ ತಿಂಗಳುಗಳಲ್ಲಿ ಕಾಣಬಹುದು. ಮರಿಗಳು 14–30 ದಿನಗಳ ವರೆಗೆ ಈ ಕೋಶಗಳೊಳಗೇ ಬೆಳೆದು ಒಂದು ಬಾರಿ ಪೊರೆಬಿಟ್ಟು ಅನಂತರ ಹೊರಬರುತ್ತವೆ. ಪ್ರೌಢಾವಸ್ಥೆ ಹೊಂದ ಬೇಕಾದರೆ ಗಂಡುಮರಿ 4–7 ಬಾರಿಯೂ ಹೆಣ್ಣು ಮರಿ 2–9 ಸಲವೂ ಪೊರೆ ಕಳಚುತ್ತದೆ. ಇವು ಪ್ರೌಢಾವಸ್ಥೆಗೆ ಬಂದ ಅನಂತರ ಕೆಲವು ತಿಂಗಳುಗಳಿಂದ ಒಂದೂವರೆ ವರ್ಷಗಳವರೆಗೆ ಜೀವಿಸಿರಬಲ್ಲವು. ಕರಿಜೇಡಗಳು ಮರದ ತೊಗಟೆಯ ಒಳಭಾಗ, ಸಂದುಗಳಲ್ಲಿ ಅಥವಾ ಪೊಟರೆಗಳಲ್ಲಿ ರೇಷ್ಮೆಯಂಥ ಸೂಕ್ಷ್ಮವಾದ ದಾರದಿಂದ ದೃಢವಾದ ಬಲೆಯನ್ನು ನೇಯುತ್ತವೆ. ಇತರ ಕೀಟಗಳು ಬಲೆಯೊಳಗೆ ಸಿಕ್ಕಿಕೊಂಡಾಗ ಅವುಗಳನ್ನು ಹಿಡಿದು ರಂಧ್ರಗಳನ್ನು ಮಾಡಿ, ಮೈ ಒಳಗಿರುವ ರಸವನ್ನು ಹೀರುತ್ತವೆ. ಆದರೆ ಕಣಜಗಳೂ ಇತರ ಕೀಟಭಕ್ಷಕಗಳೂ ಜೇಡಗಳ ಮರಿಗಳನ್ನು ತಿಂದು ಹಾಕುತ್ತವೆ.

ಇತರ ಜೇಡಗಳಿಗೆ ಇರುವಂತೆ ಕರೀಜೇಡಕ್ಕೂ ವಿಷಗ್ರಂಥಿಗಳೂ ಅದನ್ನು ದೇಹ ದೊಳಕ್ಕೆ ಹೊಗಿಸುವ ಅಂಗಗಳೂ ಇವೆ. ಇದು ಆತ್ಮರಕ್ಷಣೆಯ ಸಾಧನ. ಕರಿಜೇಡ ಒಮ್ಮೊಮ್ಮೆ ಮನುಷ್ಯನನ್ನು ಕಡಿಯುವುದು ಉಂಟು. ಆಗ ವಿಷದ ಪರಿಣಾಮವಾಗಿ ಮೈನೋವು, ವಾಂತಿ, ವಪೆಯ ಅಸ್ವಸ್ಥತೆ ಇವೆಲ್ಲ ಕಾಣಿಸಿಕೊಳ್ಳುತ್ತವೆ. ಮೂರು ನಾಲ್ಕು ದಿನಗಳವರಗೂ ಈ ನೋವು ಇರುತ್ತದೆ. ಆದರೆ ಸಾವು ಬಹಳ ಅಪರೂಪ.

ಎಚ್. ಲೆವಿ ಎಂಬ ವಿಜ್ಞಾನಿ ಲ್ಯಾಟ್ರೋಡೆಕ್ಟಸ್, ಜಾತಿಯಲ್ಲಿ ಆಫ್ರಿಕದ ಲ್ಯಾ ಜೊಮೆಟ್ರಿಕಸ್, ಅಮೆರಿಕದ ಲ್ಯಾ. ಕುರಸವಿಯೆನ್ಸಸ್, ಯೆಮನಿನ ಲ್ಯಾ. ಹಿಸ್ಪ್ರಿಕ್ಸ್, ಇರಾನಿನ ಲ್ಯಾ. ದಹ್ಲಿ, ಉತ್ತರ ಆಫ್ರಿಕದ ಲ್ಯಾ ಪ್ಯಾಲಿಡಸ್ ಮತ್ತು ಪ್ರಪಂಚದ ಇತರ ಉಷ್ಣವಲಯದಲ್ಲಿ ಜೀವಿಸುವ ಲ್ಯಾ. ಮ್ಯಾಕ್ಟನ್ಸ್ ಪ್ರಭೇದಗಳನ್ನು ವಿವರಿಸಿದ್ದಾನೆ. (ಪಿ.ಎ.ಆರ್.)

**ಕರಿಬಂಟ :** ಕನ್ನಡ ಜನಪದ ಗದ್ಯ ಕಥೆಗಳಲ್ಲಿ, ಲಾವಣಿಗಳಲ್ಲಿ ಮತ್ತು ಬಯಲಾಟಗಳಲ್ಲಿ ಅತ್ಯಂತ ಜನಪ್ರಿಯವಾಗಿರುವ ಒಂದು ಕಥೆ. ಯಕ್ಷಗಾನಗಳಲ್ಲಿ ಸಾಮಾನ್ಯವಾಗಿ ರಾಮಾಯಣ, ಮಹಾಭಾರತ ಮತ್ತು ಭಾಗವತಗಳಿಂದ ಆರಿಸಿದ ಪೌರಾಣಿಕ ಕಥೆಗಳೇ ಹೆಚ್ಚಾಗಿದ್ದರೂ ನಾಡಿನ ವೀರರ ಕಥೆಗಳೂ ಇವೆ. ಇಂಥ ಕಥೆಗಳಲ್ಲಿ ಕರಿಬಂಟನ ಕಾಳಗ ಪ್ರಖ್ಯಾತವಾಗಿದೆ. ಕರಿರಾಜ ಒಬ್ಬ ಸುಂದರ, ಸಾಹಸಿ, ಮೇಲಾಗಿ ವೀರ. ದುರ್ಗಮ ಪ್ರದೇಶವೊಂದರಲ್ಲಿ ವಾಸವಾಗಿದ್ದ ಮಾವ,ಹೆಣ್ಣು ಕೊಡುತ್ತೇನೆಂದು ಆಹ್ವಾನಿಸಿದಾಗ ಇದು ಅವನಿಗೆ ತನ್ನ ಪರಾಕ್ರಮವನ್ನು ಪ್ರಶ್ನಿಸುವ ಆಹ್ವಾನವಾಗುತ್ತದೆ. ಕರಿರಾಜ ಹೆಣ್ಣು ವರಿಸಲು ಪ್ರಯಾಣ ಹೊರಡುತ್ತಾನೆ. ಬಹಳ ದೂರ ಹೋದ ಅನಂತರ ಒಂದು ಕೆರೆಯ ಏರಿಯ ಮೇಲೆ ಆಯಾಸ ಪರಿಹಾರಕ್ಕಾಗಿ ಕೂತಿದ್ದಾಗ ಅವನ ಸೌಂದರ್ಯವನ್ನು ಕಂಡು ತೊಂಡನೂರು (ತೊಣ್ಣೂರು) ರಾಕ್ಷಸಿಯ ಮಗಳಾದ ಪುಂಡರೀಕಾಕ್ಷಿಯ ಗೌಡೀರು (ಸೇವಕಿಯರು)

ಮೂರ್ಛೆ ಹೋಗುವರು. ಅನಂತರ ಚೇತರಿಸಿಕೊಂಡು ಬಂದು ತಮ್ಮ ಒಡತಿಗೆ ತಾವು ಕಂಡ ಸುಂದರನ ಸುದ್ದಿ ಮುಟ್ಟಿಸುವರು. ಕರಿರಾಜನನ್ನು ನೋಡಲು ಬಂದ ಪುಂಡರೀಕಾಕ್ಷಿ ಅವನ ರೂಪಿಗೆ ಮನಸೋತು ಮೂರ್ಛೆ ಹೋಗುವಳು. ಅನಂತರ ಚೇತರಿಸಿಕೊಂಡು ಕರಿರಾಜನನ್ನು ಒಲಿಸಿ ಮನೆಗೆ ಕರೆದೊಯ್ಯುವಳು. ತಾಯಿ ರಕ್ಕಸಿಯಿಂದ ತನ್ನ ಪ್ರಿಯತಮನನ್ನು ಪಾರು ಮಾಡಲು ಪ್ರಯತ್ನಿಸುವಳು. ತನ್ನ ತಮ್ಮ ಬೊಮ್ಮಣ್ಣ ರಾಕ್ಷಸನಿಗೆ ಮಗಳನ್ನು ಕೊಟ್ಟು ಮದುವೆ ಮಾಡುವ ಹಂಚಿಕೆಯಲ್ಲಿದ್ದ ತೊಂಡನೂರು ರಾಕ್ಷಸಿ ಕೋಪವನ್ನು ತಾಳಿ ಮಗಳನ್ನು ವಂಚಿಸಿ ಕರಿಬಂಟನನ್ನು ಕೊಲ್ಲಲು ಪ್ರಯತ್ನಿಸುವಳು. ಆದರೆ ಪುಂಡರೀಕಾಕ್ಷಿಯ ತಂತ್ರದಿಂದ ರಾಕ್ಷಸಿಯ ತಮ್ಮ ಬೊಮ್ಮಣ್ಣ ತನ್ನ ಅಕ್ಕನಿಂದಲೇ ಹತನಾಗುವನು.

ತಮ್ಮನನ್ನು ತನ್ನ ಕೈಯಿಂದಲೇ ಕೊಂದ ರಾಕ್ಷಸಿ ತಲೆ ಮರೆಸಿಕೊಂಡು ಹೊರ ಬಿದ್ದ ಕರಿಬಂಟನನ್ನು ಅಟ್ಟಿಸಿಕೊಂಡು ಹೋಗುವಳು. ತನ್ನ ಕತ್ತಿಯನ್ನು ಬಾವಿಯ ಕಟ್ಟೆಯ ಮೇಲಿಟ್ಟು ನೀರು ಕುಡಿಯಲು ಇಳಿದಿದ್ದ ಕರಿಬಂಟ ರಾಕ್ಷಸಿ ಬೆನ್ನಟ್ಟಿ ಬರುವುದನ್ನು ಕಂಡು ಕತ್ತಿಯನ್ನು ಬಿಟ್ಟು ಓಡಿಹೋಗುವನು. ರಾಕ್ಷಸಿ ಕತ್ತಿಯನ್ನು ತೆಗೆದುಕೊಂಡು ಅದನ್ನು ಒಂದು ಮಗುವನ್ನಾಗಿ ಮಾಡಿಕೊಂಡು ಬಾಣಂತಿಯಂತೆ ಕರಿಬಂಟನನ್ನು ಹಿಂಬಾಲಿಸಿ ಒಂದೆಡೆ ಸೇರಿದ್ದ ಏಳೂರ ಗೌಡರಿಗೆ ತನ್ನ ಗಂಡ ಬಾಣಂತಿಯನ್ನು ಬಿಟ್ಟು ಹೋಗುತ್ತಿದ್ದಾನೆಂದು ನ್ಯಾಯವನ್ನು ಒಪ್ಪಿಸುವಳು. ಕರಿಬಂಟ ನ್ಯಾಯದವರಿಗೆ ತನ್ನ ನಿಜಸ್ಥಿತಿಯನ್ನು ಹೇಳಿ, ಪರಿಪರಿಯಾಗಿ ಬೇಡಿಕೊಂಡರೂ ಅವನ ಮಾತನ್ನು ನಂಬದ ಗೌಡರು ಅವರಿಬ್ಬರನ್ನೂ ಆ ರಾತ್ರಿ ಊರ ಚಾವಡಿಯಲ್ಲಿ ಕೂಡುವರು. ನಡುರಾತ್ರಿಯಲ್ಲಿ ರಾಕ್ಷಸಿ ಕರಿಬಂಟನನ್ನು ಕೊಂದು ಓಡಿಹೋಗುವಳು. ಹೀಗೆ ಮಡಿದ ಕರಿಬಂಟನಿಗಾಗಿ ಪುಂಡರೀಕಾಕ್ಷಿ ಮತ್ತು ಏಳೂರ ಗೌಡರು ವ್ಯಥೆಪಟ್ಟು ಅಗ್ನಿಕುಂಡದಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳಲು ನಿರ್ಧರಿಸಿದಾಗ ಶಿವಪಾರ್ವತಿಯರು ಪ್ರತ್ಯಕ್ಷರಾಗಿ ಸತ್ತವನನ್ನು ಬದುಕಿಸಿ ಹರಸುವರು. ಕೊನೆಗೆ ಕರಿಬಂಟ ತನ್ನ ಮಾವನ ಊರಿಗೆ ಹೋಗಿ ಮಾವನ ಮಗಳನ್ನು ಮದುವೆಯಾಗುವನು. ಕಥೆಯ ಬಹುಭಾಗ ಒಂದೆಡೆ ರಾಕ್ಷಸಿ ಹಾಗೂ ಅವಳ ತಮ್ಮ ಬೊಮ್ಮ, ಇನ್ನೊಂದೆಡೆ ಕರಿಬಂಟ ಮತ್ತು ರಾಕ್ಷಸಿಯ ಮಗಳಾದ ಪುಂಡರೀಕಾಕ್ಷಿ –ಈ ಎರಡು ಪಕ್ಷಗಳಿಗೂ ನಡೆಯುವ ವಾದ, ಜಗಳ, ಹೋರಾಟವೇ ಆಗಿದೆ. ಒಂದು ಸಾಮಾನ್ಯ ಕಥೆ ಯಕ್ಷಗಾನವಾಗಿರುವುದು ಇಲ್ಲಿಯ ವೈಶಿಷ್ಟ್ಯ.

ಕರಿಬಂಟನ ಕಥೆಯನ್ನು ಹೇಳುವ ಯಕ್ಷಗಾನಗಳು ಅನೇಕವಿದ್ದು ಇವುಗಳಲ್ಲಿ ಈ ಕಥೆಯನ್ನು ಶಿವ ಪಾರ್ವತಿಗೆ ಹೇಳಿದಂತೆ ಹೇಳಿದೆ. ಅತಿಮಾನುಷ ಘಟನೆಗಳು ಬಂದರೂ ಕಥೆಯ ಓಟ ಕುಂಟದೆ ಮುಂದುವರಿಯುತ್ತದೆ. ಯಕ್ಷಗಾನ ಪ್ರೇಮಿಗಳು ಇದನ್ನು ಮೆಚ್ಚುವುದು ಬಹಳ. ಯಕ್ಷಗಾನಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ. ವೀರನಗೆರೆ ಪುಟ್ಟಣ್ಣ ವಿರಚಿತ ಕೃತಿಯಲ್ಲಿ ಹಳೆಯಬೀಡಿನ ರಾಜಕುಮಾರಿ ಭುವನಮೋಹಿನಿಯನ್ನು ಸುಮತಿ ನಗರದ ರಾಜನ ಮಗ ಕರಿಬಂಟ ಮದುವೆಯಾಗುತ್ತಾನೆ. ಭಾಳಾಕ್ಷ ವಿರಚಿತ ಯಕ್ಷಗಾನದಲ್ಲಿ ವೀರಬಲ್ಲಾಳನ ಮಗಳನ್ನು ಕರಿಬಂಟ ಮದುವೆಯಾಗುತ್ತಾನೆ. ಇವನ ತಂದೆತಾಯಿಗಳು ಮಾರಭೂಪ, ಬಲವಂತಾದೇವಿ. ಜೀಶಂಪ ಅವರು ಪ್ರಕಟಿಸಿರುವ ಹೆಳವರ ಕಾವ್ಯಗಳು ಎಂಬ ಸಂಕಲನದಲ್ಲಿ ಬರುವ ಮಲ್ಲರಾಜ ಎಂಬ ಲಾವಣಿ ಕರಿಬಂಟನ ಕಥೆಯೇ ಆಗಿದೆ. ಇಲ್ಲಿ ಕರಿಬಂಟನ ತಂದೆ ಮಲ್ಲರಾಜ; ಇವನಿಗೆ ದುಂಡೋಜಿ, ಮಲ್ಲೋಜಿ ಎಂಬ ಇಬ್ಬರು ಹೆಂಡತಿಯರು. ಇವರಲ್ಲಿ ದುಂಡೋಜಿಯ ಮಗ ಕರಿಬಂಟ. ಇಲ್ಲಿಯೂ ಈತ ಒಬ್ಬ ರಾಜಕುಮಾರಿಯನ್ನು ಮದುವೆಯಾಗುತ್ತಾನೆ. ಕಾಳೇಗೌಡ ನಾಗವಾರ ಅವರ ಬಯಲು ಸೀಮೆಯ ಲಾವಣಿಗಳು ಎಂಬ ಸಂಕಲನದಲ್ಲಿ ಕರಿರಾಯಬಂಟ 1 ಎಂಬ ಲಾವಣಿಯಲ್ಲಿ ಕರಿಬಂಟನ ತಂದೆ ತಾಯಿಗಳ ಹೆಸರಿಲ್ಲ, ಆದರೆ ಮಾವ ತಿಮ್ಮರಾಜು ಹೆಣ್ಣು ಕೊಡುವ ಪ್ರಸ್ತಾಪವಿದೆ. ಕರಿರಾಯಬಂಟ 2 ಎಂಬ ಲಾವಣಿಯಲ್ಲಿ ಕರಿಬಂಟನ ತಂದೆ ತಾಯಿಗಳು ಬಾಲರಾಯ ಮತ್ತು ಮಾರ್ಬಲ ದೇವಿ. ಸೋದರಮಾವ ಹೆಣ್ಣು ಕೊಡುವ ಸುದ್ದಿ ಇದೆ.

ಈ ಮೇಲ್ಕಂಡ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಬಿಟ್ಟರೆ ಮೂಲಕಥೆಯ ವಸ್ತು ಮತ್ತು ಆಶಯ ಯಕ್ಷಗಾನಗಳಲ್ಲೂ ಲಾವಣಿಗಳಲ್ಲೂ ಒಂದೇ ಆಗಿರುವುದು ಕಂಡುಬರುತ್ತದೆ. ರಾಕ್ಷಸಿ ಮತ್ತು ಅವಳ ಮಗಳ ಹೆಸರು ಪುಂಡುಲಕ್ಷ್ಮಿ, ಪುಂಡಲಕಾಂತೆ ಎಂದು ಬಯಲುಸೀಮೆ ಲಾವಣಿಗಳಲ್ಲಿಯೂ ಪುಂಡರೀಕಾಕ್ಷಿ ಎಂದು ಹೆಳವರ ಕಾವ್ಯ ಹಾಗೂ ಯಕ್ಷಗಾನ ಕೃತಿಗಳಲ್ಲಿಯೂ ಕಂಡುಬರುತ್ತದೆ. ಸಿದ್ಧೇಶನ ಯಕ್ಷಗಾನದಲ್ಲಿ ಕರಿರಾಜ ಕಾಶ್ಮೀರ ದೇಶದ, ಧಾರಾಪುರದ ರಾಜ ಮಾರಭೂಪನ ಮಗ ಎಂದು ಹೇಳಿದೆ. (ಟಿ.ಎಸ್.ಆರ್.)

**ಕರಿಬಸವ ದೇಶಿಕೇಂದ್ರ[1] :** ಸು. 1200–40. ಶ್ರೀಶೈಲ ಪಂಡಿತಾರಾಧ್ಯ ಸೂರ್ಯ ಸಿಂಹಾಸನವನ್ನು ಅಲಂಕರಿಸಿದ್ದ ಯತಿ. ಗುರು ಚಂದ್ರ ಗುಂಡ ದೇಶಿಕೇಂದ್ರ. 1235ರಲ್ಲೂ 1240ರಲ್ಲೂ ನಿಡುಮಾಮಿಡಿ ಕರಿಬಸವೇಂದ್ರ ಎಂಬ ಹೆಸರಿನಿಂದ ಅಲ್ಲಮ ಪ್ರಭುದೇವನ ಜೊತೆಯಲ್ಲಿ ಸಂಚರಿಸಿದಂತೆ ತಿಳಿದುಬಂದಿದೆ. ಈತ ಮಹಾಮಹಿಮನಾಗಿದ್ದು ಪೆನುಗೊಂಡ ತಾಲ್ಲೂಕು ನಿಡುಮಾಮಿಡಿ ಮಠ (ಶೈಲಪೀಠ ಶಾಖೆ) ಸ್ಥಾಪಕನೆಂದು ಖ್ಯಾತನಾಗಿದ್ದಾನೆ. (ಎಂ.ಜಿ.ಎನ್.)

**ಕರಿಬಸವ ದೇಶಿಕೇಂದ್ರ[2] :** ಶ್ರೀಶೈಲ ಪಂಡಿತಾರಾಧ್ಯ ಪೀಠ ಪರಂಪರೆಯವನಾದ ಈತ ಗುಯಲೂರು ಮಠಾಧ್ಯಕ್ಷನಾಗಿದ್ದ. ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಅಚ್ಯುತರಾಯನಿಗೆ (1530–75) ಗುರುವಾಗಿದ್ದನೆಂದು ತಿಳಿದುಬರುತ್ತದೆ. ಮಹಾಪುರುಷನೆಂದು ಪ್ರಸಿದ್ಧನಾಗಿದ್ದ ಈತ ಪೆನುಗೊಂಡೆಗೆ ಸು. 15 ಕಿಮೀ ದೂರದಲ್ಲಿರುವ ಸೋಮಲಾಪುರದಲ್ಲಿ ತಪೋಮಗ್ನನಾಗಿದ್ದನೆಂದೂ ವಿಜಯನಗರದ ಉಪರಾಜಧಾನಿ ಯಾಗಿದ್ದ ಪೆನುಗೊಂಡೆಯಲ್ಲಿದ್ದ ಅಚ್ಯುತರಾಯ ಈತನ ಮಹಿಮೆಯನ್ನು ಕೇಳಿ ಗುರುದರ್ಶನಕ್ಕಾಗಿ ಬಂದನೆಂದೂ ಆಗ ಈತ ಮಂತ್ರೋದಕ ಪ್ರಭಾವದಿಂದ ಅಲ್ಲಿ ಒಣಗಿ ನಿಂತಿದ್ದ ಮಾವಿನ ಮರವನ್ನು ಚಿಗುರಿಸಿ, ಫಲಬಿಡಿಸಿ, ಅವುಗಳನ್ನೇ ರಾಜನಿಗೆ ಆಶೀರ್ವದಿಸಿ ಕೊಟ್ಟನೆಂದೂ ಶ್ರೀಶೈಲಪಂಡಿತಾರಾಧ್ಯ ಚರಿತ್ರೆಯಲ್ಲಿ ಉಕ್ತವಾಗಿದೆ. ಈ ಪವಾಡವನ್ನು ಇಡಗೂರು ರುದ್ರಕವಿ ಉಲ್ಲೇಖಿಸಿದ್ದಾನೆ. ಗುರುಪ್ರಭಾವಕ್ಕೆ ಮೆಚ್ಚಿದ ರಾಜ ಅಲ್ಲಿ ಈತನಿಗೆ ಮಠವನ್ನು ಕಟ್ಟಿಸಿ ಮಾನ್ಯ ಮಿರಾಸೆಗಳನ್ನು ನೀಡಿದುದಾಗಿ ಶಾಸನಗಳಿಂದ ತಿಳಿದುಬಂದಿದೆ. (ಎಂ.ಜಿ.ಎನ್.)

**ಕರಿಬಸವಶಾಸ್ತ್ರೀ, ಎನ್.ಆರ್. :** 1852–1923. ಮೈಸೂರಿನಲ್ಲಿ ಹುಟ್ಟಿ ಬೆಳೆದ ಅಂದಿನ ವಿದ್ವಾಂಸರಲ್ಲಿ ಗಮನಾರ್ಹರು. ಇವರು ನಂಜನಗೂಡು ಪಂಡಿತ ರುದ್ರಶಾಸ್ತ್ರಿಗಳ ಮಕ್ಕಳು. ಇವರು ಬಾಲ್ಯವನ್ನು ನಂಜನಗೂಡಿನಲ್ಲಿ ಕಳೆದರು. ಮೈಸೂರಿಗೆ ಬಂದ ಕರ್ಣಾಟಕ ಭಾಷಾರತ್ನಂ ಕರಿಬಸವ ಶಾಸ್ತ್ರಿಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿದರು. ಹಲವಾರು ವರ್ಷ ಶ್ರದ್ಧೆಯಿಂದ ಕನ್ನಡ, ಸಂಸ್ಕೃತ ಭಾಷೆಗಳನ್ನೂ, ಸಾಹಿತ್ಯ, ವೇದಾಂತ ಶಾಸ್ತ್ರಗಳನ್ನೂ ಕಲಿತು ಉದ್ದಾಮ ಪಂಡಿತರಾದರು. ಯಜಮಾನ್ ವೀರ ಸಂದಪ್ಪನವರ ಉದಾರ ಆಶ್ರಯದಿಂದ ಅಭಿವೃದ್ಧಿಗೆ ಬಂದರು. ಮೈಸೂರು ಸ್ಟಾರ್ ಎಂಬ ವಾರಪತ್ರಿಕೆಗೆ ಲೇಖಕರಾಗಿ ಸೇರಿಕೊಂಡು ವಿಖ್ಯಾತರಾದರು. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪಂಡಿತರಾದರು (1917). ವೀರಶೈವ ಗ್ರಂಥ ಪ್ರಕಾಶಿಕೆ ಎಂಬ ಮಾಸ ಪತ್ರಿಕೆಯನ್ನು ಸ್ಥಾಪಿಸಿ ಹಲವಾರು ಪ್ರಾಚೀನ ಗ್ರಂಥಗಳನ್ನು ಬೆಳಕಿಗೆ ತಂದರು. ಅದರಿಂದ ವೀರಶೈವ ಸಾಹಿತ್ಯದ ಹಲವಾರು ಮಹತ್ತ್ವದ ಗ್ರಂಥಗಳು ಬೆಳಕಿಗೆ ಬಂದವು. ಈ ಮಹನೀಯರು ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿ ಸಟೀಕ. ಗುರುರಾಜ ಕವಿಯ ಸಂಸ್ಕೃತ ಪಂಡಿತಾರಾಧ್ಯಚರಿತೆಗಳನ್ನು ಪ್ರಕಟಿಸಿ ಮಹೋಪಕಾರ ಮಾಡಿದರು. ಸೌಂದರ ಪುರಾಣ, ಧರ್ಮ ಶಿರೋಮಣಿ, ರೇವಣ ಸಿದ್ಧೇಶ್ವರ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ವೀರಶೈವ ದೀಕ್ಷಾವಿಧಿ, ಶಿವಯೋಗ ಪ್ರದೀಪಿಕಾ, ಶಿವಸೂತ್ರ ರತ್ನ, ತತ್ತ್ವಪ್ರಕಾಶಿಕಾ, ರಕ್ಷಾಶತಕಂ, ಶಂಕರಲಿಂಗ ಕಂದ, ಸ್ತುತಿ ಮುಕ್ತಾವಳಿ, ದೇವೀ ಕಾಲೋತ್ತರಾಗಮಂ ಸಟಿಕ, ವೃಷಭೇಂದ್ರ ವಿಜಯ, ಸಟೀಕ ಶತಕತ್ರಯ, ಕರ್ಣಾಟಕ ಶಬ್ದಮಂಜರಿ, ಬಸವೇಶ ಜನನ–ಎಂಬ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದರು. ಬಸವರಾಜವಿಜಯ ಮತ್ತು ಚೆನ್ನಬಸವ ವಿಜಯ ಎಂಬ ಉದ್ದಾಮ ಗ್ರಂಥಗಳನ್ನು ಕನ್ನಡ ಗದ್ಯ ಶೈಲಿಯಲ್ಲಿ ಬರೆದು ಪ್ರಕಟಿಸಿದರು. (ಬಿ.ಎಸ್.)

**ಕರಿಬಸವಶಾಸ್ತ್ರೀ, ಪಿ.ಆರ್. :** 19ನೆಯ ಶತಮಾನದ ಉತ್ತರಾರ್ಧ ಮತ್ತು 20ನೆಯ ಶತಮಾನದ ಪೂರ್ವಾರ್ಧದಲ್ಲಿ ಮೈಸೂರಿನಲ್ಲಿ ಆಗಿಹೋದ ಪಂಡಿತರಲ್ಲಿ ಅಗ್ರಗಣ್ಯರು. ಇವರ ತಂದೆ ಪಂಡಿತ ರುದ್ರಪ್ಪ, ತಾಯಿ ನಂಜಮ್ಮ. ಶಾಸ್ತ್ರಿಗಳ ಜನನ ಮೈಸೂರಿನಲ್ಲಿ. ಬೆಟ್ಟದಪುರದ ಬಸವದೇವರು, ಬೆಟರಿ ಬಸವ ಲಿಂಗಪ್ಪನವರು ಬಾಚಳ್ಳಿ ಶ್ರೀಕಂಠಶಾಸ್ತ್ರಿಗಳು–ಇವರುಗಳಲ್ಲಿ ಕನ್ನಡ ಸಂಸ್ಕೃತ ಅಭ್ಯಾಸಮಾಡಿ 20ನೆಯ ವರ್ಷದಲ್ಲಿ ಗಣ್ಯವಿದ್ವಾಂಸರೆನಿಸಿದರು. ಮೈಸೂರು ವೆಸ್ಲಿಯನ್ ಹೈಸ್ಕೂಲಿನಲ್ಲಿ 15 ವರ್ಷ, ಮೈಸೂರು ಮಹಾರಾಜ ಕಾಲೇಜಿನಲ್ಲಿ 30 ವರ್ಷ ಕನ್ನಡ ಪಂಡಿತರಾಗಿ ಕೆಲಸ ಮಾಡಿದರು. ಬೈಬಲ್ ಸಮಿತಿಯ ಸದಸ್ಯರಾಗಿ ರೆವರೆಂಡ್ ಗ್ರೀನ್‌ಹುಡ್, ಹಾಕಿನ್, ಹೆನ್ ಕಾಸ್ಟಿಕ್, ಗಲಿಫರ್ಡ್, ರೀಡಿರ್ಟ, ಥಾಮ್ಸನ್, ಮಿಸೆಸ್ ಗಲಿಫರ್ಡ್–ಮೊದಲಾದವರಿಗೆ ಕನ್ನಡದ ಬೋಧಕರಾಗಿದ್ದರು. ಖಾಸಗಿಯಾಗಿ ಕೂಡ ಹಲವಾರು ವಿದ್ವಾಂಸರು ಇವರ ಶಿಷ್ಯತ್ವವನ್ನು ವಹಿಸಿ ಉದ್ದಾಮ ಪಂಡಿತರೆನಿಸಿದರು. ಕರ್ಣಾಟಕ ಕವಿಚರಿತೆಯ ರಚನೆಯ ಕಾಲದಲ್ಲಿ ಇವರು ಆರ್. ನರಸಿಂಹಾಚಾರ್ಯರಿಗೆ ನೆರವಾಗಿದ್ದರು. ಮೈಸೂರು ಅರಮನೆಯಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು. 1918ರಲ್ಲಿ ಮಹಾರಾಜರ ದರ್ಬಾರಿನಲ್ಲಿ ಇವರಿಗೆ ಕರ್ಣಾಟಕ ಭಾಷಾರತ್ನ ಎಂಬ ಬಿರುದು ಪ್ರಾಪ್ತವಾಯಿತು.

ಉದ್ದಾಮ ಪಂಡಿತರಾದ ಕರಿಬಸವಶಾಸ್ತ್ರಿಗಳು ವೀರಶೈವ ಮತ ಪ್ರಕಾಶಕ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಹಲವಾರು ಕನ್ನಡ ಸಂಸ್ಕೃತ ಗ್ರಂಥಗಳನ್ನು ಪ್ರಕಟಿಸಿದರು. ಕ್ರಿಯಾಸಾರ, ಸಿದ್ಧಾಂತ ಶಿಖಾಮಣಿ, ದೀಕ್ಷಾವಿಧಿ, ಮಾಚದೇವ ಮನೋವಿಲಾಸ, ಲಿಂಗಧಾರಣ ಚಂದ್ರಿಕಾ, ಅನುಭವಸೂತ್ರ, ವಿವಾಹವಿಧಿ ವೀರಶೈವೋತ್ಕರ್ಷಸಂಗ್ರಹ,

ಸಂಸ್ಕೃತ ಬಸವೇಶ ವಿಜಯ ಮೊದಲಾದ ಸಂಸ್ಕೃತ ಗ್ರಂಥಗಳನ್ನೂ ಕನ್ನಡ ಭಾರತ, ಜೈಮಿನಿ ಭಾರತ, ರಾಜಶೇಖರವಿಳಾಸ, ಶಬರಶಂಕರ ವಿಳಾಸ, ಪ್ರಹ್ಲಾದ ಚರಿತ್ರೆ ಮುಂತಾದ ಕನ್ನಡ ಗ್ರಂಥಗಳನ್ನೂ ಸಂಪಾದಿಸಿ ಪ್ರಕಟಿಸಿ ಶಾಸ್ತ್ರೀಗಳು ಮಹೋಪಕಾರ ಮಾಡಿದ್ದಾರೆ; ಇಷ್ಟೇ ಅಲ್ಲದೆ ಭಕ್ತಾಧಿಕ್ಯ ರತ್ನಾವಳಿ, ಅನುಭವಸಾರ, ವ್ಯಾಸೋಕ್ತ ಬಸವಪುರಾಣ, ಶೈವಾದ್ವೈತ ಮಂಜರಿ, ಸಿದ್ಧೇಶ್ವರ ಪುರಾಣ, ನಳಚರಿತ್ರೆ, ವೀರಶೈವ ಪ್ರದೀಪಿಕಾ, ಶಿವಭಕ್ತಿಸಾರ, ತ್ರಿಕಾಂಡ ಅಮರಕೋಶ, ಕರ್ಣಾಟಕ ಬಾಲಬೋಧೆ, ಶಬ್ದರೂಪಾವಳಿ ಮುಂತಾದ ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ಇವರು ಸ್ವತಂತ್ರವಾಗಿ ಕನ್ನಡ ಬಸವೇಶವಿಜಯ. ನಯಶತಕ ಎಂಬ ಗ್ರಂಥಗಳನ್ನು ಕನ್ನಡದಲ್ಲಿಯೂ ವೀರಶೈವೋತ್ಕರ್ಷ ಪ್ರದೀಪಿಕಾ ಎಂಬ ಗ್ರಂಥವನ್ನು ಸಂಸ್ಕೃತದಲ್ಲಿಯೂ ಬರೆದು ಪ್ರಕಟಿಸಿದ್ದಾರೆ. ನಾಗವರ್ಮನ ಕಾದಂಬರಿಯಲ್ಲಿ ಗ್ರಂಥಪಾತವಾಗಿದ್ದ ಒಂದು ಕಡೆ ಶ್ರೀ ಶಾಸ್ತ್ರೀಗಳು ಮೂಲ ಕಾವ್ಯಕ್ಕನುಗುಣವಾಗಿ ಹತ್ತಾರು ಪದ್ಯಗಳನ್ನು ಬರೆದುಕೊಟ್ಟಿದ್ದಾರೆ. ಬಸವಪ್ಪಶಾಸ್ತ್ರೀಗಳನ್ನು ಕುರಿತ ಚರಮಗೀತೆಗಳನ್ನು ಬರೆದಿದ್ದಾರೆ. ನಿಜಗುಣ ಶಿವಯೋಗಿಯ ಅನುಭವಸಾರಕ್ಕೆ ಟಿಪ್ಪಣಿಯನ್ನು ರಚಿಸಿದ್ದಾರೆ. ಕನ್ನಡ ಜೈಮಿನಿ ಭಾರತದ 17 ಅಧ್ಯಾಯಗಳಿಗೆ ಉತ್ತಮ ಟೀಕೆ ಟಿಪ್ಪಣಿ ಬರೆದು ಪ್ರಕಟಿಸಿದ್ದಾರೆ. ಈ ಮಹನೀಯರು ಕನ್ನಡದ ಏಳಿಗೆಗಾಗಿ, ಸಾಹಿತ್ಯದ ಉನ್ನತಿಗಾಗಿ ಮಾಡಿದ ಸೇವೆಯು ಅಪಾರವಾದುದು. ಮೈಸೂರು ಮಹಾರಾಜ ಕಾಲೇಜಿನಲ್ಲಿಯೂ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಇವರ ಭಾವಚಿತ್ರವನ್ನು ಹಾಕಿ ಇವರ ವಿದ್ವತ್ತನ್ನು ಗೌರವಿಸಲಾಗಿದೆ. (ಬಿ.ಎಸ್.)

**ಕರಿಬೇವು :** ರೂಟೇಸೀ ಕುಟುಂಬದ ಮರಯ ಕೊನಿಗೆ ಎಂಬ ವೈಜ್ಞಾನಿಕ ಹೆಸರಿನ ಮರ. ಉಷ್ಣವಲಯದಲ್ಲೆಲ್ಲ ಪ್ರಸರಿಸಿದೆ. ಭಾರತದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಎಲ್ಲೆಡೆಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದರ ಸುವಾಸನಾಯುಕ್ತ ಎಲೆಗಳಿಗೊಸ್ಕರ ಇದನ್ನು ಬೆಳೆಸುತ್ತಾರೆ.

ಇದು ಸು. 20' ಎತ್ತರಕ್ಕೆ ಬೆಳೆಯುವ ಬಹುವಾರ್ಷಿಕ ಮರ. ಇದರ ತೊಗಟೆ ಕಗ್ಗಂದು ಅಥವಾ ಕಪ್ಪು ಬಣ್ಣದ್ದು. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿದ್ದು ಗರಿರೂಪದ ಸಂಯುಕ್ತ ಮಾದರಿಯವಾಗಿವೆ. ಒಂದೊಂದು ಎಲೆಯಲ್ಲೂ ಸು. 9–25 ಕಿರುಎಲೆಗಳಿವೆ (ಪರ್ಣಿಕೆ). ಇವನ್ನು ಬೆಳಕಿಗೆ ಎದುರಾಗಿ ಹಿಡಿದು ಪರೀಕ್ಷಿಸಿದರೆ ಅವುಗಳ ಅಲಗಿನ ಮೇಲೆಲ್ಲ ಸೂಕ್ಷ್ಮವಾದ ಚುಕ್ಕೆಗಳಂಥ ರಸಗ್ರಂಥಿಗಳನ್ನು ನೋಡಬಹುದು. ಈ ಗ್ರಂಥಿಗಳಲ್ಲಿ ಒಂದು ವಿಶಿಷ್ಟಬಗೆಯ ಚಂಚಲತೈಲವಿದೆ. ಇದರಿಂದಾಗಿ ಎಲೆಗಳು ಗಂಧಯುಕ್ತವಾಗಿವೆ. ಹೂಗಳು ದ್ವಿಲಿಂಗಿಗಳು; ರೆಂಬೆಗಳ ತುದಿಯಲ್ಲಿ ಹುಟ್ಟುವ ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗಳು ಬಿಳಿಯಬಣ್ಣದವೂ ನವುರಾದ ವಾಸನೆಯುಳ್ಳವೂ ಆಗಿವೆ. ಪುಷ್ಪಪಾತ್ರೆ ಮತ್ತು ಪುಷ್ಪದಳ ಸಮೂಹ ತಲಾ ಐದೈದು ಪತ್ರಗಳನ್ನೂ ದಳಗಳನ್ನೂ ಒಳಗೊಂಡಿವೆ. ಕೇಸರಗಳು 10; ಎರಡು ಸುತ್ತುಗಳಲ್ಲಿ ಜೋಡಿತವಾಗಿವೆ. ಅಂಡಾಶಯ ಉಚ್ಚಸ್ಥಾನದ್ದು; ಅದರಲ್ಲಿ ಎರಡು ಕೋಣೆಗಳಿವೆ. ಫಲ ಗುಂಡಗಿನ ಅಥವಾ ಉದ್ದುದ್ದವಾದ ಬೆರ್ರಿ ಮಾದರಿಯದು. ಅದರ ಬಣ್ಣ ಊದಾಮಿಶ್ರಿತ ಕಪ್ಪು.

ಕರಿಬೇವು ತನ್ನ ಸುಗಂಧಪೂರಿತ ಎಲೆಗಳಿಂದಾಗಿ ಬಹುಪ್ರಾಮುಖ್ಯ ಪಡೆದಿದೆ. ಎಲೆಗಳನ್ನು ಹಲವಾರು ಬಗೆಯ ಅಡಿಗೆಯ ಕೆಲಸಗಳಲ್ಲಿ ಉಪಯೋಗಿಸುವುದು ಎಲ್ಲರಿಗೂ ತಿಳಿದದ್ದೇ. ಎಲೆಗಳ ರಾಸಾಯನಿಕ ಸಂಯೋಜನೆ ಈ ರೀತಿ ಇದೆ: ತೇವಾಂಶ 66.3%; ಪ್ರೋಟೀನು 6.1%; ಕೊಬ್ಬು 1.0%; ಸಕ್ಕರೆ–ಪಿಷ್ಟದ ಅಂಶ 16.0%; ನಾರಿನ ಅಂಶ 6.4%; ಲವಣಾಂಶ 4.2%; ಹಾಗೂ ಪ್ರತಿ 100 ಗ್ರಾಂ. ಎಲೆಗಳಲ್ಲಿ 810 ಮಿಗ್ರಾಂ. ಕ್ಯಾಲ್ಸಿಯಂ, 600 ಮಿಗ್ರಾಂ. ರಂಜಕ. 3.1 ಮಿಗ್ರಾಂ. ಕಬ್ಬಿಣ, 12,600 ಐ. ಯು ಕ್ಯಾರೋಟೀನ್ (ಎ ಜೀವಾತು ರೂಪದಲ್ಲಿ), 4 ಮಿಗ್ರಾಂ, ಸಿ ಜೀವಾತು. ಇವಲ್ಲದೆ ಹಲವಾರು ಬಗೆಯ ಅಮೈನೋ ಆಮ್ಲಗಳೂ ಇವೆ. ಆಗ ತಾನೇ ಕೊಯ್ದ ಎಲೆಗಳನ್ನು ಅಸವೀಕರಣಗೊಳಿಸಿ (ಆವಿ ಬಟ್ಟಿಯಿಳಿಸುವಿಕೆ) ಒಂದು ಬಗೆಯ ಚಂಚಲ ತೈಲವನ್ನು ತೆಗೆಯಬಹುದು. ಶುದ್ಧಗೊಳಿಸಿದ ಈ ಎಣ್ಣೆ ಹಳದಿ ಬಣ್ಣದ್ದೂ ಸಂಬಾರದ ವಾಸನೆಯುಳ್ಳದ್ದೂ ಲವಂಗದ ಕಟುರುಚಿಯುಳ್ಳದ್ದೂ ಅಗಿದೆ. ಇದನ್ನು ಕೆಲವು ಬಗೆಯ ಸಾಬೂನುಗಳಿಗೆ ಕೊಡುವ ಸುಗಂಧ ದ್ರವ್ಯಗಳನ್ನು ಸ್ಥಿರೀಕರಣಗೊಳಿಸಲು ಬಳಸುತ್ತಾರೆ. ಎಲೆಗಳನ್ನು ಆಮಶಂಕೆ. ಅತಿಸಾರ, ವಾಂತಿ ಮುಂತಾದವನ್ನು ನಿಲ್ಲಿಸಲು ಉಪಯೋಗಿಸುವುದಲ್ಲದೆ ತರೆಚು ಗಾಯಗಳಿಗೂ ಬೊಕ್ಕೆಗಳಿಗೂ ಹಚ್ಚಲು ಬಳಸುತ್ತಾರೆ. ಬೇರು ಮತ್ತು ತೊಗಟೆಗಳನ್ನು ಶಕ್ತಿವರ್ಧಕ, ಜೀರ್ಣಕಾರಿ ಹಾಗೂ ವಾತಹರ ಔಷಧಿಗಳಾಗಿ ಉಪಯೋಗಿಸುತ್ತಾರೆ. ಇದರ ಚೌಬೀನೆ ಗಡುಸಾಗಿ ನಯವಾದ ಎಳೆಗಳ ವಿನ್ಯಾಸವನ್ನು ಹೊಂದಿದೆ. ಹಾಗೂ ದೀರ್ಘಕಾಲ ಬಾಳಿಕೆ ಬರುತ್ತದೆ. ಆದ್ದರಿಂದ ಇದನ್ನು ವ್ಯವಸಾಯದ ಉಪಕರಣಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಕರಿಬೇವು ಸಸ್ಯವನ್ನು ಸಸ್ಯಗಳ ಸುತ್ತಲೂ ಬೇರಿನಿಂದ ಹೊರಟಿರುವ ಸಸಿಗಳಿಂದಲೂ ಬೀಜಗಳಿಂದಲೂ ವೃದ್ಧಿಮಾಡಬಹುದು. ಚೌಗುಪ್ರದೇಶಗಳಲ್ಲಿ ಇದರ ಬೇಸಾಯ ಮಾಡಲು ಸಾಧ್ಯವಿಲ್ಲ. ಸಸಿ ನಾಟಿಮಾಡಿದ ಅನಂತರ ಇದು ಸರಿಯಾಗಿ ಬೇರುಬಿಟ್ಟು ಚಿಗುರುವ ತನಕ ಎಚ್ಚರಿಕೆ ವಹಿಸಬೇಕು. ಸಸಿನೆಟ್ಟ 3–4 ವರ್ಷಗಳ ಅನಂತರ ಎಲೆಗಳನ್ನು ಕೊಯ್ಯಬಹುದು. ಈ ಸಸ್ಯ ಬಹಳ ನಿಧಾನವಾಗಿ ಬೆಳೆಯುವ ಗುಣವುಳ್ಳದ್ದು. ಆದ್ದರಿಂದ ಎಳೆಯ ಸಸಿಯಾಗಿರುವಾಗ ಎಲೆ ಕೊಯ್ಯಲು ಪ್ರಾರಂಭಿಸಿದರೆ ಬೆಳವಣಿಗೆ ನಿಂತುಹೋಗಿ ಗಿಡ ಸತ್ತುಹೋಗುವ ಸಾಧ್ಯತೆ ಹೆಚ್ಚು. (ಎಂ.ಎಚ್.ಎಂ.)

**ಕರಿಹಾವು :** ಕೊಲ್ಯೂಬ್ರಿಡೀ ಕುಟುಂಬಕ್ಕೆ ಸೇರಿದ ಕಾಲ್ಯುಬರ್ ಕನ್‌ಸ್ಟ್ರಿಕ್ಟರ್ ಎಂಬ ಶಾಸ್ತ್ರೀಯ ಹೆಸರಿನ ಹಾವು. ಉತ್ತರ ಅಮೆರಿಕದಲ್ಲಿ ಇದು ಸಾಮಾನ್ಯ. ವಿಷರಹಿತ. ಇದರಲ್ಲಿ ಹಲವಾರು ಉಪಪ್ರಭೇದಗಳಿವೆ. ಇವುಗಳಲ್ಲಿ ಅಮೆರಿಕದ ಸಂಯುಕ್ತಸಂಸ್ಥಾನಗಳ ಮಧ್ಯಭಾಗದಲ್ಲಿ ಕಾಣಬರುವ ಬ್ಲೂ ರೇಸರ್ ಹಾಗೂ ಆಗ್ನೇಯ ಭಾಗದಲ್ಲಿ ಕಾಣಬರುವ ದಕ್ಷಿಣದ ಬ್ಲ್ಯಾಕ್ ರೇಸರ್ ಮುಖ್ಯವಾದುವು. ತೆಳು ಹಾಗೂ ನೀಳದೇಹದ ಈ ಹಾವು ಸು. 4–5 ಅಡಿ ಉದ್ದ ಬೆಳೆಯುತ್ತದೆ. ದೇಹದ ಮೇಲ್ಭಾಗ ಕಪ್ಪು, ತಳಭಾಗ ನಸುಬಿಳುಪು ಅಥವಾ ಹಳದಿ. ಬಾಯಿಯ ತಳಭಾಗ ಬಿಳಿಬಣ್ಣದ್ದಾಗಿದೆ. ಇದು ಬಹಳ ವೇಗವಾಗಿ ಚಲಿಸಬಲ್ಲುದಲ್ಲದೆ ಮರ ಹತ್ತುವುದರಲ್ಲೂ ಈಜುವುದರಲ್ಲೂ ಪ್ರಾವೀಣ್ಯ ಪಡೆದಿದೆ. ಗಾಬರಿಗೊಂಡಾಗ ಬಾಲದ ತುದಿಯನ್ನು ಅಲುಗಾಡಿಸುತ್ತದೆ. ಕಪ್ಪೆ ಇತರ ಸಣ್ಣ ಗಾತ್ರದ ಹಾವುಗಳು, ಚಿಕ್ಕ ಸ್ತನಿಗಳು, ಹಕ್ಕಿಗಳು ಮೊಟ್ಟೆಗಳು ಇದರ ಆಹಾರ. ಇವು ವಸಂತ ಋತುವಿನಲ್ಲಿ ಕೂಡಿ 10–35 ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಡುವ ಕಾಲ ಮೇ–ಜುಲೈ, ಮೊಟ್ಟೆಗಳ ಮೇಲೆ ಸಣ್ಣ ಮರಳಿನಂಥ ಕಣಗಳಿಂದಾದ ಹೊದಿಕೆಯುಂಟು. 7–9 ವಾರಗಳಲ್ಲಿ ಮೊಟ್ಟೆಗಳೊಡೆದು ಮರಿಗಳು ಹೊರಬರುತ್ತವೆ. (ಕೆ.ಎಂ.ಎ.)

**ಕರಿಹುಂಜ :** ಗ್ಯಾಲಿಫಾರ್ಮಿಸ್ ಗಣದ ಟೆಟ್ರವೋನಿಡೀ ಕುಟುಂಬಕ್ಕೆ ಸೇರಿದ ಲೈರೂರಸ್ ಟೆಟ್ರಿಕ್ಸ್ ಎಂಬ ಶಾಸ್ತ್ರೀಯ ಹೆಸರಿನ ಹಕ್ಕಿಯ ಗಂಡಿಗಿರುವ ಸಾಮಾನ್ಯ ಹೆಸರು. ಹೆಣ್ಣುಹಕ್ಕಿಯನ್ನು ಬೂದುಕೋಳಿ (ಗ್ರೇ ಹೆನ್) ಎಂದು ಕರೆಯುತ್ತಾರೆ. ಗಂಡು ಹೆಣ್ಣುಗಳೆರಡಕ್ಕೂ ಬ್ಲ್ಯಾಕ್ ಗ್ರಾಸ್ ಎಂಬ ಸಾಮಾನ್ಯ ಹೆಸರಿದೆ.

ಈ ಜಾತಿಯ ಹಕ್ಕಿ ಯುರೋಪು ಮತ್ತು ಏಷ್ಯದ ಉತ್ತರ ಭಾಗಗಳ ನಿವಾಸಿ. ಗಂಡುಹಕ್ಕಿ ಸು. 2' ಉದ್ದವಿದ್ದು 1 ಕಿಗ್ರಾಂ ಗಿಂತಲೂ ಹೆಚ್ಚು ತೂಗುತ್ತದೆ. ಗಂಡು ಬಹಳ ಚೆಲುವಾದ ಹಾಗೂ ವರ್ಣರಂಜಿತ ಹಕ್ಕಿ. ಮೈ ಹೊಳೆಯುವ ನೀಲಿಮಿಶ್ರಿತ ಕಪ್ಪು ಬಣ್ಣದ್ದು.

ಬಾಲದ ಕೆಳಗೂ ರೆಕ್ಕೆಗಳ ಮೇಲೂ ಬಿಳಿಯ ಪಟ್ಟೆಯಿದೆ. ಬಾಲ ಬೀಸಣಿಗೆಯಂತಿದೆ. ಹಣೆಯ ಮೇಲೆ ಕಡುಗೆಂಪು ಬಣ್ಣದ ಮಾಂಸಲಭಾಗವಿದೆ. ಹೆಣ್ಣು ಹಕ್ಕಿ ಗಂಡಿಗಿಂತ ಚಿಕ್ಕದು. ಇದರ ಮೈಬಣ್ಣ ಕೆಂಗಂದು; ಅಲ್ಲಲ್ಲಿ ಕಪ್ಪು ಪಟ್ಟೆಗಳಿವೆ.

ಕುರುಚಲು ಪ್ರದೇಶಗಳು, ಬಂಡೆಗಳಿಂದ ಕೂಡಿದ ಗುಡ್ಡಗಾಡುಗಳು ಮುಂತಾದೆಡೆ ಈ ಹಕ್ಕಿಗಳು ಸಾಮಾನ್ಯ. ಹಣ್ಣುಹಂಪಲು, ಕಾಳುಕಡ್ಡಿ ಇವುಗಳ ಪ್ರಧಾನ ಅಹಾರ. ಕರಿಹುಂಜ ಬಹುಪತ್ನೀಕ. ವಸಂತ ಋತುವಿನಲ್ಲಿ ಒಂದೊಂದು ಗಂಡೂ ಹಲವಾರು ಹೆಣ್ಣುಗಳನ್ನು ಸೇರಿಸಿಕೊಂಡು ವಿಶಿಷ್ಟ ಸ್ಥಳಗಳಲ್ಲಿ ಪ್ರಣಯಸೂಚಕ ನೃತ್ಯಮಾಡುತ್ತದೆ. ಈ ನರ್ತನ ಸ್ಥಳಗಳನ್ನು ಲೆಕ್ ಎನ್ನುತ್ತಾರೆ. ವಿವಿಧ ರೀತಿಯ ಭಾವ ಭಂಗಿಗಳಿಂದ ಕೂಡಿದ ಈ ಕುಣಿತದ ಮೂಲಕ ಗಂಡು ಹೆಣ್ಣುಗಳನ್ನು ಒಲಿಸಿಕೊಳ್ಳುತ್ತದೆ. ಬೆಳಗಿನ ಜಾವ ಆರಂಭ ವಾಗಿ ದಿನವೆಲ್ಲ ನಡೆಯು ತ್ತಲೇ ಇರುತ್ತದೆ. ಈ ಕುಣಿತ. ಕೆಲವು ಸಲ ಇತರ ಗಂಡುಗಳು ಈ ಸ್ಥಳಕ್ಕೆ ಬರುವುದುಂಟು. ಆಗ ಗಂಡುಹಕ್ಕಿಗಳಲ್ಲಿ ಹೆಣ್ಣುಗಳಿಗಾಗಿ ಕಾಳಗ ನಡೆಯುತ್ತದೆ. ಸಾಧಾರಣವಾಗಿ ಇದು ತೋರಿಕೆಯ ಜಗಳವಾದರೂ ಕೆಲವೊಮ್ಮೆ ಇದು ಉಗ್ರವಾಗಿಯೇ ನಡೆದು ಕೆಲವು ಗಂಡುಗಳ ಸಾವಿನಲ್ಲಿ ಪರಿಣಮಿಸಬಹುದು.



ಹೆಣ್ಣು ಹಕ್ಕಿ ಒಂದು ಸಲಕ್ಕೆ 6–10 ಮೊಟ್ಟೆಗಳನ್ನಿಡುತ್ತದೆ. ಸಾಮಾನ್ಯವಾಗಿ ನೆಲದಲ್ಲಿ ಗುಂಡಿಮಾಡಿ ಕಡ್ಡಿಗಳನ್ನು ಹರಡಿ ಗೂಡನ್ನು ಕಟ್ಟುತ್ತದೆ. ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುವುದೂ ಮರಿಗಳ ಪೋಷಣೆಯೂ ಹೆಣ್ಣಿಗೇ ಸೇರಿದ್ದು. (ಜಿ.ಎಂ.ಬಿ.)

**ಕರೀಂಖಾನ, ಎಸ್.ಕೆ. :** 1908–2006. ಹಿರಿಯ ತಲೆಮಾರಿನ ಜಾನಪದ ವಿದ್ವಾಂಸ, ಗೀತರಚನಕಾರ. ಹುಟ್ಟಿದ್ದು ಬೆಳೆದದ್ದು ಹಾಸನಜಿಲ್ಲೆಯ ಸಕಲೇಶಪುರದಲ್ಲಿ. ತಾಯಿ ಜೈನಬ್ಬಿ ಅರಬ್ ಮೂಲದವರು. ತಂದೆ ಅಬ್ದುಲ್ ರಹಮಾನ್ ಖಾನ್, ಆಫ್ಘನ್ ಯೋಧ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಅಣ್ಣನ ಆಶ್ರಯದಲ್ಲಿ ಬೆಳೆದರು. ಹಾಸನದಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಪಡೆದರು. ಆಚಂಗಿ ನಾರಾಯಣಶಾಸ್ತ್ರಿ ಇವರ ಗುರುಗಳು.

ಉರ್ದು ಮನೆಮಾತಾಗಿದ್ದರೂ ಕರೀಂಖಾನರು ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತವನ್ನು ಅಧ್ಯಯನ ಮಾಡಿದರು. ಇವರು ಹೆಚ್ಚು ವಿದ್ಯಾಭ್ಯಾಸ ಮಾಡದಿದ್ದರೂ ಇತಿಹಾಸ, ಜಾನಪದ, ಪುರಾಣ, ಮಹಾಕಾವ್ಯಗಳ ಬಗ್ಗೆ ಅಪಾರವಾದ ಪಾಂಡಿತ್ಯ ಗಳಿಸಿದವರಾಗಿದ್ದಾರೆ. ಚಾರಿತ್ರಿಕ ಸಂಗತಿಗಳನ್ನು ಕುರಿತಂತೆ ನಿಂತಲ್ಲಿಯೇ ಮಾಹಿತಿ ನೀಡುವ ಪ್ರತಿಭಾವಂತರು. ಮೂಲತಃ ಇಸ್ಲಾಂ ಧರ್ಮದವರಾದರೂ ಭಗವದ್ಗೀತೆ, ಭಾಗವತ, ಶಿವಪುರಾಣ, ವಿಷ್ಣು ಪುರಾಣಗಳನ್ನು ಬಲ್ಲವರಾಗಿದ್ದಾರೆ. ತೆಲುಗಿನ ಪೋತನನ ಭಾಗವತವನ್ನು ನಾಟಕರೂಪಕ್ಕೆ ತರುವ ಪ್ರಯತ್ನ ದಲ್ಲೂ ಇವರು ತೊಡಗಿದ್ದರು. ಉರ್ದು ಸಾಹಿತ್ಯದ ಘಾಲಿಬ್, ಇಕ್ಬಾಲ್‍ರಂತಹ ಕವಿಗಳ ಪ್ರಭಾವಕ್ಕೂ ಒಳಗಾಗಿದ್ದ ಇವರು ಹಿಂದು ಮುಸ್ಲಿಂ ಏಕತೆಗೆ ಸಾಕಷ್ಟು ಕಥೆಗಳನ್ನು ರಚಿಸಿದ್ದುಂಟು. ನಿವಾರ (ಉರ್ದುವಿನಿಂದ ಅನುವಾದಿತ ಕಥೆಗಳು), ನೀಹಾರ (ಚಾರಿತ್ರಿಕ ಕಥಾಸಂಕಲನ) ಬಲಿದಾನಿ ಹುಸೇನ್ ಎಂಬುದು ಚಾರಿತ್ರಿಕ ಕಾದಂಬರಿ, ಮಾತೃಶಾಪ ಪೌರಾಣಿಕ ಕಾದಂಬರಿ. ಇವಲ್ಲದೆ ಇವರು ನಿರ್ದೋಷಿ, ಶ್ರೀ ಕೃಷ್ಣಲೀಲೆ, ಹುಮಾಯುನ್, ಅಂಬರನಾಥ, ಮಹಾಪ್ರಭು ಮಾಗಡಿ ಕೆಂಪೇಗೌಡ ಮೊದಲಾದ ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ. ಪ್ರೌಢಶಾಲಾ ವ್ಯಾಸಂಗದ ಸಮಯದಲ್ಲಿಯೇ ಇವರು ಜಾನಪದದತ್ತ ಆಕರ್ಷಿತರಾದರು. ಹಳ್ಳಿಯ ಸಂಸ್ಕೃತಿ ಮತ್ತು ಸಾಹಿತ್ಯ ಇವರನ್ನು ಕೈ ಬೀಸಿ ಕರೆದುದರಿಂದ ಅವನ್ನು ಸಂಗ್ರಹಿಸುತ್ತಾ ಹಾಡುತ್ತಾ, ಹಳ್ಳಿ ಹಳ್ಳಿ ಸುತ್ತಿದರು. ಜೀವನ ಕಷ್ಟಕರವಾದಾಗ ಜನಪದ ಗೀತೆಗಳನ್ನು ಸಂಗ್ರಹಿಸಿ, ಪ್ರಕಟಿಸಿ ಮಾರಾಟ ಮಾಡಿದರು. ರಂಗಭೂಮಿಯತ್ತಲೂ ಆಕರ್ಷಿತರಾಗಿ ಕಥೆ, ಸಂಭಾಷಣೆ, ಹಾಡು ಬರೆಯತೊಡಗಿದರು. ರಾಯಲ್ ಇಂಡಿಯನ್ ನೇವಿ ಸಂಸ್ಥೆಯಲ್ಲಿ ಕೆಲಸ ಮಾಡಲು ಮುಂಬೈಗೂ ಹೋಗಿ ಬಂದರು. ಸೇವಾದಳದ ಬೆಳೆವಣಿಗೆಯಲ್ಲೂ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಗಳಾಗಿದ್ದಾಗ ಭಾರತೀಯ ಸೇವಾದಳದ ಸಂಘಟಕರಾಗಿ ಇವರು ಪ್ರವಾಸ ಕೈಗೊಂಡರು.

ಭಾರತ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕರೀಂಖಾನರಂಥ ಕಂಚಿನ ಕಂಠದ ಗಾಯಕರೊಬ್ಬರು ಹೋರಾಟಗಾರರಿಗೆ ಬೇಕಾಗಿದ್ದರು. ತಮ್ಮ ಅದ್ಭುತ ಕಂಠದಿಂದ ಹಾಡುತ್ತಾ ನಿರರ್ಗಳವಾಗಿ ಹರಿಯುವ ತಮ್ಮ ವಾಗ್ಝರಿಯಿಂದ ಜನರನ್ನು ಹುರಿದುಂಬಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ್ದರಿಂದಾಗಿ ಸತತ ಏಳು ಸಲ ಜೈಲುವಾಸ ಅನುಭವಿಸಿದರು. ಸ್ವಾತಂತ್ರ್ಯಾನಂತರ ಇವರು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಆಗಲೂ ಸೆರೆವಾಸ ಅನುಭವಿಸಿದರು. ಗಾಂಧೀಜಿಯವರು ವಿಶ್ರಾಂತಿಗೆಂದು ನಂದಿಬೆಟ್ಟಕ್ಕೆ ಬಂದಾಗ ಅವರನ್ನು ಭೇಟಿಯಾಗಿದ್ದರು.

ಏಕಾಂಗಿಯಾಗಿಯೂ ಸ್ವಾಭಿಮಾನಿಯಾಗಿದ್ದ ಕರೀಂಖಾನ್ ಮದರಾಸಿನ ಸಿನಿಮಾ ಜಗತ್ತಿನಲ್ಲಿ ಅದೃಷ್ಟವನ್ನು ಅರಸಿ ತೆರಳಿದರು. ಪ್ರಸಾದ್ ಮೂವೀಸ್‍ನ ಆರ್. ನಾಯ್ಡು ಅವರು ಕರೀಂಖಾನರನ್ನು ಮದರಾಸಿಗೆ ಬರಮಾಡಿಕೊಂಡರು. ಅಲ್ಲಿ ಸು. 10 ವರ್ಷಗಳ ಕಾಲ ಇದ್ದು ಹಲವಾರು ಚಿತ್ರಗಳಿಗೆ ಕಥೆ, ಸಂಭಾಷಣೆ, ಹಾಡುಗಳನ್ನು ಬರೆದರು. 300ಕ್ಕೂ ಹೆಚ್ಚು ಗೀತೆಗಳನ್ನು ರಚಿಸಿದರು. ಸ್ವರ್ಣಗೌರಿ, ಜೀವನ ತರಂಗ, ಬೇವು ಬೆಲ್ಲ, ಚಂದ್ರಕುಮಾರ, ದೇವಮಾನವ, ದೊಂಬರಕೃಷ್ಣ, ರಾಜೇಶ್ವರಿ, ಪತಿತಪಾವನಿ, ಸೂಪರ್ ನೋವ 445 ಮುಂತಾದ ಹದಿನೈದು ಚಿತ್ರಗಳಿಗೆ ಇವರು ಸಾಹಿತ್ಯ ನೀಡಿದ್ದಾರೆ. ಸ್ವರ್ಣಗೌರಿ ಚಿತ್ರಕ್ಕೆ ಬರೆದ ಹಾಡುಗಳಿಂದಾಗಿ ಇವರ ಜನಪ್ರಿಯತೆ ಹೆಚ್ಚಿತು. ರಂಭಾಪುರಿ, ಕೂಡ್ಲಿ, ಶೃಂಗೇರಿ, ಉಡುಪಿ, ಧರ್ಮಸ್ಥಳ, ಆದಮಾರು ಸ್ವಾಮಿಗಳನ್ನು ಕುರಿತಂತೆ ಸ್ವಾಗತ ಗೀತೆಗಳನ್ನು ಇವರು ರಚಿಸಿದ್ದಾರೆ. ಮಂದಾರ ಧರ್ಮಸ್ಥಳ (ಧರ್ಮಸ್ಥಳ ಮಂಜುನಾಥನ ಬಗ್ಗೆ) ಎಂಬ ಧ್ವನಿ ಸುರಳಿಯನ್ನು ಬಿಡುಗಡೆ ಮಾಡಿದ್ದಾರೆ. ನಾಡುನುಡಿಗಳ ಬಗ್ಗೆಯೂ ಹಾಡು ರಚಿಸಿದ್ದಾರೆ. ನಟವರ ಗಾಂಗಾಧರ ಉಮಾಶಂಕರರದಂಥ ಭಕ್ತಿಪ್ರಧಾನ ಗೀತೆಗಳಿಂದ ಹಿಡಿದು ಬಾರೇ ನೀ ಚೆಲುವೆಯಂಥ ಶೃಂಗಾರ ರಸದ ಹಾಡುಗಳವರೆಗೆ ಮಧುರ ಮತ್ತು ಜನಪ್ರಿಯ ಗೀತೆಗಳನ್ನು ರಚಿಸಿದರು.

ಇವರ ಸೇವೆಯನ್ನು ಗುರುತಿಸಿ ಇವರನ್ನು ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಆಗ ಹಲವರು ಸರ್ಕಾರದ ಕ್ರಮವನ್ನು ಟೀಕಿಸಿದಾಗ ಮನನೊಂದ ಕರೀಂಖಾನ್ ನೇಮಕಾದೇಶ ಕೈ ಸೇರುವ ಮೊದಲೇ ರಾಜೀನಾಮೆ ಪ್ರಕಟಿಸಿಬಿಟ್ಟರು (1990). ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಇವರದು ಅಪರೂಪದ ವ್ಯಕ್ತಿತ್ವ. ಅನಂತರ ಸರ್ಕಾರ ಇವರ ಮನ ಒಲಿಸಿ ಅಧಿಕಾರ ಸ್ವೀಕರಿಸುವಂತೆ ಮಾಡಿತು. ಜಾನಪದ ಕ್ಷೇತ್ರದ ಬೆಳೆವಣಿಗೆಗೆ ಇವರು ಅಪಾರವಾಗಿ ದುಡಿದರು. ಗಿರಿಜನ ಮತ್ತು ಬುಡಕಟ್ಟು ಜನಾಂಗದ ಸಮಗ್ರ ವೀಡಿಯೋ ಚಿತ್ರೀಕರಣ ಕಾರ್ಯವನ್ನು ಕೈಗೆತ್ತಿಕೊಂಡರು. ಇದರಿಂದ ಕಣ್ಮರೆಯಾಗುವಂತಿದ್ದ ಸಂಸ್ಕೃತಿಯೊಂದು ಉಳಿಯುವಂತಾಯಿತು. ಚಲನಚಿತ್ರರಂಗದ ನಿಕಟ ಪರಿಚಯವಿದ್ದುದರಿಂದ ಮತ್ತು ಸ್ವತಃ ಜನಪದ ಗಾಯಕರಾಗಿದ್ದುದರಿಂದ ತಮ್ಮ ಅಧ್ಯಕ್ಷಾವಧಿಯಲ್ಲಿ ಪ್ರದರ್ಶನ ಕಲೆಗಳ ವಿಷಯದಲ್ಲಿ ವಿಶೇಷ ಗಮನ ಹರಿಸಿದರು. ನಾಡಿನಾದ್ಯಂತ ಜನಪದ ಕಲಾ ಪ್ರದರ್ಶನಗಳನ್ನೇರ್ಪಡಿಸಿ ಕಲಾವಿದರಲ್ಲಿ ಆತ್ಮವಿಶ್ವಾಸ ಮೂಡಿಸಿದರು. ಶಿವಮೊಗ್ಗ ಜಿಲ್ಲೆಯ ಮೇಘಾನೆ ಎಂಬ ಬೆಟ್ಟದ ತುದಿಯಲ್ಲಿ ವಾಸಿಸುತ್ತಿರುವ ಕುಣುಬಿಗೊಂಡ ಎಂಬ ಬುಡಕಟ್ಟು ಜನಾಂಗದ ಅಧ್ಯಯನ ಮಾಡಲು ಕಾಲ್ನಡಿಗೆಯ ಕಾರ್ಯಕ್ರಮ ಹಮ್ಮಿಕೊಂಡರು. ಹಸಲರು, ಹಾಲಕ್ಕಿಗಳು, ಸಿದ್ಧಿಗಳು, ಎರವರು, ಕಾಡುಕುರುಬರು, ಸೋಲಿಗರು ಮುಂತಾದ ಬುಡಕಟ್ಟು ಜನಾಂಗಗಳ ಸಮಗ್ರ ಜೀವನ ಕಲೆಯ ವೈವಿಧ್ಯಗಳನ್ನು ಇವರ ಕಾಲದಲ್ಲಿ ವೀಡಿಯೋ ಟೇಪ್‍ಗಳಲ್ಲಿ ಸೆರೆ ಹಿಡಿಯಲಾಯಿತು. ಸಾಂಸ್ಕೃತಿಕವಾಗಿ ಮಹತ್ತ್ವ ಹೊಂದಿದ ಹಿರಿಯಡ್ಕದ ಸಿರಿ ಜಾತ್ರೆ, ಮಾಸ್ತ್ಯಾಳದ ಚೌಡೇಶ್ವರಿ ಜಾತ್ರೆ, ಮೈಲಾರಲಿಂಗದ ಜಾತ್ರೆಗಳನ್ನು ಚಿತ್ರೀಕರಣ ಗೊಳಿಸಲಾಯಿತು. ಕಲಾವಿದರನ್ನು ಪೋಷಿಸುವ ಸಲುವಾಗಿ ಕರೀಂಖಾನರು ವಿಶೇಷ ಗಿರಿಜನರ ಪ್ರಶಸ್ತಿಯನ್ನು ರೂಪಿಸಿದರು.

ಬೆಂಗಳೂರಿನ ಬಸವನಗುಡಿಯ ಚಿಕ್ಕ ಹೋಟೆಲೊಂದರ ಸಣ್ಣ ಕೋಣೆಯಲ್ಲಿದ್ದ ಇವರು ಈಗ ಬಂಧುಗಳ ಮನೆಯಲ್ಲಿದ್ದು ಸಂತರಂತೆ ಜೀವನ ಸಾಗಿಸುತ್ತಿದ್ದಾರೆ. ಇವರು ಸಾಹಿತ್ಯ, ಸಂಸ್ಕೃತಿ, ಜಾನಪದ ಮತ್ತು ಚಲನಚಿತ್ರ ರಂಗಕ್ಕೆ ಕೊಟ್ಟಕೊಡುಗೆ ಅಪಾರ. ಜನಪದ ಗೀತೆಗಳನ್ನು ಸಂಗ್ರಹಿಸಿ ಒಂಬತ್ತು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಜನಪದಗೀತೆ ಅನುಭವ ದರ್ಶನ ಇವರ ಇನ್ನೊಂದು ಕೃತಿ. ಇವರು ಸಲ್ಲಿಸಿದ ಸೇವೆಯನ್ನು ಗಮನಿಸಿ ಕರ್ನಾಟಕ ಸರ್ಕಾರ ಜಾನಪದಶ್ರೀ (1995) ಪ್ರಶಸ್ತಿಯನ್ನೂ ಕನ್ನಡ ವಿಶ್ವವಿದ್ಯಾಲಯ ನಾಡೋಜ (1997) ಪ್ರಶಸ್ತಿಯನ್ನೂ ಗುಲ್ಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟನ್ನೂ ನೀಡಿ ಗೌರವಿಸಿವೆ. ಹುಬ್ಬಳ್ಳಿಯ ಮೂರುಸಾವಿರ ಜಂಗಮ ಮಠದ ಜಾನಪದ ಜಂಗಮ ಪ್ರಶಸ್ತಿ, ಮಂಡ್ಯದ ಜೀಶಂಪ ಪ್ರಶಸ್ತಿ (1995), ಹಂಸಜ್ಯೋತಿ ಸಂಸ್ಥೆಯ ಹಂಸರತ್ನ (1998) ಪ್ರಶಸ್ತಿ –ಇವು ಇವರಿಗೆ ದೊರೆತ ಇನ್ನಿತರ ಪ್ರಶಸ್ತಿಗಳು. (ಜಿ.ಆರ್.ಟಿ.)

**ಕರೀಂನಗರ :** ಆಂಧ್ರಪ್ರದೇಶದ ತೆಲಂಗಾಣದಲ್ಲಿ ವಾರಂಗಲ್ ವಿಭಾಗದ ಒಂದು ಜಿಲ್ಲೆ. ಉತ್ತರದಲ್ಲಿ ಆಂಧ್ರಪ್ರದೇಶದ ಆದಿಲಾಬಾದ್ ಮತ್ತು ಮಹಾರಾಷ್ಟ್ರದ ಚಾಂದ ಜಿಲ್ಲೆಗಳು, ಈಶಾನ್ಯದಲ್ಲಿ ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆ, ಆಂಧ್ರಪ್ರದೇಶದ ಪೂರ್ವ–ದಕ್ಷಿಣಗಳಲ್ಲಿ ವಾರಂಗಲ್ ಜಿಲ್ಲೆ, ನೈಋತ್ಯದಲ್ಲಿ ಮೇಡಕ್ ಜಿಲ್ಲೆ ಮತ್ತು ಪಶ್ಚಿಮದಲ್ಲಿ ನಿಜಾಮಾಬಾದ್ ಜಿಲ್ಲೆ ಇವೆ. ವಿಸ್ತೀರ್ಣ 11,872 ಚ.ಕಿಮೀ. ಜನಸಂಖ್ಯೆ 3491822 (2001), ಜನಸಾಂದ್ರತೆ: ಚ.ಮೈಗೆ 354 ರೈತರೇ ಬಹುಸಂಖ್ಯಾತರು.

ಈ ಜಿಲ್ಲೆಯ ನೆಲ ಪೂರ್ವದಿಂದ ಪಶ್ಚಿಮಕ್ಕೆ ಎತ್ತರವಾಗುತ್ತ ಸಾಗುತ್ತದೆ (135 ಮೀ. – 664 ಮೀ). ತಗ್ಗಿನಲ್ಲಿ ಪರ್ವತಗಳುಂಟು. ಇವುಗಳ ಪೈಕಿ ಒಂದು ಸಾಲು ಈಶಾನ್ಯದ ಕಡೆಗೆ ಹೊರಟು, ಗುರ್ರಪಲ್ಲಿ–ಜಗತಿಯಾಲ್‌ಗಳ ನಡುವೆ ಹಾಯ್ದು ಗೋದಾವರಿ ನದಿಯ ಬಳಿಯ ವೇಮಲಕುರ್ತಿ ಬಳಿ ಕೊನೆಗೊಳ್ಳುತ್ತದೆ. ಎರಡನೆಯದು ಇದಕ್ಕೆ ಸಮಾನಾಂತವಾಗಿ ಸುನಿಗ್ರಾಂನಿಂದ ಮಲ್ಲನ್‌ಗೂರ್ ಕಡೆಗೆ ಹಬ್ಬಿದೆ. ಮೂರನೆಯ ಸಾಲು ಮಾನೇರ್ ನದೀಕಣಿವೆಯ ಬಳಿ ನೈಋತ್ಯದಿಂದ ಈಶಾನ್ಯದ ಕಡೆ ಹೊರಟು, ಸುನಿಗ್ರಾಂ ಬೆಟ್ಟಗಳನ್ನು ಭೇದಿಸಿ, ರಾಂಗೀರನ್ನು ದಾಟಿ, ಗೋದಾವರಿನದಿಯ ಬಳಿ ಕೊನೆಗೊಳ್ಳುತ್ತದೆ.

ಜಿಲ್ಲೆಯಲ್ಲಿ ರೂಪಾಂತರಗೊಂಡ ಶಿಲೆಗಳು ಹೆಚ್ಚಾಗಿವೆ. ಜಿಲ್ಲೆಯ ಹೆಚ್ಚು ಭಾಗವನ್ನು ಪ್ರಥಮ ಯುಗದ ನೈಸ್‌ಶಿಲೆ ಆಕ್ರಮಿಸಿದೆ. ಕಡಪ, ಸುಲ್ಲವಿ ಮತ್ತು ಗೊಂಡ್ವಾನ ರೀತಿಯ ಶಿಲಾ ನಿರ್ಮಾಣಗಳು ಪೂರ್ವಭಾಗದಲ್ಲಿದೆ. ಉತ್ತರದಲ್ಲಿ ಕಪ್ಪು ಜಿಗುಟು ಮಣ್ಣು ಹೆಚ್ಚು. ಇದು ಜಿಲ್ಲೆಯ 1/3 ಭಾಗವನ್ನು ಆಕ್ರಮಿಸಿದೆ. ಉಳಿದ ಭಾಗಗಳಲ್ಲಿರುವುದು ಲವಣ ಮಿಶ್ರಿತ ಮರಳು.

ಇಲ್ಲಿಯ ಮುಖ್ಯ ನದಿ ಗೋದಾವರಿ ಉತ್ತರದಲ್ಲಿ ಈ ಜಿಲ್ಲೆಯ ಗಡಿಯಂತೆ ಹರಿಯುತ್ತದೆ. ಗೋದಾವರಿಯ ಉಪನದಿಯಾದ ಮಾನೇರ್ ಇನ್ನೊಂದು ನದಿ ಪೆದ್ದವಾಗು ಮತ್ತು ಚಲ್ಲವಾಗು ಇವು ಗೋದಾವರಿಯ ಇತರ ಉಪನದಿಗಳು.

ಉತ್ತರದಲ್ಲಿಯ ಜಗತಿಯಾಲ್, ಮಹದೇವಪುರ ಮತ್ತು ಪಶ್ಚಿಮದ ಸಿರಿಸಿಲ್ಲ ಪ್ರದೇಶಗಳ ವಿನಾ ಉಳಿದ ಭಾಗಗಳು ಆರೋಗ್ಯಕರವಾಗಿವೆ. ಸಮುದ್ರದಿಂದ ದೂರವಾಗಿ ಒಳನಾಡಿನಲ್ಲಿ ಇರುವುದರಿಂದ ಬೇಸಗೆಯಲ್ಲಿ ಉಷ್ಣತೆ ಹೆಚ್ಚು. ಕರೀಂನಗರ ಮತ್ತು ಜಮಿಕುಂಟಗಳಲ್ಲಿ ಮೇ ಮತ್ತು ಡಿಸೆಂಬರ್ ತಿಂಗಳುಗಳ ಉಷ್ಣತೆ ಕ್ರಮವಾಗಿ $43.3^{\circ}$ ಸೆ ಫ್ಯಾ, ಮತ್ತು $10^{\circ}$ ಸೆ ಫ್ಯಾ.

ಪಶ್ಚಿಮಾರ್ಧದ ಸ್ವಲ್ಪ ಭಾಗದಲ್ಲಿ, ಜಿಲ್ಲೆಯ ಅಂಚಿನಲ್ಲಿ, ಒತ್ತಾದ ಕಾಡುಗಳೂ ಉತ್ತರದಲ್ಲಿ ಜಗತಿಯಾಲ್‌ಗೆ ಈಶಾನ್ಯದಲ್ಲಿ ತೆಳುವಾದ ಕಾಡುಗಳೂ ಇವೆ. ಇಲ್ಲಿಯ ಕಾಡುಗಳಲ್ಲಿ ಎಬೊನಿ ಮರಗಳು ಹೇರಳ, ತೇಗ, ಮಾವು, ಕರಿಮರಗಳೂ ಉಂಟು. ಈಚೆಗೆ ಅರಣ್ಯ ಕಡಿಮೆಯಾಗುತ್ತಿದೆ.

ಆಂಧ್ರಪ್ರದೇಶದಲ್ಲಿ ಇದು ಹೆಚ್ಚು ಬಾವಿಗಳಿರುವ ಜಿಲ್ಲೆ. ಅನೇಕ ಕೆರೆಗಳೂ ಉಂಟು. ಇವುಗಳ ಸಹಾಯದಿಂದ ಸು. 16,000 ಹೆಕ್ಟೇರುಗಳಷ್ಟು ಭೂಮಿ ನೀರಾವರಿಗೆ ಒಳಗಾಗಿದೆ. ಇಲ್ಲಿಯ ಮುಖ್ಯ ಬೆಳೆಗಳು ಬತ್ತ, ಜೋಳ, ಮೆಕ್ಕೆ ಜೋಳ ಮತ್ತು ಬೇಳೆಗಳು. ನದಿತೀರದುದ್ದಕ್ಕೂ ಬತ್ತ ಹೆಚ್ಚು; ಒಳಭಾಗಗಳಲ್ಲಿ ಜೋಳ ಹೆಚ್ಚು. ಗೋದಾವರಿಯ ಜಲಾನಯನ ಪ್ರದೇಶಕ್ಕೆ ಈ ಜಿಲ್ಲೆ ಒಳಪಟ್ಟಿದ್ದರೂ ನದಿಗಳಿಂದ ವ್ಯವಸಾಯಕ್ಕೆ ಹೆಚ್ಚು ಅನುಕೂಲ ಉಂಟಾಗಿಲ್ಲ.

ಗೋದಾವರಿಗೆ ಸಂಬಂಧಪಟ್ಟ ಹಾಗೆ ಮಂಥನಿ ಬಳಿ ರಾಮಗುಡಂ ವಿದ್ಯುತ್ ತಯಾರಿಕಾ ಯೋಜನೆಯನ್ನು ನಿರ್ಮಿಸಲಾಗಿದೆ. ಉತ್ತರದಲ್ಲಿ ತಾಮ್ರದ ಗಣಿಗಳಿವೆ ಈ ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೆಗಳಿಲ್ಲ. ಗ್ರಾಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಬೆಳ್ಳಿಯ ಪದಾರ್ಥಗಳು, ಚರ್ಮದ ವಸ್ತು, ಚಾಕು ಚೂರಿ ಮುಂತಾದವನ್ನು ತಯಾರಿಸುವ ಉದ್ಯಮಗಳಿವೆ.

ಜಿಲ್ಲಾ ಕೇಂದ್ರವಾದ ಕರೀಂನಗರ ಮಾನೇರ್ ನದಿಯ ದಡದಲ್ಲಿದೆ. ಜನಸಂಖ್ಯೆ 2,03,819 (2001), ಸರ್ಕಾರಿ ಕಚೇರಿಗಳೂ ಸಣ್ಣಮಟ್ಟ ಕೈಗಾರಿಕೆಗಳೂ ಇಲ್ಲಿವೆ. ಜಗತಿಯಾಲ್ 89,438 (2001), ಸಿರಿಸಿಲ್ಲ (15,440), ಕೊರಟ್ಲ, ಪೆದ್ದಪಲ್ಲೆ, ಮೆಟಪಲ್ಲೆ, ಮಂಥನಿ ಮತ್ತು ಮೇಮಲವಾಡ 54021 (2001) ಇವು ಜಿಲ್ಲೆಯ ಇತರ ಪಟ್ಟಣಗಳು ಮತ್ತು ತಾಲ್ಲೂಕು ಕೇಂದ್ರಗಳು (ಕೆ.ಆರ್.ಆರ್.)

**ಕರೀಜಾಲಿ :** ಲೆಗ್ಯುಮಿನೋಸೀ ಕುಟುಂಬಕ್ಕೆ ಸೇರಿದ ಅಕೇಸಿಯ ಅರ್‍ಯಾಬಿಕ ಎಂಬ ವೈಜ್ಞಾನಿಕ ಹೆಸರಿನ ಸಾಧಾರಣ ಎತ್ತರದ ಮುಳ್ಳುಮರ. ಕರೀಗೊಬ್ಬಳೀ, ಜಾಲಿ, ಗೊಬ್ಬಳಿ ಮುಂತಾದುವು ಇದರ ಪರ್ಯಾಯನಾಮಗಳು. ಪಾಕಿಸ್ತಾನದ ಸಿಂಧ್, ಆಫ್ರಿಕದ ಉಷ್ಣಪ್ರದೇಶಹಾಗೂ ದಕ್ಷಿಣಭಾರತಗಳು ಇದರ ಜನ್ಮಸ್ಥಳಗಳೆಂದು ಹೇಳಲಾಗಿದೆ. ಭಾರತಾದ್ಯಂತ ಮೆಕ್ಕಲುಮಣ್ಣು ಮತ್ತು ಎರೆಮಣ್ಣಿನ ಭೂಮಿಯಲ್ಲಿ ಹೇರಳವಾಗಿ ಬೆಳೆಯುತ್ತದೆ. ಸಾಧಾರಣವಾಗಿ ಶುಷ್ಕವಾತಾವರಣದಲ್ಲಿ ಚೆನ್ನಾಗಿ ಬೆಳೆದರೂ ಅತಿ ಒಣಹವೆಯನ್ನು ತಡೆದುಕೊಳ್ಳಲಾರದು. ಹಾಗೆಯೇ ಹೆಚ್ಚುಚಳಿಯನ್ನೂ ಸಹಿಸದು. ತೋಪುಗಳಲ್ಲಿ ಈ ಮರ ಬೆಳೆದಿರುವುದನ್ನು ಸಾಮಾನ್ಯವಾಗಿ ಕಾಣಬಹುದು. ಬಿಸಿಲು ಹೆಚ್ಚಾಗಿದ್ದರೆ ಬೆಳವಣಿಗೆಗೆ ಅನುಕೂಲ.



ಈ ಮರದ ಎತ್ತರದಲ್ಲೂ ಕಾಂಡದ ಗಾತ್ರದಲ್ಲೂ ವೈವಿಧ್ಯವಿದೆ. ಕೆಲವೆಡೆ ದೊಡ್ಡ ಪೊದೆಸಸ್ಯವಾಗಿ ಬೆಳೆದರೆ ಇನ್ನು ಕೆಲವು ಪ್ರದೇಶಗಳಲ್ಲಿ 50'–50' ಎತ್ತರದ ಮರವಾಗಿ ಬೆಳೆಯುತ್ತದೆ. ಕಾಂಡದ ಗಾತ್ರದಲ್ಲಿ 1½'–10'ವರೆಗೂ ವ್ಯತ್ಯಾಸವಿದೆ. ತೊಗಟೆ ಕಂದು ಅಥವಾ ಕಪ್ಪು ಬಣ್ಣದ್ದು. ಏಪ್ರಿಲ್ ತಿಂಗಳಿನಲ್ಲಿ ಸ್ವಲ್ಪಕಾಲ ಬಿಟ್ಟು ವರ್ಷದ ಮಿಕ್ಕೆಲ್ಲ ಕಾಲಗಳಲ್ಲಿಯೂ ಎಲೆಗಳಿರುತ್ತವೆ. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ. ಸಂಯುಕ್ತ ಮಾದರಿಯ ಇವುಗಳಲ್ಲಿ ಅಭಿಮುಖ ಜೋಡಣೆಯ ಹಲವಾರು ಕಿರುಎಲೆಗಳಿವೆ. ಮುಳ್ಳುಗಳಾಗಿ ಪರಿವರ್ತಿತವಾಗಿರುವ ವೃಂತಪರ್ಣಗಳಿವೆ (ಸ್ಟಿಪ್ಯೂಲುಗಳು). ಜೂನ್–ಜುಲೈ ತಿಂಗಳಿನ ಮಂಜರಿಗಳಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲುಗಳು ರೆಂಬೆಗಳ ತುದಿಗಳಲ್ಲೊ ಎಲೆಗಳ ಕಂಕುಳಲ್ಲೊ ಇವೆ. ಹೂಗಳು ದ್ವಿಲಿಂಗಿಗಳು. ಪುಷ್ಪಪತ್ರಗಳ ಹಾಗೂ ಹೂದಳಗಳ ಸಂಖ್ಯೆ ಐದೈದು, ಕೇಸರಗಳು ಅಸಂಖ್ಯಾತ. ಅಂಡಾಶಯ ಉಚ್ಚಸ್ಥಾನಗದ್ದು; ಒಂದೇ ಕಾರ್ಪೆಲಿನಿಂದ ಕೂಡಿದೆ. ಒಂದೇ ಕೋಣೆಯಿದ್ದು ಅದರಲ್ಲಿ ಹಲವಾರು ಅಂಡಕಗಳಿವೆ. ಫಲ ಒಡೆಯುವ ಒಣಫಲ. ಪಾಡ್ ಎಂಬ ಹೆಸರಿನಿಂದ ಕರೆಯಲಾಗುವ ಇದು ಹಲವಾರು ಬೀಜಗಳನ್ನೊಳಗೊಂಡು ಮಣಿ ಕಟ್ಟಿನಂತಿದೆ. ಅದರ ಬಣ್ಣ ಬಿಳಿ. ಹಣ್ಣನ್ನು ದನಗಳು, ಮೇಕೆಗಳು ತಿನ್ನುತ್ತವೆ. ಕರೀಜಾಲಿಮರ ಚೌಬೀನೆಗಾಗಿಯೂ ಗೋಂದಿಗಾಗಿಯೂ ಚರ್ಮ ಹದಮಾಡಲು ಬಳಸುವ ಟ್ಯಾನಿನ್ ಎಂಬ ವಸ್ತುವಿಗಾಗಿಯೂ ಪ್ರಾಮುಖ್ಯಪಡೆದಿದೆ. ಇದರ ಚೌಬೀನೆ ಬಹಳ ಗಡುಸಾದುದು (ತೇಗದ ಚೌಬೀನೆಗಿಂತ ಎರಡರಷ್ಟು

ಗಟ್ಟಿಯೆನ್ನುತ್ತಾರೆ). ಅಲ್ಲದೆ ದೀರ್ಘಕಾಲ ಬಾಳಿಕೆ ಬರುತ್ತದೆ. ರಸಕಾಷ್ಠ (ಸ್ಯಾಪ್‌ವುಡ್) ಹಳದಿಮಿಶ್ರಿತ ಬಿಳಿಯ ಬಣ್ಣದ್ದಾಗಿಯೂ ಮೆದುವಾಗಿಯೂ ಇದೆ. ಚೇಗು (ಹಾರ್ಟ್‌ವುಡ್) ಹೊಸದಾಗಿ ಕತ್ತರಿಸಿದಾಗ ತಿಳಿಗೆಂಪು ಬಣ್ಣದ್ದು. ಕೊಂಚ ಕಾಲಾನಂತರ ಕೆಂಗಂದು ಬಣ್ಣಕ್ಕೆ ತಿರುಗುತ್ತದೆ. ಚೌಬೀನೆಯನ್ನು ನೇರವಾಗಿಯೇ ಉಪಯೋಗಿಸಬಹುದಾದರೂ ಪರಿಷ್ಕರಿಸಿ ಬಳಸಿದರೆ ಒಳ್ಳೆಯದು. ಪರಿಷ್ಕಾರಕ್ಕೆ ವಿಶೇಷ ಸಾಧನಗಳಾಗಲಿ, ವಿಧಾನಗಳಾಗಲಿ ಬೇಕಿಲ್ಲ. ಗಟ್ಟಿಯಾದ ಹಾಗೂ ದೃಢವಾದ ಚೌಬೀನೆ ಬೇಕಾಗುವಂಥ ಕೆಲಸಗಳಿಗೆ ಕರೀಜಾಲಿಯ ಮರ ಅತ್ಯಂತ ಉತ್ತಮವಾದದ್ದು. ವ್ಯವಸಾಯದ ಉಪಕರಣಗಳು, ಗಾಡಿಯ ಅಚ್ಚು, ಅರೆಕಾಲು, ಎಣ್ಣೆ ಮತ್ತು ಬೆಲ್ಲದ ಗಾಣಗಳು, ದೋಣಿಯ ಹುಟ್ಟುಗಳು, ಆಯುಧಗಳ ಹಿಡಿಗಳು, ಗಣಿಗಳ ಆಸರೆಗಂಬಗಳು ಮುಂತಾದುವನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ.

ಕರೀಜಾಲಿಯಮರದಿಂದ ಉತ್ತಮ ದರ್ಜೆಯ ಗೋಂದನ್ನು ತೆಗೆಯಬಹುದು. ಮಾರ್ಚ್–ಮೇ ತಿಂಗಳುಗಳಲ್ಲಿ ತೊಗಟೆಯ ಮೇಲೆ ಚಾಕುವಿನಿಂದ ಗಾಯಮಾಡಿ ಗೋಂದನ್ನು ತೆಗೆಯುತ್ತಾರೆ. ಅಂಟು ತಿಳಿಹಳದಿಯಿಂದ ಕಂದುಮಿಶ್ರಿತ ಕಪ್ಪು ಬಣ್ಣದ ವರೆಗಿದೆ. ನೀರಿನಲ್ಲಿ ಪೂರ್ಣವಾಗಿ ಕರಗುತ್ತದೆ. ಒಳ್ಳೆಯದರ್ಜೆಯ ಅಂಟನ್ನು ಕ್ಯಾಲಿಕೊ ಮುದ್ರಣ ಮತ್ತು ಬಣ್ಣಕಟ್ಟುವಿಕೆಯಲ್ಲೂ ಕೆಲವು ಬಗೆಯ ಸಿಹಿತಿಂಡಿಮಾಡುವುದಕ್ಕೂ ಔಷಧಿಯಾಗಿಯೂ ಬಳಸುತ್ತಾರೆ.

ಕರೀಜಾಲಿಮರದ ತೊಗಟೆಯಿಂದ ಪಡೆಯಲಾಗುವ ಟ್ಯಾನಿನನ್ನು ಚರ್ಮಹದ ಮಾಡಲು ಉಪಯೋಗಿಸುತ್ತಾರೆ. ಟ್ಯಾನಿನಿಗಾಗಿಯೇ ಮರಗಳನ್ನು ಕಡಿಯದಿದ್ದರೂ ಸೌದೆಗಾಗಿಯೋ ಚೌಬೀನೆಗಾಗಿಯೋ ಕಡಿದ ಮರಗಳನ್ನು ಮರದ ಸುತ್ತಿಗೆಗಳಿಂದ ಬಡಿದು ತೊಗಟೆಯನ್ನು ಬೇರ್ಪಡಿಸಿ ಬಿಸಿಲಿನಲ್ಲಿ ಒಣಗಿಸಿ ತುಂಡುಗಳಾಗಿ ಕತ್ತರಿಸಿ ಟ್ಯಾನಿನ್ ತೆಗೆಯಲು ಪರಿಷ್ಕರಿಸುತ್ತಾರೆ. ತೊಗಟೆಯಲ್ಲಿ ಸು. ಶೇ.12 ಟ್ಯಾನಿನ್ ಇದೆಯೆಂದು ತಿಳಿದುಬಂದಿದೆ. ಕೆಲವು ಬಗೆಯ ಚರ್ಮ ಹದ ಮಾಡುವುದಕ್ಕೆ ಈ ಟ್ಯಾನಿನ್ ಅತ್ಯುತ್ತಮವೆಂದು ಹೇಳಲಾಗಿದೆ. ಕಾಯಿಯಿಂದಲೂ ಟ್ಯಾನಿನ್ ದೊರೆಯುತ್ತದೆ. ಆದರೆ ಭಾರತದಲ್ಲಿ ಕಾಯಿಗಳನ್ನು ಚರ್ಮಹದಮಾಡಲು ಬಳಸುತ್ತಿಲ್ಲ. ತೊಗಟೆ, ಎಲೆ ಮತ್ತು ಕಾಯಿಗಳಿಂದ ತೆಗೆಯಲಾಗುವ ರಸವನ್ನು ಕೆಲವು ರೀತಿಯ ಲೋಹ ಸಂಯುಕ್ತಗಳ ಜೊತೆಗೆ ಸೇರಿಸಿ ಹತ್ತಿ ಮತ್ತು ರೇಷ್ಮೆ ಬಟ್ಟೆಗಳಿಗೆ ಕಂದು, ಕಾಕಿ, ಕಪ್ಪು ಮುಂತಾದ ಬಣ್ಣಹಾಕುವುದಕ್ಕೂ ಬಳಸುತ್ತಾರೆ. ಕೆಳದರ್ಜೆಯ ಮರವನ್ನು ಸೌದೆಯಾಗಿ ಉಪಯೋಗಿಸುವುದೂ ಉಂಟು. (ಎ.ಕೆ.ಎಸ್.)

**ಕರೀಜೀರಿಗೆ :** ರ್‍ಯಾನನ್‌ಕ್ಯುಲೇಸೀ ಕುಟುಂಬಕ್ಕೆ ಸೇರಿದ ನೈಜೆಲ ಸೇಟಿವ ಎಂಬ ಶಾಸ್ತ್ರೀಯ ಹೆಸರಿನ ಪುಟ್ಟಮೂಲಿಕೆ (ಬ್ಲ್ಯಾಕ್ ಕಮಿನ್). ಔಷಧೀಯ ಮಹತ್ತ್ವವುಳ್ಳ ಇದರ ಬೀಜಗಳಿಗಾಗಿ ಇದನ್ನು ಭಾರತದಲ್ಲಿ ಅಲ್ಲಲ್ಲಿ ಬೆಳೆಸುತ್ತಾರೆ. ಪಂಜಾಬ್, ಹಿಮಾಚಲಪ್ರದೇಶ ಬಿಹಾರ ಹಾಗೂ ಅಸ್ಸಾಂಗಳಲ್ಲಿ ಸ್ವಾಭಾವಿಕವಾಗಿಯೂ ಬೆಳೆಯುತ್ತದೆ.

ಸು. ½ ಮೀ ಎತ್ತರಕ್ಕೆ ಬೆಳೆಯುವ ಏಕವಾರ್ಷಿಕ ಸಸ್ಯ ಇದು. ಪರ್ಯಾಯವಾಗಿ ಜೋಡಣೆಗೊಂಡಿರುವ ಇದರ ಎಲೆಗಳು 2.5–5.0 ಸೆಂಮೀ ಉದ್ದವಿದ್ದು ಉದ್ದುದ ಎಳೆಗಳಂಥ ಭಾಗಗಳಿಗೂ ಸೀಳಿವೆ. ಹೂಗಳು ಎಲೆಗಳ ಕಂಕುಳಲ್ಲಿ ಒಂಟೊಂಟಿಯಾಗಿ ಅರಳುತ್ತವೆ. ಇವಕ್ಕೆ ಉದ್ದವಾದ ತೊಟ್ಟುಗಳಿವೆ. ಇವುಗಳ ಬಣ್ಣ ತಿಳಿನೀಲಿ. ಒಂದೊಂದು ಹೂವಿನಲ್ಲೂ ಐದೈದು ಪುಷ್ಪಪತ್ರಗಳೂ ದಳಗಳೂ ಅಸಂಖ್ಯಾತ ಕೇಸರಗಳೂ ಐದು ಕಾರ್ಪೆಲುಗಳಿಂದಾದ ಉಚ್ಚಸ್ಥಾನದ ಅಂಡಾಶಯವೂ ಇವೆ. ಕಾರ್ಪೆಲುಗಳು ಬುಡಭಾಗದಲ್ಲಿ ಒಂದರೊಡನೊಂದು ಕೂಡಿಕೊಂಡಿರುವುದು ಈ ಸಸ್ಯದ ವೈಶಿಷ್ಟ್ಯ. ಬೀಜಗಳು ಮುಮ್ಮೂಲೆ ಯುಳ್ಳವೂ ಕಪ್ಪುಬಣ್ಣದವೂ ಆಗಿವೆ; ಇವುಗಳ ಹೊರಮೈ ಒರಟಾಗಿದೆ. ಬೀಜಗಳಲ್ಲಿ ಒಂದು ರೀತಿಯ ಹಳದಿಬಣ್ಣದ ಚಂಚಲತೈಲವಿದೆ. ಇದನ್ನು ಕೆಮ್ಮು ಮತ್ತು ಅಸ್ತಮಗಳಲ್ಲಿ ಉಪಯೋಗಿಸಬಹುದೆಂದು ಹೇಳಲಾಗಿದೆ. ಬೀಜಗಳಲ್ಲಿ ಎಣ್ಣೆಯೊಂದೇ ಅಲ್ಲದೆ ನೈಜೆಲಿನ್ ಎಂಬ ಕಹಿವಸ್ತುವೂ ಟ್ಯಾನಿನ್, ರಾಳ, ಪ್ರೋಟೀನು, ಅಮೈನೋ ಆಮ್ಲಗಳು, ಸಾಪೊನಿನ್ ಮುಂತಾದ ಸಂಯುಕ್ತಗಳೂ ಇವೆ.

ಬೀಜಗಳನ್ನು ವಾತಹರವಾಗಿಯೂ ಉತ್ತೇಜವಾಗಿಯೂ ಜಂತುನಾಶಕವಾಗಿಯೂ ಉಪಯೋಗಿಸುತ್ತಾರೆ. ಬೊಕ್ಕೆಗಳ ನಿವಾರಣೆಗೂ ಇವನ್ನು ಬಳಸುತ್ತಾರೆ. ಕೆಲವು ರೀತಿಯ ಬ್ಯಾಕ್ಟೀರಿಯಗಳನ್ನು ನಾಶಪಡಿಸುವ ಗುಣವೂ ಬೀಜಗಳಿಗಿದೆ. ಬೀಜಗಳನ್ನು ಉಣ್ಣೆ ಹಾಗೂ ಲಿನೆನ್ ಬಟ್ಟೆಗಳ ಮಧ್ಯೆ ಇಡುವುದರಿಂದ ಬಟ್ಟೆಗಳಿಗೆ ಹುಳುಗಳು ಹತ್ತುವುದನ್ನು ತಡೆಯಬಹುದೆಂದು ತಿಳಿದುಬಂದಿದೆ. (ಎಚ್.ಕೆ.ಎಂ.)

**ಕರೀಲಿಯ :** ಸೋವಿಯತ್ ಸಮಾಜವಾದಿ ಸ್ವಯಮಾಡಳಿತ ಗಣರಾಜ್ಯ. ರಷ್ಯನ್ ಸೋವಿಯತ್ ಸಂಯುಕ್ತ ಸಮಾಜವಾದಿ ಗಣರಾಜ್ಯದ ಒಂದು ಅಂಗ. ಐರೋಪ್ಯ ರಷ್ಯದ ವಾಯವ್ಯ ಭಾಗದಲ್ಲಿದೆ. ಪಶ್ಚಿಮದಲ್ಲಿ ಫಿನ್ಲೆಂಡ್, ಪೂರ್ವದಲ್ಲಿ ಬಿಳಿಯ ಸಮುದ್ರ, ದಕ್ಷಿಣದಲ್ಲಿ ಲ್ಯಾಡೊಗ ಸರೋವರ, ಉತ್ತರದಲ್ಲಿ ಕ್ಯಾಂಡಲಾಕ್ಷ ಖಾರಿ–ಇವುಗಳ ನಡುವೆ ಇರುವ ಈ ರಾಜ್ಯದ ವಿಸ್ತೀರ್ಣ 172,400 ಚ. ಕಿಮೀ.

ನೈಸರ್ಗಿಕ ಲಕ್ಷಣಗಳು : ಕರೀಲಿಯದ ನೆಲ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರು. ಕರಾವಳಿಯ ನೆಲವಂತೂ ಜೌಗಿನಿಂದ ಕೂಡಿದೆ. ಇಲ್ಲಿಯ ಭೂಭಾಗ ಪುರಾತನ ಗಟ್ಟಿಶಿಲೆಗಳಿಂದ ಕೂಡಿದ್ದು ಪರ್ವತಗಳು ನಿಸರ್ಗ ಬಲಗಳ ಪ್ರಭಾವಕ್ಕೆ ಸಿಕ್ಕಿ ಸವೆದು ತಗ್ಗಿವೆ. ನೆಲದ ಎತ್ತರ ಸಾಮಾನ್ಯವಾಗಿ ಸಮುದ್ರ ಮಟ್ಟಕ್ಕಿಂತ 300'–1,500'. ಹಿಮಯುಗದ ಪ್ರಭಾವದಿಂದ ಈ ಪ್ರದೇಶ ರೂಪುಗೊಂಡಿತು. ಅನೇಕ ಹಿಮನದಿಗಳೂ ಸರೋವರಗಳೂ ಇಲ್ಲಿಯ ವಾಯವ್ಯ ಭಾಗವನ್ನು ಆಕ್ರಮಿಸಿವೆ. ಇಲ್ಲಿ ಒಟ್ಟು 50,000 ಸರೋವರಗಳುಂಟು. ದಕ್ಷಿಣದ ಲ್ಯಾಡೋಗ ಮತ್ತು ಒನೆಗ ಸರೋವರಗಳೂ ಉತ್ತರದ ವ್ಯೂಪೊಜೆರೊ, ಸೆಗೊಜೆರೊ, ಟಾಪ್–ಒಜೆರೊ ಮತ್ತು ಕ್ಯುಯಿಟೊ ಸರೋವರಗಳೂ ಮುಖ್ಯವಾದವು. ವಿವಿಧ ಎತ್ತರಗಳಲ್ಲಿರುವ ಇಲ್ಲಿಯ ಸರೋವರಗಳನ್ನು ಅನೇಕ ನದಿಗಳು ಕೂಡಿಸುತ್ತವೆ. ಈ ನದಿಗಳಿಂದ ವಿದ್ಯುತ್ತನ್ನು ಹೇರಳವಾಗಿ ಉತ್ಪಾದಿಸಬಹುದು.

ಕರೀಲಿಯದ ನೆಲ ಹಿಮಶಿಲಾಚಯಗಳಿಂದಾವೃತವಾಗಿದ್ದರೂ ಅನೇಕ ಭಾಗಗಳಲ್ಲಿ ಇದು ಬೂದುಬಣ್ಣದ ಮಣ್ಣುಗಳಿಂದ ಕೂಡಿದೆ. ಆದರೆ ಜೌಗಿನಿಂದಾಗಿ ಬೇಸಾಯಕ್ಕೆ ಅನುಕೂಲವಾಗಿಲ್ಲ.

ವಾಯುಗುಣ : ಇಲ್ಲಿಯ ಹವಾಗುಣ ಬಲು ಶೀತಕರ. ಆದರೆ ಆಗಾಗ್ಗೆ ಥಟ್ಟನೆ ಅಟ್ಲಾಂಟಿಕ್ ಸಾಗರದಿಂದ ಬೀಸುವ ಆವರ್ತಮಾರುತದಿಂದಾಗಿ ಚಳಿಗಾಲದಲ್ಲೂ ಬೆಚ್ಚನೆಯ ಹವೆ ಸಂಭವಿಸಿ ಹಿಮ ಕರಗುವುದುಂಟು. ಫೆಬ್ರುವರಿ ಅತ್ಯಂತ ಚಳಿಯ ತಿಂಗಳು. ಆಗಿನ ಉಷ್ಣತೆ ದಕ್ಷಿಣದಲ್ಲಿ–$9^0$ ಸೆಂ. ($15^0$ಫ್ಯಾ.), ಉತ್ತರದಲ್ಲಿ $14^0$ಸೆಂ. ($57^0$ಫ್ಯಾ.). ಉತ್ತರದಿಂದ ಚಳಿಗಾಳಿ ಬೀಸಿದಾಗ ಹವಾ ಇನ್ನೂ ತಣ್ಣಗಾಗಬಹುದು. ಬೇಸಗೆ ಬಲು ಚುಟುಕು. ಆಗ ದಕ್ಷಿಣದಲ್ಲಿ ಉಷ್ಣತೆ ಸು. $16^0$ ಸೆಂ. ($61^0$ ಫ್ಯಾ.), ಉತ್ತರದಲ್ಲಿ ಸು. $13^0$ ಸೆಂ. ($55^0$ ಫ್ಯಾ.) ಅವಪಾತದ್ರವ ವಾರ್ಷಿಕ ಪರಿಮಾಣ ದಕ್ಷಿಣದಲ್ಲಿ 21' ಉತ್ತರದಲ್ಲಿ 16'. ಇದು ಮುಖ್ಯವಾಗಿ ಹಿಮರೂಪದಲ್ಲಿ ಬೀಳುತ್ತದೆ.

ಅರಣ್ಯಗಳು ಟೈಗ ಮಾದರಿಯವು. ಪೈನ್‌ಸ್ಪ್ರೂಸ್ ಮತ್ತು ಬರ್ಚ್ ಮರಗಳಿವೆ. ಕಂದುಕರಡಿ, ನರಿ, ತೋಳ ಮತ್ತು ಹಿಮಸಾರಗಗಳು ಪ್ರಾಣಿಗಳು.

ಕಬ್ಬಿಣದ ಕೈಗಾರಿಕೆಯೇ ಇಲ್ಲಿಯ ಹಳೆಯ ಉದ್ಯಮ. ಸು. 17ನೆಯ ಶತಮಾನದಿಂದಲೂ ಇದು ಬೆಳೆದುಬಂದಿದೆ. ರಷ್ಯದ ಪೀಟರ್ ಚಕ್ರವರ್ತಿ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ. ಪೆಟ್ರೋಜವೊಟ್ಸ್ಕದಲ್ಲಿ ಇದನ್ನು ಸ್ಥಾಪಿಸಿದ. ಪೀಟರ್‌ನ ಕಾರ್ಖಾನೆ ಎಂದೇ ಈ ಹೆಸರಿನ ಅರ್ಥ. ಇಲ್ಲಿ ಮಾತ್ರವೇ ಅಲ್ಲದೆ ಪೊವೆ ನೆಟ್ಸ್ ಮತ್ತು ಕಾಂಚಿಜೆರೊಗಳಲ್ಲೂ ಇವನಿಂದ ಕಬ್ಬಿಣದ ಕಾರ್ಖಾನೆಗಳು ಸ್ಥಾಪಿತವಾದವು. ಒನೆಗ ಸರೋವರದ ಬಳಿಯ ಪ್ಯುಡೋಜ್‌ನಲ್ಲೂ ಮಧ್ಯ ಕರೀಲಿಯದ ಜ್ಹಿಮೊಲಿಯಲ್ಲೂ ಈಗ ಕಬ್ಬಿಣದ ಅದಿರನ್ನು ತೆಗೆಯಲಾಗುತ್ತಿದೆ. ಪೆಟ್ರೋಜವೊಟ್ಸ್ಕ ಮತ್ತು ವ್ಯರ್ಟ್ಸಿಲ್ಯಗಳು ಲೋಹ ಕೈಗಾರಿಕೆ ಕೇಂದ್ರಗಳು. ತಾಮ್ರ ಮತ್ತು ಪೆಗ್ಮಟೈಟ್ ಇತರ ಖನಿಜಗಳು. ಮರ ಕಡಿದು ಸಾಗಿಸುವುದೂ ಅದರ ಉತ್ಪನ್ನಗಳನ್ನು ತಯಾರಿಸುವುದೂ ಇಲ್ಲಿಯ ಅತ್ಯಂತ ದೊಡ್ಡ ಉದ್ಯಮ. ಕಾಗದ ಮತ್ತು ಮರದ ತಿಳ್ಳುಗಳು ಸೆಗೆಜ, ಕೊಂಡೊಪೊಗ, ಸ್ಯೂವರ್ವಿ, ಪಿಟ್‌ಕ್ಯರಂಟ, ಖಾರ್ಲು ಮತ್ತು ಲ್ಯಾಸ್ಕೆಲ್ಯಗಳಲ್ಲಿ ತಯಾರಾಗುತ್ತವೆ. ಪೆಟ್ರೋಜವೊಟ್ಸ್ಕ ಇವಕ್ಕೂ ಪ್ರಸಿದ್ಧ. ಒಟ್ಟು ನೆಲದಲ್ಲಿ ಶೇ. 1 ರಷ್ಟು ಮಾತ್ರ ಸಾಗುವಳಿಗೆ ಒಳಪಟ್ಟಿದೆ. ರೈ, ಓಟ್ಸ್ ಮತ್ತು ತರಕಾರಿಗಳು ಬೆಳೆಯುತ್ತವೆ. ಇನ್ನು ಕೆಲವು ಕಡೆ ಹೈನು ಉದ್ಯಮವುಂಟು. ನದೀ ಸರೋವರಗಳಲ್ಲೂ ಬಿಳಿಯ ಸಮುದ್ರದಲ್ಲೂ ಮೀನುಗಾರಿಕೆ ಮುಖ್ಯ. ಬೆಲೊಮಾರ್ಸ್ಕ ಮತ್ತು ಕೆಂ ಮುಖ್ಯ ಮೀನುಗಾರಿಕೆ–ರೇವುಗಳು. ಒಂದನೆಯ ಮಹಾ ಯುದ್ಧ ಕಾಲದಲ್ಲಿ ಲೆನಿನ್‌ಗ್ರಾಡಿನಿಂದ ಪೆಟ್ರೊಜವೊಟ್ಸ್ಕ ಮೂಲಕ ಬೆಲೊ ಮಾರ್ಸ್ಕ್‌ಗೂ ಬಿಳಿಯ ಸಮುದ್ರದ ದಂಡೆಗುಂಟ ಕ್ಯಾಂಡಲಾಕ್ಷ ಮತ್ತು ಮರ್ಮನ್‌ಸ್ಕ್‌ಗಳಿಗೂ ನಿರ್ಮಿಸಲಾದ ರೈಲು ಮಾರ್ಗದ ಮೇಲೆ ಬಹುತೇಕ ಎಲ್ಲ ಪಟ್ಟಣಗಳೂ ಇವೆ. ಬಿಳಿಯ ಸಮುದ್ರದ ಕಾಲುವೆ ಇನ್ನೊಂದು ಮುಖ್ಯ ಸಂಚಾರಮಾರ್ಗ. ಇದನ್ನು ಬಿಳಿಯ ಸಮುದ್ರದ ಮೇಲೂ ಬೆಲೊಮಾರ್ಸ್ಕ್‌ನಿಂದ ಒನೆಗ ಸರೋವರದ ದಡದ ಪೊವೆನೆಟ್ಸ್‌ಗೆ 1931–33ರಲ್ಲಿ ನಿರ್ಮಿಸಲಾಯಿತು. ಇದರಿಂದಾಗಿ ಬಾಲ್ಟಿಕ್ ಮತ್ತು ಬಿಳಿಯ ಸಮುದ್ರಗಳಿಗೆ ಸಂಪರ್ಕ ಸಾಧಿಸಿದೆ. ಸಾಗರಗಾಮಿ ಹಡಗುಗಳು ಇದರಲ್ಲಿ ಸಂಚರಿಸಬಹುದಾದ್ದರಿಂದ ವಾಣಿಜ್ಯ ಮತ್ತು ಆಯಕಟ್ಟಿನ ದೃಷ್ಟಿಯಿಂದ ಇದರ ಪ್ರಾಮುಖ್ಯ ಅಧಿಕವಾಗಿದೆ.

ಕರೀಲಿಯ ಜನಸಂಖ್ಯೆ 643,548 (2010). ಇವರಲ್ಲಿ ಶೇ 64 ಮಂದಿ ಪಟ್ಟಣ ಪ್ರದೇಶವಾಸಿಗಳು, ಕರೀಲಿಯದ ರಾಜಧಾನಿ ಪೆಟ್ರೋಜವೊಟ್ಸ್ಕ (ಜನಸಂಖ್ಯೆ 261,987 (2010). ಬೆಲೊವಹರ್ಸ್ಕ, ಕಂ, ಮೆದ್ವಜ್ಯೆಗರ್ಸ್ಕ್, ಕೊಡೊಪೊಗ ಮತ್ತು ಸೊರ್ತವಾಲ ಇತರ ನಗರಗಳು. (ಕೆ.ಎನ್.ಪಿ.)

# ಇಂಗ್ಲಿಷ್ ಪದಸೂಚಿ

**ಇದು ಮುಖ್ಯ ವಿಷಯಗಳ ಸೂಚಿ ಮಾತ್ರ. ಸಂಖ್ಯೆಯು ಪುಟವನ್ನೂ ಎ ಎನ್ನುವುದು ಪುಟದ ಎಡ ಅಂಕಣವನ್ನೂ ಬ ಎನ್ನುವುದು ಪುಟದ ಬಲ ಅಂಕಣವನ್ನೂ ಸೂಚಿಸುತ್ತವೆ.**


Acacia Arabica – ಕರೀಜಾಲಿ ೯೬೦ಬ
Acacia catechu – ಕಗ್ಗಲಿ ೫೧೬ಬ
Acount Rendered – ಒಪ್ಪಿಸಿದ ಲೆಕ್ಕ ೩೫೦ಎ
Admission – ಒಪ್ಪಿಗೆ ೩೪೮ಎ
Aerides – ಏರೈಡೆಸ್ ೧೮೧ಬ
Agave – ಕತ್ತಾಳೆ ೬೦೭ಬ
Agnatha – ಏಗ್ನಾತ ೧೬೭ಎ
Agreement – ಒಪ್ಪಂದ ೩೪೭ಬ
Ailanthus Moth – ಐಲಾಂಥಸ್ ಚಿಟ್ಟೆ ೨೭೨ಬ
Alergy and Anaphylaxis – ಒಗ್ಗದಿಕೆ, ಮರೆಹಾರಿಕೆ ೩೨೨ಬ
All or none law – ಎಲ್ಲ ಅಥವಾ ಏನೂ ಇಲ್ಲ ಎಂಬ ನಿಯಮ ೮೭ಬ
All ranks – ಎಲ್ಲ ದರ್ಜೆಗಳು ೮೭ಬ
Anarrhicas – ಕಡಲ ತೋಳ ೫೭೦ಬ
Angel fish – ಏಂಜೆಲ್ ಮೀನು ೧೨೦ಎ
Angelica – ಏಂಜೆಲಿಕ ೧೨೦ಬ
Annular eclipse – ಕಂಕಣಗ್ರಹಣ ೪೬೨ಬ
Anthocephalus cadamba – ಕದಂಬ ೬೨೫ಎ
Antlia – ಏಂಟಿಲಿಯ ೧೨೦ಬ
Aponea – ಕಟ್ಟುಸಿರು ೫೫೫ಬ
Apocynaceae – ಕಣಗಿಲೆ ಗಿಡದ ಕುಟುಂಬ ೫೮೯ಬ
Applied psychology – ಔಪಯೋಗಿಕ ಮನೋವಿಜ್ಞಾನ ೪೪೫ಎ
Apus – ಏಪಸ್ ೧೭೮ಎ
Aquila – ಏಕ್ವಿಲ ೧೬೭ಎ
Arachis hypogea – ಕಡಲೆಕಾಯಿ ೫೭೭ಎ
Arch – ಕಮಾನು ೯೨೧ಎ
Arch bridge – ಕಮಾನಿನ ಸೇತುವೆ ೯೧೯ಬ
Arianism – ಏರಿಯನ್ ತತ್ತ್ವ ೧೮೦ಬ
Assian development bank – ಏಷ್ಯದ ಅಭಿವೃದ್ಧಿ ಬ್ಯಾಂಕು ೧೯೫ಎ
Assian games – ಏಷ್ಯನ್ ಕ್ರೀಡೆಗಳು ೨೨೦ಬ
Ass – ಕತ್ತೆ ೬೧೧ಎ
Asthenopia – ಕಣ್ಣಾಯಾಸ ೫೯೬ಬ
Averrhoa – ಕಮರಾಕ್ಷಿ ೯೧೫ಬ
Bacterial and infectious dieseases – ಏಕಾಣುಜೀವಿಕ, ಸೋಂಕಿನ ರೋಗಗಳು ೧೪೮ಬ
Bacteriology – ಏಕಾಣುಜೀವವಿಜ್ಞಾನ ೧೫೪ಬ
Bad debt – ಕರಡುಸಾಲ ಅಥವಾ ಕರಡುಋಣ ೯೪೩ಎ
Balustrade – ಕಟಕಟೆ ೫೨೯ಬ
Bandages, Bandagind – ಕಟ್ಟುಪಟ್ಟಿಗಳು, ಪಟ್ಟಿಕಟ್ಟುವಿಕೆ ೫೫೨ಬ
Bauhinia – ಕಂಚುವಾಳ ೪೭೦ಎ
Bear – ಕರಡಿ ೯೩೯ಎ
Bitters – ಕಟುಕಾರಕ ೫೩೧ಎ
Black ape – ಕಪ್ಪುಕೋತಿ ೮೮೯ಎ
Black body – ಕಪ್ಪುವಸ್ತು ೮೮೯ಬ
Black cock – ಕರಿಹುಂಜ ೯೫೮ಬ
Black cumin – ಕರೀಜೀರಿಗೆ೬೧ಎ
Black out – ಕತ್ತಲೆಮುಸುಕು ೬೦೭ಬ
Black shirts – ಕಪ್ಪಂಗಿಯವರು ೮೮೬ಎ
Black snake – ಕರಿಹಾವು ೯೫೮ಬ
Black water fever – ಕಂಕಾಳಜ್ವರ ೪೬೩ಬ
Black window spider – ಕರಿಜೇಡ ೯೫೬ಬ
Bladder – ಕಂಕೋಶ ೪೬೩ಬ
Bladder worm – ಕಂಕೋಶ ಹುಳು ೪೬೩ಬ
Bone – ಎಲುಬು ೪೦ಎ
Bone diseases and injuries of – ಎಲುಬಿನ ರೋಗಗಳು, ಗಾಯಗಳು ೩೮ಬ
Bone fish – ಎಲುಬು ಮೀನುಗಳು ೪೨ಬ
Bone marrow – ಎಲುಬು ಮಜ್ಜೆ ೪೧ಬ
Bronze – ಕಂಚು ೪೬೮ಎ
Building – ಕಟ್ಟಡ ೫೩೨ಎ
Building materials – ಕಟ್ಟಡದ ಸಾಮಗ್ರಿಗಳು ೫೩೬ಬ
Building protection – ಕಟ್ಟಡ ರಕ್ಷಣೆ ೫೪೨ಎ
Building stones – ಕಟ್ಟಡದ ಶಿಲೆಗಳು ೫೩೬ಎ
Cabbage – ಎಲೆಕೋಸು ೫೩ಎ
Cacalia – ಕಕೇಲಿಯ ೫೦೯ಬ
Calotes versicolor – ಓತಿ ೪೧೦ಎ
Camel – ಒಂಟೆ ೩೦೦ಎ
Camel corps – ಒಂಟೆಪಡೆ ೩೦೧ಬ
Camellia – ಕಮೆಲಿಯ ೯೨೨ಬ
Campanula – ಕಂಪ್ಯಾನುಲ ೪೯೧ಬ
Cancer – ಏಡಿಗಂತಿ ೧೭೦ಬ
Cancer research – ಏಡಿಗಂತಿ ಸಂಶೋಧನೆ ೧೭೩ಎ
Capella – ಕಪೆಲ್ಲಾ ೮೮೫ಎ
Capuchin monkey – ಕಪೂಚಿನ್ ಕೋತಿ ೮೮೪ಬ
Carcinogenic chemicals – ಏಡಿಗಂತಿಜನಕ ರಾಸಾಯನಿಕಗಳು ೧೭೧ಬ
Cardamom – ಏಲಕ್ಕಿ ೧೮೩ಬ
Care of infants – ಎಳೆಗೂಸುಗಳ ಪಾಲನೆ ೧೧೭ಎ
Carissa carindas – ಕರಂಡ ಹಣ್ಣಿನ ಗಿಡ ೯೩೪ಬ

Cassia fistula – ಕಕ್ಕೆ ೫೧೦ಬ
Castor – ಔಡಲ ೪೪೦ಎ
Catamarran – ಕಟ್ಟುಮರ ೫೫೫ಎ
Caterpillar – ಕಂಬಳಿಹುಳು ೫೦೧ಬ
Catharsis – ಕತಾರ್ಸಿಸ್ ೬೦೬ಎ
Causeway – ಒಡ್ಡುದಾರಿ ೩೩೩ಬ
Cedrela toona – ಕಂಡಗರಿಗೆ ೪೭೬ಎ
Ceiling – ಒಳಮಾಳಿಗೆ ೩೮೬ಎ
Celastrus paniculatus – ಕಂಗೊಂದಿ ಬಳ್ಳಿ ೪೬೩ಬ
Certiorari – ಕಟ್ಟಿನ ಕರೆ ೫೪೮ಎ
Chorea ; st. Vitus dance – ಕಂಪವಾತ ೪೯೦ಎ
Cicer arietinum – ಕಡಲೆ ೫೭೫ಬ
Cirrhosis in children – ಎಳೆಗೂಸಿನ ಈಲಿಯ ಅರಿಶಿನಾರಿಗೆ ೧೧೬ಬ
Client – ಕಕ್ಷಿಗಾರ ೫೧೩ಎ
Closet plays – ಓದುನಾಟಕಗಳು ೪೧೫ಎ
Coast protection – ಕರಾವಳಿಯ ರಕ್ಷಣೆ ೯೫೨ಬ
Codes, Educational – ಕಟ್ಟಳೆಗಳು, ಶೈಕ್ಷಣಿಕ ೫೪೫ಎ
Coercion – ಒತ್ತಾಯ ೩೪೧ಎ
Command – ಕಮಾಂಡ್ ೯೧೯ಬ
Commelina – ಕನ್ನೆಸೊಪ್ಪು ೮೭೬ಎ
Commelinaceae – ಕನ್ನೆಸೊಪ್ಪಿನ ಕುಟುಂಬ ೮೭೫ಬ
Commune – ಕಮ್ಯೂನ್ ೯೨೪ಎ
Communism – ಕಮ್ಯೂನಿಸಂ ೯೨೪ಬ
Communism, primitive – ಕಮ್ಯೂನಿಸಂ, ಆದಿಮ ೯೨೮ಬ
Company – ಕಂಪನಿ ೪೮೪ಬ
Composite – ಕಂಪಾಸಿಟಿ ೪೯೦ಬ
Compulosory education – ಕಡ್ಡಾಯ ಶಿಕ್ಷಣ ೫೮೪ಬ
Conflict – ಒಳತೋಟಿ ೩೮೧ಬ
Conglomerate – ಕದಂಬಶಿಲೆ ೬೩೧ಎ
Conspiracy – ಒಳಸಂಚು ೩೮೭ಎ
Contemporaneous rocks – ಏಕಕಾಲೀನ ಶಿಲೆಗಳು ೧೨೪ಎ
Contract – ಕರಾರು ೯೫೧ಎ
Contract note – ಕರಾರು ಟಿಪ್ಪಣಿ ೯೫೨ಬ
Convolvulus – ಕನ್ವಾಲ್ವುಲಸ್ ೧೭೯ಎ
Cornering – ಒಗ್ಗೂಡಿಕೆ ೩೨೪ಎ
Cornice – ಕಪೋರ² ೮೮೫ಬ
Corypha – ಓಲೆಮರ ೪೨೯ಬ
Covenant – ಒಡಂಬಡಿಕೆ ೩೨೬ಎ
Coyote – ಕಯೋಟ್ ೯೩೪ಎ
Crab – ಏಡಿ ೧೬೮ಬ
Crab nebula – ಏಡಿ ನೆಬ್ಯುಲ ೧೭೬ಎ
Crossandra – ಕನಕಾಂಬರ ೬೩೫ಎ
Crustacea – ಕಠಿಣಚರ್ಮಿಗಳು ೫೬೦ಎ
Cuddalore sandstones – ಕಡ್ಡಲೂರು ಮರಳುಶಿಲೆಗಳು ೫೮೪ಎ
Cuddapah system – ಕಡಪ ಶ್ರೇಣಿಗಳು ೫೬೭ಬ
Cutting – ಕತ್ತರಿಸುವುದು ೬೦೭ಎ
Cutworms – ಕತ್ತರಿಹುಳುಗಳು ೬೦೭ಬ
Cymbopogon – ಕಮಾಚಿ ಹುಲ್ಲು ೯೧೯ಬ
Dam – ಕಟ್ಟೆ ೫೫೬ಎ
Damsel fly – ಕನ್ಯಾಕೀಟ ೮೭೬ಬ
D.C. Machine tests – ಏಕಮುಖ ವಿದ್ಯುದ್ಯಂತ್ರ ಪರೀಕ್ಷೆಗಳು ೧೩೫ಬ
Dichanthium – ಕಂಡಬತ್ತದ ಹುಲ್ಲು ೪೭೬ಬ
Direct current generator – ಏಕಮುಖ ವಿದ್ಯುಜನಕ ೧೩೧ಬ
Dove – ಕಪೋತ¹ ೮೮೫ಎ
Dream and daydream – ಕನಸು ಮತ್ತು ಹಗಲುಗನಸು ೬೩೫ಬ
Drugget – ಒರಟು ಜಮಖಾನೆ ೩೫೧ಬ
Dry ice – ಒಣಹಿಮ ೩೩೭ಬ
Dyke – ಏರಿ ೧೭೯ಎ
Earthworm – ಎರೆಹುಳು ೧೮ಬ
ECAFE: Economic Commission for Asia and the Far east – ಏಷ್ಯ ಮತ್ತು ದೂರ ಪ್ರಾಚ್ಯಗಳ ಆರ್ಥಿಕ ಆಯೋಗ ೨೨೧ಬ
Eichhornia – ಐಕ್ಹಾರ್ನಿಯ ೨೭೯ಎ
Eider – ಐಡರ್ ಬಾತು ೨೩೦ಎ
Einsteinium – ಐನ್‌ಸ್ಟೈನಿಯಂ ೨೪೪ಎ
Elastomer – ಎಲ್ಯಾಸ್ಟೊಮರ್ ೮೪ಬ
Elaterium – ಎಲ್ಯಾಟೆರಿಯಂ ೮೪ಬ
Elatostema – ಎಲ್ಯಾಟೊಸ್ಟೆಮ ೮೪ಬ
Electro encephalography – ಎಲೆಕ್ಟ್ರೊ ಎನ್ಸೆಫಲೊಗ್ರಫಿ ೭೪ಎ
Electrophoresis – ಎಲೆಕ್ಟ್ರೊಫಾರಿಸಿಸ್ ೭೯ಎ
Electron – ಎಲೆಕ್ಟ್ರಾನ್ ೫೩ಬ
Electron diffraction – ಎಲೆಕ್ಟ್ರಾನ್ ನಮನ ೬೧ಬ
Electron emission – ಎಲೆಕ್ಟ್ರಾನ್ ಸ್ಫುರಣ ೭೧ಬ
Electronic colour scanners – ಎಲೆಕ್ಟ್ರಾನಿಕ್ ವರ್ಣವೀಕ್ಷಕಗಳು ೭೩ಎ
Electronic engraving – ಎಲೆಕ್ಟ್ರಾನಿಕ್ ನಕಾಶೆ ಕೆತ್ತನೆ ೭೨ಎ
Electronics – ಎಲೆಕ್ಟ್ರಾನಿಕ್ಸ್ ೭೩ಎ
Electron microscope – ಎಲೆಕ್ಟ್ರಾನ್ ಸೂಕ್ಷ್ಮದರ್ಶಿ ೬೪ಎ
Electron optics – ಎಲೆಕ್ಟ್ರಾನ್ ದೃಕವಿಜ್ಞಾನ ೫೭ಬ
Electron volt – ಎಲೆಕ್ಟ್ರಾನ್ ವೋಲ್ಟ್ ೬೩ಬ
Electro types – ಎಲೆಕ್ಟ್ರೊ ಟೈಪುಗಳು ೭೭ಎ
Elegy – ಎಲಿಜಿ ೨೫ಎ
Elevators – ಎಲಿವೇಟರುಗಳು ೩೦ಎ
Elk – ಎಲ್ಕ್ ಸಾರಗ ೮೨ಎ

# ಇಂಗ್ಲಿಷ್ ಪದ ಸೂಚಿ

Elm tree – ಎಲ್ಮ್ ಗಿಡ ೮೩ಬ
Elutriation – ಎಲ್ಯೂಟ್ರಿಯೇಷನ್ ೮೭ಬ
Ema – ಒಳಕೀವು ೩೮೦ಬ
Endocrine glands – ಒಳಸುರಿಕೆ ಗ್ರಂಥಿಗಳು ೩೮೮ಎ
Endocrinology – ಒಳಸುರಿಕೆ ವಿಜ್ಞಾನ ೩೮೯ಎ
Endoscopy – ಒಳದರ್ಶನ ೩೮೨ಬ
Endothelium – ಒಳಪೊರೆ ೩೮೬ಬ
Eranthemum – ಎರೆಂತಮಮ್ ೧೮ಎ
Erato – ಎರಟೊ ೧ಎ
Erbium – ಎರ್ಬಿಯಂ ೨೨ಎ
Ergosterols – ಎರ್ಗೊಸ್ಟೀರಾಲ್‌ಗಳು ೨೧ಎ
Ergot – ಎರ್ಗಟ್ ೨೦ಬ
Eridenus – ಎರಿಡೆನಸ್ ೧೭ಬ
Eriocarpus – ಎರಿಯೊಕಾರ್ಪಸ್ಸ್ ೧೮ಎ
Eryops – ಎರಿಯೋಪ್ಸ್ ೧೮ಎ
Escapement slope – ಕಡಿದು ೫೮೦ಬ
Escholtzia – ಎಸ್ಕೋಲ್ಟ್‌ಜಿಯ ೧೦೫ಬ
Esperanto – ಎಸ್ಪರ್‍ಯಾಂಟೊ ೧೧೦ಬ
Espostoa – ಎಸ್ಪೋಸ್ಟೊ ೧೧೧ಎ
Ester – ಎಸ್ಟರ್ ೧೦೬ಎ
European art – ಐರೋಪ್ಯಕಲೆ ೨೫೨ಎ
European atomic energy community – ಐರೋಪ್ಯ ಪರಮಾಣು ಶಕ್ತಿ ಸಮುದಾಯ ೨೬೦ಬ
European coal and steel community – ಐರೋಪ್ಯ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ ೨೫೯ಬ
European communities – ಐರೋಪ್ಯ ಸಮುದಾಯಗಳು ೫೬೧ಬ
European economic community – ಐರೋಪ್ಯ ಆರ್ಥಿಕ ಸಮುದಾಯ ೨೫೦ಎ
European payments union – ಐರೋಪ್ಯ ಸಲ್ಲಿಕೆ ಕೂಟ ೨೬೨ಎ
Eye glasses – ಕನ್ನಡಕಗಳು ೬೫೦ಬ
Eye, human – ಕಣ್ಣು, ಮಾನವನ ೫೯೬ಬ
Eye surgery – ಕಣ್ಣಿನ ಶಸ್ತ್ರವೈದ್ಯ ೬೦೩ಬ
Fabliau – ಕಥಾನಕ ೬೧೮ಎ
Fencing – ಕತ್ತಿವರಸೆ ೬೧೯ಎ
Ferro-alloys – ಕಬ್ಬಿಣದ ಮಿಶ್ರಲೋಹಗಳು ೯೦೪ಬ
Fibres – ಎಳೆಗಳು ೧೧೨ಎ
Field sports – ಎಸೆತಗಳು ೧೦೧ಎ
First world war – ಒಂದನೆಯ ಮಹಾಯುದ್ಧ ೩೦೧ಬ
Flavourings – ಕಂಪು ಜಿನಸುಗಳು ೪೯೧ಬ
Froncing fan – ಒತ್ತಡದ ಬೀಸಣಿಗೆ ೩೪೦ಬ
Fractures and dislocations – ಎಲುಮುರಿಕೆಗಳು, ಕೀಲ್ತಪ್ಪಿಕೆಗಳು ೪೫ಬ
Framed structure – ಒಳಪಟ್ಟು ಕಟ್ಟಡ ೩೮೫ಬ
Fresh water mussel – ಕಪ್ಪೆಚಿಪ್ಪು ಹುಳು ೮೯೨ಬ
Frog – ಕಪ್ಪೆ ೮೯೧ಎ
Gannet – ಕಡಲ ಹಕ್ಕಿ ೫೭೩ಎ
Garcinia indica – ಕಡೆಗೋಲ ಮುರುಗಲ ೫೬೬ಬ
Gout – ಕಟ್ಟುವಾರೆ ೫೫೫ಎ
Granary – ಕಣಜ ೫೯೦ಎ
Graving dock – ಒಣಕಟ್ಟೆ ೩೩೫ಬ
Gulmohur – ಕತ್ತಿಕಾಯಿಮರ ೬೦೮ಬ
Harvesting machine – ಒಕ್ಕುವಯಂತ್ರ ೩೧೯ಎ
Hay – ಒಣಗಿಸಿರುವ ಮೇವು ೩೩೫ಬ
Hay fever – ಕರಡಜ್ವರ ೯೩೮ಬ
Heron – ಕಬ್ಬಾರೆ ಹಕ್ಕಿ ೮೯ಎ
Historical novel – ಐತಿಹಾಸಿಕ ಕಾದಂಬರಿ ೨೩೨ಎ
Historical play – ಐತಿಹಾಸಿಕ ನಾಟಕ ೨೩೩ಬ
Historical poetry – ಐತಿಹಾಸಿಕ ಕಾವ್ಯ ೨೩೩ಎ
Histrocial school – ಐತಿಹಾಸಿಕ ಪಂಥ ೨೩೬ಬ
Hogbacks – ಏಣುಗಳು ೧೭೭ಎ
Homonyms – ಏಕರೂಪ ಶಬ್ದಗಳು ೧೩೭ಬ
Hyaena – ಕತ್ತೆಕಿರುಬ ೬೧೨ಎ
Hydrocotyle – ಒಂದೆಲಗ ೩೧೬ಎ
Ibex – ಐಬೆಕ್ಸ್ ೨೪೭ಬ
Ibis – ಐಬಿಸ್ ೨೪೬ಎ
Iceland spar – ಐಸ್ಲೆಂಡ್‌ಸ್ಪಾರ್ ೨೯೫ಬ
Idealism – ಐಡಿಯಲಿಸಂ ೨೩೦ಬ
Inbreeding – ಒಳತಳಿ ಸಂತಾನೋತ್ಪಾದನೆ ೩೮೧ಎ
Indefference curves – ಔದಾಸೀನ್ಯ ರೇಖೆಗಳು ೪೪೧ಎ
Inland trade (Home trade) – ಒಳನಾಡಿನ ವ್ಯಾಪಾರ ೩೮೫ಬ
Integration – ಏಕೀಕರಣ ೧೬೧ಎ
Integration, Administrative and political – ಏಕೀಕರಣ, ಆಡಳಿತ ಮತ್ತು ರಾಜಕೀಯ ೧೬೧ಎ
Integration, cultural – ಏಕೀಕರಣ, ಸಾಂಸ್ಕೃತಿಕ ೧೬೪ಎ
Integration in industry – ಏಕೀಕರಣ, ಕೈಗಾರಿಕೆಯಲ್ಲಿ ೧೬೨ಎ
Integration, national – ಏಕೀಕರಣ, ರಾಷ್ಟ್ರೀಯ ೧೬೩ಬ
Integration, social – ಏಕೀಕರಣ, ಸಾಮಾಜಿಕ ೧೬೪ಬ
Intensifier – ಒತ್ತಡ ವರ್ಧಕ ೩೪೧ಎ
Ipomoea – ಐಪೋಮಿಯ ೨೪೪ಬ
Iresine – ಊರಿಸ್ಯೆನಿ ೨೪೯ಬ
Iris – ಐರಿಸ್ ೨೪೮ಬ
Iron – ಕಬ್ಬಿಣ ೮೯ಬ
Iron age – ಕಬ್ಬಿಣಯುಗ ೯೦೬ಎ
Isobar – ಐಸೊಬಾರ್ ೨೮೬ಎ

Isobars, nuclear – ಐಸೊಬಾರುಗಳು (ಪರಮಾಣು ಬೈಜಿಕ) ೨೮೬ಬ
Isoelectric point – ಐಸೊಎಲೆಕ್ಟ್ರಿಕ್ ಬಿಂದು ೨೭೭ಎ
Isoetes – ಐಸೊಯೆಟೀಸ್ ೨೯೩ಬ
Isolepis gracilis – ಐಸೊಲೆಪಿಸ್ ಗ್ರಾಸಿಲಿಸ್ ೨೯೪ಬ
Isoleucine – ಐಸೊಲ್ಯೂಸಿನ್ ೨೯೪ಬ
Isomerases – ಐಸೊಮರೇಸುಗಳು ೨೮೬ಬ
Isomerism – ಐಸೊಮೆರಿಸಂ ೨೮೯ಬ
Isometric system – ಐಸೊಮೆಟ್ರಿಕ್ ವಿಭಾಗ ೨೮೮ಬ
Isonorphism and polymorphism – ಐಸೊಮಾರ್ಫಿಸಂ ಮತ್ತು ಪಾಲಿಮಾರ್ಫಿಸಂ ೨೮೭ಎ
Isoniazid and Iproniazid – ಐಸೊನಿಯಾಝಿಡ್ ಮತ್ತು ಇಪ್ರೊನಿಯಾಝಿಡ್ ೨೮೩ಬ
Isopoda – ಐಸೊಪೋಡ ೨೮೪ಎ
Isoprene – ಐಸೊಪ್ರೀನ್ ೨೮೪ಬ
Isoprene law – ಐಸೊಪ್ರೀನ್ ನಿಯಮ ೨೮೪ಬ
Isopropyl acetate – ಐಸೊಪ್ರೊಪೈಲ್ ಅಸಿಟೇಟ್ ೨೮೫ಬ
Isopropyl alcohol – ಐಸೊಪ್ರೊಪೈಲ್ ಆಲ್ಕೊಹಾಲ್ ೨೮೫ಬ
Isopropyl chloride – ಐಸೊಪ್ರೊಪೈಲ್ ಕ್ಲೋರೈಡ್ ೨೮೬ಎ
Isopropyl Ether – ಐಸೊಪ್ರೊಪೈಲ್ ಈಥರ್ ೨೮೬ಎ
Isotones – ಐಸೊಟೋನುಗಳು ೨೭೮ಎ
Isotopes – ಐಸೊಟೋಪುಗಳು ೨೭೮ಬ
Isozymes – ಐಸೊಝೈಮುಗಳು ೨೭೭ಬ
Itch mite – ಕಜ್ಜಿ ಉಣ್ಣಿ ೫೨೮ಬ
Ivy – ಐವಿ ೨೭೪ಬ
Kaplan Turbine – ಕಪ್ಲಾನ್ ತಿರುಬಾನಿ ೮೯೪ಎ
Kayanite – ಕಯನೈಟ್ ೯೩೩ಎ
Komodo – ಕಮೋಡೋ ೯೨೩ಎ
Krait – ಕಟ್ಟುಹಾವು ೫೫೫ಬ
Lathe – ಕಡೆತದಯಂತ್ರ ೫೮೩ಎ
Law of increasing returns – ಏರುಮುಖ ಪ್ರತಿಫಲ ಸೂತ್ರ ೧೮೧ಎ
Leaf – ಎಲೆ ೪೯ಎ
Leaf Insect – ಎಲೆಹುಳು ೮೧ಬ
Least count – ಕನಿಷ್ಠ ಎಣಿಕೆ ೬೪೧ಎ
Least squares, principle of – ಕನಿಷ್ಠತಮ ವರ್ಗತತ್ತ್ವ ೬೪೩ಎ
Legend – ಐತಿಹ್ಯ ೨೩೭ಬ
Legitimacy and legitimation – ಔರಸತ್ವ ಮತ್ತು ಔರಸೀಕರಣ ೪೪೯ಎ
Leontiasis ossea – ಎಲುಸಿಂಗಮೋರೆ ೪೯ಎ
Line breeding – ಏಕತಳಿ ಸಂತಾನೋತ್ಪಾದನೆ ೧೨೪ಎ
Lodging – ಒರಗುವಿಕೆ (ಪೈರುಗಳ) ೩೫೧ಬ
Lotus – ಕಮಲ ೯೧೬ಎ
Love bird – ಒಲವಿನಹಕ್ಕಿ ೩೭೦ಎ
Macaranga peltata – ಕಂಚುಪ್ರಾಂತಿ ೪೬೯ಬ
Mantis – ಒಂಟೆಹುಳು ೩೦೧ಬ
Marchen – ಕಟ್ಟುಕಥೆ ೫೫೧ಎ
Medicinal plants – ಔಷಧಿಸಸ್ಯಗಳು ೪೫೪ಬ
Minimax principle – ಕನಿಷ್ಠ ಗರಿಷ್ಠ ತತ್ತ್ವ ೬೪೧ಎ
Mirror – ಕನ್ನಡಿ ೮೫೩ಬ
Monism – ಏಕತ್ವವಾದ ೧೨೫ಎ
Monkeys – ಕಪಿಗಳು ೮೭೯ಬ
Monopoly – ಏಕಸ್ವಾಮ್ಯ ೧೪೬ಎ
Monotheism – ಏಕದೇವತಾ ವಾದ ೧೨೮ಬ
Murraya koenigii – ಕರಿಬೇವು ೯೫೮ಎ
Musk melon – ಕರಬೂಜ ೯೪೮ಎ
Naprapathy – ಕಟ್ಟುಬಂಧ ಚಿಕಿತ್ಸೆ ೫೫೫ಎ
Nerium oleander – ಕಣಗಿಲೆ ೫೮೯ಎ
Oak – ಓಕ್ ೩೯೪ಎ
Oarfish – ಓರಮೀನು ೪೨೩ಬ
Oat – ಓಟ್ ೪೦೨ಎ
Oberon – ಓಬೆರಾನ್ ೪೧೯ಬ
Obregonia – ಓವ್ರೆಗಾನಿಯ ೪೩೩ಬ
Ocelot – ಓಸಿಲಾಟ್ ೪೩೭ಬ
Octans – ಓಕ್ಟನ್ಸ್ ೩೯೬ಎ
Odometer – ಓಡೋಮೀಟರ್ ೪೦೮ಎ
Odonata – ಓಡೊನೇಟ ೪೦೭ಎ
Odontornithis – ಓಡೊಂಟಾರ್ನಿಥಿಸ್ ೪೦೭ಎ
Office machines and appliances – ಕಚೇರಿಯ ಯಂತ್ರೋಪಕರಣಗಳು ೫೨೨ಎ
Office organisation – ಕಚೇರಿಯ ಸಂಘಟನೆ ಮತ್ತು ವ್ಯವಸ್ಥಾಪನೆ ೫೨೫ಎ
Ohm's law – ಓಮನ ನಿಯಮ ೪೨೧ಬ
Okapi – ಒಕಾಪಿ ೩೧೬ಬ
Olefins – ಓಲಿಫಿನ್ನುಗಳು ೪೨೪ಬ
Oleic acid – ಓಲಿಯಿಕ್ ಆಮ್ಲ ೪೨೭ಎ
Ollari – ಒಲ್ಲಾರಿ ೩೭೮ಎ
Olympic – ಒಲಂಪಿಕ್ ಕ್ರೀಡೆಗಳು ೩೭೦ಬ
Operon – ಓಪರಾನ್ ೪೧೫ಬ
Ophicephalus marulius – ಔಲುಮೀನು ೪೫೧ಬ
Ophidiidae – ಓಫೊಡ್ಯೆಯಿಡೀ ೪೧೭ಎ
Ophioglossum – ಓಫಿಯೋಗ್ಲಾಸಮ್ ೪೧೮ಬ
Ophiuchus – ಒಫಿಯೂಚಸ್ ೩೫೦ಬ
Ophiuroidea – ಓಫಿಯೂರಾಯ್ಡಿಯ ೪೧೭ಬ
Ophrys – ಓಫ್ರಿಸ್ ೪೧೯ಎ
Onychophora – ಒನಿಕೊಫೊರ ೩೪೫ಎ

Opthalmology – ಕಣ್ಣು ವಿಜ್ಞಾನ ೬೦೪ಎ
Opossum – ಒಪಾಸಂ ೩೪೭ಎ
Optional subjects – ಐಚ್ಛಿಕ ವಿಷಯಗಳು ೨೩೦ಎ
Orangutan – ಒರಾಂಗೂಟಾನ್ ೩೫೨ಎ
Orbit – ಕಕ್ಷೆ ೫೧೩ಬ
Orbital – ಕಕ್ಷಕ ೫೧೦ಬ
Oreocereus – ಒರಿಯೊಸಿರಿಯಸ್ ೩೫೯ಬ
Orifice – ಕಂಡಿ ೪೭೬ಬ
Orion – ಒರ್ರೈಯನ್ ೩೬೮ಬ
Orobanchaceae – ಓರೊಬ್ಯಾಮಕೇಸಿ ೪೨೪ಎ
Orotic acid – ಒರಾಟಿಕ್ ಆಮ್ಲ ೩೫೨ಬ
Orthogenesis – ಏಕಾಭಿಮುಖವಿಕಾಶವಾದ ೧೬೦ಬ
Orthopedic surgery – ಎಲುನೇರ್ಪಿಕ ಶಸ್ತ್ರವೈದ್ಯ ೩೭ಬ
Osazones – ಓಸಝೋನುಗಳು ೪೩೬ಎ
Osteology – ಎಲುಬುವಿಜ್ಞಾನ ೪೫ಬ
Osteopathy – ಎಲುಚಿಕಿತ್ಸೆ ೩೭ಎ
Otto cycle – ಓಟೋ ಆವರ್ತ ೪೦೬ಎ
Oyomei school – ಓ–ಯೋಮೈ ತತ್ತ್ವ ೪೨೩ಬ
Ozone – ಓಝೋನ್ ೩೯೯ಎ
Ozonisation – ಓಝೋನೀಕರಣ ೪೦೦ಬ
Ozonolysis – ಓಝೋನಾಲಿಸಿಸ್ ೪೦೦ಎ
Pachydiplosis oryzae – ಕಣೆರೋಗದ ನೊಣ ೫೯೫ಬ
Particle – ಕಣ ೫೮೮ಎ
Particle accelerators – ಕಣವೇಗೋತ್ಕರ್ಷಕಗಳು ೫೯೨ಎ
Particle detector – ಕಣಸಂಸೂಚಕ ೫೯೩ಬ
Patent – ಏಕಸ್ವ ೧೪೪ಎ
Periodontal diseases – ಒಸಡಿನ ರೋಗಗಳು ೩೭೮ಬ
Phaeophycease (Brown Algae) – ಕಂದು ಆಲ್ಗೆ ೪೮೨ಬ
Pharamacology – ಔಷಧವಿಜ್ಞಾನ ೪೫೩ಎ
Pharmacopoeia – ಔಷಧಮಂಜರಿ ೪೫೨ಬ
Pharmacy – ಔಷಧಗಾರಿಕೆ ೪೫೧ಬ
Piers, arches, abutment piers – ಕಂಬಗಳು, ಕಮಾನುಗಳು, ಗುದ್ದು ಗಂಬಗಳು ೪೯೨ಎ
Piracy – ಕಡಲು ದರೋಡೆ ೫೭೫ಎ
Polyalthia – ಕಂಬದಮರ ೪೯೩ಎ
Pressed metals – ಒತ್ತಿದ ಲೋಹಗಳು ೩೪೨ಬ
Pressure – ಒತ್ತಡ ೩೩೭ಬ
Pressure gauge – ಒತ್ತಡಮಾಪಕ ೩೪೦ಬ
Pressure group – ಒತ್ತಡಗುಂಪು ೩೩೭ಬ
Proof reading – ಕರಡು ತಿದ್ದುವಿಕೆ ೯೪೧ಬ
Puffin (Sea parrot) – ಕಡಲ ಗಿಣಿ ೫೬೯ಬ
Pulleys and belts – ಕಪ್ಪಿಗಳು ಮತ್ತು ಪಟ್ಟಿಗಳು ೮೮೬ಎ
Rahmenerzahlung – ಕಥೆಯೊಳಗಣ ಕಥೆ ೬೨೪ಎ
Ravine – ಕಮರಿ ೯೧೬ಎ
Reaming – ಒಳದೂಡಿಕೆ ೩೮೩ಎ
Requisition – ಕಡ್ಡಾಯದ ಕೋರಿಕೆ ೫೮೪ಬ
Ricinus communis – ಔಡಲ ೪೪೦ಎ
Rickets – ಎಲುಮುರುಟು ೪೮ಎ
Ring – ಒಳಕೂಟ ೩೮೦ಬ
Robin – ಕಡ್ಡುಕಾರಿ ೫೮೮ಎ
Rough leg buzzard hawk – ಒರಟುಕಾಲು ಡೇಗೆ ೩೫೧ಬ
Sambur – ಕಡವೆ ೫೭೯ಬ
Scabies – ಕಜ್ಜಿ ೫೨೮ಬ
Sea anemone – ಕಡಲ ಹೂ ೫೭೪ಎ
Sea arrow – ಕಡಲ ಬಾಣ ೫೭೧ಎ
Sea bear – ಕಡಲ ಕರಡಿ ೫೬೮ಬ
Sea butterfly – ಕಡಲ ಚಿಟ್ಟೆ ೫೭೦ಎ
Sea cow – ಕಡಲ ಪಶು ೫೭೧ಎ
Sea cucumber – ಕಡಲ ಸೌತೆ ೫೭೨ಬ
Sea elephant – ಕಡಲ ಆನೆ ೫೬೮ಎ
Sea fan – ಕಡಲ ಬೀಸಣಿಗೆ ೫೭೧ಬ
Sea hare – ಕಡಲ ಮೊಲ ೫೭೧ಬ
Sea hog – ಕಡಲ ಹಂದಿ ೫೭೩ಎ
Sea horse – ಕಡಲ ಕುದುರೆ ೫೬೯ಎ
Sea lemon – ಕಡಲನಿಂಬೆ ೫೭೦ಬ
Sea leopard (Leopard seal) – ಕಡಲ ಚಿರತೆ ೫೭೦ಬ
Sea lion – ಕಡಲ ಸಿಂಹ ೫೭೨ಎ
Sea mouse – ಕಡಲ ಇಲಿ ೫೬೮ಬ
Sea serpent – ಕಡಲ ಸರ್ಪ ೫೭೨ಎ
Sea snakes – ಕಡಲ ಹಾವುಗಳು ೫೭೩ಬ
Second world war – ಎರಡನೆಯ ಮಹಾಯುದ್ಧ ೧ಎ
Semecarpus anacardium – ಕರಿಗೇರು ೯೫೬ಎ
Sesamum indicum – ಎಳ್ಳು ೧೧೯ಎ
Sewage disposal – ಕಚರಾ ವಿಲೇವಾರಿ ೫೧೮ಎ
Sheave – ಕಪ್ಪಿಚಕ್ರ ೮೮೮ಬ
Skeleton of invertebrates – ಎಲಗಟ್ಟು, ಅಕಶೇರುಕ ೩೦ಎ
Skeleton of vertebrates – ಎಲಗಟ್ಟು, ಕಶೇರುಕ ೩೦ಬ
Slope, gradient – ಓಟ (ಗಣಿತ ವಿಜ್ಞಾನದಲ್ಲಿ) ೪೦೩ಬ
Smithery – ಕಮ್ಮಾರಿಕೆ ೯೨೩ಎ
Sole trading concern – ಏಕವ್ಯಕ್ತಿ ಸಂಸ್ಥೆ ೧೪೦ಬ
Stephegyne parvifolia – ಕಡವಾಳ ೫೭೯ಬ
Stink horn – ಕನ್ಯಾಶ್ರೀ ೮೭೮ಬ
Stork – ಕಂಚುಗಾರ ಕುಕ್ಕ ೪೬೯ಎ

Streak – ಒರೆ ೩೬೮ಎ
Stress and strain – ಒತ್ತಾಯ ಮತ್ತು ವಿಕೃತಿ ೩೪೨ಬ
Stress concentration – ಒತ್ತಾಯ ಕೇಂದ್ರೀಕರಣ ೩೪೨ಎ
Strike – ಓಟ (ಭೂ ವಿಜ್ಞಾನದಲ್ಲಿ) ೪೦೪ಬ
Sugarcane – ಕಬ್ಬು ೯೧೧ಬ
Sunbird – ಕದಿರುಗಿಣಿ ೬೩೨ಎ
Sword fish – ಕತ್ತಿಮೀನು ೬೦೯ಎ
Synchronous motor – ಏಕವೇಗದ ಮೋಟರ್ ೧೩೮ಬ
Systems of units – ಏಕಮಾನ ವ್ಯವಸ್ಥೆಗಳು ೧೩೦ಬ
Tale type – ಕಥಾವರ್ಗ ೬೧೯ಎ
Tenancy – ಒಕ್ಕಲುತನ ೩೧೮ಎ
Thymus – ಓಮಗ್ರಂಥಿ ೪೨೦ಎ
Trachyspermum copticum – ಓಮ ೪೨೩ಬ
Trench – ಕಂದಕ ೪೮೦ಎ
Trench warfare – ಕಂದಕಯುದ್ಧ ೪೮೦ಎ
Treron (green pigeon) – ಕಗ್ಗುಲ ೫೧೬ಬ
Turning – ಕಡೆಯುವುದು ೫೮೩ಬ
Turtles – ಕಡಲಾಮೆಗಳು ೫೭೪ಬ
Tylophora – ಕತ್ತೆಕಾಲಂಬು ೬೧೧ಬ
Tylosis – ಏವೆಯೂತ ೧೦೧ಎ
Uniaxial crystals – ಐಕಅಕ್ಷೀಯ ಹರಳುಗಳು ೧೨೦ಬ
Unicorn – ಏಕಶೃಂಗಿ ೧೪೧ಬ
Uniformitarianism – ಏಕಪ್ರಕಾರತಾವಾದ ೧೩೦ಎ
Uniform probability distribution – ಏಕಸಮ ಸಂಭವ ವಿತರಣೆ ೧೪೨ಎ
Unitarianism – ಏಕೇಶವಾದ ೧೬೫ಬ
Unities – ಏಕತೆಗಳು ೧೨೪ಎ
Units and dimensions – ಏಕಕಗಳು ಮತ್ತು ಆಯಾಮಗಳು ೧೨೦ಬ
Valley – ಕಣಿವೆ ೫೯೪ಬ
Vestibule, organ – ಒಳಗಿವಿಗೂಡು ೩೮೧ಎ
Vibrator – ಕಂಪಕಾರಿ ೪೮೪ಎ
Virgo – ಕನ್ಯಾರಾಶಿ ೮೭೮ಎ
Vocational guidence – ಔದ್ಯೋಗಿಕ ಮಾರ್ಗದರ್ಶನ ೪೪೩ಎ
Washing machine – ಒಗೆಯುವ ಯಂತ್ರ ೩೨೧ಬ
Wasps – ಕಣಜಗಳು ೫೯೧ಎ
Wholeseller – ಒಟ್ಟುವ್ಯಾಪಾರಿ ೩೨೫ಎ
Ziziphus jujuba – ಎಲಚಿ ೨೩ಬ

## ಲೇಖಕಸೂಚಿ

**ಎ.** ಅನಂತರಾಮಯ್ಯ, ಎಂ.ವಿ. (ದಿ)
ಸೂಪರಿಂಟೆಂಡೆಂಟ್ (ವಿ), ಪ್ರಾಣಿ ಸಂಗ್ರಹಾಲಯ
ಮೈಸೂರು

**ಎಬಿ.ಎ.** ಅಬ್ದುಲ್ ಅಜೀಸ್
ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಎ.ಕೆ.** ಕುಮಾರಸ್ವಾಮಿ, ಎ.
ಅಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಎ.ಕೆ.ಕೆ.** ಕಾರಂತ, ಎ.ಕೆ.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎ.ಕೆ.ಎಸ್.** ಕೃಷ್ಣಸ್ವಾಮಿ, ಎ.
ಜಿಲ್ಲಾ ಅರಣ್ಯಾಧಿಕಾರಿ (ವಿ)
74, 3ನೆಯ ಮುಖ್ಯರಸ್ತೆ, ಬಿ.ಎಸ್.ಸಿ.ಎಸ್. ಲೇಔಟ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು

**ಎ.ಕೆ.ಎಸ್.ಎಚ್.** ಅನಂತಕೃಷ್ಣಶರ್ಮ
ಕಾಸ್ಟ್ ಅಕೌಂಟೆಂಟ್
ಜಾವಾ ಮೋಟಾರ್ ಸೈಕಲ್ ಕಂಪನಿ, ಮೈಸೂರು

**ಎ.ಎಂ.** ಮೈಲಾರ್‌ರಾವ್, ಎ.
ವಿಶ್ರಾಂತ ಸಂಪಾದಕ, ಮಾನವಿಕ ವಿಭಾಗ
ಕನ್ನಡ ವಿಶ್ವಕೋಶ, ಮೈಸೂರು

**ಎ.ಎಂ.ಎ.** ಅಣ್ಣಿಗೇರಿ, ಎ.ಎಂ.
ಸಹಾಯಕ ಸಂಶೋಧಕ (ವಿ), ಪ್ರಾಕ್ತನಶಾಸ್ತ್ರ ಇಲಾಖೆ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

**ಎ.ಎಂ.ಆರ್.** ರಾಜಶೇಖರಯ್ಯ, ಎ.ಎಂ.
ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎ.ಎಂ.ಎಸ್.** ಶ್ರೀಕಂಠರಾವ್, ಎ.ಎಂ.
ಮನಶ್ಶಾಸ್ತ್ರಜ್ಞ, ಶ್ರೀರಾಮಕೃಷ್ಣ ವಿದ್ಯಾಲಯ
ಮೈಸೂರು

**ಎ.ಎನ್.** ಅನುಪಮಾ ನಿರಂಜನ (ದಿ)
ಖಾಸಗಿ ವೈದ್ಯರು
ನಾಲ್ಕನೆಯ ಬ್ಲಾಕ್–ಟಿ, ಜಯನಗರ
ಬೆಂಗಳೂರು

**ಎ.ಎನ್‌ಎ.** ನಾರಾಯಣಪ್ಪ, ಎ.
ವೈದ್ಯ, ಬೇಲೂರು ರಸ್ತೆ, ಜಿಲ್ಲಾ ಆಸ್ಪತ್ರೆ
ಚಿಕ್ಕಮಗಳೂರು

**ಎ.ಎನ್.ಎಸ್.** ನಾಗಭೂಷಣರಾವ್ ಸಿಂಧೆ, ಎ.
ಪ್ರಾಧ್ಯಾಪಕ (ವಿ), ಜೈವಿಕವಿಜ್ಞಾನ ವಿಭಾಗ
ಸ್ನಾತಕೋತ್ತರ ಕೇಂದ್ರ
ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

**ಎ.ಎನ್.ಎಸ್.ಐ.** ಶ್ರೀನಿವಾಸ ಐಯ್ಯಂಗಾರ್, ಎ.ಎನ್. (ದಿ)
ಭೂವಿಜ್ಞಾನಿ, ಶ್ರೀ ಶಾನುದಾಸ ಗ್ರಂಥಮಾಲಾ
ಮೇಲುಕೋಟೆ

**ಎ.ಎನ್.ಎಸ್.ಎಂ.** ಮೂರ್ತಿ, ಎ.ಎನ್.ಎಸ್. (ದಿ)
ಕ್ಯಾಪ್ಟನ್ (ವಿ), ಬೆಂಗಳೂರು

**ಎ.ಪಿಆರ್.** ಅಲೋಷಿಯಸ್ ಪ್ರಭು
ಸೇಂಟ್ ಜೋಸೆಫ್ಸ್ ಸೆಮಿನರಿ, ಮಂಗಳೂರು

**ಎ.ಪಿ.ಎಸ್.** ಶ್ರೀನಿವಾಸಮೂರ್ತಿ, ಎ.ಪಿ.
ರೀಡರ್ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

# ಲೇಖಕಸೂಚಿ

| | |
|---|---|
| ಎ.ಆರ್.ಎ. | ಆದ್ಯ ರಂಗಾಚಾರ್ಯ (ದಿ)<br>(ಶ್ರೀರಂಗ) ಮಲ್ಲೇಶ್ವರಂ, ಬೆಂಗಳೂರು |
| ಎ.ಆರ್.ಸಿ.ಪಿ. | ಚಿಕ್ಕಪಾಪಯ್ಯ, ಎ.ಆರ್.<br>ಗೌರವ ಕಾರ್ಯದರ್ಶಿ<br>ಮೈಸೂರು ರಾಜ್ಯ ಒಲಿಂಪಿಕ್ ಅಸೋಸಿಯೇಷನ್<br>6ನೆಯ ಬ್ಲಾಕ್, ಜಯನಗರ, ಬೆಂಗಳೂರು |
| ಎ.ಆರ್.ಎಂ. | ಮಿತ್ರ, ಎ.ಆರ್.<br>ಅಧ್ಯಾಪಕ (ವಿ), ಕನ್ನಡ ವಿಭಾಗ<br>ಸೇಂಟ್ ಜೋಸೆಫ್ಸ್ ಕಾಲೇಜು, ಬೆಂಗಳೂರು |
| ಎ.ಎಸ್.ಒ. | ಅಮೃತ ಸೋಮೇಶ್ವರ<br>ಅಧ್ಯಾಪಕ, ಕನ್ನಡ ವಿಭಾಗ<br>ವಿವೇಕಾನಂದ ಕಾಲೇಜು, ಪುತ್ತೂರು (ದ.ಕ.) |
| ಎ.ಎಸ್‌ಯು. | ಸುಂದರ, ಎ.<br>ಪ್ರಾಧ್ಯಾಪಕ (ವಿ), ಹಿಮಶೃಂಗ<br>ಶಾರದಾನಗರ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ |
| ಎ.ವಿ. | ವೆಂಕಟಸುಬ್ಬಯ್ಯ, ಎ.<br>ದೇವಪ್ರಸಾದ, ಸೋನಾರ್ ಸ್ಟ್ರೀಟ್<br>ಚಾಮರಾಜಮೊಹಲ್ಲ, ಮೈಸೂರು |
| ಎ.ವಿ.ಎನ್. | ನರಸಿಂಹಮೂರ್ತಿ, ಎ.ವಿ.<br>ಪ್ರಾಧ್ಯಾಪಕ (ವಿ), ದೇವಗಿರಿ<br>ಗೋಕುಲಂ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು |
| ಬಿ. | ಭೀಮಾಚಾರ್ಯ<br>ಉಪಾಧ್ಯಾಯ (ವಿ)<br>ಸರ್ಕಾರಿ ವಿವಿಧೋದ್ದೇಶ ಪ್ರೌಢಶಾಲೆ, ಗುಲ್ಬರ್ಗ |
| ಬಿ.ಎ.ಸಿ. | ಚನ್ನಪ್ಪಗೌಡ, ಬಿ.ಎ.<br>ತಾಂತ್ರಿಕ ಸಹಾಯಕ, ತೋಟಗಾರಿಕೆ ಇಲಾಖೆ<br>ಲಾಲ್‌ಬಾಗ್, ಬೆಂಗಳೂರು |
| ಬಿ.ಬಿ.ಎಸ್. | ಭವಾನಿ ಶಂಕರರಾವ್, ಬಿ.<br>ಆನಂದಾಶ್ರಮ, 10ನೆಯ ಮೇನ್ ರಸ್ತೆ<br>ಮಲ್ಲೇಶ್ವರಂ, ಬೆಂಗಳೂರು |
| ಬಿ.ಸಿ.ಎಸ್. | ಸುಬ್ಬರಾವ್, ಬಿ.ಸಿ.<br>ಹಿಂದೂಸ್ತಾನ್ ಲಿವರ್ ರಿಸರ್ಚ್ ಸೆಂಟರ್<br>ಅಂಧೇರಿ, ಮುಂಬಯಿ |
| ಬಿ.ಜಿ. | ಬ್ರಹ್ಮಪ್ಪ, ಜಿ.<br>ಪ್ರಾಂಶುಪಾಲರು (ವಿ)<br>ಸಿದ್ಧಾರ್ಥ ಲೇಔಟ್, ಮೈಸೂರು |
| ಬಿ.ಜಿ.ಆರ್. | ರಮೇಶ್, ಬಿ.ಜಿ.<br>ನಿ. ಇಂಜಿನಿಯರ್, ಕೆ.ಪಿ.ಸಿ<br>ರಾಜಾಜಿನಗರ, ಬೆಂಗಳೂರು–10 |
| ಬಿಎಚ್.ಎ. | ಹುನುಮಯ್ಯ, ಬಿ.<br>ಪ್ರಾಧ್ಯಾಪಕ, ಶಸ್ತ್ರವೈದ್ಯ ವಿಭಾಗ<br>ಬೌರಿಂಗ್ ಆಸ್ಪತ್ರೆ, ಬೆಂಗಳೂರು |
| ಬಿಎಚ್.ಕೆ. | ಭದ್ರಿರಾಜು ಕೃಷ್ಣಮೂರ್ತಿ (ದಿ)<br>ಪ್ರಾಧ್ಯಾಪಕ (ವಿ), ಭಾಷಾವಿಜ್ಞಾನ ವಿಭಾಗ<br>ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಾಬಾದು |
| ಬಿ.ಎಚ್.ಎಸ್. | ಶ್ರೀಧರ, ಬಿ.ಎಚ್.<br>ಪ್ರಾಂಶುಪಾಲರು (ವಿ)<br>ಗಾಂಧಿ ಸೆಂಟಿನರಿ ಮೆಮೋರಿಯಲ್ ಕಾಲೇಜು<br>ಸಿದ್ಧಾಪುರ (ಉ.ಕ.) |
| ಬಿ.ಕೆ.ಸಿ. | ಚಕ್ರಪಾಣಿ ಅಯ್ಯಂಗಾರ್, ಬಿ.ಕೆ. (ದಿ)<br>ರೀಡರ್ (ವಿ), ಇತಿಹಾಸ ವಿಭಾಗ<br>ಸರ್ಕಾರಿ ಕಾಲೇಜು, ತುಮಕೂರು |
| ಬಿ.ಕೆ.ಜಿ. | ಗುರುರಾಜರಾವ್, ಬಿ.ಕೆ. (ದಿ)<br>ಪ್ರಾಧ್ಯಾಪಕ (ವಿ)<br>ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಕೆ.ಎಸ್. | ಶಿವರಾಮಯ್ಯ, ಬಿ.ಕೆ. (ದಿ)<br>ರೀಡರ್ (ವಿ), ಸಂಸ್ಕೃತ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಲ್.ಆರ್. | ರಾಮಸ್ವಾಮಿ, ಬಿ.ಎಲ್.<br>ಸಹಾಯಕ ನಿರ್ದೇಶಕ, ದೈಹಿಕ ಶಿಕ್ಷಣ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಬಿ.ಎಂ. | ಮುದ್ದಾಚಾರಿ, ಬಿ. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎನ್.ಬಿ. | ಬೋಳೇಗೌಡ, ಬಿ.ಎನ್. (ದಿ)<br>ರೀಡರ್, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎನ್.ಸಿ. | ಚಂದ್ರಯ್ಯ, ಬಿ.ಎನ್.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| ಬಿ.ಎನ್.ಎನ್. | ನಾರಾಯಣರಾವ್, ಬಿ.ಎನ್. (ದಿ)<br>ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಸೇಂಟ್ ಫಿಲೋಮಿನ ಕಾಲೇಜು, ಮೈಸೂರು |
| ಬಿ.ಎನ್.ಎಸ್. | ಸಿನ್ನ, ಬಿ.ಎನ್.<br>ಮುಖ್ಯಸ್ಥ, ಭೂಗೋಳಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಬಿ.ಪಿ. | ಪಾಲಾಕ್ಷ, ಬಿ.<br>ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಬಿ.ಪಿ.ಸಿ. | ಚನ್ನಬಸಪ್ಪ, ಬಿ.ಪಿ.<br>ಪ್ರಾಧ್ಯಾಪಕ, ಕೀಟವಿಜ್ಞಾನ ವಿಭಾಗ<br>ಕೃಷಿ ಕಾಲೇಜು, ಹೆಬ್ಬಾಳ, ಬೆಂಗಳೂರು |
| ಬಿ.ಪಿ.ಜಿ. | ಗೋಪಾಲಕೃಷ್ಣ, ಬಿ.ಪಿ.<br>ಪ್ರಾಂಶುಪಾಲರು (ವಿ)<br>ಬೆಂಗಳೂರು ಎಂಜಿನಿಯರಿಂಗ್ ಕಾಲೇಜು<br>ಬೆಂಗಳೂರು<br>(ಅಧ್ಯಕ್ಷ, ಶಿಲ್ಪವಿಜ್ಞಾನ ಉಪಸಮಿತಿ, ಕನ್ನಡ ವಿಶ್ವಕೋಶ)<br>231–1, ಶ್ರೀರಾಮ, 5ನೆಯ ರಸ್ತೆ<br>ಚಾಮರಾಜಪೇಟೆ, ಬೆಂಗಳೂರು |
| ಬಿ.ಪಿ.ಆರ್. | ರಾಧಾಕೃಷ್ಣ, ಬಿ.ಪಿ.<br>ನಿರ್ದೇಶಕ<br>ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು |
| ಬಿ.ಪಿ.ಯು. | ಪುಟ್ಟಯ್ಯ, ಬಿ.<br>ಅಡ್ವೊಕೇಟ್, ಬೆಂಗಳೂರು |
| ಬಿ.ಆರ್. | ರಾಮಯ್ಯ, ಬಿ.<br>ತೆಲುಗು ಅಧ್ಯಾಪಕ<br>ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಆರ್.ಬಿ. | ಭಟ್ಟ, ಬಿ.ಆರ್.<br>ರೀಡರ್ (ವಿ), ಸಂಖ್ಯಾವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |

**ಬಿ.ಆರ್.ಎಚ್.** ಹೆಗಡೆ, ಬಿ.ಆರ್.<br>ಉಪ ಪ್ರಾಧ್ಯಾಪಕ, ಕೃಷಿ ಕಾಲೇಜು<br>ಹೆಬ್ಬಾಳ, ಬೆಂಗಳೂರು

**ಬಿ.ಆರ್.ಎಂ.** ಮೋದಕ್, ಬಿ.ಆರ್.<br>ಕರ್ನಾಟಕ ಆರ್ಟ್ಸ್ ಕಾಲೇಜು<br>ಧಾರವಾಡ

**ಬಿ.ಎಸ್.** ಶಿವಮೂರ್ತಿಶಾಸ್ತ್ರೀ, ಬಿ. (ದಿ)<br>ಸಂಪಾದಕ, ಶರಣಸಾಹಿತ್ಯ, ಬೆಂಗಳೂರು

**ಬಿ.ಎಸ್.ಎ.** ಷೇಕ್ ಆಲಿ, ಬಿ.<br>ಕುಲಪತಿಗ (ವಿ)<br>ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

**ಬಿ.ಎಸ್‌ಎಚ್.** ಶಾಮಸುಂದರ, ಬಿ.<br>ಕನ್ನಡ ವಿಶ್ವಕೋಶ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು

**ಬಿ.ಎಸ್.ಕೆ.** ಕೃಷ್ಣಸ್ವಾಮಿ ಅಯ್ಯಂಗಾರ್, ಬಿ.ಎಸ್. (ದಿ)<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಬಿ.ಎಸ್.ಎಂ.** ಮಯೂರ, ಬಿ.ಎಸ್.<br>ಪ್ರಾಧ್ಯಾಪಕಿ (ವಿ), ಭೌತವಿಜ್ಞಾನ ವಿಭಾಗ<br>ಮಹಾರಾಣಿ ಕಾಲೇಜು, ಬೆಂಗಳೂರು

**ಬಿ.ಎಸ್.ಎನ್.** ನರಸಿಂಹ ಐಯ್ಯಂಗಾರ್, ಬಿ.ಎಸ್.<br>ಜಯನಗರ, ಬೆಂಗಳೂರು

**ಬಿ.ಎಸ್.ಆರ್.ಆರ್.** ರಾಮರಾವ್, ಬಿ.ಎಸ್. (ದಿ)<br>ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು

**ಬಿ.ಎಸ್.ಎಸ್.ಎ.** ಶ್ರೀಕಂಠಾರಾಧ್ಯ, ಬಿ.ಎಸ್.<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು

**ಬಿ.ಎಸ್‌ಯು.** ಬಾಟ್ನಿ ಸುಬ್ಬರಾವ್<br>ಅಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಕೋಲಾರ

**ಬಿ.ಎಸ್‌ಯುಬಿ.** ಸುಬ್ಬರಾಮಯ್ಯ, ಬಿ.<br>ಸರ್ಜನ್ (ವಿ), ಗೌರೀಶಂಕರ ನಿಲಯ<br>ನೆಹರೂ ನಗರ, ಬೆಂಗಳೂರು

**ಬಿ.ಟಿಎಚ್.** ತಿರುಮಲಾಚಾರ್ಯ, ಬಿ.<br>ಚಾಮರಾಜಪೇಟೆ<br>ಬೆಂಗಳೂರು

**ಬಿ.ವಿ.ಜಿ.** ಗೋವಿಂದರಾಜುಲು, ಬಿ.ವಿ. (ದಿ)<br>ಪ್ರಾಧ್ಯಾಪಕ, ಭೂವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು

**ಬಿ.ವಿ.ಕೆ.** ಕೃಷ್ಣಸ್ವಾಮಿ, ಬಿ.ವಿ.<br>ವ್ಯಾಯಾಮ ಶಿಕ್ಷಕ<br>ಪಿ.ಇ.ಎಸ್. ಎಂಜಿನಿಯರಿಂಗ್ ಕಾಲೇಜು<br>ಮಂಡ್ಯ

**ಬಿ.ವಿ.ವಿ.** ವೆಂಕಟರಾವ್, ಬಿ.ವಿ.<br>ಸಹಪ್ರಾಧ್ಯಾಪಕ, ಪ್ರಕಟನ ವಿಭಾಗ<br>ಕೃಷಿ ಕಾಲೇಜು, ಹೆಬ್ಬಾಳ, ಬೆಂಗಳೂರು

**ಸಿ.ಎ.ಆರ್.** ನೋಡಿ: ಎ.ಆರ್.ಸಿ.ಪಿ. (ಚಿಕ್ಕಪಾಪಯ್ಯ, ಎ.ಆರ್.)

**ಸಿ.ಸಿ.ಪಿ.** ಪಟ್ಟಣಶೆಟ್ಟಿ, ಸಿ.ಸಿ.<br>ಪ್ರಾಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ<br>(ಅಧ್ಯಕ್ಷ, ವಾಣಿಜ್ಯ ಮತ್ತು ವ್ಯಾಪಾರ ಉಪಸಮಿತಿ,<br>ಕನ್ನಡ ವಿಶ್ವಕೋಶ)

**ಸಿ.ಡಿ.** ಚಾರಲ್ಸ್ ಡಿ'ಸೋಜ<br>ಪ್ರಾಧ್ಯಾಪಕ, ಪೆಥಾಲಜಿ<br>ಮೆಡಿಕಲ್ ಕಾಲೇಜು, ಮೈಸೂರು

**ಸಿ.ಜಿ.ಕೆ.** ಕೃಷ್ಣಮೂರ್ತಿ, ಸಿ.ಜಿ. (ದಿ)<br>ಸಹಾಯಕ ನಿರ್ದೇಶಕ, ಮೀನುಗಾರಿಕೆ ಇಲಾಖೆ<br>ಬೆಂಗಳೂರು ಡಿವಿಷನ್, ಬೆಂಗಳೂರು

**ಸಿ.ಜಿ.ಪಿ.** ಪುರುಷೋತ್ತಮ, ಸಿ.ಜಿ. (ದಿ)<br>ಪ್ರಾಧ್ಯಾಪಕ (ವಿ), ಪ್ರಾಕ್ತನಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು

**ಸಿ.ಕೆ.ವಿ.** ಚೆನ್ನವೀರ ಕಣವಿ<br>ನಿರ್ದೇಶಕ (ವಿ), ಪ್ರಕಾಶನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಸಿ.ಕೆ.ಪಿ.** ಪರಶುರಾಮಯ್ಯ, ಸಿ.ಕೆ.<br>ಸಹಾಯಕ ಸಂಪಾದಕ (ವಿ)<br>ಪಂಚಾಯತ್ ರಾಜ್ಯ ಪತ್ರಿಕೆ<br>ವಾರ್ತಾ ಇಲಾಖೆ, ಬೆಂಗಳೂರು

**ಸಿ.ಕೆ.ಆರ್.** ರೇಣುಕಾರ್ಯ, ಸಿ.ಕೆ.<br>ಪ್ರಾಧ್ಯಾಪಕ (ವಿ), ನಿರ್ದೇಶಕರು<br>ಮಹಾಜನ ಸ್ನಾತಕೋತ್ತರ ಕೇಂದ್ರ<br>ಕೆ.ಆರ್.ಎಸ್. ರಸ್ತೆ, ಮೈಸೂರು

**ಸಿ.ಕೆ.ವಿ.** ವೆಂಕಟನರಸಿಂಹಯ್ಯ, ಸಿ.ಕೆ.<br>ರೀಡರ್, ಭೌತವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು

**ಸಿ.ಕೆ.ವೈ.ಡಿ.** ದೀಕ್ಷಿತ, ಸಿ.ಕೆ.ವೈ.<br>ಅಧ್ಯಾಪಕ<br>ಡಿ.ಆರ್.ಎಂ. ಕಾಲೇಜು, ದಾವಣಗೆರೆ

**ಸಿ.ಎಂ.** ಮ್ಯಾಕ್‌ಫ್ಯಾಡನ್, ಸಿ.<br>ಅಧ್ಯಕ್ಷ (ವಿ), ಭೂಗೋಳವಿಜ್ಞಾನ ವಿಭಾಗ<br>ಲಾಸ್‌ಏಂಜಲಿಸ್, ಕ್ಯಾಲಿಫೋರ್ನಿಯ, ಯು.ಎಸ್.ಎ.

**ಸಿ.ಎಂ.ಎಂ.** ಮುನಿರಾಮಪ್ಪ, ಸಿ.ಎಂ.<br>ರೀಡರ್, ವಾಣಿಜ್ಯಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು

**ಸಿ.ಎನ್.ಜಿ.** ಗಣಪತಿ, ಸಿ.ಎನ್.<br>ಪ್ರಾಧ್ಯಾಪಕ, ಪಶುವೈದ್ಯ ವಿಭಾಗ<br>ಮೈಸೂರು ಪಶುವೈದ್ಯ ಕಾಲೇಜು<br>ಹೆಬ್ಬಾಳ, ಬೆಂಗಳೂರು

**ಸಿ.ಪಿ.** ಚಂಬಿ ಪುರಾಣಿಕ್<br>ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ<br>ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ (KSOU)<br>ಮೈಸೂರು

**ಸಿ.ಪಿ.ಕೆ.** ಕೃಷ್ಣಕುಮಾರ್, ಸಿ.ಪಿ.<br>ಪ್ರಾಧ್ಯಾಪಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು

ಸಿ.ಎಸ್.ಬಿ. ಸೇತೂಬಾಯಿ, ಸಿ. (ದಿ)
ಅಧ್ಯಾಪಕಿ (ಇಂಗ್ಲಿಷ್) (ವಿ), ಸಮಾಜಶಾಸ್ತ್ರ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಸಿ.ವಿ.ಡಿ. ಧೂಳಪ್ಪ, ಸಿ.ವಿ.
ಸಸ್ಯಶಾಸ್ತ್ರ ವಿಭಾಗ, ಕೃಷಿ ಕಾಲೇಜು
ಧಾರವಾಡ

ಸಿ.ವಿ.ಆರ್. ರಂಗಸ್ವಾಮಿ, ಸಿ.ವಿ.
ಪ್ರಾಂಶುಪಾಲರು (ವಿ), ಜೆ.ಟಿ. ಕಾಲೇಜು
ಗದಗ

ಡಿ.ಸಿ. ಚಾಮರಾಜ್, ಡಿ.
ವೈಸ್ ಡೀನ್, ಮಿಂಟೋ ಕಣ್ಣಾಸ್ಪತ್ರೆ
ಬೆಂಗಳೂರು

ಡಿ.ಜಿ. ಗಣೇಶ್, ಡಿ.
ಕ್ಯೂರೇಟರ್ (ವಿ), ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಡಿ.ಎಚ್.ಕೆ. ಕೊಪ್ಪರ್, ಡಿ.ಎಚ್.
ಕ್ಯೂರೇಟರ್, ಲೇಡಿ ವಿಲ್ಸನ್ ಮ್ಯೂಸಿಯಂ
ಧರ್ಮವರ್, ಸೂರತ್ ಡಿಸ್ಟ್ರಿಕ್ಟ್

ಡಿ.ಎಂ. ಮುನಿಸ್ವಾಮಿ, ಡಿ.
ಪ್ರಾಧ್ಯಾಪಕ (ವಿ), ಪ್ರಕಾಶನ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಡಿ.ಎಂ.ಎನ್. ನಂಜುಂಡಪ್ಪ, ಡಿ.ಎಂ.
ಪ್ರಾಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಿ.ಎನ್. ನರಸಿಂಹಯ್ಯ, ಡಿ.
ಸೀನಿಯರ್ ಸಹನಿರ್ದೇಶಕ
ಸರ್ಕಾರಿ ಮುದ್ರಣಾಲಯ, ಬೆಂಗಳೂರು

ಡಿ.ಎನ್.ಎ. ಧ್ರುವನಾರಾಯಣ
ಅಧ್ಯಾಪಕ (ವಿ), ಎಲ್.ವಿ.ಡಿ. ಕಾಲೇಜು
ರಾಯಚೂರು

ಡಿ.ಎನ್.ಎಂ. ದೇವೇಂದ್ರನಾಥ ಮೊಹಾಂತಿ
ಅಧ್ಯಾಪಕ, ಒರಿಯ ಭಾಷೆ
ಕ್ರೈಸ್ಟ್ ಕಾಲೇಜು, ಕಟಕ್

ಡಿ.ಎನ್.ಎಸ್.ಎಂ. ಶ್ರೀನಿವಾಸಮೂರ್ತಿ, ಡಿ.ಎನ್.
ಪ್ರಾಧ್ಯಾಪಕ (ವಿ), ವಾಣಿಜ್ಯವಿಜ್ಞಾನ ವಿಭಾಗ
ಡಿ.ಆರ್.ಎಂ. ಕಾಲೇಜು, ದಾವಣಗೆರೆ

ಡಿ.ಪಿ.ಜೆ. ಜಯರಾಮ್, ಡಿ.ಪಿ.
ಪ್ರಾಧ್ಯಾಪಕ (ವಿ), ವೈಸ್ ಡೀನ್
ಕೆ.ಆರ್. ಆಸ್ಪತ್ರೆ, ಮೈಸೂರು

ಡಿ.ಆರ್. ರಂಗಯ್ಯ, ಡಿ.
ಪ್ರವಾಚಕ (ವಿ), ಭೂವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಡಿ.ಆರ್ಎ. ರಾಜು, ಡಿ. (ದಿ)
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಡಿ.ಎಸ್. ಶೇಷಗಿರಿರಾವ್, ಡಿ. (ದಿ)
ಕೀಟವಿಜ್ಞಾನಿ (ವಿ), ಕೃಷಿ ಇಲಾಖೆ
ಮೈಸೂರು ಸರ್ಕಾರ, ಬೆಂಗಳೂರು

ಡಿ.ಎಸ್.ಕೆ. ಕರ್ಕಿ, ಡಿ.ಎಸ್. (ದಿ)
ಪ್ರಾಂಶುಪಾಲರು (ವಿ)
ಕಾಡಸಿದ್ಧೇಶ್ವರ ಕಾಲೇಜು, ಹುಬ್ಬಳ್ಳಿ

ಡಿ.ಎಸ್.ಒ. ಡಿ'ಸೋಜ
ಪ್ರಾಂಶುಪಾಲರು
ಸೇಂಟ್ ಜೋಸೆಫ್ ಕಾಲೇಜು, ಬೆಂಗಳೂರು

ಡಿ.ಎಸ್.ಎಸ್. ಶಿವಪ್ಪ, ಡಿ.ಎಸ್. (ದಿ)
ಪ್ರಾಧ್ಯಾಪಕ (ವಿ), ಔಷಧವಿಜ್ಞಾನ ವಿಭಾಗ
ಮೈಸೂರು ಮೆಡಿಕಲ್ ಕಾಲೇಜು, ಮೈಸೂರು

ಜಿ.ಬಿ. ಬೋರಯ್ಯ, ಜಿ. (ದಿ)
ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಜಿ.ಬಿ.ಡಿ. ಧಾಲ್, ಜಿ.ಬಿ.
ಪುರಿ ಕಾಲೇಜು, ಪುರಿ, ಒರಿಸ್ಸ

ಜಿ.ಬಿ.ಆರ್. ಗೋಪಾಲ್, ಬಿ.ಆರ್. (ದಿ)
ರೀಡರ್, ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜಿ.ಜಿ. ಗಿರಡ್ಡಿ ಗೋವಿಂದರಾಜ
ಇಂಗ್ಲಿಷ್ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ
ಗುಲ್ಬರ್ಗ

ಜಿ.ಎಚ್. ಹನುಮಂತರಾವ್, ಜಿ. (ದಿ)
ಅಧ್ಯಕ್ಷ, ತತ್ತ್ವಶಾಸ್ತ್ರ ಉಪಸಮಿತಿ
ಕನ್ನಡ ವಿಶ್ವಕೋಶ, ಮೈಸೂರು

ಜಿ.ಕೆ.ಎ. ಗೌರೀಶ ಕಾಯ್ಕಿಣಿ
ಪತ್ರಿಕೋದ್ಯಮಿ
ಗೋಕರ್ಣ, ಉತ್ತರ ಕರ್ನಾಟಕ

ಜಿ.ಎಂ.ಬಿ. ಬಸವರಾಜ್, ಜಿ.ಎಂ. (ದಿ)
ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಸಹ್ಯಾದ್ರಿ ಕಾಲೇಜು, ಶಿವಮೊಗ್ಗ

ಜಿ.ಪಿ.ಸಿ. ಚೆನ್ನಬಸವಣ್ಣ, ಜಿ.ಪಿ.
ಸಹಪ್ರಾಧ್ಯಾಪಕ, ಕೀಟವಿಜ್ಞಾನ ವಿಭಾಗ
ಐ.ಎ.ಆರ್.ಐ., ನವದೆಹಲಿ
96, ಪಿ.ಜಿ. ಹಾಸ್ಟೆಲ್ (ಒ.ಡಬ್ಲ್ಯು.)
ಐ.ಎ.ಆರ್.ಐ. ನವದೆಹಲಿ

ಜಿ.ಆರ್.ಸಿ. ಚಂದ್ರಶೇಖರ್, ಜಿ.ಆರ್.
ಪ್ರಾಧ್ಯಾಪಕ, ವೈದ್ಯವಿಭಾಗ
ಮೆಡಿಕಲ್ ಕಾಲೇಜು, ಬೆಂಗಳೂರು

ಜಿ.ಆರ್.ಆರ್. ರಂಗಸ್ವಾಮಯ್ಯ, ಜಿ.ಆರ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಜಿ.ಎಸ್.ಎ. ಅಣ್ಣಯ್ಯ, ಜಿ.ಎಸ್.
ಉಪನಿರ್ದೇಶಕ (ವಿ)
ಗಣಿ ಮತ್ತು ಭೂವಿಜ್ಞಾನ ಇಲಾಖೆ
ಬೆಂಗಳೂರು

ಜಿ.ಎಸ್.ಡಿ. ದೀಕ್ಷಿತ್, ಜಿ.ಎಸ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜಿ.ಎಸ್.ಜಿ. ಗಾಯಿ, ಜಿ.ಎಸ್. (ದಿ)
ಚೀಫ್ ಎಪಿಗ್ರಫಿಸ್ಟ್
ಭಾರತ ಸರ್ಕಾರದ ಶಾಸನ ಸಂಶೋಧನ ಸಂಸ್ಥೆ
ಮೈಸೂರು

| | |
|---|---|
| **ಜಿ.ಎಸ್‌ಆರ್.** | ಶ್ರೀರಾಮರೆಡ್ಡಿ, ಜಿ.<br>ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಜಿ.ಎಸ್.ಎಸ್.** | ಶಿವರುದ್ರಪ್ಪ, ಜಿ.ಎಸ್. (ದಿ)<br>ಪ್ರಾಧ್ಯಾಪಕ, ಕನ್ನಡ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಜಿ.ಟಿ.ಜಿ.** | ಗುಬ್ಬಣ್ಣ, ಜಿ.ಟಿ.<br>ವೈಸ್‌ಪ್ರಿನ್ಸಿಪಾಲ್ (ವಿ)<br>ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು<br>ಮೈಸೂರು |
| **ಜಿ.ಟಿ.ಎಚ್.** | ಹುಚ್ಚಪ್ಪ, ಜಿ.ಟಿ. (ದಿ)<br>ಪ್ರಾಧ್ಯಾಪಕ, ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಜಿ.ಟಿ.ಪಿ.** | ಪಟೇಲ್, ಜಿ.ಟಿ.<br>ಅಧ್ಯಾಪಕ, ವೈದ್ಯ ವಿಭಾಗ<br>ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು |
| **ಜಿ.ವಿ.ಬಿ.ಎನ್.** | ನಾಯ್ಡು, ಜಿ.ವಿ.ಬಿ.<br>ಕೃಷಿ ವಿಭಾಗದ ಉಪನಿರ್ದೇಶಕ<br>ಮೈಸೂರು ಸರ್ಕಾರ, ಕಾರವಾರ |
| **ಜಿ.ವಿ.ಎಸ್.** | ವೆಂಕಟಸುಬ್ಬಯ್ಯ, ಜಿ.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ವಿಜಯಾ ಕಾಲೇಜು, ಬೆಂಗಳೂರು |
| **ಎಚ್.ಬಿ.ಡಿ.** | ದೇವರಾಜ ಸರ್ಕಾರ್, ಎಚ್.ಬಿ.<br>ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎಚ್.ಸಿ.** | ಚನ್ನಯ್ಯ, ಎಚ್.<br>ಸೂಪರಿಂಟೆಂಡಿಂಗ್ ಎಂಜಿನಿಯರ್ (ವಿ)<br>ಮೈಸೂರು ಸರ್ಕಲ್, ಮೈಸೂರು |
| **ಎಚ್.ಸಿ.ಕೆ.** | ಕಪನೀಪತಿಭಟ್ಟ, ಎಚ್.ಸಿ. (ದಿ)<br>ಪ್ರಾಂಶುಪಾಲರು<br>ಎಸ್.ಕೆ.ಎಸ್.ಜೆ.ಟಿ. ಇನ್‌ಸ್ಟಿಟ್ಯೂಟ್<br>ಸನ್ನಿಧಿ ರಸ್ತೆ, ಬಸವನಗುಡಿ, ಬೆಂಗಳೂರು |
| **ಎಚ್.ಜಿ.ಆರ್.** | ರಂಗಸ್ವಾಮಿ ಅಯ್ಯಂಗಾರ್, ಎಚ್.ಜಿ.<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಸರ್ಕಾರಿ ಕಾಲೇಜು, ಮಂಡ್ಯ |
| **ಎಚ್.ಜಿ.ಎಸ್.** | ಸುಬ್ಬರಾವ್, ಎಚ್.ಜಿ.<br>ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಎಚ್.ಎಚ್.** | ಹನುಮಂತಯ್ಯ, ಎಚ್.<br>ಅಧ್ಯಾಪಕ, ಮನಶ್ಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಎಚ್.ಕೆ.** | ಕೃಷ್ಣರಾವ್, ಎಚ್.<br>ಬ್ಲಾಕ್–ಟಿ<br>ಜಯನಗರ, ಬೆಂಗಳೂರು |
| **ಎಚ್.ಕೆ.ಎಂ.** | ಮಲ್ಲಿಕಾರ್ಜುನಪ್ಪ, ಎಚ್.ಕೆ. (ದಿ)<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಗುಲಬರ್ಗಾ |
| **ಎಚ್.ಕೆ.ಆರ್.** | ರಾಮಚಂದ್ರಮೂರ್ತಿ, ಎಚ್.ಕೆ.<br>ಅಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ನ್ಯಾಷನಲ್ ಕಾಲೇಜು, ಬೆಂಗಳೂರು |
| **ಎಚ್.ಕೆ.ಆರ್.ಜಿ.** | ರಾಜೇಗೌಡ, ಎಚ್.ಕೆ.<br>ಸಂಶೋಧನ ಸಹಾಯಕ (ವಿ), ಸಂಪಾದನ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಎಚ್.ಕೆ.ಎಸ್.ಎಂ.** | ಶ್ರೀನಿವಾಸಮೂರ್ತಿ, ಎಚ್.ಕೆ.<br>38, 'ಗೀತ', ಸೌತ್‌ಎಂಡ್ ರೋಡ್<br>ಬಸವನಗುಡಿ, ಬೆಂಗಳೂರು |
| **ಎಚ್.ಕೆ.ವಿ.** | ವೀರಣ್ಣಗೌಡ, ಎಚ್.ಕೆ.<br>ತೋಟದ ಮನೆ, ಮದ್ದೂರು |
| **ಎಚ್.ಎಲ್.ಕೆ.** | ಕೇಶವಮೂರ್ತಿ, ಎಚ್.ಎಲ್.<br>ಅಧ್ಯಾಪಕ<br>ಪಿ.ಇ.ಎಸ್. ಎಂಜಿನಿಯರಿಂಗ್ ಕಾಲೇಜು, ಮಂಡ್ಯ |
| **ಎಚ್.ಎಂ.ಸಿ.** | ಚನ್ನಯ್ಯ, ಎಚ್.ಎಂ. (ದಿ)<br>ಪ್ರಾಧ್ಯಾಪಕ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಎಚ್.ಎಂ.ಎಸ್.** | ಸದಾಶಿವಯ್ಯ, ಎಚ್.ಎಂ.<br>ಪ್ರವಾಚಕ (ವಿ), ಸಮಾಜಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎಚ್.ಎನ್.** | ನರಸಣ್ಣ, ಎಚ್. (ದಿ)<br>ಉಪನಿರ್ದೇಶಕ<br>ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು |
| **ಎಚ್.ಎನ್.ಸಿ.** | ಚಾಮಯ್ಯ, ಎಚ್.ಎನ್. (ದಿ)<br>ರೀಡರ್, ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಎಚ್.ಪಿ.ಎನ್.** | ನಾಗರಾಜಯ್ಯ, ಎಚ್.ಪಿ.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಎಚ್.ಆರ್.** | ರಾಮಲಿಂಗಪ್ಪ, ಎಚ್.<br>ಅಧ್ಯಾಪಕ, ಇತಿಹಾಸ ವಿಭಾಗ<br>ಸರ್ಕಾರಿ ಕಾಲೇಜು, ಬೆಂಗಳೂರು |
| **ಎಚ್.ಆರ್.ಡಿ.** | ದಾಸೇಗೌಡ, ಎಚ್.ಆರ್. (ದಿ)<br>ಉಪ ಪರೀಕ್ಷಾಧಿಕಾರಿ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಎಚ್.ಆರ್.ಆರ್.ಐ.** | ರಂಗಸ್ವಾಮಿ ಐಯ್ಯಂಗಾರ್, ಎಚ್.ಆರ್.<br>5ನೆಯ ಮೇನ್ ರಸ್ತೆ<br>ವಿ.ವಿ. ಮೊಹಲ್ಲಾ, ಮೈಸೂರು |
| **ಎಚ್.ಎಸ್.ಎ.** | ಅನಂತನಾರಾಯಣ, ಎಚ್.ಎಸ್.<br>ಪ್ರಾಧ್ಯಾಪಕ (ವಿ), ಭಾಷಾವಿಜ್ಞಾನ ವಿಭಾಗ<br>ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಾಬಾದು |
| **ಎಚ್.ಎಸ್.ಎಸಿ.** | ಅಚ್ಚಪ್ಪ, ಎಚ್.ಎಸ್.<br>ಜಯನಗರ, ಮೈಸೂರು |
| **ಎಚ್.ಎಸ್.ಎಚ್.** | ಹರಿಶಂಕರ್, ಎಚ್.ಎಸ್.<br>ಅಧ್ಯಾಪಕ (ವಿ), ಭಾಷಾಂತರ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಎಚ್.ಎಸ್.ಕೆ.** | ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್. (ದಿ)<br>ಮಾನವಿಕ ಸಂಪಾದಕ, ಕನ್ನಡ ವಿಶ್ವಕೋಶ<br>ಮಾನಸಗಂಗೋತ್ರಿ, ಮೈಸೂರು |

ಎಚ್.ಎಸ್.ಎನ್. ನಾಗರಾಜರಾವ್, ಎಚ್.ಎಸ್.
ರೀಡರ್, ಪ್ರಾಣಿವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಬೆಂಗಳೂರು

ಎಚ್.ಎಸ್.ಆರ್. ರಾಮಣ್ಣ, ಎಚ್.ಎಸ್.
ಅಧ್ಯಾಪಕ, ಪ್ರಾಕ್ತನಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ಎಸ್.ಎಸ್. ಶೇಷಾದ್ರಿ, ಎಚ್.ಎಸ್.
ರೀಡರ್ (ವಿ), ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ವಿ.ಕೆ.ಯು. ಉಡುಪ, ಎಚ್.ವಿ.ಕೆ.
ನಿರ್ದೇಶಕ, ಕೇಂದ್ರ ಶಿಕ್ಷಣ ಸಂಶೋಧನ ಸಂಸ್ಥೆ
ಕಾರೈಕುಡಿ, ತಮಿಳುನಾಡು

ಎಚ್.ವಿ.ಎಸ್. ಸಾವಿತ್ರಮ್ಮ, ಎಚ್.ವಿ.
ಮಲ್ಲೇಶ್ವರಂ, ಬೆಂಗಳೂರು

ಐ.ಆರ್. ರಿಬೆಲ್ಲೋ, ಐ.
ಇತಿಹಾಸ ವಿಭಾಗ, ಸೇಂಟ್ ಅಲೋಷಿಯಸ್ ಕಾಲೇಜು
ಮಂಗಳೂರು

ಜೆ.ಬಿ. ಬಾಲಚಂದ್ರ, ಜೆ.
ಸಂಶೋಧನಾಧಿಕಾರಿ
ಪರಮಾಣುಶಕ್ತಿ ವಿಭಾಗ, ಬೊಂಬಾಯಿ

ಜೆ.ಇ.ಸಿ.ಎಚ್. ಚಂದ್ರಶೇಖರ್, ಜೆ.ಇ.
ಅಧ್ಯಾಪಕ (ವಿ)
ವೈದ್ಯಕೀಯ ಕಾಲೇಜು, ಮೈಸೂರು

ಜೆ.ಕೆ.ಐ. ಇರಾನಿ, ಜೆ.ಕೆ.
ಪ್ರಾಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಜೆ.ಆರ್. ರುದ್ರಪ್ಪ, ಜೆ.
ಜಿಲ್ಲಾ ಸೆಷನ್ಸ್ ಜಡ್ಜ್ (ವಿ)
ಗಾಂಧಿನಗರ, ಬೆಂಗಳೂರು

ಜೆ.ಆರ್.ಎಲ್. ಲಕ್ಷ್ಮಣರಾವ್, ಜೆ.ಆರ್.
ಸಂಪಾದಕ (ವಿ), ಇಂಗ್ಲಿಷ್-ಕನ್ನಡ ನಿಘಂಟು
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

ಜೆ.ಎಸ್.ಸಿ. ಶಶಿಕಲಾ ಚಂದ್ರಶೇಖರ್, ಜೆ.
ಯು.ಎಸ್.ಎ.

ಜೆ.ಎಸ್.ಪಿ. ಪರಮಶಿವಯ್ಯ, ಜೆ.ಎಸ್. (ದಿ)
ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಜೆ.ಎಸ್.ಪಿ.ಎಂ. ಪರಮಶಿವಮೂರ್ತಿ, ಜೆ.ಎಸ್.
ನಿರ್ದೇಶಕ (ವಿ)
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಜೆ.ವಿ.ಎನ್. ನೀರಜಾಕ್ಷಿ, ಜೆ.ವಿ.
ಪ್ರಾಧ್ಯಾಪಕಿ, ಪ್ರಾಣಿವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

ಕೆ. ಕೃಷ್ಣಪ್ಪಗೌಡ
ಉಪನಿರ್ದೇಶಕ (ವಿ), ತೋಟಗಾರಿಕೆ ಇಲಾಖೆ
ಮಡಿಕೇರಿ

ಕೆ.ಬಿ.ಪಿ. ಪ್ರಭುಪ್ರಸಾದ್, ಕೆ.ಬಿ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಕೆ.ಬಿ.ಆರ್. ರಾಮಕೃಷ್ಣರಾವ್, ಕೆ.ಬಿ. (ದಿ)
ಪ್ರಾಧ್ಯಾಪಕ, ಹಿಂದೂ ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಕೆ.ಬಿ.ಎಸ್. ಸದಾನಂದ, ಕೆ.ಬಿ.
ಸಹಾಯಕ ಸಂಪಾದಕ (ವಿ)
ಕನ್ನಡ ವಿಶ್ವಕೋಶ, ಮಾನಸಗಂಗೋತ್ರಿ, ಮೈಸೂರು

ಕೆ.ಸಿ. ಚನ್ನಬಸಪ್ಪ, ಕೆ
ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ (ವಿ), ಬೆಂಗಳೂರು

ಕೆ.ಸಿ.ಜಿ. ಚಿದಾನಂದಗೌಡ, ಕೆ.
ಪ್ರಾಧ್ಯಾಪಕ, ಎಲೆಕ್ಟ್ರಿಕಲ್ ವಿಭಾಗ
ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು
ಮೈಸೂರು

ಕೆ.ಡಿ. ಕೃಷ್ಣಯ್ಯಂಗಾರ್, ಡಿ.
ರಿಜಿಸ್ಟ್ರೇಷನ್ ತನಿಖಾಧಿಕಾರಿ (ವಿ)
ಮೈಸೂರು

ಕೆ.ಜಿ.ಬಿ. ಗೋವಿಂದಭಟ್ಟ, ಕೆ.
ಅಡ್ವೊಕೇಟ್, ಮಂಗಳೂರು

ಕೆ.ಜಿ.ಕೆ. ಕುಂದಣಗಾರ, ಕೆ.ಜಿ.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಲಿಂಗರಾಜ ಕಾಲೇಜು, ಬೆಳಗಾಂ

ಕೆ.ಜಿ.ಕೆಆರ್. ಕೃಷ್ಣನ್, ಕೆ.ಜಿ.
ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್‌ರವರ ಕಚೇರಿ
ಮೈಸೂರು

ಕೆ.ಜಿ.ಆರ್. ರಾಮಕೃಷ್ಣ, ಕೆ.ಜಿ.
ಅಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಸೇಂಟ್ ಫಿಲೋಮಿನ ಕಾಲೇಜು, ಮೈಸೂರು

ಕೆ.ಎಚ್. ಹನುಮಂತಪ್ಪ, ಕೆ.
ಅಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕೆ.ಕೆ. ಕೃಷ್ಣಮೂರ್ತಿ, ಕೆ. (ದಿ)
ಪ್ರಾಧ್ಯಾಪಕ, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕೆ.ಕೆಆರ್. ಕೃಷ್ಣಮೂರ್ತಿ, ಕೆ.
ರೀಡರ್, ಕೃಷಿ ಕಾಲೇಜು
ಹೆಬ್ಬಾಳ, ಬೆಂಗಳೂರು

ಕೆ.ಕೆ.ಎಸ್. ಕರುಣಾಕರನ್, ಕೆ.ಎಸ್.
ಅಧ್ಯಾಪಕ (ವಿ), ಕನ್ನಡ ವಿಭಾಗ
ಕಲ್ಪತರು ಕಾಲೇಜು, ತಿಪಟೂರು

ಕೆ.ಎಲ್.ಎಂ. ಲಕ್ಷ್ಮೀನರಸಿಂಹಮೂರ್ತಿ, ಕೆ.
ರೀಡರ್, ಸಸ್ಯವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

ಕೆ.ಎಂ. ಮುನಿಯಪ್ಪ, ಕೆ.
ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಪ್ರಥಮ ದರ್ಜೆ ಕಾಲೇಜು, ಉರಿಗಾಂ, ಕೆ.ಜಿ.ಎಫ್.

ಕೆ.ಎಂ.ಕೆ. ಮಹದೇವರಾವ್ ಕದಂ, ಕೆ.
ರೀಡರ್, ಪ್ರಾಣಿವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕೆ.ಎಂ.ವಿ. ವೀರಪ್ಪ, ಕೆ.ಎಂ.
ರೀಡರ್, ಪ್ರಾಣಿಶಾಸ್ತ್ರ ವಿಭಾಗ
ಯುವರಾಜ ಕಾಲೇಜು, ಮೈಸೂರು

| | |
|---|---|
| **ಕೆ.ಎನ್.ಸಿ.** | ಚೈತನ್ಯಪಂಡಿತಾರಾಧ್ಯ, ಕೆ.ಎನ್.<br>(ಉದಯಕುಮಾರ್, ಕೆ.ಎನ್.)<br>ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು |
| **ಕೆ.ಎನ್.ವಿ.** | ವೆಂಕಟರಾಯಪ್ಪ, ಕೆ.ಎನ್. (ದಿ)<br>ಪ್ರಾಧ್ಯಾಪಕ, ಸಮಾಜಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಕೆ.ಪಿವಿ.** | ಪದ್ಮಾವತಮ್ಮ, ಕೆ.<br>ಅಧ್ಯಾಪಕಿ, ಇತಿಹಾಸ ವಿಭಾಗ<br>ಮಹಾರಾಣಿ ಕಾಲೇಜು, ಮೈಸೂರು |
| **ಕೆ.ಆರ್.ಜಿ.** | ಕುಲಕರ್ಣಿ, ಆರ್.ಜಿ.<br>ಕನ್ನಡ ವಿಭಾಗ, ಸಾಯಿಬಾಬಾ ಕಾಲೇಜು<br>ವೈಟ್‌ಫೀಲ್ಡ್, ಬೆಂಗಳೂರು |
| **ಕೆ.ಆರ್.ಎಂ.** | ಮಡಿ, ಕೆ.ಆರ್.<br>ಅಧ್ಯಾಪಕ (ವಿ), ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು<br>ಗೋಕಾಕ, ಬೆಳಗಾಂ ಜಿಲ್ಲೆ |
| **ಕೆ.ಆರ್.ಎಂಒ.** | ಮೋಹನ್, ಕೆ.ಆರ್.<br>ಪ್ರಾಧ್ಯಾಪಕ, ಯಂತ್ರಶಿಲ್ಪ ವಿಭಾಗ<br>ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು<br>1ನೆಯ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು |
| **ಕೆ.ಆರ್.ಆರ್.** | ರಂಗಾಚಾರ್, ಕೆ.ಆರ್.<br>ಪ್ರಾಧ್ಯಾಪಕ (ವಿ), ಶಿಕ್ಷಕರ ತರಬೇತಿ ಕೇಂದ್ರ<br>ಮೈಸೂರು |
| **ಕೆ.ಆರ್.ಎಸ್.ಜಿ.** | ಶೇಷಗಿರಿ, ಕೆ.ಆರ್. (ದಿ)<br>ಸಂಶೋಧನ ಸಹಾಯಕ, ಸಂಪಾದನ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಕೆ.ಆರ್.ವಿ.** | ವೆಂಕಟೇಶಾಚಾರ್, ಕೆ.ಆರ್.<br>ಎಂ.ಇ.ಎಸ್. ಟೀಚರ್ಸ್ ಕಾಲೇಜು, ಬೆಂಗಳೂರು |
| **ಕೆ.ಎಸ್.ಬಿ.** | ಸುಬ್ಬಾಭಟ್ಟ, ಕೆ.<br>ಉಪಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| **ಕೆ.ಎಸ್.ಜೆ.** | ಜಗದೀಶಚಂದ್ರ, ಕೆ.ಎಸ್.<br>ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಕೆ.ಎಸ್.ಕೆ.** | ಕೃಷ್ಣಸ್ವಾಮಿ, ಕೆ.ಎಸ್.<br>ಪ್ರಾಂಶುಪಾಲರು<br>ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| **ಕೆ.ಎಸ್.ಕೆ.ಎಂ.** | ಕೃಷ್ಣಮೂರ್ತಿ, ಕೆ.ಎಸ್.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಸೇಂಟ್ ಫಿಲೋಮಿನ ಕಾಲೇಜು, ಮೈಸೂರು |
| **ಕೆ.ಎಸ್.ಎನ್.ಎ.** | ಸೂರ್ಯನಾರಾಯಣ, ಕೆ.<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಕೆ.ಎಸ್ಆರ್ಐ.** | ಶ್ರೀನಿವಾಸನ್, ಕೆ<br>ರೀಡರ್ (ವಿ), ಭೌತವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಕೆ.ಎಸ್.ಆರ್.ಎಂ.** | ರಾಮಕೃಷ್ಣಮೂರ್ತಿ, ಕೆ.ಎಸ್. (ದಿ)<br>ಪ್ರಧಾನ ಸಂಪಾದಕ<br>ಕನ್ನಡಪ್ರಭ ದಿನಪತ್ರಿಕೆ, ಬೆಂಗಳೂರು |
| **ಕೆ.ಎಸ್.ಎಸ್ಎಚ್.** | ಷಡಕ್ಷರಪ್ಪ, ಕೆ.ಎಸ್.<br>ಪ್ರಾಧ್ಯಾಪಕ, ಔಷಧಶಾಸ್ತ್ರ<br>ಮೆಡಿಕಲ್ ಕಾಲೇಜು, ಬೆಂಗಳೂರು<br>38, ರಂಗರಾವ್ ರೋಡ್<br>ಶಂಕರಪುರಂ |
| **ಕೆ.ಎಸ್.ಎಸ್.** | ಸದಾನಂದ, ಕೆ.ಎಸ್.<br>ಅಸಿಸ್ಟೆಂಟ್ ಆರ್ಕಿಟೆಕ್ಟ್<br>ಬೆಂಗಳೂರು |
| **ಕೆ.ಎಸ್ಯು.** | ಸುಂದರೇಶನ್, ಕೆ.<br>ಗೌರವ ಸರ್ಜನ್ (ವಿ)<br>ಮಿಂಟೋ ಆಸ್ಪತ್ರೆ, ಬೆಂಗಳೂರು |
| **ಕೆ.ಎಸ್ಯಸುಬಿ.** | ಸುಬ್ಬರಾಮಪ್ಪ, ಕೆ.<br>ಪ್ರಾಧ್ಯಾಪಕ, ತೆಲುಗು ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಕೆ.ಎಸ್.ವಿ.** | ವರದಾಚಾರ್, ಕೆ.ಎಸ್.<br>ಸಂಶೋಧನ ಸಹಾಯಕ (ವಿ)<br>ಪ್ರಾಚ್ಯ ವಿದ್ಯಾ ಸಂಶೋಧನಾಲಯ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| **ಕೆ.ಟಿ.ಆರ್.** | ರಾಮಸ್ವಾಮಿ, ಕೆ.ಟಿ.<br>ರೀಡರ್, ಇತಿಹಾಸ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು |
| **ಕೆ.ಟಿ.ಎಸ್.** | ಶ್ಯಾಮಸುಂದರ, ಕೆ.ಟಿ.<br>ಮ್ಯಾನೇಜರ್ (ವಿ), ಪೆರ್‌ಮಾಳಿ ವಾಲೇಸ್ ಲಿ.,<br>ಭೂಪಾಲ್, ಮಧ್ಯಪ್ರದೇಶ |
| **ಕೆ.ವಿಇ.** | ವೆಂಕಟರಾಮಪ್ಪ, ಕೆ. (ದಿ)<br>ವಿಶ್ರಾಂತ ಕನ್ನಡ ರೀಡರ್<br>ಕೃಷ್ಣಮೂರ್ತಿಪುರಂ, ಮೈಸೂರು |
| **ಕೆ.ವಿ.ಆರ್.** | ರಮೇಶ್, ಕೆ.ವಿ. (ದಿ)<br>ಡೆಪ್ಯುಟಿ ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್<br>ಚೀಫ್ ಎಪಿಗ್ರಫಿಸ್ಟ್‌ರವರ ಕಚೇರಿ, ಮೈಸೂರು<br>7, 'ಜೆ' ಬ್ಲಾಕ್, ರಮಣಮಹರ್ಷಿ ರಸ್ತೆ<br>ಕುವೆಂಪುನಗರ, ಮೈಸೂರು |
| **ಎಲ್.ಎನ್.ಪಿ.** | ನಾರಾಯಣರಾವ್ ಪವಾರ್, ಎಲ್.<br>ರೀಡರ್, ಮನಶ್ಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಎಲ್.ಎಸ್.** | ಶ್ರೀಕಂಠಯ್ಯ, ಎಲ್. (ದಿ)<br>ನ್ಯಾಯವಾದಿ, 15, ಜಯಲಕ್ಷ್ಮಿಪುರಂ ವಿಸ್ತರಣೆ<br>ವಾಣಿವಿಲಾಸ ಮೊಹಲ್ಲ, ಮೈಸೂರು |
| **ಎಲ್.ಎಸ್.ಜಿ.** | ಸಿದ್ಧವೀರೇಗೌಡ, ಎಲ್. (ದಿ)<br>ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎಲ್.ಎಸ್.ಜೆ.** | ಜಾಗೀರ್‌ದಾರ್, ಎಲ್.ಎಸ್.<br>ವಿಭಾಗಾಧಿಕಾರಿ (ವಿ), ನ್ಯಾಯಾಂಗ ವಿಭಾಗ<br>ವಿಧಾನಸೌಧ, ಬೆಂಗಳೂರು |
| **ಎಲ್.ಎಸ್.ಎಸ್.** | ಶೇಷಗಿರಿರಾವ್, ಎಲ್.ಎಸ್.<br>ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಎಂ.ಎ.** | ಮಿರ್ಜಿ ಅಣ್ಣಾರಾಯ (ದಿ)<br>ಶೇಡಬಾಳ, ಬೆಳಗಾಂ ಜಿಲ್ಲೆ |

# ಲೇಖಕಸೂಚಿ

**ಎಂಎಚ್.** ಮಹದೇವಯ್ಯ
ಸಹಾಯಕ ಗ್ರಂಥಪಾಲ (ವಿ)
ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು

**ಎಂಎ.ಎಂ.** ಮಾದಯ್ಯ, ಎಂ.
ಕುಲಪತಿ (ವಿ)
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಎಂ.ಎಪಿ.** ಅಪ್ಪಣ್ಣ, ಎಂ.
ಸಹಾಯಕ ಕೀಟವಿಜ್ಞಾನಿ
ಕಬ್ಬು ಸಂಶೋಧನ ಕೇಂದ್ರ, ಮಂಡ್ಯ

**ಎಂ.ಎ.ಎಸ್.** ಶ್ರೀರಾಮ, ಎಂ.ಎ.
ವಿಶೇಷಾಧಿಕಾರಿ, ವಿಶ್ವಕೋಶ ವಿಭಾಗ
ಸರ್ಕಾರಿ ಮುದ್ರಣಾಲಯ, ಬೆಂಗಳೂರು

**ಎಂ.ಬಿ.** ಬಸವರಾಜು, ಎಂ.
ಪ್ರಾಧ್ಯಾಪಕ, ಔಷಧಶಾಸ್ತ್ರ ವಿಭಾಗ
ಮೆಡಿಕಲ್ ಕಾಲೇಜು, ಬೆಂಗಳೂರು

**ಎಂ.ಬಿ.ಎಸ್.** ಸಿಂಗ್, ಎಂ.ಬಿ. (ದಿ)
ಸಹಾಯಕ ಸಂಪಾದಕ
ಸುಧಾ ವಾರಪತ್ರಿಕೆ, ಬೆಂಗಳೂರು

**ಎಂ.ಬಿ.ಟಿ.** ತಿಪ್ಪಣ್ಣನವರ್, ಎಂ.ಬಿ.
ಕೃಷಿ ವಿದ್ಯಾಧಿಕಾರಿ
ಕೃಷಿ ಕಾಲೇಜು, ಧಾರವಾಡ

**ಎಂ.ಸಿ.** ಚಿದಾನಂದಮೂರ್ತಿ, ಎಂ.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಂ.ಸಿ.ಆರ್.** ಚಿನ್ನಸ್ವಾಮಿರೆಡ್ಡಿ, ಎಂ.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಂ.ಸಿ.ವಿ.** ವಸಂತಕುಮಾರ್, ಎಂ.ಸಿ.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು

**ಎಂ.ಡಿ.** ದಯಾಕರ, ಎಂ.
ಪ್ರಾಧ್ಯಾಪಕ, ಅಂಗರಚನಾವಿಜ್ಞಾನ ವಿಭಾಗ
ಮೈಸೂರು ಮೆಡಿಕಲ್ ಕಾಲೇಜು, ಮೈಸೂರು

**ಎಂ.ಡಿ.ಕೆ.** ಕೃಷ್ಣನ್, ಎಂ.ಡಿ.
ಸಹಾಯಕ ಪ್ರಾಧ್ಯಾಪಕ
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

**ಎಂ.ಡಿ.ಪಿ.** ಪಾರ್ಥಸಾರಥಿ, ಎಂ.ಡಿ.
ಪ್ರವಾಚಕ, ಪ್ರಾಣಿವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಂ.ಡಿ.ಆರ್.** ರಾಜಗೋಪಾಲ್, ಎಂ.ಡಿ.
ಪ್ರಾಧ್ಯಾಪಕ
ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ

**ಎಂ.ಜಿ.ಬಿ.** ಭಾಸಿನ್, ಎಂ.ಜಿ.
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ದಯಾನಂದ ಕಾಲೇಜು, ಸೋಲಾಪುರ

**ಎಂ.ಜಿ.ಕೆ.ಎಂ.** ಮೂರ್ತಿ, ಎಂ.ಜಿ.ಕೆ.
ಕ್ಯಾಪ್ಟನ್, 36–ಇ, ಕರಣಿಕ್ ರಸ್ತೆ
ಶಂಕರಪುರಂ, ಬೆಂಗಳೂರು

**ಎಂ.ಜಿ.ಎನ್.** ನಂಜುಂಡಾರಾಧ್ಯ, ಎಂ.ಜಿ.
ಪ್ರಾಧ್ಯಾಪಕ (ವಿ)
ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

**ಎಂ.ಎಚ್.ಡಿ.** ಧನಂಜಯ, ಎಂ.ಎಸ್
ಪ್ರಾಧ್ಯಾಪಕ (ವಿ)
ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗ
ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು
ಮೈಸೂರು

**ಎಂ.ಎಚ್.ಎಂ.** ಮರಿಗೌಡ, ಎಂ.ಎಚ್.
ನಿರ್ದೇಶಕ (ವಿ), ತೋಟಗಾರಿಕೆ ಇಲಾಖೆ
ಬೆಂಗಳೂರು
(ಅಧ್ಯಕ್ಷ, ತೋಟಗಾರಿಕೆ ಉಪಸಮಿತಿ, ಕನ್ನಡ ವಿಶ್ವಕೋಶ)

**ಎಂ.ಕೆ.ಕೆ.** ಕೇಶವಸ್ವಾಮಿ, ಎಂ.ಕೆ.
ಜಯನಗರ, ಬೆಂಗಳೂರು

**ಎಂ.ಕೆ.ಎನ್.** ನಾಯಕ್, ಎಂ.ಕೆ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎಂ.ಕೆ.ಎಸ್‌ಡಬ್ಲ್ಯು.** ಕೃಷ್ಣಸ್ವಾಮಿ, ಎಂ.
ಅಡ್ವೊಕೇಟ್, ಬೆಂಗಳೂರು

**ಎಂ.ಎಲ್.ಆರ್.** ರಾಮಸ್ವಾಮಿ, ಎಂ.ಎಲ್.
ಉಪಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಸರ್ಕಾರಿ ಕಾಲೇಜು, ಮಡಿಕೇರಿ

**ಎಂ.ಎಂ.ಕೆ.** ಕಲಬುರ್ಗಿ, ಎಂ.ಎಂ.
ಕುಲಪತಿ (ವಿ)
ಕನ್ನಡ ವಿಶ್ವವಿದ್ಯಾಲಯ, ಧಾರವಾಡ

**ಎಂ.ಎನ್.ಸಿಎಚ್.** ಚೌಡಪ್ಪ, ಎಂ.ಎನ್. (ದಿ)
ಪತ್ರಿಕೋದ್ಯಮಿ
ಜಯನಗರ, ಬೆಂಗಳೂರು

**ಎಂ.ಎನ್.ಎಚ್.** ಹೆಗಡೆ, ಎಂ.ಎನ್.
ಅಧ್ಯಾಪಕ (ವಿ), ಮನಶ್ಶಾಸ್ತ್ರ ವಿಭಾಗ
ಅಖಿಲಭಾರತ ವಾಕ್‌ಶ್ರವಣ ಸಂಸ್ಥೆ, ಮೈಸೂರು

**ಎಂ.ಎನ್.ಕೆ.** ಕಟ್ಟಿ, ಎಂ.ಎನ್. (ದಿ)
ಡೆಪ್ಯೂಟಿ ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್
ಚೀಫ್ ಎಪಿಗ್ರಫೀಸ್ಟ್‌ರವರ ಕಚೇರಿ, ಮೈಸೂರು

**ಎಂ.ಎನ್.ವಿ.** ವಿಶ್ವನಾಥಯ್ಯ, ಎಂ.ಎನ್ (ದಿ)
ಕುಲಪತಿಗಳು, ಭೂವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು
(ಅಧ್ಯಕ್ಷ, ಕ್ರೀಡಾ ಉಪಸಮಿತಿ, ಕನ್ನಡ ವಿಶ್ವಕೋಶ)

**ಎಂ.ಪಿ.ಜೆ.** ಜಾಲಿ, ಎಂ.ಪಿ.
ಡೆಪ್ಯುಟಿ ಡೈರೆಕ್ಟರ್, ವಿದ್ಯಾ ಇಲಾಖೆ, ಗುಲ್ಬರ್ಗ

**ಎಂ.ಪಿ.ಪಿ.** ಪೈ, ಎಂ.ಪಿ.
ಪ್ರಾಧ್ಯಾಪಕ, ಶಸ್ತ್ರವೈದ್ಯ ವಿಭಾಗ
ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು

**ಎಂ.ಪಿ.ಎಸ್.** ಸಮರ್ಥ, ಎಂ.ಪಿ.
ಯು.ಬಿ.ಎಂ. ಚರ್ಚ್, ಮಡಿಕೇರಿ ಗುಡ್ಡ
ಮಂಗಳೂರು

**ಎಂ.ಆರ್.** ರಾಮರಾವ್, ಎಂ. (ದಿ)
ಪ್ರಧಾನ ಸಂಪಾದಕ
ಇಂಗ್ಲಿಷ್–ಕನ್ನಡ ನಿಘಂಟು, ಪ್ರಸಾರಾಂಗ
ಮೈಸೂರು

| | |
|---|---|
| **ಎಂ.ಆರ್.ಕೆ.** | ರಾಮಕೃಷ್ಣ, ಎಂ.<br>ಕನ್ನಡ ಅಧ್ಯಾಪಕ<br>ಮಹಾರಾಜ ಕಾಲೇಜು, ಮೈಸೂರು |
| **ಎಂ.ಆರ್.ಆರ್.** | ರಾಘವೇಂದ್ರರಾವ್, ಎಂ.ಆರ್.<br>ಸಹಾಯಕ ನಿರ್ದೇಶಕ<br>ಕೇಂದ್ರ ಆಹಾರ ಸಂಶೋಧನ ಸಂಸ್ಥೆ, ಮೈಸೂರು |
| **ಎಂ.ಆರ್.ಆರ್ಎ.** | ರಾಮಯ್ಯ, ಎಂ.ಆರ್.<br>ವಿದ್ಯಾಧಿಕಾರಿ (ವಿ)<br>ಬೆಂಗಳೂರು ಕಾರ್ಪೊರೇಷನ್, ಬೆಂಗಳೂರು |
| **ಎಂ.ಆರ್.ಎಸ್.** | ಶ್ರೀನಿವಾಸರಾವ್, ಎಂ.ಆರ್.<br>ಪ್ರಾಧ್ಯಾಪಕ, ಭೂವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಎಂ.ಎಸ್ಎಚ್.** | ಹನುಮಂತರಾವ್, ಎಂ.ಎಸ್.<br>ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಬೆಂಗಳೂರು |
| **ಎಂ.ಎಸ್ಐ.** | ಸಿರ್ಸಿ, ಎಂ.<br>ಪ್ರಾಧ್ಯಾಪಕ<br>ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್<br>ಬೆಂಗಳೂರು |
| **ಎಂ.ಎಸ್.ಎಸ್.** | ಸದಾಶಿವಯ್ಯ, ಎಂ.ಎಸ್.<br>ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| **ಎಂ.ಎಸ್.ಎಸ್.ಆರ್.** | ರಾವ್, ಎಂ.ಎಸ್.ಎಸ್.<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಬಸವೇಶ್ವರ ಸೈನ್ಸ್ ಕಾಲೇಜು, ಬಾಗಲಕೋಟೆ |
| **ಎಂ.ವಿ.** | ವಾಸುದೇವರಾವ್, ಎಂ.<br>ಮುಖ್ಯೋಪಾಧ್ಯಾಯ (ವಿ)<br>ವಿದ್ಯಾದಾಯಿನಿ ಪ್ರೌಢಶಾಲೆ, ಸುರತ್ಕಲ್ (ದ.ಕ.) |
| **ಎಂ.ವಿ.ಎ.ಎಸ್.** | ಅರುಣಾಚಲಶಾಸ್ತ್ರಿ, ಎಂ.ವಿ.<br>ಪೇಲಿಯೆಂಟಾಲಜಿಸ್ಟ್<br>ಜಿಯಲಾಜಿಕಲ್ ಸರ್ವೇ ಆಫ್ ಇಂಡಿಯ, ಕಲ್ಕತ್ತ |
| **ಎಂ.ವಿ.ಐ.** | ಮಾಸ್ತಿ ವೆಂಕಟೇಶ ಐಯ್ಯಂಗಾರ್ (ದಿ)<br>11ನೆಯ ತಿರುವು, ಗವಿಪುರಂ ವಿಸ್ತರಣ<br>ಬೆಂಗಳೂರು |
| **ಎಂ.ವಿ.ಜೆ.** | ಜಂಬುನಾಥನ್, ಎಂ.ವಿ. (ದಿ)<br>ಪ್ರಾಧ್ಯಾಪಕ, ಅಧ್ಯಕ್ಷ<br>ಸಂಖ್ಯಾಶಾಸ್ತ್ರ ಉಪಸಮಿತಿ, ಕನ್ನಡ ವಿಶ್ವಕೋಶ<br>ಮಾನಸಗಂಗೋತ್ರಿ, ಮೈಸೂರು |
| **ಎಂ.ವಿ.ಕೆ.** | ಕೃಷ್ಣರಾವ್, ಎಂ.ವಿ. (ದಿ)<br>ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು<br>(ಅಧ್ಯಕ್ಷ, ಇತಿಹಾಸ ವಿಭಾಗ, ಕನ್ನಡ ವಿಶ್ವಕೋಶ) |
| **ಎಂ.ವಿ.ಎಸ್.** | ಸೀತಾರಾಮಯ್ಯ, ಎಂ.ವಿ. (ದಿ)<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| **ಎಂ.ವಿ.ಎಸ್.ಎಂ.** | ಶ್ರೀನಿವಾಸಮೂರ್ತಿ, ಎಂ.ವಿ.<br>ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್<br>ಮೈಸೂರು ಸರ್ಕಾರ, ಬೆಂಗಳೂರು |
| **ಎಂ.ವೈ.** | ಯಾಮುನಾಚಾರ್ಯ, ಎಂ. (ದಿ)<br>ಪ್ರಾಧ್ಯಾಪಕ (ವಿ), ತತ್ತ್ವಶಾಸ್ತ್ರ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| **ಎನ್.** | ನಾರಾಯಣಪ್ಪ<br>ತಾಂತ್ರಿಕ ಸಹಾಯಕ (ವಿ)<br>ತೋಟಗಾರಿಕೆ ಇಲಾಖೆ, ಬೆಂಗಳೂರು |
| **ಎನ್.ಎ.** | ಅನಂತಪದ್ಮನಾಭನ್, ಎನ್.<br>ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ<br>ಪ್ರೆಸಿಡೆನ್ಸಿ ಕಾಲೇಜು, ಮದ್ರಾಸು |
| **ಎನ್.ಬಿ.** | ಬಸವಾರಾಧ್ಯ, ಎನ್. (ದಿ)<br>ಸಂಪಾದಕ, ಕನ್ನಡ–ಕನ್ನಡ ನಿಘಂಟು<br>ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು |
| **ಎನ್.ಜಿ.ಪಿ.** | ಪುಟ್ಟಸ್ವಾಮಿ, ಎನ್.ಜಿ.<br>ರೀಡರ್, ಭೌತವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಎನ್.ಎಂ.** | ಮುನಿಯಪ್ಪ, ಎನ್.<br>ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಎನ್.ಎನ್.** | ನಾಗೇಶರಾವ್, ಎನ್.<br>ಉಪಪ್ರಾಧ್ಯಾಪಕ (ವಿ)<br>ಮಹಾರಾಜ ಕಾಲೇಜು, ಮೈಸೂರು |
| **ಎನ್.ಎನ್ಎ.** | ನಾರಾಯಣ, ಎನ್.<br>ಗೌರವ ಪ್ರಾಧ್ಯಾಪಕ, ಜೀವರಸಾಯನವಿಜ್ಞಾನ<br>ಮಹಾರಾಷ್ಟ್ರ ಅಸೋಸಿಯೇಷನ್ ಫಾರ್<br>ಕಲ್ಟಿವೇಷನ್ ಆಫ್ ಸೈನ್ಸ್, ಪುಣೆ |
| **ಎನ್.ಆರ್.ವಿ.** | ವಿಶ್ವನಾಥನ್, ಎನ್.ಆರ್.<br>ಸಹಾಯಕ ನಿರ್ದೇಶಕ, ತೋಟಗಾರಿಕೆ ಇಲಾಖೆ<br>ಬೆಂಗಳೂರು |
| **ಎನ್.ಎಸ್.ಕೆ.** | ಶ್ರೀಕಂಠ, ಎನ್.<br>ರೀಡರ್, ರಸಾಯನವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಎನ್.ಎಸ್.ಎಲ್.** | ಲಕ್ಷ್ಮೀನಾರಾಯಣಭಟ್ಟ, ಎನ್.ಎಸ್.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಎನ್.ಎಸ್.ಆರ್.ಬಿ.** | ರಾಮಭದ್ರಾಚಾರ್ಯ, ಎನ್.ಎಸ್. (ದಿ)<br>ಸಹಪ್ರಾಧ್ಯಾಪಕ, ತರ್ಕಶಾಸ್ತ್ರ<br>ಸಂಸ್ಕೃತ ಪಾಠಶಾಲೆ, ಮೈಸೂರು |
| **ಎನ್.ಎಸ್.ವಿ.** | ವೀರಪ್ಪ, ಎನ್.ಎಸ್. (ದಿ)<br>ಗೌರವ ಸಂಪಾದಕ, ಜೀವವಿಜ್ಞಾನ ವಿಭಾಗ<br>ಕನ್ನಡ ವಿಶ್ವಕೋಶ, ಮೈಸೂರು |
| **ಎನ್.ಟಿ.** | ತಪಸ್ವಿಕುಮಾರ್, ಎನ್.<br>ಅಧ್ಯಾಪಕ (ವಿ)<br>ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| **ಎನ್.ವಿ.ಎ.** | ಅಶ್ವತ್ಥನಾರಾಯಣ, ಎನ್.ವಿ.<br>ರೀಡರ್, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಪಿ.** | ಡಾ॥ ಪ್ರಭುಶಂಕರ<br>ನಿರ್ದೇಶಕ (ವಿ), ಪ್ರಸಾರಾಂಗ<br>ಮಾನಸಗಂಗೋತ್ರಿ, ಮೈಸೂರು |
| **ಪಿ.ಎ.ಆರ್.** | ರಾಮಕೃಷ್ಣ ಐಯ್ಯರ್, ಪಿ.ಎ.<br>ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |

| | |
|---|---|
| **ಪಿ.ಬಿ.ಡಿ.** | ದೇಸಾಯಿ, ಪಿ.ಬಿ. (ದಿ)<br>ನಿರ್ದೇಶಕ<br>ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ |
| **ಪಿ.ಸಿ.ಬಿ.** | ಬೋಪಯ್ಯ, ಪಿ.ಸಿ.<br>ಪ್ರಾಧ್ಯಾಪಕ, ಮಕ್ಕಳ ವಿಭಾಗ<br>ಮೆಡಿಕಲ್ ಕಾಲೇಜು, ಬೆಂಗಳೂರು |
| **ಪಿ.ಜಿ.ಡಿ.** | ಪ್ರಧಾನ್ ಗುರುದತ್ತ<br>ಪ್ರಾಧ್ಯಾಪಕ (ವಿ), ನಿರ್ದೇಶಕ<br>ಕುವೆಂಪು ಭಾಷಾಭಾರತಿ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| **ಪಿ.ಜಿ.ಆರ್.** | ರಾಮಪ್ಪ, ಪಿ.ಜಿ.<br>ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಪಿ.ಎಚ್.** | ಹಲಗೇಗೌಡ, ಪಿ.<br>ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಡಿ. ಬನುಮಯ್ಯ ಕಾಲೇಜು, ಮೈಸೂರು |
| **ಪಿ.ಕೆ.ಎನ್.** | ನಾರಾಯಣ, ಪಿ.ಕೆ.<br>ಪ್ರತಿನಿಧಿ, ಸಂಯುಕ್ತ ಕರ್ನಾಟಕ<br>ಕೊಯಿಲೊಗಾರ್ಡನ್, ಮಂಗಳೂರು |
| **ಪಿ.ಕೆ.ಆರ್.** | ಕೃಷ್ಣರಾವ್, ಪಿ.<br>349, ಒಂದನೆಯ ಬ್ಲಾಕ್<br>ಜಯನಗರ, ಬೆಂಗಳೂರು |
| **ಪಿ.ಎಂ.ಯು.ಎಸ್.** | ಉಮಾಕಾಂತಶಾಸ್ತ್ರಿ, ಪಿ.ಎಂ.<br>ಪ್ರಾಂಶುಪಾಲರು (ವಿ)<br>ಶ್ರೀ ಗವಿಸಿದ್ದೇಶ್ವರ ವಿ.ವಿ. ಟ್ರಸ್ಟ್ ಕಾಲೇಜು, ಕೊಪ್ಪಳ |
| **ಪಿ.ಎಸ್.** | ಶಾಮರಾವ್, ಪಿ.<br>ಅಡ್ವೊಕೇಟ್, ಬಳ್ಳಾರಿ |
| **ಪಿ.ಎಸ್.ಆರ್.** | ಶಾಂತಾರಾಮರಾವ್, ಪಿ.<br>ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಮಂಗಳೂರು |
| **ಪಿ.ಎಸ್.ಆರ್.ಎಸ್.** | ರಾಜಶೇಖರಯ್ಯ, ಪಿ.ಎಸ್.<br>ವ್ಯಾಕರಣಶಾಸ್ತ್ರ ಪ್ರಾಧ್ಯಾಪಕ<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು |
| **ಪಿ.ಎಸ್.ಎಸ್.** | ಶಂಕರ, ಪಿ.ಎಸ್.<br>ಪ್ರಾಧ್ಯಾಪಕ, ವೈದ್ಯವಿಜ್ಞಾನ ವಿಭಾಗ<br>ಮೆಡಿಕಲ್ ಕಾಲೇಜು, ಗುಲ್ಬರ್ಗ |
| **ಪಿ.ಎಸ್.ಎಸ್‍ಎಚ್.** | ಶರ್ಮ, ಪಿ.ಎಸ್. (ದಿ)<br>ಪ್ರಾಧ್ಯಾಪಕ (ವಿ), ಜೀವರಸಾಯನವಿಜ್ಞಾನ ವಿಭಾಗ<br>ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್<br>ಬೆಂಗಳೂರು |
| **ಪಿ.ವಿ.** | ವೆಂಕಟರಾಮಯ್ಯ, ಪಿ.<br>ಕುಲಪತಿಗಳು (ವಿ)<br>ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ |
| **ಪಿ.ವಿ.ಸಿ.** | ಚಂದ್ರಶೇಖರ, ಪಿ.ವಿ. (ದಿ)<br>ಪ್ರಾಧ್ಯಾಪಕ, ಕನ್ನಡ ವಿಭಾಗ<br>ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| **ಪಿ.ವಿ.ಎನ್.** | ನರಹರಿ, ಪಿ.ವಿ.<br>ಅಧ್ಯಾಪಕ (ವಿ), ವಾಣಿಜ್ಯವಿಜ್ಞಾನ ವಿಭಾಗ<br>ಡಿ. ಬನುಮಯ್ಯ ಕಾಲೇಜು, ಮೈಸೂರು |
| **ಆರ್.ಎ.ಎ.** | ರಂಗಣ್ಣ, ಎ.<br>ರೀಡರ್, ಭೌತವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಆರ್.ಬಿ.ಎಸ್.** | ರಾಮಾಚಾರ್, ಬಿ.ಎಸ್. (ದಿ)<br>ಗಮಕಿ, ಗುಡಿಬಂಡೆ, ಕೋಲಾರ ಜಿಲ್ಲೆ |
| **ಆರ್.ಸಿ.** | ಚಕ್ರವರ್ತಿ, ಆರ್.<br>ಒಂದನೆಯ ಬ್ಲಾಕ್, ಜಯಲಕ್ಷ್ಮೀಪುರಂ<br>ಮೈಸೂರು |
| **ಆರ್.ಡಿ.ಆರ್.** | ದಿನೇಶರಾವ್, ಆರ್.<br>ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು<br>ಮೈಸೂರು |
| **ಆರ್.ಎಫ್.ಪಿ.** | ಪಾಟೀಲ, ಆರ್.ಎಫ್.<br>ಪ್ರಾಧ್ಯಾಪಕ<br>ಕೃಷಿ ಎಂಜಿನಿಯರಿಂಗ್ ವಿಭಾಗ<br>ಕೃಷಿ ಕಾಲೇಜು, ಧಾರವಾಡ |
| **ಆರ್.ಜಿ.** | ರಾಮೇಗೌಡ<br>ಪ್ರಾಧ್ಯಾಪಕ (ವಿ)<br>ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು<br>ಚಿತ್ರಕೂಟ, ಕಾಳಿದಾಸ ರಸ್ತೆ<br>ಜಯಲಕ್ಷ್ಮೀಪುರಂ, ಮೈಸೂರು |
| **ಆರ್.ಜಿ.ಕೆ.** | ಕುಲಕರ್ಣಿ, ಆರ್.ಜಿ.<br>ಸಂಶೋಧಕ, ಹಿಂದೀ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಆರ್.ಎಚ್.ಕೆ.** | ರಂಗನಾಥ, ಎಚ್.ಕೆ. (ದಿ)<br>ನಿರ್ದೇಶಕ, ಸಂಗೀತ ನಾಟಕ ವಿಭಾಗ<br>ಎಗ್ಜಿಬಿಷನ್ ಗ್ರೌಂಡ್ ಲೈನ್ಸ್, ಮಥುರಾ ರೋಡ್<br>ನವದೆಹಲಿ |
| **ಆರ್.ಎಲ್.** | ಲಲಿತಾ, ಆರ್.<br>ಪ್ರಾಧ್ಯಾಪಕಿ (ವಿ), ಪ್ರಾಣಿವಿಜ್ಞಾನ ವಿಭಾಗ<br>ಮೌಂಟ್ ಕಾರ್ಮೆಲ್ ಕಾಲೇಜು, ಬೆಂಗಳೂರು |
| **ಆರ್.ಎಲ್.ಎ.** | ಅನಂತರಾಮಯ್ಯ, ಆರ್.ಎಲ್ (ದಿ)<br>ಸಹಾಯಕ ನಿರ್ದೇಶಕ, ಪ್ರಸಾರಾಂಗ<br>ಮಾನಸಗಂಗೋತ್ರಿ, ಮೈಸೂರು |
| **ಆರ್.ಎಲ್.ಎನ್.** | ನರಸಿಂಹಯ್ಯ, ಆರ್.ಎಲ್. (ದಿ)<br>ಭೌತವಿಜ್ಞಾನ ವಿಭಾಗ, ಸೆಂಟ್ರಲ್ ಕಾಲೇಜು<br>ಬೆಂಗಳೂರು |
| **ಆರ್.ಪಿ.ಎಸ್.** | ಸಿಂಗ್, ಆರ್.ಪಿ.<br>ಪ್ರಾಧ್ಯಾಪಕ (ವಿ), ಶಿಕ್ಷಣ ಶಾಖೆ<br>ಪಾಟ್ನ ವಿಶ್ವವಿದ್ಯಾಲಯ, ಪಾಟ್ನ |
| **ಆರ್.ಆರ್.ಎ.** | ಅತಗೂರ್, ಆರ್.ಆರ್.<br>ಅಧ್ಯಾಪಕ<br>ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ |
| **ಆರ್.ಆರ್.ಕೆ.** | ರಾಘವೇಂದ್ರರಾವ್, ಕೆ.<br>ಅಧ್ಯಾಪಕ (ವಿ), ಕನ್ನಡ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಆರ್.ಎಸ್.ಬಿ.** | ಭೂಸನೂರಮಠ, ಆರ್.ಎಸ್.<br>ಅಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ<br>ಕರ್ನಾಟಕ ಸೈನ್ಸ್ ಕಾಲೇಜು, ಧಾರವಾಡ |

ಆರ್.ಎಸ್.ಎನ್. ಸತ್ಯನಾರಾಯಣ, ಆರ್.
ಪ್ರಾಧ್ಯಾಪಕ (ವಿ)
ಶ್ರೀ ವರಲಕ್ಷ್ಮಿ ಲಲಿತಕಲಾ ಅಕಾಡೆಮಿ, ಮೈಸೂರು

ಆರ್.ಎಸ್.ಪಿ. ಪಂಚಮುಖಿ, ಆರ್.ಎಸ್. (ದಿ)
ನಿರ್ದೇಶಕ (ವಿ)
ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

ಆರ್.ಎಸ್.ವಿ. ರಾಮರಾವ್, ಎಸ್.ವಿ.
ಪ್ರಾಧ್ಯಾಪಕ (ವಿ), ವೈದ್ಯವಿಜ್ಞಾನ ವಿಭಾಗ
ಮೆಡಿಕಲ್ ಕಾಲೇಜು, ಬೆಂಗಳೂರು

ಎಸ್.ಎ.ಎಚ್. ಸಂಜೀವಯ್ಯ, ಎಚ್. (ದಿ)
ಪ್ರಾಧ್ಯಾಪಕ, ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎ.ಎಂ. ಸಿಂಧುವಳ್ಳಿ ಅನಂತಮೂರ್ತಿ (ದಿ)
ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು

ಎಸ್.ಎ.ಎನ್. ಅನಂತನಾರಾಯಣ, ಎಸ್. (ದಿ)
ಅಧ್ಯಾಪಕ, ಇಂಗ್ಲಿಷ್ ವಿಭಾಗ
ಸಂಗೀತ ಮತ್ತು ನೃತ್ಯ ಕಾಲೇಜು, ಮೈಸೂರು

ಎಸ್.ಎ.ಟಿ.ಕೆ. ಸೈಯದ್ ಅಬು ತುರಾಬ್ ಖತಾಯಿ
ಅಧ್ಯಾಪಕ, ಉರ್ದು ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಎಸ್.ಬಿ.ಎಲ್. ಶ್ರೀನಿವಾಸ್, ಬಿ.ಎಲ್.
ಅಧ್ಯಾಪಕ, ಭೂವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಸ್.ಬಿ.ಎಸ್. ಸಣ್ಣಯ್ಯ, ಬಿ.ಎಸ್.
ಸಹಾಯಕ ನಿರ್ದೇಶಕ (ವಿ), ಸಂಪಾದನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಡಿ.ಕೆ. ಸಬಿತಾದೇವಿ, ಕೆ.
ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಚ್ಒ. ಹೊನ್ನಯ್ಯ, ಎಸ್.
ಪ್ರಾಧ್ಯಾಪಕ, ಜೀವವಿಜ್ಞಾನ ವಿಭಾಗ
ಸ್ನಾತಕೋತ್ತರ ಕೇಂದ್ರ, ಮಂಗಳೂರು

ಎಸ್.ಕೆ.ಕೆ. ಕಿಟ್ಟಮ್ಮ, ಎಸ್.ಕೆ.
ಅಧ್ಯಾಪಕಿ, ಇತಿಹಾಸ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

ಎಸ್.ಕೆ.ಎಂ. ಮಿತ್ರ, ಎಸ್.ಕೆ.
ಮುಖ್ಯಸ್ಥ, ಮನಶ್ಶಾಸ್ತ್ರ ವಿಭಾಗ
ಮಾಡಲ್‌ಟೌನ್, ದೆಹಲಿ

ಎಸ್.ಕೆ.ಆರ್. ರಾಮಚಂದ್ರರಾವ್, ಎಸ್.ಕೆ. (ದಿ)
ಜಯನಗರ, ಬೆಂಗಳೂರು
(ಅಧ್ಯಕ್ಷ, ಲಲಿತಕಲಾ ಉಪಸಮಿತಿ, ಕನ್ನಡ ವಿಶ್ವಕೋಶ)

ಎಸ್.ಕೆ.ಎಸ್. ಶಿವಣ್ಣ, ಕೆ.ಎಸ್.
ಅಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಲ್. ಸಿಂಪಿಲಿಂಗಣ್ಣ (ದಿ)
ಚಡಚಣ, ಬಿಜಾಪುರ ಜಿಲ್ಲೆ

ಎಸ್.ಎಂ. ಶೇಷಾದ್ರಿ, ಎಂ. (ದಿ)
ಪ್ರಾಧ್ಯಾಪಕ, ಪ್ರಾಕ್ತನಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಂ.ಎಚ್. ಹುಣಶಾಳ್, ಎಸ್.ಎಂ.
ಪ್ರಾಂಶುಪಾಲರು
ಹಮ್‌ದರ್ದ್ ಹೈಸ್ಕೂಲು, ರಾಯಚೂರು

ಎಸ್.ಎನ್. ನಾಗರಾಜು, ಎಸ್.
ಪ್ರಾಧ್ಯಾಪಕ (ವಿ), ಪ್ರಾಕ್ತನಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್ಎಆರ್. ನಾರಾಯಣ, ಎಸ್.
ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಸ್.ಎನ್.ಬಿ. ಶ್ರೀನಾಗಭೂಷಣ
ವಿಶೇಷಾಧಿಕಾರಿ
ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್
ಕಲ್ಕತ್ತ

ಎಸ್.ಎನ್.ಕೆ. ಕೃಷ್ಣಜೋಯಿಸ್, ಎಸ್.ಎನ್. (ದಿ)
ಸಂಪಾದನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್.ಕೆವಿ. ಸೂರ್ಯನಾಥ ಕಾಮತ್
ಪ್ರಾಧ್ಯಾಪಕರು (ವಿ), ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಸ್.ಎನ್.ಕೆಯು. ನಿರ್ಮಲಕುಮಾರಿ, ಜಿ.ಎಸ್.
ಮುಖ್ಯಸ್ಥೆ, ಪ್ರಾಣಿವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಎಸ್.ಎನ್.ಎಲ್. ಲಕ್ಷ್ಮೀನಾರಾಯಣ, ಎಸ್.ಎನ್.
ಪ್ರಲೇಖನಾಧಿಕಾರಿ (ವಿ)
ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್.ಆರ್. ರಾಮಸ್ವಾಮಿ, ಎಸ್.ಎನ್.
ಸಂಶೋಧಕ, ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಪಿ.ಟಿ. ತಿಣ್ಣಪ್ಪನ್, ಎಸ್.ಪಿ.
ರೀಡರ್, ಭಾಷಾವಿಜ್ಞಾನ
ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈ ನಗರ

ಎಸ್.ಪಿ.ಡಬ್ಲ್ಯು. ವಾಳವೇಕರ್, ಎಸ್.ಪಿ.
ರೀಡರ್, ರಸಾಯನಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಸ್.ಆರ್.ಜಿ. ಸಿದ್ದರಾಮೇಗೌಡ
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಸ್ಎ. ಸವ್ಯಸಾಚಿ
2ನೆಯ ಬ್ಲಾಕ್, ಚಿಕ್ಕಮಗಳೂರು ಜಿಲ್ಲೆ

ಎಸ್.ಎಸ್.ಬಿ. ಭೂಸನೂರಮಠ, ಎಸ್.ಎಸ್.
ಪ್ರಾಧ್ಯಾಪಕ (ದಿ), ಕನ್ನಡ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ಎಸ್.ಡಿಎಚ್. ಧರ್ಮತ್ತಿ, ಎಸ್.ಎಸ್.
ಟಾಟಾ ಇನ್ಸಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್
ಕೊಲಾಬ, ಬೊಂಬಾಯಿ

ಎಸ್.ಎಸ್.ಜಿ. ಗುರುರೇಣುಕಾಚಾರ್ಯ, ಎಸ್.ಎಸ್.
ಅಧ್ಯಾಪಕ, ಮಹಿಳೆಯರ ಪಾಲಿಟೆಕ್ನಿಕ್
ಬೆಂಗಳೂರು

# ಲೇಖಕಸೂಚಿ

**ಎಸ್.ಎಸ್.ಆರ್.** ರಾಘವಾಚಾರ್, ಎಸ್.ಎಸ್. (ದಿ)
ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಎಸ್ಆರ್ಐ.** ಶ್ಯಾಮಲ ಶ್ರೀನಿವಾಸನ್
ಅಧ್ಯಾಪಕಿ, ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಎಸ್.ಎಸ್ಐ.** ಸಿಂಧಗಿ, ಎಸ್.ಎಸ್.
ತಳಿ ಅಭಿವೃದ್ಧಿ ಅಧಿಕಾರಿ
ರೀಜನಲ್ ರೀಸರ್ಚ್ ಸ್ಟೇಷನ್
ರಾಯಚೂರು

**ಎಸ್.ಟಿ.ಪಿ.** ಪುಟ್ಟಣ್ಣ, ಎಸ್.ಟಿ.
ನಿರ್ದೇಶಕ (ವಿ)
ಮಿಂಟೊ ಆಸ್ಪತ್ರೆ, ಬೆಂಗಳೂರು

**ಎಸ್ಯು.ಕೆ.** ಸುಂದರಂ, ಕೆ.
ಇತಿಹಾಸ ವಿಭಾಗ
ಆಂಧ್ರ ವಿಶ್ವವಿದ್ಯಾಲಯ, ವಾಲ್ಟೇರ್

**ಎಸ್.ವಿ.ಡಿ.** ವೆಂಕಟದೇಶಿಕಾಚಾರ್, ಎಸ್.
5, ಕಾರ್ನವಾಲೀಸ್ ರಸ್ತೆ, ನವದೆಹಲಿ

**ಎಸ್.ವಿ.ಪಿ.** ಪರಮೇಶ್ವರಭಟ್ಟ, ಎಸ್.ವಿ. (ದಿ)
ಕನ್ನಡ ಪ್ರಾಧ್ಯಾಪಕ, ಸ್ನಾತಕೋತ್ತರ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ, ಮಂಗಳೂರು
(ಅಧ್ಯಕ್ಷ, ಕನ್ನಡ ಉಪಸಮಿತಿ, ಕನ್ನಡ ವಿಶ್ವಕೋಶ)

**ಎಸ್.ವಿ.ಪಿಎ.** ಪಾಟೀಲ, ಎಸ್.ವಿ.
ಸಹಾಯಕ ಸಂಪಾದಕ
'ಕರ್ಮವೀರ' ಕನ್ನಡ ವಾರಪತ್ರಿಕೆ, ಹುಬ್ಬಳ್ಳಿ

**ಎಸ್.ವಿ.ಆರ್.** ರಂಗಣ್ಣ, ಎಸ್.ವಿ. (ದಿ)
ಇಂಗ್ಲಿಷ್ ಪ್ರಾಧ್ಯಾಪಕ (ವಿ)
(ಅಧ್ಯಕ್ಷ, ಸೌಂದರ್ಯತತ್ತ್ವ ಉಪಸಮಿತಿ
ಕನ್ನಡ ವಿಶ್ವಕೋಶ), ಮೈಸೂರು

**ಎಸ್.ವಿ.ಆರ್ಎ.** ರಾಜನ್, ಎಸ್.ವಿ.
ಸೂಪರಿಂಟೆಂಡೆಂಟ್
ಅಡಕೆ ಸಂಶೋಧನ ಕೇಂದ್ರ
ತೀರ್ಥಹಳ್ಳಿ

**ಎಸ್.ವಿ.ಎಸ್.** ಷಣ್ಮುಗಂ, ಎಸ್.ವಿ.
ರೀಡರ್, ಭಾಷಾವಿಜ್ಞಾನ ವಿಭಾಗ
ಅಣ್ಣಾಮಲೈ ವಿಶ್ವವಿದ್ಯಾಲಯ
ಅಣ್ಣಾಮಲೈ, ತಮಿಳುನಾಡು

**ಎಸ್.ವಿ.ಎಸ್.ಬಿ.** ಭಟ್ಟಾಚಾರ್, ಎಸ್.ವಿ.ಎಸ್. (ದಿ)
ಸಂಶೋಧನ ಸಹಾಯಕ, ಪ್ರಾಕ್ತನಶಾಸ್ತ್ರ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಟಿ.** ಥಂಕಮ್
ಉಪಸಂಪಾದಕಿ, ಮಾತೃಭೂಮಿ
ಕೋಳಿಕೋಡ್, ಕೇರಳ

**ಟಿಸಿ.** ಚನ್ನೇಗೌಡ, ಟಿ.
ಅಧ್ಯಾಪಕ (ವಿ), ಸಸ್ಯಶಾಸ್ತ್ರ ವಿಭಾಗ
ಎಂ.ಡಿ.ಟಿ.ಡಿ.ಬಿ. ಕಾಲೇಜು, ಮೈಸೂರು

**ಟಿ.ಸಿ.ಬಿ.ಆರ್.** ರಂಗನ್, ಟಿ.ಸಿ.ಬಿ.
ಲಕ್ಷ್ಮೀಬಾಯಿ ದೈಹಿಕ ಶಿಕ್ಷಣ ಕಾಲೇಜು
ಗ್ವಾಲಿಯರ್

**ಟಿ.ಇ.ಎಚ್.** ಹಿಲ್ಟನ್, ಟಿ.ಇ.
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಯೂನಿವರ್ಸಿಟಿ ಕಾಲೇಜು
ಅಕ್ಲುಮೋಟ, ಘಾನ (ಆಫ್ರಿಕ)

**ಟಿ.ಎಚ್.ಎಚ್.** ಹೊನ್ನಗಂಗಪ್ಪ, ಟಿ.ಎಚ್.
ಸಹಾಯಕ ಸಂಪಾದಕ (ವಿ), ಕನ್ನಡ ವಿಶ್ವಕೋಶ
ಮಾನಸಗಂಗೋತ್ರಿ, ಮೈಸೂರು

**ಟಿ.ಎನ್.ಎನ್.** ನಾಗರಾಜಶೆಟ್ಟಿ, ಟಿ.ಎನ್.
ಅಧ್ಯಾಪಕ (ವಿ), ಭೌತಶಾಸ್ತ್ರ ವಿಭಾಗ
ಯುವರಾಜ ಕಾಲೇಜು, ಮೈಸೂರು
(ಲೇಖನ: ಕನ್ನಡದಲ್ಲಿ ದಾಸ ಸಾಹಿತ್ಯ ನೋಡಿ:
ಟಿ.ಎನ್.ಎನ್.ಆರ್)

**ಟಿ.ಎನ್.ಎನ್.ಆರ್.** ನಾಗರತ್ನ, ಟಿ.ಎನ್.
ಸಹಾಯಕ ಸಂಶೋಧಕಿ (ವಿ)
ಹರಿದಾಸ ಸಾಹಿತ್ಯ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಟಿ.ಎಸ್.ಎಸ್.ಆರ್.** ಶ್ಯಾಮರಾಯ, ಟಿ.ಎಸ್.
ಗ್ರಂಥಪಾಲ (ವಿ)
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಟಿ.ಎಸ್.ಟಿ.** ತೋಂಟದಾರ್ಯ, ಟಿ.ಎಸ್.
ಕೀಟವಿಜ್ಞಾನಿ, ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು

**ಟಿ.ಟಿ.** ತಿಮ್ಮಯ್ಯ, ಟಿ.
ನಿರ್ದೇಶಕ, ಗಣಿಗಳ ಶಾಲೆ
ಕೋರಮಂಡಲ, ಕೆ.ಜಿ.ಎಫ್.

**ಟಿ.ಟಿ.ಎಸ್.** ತಿರುಮಲೆ ತಾತಾಚಾರ್ಯ ಶರ್ಮ (ದಿ)
ಪತ್ರಿಕೋದ್ಯಮಿ
54, ಶಂಕರವನ, ಶಂಕರಪುರಂ
ಬೆಂಗಳೂರು

**ಟಿ.ವಿ.ಎಸ್.** ಸುಬ್ರಹ್ಮಣ್ಯಂ, ಟಿ.ವಿ.
ಅಧ್ಯಾಪಕ (ವಿ), ಗ್ರಂಥಾಲಯಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು

**ಟಿ.ವಿ.ವಿ.** ವೆಂಕಟಾಚಲಶಾಸ್ತ್ರೀ, ಟಿ.ವಿ.
ಪ್ರಾಧ್ಯಾಪಕ ಹಾಗೂ ನಿರ್ದೇಶಕ (ವಿ)
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಯು.ಎಲ್.ಎ.** ಆಚಾರ್, ಯು.ಎಲ್.
ರೀಡರ್, ಭೌತವಿಜ್ಞಾನ ವಿಭಾಗ
ಎಂ.ಜಿ.ಎಂ. ಕಾಲೇಜು, ಉಡುಪಿ

**ಯು.ಪಿ.ಯು.** ಉಪಾಧ್ಯಾಯ, ಯು.ಪಿ.
ಪ್ರಾಂಶುಪಾಲರು (ವಿ), ದಕ್ಷಿಣ ಪ್ರಾದೇಶಿಕ ಕೇಂದ್ರ
ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಯು.ಎಸ್.ಕೆ.** ಕೃಷ್ಣರಾವ್, ಯು.ಎಸ್. (ದಿ)
"ರುಕ್ಮಿಣಿ", 2ನೆಯ ತಿರುವು
ಶೇಷಾದ್ರಿಪುರಂ, ಬೆಂಗಳೂರು

**ವಿ.ಬಿ.** ಭಾಸ್ಕರ್, ವಿ.
ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

| | |
|---|---|
| **ವಿ.ಡಿ.ಪಿ.** | ದ್ವಾರಕಪ್ರಸಾದ್, ವಿ.<br>ರೀಡರ್<br>ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| **ವಿಇ.ಎಸ್.** | ವೆಂಕಟರಾಮ್, ಎಸ್.<br>ಸಂಪಾದಕ, 'ಉತ್ಥಾನ ಗವಿಪುರಂ ರಸ್ತೆ'<br>ಕೆಂಪೇಗೌಡನಗರ, ಬೆಂಗಳೂರು |
| **ವಿ.ಜಿ.** | ವರದರಾಜರಾವ್, ಜಿ. (ದಿ)<br>ಪ್ರಾಧ್ಯಾಪಕ<br>ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ವಿ.ಜಿ.ಕೆ.** | ಕೃಷ್ಣಮೂರ್ತಿ, ವಿ.ಜಿ. (ದಿ)<br>ಭಾಷಾಂತರಕಾರ, ಭಾಷಾಂತರ ವಿಭಾಗ<br>ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ವಿ.ಜಿ.ಆರ್.** | ಗೋವಿಂದರಾಜ್, ವಿ.<br>ಐಡಿಯಲ್ ಜಾವಾ ಕಂಪನಿ ಪ್ರೈ.ಲಿ.,<br>ಮೈಸೂರು |
| **ವಿ.ಆರ್.ವಿ.ಎಚ್.** | ರವಿವರ್ಮ ಹೆಗ್ಗಡೆ, ವಿ.<br>ಪ್ರಾಧ್ಯಾಪಕ, ಪಶುವೈದ್ಯ ಕಾಲೇಜು<br>ಹೆಬ್ಬಾಳ, ಮಂಗಳೂರು |
| **ವಿ.ಎಸ್.ಎಸ್.** | ಡಾ॥ ಸಂಪತ್ಕುಮಾರಾಚಾರ್ಯ, ವಿ.ಎಸ್.<br>1402/ಎ, 8ನೆಯ ತಿರುವು<br>ಕೆ.ಆರ್. ಮೊಹಲ್ಲ, ಮೈಸೂರು |
| **ವಿ.ಎಸ್.ವಿ.** | ವೆಂಕಟರಾಮ್, ವಿ.ಎಸ್.<br>ಸಹಪ್ರಾಧ್ಯಾಪಕ<br>ಎಸ್.ಕೆ.ಎಸ್.ಜೆ. ಇನ್‌ಸ್ಟಿಟ್ಯೂಟ್, ಬೆಂಗಳೂರು |
| **ವೈ.ಆರ್.ಎಂ.** | ಮಾಧವರಾವ್, ವೈ.ಆರ್.<br>10ನೆಯ ಮೇನ್, ಸರಸ್ವತಿಪುರಂ<br>ಮೈಸೂರು (ಲೇಖನ: ಐಸೊಯೆಟೀಸ್) |
| **ವೈ.ಎಸ್.ಎಲ್.** | ಲೂಯಿಸ್, ವೈ.ಎಸ್. (ದಿ)<br>ಆಹಾರವಿಜ್ಞಾನ ಇಲಾಖೆ<br>ಕೇಂದ್ರ ಆಹಾರ ಸಂಶೋಧನ ಸಂಸ್ಥೆ<br>ಮೈಸೂರು |

## ಕೃತಜ್ಞತೆ


ಈ ಕೆಳಕಂಡ ಕಲಾವಿದರು ವಿಶ್ವಕೋಶದ ಮೂರನೆಯ ಸಂಪುಟಕ್ಕೆ ಚಿತ್ರಗಳನ್ನು ಬರೆದುಕೊಟ್ಟು ಉಪಕರಿಸಿದ್ದಾರೆ

ಇಟಿಗಟ್ಟಿ, ಸಿ.ವಿ., ಭೂವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಕುಲಕರ್ಣಿ, ಕೆ.ಬಿ., ಕಲಾವಿದ, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ

ತಿಪ್ಪೇಸ್ವಾಮಿ, ಪಿ.ಆರ್., ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ತಿಪ್ಪೇಸ್ವಾಮಿ, ಪಿ.ಆರ್., ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಪಾಟಕ್, ಎಚ್.ಎಸ್., ಸಹಾಯಕ ಸಂಶೋಧಕ, ಪ್ರಾಚ್ಯವಿದ್ಯಾ ವಿಭಾಗ, ಮಾನಸಗಂಗೋತ್ರಿ, ಮೈಸೂರು

ರಘುನಾಥಭಟ್ಟ, ಎಚ್.ಆರ್. (ದಿ), ಪ್ರಾಧ್ಯಾಪಕ, ಪ್ರಾಕ್ತನಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ರಾಮಕೃಷ್ಣರಾಜು, ಛಾಯಾಚಿತ್ರಗ್ರಾಹಕ, ಪ್ರಾಣಿಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಲಕ್ಷ್ಮೀಗೌಡ, ಬಿ.ಟಿ., ಡ್ರಾಫ್ಟ್ಸ್‌ಮನ್, ಪ್ರಾಕ್ತನಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ವೆಂಕಟೇಶ್, ಕೆ.ಎಲ್., ಕಲಾವಿದ, ಕಿರಣ ಆರ್ಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಶಶಿಕಲಾ, ಎ., ಪ್ರಾಧ್ಯಾಪಕಿ (ವಿ), ಕೃಷ್ಣರಾಜವನಂ, ಮೈಸೂರು

ಶಿವರುದ್ರಪ್ಪ, ಟ.ವಿ., ಅಧ್ಯಾಪಕ, ಭೂವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಶ್ರೀನಿವಾಸ್, ಎಂ.ಬಿ., ನಜರ್‌ಬಾದ್, ಮೈಸೂರು

ಹನಸೋಗೆ, ಶ್ರೀ ಪ್ರಕಾಶನ, ಮೈಸೂರು

ಮೂರನೆಯ ಸಂಪುಟದ ಚಿತ್ರಗಳಿಗಾಗಿ ವಿವಿಧ ಗ್ರಂಥಗಳಿಂದ ಹಾಗೂ ಸಂಘ ಸಂಸ್ಥೆಗಳಿಂದ ನೆರವು ಒದಗಿದೆ. ಅಂಥವನ್ನು ಕೆಳಗೆ ಕೃತಜ್ಞತೆಯಿಂದ ನೆನೆಯಲಾಗಿದೆ.

ಅರ್ಲಿ ಅನಟೋಲಿಯ (196). ಲೇ: ಸೆಟನ್ ಲಾಯ್ಡ್

ಅರ್ಲಿ ಇಂಡಿಯ ಅಂಡ್ ಪಾಕಿಸ್ತಾನ್ (1959). ಲೇ: ಸರ್ ಮಾರ್ಟಿಮರ್ ವೀಲರ್

ಆಲ್ಬರ್ಟ್ ಐನ್‌ಸ್ಟೈನ್–ಸಂಪುಟ 1 (1959). ಲೇ: ಪಾಲ್ ಆರ್ಥರ್ ಷಿಲ್‌ಪ್

ಇಂಟ್ರೊಡಕ್ಷನ್ ಟು ಎಲೆಕ್ಟ್ರಾನ್ ಮೈಕ್ರೊಸ್ಕೋಪಿ (1966). ಲೇ: ಸಿ.ಇ. ಹಾಲ್

ಇಂಟ್ರೊಡ್ಯೂಸಿಂಗ್ ವರ್ಲ್ಡ್ ಅನಿಮಲ್ಸ್ (1960). ಲೇ: ಪ್ರಾಂಟಿಸೆಕ್ ಜೂಲಿಯಸ್ ಕೊಮೆರೆಕ್

ಎನ್‌ಸೈಕ್ಲೋಪೀಡಿಯ ಆಫ್ ವರ್ಲ್ಡ್ ಆರ್ಟ್

ಎನ್‌ಸೈಕ್ಲೋಪೀಡಿಯ ಬ್ರಿಟ್ಯಾನಿಕ

ಎಲೆಕ್ಟ್ರಾನ್ ಮೈಕ್ರೊಸ್ಕೋಪಿ ಆಫ್ ಥಿನ್ ಕ್ರಿಸ್ಟಲ್ಸ್ (1965). ಲೇ: ಪಿ.ಬಿ. ಹಿರ್ಷ್ ಮತ್ತು ಇತರರು

ಎವ್ವೆರಿಮ್ಯಾನ್ಸ್ ಎನ್‌ಸೈಕ್ಲೋಪಿಡಿಯ

ಏಷ್ಯ (1958). ಲೇ: ಮಾರ್ಟಿನ್ ಹರ್ಲಿಮಾನ್

ಏಷ್ಯ – ಎ ನ್ಯಾಚುರಲ್ ಹಿಸ್ಟೊರಿ (1968). ಲೇ: ಪಿಯರ್ ಫೆಫರ್

ಐರ್ಲೆಂಡ್ (1969). ಲೇ: ಟಿ.ಡಬ್ಲ್ಯು. ಫ್ರೀಮನ್

ಕಾಲಿಯರ್ಸ್ ಇನ್‌ಸೈಕ್ಲೊಪೀಡಿಯ

ಜನರಲ್ ಜೂಆಲಜಿ. ಲೇ: ಸ್ಟೋರರ್ ಮತ್ತು ಯೂಸಿಂಗರ್

ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿ, ನಜರ್‌ಬಾದ್, ಮೈಸೂರು

ದಿ ಆರಿಜನ್ಸ್ ಆಫ್ ದಿ ವರ್ಲ್ಡ್‌ವಾರ್ (1959). ಲೇ: ಸಿಡ್ನಿ ಬ್ರಾಡ್‌ಷಾ ಫೇ

ದಿ ಆರ್ಟ್ ಆಫ್ ಚೈನ, ಕೊರಿಯ ಅಂಡ್ ಜಪಾನ್ (1967). ಲೇ: ಪೀಟರ್‌ಸ್ವಾನ್

ದಿ ಆರ್ಟ್ ಆಫ್ ಸೌತ್ ಈಸ್ಟ್ ಏಷ್ಯ (1967). ಲೇ: ಫಿಲಿಪ್ ರಾಸನ್

ದಿ ಇಂಟರ್‌ನ್ಯಾಷನಲ್ ಎನ್‌ಸೈಕ್ಲೋಪೀಡಿಯ ಆಫ್ ಸೈನ್ಸ್ (1965)

ದಿ ಕದಂಬ ಕುಲ (1931). ಲೇ: ಜಾರ್ಜ್ ಎಂ. ಮೊರೇಸ್

ದಿ ಚಿಲ್ಡ್ರನ್ಸ್ ಎನ್‌ಸೈಕ್ಲೋಪೀಡಿಯ. ಲೇ: ಆರ್ಥರ್ ಮೀ

ದಿ ನ್ಯೂ ಕ್ಯಾಕ್ಸ್‌ಟನ್ ಎನ್‌ಸೈಕ್ಲೋಪೀಡಿಯ

ದಿ ನ್ಯೂ ಪಾಪ್ಯುಲರ್ ಎನ್‌ಸೈಕ್ಲೋಪೀಡಿಯ ಆಫ್ ದಿ ಸೈನ್ಸಸ್ (1968). ಲೇ: ಎ.ಜೆ.ಪಿ. ಟೇಲರ್

ದಿ ಬುಕ್ ಆಫ್ ನಾಲೆಡ್ಜ್, ಸಂ: ಗೋರ್ಡನ್ ಸ್ಟೊವೆಲ್

ದಿ ಲಿವಿಂಗ್ ರೇಸಸ್ ಆಫ್ ಮ್ಯಾನ್ (1965). ಲೇ: ಕಾರ್ಲ್‌ಟನ್ ಎಸ್. ಕೂನ್

ದಿ ವೆಲ್ತ್ ಆಫ್ ಇಂಡಿಯ, ಕೌನ್ಸಿಲ್ ಆಫ್ ಸೈನ್ಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್, ನ್ಯೂ ಡೆಲ್ಲಿ

ದಿ ಸೆಕೆಂಡ್ ವರ್ಲ್ಡ್‌ವಾರ್ (1960). ಲೇ: ವಿನ್‌ಸ್ಟನ್ ಚರ್ಚಿಲ್ ಮತ್ತು ಲೈಫ್ ಮ್ಯಾಗಜೀನ ಸಂಪಾದಕರು

ದಿ ಸ್ಟ್ಯಾಂಡರ್ಡ್ ಸೈಕ್ಲೋಪೀಡಿಯ ಆಫ್ ಹಾರ್ಟಿಕಲ್ಚರ್. ಲೇ: ಎಲ್.ಎಚ್. ಬೈಲಿ

ದಿ ಸ್ಟೋರಿ ಆಫ್ ಅವರ್ ಹೆರಿಟೇಜ್ (1966). ಲೇ: ವಿ.ಎಂ. ಷಿಲ್ಯರ್ ಮತ್ತು ಇ.ಜಿ. ಹ್ಯೂಯಿ

ದಿ ಹಿಸ್ಟೋರಿ ಆಫ್ ಇಂಡಿಯ (1961). ಲೇ: ಮೈಕೇಲ್ ಎಡ್ವರ್ಡ್ಸ್

ದಿ ಹೌವ್ ಅಂಡ್ ವೈ ವಂಡರ್ ಬುಕ್ ಆಫ್ ವರ್ಲ್ಡ್‌ವಾರ್ II (1962)

ನ್ಯೂನ್ಸ್ ಎನ್‌ಸೈಕ್ಲೋಪೀಡಿಯ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (1967). ಸಂ. ಆಲಿವರ್ ಸ್ಟಾಡಿಂಗ್‌ಫರ್ಡ್

ಪ್ರೀ ಹಿಸ್ಟೋರಿಕ್ ಜೈನ – ಸಂಪುಟ 1 (1959). ಲೇ: ಚಿಂಗ್ ಟಿ–ಕುನ್

ಮಾಡರ್ನ್ ಡೆವಲಪ್‌ಮೆಂಟ್ಸ್ ಇನ್ ಎಲೆಕ್ಟ್ರಾನ್ ಮೈಕ್ರೋಸ್ಕೋಪಿ (1964). ಸಂ. ಬಿ.ಎಂ. ಸೀಗಲ್

ಮಾರ್ಕ್ಸ್ ಎಂಗೆಲ್ಸ್ ಸಂಪುಟ 1 (1950)

ಮ್ಯಾಮಲ್ಸ್ ಆಫ್ ದಿ ವರ್ಲ್ಡ್ ಸಂಪುಟ 1, 2. ಲೇ: ಇ.ಪಿ ವಾಕರ್

ಮ್ಯಾಕ್‌ಗ್ರಾಹಿಲ್ ಎನ್‌ಸೈಕ್ಲೋಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ

ಯುನೈಟೆಡ್ ಸ್ಟೇಟ್ಸ್ ಇನ್ಫರ್ಮೇಷನ್ ಸರ್ವೀಸ್ ಕಾನ್ಸುಲೇಟ್ ಜನರಲ್, ಮದ್ರಾಸು

ಯುರೋಪ್ ಇನ್ ಅವರ್ ಟೈಂ (1948). ಲೇ: ರಾಬರ್ಟ್ ಎರ್‌ಗಾಂಗ್

ಯುರೋಪ್ ಸಿನ್ಸ್ 1815 (1962). ರೇನೆ ಆಲ್ಬ್ರೆಕ್ಟ್‌ಕ್ಯಾರೀ

ಯುರೋಪ್ ಸಿನ್ಸ್ 1914 (1957). ಲೇ: ಎಫ್. ಲೇ. ಬೆನ್ಸ್

ರಿಚರ್ಡ್ಸ್ ಟ್ರಾಪಿಕಲ್ ಎನ್‌ಸೈಕ್ಲೋಪೀಡಿಯ

ವಾರ್ತಾ ವಿಭಾಗ, ಬ್ರಿಟಿಷ್ ರಾಯಭಾರಿ ಕಚೇರಿ, ಲೋಕಲ್ ಲೈಬ್ರರಿ ಬಿಲ್ಡಿಂಗ್ಸ್, ಮದ್ರಾಸು

ಹಿಸ್ಟೋರಿ ಆಫ್ ದಿ ಅಕ್ಟೋಬರ್ ರೆವೊಲ್ಯೂಷನ್ (1966). ಸಂ: ಸೊಬೊಲೆವ್ ಮತ್ತು ಇತರರು

ಹಿಸ್ಟೋರಿ ಆಫ್ ದಿ ವರ್ಲ್ಡ್ ಆರ್ಟ್. ಲೇ: ಹರ್ಮನ್ ಲಿಷ್ಟ್

ಹಿಸ್ಟೋರಿ ಆಫ್ ವರ್ಲ್ಡ್‌ವಾರ್ (1964). ಸಂ: ಅಮೆರಿಕನ್ ಹೆರಿಟೇಜ್‌ನ ಸಂಪಾದಕರು

## ಚಿತ್ರಗಳನ್ನೂ ಛಾಯಾಚಿತ್ರಗಳನ್ನೂ ಪಡಿಯಚ್ಚುಗಳನ್ನೂ ಒದಗಿಸಿ ಉಪಕರಿಸಿದ ಮಹನೀಯರು

ಅಶ್ವತ್ಥ್, ಕೆ.ಎಸ್. (ದಿ), ಚಲನಚಿತ್ರ ಕಲಾವಿದ, ಸರಸ್ವತೀಪುರಂ, ಮೈಸೂರು

ಆಚಾರ್, ಬಿ.ಎಸ್., ಛಾಯಾಚಿತ್ರಗ್ರಾಹಕ, 6ನೆಯ ಕ್ರಾಸ್, ಗಾಂಧೀನಗರ, ಬೆಂಗಳೂರು

ಆಫೀಸರ್ ಕಮಾಂಡಿಂಗ್, 2ನೆಯ ಮೈಸೂರು ಬೆಟ್ಯಾಲಿಯನ್ ಎನ್.ಸಿ.ಸಿ., ಮೈಸೂರು

ಒಚಾವಾ, ಸೆವಿರೋ, ಪ್ರಾಧ್ಯಾಪಕ ಮತ್ತು ಮುಖ್ಯಸ್ಥ, ಜೈವಿಕಶಾಸ್ತ್ರ ವಿಭಾಗ, ಸ್ಕೂಲ್ ಆಫ್ ಮೆಡಿಸನ್, ನ್ಯೂಯಾರ್ಕ್ ವಿಶ್ವವಿದ್ಯಾಲಯ, ಅಮೆರಿಕ ಸಂಯುಕ್ತ ಸಂಸ್ಥಾನ

ಕೃಷ್ಣರಾವ್, ಎಚ್.ಎನ್., ಶಾರದಾ ಮೆಡಿಕಲ್ ಅಂಡ್ ಆಪ್ಟಿಕಲ್ ಸ್ಟೋರ್ಸ್, ಸಯ್ಯಾಜಿರಾವ್ ರೋಡ್, ಮೈಸೂರು

ಕೃಷ್ಣೇಗೌಡ, ಸಿ.ಡಿ., ಕ್ಯೂರೇಟರ್, ಪ್ರಾಣಿಸಂಗ್ರಹಾಲಯ, ಮೈಸೂರು

ಕೇಸರ್‌ಸಿಂಗ್, ಬಿ., ಛಾಯಾಚಿತ್ರಗ್ರಾಹಕ, 124, ಹನುಮಂತನಗರ, ಬೆಂಗಳೂರು

ಗಣೇಶ್, ಡಿ., ಕ್ಯೂರೇಟರ್, ಸಸ್ಯವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಗುಂಡಿ ರಾಮಕೃಷ್ಣ ಐತಾಳ, ಶ್ರೀ ಸರಸ್ವತೀ ಪ್ರಕಾಶನ, ಗಾಂಧಿನಗರ, ಬೆಂಗಳೂರು

ಗೋಪಾಲಸ್ವಾಮಿ, ಎನ್.ಜಿ., ಸ್ಟೇಟ್ ಕನ್ಸ್ಯೂಮರ್ಸ್ ಪವರ್ ಕಂಪನಿ, ಜಾಕ್‌ಸನ್ ಮಿಚಿಗನ್, ಅಮೆರಿಕ ಸಂಯುಕ್ತ ಸಂಸ್ಥಾನ

ಚಿದಂಬರಂ, ಕೆ., ಕಾವ್ಯಾಲಯ, ಜಯನಗರ, ಮೈಸೂರು

ಜಗದೀಶ್‌ಚಂದ್ರ, ಕೆ., ಬನ್ನೂರು ಬಡಾವಣೆ, ಮಂಡ್ಯ

ಜನರಲ್ ಮ್ಯಾನೇಜರ್, ಮೈಸೂರು ಐರನ್ ಅಂಡ್ ಸ್ಟೀಲ್ ಲಿಮಿಟೆಡ್, ಭದ್ರಾವತಿ

ನರಸಿಂಹ ರೊಡ್ಡಂ, ಏರೋನಾಟಿಕಲ್ ಎಂಜಿನಿಯರಿಂಗ್ ವಿಭಾಗ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು

ನಾಗರಾಜು, ಎಸ್., ಅಧ್ಯಾಪಕ (ವಿ), ಇಂಡಾಲಜಿ ವಿಭಾಗ, ಮಾನಸಗಂಗೋತ್ರಿ, ಮೈಸೂರು

ನಾರಾಯಣ, ಜಿ., ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು

ನಿರ್ದೇಶಕ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

ಪರಶುರಾಮಯ್ಯ, ಸಿ.ಕೆ., ಸಹಾಯಕ ಸಂಪಾದಕ, ಪಂಚಾಯತ್ ರಾಜ್ಯ ಪತ್ರಿಕೆ, ವಿಧಾನಸೌಧ, ಬೆಂಗಳೂರು

ಬಸವಣ್ಣ, ಡಿ., ಶಿಲ್ಪಿ, ಕಶ್ಯಪ ಶಿಲ್ಪ ಕಲಾನಿಕೇತನ, ಮೈಸೂರು

ಬಸವರಾಜಯ್ಯ, ಪ್ರೀಮಿಯರ್ ಸ್ಟುಡಿಯೊ, ಮೈಸೂರು

ಭಟ್ಟ, ಎಸ್.ಪಿ., ಸೂಪರಿಂಟೆಂಡಿಂಗ್ ಎಂಜಿನಿಯರ್, ಕಪಿಲಾ ಯೋಜನಾ ವಿಭಾಗ, ಮೈಸೂರು

ಮರಿಗೌಡ, ಎಂ.ಎಚ್. (ದಿ), ನಿರ್ದೇಶಕ, ತೋಟಗಾರಿಕೆ ಇಲಾಖೆ, ಮೈಸೂರು ರಾಜ್ಯ, ಬೆಂಗಳೂರು

ಮುತ್ತಣ್ಣ, ಐ.ಎಂ., ಮಡಿಕೇರಿ

ಮೂರ್ತಿ, ಎಂ.ಜಿ.ಕೆ., (ಕ್ಯಾಪ್ಟನ್), ಶಂಕರಪುರ, ಬೆಂಗಳೂರು

ರಾಮಕೃಷ್ಣರಾಜು, ಛಾಯಾಚಿತ್ರಗ್ರಾಹಕ, ಪ್ರಾಣಿವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ರಾಮಸ್ವಾಮಿ, ಟಿ.ಎಲ್., ಮೈಸೂರು ನ್ಯೂಸ್ ಫೋಟೋಸ್, 306, ಸುಬೇದಾರ್ ಛತ್ರಂ ರಸ್ತೆ, ಬೆಂಗಳೂರು

ಲಕ್ಷ್ಮೀನಾರಾಯಣ್, ಎನ್., ಶ್ರೀ ಭವಾನಿ ಸ್ಟುಡಿಯೊ, ಬಿ.ಬಿ. ರಸ್ತೆ, ಚಿಕ್ಕಬಳ್ಳಾಪುರ

ವಿಠ್ಠಲ, ಎಂ.ಆರ್., ಚಲನಚಿತ್ರ ನಿರ್ದೇಶಕ, ಜಯಲಕ್ಷ್ಮೀಪುರಂ, ಮೈಸೂರು

ಶಂಕರ ಪಾಟೀಲ, ಸಹಾಯಕ ಸಂಪಾದಕ, ಕರ್ಮವೀರ ವಾರಪತ್ರಿಕೆ, ಹುಬ್ಬಳ್ಳಿ

ಶೇಷಾದ್ರಿ, ಎಂ., ನಿರ್ದೇಶಕ, ಪ್ರಾಕ್ತನಶಾಸ್ತ್ರ ಇಲಾಖೆ, ಲಕ್ಷ್ಮೀಪುರಂ, ಮೈಸೂರು

ಶ್ಯಾಮಲ ಶ್ರೀನಿವಾಸನ್, ಅಧ್ಯಾಪಕಿ, ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ, ಮೈಸೂರು

ಶ್ರೀನಿವಾಸನ್, ಸಿ.ಎಸ್., ಛಾಯಾಚಿತ್ರಗ್ರಾಹಕ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

ಸಂಪಾದಕ, ಕನ್ನಡಪ್ರಭ, ಬೆಂಗಳೂರು

ಸಂಪಾದಕ, ಡೆಕ್ಕನ್ ಹೆರಾಲ್ಡ್, ಬೆಂಗಳೂರು

ಸಂಪಾದಕ, ದಿ ಹಿಂದೂ ಮೌಂಟ್‌ರೋಡ್, ಮದ್ರಾಸು

ಸಂಪಾದಕ, ಪ್ರಜಾವಾಣಿ, ಬೆಂಗಳೂರು

ಸಿಂಗ್, ಎಂ.ಬಿ. (ದಿ), ಸಹಾಯಕ ಸಂಪಾದಕ, ಸುಧಾ ಕನ್ನಡ ವಾರಪತ್ರಿಕೆ, ಬೆಂಗಳೂರು

ಸಿಂಧುವಳ್ಳಿ ಅನಂತಮೂರ್ತಿ (ದಿ), ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು

ಸೂರ್ಯನಾರಾಯಣರಾವ್, ಸಹಸಂಪಾದಕ, ಕ್ರೀಡಾವಿಭಾಗ, ಸುಧಾ ವಾರಪತ್ರಿಕೆ, ಬೆಂಗಳೂರು

ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಶ್ವಕೋಶ

## ಸಂಪುಟ ನಾಲ್ಕು

**ಕರೀಷಕ:** ಕರೂಷ ದೇಶಕ್ಕೆ ಇನ್ನೊಂದು ಹೆಸರು. ಇಂದ್ರ ವೃತ್ರನನ್ನು ಕೊಂದು ಬ್ರಹ್ಮಹತ್ಯೆಗೆ ಗುರಿಯಾದಾಗ ಋಷಿಗಳು, ದೇವತೆಗಳು ಒಟ್ಟುಗೂಡಿ ಇಂದ್ರನ ದೇಹದಲ್ಲಿದ್ದ ಬ್ರಹ್ಮಹತ್ಯಾ ಪಾತಕವನ್ನು ಹೊರಕ್ಕೆ ತಳ್ಳಿದರು. ಆ ಪಾತಕ ಬಿದ್ದ ಭೂಮಿಗೆ ಕರೀಷಕ ಅಥವಾ ಕರೂಷ ಎಂದು ಹೆಸರಾಯಿತು. ಇದು ಈಗಿನ ಬಿಹಾರ್ ಪ್ರಾಂತ್ಯಕ್ಕೆ ಸೇರಿದ ಷಹಾಬಾದ್ ಜಿಲ್ಲೆಯ ಪೂರ್ವ ಭಾಗವೆಂದು ಹೇಳಲಾಗಿದೆ. ಪಾಂಡವರ ಕಾಲದಲ್ಲಿ ದಂತವಕ್ರ ಇಲ್ಲಿ ರಾಜ್ಯಭಾರ ಮಾಡುತ್ತಿದ್ದನೆಂದು ಮಹಾಭಾರತದಿಂದ ತಿಳಿದುಬರುತ್ತದೆ. *

**ಕರುಂ:** ಅಸ್ಸೀರಿಯಕ್ಕೂ ಆನಟೋಲಿಯದ ನಗರಗಳಿಗೂ ನಡುವಣ ವ್ಯಾಪಾರವನ್ನು ನಿಯಂತ್ರಿಸುತ್ತಿದ್ದ ವಾಣಿಜ್ಯ ಸಂಸ್ಥೆ. ಸರಕುಗಳ ಸಾಗಣೆ, ಹಾದಿಯಲ್ಲಿ ಅವುಗಳ ರಕ್ಷಣೆ, ವರ್ತಕರಿಗೆ ಬರಬೇಕಾದ ಬಾಕಿಗಳ ಮೇಲ್ವಿಚಾರಣೆ–ಇವು ಈ ಸಂಸ್ಥೆಯ ಮುಖ್ಯ ಹೊಣೆಗಳಾಗಿದ್ದುವು. ನಗದು ಹಣ ರವಾನೆಯ ಅಪಾಯಗಳನ್ನು ತಪ್ಪಿಸಲು ಉದ್ದರಿ ಪತ್ರದ ಸರಳ ವ್ಯವಸ್ಥೆಯೊಂದನ್ನೂ ಇದು ನಿರ್ವಹಿಸುತ್ತಿತ್ತು. ಬೆಲೆಗಳ ನಿಗದಿ, ವ್ಯಾಪಾರ ಸಂಬಂಧವಾದ ವ್ಯಾಜ್ಯಗಳ ತೀರ್ಮಾನ–ಇವು ಸಹ ಇದರ ಪರಿಮಿತಿಗೊಳಪಟ್ಟಿತ್ತು. ಸಾಲಕ್ಕೆ ಅಗತ್ಯವಾದ ಆಧಾರಗಳನ್ನು ದೊರಕಿಸಿ ಕೊಡುವ, ಸಾಲ ತೀರಿಸಲು ಋಣಿಗೆ ಶಕ್ತಿಯುಂಟೇ ಎಂಬುದನ್ನು ಪರಿಶೀಲಿಸುವ ಹೊಣೆಯೂ ಈ ಸಂಸ್ಥೆಯದಾಗಿತ್ತು. ಈ ಸಂಸ್ಥೆಯ ಮುಖ್ಯಾಧಿಕಾರಿಗೆ ಲಿಮ್ಮು ಎಂದು ಹೆಸರು. ಅವನ ಅಧಿಕಾರಾವಧಿ ಒಂದು ವರ್ಷ. ಪ್ರತಿಯೊಬ್ಬ ಲಿಮ್ಮುವೂ ಯಾವ ವರ್ಷ ಅಧಿಕಾರದಲ್ಲಿದ್ದನೋ ಆ ವರ್ಷಕ್ಕೆ ಅನಂತರ ಆತನ ಹೆಸರನ್ನೇ ಇಡುವುದು ಅಸ್ಸೀರಿಯದ ಸಂಪ್ರದಾಯವಾಗಿತ್ತು. ಆನಟೋಲಿಯದ ಒಂದು ನಗರದಲ್ಲಿ ಲಿಮ್ಮುವಾಗಿ ಅಧಿಕಾರ ನಡೆಸಿದವರ ಪೈಕಿ 80 ರಿಂದ 100ರ ವರೆಗೆ ಹೆಸರುಗಳನ್ನು ಗುರುತಿಸುವುದು ಸಾಧ್ಯವಾಗಿದೆ. ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಐಹೊಳೆಯಿಂದ 'ಅಯ್ಯಾವೊಳೆ ಐನೂರ್ವರು' ಎಂಬ ವೃತ್ತಿ ಸಂಘ ಈ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದುದನ್ನು ಇಲ್ಲಿ ನೆನೆಯಬಹುದು. *

**ಕರುಗಳ ಪಾಲನೆ:** ಕರುವಿನ ಪಾಲನೆ ಪ್ರಾಯಶಃ ಹಸು ಗಬ್ಬವಾದೊಡನೆಯೇ ಆರಂಭವಾಗುವುದು. ಗಬ್ಬದ ಹಸುವಿಗೆ ಸಮತೂಕದ ಆಹಾರ ಗರ್ಭಾವಧಿಯಲ್ಲಿ ದೊರೆಯಬೇಕು; ಅದಕ್ಕೆ ವ್ಯಾಧಿಗಳು ಬರದಂತೆ ಎಚ್ಚರ ವಹಿಸಬೇಕು; ಸಾಕಷ್ಟು ವಿಶ್ರಾಂತಿಯೂ ದೊರೆಯಬೇಕು. ಇವುಗಳ ಪರಿಣಾಮವಾಗಿ ಹುಟ್ಟುವ ಎಳೆಗರು ದೃಢಕಾಯದ್ದಾಗಿದ್ದು ಆರೋಗ್ಯ ಪೂರ್ಣವಾಗಿರುವುದು. ಕರು ಹುಟ್ಟುವುದು ತಾಯಿ ಹಸುವಿಗೆ ಗರ್ಭಮೂಡಿ ಒಂಬತ್ತು ತಿಂಗಳ ತರುವಾಯ. ಹುಟ್ಟಿದ ಕರುವಿನ ಮೂಗು ಬಾಯಿಯಲ್ಲಿರುವ ಶ್ಲೇಷ್ಮ, ಕಫ, ಲೋಳೆಯನ್ನು ತೆಗೆದು ಕರುವಿಗೆ ಸಲೀಸಾಗಿ ಉಸಿರಾಡಲು ಅನುವುಮಾಡಿಕೊಡಬೇಕು. ಉಸಿರಾಟ ಆರಂಭವಾಗದಿದ್ದರೆ ಕರುವಿನ ಹಿಂಗಾಲುಗಳನ್ನು ಹಿಡಿದು ತಲೆಕೆಳಗಾಗುವಂತೆ ಹಿಡಿದರೆ ಕೂಡಲೆ ಉಸಿರಾಡತೊಡಗುತ್ತದೆ. ಮುಂಗಾಲುಗಳನ್ನು ಅಗಲಿಸಿ ಎದೆಯ ಮೇಲೆ ಒತ್ತಡವನ್ನು ಹೇರುವುದೂ ಒಳ್ಳೆಯದು. ಉಸಿರಾಟ ಆರಂಭವಾದಮೇಲೆ ಹೊಕ್ಕುಳ ಬಳ್ಳಿಯ ಕಡೆಗೆ ಲಕ್ಷ್ಯ ಹರಿಸಬೇಕು. ಅದಕ್ಕೆ ಸೋಂಕು ತಗಲದಂತೆ ಎಚ್ಚರ ವಹಿಸುವುದು ಅವಶ್ಯ. ಮೊದಲು ಹೊಕ್ಕುಳ ಬಳ್ಳಿಯನ್ನು ತೊಳೆದು ದೇಹದಿಂದ 2.5 ಸೆಂಮೀನಷ್ಟು ಉದ್ದದ ಬಳ್ಳಿಯನ್ನು ಹಾಗೆಯೇ ಬಿಟ್ಟು ಮುಂದೆ ರಕ್ತ ಪರಿಚಲನೆಯನ್ನು ಬಂಧಿಸಿ ಅಲ್ಲಿಂದ 1 ಸೆಂಮೀ ಮುಂದೆ ಅದನ್ನು ಕತ್ತರಿಸಿ ಹಾಕಬೇಕು. ಕೊಯ್ದ ಭಾಗಕ್ಕೆ ಅಯೊಡೀನ್ ಟಿಂಕ್ಚರನ್ನು ಹಚ್ಚಿದರೆ ಸೋಂಕು ತಟ್ಟದು.

ಕರುವಿನ ಮೈಯನ್ನು ಹಸು ನೆಕ್ಕಿ ಒಣಗಿಸುವುದು. ಒಮ್ಮೊಮ್ಮೆ ಹೀಗೆ ಮಾಡದಿರುವುದೂ ಉಂಟು. ಆಗ ಆದಷ್ಟು ಬೇಗನೇ ಕರುವಿನ ಮೈಯನ್ನು ಚೆನ್ನಾಗಿ ಒರೆಸಿ ಒಣಗಿಸಬೇಕು. ಇಲ್ಲದಿದ್ದರೆ ಕರು ಶ್ವಾಸಕೋಶರೋಗಗಳಿಗೆ ಈಡಾಗುವ ಸಂಭವವುಂಟು. ಹಸುವಿನ ಕೆಚ್ಚಲನ್ನು ತೊಳೆದು ಕರುವಿಗೆ ಹಾಲು ಕುಡಿಯಲು ಬಿಡಬೇಕು. ತಾನಾಗಿಯೇ ಅದು ಹಾಲು ಕುಡಿಯಬಲ್ಲುದು. ಕೆಲವೊಮ್ಮೆ ಹೀಗೆ ಮಾಡದಿದ್ದರೆ ಹಾಲು ಕುಡಿಯುವುದನ್ನು ಅದಕ್ಕೆ ಕಲಿಸಬೇಕು. ಹುಟ್ಟಿದ ಎರಡು ಗಂಟೆಯೊಳಗೆ ಕರು ಉರುಚುತ್ತದೆ. ಇದಾಗದಿದ್ದರೆ ಸೋಡಾ ನೀರಿನಿಂದ ಭೇದಿ ಮಾಡಿಸಬೇಕು.

**ಮೊದಲ ಮೂರು ದಿನಗಳ ಲಾಲನೆ:** ಕರು ಹೊಸ ಪ್ರಪಂಚದಲ್ಲಿ ಬೆಳೆಯುವುದರಿಂದ ಅದರ ಲಾಲನೆ ಪಾಲನೆಗಳನ್ನು ತಾಯಿಯೇ ಮಾಡುವುದು ನೈಸರ್ಗಿಕ ನಿಯಮ. ತಾಯಿಯ ಹಾಲಿನಲ್ಲಿ ಎಳೆಗರುವಿನ ಆರೈಕೆಗೆ ಅಗತ್ಯವಾದ ಅಂಶಗಳಿವೆ. ಅದು ಹಳದಿ ವರ್ಣದಲ್ಲಿರುವುದು. ಅದಕ್ಕೆ ಗಿಣ್ಣುಹಾಲು ಎಂದು ಹೆಸರು. ಅದರಲ್ಲಿ ಸಸಾರಜನಕಾಂಶಗಳು, ಅನ್ನಾಂಗಗಳು, ದೇಹಪೋಷಕ ಖನಿಜಾಂಶಗಳು ಸಮಪರಿಮಾಣದಲ್ಲಿರುವುವು. ಪ್ರತಿ ವಿಷವಸ್ತುಗಳು ಸಹ ಇವೆ. ಇದರಿಂದ ಎಳೆಗರುವಿಗೆ ರೋಗದಿಂದ ರಕ್ಷಣೆ ಒದಗುವುದು. ಗಿಣ್ಣುಹಾಲು ಸರಿಯಾಗಿ ನೀಡದಿದ್ದರೆ ಕರು ಸಾವಿಗೀಡಾಗುವುದು ಸಹಜ. ಅದಕ್ಕೋಸ್ಕರ ಹುಟ್ಟಿದಂದಿನಿಂದ ಮೂರು ದಿನಗಳವರೆಗೆ ಕರುವನ್ನು ತಾಯಿಯ ಜೊತೆ ಬಿಟ್ಟರೆ ತಾನೇ ಸಾಕಷ್ಟು ಹಾಲು ಕುಡಿಯುವುದು. ಇತ್ತೀಚೆಗೆ

ಹೈನುಗಾರಿಕೆಯಲ್ಲಿ ಮೊಲೆ ಬಿಡಿಸುವ ಪದ್ಧತಿ ಬಂದಿದೆ. ಇದರಿಂದ ಕರುವನ್ನು ಮುಂದೆ ವಿನೂತನ ರೀತಿಯಲ್ಲಿ ಸಾಕುವುದಕ್ಕೆ ಉಪಯೋಗವಾಗುವುದು. ಮೊಲೆ ಬಿಡಿಸಿ ಹಾಲು ನೀಡುವಾಗ ಶುಚಿತ್ವದ ಬಗೆಗೆ ವಿಶೇಷ ಜಾಗರೂಕತೆ ವಹಿಸಬೇಕು.

**ಹೈನಕರುಗಳ ಆಹಾರಕ್ರಮ:** ಮೂರು ದಿವಸಗಳ ಅನಂತರ ಒಂಬತ್ತು ವಾರಗಳವರೆಗೆ ಕೆಳಕಂಡ ಪೋಷಣಾ ವಿಧಾನಗಳನ್ನು ಅನುಸರಿಸಬಹುದು.

**1. ಹೆಚ್ಚು ಹಾಲಿನ ಕ್ರಮ:** ಮೂರರಿಂದ ನಾಲ್ಕು ವಾರಗಳ ತನಕ ಅಪ್ಪಟ ಹಾಲನ್ನು ಕರುವಿನ ತೂಕದ 1/8 ಅಥವಾ 1/10 ಪ್ರಮಾಣದಷ್ಟು ನೀಡಬೇಕು. ಅನಂತರ ನಿಧಾನವಾಗಿ ಕೆನೆತೆಗೆದ ನಿಸ್ಸಾರಕ್ಷೀರವನ್ನು ಮೇಲೆ ಹೇಳಿದ ಪ್ರಮಾಣದಲ್ಲಿಯೇ ಕೊಡಬೇಕು. ಹಾಲಿನ ಪ್ರಮಾಣ ಹೆಚ್ಚದಂತೆ ನೋಡಿಕೊಳ್ಳಬೇಕು. ಹಾಲಿನ ಪಾತ್ರೆಗಳನ್ನು ಚೊಕ್ಕಟವಾಗಿಡಬೇಕು. ಅತಿಸಾರ ಕಂಡುಬಂದರೆ ಹಾಲಿನ ಪಡಿತರವನ್ನು ಕಡಿಮೆ ಮಾಡಬೇಕು. ಜೀವಚೈತನ್ಯ ನೀಡುವ ಅರಿಯೋಮೈಸಿನನ್ನು ಹಾಲಿನೊಂದಿಗೆ ಅತಿ ಕಡಿಮೆ ಪ್ರಮಾಣದಲ್ಲಿ ಕೊಟ್ಟರೆ ಒಳ್ಳೆಯದು. ನಿಸ್ಸಾರಕ್ಷೀರ ಆರಂಭವಾದಾಗ ಅನ್ನಾಂಗದ ಕೊರತೆಯಾಗದಂತೆ ಅನ್ನಾಂಗ ಸತ್ತ್ವಗಳಿರುವ ಮೀನಿನೆಣ್ಣೆ ಮುಂತಾದ ಪದಾರ್ಥಗಳನ್ನು ಉಪಯೋಗಿಸಬೇಕು.

**2. ಕ್ಷೀರ ಪಲ್ಲಟಕಗಳು:** ಹೈನು ಮಂದಿರದ ಉದ್ದೇಶ ಉತ್ಪತ್ತಿಯಾದ ಹಾಲಿನ ಹೆಚ್ಚು ಭಾಗವನ್ನು ಮಾರಿ ಹಣ ಗಳಿಸುವುದು. ದೊಡ್ಡದಾದ ಕರುಗಳಿಗೆ ಹಾಲಿನ ಪಡಿತರವನ್ನು ಸಾಕಷ್ಟು ಸ್ಥಗಿತಗೊಳಿಸಿ ಕ್ಷೀರಪಲ್ಲಟಕಗಳನ್ನು ಉಪಯೋಗಿಸುತ್ತಾರೆ. ಒಣಗಿದ ಆಹಾರಪುಡಿಯನ್ನು ಬಿಸಿನೀರಿನಲ್ಲಿ ಬೆರೆಸಿ ಹಾಲು ಕೊಡುವ ರೀತಿಯಲ್ಲಿಯೆ ಕೊಡುವರು. ಕ್ಷೀರಪಲ್ಲಟಕಗಳಲ್ಲಿ ಪೋಷಕಾಂಶವಿರುವುದರಿಂದ ಕರು ಸಾಕಷ್ಟು ಬೆಳೆಯುತ್ತದೆ.

**3.ಮಿತಹಾಲು ಹಾಗೂ ಮೊದಲ ಮೇವು:** ಕರು ಹುಲ್ಲು ತಿನ್ನಲು ಆರಂಭಿಸುವುದು ಹುಟ್ಟಿದ ಹತ್ತು ದಿವಸಗಳ ಮೇಲೆ. ಈ ಅವಧಿಯಲ್ಲಿ ಹಾಲನ್ನು ಮಿತಗೊಳಿಸಿ ಅದಕ್ಕೆ ಮೊದಲು ಮೇವು ನೀಡುವರು. ಇದನ್ನು ಕುರುಕುತ್ತಿದ್ದರೆ ಕರುವಿನ ಜಠರದ ಎಲ್ಲ ಭಾಗಗಳೂ ವೃದ್ಧಿಯಾಗುವುವು. ಈ ಕುರುಕು ತಿಂಡಿ ಆರೋಗ್ಯವರ್ಧಕ; ಅಲ್ಲದೇ ಇದು ದೇಹದ ಬೆಳೆವಣಿಗೆಗೆ ಬೇಕಾಗುವ ಸಕಲ ಸಾಮಗ್ರಿಗಳನ್ನೊಳಗೊಂಡಿರುವುದು.

**4. ಕಾಳು ನೀಡಿಕೆ:** ಮೊದಲ ಮೇವಿಗೆ ಬಂದ ಮೇಲೆ 7 ವಾರಗಳ ಅನಂತರ ಕರುವಿಗೆ ಕಾಳಿನ ಮಿಶ್ರಣ ಕೊಡುವರು. ಜೋಳ, ಓಟ್ಸ್ ಧಾನ್ಯ, ತವುಡು, ಇತರ ಕಾಳುಗಳ ಮಿಶ್ರಣ, ಉಪ್ಪು, ಹಾಗೂ ಅಸ್ಥಿಯುಣಿಸು ಇವು ಬೆಳೆವಣಿಗೆಗೆ ನೆರವಾಗುತ್ತವೆ. ಆರಿಯೋಮೈಸಿನ್ ಸೇರಿಸುವುದರಿಂದ ಅಧಿಕ ಪ್ರಯೋಜನ ಉಂಟು.

**5. ಒರಟು ತಿಂಡಿ ಕೊಡುವುದು:** ಹಸುರು ಹುಲ್ಲು ಮತ್ತು ದ್ವಿದಳ ಧಾನ್ಯದ ಎಲೆಗಳನ್ನು ಕೊಟ್ಟರೆ ಒಳ್ಳೆಯದು. ಮೇಲಾಗಿ ಸುವಾಸನಾಭರಿತ ಹಗೇವುಮೇವನ್ನು ಕರುಗಳು ಬಹಳ ಇಷ್ಟಪಡುತ್ತವೆ. ಪ್ರತಿ 100 ಕೆಜಿ ದೇಹ ತೂಕಕ್ಕೆ 2 ಕೆಜಿ ಹಗೇವುಮೇವು ಮಾತ್ರ ಕೊಟ್ಟರೆ ಕರು ಆರೋಗ್ಯದಿಂದಿರುವುದು.

**6. ಹುಲ್ಲುಗಾವಲು:** ಪಶುಗಳ ಪ್ರಧಾನ ಆಹಾರ ಹುಲ್ಲು. ಹುಲ್ಲು ಒಂದು ಒರಟು ತಿಂಡಿ. 6 ತಿಂಗಳು ಕಳೆದ ಕರು ಹುಲ್ಲುಗಾವಲಿನಲ್ಲಿ ಮೇಯಬಲ್ಲುದು. ತನಗೆ ಬೇಕಾದ ಹುಲ್ಲನ್ನು ತಿಂದು ಆಹಾರದ ಪ್ರಧಾನ ಸತ್ತ್ವವನ್ನು ಪಡೆಯಬಲ್ಲುದು. ಈ ವೇಳೆಯಲ್ಲಿ ಅದರ ಬೆಳೆವಣಿಗೆಯನ್ನು ಸಾಂಗಗೊಳಿಸಲು ಬಲವರ್ಧಕಗಳನ್ನು ನೀಡಿದರೆ ಒಳ್ಳೆಯದು.

**7. ನೀರು ಹಾಗೂ ಇತರ ಪಡಿತರ:** ಬೆಳೆಯುವ ಕರುಗಳಿಗೆ ನೀರು ಬಲು ಮುಖ್ಯ. ಅದು ಸದಾಕಾಲ ಸಿಗುವಂತೆ ಮಾಡಬೇಕು. ಸ್ವಚ್ಛನೀರಿನ ಜೊತೆ ಉಪ್ಪು ಹಾಗೂ ದೇಹಪೋಷಕ ಖನಿಜಗಳನ್ನು ಕೊಟ್ಟರೆ ಜೀರ್ಣಶಕ್ತಿ ಹೆಚ್ಚುವುದಲ್ಲದೆ ದೇಹವೃದ್ಧಿಯಾಗುವುದು. ಪಶು ಮೆಲುಕುಹಾಕುವ ಪ್ರಾಣಿ. ತಿಂದ ಹುಲ್ಲನ್ನು ಮತ್ತೊಮ್ಮೆ ಚೆನ್ನಾಗಿ ಜಗಿದು ಜೀರ್ಣಿಸಿಕೊಳ್ಳುವ ಶಕ್ತಿ ಇದಕ್ಕೆ ಇದೆ. ಇದರಿಂದ ತನ್ನ ದೇಹದಲ್ಲಿ ಅನ್ನಾಂಗ, ಸಸಾರಜನಕ ಹಾಗೂ ಆಮೈನೊ ಆಮ್ಲಗಳನ್ನು ಉತ್ಪತ್ತಿ ಮಾಡಿಕೊಳ್ಳುವುದು. ಎಳೆಗರುಗಳಿಗೆ ಈ ಶಕ್ತಿ ಇಲ್ಲದಿರುವುದರಿಂದ ಪೌಷ್ಟಿಕ ಆಹಾರಗಳಾದ ವಿಟಮಿನ್ (ಎ. ಡಿ. ಮತ್ತು ಬಿ. ಕಾಂಪ್ಲೆಕ್ಸ್) ಹಾಗೂ ಪ್ರಾಣಿಜನ್ಯ ಸಸಾರಜನಕಗಳನ್ನು ನೀಡಬೇಕು. ಕೆಲವು ಜೀವಿರೋಧಕಗಳು ಅತಿ ಕಡಿಮೆ ಪ್ರಮಾಣದಲ್ಲಿ ಜೀವಚೈತನ್ಯವನ್ನುಂಟುಮಾಡಬಲ್ಲುವು. ಆರಿಯೋಮೈಸಿನ್, ಟೆರಾಮೈಸಿನುಗಳನ್ನು ಉಪಯೋಗಿಸುವುದರಿಂದ ದೇಹವರ್ಧನೆ ಶೀಘ್ರವಾಗಿ ಸಾಗುವುದು. ಇವನ್ನು ಪಶುವೈದ್ಯರ ಸಲಹೆ ಮೇರೆಗೆ ಉಪಯೋಗಿಸಬೇಕು. ಇದರಿಂದ ಶೇ. 10–30% ದೇಹವರ್ಧನೆ ಆಗುವುದು; ಹಸಿವು ಮೂಡುವುದು; ಅತಿಸಾರವಿದ್ದರೆ ನಿಲ್ಲುವುದು; ಮತ್ತು ಚರ್ಮ ನುಣುಪಾಗಿ ಹೊಳೆಯುವಂತಾಗುವುದು.

**ಕರುವಿನ ಮನೆ:** ಬೆಳಕು ಮತ್ತು ವಾಯುಸಂಚಾರವಿರುವ ಚೊಕ್ಕಟವಾದ ಜಾಗ ಕರುವಿಗೆ ಒಳ್ಳೆಯ ಮನೆ. ಮಲಗುವ ನೆಲದ ಮೇಲೆ ಹಾಸುಗಲ್ಲು ಹಾಕಿದ್ದರೆ ಒಳ್ಳೆಯದು. ಪ್ರತಿಕರುವಿಗೂ ಪ್ರತ್ಯೇಕ ಭಾಗವಿರಬೇಕು. ಇತ್ತೀಚಿನ ದಿನಗಳಲ್ಲಿ ಪ್ರತಿಕರುವಿಗೂ ಒಂದೊಂದು ಅಂಕಣವನ್ನು ಒದಗಿಸುವುದು ರೂಢಿ. ಹಾಲು ಕುಡಿಸಿದ ಮೇಲೆ ಕರುಗಳನ್ನು ಅಡ್ಡಾಡಲು ಬಿಡದೆ ನಿಲುಗಂಬಿಯಲ್ಲಿ ಕಟ್ಟುವುದರಿಂದ ಅವುಗಳ ನೆಕ್ಕುವ ಚಟವನ್ನು ಹೋಗಲಾಡಿಸಬಹುದು. ಈ ಚಟದ ಪರಿಣಾಮವಾಗಿ ಅವುಗಳ ಹೊಟ್ಟೆಯೊಳಗೆ ಕೂದಲಿನ ಉಂಡೆಗಳು ಸೇರಿಕೊಂಡು ಅಪಾಯಕಾರಿಗಳಾಗುತ್ತವೆ. ಅವುಗಳ ತಿನಿಸು ತೊಟ್ಟಿಗಳು 25 ಸೆಂಮೀ. ವಿಸ್ತಾರ ಹಾಗು 15 ಸೆಂಮೀ. ಆಳವಿರಬೇಕು. ಸುಲಭವಾಗಿ ಚೊಕ್ಕಟಮಾಡುವಂತಿರಬೇಕು. ಇವನ್ನು ನೀರಿನ ತೊಟ್ಟಿಯಿಂದ ದೂರವಿಟ್ಟಿರಬೇಕು.

**ಇತರ ಪಾಲನ ವಿಧಾನಗಳು:** ಕರು ಬೆಳೆದಹಾಗೆಲ್ಲ ಅದರ ಕೋಡು ವೃದ್ಧಿಯಾಗುತ್ತ ಹೋಗುವುದು. ಹೈನದ ರಾಸಿನಲ್ಲಿ ಕೊಂಬಿನಿಂದ ಉಪಕಾರಕ್ಕಿಂತ ಅಪಕಾರವೇ ಜಾಸ್ತಿ. ಕೊಂಬುಗಳ ಪರಿಣಾಮವಾಗಿ ರಾಸನ್ನು ಕಟ್ಟಲು ಹೆಚ್ಚು ಜಾಗ ಬೇಕಾಗುತ್ತದೆ. ಆಹಾರ ಸೇವನೆಗೆ ಅಡಚಣೆ ಅಗುತ್ತದೆ. ಹಾಯುವ ಪ್ರವೃತ್ತಿಯೂ ಬೆಳೆಯುತ್ತದೆ. ಆದ್ದರಿಂದ ಕರುಗಳಲ್ಲಿ ಕೋಡು ಮೂಡದಂತೆ ಮಾಡುವುದು ಸಾಮಾನ್ಯ ಪದ್ಧತಿ. ಇದನ್ನು ಅದಷ್ಟು ಬೇಗನೆ ಎಂದರೆ ಹುಟ್ಟಿದ ಹತ್ತು ದಿವಸಗಳೊಳಗಾಗಿ ಮಾಡಿದರೆ ಕರುವಿಗೆ ನೋವು ಕಡಿಮೆಯಾಗುವುದು. ಕೋಡಿನ ಅಂಕುರದ ಸುತ್ತಲೂ ಕೂದಲನ್ನು ಚೆನ್ನಾಗಿ ಕತ್ತರಿಸಿ ವ್ಯಾಸಲಿನ್ ಬಳಿದು ಚರ್ಮದ ರಕ್ಷಣೆ ಮಾಡಬೇಕು. ಕಾಸ್ಟಿಕ್ ಪೊಟಾಷ್ ಅಥವಾ ಕಾಸ್ಟಿಕ್ ಸೋಡಾದಿಂದ ತಯಾರಿಸಿದ ರಾಸಾಯನಿಕ ಕಡ್ಡಿಯಿಂದ ಅಂಕುರದ ಮೇಲೆ ಸೂಕ್ಷ್ಮವಾಗಿ ಉಜ್ಜಬೇಕು. ಉಜ್ಜಿದ ಜಾಗದಲ್ಲಿ ಹೊಕ್ಕುಳಾಗಿ ಅದು ಮತ್ತೆ ಉದುರಿಹೋಗುವುದು. ಒಂದು ರೀತಿಯ ಅಂಟಿನಿಂದ ಹಾಗು ವಿದ್ಯುತ್ ವಿಧಾನಗಳಿಂದ ಸಹ ಕೊಂಬಿನ ಬೆಳೆವಣಿಗೆಯನ್ನು ನಿಲ್ಲಿಸಬಹುದು.

**ಗುರುತು ಹಾಕುವುದು:** ಹೈನಮಂದಿರಗಳಲ್ಲಿ ಕರುಗಳನ್ನು ಗುರುತಿಸುವುದು ಬಹಳ ಕಷ್ಟ. ಅದಕ್ಕೋಸ್ಕರ ಗುರುತುಹಾಕುವುದು ಮೊದಲಿನಿಂದ ನಡೆದುಬಂದ ಪದ್ಧತಿ. ಕಿವಿಯಲ್ಲಿ ಸಂಖ್ಯೆಯ ಹಚ್ಚೆಹಾಕುವುದು ಕರುಗಳಲ್ಲಿ ಸಾಮಾನ್ಯವಾದದ್ದು. ಒಮ್ಮೊಮ್ಮೆ ಗುರುತು ಇರುವ ತೆಳುತಗಡನ್ನು ಕಿವಿಗೆ ಕಟ್ಟುವುದರಿಂದಲೂ ಕರುಗಳನ್ನು ಗುರುತಿಸಬಹುದು.

**ಹೆಚ್ಚಿನ ಮೊಲೆತೊಟ್ಟು ತೆಗೆಯುವುದು:** ನಾಲ್ಕು ತೊಟ್ಟುಗಳ ಮೊಲೆಯಿರುವ ಕೆಚ್ಚಲಿನ ಹೈನಕ್ಕೆ ಒಳ್ಳೆಯ ಬೆಲೆ. ತೊಟ್ಟುಗಳು ಜಾಸ್ತಿ ಮೂಡುವುದು ಉಂಟು. ಇದನ್ನು ಕರುವಿನಲ್ಲಿಯೇ ಪರೀಕ್ಷಿಸಿ, ಶಸ್ತ್ರಚಿಕಿತ್ಸೆಯಿಂದ ಹೆಚ್ಚಿನ ತೊಟ್ಟು ತೆಗೆದು ಹಾಕುವುದರಿಂದ ಆಕಳಿನ ಯೋಗ್ಯತೆ ಮುಂದೆ ಜಾಸ್ತಿಯಾಗುವುದು.

**ಜೀವ ದಾಖಲೆಗಳು:** ಆಕಳಿನ ಬೆಲೆ ಅದರ ಜೀವದಾಖಲೆಯನ್ನು ಅವಲಂಬಿಸಿದೆ. ಹುಟ್ಟಿದಾಗಿನಿಂದ ಜೀವದಾಖಲೆಯನ್ನು ಸರಿಯಾಗಿ ಪಾಲಿಸಿಕೊಂಡು ಬರಬೇಕು. ತಂದೆ, ತಾಯಿ, ಜನನ, ಪೋಷಣೆ ಮುಂತಾದ ಮಹತ್ತರ ವಿಷಯಗಳನ್ನು ಜೀವದಾಖಲೆಯಲ್ಲಿ ನಮೂದಿಸಬೇಕು. ಆಕಳಿನ ಯಜಮಾನನಿಗೆ ಇದರಿಂದ ಉಪಯೋಗ ಉಂಟು.

**ಸಂತಾನ ಸಂವರ್ಧನೆ:** ಕರು ಬೆಳೆದು ಮುಂದೆ ಸಂತಾನ ಸಂವರ್ಧನೆಗೆ ಸಿದ್ಧವಾಗುವುದು. ಆಗ ಬಹಳ ಜಾಗರೂಕತೆ ಯಿಂದ ವರ್ತಿಸಿದರೆ ಒಳ್ಳೆಯ ಪೀಳಿಗೆಯನ್ನು ಪಡೆಯಬಹುದು. ಕಡಸಿಗೆ ಸರಿಯಾಗಿ ಹೊಂದುವ ಹೋರಿಯನ್ನು ಆರಿಸಬೇಕು. ಕೃತಕ ವಿಧಾನಗಳಿಂದ ನೂತನ ರೀತಿಯಲ್ಲಿ ಸಂತಾನ ರೂಪಿಸಬೇಕು. ಒಳ್ಳೆಯ ಇಲ್ಲವೇ ಹೈನಜಾತಿಯ ವೀರ್ಯವನ್ನು ಉಪಯೋಗಿಸಿ ಪೀಳಿಗೆಯ ಸಂವೃದ್ಧಿ ಮಾಡಬೇಕು. ಹಳ್ಳಿಯ ವಾತಾವರಣದಲ್ಲಿ ಬೆಳೆದ ಕಡಸು 33–36 ತಿಂಗಳಲ್ಲಿ ಹೋರಿಯೊಡನೆ ಸಂಗಮಿಸುವ ಸೂಚನೆ ತೋರಿಸುವುದು. ಹೈನಮಂದಿರದಲ್ಲಿ ಬೆಳೆದರೆ 24–27 ತಿಂಗಳಲ್ಲಿಯೇ ಸೂಚನೆ ಕಾಣಬರುವುದು.

**ರೋಗಗಳು ಮತ್ತು ಅವುಗಳ ನಿವಾರಣೆ:** ಎಳೆತನದಲ್ಲಿ ಕರು ಅನೇಕ ವ್ಯಾಧಿಗಳಿಗೆ ತುತ್ತಾಗುವುದು ಸಹಜ. ಅದರ ವಯಸ್ಸು, ಬೆಳೆವಣಿಗೆ, ಆಹಾರ ಪಾಲನೆ ಹಾಗೂ ಪೋಷಣ ವಿಧಾನಗಳು ರೋಗಗಳ ಉಲ್ಬಣಾವಸ್ಥೆಯ ಮೇಲೆ ಬಹಳ ಪ್ರಭಾವ ಬೀರುವುವು. ರೋಗಗಳಿಂದ ಕರು ಸತ್ತರೆ ಹೈನವೃತ್ತಿಗೆ ಅಪಾರ ನಷ್ಟ. ಆದ್ದರಿಂದ ಕಾಯಿಲೆಗಳ ಬಗ್ಗೆ ಬಹಳ ಜಾಗರೂಕತೆಯಿಂದ ಇರಬೇಕು. ಆರೋಗ್ಯವಂತ ಕರು ಲವಲವಿಕೆಯಿಂದ ಅಡ್ಡಾಡುತ್ತ, ಚೆನ್ನಾಗಿ ತಿನ್ನುತ್ತ ತನ್ನ ನೈಜರೂಪದಿಂದ ಸೊಗಸಾಗಿರುವುದು. ಜಾಡ್ಯ ಬಂದರೆ ಮಂಕಾಗುತ್ತವೆ. ಕಣ್ಣಿನ ಓಜಸ್ಸು ಕಡಿಮೆಯಾಗಿ, ಕಿವಿ ಇಳಿಬಿದ್ದು, ಮುಸುಡಿ ಒಣಗಿ, ಚರ್ಮದ ನುಣುಪು ಮಾಸಿ, ಉಸಿರಾಟ, ಉಷ್ಣಾಂಶ ಹಾಗೂ ನಾಡಿಯ ಬಡಿತ ಜಾಸ್ತಿಯಾಗುತ್ತವೆ. ರೋಗಕ್ಕೆ ಬಲಿಯಾದ ಕರು ಬೆಳೆಯದೆ, ನರಳಿ ಸತ್ತುಹೋಗಬಹುದು. ಕೀಟ, ಸೊಳ್ಳೆ, ಹೇನು, ಉಣ್ಣೆ, ಸೂಕ್ಷ್ಮಕೀಟಗಳು, ಹುಳುಗಳು, ಏಕಾಣುಜೀವಿಗಳು, ಪರಪುಷ್ಟ ಜೀವಿಗಳು, ಸೂಕ್ಷ್ಮಾಣುಗಳು ಅನೇಕ ರೀತಿಯ ರೋಗಗಳನ್ನು ತರುತ್ತವೆ. ಪರಪುಷ್ಟ ಜೀವಿಗಳಿಂದ ದೇಹ ನಶಿಸುವುದಲ್ಲದೆ ಒಮ್ಮೊಮ್ಮೆ ಸಾವು ಸಹ ಬರಬಹುದು. ದೊಡ್ಡರೋಗ, ಜರಸಲು, ಗಳಲೆ, ಕ್ಷಯ, ನೆರಜಿ, ಬ್ರೂಸೆಲ್ಲಾ ಇತ್ಯಾದಿ ಪಿಡುಗುಗಳು ಸಾವು ನೋವನ್ನುಂಟುಮಾಡುವುವು. ಅತಿಸಾರ ಹಾಗೂ ನ್ಯೂಮೋನಿಯಾದಿಂದಲೂ ಬಹಳ ನಷ್ಟಕಷ್ಟ ಆಗುತ್ತವೆ. ಆದ್ದರಿಂದ ಕೆಳಕಂಡ ಸಂರಕ್ಷಣಾ ವಿಧಾನಗಳನ್ನು ಅನುಸರಿಸಿದರೆ ಕರುಗಳನ್ನು ಖಾಯಿಲೆಗಳಿಂದ ಕಾಪಾಡಬಹುದು; ಹಾಗೂ ಉತ್ತಮ ತಳಿಗಳನ್ನು ವೃದ್ಧಿಸಬಹುದು: 1. ಹೈನಮಂದಿರದ ಎಲ್ಲೆಡೆ ಅಚ್ಚುಕಟ್ಟು, ಸ್ವಚ್ಛತೆಗೆ ಪ್ರಾಧಾನ್ಯ; 2. ನಿಗದಿಯಾದ ಆಹಾರ ಹಾಗೂ ಬೇಕಾಗುವಷ್ಟು ನೀರು ಸಕಾಲಕ್ಕೆ ಸರಬರಾಜು; 3. ಸಗಣಿ, ಗಂಜಲ, ಮಲಿನವಾದ ಹುಲ್ಲುಕಡ್ಡಿಗಳನ್ನು ದೂರ ಸಾಗಿಸುವುದು; 4. ಪಶುವೈದ್ಯರ

ಕೈಯಲ್ಲಿ ಕಾಲ ಕಾಲಕ್ಕೆ ಪರೀಕ್ಷೆ ಮಾಡಿಸುವುದು; 5. ಅನುಭವಿ ದನಗಾಹಿಗಳನ್ನು ನೇಮಿಸುವುದು; 6. ಆಡಳಿತದಲ್ಲಿ ಅಚ್ಚುಕಟ್ಟು, ಶಿಸ್ತುಪಾಲನೆ ಮತ್ತು ಉತ್ತಮ ಆರೈಕೆ; 7. ತಾಯಿಹಸುಗಳ ರಕ್ಷಣೆ; 8. ಅಂಟುರೋಗಗಳ ನಿವಾರಣೆ; 9. ಸಾಕಷ್ಟು ವ್ಯಾಯಾಮ. (ಜಿ.ಆರ್.ಆರ್.ಎಸ್.)

**ಕರುಣರಸ:** ಸಂಸ್ಕೃತಕಾವ್ಯಮೀಮಾಂಸೆಯಲ್ಲಿ ಕಾವ್ಯತತ್ತ್ವವೆಂದು ಪ್ರತಿಪಾದಿತವಾಗಿರುವ ರಸದ ಒಂದು ಪ್ರಕಾರ. ಭರತಮುನಿ ಹೇಳಿರುವಂತೆ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ ಎಂಬ ಎಂಟು ರಸಗಳು ಅನುಕ್ರಮವಾಗಿ ರತಿ, ಹಾಸ್ಯ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸಾ, ವಿಸ್ಮಯ ಎಂಬ ಎಂಟು ಸ್ಥಾಯಿಭಾವಗಳ ಅಭಿವ್ಯಕ್ತಿಗಳು. ಅಂದರೆ ಸಹೃದಯರಲ್ಲಿ ಸುಪ್ತವಾಗಿರತಕ್ಕ ಮೇಲ್ಕಂಡ ಒಂದೊಂದು ಭಾವವೂ ಕಾವ್ಯಾದಿಗಳಲ್ಲಿ ಕಾರಣ ಸಾಮಗ್ರಿಗಳೆನಿಸಿಕೊಳ್ಳುವ ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳ ಸಂಯೋಗದಿಂದ ಆಯಾ ರಸವಾಗುತ್ತದೆ. ಆಯಾ ಸ್ಥಾಯಿಭಾವ, ವಿಭಾವ ಮುಂತಾದವುಗಳ ದೃಷ್ಟಿಯಿಂದ ರಸಕ್ಕೆ ವೈವಿಧ್ಯವೇ ಹೊರತು ರಸಾನುಭವದಲ್ಲಿ ಯಾವ ಪ್ರತ್ಯೇಕತೆಯೂ ಇಲ್ಲ; ಅದು ಅಖಂಡವಾದ ಒಂದು ಆನಂದಾನುಭವವೆಂದು ಆಲಂಕಾರಿಕರ ಮತ. ಕಾವ್ಯಾದಿ ಉತ್ತೇಜಕಗಳಿಂದ ಶೋಕಭಾವ ಕರುಣರಸವಾಗಿ ಆನಂದಮಯವಾಗುತ್ತದೆ.

ರಾಮಾಯಣದಲ್ಲಿ ಪ್ರತಿಪಾದಿತವಾಗಿರುವಂತೆ ಕ್ರೌಂಚಪಕ್ಷಿಯೊಂದನ್ನು ವಧಿಸಿದ ನಿಷಾದನನ್ನು 'ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ಯತ್ಕ್ರೌಂಚಮಿಥುನಾ ದೇಕಮಧೀಃ ಕಾಮಮೋಹಿತಂ' ಎಂದು ಶಪಿಸಿದ ವಾಲ್ಮೀಕಿಮುನಿ ಮರುಕ್ಷಣದಲ್ಲಿ ಆಡಿದ 'ಶೋಕಾರ್ತಸ್ಯ ಪ್ರವೃತ್ತೋ ಮೇ ಶ್ಲೋಕೋ ಭವತು ನಾನ್ಯಥಾ' (ಶೋಕಾರ್ತನಾದ ನನ್ನ ಮೂಲಕ ಬಂದ ಇದು ಶ್ಲೋಕವಾಗಲಿ, ಅನ್ಯಥಾ ಆಗದಿರಲಿ) ಎಂಬ ಮಾತುಗಳು ಈ ಸಂದರ್ಭದಲ್ಲಿ ಗಮನಾರ್ಹವಾಗಿವೆ. ಶೋಕದಿಂದ ಆವಿರ್ಭವಿಸಿದ ಮಾ ನಿಷಾದ ಇತ್ಯಾದಿ ಸೊಗಸಾದ ರಚನೆಯ ನೆನಪಿನಿಂದ ಆನಂದವನ್ನನುಭವಿಸುತ್ತ ಅಂಥ ಒಂದು ವಿಶಿಷ್ಟಾನುಭವದ ಸ್ವರೂಪವನ್ನು ತಿಳಿಯಪಡಿಸಲು ಆ ಮುನಿ ಸೂಚಿಸಿದ 'ಶ್ಲೋಕೋ ಭವತು' ಮುಂತಾದ ವಿಚಾರಗಳು ರಸಪಂಥಕ್ಕೆ ಅಂಕುರಗಳೆಂದು ಪ್ರಸಿದ್ಧವಾಗಿವೆ. ಶೋಕಭಾವದ ಆಧಾರವುಳ್ಳ ಮೇಲ್ಕಂಡ ವಿಶಿಷ್ಟಾನುಭವದಲ್ಲಿ (ರಸಾನುಭವ) ಚಿತ್ತವಿದ್ರುತಿ ಬಹು ಮುಖ್ಯವಾದ ಒಂದು ಲಕ್ಷಣ. ಶೋಕಭಾವವಾಗಲಿ, ಉಳಿದ ಯಾವ ಭಾವವಾಗಲಿ ಆಯಾ ರಸವೆನ್ನಿಸಿಕೊಳ್ಳಬೇಕಾದರೆ ಚಿತ್ತವಿದ್ರುತಿ ಅತ್ಯಾವಶ್ಯಕ. ಈ ದೃಷ್ಟಿಯಿಂದ ಕರುಣರಸದ ವಿಚಾರದಲ್ಲಿ ಪಕ್ಷಪಾತ ಬೆಳೆಯಲು ಅವಕಾಶವಾಗಿ ಕೆಲವರು, ಕರುಣ ಒಂದೇ ರಸ ಎಂದು ವಾದಿಸಿದರು. ಹಾಗೆ ಹೇಳುವ ಭವಭೂತಿಯ ಪ್ರಕಾರ 'ಏಕೋ ರಸಃ ಕರುಣ ಏವ ನಿಮಿತ್ತಭೇದಾತ್, ಭಿನ್ನಃ ಪೃಥಕ್ ಪೃಥಗಿವಾಶ್ರಯತೇ ವಿವರ್ತಾನ್, ಆವರ್ತಬುದ್ಬುದತರಂಗ ಮಯಾನ್ವಿಕಾರನ್, ಅಂಭೋ ಯಥಾ ಸಲಿಲಮೇವ ಹಿ ತತ್ಸಮಸ್ತಂ. (ರಸ, ಕರುಣ ಒಂದೇ. ಕಾರಣಸಾಮಗ್ರಿಯ ಭೇದದಿಂದ ವ್ಯತ್ಯಾಸಗೊಂಡು ಬೇರೆ ಬೇರೆ ತೋರಿಕೆಗಳನ್ನು ಪಡೆಯುತ್ತದೆ. ಸುಳಿ ಗುಳ್ಳೆ ಅಲೆಗಳಾಗಿ ವಿಕಾರಗಳುಳ್ಳ ನೀರಿನಂತೆ; ಅದೆಲ್ಲವೂ ನೀರಷ್ಟೆ!) ಭವಭೂತಿಯ ಮತದಲ್ಲಿ ರಸವೈವಿಧ್ಯ ತೋರಿಕೆಯದು; ಎಲ್ಲ ರಸಗಳೂ ಕರುಣರಸದಲ್ಲೇ ಪರ್ಯವಸಾನಗೊಳ್ಳುವುದರಿಂದ ರಸ ಅದೊಂದೇ.

ಧ್ವನಿಕಾರನೆಂದು ಪ್ರಸಿದ್ಧನಾಗಿರುವ ಆನಂದವರ್ಧನ ವಿಪ್ರಲಂಭ ಶೃಂಗಾರದಲ್ಲೂ ಕರುಣರಸದಲ್ಲೂ ಮಾಧುರ್ಯಗುಣದ ಪ್ರಕರ್ಷವನ್ನು ಕಾಣುತ್ತಾನೆ. ಅಲ್ಲಿ ಮನಸ್ಸು ಹೆಚ್ಚಾಗಿ ಕರಗುವುದೇ ಅದಕ್ಕೆ ಕಾರಣವೆಂದು ಅವನ ಮತ. ಕರುಣ ಮಧುರತಮ ವೆನ್ನುತ್ತಾನೆ, ಆತ. ಹಾಗೆಯೇ ಶಾಂತ ಒಂದೇ ರಸವೆಂದೂ ಹೇಳುವವರಿದ್ದಾರೆ.

ಒಟ್ಟಿನಲ್ಲಿ ರಸಾನುಭವಕ್ಕೆ ಅತ್ಯಾವಶ್ಯಕವಾದ ಚಿತ್ತವಿದ್ರುತಿ ಎಲ್ಲ ರಸಗಳಲ್ಲೂ ಕಂಡುಬಂದರೂ ಅದು ಶೋಕಭಾವವನ್ನು ಆಧಾರವಾಗಿ ಹೊಂದಿರುವ ಕರುಣದಲ್ಲಿ ಸ್ಪಷ್ಟ ಹಾಗೂ ಸುಲಭವೆಂದು ಹೇಳಬಹುದು. ಆದ್ದರಿಂದ ಅದೊಂದೇ ರಸವೆಂದು ಹೇಳಿಸಿಕೊಳ್ಳುವಷ್ಟು ವೈಶಿಷ್ಟ್ಯ ಕರುಣರಸಕ್ಕೆ ದೊರೆತಿದೆ. ಅಲ್ಲದೆ ಅದು ಸಂಸ್ಕೃತಕಾವ್ಯ ಮೀಮಾಂಸೆಯಲ್ಲಿ ಸುಕುಮಾರತಮ ವೆಂದು ಶ್ರೇಷ್ಠತೆಯನ್ನು ಪಡೆದಿದೆ; ಸಂಸ್ಕೃತ ಸಾಹಿತ್ಯದಲ್ಲಿ ಹೆಚ್ಚಾಗಿ ಪ್ರತಿಪಾದಿತವಾಗಿರುವ ಪ್ರಧಾನ ರಸಗಳಲ್ಲಿ ಒಂದಾಗಿದೆ. (ಬಿ.ಕೆ.ಎಸ್.)

**ಕರುಹಾಲೆ:** ಅಲ್ಲೇಸೀ ಕುಟುಂಬಕ್ಕೆ ಸೇರಿದ ಸಣ್ಣಗಾತ್ರದ ಮರ. ಇದರ ಶಾಸ್ತ್ರೀಯನಾಮ ಟ್ರೀಮ ಓರಿಯಂಟ್ಯಾಲಿಸ್. ಉತ್ತರ ಕನ್ನಡ, ಶಿವಮೊಗ್ಗ, ಕೊಡಗು ಜಿಲ್ಲೆಗಳ ತೇವಮಯ ಹಾಗೂ ಒಣಹವೆಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಪರ್ಯಾಯವಾಗಿ ಜೋಡಣೆಗೊಂಡಿರುವ ಹಾಗೂ ಗರಗಸದ ಹಲ್ಲಿನಂಥ ಅಂಚುಳ್ಳ ಎಲೆಗಳಿವೆ. ಎಲೆಗಳ ಬುಡ ಕೊಂಚ ಅಸಮವಾಗಿದೆ. ಎಲೆಯ ಅಲಗಿನ ಬುಡಭಾಗದಲ್ಲಿ ಪ್ರಮುಖವಾದ ಮೂರು ನಾಳಗಳಿವೆ. ಹೂಗೊಂಚಲು ಮಧ್ಯಾರಂಭಿ ಮಾದರಿಯದು; ಎಲೆಗಳ ಕಂಕುಳಲ್ಲಿ ಹುಟ್ಟುತ್ತದೆ. ಹೂಗಳು ಏಕಲಿಂಗಿಗಳು; ಹೆಣ್ಣು ಗಂಡು ಹೂಗಳು ಒಂದೇ ಮರದಲ್ಲಿರಬಹುದು ಅಥವಾ ಬೇರೆ ಬೇರೆ ಮರಗಳಲ್ಲಿರಬಹುದು. ಪುಷ್ಪಪತ್ರಗಳು ಹೂದಳಗಳು ಬೇರೆ ಬೇರೆಯಾಗಿಲ್ಲ; ಒಂದೇ ಬಗೆಯ ಪೆರಿಯಾಂತುಗಳಾಗಿ ರೂಪಿತವಾಗಿವೆ. ಇವುಗಳ ಸಂಖ್ಯೆ 4–5. ನೋಡಲು ಪುಷ್ಪಪತ್ರಗಳಂತಿವೆ. ಇವು ಗಂಡುಹೂಗಳಲ್ಲಿ ಬಹಳ ಪುಟ್ಟಗಾತ್ರದವಾಗಿವೆ. ಗಂಡುಹೂಗಳಲ್ಲಿ 4–5 ಕೇಸರಗಳೂ ಒಂದು ಬರಡು ಅಂಡಾಶಯವೂ (ಪಿಸ್ಟಿಲೋಡ್) ಇವೆ. ಹೆಣ್ಣುಹೂವಿನಲ್ಲಿ ಎರಡು ಕಾರ್ಪೆಲುಗಳಿಂದಾದ ಉಚ್ಚ ಸ್ಥಾನದ ಅಂಡಾಶಯವಿದೆ. ಶಲಾಕೆ ಎರಡು ಭಾಗವಾಗಿ ಕವಲೊಡೆದಿದೆ. ಅಂಡಕೋಶದಲ್ಲಿ ಒಂದೇ ಕೋಣೆಯೂ ಅದರೊಳಗೆ ಒಂದೇ ಅಂಡಕವೂ ಇವೆ. ಕಾಯಿ ಒಂದೇ ಬೀಜವನ್ನುಳ್ಳ ಅಷ್ಠಿಫಲ ಮಾದರಿಯದು.

ಕರುಹಾಲೆ ಮರದ ಚೌಬೀನೆ ಕೆಂಪು ಮಿಶ್ರಿತ ಬೂದುಬಣ್ಣದ್ದಾಗಿದ್ದು ಬಹಳ ನಯವಾಗಿದೆ. ಬಂದೂಕಿನ ಮದ್ದಿನ ತಯಾರಿಕೆಗೆ ಬೇಕಾಗುವಂಥ ಇದ್ದಲನ್ನು ತಯಾರಿಸಲು ಇದು ಉತ್ತಮ ದರ್ಜೆಯ ಮರವೆಂದು ಹೆಸರಾಗಿದೆ. ಕೆಲವೆಡೆ ನೆರಳಿನ ಮರವಾಗಿಯೂ ಬೆಳೆಸುತ್ತಾರೆ. (ಎ.ಕೆ.ಎಸ್.)

**ಕರುಳಿನ ಆತಂಕ:** ಸೇವಿಸಿದ ಆಹಾರವಸ್ತುಗಳು ಕರುಳಿನಲ್ಲಿ ಎಂದಿನಂತೆ ಮುಂದೆ ಸಾಗದಂತೆ ಆಗುವ ಅಡಚಣೆ (ಕರುಳಿನ ತಡೆ). ತಿಂದದ್ದು ಅರಗಿ, ರಕ್ತಗೂಡಿ, ಉಳಿದುದು ಹೊರಬೀಳುವುದಕ್ಕೆ ಇದರಿಂದ ತಡೆಯಾಗುವುದು. ಇದು ಇದ್ದಕ್ಕಿದ್ದಹಾಗೋ ನಿಧಾನವಾಗಿ ಕೆಲವು ದಿನಗಳಲ್ಲೋ ಆಗಬಹುದು. ತಡೆಯುಂಟಾದ ಕರುಳಿನಲ್ಲಿ ರಕ್ತ ಸಂಚಾರವಿಲ್ಲದೆ ಕೊಳೆತುಹೋಗಿ ಶಸ್ತ್ರಕ್ರಿಯೆ ಆಗದಿದ್ದಲ್ಲಿ ಪ್ರಾಣಕ್ಕೆ ಅಪಾಯ ಒದಗಬಹುದು.

**ಕಾರಣಗಳು:** ಇವು ಕರುಳಿನ ಒಳಗೋ ಅದರ ಗೋಡೆಯಲ್ಲೋ ಹೊರಗೋ ಇರಬಹುದು. ಕೂಸಿನಲ್ಲಿ ಹುಟ್ಟಿನಿಂದಲೇ ಗುದನಾಳದ ಕಂಡಿ ಇಲ್ಲವಾಗುವುದುಂಟು. ಹಾಗೇ ಸಣ್ಣ ಕರುಳಿನ ಕೆಲವು ಭಾಗಗಳು ಕೂಡ ಬೆಳೆದು ವಿಕಾಸವಾಗದೆ ಇಂಗಿ ಹೋಗಿರಬಹುದು. ಒಂದಂಗುಲದಷ್ಟೋ ಇನ್ನೂ ಸಣ್ಣ ಭಾಗವೋ ಹೀಗಾಗಿ ದಪ್ಪ ಹುರಿಯಂತಾಗಿರುವುದೇ ಸಾಮಾನ್ಯ. ಆಗ ಹುಟ್ಟಿದ ಹಸುಗೂಸಿನಲ್ಲಿ ಕರುಳು ವಿಕಾಸವಾಗದಿರಲು ಕೆಲವು ಕಾರಣಗಳಿವೆ. ಪಿಂಡದಲ್ಲಿ ಕರುಳು ಬೆಳೆವಾಗ ಎಂದಿನ ನಿಲುವಿಗೆ ತಿರುಗದಿರುವುದು. ಹುಟ್ಟುತ್ತಲೇ ಬೆಳೆದಿರುವ ಅಂಟುವ ಪಟ್ಟಿಗಳು (ಅಡ್ಹಿಸಿವ ಬ್ಯಾಂಡ್ಸ್), ಸಣ್ಣ ಕರುಳಿನ ಮೊದಲ ಭಾಗವನ್ನು ಬಿಗಿ ಹಿಡಿದಿರುವುದು, ಪಿಂಡಗೂಸಿನಲ್ಲಿ ಮಾತ್ರ ಇರುವ ಹೊಕ್ಕುಳಿಗೂ ಕರುಳಿಗೂ ನಡುವಣ ಸಾಗುನಾಳ ಮುಚ್ಚಿಹೋಗದೆ ಹಾಗೇ ತಿರುಚೀಲವಾಗಿ (ಡೈವರ್ಟಿಕ್ಯುಲಂ) ಉಳಿದು ಬಿಡುವುದು. ಸಾಮಾನ್ಯವಾಗಿ ಮಗುವಾದ್ದಾಗಲೇ ಇವು ಮೊಟ್ಟಮೊದಲು ತಲೆದೋರುತ್ತವೆ.

ಕರುಳುಗಳಲ್ಲಿ ಜಂತುಹುಳು, ಕೊಕ್ಕೆಹುಳುಗಳು ವಿಪರೀತವಾಗಿ ಸೇರಿಕೊಂಡು ತಿರಿಗಟ್ಟಿ ಉಂಡೆಯಾಗಿ ಕರುಳಿನ ಆತಂಕವಾಗುವುದು ತೀರ ಸಾಮಾನ್ಯ. ಗೋಲಿ, ಮೊಳೆ, ಮಣಿ, ಕಲ್ಲು, ಸೂಜಿ ಮೊದಲಾದ ನುಂಗಬಾರದ ವಸ್ತುಗಳನ್ನು ನುಂಗಿದಾಗಲೂ ಕುರುಳಿನಲ್ಲಿ ಅಡಚಣೆಯಾಗಬಹುದು. ಸುಲಭವಾಗಿ ಅರಗದ, ಮಿತಿಮೀರಿ ತಿಂದ ತಿಂಡಿ, ಉಣಿಸೂ ಬಲು ದೊಡ್ಡದಾಗಿ ಬೆಳೆದು ಪಿತ್ತಕೋಶದಲ್ಲಿ ತೂತಿಟ್ಟು ಕೊಂಡು ಕರುಳಿಗೆ ಬಂದು ಬಿದ್ದ ಪಿತ್ತಗಲ್ಲುಗಳೂ (ಫೀಕೋಲಿತ್ಸ್) ಕರುಳಿನೊಳಗಡೆ ಅಡ್ಡಬಿದ್ದು ಆಹಾರ ಸಾಗಣೆಗೆ ಅಡ್ಡಿಯಾಗಬಹುದು.

ಕರುಳಿನ ಗೋಡೆಯಲ್ಲಿ ಉಂಟಾಗುವ ರೋಗಗಳಿಂದ ಕರುಳಿನ ಒಂದು ಭಾಗ ಮಿತಿ ಮೀರಿ ಬೆಳೆದು ಒಳನಾಳ ತೀರ ಕಿರಿದಾಗಿ ಕೊನೆಗೆ ದಾರಿ ಮುಚ್ಚಿದಂತಾಗಬಹುದು. ಹೆಗ್ಗರುಳಿನ ಮೊದಲಲ್ಲಿರುವ ಮೂಗರುಳಲ್ಲಿ (ಸೀಕಂ) ಪುಪ್ಪುಸಕ್ಷಯ ರೋಗಾಣುಗಳ ಸೋಂಕು ಹತ್ತುವುದು ಸಾಮಾನ್ಯ. ಮುಂದೆ ಇದು ಸಣ್ಣ ಕರುಳಿಗೂ ಹರಡಬಹುದು. ಈ ರೋಗದಲ್ಲಿ ಕರುಳಿನ ಸುರುಳಿಗಳು ಒಂದಕ್ಕೊಂದು ಅಂಟಿಕೊಂಡು ಗಂಟುಹಾಕಿಕೊಂಡ ಹಾಗಾಗಲೂ ಬಹುದು. ಬೇರೆ ರೋಗಗಳ ಸೋಂಕುಗಳಿಂದಲೂ ಹೀಗಾಗಬಹುದು. ಕರುಳುಗಳ ಗೋಡೆಯಲ್ಲಿ ಎಲ್ಲಾದರೂ ಏಡಿಗಂತಿ (ಕ್ಯಾನ್ಸರ್) ತೆರನಯಾವುದಾದರೂ ವಿಷಮಗಂತಿ ಎದ್ದು ಅವುಗಳ ಒಳಗಣ ದಾರಿಯನ್ನು ಕಿರಿದು (ಸ್ಟ್ರಿಕ್ಚರ್) ಮಾಡಬಹುದು. ಹೊಟ್ಟೆಗೆ ತಗಲುವ ಗಾಯ, ಪೆಟ್ಟುಗಳು ವಾಸಿಯಾದರೂ ಕರುಳಿನಲ್ಲಿ ಅಡೆತಡೆಯಾಗಬಹುದು. 45 ವಯಸ್ಸು ದಾಟಿದಾಗ ಹೆಗ್ಗರುಳಲ್ಲಿ ವಿಷಮಗಂತಿಗಳುಂಟಾಗಬಹುದು.

ಕರುಳಿನ ಸುರುಳಿಯಂತಿರುವ ಭಾಗಗಳು ಹುರಿಯಂತೆ ತಿರಿಚಿಕೊಂಡಾಗಲೂ ಕರುಳಿನಲ್ಲಿ ತಡೆಯುಂಟಾಗುತ್ತದೆ.

ಸಾಮಾನ್ಯವಾಗಿ ವರ್ಷ ಮೀರಿದ ಹಸುಳೆಗಳಲ್ಲಿ ಕರುಳಿನ ಒಂದು ಭಾಗ ಮಡಿಸಿಕೊಂಡು ಅದರ ಹಿಂದಿನ ಇಲ್ಲವೇ ಮುಂದಿನ ಭಾಗದೊಳಕ್ಕೆ ತೂರುವುದಕ್ಕೆ ಒಳತೂರಿಕೆ (ಇಂಟ್ರಸಸೆಪ್ಷನ್) ಎಂದಿದೆ. ಹೀಗಾದಾಗ ಒಳತೂರಿದ ಭಾಗದ ಕರುಳಿನ ರಕ್ತನಾಳಗಳಿಗೆ ಅಡಚಣೆಯಾಗುವುದು. ತಡಮಾಡದೆ ಶಸ್ತ್ರಕ್ರಿಯೆಯಿಂದ ಬಿಡಿಸದಿದ್ದರೆ ಆ ಭಾಗವೆಲ್ಲ ಸತ್ತು ಕೊಳೆಯುತ್ತದೆ. ರೋಗಿಗೆ ಪ್ರಾಣಾಪಾಯ ಹೆಚ್ಚುತ್ತದೆ. ಹಸುಗೂಸುಗಳಲ್ಲಿ ಹೀಗಾಗುವುದಕ್ಕೆ ನಿಜವಾದ ಕಾರಣ ಗೊತ್ತಿಲ್ಲವಾದರೂ ಎರಡು ವರ್ಷ ಮೀರಿದವರಲ್ಲೂ ದೊಡ್ಡವರಲ್ಲೂ ಅಪೂರ್ವವಾಗಿ ಕರುಳಿನೊಳಗೆ ಬೆಳೆವ ಹಲಪಾದಿ (ಪಾಲಿಪ್), ವಸೆಗಂತಿ (ಲೆಪೋಮ), ಏಡಿಗಂತಿಗಳು ಕಾರಣಗಳಾಗಿ ತೋರುತ್ತವೆ.

ಕರುಳಿನ ಒಳಗಡೆ ಆಗುವ ಹಾಗೇ ಕರುಳಿನ ಹೊರಗಿಂದಲೂ ಏನಾದರೂ ಬೆಳೆದೋ ಅಂಟಿಕೊಂಡೋ ಕರುಳಿನ ಚಲನೆಗೆ ಅಡ್ಡಿಯಾಗಬಹುದು. ಕರುಳಿನಿಂದ ಕರುಳಿಗೋ ಅಕ್ಕಪಕ್ಕದ ಅಂಗಗಳಿಗೋ ಅಂಟಿಸಿ ಬಿಗಿಸುವಂತೆ ಕಲೆಗಟ್ಟು ವುದರಿಂದ (ಸ್ಕಾರಿಂಗ್) ಆ ಭಾಗ ಇರುಕಿಸಿ ಸಿಕ್ಕಿ ಕೊಂಡಂತಾಗುತ್ತದೆ. ಸಾಮಾನ್ಯವಾಗಿ ಪಿತ್ತಕೊಶ, ಕರುಳುಬಾಲ (ಅಪೆಂಡಿಕ್ಸ್), ಗರ್ಭನಾಳಗಳೇ ಮುಂತಾದವಲ್ಲಿ ಉರಿತವೆದ್ದು (ಇನ್‌ಫ್ಲಮೇಷನ್) ಕೀವುಗೂಡಿ ನೋವಾಗುವುದುಂಟು. ಕೆಲವೇಳೆ ಹೊಟ್ಟೆಯೊಳಗೆ ನಡೆಸಿದ ಶಸ್ತ್ರಕ್ರಿಯೆಯಿಂದಲೂ ಹೀಗೆ ಅಂಟುವ ಪಟ್ಟಿಗಳಾಗಬಹುದು. ಶಸ್ತ್ರಕ್ರಿಯೆ ಕೈಗೊಳ್ಳುವಾಗ ಶಸ್ತ್ರವೈದ್ಯರು ಹಾಕಿಕೊಳ್ಳುವ ಕೈಗವುಸುಗಳಲ್ಲಿ ಕೈಗಳನ್ನು ಸರಾಗವಾಗಿ ತೂರಿಸಲೋಸುಗ ಬಿಂಗಾರದ ಪುಡಿಯನ್ನು (ಟಾಲ್ಕಂಪೌಡರ್) ಚಿಮುಕಿಸುತ್ತಿದ್ದರು. ಈ ಪುಡಿ ಹೊಟ್ಟೆಯಲ್ಲಿ ಕರುಳುಗಳ ಮೇಲೆ ಅಕಸ್ಮಾತ್ತಾಗಿ ಬಿದ್ದಾಗ ಕರುಳುಗಳು ಒಂದಕ್ಕೊಂದು ಅಂಟುವುದರಿಂದಲೇ ಹೊಟ್ಟೆಯ ಶಸ್ತ್ರಕ್ರಿಯೆಗೆ ಗುರಿಯಾದವರಲ್ಲಿ ಕೆಲಕಾಲಾನಂತರ ಕರುಳಿನಲ್ಲಿ ತಡೆಯಾಗುತ್ತಿತ್ತು. ಈಗ ಆ ಪುಡಿಯನ್ನು ಬಳಸುತ್ತಿಲ್ಲ.

ಹೊಟ್ಟೆಯ ಗೋಡೆಯಲ್ಲಿ ಎಲ್ಲಾದರೂ ಏಳುವ ಬೂರುಗಳಲ್ಲಿ (ಹರ್ನಿಯಾಸ್) ಕರುಳೂ ಒಳಸೇರಿದ್ದಾಗ ಇದ್ದಕ್ಕಿದ್ದಹಾಗೆ ಬಟ್ಟಿಬಿದ್ದರೆ (ರಪ್ಚರ್) ಕರುಳಿನಲ್ಲಿ ತಡೆಯಾಗಿ ತೊಂದರೆಯಾಗುವುದು. ಹೊಟ್ಟೆಯ ಬೂರುಗಜ್ಜಲಿನಲ್ಲಿ (ಇಂಗ್ವೈನಲ್), ವಪೆಯಲ್ಲಿ (ಡಯಫ್ರಾಗ್ಮಾಟಿಕ್), ಕರುಳಿನ ನಡುಪೊರೆಯಲ್ಲಿ (ಮೆಸೆಂಟರಿಕ್), ಇಲ್ಲವೇ ತೊಡೆಯಲ್ಲಿ (ಫೆಮಾರಲ್) ಕಾಣಿಸಿಕೊಳ್ಳಬಹುದು. ಇವಲ್ಲದೆ ಪೆಟ್ಟಾದ್ದರಿಂದ ಹೊಟ್ಟೆ ಗೋಡೆಗಳ ಮೊದಲ ಭಾಗಗಳ ಹೊರಗಡೆ ಬೆಳೆದು ಅಮುಕುವ ದೊಡ್ಡಗಂತಿಯಿಂದಲೂ ಕರುಳು ಪೂರ್ತಿ ಒತ್ತಿದಂತಾಗಿ ಮುಚ್ಚಿಹೋಗಬಹುದು.

ಕರುಳಿನ ನರಗಳ ಕೆಲಸ ಕೆಟ್ಟು ಕರುಳು ಚಲಿಸದೆ ನಿಂತು ಅಡ್ಡಿಯಾದಾಗ ಕರುಳ ತಡೆ (ಐಲಿಯಸ್) ಎನ್ನಿಸಿಕೊಳ್ಳುತ್ತದೆ. ಆಗ ಕರುಳಿಗೆ ಏನೋ ಅಡ್ಡಗಟ್ಟಿರುವ ಹಾಗೇ ಹೊರದೋರುವುದು. ಸಾಮಾನ್ಯ ಕಾರಣ ಹೊರಬಿಗಿಪೊರೆಯುರಿತ (ಪೆರಿಟೊನೈಟಿಸ್). ಕಾಲರದಲ್ಲಿ ಆಗುವಂತೆ ವಿಪರೀತ ವಾಂತಿ, ಉಚ್ಚಾಟಗಳಾಗಿ ರಕ್ತದಲ್ಲಿನ ನೀರು, ಸೋಡಿಯಂ, ಪೊಟಾಸಿಯಂ, ಕ್ಲೋರೈಡುಗಳ ಮಟ್ಟ ಏರುಪೇರಾದಾಗಲೂ ಅರನಾರಿ ಕರುಳಾತಂಕ ಆಗಬಹುದು. ಕೊರೆಯಾಗಿರುವ ಈವಸ್ತುಗಳನ್ನು ಕೂಡಲೇ ರಕ್ತಕ್ಕೆ ತುಂಬುವುದೇ ಇದರ ಚಿಕಿತ್ಸೆ.

ಕರುಳಿಗೆ ಸಂಬಂಧಿಸಿದ ಧಮನಿಗಳು (ಆರ್ಟರೀಸ್), ಸಿರಗಳಲ್ಲಿ (ವೆಯ್ನ್ಸ್) ರಕ್ತ ಹೆಪ್ಪುಗಟ್ಟುವುದರಿಂದ ಆ ಭಾಗದ ಕರುಳು ಸತ್ತು ಕೊಳೆತು ಕರುಳಿನ ರೋಗ ಆಗಬಹುದು.

ಪರಿಣಾಮಗಳು: ಕರುಳಿನಲ್ಲಿ ಅಡೆತಡೆಯಾಗಲು ಬೇರೆ ಬೇರೆ ಕಾರಣಗಳಿದ್ದರೂ ರೋಗ ಮಾತ್ರ ಎರಡು ಮಾದರಿಗಳಲ್ಲಿ ತೋರುವುದು : ಕರುಳಿನ ಗೋಡೆಯಲ್ಲಿ ಏನಾದರೂ ಬೆಳೆದಾಗ ಆಗುವ ಅದರ ನಾಳಗಂತಿಯ ಸರಳ ತಡೆ ಒಂದು; ಕರುಳಿನ ಯಾಂತ್ರಿಕ ತಡೆಯೊಂದಿಗೆ ಕರುಳಿನ ರಕ್ತನಾಳ ಪೂರೈಕೆಯ ಅಡಚಣೆ ಇನ್ನೊಂದು.

ಜಠರದ ಹತ್ತಿರವೇ, ಕರುಳಿನ ಮೊದಲ ಭಾಗದಲ್ಲಿ ತಡೆಯಾದರೆ ಪಿತ್ತಗೂಡಿದ ಹಳದಿ ಹಸುರು ವಾಂತಿಯಾಗಿ ಕರುಳಲ್ಲಿನ ನೀರೂ ಲವಣಗಳೂ ಕಳೆದು ಬಲು ತೊಂದರೆಯಾಗುವುದು. ಆದರೆ, ಸಣ್ಣ ಕರುಳಿನ, ಹೆಗ್ಗರುಳಿನ ಕೆಳ ಕೊನೆಗಳಲ್ಲಿ ಆತಂಕವಾದರೆ ಹೊಟ್ಟೆ ಉಬ್ಬರಿಸಿಕೊಳ್ಳುವುದು. ಅಲ್ಲದೆ, ಹೆಗ್ಗರುಳಲ್ಲಿ ಮಾತ್ರ ಆತಂಕವಾಗಿದ್ದರೆ ಅದಕ್ಕೂ ಸಣ್ಣ ಕರುಳಿಗೂ ನಡುವೆ ಕವಾಟ ಇರುವುದರಿಂದ ಹೆಗ್ಗರುಳಲ್ಲೇ ಗಾಳಿ ಉಳಿದುಬಿಟ್ಟು ಉಬ್ಬರಿಸಿಕೊಳ್ಳುವುದು. ಕೆಟ್ಟ ನಾತದ ಮಲಗೂಡಿದ ವಾಂತಿಯೂ ಆಗುತ್ತದೆ. ಮುಂಗರುಳು ಹಿರಿಹಿಗ್ಗಿ ಒಡೆದುಕೊಳ್ಳುವ ಅಪಾಯವು ಇದೆ.

ಕರುಳಿನ ಆತಂಕದ ಕೆಟ್ಟ ಪರಿಣಾಮಗಳಿಗೆ ಮುಖ್ಯ ಕಾರಣಗಳು ಎರಡು; ವಿಪರೀತ ವಾಂತಿಯಾಗಿ ಕರುಳಿನ ನೀರು ಮತ್ತು ಲವಣಗಳ ಕೊಳೆತ; ಒಂದೇ ಸಮನೆ ಊದಿಕೊಂಡಿರುವುದರಿಂದ ಕರುಳಿನ ಭಾಗ ಸತ್ತು ಕೊಳೆವಂತಾಗುವುದು. ಕರುಳಿನ ಸಿರಗಳಲ್ಲಿನ ರಕ್ತದ ಒತ್ತಡಕ್ಕಿಂತಲೂ ಹೆಚ್ಚಾಗಿ ಕರುಳಿನೊಳಗೆ ಒತ್ತಡವೇರಿದರೆ ಕರುಳಿನ ಪುಷ್ಟಿಗೆ ಅಡ್ಡಬರುವುದು. ರಕ್ತ ಮುಂದೆ ಹರಿಯದೆ ಆಮ್ಲಜನಕ ಕೊರೆಯಾಗುವುದರಿಂದ ಕರುಳು ಕೆಡುವುದು. ಹೀಗೆ ಕೆಟ್ಟಿರುವ ಕರುಳಿನ ನಾಳದೊಳಗಿನ ವಿಷಕರ ವಸ್ತುಗಳು ಸಾಮಾನ್ಯವಾಗಿ ಅಡ್ಡಗಟ್ಟುವ ಕರುಳಿನ ಲೋಳೆಪೊರೆಯನ್ನು (ಮ್ಯೂಕೋಸ) ದಾಟಿಕೊಂಡು ಕರುಳಿನಾಚೆ ಬಂದು ಹೊರಬಿಗಿಪೊರೆಯ ಪೊಳ್ಳಿಗೆ ಸೇರಿ ರಕ್ತಗೂಡಿ ರಕ್ತವಿಷವೇರಿಸುವುವು.

ಕರುಳಿನ ಆತಂಕದಲ್ಲಿ ನೀರಡಿಕೆ ಸಾಮಾನ್ಯ. ಮೈಯಲ್ಲಿನ ನೀರು ಮಿತಿಮೀರಿ ಕಳೆದುಹೋದಾಗ ಕಣ್ಣುಗಳು ಗುಳಿಬಿದ್ದು, ನಾಲಗೆ, ಚರ್ಮ ಒಣಗಿ ರೋಗಿ ಸಣಕಲಾಗುವನು. ಮೂತ್ರಸುರಿಕೆ ತಗ್ಗುವುದು. ಕರುಳು ಕೆಟ್ಟಿದ್ದರೆ ಜ್ವರ ಬರುವುದು. ಕೆಲವೇಳೆ ರೋಗಿ ಸುಸ್ತಾಗಿ ತಣ್ಣಗಾಗುವುದುಂಟು. ಬಲವಾಗಿ ಮಲಗಟ್ಟಿರುತ್ತದೆ. ಹೂಸು ಬಿಡುವುದೂ ರೋಗಿಯಿಂದಾಗದು.

ನಿದಾನ: ಆಗ ಹುಟ್ಟಿದ ಹಸುಗೂಸು ದಿನವೆಲ್ಲ ಕಳೆದರೂ ಮಲ ಹಾಕಿಲ್ಲವೆಂದರೆ, ಗುದನಾಳವೇ ಇಲ್ಲವೆಂದೋ ಕರುಳಿನ ವಿಕಾಸ ಆಗಿಲ್ಲವೆಂದೋ ಅನುಮಾನಿಸಬಹುದು. ಬಹುಪಾಲು ಕರುಳಿನ ಆತಂಕಗಳಲ್ಲಿ ಹೊಟ್ಟೆನುಲಿತದಿಂದ ಕರುಳು ಹಿಂಡುವುದರಿಂದ ಹೊಟ್ಟೆನೋವು, ಉದರಶೂಲೆ ಇದ್ದೇ ಇರುವುದು. ನೋವು ಮೊದಲು ಹೊಕ್ಕುಳಿನ ಸುತ್ತ ತೋರಿ, ಆಮೇಲೆ ಒಡಲೆಲ್ಲ ಹರಡಿಕೊಳ್ಳತ್ತದೆ. ಆಗ್ಗಾಗ್ಗೆ ಇಳಿದು ಹೋಗುತ್ತದೆ. ಆದರೂ ಮೊಂಡು ನೋವು ಇದ್ದೇ ಇರುತ್ತದೆ.

ಹೊಟ್ಟೆಶೂಲೆ, ಕರುಳಿನ ಕುಗ್ಗುಗಳೊಂದಿಗೆ ಒಳಗಡೆ ಗುಳುಗುಳು ಸದ್ದಾಗುವುದು. ಕೆಲವೇಳೆ ಹತ್ತಿರ ನಿಂತಿದ್ದವರಿಗೂ ಈ ಸದ್ದು ಕೇಳಿಸಬಹುದು. ಆದರೆ, ಸ್ಟೆತಸ್ಕೋಪಿನಿಂದ ಸುಲಭವಾಗಿ ಇದನ್ನು ಕೇಳಿಸಿಕೊಳ್ಳಬಹುದು. ತಿಂದದ್ದು ಹೆಚ್ಚಾಗಿ ಭೇದಿಗೆ ತೆಗೆದುಕೊಂಡಾಗಲೂ ಹೀಗೆ ಕೇಳಬಹುದಾದರೂ, ಆಗ ಹೊಟ್ಟೆ ಉಬ್ಬರ, ಶೂಲೆ ಇರವು.

ಕೇವಲ ಕರುಳಿನ ಆತಂಕವಲ್ಲದೆ ಬೂರಿನಲ್ಲಿ ಕರುಳು ಸಿಕ್ಕಿಹಾಕಿಕೊಂಡಿದ್ದರೆ ಹೊಟ್ಟೆಯನ್ನು ಎಲ್ಲಿ ಮುಟ್ಟಿದರೂ ನೋಯುತ್ತಿರುವುದು. ಆಗ ಹೊಟ್ಟೆಮೇಲೆ ಬೆರಳುಗಳಿಂದ ಮೆಲ್ಲನೆ ಬಡಿದರೆ ಒಳಗೆ ಗಾಳಿ ತುಂಬಿ ಉಬ್ಬರವಾಗಿರುವ ಸದ್ದೇಳುವುದು. ರೋಗಿಯನ್ನು ನೆಟ್ಟಗೆ ನಿಲ್ಲಿಸಿ ಸರಳ ಎಕ್ಸ್‌ಕಿರಣ ಚಿತ್ರ ತೆಗೆದು ನೋಡಿದರೆ, ಹೊಟ್ಟೆಯಲ್ಲಿ ಅಲ್ಲಲ್ಲಿ ನೀರೂ ಗಾಳಿಯೂ ಗೂಡುಗಳಲ್ಲಿ ಇರುವಂತೆ ತೋರುವುದು. ಹೆಗ್ಗರುಳಲ್ಲಿ ಉಬ್ಬರವಾಗಿದ್ದರೆ, ಅದರ ಮಡಿಕೆಗಳು ಕಾಣದಾಗುತ್ತವೆ. ಕರುಳಿನ ಆತಂಕದಲ್ಲಿ ಮುಖ್ಯವಾಗಿ ಗುದದ ಮೂಲಕ ಹೆಗ್ಗರುಳನ್ನು ವೈದ್ಯ ಪರೀಕ್ಷಿಸಬೇಕು. ಆತಂಕ ಕಾರಣ ಕೆಲವೇಳೆ ಇದರಿಂದ ತಿಳಿಯುವುದು.

ಒಟ್ಟಿನಲ್ಲಿ ಕರುಳಿನ ಆತಂಕ ಇರುವುದೇ, ಕರುಳು ತಿರುಚಿದಂತಾಗಿರುವುದೇ, ಸುಮ್ಮನೆ ಒಳಗಡೆ ಬಿದ್ದಿರುವ ಅಡಚಣೆಯೇ, ಕರುಳು ಅವುಚಿಕೊಂಡಿರುವುದೇ, ಆತಂಕವಾಗಿದ್ದರೆ ಎಲ್ಲಿ ಆಗಿದೆ ಇವನ್ನೆಲ್ಲ ವೈದ್ಯ ಮೊದಲು ನಿರ್ಧರಿಬೇಕು. ಈ ನಿರ್ಧಾರಕ್ಕೆಂದೇ ಕೆಲವೇಳೆ ಒಡಲಿನ ಶಸ್ತ್ರಕ್ರಿಯ ಆಗಬೇಕಾಗುತ್ತದೆ. ಹೊಕ್ಕುಳ ಮಟ್ಟದಲ್ಲಿ ಹೊಟ್ಟೆಯ ಸುತ್ತಳತೆಯನ್ನು ಮೇಲಿಂದಮೇಲೆ ಗುರುತಿಸುತ್ತಿದ್ದರೆ ಅನುಕೂಲ.

**ಚಿಕಿತ್ಸೆ:** ಹೊಟ್ಟೆ ಉಬ್ಬರವನ್ನು ಹೋಗಲಾಡಿಸಿ, ಕರುಳಿನ ಸಾಗುನಾಳದಲ್ಲಿ ಆಹಾರವಸ್ತುಗಳು ಸರಾಗವಾಗಿ ಮುಂದೆ ಸಾಗುವಂತೆ ಮಾಡುವುದೇ ಚಿಕಿತ್ಸೆಯ ಮುಖ್ಯ ಗುರಿ. ವಾಂತಿ ವಿಪರೀತವಾಗಿದ್ದಾಗ, ಕಳೆದುಹೋದ ನೀರು, ಲವಣಗಳನ್ನು ರಕ್ತನಾಳದ ಮೂಲಕ ಬೇಗನೆ ಉಪ್ಪುನೀರಿನೊಂದಿಗೆ ತುಂಬಿಸಬೇಕು. ರೋಗಿಗೆ ಬಾಯಿ ಮೂಲಕ ಏನೂ ಕೊಡದಂತಿರಿಸಿ, ಜಠರದೊಳಕ್ಕೆ ಒಂದು ರಬ್ಬರ್ ಕೊಳವೆಯನ್ನು ತೂರಿಸಿ ಇಳಿಬಿಟ್ಟು ಅಲ್ಲಿ ಸೇರುವ ನೀರನ್ನು ಹೀರಿ ಹೊರಹಾಕುತ್ತಿರಬೇಕು. ರೋಗದ ಗುರುತು ಹಚ್ಚಿ ಮುಂದಿನ ಚಿಕಿತ್ಸೆಗೆ ಯೋಜಿಸಿಕೊಂಡು ನೋವು ಹರಿಸುವ ಮದ್ದನ್ನೂ ವೈದ್ಯ ಬೇಗನೆ ಕೊಡುವನು. ಎಲ್ಲಕ್ಕೂ ಮುಖ್ಯವಾಗಿ ಒಂದಿಲ್ಲೊಂದು ಬಗೆಯ ಶಸ್ತ್ರಕ್ರಿಯೆ ಆಗಲೇಬೇಕಾಗುತ್ತದೆ. ರೋಗಿಯ ಸ್ಥಿತಿಕೆಡುವುದರೊಳಗಾಗಿ, ಎಷ್ಟು ಬೇಗನೆ ಶಸ್ತ್ರಕ್ರಿಯೆಯಾದರೆ ಅಷ್ಟೂ ಚೆನ್ನಾಗಿ ರೋಗಿಯನ್ನು ಉಳಿಸಿಕೊಳ್ಳಬಹುದು. ಬಾಯ ಮೂಲಕ ತೂರಿಸುವ, ಕರುಳಿನೊಳಹೊಗುವ ನೀಳವಾದ ತೆಳು ರಬ್ಬರ್ ಕೊಳವೆಯನ್ನು ಹಾಕಿಟ್ಟು ಒಳಗಿನದನ್ನೆಲ್ಲ ಹೀರಿಹಾಕುತ್ತಿದ್ದರೆ, ಎಷ್ಟೋ ವೇಳೆ ಕರುಳಿನ ಆತಂಕ ಕಳೆದು ಉಬ್ಬರವೂ ಇಳಿಯುವುದು. ಕರುಳಿನ ಉರಿತಗಳು, ಅರನಾರಿ, ಸೆಡೆತ, ಕರುಳಿನ ಅಂಟಿಕ ಪಟ್ಟಿಗಳಿಂದ ಆತಂಕವಾಗದ್ದಿರೂ ಈ ಚಿಕಿತ್ಸೆಯಿಂದ ಮೇಲಾಗುತ್ತದೆ. ಏನಾದರೂ 12 ತಾಸುಗಳೊಳಗಾಗಿ ಹೀಗೆ ಮಾಡಿದ್ದರಿಂದ ಗುಣ ಕಾಣದಿದ್ದಲ್ಲಿ ಶಸ್ತ್ರಕ್ರಿಯೆಗೆ ಸಿದ್ಧವಾಗಿರಲೇಬೇಕು.

ಆಗ ಹುಟ್ಟಿದ ಹಸುಗೂಸಿನಲ್ಲಿ ಗುದನಾಳ ಇಲ್ಲದಿದ್ದಾಗ ಹೊಸದೊಂದು ಕಂಡಿಯನ್ನು ಶಸ್ತ್ರವೈದ್ಯ ರಚಿಸಬೇಕು. ಕರುಳು ನುಲುಚಿಕೊಂಡಿರುವ ಬೂರುವಿನ ಶಸ್ತ್ರಕ್ರಿಯೆ ಕೂಡಲೇ ಆಗಬೇಕು. ಬೂರುವಿನಲ್ಲಿಕರುಳು ಸಿಕ್ಕಿಹಾಕಿಕೊಂಡಿದ್ದರೆ ಶಸ್ತ್ರಕ್ರಿಯೆಯಿಂದ ಬಿಡಿಸಬಹುದು. ಹೊಟ್ಟೆಯ ಶಸ್ತ್ರಕ್ರಿಯೆ ಮಾಡುವಾಗ ಕರುಳಿನಲ್ಲಿ ಎಲ್ಲಾದರೂ ಗುಣವಾಗದಷ್ಟು ಕೆಟ್ಟು ಕೊಳೆತಿದ್ದರೆ ಆ ಭಾಗವನ್ನು ಕತ್ತರಿಸಿ ತೆಗೆದು ಹಾಕಿ, ಉಳಿದ ಕೊನೆಗಳನ್ನು ಒಂದುಗೂಡಿಸಬೇಕಾಗಬಹುದು. ಅರನಾರಿ ಕರುಳಾತಂಕಕ್ಕೆ ಶಸ್ತ್ರಕ್ರಿಯೆ ಬೇಕಿಲ್ಲ; ಮದ್ದುಗಳಿಂದ ಮೇಲಾಗುತ್ತದೆ. ಹೊಟ್ಟೆಯಲ್ಲಿ ಜಂತುಹುಳು, ಕೊಕ್ಕೆಹುಳು ವಿಪರೀತವಾಗಿದ್ದರೆ ಕೇವಲ ಮದ್ದುಗಳಿಂದ ವಾಸಿಮಾಡ ಬಹುದು.

ಕರುಳಿನ ಆತಂಕವನ್ನು ಎಳೆಯದರಲ್ಲೇ ಗುರುತಿಸುವುದು, ಆತಂಕದಿಂದೇಳುವ ಕೆಡಕುಗಳ ಹೆಚ್ಚಿನ ಅರಿವು, ಸರಿಯಾದ ಶಸ್ತ್ರಕ್ರಿಯೆ, ಕರುಳೊಳಕ್ಕೆ ರಬ್ಬರ್ ಕೊಳವೆಗಳನ್ನು ಬೇಗನೆ ಚೆನ್ನಾಗಿ ಹಾಕಿರಿಸಿ ಒಳಗಿನದನ್ನೆಲ್ಲ ಈಚೆಗೆ ತೆಗೆದು ಹಾಕುವುದು, ಇವುಗಳಿಂದ ಕರುಳಿನ ಆತಂಕದಿಂದ ರೋಗಿ ಬಿಡುಗಡೆಯಾಗುವ ಅವಕಾಶ ಹೆಚ್ಚಿದೆ. ರಕ್ತನಾಳ ಕೆಟ್ಟಿದ್ದು ಕರುಳಿನ ಆತಂಕವಾಗಿದ್ದರೆ ರೋಗಿಗೆ ಹೆಚ್ಚು ಅಪಾಯಕರ. (ಬಿ.ಎಂ.ಎ.)

**ಕರುಳುಗಂಟು:** ಬೀಜವೊಡೆದ ಎತ್ತಿನಲ್ಲಿ, ಶ್ರೋಣಿಕುಹರದ (ಪೆಲ್ವಿಕ್ ಇನ್‌ಲೆಟ್) ಅಂಚಿನಲ್ಲಿ ರೇತುವಿನ ಸಾಗುನಾಳದ (ಸ್ಪರ್ಮಾಟಿಕ್ ಕಾರ್ಡ್) ಹೊರತುದಿಯಿಂದಾದ ಕುಣಿಕೆಯಲ್ಲಿ ಸಣ್ಣ ಕರುಳಿನ ಒಂದು ತುಂಡು ಸಿಕ್ಕಿಹಾಕಿ ಕೊಂಡಿರುವುದಕ್ಕೆ ಈ ಹೆಸರಿದೆ (ಗಟ್ ಟೈ). ಸಿಕ್ಕಿಕೊಂಡ ಕರುಳಿನಲ್ಲಿ ಸೆಗಣಿ ತುಂಬಿದ ಹಾಗೆಲ್ಲ ಒಳ ಒತ್ತಡ ಹೆಚ್ಚಿ ರಕ್ತದ ಹರಿವು ಕಡಿಮೆಯಾಗುತ್ತ ಆ ಭಾಗದ ಕರುಳನ್ನು ಸಾಯಿಸಿದಂತಾಗುವುದು. ಮಲೆನಾಡುಗಳಲ್ಲಿ, ಕೆಲವೇಳೆ ಬೀಜವೊಡೆದ ಎಳೆಯ ಹೋರಿಗರುಗಳಲ್ಲಿ, ಬಲಗಡೆ

ಪಕ್ಕದಲ್ಲಿ ಹೀಗಾಗುತ್ತದೆ. ಜಠರದ ದೊಡ್ಡ ಮೆಲುಕುಚೀಲ (ರೂಮೆನ್) ಕರುಳನ್ನೆಲ್ಲ ಬಲಕ್ಕೆ ತಳ್ಳಿರುವುದರಿಂದ ಕರುಳುಗಂಟು ಎಡಗಡೆ ಆಗದು. ಗೂಳಿಗಳಿಗೆ ತೆರೆದ ವಿಧಾನದಲ್ಲಿ ಬೇಹುಷಾರಾಗಿ ಬೀಜವೊಡೆದರೆ, ರೇತುಸಾಗುನಾಳದ ಮೇಲ್ಭಾಗ ಮೇಲಕ್ಕೆ ಸೇದಿಕೊಂಡು, ಅದರ ಕತ್ತರಿಸಿದ ತುದಿ ಗಜ್ಜಲಿನ ಸಾಗಾಲುವೆಗೋ (ಇಂಗ್ವೈನಲ್ ಕೆನಾಲ್), ಶ್ರೋಣಿಕುಹರದ ಬಳಿ ಹೊಟ್ಟೆಯ ಗೋಡೆಗೋ ಅಂಟಿಕೊಂಡು ಕುಣಿಕೆಯಾಗುತ್ತದೆ. ಈ ಕುಣಿಕೆಯೊಳಕ್ಕೋ ರೇತುಸಾಗುನಾಳದ ನಡುಪೊರೆಯೊಳಗೆ ಆಗಿರುವ ತೂತಿನೊಳಕ್ಕೋ ಕರುಳಿನ ಒಂದು ತುಂಡು ತೂರಿ ಸಿಕ್ಕಿಹಾಕಿಕೊಳ್ಳುವುದು. ಹೀಗಾದಾಗ, ದನ ಮೇವು ಮುಟ್ಟದು. ಹೊಟ್ಟೆನೋವಿನಿಂದ ಬೆನ್ನನ್ನು ಕಮಾನಾಗಿ ಬಾಗಿಸುವುದು. ನೋವಿರುವ ಎಡಕಿಬ್ಬದಿಯನ್ನೇ ನೋಡಿಕೊಳ್ಳುತ್ತಿರುವುದು. ನಿಲ್ಲಲೂ ಕೂರಲೂ ಆಗದೆ ಚಡಪಡಿಸುತ್ತ ಸೆಗಣಿ ಹಾಕಲು ಆಗಾಗ್ಗೆ ಯತ್ನಿಸುತ್ತಿರುವುದು. ಗುದನಾಳದ (ರೆಕ್ಟಂ) ಪರೀಕ್ಷೆಯಿಂದ, ಅದು ಬರಿದಾಗಿರುವುದೂ ರಕ್ತಕಲೆ, ಲೋಳೆ ಮಾತ್ರ ಇರುವುದೂ ಗೊತ್ತಾಗುವುದು. ಮೊದಮೊದಲು ಕೊಂಚ ಜ್ವರ ಬಂದ ಹಾಗಿದ್ದರೂ ಬರುಬರುತ್ತ ಆರೋಗ್ಯ ಕೆಟ್ಟಂತೆಲ್ಲ ಮೈ ತಣ್ಣಗಾಗುವುದು.

ಕರುಳಿನ ರಕ್ತನಾಳಗಳಲ್ಲಿನ ಹರಿವಿಗೆ ಆತಂಕವಾದ ದನ 4–5 ದಿವಸಗಳಲ್ಲಿ ಸಾಯುತ್ತದೆ. ಶಸ್ತ್ರಕ್ರಿಯೆಯೇ ಇದರ ಚಿಕಿತ್ಸೆ. ಸಿಕ್ಕಿಬಿದ್ದಿರುವ ಆ ಭಾಗದ ಕರುಳು ಬಹಳವಾಗಿ ಕೊಳೆವ ಮೊದಲೇ ಚಿಕಿತ್ಸೆಯನ್ನು ಕೈಗೊಳ್ಳಬೇಕು. ಹೊಟ್ಟೆಯನ್ನು ಕೊಯ್ದು, ಕುಣಿಕೆ ಹಾಕಿಕೊಂಡಿರುವ ರೇತುಸಾಗುನಾಳವನ್ನು ಕತ್ತರಿಸಿ ಬಿಡಿಸಿ, ಸಿಕ್ಕಿಕೊಂಡಿರುವ ಕರುಳಿನ ಕೊಳೆತಷ್ಟು ಭಾಗವನ್ನು ತೆಗೆದುಹಾಕಿ ಹೊಲೆದು ಸರಿಪಡಿಸಬೇಕು. (ಕೆ.ವಿ.ಎಂ.)

**ಕರುಳುರಿತ:** ಕರುಳುಗಳ ಒಳವರಿಯಾಗಿರುವ ಲೋಳೆಪೊರೆಯಲ್ಲಿ ಏಳುವ ಉರಿತ (ಎಂಟರೈಟಿಸ್). ಅದೇ ರೋಗಕಾರಣದಿಂದ ಜಠರ, ಹೆಗ್ಗರುಳುಗಳಲ್ಲೂ ಹೀಗೇ ಉರಿತವೆದ್ದು ಜಠರಗುರುಳುರಿತ (ಗ್ಯಾಸ್ಟ್ರೊಎಂಟರೈಟಿಸ್), ಕರುಳು ಹೆಗ್ಗರುಳುರಿತ (ಎಂಟರೊಕೊಲೈಟಿಸ್) ಆಗಬಹುದಾದರೂ ಕರುಳುರಿತವೆಂದರೆ ಸಣ್ಣ ಕರುಳಿಗೆ ಸೀಮಿತವಾಗಿರುವುದು. ಕರುಳುರಿತದ ಮುಖ್ಯ ಪರಿಣಾಮ ಉಚ್ಚಾಟ, ಕೆಲಮೇಳೆ, ವಾಂತಿ, ಜ್ವರ, ಆಮಶಂಕೆ, ರಕ್ತಭೇದಿಗಳೂ ಕಾಣಿಸಿಕೊಳ್ಳಬಹುದು. ಕರುಳಿಗೆ ಬಿಡುವು ಕೊಡಬೇಕಾದರೆ ಏನೂ ತಿನ್ನಬಾರದು, ಕುಡಿಯಬಾರದು, ಇದರ ಚಿಕಿತ್ಸೆ ರೋಗದ ಕಾರಕಗಳಿಗೆ ತಕ್ಕ ಹಾಗಿರುತ್ತದೆ. (ಎಂ.ಎಸ್.ಎನ್.)

**ಕರುಳುವಾಳುರಿತ (ಅಪೆಂಡಿಕ್ಸ್):** ಸಣ್ಣ ಕರುಳೂ ದೊಡ್ಡಕರುಳೂ ಕೂಡುವೆಡೆ ಮೋಟು ಬಾಲದಂತಿರುವ ಕರುಳುವಾಳದಲ್ಲಿ (ಅಪೆಂಡಿಕ್ಸ್) ಆಗುವ ಉರಿತ (ಅಪೆಂಡಿಸೈಟಿಸ್). ಇದರೊಂದಿಗೆ ಒಳಗಡೆ ತಡೆಯಾಗಿರಲೂಬಹುದು ಇಲ್ಲದಿರಲೂಬಹುದು. ಪ್ರಾಚೀನ ಈಜಿಪ್ಷಿಯನರಲ್ಲಿ ಮಮ್ಮಿಗಳಾಗಿ ಹೆಣಗಳನ್ನು ಶತಮಾನಗಳ ಕಾಲ ಕೆಡದಂತಿರಿಸುವವರಿಗೆ ಕರುಳುವಾಳ ಗೊತ್ತಿತ್ತು. ಲಿಯೋನಾರ್ಡೊ ಡ ವಿಂಚಿ ಇದನ್ನು ಚಿತ್ರಿಸಿ ವಿವರಿಸಿದ್ದ. ಕರುಳುವಾಳುರಿತವನ್ನು ಸತ್ತ ರೋಗಿಯಲ್ಲಿ ಹೀಸ್ಟರ್ ಮೊಟ್ಟಮೊದಲು ಕಂಡು ಗುರುತಿಸಿ ವರದಿ ಮಾಡಿದವ (1755). ಇದಕ್ಕೆ ಮೊದಲು ಚಿಕಿತ್ಸೆ ಮಾಡಿದ ಕ್ಲಾಡಿಯಸ್ (1735). ಕರುಳುವಾಳುರಿತದ ಗುಣಲಕ್ಷಣಗಳು 19ನೆಯ ಶತಮಾನದ ಕೊನೆಯೆರಡು ದಶಕಗಳ ತನಕ ಸರಿಯಾಗಿ ತಿಳಿದಿರಲಿಲ್ಲ.

ಬೇರೆ ರೋಗಗಳೊಂದಿಗೆ ಹೋಲಿಸಿದರೆ ಇದನ್ನು ಒಂದು ಸಾಮಾನ್ಯ ರೋಗ ಎನ್ನಬಹುದು. ಇಂಗ್ಲೆಂಡಿನಲ್ಲಿ 200 ಮಂದಿಗೊಬ್ಬರು ಈ ರೋಗಕ್ಕೆ ಬಲಿಯಾಗುವರು. ಹೆಂಗಸರಿಗಿಂತ ಗಂಡಸರಲ್ಲೇ ಹೆಚ್ಚು. ಪ್ರೋಟೀನುಗಳೇ ಬಹುವಾಗಿದ್ದು ರಕ್ತಗತವಾಗದೆ, ಅರಗದೆ ಉಳಿದ ಪದಾರ್ಥಗಳು ಆಹಾರದಲ್ಲಿ ಹೆಚ್ಚಿದ್ದರೆ ಕರುಳುವಾಳುರಿತ ಆಗುವುದೆಂದೂ ಆಹಾರದಲ್ಲಿ ನಾರಿನಂಥ ಮರದೆಳೆ (ಸೆಲ್ಯುಲೋಸ್) ಹೆಚ್ಚಿಗಿದ್ದರೆ ಈ ರೋಗ ಬಾರದೆಂದೂ ಅಭಿಪ್ರಾಯವಿದೆ. ಯಾವ ವಯಸ್ಸಿನವರಿಗಾದರೂ ಇದು ಬರುವುದಾದರೂ 2 ವರ್ಷಗಳ ಕೆಳಗೂ 40 ಮೀರಿದವರಲ್ಲೂ ಬರುವುದು ಕಡಿಮೆ.

ಕರುಳುವಾಳದಲ್ಲಿ ಹಾಲು ರಸ (ಲಿಂಫ್) ಊತಕಗಳು ತುಂಬ ಇರುವುದರಿಂದ ಮೆಂಡಿಕೆಯಂತೆ (ಟಾನ್ಸಿಲ್) ಇದಕ್ಕೂ ಆಗಾಗ್ಗೆ ಸೋಂಕು ಹತ್ತಿ ರೋಗ ಕಾಣಿಸಿಕೊಳ್ಳುವುದು ಸಾಮಾನ್ಯ. ಇದೊಂದು ಸಣ್ಣ ಕೊಳವೆಯಂತೆ ಇರುವುದರಿಂದ ಹಾಲು ರಸ ಊತಕ ಊದಿಕೊಂಡರೆ, ಹೆರ ವಸ್ತುಗಳೋ ಹುಳು, ಕ್ರಿಮಿಗಳೋ ಒಳಸೇರಿ ಸಿಕ್ಕಿಕೊಂಡರೆ ಕರುಳುವಾಳಕ್ಕೆ ಬಿರಟೆ ಹಾಕಿ ಮುಚ್ಚಿ ತಡೆದಂತಾಗುವುದು. ಇಲ್ಲಿನ ಸೋಂಕುಗಳಿಗೆ ಮುಖ್ಯ ಕಾರಕಗಳು ಕರುಳು ಕಾಯ್ಜೀವಿಗಳು (ಎಂಟ ರೋಕಾಕೈ), ಸರಕಾಯ್ಜೀವಿಗಳು (ಸ್ಟ್ರೆಪ್ಟೊಕಾಕೈ).

ಕರುಳುವಾಳುರಿತದಲ್ಲಿ ಒಳಗಿನ ಲೋಳೆಪೊರೆ ಬಿರಿದು ಸೋಂಕುಹತ್ತಿರುವುದು. ಇದರಿಂದೇಳುವ ಹೊಟ್ಟೆನೋವಿನ ಜೋರು, ಒಳಗಡೆ ಕರುಳುವಾಳಕ್ಕೆ ತಡೆ ಆಗಿರುವುದೋ ಇಲ್ಲವೋ ಎನ್ನುವಂತಿರುವುದು. ತಡೆ ಆಗಿಲ್ಲವಾದರೆ, ಒಳಗಿನ ಉರಿತ ತಾನಾಗಿ ಶಮನವಾಗಿ ಇಳಿದುಹೋಗಬಹುದು. ಆದರೆ ಉರಿತ ಕೇವಲ ಲೋಳೆ ಪೊರೆಯಲ್ಲೇ ಉಳಿಯದೆ ಉಳಿದ ಪದರಗಳಿಗೂ ಹರಡಬಹುದು. ಆಗ ಇಡೀ ಕರುಳುವಾಳ ದಪ್ಪಗೆ ಕೆಂಪಗೆ ಊದಿ ರಕ್ತಗಟ್ಟಬಹುದು. ಕೊನೆಗೆ ಒಂದೆಡೆ ಕೊಳೆತು ಮೆತುವಾಗಿಬಿಟ್ಟು ತೂತುಬಿದ್ದರೆ ತೀರ ಅಪಾಯಕರ. ಕೆಲವೇಳೆ ಒಂದೆಡೆ ಹುಣ್ಣಾಗಿ ವಾಸಿಯಾಗುವಾಗ ಕಲೆಗಟ್ಟಿ ಮುದುರಿಕೊಳ್ಳುವುದರಿಂದ ಕರುಳುವಾಳದಬಾಯಿ ಮುಚ್ಚಿದಂತೆ ಕಿವುಚಿಕೊಂಡು ತಡೆಯಾಗಬಹುದು.

ಕರುಳುವಾಳದಲ್ಲಿ ತಡೆಯಾದರೆ, ಉರಿತ ಇನ್ನಷ್ಟು ಹೆಚ್ಚಿಕೊಂಡು ಬೇಗನೆ ಮೆತ್ತಗಾಗಿ ಕೊಳೆತು ತೂತಿಟ್ಟುಕೊಂಡು ಒಡೆಯುತ್ತದೆ. ಕೇವಲ 12–18 ತಾಸುಗಳೊಳಗಾಗಿ ಹೀಗಾಗಿಬಿಡಬಹುದು. ಇದರಿಂದ ಹೊಟ್ಟೆಯಲ್ಲಿ ಹೊದ್ದಿಸಿದಂತಿರುವ ಹೊರಬಿಗಿ ಪೊರೆಗೆ (ಪೆರಿಟೋನಿಯಂ) ತಾಕಿ ಇಡೀ ಒಡಲಲ್ಲೆಲ್ಲ ಹರಡಿಬಿಡಬಹುದು. ಹೊರಬಿಗಿ ಪೊರೆ ಇಲ್ಲಿ ಅಂಟಿಕೊಂಡಿದ್ದರೆ ಸೋಂಕು ಒಂದೆಡೆಯಲ್ಲಿ ಉಳಿವ ಅನುಕೂಲವಿದೆ.

ಕರುಳುವಾಳುರಿತ ಯಾವಾಗ ಬೇಕಾದರೂ ಕಾಣಿಸಿಕೊಳ್ಳಬಹುದು. ಆದರೂ ಬೆಳಗಿನ ಹೊತ್ತಿನಲ್ಲಿ ತಲೆದೋರುವುದೇ ಹೆಚ್ಚು. ಮೊದಲು ಇಡೀ ಒಡಲೆಲ್ಲ ನೋವು ತೋರುತ್ತಿದ್ದು ಕೊನೆಗೆ ಹೊಕ್ಕುಳಿನ ಸುತ್ತ ಉಳಿವುದು. ಮೊದಲೇ ವಾಂತಿಯಾಗಬಹುದು. ಸಾಮಾನ್ಯವಾಗಿ ಇದರಿಂದೇಳುವ ಹೊಟ್ಟೆನೋವು ಬಲಗಡೆಯ ಕೆಳಹೊಟ್ಟೆಯಲ್ಲಿ ಕರುಳುವಾಳ ಇರುವ ಜಾಗದಲ್ಲಿ ನೆಲೆಸಿರುತ್ತದೆ. ಮೊದಲ 6 ತಾಸುಗಳಲ್ಲಿ ಜ್ವರವಾಗಲಿ, ನಾಡಿ ಏರುವುದಾಗಲಿ ಇರದು. ಬರುಬರುತ್ತ ನಿಧಾನವಾಗಿ ಜ್ವರ $101^{\circ}$ ಫ್ಯಾ. ಮಟ್ಟಕ್ಕೇರಬಹುದು. ಕರುಳುವಾಳ ಇರುವೆಡೆ ಹೊಟ್ಟೆ ಗಡುಸಾಗಿ ಬಿಗಿತುಕೊಂಡಿದ್ದು ಮುಟ್ಟಿದರೆ ನೋಯುತ್ತದೆ. ಎಡಗಡೆಯ ಕೆಳಹೊಟ್ಟೆಯನ್ನು ಒತ್ತಿದರೆ ಬಲಗಡೆ ಅಲ್ಲಿ ನೋವೇಳುತ್ತದೆ. ಕರುಳುವಾಳದ ತಡೆಯಾಗದೆ ಉರಿತವಾಗಿದ್ದರೆ ಬಿಳಿ ರಕ್ತಕಣಗಳು ಹೆಚ್ಚಿರುವುದು ರಕ್ತಕಣಗಳ ಎಣಿಕೆಯಿಂದ ತಿಳಿಯುತ್ತದೆ. ತಡೆಯಾಗಿರುವ ಕರುಳುವಾಳುರಿತ ತೀರ ಕಟ್ಟುನಿಟ್ಟಿನದು, ಬಲು ಅಪಾಯಕರ. ಹೊಟ್ಟೆಶೂಲೆ ಜೋರಾಗಿರುತ್ತದಲ್ಲದ ಕೂಡಲೇ ಶಸ್ತ್ರಕ್ರಿಯೆ ಆಗದಿದ್ದರೆ ಪ್ರಾಣಾಪಾಯವಿದೆ.

ಕರುಳುವಾಳುರಿತದಿಂದ ಹಲವಾರು ತಾಕು ತೊಡಕುಗಳು ಏಳಬಹುದು. ಕರುಳುವಾಳದ ಸುತ್ತಲೂ ಮುದ್ದೆಗಟ್ಟಿದಂತಾಗಿ ಗಂಟುಗಂಟಾಗಬಹುದು. ಕರುಳುವಾಳದಲ್ಲಿ ಕೀವುಗೂಡಿ ಕುರು ಏಳಬಹುದು. ಹೊರಬಿಗಿಪೊರೆಯಲ್ಲಿ ಒಂದೆಡೆಯಲ್ಲೋ ಎಲ್ಲೆಲ್ಲೂ ಹರಡಿಯೋ ಸೋಂಕಿನ ಉರಿತವಾಗಬಹುದು. ಕರುಳುವಾಳ ಬಿರಿದು ತೂತಿಟ್ಟುಕೊಳಬಹುದು. ಕೊನೆಯದಾಗಿ ರಕ್ತ ಸರಬರಾಜಿಲ್ಲದೆ ಕರುಳುವಾಳ ಕೊಳೆಯಬಹುದು. ಕರುಳುವಾಳುರಿತ ಸುಮಾರು ಕೂರಾಗಿದ್ದರೆ (ಸಬಕ್ಯೂಟ್) ಶಸ್ತ್ರಕ್ರಿಯೆಗೆ ಅವಸರವಿಲ್ಲ.

ಇದ್ದಕ್ಕಿದ್ದ ಹಾಗೆ ಜೋರಾಗಿದ್ದು ರೋಗಿಗೆ ಕೆಡುಕಾಗುವಂತಿದ್ದರೆ ಕೂಡಲೇ ಶಸ್ತ್ರಕ್ರಿಯೆಯಿಂದ ಕರುಳುವಾಳವನ್ನು ಕೊಯ್ದು ತೆಗೆಯಬೇಕು. ಆದರೆ ಕರುಳುವಾಳುರಿತವಾಗಿ ಗಂಟು ಕಟ್ಟಿಕೊಂಡಿದ್ದರೆ, ಸೋಂಕು ಇಳಿಸುವ ಜೀವಿರೋಧಕ ಮದ್ದುಗಳನ್ನು ಕೊಡುತ್ತ ಕಾದು ನೋಡುವುದು ಒಳ್ಳೆಯದು. ರೋಗಿಯನ್ನು ಹಾಸಿಗೆಯಲ್ಲಿ ಮಲಗಿಸಿ, ಮೊಣಕಾಲು ಕೊಂಚ ಮಡಿಸಿಟ್ಟು ತಲೆ ಎದೆಗಳನ್ನು ಎತ್ತರಿಸಿಟ್ಟರಬೇಕು. ಬಾಯಿ ಮೂಲಕ ಏನೂ ಕೊಡಬಾರದು. ನಾಡಿ, ಮೈ ಕಾವುಗಳನ್ನು ಗುರುತಿಸಿಡುತ್ತಿರಬೇಕು. ನೀರು ಲವಣಗಳು, ಪುಷ್ಟಿಕಾರಿಗಳು, ದ್ರಾಕ್ಷಿಸಕ್ಕರೆಗಳನ್ನು ಸಿರದ ಮೂಲಕ ಚುಚ್ಚಿ ಹೊಗಿಸುತ್ತಿರಬೇಕಾಗುವುದು. ಸಾಧಾರಣವಾಗಿ ಗಂಟುಕಟ್ಟಿದ್ದು 2–3 ವಾರಗಳಲ್ಲಿ ಕರುಗುತ್ತದೆ. 3 ತಿಂಗಳು ಬಿಟ್ಟು ಶಸ್ತ್ರಕ್ರಿಯ ಮಾಡಬಹುದು.

ಇಂದಿನ ದಿನಗಳಲ್ಲಿ ಕರುಳುವಾಳುರಿತ ಶಸ್ತ್ರ ಚಿಕಿತ್ಸೆಯನ್ನು ಅಂತರ್ದರ್ಶಕದ ಮೂಲಕವೂ ನಡೆಸಬಹುದು. (ಕೆ.ಕೆ.ಆರ್.ಐ.)

**ಕರುಳುಹುಳು ನಿರೋಧಕಗಳು:** ಮನುಷ್ಯ, ಹಂದಿ, ಕುದುರೆ, ನಾಯಿ, ದನಗಳಲ್ಲಿ ಸೇರಿಕೊಂಡು ಬೆಳೆಯುವ ಉಪಜೀವಿಗಳಾದ ಜಂತುಹುಳು ಮತ್ತಿತರ ಪರಪಿಂಡಿಗಳನ್ನು ಹೋಗಲಾಡಿಸಲು ಬಳಸುವ ಮದ್ದುಗಳಿವು (ಏಂಟ್ ಹೆಲ್ಮಿಂಟಿಕ್ಸ್).

ಈ ಹುಳುಗಳು ಅಂಗಗಳಲ್ಲಿ ಸೇರಿದ್ದರೆ ತಲೆನೋವು, ದುರ್ಬಲತೆ, ರಕ್ತಕೊರೆ, ಚರ್ಮರೋಗಗಳು, ಶ್ವಾಸರೋಗಗಳು, ಜ್ವರ, ಅಜೀರ್ಣ, ಹೊಟ್ಟೆನೋವು, ಗಂತಿಗಳು ಮುಂತಾದುವು ಕಾಣಿಸಿಕೊಳ್ಳುತ್ತವೆ. ಪ್ರಪಂಚದಲ್ಲಿ ಪ್ರಾಯಶಃ ಶೇ. 50ರಷ್ಟು ಜನರು ಈ ಹುಳುರೋಗಗಳಿಂದ ತೊಂದರೆ ಪಡುತ್ತಿದ್ದಾರೆ. ಮುಖ್ಯವಾಗಿ ಬಡತನ, ಅವಿದ್ಯೆ, ಜೌಗುಪ್ರದೇಶ, ಕೊಳಕುತನ, ಶುದ್ಧವಾದ ನೀರು ಸರಬರಾಜು ಇಲ್ಲದಿರುವುದೇ ಇದರ ಕಾರಣಗಳು.

ಮುತ್ತುಗದ ಹಸಿರಾದ ಎಲೆ ಮತ್ತು ಬೀಜ, ಪರಂಗಿಯ ಹಣ್ಣು ಮತ್ತು ಅದರಿಂದ ಬರುವ ಹಾಲು, ಬಾಳೆದಿಂಡು ಮತ್ತು ಅದರ ಹೂವು, ಕೆಸವಿನ ದಂಟುಗಳನ್ನು ಮನೆಗಳಲ್ಲಿ ಜಂತುಹುಳು ನಿರೋಧಕಗಳಾಗಿ ಬಳಸುತ್ತಾರೆ.

ಈ ಹುಳುನಿರೋಧಕಗಳು ಬೇರೆ ಬೇರೆ ರೀತಿಯಾದ ಕ್ರಿಯೆಗಳಿಂದ ಆ ಹುಳುಗಳನ್ನು ಕರುಳಿನಿಂದ ಹೊರದೂಡುತ್ತವೆ. ಹುಳುಗಳಲ್ಲಿರುವ ಕೋಲೀನ್ ಎಸ್ಟರೇಸ್ ಎಂಬ ಅಜೈವಿಕ ಕಿಣ್ವದ ಮೇಲೆ ಪೈಪರ್ ಜೀನ್ ಕೆಲಸಮಾಡಿ ಸ್ನಾಯುಗಳು ದುರ್ಬಲವಾಗುವಂತೆ ಮಾಡಿ ಹುಳುಗಳನ್ನು ನಾಶಮಾಡುತ್ತದೆ. ಕೆಲವು ಮದ್ದುಗಳು ಆಹುಳುಗಳ ಉಪಾಪಚಯ (ಮೆಟಬಾಲಿಸಂ) ಮೇಲೆ ವರ್ತಿಸಿ ಅವನ್ನು ಸಾಯಿಸುತ್ತವೆ. ಬೇರೆ ಕೆಲವು ಮದ್ದುಗಳು ಆ ಹುಳುಗಳ ಪಿಸಿತೊಗಲಿನ (ಕ್ಯೂಟಿಕಲ್) ಮೇಲೆ ವರ್ತಿಸಿ, ಆ ಹುಳುಗಳು ಕರುಳುಗಳಲ್ಲಿಯೇ ಜೀರ್ಣವಾಗುವಂತೆ ಮಾಡುತ್ತವೆ.

ಹುಳುನಿರೋಧಕಗಳ ಸೇವನೆಯ ಮೊದಲು ತಿಳಿಯಬೇಕಾದ ಸಾಮಾನ್ಯ ನಿಯಮಗಳು: ಮದ್ದನ್ನು ಬರಿಯ ಹೊಟ್ಟೆಯಲ್ಲಿ ಸೇವಿಸಬೇಕು. ಆ ಔಷಧಿಗಳನ್ನು 3–4 ಬಾರಿ, 15 ಮಿನಿಟುಗಳ ಅಂತರದಲ್ಲಿ ಸೇವಿಸಬೇಕು. ಹುಳುನಿರೋಧಕಗಳನ್ನು ಸೇವಿಸಿದ ಮೇಲೆ (ಸರಿಯಾದ, ಬೇಕಾದಷ್ಟು ವಯಸ್ಸಿಗೆ ತಕ್ಕ ಪ್ರಮಾಣದಲ್ಲಿ) ವಿರೇಚನ ಔಷಧಿಯನ್ನು ಕುಡಿಯಬೇಕು. ಹರಳೆಣ್ಣೆಯನ್ನು ಸೇವಿಸಕೂಡದು. ಹಿಟ್ಟಿನ ಪದಾರ್ಥ ಅಥವಾ ಸಕ್ಕರೆಯನ್ನು ವಿಶೇಷವಾಗಿ ತಿನ್ನಬೇಕು. ವಿಸರ್ಜನೆಯಾದ ಮಲದಲ್ಲಿ ಹುಳುಗಳು ಅವುಗಳ ಮೊಟ್ಟೆಗಳು ಇವೆಯೇ ಎಂದು ಪರೀಕ್ಷಿಸಬೇಕು.

ಹುಳುನಿರೋಧಕಗಳ ಹೆಚ್ಚು ಸೇವನೆಯಿಂದ ಓಕರಿಕೆ, ವಾಂತಿಭೇದಿ, ಹೊಟ್ಟೆ ನೋವು, ತಲೇ ತಿರುಗು, ದುರ್ಬಲತೆ, ಅಗ್ನಿಮಾಂದ್ಯ, ಅನ್ನ ಸೇರದಿರುವುದು, ಸ್ನಾಯುಗಳ ಸರಿಯಾದ ಹೊಂದಾಣಿಕೆ ಕ್ರಿಯೆ ಇಲ್ಲದಿರುವುದು, ದೃಷ್ಟಿಯ ತೊಂದರೆಗಳು, ತಲೆನೊವು, ಪಿತ್ತವತಜನಕಾಂಗ, ಶ್ವಾಸಕೋಶದ ರೋಗಗಳು, ಮಂಕಾಗಿರುವಿಕೆಯೇ ಮುಂತಾದ ರೋಗಲಕ್ಷಣಗಳು ಕಂಡುಬರುತ್ತವೆ. (ಎಸ್.ಕೆ.ಎಚ್.; ಎಂ.ಎಸ್.ಎನ್.)

**ಕರುಳುಹುಳುಶಾಸ್ತ್ರ:** ಸ್ತನಿ, ಮತ್ತಿತರ ಪ್ರಾಣಿಗಳಲ್ಲಿ ಪರಾವಲಂಬಿಯಾಗಿ, ಕರುಳುಗಳಲ್ಲಿ ಒಳಸೇರಿರುವ ಹುಳುಗಳ ಹುಟ್ಟು, ಜೀವವಿಕಾಸ, ಜೀವನ ಕ್ರಮ, ಅವುಗಳಿಂದೇಳುವ ರೋಗಗಳು, ರೋಗನಿವಾರಣೆ, ರೋಗಪ್ರತಿಬಂಧನೆ ವಿವರಿಸುವ ವೈದ್ಯಶಾಸ್ತ್ರ ವಿಭಾಗ (ಹೆಲ್ಮಿಂತಾಲಜಿ). *

**ಕರೂರ್:** ತಮಿಳು ನಾಡಿನ ತಿರುಚ್ಚಿರಾಪಳ್ಳಿ ಜಿಲ್ಲೆಯ ಕಾವೇರಿ ಮುಖಜಭೂಮಿಯ ಒಂದು ತಾಲ್ಲೂಕು. ವಿಸ್ತೀರ್ಣ 1585 ಚ.ಕಿಮೀ ಇದೊಂದು ವಿಶಾಲ ಬಯಲು. ತಾಲ್ಲೂಕಿನ ಉತ್ತರದ ಅಂಚಿನಲ್ಲಿ ಕಾವೇರಿ ಮತ್ತು ನೋಯಿಲ್ ನದಿಗಳು ಹರಿಯುತ್ತವೆ. ಅಮರಾವತಿ ಉಪನದಿ ಕಾವೇರಿಯನ್ನು ಕೂಡುವುದು ಈ ತಾಲ್ಲೂಕಿನಲ್ಲಿ. ದಕ್ಷಿಣದ ಕಡೆಯಿಂದ ಕೊಡಗನೂರ್ ಮತ್ತು ನಂಗನೋಲಾರ್ ಹೊಳೆಗಳು ಅಮರಾವತಿಯನ್ನು ಸೇರುತ್ತವೆ. ಕಾಡುಗಳು ಕಡಿಮೆ ಇರುವುದರಿಂದಲೂ ಸಮುದ್ರದ ಪ್ರಭಾವದಿಂದ ಇದು ದೂರದಲ್ಲಿರುವುದರಿಂದಲೂ ಇಲ್ಲಿ ಸೆಖೆ ಹೆಚ್ಚು. ವರ್ಷದಲ್ಲಿ ಸುಮಾರು 63 ಸೆಂಮೀ. ಮಳೆಯಾಗುತ್ತದೆ. ಇಲ್ಲಿಯ ಮಣ್ಣು ಕೆಂಪುನಸುಬೂದು ಮರುಳಿಂದ ಕೂಡಿದೆ. ಕಾವೇರಿಯ ನೀರನ್ನು ಕಾಲುವೆಗಳ ಮುಖಾಂತರ ವ್ಯವಸಾಯಕ್ಕೆ ಮೊಟ್ಟಮೊದಲು ಬಳಸಲಾದದ್ದು ಈ ತಾಲ್ಲೂಕಿನಲ್ಲಿ. ನೀರಾವರಿ ಬೇಸಾಯವೇ ಇಲ್ಲಿ ಪ್ರಧಾನ. ತಾಲ್ಲೂಕಿನ ಪಶ್ಚಿಮಭಾಗಕ್ಕೆ ಭವಾನಿಯೋಜನೆಯಿಂದ ನೀರಾವರಿ ಸೌಲಭ್ಯ ಒದಗಿದೆ. ನೀರಾವರಿ ಸೌಲಭ್ಯವಿದ್ದಲ್ಲೆಲ್ಲ ಬತ್ತ ಮತ್ತು ಕಬ್ಬು ಬೆಳೆಸುತ್ತಾರೆ. ಕಡಲೆ ಮುಖ್ಯ ಬೆಳೆ. ಇದರೊಂದಿಗೆ ಹತ್ತಿ, ಮೆಣಸು, ತಂಬಾಕು, ಜೋಳ ಮತ್ತು ರಾಗಿಗಳನ್ನೂ ಬೆಳೆಸುವುದುಂಟು. ಜನಸಾಂದ್ರತೆ ಚ. ಕಿಮೀ.ಗೆ 100–259, ಪುಂಜೈಪುಗಳೂರಿನಲ್ಲಿ ಸಕ್ಕರೆ ಕಾರ್ಖಾನೆಯಿದೆ. ಹತ್ತಿ ಮತ್ತಿತರ ಗಿರಣಿಗಳೂ ಉಂಟು. ಅರವಕುರುಚಿ, ಪಳ್ಳಪಟ್ಟಿಇವು ಈ ತಾಲ್ಲೂಕಿನ ಇತರ ಮುಖ್ಯಸ್ಥಳಗಳು.

ಕರೂರ್ ಈ ತಾಲ್ಲೂಕಿನ ಕೇಂದ್ರ. ಅಮರಾವತಿ ನದಿಯ ದಡದ ಮೇಲಿರುವ ಈ ನಗರ ತಿರುಚ್ಚಿರಾಪಳ್ಳಿಯಿಂದ ಪಶ್ಚಿಮಕ್ಕೆ 77 ಕಿಮೀ ದೂರದಲ್ಲಿದೆ. ಜನಸಂಖ್ಯೆ 76328 (2001). ಇದು ರೈಲು ರಸ್ತೆಗಳ ಸಂಧಿಸ್ಥಳ. ಪಶ್ಚಿಮ ತಮಿಳು ನಾಡಿನ ಮುಖ್ಯ ವ್ಯಾಪಾರ ಮತ್ತು ಕೈಗಾರಿಕಾ ಕೇಂದ್ರ. ಇಲ್ಲಿ ತಾಮ್ರದ ಪಾತ್ರೆಗಳು ತಯಾರುಗುತ್ತವೆ.

ಕರೂರ್ ಒಂದು ಇತಿಹಾಸ ಪ್ರಸಿದ್ಧ ಸ್ಥಳ. ಇದರ ಹೆಸರನ್ನು ಟಾಲೆಮಿ(ಸು.141) ತನ್ನ ಭೂವಿವರಣೆಯಲ್ಲಿ ತಿಳಿಸಿದ್ದಾನೆ. ರೋಮನ್ ಚಕ್ರವರ್ತಿಗಳಾದ ಆಗಸ್ಟಸ್ (ಪ್ರ.ಶ. ಪೂ. 27– ಪ್ರ.ಶ. 14) ಟೈಬೀರಿಯಸ್ (14–37) ಮತ್ತು ಕ್ಲಾಡಿಯಸರ (41–54) ನಾಣ್ಯಗಳು ಈ ಸ್ಥಳದ ಬಳಿಸಿಕ್ಕಿವೆಯಾದ್ದರಿಂದ ಆಕಾಲದಿಂದಲೂ ಇದು ಪ್ರಸಿದ್ಧವಾಗಿದ್ದಿರಬೇಕು. ಕೊಂಗುನಾಡಿನ ಸಪ್ತ–ಶಿವಾಲಯಗಳಲ್ಲಿ ಇಲ್ಲಿಯ ಪಶುಪತೀಶ್ವರ ದೇವಾಲಯವೂ ಒಂದು. ಆದುದರಿಂದ ಈ ನಗರವನ್ನು ತಿರುವಾಣಿಲೈ ಅಥವಾ ಪಶುಪತಿಎಂದು ತಮಿಳು ಗ್ರಂಥಗಳಲ್ಲಿ ಕರೆಯಲಾಗಿದೆ. ಚೇರ ಚೋಳ ಪಾಂಡ್ಯ ರಾಜ್ಯಗಳು ಸಂಧಿಸುವ ಸ್ಥಳದಲ್ಲಿ ಈ ನಗರವಿದ್ದುದರಿಂದ ಪ್ರಾಚೀನ ಕಾಲದ ಅನೇಕ ಕದನಗಳಲ್ಲಿ ಇದು ಪ್ರಮುಖ ಪಾತ್ರವಹಿಸಿತ್ತು. ಒಮ್ಮೆ ಚೇರರಾಜ್ಯದ ರಾಜಧಾನಿಯೂ ಆಗಿತ್ತು. ವಿಜಯನಗರದ ಪತನದ ಅನಂತರ ಈ ನಗರ ಮಧುರೆಯ ನಾಯಕರಿಗೆ ಸೇರಿತು. 17ನೆಯ ಶತಮಾನದ ಕೊನೆಯಲ್ಲಿ ಇದು ಮೈಸೂರು ರಾಜ್ಯಕ್ಕೆ ಸೇರಿ, ಅದರ ಮುಖ್ಯ ಗಡಿ ಠಾಣ್ಯವಾಯಿತು. 1736ರಲ್ಲಿ ಚಂದಾಸಾಹೇಬ ಇದನ್ನು ಆಕ್ರಮಿಸಲು ಪ್ರಯತ್ನಿಸಿ ಸೋತ. 1760ರಲ್ಲಿ ಇದು ಇಂಗ್ಲಿಷರ ವಶವಾಯಿತು. 1768ರಲ್ಲಿ ಹೈದರ್ ಇದನ್ನು ಗೆದ್ದುಕೊಂಡ. 1790ರಲ್ಲಿ ಇದು ಮತ್ತೆ ಇಂಗ್ಲಿಷರ ವಶವಾಯಿತು. ಸೇನಾನೆಲೆಯಾಗಿದ್ದ ಈ ನಗರಕ್ಕೆ 1901ರಲ್ಲಿ ಪೌರಸಭೆಯ ಸ್ಥಾನ ಲಭ್ಯವಾಯಿತು. (ಕೆ.ಆರ್.ಆರ್.)

**ಕರೆಂಟ್:** ಬೊಂಬಾಯಿಯಿಂದ ಪ್ರತಿ ಶನಿವಾರ ಪ್ರಕಟವಾಗುವ ಸ್ವತಂತ್ರ ಧೋರಣೆಯ ರಾಜಕೀಯ ವಿಚಾರಗಳ ಇಂಗ್ಲಿಷ್ ವಾರಪತ್ರಿಕೆ. 1949ರಲ್ಲಿ ಪ್ರಕಟಣೆ ಆರಂಭವಾಯಿತು. ಇದು ಮುಖ್ಯವಾಗಿ ವೈಚಾರಿಕ ಪತ್ರಿಕೆಯಾಗಿದ್ದರೂ ರಾಜ್ಯಗಳ ಸುದ್ದಿಪತ್ರಗಳೂ ಇದರಲ್ಲಿ ಸಮಾವೇಶಗೊಂಡಿರುತ್ತವೆ. ಮಹಿಳಾ ಮತ್ತು ಕ್ರೀಡಾ ವಿಭಾಗಗಳೂ ಉಂಟು. ಭಾಷೆ ಕಟುವೆನಿಸಿ, ಅಭಿಪ್ರಾಯಗಳು ಏಕಪಕ್ಷೀಯವೆನಿಸಿದರೂ ವೈಯಕ್ತಿಕ ನಿಂದೆ ಸಾಮಾನ್ಯವಾಗಿ ಇಲ್ಲ. ಈ ಪತ್ರಿಕೆಯ ಒಂದೇ ಅಖಿಲಭಾರತ ಆವೃತ್ತಿ ಪ್ರಕಟವಾಗುತ್ತದೆ. ಈ ಪತ್ರಿಕೆ

THE CURRENT WEEKLY

WHITHER PAKISTAN?

The British Paper A.I.R. Quoted On Dacca

SOVIET PLOT Against 2 Govts.

ಬೊಂಬಾಯಿಯ ಕರೆಂಟ್ ಪಬ್ಲಿಕೇಷನ್ಸ್ (ಪ್ರೈವೇಟ್) ಲಿಮಿಟೆಡ್‌ನ ಒಡೆತನದಲ್ಲಿದೆ. ಸಂಪಾದಕ ಡಿ. ಎಫ್. ಕರಾಕಾ. ಮುಂಬಯಿ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ ಶಿಕ್ಷಣ ಪಡೆದ ಕರಾಕಾ ಬಾಂಬೆ ಕ್ರಾನಿಕಲ್ ಪತ್ರಿಕೆಯಲ್ಲಿ ಒಂಬತ್ತು ವರ್ಷಕಾಲ ಇದ್ದರು. ಬರ್ಮ ಯೂರೋಪ್‌ಗಳಲ್ಲಿ ಯುದ್ಧ ವರದಿಗಾರರಾಗಿಯೂ ಕೆಲಕಾಲ ವಿಶೇಷ ಸುದ್ದಿಗಾರ ರಾಗಿಯೂ ಕೆಲಸ ಮಾಡಿದ ಅನುಭವ ಅವರಿಗುಂಟು. (ಎಸ್.ವಿ.ಪಿ.ಎ.)

**ಕರೆಂಟ್ ಇವೆಂಟ್ಸ್:** ಡೆಹ್ರಾ ಡೂನಿನಿಂದ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುವ ಮಾಸಪತ್ರಿಕೆ. ಸ್ಥಾಪನೆ: 1955 ಮೇಜರ್ ಜನರಲ್ ಡಿ.ಕೆ.ಪಾಲಿಟ್ ಪ್ರಧಾನ ಸಂಪಾದಕ, ದೇವದತ್ ಸಂಪಾದಕ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ಘಟನೆಗಳ ಸುದ್ದಿಗಳೇ ಅಲ್ಲದೆ ರಕ್ಷಣೆ, ವಿಜ್ಞಾನ, ಕಲೆ, ಕಾನೂನು, ವಾಣಿಜ್ಯ, ಚಿತ್ರ ಪ್ರಪಂಚ, ಕ್ರೀಡೆ, ಪುಸ್ತಕ ಪ್ರಪಂಚ ಮುಂತಾದ ವನ್ನು ಕುರಿತ ಪ್ರಚಲಿತ ವಿಚಾರ ಗಳಿಗೂ ಈ ಪತ್ರಿಕೆ ಮೀಸಲಾಗಿದೆ. ಸೇನಾ ಸಿಬ್ಬಂದಿಯ ಜನರಲ್ಲಿ ಈ ಪತ್ರಿಕೆಗೆ ಬಹಳ ಬೇಡಿಕೆಯುಂಟು. ಅಷ್ಟೇ ಅಲ್ಲ; ಆಡಳಿತಗಾರರು, ವಿಶಿಷ್ಟ ಉದ್ಯೋಗಾಕಾಂಕ್ಷಿಗಳು, ಬುದ್ಧಿಜೀವಿಗಳು–ಮುಂತಾದ ಎಲ್ಲರ ಅವಶ್ಯಕತೆಗಳನ್ನೂ ಇದು ಪೂರೈಸುತ್ತದೆ. ಬಹುಶ್ರುತತ್ವವನ್ನು ಬೆಳಸಿಕೊಳ್ಳ ಲಿಚ್ಛಿಸುವವರಿಗೂ ನಾನಾ ಸ್ಪರ್ಧಾ ಪರೀಕ್ಷೆಗಳಿಗೆ ಅಭ್ಯರ್ಥಿಗಳಾಗುವವರಿಗೂ ಈ ಪತ್ರಿಕೆ ವಿಪುಲವಾದ ಸಾಮಗ್ರಿ ಯನ್ನೊದಗಿಸುತ್ತದೆ. (ಎಚ್.ಎಸ್.ಎಚ್.)



**ಕರೆಂಪುಡಿ:** ಆಂಧ್ರಪ್ರದೇಶದಲ್ಲಿ ನಾಗಾರ್ಜುನಕೊಂಡದ ಆಗ್ನೇಯಕ್ಕೆ ಸು. 52 ಕಿಮೀ ದೂರದಲ್ಲಿ ನಾಗುಲೇರು ನದಿಯ ದಡದಲ್ಲಿರುವ ನೆಲೆ. ಆದಿಶಿಲಾಯುಗಕ್ಕೆ ಸೇರಿದ ಕಲ್ಲಿನಾಯುಧಗಳು ಇಲ್ಲಿ ದೊರಕಿವೆ. ಆಫ್ರಿಕದ ಓಲ್ಡೋವನ್ ಆಯುಧಗಳನ್ನು ಹೋಲುವ ಉಂಡೆಕಲ್ಲಿನಾಯುಧಗಳು ಇಲ್ಲಿ ಹೇರಳವಾಗಿದ್ದು ಅನಂತರದ ಕಾಲಕ್ಕೆ ಸೇರುವ ಅಬೆವಿಲಿಯನ್ ಮತ್ತು ಅಷ್ಯೂಲಿಯನ್ ಹಂತದ ಕೈಕೊಡಲಿಗಳೂ ಕ್ಲಾಕ್ಟೋನಿಯನ್ ಮತ್ತು ಲೆವಾಲ್ವಾಸಿಯನ್ ಸಂಸ್ಕೃತಿಗಳಿಗೆ ಸೇರುವ ಕಲ್ಲುಚಕ್ಕೆಗಳೂ ಅಲ್ಪಪ್ರಮಾಣದಲ್ಲಿವೆ. ನದೀಮಟ್ಟದಲ್ಲಿ ಕಂಡುಬರುವ ಪದರಗಳಲ್ಲಿ ಸಿಕ್ಕಿರುವ ಆಯುಧಗಳನ್ನು ಮಧ್ಯ ಪ್ಲಿಸ್ಟೊಸೀನ್ ಯುಗಕ್ಕೆ ನಿರ್ದೇಶಿಸಲು ಸಾಧ್ಯವಾಗುತ್ತದೆ. ಸೌಂದರರಾಜನ್‌ರ ಅಭಿಪ್ರಾಯದಂತೆ ಇಲ್ಲಿಯ ಒಂದು ನೆಲೆಯಲ್ಲಿ ಮಾತ್ರ ಉಂಡೆ ಕಲ್ಲಿನಾಯುಧಗಳು ಅಧಿಕ ಪ್ರಮಾಣದಲ್ಲಿದ್ದು ಕ್ರಮೇಣ ಕೈಗೊಡಲಿ ಹಂತದೆಡೆಗೆ ಸಾಗುತ್ತಿದ್ದುದರ ಸೂಚನೆ ಕಂಡುಬರುತ್ತದೆ. ಆದುದರಿಂದ ಒಂದು ಪ್ರದೇಶದಲ್ಲಿ ಈ ಸಂಸ್ಕೃತಿ ಹುಟ್ಟಿ , ಅದು ಸುಧಾರಣೆಗೊಂಡ ಮೇಲೆ ಇತರ ಪ್ರದೇಶಗಳಿಗೆ ಹಬ್ಬಿರಬೇಕೆಂದು ವಾದಿಸಲಾಗಿದೆ. ಎಂದರೆ ಆದಿಶಿಲಾಯುಗ ಮಾನವ ಒಂದೇ ಎಡೆಯಲ್ಲಿ ವಾಸಿಸುತ್ತಿದ್ದು ಅನಂತರ ನದೀದಂಡೆಗೆ ತನ್ನ ಕಾರ್ಯರಂಗವನ್ನು ವಿಸ್ತರಿಸಿದನೆಂದೂ ವಾದಿಸಿದಂತಾಗುತ್ತದೆ. ಆದರೆ ಈ ವಾದದಲ್ಲಿ ಹುರುಳಿಲ್ಲ. *

**ಕರೆನ್ ರಾಜ್ಯ:** ಮಯನ್ಮಾರ್ ದೇಶಕ್ಕೆ ಸೇರಿದ ಒಂದು ರಾಜ್ಯ. 1947ರ ಬರ್ಮೀ ಸಂವಿಧಾನದ ಪ್ರಕಾರ ಸಾಲ್ವೀನ್ ಜಿಲ್ಲೆ ಹಾಗೂ ಅದರ ಸುತ್ತುಮುತ್ತಲಿನ ಕೆಲವು ಪ್ರದೇಶಗಳನ್ನು ಸೇರಿಸಿ ಅವುಗಳಿಗೆ ಕರೆನ್ ರಾಜ್ಯವೆಂದು ನಾಮಕರಣ ಮಾಡಲಾಗಿತ್ತು. ಆಗಿನ ಬರ್ಮ ಸ್ವತಂತ್ರವಾದರೂ ಕೇವಲ ಆಳರಸರ ಬದಲಾವಣೆ ಮಾತ್ರವೆಂದೂ ಇದರಿಂದ ತಮ್ಮ ಸ್ಥಿತಿ ಇನ್ನೂ ಹದಗೆಡುವುದೆಂದೂ ಅವರು ಭಾವಿಸಿದರು. ಕೇಂದ್ರಾಡಳಿತವನ್ನು ಬಲಪಡಿಸುವ ಸಲುವಾಗಿ ಬರ್ಮೀ ಸರ್ಕಾರ ಕೆಲವು ಕ್ರಮ ಕೈಕೊಂಡಾಗ (1948) ಸಶಸ್ತ್ರ ಕರೆನ್ ಜನರು ತಮ್ಮವೆನ್ನಲಾದ ಕೆಲವು ಪ್ರದೇಶಗಳನ್ನಾಕ್ರಮಿಸಿಕೊಂಡು ಬಂಡಾಯವೆದ್ದರು. ಸ್ವಯಮಾಡಳಿತ ರಾಜ್ಯವೇ ಅವರ ಗುರಿ. 1952ರಲ್ಲಿ ಬರ್ಮ ರಾಜ್ಯಾಂಗದಲ್ಲಿ ಸೂಕ್ತ ಬದಲಾವಣೆ ಮಾಡಿ ಕರೆನ್ ರಾಜ್ಯ ನಿರ್ಮಿಸಲಾಯಿತು. ಪಾ–ಅನ್ ಇದರ ರಾಜಧಾನಿ. 1957–59ರ ವೇಳೆಗೆ ಪಾ–ಅನ್ ಸರ್ವತೋಮುಖವಾದ ಪ್ರಗತಿ ಪಡೆಯಿತು. ದೊಡ್ಡ ರಸ್ತೆಗಳು, ವಿಮಾನ ನಿಲ್ದಾಣ, ಸರ್ಕಾರಿ ಕಟ್ಟಡಗಳು, ಆಸ್ಪತ್ರೆ ಮುಂತಾದವೆಲ್ಲ ಅಲ್ಲಿವೆ.

ರಾಜ್ಯದ ವಿಸ್ತೀರ್ಣ 30383 ಚ.ಕಿಮೀ ಜನಸಂಖ್ಯೆ 1,431,377 (2005). ಈ ರಾಜ್ಯದ ಸುತ್ತಮುತ್ತ ದಟ್ಟವಾದ ಕಾಡುಗಳು ಹಬ್ಬಿವೆ. ಸರ್ಕಾರ ಇತ್ತೀಚೆಗೆ ಸಾಲ್ವೀನ್ ನದೀತೀರದ ಪ್ರದೇಶಗಳನ್ನೆಲ್ಲ ವ್ಯವಸಾಯಯೋಗ್ಯವನ್ನಾಗಿ ಮಾಡಿದುದರ ಪರಿಣಾಮವಾಗಿ ಇಲ್ಲಿ ಹೇರಳವಾಗಿ ಬತ್ತವನ್ನು ಬೆಳೆಯಲಾಗುತ್ತಿದೆ. ರಬ್ಬರ್, ಹತ್ತಿ, ಕಾಫಿ, ಕಬ್ಬು ಮುಂತಾದ ಬೆಳೆಗಳನ್ನು ಇತ್ತೀಚೆಗೆ ಕಾಣಬಹುದು. ತೇಗ ಒಂದು ಮುಖ್ಯ ಅರಣ್ಯವಸ್ತು. ಇದು ಕರೆನ್ ರಾಜ್ಯದ ನಿರ್ಯಾತಗಳಲ್ಲಿ ಪ್ರಧಾನವಾದದ್ದು. *

**ಕರೆನಿ ರಾಜ್ಯ:** ಮಯನ್ಮಾರಿನ ಕಂತರವಾಡಿ, ಕೈಬೋಗ್ಯಿ ಮತ್ತು ಬಲಾಕ ರಾಜ್ಯಗಳಿಗಿದ್ದ ಒಟ್ಟು ಹೆಸರು. ಮಯನ್ಮಾರ್ ಬ್ರಿಟಿಷ್ ಭಾರತದ ಭಾಗವಾಗಿದ್ದಾಗ ಇವು ಷಾನ್ ರಾಜ್ಯಗಳ ಒಕ್ಕೂಟಕ್ಕೆ ದಕ್ಷಿಣದಲ್ಲಿ, ಬರ್ಮದ ಪೂರ್ವಕ್ಕೆ, ಇದ್ದುವು. 1922ರಿಂದ ಇವು ಷಾನ್ ಒಕ್ಕೂಟದ ಕಮಿಷನರ ಆಡಳಿತಕ್ಕೆ ಒಳಪಟ್ಟಿದ್ದುವು. 1947ರಲ್ಲಿ ಜಾರಿಗೆ ಬಂದ ಬರ್ಮೀ ಸಂವಿಧಾನದಲ್ಲಿ ಈ ಮೂರು ರಾಜ್ಯಗಳನ್ನು ಸೇರಿಸಿ ಕರೆನಿ ರಾಜ್ಯ ರಚಿಸಬೇಕೆಂದು ಘೋಷಿಸಲಾಯಿತು. 1952ರಲ್ಲಿ ಮಾಂಗ್ ಪೈಯನ್ನೂ ಸೇರಿಸಿ ಈ ರಾಜ್ಯವನ್ನು ನಿರ್ಮಿಸಲಾಯಿತು. ಕಾಯಾ ರಾಜ್ಯವೆಂಬುದು ಇದರ ನೂತನ ನಾಮಧೇಯ. ರಾಜ್ಯದ ವಿಸ್ತೀರ್ಣ 11,670 ಚ.ಕಿಮೀ ಜನಸಂಖ್ಯೆ ಸುಮಾರು 2,59,000 (2000). ಇದರ ರಾಜಧಾನಿ ಲೊಯ್‌ಕೊ. ಇಲ್ಲಿಯ ಮೌಚಿ ಎಂಬಲ್ಲಿ ಟಂಗ್‌ಸ್ಟನ್ (ವುಲ್ಫ್ರಾಂ) ಮತ್ತು ಸತು ದೊರಕುತ್ತವೆ. ಬತ್ತ, ಕಾಳುಗಳು, ತರಕಾರಿ, ಮೆಕ್ಕೆ ಜೋಳ ಮುಖ್ಯ ಬೆಳೆಗಳು. ಅರಗು ಹೇರಳವಾಗಿದೆ. ತೇಗದ ಮರದ ಕಾಡುಗಳೂ ಇವೆ. ಬರ್ಮೀ ಸಂಸತ್ತಿನಲ್ಲಿ ಇದರ ಚುನಾಯಿತ ಪ್ರತಿನಿಧಿಗಳಿದ್ದಾರೆ. ಈ ರಾಜ್ಯದ ಒಬ್ಬ ಮಂತ್ರಿಯೂ ಇದ್ದಾನೆ. ಇದರದು ಸ್ವಯಂ ಆಡಳಿತ ವ್ಯವಸ್ಥೆ. (ಎಸ್.ಎನ್.ಎಲ್.)

**ಕರೆಹಣ:** ಬಂಡವಾಳ ಪತ್ರಗಳ ವಹಿವಾಟುದಾರರು, ದಳ್ಳಾಳಿಗಳು ಮುಂತಾದವರಿಗೆ ಖಜಾನೆ ಹುಂಡಿಯೇ ಮುಂತಾದವುಗಳ ಒತ್ತೆಯ ಮೇಲೆ ಬ್ಯಾಂಕುಗಳು ನೀಡುವ ಸಾಮಾನ್ಯವಾಗಿ 24 ಘಂಟೆಗಳಿಗೂ ಕಡಿಮೆಯ ವಾಯಿದೆಯ ಸಾಲ; ಕರೆದಾಗ ಬರುವ ಹಣ (ಕಾಲ್ ಮನಿ). ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಇದಕ್ಕೆ ಕರೆಸಾಲ ಎಂದು ಹೆಸರು. ಇದರ ವಿಧಿ ವಿಧಾನಗಳು ಒಂದೊಂದು ದೇಶದಲ್ಲಿ ಒಂದೊಂದು ರೀತಿ ಇವೆ. ಹಣದ ಪೇಟೆಯಲ್ಲಿ ಮಾರಾಟವಾದ ಪತ್ರಗಳು ಕೈಯಿಂದ ಕೈಗೆ ಬದಲಾವಣೆಯಾಗುವ ಸಂದರ್ಭದಲ್ಲಿ ವಹಿವಾಟುದಾರರ ಹಣದ ದರವನ್ನು ಪೂರೈಸಲು ಇದು ಅನುವಾಗಿದೆ. ಕೇಳಿದ ಕೂಡಲೇ ಮರಳಿ ಪಾವತಿ ಮಾಡಬೇಕೆಂಬ ಷರತ್ತಿನ ಮೇಲೆ ಈ ಹಣವನ್ನು ಕೊಡಲಾಗುವುದರಿಂದಲೂ ಇದಕ್ಕೆ ಅನುಬಂಧಿಯಾಗಿ ಇಡುವ ಒತ್ತೆಯ ಮೌಲ್ಯಕ್ಕೂ ಸಾಲವಾಗಿ ಕೊಡುವ ಹಣಕ್ಕೂ ಇರುವ ಅಂತರದ ದೃಷ್ಟಿಯಿಂದಲೂ ಈ ಸಾಲದ ಹಣವೂ ಬಹುತೇಕ ದ್ರವರೂಪಿಯೆಂದೇ (ಲಿಕ್ವಿಡ್) ಬ್ಯಾಂಕಿಗೆ ಭರವಸೆಯಿರುತ್ತದೆ. ಬ್ಯಾಂಕಿನ ಅತ್ಯಂತ ದ್ರವರೂಪಿ ಆಸ್ತಿಯೆಂದರೆ ನಗದು; ಕೇಂದ್ರೀಯ ಮತ್ತು ಇತರ ಬ್ಯಾಂಕುಗಳಲ್ಲಿರುವ ಹಣ. ಕೇಳಿದಾಗ ಹಿಂತಿರುಗಿಸಲೊಪ್ಪಿದ, ಅತ್ಯಂತ ಕಿರುವಾಯಿದೆಯ, ಈ ಹಣದ್ದು ಎರಡನೆಯ ಸ್ಥಾನ. ಈ ಪ್ರಕಾರವಾಗಿ–ದ್ರವತೆಯ ಕ್ರಮದಲ್ಲಿ–ತನ್ನ ಆಸ್ತಿಗಳನ್ನು ಜೋಡಿಸಿಕೊಂಡಿದ್ದು ತನ್ನ ಠೇವಣಿದಾರರಿಂದ ನಗದಿಗಾಗಿ ಬರುವ ಬೇಡಿಕೆಗಳನ್ನು ಪೂರೈಸುವ ರಕ್ಷಾಶಕ್ತಿಯೊಂದಿಗೆ ಯಥೋಚಿತ ಲಾಭವನ್ನೂ ಗಳಿಸುವುದು ಬ್ಯಾಂಕಿಗೆ ಸಾಧ್ಯವಾಗುತ್ತದೆ. ಕೇಳಿದಾಗ ಕೊಡಬೇಕೆಂಬುದು ಸಾಮಾನ್ಯವಾಗಿ ಇಂಥ ಸಾಲಗಳ ಷರತ್ತಾದರೂ ಈ ಷರತ್ತಿನ ಅನ್ವಯದ ವಿಚಾರದಲ್ಲಿ ಒಂದೊಂದು ದೇಶದ ರೂಢಿ ಒಂದೊಂದು ಬಗೆಯದು. ಹಿಂದಿನ ದಿನ ಕೊಟ್ಟು ಮರುದಿನ ಬೆಳಗಾಗ ಹಿಂದಿರುಗಿಸಬೇಕಾದ ಮುಂಗಡಗಳೆಂದೂ ದಿನದಿಂದ ದಿನಕ್ಕೆ ಮುಂದುವರಿಯುತ್ತ ಹೋಗುವ ಮುಂಗಡಗಳೆಂದೂ ಇವನ್ನು ವಿಭಾಗಿಸಬಹುದು. ಎರಡನೆಯ ಬಗೆಯ ಮುಂಗಡಗಳನ್ನು ಹಿಂದಿರುಗಿಸಬೇಕೆಂದು ಸಾಮಾನ್ಯವಾಗಿ ಬ್ಯಾಂಕುಗಳು ಕರೆನೀಡುವುದಿಲ್ಲ. ಅಮೇರಿಕದಲ್ಲಿ ಈ ಬಗೆಯ ಮುಂಗಡಗಳೇ ಹೆಚ್ಚು. ನ್ಯೂಯಾರ್ಕಿನ ಕರೆಸಾಲ ಮಾರುಕಟ್ಟೆ ವಿಶ್ವದಲ್ಲೇ ಅತಿ ದೊಡ್ಡದು.

ಕರೆಹಣದ ವಹಿವಾಟು ಹೆಚ್ಚಾಗಿ ನಡೆಯಬೇಕಾದರೆ ಬ್ಯಾಂಕುಗಳ ಬಳಿ ಹೆಚ್ಚುವರಿ ಹಣ ಇರಬೇಕಾದುದು ಅವಶ್ಯ. ಅಲ್ಲದೆ ಮುಂಗಡ ಪಡೆಯಬಯಸುವ ಗ್ರಾಹಕರ ಬಳಿಯಲ್ಲಿ ಒತ್ತೆಯಾಗಿ ನೀಡಬಹುದಾದ ಪ್ರತಿಭೂತಿಗಳೂ (ಸೆಕ್ಯೂರಿಟೀಸ್) ಹಣಪತ್ರಗಳೂ ಇರಬೇಕು; ಅವರಿಗೆ ಹಣದ ಆವಶ್ಯಕತೆಯೂ ಪಡೆದ ಮುಂಗಡವನ್ನು ಸಕಾಲದಲ್ಲಿ ಅಥವಾ ಕೇಳಿದಾಗ ಹಿಂದಿರುಗಿಸುವ ಶಕ್ತಿಯೂ ನಂಬಿಕೆಯೂ ಇರಬೇಕು. ಸುವ್ಯವಸ್ಥಿತವಾದ ಹಣದ ಪೇಟೆಯಿಲ್ಲದ ಭಾರತದಂಥ ದೇಶದಲ್ಲಿ ಕರೆಹಣದ ಪ್ರಾಮುಖ್ಯ ಇಂಗ್ಲೆಂಡ್ ಮುಂತಾದ ದೇಶಗಳಲ್ಲಿರುವಷ್ಟಿಲ್ಲ. ಕರೆಹಣವನ್ನು ಪ್ರತ್ಯೇಕವಾಗಿ ತೋರಿಸುವ ವಾಡಿಕೆಯೂ ಭಾರತದ ಬ್ಯಾಂಕುಗಳಲ್ಲಿ ಇತ್ತೀಚಿನವರೆಗೂ ಇರಲಿಲ್ಲ. ಒಂದು ಬ್ಯಾಂಕು ಇತರ ಬ್ಯಾಂಕುಗಳಲ್ಲಿ ಇಟ್ಟಿರುವ ಹಣವನ್ನೇ ಕರೆದಾಗ ಅಥವಾ ಅಲ್ಪಾವಧಿಯ ತಿಳಿವಳಿಕೆ (ನೋಟೀಸ್) ನೀಡಿದಾಗ ಹಿಂದಿರುಗಿಸಬೇಕಾದ ಹಣ' ಎಂಬ ಶೀರ್ಷಿಕೆಯ ಅಡಿಯಲ್ಲಿ ತೋರಿಸಲಾಗುತ್ತಿತ್ತು.

ಕರೆಹಣದ ಮೇಲಿನ ಬಡ್ಡಿಯ ದರ ಸಾಮಾನ್ಯವಾಗಿ ಹೆಚ್ಚಿನದಾಗಿರುತ್ತದೆ. ಮೊದಲನೆಯ ಬಾರಿಗೆ ಪಡೆಯುವ ಮುಂಗಡದ ಮೇಲಿನ ಬಡ್ಡಿಯ ದರಕ್ಕಿಂತ ಹಳೆಯ ಸಾಲವನ್ನು ನವೀಕರಣಗೊಳಿಸುವಾಗ (ರಿನ್ಯೂ) ವಿಧಿಸಲಾಗುವ ಬಡ್ಡಿಯ ದರ ಅಧಿಕವಾಗಿರಬಹುದು. (ಸಿ.ಎಂ.ಎಂ.)

**ಕರೇಣುಮತಿ:** ಶ್ರೀಕೃಷ್ಣನಿಂದ ಹತನಾದ ಚೇದಿರಾಜ ಶಿಶುಪಾಲನ ಮಗಳು. ಮಾದ್ರೀಪುತ್ರ ನಕುಲನ ಪತ್ನಿ. ಈಕೆಗೆ ರೇಣುಮತಿ ಎಂಬ ಇನ್ನೊಂದು ಹೆಸರೂ ಇದೆ. ನಿರಮಿತ್ರ ಈಕೆಯ ಮಗ. *

**ಕರೇ ಹಂಬು:** ಅಪೋಸೈನೇಸೀ ಕುಟುಂಬದ ಸಸ್ಯ; ಹಾಲು ಗೆಣಸು, ಗೌರಿ ಬಳ್ಳಿ, ಶ್ಯಾಮಲತೆ ಪರ್ಯಾಯ ನಾಮಗಳು (ಇಚಿನೊಕಾರ್ಪಸ್ ಫ್ರುಟೆಸೆನ್ಸ್). ಇದು

ಸುರುಳಿಬಳ್ಳಿಯಂತೆ ಬೆಳೆಯುವ ಪೊದೆಸಸ್ಯ. ಆಗ್ನೇಯ ಏಷ್ಯ ಮತ್ತು ಆಸ್ಟ್ರೇಲಿಯಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಸಮುದ್ರ ಮಟ್ಟದಿಂದ 4,000 ಎತ್ತರ ಪ್ರದೇಶಗಳಲ್ಲಿ ವ್ಯಾಪ್ತಿ ಅಧಿಕ. ಬಳ್ಳಿ ಬಲು ಉದ್ದವಾಗಿ ಬೆಳೆಯುತ್ತದೆ; ಬಣ್ಣ ಸದಾ ಹಚ್ಚಹಸಿರು. ಇದರಲ್ಲಿ ಹಾಲ್ಗೊರೆ (ಲೇಟೆಕ್ಸ್) ದೊರೆಯುವುದು ಅಭಿಮುಖವಾಗಿ ಸಂಯೋಗಗೊಂಡ ಎಲೆಗಳಿವೆ. ಆಕಾರ ದೀರ್ಘ ವೃತ್ತದಂತೆ; ನಡು ಅಗಲ, ತಲೆ ಈಟಿಯಂತೆ. ಎಳೆ ಎಲೆಗಳು ಚರ್ಮಿಲವೂ ರೋಮಿಲವೂ ಆಗಿವೆ. ಹೂಗಳಿಗೆ ಬಲು ಸುವಾಸನೆ ಇದೆ. ಬಣ್ಣ ಬಿಳಿಹಸಿರು ಅಥವಾ ಊದಾ. ಎಲೆಯ ಕಂಕುಳಲ್ಲಿ ಅಥವಾ ರೆಂಬೆಗಳ ತುದಿಯಲ್ಲಿ ಸಂಕೀರ್ಣ ಪುಷ್ಪಗುಚ್ಛಗಳಾಗಿ ಬೆಳೆಯುತ್ತವೆ. ಹಣ್ಣು ಒಡೆಯುವ ಜಾತಿಗೆ ಸೇರಿದೆ. ಇದರ ಹೆಸರು ಫಾಲಿಕಲ್. ಇದು ಉರುಳೆಯಾಕಾರದ್ದಾಗಿದ್ದು ಬಹು ನಾಜೂಕಾಗಿದೆ. ಸಾಮಾನ್ಯವಾಗಿ ಎರಡು ಹಣ್ಣುಗಳು ಒಟ್ಟಿಗೆ ಒಂದಕ್ಕೊಂದು ಲಂಬವಾಗಿ ಬೆಳೆಯುತ್ತವೆ. ಒಳಗೆ ದುರ್ಬಲವಾದ ಕಪ್ಪು ಬೀಜಗಳಿವೆ. ಉದ್ದ 0.5" – 0.7". ಬೀಜಗಳ ಕೊನೆಯಲ್ಲಿ

ರೇಷ್ಮೆಯಂಥ ಸೂಕ್ಷ್ಮತಂತುಗಳ ಗುಚ್ಛವಿದೆ. ಶಕ್ತಿವರ್ಧಕ ಔಷಧಿಗಳ ತಯಾರಿಕೆಯಲ್ಲಿ ಸೊಗದೆ ಬೇರುಗಳ ಬದಲಾಗಿ ಕರೇಹಂಬಿನ ಬೇರುಗಳನ್ನು ಬಳಸುವುದುಂಟು. ಕೆಲವೊಮ್ಮೆ ಎರಡು ಬೇರುಗಳನ್ನೂ ಒಟ್ಟಿಗೆ ಉಪಯೋಗಿಸು ವುದೂ ಉಂಟು. ಇವುಗಳ ಚಿಕಿತ್ಸಕ ಗುಣಗಳು ಬಲು ಪ್ರಚಲಿತವಾಗಿವೆ. ಬೇರಿನ ರುಚಿ ಸಿಹಿ. ಗಾಯಗಳಿಂದಾದ ರಕ್ತ ಸ್ರಾವವನ್ನು ತಡೆಯುವ ಶಕ್ತಿ ಬೇರಿಗಿದೆ. ಸೊಗದೆ ಬೇರಿನ ವಾಸನೆ ಮಾತ್ರ ಇದಕ್ಕೆ ಇಲ್ಲ. ಬೇರನ್ನು ತಾಜಾ ಆಗಿಯೂ ಒಣಗಿಸಿಯೂ ಮಾರುವುದುಂಟು. ತಾಜಾ ಬೇರುಗಳು ಬಲುಮಟ್ಟಿಗೆ ಉಬ್ಬಿಸಿಕೊಂಡಿರುತ್ತವೆ. ಇವನ್ನು ಸ್ವಲ್ಪಗೀರಿದರೆ ಅಥವಾ ಗಾಯಗೊಳಿಸಿದರೆ ಕೆನೆಬಣ್ಣದ ಅಥವಾ ನಸು ಹಳದಿ ಬಣ್ಣದ ಹಾಲ್ನೊರೆ ಧಾರಾಳವಾಗಿ ಹೊರಸೂಸುತ್ತದೆ. ತಾಜಾ ಬೇರುಗಳ ಸಿಪ್ಪೆಬಲು ಮಿದು. ಆದ್ದರಿಂದ ಬೇರಿನಿಂದ ಸಿಪ್ಪೆಯನ್ನು ಸುಲಭವಾಗಿ ಸುಲಿದು ಪ್ರತ್ಯೇಕಿಸಬಹುದು. ಒಣಗಿದ ಬೇರಿನಲ್ಲಿ ಸಿಪ್ಪೆ ಗಟ್ಟಿಯಾಗಿ ಅಂಟಿಕೊಂಡಿರುತ್ತದೆ. ಬೇರಿಗೆ ಶಾಮಕ ಗುಣವೂ ಇದೆ; ದೇಹದಲ್ಲಿನ ಪೋಷಣ ವ್ಯಾಪಾರಗಳನ್ನು ಬದಲಾಯಿಸಿ ಅವನ್ನು ಆರೋಗ್ಯಸ್ಥಿತಿಗೆ ತರುವಂಥ ಶಕ್ತಿವರ್ಧಕ ಮಹತ್ತ್ವವಿದೆ. ಇದರ ಇತರ ಉಪಯೋಗಗಳು ಮೂತ್ರವ್ಯಾಧಿಗಳಲ್ಲಿ, ಜ್ವರಗಳಲ್ಲಿ, ಅಜೀರ್ಣ ವ್ಯಾಧಿಗಳಲ್ಲಿ ಮತ್ತು ಚರ್ಮವ್ಯಾಧಿಗಳಲ್ಲಿ. ಸಿಹಿಮೂತ್ರ ರೋಗವಿದ್ದವರಿಗೆ, ಮೂತ್ರಪಿಂಡಗಳಲ್ಲಿ ಕಲ್ಲುಗಳುಂಟಾದವರಿಗೆ ಇದರ ಹುಡಿಯನ್ನು ಹಾಲಿನಲ್ಲಿ ಮಿಶ್ರಿಸಿ ಕುಡಿಯಲು ಕೊಡುತ್ತಾರೆ. ಅಲ್ಲದೆ ರಕ್ತಶುದ್ಧಿಕಾರಕವಾಗಿಯೂ ಇದನ್ನು ಉಪಯೋಗಿಸುತ್ತಾರೆ. ಸಣ್ಣಮಟ್ಟ ರೆಂಬೆಗಳನ್ನು ಮೀನಿನ ಬಲೆಗಳ ತಯಾರಿಕೆಯಲ್ಲಿ ನೊಣಗಂಟು ಹಾಕುವುದಕ್ಕೂ ಬುಟ್ಟಿಗಳನ್ನು ಹೆಣೆಯುವುದಕ್ಕೂ ಉಪಯೋಗಿಸುತ್ತಾರೆ. ಕರೇ ಹಂಬಿನಂತೆಯೇ ಕಾಣುವ ಇನ್ನೆರಡು ಪ್ರಭೇದಗಳಾದ ಇಚಿನೊಕಾರ್ಪಸ್ ವೊಲ್ಯೂಬಿಲಿಸ್, ಇಚಿನೊಕಾರ್ಪಸ್ ಒವೆಟಿಫೊಲಿಯಸ್ ಇವೆರಡೂ ದಾರುಮಯವಾದ ಬಳ್ಳಿಗಳಾಗಿದ್ದು ಹಂಬಿನ ಸ್ವಭಾವ ಹಾಗೂ ಸಾಮ್ಯವುಳ್ಳವಾಗಿವೆ. ಛೋಟಾ ನಾಗಪುರ ಹಾಗೂ ಅಸ್ಸಾಮಿನ ಕೆಲವು ಭಾಗಗಳಲ್ಲಿ ಇವು ಬೆಳೆಯುತ್ತವೆ. ಫಿಲಿಪೀನ್ ದ್ವೀಪಗಳವರು ಹಗ್ಗ ತಯಾರಿಕೆಯಲ್ಲಿ, ಬೇಲಿ ಕಟ್ಟುವುದರಲ್ಲಿ ಹಾಗೂ ಮೀನು ಬಲೆಗಳ ತಯಾರಿಕೆಯಲ್ಲಿ ಇವನ್ನು ಉಪಯೋಗಿಸುತ್ತಾರೆ. (ಎಂ.ಜಿ.)

**ಕರೋನ ಆಸ್ಟ್ರೇಲಿಸ್:** ಖಗೋಳದಲ್ಲಿಯ 88 ನಕ್ಷತ್ರ ಪುಂಜಗಳ ಪೈಕಿ ಒಂದು (ದಕ್ಷಿಣ ಕಿರೀಟ). ಇದರ ವ್ಯಾಪ್ತಿ ವಿಷುವದಂಶ 17ಗಂ. 55ಮಿ. – 19ಗಂ. 15ಮಿ. ಮತ್ತು ಘಂಟಾವೃತ್ತಾಂಶ 37° –46° ದ. ಧನೂರಾಶಿಯ ಪಕ್ಕದಲ್ಲಿದೆ. ಇದರ ನಕ್ಷತ್ರಗಳ ಅಳವಡಿಕೆ ವೃತ್ತ ಕಂಸ ಸಾಕಾರದಲ್ಲಿದೆ. ಈ ಪುಂಜವನ್ನು ಬರಿಗಣ್ಣಿನಿಂದ ಗುರುತಿಸುವುದು ಕಷ್ಟ. *

**ಕರೋನ ವಿಸರ್ಜನೆ:** ವಾಯುಮಂಡಲದ ಸಂಮರ್ದದಲ್ಲಿ ಅಥವಾ ಸರಿಸುಮಾರಾಗಿ ಅಷ್ಟೇ ಸಂಮರ್ದದಲ್ಲಿ ಅನಿಲಗಳಲ್ಲಿ ಉಂಟಾಗುವ ವಿದ್ಯುದ್ವಹನತೆಯ ಒಂದು ಪ್ರರೂಪ (ಕರೋನ ಡಿಸ್‌ಚಾರ್ಜ್). ಹೆಚ್ಚಿನ ವಿಭವಾಂತರದಲ್ಲಿ ಕೆಲಸ ಮಾಡುವ ವಿದ್ಯುತ್ ಸ್ಥಾಯಿ ಯಂತ್ರಗಳು (ಎಲೆಕ್ಟ್ರೊಸ್ಟ್ಯಾಟಿಕ್ ಆಪರೇಟರ್ಸ್) ತಮ್ಮನ್ನು ಸುತ್ತುವರಿದಿರುವ ವಸ್ತುವಿನ ರೋಧವನ್ನು (ಇನ್ಸುಲೇಷನ್) ಅವಲಂಬಿಸುತ್ತವೆ. ಸಾಮಾನ್ಯವಾಗಿ ಯಂತ್ರೋಪಕರಣಗಳನ್ನು ಸುತ್ತುವರಿದಿರುವ ನಿರೋಧಕ (ಇನ್ಸುಲೇಟರ್) ಗಾಳಿ. 0° ಸೆಂ. ಉಷ್ಣತೆ ಮತ್ತು 760 ಮಿ.ಮಿ. ಒತ್ತಡದಲ್ಲಿರುವ ಒಣಗಾಳಿ. ವಿದ್ಯುತ್‌ಕ್ಷೇತ್ರ ಬಲವಿದ್ದಾಗ (ಎಲೆಕ್ಟ್ರಿಕ್‌ಫೀಲ್ಡ್ ಇನ್‌ಟೆನ್ಸಿಟಿ) ತನ್ನ ನಿರೋಧಕತ್ವವನ್ನು ಕಳೆದುಕೊಂಡು ವಿದ್ಯುದ್ವಿಸರ್ಜನೆಯಾಗುವುದಕ್ಕೆ ಕಾರಣವಾಗುತ್ತದೆ. ಗಾಳಿಯಿಂದ ಸುತ್ತುವರಿಯಲ್ಪಟ್ಟ ವಿದ್ಯುದ್ವಾಹಕವಸ್ತು ವಿದ್ಯುದಂಶವನ್ನು (ಎಲೆಕ್ಟ್ರಿಕಲ್ ಚಾರ್ಜ್) ತನ್ನಲ್ಲಿ ಅಡಗಿಸಿಟ್ಟು ಕೊಳ್ಳಬೇಕಾದರೆ ಅದರ ಮೇಲ್ಮೈ ಮೊನಚಾಗಿರಬಾರದು, ತುದಿಗಳು ದುಂಡಾಗಿರಬೇಕು. ಮೊನಚಾಗಿರುವ ಭಾಗಗಳಲ್ಲಿ ವಿದ್ಯುದಂಶದ ಸಾಂದ್ರತೆ ಹೆಚ್ಚಾಗಿದ್ದು ವಿದ್ಯುತ್ ಕ್ಷೇತ್ರಬಲ ಅಧಿಕವಾಗಿರುವುದು. ಸುತ್ತುವರಿಯಲ್ಪಟ್ಟ ಗಾಳಿಯ ಅಣುಗಳಲ್ಲಿ ಧನವಿದ್ಯುದಂಶವುಳ್ಳ ನ್ಯೂಕ್ಲಿಯಸ್ ಇರುತ್ತದೆ. ಅವನ್ನು ಋಣವಿದ್ಯುದಂಶವುಳ್ಳ ಎಲೆಕ್ಟ್ರಾನುಗಳು ಸುತ್ತುವರಿದಿರುವುವು. ವಸ್ತುವಿನ ಮೊನಚಾದ ಭಾಗಗಳಲ್ಲಿ ಧನವಿದ್ಯುತ್ ಕಣಗಳ ಸಾಂದ್ರತೆ ಹೆಚ್ಚಾಗಿದ್ದಾಗ ಇವು ಗಾಳಿಯ ತಟಸ್ಥ ಅಣುಗಳಲ್ಲಿರುವ ಋಣವಿದ್ಯುತ್ ಕಣಗಳನ್ನು ತಮ್ಮೆಡೆಗೆ ಸೆಳೆದುಕೊಳ್ಳುತ್ತವೆ. ಗಾಳಿಯ ಅಣುಗಳು ಅಯಾನೀಕರಿಸಿ ಧನವಿದ್ಯುದಂಶವುಳ್ಳ ಕಣಗಳಿಂದ ತುಂಬಿರುತ್ತದೆ. ಇವು ವಿಕರ್ಷಣೆಹೊಂದಿ ದೂರ ಹೋಗುತ್ತವೆ. ಈ ಸ್ಥಳವನ್ನು ಗಾಳಿಯ ತಟಸ್ಥ ಅಣುಗಳು ಆಕ್ರಮಿಸಿಕೊಂಡು ಮೇಲೆ ಹೇಳಿದ ರೀತಿಯಲ್ಲಿ ಅಯಾನೀಕರಿಸುತ್ತವೆ. ಇದೇ ರೀತಿ ವಸ್ತುವಿನ ಮೊನಚಾದ ಭಾಗಗಳಲ್ಲಿ ಋಣವಿದ್ಯುತ್ ಕಣಸಾಂದ್ರತೆ ಅಧಿಕವಾಗಿದ್ದಾಗ ಗಾಳಿಯ ತಟಸ್ಥ ಅಣುಗಳು ಋಣ ವಿದ್ಯುತ್‌ಕಣಗಳನ್ನು ವಿಕರ್ಷಿಸಿ ಅಯಾನೀಕರಣವನ್ನು ಉಂಟುಮಾಡುತ್ತವೆ. ಈ ರೀತಿ ಉಂಟಾಗುವ ವಿದ್ಯುದ್ವಿಸರ್ಜನೆಯೇ ಕರೋನ ವಿಸರ್ಜನೆ. (ಬಿ.ಆರ್.ಜಿ.)

**ಕರೋಸ, ಹಾನ್ಸ್:** 1878–1955. ಬವೇರಿಯದ ಟೋಲ್ಜ್ ಎಂಬಲ್ಲಿ ಜನಿಸಿದ ಈತನ ಕೃತಿಗಳು ಆತ್ಮಕಥಾ ಪ್ರಕಾರಗಳಲ್ಲಿ ಅತ್ಯುತ್ತಮವೆನಿಸಿವೆ. 1913ರಲ್ಲಿ ಪ್ರಕಟವಾದ ಡಾ॥ ಬಂಗರ್ಸ್‌ನ ಅದೃಷ್ಟ ದಾರುಣಕಥೆ. ರೋಗಿಯೊಬ್ಬಳನ್ನು ವೈದ್ಯ ಪ್ರೇಮಿಸುತ್ತಾನೆ. ಆತನ ನಿರ್ಲಕ್ಷ್ಯದಿಂದ ಆಕೆ ಸಾಯುತ್ತಾಳೆ. ಕಡೆಗೆ ವೈದ್ಯ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದರಲ್ಲಿ ರೋಗಿಯನ್ನು ಕುರಿತು ಇರಬೇಕಾದ ಮಾನವೀಯತೆ ಹಾಗೂ ವೃತ್ತಿಗೌರವದ ನಡತೆ ಇವೆರಡೂ ಆತನನ್ನು ಗೊಂದಲದಲ್ಲಿ ಬೀಳಿಸಿವೆ. ತರುಣ ವೈದ್ಯ ಹಾಗೂ ರೋಗಿಯ ಈ ರೀತಿಯ ಸಂಬಂಧ ಸಾಧಾರಣವಾಗಿ ಜರುಗುವ ಘಟನೆಯೇ. ತನ್ನ ಜೀವನದ ನಾನಾ ಹಂತಗಳನ್ನು ಬಾಲ್ಯ (1922) ತಾರುಣ್ಯದ ಪರಿವರ್ತನೆ (1928), ಅಮೋಘ ಭ್ರಮೆಗಳ ವರ್ಷ ಎಂಬ ಕೃತಿಗಳಲ್ಲಿ ಕರೋಸ ವಿವರಿಸಿದ್ದಾನೆ. ಮೊದಲನೆಯ ಮಹಾಯುದ್ಧದಲ್ಲಿ ಸೈನ್ಯದ ವೈದ್ಯನಾಗಿ ಗಳಿಸಿದ ತನ್ನ ಅನುಭವಗಳನ್ನು ರೂಮೇನಿಯದ ದಿನಚರಿ (1924) ಎಂಬ ಗ್ರಂಥದಲ್ಲಿ ವಿವರಿಸಿದ್ದಾನೆ.

ತನ್ನ ಸಮಕಾಲೀನರಾದ ಹಾಫಮನ್‌ತಾಲ್, ರಿಲ್ಕೆ ಇವರ ಸಖ್ಯವನ್ನು ಮುಖಂಡರು ಮತ್ತು ಅನುಯಾಯಿಗಳು (1933) ಎಂಬ ಪುಸ್ತಕದಲ್ಲೂ ಜೀವನ ಸ್ಮೃತಿಗಳು ಎಂಬ ಕೃತಿಯಲ್ಲೂ ಕವಿ ವಿವರವಾಗಿ ಚಿತ್ರಿಸಿದ್ದಾನೆ. ಡಾ॥ ಗಿಯಾನ್ (1931) ಮತ್ತು ಪಕ್ವಜೀವನದ ರಹಸ್ಯಗಳು (1937) ಈತನ ಇತರ ಕೃತಿಗಳು. ವೈದ್ಯವೃತ್ತಿಗೂ ಸಾಹಿತ್ಯಪ್ರಬೋಧನೆಗೂ ಇರುವ ತಿಕ್ಕಾಟವನ್ನು ತನ್ನ ಕಡೆಯ ಅಪೂರ್ಣ ಕೃತಿಯಾದ ತರುಣವೈದ್ಯನ ದಿನ (1955) ಎಂಬುದರಲ್ಲಿ ವಿವರಿಸಲಾಗಿದೆ.

ತನ್ನ ಜೀವನದ ಘಟನೆಗಳನ್ನು, ಕಥಾನಕಗಳನ್ನು ಹೆಣೆಯುವಲ್ಲಿ ಅವು ಎಷ್ಟೇ ಅಮುಖ್ಯವಾಗಿರಲಿ ಅವುಗಳಲ್ಲಿ ಲಯ, ವಿನ್ಯಾಸವನ್ನು ಕಂಡು ಏಕತೆ ತೋರುವಂತೆ ಮಾಡಿದ್ದಾನೆ ಕರೋಸ. ಗಯಟೆಯ ಆತ್ಮಕಥೆಯನ್ನು ನೆನಪಿಗೆ ತರುವ ಕರೋಸನ ಸಮ್ಮೋಹಕ ಪ್ರಾಮಾಣಿಕ ಶೈಲಿಯೇ ಆತನ ಯಶಸ್ಸಿನ ಗುಟ್ಟು. (ಟಿ.ವಿ.ಎಸ್.)

**ಕರ್ಕಾಟಕ ರಾಶಿ:** ರಾಶಿಚಕ್ರದ (**ನೋಡಿ– ರಾಶಿಚಕ್ರ**) ಮೇಲಿರುವ ಹನ್ನೆರಡು ನಕ್ಷತ್ರ ಪುಂಜಗಳಲ್ಲಿ ನಾಲ್ಕನೆಯದು (ಕ್ಯಾನ್ಸರ್). ಮೊದಲನೆಯದು ಮೇಷ ರಾಶಿ, ಪಶ್ಚಿಮ–ಪೂರ್ವ ದಿಶೆಯಲ್ಲಿ ಅಳವಡಿಕೆ. ನಕ್ಷತ್ರಪಟಗಳಲ್ಲಿ ಕರ್ಕಾಟಕ ರಾಶಿಯನ್ನು ನಾಲ್ಕು ನಕ್ಷತ್ರಗಳು ರಚಿಸುವ y ಆಕಾರದಿಂದ ತೋರಿಸುವುದು ವಾಡಿಕೆ. ಆದರೆ ಇವಿಷ್ಟು ನಕ್ಷತ್ರಗಳೂ ಬಲು ಕ್ಷೀಣ ಪ್ರಕಾಶದವಾಗಿರುವುದರಿಂದ ಈ ರಾಶಿಯನ್ನು ಬರಿಗಣ್ಣಿನಿಂದ ನೋಡಿ ಗುರುತಿಸಲು ಸಾಧ್ಯವಾಗದು. ಇದರ ಪಶ್ಚಿಮ ಒತ್ತಿಗೆ ಮಿಥುನರಾಶಿಯೂ ಪೂರ್ವ ಒತ್ತಿಗೆ ಸಿಂಹರಾಶಿಯೂ (**ನೋಡಿ – ಮಿಥುನರಾಶಿ; ಸಿಂಹರಾಶಿ**) ಇವೆ. ಇವನ್ನು ಸ್ಪಷ್ಟವಾಗಿ ಗುರುತಿಸಬಹುದು. ಇವುಗಳ ನಡುವಿನ ವಲಯವೇ ಸರಿಸುಮಾರಾಗಿ ಕರ್ಕಾಟಕ ರಾಶಿ. ಇದರ ವಿಷುವದಂಶ 7 ಗಂ. 55 ಮಿ.–9 ಗಂ. 20 ಮಿ; ಘಂಟಾವೃತ್ತಾಂಶ 7°–33°ಉ. ಚಂದ್ರರಹಿತ ರಾತ್ರಿಯ ಸ್ವಚ್ಛಾಕಾಶದಲ್ಲಿ, ಕರ್ಕಾಟಕರಾಶಿಯ ಹಿನ್ನೆಲೆಯಲ್ಲಿ ಒಂದು ನಿಬಿಡ ನಕ್ಷತ್ರಗುಚ್ಛವನ್ನು ಬರಿಗಣ್ಣಿನಿಂದ ನೋಡಬಹುದು– ಹೀಗೆ ಮಸಕು ಬೆಳಕಿನ ಮಚ್ಚೆಯಂಥ ಆಕಾರ. ಇದರ ಹೆಸರು ಪೆಸೀಪೀ. ಟೆಲಿಸ್ಕೋಪಿನಿಂದ ನೋಡುವವರಿಗೆ ಇದೊಂದು ಸುಂದರ ದೃಶ್ಯ. ಈ ಗುಚ್ಛಕ್ಕೆ ಬೀಹೈವ್ (ಜೇನುಗೂಡು) ಎಂದು ಹೆಸರಿದೆ.




**ಚಿತ್ರ: 1 E ವೀಕ್ಷಕನ ಸ್ಥಾನ; QγRΩ ವಿಷುವದ್ವೃತ್ತ; $S_1γS_2Ω$ ಕ್ರಾಂತಿವೃತ್ತ, ಇದು ಸೂರ್ಯನ ವಾರ್ಷಿಕ ಕಕ್ಷೆ; γ ಮೇಷ ವಿಷುವದ್ಬಿಂದು, ಇಲ್ಲಿ ಸೂರ್ಯ ವಿಷುವದ್ವೃತ್ತವನ್ನು ದಕ್ಷಿಣದಿಂದ ಉತ್ತರಕ್ಕೆ ದಾಟುತ್ತದೆ; $S_2$ ಕರ್ಕಾಟಕ ಸಂಕ್ರಾಂತಿ ಬಿಂದು, ಇಲ್ಲಿ ಸೂರ್ಯನ ಚಲನೆಯ ದಿಶೆ ಉತ್ತರದಿಂದ ದಕ್ಷಿಣಕ್ಕೆ ಬದಲಾಗುತ್ತದೆ; Ω ತುಲಾ ವಿಷುವದ್ಬಿಂದು ಇಲ್ಲಿ ಸೂರ್ಯ ವಿಷುವದ್ವೃತ್ತವನ್ನು ಉತ್ತರದಿಂದ ದಕ್ಷಿಣಕ್ಕೆ ದಾಟುತ್ತದೆ; $S_1$ ಮಕರ ಸಂಕ್ರಾಂತಿ ಬಿಂದು, ಇಲ್ಲಿ ಸೂರ್ಯನ ಚಲನೆಯ ದಿಶೆ ದಕ್ಷಿಣದಿಂದ ಉತ್ತರಕ್ಕೆ ಬದಲಾಗುತ್ತದೆ.**

ಸ್ಥಿರನಕ್ಷತ್ರ ಚಿತ್ರಗಳ ಪಟದಲ್ಲಿ ಸೂರ್ಯನ ಚಲನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ತಿಳಿಯುವ ಕೆಲವು ಮುಖ್ಯಾಂಶಗಳು ಇಷ್ಟು–ಚಲನೆಯ ದಿಶೆ ಪಶ್ಚಿಮದಿಂದ ಪೂರ್ವಕ್ಕೆ; 1 ಪರಿಭ್ರಮಣೆಯ ಅವಧಿ ಒಂದು ವರ್ಷ; ಮಾರ್ಚ್ 21 ರಿಂದ ಸೆಪ್ಟೆಂಬರ್ 21ರ ತನಕ ಆಕಾಶದ ಉತ್ತರಗೋಳಾರ್ಧ ದಲ್ಲಿಯೂ ಸೆಪ್ಟೆಂಬರ್ 21ರಿಂದ ಮಾರ್ಚ್ 31 ವರೆಗೆ ದಕ್ಷಿಣಗೋಳಾರ್ಧದಲ್ಲಿಯೂ ಸೂರ್ಯನ ಸಂಚಾರವಿದೆ. ಈ ಚಲನೆಯಲ್ಲಿ ಸೂರ್ಯನಿಗೆ ಅತಿ ಉತ್ತರಸ್ಥಾನ ಕರ್ಕಾಟಕ ರಾಶಿ ಆಗಿದ್ದಾಗ ಸಹಜವಾಗಿಯೇ ಇದಕ್ಕೆ ಅಧಿಕ ಪ್ರಾಧಾನ್ಯ ದೊರೆತಿತ್ತು. ಆದರೆ ಅಯನಾಂಶದ (**ನೋಡಿ– ಅಯನಾಂಶ**) ಪರಿಣಾಮವಾಗಿ ಕರ್ಕಾಟಕ ರಾಶಿಗೆ ಈಗ ಈ ಹಿರಿಮೆ ತಪ್ಪಿ ಹೋಗಿದೆ. ಬದಲು, ಮಿಥುನ ರಾಶಿ ಇಂದು ಸರಿಸುಮಾರಾಗಿ ಸೂರ್ಯನ ಅತಿ ಉತ್ತರಸ್ಥಾನ.

**ಕರ್ಕಾಟಕ ಸಂಕ್ರಾಂತಿ ವೃತ್ತ :** ಸಮಭಾಜಕ ವೃತ್ತಕ್ಕೆ (ಭೂಮಧ್ಯರೇಖೆ–ಟೆರ್ರೆಸ್ಟ್ರಿಯಲ್ ಇಕ್ವೇಟರ್) 23° 27 ಉತ್ತರದಲ್ಲಿ ಭೂಗೋಳದ ಮೇಲೆ ಎಳೆದ ಸಮಾಂತರ ಅಲ್ಪವೃತ್ತ (ಟ್ರಾಪಿಕ್ ಆಫ್ ಕ್ಯಾನ್ಸರ್). ಇದು ಸೂರ್ಯನ ದೈನಂದಿನ ಪಥಗಳ (ಸೂರ್ಯ ಮೂಡುವಲ್ಲಿಂದ ಕಂತುವ ತನಕ ಒಂದು ಹಗಲು ಆಕಾಶದಲ್ಲಿ ಸಾಗಿದ ದಾರಿಯ ಹೆಸರು ದೈನಂದಿನ ಪಥ) ಅತಿ ಉತ್ತರ ಗಡಿ ; ಎಂದರೆ ಕರ್ಕಾಟಕ ಸಂಕ್ರಾಂತಿ ವೃತ್ತಕ್ಕಿಂತ ಉತ್ತರಕ್ಕೆ ಸೂರ್ಯನ ಸಂಚಾರವಿಲ್ಲ. ದೈನಂದಿನ ಪಥಗಳನ್ನು ನೆಲದ ಮೇಲಿನ ಯಾವುದೇ ಸ್ಥಿರ ನೆಲೆಗಳ ಆಧಾರದಿಂದ ಗುರುತಿಸುತ್ತ ಹೋಗಬೇಕು. ಆಗ ಒಂದು ವಿಶೇಷವನ್ನು ಗಮನಿಸಬಹುದು; ಡಿಸೆಂಬರ್ 21 ರಿಂದ ಜೂನ್ 22ರ ತನಕ ಈ ಪಥಗಳು ಕ್ರಮೇಣ ಉತ್ತರದೆಡೆಗೆ ಜಾರುತ್ತ ಸಾಗುವುವು; ಜೂನ್ 22ರಂದು ಉತ್ತರ ಎಲ್ಲೆಯನ್ನು ತಲಪಿ ಮರುದಿನದಿಂದ ದಕ್ಷಿಣದೆಡೆಗೆ ಜಾರತೊಡಗುವುವು. ಕರ್ಕಾಟಕ ಸಂಕ್ರಾಂತಿ ವೃತ್ತವೆಂಬ ಹೆಸರು ಉತ್ತರದ ಎಲ್ಲೆಗೆ ರೂಢಿಗೆ ಬಂದ ದಿವಸಗಳಂದು (ಸಹಸ್ರಾರು ವರ್ಷಗಳ ಹಿಂದೆ) ಕರ್ಕಾಟಕ ರಾಶಿ ಸೂರ್ಯನ ಅತಿ ಉತ್ತರಸ್ಥಾನವಾಗಿತ್ತು. ಸೂರ್ಯ ಈ ರಾಶಿಗೆ ಬಂದ ದಿವಸ ಕರ್ಕಾಟಕ ಸಂಕ್ರಮಣ; ಅಂದು ಸೂರ್ಯನದೈನಂದಿನ ಪಥ ವಿಷುವದ್ವೃತ್ತದಿಂದ (ಸೆಲೆಸ್ಟಿಯಲ್ ಇಕ್ವೇಟರ್) 23° 27° ಉತ್ತರದಲ್ಲಿ ಅದಕ್ಕೆ ಸಮಾಂತರವಾದ ಅಲ್ಪ ವೃತ್ತ.




**ಚಿತ್ರ 2 : ಭೂಮಿಯ ಚಿತ್ರ**

**N – ಉತ್ತರ ಮೇರು; $S_2$'$S_2$" – ಕರ್ಕಾಟಕ ಸಂಕ್ರಾಂತಿ ವೃತ್ತ (ಚಿತ್ರ1ರ $S_2$ ಸಂವಾದಿ); Q'R'–ಭೂಮಧ್ಯ ವೃತ್ತ (ಚಿತ್ರ 1ರ QRಗೆ ಸಂವಾದಿ); S1'S1" – ಮಕರ ಸಂಕ್ರಾಂತಿ ವೃತ್ತ (ಚಿತ್ರ 1ರ S1ಕ್ಕೆ ಸಂವಾದಿ); S – ದಕ್ಷಿಣ ಮೇರು**

ಭೂಗೋಳದ ಮೇಲೆ ಇದರ ಸಂವಾದಿ ವೃತ್ತವೇ ಕರ್ಕಾಟಕ ಸಂಕ್ರಾಂತಿ ವೃತ್ತ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ವಾರ್ಷಿಕ ಚಲನೆಯಲ್ಲಿ ಸೂರ್ಯನ ಸಂಚಾರ, ಕರ್ಕಾಟಕ ಸಂಕ್ರಮಣ ದಿನದ ದೈನಂದಿನ ಪಥಕ್ಕಿಂತಲೂ ಉತ್ತರಕ್ಕೆ ಸಾಗುವುದು. ಆದ್ದರಿಂದ ಕರ್ಕಾಟಕ ಸಂಕ್ರಾಂತಿ ವೃತ್ತದ ವ್ಯಾಖ್ಯೆಯನ್ನು ಈ ಪರಿಚ್ಛೇದದ ಆರಂಭದಲ್ಲಿ ಬರೆದಂತೆ ತೆಗೆದುಕೊಳ್ಳಬೇಕು. **(ನೋಡಿ– ಮಕರರಾಶಿ)** *

**ಕರ್ಕೋಟಕ:** ಎಂಟು ಮಂದಿ ಸರ್ಪರಾಜರಲ್ಲಿ ಒಬ್ಬ. ದಕ್ಷಬ್ರಹ್ಮನ ಮಗಳಾದ ಕದ್ರು ಹಾಗೂ ಕಶ್ಯಪರ ಮಗ. ನಿಷಧ ದೇಶಾಧಿಪತಿ ನಳ ಚಕ್ರವರ್ತಿ ಪುಷ್ಕರನೊಡನೆ ಜೂಜಾಡಿ ರಾಜ್ಯಭ್ರಷ್ಟನಾಗಿ ಕಾಡು ಸೇರಿ ತನ್ನ ಪತ್ನಿ ದಮಯಂತಿಯನ್ನು ಅಗಲಿ ಹೋಗುತ್ತಿದ್ದಾಗ ನಾರದರ ಶಾಪದಿಂದ ದಾವಾಗ್ನಿಯಲ್ಲಿ ಬಿದ್ದು ಸುಟ್ಟು ಹೋಗುತ್ತಿದ್ದ ಕರ್ಕೋಟಕ ನಳನನ್ನು ಕಂಡು ತನ್ನನ್ನು ದಾವಾಗ್ನಿಯಿಂದ ತಪ್ಪಿಸಿದರೆ ಪ್ರತ್ಯುಪಕಾರ ಮಾಡುವುದಾಗಿ ತಿಳಿಸಲು ನಳ ಮರುಕಗೊಂಡು ಕರ್ಕೋಟಕನನ್ನು ಜ್ವಾಲೆಯಿಂದ ಹೊರಕ್ಕೆ ತೆಗೆದ. ಕೂಡಲೆ ಕರ್ಕೋಟಕ ನಳನನ್ನು ಕಚ್ಚಿದ. ನಳನಿಗೆ ಆ ವಿಷದಿಂದ ವಿಕಾರರೂಪವುಂಟಾಯಿತು. ಅಡ್ಡ ಮೋರೆಯ ಗಂಟು ಮೂಗಿನ ಜಡ್ಡು ದೇಹದ ಗುಜ್ಜು ಗೊರಳಿನ– ಎಂಬ ಕನ್ನಡ ನಳಚರಿತ್ರೆಯ ನಳನ ವರ್ಣನೆಯನ್ನು ಇಲ್ಲಿ ನೆನೆಯಬಹುದು. ಆಗ ನಳ ಇದಲ್ಲವೆ ನೀನು ನನಗೆ ಮಾಡಿದ ಪ್ರತ್ಯುಪಕಾರ ಎನಲಾಗಿ ಕರ್ಕೋಟಕ ಇದೇ ನಾನು ನಿನಗೆ ಮಾಡಿದ ಪರಮೋಪಕಾರ, ಈ ರೂಪಿನಲ್ಲಿ ನಿನ್ನನ್ನು ಯಾರೂ ಗುರುತಿಸಲಾರರು. ನೀನು ಋತುಪರ್ಣ ರಾಜನಲ್ಲಿಗೆ ಹೋಗಿ ಬಾಹುಕನೆಂಬ ಹೆಸರಿನಿಂದ ಆತನ ಸಾರಥಿಯಾಗಿದ್ದು ಅನಂತರ ನಿನ್ನ ರಾಜ್ಯವನ್ನೂ ಪತ್ನಿಯನ್ನೂ ಪಡೆಯುವೆ, ನೀನು ಅಪೇಕ್ಷಿಸಿದಾಗ ನನ್ನನ್ನು ಸ್ಮರಿಸಿಕೊಂಡು ಈ ವಸ್ತ್ರಗಳನ್ನು ಧರಿಸಿಕೊಂಡರೆ ನಿಜರೂಪ ಬರುವುದು ಎಂದು ಹೇಳಿ ಎರಡು ವಸ್ತ್ರಗಳನ್ನು ಕೊಟ್ಟು ಅಂತರ್ಧಾನನಾದ. *

**ಕರ್‌ಕ್ಯುಮಿನ್:** ಇದು ಅರಿಸಿನದ ಬೇರಿನಲ್ಲಿರುವ ವರ್ಣಪದಾರ್ಥ, ಅರಿಸಿನವನ್ನು ನೇರವಾಗಿ ಲೀನಕಾರಿಗಳಿಂದ ಸಂಸ್ಕರಿಸಿ ಸ್ಫಟಿಕೀಕರಿಸಿಯಾಗಿಲೀ ಕ್ಷಾರಗಳ ಜಲದ್ರಾವಣದಲ್ಲಿ ಸಂಸ್ಕರಿಸಿ ಬಳಿಕ ಆಮ್ಲಗಳನ್ನುಪಯೋಗಿಸಿ ಸ್ಫಟಿಕೀಕರಿಸಿಯಾಗಲೀ ಇದನ್ನು ಹೊರತೆಗೆಯಬಹುದು. ಅರಿಸಿನ ಬೇರಿನಲ್ಲಿ ಶೇ. 0.5 ರಿಂದ ಶೇ. 2 ಭಾಗ ಕರ್‌ಕ್ಯುಮಿನ್ ಇರುತ್ತದೆ. ಇದರ ರಚನೆ $C_{21}H_{20}O_6$. ರಾಸಾಯನಿಕ ಹೆಸರು ಫೆರುಲಾಯಿಲ್ ಮೀಥೇನ್. ಇದರ ಕರಗುವ ಬಿಂದು $177^0$–$178^0$ ಸೆಂ. ಇದು ಉತ್ಕರ್ಷಣ ನಿರೋಧಕ ಪದಾರ್ಥ. ಇದರ ಫೀನಾಲಿಕ್ ರಚನೆಯೇ ಇದಕ್ಕೆ ಕಾರಣ. ಈಚಿನ ಸಂಶೋಧನೆಗಳಿಂದ ಇಲಿಗಳಿಗೆ ಕೋಲೆಸ್ಟೆರಾಲ್ ಜೊತೆಯಲ್ಲಿ ಕರ್‌ಕ್ಯುಮಿನ್ನನ್ನು ಆಹಾರದಲ್ಲಿ ಕೊಟ್ಟಾಗ ಕೋಲೆಸ್ಟೆರಾಲ್ ಹೀರುವಿಕೆ ಬಲುಮಟ್ಟಿಗೆ ನಿಂತು ಹೋಯಿತೆಂದು ತಿಳಿದುಬಂದಿದೆ. (ಎಂ.ಆರ್.ಆರ್.)

**ಕರ್‌ಕ್ಯೂಲಿಗೊ:** ಅಮರಿಲ್ಲಿಡೇಸೀ ಅಥವಾ ಹೈಪಾಕ್ಸಿಡೇಸೀ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ಸಸ್ಯ ಜಾತಿ. ಈ ಗಿಡಗಳ ಅಂಡಾಶಯದ ತುದಿ ಸೊಂಡಿಲು ಕೀಟದಂತಿರಿವುದರಿಂದ ಇದಕ್ಕೆ ಈ ಹೆಸರು ಬಂದಿದೆ (ಲ್ಯಾಟಿನ್ ಭಾಷೆಯಲ್ಲಿ ಕರ್‌ಕ್ಯೂಲಿಯೊ ಎಂದರೆ ಸೊಂಡಿಲುಕೀಟ–ವೀವಿಲ್ ಎಂದು ಅರ್ಥ), ಇದರಲ್ಲಿ ಸುಮಾರು 12ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಕೆಲವು ಸ್ವಾಭಾವಿಕವಾಗಿ ಬೆಳೆಯುವುವಾದರೂ ಇನ್ನು ಕೆಲವನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ, ಮನೆಗಳಲ್ಲಿ ಬೆಳೆಸುವುದುಂಟು. ಇವು ಸುಮಾರು 1'–5' ಎತ್ತರಕ್ಕೆ ಬೆಳೆಯುವ ಮೂಲಿಕೆಗಳು.

ಭೂಮಿಯಲ್ಲೇ ಹುದುಗಿರುವ ಗೆಡ್ಡೆಯಂಥ ಪ್ರಕಂದವೂ (ರೈಜ಼ೋಮ್) ನೆಲದಿಂದ ಮೇಲಕ್ಕೆ ಕಾಂಡವಿಲ್ಲದಿರುವುದೂ ಬೇರಿನಿಂದಲೇ ಹೊರಟಿರುವಂಥ ಎಲೆಗಳೂ ಕದಿರುಗೊಂಚಲು ಮಾದರಿಯ ಹೂಗೊಂಚಲೂ ಈ ಸಸ್ಯಗಳ ಮುಖ್ಯ ಹಾಗೂ ವಿಶಿಷ್ಟ ಲಕ್ಷಣಗಳು. ಎಲೆಗಳು ಚಿಕ್ಕವಾಗಿದ್ದಾಗ ಮಡಚಿಕೊಂಡಿರುತ್ತವಲ್ಲದೆ, ನೋಡಲು ತೆಂಗಿನ ಜಾತಿಯ ಸಸ್ಯಗಳ ಎಲೆಗಳಂತೆ ಕಾಣುತ್ತವೆ. ಹೂ ಗೊಂಚಲು ಹಲವಾರು ಪ್ರಬೇಧಗಳಲ್ಲಿ ಎಲೆಗಳ ಮಟ್ಟದಿಂದ ಕೆಳಗೇ ಇದ್ದು ಗಿಡದ ಬುಡದಲ್ಲಿ ಅಡಗಿಕೊಂಡಂತಿರುತ್ತದೆ. ಹೂಗಳು ಹಳದಿಬಣ್ಣದವು. ನಕ್ಷತ್ರಗಳಂತೆ ಕಾಣುತ್ತವೆ. ಪ್ರತಿಯೊಂದು ಹೂವಿನಲ್ಲಿ 6 ಭಾಗಗಳುಳ್ಳ ಸಂಯುಕ್ತಮಾದರಿಯ (ಗ್ಯಾಮಾಫಿಲಸ್) ಪೆರಿಯಾಂತು, 6 ಕೇಸರಗಳು, ಮೂರು ಕಾರ್ಪೆಲುಗಳನ್ನೊಳಗೊಂಡ ನೀಚಸ್ಥಾನದ ಅಂಡಾಶಯ ಇವೆ. ಅಂಡಕೋಶದಲ್ಲಿ ಮೂರು ಕೋಣೆಗಳಿವೆ. ಒಂದೊಂದು ಕೋಣೆಯಲ್ಲೂ 12 – 24 ಅಂಡಕಗಳಿವೆ.



**ಕರ್ಕ್ಯೂಲಿಗೊ ಕುಂಡ ಸಸ್ಯ. ಎಡಗಡೆಯದು ಹೂಗೊಂಚಲು**

ಉದ್ಯಾನ ಪ್ರಾಮುಖ್ಯವನ್ನು ಪಡೆದಿರುವ ಕರ್‌ಕ್ಯೂಲಿಗೊ ಪ್ರಭೇದಗಳಲ್ಲಿ ಮುಖ್ಯವಾದುವು ಕ. ಲ್ಯಾಟಿಫೋಲಿಯ ಮತ್ತು ಕ. ರಿಕರ್ವೇಟ. ಇವುಗಳಲ್ಲಿ ಮೊದಲನೆಯದು ಸುಮಾರು 2'–3' ಎತ್ತರಕ್ಕೆ ಬೆಳೆಯುವ ಬಗೆಯದು. ಇದಕ್ಕೆ ಈಟಿಯಾಕಾರದ ಎಲೆಗಳಿವೆ. ಕ.ರಿಕರ್ವೇಟ ಪ್ರಭೇದ ಹೆಚ್ಚು ಜನಪ್ರಿಯವಾದುದು. ಇದು ಕೂಡ ಸುಮಾರು 2½' ಎತ್ತರಕ್ಕೆ ಬೆಳೆಯುತ್ತದೆ. ಇದರಲ್ಲಿ ಸು. 1' – 3' ಉದ್ದದ ಹಾಗೂ 2" – 6" ಅಗಲದ ಹಿಂದಕ್ಕೆ ಬಾಗಿದ ಎಲೆಗಳಿವೆ. ಈ ಪ್ರಭೇದದಲ್ಲಿ ವೇರಿಗೇಟ ಮತ್ತು ಸ್ಟ್ರಯೇಟ ಎಂಬ ಎರಡು ಬಗೆ (ತಳಿ) ಗಳಿವೆ. ಮೊದಲನೆಯದರ ಎಲೆಗಳಮೇಲೆ ಬಿಳಿಯ ಬಣ್ಣದ ಹಲವಾರು ಉದ್ದ ಪಟ್ಟೆಗಳೂ ಎರಡನೆಯದರಲ್ಲಿ ಒಂದೇ ಒಂದು ಬಿಳಿಯ ಪಟ್ಟೆಯೂ ಇವೆ. ಎಲ್ಲ ಪ್ರಭೇದಗಳನ್ನೂ ಕುಂಡಗಳಲ್ಲೊ ನೇರವಾಗಿ ಸಸಿನೆಡುವ ಸ್ಥಳಗಳಲ್ಲೊ ಅಲಂಕಾರಸಸ್ಯಗಳನ್ನಾಗಿ ಬೆಳೆಸುತ್ತಾರೆ.

ಇವನ್ನು ಪ್ರಕಂದದ ತುಂಡುಗಳಿಂದ ವೃದ್ಧಿಸುತ್ತಾರೆ. ಬೆಳೆವಣಿಗೆಯ ಕಾಲದಲ್ಲಿ ಉಷ್ಣತೆ ಹೆಚ್ಚಾಗಿದ್ದರೆ ಉತ್ತಮ. ಮರುಳು ಮಿಶ್ರಿತ ಗೋಡುಮಣ್ಣಿನ ನೆಲದಲ್ಲಿ ಚೆನ್ನಾಗಿ ಬೆಳೆಯುತ್ತವೆ. ಉತ್ತಮ ಬೆಳೆವಣಿಗೆಗಾಗಿ ದನದ ಗೊಬ್ಬರವನ್ನೂ ಹೇರಳವಾಗಿ ಹಾಕಬೇಕು.

ಮೇಲೆ ಹೇಳಿದ ಎರಡು ಪ್ರಭೇದಗಳಲ್ಲದೆ ಪಶ್ಚಿಮ ಘಟ್ಟಗಳಲ್ಲೂ ಪೂರ್ವ ಹಿಮಾಲಯ ಪರ್ವತ ಪ್ರದೇಶಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುವ ಕರ್‌ಕ್ಯುಲಿಗೊ ಆರ್ಕಿಯಾಯ್ಡಿಸ್ ಎಂಬ ಪ್ರಭೇದವೂ ಇದೆ. ಇದನ್ನು ನೆಲತೆಂಗು ಅಥವಾ ನೆಲತಾಳೆ ಎಂದು ಕರೆಯುತ್ತಾರೆ. ಇದರ ಗೆಡ್ಡೆಯಂತಿರುವ ಬೇರುಗಳು ಔಷಧಿಯ ಪ್ರಾಮುಖ್ಯ ಪಡೆದಿವೆ. ಕೊಂಚ ಕಹಿಯಾಗೂ ಲೋಳೆಯಿಂದ ಕೂಡಿರುವಂಥವೂ ಆದ ಇವನ್ನು ಶಕ್ತಿವರ್ಧಕ, ಮೂತ್ರಸ್ರಾವ ಉತ್ತೇಜಕ, ಪುನರಾರೋಗ್ಯದಾಯಕ ಹಾಗೂ ಶಾಮಕವಾಗಿ ಬಳಸುತ್ತಾರೆ. ಅಲ್ಲದೆ ಮೂಲವ್ಯಾಧಿ ಅತಿಸಾರ, ಕಾಮಾಲೆ, ಆಸ್ತಮ ರೋಗ ನಿವಾರಣೆಗೂ ತುರಿ ಮತ್ತಿತರ ಚರ್ಮರೋಗಗಳಲ್ಲಿ ಬೆಚ್ಚರವಾಗೂ (ಪೋಲ್ಟೀಸು) ಉಪಯೋಗಿಸುವುದುಂಟು. (ಎನ್.ಆರ್.ಆರ್.)

**ಕರ್ಕ್ ಪ್ಯಾಟ್ರಿಕ್, ವಿಲಿಯಂ:** 1754-1812. ಈಸ್ಟ್ ಇಂಡಿಯ ಕಂಪನಿಯ ಸೇವೆಯಲ್ಲಿದ್ದ ಯೋಧ, ಆಡಳಿತಗಾರ. ಮದರಾಸು ಅಶ್ವದಳದಲ್ಲಿ ಕರ್ನಲ್ ಆಗಿದ್ದ ಜೇಮ್ಸ್ ಅವರ ಮಗನಾದ ಈತ 1773ರಲ್ಲಿ ಬಂಗಾಲ ಕಾಲ್ದಳದಲ್ಲಿ ಸೇನೆಗೆ ಸೇರಿ, ಲೆಫ್ಟಿನೆಂಟ್ ಕರ್ನಲ್ ಹುದ್ದೆಯವರೆಗೆ ಏರಿದ. ಪಾರಸೀ ಭಾಷೆ ಬಲ್ಲವನಾಗಿ ಮೂರನೆಯ ಮೈಸೂರು ಯುದ್ಧದ ಕಾಲದಲ್ಲಿ ಲಾರ್ಡ್ ಕಾರ್ನ್‌ವಾಲೀಸನ ದುಭಾಷಿಯಾಗಿ ಕೆಲಸ ಮಾಡಿದ. ಲಾರ್ಡ್ ಮಾರ್ನಿಂಗ್‌ಟನ್‌ನ ಸೇನಾ ಕಾರ್ಯದರ್ಶಿ (1798) ಹಾಗೂ ಆಪ್ತ ಕಾರ್ಯದರ್ಶಿ (1799) ಹುದ್ದೆ ನಿರ್ವಹಿಸಿದ. ಟಿಪ್ಪುವಿನ ಪತನಾನಂತರ ಮೈಸೂರು ವಿಭಜನೆಯ ಒಪ್ಪಂದವನ್ನು ರೂಪಿಸಲು ಜನರಲ್ ಹ್ಯಾರಿಸ್, ಕರ್ನಲ್ ಆರ್ಥರ್ ವೆಲ್ಲೆಸ್ಲಿ, ಹೆನ್ರಿ ವೆಲ್ಲೆಸ್ಲಿ, ಬ್ಯಾರಿ ಕ್ಲೋಸ್ ಮತ್ತು ಈತನನ್ನು ಒಳಗೊಂಡ ಕಮಿಷನ್ ನೇಮಿಸಿದ್ದು, ಅದಕ್ಕೆ ಸಹಿ ಹಾಕಿದ್ದ ಕಂಪನಿಯ ಪ್ರತಿನಿಧಿಗಳಲ್ಲಿ ಈತನೂ ಒಬ್ಬ. ಮುಂದೆ ಈತನನ್ನು ಪುಣೆಯ ರೆಸಿಡೆಂಟನಾಗಿ ನೇಮಿಸಲಾಗಿತ್ತು. ಭಾರತೀಯ ಭಾಷೆ ಮತ್ತು ಸಾಹಿತ್ಯಗಳನ್ನು ಚೆನ್ನಾಗಿ ಬಲ್ಲವನಾದ ಈತ ಟಿಪ್ಪುವಿನ 1786ರವರೆಗಿನ ಪಾರಸೀ ಪತ್ರಗಳನ್ನು ಭಾಷಾಂತರಿಸಿ, 1811ರಲ್ಲಿ ಲಂಡನಿನಿಂದ ಸೆಲೆಕ್ಟ್ ಲೆಟರ್ಸ್ ಆಫ್ ಟಿಪ್ಪುಸುಲ್ತಾನ್ ಎಂಬ ಹೆಸರಿನಲ್ಲಿ ಪ್ರಕಟಿಸಿದ.

ಈತನ ಸೋದರ ಜೇಮ್ಸ್ ಅಕಿಲಿಸ್ ಕರ್ಕ್‌ಪ್ಯಾಟ್ರಿಕ್ (1764-1805) 1791-92ರ ಮೈಸೂರು ಯುದ್ಧದಲ್ಲಿ ಪಾಲುಗೊಂಡಿದ್ದ. 1799ರ ಯುದ್ಧದಲ್ಲಿ ಟಿಪ್ಪುವಿನ ವಿರುದ್ಧ ನಿಜಾಮನ ಸೇನೆಯನ್ನು ತಂದು ಭಾಗವಹಿಸಿದ್ದ. (ಎಸ್.ಕೆ.)

**ಕರ್ಕಿ, ಡಿ.ಎಸ್.:** 1907-84. ಕನ್ನಡ ನವೋದಯ ಮಾರ್ಗದ ಕವಿ. ದುಂಡಪ್ಪ ಸಿದ್ದಪ್ಪ ಕರ್ಕಿ ಎಂಬುದು ಇವರ ಪೂರ್ಣ ನಾಮ. ಬೆಳಗಾಂವಿ ಜಿಲ್ಲೆಯ ಭಾಗೋಜಿ ಕೊಪ್ಪದಲ್ಲಿ ಜನಿಸಿದರು. ಇವರು ಮೂರು ವರ್ಷದವರಿರುವಾಗಲೇ ತಾಯಿಯನ್ನು ಕಳೆದುಕೊಂಡರು. ಅನಂತರ ಇವರು ಬೆಳೆದದ್ದು ಸೋದರಮಾವನ ಮನೆಯಲ್ಲಿ. ಬೆಲ್ಲದ ಬಾಗೇವಾಡಿಯಲ್ಲಿ ಪ್ರಾಥಮಿಕ ಶಿಕ್ಷಣ, ಬೆಳಗಾಂವಿಯ ಜಿ.ಎ.ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ ಪಡೆದರು. ಕೊಲ್ಲಾಪುರದ ರಾಜಾರಾಮ ಕಾಲೇಜು, ಪುಣೆಯ ಫರ್ಗ್ಯುಸನ್ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜುಗಳಲ್ಲಿ ಓದಿದರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಕಾರವಾರದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಜೀವನ ಆರಂಭಿಸಿದರು. ಕೆಲಕಾಲದಲ್ಲಿ ಕೆ.ಎಲ್.ಇ. ಸೊಸೈಟಿ ಸೇರಿದರು. ಜಿ.ಎ. ಪ್ರೌಢ ಶಾಲೆಯಲ್ಲಿ ಅಧ್ಯಾಪಕರಾದರು. ಅನಂತರ ಬೆಳಗಾಂವಿಯ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಕೆ.ಎಲ್.ಇ. ಸೊಸೈಟಿಯ ಹುಬ್ಬಳ್ಳಿಯ ಆರ್ಟ್ಸ್ ಕಾಲೇಜಿನ ಉಪಪ್ರಾಚಾರ್ಯರಾಗಿ, ಪ್ರಾಂಶುಪಾಲರಾಗಿ, ಕೆಲಕಾಲ ನರೇಗಲ್ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿ ಹುಬ್ಬಳ್ಳಿಗೆ ಹಿಂದಿರುಗಿದರು. ದಕ್ಷ ಆಡಳಿತಗಾರರೆಂದೂ ಇವರು ಹೆಸರುಗಳಿಸಿದರು. ವಿದ್ಯಾರ್ಥಿಗಳನ್ನು ಸ್ನೇಹಿತರಂತೆ ಕಾಣುತ್ತಿದ್ದರು. ಕರ್ಕಿಯವರು ಸಹಜಮಾದುರ್ಯದ ಸಂವೇದನಾಶೀಲ ಮತ್ತು ಭಾವನಿಷ್ಠ ರಮ್ಯ ಕವನಗಳ ಮೂಲಕ ಕನ್ನಡ ನಾಡು ನುಡಿ ಸಂಸ್ಕೃತಿಯ ಉನ್ನತಮೌಲ್ಯಗಳನ್ನು ಉದಾತ್ತ ಆದರ್ಶಗಳನ್ನು ಹೃದ್ಯವಾಗಿ ಹಾಡಿದ ಭಾವಗೀತೆಯ ಕವಿ ಎಂದೇ ಪ್ರಸಿದ್ಧರಾಗಿದ್ದರು. ಪ್ರಕೃತಿ ಮತ್ತು ಜೀವನದ ಸಾತ್ವಿಕ ಸತ್ವ ಸೌಂದರ್ಯದಿಂದ ಅಗಾಧವಾಗಿ ಪ್ರಭಾವಿತರಾದ ಇವರು ಗದ್ಯಪದ್ಯವೆರಡರಲ್ಲೂ ತಮ್ಮ ವ್ಯಕ್ತಿ ವಿಶಿಷ್ಟ ಪ್ರತಿಭೆಯನ್ನು ಪ್ರದರ್ಶಿಸಿದರು. ಕಾವ್ಯ, ಪ್ರಬಂಧ, ಮಕ್ಕಳಸಾಹಿತ್ಯ ಮತ್ತು ಸಂಪಾದನೆ, ಸಂಶೋಧನೆಗೆ ಸಂಬಂಧಿಸಿದ ಒಟ್ಟು ಹನ್ನೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ. ಆಧ್ಯಾತ್ಮಿಕ ಚಿಂತನೆಗಳನ್ನು ಸೌಂದರ್ಯಪ್ರಜ್ಞೆ ಮತ್ತು ಜೀವನಸಂಸ್ಕೃತಿ ಕುರಿತಾದ ಆರೋಗ್ಯಪೂರ್ಣ ವಿಚಾರಗಳನ್ನು ಬದುಕಿನ ಶುಚಿ ರುಚಿ ಮತ್ತು ಒಲವು ಚೆಲವನ್ನು ಕಲಾತ್ಮಕ ವಿನ್ಯಾಸದಲ್ಲಿ ಸುಕುಮಾರ ಶೈಲಿಯಲ್ಲಿ ಪಡಿಮೂಡಿಸಿರುವ ಇವರ ಕಾವ್ಯಪ್ರತಿಭೆ ಅನನ್ಯವಾದುದು.

ನಕ್ಷತ್ರಗಾನ (1949), ಭಾವತೀರ್ಥ (1953), ಗೀತಗೌರವ (1968), ಕರಿಕೆ ಕಣಗಿಲು (1976), ನಮನ (1977) – ಇವು ಇವರ ಕವನ ಸಂಕಲನಗಳು. ಹಚ್ಚೇವು ಕನ್ನಡದ ದೀಪ, ಕರುನಾಡದೀಪ ಸಿರಿನುಡಿಯದೀಪ ಒಲವೆತ್ತಿ ತೋರುವ ದೀಪ ಎಂದು ಕನ್ನಡಿಗರ ಎದೆಯಾಳದ ಮಿಡಿತವನ್ನು ಕಾವ್ಯದ ಕೊರಳಲ್ಲಿ ಮಿಡಿದ ನಾಡಕವಿ ಇವರು. ಕವಿಯ ಜೀವನ ಪ್ರೀತಿ, ಪ್ರಕೃತಿ, ಕಲೆ ಮತ್ತು ಸಾಹಿತ್ಯ ಚಿಂತನೆಯ ಚತುರ್ಮುಖ ದರ್ಶನ ನೀಡುವ ಗದ್ಯಕೃತಿ ನಾಲ್ದೆಸೆಯನೋಟ (1952), ಸಾಹಿತ್ಯ ಸಂಸ್ಕೃತಿ ಶೃತಿ (1974) ಇವರ ಗದ್ಯಶೈಲಿಯ ಸೊಗಸು ಪ್ರಬಂಧ ಪ್ರತಿಭೆ ಮತ್ತು ಅನುವಾದ ಸಾಮರ್ಥ್ಯಕ್ಕೆ ಉತ್ತಮ ಉದಾಹರಣೆ. ಮಕ್ಕಳ ಶಿಕ್ಷಣ (1956) ಶಿಕ್ಷಣತಜ್ಞನೊಬ್ಬನ ಶೈಕ್ಷಣಿಕ ಕಾಳಜಿಗಳನ್ನು ಪ್ರಕಟಿಸಿರುವ ಕೃತಿ. ಬಣ್ಣದ ಚೆಂಡು, ತನನತೋಂನಂ ಶಿಶುಗೀತೆಗಳ ಸಂಕಲನಗಳು.



ಕರ್ನಾಟಕದ ಅನುಭಾವಿ ಕವಿ ಶಿಶುನಾಳ ಶರೀಫರ ತತ್ವಪದಗಳ ಸಂಗ್ರಹ ಜನಪ್ರಿಯ ಪದಗಳು. ಇದು ಶರೀಫರ ಗೀತೆಗಳ ಅನುಭಾವಿಕ ಸಾಮಾಜಿಕ, ತಾತ್ವಿಕ ನೆಲೆಗಳ ಗಂಭೀರ ಪ್ರತಿಪಾದನೆಯನ್ನೊಳಗೊಂಡಿದೆ. ಕನ್ನಡ ಛಂದೋವಿಕಾಸ (1956) ಕನ್ನಡ ಛಂದಸ್ಸಿನ ಚರಿತ್ರೆ ಮತ್ತು ಸ್ವರೂಪವನ್ನು ಪ್ರಾಚೀನ ಮತ್ತು ಆಧುನಿಕ ಕಾವ್ಯ ಭಾಗಗಳ ಮೂಲಕ ವಿಶ್ಲೇಷಿಸುವ ಸಂಶೋಧನ ಮಹಾ ಪ್ರಬಂಧ. ಛಂದಶ್ಶಾಸ್ತ್ರದ ಗಂಭೀರ ಅಧ್ಯಯನಗಳು ವಿರಳವಾಗಿದ್ದ ಸಂದರ್ಭದಲ್ಲಿ ಛಂದಶ್ಶಾಸ್ತ್ರದ ಅಧ್ಯಯನಕ್ಕೆ ಅಧಿಕೃತ ಆಕರ ಗ್ರಂಥವಾಗಿದ್ದ ಕನ್ನಡ ಛಂದೋವಿಕಾಸ ಅಚ್ಚಗನ್ನಡದ ದೇಸಿ ಛಂದಸ್ಸನ್ನು ಕುರಿತು ನಡೆಸಿರುವ ವಿವೇಚನೆ ಮೌಲಿಕವಾದುದಾಗಿದೆ. ತ್ರಿಪದಿ, ಕಂದ, ರಗಳೆ, ಸಾಂಗತ್ಯ, ಷಟ್ಪದಿ, ಅಕ್ಕರ, ಚೌಪದಿ, ಏಳೆ ಇತ್ಯಾದಿ ಅಚ್ಚಗನ್ನಡ ಛಂದೋಲಯಗಳ, ಚಾರಿತ್ರಿಕ ಮತ್ತು ಕಲಾತ್ಮಕ ನೆಲೆಯ ಚರ್ಚೆ ಕರ್ಕಿಯವರ ವಿದ್ವತ್ ಪರಿಶ್ರಮ ಮತ್ತು ಸದಭಿರುಚಿಯ ಪ್ರತೀಕವಾಗಿದೆ. ಇವರ ಸಾಹಿತ್ಯಕ ಸಾಧನೆಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ (1972). ಕಾವ್ಯಗೌರವ ಎಂಬ ಸಂಭಾವನಾ ಗ್ರಂಥವನ್ನು ಇವರಿಗೆ ಅರ್ಪಿಸಲಾಗಿದೆ (1991). (ಎಸ್‌ಎಚ್‌ಎ.ಐ.)

**ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ:** ಹೊಸಗನ್ನಡ ಅರುಣೋದಯದ (19ನೆಯ ಶತಮಾನ) ಆದ್ಯಲೇಖಕರು. ಹೊಸಗನ್ನಡದ ಪ್ರಪ್ರಥಮ ಸಾಮಾಜಿಕ ನಾಟಕ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಎಂಬ ನಾಟಕದ ಕರ್ತೃ. ಇವರು ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕರ್ಕಿಯವರು. ಸೂರಿ ಎಂಬ ಬಿರುದು ವೈದಿಕ ಕರ್ಮಕಾಂಡಗಳಲ್ಲಿ ಪ್ರಸಿದ್ಧಿಯನ್ನು ಪಡೆದ ಇವರ ಮನೆತನಕ್ಕೆ ಶ್ರೀ ಗುರುಪೀಠದಿಂದ ದೊರೆತದ್ದು. ಇವರ ತಂದೆ ವಿಘ್ನೇಶ್ವರ ಶಾಸ್ತ್ರಿಗಳೂ ದೊಡ್ಡ ಪಂಡಿತರು. ವೆಂಕಟರಮಣಶಾಸ್ತ್ರಿಯವರು ತಮ್ಮ ಬಾಲ್ಯದ ವಿದ್ಯಾಭ್ಯಾಸವನ್ನು ಕರ್ಕಿಯಲ್ಲಿ ಮುಗಿಸಿ, ಹೊಸನಗರದ ಬಳಿ ಇರುವ ಶ್ರೀ ರಾಮಚಂದ್ರಾಪುರ ಮಠದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಪಡೆದರು. ಅಲ್ಲಿ ಕಾವ್ಯ, ವ್ಯಾಕರಣ, ಅಲಂಕಾರ, ವೇದಾಂತಗಳನ್ನು ಅಧ್ಯಯನ ಮಾಡಿ ಶ್ರೀಗಳ ಪ್ರೀತಿಗೆ ಪಾತ್ರರಾದರು. ಇವರು ಕೆಲವು ಕಾಲ ಮಠದ ಪಾರುಪತ್ಯಗಾರರಾಗಿಯೂ ಕೆಲಸ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಫೌಜುದಾರರಾಗಿ ಅನುಭವ ಪಡೆದ ಇವರು ಯಾವ ಹುದ್ದೆಯಲ್ಲಿಯೂ ಬಹುಕಾಲ ಮುಂದುವರೆಯಲಿಲ್ಲ. ಗೆಳೆಯ ಬೂದಿ ಮಹಾಬಲಭಟ್ಟರೊಂದಿಗೆ ಸೇರಿ 'ಶಾಸ್ತ್ರೀ ಕಂಪನಿ' ಮಾಡಿಕೊಂಡು ಊರೂರು ತಿರುಗಿ ಹವ್ಯಕ ಬಾಂಧವರಿಂದ ನಿಧಿ ಸಂಗ್ರಹಿಸಿಕೊಂಡು ಮುಂಬಯಿಯಲ್ಲಿ ಭಾರತೀ ಛಾಪಖಾನೆಯನ್ನು ಸ್ಥಾಪಿಸಿದರು. ಕನ್ನಡದಲ್ಲಿ ಗ್ರಂಥರಚನೆ, ಗ್ರಂಥ ಸಂಪಾದನೆ ಮತ್ತು ಪ್ರಕಟಣೆ ಅಂದಿನ ಇವರ ಗುರಿಯಾಗಿತ್ತು. ಕರಾವಳಿಯ ಅಕ್ಕಸಾಲಿಗರಿಂದ ಕನ್ನಡ ಅಕ್ಷರಗಳನ್ನು ಕೆತ್ತಿಸಿ ಅನೇಕ ಶಾಸ್ತ್ರ ಗ್ರಂಥಗಳನ್ನೂ ಕಾವ್ಯಗಳನ್ನೂ ಅಚ್ಚು ಹಾಕಿಸಿದರು. ಶಂಕರಸಂಹಿತೆ, ಮನುಸ್ಮೃತಿ, ಯೋಗವಾಸಿಷ್ಠ, ದುರ್ಗಾಸಪ್ತಶತಿ, ಸಹಸ್ರನಾಮಾವಳಿ, ಪೂಜಾಸಮುಚ್ಚಯ, ತುರಂಗಭಾರತ ಮುಂತಾದವು ಕೆಲವು ಮುಖ್ಯಕೃತಿಗಳು.

ಹವ್ಯಕರ ಇತಿಹಾಸ, ಧರ್ಮ ಮತ್ತು ಮಠಗಳಿಗೆ ಸಂಬಂಧಿಸಿದ ಗ್ರಂಥಗಳನ್ನೂ ಅನೇಕ ಯಕ್ಷಗಾನ ಕೃತಿಗಳನ್ನೂ ಇವರು ಮುದ್ರಿಸಿ ಪ್ರಕಟಿಸಿದರು. ಸ್ವತಃ ಕೆಲವು ಕೃತಿಗಳನ್ನು ರಚಿಸಿದರು. ದಕ್ಷಿಣಯಾತ್ರಾ ಚರಿತ್ರೆ, ಪ್ರಾಚೀನ ನಾಟ್ಯ ಕಥಾರ್ಣವ, ಅನಾರ್ಯವಿವರ (1887) ಇವು ಮುಖ್ಯವಾದವು. 'ದಕ್ಷಿಣ ಯಾತ್ರಾ ಚರಿತ್ರೆ' ಹದಿಮೂರು ಪುಟಗಳ ಒಂದು ಚಿಕ್ಕ ಗ್ರಂಥವಾದರೂ ಐತಿಹಾಸಿಕವಾಗಿ ಕನ್ನಡದ ಪ್ರಥಮ ಪ್ರವಾಸಸಾಹಿತ್ಯ ಕೃತಿಯಾಗಿದೆ. ಹೀಗೆಯೇ ಇವರು ಪ್ರಕಟಿಸಿದ ಕಿಬ್ಬಚ್ಚಲು ಮಂಜಮ್ಮನ ವೇದಾಂತ ತತ್ತ್ವಸರಸಾ ಕನ್ನಡದಲ್ಲಿ ಮುದ್ರಣಗೊಂಡ ಮೊದಲ ಮಹಿಳಾಕೃತಿ.

ಕನ್ನಡ ಪತ್ರಿಕೋದ್ಯಮದಲ್ಲಿಯೂ ಇವರದು ಮಹತ್ವದ ಹೆಸರು. ಇವರು ಹವ್ಯಕ ಸುಬೋಧ ಎಂಬ ವಾರ ಪತ್ರಿಕೆಯನ್ನೂ (1885) ಹಿತೋಪದೇಶ (1888) ಎಂಬ ಮಕ್ಕಳ ಮಾಸಪತ್ರಿಕೆಯನ್ನೂ ಪ್ರಾರಂಭಿಸಿದರು. ಇವು ಆ ಕಾಲಕ್ಕೆ ಬಹಳ ಜನಪ್ರಿಯ ಪತ್ರಿಕೆಗಳೆನ್ನಿಸಿ ಕೊಂಡಿದ್ದವು. ನಿರ್ಭಿಡೆ ವ್ಯಕ್ತಿತ್ವದ ವೆಂಕಟರಮಣಶಾಸ್ತ್ರಿಯವರಿಂದ ಅಂದಿನ ಬ್ರಿಟಿಷರ ಆಡಳಿತ ನೀತಿ ಮತ್ತು ಅಧಿಕಾರಿಗಳ ದುರ್ವರ್ತನೆಗಳು ಕಟುಟೀಕೆಗೆ ಒಳಗಾದವು. ಅರಣ್ಯ ಇಲಾಖೆಯ ಅವ್ಯವಹಾರಗಳನ್ನೆಲ್ಲ ಬಯಲಿಗೆಳೆದಿದ್ದರಿಂದಾಗಿ ಪ್ರಾಯಶಃ ಇವರ ಮೇಲೆ ಖಟ್ಲೆ ಜರುಗಿ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಇವರಿಗೆ ಜೈಲು ಶಿಕ್ಷೆ ವಿಧಿಸಲ್ಪಟ್ಟಿತು. ಹೀಗೆ ರಾಜಕೀಯ ಕಾರಣಕ್ಕಾಗಿ ಶಿಕ್ಷೆಗೊಳಗಾದ ಕನ್ನಡ ಲೇಖಕರಲ್ಲಿ ವೆಂಕಟರಮಣಶಾಸ್ತ್ರಿಯವರೇ ಮೊದಲಿಗರು. ಕನ್ನಡ ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳನ್ನು ಮೊದಲು ಬಳಸಿದವರು ಇವರು. ತಮ್ಮ ಜೀವಿತದ ಕೊನೆಯ ಕೆಲವು ಕಾಲ ಪುಣೆಯಲ್ಲಿ ವೈದ್ಯಕೀಯ ವೃತ್ತಿ ನಡೆಸಿ, ಹುಟ್ಟೂರಿಗೆ ಮರಳಿ ಅನಂತರ ಅಲ್ಲಿಯೇ ನಿಧನರಾದರು (**ನೋಡಿ: ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ**). (ಎಸ್.ಆರ್.ಎನ್.)

**ಕರ್ಕ್ಯೂಲಿಯಾನಿಡೀ:** ಗೋದಿ, ಅಕ್ಕಿ ಹಿಟ್ಟು ಮುಂತಾದುವಕ್ಕೆ ಹತ್ತುವ ಕುಟ್ಟೆ ಹುಳುಗಳು ಅಥವಾ ವಾಡೆ ಹುಳುಗಳು ಎಂದು ಕರೆಯಲ್ಪಡುವ ಸೊಂಡಿಲು ಕೀಟಗಳ ಕುಟುಂಬ. ಇವು ಕೀಟವರ್ಗದ ಕೋಲಿಯಾಪ್ಟಿರ ಗಣಕ್ಕೆ ಸೇರಿವೆ. ಇತರ ಜೀರುಂಡೆಗಳೊಡನೆ



ಕಾಸ್ಮೊಪಾಲಿಟಸ್ ಸಾರ್ಡಿಡಸ್; ರ್ಹಿಂಕೊಫೋರಸ್ ಫೆರುಜಿನಿಯಸ್; ಸೈಟೊಫೈಲಸ್ ಒರೈಜೆ ಎಂಬ ಕುಟ್ಟೆಹುಳು; ಕ್ರಿಪ್ಟೊರ್ಹಿಂಕಸ್ ಮ್ಯಾಂಜಿಫೆರಿ ಮಾವಿನ ಹಣ್ಣಿಗೆ ಹತ್ತುವ ಕುಟ್ಟೆಹುಳು

(ಬೀಟಲ್ಸ್) ಹೋಲಿಕೆಯಿದ್ದರೂ ಕೆಲವು ಗುಣಲಕ್ಷಣಗಳಲ್ಲಿ ಇವು ಭಿನ್ನವಾಗಿವೆ. ಈ ಕುಟುಂಬದ ಕೀಟಗಳ ತಲೆಯ ಮುಂಭಾಗ ಕೊಕ್ಕಿನ ಅಥವಾ ಸೊಂಡಿಲಿನ ಹಾಗಿರುವುದರಿಂದ ಇವನ್ನು ಸೊಂಡಿಲು ಕೀಟಗಳು (ವೀವಿಲ್ಸ್) ಎಂದು ಕರೆಯುವುದುಂಟು. ಇವುಗಳಲ್ಲಿ ಹಲವಾರು ಜಾತಿಗಳಿವೆ. ವಿವಿಧ ಜಾತಿಗಳಲ್ಲಿನ ಸೊಂಡಿಲ ಗಾತ್ರ, ಆಕಾರ ಮತ್ತು ಉದ್ದಗಳಲ್ಲಿ ವೈವಿಧ್ಯವಿದೆ. ಅನೇಕ ಪ್ರಭೇದಗಳಲ್ಲಿ ಸೊಂಡಿಲು ಸಾಮಾನ್ಯವಾಗಿದೊಡ್ಡದು. ಕುಡಿಮೀಸೆ (ಆಂಟೆನ) ಸೊಂಡಿಲಿನ ಮಧ್ಯಪ್ರದೇಶದಿಂದ ಹುಟ್ಟುತ್ತದೆ. ಕೆಲವು ಬಗೆಯ ಕೀಟಗಳಲ್ಲಿ (ನಟ್‌ವೀವಿಲ್ಸ್) ಸೊಂಡಿಲು ಬಹಳ ತೆಳ್ಳಗೆ ಕೀಟದ ಉದ್ದದಷ್ಟು ನೀಳವಾಗಿದೆ.

ಸೊಂಡಿಲು ಕೀಟಗಳು ಕಾಯಿ, ಹಣ್ಣು ಮತ್ತು ಸಸ್ಯಕಾಂಡಗಳಲ್ಲಿ ಆಳವಾದ ರಂಧ್ರಗಳನ್ನು ಕೊರೆಯುತ್ತವೆ. ಇಂಥ ರಂಧ್ರಗಳಲ್ಲಿಯೇ ಹೆಣ್ಣು ಕೀಟ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳಿಂದ ಹೊರಬಂದ ಡಿಂಬಗಳು (ಲಾರ್ವ) ಸಾಮಾನ್ಯವಾಗಿ ಮೊಗ್ಗು, ಬೀಜ, ಕಾಯಿ ಮತ್ತು ಕಾಂಡಗಳ ಒಳಗೇ ಇದ್ದು ಅವನ್ನು ತಿಂದು ಬೆಳೆಯುತ್ತವೆ. ಸೊಂಡಿಲು ಕೀಟಗಳು ಗೆಣಸು, ಹತ್ತಿ, ಪ್ಲಮ್, ಚೆರ್ರಿ, ಪೀಚ್, ಸೇಬು ಮುಂತಾದ ಹಣ್ಣುಗಳನ್ನೂ ಉಗ್ರಾಣಗಳಲ್ಲಿ ಶೇಖರಣೆ ಮಾಡುವ ದವಸಗಳನ್ನೂ ತಿಂದು ಹಾಳುಮಾಡುತ್ತವೆ.

ತೊಂದರೆಗೊಳಗಾದಾಗ ಈ ಕೀಟಗಳು ತಮ್ಮ ಕುಡಿಮೀಸೆ ಮತ್ತು ಕಾಲುಗಳನ್ನು ಮುದುಡಿ, ಚಲಿಸದೆ ನೆಲದ ಮೇಲೆ ಬಿದ್ದುಕೊಂಡಿದ್ದು ಸತ್ತಹಾಗೆ ನಟಿಸುತ್ತವೆ. ಕೆಲವಂತೂ ಬಣ್ಣದಲ್ಲಿ ಮತ್ತು ಆಕಾರದಲ್ಲಿ ಮರದ ತೊಗಟೆಯನ್ನೂ ಕಸಕಡ್ಡಿಗಳನ್ನೂ ಅನುಕರಿಸುತ್ತವೆ. ಚಲಿಸದೆ ಬಿದ್ದಿರುವಾಗ ಇವನ್ನು ಗುರುತಿಸುವುದು ಕಷ್ಟ.

ಈ ಕುಟುಂಬದಲ್ಲಿ ಕೆಳಗೆ ಸೂಚಿಸಿರುವ 13 ಉಪಕುಟುಂಬಗಳಿವೆ.

**1. ಸೈಲಾಡಿನೀ:** ತೆಳುವಾದ ಉದ್ದನೆಯ ಇರುವೆಗಳಂತಿರುವ ಕುಟ್ಟೆ ಹುಳುಗಳು ಇದಕ್ಕೆ ಸೇರಿವೆ. ಇವುಗಳ ಡಿಂಬಗಳನ್ನು ಸಿಹಿಗೆಣಸು ರಂಧ್ರ ಹುಳು ಎನ್ನುತ್ತಾರೆ. ಇವು ಸಿಹಿಗೆಣಸನ್ನು ಕೊರೆದು ಬೇರುಗಳನ್ನೂ ಗಿಡಗಳನ್ನೂ ನಾಶಗೊಳಿಸುತ್ತವೆ. ಅನೇಕ ವೇಳೆ ಇವು ಗೆಣಸಿನ ಗೆಡ್ಡೆಯಲ್ಲಿದ್ದು ಗೆಣಸು ಮಾರುಕಟ್ಟೆಗೆ ಬಂದಾಗ ಪ್ರೌಢಾವಸ್ಥೆ ತಲುಪಿ ಹೊರಬರುತ್ತವೆ.

2. **ಬೆಲಿನೀ:** ಇದರ ಒಂದೇ ಒಂದು ಪ್ರಭೇದವಾದ *ಇಥ್ಸಿರಿಸ್ ನೊಮಮೊ ರೇಸಿಯಸ್ಸಿಸ್* ಎಂಬ ಕೀಟ ಓಕ್, ಹಿಕರಿ ಮತ್ತು ಬೀಚ್ ಮರಗಳ ಕೊಂಬೆ ಮತ್ತು ಎಲೆಗಳಲ್ಲಿರುತ್ತದೆ. ಇದರ ಡಿಂಬಗಳು ಕೊಂಬೆಗಳನ್ನು ಕೊರೆಯುತ್ತವೆ. ಇದರ ಉದ್ದ 12–18 ಮಿಮೀ. ಬಣ್ಣ ಮಿರುಗುವ ಕಪ್ಪು.

3. **ರಿಂಖಿಟಿನೀ (ಸಿಂಬಿನೀ):** ಈ ಕುಟುಂಬದ ಕೀಟಗಳ ಮ್ಯಾಂಡಿಬಲ್‌ನ ಹೊರ ಮತ್ತು ಒಳ ಅಂಚಿನ ಮೇಲೆ ಹಲ್ಲುಗಳಿರುವುದರಿಂದ ಇವನ್ನು ಹಲ್ಲು ಮೂಗಿನ ಸೊಂಡಿಲು ಕೀಟ ಎಂದು ಕರೆಯುವುದುಂಟು. ಇವುಗಳ ಉದ್ದ 1.5–6.5 ಮಿಮೀ. ಇವು ಸಾಧಾರಣವಾಗಿ ಕುಳ್ಳಾದ ಗಿಡಗಳ ಮೇಲಿರುತ್ತವೆ. ರಿಂಖೈಟಿಸ್ ಬೈಕಲರ್ ಎಂಬ ಪ್ರಭೇದದ ಕೀಟಗಳು ಸಾಮಾನ್ಯವಾಗಿ ಗುಲಾಬಿಗಿಡಗಳಲ್ಲಿರುತ್ತವೆ. ಇದರ ಮೇಲ್ಮೈ ಕೆಂಪಾಗಿಯೂ ಕೆಳಭಾಗ ಕಪ್ಪಾಗಿಯೂ ಇರುತ್ತದೆ. ಮಿಕ್ಕ ಪ್ರಭೇದಗಳು ಮೊಗ್ಗು, ಕಾಯಿ ಮತ್ತು ಹಣ್ಣುಗಳಲ್ಲಿ ಮೊಟ್ಟೆಯಿಡುತ್ತವೆ.

**4. ಅಟ್ಟೆಲಾಬಿನೀ:** ರೂಢಿಯಲ್ಲಿ ಈ ಕುಟುಂಬದ ಕೀಟವನ್ನು ಎಲೆಸುರುಳಿ ಮಾಡುವ ಸೊಂಡಿಲು ಕೀಟ ಎನ್ನುತ್ತಾರೆ. ಮೊಟ್ಟೆಯನ್ನು ಎಲೆಯ ಮೇಲಿಟ್ಟ ಮೇಲೆ ಅದನ್ನು ಚಮತ್ಕಾರವಾಗಿ ಸುರುಳಿಸುತ್ತಿ ಎಲೆಯ ತೊಟ್ಟನ್ನು ಕಡಿದು ಅದನ್ನು ಕೆಳಗೆ ಬೀಳಿಸುತ್ತದೆ. ಮೊಟ್ಟೆಯೊಡೆದು ಹೊರಬರುವ ಡಿಂಬ ಎಲೆಯ ಒಳಭಾಗವನ್ನು ತಿಂದು ಬೆಳೆಯುತ್ತದೆ. ಕೀಟದ ಉದ್ದ 3–6ಮಿಮೀ.

**5. ಆಕಿಸೊರಿನಿನೀ (ಅಲ್ಲೊಕೊರಿನಿನೀ):** ಇದರಲ್ಲಿ ಒಂದೇ ಒಂದು ಪ್ರಭೇದವಿದೆ. ಈ ಕುಟ್ಟೆಹುಳು ಆರೋರೂಟ್ ಗಿಡದಲ್ಲಿ ಜೀವಿಸುತ್ತದೆ.

**6. ಟ್ರ್ಯಾಖಿಗೋನಿನೀ:** ಈ ಕುಟುಂಬದ ಕೀಟಗಳು ನೆಲಗಪ್ಪೆ ಆಕಾರವಿರುವುದರಿಂದ ಇವಕ್ಕೆ ನೆಲಗಪ್ಪೆ ಸೊಂಡಿಲು ಕೀಟಗಳೆಂದು ಹೆಸರು. ಎಲೆಯ ಕೆಳಭಾಗದಲ್ಲೇ ಚಲಿಸುವುದು ಈ ಕೀಟಗಳ ವಿಶೇಷ ಗುಣ.

**7. ಟೀರೋ ಕೋಲಿನೀ:** ಇದಕ್ಕೆ ಸೇರಿದ ಕೀಟಗಳು ಮೊಟಕು ರೆಕ್ಕೆಯವು. ಸಣ್ಣ ಓಕ್ ಮರಗಳಲ್ಲಿ ಸಾಧಾರಣವಾಗಿ ಕಾಣಬರುತ್ತವೆ.

**8. ಎಪಿಯೋನಿನೀ:** ಈ ಕುಟುಂಬದ ಕೀಟಗಳು ಬಹಳ ಸಣ್ಣ ಗಾತ್ರದವು. ಉದ್ದ ಸುಮಾರು 4.5 ಮಿಮೀ ಅಥವಾ ಇನ್ನೂ ಕಡಿಮೆ. ಅನೇಕ ಪ್ರಭೇದಗಳು ಅವರೆ ಜಾತಿಯ ಸಸ್ಯಗಳಲ್ಲಿ ಕಾಣಬರುತ್ತವೆ. ಡಿಂಬಗಳು ಈ ಸಸ್ಯಗಳ ಬೀಜ, ಕೊಂಬೆ ಮತ್ತು ಇತರ ಭಾಗಗಳನ್ನು ಕೊರೆದು ಅವುಗಳಲ್ಲಿರುತ್ತವೆ. ಇನ್ನು ಕೆಲವು ಪ್ರಭೇದಗಳು ಬೇರೆ ಗಿಡಮರಗಳಲ್ಲಿರುವುದುಂಟು.

**9. ಕರ್ಕ್ಯೂಲಿಯೋನಿನೀ:** ಈ ಕುಟುಂಬದ ಸೊಂಡಿಲು ಕೀಟಗಳು ಕರ್ಕ್ಯೂಲಿಯಾನಿಡೀ ವರ್ಗಕ್ಕೆ ಸೇರಿದ ಜೀರುಂಡೆಗಳ ಪ್ರತಿರೂಪೀ ಉದಾಹರಣೆಗಳು. ಇವು ಅನೇಕ ರೀತಿಯಲ್ಲಿ ಉತ್ತಮ ಬೆಳೆಗಳ ಮತ್ತು ಹಣ್ಣಿನ ಮರಗಳ ಪಿಡುಗುಗಳಾಗಿದ್ದು ಹೆಚ್ಚಿನ ಪ್ರಾಮುಖ್ಯ ಪಡೆದಿವೆ. ಇವುಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಿದೆ. ಉದಾ: *ಕೋನೊಟ್ರೇಚಲಸ್ ನೆನುಫಾರ್* ಎಂಬ ಪ್ರಭೇದ ಪ್ಲಮ್ ಹಣ್ಣಿನ ಕುಟ್ಟೆಹುಳು. ಇದು ಮಿಕ್ಕ ಕೆಲವು ಹಣ್ಣುಗಳಲ್ಲೂ ಪಿಡುಗಾಗಿರುವುದು. ಆನ್ತೊನೊಮಸ್ ಗ್ರಾಂಡಿಸ್ ಎಂಬ ಪ್ರಭೇದ ಹತ್ತಿಗಿಡಗಳ ಮೇಲೆ ವಾಸಿಸುವುದು. ಎಕಾರ್ನ್ ಮತ್ತು ಗಟ್ಟಿಕಾಯಿಗಳ (ನಟ್) ಕೀಟಗಳಲ್ಲಿ ನೀಳವಾದ ಸೊಂಡಿಲಿರುತ್ತದೆ.

10. **ಥೆಸೆಸ್ಟರ್ನಿನೀ (ಬ್ರೈಸೆಪ್ಸೈನೀ):** ಇವು ಎಮ್ಮೆ ಮುಸುಡಿ ಕೀಟಗಳು. ದನಕರುಗಳು ಸಗಣಿ ಕೆಳಗಡೆ ಇವುಗಳ ವಾಸ.

11. **ಕೊಸೊನಿನೀ:** ಅಗಲವಾದ ಮೊಟಕು ಕೊಕ್ಕಿನ ಕೀಟಗಳು. 1.5–6.5 ಮಿಮೀ. ನಷ್ಟು ಉದ್ದವಿರುತ್ತವೆ.

12. **ಓಟಿಯೊರಿಂಖಿನೀ:** ಇವು ಕುರುಚಲು ಗಿಡಗಳಲ್ಲಿ ಅಥವಾ ನೆಲದಲ್ಲಿರುತ್ತವೆ. ಕೆಲವಂತೂ ಬಹಳ ಮುಖ್ಯವಾದ ಬೆಳೆಗಳ ಪಿಡುಗುಗಳು.

13. **ಕ್ಯಾಲೆಂಡ್ರಿನೀ (ಬೆಲ್ ಬಗ್ಸ್ ಮತ್ತು ಕಾಳಿನ ಕೀಟಗಳು):** ಇದರ ಪ್ರಭೇದಗಳು ಸಾಮಾನ್ಯವಾಗಿ ಪುಷ್ಟವಾಗಿ, ದುಂಡಾಗಿ ವಿವಿಧ ಗಾತ್ರದಲ್ಲಿರುವುವು. *ರಿಂಕೊಫೊರಸ್ ಕೊಯನ್ಪೇಟಸ್* ಹಾಗೂ *ರಿ. ಫೆರುಜಿನಿಯಸ್* ಎಂಬುವು 20–30 ಮಿಮೀ. ಉದ್ದವಿರುತ್ತವೆ. ಇವು ತೆಂಗಿನ ಜಾತಿಯ ಮರಗಳಲ್ಲಿರುವುವು. ಸೈಟೊಫೈಲಸ್ ಒರೈಜೆ ಎಂಬುವು ಅಕ್ಕಿ, ಗೋದಿ ಮುಂತಾದ ಕಾಳುಗಳಲ್ಲಿರುವ ಸಣ್ಣ ಕುಟ್ಟೆ ಹುಳುಗಳು. ಇವು 3–4 ಮಿಮೀ. ಉದ್ದವಿರುವುವು. ಇವುಗಳ ಡಿಂಬಗಳು ಕಾಳುಗಳಲ್ಲಿ ಬೆಳೆಯುವುವು. (ಎನ್.ಬಿ.ಕೆ.;ಎನ್.ಎ.ಎ.)

**ಕರ್ಜ್, ಐಸೋಲ್ಡ್:** 1853–1944. ಜರ್ಮನ್ ಲೇಖಕಿ. ಸಣ್ಣಕಥೆಗಳನ್ನೂ ಭಾವಗೀತೆಗಳನ್ನೂ ಕಾದಂಬರಿಗಳನ್ನೂ ಬರೆದಿದ್ದಾಳೆ. ಪ್ರಸಿದ್ಧ ಸ್ವಾಬಿಯಾ ಕಾದಂಬರಿಕಾರ ಹರ್ಮನ್ ಕರ್ಜ್ ಈಕೆಯ ತಂದೆ. ಬಾಲ್ಯದಿಂದಲೂ ತಾಯಿಯ ಪ್ರಭಾವ ಹಾಗೂ ಶಿಕ್ಷಣದಲ್ಲಿ ಬೆಳೆದದ್ದರಿಂದ ಸಾಹಿತ್ಯದಲ್ಲಿ ಅಭಿರುಚಿಯುಂಟಾಯಿತು. ಪ್ರಾಚೀನ, ಅರ್ವಾಚೀನ ಜರ್ಮನ್ ಸಾಹಿತ್ಯವನ್ನು ಓದಿಕೊಂಡಳು. ಚಿಕ್ಕವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡಿದ್ದರಿಂದ ಸ್ವಾವಲಂಬಿಯಾಗಿ ದುಡಿಯ ಬೇಕಾಯಿತು. ಮ್ಯೂನಿಚ್‌ನಲ್ಲಿ ಭಾಷೆ ಕಲಿಸುವ ಶಿಕ್ಷಕಿಯಾದಳು. ಆಗ ಬರೆದ ಮೊದಲ ಸಣ್ಣಕಥೆ ಪ್ರಸಿದ್ಧವಾಯಿತು. ಯೌವನ ಸಹಜವಾದ ಭಾವನಾಶೀಲತೆ, ಧೀರೋದಾತ್ತ ನಾಯಕ ಚಿತ್ರಣ–ಇವು ಈಕೆಯ ಕಥೆಗಳಲ್ಲಿ ಕಂಡುಬಂದರೂ ಹಗಲುಗನಸು ಕಾಣುವಂಥ ಮನೋಧರ್ಮ ಈಕೆಗೆ ಇರಲಿಲ್ಲ. 1877ರಿಂದ ಆಚೆ ಫ್ಲಾರೆನ್ಸಿನಲ್ಲಿದ್ದ ತನ್ನ ತಾಯಿ ಮತ್ತು ಸೋದರರೊಂದಿಗೆ ಇರತೊಡಗಿದಳು. ಕಡಲು ಈಕೆಯ ಮುಖ್ಯ ಆಕರ್ಷಣೆ. ಈಕೆಯ ಪಾಲಿಗೆ ಅದು ಸ್ವತಂತ್ರ ವಿಚಾರದ ಸಂಕೇತವಾಯಿತು. ಸುಮಾರು 27 ವರ್ಷ ಇಟಲಿಯಲ್ಲೇ ನೆಲೆಸಿ ಅವ್ಯಾಹತವಾಗಿ ಕೃತಿರಚನೆ ಮಾಡಿದಳು. ಒಂದನೆಯ ಮಹಾಯುದ್ಧ ಆರಂಭವಾದಾಗ ಮ್ಯೂನಿಚ್‌ಗೆ ಹಿಂತಿರುಗಿದಳು. ಈಕೆಯ ಕಾವ್ಯಕ್ಕೆ ಇಟಲಿಯೇ ನಿರಂತರವಾದ ಸ್ಫೂರ್ತಿಯ ನೆಲೆ. ಆದ್ದರಿಂದಲೇ ಈಕೆ ಬರೆದ ಎಲ್ಲ ಕಥೆಗಳಲ್ಲೂ ಇಟಲಿಯ ಜೀವನ ಹಾಸುಹೊಕ್ಕಾಗಿದೆ.

ಗೆದಿಷ್ಟೆ (1899), ನ್ಯೂ ಗೆದಿಷ್ಟೆ (1905)–ಇವು ಈಕೆಯ ಪ್ರಕಟಿತ ಕವನ ಸಂಕಲನಗಳು. ಇವುಗಳಲ್ಲಿ ಚಿಂತನವೇ ಪ್ರಧಾನ ಗುಣ. ಕೆಲವೆಡೆ ಅದು ಅತಿ ಎನಿಸಿದರೂ ಜರ್ಮನ್ ಭಾವಗೀತೆಗಳಲ್ಲಿ ಈಕೆಯ ಕವಿತೆಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಆಲೋಚನೆಗಳಾಗಲೀ ಭಾವನೆಗಳಾಗಲೀ ಭಾವಾತಿರೇಕದ ಲೇಪವಿಲ್ಲದೆ ಪ್ರಾಮಾಣಿಕವಾಗಿ ನೇರವಾಗಿ ಅಭಿವ್ಯಕ್ತವಾಗಿರುವುದೇ ಈ ಕವನಗಳಿಗೆ ವಿಶೇಷತೆ. ಈ ದೃಷ್ಟಿಯಿಂದ ಈಕೆಯ ಕವನಗಳನ್ನು ರಿಕಾರ್ಡ್ ಹ್ಯೂನ ಕವನಗಳಿಗೆ ಹೋಲಿಸುವುದುಂಟು. ಹ್ಯೂ ಈಕೆಗಿಂತಲೂ ಶ್ರೇಷ್ಠ ಕವಿಯಾದರೂ ಆತನ ಕವನಗಳಲ್ಲಿ ಕಾಣದ ಸೊಗಸು, ಹೊಳಹು ಈಕೆಯ ಕವಿತೆಗಳಲ್ಲಿವೆ. ಐಸೋಲ್ಡಳ ಕಾದಂಬರಿ ವನಾಡಿಸ್ ಅನ್ನು ಜರ್ಮನಿಯ ಬಿಲ್ಡುಂಗ್ಸ್ ರೊಮಾನ್ ಪರಂಪರೆಗೆ ಸೇರಿಸಿದ್ದಾರೆ.

ಕೆಲವು ಬಾರಿ ಭಾವದ ಕಾವಿಗೂ ಸತ್ತ್ವಕ್ಕೂ ಚ್ಯುತಿ ಬಂದರೂ ಕೃತಿಯ ರಚನೆಯ ಕಡೆ ಸುಭಗವಾದ ಶೈಲಿಯಕಡೆ ವಿಶೇಷಗಮನವಿತ್ತು ಶ್ರಮವಹಿಸಿ ತಿದ್ದಿ ತೀಡಿ ಹೊಳಪು ಕೊಟ್ಟಿರುವುದರಿಂದ ಐಸೋಲ್ಡಳ ಕೃತಿಗಳು ಕಲಾತ್ಮಕ ಪರಿಪೂರ್ಣತೆಗೆ ಹೆಸರಾಗಿವೆ. (ಕೆ.ಬಿ.ಪಿ.)

**ಕರ್ಜ್, ಹರ್ಮನ್:** 1813–1873. ಹೆಸರಾಂತ ಜರ್ಮನ್ ಕಾದಂಬರಿಕಾರ. ಜನನ ಹಾಯ್ಬ್ರಿಂಗೆನಿನಲ್ಲಿ. ಷಿಲ್ಲರ್ಸ್ ಹೀಮತ್ ಜಾಹ್ರೆ ಮತ್ತು ಡೆರ್ ಸೊನೆನ್ ವಿರ್ಟ್ ಎಂಬ ಈತನ ಐತಿಹಾಸಿಕ ಕಾದಂಬರಿಗಳು ಇವನ ಖ್ಯಾತಿಯನ್ನು ಇಂದಿಗೂ ಉಳಿಸಿವೆ. ಮಾಲ್‌ಬ್ರೌನ್ ಮತ್ತು ಟ್ಯೂಬಿಗೆನ್ ನಗರಗಳಲ್ಲಿ ಈತನ ವಿದ್ಯಾಭ್ಯಾಸ ನಡೆಯಿತು. ಅನಂತರ ಬರೆಹವೇ ಈತನ ವೃತ್ತಿಯಾಯಿತು; ತಾನು ಹುಟ್ಟಿ ಬೆಳೆದ ಪ್ರಾಂತ್ಯದ ಬದುಕನ್ನೇ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಶ್ರೇಷ್ಠಕೃತಿಗಳನ್ನು ಬರೆದ. ಮೂರು ಸಂಪುಟಗಳಲ್ಲಿರುವ ಎರ್ಝಾಹಿಲಂಗೆನ್ (1858–63) ಎಂಬುದು ಸ್ವಾಬಿಯನ್ ಜೀವನವನ್ನು ವರ್ಣರಂಜಿತವಾಗಿ ಚಿತ್ರಿಸುವ ಈತನ ಒಂದು ಕಥಾಸಂಕಲನ. ತನ್ನ ಬರಹಗಳಿಂದ ಹಣ ಮತ್ತು ಹೆಸರು ಬರಲಿಲ್ಲವಾದರೂ ಬರೆವ ಹವ್ಯಾಸವನ್ನು ಮುಂದುವರಿಸಿ ಇಂಗ್ಲಿಷ್, ಸ್ಪಾನಿಷ್, ಇಟಾಲಿಯನ್ ಮತ್ತು ಮಧ್ಯ ಜರ್ಮನ್ ಭಾಷೆಗಳಿಂದ ಕೆಲವು ಶ್ರೇಷ್ಠ ಕೃತಿಗಳ ಭಾಷಾಂತರ ಮಾಡಿದ. ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಯೊಂದರ ಸಂಪಾದಕನಾಗಿಯೂ (1843–54) ರಾಜಕಾರಣಿಯಾಗಿಯೂ ದುಡಿದ. ಅನಂತರ ಟ್ಯೂಂಬಿಗೆನಿನಲ್ಲಿ ವಿಶ್ವವಿದ್ಯಾನಿಲಯದ ಗ್ರಂಥಪಾಲನಾಗಿ ಕೆಲಸಮಾಡುತ್ತಿದ್ದು ಅದೇ ನಗರದಲ್ಲಿ ನಿಧನನಾದ. ಈತನ ಮಗಳಾದ ಐಸೋಲ್ಡ್ ಕರ್ಜ್ ಸಹ ಈತನಂತೆಯೇ ಕವನಗಳನ್ನೂ ಕಾದಂಬರಿಗಳನ್ನೂ ಬರೆದಿದ್ದಾಳೆ. ಹರ್ಮನ್ ಫಿಷರ್ ಎಂಬುವನ ಸಂಪಾದಕತ್ವದಲ್ಲಿ ಈತನ ಎಲ್ಲ ಕೃತಿಗಳೂ 12 ಸಂಪುಟಗಳಲ್ಲಿ ಪ್ರಕಟವಾಗಿವೆ. (ಕೆ.ಬಿ.ಪಿ.)

**ಕರ್ಜಗಿ:** ಹಾವೇರಿ ಜಿಲ್ಲೆಗೆ ಸೇರಿದ ಹಾವೇರಿ ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣಕ್ಕೆ ಈಶಾನ್ಯದಲ್ಲಿ 11.7 ಕಿಮೀ ದೂರದಲ್ಲಿ ವರದಾ ನದಿಯ ತೀರದಲ್ಲಿರುವ ಒಂದು ಊರು. 1905ರವರೆಗೆ ಈ ಊರು ಒಂದು ತಾಲ್ಲೂಕಾಗಿದ್ದು ಕರ್ಜಗಿ ಅದರ ಆಡಳಿತ ಕೇಂದ್ರವಾಗಿತ್ತು. ಮುಂದೆ ತಾಲ್ಲೂಕು ಕೇಂದ್ರ ಹಾವೇರಿಗೆ ವರ್ಗಾಯಿಸಲಾಯಿತು. ವಿಸ್ತೀರ್ಣ 28.38 ಚ.ಕಿಮೀ ಇತ್ತು. ಜನಸಂಖ್ಯೆ 7508 (2001).

ಓದಿಗೆ ಶಾಲಾ ಸೌಲಭ್ಯವಿದೆ. ಊರು ಇತ್ತೀಚೆಗೆ ಇತರೆ ನಾಗರಿಕ ಸೌಲಭ್ಯಗಳನ್ನು ಹೊಂದಿದೆ.

ಇಲ್ಲಿ 32 ದೇವಾಲಯಗಳಿವೆ. ಇವುಗಳಲ್ಲಿ ಬ್ರಹ್ಮದೇವರು, ಮೌನೇಶ್ವರ, ವೀರ ಭದ್ರ ಹಾಗೂ ಪಾಂಡುರಂಗ ದೇವಾಲಯಗಳು ಮುಖ್ಯವಾದವು. ಕಾರ ಹುಣ್ಣಿಮೆಯಂದು ಬ್ರಹ್ಮದೇವರ ಜಾತ್ರೆ ಜರುಗುತ್ತದೆ. ಮೌನೇಶ್ವರ ಜಾತ್ರೆ, ವೀರಭದ್ರ ದೇವರ ಜಾತ್ರೆ, ಪಾಂಡುರಂಗನ ಜಾತ್ರೆ, ಚಮನಶಾವಲಿ ಉರುಸುಗಳು ಇತರ ಉತ್ಸವಗಳು. ರೈಲ್ವೆ ನಿಲ್ದಾಣದಿಂದ ಊರಿಗೆ ಬರುವ ಮಾರ್ಗದಲ್ಲಿ ಶ್ರೀ ರಾಘವೇಂದ್ರಯತಿಗಳ ಮಠವಿದೆ.

ಇಲ್ಲಿಯ ಹವಾಮಾನ ಸಮ್ಮಿಶ್ರವಾಗಿದ್ದು ಮಳೆ ಸಾಧಾರಣವಾಗಿದೆ. ಹತ್ತಿ, ಜೋಳ, ಸೇಂಗ, ಅಕ್ಕಡಿಕಾಳುಗಳು ಇಲ್ಲಿಯ ಮುಖ್ಯ ಬೆಳೆಗಳು. ಈ ಊರಿಗೆ ಹತ್ತಿರದಲ್ಲಿರುವ ಕರಡಿಗುಡ್ಡದಲ್ಲಿ ಮನೆಕಟ್ಟುವ ಕಲ್ಲುಗಳೂ ಉರುವಲು ಕಟ್ಟಿಗೆಯೂ ದೊರೆಯುತ್ತವೆ. ಬಡಿಗತನ, ಕಮ್ಮಾರಿಕೆ, ನೇಕಾರಿಕೆ ಇಲ್ಲಿಯ ಮುಖ್ಯವಾದ ಕಸಬುಗಳು. ದೋತರ ಮತ್ತು ಸೀರೆಗಳ ನೇಯ್ಗೆ ಮುಖ್ಯವಾದದ್ದು. ಇಲ್ಲಿ ಹತ್ತಿ ಹಿಂಜುವ ಗಿರಣಿಗಳಿವೆ. ಹತ್ತಿ, ಅರಳೆ ಮತ್ತು ಹತ್ತಿಕಾಳುಗಳ ವ್ಯಾಪಾರ ನಡೆಯುತ್ತದೆ. (ಎಸ್.ವಿ.ಪಿ.ಎ.)

**ಕರ್ಜನ್, ಜಾರ್ಜ್‌ನ್ಯಾಥೆನಿಯಲ್, ಕೆಡ್ಲ್‌ಸ್ಟನ್ ಮಾರ್ಕ್ವಿಸ್:** 1859–1925. ಇಂಗ್ಲೆಂಡಿನ ರಾಜಕಾರಣಿ. ಭಾರತದ ವೈಸ್‌ರಾಯ್ (1898–1905), ಬ್ರಿಟನಿನ ವಿದೇಶಾಂಗ ಕಾರ್ಯದರ್ಶಿ (1919–1924). 4ನೆಯ ಬ್ಯಾರನ್ ಸ್ಕಾರ್ಸ್‌ಡೇಲನ ಹನ್ನೊಂದು ಮಕ್ಕಳ ಪೈಕಿ ನಾಲ್ಕನೆಯವನಾಗಿ 1859ರ ಜನವರಿ 11ರಂದು ಡರ್ಬಿಷೈರಿನ ಕೆಡ್ಲ್‌ಸ್ಟನ್ ಹಾಲಿನಲ್ಲಿ ಹುಟ್ಟಿದ. ಕರ್ಜನನಿಗೆ 16 ವರ್ಷವಾಗಿದ್ದಾಗ ತಾಯಿ ತೀರಿಕೊಂಡಳು. ಬಾಲ್ಯದಲ್ಲಿ ಕರ್ಜನನ ಮೇಲೆ

ಬಹುವಾಗಿ ಪ್ರಭಾವ ಬೀರಿದವರೆಂದರೆ ಈತನ ಗೃಹ ಶಿಕ್ಷಕಿ ಮತ್ತು ಪ್ರಾಥಮಿಕ ಶಾಲಾಧ್ಯಾಪಕ. ಕಷ್ಟಪಟ್ಟು ದುಡಿಯುವ ಅಭ್ಯಾಸವೂ ವಿವರಗಳನ್ನು ಗಮನಿಸುವ ಗುಣವೂ ಕರ್ಜನನಿಗೆ ಬಂದದ್ದು ಇವರಿಂದ. ಈಟನ್ ಆಕ್ಸ್‌ಫರ್ಡ್‌ಗಳಲ್ಲಿ ಕರ್ಜನ್ ಶಿಕ್ಷಣ ಪಡೆದ. ಆಕ್ಸ್‌ಫರ್ಡಿನಲ್ಲಿದ್ದಾಗ ಇವನಿಗೆ ಬೆನ್ನುಮೂಳೆ ಬಾಗಿತು. ಈ ನೋವನ್ನುವನ್ನು ತನ್ನ ಇಡೀ ಜೀವನಪರ್ಯಂತ ಅನುಭವಿಸಬೇಕಾಯಿತು. ಬಾಗಿದ ಬೆನ್ನನ್ನು ನೆಟ್ಟಗೆ ಮಾಡಲು ಕರ್ಜನ್ ಉಕ್ಕಿನ ಕವಚ ತೊಡುತ್ತಿದ್ದ. ಇದರಿಂದ ಇಡೀ ದೇಹವೇ ಸೆಟೆದಂತೆ ಕಾಣುತ್ತಿತ್ತು. ಈ ಗುಣವೇ ಮನಸ್ಸನ್ನೂ ಹೊಕ್ಕಿತೇನೋ ಎಂಬಂತೆ ಮುಂದಿನ ಜೀವನದಲ್ಲಿ ಇವನ ನಡತೆಯೂ ಘಟನೆಗಳೂ ರೂಪುಗೊಂಡುವು. ಕಾಲೇಜು ಸಂಘದ ಅಧ್ಯಕ್ಷನಾಗಿ ಕರ್ಜನ್ ಆಯ್ಕೆಗೊಂಡ. ಶಿಕ್ಷಣ ಮುಗಿದ ಮೇಲೆ ಧಾರಾಳವಾಗಿ ಸಂಚರಿಸಿದ; ಸಮಾಜ ಜೀವನದಲ್ಲಿ ಬೆರೆತ.

ಕನ್ಸರ್ವೆಟಿವ್ ಪಕ್ಷದ ವತಿಯಿಂದ ಕರ್ಜನ್ ಬ್ರಿಟಿಷ್ ಪಾರ್ಲಿಮೆಂಟನ್ನು ಪ್ರವೇಶಿಸಿದ್ದು 1886ರಲ್ಲಿ. ಐದು ವರ್ಷಗಳ ಅನಂತರ (1891) ಈತ ಭಾರತಕ್ಕೆ ಕೆಳಕಾರ್ಯದರ್ಶಿಯಾಗಿ ನೇಮಕಹೊಂದಿದ. 1895ರಲ್ಲಿ ವಿದೇಶಾಂಗ ವ್ಯವಹಾರಗಳ ಕೆಳಕಾರ್ಯದರ್ಶಿಯ ಹುದ್ದೆ ಇವನಿಗೆ ಲಭ್ಯವಾಯಿತು.

ಈ ಕಾಲದಲ್ಲಿ ಕರ್ಜನ್ ಮಧ್ಯ ಏಷ್ಯ, ಪಶ್ಚಿಮ ಏಷ್ಯ, ಭಾರತ, ಚೀನ, ಅಮೆರಿಕ ಮುಂತಾದ ಕಡೆಗಳಲ್ಲಿ ಪ್ರವಾಸಮಾಡಿ ವಿಪುಲವಾದ ಸಾಮಗ್ರಿಯನ್ನೂ ಅನುಭವವನ್ನೂ ಸಂಗ್ರಹಿಸಿಕೊಂಡ. ಇವನ ಲೇಖನಿಯಿಂದ ಅನೇಕ ಪುಸ್ತಕಗಳು ಹೊರ ಬಂದುವು. 1895ರಲ್ಲಿ ಕರ್ಜನ್ ಅಮೆರಿಕದ ಕೋಟ್ಯಧಿಶ್ವರನೊಬ್ಬನ ಮಗಳನ್ನು (ಮೇರಿ ಲೀಟರ್) ಮದುವೆಯಾದ.

ಕರ್ಜನ್ ಭಾರತದ ವೈಸ್ರಾಯಿಯಾದದ್ದು 1898ರಲ್ಲಿ. ಆಗ ಇವನಿಗೆ ಇನ್ನೂ 40 ವರ್ಷ ತುಂಬಿರಲಿಲ್ಲ. ಈ ಹೊಸ ಹುದ್ದೆಯಲ್ಲಿ ಕರ್ಜನ್ ಅತ್ಯಂತ ಉತ್ಸಾಹದಿಂದಲೇ ಕಾರ್ಯವನ್ನಾರಂಭಿಸಿದ. ತನ್ನ ವೈಸ್‌ರಾಯ್‌ಗಿರಿಯಲ್ಲಿ ಕರ್ಜನ್ ಮಾಡಿದ ಸುಧಾರಣೆಗಳೂ ಸಾಧನೆಗಳೂ ಅನೇಕ. ಬ್ರಿಟಿಷ್ ಆಡಳಿತಕ್ಕೆ ಕಿರುಕುಳ ಕೊಡುತ್ತಿದ್ದ

ವಾಯವ್ಯ ಗಡಿಪ್ರದೇಶದ ಜನರ ಮೇಲೆ ಹೆಚ್ಚಿನ ಹತೋಟಿ ತರುವ ಉದ್ದೇಶದಿಂದ ಕರ್ಜನ್ ಅದನ್ನೊಂದು ಪ್ರತ್ಯೇಕ ಪ್ರಾಂತ್ಯವಾಗಿ ವಿಭಜಿಸಿದ. ಆದರೂ ಪರಿಸ್ಥಿತಿ ಕೈಮೀರಿದ್ದರಿಂದ 1901ರಲ್ಲಿ ವಜೀರಿಗಳ ಮೇಲೆ ಸೈನಿಕ ಕಾರ್ಯಾಚರಣೆ ನಡೆಸಬೇಕಾಯಿತು. ಇದು ಬ್ರಿಟಿಷರ ವಿಜಯವಾಗಿ ಪರ್ಯವಸಾನಗೊಂಡಿತು. ಬ್ರಿಟಿಷ್ ಹಿತಗಳಿಗೆ ರಷ್ಯನರಿಂದ ಧಕ್ಕೆಯೊದಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಕರ್ಜನ್ 1903ರಲ್ಲಿ ಪರ್ಷಿಯನ್ ಖಾರಿ ಪ್ರದೇಶಕ್ಕೆ ಭೇಟಿಕೊಟ್ಟ. ಟಿಬೆಟಿನಲ್ಲಿ ಅವರ ಪ್ರಭಾವ ಬೆಳೆಯದಂತೆ ಮಾಡಲು ಬ್ರಿಟಿಷ್ ನಿಯೋಗವೊಂದನ್ನು ಅಲ್ಲಿಗೆ ಕಳಿಸಿದ. ಆದರೆ ಟಿಬೆಟಿನೊಂದಿಗೆ ವಿರಸ ಬೆಳೆಯಿತು. ಬ್ರಿಟಿಷ್ ಭಾರತ ಸೇನೆ ಲ್ಹಾಸಕ್ಕೆ ನುಗ್ಗಿತು. 1904ರಲ್ಲಿ ಟಿಬೆಟರು ಶಾಂತಿಗೆ ಒಡಂಬಡಬೇಕಾಯಿತು. ಆಡಳಿತದ ನಾನಾ ಶಾಖೆಗಳನ್ನು ಕರ್ಜನ್ ತೀಕ್ಷ್ಣವಾದ ತನಿಖೆಗೆ ಒಳಪಡಿಸಿ ಅವನ್ನು ಸುಧಾರಿಸಿದ. ಇಂಪೀರಿಯಲ್ ಕೆಡೆಟ್ ಕೋರನ್ನು ಸ್ಥಾಪಿಸಿದವನೂ ಕಲ್ಕತ್ತದ ವಿಕ್ಟೋರಿಯ ಸ್ಮಾರಕಭವನ ನಿರ್ಮಿಸಿದವನೂ ಕರ್ಜನನೇ. ಈ ಭವನಕ್ಕಾಗಿ ಭಾರತದ ಶ್ರೀಮಂತರನೇಕರಿಂದ ಈತ ಅಪಾರ ಧನಸಂಗ್ರಹಮಾಡಿದ. 1903ರಲ್ಲಿ ಏಳನೆಯ ಎಡ್ವರ್ಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಕರ್ಜನನೂ ದೆಹಲಿಯಲ್ಲಿ ದರ್ಬಾರ್ ನಡೆಸಿದ.

ಭಾರತದ ಹಣಕಾಸಿನ ನಿರ್ವಹಣೆಯಲ್ಲಿ ಕರ್ಜನ್ ತೋರಿದ ಚಾಕಚಕ್ಯತೆ ಅಸಾಧಾರಣ. ಈತನ ಕಾಲದಲ್ಲಿ ಉಪ್ಪಿನ ತೆರಿಗೆ ಎರಡು ಸಾರಿ ಇಳಿಯಿತು. ಕಡಿಮೆ ವರಮಾನಗಳ ಮೇಲಣ ತೆರಿಗೆ ರದ್ದಾಯಿತು. ಸರ್ಕಾರಿ ರಹಸ್ಯ ಕಾಯಿದೆ ಭಾರತೀಯ ಗಣಿಗಳ ಕಾಯಿದೆ, ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಯಿದೆ, ಸಹಕಾರ ಸಂಘಗಳ ಕಾಯಿದೆ––ಮುಂತಾದ ಹಲವಾರು ಕಾಯಿದೆಗಳು ಜಾರಿಗೆ ಬಂದದ್ದು ಈತನ ಅಧಿಕಾರದ ಕಾಲದಲ್ಲೇ. (ಎಸ್.ವಿ.ಡಿ.)

ಆದರೆ ಕರ್ಜನನ ಧೋರಣೆಯೂ ಇವನು ಕೈಗೊಂಡ ಹಲವು ಕ್ರಮಗಳೂ ಜನರಲ್ಲಿ ತೀವ್ರ ಅಸಮಾಧಾನಕ್ಕೂ ಕ್ರೋಧಕ್ಕೂ ಕಾರಣವಾದುವು. ವಿಶ್ವವಿದ್ಯಾಲಯಗಳ ಮಸೂದೆ ಇಂಥ ಕ್ರಮಗಳಲ್ಲೊಂದು. ಬಂಗಾಲದ ವಿಭಜನೆಯಿಂದಂತೂ ಸಿಂಹದ ಕೇಸರವನ್ನೇ ಹಿಡಿದೆಳೆದಂತಾಯಿತು. ಭಾರತೀಯರ ಗುಣವನ್ನೂ ಭಾರತ ರಾಷ್ಟ್ರೀಯ ಕಾಂಗ್ರೆಸನ್ನೂ ಅವಹೇಳನ ಮಾಡಿ ಈತ ಮಾಡಿದ ಅನೇಕ ಭಾಷಣಗಳಿಂದ ಜನರಲ್ಲಿ ವಿರೋಧ ತೀವ್ರವಾಯಿತು. ಎಲ್ಲ ರಾಜಕೀಯ ಚಳವಳಿಗಳನ್ನೂ ಮರ್ದಿಸಲು ಕೈಕೊಂಡ ಕ್ರಮಗಳಿಂದ ಪರಿಸ್ಥಿತಿ ಸುಧಾರಿಸುವ ಬದಲು ಇನ್ನೂ ಹದಗೆಟ್ಟಿತು. ಭಾರತೀಯರ ರಾಷ್ಟ್ರಪ್ರೇಮವೂ ಕಾಂಗ್ರೆಸಿನ ಬಗ್ಗೆ ಅವರ ಅಭಿಮಾನವೂ ಬೆಳೆಯಲು ಕರ್ಜನನ ಅತ್ಯುಗ್ರ ಕ್ರಮಗಳೂ ಕಾರಣವಾದುವು.

1903ರಲ್ಲಿ ಕರ್ಜನನ ವೈಸ್‌ರಾಯ್ ಅಧಿಕಾರಾವಧಿ ಮುಗಿಯಿತು. 1904ರಲ್ಲಿ ಈತ ಮತ್ತೆ ನೇಮಕಗೊಂಡ. ಆದರೆ ವೈಸ್‌ರಾಯ್ ಮಂಡಲಿಯ ಸೈನಿಕ ಸದಸ್ಯನ ಅಧಿಕಾರ ವೇನೆಂಬುದರ ಬಗ್ಗೆ ಕರ್ಜನನಿಗೂ ಪ್ರಧಾನ ದಂಡನಾಯಕನಾಗಿದ್ದ ಲಾರ್ಡ್ ಕಿಚನರನಿಗೂ ಮನಸ್ತಾಪ ಬೆಳೆದು, ಕರ್ಜನ ಕೊನೆಗೆ ತನ್ನ ಹುದ್ದೆಗೆ ರಾಜೀನಾಮೆ ನೀಡಿದ. ಲಾರ್ಡ್ ಕಿಚನರ್‌ಗೆ ಲಂಡನಿನಲ್ಲಿ ವಿಶೇಷ ಪ್ರಭಾವವಿದ್ದದ್ದರಿಂದ ಇಂಗ್ಲೆಂಡಿನ ಸರ್ಕಾರ ಕರ್ಜನನ ರಾಜೀನಾಮೆಯನ್ನು ಒಪ್ಪಿಕೊಂಡಿತು (1905). ಮರುವರ್ಷ ಕರ್ಜನನ ಪತ್ನಿ ತೀರಿಕೊಂಡಳು.

1907ರಲ್ಲಿ ಈತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ (ಛಾನ್ಸಲರ್) ಚುನಾವಣೆಗೊಂಡು ಮತ್ತೆ ರಾಜಕೀಯಕ್ಕೆ ಜಾರಿಕೊಳ್ಳಲು ಸಮಯಕಾಯುತ್ತಿದ್ದ. ಅಲ್ಲೂ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಈತ ಕೆಡಲ್ ಸ್ಟನಿನ್ ಅರ್ಲ್ ಮತ್ತು ಬ್ಯಾರನ್ ರ್‍ಯಾವೆನ್ಸ್‌ಡೇಲ್ ಆದದ್ದು 1911ರಲ್ಲಿ. 1915ರಲ್ಲಿ ಆಸ್ಕ್ವಿತನ ಯುದ್ಧಕಾಲೀನ ಸಂಮಿಶ್ರ ಸರ್ಕಾರದಲ್ಲಿ ಕರ್ಜನನಿಗೆ ಲಾರ್ಡ್ ಪ್ರಿವಿಸೀಲ್‌ನ ಅಧಿಕಾರ ಲಭ್ಯವಾಯಿತು. 1916ರಲ್ಲಿ ಆಸ್ಕ್ವಿತನ ಸರ್ಕಾರದ ಪತನವಾದ ಮೇಲೆ ಅಧಿಕಾರಕ್ಕೆ ಬಂದ ಡೇವಿಡ್ ಲಾಯ್ಡ್ ಜಾರ್ಜನ ಸರ್ಕಾರದಲ್ಲಿ ಕರ್ಜನ್ ಯುದ್ಧದ ಒಳಸಂಪುಟದ ಸದಸ್ಯರಲ್ಲೊಬ್ಬನಾಗಿದ್ದ. 1917ರಲ್ಲಿ ಗ್ರೇಸ್ ಹಿಂಡ್ಸ್ ಡಗ್ಗನ್ ಎಂಬ ಅಮೆರಿಕನ್ ವಿಧವೆಯೊಬ್ಬಳನ್ನು ವಿವಾಹವಾದ.

1919 ಆರಂಭದಲ್ಲಿ ಪ್ಯಾರಿಸಿನ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕಾಗಿ ಲಾರ್ಡ್ ಬಾಲ್ಫರ್ ಅಲ್ಲಿಗೆ ಹೋಗಿದ್ದಾಗ ಅವನ ಸ್ಥಾನದಲ್ಲಿ ಈತ ಹಂಗಾಮಿಯಾಗಿ ವಿದೇಶಾಂಗ ಕಚೇರಿಯ ಹೊಣೆ ಹೊತ್ತಿದ್ದ. ಆ ವರ್ಷದ ಅಕ್ಟೋಬರಿನಲ್ಲಿ ಬಾಲ್ಫರ್ ರಾಜೀನಾಮೆ ನೀಡಿದ್ದರಿಂದ ಕರ್ಜನನನ್ನೇ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕ ಮಾಡಿದಾಗ ಈತನ ಬಾಳಿನ ಆಕಾಂಕ್ಷೆಗಳಲ್ಲೊಂದು ಪೂರೈಸಿದಂತಾಯಿತು. ಆದರೆ ಇವನಿಗೂ ಪ್ರಧಾನಮಂತ್ರಿಗೂ ಒಳ್ಳೆಯ ಸಂಬಂಧ ಬೆಳೆಯಲಿಲ್ಲ. ಕರ್ಜನನನ್ನು ಕೇಳದೆಯೇ ಅವನ ಶಾಖೆಯ ವಿಚಾರಗಳನ್ನು ಪ್ರಧಾನಮಂತ್ರಿ ಇತ್ಯರ್ಥಪಡಿಸುತ್ತಿದ್ದ. ತುರ್ಕಿ ಗ್ರೀಸ್‌ಗಳ ನಡುವೆ ಘರ್ಷಣೆಯಾದಾಗ ತುರ್ಕರನ್ನು ಯುರೋಪಿನಿಂದಲೂ ಗ್ರೀಕರನ್ನು ಏಷ್ಯದಿಂದಲೂ ದೂರ ಇಡಬೇಕೆಂಬುದು ಕರ್ಜನನ ನೀತಿಯಾಗಿತ್ತು. ಲಾಯ್ಡ್ ಜಾರ್ಜ್ ಇದನ್ನೊಪ್ಪಲಿಲ್ಲ. ಕರ್ಜನ್ ಪ್ರತಿಭಟಿಸಿದ. ರಾಜೀನಾಮೆ ಕೊಡುವುದಾಗಿ ಬೆದರಿಸಿದ. ಆದರೆ ರಾಜೀನಾಮೆ ಕೊಡುವ ಸ್ಥೈರ್ಯ ಬರಲಿಲ್ಲ. ಪದೇ ಪದೇ ಈತ ಮಾಡುತ್ತಿದ್ದ ಇಂಥ ಬೆದರಿಕೆಗಳು ಅಪಹಾಸ್ಯಕ್ಕೆಡೆಕೊಟ್ಟುವು. ಲಾಯ್ಡ್ ಜಾರ್ಜನ ತುರ್ಕಿ ನೀತಿ ವಿಫಲಗೊಂಡು ಅವನ ಸಂಮಿಶ್ರ ಸರ್ಕಾರಕ್ಕೆ ಗಂಡಾಂತರ ಬಂತು. ಬ್ರಿಟನಿನಲ್ಲಿ ಚುನಾವಣೆ ನಡೆಸಬೇಕೆಂದು ತೀರ್ಮಾನವಾಯಿತು. ಸ್ವಲ್ಪ ಕಾಲಾನಂತರ ಲಾಯ್ಡ್ ಜಾರ್ಜ್ ಮತ್ತೆ ಕರ್ಜನನನ್ನು ಕಡೆಗಣಿಸಿ ವಿದೇಶಾಂಗ ವ್ಯವಹಾರಗಳಲ್ಲಿ ನೇರವಾಗಿ ಸಂಧಾನ ನಡೆಸತೊಡಗಿದ. ಇದರಿಂದ ಕರ್ಜನನ ಅಸಮಾಧಾನ ಪರಮಾವಧಿಗೇರಿತು. ಕೊನೆಗೂ ಈತ ರಾಜೀನಾಮೆ ಕೊಟ್ಟ.

ಕರ್ಜನನ ಅಭಿಮಾನ ಆಮೇಲೆ ಆಂಡ್ರ್ಯೂಬೊನಾರ್ ಲಾನ ಕಡೆಗೆ ತಿರುಗಿತು. 1922ರಲ್ಲಿ ಆತ ಪ್ರಧಾನಿಯಾದಾಗ ಕರ್ಜನ್ ವಿದೇಶಾಂಗ ಕಾರ್ಯದರ್ಶಿಯಾದ. ಕೊನೆಗೂ ಕರ್ಜನನಿಗೆ ತನ್ನ ಸಂಪೂರ್ಣ ಅಧಿಕಾರ ಚಲಾಯಿಸುವ ಸ್ವಾತಂತ್ರ್ಯ ಲಭ್ಯವಾಯಿತು.

ಆದರೆ 1923ರಲ್ಲಿ ಅನಾರೋಗ್ಯ ನಿಮಿತ್ತ ಬೊನಾರ್ ಲಾ ರಾಜೀನಾಮೆ ನೀಡಿದ. ಆಗ ತಾನೇ ಪ್ರಧಾನಿಯಾಗುವೆನೆಂದು ಕರ್ಜನ್ ನೆನೆದಿದ್ದ. ಆದರೆ ಪಕ್ಷದ ಸದಸ್ಯರು ಕರ್ಜನನ ನಿರೀಕ್ಷೆಯನ್ನು ಸುಳ್ಳುಮಾಡಿ ಸ್ಟ್ಯಾನ್ಲೆ ಬಾಲ್ಡ್ವಿನನನ್ನು ತಮ್ಮ ನಾಯಕನನ್ನಾಗಿ ಆರಿಸಿದರು. ಪೀರ್ ಆದವನು ಪ್ರಧಾನಿಯಾಗಬಾರದೆಂಬುದು ಅವರು ಕೊಟ್ಟ ಕಾರಣ. ಆದರೆ ವಾಸ್ತವ ಕಾರಣ ಬೇರೆ. ಕರ್ಜನನ ವೈಭವ ಅಟ್ಟಹಾಸಗಳೂ ಅಹಂಭಾವವೂ ಅನೇಕರಿಗೆ ಹಿಡಿಸುತ್ತಿರಲಿಲ್ಲ. ಪ್ರಜಾಪ್ರಭುತ್ವಯುಗದಲ್ಲಿ ಇವು ದೊಡ್ಡ ಅವಗುಣಗಳೆಂಬುದು ಅವರ ನಂಬಿಕೆಯಾಗಿತ್ತು. ತನಗೆ ಪ್ರಧಾನಿ ಹುದ್ದೆ ದೊರಕದಿದರೂ ಬಾಲ್ಡ್ವಿನನ ಸರ್ಕಾರದಲ್ಲಿ ಕರ್ಜನ್ ಮುಂದುವರಿಯಲೊಪ್ಪಿದ. 1923ರ ಚುನಾವಣೆಯಲ್ಲಿ ಬಾಲ್ಡ್ವಿನ್ ಸೋತ. 1924ರಲ್ಲಿ ಬಾಲ್ಡ್ವಿನ್ ಮತ್ತೆ ಸರ್ಕಾರ ರಚಿಸಿದಾಗ ಅದರಲ್ಲಿ ಕರ್ಜನನಿಗೆ ಸ್ಥಾನ ದೊರಕಲಿಲ್ಲ. ಈತ ಲಾರ್ಡ್ ಪ್ರಿವಿಸೀಲನ ಹುದ್ದೆಯಲ್ಲೇ ಸಮಾಧಾನಪಟ್ಟುಕೊಳ್ಳಬೇಕಾಯಿತು. 1925ರ ಮಾರ್ಚ್ 20 ರಂದು ಕರ್ಜನ್ ತೀರಿಕೊಡ. 1921ರಲ್ಲಿ ಈತ ಮಾರ್ಕ್ವಿಸ್ ಎಂದು ಸನ್ಮಾನಿತನಾಗಿದ್ದ. *

**ಕರ್ಣ:** ಸೂರ್ಯಮಂತ್ರದಿಂದ ಮದುವೆಗೆ ಮುನ್ನ ಕುಂತಿಯಲ್ಲಿ ಜನಿಸಿದವ. ಕರ್ಣಂಗೊಡ್ಡಿತ್ತುದಲ್ ಭಾರತಂ ಎಂಬ ಉಕ್ತಿಗೆ ಕಾರಣನಾದ ಮಹಾವೀರ. ಇವರ್ಗಳಿನೀ ಭಾರತಂ ಲೋಕಪೂಜ್ಯಂ–ಎಂದು ಹೇಳುವಲ್ಲಿ ಪಂಪ ಕರ್ಣನನ್ನು ಕುರಿತು ನನ್ನಿಯೊಳಿನತನಯಂ ಎಂದು ಪ್ರಶಂಸಿಸಿದ್ದಾನೆ. ಕುಂತಿಭೋಜನ ಮನೆಯಲ್ಲಿದ್ದ ಕುಂತಿ ದೂರ್ವಾಸನನ್ನು ಸತ್ಕರಿಸಿದ್ದಕ್ಕಾಗಿ ಮಂತ್ರಗಳ ವರಪಡೆದಿದ್ದಳಷ್ಟೆ ಮಂತ್ರ ಮಾಹಾತ್ಮ್ಯೆಯನ್ನು ಪರೀಕ್ಷಿಸಬೇಕೆಂಬ ಚಾಪಲ್ಯದಿಂದ ಸೂರ್ಯಮಂತ್ರ ಜಪಿಸಲು ಸೂರ್ಯನಾರಾಯಣ ಆಕೆಗೆ ಗಂಡು ಮಗುವನ್ನು ಅನುಗ್ರಹಿಸಿದ. ಲೋಕಾಪವಾದಕ್ಕೆ ಹೆದರಿದ ಕುಂತಿ ತನ್ನ ಮರುಳುತನಕ್ಕಾಗಿ ಬೆದರಿ ಆ ಹಸುಗೂಸನ್ನು ಗಂಗಾನದಿಯಲ್ಲಿ ತೇಲಿಬಿಟ್ಟಳು. ಅದು ಧೃತರಾಷ್ಟ್ರನ ಸಾರಥಿ ಅಧಿರಥನ ಕೈಗೆ ಸಿಕ್ಕಿತು. ಕವಚ ಕುಂಡಲಗಳ ಸಮೇತನಾಗಿ ಹುಟ್ಟಿದ ಆಕಾರಣಿಕ ಶಿಶುವನ್ನು ಅಧಿರಥ ತನ್ನ ಹೆಂಡತಿ ರಾಧೆಯ ಕೈಗೆ ಕೊಟ್ಟ. ಅಪೂರ್ವ ತೇಜೋಶಾಲಿಯಾದ ಆ ಮಗುವಿಗೆ ವಸುಷೇಣನೆಂದು ಹೆಸರಿಟ್ಟರು. ದಿನ ಕಳೆದಂತೆಲ್ಲ ಆ ಹುಡುಗನ ಕೀರ್ತಿ ಕರ್ಣಾಕರ್ಣಿಕೆಯಾಗಿ ಹರಡತೊಡಗಿದ್ದರಿಂದ ಅವನಿಗೆ ಕರ್ಣನೆಂಬ ಹೆಸರೇ ಪ್ರಚಾರಕ್ಕೆ ಬಂತು. ಇದಲ್ಲದೆ ಅವನಿಗೆ ರಾಧೇಯ, ಸೂತಪುತ್ರ, ಕಾನೀನನೆಂಬ ಸಂಬೋಧನೆಯೂ ಉಂಟು.

ಬಾಲ್ಯ ಕಳೆದು ಯೌವನ ಮೊದಲಾಗಲು ಕರ್ಣನಿಗೆ ಶಸ್ತ್ರ ವಿದ್ಯಾಭ್ಯಾಸದಲ್ಲಿ ಆಸಕ್ತಿ ಮೂಡಿತು. ಸೂತಪುತ್ರನಾದ ಅವನಿಗೆ ಶಸ್ತ್ರವಿದ್ಯಾಭ್ಯಾಸ ಕಲಿಸುವ ಆಚಾರ್ಯರು ದೊರೆಯಲಿಲ್ಲ. ಆಗ ಆತ ಪರುಶರಾಮನ ಬಳಿಗೆ ಬಂದು ತಾನು ವಿಪ್ರನೆಂದು ಸುಳ್ಳು ಹೇಳಿ ಧನುರ್ವಿದ್ಯಾಪಾರಂಗತನಾದ. ಒಂದು ದಿನ ಪರುಶುರಾಮ ಕರ್ಣನ ತೊಡೆಯಮೇಲೆ ತಲೆಯಿಟ್ಟು ನಿದ್ರಿಸುತ್ತಿದ್ದಾಗ, ಇಂದ್ರನ ಆಜ್ಞೆಯ ಮೇರೆಗೆ ಅಲರ್ಕವೆಂಬ ದುಂಬಿಯೊಂದು ಬಂದು ಆತನ ತೊಡೆಯನ್ನು ಬಗಿಯಲಾರಂಭಿಸಿತು. ಆಗ ತಾನು ಅಲುಗಿದರೆ ಗುರುವಿಗೆ ನಿದ್ರಾಭಂಗವಾದೀತೆಂದು ಎಣಿಸಿ ಕರ್ಣ ತನಗಾದ ಅಗಾಧ ನೋವನ್ನು ಲಕ್ಷಿಸದೆ ಹಾಗೆಯೇ ತಡೆದುಕೊಂಡಿದ್ದ. ಅವನ ರಕ್ತದ ಸೋಂಕಿನಿಂದ ಪರುಶರಾಮ ಎಚ್ಚತ್ತು, ಶಿಷ್ಯನ ವರ್ತನೆಯನ್ನು ಕಂಡು ಮೆಚ್ಚಿದರೂ ಅವನು ವಿಪ್ರನಿರಲಾರನೆಂದೂ ಕ್ಷತ್ರಿಯನೇ ಇರಬೇಕೆಂದೂ ತಿಳಿದು ಕುಪಿತನಾದ. ನಿಜವೃತ್ತಾಂತ ತಿಳಿದಾಗ ತನ್ನ ವ್ರತಭಂಗವಾದುದಕ್ಕೆ ಕೆರಳಿದ ಪರುಶುರಾಮ ವಿಪ್ರನೆಂದು ಸುಳ್ಳುಹೇಳಿ ಶಸ್ತ್ರವಿದ್ಯೆ ಕಲಿತಿದ್ದಕ್ಕಾಗಿ ಅವಸಾನ ಕಾಲದಲ್ಲಿ ತಾನು ಅನುಗ್ರಹಿಸಿದ ಮಹಾಸ್ತ್ರಗಳಾವುವೂ ಫಲಿಸದಿರಲಿ ಎಂದು ಕರ್ಣನಿಗೆ ಶಾಪವಿತ್ತ. ಗುರುಶಾಪದಿಂದ ಕರ್ಣ ನಿರ್ವಿಣ್ಣನಾದ.

ಈ ವೇಳೆಗೆ ಹಸ್ತಿನಾವತಿಯಲ್ಲಿ ಪಾಂಡವರಿಗೂ ಕೌರವರಿಗೂ ದ್ರೋಣಾಚಾರ್ಯ ಶಸ್ತ್ರವಿದ್ಯೆಯನ್ನು ಕಲಿಸುತ್ತಿದ್ದ. ಆ ರಾಜಪುತ್ರರ ವಿದ್ಯಾಪರಿಣತಿಯನ್ನು ಪ್ರದರ್ಶಿಸುವುದಕ್ಕಾಗಿ ಸಕಲ ಏರ್ಪಾಡುಗಳೂ ನಡೆದಿದ್ದುವು. ಆ ಸಭೆಯಲ್ಲಿ ಪಾಂಡವ ಮತ್ತು ಕೌರವರ ಶಸ್ತ್ರಕೌಶಲ ತಾನೇ ತಾನಾಗಿ ಮೆರೆಯಲಾರಂಭಿಸಿತ್ತು. ಅರ್ಜುನ ರಂಗಕ್ಕೆ ಪ್ರವೇಶಿಸುವುದೇ ತಡ, ಆತನನ್ನು ಅದ್ವಿತೀಯನೆಂದು ಗುರುಗಳು ಮೊದಲ್ಗೊಂಡು ಎಲ್ಲರೂ ಪ್ರಶಂಸಿಸಿದರು.

ಈ ಮಾತುಗಳನ್ನು ಆಲಿಸಿದ ಕರ್ಣ ಮುಂದೆ ಬಂದು ತಾನು ಅರ್ಜುನನನ್ನು ಎದುರಿಸುವುದಾಗಿ ಸವಾಲುಹಾಕಿದ. ಆಗ ಅಲ್ಲಿಯೇ ಇದ್ದ ಕೃಪಾಚಾರ್ಯ ಎದ್ದುನಿಂತು ಸೂತಪುತ್ರನಾದ ಕರ್ಣನನ್ನು ಅರ್ಜುನನೊಂದಿಗೆ ಸರಿಸಮನಾಗಿ ಭಾವಿಸಲು ಸಾಧ್ಯವಿಲ್ಲವೆಂದು ವಿರೋಧಿಸಿದ. ಈ ಅಸೂಯೆಯ ಮಾತುಗಳನ್ನು ಕೇಳಿ, ಆಗತಾನೆ ಭೀಮನಿಂದ ಪರಾಜಿತನಾಗಿದ್ದ ದುರ್ಯೋಧನ ಮುಂದೆ ಬಂದು ಕರ್ಣನ ಪರವಾಗಿ ವಾದಿಸಿ, ಅವನಿಗೆ ಅಂಗರಾಜ್ಯಾಭಿಷೇಕವನ್ನಿತ್ತು ಗೌರವಿಸಿದ. ಅಂದಿನಿಂದ ಕರ್ಣನಿಗೂ ದುರ್ಯೋಧನನಿಗೂ ಅಸದೃಶವಾದ ಮೈತ್ರಿ ಮೊದಲಾಯಿತು.

ದುರ್ಯೋಧನನ ಆಪ್ತಮಿತ್ರನಾದ ಕರ್ಣನ ಮೇಲ್ಮೆ ದಿನದಿನಕ್ಕೂ ವರ್ಧಿಸತೊಡಗಿತು. ದುಶ್ಯಾಸನ, ಶಕುನಿ ಮತ್ತು ಸೈಂಧವರೊಂದಿಗೆ ಕೂಡಿ ಕರ್ಣ ಅರಸನ ಎಲ್ಲ ಕಾರ್ಯಗಳಿಗೂ ಬೆಂಬಲವನ್ನಿತ್ತನಲ್ಲದೆ ಪಾಂಡವರ ವಿನಾಶ ಕಾರ್ಯದಲ್ಲಿ ಮುಂದಾಳಾಗಿ ದುಷ್ಟಚತುಷ್ಟಯರಲ್ಲಿ ಒಬ್ಬನೆನಿಸಿದ. ಕರ್ಣನ ಪರಾಕ್ರಮ ಜನ ಜನಿತವಾಗಿ ಬೆಳಗಿದಂತೆಯೇ ಅವನ ದಾನಗುಣವೂ ವಿಖ್ಯಾತವಾಯಿತು. ಭೀಮ ದುರ್ಯೋಧನರಿಗೆ ಹೇಗೆ ಬದ್ಧವೈರವೋ ಹಾಗೆಯೇ ಕರ್ಣ ಅರ್ಜುನರಿಗೆ ಎಲ್ಲ ವಿಷಯಗಳಲ್ಲಿಯೂ ಸ್ಪರ್ಧೆ ನಡೆಯುತ್ತಿತ್ತು. ಅರ್ಜುನನ ಮೇಲ್ಮೈಯಲ್ಲಿ ಆಸಕ್ತನಾಗಿದ್ದ ಇಂದ್ರನಿಗೆ ಕರ್ಣನನ್ನು ಹೇಗಾದರೂ ಮಾಡಿ ನಿಶ್ಶಕ್ತನನ್ನಾಗಿ ಮಾಡಬೇಕೆಂಬ ಯೋಚನೆ ಬಲವಾಗಿ ಕಾಡಲಾರಂಭಿಸಿತು. ಕರ್ಣನ ಉದಾರಗುಣವನ್ನು ಕೇಳಿದ ಆತ, ಒಂದು ದಿನ ವಿಪ್ರವೇಷದಲ್ಲಿ ಕರ್ಣನಲ್ಲಿಗೆ ಬಂದು ಆತನ ಕವಚಕುಂಡಲಗಳನ್ನು ಬೇಡಿದ. ಇಂದ್ರನ ಸಂಚನ್ನು ಮೊದಲೇ ತಿಳಿದ ಸೂರ್ಯ ಕರ್ಣನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಎಚ್ಚರಸಿದ್ದರೂ ಕರ್ಣ ತನ್ನ ಸಹಜಗುಣಕ್ಕೆ ಅನುಸಾರವಾಗಿ ತನಗೆ ರಕ್ಷೆಯಂತಿದ್ದ ಕವಚಕುಂಡಲಗಳನ್ನು ಮನಃಪೂರ್ವಕವಾಗಿ ಇಂದ್ರನಿಗೆ ಒಪ್ಪಿಸಿದ. ಕರ್ಣನನ್ನು ಪರೀಕ್ಷಿಸಲು ಬಂದ ಇಂದ್ರನಿಗೆ ಆ ಸೂತಪುತ್ರನ ದಾನಗುಣವನ್ನು ಕಂಡು ಸಂತೋಷವಾಯಿತು. ತನ್ನ ನಿಜಸ್ವರೂಪವನ್ನು ತೋರಿಸಿ, ಅವನಿಗೆ ಶಕ್ತ್ಯಾಯುಧವನ್ನು ಅನುಗ್ರಹಿಸಿದ. ಕವಚಕುಂಡಲ ವಿಹೀನನಾದ ಕರ್ಣನಿಗೆ ಇಂದ್ರನಿತ್ತ ಶಕ್ತ್ಯಾಯುಧದಿಂದ ಮತ್ತೊಮ್ಮೆ ರೆಕ್ಕೆಬಂದಂತಾಯಿತು.

ಕೌರವರ ಉಪಟಳಗಳಿಗೆ ಗುರಿಯಾಗಿದ್ದ ಪಾಂಡವರು, ಅರಗಿನ ಮನೆಯ ವಿಪತ್ತಿನಿಂದ ಪಾರಾಗಿ, ಏಕಚಕ್ರಪುರಿಯಲ್ಲಿ ಕೆಲವು ದಿನವಿದ್ದು, ವೇಷ ಮರೆಸಿಕೊಂಡು ದ್ರೌಪದಿಯ ಸ್ವಯಂವರಕ್ಕೆ ಬಂದಾಗ ಪುನಃ ಅರ್ಜುನನಿಗೂ ಕರ್ಣನಿಗೂ ಸವಾಲು ಬೀಳುವ ಸನ್ನಿವೇಷ ಒದಗಿತು. ದ್ರುಪದ ಪಣವಾಗಿಟ್ಟಿದ್ದ ಮತ್ಸ್ಯಯಂತ್ರವನ್ನು ಕ್ಷತ್ರಿಯ ವೀರಾಧಿವೀರರು ಭೇದಿಸದೆ ಹೋಗಲು, ಕರ್ಣ ಆ ಸಾಹಸಕ್ಕಾಗಿ ಮುಂದೆ ಬಂದ. ಶಸ್ತ್ರವಿದ್ಯಾಕುಶಲನಾದ ಆತ ಮತ್ಸ್ಯಕ್ಕೆ ಗುರಿಯಿಟ್ಟು ಬಾಣಬಿಡುವಷ್ಟರಲ್ಲಿ ದ್ರೌಪದಿ ಆತನನ್ನು ಸೂತಪುತ್ರನೆಂದು ಧಿಕ್ಕರಿಸಿದಳು. ಕರ್ಣ ಮ್ಲಾನವದನನಾಗಿ ಬಿಲ್ಲುಬಾಣಗಳನ್ನು ಕೆಳಗೆಸೆದು ತನ್ನ ಪೀಠದತ್ತ ಹಿಂತಿರುಗಿ ಬಂದ. ಅನಂತರ ಬ್ರಾಹ್ಮಣರ ಸಮೂಹದಲ್ಲಿ ವಿಪ್ರವೇಷಿಯಾಗಿದ್ದ ಅರ್ಜುನ ಎದ್ದುಬಂದು, ಜನ ಅಪಹಾಸ್ಯಮಾಡಿ ನಕ್ಕರೂ ಹಿಂತೆಗೆಯದೆ, ಮತ್ಸ್ಯಯಂತ್ರವನ್ನು ಭೇಧಿಸಿದ. ಪಾಂಡವರಿಗೂ ಇತರ ರಾಜರಿಗೂ ಕಾಳಗವಾಗಿ, ಪಾಂಡವರು ವಿಜಯಿಗಳಾದರು. ಈ ಸಂದರ್ಭದಲ್ಲಿ ಅರ್ಜುನ ಮತ್ತು ಭೀಮರೊಂದಿಗೆ ಕರ್ಣ ಕಾದಾಡಬೇಕಾಯಿತು.

ಕೌರವನ ಪಕ್ಷ ವಹಿಸಿದ ಕರ್ಣ ತನ್ನ ಸ್ವಾಮಿಯ ಅಭೀಷ್ಟಕ್ಕೆ ಅನುಗುಣವಾಗಿ ಪಾಂಡವರಿಗೆ ಅಹಿತಗಳನ್ನೇ ಬಯಸುತ್ತಿದ್ದ. ದ್ರೌಪದಿಯ ವಸ್ತ್ರಾಪಹರಣ ಕಾಲದಲ್ಲಿಯೂ ಆತ ಉಚಿತವಾಗಿ ವರ್ತಿಸಲಿಲ್ಲ. ಪಾಂಡವರು ವನವಾಸದಲ್ಲಿದ್ದಾಗ ದುರ್ಯೋಧನನನ್ನು ಪ್ರಚೋದಿಸಿ ಅವರ ಮೇಲೆ ಎರಗುವಂತೆ ಏರ್ಪಡಿಸಿದ. ಆಗ ಗಂಧರ್ವರಿಗೂ ಕೌರವರಿಗೂ ಯುದ್ಧ ನಡೆಯಿತು. ಕರ್ಣ ಚಿತ್ರಸೇನನೆಂಬ ಗಂಧರ್ವನಿಂದ ಅಪಮಾನಿತನಾದ. ಇಷ್ಟಾದರೂ ಅವನ ಸೊಕ್ಕು ಕಡಿಮೆಯಾಗಲಿಲ್ಲ. ಪಾಂಡವರ ಅಜ್ಞಾತವಾಸದ ಅವಧಿ ತೀರಿ ಉತ್ತರಗೋಗ್ರಹಣ ಕಾಲದಲ್ಲಿ ಯುದ್ಧವಾಗಲು ಕರ್ಣ ತನ್ನ ಸೇಡನ್ನು ಅರ್ಜುನನ ಮೇಲೆ ತೀರಿಸಿಕೊಳ್ಳತೊಡಗಿದ. ಕೊನೆಗೆ ಸಮಸ್ತ ಕೌರವ ಸೈನ್ಯವೇ ಅರ್ಜುನನ ಸಮ್ಮೋಹನಾಸ್ತ್ರಕ್ಕೆ ಗುರಿಯಾಗಿ ನಿದ್ರಾಪರವಶವಾಯಿತು. ವಿರಾಟನ ಸೈನ್ಯಕ್ಕೆ ಜಯ ಲಭಿಸಿತು. ಕೃಷ್ಣ ಪಾಂಡವರ ಪರವಾಗಿ ಕೌರವರೊಡನೆ ಸಂಧಾನವನ್ನು ನಡೆಸಿದ್ದ. ಹಿತೋಕ್ತಿಗಳಾವುವೂ ಫಲಿಸದೆ ಸಮರವೇ ಅನಿವಾರ್ಯವಾದ ಸಂದರ್ಭದಲ್ಲಿ ಕೃಷ್ಣ ಕರ್ಣನೊಬ್ಬನನ್ನೇ ಗುಟ್ಟಾಗಿ ಕರೆದು ಅವನ ಜನ್ಮವೃತ್ತಾಂತವನ್ನು ತಿಳಿಸಿ, ಪಾಂಡವರ ಕಡೆಗೆ ಬರುವಂತೆ ಪ್ರೇರಿಸಿದ. ಸ್ವಾಮಿ ಭಕ್ತನಾದ ಕರ್ಣ ಕೃಷ್ಣನ ತಂತ್ರಕ್ಕೆ ಒಡಂಬಡಲಿಲ್ಲ. ಅನಂತರ ಕುಂತಿಯೇ ಕರ್ಣನನ್ನು ಗಂಗಾತೀರದಲ್ಲಿ ಕಂಡು ತನ್ನ ಮಗನ ಮನಸ್ಸನ್ನು ಒಲಿಸಿಕೊಳ್ಳಲುಯತ್ನಿಸಿದಳು. ಆಗಲೇ ಸೂರ್ಯನೂ ಪ್ರತ್ಯಕ್ಷನಾಗಿ ಕರ್ಣನಿಗೆ ಹಿತೋಪದೇಶವನ್ನಿತ್ತು ತಾಯಿ ಮಾತಿಗೆ ಒಪ್ಪುವಂತೆ ಕೇಳಿಕೊಂಡ. ಸ್ಥಿರಚಿತ್ತನಾದ ಕರ್ಣ ಅವರ ಪ್ರೇರಣೆಗೆ ಓಗೊಡಲಿಲ್ಲ. "ಎಲೈ ತಾಯೇ ನೀನು ನನ್ನನ್ನು ಚಿಕ್ಕಂದಿನಲ್ಲಿ ಕೈಬಿಟ್ಟಿದ್ದರಿಂದ ನಾನು ನಾನಾ ಅಪಮಾನಗಳನ್ನು ಅನುಭವಿಸಬೇಕಾಯಿತು, ಈಗ ನಿನ್ನ ಮಾತನ್ನು ಕೇಳಿ, ನನ್ನನ್ನು ಸಾಕಿ ಸಲಹಿ, ಸತ್ಕರಿಸಿದ ಸ್ವಾಮಿಯನ್ನು ವಂಚಿಸಲಾರೆ. ನನಗೂ ಅರ್ಜುನನಿಗೂ ವೈರ ಕಟ್ಟಿಟ್ಟದ್ದೇ ಸರಿ. ನಿನಗಾಗಿ, ಉಳಿದ ನಾಲ್ವರ ಜೀವಕ್ಕೆ ನಾನು ಅಪಾಯವನ್ನು ಮಾಡುವುದಿಲ್ಲ. ನಮ್ಮಿಬ್ಬರಲ್ಲಿ ಯಾರೊಬ್ಬರು ಉಳಿದರೂ ನಿನಗೆ ಐದು ಮಂದಿ ಇದ್ದಂತಾಯಿತಲ್ಲವೇ? ಶ್ರೀಕೃಷ್ಣ ನಿಮ್ಮ ಪಕ್ಷವನ್ನು ವಹಿಸಿರುವುದರಿಂದ ನಿಮಗೆ ಭಯವಿಲ್ಲ"–ಎಂದು ಆತ ತನ್ನ ತಾಯನ್ನು ಸಮಾಧಾನ ಪಡಿಸಿ ಕಳುಹಿಸಿದ.

ಯುದ್ಧ ನಿಶ್ಚಯವಾದ ಬಳಿಕ, ಭೀಷ್ಮನಿಗೆ ಪಟ್ಟಕಟ್ಟುವ ಕಾಲದಲ್ಲಿ ಕರ್ಣ ಅವನನ್ನು ಹಂಗಿಸಿದ. ಆತ ಪಾಂಡವ ಪಕ್ಷಪಾತಿಯೆಂದೂ ಶತ್ರುಗಳೊಡನೆ ಹೋರಾಡಲು ಅಸಮರ್ಥನೆಂದೂ ಆಕ್ಷೇಪಿಸಿದ. ಆಗ ಕೃಪ, ದ್ರೋಣ ಮೊದಲಾದವರೆಲ್ಲ ಕರ್ಣನನ್ನು ಅವಹೇಳನ ಮಾಡಿದರು. ಭೀಷ್ಮನೂ ಕುಪಿತನಾದ. ಭೀಷ್ಮ ಬದುಕಿರುವವರೆಗೂ ತಾನು ಯುದ್ಧ ಮಾಡುವುದಿಲ್ಲವೆಂದು ಕರ್ಣ ಶಸ್ತ್ರಸಂನ್ಯಾಸ ಕೈಕೊಂಡು ಭೀಷ್ಮಾಚಾರ್ಯ ಅತ್ಯದ್ಭುತ ಪರಾಕ್ರಮದಿಂದ ಹತ್ತು ದಿನಗಳವರೆಗೆ ಯುದ್ಧಮಾಡಿ, ಕಡೆಗೆ ಶರಶಯ್ಯಾಗತನಾದ ಬಳಿಕ ಕರ್ಣನಿಗೆ ಭೀಷ್ಮನಲ್ಲಿ ಮತ್ತೆ ಭಕ್ತಿಮೂಡಿತು. ಅವನ ಬಳಿಗೆ ತೆರಳಿ ತನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡ; ದ್ರೋಣ ಸೇನಾಧಿಪತ್ಯ ವಹಿಸಿದಾಗ ಕರ್ಣ ದಿಟ್ಟತನದಿಂದ ಹೋರಾಡಿದ. ಇಂದ್ರ ಅವನಿಗೆ ಅನುಗ್ರಹಿಸಿದ್ದ ಶಕ್ತ್ಯಾಯುಧ ಇರುವವರೆಗೂ ಕರ್ಣ ಅಜೇಯನೆಂದು ತಿಳಿದು ಕೃಷ್ಣ ರಾತ್ರಿಯುದ್ಧದಲ್ಲಿ ಘಟೋತ್ಕಚನನ್ನು ಮುಂದೆಬಿಟ್ಟು ಕರ್ಣನ ಶಕ್ತ್ಯಾಯುಧ ಅವನ ಮೇಲೆ ವ್ಯರ್ಥವಾಗುವಂತೆ ಮಾಡಿಸಿದ. ದ್ರೋಣರ ಅನಂತರ ಸೇನಾಧಿಪತ್ಯವನ್ನು ಕರ್ಣನೇವಹಿಸಿಕೊಂಡ. ತನ್ನ ಎದುರಾಳಿಯಾದ ಅರ್ಜುನನಿಗೆ ಕೃಷ್ಣನಂಥವ ಸಾರಥಿಯಾಗಿರುವಂತೆ ಅಶ್ವವಿದ್ಯೆಯಲ್ಲಿ ಪ್ರವೀಣನಾದ ಶಲ್ಯ ತನಗೆ ಸಾರಥಿಯಾದರೆ ಜಯ ನಿಶ್ಚಯವೆಂದು ದುರ್ಯೋಧನನಲ್ಲಿ ವಿಜ್ಞಾಪಿಸಿಕೊಂಡ; ದುರ್ಯೋಧನ ಶಲ್ಯನನ್ನು ಬಹು ಕಷ್ಟದಿಂದ ಒಪ್ಪಿಸಿ ಕರ್ಣನಿಗೆ ಸಾರಥಿಯನ್ನಾಗಿ ಮಾಡಿದ.

ಕರ್ಣಾರ್ಜುನರ ಸಂಗ್ರಾಮ ಬಹಳ ಉಗ್ರವಾಗಿ ಸಾಗಿತು. ಕೃಷ್ಣನಿಗಾದರೋ ಅಂದಿನ ಕಾಳಗದಲ್ಲಿ ಕರ್ಣನ ಮರಣವಾಗಲೇಬೇಕೆಂದು ಅಪೇಕ್ಷೆ. ವೀರರಿಬ್ಬರಿಗೂ ಕಾಳಗ ನಡೆಯುತ್ತಿರಲು ಕರ್ಣ ತನ್ನಲ್ಲಿದ್ದ ಸರ್ಪಾಸ್ತ್ರವನ್ನು ತೆಗೆದು ಅರ್ಜುನನ ತಲೆಗೆ ಗುರಿಯಿಟ್ಟ. ಆ ದಿವ್ಯಾಸ್ತ್ರವನ್ನು ಅರ್ಜುನನ ಎದೆಗೆ ಗುರಿಯಿಟ್ಟಿದ್ದೇ ಅದರೆ ತಮಗೆ ಜಯ ನಿಶ್ಚಯ ಎಂದು ಶಲ್ಯ ಕರ್ಣನನ್ನು ಎಚ್ಚರಿಸಿದ. ತಾನು ಒಂದು ಬಾರಿ ಇಟ್ಟ ಗುರಿಯನ್ನು ಮತ್ತೆ ತೆಗೆಯುವವನಲ್ಲವೆಂದು ಕರ್ಣ ಹಟ ಹಿಡಿದ. ತನ್ನ ಇಷ್ಟದಂತೆಯೇ ಬಾಣವನ್ನು ಬಿಡುವ ಹೊತ್ತಿಗೆ ಸರಿಯಾಗಿ ಅತ್ತ ಕೃಷ್ಣ ಅರ್ಜುನನ ರಥವನ್ನು ನೆಲಕ್ಕೆ ಒತ್ತಿದ. ಬಾಣ ಅರ್ಜುನನ ಕಿರೀಟವನ್ನು ಮಾತ್ರ ಭೇದಿಸಿಕೊಂಡು ಹೋಯಿತು. ಕರ್ಣ ದಿಕ್ಕುತೋಚದಂತಾದ. ಈ ಮಧ್ಯೆ ಹಿಂದೊಮ್ಮೆ ಬ್ರಾಹ್ಮಣನ ಶಾಪಕ್ಕೆ ಪಕ್ಕಾಗಿದ್ದುದರಿಂದ ಅದೇ ಸಮಯದಲ್ಲಿ ಕರ್ಣನ ರಥದ ಚಕ್ರ ಭೂಮಿಯಲ್ಲಿ ಹೂತುಕೊಂಡಿತು. ಅದನ್ನು ಸರಿಪಡಿಸಿಕೊಳ್ಳಲು ರಥದಿಂದ ಕೆಳಗಿಳಿಯಲು, ಕರ್ಣನನ್ನು ಸಂಹರಿಸಲು ಅದೇ ತಕ್ಕ ಸಮಯವೆಂದು ಕೃಷ್ಣ ಅರ್ಜುನನನ್ನು ಪ್ರಚೋದಿಸಿದ. ನಿರಾಯುಧನಾದ ಕರ್ಣನನ್ನು ಹೇಗೆ ಕೊಲ್ಲುವುದೆಂದು ಕನಿಕರದಿಂದ ಅರ್ಜುನ ಹಿಂತೆಗೆಯಲು, ಕೃಷ್ಣ ಕರ್ಣನ ಅಧರ್ಮ ಕಾರ್ಯಗಳನ್ನೆಲ್ಲ ಪಟ್ಟಿಮಾಡಿ ಹೇಳಿ ಕಾರ್ಯನಿರತನಾಗಲು ಬಲಾತ್ಕಾರ ಮಾಡಿದ. ಅರ್ಜುನ ನಿರ್ವಾಹವಿಲ್ಲದೆ ಕರ್ಣನ ಮೇಲೆ ಅಂಜಲಿಕಾಸ್ತ್ರವನ್ನು ಪ್ರಯೋಗಿಸಿದ. ಅಸಹಾಯಕನಾದ ಕರ್ಣ ಆ ಅಸ್ತ್ರಕ್ಕೆ ಗುರಿಯಾಗಿ ಹತನಾದ.

ಭಾರತ ಯುದ್ಧವೆಲ್ಲ ಮುಗಿದ ಬಳಿಕ, ಧರ್ಮರಾಯ ಸತ್ತವರಿಗೆ ಉತ್ತರಕ್ರಿಯಾದಿಗಳನ್ನು ಮಾಡುವ ಸಂದರ್ಭದಲ್ಲಿ ಕುಂತಿ ಓಡಿಬಂದು ಕರ್ಣ ತನ್ನ ಮಗನೆಂದೂ ಪಾಂಡವರಿಗೆಲ್ಲ ಅವನೇ ಹಿರಿಯನೆಂದೂ ಮೊದಲು ಅವನಿಗೆ ಕರ್ಮಾದಿಗಳು ನಡೆಯಬೇಕೆಂದೂ ತಿಳಿಸಿದಳು. ಈ ವೃತ್ತಾಂತವನ್ನು ಕೇಳಿ ಧರ್ಮರಾಯ ಚಕಿತನಾಗಿ ತಾಯಿ ಮಾಡಿದ ಅಕಾರ್ಯಕ್ಕಾಗಿ ಅವಳ ಮೇಲೆ ಕೋಪಗೊಂಡ. ಪಾಂಡವರೆಲ್ಲರೂ ಕರ್ಣನಿಗಾದ ದುರ್ದೆಸೆಗಾಗಿ ಮರುಗಿದರು. ಕರ್ಣನಿಗೆ ಕ್ಷತ್ರಿಯೋಚಿತವಾದ ಸಂಸ್ಕಾರಗಳು ನಡೆದುವು.

ವ್ಯಾಸಭಾರತದಲ್ಲಿ ಕರ್ಣನನ್ನು ಮೊದಲಿನಿಂದ ಕಡೆಯ ವರೆಗೂ ದುರ್ಯೋಧನನ ದುಷ್ಟಚತುಷ್ಟಯದಲ್ಲೊಬ್ಬನೆನ್ನುವಂತೆ ವರ್ಣಿಸಲಾಗಿದೆ. ವಾಸ್ತವಿಕವಾಗಿ ಕರ್ಣನಿಗೆ ಜೀವನದಲ್ಲಿ ಒದಗಿಬಂದ ದುರ್ದೈವ ಪರಂಪರೆಯನ್ನು ಗಮನಿಸಿ ಅವನ ಬಗ್ಗೆ ಸಹಾನುಭೂತಿಯಿಂದ ನೋಡಿದ ಸಂಸ್ಕೃತ ಕವಿಗಳಲ್ಲಿ ಭಾಸನೇ ಬಹಳ ಹಳಬನೆಂದು ತೋರುತ್ತದೆ. ಈತ ಕರ್ಣಭಾರ ಎಂಬ ತನ್ನ ಏಕಾಂಕ ನಾಟಕದಲ್ಲಿ ಕರ್ಣನ ದಾನ ಗುಣಕ್ಕೆ ಪ್ರಾಶಸ್ತ್ಯವಿತ್ತು ಆವನ ಹಿರಿಮೆಯನ್ನು ಬೆಳಗಿಸಿದ್ದಾನೆ; ಪಂಚರಾತ್ರವೆಂಬ ಮತ್ತೊಂದು ಕೃತಿಯಲ್ಲಿ ಕರ್ಣ ದುರ್ಯೋಧನನ ಆಪ್ತಮಿತ್ರನೆನಿಸಿದರೂ ಪಾಂಡವರ ಬಗ್ಗೆ ವೃಥಾ ಆಗ್ರಹವಿಲ್ಲದವನೆಂಬಂತೆ ಅವನ ಪಾತ್ರವನ್ನು ಚಿತ್ರಿಸಿದ್ದಾನೆ. ಈ ನೂತನ ದೃಷ್ಟಿ ಪರಂಪರೆಯೇ ಮುಂದುವರಿಯಿತೋ ಎಂಬಂತೆ ಕನ್ನಡದ ಆದಿಕವಿಯಾದ ಪಂಪ ಕರ್ಣನ ಪಾತ್ರವನ್ನು ನಿರೂಪಿಸುವಲ್ಲಿ ತುಂಬ ಉದಾರವಾಗಿ ವರ್ತಿಸಿದ್ದಾನೆ. ಪಂಪನಲ್ಲಿ ಕಥಾನಾಯಕ ಅರ್ಜುನನಾದರೆ, ಪ್ರತಿನಾಯಕ ಕರ್ಣನಾಗುತ್ತಾನೆ. ಕರ್ಣನ ಜನನ ಬಾಲ್ಯಗಳನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿ ಆತ ಪರಶುರಾಮನಿಂದ ಶಾಪಗ್ರಸ್ತನಾಗುವ ವಿಷಯವನ್ನು ಹೃದಯ ಕರಗುವಂತೆ ವರ್ಣಿಸಿದ್ದಾನೆ. ಕೌರವರ್ಗೆಲ್ಲಂ ಪ್ರಾಣಂಬರ್ಪಾಕೃತಿಯೊಳೆ ಬಾಣಾಸನ ಬಾಣಪಾಣಿ ಕರ್ಣಂ ಬಂದಂ–

ಎಂದು ಕರ್ಣನ ಆಗಮನವನ್ನು ಅರ್ಥವತ್ತಾಗಿ ಹೇಳಿದ್ದಾನೆ. ಕರ್ಣದುರ್ಯೋಧನರ ಸ್ನೇಹವಂತೂ ಅಸದೃಶವಾದುದು. 'ಪೊಡಮಡುವರ್ ಜೀಯೆಂಬರ್ ಕುಡುದಯೆಗೆಯ್ ಏಂ ಪ್ರಸಾದಮೆಂಬಿವು ಪೆಱರೊಳ್ ನಡೆಗೆಮ್ಮೆ ನಿನ್ನಯೆಡೆಯೊಳ ನಡೆಯಲ್ವೇಡೆನಗೆ ಕೆಳೆಯನ್ನೈ ರಾಧೇಯಾ' ಎಂದು ದುರ್ಯೋಧನ ಅವನನ್ನು ಅತ್ಯಂತ ಪ್ರೀತಿಯಿಂದ ಸತ್ಕರಿಸುತ್ತಾನೆ. ಈ ರೀತಿಯಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕರ್ಣನನ್ನು ಕವಿ 'ಏಂ ಕಲಿಯೋ ಚಾಗಿಯೋ ರವಿತನಯಂ' ಎಂದು ಮೇಲಿಂದ ಮೇಲೆ ಕೊಂಡಾಡಿದ್ದಾನೆ. ಕೃಪ ದ್ರೋಣಾದಿಗಳು ಸೂತಪುತ್ರನೆಂದು ಹೀಯಾಳಿಸಲಾಗಿ ಕರ್ಣ ನಾಚಿ ತಲೆತಗ್ಗಿಸುತ್ತಾನೆ. ಕೃಷ್ಣನ ಮೂಲಕ ತನ್ನ ಜನ್ಮವೃತ್ತಾಂತ ತಿಳಿದ ಬಳಿಕ ಕರ್ಣನಿಗೆ ಒಂದು ಕಡೆ ಸಂತೋಷ; ಮತ್ತೊಂದು ಕಡೆ ಸಂಕಟ, ಪಾಂಡವರು ತನ್ನ ತಮ್ಮಂದಿರೆಂದು ತಿಳಿದ ಮೇಲೆ ಅವರನ್ನು ಕೊಲ್ಲುವುದಕ್ಕೆ ಕೈ ಬಾರದೆಂದು ಕೊರಗುತ್ತಾನೆ. ಅವರನ್ನು ಕೊಲ್ಲದಿದ್ದರೆ ತನ್ನ ಸ್ವಾಮಿಗೆ ದ್ರೋಹ ಬಗೆದಂತಾಗುವುದೆಂದೂ ನೊಂದುಕೊಳ್ಳುತ್ತಾನೆ. ಕಡೆಗೆ ಯುದ್ಧ ಜ್ವಾಲೆಗೆ ತನ್ನನ್ನೇ ಸಮರ್ಪಿಸಿಕೊಳ್ಳುವುದೆಂದು ನಿಶ್ಚಯಿಸುತ್ತಾನೆ. ಕೃಷ್ಣ ಕರ್ಣನನ್ನು ಭೇದಿಸಲಾರದೆ, ಕುಂತಿಗೆ ಆ ಕೆಲಸವನ್ನು ಒಪ್ಪಿಸಿಕೊಡುತ್ತಾನೆ. ತಾಯಿಯನ್ನು ಕಂಡಕೂಡಲೆ ಕರ್ಣ ಪುಳಕಿತನಾಗಿ 'ಚಲಮುಂ ಚಾಗಮುಮಳವುಂ ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್ ನೆಲಸಿದುವು ನಿಮ್ಮ ಕರುಣಾಬಲದಿಂ ನೀವೆನ್ನನಿಂದಿಂ ಮಗನೆಂದುದಱಿಂ' ಎಂದು ಹಿಗ್ಗುತ್ತಾನೆ. ಕುಂತಿ ಕರ್ಣನನ್ನು ಕೌರವರ ಪಕ್ಷ ಬಿಟ್ಟು ಪಾಂಡವರ ಕಡೆಗೆ ಬಾ ಎನ್ನಲು 'ಮೀಂಗುಲಿಗನೆನಾಗಿಯುಮಣಮಾಂ ಗುಣಮನೆ ಬಿಸುಟೆನಿಲ್ಲ ನಿಮಗಂ ಮಗನಾದಂಗೆನಗೆ ಬಿಸುಡಲಕ್ಕುಮೆ' ಎಂದು ಉದಾತ್ತವಾಗಿ ನುಡಿದು, ಕಟ್ಟಕಡೆಗೆ 'ಪಿಡಿಯೆಂ ಪುರಿಗಣೆಯಂ ನರನೆಡೆಗೊಂಡೊಡಮುಟಿದ ನಿನ್ನ ಮಕ್ಕಳನಿನ್ನೇರ್ದೊಡಮಟಿಯೆಂ' ಎಂದು ವಾಗ್ದಾನ ಮಾಡುತ್ತಾನೆ. ಸಂಸ್ಕೃತ ಮಹಾಭಾರತದಲ್ಲಿ ಕರ್ಣನನ್ನು ಸಾರಥಿಯಾದ ಅದಿರಥನ ಮಗನೆಂದು ಹೇಳಿದ್ದರೆ, ಪಂಪನಲ್ಲಿ ಅವನನ್ನು ಮೀಂಗುಲಿಗನೆಂದು ವಿಶದಪಡಿಸಿದೆ. ಇದಲ್ಲದೆ ಕರ್ಣ ಕುಂತಿಯನ್ನು ಕಂಡು ಮಾತನಾಡುವ ರೀತಿನೀತಿಗಳು ತುಂಬ ಭಿನ್ನವಾಗಿವೆ. ಮುಂದೆ ಭೀಷ್ಮನನ್ನು ಕುರಿತು ಕಟುವಾಗಿ ಮಾತನಾಡಿದಾಗ, ಇತರರು ಅವನನ್ನು ಹೀನಕುಲಜನೆಂದು ಅಲ್ಲಗೆಳೆಯಲು, ತನ್ನ ಜನ್ಮವೃತ್ತಾಂತವನ್ನು ಅರಿತ ಕರ್ಣ ಆಗ ಎಂದಿನಂತಲ್ಲದೆ, 'ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಮಭಿಮಾನವೊಂದೆ ಕುಲಮಣ್ಮು ಕುಲಂ ಬಗೆವಾಗಳೀ ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ' ಎಂದು ಆತ್ಮವಿಶ್ವಾಸದಿಂದ ಕಿಡಿಕಿಡಿಯಾಗುತ್ತಾನೆ. ತಮ್ಮ ಕ್ಷಮಾಪಣೆ ಕೇಳುವಲ್ಲಿಯೂ ಈತನ ನಯವಿನಯಗಳನ್ನು ಕಂಡು ಭೀಷ್ಮರು ಸಂತೋಷಪಡುತ್ತಾರೆ. ಕರ್ಣಾರ್ಜುನರ ಯುದ್ಧವನ್ನಂತೂ ಪಂಪ ಬಹಳ ಪ್ರಭಾವಶಾಲಿಯಾಗಿ ವರ್ಣಿಸಿದ್ದಾನೆ. ತನಗೆ ಅರಿವಿಲ್ಲದೆ ತನ್ನ ಬತ್ತಳಿಕೆಯಲ್ಲಿ ಬಂದು ಸೇರಿದ್ದ ಸರ್ಪಾಸ್ತ್ರವನ್ನು ಕಂಡು, ಅದರ ಮರುನುಡಿಗೆ ಕಿವಿಗೊಡದೆ ತನ್ನ ತಾಯಿಗಿತ್ತ ವಚನವನ್ನು ಚಾಚೂತಪ್ಪದೆ ಕರ್ಣ ನಡೆಸುತ್ತಾನೆ. ಕರ್ಣನ ಮರಣವನ್ನು ಕಂಡು ಪಂಪನ ಹೃದಯ ಕರಗುತ್ತದೆ. ಅವನನ್ನು 'ಚಾಗದ ನನ್ನಿಯ ಕಲಿತನದಾಗರಂ' ಎಂದು ಕೊಂಡಾಡುತ್ತಾನೆ. 'ಪಿಡಿದನೆ ಪುರಿಗಣೆಯನೆರಬ್ಬುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ ಪಿಡಿದಟಿದನ್' ಎಂದು ದೇವತೆಗಳ ಪಡೆ ಹೊಗಳುತ್ತದೆ. ಮಹಾಭಾರತದ ವೀರಾಧಿವೀರರಲ್ಲಿ ಒಬ್ಬನೂ ಪಂಪನ ಕೃತಿಯ ಪ್ರತಿನಾಯಕನೂ ಆದ ಕರ್ಣನನ್ನು ಕುರಿತ ಚರಮಶ್ಲೋಕವನ್ನಂತು ಎಂದೆಂದಿಗೂ ಮರೆಯುವಂತಿಲ್ಲ.

***ನೆನೆಯದಿರಣ್ಣ ಭಾರತದೊಳಿಂ ಪೆರಾರುಮನೊಂದೆ ಚಿತ್ತದಿಂ***  
***ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ***  
***ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ***  
***ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ***

ಕನ್ನಡದ ಮತ್ತೊಬ್ಬ ಮಹಾಕವಿಯಾದ ಕುಮಾರವ್ಯಾಸನೂ ಹೀಗೆಯೇ ಕರ್ಣನ ಪಾತ್ರಕ್ಕೆ ಅಪೂರ್ವವಾದ ಕಾಂತಿಯನ್ನು ನೀಡಿದ್ದಾನೆ. ಇಟ್ಟಗುರಿಯನ್ನು ಬದಲಿಸುವುದಿಲ್ಲವೆಂದು ವ್ಯಾಸಭಾರತದಲ್ಲಿ ಶಲ್ಯನಿಗೆ ಉತ್ತರವಿತ್ತ ಕರ್ಣ, ಪಂಪಭಾರತದಲ್ಲಿ ತನ್ನ ತಾಯಿಗೆ ಪುರಿಗಣೆಯನ್ನು ಪ್ರಯೋಗಿಸುವುದಿಲ್ಲವೆಂದು ವಚನವೀಯುತ್ತಾನೆ. ಕುಮಾರವ್ಯಾಸಭಾರತದಲ್ಲಿ ಕುಂತಿಗೆ ತೊಟ್ಟಬಾಣವನ್ನು ತೊಡುವುದಿಲ್ಲವೆಂದು ಕರ್ಣ ವಾಗ್ದಾನ ಮಾಡುತ್ತಾನೆ. ಕಡೆಗಾಲದಲ್ಲಿ ಕೃಷ್ಣ ಕರ್ಣನಿಗೆ ತನ್ನ ದಿವ್ಯರೂಪವನ್ನು ತೋರಿ ಅವನನ್ನು ಕೃತಾರ್ಥನನ್ನಾಗಿ ಮಾಡುತ್ತಾನೆ. (ವಿ.ಜಿ.)

**ಕರ್ಣ (ಜ್ಯಾಮಿತಿ):** ಸರಳರೇಖೆಗಳಿಂದ ಆವೃತವಾದ ಒಂದು ಬಹುಭುಜಾಕೃತಿಯಲ್ಲಿ ಆಸನ್ನವಲ್ಲದ (ನಾನ್‌ಅಡ್ಜೆಸೆಂಟ್) ಯಾವುದೇ ಎರಡು ಶೃಂಗಗಳನ್ನು ಜೋಡಿಸುವ ಸರಳರೇಖೆ (ಡಯಗೊನಲ್). ನಾಲ್ಕು ಅಥವಾ ಹೆಚ್ಚು ಭುಜಗಳಿರುವ ಬಹುಭುಜಗಳಿಗೆ ಮಾತ್ರ ಕರ್ಣಗಳಿವೆ. ಒಂದು n–ಭುಜದಲ್ಲಿನ ಕರ್ಣಗಳ ಸಂಖ್ಯೆ

$nC_2 - n = \frac{1}{2}n\,(n-3)$

ಆದ್ದರಿಂದ ಒಂದು ಚತುರ್ಭುಜದಲ್ಲಿ 2, ಪಂಚಭುಜದಲ್ಲಿ 5, ಷಡ್ಭುಜದಲ್ಲಿ 9, ಇತ್ಯಾದಿ ಕರ್ಣಗಳಿವೆ.

ABCD ಒಂದು ಆಯತವಾದರೆ AC, BDಗಳು ಅದರ ಎರಡು ಕರ್ಣಗಳು ಇವುಗಳಲ್ಲಿ ಪ್ರತಿಯೊಂದೂ ಆ ಆಯತವನ್ನು ಎರಡು ಸರ್ವಸಮ ಲಂಬಕೋನ ತ್ರಿಭುಜಗಳಾಗಿ ವಿಭಾಗಿಸುತ್ತವೆ (AC ಯಾದರೆ ΔACD, ΔACB; BD ಯಾದರೆ ΔBDA, ΔBDC). ಈ ತ್ರಿಭುಜಗಳನ್ನು ಕುರಿತು ಪ್ರಸ್ತಾಪಿಸುವಾಗ AC ಮತ್ತು BDಗಳನ್ನು ವಿಕರ್ಣ ಗಳೆಂದು (ಹೈಪಾಟಿನ್ಯೂಸಸ್) ಕರೆಯುವುದು ವಾಡಿಕೆ.




ಒಂದು ಚತುರ್ಭುಜವನ್ನು (ಇದೇ ರೀತಿ ಬಹುಭುಜಗಳನ್ನು ಸಹ) ಎರಡು ಭಿನ್ನದೃಷ್ಟಿಕೋನಗಳಿಂದ ಪರಿಶೀಲಿಸಬಹುದು.

ಮೊದಲನೆಯದರಲ್ಲಿ ಬಿಂದುಗಳಿಂದ ಪ್ರಾರಂಭಿಸಿ ಮುಂದುವರಿಯುತ್ತೇವೆ. A, B, C, Dಗಳು ನಾಲ್ಕು ಸಮತಲೀಯ, ಇವುಗಳ ಪೈಕಿ ಯಾವ ಮೂರೂ ಏಕರೇಖಸ್ಥವಲ್ಲದ, ಬಿಂದುಗಳು. ಇವು ಒಟ್ಟು ಆರು ಸರಳರೇಖೆಗಳನ್ನು ರಚಿಸುತ್ತವೆ:




*a: AB; b: BC; c: CA*

*a': CD; b': AD; c': BD*

ಇವು ಆವೃತಿಸುವ ಒಟ್ಟು ಚಿತ್ರದ ಹೆಸರು ಸಂಪೂರ್ಣ ಚತುಷ್ಕೋನ (ಕಂಪ್ಲೀಟ್‌ಕ್ವಾಡ್ರೇಂಗಲ್), a, a'; b, b'; c, c ಇದರ ಒಂದೊಂದು ಜೊತೆ ಎದುರು ಭುಜಗಳು. ಇವು ಸಂಧಿಸುವ ಬಿಂದುಗಳು ಹೀಗಿವೆ;

E : a, a' ; F : b, b' ; G : c, c'

E,F,Gಗಳಿಗೆ ಕರ್ಣಬಿಂದುಗಳೆಂದೂ ಅವು ರಚಿಸುವ EFGಗೆ ಕರ್ಣಬಿಂದು ತ್ರಿಕೋನ (ಡಯಗೊನಲ್ ಪಾಯಿಂಟ್ ಟ್ರ್ಯಾಂಗಲ್) ಎಂದೂ ಹೆಸರು.

ಎರಡನೆಯದರಲ್ಲಿ ಸರಳರೇಖೆಗಳಿಂದ ಪ್ರಾರಂಭಿಸಿ ಮುಂದುವರಿಯುತ್ತೇವೆ. a,b,c,d ಗಳು ನಾಲ್ಕು ಸಮತಲೀಯ, ಇವುಗಳ ಪೈಕಿ ಯಾವ ಮೂರು ಏಕ




ಬಿಂದುಸ್ಥವಲ್ಲದ, ಸರಳರೇಖೆಗಳು. ಇವು ಒಟ್ಟು ಆರು ಬಿಂದುಗಳನ್ನು ರಚಿಸುತ್ತವೆ.

A : d,a ; B : a,b ; C: b,d;

A’ : b, c ; B’ : c,d ; C’ : c,a

ಇವು ಆವೃತಿಸುವ ಒಟ್ಟು ಚಿತ್ರದ ಹೆಸರು ಸಂಪೂರ್ಣ ಚತುರ್ಭುಜ (ಕಂಪ್ಲೀಟ್ ಕ್ವಾಡ್ರಿಲೇಟರಲ್). A, A’; B, B’; C, C’ ಇದರ ಒಂದೊಂದು ಜೊತೆ ಎದುರು ಶೃಂಗಗಳು. ಇವನ್ನು ಜೋಡಿಸುವ ಸರಳರೇಖೆಗಳು ಹೀಗಿವೆ:

*e: AA’, f : BB’, g : CC’*

e,f,g ಗಳಿಗೆ ಕರ್ಣರೇಖೆಗಳೆಂದೂ ಅವು ಆವೃತಿಸುವ ತ್ರಿಭುಜಕ್ಕೆ ($\Delta PQR$) ಕರ್ಣ ರೇಖಾ ತ್ರಿಭುಜ (ಡಯಗೊನಲ್ ಲೈನ್ ಟ್ರೈಲೇಟರಲ್) ಎಂದೂ ಹೆಸರು. (ಸಿ.ಎನ್.ಎಸ್.)

**ಕರ್ಣ (ಕಳಚುರಿ):** ಕರ್ನಾಟಕದಲ್ಲಿ ಚಾಳುಕ್ಯರ ಆಶ್ರಯದಲ್ಲಿ ಆಳುತ್ತಿದ್ದ ಕಳಚುರಿ ದೊರೆಗಳಲ್ಲೊಬ್ಬ. ಒಂದನೆಯ ಬಿಜ್ಜಳನ (ಬಿಜ್ಜ) ಮಗ. ಕನ್ನಮ, ಕೃಷ್ಣರಾಜ ಎಂದೂ ಈತನನ್ನು ಸಂಬೋಧಿಸಲಾಗಿದೆ. 1067ರಲ್ಲಿ ಈತನ ಆಳ್ವಿಕೆ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ಮಂಗಳಿವೇಡದಿಂದ (ಈಗಿನ ಮಂಗಳವೇಢೆ; ಷೋಲಾಪುರ ಜಿಲ್ಲೆ) ಅದರ ಸುತ್ತಮುತ್ತಣ ಪ್ರದೇಶಗಳನ್ನು ಈತ ಆಳುತ್ತಿದ್ದ. ಐವತ್ತು ಕದನಗಳಲ್ಲಿ ಕಾದಾಡಿ ಗೆದ್ದನೆಂದೂ ಹನ್ನೆರಡು ಮಂದಿ ದೊರೆಗಳನ್ನು ಕೊಂದು ತನ್ನ ರಾಜಧಾನಿಯನ್ನು ಶತ್ರುಗಳಿಂದ ರಕ್ಷಿಸಿದನೆಂದೂ ಇವನನ್ನು ಹೊಗಳಲಾಗಿದೆ. ಪರಮಾರರು, ಪೂರ್ವ ಚಾಳುಕ್ಯರು, ಚೋಳರು ಮುಂತಾದವರೊಂದಿಗೆ ಈತನ ಪ್ರಭುವಾದ ಒಂದನೆಯ ಸೋಮೇಶ್ವರ ಮಾಡಿದ ಕದನಗಳಲ್ಲಿ ಇವನೂ ಭಾಗವಹಿಸಿರಬೇಕೆಂದು ತೋರುತ್ತದೆ. ಈತ 1080ರ ವರೆಗೂ ರಾಜ್ಯವಾಳಿದ (**ನೋಡಿ– ಕಳಚುರಿಗಳು**). *

**ಕರ್ಣ (ಗುಹಿಲ):** 12ನೆಯ ಶತಮಾನದಲ್ಲಿ ಮೇವಾಡ ಅಥವಾ ಮೆದಪಾಟ ವನ್ನಾಳುತ್ತಿದ್ದ ಗುಹಿಲ ಮನೆತನದ ಒಬ್ಬ ದೊರೆ. ರಣಸಿಂಹ ಎಂಬುದು ಇವನ ಇನ್ನೊಂದು ಹೆಸರು. ಕರ್ಣನಿಗೆ ಮಹಾನ, ಕ್ಷೇಮಸಿಂಹ ಮತ್ತು ರಾಹಪ ಎಂಬ ಮೂವರು ಮಕ್ಕಳಿದ್ದರು. ಕ್ಷೇಮಸಿಂಹನ ವಂಶದವರು ರಾವಲ ಅಥವಾ ರಾಜಕುಲರೆಂದೂ ರಾಹಪನ ವಂಶಜರು ರಾವಲರ ಅಧೀನರಾಗಿ ಆಳುತ್ತಿದ್ದು, ರಾಣಾಗಳೆಂದೂ ಹೆಸರಾಂತರು. ಕರ್ಣನ ಅನಂತರ ಸಿಂಹಾಸನವನ್ನೇರಿದವ ಕ್ಷೇಮಸಿಂಹ. ಇವನ ಮಗ ಸಾಮಂತಸಿಂಹ 1171ರಲ್ಲಿ ಮೇವಾಡವನ್ನಾಳುತ್ತಿದ್ದನೆಂದು ತಿಳಿದುಬಂದಿದೆ. *

**ಕರ್ಣ (ಚೌಳುಕ್ಯ):** ಸು. 1064ರಿಂದ ಸು. 1094ರವರೆಗೆ ಗುಜರಾತಿನಲ್ಲಿ ಆಳಿದ ಚೌಳುಕ್ಯ ವಂಶದ ದೊರೆಗಳಲ್ಲೊಬ್ಬ. ಭೀಮನ ಮೂವರು ಗಂಡುಮಕ್ಕಳಲ್ಲಿ ಕೊನೆಯವ. ಮೊದಲನೆಯವನಾದ ಮೂಲರಾಜ ತನ್ನ ತಂದೆಗಿಂತ ಮುಂಚೆಯೇ ಮರಣ ಹೊಂದಿದ. ತನ್ನ ತಾಯಿ ಉತ್ತಮ ಕುಲಜೆಯಲ್ಲವೆಂಬ ಕಾರಣದಿಂದ ಎರಡನೆಯವನಾದ ಕ್ಷೇಮರಾಜ ಸಿಂಹಾಸನವನ್ನೇರಲು ಒಪ್ಪಲಿಲ್ಲ. ಆದ್ದರಿಂದ ಭೀಮ ಸು. 1064ರಲ್ಲಿ ರಾಜ್ಯಾಧಿಕಾರವನ್ನು ಕರ್ಣನಿಗೆ ಒಪ್ಪಿಸಿ ತಾನು ತೀರ್ಥಯಾತ್ರೆ ಹೊರಟ.

ಕರ್ಣ ತ್ರೈಲೋಕ್ಯಮಲ್ಲನೆಂಬ ಬಿರುದು ತಳೆದು, ತನ್ನ ರಾಜ್ಯವನ್ನು ಬಲಪಡಿಸಿದುದೇ ಅಲ್ಲದೆ, ಅನೇಕ ಹೊಸ ಪ್ರದೇಶಗಳನ್ನು ಸಂಪಾದಿಸಿದ. ದಕ್ಷಿಣದಲ್ಲಿ ನವಸಾರಿಯವರೆಗೂ ಇವನ ರಾಜ್ಯ ವಿಸ್ತರಿಸಿತು. ಕರ್ನಾಟಕ ವಂಶದ ಅರಸರೊಡನೆ ಸಖ್ಯ ಬೆಳೆಸಿ, ಪರಮಾರ ದೊರೆ ಜಯಸಿಂಹನನ್ನು ಅವರ ಸಹಾಯದಿಂದ ಸೋಲಿಸಿ ಕೊಂದ. ಮಾಳವವನ್ನು ಜಯಿಸಿದ. ಆದರೆ ಅಂತ್ಯದಲ್ಲಿ ಕರ್ಣನನ್ನು ಪರಮಾರ ಉದಯಾದಿತ್ಯ ತನ್ನ ರಾಜ್ಯದಿಂದ ಓಡಿಸಿದ. ಅಷ್ಟೇ ಅಲ್ಲ. ಕರ್ಣನ ಆಳ್ವಿಕೆಯ ಕೊನೆಯ ಕಾಲದಲ್ಲಿ ಪರಮಾರ ದೊರೆ ಜಗದ್ದೇವನಿಂದ ಇವನು ಪರಾಭವವನ್ನನುಭವಿಸಬೇಕಾಯಿತು.

ದಕ್ಷಿಣ ಮಾರ್ವಾರದ ಮೇಲೆ ಕರ್ಣ ಕೈಕೊಂಡ ದಂಡಯಾತ್ರೆಯೂ ವಿಫಲವಾಯಿತು. ಅಲ್ಲಿ ಆಳುತ್ತಿದ್ದ ನಾಡೋಲದ ಚಾಹಮಾನ ರಾಜ ಪೃಥ್ವೀಪಾಲ ಇವನನ್ನು ಹಿಮ್ಮೆಟ್ಟಿಸಿದ. ಅಹಮದಾಬಾದಿನ ಬಳಿಯ ಆಶಾಪಲ್ಲೀ (ಈಗಿನ ಅಸವಲ್) ಎಂಬಲ್ಲಿ ಆಳುತ್ತಿದ್ದ ಆಶಾ ಎಂಬ ಭಿಲ್ಲ ನಾಯಕನನ್ನು ಕರ್ಣ ಸೋಲಿಸಿದ. ಗೋವೆಯ ಕದಂಬ ದೊರೆ ಜಯಕೇಶಿಯ ಮಗಳಾದ ಮಯಣಲ್ಲದೇವಿಯನ್ನು ಕರ್ಣ ವಿವಾಹವಾಗಿದ್ದ. ಪ್ರ.ಶ. 1094ರಲ್ಲಿ ಕರ್ಣ ಮರಣಹೊಂದಲು ಅವನ ಅಪ್ರಾಪ್ತ ವಯಸ್ಕ ಪುತ್ರನಾದ ಜಯಸಿಂಹ ಚೌಳುಕ್ಯರಾಜನಾದ. ಸ್ವಲ್ಪಕಾಲ ಮಯಣಲ್ಲ ದೇವಿಯೇ ತನ್ನ ಮಗನ ರಾಜಪ್ರತಿನಿಧಿಯಾಗಿ (ರೀಜೆಂಟ್) ಆಳ್ವಿಕೆ ನಡೆಸಿದಳು. **ನೋಡಿ–ಚಾಳುಕ್ಯರು, ಗುಜರಾತಿನ.** (ಎಸ್.ಎಚ್.ಐ.)

**ಕರ್ಣ (ವಾಘೇಲ):** ಗುಜರಾತನ್ನಾಳಿದ ಚೌಳುಕ್ಯ ದೊರೆಗಳಲ್ಲಿ ಕೊನೆಯವ. ವಾಘೇಲ ಮನೆತನಕ್ಕೆ ಸೇರಿದವ. ರಾಮನ ಮಗ. ದೊಡ್ಡಪ್ಪ ಸಾರಂಗದೇವನ ಅನಂತರ ಪಟ್ಟಕ್ಕೆ ಬಂದ (1296). ಆದರೆ 1299ರಲ್ಲಿ ಅಲಾವುದ್ದೀನ್ ಖಿಲ್ಜಿಯ ಇಬ್ಬರು ಸೇನಾಧಿಪತಿ ಗಳಾದ ಉಲುಘ್‌ಖಾನ್ ಮತ್ತು ನುಸ್ರತ್ ಖಾನರು ದೊಡ್ಡ ಸೈನ್ಯದೊಂದಿಗೆ ಗುಜರಾತಿನ ಮೇಲೇರಿ ಬಂದರು. ಆಶಾಪಲ್ಲಿಯ ಬಳಿ ಯುದ್ಧ ನಡೆಯಿತು. ಇಡೀ ಗುಜರಾತು ಅವರಿಗೆ ವಶವಾಯಿತು. ಕರ್ಣನ ರಾಣಿ ಕಮಲಾದೇವಿಯನ್ನು (ಕೌಲದೇವಿ) ಅವರು ಸೆರೆಹಿಡಿದು ದೆಹಲಿಗೆ ಕೊಂಡೊಯ್ದು ಅಲ್ಲಾವುದ್ದೀನನ ಜನಾನಾಕ್ಕೆ ಸೇರಿಸಿದರು (**ನೋಡಿ– ಕಮಲಾದೇವಿ**). ಕರ್ಣ ತನ್ನ ಮಗಳು ದೇವಲದೇವಿಯೊಡನೆ ನಾಸಿಕದಲ್ಲಿರುವ ಬಾಗ್ಲಾನಿಗೆ ಓಡಿಹೋಗಿ ಅಲ್ಲಿ ಕೆಲಕಾಲ ರಾಜ್ಯವಾಳಿದ. ಗುಜರಾತಿನ ರಾಜ್ಯಪಾಲನಾಗಿದ್ದ ಅಲಫ್ ಖಾನ್ 1306ರ ಅನಂತರ ಬಾಗ್ಲಾನಿನ ಮುತ್ತಿಗೆ ನಡೆಸಿದ. ಆಗ ದೇವಲದೇವಿಗೆ ಯಾದವರ ಶಂಕರನೊಂದಿಗೆ ವಿವಾಹ ನಿಶ್ಚಯವಾಗಿತ್ತು. ಕರ್ಣ ದೇವಲದೇವಿಯನ್ನು ದೇವಗಿರಿಗೆ ರಕ್ಷಕರ ಜೊತೆಯಲ್ಲಿ ಕಳಿಹಿಸಿಕೊಟ್ಟ. ಆದರೆ ಹಾದಿಯಲ್ಲೇ ಮುಸ್ಲಿಮರು ಅವಳನ್ನು ಹಿಡಿದು ದೆಹಲಿಗೆ ಕೊಂಡೊಯ್ದರು. ಕರ್ಣ ಸ್ವಲ್ಪಕಾಲ ಅಲಫ್ ಖಾನನೊಂದಿಗೆ ಕೆಚ್ಚಿನಿಂದ ಕಾದಾಡಿದ. ಆದರೆ ಆಕ್ರಮಣಕಾರರ ಬಲದ ಮುಂದೆ ಅವನ ಯತ್ನ ವಿಫಲವಾಯಿತು. ಕೊನೆಗೆ ಆತ ದೇವಗಿರಿಗೆ ಪಲಾಯನ ಮಾಡಿದ. ಆಮೇಲೆ ಅವನ ಗತಿ ಏನಾಯಿತೆಂಬುದು ತಿಳಿಯದು. (ಎಸ್.ಎಚ್.ಐ.;ಎ.ವಿ.ಎನ್.)

**ಕರ್ಣ (ಸೇವುಣ):** ದೇವಗಿರಿಯ ಸೇವುಣ ರಾಜವಂಶದ ಐದನೆಯ ಭಿಲ್ಲಮನ (1173–1192) (**ನೋಡಿ– ಭಿಲ್ಲಮ**) ತಂದೆಯೆಂದು ಹೇಳಲಾಗಿದೆ. ಇವನ ವಿಷಯವಾಗಿ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ. ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿ ಗ್ರಂಥದಲ್ಲಿರುವ ಸೇವುಣರ ರಾಜಪ್ರಶಸ್ತಿಯಲ್ಲಿ ಇವನ ಹೆಸರು ಕಾಣಬರುವುದಿಲ್ಲ. ಆದರೆ ಐದನೆಯ ಭಿಲ್ಲಮನಿಂದಲೇ ಹೊರಡಿಸಲಾದ ಗದಗ್ ಶಾಸನದಲ್ಲಿ ಈತ ಭಿಲ್ಲಮನ ತಂದೆಯೆಂದು ಹೇಳಿದೆ. ಮೇಥಿ ಮತ್ತಿತರ ಶಾಸನಗಳಲ್ಲಿ ಇವನ ಹೆಸರು ಕೃಷ್ಣ ಎಂದಿದೆ. ಈ ಎಲ್ಲ ಅಂಶಗಳನ್ನೂ ಗಮನಿಸಿ ಕೆಲವು ಚರಿತ್ರಕಾರರು ಕರ್ಣನನ್ನು ಸೇವುಣರ ವಂಶವೃಕ್ಷದಲ್ಲಿ ಕೈಬಿಟ್ಟಿದ್ದಾರೆ. ಕರ್ಣ ರಾಜ್ಯಭಾರ ಮಾಡಿದಂತೆ ಕಾಣುವುದಿಲ್ಲ. ಎರಡನೆಯ ಮಲ್ಲುಗಿಯ ಅನಂತರ ಐದನೆಯ ಭಿಲ್ಲಮ ರಾಜ್ಯಭಾರ ಮಾಡಿದನೆಂದು ಸ್ಪಷ್ಟವಾಗುತ್ತದೆ. ಭಿಲ್ಲಮ ಮಲ್ಲುಗಿಯ ಮಗನೆಂದೇ ಪಿ. ಬಿ. ದೇಸಾಯಿ ಸಂಪಾದಿತ ಎ ಹಿಸ್ಟರಿ ಆಫ್ ಕರ್ನಾಟಕದಲ್ಲೂ ಹೇಳಲಾಗಿದೆ. ಕರ್ಣ ರಾಜ್ಯಭಾರವನ್ನು ವಹಿಸಿಕೊಳ್ಳುವ ಮೊದಲೇ ಮರಣ ಹೊಂದಿರಬೇಕು ಎಂಬುದೂ ಒಂದು ಊಹೆ. (ಎ.ವಿ.ಎನ್.)

**ಕರ್ಣಕೀಟಗಳು:** ಕೀಟವರ್ಗದ ಡರ್ಮಾಪ್ಟಿರ ಗಣಕ್ಕೆ ಸೇರಿದ ಕೀಟಗಳು (ಇಯರ್ ವಿಗ್ಸ್). ಇವು ನಿದ್ರಿಸುವವರ ಕಿವಿಯೊಳಕ್ಕೆ ಹೋಗುವುದೆಂಬ ತಪ್ಪು ಭಾವನೆಯಿಂದ ಈ ಹೆಸರು ಬಂದಿದೆ. ಇವುಗಳ ದೇಹದ ಹಿಂಭಾಗದ ಕೊನೆಯಲ್ಲಿ ಕೊಂಡಿಗಳಂತಿರುವ ಎರಡು ರಚನೆಗಳಿವೆ. ಇದರಿಂದಾಗಿ ಇವಕ್ಕೆ ಕೊಂಡಿಕೀಟ ಅಥವಾ ಕೊಂಡಿಹುಳು ಎಂಬ ಹೆಸರೂ ಇದೆ.

ಪ್ರೌಢಕೀಟಗಳಿಗೆ ಸಾಮಾನ್ಯವಾಗಿ ಎರಡು ಜೊತೆ ರೆಕ್ಕೆಗಳಿವೆ. ಮುಂದಿನ ಜೊತೆ ರೆಕ್ಕೆಗಳು ಒರಟು ಮತ್ತು ಸಣ್ಣವು. ಇವುಗಳ ಮೇಲೆ ನಾಳವಿನ್ಯಾಸವಿಲ್ಲ. ಹಿಂದಿನ ಜೊತೆ ರೆಕ್ಕೆಗಳು ಅಗಲವಾಗಿ, ತೆಳುವಾಗಿ ಪೊರೆಯಂತಿವೆ. ಇವುಗಳ ಮೇಲೆ ನಾಳಗಳಿವೆ. ಕೀಟ ಹಾರದಿದ್ದಾಗ ಇವು ಮುಂದಿನ ರೆಕ್ಕೆಗಳ ಕೆಳಗೆ ಮಡಿಚಿಕೊಂಡಿರುತ್ತವೆ. ವದನಾಂಗಗಳು



ಆಹಾರವನ್ನು ಅಗಿಯುವುದಕ್ಕೆ ಸಹಕಾರಿಯಾಗಿವೆ. ಶರೀರದ ಕೊನೆಯಲ್ಲಿರುವ ಕೊಂಡಿಗಳು ಈ ಕೀಟಗಳ ಪ್ರಧಾನ ಲಕ್ಷಣ. ಕೊಂಡಿಗಳ ಆಕಾರ ಮತ್ತು ಉದ್ದ ವಿವಿಧ ಪ್ರಭೇದಗಳಲ್ಲಿ ಬೇರೆ ಬೇರೆಯಾಗಿವೆ. ಅಲ್ಲದೆ ಒಂದೇ ಪ್ರಭೇದದ ಗಂಡು ಹಾಗೂ ಹೆಣ್ಣು ಕೀಟಗಳಲ್ಲಿ ಇವು ಭಿನ್ನವಾಗಿರುತ್ತವೆ. ಇದರಿಂದ ಗಂಡು, ಹೆಣ್ಣುಗಳನ್ನು ಗುರುತಿಸ ಬಹುದು. ಕೊಂಡಿಗಳನ್ನು ತಮ್ಮ ಆಹಾರವಾದ ಇತರ ಸಣ್ಣ ಕೀಟಗಳನ್ನು ಹಿಡಿಯುವುದಕ್ಕೂ ಎಳೆದುಕೊಂಡು ಹೋಗುವುದಕ್ಕೂ ತಮ್ಮ ರಕ್ಷಣೆಗೂ ಉಪಯೋಗಿಸುತ್ತವೆ. ಗಂಡು ಹೆಣ್ಣುಗಳ ಸಂಭೋಗಕ್ಕೆ ಕೊಂಡಿ ಸಹಕಾರಿ ಎನ್ನಲಾಗಿದೆ. ಕೆಲವು ಪ್ರಭೇದಗಳು ತಮ್ಮ ರಕ್ಷಣೆಗಾಗಿ ಇನ್ನೊಂದು ಮಾರ್ಗವನ್ನವಲಂಬಿಸಿವೆ. ಇವುಗಳ 2 ಮತ್ತು 3ನೆಯ ಉದರ ಖಂಡಗಳ ಮೇಲ್ಭಾಗದಲ್ಲಿ ವಾಸನೆಯ ಗ್ರಂಥಿಗಳಿವೆ. ಇವುಗಳಿಂದ ದುರ್ವಾಸನೆಯುಳ್ಳ ಕಂದುಮಿಶ್ರಿತ ಹಳದಿಬಣ್ಣದ ದ್ರವವೊಂದು ಉತ್ಪತ್ತಿಯಾಗುತ್ತದೆ. ಇದನ್ನು ಇವು ಸು. 3"–4" ದೂರ ಚಿಮ್ಮಿಸಬಲ್ಲವು.

ಕರ್ಣಕೀಟಗಳು ನಿಶಾಚರಿಗಳು. ಹಗಲಿನಲ್ಲಿ ನೆಲದಲ್ಲಿನ ಸಂದುಗಳು, ಬಿರುಕುಗಳು, ಮರದ ಪೊಟರೆಗಳಲ್ಲಿ ಇರುತ್ತವೆ. ಇವುಗಳ ಮುಖ್ಯ ಆಹಾರ ಕೊಳೆತಿರುವ ಮಾಂಸ ಹಾಗೂ ಇತರ ಸಣ್ಣ ಪುಟ್ಟ ಪ್ರಾಣಿಗಳು. ಕೆಲವೊಮ್ಮೆ ಕೊಳೆತ ಸಸ್ಯಪದಾರ್ಥಗಳನ್ನೂ ತಿನ್ನುವುದುಂಟು.

ಕರ್ಣಕೀಟಗಳ ಜೀವನದ ಸ್ವಾರಸ್ಯವಾದ ವಿಷಯ ಎಂದರೆ ತಾಯಿಕೀಟ ತನ್ನ ಮೊಟ್ಟೆಗಳನ್ನು, ಮರಿಗಳನ್ನು ಜಾಗರೂಕತೆಯಿಂದ ರಕ್ಷಿಸಿ ಪಾಲನೆ ಮಾಡುವುದು. ಮೊಟ್ಟೆಗಳನ್ನು ನೆಲದಲ್ಲಿ ಕೊರೆದ ತೂತುಗಳಲ್ಲಿಟ್ಟು ಅವು ಒಡೆದು ಮರಿಗಳಾಗಿ ಬೆಳೆದು ದೊಡ್ಡವಾಗುವವರೆಗೂ ಅವನ್ನು ಕಾಪಾಡುತ್ತದೆ.

ಈ ಕೀಟಗಳು ಪ್ರಪಂಚದಾದ್ಯಂತ ಇವೆಯಾದರೂ ಇವುಗಳ ಸಂಖ್ಯೆ ಯುರೋಪ್ ಮತ್ತು ಉಷ್ಣವಲಯದ ದೇಶಗಳಲ್ಲಿ ಹೆಚ್ಚು. ವಿವಿಧ ಪ್ರಭೇಧಗಳ ಒಟ್ಟಾರೆ ಸಂಖ್ಯೆ ಸುಮಾರು 1,200. ಇದರಲ್ಲಿ ಸುಮಾರು 120 ಪ್ರಭೇಧಗಳು ಭಾರತದಲ್ಲಿವೆಯೆಂದು ಅಂದಾಜು. ಇವುಗಳಲ್ಲಿ ಮುಖ್ಯವಾದವು ಇವು: 1 ಲೆಬಿಡ್ಯೂರಿಡೀ ಕುಟುಂಬಕ್ಕೆ ಸೇರಿದ *ಲೆಬಿಡ್ಯೂರ ರೈಪೇರಿಯ*, 2 ಲೇಬಿಡೀ ಕುಟುಂಬದ *ಲೇಬಿಯ ಮೈನರ್*, 3 ಫಾರ್ಫಿಕ್ಯುಲಿಡೀ ಕುಟುಂಬದ *ಫಾರ್ಫಿಕ್ಯುಲ ಆರಿಕ್ಯುಲೇರಿಯ*, 4 ಕೆಲಿಸೋಸಿಡೀ ಕುಟುಂಬಕ್ಕೆ ಸೇರಿದ *ಪ್ರೋರಿಯಸ್ ಅಬ್ಡಾಮಿನ್ಯಾಲಿಸ್*. ಈ ವರೆಗೆ ಕೇವಲ 15 ಪ್ರಭೇದಗಳ ಕ್ರೋಮೊಸೋಮುಗಳನ್ನು ವಿವರಿಸಿದ್ದಾರೆ. (ಪಿ.ಎಂ.;ಜೆ.ಪಿ.ಸಿ.)

**ಕರ್ಣಕುಂಡಲ:** ಬಾಲ್ಸಾಮಿನೇಸೀ ಕುಟುಂಬಕ್ಕೆ ಸೇರಿದ ಒಂದು ವಾರ್ಷಿಕ ಸಸ್ಯ. ಇದರ ವೈಜ್ಞಾನಿಕ ಹೆಸರು ಇಂಪೇಷಿಯೆನ್ಸ್‌ಮಿನ. ಇದನ್ನು ಗೌರಿಹೂಗಿಡ, ಬಸವನ ಪಾದ ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ವರ್ಣರಂಜಿತ ಹೂ ಬಿಡುವ ಇದು ಸಾಮಾನ್ಯವಾಗಿ ಉದ್ಯಾನ, ಕೈತೋಟಗಳಲ್ಲಿ ಮನೆಯ ಆವರಣಗಳಲ್ಲಿ ಬೆಳೆಸಲು ಯೋಗ್ಯವಾದ ಗಿಡ. ಇದನ್ನು ಕುಂಡಗಳಲ್ಲಿಯೂ ಹೂ ಮಡಿಗಳಲ್ಲಿಯೂ ಬೆಳೆಸಬಹುದು. ಇದರ ಹೂಗಳು ಪೂಜೆಗೆ ಶ್ರೇಷ್ಠವಾದವೆಂದು ನಂಬಿಕೆ. ಹೆಣ್ಣುಮಕ್ಕಳು ಮುಡಿಯುವುದು ಕಡಿಮೆ. ಇದರಲ್ಲಿ ಬಿಳಿ, ಕೆಂಪು, ಕಿತ್ತಳೆ, ಗುಲಾಬಿ, ನೇರಳೆ ಇತ್ಯಾದಿ ಬಣ್ಣಗಳ ಹೂ ಬಿಡುವ, ದಳಗಳ ಮೇಲೆ ಚುಕ್ಕೆಗಳಿರುವ ಹೂವುಳ್ಳ, ಒಂಟಿ ಸುತ್ತಿನ ಅಥವಾ ಹಲವಾರು ಸುತ್ತಿನ ಹೂಗಳು ಹೆಚ್ಚು ಸುಂದರವೂ ಆಕರ್ಷಕವೂ ಆಗಿವೆ.

ಬೀಜದಿಂದಲೇ ಈ ಸಸ್ಯ ಸುಲಭವಾಗಿ ವೃದ್ಧಿಯಾಗುತ್ತದೆ. ಇದು ಮಳೆಗಾಲದಲ್ಲಿ ಚೆನ್ನಾಗಿ ಬೆಳೆಯಬಲ್ಲುದು. ಚಳಿಗಾಲದಲ್ಲಿ ಇದಕ್ಕೆ ಬೂಷ್ಟು ರೋಗದ ಕಾಟ ಹೆಚ್ಚು. ಮೊದಲು ನರ್ಸರಿಯಲ್ಲಿ ಬೀಜ ಹಾಕಿ ಸಸಿಗಳನ್ನು ಉತ್ಪಾದಿಸಿ ಅನಂತರ ಹೂವಿನ ಮಡಿಗಳಲ್ಲಿ ಸ್ಥಳಾಂತರಿಸಬೇಕು. 6"–8" ಅಂತರವಿರುವಂತೆ ಸಸಿಗಳನ್ನು ನೆಡಬೇಕು. ಇದು ಸಾಮಾನ್ಯವಾಗಿ ಯಾವ ಬಗೆಯ ಭೂಮಿಯಲ್ಲಾದರೂ ಬೆಳೆಯುತ್ತದೆ. ಆದರೆ ಸಾಕಷ್ಟು ಕೊಳೆತ ಗೊಬ್ಬರ ಹಾಕಿ ನೀರುಣಿಸಿದರೆ ಗಿಡ ಹುಲುಸಾಗಿ ಬೆಳೆಯುತ್ತದೆ. ಗೊಬ್ಬರ ಅತಿಯಾದರೆ, ಎಲೆಗಳೇ ಹೆಚ್ಚಿ ಹೂ ಕಡಿಮೆ ಆಗಬಹುದು. ಸ್ಥಳಾಂತರಿಸಿದ 40–50 ದಿವಸಗಳಲ್ಲಿ ಹೂ ಬಿಡುತ್ತದೆ. ಕಾಯಿಯಾಗುವ ಮೊದಲೇ ಹೂಗಳನ್ನು ತೆಗೆದು ಹಾಕುತ್ತಿದ್ದರೆ ದೀರ್ಘಕಾಲ ಹೂ ಬಿಡುತ್ತದೆ. ಹೂ ಬಿಟ್ಟಾಗ ಎಲೆಗಳ ಸಂಖ್ಯೆಯನ್ನು ಕಡಿಮೆ ಮಾಡಿದರೆ. ಹೂಗಳ ಪ್ರಾಮುಖ್ಯ ಹಾಗೂ ಸೌಂದರ್ಯ ಎದ್ದು ಕಾಣುತ್ತದೆ.

ಇದು ಸುಮಾರು 12"–15" ಎತ್ತರಕ್ಕೆ ಬೆಳೆಯುವ ಮೂಲಿಕೆಸಸ್ಯ (ಹರ್ಬ್). ಕಾಂಡ ಮತ್ತು ಶಾಖೆಗಳನ್ನು ಬೆಳಕಿಗೆ ಎದುರಾಗಿ ಹಿಡಿದಾಗ, ಒಳಗಿರುವ ನಾಳಗಳು (ನೀರ್ನಾಳ ಮತ್ತು ಆಹಾರನಾಳ) ದಪ್ಪ ಗೆರೆಗಳಂತೆ ಎದ್ದು ಕಾಣುತ್ತವೆ. ಒಂದು ಚಿಕ್ಕ ಗಿಡವನ್ನು ಬೇರು ಸಹಿತ ಕಿತ್ತು ಬಣ್ಣದ ದ್ರಾವಣದಲ್ಲಿ (ಇಯಸೀನ್ ದ್ರಾವಣ) ಕೆಲಹೊತ್ತು ಇಟ್ಟರೆ, ನಾಳಗಳೊಳಕ್ಕೆ ದ್ರಾವಣ ಪ್ರವಹಿಸಿ ನಾಳಗಳು ಕೆಂಪಾಗಿ ಇನ್ನಷ್ಟು ಎದ್ದು ಕಾಣುತ್ತವೆ. ಎಲೆಗಳು ಸರಳ. ಇವು ಕಾಂಡದ ಮೇಲೆ ವಿವಿಧ ರೀತಿಯಲ್ಲಿ ಜೋಡಣೆಯಾಗಿವೆ. ಸಾಮಾನ್ಯವಾಗಿ ವೃಂತಪತ್ರಗಳಿಲ್ಲ. ಕೆಲವೊಮ್ಮೆ ವೃಂತಪತ್ರ ಗ್ರಂಥಿಗಳಿರಿತ್ತವೆ. ಹೂಗಳು ಅಸಮ; ವಿಪರ್ಯಸ್ತ ಮತ್ತು ಆಕರ್ಷಕವಾಗಿದ್ದು, ಎಲೆಗಳ ಕಂಕುಳಲ್ಲಿ (ಆಕ್ಸಿಲ್) ಒಂಟೊಂಟಿಯಾಗಿ ಹುಟ್ಟುತ್ತವೆ. ಆದರೆ ಕೆಲವೊಮ್ಮೆ ಅಪವಾದವಾಗಿ, ಚಿಕ್ಕ ಗೊನೆಯಂತಿರುವ ಮಧ್ಯಾರಂಭಿ ಹೂಗೊಂಚಲುಗಳಲ್ಲೂ ಹುಟ್ಟುವುದುಂಟು. ಪುಷ್ಪಪತ್ರಗಳ ಸಂಖ್ಯೆ 3, ಒಮ್ಮೊಮ್ಮೆ 5; ವರ್ಣಮಯ; ಮುಂಭಾಗದಲ್ಲಿನ 2 ಪತ್ರಗಳು ಕಿರಿದಾಗಿವೆ. ಪಾರ್ಶ್ವ ಬದಿಯಲ್ಲಿನ 2 ಪತ್ರಗಳು ಚಿಕ್ಕವೂ ಚಪ್ಪಟೆಯೂ ಆಗಿದ್ದು ಸಾಮಾನ್ಯವಾಗಿ ಹಸಿರಾಗಿವೆ. ಇಡೀ ಹೂವೇ ತಿರುವುಮುರುವಾಗಿರುವುದರಿಂದ ತುಟಿಯಂತಿರುವ ಹಿಂದಿನ ಭಾಗದ ಪುಷ್ಪಪತ್ರ ಮುಂಭಾಗಕ್ಕೆ ಬಂದಂತಿರುತ್ತದೆ. ಇದು ದೊಡ್ಡದಾಗಿದ್ದು, ದಳದಂತೆ ಕಾಣುತ್ತದೆ. ಅಲ್ಲದೆ ಇದಕ್ಕೆ ಒಂದು ಪೊಳ್ಳಾದ ಹಾಗೂ ಬಾಗಿದ ಸೊಂಡಿಲಿನಂಥ (ಸ್ಪರ್) ರಚನೆಯಿದೆ. ಪುಷ್ಪದಳಗಳು 3 ಅಥವಾ 5; ಮುಂದಿನ ದಳ ಪತಾಕೆಯಂತಿದ್ದು (ಸ್ಟಾಂಡರ್ಡ್) ಹೂ ತಿರುವುಮುರುವಾಗಿರುವುದರಿಂದ ಹೂವಿನ ಹಿಂಬದಿಗೆ ಬರುತ್ತದೆ. ಮೊಗ್ಗಿನಲ್ಲಿ ಈ ದಳ ಅತ್ಯಂತ ಹೊರಭಾಗದಲ್ಲಿರುತ್ತದೆ. ರೆಕ್ಕೆಯಂಥ ಪಾರ್ಶ್ವದಳಗಳು 2 ಭಾಗಗಳಾಗಿ ಸೀಳಿವೆ. ಕೆಲವು ಬಾರಿ ಎರಡೂ ಕೂಡಿಕೊಂಡಿರುವುದು ಉಂಟು. ಕೇಸರಗಳು 5, ಕೇಸರದಂಡ ಅಗಲವಾಗಿಯೂ ಚಿಕ್ಕದಾಗಿಯೂ ಇದೆ. ಪರಾಗಕೋಶಗಳು ಒಂದಕ್ಕೊಂದು ಕೂಡಿಕೊಂಡಿವೆ. ಅಂಡಾಶಯ ಉಚ್ಚಸ್ಥಾನದ್ದು; ಆಯತಾಕಾರವಾಗಿದೆ. ಇದರಲ್ಲಿ 5 ಕೋಣೆಗಳಿವೆ. ಒಂದೊಂದು ಕೋಣೆಯಲ್ಲಿಯೂ ಅಸಂಖ್ಯಾತ ಅಂಡಕಗಳಿದ್ದು ಇವು ಸಾಲಾಗಿ ಜೋಡಣೆಗೊಂಡಿರುತ್ತವೆ. ಶಲಾಕೆ ಇಲ್ಲ. ಶಲಾಕಾಗ್ರ ಅಂಡಾಶಯದ ಮೇಲೇ ಇದೆ. ಅದರಲ್ಲಿ 5 ಮೂಲೆಗಳಿವೆ. ಫಲ ಒಡೆಯುವ ಮಾದರಿಯದು. ಅದು ಸಂಪುಟ (ಕ್ಯಾಪ್ಸೂಲ್) ಜಾತಿಗೆ ಸೇರಿದೆ. ಇದರ ಕೋಶ ಸ್ಫುಟನ ಶಕ್ತಿ ಮತ್ತು ಬೀಜಗಳ ಬಿಡುಗಡೆಯ ರೀತಿ ಗಮನಾರ್ಹವೆನಿಸಿದೆ. ಅಂಡಕೋಶದಲ್ಲಿ 5 ವಿಭಾಗಗಳಿದ್ದು ಅವು ಅಂಡಕಾಧಾರ ದಂಥ ಅಕ್ಷದಿಂದ ಸ್ಥಿತಿಸ್ಥಾಪಕ ಗುಣವುಳ್ಳ ರಬ್ಬರಿನಂತೆ ಹಿಡಿದು ಸ್ಫೋಟಗೊಳ್ಳುತ್ತವೆ. ಬೀಜಗಳು ನುಣುಪು ಇಲ್ಲವೆ ಒರಟು, ಹೊಳಪು ಇಲ್ಲವೆ ರೋಮಮಯವಾಗಿರುತ್ತವೆ.

ಇಂಪೇಷಿಯೆನ್ಸ್ ಬಾಲ್ಸಾಮಿನ ಪ್ರಭೇದವೊಂದೇ ಅಲ್ಲದೆ ಇದೇ ಜಾತಿಗೆ ಸೇರಿದ ಸುಮಾರು 115 ಬೇರೆ ಪ್ರಭೇದಗಳುಂಟು. ಇವು ಹೆಚ್ಚಾಗಿ ಏಷ್ಯ ಮತ್ತು ಆಫ್ರಿಕಗಳ ಉಷ್ಣ ಪ್ರದೇಶಗಳಲ್ಲಿ ಬೆಳೆಯುತ್ತವೆ. ಭಾರತದಲ್ಲಿ ಸುಮಾರು 70ಕ್ಕೂ ಹೆಚ್ಚು ಪ್ರಭೇದಗಳಿವೆಯೆಂದು ತಿಳಿದಿದೆ. ಇವುಗಳಲ್ಲಿ ಕೆಲವು ಸ್ವಾಭಾವಿಕವಾಗಿ ಬೆಳೆಯುವ ಕಾಡುಪ್ರಭೇದಗಳು; ಇನ್ನು ಕೆಲವು ಉದ್ಯಾನದಲ್ಲಿ ಪ್ರಾಮುಖ್ಯ ಪಡೆದವು. ಉದ್ಯಾನಗಳಲ್ಲಿ ಬೆಳೆಸುವ ಕೆಲವು ಮುಖ್ಯ ಪ್ರಭೇದವನ್ನು ಕೆಳಗೆ ಉಲ್ಲೇಖಿಸಿದೆ.

ಇಂಪೇಷಿಯೆನ್ಸ್ ಸುಲಾನಿ ಮತ್ತು ಇಂಪೇಷಿಯೆನ್ಸ್ ಹೋಲ್‌ಸ್ಟೈ – ಇವು ಬಹುವಾರ್ಷಿಕ ರಸಭರಿತ ಸಸ್ಯಗಳು. ಇವನ್ನು ಸ್ವಲ್ಪ ನೆರಳಿರುವ ಪ್ರದೇಶಗಳಲ್ಲಿ ಬೆಳೆಸಬಹುದು. ಇವಲ್ಲದೆ ಇಂಪೇಷಿಯೆನ್ಸ್ ಹಾಕರಿ, ಇಂ. ಆಲಿವರ್‍ರೈ, ಇಂ. ಹುಕರಿಯಾನ ಮತ್ತು ಇಂ. ಮಲಬಾರಿಕಮ್–ಇವನ್ನು ರಾಕರಿ ಮತ್ತು ತೂಗುಬುಟ್ಟಿಗಳಲ್ಲಿ ಬೆಳೆಸಬಹುದು, ಇವನ್ನು ಗಿಣ್ಣುಗಳಿಂದ ವೃದ್ಧಿಮಾಡಬಹುದು. ಇವುಗಳ ಹೂಗಳ ಬಣ್ಣ ಹಳದಿ.

ಈ ಪ್ರಭೇದಗಳ ಸಾಮಾನ್ಯ ಜಾತಿಯ ವಿವರಗಳಿಗೆ **(ನೋಡಿ– ಇಂಪೇಷಿಯೆನ್ಸ್).**

(ಎಂ.ಎಸ್.ಎಸ್.ಆರ್.;ಕೆ.)

**ಕರ್ಣಪಾರ್ಯ:** ಸು.1160–1170. ಕೊಲ್ಲಾಪುರದ ಶಾಖೆಯ ಶಿಲಾಹಾರ ರಾಜರಲ್ಲಿ ಒಬ್ಬನಾದ ವಿಜಯಾದಿತ್ಯನೆಂಬವನ ಕಾಲದಲ್ಲಿದ್ದ ಒಬ್ಬ ಜೈನಕವಿ. ರುದ್ರ ಭಟ್ಟ, ಆಂಡಯ್ಯ, ಮಂಗರಸ ಮೊದಲಾದ ಕವಿಗಳು ಈತನನ್ನು ಹೆಸರಿಸಿದ್ದಾರೆ. ಈ ಕವಿ ನೇಮಿನಾಥಪುರಾಣ ಮತ್ತು ವೀರೇಶಚರಿತ ಎಂಬ ಎರಡು ಕೃತಿಗಳನ್ನು ಬರೆದಿರುವಂತೆ ತಿಳಿದುಬಂದಿದ್ದು, ಅವುಗಳಲ್ಲಿ ಮೊದಲನೆಯದು ಮಾತ್ರ ಲಭ್ಯವಾಗಿ ಪ್ರಕಟವಾಗಿದೆ.

ನೇಮಿನಾಥಪುರಾಣದಿಂದ ತಿಳಿಯುವ ಕವಿಯ ವಿಷಯದ ವಿವರಗಳು ಹೀಗಿವೆ: ಸಮಂತಭದ್ರ, ಗುಣಭದ್ರ, ಪೂಜ್ಯವಾದ, ಗೃದ್ಧಪಿಂಛ, ವೀರಸೇನ ಕೊಂಡಕುಂದಾಚಾರ್ಯ, ಮಲಧಾರಿದೇವ, ಕಲ್ಯಾಣಕೀರ್ತಿ, ಶುಭಚಂದ್ರ, ಬೆಟ್ಟದ ವ್ರತಿ, ಭುವನಬ್ಬೆ, ನೇಮಿಚಂದ್ರ, ಅಕಳಂಕಚಂದ್ರ–ಇವರು ಕವಿಯಿಂದ ಸ್ತುತಿಸಲಾಗಿರುವ ಯತಿಗಳು. ಪಂಪ, ಪೊನ್ನ, ರನ್ನ ಮತ್ತು ನಾಗಚಂದ್ರ–ಇವರ ಉಲ್ಲೇಖವಾಗಿರುವ ಪೂರ್ವಕವಿಗಳು. ಜೀಮೂತವಾಹನ ವಿದ್ಯಾಧರ ಚಕ್ರಿವಂಶತಿಳಕನೆನ್ನಿಸಿದ ಗಂಡರಾದಿತ್ಯನ ಪುತ್ರ ವಿಜಯಾದಿತ್ಯನಲ್ಲಿ ಕರಣಾಗ್ರಣಿಯೂ ಮಂತ್ರಿಯೂ ಆಗಿದ್ದ ಲಕ್ಷ್ಮನೆಂಬವನು (ಲಕ್ಷ್ಮಣ, ಲಕ್ಷ್ಮೀಧರ ಎಂದೂ ಈತನ ಹೆಸರನ್ನು

ಹೇಳಿದೆ) ಕವಿಯ ಆಶ್ರಯದಾತೃ; ಕವಿಯ ಕೃತಿರಚನೆಗೆ ಸಹಾಯಕ. ಲಕ್ಷ್ಮನ ತಂದೆ ಶ್ರೀಭೂಷಣಾರ್ಯ ಮೊದಲಾದವರು ಪ್ರೋತ್ಸಾಹಿಸಲಾಗಿ ಕರ್ಣಪಾರ್ಯ ನೇಮಿನಾಥ ಪುರಾಣದ ರಚನೆಗೆ ಸಂಕಲ್ಪಿಸಿದ.

ಕವಿ ಕರ್ಣಪಾರ್ಯನ ತಾಯಿತಂದೆಗಳು ಯಾರೆಂಬುದು ತಿಳಿಯದು. ಗುರು ಕಲ್ಯಾಣಕೀರ್ತಿ; ಈತ ಕೃತಿಯ ನಾಂದೀಮುಖದ ಪೂರ್ವಾಚಾರ್ಯಶ್ರೇಣೀಯಲ್ಲಿ ಸ್ತುತನಾಗಿರುವ ಮಲಧಾರಿ ದೇವರ ಶಿಷ್ಯನೇ ಹೇಗೆ ಎಂಬುದು ನಿಶ್ಚಯವಿಲ್ಲ. ನೇಮಿನಾಥ ಪುರಾಣದ ಆಶ್ವಾಸಾದಿ ಪದ್ಯಗಳಲ್ಲಿ ಕಾಣಿಸಿಕೊಳ್ಳುವ ಭವ್ಯವನಜವನ ಮಾರ್ತಂಡಂ ಎಂಬುದೂ ಆಶ್ವಾಸಾಂತ್ಯಪದ್ಯಗಳಲ್ಲಿ ಕಾಣಿಸಿಕೊಳ್ಳುವ ಪರಮ ಜಿನಮತ ಕ್ಷೀರವಾರಾಶಿಚಂದ್ರಂ ಎಂಬುದೂ ಅಲ್ಲಿಯೇ ಗದ್ಯಭಾಗದಲ್ಲಿ ಕಾಣಿಸಿಕೊಳ್ಳುವ ಸಹಜ ಕವಿತಾರಸೋದಯಂ ಎಂಬುದೂ ಕರ್ಣಪಾರ್ಯನಿಗೆ ಮೆಚ್ಚಿಕೆಯಾಗಿರುವ ಬಿರುದುಗಳಾಗಿರುವಂತೆ ತೋರುತ್ತದೆ. ಇವುಗಳಲ್ಲಿ ಮೊದಲಿನವೆರಡೂ ಕವಿಯ ಆಶ್ರಯದಾತೃವಿಗೆ ಹಾಗೂ ಕಾವ್ಯಶರೀರದಲ್ಲಿಯ ಇಷ್ಟವ್ಯಕ್ತಿಗೆ ಅನ್ವಯವಾಗಿರುವುದುಂಟು.

ನೇಮಿನಾಥಪುರಾಣದಲ್ಲಿ ಕರ್ಣಪಾರ್ಯನ ಕಾಲದ ವಿಷಯವಾಗಿ ನೇರವಾದ ಉಲ್ಲೇಖವಿಲ್ಲ. ಪಂಪರಾಮಾಯಣದ ಕವಿ ನಾಗಚಂದ್ರನ ಕಾಲ, ಕರ್ಣಪಾರ್ಯನ ಗುರು ಕಲ್ಯಾಣಕೀರ್ತಿಯ ಕಾಲ ಮತ್ತು ಪೋಷಕವ್ಯಕ್ತಿ ಲಕ್ಷ್ಮಣ ಹಾಗೂ ಆತನ ಅರಸನಾದ ವಿಜಯಾದಿತ್ಯನ ಸಂಬಂಧವಾದ ಕೆಲವು ಚಾರಿತ್ರಿಕ ವಿವರಗಳನ್ನು ಅವಲಂಬಿಸಿ ಈ ಕವಿಯ ಕಾಲವನ್ನು ಗೊತ್ತುಮಾಡುವ ಪ್ರಯತ್ನ ನಡೆದಿದೆ.

ವಿದ್ವಾಂಸರು ಸೂಚಿಸಿರುವ ಕಾಲಗಳು ಈ ರೀತಿಯಾಗಿವೆ; ಆರ್. ನರಸಿಂಹ ಚಾರ್ಯರು: ಪ್ರ.ಶ.ಸು. 1140; ಡಾ. ಎ. ವೆಂಕಟಸುಬ್ಬಯ್ಯನವರು: ಮೊದಲು ಊಹಿಸಿದ್ದು ಪ್ರ.ಶ.ಸು. 1173–74, ಆಮೇಲೆ ಸ್ಥೂಲವಾಗಿ ನಿರ್ಧರಿಸಿದ್ದು ಪ್ರ. ಶ. 1135–90; ಎಚ್. ಶೇಷ ಅಯ್ಯಂಗಾರ್ಯರು: ಪ್ರ.ಶ.ಸು. 1130–35: ಪ್ರೊ. ಡಿ.ಎಲ್. ನರಸಿಂಹಾಚಾರ್ಯರು: ಪ್ರ.ಶ.ಸು. 1140–80, ಎಂ. ಗೋವಿಂದಪೈಯವರು: ಪ್ರ.ಶ.ಸು. 1170.

ಕರ್ಣಪಾರ್ಯನ ಕಾಲನಿರ್ಧಾರದಲ್ಲಿ ಎಲ್ಲ ವಿದ್ವಾಂಸರೂ ನಾಗಚಂದ್ರನ ಕಾಲವನ್ನು ಒಂದು ಮುಖ್ಯ ಆಧಾರವನ್ನಾಗಿ ಗ್ರಹಿಸಿದ್ದಾರೆ. ಆದರೆ ನಾಗಚಂದ್ರನ ಕಾಲ ವಿಷಯದಲ್ಲೆ ಅವರಲ್ಲಿ ಭಿನ್ನಮತವಿದೆ. ಈಚೆಗೆ ನಾಗಚಂದ್ರನ ಪ್ರಸಿದ್ಧಿಯ ಕಾಲ 12ನೆಯ ಶತಮಾನದ ಪೂರ್ವಾರ್ಧವೆಂದೂ ಆತನ ಕೃತಿ ಪಂಪರಾಮಾಯಣ ಪ್ರ.ಶ.ಸು. 1140ರಲ್ಲಿ ಬಲುಮಟ್ಟಿಗೆ ರಚಿತವಾಗಿರಬೇಕೆಂದೂ ತಿಳಿಯಲಾಗಿದೆ. ಈ ಕವಿಯನ್ನು ಕರ್ಣಪಾರ್ಯ ಅದ್ಯತನನೆಂದು ಹೇಳಿರುವುದರಿಂದ ನಾಗಚಂದ್ರನ ಸಮಕಾಲೀನನೋ ಸಮೀಪವರ್ತಿಯೋ ಆಗಿರುವಂತೆ ತಿಳಿಯುವುದಕ್ಕೆ ಆಸ್ಪದವಿದೆ. ನಾಗಚಂದ್ರನನ್ನು ಪ್ರತ್ಯೇಕವಾದೊಂದು ಪದ್ಯದಲ್ಲಿ ಉಲ್ಲೇಖಿಸಿ ಮನ್ನಿಸಿರುವುದನ್ನು ನೋಡಿದರೆ ಆತನ ಖ್ಯಾತಿಯ ಪ್ರಭಾವ ವಿದ್ವದ್ವಲಯದಲ್ಲಿ ಇನ್ನೂ ಮುನ್ನೆಲೆಯಲ್ಲಿದ್ದಿ ತೆಂದು ಹೇಳಬಹುದು. ಅಲ್ಲದೆ ಆತನ ಶೈಲಿಯ ಪ್ರಭಾವವೂ ಅಲ್ಲಲ್ಲಿ ಪಂಪ ರಾಮಾಯಣದ ಅನುಕರಣವೂ ಕರ್ಣಪಾರ್ಯನ ನೇಮಿನಾಥಪುರಾಣದಲ್ಲಿ ಕಾಣುತ್ತದೆ. ಈ ಕಾರಣಗಳಿಂದ ಕರ್ಣಪಾರ್ಯ ಪ್ರ.ಶ.ಸು. 1140ಕ್ಕಿಂತ ಹತ್ತಿಪ್ಪತ್ತು ವರ್ಷಗಳಷ್ಟಾದರೂ ಈಚೆಗೆ ಇದ್ದಿರಬಹುದು. ಅಲ್ಲದೆ ಕರ್ಣಪಾರ್ಯನಿಗೆ ಆಶ್ರಯದಾತನಾಗಿದ್ದ ಶಿಲಾಹಾರರ ವಿಜಯಾದಿತ್ಯರಾಜ ಪ್ರ.ಶ.ಸು. 1140ರಲ್ಲಿ ಪಟ್ಟವೇರಿ ಪ್ರಾಯಶಃ ಪ್ರ.ಶ.ಸು. 1115ರ ವರೆಗೆ ಆಳಿದನೆಂತಲೂ ಪ್ರ. ಶ. ಸು. 1140ರ ಮೊದಲು ಆತ ಸಿಂಹಾಸನವೇರಲಿಲ್ಲವೆಂತಲೂ ಚರಿತ್ರಕಾರರು ಸಾಧಾರವಾಗಿ ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಕರ್ಣಪಾರ್ಯನ ಅಸ್ತಿತ್ವದ ಕಾಲ ಪ್ರ.ಶ.ಸು. 1440–75 ಎಂದಾಗುತ್ತದೆ. ಇಮ್ಮಡಿ ನಾಗವರ್ಮನ (ಪ್ರ.ಶ.ಸು. 1145) ಭಾಷಾಭೂಷಣದಲ್ಲಾಗಲಿ ಕಾವ್ಯಾವಲೋಕನದಲ್ಲಾಗಲಿ ಕರ್ಣಪಾರ್ಯನ ನೇಮಿನಾಥ ಪುರಾಣದ ಪದ್ಯಗಳು ಉದಾಹೃತವಾಗಿರುವುದರಿಂದ ಪ್ರ.ಶ.ಸು. 1145 ರಿಂದೀಚೆಗೆ, ಪ್ರ.ಶ.ಸು. 1140ರಲ್ಲಿ ರಚಿತವಾಗಿರಬಹುದಾದ ಪಂಪ ರಾಮಾಯಣಕ್ಕೆ ಕನಿಷ್ಠ ಹತ್ತಿಪ್ಪತ್ತು ವರ್ಷಗಳಷ್ಟು ಈಚೆಗೆ ಎಂದರೆ ಪ್ರ.ಶ.ಸು. 1150ರ ಅನಂತರದಲ್ಲಿ, ಅಲ್ಲಲ್ಲಿ ಅರ್ವಾಚೀನ ಭಾಷಾ ಪ್ರಯೋಗಗಳು ಪ್ರಾಚುರ್ಯವಿರುವುದರಿಂದ 12ನೆಯ ಶತಮಾನದ ಉತ್ತರಾರ್ಧದಲ್ಲಿ, ಪ್ರಾಯಃ 1160–70ರ ಅವಧಿಯಲ್ಲಿ ಕರ್ಣಪಾರ್ಯನ ಕೃತಿ ನೇಮಿನಾಥಪುರಾಣ ರಚಿತವಾಗಿರಬಹುದು.

ಕರ್ಣಪಾರ್ಯ ಯಾವ ಸ್ಥಳದವನೆಂದು ತಿಳಿಯಲು ಗ್ರಂಥಾಧಾರವಿಲ್ಲ. ದೊರೆತಿರುವ ವಿಜಯಾದಿತ್ಯನ ಶಾಸನಗಳೆಲ್ಲವೂ ಆತ ವಳವಾಡವನ್ನು ಸ್ಥಿರ ಶಿಬಿರವಾಗಿಸಿಕೊಂಡು ರಾಜ್ಯವಾಳುತ್ತಿದ್ದನೆಂದು ಉಲ್ಲೇಖಿಸಿವೆ. ಈ ವಳವಾಡ ಕೊಲ್ಲಾಪುರದ ನೈಋತ್ಯಕ್ಕೆ 25.6 ಕಿ.ಮೀ. ಅಂತರದಲ್ಲಿರುವ, ಅದೇ ಪ್ರಾಂತಕ್ಕೆ ಸೇರಿದ ಇಂದಿನ ವಳವಾಡ ಎಂಬ ಸ್ಥಳವಾಗಿರಬಹುದು ಎಂಬ ಗ್ರಹಿಕೆಯಿದೆ. ಈ ವಿಜಯಾದಿತ್ಯನ ಕರಣಾಗ್ರಣಿಯಾದ ಲಕ್ಷ್ಮನೂ ಇಲ್ಲಿಯೇ ಇದ್ದಿರುವುದು ಸಹಜವಾದರಿಂದ ಈತನ ಪೋಷಣೆಯ ಕವಿಗೂ ಇದೇ ವಾಸಸ್ಥಳವಾಗಿದ್ದು ನೇಮಿನಾಥಪುರಾಣದ ರಚನೆಯೂ ಇಲ್ಲಿಯೇ ನಡೆದಿರಬಹುದು. ಆದರೆ ಇದು ಬರಿಯ ಊಹೆ.

ಕರ್ಣಪಾರ್ಯಕೃತವಾದ ನೇಮಿನಾಥಪುರಾಣ ಪ್ರತ್ಯೇಕವಾಗಿಯೂ ಸಮಗ್ರವಾಗಿಯೂ ರಚಿತವಾಗಿದ್ದು ಈಗ ದೊರೆಯುತ್ತಿರುವ ನೇಮಿಚರಿತ್ರೆಗಳಲ್ಲಿ ಮೊತ್ತಮೊದಲನೆಯದಾಗಿದೆ. ಕರ್ಣಪಾರ್ಯ ತನ್ನ ಕೃತಿರಚನೆಗೆ ತನಗೆ ಮೊದಲಿದ್ದ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಜೈನಕವಿಗಳ ನೇಮಿಕಥಾಮೂಲಗಳಲ್ಲಿ ಕೆಲವನ್ನು ಉಪಯೋಗಿಸಿಕೊಂಡಿರುವಂತೆ ತೋರಿದರೂ ಅವುಗಳಲ್ಲಿ ಎಲ್ಲವನ್ನೂ ಗುರುತಿಸುವುದು ಸಾಧ್ಯವಾಗಿಲ್ಲ. ಪುನ್ನಾಟಸಂಘದ ಜಿನಸೇನಾಚಾರ್ಯರ ಹರಿವಂಶಪುರಾಣ ಮತ್ತು ಚಾವುಂಡರಾಯ ಕೃತವಾದ ಚಾವುಂಡರಾಯಪುರಾಣ ಇವನ್ನು ನೋಡಿರುವುದಕ್ಕೆ ಆಧಾರಗಳು ತೋರುತ್ತವೆ. ಕರ್ಣಪಾರ್ಯನ ಈ ಕೃತಿ ಜಿನಸೇನರ ಹರಿವಂಶಪುರಾಣವನ್ನೂ ಚಾವುಂಡರಾಯಪುರಾಣದ ಮೂಲಕವಾಗಿ ಗುಣಭದ್ರಾಚಾರ್ಯರ ಮಹಾಪುರಾಣ ಮಾರ್ಗವನ್ನೂ ಯಥೋಚಿತವಾಗಿ ಸಮ್ಮಿಳಮಾಡಿಕೊಂಡಿರುವ ಕೃತಿ. ಹೀಗಿದ್ದೂ ಈ ಆಚಾರ್ಯದ್ವಯರ ಕಥಾಮಾರ್ಗಗಳಲ್ಲಾಗಲಿ ಪೂರ್ವಕಾಲೀನ ಅನ್ಯ ನೇಮಿಚರಿತ್ರೆಗಳಲ್ಲಾಗಲಿ ಕಂಡುಬರದಿರುವ ಕೆಲವು ಪ್ರಮುಖ ಕಥಾಸಂದರ್ಭಗಳೂ ಅದರಲ್ಲಿ ಕಂಡುಬಂದಿವೆ. ಜೈನೇತರವಾದ ಎಂದರೆ ವೈದಿಕ ಸಂಪ್ರದಾಯದ ಭಾರತ ಕಥೆಯನ್ನು ಒಳಕೊಂಡಿರುವುದೂ ಈ ಕೃತಿಯ ಒಂದು ವಿಶೇಷ. ಪಂಪಭಾರತ ಮತ್ತು ಗದಾಯುದ್ಧಗಳ ಮೂಲಕವಾಗಿ ಅದು ಇಲ್ಲಿ ಅನುಸರಿಸಲ್ಪಟ್ಟಿದೆ. ಆದರೆ ಪೂರ್ತಿಯಾಗಿ ವೈದಿಕ ಸಂಪ್ರದಾಯದ ಭಾರತಕಥೆಯನ್ನೇ ಅನುಸರಿಸಿದ ಪ್ರಮುಖ ಘಟ್ಟಗಳಲ್ಲಿ ಜೈನ ಭಾರತ ಕಥಾಂಶಗಳನ್ನೂ ಹಾಸುಹೊಕ್ಕಾಗಿ ಕೂಡಿಸಿದೆ. ಕೆಲಮಟ್ಟಿಗೆ ಕ್ರಾಂತಿಕಾರಕವೆನ್ನಬಹುದಾದ ಈ ಬದಲಾವಣೆಗಳಿಂದ ಕರ್ಣಪಾರ್ಯ ಸಂಪ್ರದಾಯ ಶರಣನಲ್ಲ, ಸ್ವಾತಂತ್ರ್ಯಪ್ರಿಯನೂ ಕಾವ್ಯಕಲಾದೃಷ್ಟಿಯಲ್ಲಿ ಆಸಕ್ತಿಯುಳ್ಳವನೂ ಆಗಿದ್ದಾನೆಂಬ ಸಂಗತಿ ತಿಳಿಯುತ್ತದೆ. ಈಗ ತಿಳಿದಿರುವಂತೆ ಸಮ್ಮಿಶ್ರಕಥಾ ಸಂಪ್ರದಾಯದ ವಿಭಿನ್ನ ಕಥಾವಾಹಿನಿಗಳ ಒಂದು ಸುಂದರವಾದ ಮಾದರಿಯನ್ನಾಗಿ ಆತ ತನ್ನ ಕೃತಿಯನ್ನು ಕಟ್ಟಿ, ಈಚಿನ ಕನ್ನಡ ನೇಮಿಚರಿತ್ರಕಾರರಿಗೆ ಮಾರ್ಗದರ್ಶಕನಾದಂತೆ ತೋರುತ್ತದೆ. ಕರ್ಣಪಾರ್ಯ ವಿವಿಧ ಕಥಾಮೂಲಗಳನ್ನು ಬಳಸಿಕೊಂಡಿರುವ ದೃಷ್ಟಿ ಶ್ಲಾಘ್ಯವಾಗಿದೆ. ಇಲ್ಲಿಯ ವಿಸ್ತಾರವಾದ ಕಥಾಭಿತ್ತಿಯಲ್ಲಿ ಹರಿವಂಶ ಕುರುವಂಶಗಳ ಚರಿತ್ರಪುರುಷರ ಕಥೆಯೂ ಸೇರಿಕೊಂಡು ಬರುತ್ತವೆ. ಈ ಕಥಾವಸ್ತುವಿನ ಅಂಗೋಪಾಂಗಗಳಿಗೆ ಕೊರತೆಯಾಗದಂತೆ ರಸದೃಷ್ಟಿ, ಪಾತ್ರಪರಿಪುಷ್ಟಿ, ಸನ್ನಿವೇಶ ಸೃಷ್ಟಿಗಳನ್ನು ಆತನ ಕೃತಿಯಲ್ಲಿ ಕಾಣಬಹುದಾಗಿದೆ. ಯುದ್ಧವರ್ಣನೆ ಕಾವ್ಯಾಂಗಗಳಾದ ಇತರ ವರ್ಣನೆಗಳಿಗೆ ಯಾವ ಪ್ರಾಶಸ್ತ್ಯವೂ ಇಲ್ಲದೆ ಇಲ್ಲಿ ಕಥೆ ಮುನ್ನಡೆದಿದೆ. ಮೂಲದ ಕಥಾಭಾಗಗಳು ಪರಿಷ್ಕಾರಗೊಂಡು ಹೊಸ ತೇಜಸ್ಸಿನಿಂದ ಕಳೆಗೊಂಡಿರುವುದಕ್ಕೆ ಸರಳ ಸುಂದರವಾದ ಕವಿಯ ಶೈಲಿಯೂ ಒಂದು ಕಾರಣ. ಕರ್ಣಪಾರ್ಯ ಪ್ರತಿಭಾ ಸಂಪನ್ನನಾದ ಕವಿಯಲ್ಲವಾದರೂ ಹೃದ್ಯವೂ ಸರಸವೂ ಆದ ಕಥನಕಲೆ, ಸರಳವೂ ಸ್ಪಷ್ಟವೂ ಆದ ರೀತಿಯ ಅಭಿವ್ಯಕ್ತಿಕೌಶಲ, ಹೃದಯಂಗಮವಾದ ಮಾನವೀಯ ದೃಷ್ಟಿ, ಆಕರ್ಷಕವಾದ ನಾಟಕೀಯತೆ, ವಸ್ತುವಿನ್ಯಾಸದಲ್ಲಿಯೂ ಶೈಲಿಯಲ್ಲಿಯೂ ಪ್ರತಿಬಿಂಬಿಸಿರುವ ದೇಶ್ಯ–ಇವು ಕಾರಣವಾಗಿ ಕನ್ನಡಸಾಹಿತ್ಯದಲ್ಲಿ ಒಬ್ಬ ಶ್ರೇಷ್ಠ ಕವಿಯಾಗಿದ್ದಾನೆ. (ಟಿ.ವಿ.ಪಿ.)

**ಕರ್ಣಪ್ರಯಾಗ್:** ಉತ್ತರಗಂಗಾನದಿಯ ಮೇಲಿನ ಪವಿತ್ರ ಯಾತ್ರಾ ಸ್ಥಳ. ಗರ್ವಾಲ್ ಪ್ರಾಂತ್ಯದಲ್ಲಿ ಅಲಕನಂದ ಮತ್ತು ಪಿಂಡಾರ್ ನದಿಗಳ ಸಂಗಮದಲ್ಲಿದೆ. ಕರ್ಣನ ಕಥೆಗೆ ಸಂಬಂಧಪಟ್ಟ ಸ್ಥಳವಾದರಿಂದ ಇದಕ್ಕೆ ಕರ್ಣಪ್ರಯಾಗ ಎಂಬ ಹೆಸರು ಬಂದಿದೆ. ಇಲ್ಲಿಯ ದೇವಸ್ಥಾನ ಆ ವೀರನ ಸ್ಮಾರಕ. (ಜಿ.ಎಚ್.)

**ಕರ್ಣಸುವರ್ಣ:** ಪಶ್ಚಿಮ ಬಂಗಾಲ ಪ್ರಾಂತ್ಯದ ಮುರ್ಶಿದಾಬಾದ್ ಜಿಲ್ಲೆಯಲ್ಲಿರುವ ಈಗಿನ ರಂಗ್‌ಮತಿ ಎಂಬ ಸ್ಥಳವೇ ಇತಿಹಾಸ ಕಾಲದಲ್ಲಿ ಕರ್ಣಸುವರ್ಣ ನಗರ ವಾಗಿತ್ತೆಂದು ಇತಿಹಾಸಕಾರರು ನಿರ್ಧರಿಸಿದ್ದಾರೆ. ಈ ನಗರ ಬಂಗಾಳದ ಇತಿಹಾಸದಲ್ಲಿ ಹೆಚ್ಚಿನ ಪ್ರಾಮುಖ್ಯ ಪಡೆದಿದೆ. ಪ್ರ.ಶ. 6ನೆಯ ಶತಮಾನದಲ್ಲಿ ಪಶ್ಚಿಮ ಬಂಗಾಳದಲ್ಲಿ ಗೌಡರು ಇಲ್ಲಿ ಪ್ರಸಿದ್ಧಿಗೆ ಬಂದರು. ಗುಪ್ತವಂಶದ ರಾಜರು ಮತ್ತು ಮೌಖರಿ ವಂಶದ ರಾಜ ಈಶ್ವರವರ್ಮ ಗೌಡಸಂತತಿಯ ರಾಜರ ವಿಸ್ತರಣ ನೀತಿಯನ್ನು ತಡೆಗಟ್ಟಲು ಪ್ರಯತ್ನಿಸಿದರು. ಆ ವಂಶದ ಹೆಸರಾಂತ ರಾಜನಾದ ಜಯನಾಗರನ ನೇತೃತ್ವದಲ್ಲಿ ಅವರು ಕರ್ಣಸುವರ್ಣವನ್ನು ಕೇಂದ್ರವನ್ನಾಗಿ ಮಾಡಿಕೊಂಡು ರಾಜ್ಯವನ್ನು ಎಲ್ಲ ದಿಕ್ಕುಗಳಲ್ಲೂ ವಿಸ್ತರಿಸಿದರು. 606ರಲ್ಲಿ ಪಟ್ಟಕ್ಕೆ ಬಂದ ಶಶಾಂಕನ ಕಾಲದಲ್ಲೂ ಕರ್ಣಸುವರ್ಣ ಬಂಗಾಳದ ಗೌಡಸಂತತಿಯವರ ರಾಜಧಾನಿಯಾಗಿ ಮುಂದುವರಿಯಿತು. ಶಶಾಂಕನ ಮರಣಾನಂತರ ಇದು ಕೆಲವು ಕಾಲ ಕಾಮರೂಪದ (ಅಸ್ಸಾಂ) ರಾಜನಾದ ಭಾಸ್ಕರವರ್ಮನ ಅಧೀನದಲ್ಲಿತ್ತು. ಭಾಸ್ಕರವರ್ಮ ಈ ನಗರವನ್ನು ಗೆದ್ದ. ಇಲ್ಲಿಂದಲೇ ವಿಧಾನಪುರ ಶಾಸನವನ್ನು ಹೊರಡಿಸಿದ. (ಎಸ್.ಕೆ.ಎಸ್.)

**ಕರ್ಣಾಟಕ (ಪತ್ರಿಕೆ):** ಡಿ.ವಿ. ಗುಂಡಪ್ಪನವರು ಬೆಂಗಳೂರಿನಲ್ಲಿ ನಡೆಸುತ್ತಿದ್ದ ಇಂಗ್ಲಿಷ್ ದ್ವಿಸಾಪ್ತಾಹಿಕ. 1913ರಲ್ಲಿ ಪ್ರಾರಂಭವಾಯಿತು. ಆಗಿನ ಮೈಸೂರು ಸರ್ಕಾರದ ರೀತಿ ನೀತಿಗಳನ್ನು ಈ ಪತ್ರಿಕೆ ಧೈರ್ಯವಾಗಿ ಟೀಕಿಸುತ್ತಿತ್ತು. ಸರ್ಕಾರಕ್ಕೆ ಮತ್ತು ಆಗಾಗ ಘರ್ಷಣೆಯಾಗುತ್ತಿದ್ದುದೂ ಉಂಟು.

ಕಾಬ್ ಎಂಬ ಬ್ರಿಟಿಷ್ ರೆಸಿಡೆಂಟ್ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿರುವ ಸಾರ್ವಜನಿಕ ಗ್ರಂಥಾಲಯದಲ್ಲಿ ಬಾಂಬೇಕ್ರಾನಿಕಲ್, ಇಂಡಿಯನ್ ಪೇಟ್ರಿಯಟ್ ಮೊದಲಾದ ಪತ್ರಿಕೆಗಳ ಜೊತೆಗೆ ಕರ್ನಾಟಕ ಪತ್ರಿಕೆಯೂ ಇದ್ದುದನ್ನು ನೋಡಿ ಕಿಡಿಕಿಡಿಯಾದನೆಂದು ಹೇಳಲಾಗಿದೆ. ಇದೊಂದು ವಿಷಪೂರಿತ ಪತ್ರಿಕೆಯೆಂದೂ ಇದನ್ನು ತರಿಸಕೂಡದೆಂದೂ ಆತನು ಸೂಚನೆ ನೀಡಿದ. ಪತ್ರಿಕೆ ಆ ಅವಮಾನವನ್ನು ಧೈರ್ಯವಾಗಿ ಎದುರಿಸಿತು. ಪರಕೀಯ ರೆಸಿಡೆಂಟನಿಗೆ ಸಂಸ್ಥಾನದ ವಿಷಯಗಳಲ್ಲಿ ಬಾಯಿಹಾಕಲು ಅಧಿಕಾರವಿಲ್ಲವೆಂದು ಅದು ಟೀಕಿಸಿತು. ರಾಜವಿರೋಧಿಯಾಗಿ ಬರೆಯುತ್ತಿದ್ದರಿಂದ ಅದು ದಿವಾನರ ಪತ್ರಿಕೆಯೆಂದು ಅರಮನೆಯವರು ಶಂಕಿಸಿದ್ದೂ ಉಂಟು. ಕರ್ನಾಟಕ ಪತ್ರಿಕೆ ತನಗೆ ತೋರಿದ್ದನ್ನು ನಿರ್ಭಯವಾಗಿ ಬರೆಯಿತು. ಇದರಿಂದ ಆಗಿನ ದಿವಾನರು ಪತ್ರಿಕೆಯ ಸಂಪಾದಕರನ್ನು ಆಗಾಗ್ಗೆ ಕರೆಸಿಕೊಂಡು ಸಲಹೆ ಕೇಳುತ್ತಿದ್ದರು. ಬಿಗಿಯಾದ ವೃತ್ತಪತ್ರಿಕಾ ಕಾನೂನು ಜಾರಿಯಲ್ಲಿದ್ದ ಕಾಲವದು. ಈ ಪತ್ರಿಕೆಯನ್ನು ಮುಟ್ಟುಗೋಲು ಹಾಕಬೇಕೆಂದು ಹಲವು ಕಡೆಯಿಂದ ಒತ್ತಾಯ ಬಂದಿತ್ತಾದರೂ ಆಗಿನ ದಿವಾನರು ಪತ್ರಿಕೆಯನ್ನು ಸಹಾನುಭೂತಿಯಿಂದ ನೋಡುತ್ತಿದ್ದರು. ಕರ್ನಾಟಕ ಪತ್ರಿಕೆಯ ಪ್ರಕಟಣೆ ನಿಂತದ್ದು 1922–23ರ ಸುಮಾರಿನಲ್ಲಿ, ಆಗ ಅದಕ್ಕೆ ಚಂದಾದಾರರಿಂದ ಬರಬೇಕಾದ್ದ ಬಾಕಿಯ ಮೊತ್ತ ಸು. 8000 ರೂಪಾಯಿ. *

**ಕರ್ನಾಟಕ ಕೇಸರಿ:** ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. 1928ರ ಜುಲೈ ತಿಂಗಳಿನಲ್ಲಿ ಪ್ರಾರಂಭವಾಗಿ ಎರಡು ವರ್ಷ ನಡೆಯಿತು. ಸಂಪಾದಕರು ಮಂಜೇಶ್ವರ ಅನಂತರಾವ್. ಇದರಲ್ಲಿ ಕಥೆ, ಕವನ, ಪ್ರಬಂಧ, ನಾಟಕ, ಲೇಖನ, ಸಂಶೋಧನೆ, ಇತಿಹಾಸ ಮುಂತಾದ ವಿವಿಧ ಪ್ರಕಾರಗಳ ಲೇಖನಗಳಿದ್ದು, ಪತ್ರಿಕೆಯಲ್ಲಿ 24 ಪುಟಗಳಿರುತ್ತಿದ್ದುವು. ಬಿಡಿ ಸಂಚಿಕೆಯ ಬೆಲೆ ನಾಲ್ಕಾಣೆ; ವಾರ್ಷಿಕ ಚಂದಾ ಎರಡೂವರೆ ರೂಪಾಯಿ. ಬೆಲೆ ನಾಲ್ಕಾಣೆ; ವಾರ್ಷಿಕ ಚಂದಾ ಎರಡೂವರೆ ರೂಪಾಯಿ. ಮೊದಲ ಪುಟದಲ್ಲಿ ಸಾಮಾನ್ಯವಾಗಿ ಕವಿತೆಯೊಂದು ಪ್ರಕಟವಾಗುತ್ತಿತ್ತು. ಅದರ ಬದಿಯ ಪುಟ ಪ್ರಾಚೀನ ದೇವಾಲಯಗಳ ಚಿತ್ರಗಳಿಗೆ ಮೀಸಲು.

ಎಂ. ಗೋವಿಂದ ಪೈ ಅವರ ಲಕ್ಷ್ಮಿ ಕಾಲ ವಿಚಾರ. ಶಿವರಾಮಕಾರಂತರ ವಿಜಯನಗರಕ್ಕೆ ಸಂಬಂಧಿಸಿದ ಲೇಖನಮಾಲೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ನಿಜಗಲ್ಲಿನ ರಾಣಿ ಮೊದಲಾದ ಹಲವಾರು ಸಂಶೋಧಕ ಚಾರಿತ್ರಿಕ ಲೇಖನಗಳು ಈ ಪತ್ರಿಕೆಯಲ್ಲಿ ಬೆಳಕು ಕಂಡವು. ಐರೋಡಿ ಶಿವರಾಮಯ್ಯ, ಹೊಸಕೆರೆ ಚಿದಂಬರಯ್ಯ, ಉಗ್ರಾಣ ಮಂಗೇಶರಾವ್, ಪಾಂಡೇಶ್ವರ ಗಣಪತಿರಾವ್, ಕಡೆಂಗೋಡ್ಲು ಶಂಕರಭಟ್ಟ, ಮಚ್ಚಿಮನೆ ಶಂಕರನಾರಾಯಣರಾವ್, ಬೆಳ್ಳೆ ರಾಮಚಂದ್ರರಾವ್ ಮೊದಲಾದವರ ಲೇಖನಗಳಿರುತ್ತಿದ್ದುವು. ಪುತ್ತೂರಿನ ಹರಿಹರ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದ ಈ ಮಾಸ ಪತ್ರಿಕೆಯ ಪ್ರಸಾರ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಿದ್ದು ಆ ಭಾಗದ ಜನಪ್ರಿಯ ಪತ್ರಿಕೆಯೆನಿಸಿತ್ತು. (ಎಸ್.ವಿ.ಪಿ.)

**ಕರ್ನಾಟಕ ಪ್ರಕಾಶಿಕಾ:** ವಿದ್ವಾನ್ ಭಾಷ್ಯಂ ತಿರುಮಲಾಚಾರ್ಯರಿಂದ ಪ್ರಾರಂಭವಾದ (1865) ಕನ್ನಡ ಇಂಗ್ಲಿಷ್ ವಾರಪತ್ರಿಕೆ. ತಿರುಮಲಾಚಾರ್ಯರ ಮಗ ಭಾಷ್ಯಾಚಾರ್ಯರು ಪತ್ರಿಕೆ ನಡೆಸುವುದರಲ್ಲಿ ತಂದೆಗೆ ಕೆಲಕಾಲ ಸಹಾಯ ಮಾಡಿದರು. ಅನಂತರ ಅವರು ಸರ್ಕಾರಿ ಗೆಜೆಟಿಗೆ ಕನ್ನಡ ಭಾಷಾಂತರಕಾರರಾಗಿ ಹೋದ ಮೇಲೆ (1866) ತಿರುಮಲಾಚಾರ್ಯರೊಬ್ಬರೇ ಪತ್ರಿಕೆಯನ್ನು ಮುಂದುವರಿಸಿಕೊಂಡು ಹೋದರು. 1868ರ ವರೆಗೆ ಈ ಪತ್ರಿಕೆ ನಡೆಯಿತು. 1973ರಲ್ಲಿ ಪುನರ್ಜನ್ಮ ಹೊಂದಿದ 'ಕರ್ನಾಟಕ ಪ್ರಕಾಶಿಕಾ' ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯ ಲೇಖನಗಳನ್ನು ಒಳಗೊಂಡಿತ್ತು. ಅದರಲ್ಲಿ 'ತಂತೀ ವರ್ತಮಾನ ಸಂಗ್ರಹ' 'ಗೆಜೆಟ್ಟಿನ ಸಾರಾಂಶ', ಒಳದೇಶ ಮತ್ತು ತಾಲ್ಲೂಕಿನ ವೃತ್ತಾಂತ, 'ನೈಮಿತ್ತಿಕ ವಿಷಯನ್ಯಾಸವು' ಮುಂತಾದ ವಿಷಯಗಳು ಇರುತ್ತಿದ್ದವು. ಅನೇಕ ಕನ್ನಡ ಮತ್ತು ಸಂಸ್ಕೃತ ವಿದ್ವಾಂಸರು ಇದಕ್ಕೆ ಲೇಖನಗಳನ್ನು ಬರೆಯುತ್ತಿದ್ದರು. ಪತ್ರಿಕೆಯ ಲೇಖನಗಳು ತುಂಬ ಪ್ರಭಾವಶಾಲಿಯಾಗಿದ್ದುವು. ಮೈಸೂರಿಗರ ಹಿತಕ್ಕಾಗಿ ಈ ಪತ್ರಿಕೆ ಹೋರಾಡಿತು. ಅಂದಿನ ರಾಜ್ಯಾಡಳಿತವನ್ನು ಟೀಕಿಸುವ ಧೈರ್ಯ ತೋರಿತು. ಅದರ ರಾಜಕೀಯ ಧೋರಣೆಯಿಂದಾಗಿ ವಿಚಾರ ಸ್ವಾತಂತ್ರ್ಯ ತೋರಿದ ಆದ್ಯಪತ್ರಿಕೆ ನಿಂತು ಹೋಯಿತು.

ಭಾಷ್ಯಂ ತಿರುಮಲಾಚಾರ್ಯರು 1877ರಲ್ಲಿ ನಿಧನರಾದರು. ಆಗ ಭಾಷ್ಯಾಚಾರ್ಯರ ಮಗ ವೆಂಕಟಾಚಾರ್ಯರು ಇದರ ಸಂಪಾದಕರಾದರು. ಟಿ.ಸಿ. ಶ್ರೀನಿವಾಸಾಚಾರ್ಯರು ಇದರ ಮಾಲೀಕರಾದರು. ಕೆಲಕಾಲಾನಂತರ ಮಾಲೀಕರೂ ಸಂಪಾದಕರೂ ಪ್ಲೇಗಿನಿಂದ ನಿಧನರಾದರುದರಿಂದ (1898) ಪತ್ರಿಕೆ ನಿಂತು ಹೋಯಿತೆಂದೂ ಹೇಳಲಾಗುತ್ತದೆ.

ಕರ್ನಾಟಕ ಪ್ರಕಾಶಿಕಾ ಆರಂಭಕ್ಕೆ ಮುನ್ನ ಭಾಷ್ಯಂ ಬಂಧುಗಳು 1859ರ ಜೂನ್‌ನಲ್ಲಿ 'ಮೈಸೂರು ವೃತ್ತಾಂತ ಬೋಧಿನಿ'ಯನ್ನು ಆರಂಭಿಸಿದರು. ಇದು ಮೈಸೂರಿನ ಆದ್ಯಪತ್ರಿಕೆ. ಕನ್ನಡದ ಪ್ರಥಮ ಪತ್ರಿಕೆ 'ಮಂಗಳೂರ ಸಮಾಚಾರ' ಪ್ರಕಟಿಸಿದ ಹರ್ಮನ್ ಮೊಗ್ಲಿಂಗ್ ಅನಂತರ ಭಾಷ್ಯಂ ಬಂಧುಗಳೇ ಕನ್ನಡ ಪತ್ರಿಕೋದ್ಯಮದ ಆದ್ಯರು. (ಎಂ.ಬಿ.ಎಸ್.)

**ಕರ್ನಾಟಕ ಭಾಷೋಜ್ಜೀವಿನಿ ಸಭಾ:** 18ನೆಯ ಶತಮಾನದ ಕೊನೆಯ ಭಾಗದಲ್ಲಿ ಮೈಸೂರಿನಲ್ಲಿ ಕನ್ನಡದ ಅಭಿವೃದ್ಧಿಗೆಂದೇ ಸ್ಥಾಪಿತವಾದ (1887) ಒಂದು ಸಂಘ. ಚಾಮರಾಜ ಒಡೆಯರ್ ಇದರ ಸ್ಥಾಪಕರು. ಇವರ ರಾಜ್ಯಾಭಿಷೇಕ 1881 ಮಾರ್ಚ್ 1 ರಂದು ಜರುಗಿತು. ಆ ಬಳಿಕ ಇವರು ಹಲವು ಸಾಂಸ್ಕೃತಿಕ, ಸಾರ್ವಜನಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮಹಾರಾಜ ಕಾಲೇಜಿನ ಪ್ರಗತಿ, ಸ್ತ್ರೀ ವಿದ್ಯಾಭ್ಯಾಸ, ಸಂಸ್ಕೃತ–ಕನ್ನಡಗಳ ಪೋಷಣೆ ಇವರ ಉದ್ದೇಶವಾಗಿತ್ತು. ಸಂಸ್ಕೃತ ಭಾಷೆ–ವಿದ್ಯಾಭ್ಯಾಸಗಳ ಪುನರುಜ್ಜೀವನಕ್ಕೆ ಸರಸ್ವತೀ ಪ್ರಾಸಾದವೆಂಬ ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಿದರು. ಯುವಕರ, ವಿದ್ಯಾರ್ಥಿಗಳ ಜ್ಞಾನವಿಕಾಸಕ್ಕೆ ಇಂಗ್ಲಿಷ್ ವಿದ್ಯೆಯೊಂದೇ ಅಗತ್ಯವೆಂಬುದು ಒಡೆಯರ ಅಭಿಪ್ರಾಯವಾಗಿತ್ತು. ಪಾಶ್ಚಾತ್ಯ ವಿದ್ಯೆ ಕನ್ನಡದ ಮೂಲಕ ದೊರೆಯಬೇಕು ಪಾಶ್ಚಾತ್ಯ ಜ್ಞಾನಶಾಖೆಗಳ ಅಧ್ಯಯನ–ಬೋಧನೆ ಕನ್ನಡದಲ್ಲಿ ನಡೆಯಬೇಕು ಎಂಬ ಉದ್ದೇಶದಿಂದ ಇವರು ಕರ್ನಾಟಕ ಭಾಷೋಜ್ಜೀವಿನಿ ಸಭಾದ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿದರು. ಈ ಸಭೆ ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತುಗಳಿಗಿಂತ ಹಳೆಯದು. ಇದರ ಚಟುವಟಿಕೆಗಳಲ್ಲಿ ಎಂ. ಶಾಮರಾವ್ ಮುಂತಾದ ಮಹನೀಯರು ಪಾಲ್ಗೊಂಡಿದ್ದರು. (ಎನ್.ಎಸ್.ಟಿ.)

**ಕರ್ನಾಟಕ ಸಂಗೀತ:** ದಕ್ಷಿಣಾದಿ ಸಂಗೀತ ಎಂದೂ ಹೆಸರಿರುವ ಈ ಪದ್ಧತಿ ಭಾರತೀಯ ಸಂಗೀತದ ಎರಡು ಮುಖ್ಯ ಪ್ರಕಾರಗಳಲ್ಲಿ ಒಂದು. ಇನ್ನೊಂದು ಉತ್ತರಾದಿ (ಹಿಂದುಸ್ತಾನಿ). ಕರ್ನಾಟಕ ಸಂಗೀತ ಈಗ ದಕ್ಷಿಣ ಕರ್ನಾಟಕ ಮತ್ತು ಪಕ್ಕದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳಗಳಲ್ಲಿ ವಿಶೇಷವಾಗಿ ಪ್ರಚಾರದಲ್ಲಿದೆ. ಕನ್ನಡ, ಸಂಸ್ಕೃತ, ತೆಲುಗು, ತಮಿಳು ಮುಂತಾದ ಎಲ್ಲ ಭಾಷೆಗಳ ಸೇವೆಯನ್ನೂ ಪಡೆದು ಗಾಯನ, ವಾದನ, ನಾಟ್ಯ, ನರ್ತನ, ರಸಭಾವ, ಅಲಂಕಾರ, ಛಂದಸ್ಸು, ಧೃವಗಾನ ಮೊದಲಾದ ಎಲ್ಲಾ ಅಂಗಗಳೊಡನೆ ಬೆಳೆದಿರುವ ಈ ಸಂಗೀತ ಪದ್ಧತಿಗೆ ಕನ್ನಡಿಗರ ಕೊಡುಗೆ ಪ್ರಮುಖವಾದುದು. ಕರ್ನಾಟಕ ಸಂಗೀತ ಶಾಸ್ತ್ರಜ್ಞರ ಕಾಣಿಕೆ, ಪ್ರಾಚೀನ ಕಾಲದಿಂದ ಈ ನಾಡಿನಲ್ಲಿ ದೊರೆತ ವಿಶೇಷ ಪ್ರೋತ್ಸಾಹ ಇವು ಕರ್ನಾಟಕ ಸಂಗೀತ ರೂಪುಗೊಳ್ಳಲು ಮುಖ್ಯ ಕಾರಣ. ಇದರಿಂದಲೇ ಈ ಪ್ರಕಾರಕ್ಕೆ ಕರ್ನಾಟಕದ ಹೆಸರು ಜೊತೆಗೂಡಿಕೊಂಡಿದೆ.

**ಉಗಮ–ವಿಕಾಸ:** ಸಾಮವೇದದಿಂದ ಆರಂಭವಾಗಿ ದತ್ತಿಲ, ಕೋಹಿಲ, ಭರತ ಮೊದಲಾದವರ ಗ್ರಂಥಗಳಲ್ಲಿ ಶಾಸ್ತ್ರೀಯವಾಗಿ ನಿರೂಪಿತವಾಗಿರುವ ಸಂಗೀತ ಪದ್ಧತಿ; ಭಾರತೀಯ ಸಂಗೀತ ಪದ್ಧತಿಗಳಿಗೆ ಆಧಾರವಾಗಿದೆ. ಬಹುಶಃ ದಕ್ಷಿಣ ಭಾರತದಲ್ಲಿಯೂ ಸ್ಥಳೀಯ ಸಂಗೀತ ರೀತಿಯೊಂದು ಬಳಕೆಯಲ್ಲಿದ್ದು ಇದನ್ನೂ ಒಳಗೊಂಡು ಮುಂದಿನ ಭಾರತೀಯ ಸಂಗೀತ ಮಾರ್ಗ ಬೆಳೆದಂತೆ ತೋರುತ್ತದೆ. ಉದಾಹರಣೆಗೆ ಭರತನ ನಾಟ್ಯಶಾಸ್ತ್ರದಲ್ಲಿ ಸು.4ನೆಯ ಶತಮಾನ ಗಾಯನ ವಾದನ ರಸ ಅಲಂಕಾರ ಮುಂತಾದ ಎಲ್ಲ ಸಂಗೀತಗಳಿಗೂ ಸಾಮಾನ್ಯವಾದ ವಿಷಯಗಳಿದ್ದರೆ ಸು.4–5ನೆಯ ಶತಮಾನದಲ್ಲಿದ್ದ ಮತಂಗನ ಬೃಹದ್ದೇಶೀ ಎಂಬ ಪ್ರಮಾಣ ಗ್ರಂಥ ದಕ್ಷಿಣ ಭಾರತದ ಸಂಗೀತವನ್ನು ವಸ್ತುವಾಗಿ ಗ್ರಹಿಸಿ, ಭರತ ಹೇಳುವ ಸಂಗೀತ ಜಾತಿಗಳ ಬದಲು ರಾಗ ಸಂಗೀತದ ವಿಷಯವನ್ನು ಮೊಟ್ಟಮೊದಲಿಗೆ ಪ್ರತಿಪಾದಿಸುತ್ತದೆ. ರಾಗಗಳನ್ನು ಶುದ್ಧ, ಸಂಕೀರ್ಣವೆಂದು ವಿಭಾಗ ಮಾಡಿ ಶ್ರುತಿ, ಸ್ವರ, ವರ್ಣ, ಅಲಂಕಾರ ಮುಂತಾದ ಹಲವು ವಿವರಗಳನ್ನು ಮತಂಗ ನಿರೂಪಿಸಿದ್ದಾನೆ. ಅನೇಕ ವಾದ್ಯಗಳ ವಿಚಾರವಾಗಿ ತುಂಬ ಸ್ವಾರಸ್ಯವಾದ ವಿವರಗಳನ್ನು ನೀಡುತ್ತಾನೆ. ಬಹುಶಃ ಇವನು ಕನ್ನಡ ನಾಡಿನವನು. ಇವನ ಗ್ರಂಥದಲ್ಲಿ ಕನ್ನಡ ಪ್ರಬಂಧಗಳನ್ನೂ ಹೇಳಿದೆ.

ಕರ್ನಾಟಕದಲ್ಲಿ ಬಹು ಹಿಂದಿನಿಂದಲೂ ಸಂಗೀತಕ್ಕೆ ವಿಶೇಷವಾದ ಮನ್ನಣೆ ಯಿತ್ತೆಂಬುದು ಹಲವು ಶಾಸನ ಸಾಹಿತ್ಯ ಉಲ್ಲೇಖಗಳಿಂದ ತಿಳಿಯುತ್ತದೆ. ತಾಳಗುಂದ ಶಾಸನದಲ್ಲಿ ಕದಂಬ ಶಾಂತಿವರ್ಮನ ವೈಭವವನ್ನು ವರ್ಣಿಸುತ್ತಾ ಅವನ ಮನೆ ಸಂಗೀತದ ಧ್ವನಿಯಿಂದ ತುಂಬಿಹೋಗಿದ್ದಿತೆಂದು ಹೇಳಿದೆ (ನಾನಾ ವಿಧ ದ್ರವಿಣಸಾರಸಮುಚ್ಚಯೇಷು ದ್ವಿಪೇಂದ್ರಮದವಾಸಿಕಗೋಪುರೇಷು ಸಂಗೀತವಲ್ಗು ನಿನದೇಷು ಗೃಹೇಷು). ಪಟ್ಟದಕಲ್ಲಿನ ದೇವಸ್ಥಾನದ ಕಂಬದ ಮೇಲಿನ ಸು.850ರ ಶಾಸನವೊಂದರಲ್ಲಿ ಒಬ್ಬ ಶ್ರೇಷ್ಠ ನಟನ ಪ್ರಶಂಸೆ ಇದೆ. ಸ್ತ್ರೀಯರ ವಿದ್ಯಾಭ್ಯಾಸದಲ್ಲಿ ಸಂಗೀತ, ನರ್ತನ ಮುಂತಾದ ಕಲೆಗೆ ಹೆಚ್ಚು ಪ್ರಾಧ್ಯಾನವಿದ್ದುದು ತಿಳಿಯಬರುತ್ತದೆ. ಉದಯಸಿಂಹ ಎಂಬವನು ಕದಂಬ ಗೀತ ವಾದ್ಯ ನೃತ್ಯ ವೇಣು ವೀಣಾರವ ಸಂಗತ ಪಾಟಕ ವಿಜೃಂಭಿತ ಆಸ್ಥಾನ ಕಾವ್ಯನಾಟಕ ವಿಚಾರ ಪ್ರಸಂಗನಾಗಿದ್ದನೆಂದು 1017ರ ಒಂದು ಶಾಸನ ಹೊಗಳಿದೆ. ಹೊಯ್ಸಳ ವಿಷ್ಣುವರ್ಧನನ ಪತ್ನಿ ಶಾಂತಲೆಯನ್ನು ಅನೇಕ ಶಾಸನಗಳು ಸಂಗೀತವಿದ್ಯಾಸರಸ್ವತಿ, ವಿಚಿತ್ರನರ್ತನ ಪಾತ್ರ ಶಿಖಾಮಣಿ, ಸಕಳಕಳಾಗಮಾನೂನೆ, ಗೀತವಾದ್ಯನೃತ್ಯಸೂತ್ರಧಾರೆ ಎಂದು ವರ್ಣಿಸಿವೆ. ಹಲವು ಅಗ್ರಹಾರಗಳ ಮಹಾಜನರು ಸಂಗೀತಕಲಾ ನಿಪುಣರಾಗಿದ್ದುದನ್ನೂ ದೇವಾಲಯಗಳಲ್ಲಿ ಗೀತವಾದ್ಯ ನೃತ್ಯದವರಿಗಾಗಿ ದತ್ತಿಗಳನ್ನು ಕೊಟ್ಟದ್ದನ್ನೂ ಶಾಸನಗಳಲ್ಲಿ ಹೇಳಿದೆ.

ಪಂಪ, ಪೊನ್ನ, ರನ್ನ,ಜನ್ನ ಮೊದಲಾದವರು ರಚಿಸಿರುವ ಕನ್ನಡ ಸಾಹಿತ್ಯ ಗ್ರಂಥಗಳಲ್ಲಿ ಸಂಗೀತ ಮತ್ತು ನೃತ್ಯಗಳ ವರ್ಣನೆಗಳು ಹೇರಳವಾಗಿ ದೊರಕುತ್ತವೆ. ಪಂಪನ ಆದಿಪುರಾಣದಲ್ಲಿ ವಾದ್ಯಗಳ ವರ್ಣನೆ, ನೃತ್ಯದ ವರ್ಣನೆಗಳು ಸುಂದರವಾಗಿವೆ. ಪೊನ್ನನ ಶಾಂತಿಪುರಾಣದಲ್ಲಿ ಅಮರಿಯರ ನರ್ತನ ಅಪೂರ್ವ ಸಂಗೀತದಿಂದ ಕೂಡಿತ್ತೆಂಬ ಹೇಳಿಕೆಯಿದೆ. ರನ್ನನ ಅಜಿತಪುರಾಣದಲ್ಲಿ ಇಂದ್ರಜಿನಶಿಶುವಿನ ಪರಮೋತ್ಸವವನ್ನು ಮಾಡಿದ ಸಂದರ್ಭದಲ್ಲಿ ನಡೆದ ನೃತ್ಯ ನಾನಾವಿಧ ಗೀತವಾದ್ಯಗಳೊಡನೆ ಶೃಂಗಾರಾದಿ ನವರಸಗಳಿಂದ ಕೂಡಿದ್ದು ಸಪ್ತ ಸ್ವರಗಳನ್ನು ನಾನಾ ಭೇದಗಳಿಂದ ಧ್ವನಿತವಾಗುವಂತೆ ಮಾಡಿ ದಿಶಾವನಿತೆಯರು ಶೋಭಿಸುತ್ತಿದ್ದರೆಂದು ವರ್ಣಿಸಿದೆ. ಅಭಿನವಪಂಪನ ಮಲ್ಲಿನಾಥಪುರಾಣದಲ್ಲಿ ಶರತ್ಸಮಯ ವರ್ಣನೆಯಲ್ಲಿ ವೇಣುಗಾನಲೋಲನು ತ್ರಿಸ್ಥಾನಶುದ್ಧಿಯಿಂದ ಹಾಡಿದಾಗ ಸಭಿಕರು ಮೈ ಮರೆತು ರಾಗರಸದಲ್ಲಿ ತಲ್ಲೀನರಾದಂತೆ ವರ್ಣಿಸಿದೆ. ಕಣ್ಣಪ್ಪ ಹಾಡುತ್ತ, ಕುಣಿಯುತ್ತ ಈಶ್ವರನನ್ನು ಕೂಗಿದಂತೆ ಹರಿಹರ ವರ್ಣಿಸಿದ್ದಾನೆ. ನೇಮಿಚಂದ್ರನ ಲೀಲಾವತೀಪ್ರಬಂಧದಲ್ಲಿ ಓರ್ವ ಪ್ರೌಢೆ ತಾಳಲಯ ಗಳಿಗನುಗುಣವಾಗಿ ಮನೋಹರವಾಗಿ ವೀಣೆಯನ್ನು ನುಡಿಸಿದಳೆಂದು ವರ್ಣಿಸಿದೆ. ಅಗ್ಗಳನ ಚಂದ್ರಪ್ರಭಪುರಾಣದಲ್ಲಿ ಗಾನವಿದ್ಯಾವಿಶಾರದನೊಬ್ಬ ತಾಳಸ್ವರಲಯಗಳಿಗನುಗುಣವಾಗಿ ವೀಣೆಯ ನಾದಕ್ಕನುಸಾರವಾಗಿ ಕರ್ಣಾನಂದಕರವಾಗಿ ಹಾಡಿದನೆಂದೂ ಸಂಗೀತದ ಗಂಧವನ್ನೇ ಅರಿಯದವರೂ ಸಂಗೀತ ಕಚೇರಿಯನ್ನು ಪ್ರವೇಶಿಸಿದ ಕೂಡಲೇ ತಮಗೂ ಹಾಡುವ ಮನೋಭಾವವನ್ನುಂಟುಮಾಡುವಂತೆ ಅಲ್ಲಿಯ ಸಂಗೀತವಿತ್ತೆಂದೂ ವಿವರಿಸಿದೆ. ಜನ್ನನ ಅನಂತನಾಥ ಪುರಾಣದಲ್ಲೂ ಸಂಗೀತದ ಬಗ್ಗೆ ಹೇಳಿಕೆಯಿದೆ. ಸೋಮರಾಜ ತನ್ನ ಉದ್ಭಟಕಾವ್ಯದಲ್ಲಿ ಗಾನವಿಶಾರದೆಯರು ಗಾನ ಮಾಡಿದುದನ್ನು ವರ್ಣಿಸಿದ್ದಾನೆ. ಗಾಯಕಿಯರು ಮನೋಹರವಾಗಿ ಹಾಡಲುದ್ಯುಕ್ತರಾಗಿ ನಾಟಿ, ಗೌಳ, ಸಾಳಗ, ಶ್ರೀ ಮೊದಲಾದ ನಾನಾವಿಧ ರಾಗ ಸಮೂಹದಿಂದ ಹಾಡಿ ಅಲ್ಲಿ ನೆರೆದಿದ್ದವರ ಮನ ಮೆಚ್ಚಿಸಿದರೆಂದು ಹೇಳಿದೆ.

ಪ್ರಾಚೀನ ಕರ್ನಾಟಕದಲ್ಲಿ ಸಂಗೀತ ಜನಪ್ರಿಯವಾಗಿದ್ದು ವಿಶೇಷ ಪ್ರೋತ್ಸಾಹವನ್ನು ಗಳಿಸಿತ್ತೆಂಬುದನ್ನು ಶಾಸನಗಳು ಮತ್ತು ಸಾಹಿತ್ಯದ ಉಲ್ಲೇಖಗಳು ಸೂಚಿಸುತ್ತವೆ. ಇಂಥ ವಾತಾವರಣದಲ್ಲಿ ಅಂದಿನ ಸಂಗೀತದ ಶಾಸ್ತ್ರೀಯ ನಿರೂಪಣೆ ಮತ್ತು ವ್ಯವಸ್ಥೆ ಅನೇಕ ವಿದ್ವಾಂಸರಿಂದ ನೆರವೇರಿತು. ಸೋಮೇಶ್ವರ ಮಾನಸೋಲ್ಲಾಸದಲ್ಲಿ ಆ ಕಾಲದಲ್ಲಿ ಈ ದೇಶದಲ್ಲಿ ಪ್ರಚಲಿತವಾಗಿದ್ದ ಸಂಗೀತದ ಪ್ರಸ್ತಾಪವಿದೆ. ಇದರಲ್ಲಿ ವಿನೋದವಿಂಶತಿಯಮೂರು ಅಧ್ಯಾಯಗಳಲ್ಲಿ ಸಂಗೀತಶಾಸ್ತ್ರದ ವಿವರಣೆಗಳಿವೆ. ಪ್ರಾದೇಶಿಕ ರಾಗಗಳು, ಅವುಗಳ ಲಕ್ಷಣಗಳು ಮತ್ತು ಅನೇಕ ಪ್ರಬಂಧಗಳನ್ನು ದೃಷ್ಟಾಂತಗಳೊಡನೆ ವಿವರಿಸಿಲಾಗಿದೆ. ಸೋಮೇಶ್ವರನ ಮಗ ಎರಡನೆಯ ಜಗದೇಕಮಲ್ಲ ತನ್ನ ಸಂಗೀತಚೂಡಾಮಣಿ ಎಂಬ ಗ್ರಂಥದಲ್ಲಿ ನೂರಕ್ಕೂ ಮಿಗಿಲಾಗಿ ರಚನಾರೂಪಗಳನ್ನು ವಿವರಿಸಿದ್ದಾನೆ. ಮತ್ತೊಂದು ಮೇರುಕೃತಿ ಶಾರ್ಙ್ಗದೇವನ ಸಂಗೀತ ರತ್ನಾಕರ. ಈತ ದೇವಗಿರಿಯ ಸೇವುಣ ದೊರೆ ಸಿಂಘಣನ (1199–1247) ಆಶ್ರಯದಲ್ಲಿ ಶ್ರೀಕರಣಿಕಾಗ್ರಣಿಯಾಗಿದ್ದ. ಈ ಗ್ರಂಥದಲ್ಲಿ ಸಂಗೀತದ ನಿಯಮಗಳನ್ನು ರೂಪಿಸಿದ್ದಾನೆ. ಈ ಗ್ರಂಥ ಹಿಂದಿನ ಕಾಲದ ಸಂಗೀತದ ಸ್ವರೂಪವನ್ನು ತಿಳಿಸುತ್ತದೆ. 74 ಪ್ರಬಂಧಗಳನ್ನು ವಿವರಿಸುವ ಈ ಸಂಗೀತ ರತ್ನಾಕರ ಭಾರತೀಯ ಪ್ರಾಚೀನ ಪ್ರಮಾಣಗ್ರಂಥಗಳಲ್ಲಿ ಅತಿ ಮುಖ್ಯವಾದುದು. ಈ ಕೃತಿ ಸಂಗೀತ ಶಾಸ್ತ್ರಕ್ಕೆ ಭದ್ರವಾದ ಬುನಾದಿ ಹಾಕಿತೆಂದರೆ ತಪ್ಪಾಗದು. ಶಾರ್ಙ್ಗದೇವನ ಸಂಗೀತ ರತ್ನಾಕರಕ್ಕೆ ಸುಧಾಕರವೆಂಬ ಟೀಕೆಯನ್ನು 1330ರ ಸುಮಾರಿಗಿದ್ದ ಸಿಂಹಭೂಪಾಲ ಬರೆದಿದ್ದಾನೆ. ಈ ದೇಶದಲ್ಲಿ ಸಂಗೀತಕ್ಕೆ ಇದ್ದ ವಿಶೇಷ ಪ್ರೋತ್ಸಾಹ ಹಾಗೂ ಜಗದೇಕಮಲ್ಲನಂಥ ಚಕ್ರವರ್ತಿಯೂ ಒಳಗೊಂಡಂತೆ ಹಲವು ಶಾಸ್ತ್ರಕಾರರ ಪರಿಶ್ರಮದಿಂದ ಕರ್ನಾಟಕ ದೇಶದಲ್ಲಿ ಒಂದು ವಿಶಿಷ್ಟ ಸಂಗೀತ ಪದ್ಧತಿ ಬೆಳೆಯಲು ಆರಂಭಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಈ ಸಂಗೀತ ಪದ್ಧತಿಯನ್ನೇ ಕರ್ನಾಟಕ ಸಂಗೀತ ಎಂದು ಕರೆದಿರುವುದು ಸಹಜ. ಹದಿನಾಲ್ಕನೆಯ ಶತಮಾನದಲ್ಲಿ ಕರ್ನಾಟಕದಲ್ಲಿದ್ದ ಒಬ್ಬ ಲಕ್ಷಣಕಾರ ಹರಿಪಾಲದೇವ (1309–80) 'ತದಪಿ ದ್ವಿವಿಧಂ ಪ್ರೋಕ್ತಂ ದಕ್ಷಿಣೋತ್ತರಭೇದತಃ । ಕರ್ಣಾಟಕಂ ದಕ್ಷಿಣೇ ಸ್ಯಾದ್ಧಿಂದುಸ್ತಾನೀ ತಥೋತ್ತರೇ' ಎಂದು ಸ್ಪಷ್ಟವಾಗಿ ಅಂದಿಗೆ ಕರ್ನಾಟಕ ಸಂಗೀತ ಎಂಬ ಪದ್ಧತಿ ರೂಢಿತವಾಗಿತ್ತೆಂದು ಹೇಳಿದ್ದಾನೆ.

ವಿಜಯನಗರದ ಅರಸರ ಕಾಲದಲ್ಲಿ ಕರ್ಣಾಟಕ ಸಂಗೀತ ಸ್ಪಷ್ಟ ರೂಪುರೇಖೆಗಳೊಡನೆ ವಿಶಿಷ್ಟ ಆವಿಷ್ಕಾರಗಳೊಡನೆ ರೂಪು ತಳೆಯಿತು. ಹಿಂದಿನ ಕಾಲದಲ್ಲಿದ್ದ ಜನಮನ್ನಣೆ ಅದೇ ಧಾಟಿಯಲ್ಲಿ ಮುಂದುವರಿದಿದ್ದು ಮತ್ತು ಅಂದಿನ ದೊರೆಗಳ ವಿಶೇಷ ಪ್ರೋತ್ಸಾಹ ಈ ಮುನ್ನಡೆಗೆ ಕಾರಣ. ತತ್ಕಾಲೀನ ಸಾಹಿತ್ಯ ಗ್ರಂಥಗಳಲ್ಲಿ ಬರುವ ಹಲವು ಉಲ್ಲೇಖಗಳು ಸಂಗೀತ ಅಂದು ಜನಪ್ರಿಯವಾಗಿತ್ತೆಂಬುದನ್ನೂ ಶಾಸ್ತ್ರಬದ್ಧವಾಗಿತ್ತೆಂಬುದನ್ನೂ ಸೂಚಿಸುತ್ತವೆ. ಚಂದ್ರಶೇಖರ ಕವಿಯಿಂದ ರಚಿತವಾದ ಪಂಪಾಸ್ಥಾನವರ್ಣನಂ ಕಾವ್ಯದಲ್ಲಿ ಗಾಯಕರು ದಂಡಿಗೆಯನ್ನು ತೆಗೆದುಕೊಂಡು ಶಾರೀರಕ್ಕೆ ತಕ್ಕಂತೆ ಮೇಳೈಸಿ ಗ್ರಾಮ ಮೂರ್ಛನೆ ಪಂಚವಿಧಗಮಕಗಳನ್ನು ತ್ರಿಸ್ಥಾಯಿದಲ್ಲೂ ನೆಲೆಗೊಳಿಸಿ ರಂಜಿಸುವಂತೆ ರಾಗಾಲಾಪವನ್ನೂ ಅನೇಕ ತಾಳಗಳಿಗನು ಗುಣವಾಗಿ, ದೋಷ ರಹಿತವಾದ ರಾಗಗಳನ್ನೂ ಹಾಡಿದರೆಂಬುದರ ವರ್ಣನೆ, ಪಕ್ಕವಾದ್ಯಗಳ ವರ್ಣನೆ, ಮದ್ದಳೆಯನ್ನು ನುಡಿಸುವ ಚಿತ್ರ ಮನೋಜ್ಞವಾಗಿ ನಿರೂಪಿತವಾಗಿದೆ. ಅನೇಕ ವಾದ್ಯಗಳ ವಾದನಕ್ರಮವನ್ನು ಈ ಗ್ರಂಥದಲ್ಲಿ ಮನನಾಟುವಂತೆ ವರ್ಣಿಸಿದೆ. ಸು.1500ರಲ್ಲಿ ನಿಜಗುಣಶಿವಯೋಗಿಯಿಂದ ರಚಿತವಾದ ವಿವೇಕ ಚಿಂತಾಮಣಿಯಲ್ಲಿ ಸ್ವರೋತ್ಪತ್ತಿಕ್ರಮ, ರಾಗೋತ್ಪತ್ತಿಲಕ್ಷಣ, ವಿಪಂಚಿ ಮೊದಲಾದ ವಿವಿಧ ವೀಣೆಗಳು, ಪ್ರಸಿದ್ಧ ರಾಗಗಳು ಮೊದಲಾದವುಗಳನ್ನು ಕುರಿತ ವಿವರಣೆಯಿದೆ. ನಾರದ ವೀಣೆಯಲ್ಲಿ ಹಲವಾರು ರಾಗಗಳನ್ನು ನುಡಿಸಿ ವಿಶ್ವೇಶ್ವರನನ್ನು ಕುರಿತು ಹಾಡಿದಂತೆ ವೀರಭದ್ರ ಕವಿಯ ವೀರಭದ್ರವಿಜಯದಲ್ಲಿ ವರ್ಣಿಸಿದೆ. ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣದಲ್ಲಿ ಶಂಭು ಅಂಧಕಾಸುರನ ಸ್ತೋತ್ರಕ್ಕೆ ಮೆಚ್ಚಿ ಅವನ ಬೇಡಿಕೆಯನ್ನು ಮನ್ನಿಸಿ ತಾಂಡವನೃತ್ಯವನ್ನಾಡಿದಾಗ ನಂದಿ ಬ್ರಹ್ಮಾದಿಗಳು ಮೃದಂಗ ತಾಳಗಳನ್ನೂ ನಾರದ ತುಂಬುರರು ವೀಣೆ ದಂಡಿಗೆಗಳನ್ನೂ ನುಡಿಸಿದರೆಂಬ ಸುಂದರ ವರ್ಣನೆಯಿದೆ. ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಪೂರ್ವನಾಟಕ ಸಂಧಿಯಲ್ಲಿ ಬರುವ ನಾಟ್ಯದವರ್ಣನೆ, ಉತ್ತರನಾಟಕ ಸಂಧಿಯಲ್ಲಿ ಬರುವ ಹಂಸಮಂಡಳೆ ಎಂಬ ನರ್ತನ, ತಾಂಡವವಿನಯ ಸಂಧಿಯಲ್ಲಿ ಬರುವ ವಿವಿಧ ವೇಷಗಳಿಂದ ಕೂಡಿದ ನೃತ್ಯಗಳ ವರ್ಣನೆಗಳು ಬಹು ಮನೋಜ್ಞವಾಗಿದ್ದು ಕರ್ನಾಟಕ ಸಂಗೀತ ಮತ್ತು ನಾಟ್ಯಗಳ ಪ್ರೌಢಾವಸ್ಥೆಯನ್ನು ತಿಳಿಸುತ್ತವೆ. (ವಿ.ಎಸ್.ಎಸ್.)

ಕರ್ನಾಟಕ ಸಿಂಹಾಸನಾಧೀಶ್ವರರಾದ ವಿಜಯನಗರದ ಅರಸರ ಕಾಲದಲ್ಲಿ ಅವರ ಪ್ರೋತ್ಸಾಹದ ನೆರಳಿನಲ್ಲಿ ಈ ನಾಡಿನ ಸಂಗೀತದ ಶಾಸ್ತ್ರೀಯ ನಿರೂಪಣೆ ಹೆಚ್ಚಿನ ಮಟ್ಟಿಗೆ ಸಾಗಿತಾಗಿ ಇದೇ ಈ ಸಂಗೀತ ಪ್ರಕಾರಕ್ಕೆ ಕರ್ನಾಟಕ ಸಂಗೀತ ಎಂಬ ಹೆಸರು ಬರಲು ಕಾರಣವಾಯಿತು ಎಂಬ ಊಹೆ ಇದೆ. ಅದರಲ್ಲೂ ಕರ್ನಾಟಕ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ವಿದ್ಯಾರಣ್ಯರು ದಕ್ಷಿಣಾದಿ ಸಂಗೀತವನ್ನು ಪುನರುತ್ಥಾನ ಮಾಡಿದ ಮಹಾಮಹಿಮರು ಸಂಗೀತಸಾರವೆಂಬ ಗ್ರಂಥ ಬರೆದು ಈಗ ಅನುಪಲಬ್ಧ ಕರ್ನಾಟಕ ಸಂಗೀತವೆಂದು ದಕ್ಷಿಣಾದಿ ಸಂಗೀತ ನೆಲೆಗೊಳ್ಳಲು ಅಂಕುರಾರ್ಪಣ ಮಾಡಿದವರು. ಇವರು ಆರಂಭಿಸಿದ ಅಥವಾ ಸ್ಫುಟಪಡಿಸಿದ ಸಂಗೀತ ಪದ್ಧತಿಯನ್ನು ಕರ್ನಾಟಕ ಸಂಗೀತವೆಂದು ಜನ ಕರೆದಿದ್ದಿರಬಹುದು ಎಂಬ ಹೇಳಿಕೆಯೂ ಇದೆ.

ವಿದ್ಯಾರಣ್ಯರು ತಮ್ಮ ಸಂಗೀತಸಾರದಲ್ಲಿ ಹದಿನೈದು ಮೇಳ ರಾಗಗಳನ್ನು ಹೇಳಿ ಐವತ್ತು ಪ್ರಚುರ ಪ್ರಯೋಗಗಳುಳ್ಳ ರಾಗಗಳನ್ನ ಳವಡಿಸಿದ್ದಾರೆಂದು ಗೋವಿಂದ ದೀಕ್ಷಿತ ತನ್ನ ಸಂಗೀತಸುಧೆಯಲ್ಲಿ (1614) ಹೇಳುತ್ತಾನೆ. ಕರ್ನಾಟಕ ಭಾಗ್ಯ ವಿದ್ಯಾರಣ್ಯ ಶ್ರೀಚರಣಾಗ್ರಣೀಭ್ಯಃ ಆರಭ್ಯರಾಗಾನ್ ಪ್ರಚುರ ಪ್ರಯೋಗಾನ್ ಪಂಚಾಶತಂ ಚ ಕಲಯೇ ಷಡಂಗಾನ್ – ಎಂಬುದು ಅವನ ಮಾತು. ರಾಗವಿಬೋಧದಲ್ಲಿ (1609) 960 ಮೇಳರಾಗಗಳ ಪದ್ಧತಿಯನ್ನು ನಿರೂಪಿಸಿರುವ ಸೋಮನಾಥನಿಂದ ಈ ಮೇಳ ಪದ್ಧತಿ ಆರಂಭವಾಯಿತೆಂದು ಇತ್ತೀಚಿನ ವರೆಗೂ ಎಣಿಕೆಯಿದ್ದಿತು. ಆದರೆ ಮೇಳರಾಗಗಳ ನಿರ್ದೇಶ ಮಾತ್ರವಲ್ಲದೆ ವಿದ್ಯಾರಣ್ಯರು ತಮ್ಮ ಗ್ರಂಥದಲ್ಲಿ ರಾಗಾಲಾಪನೆಯ ವಿಧಿಗಳನ್ನೂ ನಿರೂಪಿಸಿದ್ದಾರೆಂದು ದೀಕ್ಷಿತನಿಂದ ತಿಳಿದುಬರುತ್ತದೆ.

ದೇವರಾಯನ ಆಳಿಕೆಯ (ಸು.1446–65) ಕಾಲದಲ್ಲಿದ್ದು, ಅಭಿನವಭರತಾಚಾರ್ಯ, ರಾಯವಾಗ್ಗೇಯಕಾರ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದ ಕಲ್ಲಿನಾಥನೆಂಬ ವಿದ್ವಾಂಸ ಶಾರ್ಙ್ಗದೇವನ ಕೃತಿಗೆ ಕಲಾನಿಧಿಯೆಂಬ ಟೀಕೆಯನ್ನು ಬರೆದ. ಈತ ತುಂಬ ಪ್ರತಿಭಾಶಾಲಿ, ಪ್ರಭಾವಶಾಲಿ. ಒಂದು ಕಾಲಕ್ಕೆ ಸಂಗೀತ ಪ್ರಪಂಚದಲ್ಲಿ ಹನೂಮನ್ಮತ, ನಾರದಮತ, ಸೋಮೇಶ್ವರಮತಗಳಿದ್ದಂತೆ ಕಲ್ಲಿನಾಥಮತವೆಂಬ ವಿಶಿಷ್ಟವಾದ ಸಂಪ್ರದಾಯವೇ ಇತ್ತು. ತಾಳದೀಪಿಕೆಯನ್ನು ಬರೆದ ಗೋಪೇಂದ್ರ ತಿಪ್ಪಭೂಪಾಲ (ಸು.1423–46) ಸಂಗೀತ ಶಾಸ್ತ್ರವನ್ನು ಸ್ಫುಟಗೊಳಿಸಲು ಯತ್ನಿಸಿದ. ಇವನ ವ್ಯಾಖ್ಯೆಯಿಂದ ಆ ಕಾಲಕ್ಕೆ ವಿಜಯನಗರದಲ್ಲಿ ಶಾಸ್ತ್ರೀಯ ಸಂಗೀತ ವಿಶೇಷವಾಗಿ ಜನಪ್ರಿಯವಾಗಿದ್ದಿತೆಂದು ತಿಳಿದುಬರುತ್ತದೆ. ಕೃಷ್ಣದೇವರಾಯನ ಕಾಲದಲ್ಲಿ ಸಂಗೀತ ಸೂರ್ಯೋದಯ ಎಂಬ ಸಂಸ್ಕೃತ ಸಂಗೀತ ಶಾಸ್ತ್ರಗ್ರಂಥ ಬೆಳಕು ಕಂಡಿತು. ರಾಣಿವಾಸದವರಿಗೆ ನಾಟ್ಯಾಚಾರ್ಯನಾಗಿದ್ದ ಬಂಧಂ ಲಕ್ಷ್ಮೀನಾರಾಯಣ ಈ ಗ್ರಂಥದ ಕರ್ತೃ.

ದಕ್ಷಿಣಾದಿ ಸಂಗೀತದ ಸ್ವರೂಪವನ್ನು ಚಿತ್ರಿಸುವ ಮತ್ತೊಂದು ಗ್ರಂಥ ಸ್ವರ ಮೇಳಕಳಾನಿಧಿ. ವಿಜಯನಗರದ ರಾಮರಾಯನಿಗೆ ಅಮಾತ್ಯನಾಗಿದ್ದ ರಾಮಾಮಾತ್ಯ ಈ ಗ್ರಂಥದ ಕರ್ತೃ. ತನ್ನ ಗ್ರಂಥದಲ್ಲಿ (ಸು.1550) ಇಪ್ಪತ್ತು ಮೇಳಗಳನ್ನು ನಮೂದಿಸಿ, ರಾಗಗಳನ್ನು ಉತ್ತಮ, ಮಧ್ಯಮ ಮತ್ತು ಅಧಮಗಳೆಂದು ವರ್ಗೀಕರಿಸಿದ್ದಾನೆ. ವೀಣಾವಾದ್ಯದ ವಿವರಣೆಗೆ ಒಂದು ಅಧ್ಯಾಯವನ್ನೇ ಬರೆದಿದ್ದಾನೆ. ಸ್ವರಮೇಳಕಳಾನಿಧಿ ಕರ್ನಾಟಕ ಸಂಗೀತದಲ್ಲಿ ಕ್ರಾಂತಿಯನ್ನು ತಂದ ಗ್ರಂಥ. ಆ ಕಾಲಕ್ಕೆ ಸಂಗೀತಶಾಸ್ತ್ರದಲ್ಲಿ ಲಕ್ಷ್ಯ, ಲಕ್ಷಣಗಳ ವಿಷಯದಲ್ಲಿ ವಿಶೇಷವಾದ ಗೊಂದಲವಿದ್ದುದರಿಂದ ಇವುಗಳನ್ನು ಸಮೀಕರಿಸಿ ಗ್ರಂಥರಚನೆ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಇವನು ಪ್ರಯೋಗದ ದೃಷ್ಟಿಯನ್ನೇ ಹಿಡಿದು ಪ್ರಚುರವಾಗಿದ್ದ ಎಲ್ಲ

ದೇಶೀ ರಾಗಗಳನ್ನೂ ಇಪ್ಪತ್ತು ಮೇಳಗಳಲ್ಲಿ ಅಡಕಮಾಡಲು ಯತ್ನಿಸಿದ. ಹಿಂದಿನ ಕಾಲದಿಂದ ಬಂದಿದ್ದ ಗ್ರಾಮಮೂರ್ಛನ ಪದ್ಧತಿಯಿಂದ ರಾಗಗಳನ್ನು ಹಿಡಿಯುವ, ಹೆಸರಿಸುವ ಹುಟ್ಟಿಸುವ ಪದ್ಧತಿಯನ್ನು ಧೈರ್ಯದಿಂದ ಬದಿಗಿಟ್ಟಾತ ರಾಮಾಮಾತ್ಯ ಈ ಪದ್ಧತಿ ಲಕ್ಷಣಪ್ರಧಾನವಾದದ್ದು. ಮೇಳವೆಂಬ ಮಾತಿಗೆ ಹಿರಿಮೆ ಕೊಟ್ಟವರಲ್ಲಿ ರಾಮಾಮಾತ್ಯ ಮೊದಲಿಗ. ಇವನ ಗ್ರಂಥದಲ್ಲಿ ಮೇಳ ಪ್ರಕರಣವೆಂಬ ಪ್ರತ್ಯೇಕವಾದ ಪರಿಚ್ಛೇದವೇ ಇದೆ. ಆದರೆ ಇವನ ಗಮನವೆಲ್ಲ ಲಕ್ಷ್ಯದ ಕಡೆಗೇ ಇತ್ತು.

ಇದೇ ಕಾಲದಲ್ಲಿದ್ದ ನಿಜಗುಣಶಿವಯೋಗಿ ತನ್ನ ವಿವೇಕಚಿಂತಾಮಣಿಯಲ್ಲಿ ನಾಲ್ಕನೆಯ ಅಧ್ಯಾಯವನ್ನು ಸಂಗೀತಶಾಸ್ತ್ರದ ನಿರೂಪಣೆಗೆ ವಿನಿಯೋಗಿಸಿರುವುದಲ್ಲದೆ ಪಲ್ಲವಿ ಮತ್ತು ಚರಣಗಳನ್ನುಳ್ಳ ಸಹಸ್ರಾರು ಶೈವಪರ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿದ್ದಾನೆ. ಈ ಕೀರ್ತನೆಗಳೊಂದರಿಂದ ಆ ಕಾಲದ ವೀಣೆಗೆ ಹದಿನಾರು ಮೆಟ್ಟಿಲುಗಳು ಇದ್ದವೆಂದು ತಿಳಿಯುತ್ತದೆ. ವಿವೇಕಚಿಂತಾಮಣಿ ದಕ್ಷಿಣಾದಿ ಸಂಗೀತಶಾಸ್ತ್ರವನ್ನು ಕನ್ನಡದಲ್ಲಿ ತಿಳಿಸುವ ಮೊತ್ತಮೊದಲ ಗ್ರಂಥ.

ವಿಜಯನಗರದ ಪತನಾನಂತರ ತಮಿಳುನಾಡಿನ ಕೊಡುಗೆ ಹೆಚ್ಚಾಗಿ ಕಂಡುಬರುತ್ತದೆ. ಆದರೆ ದಕ್ಷಿಣ ಕರ್ನಾಟಕದ ಹಲವು ಸಂಸ್ಥಾನಗಳು ಸಂಗೀತ ಪ್ರೋತ್ಸಾಹವನ್ನು ಮುಂದುವರಿಸಿದವು. ಮಾಗಡಿ ಕೆಂಪೇಗೌಡ ಸಂಗೀತಪ್ರಿಯನಾಗಿದ್ದಂತೆ ತೋರುತ್ತದೆ. ವಿಜಯನಗರದ ಸಂಪ್ರದಾಯಗಳನ್ನು ಮೈಸೂರಿನ ಒಡೆಯರು ಪೋಷಿಸಿ ಮುಂದುವರಿಸಿದರು. ಐದನೆಯ ಚಾಮರಾಜ ಒಡೆಯರು ಚತುಷ್ಷಷ್ಟಿ ಕಲಾಪರಿಣತರಾಗಿದ್ದರು. ಕಂಠೀರವ ನರಸಿಂಹರಾಜ ಒಡೆಯರ ನಿತ್ಯದೋಲಗದಲ್ಲಿ ನಾಟ್ಯ,ತಂಬೂರ, ವೀಣಾದಿ ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದಿತು. ಅವರ ಆಸ್ಥಾನದಲ್ಲಿ ಸಂಗೀತಕೋವಿದೆಯರಿದ್ದರು. ಅವರು ಸ್ವತಃ ಸಂಗೀತಸಾಹಿತ್ಯಶಾಸ್ತ್ರ ವಿಶಾರದರು. ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಸಂಗೀತ ಗಾನ ವಾದ್ಯ ನಾಟ್ಯಗಳು ಪ್ರೋತ್ಸಾಹಿತವಾಗಿದ್ದುವು. ಇಲ್ಲಿ ವೀಣಾವಾದನ ತತ್ವಲಯಜ್ಞಾನಕುಶಲ ಕಲಾವಿದರಿದ್ದರು. ಇವರು ಸಂಗೀತಸಾರಜ್ಞರೇ ಆಗಿದ್ದರು. ಚಿಕ್ಕದೇವರಾಜ ಒಡೆಯರು ವೈಣಿಕರೊಳು ಪ್ರವೀಣರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಸಂಗೀತಶಾಸ್ತ್ರ ಸಂಪ್ರದಾಯಗಳಲ್ಲಿ ನಿಶ್ಚಿತ ಯೋಗ್ಯತೆಯನ್ನು ಪಡೆದಿದ್ದ ವಿದ್ವಾಂಸರಾಗಿದ್ದು ಸ್ವತಃ ಕೆಲವು ಗೇಯ ಕೃತಿಗಳನ್ನು ರಚಿಸಿದ್ದಲ್ಲದೆ ಬಹುಮಂದಿ ಸಂಗೀತ ವಿದ್ವಾಂಸರಿಗೆ ಉದಾರ ಆಶ್ರಯ ಕೊಟ್ಟಿದ್ದರು. ಹಾಗೆಯೇ 9ನೆಯ ಚಾಮರಾಜ ಒಡೆಯರವರೂ ಕಲಾಪ್ರೇಮಿಯಾಗಿದ್ದು ಕಲೆಯನ್ನು ಪೋಷಿಸುತ್ತಾ ಬಂದರು. ಅನಂತರ ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರು (1895–1940) ರಸಾಭಿಜ್ಞರಾಗಿದ್ದು ಸಂಗೀತಾದಿ ಕಲೆಗಳಿಗೆ ಉದಾರ ಪೋಷಣೆ ನೀಡಿ ಮೈಸೂರನ್ನು ತಂಜಾವೂರಿಗೆ ಸಮನಾಗಿ ಮಾಡಿದರು. ಇವರ ಆಸ್ಥಾನ ಅನೇಕ ವೈಣಿಕರು, ಗಾಯಕರು, ನಾಟ್ಯಕಲಾಪ್ರವೀಣರಿಂದ ಶೋಭಿಸುತ್ತಿತ್ತು. ಜಯಚಾಮರಾಜರೂ ಸಂಗೀತ ಪೋಷಕರಾಗಿದ್ದರು.

ಈ ಕಾಲದ ಶಾಸ್ತ್ರಗ್ರಂಥಕರ್ತರಲ್ಲಿ ಬೆಂಗಳೂರು ಜಿಲ್ಲೆಯ ಶಿವಗಂಗೆಯ ಸಮೀಪದ ಸಾತನೂರಿನ ಪುಂಡರೀಕವಿಠಲ (ಸು.1562–91) ಮುಖ್ಯನಾದವನು. ಬುರ್ಹಾನ್ ಖಾನನ ಆಹ್ವಾನದ ಮೇಲೆ ಖಾನ್‌ದೇಶಕ್ಕೆ ಹೋಗಿ ಷಡ್ರಾಗ ಚಂದ್ರೋದಯ, ರಾಗಮಾಲಾ, ರಾಗಮಂಜರಿ, ನರ್ತನನಿರ್ಣಯ ಎಂಬ ನಾಲ್ಕೂ ಸಂಗೀತ ಗ್ರಂಥಗಳನ್ನು ರಚಿಸಿದ್ದಾನೆ. ಪುಂಡರೀಕವಿಠಲ ಉತ್ತರಾದಿ ದಕ್ಷಿಣಾದಿ ಸಂಗೀತಗಳೆರಡರಲ್ಲೂ ನಿಷ್ಣಾತನಾಗಿದ್ದ.

ತಂಜಾವೂರಿನ ಅರಸು ರಘುನಾಥನಾಯಕನ ಆಳ್ವಿಕೆಯಲ್ಲಿ (ಸು.1614–28) ಮಂತ್ರಿಯಾಗಿದ್ದು ಸಂಗೀತಸುಧೆ ಎಂಬ ಪ್ರಖ್ಯಾತ ಗ್ರಂಥವನ್ನು ಬರೆದ ಗೋವಿಂದ ದೀಕ್ಷಿತನೂ ಕನ್ನಡದವನೇ, ಕರ್ನಾಟಕ ಸ್ಮಾರ್ತ ಬ್ರಾಹ್ಮಣ. ಈಗ ಪ್ರಚುರವಾಗಿರುವ ವೀಣೆಯ ಸ್ವರೂಪವನ್ನು ಸಿದ್ಧಮಾಡಿಕೊಟ್ಟವ ಇವನೇ (ಈ ಕೆಲಸ ತಂಜಾವೂರಿನಲ್ಲಿ ನಡೆದಿದ್ದು ಆದ್ದರಿಂದ ವೀಣೆಗೆ ತಂಜಾವೂರು ವೀಣೆಯೆಂದು ಹೆಸರಾಯಿತು). ಇವನ ಮಗ ವೆಂಕಟಮಖಿ (ವೆಂಕಟೇಶ್ವರ ದೀಕ್ಷಿತ) ಮೇಳ ಪದ್ಧತಿಯನ್ನು ಮುಂದುವರಿಸಿ ತನ್ನ ಚತುರ್ದಂಡಿ ಪ್ರಕಾಶಿಕೆಯಲ್ಲಿ (ಸು.1620) ಎಪ್ಪತ್ತೆರಡು ಮೇಳಕರ್ತ ರಾಗಗಳ (ಮೂಲಪದ ಮೇಳಕರ್ತೃ ಎಂದು) ವಿಭಜನೆಯನ್ನು ಮಾಡಿಕೊಟ್ಟಿದ್ದಾನೆ. ತಂಜಾವೂರಿನ ವಿಜಯರಾಘವ ನಾಯಕನ ಆದೇಶದ ಮೇಲೆ ಬರೆದ ಈ ಪ್ರಸಿದ್ಧ ಗ್ರಂಥ ಕರ್ನಾಟಕ ಸಂಗೀತಕ್ಕೆ ಸ್ಪಷ್ಟವಾದ ಕಟ್ಟಡವನ್ನು ಕಟ್ಟಿಕೊಟ್ಟಿತು. ಎಲ್ಲ ರಾಗಗಳನ್ನು ನುಡಿಸಲು ಅನುಕೂಲವಾಗುವಂತೆ ಮೇಳದ ಮೆಟ್ಟಿಲುಗಳನ್ನು ಮೇಣದಲ್ಲಿ ಸ್ಥಿರವಾಗಿರಿಸಿದ ಇಂದಿನ ವೀಣೆ ಈತನ ಕಲ್ಪನೆಯಂತೆ. ಇವನ ಗ್ರಂಥದ ಹೆಸರಿನಲ್ಲಿ ಬರುವ ಚತುರ್ದಂಡಿಯೆಂದರೆ ಗೀತ, ಆಲಾಪ, ಲಯ ಮತ್ತು ಪ್ರಬಂಧ – ಇವು ರಾಗ ಹರಿಯುವ ನಾಲ್ಕು ದಾರಿಗಳು. ಈ ಗ್ರಂಥದಲ್ಲಿ ವೀಣೆ, ಶ್ರುತಿ, ಸ್ವರ, ಮೇಳ, ರಾಗ, ಆಲಾಪ, ಠಾಯ,ಗೀತ ಪ್ರಬಂಧಗಳನ್ನು ವಿವರಿಸುವ ಪರಿಚ್ಛೇದಗಳಿವೆ. ತಾಳ ಪ್ರಕರಣ ಉಪಲಬ್ಧವಿಲ್ಲ. ಈತ ರಾಗಾಂಗ ಉಪಾಂಗ ಭಾಷಾಂಗ ರಾಗಗಳಿಗೆ ಶ್ಲೋಕರೂಪದಲ್ಲಿ ಲಕ್ಷಣವನ್ನು ಗೀತ ರೂಪದಲ್ಲಿ ಲಕ್ಷ್ಯವನ್ನು ನಿರೂಪಿಸಿದ್ದಾನೆ. ಅನಂತರದಲ್ಲಿ ಉಲ್ಲೇಖನೀಯ ಶಾಸ್ತ್ರ ಗ್ರಂಥಗಳಾವುವೂ ಹುಟ್ಟಲಿಲ್ಲವೆಂದು ತೋರುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ತಚ್ಚೂರು ಶಿಂಗರಾಚಾರ್ಯರೆಂಬುವರು ತಮ್ಮ ಸಹೋದರ ಹಿರಿಯ ಶಿಂಗರಾಚಾರ್ಯರೊಡನೆ ಸೇರಿಕೊಂಡು ಸ್ವರಮಂಜರಿ, ಗಾಯಕ ಪಾರಿಜಾತಂ, ಸಂಗೀತಕಲಾನಿಧಿ, ಗಾಯಕ ಲೋಚನಂ, ಗಾಯಕ ಸಿದ್ಧಾಂಜನಂ, ಗಾನೇಂದು ಶೇಖರಂ, ಭಾಗವತ ಸಾರಾಮೃತಂ ಎಂಬ ಶಾಸ್ತ್ರಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.

**ಗೇಯ ಕೃತಿಗಳು:** ಸಂಗೀತ ಲಕ್ಷಣದ ಬಗ್ಗೆ ಹುಟ್ಟಿರುವ ಹಲವಾರು ಗ್ರಂಥಗಳು ಶಾಸ್ತ್ರದ ಪ್ರಾಗಲ್ಭ್ಯತೆಯನ್ನು ಸೂಚಿಸುತ್ತಿರುವಂತೆ ಗೇಯಕೃತಿಗಳ ರಚನೆಯೂ ವ್ಯಾಪಕವಾಗಿ ಆಗಿರಬೇಕು. ಇದರ ಬಗ್ಗೆಯೂ ಹಿಂದೆ ತಿಳಿಸಿರುವ ಹಲವಾರು ಶಾಸನ ಮತ್ತು ಸಾಹಿತ್ಯ ಉಲ್ಲೇಖಗಳು ಉತ್ತಮ ಸಾಕ್ಷಿಗಳಾಗಿವೆ. ಗ್ರಂಥಗಳಲ್ಲಿ ಲಕ್ಷಣದ ಜೊತೆಗೆ ಲಕ್ಷ್ಯಗಳನ್ನೂ ಬರೆಯುತ್ತಿದ್ದುದು ರೂಢಿ. ಹೀಗೆ ಸಂಗೀತರೂಪಗಳ ರಚನೆಯಲ್ಲೂ ಕರ್ನಾಟಕದ ಕೊಡುಗೆ ಹೇರಳವಾಗಿ ವೈವಿಧ್ಯದಿಂದ ಕೂಡಿದೆ. ಕರ್ನಾಟಕದಲ್ಲಿ ರೂಪಗೊಂಡ ರಚನೆಗಳ ಬಗ್ಗೆ ಸುಮಾರು ಐವತ್ತು ಪ್ರಬಂಧಗಳ ವಿವರಣೆ ಮತಂಗನ ಬೃಹದ್ದೇಶೀಯಲ್ಲೇ ಉಕ್ತವಾಗಿದೆ. ಇವುಗಳಲ್ಲದೆ ಬೆದಂಡೆ, ಮೆಲ್ವಾಡು, ಪಾಡುಗಬ್ಬ, ಪಾಡು, ಬಾಜನೆಗಬ್ಬ, ಚತ್ತಾಣ, ಸುವ್ವಿ, ಚೌಪದಿ, ಅಡ್ಡತನ, ಒನಕೆವಾಡು, ಓವಿ, ಧವಳ, ಮಂಗಳಾಚಾರ, ಏಲಾ ಎಂಬ ರಚನೆಗಳೂ ರೂಢಿಯಲ್ಲಿದ್ದುವೆಂದು ತಿಳಿದುಬರುತ್ತದೆ. ವಚನ ಸಾಹಿತ್ಯದಲ್ಲಿ ಸಂಗೀತ ಉಲ್ಲೇಖನ ಅನೇಕ ಕಡೆ ಬಂದಿದೆ. ಶರಣರು ವಚನಗಳಲ್ಲದೆ, ಹಾಡುಗಳನ್ನೂ ಬರೆದಿದ್ದರು. ಎನ್ನ ಕಾಯವ ದಂಡಿಗೆಯ ಮಾಡಯ್ಯ, ಬತ್ತೀಸರಾಗವ ಹಾಡಯ್ಯ, ಉರದಲೊತ್ತಿ ಬಾರಿಸುಕೂಡಲಸಂಗಮದೇವಯ್ಯ ಎಂಬ ಬಸವಣ್ಣನವರ ವಚನದಿಂದ 32 ರಾಗಗಳು ಕರ್ನಾಟಕದಲ್ಲಿ ಮುಖ್ಯವಾಗಿದ್ದುವೆಂದು ಕಾಣುತ್ತದೆ. ಹರಿಹರ ತನ್ನ ಕಾವ್ಯದಲ್ಲಿ ಒಂದು ಕಡೆ ಗೀತಗಳಂ ಪಾಡುತಂ ಎಂದು ಹೇಳಿದ್ದಾನೆ. ಶರಣರು ವಚನಗಳನ್ನು ಹಾಡುತ್ತಿದ್ದ ರೆನ್ನಬಹುದು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಬತ್ತಲೇಶ್ವರ ಮುಂತಾದ ಶರಣಶರಣೆಯರೂ ಪ್ರೌಢದೇವರಾಯನ ಕಾಲದಲ್ಲಿದ್ದ 101 ವಿರಕ್ತರಲ್ಲಿ ಅನೇಕರು ಗುರುಬಸವ, ಕರಸ್ಥಲದ ನಾಗಿದೇವ, ನಿರ್ವಾಣಜೋಳೇಶ ಮುಂತಾದವರೂ ವಿಚಾರಪ್ರಧಾನ ವಾದ ಸಂಗೀತ ಕೃತಿಗಳನ್ನು ರಚಿಸಿದರು. ಅನಂತರದ ಯುಗದಲ್ಲಿ ರಚಿತವಾದ ಮುಖ್ಯ ಕೃತಿ ನಿಜಗುಣಶಿವಯೋಗಿಯದು. ಇವನು ತ್ರಿಪದಿ, ಸಾಂಗತ್ಯ ಮುಂತಾದ ಹಾಡುಗಳಲ್ಲಿ ತನ್ನ ಷಟ್ ಶಾಸ್ತ್ರಗಳನ್ನೆಲ್ಲಾ ರಚಿಸಿದ. ಕೈವಲ್ಯಪದ್ಧತಿಯ ಹಾಡುಗಳು ರಾಗ ತಾಳ ಸಮನ್ವಿತವಾದ ಸಂಗೀತ ಕೃತಿಗಳು, ನಾದನಾಮಕ್ರಿಯೆ, ಧನ್ಯಾಸಿ, ಶಂಕರಾಭರಣ, ಲಲಿತೆ, ದೇಶಿ ಸಾರಗ, ಸುವ್ವಾಲೆ, ಭೈರವ, ತೋಡಿ, ಕಾಂಬೋಧಿ, ಭವುಳಿ, ಕುರಂಜಿ, ಮಧು ಮಾಧವಿ, ಸೌರಾಷ್ಟ್ರ, ಸಾವಂತ,ಕಲ್ಯಾಣಿ ಮೊದಲಾದ ರಾಗಗಳಲ್ಲಿರುವ ಭಾವಪ್ರಧಾನವಾದ ನಾದಮಾಧುರ್ಯ ಮತ್ತು ಪದವಿನ್ಯಾಸದಿಂದ ಕೂಡಿದ ಸಂಗೀತ ಸಾಹಿತ್ಯಗಳ ಸಮನ್ವಯವುಳ್ಳ ಶ್ರೇಷ್ಠ ಕೃತಿಗಳು ಇದರಲ್ಲಿವೆ.

ಅಲ್ಲಿಂದ ಮುಂದೆ ದಾಸಸಾಹಿತ್ಯ ಒಂದು ಹೊಸ ಶಕೆಯನ್ನು ಆರಂಭಿಸಿತು. ಹರಿದಾಸ ಸಾಹಿತ್ಯದ ಆದ್ಯಾಚಾರ್ಯರಾದ ನರಹರಿತೀರ್ಥರು ರಘುಪತಿ ಎಂಬ ಅಂಕಿತದಲ್ಲಿ ಕನ್ನಡದ ಹಾಡುಗಳನ್ನು ರಚಿಸಿದರು. ಶ್ರೀಪಾದರಾಯರು ಕನ್ನಡದಲ್ಲಿ ಅನೇಕ ಸುಳಾದಿಗಳನ್ನೂ ದೇವರ ನಾಮಗಳನ್ನೂ ರಂಗವಿಠಲ ಮುದ್ರಿಕೆಯಿಂದ ರಚಿಸಿದ್ದಾರೆ. ಇವರು ಸುಳಾದಿಗಳ ಆದ್ಯಪ್ರವರ್ತಕರು. ಇವರ ಶಿಷ್ಯರಾದ ವ್ಯಾಸರಾಯರು ಹೇರಳವಾಗಿ ದೇವರ ನಾಮಗಳನ್ನೂ ಸುಳಾದಿಗಳನ್ನೂ ಶ್ರೀ ಕೃಷ್ಣ ಮುದ್ರಿಕೆಯಿಂದ ರಚಿಸಿ, ತಮ್ಮ ಶಿಷ್ಯರುಗಳಾದ ಪುರಂದರದಾಸ, ಕನಕದಾಸ, ವಾದಿರಾಜ ಇವರಿಗೆ ಸಂಗೀತ ಕೃತಿಗಳ ರಚನೆಯಲ್ಲಿ ಮಾರ್ಗ ದರ್ಶಕರಾದರು. ಅನಂತರಕಾಲದಲ್ಲಿ ವಿಜಯದಾಸರು, ಗೋಪಾಲದಾಸರು, ರಾಘವೇಂದ್ರ ಸ್ವಾಮಿಗಳು, ಮೋಹನದಾಸರು ಮತ್ತು ಜಗನ್ನಾಥದಾಸರೇ ಮುಂತಾದವರು ದಾಸಸಾಹಿತ್ಯವನ್ನು ಬೆಳೆಸಿದರು. ಈ ಕಾಲಕ್ಕೆ ಅನೇಕ ರಾಗಗಳನ್ನು ಬಳಸಿಕೊಂಡು ವೈವಿಧ್ಯಮಯವೂ ಶಾಸ್ತ್ರೀಯವೂ ಆದ ಮಾರ್ಗದಲ್ಲಿ ಬೆಳೆದು ಬಂದ ಸಂಗೀತವನ್ನು ಅತ್ಯಂತ ಜನಪ್ರಿಯವಾಗಿ ಈ ಹರಿದಾಸರು ಪರಿವರ್ತಿಸಿದರು.

ಹರಿದಾಸರಲ್ಲಿ ಬಹು ಮುಖ್ಯರಾದವರು ಅಪಾರ ಸಂಖ್ಯೆಯ ಕೀರ್ತನೆಗಳನ್ನು ರಚಿಸಿರುವ ಪುರಂದರದಾಸರು. ಇವರು ಸಂಗೀತದ ಅಭ್ಯಾಸಕ್ಕೆ ಒಂದು ಹೊಸ ಹಾದಿಯನ್ನು ಹಾಕಿಕೊಟ್ಟು, ಕರ್ನಾಟಕ ಸಂಗೀತವನ್ನು ಕಲಿಯಲು ವೈಜ್ಞಾನಿಕವೂ ವ್ಯವಸ್ಥಿತವೂ ಆದ ಪದ್ಧತಿಯನ್ನು ರೂಪಿಸಿದರು. ಸರಳೆ, ಜಂಟಿವರಸೆ, ಅಲಂಕಾರಗಳನ್ನು ಮಾಯಾಮಾಳವಗೌಳ ರಾಗದಲ್ಲೂ ಸುಳಾದಿ ಸಪ್ತ ತಾಳಗಳನ್ನು ಅಳವಡಿಸಿ ಮಲಹರಿ ರಾಗದಲ್ಲಿ ಪಿಳ್ಳಾರಿ ಗೀತಗಳನ್ನೂ ರಚಿಸಿದರು. ಅನೇಕ ಜನಪದ ಸಂಗೀತದ ಮಟ್ಟುಗಳಿಗೆ ಶಾಸ್ತ್ರೀಯವಾದ ರಾಗಗಳ ಸ್ವರೂಪ ಕೊಟ್ಟರು. ತುತ್ತುರುತುರೆಂದು, ನಳಿನಜಾಂಡ – ಎಂಬ ಕೀರ್ತನೆಗಳಿಂದ 12ನೆಯ ಶತಮಾನದಿಂದಲೂ ಬೆಳೆದುಬಂದಿದ್ದ ಬತ್ತೀಸ ರಾಗಗಳಲ್ಲಿ ಹಾಡಿದ್ದಾರೆಂದು ತಿಳಿದುಬರುತ್ತದೆ. ಅಲ್ಲದೆ ಅನೇಕ ಸುಳಾದಿ ಉಗಾಭೋಗಗಳನ್ನೂ ರಚಿಸಿದರು.

ಮಾಯಾಮಾಳವಗೌಳವನ್ನು ಶುದ್ಧಮೇಳವೆಂದು ಗ್ರಹಿಸಿದುದೇ ಕರ್ನಾಟಕ ಸಂಗೀತದ ಇತಿಹಾಸದಲ್ಲಿ ದೊಡ್ಡದೊಂದು ಕ್ರಾಂತಿಯಾಗಿ ಪರಿಣಮಿಸಿತು ಎನ್ನಬಹುದು. ಸಮಾನಾಂತರ ಶ್ರುತಿಯ ಈ ರಾಗದ ಹಿರಿಮೆಯನ್ನು ಅರ್ಥಮಾಡಿಕೊಂಡವರಲ್ಲಿ ಪುರಂದರದಾಸರು

ಮೊದಲಿಗರು. ಅಭ್ಯಾಸಿಗಳ ಅನುಕೂಲಕ್ಕೆಂದು ಇವರು ಮಾಯಾಮಾಳವಗೌಳ ಮೇಳದಿಂದ ಜನ್ಯವಾದ ಮಲಹರಿಯಲ್ಲಿ ಗೀತಗಳನ್ನು ರಚಿಸಿದ್ದಾರೆ. ಈ ರಾಗದಲ್ಲಿ ಪುರಂದರದಾಸರು ರಚಿಸಿದ ಲಕ್ಷ್ಯಗೀತಗಳಲ್ಲಿ ಶ್ರೀಗಣನಾಥ ಸಿಂಧುರ ವರ್ಣ, ಕುಂದಗೌರ ಗೌರೀವರ, ಕೆರೆಯ ನೀರನು ಕೆರೆಗೆ ಚೆಲ್ಲಿ ಇವು ಇಂದಿಗೂ ಉಳಿದುಬಂದಿವೆಯಲ್ಲದೆ ಎಳೆಯರಿಗೆ ಸಂಗೀತಾಭ್ಯಾಸವನ್ನು ಮಾಡಿಸುವಲ್ಲಿ ಇವುಗಳಿಂದ ಪ್ರಾರಂಭ ಮಾಡುವ ರೂಢಿ ಇದೆ. ಪುರಂದರ ಕೊಡುಗೆ ದಕ್ಷಿಣಾದಿ ಸಂಗೀತದ ಭದ್ರ ಬುನಾದಿಯಾಯಿತು. ಇವರು ಕರ್ಣಾಟಕ ಸಂಗೀತ ಪಿತಾಮಹರಾದರು.

ಹರಿದಾಸರೆಲ್ಲರೂ ಜನರ ಭಾಷೆಗೆ ಹೊಂದುವಂತೆ ವಾಕ್ಯರಚನೆ ಮತ್ತು ಪದಗಳನ್ನು ಮಾರ್ಪಡಿಸಿ ಒಂದು ಹೊಸ ಶೈಲಿಯನ್ನೇ ಸೃಷ್ಟಿಸಿದರು. ಪ್ರಾಸ, ಅನುಪ್ರಾಸ, ಯಮಕ, ಅಲಂಕಾರಗಳು, ದ್ವಿತೀಯಾಕ್ಷರ ಮತ್ತು ಅಂತ್ಯಪ್ರಾಸ, ಉಪಮಾನ, ರೂಪಕ, ಸ್ವಭಾವೋಕ್ತಿ, ನಿಂದಾಸ್ತುತಿ, ಜನಜೀವನಕ್ಕೆ ಸಂಬಂಧಿಸಿದ ಅನುಭವಸಿದ್ಧವಾದ ಉಪಮಾನಗಳನ್ನು ಬಳಸಿ ಕೃತಿಗಳನ್ನು ರಚಿಸಿದ್ದಾರೆ. ಇವರೆಲ್ಲರೂ ಗೀತ, ವಾದ್ಯ, ನೃತ್ಯ ಈ ಮೂರರಲ್ಲೂ ಪರಿಣತರಾಗಿದ್ದರು. ಹರಿದಾಸರ ಕೀರ್ತನೆಗಳೆಲ್ಲವೂ ಸುಂದರವಾಗಿ ಲಯಬದ್ಧವಾಗಿವೆ; ವೈರಾಗ್ಯ, ಶಾಂತಿ, ಭಕ್ತಿರಸಗಳಿಂದ ತುಂಬಿದ ರಚನೆಗಳಾಗಿವೆ. ಈ ರೀತಿ ದಾಸರ ಕಾಲದಿಂದ ಈಚೆಗೆ ಕರ್ಣಾಟಕ ಸಂಗೀತ ಒಂದು ಖಚಿತ ರೂಪವನ್ನು ಪಡೆಯಿತು. ಪುರಂದರದಾಸರು ಮುಂದಿನ ವಾಗ್ಗೇಯಕಾರರಿಗೆ ಗುರುಗಳಾಗಿ ಪರಿಣಮಿಸಿದರು. ಕರ್ಣಾಟಕ ಸಂಗೀತದ ರತ್ನಪ್ರಾಯರಾದ ತ್ಯಾಗರಾಜ ಸ್ವಾಮಿಗಳು ಇವರನ್ನು ಗುರುಗಳೆಂದು ಅಂಗೀಕರಿಸಿ ಸ್ತುತಿಸಿರುವುದಲ್ಲದೆ ಇವರ ಕೃತಿಗಳಿಂದ ಪ್ರಭಾವಿತರಾಗಿ ಕೃತಿಗಳನ್ನು ರಚಿಸಿದರು.

ನಿಜಗುಣಶಿವಯೋಗಿ, ಮಾಗಡಿ ಕೆಂಪೇಗೌಡ ಇಂತಹ ಕೆಲವರು ದಾಸಪಂರಪೆಯ ಹೊರಗಿದ್ದು ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ.

ಸಂಗೀತ–ಸಾಹಿತ್ಯ ರಚನೆ 18ನೆಯ ಶತಮಾನದಿಂದ ಮುಂದಿನ ಶತಮಾನಗಳಲ್ಲೂ ಅನೇಕ ಹರಿದಾಸರಿಂದ ವಿಪುಲವಾಗಿ ನಡೆಯಿತು. ಅಂಥ ವಾಗ್ಗೇಯಕಾರರಲ್ಲಿ ಪ್ರತಿಯೊಬ್ಬರ ರಚನೆಯಲ್ಲೂ ಸಂಗೀತ ದೃಷ್ಟಿಯಿಂದ ಅವರದೇ ಆದ ವೈಶಿಷ್ಟ್ಯವಿದೆ. ವಿಜಯದಾಸರ (18ನೆಯ ಶತಮಾನ) ಸಮಕಾಲೀನರಾದ ಪ್ರಸನ್ನವೆಂಕಟದಾಸರು ಭಾಗವತ ಮತ್ತು ಜೋಗುಳ ಪದಗಳನ್ನು ರಚಿಸಿದರು. ಅವರ ಸೋದರರು ಹಯವದನವಿಠಲ ಎಂಬ ಅಂಕಿತದಲ್ಲಿ ಕೃತಿಗಳನ್ನು ರಚಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ ಸಮಕಾಲೀನರೆಂದು ಹೇಳಲಾದ ಸುರಪುರದ ಆನಂದದಾಸರು ಸಂಗೀತಮಾಧುರ್ಯ, ಸಾಹಿತ್ಯ ಸೌಂದರ್ಯಗಳ ಮಧುರ ಮಿಲನವಿರುವ ಕೃತಿಗಳನ್ನು ರಚಿಸಿ ಸುರಪುರದ ಶೈಲಿಯನ್ನು ಸ್ಥಾಪಿಸಿದರು. ಮಹಿಪತಿದಾಸರು ಮತ್ತು ಅಣ್ಣಾವಧೂತರು ಹಲವು ಸುಂದರವಾದ ಕೃತಿಗಳನ್ನು ರಚಿಸಿದರು. ಮಹಿಪತಿದಾಸರ ಮಗ ಕೃಷ್ಣರಾಯರೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. 20ನೆಯ ಶತಮಾನದ ವರೆಗಿನ ಹರಿದಾಸ ಕೃತಿಗಳ ಸಂಪತ್ತನ್ನು ಹೆಚ್ಚಿಸಿದವರಲ್ಲಿ ವೆಂಕಟವಿಠಲ, ವೈಕುಂಠಕೇಶವ, ಅಚ್ಯುತವಿಠಲ, ವಾಸುದೇವ ವಿಠಲ, ಕಮಲೇಶವಿಠಲ, ಭೀಮೇಶವಿಠಲ, ಜನಾರ್ದನವಿಠಲ, ಶ್ರೀಪತಿವಿಠಲ, ರಘುನಾಥವಿಠಲ, ಪ್ರಾಣೇಶವಿಠಲ, ಶ್ರೀವಿಠಲ ಪ್ರಸನ್ನವೆಂಕಟಪತಿ, ಅನಂತಾದ್ರೀಶ, ಅಭಿನವಜನಾರ್ದನವಿಠಲ, ಅಚಲಾನಂದವಿಠಲ ಮತ್ತು ವೆಂಕಟೇಶ್ವರ ಎಂಬ ಹರಿದಾಸರು ಮುಖ್ಯರು. ಹಾಗೆಯೇ ವ್ಯಾಸರಾಯರ ಶಿಷ್ಯಪರಂಪರೆಗೆ ಸೇರಿದ ವಿದ್ಯಾಕಾಂತರು ಭಾವರಾಗಯುಕ್ತವಾದ ದೇವರನಾಮಗಳನ್ನು ರಚಿಸಿದ್ದಾರೆ. ಮಂಗಳೂರಿನ ತುಪಾಕಿ ವೆಂಕಟರಮಣಾಚಾರ್ಯ, ಸುಬ್ಬಣ್ಣಾಚಾರ್ಯ ಮತ್ತು ರಾಮಾಚಾರ್ಯರ ದೇವರನಾಮಗಳು, ಬಾಗೇಪಲ್ಲಿಯ ಗುರುರಾಮವಿಠಲರ ಕೃತಿಗಳು, ಸೋಸಲೆ ವಿದ್ಯಾರತ್ನಾಕರ (ನರಹರಿವಿಠಲ) ಮತ್ತುವ್ಯಾಸರಾಯರ ಮಠಾಧೀಶ ಶ್ರೀ ವಿದ್ಯಾಪ್ರಸನ್ನತೀರ್ಥರ ದೇವರನಾಮಗಳೂ ಸುಂದರವಾದುವು. ಬೆಂಗಳೂರಿನ ಸರ್ಪಭೂಷಣ ಶಿವಯೋಗಿಗಳು ರಾಗಭಾವದಿಂದ ಕೃತಿಗಳನ್ನು ರಚಿಸಿದ್ದಾರೆ.

19 ಮತ್ತು 20ನೆಯ ಶತಮಾನಗಳಲ್ಲಿ ಮೈಸೂರು ರಾಜಮನೆತನದ ವಿಶೇಷ ಪ್ರೋತ್ಸಾಹ, ಪೋಷಣೆಗಳಿಂದ ಅನೇಕ ವಾಗ್ಗೇಯಕಾರರು ಸಂಗೀತಸಂಪತ್ತನ್ನು ಹೆಚ್ಚಿಸಿದ್ದಾರೆ. ಮೈಸೂರು ಸದಾಶಿವರಾಯರು, ವೀಣೆ ಶೇಷಣ್ಣನವರು, ಮೂಗೂರು ಸುಬ್ಬಣ್ಣನವರು, ವೀಣೆ ಸುಬ್ಬಣ್ಣನವರು, ಕರಿಗಿರಿರಾಯರು, ಬಿಡಾರಂ ಕೃಷ್ಣಪ್ಪನವರು ಅನೇಕ ಬಗೆಯ ಸಂಗೀತ ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ವಾಸುದೇವಾ ಚಾರ್ಯರು 300ಕ್ಕಿಂತಲೂ ಹೆಚ್ಚು ಕೃತಿಗಳನ್ನು ವಾಸುದೇವ ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ಮುತ್ತಯ್ಯ ಭಾಗವತರು 108 ರಾಗಗಳಲ್ಲಿ ಚಾಮುಂಡೇಶ್ವರಿಯ ಮೇಲೆ ಸಾಮಾನ್ಯವಾಗಿ ಬಳಕೆಯಲ್ಲಿಲ್ಲದ ಅನೇಕ ಜನ್ಯರಾಗಗಳಲ್ಲಿ 108 ಕನ್ನಡದ ಕೀರ್ತನೆಗಳನ್ನು ಹರಿಕೇಶ ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ದೇವೋತ್ತಮ ಜೋಯಿಸರು ಕನ್ನಡ ಹಾಡುಗಳನ್ನು ರಚಿಸಿದವರಲ್ಲಿ ಮುಖ್ಯರು. ಟಿ.ಚೌಡಯ್ಯನವರು ಅನೇಕ ತಿಲ್ಲಾನಗಳನ್ನೂ ಕೃತಿಗಳನ್ನೂ ತ್ರಿಮಕುಟ ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ಜಯಚಾಮರಾಜ ಒಡೆಯರು ಸ್ವಯಂ ಸಂಗೀತರಸಿಕರು ಮತ್ತು ವಾಗ್ಗೇಯ ಕಾರರು. ಶ್ರೀವಿದ್ಯಾ ಎಂಬ ಅಂಕಿತದಲ್ಲಿ ಹಲವು ಶ್ರೇಷವಿವಾದ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿಯವರೆಗೆ ಕರ್ನಾಟಕದಲ್ಲಿ ಹಲವಾರು ಕೃತಿಗಳ ರಚನೆಯಿಂದ ಕರ್ಣಾಟಕ ಸಂಗೀತ ಸಾಹಿತ್ಯ ವಿಪುಲವಾಗಿ ವೈಶಿಷ್ಟ್ಯಪೂರ್ಣವಾಗಿ ಬೆಳೆದುಬಂದಿದೆ.

**ಕಲಾವಿದರು:** ಹಿಂದೆಯೇ ವಿವರಿಸಿರುವ ಅನೇಕ ಸಾಹಿತ್ಯ ಮತ್ತು ಶಾಸನಗಳ ಉಲ್ಲೇಖದಿಂದ ಕಾಲಕಾಲದಲ್ಲಿ ಅನೇಕ ಗಾಯನ ನಿಪುಣರಿದ್ದಿರಬೇಕೆಂಬುದು ಸ್ಪಷ್ಟವೇ ಇದೆ. ಕರ್ನಾಟಕದ ಸಂಗೀತಗಾರರಲ್ಲಿ ವಿಶೇಷ ಉಲ್ಲೇಖಕ್ಕೆ ಅರ್ಹನಾದವನು ಗೋಪಾಲನಾಯಕ. ಸ್ವತಃ ಶಾಸ್ತ್ರಜ್ಞನಷ್ಟೇ ಅಲ್ಲದೆ ಗಾಯನ ಚತುರನೂ ಆಗಿದ್ದ ಈತ ಉತ್ತರ ಭಾರತದಲ್ಲೂ ತನ್ನ ಕಲಾಚಾತುರ್ಯವನ್ನು ಮೆರೆಸಿ ಅಲ್ಲಿ ರಾಜಪೋಷಣೆಯನ್ನೂ ಪ್ರಸಿದ್ಧ ಗಾಯಕನಾಗಿದ್ದ ಅಮೀರ್ ಖುಸ್ರುವಿನಿಂದ ಹೊಗಳಿಕೆಯನ್ನೂ ಗಳಿಸಿದ್ದ. ಪುರಂದರದಾಸರೇ ಮೊದಲಾದ ದಾಸಕೂಟದವರು ಉತ್ತಮ ಗಾಯಕರೂ ಆಗಿದ್ದರು. ಅರಸರಿಂದ ದೊರೆತ ಪ್ರೋತ್ಸಾಹದಿಂದಾಗಿ ಅನೇಕ ಸಂಗೀತ ವಿದ್ವಾಂಸರು ಮೈಸೂರು ಆಸ್ಥಾನದಲ್ಲಿದ್ದರು. ಸುಪ್ರಸಿದ್ಧ ವೀಣೆ ಕುಪ್ಪಯ್ಯನವರ ಮೊಮ್ಮಕ್ಕಳಾದ ವೀಣೆ ವೆಂಕಟಸುಬ್ಬಯ್ಯನವರನ್ನು ದಿವಾನ್ ಪೂರ್ಣಯ್ಯನವರು ಮೈಸೂರಿಗೆ ಆಹ್ವಾನಿಸಿದರೆಂದೂ ಮುಮ್ಮಡಿ ಕೃಷ್ಣರಾಜ ಒಡೆಯರು ಅವರ ಸಂಗೀತ ಸಾಮರ್ಥ್ಯಕ್ಕೆ ಮೆಚ್ಚಿ ಬಹುಮಾನಿಸಿದರೆಂದೂ ತಿಳಿದುಬರುತ್ತದೆ.

19ನೆಯ ಶತಮಾನದ ಅಂತ್ಯ ಮತ್ತು 20ನೆಯ ಶತಮಾನದ ಮೊದಲ ಭಾಗದಲ್ಲಿದ್ದ ಕರ್ಣಾಟಕ ಸಂಗೀತ ವಿದ್ವಾಂಸರಲ್ಲಿ ಬಿಡಾರಂ ಕೃಷ್ಣಪ್ಪ ಸಂಗೀತರಂಗದಲ್ಲಿ ಪ್ರಖ್ಯಾತಿಪಡೆದವರು. ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ಇವರು ಕನ್ನಡ ದೇವರನಾಮಗಳಲ್ಲೆ ಸಂಗೀತ ಕಛೇರಿಯನ್ನು ಮಾಡುವ ಪದ್ಧತಿಯನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದರು. ಇವರಿಗೆ ತ್ರಿಸ್ಥಾಯಿಯಲ್ಲಿ ನುಡಿಯುವ ಅದ್ಭುತ ಶಾರೀರ ಸಂಪತ್ತಿದ್ದಿತು. ಇವರ ಸಂಗೀತ ಪ್ರಮುಖವಾಗಿ ಮನೋಭಾವದ, ಸ್ವಾನುಭವದ ಸಂಗೀತವಾಗಿತ್ತು. ಕಾಲಕ್ರಮದಲ್ಲಿ ಇವರ ಗಾನಕೀರ್ತಿ ದಕ್ಷಿಣ ದೇಶದಲ್ಲೆಲ್ಲಾ ಹರಡಿತು. ಮೈಸೂರು ವಾಸುದೇವಾಚಾರ್ಯರು ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ಮತ್ತೊಬ್ಬ ವಿದ್ವನ್ಮಣಿಗಳು. ಸಂಸ್ಕೃತ ಶ್ಲೋಕಗಳನ್ನು ಹಾಡುವುದರಲ್ಲಿ ತಾನ, ಪಲ್ಲವಿಗಳನ್ನು ಹಾಡುವುದರಲ್ಲಿ ಅದ್ವಿತೀಯರು. ಇವರ ಶಿಷ್ಯರಾದ ವಿದ್ವಾನ್ ಚನ್ನಕೇಶವಯ್ಯನವರು ಆಸ್ಥಾನ ವಿದ್ವಾಂಸರಾಗಿದ್ದರು. ಇದೇ ಆಸ್ಥಾನ ವಿದ್ವಾಂಸರಾಗಿದ್ದು ಮೈಸೂರಿನ ಕೀರ್ತಿಯನ್ನು ದೇಶಾದ್ಯಂತ ಹರಡಿದ ಮತ್ತೊಬ್ಬ ವಿದ್ವಾಂಸರು ಟಿ.ಚೌಡಯ್ಯನವರು. **(ವಿ.ಎಸ್.ಎಸ್.;ಎಸ್.ಕೆ.ಆರ್.;ಎಲ್.ಆರ್.)**

**ಸ್ವರೂಪವಿಧಾನ:** ಕರ್ಣಾಟಕ ಸಂಗೀತ ದೈವಿಕ ಹಿನ್ನೆಲೆಯಲ್ಲಿ ಸುಪುಷ್ಟವಾಗಿ ಬೆಳೆದು ಬಂದಿದೆ. ನಾದಬ್ರಹ್ಮೋಪಾಸನೆಯೇ ಇದರ ಅಂತಿಮ ಗುರಿ. ಕರ್ಣಾಟಕ ಸಂಗೀತಶಾಸ್ತ್ರಜ್ಞರ ಪ್ರಕಾರ ಸಂಗೀತದ ಸರ್ವಸ್ವವೂ ನಾದವೇ. ಸಂಗೀತರತ್ನಾಕರದ ಪ್ರಕಾರ ನಾದದ ವಿಶ್ಲೇಷಣೆ ಹೀಗಿದೆ: ನ ಎಂದರೆ ಪ್ರಾಣ, ದ ಎಂದರೆ ಅನಲ ಅಥವಾ ಅಗ್ನಿ; ಈ ಎರಡರ ಸಂಯೋಗದಿಂದ ಆದದ್ದು ನಾದ. ಮನುಷ್ಯನಲ್ಲಿ ನಾಭಿಯಿಂದ ಅತಿ ಸೂಕ್ಷ್ಮ, ಹೃದಯದಿಂದ ಸೂಕ್ಷ್ಮ, ಕಂಠದಿಂದಪುಷ್ಟ, ಮೂರ್ಧನ್ಯದಿಂದ ಅಪುಷ್ಟ, ಮುಖದಿಂದ ಕೃತ್ರಿಮ ಎಂಬ ನಾದಗಳು ಉತ್ಪತ್ತಿಯಾಗುತ್ತವೆ. ವ್ಯವಹಾರದಲ್ಲಿ ಹೃದಯದಿಂದೆದ್ದ ಮಂದ್ರ,ಮಧ್ಯ, ತಾರ ಇವನ್ನು ಮಾತ್ರ ಪರಿಗಣಿಸುತ್ತಾರೆ. ಇವೇ ಸ್ಥಾಯಿಗಳು, ಸ್ಥಾಯಿಗಳಲ್ಲಿ ಶ್ರುತಿಗಳಿವೆ. ಇಂಥ ಶ್ರುತಿಗಳ ಸಂಖ್ಯೆ ಇಪ್ಪತ್ತೆರಡು. ಇವನ್ನು ಐದು ಭಾಗಗಳಲ್ಲಿ ಅಳವಡಿಸಲಾಗಿದೆ. (ಶಾರ್ಙ್ಗದೇವ), ತೀವ್ರಾ, ರೌದ್ರೀ, ವಜ್ರಿಕಾ, ಉಗ್ರಾ– ಈ ನಾಲ್ಕು ದೀಪ್ತಾ ಎಂಬ ಜಾತಿಗೆ ಸೇರಿದವು. ಕುಮುದ್ವತೀ, ಕ್ರೋಧೀ, ಪ್ರಸಾರಿಣೀ, ಸಂದೀಪಿನೀ, ರೋಹಿಣೀ– ಈ ಐದು ಆಯತಾ ಜಾತಿ, ದಯಾವತೀ, ಆಲಾಪಿನೀ, ಮದಂತೀ– ಈ ಮೂರು ಕರುಣಾ ಎಂಬ ಜಾತಿ; ಮಂದಾ, ರತಿಕಾ, ಪ್ರೀತಿ, ಕ್ಷಿತಿ– ಈ ನಾಲ್ಕು ಮೃದು ಎಂಬ ಜಾತಿ; ಛಂದೋವತಿ, ರಂಜಿನೀ, ಮಾರ್ಜನಿ, ರಕ್ತಾ,ರಮ್ಯಾ, ಕ್ಷೋಭಿಣೀ ಈ ಆರು ಮಧ್ಯಾ ಎಂಬ ಜಾತಿ.

ಈ ಶ್ರುತಿಗಳ ನಡುವೆ ಅನುರಣನದಿಂದ ಯುಕ್ತವಾದ, ಸ್ಫುಟವಾದ, ನಿರ್ದಿಷ್ಟವಾದ ಏಳು ಸ್ವರಗಳನ್ನು ನಿಲ್ಲಿಸುತ್ತಾರೆ. ಇವುಗಳ ನಡುವೆ ಇರುವ ವ್ಯತ್ಯಾಸ (ರೇಷ್ಯೋ) ಸ್ಪಂದನ ಪರಿಮಾಣದಲ್ಲಿ. ಇವನ್ನು ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ ಎನ್ನುತ್ತಾರೆ. ಇಪ್ಪತ್ತೆರಡು ಶ್ರುತಿಗಳ ನಡುವೆ ಈ ಏಳು ಸ್ವರಗಳ ಸ್ಥಾನ ಈ ರೀತಿ – 1, 2, 3, 4 ಷಡ್ಜ; 5, 6, 7 ಋಷಭ; 8, 9 ಗಾಂಧಾರ; 10, 11, 12, 13 ಮಧ್ಯಮ; 14, 15, 16, 17 ಪಂಚಮ; 18, 19, 20 ಧೈವತ; 21, 22 ನಿಷಾದ. ಆಯಾ ಸ್ವರದ ಸಂಗಡಲೇ ಬಂದ ಶ್ರುತಿಗೆ ನಿಯತಶ್ರುತಿ ಎಂದು ಹೆಸರು.

ಈ ಏಳು ಸ್ವರಗಳು ಶುದ್ಧ ಮತ್ತು ಪ್ರಕೃತಿ ಸ್ವರಗಳು. ಸ, ರಿ, ಗ, ಮ, ಪ, ಧ, ನಿ ಎಂದು ಇವುಗಳ ನಿರ್ದೇಶ. ನಿಯತಶ್ರುತಿಯೇ ಶುದ್ಧಸ್ವರದ ಉಗಮಸ್ಥಾನ. ಈ ಶುದ್ಧಸ್ವರಗಳಲ್ಲದೆ ವಿಕೃತಸ್ವರಗಳೂ ಇವೆ. ಶಾರ್ಙ್ಗದೇವನ ಪ್ರಕಾರ ವಿಕೃತ ಸ್ವರಗಳ ಸಂಖ್ಯೆ 12, ಸಂಗೀತಪಾರಿಜಾತದ ಪ್ರಕಾರ 22, ಸೋಮನಾಥನ ರಾಗವಿಬೋಧದ ಪ್ರಕಾರ 10, ರಾಮಾಮಾತ್ಯನ ಸ್ವರ ಮೇಳಕಳಾನಿಧಿಯ ಪ್ರಕಾರ 11, ವೆಂಕಟಮಖಿಯ ಚತುರ್ದಂಡಿ ಪ್ರಕಾಶಿಕೆಯ ಪ್ರಕಾರ 9, ಕಡೆಯ ಸಂಖ್ಯೆಯೇ ಇಂದು ವಾಡಿಕೆಯಲ್ಲಿದೆ. ಈ ವಿಕೃತ ಸ್ವರಗಳು ಶ್ರುತಿಯ ಹೆಚ್ಚಳ ಅಥವಾ ತಗ್ಗುಗಳಿಂದಾದವು. ಅವುಗಳು ಯಾವುವೆಂದರೆ – ಕೋಮಲ ಅಥವಾ ಚತುಃಶ್ರುತಿ ಋಷಭ, ಷಟ್ಶ್ರುತಿ ಋಷಭ, ಸಾಧಾರಣ ಗಾಂಧಾರ,

ಅಂತರ ಗಾಂಧಾರ, ಪ್ರತಿ ಮಧ್ಯಮ, ಚತುಃಶ್ರುತಿ ಧೈವತ, ಷಟ್ಶ್ರುತಿಧೈವತ, ಕೈಶಿಕೀ ನಿಷಾದ, ಕಾಕಲೀ ನಿಷಾದ. ಏಳು ಸ್ವರಗಳನ್ನು ಸೇರಿಸಿ ನಿರ್ದೇಶಿಸಬೇಕಾದರೆ ಸ,ರ,ರಿ, ರು, ಗ, ಗಿ, ಗು,ಮ, ಮಿ, ಪ, ಧ, ಧಿ, ಧು, ನ, ನಿ, ನು ಎನ್ನುತ್ತಾರೆ. ಸ ಮತ್ತು ಪ ಗಳಲ್ಲಿ ವಿಕಾರವೇ ಇಲ್ಲ; ಇವು ಇನಿತ್ಯ ಶುದ್ಧ. ರಿ ಯಲ್ಲಿ ಮೂರು, ಗ ದಲ್ಲಿ ಮೂರು, ಮ ದಲ್ಲಿ ಎರಡು,ಧದಲ್ಲಿ ಮೂರು, ನಿ ಯಲ್ಲಿ ಮೂರು – ಹೀಗೆ ವಿಕಾರಗಳಿವೆ.

ಈ ಸ್ವರಗಳ ಸಮೂಹ ಗ್ರಾಮ. ಇವು ಮೂರು ವಿಧ ಷಡ್ಜಗ್ರಾಮ, ಮಧ್ಯಮ ಗ್ರಾಮ, ಗಾಂಧಾರ ಗ್ರಾಮ. ಪ್ರತಿ ಗ್ರಾಮದಲ್ಲೂ 7 ಮೂರ್ಛನೆಗಳಿರುತ್ತವೆ. ಮೂರ್ಛನೆಯೆಂದರೆ ಅನುಕ್ರಮವಾಗಿ ಏಳು ಸ್ವರಗಳ ಆರೋಹಣ ಮತ್ತು ಅವರೋಹಣ. ಗಾಂಧಾರ ಗ್ರಾಮದ ಏಳುಮೂರ್ಛನೆಗಳಿಗೆ ನಂದ, ವಿಲಾಸ, ಸುಮುಖೀ, ಚಿತ್ರ, ಚಿತ್ರವತೀ, ಸುಖ, ಆಲಾಪ ಎಂದು ಹೆಸರುಗಳು. ಷಡ್ಜಗ್ರಾಮದ ಮೊದಲ ಮೂರ್ಛನೆಯಲ್ಲಿ ತಾರಸ್ಥಾಯಿಯ ಒಂದು ಸ್ವರ ಮುಟ್ಟುತ್ತೇವೆ, ಎರಡನೆಯ ಮೂರ್ಛನೆಯಲ್ಲಿ ಎರಡು ಇತ್ಯಾದಿ. ಮಧ್ಯಮ ಗ್ರಾಮದ ಮೊದಲ ಮೂರ್ಛನೆಯಲ್ಲಿ ಅತಿತಾರದ ಒಂದು ಸ್ವರ, ಎರಡನೆಯ ಮೂರ್ಛನೆಯಲ್ಲಿ ಎರಡು ಹೀಗೆ ಮುಟ್ಟುತ್ತೇವೆ. ಹಾಗೆಯೇ ಗಾಂಧಾರ ಗ್ರಾಮದಲ್ಲಿ ಅತಿ ತಾರಕ್ಕಿಂತ ತಾರತರವಾದ ಸ್ವರ ಮುಟ್ಟಬೇಕು. ಆದರೆ ಇದು ಮಾನವ ಕಂಠಕ್ಕೆ ಅಸಾಧ್ಯವಾದುದರಿಂದ ದೇವಗಾನವೆಂದು ಇದನ್ನು ಬಿಟ್ಟಿದ್ದಾರೆ. ಅಂತೂ ಮೂರು ಗ್ರಾಮಗಳಿಂದ ಒಟ್ಟು 21 ಮೂರ್ಛನೆಗಳು. ಈ ಸಪ್ತಸ್ವರಗಳು, ಏಕವಿಂಶತಿ ಮೂರ್ಛನೆಗಳು, ಅಷ್ಟಾದಶ ಶ್ರುತಿಗಳು –ಇವಕ್ಕೆ ಒಟ್ಟಾರೆಯಾಗಿ ಸ್ವರಮಂಡಲ ಎಂಬ ಹೆಸರಿದೆ.

ಸ್ವರಗಳನ್ನು ಹಾಡುವುದಕ್ಕೆ ವರ್ಣ ಎಂದು ಹೆಸರು. ಸ್ವರಗಳನ್ನು ನಾಲ್ಕು ಬಗೆಯಾಗಿ ಹಾಡಬಹುದು. ಒಂದೇ ಸ್ವರವನ್ನು ವಿಳಂಬಕಾಲದಲ್ಲಿ ಮೂರಾವರ್ತಿ ಉಚ್ಚರಿಸುವುದು ಸ್ಥಾಯೀ (ಸಾ–ಸಾ–ಸಾ). ಕ್ರಮ ಹಿಡಿದು ಒಂದು ಸ್ವರದಿಂದ ಮೇಲಿನ ಸ್ವರಗಳನ್ನು ಹತ್ತಿದರೆ ಆರೋಹಿ (ರಿ ಗ ಮ ಪ). ಹಾಗೆಯೇ ಕ್ರಮ ಹಿಡಿದು ಇಳಿದರೆ ಅವರೋಹಿ (ನಿ ಧ ಮ ಪ). ಈ ಆರೋಹಿ ಅವರೋಹಿಗಳು ಕಲಿಸಿದಂತೆ ಸ್ವರಗಳನ್ನು ಹಾಡಿದರೆ ಅದು ಸಂಚಾರಿ (ರಿ ಮ ಗ ಮ ಗ ರಿ ಸಾ).

ಇಂಥ ವರ್ಣಗಳನ್ನು ಕ್ರಮವರಿತು ಸೇರಿಸಿದರೆ ಅಲಂಕಾರವಾಗುತ್ತದೆ. ಅಲಂಕಾರವೂ ವರ್ಣದಂತೆ ಸ್ಥಾಯೀ, ಆರೋಹಿ, ಅವರೋಹಿ, ಸಂಚಾರಿ ಎಂದು ನಾಲ್ಕು ವಿಧ. ಸ್ಥಾಯ್ಯಲಂಕಾರದಲ್ಲಿ ಪ್ರಸನ್ನಾದಿ (ಸ ಸ ಸ), ಪ್ರಸನ್ನಾಂತ (ಸ ಸ ಸ), ಪ್ರಸನ್ನಾದ್ಯಂತ (ಸ ಸ ಸ), ಪ್ರಸನ್ನಮಧ್ಯ (ಸ ಸ ಸ), ಕ್ರಮರೇಚಿತ (ಸ ರಿ ಸ ಸ ಗ ಮ ಸ) ಎಂದು ಐದು ವಿಧಗಳು. ಆರೋಹ್ಯಲಂಕಾರದಲ್ಲಿ ವಿಸ್ತೀರ್ಣ (ಸಾ–ರೀ–ಗಾ–ಮಾ), ನಿಷ್ಕರ್ಷ (ಸಸ–ರಿರಿ–ಗಗ), ಪ್ರೇಂಖಿತ (ಸರೀ–ರಿಗಾ–ಗಮಾ), ಬಿಂದು (ಸಸಸರಿ–ಗಗಗಮ–ಮಮಮಪ), ಹಸಿತ (ಸಾ–ರಿರೀ–ಗಗಗಗಾ–ಮಮಮಮಾ), ಸಂಧಿಪ್ರಚ್ಛಾದನ (ಸರಿಗಾ–ಗಮಪಾ–ಪಧನೀ), ಅಕ್ಷಿಪ್ತ (ಸಗಾ–ಗಪಾ–ಪನೀ) ಎಂದೂ ಏಳು ಉಪವಿಧಗಳು. ಅವರೋಹ್ಯಾಲಂಕಾರದಲ್ಲೂ ಇದೇ ಏಳು ವಿಧಗಳು. ಆದರೆ ಸ್ವರಗಳ ಕ್ರಮ ಹಿಂದು ಮುಂದಾಗಿರುತ್ತದೆ. ಸಂಚಾರಿ ಅಲಂಕಾರದಲ್ಲಿ ಪ್ರಸಾದ (ಸರಿಸ–ರಿಗರಿ–ಗಮಗ), ಪ್ರೇಂಖ (ಸರಿರಿಸ– ರಿಗಗರಿ–ಗಮಮಗ), ರಂಜಿತ (ಸಗರಿ, ಸಗರಿಸ–ರಿಮಗ, ರಿಮಗರಿ–ಗಪಮ, ಗಪಮಗ), ಆಕ್ಷೇಪ (ಸರಿಗಾ–ರಿಗಮಾ–ಗಮಪಾ), ಪರಿವರ್ತ (ಸಗಮಾ–ರಿಮಪಾ–ಗಪಧಾ), ಕೂತಜಿ (ಸರಿ, ಸಗಸ–ರಿಗ, ರಿಮರಿ–ಗಮ, ಗಪಗ), ಉದ್ವಾಹಿತ (ಸರಿಗರಿ–ರಿಗಮಗ–ಗಮಪಮ), ಉದ್ಘಟ್ಟಿತ (ಸರಿ,ಪಮಗರಿ–ರಿಗ, ಧಪಮಗ–ಗಮ), ನಿಧಪಮ, ಹುಂಕಾರ (ಸರಿಸ–ಸರಿಗರಿಸ –ಸರಿಗಮರಿಗಸ–ಸರಿಮಪಮಗರಿಸ), ಸ್ಖಲಿತ (ಸಗರಿಮ, ಮರಿಗಸ–ರಿಮಗಪ, ಪಮಗರಿ), ಕ್ರಮ (ಸರಿ–ಸರಿಗ, ಸರಿಗಮ–ರಿಗ, ರಿಗಮ, ರಿಗಮಪ), ಶ್ಯೇನ (ಸಪಾ–ರಿಧಾ–ಗನೀ–ಮಸಾ), ಹ್ರಾದಮಾನ (ಸಗರಿಸ–ರಿಮಗರಿ–ಗಪಮಗ) ಎಂದು ಹದಿಮೂರು ಉಪವಿಧಗಳು, ಭರತ ಕಲ್ಪಲತಾ ಮಂಜರಿಯಲ್ಲಿ ತಾಲ ಮಂದ್ರ ಪ್ರಸನ್ನ (ಸರಿಗಮಗರಿ–ಸರಿಗರಿ–ಸರಿಗಮ), ಮಂದ್ರ ತಾಲಪ್ರಸನ್ನ (ಸರಿಗರಿ–ಸರಿ–ಸರಿಗಮ), ಆವರ್ತಕ (ಸರಿ–ಸರಿಗಮ–ರಿಗ–ರಿಗಮಪ), ಸಂವಿಧಾನ (ಸರಿಗಸರಿಸರಿ–ಗ–ಮಾ–ರಿಗಮರಿಗರಿಗ–ಮ–ಪಾ), ವಿಧೃತ (ಸರಿಗ–ಸರಿಗಮ–ರಿಗಮ–ರಿಗಮಪ), ವ್ಯವಲೋಪ (ಸರಿಗಾ–ಸಾರಿಗಾ–ಮಾ–ಮಾ– ರಿಗಾಮ–ರೀಗಮಾ–ಪಾ–ಪಾ), ಧಿಲ್ಲಾಸಿತ (ಸರಿಗ–ಸರಿಗಮ–ರಿಗಮ–ರಿಗಮಪ) ಎಂದು ಸಪ್ತಾಲಂಕಾರಗಳನ್ನು ಹೇಳಿದೆ.

ಕೇಳುವವರಿಗೆ ಹಿತವೆನಿಸುವಂತೆ ಸ್ವರವನ್ನು ಕಂಪಿಸುವುದಕ್ಕೆ ಗಮಕ ಎಂದು ಹೆಸರು. ಒಂದು ಸ್ವರವನ್ನು ಅರ್ಧಾಕ್ಷರ ಕಾಲ ಹಿಡಿದು ಒತ್ತುವುದು ತಿರಿಪ ಎನಿಸಿಕೊಳ್ಳುತ್ತದೆ. ಒಂದು ಸ್ವರವನ್ನು ಒಂದಕ್ಷರ ಕಾಲ ಅಲುಗಿಸುವುದು ಕಂಪಿತ (ಟ್ರಿಲ್), ಎರಡಕ್ಷರ ಕಾಲ ಅಲುಗಿಸುವುದು ಲೀನ, ನಾಲ್ಕಕ್ಷರ ಕಾಲ ಆಂದೋಲಿತ, ಹನ್ನೆರಡಕ್ಷರ ಕಾಲ ಪ್ಲಾವಿತ. ಸಸ, ರಿರಿ ಇತ್ಯಾದಿ ಜಂಟಿಸ್ವರಗಳಲ್ಲಿ ಎರಡನೆಯ ಸ್ವರವನ್ನು ಒತ್ತಿ ಬಿಡುವುದು ಆರೋಹಣದಲ್ಲಿ ಸ್ಫುರಿತ (ಡಿಫ್ಲೆಕ್ಟ್), ಅವರೋಹಣದಲ್ಲಿ ಪ್ರತ್ಯಾಘಾತ. ಒಂದು ಸ್ವರದಿಂದ ಹಿಂದಿನ ಸ್ವರಕ್ಕೆ ಸ್ವರ ಛಾಯೆಯಲ್ಲಿ ಇಳಿಯುವುದು (ಪಮ=ಪಪಮ) ಆಹತ; ವೀಣೆಯಲ್ಲಿ ಮೀಟುಹಾಕಿ ಗ ಸ್ವರವನ್ನು ಎಬ್ಬಿಸಿ, ಮೀಟು ಹಾಕದೆಯೇ ಮ ಸ್ವರವನ್ನು ಉತ್ಪತ್ತಿ ಮಾಡುವುದು ಆಹತವೆನಿಸಿಕೊಳ್ಳುತ್ತದೆ. ಒಂದು ಸ್ವರದಿಂದ ಕೆಳಗಿನ ಇನ್ನೊಂದು ಸ್ವರಕ್ಕೆ ಇಳಿಯುವಾಗ ನಡುವೆ ಇರುವ ಸ್ವರವನ್ನು ಶಬ್ದಿಸಿ ದಾಟುವುದು ಖಂಡಿಂಪು [ಮರಿ=ಮ(ಗ)ರಿ]. ಉಲ್ಲಸಿತ ಎಂಬುದಿನ್ನೊಂದು ಬಗೆಯ ಗಮಕ. ಒಂದು ಸ್ವರದಿಂದ ಮತ್ತೊಂದು ಸ್ವರಕ್ಕೆ ಜಾರುವುದು ಆರೋಹಣದಲ್ಲಿ ಎಕ್ಕುಜಾರು, ಅವರೋಹಣದಲ್ಲಿ ದಿಗುಜಾರು. ಒಂದೇ ಸ್ವರಸ್ಥಾನದಲ್ಲಿ ಪಕ್ಕದ ಸ್ವರವನ್ನೂ ಲಘುವಾಗಿ ಪ್ರದರ್ಶಿಸುವುದು ಒರಿಕ (ಸನಿಧಪ=ಸರಿನಿಸಧನಿಪ). ಇಂಥ ಗಮಕಗಳ ಒಟ್ಟು ಸಂಖ್ಯೆ ಹತ್ತೊಂಬತ್ತು. ಆದರೆ ಸಾಮಾನ್ಯವಾಗಿ ಬಳಕೆಯಲ್ಲಿರುವುದು ಹತ್ತು ಮಾತ್ರ.

ಸ್ವರಗಳಲ್ಲಿ ನಾಲ್ಕು ವಿಧ ವಾದಿ,ಸಂವಾದಿ,ಅನುವಾದಿ, ವಿವಾದಿ. ವಾದಿ (ಸೊನ್ಯಾಂಟ್) ಎನ್ನುವುದು ಮುಖ್ಯಸ್ವರ. ರಾಗದಲ್ಲಿ ಬಹುವೇಳೆ ಬರುವ ಸ್ವರ (ಸರಿಗಮಪಧನಿಸ–ರಿಗಮಪಧನಿಸ–ಗಮಪಧನಿಸ–ಮಪಧನಿಸ–ಪಧನಿಸ–ಧನಿಸ–ನಿಸ–ಸ) ಸಂವಾದಿ (ಕಾನ್ಸೊನೆಂಟ್) ಸ್ವರ ವಾದಿಯೊಂದಿಗೆ ಸುಸಂಗತವಾಗಿ ಸೇರಿ ಹೊಂದಿಕೊಂಡು ಹೋಗುವ ಸ್ವರ. ಸಂವಾದಿ ಸ್ವರಗಳ ನಡುವೆ ಎಂಟು ಇಲ್ಲವೆ ಹನ್ನೆರಡು ಶ್ರುತಿಗಳ ಅಂತರ ಇರಬೇಕು. ಸ–ಪ, ಸ–ಮ, ರ–ಧ, ಗ–ನ, ಗಿ–ನಿ, ಗು–ನು, ರ–ಮಿ ಗಳು ಸಂವಾದಿ ಸ್ವರಗಳು. ವಿವಾದಿಗೆ (ಡಿಸ್ಸೊನೆಂಟ್) ವೈರಿ ಸ್ವರ ಎಂದೂ ಹೆಸರು; ಎರಡು ಸ್ವರಗಳ ನಡುವೆ ಒಂದೇ ಶ್ರುತಿಯ ಅಂತರ ಇದ್ದರೆ ಸಂವಾದಿ, ವಾದಿಗೆ ವಿರುದ್ಧ (ಸಮ್ಮಗರಿಸ–ರಿಗಮ–ರಿಪ್ಪಮರಿಗ–ಗಮಪ–ಗದ್ದಪಮಗ–ಮಪಧ). ಕಡೆಯದಾಗಿ ಅನುವಾದಿ (ಅಸ್ಸೊನೆಂಟ್). ವಾದಿಯೊಂದಿಗೆ ಯಾವೊಂದು ಸಂಬಂಧವನ್ನೂ ಇಟ್ಟುಕೊಂಡಿರದೆ, ಅದಕ್ಕೆ ವಿರೋಧವಾಗಿಯೂ ಇರದೆ ರಾಗದ ಸೌಂದರ್ಯ ಹೆಚ್ಚಿಸಲು ತನ್ನ ಮಟ್ಟಿಗೆ ತಾನು ಯತ್ನಿಸುತ್ತದೆ (ಸರಿಗ–ರಿಪಮ–ಗಮಪ). ಇದೂ ಒಂದು ಬಗೆಯಲ್ಲಿ ಸಂವಾದಿತ್ವವೇ ಆದರೂ ಸಂವಾದಿಗಿಂತ ಇದರ ಸಂವಾದಿತ್ವ ಕಡಿಮೆ.

**ರಾಗ** : ದಕ್ಷಿಣಾದಿ ಸಂಗೀತದ ವೈಶಿಷ್ಟ್ಯವೆಂದರೆ ರಾಗ ಪದ್ಧತಿ. ರಾಗ ಎಂದರೆ ಸಂತೋಷಪಡಿಸುವುದು ಎಂದರ್ಥ (ರಂಜಕತ್ವಾತ್). ಇಂಗ್ಲಿಷಿನಲ್ಲಿ ಇದಕ್ಕೆ ಮೆಲೊಡಿ–ಟೈಪ್, ಮೆಲೊಡಿ–ಮೌಲ್ಡ್, ಟ್ಯೂನ್ ಎನ್ನಬಹುದು. ಶುದ್ಧವಿಕೃತ ಸ್ವರಗಳ ಸಂಖ್ಯೆ ಹನ್ನೆರಡು. ಅವುಗಳಲ್ಲಿ (ಸಪ್ತಸ್ವರಭೇದಗಳಲ್ಲಿ) ಐದಕ್ಕೆ ಕಡಿಮೆ ಇಲ್ಲದಂತೆ ಸ್ವರಗಳನ್ನಾಯ್ದು ಅವನ್ನು ಆಧಾರಷಡ್ಜಕ್ಕೆ ಸಂಬಂಧಿಸಿದಂತೆ ಒಂದು ಕ್ರಮದಲ್ಲಿ ಸೇರಿಸಿದರೆ ರಾಗವಾಗುತ್ತದೆ. ಐದೇ ಸ್ವರಗಳಿದ್ದರೆ ಅದಕ್ಕೆ ಔಡವ (ಪೆಂಟಾಟೋನಿಕ್) ರಾಗ ಎಂದು ಹೆಸರು. ದೃಷ್ಟಾಂತ ಬೇಕೆಂದರೆ ಮೋಹನ ರಾಗದಲ್ಲಿ ಸರಿಗುಪಧಿಸ ಎಂಬಷ್ಟೇ ಸ್ವರಗಳು. ಆರು ಸ್ವರಗಳಿದ್ದರೆ ಅದು ಷಾಡವ ರಾಗ (ಹೆಕ್ಸೊಟೋನಿಕ್) ಎನಿಸಿಕೊಳ್ಳುತ್ತದೆ. ಶ್ರೀರಂಜಿನೀ ರಾಗದಲ್ಲಿ ಸರಿಗಮಧನಿ ಎಂಬಷ್ಟೇ ಸ್ವರಗಳು. ಏಳೂ ಸ್ವರಗಳಿದ್ದರೆ ಸಂಪೂರ್ಣ ರಾಗ. ಆರೋಹಣದಲ್ಲಿ ಅವರೋಹಣದಲ್ಲಿ ಎರಡರಲ್ಲೂ ಸಂಪೂರ್ಣವಾಗಿದ್ದರೆ ಅಂಥ ರಾಗಕ್ಕೆ ಮೇಳಕರ್ತ ಅಥವಾ ಜನಕರಾಗ ಅಥವಾ ಸಂಪೂರ್ಣ ರಾಗ ಎಂದು ಹೆಸರು. ಇಂಥ ಮೇಳಕರ್ತಗಳನ್ನು ಎಪ್ಪತ್ತೆರಡಾಗಿ ವೆಂಕಟಮಖಿ ತನ್ನ ಚತುರ್ದಂಡಿ ಪ್ರಕಾಶಿಕೆಯಲ್ಲಿ ವಿಭಾಗ ಮಾಡಿದ್ದಾನೆ. ನಿತ್ಯ ಶುದ್ಧ ಸ್ವರಗಳಾದ ಸ ಮತ್ತು ಪ–ಈ 72 ರಾಗಗಳಲ್ಲೂ ಏಕರೀತಿಯಾಗಿರುತ್ತವೆ. ಮಧ್ಯಮದ ವಿಕಾರಗಳಾದ ಶುದ್ಧ ಮತ್ತು ಪ್ರತಿಮಧ್ಯಮಗಳು ಬರುವ ದೃಷ್ಟಿಯಿಂದ ಮೇಳಕರ್ತಗಳನ್ನು ಪೂರ್ವ, ಉತ್ತರ ಎಂದು ವಿಗಂಡಿಸಿದ್ದಾರೆ –ಪೂರ್ವ ಮೇಳದಲ್ಲಿ 1 ರಿಂದ 36 ರಾಗಗಳಿದ್ದು ಅವುಗಳಲ್ಲೆಲ್ಲ ಶುದ್ಧ ಮಧ್ಯಮ ಇರುತ್ತದೆ. ಉತ್ತರ ಮೇಳದಲ್ಲಿ 37 ರಿಂದ 72 ರಾಗಗಳಿದ್ದು ಅವುಗಳಲ್ಲಿ ಪ್ರತಿ ಮಧ್ಯಮ ಇರುತ್ತದೆ. ಉಳಿದ ಋಷಭ, ಗಾಂಧಾರ, ಧೈವತ, ನಿಷಾದಗಳು ರಾಗರಾಗಕ್ಕೆ ವ್ಯತ್ಯಾಸವಾಗುತ್ತ ಹೋಗುತ್ತವೆ.

ಇಲ್ಲೂ ಒಂದು ಕ್ರಮಹಿಡಿದು ಒಂದೇ ಜಾತಿಯ ಈ ಸ್ವರಗಳು ಬರುವ ಆರಾರು ರಾಗಗಳನ್ನು ಒಂದೊಂದು ಚಕ್ರ ಮಾಡಿ ಇಂಥ ಹನ್ನೆರಡು ಚಕ್ರಗಳಲ್ಲಿ 72 ರಾಗಗಳನ್ನೂ ಅಡಕ ಮಾಡಿದ್ದಾರೆ. ಪೂರ್ವಮೇಳದ ಮೊದಲ ಚಕ್ರವಾದ ಇಂದುವಿನಲ್ಲಿ ಸ, ಪ, ಮ ಗಳ ಜೊತೆಗೆ ರ, ಗ ಇದ್ದು ಇದರ ಆರು ರಾಗಗಳಲ್ಲಿ ಧ, ನ ಗಳ ವಿಕಾರಗಳು ಇರುತ್ತವೆ ಇತ್ಯಾದಿ.

ಸ್ವರಜಾತಿ ವೈವಿಧ್ಯದಿಂದ ರಾಗವೈವಿಧ್ಯ. ಏಳು ಸ್ವರಗಳೂ ಕ್ರಮ ಹಿಡಿದು ಬಂದು ಆರೋಹಣಾವರೋಹಣಗಳಲ್ಲೂ ಒಂದೇ ಜಾತಿಯ ಸ್ವರಗಳಾಗಿರುವುದು ಮೇಳಕರ್ತರಾಗದ ಲಕ್ಷಣ. ಉಳಿದ ರಾಗಗಳಲ್ಲಿ ಹೀಗೆ ಸಪ್ತಸ್ವರಗಳೂ ಇರುವುದಿಲ್ಲ. ಸ್ವರಗಳ ಆರೋಹಣಾವರೋಹಣ ಹೀಗೆ ಪೂರ್ಣ ಕ್ರಮಯುಕ್ತವೂ ಅಲ್ಲ. ಏಳು ಸ್ವರಗಳೂ ಇಲ್ಲದಿರುವುದರಿಂದ ಇವುಗಳಿಗೆ ವರ್ಜ್ಯರಾಗಗಳೆನ್ನುತ್ತಾರೆ.

ಇಂಥ ರಾಗಗಳ ಸಂಖ್ಯೆ ಅನಂತವಾದರೂ ಸುಮಾರು 800 ಬಳಕೆಯಲ್ಲಿವೆ. ಸ್ವರಗಳ ಸಂಖ್ಯೆಯ ದೃಷ್ಟಿಯಿಂದ ವರ್ಜ್ಯರಾಗಗಳಲ್ಲಿ ಎಂಟು ವಿಧಗಳಾಗುತ್ತವೆ. ಆರೋಹಣದಲ್ಲೂ ಐದು, ಅವರೋಹಣದಲ್ಲೂ ಐದು ಸ್ವರಗಳು ಬಂದರೆ ಅದು ಔಡವ–ಔಡವ; ಮೋಹನ ರಾಗದಲ್ಲಿ ಸರಿಪಧಗ ಇಷ್ಟು ಮಾತ್ರ ಸ್ವರಗಳು (ಹರಿಕಾಂಭೋದಿ

ಮೇಳದ ಜನ್ಯ ಇದು). ಆರೋಹಣದಲ್ಲಿ ಆರು, ಅವರೋಹಣದಲ್ಲಿ ಐದು ಸ್ವಧಗಳಿದ್ದರೆ ಷಾಡವ–ಔಡವ; ನಾಟಕುರಂಜಿ ರಾಗದಲ್ಲಿ ಸರಿಗಮಧನಿಸ–ಸನಿಮಧಧಸ ಬರುತ್ತವೆ (ಇದೂ ಹರಿಕಾಂಭೋದಿ ಜನ್ಯ). ಆರೋಹಣದಲ್ಲಿ ಐದು ಅವರೋಹಣದಲ್ಲಿ ಆರು ಇದ್ದರೆ ಔಡವ–ಷಾಡವ; ಶ್ರೀಮಣಿ ರಾಗದಲ್ಲಿ ಸರಗಪಧಸ–ಸನಿಧಪಗರಸ (ಇದು ರತ್ನಾಂಗಿ ಮೇಳಜನ್ಯ). ಆರೋಹಣದಲ್ಲಿ ಐದು ಅವರೋಹಣದಲ್ಲಿ ಏಳು ಸ್ವರಗಳಿದ್ದರೆ ಔಡವ–ಸಂಪೂರ್ಣ; ಕೀರ್ತಿಪ್ರಿಯ ರಾಗದಲ್ಲಿ ಸರಮಪಧಸ–ಸನಧಪಮಗರಸ (ಇದು ಕನಕಾಂಗಿ ಮೇಳ ಜನ್ಯ). ಆರೋಹಣದಲ್ಲಿ ಆರು, ಅವರೋಹಣದಲ್ಲಿ ಆರು ಸ್ವರಗಳಿದ್ದರೆ ಷಾಡವ–ಷಾಡವ; ಶ್ರೀ ರಂಜಿನೀ ರಾಗದ ಸ್ವರಗಳು ಸರಿಗಮಧನಿಸ–ಸನಿಧಮಗರಿಸ (ಖರಹರಪ್ರಿಯಜನ್ಯ). ಆರೋಹಣದಲ್ಲಿ ಆರು ಅವರೋಹಣದಲ್ಲಿ ಏಳು ಸ್ವರಗಳಿದ್ದರೆ ಷಾಡವ–ಸಂಪೂರ್ಣ; ಕಾಂಭೋದಿ ರಾಗದಲ್ಲಿ ಸರಿಗಮಪಧಸ ಸನಿಧಪಮಗರಿಸ (ಹರಿಕಾಂಭೋದಿ ಜನ್ಯ). ಆರೋಹಣದಲ್ಲಿ ಏಳು ಅವರೋಹಣದಲ್ಲಿ ಆರು ಸ್ವರಗಳಿದ್ದರೆ ಸಂಪೂರ್ಣ–ಷಾಡವ; ಸೇನಾಜಯಂತೀ ರಾಗದಲ್ಲಿ ಸರುರಿಗಪಧಮಸ–ಸಧಪನಿಮಗಸ (ಸುಚರಿತ್ರ ಮೇಳಜನ್ಯ). ಕಡೆಯದಾಗಿ ಆರೋಹಣದಲ್ಲಿ ಏಳು; ಅವರೋಹಣದಲ್ಲಿ ಐದು ಸ್ವರಗಳಿದ್ದರೆ ಸಂಪೂರ್ಣ–ಔಡವ ಗೌರೀಸೀಮಂತಿನೀ ರಾಗದಲ್ಲಿ ಸಗಮಮಪಧನಿಸ–ಸನಿಪಗರಿಸ (ನಾಸಿಕಾಭೂಷಣೀಜನ್ಯ). ಇದು ಸ್ವರಸಂಖ್ಯಾ ದೃಷ್ಟಿಯಿಂದ ಮಾಡಿದ ವಿಭಾಗ.

ಮತ್ತೊಂದು ದೃಷ್ಟಿಯೆಂದರೆ ಸ್ವರಗಳು ಕ್ರಮವಾಗಿ ಬಂದಿವೆಯೋ ಇಲ್ಲವೋ ಎಂಬುದು. ಅವರೋಹಣದಲ್ಲಿ ಆಧಾರ ಷಡ್ಜದಿಂದ ಶುರುಮಾಡಿ ಋಷಭ, ಅನಂತರ ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ, ತಾರಷಡ್ಜ, ಅವರೋಹಣದಲ್ಲಿ ತಾರಷಡ್ಜದಿಂದ ಶುರುಮಾಡಿ ನಿಷಾದ, ಧೈವತ, ಪಂಚಮ, ಮಧ್ಯಮ, ಗಾಂಧಾರ, ಋಷಭ ಮಧ್ಯಸ್ಥಾಯಿಷಡ್ಜ ಮುಟ್ಟುವ ರಾಗಗಳು ಕ್ರಮರಾಗಗಳು. ಈ ಕ್ರಮ ತಪ್ಪಿ ಸ್ವರಗಳು ಬಂದರೆ ಅಂಥ ರಾಗಕ್ಕೆ ವಕ್ರರಾಗ ಎಂದು ಹೆಸರು. ಈ ವಕ್ರತ್ವ ಆರೋಹಣದಲ್ಲಿರಬಹುದು. ಚಕ್ರವಾಕಜನ್ಯವಾದ ವೇಗವಾಹಿನೀ ಸ ರ ಗು ಮ ಪ ಧಿ ನಿ ಸ – ಸ ನಿ ಧಿ ಪ ಮ ಗು ರ ಸ ಎಂಬ ಸ್ವರಗಳನ್ನೂ ನಟಭೈರವೀಜನ್ಯವಾದ ಆನಂದಭೈರವಿ ಸ ಗಿ ರಿ ಗಿ ಮ ಪ ಧ ಪ ನಿ ಸ – ಸ ನಿ ಧ ಪ ಮ ಗ ರಿ ಸ ಎಂಬ ಸ್ವರಗಳನ್ನೂ ಹೊಂದಿವೆ. ಇಲ್ಲವೇ ಅವರೋಹಣ ವಕ್ರವಾಗಿರಬಹುದು. ಹರಿಕಾಂಭೋದಿಜನ್ಯವಾದ ಸುರುಟಿ ರಾಗದಲ್ಲಿ ಸ ರಿ ಮ ಪ ನಿ ಸ – ಸ ನಿ ಧಿ ಪ ಮ ಗು ಪ ಮ ರೀ ಸ ಎಂಬ ಸ್ವರಗಳೂ ಗಾಂಗೇಯ ಭೂಷಣೀಜನ್ಯವಾದ ಗಂಗಾತರಂಗಿಣಿ ರಾಗದಲ್ಲಿ ಸ ರು ಗು ಮ ಪ ಸ – ಸ ನು ಧ ಪ ಸ ಗು ಮ ರು ಸ ಎಂಬ ಸ್ವರಗಳೂ ಬರುತ್ತವೆ. ಅಥವಾ ಎರಡೂ ವಕ್ರವಾಗಿರಬಹುದು. ನಟಭೈರವೀಜನ್ಯವಾದ ಹಿಂದೋಳ ವಸಂತ ರಾಗದಲ್ಲಿ ಸ ಗಿ ಮ ಪ ಧ ನಿ ಧ ಸ – ಸ ನಿ ಧ ಪ ಮ ಧ ಮ ಗಿ ಸ ಎಂಬ ಸ್ವರಗಳು ಬರುತ್ತವೆ.

ತಂತಮ್ಮ ಮೇಳಕರ್ತಗಳಲ್ಲಿ ಬಂದಂಥದೇ ಜಾತಿಯ ಸ್ವರಗಳನ್ನು ಮಾತ್ರ ಜನ್ಯರಾಗಗಳು ಹೊಂದಿದ್ದರೆ ಅಂಥವಕ್ಕೆ ಉಪಾಂಗರಾಗಗಳೆನ್ನುತ್ತಾರೆ; ಶುದ್ಧ ಸಾವೇರಿ, ಮೋಹನ ಮುಂತಾದ ಹಲವು ರಾಗಗಳು ಈ ಜಾತಿಗೆ ಸೇರಿದವು. ತಂತಮ್ಮ ಮೇಳಗಳ ಸ್ವರಗಳ ಜೊತೆಗೆ ವಿಜಾತೀಯ ಸ್ವರಗಳೂ ಜನ್ಯರಾಗದಲ್ಲಿದ್ದರೆ ಅದು ಭಾಷಾಂಗರಾಗ; ಈ ಅನ್ಯಸ್ವರಗಳು ಕೆಲವು ಸಂಚಾರಗಳಲ್ಲಿ ಮಾತ್ರ ಬರುತ್ತವೆ. ನಟಭೈರವಿಯ ಧೈವತ ಶುದ್ಧವಾದರೂ ಭೈರವಿಯ ಕೆಲವೆಡೆ ಚತುಃಶ್ರುತಿ ಧೈವತ ಬರುತ್ತದೆ; ಇದರಿಂದ ರಾಗದ ಮಾಧುರ್ಯ ಹೆಚ್ಚುತ್ತದೆ. ನೀಲಾಂಬರಿ, ಮಾಂಜಿ, ಬಿಲಹರಿ ಮುಂತಾದ ಭಾಷಾಂಗ ರಾಗಗಳಲ್ಲಿ ಒಂದೇ ಒಂದು ಅನ್ಯಸ್ವರ ಇರುತ್ತದೆ. ಆನಂದಭೈರವಿ, ಹಿಂದುಸ್ತಾನೀ, ಬೇಹಾಗ್ ಮುಂತಾದ ಭಾಷಾಂಗರಾಗಗಳಲ್ಲಿ ಎರಡು ಅನ್ಯಸ್ವರಗಳು ಇರುತ್ತವೆ. ಹಿಂದುಸ್ತಾನೀ ಕಾಪಿಯಲ್ಲಿ ಮೂರು ಅನ್ಯಸ್ವರಗಳಿರುತ್ತವೆ. ಈ ಅನ್ಯಸ್ವರಗಳಿಂದ ರಾಗ ಲಕ್ಷಣಕ್ಕೆ ಧಕ್ಕೆ ಬರುವುದಿಲ್ಲ. ರಾಗದ ಸ್ವರೂಪ ಇನ್ನೂ ಹೆಚ್ಚು ಸ್ಫುಟವಾಗಲೆಂದೇ ಅನ್ಯಸ್ವರ ಪ್ರವೇಶದ ಆಶಯ.

ಸಾಮಾನ್ಯವಾಗಿ ಆರೋಹಣ ಆಧಾರಷಡ್ಜದಿಂದ ಮೊದಲಾಗಿ ತಾರಷಡ್ಜದಲ್ಲಿ ಮುಗಿಯುತ್ತದೆ. ಆದರೆ ಕೆಲವು ರಾಗಗಳಲ್ಲಿ ಆರೋಹಣ ತಾರಷಡ್ಜವನ್ನು ಮುಟ್ಟುವುದೇ ಇಲ್ಲ. ನಿಷಾದಕ್ಕೊ ಧೈವತಕ್ಕೊ ಪಂಚಮಕ್ಕೊ ಬಂದು ಹಿಂದಿರುಗುತ್ತದೆ. ಷಣ್ಮುಖಪ್ರಿಯ ಮೇಳದ ದೇಶಮಾಳವಿಯ ಕೈಶಿಕೀ ನಿಷಾದಕ್ಕಿಂತ ಮುಂದೆ ಹೋಗುವುದಿಲ್ಲ; ಇಂಥ ರಾಗಗಳಿಗೆ ನಿಷಾದಾಂತ ರಾಗಗಳೆನ್ನುತ್ತಾರೆ. ಸರಸಾಂಗೀ ಮೇಳದ ಮಣಿಮಯ ರಾಗ, ಧೀರ ಶಂಕರಾಭರಣ ಮೇಳದ ಕುರಂಜೀ ರಾಗ, ಶುದ್ಧ ಧೈವತದಲ್ಲೇ ಆರೋಹಣ ಮುಗಿಸುತ್ತವೆ. ಇಂಥವಕ್ಕೆ ಧೈವತಾಂತ ರಾಗಗಳೆಂದು ಹೆಸರು. ಧೀರಶಂಕರಾಭರಣ ಮೇಳದ ನವರೋಸ್ ಮತ್ತು ಜುಲಾವ್ ರಾಗಗಳು ಪಂಚಮದಲ್ಲೆ ಮುಗಿಯುವುದರಿಂದ ಅಂಥ ರಾಗಗಳಿಗೆ ಪಂಚಮಾಂತಗಳೆನ್ನುತ್ತಾರೆ. ಇವು ಜನ್ಯರಾಗದ ವಿವಿಧ ಜಾತಿಗಳು.

ಮೇಳಕರ್ತರಾಗ ಗೊತ್ತಾಗಿದ್ದರೆ ಅದರ ಮೇಳಸಂಖ್ಯೆ ಇದೇ ಎಂದು ಹೇಳುವ ಬಗೆ ಹೇಗೆ ಎಂಬುದನ್ನು ನಿರ್ಧರಿಸಲು ಈ ಕೆಳಗಿನ ಕಟಪಯಾದಿ ಸಂಖ್ಯಾಯಂತ್ರ ವನ್ನುಪಯೋಗಿಸುತ್ತಾರೆ.

| | 1 | 2 | 3 | 4 | 5 | 6 | 7 | 8 | 9 | 0 |
|---|---|---|---|---|---|---|---|---|---|---|
| ಕಾದಿನವ | ಕ | ಖ | ಗ | ಘ | ಙ | ಚ | ಛ | ಜ | ಝ | ಞ |
| ಟಾದಿನವ | ಟ | ಠ | ಡ | ಢ | ಣ | ತ | ಥ | ದ | ಧ | ನ |
| ಪಾದಿಪಂಚ | ಪ | ಫ | ಬ | ಭ | ಮ | | | | | |
| ಯಾದ್ಯಷ್ಟ | ಯ | ರ | ಲ | ವ | ಶ | ಷ | ಸ | ಹ | | |

ಮೇಳ ಪತ್ತೆ ಮಾಡಬೇಕಾಗಿರುವ ರಾಗದ ಹೆಸರಿನ ಮೊದಲ ಎರಡು ಅಕ್ಷರಗಳನ್ನು ತೆಗೆದುಕೊಂಡು, ಆ ಅಕ್ಷರಗಳಿಗೆ ತಕ್ಕ ಸಂಖ್ಯೆಯನ್ನು ಈ ಪದಕದಿಂದ ನಿರ್ಧರಿಸಬೇಕು; ಅನಂತರ ಆ ಎರಡು ಸಂಖ್ಯೆಯನ್ನು ತಿರುಗುಮುರುಗು ಮಾಡಿದರೆ ಮೇಳರಾಗದ ಸಂಖ್ಯೆ ಬರುತ್ತದೆ. ದೃಷ್ಟಾಂತಕ್ಕೆ, ಚಾರುಕೇಶೀ ರಾಗದ ಮೇಳ ತಿಳಿಯಬೇಕೆಂದರೆ–ಚ ದ ಸಂಖ್ಯೆ ಪದಕದಲ್ಲಿ 6, ರು ದ ಸಂಖ್ಯೆ 2 ಅಂದರೆ 62 ಆಯಿತು. ಅದನ್ನು ಹಿಂದುಮುಂದು ಮಾಡಿದರೆ 26 – ಅದೇ ಚಾರುಕೇಶಿಯ ಮೇಳ ಸಂಖ್ಯೆ; ಹಾಗೆಯೇ ಖರಹರಪ್ರಿಯ ಖ 2 ರ 2; 22 ಹಿಂದು ಮುಂದು ಮಾಡಿದರೂ ಅಷ್ಟೇ ಅದರ ಮೇಳ. ಧಾತುವರ್ಧಿನಿ –ಧ 9, ತು 6; 96; 69ನೆಯ ಮೇಳ. ರಸಿಕಪ್ರಿಯ – ರ 2 ಸಿ 7; 27; 72ನೆಯ ಮೇಳ ಇತ್ಯಾದಿ. ಈ ಪದಕ ಜನ್ಯರಾಗಗಳಿಗೆ ಅನ್ವಯಿಸುವುದಿಲ್ಲ.

ರಾಗಗಳನ್ನು (ಜನಕ–ಜನ್ಯ ಎರಡೂ) ಮತ್ತೊಂದು ಬಗೆಯಲ್ಲಿ ವಿಂಗಡಿಸುತ್ತಾರೆ. ಮಾಯಾಮಾಳವಗೌಳ, ಕಲ್ಯಾಣಿಯಂಥ ರಾಗಗಳು ತಂತಮ್ಮ ವೈಶಿಷ್ಟವನ್ನು ತಮ್ಮಲ್ಲಿಯೇ ಉಳಿಸಿಕೊಂಡು, ಅದರಿಂದ ಮಾತ್ರ ತೃಪ್ತವಾಗಿ, ಲಕ್ಷಣಕಾರರ ಆದೇಶಗಳಿಗೆ ತಲೆಬಾಗಿ ಪಾತಿವ್ರತ್ಯ ನಿಯಮ ಪಾಲಿಸುವ ರಾಗಗಳು, ಇವುಗಳಿಗೆ ಶುದ್ಧರಾಗಗಳೆಂದು ಹೆಸರು. ಸಾರಂಗ, ಸೌರಾಷ್ಟ್ರದಂಥ ಮತ್ತೆ ಕೆಲವು ರಾಗಗಳು ಬೇರೆ ರಾಗಗಳ ಲಕ್ಷಣವನ್ನೂ ಪ್ರದರ್ಶಿಸುತ್ತವೆ; ಇಂಥವಕ್ಕೆ ಛಾಯಾಲಗ ಅಥವಾ ಸಾಳಗ ಎನ್ನುತ್ತಾರೆ. ಉದಾ: ಕುರಂಜಿ, ಶಂಕರಾಭರಣ ಇತ್ಯಾದಿ.

ಹೀಗೆ ಬೇರೆ ರಾಗದ ಛಾಯೆ ತನ್ನ ವೈಶಿಷ್ಟ್ಯಕ್ಕೆ ಪೈಪೋಟಿ ಮಾಡುವಷ್ಟು ಹಿರಿದಾಗಿದ್ದರೆ ಅದು ಸಂಕೀರ್ಣ ಅಥವಾ ಮಿಶ್ರರಾಗ; ಘಂಟಾ, ಆಹಿರಿ ಮುಂತಾದವು ಇಂಥವು.

ಭಾವಸ್ಫುರಣದ ದೃಷ್ಟಿಯಿಂದ ರಾಗವನ್ನು ಘನ ಇಲ್ಲವೆ ನಯ ಎನ್ನಬಹುದು. ಚಲನಾಟ ರಾಗ ದಿಟ್ಟತನವನ್ನು ಸೂಚಿಸುತ್ತದೆ; ಶುದ್ಧನಾಟ ಶಕ್ತಿ, ವೈಭವಗಳ ಪ್ರದರ್ಶಕ. ಶ್ರೀರಾಗದಲ್ಲಿ ಶೋಕದ ವಾಸನೆ ಇದ್ದರೂ ಅದರಲ್ಲಿ ಒಂದು ಠೀವಿ, ಗತ್ತು ಇದೆ. ಹೀಗೆಯೇ ಗೌಳ ಆರಭಿ ವರಾಳಿ ಕೇದಾರ ರೀತಿಗೌಳ ಮುಂತಾದವು ಪ್ರತಿಷೆಯಿನ್ನಾಗಲಿ ಪರಾಕ್ರಮವನ್ನಾಗಲೀ ವ್ಯಕ್ತಪಡಿಸುವುದರಿಂದ ಇವಕ್ಕೆ ಘನರಾಗಗಳೆನ್ನುತ್ತಾರೆ. ಈ ರಾಗಗಳಿಗೆ ತಾನ (ಮಧ್ಯಮ ಕಾಲ) ತುಂಬ ಸೊಗಸು. ದುಃಖಪ್ರದರ್ಶಕವಾದ ತೋಡಿ. ಅಂಗಲಾಚಿ ಬೇಡುವ ಕಾಂಬೋದಿ, ಗೋಳು ಕರೆಯುವ ಭೈರವಿ, ಶೃಂಗಾರರಸಭರಿತವಾದ ಕಲ್ಯಾಣಿ ಇಂಥ ಹೃದಯ ಮುಟ್ಟುವ ರಾಗಗಳನ್ನು ನಯ ಅಥವಾ ರಕ್ತಿರಾಗಗಳೆನ್ನುತ್ತಾರೆ. ಇವುಗಳ ಆಲಾಪನೆಯೇ ತುಂಬ ಹಿತ. ಈ ಎರಡೂ ಬಗೆಯ ಭಾವಗಳನ್ನು ಕೊಂಚಮಟ್ಟಿಗೆ ವ್ಯಕ್ತಪಡಿಸುತ್ತ ಆಲಾಪನೆಯಲ್ಲಿ ಮಾತ್ರವೇ ತನ್ನ ವೈಶಿಷ್ಟ ಹೊರಸೂಸುವ ಕಾನಡ, ಬೇಹಾಗ್, ಜಂಝೂಟಿ ಮುಂತಾದ ದೇಶ್ಯ ರಾಗಗಳು ಉತ್ತರದಿಂದ ಕರ್ಣಾಟಕ ಸಂಗೀತದಲ್ಲಿ ಬಂದು ಸೇರಿಕೊಂಡು ಕರ್ನಾಟಕದವೇ ಆಗಿವೆ. ನವರೋಸ್, ಖಮಾಸ್, ಜಲಾವ್, ಕಾಪಿ ಇವೂ ಈ ರೀತಿಯವು. ಕರ್ಣಾಟಕ ಸಂಗೀತದವೇ ಪೂರ್ಣವಾಗಿ ಆದ ರಾಗಗಳು ಭೈರವಿ, ಕೇದಾರಗೌಳ, ಶಂಕರಾಭರಣ ಇತ್ಯಾದಿ. ರಾಗಗಳ ಹೆಸರುಗಳಲ್ಲೂ ಕರ್ಣಾಟಕದ ಶಂಕರಾಭರಣ ಹಿಂದುಸ್ತಾನಿಯ ಬಿಲವಾಲ್, ಕರ್ಣಾಟಕದ ಹನುಮತೋಡಿ, ಹಿಂದುಸ್ತಾನಿಯ ಭೈರವಿ, ಕರ್ಣಾಟಕದ ಮಾಯಾ ಮಾಳವಗೌಳ, ಹಿಂದುಸ್ತಾನಿಯ ಭೈರವ್, ಕರ್ಣಾಟಕದ ಶುಭಪಂತುವರಾಳಿ, ಹಿಂದುಸ್ತಾನಿಯ ತೋಡಿ ಇತ್ಯಾದಿ ವ್ಯತ್ಯಾಸಗಳಿವೆ.

ರಾಗಭಾವಗಳ ವಿಷಯ ಪ್ರಸ್ತಾಪ ಮಾಡುತ್ತ ಸಂಗೀತನಿಧಿ ತಿರುವನಂತಪುರಂ ಲಕ್ಷ್ಮಣ ಪಿಳ್ಳೆ ಅವರ ಅಭಿಪ್ರಾಯವನ್ನಿಲ್ಲಿ ಸೂಚಿಸುವುದು ಉಚಿತವೆನ್ನಿಸುತ್ತದೆ. ಅವರ ಪ್ರಕಾರ ತೋಡಿ, ಭೈರವಿಗಳು ವೈಭವ, ಠೀವಿಯ ರಾಗಗಳು; ಪುನ್ನಾಗ ವರಾಳಿ ಶೋಕಪೂರಿತ; ಮೋಹನ ಪೂರ್ವೀಕಲ್ಯಾಣಿ ರಾಗಗಳು ಶೃಂಗಾರರಸ ಪ್ರಧಾನ, ಬೇಗಡೆ ವಾದವಿವಾದಕ್ಕೆ ತಕ್ಕ ರಾಗ. ಅದರಲ್ಲಿ ಕೋಪ ಪ್ರದರ್ಶನ ಸುಲಭ. ನಾದನಾಮ ಕ್ರಿಯವಾದರೆ ಶಾಂತ, ಯೋಚನಾಭರಿತ; ನೀಲಾಂಬರಿ, ಯದುಕುಲ ಕಾಂಬೋದಿ ತಗ್ಗಿ ನಡೆಯುವ ರಾಗಗಳು. ಅವುಗಳದ್ದು ಬೇಡುವ ಸ್ವಭಾವ; ಕೀರ್ವಾಣಿ, ವಸಂತ ರಾಗಗಳು ಗಾಂಭೀರ್ಯವಿಶಿಷ್ಟ ಇತ್ಯಾದಿ. ಮಾಯಾಮಾಳವಗೌಳ ಗೌರವಸೂಚಕ, ಚಕ್ರವಾಕ ಪ್ರಣಯಸಂಬಂಧಿ, ಶಂಕರಾಭರಣ ಶಾಂತ, ಶುಭಪಂತುವರಾಳಿ ಮರ್ಯಾದೆಯ ರಾಗ, ಗಮನಪ್ರಿಯ ಉದ್ವಿಗ್ನ, ಮಧ್ಯಮಾವತಿ ಮತ್ತು ಆರಭಿ ಸ್ತೋತ್ರಕ್ಕೆ ಅನುರೂಪವಾದ ರಾಗಗಳು, ಧನ್ಯಾಸಿ ಗೋಗರೆಯುವ ರಾಗ, ಹಂಸಧ್ವನಿ ಭಕ್ತಿ ಹಾಗೂ ಶೃಂಗಾರರಸಯುಕ್ತ, ಬಿಲಹರಿ ಸಂತೋಷಪ್ರದರ್ಶಕ, ಶ್ರೀರಾಗ ದುಃಖಸೂಚಕ, ನಾದನಾಮಕ್ರಿಯ ಜನಪದ ಭಜನೆ ಮುಂತಾದವಕ್ಕೆ ಸರಿಹೋಗುವ ರಾಗ, ಆನಂದಭೈರವಿ ಭಕ್ತಿರಸಪ್ರಧಾನ ಎಂದು ಮುಂತಾಗಿ ಕೆಲವರು ಹೇಳುತ್ತಾರೆ.

ಕೆಲವು ರಾಗಗಳನ್ನು ನಿರ್ದಿಷ್ಟ ಕಾಲದಲ್ಲಿ ಹಾಡಿದರೇ ಇಂಪು, ಸೊಗಸು ಇರುವುದೆಂದು ನಮ್ಮಲ್ಲಿ ಒಂದು ಮತ. ಈ ದೃಷ್ಟಿಯಿಂದ ರಾಗಗಳನ್ನು ಬೆಳಗಿನ ರಾಗಗಳು, ಮಧ್ಯಾಹ್ನದ ರಾಗಗಳು ಎಂದು ಮುಂತಾಗಿ ವಿಂಗಡಿಸಬಹುದು. ಶಂಕರಾಭರಣ, ಬಿಲಹರಿ, ಹನುಮತೋಡಿ ಮುಂತಾದವು ಬೆಳಗಿನ ರಾಗಗಳು, ಮಾಯಾಮಾಳವಗೌಳವಂತೂ ಅರುಣೋದಯದ ರಾಗ. ಖರಹರಪ್ರಿಯ ಮಧ್ಯಾಹ್ನದ ರಾಗ. ಶುಭ ಪಂತುವರಾಳಿ, ಮೇಚಕಲ್ಯಾಣಿ ಮುಂತಾದವು ಸಾಯಂಕಾಲ ಹಾಡಲು ಯೋಗ್ಯ. ಹರಿಕಾಂಭೋದಿ, ನಟಭೈರವಿ, ಚಲನಾಟ ಮುಂತಾದವು ರಾತ್ರಿಯ ರಾಗಗಳು. ಚಕ್ರವಾಕ, ಆನಂದಭೈರವಿಯಂಥ ರಾಗಗಳು ಸಾರ್ವಕಾಲಿಕ.

ಭರತಕಲ್ಪಲತಾ ಮಂಜರಿಯಲ್ಲಿ ಭೈರವಿ, ಭೂಪಾಲ ಮುಂತಾದವು ಪುರುಷ ರಾಗಗಳೆಂದೂ ಅವುಗಳಿಗೆ ಕೆಲವು ಸ್ತ್ರೀರಾಗಗಳಿವೆಯೆಂದೂ ಹೇಳಿದೆ. ಭೈರವ ರಾಗಕ್ಕೆ ಮೇಘರಂಜೀ, ಕುರಂಜೀ, ದೇವಕ್ರಿಯಾ; ಭೂಪಾಲಕ್ಕೆ ಮಲಹರಿ, ಬೌಳಿ, ವೇಳಾವತಿ; ಬಂಗಾಳಕ್ಕೆ ಧನ್ಯಾಸಿ, ಕರ್ಣಾಟ, ಗೌಳ; ಶ್ರೀರಾಗಕ್ಕೆ ಹಿಂದೋಳಿ, ಆಹಿರಿ; ವಸಂತ ರಾಗಕ್ಕೆ ರಾಮಕ್ರಿಯಾ, ವರಾಳಿ; ಸಾರಂಗಕ್ಕೆ ದೇಶಾಕ್ಷಿ, ರೀತಿಗೌಳ; ಪಂಚಮಕ್ಕೆ ದೇಶಿ, ಲಲಿತಾ,ತೋಡಿ ಇತ್ಯಾದಿ ಒಟ್ಟು ಎಂಟು ಪುರುಷ ರಾಗಗಳಿಗೆ ಇಪ್ಪತ್ತನಾಲ್ಕು ಸ್ತ್ರೀರಾಗಗಳನ್ನು ಭರತ ಹೇಳಿದ್ದಾನೆ.

ಲಕ್ಷಣಗ್ರಂಥಗಳಲ್ಲಿ ರಾಗಕ್ಕೆ 13 ಲಕ್ಷಣಗಳನ್ನು ಹೇಳಿದ್ದಾರೆ– ಗ್ರಹ, ಅಂಶ, ತಾರ, ಮಂದ್ರ, ನ್ಯಾಸ, ಅಪನ್ಯಾಸ, ಸನ್ಯಾಸ, ವಿನ್ಯಾಸ, ಬಹುತ್ವ, ಅಲ್ಪತ್ವ, ಅಂತರ, ಮಾರ್ಗ, ಷಾಡವ, ಔಡವ (ಸಂಗೀತರತ್ನಾಕರ). ಇವುಗಳಲ್ಲಿ ಗ್ರಹ, ಅಂಶ, ನ್ಯಾಸ ಮೂರು ಮಾತ್ರ ಮುಖ್ಯ. ಉಳಿದವು ಇಂದು ಅಷ್ಟಾಗಿ ವ್ಯವಹಾರದಲ್ಲಿಲ್ಲ. ಗ್ರಹವೆಂದರೆ ರಾಗ ಶುರುವಾಗುವ ಸ್ವರ (ತಮಿಳು ಎಡುಪ್ಪು). ನ್ಯಾಸ ರಾಗ ಮುಗಿಯುವ ಸ್ವರ ಅಂಶವೆಂದರೆ ರಾಗದಲ್ಲಿ ಅತಿ ಮುಖ್ಯವಾಗಿ ಪ್ರಯೋಗ ಬಾಹುಳ್ಯದಿಂದ ವಿಶಿಷ್ಟವಾದ ಸ್ವರ. ಇದಕ್ಕೆ ಜೀವಸ್ವರ, ರಾಗ ಛಾಯಾಸ್ವರ ಎಂತಲೂ ಕರೆಯುತ್ತಾರೆ. ಹನುಮತೋಡಿಯಲ್ಲಿ ಧೈವತ, ನಟಭೈರವಿಯಲ್ಲಿ ಋಷಭ, ಹರಿಕಾಂಭೋದಿಯಲ್ಲಿ ಗಾಂಧಾರ, ಖರಹರಪ್ರಿಯದಲ್ಲಿ ಪಂಚಮ, ಆರಭಿಯಲ್ಲಿ ಮಧ್ಯಮ, ಧನ್ಯಾಸಿಯಲ್ಲಿ ನಿಷಾದ ಇವು ಅಂಶಸ್ವರಗಳು.

ಒಂದು ರಾಗದ ಲಕ್ಷಣ ಹೇಳಬೇಕೆಂದರೆ ಮೊದಲು ಅದು ಮೇಳಕರ್ತವೊ ಜನ್ಯವೊ ಎಂಬುದನ್ನು ನಿರ್ಧರಿಸಬೇಕು. ಅದರ ಸ್ವರಜಾತಿಗಳನ್ನೂ ಗಮನಿಸಬೇಕು. ಜನ್ಯವಾದರೆ ಅದು ಯಾವ ಮೇಳ, ವರ್ಜ್ಯವೊ ಸಂಪೂರ್ಣವೊ ವಕ್ರವೊ ಕ್ರಮವೊ, ಅದರ ಮೂರ್ಛನೆಗಳು ಯಾವುವು, ಷಾಡವವೊ, ಔಡವವೊ, ಸಂಪೂರ್ಣವೊ, ಉಪಾಂಗವೊ, ಭಾಷಾಂಗವೋ, ಯಾವ ಸ್ವರಾಂತ,ಅದರ ಸಂಚಾರಗಳು ಯಾವುವು, ಅದರ ಜೀವ ಹಾಗೂ ನ್ಯಾಸ ಸ್ವರಗಳು ಯಾವುವು. ಶುದ್ಧವೊ ಛಾಯಾಲಗವೊ, ಘನರಾಗವೊ, ರಕ್ತಿರಾಗವೊ, ಅದರ ವಿಶಿಷ್ಟ ಗಮಕಗಳು ಯಾವುವು, ವಿಶೇಷ ಸಂಚಾರಗಳು ಯಾವುವು, ಜಂಟಿಸ್ವರ ದಾಟುಸ್ವರ ಪ್ರಯೋಗಗಳುಂಟೆ – ಎಂಬೆಲ್ಲ ವಿಷಯಗಳನ್ನೂ ಗಮನದಲ್ಲಿ ಇಟ್ಟುಕೊಂಡು ರಾಗಲಕ್ಷಣ ನಿರ್ಧರಿಸಬೇಕು.

**ತಾಳ:** ಕರ್ಣಾಟಕ ಸಂಗೀತದಲ್ಲಿ ರಾಗ ಎಷ್ಟು ಮುಖ್ಯವೋ ತಾಳ ಅಷ್ಟೇ ಮುಖ್ಯ; ತಾಳವೆಂದರೆ ಕಾಲನಿಯತಿ (ಟೈಮ್–ಮೆಷರ್). ಎಲ್ಲ ಸಂಗೀತದಲ್ಲೂ ತಾಳ ಅವಶ್ಯಾಂಗವಾದರೂ ಈ ಸಂಗೀತದಲ್ಲಿ ಅದಕ್ಕೆ ಪ್ರಮುಖಪಟ್ಟ; ತಾಳ ಎಂದರೆ ಕಾಲಪ್ರಮಾಣ. ಈ ಕಾಲದ ಗಣನೆ ಹೀಗಿದೆ. ಒಂದರಮೇಲೊಂದರಂತೆ ನೂರು ತಾವರೆ ಎಲೆಗಳನ್ನಿಟ್ಟು ಒಂದು ಸೂಜಿಯಿಂದ ಎಲ್ಲವನ್ನೂ ಒಮ್ಮೆಲೆ ಚುಚ್ಚಲು ಎಷ್ಟು ಕಾಲ ಬೇಕೋ ಅದು ಒಂದು ಕ್ಷಣ; ಎಂಟು ಕ್ಷಣಗಳಾದರೆ ಒಂದು ಲವ; ಎಂಟು ಲವಗಳಾದರೆ ಒಂದು ಕಾಷವಿ; ಎಂಟು ಕಾಷ್ಠಗಳಾದರೆ ಒಂದು ನಿಮಿಷ; ಎಂಟು ನಿಮಿಷಗಳು ಒಂದು ಕಲಾ; ಎರಡು ಕಲಾ ಒಂದು ಚತುರ್ಭಾಗ; ಎರಡು ಚತುರ್ಭಾಗ ಒಂದು ಅನುದ್ರುತ; ಎರಡು ಅನುದ್ರುತ ಒಂದು ದ್ರುತ; ಎರಡು ದ್ರುತ ಒಂದು (ಚತುರಶ್ರ) ಲಘು; ಎರಡು ಲಘು ಒಂದು ಗುರು; ಮೂರು ಲಘು ಒಂದು ಪ್ಲುತ; ನಾಲ್ಕು ಪ್ಲುತ ಒಂದು ಕಾಕಪಾದ. ವ್ಯವಹಾರದಲ್ಲಿ ಆರು ಮುಖ್ಯ ಕಾಲವಿಭಾಗಗಳನ್ನು ಪರಿಗಣಿಸುತ್ತಾರೆ.

| **ಕಾಲವಿಭಾಗ** | **ಸಂಜ್ಞೆ** | **ಅಕ್ಷರಕಾಲ** | **ಮಾತ್ರಾಕಾಲ** | **ಕ್ರಿಯೆ** |
|---|---|---|---|---|
| ಅನುದ್ರುತ | 0 | 1 | 1/4 | ಪೆಟ್ಟು |
| ದ್ರುತ | 0 | 2 | 1/2 | ಪೆಟ್ಟು,ಹುಸಿ |
| ಲಘು | 1 | 4 | 1 | ಪೆಟ್ಟು,ಎಣಿಕೆ |
| ಗುರು | S | 8 | 2 | ——— |
| ಪ್ಲುತ | 3 | 12 | 3 | ——— |
| ಕಾಕಪಾದ | x | 16 | 4 | ——— |

ಈ ಆರು ತಾಳದ ಷಡಂಗಗಳೆಂದು ಕರೆಸಿಕೊಳ್ಳುತ್ತವೆ. ಲಕ್ಷಣ ಗ್ರಂಥಗಳಲ್ಲಿ ಹೇಳಿರುವ ತಾಳಗಳಲ್ಲಿ ಈ ಆರೂ ಅಂಗಗಳು ಇರುತ್ತವೆ. ಆದರೆ ಸಾಮಾನ್ಯವಾಗಿ ವ್ಯವಹಾರದಲ್ಲಿರುವ ಸುಳಾದಿ ಸಪ್ತತಾಳಗಳಲ್ಲಿ ಅನುದ್ರುತ, ದ್ರುತ, ಲಘು0 ಇಷ್ಟೇ ಇರುತ್ತವೆ. ಒಂದು ಪೆಟ್ಟು (ಘಾತ) ಹಾಕುವಷ್ಟು ಕಾಲ ಅಥವಾ ಒಂದಕ್ಷರ ಉಚ್ಚರಿಸುವಷ್ಟು ಕಾಲ ಅನುದ್ರುತ ವೆನಿಸಿಕೊಳ್ಳುತ್ತದೆ; ಒಂದು ಪೆಟ್ಟು ಹಾಕಿ ಕೈ ಎತ್ತಿ ಪಕ್ಕಕ್ಕೆ ಬಿಡುವಷ್ಟು (ವಿಸರ್ಜ) ಕಾಲ ಅಥವಾ ಎರಡಕ್ಷರ ಉಚ್ಚರಿಸುವಷ್ಟು ಕಾಲ ದ್ರುತ. ಲಘುವಿನಲ್ಲಿ ಐದು ಜಾತಿಗಳುಂಟು. ತ್ರಿಶ್ರ ಲಘುವೆಂದರೆ ಒಂದು ಪೆಟ್ಟು ಹಾಕಿ ಬೆರಳಲ್ಲಿ ಎರಡು ಎಣಿಸುವಷ್ಟು ಕಾಲ, ಅಂದರೆ ಮೂರು ಅಕ್ಷರ ಕಾಲವಾಯಿತು. ಚತುರಶ್ರ ಲಘುವಿನಲ್ಲಿ ಒಂದು ಪೆಟ್ಟು ಹಾಕಿ ಮೂರು ಎಣಿಕೆ ಅಂದರೆ ನಾಲ್ಕಕ್ಷರ ಕಾಲ. ಖಂಡ ಲಘುವೆಂದರೆ ಒಂದು ಪೆಟ್ಟು, ನಾಲ್ಕು ಎಣಿಕೆ ಎಂದರೆ ಐದಕ್ಷರ ಕಾಲ. ಮಿಶ್ರ ಲಘುವಿನಲ್ಲಿ ಒಂದು ಪೆಟ್ಟು ಆರು ಎಣಿಕೆ ಏಳಕ್ಷರ ಕಾಲ. ಕಡೆಯದಾಗಿ ಸಂಕೀರ್ಣ ಲಘವಿನಲ್ಲಿ ಒಂದು ಪೆಟ್ಟು ಎಂಟು ಎಣಿಕೆ, 9 ಒಟ್ಟು ಒಂಬತ್ತು ಅಕ್ಷರ ಕಾಲ. ಈ ಐದು ಲಘುವಿನ ಜಾತಿ ಭೇದಗಳು ಸಪ್ತ ಸುಳಾದಿ ತಾಳಗಳಲ್ಲಿ ಸೇರಿದರೆ ಒಟ್ಟು 35 ತಾಳಗಳಾಗುತ್ತವೆ. ಒಂದೊಂದು ತಾಳದಲ್ಲೂ ಐದೈದು ಜಾತಿಗಳು.

ಈ ಏಳು ಸುಳಾದಿ ತಾಳಗಳಲ್ಲೂ ಪುರಂದರದಾಸರು ಅನೇಕ ಅಲಂಕಾರಗಳನ್ನು ಹೆಣೆದಿದ್ದಾರೆ. ಉದಾಹರಣೆಗೆ – ತ್ರಿಶ್ರ ಧ್ರುವ ಸರಿಗ, ಸಗ, ರಿಗಮ, ಗಮಪ; ರಿಗಮ, ರಿಮ, ಗಮಪ, ಮಪಧ ಇತ್ಯಾದಿ. ಚತುರಶ್ರ ಮಠ್ಯ – ಸರಿಗರಿ, ಸರಿ, ಸರಿಗಮ, ರಿಗಮಗ, ರಿಗ, ರಿಗಮಪ ಇತ್ಯಾದಿ. ಖಂಡರೂಪಕ ಸರಿ, ಸರಿಗಮಪ; ರಿಗ, ರಿಗಮಪಧ ಇತ್ಯಾದಿ. ಮಿಶ್ರ ಝಂಪ – ಸರಿಗಸರಸರಿ, ಗ, ಮಾರಿಗಮರಿಗರಿಗ, ಮ, ಪಾ ಇತ್ಯಾದಿ. ಸಂಕೀರ್ಣ ತ್ರಿಪುಟ – ಸಾರೀಗಾಮಪಧ, ಮಪ, ಧ, ನಿ, ರೀಗಾಮಾಪಧನಿ, ಪನಿಧಸ ಇತ್ಯಾದಿ. ತ್ರ್ಯಶ್ರ ಅಟ – ಸರಿಗ, ರಿಗಮ, ಪಾ, ಪಾ, ರಿಗಮ, ಗಮಪ, ಧಾ, ಧಾ ಇತ್ಯಾದಿ. ಚತುರಶ್ರ ಏಕ – ಸರಿಗಮ; ರಿಗಮಪ ಇತ್ಯಾದಿ. ಇವಕ್ಕೆ ತಾಳಾಲಂಕಾರಗಳು ಎಂದು ಹೆಸರು. ಮೇಲೆ ಹೇಳಿದ ಮೂವತ್ತೈದು ತಾಳಗಳಲ್ಲಿ ಒಂದೊಂದು ಗತಿಭೇದದಿಂದ ಐದೈದು ಉಪವಿಭಾಗಗಳಾಗಿ ಒಡೆಯುತ್ತವೆ; ಎಂದರೆ ಒಟ್ಟು 175 ತಾಳಗಳಾದಂತಾಯಿತು. ಐದು ಜಾತಿಗಳೂ ಐದು ಗತಿಭೇದಗಳೂ ಒಂದೊಂದು ತಾಳದಲ್ಲೂ ಬಂದು ಸಪ್ತತಾಳಗಳಲ್ಲಿ ಪ್ರತಿಯೊಂದರಲ್ಲೂ 25 ವಿಧಗಳಾಗುತ್ತವೆ. ಜಾತಿಭೇದ ಲಘುವಿಗೆ ಮಾತ್ರವಾದರೆ ಗತಿಭೇದ ಇತರ ತಾಳಾಂಗಗಳಿಗೂ ಉಂಟು. ಚಾಪು ತಾಳ ಎಂಬ ಒಂದು ತಾಳ ವಿಶೇಷ ನಮ್ಮಲ್ಲಿ ತೀರ ಹಿಂದಿನಿಂದಲೂ ವ್ಯವಹಾರದಲ್ಲಿದೆ; ಅದರ ಕ್ರಿಯೆ ಎರಡೂ ಘಾತಗಳು ಅಥವಾ ಒಂದು ಘಾತ ಒಂದು ವಿಸರ್ಜಿತ.

ತಾಳದ ಪ್ರಾಣಗಳಲ್ಲಿ ಗ್ರಹ ಒಂದು ಎಂದು ಲಕ್ಷಣ ಗ್ರಂಥಗಳಲ್ಲಿ ಹೇಳಿದೆ. ಇಲ್ಲಿ ಗ್ರಹವೆಂದರೆ ತಾಳಾವರ್ತದಲ್ಲಿ ಸಂಗೀತದ ಸಾಹಿತ್ಯವನ್ನು ಪ್ರಾರಂಭಿಸುವುದೆಂದರ್ಥ. ಗ್ರಹದಲ್ಲಿ ಎರಡು ವಿಧ–ಸಮ, ವಿಷಮ ಎಂದು. ಸಮಗ್ರಹವೆಂದರೆ ತಾಳ ಶುರುವಾಗುತ್ತಿದ್ದಂತೆಯೇ ಸಂಗತಿಯೂ ಶುರುವಾಗುವುದು; ಎರಡಕ್ಕೂ ವ್ಯತ್ಯಾಸ ಬಂದರೆ ಅದು ವಿಷಮ. ತಾಳಕ್ಕೆ ಮುಂಚೆಯೇ ಗಾನಶುರುವಾದರೆ ಅದು ಅತೀತ ವಿಷಮಗ್ರಹ; ತಾಳವೇ ಮುಂಚೆ ಶುರುವಾಗಿ ಆಮೇಲೆ ಗಾನ ಆರಂಭವಾದರೆ ಅದು ಅನಾಗತ ವಿಷಮ ಗ್ರಹ. ತಾಳದ ಮತ್ತೊಂದು ಪ್ರಾಣ ಲಯ, ಎಂದರೆ ಗಾನ ವೇಗ (ಟೆಂಪೋ), ಇದರಲ್ಲಿ ಮೂರು ವಿಧ; ಓಟ ಜೋರಾಗಿದ್ದರೆ ಅದು ದ್ರುತ, ನಿಧಾನವಾದರೆ ವಿಳಂಬಿತ; ಎರಡೂ ಅಲ್ಲದಿದ್ದರೆ ಮಧ್ಯ. ಇದಕ್ಕೇ ಸಾಮಾನ್ಯವಾಗಿ ಕಾಲ ಎಂದು ವ್ಯವಹರಿಸುವುದುಂಟು. ಇನ್ನೊಂದು ತಾಳ ಪ್ರಾಣವಾದ ಕಳಾ ಎನ್ನುವುದು ತಾಳಾಕ್ಷರದಲ್ಲಿ ಅಂಗೀಭೂತವಾದ ಕಾಲವಿಭಾಗ. ಏಕಕಳಾ ಎಂದರೆ ಒಂದು ತಾಳಾಕ್ಷರದಲ್ಲಿ ಒಂದೇ ಉಪವಿಭಾಗ ಇರುವುದು. ಅಂದರೆ ಒಂದು ತಾಳಕ್ರಿಯೆಗೆ ಒಂದು ಸ್ವರ ಪ್ರಮಾಣ; ದ್ವಿಕಳಾ ಎಂದರೆ ಒಂದು ತಾಳಕ್ರಿಯೆಗೆ ಎರಡಕ್ಷರಗಳು ಇತ್ಯಾದಿ.

ಯತಿ ಎನ್ನುವುದು ಇನ್ನೊಂದು ತಾಳಪ್ರಾಣ (ರಿದಮ್). ತಾಳಾಂಗಗಳಲ್ಲಿ ಸಮ, ಗೋಪುಚ್ಛ, ಸ್ರೋತೋವಹ, ಡಮರು, ಮೃದಂಗ, ವಿಷಮ ಎಂದು ಷಡ್ವಿಧ. ಏರದೇ ಕುಗ್ಗದೇ ಇರುವೆಯ ಸಾಲಿನಂತೆ ಒಂದೇ ಸಾಲಿನಲ್ಲಿ ಹೋಗುವುದು ಸಮಯತಿ. ಎಲ್ಲ ತಾಳಾಂಗಗಳೂ ಒಂದೇ ಅಕ್ಷರ ಪ್ರಮಾಣದ್ದೋ ಇಲ್ಲವೆ ಎರಡೇ ಅಕ್ಷರ ಪ್ರಮಾಣದ್ದೋ ಇರಬಹುದು. ಗೋಪುಚ್ಛ ಯತಿಯಲ್ಲಾದರೋ ಹಸುವಿನ ಬಾಲದಂತೆ ತಾಳಾಂಗಗಳು ಮೊದಲು ದೊಡ್ಡವಾಗಿದ್ದು ಬರುಬರುತ್ತ ಕ್ರಮವಾಗಿ ಸಣ್ಣಗಾಗುವುವು. ಮೊದಲೊಂದು ಕಾಕಪಾದ. ಅನಂತರ ಒಂದು ಪ್ಲುತ, ಅನಂತರ ಲಘು, ದ್ರುತ, ಅನುದ್ರುತ – ಹೀಗೆ ತಾಳಾಂಗಗಳು ಬರುತ್ತವೆ. ಈ ಕ್ರಮ ಹಿಂದುಮುಂದಾದರೆ ಅದು ಸ್ರೋತೋವಹ; ನದಿ ಸಣ್ಣದಾಗಿ ಶುರುವಾಗಿ ಕ್ರಮೇಣ ದೊಡ್ಡದಾಗುವುದೇ ಉಪಮಾನ. ಡಮರು ಯತಿಯಲ್ಲಿ ಗೋಪುಚ್ಛ ಹಾಗೂ ಸ್ರೋತೋವಹಗಳು ಸಮವಾಗಿ ಸೇರುತ್ತವೆ. ಅರ್ಧದ ವರೆಗೆ ಸಣ್ಣದಾಗುತ್ತ ಬಂದು ಅನಂತರ ದೊಡ್ಡದಾಗಲಾರಂಭಿಸಿ ಮೊದಲ ಪ್ರಮಾಣಕ್ಕೆ ಬರುವುದು ಡಮರು. ಇದಕ್ಕೆ ವಿರುದ್ಧ ಮೃದಂಗ ಯತಿ. ಮೊದಲು ಸ್ರೋತೋವಹ ಅರ್ಧದ ವರೆಗೆ ಬಂದು ಅನಂತರ ಗೋಪುಚ್ಛ ಆರಂಭವಾಗಿ ಆದ್ಯಂತ ಪ್ರಮಾಣ ಒಂದೇ ಆಗುತ್ತದೆ. ಇಂಥ ಯಾವ ಕ್ರಮವೂ ಇಲ್ಲದಿರುವುದು ವಿಷಮ ಯತಿ.

ಮಾರ್ಗ ಎಂಬ ತಾಳಪ್ರಾಣ ಕೃತಿರಚನೆಯಲ್ಲಿ ಕಾಲ ಲಯ ನಿಯಂತ್ರಣದ ಸಾಧನ. ಇದರಲ್ಲಿ ಆರು ವಿಧ. ಒಂದು ತಾಳಾಕ್ಷರಕ್ಕೆ ಎಂಟು ಮಾತ್ರಾಕಾಲಗಳಿದ್ದರೆ ದಕ್ಷಿಣ ಸಂಜ್ಞೆ, ನಾಲ್ಕು ಮಾತ್ರಾ ಕಾಲಗಳಿದ್ದರೆ ವರ್ತಿಕ. ಎರಡಿದ್ದರೆ ಚಿತ್ರ, ಒಂದಿದ್ದರೆ ಚಿತ್ರತರ, ಅರ್ಧ

ಇದ್ದರೆ ಚಿತ್ರತಮ (ದ್ರುತ), ನಾಲ್ಕನೆಯ ಒಂದು ಭಾಗ ಇದ್ದರೆ ಅತಿಚಿತ್ರತಮ (ಅನುದ್ರುತ). ಕಡೆಯದಾಗಿ ಪ್ರಸ್ತಾರ ಎಂದರೆ ತಾಳದ ವಿವಿಧ ಅಂಗಗಳನ್ನು ಉಪಾಂಗಗಳಾಗಿ ವಿಭಜಿಸಿ ಅವುಗಳ ವೈವಿಧ್ಯವನ್ನೆಲ್ಲ ಕ್ರಮ ಹಿಡಿದು ಪ್ರದರ್ಶಿಸುವುದು ಎಂದರ್ಥ.

ಈ ಹತ್ತು– ಅಂಗ (ದ್ರುತ, ಲಘು ಇತ್ಯಾದಿ), ಜಾತಿ (ತ್ರಿಶ್ರ ಇತ್ಯಾದಿ), ಕಾಲ (ಕ್ಷಣ, ಲವ ಇತ್ಯಾದಿ), ಗ್ರಹ, ಲಯ, ಯತಿ, ಮಾರ್ಗ, ಪ್ರಸ್ತಾರ, ಕ್ರಿಯೆ (ಘಾತ ಇತ್ಯಾದಿ), ಕಳಾ ತಾಳದ ದಶಪ್ರಾಣಗಳೆಂದು ಲಕ್ಷಣಕಾರರು ಹೇಳಿದ್ದಾರೆ. ಅವುಗಳಲ್ಲಿ ಮುಖ್ಯವಾದುವೆಂದರೆ ಅಂಗ, ಗ್ರಹ, ಜಾತಿ, ಕ್ರಿಯೆ, ಲಯಗಳು. ಶಾಸ್ತ್ರೋಕ್ತವಾಗಿ 108 ತಾಳಗಳಿದ್ದರೂ ವ್ಯವಹಾರದಲ್ಲಿರುವುದು ಮೇಲೆ ಹೇಳಿದ 35 ಮಾತ್ರ.

**ಕಲಿಕೆಪ್ರಯೋಗ:** ಕರ್ಣಾಟಕ ಸಂಗೀತ ಕಲಿಯಲಾರಂಭಿಸುವವರು ಮೊದಲು ಸ್ವರಜ್ಞಾನಕೋಸ್ಕರ ಸ್ವರಾವಳಿ (ಸರಳೆ), ಜಂಟಿವರಸೆ, ಅಲಂಕಾರಗಳನ್ನು ಕಲಿತು ಗೀತಗಳಿಗೆ ಕೈ ಹಾಕುತ್ತಾರೆ. ಗೀತ ತುಂಬ ಸರಳವಾದ ಕೃತಿ; ಅದರಲ್ಲಿ ಪಲ್ಲವಿ, ಅನುಪಲ್ಲವಿ, ಚರಣ ಮುಂತಾದ ಗೊಂದಲಗಳಿಲ್ಲ; ತಾಳವೂ ತುಂಬ ಸುಲಭ. ಆಯಾ ರಾಗ ಲಕ್ಷಣ ಪ್ರದರ್ಶಿಸಲು ಎಷ್ಟು ಬೇಕೋ ಅಷ್ಟು ಮಾತ್ರ ಸಂಚಾರ ಇರುತ್ತದೆ. ಪ್ರತಿ ಸ್ವರಕ್ಕೂ ಸಾಹಿತ್ಯದಲ್ಲೊಂದು ಅಕ್ಷರ ಇರುತ್ತದೆ. ಪುರಂದರದಾಸ, ಪೈದಾಳ ಗುರುಮೂರ್ತಿಶಾಸ್ತ್ರಿ, ವೆಂಕಟಮಖಿ ಮುಂತಾದವರು ಗೀತರಚನೆಯಲ್ಲಿ ಪ್ರಸಿದ್ಧರು. ಗೀತದ ಅನಂತರ ಅಭ್ಯಾಸ ಮಾಡವುದು ಸ್ವರಜತಿ. ಇದರಲ್ಲಿ ಪಲ್ಲವಿ ಇದ್ದು (ಕೆಲವು ವೇಳೆ ಅನುಪಲ್ಲವಿಯೂ ಇದ್ದು) ನಾಲ್ಕೈದು ಚರಣಗಳಿರುತ್ತವೆ. ಪ್ರತಿ ಚರಣ ಮುಗಿದೊಡನೆ ಪಲ್ಲವಿ ಬರುತ್ತದೆ. ಇದರಲ್ಲಿ ಭಕ್ತಿರಸ ಅಥವಾ ಶೃಂಗಾರರಸ ಇರುತ್ತದೆ. ಶ್ಯಾಮಶಾಸ್ತ್ರಿಗಳ ಕಾಮಾಕ್ಷಿ ಎಂಬ ಭೈರವೀ ಸ್ವರಜತಿ, ನೀಟು ಗಲ ಮಿಠಾರಿ ಎಂಬ ಕಲ್ಯಾಣಿ ಸ್ವರಜತಿ, ಸಾಮೀ ದಯಮೀರಾ ಎಂಬ ಮೋಹನ ಸ್ವರಜತಿ, ರಾರ ವೇಣು ಗೋಪಬಾಲ ಎಂಬ ಬಿಲಹರಿಯ ಸ್ವರಜತಿ ಮುಂತಾದವು ಪ್ರಸಿದ್ಧ. ಸ್ವರಜತಿಯ ಹಂತ ದಾಟಿದರೆ ವರ್ಣ. ವರ್ಣಗಳು ವಿದ್ವತ್ಪೂರ್ಣ ರಾಗಭಾವದಿಂದ ಪಕ್ವವಾಗಿರುತ್ತವೆ. ಇದರಲ್ಲಿ ಒಂದು ಸಣ್ಣ ಪಲ್ಲವಿ, ಅನುಪಲ್ಲವಿ, ಮುಕ್ತಾಯ ಸ್ವರ (ಇವುಗಳು ಸೇರಿ ಪೂರ್ವಾಂಗ) ಒಂದು ಚರಣ ಮತ್ತು ಚರಣ ಸ್ವರಗಳು (ಇವು ಉತ್ತರಾಂಗ) ಇರುತ್ತವೆ. ಪಲ್ಲವಿ, ಅನುಪಲ್ಲವಿ, ಚರಣಗಳಿಗೆ ಮಾತ್ರ ಸಾಹಿತ್ಯ ಇದ್ದು ಉಳಿದ ಭಾಗಗಳು ಸ್ವರ ಮಾತ್ರವಾಗಿದ್ದರೆ ಅದು ತಾನ ವರ್ಣ; ವರ್ಣದ ಪೂರಾ ಸಾಹಿತ್ಯ ಇದ್ದರೆ ಅದು ಪದವರ್ಣ. ರಾಗಮಾಲಿಕಾ ವರ್ಣಗಳಲ್ಲಿ ಒಂದಕ್ಕಿಂತ ಹೆಚ್ಚು ರಾಗಗಳಿರುತ್ತವೆ. ಪಲ್ಲವಿ ಒಂದು ರಾಗ, ಅನುಪಲ್ಲವಿ ಇನ್ನೊಂದು. ಹೀಗೆ ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್, ರಾಮನಾಥಪುರಂ ಶ್ರೀನಿವಾಸಯ್ಯಂಗಾರ್, ಶ್ಯಾಮಾಶಾಸ್ತ್ರಿ, ವೀಣಾ ಕುಪ್ಪಯ್ಯರ್, ಆದಿಯಪ್ಪಯ್ಯ, ವೀಣೆ ಶೇಷಣ್ಣ ಮುಂತಾದವರ ವರ್ಣಗಳು ಇಂದಿಗೂ ವ್ಯವಹಾರದಲ್ಲಿವೆ.

ವರ್ಣಗಳಾದ ಮೇಲೆ ಕೃತಿ; ರಾಗಭಾವ ಸಂಪೂರ್ಣವಾಗಿ ಹೊರಸೂಸುವ ಸಾಧನ ಇದು. ಇಲ್ಲಿ ಮಾತಿನ ಜಂಜಾಟ ಅಷ್ಟಾಗಿ ಇಲ್ಲ. ಇದರಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳು, ಕೆಲವೆಡೆ ಚಿಟ್ಟೆಸ್ವರ ಇರುತ್ತವೆ. ಕೃತಿಯೇ ಸಂಗೀತ ಸಾಹಿತ್ಯ ರಚನೆಯ ಪರಾಕಾಷ್ಠವಿತೆ. ಕೃತಿಯ ನಡುವೆ ಮಧ್ಯಮ ಕಾಲ ಸಾಹಿತ್ಯ ಇರಬಹುದು; ಕೃತಿಯ ಸಾಹಿತ್ಯದ ಕೆಲವು ಕಡೆ ಸಂಗತಿಗಳಿರಬಹುದು. ಇವೆಲ್ಲ ಮಾಧುರ್ಯವರ್ಧಕ ಸಾಧನಗಳು. ಕೃತಿಕಾರರಲ್ಲಿ ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತ, ಶ್ಯಾಮಾಶಾಸ್ತ್ರಿ, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್, ವೀಣಾ ಕುಪ್ಪಯ್ಯರ್, ತಿರುವಟ್ಟಿಯೂರು ತ್ಯಾಗಯ್ಯರ್, ಮೈಸೂರು ಸದಾಶಿವರಾಯ, ಸ್ವಾತಿ ತಿರುನಾಳ್, ರಾಮಸ್ವಾಮಿ ದೀಕ್ಷಿತ, ಪಲ್ಲವಿ ಗೋಪಾಲಯ್ಯ, ಮೈಸೂರು ವಾಸುದೇವಾಚಾರ್ಯ ಮುಂತಾದವರು ಪ್ರಖ್ಯಾತರು. ರಾಗಮಾಲಿಕೆ ಎಂಬುದು ಕೃತಿಯಂತೆಯೆ ಪಲ್ಲವಿ, ಅನುಪಲ್ಲವಿ, ಚರಣಗಳಿಂದ ಕೂಡಿ ವಿವಿಧ ರಾಗಗಳಲ್ಲಿರುತ್ತದೆ. ಪನ್ನಗೇಂದ್ರಶಯನ ಎಂಬ ಸ್ವಾತಿ ತಿರುನಾಳ್ ರಾಗಮಾಲಿಕೆ, ನಿತ್ಯಕಲ್ಯಾಣೀ ಎಂಬ ತೋಡಿ, ಸೀತಾರಾಮಯ್ಯನ ರಾಗಮಾಲಿಕೆ, ಲೀಲಾಶುಕನ ಶ್ಯಾಮಲಾದಂಡಕ, ಕೃಷ್ಣಕರ್ಣಾಮೃತದ ಹಲವು ಶ್ಲೋಕಗಳು – ಇವೆಲ್ಲ ತುಂಬ ಸೊಗಸಾದ ದೃಷ್ಟಾಂತಗಳು.

ಇವುಗಳಲ್ಲಿ ಧಾತು (ಸ್ವರ) ಮತ್ತು ಮಾತು (ಸಾಹಿತ್ಯ) ಎರಡೂ ಇರುತ್ತವೆ; ಇವು ಮೊದಲೆ ಸಿದ್ಧವಾಗಿರುವುದರಿಂದ ಸಂಗೀತಗಾರನ ಪ್ರತಿಭೆಗೆ ಇಲ್ಲಿ ಅಷ್ಟಾಗಿ ಅವಕಾಶವಿಲ್ಲ. ಆದರೆ ಕೃತಿಯ ಮೊದಲು ಹಾಡುವ ಆಲಾಪನೆ ತಾನ ಇವುಗಳೂ ಕೃತಿಯಲ್ಲಿ ಪಲ್ಲವಿಗೆ ಸಂಗತಿಗಳನ್ನು ಹಾಕಿ ಹಾಡುವುದೂ ಸಂಗೀತಸಾಧನೆಯ ಕಳಶ; ಇದಕ್ಕೆ ಮನೋಧರ್ಮ ಸಂಗೀತ ಎನ್ನುತ್ತಾರೆ. ಇದನ್ನು ಸಂಗೀತಗಾರ ಅಲ್ಲಿಯೇ ಆಗಲೇ ಕಲ್ಪಿಸಿಕೊಂಡು ಹಾಡುತ್ತಾನೆ. ರಾಗಾಲಾಪನೆಯಲ್ಲಿ ಆಯಾರಾಗದ ಸ್ವರಗಳ ಕ್ರಮಯುಕ್ತ ಸಂಚಾರಗಳು ತಾಳನಿಯಮವಿಲ್ಲದೆ ತೇಲಿಸಿಕೊಂಡು ಬರುತ್ತವೆ. ಬಾಯಲ್ಲಿ ಸ್ವರಗಳನ್ನು ಹೇಳದೆ ಆಯಾ ಸ್ವರಸ್ಥಾನಕ್ಕೆ ಸಹಜವಾದ ತದರಿನ್ನತಂ ನಂ ಎಂಬ ಶಬ್ದಗಳನ್ನು ಮಾತ್ರ ಮಾಧುರ್ಯ ದೃಷ್ಟಿಯಲ್ಲಿಟ್ಟುಕೊಂಡು ಜೋಡಿಸುವುದು ಆ ರಾಗಲಕ್ಷಣವನ್ನು ಸ್ಫುಟವಾಗಿ ಪ್ರದರ್ಶಿಸುವುದು ಇವು ಆಲಾಪನೆಯ ಮುಖ್ಯ ವಿಷಯಗಳು. ಆಲಾಪನೆಯಲ್ಲಿ ಆಕ್ಷಿಪ್ತಿಕಾ (ಅಥವಾ ಅಯತ್ತ) ಅಂದರೆ ಸಣ್ಣದರಲ್ಲಿ ರಾಗಲಕ್ಷಣ ಪೂರ್ತಿ ಸಂಗ್ರಹಿಸುವುದು. ಒಂದು ಬಗೆಯಲ್ಲಿ ಮುನ್ನುಡಿಯಂತೆ; ರಾಗವರ್ಧಿನೀ, ಆಲಾಪನೆಯ ಮುಖ್ಯಾಂಗ. ಇದರಲ್ಲಿ ನಾಲ್ಕು ಹಂತಗಳು – ಮೊದಲದರಲ್ಲಿ ಮಂದ್ರ, ಎರಡನೆಯದರಲ್ಲಿ ಮಧ್ಯ, ಮೂರನೆಯದರಲ್ಲಿ ತಾರಸ್ಥಾಯಿಗಳಲ್ಲಿ ವಿಳಂಬ ಕಾಲದಿಂದ ಸಂಚಾರ, ನಾಲ್ಕನೆಯದರಲ್ಲಿ ದ್ರುತ ಕಾಲದ ಸಂಚಾರ ಅಥವಾ ಮೂರ್ಛನಾ ಪ್ರಸ್ತಾರ, ಅನಂತರ ಸ್ಥಾಯಿ, ಸಂಚಾರದಲ್ಲಿ ಒಂದೇ ಸ್ವರದಿಂದ ಆರಂಭಮಾಡಿ ಆ ಸ್ವರದಲ್ಲಿಯೇ ಮುಗಿಸಿದರೆ ಆ ಸ್ವರಕ್ಕೆ ಸ್ಥಾಯೀ ಎಂದು ಹೆಸರು. ಕಡೆಯದಾಗಿ ಮಕರಿಣೀ ಅಥವಾ ತಾನ. ಪಾಂಡ್ಯ ರಾಜನ ಪ್ರಶಸ್ತಿಯಾದ ದಕ್ಷಿಣ ರಾಷ್ಟ್ರಾಧಿಪಾ ಎಂಬರ್ಥವನ್ನು ಸೂಚಿಸುವ ತೆನ್ನಾ ಎಂಬ ದ್ರಾವಿಡ ಪದದ ಸಂಸ್ಕೃತದ ರೂಪವೇ ತಾನ. ತಾನದ ಕಾಲ ಮಧ್ಯಮ, ಇದರಲ್ಲಿ ಪ್ರಯೋಗ ತಾನಾಂತ, ತಾನಂ,ತಾನಂನ ಇತ್ಯಾದಿ. ಇಲ್ಲಿ ಯತಿ ಸ್ಫುಟವಾಗಿ ಎದ್ದು ಕಾಣುತ್ತದೆ. ತಾಳ ದ್ರುತವಾದರೆ ಅದು ಘನ ಎನಿಸಿಕೊಳ್ಳುತ್ತದೆ. ಆಲಾಪನೆ ಮುಗಿದಮೇಲೆ ಪಲ್ಲವಿ ಶುರುವಾಗುತ್ತದೆ; ಇದರ ಜೀವಾಳ ಸಂಗತಿ – ಅಂದರೆ ಬಾರಿಬಾರಿಗೂ ಪಲ್ಲವಿಯ ಸ್ವರ ಸಾಹಿತ್ಯ ಹಿಗ್ಗಿಸುವುದೆಂದರ್ಥ. ದೃಷ್ಟಾಂತಕ್ಕೆ ಖಮಾಸ್ ರಾಗದ ಈ ತ್ಯಾಗರಾಜ ಕೃತಿ ನೋಡಬಹುದು.

1. ಸುಜನ ಜೀವ । ನಾ – ರ ಅಮಾ

2. ಸು ಉ ಜ ಅ ನಾ – ಜೀವ । ನ ಅ ಅ ಅ ಅ –ರ ಅ ಮಾ

3. ಸುಜನ ಜೀವ । ನ ಅ ಅ – ಅ ಅ ಅ –ರ ಅ ಅ ಅ ಅ ಮ

4. ಸುಜನ ಜೀವ । ನಾ ಅ ಅ ಅ ರ ಮ ಅ –ಸುಗುಣಭೂಷ ಣಾ ಅ ..

ಪಲ್ಲವಿ ಹಾಡಿ ಮುಗಿದಮೇಲೆ ಹಾಕುವ ಕಲ್ಪನಾ ಸ್ವರವೂ ಮನೋಧರ್ಮ ಸಂಗೀತ.

ಗಾಯಕರನ್ನು ಐದು ವಿಧವಾಗಿ ವಿಂಗಡಿಸುತ್ತಾರೆ ಶಿಕ್ಷಾಕಾರ, ಅಂದರೆ ಪಾಠ ಹೇಳಿ ಕೊಡುವುದರಲ್ಲಿ ಮಾತ್ರ ನಿಪುಣ; ಅನುಕಾರ, ಅಂದರೆ ಬೇರೆಯವರು ಹಾಡಿದಂತೆ ಅನುಕರಿಸಿ ಹಾಡುವವನು; ರಸಿಕ ಅಂದರೆ ರಸವತ್ತಾಗಿ ಹೃದಯ ಮುಟ್ಟುವಂತೆ ಹಾಡುವವನು; ರಂಜಕ ಅಂದರೆ ಶ್ರೋತೃಗಳ ಮನೋಲ್ಲಾಸವನ್ನೇ ಆದರ್ಶವಾಗುಳ್ಳವನು; ಕಡೆಯದಾಗಿ ಭಾವುಕ ಅಂದರೆ ಭಾವಗಳನ್ನು ಹಿಡಿದು ಅವುಗಳಿಗೆ ಮೆರುಗು ಕೊಟ್ಟು ಮನಮುಟ್ಟುವಂತೆ ಹಾಡುವವನು.

ಸಂಗೀತಗಾರನಿಗೆ ಶಾರೀರ ತುಂಬ ಮುಖ್ಯ. ಒಳ್ಳೆಯ ಶಾರೀರದ ಲಕ್ಷಣಗಳೆಂದರೆ ರಕ್ತಿ, ಗಾಂಭೀರ್ಯ, ಮಾರ್ದವ, ಘನತೆ, ಸ್ನಿಗ್ಧತೆ, ಧ್ವನಿಮಾಧುರ್ಯ ಮುಂತಾದವು. ಅಭ್ಯಾಸವಿಲ್ಲದಿದ್ದರೂ ರಾಗವನ್ನು ಸ್ಫುಟವಾಗಿ ಕಾಣಿಸುವ ಸಾಮರ್ಥ್ಯ ಶಾರೀರವೆನಿಸಿಕೊಳ್ಳುತ್ತದೆ.

**(ಎಸ್.ಕೆ.ಆರ್.)**

ಕರ್ಣಾಟಕ ಸಂಗೀತದ ಪ್ರಯೋಗದಲ್ಲಿ ಗಾಯಕ ಮುಖ್ಯ. ಈಗ ಪಿಟೀಲು, ಮೃದಂಗ, ಕಂಜರಿ ಮುಂತಾದ ಪಕ್ಕವಾದ್ಯಗಳೊಡನೆ ಕಚೇರಿಗಳಲ್ಲಿ ಹಾಡುವುದು ರೂಢಿಯಲ್ಲಿದೆ. ವೀಣೆ, ನಾಗಸ್ವರ, ಪಿಟೀಲು ಮುಂತಾದವುಗಳನ್ನೇ ಪ್ರಧಾನವಾಗಿಯೂ ಉಪಯೋಗಿಸಬಹುದು. ಹಿಂದಿನಿಂದಲೂ ಈ ಪದ್ಧತಿಗಳು ಇದ್ದಂತೆ ತೋರುತ್ತದೆ. 17–18ನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸಂಗೀತ ಕಚೇರಿಗಳು ಸಂಗಾತವಾದ್ಯಗಳ ಉಲ್ಲೇಖಗಳೂ ದೊರೆಯುತ್ತವೆ. ನಗರಗಳಲ್ಲಿ ಸಂಗೀತ ಮತ್ತು ನೃತ್ಯಕ್ಕಾಗಿ ಪ್ರತ್ಯೇಕ ರಂಗಮಂಟಪಗಳಿದ್ದುವು. ವಾದ್ಯಸಂಗೀತದ ತನಿಕಚೇರಿಗಳು ವೀಣೆ ಮತ್ತು ಕೊಳಲು ವಾದ್ಯಗಳಲ್ಲಿ ಮದ್ದಳೆ ವಾದನದೊಡನೆ ನಡೆಯುತ್ತಿದ್ದುವು. ಹಾಡುಗಾರಿಕೆಯಲ್ಲಿ ಒಬ್ಬನೇ ಗಾಯಕ ಅಥವಾ ಯುಗ್ಮ ಜೊತೆ ಅಥವಾ ಗೋಷ್ಠಿವಿಗಳು ಇರುತ್ತಿದುವು. ಇವು ಪಕ್ಕವಾದ್ಯಗಳೊಡನೆ ನಡೆಯುತ್ತಿದ್ದುವು. ಮುಖ್ಯ ಗಾಯಕನಿಗೆ ಮುಖರಿ ಎಂದು ಹೆಸರಿತ್ತು. ಇವನ ಜೊತೆಯಲ್ಲಿ ಇತರ ಗಾಯಕರು ಅನುಸರಿಸುತ್ತಿದ್ದರು. ರಾಜಾಸ್ಥಾನದಲ್ಲಿ ಗಾಯನವು ವೀಣೆ ಅಥವಾ ಕೊಳಲು ಮತ್ತು ಅವನದ್ಧ, ತತ ಮತ್ತು ಸುಷಿರ ವಾದ್ಯಗಳೊಡನೆ ನಡೆಯುತ್ತಿತ್ತು. ಅವನದ್ಧ ವಾದ್ಯಗಳಲ್ಲಿ ಹಲವು ರೀತಿಯ ಪಟಹ, ಭೇರಿ ಮುಂತಾದವು ಇದ್ದವು. ಕೊಂಬು, ಕಹಳೆ ಮುಂತಾದವು ಸುಷಿರ ವಾದ್ಯಗಳು. ಪಂಚಮುಖವಾದ್ಯವೆಂಬ ವಾದ್ಯ ರೂಢಿಯಲ್ಲಿತ್ತು. ಕಥಾಪ್ರಸಂಗದ ಪದ್ಯಗಳನ್ನು ಓದುವಾಗ ಸಂಗೀತವನ್ನು ಬಳಸಿಕೊಳ್ಳುತ್ತಿದ್ದರು. ವಾದ್ಯಗಳಲ್ಲಿ ಕಿನ್ನರಿ, ವಲ್ಲಕಿ, ವಿಪಂಚಿ, ರಾವಣಹಸ್ತ, ದಂಡಿಕಾ, ತ್ರಿಸರಿ, ಚಂತ್ರ, ಸ್ವರಮಂಡಲ ಮತ್ತು ಪರಿವಾದಿನಿ ಎಂಬ ತಂತೀವಾದ್ಯಗಳು ಶಂಖ, ಶೃಂಗ, ವಂಶ, ತಿತ್ತಿರಿ, ಬಂಬುಲಿ, ಕಹಳೆ ಮುಂತಾದ ಸುಷಿರ ವಾದ್ಯಗಳು ಒತ್ತು ಕರಡೆ, ಮೃದಂಗ, ಢಕ್ಕೆ, ಪಟಹ, ಆವುಜ, ದುಂದುಭಿ, ಪಣವ, ಭೇರಿ, ಡಿಂಡಿಮ, ತ್ರಿವಳಿ, ನಿಸ್ಸಾಳ, ಡಮರು, ಚೆಂಬಕ, ದಂಡೆ, ರುಂಜ, ಟೋಲುಗ, ಮುಕುಂದ, ರವಲಿ, ಕಂಠೀರವ, ಗಜಢಕ್ಕೆ, ಸಿಂಹಘಂಟೆ, ಪವಲ, ಚಿಂಕಿರು ಮುಂತಾದ ತಾಳ ವಾದ್ಯಗಳು ಘಂಟೆ, ಜಯಘಂಟೆ, ಕಿಂಕಣಿ, ಝಲ್ಲರಿ, ತಾಳ, ಕಂಸಾಲವೆಂಬ ಘನವಾದ್ಯಗಳ ಹೆಸರು ಉಕ್ತವಾಗಿವೆ. ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯಚರಿತ್ರೆ ಎಂಬ ತೆಲುಗು ಗ್ರಂಥದ ಪರ್ವತಪ್ರಕರಣದಲ್ಲಿ 32 ಬಗೆಯ ವೀಣೆಗಳು ಮತ್ತು 18 ಬಗೆಯ ಕೊಳಲುಗಳನ್ನು ಮತ್ತು ಸಂಗೀತ ವಾದ್ಯಗಳನ್ನು ಕುರಿತು ಹೇಳಿದೆ. ಇವುಗಳಲ್ಲಿ ಹಲವು ವಾದ್ಯಗಳ ಬಳಕೆ ಬಿಟ್ಟುಹೋಗಿದೆ. ಕೆಲವು ಕೇವಲ ಜನಪದ ವಾದ್ಯಗಳಾಗಿ ಬಳಕೆಯಲ್ಲಿವೆ. ಪಿಟೀಲು, ಹಾರ್ಮೋನಿಯಂ, ಮೋರ್ಚಿಂಗ್ ಮೊದಲಾದ ಪಾಶ್ಚಾತ್ಯ ಮೂಲದ ವಾದ್ಯಗಳು ಈಚೆಗೆ ಬಳಕೆಗೆ ಬಂದಿವೆ.

**(ವಿ.ಎಸ್.ಎಸ್.)**

**ಕರ್ಣಾವತಿ:** ಮೇವಾರದ ರಾಣಾ ಸಂಗ್ರಾಮಸಿಂಹನ ಪತ್ನಿ; ರಾಣಾ ವಿಕ್ರಮಜಿತ್ ಮತ್ತು ರಾಣಾ ಉದಯಸಿಂಹರ ತಾಯಿ. ಈಕೆಗೆ ಕರ್ಮಾವತಿಯೆಂದೂ ಹೆಸರುಂಟು. ಹೋರಾಟದಲ್ಲಿ ತೀವ್ರವಾಗಿ ಪೆಟ್ಟುತಿಂದು, ದೇಹದಲ್ಲಿ ಎಂಬತ್ತು ಗಾಯಗಳಾಗಿದ್ದರೂ ಸ್ವಾತಂತ್ರ್ಯರಕ್ಷಣೆಗಾಗಿ ಹೋರಾಡಿದ ಸಂಗ್ರಾಮನ ಮರಣಾನಂತರ, ಬಾಲಕನಾದ ವಿಕ್ರಮಜಿತ್ ಮೇವಾರದ ಗದ್ದುಗೆಯನ್ನೇರಿದ. 1533ರಲ್ಲಿ ಗುಜರಾತಿನ ಸುಲ್ತಾನ ಬಹದ್ದೂರ್ ಷಹ ಚಿತ್ತೂರನ್ನು ಮುತ್ತಿದ. ಸಂಗ್ರಾಮನ ಕಾಲದಲ್ಲಿ ಕಳೆದುಕೊಂಡಿದ್ದ ಮಾಳ್ವವನ್ನು ಪುನರ್ವಶ ಗೊಳಿಸಿಕೊಳ್ಳುವುದು ಈತನ ಮುಖ್ಯ ಧ್ಯೇಯವಾಗಿತ್ತು. ರಾಣಾ ವಿಕ್ರಮಜಿತ್ ತನ್ನ ರಾಜಧಾನಿಯ ರಕ್ಷಣೆಯ ವಿಚಾರದಲ್ಲಿ ನಿರಾಸಕ್ತನಾಗಿದ್ದುದರಿಂದ ಇತರ ರಜಪೂತ ನಾಯಕರೂ ತಂತಮ್ಮ ಜಾಗೀರುಗಳಿಗೆ ಹಿಂತಿರುಗಿದರು. ಇಂಥ ಶೋಚನೀಯ ಪರಿಸ್ಥಿತಿಯಲ್ಲಿ ರಾಜಮಾತೆ ಕರ್ಣಾವತಿ ಆಗಿನ ರಜಪೂತ ಪದ್ಧತಿಯಂತೆ ತನ್ನ ತೋಳಬಂದಿಯನ್ನು ಮೊಗಲ್ ಚಕ್ರವರ್ತಿ ಹುಮಾಯೂನನಿಗೆ ಕಳುಹಿಸಿ ತನ್ನ ಸೋದರನನ್ನಾಗಿ ಪರಿಗಣಿಸಿ, ಆತನ ಸಹಾಯ ಯಾಚಿಸಿದಳು. ಬಹದ್ದೂರ್ ಷಹ ಮೇವಾರದ ಶತ್ರುವಾಗಿದ್ದಂತೆ ಮೊಗಲರ ಶತ್ರುವೂ ಆಗಿದ್ದ; ಮೊಗಲರನ್ನು ಗುಜರಾತ್ ಮತ್ತು ಮಾಳ್ವಗಳಿಂದ ಓಡಿಸುವ ಯತ್ನದಲ್ಲಿದ್ದ. ಕರ್ಣಾವತಿಯ ಬೇಡಿಕೆಯಂತೆ ಹುಮಾಯೂನ್ ಚಿತ್ತೂರಿನ ರಕ್ಷಣೆಗೆ ಧಾವಿಸುತ್ತಿದ್ದಾಗ, ಬಹದ್ದೂರ್ ಷಹ ಅವನಿಗೆ ಪತ್ರ ಬರೆದು ಕಾಫರರ ಮೇಲೆ ಧರ್ಮಯುದ್ಧ (ಜೇಹಾದ್) ಮಾಡುತ್ತಿರುವ ಮುಸ್ಲಿಂ ದೊರೆಯ ಮೇಲೆ ಅದೇ ಮತಕ್ಕೆ ಸೇರಿದ ಹುಮಾಯೂನ್ ಯುದ್ಧಮಾಡುವುದು ಉಚಿತವಲ್ಲವೆಂದು ತಿಳಿಸಿದ. ಈ ನಯಗಾರಿಕೆಯ ಮಾತಿನಿಂದ ವಂಚಿತನಾದ ಹೂಮಾಯೂನ್ ಕರ್ಣಾವತಿಗೆ ನೆರವು ನೀಡಲಿಲ್ಲ. ಚಿತ್ತೂರು ಶರಣು ಹೋಗಿ ಮಾಳ್ವವನ್ನು ಬಹುದ್ದೂರ್ ಷಹನಿಗೆ ಹಿಂತಿರುಗಿಸಬೇಕಾಯಿತಲ್ಲದೆ ಯುದ್ಧದ ಖರ್ಚಿಗಾಗಿ ಅಪಾರ ಧನ ಕೊಡಬೇಕಾಯಿತು. ಪ್ರಾಬಲ್ಯಾಕಾಂಕ್ಷಿಯಾದ ಬಹದ್ದೂರ್ ಷಹ ಪುನಃ 1535ರಲ್ಲಿ ಚಿತ್ತೂರನ್ನು ಮುತ್ತಿದ. ಅಪ್ರಯೋಜಕನಾಗಿದ್ದ ವಿಕ್ರಮಜಿತ್ತನನ್ನು ರಾಣಿ ಕರ್ಣಾವತಿ ಸ್ಥಳಾಂತರಿಸಿ, ಸ್ವತಃ ನಗರ ರಕ್ಷಣೆಗೆ ನಿಂತಳು. ಎಲ್ಲ ರಜಪೂತ ನಾಯಕರನ್ನೂ ಯೋಧರನ್ನೂ ಹುರಿದುಂಬಿಸಿ ರಕ್ಷಣೆಯ ವ್ಯವಸ್ಥೆ ಮಾಡಿದರೂ ಮುಸ್ಲಿಮರ ಪ್ರಬಲ ಸೈನ್ಯದ ಮುಂದೆ, ಅದರಲ್ಲೂ ಫಿರಂಗಿದಳದ ಮುಂದೆ ರಜಪೂತ ಸೈನ್ಯ ಸೋತು ಹೋಯಿತು. ರಜಪೂತ ವೀರರೆಲ್ಲ ರಣರಂಗದಲ್ಲಿ ಹೋರಾಡುತ್ತ ಮಡಿದರು. ಕರ್ಣಾವತಿಯ ನೇತೃತ್ವದಲ್ಲಿ 1535ರ ಮಾರ್ಚ್ 8 ರಂದು 300ಕ್ಕೂ ಹೆಚ್ಚಿನ ರಜಪೂತ ವೀರರಮಣಿಯರು ಜೋಹರ್ ಪದ್ಧತಿಗನುಸಾರವಾಗಿ ಅಗ್ನಿಪ್ರವೇಶ ಮಾಡಿದರು. ತನ್ನ ಮಾತೆಯ ಮತ್ತು ರಜಪೂತ ಯೋಧರ ಧೈರ್ಯಸಾಹಸಗಳಿಂದ ಜಾಗೃತನಾದ ವಿಕ್ರಮಜಿತ್ ಅನತಿಕಾಲದಲ್ಲಿಯೇ ಮುಸ್ಲಿಮರನ್ನು ಹೊಡೆದಟ್ಟಿ ಚಿತ್ತೂರಿನ ಸ್ವಾತಂತ್ರ್ಯ ರಕ್ಷಿಸಿದ. *

**ಕರ್ತನೋಪಕರಣಗಳು:** ಕತ್ತರಿಸುವ ಸಾಧನಗಳ ಒಟ್ಟು ಹೆಸರು (ಕಟ್ಲೆರಿ). ಬ್ಲೇಡು, ಚಾಕು, ಚೂರಿ, ಕತ್ತಿ, ಬಾಳು, ಖಡ್ಗ, ಕತ್ತರಿ, ಕುಡುಗೋಲು, ವೈದ್ಯರ ಶಸ್ತ್ರಗಳು. ಇವು ಬಳಕೆಯಲ್ಲಿರುವ ಸಾಮಾನ್ಯ ಪ್ರಭೇದಗಳು. ಕರವಾಲ, ಪೀಚಕತ್ತಿ, ಒಡಿಕತ್ತಿ, ಹೆಗ್ಗತ್ತಿ, ಹೆಗ್ಗತ್ತರಿ ಮುಂತಾದವು ಸಹ ಕರ್ತನೋಪಕರಣಗಳೇ. ಲೋಹವನ್ನು ಮನುಷ್ಯ ಕಂಡುಕೊಂಡಂದಿನಿಂದ ಇವುಗಳ ತಯಾರಿಕೆ, ಬಳಕೆ ರೂಢಿಗೆ ಬಂದಿವೆ. ಮೊದಲು ಕಬ್ಬಿಣ, ಮುಂದೆ ಉಕ್ಕು ಸಾಮಾನ್ಯವಾಗಿ ಉಪಯೋಗವಾಗುತ್ತಿದ್ದ ಲೋಹಗಳು. ಮಿಶ್ರಲೋಹಗಳಲ್ಲಿ ಸಂಶೋಧನೆ ಮುಂದುವರಿದಂತೆ ಕರ್ತನೋಪಕರಣಗಳ ತಯಾರಿಕೆಯಲ್ಲೂ ಸುಧಾರಣೆಗಳು ಕಾಣಿಸಿಕೊಂಡುವು. ಇಂದು ತುಕ್ಕು ಹಿಡಿಯದ ಉಕ್ಕು (ಸ್ಟೇನ್‌ಲೆಸ್ ಸ್ಟೀಲ್) ಕರ್ತನೋಪಕರಣಗಳ ತಯಾರಿಕೆಯಲ್ಲಿ ವಿಶೇಷವಾಗಿ ಬಳಕೆಯಾಗುವ ಕಚ್ಚಾಸಾಮಗ್ರಿ.

ರೂಢಿಯ ಅರ್ಥದಲ್ಲಿ ಕಟ್ಲೆರಿ ಪದ ಕೇವಲ ಕರ್ತನೋಪಕರಣಗಳನ್ನು ಮಾತ್ರ ಒಳಗೊಂಡಿಲ್ಲ–ಮುಳ್ಳು ಚಮಚಗಳು (ಫೋರ್ಕ್ಸ್), ನಾನಾವಿಧದ ಚಮಚಗಳು ಚಿಮಟಗಳು, ಇಕ್ಕುಳಗಳು ಮುಂತಾದವೂ ಈ ಪದದ ವ್ಯಾಪ್ತಿಯಲ್ಲಿ ಬರುತ್ತವೆ. ಒಂದು ಕಟ್ಲೆರಿ ಅಂಗಡಿ ಎಂದರೆ ಇವೆಲ್ಲ ಮಾಲುಗಳೂ ಒಂದೆಡೆ ಬಿಕರಿಗೆ ದೊರೆಯುವ ಸ್ಥಳ.

**ವಿಧಗಳು:** ಕರ್ತನೋಪಕರಣಗಳನ್ನು ಈ ಕೆಳಗಿನ ದರ್ಜೆಗಳಾಗಿ ವರ್ಗೀಕರಿಸಿದೆ; ಆಹಾರ ಸೇವನೆಯ ಕಾಲದಲ್ಲಿ ಬಳಸುವ ಚಾಕುಗಳು (ಟೇಬಲ್ ನೈವ್ಸ್), ತರಕಾರಿ ಹಾಗೂ ಮಾಂಸ ಕತ್ತರಿಸಲು ಉಪಯೋಗಿಸುವ ಕತ್ತಿಗಳು, ಕಿರಿಯ ಚೂರಿಗಳು, ಕತ್ತರಿಗಳು, ಬಾಳು ಕತ್ತಿಗಳು (ರೇಜರ್ಸ್), ಸೇಫ್ಟಿ ರೇಜರುಗಳು, ಕಾರ್ಖಾನೆಗಳಲ್ಲೂ ವ್ಯವಹಾರಗಳಲ್ಲೂ ಬೇಕಾಗುವ ಇತರ ವಿಶಿಷ್ಟ ಕರ್ತನೋಪಕರಣಗಳು. ವಿಧ ಯಾವುದೇ ಇರಲಿ, ಅದರ ಕತ್ತಿಯ ಹರಿತವಾದ ಅಲಗು ಆ ವಿಧದ ಉಪಯುಕ್ತತೆಯನ್ನು ನಿರ್ಧರಿಸುವುದು. ಅಲಗಿನ ತೀಕ್ಷ್ಣತೆ ಮತ್ತು ಬಾಳಿಕೆ ಬಳಸಿದ ಲೋಹದ ಅಥವಾ ಮಿಶ್ರಲೋಹದ ಗುಣಗಳನ್ನು ಅವಲಂಬಿಸಿವೆ. ಅಂತಿಮವಾಗಿ ಇದು ಮಾರುಕಟ್ಟೆಯಲ್ಲಿ ಬೇಡಿಕೆ ತಯಾರಿಕೆಯ ವೆಚ್ಚ ಮುಂತಾದುವುಗಳಿಂದ ಪ್ರಭಾವಿತವಾಗುವುದು.

ಆಹಾರಸೇವನೆಯ ಕಾಲದಲ್ಲಿ ಉಪಯೋಗಿಸುವ ಕರ್ತನೋಪಕರಣಗಳ ಅಲಗುಗಳನ್ನು ಐದು ಮುಖ್ಯ ಹಂತಗಳಲ್ಲಿ ತಯಾರಿಸುತ್ತಾರೆ. (ಇತರ ಅಲಗುಗಳಿಗೂ ಇವು ಅನ್ವಯವಾಗುತ್ತವೆ): 1 ಅಪೇಕ್ಷಿತ ಆಕಾರಕ್ಕೆ ಉಕ್ಕನ್ನು ರೂಪಿಸುವುದು; 2 ಗಡಸುಗೊಳಿಸುವಿಕೆ ಮತ್ತು ಹದಗೊಳಿಸುವಿಕೆ (ಹಾರ್ಡನಿಂಗ್ ಅಂಡ್ ಟೆಂಪರಿಂಗ್); 3 ಉಕ್ಕನ್ನು ಕರ್ತನಧಾರೆಯ ರೂಪಕ್ಕೆ ಅರೆಯುವುದು; 4 ಉಕ್ಕಿಗೆ ಮೆರುಗು ಕೊಡುವುದು; 5 ಸಮರ್ಪಕವಾದ ಹಿಡಿಯನ್ನು ತಯಾರಿಸಿ ಉಪಕರಣಕ್ಕೆ ಅದನ್ನು ಜೋಡಿಸುವುದು. (ಆರ್.ಕೆ.ಎಸ್.)

**ಕರ್ದಮ:** ಬ್ರಹ್ಮನ ಮಾನಸಪುತ್ರರಾದ ಬ್ರಹ್ಮಋಷಿಗಳಲ್ಲಿ ಒಬ್ಬ. ಮಹಾಭಾರತದಲ್ಲಿ ಇವನ ವಿಚಾರವಾಗಿ ಹೆಚ್ಚು ವಿವರಗಳಿವೆ. ಈತ ಸರಸ್ವತೀ ತೀರದಲ್ಲಿ ವಿಷ್ಣುವನ್ನು ಕುರಿತು ತಪಸ್ಸು ಮಾಡಿದ. ಪ್ರತ್ಯಕ್ಷನಾದ ವಿಷ್ಣುವನ್ನು ಸಂತಾನಾರ್ಥವಾಗಿ ತನಗೆ ಪತ್ನಿಯೊಬ್ಬಳು ಬೇಕೆಂದು ಬೇಡಿದ. ನೀನಿದ್ದೆಡೆಗೇ ಸ್ವಯಂಭುವ ಮನು ಬಂದು ತನ್ನ ಮಗಳನ್ನು ಕೊಡುವನು ಎಂದು ಹೇಳಿ ವಿಷ್ಣು ಅಂತರ್ಧಾನನಾದ. ಸ್ವಲ್ಪಕಾಲದಲ್ಲೆ ಸ್ವಯಂಭುವ ಮನು ತನ್ನ ಮಗಳಾದ ದೇವಹೂತಿಯನ್ನು ಅಲ್ಲಿಗೆ ಕರೆತಂದು ಕರ್ದಮನಿಗೆ ಕೊಟ್ಟು ಮದುವೆ ಮಾಡಿದ. ದೇವಹೂತಿಯಲ್ಲಿ ಕರ್ದಮನಿಗೆ ಕಳಾ, ಅನಸೂಯಾ, ಶ್ರದ್ಧಾ, ಹವಿರ್ಭುಕ್, ಅರುಂಧತಿ, ಶಾಂತಿ, ಗತಿ, ಕ್ರಿಯಾ, ಖ್ಯಾತಿ ಎಂಬ ಒಂಬತ್ತು ಮಂದಿ ಹೆಣ್ಣುಮಕ್ಕಳಾದರು. ಮುಂದೆ ಇವರು ಕ್ರಮವಾಗಿ ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ವಸಿಷ್ಠ, ಅಥರ್ವಮುನಿ, ಪುಲಹ, ಕ್ರತು, ಭೃಗು ಎಂಬ ಒಂಬತ್ತು ಮಹರ್ಷಿಗಳನ್ನು ಮದುವೆಯಾದರು. ಇದಾದ ಅನಂತರ ಕರ್ದಮನಿಗೆ ಸಂನ್ಯಾಸ ತೆಗೆದುಕೊಳ್ಳಬೇಕೆಂಬ ಇಚ್ಛೆ ಹುಟ್ಟಿತು. ಇದನ್ನು ಕರ್ದಮ ತನ್ನ ಹೆಂಡತಿಗೆ ತಿಳಿಸಲು ಅವಳು ತನಗೆ ಪುತ್ರ ಸಂತಾನವಾದ ಹೊರತು ಸಂನ್ಯಾಸವನ್ನು ತೆಗೆದುಕೊಳ್ಳಕೂಡದೆಂದು ಹೇಳಿದಳು. ಕರ್ದಮ ದೇವಹೂತಿಯಲ್ಲಿ ಕಪಿಲನೆಂಬ ಮಗನನ್ನು ಪಡೆದ ಅನಂತರ ಸಂನ್ಯಾಸಾಶ್ರಮಕ್ಕೆ ತೆರಳಿದ. (ಜಿ.ಎಚ್.)

**ಕರ್ನಲ್:** ಸೈನ್ಯದಲ್ಲಿ ಒಂದು ಉನ್ನತ ದರ್ಜೆ. ಇದು ಲೆಫ್ಟೆನೆಂಟ್ ಕರ್ನಲ್ ದರ್ಜೆಗಿಂತ ಮೇಲಿನದು ಮತ್ತು ಬ್ರಿಗೇಡಿಯರ್ ದರ್ಜೆಗಿಂತ ಕೆಳಗಿನದು. ಲೆಫ್ಟೆನೆಂಟ್ ಕರ್ನಲ್ ಆದವನು ಪದಾತಿ ಸೈನ್ಯದ ಒಂದು ಬಟಾಲಿಯನ್ನಿಗೆ ಅಧಿನಾಯಕ. ಕರ್ನಲುಗಳನ್ನು ರೆಜಿಮೆಂಟಿಗೆ ಹೊರತಾಗಿರುವಂತೆ ಸೇನಾಕೇಂದ್ರದ ಸಹಾಯಕ ವರ್ಗದಲ್ಲಾಗಲಿ ಬ್ರಿಗೇಡಿನಲ್ಲಾಗಲಿ ಕಮ್ಯಾಂಡಿನಲ್ಲಾಗಲಿ ಕಾರ್ಯಕ್ಷೇತ್ರದಲ್ಲಿ ನಿಯೋಜಿಸುತ್ತಾರೆ. ಕರ್ನಲ್ ಜನರಲ್ ಎಂಬ ಪದವನ್ನು ಹಿಂದೆ ಅನೇಕ ಸೈನ್ಯಗಳಲ್ಲಿ ಈಗಲೂ ಜರ್ಮನ್ ಸೇನೆಯಲ್ಲಿ ಆ ದರ್ಜೆಯ ಶ್ರೇಷ್ಠತೆಯ ಸಲುವಾಗಿ ಬಳಸುತ್ತಾರೆ. ಸಂಯುಕ್ತ ರಾಷ್ಟ್ರಗಳ ಸೇನೆಯಲ್ಲಿ ಅಧಿಕಾರಿಗಳು ಜ್ಯೇಷ್ಠಾನುಕ್ರಮದಲ್ಲಿ ಬಡತಿಯನ್ನು ಪಡೆಯಬಹುದಾದ ಶ್ರೇಷ್ಠತಮ ದರ್ಜೆ ಕರ್ನಲ್ ಪದವಿ. ಭಾರತ ದೇಶದಲ್ಲಿ ಲೆಫ್ಟೆನೆಂಟ್ ಕರ್ನಲುಗಳನ್ನು ಮೇಜರುಗಳಿಂದಲೂ ಕರ್ನಲಗಳನ್ನು ಲೆಫ್ಟೆನೆಂಟ್ ಕರ್ನಲುಗಳಿಂದಲೂ ಆರಿಸಿಕೊಳ್ಳುತ್ತಾರೆ. ಮೇಜರುಗಳು ತಮ್ಮ ದರ್ಜೆಗೆ ಜ್ಯೇಷ್ಠಾನುಕ್ರಮದಿಂದ ಏರುತ್ತಾರೆ. ಕೆಲವು ರೆಜಿಮೆಂಟುಗಳು ತಮ್ಮ ಯೋಗ ಕ್ಷೇಮವನ್ನು ನೋಡಿಕೊಳ್ಳಲು ಕೋರಿದಾಗ ಜನರಲ್ ಪದವೀಧರರಲ್ಲಿ ಕೆಲವರನ್ನು ಕರ್ನಲ್ ಕಮಾಂಡಂಟರನ್ನಾಗಿ ನೇಮಕಮಾಡುತ್ತಾರೆ. (ಎ.ಎನ್.ಎಸ್.ಎಂ.)

**ಕರ್ನಾಟಕ (ವ್ಯುತ್ಪತ್ತಿ):** ಕರ್ಣಾಟಕ, ಕರ್ಣಾಟ ಮತ್ತು ಕನ್ನಡ ಶಬ್ದಗಳು, ದೇಶ, ಭಾಷೆ, ಜನ ಮತ್ತು ಕುಲಗಳನ್ನು ನಿರ್ದೇಶಿಸುತ್ತವೆ. ಕವಿರಾಜಮಾರ್ಗದಲ್ಲಿಯೂ ಆಂಡಯ್ಯನ ಕಬ್ಬಿಗರ ಕಾವದಲ್ಲಿಯೂ ಕನ್ನಡ ದೇಶವಾಚಕವಾಗಿದೆ. ಚೆನ್ನಬಸವೇಶ್ವರ, ನಿಜಗುಣ ಶಿವಯೋಗಿಗಳ ಉಲ್ಲೇಖನಗಳಲ್ಲಿ ಅದು ಕುಲವಾಚಕವಾಗಿ ಬಂದಿರುವಂತೆ ತೋರುತ್ತದೆ. ಮುಖ್ಯವಾಗಿ ಆ ಶಬ್ದಗಳು ದೇಶ ಮತ್ತು ಭಾಷಾ ವಾಚಕಗಳಾಗಿಯೇ ಪ್ರಯೋಗವಾಗುತ್ತವೆ. ಈ ಲೇಖನದಲ್ಲಿ ಕರ್ಣಾಟಕ ಶಬ್ದದ ವ್ಯುತ್ಪತ್ತಿ ಮತ್ತು ಅರ್ಥವ್ಯಾಪ್ತಿಯನ್ನು ಕುರಿತು ವಿವೇಚಿಸಲಾಗಿದೆ.

ಕರ್ಣಾಟ ಶಬ್ದದ ಪೂರ್ವಪ್ರಯೋಗಗಳು ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಸಂಸ್ಕೃತ ಮಹಾಭಾರತದಲ್ಲಿ (ಪ್ರ.ಶ. 320–200?) ಜನಪದಗಳನ್ನು ಕುರಿತು ಹೇಳುವಾಗ ಸಭಾಪರ್ವದಲ್ಲಿ ಕರ್ಣಾಟಾಃ ಎಂದೂ (78–98), ಭೀಷ್ಮಪರ್ವದಲ್ಲಿ ಕರ್ಣಾಟಿಕಾಃ ಎಂದೂ (9–59) ಎರಡು ಮಾತುಗಳು ಬಂದಿವೆ. ಶೂದ್ರಕ ಕವಿಯ (ಪ್ರ.ಶ.ಸು. 400) ಮೃಚ್ಛಕಟಿಕ ನಾಟಕದ ಒಂದು ಸಂವಾದದಲ್ಲಿ, ವರಾಹಮಿಹಿರನ (ಪ್ರ.ಶ.ಸು. 6ನೆಯ ಶತಮಾನದ ಆದಿಭಾಗ) ಬೃಹತ್ಸಂಹಿತೆಯಲ್ಲಿ, ಮಾರ್ಕಂಡೇಯ ಪುರಾಣ (ಪ್ರ.ಶ.ಸು 8ನೆಯ ಶ.?) ಮತ್ತು ಸೋಮದೇವನ ಕಥಾಸರಿತ್ಸಾಗರಗಳಲ್ಲಿ ಕರ್ಣಾಟ ಶಬ್ದವನ್ನು ಕಾಣಬಹುದೆಂದು ವಿದ್ವಾಂಸರು ತಿಳಿಸಿದ್ದಾರೆ. ಗುಣಾಢ್ಯನ ಬೃಹತ್ಕಥೆಯಿಂದ ಆ ಪದವನ್ನು ಸೋಮದೇವ ಎತ್ತಿಕೊಂಡಿದ್ದ ಪಕ್ಷಕ್ಕೆ ಆ ಶಬ್ದದ ಬಳಕೆ ಪ್ರ.ಶ. 1–2 ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆನ್ನಬಹುದು. ಈಚೆಗೆ ರಾಜಶೇಖರನ (ಪ್ರ.ಶ. 10ನೆಯ ಶ.) ಕಾವ್ಯಮೀಮಾಂಸಾ ಗ್ರಂಥದಲ್ಲಿ ಕನ್ನಡಿಗರ ಪಠನ ರೀತಿಯನ್ನು ಕುರಿತು ಹೇಳುವಾಗ ರಸಃ ಕೋಪ್ಯಸ್ತುಕಾಪ್ಯಸ್ತು ರೀತಿಃ ಸಗರ್ವಂ ಸರ್ವಕರ್ಣಾಟಕಾಃ ಟಂಕಾರೋತ್ತರ ಪಾಠಿನಃ–ಎಂಬ ಸ್ವಾರಸ್ಯಕರವಾದ ಮಾತು ಬಂದಿದೆ.

ಶಿಲಪ್ಪದಿಗಾರಂ ಎಂಬ ಪ್ರಾಚೀನ ತಮಿಳು ಸಾಹಿತ್ಯ ಕೃತಿಯಲ್ಲಿ (ಪ್ರ.ಶ.ಸು. 2–5) ಕರುನಾಡರ್ ಎಂಬ ಶಬ್ದವೂ ಪಾಂಡ್ಯ ದೊರೆ ಶಡೈಯನ್ ಪರಾಂತಕ ವೇಳ್ವಿಕುಡಿ ತಾಮ್ರ ಶಾಸನದಲ್ಲಿ (ಪ್ರ.ಶ.ಸು. 770) ಕರುನಾಡಗನ್ ಎಂಬ ಶಬ್ದವೂ ದೊರೆಯುತ್ತವೆ. ಹಾಗೆಯೇ

ಕನ್ನಾಡಗರುಂ, ಕನ್ನಾಟ, ಕನ್ನಾಟಕ ಎಂಬ ರೂಪಗಳೂ ತಮಿಳುಶಾಸನಗಳಲ್ಲಿ ಕಂಡುಬಂದಿವೆ. ಅಪಭ್ರಂಶ ಪ್ರಾಕೃತದಲ್ಲಿ ಕನ್ನಾಡ, ಪಾಲಿಯಲ್ಲಿ ಕಣ್ಣಾಟ, ಗುಜರಾತಿ ಮೊದಲಾದುವುಗಳಲ್ಲಿ ಕನಡಿ, ಮರಾಠಿಯಲ್ಲಿ ಕಾನಡಿ ಎಂಬ ರೂಪಗಳುಂಟು. ಬಿ. ಎ. ಸಾಲೆತೊರೆ ಅವರ ಪ್ರಕಾರ ಪಾಶ್ಚಾತ್ಯರು ಕನ್ನಡ ಭಾಷೆಯ ಹೆಸರನ್ನು ಪ್ರ.ಶ. 1516ರಲ್ಲಿ Canari, 1520ರಲ್ಲಿ Canarim, 1552ರಲ್ಲಿ Canarij, 1615ರಲ್ಲಿ Canarin 1654ರಲ್ಲಿ Cannary ಎಂದೂ ನಡುನಡುವೆ ಎಷ್ಟೋ ಬಾರಿ Carnatic, Carnate, Karnat- ಎಂದು ಮುಂತಾಗಿ ಬರೆಯುತ್ತಿದ್ದರೆಂದು ತಿಳಿಯುತ್ತದೆ.

ಕನ್ನಡ ಭಾಷೆಯಲ್ಲಿಯೇ ಬಹುಸಂಖ್ಯೆಯ ಪ್ರಾಚೀನ ಶಾಸನಗಳಲ್ಲಿ ಹಾಗೂ ಗ್ರಂಥಗಳಲ್ಲಿ ಕರ್ಣಾಟ ಮತ್ತು ಸದೃಶ ಶಬ್ದಗಳಾದ ಕರ್ಣಾಟಕ, ಕರ್ನಾಟ, ಕರ್ನಾಟಕ, ಕನ್ನಡ ಮುಂತಾದವು ಬಳಕೆಯಾಗಿವೆ. ಉತ್ತರ ಕರ್ಣಾಟಕದಲ್ಲಿ, ವ್ಯವಹಾರದಲ್ಲಿ ಕನ್ನಡು ಎಂಬ ಮಾತುಂಟು. ಸುಮಾರು 7–8ನೆಯ ಶತಮಾನದಿಂದ ಶಾಸನಗಳಲ್ಲಿ ಈ ಶಬ್ದಗಳ ರೂಪಗಳು ಬಳಕೆಯಾಗಿರುವಂತೆ ತೋರುತ್ತವೆ. 90ಕ್ಕೆ ಮೇಲ್ಪಟ್ಟ ಅಂಥ ಶಾಸನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.

ಇವುಗಳ ಆಧಾರದಿಂದ ಕನ್ನಡನಾಡು ಬಹು ಹಿಂದಿನ ಕಾಲದಿಂದಲೂ ಕರ್ಣಾಟ, ಕರುನಾಡು ಮುಂತಾದ ಹೆಸರುಗಳಲ್ಲಿ ಅಸ್ತಿತ್ವದಲ್ಲಿದೆಯೆಂಬುದಾಗಿ ತಿಳಿಯುತ್ತದೆ.

ಕಾಲ್ಡ್‌ವೆಲ್ ಅವರು ಕರ್ಣಾಟಕ ಎಂಬ ಪದ ಈಚೆಗೆ ವಿಪರೀತವಾದ ಅರ್ಥವನ್ನು ಪಡೆಯಿತೆಂದು ಹೇಳಿದ್ದಾರೆ. ಈ ಮೊದಲು ಕರ್ಣಾಟಕ ಎಂಬುದು ದಕ್ಷಿಣ ಹಿಂದೂಸ್ತಾನದ ಎತ್ತರವಾದ ಪ್ರಾಂತ್ಯಕ್ಕೆ ಕೊಟ್ಟ ಹೆಸರಾಗಿತ್ತು. ಈಚೆಗೆ ವಿದೇಶೀಯರ ಕೈಯಲ್ಲಿ ಅದಕ್ಕೆ ವಿಪರೀತವಾದ ಅರ್ಥ ಬಂತು. ಮಹಮ್ಮದೀಯರು ದಕ್ಷಿಣ ಭಾರತಕ್ಕೆ ಬಂದ ಮೊದಲಲ್ಲಿ ತಮಗೆ ಮೊದಲು ಪರಿಚಿತವಾದ ಮೈಸೂರು ಮತ್ತು ತೆಲಂಗಾಣದ ಭಾಗಗಳನ್ನೊಳಗೊಂಡ ಘಟ್ಟಗಳ ಮೇಲಿನ ಪ್ರದೇಶವನ್ನು ಕರ್ಣಾಟಕ ದೇಶವೆಂದು ಕರೆದರು. ಕಾಲಕ್ರಮದಲ್ಲಿ ಅವರು ಆ ಹೆಸರನ್ನು ಘಟ್ಟಗಳ ಕೆಳಗಿನ ಪ್ರದೇಶಕ್ಕೂ ಕೊಟ್ಟರು. ಅನಂತರದಲ್ಲಿ ಇಂಗ್ಲಿಷರು ವಾಸ್ತವವಾಗಿ ಆ ಹೆಸರಿಗೆ ಏನೂ ಸಂಬಂಧವೇ ಇಲ್ಲದ ಘಟ್ಟದ ಕೆಳಗಿನ ಪ್ರದೇಶಕ್ಕೆ ಮಾತ್ರ ಆ ಹೆಸರನ್ನು ಸೀಮಿತಗೊಳಿಸಿದರು. ಈ ಕಾರಣವಾಗಿ ನಿಜವಾಗಿ ಕರ್ಣಾಟಕ ಎಂಬ ಶಬ್ದ ಯಾವ ಪ್ರದೇಶವನ್ನು ಸೂಚಿಸಬೇಕಾಗಿತ್ತೋ ಅದು ಹೋಗಿ ಕರ್ನಾಟಿಕ್ ಎಂಬುದು ತಮಿಳು ದೇಶವನ್ನೂ ತೆಲುಗು ದೇಶದ ನೆಲ್ಲೂರು ಜಿಲ್ಲೆಯನ್ನೂ ಒಳಗೊಂಡು ಪೂರ್ವ ಸಮುದ್ರತೀರದಲ್ಲಿರುವ ಘಟ್ಟದ ಕೆಳಗಿನ ಪ್ರಾಂತ್ಯಕ್ಕೆ ಮಾತ್ರ ಅನ್ವಯಿಸುವಂತಾಯಿತು.

ಕವಿರಾಜಮಾರ್ಗದ ಉಲ್ಲೇಖದ ಪ್ರಕಾರ ಕನ್ನಡನಾಡು ಎಂಬುದು ದಕ್ಷಿಣದ ಕಾವೇರಿಯಿಂದ ಮೇಲೆ ಗೋದಾವರಿಯವರೆಗಿದ್ದ ನಾಡು. ನಂಜುಂಡ ಕವಿಯ (ಪ್ರ. ಶ. ಸು. 1525) ರಾಮನಾಥ ಚರಿತದಲ್ಲಿಯ ಉಲ್ಲೇಖವೂ ಈ ವಿಷಯವನ್ನು ತಿಳಿಸುತ್ತದೆ. ಕವಿರಾಜಮಾರ್ಗಕರ್ತೃ ಹೇಳುವ ಪ್ರಕಾರ, ಬಿಜಾಪುರ ಜಿಲ್ಲೆಯ ಪಟ್ಟದಕಲ್ಲು, ರಾಯಚೂರು ಜಿಲ್ಲೆಯ ಕೊಪ್ಪಳ, ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ ಹಾಗೂ ಬೆಳಗಾಂವಿ ಜಿಲ್ಲೆಯ ಒಂಕುಂದ–ಇವುಗಳ ನಡುವೆಯಿದ್ದ ಪ್ರದೇಶ ಕನ್ನಡ ನಾಡಿನ ತಿರುಳು ಶಾಸನಗಳು, ಸಾಹಿತ್ಯ, ಸ್ಥಳನಾಮಗಳು ಮೊದಲಾದವುಗಳ ಆಧಾರದ ಮೇಲೆ ಹಿಂದಿನ ನಿಜಾಂಶಾಹಿಯ ಅತಿ ಪಡುವಲ ಸ್ಥಾನದಿಂದ ಹಿಡಿದು ಅತಿ ಮೂಡಲ ಸ್ಥಾನದವರೆಗಿನ ಪ್ರದೇಶವೂ ಹಿಂದಿನ ಮದ್ರಾಸ್ ಪ್ರಾಂತ್ಯದ ವೆಂಗಿಮಂಡಲ ಮತ್ತು ಗೋದಾವರೀ ಕೃಷ್ಣಾನದಿಗಳ ನೀರು ಹರಿಯುವ ಜಿಲ್ಲೆಗಳೂ ಹಿಂದಿನ ಮಹಾರಾಷ್ಟ್ರದ ಭಾಗಗಳೂ ಇನ್ನೂ ದಕ್ಷಿಣದಲ್ಲಿ ನೀಲಗಿರಿ, ಕೊಯಮತ್ತೂರು, ಸೇಲಂ ಜಿಲ್ಲೆಗಳೂ ಕನ್ನಡಭೂಮಿಯಾಗಿತ್ತೆಂದು ಕೆಲವು ಚರಿತ್ರಕಾರರು ಹೇಳಿದ್ದಾರೆ. ರಾಜಕೀಯ ಕಾರಣಗಳಿಂದಾಗಿ ಕಾಲಕಾಲಕ್ಕೆ ಕನ್ನಡನಾಡಿನ ಸೀಮಾರೇಖೆಗಳು ಸಂಕೋಚಗೊಂಡಿವೆ.

ಕರ್ಣಾಟ(ಕ) ಎಂಬ ಪದದ ಸರಿಯಾದ ರೂಪ ಯಾವುದು, ಅರ್ಥವೇನು, ನಿಷ್ಪತ್ತಿ ಹೇಗೆ–ಎಂಬ ವಿಷಯದಲ್ಲಿ ಚರಿತ್ರಕಾರರೂ ಸಾಹಿತ್ಯಜ್ಞರೂ ತುಂಬ ಜಿಜ್ಞಾಸೆ ಮಾಡಿರುವುದು ಕಾಣುತ್ತದೆ. ಆ ಪದದ ಸಂಬಂಧವಾಗಿಯೇ ಕನ್ನಡ ಪದವೂ ವಿಚಾರಕ್ಕೆ ಸೇರಿಕೊಂಡಿದೆ. ವಿಚಾರಮಂಥನ ನಡೆದು ಭಿನ್ನ ಭಿನ್ನ ಮತಗಳು ವ್ಯಕ್ತಪಟ್ಟಿವೆ. ಆದರೆ ಒಮ್ಮತವಾದ ಅಥವಾ ಬಹುಜನ ಸಮ್ಮತವಾದ ನಿರ್ಣಯ ಮಾತ್ರ ಇನ್ನೂ ಸಾಧ್ಯವಾಗಿಲ್ಲ. ನಿಶ್ಚಿತ ಪ್ರಮಾಣಗಳ ಅಭಾವವೇ ಇದಕ್ಕೆ ಮುಖ್ಯ ಕಾರಣ. ಕೆಲವು ಅಭಿಪ್ರಾಯಗಳನ್ನು ಇಲ್ಲಿ ಸಂಕ್ಷೇಪವಾಗಿ ಸೂಚಿಸಬಹುದು.

(ಅ) ಕರ್ಣಾಟ(ಕ) ಎಂಬ ಪದಕ್ಕೆ ಸಂಸ್ಕೃತ ಮೂಲವಾಗಿ ನಿಷ್ಪತ್ತಿಯನ್ನು ಕೊಡುವ ಹಳೆಯ ಉಲ್ಲೇಖಗಳಲ್ಲಿ ಇವು ಪ್ರಸಿದ್ಧವಾಗಿವೆ; ಕರ್ಣೇಷು ಅಟತಿ– ಪ್ರಭೂತತಯಶಸ್ವಿನ ಏತದ್ದೇಶಸ್ಯ ರಾಜ್ಞೋ ಗುಣಾದಿ ಕೀರ್ತನೇನ ಸರ್ವೇಷಾಂಕರ್ಣೇಷು ಭ್ರಮತೀತಿ. ಕರ್ಣ + ಅಟ್ + ಅಚ್ (ಯಾವ ದೇಶದ ರಾಜನ ಕೀರ್ತಿ ಎಲ್ಲರ ಕಿವಿಯಲ್ಲಿಯೂ ಮೊಳಗುತ್ತಿರುವುದೊ ಆ ದೇಶ). ಇದು ಶಬ್ದರತ್ನಾವಲಿಯಲ್ಲಿ ಸಿಗುವ ಆಧಾರ. ಕೇಶವವರ್ಣಿಯೆಂಬ (ಪ್ರ.ಶ. 1356) ಜೈನ ಪಂಡಿತನ ಪ್ರಕಾರ ಭೇದನಾರ್ಥಕವಾದ ಕರ್ಣ ಧಾತುವಿನಿಂದ ಕರ್ಣಾಟ ಪದವಾಯಿತು. ದಿವ್ಯಭಾಷೆಯಿಂದ ಬೇರೆಯಾಗಿ ವ್ಯವಹಾರದಲ್ಲಿರುವ ಭಾಷೆಯೆಂದು ಆ ಪದದ ಅರ್ಥ. ವೆಂಕಟಾಧ್ವರಿಯ (ಪ್ರ.ಶ.ಸು. 1700) ವಿಶ್ವಗುಣಾದರ್ಶದಲ್ಲಿ ಕರ್ಣಾಟ ದೇಶೋ ಯಃ ಪೂರ್ವಂ ಕರ್ಣದೇಶಮಭೂಷಯಾತ್ ಸ ಏಷ ಸಾಂಪ್ರತಂ ಪಶ್ಯ ಚಕ್ಷುಷೋರ್ಭೂಷಣಾಯತೇ॥ ಎಂದೂ ಕರ್ಣಯೋಃ ಅಟತೀತಿ ಕರ್ಣಾಟಃ ಅಟ ಗತೌ ಇತಿಧಾತೋಃ ನಿಷ್ಪನ್ನಶ್ಶಬ್ದಃ ॥ ಎಂದೂ ನಿರೂಪಣೆಯಿದೆ. ಸ್ಕಂದಪುರಾಣದ ಪ್ರಕಾರ ಕರ್ಣಾಟನೆಂಬ ರಾಕ್ಷಸನಿಂದ ನಾಡಿಗೆ ಈ ಹೆಸರಾಯಿತಂತೆ.

ಕವಿಕಲ್ಪಿತಗಳೆಂದು ಹೇಳಿ ಈ ಅರ್ಥ ಮತ್ತು ನಿಷ್ಪತ್ತಿಗಳನ್ನು ರಾ. ನರಸಿಂಹಾಚಾರ್ ಮೊದಲಾದ ಮಹನೀಯರು ಗ್ರಾಹ್ಯಮಾಡಿಲ್ಲ. ರಾಜವಾಡೆಯವರು ಕರಣ+ನಟ=ಕರ್ಣಾಟ ಎಂದು ನಿಷ್ಪತ್ತಿ ಹೇಳಿದ್ದಾರೆ. ಮನು ತನ್ನ ಕಾಲದ ವ್ರಾತ್ಯ ಕ್ಷತ್ರಿಯರ ಪಂಗಡಗಳನ್ನು ವಿವರಿಸುತ್ತ ನಟಶ್ಚ ಕರಣಶ್ಚೈವ ಎಂಬುದಾಗಿ ಎರಡು ಬಗೆಗಳನ್ನು ಕೂಡ ಹೇಳಿದ್ದಾನೆ ಎಂಬ ಆಧಾರವನ್ನು ಹಿಡಿದು, ಕರಣ ಮತ್ತು ನಟರ ಸಮ್ಮಿಶ್ರ ಪಂಗಡವೇ ಕರ್ಣಾಟವೆಂದು ಗ್ರಹಿಸಿದ್ದಾರೆ. ಇದನ್ನು ವಿಮರ್ಶಿಸುತ್ತ ಶಂ. ಬಾ. ಜೋಶಿಯವರು ಬೇರೆ ಸ್ಮೃತಿಗಳಲ್ಲಿಯೂ ನಟರ ಉಲ್ಲೇಖಗಳನ್ನು ಗುರುತಿಸಿ ಮತ್ಸ್ಯ ಪುರಾಣದಲ್ಲಿ ಕರ್ಣ ಎಂದಿರುವ ಜನಪದ ವಾಚಕವನ್ನು ಕರಣ ಎಂಬುದರೊಡನೆ ಅಭಿನ್ನವಾಗಿ ಗ್ರಹಿಸಿ, ಕರಣ+ನಟ–ಕರ್ಣ್ನಾಟ > ಕರ್ಣಾಟ ಎಂದೋ ಕರ್ಣ+ನಟ=ಕರ್ಣಾಟ ಎಂದೋ ಆಗಬಹುದೆಂದು ಸೂಚಿಸಿ, ಆ ಶಬ್ದಗಳ ಮೂಲವನ್ನು ಮಾತ್ರ ದೇಶೀಯವೆಂದು (ಕನ್ನಡವೆಂದು) ಹೇಳಿದ್ದಾರೆ. ಆದರೆ ಈ ಸಮೀಕರಣಗಳನ್ನು ಪುಷ್ಟೀಕರಿಸುವ ಬೇರೆ ಪ್ರಮಾಣಗಳಿಲ್ಲ.

(ಆ) ಕನ್ನಡ ಎಂಬ ದೇಶ್ಯ ಶಬ್ದವೇ ಕರ್ಣಾಟ(ಕ) ಎಂಬ ಸಂಸ್ಕೃತರೂಪವನ್ನು ಆನಂತರದಲ್ಲಿ ಪಡೆಯಿತು ಎನ್ನುವ ಆಧುನಿಕ ಭಾಷಾವಿದ್ವಾಂಸರ ಕೆಲವು ಅಭಿಪ್ರಾಯಗಳು ಹೀಗಿವೆ:

1. ಗುಂಡರ್ಟನ ಪ್ರಕಾರ ದಕ್ಷಿಣ ದಕ್ಖನಿನ ನೆಲ ಕಪ್ಪುಮಣ್ಣಿನ ಭೂಮಿಯಾಗಿದೆ; ಆದ್ದರಿಂದ ಕರ್‌ನಾಡು (ಕಪ್ಪು ನಾಡು) ಎಂಬುದು ಕರ್ಣಾಟದ ಮೂಲರೂಪ. ಕರ್+ನಾಟ್+ಅಗಂ ಎಂದರೆ ಕಪ್ಪುನಾಡಿನ ಒಳಭಾಗ (ಪ್ರದೇಶ)– ಎಂಬುದು ಕೂಡ ಅವರ ಇನ್ನೊಂದು ಸೂಚನೆ. ಮೊದಲನೆಯದನ್ನು ಕಾಲ್ಡ್‌ವೆಲ್ ಮತ್ತು ಆರ್. ರಘುನಾಥರಾಯರು ಒಪ್ಪಿದ್ದಾರೆ; ಎರಡನೆಯದನ್ನು ಉದ್ಧರಿಸಿದ್ದಾರೆ.

2. ಕನ್ನಡನಾಡು ಸಮುದ್ರ ಮಟ್ಟಕ್ಕಿಂತ ಎತ್ತರವಾಗಿ ಘಟ್ಟದ ಮೇಲಿದೆ. ಕರುನಾಡು ಎಂಬುದು ಕರುಮಾಡ ಎಂಬಂತೆ ಸೀಮೆ (ಕಣಿವೆ ಮೇಲಣ ಸೀಮೆ) ಆದ್ದರಿಂದ ಕರು–ನಾಡು (ಎತ್ತರವಾದ ನಾಡು) ಎಂಬುದು ದ್ರಾವಿಡಭಾಷೆಗಳಲ್ಲಿ ಮುಂದೆ ಕನ್ನಡ ಎಂಬುದಾಗಿಯೂ ಸಂಸ್ಕೃತದಲ್ಲಿ ಕರ್ಣಾಟ ಎಂಬುದಾಗಿಯೂ ಪರಿವರ್ತಿಸಿರಬಹುದು. ಇದು ಎಚ್. ನಾರಾಯಣರಾಯರ ಅಭಿಪ್ರಾಯ.

3. ಕರುನಡಂ (= ಕನ್ನಡ): ಕರ್ಣಾಟ. ಕರುನಡಂ ಎಂಬುದೂ ಕನ್ನಡಂ ಎಂಬುದೂ ತಮಿಳು ಲಕ್ಷಣ ಗ್ರಂಥಗಳ ವೃತ್ತಿಗಳಲ್ಲಿ ಉಕ್ತವಾಗಿವೆ. ತಮಿಳಿನಲ್ಲಿ ಕರು ಎಂದರೆ ಬೆಟ್ಟ ಎಂದರ್ಥ. ಕೀಳ್ನಾಡಿನವರಾದ ತಮಿಳರು ಮೇಲ್ನಾಡನ್ನು ಕರುನಾಡು–ಕರುನಡ ಎಂದು ಕರೆದಿರಬಹುದು; ಕಮ್ಮಿತು + ನಡೆ (ಕಂ+ನಡೆ>ಕನ್ನಡ). ಇದು ಆರ್. ತಾತಾಚಾರ್ಯರ ಅಭಿಮತ.

4. ಕರಂ, ಕರು, ಕಡು ಎಂಬವು ದೊಡ್ಡ, ವಿಸ್ತಾರವಾದ ಮಹಾ ಎಂಬ ಅರ್ಥದ ಪದಗಳು. ಆದ್ದರಿಂದ ಕರುನಾಡು ಎಂದರೆ ಮಹಾರಾಷ್ಟ್ರ. ಕರು + ನಾಡು > ಕರ್ + ನಾಡು > ಕರ್ನಾಡು (=ದೊಡ್ಡ ದೇಶ) ಎಂಬ ಕನ್ನಡ ಸಮಾಸಪದವೇ ಸಂಸ್ಕೃತದಲ್ಲಿ ಕರ್ಣಾಟ ಎಂದು ಆಗಿರಬೇಕು. ಇದು ಎಂ.ಗೋವಿಂದ ಪೈಗಳ ಮತ. ರಾ. ಹ. ದೇಶಪಾಂಡೆಯವರ ಅಭಿಪ್ರಾಯವೂ ಒಟ್ಟಿನಲ್ಲಿ ಇದೇ ಆಗಿದೆ.

5. (ಪರಿಮಳವಾಚಿಯಾದ) ಕಮ್ಮಿತು + ನಾಡು=ಕನ್ನಾಡು > ಕನ್ನಡು > ಕನ್ನಡ. ಕನ್ನಡ ಎಂಬ ಪದಕ್ಕೆ ಪರಿಮಳ ವಿಶಿಷ್ಟವಾದ ದೇಶದ ಭಾಷೆ ಎಂದು ಅರ್ಥ. ಕನ್ನಡ ದೇಶ ಗಂಧದ ಮರದ ಕಾಡುಗಳಿಗೂ ತಾವರೆಕೊಳಗಳಿಗೂ ಪ್ರಸಿದ್ಧಿಪಡೆದಿರುವುದರಿಂದ ಕಮ್ಮಿತು ಎಂಬ ವಿಶೇಷಣ ಅನುರೂಪವಾದುದು–ಎಂದು ರಾ. ನರಸಿಂಹಾಚಾರ್ಯರು ಹೇಳುತ್ತಾರೆ. ಆರ್. ತಾತಾಚಾರ್ಯರು ಈ ಅಭಿಪ್ರಾಯವನ್ನು ಒಪ್ಪಿಕೊಂಡಿರುವಂತೆ ತೋರುತ್ತದೆ.

6. ಕನ್ (ಎಂದರೆ ಕಾಣು ಅಥವಾ ಒಡಮೂಡು) ಎಂಬ ಧಾತುವಿನಿಂದ ಕನ್ನಡ ಹುಟ್ಟಿದೆ. ಕನ್ + ಅಳ್ =ಕನ್ನಳ್, ಕನ್ನಡ. ಕನ್ – ಅಳ್ = ಒಡಮೂಡುವುದನ್ನು ಉಳ್ಳದ್ದು; ಭಾವಗಳನ್ನು ಒಡಮೂಡಿಸುವುದು – ಕನ್ನಡ. ಹೀಗೆಂದು ದ. ರಾ. ಬೇಂದ್ರೆ ಮತ್ತು ಬೆಟಗೇರಿ ಕೃಷ್ಣಶರ್ಮರ ಅಭಿಪ್ರಾಯ.

7. ಕರ್– ನಾಟ್– ಅಗಂ ಎಂದರೆ ಕರಿಯ ನಾಡನ್ನು ಒಳಗೊಂಡ ಪ್ರದೇಶ. ಆದರೆ ಶಬ್ದರೂಪ ಕರ್ಣಾಟಕವೇ ಹೊರತು ಕರ್ನಾಟಕ ಅಲ್ಲ. ಇದು ಬಿ.ಎಂ.ಶ್ರೀ. ಅವರ ಧೋರಣೆ. ಒಟ್ಟಿನಲ್ಲಿ ಇದು ಗುಂಡರ್ಟ್ ಅವರ ಅಭಿಪ್ರಾಯವನ್ನು ಪೋಷಿಸುತ್ತದೆ.

8. ಮೊಹೆಂಜೋದಾರೋ ಚಿತ್ರಲಿಪಿಯ ಸಂಕೇತವನ್ನು ಗಮನಿಸಿದರೆ ಕಣ್‌ನಿರ್ ಪದದ ಸಂಸ್ಕೃತರೂಪ ಕರ್ಣಾಟಕ ಆಗಿರಬಹುದು– ಎಂದರೆ ಫಾದರ್ ಹೆರಾಸರ ಮತ.

9. ಅಡಿಯಲ್ಲಿ ಕಣ್ಣುಳ್ಳವರು ಯಾರೋ ಅವರು ಕನ್(ಣ್) + ಅಡಿಗರ್ ಅರ್ಥಾತ್ ಕನ್ನಡಿಗರು– ಎಂಬುದು ರೆ. ಚನ್ನಪ್ಪ ಉತ್ತಂಗಿಯವರ ಮತ.

10. ಕನ್ನಡದ ರಾಜಕುಲಕ್ಕೆ ಕದಂಬ ಅಥವಾ ಕರಂಬ ಎಂಬ ಹೆಸರಿದೆ. ಆ ಕರ್ ಅಲ್ಲವೆ ಕನ್ ಎಂಬ ದಸ್ಯುವರ್ಗದಿಂದ ಕನ್ನಡ ಎಂಬ ಹೆಸರಾಗಿರಬಹುದು. ಕರು ಪದಕ್ಕೆ ಎತ್ತರ, ಶಿಖರ, ಮಹತ್ತು ಎಂಬ ಅರ್ಥಗಳಿರುವುದು ತಿಳಿದಿದೆ. ಕನ್ ಮತ್ತು ಕರ್ ಎಂಬ ರೂಪಗಳು ಅಭಿನ್ನ. ಅದರಿಂದ ಕನ್ + ನಾಡು= ಕನ್ನಾಡು(ಕನ್ನಡ); ಕರ್ + ನಾಡು =ಕರುನಾಡು (ಕರುನಾಡಗ, ಸಂ. ಕರ್ಣಾಟಕ); ಕಱು ತಳದ ನಾಟರೇ ಕನ್ನಡಿಗರು. ಆದಿಜನಾಂಗದೊಳಗಿನವರಾದ ಕನ್ ಮತ್ತು ನಾಟರು ಬೆರೆದು ಕನ್ನಡಿಗರೆನ್ನಿಸಿರಬಹುದು. ಇದು ಮುಳಿಯ ತಿಮ್ಮಪ್ಪಯ್ಯನವರ ವಾದ.

11. ಶ್ರೀಶೈಲಪರ್ವತದ ತಪ್ಪಲಿನಲ್ಲಿ ಹಿಂದಿನ ಕಾಲದಲ್ಲಿ ಕಣ್ಣ ವಿಷಯ (ಕರ್ಣಾಟ ಸೀಮಾ), ಕನ್ನಾಡು ಎಂಬ ಚಿಕ್ಕ ಜಿಲ್ಲೆಯಿತ್ತು; ಆ ಮೂಲಕವಾಗಿಯೇ ತಮ್ಮ ನಾಡಿಗೆ, ನುಡಿಗೆ ಕನ್ನಡಿಗರು ಆ ಹೆಸರನ್ನು ಪಡೆದುಕೊಂಡರು ಎಂದು ತೋರುತ್ತದೆಂದು ಹೇಳಿದ್ದಾರೆ, ಎನ್. ವೆಂಕಟರಮಣಯ್ಯನವರು.

12. ಳ–ಣ–ನ ಗಳಲ್ಲಿ ಪರಸ್ಪರವಾಗಿ ಪಲ್ಲಟವುಂಟು. ಕಳವರು (ಕಳ್ವರು ಅಥವಾ ಕಳ್ಳರು=ಕಳಭ್ರರು) ಎಂಬ ದ್ರಾವಿಡ ವರ್ಗದ ಬಹುಪ್ರಾಚೀನ ಶಾಖೆಯ ಜನಾಂಗವೇ ಕಣ್ಣರು ಅಥವಾ ಕನ್ನರು. ಕನ್ನರ ನಾಡು ಕನ್ನಾಡು (ಕನ್ನಡ). ಇದು ಕನ್ನಾಡು>ಕನ್ನಾಟ>ಕರ್ಣಾಟ ಈ ಕ್ರಮದಿಂದ ಸಂಸ್ಕೃತದಲ್ಲಿ ಸೇರಿಕೊಂಡಿದೆ, ಕರ್ಣಾಟಕದಲ್ಲಿರುವ ದ್ವಿರುಕ್ತಿದೋಷ ಕನ್ನಾಡ (ಕನ್ನಡ)ದಲ್ಲಿ ಸ್ವಲ್ಪವೂ ಇಲ್ಲ. ಇದು ಶಂ.ಬಾ. ಜೋಶಿಯವರ ಮತ.

13. ಕನ್ನಾಡ ಅಥವಾ ಕರ್ನಾಡು ಎಂಬ ಪದದ ಮೂಲ ಅರ್ಥ ಒಂದು ಮಹಾನಾಡು ಅಥವಾ ಒಂದು ಎತ್ತರವಾದ ನಾಡು ಎಂದಿದ್ದು, ಇವನ್ನು ಸಂಸ್ಕೃತರೂಪಕ್ಕೆ ತಿರುಗಿಸಿದಾಗ ಕರ್ನಾಟ, ಕರ್ನಾಟಕ, ಮಹಾರಾಷ್ಟ್ರ ಆಗಿರಬೇಕು–ಎಂದು ಬಿ.ಎ.ಸಾಲೆತೊರೆಯವರ ವಾದ.

14. ಕಣಾ(ನಾ)ರ್ಟ, ಕಣಾ(ನಾ)ರ್ಟಕ ಶಬ್ದಗಳು ಮೂಲತಃ ಸಂಸ್ಕೃತ ಶಬ್ದಗಳಲ್ಲ. ಪುನ್ನಾಡು ಸಂಸ್ಕೃತಕ್ಕೆ ಬರುವಾಗ ಪುನ್ನಾಟ ಆದಂತೆ ಕರ್ನಾಡು ಎಂಬ ದೇಶ್ಯ ಶಬ್ದ ಸಂಸ್ಕೃತಜ್ಞರ ಉಚ್ಚಾರಣೆಯಲ್ಲಿ ಕಣಾ(ನಾ)ರ್ಟ ಎಂಬ ರೂಪವನ್ನು ತಾಳಿರಬೇಕು. ಕಣಾ(ನಾ)ರ್ಟ+ಕ=ಕಣಾ(ನಾ)ರ್ಟಕ, ಇದು ತೀ.ನಂ. ಶ್ರೀಕಂಠಯ್ಯನವರ ಹೇಳಿಕೆ.

15. ಕರ್‌ನಾಡುವಿನಿಂದ ಕರ್‌ನಾಟ ಹುಟ್ಟಿ ಸ್ವಾರ್ಥದಲ್ಲಿ ಕ ಪ್ರತ್ಯಯ ಬಂದು ಕರ್ನಾಟಕ ಆಗಿರುವುದು ಸಾಧ್ಯ. ಕರ್ನಾಟ, ಕರ್ನಾಟಕ ರೂಪಗಳು ಅಪಾಣಿನೀಯವೆಂದು ಅವನ್ನು ಕರ್ಣಾಟ ಕರ್ಣಾಟಕ ಎಂದು ಮಾಡಿಕೊಂಡಿರಬೇಕು ; ಆಗ ಮೂಲ ಪದದ ಅರ್ಥ ಮರೆಯಾಗಿಯೋ ಗೊತ್ತಾಗದೆಯೋ ಪುನ್‌ನಾಟವನ್ನು ಪುಂರಾಷ್ಟ್ರ ಎಂದು ಮಾಡಿಕೊಂಡಂತೆ ಕರ್ಣಾಟದ ನಿಷ್ಪತ್ತಿಯನ್ನು ಕರ್ಣೇಷು ಅಟತಿ ಇತಿ ಕರ್ಣಾಟಃ ಎಂದು ವಿವರಿಸಲು ಸ್ವಾಭಾವಿಕವಾಗಿ ಯತ್ನಿಸಿರಬಹುದು. ಪ್ರಯೋಗಗಳನ್ನು ನೋಡಿದರೆ ನಕಾರಯುಕ್ತ ಕರ್ನಾಟಕವೂ ಣಕಾರಯುಕ್ತ ಕರ್ಣಾಟಕವೂ ಬಹುಕಾಲದಿಂದ ವಿಕಲ್ಪವಾಗಿ ಪ್ರಯೋಗವಾಗಿರುವುದಕ್ಕೆ ಶಾಸನೋಕ್ತವಾದ ಉದಾಹರಣೆಗಳಿರುವುದರಿಂದ ಎರಡೂ ಗ್ರಾಹ್ಯವೇ. ಕರ್‌ನಾಡು ಪ್ರಾಯಃ ಪ್ರಾಕೃತ ಪ್ರಭಾವದಿಂದ, ಪ್ರಾಚೀನವಾದ ಪುನ್ನಾಡು ಪುನ್ನಾಟ ಆದಂತೆ ಕರ್‌ನಾಡು ಕರ್ನಾಟ ಆಗಿರಬೇಕು. ಇದು ಜಿ. ಪಿ. ರಾಜರತ್ನಂ ಅವರ ಮಂಡನೆ.

ಈ ಮೇಲೆ ಕಾಣಿಸಿದ ಕೆಲವು ಅಭಿಪ್ರಾಯಗಳನ್ನು ಪರಿಶೀಲಿಸಿದರೆ ಕನ್ನಡದೇಶ ಮತ್ತು ಭಾಷೆಗಳಿಗೆ ಆ ಹೆಸರುಗಳು ಎಲ್ಲಿಂದ ಹೇಗೆ ಬಂದುವು ಎನ್ನುವ ವಿಷಯವನ್ನು ಖಚಿತವಾಗಿ ಗೊತ್ತುಮಾಡುವುದು ಇನ್ನೂ ಸಾಧ್ಯವಾಗಿಲ್ಲ ಎನ್ನುವ ಸಂಗತಿ ವಿಶದವಾಗುತ್ತದೆ. ಒಂದೊಂದು ಸೂಚನೆಯಲ್ಲಿಯೂ ಏನಾದರೂ ಕುಂದುಕೊರತೆಗಳನ್ನು ವಿದ್ವಾಂಸರು ಸಪ್ರಮಾಣವಾಗಿ ಎತ್ತಿರುವುದರಿಂದ ಯಾವುದೂ ಬಹುಜನ ಸಮ್ಮತವಾಗಿ ಗ್ರಾಹ್ಯವಾಗಲಾರದೆ ಹೋಗಿದೆ. ಆದರೆ ಈ ಸಮಸ್ಯೆಯ ಕೆಲವಂಶಗಳು ಬಹುಮಂದಿ ಸಂಶೋಧಕರಿಗೆ ಸಮ್ಮತವಾಗಿರುವುದು ಕಾಣುತ್ತದೆ. ಕರ್ನಾ(ರ್ಣಾ)ಟ(ಕ) ಎಂಬ ಸಂಸ್ಕೃತ ಪದದ ಮೂಲ ದೇಶೀಯವಾದುದು. ದೇಶೀಯವಾದುದೊಂದು ಪದದಿಂದ ಸಂಸ್ಕೃತ ರೂಪ ಹುಟ್ಟಿತಲ್ಲದೆ ಸಂಸ್ಕೃತರೂಪ ತದ್ಭವವಾಗಿ ದೇಶೀಯ ಪದ ಹುಟ್ಟಲಿಲ್ಲ. ಅದು ಒಂದು ಸಮಾಸಪದ. ಅದರ ಉತ್ತರಪದ ನಾಡು ಮತ್ತು ಅದರ ಜನ್ಯ ರೂಪಗಳು. ಇನ್ನು ಪೂರ್ವಪದದ ರೂಪ ಎತ್ತರ, ದೊಡ್ಡ , ಮಹಾ ಎಂಬರ್ಥಗಳಿರುವ ಕರು ಎಂಬುದಾಗಿದ್ದರಬೇಕೆಂಬುದು ಹಲವರಿಗೆ ಒಪ್ಪಿಗೆಯಾಗಿರುವಂತೆ ತೋರುತ್ತದೆ. ಕಪ್ಪು ಎಂಬರ್ಥದ ಕರ್ ಎಂಬುದನ್ನೂ ಕೆಲವರು ಒಪ್ಪಿದ್ದಾರೆ. ಜನಾಂಗವಾಚಕವಾದ ಕಳ್, ಕಣ್, ಕರ್, ಕನ್ ಎಂಬುವನ್ನು ಪೂರ್ವಪದವಾಗಿ ತೋರಿಸಲು ಶಂ.ಬಾ. ಜೋಶಿ ಮೊದಲಾದ ವಿದ್ವಾಂಸರು ತುಂಬ ಶ್ರಮಿಸಿದ್ದರೂ ಒದಗಿಸಿರುವ ಪ್ರಮಾಣಗಳು ಪ್ರಾಯಃ ಗಟ್ಟಿಯಾದವಲ್ಲವಾಗಿ ಅವು ಸಾರ್ವತ್ರಿಕವಾದ ಮಾನ್ಯತೆ ಪಡೆದುಕೊಂಡಿರುವಂತೆ ತೋರುವುದಿಲ್ಲ. ಉಳಿದ ಕೆಲವು ಸೂಚನೆಗಳು ಹೆಚ್ಚಾಗಿ ಊಹಾಜನ್ಯವಾಗಿಯೇ ಕಾಣುತ್ತವೆ. ಬಹುಜನಸಮ್ಮತವಾಗಿ ತೋರುವ ವ್ಯುತ್ಪತ್ತಿಗಳು ಕೆಲವರು ಸಯುಕ್ತವಾದ ಆಕ್ಷೇಪಣೆಗಳನ್ನು ಒಡ್ಡಿರುವುದು ಕಾಣುತ್ತದೆ. ಕರು ಪದಕ್ಕೆ ವಿಸ್ತಾರವಾದ, ಎತ್ತರವಾದ ಮೊದಲಾದ ಅರ್ಥಗಳು ಇಲ್ಲವೆಂದೂ ತಮಿಳು ಉಲ್ಲೇಖಗಳಲ್ಲಿ ಅಲ್ಲದೆ ಕರುನಾಡು ಎಂಬ ಮಾತು ಕನ್ನಡದಲ್ಲಿ ಎಲ್ಲೂ ಬಳಕೆಯಾಗಿಲ್ಲವೆಂದೂ ಎತ್ತರವಲ್ಲದ ಬಯಲು ಸೀಮೆಯೂ ಕನ್ನಡನಾಡಿನಲ್ಲಿ ಉಂಟೆಂದೂ ಮುಂತಾಗಿ ವಾದಿಸಿದ್ದಾರೆ. ಹೀಗೆಯೇ ಕನ್ನಡದ ನೆಲದಲ್ಲಿ ಕಪ್ಪುಮಣ್ಣಿನ ನೆಲವಲ್ಲದ ಭಾಗಗಳೂ ಬಹುವಾಗಿರುವುದರಿಂದ ಕರ್ (ಕರಿದು)–ನಾಡು=ಕನ್ನಾಡು ಆಯಿತೆಂದು ಒಪ್ಪುವುದಕ್ಕೆ ಆಗದೆಂದಿದ್ದಾರೆ. ಈಚೆಗೆ ಈ ವಿಷಯದಲ್ಲಿ ಹೆಚ್ಚಿನ ವಿಚಾರ ವಿಮರ್ಶೆಗಳೇನೂ ಆಗಿಲ್ಲ; ಪೂರ್ವೋಕ್ತವಾದ ಎರಡು ನಿಷ್ಪತ್ತಿಗಳಲ್ಲಿ ವಿಮರ್ಶಕರು ಯಾವುದಾದರೊಂದರ ಕಡೆಗೆ ಒಲವನ್ನು ತೋರುವಂತೆ ಕಾಣುತ್ತದೆ.

ಶಬ್ದಾರ್ಥದ ವಿಚಾರದಲ್ಲಿ ವಿವಿಧಾಭಿಪ್ರಾಯಗಳು ವ್ಯಕ್ತವಾಗಿರುವಂತೆಯೇ ಶಬ್ದರೂಪದ–ಮುಖ್ಯವಾಗಿ ಕರ್ನಾಟ(ಕ) – ಕರ್ಣಾಟ(ಕ) ಎಂಬ ರೂಪಗಳ–ವಿಚಾರದಲ್ಲಿಯೂ ಬಹುವಾಗಿ ಚರ್ಚೆ ನಡೆದಿರುವುದು ಕಾಣುತ್ತದೆ. ಈ ಚರ್ಚೆಯಲ್ಲಿ ಶ್ರೀಯುತರಾದ ತೋಗೆರೆ ನಂಜುಂಡಶಾಸ್ತ್ರಿ, ಎಚ್. ನಾರಾಯಣರಾವ್, ಆರ್. ತಾತಾಚಾರ್ಯ, ರಾ.ಹ. ದೇಶಪಾಂಡೆ, ತೀ.ನಂ. ಶ್ರೀಕಂಠಯ್ಯ, ಜಿ.ಪಿ. ರಾಜರತ್ನಂ ಮೊದಲಾದ ವಿದ್ವಾಂಸರು ಪಾಲ್ಗೊಂಡಿದ್ದಾರೆ. ಕರ್ಣಾಟ(ಕ) ಶುದ್ಧ ಸಂಸ್ಕೃತ ಪದವೆಂದೂ ಅದಕ್ಕೆ ಸಂಸ್ಕೃತದಲ್ಲಿ ವ್ಯುತ್ಪತ್ತಿ ಕೊಡಬಹುದೆಂದೂ ಕನ್ನಡ ಅದರ ತದ್ಭವವೆಂದೂ ಆದ್ದರಿಂದ ಕರ್ಣಾಟ(ಕ)ವೇ ಸಾಧುವೆಂದೂ ಎನ್ನುವವರು ಸಾಮಾನ್ಯವಾಗಿ ಶಬ್ದರತ್ನಾವಲಿಯಲ್ಲಿ ಉಕ್ತವಾದ ವ್ಯುತ್ಪತ್ತಿಯನ್ನೂ ಕೇಶಿರಾಜ ಅಪಭ್ರಂಶ ಪ್ರಕರಣದಲ್ಲಿ ಕರ್ಣಾಟದ ತದ್ಭವ ಕನ್ನಡ ಎಂದು ಹೇಳಿರುವುದನ್ನೂ ಸಂಸ್ಕೃತ ಕನ್ನಡ ಗ್ರಂಥಗಳಲ್ಲಿ ಕರ್ಣಾಟ(ಕ) ಪದದ ಪ್ರಾಚುರ್ಯವನ್ನೂ ಆಧಾರವಾಗಿ ತೋರಿಸುತ್ತಾರೆ. ಪೂರ್ವೋಕ್ತವಾದ ಸಂಸ್ಕೃತ ಗ್ರಂಥದ ವ್ಯುತ್ಪತ್ತಿಯನ್ನು ಯಾವ ದೇಶಕ್ಕಾಗಲಿ ಭಾಷೆಗಾಗಲಿ ಅನ್ವಯಿಸಬಹುದೆಂದೂ ಕೇಶಿರಾಜ ಕೆಲವು ದ್ರಾವಿಡ ಶಬ್ದಗಳನ್ನೂ ಸಂಸ್ಕೃತದ ತದ್ಭವವಾಗಿ ಹೇಳಿರುವುದರಿಂದ ಆತನ ಸೂಚನೆ ಪ್ರಮಾಣವಾಗದೆಂದೂ ಮುಂತಾದ ಆಕ್ಷೇಪಗಳಿವೆ. ಎರಡನೆಯ ಪಂಥದವರು ಕರ್ಣಾಟ(ಕ)ಕ್ಕೆ ಮೂಲ ಕನ್ನಡ ಅಥವಾ ಕರ್ನಾಟ(ಕ) ಯಾವುದೇ ಇರಲಿ, ರಕಾರ ಸಂಪರ್ಕವಿರುವ ನಕಾರ ಣಕಾರವಾಗಿ ಮಾರ್ಪಡಬೇಕಾದ್ದು ಸಂಸ್ಕೃತ ವ್ಯಾಕರಣದ ಮರ್ಯಾದೆ ಯಾದ್ದರಿಂದ ಕರ್ಣಾಟ(ಕ) ಎಂಬ ಶಬ್ದರೂಪವೇ ಸಾಧು ಎನ್ನುತ್ತಾರೆ. ಇದನ್ನು ಆಕ್ಷೇಪಿಸುವವರು, ದುರ್ನಯ ದುರ್ನೀತಿ ಇತ್ಯಾದಿ ಸಂಸ್ಕೃತ ಪದಗಳಲ್ಲಿ ರಕಾರ ಸಂಪರ್ಕದ ನಕಾರಣಕಾರವಾಗದಿರುವುದನ್ನು ತೋರಿಸಿ, ಕರ್ನಾಟ(ಕ) ತಪ್ಪೆಂದು ಹೇಳುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಕರ್ನಾಟ(ಕ) ಅಚ್ಚಕನ್ನಡ ಶಬ್ದ; ಅದಕ್ಕೆ ಕನ್ನಡದಲ್ಲಿಯೇ ವ್ಯುತ್ಪತ್ತಿಯುಂಟು. ಸಂಸ್ಕೃತಜ್ಞರು ಅವರ ಭಾಷಾ ಮರ್ಯಾದೆಗೆ ಅನುಸಾರವಾಗಿ ಅದನ್ನು ಕರ್ಣಾಟ(ಕ)ವೆಂದು ಮಾಡಿದ್ದಾರೆ ಎನ್ನುವುದು ಇನ್ನೊಂದು ಪಂಥ. ಕರ್ನಾಟ(ಕ) ಅಚ್ಚಕನ್ನಡ ಎನ್ನುವವರ ವಾದವನ್ನು ಆಧುನಿಕ ಭಾಷಾ ಶಾಸ್ತ್ರಜ್ಞರ ಮತ್ತು ಇತರರ ನಿರೂಪಣೆಯಲ್ಲಿ ಕಾಣುತ್ತೇವೆ. ಈ ಜಿಜ್ಞಾಸೆ ಪ್ರಬಲವಾಗಿದ್ದ ಕಾಲದಲ್ಲೆ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಹೆಸರನ್ನು ಕರ್ಣಾಟಕ ಸಾಹಿತ್ಯ ಪರಿಷತ್ತು ಎಂಬುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಿಸಿ ಕೊಂಡಿತೆಂಬುದನ್ನು ಇಲ್ಲಿ ನೆನೆಯಬಹುದು. ಕರ್ಣಾಟಕ, ಕರ್ನಾಟಕ ಎರಡು ರೂಪ ಗಳನ್ನೂ ಭಾಷಾಶಾಸ್ತ್ರದ ತತ್ತ್ವಗಳಿಗೆ ಅನುಸಾರವಾಗಿ ವಿಮರ್ಶಿಸಿ, "ಒಂದು ಶಬ್ದರೂಪ ಸಾಧುವೆ ಅಸಾಧುವೆ ಎಂದು ನಿರ್ಣಯಿಸುವುದರಲ್ಲಿ ಶಿಕ್ಷಾಶಾಸ್ತ್ರ, ಭಾಷಾಗತಿ, ಶಿಷ್ಟಸಮ್ಮತಿ ಇವೆಲ್ಲವನ್ನೂ ಗಮನಕ್ಕೆ ತಂದುಕೊಳ್ಳಬೇಕು. ಕರ್ಣಾಟಕ ಎಂಬ ಮೂರ್ಧನ್ಯಸಹಿತ ರೂಪ ಪಾಣಿನಿ ಸಮ್ಮತವಾದದ್ದು. ಕನ್ನಡನಾಡಿನ ಒಂದು ಭಾಗದಲ್ಲಿ (ಮುಖ್ಯವಾಗಿ, ಮೈಸೂರಿನಲ್ಲಿ) ಬಹುಮಟ್ಟಿಗೆ ಬಳಕೆಯಾಗಿರತಕ್ಕದ್ದು. ಆದಕಾರಣ ಅದರ ಉಚ್ಚಾರಣೆ ಕಠಿಣವಾದರೂ ಶಿಕ್ಷಾಶಾಸ್ತ್ರದ ಬೆಂಬಲ ಅದಕ್ಕಿಲ್ಲದೆ ಹೋದರೂ ಅದು ಸರ್ವಥಾ ತ್ಯಾಜ್ಯವೆಂದು ಹೇಳಲಾಗುವುದಿಲ್ಲ. ಕರ್ನಾಟಕವೆಂಬ ರೂಪವಾದರೋ ಹೆಚ್ಚುಯುಕ್ತ ವಾದದ್ದು, ಉಚ್ಚಾರಣೆಗೆ ಸುಲಭವಾದದ್ದು, ಕನ್ನಡನಾಡಿನ ಉತ್ತರ ಭಾಗದಲ್ಲೆಲ್ಲಾ ರೂಢಿಯಾಗಿರತಕ್ಕದ್ದು. ಇದನ್ನು ಅಸಾಧುವೆಂದು ಹೊರದೂಡುವುದು ಹಾಗಿರಲಿ; ಮೂರ್ಧನ್ಯಸಹಿತ ರೂಪಕ್ಕಿಂತ ಹೆಚ್ಚು ಉಪಾದೇಯವೆಂದು ಹೇಳಲು ಮನಸಿಲ್ಲದಿದ್ದರೆ ಅದರಷ್ಟೇ ಸಾಧುವೆಂದಾದರೂ ಒಪ್ಪಲೇಬೇಕು. ಸದ್ಯಕ್ಕೆ ಎರಡು ರೂಪಗಳನ್ನೂ ಅಂಗೀಕರಿಸೋಣ. ಸಂಸ್ಕೃತದಲ್ಲೇ ಕೋಷ–ಕೋಶ, ಪೃಥ್ವೀ–ಪೃಥಿವೀ ಮೊದಲಾದ ಜೋಡಿಗಳಿಲ್ಲವೆ? ಕರ್ಣಾಟಕ–ಕರ್ನಾಟಕಗಳಲ್ಲಿ ಕೊನೆಗೆ ಯಾವುದು ನಿಲ್ಲಬೇಕೆಂಬುದನ್ನು ಕಾಲಪುರುಷ ನಿರ್ಣಯಿಸಲಿ." ತೀ.ನಂ. ಶ್ರೀಕಂಠಯ್ಯನವರ ಈ ಅಭಿಪ್ರಾಯ ಈ ಸಮಸ್ಯೆಯ ಜಿಜ್ಞಾಸುಗಳಿಗೆ ತಕ್ಕ ಸಮಾಧಾನವನ್ನು ನೀಡಬಹುದೆಂದು ತೋರುತ್ತದೆ.

ಶಬ್ದರೂಪದ ಬಗ್ಗೆ ವಿದ್ವಾಂಸರ ಚರ್ಚೆಗಳು ಏನೇ ಇದ್ದರೂ ಕನ್ನಡನಾಡಿಗೆ ಕರ್ನಾಟಕ ಎಂಬ ಹೆಸರು ಇರಬೇಕೆಂದು ವಿಧಾನಮಂಡಲಗಳಲ್ಲಿ ತೀರ್ಮಾನವಾಗಿ (1973) ಈಗ ಈ ರೂಪವೇ ಮಾನ್ಯವಾಗಿದೆ. (ಟಿ.ವಿ.ವಿ.)

**ಕರ್ನಾಟಕ:** ದಕ್ಷಿಣ ಭಾರತದ ರಾಜ್ಯಗಳಲ್ಲೊಂದು. ಇದರ ಹಿಂದಿನ ಹೆಸರು ಮೈಸೂರು ಸಂಸ್ಥಾನ. ಉತ್ತರದಲ್ಲಿ ಕೃಷ್ಣಾ ಮತ್ತು ದಕ್ಷಿಣದಲ್ಲಿ ಕಾವೇರಿ ನದಿ ವ್ಯವಸ್ಥೆಗಳಿಂದ ಕೂಡಿ ದಖನ್ ಪ್ರಸ್ಥಭೂಮಿಯ ನೈಋತ್ಯ ಭಾಗದಲ್ಲಿ, ಉ.ಅ. 11°3′ ನಿಂದ 18°45′ ವರೆಗೂ ಪೂ.ರೇ. 74°12′ ನಿಂದ 78°40′ ವರೆಗೂ ಹಬ್ಬಿರುವ ಈ ನಾಡಿಗೆ ಕರ್ನಾಟಕ, ಕನ್ನಡ ನಾಡು, ಕನ್ನಾಡು ಎಂಬ ಹೆಸರುಗಳೂ ಇವೆ. ವಾಯವ್ಯ ಮತ್ತು ಉತ್ತರ ದಿಕ್ಕುಗಳಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರಪ್ರದೇಶ, ಆಗ್ನೇಯ ದಕ್ಷಿಣಗಳಲ್ಲಿ ತಮಿಳುನಾಡು, ನೈಋತ್ಯದಲ್ಲಿ ಕೇರಳ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಇದರ ಮೇರೆಗಳು. ಪೂರ್ವಪಶ್ಚಿಮವಾಗಿ ಸು. 400 ಕಿಮೀ ಮತ್ತು ಉತ್ತರದಕ್ಷಿಣವಾಗಿ ಸು.700 ಕಿಮೀ ಹಬ್ಬಿರುವ ಕರ್ನಾಟಕದ ವಿಸ್ತೀರ್ಣ 1,91,791 ಚ.ಕಿಮೀ. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಬೆಳಗಾಂವಿ, ಬಳ್ಳಾರಿ, ಬೀದರ್, ಬಿಜಾಪುರ, ಚಿಕ್ಕಮಗಳೂರು, ಚಿತ್ರದುರ್ಗ ಕೊಡಗು, ಧಾರವಾಡ, ಬಾಗಲಕೋಟೆ, ಗದಗ, ಕೊಪ್ಪಳ, ಗುಲ್ಬರ್ಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ಚಾಮರಾಜನಗರ, ಉತ್ತರ ಕನ್ನಡ, ರಾಯಚೂರು, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ದಾವಣಗೆರೆ, ಹಾವೇರಿ, ತುಮಕೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರ, ಯಾದಗಿರಿ ಎಂಬ 30 ಜಿಲ್ಲೆಗಳಿವೆ. ರಾಜಧಾನಿ ಬೆಂಗಳೂರು. ರಾಜ್ಯದ ಜನಸಂಖ್ಯೆ 61,130,704 (2011).




**ಮೇಲ್ಮೈ ಲಕ್ಷಣ:** ಕರ್ನಾಟಕದ ಬಹುಭಾಗ ದಖನ್ ಪ್ರಸ್ಥಭೂಮಿ ಪ್ರದೇಶದಲ್ಲಿದೆ. ಇದು ಭಾರತದಲ್ಲೇ ಅತ್ಯಂತ ಪುರಾತನವಾದ ನೆಲ. ಕರ್ನಾಟಕದ ಪಶ್ಚಿಮದಂಚಿನ ಕಿರಿದಾದ ನೆಲ ಮಾತ್ರ ತಗ್ಗುಪ್ರದೇಶ. ದಖನ್ನಿನ ಆಚೀಚೆ ಮಾಲೆಯಂತೆ ಹಬ್ಬಿರುವ ಪೂರ್ವ ಪಶ್ಚಿಮ ಘಟ್ಟಗಳು ಕರ್ನಾಟಕದ ದಕ್ಷಿಣದಲ್ಲಿ ನೀಲಗಿರಿಯಲ್ಲಿ ಸಂಧಿಸುತ್ತವೆ. ಪಶ್ಚಿಮ ಕರಾವಳಿಯಿಂದ ಕಡಿದಾಗಿ ಮೇಲೇರುವ ಪಶ್ಚಿಮಘಟ್ಟಗಳು ಪೂರ್ವಘಟ್ಟಗಳಗಿಂತ ಹೆಚ್ಚು ಎತ್ತರ. ಸು. 350 ಕಿಮೀ. ಉದ್ದದ ಪಶ್ಚಿಮದ ಕಡಲ ಕರೆ ಬಹುತೇಕ ನೇರ. ತೀರದಿಂದ ಸಮುದ್ರದತ್ತ ಚಾಚಿದಂತೆ 65–80 ಕಿಮೀ. ಖಂಡಾವರಣ ಪ್ರದೇಶದಲ್ಲಿ ಕಡಲ ಆಳ 180 ಮೀ. ಅಡಿಗಳಿಗಿಂತ ಕಡಿಮೆ. ಕಡಿದಾದ ಬೆಟ್ಟದಿಂದ ಕೆಳಗಿಳಿದು ಸಮುದ್ರ ಸೇರುವ ಹೊಳೆ ಝರಿಗಳು ಜಲರಾಶಿಯಲ್ಲಿ ಹೊತ್ತು ತರುವ ಆಹಾರವೂ ಕಿರಿ ಆಳದ ಕಡಲೂ ಕರ್ನಾಟಕದ ಮತ್ಸ್ಯ ಸಂಪತ್ತಿಗೆ ಮೂಲಾಧಾರ.

ಕರ್ನಾಟಕದ ಮಧ್ಯ ಭಾಗದಲ್ಲಿ 15° ಉ. ಅ.ದ ಸನಿಯದಲ್ಲಿ ಹರಿಯುವ ತುಂಗಭದ್ರಾ ನದಿಯ ಉತ್ತರ ದಕ್ಷಿಣ ಭಾಗಗಳು ಕ್ರಮವಾಗಿ ಉತ್ತರ ಮತ್ತು ದಕ್ಷಿಣ ಕರ್ನಾಟಕಗಳೆಂದು ಹೆಸರಾಗಿವೆ. ಭೂ ರಚನೆ, ಮೇಲ್ಮೈಲಕ್ಷಣ, ಮಳೆಬೆಳೆ, ಜನರ ನಡೆ ನುಡಿ, ವ್ಯವಹಾರ, ಆಹಾರ, ಉಡಿಗೆತೊಡಿಗೆ ಇವುಗಳಲ್ಲಿ ಉತ್ತರ ದಕ್ಷಿಣಗಳಲ್ಲಿ ವೈಶಿಷ್ಟ್ಯಗಳುಂಟು. ಆದ್ದರಿಂದ ಪ್ರಾಕೃತಿಕವಾಗಿ ಕರ್ನಾಟಕವನ್ನು 3 ಪ್ರಮುಖ ವಿಭಾಗಗಳಾಗಿ ವಿಂಗಡಿಸಬಹುದು: 1. ಮಲೆನಾಡು 2. ಮೈದಾನ ಮತ್ತು 3. ಕರಾವಳಿ.

**1. ಮಲೆನಾಡು:** ಇದು ಬೆಟ್ಟ ಗುಡ್ಡಗಳ ಬೀಡಾಗಿದ್ದರೂ ಕರ್ನಾಟಕದ ಸಂಪದ್ಭರಿತವಾದ ಪ್ರಾಕೃತಿಕ ವಿಭಾಗ. ರಾಜ್ಯದ ಪಶ್ಚಿಮಕ್ಕಿದ್ದು ಸಹ್ಯಾದ್ರಿ ಎಂದೇ ಪ್ರಸಿದ್ಧಿ. ಉತ್ತರ ದಕ್ಷಿಣವಾಗಿ 650 ಕಿಮೀ ಉದ್ದವಾಗಿ ಹಬ್ಬಿರುವ ಈ ಸಾಲುಗಳು ದಕ್ಷಿಣದತ್ತ ಸಾಗಿದಂತೆ ಹೆಚ್ಚು ಎತ್ತರವಾಗಿ, ಕೊನೆಗೆ ನೀಲಗಿರಿಯಲ್ಲಿ ಸಮಾವೇಶಗೊಳ್ಳುತ್ತವೆ. ರಾಜ್ಯದ ಸ್ಥಳವಿನ್ಯಾಸದ ಮೇಲೂ ಮೇಲ್ಮೈ ರಚನೆಯ ಮೇಲೂ ಇವುಗಳ ಪ್ರಭಾವ ಅತ್ಯಧಿಕ. ರಾಜ್ಯದ ಅನೇಕ




ಮುಖ್ಯ ನದಿಗಳಿಗೆ ಈ ಸಹ್ಯಾದ್ರಿಯೇ ಉಗಮಸ್ಥಾನ. ಇದು ಪೂರ್ವಪಶ್ಚಿಮ ಜಲವಿಭಾಜಕ. ಉತ್ತರದಲ್ಲಿ ಈ ಶ್ರೇಣಿಗಳ ತಳದಲ್ಲಿ ಧಾರವಾಡ ಶಿಲಾವರ್ಗ ದಕ್ಷಿಣದಲ್ಲಿ ಗ್ರಾನೈಟ್ ಶಿಲೆಗಳೂ ಉಂಟು. ಸಹ್ಯಾದ್ರಿಯ ನೆತ್ತಿಯ ಮೇಲಣ ಗಟ್ಟಿ ಶಿಲೆಗಳು ಮಳೆಗಾಳಿಗಳೇ ಮುಂತಾದ ಪ್ರಾಕೃತಿಕ ಜಂಜಡಗಳನ್ನೆದುರಿಸಿ ನಿಂತು ಎತ್ತರವಾಗಿಯೇ ಉಳಿದುಕೊಂಡಿವೆ. ಮೃದು ಶಿಲೆಗಳು ಸವೆದುಹೋಗಿ ಬಾಯ್ದೆರೆದು, ಘಟ್ಟಗಳ ನಡುವೆ ಅಲ್ಲಲ್ಲಿ ಸೀಳುಗಳು ಸಂಭವಿಸಿವೆ. ಸಹ್ಯಾದ್ರಿಯ ಶ್ರೇಣಿಗಳಲ್ಲಿ ಅನೇಕ ಉತ್ತುಂಗ ಶಿಖರಗಳಿವೆ. ಈ ಭಾಗದಲ್ಲಿ ಕರ್ನಾಟಕದ ಅತ್ಯುನ್ನತ ಶಿಖರಗಳಿವೆ. ಸಹ್ಯಾದ್ರಿಯ ಬೃಹದ್‌ಬಾಹುಗಳಲ್ಲೊಂದಾದ ಚಂದ್ರದ್ರೋಣಪರ್ವತ ಅಥವಾ ಬಾಬಾಬುಡನ್‌ಗಿರಿಯಲ್ಲಿರುವ ಮುಳ್ಳಯ್ಯನಗಿರಿ ಶಿಖರದ


ಕ ರ್ನಾ ಟ ಕ
ಆಡಳಿತ ವಿಭಾಗಗಳು
ಜಿಲ್ಲಾ ಗಡಿ
ತಾಲ್ಲೂಕು ಗಡಿ
ರಾಜಧಾನಿ
ವಿಭಾಗಕೇಂದ್ರ
ಜಿಲ್ಲಾಕೇಂದ್ರ
ತಾಲ್ಲೂಕು ಕೇಂದ್ರ
0 25 50 75
ಕಿಲೋಮೀಟರುಗಳು
ಗೋ ವ
ಉತ್ತರ ಕನ್ನಡ
ದಕ್ಷಿಣ ಕನ್ನಡ
ಬೀದರ್
ಭಾಲ್ಕಿ
ಬಸವಕಲ್ಯಾಣ
ಹುಮನಾಬಾದ್
ಆಳಂದ
ಚಿಂಚೋಳಿ
ಅಫಜಲಪುರ
ಗುಲ್ಬರ್ಗ
ಚಿತ್ತಾಪುರ
ಸೇಡಂ
ಇಂಡಿ
ಜೇವರ್ಗಿ
ಸಿಂಧಗಿ
ಯಾದಗಿರಿ
ಅಥಣಿ
ಬಿಜಾಪುರ
ಜಮಖಂಡಿ
ಬಸವನ
ಶಹಾಪುರ
ಬಾಗೇವಾಡಿ
ಸುರಪುರ
ರಾಯಬಾಗ
ಚಿಕ್ಕೋಡಿ
ಮುದ್ದೇಬಿಹಾಳ
ದೇವದುರ್ಗ
ಬೀಳಗಿ
ಮುಧೋಳ
ಲಿಂಗಸುಗೂರು
ರಾಯಚೂರು
ಹುಕ್ಕೇರಿ
ಗೋಕಾಕ
ಬಾಗಲಕೋಟೆ
ಹುನಗುಂದ
ಮಾನ್ವಿ
ರಾಮದುರ್ಗ
ಬಾದಾಮಿ
ಬೆಳಗಾಂವಿ
ಸವದತ್ತಿ
ಕುಷ್ಟಗಿ
ಸಿಂಧನೂರು
ಬೈಲಹೊಂಗಲ
ನರಗುಂದ
ರೋಣ
ಖಾನಾಪುರ
ನವಲಗುಂದ
ಯಲಬುರ್ಗ
ಗಂಗಾವತಿ
ಸಿರಗುಪ್ಪ
ಧಾರವಾಡ
ಗದಗ
ಕೊಪ್ಪಳ
ಹುಬ್ಬಳ್ಳಿ
ಕುಂದಗೋಳ
ಮುಂಡರಗಿ
ಹೊಸಪೇಟೆ
ಬಳ್ಳಾರಿ
ಜೋಯಿಡ
ಹಳಿಯಾಳ
ಕಲಘಟಗಿ
ಶಿರಹಟ್ಟಿ
ಹಗರಿಬೊಮ್ಮನಹಳ್ಳಿ
ಸಂಡೂರು
ಯಲ್ಲಾಪುರ
ಶಿಗ್ಗಾಂವಿ
ಸವಣೂರ
ಹಡಗಲಿ
ಕಾರವಾರ
ಮುಂಡಗೋಡ
ಹಾವೇರಿ
ಹರಪನಹಳ್ಳಿ
ಕೂಡ್ಲಗಿ
ಮೊಳಕಾಲ್ಮೂರು
ಬ್ಯಾಡಗಿ
ಹಾನಗಲ್
ಅಂಕೋಲ
ಶಿರಸಿ
ರಾಣೆಬೆನ್ನೂರು
ಹರಿಹರ
ಜಗಳೂರು
ಕುಮಟ
ಹಿರೇಕೆರೂರು
ಸೊರಬ
ದಾವಣಗೆರೆ
ಸಿದ್ದಾಪುರ
ಚಿತ್ರದುರ್ಗ
ಚಳ್ಳಕೆರೆ
ಪಾವಗಡ
ಶಿಕಾರಿಪುರ
ಹೊನ್ನಾವರ
ಹೊನ್ನಾಳಿ
ಚನ್ನಗಿರಿ
ಸಾಗರ
ಹೊಳಲ್ಕೆರೆ
ಹಿರಿಯೂರು
ಭಟ್ಕಳ
ಶಿವಮೊಗ್ಗ
ಭದ್ರಾವತಿ
ಬಾಗೇಪಲ್ಲಿ
ಹೊಸನಗರ
ಹೊಸದುರ್ಗ
ಶಿರಾ
ಮಧುಗಿರಿ
ಗುಡಿಬಂಡೆ
ತೀರ್ಥಹಳ್ಳಿ
ನರಸಿಂಹರಾಜಪುರ
ತರೀಕೆರೆ
ಗೌರಿಬಿದನೂರು
ಶಿಡ್ಲಘಟ್ಟ
ಕುಂದಾಪುರ
ಕೊಪ್ಪ
ಕಡೂರು
ಚಿಕ್ಕನಾಯಕನಹಳ್ಳಿ
ಕೊರಟಗೆರೆ
ಚಿಕ್ಕಬಳ್ಳಾಪುರ
ಚಿಂತಾಮಣಿ
ಶ್ರೀನಿವಾಸಪುರ
ಉಡುಪಿ
ಶೃಂಗೇರಿ
ಚಿಕ್ಕಮಗಳೂರು
ಆರಸೀಕೆರೆ
ಗುಬ್ಬಿ
ತುಮಕೂರು
ದೊಡ್ಡಬಳ್ಳಾಪುರ
ದೇವನಹಳ್ಳಿ
ಕಾರ್ಕಳ
ಮೂಡಿಗೆರೆ
ಬೇಲೂರು
ತಿಪಟೂರು
ನೆಲಮಂಗಲ
ಹೊಸಕೋಟೆ
ಕೋಲಾರ
ಮುಳಬಾಗಿಲು
ಹಾಸನ
ತುರುವೇಕೆರೆ
ಮಂಗಳೂರು
ಚನ್ನರಾಯಪಟ್ಟಣ
ಕುಣಿಗಲು
ಮಾಗಡಿ
ಬೆಂಗಳೂರು
ಮಾಲೂರು
ಬಂಗಾರಪೇಟೆ
ಬೆಳ್ತಂಗಡಿ
ಆಲೂರು
ಬಂಟ್ವಾಳ
ಪುತ್ತೂರು
ಸಕಲೇಶಪುರ
ಹೊಳೆನರಸೀಪುರ
ನಾಗಮಂಗಲ
ರಾಮನಗರ
ಚನ್ನಪಟ್ಟಣ
ಆನೇಕಲ್ಲು
ಸುಳ್ಯ
ಅರಕಲಗೂಡು
ಕೃಷ್ಣರಾಜಪೇಟೆ
ಮಂಡ್ಯ
ಕನಕಪುರ
ಸೋಮವಾರಪೇಟೆ
ಕೃಷ್ಣರಾಜನಗರ
ಪಾಂಡವಪುರ
ಮದ್ದೂರು
ಬೆಂಗಳೂರು (ಗ್ರಾಮಾಂತರ)
ಮಡಿಕೇರಿ
ಪಿರಿಯಾಪಟ್ಟಣ
ಶ್ರೀರಂಗಪಟ್ಟಣ
ಮಳವಳ್ಳಿ
ಕೊಡಗು
ತಿರುಮಕೂಡಲು
ಹುಣಸೂರು
ಮೈಸೂರು
ನರಸೀಪುರ
ಕೊಳ್ಳೇಗಾಲ
ವಿರಾಜಪೇಟೆ
ಹೆಗ್ಗಡದೇವನಕೋಟೆ
ನಂಜನಗೂಡು
ಯಳಂದೂರು
ಗುಂಡ್ಲುಪೇಟೆ
ಚಾಮರಾಜನಗರ

ಎತ್ತರ ಸು. 1927 ಮೀ. ಇದು ರಾಜ್ಯದ ಅತ್ಯಂತ ಎತ್ತರದ ಶಿಖರ. ಕುದುರೆಮುಖ (1892 ಮೀ), ಕೊಡಚಾದ್ರಿ (1344 ಮೀ), ಪುಷ್ಪಗಿರಿ (1731 ಮೀ), ದತ್ತಗಿರಿ (1895 ಮೀ) ಮತ್ತು ಕಲ್ಲತ್ತಗಿರಿ (1877 ಮೀ)– ಇವು ಇತರ ಶಿಖರಗಳು.

ಸಹ್ಯಾದ್ರಿಯ ಪೂರ್ವಭಾಗಕ್ಕಿಂತ ಪಶ್ಚಿಮಭಾಗ ಹೆಚ್ಚು ಕಡಿದಾದ ಶಿಲಾಮುಖ ಭೂಯಿಷ್ಠವೂ ಆದದ್ದು, ಸಹ್ಯಾದ್ರಿಯ ಎರಡು ಬದಿಗಳಲ್ಲೂ ಅಡ್ಡಲಾಗಿ ಹಬ್ಬಿದ ಬೆಟ್ಟದಸಾಲುಗಳಿವೆ. ಪಶ್ಚಿಮಸಾಲು ಕ್ರಮಬದ್ಧವಾಗಿಲ್ಲ. ಪಶ್ಚಿಮಘಟ್ಟಗಳು ಕಡಿದಾಗಿದ್ದರೂ ಇವುಗಳ ನಡುವೆ ಇರುವ ಕಣಿವೆ ಮಾರ್ಗಗಳು ಕರ್ನಾಟಕದ ಪೂರ್ವ ಪಶ್ಚಿಮ ಭಾಗಗಳ ನಡುವಣ ಸಂಪರ್ಕಮಾಧ್ಯಮವಾಗಿ, ರಾಜ್ಯದ ಸಾಂಸ್ಕೃತಿಕ ಬೆಳವಣಿಗೆಗೆ ಸಾಧಕವಾಗಿವೆ ಯೆನ್ನಬಹುದು. ಉತ್ತರ ಕರ್ನಾಟಕದ ಕೊಲ್ಲೂರ್ ಘಾಟಿ, ಶಿವಮೊಗ್ಗ – ಉಡುಪಿಗಳ ನಡುವೆ ಇರುವ ಆಗುಂಬೆ ಘಾಟಿ, ಚಿಕ್ಕಮಗಳೂರು–ಮಂಗಳೂರುಗಳ ನಡುವೆ ಚಾರ್ಮುಡಿ ಘಾಟಿ ಇವು ಪ್ರಮುಖವಾದವು.

ಸಹ್ಯಾದ್ರಿ ಶ್ರೇಣಿ

ಪಶ್ಚಿಮದಿಂದ ಪೂರ್ವದ ಕಡೆಗೆ ಇಳಿಜಾರಾಗಿರುವ ಪ್ರಸ್ಥಭೂಮಿಯ ಪೂರ್ವದಂಚಿನಲ್ಲಿ, ಈಶಾನ್ಯ ದಿಕ್ಕಿನಿಂದ ನೈಋತ್ಯಾಭಿಮುಖವಾಗಿ ಹಬ್ಬಿ, ನೀಲಗಿರಿಯಲ್ಲಿ ಪಶ್ಚಿಮ ಘಟ್ಟಗಳೊಂದಿಗೆ ಸಂಗಮಿಸುವ ಪೂರ್ವಘಟ್ಟಗಳು ಸಹ್ಯಾದ್ರಿ ಶ್ರೇಣಿಗಳಿಗಿಂತ ತಗ್ಗು, ಕೋಲಾರದಲ್ಲಷ್ಟೇ ಪ್ರಧಾನವಾಗಿ ಎದ್ದುನಿಂತಿರುವ ಈ ಶ್ರೇಣಿಗಳು ಒಟ್ಟಿನಲ್ಲಿ ಪ್ರಸ್ಥಭೂಮಿಯ ತಲಮಟ್ಟಕ್ಕಿಂತ ಅತಿ ಹೆಚ್ಚು ಎತ್ತರವಾಗೇನು ಇಲ್ಲ. ಇವುಗಳದು ಧಾರವಾಡ ಶಿಲಾವರ್ಗದ ರಚನೆ. ಉದ್ದ ಏಣಿನ ಬಂಡೆಗಲ್ಲುಗಳು ಇಲ್ಲಿಯ ವೈಶಿಷ್ಟ್ಯ.



ಶಿವಗಂಗೆ ಬೆಟ್ಟ ಮತ್ತು ದೇವಾಲಯಗಳು

**2. ಮೈದಾನ:** ಪೂರ್ವಪಶ್ಚಿಮ ಘಟ್ಟಗಳ ನಡುವಣ ದಿಣ್ಣೆ ನೆಲವನ್ನು ಮೈದಾನವೆಂದು ವ್ಯವಹರಿಸುವುದು ವಾಡಿಕೆಯಾಗಿದೆ. ತುಂಗಭದ್ರೆಯ ಉತ್ತರಕ್ಕಿರುವ ಪ್ರದೇಶ ಕಪ್ಪು ಮಣ್ಣಿನಿಂದ ಕೂಡಿದ, ಅಲ್ಲಲ್ಲಿ ಮರಗಳನ್ನೊಳಗೊಂಡ, ಏಕಪ್ರಕಾರವಾಗಿ ಹಬ್ಬಿರುವ ದಿಣ್ಣೆನೆಲದಂತೆ ಕಾಣುತ್ತದೆ. ಆದರೆ ಈ ಪ್ರದೇಶದಲ್ಲೂ ಭೌತಿಕವಾಗಿ ಭಿನ್ನತೆಗಳಿಲ್ಲ. ಉತ್ತರ ಮೈದಾನದ ಮೂರನೆಯೆರಡು ಭಾಗ ಸು. 610 ಮೀ ಎತ್ತರವುಂಟು. ನಗ್ನೀಕೃತ ಬೆಟ್ಟಸಾಲುಗಳೂ ಅಗಲವೂ ಚಪ್ಪಟೆಯೂ ಆದ ಕಣಿವೆಗಳೂ ನದೀವನಗಳೂ ಇದನ್ನು ಅಲ್ಲಲ್ಲಿ ವಿಭಾಗಿಸಿವೆ. ಕೃಷ್ಣಾ , ಭೀಮಾ ಮತ್ತು ತುಂಗಭದ್ರಾ ನದಿಗಳು ಉದ್ದಕ್ಕೂ ಆಚೀಚೆ ಕನಿಷ್ಠ 16 ಕಿಮೀ ಅಗಲಕ್ಕಿರುವ ನೆಲಪಟ್ಟಿಗಳು ಉಳಿದ ನೆಲಕ್ಕಿಂತ ತಗ್ಗು. ಇವು ಪೂರ್ವದಲ್ಲಿ 365–400 ಮೀ ಎತ್ತರದ ವಿಸ್ತಾರವಾದ ಬಯಲಿನಲ್ಲಿ ಸಮಾವೇಶಗೊಳ್ಳುತ್ತವೆ. ಪೂರ್ವಭಾಗದ ಈ ನೆಲ ಅಲ್ಲಲ್ಲಿ ಥಟ್ಟನೆ ಕೆಳಕ್ಕೆ ಇಳಿದಿದೆ. ಕಿಲೋಮೀಟರ್‌ಗಳಷ್ಟು ಹಬ್ಬಿರುವ ಇಂಥ ಇಳುಕಲುಗಳ ಅಂಚಿನ ಕಡಿದುಬಂಡೆಗಳು ಯುಗಯುಗಗಳಿಂದ ಮಳೆಗಾಳಿಗೆ ಮೈಯೊಡ್ಡಿ ಬೆತ್ತಲೆಯಾಗಿ ನಿಂತಿವೆ. ತುಂಗಭದ್ರೆಗೆ ಉತ್ತರದ ಪ್ರದೇಶದಲ್ಲಿರುವ ಪರ್ಯಾಯದ್ವೀಪೀಯ ನೈಸ್ ಶಿಲಾಪದರಗಳಿಗೂ ಇವುಗಳು ನಡುನಡುವೆ ದಕ್ಷಿಣೋತ್ತರವಾಗಿ ಹಬ್ಬಿದ ಭಿನ್ನಸ್ತರಗಳ ಧಾರವಾಡ ಶಿಲೆಗಳಿಗೂ ಮೆತ್ತಿಕೊಂಡಂತೆ ಉತ್ತರದಲ್ಲಿ ಕಡಪ ಕರ್ನೂಲು ಮಾದರಿಯ ಮರಳು ಕಲ್ಲು, ಸುಣ್ಣಕಲ್ಲು ಮತ್ತು ಬುರುದೆಕಲ್ಲುಗಳ (ಮಡ್‌ಸ್ಟೋನ್) ಅಖಂಡ ಪಟ್ಟಿಕೆಯೊಂದು ಹಬ್ಬಿದೆ. ರಾಜ್ಯದ ಉತ್ತರದಂಚಿನಲ್ಲಿರುವ ಪ್ರದೇಶ ಜ್ವಾಲಾಮುಖಿಯ ಕಪ್ಪುಶಿಲೆಯಿಂದಲೂ ಘನೀಕೃತ ಶಿಲಾಪ್ರವಾಹಗಳಿಂದಲೂ ಕೂಡಿದೆಯೆನ್ನಬಹುದು.

ದಕ್ಷಿಣ ಮೈದಾನ ಉತ್ತರದ್ದಕ್ಕಿಂತ ಭಿನ್ನ, ಉತ್ತರದಕ್ಕಿಂತ ಹೆಚ್ಚು ಎತ್ತರ. ಇದರ ರಚನೆ ಗ್ರಾನೈಟ್ ಮತ್ತು ಧಾರವಾಡ ಶಿಲಾಭಾಗಗಳಿಂದ ಕೂಡಿರುವುದರಿಂದ ಭೂಪ್ರದೇಶ ಹೆಚ್ಚು ವೈವಿಧ್ಯಪೂರಿತ. ಊ ಆಕಾರದ ಉಬ್ಬು ನೆಲದಿಂದೊಡಗೂಡಿದಂತೆ ಇದರ ಲಕ್ಷಣ. ಈ ಅಕ್ಷರದ ಪಶ್ಚಿಮದ ಪಾದ ಮಲೆನಾಡಿನ ಪೂರ್ವತುದಿಯಲ್ಲಿ ಊರಿದಂತಿದೆ. ಅಲ್ಲಿ ಇದರ ಎತ್ತರ 915–975 ಮೀ ಬಿಳಿಗಿರಿರಂಗನ ಬೆಟ್ಟ, (1497 ಮೀ), ಗೋಪಾಲಸ್ವಾಮಿ ಬೆಟ್ಟ (1455 ಮೀ), ಶಿವಗಂಗಾ (1387 ಮೀ), ಸಾವನದುರ್ಗ (1226 ಮೀ), ಚಾಮುಂಡಿ ಬೆಟ್ಟ (1038 ಮೀ), ದೇವರಾಯನ ದುರ್ಗ (1187 ಮೀ), ನಂದಿದುರ್ಗ (1463 ಮೀ), ಇತ್ಯಾದಿ ದಕ್ಷಿಣ ಮೈದಾನದ ಪ್ರಮುಖ ಬೆಟ್ಟಗಳು. ಇದರ ಪೂರ್ವಪಾದವಿರುವುದು ಕೊಳ್ಳೆಗಾಲದ ದಕ್ಷಿಣಕ್ಕಿರುವ ಬಿಳಿಗಿರಿರಂಗನ ಬೆಟ್ಟದಿಂದ ರಾಮನಗರದ ಮೂಲಕ ಮಧುಗಿರಿ ಮತ್ತು ಪಾವಗಡ ವರೆಗೆ (1040–1100 ಮೀ) ಹಬ್ಬಿರುವ ಚಾರ್ನೊಕೈಟ್ ಅಥವಾ ಗ್ರಾನೈಟ್ ಶಿಲಾಶ್ರೇಣಿಯಲ್ಲಿ; ಅಲ್ಲಿಂದ ಇದು ವಾಯವ್ಯಾಭಿಮುಖವಾಗಿ ಹಾದು ಸಂಡೂರಿನ ಬಳಿಯ ಕಬ್ಬಿಣದ ಅದುರಿನ ಬೆಟ್ಟಗಳ ಮೇಲೆ ಸಾಗುತ್ತದೆ. H ಅಕ್ಷರದ ಅಡ್ಡಪಟ್ಟಿ ಅಲ್ಲಲ್ಲಿ ಕತ್ತರಿಸಿದಂತಿದೆ. ಆದರೂ ಇದನ್ನು ಗುರುತಿಸುವುದು ಕಷ್ಟವಲ್ಲ. ರಾಮನಗರದಿಂದ ಹೊಳೆನರಸೀಪುರದವರೆಗೆ ಸಾಮಾನ್ಯವಾಗಿ 1000–1070 ಮೀ ಎತ್ತರವಾಗಿಯೂ ಇರುವ ಶ್ರೇಣಿಯುಂಟು. H ಅಕ್ಷರದ ಕೆಳಅರ್ಧದ ಆವರಣದಲ್ಲಿರುವ ಭಾಗವೇ ಕಾವೇರಿ ಕಣಿವೆಯ ಮಧ್ಯ ಪ್ರದೇಶ. ಇದರ ಎತ್ತರ ಸಾಮಾನ್ಯವಾಗಿ 670–700 ಮೀ ತುಂಗಾಭದ್ರಾ ನದಿ ವ್ಯವಸ್ಥೆ ಇದರ ಉತ್ತರಾರ್ಧದಲ್ಲಿದೆ. ಆದರೂ H ಅಕ್ಷರದ ನಡುಪಟ್ಟಿ ಕಾವೇರಿ–ತುಂಗಾಭದ್ರಾ ನದೀ ವ್ಯವಸ್ಥೆಗಳ ಜಲವಿಭಜನ ರೇಖೆಯೇನೂ ಅಲ್ಲ. ಕಾವೇರಿ ಕಣಿವೆಯ ದಕ್ಷಿಣಕ್ಕೆ ಬಿಳಿಗಿರಿರಂಗನ ಬೆಟ್ಟದ ಕವಲುಗಳು ಮುನ್ನಡೆದು ನೀಲಗಿರಿಯ ಉತ್ತರ ಪಾದದಲ್ಲಿ ಲೀನವಾಗುತ್ತವೆ.

ನಂದಿ ಬೆಟ್ಟ

ರಾಮನಗರ–ಹೊಳೆನರಸೀಪುರ ನಡುಪಟ್ಟಿಯ ಉತ್ತರಕ್ಕಿರುವ ಪ್ರಸ್ಥಭೂಮಿಯ ಎತ್ತರ ಸಾಮಾನ್ಯವಾಗಿ 700–730 ಮೀ ಇಲ್ಲಿ ಬಿದ್ದ ಮಳೆ ನೀರು ಭಾಗಶಃ ಕಾವೇರಿ ಕಣಿವೆಗೂ ಉಳಿದದ್ದು ವೇದಾವತಿ–ತುಂಗಭದ್ರಾ ವ್ಯವಸ್ಥೆಗೂ ಜಾರಿಕೊಳ್ಳುತ್ತದೆ. ಈ

ಪ್ರದೇಶದಲ್ಲಿ ಧಾರವಾಡ ಶಿಲಾ ಸರಣಿಯಿಂದ ಕೂಡಿದ, ಅಲ್ಲಲ್ಲಿ ಗ್ರಾನೈಟ್ ಭೂಯಿಷ್ಠವಾದ ಸಮಾಂತರ ಶ್ರೇಣಿಗಳುಂಟು. ಇವು ಅಲ್ಲಲ್ಲಿ ಮುರಿದಿವೆ. ಚಿಕ್ಕನಾಯಕನಹಳ್ಳಿಯ ಬಳಿಯಿಂದ ದಾವಣಗೆರೆಯನ್ನು ಹಾದು, ಉತ್ತರ ಮೈದಾನ ಪ್ರದೇಶದಲ್ಲಿ ಮುಂಡರಗಿರಿಯ ಬಳಿಯ ಡಂಬಳ ಬೆಟ್ಟಗಳವರೆಗೆ ಹರಿದಿರುವುದು ಒಂದು ಶ್ರೇಣಿ. ಇದರ ಪಶ್ಚಿಮಕ್ಕೆ 48–56



ಓಂ ಬೀಚ್, ಗೋಕರ್ಣ

ಕಿಮೀ ದೂರದಲ್ಲಿ ಹಬ್ಬಿರುವ ಶ್ರೇಣಿ ಹೆಚ್ಚು ಸಂಕೀರ್ಣ. ಇದು ಕೃಷ್ಣರಾಜಪೇಟೆಯ ಬಳಿಯಿಂದ ವಾಯವ್ಯ ದಿಕ್ಕಿನಲ್ಲಿ ಹೊರಟು ಹೊನ್ನಾಳಿಯನ್ನು ದಾಟಿ ಹಬ್ಬಿದೆ. ಈ ಎರಡು ಶ್ರೇಣಿಗಳಲ್ಲೂ ಅನೇಕ ಖನಿಜಗಳುಂಟು. ಇವೆರಡರ ನಡುವಣ ನೆಲವನ್ನು ದಕ್ಷಿಣ ಮೈದಾನದ ಉಪಪ್ರದೇಶವೆನ್ನಬಹುದು. ಇಲ್ಲಿಯ ಬೇಸಾಯ ವಿಶಿಷ್ಟವಾದದ್ದು (ತೆಂಗು ಒಂದು ಮುಖ್ಯ ಬೆಳೆ). ದಕ್ಷಿಣ ಮೈದಾನದ ಪೂರ್ವಭಾಗ ಜಗಲಿಯಂತಿದ್ದು 915 ಮೀ ಎತ್ತರಕ್ಕೆ ಏರಿದೆ. ಬೆಂಗಳೂರಿನ ಸನಿಯದ ಈ ನೆಲದ ಉತ್ತರದ ಏಣು ಹೆಚ್ಚು ಎತ್ತರ. ಗುಡಿಬಂಡೆಯ ಬಳಿಯಿಂದ ಚಿಕ್ಕಬಳ್ಳಾಪುರದವರೆಗೆ ಹಬ್ಬಿರುವ ಬೆಟ್ಟಗಳಲ್ಲಿ ನಂದಿಬೆಟ್ಟವೂ ಒಂದು. ಈ ಶ್ರೇಣಿಯಿಂದ ಪಶ್ಚಿಮಾಭಿಮುಖವಾಗಿ ಸು. 24 ಕಿಮೀ ದೂರ ಸಾಗುವ ಬೆಟ್ಟಸಾಲು ಮೊದಲಿನವಕ್ಕಿಂತ ಕುಳ್ಳ. ಬಾಗೇಪಲ್ಲಿಯ ಪೂರ್ವದೆಡೆಯಿಂದ ಬಂಗಾರಪೇಟೆಯ ವರೆಗೆ ಇನ್ನೊಂದು ಶ್ರೇಣಿ ಹಬ್ಬಿದೆ. ಇಲ್ಲಿ ಕಲ್ಲುಬಂಡೆಗಳಿಂದ ಕೂಡಿದ ಬರಡು ಬೆಟ್ಟಗಳುಂಟು. ನಂದಿ ಬೆಟ್ಟದಿಂದ ಉತ್ತರದ ನೆಲ ಥಟ್ಟನೆ ಇಳಿಜಾರಾಗಿ ಸಾಗಿ ಪೆನ್ನಾರ್ ನದಿಯ ಬಳಿ ಎತ್ತರ 700–760 ಮೀ ಆಗಿದೆ.

ದಕ್ಷಿಣ ಮೈದಾನದ್ದು ಪ್ರಧಾನವಾಗಿ ಕೆಂಪು ಮಣ್ಣಿನಿಂದ ಕೂಡಿದ ನೆಲ. ಕೆಲವು ಕಡೆಗಳಲ್ಲಿ, ಮುಖ್ಯವಾಗಿ 915 ಮೀ ಎತ್ತರದಲ್ಲಿ ನೆಲ ಕಬ್ಬಿಣಭರಿತವಾಗಿದೆ. ಭೂಸವೆತದಿಂದಾಗಿ ಬಂಡೆಗಳ ಮಣ್ಣಿನ ಹೊದಿಕೆ ಕಳೆದುಹೋಗಿ ನೆಲ ಬರಡಾಗಿದೆ. ಉಳಿದ ಕಡೆಯ ನೆಲ ಕೂಡ ಅರಣ್ಯವರ್ಜನದ ಪರಿಣಾಮವಾಗಿಯೂ ಶತಶತಮಾನಗಳ ಬೇಸಾಯದ ಫಲವಾಗಿಯೂ ತಮ್ಮ ಸಾರವಷ್ಟನ್ನೂ ಕಳೆದುಕೊಂಡಿವೆ. ಹೊಸದಾಗಿ ಬೇಸಾಯಕ್ಕೆ ತಂದ ನೆಲದ ಮಣ್ಣು ಕಪ್ಪಾಗಿರುತ್ತದೆ. ಆದರೆ ಕ್ರಮೇಣ ಅದೂ ಸಾರ ಕಳೆದುಕೊಂಡು ಅಕ್ಕಪಕ್ಕದ ನೆಲದ ಮಣ್ಣಿನಂತೆಯೇ ಪರಿಣಮಿಸಬಹುದು. ಹೊಸ ನೆಲದ ಕಪ್ಪಿಗೆ ಸುಟ್ಟ ಬೇರಿನ ಕರುಕೇ ಕಾರಣವೆಂದು ಕೆಲವರ ಅಭಿಪ್ರಾಯ. ಕಣಿವೆಗಳಲ್ಲಿಯ ನೆಲ ಆಳವಾದ ಸಾರಭೂತ ಮಣ್ಣಿನಿಂದ ಕೂಡಿದ್ದಾಗಿದೆ.

**3. ಕರಾವಳಿ:** ಸಹ್ಯಾದ್ರಿ ಏಣಿನಿಂದ ಕಡಲ ತಡಿಯವರೆಗೆ ಇರುವುದು ಕರಾವಳಿ ಯೆನಿಸುತ್ತದೆ. ಸಹ್ಯಾದ್ರಿಯಿಂದ ಅಡ್ಡ ಹಾಯ್ದಿರುವ ಬೆಟ್ಟಗಳು ಮತ್ತು ಲ್ಯಾಟರೈಟ್ ಸಮಾವಿಷ್ಟ ಪ್ರಸ್ಥಭೂಮಿಗಳಿಂದಾಗಿ ಈ ಪ್ರದೇಶದಲ್ಲಿ ಭಿನ್ನತೆಗಳೇರ್ಪಟ್ಟಿವೆ. ಮರಳು ಗುಡ್ಡೆಗಳಿಂದ ಕೂಡಿದ ಕಡಲಂಚು. ತೆಂಗು, ಗೇರು, ಹಚ್ಚಹಸುರಿನ ಬತ್ತದಗದ್ದೆ; ಇವಕ್ಕೆ ಹಿನ್ನಲೆಯಾಗಿ ಪಶ್ಚಿಮಕ್ಕೆ ಅರಣ್ಯಾಚ್ಛಾದಿತ ಘಟ್ಟ ಸೋಪಾನ–ಇದು ಈ ಪ್ರದೇಶದ ಸಾಮಾನ್ಯ ದೃಶ್ಯ. ಈ ಪ್ರದೇಶದ ಉತ್ತರ ಭಾಗವನ್ನು (ಉತ್ತರ ಕನ್ನಡ) ಮಲೆನಾಡೆಂದು ಪರಿಗಣಿಸುವುದೂ ಉಂಟು. ಕಾರವಾರದ ಪೂರ್ವಕ್ಕೂ ದಕ್ಷಿಣಕ್ಕೂ ಇರುವ ಸು. 600 ಮೀ ಎತ್ತರದ ಪ್ರಸ್ಥಭೂಮಿ ಪ್ರದೇಶ ಸಮುದ್ರದ ಸನಿಯದವರೆಗೂ ಚಾಚಿಕೊಂಡಿದೆ. ಆದರೆ ಇದೂ ಅಖಂಡವಾಗಿಲ್ಲ. ಅಲ್ಲಲ್ಲಿ ಅಗಲ ಕಣಿವೆಗಳು ಇದನ್ನು ವಿಭಜಿಸುತ್ತವೆ. ಶಂಕುವಿನಂಥ ಬೆಟ್ಟಗಳು ಮಾತ್ರ 600 ಮೀ ಎತ್ತರವಿವೆಯೆನ್ನಬಹುದು.

ಬೈಂದೂರಿನ ಉತ್ತರಕ್ಕೆ ಕಡಲಕರೆಯ ಮೈದಾನ ವಾಸ್ತವವಾಗಿ ಬಲು ಕಿರಿದು; ಅಲ್ಲಲ್ಲಿ ನದೀ ಅಳಿವೆಗಳ ಆಚೀಚೆ ಉದ್ದುದ್ದನೆಯ ಪಟ್ಟೆಗಳಂತೆ ಕಾಣುತ್ತದೆ. ಬೈಂದೂರಿನಿಂದ ಮಂಗಳೂರಿನವರೆಗೆ ಇದರ ಅಗಲ ಸ್ವಲ್ಪ ಹೆಚ್ಚು; 13–16 ಕಿಮೀ ಗಳಷ್ಟು ವಿಸ್ತರಿಸಿದೆ. ಅಲ್ಲಲ್ಲಿ ಸು. 60 ಮೀ ಎತ್ತರದ ಲ್ಯಾಟೆರೈಟಿಕ್ ಜಗಲಿಗಳನ್ನು ಕೊರೆದಿರುವ ಅಳಿವೆಗಳನ್ನೂ 16 ಕಿಮೀ ಹಬ್ಬಿರುವ ಮರಳಗುಡ್ಡಗಳನ್ನೂ ಕಾಣಬಹುದು. ಕೆಲವು ಅಳಿವೆಗಳು ಕಡಲುಪ್ಪು ನೀರಿನ ಸರೋವರಗಳಂತಿದ್ದು ಕೇರಳದ ಸನ್ನಿವೇಶವನ್ನು ಹೋಲುವುದೂ ಉಂಟು.




ಕಡಲ ಮಟ್ಟದ ಈ ನೆಲದ ಪೂರ್ವದ ಬದಿಗೆ ಕುಂದಾಪುರದಿಂದ ಮಂಗಳೂರಿನ ದಕ್ಷಿಣದಂಚಿನವರೆಗೆ 15–25 ಕಿಮೀ ಅಗಲವೂ, 60–90 ಮೀ ಎತ್ತರವೂ ಇರುವ ತಗ್ಗಿನ



ಘಟ್ಟದ ಮಾರ್ಗ

ಪ್ರಸ್ಥಭೂಮಿಯನ್ನು ಕಾಣಬಹುದು. ಕೆಲವೆಡೆಗಳಲ್ಲಿ ಇದರ ಕಡಿದಾದ ಬಂಡೆಗಳು ಕಡಲವರೆಗೆ ಚಾಚಿರುವುದೂ ನೇತ್ರಾವತಿಯಂಥ ಮುಖ್ಯ ನದಿಕಣಿವೆಗಳಿರುವೆಡೆಯಲ್ಲಿ ಈ ನೆಲ ಪಶ್ಚಿಮದ ಕಡೆಗೆ ಹೆಚ್ಚಾಗಿ ಹಬ್ಬಿರುವುದೂ ಉಂಟು. ಈ ಪ್ರಸ್ಥಭೂಮಿಯ ಪ್ರದೇಶ ಅಷ್ಟೇನು

ಸವೆತಕ್ಕೊಳಗಾಗಿಲ್ಲ. ಆದರೆ ಉದ್ದಕ್ಕೂ ಇದನ್ನು ಸಮತಲದ, ಕಡಿದಾದ ದಂಡೆಯ ಅನೇಕ ಕಣಿವೆಗಳು ಅಡ್ಡಹಾಯ್ದಿವೆ. ಈ ಕಣಿವೆಗಳ ಅಗಲ ಸು. 2 ಕಿಮೀ ಕರಾವಳಿಯ ಹಾಗೂ ಮಲೆನಾಡಿನ ಲಕ್ಷಣಗಳೆರಡೂ ಇಲ್ಲಿ ಮಿಶ್ರವಾಗಿವೆ. ಒಟ್ಟಿನಲ್ಲಿ ಇದನ್ನು ಕರಾವಳಿಯ ತಗ್ಗುದಿಣ್ಣೆಯೆನ್ನುವುದು ಸಮಂಜಸವಾದೀತು.

ಕರಾವಳಿಯ ತಗ್ಗು ದಿಣ್ಣೆಯ ಪೂರ್ವದಲ್ಲಿ ಘಟ್ಟದೇಣಿನವರೆಗೆ ಇರುವ ಪ್ರದೇಶವನ್ನು ಕರಾವಳಿಯ ಮಲೆನಾಡು ಎನ್ನಬಹುದು. ಪುತ್ತೂರಿನ ಪೂರ್ವದಕ್ಷಿಣಗಳಲ್ಲಿ ಆರಂಭವಾಗಿ ಉತ್ತರದಲ್ಲಿ ಉಡುಪಿಯವರೆಗೂ ಹಬ್ಬಿರುವ ಪ್ರದೇಶದ ಎತ್ತರ ಸಾಮಾನ್ಯವಾಗಿ 300 ಮೀ ಗಿಂತ ಕಡಿಮೆ. ನಡುನಡುವೆ, ಎತ್ತರದ ಬೆಟ್ಟಪಂಕ್ತಿಗಳೂ ಉಂಟು. ಮತ್ತೆ ಕುಂದಾಪುರದ ಉತ್ತರದಲ್ಲಿ ಕರಾವಳಿಯ ಮಲೆನಾಡನ್ನು ಕಾಣಬಹುದು. ಇದು ಸ್ವರ್ಣಾ ನದಿಯ ಉತ್ತರಕ್ಕೆ ಹಬ್ಬಿ ಗೋವೆಯ ಎಲ್ಲೆಯವರೆಗೂ ಪಸರಿಸಿದೆ. ಘಟ್ಟಗಳ ಪೂರ್ವ ಭಾಗದಲ್ಲಿರುವ ನಿಜವಾದ ಮಲೆನಾಡಿಗೂ ಇದಕ್ಕೂ ಒಂದು ಮುಖ್ಯ ವ್ಯತ್ಯಾಸವುಂಟು. ಈ ಪ್ರದೇಶದಲ್ಲಿ 600 ಮೀ ಎತ್ತರವಿರುವ ಕೆಲವೇ ಬೆಟ್ಟತುಂಗಗಳಿವೆ. ಕಾಳಿನದಿ ಅಳಿವೆಯ ಉತ್ತರಕ್ಕೆ ಕಾಡು ಹಬ್ಬಿರುವ ವಿಸ್ತಾರವಾದ ತಗ್ಗುದಿಣ್ಣೆಯನ್ನು ಕಾಣಬಹುದು.

**ವಾಯುಗುಣ:** ಕರ್ನಾಟಕ ಉಷ್ಣವಲಯದ ಮಾನ್ಸೂನ್ ವಾಯುಗುಣವನ್ನೊಳಗೊಂಡಿದೆ. ಶಾಖ ಮತ್ತು ತೇವಾಂಶವುಳ್ಳ ಬೇಸಗೆ ಮತ್ತು ತಂಪಾದ ಹಾಗೂ ಶುಷ್ಕ



ಆಗುಂಬೆ ಸೂರ್ಯಾಸ್ತ

ಪರಿಸ್ಥಿತಿಯುಳ್ಳ ಚಳಿಗಾಲವು ಈ ವಾಯುಗುಣದ ಮುಖ್ಯ ಗುಣಲಕ್ಷಣಗಳು. ಆದರೆ ಕರ್ನಾಟಕದ ವಾಯುಗುಣ ವೈವಿಧ್ಯಪೂರ್ಣ. ಅದಕ್ಕೆ ಅಕ್ಷಾಂಶ, ಸಮುದ್ರ ಮಟ್ಟದಿಂದ ಎತ್ತರ, ಸಮುದ್ರ ಸಾಮೀಪ್ಯ, ಸ್ಥಳೀಯ ಮಾರುತಗಳು, ಸಸ್ಯವರ್ಗ, ಭೂಸ್ವರೂಪಗಳು ಮುಂತಾದವು ಕಾರಣವಾಗಿವೆ. ಕರಾವಳಿ ಪ್ರದೇಶ, ಮಲೆನಾಡು ಮತ್ತು ಸಹ್ಯಾದ್ರಿ ಘಟ್ಟಗಳ ಸರಣಿಗಳಲ್ಲಿ ಅಧಿಕ ಮಳೆಯಾಗುವುದರಿಂದ ಆರ್ದ್ರತೆಯುಳ್ಳ ವಾಯುಗುಣ ವಿರುತ್ತದೆ. ಒಳನಾಡು ಮತ್ತು ಉತ್ತರದ ಜಿಲ್ಲೆಗಳಲ್ಲಿ ಅರೆಶುಷ್ಕ ವಾಯುಗುಣವೂ, ಬಳ್ಳಾರಿ ಹಾಗೂ ಇತರ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಶುಷ್ಕವಾಯುಗುಣವೂ ಬಳ್ಳಾರಿ ಮತ್ತು ಬಿಜಾಪುರ ಪ್ರದೇಶದಲ್ಲಿ ಅತಿ ಸೆಕೆ ಮತ್ತು ಅತಿ ಶುಷ್ಕದ ವಾತಾವರಣವಿರುತ್ತದೆ. ತೀರಪ್ರದೇಶದಲ್ಲಿ ಸಮುದ್ರದ ಪ್ರಭಾವದಿಂದಾಗಿ ಬೇಸಗೆ ಮತ್ತು ಚಳಿಗಾಲದ ಉಷ್ಣಾಂಶ ಸಮತೋಲನಗೊಳ್ಳುತ್ತದೆ. ಸಮುದ್ರದ ಮಂದಮಾರುತಗಳು ಬೇಸಗೆಯ ತಾಪವನ್ನು ಉಪಶಮನ ಮಾಡುತ್ತವೆ. ಆದರೆ ಒಳನಾಡಿಗೆ ಹೋದಂತೆಲ್ಲಾ ಸಮುದ್ರದ ಪ್ರಭಾವವು ಕುಗ್ಗುತ್ತಾ ಹೋಗುವುದು. ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಿರುವ ಕರಾವಳಿ, ಅದಕ್ಕೆ ಹೊಂದಿಕೊಂಡಿರುವ ಭಾಗಗಳಲ್ಲಿ, ಹೆಚ್ಚು ಮಳೆ ಬೀಳುವ ಹಾಗೂ ರಾಜ್ಯದ ಪೂರ್ವಭಾಗಗಳಲ್ಲಿರುವ, ಕಡಿಮೆ ಮಳೆ ಬೀಳುವ ಹಾಗೂ ಬರಪೀಡಿತ ಪ್ರದೇಶಗಳ ನಡುವೆ ಸಹ್ಯಾದ್ರಿ ಶ್ರೇಣಿ (ಪಶ್ಚಿಮ ಘಟ್ಟಗಳು) ಗಳು ವಿಭಾಜಕದಂತೆ ವರ್ತಿಸುವವು. ಇದು ಕರ್ನಾಟಕದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ನೈಸರ್ಗಿಕ ಅಂಶಗಳಾಗಿವೆ. ಕರ್ನಾಟಕದ ಮೈದಾನಗಳು ಸಮುದ್ರ ಪ್ರಭಾವದಿಂದ ಹೊರತಾಗಿವೆ.

ನೈಋತ್ಯ ಮಾನ್ಸೂನ್ ಮಾರುತಗಳು ಸಮುದ್ರದ ಕಡೆಯಿಂದ ಭೂಭಾಗದ ಕಡೆಗೆ ಬೀಸುವುದರಿಂದ ಮಳೆಯ ಹಂಚಿಕೆಯಲ್ಲಿ ವ್ಯತ್ಯಾಸವುಂಟಾಗುವುದು. ಪಶ್ಚಿಮದಿಂದ ಪೂರ್ವದ ಕಡೆಗೆ ಹೋದಂತೆ ಮಳೆಯ ಹಂಚಿಕೆ ಕಡಿಮೆಯಾಗುವುದು. ಈ ಎಲ್ಲಾ ಅಂಶಗಳನ್ನು ದೃಷ್ಟಿಯಲಿಟ್ಟುಕೊಂಡು ಕರ್ನಾಟಕದ ವಾಯುಗುಣವನ್ನು ಭಾರತದ ವಾಯುಗುಣದ ಕಾಲಗಳಂತೆಯೇ ನಾಲ್ಕು ಮುಖ್ಯ ಭಾಗಗಳನ್ನಾಗಿ ವಿಂಗಡಿಸಬಹುದು.

1. ಚಳಿಗಾಲ (ಡಿಸೆಂಬರ್–ಫೆಬ್ರವರಿ)
2. ಬೇಸಗೆ ಕಾಲ (ಮಾರ್ಚ್–ಮೇ)
3. ಮಳೆಗಾಲ (ಜೂನ್–ಸೆಪ್ಟೆಂಬರ್)
4. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ (ಅಕ್ಟೋಬರ್–ನವೆಂಬರ್)

**1. ಚಳಿಗಾಲ:** ಕಡಿಮೆ ಉಷ್ಣಾಂಶ ಮತ್ತು ಆರ್ದ್ರತೆ, ಅಲ್ಪಮಳೆ ಹಾಗೂ ನಿರ್ಮಲವಾದ ಆಕಾಶ, ಇವು ಚಳಿಗಾಲದ ವಿಶಿಷ್ಟವಾದ ಲಕ್ಷಣಗಳು. ಈ ಅವಧಿಯಲ್ಲಿ ಕರಾವಳಿ ಪ್ರದೇಶಗಳಲ್ಲಿ $27^0$ಸೆ. ಉಷ್ಣಾಂಶವಿದ್ದು, ಅದು ಮಲೆನಾಡು ಮತ್ತು ಮೈದಾನಗಳ ಕಡೆಗೆ ಹೋದಂತೆ ಕಡಿಮೆಯಾಗುವುದು. ಉತ್ತರ ಕರ್ನಾಟಕದ ಒಳನಾಡು ಭಾಗಗಳಲ್ಲಿನ ರಾತ್ರಿಯ ತಾಪಮಾನವು ಸರಾಸರಿಗಿಂತಲೂ ಕಡಿಮೆಯಿರುತ್ತದೆ. ಶೀತವಾದ ಗಾಳಿಯಿಂದ ಆಗಾಗ ಚಳಿಯಿರುತ್ತದೆ. ಈ ಕಾಲದಲ್ಲಿ ರಾಜ್ಯದ ಬಹುಭಾಗದಲ್ಲಿ 10 ಸೆಂಮೀ ಗಿಂತಲೂ ಕಡಿಮೆ ಮಳೆ ಬೀಳುವುದು. ಬದಲಿಗೆ ಈ ಅವಧಿಯಲ್ಲಿ ಶುಷ್ಕ ಹವೆಯುಳ್ಳ ಪರಿಸ್ಥಿತಿಯಿರುತ್ತದೆ. ಇದು ಕೃಷಿ ಬೆಳೆಗಳನ್ನು ಕಟಾವು ಮಾಡಲು ಅನುಕೂಲವಾದುದು. ಪ್ರಾತಃಕಾಲ ಕರಾವಳಿ ಹಾಗೂ ಎತ್ತರವಾದ ಭಾಗಗಳಲ್ಲಿ ಮಸುಕಿನ ಮಬ್ಬು ಮತ್ತು ಕಾವಳದ ಪರಿಸ್ಥಿತಿಯಿರುತ್ತದೆ.

**2. ಬೇಸಗೆ ಕಾಲ:** ಮಾರ್ಚಿ ಅನಂತರ ರಾಜ್ಯದಾದ್ಯಂತ ಉಷ್ಣಾಂಶವು ಗಣನೀಯವಾಗಿ ಏರುತ್ತಾ ಹೋಗಿ ಏಪ್ರಿಲ್–ಮೇ ತಿಂಗಳುಗಳಲ್ಲಿ ಅದು ಗರಿಷ್ಠ ಮಟ್ಟವನ್ನು ತಲುಪುವುದು. ಉಷ್ಣಾಂಶವು ಕರಾವಳಿ ಪ್ರದೇಶದಲ್ಲಿ $31^0$ಸೆ ವರೆಗೆ ಏರಿದರೆ, ರಾಜ್ಯದ ಈಶಾನ್ಯದ ಕೆಲ ಭಾಗಗಳಲ್ಲಿ $42^0$ಸೆ ಗಳಿಗೆ ಏರುವುದು. ರಾತ್ರಿಯ ವೇಳೆ ಹಗಲಿಗಿಂತ ತಂಪಾಗಿರುತ್ತದೆ. ಈ ಅವಧಿಯ ಪ್ರಾರಂಭದಲ್ಲಿ ವಾಯುಮಂಡಲದ ತೇವಾಂಶವು ಕಡಿಮೆಯಿದ್ದರೂ ಮೇ ತಿಂಗಳ ಅನಂತರ ಅದು ಹೆಚ್ಚಾಗುತ್ತಾ ಹೋಗುವುದು. ಪರಿಣಾಮವಾಗಿ ಈ ವೇಳೆಯಲ್ಲಿ ಕೆಲಮೊಮ್ಮೆ ಗುಡುಗಿನಿಂದ ಕೂಡಿದ ಪರಿಸರಣ ಮಳೆಯು ಬೀಳುವುದು. ಆಗಾಗ ಮಳೆಯ ಜೊತೆ ಆಲಿಕಲ್ಲುಗಳು ಸುರಿಯುವುದು. ಇಂತಹ ಮಳೆಯು ಸಾಮಾನ್ಯವಾಗಿ ಅಪರಾಹ್ನದ ವೇಳೆಯಲ್ಲಿ ಸಂಭವಿಸುತ್ತದೆ. ಕರಾವಳಿ ಮತ್ತು ದಕ್ಷಿಣದ ಜಿಲ್ಲೆಗಳಲ್ಲಿ ಶಾಖ ಮತ್ತು ಸೆಕೆ, ಉತ್ತರ ಕರ್ನಾಟಕದಲ್ಲಿ ಶಾಖ ಮತ್ತು ಶುಷ್ಕವಾದ ಪರಿಸ್ಥಿತಿಯಿರುತ್ತದೆ.

**3. ಮಳೆಗಾಲ:** ಇದನ್ನು 'ನೈಋತ್ಯ ಮಾನ್ಸೂನ್ ಮಾರುತ'ಗಳ ಕಾಲವೆಂತಲೂ ಕರೆಯುವರು. ಈ ಅವಧಿಯಲ್ಲಿ ವಾಯುಮಂಡಲವು ಗರಿಷ್ಠ ಪ್ರಮಾಣದ ಆರ್ದ್ರತೆಯನ್ನು ಹೊಂದಿದ್ದು, ಕರಾವಳಿ, ಪ್ರಮಾಣದ ಆರ್ದ್ರತೆಯನ್ನು ಹೊಂದಿದ್ದು, ಕರಾವಳಿ, ಪಶ್ಚಿಮಘಟ್ಟಗಳು, ಮಲೆನಾಡುಗಳಲ್ಲಿ ಅತ್ಯಧಿಕ ಪ್ರಮಾಣದ ಮಳೆ ಬೀಳುವುದು. ಆದರೆ ಪೂರ್ವದ ಕಡೆಗೆ ಹೋದಂತೆ ಮಳೆಯ ಮಾರುತಗಳು ದುರ್ಬಲಗೊಂಡು ಉತ್ತರ ಮೈದಾನದ ಭಾಗಗಳಿಗೆ ಮಳೆಯ ಹಂಚಿಕೆ ವಿರಳವಾಗುವುದು. ಪರಿಣಾಮವಾಗಿ ಅವು ಮಳೆಯ ನೆರಳಿನ ಪ್ರದೇಶಗಳಾಗಿ ಪರಿಣಮಿಸುತ್ತವೆ. ಇದರಿಂದಾಗಿ ಆಗಾಗ್ಗೆ ಕ್ಷಾಮವು ತಲೆದೋರುವುದು. ಈ ಅವಧಿಯಲ್ಲಿ ರಾಜ್ಯದ ಮುಕ್ಕಾಲು ಭಾಗವು ಮಳೆಯನ್ನು ಪಡೆಯುವುದು. ಇದು ಮುಂಗಾರು ಬೆಳೆಗಳಿಗೆ ಪೂರಕವಾಗಿದೆ. ಅಧಿಕ ಮಳೆಯಿಂದಾಗಿ ದೈನಿಕ ಉಷ್ಣಾಂಶವು ಕಡಿಮೆಯಾಗುವುದು. ವಾಯುವಿನ ತೇವಾಂಶವು ಹೆಚ್ಚಾಗುವುದು.

**4. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ:** ಇದನ್ನು ಈಶಾನ್ಯ ಮಾನ್ಸೂನ್ ಮಾರುತಗಳ ಕಾಲವೆಂತಲೂ ಕರೆಯುವರು. ಈ ಅವಧಿಯಲ್ಲಿ ಒತ್ತಡದ ಹಂಚಿಕೆಯಲ್ಲಿ ಬದಲಾವಣೆಯಾಗುತ್ತದೆ. ಭಾರತದ ಉತ್ತರ ಭಾಗದಲ್ಲಿ ಅಧಿಕ ಒತ್ತಡ ಕೋಶ ಉಂಟಾಗಿ ದಕ್ಷಿಣದಲ್ಲಿ ಒತ್ತಡ ಕಡಿಮೆಯಾಗುವುದು. ಇಂತಹ ತದ್ವಿರುದ್ಧವಾದ ಪರಿಸ್ಥಿತಿಯಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ. ಬಂಗಾಲ ಕೊಲ್ಲಿಯ ಮೇಲೆ ಬೀಸಿ ಬರುವಾಗ ಮಾರುತಗಳು ತೇವಾಂಶವನ್ನು ಒಯ್ಯುವುದರಿಂದ ದೇಶದ ಪೂರ್ವ ಕರಾವಳಿಗೆ ಸ್ವಲ್ಪ ಮಳೆಯಾಗುವುದು. ಇದೇ ಮಾರುತಗಳು ಪಶ್ಚಿಮಕ್ಕೆ ಮುಂದುವರಿದು ಕರ್ನಾಟಕವನ್ನು ತಲುಪುವ ವೇಳೆಗೆ ಅಲ್ಪಸ್ವಲ್ಪ ಮಳೆಯಾಗುವುದು. ಕೆಲವೊಮ್ಮೆ ಆವರ್ತ ಮಾರುತ ಪರಿಸ್ಥಿತಿಯು ಸಂಭವಿಸುತ್ತದೆ. ಒಟ್ಟಾರೆ ಈ ಅವಧಿಯಲ್ಲಿ ವಾಯುಗುಣದ ಪರಿಸ್ಥಿತಿ ಅನಿಶ್ಚಿತವಾಗಿರುತ್ತದೆ.

**ಉಷ್ಣಾಂಶದ ಹಂಚಿಕೆ:** ಕರ್ನಾಟಕ ಉತ್ತರ ಗೋಳಾರ್ಧದಲ್ಲಿದ್ದರೂ ಸಮಭಾಜಕ ವೃತ್ತಕ್ಕೆ ಸಮೀಪದಲ್ಲಿದೆ. ವರ್ಷವಿಡೀ ಹೆಚ್ಚು ಕಡಿಮೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುತ್ತವೆ. ಪರಿಣಾಮವಾಗಿ ರಾಜ್ಯದಾದ್ಯಂತ ಉಷ್ಣಾಂಶ ಹೆಚ್ಚಾಗಿರುತ್ತದೆ. ರಾಜ್ಯದ ದಕ್ಷಿಣ ಭಾಗವು ಸಮಭಾಜಕ ವೃತ್ತಕ್ಕೆ ಸಮೀಪವಾಗಿದ್ದು ಉಷ್ಣಾಂಶದ ತೀವ್ರತೆ ಉತ್ತರಕ್ಕಿಂತ ಹೆಚ್ಚಾಗಿರುತ್ತದೆ. ಈ ಭಾಗವು ಸಮುದ್ರಮಟ್ಟದಿಂದ ಹೆಚ್ಚು ಎತ್ತರವುಳ್ಳ ಭೂಸ್ವರೂಪವುಳ್ಳದ್ದಾಗಿದ್ದು, ತಾಪಮಾನದಲ್ಲಿ ಗಮನಾರ್ಹವಾದ ಬದಲಾವಣೆ ಕಾಣಬಹುದು. ಹೀಗಾಗಿ ಉತ್ತರ ಮೈದಾನದ ಜಿಲ್ಲೆಗಳಿಗಿಂತ ದಕ್ಷಿಣದಲ್ಲಿ ಉಷ್ಣಾಂಶದ ತೀಕ್ಷ್ಣತೆ ಕಡಿಮೆ. ಕರಾವಳಿ ಮತ್ತು ಮಲೆನಾಡಿನ ಉಷ್ಣಾಂಶದ ಹಂಚಿಕೆ. ಭಿನ್ನವಾದುದು ಸಾಮಾನ್ಯವಾಗಿ ಬಿಸಿಲಿನ ತಾಪ

ಹೆಚ್ಚು. ಆದರೆ ಕೋಲಾರ ಜಿಲ್ಲೆಯ ನಂದಿಬೆಟ್ಟ, ಚಾಮರಾಜನಗರ ಜಿಲ್ಲೆಯ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಮತ್ತು ಬಿಳಿಗಿರಿರಂಗನ ಬೆಟ್ಟ ಚಿಕ್ಕಮಗಳೂರು ತಾಲ್ಲೂಕಿನ ಕೆಮ್ಮಣ್ಣು ಗುಂಡಿಗಳಲ್ಲಿ ತಂಪಾದ ಹವಾಮಾನವಿರುತ್ತದೆ.

ಸಮುದ್ರಮಟ್ಟಕ್ಕೆ ಸಮೀಪವಿರುವ ಕರಾವಳಿ ಪ್ರದೇಶದಲ್ಲಿ ಉಷ್ಣಾಂಶ ಹೆಚ್ಚಾಗಿರುವುದು ಸಹಜ. ಅದರಲ್ಲಿ ಹೆಚ್ಚು ಋತುಕಾಲಿಕ ವ್ಯತ್ಯಾಸವಿಲ್ಲ. ಸು. $24^0$ಸೆ–$30^0$ ಸೆಲ್ಸಿಯಸ್‌ಗಳಾಗಿರುತ್ತದೆ. ಏಪ್ರಿಲ್–ಮೇ ಮಾಸಗಳಲ್ಲಿ ಉಷ್ಣಾಂಶ ರಾಜ್ಯದಾದ್ಯಂತ ಗರಿಷ್ಠ ಮಟ್ಟವನ್ನು ಮುಟ್ಟುತ್ತದೆ. ಸಮುದ್ರದ ಸನಿಯದ ಕರಾವಳಿ ಪ್ರದೇಶದಲ್ಲಿ ಕಡಲ್ಗಾಳಿ ಬೀಸುವುದರಿಂದ ತಾಪಮಾನವು ಶಮನವಾಗುವುದು. ಈ ಕಾಲದಲ್ಲಿ ಸ್ವಲ್ಪ ಮಳೆಬೀಳುವುದುಂಟು. ಮಳೆಗಾಲವು ಪ್ರಾರಂಭವಾದ ಮೇಲೆ ಉಷ್ಣಾಂಶ ಕಡಿಮೆಯಾಗುತ್ತದೆ. ನವೆಂಬರ್ ಮಾಹೆಯಲ್ಲಿ ತಟ್ಟನೆ ಬದಲಾಗುತ್ತದೆ. ನಿರ್ಗಮನ ಮಾನ್ಸೂನ್ ಪ್ರಭಾವದಿಂದ ದಕ್ಷಿಣ ಮೈದಾನದಲ್ಲಿ ಸ್ವಲ್ಪ ಮಳೆಬೀಳುವುದುಂಟು. ಆಗ ಉಷ್ಣಾಂಶದಲ್ಲಿ ಬದಲಾವಣೆಯಿರುತ್ತದೆ. ಒಂದು ವೇಳೆ ಸೈಕ್ಲೋನ್ ಸಂಭವಿಸಿದರೆ ಇನ್ನೂ ಹೆಚ್ಚು ಬದಲಾವಣೆಯಾಗುವುದು. ಡಿಸೆಂಬರ್ ಮಾಹೆಯಲ್ಲಿ ಉತ್ತರ ಮೈದಾನದ ಉಷ್ಣತೆ ಕಡಿಮೆಯಾದರೂ ದಕ್ಷಿಣದಲ್ಲಿ ಕಡಿಮೆಯಾಗುವುದಿಲ್ಲ. ಮಳೆ ಕಡಿಮೆಯಾದಂತೆ ಹಾಗೂ ಈಶಾನ್ಯದಿಂದ ಬೀಸುವ ತಣ್ಣನೆ ಗಾಳಿಯನ್ನು ಸಹ್ಯಾದ್ರಿ ಸರಣಿಗಳು ತಡೆಯುತ್ತವೆ. ಹೀಗಾಗಿ ಜನವರಿಯಲ್ಲಿ ಉಷ್ಣಾಂಶ ಕನಿಷ್ಠಮಟ್ಟವನ್ನು ತಲುಪುತ್ತದೆ. ಮತ್ತೆ ಮಾರ್ಚಿಯಿಂದ ಉಷ್ಣಾಂಶ ಏರುತ್ತಾ ಹೋಗುವುದು. ಮಡಿಕೇರಿ ಸುತ್ತಮುತ್ತ ಕರಾವಳಿಪ್ರದೇಶಗಳಲ್ಲಿ ಚಳಿಗಾಲ ಮತ್ತು ಬೇಸಗೆಗಳ ನಡುವೆ ಹೆಚ್ಚು ಉಷ್ಣಾಂಶದ ವ್ಯತ್ಯಾಸವಿರುತ್ತದೆ. ಮಾರ್ಚಿ–ಏಪ್ರಿಲ್ ಮಾಹೆಗಳಲ್ಲಿ ಸೆಕೆ ಹೆಚ್ಚು ($22^O$ ರಿಂದ $24^O$ಸೆ.) ಆ ಸಮಯದ ಹಗಲಿನ ಗರಿಷ್ಠ ಉಷ್ಣಾಂಶ $28^O$ ರಿಂದ $30^O$ಸೆ., ಚಳಿಗಾಲದಲ್ಲಿ ಬೇಸಗೆಗಿಂತ ಆರ್ದ್ರತೆಯ ಪ್ರಮಾಣ ಕಡಿಮೆ.

**ಮಳೆಯ ಹಂಚಿಕೆ:** ಕರ್ನಾಟಕದ ಎಲ್ಲಾ ಭಾಗಗಳಲ್ಲೂ, ಮಳೆಯ ಹಂಚಿಕೆ ಸಮನಾಗಿಲ್ಲ. ಇದಕ್ಕೆ ಋತುಕಾಲಿಕ ಮಾನ್ಸೂನ್ ಮಾರುತಗಳು, ಮೇಲ್ಮೈಲಕ್ಷಣ, ಪರ್ಯಾಯ ಪ್ರಸ್ಥಭೂಮಿಯನ್ನಾವರಿಸಿರುವ ಸಮುದ್ರಗಳು ಪ್ರಮುಖ ಕಾರಣಗಳಾಗಿವೆ. ನೈಋತ್ಯ ಮತ್ತು ಈಶಾನ್ಯ ಮಾನ್ಸೂನ್ ಮಾರುತಗಳಿಂದ ರಾಜ್ಯದಾದ್ಯಂತ ಮಳೆ ಬೀಳುತ್ತದೆ. ಚಳಿಗಾಲ ಮತ್ತು ಬೇಸಗೆ ಅವಧಿಗಳಲ್ಲಿ ಸ್ವಲ್ಪವೇ ಮಳೆಯಾಗುವುದು. ವಾರ್ಷಿಕ ಮಳೆಯು ಪಶ್ಚಿಮ ಘಟ್ಟಗಳಲ್ಲಿ ಅತ್ಯಧಿಕವಾಗಿರುತ್ತದೆ. ಅಲ್ಲಿಂದ ಪೂರ್ವದ ಕಡೆಗೆ ಹೋದಂತೆಲ್ಲಾ ಕಡಿಮೆಯಾಗುವುದು. ಅದರಲ್ಲೂ ಮಲೆನಾಡಿನಲ್ಲಿ ಮಳೆಯು ಹೆಚ್ಚು. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಲ್ಲಿ ಅತ್ಯಧಿಕ ಮಳೆ ಬೀಳುವುದು. ಈ ಭಾಗಗಳಲ್ಲಿ ವರ್ಷಕ್ಕೆ ಸರಾಸರಿ 40 ಸೆಂಮೀ ಮಳೆ ಬೀಳುವುದು. ಇದೇ ಪ್ರದೇಶದಲ್ಲಿರುವ ಆಗುಂಬೆ ಪ್ರದೇಶಕ್ಕೆ ವರ್ಷದಲ್ಲಿ 500 ದಿಂದ 800 ಸೆಂಮೀ ಮಳೆಯಾಗುವುದು. ವಾಸ್ತವವಾಗಿ ಆಗುಂಬೆಯಲ್ಲಿ 828 ಸೆಂಮೀ ಮಳೆ ಬೀಳುವುದು. ಇದು ರಾಜ್ಯದಲ್ಲಿ ಅತ್ಯಂತ ಹೆಚ್ಚು ಮಳೆ ಬೀಳುವ ಸ್ಥಳ. ಇದನ್ನು ಕರ್ನಾಟಕದ ಚಿರಾಪುಂಜಿ ಎಂದು ಕರೆಯುವರು. ಕರ್ನಾಟಕದ ಮತ್ತೊಂದು ಅಧಿಕ ಮಳೆ ಬೀಳುವ ಪ್ರದೇಶವೆಂದರೆ ಕೊಡಗಿನ ಪೂರ್ವಭಾಗ. ಒಟ್ಟಾರೆ ಉತ್ತರ ಮತ್ತು ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಬೆಳಗಾಂವಿಯ ನೈಋತ್ಯ ಭಾಗ, ಚಿಕ್ಕಮಗಳೂರಿನ ಪಶ್ಚಿಮ ಭಾಗ, ಹಾಸನದ ಸಕಲೇಶಪುರ ತಾಲ್ಲೂಕುಗಳು ಅತ್ಯಧಿಕ ಪ್ರಮಾಣದಲ್ಲಿ ಮಳೆ ಬೀಳುವ ಭಾಗಗಳಾಗಿವೆ.

ಪೂರ್ವದ ಕಡೆಗೆ ಹೋದಂತೆ ಮಳೆಯ ಪ್ರಮಾಣವು ಕಡಿಮೆಯಾಗುತ್ತಾ ಮೈದಾನದ ಕೆಲವೆಡೆ ಕನಿಷ್ಠ ಪ್ರಮಾಣದಲ್ಲಿ ಮಳೆ ಬೀಳುವುದು. ಬಿಜಾಪುರ, ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಕಡಿಮೆ ಮಳೆಯಾಗುವ ಪ್ರದೇಶಗಳು. ಚಳ್ಳಕೆರೆಯು ಕರ್ನಾಟಕದಲ್ಲೇ ಅತ್ಯಂತ ಕಡಿಮೆ ಮಳೆ (46 ಸೆಂಮೀ) ಬೀಳುವ ಪ್ರದೇಶ. ಚಳ್ಳಕೆರೆಯ ವಾಯವ್ಯ ಭಾಗದಲ್ಲಿರುವ ನಾಯಕನ ಹಟ್ಟಿ ಮತ್ತು ಆಗ್ನೇಯ ದಿಕ್ಕಿನಲ್ಲಿರುವ ಧರ್ಮಪುರ ಎಂಬ ಸ್ಥಳಗಳು ಇನ್ನೂ ಕಡಿಮೆ ಪ್ರಮಾಣದ ಮಳೆಯಾಗುವ ಪ್ರದೇಶಗಳು.

ಭಾರತದ ನಾಲ್ಕು ಋತುಮಾನುಗಳನ್ನು ಗಣನೆಗೆ ತೆಗೆದುಕೊಂಡಾಗ ಕರ್ನಾಟಕಕ್ಕೆ ಹೆಚ್ಚು ಮಳೆಯಾಗುವ ಅವಧಿ ನೈಋತ್ಯ ಮಾನ್ಸೂನ್ ಕಾಲ. ನೈಋತ್ಯ ಮಾನ್ಸೂನ್ ಮಾರುತಗಳು ಕರಾವಳಿಯನ್ನು ತಲುಪುವುದಕ್ಕೂ ಮುಂಚೆ ಅರಬ್ಬಿ ಸಮುದ್ರದ ಮೇಲೆ ಹಾಯ್ದು ಬರುವಾಗ ಅವು ಸಾಕಷ್ಟು ತೇವಾಂಶವನ್ನು ಪಡೆದಿರುತ್ತವೆ. ಅವು ಪಶ್ಚಿಮ ಘಟ್ಟಗಳ ಮೇಲೇರಿದಂತೆಲ್ಲಾ ತಂಪಾಗಿ ಘನೀಕರಣದಿಂದ ದಟ್ಟವಾದ ಮೋಡಗಳು ರೂಪುಗೊಂಡು, ಹೆಚ್ಚು ಮಳೆ ಬೀಳುವುದಕ್ಕೆ ಕಾರಣವಾಗುತ್ತವೆ. ಆದರೆ ಮಳೆಯು ನಿರಂತರವಾಗಿ ಬೀಳುವುದಿಲ್ಲ. ಅದು ಅಕಾಲಿಕವಾಗಿರುತ್ತದೆ. ಹಾಗೆಯೇ ಮಳೆಯ ಹಂಚಿಕೆಯಲ್ಲಿಯೂ ಪ್ರಾದೇಶಿಕ ವ್ಯತ್ಯಾಸವಿರುತ್ತದೆ. ಕರಾವಳಿ ಮತ್ತು ಮಲೆನಾಡು ಭಾಗಗಳಿಗೆ ಹೆಚ್ಚು ಮಳೆಯಾದರೆ ರಾಜ್ಯದ ಪೂರ್ವಾರ್ಧಕ್ಕೆ ಹೋದಂತೆ 40 ಸೆಂಮೀ ಗಿಂತಲೂ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುವುದು. ಆಗುಂಬೆ ಮತ್ತು ಭಾಗಮಂಡಲಗಳಲ್ಲಿ ಈ ಅವಧಿಯಲ್ಲಿ ಬೀಳುವ ಮಳೆ ಅನುಕ್ರಮವಾಗಿ 700 ಸೆಂಮೀ ಮತ್ತು 500 ಸೆಂಮೀ ಗಳಾದರೆ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ಹಾಗೂ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಗಳಲ್ಲಿ ಅನುಕ್ರಮವಾಗಿ 20 ಮತ್ತು 22 ಸೆಂಮೀ ಮಳೆಯನ್ನು ಪಡೆವ ಈ ಋತುವಿನ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಗಳಾಗಿವೆ. ರಾಜ್ಯದ ವಾರ್ಷಿಕ ಮಳೆಯ ಹಂಚಿಕೆಯಲ್ಲಿ ಶೇ. 75ರಷ್ಟು ಮಳೆಯು ಈ ಅವಧಿಯಲ್ಲಿ ಬೀಳುತ್ತದೆ.

ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಮಾರುತಗಳು ಭೂಭಾಗದಿಂದ ಬೀಸುವುದರಿಂದ ಅವು ಸಾಮಾನ್ಯವಾಗಿ ಒಣ ಗಾಳಿಗಳಾಗಿರುತ್ತವೆ. ಆದ್ದರಿಂದ ಅವು ಸಾಕಷ್ಟು ಮಳೆಯನ್ನು ಸುರಿಸಲಾರವು. ಆದರೆ ಬಂಗಾಳ ಕೊಲ್ಲಿಯ ಮೇಲೆ ಹಾಯ್ದು ಬರುವಾಗ ತೇವಾಂಶವನ್ನು ಪಡೆದುಕೊಳ್ಳುವುದರಿಂದ ಭಾರತದ ಪೂರ್ವ ಕರಾವಳಿಗೆ ಸ್ವಲ್ಪ ಮಳೆಯನ್ನು ಸುರಿಸುವವು. ಅವು ಕರ್ನಾಟಕವನ್ನು ತಲುಪುವ ವೇಳೆಗೆ ದುರ್ಬಲವಾಗುವುದರಿಂದ ಅಷ್ಟೊಂದು ಮಳೆಯನ್ನು ಸುರಿಸಲಾರವು. ಆದರೂ ರಾಜ್ಯದ ಬಯಲು ಪ್ರದೇಶಗಳಲ್ಲಿ ಸ್ವಲ್ಪ ಮಳೆಯಾಗುತ್ತದೆ. ಇದನ್ನು ಹಿಂಗಾರು ಮಳೆ ಎಂದು ಕರೆಯುವರು. ಮಳೆಯ ಪ್ರಮಾಣ ಮೈದಾನ ಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೂ ಹಾಗೂ ಕರಾವಳಿಯ ಕಡೆಗೆ ಬಂದಂತೆ ಕಡಿಮೆಯಾಗುವುದು. ತುಮಕೂರಿನ ಪಶ್ಚಿಮ, ಹಾಸನ ಜಿಲ್ಲೆಯ ಪೂರ್ವಭಾಗ, ಮಂಡ್ಯ, ಮೈಸೂರು ಮತ್ತು ಕೋಲಾರ ಜಿಲ್ಲೆಗಳ ಪೂರ್ವ ಭಾಗಗಳಿಗೆ ವಾರ್ಷಿಕ ಮಳೆಯಲ್ಲಿ ಶೇ. 30ರಷ್ಟು ಈ ಅವಧಿಯಲ್ಲಿ ಬೀಳುತ್ತದೆ. ಬೀದರ್, ಗುಲ್ಬರ್ಗ ಮತ್ತು ಕರಾವಳಿಗಳಲ್ಲಿ ಕನಿಷ್ಠ ಪ್ರಮಾಣದಲ್ಲಿ ಮಳೆ ಬೀಳುವುದು.

**ಕರ್ನಾಟಕದ ಜಿಲ್ಲಾವಾರು ಮಳೆಯ ಹಂಚಿಕೆ, (ಸೆಂಮೀಗಳಲ್ಲಿ)**

| | ಜಿಲ್ಲೆ | ವಾರ್ಷಿಕ ಸರಾಸರಿ | ವಾಸ್ತವ ವಾರ್ಷಿಕ ಮಳೆ (2003) |
|---|---|---|---|
| 1. | ಉತ್ತರ ಕನ್ನಡ | 421 | 396 |
| 2. | ದಕ್ಷಿಣ ಕನ್ನಡ | 393 | 353 |
| 3. | ಉಡುಪಿ | 284 | 243 |
| 4. | ಶಿವಮೊಗ್ಗ | 286 | 217 |
| 5. | ಕೊಡಗು | 280 | 215 |
| 6. | ಚಿಕ್ಕಮಗಳೂರು | 206 | 123 |
| 7. | ಹಾಸನ | 276 | 99 |
| 8. | ಬೀದರ್ | 89 | 72 |
| 9. | ಬೆಳಗಾಂವಿ | 83 | 67 |
| 10. | ಮೈಸೂರು | 73 | 59 |
| 11. | ಚಾಮರಾಜನಗರ | 70 | 57 |
| 12. | ಮಂಡ್ಯ | 63 | 54 |
| 13. | ಬೆಂಗಳೂರು (ಗ್ರಾ) | 75 | 53 |
| 14. | ಹಾವೇರಿ | 75 | 53 |
| 15. | ಬೆಂಗಳೂರು | 73 | 52 |
| 16. | ಕೋಲಾರ | 84 | 49 |
| 17. | ಗುಲ್ಬರ್ಗ | 78 | 47 |
| 18. | ದಾವಣಗೆರೆ | 66 | 45 |
| 19. | ಧಾರವಾಡ | 77 | 43 |
| 20. | ತುಮಕೂರು | 54 | 42 |
| 21. | ರಾಯಚೂರು | 62 | 40 |
| 22. | ಗದಗ | 61 | 35 |
| 23. | ಕೊಪ್ಪಳ | 58 | 33 |
| 24. | ಚಿತ್ರದುರ್ಗ | 73 | 33 |
| 25. | ಬಳ್ಳಾರಿ | 61 | 32 |
| 26. | ಬಿಜಾಪುರ | 58 | 31 |
| 27. | ಬಾಗಲಕೋಟೆ | 68 | 24 |
| 28. | ರಾಮನಗರ | ಅಲಭ್ಯ | ಅಲಭ್ಯ |
| 29. | ಚಿಕ್ಕಬಳ್ಳಾಪುರ | ಅಲಭ್ಯ | ಅಲಭ್ಯ |
| 30. | ಯಾದಗಿರಿ | ಅಲಭ್ಯ | ಅಲಭ್ಯ |
| | | **119** | **82** |

ಚಳಿಗಾಲದಲ್ಲಿ ಅತ್ಯಲ್ಪ ಮಳೆಯಾಗುವುದು. ಬೇಸಗೆಯ ಕೊನೆಯ ಭಾಗದಲ್ಲಿ, ಅಂದರೆ ಮೇ ತಿಂಗಳಲ್ಲಿ ಪರಿಸರಣ ರೀತಿಯ ಮಳೆ ಬೀಳುವುದು. ಈ ಎರಡು ಋತುವಿನಲ್ಲಿ ಬೀಳುವ ಮಳೆಯ ಹಂಚಿಕೆಯು ರಾಜ್ಯಕ್ಕೆ ಅಷ್ಟೊಂದು ಮಹತ್ತ್ವದ್ದಾಗಿರುವುದಿಲ್ಲ. ಆದರೆ ಮೇ ತಿಂಗಳಲ್ಲಿ ಬೀಳುವ ಮಳೆಯು ಕಾಫಿ ಬೇಸಾಯಗಾರರಿಗೆ ಬಹಳ ಮಹತ್ತ್ವವುಳ್ಳದ್ದಾಗಿರುತ್ತದೆ. ಏಕೆಂದರೆ ಈ ಮಳೆಯು ಕಾಫಿ ಗಿಡಗಳು ಹೂವು ಬಿಡುವುದಕ್ಕೆ ಪೂರಕವಾಗಿರುತ್ತದೆ. ಆದ್ದರಿಂದ ಬೇಸಗೆಯಲ್ಲಾಗುವ ಈ ಮಳೆಯನ್ನು ಕಾಫಿಯ ಹೂಮಳೆ ಎಂದು ಕರೆಯುವರು.

ಮಳೆಯ ಹಂಚಿಕೆಯನ್ನಾಧರಿಸಿ ಕರ್ನಾಟಕವನ್ನು ಮುಖ್ಯವಾಗಿ ಮೂರು ಪ್ರದೇಶಗಳನ್ನಾಗಿ ಈ ಕೆಳಕಂಡಂತೆ ವಿಂಗಡಿಸಬಹುದು:

1) **ಅಧಿಕ ಮಳೆ ಬೀಳುವ ಪ್ರದೇಶ:** ಈ ಪ್ರದೇಶ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಭಾಗ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಬೆಳಗಾಂವಿಯ ಪಶ್ಚಿಮ ಭಾಗ ಹಾಗೂ ಧಾರವಾಡ ಮತ್ತು ಮೈಸೂರು ಜಿಲ್ಲೆಗಳ ಕೆಲವೇ ಭಾಗಗಳನ್ನೊಳಗೊಂಡಿದೆ. ಈ ಪ್ರದೇಶದ ವಾರ್ಷಿಕ ಸರಾಸರಿ ಮಳೆ 250 ಸೆಂಮೀ ಕೆಲವು ಭಾಗಗಳಲ್ಲಿ 700 ಸೆಂಮೀ ಗಿಂತಲೂ ಹೆಚ್ಚು ಮಳೆಯಾಗುವುದು. ಆಗುಂಬೆಯು ಈ ಪ್ರದೇಶದಲ್ಲಿ ಬರುವುದು. ಈ ಪ್ರದೇಶವು ನೈಋತ್ಯ ಮಾನ್ಸೂನ್ ಮಾರುತಗಳ ಅಭಿಮುಖ ಭಾಗವಾಗಿದ್ದು ಅತ್ಯಧಿಕ ಪ್ರಮಾಣದಲ್ಲಿ ಆರೋಹಣ ಮಾದರಿ ಮಳೆಯನ್ನು ಪಡೆಯುವುದು. ಇಲ್ಲಿ ಬೀಳುವ ಮಳೆಯ ಹಂಚಿಕೆ ಮತ್ತು ಪ್ರಮಾಣಗಳೆರಡೂ ನಿಶ್ಚಿತವಾಗಿರುತ್ತವೆ.

2) **ಸಾಧಾರಣ ಮಳೆ ಬೀಳುವ ಪ್ರದೇಶ:** ಈ ಪ್ರದೇಶದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಪೂರ್ವಭಾಗ, ಮೈಸೂರು ಜಿಲ್ಲೆ, ಧಾರವಾಡ, ಹಾವೇರಿ ಮತ್ತು ಬೆಳಗಾಂವಿ ಜಿಲ್ಲೆಗಳ ಹೃದಯ ಭಾಗ, ಹಾಸನ, ಮಂಡ್ಯ, ಬೆಂಗಳೂರು ಮತ್ತು ಬೀದರ್ ಜಿಲ್ಲೆಗಳು, ತುಮಕೂರು ಜಿಲ್ಲೆಯ ಉತ್ತರ ಭಾಗ ಮುಂತಾದವು ಸೇರುತ್ತವೆ. ಈ ಪ್ರದೇಶದ ವಾರ್ಷಿಕ ಸರಾಸರಿ ಮಳೆ 95 ಸೆಂಮೀ ಗಳಾಗಿರುತ್ತದೆ. ಆದರೆ ಪಶ್ಚಿಮದಿಂದ ಪೂರ್ವಕ್ಕೆ ಹೋದಂತೆಲ್ಲಾ ಮಳೆಯ ಪ್ರಮಾಣವು ಕಡಿಮೆಯಾಗುವುದು.

3) **ಕಡಿಮೆ ಮಳೆ ಬೀಳುವ ಪ್ರದೇಶ:** ಈ ಪ್ರದೇಶ ರಾಯಚೂರು ಬಳ್ಳಾರಿ, ಬಿಜಾಪುರ ಮತ್ತು ಚಿತ್ರದುರ್ಗ, ಗುಲ್ಬರ್ಗದ ದಕ್ಷಿಣ ಭಾಗ, ಬೆಳಗಾಂವಿ ಜಿಲ್ಲೆಯ ಪೂರ್ವಭಾಗ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಯ ಉತ್ತರ ಭಾಗ, ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮುಂತಾದವುಗಳನ್ನು ಒಳಗೊಂಡಿದೆ. ಇಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ 60 ಸೆಂಮೀ ಗಳು ಮಾತ್ರ, ಕೆಲವು ಭಾಗಗಳಾದ ಚಿತ್ರದುರ್ಗ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಗಳಲ್ಲಿ ಸರಾಸರಿಗಿಂತಲೂ ಕನಿಷ್ಠ ಪ್ರಮಾಣದಲ್ಲಿ ಮಳೆಯಾಗುವುದು. ಜೊತೆಗೆ ಮಳೆ ಬೀಳುವುದು ಅನಿಶ್ಚಿತವಾಗಿರುತ್ತದೆ. ಪರಿಣಾಮವಾಗಿ ಈ ಪ್ರದೇಶಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತವೆ.



ಉಚ್ಚಂಗಿ ದುರ್ಗ

**ಬರಪೀಡಿತ ಪ್ರದೇಶಗಳು:** ಮಳೆಗಾಲದಲ್ಲಿ ಬೀಳುವ ಮಳೆ ಕಡಿಮೆಯಿದ್ದು, ಹಾಗೂ ಮಳೆಯ ಹಂಚಿಕೆಯಲ್ಲಿ ಹೆಚ್ಚು ಏರುಪೇರಿನಿಂದ ಕೂಡಿದ್ದರೆ ಅಂತಹ ಭಾಗಗಳನ್ನು ಬರಪೀಡಿತ ಪ್ರದೇಶಗಳೆಂದು ಕರೆಯುವರು. ಕರ್ನಾಟಕದಲ್ಲಿ ಅತಿವೃಷ್ಟಿಗಿಂತ ಅನಾವೃಷ್ಟಿ ಅಥವಾ ಬರವು ತಲೆದೋರುವುದು ಹೆಚ್ಚು. ಇದಕ್ಕೆ ಮಾನ್ಸೂನ್ ಮಾದರಿಯ ಮಳೆಯ ಹಂಚಿಕೆಯು ಪ್ರಮುಖವಾದ ಕಾರಣವಾಗಿರುತ್ತದೆ. ಇತ್ತೀಚೆಗೆ ರಾಜ್ಯದ ಮಳೆಯ ಹಂಚಿಕೆಯಲ್ಲಿ ತೀವ್ರವಾದ ಬದಲಾವಣೆ, ಅದರಲ್ಲಿಯೂ ಅನಾವೃಷ್ಟಿಯಿಂದ ಕೃಷಿ ವಲಯದಲ್ಲಿ ಗಂಭೀರವಾದ ಪರಿಸ್ಥಿತಿಯು ಸಂಭವಿಸುವುದು. ಜೊತೆಗೆ ಜಲವಿದ್ಯುಚ್ಛಕ್ತಿಯ ಕೊರತೆ ಉಲ್ಬಣಗೊಳ್ಳುವುದು. ಇಂತಹ ಪರಿಸ್ಥಿತಿಯು ಆಗಾಗ್ಗೆ ತಲೆದೋರುವುದಕ್ಕೆ ಅನೇಕ ಕಾರಣಗಳಿದ್ದರೂ, ಸಸ್ಯವರ್ಗವು ನಾಶವಾಗುತ್ತಿರುವುದು ಹಾಗೂ ವಾಯುಮಾಲಿನ್ಯಗಳು ಪ್ರಮುಖವಾದ ಕಾರಣಗಳಾಗಿವೆ.

ಎಪ್ಪತ್ತೈದು ವರ್ಷಗಳ ದೀರ್ಘಾವಧಿವರೆಗಿನ ರಾಜ್ಯದ 27 ಜಿಲ್ಲೆಗಳ ಮಳೆಯ ಹಂಚಿಕೆಯನ್ನು ಅಭ್ಯಸಿಸಿದಾಗ ಪ್ರತಿವರ್ಷವೂ ಒಂದಲ್ಲ ಒಂದು ಜಿಲ್ಲೆಯಲ್ಲಿ ಬರ ತಲೆದೋರಿರುವುದು ಕಂಡು ಬರುತ್ತದೆ. 1899, 1904, 1905, 1908, 1911, 1920, 1922, 1926, 1934, 1937, 1945, 1952, 1965, 1967, 1972 ಮತ್ತು 2003 ಪ್ರಮುಖ ಬರಪೀಡಿತ ವರ್ಷಗಳಾಗಿವೆ. ಸಾಮಾನ್ಯವಾಗಿ ದಕ್ಷಿಣದ ಜಿಲ್ಲೆಗಳಿಗಿಂತ ಉತ್ತರ ಜಿಲ್ಲೆಗಳಲ್ಲಿ ಬರ ಸಂಭವಿಸುವುದು ಸರ್ವೇ ಸಾಮಾನ್ಯವಾಗಿದೆ. ಉದಾ: ಬೀದರ್, ರಾಯಚೂರು, ಗುಲ್ಬರ್ಗ, ತುಮಕೂರು, ಚಿತ್ರದುರ್ಗ ಇತ್ಯಾದಿ. ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತಿಹೆಚ್ಚು ಸಲ ಬರಗಳು ಸಂಭವಿಸಿವೆ. ಅಂದರೆ 75 ವರ್ಷಗಳಲ್ಲಿ 30 ಸಲ ಬರ ಸಂಭವಿಸಿದೆ. ಇಷ್ಟೇ ಅಲ್ಲದೆ ಕೆಲವು ಜಿಲ್ಲೆಗಳ ಭಾಗಗಳಲ್ಲಿಯೂ ಆಗಾಗ್ಗೆ ಬರ ಸಂಭವಿಸುತ್ತದೆ. ಉದಾ: ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ಚಾಮರಾಜನಗರ, ಬೆಳಗಾಂವಿಯ ಅಥಣಿ, ಧಾರವಾಡದ ನರಗುಂದ, ಚಿಕ್ಕಮಗಳೂರಿನ ಕಡೂರು ಹಾಗೂ ಮಧುಗಿರಿ, ಬಂಗಾರಪೇಟೆ, ಗುಡಿಬಂಡೆ, ಬಾಗೆಪಲ್ಲಿ, ರಾಯಭಾಗ ಇತ್ಯಾದಿ.

**ನದೀವ್ಯವಸ್ಥೆ:** ಕರ್ನಾಟಕದ ನದೀವ್ಯವಸ್ಥೆ ಅದರ ಮೇಲ್ಮೈಯ ಲಕ್ಷಣಕ್ಕೆ ಅನುಗುಣವಾಗಿದೆ. ರಾಜ್ಯದ ನೀರಿನ ಹರಿವು ಸ್ಥೂಲವಾಗಿ ಪಶ್ಚಿಮದಿಂದ ಪೂರ್ವದ ಕಡೆಗೆ ಹೆಚ್ಚು. ರಾಜ್ಯದ ಜಲವಿಭಾಜಕ ರೇಖೆಯಲ್ಲಿ ಬಲ್ಲಾಳರಾಯನದುರ್ಗದಿಂದ ನಂದಿದುರ್ಗಕ್ಕೆ ಒಂದು, ಅಲ್ಲಿಂದ ದಕ್ಷಿಣಾಭಿಮುಖವಾಗಿ ಆನೆಕಲ್ಲಿನವರೆಗೆ ಇನ್ನೊಂದು, ಹಾಗೂ ದೇವರಾಯನದುರ್ಗದಿಂದ ಪಾವಗಡಕ್ಕೆ ಮತ್ತೊಂದನ್ನೂ ಗುರ್ತಿಸಲಾಗಿದೆ. ಇದರಿಂದ ಕರ್ನಾಟಕದ ಮುಖ್ಯ ಜಲಾನಯನ ವ್ಯವಸ್ಥೆಗಳ ಎಲ್ಲೆಗಳನ್ನು ಗುರುತಿಸಿದಂತಾಗುತ್ತದೆ. ನಂದಿದುರ್ಗ ಮತ್ತು




ಬಲ್ಲಾಳರಾಯನದುರ್ಗಗಳನ್ನು ಕೂಡಿಸುವ ಜಲವಿಭಾಜಕ ರೇಖೆಯ ಉತ್ತರಕ್ಕೆ ಹರಿಯುವ ಮುಖ್ಯ ನದಿಗಳು ತುಂಗಾ ಮತ್ತು ಭದ್ರಾ. ಇವು ಪಶ್ಚಿಮಘಟ್ಟಗಳ ಗಂಗಾಮೂಲದಲ್ಲಿ ಹುಟ್ಟಿ ಬೇರೆ ಬೇರೆ ದಿಕ್ಕುಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹರಿದು ಶಿವಮೊಗ್ಗದ

ಕೂಡ್ಲಿಯಲ್ಲಿ ಸೇರುತ್ತವೆ. ಅಲ್ಲಿಂದ ಮುಂದೆ ತುಂಗಭದ್ರೆಯೆನಿಸಿಕೊಳ್ಳುವ ನದಿಗೆ ವೇದಾವತಿ ಮತ್ತು ವರದಾ ಎಂಬ ಎರಡು ಮುಖ್ಯ ಉಪನದಿಗಳು. ಕೃಷ್ಣನದಿಯ ಉಪನದಿಯಾದ ತುಂಗಭದ್ರಾ ಅಂತಿಮವಾಗಿ ಆಂಧ್ರಪ್ರದೇಶದ ಕರ್ನೂಲಿನ ಬಳಿ ಕೃಷ್ಣಾ ನದಿಯನ್ನು ಕೂಡಿಕೊಳ್ಳುತ್ತದೆ. ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಹುಟ್ಟಿ ಕರ್ನಾಟಕದ ಉತ್ತರದಲ್ಲಿ ಹರಿದು ಆಂಧ್ರಪ್ರದೇಶಕ್ಕೆ ಹೋಗುವ ಮುಖ್ಯ ನದಿ ಕೃಷ್ಣಾ. ಭೀಮಾ ಇದರ ಮತ್ತೊಂದು ಮುಖ್ಯ ಉಪನದಿ. ಘಟಪ್ರಭಾ ಮಲಪ್ರಭಾ ಮತ್ತು ಡೋಣಿ ಇತರ ಉಪನದಿಗಳಲ್ಲಿ ಕೆಲವು. ಬಲ್ಲಾಳರಾಯನದುರ್ಗ ಮತ್ತು ನಂದಿದುರ್ಗಗಳ ನೇರಕ್ಕೆ ಹಬ್ಬಿರುವ ಬೆಟ್ಟಸಾಲುಗಳ ದಕ್ಷಿಣಕ್ಕಿರುವ ಮುಖ್ಯ ನದಿ ಕಾವೇರಿ. ದಕ್ಷಿಣ ಗಂಗಾವೆಂದೇ ಪ್ರಸಿದ್ಧಿ. ಕೊಡುಗು ಜಿಲ್ಲೆಯ ಬ್ರಹ್ಮಗಿರಿ ಶ್ರೇಣಿಯಲ್ಲಿ ಭಾಗಮಂಡಲದ ಬಳಿ (12°25′ ಉ.ಅ., 75°34′ ಪೂ.ರೇ.) ಇದು ಹುಟ್ಟುತ್ತದೆ. ಪಶ್ಚಿಮ ಘಟ್ಟಗಳ ತುತ್ತತುದಿಯಲ್ಲಿ ಅರಬ್ಬಿ ಸಮುದ್ರಕ್ಕೆ ಅನತಿದೂರದಲ್ಲಿ ಹುಟ್ಟುವ ಈ ನದಿ ಘಟ್ಟಗಳನ್ನು ದಾಟಿ ಪೂರ್ವಾಭಿಮುಖವಾಗಿ ಹರಿಯುವುದು ಗಮನಾರ್ಹ. ಘಟ್ಟಗಳ ನೆತ್ತಿಗೆರೆಯ ಪಶ್ಚಿಮದ ಕಡೆಯ ಬೆಟ್ಟಸೀಮೆಯ ನೀರನ್ನೂ ಇದು ಸ್ವಲ್ಪಮಟ್ಟಿಗೆ ಕೂಡಿಸಿಕೊಳ್ಳುತ್ತದೆ. ಜೂನ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಸುತ್ತ ಬೀಳುವ ಹೆಚ್ಚು ಮಳೆಯಿಂದ ಉಕ್ಕಿ ಹರಿಯುವ ಕಾವೇರಿ, ಘಟ್ಟಗಳ ಕೆಳಗಿನ ಬಯಲು ಸೀಮೆಗೆ ಸಮೃದ್ಧ ನೀರೊದಗಿಸುವ ಮುಖ್ಯ ಜಲಧಾರೆ. ಮೈಸೂರು, ಹಾಸನ, ಮಂಡ್ಯ ಜಿಲ್ಲೆಗಳ ಮೂಲಕ ಹರಿದು ಬೆಂಗಳೂರು ಜಿಲ್ಲೆಯ ದಕ್ಷಿಣದಂಚನ್ನು ಸೋಂಕಿ ಸಾಗಿ ತಮಿಳು ನಾಡಿಗೆ ಜಾರುವ ಈ ನದಿಯ ಉಪನದಿಗಳು ಅನೇಕ. ಹಾರಂಗಿ, ಯಗಚಿಯಿಂದೊಡಗೂಡಿದ ಹೇಮಾವತಿ, ಲಕ್ಷ್ಮಣತೀರ್ಥ, ಕಪಿಲ, ಸುವರ್ಣಾವತಿ, ಶಿಂಷಾ ಮತ್ತು ಅರ್ಕಾವತಿ–ಇವು ಕರ್ನಾಟಕದ ಇತರ ಕೆಲವು ಉಪನದಿಗಳು. ನುಗು ಮತ್ತು ಗುಂಡಲುಗಳು ಕಪಿಲಾವನ್ನೂ, ಕಣ್ವ ಶಿಂಷಾವನ್ನೂ ಸೇರುವ ಉಪನದಿಗಳು.

ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ಕರ್ನಾಟಕದ ನದಿಗಳೂ ಅಸಂಖ್ಯಾತ ತೊರೆಗಳೂ ಕಡಿದಾದ ಘಟ್ಟ ಪಾರ್ಶ್ವದಿಂದ ಥಟ್ಟನೆ ಇಳಿದು, ಜಲಪಾತಗಳನ್ನು ಸೃಷ್ಟಿಸಿ, ಕಿರಿದಾದ ನೆಲವನ್ನು ದಾಟಿ ಅರಬ್ಬಿ ಸಮುದ್ರದಲ್ಲಿ ಅದೃಶ್ಯವಾಗುತ್ತವೆ. ಪಶ್ಚಿಮ ಕರಾವಳಿ ಪ್ರದೇಶ ಹೆಚ್ಚು ಮಳೆ ಪಡೆಯುವುದರಿಂದ ಈ ನದಿಪಾತ್ರಗಳು ನೀರಾವರಿಗೆ ಅಷ್ಟೇನೂ ಉಪಯುಕ್ತವಲ್ಲ. ಆದರೆ ವಿದ್ಯುದುತ್ಪಾದನೆಗೆ ಇವು ಹೆಚ್ಚು ಉಪಯುಕ್ತ. ದೊಡ್ಡ ನದಿಗಳು ಸಮುದ್ರ ಸೇರುವೆಡೆಯಲ್ಲಿ ಅಳಿವೆಗಳನ್ನು ಸೃಷ್ಟಿಸಿ ದೋಣಿಸಂಚಾರಕ್ಕೆ ಅನುಕೂಲ ಕಲ್ಪಿಸಿವೆ. ಆದರೆ ದಕ್ಷಿಣೋತ್ತರವಾಗಿ ಸಂಚರಿಸಲು ಈ ನದಿಪಾತ್ರಗಳು ದೊಡ್ಡ ಅಡಚಣೆಗಳು. ಇವು ಘಟ್ಟಗಳಿಂದ ಸವೆಸಿ ತರುವ ಮೆಕ್ಕಲುಮಣ್ಣು ಫಲವತ್ತಾಗಿರುವುದರಿಂದ ಗದ್ದೆತೋಟಗಳಿಗೆ ಉಪಯುಕ್ತ. ಮಳೆಯಿಂದ ತೊಯ್ದ ಘಟ್ಟಗಳ ಜೀವಕೋಟಿಯ ಸಾರ ಗ್ರಹಿಸಿ ಸಮುದ್ರ ಸೇರುವ ಜಲರಾಶಿಯಲ್ಲಿ ಮೀನಿಗೆ ಸಮೃದ್ಧಿಯಾಗಿ ಆಹಾರ ಒದಗುತ್ತದೆ. ಇಡೀ ಭಾರತದಲ್ಲೇ ಕರ್ನಾಟಕದ ಕಡಲ ಮೀನು ಅತ್ಯಧಿಕ ಆಹಾರಾಂಶವುಳ್ಳದ್ದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುವ ನದಿಗಳಲ್ಲಿ ಕಾಳಿ, ಗಂಗಾವಳಿ, ತದಡಿ, ಅಘನಾಶಿನಿ, ನೇತ್ರಾವತಿ, ವರಾಹಿ ಮತ್ತು ಶರಾವತಿ ಮುಖ್ಯ. ಶಿವಮೊಗ್ಗ ಜಿಲ್ಲೆಯ ಅಂಬುತೀರ್ಥದ ಬಳಿ ಉಗಮ ಹೊಂದುವ ಶರಾವತಿ ನದಿ ಘಟ್ಟದಿಂದ ಕೆಳಕ್ಕಿಳಿಯುವಾಗ ಗೇರುಸೊಪ್ಪೆಯಲ್ಲಿ ಭವ್ಯವಾದ ಜಲಪಾತ ಸೃಷ್ಟಿಸಿದೆ. ಕೊಡಗಿನಲ್ಲಿ ಹುಟ್ಟಿ ಕಾಸರಗೋಡಿನ ಸಮುದ್ರ ಸೇರುವ ಪಯಸ್ವಿನೀ ಸ್ವಲ್ಪ ದೂರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುತ್ತದೆ. ಕುದುರೆಮುಖದ ಬಲ್ಲಾಳರಾಯನ ದುರ್ಗದ ಬಳಿ ಉಗಮಿಸುವ ನೇತ್ರಾವತಿ ನದಿ, ಸುಬ್ರಹ್ಮಣ್ಯದ ಕಡೆಯಿಂದ ಜಾರಿ ಬರುವ ಕುಮಾರಧಾರೆಯನ್ನು ಉಪ್ಪಿನಂಗಡಿಯ ಬಳಿ ಕೂಡಿಸಿಕೊಂಡು ಮಂಗಳೂರಿನ ಬಳಿ ಅರಬ್ಬಿ ಸಮುದ್ರದಲ್ಲಿ ಸೇರುತ್ತದೆ. ಉತ್ತರದಿಂದ ಆಗಮಿಸುವ ಗುರುಪುರ ಹೊಳೆಯೂ ನೇತ್ರಾವತಿಯೂ ಸಮುದ್ರ ಸೇರುವುದು ಒಂದೇ ಎಡೆಯಲ್ಲಿ. ಸ್ವರ್ಣಾ, ಸೀತಾ ನದಿಗಳು ಉಡುಪಿ ತಾಲ್ಲೂಕಿನಲ್ಲಿ ಸಂಚರಿಸಿ ಹಂಗರಕಟ್ಟೆಯಲ್ಲಿ ಸಮುದ್ರ ಸೇರುತ್ತವೆ. ಕುಂದಾಪುರ ತಾಲ್ಲೂಕಿನಲ್ಲಿ ಕವಲುಗೂಡುವ ಸಣ್ಣ ಹೊಳೆಗಳು ಆ ತಾಲ್ಲೂಕಿನ ಸೌಂದರ್ಯವರ್ಧಕಗಳು.

ನಂದಿದುರ್ಗದ ಪೂರ್ವಕ್ಕೆ ಹರಿಯುವ ನದಿಗಳದು ಇನ್ನೊಂದು ವ್ಯವಸ್ಥೆ. ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ ಮತ್ತು ಪಾಲಾರ್ ಮುಖ್ಯವಾದವು. ಉತ್ತರ ಪಿನಾಕಿನಿಗೆ ಚಿತ್ರಾವತಿ ಮತ್ತು ಪಾಪಘ್ನಿ ಎಂಬ ಉಪನದಿಗಳು ಸೇರುತ್ತವೆ.

**ಸ್ವಾಭಾವಿಕ ಸಸ್ಯವರ್ಗ:** ಅತಿ ಶೈತ್ಯದಿಂದ ಬಹಳ ಒಣ ಹವೆಯವರೆಗೆ ವಿಧ ವಿಧದ ವಾಯುಗುಣಗಳೂ 1830 ಮೀ ಗಳಿಂದ ಸಮುದ್ರಮಟ್ಟದವರೆಗೆ ನಾನಾ ಎತ್ತರಗಳ ನೆಲಗಳೂ ಕರ್ನಾಟಕದಲ್ಲಿರುವುದರಿಂದ ಬಗೆಬಗೆಯ ಸಸ್ಯಗಳನ್ನು ಇಲ್ಲಿ ಕಾಣಬಹುದು. ವರ್ಷದಲ್ಲಿ 100 ಸೆಂಮೀ ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನಿತ್ಯಹರಿದ್ವರ್ಣದ ಕಾಡುಗಳು ಹಬ್ಬಿವೆ. ಮಲೆನಾಡಿನ ಸ್ವಾಭಾವಿಕ ಸಸ್ಯದಲ್ಲಿ ಬಹುಭಾಗ ಈಗಲೂ ಉಳಿದುಕೊಂಡಿದೆ. ಇದು ಈಗಲೂ ಅರಣ್ಯಾವೃತ ಪ್ರದೇಶ. ಮಲೆನಾಡಿನ ತಾಲ್ಲೂಕುಗಳಲ್ಲಿ ಶೇ. 30ರಿಂದ 90 ಭಾಗಗಳು ಈಗಲೂ ಅರಣ್ಯಗಳು. ಇವುಗಳಲ್ಲಿ ಎಲ್ಲವೂ ಸ್ವಾಭಾವಿಕವೆಂದು ಹೇಳಲಾಗುವುದಿಲ್ಲ. ಮೀಸಲು ಅರಣ್ಯಗಳಲ್ಲಿಯ ಮರಗಳು ವಿಶೇಷ ಆರೈಕೆಯಿಂದ ಬೆಳೆದಿವೆ. ತೇಗ ಮುಂತಾದ ಮರಗಳನ್ನು ಕೆಲವೆಡೆಗಳಲ್ಲಿ ನೆಟ್ಟಿರುವುದರಿಂದ ಅಂಥವನ್ನು ಕಾಡುಗಳೆನ್ನುವುದಕ್ಕಿಂತ ನೆಡುತೋಟಗಳೆನ್ನಬಹುದು. ದಕ್ಷಿಣದಲ್ಲಿ ತ್ಯಜಿಸಲಾದ ಕಾಫಿ ತೋಟಗಳಲ್ಲಿ ಲಾಂಟಾನಾ ಬೆಳೆದಿದೆ. ಉರುವಲಿಗಿಂತ ಲಾಂಬಿಗಳಿಗಾಗಿ ಮರಗಳನ್ನು ಕಡಿಯುವುದೇ ಹೆಚ್ಚು. 150–300 ಸೆಂಮೀ ವಾರ್ಷಿಕ ಮಳೆಯಾಗುವ ಘಟ್ಟಗಳ ತಲೆಯೆಡೆಯ ಕೆಳಪಟ್ಟಿಯ ಸೋಪಾನಗಳಲ್ಲೂ ನೆರೆಯ ಕಣಿವೆಗಳಲ್ಲೂ ಇರುವ ದಟ್ಟವಾದ ನಿರಂತರ ಹಸುರೆಲೆಯ ಕಾಡುಗಳಲ್ಲಿ ಎತ್ತರದ ಗಟ್ಟಿ ಮರಗಳು ಬೆಳೆಯುತ್ತವೆ. ಮಲೆನಾಡಿನ ಉದ್ದನೆಯ ನಡುಪಟ್ಟಿಗಳಲ್ಲಿಯ ಮುಖ್ಯ ಮರಗಳೆಂದರೆ ತೇಗ, ಹೊನ್ನೆ, ಮತ್ತಿ, ನಂದಿ, ಬೀಟೆ ಮತ್ತು ಲಾರೆಲ್. ಪೂರ್ವದ ಅಂಚುಗಳಲ್ಲಿರುವ ಉಷ್ಣವಲಯದ ತೇವ ಪ್ರದೇಶದ ಎಲೆ ಉದುರುವ ಜಾತಿಯ ಮರಗಳ ಪೈಕಿ ಶ್ರೀಗಂಧ ಮುಖ್ಯ. ಎಲ್ಲೆಲ್ಲೂ ಬಿದಿರುಗಳು ಸಾಮಾನ್ಯ. ಅಡವಿಯ ಗಿಡಗಳನ್ನು ಸುಟ್ಟು ಸಾಗುವಳಿ ಮಾಡಿ, ಅದು ಸಾರ ಕಳೆದುಕೊಂಡಾಗ ಆ ಸ್ಥಳವನ್ನು ಬಿಟ್ಟು ಬೇರೆಡೆಯಲ್ಲಿ ಸಾಗುವಳಿ ಮಾಡುವ ಪೋಡು ಕೃಷಿವಿಧಾನ (ವರ್ಗಾವಣೆ ಬೇಸಾಯ) ಹಿಂದೆ ಸಾಮಾನ್ಯವಾಗಿತ್ತು. ಇದರಿಂದ ಬಂಜರಾದ ಸ್ಥಳಗಳಲ್ಲಿ ಬಿದಿರುಮೆಳೆಗಳು ದಟ್ಟವಾಗಿವೆ. ಅಂತೂ ಮಲೆನಾಡು ಪ್ರದೇಶದಲ್ಲಿ ಸುಮಾರು 4,000 ಬಗೆಯ ಗಿಡಮರಗಳುಂಟು. ಪಶ್ಚಿಮ ಕರಾವಳಿಯಲ್ಲಿ ಘಟ್ಟಗಳ ಅಂಚಿನಲ್ಲಿ 10 ರಿಂದ 100 ಕಿಮೀ ಅಗಲದ ಕಾಡುಗಳಿವೆ. ಘಟ್ಟ ಪ್ರದೇಶ ಮುಂಗಾರು ಮಳೆಗೆ ಸಂಬಂಧಿಸಿದಂತೆ ಇರುವ ಸನ್ನಿವೇಶಾನುಗುಣವಾಗಿ ಕಾಡಿನ ಲಕ್ಷಣ ವ್ಯತ್ಯಾಸವಾಗುತ್ತದೆ. ಉಷ್ಣತೆ, ಮಾರುತದ ವೇಗ, ನೆಲದ ಎತ್ತರ ಇವು ಪ್ರಭಾವ ಬೀರುವ ಅಂಶಗಳು. ಘಟ್ಟದ ಶಿಖರಗಳಲ್ಲೂ, ಕಡಿದಾದ ಇಳಿಜಾರಿನಲ್ಲೂ ಮಣ್ಣು ಹೆಚ್ಚು ಆಳವಿಲ್ಲ. ಆದ್ದರಿಂದ ಅಲ್ಲಿ ಅತಿ ಎತ್ತರದ ಮರಗಳು ಬೆಳೆಯಲು ಅನುಕೂಲಕರ. ಧೂಮ, ಕಲ್ಲುಹೊನ್ನೆ, ಬಲಗಿ, ಧೂಪ, ಸಟಗ, ಹಾಲಮಡ್ಡಿ, ಹಲಗೇರು ಮತ್ತು ಹಲಸು ಮುಂತಾದ ನಿತ್ಯ ಹಸುರು ಮರಗಳೂ ನಾರುಬೇರು, ಕಾಡಿಪಿಂಡಿ, ಕಂಟದ ಮರ ಮುಂತಾದ ಭಿನ್ನಜಾತಿಗಳೂ ಉಂಟು. ನಿತ್ಯ ಹಸುರು ಮರಗಳಿಗೆ ಮುಂದಿನ ಶ್ರೇಣಿಯಲ್ಲಿ 15 ರಿಂದ 20 ಮೀ ಎತ್ತರಕ್ಕೆ ಬೆಳೆಯುವ ಮರಗಳಿವೆ. ಕೂಟಗೇರು, ಬೈರಿ, ಬಿಳಿದೇವದಾರು, ಹೆಬ್ಬಲಸು, ಕಾಡು ಲವಂಗ, ಇಳಿಸಿಂಗಿ ಇವು ಮುಖ್ಯ. ಘಟ್ಟಗಳಿಂದ ಸ್ವಲ್ಪ ದೂರದಲ್ಲಿ ಮಳೆ ಕಡಿಮೆ ಬೀಳುವ ಎಡೆಗಳಲ್ಲಿ ಗಲವಾರ, ಸಪ್ತಪರ್ಣ, ಮಾಸ್ಸಿ, ದಿಂಡಿಗ, ಸಳ್ಳೆ, ಹೆಣ್ಣುಮತ್ತಿ. ಕಾಡುಕಣಗಿಲೆ, ಹೆಣ್ಣುಸಂಪಿಗೆ, ಮರ್ಕಿಮರ, ನಂದಿ, ವಿಷಮುಷ್ಟಿ ಮತ್ತು ಮತ್ತಿ ಬೆಳೆಯುತ್ತವೆ. ಇವು ತೇವಕಾಡಿನ ಎಲೆ ಉದುರುವ ಮರಗಳು, ಕೆಮದಾಳೆ, ಹಲಸು, ಪಾಚಿಗಿಡ, ದೊಡ್ಡಜಾಜಿ, ಕದಂಬ, ಪಾಟಗಾಣಿ, ಇವು ಘಟ್ಟಗಳಲ್ಲೆಯ ಮೂರನೆಯ ಸಾಲಿನ ಮರಗಳು. ಇವಲ್ಲದೆ ಎಲ್ಲೆಲ್ಲೂ ಪೊದೆಗಳೂ ಬಿದಿರುಗಳೂ ಬೆಳೆಯುತ್ತವೆ. ಘಟ್ಟದ ಪೂರ್ವಭಾಗದ ಅನೇಕ ಕಡೆಗಳಲ್ಲಿ ಪೊದರುಗಳು, ತೇಗ, ಜಾಲಿ, ಶ್ರೀಗಂಧ, ಬೂರುಗ, ಕಕ್ಕೆ, ಮುತ್ತಗ, ಜಗಳಗಂಟೆ, ಅಂಕೋಟೆ ಮತ್ತು ಬಿದಿರುಗಳುಂಟು, ಬಗನಿ, ಮಾವು, ಹುಣಿಸೆ ಮುಂತಾದವು ಕರ್ನಾಟಕದಲ್ಲಿ ಸಾಮಾನ್ಯ.

ಕರ್ನಾಟಕದ ಉತ್ತರ ಮೈದಾನದಲ್ಲಿ ಪೂರ್ವ ಪಶ್ಚಿಮದಂಚುಗಳಲ್ಲಿ ಉಷ್ಣವಲಯದ ಒಣಹವೆಯ ಎಲೆ ಉದುರುವ ಸಸ್ಯವನ್ನು ಕಾಣಬಹುದು. ನಡುಭಾಗದಲ್ಲಿ ಪೊದೆಮುಳ್ಳು ಬೆಳೆಯುತ್ತದೆ. ಒಟ್ಟು ಪ್ರದೇಶದ ಶೇ. 10ರಷ್ಟು ಭಾಗದಲ್ಲಿ ಮಾತ್ರ ಸ್ವಾಭಾವಿಕ ಸಸ್ಯವುಂಟು. ಕುರುಚಲು ಕಾಡುಗಳನ್ನು ಎತ್ತರದ ಗುಡ್ಡಗಳ ಪಾರ್ಶ್ವಗಳಲ್ಲಿ ಮಾತ್ರ ಕಾಣಬಹುದು.

ದಕ್ಷಿಣ ಮೈದಾನದ ಸ್ವಾಭಾವಿಕ ಸಸ್ಯವರ್ಗವು ಉಷ್ಣವಲಯದ ಶುಷ್ಕ ಹವೆಯ ಎಲೆ ಉದುರುವ ಜಾತಿಯದು. ಮಧ್ಯ ಮತ್ತು ಪೂರ್ವಭಾಗಗಳಲ್ಲಿ ಮುಳ್ಳುಪೊದೆಗಳಿವೆ. ಕಾಡುಗಳಿರುವುದೆಲ್ಲ ವಿಶೇಷವಾಗಿ ಬೆಟ್ಟಗಳ ಇಳಿಜಾರುಗಳಲ್ಲಿ. ಆದರೆ ಇವು ಹೆಸರಿಗೆ ಮಾತ್ರ ಕಾಡುಗಳು. ವಿಶಾಲ ಪ್ರಸ್ಥಭೂಮಿಯ ಬೆನ್ನ ಮೇಲೆ ಕುರುಚಲು ಹಬ್ಬಿದೆ. ಕನಕಪುರ–ತುಮಕೂರುಗಳ ನಡುವೆ ಅರ್ಧಭಾಗ ಇದರಿಂದ ತುಂಬಿದೆ. ಬಾಗೆಪಲ್ಲಿಯಿಂದ ಬಂಗಾರುಪೇಟೆಯವರೆಗಿನ ಬೆಟ್ಟದಗ್ರಗಳ ಪೂರ್ವದ ಕಡೆಯಲ್ಲೂ ಇದನ್ನು ಕಾಣಬಹುದು. ಸೌದೆ ಮರ ಸಾಮಾನ್ಯ. ಇದರ ಪೂರೈಕೆಗಾಗಿ ಅನೇಕ ಕಡೆ ನಿರ್ದಯೆಯಿಂದ ಮರ ಪೊದೆಗಳನ್ನು ಕತ್ತರಿಸುವುದು ಕಂಡುಬಂದಿದೆ. ಸರ್ವೆ ಮತ್ತು ನೀಲಗಿರಿ ತೈಲ ಮರಗಳು ಇಲ್ಲಿಯ ಆಗಂತುಕ ಜಾತಿಗಳು.

**ಪ್ರಾಣಿಗಳು:** ನೆಲ ಮಳೆ ಗಿಡಮರಗಳಂತೆ ಪ್ರಾಣಿವರ್ಗ ಕರ್ನಾಟಕದಲ್ಲಿ ವೈವಿಧ್ಯಮಯ. ಘಟ್ಟಸೀಮೆ, ಬಯಲುಸೀಮೆಗಳೆಂದು ಇವನ್ನು ಸ್ಥೂಲವಾಗಿ ವಿಂಗಡಿಸಬಹುದು. ಪಶ್ಚಿಮಘಟ್ಟದ ದಟ್ಟ ಕಾಡುಗಳಲ್ಲಿ ಕುಚ್ಚುಬಾಲದ ಕೋತಿ, ಮುಸುಕ ಮಂಗ, ಲಂಗೂರು, ಕಾಡುಪಾಪಗಳು. ಹುಲಿ, ಚಿರತೆ, ಮುಂಗುಸಿ, ಕಾಡುಬೆಕ್ಕು, ಕಿರುಬ, ತೋಳ, ನೀರುನಾಯಿ ಮತ್ತು ಕರಡಿಗಳು ಹೇರಳವಾಗಿ ಕಾಣಸಿಗುತ್ತವೆ. ಜಿಂಕೆ, ಕಾಡುಹಂದಿ, ಮುಳ್ಳಿಲಿ, ಬಾವಲಿ, ಅಳಿಲು, ಮೊಲ ಮತ್ತು ಮುಳ್ಳುಹಂದಿಗಳು ಲೆಕ್ಕವಿಲ್ಲದಷ್ಟಿವೆ. ಕಾಡುಗಳಲ್ಲಿರುವ ಅತ್ಯಂತ ದೊಡ್ಡ ಪ್ರಾಣಿಯೆಂದರೆ ಆನೆ. ಇದು ಹಾಸನ, ಮೈಸೂರು, ಚಾಮರಾಜನಗರ, ಕೊಡಗು, ಕಡೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಕಾಡುಗಳಲ್ಲಿವೆ. ಕಾಡುಕೋಣ ಇನ್ನೊಂದು ಪ್ರಾಣಿ. ಸಾಂಬಾರ್, ಸಾರಗ, ಕಾಡುಹಂದಿ, ಕೂರ್ಪಂದಿ, ನರಿ ಇವನ್ನೂ ಮಲೆನಾಡಿನ ಕಾಡುಗಳಲ್ಲಿ ಹೇರಳವಾಗಿ ಕಾಣಬಹುದು.

ಕ್ರಿಮಿ-ಕೀಟ ಮತ್ತು ಸಸ್ಯಾಹಾರಗಳು ಧಾರಾಳವಾಗಿ ದೊರಕುವ ಕಾಡುಗಳಲ್ಲಿ ಪಕ್ಷಿಗಳು ಅಸಂಖ್ಯಾತವಾಗಿವೆ. ಕಾಗೆ ಎಲ್ಲೆಲ್ಲೂ ಸಾಮಾನ್ಯ. ಮರದ ಪೈ ಸಾಮಾನ್ಯವಾಗಿ ಅರಣ್ಯದಲ್ಲಿವಾಸಿಸುತ್ತದೆ. ಟಿಟ್ಟಿಭ ಎಲ್ಲೆಡೆಯೂ ಉಂಟು. ಉಲಿಯಕ್ಕಿಗಳೂ ಅಷ್ಟೆ ಇವುಗಳಲ್ಲಿ ನಾನಾ ವಿಧಗಳು ಉಂಟು. ಹರಟು ಹಕ್ಕಿ ಕರ್ನಾಟಕದ ಇನ್ನೊಂದು ಪಕ್ಷಿ. ಗಂಧರ್ವ ಪಕ್ಷಿ ಮತ್ತು ಬುಲ್‌ಬುಲ್ ಹಸುರುಕಾಡಿನ ಪ್ರಜೆಗಳು. ಬುಲ್‌ಬುಲಿನ ಕೆಲಜಾತಿಗಳು ಇತರೆಡೆಗಳಲ್ಲೂ ಇವೆ. ಕಣಿವೆಗಳಲ್ಲೂ ಬಿದಿರಮಳೆಗಳಲ್ಲೂ ಶ್ಯಾಮಲ ಹಕ್ಕಿಯನ್ನು ಕಾಣಬಹುದು. ತೆಂಕಣ ಕಪ್ಪಕ್ಕಿಗೂ ಕಣಿವೆಯೇ ತವರು. ಚಳಿಗಾಲದಲ್ಲಿ ಇದು ಬೆಚ್ಚನೆಯ ಬಯಲು ಸೀಮೆಗೆ ಬರುವುದುಂಟು. ಕಾಡುಕಡುಕ ಮತ್ತು ಕಳಿಂಗಪಕ್ಷಿಗಳ ವಿವಿಧ ಜಾತಿಗಳಲ್ಲಿ ಕೆಲವು ಕಾಡುಗಳಿಗೂ ಮತ್ತೆ ಕೆಲವು ಬಯಲು ಸೀಮೆಗೂ ವಿಶಿಷ್ಟವಾದವು. ಕೋಗಿಲೆ, ಉಲ್ಲಾಸದ ಸಿಳ್ಳುಹಕ್ಕಿ, ಮೈನಾ, ನೊಣಹಿಡುಕ, ಗೀಜಗ, ಗುಬ್ಬಚ್ಚಿ, ಬಾಗಕ್ಕಿ, ಗಿಳಿ, ಜೇನುಹುಕ್ಕ, ಮೀಂಚುಳ್ಳಿ, ಮಲೆಹಕ್ಕಿ, ಅಂಬಕ್ಕಿ, ಗಿಡುಗ, ಪಾರಿವಾಳ, ಕಪೋತ, ಕೊಕ್ಕರೆ, ಉಲ್ಲಂಗಿ, ನವಿಲು, ಕಾಡುಕೋಳಿ, ಬಾತು, ನಾಗಹಕ್ಕಿ-ಮುಂತಾದ ಒಂದೊಂದರಲ್ಲೂ ನಾನಾ ಬಗೆಯ ಹಕ್ಕಿಗಳು ಮಲೆನಾಡು ಬಯಲುಸೀಮೆ ಕರಾವಳಿ ಪ್ರದೇಶಗಳಲ್ಲಿ ಹರಡಿವೆ.

ಉರಗಗಳಲ್ಲೂ ನಾನಾ ವಿಧಗಳಿವೆ. ಮೊಸಳೆ, ಆಮೆ, ಹಲ್ಲಿ, ಹೆಬ್ಬಾವು, ತಾಳೆಹಾವು, ಹಸುರುಹಾವು, ಕಟ್ಟುಹಾವು, ನಾಗರಹಾವು, ಮಂಡಲದ ಹಾವು, ಹವಳದ ಹಾವು-ಇವು ಕೆಲವು.

ಕಪ್ಪೆಗಳಿಗೂ, ಮೀನುಗಳಿಗೂ ಕರ್ನಾಟಕದಲ್ಲಿ ಕೊರತೆಯಿಲ್ಲ. ಕಡಲ ತೀರದಲ್ಲಿ ಮೀನುಸಮೃದ್ಧವಾಗಿದೆ. ಸೊರಮೀನು, ಗರಗರಸ ಮೀನು, ಕಂಟಕ-ರಶ್ಮಿ , ಹಾವುಮೀನು, ಥೇಡೆ, ಹೆರ್ರಿಂಗ್, ಬಂಗಡ, ಸೀರ್, ಅಕ್ಕುಲೈ, ಪರ್ಚ, ಸೀಗಡಿ, ಲಾಡಿ, ಕೊಲಾಜಿ, ಮುಲ್ಲೆಟ್ ಮುಂತಾದ ಹಲವು ಬಗೆಗಳುಂಟು. ಒಳನಾಡಿನ ಅಸಂಖ್ಯಾತ ಕೆರೆ ಹಳ್ಳಗಳು ಮೀನುಗಳಿಗೆ ಅನುಕೂಲಕರ.

ಕುರಿ, ಆಡು, ದನಕರು, ಕುದುರೆ ಮುಂತಾದುವು ಸಾಕುಪ್ರಾಣಿಗಳು. ಉತ್ತರ ಬಯಲಿನಲ್ಲಿ ಎಮ್ಮೆಗಳ ಸಂಖ್ಯೆ ಗಮನಾರ್ಹ.

**ಕೃಷಿ:** ವ್ಯವಸಾಯವೇ ಕರ್ನಾಟಕದ ಮುಖ್ಯ ಆರ್ಥಿಕ ಚಟುವಟಿಕೆ. ಸನ್ನಿವೇಶ, ವಾಯುಗುಣ, ಭೂಗುಣ, ನೀರಾವರಿ ಸೌಲಭ್ಯ-ಇವುಗಳಿಗೆ ಅನುಗುಣವಾಗಿ ವ್ಯವಸಾಯದ



ತೆಂಗಿನ ತೋಟ

ಸ್ವರೂಪವೂ ಬೆಳೆಯೂ ಬದಲಾಗುತ್ತವೆ. ಕರಾವಳಿಯ ತಗ್ಗುಬಯಲು ಸಾಮಾನ್ಯವಾಗಿ ಫಲವತ್ತಾದ ಮಣ್ಣಿನಿಂದ ಕೂಡಿದ್ದು ಸಮೃದ್ಧವಾಗಿ ಮಳೆ ಪಡೆಯುವುದರಿಂದ ಬತ್ತ ಇಲ್ಲಿಯ ಮುಖ್ಯ ಬೆಳೆ. ಕವಿದು ಬಂದ ಮರಳ ಗುಡ್ಡೆಗಳನ್ನು ಅನೇಕ ಕಡೆಗಳಲ್ಲಿ ವಿಸ್ತರಿಸಲಾಗಿದೆ. ವರ್ಷದಲ್ಲಿ ಒಂದು ಬೆಳೆ ಬತ್ತ ತೆಗೆದ ಮೇಲೆ ಕಡಲೆ ಮುಂತಾದ ಕಾಳು ಬೆಳೆಯುವುದುಂಟು. ನೀರಿನ ವಸತಿ ಇರುವಲ್ಲಿ ಒಡ್ಡು ಕಟ್ಟಿಯೋ ಏತದಿಂದ ನೀರು ಹಾಯಿಸಿಯೋ ಬತ್ತದ ಎರಡು ಬೆಳೆಗಳನ್ನು-ಕೆಲವು ಕಡೆ ಮೂರು ಬೆಳೆಗಳನ್ನು ಕೂಡ ತೆಗೆಯುತ್ತಾರೆ. ತರಕಾರಿ ಮೆಣಸು ತೋಟಗಳೂ ಅಲ್ಲಲ್ಲಿ ಕಾಣಸಿಗುತ್ತವೆ. ಕಡಲ ದಂಡೆಗುಂಟ ತೆಂಗಿನ ಮರಗಳು ತಲೆ ಬೀಸುತ್ತ ಸಾವಿರಗಳ ಲೆಕ್ಕದಲ್ಲಿ ನಿಂತಿವೆ. ಮನೆ ಹಿತ್ತಲುಗಳಲ್ಲೂ ತೆಂಗನ್ನು ಬೆಳೆಸುತ್ತಾರೆ. ಎತ್ತರದ ಮತ್ತು ಮರಳ ನೆಲಗಳು ಅಷ್ಟೇನೂ ಫಲವತ್ತಲ್ಲ. ಅಲ್ಲಿ ಮರಳು ತೆಗೆದು ಬತ್ತವನ್ನೋ ತೆಂಗನ್ನೊ ಬೆಳೆಸುವುದುಂಟು. ಉತ್ತರ ಭಾಗದಲ್ಲಿ ಸಾಗುವಳಿ ನೆಲ ಕೆಳಗಿನ ಬಯಲಿನಲ್ಲಿದ್ದು ಹೊಲಮನೆಗಳು ದಿಬ್ಬದ ಮೇಲಿವೆ.

ಮತ್ಸ್ಯೋದ್ಯಮ ಮಲ್ಪೆ

ಕಡಲಕರೆಯ ಮೈದಾನದ ಆರ್ಥಿಕ ಜೀವನ ಹಳ್ಳಿಯಿಂದ ಹಳ್ಳಿಗಳಿಗೆ ವ್ಯತ್ಯಾಸವಾಗುತ್ತದೆ. ವರ್ಷಕ್ಕೆ ಒಂದೇ ಬೆಳೆತೆಗೆಯುವ ಪ್ರದೇಶಗಳಿಗಿಂತ ಎರಡು-ಮೂರು ಬೆಳೆತೆಗೆಯುವವು ಹೆಚ್ಚು ಉತ್ತಮಸ್ಥಿತಿಯಲ್ಲಿವೆ. ಈ ಪ್ರದೇಶದಲ್ಲಿ ಜನಸಾಂದ್ರತೆಯ ಒತ್ತಡ ಬಹಳ ಹೆಚ್ಚು. ಸಣ್ಣಪುಟ್ಟ ನೀರಾವರಿ ವ್ಯವಸ್ಥೆಗಳ ಅಗತ್ಯವಿದೆ. ಸದಾಕಾಲದಲ್ಲೂ ನೀರಿರುವ ಸಣ್ಣಪುಟ್ಟ ಹೊಳೆಗಳನೇಕ ಇಲ್ಲಿ ಹರಿಯುವುದರಿಂದ ನೀರಾವರಿ ವಿಸ್ತರಿಸುವ ಸಾಧ್ಯತೆಯಿದೆ.

ಗೋಡಂಬಿ, ಹಣ್ಣು ಮತ್ತು ತರಕಾರಿ ಗಿಡಗಳೂ ಇಲ್ಲಿ ಬೆಳೆಯುತ್ತವೆ. ಇವನ್ನು ಹೆಚ್ಚಾಗಿ ಬೆಳೆಸುವುದಕ್ಕೂ ಕ್ರಮ ಕೈಕೊಳ್ಳಲಾಗಿದೆ. ಸೀ-ಐಲೆಂಡ್ ಹತ್ತಿ ಮತ್ತು ಕಬ್ಬು ಬೆಳೆಸುವ ಸಾಧ್ಯತೆಯೂ ಉಂಟು. ಇಷ್ಟೆಲ್ಲ ಆದರೂ ಇಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಬೇರೆ ಉದ್ಯೋಗಗಳನ್ನು ದೊರಕಿಸಿಕೊಡುವ ಅವಶ್ಯಕತೆಯಿದೆ. ಮೀನುಗಾರಿಕೆ, ದೋಣಿ ನಿರ್ಮಾಣ-ಇವುಗಳಲ್ಲದೆ ಮರಗೆಲಸ, ಕುಂಬಾರ ಕೆಲಸ ಮುಂತಾದ ಅನೇಕ ಹಳೆಯ ಕಸಬುಗಳು ಇಂದಿಗೂ ಅಲ್ಪಸ್ವಲ್ಪ ಜೀವಂತವಾಗಿವೆ.

ಕರಾವಳಿಯ ತಗ್ಗು ಪ್ರಸ್ಥಭೂಮಿಯಲ್ಲೂ ಅನೇಕ ಕಡೆಗಳಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುವುದುಂಟು. ಏತ, ಪಂಪು, ಸಣ್ಣ ಅಣೆಕಟ್ಟೆ ಇವುಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಿಕೊಳ್ಳಲಾಗಿದೆ. ಹೊಸ ಅಣೆಕಟ್ಟೆಗಳನ್ನು ಕಟ್ಟಿ ನೀರಾವರಿಯನ್ನು ವಿಸ್ತರಿಸಿ ಇನ್ನೂ ಹೆಚ್ಚು ಕಡೆಗಳಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯಬಹುದು. ಬತ್ತ ಮುಖ್ಯ ಬೆಳೆ. ಖುಷ್ಕಿ ಬೆಳೆಯಾಗಿ ಮೆಣಸಿನಕಾಯಿ ಬೆಳೆಯುವುದುಂಟು. ತೆಂಗಿನಕಾಯಿ, ಅಡಕೆ, ತಾಳೆ ಇವು ಆರ್ಥಿಕಬೆಳೆಗಳು. ಅಲ್ಲಲ್ಲಿ ಮೆಣಸಿನ ತೋಟಗಳೂ ಇವೆ. ದಕ್ಷಿಣದಲ್ಲಿ ನೀರಿನ ವಸತಿ ಕಡಿಮೆಯಿರುವೆಡೆಗಳಲ್ಲಿ ಗೇರುಬೀಜ ಒಂದು ಮುಖ್ಯ ಬೆಳೆ.

ಕರಾವಳಿಯ ಮಲೆನಾಡಿನ ಮುಖ್ಯ ಬೆಳೆ ಬತ್ತ. ವರ್ಷಕ್ಕೆ ಒಂದು ಬೆಳೆ ಸಾಮಾನ್ಯ. ಕಬ್ಬು ಬೆಳೆಯುವುದುಂಟು. ಇಲ್ಲಿಯ ಬೆಳೆ ಸಾಮಾನ್ಯವಾಗಿ ಮಳೆಯನ್ನೇ ಅವಲಂಬಿಸಿದೆ. ಕಣಿವೆಗಳ ತಳಗಳಲ್ಲೂ ಇಳಿಜಾರುಗಳಲ್ಲೂ ಮೆಟ್ಟಿಲುಮೆಟ್ಟಿಲಾಗಿ ಹಬ್ಬಿದ ಹಸುರು ಗದ್ದೆಗಳನ್ನೂ ಅವುಗಳ ಸುತ್ತ ಕೆಂಪು ಹಂಚಿನ ಮನೆಗಳನ್ನೂ ಕಾಣಬಹುದು. ಅಲ್ಲಲ್ಲಿ ಅಲ್ಪಸ್ವಲ್ಪ ನೀರಾವರಿ ವ್ಯವಸ್ಥೆಯುಂಟು. ಅಂಥೆಡೆಗಳಲ್ಲಿ ವರ್ಷಕ್ಕೆ ಎರಡು ಮೂರು ಬೆಳೆ ತೆಗೆಯುತ್ತಾರೆ. ದನಗಳ ಸಂಖ್ಯೆಯೂ ಹೆಚ್ಚಾಗಿದೆ. ತೆಂಗು, ಅಡಕೆ ವೀಳೆಯದೆಲೆ, ತಾಳೆ, ಮೆಣಸು, ಬಾಳೆ, ಮಾವು, ಹಲಸು ಇವು ತೋಟಗಳ ಬೆಳೆಗಳು. ನೆರೆಯ ಮಲೆನಾಡಿನಂತೆ ಇಲ್ಲೂ ಮಲೇರಿಯ ಮುಂತಾದ ವ್ಯಾಧಿಗಳಿಂದ ಜನಸಂಖ್ಯೆ ಇಳಿಮುಖವಾಗಿತ್ತು. ಈಚೆಗೆ ಈ ಪ್ರವೃತ್ತಿ ನಿಂತಿದೆ. ಅನೇಕ ಹಳ್ಳಿಗಳಲ್ಲಿ ಶೇ. 36-56 ಜನ ಗುತ್ತಿಗೆದಾರರು. ಭೂರಹಿತ ಶ್ರಮಜೀವಿಗಳು ಕೆಲಸವನ್ನರಸಿ ಅಪರೂಪವಾಗಿ ಹೊರಗೆ ಹೋಗಬಹುದು. ಅನೇಕರಿಗೆ

ಸ್ಥಳೀಯ ತೋಟಗಳಲ್ಲೇ ಕೆಲಸ ದೊರಕುತ್ತದೆ. ಇಲ್ಲಿ ಜನಸಂಖ್ಯೆಯ ಒತ್ತಡ ಹೆಚ್ಚಾಗಿಲ್ಲ. ಇರುವ ಸಂಪನ್ಮೂಲಗಳನ್ನೆಲ್ಲ ಸಂಪೂರ್ಣವಾಗಿ ಇಲ್ಲಿ ಬಳಸಿಕೊಂಡಿಲ್ಲ.



ಮಲೆನಾಡಿನಲ್ಲಿ ವರ್ಷಕ್ಕೆ ಒಂದು ಬತ್ತದಬೆಳೆ ಸಾಮಾನ್ಯ. ಎರಡು ಬೆಳೆ ಉತ್ತರಾರ್ಧದಲ್ಲಿ ಹೆಚ್ಚು. ಅಲ್ಲಿ ಒಟ್ಟು ಸಾಗುವಳಿ ನೆಲದಲ್ಲಿ ಶೇ. 5–10 ಪ್ರದೇಶದಲ್ಲಿ ಎರಡು ಬೆಳೆ ತೆಗೆಯುವುದುಂಟು. ಮಳೆ ಸಮೃದ್ಧಿಯಾಗಿರುವ ಕಡೆಗಳಲ್ಲಿ ಹಳ್ಳಿಗಳು ತಮಗೆ ಸಾಕಾಗುವಷ್ಟು ಬತ್ತ ಬೆಳೆಯುತ್ತವೆ. ಕಡಿಮೆ ಮಳೆಯ ಪೂರ್ವದಂಚುಗಳಲ್ಲಿ ಒಮ್ಮೊಮ್ಮೆ ಅಕ್ಕಿಯ ಕೊರತೆ ಬರುವುದುಂಟು. ಅಡಕೆ, ವೀಳೆಯದೆಲೆ, ಮೆಣಸು, ಲವಂಗ, ಕಿತ್ತಳೆ, ಕಾಫಿ ಮುಖ್ಯ ಹಣಗಳಿಕೆ ಬೆಳೆಗಳು. ಕಾಫಿ (ಕೆಲವು ಕಡೆ ಚಹ), ಮೆಣಸು ಮುಂತಾದವು ನೆಡು ತೋಟದ (ಪ್ಲಾಂಟೇಷನ್) ಬೆಳೆಗಳು. ಕಾಫಿ ತೋಟಗಳು ದಕ್ಷಿಣದಲ್ಲಿವೆ. ಇವು ಬೃಹದ್ಗಾತ್ರದ ಬಂಡವಾಳ ಉದ್ಯಮಗಳು. ಕಾಫಿ ಬೆಳೆಯುವ ಪ್ರದೇಶ ಉಳಿದೆಡೆಗಳಿಗಿಂತ ಹೆಚ್ಚು ಅಭಿವೃದ್ಧಿಹೊಂದಿದೆ. ಇಲ್ಲಿ ಹಣದ ಪ್ರಸಾರ ಹೆಚ್ಚು. ರಸ್ತೆಗಳು ಬೆಳೆದಿವೆ. ಭೂಸಾರ ಕೊಚ್ಚಿ ಹೋಗಿ ತ್ಯಜಿಸಲಾದ ಕಾಫಿ ತೋಟಗಳೆಡೆಯಲ್ಲಿ ಲಂಟಾನಾ ವಿಶೇಷವಾಗಿ ಬೆಳೆದಿದೆ. ಕಾಫಿ ತೋಟಗಳಲ್ಲಿ ಕೆಲಸ ಮಾಡಲು ಅವಶ್ಯವಾದ ಕಾರ್ಮಿಕರು ದಕ್ಷಿಣ ಕನ್ನಡ ಮತ್ತು ಕೇರಳಗಳಿಂದ ಅಧಿಕ ಸಂಖ್ಯೆಯಲ್ಲಿ ಬರುವರು. ಸ್ಥಳೀಯ ಜನರೂ ತೋಟಗಳಿಂದ ಆಕರ್ಷಿತವಾಗುವುದರಿಂದ ಸಾಮಾನ್ಯ ಬೇಸಾಯಕ್ಕೆ ಸಾಕಷ್ಟು ದುಡಿಮೆಗಾರರ ಅಭಾವ ಏರ್ಪಡುತ್ತದೆ. ದಕ್ಷಿಣ ಮಲೆನಾಡಿನಲ್ಲಿ ಬತ್ತದ ಎರಡು ಬೆಳೆ ತೆಗೆಯದಿರುವುದಕ್ಕೆ ಇದೂ ಒಂದು ಕಾರಣ. ದಕ್ಷಿಣದ ಎತ್ತರದ ಮಲೆನಾಡಿನಲ್ಲಿ ಸಾಗುವಳಿಯಾಗುವ ನೆಲದ ಕಾಲುಭಾಗದಿಂದ ಅರ್ಧಭಾಗದವರೆಗಿನ ಜಮೀನು ಕಾಫಿ ಮತ್ತು ಚಹಗಳಿಗೆ ಮೀಸಲು. ಉತ್ತರದಲ್ಲಿ ಎತ್ತರ ಪ್ರದೇಶಗಳಲ್ಲೂ ಕಾಫಿ ತೋಟಗಳು ಅಷ್ಟೇನೂ ಇಲ್ಲ. ದಕ್ಷಿಣಕ್ಕಿಂತ ಅಲ್ಲಿ ಮಳೆಗಾಲ ಒಂದು ತಿಂಗಳಷ್ಟು ಕಡಿಮೆ. ಕಾಫಿ ಹೂ ಬಿಡಲು ಅವಶ್ಯವಾದ ಬೇಸಗೆ ಮಳೆ ಬರುವ ನಚ್ಚುಗೆಯಿಲ್ಲ. ಬತ್ತ ಎಲ್ಲೆಲ್ಲೂ ಬೆಳೆಯುತ್ತದೆ. ಯಲ್ಲಾಪುರದಿಂದ ಮಡಿಕೇರಿಯವರೆಗಿನ ತಾಲ್ಲೂಕುಗಳಲ್ಲಿ ಮೆಣಸು ಬೆಳೆಯುವ ಪ್ರದೇಶ ಒಟ್ಟು ಸಾಗುವಳಿ ಜಮೀನಿನ ಶೇ. 10 ರಿಂದ 25ರ ವರೆಗಿರುತ್ತದೆ. ಪೂರ್ವದ ತಾಲ್ಲೂಕುಗಳಾದ ನರಸಿಂಹರಾಜಪುರ, ಶಿವಮೊಗ್ಗ ಮತ್ತು ಪಿರಿಯಾಪಟ್ಟಣಗಳಲ್ಲಿ ಶೇ. 5ಕ್ಕಿಂತ ಕಡಿಮೆ ನೆಲದಲ್ಲಿ ಮೆಣಸು ಬೆಳೆಯುತ್ತದೆ. ಮೆಣಸು ಬೆಳೆಯ ಜೊತೆಗೆ ಹಣ್ಣು ತರಕಾರಿ ಬೆಳೆಯುವುದೂ ಸಾಮಾನ್ಯ. ಪೂರ್ವದ ಕಡೆಗೆ ಸಾಗಿದಂತೆ ಮೆಣಸಿನ ಭೂಮಿ ಕಡಿಮೆಯಾಗಿ ಹಣ್ಣು ತರಕಾರಿ ಬೆಳೆ ಹೆಚ್ಚುತ್ತದೆ. ಕಡಿಮೆ ಮಳೆಯ ಪೂರ್ವ ಪ್ರದೇಶದಲ್ಲಿ ಎಣ್ಣೆಕಾಳುಗಳ ಬೆಳೆಯೂ ಮುಖ್ಯ. ನೆರೆಯ ಮೈದಾನದ ಬೆಳೆಯೇ ಇಲ್ಲೂ ಬೆಳೆಯುವುದು ಅಭ್ಯಾಸವಾಗಿದೆ.

ಅರೆಮಲೆನಾಡಿನ ನೆಲದಲ್ಲಿ ಸು. ಶೇ.50 ರಷ್ಟು ಭೂಮಿ ಬೇಸಾಯಕ್ಕೊಳಪಟ್ಟಿದೆಯೆಂದು ಸ್ಥೂಲವಾಗಿ ಹೇಳಬಹುದು. ಶಿಕಾರಿಪುರ ಹಾಸನಗಳಲ್ಲಿ ಬತ್ತ ಅತ್ಯಂತ ಮುಖ್ಯ ಬೆಳೆ. ರಾಗಿ, ಜೋಳ ಮುಂತಾದವೂ ಬೆಳೆಯುತ್ತವೆ. ಹಾಸನದ ದಕ್ಷಿಣದ ಪ್ರದೇಶದಲ್ಲಿ ಕಾಫಿಯನ್ನೂ ಸ್ವಲ್ಪ ಬೆಳೆಯುತ್ತಾರೆ. ಹಿರೇಕೆರೂರಿನ ಉತ್ತರಕ್ಕೆ ಹತ್ತಿಯ ಕಪ್ಪು ನೆಲದ ಬದಿಯ ನೆಲದಲ್ಲಿ ಜೋಳ, ಹತ್ತಿ, ತೊಗರಿ, ಎಣ್ಣೆಕಾಳು ಬೆಳೆಯುತ್ತವೆ. ಹಾಸನ ಮತ್ತು ದಕ್ಷಿಣದಲ್ಲಿ ಆಲೂಗೆಡ್ಡೆ, ಈರುಳ್ಳಿ, ಮಾವು, ಬಾಳೆ, ಕಿತ್ತಳೆ, ತೊಗರಿ, ಎಣ್ಣೆಕಾಳುಗಳು, ತೆಂಗು, ಕಡಲೆಕಾಯಿ ಬೆಳೆಯುವರು.

ಉತ್ತರ ಮೈದಾನದ ಹಳ್ಳಿಗಳು ಅಡಕವಾಗಿವೆ. ಜಮೀನು ಹಿಡುವಳಿಯ ಗಾತ್ರ ಹೆಚ್ಚು . ಭೂರಹಿತ ದುಡಿಮೆಗಾರರ ಪ್ರಮಾಣವೂ ಹೆಚ್ಚು. ಖುಷ್ಕಿ ನೆಲವೇ ಅಧಿಕವಾಗಿದೆ. ಇಲ್ಲಿ ಪರಮಾವಧಿ ಮಳೆ ಬೀಳುವುದು ತಡವಾಗಿಯಾದ್ದರಿಂದಲೂ ನೆಲಕ್ಕೆ ಹೆಚ್ಚು ಜಲಧಾರಣಶಕ್ತಿಯಿರುವುದರಿಂದಲೂ ಚಳಿಗಾಲದ ಬೆಳೆಗಳು(ರಾಬಿ)ಹೆಚ್ಚು. ಪಶ್ಚಿಮದ ಎತ್ತರ ಪ್ರಸ್ಥಭೂಮಿಯ ತಂಪು ಹವೆ ಗೋದಿ ಬೆಳೆಗೆ ಅನುಕೂಲವಾಗಿದೆ. ಎಲ್ಲೆಡೆಗಳಲ್ಲೂ ಜೋಳ ಸಾಮಾನ್ಯ. ಹತ್ತಿ , ಬಾಜ್ರ , ಶೇಂಗ, ರಾಗಿ ಇತರ ಬೆಳೆಗಳು.

ಹರಿಹರದಿಂದ ಹೊನ್ನಾಳಿಯವರೆಗಿನ ಪ್ರದೇಶ ಮಲೆನಾಡಿನ ಸೆರಗಿನಂತಿದೆ. ಇಲ್ಲಿ ಜೋಳ, ರಾಗಿ, ಎಣ್ಣೆಬೀಜ, ತೊಗರಿ, ಹತ್ತಿ, ಸಂಬಾರ ಪದಾರ್ಥ ಮತ್ತು ಬತ್ತ ಬೆಳೆಯುತ್ತವೆ. ಹರಿಹರದಲ್ಲಿ ಸಾಗುವಳಿಯ ನೆಲದಲ್ಲಿ ಶೇ. 39ರಷ್ಟೂ ಹೊನ್ನಾಳಿಯಲ್ಲಿ ಶೇ. 20ರಷ್ಟೂ ಪ್ರದೇಶ ಜೋಳಕ್ಕೆ ಮೀಸಲು. ಹರಿಹರ ಪ್ರದೇಶದಲ್ಲಿ ಎಣ್ಣೆ ಬೀಜಗಳೂ ಹೊನ್ನಾಳಿಯಲ್ಲಿ ತೊಗರಿ ರಾಗಿಗಳೂ ಅನಂತರದ ಮುಖ್ಯ ಬೆಳೆಗಳು. ಧಾರವಾಡ, ಸಂಪಗಾಂವ್, ಹುಬ್ಬಳ್ಳಿ, ಕುಂದಗೋಳ, ಶಿರಹಟ್ಟಿ ಪ್ರದೇಶಗಳಲ್ಲಿ ಜೋಳ, ಗೋದಿ, ಬತ್ತ, ಹತ್ತಿ , ಬೇಳೆ, ಎಣ್ಣೆ ಬೀಜ, ಸಂಬಾರ ಪದಾರ್ಥ ಬೆಳೆಯುತ್ತವೆ. ಇವುಗಳ ಪೈಕಿ ಕುಂದಗೋಳವೊಂದನ್ನು ಬಿಟ್ಟರೆ ಉಳಿದೆಡೆಗಳಲ್ಲೆಲ್ಲ ಜೋಳ ಬೆಳೆಯುವ ನೆಲವೇ ಒಟ್ಟು ಸಾಗುವಳಿ ಪ್ರದೇಶದ ಶೇ. 25 ರಿಂದ 30ರ ವರೆಗೆ ಇದೆ. ಕುಂದಗೋಳದಲ್ಲಿ ಹತ್ತಿ ಬೆಳೆಯುವ ಪ್ರದೇಶದ ಶೇ. 38.3. ಶಿರಹಟ್ಟಿಯಲ್ಲಿ ಎಣ್ಣೆಬೀಜವೂ ಜೋಳದಷ್ಟೇ ಮುಖ್ಯ ಬೆಳೆ. ಹುಬ್ಬಳ್ಳಿಯಲ್ಲಿ ಹತ್ತಿಯೇ ಜೋಳಕ್ಕೆ ಎರಡನೆಯ ಬೆಳೆ. ಧಾರವಾಡ ಸಂಪಗಾಂವಗಳಲ್ಲಿ ಕಾಳುಗಳಿಗೆ ಎರಡನೆಯ ಸ್ಥಾನ. ಬೆಳಗಾಂವಿ ಪ್ರದೇಶದ ಕೃಷಿ ಭೂಮಿಯಲ್ಲಿ ಶೇ. 29ರಷ್ಟು ಭೂಮಿಯಲ್ಲಿ ಬತ್ತ ಬೆಳೆಯುತ್ತಾರೆ. ಜೋಳ ಕಾಳುಗಳೂ ತಕ್ಕಮಟ್ಟಿಗೆ ಬೆಳೆಯುತ್ತವೆ. ಗೋದಿ, ಹತ್ತಿ, ಎಣ್ಣೆಬೀಜ,

ಮೆಣಸು ಮುಂತಾದವು ಇತರ ಬೆಳೆಗಳು. ಚಿಕ್ಕೋಡಿ, ಹುಕ್ಕೇರಿಗಳಲ್ಲಿ ಜೋಳ ಬೆಳೆಯ ಪ್ರದೇಶ ಒಟ್ಟು ಸಾಗುವಳಿ ನೆಲದ ಶೇ. 28ರಷ್ಟು . ಚಿಕ್ಕೋಡಿಯಲ್ಲಿ ಎರಡನೆಯ ಸ್ಥಾನ ಹೊಗೆಸೊಪ್ಪಿಗೆ (ಶೇ. 16.9); ಹುಕ್ಕೇರಿಯಲ್ಲಿ ಎಣ್ಣೆಬೀಜದ್ದು ಎರಡನೆಯ ಸ್ಥಾನ (ಶೇ. 23.9). ಸಜ್ಜೆ, ತೊಗರಿ, ಹಣ್ಣು, ತರಕಾರಿ ಇತರ ಬೆಳೆಗಳು.

ಉತ್ತರ ಮೈದಾನದ ನಡುಪಟ್ಟಿಯ ಪ್ರದೇಶದಲ್ಲಿ ಒಟ್ಟಿನಲ್ಲಿ ಸಾಗುವಳಿಗೆ ಒದಗಿ ಬರದ ನೆಲ ಶೇ. 10ಕ್ಕಿಂತ ಕಡಿಮೆ. ಗದಗಿನ ಪಶ್ಚಿಮದಲ್ಲಿರುವ ಡಂಬಳ ಬೆಟ್ಟ ಮುಂತಾದ ಕೆಲವು ಪ್ರದೇಶಗಳಲ್ಲಿ ಮಾತ್ರ ಸಾಗುವಳಿ ಭೂಮಿ ಕಡಿಮೆ. ಮುಂಗಾರು (ಖರೀಫ್) ಮತ್ತು ಹಿಂಗಾರು (ರಾಬಿ) ಬೆಳೆಗಳೆರಡೂ ಬೆಳೆಯುವುದಾದರೂ ವರ್ಷಕ್ಕೆ ಎರಡು ಬೆಳೆ ತೆಗೆಯುವ ನೆಲ ಕಡಿಮೆ. ಉತ್ತರ ಗೋಕಾಕ, ಉತ್ತರ ಮುಧೋಳ, ಆಗ್ನೇಯ ಮತ್ತು ಉತ್ತರ ಜಮಖಂಡಿ, ರಾಯಬಾಗ್, ಉತ್ತರ ಅಥಣಿ, ಉತ್ತರ ಬಿಜಾಪುರ, ಬಾಗೇವಾಡಿಯ ನಡುಭಾಗ, ಮುದ್ದೇಬಿಹಾಳ, ಪಶ್ಚಿಮ ಸಿಂದಗಿ, ಇಂಡಿ ಬಹುಭಾಗ–ಇಲ್ಲೆಲ್ಲ ಬಾವಿಯ ನೀರಾವರಿ ವ್ಯವಸ್ಥೆಯುಂಟು. ಇಲ್ಲಿ ಬೇಸಾಯ ಬಹುತೇಕ ಜೀವನಾಧಾರಕ್ಕಾಗಿ, ಜೋಳ, ಸಜ್ಜೆ, ಗೋದಿ, ಹತ್ತಿ, ಎಣ್ಣೆಬೀಜ, ತೊಗರಿ, ಮೆಣಸಿನಕಾಯಿ, ಬಾಳೆ, ಗೆಣಸು ಮತ್ತು ಈರುಳ್ಳಿ ಇವು ಇಲ್ಲಿಯ ಬೆಳೆಗಳು. ಮುಧೋಳ, ಬಾದಾಮಿ, ಗೋಕಾಕ, ರಾಮದುರ್ಗ, ಬಾಗಲಕೋಟೆ, ಹುನುಗುಂದ ಈ ಪ್ರದೇಶಗಳಲ್ಲಿ ಸಾಗುವಳಿಯಲ್ಲಿರುವ ಭೂಮಿಯಲ್ಲಿ ಶೇ. 25 ರಿಂದ ಶೇ. 40ರ ವರೆಗೆ ಜೋಳದ ಬೆಳೆಗೆ ಮೀಸಲಾಗಿದೆ. ಸಜ್ಜೆ, ಗೋದಿ, ಹತ್ತಿ, ಎಣ್ಣೆಬೀಜ, ತೊಗರಿ, ಹಣ್ಣು ಮತ್ತು ತರಕಾರಿಗಳೂ ಬೆಳೆಯುತ್ತವೆ. ದಾವಣಗೆರೆ ಮತ್ತು ಹರಪನಹಳ್ಳಿಗಳಲ್ಲೂ ಜೋಳವೇ ಪ್ರಥಮ ಬೆಳೆ. ಹಡಗಲಿ, ಕೂಡ್ಲಿಗಿಗಳಲ್ಲಿ ಎಣ್ಣೆ ಬೀಜ ಪ್ರಧಾನ. ದಾವಣಗೆರೆಯಲ್ಲಿ ರಾಗಿಯೂ ಹರಪನಹಳ್ಳಿಯಲ್ಲಿ ಎಣ್ಣೆ ಬೀಜವೂ ಉಳಿದೆರಡು ಪ್ರದೇಶಗಳಲ್ಲಿ ಜೋಳವೂ ಎರಡನೆಯ ಸ್ಥಾನ ಗಳಿಸುತ್ತವೆ. ತೊಗರಿ, ಹತ್ತಿ, ಬತ್ತ, ಸಜ್ಜೆ, ಸಂಬಾರ, ಹಣ್ಣು ಮತ್ತು ತರಕಾರಿಗಳನ್ನೂ ಬೆಳೆಯುತ್ತಾರೆ. ಗದಗ ನರಗುಂದ, ನವಲಗುಂದಗಳಲ್ಲಿಯ ಬೆಳೆಗಳು ಹತ್ತಿ , ಜೋಳ, ಗೋದಿ, ದ್ವಿದಳ ಧಾನ್ಯ, ಎಣ್ಣೆಬೀಜ, ಹಣ್ಣು , ತರಕಾರಿ.

ಉತ್ತರ ಮೈದಾನದ ಪೂರ್ವ ಪ್ರದೇಶದಲ್ಲಿ ಬೇಸಾಯಕ್ಕೊಳಪಡದ ಭೂಮಿಯ ಪ್ರಮಾಣ ಹೆಚ್ಚು (ಶೇ. 20 ರಿಂದ 59ರ ವರೆಗೆ). ಈಶಾನ್ಯ ಭಾಗದ ಚಿಂಚೋಳಿ ಯಾದಗಿರಿಗಳು ಜೋಳ, ಸಜ್ಜೆ, ಬತ್ತ, ಗೋದಿ, ಹತ್ತಿ, ಎಣ್ಣೆಬೀಜ, ದ್ವಿದಳದಾನ್ಯ, ಸಂಬಾರ ಬೆಳೆಗಳನ್ನು ಬೆಳೆಯುತ್ತವೆ. ಶಾಂತಪುರ, ಭಾಲ್ಕಿ, ಹುಮನಾಬಾದ್, ಅಳಂದು, ಗುಲ್ಬರ್ಗ, ಚಿತ್ತಾಪುರ, ಸೆರಂಗಳಲ್ಲೂ ಮೊದಲ ಸ್ಥಾನ ಜೋಳಕ್ಕೆ, ದ್ವಿದಳದಾನ್ಯ, ಎಣ್ಣೆಬೀಜ ಅನಂತರದ ಮುಖ್ಯ ಬೆಳೆಗಳು. ಇತರ ಬೆಳೆಗಳೂ ಉಂಟು. ಆದರೆ ಹತ್ತಿಯಿಲ್ಲ. ತುಂಗಭದ್ರ ಪ್ರದೇಶದ ಹೊಸಪೇಟೆ, ಬಳ್ಳಾರಿ, ಸಿಂಧನೂರು, ಸಿರಗುಪ್ಪ, ಮಾನ್ವಿ, ರಾಯಚೂರುಗಳಲ್ಲಿ ಸಾಗುವಳಿ ಭೂಮಿಯ ಅರ್ಧ ಭಾಗದಲ್ಲಿ ಹತ್ತಿ ಬೆಳೆಯುತ್ತಾರೆ. ಉಳಿದ ಬೆಳೆಗಳನ್ನೆಲ್ಲ ಬೇರೆಯೆಡೆಗಳಂತೆಯೇ ಬೆಳೆಯುತ್ತಾರೆ.

ಉತ್ತರ ಮೈದಾನದ ಕೆಲವು ದೊಡ್ಡ ಪಟ್ಟಣಗಳ ವಿನಾ ಉಳಿದೆಲ್ಲ ಪ್ರದೇಶಗಳಲ್ಲೂ ವ್ಯವಸಾಯಾವಲಂಬಿ ಜನರದೇ ಹೆಚ್ಚು ಸಂಖ್ಯೆ. ಎಲ್ಲ ಕಡೆಗಳಲ್ಲೂ ಶೇ. 57ಕ್ಕಿಂತ ಹೆಚ್ಚು (ಇಡೀ ರಾಜ್ಯದ ಪ್ರಮಾಣ ಶೇ. 76.4). ಉತ್ತರ ದಕ್ಷಿಣ ಮೈದಾನಗಳೆರಡರಲ್ಲೂ ಭೂಮಿ ಒಡೆತನವುಳ್ಳ ರೈತರ ಪ್ರಮಾಣವೇ ಅಧಿಕ.

ಉತ್ತರ ಮೈದಾನದಲ್ಲಿ ಸಾಮಾನ್ಯವಾಗಿ ಎಲ್ಲ ಹಳ್ಳಿಗಳೂ ಆಹಾರ ವಿಚಾರದಲ್ಲಿ ಕೊರತೆಯ ಪ್ರದೇಶಗಳು. ಜೋಳದ ಬೆಳೆ ಚೆನ್ನಾಗಿ ಆದ ವರ್ಷಗಳಲ್ಲಿ ಪರಿಸ್ಥಿತಿ ಉತ್ತಮ. ಹತ್ತಿ ಮತ್ತು ಕಡಲೆಕಾಯಿಯಿಂದ ಬರುವ ಹಣದಿಂದ ಆಹಾರ ಪೂರೈಕೆಯಾಗುತ್ತದೆ.

ದಕ್ಷಿಣ ಮೈದಾನ ಮುಖ್ಯವಾಗಿ ಕೆರೆಗಳ ಸೀಮೆ. ಇದು ಹಳೆಯ ಮೈಸೂರು ರಾಜ್ಯ ಪ್ರದೇಶ. ವಿದ್ಯುದುತ್ಪಾದನೆ, ಕೈಗಾರಿಕೆ ಮತ್ತು ನೀರಾವರಿ ಅಭಿವೃದ್ಧಿ ಕಾರ್ಯಗಳು ಹಿಂದಿನಿಂದಲೂ ಇಲ್ಲಿ ನಡೆದಿವೆ. ಶಿವಸಮುದ್ರದ ಬಳಿಯಿಂದ ಉತ್ತರಕ್ಕೆ ವಿಶ್ವೇಶ್ವರಯ್ಯ ನಾಲೆಯ ಗದ್ದೆ ಬಯಲುಗಳಲ್ಲಿ ಕಬ್ಬು ಬತ್ತಗಳೂ ಅಲ್ಲಲ್ಲಿ ತೆಂಗುಗಳೂ ಹಬ್ಬಿವೆ. ಕೆರೆಗಳ ಬೇಸಾಯ ಸಾರ್ವತ್ರಿಕ. ಕೆರೆಗಳ ಸೀಮೆ 51800 ಚ.ಕಿಮೀ ವಿಸ್ತಾರದಲ್ಲಿ ಹರಡಿದೆ. ಅನೇಕ ಕೆರೆಗಳ ದುರಸ್ತಿಯಲ್ಲಿಲ್ಲ. ಈ ಕೆರೆಗಳು ಹಿಂದಿನ ಶತಮಾನಗಳ ಸಾಮೂಹಿಕ ಕಾರ್ಯಶೀಲತೆಯ ಸಂಕೇತಗಳು.

ದಕ್ಷಿಣ ಮೈದಾನ ಪ್ರದೇಶದಲ್ಲಿ ಸಾಗುವಳಿಗೆ ಒಳಪಡುವ ಭೂಮಿ ಸಾಮಾನ್ಯವಾಗಿ ಅರ್ಧದಷ್ಟಿದೆ. ಪಾವಗಡ, ಕೊಳ್ಳೇಗಾಲ ಮತ್ತು ಗುಬ್ಬಿಯಂಥ ಗುಡ್ಡನಾಡುಗಳಲ್ಲಿ ಶೇ. 90ರ ವರೆಗೂ ಇದು ಏರಿರುವುದುಂಟು. ಮೈಸೂರಿನ ಸುತ್ತಣ ಮೂರು ತಾಲ್ಲೂಕುಗಳಲ್ಲಿ ಮಾತ್ರ ಶೇ. 70ಕ್ಕಿಂತ ಹೆಚ್ಚು ಭೂಮಿ ಸಾಗುವಳಿಯಲ್ಲಿದೆ.

ದಕ್ಷಿಣ ಮೈದಾನದ ದಕ್ಷಿಣಾರ್ಧದಲ್ಲಿ ಉತ್ತರಾರ್ಧದಲ್ಲಿರುವುದಕ್ಕಿಂತ ಕೆರೆಗಳ ಸಂಖ್ಯೆ ಹೆಚ್ಚು. ಅರೆಮಲೆನಾಡಿನ ಬಳಿಯ ಪಶ್ಚಿಮ ಭಾಗದಲ್ಲಿ ಪೂರ್ವ ಭಾಗಕ್ಕಿಂತ ಕಡಿಮೆ. ಬೆಟ್ಟಸೀಮೆಗಳಾದ ಕನಕಪುರ, ಬಂಗಾರಪೇಟೆ, ಚಿಂತಾಮಣಿ ತಾಲ್ಲೂಕುಗಳಲ್ಲೂ ಹೆಚ್ಚು ಕೆರೆಗಳಿಲ್ಲ. ಉತ್ತರ ಮಧ್ಯಭಾಗದಲ್ಲಿ ಗೌರಿಬಿದನೂರಿನಿಂದ ಚಿಕ್ಕನಾಯಕನಹಳ್ಳಿಯ ವರೆಗೆ ಇವು ಅಧಿಕ.

ದಕ್ಷಿಣ ವಿಶ್ವೇಶ್ವರಯ್ಯ ನಾಲೆಯ ಪ್ರದೇಶದ ದಕ್ಷಿಣ ಭಾಗದಲ್ಲೂ ಕಾವೇರಿ ಕಣಿವೆಯ ಬಹುಭಾಗದಲ್ಲೂ ಚನ್ನರಾಯಪಟ್ಟಣ ಮತ್ತು ನಾಗಮಂಗಲದ ಸುತ್ತಲೂ ತುಂಬ ಉತ್ತರದಲ್ಲೂ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ. ಬೆಂಗಳೂರಿನ ಹತ್ತಿರದ ತರಕಾರಿ ಕ್ಷೇತ್ರಗಳನ್ನೂ ಚಿಕ್ಕಬಳ್ಳಾಪುರ ಪ್ರದೇಶದ ಆಲೂಗೆಡ್ಡೆ ಪ್ರದೇಶವನ್ನೂ ಈ ಗುಂಪಿಗೆ ಸೇರಿಸಬಹುದು.

ಸಾಗುವಳಿಗೆ ಒಳಪಟ್ಟ ನೆಲದಲ್ಲಿ ಹೊಲಗಳ ಪ್ರಮಾಣ ಅಧಿಕ. ಇಲ್ಲಿ ರಾಗಿ ಬೆಳೆಯುವುದೇ ಹೆಚ್ಚು. ಸಾಮಾನ್ಯವಾಗಿ ಜೋಳ, ಕಡಲೆ, ಅವರೆ, ತೊಗರಿ, ಎಳ್ಳು, ಹುಚ್ಚೆಳ್ಳು, ಮತ್ತು ಹರಳುಗಳೊಂದಿಗೆ ಇದನ್ನು ಬೆಳೆಯುತ್ತಾರೆ. ಇದರ ಬಿತ್ತನೆಯಾಗುವುದು ಜುಲೈ ತಿಂಗಳಲ್ಲಿ. ನಡುನಡುವಣ ಇತರ ಬೆಳೆಗಳ ಸಾಲುಗಳನ್ನು ಬಿಟ್ಟು ರಾಗಿಯನ್ನು ಕಟಾವು ಮಾಡುವುದು ಡಿಸೆಂಬರಿನಲ್ಲಿ. ಉಳಿದ ಬೆಳೆಯ ಫಸಲು ಸ್ವಲ್ಪ ನಿಧಾನ. ಜೋಳ ಮತ್ತು ಸಜ್ಜೆಯೂ ಮುಖ್ಯ ಬೆಳೆಗಳು. ನೆಲಗಡಲೆಯನ್ನೂ ಕೆಲವು ಕಡೆಗಳಲ್ಲಿ ಹೊಗೆಸೊಪ್ಪನ್ನೂ ಬೆಳೆಯುವುದುಂಟು. ಇವು ನಗದು ಬೆಳೆಗಳು. ತರಿ ಜಮೀನಿನ ಮುಖ್ಯ ಫಸಲೆಂದರೆ ಬತ್ತ. ಡಿಸೆಂಬರ್–ಜನವರಿ ಇದರ ಕೊಯ್ಲು ಕಾಲ. ಕಬ್ಬನ್ನೂ ಬೆಳೆಯುವುದುಂಟು. ಕೆಲವು ವಿಶಿಷ್ಟ ಪ್ರದೇಶಗಳಲ್ಲಿ ಹಿಪ್ಪುನೇರಳೆ ಮುಖ್ಯ ಬೆಳೆ. ಬತ್ತದ ಫಸಲು ತಗೆದ ಮೇಲೆ ಚಳಿಗಾಲದ ಬೆಳೆಯಾಗಿ ಕಡಲೆ, ಹುರುಳಿ ಮುಂತಾದವನ್ನು ಬೆಳೆಯಬಹುದು. ಆದರೆ ಇವು ಅಷ್ಟೇನೂ ಮುಖ್ಯವಲ್ಲ. ಕೆಲವು ಕಡೆಗಳಲ್ಲಿ ರಾಗಿಗೂ ನೀರಾವರಿಯನ್ನು ಬಳಸುವುದುಂಟು. ಇದರ ಫಸಲು ಇಳುವರಿ ಖುಷ್ಕಿ ರಾಗಿಗಿಂತ ಹೆಚ್ಚು. ಕೆರೆಯ ಅಥವಾ ಬಾವಿಯ ಕೆಳಗಿನ ತೋಟಗಳು ತೆಂಗು,




ಅಡಕೆ, ವೀಳೆಯದೆಲೆ, ನಿಂಬೆ ಮತ್ತು ಮೆಣಸುಗಳಿಗೆ ಮೀಸಲು, ನದಿಪಾತ್ರದ ಒಣಮರುಳು ಬಯಲುಗಳಲ್ಲಿ ಕಲ್ಲಂಗಡಿ ಮುಂತಾದವನ್ನು ಬೆಳೆಯುವುದುಂಟು. ಇವು ನದಿಪಾತ್ರದ ಅಡಿಯ ನೀರನ್ನು ಬಳಸಿಕೊಳ್ಳುತ್ತವೆ. ಬೆಂಗಳೂರಿನಂಥ ನಗರ ಪ್ರದೇಶಗಳ ಸುತ್ತ ತರಕಾರಿಗಳಿಗಾಗಿ ನೀರಾವರಿ ಬಳಕೆಯುಂಟು.

ದಕ್ಷಿಣ ಮೈದಾನದ ಮುಖ್ಯ ಬೆಳೆ ರಾಗಿ ಬತ್ತಗಳಾದರೂ ಉತ್ತರ ಮೈದಾನದಲ್ಲಿ ಜೋಳವೂ ಪಶ್ಚಿಮ ಕರ್ನಾಟಕದಲ್ಲಿ ಬತ್ತವೂ ಸಾಮಾನ್ಯವಾಗಿ ಪ್ರಧಾನವಾಗಿರುವಷ್ಟು

ಮಟ್ಟಿಗೆ ಇವು ಇಲ್ಲಿ ಪ್ರಧಾನವಾಗಿಲ್ಲ. ಕೆಲವು ಕಡೆಗಳಲ್ಲಿ ಜೋಳ ಮುಖ್ಯ ಧಾನ್ಯ ; ಮತ್ತೆ ಕೆಲವೆಡೆಗಳಲ್ಲಿ ಸಜ್ಜೆ ಮುಖ್ಯ. ಅಲ್ಲೆಲ್ಲ ರಾಗಿ, ಬತ್ತಗಳನ್ನೂ ಬೆಳೆಯುವುದುಂಟು. ದಕ್ಷಿಣ ಮೈದಾನದ ಉತ್ತರಾರ್ಧದಲ್ಲಿ ಉತ್ತರ ಮೈದಾನದ ಬೆಳೆಗಳು ಮುಖ್ಯ. ಅರಸಿಕೆರೆ, ಪಾವಗಡ, ಬಾಗೆಪಲ್ಲಿ ಮತ್ತು ಉತ್ತರದ ತಾಲ್ಲೂಕುಗಳಲ್ಲಿ ಜೋಳವೂ, ಹೊಸದುರ್ಗ, ಶಿಡ್ಲಘಟ್ಟ, ಚಿಂತಾಮಣಿಗಳಲ್ಲೂ ಅದಕ್ಕೆ ಉತ್ತರದಲ್ಲೂ ಸಜ್ಜೆಯೂ, ಹೊಸದುರ್ಗ–ಚಳ್ಳಕೆರೆ–ಪಾವಗಡಗಳ ನೇರಕ್ಕೂ ಉತ್ತರಕ್ಕೂ ಹತ್ತಿಯೂ ಬೆಳೆಯುತ್ತವೆ. ಇವು ಕಡಿಮೆ ಮಳೆಯ ಪ್ರದೇಶಗಳು. ನೈಋತ್ಯದಲ್ಲಿ ಜೋಳ, ಹತ್ತಿ, ಹೊಗೆಸೊಪ್ಪು ಬೆಳೆಯುವ ಅಖಂಡ ಪ್ರದೇಶ ಇಲ್ಲಿಯಷ್ಟು ವಿಸ್ತಾರವಾಗಿ ಕರ್ನಾಟಕದಲ್ಲಿ ಬೇರೆಲ್ಲೂ ಇಲ್ಲ. ಉತ್ತರ ವಾಯವ್ಯದಿಂದ ದಕ್ಷಿಣ ಆಗ್ನೇಯದವರೆಗೆ ಎರಡು ಮುಖ್ಯ ವೃಕ್ಷಬೆಳೆಗಳ ಪ್ರದೇಶಗಳನ್ನು ಕಾಣಬಹುದು. ಕಡೂರು ಹೊಸದುರ್ಗಗಳಿಂದ ಚನ್ನಪಟ್ಟಣ ಮದ್ದೂರುಗಳವರೆಗೆ ಈ ಪ್ರದೇಶ ವ್ಯಾಪಿಸಿದ್ದು, ಚಿಕ್ಕನಾಯಕನಹಳ್ಳಿಯಿಂದ ದಾವಣಗೆರೆಯವರೆಗೂ ಕೃಷ್ಣರಾಜಪೇಟೆಯಿಂದ ಹೊನ್ನಾಳಿಯವರೆಗೂ ಹಬ್ಬಿರುವ ಬೆಟ್ಟ ಶ್ರೇಣಿಗಳನ್ನೊಳಗೊಂಡಿದೆ. ಇಲ್ಲಿ ತೆಂಗು ಬೆಳೆಯುತ್ತದೆ. ಇದಕ್ಕೆ ಹೊಂದಿಕೊಂಡಂತೆ, ಸ್ವಲ್ಪ ಪೂರ್ವಕ್ಕೆ, ಅಡಕೆಯೂ ಬೆಳೆಯುತ್ತದೆ. ಇದರ ದಕ್ಷಿಣ ಪಾರ್ಶ್ವದಲ್ಲಿ ಗುಂಡ್ಲುಪೇಟೆ ಚಾಮರಾಜನಗರಗಳವರೆಗೆ ಇರುವ ಪ್ರದೇಶದಲ್ಲಿ ಬಾಳೆ ತೋಟಗಳಿವೆ. ಮಂಡ್ಯದ ಬಳಿ ಕಬ್ಬು ಗೌರಿಬಿದನೂರಿನ ಬಳಿ ಮತ್ತು ಶ್ರೀನಿವಾಸಪುರ ಮುಳಬಾಗಿಲುಗಳಲ್ಲಿ ಏತ ಮತ್ತು ವಿದ್ಯುತ್ ಪಂಪು ಬಾವಿ ನೀರಾವರಿಯಿಂದ ಕಬ್ಬು ಮತ್ತು ಹೊಗೆಸೊಪ್ಪು ಶಿಡ್ಲಘಟ್ಟ ಮತ್ತು ಮಾಗಡಿಯಿಂದ ಕನಕಪುರ ಮತ್ತು ಕೊಳ್ಳೆಗಾಲದವರೆಗಿನ ಪ್ರದೇಶದಲ್ಲಿ ಹಿಪ್ಪುನೇರಳೆಯೂ ದಕ್ಷಿಣ ಮೈದಾನದ ಪೂರ್ವಭಾಗದಲ್ಲಿ ಹಣ್ಣು ತರಕಾರಿಗಳೂ ಬೆಳೆಯುತ್ತವೆ.

ದಕ್ಷಿಣ ಮೈದಾನದ ದಕ್ಷಿಣ, ಮಧ್ಯ ಮತ್ತು ಪೂರ್ವಭಾಗಗಳಲ್ಲಿ ಸಾಕುಪ್ರಾಣಿಗಳ ಸಂಖ್ಯೆ ಉಳಿದ ಭಾಗಗಳಲ್ಲಿರುವುದಕ್ಕಿಂತ ಹೆಚ್ಚು. ಕೆರೆ ಪ್ರದೇಶದಲ್ಲಿ ದನಗಳ ಮೇವಿಗೆ ಅನುಕೂಲವಾದ ಸ್ಥಳ ಹೆಚ್ಚಾಗಿದೆ. ಹಸು, ಎಮ್ಮೆ, ಕುರಿ ಮತ್ತು ಆಡು ಮುಖ್ಯ. ಉತ್ತರಾರ್ಧದ ಕಪ್ಪು ಮಣ್ಣಿನ ಪ್ರದೇಶದಲ್ಲಿ ಕುರಿ ಕಡಿಮೆ. ಕೊಳ್ಳೆಗಾಲ ಪ್ರದೇಶದಲ್ಲಿ ಕುರಿ ಆಡುಗಳಿಗಿಂತ ದನ ಹೆಚ್ಚು. ಕೋಲಾರದ ಕಡೆ ಕಂಬಳಿ ನೇಯ್ಗೆ ಒಂದು ಮುಖ್ಯ ಕಸಬು. ರಾಗಿ–ಬತ್ತ ಬೆಳೆಯುವ ಪ್ರದೇಶದಲ್ಲಿ ಕೋಳಿ ಸಾಕಣೆಯೂ ಹೆಚ್ಚು.

ತೆಂಗು ಬೆಳೆಯುವ ಪ್ರದೇಶದಲ್ಲೂ ವಿಶ್ವೇಶ್ವರಯ್ಯ ನಾಲೆಯ ಬಳಿಯಲ್ಲೂ ಕಾವೇರಿ ಕಣಿವೆಯಲ್ಲೂ ವ್ಯವಸಾಯವಲಂಬಿತ ಜನರ ಸಂಖ್ಯೆ ಹೆಚ್ಚು (ಶೇ. 84–91) ನಂಜನಗೂಡಿನ ಬಳಿಯೂ ಅಧಿಕ. ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶದಲ್ಲೂ ಚಿತ್ರದುರ್ಗ, ದಾವಣಗೆರೆ, ಚನ್ನಪಟ್ಟಣ–ಈ ಪ್ರದೇಶದಲ್ಲೂ ಮೈಸೂರು ನಗರದಲ್ಲೂ ಬೆಳೆದಿರುವ ಕೈಗಾರಿಕೆಗಳಿಂದಾಗಿ ವ್ಯವಸಾಯಾವಲಂಬಿ ಜನರ ಪ್ರಮಾಣ ಕಡಿಮೆ.

**ಕರ್ನಾಟಕದ ಕೃಷಿಗೆ ಸಂಬಂಧಿಸಿದ ಕೆಲವಿವರ, 2004–05**

| ವಿವರ | ಕ್ಷೇತ್ರ (000 ಹೆ.) |
|---|---|
| ಭೂ ವಿಸ್ತೀರ್ಣ | 19049.8 |
| ಕಾಡು | 3070.3 |
| ವ್ಯವಸಾಯೇತರ ಭೂಮಿ | 1331.6 |
| ಕೃಷಿ ಯೋಗ್ಯವಲ್ಲದ ಭೂಮಿ | 788.0 |
| ಖಾಯಂ ಗೋಮಾಳ ಇತ್ಯಾದಿ | 952.2 |
| ವಿವಿಧ ವೃಕ್ಷಾವೃತ ಭೂಮಿ | 304.7 |
| ಕೃಷಿ ಯೋಗ್ಯ ಬರಡು ನೆಲ | 421.2 |
| ಪಾಳು ಭೂಮಿ | 2344.0 |
| ಬಿತ್ತನೆಯ ಪ್ರದೇಶ | 9837.6 |
| ಒಂದಕ್ಕಿಂತ ಹೆಚ್ಚು ಬಿತ್ತನೆಯ ಪ್ರದೇಶ | 1674.2 |
| ನಿವ್ವಳ ನೀರಾವರಿ ಪ್ರದೇಶ | 2450.4 |

**ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆ, 2004–05**

| ಬೆಳೆ | ವಿಸ್ತೀರ್ಣ (ಹೆಕ್ಟೇರು) | ಉತ್ಪನ್ನ (ಟನ್ನುಗಳು) |
|---|---|---|
| ಹಣ್ಣುಗಳು | 260,733 | 416,4611 |
| ತರಕಾರಿಗಳು | 377,374 | 665,4105 |
| ಸಾಂಬಾರು ಬೆಳೆ | 244,501 | 496,933 |
| ತೋಟದ ಬೆಳೆ | 625,693 | 334,005 |
| ವಾಣಿಜ್ಯ ಪುಷ್ಪಗಳು | 20890 | 156,584 |
| ಔಷಧೀಯಗಿಡಗಳು | 381 | 4525 |
| ಸುಗಂಧಿಕ ಗಿಡಗಳು | 665 | 9144 |

**ಕರ್ನಾಟಕದ ಪ್ರಮುಖ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪನ್ನ, 2004–2005**

| ಬೆಳೆ | ವಿಸ್ತೀರ್ಣ (000 ಹೆಕ್ಟೇರು) | ಉತ್ಪನ್ನ (000 ಟನ್ನು) |
|---|---|---|
| **ಆಹಾರಧಾನ್ಯಗಳು** | | |
| ಬತ್ತ | 1,308.2 | 5,556.5 |
| ಜೋಳ | 1,662.8 | 1,358.6 |
| ಸಜ್ಜೆ | 444.7 | 266.1 |
| ಮುಸುಕಿನ ಜೋಳ | 850.4 | 2,509.3 |
| ರಾಗಿ | 892.8 | 1,613.9 |
| ತೃಣ ಧಾನ್ಯಬೆಳೆ | 58.4 | 30.6 |
| ಗೋದಿ | 242.0 | 206.3 |
| **ಒಟ್ಟು ಏಕದಳ ಧಾನ್ಯ** | **5459.2** | **9,691.1** |
| ಕಡಲೆ | 418.1 | 230.9 |
| ತೊಗರಿ | 562.1 | 291.1 |
| ಇತರ ದ್ವಿದಳ ಬೆಳೆ | 108.7 | 384.6 |
| **ಒಟ್ಟು ದ್ವಿದಳಧಾನ್ಯ ಬೆಳೆ** | **2,108.0** | **799.9** |
| **ಎಣ್ಣೆ ಬೀಜಗಳು** | | |
| ನೆಲಗಡಲೆ | 968.6 | 684.1 |
| ಸೂರ್ಯಕಾಂತಿ | 1135.5 | 436.8 |
| ಹರಳು | 17.3 | 15.7 |
| ಹುಚ್ಚೆಳ್ಳು | 27.4 | 5.2 |
| ಎಳ್ಳು | 58.5 | 25.9 |
| ಕುಸುಬೆ | 98.6 | 42.3 |
| ಸಾಸಿವೆ, ರೇಪ್ ಬೀಜ | 6.1 | 1.7 |
| ಅಗಸೆ | 12.9 | 1.0 |
| **ಒಟ್ಟು** | **2,267.4** | **934.1** |
| **ಇತರ ಉತ್ಪನ್ನಗಳು** | | |
| ಹತ್ತಿ | 521.8 | 624.6 |
| ಕಬ್ಬು | 177.9 | 13,993.2 |
| ಮಾವು | 119.2 | 109.8 |
| ದ್ರಾಕ್ಷಿ | 8.5 | 150.3 |
| ಹೊಗೆಸೊಪ್ಪು | 98.1 | 50.1 |
| ಅರಿಸಿನ | 10.2 | 65.6 |
| ಆಲೂಗೆಡ್ಡೆ | 44.7 | 575.8 |
| ತೆಂಗು | 412.7 | 38.7 |
| ಗೋಡಂಬಿ | 61.5 | 104.8 |
| ಅಡಕೆ | 132.3 | 169.9 |
| ಕಾಫಿ | 204.3 | 210.8 |
| ಕೋಕೋ | 1.9 | 22.8 |

**ಪಶುಸಂಗೋಪನೆ:** ಕರ್ನಾಟಕದಲ್ಲಿ ಪಶುಸಂಗೋಪನೆ ಕೃಷಿಯ ಒಂದು ಭಾಗವಾಗಿ ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. ಜಾನುವಾರುಗಳನ್ನು ಕ್ಷೀರೋತ್ಪನ್ನ, ತುಪ್ಪಳ, ಚರ್ಮ, ಗೊಬ್ಬರ, ಮಾಂಸ ಮುಂತಾದ ಉದ್ದೇಶಗಳಿಗಾಗಿ ಸಾಕಿದರೂ ಕೃಷಿ ಕಾರ್ಯಗಳಿಗೆ ಸಾಕುವುದೇ ಹೆಚ್ಚು. ಉದಾ: ಉಳುಮೆ ಮಾಡಲು, ಸರಕು ಸಾಗಿಸಲು ಇತ್ಯಾದಿ. ದನ, ಎಮ್ಮೆ, ಕುರಿ, ಮೇಕೆ ಮತ್ತು ಕೋಳಿಗಳನ್ನು ಹೆಚ್ಚು ಸಾಕಲಾಗುವುದು. ಇತರ ಪ್ರಾಣಿಗಳನ್ನು ಸಾಕಿದರೂ ಅವುಗಳ ಸಂಖ್ಯೆ ಕಡಿಮೆ. 2003ರಲ್ಲಿದ್ದಂತೆ ಕರ್ನಾಟಕದಲ್ಲಿ ಒಟ್ಟು 283.1 ಲಕ್ಷ ಜಾನುವಾರುಗಳಿದ್ದವು. ಅವುಗಳಲ್ಲಿ 95.4 ಲಕ್ಷ ದನಗಳು, 40 ಲಕ್ಷ ಎಮ್ಮೆ, 72.5 ಲಕ್ಷ ಕುರಿ, 44.8 ಲಕ್ಷ ಮೇಕೆ ಮತ್ತು 3 ಲಕ್ಷ ಹಂದಿಗಳಾಗಿದ್ದವು. ಬೆಳಗಾಂವಿ ಅಧಿಕ ಜಾನುವಾರುಗಳನ್ನೊಳಗೊಂಡ ಜಿಲ್ಲೆಯಾದರೆ ಕೊಡಗು ಕಡಿಮೆ ಜಾನುವಾರುಗಳನ್ನೊಳಗೊಂಡ ಜಿಲ್ಲೆಯಾಗಿದೆ.

**2003ರಲ್ಲಿ ರಾಜ್ಯದಲ್ಲಿದ್ದ ಜಾನುವಾರುಗಳ ಸಂಖ್ಯೆ ('000ಗಳಲ್ಲಿ):**

| | |
|---|---|
| ದನಕರು | 9539.0 |
| ಎಮ್ಮೆ | 3991.0 |
| ಕುರಿ | 7256.0 |
| ಆಡು | 4484.0 |
| ಹಂದಿ | 312.0 |
| ಇತರೆ | 2730.0 |
| ಕುಕ್ಕುಟ | 25,592.8 |

**ಹೈನುಗಾರಿಕೆ:** ಕೃಷಿ ಪ್ರಧಾನವಾದ ಕರ್ನಾಟಕದಲ್ಲಿ ಜಾನುವಾರು ಸಾಕಣೆಯಷ್ಟೆ ಹೈನುಗಾರಿಕೆಯೂ ಮುಖ್ಯ ಉದ್ಯಮ. 1950ರ ದಶಕಕ್ಕೂ ಮುಂಚೆ ರಾಜ್ಯದಲ್ಲಿ ಹಾಲಿನ ಉತ್ಪಾದನೆ ಮತ್ತು ವಿತರಣೆ ಸೀಮಿತವಾಗಿತ್ತು. ಕೃಷಿ ಕ್ಷೇತ್ರಗಳಲ್ಲಿ ಸಾಕುತ್ತಿದ್ದ ಹಸು ಮತ್ತು ಎಮ್ಮೆಗಳ ಹಾಲನ್ನು ಸ್ಥಳೀಯವಾಗಿ ಬಳಕೆಮಾಡಲಾಗುತ್ತಿತ್ತು. ಕ್ರಮೇಣ ಗ್ರಾಮೀಣ ಪ್ರದೇಶಗಳಿಂದ ಪಟ್ಟಣ–ನಗರಗಳಿಗೆ ಹಾಲಿನ ಮಾರಾಟ ಪ್ರಾರಂಭವಾಯಿತು. ಪ್ರಥಮವಾಗಿ ಕೊಡಗು ಜಿಲ್ಲೆಯ ಕೂಡಿಗೆ (1955)ಯಲ್ಲಿ ಆಧುನಿಕ ಹೈನುಗಾರಿಕೆ ಪ್ರಾರಂಭವಾಯಿತು. 1965ರಲ್ಲಿ ಬೆಂಗಳೂರಿನಲ್ಲಿ ಡೈರಿ ಸಂಸ್ಥೆ ಅಸ್ತಿತ್ವಕ್ಕೆ ಬಂದದ್ದು ರಾಜ್ಯದ ಹೈನುಗಾರಿಕೆಯ ಮಹತ್ವದ ಹೆಜ್ಜೆ. ಅದೇ ವರ್ಷ ಕರ್ನಾಟಕ ಕ್ಷೀರಾಭಿವೃದ್ಧಿ ಮಂಡಲಿ ಉಗಮವಾಯಿತು. ಇಂದು ಕರ್ನಾಟಕ ಹಾಲು ಮಹಾಮಂಡಲಿ ರಾಜ್ಯದಾದ್ಯಂತ ಹಾಲು ಸಂಗ್ರಹಿಸುವ ರಾಜ್ಯದ ಏಕೈಕ ಸಾರ್ವಜನಿಕ ಸಂಸ್ಥೆ.

2002ರಲ್ಲಿದ್ದಂತೆ ರಾಜ್ಯದಲ್ಲಿ ಒಟ್ಟು 8833 ನೋಂದಣಿ ಪಡೆದ ಹೈನುಗಾರಿಕಾ ಸಹಕಾರ ಸಂಘಗಳಿವೆ. ಇವುಗಳಲ್ಲಿ ನೋಂದಾಯಿಸಲ್ಪಟ್ಟ 16.6 ಲಕ್ಷ ಸದಸ್ಯರಿದ್ದಾರೆ. ಇವರಲ್ಲಿ ಸಣ್ಣ, ಅತಿ ಸಣ್ಣ ರೈತರು, ಭೂರಹಿತ ಕೃಷಿ ಕಾರ್ಮಿಕರೂ ಸೇರಿದ್ದಾರೆ. ರಾಜ್ಯದಲ್ಲಿ 13 ಹಾಲು ಒಕ್ಕೂಟಗಳಿವೆ ಮತ್ತು 17 ಕ್ಷೀರ ಕೇಂದ್ರಗಳಿವೆ. ಒಟ್ಟು 42 ಶೀತಲೀಕರಣ ಘಟಕಗಳಿವೆ. ಬೆಂಗಳೂರು, ಮೈಸೂರು, ಮಂಡ್ಯ, ತುಮಕೂರು, ಹಾಸನ, ಧಾರವಾಡ, ಬೆಳಗಾಂವಿ, ಬಿಜಾಪುರ, ಗುಲ್ಬರ್ಗ, ಮಂಗಳೂರು, ಶಿವಮೊಗ್ಗ, ರಾಯಚೂರು ಮತ್ತು ಕೋಲಾರಗಳು ಡೈರಿಕೇಂದ್ರಗಳು. ಈ ಕೇಂದ್ರಗಳು ಹಾಲು ಸಂಗ್ರಹಿಸುವುದು, ಸಂಸ್ಕರಿಸುವುದು ಹಾಗೂ ಮಾರಾಟಮಾಡುವುದಕ್ಕೆ ಸೀಮಿತವಲ್ಲ. ಇತರ ಕ್ಷೀರೋತ್ಪನ್ನಗಳನ್ನೂ ತಯಾರಿಸುತ್ತವೆ. ಉದಾ: ಕ್ರೀಮ್, ಮೊಸರು, ಬೆಣ್ಣೆ, ತುಪ್ಪ, ಮಜ್ಜಿಗೆ, ಸುವಾಸಿತ ವಿಶೇಷ ಬಗೆಯ ಹಾಲು, ಐಸ್‌ಕ್ರೀಮ್, ಪೇಡ, ಮೈಸೂರು ಪಾಕ್, ಕೆನೆರಹಿತ ಹಾಗೂ ಕೆನೆಬರಿತ ಹಾಲಿನ ಪುಡಿ, ಖೋವಾ, ರಸಗುಲ್ಲ ಮತ್ತು ಬರ್ಫಿ.

**ಮೀನುಗಾರಿಕೆ:** ನೆಲದಲ್ಲಿ ಬೆಳೆಗಳಿಂದ ಪಡೆದುಕೊಳ್ಳುವಂತೆ ಜಲದಲ್ಲಿಯೂ ಆಹಾರ ಪಡೆಯಬಹುದು. ಅಂತಹ ಆಹಾರಗಳಲ್ಲಿ ಮೀನು ಮುಖ್ಯವಾದುದು. ಕರ್ನಾಟಕಕ್ಕೆ ನಿಸರ್ಗವು ನೀಡಿರುವ ಸಂಪನ್ಮೂಲಗಳಲ್ಲಿ ಮತ್ಸ್ಯ ಸಂಪನ್ಮೂಲ ಸೇರಿದೆ. ಕಡಲದಂಡೆಯಲ್ಲಿ ಬದುಕುವ ಜನರ ಮುಖ್ಯವೃತ್ತಿ ಮೀನುಗಾರಿಕೆ. ಇಲ್ಲಿ ಸಾಗರಿಕ ಮತ್ಸ್ಯೋದ್ಯಮ ಅಭಿವೃದ್ಧಿಗೊಂಡಿದೆ. ಪುರಾತನ ಕಾಲದಿಂದಲೂ ರೂಢಿಗೆ ಬಂದಿರುವಂತಹ ವೃತ್ತಿ. ಭೌಗೋಳಿಕ ಪರಿಸ್ಥಿತಿ ಪೂರಕವಾಗಿದ್ದರೂ ಇದೊಂದು ಸಣ್ಣ ಪ್ರಮಾಣದ ಹಾಗೂ ಋತುಕಾಲಿಕವಾದ ಉದ್ಯಮ.

ಕರ್ನಾಟಕ 320 ಕಿಮೀ ಉದ್ದದ ಕರಾವಳಿಯನ್ನು ಹೊಂದಿರುವುದರೊಂದಿಗೆ 27,000 ಚ.ಕಿಮೀ ವಿಸ್ತೀರ್ಣವುಳ್ಳ ಖಂಡಾವರಣ ಪ್ರದೇಶವನ್ನು ಹೊಂದಿದೆ. ಜೊತೆಗೆ 5.03 ಲಕ್ಷ ಹೆ. ಒಳನಾಡಿನ ಜಲರಾಶಿ ಮತ್ತು 8000 ಹೆ. ಹಿನ್ನೀರು ಕ್ಷೇತ್ರವುಂಟು. ಇದು ಸೀಗಡಿ ಮೀನು ಕೃಷಿಗೆ ಉತ್ಕೃಷ್ಟ. ರಾಜ್ಯದಲ್ಲಿ ಸು. 7.6 ಲಕ್ಷ ಮೀನುಗಾರರಿದ್ದಾರೆ. ಅವರಲ್ಲಿ 2 ಲಕ್ಷ ಜನರು ಕರಾವಳಿಯಲ್ಲಿ ಮತ್ತು 5.6 ಲಕ್ಷ ಒಳನಾಡಿನಲ್ಲಿದ್ದು ಮೀನುಗಾರಿಕೆಯಲ್ಲಿ ತೊಡಗಿರುವರು. ಕರ್ನಾಟಕದಲ್ಲಿ ಕಡಲ ಮತ್ತು ಒಳನಾಡಿನ ಎರಡೂ ರೀತಿಯ ಮೀನುಗಾರಿಕೆ ರೂಢಿಯಲ್ಲಿದೆ. ಸಮುದ್ರ ತೀರವನ್ನು ಹೊಂದಿಕೊಂಡಂತಿರುವ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಡಲ ಮೀನುಗಾರಿಕೆ ಮುಖ್ಯ. ಇವು ಸುಮಾರು 25000 ಚ.ಕಿಮೀ ಗಳಷ್ಟು ಖಂಡಾವರಣ ಪ್ರದೇಶವನ್ನಾವರಿಸಿದ್ದು 28 ಮೀನುಗಾರಿಕೆ ಕೇಂದ್ರಗಳು ಮತ್ತು 204 ಮೀನುಗಾರಿಕಾ ಹಳ್ಳಿಗಳಲ್ಲಿ ಸಾವಿರಾರು ಕುಟುಂಬಗಳು ಮೀನುಗಾರಿಕಾ ವೃತ್ತಿಯನ್ನಾಧರಿಸಿ ಬದುಕುತ್ತಿದ್ದಾರೆ. ಸಂಗ್ರಹಿಸುವ ಮೀನುಗಳೆಂದರೆ. ಸೀಗಡಿ, ಬಂಗೆಡೆ, ಸಾರ್ಡಿನ್, ತಾಟೆ, ತೊರಕೆ, ಗರಗಸಮೀನು, ಕೊಡ್ಡಾಯಿ, ಬಲ್ಲೆಧೋಡಿ, ಕೊದಾಡೆ, ಶೇಡೆ, ಕಡುವಾಯಿ, ತಿಡುಂಬ, ಸಾಂದಾಳ ಇತ್ಯಾದಿ. ಇವುಗಳಲ್ಲಿ ಮೊದಲ 3 ಪ್ರಭೇದಗಳು ಮುಖ್ಯವಾದವು. ಕಾರವಾರ, ಅಂಕೋಲ, ಕುಮಟ, ಹೊನ್ನಾವರ, ಭಟ್ಕಳ, ಮಜಲಿ, ಬಿಂಗಿ, ಬಿಂದಿಯ, ಗಂಗೊಳ್ಳಿ, ಮಲ್ಪೆ, ಕಾರವಾರ, ಮಂಗಳೂರು ಮತ್ತು ಉರಿಯಾವರ ಪ್ರಮುಖ ಕಡಲ ಮೀನುಗಾರಿಕಾ ಕೇಂದ್ರಗಳು.

ಒಳನಾಡಿನ ಮೀನುಗಾರಿಕೆ: 6015 ದೊಡ್ಡ ಕೆರೆಗಳು, 19,697 ಸಣ್ಣಕೆರೆಗಳು, ಕೆಲವು ದೇವಾಲಯ ಪುಷ್ಕರಣಿಗಳು, ಪ್ರಮುಖ ನದಿಗಳಾದ ಕಾವೇರಿ, ತುಂಗಭದ್ರಾ, ಕೃಷ್ಣಾ ಮತ್ತು ಅವುಗಳ ಉಪನದಿಗಳಲ್ಲಿ ಕಂಡುಬರುತ್ತದೆ. ಜೊತೆಗೆ ಸು. 4000 ಹೆ. ಪ್ರದೇಶವುಳ್ಳ ಸೌಳು ನೀರಿನ ಕೊಲ್ಲಿ ಮತ್ತು ಹಿನ್ನೀರುಗಳು ಸಹ ಒಳನಾಡಿನ ಮೀನುಗಾರಿಕೆಗೆ ಲಭ್ಯ. ಆದರೂ ಈ ವಿಧದ ಮೀನುಗಾರಿಕೆ ಹಂಚಿಕೆ ಕಡಿಮೆ. ತುಂಗಭದ್ರಾ ಜಲಾಶಯ, ಭದ್ರಾ ಜಲಾಶಯ, ವಾಣಿ ವಿಲಾಸ ಸಾಗರ, ಶಾಂತಿ ಸಾಗರ, ನುಗು ಕಬಿನಿ, ನೀರಸಾಗರ, ಹೆಸರುಘಟ್ಟ, ಕೃಷ್ಣರಾಜಸಾಗರ, ಮುನಿರಾಬಾದ್ ಮತ್ತು ರಕ್ಕಸ ಕೊಪ್ಪ ಜಲಾಶಯಗಳು ಮುಖ್ಯ ಮೀನುತಳಿ ಮತ್ತು ಮೀನುಪಾಲನಾ ಕೇಂದ್ರಗಳು. ಮೂಗುಮಲ್ಲ, ಬಿಳಿಮೀನು, ಬಾಳೆಮೀನು, ಗೆಂಡೆಮೀನು, ರೂಹು, ಮೃಗಾಲ್ ಗೆಂಡೆ, ಹುಲ್ಲು ಮೀನು, ಬೆಳ್ಳಿಮೀನು, ಟಿಲಾಪಿಯಾ ಮುಂತಾದವು ಒಳನಾಡಿನ ಮೀನುಗಾರಿಕೆಯ ಮೀನುಗಳು. ರಾಜ್ಯ 2003–04ನೇ ಸಾಲಿನಲ್ಲಿ ಸು. 2 ಲಕ್ಷ ಟನ್ನು (ಶೇ. 76) ಕಡಲ ಮೀನು ಮತ್ತು 62 ಸಾವಿರ ಟನ್ನು ಒಳನಾಡಿನ ಮೀನುಗಳನ್ನು ಉತ್ಪಾದಿಸಿತ್ತು. ಉತ್ತರ ಮತ್ತು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು ಮೀನು ಉತ್ಪಾದನೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಹೊಂದಿವೆ. ರಾಜ್ಯದಲ್ಲಿ 45 ಮೀನು ಶೈತ್ಯೀಕರಣ ಉಗ್ರಾಣಗಳು ಮತ್ತು 222 ಶೈತ್ಯೀಕೃತ ಮೀನುಸಂಗ್ರಹಣ ಘಟಕಗಳಿವೆ. ಕರ್ನಾಟಕದಲ್ಲಿ ಮೀನು ಬಳಸುವವರ ಸಂಖ್ಯೆ ಕಡಿಮೆ. ಅಂದರೆ ಶೇ. 48 ಜನರು ಮಾತ್ರ ಮೀನು ಬಳಸುವರು. ಕರಾವಳಿ ಜಿಲ್ಲೆಗಳು ಹಾಗು ಅವುಗಳಿಗೆ ಸಮೀಪದ ಇತರ ಭಾಗಗಳಲ್ಲಿ ಮೀನಿನ ಬಳಕೆ ಹೆಚ್ಚು.

ಕರ್ನಾಟಕದಿಂದ ಕೆಲವು ಪ್ರಭೇದದ ಮೀನುಗಳು ಹಾಗೂ ಮತ್ಸ್ಯ ಉತ್ಪನ್ನಗಳು ರಫ್ತಾಗುತ್ತವೆ. ರಾಜ್ಯದ ಸೀಗಡಿ ಮೀನುಗಳಿಗೆ ವಿದೇಶಗಳಲ್ಲಿ ಅಪಾರವಾದ ಬೇಡಿಕೆಯಿದೆ. ರಫ್ತಾಗುವ ಮೀನಿನ ಪ್ರಮಾಣದಲ್ಲಿ ಶೇ. 80 ಸೀಗಡಿ ಮೀನಿನಿಂದ ಕೂಡಿರುತ್ತದೆ.

**ನೀರಾವರಿ, ವಿದ್ಯುದುತ್ಪಾದನೆ :** ಒಂದು ನದಿಯ ನೀರಿನ ಯಶಸ್ವೀ ಬಳಕೆಗೆ ಮುಖ್ಯವಾದ ಅಂಶಗಳು ನಾಲ್ಕು : ಮೇಲ್ಮೈ ಲಕ್ಷಣ, ವಾಯುಗುಣ, ಭೂರಚನೆ ಮತ್ತು ಸನ್ನಿವೇಶ. ಈ ನಾಲ್ಕು ಅಂಶಗಳೂ ಕರ್ನಾಟಕದಲ್ಲಿ ಅನುಕೂಲಕರವಾಗಿವೆ. ಅಂದಾಜೊಂದರ ಪ್ರಕಾರ ಕರ್ನಾಟಕದಲ್ಲಿ ಸು. 188.1 ಸಾವಿರಕೋಟಿ ಘನ ಮೀಟರ್‌ನಷ್ಟು ಸಂಭವನೀಯ ಜಲಸಂಪತ್ತಿದೆ ಎಂದು ತಿಳಿದಿದೆ. ಇದರಲ್ಲಿ ಮೇಲ್ಮೈ ಜಲ ಮತ್ತು ಅಂತರ್ಜಲಗಳು ಸೇರಿವೆ. ರಾಜ್ಯದ ನದಿಗಳಲ್ಲಿ ಸು. 1 ಕೋಟಿ ಹೆ.ಮೀನಷ್ಟು ನೀರು ಹರಿಯುತ್ತದೆಂದು ತಜ್ಞರ ಅಂದಾಜು. ಇದರಲ್ಲಿ 45–50 ಲಕ್ಷ ಹೆ.ಮೀ ಮೇಲ್ಮೈ

ಶಿವಸಮುದ್ರ ಜಲಪಾತ

ನೀರನ್ನು ಬಳಕೆ ಮಾಡಿಕೊಳ್ಳಬಹುದು. ಹಾಗೂ 42 ಲಕ್ಷ ಹೆ. ಭೂಮಿಗೆ ನೀರಾವರಿ ಸೌಲಭ್ಯ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಮೀಕ್ಷೆಯಂತೆ ಸು. 11,412.2 ದಶಲಕ್ಷ ಘನ ಮೀಟರ್‌ನಷ್ಟು ಅಂತರ್ಜಲ ಸಂಪತ್ತು ರಾಜ್ಯದಲ್ಲಿ ಲಭ್ಯ. ಇದರಲ್ಲಿ 8,812.2 ದಶಲಕ್ಷ

ಘನ ಮೀನಷ್ಟು ನೀರಾವರಿಗೆ ಬಳಸುವ ಹಾಗೂ ಸು. 10 ಲಕ್ಷ ಹೆ. ಭೂಮಿಗೆ ನೀರಾವರಿ ಸೌಲಭ್ಯ ಸಾಧ್ಯ. ಇತ್ತೀಚೆಗೆ ಕುಡಿಯುವ ನೀರಿಗಾಗಿ ಮತ್ತು ನೀರಾವರಿಗಾಗಿ ಅಂತರ್ಜಲವನ್ನು ಹೆಚ್ಚೆಚ್ಚು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮೇಲ್ಮೈ ಜಲಸಂಪತ್ತು ನೀಡುವ ನದಿಗಳಲ್ಲಿ ಕೃಷ್ಣ, ಕಾವೇರಿ ಮತ್ತು ಅವುಗಳ ಉಪನದಿಗಳು ಮಹತ್ವವುಳ್ಳವು. ಇವುಗಳಲ್ಲಿ ಸು. 3400 ಟಿ.ಎಂ.ಸಿ ನೀರು ಹರಿಯುತ್ತದೆ. ನೀರಾವರಿಗಲ್ಲದೆ ಈ ನದಿ ಜಲಗಳು ಜಲವಿದ್ಯುಚ್ಛಕ್ತಿ ಉತ್ಪಾದನೆಗೂ ಬಹು ಉಪಯುಕ್ತ. ಪಶ್ಚಿಮಕ್ಕೆ ಹರಿಯುವ ಶರಾವತಿ, ಕಾಳಿ, ವರಾಹಿ, ಬೇಡ್ತಿ, ಅಘನಾಶಿನಿ ಮತ್ತು ಬರಪೊಳೆ ನದಿಗಳು ನೀರಾವರಿಗಿಂತ ವಿದ್ಯುಚ್ಛಕ್ತಿ ಉತ್ಪಾದನೆಗೆ ಹೆಚ್ಚು ಉಪಯುಕ್ತ. ನೀರಾವರಿಯ ಜೊತೆಗೆ ವಿದ್ಯುದುತ್ಪಾದನೆಗೂ ಬಳಸಿಕೊಳ್ಳಲಾಗಿರುವ ಅಥವಾ ಬಳಸಿಕೊಳ್ಳಬಹುದಾದ ನದಿಗಳೆಂದರೆ ಕಾವೇರಿ, ಶಿಂಷಾ, ಭದ್ರಾ, ತುಂಗಭದ್ರಾ, ಕಪಿಲ, ಘಟಪ್ರಭಾ, ಕೃಷ್ಣ (ಮೇಲ್ದಂಡೆ) ಇವು ಮುಖ್ಯ. ಕರ್ನಾಟಕದ ವಿದ್ಯುತ್ ವಿಭವ (ಪವರ್ ಪೊಟೆನ್ಷಿಯಲ್) 60 ಲಕ್ಷ ಕಿವ್ಯಾ ಗಳಿಗಿಂತ ಹೆಚ್ಚು .

ರಾಜ್ಯದ ನದಿ ನೀರನ್ನು ಬೇಸಾಯಕ್ಕಾಗಿ ಬಳಸಿಕೊಳ್ಳುವ ಪ್ರಯತ್ನ ಬಹಳ ಹಿಂದಿನ ಕಾಲದಿಂದಲೂ ನಡೆದುಬಂದಿದೆ. ಕರ್ನಾಟಕದ ಅನೇಕ ನದಿಗಳಿಗೆ ಅಡ್ಡಲಾಗಿ ಕಟ್ಟಿದ ಹಳೆಯ ಅಣೆಕಟ್ಟುಗಳೂ ಕಾಲುವೆಗಳೂ ಈಗಲೂ ನೀರಾವರಿಗೆ ಉಪಯುಕ್ತ. ರಾಜ್ಯದಲ್ಲಿರುವ 37,337 ಚಿಕ್ಕದೊಡ್ಡ ಕೆರೆಗಳ ಕೆಳಗಿರುವ 3,97,530 ಹೆ. ಗಳು ಸೇರಿ ನಾನಾ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದಿದ್ದ ಜಮೀನು 17 ಲಕ್ಷ ಎಕರೆ. ವೇದಾವತಿ ನದಿಗೆ ವಾಣಿವಿಲಾಸ ಸಾಗರವನ್ನು ಸುಮಾರು ಒಂದು ಶತಮಾನದ ಹಿಂದೆ (1907) ನಿರ್ಮಿಸಲಾಯಿತು. ಇದರಿಂದ ನೀರಾವರಿಗೆ ಒದಗಿ ಬಂದಿರುವ ವಿಸ್ತೀರ್ಣ 10 ಸಾವಿರ ಹೆ. ಮೈಸೂರಿನ ಬಳಿಯ ಕೃಷ್ಣರಾಜಸಾಗರದಿಂದ 1,09,375 ಹೆ. ಗಳಿಗೆ ನೀರು ಒದಗುವುದಲ್ಲದೆ ಶಿಂಷಾ ಮತ್ತು ಶಿವಸಮುದ್ರ ಜಲವಿದ್ಯುದ್ಯೋಜನೆಗಳಿಗೆ ನಿರಂತರ ಜಲಧಾರೆ ಏರ್ಪಟ್ಟಿದೆ. ಕೃಷ್ಣರಾಜಸಾಗರ ಕಟ್ಟೆಯ ಕೆಲಸ 1910ರಲ್ಲಿ ಪ್ರಾರಂಭವಾಗಿ 1931ರಲ್ಲಿ ಮುಗಿಯಿತು.




ಕಾವೇರಿ ನೀರಿನ ಬಳಕೆಯ ಬಗ್ಗೆ ಆಗಿನ ಮದರಾಸು ಸರ್ಕಾರ ಅಡ್ಡಿ ಮಾಡದಿದ್ದರೆ ಇದು ಇನ್ನೂ ಬೇಗನೆ ಮುಗಿಯುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಕಾಲದಲ್ಲಿ ಹಳೆಯ ಮೈಸೂರು ಸಂಸ್ಥಾನ ಸರ್ಕಾರದ ಆಸಕ್ತಿಯಿಂದಾಗಿ ಆ ಪ್ರದೇಶದಲ್ಲಿ ಅನೇಕ ಸಣ್ಣ ನೀರಾವರಿ ಕಾಮಗಾರಿಗಳು ನಡೆದುವು. ತುಂಗಭದ್ರೆಯ ನೀರನ್ನು ಅಡ್ಡಹಾಯಿಸಿಕೊಳ್ಳಲು ವಿಜಯನಗರದ ಕಾಲದಲ್ಲಿ ನಡೆದ ಕೆಲಸ ಗಮನಾರ್ಹವಾದದ್ದು. ರಾಯರ ಕಾಲುವೆಗಳೆಂದು ಅವು ಈಗಲೂ ಪ್ರಸಿದ್ಧವಾಗಿವೆ. ಹಂಪಿ, ಕಮಲಾಪುರ, ವಲ್ಲಭಪುರ ಮುಂತಾದೆಡೆಗಳಲ್ಲಿ ಅವುಗಳ ಗುರುತುಗಳಿವೆ. ಈಸ್ಟ್ ಇಂಡಿಯ ಕಂಪನಿಯವರು ಸುಂಕೇಪಾಲದ ಬಳಿ ಒಂದು ಅಣೆಕಟ್ಟನ್ನು ಕಟ್ಟಿದ್ದರು. ಕೃಷ್ಣರಾಜಸಾಗರ ನಿರ್ಮಾಣದಿಂದ ಜಲಾಂತರ್ಗತವಾದ ಕೆಲವು ನೀರಾವರಿ ವ್ಯವಸ್ಥೆಗಳು ಟಿಪ್ಪುವಿನ ಕಾಲದವು. ಹೀಗೆ ಕರ್ನಾಟಕದ ಜನ ಅನೇಕ ಶತಮಾನಗಳಿಂದ ನೀರಾವರಿಯ ಕ್ಷೇತ್ರದಲ್ಲಿ ತಕ್ಕಮಟ್ಟಿನ ಕೆಲಸ ಮಾಡಿದ್ದಾರೆ.

ಸ್ವತಂತ್ರ ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಆರಂಭವಾದ ಮೇಲೆ ಅನೇಕ ನೀರಾವರಿ ಕಾರ್ಯಕ್ರಮಗಳು ಜಾರಿಗೆ ಬಂದುವು. ಭದ್ರಾಜಲಾಶಯ, ಬೆಳಗಾಂವಿಯ ಘಟಪ್ರಭಾ ಯೋಜನೆ ಮತ್ತು ಶಿವಮೊಗ್ಗದ ತುಂಗಾ ಅಣೆಕಟ್ಟೆ ಯೋಜನೆ ಮತ್ತು ಮೈಸೂರು ಜಿಲ್ಲೆಯ ನುಗು ಯೋಜನೆ ಇವುಗಳಲ್ಲಿ ಕೆಲವು. ತುಂಗ ಭದ್ರಾ ಯೋಜನೆಯ ಪ್ರಥಮ ಹಂತದ ಕಾರ್ಯವೂ ಆರಂಭವಾಗಿತ್ತು. ಇವಲ್ಲದೆ ಎಂಟು ಮಧ್ಯಮವರ್ಗದ ನೀರಾವರಿ ಯೋಜನೆಗಳೂ ಹಳೆಯ ಕೆರೆಗಳ ದುರಸ್ತಿಯೂ ಹೊಸ ಕೆರೆಗಳ ನಿರ್ಮಾಣಕಾರ್ಯವೂ ನಡೆದುವು. ಇವುಗಳಿಂದ ಲಾಭ ಪಡೆದ ಜಮೀನಿನ ವಿಸ್ತೀರ್ಣ 94,810 ಹೆ. ಇದರಲ್ಲಿ ಹೊಸದಾಗಿ ನೀರಾವರಿ ಸೌಲಭ್ಯ ಪಡೆದ ಜಮೀನು 6160 ಹೆ.

ಕಾವೇರಿ ಕಣಿವೆಯಲ್ಲಿ ಅನೇಕ ಹೊಸ ಕಾರ್ಯಕ್ರಮಗಳು ಜಾರಿಗೆ ಬಂದಿವೆ, ಅಥವಾ ಬರಲಿವೆ. ಹೇಮಾವತಿ, ಕಂಬದಕಡ, ಕಪಿಲ, ಹಾರಂಗಿ, ಸುವರ್ಣಾವತಿ, ಚಿಕ್ಕಹೊಳೆ, ಲಕ್ಷ್ಮಣತೀರ್ಥ ಮುಂತಾದವುಗಳ ನೀರನ್ನು ಬಳಸುವ ಯೋಜನೆಗಳು ಕಾರ್ಯಗತವಾಗಿವೆ. ಇವುಗಳ ಪೈಕಿ ಕಪಿಲ ಯೋಜನೆ ಮುಖ್ಯವಾದದ್ದು. ವರ್ಷಕ್ಕೆ 150–300 ಸೆಂಮೀ ಮಳೆ ಬೀಳುವ ಪ್ರದೇಶವಾದ ವೈನಾಡಿನ ಅನೇಕ ಹೊಳೆಗಳಿಂದ ಕೂಡಿ 230 ಕಿಮೀ ಹರಿದು ತಿರುಮಕೂಡಲು ನರಸೀಪುರದ ಬಳಿ ಕಾವೇರಿನದಿಯನ್ನು ಸೇರುವ ಈ ನದಿಗೆ ಹುಲ್ಲಹಳ್ಳಿಯ ಬಳಿ ಹಿಂದೆಯೇ ಅಣೆಕಟ್ಟು ಕಟ್ಟಿ 4,925 ಹೆ. ನೀರೊದಗಿಸಿಕೊಳ್ಳಲಾಗಿತ್ತು. ಈ ನದಿಯ ನೀರನ್ನು ಇನ್ನೂ ಹೆಚ್ಚಾಗಿ ಬಳಸಿಕೊಳ್ಳುವ ಯೋಚನೆ 1916 ರಿಂದಲೂ ಮೈಸೂರು ಸರ್ಕಾರಕ್ಕಿತ್ತು. ಮೈಸೂರು ನಗರಕ್ಕೆ 61 ಕಿಮೀ ದೂರದಲ್ಲಿ ನಿರ್ಮಿಸಲಾಗುವ ಹೊಸ ಜಲಾಶಯದ ಬಳಿ ನದಿಯ ಪಾತ್ರ ಸಮುದ್ರ

ತುಂಗಭದ್ರಾ ಕಟ್ಟೆ

ಮಟ್ಟಕ್ಕಿಂತ 672 ಮೀ ಎತ್ತರದಲ್ಲಿದೆ. ಈ ಜಲಾಶಯದ ಶೇಖರಣಾ ಸಾಮರ್ಥ್ಯ 19,200 ಮೆಟ್ರಿಕ್ ಘನ ಅಡಿ ಕಟ್ಟೆಯ ಎತ್ತರ ಅಡಿಪಾಯದಿಂದ 57.3 ಮೀ (ನದೀಪಾತ್ರದಿಂದ

26.8 ಮೀ); ಕನಿಷ್ಠ ಅಗಲ ಅಡಿಪಾಯದಲ್ಲಿ 49 ಮೀ ಮೇಲ್ತುದಿಯಲ್ಲಿ 7.3 ಮೀ ಎಡಬಲದಂಡೆಗಳ ನಾಲೆಗಳಿಂದ 19,450 ಕ್ಯುಸೆಕ್ಸ್ ನೀರು ಬಿಡಲಾಗುತ್ತದೆ. ಎಡದಂಡೆ ನಾಲೆಯಿಂದ 2298 ಹೆ. ಎಕರೆ ಜಮೀನೂ ಬಲದಂಡೆ ಕಾಲುವೆಯಿಂದ 9464 ಹೆ. ಜಮೀನೂ ತರಿ ಸಾಗುವಳಿಗೆ ಒದಗುತ್ತವೆ. ಒಟ್ಟು 30,010 ಹೆ. ಗಳಿಗೆ ಪ್ರಯೋಜನವಾಗುತ್ತದೆ. ಅನುಕೂಲ ಪಡೆಯುವ ತಾಲ್ಲೂಕುಗಳು ಮೈಸೂರು ಜಿಲ್ಲೆಯ ನಂಜನಗೂಡು, ತಿರುಮಕೂಡಲು ನರಸೀಪುರ, ಹೆಗ್ಗಡದೇವನಕೋಟೆ ಮತ್ತು ಚಾಮರಾಜನಗರ.

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ನೈರುತ್ಯದಲ್ಲಿ ನಂಜನಗೂಡಿಗೆ 24 ಕಿಮೀ ದೂರದಲ್ಲಿರುವ ನುಗು ಜಲಾಶಯ ಇನ್ನೊಂದು ಯೋಜನೆ. ಇದರ ಜಲಾನಯನ ಪ್ರದೇಶ ವಿಸ್ತೀರ್ಣ 984 ಚ.ಕಿಮೀ. ಇದರಿಂದ 73 ಸಾವಿರ ಎಕರೆಗಳಿಗೆ ನೀರು ಪೂರೈಕೆಯಾಗುತ್ತದೆ. ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ ಚಿಕ್ಕಹೊಳೆ ಜಲಾಶಯ ಯೋಜನೆ ಮಧ್ಯಮ ದರ್ಜೆಯದು. ಈ ಹೊಳೆ ಸುವರ್ಣಾವತಿಯ ಉಪನದಿ. ಇದರ ಇಳಿಮೇಡು ಪ್ರದೇಶ 394 ಚಕಿಮೀ. 2395 ಹೆ. ಜಮೀನಿಗೆ ಇದರಿಂದ ಪ್ರಯೋಜನ. ಕಪಿಲಾದ ಉಪನದಿಯಾದ ಹೆಬ್ಬಹಳ್ಳಕ್ಕೆ ಹೆಗ್ಗಡದೇವನಕೋಟೆಯ ಬಳಿ ಕಟ್ಟುವ ಕಟ್ಟೆಯ ಇಳಿಮೇಡು 180 ಚಕಿಮೀ. ಕಾವೇರಿ ಕಣಿವೆಯ ಈ ನಾನಾ ಯೋಜನೆಗಳೆಲ್ಲ ಫಲಪ್ರದವಾದಾಗ ಒಟ್ಟು 44 ಲಕ್ಷ ಹೆ. ಗಳಿಗೆ ನೀರಾವರಿ ಸೌಲಭ್ಯ ಒದಗುವುದೆಂಬುದಾಗಿ ನಿರೀಕ್ಷಿಸಲಾಗಿದೆ. ಕಾವೇರಿ ನದಿನೀರಿನ ಬಳಕೆಯ ವಿಚಾರವಾಗಿ 1892ರಲ್ಲೂ 1924ರಲ್ಲೂ ಮೈಸೂರು ಮದ್ರಾಸು ಸರ್ಕಾರಗಳ ನಡುವೆ ಆದ ಒಪ್ಪಂದಗಳ ಪುನರ್ವಿಮರ್ಶೆ ನಡೆಯುತ್ತದೆ (1971).

ತುಂಗಾ, ಭದ್ರಾ, ತುಂಗಭದ್ರ ಯೋಜನೆಗಳಿಂದ ಈಗಾಗಲೇ 3.8 ಲಕ್ಷ ಹೆ. ಗಳಿಗೂ ಹೆಚ್ಚು ನೆಲಕ್ಕೆ ನೀರಾವರಿ ಸೌಲಭ್ಯ ಒದಗಿದೆ. ಇನ್ನು 0.58 ಲಕ್ಷ ಹೆ. ಗಳಿಗೆ ಈ ಸೌಲಭ್ಯ ವಿಸ್ತರಿಸಬಹುದು. ಹೊಸಪೇಟೆಯ ಬಳಿ ತುಂಗಭದ್ರ ನದಿಗೆ ಅಡ್ಡಲಾಗಿ ಕಟ್ಟೆಕಟ್ಟುವ ಕೆಲಸ ಆರಂಭವಾದದ್ದು 1945ರಲ್ಲಿ. ಇದೊಂದು ವಿವಿಧೋದ್ದೇಶ ಯೋಜನೆ. ಕರ್ನಾಟಕ ರಾಜ್ಯದಲ್ಲಿ 3.92 ಹೆ. ಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಇದು ಈ ರಾಜ್ಯದ ಅತ್ಯಂತ ದೊಡ್ಡ ನೀರಾವರಿ ಯೋಜನೆ. ಜೊತೆಗೆ ಇದು 1,72,500 ಕಿವ್ಯಾ ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ. ಕಟ್ಟೆಯ ಎತ್ತರ 49.4 ಮೀ. ಅಗಲ 28.5 ಮೀ ಜಲಾಶಯದ ವಿಸ್ತೀರ್ಣ 482 ಚ.ಕಿಮೀ. ಇದರ ಮುಖ್ಯ ನಾಲೆಗಳಲ್ಲಿ ಎರಡು ಜಲಾಶಯದ ಬಲಗಡೆಯಿಂದಲೂ (ಕೆಳಮಟ್ಟ ಮತ್ತು ಮೇಲ್ಮಟ್ಟದ ನಾಲೆಗಳು) ಮತ್ತೊಂದು ಎಡಗಡೆಯಿಂದಲೂ ಹರಿಯುತ್ತವೆ. ಇದಲ್ಲದೆ ಸಣ್ಣ ಕಾಲುವೆಯೊಂದು ಇದೆ. ಬತ್ತ, ಕಬ್ಬು, ಹಣ್ಣು, ಹೊಗೆಸೊಪ್ಪುಗಳ ಬೆಳೆ ತೆಗೆಯಲು ನೀರು ಒದಗಿಸುವುದಲ್ಲದೆ, ಖುಷ್ಕಿ ಬೆಳೆಗೂ ಸೌಲಭ್ಯ ನೀಡುವುದು ಈ ಯೋಜನೆಯ ವೈಶಿಷ್ಟ್ಯ. 17,330 ಹೆ. ನೆಲದಲ್ಲಿ ಇಂಥ ಲಘು ನೀರಾವರಿ ಬೇಸಾಯಕ್ಕೆ ಇದು ನೆರವು ನೀಡುತ್ತದೆ. ಇದರಲ್ಲಿ ಅರ್ಧ ಭಾಗದಲ್ಲಿ ಹತ್ತಿ ಬೆಳೆಯಲಾಗುತ್ತದೆ. ಮೀನುಗಾರಿಕೆ, ತೋಟಗಾರಿಕೆಗಳಿಗೂ ಈ ಯೋಜನೆಯಿಂದ ಪ್ರೋತ್ಸಾಹ ದೊರಕಿದೆ.

ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿರುವ ಭದ್ರಾ ಜಲಾಶಯ ಯೋಜನೆಯಿಂದ ಈ ಎರಡು ಜಿಲ್ಲೆಗಳು ಹಾಗೂ ಚಿತ್ರದುರ್ಗ ಮತ್ತು ಬಳ್ಳಾರಿಗಳಿಗೂ ನೀರಾವರಿ ಸೌಕರ್ಯ ಒದಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಲಕ್ಕವಳ್ಳಿಯ ಬಳಿ ಕಟ್ಟಲಾದ ಕಟ್ಟೆಗೆ ಎರಡು ಕಡೆಯೂ ನಾಲೆಗಳುಂಟು. ಇದರಿಂದ 89,020 ಹೆ. ಗಳಿಗೆ ನೀರಾವರಿ ಒದಗುತ್ತದೆ. ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ತು 25,000 ಕಿವ್ಯಾ ಈ ಕಟ್ಟೆಯ ಎತ್ತರ 59 ಮೀ. ಉದ್ದ 440 ಮೀ.

ಶಿವಮೊಗ್ಗದಿಂದ 10.6 ಕಿಮೀ. ದೂರದಲ್ಲಿ ಸಕ್ರೆಬೈಲಿನ ಹತ್ತಿರ ತುಂಗಾ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟೆಯ ಎರಡೂ ಬದಿಗಳ ನಾಲೆಗಳಿಂದ 7844 ಹೆ. ಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ. ಕಡಿಮೆ ಮಳೆ ಪಡೆಯುವ ಹೊನ್ನಾಳಿ ತಾಲ್ಲೂಕಿನ ರೈತರಿಗೆ ಈ ಯೋಜನೆಯಿಂದ ಹೆಚ್ಚು ಫಲ. ಅಣೆಕಟ್ಟೆಯ ಎತ್ತರ 12.2 ಮೀ. ಉದ್ದ 365.8 ಮೀ.

ನೀರಾವರಿಗೆ ಒಳಪಡಿಸಬಹುದಾದ ಅತಿ ವಿಶಾಲಪ್ರದೇಶ ಇರುವುದು ರಾಜ್ಯದ ಕೃಷ್ಣಾನದೀ ಕಣಿವೆಯಲ್ಲಿ. ನದಿಯ ಆರು ಉಪನದಿಗಳ ಪೈಕಿ ಘಟಪ್ರಭಾ ಮತ್ತು ಮಲಪ್ರಭಾ ನದಿಗಳ ನೀರನ್ನು ಬಳಸುವ ಯೋಜನೆ ಕಾರ್ಯರೂಪಕ್ಕೆ ಬಂದಿದೆ. ಮಲಪ್ರಭಾ ನದಿಯ ಮೇಲಣ ಕಟ್ಟೆಯ ಎತ್ತರ 55 ಮೀ ಮತ್ತು ಉದ್ದ 4575 ಮೀ ಇದರ ಬಲಭಾಗದ ನಾಲೆಯಿಂದ ಸೌಲಭ್ಯ ಪಡೆಯುವ ಪ್ರದೇಶ 1,77,780 ಹೆ. ಬೆಳಗಾಂವಿ, ಧಾರವಾಡ, ಬಿಜಾಪುರ ಜಿಲ್ಲೆಗಳ ಆಹಾರ ಪೂರೈಕೆ ಇದರಿಂದ ಸಾಧ್ಯವಾಗುತ್ತದೆ. ಘಟಪ್ರಭಾ ನದಿಯ ಧೂಪದಾಳ ಕಟ್ಟೆಯಿಂದ 19 ಕಿಮೀ ಮೇಲೆ ಹಿಡ್ಕಲ್‌ನಲ್ಲಿ ಕಟ್ಟಲಾಗುವ ಕಟ್ಟೆಯ ಎಡಬಲ ನಾಲೆಗಳಿಂದ ಬೆಳಗಾಂವಿ ಜಿಲ್ಲೆಯ ಅಥಣಿ, ರಾಯಬಾಗ, ಗೋಕಾಕ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳಲ್ಲೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ, ಮುಧೋಳ, ಬೀಳಗಿ ಬಾಗಲಕೋಟೆ, ಬಾದಾಮಿ ಮತ್ತು ಹುನಗುಂದ ತಾಲ್ಲೂಕುಗಳಲ್ಲೂ 2.17 ಲಕ್ಷ ಹೆ. ಗಳ ಸಾಗುವಳಿಗೆ ಸೌಲಭ್ಯ ಒದಗುತ್ತದೆ. ಇದು ರಾಜ್ಯದ ಮುಖ್ಯ ನೀರಾವರಿ ಯೋಜನೆಗಳಲ್ಲೊಂದು.

ಕೃಷ್ಣಾ ಕಣಿವೆ ಪ್ರದೇಶದ ಬಹುಭಾಗ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿದೆ. ಹಳೆಯ ಮುಂಬಯಿ ಮತ್ತು ಹೈದರಾಬಾದ್ ಕರ್ನಾಟಕದ ಅಭಾವ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶದಿಂದ ಕೈಗೊಳ್ಳಲಾದ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನ ಆಲಮಟ್ಟಿ ಜಲಾಶಯ ಮತ್ತು ಗುಲ್ಬರ್ಗ ಶೋರಾಪುರ ತಾಲ್ಲೂಕಿನ ನಾರಾಯಣಪುರ ಜಲಾಶಯಗಳಿವೆ. ಆಲಮಟ್ಟಿ ಕಟ್ಟೆಯ ಎಡಭಾಗದ ನಾಲೆ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿಯ 2.0 ಲಕ್ಷ ಹೆ.ಗಳಿಗೂ ನಾರಾಯಣಪುರದ ಕಟ್ಟೆಯ ಎಡ ಮತ್ತು ಬಲದಂಡೆ ನಾಲೆಗಳು ಬಿಜಾಪುರ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ 5.6 ಲಕ್ಷ ಹೆ. ಗಳಿಗೂ ನೀರಾವರಿ ಸೌಲಭ್ಯ ಕಲ್ಪಿಸುತ್ತವೆ. ಇಡೀ ಯೋಜನೆಯಿಂದ ಸು. 4.37 ಲಕ್ಷ ಹೆ. ನೆಲಕ್ಕೆ ಪ್ರಯೋಜನವಾಗುತ್ತದೆ.

ಇವಲ್ಲದೆ ಮಧ್ಯಮ ವರ್ಗದ ನೀರಾವರಿ ಕಾರ್ಯಗಳೂ ಇಲ್ಲಿ ನಡೆದಿವೆ. ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂವಿ ಜಿಲ್ಲೆಗಳ ರಾಮನಹಳ್ಳಿ ಅರೆಶಂಕರ ಮತ್ತು ಕಲಾಸಕೋಪ್ ಕೆರೆಗಳು ಅನುಕ್ರಮವಾಗಿ 1751, 4764 ಮತ್ತು 1043 ಹೆ. ಗಳಿಗೆ ಅನುಕೂಲ, ಬೆಳಗಾಂವಿ ಜಿಲ್ಲೆಯ ಕೊಳಚಿ ಕೋಡಿ ಕಟ್ಟೆಯಿಂದ ನೀರಾವರಿ ಒದಗುವುದು 1149 ಹೆ. ಗಳಿಗೆ, ಬಿಜಾಪುರ ಜಿಲ್ಲೆಯ ಚಿತವಾಡಿ ಕೆರೆಯಿಂದ 803 ಹೆ.ಗಳಿಗೆ ಈ ಸೌಲಭ್ಯ ದೊರಕುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಯಮಗಳ್ಳಿ ಬಳಿ ಧರ್ಮಾನದಿಗೆ ಕಟ್ಟಲಾಗಿರುವ ಮಣ್ಣಿನ ಕಟ್ಟೆಯಿಂದ 10,000 ಎಕರೆಗಳಿಗೆ ನೀರಿನ ಸೌಕರ್ಯ ದೊರಕುತ್ತದೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಮಂಗಳಗ್ರಾಮದ ಬಳಿ ನಾಗಿನ ನದಿಗೆ ಅಡ್ಡಲಾಗಿ ಕಟ್ಟಿದ ಮಣ್ಣಿನ ಕಟ್ಟೆಯ ಅಚ್ಚುಕಟ್ಟಿನಲ್ಲಿ 13,500 ಹೆ. ನೆಲ ನೀರಾವರಿಗೆ ಬರುತ್ತದೆ. ಇದರ ಪೈಕಿ 596 ಹೆ. ಗಳಿಗೆ ಎರಡು ಬೆಳೆಗಳ ಸೌಲಭ್ಯ ಲಭಿಸುವ ನಿರೀಕ್ಷೆಯುಂಟು.

ಕರ್ನಾಟಕ ರಾಜ್ಯದ ವಿಸ್ತೀರ್ಣದಲ್ಲಿ 128 ಲಕ್ಷ ಹೆ. ವ್ಯವಸಾಯಯೋಗ್ಯ ಪ್ರದೇಶ. ಪಂಚವಾರ್ಷಿಕ ಯೋಜನೆಗಳ ಆರಂಭಕ್ಕೆ ಮೊದಲು ನೀರಾವರಿಗೆ ಒಳಪಟ್ಟಿದ್ದ ನೆಲದ ಪ್ರಮಾಣ ಶೇ. 4.9.

**ಜಲವಿದ್ಯುಚ್ಛಕ್ತಿ :** ಕರ್ನಾಟಕ ರಾಜ್ಯದಲ್ಲಿ ಜಲವಿದ್ಯುತ್ ಅಭಿವೃದ್ಧಿ 1902ಕ್ಕೂ ಹಿಂದೆಯೇ ಆರಂಭವಾಯಿತು. ಕಾವೇರಿ ನದಿಗೆ ಶಿವಸಮುದ್ರದ ಬಳಿ 4,300 ಕಿವ್ಯಾ ಸ್ಥಾಪಿತ ಸಾಮರ್ಥ್ಯದ ಉತ್ಪಾದನಾಕೇಂದ್ರ ನಿರ್ಮಾಣವಾದದ್ದು ಆಗ. ಇದು ಭಾರತದ ಪ್ರಥಮ ದೊಡ್ಡ ಜಲವಿದ್ಯುದ್ಯೋಜನೆ. ಶಿವಸಮುದ್ರದಿಂದ ಕೋಲಾರ ಚಿನ್ನದ ಗಣಿಗಳಿಗೆ ಹಾಕಲಾದ ವಿದ್ಯುತ್ ಪ್ರೇಷಣ (ಪ್ರಸರಣ) ವ್ಯವಸ್ಥೆ ಇಡೀ ಪ್ರಪಂಚದಲ್ಲೇ ಆಗ ಅತ್ಯಂತ ಉದ್ದದ್ದಾಗಿತ್ತು. ಆ ಕೇಂದ್ರದ ವಿದ್ಯುದುತ್ಪಾದನಾ ಸಾಮರ್ಥ್ಯವನ್ನು ಮುಂದೆ 42,000 ಕಿವ್ಯಾ ಗಳಿಗೆ ಹೆಚ್ಚಿಸಲಾಯಿತು. ಶಿಂಷಾ ನದೀವಿದ್ಯುತ್ಕೇಂದ್ರ (17,200 ಕಿವ್ಯಾ) ನಿರ್ಮಾಣವಾದದ್ದು 1940ರಲ್ಲಿ.

ಶರಾವತಿ ವಿದ್ಯುದ್ಯೋಜನೆಯನ್ನು ರೂಪಿಸಿದ್ದು 1938ರಲ್ಲಿ. ಮಹಾತ್ಮಗಾಂಧಿ ಜಲವಿದ್ಯುತ್ಕೇಂದ್ರವನ್ನು ಆ ನದಿಯ ವಿದ್ಯುದ್ವಿಭವದ ಶೇ.10 ರಷ್ಟನ್ನು ಉತ್ಪಾದಿಸಲು ಯೋಜಿಸಲಾಯಿತು (1948). ನದಿಯ ಉಳಿದ ವಿಭವವನ್ನೂ ಬಳಸಿಕೊಳ್ಳಲು ಶರಾವತಿ ಕಣಿವೆ ಯೋಜನೆಯನ್ನು ಆರಂಭಿಸಲಾಯಿತು (1959). ಇದರ ಉತ್ಪಾದನಾ ಸಾಮರ್ಥ್ಯ 8,91,000 ಕಿವ್ಯಾ. 1965 ರಲ್ಲಿ ಈ ಯೋಜನೆಯ ಮೊದಲನೆಯ ಹಂತದ ಉತ್ಪಾದನೆ ಆರಂಭವಾದದ್ದು. ಭದ್ರಾ ಮತ್ತು ತುಂಗಭದ್ರಾ ಜಲಾಶಯಗಳ ಬಳಿಯೂ ವಿದ್ಯುದುತ್ಪಾದನೆಯಾಗುತ್ತದೆ. ಇವುಗಳ ಉತ್ಪಾದನ ಸಾಮರ್ಥ್ಯ 1,32,200 ಕಿವ್ಯಾ ರಾಜ್ಯದ ವಿವಿಧ ಜಲವಿದ್ಯುದ್ಯೋಜನೆಗಳ ವಿವರಗಳನ್ನು ಮುಂದೆ ಕೊಟ್ಟಿದೆ:

| | ಯೋಜನೆಗಳು | ನಿರೀಕ್ಷಿತ ವಿದ್ಯುದ್ವಿಭವ (ಮೆ.ವಾ.ಗಳಲ್ಲಿ) |
|---|---|---|
| 1. | ಶರಾವತಿ ಕಣಿವೆ ಜಲವಿದ್ಯುತ್ ಯೋಜನೆ | 1300 |
| 2. | ಕಾಳಿನದಿ ಜಲವಿದ್ಯುತ್ ಯೋಜನೆ | 1350 |
| 3. | ಬೇಡ್ತಿ ಜಲವಿದ್ಯುತ್ ಯೋಜನೆ | 225 |
| 4. | ಬೇಡ್ತಿ ಎರಡನೆಯ ಘಟ್ಟ | 200 |
| 5. | ವರಾಹಿ ಜಲವಿದ್ಯುತ್ ಯೋಜನೆ | 250 |
| 6. | ಅಘನಾಶಿನಿ ಜಲವಿದ್ಯುತ್ ಯೋಜನೆ | 300 |
| 7. | ಚಕ್ರಾನದಿ ಜಲವಿದ್ಯುತ್ ಯೋಜನೆ | 75 |
| 8. | ಬರಪೊಳೆ ಜಲವಿದ್ಯುತ್ ಯೋಜನೆ | 125 |

| | | |
|---|---|---|
| 9. | ಮಹಾದಾಯಿ ಜಲವಿದ್ಯುತ್ ಯೋಜನೆ | 30 |
| 10. | ನೇತ್ರಾವತಿ ಜಲವಿದ್ಯುತ್ ಯೋಜನೆ | 100 |
| 11. | ತುಂಗಭದ್ರಾ ಎಡದಂಡೆ ನಾಲಾಕೇಂದ್ರ ವಿದ್ಯುತ್ ಅಭಿವೃದ್ಧಿ ಯೋಜನೆ | 40 |
| 12. | ಕಪಿಲಾ ಕಟ್ಟೆಯ ವಿದ್ಯುತ್‍ಗೃಹ ಯೋಜನೆ | 16 |
| 13. | ಹಿಡಕಲ್ ಕಟ್ಟೆಯ ವಿದ್ಯುತ್‍ಗೃಹ ಯೋಜನೆ | 28 |
| 14. | ಹೇಮಾವತಿ ಕಣಿವೆ ವಿದ್ಯುತ್ ಅಭಿವೃದ್ಧಿ ಕಾರ್ಯಕ್ರಮಗಳು | 20 |
| 15. | ಕೃಷ್ಣಾನದಿ ವಿದ್ಯುತ್ ಅಭಿವೃದ್ಧಿ ಕಾರ್ಯಕ್ರಮಗಳು | 175 |
| 16. | ಕಾವೇರಿ ಕಣಿವೆ ಜಲವಿದ್ಯುತ್ ಯೋಜನೆ | 800 |

ಕರ್ನಾಟಕದಲ್ಲಿ ಜಲವಿದ್ಯುತ್ತಿನ ಉತ್ಪಾದನೆಯ ಭವಿಷ್ಯ ಉತ್ತಮವಾಗಿದೆ ಎನ್ನಲು ಕೆಲವು ಕಾರಣಗಳುಂಟು: 1. ಈಗಾಗಲೆ ಕಾರ್ಯಗತವಾಗಿರುವ ವಿದ್ಯುದುತ್ಪಾದನ ಕೇಂದ್ರಗಳಿಂದ ಬರುವ ವರಮಾನದಿಂದಲೇ ಮುಂದಿನ ಉತ್ಪಾದನ ಯೋಜನೆಗಳಿಗೆ ಹಣ ಹೂಡುವುದು ಸಾಧ್ಯವಾಗಬಹುದು. 2. ಇದುವರೆಗಿನ ಅನುಭವದ ಆಧಾರದ ಮೇಲೆ ಭವಿಷ್ಯದ ಯೋಜನೆಗಳಿಗೆ ಅವಶ್ಯವಾದ ತಾಂತ್ರಿಕ ಜ್ಞಾನವನ್ನು ಒದಗಿಸಬಹುದು. 3. ವಿದ್ಯುದುತ್ಪಾದನೆಗೆ ಬೇಕಾದ ಯಂತ್ರಗಳನ್ನು ಇಲ್ಲೇ ತಯಾರಿಸುವ ಸಾಧ್ಯತೆಯುಂಟು. 4. ಕೊನೆಯದಾಗಿ ಬೇಡಿಕೆ. ವಿದ್ಯುತ್ ಸರಬರಾಜು ಅಧಿಕವಾದಂತೆಲ್ಲ ಬೇಡಿಕೆಯೂ ಹೆಚ್ಚುವುದರಿಂದ ಉತ್ಪಾದನೆಗೆ ತಡೆಯುಂಟಾಗುವ ಸಂಭವವಿಲ್ಲ.

ಕರ್ನಾಟಕದಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಇತರ ರಾಜ್ಯಗಳಿಗೂ ಸರಬರಾಜು ಮಾಡುವುದರಿಂದ ರಾಜ್ಯಕ್ಕೆ ಇದರಿಂದ ಲಾಭವೂ ಉಂಟು. ಅಲ್ಲದೆ ರಾಜ್ಯದ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ತು ಸರಬರಾಜಾಗುವ ಭರವಸೆಯಿಂದ ಆರ್ಥಿಕ ಪ್ರಗತಿ ಹೆಚ್ಚು ಸುಭದ್ರವಾಗುತ್ತದೆ.

ಕರ್ನಾಟಕದ ಎಲ್ಲಾ ವಿದ್ಯುದಾಗಾರಗಳ ಒಟ್ಟು ಜಲವಿದ್ಯುತ್ ಸ್ಥಾಪಿತ ಸಾಮರ್ಥ್ಯ 1955–56ನೆ ಸಾಲಿನಲ್ಲಿ 179.2 ಮೆ.ವಾ ಗಳಾಗಿತ್ತು. ಅದು 2001–02 ರವೇಳೆಗೆ 3021 ಮೆವಾ ಗಳಿಗೆ ಹೆಚ್ಚಿತ್ತು. ಇಷ್ಟೆಲ್ಲ ಪ್ರಗತಿ ಕಂಡುಬಂದರೂ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವ ಕಂಡುಬರುತ್ತಿದೆ.



ರಾಜ್ಯದ ಕೆಲಭಾಗಗಳಲ್ಲಿ ಜಲವಿದ್ಯುಚ್ಛಕ್ತಿ ಉತ್ಪಾದನೆ ಸಾಧ್ಯತೆಗಳಿವೆ. ಸಹ್ಯಾದ್ರಿ ಶ್ರೇಣಿಗಳಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ಮಲೆನಾಡು ಮತ್ತು ದಕ್ಷಿಣ ಕರ್ನಾಟಕದಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ಮಲೆನಾಡು ಮತ್ತು ದಕ್ಷಿಣ ಕರ್ನಾಟಕದಲ್ಲಿ ಹರಿಯುವ ನದಿಗಳಿಂದ ಹೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆ ಸಾಧ್ಯ. ಈ ನದಿಗಳು ಹೆಚ್ಚು ಮಳೆಯಾಗುವ ಭಾಗಗಳಿಂದ ಹರಿದುಬರುವುದರ ಜೊತೆಗೆ ರಭಸ ಇಳಿತ ಮತ್ತು ಜಲಪಾತಗಳನ್ನು ಸೃಷ್ಟಿಸುತ್ತವೆ.

ರಾಜ್ಯದ ಜಲವಿದ್ಯುಚ್ಛಕ್ತಿಯನ್ನು ವಿವಿಧ ಉದ್ದೇಶಗಳಿಗೆ ಬಳಸಲಾಗುವುದು. ಉದಾ: ಕೈಗಾರಿಕೆ, ಗೃಹಬಳಕೆ, ನೀರಾವರಿ, ಬೀದಿ ದೀಪ ಇತ್ಯಾದಿ. ಆದರೆ ಶೇ. 70 ಜಲವಿದ್ಯುಚ್ಛಕ್ತಿ ಕೈಗಾರಿಕೆಗಳಿಗೆ ಬಳಕೆಯಾಗುವುದು ವಿಶೇಷ ಸಂಗತಿ. ಕರ್ನಾಟಕ ವಿದ್ಯುತ್ ನಿಗಮವು ಹೊಸ ಜಲವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳ ನಿರ್ಮಾಣಕ್ಕೆ ಆಯೋಜಿಸುತ್ತಿದೆ.

**ಕೈಗಾರಿಕೆಗಳು:** ಕರ್ನಾಟಕದಲ್ಲಿ ಸಣ್ಣದೊಡ್ಡ ಕೈಗಾರಿಕೆಗಳ ಬೆಳೆವಣಿಗೆಗೆ ಅನುಕೂಲಕರವಾದ ಪರಿಸ್ಥಿತಿಯುಂಟು. ವಿದ್ಯುತ್ತು, ಖನಿಜ ಸಂಪತ್ತು, ವ್ಯವಸಾಯೋತ್ಪನ್ನ, ವಾಯುಗುಣ, ಜನಬಲ–ಎಲ್ಲವೂ ಈ ರಾಜ್ಯದಲ್ಲಿ ಧಾರಾಳ. ವಿದ್ಯುತ್ ವಿಭವ ಹಾಗೂ ಉತ್ಪಾದನೆಗಳ ವಿಚಾರವನ್ನು ಹಿಂದೆಯೇ ವಿವೇಚಿಸಲಾಗಿದೆ. ಖನಿಜಗಳ ವಿಚಾರದಲ್ಲೂ ಕರ್ನಾಟಕಕ್ಕೆ ಕೊರತೆಯಿಲ್ಲ. ರಾಜ್ಯದ ಭೂಗರ್ಭದಲ್ಲಿ 200–250 ಕೋಟಿ ಟನ್ ಉತ್ತಮ ದರ್ಜೆಯ ಕಬ್ಬಿಣದ ಅದಿರು, 100–120 ಲಕ್ಷ ಟನ್ ಮ್ಯಾಂಗನೀಸ್, ಬಾಕ್ಸೈಟ್, ಮ್ಯಾಗ್ನಸೈಟ್, ಕ್ರೋಮೈಟ್, ಸುಣ್ಣಕಲ್ಲು, ಕೊರಂಡಂ, ಎಮರಿ, ಕಲ್ನಾರು, ಜೇಡಿಮಣ್ಣು ಮುಂತಾದವು ಇವೆ. ನೆಲದಿಂದ ತೆಗೆಯುತ್ತಿರುವ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸುಗಳಲ್ಲಿ ಬಹುಭಾಗ ಹೊರದೇಶಗಳಿಗೆ ನಿರ್ಯಾತವಾಗುತ್ತಿದೆ. ರಾಜ್ಯದ ಕಬ್ಬಿಣದ ಅದಿರನ್ನು ಉಪಯೋಗಿಸಿಕೊಂಡು ಉಕ್ಕು ತಯಾರಿಸುತ್ತಿರುವ ಉದ್ಯಮವೆಂದರೆ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ. ಫೆರೋ–ಮ್ಯಾಂಗನೀಸ್ ತಯಾರಿಸುವ 2 ಕಾರ್ಖಾನೆಗಳು ರಾಜ್ಯದಲ್ಲಿವೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಬಳಿ ಜಿಂದಾಲ್ ಉಕ್ಕಿನ ಕಾರ್ಖಾನೆ ಇದೆ.

ಸುಣ್ಣಕಲ್ಲು ಮತ್ತು ಬಾಕ್ಸೈಟುಗಳನ್ನು ಕೈಗಾರಿಕೆಗಳಿಗೆ ಬಳಸಿಕೊಳ್ಳುವ ಪ್ರಯತ್ನವೂ ನಡೆದಿದೆ. ಕರ್ನಾಟಕದ ಸಿಮೆಂಟ್ ಕಾರ್ಖಾನೆಗಳ ವಾರ್ಷಿಕ ಉತ್ಪಾದನಾ ಸಾಮರ್ಥ್ಯ 24ಲಕ್ಷ ಟನ್.

ಕರ್ನಾಟಕದಲ್ಲಿ ಕೈಗಾರಿಕೆಗಳಿಗೆ ಉಪಯುಕ್ತವಾದ ಎರಡು ಮುಖ್ಯ ವ್ಯವಸಾಯೋತ್ಪನ್ನಗಳೆಂದರೆ ಕಬ್ಬು ಮತ್ತು ಹತ್ತಿ. ರಾಜ್ಯದಲ್ಲಿ 33 ಕಾರ್ಯನಿರತ ಸಕ್ಕರೆ ಕಾರ್ಖಾನೆಗಳಿವೆ. ಇವುಗಳ ಸರಾಸರಿ ವಾರ್ಷಿಕ ಉತ್ಪಾದನೆ 2.9 ಲಕ್ಷ ಟನ್. ಇದು ಭಾರತದ ಒಟ್ಟು ಉತ್ಪನ್ನದಲ್ಲಿ ಶೇ. 6ರಷ್ಟಾಗುತ್ತದೆ. ಕಬ್ಬಿನ ಸಿಪ್ಪೆ (ಬಗ್ಯಾಸ್), ಕಾಕಂಬಿ (ಮೊಲ್ಯಾಸೆಸ್) ಇವು ಸಕ್ಕರೆ ಕೈಗಾರಿಕೆಯ ಎರಡು ಮುಖ್ಯ ಉಪೋತ್ಪನ್ನಗಳು. ಕಬ್ಬಿನ ಸಿಪ್ಪೆಯಿಂದ ಕಾಗದವನ್ನೂ ಕಾಕಂಬಿಯಿಂದ ಮದ್ಯಸಾರ (ಆಲ್ಕೊಹಾಲ್) ಮತ್ತು ದನಗಳ ಮೇವನ್ನೂ ತಯಾರಿಸಲಾಗುತ್ತದೆ.

ಕರ್ನಾಟಕದ ಕೈಗಾರಿಕೆಗಳ ಪೈಕಿ ಜವಳಿ ಉದ್ಯಮ ಮುಖ್ಯವಾದದ್ದು. ರಾಜ್ಯದಲ್ಲಿ 44 ದೊಡ್ಡ ಹತ್ತಿ ಗಿರಣಿಗಳಿವೆ. ಇವುಗಳ ಪೈಕಿ 32 ನೂಲು ತೆಗೆಯುವವು; ಉಳಿದವು (12) ಸಂಯೋಜಿತ (ಕಾಂಪೊಸಿಟ್) ಗಿರಣಿಗಳು, ಇವುಗಳ ಒಟ್ಟು ಕದಿರುಗಳ ಸಂಖ್ಯೆ 10,68,000; ಮಗ್ಗಗಳು 5434. ನೂಲಿನ ವಾರ್ಷಿಕ ಉತ್ಪನ್ನ ಸು. 67,000 ಟನ್; ಹತ್ತಿಯ ಬಟ್ಟೆ ಸು. 5.1 ದಶಲಕ್ಷ ಮೀ ಇವುಗಳಲ್ಲದೆ ಅನೇಕ ಸಣ್ಣ ವಿದ್ಯುತ್ ಮಗ್ಗಗಳೂ ಕೈಮಗ್ಗಗಳೂ ಹತ್ತಿ ಮತ್ತು ರೇಷ್ಮೆ ಬಟ್ಟೆಗಳ ಉತ್ಪಾದನೆಯಲ್ಲಿ ನಿರತವಾಗಿವೆ.

ಕರ್ನಾಟಕದ ಅರಣ್ಯೋತ್ಪನ್ನಗಳ ಪೈಕಿ ಕೈಗಾರಿಕೆಗಳಿಗೆ ಉಪಯುಕ್ತವಾದವು ಅನೇಕ. ತೇಗ, ಬೀಟೆ, ಶ್ರೀಗಂಧ, ಮೃದುಮರಗಳು, ಬಿದಿರು–ಇವು ಮುಖ್ಯ. ಶ್ರೀಗಂಧ ವಿಶಿಷ್ಟವಾದದ್ದು. ಸಾಬೂನು, ರಾಸಾಯನವಸ್ತು ಮತ್ತು ಕಾಂತಿವರ್ಧಕ ವಸ್ತು ತಯಾರಿಕೆಯಲ್ಲಿ ಉಪಯುಕ್ತವಾದ ಗಂಧದೆಣ್ಣೆಯನ್ನು ಇದರಿಂದ ತೆಗೆಯಲಾಗುತ್ತದೆ. ರಾಜ್ಯದಲ್ಲಿರುವ ಗಂಧದೆಣ್ಣೆ ಕಾರ್ಖಾನೆಗಳು ಎರಡು. ಇವುಗಳ ವಾರ್ಷಿಕ ಉತ್ಪನ್ನ ಇಡೀ ಭಾರತದ ಉತ್ಪನ್ನದ ಶೇ. 80ರಷ್ಟು..

ಇನ್ನೊಂದು ಮುಖ್ಯ ಅರಣ್ಯೋತ್ಪನ್ನವಾದ ಬಿದಿರನ್ನು ಆಧರಿಸಿ ಕಾಗದ ತಯಾರಿಸಬಹುದು. ರಾಜ್ಯದಲ್ಲಿ 14 ಕಾಗದ ಕಾರ್ಖಾನೆಗಳಿವೆ. ರೆಯಾನ್ ದರ್ಜೆಯ ಮರದ ತಿರುಳು ತಯಾರಿಕೆ ಇನ್ನೊಂದು ಉದಿತೋದಿತ ಕೈಗಾರಿಕೆ. ಮುದ್ರಣಕಾಗದ ತಯಾರಿಕೆಗೆ ರಾಜ್ಯದಲ್ಲಿ ಸೌಲಭ್ಯಗಳಿವೆ. ಪ್ಲೈವುಡ್, ಚಿಪ್‍ಬೋರ್ಡ್, ಮರ ಉಣ್ಣೆ ಮುಂತಾದವನ್ನು ತಯಾರಿಸುವ ಅನೇಕ ಕಾರ್ಖಾನೆಗಳುಂಟು. ರಾಜ್ಯದಲ್ಲಿ ಪ್ಲೈವುಡ್ಡಿನ ಉತ್ಪಾದನೆ 120 ಲಕ್ಷ ಘನ ಅಡಿ. ಇದರಲ್ಲಿ ಒಂದು ಭಾಗ ನಿರ್ಯಾತವಾಗುತ್ತದೆ.

ಲವಣ ಕೈಗಾರಿಕೆಯ ಬೆಳೆವಣಿಗೆಗೆ ಸಂದಿರುವ ಪ್ರಾಮುಖ್ಯ ಅಲ್ಪವೇನಲ್ಲ. ಅನೇಕ ರಸಾಯನ ಕೈಗಾರಿಕೆಗಳಿಗೆ ಇದು ಮೂಲ ಸಾಮಗ್ರಿಯಾದ್ದರಿಂದಲೇ ಇದಕ್ಕೆ ಈ ಪ್ರಾಶಸ್ತ್ಯ. ಕಾಸ್ಟಿಕ್ ಸೋಡ, ಹೈಡ್ರೋಕ್ಲೋರಿಕ್ ಆಮ್ಲ ಮುಂತಾದ ಅನೇಕ ಕೈಗಾರಿಕೆಗಳು ಸ್ಥಾಪಿತವಾಗುವ ಹಂತದಲ್ಲಿವೆ. ಕರ್ನಾಟಕ ರೇಷ್ಮೆ ಕೈಗಾರಿಕೆ ಪ್ರಾಚೀನವಾದದ್ದು. ಇದು ರಾಜ್ಯದ ಮುಖ್ಯ ಕೈಗಾರಿಕೆಗಳಲ್ಲೊಂದು. ರೇಷ್ಮೆ ಸುತ್ತುವ, ಬಟ್ಟೆ ನೇಯುವ ಕಾರ್ಖಾನೆಗಳೂ ರಾಜ್ಯದಲ್ಲಿವೆ. ರಾಜ್ಯದ ವಾರ್ಷಿಕ ರೇಷ್ಮೆ ಬಟ್ಟೆ ಉತ್ಪಾದನೆ 2.6 ಲಕ್ಷ ಟನ್ನು. ರಾಜ್ಯದಲ್ಲಿ ಸು. 22,800 ರೇಷ್ಮೆ ಕೈಮಗ್ಗಗಳು ಮತ್ತು 23,800 ಯಂತ್ರಚಾಲಿತ ಮಗ್ಗಗಳಿವೆ. ಇವೆಲ್ಲ ಸಾಧನಸಾಮಗ್ರಿ ಮೂಲವಾದ ಕೈಗಾರಿಕೆಗಳು. ಇವಲ್ಲದೆ ಎಲೆಕ್ಟ್ರಾನಿಕ್ಸ್, ವಿದ್ಯುತ್

ಎಂಜಿನಿಯರಿಂಗ್, ಯಂತ್ರೀಯ ಎಂಜಿನಿಯರಿಂಗ್ ಕೈಗಾರಿಕೆಗಳೂ ರಾಜ್ಯದಲ್ಲಿ ಬೆಳೆದಿವೆ. ಕರ್ನಾಟಕ ಕೆಲವು ಮುಖ್ಯ ಕೈಗಾರಿಕೆಗಳ ಉತ್ಪಾದನೆಯನ್ನು (2002–03) ಮುಂದೆ ಕೊಟ್ಟಿದೆ;

**ಕರ್ನಾಟಕದಲ್ಲಿ ಆಯ್ದ ಕೈಗಾರಿಕೆಗಳ ಉತ್ಪಾದನೆ 2001–02**

| ಕೈಗಾರಿಕೆ | ಘಟಕ | ಉತ್ಪಾದನೆ |
|---|---|---|
| ಅಲ್ಯೂಮಿನಿಯಂ | (ಲಕ್ಷಟನ್ನುಗಳಲ್ಲಿ) | 0.33 |
| ಕಬ್ಬಿಣ ಮತ್ತು ಉಕ್ಕು | | 1.74 |
| ಮಾರಾಟ ಉಕ್ಕು | | 0.87 |
| ಗಟ್ಟಿ ಉಕ್ಕು | | 1.14 |
| ಕಾಗದ | | 2.71 |
| ಸಕ್ಕರೆ | | 2.88 |
| ರಾಸಾಯನಿಕ ಗೊಬ್ಬರ | | 14.25 |
| ಸಿಮೆಂಟ್ | | 49.60 |
| ಸಿಗರೇಟ್ | (ಮಿಲಿಯನ್‌ಗಳಲ್ಲಿ) | 19378.00 |
| ಕೈಗಡಿಯಾರಗಳು | (ಲಕ್ಷಗಳಲ್ಲಿ) | 2.02 |
| ರೇಷ್ಮೆ ಬಟ್ಟೆ | (ಲಕ್ಷ ಮೀ) | 264.80 |
| ಹತ್ತಿದಾರ | (000 ಟನ್ನು) | 67.00 |
| ಹತ್ತಿ ಬಟ್ಟೆ | (ದಶಲಕ್ಷ ಮೀ) | 5.10 |

(ಆಧಾರ : ಆರ್ಥಿಕ ಸಮೀಕ್ಷೆ 2002–03)



**ನ್ಯಾಟ್ ವಿಮಾನ, ಹಿಂದೂಸ್ತಾನ್ ಏರೋನಾಟಿಕ್ಸ್, ಬೆಂಗಳೂರು**

ರಾಜ್ಯದ ಮುಖ್ಯ ಬೃಹದ್ಗಾತ್ರ ಕೈಗಾರಿಕೆಗಳನ್ನೂ ಅವುಗಳಿರುವ ಸ್ಥಳಗಳನ್ನೂ ಮುಂದೆ ಕೊಟ್ಟಿದೆ:

| ಕೈಗಾರಿಕೆ | ಸ್ಥಳಗಳು |
|---|---|
| ಜವಳಿ | ಬೆಂಗಳೂರು, ದಾವಣಗೆರೆ, ಬಳ್ಳಾರಿ, ರಾಯಚೂರು, ಹುಬ್ಬಳ್ಳಿ, ಗದಗ, ಇಳಕಲ್, ಗುಳೇದಗುಡ್ಡ, ಗೋಕಾಕ, ಗುಲ್ಬರ್ಗ, ರಬಕವಿ, ಬಾದಾಮಿ, ಬಾಗಲಕೋಟೆ, ನಂಜನಗೂಡು, ಚಾಮರಾಜನಗರ |
| ಎಂಜಿನಿಯರಿಂಗ್ | ಬೆಂಗಳೂರು, ಹರಿಹರ |
| ಖನಿಜ ಮತ್ತು ಲೋಹ | ಬೆಂಗಳೂರು, ಭದ್ರಾವತಿ, ಬಳ್ಳಾರಿ, ಕೋಲಾರ, ಶಿವಮೊಗ್ಗ |
| ಆಹಾರ, ಪಾನೀಯ, ಹೊಗೆಸೊಪ್ಪು | ಬೆಂಗಳೂರು |
| ರಾಸಾಯನಿವಸ್ತು, ಬಣ್ಣ ಮುಂತಾದವು | ಬೆಂಗಳೂರು, ಮೈಸೂರು, ಮಂಗಳೂರು |
| ಕಾಗದ, ಮುದ್ರಣ | ಭದ್ರಾವತಿ, ನಂಜನಗೂಡು, ದಾಂಡೇಲಿ, ಮುಂಡಗೋಡ, ಮುನಿರಾಬಾದ, ಎಡೆಯೂರು, ಮಂಡ್ಯ, ಬೆಂಗಳೂರು |
| ಮರ, ಕಲ್ಲು ಮತ್ತು ಗಾಜು ಕೆಲಸ | ರಾಜ್ಯಾದ್ಯಂತ |
| ತೊಗಲು, ಚರ್ಮ ಹದ, | |
| ಸರಕು ತಯಾರಿಕೆ | ಬೆಂಗಳೂರು |
| ಹತ್ತಿ ಬಿಡಿಸುವ, ಒತ್ತುವ ಕೈಗಾರಿಕೆ | ದಾವಣಗೆರೆ, ಬೆಳಗಾಂವಿ, ಬಳ್ಳಾರಿ, ಧಾರವಾಡ, ಗುಲ್ಬರ್ಗ, ರಾಯಚೂರು |
| ಮೀನುಗಾರಿಕೆ | ಮಂಗಳೂರು, ಕಾರವಾರ. |

ರಾಜ್ಯ ಸರ್ಕಾರದ ಮುಖ್ಯ ಕೈಗಾರಿಕೆಗಳನ್ನೂ ಅವುಗಳ ಸ್ಥಳಗಳನ್ನೂ ಮುಂದೆ ಕೊಟ್ಟಿವೆ:

| | |
|---|---|
| ಕೇಂದ್ರಿಯ ಕೈಗಾರಿಕಾ ಕಾರ್ಯಾಗಾರ | ಬೆಂಗಳೂರು |
| ಸರ್ಕಾರಿ ಕೇಂದ್ರಿಯ ಕಾರ್ಯಾಗಾರ | ಮಡಿಕೇರಿ |
| ಸರ್ಕಾರಿ ವಿದ್ಯುತ್ ಕಾರ್ಖಾನೆ | ಬೆಂಗಳೂರು |
| ಜೈ ಹಿಂದ್ ಮರಕೊಯ್ಯುವ ಕಾರ್ಖಾನೆ | ದಾಂಡೇಲಿ |
| ಸರ್ಕಾರಿ ಸಾಬೂನು ಕಾರ್ಖಾನೆ | ಬೆಂಗಳೂರು |
| ಸರ್ಕಾರಿ ಪಿಂಗಾಣಿ ಕಾರ್ಖಾನೆ | ಬೆಂಗಳೂರು |
| ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ | ಮೈಸೂರು, ಶಿವಮೊಗ್ಗ |
| ಸರ್ಕಾರಿ ಸ್ಪನ್ ರೇಷ್ಮೆ ಕಾರ್ಖಾನೆ | ಚನ್ನಪಟ್ಟಣ |
| ಮೈಸೂರು ರೇಷ್ಮೆ ಫಿಲೇಚರ್ | ಕನಕಪುರ, ಕೊಳ್ಳೆಗಾಲ ಮೈಸೂರು |
| ಮೈಸೂರು ಚರ್ಮ ಹದ ಮಾಡುವ | |
| (ಕ್ರೋಂಟ್ಯಾನಿಂಗ್) ಕಂಪನಿ | ಬೆಂಗಳೂರು |
| ಹಟ್ಟಿ ಚಿನ್ನದ ಗಣಿ | ಹಟ್ಟಿ |
| ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ | ಮೈಸೂರು |
| ರೇಡಿಯೋ ಮತ್ತು ವಿದ್ಯುತ್ ತಯಾರಿಕೆ | |
| ಕಾರ್ಖಾನೆ | ಬೆಂಗಳೂರು |
| ಮೈಸೂರು ಸಕ್ಕರೆ ಕಂಪನಿ | ಮಂಡ್ಯ |
| ಸರ್ಕಾರದ ಹೊಸ ವಿದ್ಯುತ್ ಕಾರ್ಖಾನೆ | ಬೆಂಗಳೂರು |
| ಕೇಂದ್ರ ಸರ್ಕಾರದ ಉದ್ಯಮಗಳು | |
| ಭಾರತ ಅರ್ಥ್ ಮೂವರ್ಸ್ ಲಿಮಿಟೆಡ್ | ಬೆಂಗಳೂರು |
| ಭಾರತ ಎಲೆಕ್ಟ್ರಾನಿಕ್ಸ್ ಲಿ. | ಬೆಂಗಳೂರು |
| ಹಿಂದೂಸ್ತಾನ್ ಮಷೀನ್ ಟೂಲ್ಸ್ ಲಿ. | ಬೆಂಗಳೂರು |
| ಕೋಲಾರ ಚಿನ್ನದ ಗಣಿ ಉದ್ಯಮಗಳು | ಕೋಲಾರ ಚಿನ್ನದ ಗಣಿ |
| ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ | ಬೆಂಗಳೂರು |
| ಇಂಡಿಯನ್ ಟೆಲಿಫೋನ್ ಕೈಗಾರಿಕೆ ಲಿಮಿಟೆಡ್ | ಬೆಂಗಳೂರು |
| ಆಟೋಮೋಟಿವ್ ಆಕ್ಸಲ್ | ಮೈಸೂರು |
| ಸರ್ಕಾರಿ ಸ್ವಾಮ್ಯದ ಉಕ್ಕು ಪ್ರಾಧಿಕಾರ: | |
| ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಲಿಮಿಟೆಡ್ | ಭದ್ರಾವತಿ |

ಬೆಂಗಳೂರಿನಲ್ಲಿ ಹಿಂದೂಸ್ತಾನ್ ಮಷೀನ್ ಟೂಲ್ಸ್ ಸಂಸ್ಥೆಯ ಅಂಗವಾಗಿ ಸ್ಥಾಪಿತವಾಗಿರುವ ಗಡಿಯಾರ ಕಾರ್ಖಾನೆ ವರ್ಷಕ್ಕೆ 5 ಲಕ್ಷ ಕೈಗಡಿಯಾರಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿರುವಂತೆ ಅದನ್ನು ಯೋಜಿಸಲಾಗಿತ್ತು. ಬೆಳಗಾಂವಿಯ ಬಳಿ ವರ್ಷಕ್ಕೆ 30,000 ಟನ್ ಅಲ್ಯೂಮಿನಿಯಂ ಗಟ್ಟಿ ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುತ್ತದೆ. ಮಂಗಳೂರಿನ ಸೀಮೆಗೊಬ್ಬರ ಕಾರ್ಖಾನೆ ಇನ್ನೊಂದು ಮುಖ್ಯ ಉದ್ಯಮ.

ಕರ್ನಾಟಕ ರಾಜ್ಯದಲ್ಲಿರುವ ಕುಶಲ ಕೈಗಾರಿಕೆಗಳೂ ಗೃಹ ಕೈಗಾರಿಕೆಗಳೂ ಅನೇಕ. ಕೆಲವು ಮುಖ್ಯ ಗೃಹ ಕೈಗಾರಿಕೆಗಳನ್ನೂ ಅವುಗಳ ಕೇಂದ್ರಗಳನ್ನೂ ಮುಂದೆ ಕೊಟ್ಟಿದೆ:

| | |
|---|---|
| ಮೆರಗು ಸರಕು (ಲ್ಯಾಕರ್‌ವೇರ್) | ಚನ್ನಪಟ್ಟಣ, ಗೋಕಾಕ |
| | ನೆಲಮಂಗಲ |
| | ಚಿಕ್ಕಮಗಳೂರು |
| | ಶಿವಮೊಗ್ಗ |
| ಗಂಧದ ಗುಡಿಗಾರಿಕೆ | ಸಾಗರ, ಸೊರಬ |
| | ಮೈಸೂರು ದಂತ ಕೆಲಸ |
| | ಸಾಗರ, ಸೊರಬ |
| | ಮೈಸೂರು |
| ಹಿತ್ತಾಳೆ ಸಾಮಾನು ತಯಾರಿಕೆ | ನೆಲಮಂಗಲ |
| ಬೆತ್ತದ ಕೆಲಸ | ಮೈಸೂರು |
| | ಚಿಕ್ಕಮಗಳೂರು |
| | ಶಿವಮೊಗ್ಗ, ಸಾಗರ |
| ಗಾಜಿನ ಬಳೆ | ಯಶವಂತಪುರ |
| | ಪೋಡಗೇರಿ |
| | ಚಾಪೆ ಹೆಣಿಗೆ |
| | ಕಡಕೊಳ, ಕೆಂಗೇರಿ |
| | ಅಮೃತೂರು, |
| | ನಾಗಮಂಗಲ, ಹಾಸನ |
| | ಕುಂಬೂರು |
| | ಆನಂದಾಪುರ |
| | ಹಿರಿಯೂರು |
| ಚರ್ಮದ ಹೊಲಿಗೆ | ಬೀರೂರು, ಸಾಗರ |
| | ದೊಡ್ಡಸಿದ್ದವನಹಳ್ಳಿ |
| | ಇಂಡಿ, ರಾಮದುರ್ಗ |
| | ಅಶಾನಿ, ಸವದತ್ತಿ |
| | ಕಾರವಾರ |
| ಮಡಕೆ ಕುಡಿಕೆ | ರಾಮನಗರ |
| | ಖಾನಾಪುರ |
| | ಮಡಿಕೆಬೀಡು |
| | ಕೃಷ್ಣರಾಜಪುರ |
| ಹೆಂಚು | ಮಂಗಳೂರು |
| ಹಗ್ಗ, ಹುರಿ ಪದಾರ್ಥ | ಮಂಗಳೂರು |
| | ಕಾರವಾರ |
| ಅಗರಬತ್ತಿ | ಮೈಸೂರು |
| | ಬೆಂಗಳೂರು |
| ಹತ್ತಿಯ ಹೆಣಿಗೆವಸ್ತು | ಷಹಾಪುರ |
| ಕಂಪ್ಯೂಟರ್ ಟಿ.ವಿ. ಎಲೆಕ್ಟ್ರಾನಿಕ್ಸ್ | ಬೆಂಗಳೂರು |

ಬೆಂಗಳೂರು, ಬೆಳಗಾಂವಿ, ತುಮಕೂರು, ಹುಬ್ಬಳ್ಳಿ, ಹೊಸಪೇಟೆ, ಭದ್ರಾವತಿ, ಮಂಗಳೂರು–ಇವು ಸಣ್ಣ ಕೈಗಾರಿಕೆಗಳ ಮುಖ್ಯ ಕೇಂದ್ರಗಳು. ಸೈಕಲ್ ಡೈನಮೊ ದೀಪ, ಕೇಂದ್ರ ಲೇತು, ಮರ ಗೆಲಸ ಯಂತ್ರ, ರಂಧ್ರ ಒತ್ತುಯಂತ್ರ ಇದ್ದಲಿನ ಇಸ್ತ್ರಿಪೆಟ್ಟಿಗೆ, ಕಬ್ಬಿಣೇತರ ಲೋಹಗಳ ಪೂಜಾ ಸಲಕರಣೆ, ಇವಕ್ಕೆ ಅಖಿಲ ಭಾರತ ಬೇಡಿಕೆಯಿದೆ.

ಕೈಗಾರಿಕೆಗಳ ಪ್ರಗತಿಯಲ್ಲಿ ಭಾರತದ ರಾಜ್ಯಗಳ ಪೈಕಿ ಕರ್ನಾಟಕಕ್ಕೆ ಎಂಟನೆಯ ಸ್ಥಾನ. 2004ರಲ್ಲಿ ರಾಜ್ಯದಲ್ಲಿ 9625 ನೋಂದಣಿಯಾದ ಕಾರ್ಖಾನೆಗಳಿದ್ದುವು. ಕಾರ್ಮಿಕರ ಸಂಖ್ಯೆ 9.6 ಲಕ್ಷ.

ಕರ್ನಾಟಕದ ಸ್ವಾಭಾವಿಕ ವಿಭಾಗಗಳಿಗೆ ಅನುಗುಣವಾಗಿ ಸಣ್ಣ ದೊಡ್ಡ ಕೈಗಾರಿಕೆಗಳ ಹಬ್ಬುಗೆಗಳ ರೀತಿಯನ್ನು ಮುಂದೆ ವಿವೇಚಿಸಲಾಗಿದೆ. ಕರಾವಳಿ ಪ್ರದೇಶದಲ್ಲಿ ಉತ್ತರಕ್ಕಿಂತ ದಕ್ಷಿಣ ಭಾಗದಲ್ಲೇ ಬೃಹದ್ಗಾತ್ರದ ಕೈಗಾರಿಕೆಗಳ ಸಂಖ್ಯೆ ಹೆಚ್ಚು. ಮಂಗಳೂರು, ಉಡುಪಿ, ಮಣಿಪಾಲಗಳಲ್ಲಿ ಅನೇಕ ದೊಡ್ಡ ಹಾಗು ಮಧ್ಯಮ ಗಾತ್ರದ ಮುದ್ರಣಾಲಯಗಳಿವೆ. ಮಂಗಳೂರಿನಲ್ಲಿರುವ ಲೋಹ ವಸ್ತು ತಯಾರಿಕಾ ಕೇಂದ್ರಗಳ ಜೊತೆಗೆ ಎಂಜಿನಿಯರಿಂಗ್

ಗಂಧದ ಗುಡಿಗಾರಿಕೆ, ಸಾಗರ

ಕೈಗಾರಿಕೆಗಳೂ ಇವೆ. ಉಡುಪಿ, ಕುಮಟಗಳಲ್ಲೂ ಸಣ್ಣ ಎಂಜಿನಿಯರಿಂಗ್ ಕೇಂದ್ರಗಳಿವೆ. ವ್ಯವಸಾಯಾಧಾರಿತ ಕೈಗಾರಿಕೆಗಳಿರುವುದು ಬಹುತೇಕ ದಕ್ಷಿಣದಲ್ಲೇ. ಮಂಗಳೂರಿನ ಗೋಡಂಬಿ ಮತ್ತು ಕಾಫಿ ಪರಿಷ್ಕರಣ ಹೊಗೆಸೊಪ್ಪು ಮತ್ತು ಬೀಡಿ ಕಾರ್ಖಾನೆಗಳನ್ನು ಇಲ್ಲಿ ಉಲ್ಲೇಖಿಸಬಹುದು. ಅಕ್ಕಿ ಮತ್ತು ಎಣ್ಣೆ ಗಿರಣಿಗಳೂ ಇವೆ. ಮಂಗಳೂರಿನಲ್ಲೂ ಉಡುಪಿಯಲ್ಲೂ ಕೆಲವು ಜವಳಿಯ ಉದ್ಯಮಗಳುಂಟು. ಮಂಗಳೂರಿನ ಇನ್ನೆರಡು ಸಣ್ಣ ಕೈಗಾರಿಕೆಗಳೆಂದರೆ ಸಾಬೂನು ಮತ್ತು ರಸಾಯನವಸ್ತು ತಯಾರಿಕೆ. ಹಂಚು ತಯಾರಿಕೆಯೇ ಕರಾವಳಿಯ ಅತ್ಯಂತ ಮುಖ್ಯವಾದ ದೊಡ್ಡ ಕೈಗಾರಿಕೆ. ಇಲ್ಲಿರುವ 45 ಹೆಂಚಿನ ಕಾರ್ಖಾನೆಗಳಿವೆ ಹಂಚುಗಳಿಗೆ ಇಡೀ ಕರ್ನಾಟಕ ರಾಜ್ಯದಲ್ಲೂ ಭಾರತದ ಪಶ್ಚಿಮ ತೀರದಲ್ಲೂ ಬೇಡಿಕೆಯಿರುವುದಲ್ಲದೆ ಇದು ಶ್ರೀಲಂಕ ಮುಂಬಯಿಯ ಮುಖಾಂತರವಾಗಿ ಪೂರ್ವ ಆಫ್ರಿಕ, ಇರಾನ್ ಮತ್ತು ಮಲೇಷ್ಯಗಳಿಗೂ ರಫ್ತಾಗುತ್ತದೆ. ಆದರೆ ಆಸ್ಬೆಸ್ಟಸ್ ತಗಡಿನೊಂದಿಗೂ ಕೇರಳದ ಹಂಚಿನೊಂದಿಗೂ ಇದು ಸ್ಪರ್ಧಿಸಬೇಕಾಗಿ ಬಂದಿರುವುದರಿಂದ ಇದರ ಉತ್ಪಾದನೆ ಈಚಿನ ವರ್ಷಗಳಲ್ಲಿ ಕುಗ್ಗಿದೆ, ಇದಕ್ಕೆ ಅಗತ್ಯವಾದ ಮಣ್ಣಿಗೆ ಕರಾವಳಿಯಲ್ಲಿ ಕೊರತೆಯಿಲ್ಲ. ಕಡಲ ಕಡೆಯ ಸಾರಿಗೆಸೌಲಭ್ಯ, ಸೌದೆ, ನೆರೆಯ ಮಾರುಕಟ್ಟೆಯ ಬೇಡಿಕೆ–ಇವು ಈ ಕೈಗಾರಿಕೆಯ ಬೆಳೆವಣಿಗೆಗೆ ಕಾರಣವಾದ ಮುಖ್ಯ ಅಂಶಗಳು. ಕರಾವಳಿಯ ಪಟ್ಟಣಗಳಲ್ಲಿ ಮರದಲಾಂಬಿಯ ಕೇಂದ್ರಗಳೂ ಉಂಟು, ಕರಾವಳಿಯಲ್ಲಿ ಸಣ್ಣ ಕೈಗಾರಿಕೆ, ಜವಳಿ ಕೈಗಾರಿಕೆ, ದೋಣಿ ನಿರ್ಮಾಣ, ಮರಗೆಲಸ ಮತ್ತು ಹಗ್ಗ ಹುರಿ ಸರಕು ತಯಾರಿಕೆ ಉಪ ಕಸಬುಗಳು.

ಮೈಸೂರು–ಬೆಂಗಳೂರು–ಕೋಲಾರ ಚಿನ್ನದ ಗಣಿ ಪ್ರದೇಶದೊಂದಿಗಾಗಲಿ, ಹುಬ್ಬಳ್ಳಿ–ಧಾರವಾಡ–ಬೆಳಗಾಂವಿ ಪ್ರದೇಶದೊಂದಿಗಾಗಲಿ ಹೋಲಿಸಿದರೆ ಮಲೆನಾಡಿನಲ್ಲಿ ದೊಡ್ಡ ಕೈಗಾರಿಕೆಗಳು ಕಡಿಮೆ. ಈಗಾಗಲೇ ಬೆಳೆದಿರುವ ಕೈಗಾರಿಕೆಗಳನ್ನು ಇಲ್ಲಿ ವಿವೇಚಿಸಬಹುದು. ಭದ್ರಾವತಿಯ ಕಬ್ಬಿಣ–ಉಕ್ಕು ಕಾರ್ಖಾನೆ ಅತಿ ದೊಡ್ಡದು. ಪಕ್ಕದ ಕಾಗದದ ಕಾರ್ಖಾನೆಯೂ ದೊಡ್ಡದು. ದಾಂಡೇಲಿಯಲ್ಲಿ ಒಂದು ಕಾಗದದ ಕಾರ್ಖಾನೆಯೂ ಲೋಹ ಕಾರ್ಖಾನೆಯೂ ಇವೆ. ಚಿಕ್ಕಮಗಳೂರಿನಲ್ಲಿ ಕೆಲವು ಸಣ್ಣ ಎಂಜಿನಿಯರಿಂಗ್ ಉದ್ಯಮಗಳಿವೆ.

ಭದ್ರಾವತಿ ಕಬ್ಬಿಣ–ಉಕ್ಕಿನ ಕೈಗಾರಿಕೆಯ ಸನ್ನಿವೇಶ ಅತ್ಯುತ್ತಮವಾದದ್ದು. ಕಬ್ಬಿಣದ ಅದಿರು, ಸುಣ್ಣಕಲ್ಲು, ವಿದ್ಯುಚ್ಛಕ್ತಿ ಯಾವುದಕ್ಕೂ ಕೊರತೆಯಿಲ್ಲ. ತಾಂಡವಾಳ, ಉಕ್ಕು ಗಟ್ಟಿ, ಕಬ್ಬಿಣ ಮಿಶ್ರ ಲೋಹಗಳು, ಉಕ್ಕಿನ ಪಟ್ಟಿ, ಬೇಲುಪಟ್ಟಿ ಮತ್ತು ಎರಕ ಕಬ್ಬಿಣ

ಕೊಳವೆಗಳನ್ನು ಇದು ತಯಾರಿಸುತ್ತದೆ. ಇದು ಭಾರತದ ದೈತ್ಯಾಕಾರದ ಉಕ್ಕು ಕಾರ್ಖಾನೆಗಳಲ್ಲೊಂದಾಗುವ ನಿರೀಕ್ಷೆಯಿಲ್ಲ. ವಿಶಿಷ್ಟ ಉಕ್ಕುಗಳನ್ನೂ ಮಿಶ್ರಲೋಹಗಳನ್ನೂ ತಯಾರಿಸುವುದರಲ್ಲಿ ನೈಪುಣ್ಯ ಸಂಪಾದಿಸುವುದು ಇದರ ಉದ್ದೇಶ. ಫೆರೊ–ಸಿಲಿಕಾನ್ ಮತ್ತು ಫೆರೊ–ಮ್ಯಾಂಗನೀಸ್ ಉತ್ಪಾದನೆ ಒಂದು ವಿಶಿಷ್ಟ ಬೆಳವಣಿಗೆ. ದಾಂಡೇಲಿಯಲ್ಲಿ ಕಬ್ಬಿಣ ಮಿಶ್ರಲೋಹ ಯಂತ್ರಸ್ಥಾವರವಿದೆ.

ಸರ್ಕಾರಿ ಸಾಬೂನು ಕಾರ್ಖಾನೆ, ಬೆಂಗಳೂರು

ಭದ್ರಾವತಿ ಮತ್ತು ದಾಂಡೇಲಿಗಳ ಕಾಗದದ ಕಾರ್ಖಾನೆಗಳಿಗೆ ಸ್ಥಳೀಯವಾಗಿ ಕಚ್ಚಾಸಾಮಗ್ರಿ ಒದಗುತ್ತವೆ. ಜಲವಿದ್ಯುತ್ತಿಗೂ ಕೊರತೆಯಿಲ್ಲ. ಮೃದುತಿರುಳಿನ ಮರಗಳನ್ನು ಮಲೆನಾಡಿನಲ್ಲಿ ನೆಡುವುದರಿಂದ ಪ್ರಯೋಜನವುಂಟು. ಮುದ್ರಣ ಕಾಗದ ಕೈಗಾರಿಕೆಗೂ ಒಳ್ಳೆಯ ಭವಿಷ್ಯವಿದೆ. ಭದ್ರಾವತಿ–ದಾಂಡೇಲಿಗಳೆರಡೂ ಕರ್ನಾಟಕದ ಕೈಗಾರಿಕೆ ಬೆಳೆವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾದ ಕೇಂದ್ರಗಳು. ಹಾಸನದ ವ್ಯವಸಾಯೋಪಕರಣ ಕಾರ್ಖಾನೆ ಸನ್ನಿವೇಶ ದೃಷ್ಟಿಯಿಂದ ಉಚಿತವಾದದ್ದು. ಉತ್ತರ ಮಲೆನಾಡಿನ ಪೂರ್ವಭಾಗದಲ್ಲಿ ಕೆಲವು ಹತ್ತಿ ಹಿಂಜುವ ಉದ್ಯಮಗಳಿವೆ. ಆದರೆ ಇವನ್ನು ವಾಸ್ತವವಾಗಿ ಉತ್ತರ ಮೈದಾನದ ಪಶ್ಚಿಮ ಪ್ರದೇಶದ ಜವಳಿ ಕೈಗಾರಿಕೆಗಳ ಗುಂಪಿಗೆ ಸೇರಿಸಬೇಕು.

ವ್ಯವಸಾಯಾಧಾರಿತ ಕೈಗಾರಿಕೆಗಳೆಂದರೆ ಅಕ್ಕಿ ಮತ್ತು ಎಣ್ಣೆಗಿರಣಿಗಳು. ಮೂಡಿಗೆರೆಯಲ್ಲಿ ಕೆಲವು ದೊಡ್ಡ ಅಕ್ಕಿ ಗಿರಣಿಗಳಿವೆ. ಬಹುತೇಕ ಅಕ್ಕಿ ಗಿರಣಿಗಳಿರುವುದು ಅರೆಮಲೆನಾಡಿನಲ್ಲಿ. ತೀರ್ಥಹಳ್ಳಿಯಲ್ಲೂ ಮಲೆನಾಡಿನ ಎಲ್ಲೆಗಿಂತ ಸ್ವಲ್ಪ ಆಚೆಗಿರುವ ಶಿಗ್ಗಾವಿಯಲ್ಲಿ ಹೊಗೆಸೊಪ್ಪಿನ ಸಣ್ಣ ಪರಿಷ್ಕರಣ ಕೇಂದ್ರಗಳಿವೆ. ದಕ್ಷಿಣದಲ್ಲಿ ಚಿಕ್ಕಮಗಳೂರು, ಹುಣಸೂರು ಮತ್ತು ಮೂಡಿಗೆರೆಗಳಲ್ಲಿ ಕಾಫಿ ಪರಿಷ್ಕರಣ ಕೇಂದ್ರಗಳನ್ನು ಕಾಣಬಹುದು.

ಇವಲ್ಲದೆ ವಿವಿಧ ಬಗೆಯ ಇನ್ನು ಕೆಲವು ದೊಡ್ಡ ಕೈಗಾರಿಕೆಗಳು ಮಲೆನಾಡಿನಲ್ಲಿವೆ. ದಾಂಡೇಲಿಯ ಪ್ಲೈವುಡ್ ಕಾರ್ಖಾನೆ, ಮರ ಕೊಯ್ಯುವ ಕಾರ್ಖಾನೆ, ಭದ್ರಾವತಿಯ ಸಿಮೆಂಟ್ ಕಾರ್ಖಾನೆ ಮುಖ್ಯ. ಮರದ ದಿಮ್ಮಿ ಉದ್ಯಮಗಳು ತರೀಕೆರೆ, ಚಿಕ್ಕಮಗಳೂರು, ಬೇಲೂರು, ಹಾಸನ, ಹುಣಸೂರುಗಳಲ್ಲೂ ಇವೆ. ಈ ಪ್ರದೇಶದ ಹೊರಗಿರುವ ಅರಸೀಕೆರೆ, ಮೈಸೂರು, ನಂಜನಗೂಡುಗಳನ್ನು ಈ ಪಟ್ಟಿಯಲ್ಲಿ ಸೇರಿಸಬಹುದು. ಖಾನಾಪುರ, ಶಿರಾಳಕೊಪ್ಪ, ಸಾಗರ, ಶಿವಮೊಗ್ಗ ಮುಂತಾದೆಡೆಗಳಲ್ಲಿ ಇಟ್ಟಿಗೆ ಮತ್ತು ಹೆಂಚು ತಯಾರಿಕೆಯೂ ಶಿವಮೊಗ್ಗದಲ್ಲಿ ಸಾಬೂನು ಮತ್ತು ರಾಸಾಯನಿಕವಸ್ತು ತಯಾರಿಕೆಯೂ ಲೋಂಡದಲ್ಲಿ ಮೂಳೆ ಗೊಬ್ಬರ ತಯಾರಿಕೆಯೂ ಉಲ್ಲೇಖನಾರ್ಹ.

ಉತ್ತರ ಮೈದಾನದ ಹತ್ತಿ ಬೆಳೆಯುವ ಪ್ರದೇಶದಲ್ಲೆಲ್ಲ ತಲಾ 30 ರಿಂದ 50 ಜನ ಕೆಲಸ ಮಾಡುವ ಸಣ್ಣ ಹತ್ತಿ ಹಿಂಜುವ ಕಾರ್ಖಾನೆಗಳಿವೆ. ಇವು ಸ್ಥಾಪಿತವಾಗಿರುವುದು ಹತ್ತಿ ಸಂಗ್ರಹ ಕೇಂದ್ರಗಳ ಬಳಿಯಲ್ಲಿ. ಹುಬ್ಬಳ್ಳಿ, ಗದಗ, ಬಿಜಾಪುರ, ಅಣ್ಣಿಗೇರಿ, ನರಗುಂದ, ರೋಣ, ಬೈಲಹೊಂಗಲ ಮತ್ತು ಬಾಗಲಕೋಟೆ. ಈ ಸ್ಥಳಗಳಲ್ಲಿ ದೊಡ್ಡ ಉದ್ಯಮಗಳೂ ಉಂಟು. ತುಂಗಭದ್ರಾ ಹತ್ತಿ ಬೆಳೆಯ ಪ್ರದೇಶಕ್ಕೆ ಮುಖ್ಯವಾಗಿ ರಾಯಚೂರು ಹಿಂಜುವ ಕೇಂದ್ರ. ದೊಡ್ಡ ಹತ್ತಿ ಜವಳಿ ಕೈಗಾರಿಕೆ ಗೋಕಾಕ, ಹುಬ್ಬಳ್ಳಿ, ಗದಗ, ಬೆಳಗಾಂವಿ, ಹೊಸಪೇಟೆ ಮತ್ತು ಗುಲ್ಬರ್ಗಗಳಲ್ಲಿ ಕೇಂದ್ರಿಕೃತವಾಗಿದೆ. ಕೈಮಗ್ಗದ ಕೈಗಾರಿಕೆ ಅನೇಕ ಕಡೆಗಳಲ್ಲಿ ಹರಡಿದೆ. ಗುಳೇದ ಗುಡ್ಡ, ಇಳಕಲ್, ಅಮೀನಗಡ, ಹುನಗುಂದ, ಕಮತಗಿ, ರಬಕವಿ, ಪಾಚ್ಛಾಪುರಗಳಲ್ಲಿ ಇಂದಿಗೂ ಇದನ್ನು ಅಧಿಕವಾಗಿ ಕಾಣಬಹುದು. ಬೆಳಗಾಂವಿಯ ಸುತ್ತ ರೇಷ್ಮೆ ಕೈಗಾರಿಕೆಯುಂಟು.

ವ್ಯವಸಾಯೋತ್ಪನ್ನಗಳನ್ನಾಧರಿಸಿದ ದೊಡ್ಡ ಕೈಗಾರಿಕೆಗಳನ್ನು ವ್ಯಾಪಕವಾಗಿ ಕಾಣಬಹುದು. ಎಣ್ಣೆ ಅಕ್ಕಿ ಗಿರಣಿಗಳನ್ನು ಇಲ್ಲಿ ಹೆಸರಿಸಬಹುದು. ಬಾದಾಮಿ, ಯಾದಗಿರಿ ಮುಂತಾದ ಸ್ಥಳೀಯ ಮಾರುಕಟ್ಟೆಗಳಲ್ಲಿ ಇವು ಹೆಚ್ಚಾಗಿವೆ. ಬಿಜಾಪುರ, ರಾಯಚೂರು, ಬಾಗಲಕೋಟೆಗಳು ಮುಖ್ಯ ಕೇಂದ್ರಗಳು. ತುಂಗಭದ್ರಾ ನಾಲೆ ಬಯಲಿನಲ್ಲಿ ಹೊಸಪೇಟೆ, ಮುನಿರಾಬಾದ್‍ಗಳಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಬಾವಿ ನೀರಾವರಿ ಸೌಕರ್ಯವಿರುವ ವಾಯವ್ಯದ ಉಗಾರ್‍ಖುರ್ದ್ ಮತ್ತು ಕಣಬೂರಗಳು ಇನ್ನೆರಡು ಮುಖ್ಯ ಪ್ರದೇಶಗಳು. ಅಲ್ಲಿ, ಮುಖ್ಯವಾಗಿ ನಿಪ್ಪಾಣಿಯಲ್ಲಿ, ಮಧ್ಯಮಗಾತ್ರದ ಹೊಗೆಸೊಪ್ಪಿನ ಕೇಂದ್ರಗಳಿವೆ. ರಾಣಿಬೆನ್ನೂರು, ಸವಣೂರು, ಯಾದಗಿರಿಗಳಲ್ಲೂ ಹುಬ್ಬಳ್ಳಿಯಲ್ಲೂ ಇವನ್ನು ಕಾಣಬಹುದು. ಹುಬ್ಬಳ್ಳಿ ಒಂದು ಮುಖ್ಯ ಕೈಗಾರಿಕಾ ಕೇಂದ್ರ.

ಹರಿಹರದಲ್ಲಿ ಯಂತ್ರೋಪಕರಣ ಕೈಗಾರಿಕೆಯೂ ಸಣ್ಣ ವ್ಯವಸಾಯೋಪಕರಣ ಕಾರ್ಖಾನೆಯೂ ಇವೆ. ಹುಬ್ಬಳ್ಳಿ ಎಂಜಿನಿಯರಿಂಗ್ ಕೈಗಾರಿಕೆಗಳಿಗೂ ಮುಖ್ಯವಾದದ್ದು. ಅಲ್ಲಿ ರೈಲ್ವೆ ಕಾರ್ಯಾಗಾರವಿದೆ. ಬೆಳಗಾಂವಿಯಲ್ಲಿರುವ ಸಣ್ಣ ಕೈಗಾರಿಕೆಗಳು ಬಗೆಬಗೆಯವು. ಬಿಜಾಪುರದಲ್ಲೂ ಕೆಲವು ಸಣ್ಣ ಉದ್ಯಮಗಳುಂಟು.

ಬೆಳಗಾಂವಿಯ ಕೈಗಾರಿಕೆಗಳಲ್ಲಿ ಮರದ ದಿಮ್ಮಿ ಉದ್ಯಮ ಮುಖ್ಯವಾದದ್ದು. ಬಾಗಲಕೋಟೆ ಕಲಾದಗಿಗಳಲ್ಲಿ ಸಿಮೆಂಟ್ ಸಂಬಂಧವಾದ ಸಣ್ಣ ಉದ್ಯಮಗಳಿವೆ. ಮೈದಾನದ ಪಶ್ಚಿಮದಂಚಿನಲ್ಲಿ ಚರ್ಮದ ಕೈಗಾರಿಕೆಯೂ ಉಂಟು. ಗುಲ್ಬರ್ಗದ ದಕ್ಷಿಣಕ್ಕೆ ಶಾಹಬಾದಿನ ಸಿಮೆಂಟ್ ಕಾರ್ಖಾನೆ ದೊಡ್ಡದು. ಇದು ಬಹುತೇಕ ಯಾಂತ್ರೀಕೃತ. ಬಳ್ಳಾರಿ, ಬೆಳಗಾಂವಿಗಳಲ್ಲಿ ಸಾಬೂನು ಕೈಗಾರಿಕೆಯೂ ಸಣ್ಣ ಪ್ರಮಾಣದಲ್ಲಿ ನಡೆಯುತ್ತದೆ.

ಬೆಂಗಳೂರು–ಪುಣೆ ರೈಲುಹಾದಿಯ ಉದ್ದಕ್ಕೂ ಅದರ ಸಮೀಪದಲ್ಲೂ ಕೈಗಾರಿಕೆಗಳು ಹೆಚ್ಚಾಗಿ ಗೊಂಚಲುಗಳಂತೆ ಸೇರಿಕೊಂಡಿರುವುದನ್ನು ಕಾಣಬಹುದು. ರಾಯಚೂರು–ಷೋರಾಪುರ ರೈಲುಮಾರ್ಗಗಳ ಪ್ರದೇಶದಲ್ಲೂ ತಕ್ಕಮಟ್ಟಿಗೆ ಇವು ಕಾಣಬರುತ್ತವೆ. ಪೂರ್ವಮಧ್ಯ ಪ್ರದೇಶದಲ್ಲಿ ಅಳಂದದಿಂದ ಹೊಸಪೇಟೆಯವರೆಗೆ ಇವು ಇಲ್ಲವೇ ಇಲ್ಲವೆನ್ನಬೇಕು. ಆದರೆ ಇಲ್ಲೆಲ್ಲ ಕೈಮಗ್ಗದಂಥ ಸಣ್ಣ ಕೈಗಾರಿಕೆಗಳು ಹಬ್ಬಿವೆ. ಬೀದರ್‌ನಲ್ಲಿ ಬೀದರಿ ಕೆಲಸ ನಡೆಯುತ್ತದೆ.

ಹೆಂಚಿನ ಕಾರ್ಖಾನೆ, ಮಂಗಳೂರು

ಉತ್ತರ ಮೈದಾನ ಪ್ರದೇಶದ ಮುಖ್ಯ ಕೈಗಾರಿಕೆಯೆಂದರೆ ಜವಳಿ ತಯಾರಿಕೆ. ಬಿಜಾಪುರ, ಧಾರವಾಡ, ಬೆಳಗಾಂವಿ ಮತ್ತು ಬಳ್ಳಾರಿಯಲ್ಲಿ ಉಣ್ಣೆ ತಯಾರಿಕೆ, ಅಲ್ಪ ಪ್ರಮಾಣ ಕೇಂದ್ರೀಕರಿಸಿದ ರೇಷ್ಮೆಯ ಸಣ್ಣ ಉದ್ಯಮಗಳು ಬಿಜಾಪುರದಲ್ಲೂ ದೊಡ್ಡವು ಬೆಳಗಾವಿಯಲ್ಲೂ ಉಂಟು.

ಹತ್ತಿ ಹಿಂಜುವಿಕೆ, ಹತ್ತಿ ಮತ್ತು ರೇಷ್ಮೆ ಜವಳಿ ಕೈಗಾರಿಕೆಗಳು ದಕ್ಷಿಣ ಮೈದಾನದ ಕೆಲವು ಮುಖ್ಯ ಕೇಂದ್ರಗಳಲ್ಲಿವೆ. ಹತ್ತಿ ಹಿಂಜುವ ಕೇಂದ್ರಗಳು ಮುಖ್ಯವಾಗಿ ದಾವಣಗೆರೆ ಚಿತ್ರದುರ್ಗಗಳಲ್ಲಿ–ಇವೆ. ಹತ್ತಿ ಜವಳಿಯ ಮುಖ್ಯ ಕೇಂದ್ರಗಳು, ದಾವಣಗೆರೆ, ಮೈಸೂರು, ನಂಜನಗೂಡು ಮತ್ತು ಬೆಂಗಳೂರು. ಅತಿ ದೊಡ್ಡ ಗಿರಣಿಗಳಿರುವುದು ಬೆಂಗಳೂರಿನಲ್ಲೇ. ಅನೇಕ ಸಣ್ಣ ಉದ್ಯಮಗಳೂ ಅಲ್ಲುಂಟು. ರೇಷ್ಮೆ ಕೈಗಾರಿಕೆಯೂ ಬೆಂಗಳೂರಿನಲ್ಲೇ ಸಾಂದ್ರೀಕೃತವಾಗಿದೆ. ಮೈಸೂರು, ಚನ್ನಪಟ್ಟಣ, ಕನಕಪುರ, ತಿರುಮಕೂಡಲು ನರಸೀಪುರ, ನಂಜನಗೂಡು ಮತ್ತು ಮಾಂಬಳ್ಳಿ ಇತರ ಕೇಂದ್ರಗಳು, ಮೈಸೂರು ಬೆಂಗಳೂರುಗಳಲ್ಲಿ ಈ ಕೈಗಾರಿಕೆಗೆ ಅಗತ್ಯವಾದ ಸಾರಿಗೆ ಮತ್ತು ಕಾರ್ಮಿಕರ ಸೌಲಭ್ಯವುಂಟು.

ಬೆಂಗಳೂರು ಮೈಸೂರುಗಳಲ್ಲಿ ವ್ಯವಸಾಯೋತ್ಪನ್ನಗಳನ್ನವಲಂಬಿಸಿದ ಕೈಗಾರಿಕೆಗಳು ಮುಖ್ಯವಾಗಿ ಕೇಂದ್ರೀಕೃತವಾಗಿವೆ. ಕಾರ್ಮಿಕ ಸರಬರಾಜು, ಮಾರುಕಟ್ಟೆ–ಇವು ಎರಡು ಮುಖ್ಯ ಸೌಲಭ್ಯಗಳು. ಅಕ್ಕಿ ಗಿರಣಿಗಳು ಹೆಚ್ಚಾಗಿ ನಂಜನಗೂಡು, ಕೃಷ್ಣರಾಜನಗರ, ಪಾಂಡವಪುರ ಮತ್ತು ಹೊಳೆನರಸಿಪುರ, ಶಿರಾ, ಮಧುಗಿರಿ, ಚಿತ್ರದುರ್ಗ, ಮುಳಬಾಗಿಲು,



ಚಾಪೆ ಹೆಣಿಗೆ

ದಾವಣಗೆರೆ ಇತ್ಯಾದಿಗಳಲ್ಲಿವೆ. ಗೋದಿ ಹಿಟ್ಟಿನ ತಯಾರಿಕೆ ಬೆಂಗಳೂರಿನಲ್ಲಿ ಮುಖ್ಯ. ಎಣ್ಣೆ ಉತ್ಪಾದನೆ ದಕ್ಷಿಣ ಮೈದಾನ ಪ್ರದೇಶದಲ್ಲೆಲ್ಲ ನಡೆಯುತ್ತದೆ. ಆದರೆ ಕೆಲವು ಕೇಂದ್ರಗಳಲ್ಲಿ ಹೆಚ್ಚು. ಉದಾ: ದಾವಣಗೆರೆ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಕುಡತಿನಿ, ಬಳ್ಳಾರಿ ತುಮಕೂರು, ಹಾಸನ, ಮುಳಬಾಗಿಲು, ಮೈಸೂರು, ಬೆಂಗಳೂರು ಇತ್ಯಾದಿ. ದಕ್ಷಿಣ ಮೈದಾನದಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಕೊಳ್ಳೆಗಾಲ, ಮಂಡ್ಯ, ಪಾಂಡವಪುರ ಹಾಗೂ ಇನ್ನು ಕೆಲವು ಕಡೆಗಳಲ್ಲಿ ಸಕ್ಕರೆ ಉದ್ಯಮವಿದೆ. ಉದಾ: ಕಾಳಮುದ್ದನದೊಡ್ಡಿ, ಸಮೀರವಾಡಿ, ಮುನಿರಾಬಾದ್, ಸಿರುಗುಪ್ಪ, ಸರಗೂರು, ದಾವಣಗೆರೆ, ಹೊಸಪೇಟೆ, ಗಂಗಾವತಿ, ಹಳ್ಳಿಖೇಡ, ಮುಧೋಳ, ಗೋಕಾಕ, ಹುಕ್ಕೇರಿ, ಮುನವಳ್ಳಿ, ಹಾಸನ, ಸಂಕೇಶ್ವರ, ಚಿಕ್ಕೋಡಿ, ಚುಂಚನಕಟ್ಟೆ, ಗೌರಿಬಿದನೂರು, ಶಿವಮೊಗ್ಗ, ಕಂಪ್ಲಿ, ಹೊಸಕೋಟೆ. ದಕ್ಷಿಣ ಮೈದಾನದ ನೈಋತ್ಯ ಪ್ರದೇಶವಾದ ಮೈಸೂರು–ನಂಜನಗೂಡು–ಗುಂಡ್ಲುಪೇಟೆ–ಚಾಮರಾಜನಗರ ಸುತ್ತಿನಲ್ಲಿ ಹಲವು ಹೊಗೆಸೊಪ್ಪಿನ ಉದ್ಯಮಗಳಿವೆ. ಬೀಡಿ ಪ್ರಧಾನ ಉತ್ಪನ್ನ. ಬೆಂಗಳೂರಿನಲ್ಲೂ ಈ ಉದ್ಯಮ ಬೆಳೆದಿದೆ. ವೈಟ್‍ಫೀಲ್ಡ್, ರಾಮನಗರ, ಚನ್ನಪಟ್ಟಣ, ಗೌರಿಬಿದನೂರು, ತುಮಕೂರು, ಹೊಸಕೋಟೆ, ಆನೆಕಲ್ಲು, ಕೊರಟಗೆರೆ ಇವು ಇತರ ಕೇಂದ್ರಗಳು. ಈ ಉದ್ಯಮ ಉಳಿದ ಪ್ರದೇಶಗಳಿಗೂ ಹಬ್ಬುತ್ತಿದೆ. ಕಚ್ಚಾಸಾಮಗ್ರಿಯ ಸರಬರಾಜು ಮತ್ತು ಮಾರಾಟಗಳ ವಿಚಾರದಲ್ಲಿ ತೊಂದರೆಯಿಲ್ಲ. ಮೈಸೂರಿನ ಬಳಿಯ ಬೆಳಗೊಳದಲ್ಲಿದ್ದ ಕಾಗದದ ಕಾರ್ಖಾನೆ ಈಗ ಕಾರ್ಯನಿರ್ವಹಿಸುತ್ತಿಲ್ಲ. ಸಕ್ಕರೆ ಕಾರ್ಖಾನೆಯ ಉಪೋತ್ಪನ್ನ ಇದಕ್ಕೆ ಕಚ್ಚಾ ಸಾಮಗ್ರಿ.

ಎಂಜಿನಿಯರಿಂಗ್ ಕೈಗಾರಿಕೆಗಳಲ್ಲಿ ಬೆಂಗಳೂರು ಪ್ರಧಾನ. ಅನೇಕ ದೊಡ್ಡ ಕಾರ್ಖಾನೆಗಳನ್ನೂ ಅಸಂಖ್ಯಾತ ಸಣ್ಣ ಉದ್ಯಮಗಳ ನಿಬಿಡ ನೆಲೆಯನ್ನೂ ಅಲ್ಲಿ ಕಾಣಬಹುದು. ವಿಮಾನ, ದೂರವಾಣಿ, ಲೋಹಗಾರಿಕೆ, ಯಂತ್ರೋಪಕರಣ, ಕೈಗಡಿಯಾರ, ಎಲೆಕ್ಟ್ರಾನಿಕ್ಸ್, ವಿದ್ಯುದುಪಕರಣ, ವಿದ್ಯುದ್ದೀಪ, ರೇಡಿಯೋ ಮುಂತಾದ ಹಲವು ಕೈಗಾರಿಕೆಗಳ ಹಬ್ಬುಗೆಯೇ ಇದೆ. ಬೆಳೆಯುತ್ತಿರುವ ಈ ನಗರದಲ್ಲಿ ಕಾರ್ಮಿಕ ಸರಬರಾಜೂ ಮಾರಾಟ ಸೌಲಭ್ಯವೂ ಧಾರಾಳವಾಗಿದೆ. ಇಲ್ಲಿರುವ ಹಲವಾರು ಕೇಂದ್ರಿಯ ಬೃಹದ್ಗಾತ್ರ ಉದ್ಯಮಗಳು ನಗರದ ಬೆಳವಣಿಗೆಗೆ ಕಾರಣ. ಹಿಂದಿನ ಮೈಸೂರಿನ ಸರ್ಕಾರ ಹಾಕಿದ ತಳಹದಿ ಇಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಮುಖ್ಯ ಕಾರಣ.

ರಾಸಾಯನಿಕಗಳು, ಸಾಬೂನು, ಊದುಬತ್ತಿ ಮುಂತಾದ ಉದ್ಯಮಗಳು ಮುಖ್ಯವಾಗಿ ಮೈಸೂರು ಬೆಂಗಳೂರುಗಳಲ್ಲಿವೆ. ಚಿಂತಾಮಣಿ, ಕೋಲಾರ, ಮುಂತಾದವು ಪರಿಮಳ ವಸ್ತುಗಳನ್ನು ತಯಾರಿಸುತ್ತವೆ. ಸಣ್ಣ ಎಂಜಿನಿಯರಿಂಗ್ ಉದ್ಯಮಗಳು ಮೈಸೂರು, ತುಮಕೂರು, ಗೂಳೂರು, ಕೋಲಾರ, ರಾಬರ್ಟ್‍ಸನ್‍ಪೇಟೆ, ಬಂಗಾರಪೇಟೆಗಳಲ್ಲಿವೆ. ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ ಗಣಿ ಯಂತ್ರ ಮತ್ತು ಬಂಡೆ ಕೊರೆಯುವ ಯಂತ್ರ ತಯಾರಿಸಬಹುದಾದರೂ ಇದಕ್ಕೆ ಅವಶ್ಯವಾದ ಪರಿಣಿತ ಶ್ರಮ ಅಲ್ಲಿ ಬೆಳೆದಿಲ್ಲ. ಅನೇಕ ಬಗೆಯ ಸಣ್ಣ ಉದ್ಯಮಗಳಿಗೂ ಬೆಂಗಳೂರು ಕೇಂದ್ರವಾಗಿದೆ. ಚರ್ಮ ಕೈಗಾರಿಕೆ, ಕೃತಕ ವಸ್ತ್ರ–ಇವು ಮುಖ್ಯ. ಮೈಸೂರಿನಲ್ಲೂ ಚರ್ಮದ ಕೈಗಾರಿಕೆಯುಂಟು. ಇಟ್ಟಿಗೆ ಮತ್ತು ಹೆಂಚು ತಯಾರಿಕೆ ಸಣ್ಣ ಪ್ರಮಾಣದಲ್ಲಿ ತುಮಕೂರು, ಬಂಗಾರಪೇಟೆ ಮತ್ತು ಯಲಹಂಕಗಳಲ್ಲಿ ನಡೆಯುತ್ತದೆ. ಅಮ್ಮಸಂದ್ರದ ಸಿಮೆಂಟ್ ಕೈಗಾರಿಕೆ ದೊಡ್ಡಗಾತ್ರದ್ದು.

**ಸಾರಿಗೆ–ಸಂಪರ್ಕ:** ಸಾರಿಗೆಯ ವಿಚಾರದಲ್ಲಿ ಕರ್ನಾಟಕಕ್ಕೆ ಅನೇಕ ಸೌಲಭ್ಯಗಳುಂಟು. ಅರಬ್ಬೀ ಸಮುದ್ರಾಭಿಮುಖವಾದ ಸು. 320 ಕಿಮೀ ಕರಾವಳಿಯ ಮೇಲೆ 19 ಸಣ್ಣ ಮತ್ತು ಮಧ್ಯಮ ವರ್ಗದ ಬಂದರುಗಳಿವೆ. ಮಂಗಳೂರು ಒಂದು ದೊಡ್ಡ ಬಂದರಾಗಿ ಅಭಿವೃದ್ಧಿಗೊಳಿಸಲಾಗಿದೆ. ಇವುಗಳ ಹಿನ್ನಾಡು ಬಲು ಫಲವತ್ತಾದದ್ದು. ಕರ್ನಾಟಕದಲ್ಲಿ 2761 ಕಿಮೀ ಬ್ರಾಡ್ ಗೇಜ್ ಮತ್ತು 410 ಕಿಮೀ ಮೀಟರ್ ಗೇಜ್ ರೈಲುಮಾರ್ಗಗಳುಂಟು. ರಸ್ತೆಗಳ ಉದ್ದ 1,31,815 ಕಿಮೀ ಇದರಲ್ಲಿ 92,232 ಕಿಮೀ (ಶೇ.70) ಪಕ್ಕ ರಸ್ತೆ. ಉಳಿದ 39,583 ಕಿಮೀ ಕಚ್ಚಾ ರಸ್ತೆಯಾಗಿರುತ್ತದೆ. 13 ರಾಷ್ಟ್ರೀಯ ಹೆದ್ದಾರಿಗಳು ರಾಜ್ಯದಲ್ಲಿದ್ದು, ಇವುಗಳ ಉದ್ದ 3728 ಕಿಮೀ ಮುಂಬಯಿ ತಿರುವನಂತಪುರಗಳನ್ನು ಕೂಡಿಸುವ ಕರಾವಳಿ ರಸ್ತೆಯೂ ಕಬ್ಬಿಣ ಅದುರು ಸಾಗಿಸಲು ಅವಶ್ಯವಾದ 600 ಕಿಮೀ ರಸ್ತೆಗಳಿವೆ. ಬೆಂಗಳೂರು–ಸೇಲಂ, ಹಾಸನ–ಮಂಗಳೂರು ಮತ್ತು ಕೊಂಕಣ ರೈಲುದಾರಿಗಳು ಹೊಸವು.




ಬೆಂಗಳೂರು, ಬೆಳಗಾಂವಿ ಮೈಸೂರು ಮತ್ತು ಮಂಗಳೂರುಗಳಲ್ಲಿ ಮುಖ್ಯ ವಿಮಾನ ನಿಲ್ದಾಣಗಳಿವೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಪರಿಗಣಿಸಲಾಗಿದ್ದು, ದೇವನ ಹಳ್ಳಿಯಲ್ಲಿ ಹೊಸ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯಮುಂದುವರಿದಿದೆ.

ಕರ್ನಾಟಕ ರಾಜ್ಯದ ಸಂಚಾರ ಮಾರ್ಗಗಳನ್ನು ಗಮನಿಸಿದಾಗ ಕೆಲವು ಮುಖ್ಯ ಅಂಶಗಳು ವ್ಯಕ್ತಪಡುವುವು. ವಿಜಯನಗರ ಪತನಾನಂತರ ತುಂಡಾದ ಕನ್ನಡ ನಾಡು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇಪ್ಪತ್ತೇಳು ಆಡಳಿತಗಳಲ್ಲಿ ಹಂಚಿಹೋಗಿತ್ತಾದ್ದರಿಂದ ಸಂಚಾರಸಂಪರ್ಕ ಬೆಳವಣಿಗೆ ವ್ಯವಸ್ಥಿತ ರೀತಿಯಲ್ಲಿ ಸಾಗಲಿಲ್ಲ. ರಾಜ್ಯದ ಹಲವು ಭಾಗಗಳು ರಾಜ್ಯದ ಕೇಂದ್ರದಿಂದ ವಿಮುಖವಾಗಿ ಇತರ ಪ್ರಾಂತ್ಯಗಳ ಅಂಚುಗಳಾಗಿದ್ದುದರಿಂದ ಸಂಚಾರಮಾರ್ಗಗಳ ಬೆಳವಣಿಗೆಯಾಗಲಿಲ್ಲ. ಉತ್ತರ ಕನ್ನಡ, ಬಿಜಾಪುರ ಮತ್ತು ಹೈದರಾಬಾದ್ ಪ್ರದೇಶಗಳು ಬಹಳ ಹಿಂದುಳಿದವು. ಉತ್ತರ ಕನ್ನಡ ಜಿಲ್ಲೆಯೂ ಅಷ್ಟೆ. ಮಂಗಳೂರು ಒಂದು ರೈಲು ಕೊನೆದಾಣ (ಟರ್ಮಿನಸ್). ಕೊಡಗಿನಲ್ಲಿ ರೈಲುಮಾರ್ಗವಿಲ್ಲ. ಬೆಂಗಳೂರು ಧಾರವಾಡ ಜಿಲ್ಲೆಗಳು ಉತ್ತಮ ರೈಲು ಸಂಪರ್ಕ ಹೊಂದಿವೆ. ಬೆಂಗಳೂರು ಹುಬ್ಬಳ್ಳಿಗಳು ರೈಲ್ವೆಕೇಂದ್ರಗಳು. ಹಳೆಯ ಮೈಸೂರು ರಾಜ್ಯದ ರೈಲುಮಾರ್ಗಗಳು ಕ್ರಮಬದ್ಧವಾಗಿ ನಿರ್ಮಿಸಿದಂಥವು. ಅವು ಬೆಂಗಳೂರಿಗೆ ಅಭಿಮುಖವಾದವು. ಉತ್ತರ ಕರ್ನಾಟಕದ ರೈಲುಮಾರ್ಗಗಳು ಹುಬ್ಬಳ್ಳಿಗೆ ಅಭಿಮುಖವಾಗಿವೆ. ಕರ್ನಾಟಕದಲ್ಲಿಯ ಎಲ್ಲಾ ರೈಲು ಮಾರ್ಗಗಳು ಇತ್ತೀಚೆಗೆ ಬ್ರಾಡ್‍ಗೇಜ್‍ಗೆ ಪರಿವರ್ತನೆಯಾಗುತ್ತಿವೆ.

ಕರ್ನಾಟಕದ ಏಕೀಕರಣ ಸಂಪೂರ್ಣವಾಗಬೇಕಾದರೆ, ಆರ್ಥಿಕ ಸಮಗ್ರತೆ ಏರ್ಪಡಬೇಕಾದರೆ, ಆಂತರಿಕ ಮಾರ್ಗಗಳು ಬೆಳೆಯಬೇಕು. ರೈಲುಮಾರ್ಗಗಳ ಕೊರತೆಯನ್ನು ರಸ್ತೆಗಳು ಬಹುತೇಕ ಪೂರೈಸುತ್ತವೆ. ಬೆಂಗಳೂರಿನಿಂದ ಎಲ್ಲ ಜಿಲ್ಲೆಗಳ ಮುಖ್ಯ ಸ್ಥಳಗಳಿಗೂ ಉತ್ತಮ ರಸ್ತೆಗಳಿವೆ. ಇಡೀ ರಾಜ್ಯದ ಸಾರಿಗೆ ವ್ಯವಸ್ಥೆಯನ್ನು ಸ್ಥೂಲವಾಗಿ ವಿವೇಚಿಸಿದ

ಮೇಲೆ ವಿವಿಧ ಸ್ವಾಭಾವಿಕ ವಿಭಾಗಗಳ ಪರಿಸ್ಥಿತಿಯನ್ನಷ್ಟು ಪರಿಶೀಲಿಸಬಹುದು. ಕರಾವಳಿಯಲ್ಲಿ ಮಂಗಳೂರೊಂದೇ ರೈಲ್ವೆ ಸಂಪರ್ಕ ಪಡೆದಿರುವ ಮುಖ್ಯ ಸ್ಥಳ. ಬ್ರಾಡ್‌ಗೇಜಿನ ರೈಲುಮಾರ್ಗವೊಂದು ಪಾಲ್ಘಾಟಿನ ಮೂಲಕ ಸುತ್ತಿಕೊಂಡು ಚೆನ್ನೈ ತಲಪುತ್ತದೆ.




ಮಂಗಳೂರಿನ ರೈಲ್ವೆ ಹಿನ್ನಾಡು ಕರ್ನಾಟಕದೊಳಗಿಲ್ಲ. ನಿರ್ಮಾಣವಾಗುತ್ತಿರುವ ಮಂಗಳೂರು–ಹಾಸನ ರೈಲ್ವೆಯಿಂದ ಮಂಗಳೂರಿನ ಸಮೃದ್ಧವಾದ ಹಿನ್ನಾಡಿಗೆ ಸಮುದ್ರಮುಖ ಲಭ್ಯವಾದಂತಾಗುತ್ತದೆ. ಕರಾವಳಿಯ ಉದ್ದಕ್ಕೂ ಘಟ್ಟದಾಚೆಗೂ ಹಲವಾರು ಬಸ್ ಸಂಚಾರ ಮಾರ್ಗಗಳುಂಟು. ಕಾರವಾರದಿಂದ ಅಂಕೋಲದ ಮೂಲಕ ಯಲ್ಲಾಪುರ ಹುಬ್ಬಳ್ಳಿ ಧಾರವಾಡಗಳಿಗೂ ಕುಮಟದಿಂದ ಶಿರಸಿಗೂ ರಸ್ತೆ ಸೌಲಭ್ಯವಿದೆ. ಬೆಂಗಳೂರು–ಮೈಸೂರು–ಮಡಿಕೇರಿಗಳ ಮೂಲಕ ಸಾಗುವ ರಸ್ತೆಯೂ ಮುಖ್ಯ. ಹಾಸನ–ಮಂಗಳೂರು, ಮಂಗಳೂರು–ಚಿಕ್ಕಮಗಳೂರು ಮಾರ್ಗಗಳು ಇನ್ನೆರಡು. ಕುಂದಾಪುರ, ಉಡುಪಿ, ಪುತ್ತೂರು, ಮುಲ್ಕಿ, ಮಂಗಳೂರು ಮುಖ್ಯ ರಸ್ತೆಕೇಂದ್ರಗಳು. ಕುಂದಾಪುರ, ಉಡುಪಿ, ಪುತ್ತೂರು, ಮುಲ್ಕಿಗಳಿಂದ ಆಗುಂಬೆಯ ಮೂಲಕ ತೀರ್ಥಹಳ್ಳಿ, ಶಿವಮೊಗ್ಗ, ಕೊಪ್ಪ, ತರೀಕೆರೆಗಳಿಗೆ ಸಂಪರ್ಕವಿದೆ. ಘಟ್ಟದ ಆಚೀಚೆಯ ಸಾರಿಗೆ ಸಂಪರ್ಕ ಪ್ರಾಚೀನವಾದದ್ದು. ಮಂಗಳೂರಿನ ಹಿನ್ನಾಡು ರಸ್ತೆ ಸಮೃದ್ಧಪ್ರದೇಶ.

ಉತ್ತರ ದಕ್ಷಿಣ ಮಲೆನಾಡಿಗೂ ಮೈದಾನಕ್ಕೂ ನಡುವೆ ರೈಲ್ವೆ ಸಂಪರ್ಕವುಂಟು. ಬೆಂಗಳೂರು–ಪುಣೆ ರೈಲುಮಾರ್ಗದಲ್ಲಿ ಅರಸೀಕೆರೆಯಿಂದ ಒಂದು ಕವಲು ಹಾಸನದ ಮೂಲಕ ಮೈಸೂರಿಗೂ ಬೀರೂರಿನಿಂದ ಒಂದು ಕವಲು ಭದ್ರಾವತಿಯ ಮೂಲಕ ಶಿವಮೊಗ್ಗ–ತಾಳಗುಪ್ಪಗಳಿಗೂ ಸಾಗುತ್ತವೆ. ಬೆಂಗಳೂರು–ಪುಣೆ ಮಾರ್ಗ ಸಾಗುವುದು ಅರೆಮಲೆನಾಡಿನಲ್ಲಿ (ಧಾರವಾಡ–ಬೆಳಗಾಂವಿಗಳ ಮೂಲಕ). ಅಳ್ಣಾವರದಿಂದ ದಾಂಡೇಲಿಗೂ ಲೋಂಡದಿಂದ ಕ್ಯಾಸಲ್‌ರಾಕಿಗೂ ಮರ್ಮಗೋವಕ್ಕೂ ಕವಲುಗಳಿವೆ. ಅರೆಮಲೆನಾಡಿನ ಒಂದು ತುಂಡಿನೊಡನೆ ಮೈಸೂರು–ಚಾಮರಾಜನಗರ ರೈಲ್ವೆ ಸಂಪರ್ಕವುಂಟು. ಒಟ್ಟಿನಲ್ಲಿ ಮಲೆನಾಡಿನ ಶೇ. 10 ಭಾಗ ಪ್ರದೇಶವನ್ನು ಮಾತ್ರ ರೈಲ್ವೆ ಮುಟ್ಟಲು ಸಾಧ್ಯವಾಗಿದೆಯೆನ್ನಬಹುದು. ಮಲೆನಾಡಿನ ಮೂಲಕ ಹಾದುಹೋಗುವ ರಸ್ತೆಗಳ ಬಗ್ಗೆ ಪ್ರಥಮವಾಗಿ ಗಮನ ಸೆಳೆಯುವ ಅಂಶವೆಂದರೆ ಪೂರ್ವ–ಪಶ್ಚಿಮವಾಗಿ ಹರಿಯುವ ಮಾರ್ಗಗಳ ಹೆಚ್ಚಳ. ಕರಾವಳಿ ಹೆದ್ದಾರಿಯಂತೆ ಮಲೆನಾಡು ಹೆದ್ದಾರಿಯೊಂದು ಬೆಳೆದಿಲ್ಲ. ಉತ್ತರ ಮಲೆನಾಡಿನಲ್ಲಿ ಯಲ್ಲಾಪುರ ಮತ್ತು ಶಿರಸಿ ಎರಡು ಮುಖ್ಯ ಕೇಂದ್ರಗಳು. ಯಲ್ಲಾಪುರಕ್ಕೂ ಕರಾವಳಿಯ ಅಂಕೋಲ–ಕಾರವಾರಗಳಿಗೂ ಸಂಪರ್ಕವುಂಟು. ಬೆಂಗಳೂರು–ಪುಣೆ ರೈಲುಮಾರ್ಗದೊಂದಿಗೆ ಈಶಾನ್ಯಾಭಿಮುಖವಾಗಿಯೂ ಹಾದಿ ಹರಿದಿದೆ. ಹಳಿಯಾಳ–ಅಳ್ನಾವರ ಜಂಕ್ಷನ್ ಮತ್ತು ಹುಬ್ಬಳ್ಳಿ ಜಂಕ್ಷನ್–ಧಾರವಾಡ

**ಉಡುಪಿ ರಥೋತ್ಸವ**

ಮಾರ್ಗಗಳಿಗೂ ಸಂಪರ್ಕವಿದೆ. ರಸ್ತೆ ಮಾರ್ಗಗಳು, ಶಿರಸಿಯಿಂದ ಕುಮಟ, ಹಾನಗಲ್, ಹುಬ್ಬಳ್ಳಿ, ಬನವಾಸಿ, ಸಿದ್ಧಾಪುರಗಳಿಗೆ ಸುಲಭವಾಗಿ ಹೋಗಿ ಬರಬಹುದು. ಶಿರಸಿ ಒಂದು ಮುಖ್ಯ ವ್ಯಾಪಾರಸ್ಥಳ. ಮಲೆನಾಡಿ ಮೂಲಕ ಹಾಯ್ದು ಹೋಗುವ ಮೈಸೂರು–ಮಡಿಕೇರಿ–ಮಂಗಳೂರು, ಮಂಗಳೂರು–ಮೂಡಿಗೆರೆ–ಹಾಸನ, ಮಂಗಳೂರು–ಮೂಡಿಗೆರೆ–ಆಲೂರು–ಚಿಕ್ಕಮಗಳೂರು, ಚಿಕ್ಕಮಗಳೂರು–ಹಾಸನ–ಕಡೂರು, ಶಿವಮೊಗ್ಗ–ಭದ್ರಾವತಿ–ಚಿತ್ರದುರ್ಗ, ಭದ್ರಾವತಿ–ಕಡೂರು, ಕೊಪ್ಪ–ತರೀಕೆರೆ, ತೀರ್ಥಹಳ್ಳಿ–ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಮುಖ್ಯ ಕೇಂದ್ರಗಳು.



**ಮಂಜುನಾಥೇಶ್ವರ ದೇವಾಲಯ, ಧರ್ಮಸ್ಥಳ**

ಉತ್ತರ ಮೈದಾನದ ಬಹು ವಿಶಾಲ ಪ್ರದೇಶಗಳಲ್ಲಿ ರೈಲುಮಾರ್ಗ ವಿರಳ. ಹಿಂದಿನ ಬೊಂಬಾಯಿ ಕರ್ನಾಟಕದ ಭಾಗಕ್ಕೂ ಹೈದರಾಬಾದ್ ಕರ್ನಾಟಕಕ್ಕೂ ನಡುವೆ ರಸ್ತೆ

ಸಂಪರ್ಕ ಅಲ್ಲಲ್ಲಿ ಕಡಿದಿರುವುದನ್ನು ಕಾಣಬಹುದು. ಸಾವಿರಾರು ಚ.ಕಿಮೀ ಪ್ರದೇಶಗಳಲ್ಲಿ ಒಳ್ಳೆಯ ರಸ್ತೆಗಳಿಲ್ಲ. ಗುಂತಕಲ್-ಶೋಲಾಪುರ-ಮುಂಬಯಿ ಮಾರ್ಗಮೊಂದೇ ಬ್ರಾಡ್‌ಗೇಜ್ ರೈಲುಮಾರ್ಗವಾಗಿತ್ತು. ಈಗ ಇತರ ಮಾರ್ಗಗಳೂ ಬ್ರಾಡ್‌ಗೇಜ್‌ಗೆ ಪರಿವರ್ತನೆಯಾಗಿದೆ, ಆಗುತ್ತಿವೆ. ಬೆಂಗಳೂರು-ಪುಣೆ, ಹುಬ್ಬಳ್ಳಿ-ಗುಂತಕಲ್ ಮತ್ತು ಗದಗ್-ಶೋಲಾಪುರದವು ಇತರ ಮಾರ್ಗಗಳು. ಹೊಸಪೇಟೆಯಿಂದ ಕೊಟ್ಟೂರಿಗೂ ಮ್ಯಾಂಗನೀಸ್ ಪ್ರದೇಶಕ್ಕೂ ರೈಲುಸಂಪರ್ಕವುಂಟು. ಈ ಮಾರ್ಗಕ್ಕೆ ಸಾಮೆಹಳ್ಳಿ ಕೊನೆ. ಮ್ಯಾಂಗನೀಸ್ ಅದಿರು ಮುಂಬಯಿ-ವಿಶಾಖಪಟ್ಟಣ-ಚೆನ್ನೈಗಳಿಗೆ ಸಾಗುತ್ತದೆ. ಹೊಸಪೇಟೆಯಿಂದ ಹುಬ್ಬಳ್ಳಿಗೆ ರೈಲಿನಲ್ಲೂ ಅಲ್ಲಿಂದ ಕಾರವಾರಕ್ಕೆ ರಸ್ತೆಯ ಮೂಲಕವೂ ಕಬ್ಬಿಣದ ಅದಿರಿನ ಹರಿವುಂಟು. ಅದಿರು ಸಾಗಣೆ ಮಂಗಳೂರು ಬಂದರಿನ ಇನ್ನೊಂದು ಗುರಿ.

ರಾಣೆಬೆನ್ನೂರಿನಿಂದ ನಿಪ್ಪಾಣಿ ಶೇಡಬಾಳಗಳವರೆಗೆ ರಸ್ತೆಗಳು ಬಲೆಯಂತೆ ಹೆಣೆದುಕೊಂಡಿವೆ. ಹುಬ್ಬಳ್ಳಿ, ಧಾರವಾಡ, ಬೆಳಗಾಂವಿ, ಸಂಕೇಶ್ವರ, ನಿಪ್ಪಾಣಿ, ಚಿಕ್ಕೋಡಿ, ಗೋಕಾಕ, ಬೈಲಹೊಂಗಲ, ಬಿಜಾಪುರ, ಬಾಗಲಕೋಟೆ, ಜಮಖಂಡಿ, ರಾಣೆಬೆನ್ನೂರು, ಯಲಬುರ್ಗ, ಮುದ್ದೇಬಿಹಾಳ, ಸಿಂದಗಿ ಮುಖ್ಯ ರಸ್ತೆಕೇಂದ್ರಗಳು, ರಾಯಚೂರು, ಗುಲ್ಬರ್ಗ, ಹುಮನಾಬಾದ್, ಬೀದರ್ ಇತರ ಕೆಲವು ಮುಖ್ಯ ಸ್ಥಳಗಳು.




ಬೆಂಗಳೂರಿನಿಂದ ನೆಲಮಂಗಲ ಮಾರ್ಗವಾಗಿ ತುಮಕೂರು ಚಿತ್ರದುರ್ಗಗಳಿಗೂ ಹಾಸನಕ್ಕೂ ರಸ್ತೆಗಳಿವೆ. ಬೆಂಗಳೂರು-ಮೈಸೂರು-ಗುಂಡ್ಲುಪೇಟೆ ರಸ್ತೆ ಇನ್ನೊಂದು ಇದು ನೀಲಗಿರಿಯ ಕಡೆಗೆ ಸಾಗುತ್ತದೆ. ಇದು ಒಂದು ಹೆದ್ದಾರಿ. ಚಿಕ್ಕಬಳ್ಳಾಪುರ. ದೊಡ್ಡಬಳ್ಳಾಪುರ, ಕೋಲಾರ ಚಿನ್ನದ ಗಣಿ ಇತರ ಕೇಂದ್ರಗಳು. ಸಾಮಾನ್ಯವಾಗಿ ಎಲ್ಲ ಜಿಲ್ಲಾ ಮುಖ್ಯಸ್ಥಳಗಳಿಗೆ ಮತ್ತು ದೊಡ್ಡ ಊರುಗಳಿಗೆ ರಸ್ತೆ ಸಂಪರ್ಕವುಂಟು.

ಕರ್ನಾಟಕದಲ್ಲಿ ಜಲಮಾರ್ಗಗಳು ಅಷ್ಟೊಂದು ಮಹತ್ವ ಪಡೆದಿಲ್ಲ. ಅದು ಕೆಲವೇ ಭಾಗಗಳಲ್ಲಿ ಕಾಣಬಹುದು. ಉದಾ: ಉತ್ತರ ಮತ್ತು ದಕ್ಷಿಣ ಕನ್ನಡ ಹಾಗು ಉಡುಪಿ ಜಿಲ್ಲೆಗಳು. ಇವು 312 ಕಿಮೀ ಉದ್ದದ ಒಳನಾಡಿನ ಜಲಮಾರ್ಗಗಳನ್ನು ಹೊಂದಿವೆ. ಸಮುದ್ರದ ಹಿನ್ನೀರು, ಖಾರಿಗಳು ಮತ್ತು ನದಿಗಳ ಕೆಲಮುಖ್ಯಭಾಗಗಳು ನೌಕಾಯಾನಕ್ಕೆ ಯೋಗ್ಯ.

ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಂತೆ ರಾಜ್ಯದಲ್ಲಿ 25 ಕ್ಕೂ ಹೆಚ್ಚು ಬಂದರುಗಳಿವೆ. ಉದಾ: ಮಂಗಳೂರು, ಮಲ್ಪೆ, ನವಮಂಗಳೂರು, ಹಂಗರಕಟ್ಟೆ, ಕುಂದಾಪುರ, ಬೈಂದೂರು, ಭಟ್ಕಳ, ಶಿರಾಲಿ, ಮುರ್ಡೇಶ್ವರ, ಮಂಕಿ, ಹೊನ್ನಾವರ ಕುಮಟ ತದಡಿ, ಗಂಗಾವಳಿ, ಅಂಕೋಲ, ಕಾರವಾರ, ಮಾಜಾಳಿ ಇತ್ಯಾದಿ. ನವಮಂಗಳೂರು ಭಾರತದ ಪ್ರಮುಖ ಬಂದರುಗಳಲ್ಲಿ ಒಂದಾಗಿದೆ. ಇದು ಕರ್ನಾಟಕದ ಹೆಬ್ಬಾಗಿಲು ಎಂದೇ ಪ್ರಸಿದ್ಧಿ.

**ಕರ್ನಾಟಕದ ಕರಾವಳಿ ಮತ್ತು ಬಂದರುಗಳು**

ಸಂಪರ್ಕ ಮಾಧ್ಯಮ: ಕರ್ನಾಟಕದಲ್ಲಿ ಅಂಚೆ, ದೂರವಾಣಿ, ಆಕಾಶವಾಣಿ, ದೂರದರ್ಶನ, ವೃತ್ತ ಪತ್ರಿಕೆ, ಗಣಕ, ಯಂತ್ರ, ಇಂಟರ್‌ನೆಟ್, ಈಮೇಲ್ ಮುಂತಾದ ಸಂಪರ್ಕ ಮಾಧ್ಯಮಗಳಿವೆ. ಮಾರ್ಚ್ 2004, 31ರಲ್ಲಿದ್ದಂತೆ ರಾಜ್ಯದಲ್ಲಿ 9909 ಅಂಚೆ ಕಛೇರಿಗಳಿವೆ. ಇವುಗಳ ಸೌಲಭ್ಯ ಸುಧಾರಿಸಿದೆಯಾದರೂ ಜನಸಂಖ್ಯೆಗೆ ತಕ್ಕಷ್ಟು ಅಂಚೆಕಛೇರಿಗಳಿಲ್ಲ. ಪ್ರತಿ 1 ಲಕ್ಷ ಜನ ಸಂಖ್ಯೆಗೆ 18 ಅಂಚೆ ಕಛೇರಿಗಳಿವೆ. ಬೆಂಗಳೂರು, ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕವೆಂದು 3 ಅಂಚೆ ವೃತ್ತಗಳಿವೆ. ಪ್ರತಿದಿನ ಸರಾಸರಿ 23.74 ಲಕ್ಷ ಟಪಾಲುಗಳು ವಿತರಣೆಯಾಗುತ್ತಿವೆ. ಅವುಗಳಲ್ಲಿ ಸು. ಅರ್ಧದಷ್ಟು ಬೆಂಗಳೂರು ನಗರವೊಂದರಲ್ಲೆ ಇವೆ. ಈ ನಗರದಲ್ಲಿ ದಿನಕ್ಕೆ ಮೂರು ಭಾರಿ ಟಪಾಲು ವಿತರಿಸುವ 17 ಮತ್ತು ಎರಡು ಬಾರಿ ವಿತರಿಸುವ 258 ಅಂಚೆ ಕಛೇರಿಗಳಿವೆ. ಇತ್ತೀಚೆಗೆ ಸ್ಪೀಡ್ ಪೋಸ್ಟ್ ವ್ಯವಸ್ಥೆ ರೂಢಿಗೆ ಬಂದಿದೆ. ರಾಜ್ಯದಾದ್ಯಂತ 27,348 ಗಳಿಗಿಂತಲೂ ಹೆಚ್ಚು ಅಂಚೆ ಪೆಟ್ಟಿಗೆ ಸೌಲಭ್ಯವಿದೆ. ಏಳು ಸಂಜೆ ವೇಳೆಯ ಅಂಚೆ ಸೇವಾಕೇಂದ್ರಗಳಿವೆ. ಈಗ ಅಂಚೆ ಸೇವೆಗೆ ಪರ್ಯಾಯವಾದ ಖಾಸಗಿ ವ್ಯವಸ್ಥೆ ಕೊರಿಯಾರ್ ಸೇವೆ ಹೆಚ್ಚು ಪ್ರಚಲಿತವಾಗುತ್ತಿದೆ. ಇವು ನಗರ ಪ್ರದೇಶಗಳಿಗೆ ಮಾತ್ರ ಲಭ್ಯ. ಗ್ರಾಮಾಂತರ ಪ್ರದೇಶಗಳಿಗಿಲ್ಲ.

**ದೂರವಾಣಿ ಸಂಪರ್ಕ:** ಕರ್ನಾಟಕಕ್ಕೆ 19ನೆಯ ಶತಮಾನದ ಅಂತಿಮಾವಧಿಯಲ್ಲಿ ಪರಿಚಯ. 1881-82ರ ಸುಮಾರಿಗೆ ಬೆಂಗಳೂರಿನ ದಂಡು ಪ್ರದೇಶ ಹಾಗೂ 1889ರಲ್ಲಿ ಕಾಕನ ಕೋಟೆಯಲ್ಲಿ ನಡೆಯುತ್ತಿದ್ದ ಪ್ರಪಂಚವಿಖ್ಯಾತ ಖೆಡ್ಡಾ ಆಚರಣೆಯ ಸಲುವಾಗಿ ಈ ಸೌಲಭ್ಯ ಜಾರಿಗೆ ಬಂದಿತು. ಇಂದು ಅದು ರಾಜ್ಯದಲ್ಲಿ ಅವ್ಯಾಹಿತವಾಗಿ ಬೆಳೆದಿದೆ. ಮಾರ್ಚ್, 2004ರಲ್ಲಿದ್ದಂತೆ ರಾಜ್ಯದ ಒಟ್ಟು ದೂರವಾಣಿಗಳ ಸಂಖ್ಯೆ 27,52,060. ಸು. 2700ಕ್ಕೂ ಹೆಚ್ಚು ದೂರವಾಣಿ ವಿನಿಮಯ ಕೇಂದ್ರಗಳಿವೆ. ಇವುಗಳಲ್ಲಿ ಹೆಚ್ಚು ಕಂಪ್ಯೂಟರ್‌ವ್ಯವಸ್ಥೆಯಿಂದ ಸುಸಜ್ಜಿತವಾಗಿವೆ. ತೀವ್ರಗತಿಯ ನಗರೀಕರಣದ ಫಲವಾಗಿ ಬೆಂಗಳೂರು ನಗರದಲ್ಲಿ ದೂರವಾಣಿ ಸೌಲಭ್ಯ ಹೆಚ್ಚು. ರಾಜ್ಯದ ಎಲ್ಲ ಜಿಲ್ಲಾಕೇಂದ್ರಗಳು, ತಾಲ್ಲೂಕು ಮತ್ತು ಹೋಬಳಿ ಹಾಗೂ ಪ್ರಮುಖ ಹಳ್ಳಿಗಳಿಗೂ ಎಸ್.ಟಿ.ಡಿ. ಮತ್ತು ಪಿ.ಸಿ.ಓ ವ್ಯವಸ್ಥೆ ಸೌಲಭ್ಯವಿದೆ. ಸಾರ್ವಜನಿಕರಿಗೆ ಸುಲಭ ದೂರವಾಣಿ ಸಂಪರ್ಕ ಕಲ್ಪಿಸುವ ಮೊಬೈಲ್‌ಗಳ ವ್ಯವಸ್ಥೆ ಈಗ ಹೆಚ್ಚು ಪ್ರಚಲಿತ. ಟೆಲೆಕ್ಸ್ ವ್ಯವಸ್ಥೆಯೂ ಉಂಟು. ಅನೇಕ ಖಾಸಗಿ ದೂರವಾಣಿ ಸಂಸ್ಥೆಗಳು ಕಾರ್ಯನಿರತವಾಗಿವೆ.

**ಆಕಾಶವಾಣಿ:** ಮೈಸೂರು ವಿಶ್ವವಿದ್ಯಾನಿಲಯದ ಮನಃಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಎಂ.ವಿ. ಗೋಪಾಲಸ್ವಾಮಿಯವರಿಂದ 1935ರಲ್ಲಿ ಪ್ರಪಥಮವಾಗಿ ಮೈಸೂರಿನಲ್ಲಿ ಪ್ರಾರಂಭವಾಗುವುದರೊಂದಿಗೆ ಕರ್ನಾಟಕಕ್ಕೆ ಆಕಾಶವಾಣಿ ಪರಿಚಯವಾಯಿತು. ಇಲ್ಲಿಯೇ ಭಾರತದಲ್ಲಿ ಆಕಾಶವಾಣಿ ಎಂಬ ಹೆಸರನ್ನು ಮೊದಲ ಬಾರಿಗೆ ಬಳಸಲಾಯಿತು. ಈಗ ರಾಜ್ಯದಲ್ಲಿ 9 ದೊಡ್ಡ ಪ್ರಮಾಣದ ಆಕಾಶವಾಣಿ ಪ್ರಸಾರ ಕೇಂದ್ರಗಳಿವೆ. ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗ, ಭದ್ರಾವತಿ, ಹಾಸನ, ಚಿತ್ರದುರ್ಗ, ಹೊಸಕೋಟೆ ಮತ್ತು ಮಂಗಳೂರು. ಬೆಂಗಳೂರು ಮತ್ತು ಧಾರವಾಡಗಳಲ್ಲಿ ತಲಾ ಎರಡು ಕೇಂದ್ರಗಳಿವೆ. ಈ ಎಲ್ಲ ಕೇಂದ್ರಗಳು ವಾರ್ತೆ, ಕೃಷಿ, ಕೈಗಾರಿಕೆ, ತೋಟಗಾರಿಕೆ, ಹೈನುಗಾರಿಕೆ, ಪರಿಸರ, ಆರೋಗ್ಯ, ಮನರಂಜನೆ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಬಿತ್ತರಿಸುತ್ತವೆ. ದೂರದರ್ಶನದ ಪ್ರಸರಣವು ಆಕಾಶವಾಣಿಯ ಪ್ರಾಮುಖ್ಯತೆ ಕಡಿಮೆ ಮಾಡಿದೆ.

**ದೂರದರ್ಶನ:** ಕರ್ನಾಟಕಕ್ಕೆ ವಿಳಂಬವಾಗಿ ಬಳಕೆಗೆ ಬಂದರೂ ಅತ್ಯಂತ ಪರಿಣಾಮಕಾರಿ ಸಮೂಹ ಸಂಪರ್ಕ ಮಾಧ್ಯಮ. ಹೆಚ್ಚು ಆಕರ್ಷಣೀಯ. ರಾಜ್ಯದಲ್ಲಿ ಮೊದಲು 03-09-1977ರಲ್ಲಿ ದೂರದರ್ಶನ ಪ್ರಸಾರ ಗುಲ್ಬರ್ಗದಲ್ಲಿ ಉದ್ಘಾಟನೆಯಾಯಿತು. ಅನಂತರ 01-11-1981ರಲ್ಲಿ ತತ್ಕಾಲಿಕ ದೂರದರ್ಶನ ಕೇಂದ್ರ ಬೆಂಗಳೂರಿನಲ್ಲಿ ಪ್ರಾರಂಭಗೊಂಡು ವಾರದ ಕೆಲವೇ ದಿನಗಳಲ್ಲಿ ಕಾರ್ಯಕ್ರಮ ಪ್ರಸಾರವಾಗುತ್ತಿದ್ದವು. 1988ರಿಂದ ಪೂರ್ಣಪ್ರಮಾಣದ ಪ್ರಸಾರ ಪ್ರಾರಂಭವಾಯಿತು. ಇಂದು ಇದೊಂದು ಪ್ರಾದೇಶಿಕ ಕಾರ್ಯಕ್ರಮಗಳನ್ನು ಬಿತ್ತರಿಸುವ ಸುಸಜ್ಜಿತ ದೂರದರ್ಶನ ಕೇಂದ್ರ, ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಕಾರ್ಯಕ್ರಮಗಳನ್ನು 'ಇನಸಾಟ್' ಉಪಗ್ರಹದ ಮೂಲಕ ಪ್ರಸಾರ ಮಾಡಲಾಗುತ್ತದೆ. ರಾಜ್ಯದಾದ್ಯಂತ ಹಲವು ಟ್ರಾನ್ಸ್ ಮೀ ಗಳಿದ್ದು ಅವು ಬೆಂಗಳೂರು ದೂರದರ್ಶನ ಕೇಂದ್ರದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ. ಬೆಂಗಳೂರು ದೂರದರ್ಶನ 'ಚಂದನ'ದಲ್ಲಿ ಪ್ರಾದೇಶಿಕ ಕನ್ನಡ ಕಾರ್ಯಕ್ರಮಗಳ ಪ್ರಸಾರವಾಗುತ್ತವೆ. ಕೇಬಲ್ ನೆಟ್‌ವರ್ಕ್ ಸೌಲಭ್ಯವಿರುವ ದೂರದರ್ಶನಗಳಲ್ಲಿ ಈಟಿವಿ, ಉದಯ ಟಿವಿ, ಉಷೆ ಟಿವಿ, ಯುಟಿವಿ ಚಾನೆಲ್‌ಗಳ ಮೂಲಕ ಕನ್ನಡ ಕಾರ್ಯಕ್ರಮಗಳೂ ಪ್ರಸಾರವಾಗುವುವು. ಜೊತೆಗೆ ವಿವಿಧ ಭಾಷಾ ವಿವಿಧ ದೇಶಗಳ ಕಾರ್ಯಕ್ರಮಗಳೂ ಲಭ್ಯವಿದೆ.

**ಪತ್ರಿಕೋದ್ಯಮ:** ಕರ್ನಾಟಕದಲ್ಲಿ ಪತ್ರಿಕೋದ್ಯಮವು, ಪ್ರಥಮ ಕನ್ನಡ ವೃತ್ತಪತ್ರಿಕೆ ಮಂಗಳೂರ ಸಮಾಚಾರ 1843ರಲ್ಲಿ ಮಂಗಳೂರಿನಲ್ಲಿ ಪ್ರಾರಂಭಗೊಂಡಿತು. ಈ ವೃತ್ತಪತ್ರಿಕೆ ಸಂಪಾದಕ ಬಾಸೆಲ್ ಮಿಷನ್ ಸಂಸ್ಥೆಯ ಹರ್ಮನ್ ಮೊಗ್ಲಿಂಗ್. ಕರಾವಳಿಯಿಂದ ಆರಂಭಗೊಂಡ ರಾಜ್ಯದ ಪತ್ರಿಕೋದ್ಯಮ ತರುವಾಯ ಧಾರವಾಡ, ಮೈಸೂರು, ಬೆಂಗಳೂರುಗಳಲ್ಲಿದ್ದು, 19ನೆಯ ಶತಮಾನದ ಅಂತ್ಯದವೇಳೆಗೆ ವಿವಿಧ ಕೇಂದ್ರಗಳಿಂದ ವೃತ್ತ ಪತ್ರಿಕೆಗಳು ಪ್ರಾರಂಭಗೊಂಡವು. ಭಾರತೀಯ ಕಾಂಗ್ರೆಸ್ ಮತ್ತು ಮಹಾತ್ಮ ಗಾಂಧಿಯವರು ಸ್ವತಂತ್ರ ಚಳವಳಿ ಪ್ರವೇಶ ಇಡೀ ದೇಶದ ಪತ್ರಿಕೋದ್ಯಮದ ಮೇಲೆ ಪ್ರಭಾವ ಬೀರಿದವು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕರ್ನಾಟಕದ ಪತ್ರಿಕೋದ್ಯದಲ್ಲಿ ಸಾಕಷ್ಟು ಪೈಪೋಟಿಯಿದೆ. ಮುದ್ರಣ ಕ್ಷೇತ್ರದಲ್ಲಾದ ಕ್ರಾಂತಿಕಾರಕ ಬದಲಾವಣೆ, ಗಣಕಯಂತ್ರದ

ಬಳಕೆ, ಕೃತಕ ಉಪಗ್ರಹ, ಇಂಟರ್‌ನೆಟ್ ವ್ಯವಸ್ಥೆ ಮುಂತಾದವು ಕರ್ನಾಟಕದ ಪತ್ರಿಕೋದ್ಯಮದಲ್ಲಿ ವಿಸ್ಮಯ ಲೋಕವನ್ನೇ ನಿರ್ಮಿಸಿವೆ. ಅತ್ಯಧಿಕ ಸಂಖ್ಯೆಯ ಕನ್ನಡ ಮತ್ತು ಇತರ ಭಾಷಾ ಪತ್ರಿಕೆಗಳು ರಾಜ್ಯದ ರಾಜಧಾನಿ ಹಾಗೂ ಭಾರತದ ಬೃಹನ್ನಗರವಾದ ಬೆಂಗಳೂರಿನಿಂದ ಪ್ರಕಟವಾಗುತ್ತವೆ. ಮೈಸೂರು, ಮಂಗಳೂರು, ಧಾರವಾಡ ಹಾಗೂ ಬೆಳಗಾಂವಿಗಳು ಇತರ ಪ್ರಮುಖ ಪತ್ರಿಕೋದ್ಯಮ ಕೇಂದ್ರಗಳು.

ತ್ರಿಶ್ರೇಣೀಯ ಪಂಚಾಯಿತಿ ರಾಜ್ಯ ವ್ಯವಸ್ಥೆ ರಾಜ್ಯದಲ್ಲಿ ಜಾರಿಗೆ ಬರುತ್ತಿದೆ. ರಾಜ್ಯದಲ್ಲಿ 5705 ಪಂಚಾಯಿತಿಗಳೂ 176 ತಾಲ್ಲೂಕು ಬೋರ್ಡುಗಳೂ ಉಂಟು. ಜಿಲ್ಲಾಭಿವೃದ್ಧಿ ಮಂಡಳಿಗಳ ಸಂಖ್ಯೆ 27. ನೂತನ ಕಾಯಿದೆಯ ಅಡಿಯಲ್ಲಿ ಈ ಸಲಹಾಮಂಡಲಿಗಳ ಬದಲು ಜಿಲ್ಲಾ ಪರಿಷತ್ತುಗಳನ್ನು ಸ್ಥಾಪಿಸಲಾಗಿದೆ.

ಕರ್ನಾಟಕದಲ್ಲಿ 28,058 ಹಾಸಿಗೆಗಳಿರುವ 177 ಸರ್ಕಾರಿ ಆಸ್ಪತ್ರೆಗಳೂ 1679 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದು ಅವುಗಳಲ್ಲಿ ರೋಗಿಗಳ ಹಾಸಿಗೆ ಸಂಖ್ಯೆ 17,828, ಪ್ರಾಥಮಿಕ ಆರೋಗ್ಯಗಳ ಘಟಕಗಳು 578, ಅವುಗಳಲ್ಲಿ ರೋಗಿ ಹಾಸಿಗೆ ಸಂಖ್ಯೆ 1229, ಭಾರತೀಯ ವೈದ್ಯಪದ್ಧತಿ ಆಸ್ಪತ್ರೆಗಳು 121, ಈ ಆಸ್ಪತ್ರೆಗಳಲ್ಲಿ ಹಾಸಿಗೆ ಸಂಖ್ಯೆ 8143, ಕುಟುಂಬಕಲ್ಯಾಣ ಕೇಂದ್ರಗಳು 8143, ಸಂತಾನ ಹರಣ ಶಸ್ತ್ರ ಚಿಕಿತ್ಸೆಯಾದವರ ಸಂಖ್ಯೆ 3.77 ಲಕ್ಷ (2003–04), ಕುಟುಂಬ ಕಲ್ಯಾಣ ಉಪ ಕೇಂದ್ರಗಳು 8143, ಔಷಧಿ ಅಂಗಡಿಗಳು 14,566, ಕುಷ್ಠರೋಗ ಚಿಕಿತ್ಸಾ ಘಟಕಗಳು 12, ಜಿಲ್ಲಾ ವೈದ್ಯಕೀಯ ಪ್ರಯೋಗಾಲಯಗಳು 12, ಯುನಾನಿ ಔಷಧಾಲಯಗಳು 71, ಹೋಮಿಯೋಪತಿ ಔಷಧಾಲಯಗಳು 10, ರಾಷ್ಟ್ರೀಯ ಮಲೇರಿಯಾ ನಿರ್ಮೂಲಯೋಜನೆ, ರಾಷ್ಟ್ರೀಯ ಫೀಲೇರಿಯ ನಿಯಂತ್ರಣ ಯೋಜನೆ, ರಾಷ್ಟ್ರೀಯ ಸಿಡುಬು ನಿರ್ಮೂಲ ಯೋಜನೆ, ಕುಷ್ಠರೋಗ ನಿಯಂತ್ರಣ ಯೋಜನೆ, ಬಿ.ಸಿ.ಜಿ. ವ್ಯಾಕ್ಸಿನೇಷನ್ ಯೋಜನೆ–ಇವು ರಾಜ್ಯದಲ್ಲಿ ಜಾರಿಗೆ ಬಂದಿರುವ ಕೆಲವು ಮುಖ್ಯ ಯೋಜನೆಗಳು.

ರಾಜ್ಯದಲ್ಲಿ 4 ಸರ್ಕಾರಿ ವೈದ್ಯಕೀಯ ಕಾಲೇಜುಗಳೂ 19 ಖಾಸಗಿ ವೈದ್ಯಕೀಯ ಕಾಲೇಜುಗಳೂ ಇವೆ (2004). ಭಾರತೀಯ ವೈದ್ಯಪದ್ಧತಿ ಕಾಲೇಜುಗಳು 66, ದಂತವೈದ್ಯಕಾಲೇಜುಗಳು 42, ವೈದ್ಯ ವಿದ್ಯಾಭ್ಯಾಸದ ನಾನಾ ಶಾಖೆಗಳಲ್ಲಿ ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಗಳಿವೆ. ಮೈಸೂರಿನ ಅಂಗವಿಕಲರ ಸಂಸ್ಥೆ, ಬೆಂಗಳೂರಿನ ದಂತವೈದ್ಯ ಕಾಲೇಜು, ಅಖಿಲಭಾರತ ಮಾನಸಿಕ ಆರೋಗ್ಯ ಸಂಸ್ಥೆ ಇವು ಇನ್ನು ಕೆಲವು ಮುಖ್ಯ ಸಂಸ್ಥೆಗಳು.

6 ರಿಂದ 11ರ ವರೆಗಿನ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವುಂಟು. ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲೂ ಪ್ರಾಥಮಿಕದಿಂದ ಪ್ರೌಢ ಶಿಕ್ಷಣದವರೆಗೆ ಉಚಿತ. ರಾಜ್ಯದಲ್ಲಿ 9173 ಪ್ರೌಢ ಶಾಲೆ ಮತ್ತು 2554 ಪದವಿಪೂರ್ವ ಕಾಲೇಜುಗಳಿವೆ. ಈ ಯೋಜನೆಯೊಳಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಸು. 11 ಲಕ್ಷ. ರಾಜ್ಯದಲ್ಲಿ ಒಟ್ಟು 18 ವಿಶ್ವವಿದ್ಯಾನಿಲಯಗಳಿವೆ, ಇವುಗಳಲ್ಲಿ 6 ಸಾಮಾನ್ಯ, 2 ಕೃಷಿ, 1 ಕನ್ನಡ, 1 ಮುಕ್ತ, 1 ತಾಂತ್ರಿಕ, 1 ವೈದ್ಯಕೀಯ 3 ಮಹಿಳಾ ಹಾಗೂ 3 ಇತರೆ ವಿಶ್ವವಿದ್ಯಾನಿಲಯಗಳಾಗಿವೆ. ರಾಜ್ಯದಲ್ಲಿ (2001–02) 1000 ಪದವಿ ಕಾಲೇಜುಗಳಿವೆ. ಅವುಗಳಲ್ಲಿ 35 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇತರೆ ಕಾಲೇಜುಗಳ ಸಂಖ್ಯೆಗಳು ಹೀಗಿವೆ: ಎಂಜಿನಿಯರಿಂಗ್ ಕಾಲೇಜುಗಳು 122; ವೈದ್ಯಕೀಯ ಕಾಲೇಜುಗಳು 32; ನ್ಯಾಯಶಿಕ್ಷಣ ಕಾಲೇಜುಗಳು 67, ವಾಣಿಜ್ಯ ಕಾಲೇಜುಗಳು 13, ಕೃಷಿ ಕಾಲೇಜುಗಳು 2, ಪಶುವೈದ್ಯ ಕಾಲೇಜು 1, ವಿವಿಧ ತಾಂತ್ರಿಕ ಶಿಕ್ಷಣಾಲಯಗಳು (ಪಾಲಿಟೆಕ್ನಿಕ್) 184, ಶಿಕ್ಷಣ ತರಬೇತಿ ಕಾಲೇಜುಗಳು 19, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳು 916, ಫಾರ್ಮಸಿ ಕಾಲೇಜು 1, ಪ್ರಾಚ್ಯ ಶಿಕ್ಷಣ ಸಂಸ್ಥೆಗಳು 5, ಶರೀರ ಶಿಕ್ಷಣ ಕಾಲೇಜು 1, ಲಲಿತಕಲೆಗಳ ಕಾಲೇಜು 1, ಸಮುದ್ರ ಉತ್ಪನ್ನ ಮತ್ತು ಮತ್ಸ್ಯೋದ್ಯಮ ಶಿಕ್ಷಣ ಸಂಸ್ಥೆ 1, ವಾಕ್‌ಶ್ರವಣ ಚಿಕಿತ್ಸಾ ಸಂಸ್ಥೆ 1, ವಿದ್ಯಾರ್ಥಿಗಳ ಸಂಖ್ಯೆ: ಸಾಮಾನ್ಯ ಶಿಕ್ಷಣ ಕಾಲೇಜುಗಳಲ್ಲಿ 3523 ಸಾವಿರ, ಎಂಜಿನಿಯರಿಂಗ್ 42,729, ವೈದ್ಯಕೀಯ 3,955, ದಂತವೈದ್ಯಕೀಯ 2,800 ವಿದ್ಯಾರ್ಥಿಗಳು ಒಟ್ಟು ಶಾಲೆಗಳ ಸಂಖ್ಯೆ 54,520 ವಿದ್ಯಾರ್ಥಿಗಳು 78 ಸಾವಿರ.

ಮೈಸೂರಿನಲ್ಲಿ ಒಂದು ಪ್ರಾದೇಶಿಕ ಶಿಕ್ಷಣ ಕಾಲೇಜಿದೆ. ಇತರ ಸಂಸ್ಥೆಗಳು : ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆ, ಬೆಂಗಳೂರು; ಗ್ಯಾಸ್ ಟರ್ಬೈನ್ ಸಂಶೋಧನ ಪ್ರತಿಷ್ಠಾನ, ಬೆಂಗಳೂರು; ರಾಷ್ಟ್ರೀಯ ಏರೋನಾಟಿಕಲ್ ಪ್ರಯೋಗಾಲಯ, ಬೆಂಗಳೂರು; ರಾಷ್ಟ್ರೀಯ ಕ್ಷಯರೋಗ ಸಂಸ್ಥೆ, ಬೆಂಗಳೂರು ; ಕೇಂದ್ರೀಯ ಆಹಾರ ಸಂಶೋಧನಾಲಯ, ಮೈಸೂರು.

ಜನಸಂಖ್ಯೆ, ಮುಖ್ಯ ಅಂಶಗಳು : ಕರ್ನಾಟಕದ ಜನಸಂಖ್ಯೆ 52,850,562 (2001). ಇವರ ಪೈಕಿ 34,889,033 ಜನ (ಶೇ.66.01) ಗ್ರಾಮ ವಾಸಿಗಳು; 17,961,529 ಮಂದಿ (ಶೇ. 33.98) ಪಟ್ಟಣವಾಸಿಗಳು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 26,898,918 ಪುರುಷರು ಮತ್ತು 25,951,644 ಮಹಿಳೆಯರು 2001ರಲ್ಲಿದ್ದಂತೆ, ಇಡೀ ಭಾರತದ ಶೇ. 6.5ರಷ್ಟು ವಿಸ್ತೀರ್ಣವಿರುವ ರಾಜ್ಯದಲ್ಲಿ ಒಟ್ಟು ರಾಷ್ಟ್ರದ ಜನಸಂಖ್ಯೆಯ ಶೇ.5.13ರಷ್ಟು ಜನ ಇದ್ದಾರೆ (2001).

ರಾಜ್ಯದ ಒಟ್ಟು 29 ಜಿಲ್ಲೆಗಳಲ್ಲಿ ಬೆಂಗಳೂರು ಜನಭರಿತವಾದುದು. (65.37ಲಕ್ಷ). ಇದಕ್ಕೆ ಪ್ರತಿಯಾಗಿ ಕೊಡಗು ಅತಿ ಕಡಿಮೆ ಜನಸಂಖ್ಯೆಯುಳ್ಳ ಜಿಲ್ಲೆ (5.48 ಲಕ್ಷ). ರಾಜ್ಯದಲ್ಲಿ 1901 ರಿಂದ 2001ರವರೆಗೆ 39.7 ಮಿಲಿಯನ್‌ಗಳಷ್ಟು ಜನಸಂಖ್ಯೆ ಹೆಚ್ಚುವರಿಯಾಗಿದೆ. 1991–2001ರ ರಾಜ್ಯದ ಜನಸಂಖ್ಯಾ ಬೆಳವಣಿಗೆ ದರ ಶೇ 17.25 ಆಗಿತ್ತು. 2010ರವೇಳೆಗೆ ರಾಜ್ಯದ ಜನಸಂಖ್ಯೆ ಸು. 61.5 ದಶಲಕ್ಷಗಳಿಗೆ ಹೆಚ್ಚಾಗುವುದೆಂದು ಅಂದಾಜು ಮಾಡಲಾಗಿದೆ.

**ಜನಸಾಂದ್ರತೆ:** 2001ರ ಜನಗಣತಿಯಂತೆ ರಾಜ್ಯದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿಮೀಗೆ 275 ಜನರು. ಭಾರತದ ಸರಾಸರಿಗಿಂತ ಕಡಿಮೆ. ಜಿಲ್ಲೆಗಳಲ್ಲಿ ಬೆಂಗಳೂರು ಅತ್ಯಧಿಕ ಜನಸಾಂದ್ರತೆ (2979) ವುಳ್ಳದ್ದು. ದಕ್ಷಿಣ ಕನ್ನಡ (416) ಮತ್ತು ಮೈಸೂರು (383) ಜಿಲ್ಲೆಗಳು ಅನುಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿವೆ. ಇದಕ್ಕೆ ಪ್ರತಿಯಾಗಿ ಉತ್ತರಕನ್ನಡ ಅತಿ ಕಡಿಮೆ (132) ಜನಸಾಂದ್ರತೆಯುಳ್ಳ ಜಿಲ್ಲೆ. ತರುವಾಯ ಕೊಡಗು (133) ಮತ್ತು ಚಿಕ್ಕಮಗಳೂರು (158) ಜಿಲ್ಲೆಗಳು ಬರುತ್ತವೆ.

**ನಗರ–ಗ್ರಾಮೀಣ ಜನಸಂಖ್ಯೆ:** ಕರ್ನಾಟಕ ಹಳ್ಳಿ ಪ್ರಧಾನ ರಾಜ್ಯ. ಒಟ್ಟು ಜನಸಂಖ್ಯೆಯಲ್ಲಿ ಶೇ. 66 ಜನರು ಗ್ರಾಮಾಂತರ ಪ್ರದೇಶಗಳಲ್ಲಿಯೂ ಉಳಿದ ಶೇ. 44 ರಷ್ಟು ನಗರಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ ನಗರ ಜನಸಂಖ್ಯೆಯ ಪ್ರಮಾಣ ಭಾರತದ ಸರಾಸರಿಗಿಂತ ಹೆಚ್ಚು. ಬೆಂಗಳೂರು ರಾಜ್ಯದಲ್ಲೆ ಅತಿ ಹೆಚ್ಚು ನಗರ ಜನ ಸಂಖ್ಯೆಯುಳ್ಳ ಜಿಲ್ಲೆ. ಇದು ರಾಜ್ಯದ ಒಟ್ಟು ನಗರ ಜನಸಂಖ್ಯೆಯಲ್ಲಿ ಶೇ. 32.1 ರಷ್ಟನ್ನು ಹೊಂದಿದೆ. ರಾಜ್ಯದ ರಾಜಧಾನಿ, ದೇಶದ ಮಹಾನಗರಗಳಲ್ಲಿ ಒಂದಾಗಿದ್ದು ಕೈಗಾರಿಕಾ ಕೇಂದ್ರವಾಗಿರುವುದರಿಂದ ನಗರ ಜನಸಂಖ್ಯೆ ಅತ್ಯಧಿಕ. ಬೆಂಗಳೂರು ತರುವಾಯ ಬೆಳಗಾವಿ, ಮೈಸೂರು ಮತ್ತು ಧಾರವಾಡಗಳು ಅಧಿಕ ನಗರ ಜನಸಂಖ್ಯೆಯುಳ್ಳವು. ಕೊಡಗು ಅತಿ ಕಡಿಮೆ ನಗರ ಜನಸಂಖ್ಯೆಯುಳ್ಳ ಜಿಲ್ಲೆ. ಇದರ ನಂತರ ಚಾಮರಾಜನಗರ, ಕೊಪ್ಪಳ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ನಗರ ಜನಸಂಖ್ಯೆ ಕಡಿಮೆ. ರಾಜ್ಯದಲ್ಲಿ 1901ರಲ್ಲಿ ನಗರ ಜನಸಂಖ್ಯೆ ಶೇ. 12.6ರಷ್ಟು ಮಾತ್ರ. ಈಗ ಈ ಪ್ರಮಾಣವು ಹೆಚ್ಚಾಗಿದೆ.

**ಕರ್ನಾಟಕದ ಹತ್ತು ಜನಭರಿತ ನಗರಗಳು (2001)**

| | ನಗರ | ಜನಸಂಖ್ಯೆ |
|---|---|---|
| 1. | ಬೆಂಗಳೂರು | 56,86,844 |
| 2. | ಮೈಸೂರು | 7,85,800 |
| 3. | ಹುಬ್ಬಳಿ–ಧಾರವಾಡ | 7,86,018 |
| 4. | ಮಂಗಳೂರು | 6,01,079 |
| 5. | ಬೆಳಗಾಂವಿ | 4,56,999 |
| 6. | ಗುಲ್ಬರ್ಗ | 4,30,265 |
| 7. | ದಾವಣಗೆರೆ | 3,64,523 |
| 8. | ಬಳ್ಳಾರಿ | 3,16,766 |
| 9. | ಬಿಜಾಪುರ | 2,53,891 |
| 10. | ಶಿವಮೊಗ್ಗ | 2,74,352 |

**ಲಿಂಗಾನುಪಾತ:** 2001 ಜನಗಣತಿಯಂತೆ ಕರ್ನಾಟಕದಲ್ಲಿ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ 964 ಮಹಿಳೆಯರು. ಇದು ಭಾರತದ ಸರಾಸರಿಗಿಂತ (933) ಹೆಚ್ಚು. ಉಡುಪಿ, ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಹೆಚ್ಚು. ಉಡುಪಿ ಜಿಲ್ಲೆಯಲ್ಲಿ ಪ್ರತಿ ಸಾವಿರ ಪುರುಷರಿಗೆ 1127 ಮಹಿಳೆಯರಿದ್ದಾರೆ. ಇದಕ್ಕೆ ಪ್ರತಿಯಾಗಿ ಬೆಂಗಳೂರು ಜಿಲ್ಲೆಯಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ. ಅಂದರೆ ಪ್ರತಿ ಸಾವಿರ ಪುರುಷರಿಗೆ 906 ಮಹಿಳೆಯರಿದ್ದಾರೆ.

**ಸಾಕ್ಷರತೆ:** ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 33 ರಷ್ಟು ಜನರು ಅನಕ್ಷರಸ್ಥರು (2001) ಇವರಲ್ಲಿ ಶೇ. 23.71 ರಷ್ಟು ಪುರುಷರು ಮತ್ತು ಶೇ. 42.55 ರಷ್ಟು ಮಹಿಳೆಯರು. ರಾಜ್ಯದ ಒಟ್ಟು ಸಾಕ್ಷರತೆ ಶೇ. 67. ಸಾಕ್ಷರತೆ ಗ್ರಾಮೀಣ ಜನರಲ್ಲಿ (ಶೇ. 60) ಕಡಿಮೆ ಮತ್ತು ನಗರಗಳಲ್ಲಿ ಹೆಚ್ಚು (ಶೇ. 81). ಒಟ್ಟಾರೆ ಭಾರತದ ಸರಾಸರಿಗಿಂತ (ಶೇ. 65.4) ಉತ್ತಮವಾಗಿದೆ. ಸಾಕ್ಷರತೆಯಲ್ಲಿ ಬೆಂಗಳೂರು ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಈ ಹಿಂದೆ ಮೊದಲ ಸ್ಥಾನ ಹೊಂದಿದ್ದ ದ.ಕನ್ನಡವು 2ನೇ ಸ್ಥಾನದಲ್ಲಿದೆ. ಉಡುಪಿಗೆ 3ನೇ ಸ್ಥಾನ. ಇದಕ್ಕೆ ಪ್ರತಿಯಾಗಿ ರಾಯಚೂರು ಅತಿ ಕಡಿಮೆ ಸಾಕ್ಷರತೆಯುಳ್ಳ ಜಿಲ್ಲೆ. ಚಾಮರಾಜನಗರ, ಕೊಪ್ಪಳ ಮತ್ತು ಬಿಜಾಪುರ ಜಿಲ್ಲೆಗಳಲ್ಲಿಯೂ ಸಾಕ್ಷರತೆ ದರ ಕಡಿಮೆ.

ಸ್ತ್ರೀ–ಪುರುಷರ ಸಾಕ್ಷರತೆ ಗಮನಿಸಿದಾಗ ಸ್ತ್ರೀಯರಿಗಿಂತ ಪುರುಷರಲ್ಲಿ ಸಾಕ್ಷರರು ಹೆಚ್ಚು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 76.3 ಭಾಗ ಪುರುಷರು ಮತ್ತು ಶೇ. 57.45 ಭಾಗ ಮಹಿಳೆಯರು ಸಾಕ್ಷರರಾಗಿರುತ್ತಾರೆ. ದ.ಕನ್ನಡದಲ್ಲಿ ಪುರುಷ ಸಾಕ್ಷರರು ಹೆಚ್ಚಾಗಿದ್ದರೆ ರಾಯಚೂರಿನಲ್ಲಿ ಕಡಿಮೆ. ಬೆಂಗಳೂರು ಜಿಲ್ಲೆಯ ಮಹಿಳಾ ಸಾಕ್ಷರರ ಪ್ರಮಾಣ ಹೆಚ್ಚು. ಇದಕ್ಕೆ ಪ್ರತಿಯಾಗಿ ಚಾಮರಾಜನಗರ, ಗುಲ್ಬರ್ಗ ಮತ್ತು ಕೊಪ್ಪಳಗಳಲ್ಲಿ ಕಡಿಮೆ. ಇದೇ ರೀತಿ ನಗರ–ಗ್ರಾಮೀಣರ ಸಾಕ್ಷರತೆ ನೋಡಿದಾಗ ಸ್ವಾಭಾವಿಕವಾಗಿ ನಗರಗಳಲ್ಲಿ ಸಾಕ್ಷರತೆ ಹೆಚ್ಚು. ಜಿಲ್ಲಾ ನಗರಗಳ ಸಾಕ್ಷರತೆಯನ್ನು ತೆಗೆದುಕೊಂಡರೆ ಕೊಡಗಿನಲ್ಲಿ ಹೆಚ್ಚು ಮತ್ತು ರಾಯಚೂರು ಜಿಲ್ಲೆಯಲ್ಲಿ ಅತಿ ಕಡಿಮೆ.

**ವಯೋರಚನೆ:** ರಾಜ್ಯದ ವಯೋರಚನೆಯಲ್ಲಿ ಮಕ್ಕಳ ಪ್ರಮಾಣ ಹೆಚ್ಚು. ಅಂದರೆ ರಾಜ್ಯದ ಜನಸಂಖ್ಯೆಯಲ್ಲಿ 0–14 ವಯಸ್ಸಿನವರು ಶೇ. 24.6 ರಷ್ಟು ಬಾಲಕಬಾಲಕಿಯರು. ಜನಸಂಖ್ಯೆಯಲ್ಲಿ ಶೇ. 6.9 ಭಾಗ ಅರವತ್ತು ಮತ್ತು ಅದಕ್ಕಿಂತಲೂ ಹೆಚ್ಚು ವಯಸ್ಸಿನ ವೃದ್ಧರು. ಉಳಿವರು 15 ರಿಂದ 60 ವಯಸ್ಸಿನವರು. ಇವರನ್ನು ದುಡಿಯುವ ವರ್ಗವೆಂದು ಪರಿಗಣಿಸಲಾಗಿದೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇ. 56 ರಷ್ಟು ದುಡಿಮೆ ಮಾಡುವವರಾಗಿದ್ದು, ಅವರನ್ನಾಧರಿಸಿ ಶೇ. 31.5ರಷ್ಟು ಮಕ್ಕಳು ಮತ್ತು ವೃದ್ಧರು ಬದುಕುವರು.

ಕೆಲಸಗಾರರು: ರಾಜ್ಯದ ಜನಸಂಖ್ಯೆಯಲ್ಲಿ ಉದ್ಯೋಗಸ್ಥರು ಮತ್ತು ಉದ್ಯೋಗ ರಹಿತರೆಂದು ಎರಡು ವರ್ಗಗಳಿವೆ. ಮೊದಲ ವರ್ಗದವರು ಉತ್ಪಾದನೆ ಮತ್ತು ಸೇವಾ ಕಾರ್ಯಗಳಲ್ಲಿ ತೊಡಗಿದ ಕೆಲಸಗಾರರು. 2001 ಜನಗಣತಿಯಂತೆ 23,534, 791 ಜನರು ದುಡಿಯುವರು ಹಾಗೂ 29,315,771 ಜನರು ಕೆಲಸಗಾರರಲ್ಲದವರು. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇ. 55 ಭಾಗ ಉದ್ಯೋಗಸ್ಥರಾಗಿರುತ್ತಾರೆ. ದುಡಿಯುವರಲ್ಲಿ 19,364,759 (82.4) ಪೂರ್ಣಕಾಲಿಕ ಕೆಲಸಗಾರರು ಮತ್ತು 41,70,032 (17.6) ಜನರು ಅರೆಕಾಲಿಕ ಕೆಲಸಗಾರರು. ಇವರು ಆರು ತಿಂಗಳಿಗಿಂತ ಕಡಿಮೆ ಕಾಲ ಸೇವೆಯಲ್ಲಿರುವಂತಹವರು.

ರಾಜ್ಯದಲ್ಲಿ ಒಟ್ಟು 68.8 ಲಕ್ಷ ಕೃಷಿಗಾರರು ಮತ್ತು 62.3 ಲಕ್ಷ ಕೃಷಿಕಾರ್ಮಿಕರಿದ್ದಾರೆ ಒಟ್ಟು ಕೆಲಸಗಾರರಲ್ಲಿ ಶೇ. 60 ಭಾಗ ಕೃಷಿವಲಯದಲ್ಲಿ ದುಡಿಯುವವರು.

ಧರ್ಮ: ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ (ಶೇ. 83.86) ಹಿಂದು ಧರ್ಮಿಯರು ಮುಸ್ಲಿಮರು ಎರಡನೆಯ (ಶೇ. 12.23) ಸ್ಥಾನ ಮತ್ತು ಕ್ರೈಸ್ತರು (ಶೇ.1.9) ಮೂರನೆಯ ಸ್ಥಾನದಲ್ಲಿರುವರು. ಇನ್ನುಳಿದವರು ಜೈನರು, ಬೌದ್ಧರು, ಸಿಕ್ಕರು ಹಾಗೂ ಇತರ ಧರ್ಮಿಯರು. ಜೊತೆಗೆ ರಾಜ್ಯದಲ್ಲಿ ವಿವಿಧ ಜಾತಿ ಮತ್ತು ಉಪಜಾತಿಗಳಿವೆ.

**ಧರ್ಮಕ್ಕನುಸಾರ ಜನಸಂಖ್ಯೆ**

| ಧರ್ಮ | ಜನಸಂಖ್ಯೆ | ಶೇಕಡಪ್ರಮಾಣ |
|---|---|---|
| ಹಿಂದು | 44,321,279 | 83.86 |
| ಮುಸ್ಲಿಮ್ | 6,463,127 | 12.23 |
| ಕ್ರೈಸ್ತ | 1,009,164 | 1.91 |
| ಜೈನ | 412,659 | 0.78 |
| ಇತರೆ | 644,333 | 1.22 |

ಕರ್ನಾಟಕದಲ್ಲಿ ಸು. 166 ಮಾತೃಭಾಷೆಗಳಿದ್ದು ಬಹುಭಾಷಾ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಕನ್ನಡ ಪ್ರಮುಖ ಹಾಗೂ ಮಾತೃ ಭಾಷೆ. ರಾಷ್ಟ್ರೀಯ ಅಧಿಕೃತ ಭಾಷೆಗಳಲ್ಲಿ ಒಂದಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 68ರಷ್ಟು ಜನರು ಕನ್ನಡ ಮಾತನಾಡುವರು. ಕನ್ನಡದ ತರುವಾಯ ಉರ್ದು ಎರಡನೆಯದು (ಶೇ. 9). ಇದು ಭಾಷೆ ಮತ್ತು ಧರ್ಮಗಳ ಸಂಬಂಧ ಕಲ್ಪಿಸುತ್ತದೆ. ಮೂರನೆಯಸ್ಥಾನ ತೆಲುಗಿಗೆ ಸೇರುತ್ತದೆ. (ಶೇ. 8.21) ಮರಾಠಿ, ತುಳು, ತಮಿಳು, ಕೊಂಕಣಿ, ಮಲೆಯಾಳಂ ಮತ್ತು ಲಂಬಾಣಿ ಇತರ ಪ್ರಮುಖ ಭಾಷೆಗಳು. ಈ ಒಂಬತ್ತು ಭಾಷೆಗಳು ರಾಜ್ಯದ ಜನಸಂಖ್ಯೆಯಲ್ಲಿ ಶೇ. 99 ರಷ್ಟನ್ನು ಒಳಗೊಂಡಿದೆ.

ಒಂದೊಂದು ಭಾಷೆ ಒಂದೊಂದು ಜಿಲ್ಲೆಗಳಲ್ಲಿ ಪ್ರಧಾನ. ಹೆಚ್ಚು ಉರ್ದು ಮಾತನಾಡುವವರು ಬೆಂಗಳೂರು, ಬಿಜಾಪುರ, ಗುಲ್ಬರ್ಗ ಮತ್ತು ಧಾರವಾಡ (ಶೇ. 44) ಜಿಲ್ಲೆಗಳು ಹಾಗೂ ಬೆಂಗಳೂರು ಮತ್ತು ಕೋಲಾರಗಳಲ್ಲಿ ತೆಲುಗು (ಶೇ. 57), ಬೆಳಗಾಂವಿ ಮತ್ತು ಬೀದರ್‌ಗಳಲ್ಲಿ ಮರಾಠಿ (ಶೇ. 60), ದ.ಕನ್ನಡ ಜಿಲ್ಲೆಗಳಲ್ಲಿ ಕೊಂಕಣಿ (ಶೇ. 85) ಬಿಜಾಪುರ, ಬೀದರ್, ಗುಲ್ಬರ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಲಂಬಾಣಿ (ಶೇ. 56) ಭಾಷೆ ಮಾತನಾಡುವವರಿದ್ದಾರೆ. ಇವೆಲ್ಲದರ ನಡುವೆ ಆಂಗ್ಲ ಭಾಷೆಯೂ ರೂಢಿಯಲ್ಲಿದೆ.

**ಪ್ರಮುಖ ಸ್ಥಳಗಳು :** ಬೆಂಗಳೂರು ಕರ್ನಾಟಕದ ರಾಜಧಾನಿ. 17ನೆಯ ಶತಮಾನದಲ್ಲಿ ಸ್ಥಾಪಿತವಾದ ಈ ನಗರದಲ್ಲೂ ಅದರ ಸುತ್ತಮುತ್ತಲೂ ಅನೇಕ ಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳಿವೆ. ಕರ್ನಾಟಕದ ಆಗ್ನೇಯ ಭಾಗದಲ್ಲಿ ಎತ್ತರದ ನೆಲದ ಮೇಲಿರುವ ಈ ನಗರದ ವಾಯುಗುಣ ವರ್ಷಾದ್ಯಂತ ಹಿತಕರ. ನಗರದಲ್ಲಿ ಒಟ್ಟು 2188 ಕೈಗಾರಿಕೆಗಳಿದ್ದು, ಅವುಗಳಲ್ಲಿ 742 ಜವಳಿ, 176 ರಾಸಾಯನಿಕ, 1562 ಎಂಜಿನೀಯರಿಂಗ್ ಕೈಗಾರಿಕೆಗಳಾಗಿರುತ್ತವೆ. ರಾಜ್ಯದ ಒಟ್ಟು ಕೈಗಾರಿಕೆಗಳಲ್ಲಿ ಶೇ. 37 ರಷ್ಟು ಈ ನಗರದಲ್ಲಿ

ಟಿಪ್ಪುಸುಲ್ತಾನನ ಅರಮನೆ, ಬೆಂಗಳೂರು

ಸಾಂದ್ರೀಕರಿಸಿವೆ. ಬಹು ರಾಷ್ಟ್ರೀಯ ಉದ್ಯಮಗಳು, ಐ.ಟಿ. ಬಿ.ಟಿ. ಸಂಸ್ಥೆಗಳು, ಹಲವು ಬಂದಿವೆ. ನಗರದಲ್ಲಿ ಕುಶಲ ಹಾಗೂ ಅಕುಶಲ ಕೆಲಸಗಾರರಿಗೇನೂ ಅಭಾವವಿಲ್ಲ. ಇವರ ದಕ್ಷತೆ ಶಿಸ್ತುಗಳೇ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಮುಖ್ಯ ಆಕರ್ಷಣೆ. ರಾಜಾಜಿನಗರದ ಕೈಗಾರಿಕಾ ಎಸ್ಟೇಟು ಸರ್ಕಾರದಿಂದ ಪ್ರವರ್ತಿತವಾದ ಈ ಬಗೆಯ ವ್ಯವಸ್ಥೆಗಳ ಪೈಕಿ ಭಾರತದಲ್ಲೇ ದೊಡ್ಡದು, ಅತ್ಯಂತ ದಕ್ಷವಾದದ್ದು. ಬೆಂಗಳೂರಿನ ಅನೇಕ ಮನೆಗಳಲ್ಲಿ ಪರಂಪರಾಗತವಾಗಿ ಬಂದ ನೇಯ್ಗೆ ಕೆಲಸ ಇಂದಿಗೂ ಪ್ರವರ್ಧಮಾನವಾಗಿದೆ. ಬೆಂಗಳೂರು ಒಂದು ಮುಖ್ಯ ವಾಣಿಜ್ಯ ಕೇಂದ್ರ, ರೈಲ್ವೆ ಮತ್ತು ವಿಮಾನ ಮಾರ್ಗಗಳ ಸಂಧಿಸ್ಥಳ, ಸೇನಾಕೇಂದ್ರ, ಟಿಪ್ಪೂಸುಲ್ತಾನನ ಕೋಟೆ, ಲಾಲ್‌ಬಾಗ್, ಕಬ್ಬನ್‌ಪಾರ್ಕ್, ಅರಮನೆ, ಸರ್ಕಾರದ ಪೀಠವಿರುವ ವಿಧಾನಸೌಧ ಮುಂತಾದ ಪ್ರೇಕ್ಷಣೀಯ ಸ್ಥಳಗಳಲ್ಲದೆ ಅನೇಕ ಸಂಶೋಧನಾಗಾರಗಳೂ ವಿದ್ಯಾಸಂಸ್ಥೆಗಳೂ ಬೆಂಗಳೂರು ಮತ್ತು ಕೃಷಿ ವಿಶ್ವವಿದ್ಯಾನಿಲಯಗಳೂ ಇವೆ. ಬೆಂಗಳೂರು ನಗರ ಬೆಳೆಯಲು ಸ್ಥಳದ ಅಡಚಣೆಯೇನೂ ಇಲ್ಲ. ಇರುವ ಮುಖ್ಯ ತೊಂದರೆಯೆಂದರೆ ನೀರಿನದು. ಕಾವೇರಿಯಿಂದ ನೀರು ಸರಬರಾಜು ಮಾಡುವ ಯೋಜನೆ ಪೂರೈಸಿದ ಮೇಲೆ ಈ ತೊಂದರೆಯ ನಿವಾರಣೆಯಾಗುತ್ತಿದೆ. ಇತ್ತೀಚೆಗೆ ನಿವೇಶನ, ವಸತಿಗಳ ಕೊರತೆ ತಲೆದೋರಿದೆ. ಕೊಳಗೇರಿಗಳ ಬೆಳೆವಣಿಗೆ ಹಾಗೂ ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಸಂಚಾರ ಒತ್ತಡದಿಂದ ಅಪಘಾತಗಳು ಹೆಚ್ಚುತ್ತಿವೆ. ಆಡಳಿತ ನಿರ್ವಹಣೆ ಈ ಬೃಹನ್ನಗರದಲ್ಲಿ ಅಸಾಧ್ಯವಾಗುತ್ತಿದೆ.

ಮೈಸೂರು ಭಾರತದ ಉದ್ಯಾನಗಳ ನಗರವೆಂಬ ಹೆಸರು ತಳೆದಿದೆ. ಬೆಂಗಳೂರಿಗೆ ನೈಋತ್ಯದಲ್ಲಿ 140 ಕಿಮೀ ದೂರದಲ್ಲಿದೆ. ವಿಶಾಲ ರಸ್ತೆಗಳೂ ಭವ್ಯ ಭವನಗಳೂ ಮನಮೋಹಕ ಉದ್ಯಾನಗಳೂ ತುಂಬಿರುವ ಈ ನಗರದಲ್ಲಿ ಕರ್ನಾಟಕದ ಅತ್ಯಂತ ಹಳೆಯ ಮೈಸೂರು ವಿಶ್ವವಿದ್ಯಾನಿಲಯ ಇದೆ. ವರ್ಷಕ್ಕೊಮ್ಮೆ ನಡೆಯುವ ದಸರ ಉತ್ಸವ ರಾಷ್ಟ್ರೀಯ ಅಂತಾರಾಷ್ಟ್ರೀಯ ಖ್ಯಾತಿಗಳಿಸಿದೆ. ಇಂಡೊ–ಸಾರ್ಸೆನಿಕ್ ಶೈಲಿಯ ಅರಮನೆ ಒಂದು ಆಕರ್ಷಣೆ. ಜಗನ್ಮೋಹನ ಬಂಗಲೆಯ ಕಲಾವಸ್ತು ಸಂಗ್ರಹಾಲಯ, ಲಲಿತಮಹಲ್, ಪ್ರಾಣಿ ಸಂಗ್ರಹಾಲಯ ಮುಂತಾದವೂ ನಗರದ ಆಗ್ನೇಯಕ್ಕಿರುವ ಚಾಮುಂಡಿ ಬೆಟ್ಟವೂ ಪ್ರೇಕ್ಷಣೀಯ. ಮೈಸೂರು ನಗರ ರಸ್ತೆ ಮತ್ತು ರೈಲುಮಾರ್ಗಗಳ ಸಂಧಿಸ್ಥಳ. ನಗರಕ್ಕೆ ಸಮೀಪದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಸುಪ್ರಸಿದ್ಧವಾದ ಬಂಡೀಪುರ ಅಭಯಾರಣ್ಯವೂ ವನ್ಯಧಾಮವೂ, ರಂಗನತಿಟ್ಟಿನ ಪಕ್ಷಿಧಾಮವೂ ಇರುವುದು. ಇತಿಹಾಸ ಸುಪ್ರಸಿದ್ಧವಾದ ಪುಣ್ಯ ಕ್ಷೇತ್ರಗಳು, ಶ್ರೀರಂಗಪಟ್ಟಣ ತಲಕಾಡುಗಳು, ಹೊಯ್ಸಳ ಶಿಲ್ಪಾಗಾರಗಳಾದ ಸೋಮನಾಥಪುರ ಬೇಲೂರು ಹಳೇಬೀಡುಗಳು ಅತ್ಯಂತ ಉನ್ನತ ಏಕಶಿಲಾವಿಗ್ರಹವಾದ ಗೊಮ್ಮಟೇಶ್ವರವಿರುವ ಶ್ರವಣಬೆಳಗೊಳ, ಶಿವಸಮುದ್ರ ಮತ್ತು ಶಿಂಷ ಹೆಚ್ಚು ಆಕರ್ಷಣೆಗಳು. ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುಚ್ಛಕ್ತಿ, ನೀರಿನ ಸೌಲಭ್ಯ, ಅಗ್ಗದ ಕಾರ್ಮಿಕ ಸರಬರಾಜು, ಸ್ಥಳಾನುಕೂಲ ಇವೆಲ್ಲ ಇದ್ದರೂ ಕೈಗಾರಿಕೆಯ ದೃಷ್ಟಿಯಿಂದ ಈ ನಗರ ಅಷ್ಟು ಮುಂದುವರಿದಿಲ್ಲ. ನಗರದಲ್ಲಿ ಕೆಲವು ದೊಡ್ಡ ಕೈಗಾರಿಕೆಗಳಿವೆ. ಇವುಗಳಲ್ಲಿ ನಾಲ್ಕು ಸರ್ಕಾರದವು.

ಹುಬ್ಬಳ್ಳಿ–ಧಾರವಾಡ ಗುಂಪು ಜನಸಂಖ್ಯೆಯ ದೃಷ್ಟಿಯಿಂದ ಈಗ ಎರಡನೆಯದಾಗಿದೆ. ಹುಬ್ಬಳ್ಳಿ ಧಾರವಾಡಗಳು ಅವಳಿನಗರಗಳು. ಇವೆರಡರ ನಡುವೆ ಹೆಚ್ಚು ಅಂತರವಿಲ್ಲ. ಇವು ಒಂದಾಗುತ್ತಿವೆ. ಹುಬ್ಬಳ್ಳಿಯಲ್ಲಿ ಕೈಗಾರಿಕೆ, ವಾಣಿಜ್ಯಗಳು ಪ್ರಧಾನವಾಗಿವೆ; ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯದ ಕೇಂದ್ರ; ಕೃಷಿ ವಿಶ್ವವಿದ್ಯಾನಿಲಯ ಜಿಲ್ಲಾ ಆಡಳಿತ ಕೇಂದ್ರ, ಹುಬ್ಬಳ್ಳಿ ಸಂಚಾರಮಾರ್ಗಗಳ ಸಂಧಿಸ್ಥಳ.


ತಲಕಾಡು ಸ್ನಾನದೃಶ್ಯ

ಮಂಗಳೂರು ಕರಾವಳಿಯ ದೊಡ್ಡ ನಗರ; ರೇವು ಪಟ್ಟಣ. ಇಲ್ಲಿಯ ಬಂದರು ಕೇವಲ ಸಾಗರ ಮಾರ್ಗದ ಬದಿತಾಣವಾಗಿದ್ದು ಬಹುಕಾಲ ಮುಂಗಾರು ಮಳೆಗಾಲದಲ್ಲಿ ಅನುಪಯುಕ್ತವಾಗಿತ್ತು. ಇಡೀ ಕರ್ನಾಟಕ ಇದರ ಹಿನ್ನಾಡು. ಭಾರತದ ಕಾಫಿ ನಿರ್ಯಾತದ ಮುಕ್ಕಾಲು ಭಾಗ ಸಾಗುವುದು ಈ ಮೂಲಕ. ಕರ್ನಾಟಕದಿಂದ ಹೊರದೇಶಗಳಿಗೆ ಸಾಗುವ ಕಬ್ಬಿಣದ ಅದುರಿನ ಸಾಗಣೆಗೆ ದೃಷ್ಟಿಯಿಂದಲೂ ಇದು ಪ್ರಾಮುಖ್ಯ ತಳೆದಿದೆ. ಈಗ ಇದನ್ನು ಭಾರತದ ಪ್ರಧಾನ ಬಂದರುಗಳಲ್ಲೊಂದಾಗಿ ಅಭಿವೃದ್ಧಿಪಡಿಸಲಾಗಿದೆ. ವಿಶ್ವವಿದ್ಯಾನಿಲಯ ಮತ್ತು ಸ್ನಾತಕೋತ್ತರ ಕೇಂದ್ರವೂ ಅನೇಕ ಶಾಲಾ ಕಾಲೇಜುಗಳೂ ಇಲ್ಲಿವೆ. ನವಮಂಗಳೂರು ಭಾರತದ ಪ್ರಮುಖ ಬಂದರುಗಳಲ್ಲಿ ಒಂದಾಗಿದ್ದು, ಅದು ಕರ್ನಾಟಕದ ಹೆಬ್ಬಾಗಿಲು ಎನಿಸಿಕೊಂಡಿದೆ.


ಮಂಗಳೂರಿನ ಹೊಸ ಬಂದರು ನಿರ್ಮಾಣ ಯೋಜನೆ

ಕೋಲಾರ ಚಿನ್ನದ ಗಣಿ ಇರುವುದು ಬೆಂಗಳೂರಿನಿಂದ ಸು. 96 ಕಿಮೀ ದೂರದಲ್ಲಿ. ವಿಶ್ವದ ಅತ್ಯಂತ ಆಳವಾದ (2,743 ಮೀ) ಚಿನ್ನದ ಗಣಿ ಇಲ್ಲಿಯದು. ಇದು ಈಗ ರಾಷ್ಟ್ರೀಕರಣಗೊಂಡ ಉದ್ಯಮ. ಇತ್ತೀಚೆಗೆ ಚಿನ್ನದ ನಿಕ್ಷೇಪವು ಮುಗಿದಿರುವುದರಿಂದ ಗಣಿ ಕಾರ್ಯಾಚರಣೆ ಸ್ಥಗಿತವಾಗಿವೆ.

ಬೆಳಗಾವಿ ಮರ್ಮಗೋವಕ್ಕೆ ಹೆಬ್ಬಾಗಿಲಿನಂತಿದೆ. ಉತ್ತರ ಮೈದಾನದ ಮುಖ್ಯ ರಸ್ತೆಗಳು ಇಲ್ಲಿ ಸಂಧಿಸಿ ಇಲ್ಲಿಂದಾಚೆಗೆ ಸಾಗುತ್ತವೆ. ಬೆಳೆಯುತ್ತಿರುವ ಹತ್ತಿ ಉದ್ಯಮದ ಕೇಂದ್ರವಿದು. ಇನ್ನೂ ಹಲವು ಕೈಗಾರಿಕೆಗಳಿವೆ. ಇದು ಕರ್ನಾಟಕದ ಎರಡನೆಯ ಸೇನಾಕೇಂದ್ರ ವಿಶ್ರಾಂತಿದಾಣ.

ಕರ್ನಾಟಕದಲ್ಲಿ ಪ್ರೇಕ್ಷಣೀಯ ಹಾಗೂ ಯಾತ್ರಾಸ್ಥಳಗಳಿಗೇನೂ ಕೊರತೆಯಿಲ್ಲ. ನಿಸರ್ಗ ಸೌಂದರ್ಯದಿಂದ ಕೂಡಿದ ತಾಣಗಳೂ ಇತಿಹಾಸವನ್ನು ಕೆತ್ತಿದಂತಿರುವ ಕ್ಷೇತ್ರಗಳೂ


ಮಂಗಳೂರಿನ ಹಳೆಯ ಬಂದರು

ಅನೇಕ, ಕೊಡಗಿನಲ್ಲಿರುವ ಭಾಗಮಂಡಲ ಬಳಿಯ ತಲಕಾವೇರಿ ಹಿಂದೂಗಳಿಗೆ ಪವಿತ್ರ. ಧರ್ಮಸ್ಥಳ ಪುತ್ತೂರು ತಾಲ್ಲೂಕಿನಲ್ಲಿ ಮಂಗಳೂರಿಗೆ ಸು. 68 ಕಿಮೀ ದೂರದಲ್ಲಿರುವ ಒಂದು ಪವಿತ್ರ ಸ್ಥಳ. ಗೋಕರ್ಣ ಉತ್ತರ ಕನ್ನಡ ಜಿಲ್ಲೆಯ ಯಾತ್ರಾಸ್ಥಳ. ಇಲ್ಲಿಯ ಪವಿತ್ರ ಲಿಂಗ ಗೋವಿನ ಕಿವಿಯಂತಿದೆ. ಹಿಂದುಗಳ ಆರಾಧನಾ ಕೇಂದ್ರವಿದು. ಕಾರ್ಕಳ ಮಂಗಳೂರಿನ ಬಳಿ ಇದೆ. ಇಲ್ಲಿಯ ಗೊಮ್ಮಟೇಶ್ವರ ಶಿಲಾವಿಗ್ರಹ ಶ್ರವಣಬೆಳಗೊಳದಲ್ಲಿರುವುದಕ್ಕೆ ಎರಡನೆಯದು. ಮಂಡ್ಯ ಜಿಲ್ಲೆಯ ಮೇಲುಕೋಟೆ ಶ್ರೀವೈಷ್ಣವ ಕೇಂದ್ರ. ಬೆಟ್ಟದ ಮೇಲೆ ದೇವಸ್ಥಾನದಲ್ಲಿ ವರ್ಷಕ್ಕೊಮ್ಮೆ ನಡೆಯುವ ವೈರಮುಡಿಉತ್ಸವ ಹಿಂದೂ ಆಸ್ತಿಕರ ಆಕರ್ಷಣೆ. ಮೂಡಬಿದಿರೆ ಮಂಗಳೂರಿಗೆ ಸು. 35 ಕಿಮೀ ದೂರದಲ್ಲಿದೆ. ಇದು ಜೈನಕಾಶಿ. ಮೈಸೂರಿನ ಬಳಿ ಕಪಿಲಾ ನದಿ ದಂಡೆಯ ಮೇಲೆ ಇರುವ ನಂಜನಗೂಡು ಈಶ್ವರನ ಆವಾಸಸ್ಥಾನ. ತುಂಗಾನದಿ ದಡದಲ್ಲಿ ಮಲೆನಾಡಿನ ನಡುವೆ ಇರುವ ಶೃಂಗೇರಿಯ ಮಠ ಶಂಕರಾಚಾರ್ಯರಿಂದ ಸ್ಥಾಪಿತವಾದದ್ದು. ಈ ಊರು ನಿಸರ್ಗ ಸೌಂದರ್ಯದಿಂದ ಆವೃತ. ಬೆಳಗಾವಿ ಜಿಲ್ಲೆಯ ಸವದತ್ತಿ ಬಳಿಯ ಶ್ರೀ ರೇಣುಕ ಕ್ಷೇತ್ರಕ್ಕೆ ಎಲ್ಲಮ್ಮನ ಗುಡ್ಡವೆಂಬ ಹೆಸರಿದೆ. ಇಲ್ಲಿಯ ದೇವಸ್ಥಾನ ಪುರಾತನವಾದದ್ದು. ಸಿದ್ಧಗಂಗಾ ತುಮಕೂರಿನ ಬಳಿಯ ಕ್ಷೇತ್ರ. ಸುತ್ತಣ ಪ್ರಕೃತಿಯ ದೃಶ್ಯ ಚೆಲುವಿನದು. ಸುಬ್ರಹ್ಮಣ್ಯ ಪಶ್ಚಿಮ ಘಟ್ಟಗಳ ದಕ್ಷಿಣ ಭಾಗದಲ್ಲಿದೆ. ವರ್ಷಕ್ಕೊಮ್ಮೆ ನಡೆಯುವ ರಥೋತ್ಸವ, ದನಗಳ ಜಾತ್ರೆ ಸಾವಿರಾರು ಮಂದಿಗೆ ಆಕರ್ಷಣೆ. ಉಡುಪಿ ಭಾರತದ ಮುಖ್ಯ ಯಾತ್ರಾಸ್ಥಳಗಳಲ್ಲೊಂದು. ಇಲ್ಲಿ ಮಧ್ವಾಚಾರ್ಯರಿಂದ ಪ್ರತಿಷ್ಠಿತವಾದ ಕೃಷ್ಣನ ಮಂದಿರವಿದೆ. ಅಷ್ಟ ಮಠಗಳಿವೆ.

ಚಿತ್ರದುರ್ಗದ ಬಳಿಯಲ್ಲಿ ಇರುವ ಚಂದ್ರವಳ್ಳಿಯ ಉತ್ಖನನದಿಂದ ಗತಕಾಲದತ್ತ ಇಣುಕುನೋಟ ದೊರಕುತ್ತದೆ. ಕಿತ್ತೂರಿನ ಬಳಿಯ ದೇವಗಿರಿ ಮತ್ತು ದೇಗುಲಹಳ್ಳಿಗಳಲ್ಲಿ ಕದಂಬರ ಕಾಲದ ಶಿಲ್ಪವನ್ನೊಳಗೊಂಡ ದೇವಾಲಯಗಳನ್ನು ಕಾಣಬಹುದು. ತುಮಕೂರಿನ ಬಳಿ ಇರುವ ಕೈದಾಳದ ಚೆನ್ನಕೇಶವನ ದೇವಸ್ಥಾನ ಹೊಯ್ಸಳ ಶೈಲಿಯದು. ಬೆಳಗಾವಿಯ ಬಳಿಯ ಖಾನಾಪುರದಲ್ಲಿ ಪಿಂಗಾಣಿ ಕಾರ್ಖಾನೆಯಿದೆ. ಈ ಪ್ರದೇಶದಲ್ಲಿರುವ ಬಾಕ್ಸೈಟ್ ಮತ್ತು ಮ್ಯಾಂಗನೀಸ್ ನಿಕ್ಷೇಪಗಳು ಬಹು ಸಂಪದ್ಭರಿತವಾದವು. ಸುತ್ತಣ ನಿಸರ್ಗವೂ ಸುಂದರವಾದದ್ದು. ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಸ್ಥಳ ಕಿತ್ತೂರು. ಮಹೀಪಾಲಗಡವಿರುವುದು ಬೆಳಗಾಂವಿಯ ಬಳಿ. ವೈಜನಾಥ ಗುಹಾ ದೇವಾಲಯದಿಂದಾಗಿ ಇದು ಪ್ರಸಿದ್ಧ. ಮಡಿಕೇರಿ ಕೊಡಗು ಜಿಲ್ಲೆಯ ಮುಖ್ಯ ಪಟ್ಟಣ. ಹಿಂದಿನ ಕೊಡಗು ರಾಜ್ಯದ ರಾಜಧಾನಿ. ಇಲ್ಲಿ ಕೊಡಗಿನ ರಾಜರ ಕಾಲದ ಅನೇಕ ಸ್ಮಾರಕಗಳಿವೆ. ಮೈಸೂರಿಗೆ ಸಮೀಪ ಇರುವ ಶ್ರೀರಂಗಪಟ್ಟಣ ಮೈಸೂರು ದೊರೆಗಳ ಮುಂಚಿನ ರಾಜಧಾನಿಯಾಗಿತ್ತು. ಟಿಪ್ಪುಸುಲ್ತಾನನ ಸ್ಮಾರಕ, ದರಿಯಾದೌಲತ್ ಬೇಸಗೆ ಅರಮನೆ, ಕೋಟೆ ಮತ್ತು ಶ್ರೀರಂಗನಾಥನ ದೇವಾಲಯ ಇವೆ. ಕಾವೇರಿಯಿಂದ ನಿರ್ಮಿತವಾದ ಮೂರು ದೊಡ್ಡ ದ್ವೀಪಗಳಲ್ಲಿ ಶ್ರೀರಂಗಪಟ್ಟಣ ಮೊದಲನೆಯದು. ಎರಡನೆಯದಾದ ಶಿವಸಮುದ್ರವೂ ಕರ್ನಾಟಕದಲ್ಲೇ ಇದೆ.

ಕರ್ನಾಟಕದಲ್ಲಿ ಬೆಟ್ಟದಾಣಗಳೂ ವಿಶ್ರಾಂತಿಧಾಮಗಳೂ ಮೃಗಯಾವಿನೋದ ಪ್ರದೇಶಗಳೂ ವಿಹಾರ ಕೇಂದ್ರಗಳೂ ಅನೇಕ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಆಗುಂಬೆ ಒಂದು ಸಣ್ಣ ಹಳ್ಳಿ. ಅರಬ್ಬೀ ಸಮುದ್ರದ ಕಡೆ ಅಸ್ತಮಿಸುವ

ಸೂರ್ಯನನ್ನು ಇಲ್ಲಿಂದ ವೀಕ್ಷಿಸಲು ಅನೇಕರು ಇಲ್ಲಿಗೆ ಬರುತ್ತಾರೆ. ಸುತ್ತಣ ಸನ್ನಿವೇಶ ರಮ್ಯವಾದದ್ದು. ಬಂಡೀಪುರ ಮೈಸೂರಿಗೆ ಸು. 80 ಕಿಮೀ ದೂರದಲ್ಲಿದೆ. ಬನ್ನೇರುಘಟ್ಟ

ಶ್ರೀಕಂಠೇಶ್ವರ ದೇವಾಲಯ, ನಂಜನಗೂಡು

ಬೆಂಗಳೂರಿಗೆ ಸು. 20 ಕಿಮೀ ದೂರದಲ್ಲಿ ಆನೆಕಲ್ಲು ರಸ್ತೆಯ ಬಳಿ ಇದೆ. ಬೆಟ್ಟದ ಬುಡದ ಸಂಪಂಗಿರಾಮಸ್ವಾಮಿ ದೇವಾಲಯ ಪ್ರಕೃತಿ ರಮ್ಯಸ್ಥಳದಲ್ಲಿದೆ. ನಾಗರಹೊಳೆಗೆ ಕೊಡಗಿನ ವಿರಾಜಪೇಟೆಯಿಂದ ಸು. 20 ಕಿಮೀ ದೂರ. ಇದು ಅಭಯಾರಣ್ಯ. ಬೆಂಗಳೂರಿಗೆ ಹತ್ತಿರದಲ್ಲೆ ಇರುವ ನಂದಿ ಬೆಟ್ಟ ವಿಶ್ರಾಂತಿಧಾಮ. ಶಿವಗಂಗಾ ಕೂಡ ಬೆಂಗಳೂರಿಗೆ ಹತ್ತಿರದಲ್ಲಿದೆ. ಇದೊಂದು ಚೆಲುವದಾಣ. ವಸಂತಪುರ ಬೆಂಗಳೂರಿನ ಬಳಿಯ ಪುಟ್ಟ ಬೆಟ್ಟ.

ಅಸಂಖ್ಯಾತ ಜಲಪಾತಗಳು ಕರ್ನಾಟಕದ ಇನ್ನೊಂದು ವೈಶಿಷ್ಟ್ಯ. ಶಿವಮೊಗ್ಗ ಜಿಲ್ಲೆಯ ತಾಳಗುಪ್ಪಕ್ಕೆ ಸು. 16 ಕಿಮೀ ದೂರದಲ್ಲಿ ಶರಾವತಿ ನದಿಯಿಂದಾಗಿರುವ ಜೋಗದ (ಗೇರುಸೊಪ್ಪೆ) ಜಲಪಾತ ಜಗತ್ಪ್ರಸಿದ್ಧ. ಮಂಡ್ಯಕ್ಕೆ ಸು. 80 ಕಿಮೀ ದೂರದಲ್ಲಿರುವ ಶಿವಸಮುದ್ರದ ಬಳಿ ಕಾವೇರಿ ಎರಡಾಗಿ ಕವಲೊಡೆದು ಧುಮ್ಮಿಕ್ಕುತ್ತದೆ. ಉತ್ತರದ ಕವಲು ಗಗನಚುಕ್ಕಿ, ದಕ್ಷಿಣದ್ದು ಭರಚುಕ್ಕಿ. ಭಾರತದಲ್ಲಿ ಮೊಟ್ಟಮೊದಲು ದೊಡ್ಡ ಪ್ರಮಾಣದಲ್ಲಿ ಜಲವಿದ್ಯುತ್ತಿನ ಉತ್ಪತ್ತಿ ಮಾಡಲಾರಂಭಿಸಿದ್ದು ಇಲ್ಲೇ. ಬೆಳಗಾಂವಿ ಜಿಲ್ಲೆಯ ಗೋಕಾಕದ ಘಟಪ್ರಭಾ ನದಿಯ ಗೋಕಾಕ ಜಲಪಾತ ಗೇರು ಸೊಪ್ಪೆಯಷ್ಟು ದೊಡ್ಡದಲ್ಲ. ಇಲ್ಲಿ ಭಾರತದ ಮೊಟ್ಟಮೊದಲಿನ ಜಲವಿದ್ಯುತ್ ಜನಕ ಯಂತ್ರ ಸ್ಥಾಪಿತವಾಯಿತು. ಗೋಕಾಕ ಜಲಪಾತಮೊಂದು ಸುಂದರ ತಾಣ. ಯಲ್ಲಾಪುರಕ್ಕೆ ಉತ್ತರದಲ್ಲಿರುವ ಕಾಳೀನದಿಯ ಲಾಲ್‌ಗುಳಿ, ಯಲ್ಲಾಪುರದ ದಕ್ಷಿಣದಲ್ಲಿ ಗಂಗಾವಳಿ ನದಿಯ ಮಾಗೋಡು, ಬೆಳಗಾವಿಗೆ ಈಶಾನ್ಯದಲ್ಲಿರುವ ಮಾರ್ಕಂಡೇಯ, ಶಿರಸಿಯ ಬಳಿಯ ಶಿವಗಂಗಾ, ಸಿದ್ದಾಪುರದ ಉಂಚಳ್ಳಿ, ಆಗುಂಬೆಯ ಬಳಿಯ ವರಾಹಿ– ಇವು ಇತರ ಕೆಲವು ಜಲಪಾತಗಳು.

ನದಿಗೆ ಅಡ್ಡಲಾಗಿ ಕಟ್ಟಿದ ಕಟ್ಟೆಗಳಿಂದ ನಿರ್ಮಿತವಾದ ಜಲಾಶಯಗಳೂ ಚೆಲುವುದಾಣಗಳೇ. ಮೈಸೂರಿನ ಹತ್ತಿರ ಇರುವ ಕೃಷ್ಣರಾಜಸಾಗರ ಅತ್ಯಂತ ಪ್ರಸಿದ್ಧವಾದ್ದು. ಇಲ್ಲಿರುವ ಬೃಂದಾವನಕ್ಕೆ ಅಂತರರಾಷ್ಟ್ರೀಯ ಖ್ಯಾತಿಯಿದೆ. ಪ್ರಾಚೀನ ಸರೋವರಗಳಲ್ಲಿ ರಾಣಿಬೆನ್ನೂರಿನ ಬಳಿಯ ಮದಗಮಸೂರ್ ಸರೋವರ ಪ್ರಸಿದ್ಧವಾದದು. ಇದರ ಶಿಲ್ಪ ವಿಶಿಷ್ಟವಾದ್ದು. ವಿಜಯನಗರ ಕಾಲದಲ್ಲಿ ಕಟ್ಟಿದ ಈ ಸರೋವರದ ಕಟ್ಟೆ ಮಣ್ಣಿನದು; ಒಂದು ಫರ್ಲಾಂಗ್ ಉದ್ದವಿದೆ. ಬೆಂಗಳೂರಿಗೆ ಸನಿಯದಲ್ಲಿ ಅರ್ಕಾವತಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ತಿಪ್ಪಗೊಂಡನಹಳ್ಳಿ ಜಲಾಶಯಪ್ರದೇಶ ವಿಹಾರಿಗಳಿಗೊಂದು ಆಕರ್ಷಣೆ.



ಯೋಗಾನರಸಿಂಹ ದೇವಾಲಯ, ಮೇಲುಕೋಟೆ

ಮಲಪ್ರಭಾ ನದಿ ಘಟ್ಟಗಳನ್ನು ಕೊರೆದು ಹರಿದುಬರುವ ತಾಣ ನವಿಲುತೀರ್ಥ. ವಾಣಿವಿಲಾಸಸಾಗರ ಹಿರಿಯೂರಿನ ಬಳಿಯ ಕೃತಕ ಸರೋವರ. ತುಂಗಭದ್ರಾ ಕಟ್ಟೆಯ ಮೇಲಿನ ವಿಶಾಲ ಸಾಗರ ಈಚಿನ ಒಂದು ಆಕರ್ಷಣೆಯಾಗಿದೆ.

ಕರ್ನಾಟಕದ ಹಲವಾರು ಎಡೆಗಳಲ್ಲಿರುವ ಐತಿಹಾಸಿಕ ಸ್ಥಳಗಳೂ ಶಿಲ್ಪಕಲಾಕೃತಿಗಳೂ ಅಸಂಖ್ಯಾತ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದಾಗಿದೆ. ಉತ್ತರ

ಮಡಿಕೇರಿಯ ಒಂದು ದೃಶ್ಯ

ಕರ್ನಾಟಕದಿಂದ ಆರಂಭ ಮಾಡುವುದಾದರೆ, ಬಿಜಾಪುರ ಮೊದಲನೆಯದು. ಪಟ್ಟಣದ ಸುತ್ತಣ ಕೋಟೆಯ ಉದ್ದ 13 ಕಿಮೀ. ಈಗಲೂ ಇದು ಒಳ್ಳೆಯ ಸ್ಥಿತಿಯಲ್ಲಿದೆ. ಇಲ್ಲಿಯ ಗೋಳಗುಮ್ಮಟ ತುಂಬ ಪ್ರಸಿದ್ಧವಾದ್ದು. ಇಲ್ಲಿರುವ ಮಸೀದಿ ಇಡೀ ದಕ್ಷಿಣ ಭಾರತದಲ್ಲೇ ದೊಡ್ಡದು. ಗುಲ್ಬರ್ಗ ಮತ್ತು ಬಿದರೆ ಇನ್ನೆರಡು ಸ್ಥಳಗಳು. ಗುಲ್ಬರ್ಗದ ಕೋಟೆ ಬತ್ತೇರಿಗಳು ದೊಡ್ಡ ಆಕರ್ಷಣೆಗಳು. ಇಲ್ಲಿಯ ಶರಣಬಸವ ದೇವಸ್ಥಾನಕ್ಕೆ ಯಾತ್ರಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ನಿಸರ್ಗದ ಮಡಿಲಲ್ಲಿರುವ ಬೀದರ್‌ನ ಪುರಾತನ ಕೋಟೆಗಳೂ ಭವನಗಳೂ ಹಿಂದೂ–ಮುಸ್ಲಿಂ ಕಲೆಗಳ ಸಂಗಮದ ಪ್ರತೀಕಗಳು. ಬಿದ್ರಿ ಕಲೆಗೆ ಈ ಊರು ಪ್ರಸಿದ್ಧ. ಬೀದರ್‌ಗೆ ಸು. 112 ಕಿಮೀ ದೂರದಲ್ಲಿರುವ ಕಲ್ಯಾಣ ಚಾಳುಕ್ಯರ ರಾಜಧಾನಿಯಾಗಿತ್ತು. ಹಿಂದೂ ಯುದ್ಧಶಿಲ್ಪದ ಪರಿಚಯ ಪಡೆಯಬೇಕೆನ್ನುವವರು

ರಾಯಚೂರಿಗೆ ಭೇಟಿ ಕೊಡಬೇಕು. ಇದರ ಹತ್ತಿರದಲ್ಲೇ ಮಂತ್ರಾಲಯವಿದೆ. ಇದು ಹಿಂದೂಗಳಿಗೆ ಪವಿತ್ರಸ್ಥಳ; ಬಾದಾಮಿಯ ಗುಹೆಗಳೂ, ಪಟ್ಟದಕಲ್ಲು, ಐಹೊಳೆಗಳೂ,

ಕೃಷ್ಣರಾಜೇಂದ್ರ ಗಿರಿಧಾಮ, ಕೆಮ್ಮಣ್ಣುಗುಂಡಿ

ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಪರಿಚಯ ಮಾಡಿಕೊಡುತ್ತವೆ. ಬಾದಾಮಿಯಲ್ಲಿ ಹುಟ್ಟಿದ ಚಾಳುಕ್ಯ ಕಲೆ ಗದುಗಿನಲ್ಲೂ ಬೆಳೆಯಿತು. ಈಗ ಗದಗ್ ಹತ್ತಿ ವ್ಯಾಪಾರಕೇಂದ್ರ. ಕನ್ನಡನಾಡಿನ ಶಿವಶರಣರ ಆಧ್ಯಾತ್ಮಿಕ ಸಾಮಾಜಿಕ ಕ್ರಾಂತಿಗೆ ಜನ್ಮ ನೀಡಿದ ಸ್ಥಳವೇ ಕೂಡಲಸಂಗಮ. ಗದಗಿನ ಸನಿಯದಲ್ಲೇ ಇರುವ ಲಕ್ಕುಂಡಿಯಲ್ಲೂ ಐಹೊಳೆಯಲ್ಲಿರುವಂತೆ ಅನೇಕ ಪ್ರಾಚೀನ ದೇಗುಲಗಳಿವೆ. ಇವು ಚಾಳುಕ್ಯ ಕಲೆಯ ವಿವಿಧ ಮಾದರಿಗಳು. ಈ ಪ್ರದೇಶವನ್ನು ಚಾಳುಕ್ಯ ವಾಸ್ತುಶಿಲ್ಪದ ತೊಟ್ಟಿಲು ಎಂದು ಫರ್ಗುಸನ್ ಕರೆದಿದ್ದಾನೆ. ಡಂಬಳ, ಅಣ್ಣಿಗೇರಿ, ಇಟಗಿ, ಕುಕ್ಕನೂರು, ಕುಂದಗೋಳ, ಹಾವೇರಿ, ಲಕ್ಷ್ಮೇಶ್ವರ, ತಿಳವಳ್ಳಿ ನೀರಲಿಗಿ, ಗಳಗನಾಥ, ಹಾವನೂರು, ಹರಳಹಳ್ಳಿ, ಹಾನಗಲ್, ಬಂಕಾಪುರ, ಬನವಾಸಿ, ಆನವಟ್ಟಿ, ಬಾಳಂ ಬೀಡು, ಉಣಕಲ್, ಗಂಜಿಗಟ್ಟಿ, ಕುರವತ್ತಿ, ಬಾಗಲಿ– ಇವೆಲ್ಲ ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನೂ ಇತಿಹಾಸವನ್ನೂ ಮಿಡಿಯುವ ನಾಡಿಗಳು.

ಇತಿಹಾಸದ ಹಲವಾರು ಸಂಪದ್ಯುಕ್ತ ಸ್ಮೃತಿಗಳು ಚೆಲ್ಲಾಡಿರುವುದು ಹಂಪಿಯಲ್ಲಿ. ಇದು ವಿಜಯನಗರ ಸಾಮ್ರಾಜ್ಯದ ಹೃದಯಪ್ರದೇಶವಾಗಿತ್ತು. ಭಾರತದಲ್ಲಿ ಕೊಟ್ಟ ಕೊನೆಯ ವೈಭವಯುತ ಸಾಮ್ರಾಜ್ಯವಾಗಿದ್ದ ವಿಜಯನಗರದ ಸಂಸ್ಕೃತಿ ನಾಗರಿಕತೆಗಳ ಸಂಕೇತವಾಗಿ ಅಲ್ಲಿ ಅನೇಕ ಭಗ್ನಾವಶೇಷಗಳಿವೆ. ಮಲೆಘಟ್ಟಗಳ ನಡುವಣ ಪಾಳು ಬಯಲಿನ ನಡುವೆ ನಿಂತ ಉಗ್ರನರಸಿಂಹ, ರಾಣಿಮಹಲ್, ಕಮಲಮಹಲ್, ಆನೆಸಾಲು, ಅರಮನೆಯ ಆಸ್ತಿಭಾರ, ಹಜಾರ ರಾಮನ ದೇವಸ್ಥಾನ ಮುಂತಾದ ಹಲವಾರು ಸ್ಮಾರಕಗಳು ವಿಜಯನಗರದ ಭವ್ಯ ಇತಿಹಾಸವನ್ನು ಸಾರುತ್ತವೆ. ಇದರ ಬಳಿಯೇ ಆಧುನಿಕ ಶಿಲ್ಪದ ಫಲವಾದ ತುಂಗಭದ್ರಾ ಕಟ್ಟೆಯಿದೆ.

ದಕ್ಷಿಣ ಮಲೆನಾಡಿನ ಸೆರಗಿನಲ್ಲಿರುವ ಬೇಲೂರು ಹಳೆಬೀಡುಗಳಲ್ಲಿ ಹೊಯ್ಸಳ ಶಿಲ್ಪದ ಮಹೋನ್ನತಿಯನ್ನು ಕಾಣಬಹುದು. ಇಲ್ಲಿಯ ದೇಗುಲಗಳು ವಿಶ್ವಪ್ರಸಿದ್ಧವಾದಂಥವು. ಇಲ್ಲಿ ಕಲ್ಲಿನಲ್ಲಿ ಕಾವ್ಯ ಹೆಪ್ಪುಗಟ್ಟಿದೆ. ಮೈಸೂರಿನ ಬಳಿಯ ಸೋಮನಾಥಪುರದ ದೇವಸ್ಥಾನವೂ ಇದೇ ಸಂಪ್ರದಾಯಕ್ಕೆ ಸೇರಿದ್ದು. ಶ್ರವಣಬೆಳಗೊಳದ ಗೊಮ್ಮಟ ವಿಗ್ರಹ ಬೃಹದಾಕಾರದ ಶಾಂತಿಮೂರ್ತಿ. ಹರಪನಹಳ್ಳಿ, ಕೂಡ್ಲಿಗಿ, ಚಿತ್ರದುರ್ಗ, ಹರಿಹರ, ನೀಲಗುಂದ, ಕೊಟ್ಟೂರು, ಉಚ್ಚಂಗಿ, ಚಂದ್ರವಳ್ಳಿ, ಬನವಾಸಿ, ಸೋಂದಾ–ಇವೂ ಇತಿಹಾಸದ ದೃಷ್ಟಿಯಿಂದ ಪ್ರೇಕ್ಷಣೀಯ. ಭದ್ರಾವತಿಯ ಬಳಿಯ ಕೆಮ್ಮಣ್ಣುಗುಂಡಿ ಬೇಸಗೆಯ ವಿಶ್ರಾಂತಿಧಾಮ. ಶಿರಸಿ ಕುಮಟಗಳ ನಡುವೆ ಇರುವ ಯಾಣ ಚೆಲುವಾದ ಯಾತ್ರಾಸ್ಥಳ. ಮೈಸೂರಿನ ಬಳಿಯ ಚಾಮುಂಡಿಬೆಟ್ಟದ ನಟ್ಟ ನಡುವಿನಲ್ಲಿರುವ ಕಲ್ಲು ಬಸವ ಪ್ರಪಂಚದಲ್ಲೇ ದೊಡ್ಡದು. ಹೀಗೆ ಕರ್ನಾಟಕದಲ್ಲಿ ನಿಸರ್ಗ ರಮ್ಯತೆಯೂ ಮಾನವ ನಿರ್ಮಿತ ಕಲೆಯೂ ಸಮರಸವಾಗಿ ಬೆರೆತುಕೊಂಡಿವೆ.

**ರಫ್ತು ವ್ಯಾಪಾರ** : ಭಾರತದ ವಿದೇಶೀ ವ್ಯಾಪಾರದ ಭೂಪಟದಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಸ್ವಾತಂತ್ರ್ಯಪೂರ್ವ ದಿನಗಳ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಯ ಬೆಳವಣಿಗೆಯಂತೆಯೇ ರಫ್ತಿನ ಬೆಳವಣಿಗೆಗೂ ಹೆಚ್ಚಿನ ಗಮನ ಕೊಡಲಾಗಿತ್ತು. ಕರ್ನಾಟಕದ ಉತ್ಪನ್ನಗಳಾದ ಗಂಧದ ಎಣ್ಣೆ, ಗಂಧದ ಸಾಬೂನು, ರೇಷ್ಮೆ ಮುಂತಾದವಕ್ಕೆ ಹಿಂದೆ ವಿದೇಶೀ ಮಾರುಕಟ್ಟೆ ಇತ್ತು. ಸರ್ಕಾರ ಕೈಕೊಂಡ ಇಂಥ ನಾನಾ ಕ್ರಮಗಳಿಂದಾಗಿ ಕರ್ನಾಟಕದ ನಿರ್ಯಾತ ದೃಢವಾಗಿ ಹೆಚ್ಚಿದೆ. ವರ್ಷದಿಂದ ವರ್ಷಕ್ಕೆ ಕರ್ನಾಟಕದ ರಫ್ತು



ಬೀದರ್‌ನ ಕೋಟೆ

ವ್ಯಾಪಾರ ಅಧಿಕವಾಗುತ್ತಿದೆ. ರೇಷ್ಮೆ ವಸ್ತ್ರ, ಎಂಜಿನಿಯರಿಂಗ್ ಸಾಮಗ್ರಿ, ಗೋಡಂಬಿ, ಕಾಫಿ, ಕಬ್ಬಿಣದ ಅದಿರು ಇವಕ್ಕೆ ಬೇಡಿಕೆ ಹೆಚ್ಚುತ್ತಿದೆ.



ರಾಯಚೂರು ಕೋಟೆಯ ಒಂದು ದ್ವಾರ

ಕರ್ನಾಟಕದ ರಫ್ತು ವಸ್ತುಗಳಲ್ಲಿ ಕಬ್ಬಿಣದ ಅದಿರು ಮತ್ತು ಕಾಫಿ ಅತ್ಯಂತ ಮುಖ್ಯವಾದವು. ಎಂಜಿನಿಯರಿಂಗ್ ವಸ್ತುಗಳದು ಮೂರನೆಯ ಸ್ಥಾನ ನಾಲ್ಕನೆಯದು ಗೋಡಂಬಿ (1.56 ಕೋಟಿ ರೂ). ಇದರೊಂದಿಗೆ ನಾಲ್ಕನೆಯ ಸ್ಥಾನಕ್ಕಾಗಿ ಸ್ಪರ್ಧೆ ನಡೆಸಿರುವ ಪದಾರ್ಥ ಗಂಧದ ಎಣ್ಣೆ ಅಪ್ಪಟ ರೇಷ್ಮೆಯನ್ನು ಬಿಟ್ಟು ಉಳಿದ ಜವಳಿ ಪ್ರಾಮುಖ್ಯದ ದೃಷ್ಟಿಯಿಂದ ಆರನೆಯದು ಏಲಕ್ಕಿಯದು ಏಳನೆಯ ಸ್ಥಾನ. ಈ ಏಳು ಪದಾರ್ಥಗಳ ನಿರ್ಯಾತ ಮೌಲ್ಯ ಒಟ್ಟು ರಫ್ತಿನ ಮೌಲ್ಯದ ಶೇ. 85 ರಷ್ಟಾಗುತ್ತದೆ. ಶುದ್ಧ ರೇಷ್ಮೆ ಸಮುದ್ರಮೂಲ ಆಹಾರವಸ್ತು, ಮ್ಯಾಂಗನೀಸ್ ಅದಿರು, ಹೊಗೆಸೊಪ್ಪು, ಫಲೋತ್ಪನ್ನ, ಅಗರಬತ್ತಿ ಮತ್ತು ಕುಶಲ ವಸ್ತುಗಳು, ಗೋಡಂಬಿ, ಚಿಪ್ಪೆಣ್ಣೆ, ಮೂಳೆಪುಡಿ, ಗ್ರಾನೈಟ್ ಸಾಬೂನುಗಳು, ಪರಂಪರಾಗತವಾದ ಪದಾರ್ಥಗಳ ನಿರ್ಯಾತದ ಹೆಚ್ಚಳದ ಜೊತೆಗೆ ಹೊಸಹೊಸ

ಕೈಗಾರಿಕೆಗಳ, ಪದಾರ್ಥಗಳು ವಿದೇಶೀ ಮಾರುಕಟ್ಟೆಗಳಲ್ಲಿ ಪ್ರಿಯವಾಗುತ್ತಿವೆ. ಕರ್ನಾಟಕದಿಂದ ರಫ್ತಾಗುವ ಪದಾರ್ಥಗಳು ಮತ್ತು ಅವನ್ನು ಆಮದು ಮಾಡಿಕೊಳ್ಳುವ ದೇಶಗಳನ್ನು ಮುಂದೆ ಕೊಟ್ಟಿದೆ:

ಮಾಗೋಡು ಜಲಪಾತ

| ಪದಾರ್ಥ | ಆಮದು ಮಾಡಿಕೊಳ್ಳುವ ದೇಶಗಳು |
|---|---|
| 1. ಅಗರಬತ್ತಿ | ಬ್ರಿಟನ್, ಅಮೆರಿಕ, ಮಲೇಷ್ಯ, ಫ್ರಾನ್ಸ್, ಥೈಲೆಂಡ್, ಜಪಾನ್, ಘಾನ, ಫಿಜಿ, ಇಟಲಿ, ಹಾಂಗ್‌ಕಾಂಗ್, ದಕ್ಷಿಣ ಅಮೆರಿಕದ ದೇಶಗಳು, ಕೆನಡ, ಆಸ್ಟ್ರೇಲಿಯ, ಉಗಾಂಡ, ಅರೇಬಿಯ, ಇಥಿಯೋಪಿಯ, ಕೀನ್ಯ, ಇರಾಕ್, ಸ್ವೀಡನ್. |
| 2. ಅಪ್ಪಟ ರೇಷ್ಮೆ | ಜರ್ಮನಿ, ಆಸ್ಟ್ರೇಲಿಯ, ಅಮೆರಿಕ, ಫ್ರಾನ್ಸ್, ಬ್ರಿಟನ್, ಫಿನ್ಲೆಂಡ್, ಹಾಲೆಂಡ್, ಡೆನ್ಮಾರ್ಕ್, ಸ್ವೀಡನ್, ಸ್ವಿಟ್ಜರ್ಲೆಂಡ್, ಮಲೇಷ್ಯ, ಇಟಲಿ, ಕೆನಡ, ಇರಾನ್, ಬೆಲ್ಜಿಯಂ, ಜಪಾನ್, ಕೀನ್ಯ, ಮಲಾವಿ, ನೈಜೀರೀಯ, ಫಿಜಿ, ನಾರ್ವೇ. |
| 3. ಎಂಜಿನಿಯರಿಂಗ್ ವಸ್ತುಗಳು | ಅಮೆರಿಕ, ಕೆನಡ, ಪೋಲೆಂಡ್, ಬಲ್ಗೇರಿಯ, ಹಂಗರಿ, ನೈಜೀರಿಯ, ನ್ಯೂಜಿಲೆಂಡ್, ವಿಯೆಟ್ನಾಂ, ಇರಾಕ್, ಇರಾನ್, ಬೆಲ್ಜಿಯಂ, ದಕ್ಷಿಣ ಅಮೆರಿಕದ ದೇಶಗಳು, ಜರ್ಮನಿ, ಶ್ರೀಲಂಕ, ಐರ್ಲೆಂಡ್. |
| 4. ಏಲಕ್ಕಿ | ಇರಾಕ್, ಅರೇಬಿಯ, ಪರ್ಷಿಯನ್ ಖಾರಿ ದೇಶಗಳು, ಇರಾನ್, ಫಿನ್ಲೆಂಡ್, ಡೆನ್ಮಾರ್ಕ್. |
| 5. ಕಬ್ಬಿಣದ ಅದಿರು | ಜರ್ಮನಿ, ಜಪಾನ್, ಹಂಗರಿ. |
| 6. ಕಬ್ಬಿಣ ಮತ್ತು ಉಕ್ಕು | ಸಿಂಗಪುರ, ಶ್ರೀಲಂಕ, ಜಪಾನ್ |
| 7. ಕಾಫಿ | ಅಮೆರಿಕ, ಬೆಲ್ಜಿಯಂ, ಜರ್ಮನಿ, ನೆದರ್ಲೆಂಡ್ಸ್, ಬ್ರಿಟನ್, ಇರಾಕ್, ಪೋಲೆಂಡ್, ಕೆನಡ, ಸೌದಿ ಅರೇಬಿಯ, ಸ್ವೀಡನ್, ರಷ್ಯ |
| 8. ಕೃತಕ ರೇಷ್ಮೆ | ಮಲಾವಿ, ಬ್ರಿಟನ್. |
| 9. ಗಂಧದ ಎಣ್ಣೆ | ಅಮೆರಿಕ, ಬ್ರಿಟನ್, ನೆದರ್ಲೆಂಡ್ಸ್, ಫ್ರಾನ್ಸ್, ಜರ್ಮನಿ, ಜಪಾನ್, ಹಂಗೇರಿ, ಮಲೇಷ್ಯ, ಸೌದಿ ಅರೇಬಿಯ, ಸ್ವಿಟ್ಜರ್ಲೆಂಡ್, ಇಟಲಿ, ಆಸ್ಟ್ರೇಲಿಯ, ಶ್ರೀಲಂಕ, ಆಫ್ರಿಕ ದೇಶಗಳು, ಅರೇಬಿಯ, ಕೀನ್ಯ, ರಷ್ಯ, ಬಲ್ಗೇರಿಯ. |
| 10. ಗೋಡಂಬಿ | ಅಮೆರಿಕ, ಬೆಲ್ಜಿಯಂ, ಜರ್ಮನಿ, ನೆದರ್ಲೆಂಡ್ಸ್, ಬ್ರಿಟನ್, ಲೆಬನಾನ್, ಸೌದಿ ಅರೇಬಿಯ. |
| 11. ಗೋಡಂಬಿ ಚಿಪ್ಪೆಣ್ಣೆ | ಅಮೆರಿಕ, ಬ್ರಿಟನ್ |
| 12. ಗ್ರಾನೈಟ್ | ಜಪಾನ್, ಸ್ವಿಟ್ಜರ್ಲೆಂಡ್, ಬ್ರಿಟನ್, ಜರ್ಮನಿ, ಇಟಲಿ. |
| 13. ಜವಳಿ | ಅಮೆರಿಕ, ಬ್ರಿಟನ್, ಫ್ರಾನ್ಸ್, ಶ್ರೀಲಂಕ, ಇಂಡೋನೇಷ್ಯ, ಪೋಲೆಂಡ್, ಕೆನಡ, ಫಿಜಿ, ಹಾಂಗ್‌ಕಾಂಗ್, ಕೀನ್ಯ, ನಾರ್ವೇ, ಸಿಂಗಪುರ, ಉಗಾಂಡ, ಆಸ್ಟ್ರೇಲಿಯ, ಮಲಾವಿ, ಇರಾನ್, ಸೈಪ್ರಸ್. |
| 14. ತೆಂಗಿನ ನಾರು, ಹುರಿ | ಇರಾಕ್ |
| 15. ಪ್ಲಾಸ್ಟಿಕ್ ಮತ್ತು ಲಿನೋಲಿಯಂ | ಮಲೇಷ್ಯ, ಸಿಂಗಪುರ, ಬ್ರಿಟನ್, ಉಗಾಂಡ, ಕೀನ್ಯ, ಶ್ರೀಲಂಕ. |
| 16. ಫಲೋತ್ಪನ್ನ | ಬ್ರಿಟನ್, ಪರ್ಷಿಯನ್ ಖಾರಿಯ ದೇಶಗಳು, ಇರಾನ್, ರಷ್ಯ, ಸೌದಿ ಅರೇಬಿಯ, ಸಿಂಗಪುರ, ಅಮೆರಿಕ, ಜಪಾನ್, ಜರ್ಮನಿ, ಶ್ರೀಲಂಕ. |
| 17. ಮರ ಮತ್ತು ದಿಮ್ಮಿ | ಜಪಾನ್, ಶ್ರೀಲಂಕ, ಹಾಂಗ್‌ಕಾಂಗ್. |
| 18. ಮೂಳೆ ಪುಡಿ | ಬೆಲ್ಜಿಯಂ, ಬಲ್ಗೇರಿಯ, ಬ್ರಿಟನ್, ಫ್ರಾನ್ಸ್, ಜರ್ಮನಿ. |
| 19. ರೇಷ್ಮೆ ರದ್ದಿ (ವೇಸ್ಟ್) | ಇಟಲಿ, ಜಪಾನ್, ಸ್ವಿಟ್ಜರ್ಲೆಂಡ್. |
| 20. ಸಮುದ್ರಮೂಲ ಆಹಾರ | ಅಮೆರಿಕ, ಬ್ರಿಟನ್. |
| 21. ಸಾಬೂನುಗಳು, ಅಂಗರಾಗಗಳು | ಇರಾನ್, ಫಿಜಿ, ಅಮೆರಿಕ, ಸಿಂಗಪುರ, ಟಾನ್ಜಾನಿಯ, ಅರೇಬಿಯ, ಜರ್ಮನಿ, ಆಸ್ಟ್ರೇಲಿಯ, ಬ್ರಿಟನ್, ಫಿನ್ಲೆಂಡ್, ಥೈಲೆಂಡ್, ಕೆನಡ, ಬೆಲ್ಜಿಯಂ, ಸ್ವಿಟ್ಜರ್ಲೆಂಡ್. |
| 22. ಹತ್ತಿ ಬೀಜ, ಎಣ್ಣೆ, ಹಿಂಡಿ | ಬ್ರಿಟನ್, ಪೋಲೆಂಡ್, ರಷ್ಯ |
| 23. ಹದ ಮಾಡಿದ ಚರ್ಮ | ಬ್ರಿಟನ್, ನೆದರ್ಲೆಂಡ್ಸ್, ಫ್ರಾನ್ಸ್, ಹಂಗೇರಿ, ಸ್ವಿಟ್ಜರ್ಲೆಂಡ್, ಇಟಲಿ, ಜರ್ಮನಿ, ಬಲ್ಗೇರಿಯ, ಜರ್ಮನಿ, ಫ್ರಾನ್ಸ್. |
| 24. ಹೊಗೆಸೊಪ್ಪು | ಬೆಲ್ಜಿಯಂ, ಬ್ರಿಟನ್, ನೆದರ್ಲೆಂಡ್ಸ್. |

(ಎಚ್.ಎಸ್.ಕೆ.;ಪಿ.ಎಂ.)

**ಕರ್ನಾಟಕದ ಅರಣ್ಯಗಳು:** ಕರ್ನಾಟಕ ಅತ್ಯಂತ ಮಹತ್ವವುಳ್ಳ ಸಮೃದ್ಧ ಕಾಡುಗಳನ್ನುಳ್ಳ ಭಾರತದ ರಾಜ್ಯ. ಸಹ್ಯಾದ್ರಿ ಘಟ್ಟಗಳು ಪ್ರಪಂಚದಲ್ಲಿ ಗುರ್ತಿಸಿರುವ ವಿಶಿಷ್ಟ ಜೈವಿಕ ವೈವಿಧ್ಯತೆಯ 25 ಪ್ರಮುಖ ತಾಣಗಳಲ್ಲಿ ಒಂದಾಗಿದೆ. ವೃಕ್ಷರಾಶಿ ಮತ್ತು ಸಸ್ಯರಾಶಿಗಳಷ್ಟೇ ವನ್ಯಜೀವಿ ಸಂಪತ್ತು ರಾಜ್ಯದಲ್ಲಿದೆ. ರಾಜ್ಯದ ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಘೋಷಿತ ಅರಣ್ಯ ಪ್ರದೇಶ 38,724 ಚ.ಕಿಮೀ ಅಂದರೆ ಭೌಗೋಳಿಕ ಕ್ಷೇತ್ರದಲ್ಲಿ ಶೇ. 20.2 ಅರಣ್ಯ ಪ್ರದೇಶವೆಂದು ದಾಖಲಾಗಿದ್ದರೂ. ಶೇ. 11 ಪ್ರದೇಶ ಮಾತ್ರ ವೃಕ್ಷ ಆವೃತವಾದುದು. ಉಳಿದದ್ದು ಕ್ಷೀಣಿತ ಅರಣ್ಯ ಪ್ರದೇಶವಾಗಿದೆ. ಕರ್ನಾಟಕದ ಅರಣ್ಯ ಕ್ಷೇತ್ರದ ಶೇಕಡ ಪ್ರಮಾಣ ರಾಷ್ಟ್ರೀಯ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ. ರಾಷ್ಟ್ರೀಯ ಅರಣ್ಯ ನೀತಿ ನಿಗದಿಪಡಿಸಿರುವ (ಶೇ. 33.3) ಪ್ರಮಾಣಕ್ಕಿಂತ ಬಹಳ ಕಡಿಮೆ. ಈ ವ್ಯಾಪ್ತಿಗೆ ತರುವುದಕ್ಕಾಗಿ ಅರಣ್ಯೀಕರಣ ಯೋಜನೆಯಲ್ಲಿ ಶೀಘ್ರಗತಿಯಲ್ಲಿ ಬೆಳೆಯುವ ಮರಗಳ ಬೆಳವಣಿಗಾಗಿ ಹೊಸದಾಗಿ ಸಸಿ

ನೆಡಲಾಗುತ್ತಿದೆ. 2001–02 ನೆಯ ಸಾಲಿನಲ್ಲಿ ಕರ್ನಾಟಕದ ಅರಣ್ಯ ಇಲಾಖೆಯ ಮೂಲಕ 49,755 ಹೆ. ಪ್ರದೇಶವನ್ನು ಹೆಚ್ಚುವರಿಯಾಗಿ ಅರಣ್ಯಪ್ರದೇಶದ ವ್ಯಾಪ್ತಿಗೆ ತರಲಾಗಿದೆ. ನಂತರವೂ ಇಂಥ ಕಾರ್ಯಕ್ರಮವು ಮುಂದುವರಿದಿದೆ. ವೃಕ್ಷ ಬೆಳೆಗಾರರ ಸಹಕಾರ ಸಂಘ, ಗ್ರಾಮ ಅರಣ್ಯ ಸಮಿತಿಗಳು ಹಾಗೂ ಸ್ವಯಂ ಸೇವಾ ಸಂಘಗಳನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಾಗಿದೆ. ರಾಜ್ಯದ ಎಲ್ಲ ಅರಣ್ಯ ವಿಭಾಗಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ದೂರ ಸಂವೇದಿ (ರಿಮೋಟ್ ಸೆನ್ಸಿಂಗ್) ಹಾಗೂ ಭೂಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಇತ್ತೀಚೆಗೆ ಕೋಕೊ ಮತ್ತು ರಬ್ಬರ್ ತೋಟಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನವೂ ಸಾಗಿದೆ.

ಕರ್ನಾಟಕದ ಅರಣ್ಯಗಳು ಅಗಲವಾದ ಎಲೆಗಳುಳ್ಳ ರೀತಿಯವು. ರಾಷ್ಟ್ರೀಯ ಪ್ರಾಮುಖ್ಯವುಳ್ಳ ಅನೇಕ ಬೆಲೆಬಾಳುವ ಮರಗಳು ಇಲ್ಲಿವೆ. ತೇಗ, ಬೀಟೆ, ಮತ್ತಿ, ಬಾಗೆ, ಪಡಾಕ್ ಅನೇಕ ಪ್ರಭೇದದ ಮರಗಳು ಹೇರಳವಾಗಿವೆ. ಶ್ರೀಗಂಧವಂತೂ ಸಂಪೂರ್ಣವಾಗಿ ಕರ್ನಾಟಕದ್ದೇ ಆಗಿದೆ.

ಸಾಮಾನ್ಯವಾಗಿ ವಿವಿಧ ರೀತಿಯ ಅರಣ್ಯಗಳ ವಿತರಣೆ ಮತ್ತು ಬೆಳೆವಣಿಗೆಗಳು ಮುಖ್ಯವಾಗಿ ವಾಯುಗುಣ, ಭೂಗುಣ ಮತ್ತು ಭೂಸ್ವರೂಪಗಳು ಹಾಗೂ ಐತಿಹಾಸಿಕ ಕಾರಣಗಳನ್ನು ಅವಲಂಬಿಸಿರುತ್ತವೆ. ಈಗ ಬಂಜರಾಗಿ ಅರಣ್ಯಪ್ರದೇಶವಿಲ್ಲದಿರುವ ಅನೇಕ ಭಾಗಗಳು (ಉದಾ. ಮಂಡ್ಯ ಜಿಲ್ಲೆ) 18ನೆಯ ಶತಮಾನದ ಕೊನೆಯಲ್ಲಿ ಸಾಧಾರಣ ಗಾತ್ರದ ಮರಗಳನ್ನು ಪಡೆದಿದ್ದುವೆಂದು ತಿಳಿದುಬಂದಿದೆ. ಅನೇಕ ಯುದ್ಧಗಳು, ವ್ಯವಸಾಯದ ಬೆಳೆವಣಿಗೆ, ಜನಸಂಖ್ಯೆಯ ಹೆಚ್ಚಳ, ಮನೆಕಟ್ಟಲು, ಸೌದೆ ಇದ್ದಲುಗಳು ಮತ್ತಿತರ ಸಾಮಗ್ರಿಗಳ ಬಗ್ಗೆ ಮಾನವನ ಹೆಚ್ಚಿನ ಅವಶ್ಯಕತೆಗಳು ಇವೆಲ್ಲವುಗಳಿಂದ ಒಂದು ಕಾಲದಲ್ಲಿ ಶ್ರೀಮಂತವಾಗಿದ್ದ ಅರಣ್ಯಪ್ರದೇಶಗಳು ಇಂದು ಬಂಜರಾಗಿವೆ. ಇಂದಿನ ಅರಣ್ಯಗಳಾದರೂ ಹಾಗೆಯೇ ಉಳಿದು ಬಂದಿರುವುದಕ್ಕೆ ಒಂದು ಮುಖ್ಯ ಕಾರಣವೆಂದರೆ ಅವು ಪ್ರವೇಶಿಸಲಸಾಧ್ಯವಾಗಿರುವುದು. ಆದರೆ ಈಗಿನ ಒಳ್ಳೆಯ ರಸ್ತೆಗಳು ಬುಲ್ಡೋಜರುಗಳು, ಜೀಪ್ ಹಾಗೂ ಲಾರಿಗಳು ಇವನ್ನೂ ಹಾಳು ಮಾಡಲು ದಾರಿ ಮಾಡಿ ಕೊಟ್ಟಿವೆ. ನಮ್ಮ ಕೈಗಾರಿಕೆಗಳಾದ ಕಾಗದ, ಮರದ ತಿರುಳು, ರೇಯಾನ್, ಪ್ಲೈವುಡ್, ಚಿಪ್‌ಬೋರ್ಡ್ಸ್, ವಿನೀರ್ಸ್ ಮುಂತಾದುವೆಲ್ಲ ಮುಖ್ಯವಾಗಿ ಅರಣ್ಯವೃಕ್ಷಗಳನ್ನೇ ಅವಲಂಬಿಸಿವೆ.

ಕರ್ನಾಟಕದ ಅರಣ್ಯಗಳು ಉತ್ತರ ದಕ್ಷಿಣವಾಗಿ ವಿತರಣೆಗೊಂಡಿವೆ. ಇವುಗಳ ಬೆಳೆವಣಿಗೆ ಮತ್ತು ಅಭಿವೃದ್ಧಿಗಳಲ್ಲಿ ಮಳೆ ಹಂಚಿಕೆಯ ಪಾತ್ರ ಬಹು ಹಿರಿದಾದದ್ದು. ಸಂಪತ್ಕುಮಾರನ್ ಅವರು ಈ ಅರಣ್ಯಗಳನ್ನು ಮೂರು ಬಗೆಯವನ್ನಾಗಿ ವಿಂಗಡಿಸಿದ್ದಾರೆ.

1. ನಿತ್ಯ ಹರಿದ್ವರ್ಣದ ಅರಣ್ಯಪ್ರದೇಶ: ವಾರ್ಷಿಕ ಮಳೆ 150–300 ಸೆಂಮೀ. ವಿತರಣೆ ರಾಜ್ಯದ ಪಶ್ಚಿಮ ಭಾಗಗಳಲ್ಲಿ (ಕೊಡಗು, ಹಾಸನ, ಶಿವಮೊಗ್ಗ, ದ.ಕ., ಉ.ಕ., ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳು).

2. ಮಿಶ್ರ ಎಲೆಯುದುರುವ ಸಸ್ಯ (ಡೆಸಿಡ್ಯುಯಸ್) ಪ್ರದೇಶ: ವಾರ್ಷಿಕ ಮಳೆ 60–150 ಸೆಂಮೀ. ಹಿಂದೆ ಹೇಳಿದ ಅರಣ್ಯಪ್ರದೇಶದ ಪೂರ್ವಭಾಗದಲ್ಲಿದೆ.

3. ಶುಷ್ಕ ಪ್ರದೇಶದ ಸಸ್ಯಗಳು ಮತ್ತು ಕುರುಚಲು ಪ್ರದೇಶ: ವಾರ್ಷಿಕ ಮಳೆ 50 ಸೆಂಮೀ ಗಿಂತ ಕಡಿಮೆ. ಪೂರ್ವದ ಎಲ್ಲ ಜಿಲ್ಲೆಗಳಲ್ಲೂ ಕಂಡುಬರುತ್ತದೆ.

ಮೇಲೆ ಹೇಳಿದ ಮೂರು ವಿವಿಧ ರೀತಿಯವುಗಳಲ್ಲೂ ಇರುವ ಅನೇಕ ಪ್ರಭೇದಗಳು ಬೇರೆ ಬೇರೆಯವೇ ಆದರೂ ಅವುಗಳ ನಡುವೆ ನಿಖರವಾದ ಎಲ್ಲೆಗಳನ್ನು ಎಳೆಯಲಾಗುವುದಿಲ್ಲ. ಏಕೆಂದರೆ ಪಶ್ಚಿಮದಿಂದ ಪೂರ್ವಕ್ಕೆ ಒಂದು ರೀತಿಯ ಅರಣ್ಯ ಮತ್ತೊಂದು ರೀತಿಯದಕ್ಕೆ ನಿಧಾನವಾಗಿ ಎಡೆಗೊಡುತ್ತದೆ.

1. ನಿತ್ಯ ಹರಿದ್ವರ್ಣದ ಅರಣ್ಯ ಪ್ರದೇಶ: ಪಶ್ಚಿಮ ಘಟ್ಟಗಳ ಸಹ್ಯಾದ್ರಿಗಳ ಉದ್ದಕ್ಕೂ 10–70 ಕಿಮೀಗಳ ಅಗಲಕ್ಕೆ ಹರಡಿಕೊಂಡಿದೆ. ಪ್ರಪಂಚದ ಅನೇಕ ಕಡೆಗಳಲ್ಲಿ ಕಂಡುಬರುವ ಉಷ್ಣವಲಯದ ತೇವಪೂರಿತ ಅರಣ್ಯಗಳ ಅವಶೇಷಗಳನ್ನು ಇಲ್ಲಿಯ ಕಡಿದಾದ ಕಣಿವೆಗಳು, ಪರ್ವತಗಳ ಹಳ್ಳತಿಟ್ಟುಗಳು ಮತ್ತು ಪ್ರಪಾತಗಳಲ್ಲಿ ಕಾಣಬಹುದು. ರಸ್ತೆಗಳ ಅಭಾವ ಮತ್ತು ದಟ್ಟವಾಗಿ ಬೆಳೆದಿರುವ ಸಸ್ಯವರ್ಗದಿಂದಾಗಿ ಈ ಅರಣ್ಯಗಳ ಪ್ರವೇಶ ಅತಿ ದುರ್ಗಮವಾಗಿದೆ. ಇಲ್ಲಿನ ಸಸ್ಯವರ್ಗ ಮುಖ್ಯವಾಗಿ ಮೂರು ಸ್ತರಗಳಲ್ಲಿ ಕಂಡುಬರುತ್ತದೆ. ಪ್ರತಿ ಸ್ತರದಲ್ಲೂ ಕಂಡುಬರುವ ಪ್ರಭೇದಗಳು ಸಾಮಾನ್ಯವಾಗಿ ಬೇರೆಯವೇ ಆಗಿವೆ. ಈ ಒಂದೊಂದು ಸ್ತರಕ್ಕೂ ನಡುವಿನ ಅಂತರದಲ್ಲಿ ಉಷ್ಣತೆ ಹಾಗೂ ಆರ್ದ್ರತೆಯ ವ್ಯತ್ಯಾಸಗಳಿವೆ. ಇವು ದಟ್ಟವಾದ ಅಡವಿಗಳಾದ್ದರಿಂದ ಸೂರ್ಯರಶ್ಮಿ ಭೂಮಿಯನ್ನು ಸೋಕುವುದೇ ಕಷ್ಟ. ಆದ್ದರಿಂದ ಅರಣ್ಯದ ಒಳಗೆ ಉಷ್ಣತೆ ಬಹು ಕಡಿಮೆ (ಮರಗಳ ಮೇಲಿನ ಒಣಗಾಳಿಯ ಉಷ್ಣತೆಗೆ ಹೋಲಿಸಿದರೆ). ಮಾನ್ಸೂನಿನ ಪ್ರಬಲ ಗಾಳಿಗಳಿಗೆ ಎದುರಾಗಿರುವ ಬೆಟ್ಟಗಳ ಮೇಲೆ ಬೆಳಯುವ ಮರಗಳ ಬೆಳೆವಣಿಗೆ ಕುಂಠಿತವಾಗಿದ್ದು ಅವು ಕುಳ್ಳಾಗಿ ವಿರೂಪಗೊಂಡಿರುತ್ತವೆ. ಅನೇಕ ವೇಳೆ ದಕ್ಷಿಣ ಪಶ್ಚಿಮ ಮಾನ್ಸೂನಿನ ಪ್ರಬಲವಾದ ಮಳೆಯಿಂದ ಕೂಡಿದ ಗಾಳಿಗಳು ಇಲ್ಲಿ ಪ್ರಭೇದಗಳ ವಿತರಣೆಯನ್ನು ನಿಯಂತ್ರಿಸುವುದುಂಟು. ಹಾವಸೆಗಳು, ತೆರ್ಮೆಗಳು, ಕಲ್ಲುಹೂಗಳು ಮತ್ತು ಇತರ ಅಪ್ಪು ಗಿಡಗಳು ಇಲ್ಲಿ ಸಮೃದ್ಧವಾಗಿ ಬೆಳೆಯುತ್ತವೆ.

ಈ ಅರಣ್ಯಗಳ ಮೇಲಿನ ಸ್ತರದಲ್ಲಿ ನೆಲದಿಂದ 60–70 ಮೀ ಗಳಷ್ಟು ಎತ್ತರದ ನಿತ್ಯಹರಿದ್ವರ್ಣ ವೃಕ್ಷಗಳು ಇವೆ. ಇವುಗಳ ಮೇಲೆ ಆರ್ಕಿಡ್ ಸಸ್ಯಗಳು, ಕೆಸುವಿನ ಜಾತಿಯ ಸಸ್ಯಗಳು ಮತ್ತು ತೆರ್ಮೆಗಳು ಹೇರಳವಾಗಿ ಬೆಳೆದಿವೆ. ಈ ಕೆಳಗಿನ ಕೆಲವು ಮುಖ್ಯ ಮರಗಳು ಮೇಲಿನ ಸ್ತರದಲ್ಲಿ ಕಂಡುಬರುತ್ತವೆ : ಉದಾ: ವಾಲಿಮರ, ಧೂಪ, ಎಣ್ಣೆಮರ, ಬಾಗೆ, ನಾಗಸಂಪಿಗೆ, ಸುರಹೊನ್ನೆ, ಸಾಲ್ ಇತ್ಯಾದಿ.

ಮಧ್ಯಮಸ್ತರದಲ್ಲಿ ಮೇಲಿನ ಸ್ತರದ ನೆರಳನ್ನು ಸಹಿಸಿಕೊಳ್ಳುವ ಮಧ್ಯಮ ಗಾತ್ರದ ವೃಕ್ಷಗಳಿವೆ. ವೃಕ್ಷಗಳ ದಪ್ಪ ಕಡಿಮೆ, ಎತ್ತರ 20–60 ಮೀ ಮೇಲಿನ ಸ್ತರ ನಿರ್ಮಿಸಿರುವ ಸೂಕ್ಷ್ಮವಾತಾವರಣದಲ್ಲಿ ಇವು ಚೆನ್ನಾಗಿ ಬದುಕಬಲ್ಲವು. ಈ ಮರಗಳ ಮೇಲೂ ಹಾವಸೆಗಳು ಹಾಗೂ ತೆರ್ಮೆಗಳು ಮುಂತಾದ ಅಪ್ಪುಗಿಡಗಳಿರುತ್ತವೆ. ಇಲ್ಲಿನ ಕೆಲವು ಮುಖ್ಯ ವೃಕ್ಷಗಳೆಂದರೆ–ರುದ್ರಾಕ್ಷಿ, ರಾಮನದಿಕೆ, ಕುಟುಗೇರಿ, ಹೈಗ, ಬಿಳಿದೇವದಾರು, ಹೆಬ್ಬಲಸು ಮಂಡ ಧೂಪ, ಚಿಟ್ಟು ತಂದ್ರಿಮರ, ಗೊಬ್ಬನೇರಳೆ ಇತ್ಯಾದಿ.

ಕೆಳಗಿನ ಸ್ತರದ ಮರಗಳ ಎತ್ತರ 10–20 ಮೀ ವರೆಗೆ ಇದೆ. ಅವುಗಳಲ್ಲಿ ಮುಖ್ಯವಾದ ಮರಗಳೆಂದರೆ ಸಗದೆ, ಹಲಸು, ಕಿಲಾರ್ ಭೋಗಿ, ಕನಾನಿ, ದಾಲ್ಚಿನ್ನಿ, ಎಲ್ಲಗ, ಕೆಂದಾಳ, ಅರದಳ ಕೂರ, ಕಾಡು ಕುಂಬಳ, ಸೊಟಿಗೆಮರ, ಲೊಡ್ಡಗಿನಮರಜ ಇತ್ಯಾದಿ.

ನಿತ್ಯಹರಿದ್ವರ್ಣ ಅರಣ್ಯಗಳು ಬಹುಪಾಲು ಎಲ್ಲ ಸ್ತರವನ್ನು ಆಕ್ರಮಿಸಿಕೊಂಡಿರುತ್ತವೆ. ಇವುಗಳ ತಳಭಾಗದಲ್ಲಿ ಪೊದೆಯಂತೆ ಬೆಳೆದುಕೊಳ್ಳುವ ಸಸ್ಯಗಳು ಕೆಳಗಿನಂತಿವೆ: ಉದಾ; ಹಾಸಿಗೆ ಮರ, ಕುಂಕುಮದ ಮರ, ಬಿಳಿ ದಾಳೆ, ಕಿಸ್ಕಾರ, ಬೆಂಡು ಮರ, ಪಾವಚೆ, ಆರ್ಥ್ರಿ, ದತ್ತಲೆ, ಕಾಡು ಅಡಿಕೆ, ಅಡರುಬಳ್ಳಿಗಳು : ನೀಟಮ್ ಉಲ, ಸ್ಪತೋಡಿಯ ರಾಕ್ಸ್‌ಬರ್ಗಿಯೈ, ದಾಲ್‌ಬರ್ಜಿಯ ಸಿಂಪತೆಟಿಕ, ಬಾಹಿನಿಯ ವಾಹ್ಲಿ (ಹೆಪ್ಪರಿಗೆ) ಸ್ಟ್ರಿಕ್ನಾಸ್ ಕಾಲಂಬ್ರಿನ (ನಾಗಮುಷ್ಠಿ), ಲವಂಗ ಎಲ್ಯೂತೆರಾಂಡ್ರ (ಲವಂಗ ಲತೆ), ಡಯಸ್ಕೋರಿಯ ಏಲೇಟ (ತೂನಗೆಣಸು) ಮತ್ತು ಎಂಟಾಡ ಪರ್ಸಿಯಥ.

ನಿತ್ಯಹರಿದ್ವರ್ಣ ಅರಣ್ಯಗಳ ಬೇರೆ ರೂಪಾಂತರಗಳಾದ ಷೋಲಾ ಅರಣ್ಯಗಳು 1000 ಮೀ ಗಳಿಗಿಂತಲೂ ಎತ್ತರವಿರುವ ಪರ್ವತ ಪ್ರದೇಶಗಳಲ್ಲಿ ಝರಿಗಳ ಎರಡು ಕಡೆಗಳಲ್ಲೂ ಬೆಳೆದುಕೊಂಡಿವೆ. ವಾಯುರಕ್ಷಿತ ಪ್ರದೇಶಗಳಲ್ಲಿ ಮಾತ್ರ ಇವು ಇದ್ದು ತೀರ ಮೇಲಕ್ಕೆ ಗಾಳಿಯ ಹೊಡೆತಕ್ಕೆ ಸಿಕ್ಕಿರುವ ಪರ್ವತಾಗ್ರಗಳಿಗೆ ಹೋದಂತೆಲ್ಲ ಹುಲ್ಲುಗಾವಲುಗಳಿವೆ. ಈ ಉಪೋಷ್ಣವಲಯದ ಅರಣ್ಯಗಳಲ್ಲಿ ಉಷ್ಣವಲಯದ ಮತ್ತು ಸರಿಸುಮಾರು ಸಮಶೀತೋಷ್ಣವಲಯದ ಪ್ರಭೇದಗಳು ಮಿಶ್ರವಾಗಿದ್ದು ಜೊತೆಗೂಡಿ ಬೆಳೆಯುತ್ತಿರುತ್ತವೆ. ಬಾಬಾಬುಡನ್, ಬಿಳಿಗಿರಿರಂಗನ ಬೆಟ್ಟ, ಕುದುರೆಮುಖ ಮುಂತಾದ ಬೆಟ್ಟ ಪ್ರದೇಶಗಳಲ್ಲಿ ಎತ್ತರದ ಭಾಗಗಳಲ್ಲಿ ಷೋಲಾ ಅರಣ್ಯಗಳು ಕಂಡುಬರುತ್ತವೆ. ವಿಶೇಷವೆಂದರೆ ಇಲ್ಲಿನ ಮರಗಳು ಅಷ್ಟು ಎತ್ತರಕ್ಕೆ ಬೆಳೆಯುವುದಿಲ್ಲ ಮತ್ತು ಬೇರುಗಳು ಆಳವಾಗಿರುವುದಿಲ್ಲ. ಮರಗಳ ಮೇಲೆ ಹಾವಸೆಗಳು ಬೆಳೆದುಕೊಂಡಿರುತ್ತವೆ.

ಇವುಗಳಲ್ಲಿ ಗ್ಲಾಕಿಡಿಯನ್ ಆರ್ಬೋರಿಯಮ್, ಲಿಟ್ಸಿಯ ಗ್ಲಾಬ್ರೇಟ, ಪಿಟೋಸ್ಪೋರಮ್ ಟೆಟ್ರಸ್ಪರ್ಮ್, ಕುಂಪೋಲಿ, ನೀರುಜಪ್ಲೆ, ಕಲ್‌ಬಿಕ್ಕಿ ಕ್ಯಾಲಿಕಾರ್ಪ ಟೊಮೆಂಟೋಸ, ಕ್ಯಾಂತಿಯಮ್ ಡೈಕಾಕಮ್ ವೈರೈಟಿ ಅಂಬೆಲೇಟಮ್, ಬೀಗದಮರ, ದಾಲ್ಚಿನ್ನಿ ಮೀಲಿಯೋಸ್ಮ ಮೈಕ್ರೊಕಾರ್ಪ, ಹೊನ್ನೆ, ಚಂಗ, ಶೆಫ್ಲೆರ ಕ್ಯಾಪಿಟೇಟ, ಕಂಡಗರಿಗೆ ಮತ್ತು ಷೋಲಾ ಇಳಿಜಾರುಗಳ ಹೊರಭಾಗದಲ್ಲಿ ಆರ್ಟಿಮಿಸಿಯ ಪಾರ್ವಿಪ್ಲೋರ, ಚಿನ್ನದಾವರೆ ಮತ್ತು ಕಿರು ಈಚಲು ಇವು ಮುಖ್ಯವಾದವು.

ಷೋಲಾ ಅರಣ್ಯಗಳು ವಾಯುಪೀಡಿತ ಪರ್ವತಾಗ್ರಗಳಲ್ಲಿ ಹುಲ್ಲುಗಾವಲುಗಳಿಗೆ ಎಡೆಗೊಟ್ಟಿದ್ದು ಕೆಳಗೆ ಬಂದಂತೆಲ್ಲ ನಿಧಾನವಾಗಿ ಉಷ್ಣವಲಯದ ತೇವಪೂರಿತ ಪರ್ಣಪಾತಿ ಸಸ್ಯದ ಅರಣ್ಯಗಳೊಂದಿಗೆ ಕೂಡಿಕೊಳ್ಳುತ್ತವೆ.

ಪರ್ವತಾಗ್ರಗಳ ಮೇಲೆ ಬೆಳೆಯುವ ಮೂಲಿಕೆಗಳ ಸಸ್ಯವರ್ಗ ಋತುಗಳಿಗೆ ತಕ್ಕಂತೆ ಬೇರೆ ಬೇರೆಯೇ ಆಗಿರುತ್ತದೆ. ಇಲ್ಲಿರುವ ಹುಲ್ಲುಗಳು ಹಾಗೂ ಮೂಲಿಕೆಗಳಿಗೆ ಉಷ್ಣತೆಯ ವೈಪರೀತ್ಯಗಳು, ಸೂರ್ಯನ ಗಾಢಪ್ರಖರತೆ ಮುಂತಾದುವನ್ನೆಲ್ಲ ತಡೆದುಕೊಳ್ಳುವ ಶಕ್ತಿ ಇದೆ. ಒಮ್ಮೊಮ್ಮೆ ಹುಲ್ಲುಗಾವಲುಗಳಲ್ಲಿ ಬೆಳೆವಣಿಗೆ ಕುಂಠಿತಗೊಂಡ, ಅಗಲ ಕಡಿಮೆ ಇರುವ ಎಲೆಗಳ, ಕಡಿಮೆ ಎತ್ತರದ ಮರಗಳು ಕಂಡು ಬರುವುವು. ಓಲಿಯ, ವೆಂಡ್‌ಲ್ಯಾಂಡಿಯ, ಆಲೋಫಿಲಸ್, ಯೂಜೀನಿಯ, ಸಿಂಪ್ಲೊಕಾಸ್ ಮತ್ತು ಲೊನಿಸೆರ ಇವೇ ಆ ಜಾತಿಯವು. ಕುರಂಜಿಗಿಡದ ಪೊದೆಗಳಂತೂ ಸಮೃದ್ಧವಾಗಿ ಬೆಳೆದಿರುತ್ತವೆ. ಇಲ್ಲಿರುವ ಪ್ರಧಾನ ಹುಲ್ಲುಗಳು: ಆಂಡ್ರೋ ಪೋಗಾನ್ ಪರ್ಟುಸಸ್, ಇಶೀಮಮ್ ಪೈಲೋಸಮ್ (ಕುಂದರಕಡ್ಡಿಹುಲ್ಲು), ತಿಮಿಡ ಇಂಬರ್ಬಿಸ್, ಸಿಂಬೊಪೋಗಾನ್ ಪಾಲಿನ್ಯೂರೋಸ್ ಮತ್ತು ಎರಾಗ್ರಾಸ್ಟಿಸ್ ನೈಗ್ರ.

2. ಮಿಶ್ರ ಎಲೆ ಉದುರುವ ಸಸ್ಯ ಪ್ರದೇಶ : ಘಟ್ಟ ಪ್ರದೇಶಗಳ ಪೂರ್ವಭಾಗದಲ್ಲಿದೆ. ಇಲ್ಲಿ ಬಿದಿರು, ತೇಗಗಳ ಜೊತೆಗೆ ನಿತ್ಯಹರಿದ್ವರ್ಣ ಹಾಗೂ ಪರ್ಣಪಾತಿ ಸಸ್ಯ ಪ್ರಭೇದಗಳು

ಮಿಶ್ರಗೊಂಡು ಬೆಳೆಯುತ್ತವೆ. ಈ ಪ್ರದೇಶದ ಅಗಲ ಪಶ್ಚಿಮದಿಂದ ಪೂರ್ವಕ್ಕೆ 35–50 ಕಿಮೀ ಗಳಷ್ಟಿದೆ. ಈ ಅರಣ್ಯಗಳನ್ನು ಸುಲಭವಾಗಿ ಪ್ರವೇಶಿಸಬಹುದಾದ್ದರಿಂದ ಸರ್ಕಾರಕ್ಕೆ ಇವುಗಳಿಂದ ಒಳ್ಳೆಯ ಆದಾಯ ಬರುತ್ತದೆ. ಬೀಳುವ ಮಳೆಯ ಪ್ರಮಾಣಕ್ಕನುಗುಣವಾಗಿ ತೇವಪೂರಿತ ಹಾಗೂ ಒಣ ಪರ್ಣಪಾತಿ ಸಸ್ಯದ ಅರಣ್ಯಗಳು ಇಲ್ಲಿ ಬೆಳೆಯುತ್ತವೆ. ಇವೆರಡಕ್ಕಿರುವ ಮುಖ್ಯ ವ್ಯತ್ಯಾಸವೆಂದರೆ ಮೊದಲಿನದರಲ್ಲಿ ಮರಗಳ ಬೆಳೆವಣಿಗೆ ಬಲು ಹುಲುಸಾಗಿರುವುದು. ಇಲ್ಲೂ ಸಸ್ಯವರ್ಗದಲ್ಲಿ ವಿವಿಧಸ್ತರಗಳು ಕಂಡುಬಂದರೂ ಅವು ನಿತ್ಯಹರಿದ್ವರ್ಣ ರೀತಿಯದರಷ್ಟು ಸ್ಪಷ್ಟವಾಗಿರುವುದಿಲ್ಲ. ಮರಗಳು ಅಷ್ಟು ಎತ್ತರವಾಗಿರುವುದಿಲ್ಲ ಮತ್ತು ಅಲ್ಲಲ್ಲಿ ತೆರೆದ ಸ್ಥಳಗಳಿರುತ್ತವೆ. ಸ್ಥಳ ಮತ್ತು ತೇವಗಳಿಗನುಗುಣವಾಗಿ ಸಸ್ಯವರ್ಗ ವೈವಿಧ್ಯಪೂರ್ಣವಾಗಿದೆ. ಈ ಅರಣ್ಯಗಳಿರುವ ಕಣಿವೆಗಳಲ್ಲಿ ಮರಗಳ ಎತ್ತರ 30–40 ಮೀ. ಇಲ್ಲಿನ ಮುಖ್ಯ ಮರಗಳೆಂದರೆ – ಹೆತ್ತೇಗ, ಬಿಲ್ವಾರ, ಪಾದ್ರಿ, ನಂದಿ, ಜಂಬೆ, ತೇಗ, ಬೆಂಡೆಮರ, ಹೊನ್ನೆ ಮುಂತಾದವು. ಇವುಗಳ ಪೈಕಿ ಅನೇಕ ಮರಗಳಿಗೆ ಸುತ್ತಳತೆ 3–5 ಮೀ ಗಳಿಷ್ಟಿರುತ್ತದೆ. ಮೇಲಿನ ಅರಣ್ಯಗಳ ಸ್ಥಳೀಯ ರೂಪಾಂತರಗಳಲ್ಲಿ ಈ ಕೆಳಗಿನ ಸಸ್ಯಗಳೂ ಕಂಡುಬರುತ್ತವೆ : ಉದಾ: ಮಡಿಮರ, ಗೋಮಜ್ಜಿಗೆ, ಕೂಲಿ, ಜಂಬುನೇರಳೆ ಇತ್ಯಾದಿ. ಇವುಗಳ ಜೊತೆಗೆ ಕಿರುಬಿದಿರು ಮತ್ತು ಹೆಬ್ಬಿದಿರುಗಳ ಬೆಳೆದಿರುತ್ತವೆ. ಒಣಪರ್ಣಪಾತಿ ಅರಣ್ಯ ಶಕ್ತಿಯುಡುಗಿನ ತೇವಪೂರಿತ ಅರಣ್ಯದ ರೂಪಾಂತರ. ಇದರ ಮೇಲಿನ ಸ್ತರದಲ್ಲಿ ತೇಗವಿರುತ್ತದೆ. ಅದರ ಜೊತೆಗೇ ಮತ್ತಿ, ನಂದಿ ಮತ್ತು ದಿಂಡಿಗಗಳಿರುತ್ತವೆ. ಎರಡನೆಯ ಸ್ತರವೇನಾದರೂ ಕಂಡುಬಂದಲ್ಲಿ ಅದರಲ್ಲಿ ನೆಲ್ಲಿ, ಕಾವಲ್, ಮುರ್ಕಲಿ ಮುಂತಾದ ಮರಗಳಿರುತ್ತವೆ. ಇಲ್ಲಿ ಅನೇಕ ಅಡರುಬಳ್ಳಿಗಳೂ ಇರುತ್ತವೆ. ಅವುಗಳಲ್ಲಿ ಮುಖ್ಯವಾದವು ಕಂಗೋಂದಿ ಬಳ್ಳಿ, ಕಾಡು ಹಂಬು ತಾವರೆ ಮತ್ತು ಮರ್ಸದ ಬಳ್ಳಿ.

3. ಶುಷ್ಕ ಪ್ರದೇಶದ ಸಸ್ಯಗಳು ಮತ್ತು ಕುರುಚಲು ಪ್ರದೇಶ: ಈ ಪ್ರದೇಶ ವಿಶಾಲವಾದುದು ಮತ್ತು ಉಳಿದ ರೀತಿಯ ಅರಣ್ಯಗಳ ಪೂರ್ವಕ್ಕೆ ಇದು ಹಬ್ಬಿದೆ. ಕರ್ನಾಟಕದ ಶೇ. 80–85 ಭೂಪ್ರದೇಶಗಳನ್ನು ಇದು ಆವರಿಸಿದೆ. ಇದರ ಸಸ್ಯವರ್ಗ ಎಂದೂ ಅರಣ್ಯದಂತೆ ಕಾಣಲಾರದು. ಇಲ್ಲಿನ ವಾರ್ಷಿಕ ಮಳೆ ಅತಿ ಕಡಿಮೆಯಾದ್ದರಿಂದ ಮರಗಳು ಬೆಳೆಯುವುದು ಬಹಳ ಕಷ್ಟ. ಆಕಸ್ಮಾತ್ತಾಗಿ ಮರಗಳೇನಾದರೂ ಬೆಳೆದರೆ ಅವು ಅಲ್ಲೊಂದು ಇಲ್ಲೊಂದರಂತೆ ವಿತರಣೆಗೊಂಡಿದ್ದು ಬಹುಸಣ್ಣ ಪ್ರಮಾಣದವಾಗಿರುತ್ತವೆ. ಇಲ್ಲಿ ಅನಾವೃಷ್ಟಿಯನ್ನು ಸಹಿಸಿಕೊಳ್ಳಬಲ್ಲ ವೈವಿಧ್ಯ ಪೂರ್ಣವಾದ ಮತ್ತು ಮುಳ್ಳುಗಳಿರುವ ಅನೇಕ ಪ್ರಭೇದಗಳಿವೆ. ಇಲ್ಲಿ ಬೆಳೆಯುವ ಮುಖ್ಯ ಮರಗಳೆಂದರೆ – ತಂಡರಸಿ, ಕಾಚಿನ ಮರ, ಜಾಲಿ, ಕಡುವಲೆ, ದಿಂಡಿಗ, ಕಾರಾಚ, ಶ್ರೀಗಂಧ, ಅರಚಿನಬೂರಗ, ಕಕ್ಕೆ, ಎಬನಿ ಮುತ್ತುಗ, ಅಂಕೋಲೆ ಇತ್ಯಾದಿ.

ಕೆಲವು ಜಿಲ್ಲೆಗಳಲ್ಲಿ ಸಣ್ಣ ಗುಡ್ಡಗಳಲ್ಲಿ ಮುಂಡುಗಳ್ಳಿ, ಕರೀಉಪ್ಪಿಗಿಡ ಮುಂತಾದವು ಇವೆ. ವಿಶಾಲವಾದ ಬಯಲುಗಳಲ್ಲಿ ಮರಗಳ ಮಧ್ಯೆ ಅನೇಕ ಜಾತಿಯ ಹುಲ್ಲುಗಳಿವೆ. ಸುಂಕರೀಹುಲ್ಲು, ದೊಡ್ಡ ಹಂಚೀಹುಲ್ಲು, ಕುಂತಿಹುಲ್ಲು ಮತ್ತು ಅಪ್ಲೂಡ ಮ್ಯೂಟಿಕಗಳು ಇವುಗಳಲ್ಲಿ ಕೆಲವು.

ಮೇಲಿನ ಮೂರು ಮುಖ್ಯ ರೀತಿಯ ಅರಣ್ಯಪ್ರದೇಶಗಳ ಪೈಕಿ ನಿತ್ಯಹರಿದ್ವರ್ಣಕಾಡುಗಳನ್ನು ಕಡ್ಡಾಯವಾಗಿ ಸಂರಕ್ಷಿಸಬೇಕು. ಎರಡನೆಯ ರೀತಿಯದನ್ನು ದುರುಪಯೋಗಗೊಳಿಸಿಕೊಳ್ಳದೆ ಸೂಕ್ತವಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಮೂರನೆಯ ರೀತಿಯ ಅರಣ್ಯಪ್ರದೇಶವಿರುವ ವಿಶಾಲಪ್ರದೇಶದಲ್ಲಿ ವನಮಹೋತ್ಸವ ಕಾರ್ಯಕ್ರಮಗಳನ್ನು ನಡೆಸಿ ಅರಣ್ಯಾಭಿವೃದ್ಧಿಯಾಗುವಂತೆ ಮಾಡುವುದು ಒಳ್ಳೆಯದು. ಮರದ ಕೈಗಾರಿಕೆಗಳಿಗೆ ಬೇಕಾದ ಮರವನ್ನು ಶೀಘ್ರಗತಿಯಲ್ಲಿ ಒದಗಿಸುವ ಪ್ರಭೇದಗಳನ್ನು ಈ ಭಾಗದ ಪ್ರದೇಶಗಳಲ್ಲಿ ಬೆಳೆಸಬೇಕು.

(ಬಿ.ಎ.ಆರ್.)

**ಕರ್ನಾಟಕದ ಭೂವಿಜ್ಞಾನ:** ಕರ್ನಾಟಕದ ಭೂವೈಜ್ಞಾನಿಕ ಅಧ್ಯಯನ ಪ್ರಾಕೃತಿಕ ವಿಭಾಗಗಳಷ್ಟೇ ಮುಖ್ಯವಾದುದು. ಭೂರಚನೆ ಭೂಸ್ವರೂಪವನ್ನು ರೂಪಿಸುತ್ತದೆ. ಜೊತೆಗೆ ಖನಿಜ, ಶಿಲೆ ಹಾಗೂ ಮಣ್ಣುಗಳ ಹಂಚಿಕೆಯನ್ನೂ ನಿರ್ಧರಿಸುತ್ತದೆ. ಭಾರತದ ಪರ್ಯಾಯ ಪ್ರಸ್ಥಭೂಮಿಯ ಒಂದು ಭಾಗದಲ್ಲಿ ಕರ್ನಾಟಕವೂ ವಿಸ್ತರಿಸಿದ್ದು, ಅದು ಪುರಾತನ ಭೂ ಇತಿಹಾಸ ಮತ್ತು ಶಿಲಾ ಪರಂಪರೆಯನ್ನು ಹೊಂದಿದೆ.

ಬಾಹ್ಯಶಕ್ತಿಗಳ ಕಾರ್ಯಾಚರಣೆಯಿಂದಾಗಿ ಶಿಲೆಗಳು ರೂಪಾಂತರಗೊಂಡಿರುತ್ತವೆ. ರಾಜ್ಯದ ಪ್ರಸ್ತುತ ಶಿಲಾ ಸಮೂಹವನ್ನು ಕುರಿತು ಭೂವಿಜ್ಞಾನಿಗಳು ಅಧ್ಯಯನ ಮಾಡಿ ಬರೆದಿದ್ದಾರೆ. ಭೂ ಇತಿಹಾಸದ ಮೊಟ್ಟಮೊದಲ ಅಧ್ಯಯನ ಕ್ಯಾಪ್ಟನ್ ಬಿ.ಜೆ. ಬೋಲ್ಡ್ ಎಂಬ ಭೂವಿಜ್ಞಾನಿಯಿಂದ ಪ್ರಾರಂಭ (1880). ಅವರ ಪ್ರಕಾರ ಕರ್ನಾಟಕದ ಭೂವಿಸ್ತೀರ್ಣದಲ್ಲಿ ಶೇ. 70 ಭಾಗ ಸೂಕ್ಷ್ಮ ಗೆರೆಗಳುಳ್ಳ ಬೂದು ಬಣ್ಣದ ಗ್ರಾನೈಟ್–ನೈಸ್ ಶಿಲೆಗಳಿಂದಲೂ ಉಳಿದ ಭಾಗದಲ್ಲಿ ಶೇ. 20 ಭಾಗವು ಹಸುರುಬಣ್ಣದ ಭಿನ್ನಸ್ತರದ (ಶಿಸ್ಟ್) ಶಿಲೆಗಳಿರುವುದು ತಿಳಿದು ಬಂದಿತು. ಇನ್ನೂ ಹಲವು ಭೂವಿಜ್ಞಾನಿಗಳು ರಾಜ್ಯದ ಭೂ ಇತಿಹಾಸವನ್ನು ಅಧ್ಯಯನ ಮಾಡಿ 2,700 ದಶಲಕ್ಷ ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಇಲ್ಲಿನ ಶಿಲಾ ಸಮುದಾಯ "ಆರ್ಷೇಯ ಯುಗಕ್ಕೆ" ಸೇರಿರುತ್ತದೆಂದು ಅಭಿಪ್ರಾಯಪಟ್ಟಿರುವರು. ಇವುಗಳನ್ನು ಎರಡು ಪ್ರಧಾನಗುಂಪುಗಳಾಗಿ ವಿಂಗಡಿಸಲಾಗಿದೆ.

1. ಕಣರಚನೆಯ ಪದರು ಶಿಲೆಗಳು (ಶಿಸ್ಟ್ಸ್) : ಧಾರವಾಡ ಶಿಲಾವರ್ಗವೆಂದು ಇವುಗಳ ಹೆಸರು. ಬ್ರೂಸ್ ಫೂಟ್ ಭೂವಿಜ್ಞಾನಿ ಪ್ರಥಮ ಬಾರಿಗೆ ಧಾರವಾಡದ ಬಳಿ ಶೋಧನೆ ಮಾಡಿದುದರಿಂದ ಇವುಗಳಿಗೆ ಧಾರವಾಡದ ಶಿಸ್ಟ್ ಎಂದು ಹೆಸರಿಸಲಾಗಿದೆ. ರೂಪಾಂತರ ಹೊಂದಿದ ಜಲಜಶಿಲೆಗಳು ಮತ್ತು ಜ್ವಾಲಾಮುಖಿಜನ್ಯಶಿಲೆಗಳೂ ಆಂಫಿಬೊಲೈಟ್, ಪೆಂಡೊಟೈಟ್, ಡನೈಟ್ ಮುಂತಾದ ಅಲ್ಪಸಿಲಿಕಾಂಶ (ಬೇಸಿಕ್) ಶಿಲೆಗಳೂ ಇವುಗಳಲ್ಲಿ ಸೇರಿವೆ. ವ್ಯಾಪ್ತಿ ಸು. 20,700 ಚ.ಕಿಮೀ.

2. ಗ್ರಾನೈಟ್ ಮತ್ತು ನೈಸ್ ಶಿಲಾವಿಧಗಳು: ಈ ಶಿಲೆ ರಾಜ್ಯದಲ್ಲಿ ಅಧಿಕವಾಗಿವೆ. ರಾಜ್ಯದ ದಕ್ಷಿಣಕ್ಕೆ ಇವುಗಳ ಹಂಚಿಕೆ ಹೆಚ್ಚು. ಅನೇಕ ಕಡೆ ಧಾರವಾಡ ಪದರು ಶಿಲೆಗಳನ್ನು ಛೇದಿಸಿಕೊಂಡು ಹೊರಬಂದಿರುವುದರಿಂದ (ಅಂತಸ್ಸರಣ) ಧಾರವಾಡ ಶಿಲಾವರ್ಗವೇ ಈ ರಾಜ್ಯದಲ್ಲಿ ಅತ್ಯಂತ ಪುರಾತನವಾದುದೆಂದು ಪರಿಗಣಿಸಲಾಗಿದೆ.

ಈಗ ಹೊರಕಾಣುತ್ತಿರುವ ಧಾರವಾಡ ಶಿಲಾವರ್ಗಗಳು ಹಲವಾರು ಉದ್ದವಲಯಗಳಾಗಿ ಉತ್ತರದಕ್ಷಿಣದುದ್ದಕ್ಕೂ ಹಬ್ಬಿವೆ. ಇವುಗಳ ಸುತ್ತ ಗ್ರಾನೈಟ್ ಮತ್ತು ನೈಸ್ ಶಿಲೆಗಳು ಹೆಚ್ಚುಕಡಿಮೆ ಸಮಾಂತರವಾಗಿ ಮೂರು ದೊಡ್ಡ ವಲಯಗಳಲ್ಲಿ ಹರಡಿವೆ. ಪಶ್ಚಿಮದಿಂದ ಪೂರ್ವಕ್ಕೆ ಹಾದುಹೋಗುವಾಗ ಧಾರವಾಡ ಶಿಲಾವಲಯಗಳನ್ನು ಒಂದಾದಮೇಲೊಂದರಂತೆ ಕಾಣಬಹುದು. ಇವನ್ನು ಬಿ.ರಾಮರಾಯರು ಕೆಳಕಂಡಂತೆ ವಿಂಗಡಿಸಿದ್ದಾರೆ (1940).

1. ಪಶ್ಚಿಮ ವಲಯ : ಕ್ಯಾಸಲ್‌ರಾಕ್, ಕೊಡಚಾದ್ರಿ, ಆಗುಂಬೆ, ಕುದುರೆಮುಖ ಮತ್ತು ಮಡಿಕೇರಿ ಶಿಲಾಪ್ರದೇಶಗಳನ್ನೊಳಗೊಂಡಿದೆ.

2. ಪಶ್ಚಿಮ ಮಧ್ಯವಲಯ : ಧಾರವಾಡಕ್ಕೆ ಸ್ವಲ್ಪ ಉತ್ತರದಲ್ಲಿ ಪ್ರಾರಂಭವಾಗಿ ದಕ್ಷಿಣದಲ್ಲಿ ಕಾವೇರಿ ನದಿಯ ತೀರದವರೆಗೆ ಸು. 435 ಕಿಮೀ ಉದ್ದವಾಗಿ ಹಬ್ಬಿದೆ. ಇದರಲ್ಲಿ ಮುಖ್ಯವಾಗಿ ಶಿವಮೊಗ್ಗ, ಹೊಳೆನರಸೀಪುರ ಮತ್ತು ಕೃಷ್ಣರಾಜಪೇಟೆ ಪದರು ಶಿಲಾವಲಯಗಳು ಸೇರಿವೆ. ಪಶ್ಚಿಮ ಮತ್ತು ಪಶ್ಚಿಮ ಮಧ್ಯ ಹರವಿನ ಒಟ್ಟು ವಿಸ್ತೀರ್ಣ ಸು. 11,650 ಚ.ಕಿಮೀ.

3. ಮಧ್ಯವಲಯ : ಉತ್ತರದಲ್ಲಿ ಗದಗ ಡಂಬಳದಿಂದ ಪ್ರಾರಂಭವಾಗಿ ಸ್ವಲ್ಪ ದೂರ ಆಗ್ನೇಯಾಭಿಮುಖವಾಗಿ ದಕ್ಷಿಣದತ್ತ ಹರಡಿದೆ. ಇದು ಚಿತ್ರದುರ್ಗ, ಚಿಕ್ಕನಾಯಕನ ಹಳ್ಳಿ, ನಾಗಮಂಗಲ ಮತ್ತು ನುಗ್ಗೇಹಳ್ಳಿ ಮುಂತಾದ ಪದರುಶಿಲಾಪ್ರದೇಶಗಳನ್ನೊಳಗೊಂಡಿದೆ.

4. ಪೂರ್ವ ಮಧ್ಯವಲಯ : ಅನೇಕ ಚಿಕ್ಕ ಪ್ರದೇಶಗಳನ್ನೊಳಗೊಂಡಿದೆ. ಇವುಗಳಲ್ಲಿ ಬ್ಯಾಂಡೈಟ್ ಶಿಲಾವರ್ಗ, ಕೋಡಮೈಟ್ ಶಿಲಾವರ್ಗ ಮತ್ತು ಸಾಕರ್‌ಸನೈಟ್ ಶಿಲಾವರ್ಗಗಳು ಮುಖ್ಯವಾದವು.

5. ಪೂರ್ವವಲಯ : ಕೋಲಾರ ಜಿಲ್ಲೆಯಲ್ಲಿದೆ. ಇದಕ್ಕೆ ಕೋಲಾರ ಶಿಲಾವಲಯವೆಂದು ಹೆಸರು. ಈ ಶಿಲೆಗಳು ಉತ್ತರದಕ್ಷಿಣವಾಗಿ ಹಬ್ಬಿವೆ. ಸು. 260 ಚ.ಕಿಮೀ ಗಳು. ಭಾರತದ ಚಿನ್ನದ ಉತ್ಪತ್ತಿಗೆ ಇದೇ ಮುಖ್ಯ ಕೇಂದ್ರ.

ಶಿಲಾ ಓಟ : ಧಾರವಾಡ ಶಿಲೆಗಳ ಪ್ರಾದೇಶಿಕ ಶಿಲಾ ಓಟ (ಸ್ಟ್ರೈಕ್) ಉತ್ತರ ಭಾಗದಲ್ಲಿ ಉತ್ತರವಾಯವ್ಯ ಮತ್ತು ದಕ್ಷಿಣಾಆಗ್ನೇಯವಾಗಿಯೂ ದಕ್ಷಿಣಕ್ಕೆ ಬಂದಂತೆಲ್ಲ ಉತ್ತರ ದಕ್ಷಿಣವಾಗಿಯೂ ದಕ್ಷಿಣದ ಎಲ್ಲೆಯ ಹತ್ತಿರ ಈಶಾನ್ಯ ನೈಋತ್ಯವಾಗಿಯೂ ಇವೆ.

ಶಿಲಾವಿಭಜನೆ : ಧಾರವಾಡ ಶಿಲಾಸಮುದಾಯಗಳನ್ನು ಬಹುಕಾಲದಿಂದ ಹಲವಾರು ಭೂ ವಿಜ್ಞಾನಿಗಳು ವಿಂಗಡಿಸಲು ಪ್ರಯತ್ನಿಸಿದ್ದಾರೆ. ಇವರಲ್ಲಿ ಮೊದಲಿಗರು ಸಂಪತ್ ಐಯ್ಯಂಗಾರ್ (1906) ಅನಂತರ ಡಬ್ಲ್ಯು.ಎಫ್. ಸ್ಮಿತ್ (1916). ಬಿ.ರಾಮರಾಯರು 1940 ರಲ್ಲಿ ಇದನ್ನು ವಿಂಗಡಿಸಿದ್ದಾರೆ.

ಧಾರವಾಡ ಶಿಲೆಗಳ ಉತ್ಪತ್ತಿ : ಇದೊಂದು ಆಸಕ್ತಿಯನ್ನುಂಟುಮಾಡುವ ವಿಚಾರ. ಕಾರಣ ಈ ಶಿಲೆಗಳು ಸಮುದ್ರದ ಅಡಿಯಲ್ಲಾದ ಇತರ ಶಿಲೆಗಳಂತಲ್ಲ. ಈವರೆಗೆ ಅನೇಕ ಭೂವಿಜ್ಞಾನಿಗಳು ಇವುಗಳ ಉತ್ಪತ್ತಿಯ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಶಿಲೆಗಳು ಸಮಕಾಲೀನ ಶಿಲಾರಸಪ್ರವಾಹ ಹಾಗೂ ಸಿಲಿಕಾಂಶರಹಿತ ಅಗ್ನಿಶಿಲೆಗಳಿಂದಾಗಿರುವ ಮತ್ತು ನೈಸ್ ತಳದ ಶಿಲಾತೊಡಕಿನ ಮೇಲೆ ಅನನುರೂಪತೆಯಿಂದಿರುವ ತೀವ್ರ ರೂಪಾಂತರ ಜಲಜ ಶಿಲೆಗಳೆಂದು ರಾಬರ್ಟ್ ಬ್ರೂಸ್‌ಫುಟ್ ಹೇಳಿದ್ದಾನೆ (1896). ಆದರೆ ಡಬ್ಲ್ಯು.ಎಫ್. ಸ್ಮಿತ್‌ನ ಅಭಿಪ್ರಾಯದಲ್ಲಿ ಈ ಶಿಲೆಗಳೆಲ್ಲವೂ ಅಗ್ನಿಶಿಲೆಗಳಿಂದಾದವುಗಳೇ ವಿನಾ ಜಲಜಶಿಲೆಗಳ ರೂಪಾಂತರದಿಂದಾದವುಗಳಲ್ಲ (1911). ಸು. ಎರಡು ದಶಕಗಳ ತರುವಾಯ ಬಿ.ರಾಮರಾವ್ ಮತ್ತು ಸಹೋದ್ಯೋಗಿಗಳು ಧಾರವಾಡ ಪದರು ಶಿಲಾವರ್ಗದಲ್ಲಿ ಅಲೆಯ ಗುರುತುಗಳು, ಪ್ರವಾಹಸ್ತರಗಳು ಮುಂತಾದ ನಿರ್ದಿಷ್ಟ ಜಲಜಶಿಲಾರಚನೆಗಳನ್ನು ಕಂಡು ಇವು

ಜಲಜಶಿಲಾಜನ್ಯವೆಂದು ಅಭಿಪ್ರಾಯಪಟ್ಟರು. ಸಿ. ಎಸ್. ಪಿಚ್ಚಮುತ್ತು ಮತ್ತು ಇತರ ಸಂಶೋಧಕರ ಅಭಿಪ್ರಾಯದಲ್ಲಿ ಧಾರವಾಡ ಪದರುಶಿಲಾವರ್ಗದ ಅನೇಕ ಶಿಲಾವಿಧಗಳು ಜಲಜನ್ಯವೆಂದಿದೆ.

**ಶಿಲಾವರ್ಣನೆ :** ಈ ವರ್ಗದಲ್ಲಿರುವ ಅನೇಕ ಶಿಲಾವಿಧಗಳನ್ನು ಸ್ಥೂಲವಾಗಿ ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

1. ಸಿಲ್ ಮತ್ತು ಡೈಕುಗಳನ್ನೊಳಗೊಂಡ ಜ್ವಾಲಾಮುಖಿಜಶಿಲೆಗಳು : ಧಾರವಾಡ ಪದರುಶಿಲೆಗಳ ಕೆಳಭಾಗದಲ್ಲಿ ರೂಪಾಂತರ ಹೊಂದಿರುವ ಜ್ವಾಲಾಮುಖಿ ಶಿಲೆಗಳಿವೆ. ಇವುಗಳ ಕಾಲದ ಬಗ್ಗೆ ಬಲು ತೊಡಕಿದೆ. ಇವುಗಳಲ್ಲಿ ಕೆಲವು ಅಧಿಕ ಸಿಲಿಕಾಂಶ, ಮಧ್ಯವರ್ತಿ (ಮಿತ ಸಿಲಿಕಾಂಶ) ಮತ್ತು ಅತ್ಯಲ್ಪ ಸಿಲಿಕಾಂಶ ಶಿಲೆಗಳು. ಇವು ಲಾವಾ ಪ್ರವಾಹಗಳು, ಸಿಲ್ಲುಗಳು, ಪದರಗಳು, ಡೈಕುಗಳು– ಈ ರೂಪಗಳಲ್ಲಿಯೂ ಜ್ವಾಲಾಮುಖಿ ಬೂದಿ, ಟುಫ್ ಮತ್ತು ಕಾಂಗ್ಲಾಮರೇಟುಗಳಾಗಿಯೂ ಇವೆ. ಅಧಿಕ ಸಿಲಿಕಾಂಶದ ಜ್ವಾಲಾಮುಖಿಜನ್ಯ ಶಿಲೆಗಳು ರೂಪಾಂತರಿಸಿ ಒಪಾಲ್‌ಸೆಂಟ್ ಬೆಣಚಿನಿಂದ ಕೂಡಿದ ಶಿಲೆಗಳಾಗಿವೆ. ಇವು ಚಿತ್ರದುರ್ಗ ಜಿಲ್ಲೆಯ ಮಲೆಬೆನ್ನೂರು ಮತ್ತು ತೆಕ್ಕಲುವಟ್ಟಿ ಬಳಿ ಸಿಗುವುವು. ಮಿತ ಸಿಲಿಕಾಂಶ ಮತ್ತು ಅಲ್ಪ ಸಿಲಿಕಾಂಶ ಶಿಲೆಗಳು ರೂಪಾಂತರದಿಂದ ಪದರು ರಚನೆಪಡೆದು ತಿಳಿ ಹಸಿರುಬಣ್ಣದ ಕ್ಲೋರೈಟ್ ಪದರು ಶಿಲೆಗಳಾಗಿವೆ. ಇವುಗಳಿಗೆ ಸಣ್ಣಕಣರಚನೆ ಇದೆ. ಇವು ಶಿವಮೊಗ್ಗ ಮತ್ತು ಚಿತ್ರದುರ್ಗಶಿಲಾಪ್ರದೇಶಗಳಲ್ಲಿವೆ.

2. ಕಣರಚನೆಯ ಪದರು ಶಿಲೆಗಳು : ಧಾರವಾಡ ಶಿಲಾವರ್ಗದ ಬಹುಭಾಗ ವಿವಿಧ ಕಣರಚನೆಯಿಂದ ಕೂಡಿರುವ ಪದರುಶಿಲೆಗಳಿಂದಲೂ ಕಣಕ ಶಿಲೆಗಳಿಂದಲೂ ಕೂಡಿದೆ. ಇವುಗಳಲ್ಲಿ ಮುಖ್ಯವಾದವು : (i) ಕ್ಲೋರೈಟ್ ಪದರುಶಿಲೆ; (ii) ಮೈಕಾ ಪದರುಶಿಲೆ; (iii) ಕಪ್ಪು ಹಾರ್ನ್‌ಬ್ಲೆಂಡ್ ಪದರುಶಿಲೆ; (iv) ಟ್ರಿಮೊಲೈಟ್ ಆಕ್ಟಿನೊಲೈಟ ಪದರುಶಿಲೆ; (v) ಕ್ಯಾಲ್ಕ್‌ಪೈರಾಕ್ಸೀನ್ ಕಣಕ ಶಿಲೆಗಳು; (vi) ಕಯನೈಟ್ ಸ್ಟಾರೊಲೈಟ್ ಪದರುಶಿಲ; (vii) ಕಾರ್ಡಿಯರೈಟ್ ಸಿಲಿಮನೈಟ್ ಪದರುಶಿಲೆ; (viii) ಟಾಲ್ಕ್ ಬಯೊಟೈಟ್ ಪದರುಶಿಲೆ, (ix) ಕಯನೈಟ್ ಸಿಲಿಮನೈಟ್ –ಗ್ರಾಫೈಟ್ ಪದರುಶಿಲೆ.

3. ವಿರೂಪ ಜಲಜಶಿಲೆಗಳು : ಈ ಶಿಲೆಗಳು ಇತರ ಶಿಲೆಗಳಿಗಿಂತ ಕಡಿಮೆಯಿದ್ದರೂ ಉತ್ಪತ್ತಿಯ ರೀತಿಯಿಂದ ಬಹುಮುಖ್ಯವೆನಿಸಿವೆ. ಇವು ಅನೇಕ ಭೂವೈಜ್ಞಾನಿಕ ಕಾರಣಗಳಿಂದಾಗಿ ವಿರೂಪಹೊಂದಿರುವುವು. ಇವುಗಳಲ್ಲಿ ಮುಖ್ಯವಾದವು: (i) ಕಂಗ್ಲಾಮರೇಟುಗಳು; (ii) ಕ್ವಾರ್ಟ್ಜೈಟುಗಳು; (iii) ಪೆರುಜಿನಸ್ ಕ್ವಾರ್ಟ್ಜೈಟುಗಳು; (iv) ಫಿಲ್ಲೈಟುಗಳು ಮತ್ತು ಅರ್ಜಿಲ್ಲೈಟುಗಳು; (v) ಗ್ರೇವಾಕುಗಳು; (vi) ಸುಣ್ಣಶಿಲೆಗಳು. ಇವುಗಳಲ್ಲದೆ ಅತ್ಯಲ್ಪ ಸಿಲಿಕಾಂಶ (ಅಲ್ಟ್ರಾ ಬೇಸಿಕ್) ಶಿಲೆಗಳು ದೊಡ್ಡ ಪರಿಮಾಣದಲ್ಲಿ ಪದರುಶಿಲೆಗಳನ್ನು ಭೇದಿಸಿವೆ. ಇವನ್ನು ಟ್ರಾಸ್ ಶಿಲೆಗಳೆಂದೂ ಕರೆಯುವುದುಂಟು.

ಗ್ರಾನೈಟ್ ಮತ್ತು ನೈಸುಗಳು : ಕರ್ನಾಟಕ ರಾಜ್ಯದ ಬಹುಭಾಗವನ್ನಾವರಿಸಿರುವ ಈ ಶಿಲೆಗಳಲ್ಲಿ ಸ್ಮಿತ್ ನಾಲ್ಕು ಬಗೆಯ ಶಿಲೆಗಳನ್ನು ಗುರುತಿಸಿ ಇವು ವಿವಿಧ ಅಂತಸ್ಸರಣ ಕಾಲಗಳಿಗೆ ಸಂಬಂಧಿಸಿದುವೆಂದು ತೋರಿಸಿದ್ದಾನೆ (1916).

1. ಚಾಂಪಿಯನ್ ನೈಸ್, 2. ಪೆನಿನ್‌ಸುಲಾರ್ ನೈಸ್, 3. ಚಾರ್ನಕೈಟ್, 4. ಕ್ಲೋಸ್‌ಪೇಟೆ ಗ್ರಾನೈಟ್.

ಈ ನಾಲ್ಕು ಶಿಲಾಗುಂಪುಗಳಲ್ಲಿಯೂ ಅನೇಕ ಪ್ರಭೇದಗಳಿವೆ. ಇವು ಆಳದಲ್ಲಿ ವಿವಿಧ ಕಾಲಗಳಲ್ಲಿ ಮಾತೃಶಿಲಾದ್ರವದಿಂದ ಹೊರಬಂದವು. ಸ್ಮಿತ್ ಮಾಡಿರುವ ಈ ವಿಂಗಡಣೆ ಈಗಲೂ ಬಳಕೆಯಲ್ಲಿದೆ.

1. ಚಾಂಪಿಯನ್ ನೈಸ್ ಶಿಲೆಗಳು ಗ್ರಾನಿಟಿಕ್ ಶಿಲೆಗಳಲ್ಲಿ ಅತ್ಯಂತ ಪುರಾತನವಾದವು; ಕೋಲಾರ ಚಿನ್ನದ ಗಣಿಪ್ರದೇಶ, ಶೃಂಗೇರಿ ಮತ್ತು ಭದ್ರಾವತಿ ಸಮೀಪದಲ್ಲಿ ಹರಡಿವೆ. ಇವನ್ನು ಮೊಟ್ಟಮೊದಲು ಕೋಲಾರ ಪದರು ಶಿಲಾವಲಯದಲ್ಲಿ ಗುರುತಿಸಲಾಯಿತು. ಹೆಚ್ಚು ಅಭ್ರಕದಿಂದ ಕೂಡಿದ್ದು ಬೂದು ಬಣ್ಣದ ಒಪಾಲಸೆಂಟ್ ಬೆಣಚು ಇರುವುದು ಇವುಗಳ ವಿಶೇಷ ಲಕ್ಷಣ. ಇವು ಪೆನಿನ್‌ಸುಲಾರ್ ನೈಸುಗಳಿಗಿಂತ ಹಿರಿಯವು. ಆದರೆ ಪೆನಿನ್‌ಸುಲಾರ್‌ನೈಸಿನ ಕೆಲವು ಶಿಲಾವಿಧಗಳನ್ನು ಈ ಗುಂಪಿನ ಶಿಲೆಗಳಿಂದ ಗುರುತಿಸುವುದು ಬಹಳ ಕಷ್ಟ.

2. ಕರ್ನಾಟಕದ ಬಹುಭಾಗವನ್ನಾಕ್ರಮಿಸಿರುವ ನೈಸ್ ಮತ್ತು ಗ್ರಾನೈಟ್ ಶಿಲಾತೊಡಕನ್ನು ಪೆನಿನ್‌ಸುಲಾರ್‌ನೈಸ್ ಎಂದು ಪರಿಗಣಿಸಲಾಗಿದೆ. ಇದರಲ್ಲಿ ಮುಖ್ಯ ಶಿಲಾವಿಧಗಳೆಂದರೆ ಗ್ರಾನೋಡಯೊರೈಟ್, ನೈಸಿಕ್ ಗ್ರಾನೈಟ್ ಮತ್ತು ಕಲಬೆರಕೆ ನೈಸುಗಳು ಇವೆಲ್ಲ ಬಹುಮಟ್ಟಿಗೆ ಒಂದೇ ಅಂತಸ್ಸರಣ ಕಾಲದವೇ ಅಥವಾ ಬೇರೆ ಬೇರೆ ಕಾಲಗಳಿಗೆ ಸೇರಿವೆಯೇ ಎಂದು ಹೇಳುವುದು ಕಷ್ಟ. ಅಂತೂ ಇವು ಚಾಂಪಿಯನ್ ನೈಸುಗಳಿಗಿಂತ ಕಿರಿಯವೆಂದು ಸ್ಮಿತ್ ಅಭಿಪ್ರಾಯ ಪಟ್ಟಿದ್ದಾನೆ.

3. ಚಾರ್ನಕೈಟ್ ಶಿಲೆಗಳು ಧಾರವಾಡ ಶಿಲಾವರ್ಗವನ್ನು ಭೇದಿಸುವ ಮೂರನೆಯ ಅಂತಸ್ಸರಣ ಶ್ರೇಣಿ. ಬಿಳಿಗಿರಿರಂಗನಬೆಟ್ಟದ ಸಾಲು, ಪಿರಿಯಾಪಟ್ಟಣದ ಪಶ್ಚಿಮಭಾಗ ಮತ್ತು ಕೊಡಗು ಪ್ರದೇಶಗಳಲ್ಲಿ ಈ ಶಿಲಾಸಮೂಹ ಇದೆ. ಇದಲ್ಲದೆ ರಾಮನಗರ, ಮದ್ದೂರು, ಮಳವಳ್ಳಿ, ಹಲಗೂರು ಮತ್ತು ಇತರ ಪ್ರದೇಶಗಳಲ್ಲಿ ಹೈಪರಸ್ತೀನ್ ಇರುವ ಅಥವಾ ಇಲ್ಲದಿರುವ ಕಣಶಿಲಾವಿಧಗಳಿವೆ. ಚಾರ್ನಕೈಟುಗಳ ಉತ್ಪತ್ತಿಯ ಬಗ್ಗೆ ವಿವಾದವಿದೆ. ಇವುಗಳ ಉತ್ಪತ್ತಿಯ ಬಗ್ಗೆ ಅನೇಕ ಭೂವಿಜ್ಞಾನಿಗಳು ಸಂಶೋಧನೆ ಮಾಡಿದ್ದರೂ ಏಕಾಭಿಪ್ರಾಯ ಮೂಡಿಲ್ಲ.

4. ರಾಮನಗರ ಗ್ರಾನೈಟುಗಳು ಅತ್ಯಂತ ಕಿರಿಯ ಅಂತಸ್ಸರಣ ಶಿಲೆಗಳು. ಇವೂ ಬಳ್ಳಾರಿ ಬಳಿ ಇರುವ ಗ್ರಾನೈಟ್ ಶಿಲಾವಿಧಗಳೂ ಒಂದೇ ತೆರನಾಗಿರುವುದರಿಂದ ಬಿ.ರಾಮರಾಯರು ಇವನ್ನು ಬಳ್ಳಾರಿನೈಸ್ ಎಂದು ಕರೆದಿರುವರು. ಈ ಶಿಲೆಗಳು ಅನೇಕ ಕಡೆ ಇವುಗಳಿಗಿಂತ ಹಿರಿಯ ವಯಸ್ಸಿನ ಪೆನಿನ್‌ಸುಲಾರ್ ನೈಸ್ ಮತ್ತು ಇತರ ಗ್ರಾನೈಟ್‌ನೈಸ್ ಶಿಲಾವರ್ಗಗಳನ್ನು ಭೇದಿಸಿರುವುದು ಸ್ಪಷ್ಟವಾಗಿದೆ. ಇವು ದಕ್ಷಿಣದಲ್ಲಿ ಶಿವನಸಮುದ್ರದಿಂದ ಉತ್ತರದಲ್ಲಿ ಬಳ್ಳಾರಿಯವರೆಗೆ ಹಬ್ಬಿವೆ. ಈ ಶಿಲೆಗಳಿಗೆ ಸಾಮಾನ್ಯವಾಗಿ ದಪ್ಪಕಣ ರಚನೆ ಇದೆ. ಅಲ್ಲಲ್ಲಿ ಪಾರ್ಫಿರಿಟಿಕ್ ರಚನೆಯಿರುವ ಪ್ರಭೇದಗಳಿವೆ. ಇವುಗಳಲ್ಲಿರುವ ಫೆಲ್ಸ್‌ಪಾರ್‌ಕಣಗಳು ತಿಳಿಗುಲಾಬಿ ಬಣ್ಣ ಅಥವಾ ಮಾಂಸಖಂಡದ ಕೆಂಪು ಬಣ್ಣದಿಂದ ಕೂಡಿರುವ ಕಾರಣ ಗುಲಾಬಿ ಮತ್ತು ಬೂದುಬಣ್ಣದ ಶಿಲಾವಿಧಗಳುಂಟಾಗಿವೆ. ಕ್ಲೋಸ್‌ಪೇಟೆ (ಈಗ ರಾಮನಗರ) ಪ್ರದೇಶದ ದಕ್ಷಿಣ ಭಾಗದಲ್ಲಿ ಅಧಿಕ ಸಿಲಿಕಾಂಶದ ಪಾರ್ಫಿರಿಟಿಕ್, ಫೆಲ್ಸೈಟ್, ಲ್ಯಾಂಪ್ರೊಫೈರ್ ಮತ್ತು ಇತರ ಡೈಕ್ ವಿಧಗಳು ಈ ಗ್ರಾನೈಟುಗಳನ್ನು ಭೇದಿಸಿವೆ. ಕ್ಲೋಸ್‌ಪೇಟೆ ಗ್ರಾನೈಟ್ ನಿರ್ದಿಷ್ಟವಲಯದ ಹೊರಗೆ, ಇದೇ ರೀತಿಯ ಶಿಲೆಗಳು ಚಿತ್ರದುರ್ಗ, ಹೊಸದುರ್ಗ, ಅರಸೀಕೆರೆ, ಬಾಣಾವರ, ಕೈವಾರ (ಚಿಂತಾಮಣಿ ಬಳಿ) ಮತ್ತು ಮೈಸೂರು (ಚಾಮುಂಡಿಬೆಟ್ಟ) ಹಾಗೂ ಹೆಗ್ಗಡದೇವನಕೋಟೆ ಬಳಿ ಇವೆ.

ಡೈಕ್ ಶಿಲೆಗಳು : ಆರ್ಷೇಯ ಭೂ ಕಲ್ಪದ ಶಿಲಾವಿಧಗಳನ್ನೆಲ್ಲ ಭೇದಿಸಿರುವ ಅನೇಕ ವಿಧವಾದ ಡೈಕ್ ಸಮೂಹಗಳನ್ನು ಕೆಳಗೆ ಸೂಚಿಸಿದೆ.

1. ಕಪ್ಪು ಹಾರ್ನ್‌ಬ್ಲೆಂಡ್ ಡೈಕುಗಳು : ತುಮಕೂರಿಗೆ ಪಶ್ಚಿಮ ಭಾಗಮತ್ತು ಹಾಸನದ ಪೂರ್ವಭಾಗದಲ್ಲಿ ಹರಡಿವೆ. ತಿಪಟೂರಿಗೆ ಉತ್ತರ ಮತ್ತು ದಕ್ಷಿಣದಲ್ಲಿ ಅತಿ ಒತ್ತಾಗಿ ಹರಡಿವೆ.

2. ನೊರೈಟ್ ಡೈಕುಗಳು : ಬಿಡದಿ, ಹಾರೋಹಳ್ಳಿ, ಮದ್ದೂ, ಹುಣಸೂರಿಗೆ ಪಶ್ಚಿಮ ಮತ್ತು ನೈಋತ್ಯ ದಿಕ್ಕಿನಲ್ಲಿ ಹೆಚ್ಚಾಗಿವೆ.

3. ಫೆಲ್ಸೈಟ್ ಮತ್ತು ಪಾರ್ಫಿರಿ ಡೈಕುಗಳು : ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಸುತ್ತಮುತ್ತಲೂ ಕ್ಲೋಸ್‌ಪೇಟೆ ಗ್ರಾನೈಟ್ ಶಿಲೆಗಳಲ್ಲಿಯೂ ಇವೆ.

4. ಡಾಲರೈಟ್ ಮತ್ತು ಎನ್‌ಸ್ಟಟೈಟ್ ಡೈಕುಗಳು : ಕ್ಲೋಸ್‌ಪೇಟ್ ಗ್ರಾನೈಟುಗಳೊಂದಿಗಿರುವ ಫೆಲ್ಸೈಟ್ ಮತ್ತು ಪಾರ್ಫಿರಿಗಳನ್ನು ಭೇದಿಸಿವೆ. ಇವು ಆರ್ಷೇಯ ಕಲ್ಪದಲ್ಲಿ ಅತ್ಯಂತ ಕಿರಿಯಶಿಲಾವಿಧಗಳಾದ್ದರಿಂದ ಈ ಕಲ್ಪವಾದ ತರುವಾಯ ಅಂತಸ್ಸರಣಗೊಂಡಿರಬಹುದೆಂದು ಪರಿಗಣಿಸಲಾಗಿದೆ.

ಪುರಾಣಯುಗ (ಪ್ರೀಕೇಂಬ್ರಿಯನ್) ಕಲಾದಗಿ ಶಿಲಾಶ್ರೇಣಿ : ಕರ್ನಾಟಕದ ಉತ್ತರಭಾಗದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬೆಳಗಾವಿ ಮತ್ತು ಕಲಾದಗಿಗಳ ಮಧ್ಯೆ ಸು. 260 ಕಿಮೀ ಉದ್ದ ಹಾಗು 65–100 ಕಿಮೀ ಅಗಲವಿದ್ದು ಪೂರ್ವಪಶ್ಚಿಮವಾಗಿ ಹಬ್ಬಿರುವ ರೂಪಾಂತರಿತ ಜಲಜಶಿಲಗಳಿವೆ. ಈ ಶಿಲಾವಿಧಗಳಿಗೆ ಕಲಾದಗಿ ಶಿಲಾಶ್ರೇಣಿಯೆಂದು ಹೆಸರು. ಇವು ಸಮತಲವಾಗಿ ಧಾರವಾಡ ಪದರುಶಿಲೆಗಳ ಮೇಲೆ ಅನನುರೂಪತೆಯಿಂದ ಹರಡಿವೆ. ಇವುಗಳ ಮಂದ ಸು. 3050–4575 ಮೀ. ಇವನ್ನು ಕೆಳ ಕಲಾದಗಿ ಮತ್ತು ಮೇಲು ಕಲಾದಗಿ ಎಂದು ಎರಡು ವರ್ಗಗಳಾಗಿ ವಿಭಜಿಸಿದ್ದಾರೆ. ಈ ಶಿಲೆಗಳ ಇಳಿಜಾರು ಉತ್ತರ ಪಶ್ಚಿಮವಾಗಿದೆ. ಮುಖ್ಯವಾಗಿ ಕಂಗ್ಲಾಮರೇಟು, ಮರಳುಶಿಲೆ, ಬೆಣಚು, ಬ್ರೆಕ್ಷಿಯ, ಚೆರ್ಟ್, ಸುಣ್ಣಶಿಲೆ, ಜೇಡುಶಿಲೆ ಮತ್ತು ಹಾರನ್ ಸ್ಟೋನುಗಳಿಂದ ಕೂಡಿದೆ. ಈ ಶ್ರೇಣಿಯ ಬೆಣಚು ಮತ್ತು ಮರಳುಶಿಲೆಗಳಲ್ಲಿ ಅಲೆಗುರುತು ಹಾಗೂ ಪ್ರವಾಹ ಪದರು ರಚನೆಗಳು ಇವೆ. ಬಾದಾಮಿ ಗುಹೆಗಳಲ್ಲಿ ಪ್ರವಾಹಪದರ ಬೆಣಚುಗಳನ್ನು ಉಪಯೋಗಿಸಿ ದೇವಾಲಯಗಳೂ ಹಾಗೂ ಸುಂದರಮೂರ್ತಿಗಳನ್ನು ಕೆತ್ತಿದ್ದಾರೆ.

ಭೀಮಾಶಿಲಾಶ್ರೇಣಿ : ಈ ಶಿಲಾಶ್ರೇಣಿ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಕೃಷ್ಣಾನದಿಯ ಉಪನದಿ ಭೀಮಾನದಿಯ ಪಾತ್ರದಲ್ಲಿ ಚೆನ್ನಾಗಿ ಹೊರಕಾಣುತ್ತದೆ. ವಿಸ್ತಾರ ಸು. 5200 ಕಿಮೀ. ಇವು ಆರ್ಷೇಯ ಕಲ್ಪದ ಶಿಲಾವಿಧಗಳ ಮೇಲೆ ಅನನುರೂಪತೆಯಿಂದ ಹರಡಿವೆ. ಈ ಶ್ರೇಣಿಯಲ್ಲಿ ಕಂಗ್ಲಾಮರೇಟ್, ಮರಳುಶಿಲೆ ಊದಾ ಜೇಡುಶಿಲೆ ಮತ್ತು ಸುಣ್ಣಶಿಲೆಗಳು ಮುಖ್ಯವಾದವು. ಇದನ್ನು ಡಬ್ಲ್ಯು ಕಿಂಗ್ ಮತ್ತು ಆರ್.ಬ್ರೂಸ್‌ಫೂಟ್ ಅವರು ಮೇಲು ಮತ್ತು ಕೆಳ ಎಂದು ವಿಂಗಡಿಸಿದರು. ಆದರೆ ಸಿ.ಮಹದೇವನ್ ಮೂರು ವಿಭಾಗಗಳಾಗಿ ವಿಂಗಡಿಸಿದರು. ಈ ಶ್ರೇಣಿಯ ಶಿಲೆಗಳು ಕರ್ನೂಲು ಶಿಲಾಸಮುದಾಯಕ್ಕೆ ಸಮಕಾಲೀನ (ಸು. 1,450 ದಶಲಕ್ಷವರ್ಷಗಳು) ವಯಸ್ಸನ್ನು ಸೂಚಿಸುತ್ತವೆ. ಇಲ್ಲಿ ಹೇರಳವಾಗಿ ದೊರೆಯುವ ಸಣ್ಣ ಶಿಲೆಗಳನ್ನು ಸಿಮೆಂಟ್ ತಯಾರಿಸಲು ಉಪಯೋಗಿಸುತ್ತಾರೆ.

ಆರ್ಷೇಯೋತ್ತರಕಾಲದ ಅತ್ಯಲ್ಪ ಸಿಲಿಕಾಂಶದ ಡೈಕ್ ಶಿಲೆಗಳು : ಇವು ಆರ್ಷೇಯ ಕಾಲದ ತರುವಾಯ ಮೈದೋರಿವೆ. ಈ ಸಮೂಹದಲ್ಲಿ ಡಾಲರೈಟ್, ಆಲಿವೀನ್ ಡಾಲರೈಟ್, ಎನ್‌ಸ್ಟೈಟೈಟ್ ಡಾಲರೈಟ್, ಡಯೋರೈಟ್, ಬಸಾಲ್ಟ್ ಮುಂತಾದ ಶಿಲೆಗಳ ಡೈಕುಗಳಿವೆ. ಇವು ಸಾಮಾನ್ಯವಾಗಿ ಕಪ್ಪು ಗುಂಡುಗಳಂತೆ ಹೊರಕಾಣುತ್ತವೆ. ಅಲ್ಲದೆ ಪುರಾತನ ಶಿಲೆಗಳಾದ ನೈಸ್ (ಗೀರುಶಿಲೆ) ಗ್ರಾನೈಟ್ ಶಿಲೆಗಳನ್ನು ಛೇದಿಸಿಕೊಂಡು ಹೊರಬಂದಿವೆ. ಇವನ್ನು ಕಡಪ ಶಿಲಾವರ್ಗದ ಕಾಲ ಅಥವಾ ದಖಿನ್ ಟ್ರಾಪ್ ಕಾಲಕ್ಕೆ ಸೇರಿಸಲಾಗಿದೆ.

ದಖಿನ್ ಟ್ರಾಪುಗಳು : ಈ ಶಿಲೆಗಳನ್ನು ದಖಿನ್ ಜ್ವಾಲಾಮುಖಿಜನ್ಯ ಶಿಲೆಗಳೆಂದೂ ಪ್ರಸ್ಥಭೂಮಿಯಂತೆ ಎತ್ತರವಾದ ಸ್ಥಳವನ್ನು ಆವರಿಸಿರುವುದರಿಂದ ಪ್ರಸ್ಥಭೂಮಿ ಬಸಾಲ್ಟ್ ಎಂದೂ ಕರೆಯುವುದುಂಟು. ಮಧ್ಯಜೀವಿಯುಗದ ಅಂತ್ಯಕಾಲದಲ್ಲಿ (ಅಂದರೆ ಹಿಮಾಲಯ ಪರ್ವತಸ್ತೋಮ ರೂಪುಗೊಳ್ಳುವುದಕ್ಕೆ ಮುಂಚೆ) ಉಂಟಾದ ಭೂ ಚಲನೆಯಿಂದ ಭೂಮಿಯ ಹೊರಮೈಯ್ಯಲ್ಲಾದ ಬಿರುಕುಗಳ ಮೂಲಕ ಅತ್ಯಧಿಕ ಪ್ರಮಾಣದ ಶಿಲಾರಸ ಹೊರಹೊಮ್ಮಿ ದಖಿನ್ ಟ್ರಾಪುಗಳು ಇಂಥ ಪ್ರದೇಶದಲ್ಲಿ ವ್ಯಾಪಿಸಿವೆ. ಈ ಶಿಲೆಗಳ ಹೊರಸ್ತರ ಹಂತಹಂತವಾಗಿ ಕಾಣುವುದರಿಂದ ಇವುಗಳಿಗೆ ಟ್ರಾಪ್ ಶಿಲೆಗಳೆಂದು ಹೆಸರುಬಂದಿದೆ. ಕೆಲವು ಪ್ರದೇಶಗಳಲ್ಲಿ ಟ್ರಾಪ್‌ಸ್ತರಗಳ ಅಡಿಯಲ್ಲಿ, ಮಧ್ಯದಲ್ಲಿ ಮತ್ತು ಮೇಲೆ ಜಲಜ ಶಿಲಾವಿಧಗಳಿವೆ. ಇವುಗಳಿಗೆ ಅನುಕ್ರಮವಾಗಿ ಟ್ರಾಪ್ ಕೆಳಸ್ತರ, ಅಂತರ ಟ್ರಾಪ್‌ಸ್ತರ ಟ್ರಾಪ್ ಮೇಲುಸ್ತರಗಳೆಂದು ಹೆಸರು. ಇವುಗಳಲ್ಲಿರುವ ಜೀವಾವಶೇಷಗಳ ಆಧಾರದ ಮೇಲೆ ಟ್ರಾಪ್ ವಯಸ್ಸು ಕ್ರಿಟೇಷಸ್ಸಿನಿಂದ ಇಯೋಸೀನ್‌ವರೆಗೆ ವ್ಯಾಪಿಸಿದೆ ಎಂದು ಅಭಿಪ್ರಾಯಪಡಲಾಗಿದೆ. ಕರ್ನಾಟಕದಲ್ಲಿ ಬೆಳಗಾವಿ, ಬಿಜಾಪುರ ಮತ್ತು ಗುಲ್ಬರ್ಗದ ಹಲವಾರು ಭಾಗಗಳಲ್ಲಿ ಒಟ್ಟು ಸು. 25,900 ಚ.ಕಿಮೀ ಗಳಷ್ಟು ಪ್ರದೇಶದಲ್ಲಿ ಟ್ರಾಪ್‌ಶಿಲೆಗಳ ವ್ಯಾಪ್ತಿ ಉಂಟು. ಮಂದ ಸು. 60 ಮೀ. ಈ ಶಿಲೆಗಳು ಅನೇಕ ಹಳೆಯ ಶಿಲಾಸಮುದಾಯಗಳ ಮೇಲೆ ಅನನುರೂಪತೆಯಾಗಿ ವಿಸ್ತರಿಸಿವೆ. ಸತತ ಸವೆತದಿಂದ ದಖಿನ್ ಟ್ರಾಪ್ ಶಿಲೆಗಳು ಮತ್ತು ಲ್ಯಾಟರೈಟ್ ಎಂಬ ನಿಕ್ಷೇಪಗಳಾಗಿವೆ. ಇವುಗಳಿಗೆ ಶೇಷ ನಿಕ್ಷೇಪಗಳೆಂದು ಹೆಸರು. ಸಾಧಾರಣ ರೀತಿಯಲ್ಲಿ ಶಿಲೆ ಶಿಥಿಲವಾಗಿ ಕಪ್ಪು ಮಣ್ಣು ಉಂಟಾಗುತ್ತದೆ. ಇಂಥ ಮಣ್ಣು ಬಹಳ ಫಲವತ್ತಾಗಿರುತ್ತದೆ.

ತೃತೀಯ ಭೂ ಕಾಲಯುಗದ ಶಿಲಾಸಮುದಾಯಗಳು: ಲ್ಯಾಟರೈಟ್ : ಈ ನಿಕ್ಷೇಪಗಳು ಭೂಮಿಯ ಹೊರಪದರದ ಶಿಲೆಗಳ ಬದಲಾವಣೆಯಿಂದಾಗಿವೆ. ಇಂಥ ಬದಲಾವಣೆಗಳು ಭಾರತ ಮತ್ತೆ ಹಲವು ಉಷ್ಣವಲಯದ ದೇಶಗಳಲ್ಲಿನ ಗ್ರಾನೈಟ್, ನೈಸ್ ಪದರುಶಿಲೆ ಮತ್ತು ಬಸಾಲ್ಟ್ ಇತ್ಯಾದಿ ಶಿಲೆಗಳ ಬದಲಾವಣೆಯಿಂದಾಗುವುವು. ಕಬ್ಬಿಣ, ಮ್ಯಾಂಗನೀಸ್ ಮತ್ತು ಅಲ್ಯೂಮಿನಿಯಂ ಖನಿಜಗಳು ಹೆಚ್ಚಾಗಿರುವ ಲ್ಯಾಟರೈಟ್ ಉತ್ತಮ ಅದುರು ನಿಕ್ಷೇಪಗಳೆನಿಸಿವೆ. ಲೋಹಾಂಶವನ್ನು ಅನುಸರಿಸಿ ಇವುಗಳ ಬಣ್ಣ ಹಳದಿಮಿಶ್ರಿತ ಕೆಂಪು ಬೂದು ಮತ್ತು ಕಪ್ಪು ಕಂದು. ಕರ್ನಾಟಕದಲ್ಲಿ ಇವು ಕೋಲಾರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಹಾಗೂ ಬೆಳಗಾಂವಿ ಜಿಲ್ಲೆಯಲ್ಲಿ ಅನೇಕ ಕಡೆ ಇವೆ. ಲ್ಯಾಟರೈಟುಗಳನ್ನು ಮಲೆನಾಡು ಮುಂತಾದ ಕಡೆ ಅಗೆದು ಹೊರತೆಗೆದು ದೊಡ್ಡ ದೊಡ್ಡ ಇಟ್ಟಿಗೆ ರೂಪದಲ್ಲಿ ಕತ್ತರಿಸಿ ಗೋಡೆಗಳನ್ನು ಕಟ್ಟಲು ಉಪಯೋಗಿಸುತ್ತಾರೆ.

ಇತ್ತೀಚಿನ ಕಾಲದ ಶಿಲಾಸಮುದಾಯಗಳು : ಇತ್ತೀಚಿನ ಶಿಲಾಸಮುದಾಯಗಳಲ್ಲಿ ತೀರಪ್ರದೇಶದ ನಿಕ್ಷೇಪಗಳು, ಮೆಕ್ಕಲು ನಿಕ್ಷೇಪಗಳು ಮತ್ತು ಮಣ್ಣುಗಳು ಮುಖ್ಯವಾದವು.

ತೀರಪ್ರದೇಶದ ನಿಕ್ಷೇಪಗಳು : ಕರ್ನಾಟಕದ ಪಶ್ಚಿಮಭಾಗದ ಸಮುದ್ರತೀರದಲ್ಲಿ ಮಂಗಳೂರಿಗೆ ಸ್ವಲ್ಪ ದಕ್ಷಿಣದಿಂದ ಕಾರವಾರದವರೆಗೆ ಇವು ಹಬ್ಬಿವೆ. ಇವುಗಳಲ್ಲಿ ಬಹುಶಃ ಲ್ಯಾಟರೈಟುಗಳೂ ಸೇರುತ್ತವೆ. ಇವು ಪ್ಲೀಸ್ಟೋಸೀನ್ ಕಾಲದಿಂದ ಇತ್ತೀಚಿನ ಕಾಲದವು.

ಮೆಕ್ಕಲು ನಿಕ್ಷೇಪಗಳು : ನದಿಗಳ ಇಕ್ಕೆಲಗಳಲ್ಲಿಯೂ ಅಳಿವೆಯ ಗಾಳಿಯಿಂದ ತೂರಿಬಂದ ಮತ್ತು ಇತರ ಶಿಲಾವಿಧಗಳು ಸೇರಿವೆ. ಇವು ವ್ಯವಸಾಯಕ್ಕೆ ಫಲವತ್ತಾದ ಪ್ರದೇಶಗಳು.

**ಮಣ್ಣುಗಳು :** ವಿವಿಧ ಶಿಲೆಗಳ ಸತತವಾದ ಶಿಥಿಲತೆಯಿಂದಾದ ಹಲವಾರು ಬಗೆಯ ಮಣ್ಣುಗಳ ಉತ್ಪತ್ತಿಯಾಗಿವೆ. 1. ಕಪ್ಪು ಮಣ್ಣು ಅಥವಾ ಎರೆಮಣ್ಣು ಚಿತ್ರದುರ್ಗದ ಜಿಲ್ಲೆ, ಚಾಮರಾಜನಗರ, ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕು, ಸ್ವಲ್ಪ ಭಾಗ ಮಂಡ್ಯ ಜಿಲ್ಲೆಯಲ್ಲಿಯೂ ಕಾಣಬರುತ್ತದೆ. 2. ಹಳದಿಮಣ್ಣು ಬಲು ನುಣುಪು. ಇದು ಶಿಕಾರಿಪುರ, ಕುಂಸಿ, ಸೊರಬ ತಾಲ್ಲೂಕುಗಳಲ್ಲಿ ಅನೇಕ ಕಡೆ ಮತ್ತು ಪದರು ಶಿಲಾವಲಯಗಳಲ್ಲಿದೆ. 3. ಕೆಂಪು ಮಣ್ಣು. ಇದು ಗ್ರಾನೈಟ್, ನೈಸುಗಳು ಶಿಥಿಲವಾಗಿ ಉತ್ಪತ್ತಿಯಾಗುತ್ತದೆ. 60–130 ಸೆಂಮೀ ಆಳದವರೆಗೆ ಇರುವುದು. ಇದನ್ನು ಬೆಂಗಳೂರು, ತುಮಕೂರು, ಕೋಲಾರ ಇತ್ಯಾದಿ ಪ್ರದೇಶಗಳಲ್ಲಿ ಕಾಣಬಹುದು. 4. ಉಪ್ಪು ಮತ್ತು ಕ್ಷಾರ ಮಣ್ಣುಗಳು. ಮೈಸೂರು, ಮಂಡ್ಯ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕೆಲವೆಡೆ ಇವೆ. ಇವನ್ನು ಚೌಳುಪ್ಪು ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಗ್ರಾನೈಟ್ ಅಥವಾ ನೈಸ್ ವಲಯಗಳಲ್ಲಿ ತಗ್ಗಾದ ಜೌಗು ಪ್ರದೇಶದಲ್ಲಿ ಮಳೆಗಾಲದಲ್ಲಿ ಈ ಮಣ್ಣುಗಳ ಉತ್ಪತ್ತಿ ಆಗುವುದು. 5. ಕಂಕರ್ ಮತ್ತು ಕಂಕರ್ ಮಣ್ಣುಗಳು. ಗ್ರಾನಿಟಿಕ್ ನೈಸುಗಳು. ಪದರುಶಿಲೆಗಳು ಮತ್ತು ಕರಿಕಲ್ಲುಗಳಿಂದ (ಡಾಲರೈಟ್) ಇವು ಉತ್ಪತ್ತಿಯಾಗುತ್ತವೆ. ಇವು ಉಂಡೆಯಾಕಾರದ ಕೆಳದರ್ಜೆಯ ಸುಣ್ಣಕಲ್ಲುಗಳು.

ಕರ್ನಾಟಕದ ಶಿಲೆಗಳ ವಯಸ್ಸು : ಶಿಲೆಗಳ ವಯೋನಿರ್ಧಾರ ಸಾಧಾರಣ ಜಲಜಶಿಲೆಗಳಂತೆ ಸುಲಭವಲ್ಲ. ಕಾರಣ ಅತಿ ಪುರಾತನಕಾಲದವು. ಅವು ಉತ್ಪತ್ತಿಯಾದ ಅನಂತರ ಹಲವಾರು ಭೂಕ್ರಿಯೆಗಳಿಂದಾಗಿ ಅನೇಕ ರೀತಿಯಲ್ಲಿ ಮಾರ್ಪಟ್ಟಿವೆ. ಮೇಲಾಗಿ ಈ ಶಿಲೆಗಳಲ್ಲಿ ಪ್ರಾಚೀನ ಶಿಲೆಗಳ ಅವಶೇಷಗಳಿಲ್ಲದಿರುವುದು ಮತ್ತಷ್ಟು ತೊಡಕನ್ನೊಡ್ಡಿದೆ. ಈ ರಾಜ್ಯದ ಶಿಲೆಗಳನ್ನು ಅಂತರರಾಷ್ಟ್ರೀಯ ಭೂ ಇತಿಹಾಸ ಕಾಲ ಪ್ರಮಾಣದ ಪಟ್ಟಿಗೆ ಹೋಲಿಸಿ ಈ ಕೆಳಗಿನ ಪಟ್ಟಿಯಲ್ಲಿ ಬರೆದಿದೆ.

ಹಲವಾರು ಭೂವಿಜ್ಞಾನಿಗಳು ಕರ್ನಾಟಕದ ಶಿಲಾವಿಧಗಳ ವಯೋನಿರ್ಧಾರ ಮಾಡಲು ಪ್ರಯತ್ನಿಸಿದ್ದಾರೆ. ಆ ಪ್ರಕಾರ ಈ ಶಿಲಾವಿಧಗಳ ವಯಸ್ಸು ಸು. 1,500–2,000 ದಶಲಕ್ಷವರ್ಷಗಳೆಂದು ಪರಿಗಣಿಸಲಾಗಿದೆ. ಆರ್ಥರ್ ಹೋಮ್ಸನ ಪ್ರಕಾರ (1956) ಭಾರತದ ಆರ್ಷೇಯ ಕಾಲದ ಶಿಲಾವಿಧಗಳ ವಯಸ್ಸು 4,500 ದಶಲಕ್ಷವರ್ಷಗಳು ಮತ್ತು ಧಾರವಾಡ ಪದರುಶಿಲಾವರ್ಗದ ವಯಸ್ಸು ಸು. 3,500 ದಶಲಕ್ಷವರ್ಷಗಳು. ಇತ್ತೀಚೆಗೆ ಎ.ಆರ್.ಕ್ರಾಫರ್ಡ್ ಎಂಬುವರು ಧಾರವಾಡ ಶಿಲಾಸಮುದಾಯಗಳ ವಯಸ್ಸು ಅನಿಶ್ಚಿತವಾದರೂ ರುಬಿಡಿಯಂ (Rb) ಮತ್ತು ಸ್ಟ್ರಾನ್ಷಿಯಂ (Sr) ಪ್ರಮಾಣದ ಆಧಾರದ ಮೇಲೆ ಚಿತ್ರದುರ್ಗದ ಬಳಿ ಇರುವ ಲಾವಾ ಶಿಲಾಸ್ತರಗಳ ವಯಸ್ಸು 2,400 ರಿಂದ 2,450 ದಶಲಕ್ಷ ವರ್ಷಗಳು ಮತ್ತು ಕ್ಲೋಸ್‌ಪೇಟೆ (ರಾಮನಗರ) ಗ್ರಾನೈಟ್ ವಯಸ್ಸು ಸು. 2,400 ರಿಂದ 2,450 ದಶಲಕ್ಷವರ್ಷಗಳೆಂದು ನಿರ್ಧರಿಸಿದ್ದಾರೆ (1969). (ಎಂ.ಎನ್.ಎಂ.)

**ಕರ್ನಾಟಕದ ಶಿಲಾವರ್ಗಗಳು:** ಕರ್ನಾಟಕ ರಾಜ್ಯದ ಬಹುಭಾಗ ಅತ್ಯಂತ ಪ್ರಾಚೀನವಾದ ಶಿಲೆಗಳಿಂದ ಆವೃತವಾಗಿದೆ. ಇವುಗಳನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಿದ್ದಾರೆ. 1. ಬೆಳ್ಳಿ, ಬಂಗಾರ, ತಾಮ್ರ, ಕಬ್ಬಿಣದ ಸಂಬಂಧದ ಲೋಹಗಳನ್ನೊಳಗೊಂಡಿರುವ ಧಾರವಾಡ ಶಿಲಾಸ್ತೋಮ 2. ಗ್ರಾನೈಟ್ ಸಂಬಂಧದ ನೈಸ್ ಶಿಲಾಸ್ತೋಮ.

ದಕ್ಷಿಣ ಕರ್ನಾಟಕದಲ್ಲಿನ ಶಿಲೆಗಳು ಭೂಮಿಯ ಹುಟ್ಟಿನ ಆದಿಕಾಲದಲ್ಲಿ ರೂಪುಗೊಂಡ ಅತಿ ಪ್ರಾಚೀನ ವರ್ಗಕ್ಕೆ ಸೇರಿದುವೆಂದು ಪ್ರಸಿದ್ಧಿಯಾಗಿವೆ. ಇವುಗಳು ರೂಪುಗೊಂಡ ಕಾಲ ಮೂರು ಸಾವಿರ ಮಿಲಿಯ (ಮುನ್ನೂರು ಕೋಟಿ) ವರ್ಷಗಳಿಗೂ ಹಳೆಯದು. ಈ ಬಗೆಯ ಶಿಲೆಗಳನ್ನು ಸರಗೂರು, ಕೋಲಾರ, ನುಗ್ಗೇಹಳ್ಳಿ, ಹಟ್ಟಿ ಬಳಿ ಗುರುತಿಸಿದ್ದಾರೆ.

ಈ ಪುರಾತನ ಕಾಲದ ಅಗ್ನಿ ಮತ್ತು ರೂಪಾಂತರ ಶಿಲೆಗಳನ್ನು ಛೇದಿಸಿ, ತುಂಡರಿಸಿ, ಅವುಗಳನ್ನು ಬಹುಶಃ ಜೀರ್ಣಿಸಿಕೊಂಡು ಬಹುವ್ಯಾಪಿ ಯಾಗಿರುವ ನೈಸ್ ಶಿಲೆಗಳು ರಾಜ್ಯದ ಬಹುಭಾಗವನ್ನು ಆವರಿಸಿವೆ. ಈ ವರ್ಗದ ಕಲ್ಲುಗಳನ್ನು ಬೆಂಗಳೂರು ಸುತ್ತ ನೋಡಬಹುದು. ನೈಸ್‌ಗಳಿಂದ ಆವೃತವಾದ ಬಯಲು ಸೀಮೆಯಲ್ಲಿ ಅಲ್ಲಲ್ಲಿ ಪೋರಲಿಟ್ಟ ಬಟ್ಟಲುಗಳಂತೆ ಕಲ್ಲುಗುಂಡುಗಳಿಂದ ನಿಬಿಡವಾಗಿ ಎದ್ದುನಿಂತ ಗುಡ್ಡಸಾಲುಗಳನ್ನು ನೋಡಬಹುದು. ಶಿವಗಂಗೆ, ಸಾವನದುರ್ಗ, ದೇವರಾಯನದುರ್ಗ, ಮಧುಗಿರಿ ಮತ್ತು ಕೊರಟಗೆರೆ ಸುತ್ತಲಿನ ಬೆಟ್ಟಗಳು, ಹಂಪೆಯ ಸುತ್ತಲಿನ ಬೆಟ್ಟಸಾಲುಗಳು ಈ ಬಗೆಯ ಗ್ರಾನೈಟ್‌ಗಳಿಂದ ನಿರ್ಮಿತವಾದವು. ಕರ್ನಾಟಕದಲ್ಲಿ ಎಲ್ಲಿ ಹೋದರಲ್ಲಿ ಎದ್ದು ನಿಂತ ಬಗೆಬಗೆಯ ಆಕಾರವನ್ನು ತೋರುವ ಗುಡ್ಡಸಾಲುಗಳು ತಮ್ಮದೇ ಆದ ಒಂದು ನಿಸರ್ಗ ರಮಣೀಯತೆಯನ್ನು ಪಡೆದುಕೊಂಡಿವೆ.

ಈ ನೈಸುಗಳ ಮೇಲೆ ಒರಗಿದಂತೆ ಸಾವಿರಾರು ಅಡಿ ಮಂದದ ಪದರು ಶಿಲೆಗಳು, ದಕ್ಷಿಣದಲ್ಲಿ ಶ್ರೀರಂಗಪಟ್ಟಣದಿಂದ ಹಿಡಿದು ಉತ್ತರದಲ್ಲಿ ಬೆಳಗಾಂವಿಯವರೆಗೂ ಹಬ್ಬಿವೆ. ಧಾರವಾಡದ ಬಳಿ ವಿಸ್ತಾರವಾಗಿ ಹರಡಿರುವುದರಿಂದ ಈ ಶಿಲಾವರ್ಗವನ್ನು ಧಾರವಾಡ ಶಿಲಾವರ್ಗ ಎಂದು ಗುರುತಿಸಿದ್ದಾರೆ. ರಾಜ್ಯದಲ್ಲಿ ದೊರೆಯುವ ಖನಿಜ ಸಂಪತ್ತಿಗೆಲ್ಲ ಈ ಧಾರವಾಡ ಪದರುಶಿಲಾ ಸಮುದಾಯವೇ ಆಕರವಾಗಿದೆ. ಪಶ್ಚಿಮ ಘಟ್ಟದ ಸಹ್ಯಾದ್ರಿ ಪರ್ವತ, ಬಾಬಾಬುಡನ್ ಪರ್ವತ ಶ್ರೇಣಿ, ಕೊಡಚಾದ್ರಿ, ಚಿಕ್ಕನಾಯಕನಹಳ್ಳಿ, ಚಿತ್ರದುರ್ಗ, ಗದಗ, ರಾಯಚೂರು, ಹಟ್ಟಿ ಈ ಸುತ್ತಲಿನ ಶಿಲೆಗಳೆಲ್ಲವೂ ಧಾರವಾಡ ಶಿಲಾವರ್ಗಕ್ಕೆ ಸೇರಿದುವು. ಈ ವರ್ಗದ ಶಿಲೆಗಳಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರುಗಳು, ತಾಮ್ರ, ಸೀಸ, ಚಿನ್ನ, ಬೆಳ್ಳಿ ಮುಂತಾದ ಲೋಹಗಳ ಅದುರುಗಳು ದೊರೆಯುತ್ತವೆ.

ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ನೀಲಗಿರಿ ಬೆಟ್ಟ ಸಾಲುಗಳಲ್ಲಿ ಬೂದು ಬಣ್ಣದ ಒಂದು ವಿಶೇಷ ರೀತಿಯ ಗ್ರಾನೈಟ್ ಶಿಲೆಗಳು ದೊರೆಯುತ್ತವೆ. ಇವುಗಳನ್ನು ಚಾರ್ನೊಕೈಟ್ ಎಂದು ಗುರುತಿಸಿದ್ದಾರೆ.

ದಕ್ಷಿಣದಲ್ಲಿ ಶಿವಸಮುದ್ರದಿಂದ ಹಿಡಿದು ಉತ್ತರದಲ್ಲಿ ತುಂಗಭದ್ರೆಯ ದಕ್ಷಿಣ ದಂಡೆಯವರೆಗೆ ಒಂದೇ ಸಮನೆ ಹಬ್ಬಿರುವ ಕಲ್ಲುಗುಂಡುಗಳಿಂದ ನಿಬಿಡವಾದ ಗುಡ್ಡ ಸಾಲು ಕಾಣಿಸುತ್ತದೆ. ಸಾವನದುರ್ಗ, ಕಬ್ಬಾಳದುರ್ಗ, ಶಿವಗಂಗೆ, ಮಧುಗಿರಿ, ಕೊರಟಗೆರೆ ಬೆಟ್ಟಗಳು, ಮಿಡಿಗೇಶಿ, ಪಾವಗಡ, ಮೊಳಕಾಲ್ಮೂರು, ಹಂಪೆ ಈ ಸುತ್ತಲಿನ ಬೆಟ್ಟಗಳೆಲ್ಲವೂ ಒರಟುಒರಟಾದ, ಅಗಲ ಹರಳುಗಳುಳ್ಳ ಕೆಂಪು ಬಣ್ಣದ ಗ್ರಾನೈಟ್‌ಗಳಿಂದ ರೂಪಿತವಾದುವು.

ಇವುಗಳನ್ನು ರಾಮನಗರ ಗ್ರಾನೈಟ್ ಎಂಬ ಹೆಸರಿನಿಂದ ಕರೆಯುತ್ತಾರೆ. ರಾಮನಗರ ಸುತ್ತಲಿನ ಬೃಹದಾಕಾರದ ಬಂಡೆಗಳಿಂದ ಕೂಡಿರುವ ಬೆಟ್ಟಗಳೆಲ್ಲವೂ ಈ ಗ್ರಾನೈಟ್‌ನಿಂದ ರೂಪಿತವಾದುವು.

ಮೇಲೆ ವಿವರಿಸಿದ ಶಿಲೆಗಳೆಲ್ಲವೂ ಅತಿ ಪ್ರಾಚೀನವಾದುವು. ಅವು ತಮ್ಮ ಮೊದಲ ರೂಪವನ್ನು ಬದಲಾಯಿಸಿ ರೂಪಾಂತರ ಹೊಂದಿರುತ್ತವೆ. ಇಂಥ ಶಿಲೆಗಳ ಮೇಲೆ ಹಾಸಿದಂತೆ ಈಚಿನ ಇನ್ನೊಂದು ಶಿಲಾವರ್ಗ ಬೆಳಗಾಂವಿಯ ಪೂರ್ವಭಾಗದಿಂದ ಹಿಡಿದು ಬಾಗಲಕೋಟೆಯವರೆಗೆ ಹರಡಿರುವುದು ಕಾಣುತ್ತದೆ. ಈ ವರ್ಗದ ಕಲ್ಲುಗಳಲ್ಲಿ ಸುಣ್ಣಕಲ್ಲಿನ ಶಿಲೆಗಳೆ ಪ್ರಮುಖವಾದವು. ಕಲಾದಗಿಯ ಬಳಿ ಇವು ಬಹುವಾಗಿ ಹರಡಿರುವುದರಿಂದ ಈ ವರ್ಗದ ಶಿಲೆಗಳಿಗೆ ಕಲಾದಗಿ ಶಿಲಾವರ್ಗ ಎಂದು ಹೆಸರಿಸಿದ್ದಾರೆ. ಘಟಪ್ರಭಾ ಮತ್ತು ಕೃಷ್ಣಾ ನದಿಗಳು ಬೆಳಗಾಂವಿ ಬಿಜಾಪುರ ಜಿಲ್ಲೆಗಳಲ್ಲಿ ಈ ಶಿಲೆಗಳನ್ನು ಹಾದುಹೋಗಿರುತ್ತವೆ. ಬಾದಾಮಿ, ಪಟ್ಟದಕಲ್ಲಿನ ದೇವಸ್ಥಾನಗಳು ಈ ಕಲಾದಗಿ ಶಿಲೆಗಳಿಂದ ಕಡೆದವು.

ಇವಕ್ಕೂ ಸ್ವಲ್ಪ ಈಚಿನ ಶಿಲೆಗಳು ಮುಖ್ಯವಾಗಿ ಗುಲ್ಬರ್ಗ ಜಿಲ್ಲೆಯ ಭೀಮಾನದಿಯ ಇಕ್ಕೆಲಗಳಲ್ಲಿ ಕಾಣುತ್ತವೆ. ಇವೂ ಬಹುವಾಗಿ ಸುಣ್ಣಕಲ್ಲಿನಿಂದ ಕೂಡಿದವು. ಇವುಗಳಿಗೆ ಭೀಮಾ ಶಿಲಾಸ್ತೋಮ ಎಂದು ಹೆಸರು. ಇವು ಮುಖ್ಯವಾಗಿ ಮುದ್ದೇಬಿಹಾಳ, ತಾಳಿಕೋಟೆ, ಶಾಹಬಾದ, ವಾಡಿ, ಚಿತ್ತಾಪುರ, ಸೇಡಂ, ಚಿಂಚೋಳಿ ಈ ಸ್ಥಳಗಳಲ್ಲಿ ಕಾಣುತ್ತವೆ. ಇಲ್ಲಿಯ ಸುಣ್ಣಕಲ್ಲನ್ನು ಉಪಯೋಗಿಸಿ ಮೂರು ದೊಡ್ಡಪ್ರಮಾಣದ ಸಿಮೆಂಟ್ ತಯಾರಿಕಾ ಕಾರ್ಖಾನೆಗಳು ಗುಲ್ಬರ್ಗ ಜಿಲ್ಲೆಯಲ್ಲಿದ್ದು ಹೇರಳವಾಗಿ ಸಿಮೆಂಟನ್ನು ತಯಾರಿಸುತ್ತವೆ.

ಮೇಲೆ ವಿವರಿಸಿದ ಎಲ್ಲ ಶಿಲೆಗಳೂ ಅತಿ ಪ್ರಾಚೀನ ಕಾಲಕ್ಕೆ ಸೇರಿದ ಜೀವ ಚಿಹ್ನೆ ಅಷ್ಟಾಗಿ ಕಾಣದ ಶಿಲಾವರ್ಗಗಳಿಗೆ ಸೇರಿದುವು. ಈ ಎಲ್ಲ ವರ್ಗದ ಶಿಲೆಗಳ ಮೇಲೂ ಸು. 5 ಕೋಟಿ ವರ್ಷಗಳ ಹಿಂದೆ ಅಗಾಧ ಪ್ರಮಾಣದಲ್ಲಿ ಶಿಲಾಲಾವ ಪ್ರವಾಹ ರೂಪದಲ್ಲಿ ಹರಿದು ಮಂದವಾದ ಹೊದಿಕೆಯಂತೆ ಕುಳಿತಿದೆ. ಬೆಳಗಾಂವಿ ಜಿಲ್ಲೆಯ ಉತ್ತರಭಾಗ, ಬಿಜಾಪುರ, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳು ದಖನ್‌ಲಾವಾ ಪ್ರವಾಹದಿಂದ ಮುಚ್ಚಿಹೋಗಿವೆ. ಇವು ಮಟ್ಟವಾಗಿದ್ದು ಬಹುದೂರ ಹರಡಿರುತ್ತವೆ. ಇಲ್ಲಿಯ ಬೆಟ್ಟಗಳು ಮೇಜಿನಾಕಾರದಲ್ಲಿದ್ದು, ಶಿಖರಗಳಿರುವುದಿಲ್ಲ. ಈ ಬಗೆಯ ಶಿಲೆಗಳನ್ನು ದಖನ್‌ಲಾವಾಗಳೆಂದು ಗುರುತಿಸುತ್ತಾರೆ. ಇವು ಬೀಳುಬಿದ್ದಾಗ ಅದರಿಂದುಂಟಾದ ಮಣ್ಣು ಕಪ್ಪುಛಾಯೆಯನ್ನು ಹೊಂದಿರುತ್ತದೆ. ಈ ಎರೆಮಣ್ಣಿನ ಪ್ರದೇಶ ಫಲವತ್ತಾದುದು. ನೂರಾರು ಮೈಲುಗಳಷ್ಟು ಏರು ತಗ್ಗೂ ಇಲ್ಲದ ಕಪ್ಪುಮಣ್ಣಿನಿಂದ ಆವೃತವಾದ ಅಗಾಧ ಬಯಲು ಕಾಣುತ್ತದೆ. ದಖನ್‌ಲಾವಾಗಳಿಂದ ಆವೃತವಾದ ಪ್ರದೇಶ ಈ ಬಗೆಯ ಬಯಲು ಭೂಮಿಗೆ ಉತ್ತಮ ನಿದರ್ಶನ.

ಬೆಳಗಾಂವಿ ಜಿಲ್ಲೆಯ ಪಶ್ಚಿಮಕ್ಕೆ ಮತ್ತು ಬೀದರ್ ಜಿಲ್ಲೆಯ ಬೀದರ್, ಹುಮನಾಬಾದ ಮತ್ತು ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಬಹು ವ್ಯಾಪಿಯಾಗಿ ರಂಧ್ರಮಯವಾಗಿರುವ ಕೆಮ್ಮಣ್ಣು ಬಣ್ಣದ, ಮಣ್ಣುರೂಪಿನ ಆದರೂ ಬಹು ಗಡುಸಾದ ಒಂದು ಬಗೆಯ ಶಿಲೆ ದೊರೆಯುತ್ತದೆ. ಇದೇ ಬಗೆಯ ಶಿಲೆ ಪಶ್ಚಿಮ ಕರಾವಳಿಯ ಉದ್ದಕ್ಕೂ ಕಾಣುವುದುಂಟು. ಇದನ್ನು ಲ್ಯಾಟರೈಟ್ ಎಂದು ಕರೆಯುತ್ತಾರೆ. ಇದನ್ನು ಜಂಬಿಟ್ಟಿಗೆ, ಇಟ್ಟಿಗೆ ಕಲ್ಲು ಎಂದೂ ಕರೆಯುತ್ತಾರೆ. ಕರಾವಳಿಯ ಕಟ್ಟಡಗಳೆಲ್ಲವೂ ಈ ಕಲ್ಲಿನಿಂದ ಕಟ್ಟಿದುವು. ಬೀದರ್, ಬೆಳಗಾಂವಿ ಸುತ್ತಲೂ ಈ ಕಲ್ಲಿನಿಂದ ಕಟ್ಟಿದ ಮನೆಗಳನ್ನು ಗುರುತಿಸಬಹುದು. ಈ ಬಗೆಯ ಶಿಲೆಗಳಲ್ಲಿರುವ ಅಲ್ಯೂಮಿನಿಯಂ ಅಂಶ ಹೆಚ್ಚಾದಾಗ ಅವು ಬಾಕ್ಸೈಟ್ ಅದಿರಾಗಿ ಮಾರ್ಪಡುತ್ತವೆ. ಅವುಗಳಿಂದ ಅಲ್ಯೂಮಿನಿಯಂ ಲೋಹವನ್ನು ಪಡೆಯಬಹುದು. ದಖನ್‌ಲಾವಾಗಳನ್ನು ಮತ್ತು ಅದರ ಮೇಲೆ ರೂಪುಹೊಂದಿದ ಜಂಬಿಟ್ಟಿಗೆಯನ್ನು ಬಿಟ್ಟರೆ ಇನ್ನುಳಿದಿರುವುದು ಕಡಲ ಅಂಚಿನಲ್ಲಿ ಶೇಖರವಾಗಿರುವ ಈಚಿನ ಮರಳು ಶಿಲೆಗಳು, ಮೆಕ್ಕಲು ಮಣ್ಣು. *

**ಕರ್ನಾಟಕದಲ್ಲಿ ಚಿನ್ನದ ಗಣಿಗಾರಿಕೆ:** ಕರ್ನಾಟಕದ ಚಿನ್ನದ ಗಣಿಗಾರಿಕೆಗೆ ಅತ್ಯಂತ ಪ್ರಾಚೀನ ಇತಿಹಾಸವಿದೆ. ಪ್ರ.ಶ.ಪೂ. ವರ್ಷಗಳಲ್ಲೇ ನಮ್ಮ ನಾಡಿನಲ್ಲಿ ಚಿನ್ನವನ್ನು ಗಣಿ ಮಾಡಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಚಿನ್ನ ದೊರೆಯುವ ಶಿಲೆಗಳ ಬಗ್ಗೆ ಪ್ರಾಚೀನರಿಗೆ ಸ್ಪಷ್ಟ ತಿಳಿವಿತ್ತು. ಈ ಹಿನ್ನೆಲೆಯಲ್ಲಿ ಭೂಮಿಯೊಳಗೆ ಕೂಪ ತೋಡಿ, ಆಳವಾದ ಭಾಗಗಳನ್ನು ಪರಿಶೋಧಿಸಿ ಚಿನ್ನವನ್ನು ಗಣಿ ಮಾಡಿದ್ದಾರೆ. ಹಾಗೆಯೇ ಮೆಕ್ಕಲು ಚಿನ್ನವನ್ನು ಸೋಸಿ ತೆಗೆದಿದ್ದಾರೆ.

ಬ್ರಹ್ಮಗಿರಿಯ ಅಶೋಕನ ಶಾಸನದಲ್ಲಿ ಪ್ರಸ್ತಾಪಿಸಿರುವ ಸುವರ್ಣಗಿರಿ ಎನ್ನುವ ಹೆಸರು ರಾಯಚೂರಿನ ಮಸ್ಕಿಯ ಬಳಿಯ ಸ್ವರ್ಣಭರಿತ ಗುಡ್ಡಗಳನ್ನು ಕುರಿತೇ ಇರಬಹುದೆಂದು ಆಲ್ಚಿನ್ ಎಂಬ ಇತಿಹಾಸಕಾರರ ಅಭಿಪ್ರಾಯ. ಬಹುಶಃ ನವಶಿಲಾಯುಗದಲ್ಲಿ ಎಂದರೆ ಪ್ರ.ಶ.ಪೂ. 3ನೆಯ ಸಹಸ್ರಮಾನದ ಕೊನೆಯಲ್ಲಿ ಪ್ರಾರಂಭವಾಗಿ 1ನೆಯ ಸಹಸ್ರಮಾನದ ಮೊದಲರ್ಧದವರೆಗೆ ಸಣ್ಣ ಪ್ರಮಾಣದಲ್ಲಿ ಚಿನ್ನದ ಗಣಿಗಾರಿಕೆ ಪ್ರಾರಂಭವಾಗಿರಬಹುದು ಅನಂತರ ಮೌರ್ಯರು ದಖನ್ ಪ್ರಾಂತ್ಯವನ್ನು ಆಳುವ ಹೊತ್ತಿಗೆ ಚಿನ್ನದ ಗಣಿಗಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆದಿರಲು ಸಾಧ್ಯ. ಮಸ್ಕಿ, ಮುದಗಲ್, ಸಿಂಗಸಗೂರು, ಕೋಟೆಗಲ್ಲು, ವಾಟೆಗಲ್ಲು ಮುಂತಾದೆಡೆ ನವ ಶಿಲಾಯುಗದ ಅನೇಕ ಕುರುಹುಗಳು ಪತ್ತೆಯಾಗಿವೆ. ಹಟ್ಟಿ ಸುತ್ತಮುತ್ತಲಿರುವ ಪುರಾತನ ಚಿನ್ನದ ಗಣಿಗಳನ್ನು ಕುರಿತು ಹೈದರಾಬಾದ್ ನಿಜಾಮ್ ಸರ್ಕಾರಕ್ಕೆ ಭೂವಿಜ್ಞಾನ ಸಲಹೆಗಾರನಾಗಿದ್ದ ಕ್ಯಾಪ್ಟನ್ ಲಿಯೋನಾರ್ಡ್‌ಮನ್ ಎಂಬಾತ ಸಮೀಕ್ಷೆ ನಡೆಸಿ ಗಣಿಗಳ ಪ್ರಾಚೀನ ಇತಿಹಾಸ ಸಾರುವ ಅಮೂಲ್ಯ ಮಾಹಿತಿಯನ್ನು ನೀಡಿದ್ದಾನೆ.

ದಕ್ಷಿಣ ಭಾರತದಲ್ಲಿರುವ ಪ್ರಾಚೀನ ಚಿನ್ನದ ಗಣಿಗಳಿಂದ ಒಂದು ಅಂಶ ನಿಚ್ಚಳವಾಗಿ ತಿಳಿಯುತ್ತದೆ. ಎಲ್ಲೆಲ್ಲಿ ಚಿನ್ನಭರಿತ ಶಿಲೆಗಳಿವೆಯೋ ಅಲ್ಲೆಲ್ಲ ತಾಂತ್ರಿಕ ತೊಂದರೆ ಗಣಿಗಾರಿಕೆಯನ್ನು ಅರ್ಧಕ್ಕೆ ಕೈ ಬಿಟ್ಟಿರುವ ನಿದರ್ಶನಗಳಿವೆ. ಆದರೆ ಹಟ್ಟಿಯ ಸುತ್ತಮುತ್ತ ಅತ್ಯಂತ ಆಳವಾದ ಪ್ರಾಚೀನ ಚಿನ್ನದ ಗಣಿಗಳಿವೆ. ಮೆಕ್ಲರಾನ್ ಎಂಬ ಭೂವಿಜ್ಞಾನಿ ಹಟ್ಟಿಯ ಸುತ್ತಮುತ್ತ 300ಕ್ಕಿಂತಲೂ ಮಿಗಿಲು ಪ್ರಾಚೀನ ಚಿನ್ನದ ಗಣಿಗಳಿವೆ ಎಂದು ತಿಳಿಸಿದ್ದಾನೆ. ಹಟ್ಟಿಯ ಗಣಿಗಳಲ್ಲಿ ಪ್ರಾಚೀನರು ಬಳಸಿದ ಕಬ್ಬಿಣದ ಬಾಣಲೆ, ಕಲ್ಲಿನ ಪೀಠ, ಮಡಕೆಯ ಚೂರುಗಳು ಮುಂತಾದವು ದೊರೆತಿವೆ. ಈ ಪುರಾವೆಗಳನ್ನು ಆಧರಿಸಿ ಪ್ರಾಚ್ಯ ಸಂಶೋಧಕರು ಇವು ಮೊದಲನೇ ಸಂಸ್ಥಾನಕ್ಕೆ ಸೇರಿವೆ ಎಂದು ಕಾಲನಿರ್ಣಯ ಮಾಡಿದ್ದಾರೆ. ಇದೇ ಬಗೆಯ ಗಣಿ ಸಾಮಗ್ರಿಗಳು, ಮಡಕೆ ಚೂರುಗಳು ಕೋಲಾರದ ಚಿನ್ನದ ಗಣಿಗಳಲ್ಲಿ ಒಂದಾದ ಮೈಸೂರು ಗಣಿಯನ್ನು ಅಳವಡಿಸುವಾಗ ದೊರೆತವು. ಅಲ್ಲಿನ ಗಣಿ ವಸ್ತು ಸಂಗ್ರಹಾಲಯದಲ್ಲಿ ಇವುಗಳನ್ನು ರಕ್ಷಿಸಿ ಇಟ್ಟಿದ್ದಾರೆ. ರಾಟೆಗಳ ಮೂಲಕ ಚಿನ್ನದ ಅದಿರನ್ನು ಎತ್ತಿ ಹೊರತೆಗೆದು ಕಲ್ಲಿನ ಮೇಲೆ ಅರೆದು ಸಣ್ಣಗೆ ಪುಡಿ ಮಾಡುವ ತಂತ್ರವನ್ನು ಪ್ರಾಚೀನರು ಅನುಸರಿಸಿದ್ದಾರೆ. ಕರ್ನಾಟಕದಾದ್ಯಂತ ಪ್ರಾಚೀನದ ಗಣಿಗಳ ಸುತ್ತಮುತ್ತ ಚಿನ್ನದ ಅದಿರನ್ನು ಪುಡಿಮಾಡಲು ಬಳಸುತ್ತಿದ್ದ ರುಬ್ಬುಗುಂಡುಗಳು, ಬಂಡೆಗಳ ಮೇಲೆ ಮೂಡಿಸಿರುವ ಕುಳಿಗಳು ಸಾಕಷ್ಟು ಲಭ್ಯವಿವೆ. ಹತ್ತಿರದ ಹೊಳೆಯ ಬಳಿ ಪುಡಿ ಮಾಡಿದ ಅದುರನ್ನು ಜಾಲಿಸಿ, ಚಿನ್ನವನ್ನು ಸಾಂದ್ರತೆಯ ಆಧಾರದ ಮೇಲೆ ಸುಲಭವಾಗಿ ಸಂಗ್ರಹಿಸುತ್ತಿದ್ದರು. ವಿಶೇಷವಾಗಿ ಹಟ್ಟಿ ಚಿನ್ನದ ಗಣಿಗಳಲ್ಲಿ ಪ್ರಾಚೀನ ಗಣಿಗಾರಿಕೆಯ ಅನೇಕ ಕುರುಹುಗಳು ಪತ್ತೆಯಾಗಿವೆ. ಅದಿರನ್ನು ಮೇಲೆ ಎಳೆದುಕೊಳ್ಳಲು ಬಳಸುತ್ತಿದ್ದ ಹಗ್ಗಗಳಿಂದ ಶಿಲಾ ಭಿತ್ತಿಯ ಮೇಲೆ ಮೂಡಿರುವ ಗುರುತುಗಳು ಈಗಲೂ ಉಳಿದಿವೆ. ಗಣಿ ಕುಸಿದು ಬೀಳದಂತೆ ಆಸರೆಗಾಗಿ ಬಳಸುತ್ತಿದ್ದ ಗೊಬ್ಬಳಿ ಮರದ ತುಂಡುಗಳೂ ಪತ್ತೆಯಾಗಿವೆ. ಕೆಲವು ದಿಮ್ಮಿಗಳು ಗರಗಸದಿಂದ ಕೊಯ್ಯಲಾರದಷ್ಟು ಗಟ್ಟಿಯಾಗಿವೆ.

ಕರ್ನಾಟಕದ ಸ್ಥಳನಾಮಗಳ ವೈಶಿಷ್ಟ್ಯವನ್ನು ಪರಿಗಣಿಸಿದಾಗ ಮತ್ತೊಂದು ಅಂಶವೂ ವಿಶೇಷವಾಗಿ ಗಮನ ಸೆಳೆಯುತ್ತದೆ. ಹೊನ್ನು ಹೆಸರಿನ ಅನೇಕ ಸ್ಥಳಗಳು ನಮ್ಮಲ್ಲಿವೆ.. ಹೊನ್ನಗಲ್ಲು, ಹೊನ್ನಾಳಿ, ಹೊನ್ನಬೆಟ್ಟ, ಹೊನ್ನೇಬಾಗಿ, ಹೊನ್ನೆಹಟ್ಟಿ, ಹೊನ್ನೆಕುಣಿ, ಹೊನ್ನದೋಣಿ ಈ ಸ್ಥಳಗಳಲ್ಲಿ ಪುರಾತನ ಚಿನ್ನದ ಗಣಿಗಳಿವೆ. ಪ್ರಾಚೀನ ಚಿನ್ನದ ಗಣಿಗಳೆಲ್ಲವೂ ಈಗ ಸುಸ್ಥಿತಿಯಲ್ಲಿಲ್ಲ. ಅನೇಕ ಗಣಿಗಳು ಗುರುತೂ ಸಿಕ್ಕದಷ್ಟು ಮುಚ್ಚಿ ಹೋಗಿದೆ.

ಕರ್ನಾಟಕದ ಚಿನ್ನದ ಗಣಿಗಳ ಪ್ರಾಚೀನತೆಯನ್ನು ಪ್ರಸಿದ್ಧ ಪ್ರಾಚ್ಯ ಸಂಶೋಧಕ ವೀಲರ್, ಸಿಂಧೂನದಿಯ ಸಂಸ್ಕೃತಿಯವರೆಗೆ ವಿಸ್ತರಿಸಿದ್ದಾರೆ. ಆಲ್ಚಿನ್ ಎಂಬ ವಿದ್ವಾಂಸ ಈ ಕುರಿತು ಇನ್ನಷ್ಟು ಪುರಾವೆಗಳನ್ನು ಮುಂದಿಟ್ಟಿದ್ದಾರೆ. ಸಿಂಧೂ ನಾಗರಿಕತೆಯಲ್ಲಿ ಬಳಸಿರುವ ಬಹುಪಾಲು ಚಿನ್ನ ಬೆಳ್ಳಿಯ ಅಂಶದಿಂದಾದ ಬಿಳಿಚಿನ್ನ (ಎಲೆಕ್ಟ್ರಮ್). ಈ ಬಗೆಯ ಚಿನ್ನ ದೊರೆಯುವುದು ಗಣಿಗಳ ಮೂಲದಿಂದಲೇ ಹೊರತು ಮೆಕ್ಕಲಿನಿಂದಲ್ಲ. ಹಟ್ಟಿಯ ಚಿನ್ನ ಈ ಬಗೆಯದು. ಇದರ ಜೊತೆಗೆ ನವಶಿಲಾಯುಗದ ಅನೇಕ ಅವಶೇಷಗಳು ಹಟ್ಟಿ ಗಣಿಯ ಸುತ್ತಮುತ್ತ ಪತ್ತೆಯಾಗಿರುವುದನ್ನು ಇವರು ಉಲ್ಲೇಖಿಸಿದ್ದಾರೆ. ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿಗಳಲ್ಲಿ ಪ್ರಾಚೀನರು ಬಳಸಿದ್ದ ಮರದ ಕಂಬಗಳನ್ನು ಕಾರ್ಬನ್ 14 ಕಾಲನಿರ್ಣಯಕ್ಕೆ ಒಳಪಡಿಸಿದ್ದಾರೆ. ಈ ಅಧ್ಯಯನದ ಹಿನ್ನೆಲೆಯಲ್ಲಿ ಕೋಲಾರದ ಚಿನ್ನದ ಗಣಿಗಳನ್ನು ಈಗ್ಗೆ 700 ವರ್ಷಗಳಷ್ಟು ಮೊದಲೇ ಪ್ರಾಚೀನರು ಆಳಪಡಿಸಿದ್ದಾರೆಂಬ ಅಂಶ ಹೊರಬಿದ್ದಿದೆ.

ನಮ್ಮ ನಾಡಿನಾದ್ಯಂತ ಚಿನ್ನಕ್ಕಾಗಿ ವ್ಯವಸ್ಥಿತ ಶೋಧನೆ ಮಾಡಿರುವ ಪ್ರಾಚೀನರು ಸ್ಥಳೀಯರೇ ಅಥವಾ ಹೊರಗಿನವರೆ ಎಂಬುದರ ಬಗ್ಗೆ ಸ್ಪಷ್ಟವಾದ ದಾಖಲೆಗಳಿಲ್ಲ. ಲಿಯೋನಾರ್ಡ್‌ಮನ್ ಎಂಬ ಭೂವಿಜ್ಞಾನಿ 1939ರಲ್ಲಿ ಈ ಕುರಿತು ದೀರ್ಘ ಅಧ್ಯಯನ ಮಾಡಿದ. ಆಗಿನ ಮೈಸೂರು ಪ್ರಾಂತ್ಯದಲ್ಲಿ ಮಾಡಿರುವ ಗಣಿಗಾರಿಕೆ ಆಫ್ರಿಕದಲ್ಲಿ ಚಿನ್ನದ ಗಣಿಗಳನ್ನು ಮಾಡಲು ಪ್ರೇರಣೆ ನೀಡಿರಬಹುದೆಂದು ಊಹಿಸಿದ. ರೊಡೀಷಿಯದಲ್ಲಿ ಮೈಸೂರು ಪ್ರಾಂತ್ಯದಲ್ಲಿರುವಂತೆ ಪ್ರಾಚೀನ ಚಿನ್ನದ ಗಣಿಗಳಿಗೆ ಹೋಲಿಕೆಯಿದೆ. ಈ ಚಿನ್ನದ ಗಣಿಗಳ ಸುತ್ತಮುತ್ತಲಿನ ಕಾಡುಹತ್ತಿ, ಹುಣಿಸೇ ಮರ, ಕಾಡು ನಿಂಬೆ,

ಸ್ಥಳೀಯವಲ್ಲವೆಂದೂ, ಇವೆಲ್ಲ ಹಿಂದಿನ ಮೈಸೂರು ಪ್ರಾಂತ್ಯದಿಂದ (ಆಗಿನ ಹೈದರಾಬಾದು ಕರ್ನಾಟಕ ಪ್ರಾಂತ್ಯ) ಬಂದಿರಬಹುದೆಂದು ರೋಡಿಷಿಯದ ಭೂವಿಜ್ಞಾನ ಸರ್ವೇ ಸಂಸ್ಥೆಯ ಸದಸ್ಯ ಮೇಜರ್ ಲೈತ್‌ಫುಟ್ ಎಂಬ ತಜ್ಞ, ಕ್ಯಾಪ್ಟನ್ ಲಿಯೋನಾರ್ಡ್‌ಮನ್‌ಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾನೆ.

ಕೋಲಾರದ ಚಿನ್ನದ ಗಣಿಗಳ ಇತಿಹಾಸದಲ್ಲಿ ಅತ್ಯಂತ ಕುತೂಹಲಕಾರಿ ಪ್ರಸಂಗ ಒಂದಿದೆ. ಬೆಂಗಳೂರಿನ ದಂಡು ಪ್ರದೇಶದಲ್ಲಿ ವಾಸವಾಗಿದ್ದ ಐರಿಷ್ ಸೈನಿಕ ಮೈಕೇಲ್ ಲ್ಯಾವೆಲ್ಲೆ ಎಂಬಾತ ನ್ಯೂಜಿಲೆಂಡಿನಲ್ಲಿ ಮಯೋರಿ ಯುದ್ಧದಲ್ಲಿ ಪಾಲ್ಗೊಂಡು ಬೆಂಗಳೂರಿಗೆ ವಾಪಸ್ಸಾದ ಅನಂತರ ಚಿನ್ನದ ಗಣಿಗಾರಿಕೆಯಲ್ಲಿ ಆಸಕ್ತಿ ತಳೆದ. 1871ರಲ್ಲಿ ಕೋಲಾರದ ಚಿನ್ನದ ಗಣಿ ಪ್ರದೇಶವನ್ನು ಗೋಪ್ಯವಾಗಿ ಅಧ್ಯಯನ ಮಾಡಿದ. 1873ರಲ್ಲಿ ಆಗಿನ ಮೈಸೂರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಕೋಲಾರ ಪ್ರದೇಶದಲ್ಲಿ ಕಲ್ಲಿದ್ದಲು ಗಣಿ ಮಾಡಲು ಪರವಾನಗಿ ಕೇಳಿದ್ದ. 1875ರಲ್ಲಿ ಸರ್ಕಾರವನ್ನು ವಂಚಿಸಿ ಮೂರು ವರ್ಷಗಳ ಕಾಲ ಗುತ್ತಿಗೆ ಪಡೆದ. 1876ರಲ್ಲಿ ತನ್ನ ಹಕ್ಕನ್ನು ಮದ್ರಾಸ್ ಸ್ಟಾಫ್ ಕ್ವಾರ್ಟರ್ಸ್‌ನ ಜನರಲ್ ಬೆರಿಸ್‌ಫರ್ಡ್ ಎಂಬುವನಿಗೆ ಮಾರಿಕೊಂಡ. ಮುಂದೆ ಈತ ಒಂದು ಸಿಂಡಿಕೇಟನ್ನು ಮಾಡಿಕೊಂಡು ಕೋಲಾರ್ ಕನ್ಸೆಷನರೀಸ್ ಎಂದು ಹೆಸರಿಟ್ಟು ಅದಕ್ಕೆ ಐದು ಸಾವಿರ ರೂಪಾಯಿ ಬಂಡವಾಳ ಹೂಡಿದ. ಈ ಸಿಂಡಿಕೇಟ್, ಆಸ್ಟ್ರೇಲಿಯದ ಇಬ್ಬರು ಗಣಿ ತಜ್ಞರನ್ನು ಬರಮಾಡಿಕೊಂಡು ಚಿನ್ನದ ಗಣಿಗಾರಿಕೆ ಪ್ರಾರಂಭಿಸಿತು. 1879ರಲ್ಲಿ ಸ್ವಲ್ಪಪ್ರಮಾಣದ ಚಿನ್ನವೂ ದೊರೆಯಿತು. ಇದರಿಂದ ಪ್ರೇರಿತವಾಗಿ ಅತ್ತ ವೈನಾಡಿನಲ್ಲಿ ಚಿನ್ನದ ಮೇಲೆ ಹಣ ಹೂಡಿದ್ದ ಅನೇಕ ಕಂಪನಿಗಳು ಮೈಸೂರು ಪ್ರಾಂತ್ಯದತ್ತ ಸಾರಾಸಗಟಾಗಿ ಬಂದವು. 1880ರಲ್ಲಿ ಮೈಸೂರು ಗಣಿ ಕಂಪನಿ ಅಸ್ತಿತ್ವಕ್ಕೆ ಬಂದಿತು. ಅನಂತರ ನಂದಿದುರ್ಗ ಕಂಪನಿ ತಲೆಯೆತ್ತಿತು. ಇವುಗಳ ಆಡಳಿತ ಕೇಂದ್ರ ಲಂಡನ್ನಿನಲ್ಲಿತ್ತು. 1881ರ ಹೊತ್ತಿಗೆ ಕೋಲಾರದ ಚಿನ್ನದ ಗಣಿಗಳಲ್ಲಿ 13 ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದವು. 1880ರಲ್ಲೇ ಉರಿಗಾಂ ಕಂಪನಿ 40 ಟನ್ನು ಚಿನ್ನದ ಅದಿರನ್ನು ಅರೆದು 42 ಔನ್ಸ್ ಚಿನ್ನವನ್ನು ಸಂಗ್ರಹಿಸಿ ಆಧುನಿಕ ಗಣಿ ಉದ್ಯಮಕ್ಕೆ ಬುನಾದಿ ಹಾಕಿತು. ಪ್ರಾರಂಭಿಕ ಸ್ಥಿತಿ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಇಲ್ಲಿನ ಚಿನ್ನದ ಗಣಿ ಉದ್ಯಮದ ಬಗ್ಗೆ ಬ್ರಿಟನ್ನಿನ ಗಣಿಗಳು ಮತ್ತು ಖನಿಜ ಎಂಬ ವರದಿಯಲ್ಲಿ ರಾಲ್ಫ್ ಸ್ಟೋಕ್ಸ್ ಎಂಬ ತಜ್ಞ ಬರೆದ ಮಾತುಗಳಿವು:

ಮೊದಲ ದುರದೃಷ್ಟ ಗಣಿಗಳಲ್ಲಿ ಕೋಲಾರದ ಗಣಿಗಳ ಹೆಸರು ಎದ್ದು ಕಾಣುತ್ತದೆ. ಇಲ್ಲಿ ಪ್ರಾಚೀನರು ಬಹು ಹಿಂದೆಯೇ ಚಿನ್ನವನ್ನು ಪತ್ತೆ ಹಚ್ಚಿ ಗಣಿಗಳನ್ನು ಮಾಡಿದ್ದರು. ಹೊಸ ನಿಕ್ಷೇಪವನ್ನು ಪತ್ತೆ ಹಚ್ಚಲು ಆಳವಾದ ಗಣಿಗಳನ್ನು ತೋಡುವುದು ಅನಿವಾರ್ಯವಾಯಿತು.

ಆಗಿನ ಪರಿಸ್ಥಿತಿಯೂ ಅಷ್ಟೇ ನಿರಾಶಾದಾಯಕವಾಗಿತ್ತು. ಕೋಲಾರದ ಸುತ್ತಮುತ್ತ ಸಾಂಕ್ರಾಮಿಕ ರೋಗ ಉಲ್ಬಣಿಸಿತ್ತು. ಗಣಿಗಳಿಗಂತಿರಲಿ, ಕುಡಿಯುವ ನೀರಿಗೆ ಎಂದೂ ಅಲ್ಲಿ ಬವಣೆ ತಪ್ಪೇ ಇರಲಿಲ್ಲ. 1882ರ ಹೊತ್ತಿಗೆ ಗಣಿ ಕಾರ್ಯಾಚರಣೆ ತೀರಾ ಕೆಳಮಟ್ಟಕ್ಕೆ ಕುಸಿದು ಇನ್ನೇನು ಗಣಿಗಳನ್ನು ಮುಚ್ಚದೆ ಬೇರೆ ಮಾರ್ಗವೇ ಇಲ್ಲ ಎಂಬ ತೀರ್ಮಾನ ತೆಗೆದುಕೊಳ್ಳುವ ಹಂತವನ್ನು ತಲಪಿತು. 1880ರಿಂದ 1902ರವರೆಗೆ ಕೋಲಾರದ ಚಿನ್ನದ ಗಣಿಗಾರಿಕೆಯ ಮುಖ್ಯಸ್ಥನಾಗಿದ್ದ ಜಾನ್ ಟೇಲರ್, ಕೋಲಾರದ ಪುರಾತನ ಚಿನ್ನದ ಗಣಿಗಳನ್ನು ಆಳಕ್ಕೆ ಇಳಿಸಿ ಪರಿಶೋಧಿಸಬೇಕೆಂದು ಸಲಹೆ ನೀಡಿದ. ಕ್ಯಾಪ್ಟನ್ ಪ್ಲಮರ್ ಎಂಬಾತ ಗಣಿಯನ್ನು ಆಳಪಡಿಸುತ್ತಿದ್ದಾಗ ಪ್ರಾಚೀನರು ಬಿಟ್ಟಿದ್ದ ಚಿನ್ನದ ಅದಿರಿನ ಶಿಲ್ಕು ದೊರೆಯಿತು.

ಕೋಲಾರದ ಚಿನ್ನದ ಗಣಿ ಪ್ರದೇಶದ ಭೂವಿಜ್ಞಾನ: ಬೆಂಗಳೂರಿನಿಂದ 80 ಕಿಮೀ ಪೂರ್ವಕ್ಕೆ, ಉತ್ತರ ದಕ್ಷಿಣವಾಗಿ ಸು. 80 ಕಿಮೀ ದೂರ ಹಾಯುವ ಕೋಲಾರದ ಪದರ ಶಿಲಾ ಜಾಡಿಗೆ ಕರ್ನಾಟಕದ ಭೂವಿಜ್ಞಾನದಲ್ಲಿ ವಿಶೇಷ ಸ್ಥಾನವಿದೆ. ಇದರ ಅಗಲ ಸರಾಸರಿ ಆರು ಕಿಮೀ ದಕ್ಷಿಣದಲ್ಲಿ ಕಾಮಸಮುದ್ರದಿಂದ ಮುಂದಕ್ಕೆ ಚಾಚಿ ಎರಡು ಕವಲಾಗಿ ಹಂಚಿಹೋಗಿದೆ. ಉತ್ತರದಲ್ಲಿ ಶ್ರೀನಿವಾಸಪುರದವರೆಗೂ ಇದು ವಿಸ್ತರಿಸಿದೆ. ಈ ಶಿಲಾ ಸಮೂಹವನ್ನು ಧಾರವಾಡ ಶಿಲಾ ಸಮೂಹದ ಒಂದು ಭಾಗ ಎಂದು ಪರಿಗಣಿಸಲಾಗಿದೆ. ಕರ್ನಾಟಕದಲ್ಲಿ ಈ ಬಗೆಯ ಶಿಲೆಗಳನ್ನು ಹಸುರು ಶಿಲಾ ಪಟ್ಟಿ ಎಂಬ ಗುಂಪಿಗೆ ಸೇರಿಸಲಾಗಿದೆ. ಚಿನ್ನವಿರುವ ವಲಯ ಈ ಶಿಲಾ ಪಟ್ಟಿಯಲ್ಲಿದೆ. ಸು. ಎಂಟು ಕಿಮೀ ವ್ಯಾಪಿಸಿದೆ. ಇಲ್ಲಿನ ಹಾರ್ನ್‌ಬ್ಲೆಂಡ್ ಪದರ ಶಿಲೆ, ಸ್ವರ್ಣಭರಿತ ಸಿರಗಳಿಗೆ ಮಾತೃವಾಗಿದೆ. ಮೂಲತಃ ಅಗ್ನಿಶಿಲೆಯಾಗಿದ್ದು ಅನಂತರ ರೂಪಾಂತರಣವಾಗಿದೆ. ಪಶ್ಚಿಮ ಅಂಚಿನಲ್ಲಿ ಕಬ್ಬಿಣಯುಕ್ತ ಕ್ವಾರ್ಟ್ಜೈಟ್ ಶಿಲೆಗಳಿವೆ ಪೂರ್ವದ ಅಂಚಿನಲ್ಲಿ ಜರ್ಜರಿತವಾದ ಶಿಲೆಗಳಿವೆ. ಕೋಲಾರದ ಪದರು ಶಿಲಾ ಜಾಡಿನಲ್ಲಿ ಅಲ್ಲಲ್ಲೇ ಗ್ರಾನೈಟ್ ಶಿಲೆ ಅಂತಸ್ಸರಣಗೊಂಡಿದೆ. ಸ್ವರ್ಣಭರಿತ ಬೆಣಚು ಸಿರಗಳು ಹಾರ್ನ್‌ಬ್ಲೆಂಡ್ ಶಿಲೆಗಳಲ್ಲಿರುವ ಸ್ತರಭಂಗದಿಂದಾದ ಬಿರುಕುಗಳನ್ನು ತುಂಬಿ ರೂಪುಗೊಂಡಿವೆ ಎಂದು ಭೂವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ಬಹುಶಃ ಗ್ರಾನೈಟ್ ಶಿಲೆ, ನಾಡಶಿಲೆಯಲ್ಲಿ ಅಂತಸ್ಸರಣಗೊಂಡ ಕಾಲಕ್ಕೆ ಶಿಲಾ ಪಾಕದೊಂದಿಗೆ ಬಂದ ಬೆಣಚು ಚಿನ್ನವನ್ನು ಹೊತ್ತು ತಂದು ಈ ಬಿರುಕುಗಳಲ್ಲಿ ತುಂಬಿರಬಹುದು.

ಇಡೀ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಪ್ರಮುಖವಾಗಿ 26 ಸ್ವರ್ಣಭರಿತ ಸಿರಗಳಿವೆ. ಇವುಗಳಲ್ಲಿ ಪ್ರಧಾನವಾಗಿ ಎರಡು ಬಗೆ. ಸಲ್ಫೈಡ್ ಖನಿಜಗಳು ಬೆರೆತಿರುವ ಪಶ್ಚಿಮ ಸಿರಗಳು ಮತ್ತು ನೇರವಾಗಿ ಯಂತ್ರಕ್ಕೆ ಕೊಟ್ಟು ಚಿನ್ನವನ್ನು ಸಂಗ್ರಹಿಸಬಹುದಾದ ಪೂರ್ವ ಸಿರಗಳು. ಇವುಗಳಲ್ಲೆಲ್ಲ ಛಾಂಪಿಯನ್ ಸಿರದ ಮೇಲೆ ಅತ್ಯಂತ ಆಳವಾದ ಗಣಿಯಿದೆ. ಕೋಲಾರದ ಚಿನ್ನದ ಗಣಿಗಳ ಪೈಕಿ ಇದು ಅತ್ಯಂತ ಹೆಚ್ಚಿನ ಚಿನ್ನವನ್ನು ಉತ್ಪಾದಿಸಿದೆ. ದಕ್ಷಿಣದಲ್ಲಿ ಮೈಸೂರು ಗಣಿ, ಮಧ್ಯದಲ್ಲಿ ಛಾಂಪಿಯನ್ ಗಣಿ, ವಾಯವ್ಯದಲ್ಲಿ ನಂದಿದುರ್ಗ ಗಣಿಗಳಿವೆ. 1880ರಿಂದ ಪ್ರಾರಂಭಿಸಿ 1990ರವರೆಗೆ ಈ ಎಲ್ಲ ಗಣಿಗಳಿಂದ ಒಟ್ಟು 800 ಟನ್ನು ಚಿನ್ನ ಉತ್ಪಾದನೆಯಾಗಿದೆ. 3320 ಮೀ ಆಳದವರೆಗೆ ವಿಸ್ತರಿಸಿರುವ ಈ ಗಣಿಗಳ ಎಲ್ಲ ಕೂಪಗಳನ್ನು ಸಾಲಿಗೆ ಪೋಣಿಸಿದರೆ 63 ಕಿಮೀ ಉದ್ದದ ಕೂಪಗಳಾಗುತ್ತವೆ. ಹಾಗೆಯೇ ಎಲ್ಲ ಸುರಂಗಗಳನ್ನು ಒಂದರ ಹಿಂದೆ ಒಂದು ಪೋಣಿಸಿದರೆ ಅವು 650 ಕಿಮೀ ಉದ್ದದ ಸುರಂಗವಾಗುತ್ತದೆ.

**ಛಾಂಪಿಯನ್ ಸಿರ ಸಮೂಹ :** ಕೋಲಾರದ ಚಿನ್ನದ ಗಣಿಗಳಲ್ಲಿ ಅತ್ಯಂತ ಸ್ವರ್ಣಭರಿತವಾದ ಛಾಂಪಿಯನ್ ಸಿರ ಸಮೂಹ ಅತಿ ಹೆಚ್ಚಿನ ಪ್ರಮಾಣದ ಮೆಗ್ನೀಸಿಯಮ್ ಮತ್ತು ನಿಕ್ಕಲ್ ಧಾತುಗಳಿರುವ ಬಸಾಲ್ಟ್ ಲಾವಾ ಶಿಲೆಗಳಲ್ಲಿದೆ. ಉತ್ತರಕ್ಕೆ ಬಲ್ಗಾಟ್ ಗಣಿವರೆಗೆ, ದಕ್ಷಿಣಕ್ಕೆ ಕೋಲಾರ ಗಣಿವರೆಗೆ ಹಬ್ಬಿರುವ ಈ ಸಿರದಲ್ಲಿ ತಿಳಿ ಬೂದುಬಣ್ಣದ ಸಣ್ಣ ಸಣ್ಣ ಬೆಣಚಿನ ಎಳೆಗಳು ಸ್ವರ್ಣಭರಿತವಾಗಿವೆ. ಪುರಾತನ ಚಿನ್ನದ ಗಣಿಗಳು ಈ ಎಳೆಗಳನ್ನು ಆಧರಿಸಿ ಸಾಕಷ್ಟು ಆಳಕ್ಕೆ ಇಳಿದಿವೆ. ಛಾಂಪಿಯನ್ ಸಿರವನ್ನು ಅನುಸರಿಸಿ 102ನೆಯ ಹಂತದವರೆಗೆ ಚಿನ್ನವನ್ನು ತೆಗೆದಿದ್ದಾರೆ. ಈ ಹಂತ 3230 ಮೀ ಆಳದಲ್ಲಿದೆ. ಸಣ್ಣ ಸಣ್ಣ ಸ್ವರ್ಣಭರಿತ ಎಳೆಗಳ ಒಟ್ಟೂ ಅಗಲ ಸು. 200 ಮೀ. 8 ಕಿಮೀ ಉದ್ದಕ್ಕೂ ಕೋಲಾರದ ಪದರ ಶಿಲಾಜಾಡಿನಲ್ಲಿ ಇವು ವ್ಯಾಪಿಸಿವೆ.

**ಪಶ್ಚಿಮ ಸ್ವರ್ಣ ಸಿರಗಳು :** ಓರಿಯೆಂಟಲ್ ಸಿರ ಸೇರಿದಂತೆ ಪಶ್ಚಿಮದ ಸ್ವರ್ಣ ಸಿರಗಳು ಬಹುತೇಕ ಪಟ್ಟಿರೂಪದ ಚೆರ್ಟ್ ಮತ್ತು ಜ್ವಾಲಾಮುಖಿ ಜನ್ಯ ಟುಫ್ ಸ್ತರಗಳಿಗೆ ಸೀಮಿತವಾಗಿದೆ. ಚಿನ್ನದೊಂದಿಗೆ ಸಲ್ಫೈಡ್ ಖನಿಜಗಳು ಬೆರೆತಿರುವುದು ಈ ಸಿರಗಳ ವೈಶಿಷ್ಟ್ಯ. ಛಾಂಪಿಯನ್ ಸಿರ ಸಮೂಹಕ್ಕೆ 400 ರಿಂದ 500 ಮೀ ಪಶ್ಚಿಮದಲ್ಲಿರುವ ಈ ಸಿರಗಳ ಒಟ್ಟೂ ಉದ್ದ 4700 ಮೀ ಸು. 300 ಮೀ ಅಗಲ ಸಿರಗಳೂ ವ್ಯಾಪಿಸಿವೆ. ಕೋಲಾರ ಗಣಿಗಳ ಚಿನ್ನದ ಉತ್ಪಾದನೆಯಲ್ಲಿ ಇವುಗಳ ಪಾಲು ಶೇ. 2.5 ಭಾಗ ಮಾತ್ರ. ಬಿಡಿ ಸ್ವರ್ಣಸಿರ ಕೇವಲ 2 ಮೀ ಅಗಲವಾಗಿದೆ. ಈ ಗಣಿಯ ಮೇಲಿನ ಭಾಗವನ್ನು ಹೆಚ್ಚು ಗಣಿ ಮಾಡದೆ ಇರುವುದರಿಂದ ಇದರಲ್ಲೂ ಚಿನ್ನದ ಅದುರು ಗಣನೀಯ ಪ್ರಮಾಣದಲ್ಲಿದೆ.

1956ರಲ್ಲಿ ಕರ್ನಾಟಕ ಸರ್ಕಾರ ಕೋಲಾರದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡಿತು. 1962ರಲ್ಲಿ ಭಾರತ ಸರ್ಕಾರ ಇದನ್ನು ವಹಿಸಿಕೊಂಡಿತು. 1965ರಲ್ಲಿ ಮೈಸೂರು ಗಣಿ ಛಾಂಪಿಯನ್ ಗಣಿಯೊಂದಿಗೆ ವಿಲೀನವಾಯಿತು. 1972ರಲ್ಲಿ ಕೋಲಾರದ ನಾಲ್ಕೂ ಗಣಿ ಕಂಪನಿಗಳನ್ನು ವಿಲೀನ ಮಾಡಿ ಕೋಲಾರ್ ಗೋಲ್ಡ್ ಮೈನಿಂಗ್ ಅಂಡರ್‌ಟೇಕಿಂಗ್ ಸಂಸ್ಥೆಯನ್ನು ಭಾರತ್ ಗೋಲ್ಡ್ ಮೈನಿಂಗ್ ಸಂಸ್ಥೆ ಎಂದು ಮರುನಾಮಕರಣ ಮಾಡಲಾಯಿತು.

ಈಗ ಕೋಲಾರದ ಚಿನ್ನದ ಗಣಿಗಳಕಾರ್ಯ ಬಹುತೇಕ ಸ್ಥಗಿತವಾಗಿದೆ. ಆಳ ಗಣಿ ಮಾಡಿದಷ್ಟೂ ವೆಚ್ಚ ಏರುತ್ತಿದೆ. ಅಲ್ಲದೆ, ಮೊದಲಿನಂತೆ ಗಣಿಯಲ್ಲಿ ಉತ್ಕೃಷ್ಟ ಅದಿರು ಲಭ್ಯವಿಲ್ಲ. 1905ರಲ್ಲಿ ಕೋಲಾರದ ಚಿನ್ನದ ಗಣಿಯಿಂದ ಒಂದೇ ವರ್ಷದಲ್ಲಿ 19 ಟನ್ನು ಚಿನ್ನ ಉತ್ಪಾದನೆಯಾಗಿ ಅದೊಂದು ದಾಖಲೆಯಾಯಿತು. 1984–85 ರಿಂದೀಚೆಗೆ ನಿರಂತರವಾಗಿ ಉತ್ಪಾದನೆ ಕುಗ್ಗಿತು. ಒಂದು ಹಂತದಲ್ಲಿ ಸರ್ಕಾರ ಈ ಗಣಿಗಳನ್ನು ಮುಚ್ಚುವ ಯೋಚನೆಯನ್ನೂ ಮಾಡಿತ್ತು. ಹಾಗೆಂದೊಡನೆ ತಜ್ಞರು ನಿರಾಶರಾಗಿಲ್ಲ. ಹಿಂದೆಲ್ಲ ಉತ್ಕೃಷ್ಟ ದರ್ಜೆಯ ಅದಿರನ್ನು ಮಾತ್ರ ಗಣಿ ಮಾಡಿ ತ್ವರಿತ ಲಾಭ ಗಳಿಸುವುದೇ ಗುರಿಯಾಗಿತ್ತು. ಆಗ ಒಂದು ಟನ್ನು ಅದಿರಿನಲ್ಲಿ 15 ಗ್ರಾಂಗಿಂತ ಕಡಿಮೆ ಚಿನ್ನವಿದ್ದರೆ ಅಂಥ ಅದಿರನ್ನು ನಿಕೃಷ್ಟ ಎಂದು ಪರಿಗಣಿಸಿ ಅಲಕ್ಷಿಸುತ್ತಿದ್ದರು. ಈಗ ತಂತ್ರಜ್ಞಾನದಲ್ಲಿ ಭಾರಿ ಸುಧಾರಣೆಯಾಗಿದೆ. ತೆರೆದ ಗಣಿ ಕಾರ್ಯಾಚರಣೆ ಮಾಡಿ 1 ರಿಂದ 2.5 ಗ್ರಾಂ ಚಿನ್ನವಿದ್ದರೂ ಸಾಕು ಲಾಭದಾಯಕವಾಗಿ ಗಣಿ ಮಾಡಬಹುದೆಂದು ಪ್ರಾಯೋಗಿಕವಾಗಿ ಕಂಡುಕೊಳ್ಳಲಾಗಿದೆ. ಅದರಲ್ಲೂ ಓರಿಯೆಂಟಲ್ ಸ್ವರ್ಣ ಸಿರದ ಬಹುಭಾಗವನ್ನು ಗಣಿ ಮಾಡದೆಯೇ ಮೇಲು ಭಾಗದಲ್ಲಿ ಹಾಗೆಯೇ ಉಳಿಸಿದ್ದಾರೆ. ಇಂಥ ಸಿರಗಳು ತೆರೆದ ಗಣಿ ಮಾಡಲು ಯುಕ್ತ ಎಂದು ತಜ್ಞರು ಭಾವಿಸಿದ್ದಾರೆ. ಇದಲ್ಲದೆ ಕೆ.ಜಿ.ಎಫ್ ಪಟ್ಟಣದ ಸುತ್ತ ಗುಡ್ಡದಂತೆ ರಾಶಿ ಹಾಕಿರುವ ಸಂಸ್ಕರಿಸಿದ ಅದಿರಿನ ವ್ಯರ್ಥ ರಾಶಿ (ಸೈನೈಡ್ ಗುಡ್ಡ) ಮೂವತ್ತು ಕೋಟಿ ಟನ್ನುಗಳಷ್ಟಿದೆಯೆಂದು ಅಂದಾಜು. ಈ ರಾಶಿಯಲ್ಲಿ ಕನಿಷ್ಠ ಶೇ. 0.5 ಭಾಗ ಅತಿ ಸೂಕ್ಷ್ಮ ಚಿನ್ನದ ಕಣಗಳಿವೆ. ಇದನ್ನು ಮರು ಸಂಸ್ಕರಣೆಗೆ ಒಳಪಡಿಸಿದರೆ ಅತ್ಯಂತ ಕನಿಷ್ಠವೆಂದರೂ 25 ಟನ್ನು ಚಿನ್ನ ಉತ್ಪಾದಿಸಲು ಸಾಧ್ಯ. ಈ ರಾಶಿಯಲ್ಲಿರುವ

ಶೇ. 60 ಭಾಗ ಚಿನ್ನವನ್ನು ಮರುಪಡೆಯಬಹುದೆಂದು ಗಣನೆ ಮಾಡಲಾಗಿದೆ. ಇದಲ್ಲದೆ ಭಾರತ್ ಗೋಲ್ಡ್ ಮೈನ್ಸ್ ಸಂಸ್ಥೆ ಇತ್ತೀಚೆಗೆ ವರದಿ ಮಾಡಿರುವಂತೆ ಟನ್ನಿಗೆ 5 ಗ್ರಾಂ ಚಿನ್ನವಿರುವ 40 ಲಕ್ಷ ಟನ್ನು ಅದಿರಿನ ಮೀಸಲು ನಿಕ್ಷೇಪ ಇನ್ನೂ ಗಣಿಯಲ್ಲಿದೆ. ಈ ಅಂಶಗಳನ್ನೆಲ್ಲ ಪರಿಗಣಿಸಿ ಕಾರ್ಯೋನ್ಮುಖವಾದರೆ ಕೋಲಾರದ ಚಿನ್ನದ ಗಣಿಗಳಿಗೆ ಇನ್ನಷ್ಟು ಕಾಲ ಜೀವದಾನ ಬರುತ್ತದೆ.

**ಹಟ್ಟಿ ಚಿನ್ನದ ಗಣಿಗಳು :** ಕೋಲಾರದ ಚಿನ್ನದ ಗಣಿಗಳನ್ನುಳಿದರೆ ಅತ್ಯಂತ ಹೆಚ್ಚಿನ ಚಿನ್ನದ ಗಣಿಗಾರಿಕೆ ನಡೆಯುತ್ತಿರುವುದು ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಗಳಲ್ಲಿ. ಕೋಲಾರದ ಚಿನ್ನದ ಗಣಿ ಪ್ರಾರಂಭವಾದ ಕಾಲಕ್ಕೆ ಹಟ್ಟಿ ಚಿನ್ನದ ಗಣಿಗಳಲ್ಲೂ ಚಿನ್ನ ತೆಗೆಯುವ ಕೆಲಸ ಪ್ರಾರಂಭವಾಯಿತು. 1887 ರಿಂದ 1920ರವರೆಗೆ ಇಲ್ಲಿ 7.5 ಟನ್ನು ಚಿನ್ನವನ್ನು ಗಣಿ ಮಾಡಲಾಗಿದೆ. ಇದಕ್ಕಾಗಿ 3,85,000 ಟನ್ನು ಅದಿರನ್ನು ಅರೆಯಲಾಗಿದೆ. ಆಗಿನ ಅದಿರಿನ ಚಿನ್ನದ ಅಂಶ ಟನ್ನಿಗೆ 19 ಗ್ರಾಂ ಇತ್ತು. ಮೆಯ್ನ್ ರೀಫ್ ಎಂಬ ಸ್ವರ್ಣ ಸಿರಕ್ಕೆ ಮಾತ್ರ ಗಣಿಗಾರಿಕೆ ಸೀಮಿತವಾಗಿತ್ತು.

ಹಟ್ಟಿ ಚಿನ್ನದ ಗಣಿಗಳಿರುವುದು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನಲ್ಲಿ. ಹಟ್ಟಿ, ಹಳ್ಳಿಯ ಹೆಸರು. ಅದರ ಪಕ್ಕದಲ್ಲೇ ಪುರಾತನರು ನೂರಾರು ಸಣ್ಣ ಪುಟ್ಟ ಚಿನ್ನದ ಗಣಿಗಳನ್ನು ತೋಡಿದ್ದರು. ಇಲ್ಲಿ 195 ಮೀ ಆಳದ ಗಣಿಗಳಿವೆ. ರಾಯಚೂರಿನಿಂದ 80 ಕಿಮೀ ಮತ್ತು ಕೃಷ್ಣಾನದಿಯಿಂದ 16 ಕಿಮೀ ದೂರದಲ್ಲಿದೆ. ಹಟ್ಟಿ–ಮಸ್ಕಿ ಶಿಲಾ ಜಾಡೆಂದೇ ಹೆಸರಾಗಿರುವ ಈ ಜಾಗ ಸು. 750 ಚ.ಕಿಮೀ ಪ್ರದೇಶವನ್ನು ಆಕ್ರಮಿಸಿಕೊಂಡಿದೆ.

ಪ್ರ.ಶ.ಪೂ. 1880ರ ಸು.ನಲ್ಲಿ ಕೋಲಾರದ ಚಿನ್ನದ ಗಣಿಗಳು ಪ್ರಖ್ಯಾತಿ ಪಡೆದ ಕಾಲದಲ್ಲೇ ರಾಯಚೂರಿನ ಈ ಹಟ್ಟಿ ಗಣಿಗಳು ಗಮನ ಸೆಳೆದವು. 1874ರಲ್ಲಿ ಬ್ರೂಸ್‌ಫೂಟ್, ಈ ಭಾಗಗಳಲ್ಲಿ ಚಿನ್ನದ ಸಿರಗಳ ವಿವರಣೆ ನೀಡಿದ. 1877ರ ಹೊತ್ತಿಗೆ ಹೈದರಾಬಾದಿನ ಡೆಕ್ಕನ್ ಕಂಪನಿ 2590 ಚ.ಕಿಮೀ ಜಾಗವನ್ನು ಗುತ್ತಿಗೆಗೆ ಪಡೆದು ರಾಯಚೂರು ದೋಅಬ್ ಗೋಲ್ಡ್ ಫೀಲ್ಡ್ ಹೆಸರಿನಲ್ಲಿ ಸುರಪುರ ತಾಲ್ಲೂಕನ್ನು ಒಳಗೊಂಡಂತೆ ಸಮೀಕ್ಷೆ ನಡೆಸಿ ಚಿನ್ನ ಶೋಧಿಸಲು ಪ್ರಾರಂಭಿಸಿತು. ಭಾರತೀಯ ಭೂವಿಜ್ಞಾನ ಸಂಸ್ಥೆಯ ಪರಿಣತ ಭೂವಿಜ್ಞಾನಿಗಳು ಈ ಕಾರ್ಯವನ್ನು ಕೈಗೆತ್ತಿಕೊಂಡರು. ಹಟ್ಟಿ ಹಳ್ಳಿಗೆ ಅರ್ಧ ಕಿಮೀ ಪಶ್ಚಿಮದಲ್ಲಿ ಉಳುಮೆ ಭೂಮಿಯಲ್ಲಿ ತೇಲುತ್ತಿದ್ದ ಬೆಣಚುಕಲ್ಲಿನಲ್ಲಿ ಮೊದಲು ಚಿನ್ನವನ್ನು ಪತ್ತೆ ಹಚ್ಚಲಾಯಿತು. ಇದು ಅಲ್ಲಿನ ಪುರಾತನ ಚಿನ್ನದ ಗಣಿಗಳನ್ನು ಪತ್ತೆ ಹಚ್ಚಲು ನೆರವಾಯಿತು. ಹಟ್ಟಿಗೆ 20 ಕಿಮೀ ಪರಿಧಿಯಲ್ಲೇ 1887–1900ರ ನಡುವೆ ಅನೇಕ ಕಂಪನಿಗಳು ಚಿನ್ನದ ಪರಿಶೋಧನೆಗೆ ತೊಡಗಿದವು. ವಂಡಳ್ಳಿಯಲ್ಲಿ ಇದೇ ಕಂಪನಿಗೆ ಸೇರಿದ ಶಾಖೆ 1898ರಲ್ಲಿ ಗಣಿಯನ್ನು ಪ್ರಾರಂಭಿಸಿತು. 373 ಕಿಗ್ರಾಂ ಚಿನ್ನವನ್ನು ಉತ್ಪಾದಿಸಿ ಹೇಳಿಕೊಳ್ಳುವ ಲಾಭ ಪಡೆಯದೆ ಕಂಪನಿ ಮುಚ್ಚಿತು. 1901ರಲ್ಲಿ ನಿಜಾಮ್ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ಹಟ್ಟಿಯ ಮುಖ್ಯ ಗಣಿಯ ಕಾರ್ಯಾಚರಣೆ ಪ್ರಾರಂಭಿಸಿತು. 1903–20ರ ನಡುವೆ ಅದು 7371 ಕಿಗ್ರಾಂ ಚಿನ್ನವನ್ನು ಉತ್ಪಾದಿಸಿತು. ಇದರಂತೆ ಕೆಂಪನದೊಡ್ಡಿಯ ಬಳಿ ಇದೇ ಕಂಪನಿ 1905ರಲ್ಲಿ 66 ಕಿಗ್ರಾಂ ಚಿನ್ನ ಉತ್ಪಾದಿಸಿ 1908ರಲ್ಲಿ ಮುಚ್ಚಿಹೋಯಿತು.

1937ರಲ್ಲಿ ಹೈದರಾಬಾದ್ ಸರ್ಕಾರ ಹೈದರಾಬಾದ್ ಗೋಲ್ಡ್ ಡೆವಲಪ್‌ಮೆಂಟ್ ಸಿಂಡಿಕೇಟ್ ಮತ್ತು ಜಾನ್ ಟೇಲರ್ ಕಂಪನಿ, ಹಟ್ಟಿಯ ಪುರಾತನ ಚಿನ್ನದ ಗಣಿಗಳ ಕೂಲಂಕಷ ಅಧ್ಯಯನದಲ್ಲಿ ತೊಡಗಿದವು. ಆಗ ಚಿನ್ನದ ಬೆಲೆ ಹೆಚ್ಚಾಗುವುದರ ಜೊತೆಗೆ ರಾಯಚೂರು ಜಿಲ್ಲೆ ಬರ ಪೀಡಿತ ಪ್ರದೇಶವಾಗಿತ್ತು. ಪರಿಹಾರೋಪಾಯವಾಗಿ ಗಣಿ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿತು. ಹಟ್ಟಿ ಚಿನ್ನದ ಗಣಿಗಳ ಅಭಿವೃದ್ಧಿಗೆ ಈ ಯೋಜನೆ ಭದ್ರ ಬುನಾದಿಯನ್ನು ಹಾಕಿಕೊಟ್ಟಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಹಟ್ಟಿ ಚಿನ್ನದ ಗಣಿಯ ಕಾರ್ಯಾಚರಣೆ ಸ್ಥಗಿತವಾಯಿತು. 1947ರವರೆಗೂ ಗಣಿ ಕಾರ್ಯಾಚರಣೆ ಮುಂದುವರಿಯಲಿಲ್ಲ. ಮುಂದೆ ಹೈದರಾಬಾದ್ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಮತ್ತೆ ಚಿನ್ನವನ್ನು ಉತ್ಪಾದಿಸಲು ತೊಡಗಿತು (1948).

ಕರ್ನಾಟಕದ ಏಕೀಕರಣವಾದುದರಿಂದ ಹೈದರಾಬಾದಿನ ಆಡಳಿತದಿಂದ ರಾಯಚೂರು ಜಿಲ್ಲೆ ಕರ್ನಾಟಕದ ವ್ಯಾಪ್ತಿಗೆ ಬಂದದ್ದರಿಂದ ಗಣಿಯ ಸ್ವಾಮ್ಯವು ಕರ್ನಾಟಕಕ್ಕೆ ಬಂತು (1956). ಈಗ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಇಲ್ಲಿ ಚಿನ್ನವನ್ನು ಉತ್ಪಾದಿಸುತ್ತಿದೆ. ಕೋಲಾರದಲ್ಲಿರುವಂತೆ ಇಲ್ಲಿನ ಗಣಿಗಳಿಗೂ ತಮ್ಮದೇ ಆದ ತಾಂತ್ರಿಕ ಅನುಕೂಲಗಳಿವೆ. ಚಿನ್ನವನ್ನು ಸಂಸ್ಕರಿಸುವ ಸ್ಥಾವರವಿದೆ. ಕೃಷ್ಣಾ ನದಿಯ ಜಲ ವಿದ್ಯುತ್ ಪೂರೈಕೆ ಇದೆ. ದಿನಮೊಂದರಲ್ಲಿ 910 ಟನ್ನು ಅದಿರನ್ನು ನಿರ್ವಹಿಸುವ ಸಾಮರ್ಥ್ಯ ಇಲ್ಲಿನ ಸ್ಥಾವರಗಳಿಗಿದೆ.

1995ರವರೆಗೆ ಹಟ್ಟಿ ಚಿನ್ನದ ಗಣಿಗಳು ಮೂವತ್ತೆಂಟು ಟನ್ನು ಚಿನ್ನ ಉತ್ಪಾದಿಸಿವೆ. ಮಾರುಕಟ್ಟೆಗೆ ಬಿಟ್ಟು ನೇರವಾಗಿ ಮಾರಾಟ ಮಾಡಿದ್ದರೆ ಈ ಗಣಿಗಳು ಹೇರಳ ಲಾಭ ಸಂಪಾದನೆ ಮಾಡುತ್ತಿದ್ದವು. ಚಿನ್ನದ ನಿಯಂತ್ರಣ ಕಾಯಿದೆಯಿಂದಾಗಿ 1963ರಿಂದ ಚಿನ್ನದ ಉತ್ಪಾದನೆಗೆ ತಕ್ಕ ಬೆಲೆ ಸಿಕ್ಕದೆ ಉಸಿರು ಬಿಗಿ ಹಿಡಿಯುವ ಪರಿಸ್ಥಿತಿಯುಂಟಾಗಿತ್ತು. ಉತ್ಪಾದನೆಯಾದ ಚಿನ್ನವನ್ನು ಸರ್ಕಾರಕ್ಕೆ ಮಾರಬೇಕು. ಆದರೆ ಉತ್ಪಾದಿಸಿದ ಎಲ್ಲ ಮೊತ್ತದ ಚಿನ್ನವನ್ನು ಸರ್ಕಾರ ಕೊಂಡುಕೊಳ್ಳುತ್ತಿರಲಿಲ್ಲ. 1958ರವರೆಗೆ ಇಲ್ಲಿಯ ಚಿನ್ನವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವ ಅವಕಾಶವಿತ್ತು. ಅಂದಿನ ಮಾರುಕಟ್ಟೆ ಬೆಲೆಗೆ ಸರ್ಕಾರ ಚಿನ್ನವನ್ನು ಕೊಳ್ಳುತ್ತಿತ್ತು. ಚಿನ್ನದ ನಿಯಂತ್ರಣ ಕಾಯ್ದೆಯ ರೀತ್ಯಾ ಚಿನ್ನವನ್ನು ಸೀಮಿತ ಕೈಗಾರಿಕೆ ಬಳಕೆಗೆ ಮಾರುವ ಅವಕಾಶ ಇತ್ತು. 1978–79ರಲ್ಲಿ ಹಟ್ಟಿ ಚಿನ್ನದ ಸಂಸ್ಥೆಯಿಂದ ಸರ್ಕಾರ ಕೊಂಡ ಚಿನ್ನ ಕೇವಲ 881 ಕಿಗ್ರಾಂ ಆ ವರ್ಷ ಗಣಿ ಉತ್ಪಾದಿಸಿದ ಚಿನ್ನ 960 ಕಿಗ್ರಾಂ ಇಂಥ ನೀತಿಯಿಂದಾಗಿ ಗಣಿ ಸಂಸ್ಥೆಗಳು ನಷ್ಟ ಅನುಭವಿಸಬೇಕಾಗಿ ಬಂತು. 1948ರಿಂದ ಹಟ್ಟಿ ಗಣಿಗಳಲ್ಲಿ ತೋಡಿರುವ ಸುರಂಗಗಳನ್ನು ಸಾಲಾಗಿ ಜೋಡಿಸಿದರೆ 123.5 ಕಿಮೀ ದೂರ ಸಾಗುತ್ತದೆ. ಎಂದರೆ ಕೋಲಾರದ ಚಿನ್ನದ ಗಣಿಗಳ ಹತ್ತನೆಯ ಒಂದು ಭಾಗದಷ್ಟು. ಹಟ್ಟಿಯ ಸುತ್ತ ಮುತ್ತ ಒಟ್ಟು ಒಂಬತ್ತು ಚಿನ್ನದ ಸಿರಗಳಿವೆ. ಇದರಲ್ಲಿ ಮುಖ್ಯ ಸಿರದ ಮೇಲೆ ತೋಡಿರುವ ಗಣಿ 1140 ಮೀ ಆಳಕ್ಕಿಳಿದಿದೆ.

ಹಟ್ಟಿ ಚಿನ್ನದ ಗಣಿ ಪ್ರದೇಶದ ಭೂವಿಜ್ಞಾನ : ಕೋಲಾರದ ಚಿನ್ನದ ನಿಕ್ಷೇಪಗಳಂತೆಯೇ ಹಟ್ಟಿ ಚಿನ್ನದ ನಿಕ್ಷೇಪಗಳಿಗೂ ಜ್ವಾಲಾಮುಖಿ ಜನ್ಯ ಥೋಲಿಯೈಟ್ ಎಂಬ ಶಿಲೆಗಳೇ ಮೂಲ. ಇಲ್ಲಿನ ಶಿಲೆಗಳು ಭಾರಿ ಪ್ರಮಾಣದಲ್ಲಿ ರೂಪಾಂತರಗೊಂಡಿವೆ. ಸ್ವರ್ಣ ಸಿರಗಳಿರುವುದು ಬಿರುಕು, ಸೀಳುಗಳಿಂದ ಛಿದ್ರವಾದ ಕ್ಷಾರ ಶಿಲೆಗಳಲ್ಲಿ. ಬಿರುಕುಗಳೇ ಖನಿಜೀಕರಣವನ್ನು ನಿಯಂತ್ರಿಸಿದೆ. ಮೆಯ್ನ್ ರೀಫ್, ಓಕ್ಲೆ ರೀಫ್, ವಿಲೇಜ್ ರೀಫ್ ಮುಂತಾಗಿ ಒಂಬತ್ತು ಸ್ವರ್ಣ ಸಿರಗಳಿದ್ದರೂ ಮುಖ್ಯ ಗಣಿ ಅಭಿವೃದ್ಧಿಯಾಗಿದ್ದು ಮೆಯ್ನ್ ರೀಫ್‌ನಲ್ಲಿ. 1895ರಿಂದ 1919ರವರೆಗೂ ಈ ಭಾಗದ ಗಣಿ ಹೆಚ್ಚು ಅಭಿವೃದ್ಧಿಯಾಗಿದೆ. ಹಿಂದೆ ಟನ್ನೊಂದಕ್ಕೆ 19 ಗ್ರಾಂ ಚಿನ್ನವಿರುವ ಬೆಣಚನ್ನು ಮಾತ್ರ ಗಣಿ ಮಾಡಿದ್ದಾರೆ, ಸಲ್ಫೈಡ್ ಖನಿಜಗಳಿರುವ ನಿಕೃಷ್ಟ ದರ್ಜೆಯ ಬೆಣಚನ್ನು ಗಣಿ ಮಾಡದೆ ಬಿಟ್ಟಿದ್ದಾರೆ.

ಈಗ ಉಳಿದ ಸ್ವರ್ಣ ಸಿರಗಳ ಅಭಿವೃದ್ಧಿ ಮಾಡಿದರೆ 750 ಮೀ ಆಳದವರೆಗೆ ಮೂವತ್ತು ದಶಲಕ್ಷ ಟನ್ನು ಚಿನ್ನದ ಅದಿರಿನ ಮೀಸಲು ನಿಕ್ಷೇಪವಿದೆಯೆಂದು ಸಮೀಕ್ಷೆಗಳು ದೃಢಪಡಿಸಿವೆ. ಈ ಪೈಕಿ ಟನ್ನಿಗೆ 6.3 ಗ್ರಾಂ ಚಿನ್ನವಿರುವ ಆರು ದಶಲಕ್ಷ ಟನ್ನು ಅದಿರನ್ನು ಈಗಾಗಲೇ ಹೊರ ತೆಗೆಯಲಾಗಿದೆ.

ಗದಗದ ಚಿನ್ನದ ನಿಕ್ಷೇಪಗಳು : ಗದಗ ಬಹು ಹಿಂದಿನಿಂದ ಮೆಕ್ಕಲು ಚಿನ್ನಕ್ಕೆ ಹೆಸರುವಾಸಿ. ಈ ಪ್ರಾಂತ್ಯದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜಾಲಗಾರರು ಚಿನ್ನ ಸೋಸುತ್ತಿದ್ದ ಉದ್ಯಮವನ್ನು ತಿಳಿಸುವ ಶಾಸನಮೊಂದು ದೊರೆತಿದೆ. ಜರಗಿನ ತೆರೆ ಎಂಬ ಕರವನ್ನು ಚಿನ್ನ ಸೋಸುವ ಉದ್ಯಮಕ್ಕೆ ಹಾಕಲಾಗುತ್ತಿತ್ತು. ಅದರ ಮೇಲ್ವಿಚಾರಕ ಜರಗಿನ ತೆರೆಯ ಅಧಿಕಾರಿ. ಗದಗ ತಾಲ್ಲೂಕಿನ ಕುರ್ತುಕೋಟಿಯ ವಿರೂಪಾಕ್ಷ ದೇವಾಲಯದ ಕಂಬದಲ್ಲಿ ದೇವರ ಸೇವೆಗೆಂದು ಜರಗಿನ ತೆರೆಯಲ್ಲಿ ಒಂದು ದೋಣಿಯ ತೆರೆಯನ್ನು ಬಿಡಲಾಗಿದೆ ಎಂದು ನಮೂದಿಸಿದೆ. ಅಲ್ಲಿ ಚಿನ್ನವನ್ನು ಸೋಸುವ ಉದ್ಯಮ ಸಾಕಷ್ಟು ಪ್ರಸಿದ್ಧಿಯಾಗಿತ್ತೆಂಬುದನ್ನು ಇದು ತೋರಿಸುತ್ತದೆ. (ಬೊಂಬಾಯಿ ಕರ್ನಾಟಕ ಶಾಸನ ನಂ. 200, 1926).

ಗದಗಿನ ಕಪ್ಪತ್ತಗುಡ್ಡದ ಪ್ರದೇಶ ಚಿನ್ನಭರಿತವಾದದ್ದು. ಶಿರಹಟ್ಟಿ ತಾಲ್ಲೂಕನ್ನೊಳಗೊಂಡು ದಕ್ಷಿಣದಲ್ಲಿ ತುಂಗಭದ್ರಾ ನದಿಯವರೆಗೂ ಸು. ಅರವತ್ತು ಕಿಮೀ ದೂರ ಹಾಯುವ ಈ ರಮಣೀಯ ಗಿರಿಸಾಲು ಸ್ವರ್ಣಭರಿತ ಶಿಲೆಯಿಂದ ಕೂಡಿದೆ. ಈ ಪ್ರದೇಶದ ಹರವು 50 ಚ.ಕಿಮೀ ಗಿಂತಲೂ ಮಿಗಿಲು. 1840ರಲ್ಲಿ ದೋಣಿ ಮತ್ತು ಸುರಟೂರಿನ ತೊರೆಗಳಿಂದ ವರ್ಷಕ್ಕೆ ಸು. ಆರು ಕಿಗ್ರಾಂ ಚಿನ್ನವನ್ನು ಸೋಸಿ ತೆಗೆಯುತ್ತಿದ್ದ ವರದಿಗಳಿವೆ. ಗದಗಿನ ಕಪ್ಪತ್ತಗುಡ್ಡದ ಸುತ್ತಮುತ್ತ ಪ್ರಾಚೀನರು ಚಿನ್ನವನ್ನು ಅರೆಯಲು ಬಳಸಿದ ಕಲ್ಲುಗಳು, ಒರಳುಕಲ್ಲು, ಕುಟ್ಟುವ ಕಲ್ಲು ಹಲವಾರು ದೊರೆತಿವೆ. ಧಾರವಾಡ ಗೋಲ್ಡ್ ಕಂಪನಿ, ಕಳೆದ ಶತಮಾನದ ಕೊನೆಯಲ್ಲಿ 1,70,000 ಪೌಂಡ್ ಬಂಡವಾಳ ಹೂಡಿ ಅತ್ತಿಕಟ್ಟೆ ಬಳಿ ಗಣಿ ತೋಡಿತು. ಅತ್ತಿಕಟ್ಟೆಯ ದಕ್ಷಿಣದ ಸ್ವರ್ಣಭರಿತ ಬೆಣಚು ಸಿರವನ್ನು ಸಾಂಗ್ಲಿ ಗೋಲ್ಡ್ ಮೈನ್ಸ್ ಕಂಪನಿ ಗಣಿ ಮಾಡಿತು.

ಕೋಲಾರದ ಛಾಂಪಿಯನ್ ರೀಫ್ ಕಂಪನಿ ಗದಗಿನ ಹೊಸೂರು ಬಳಿ ಗಣಿ ಆರಂಭಿಸಿ ಕಬುಲಿಯಾತ್ ಕಟ್ಟೆಯಲ್ಲಿ ಗಣಿ ಕಾರ್ಯಾಚರಣೆ ನಡೆಸಿತು (1911). ಸು. ನೂರ ಅರವತ್ತು ಮೀ ಆಳ ಅಭಿವೃದ್ಧಿ ಪಡಿಸಿತು. ಇದರ ಬಳಿಯೇ ಚಿನ್ನವನ್ನು ಶುದ್ಧೀಕರಿಸುವ ಸಯನೈಡ್ ಸ್ಥಾವರವನ್ನು ತೆರೆದು ಒಟ್ಟಾರೆ 666 ಕಿಗ್ರಾಂ ಚಿನ್ನವನ್ನು ಗದಗಿನ ಚಿನ್ನದ ಗಣಿಗಳು ಉತ್ಪಾದಿಸಿವೆ.

ಕಪ್ಪತ್ತಗುಡ್ಡದ ಪಶ್ಚಿಮಕ್ಕೆ ಮಾಲಿಂಗಪುರ, ಹೊಸೂರು, ಶಿರೂರು, ಎಲೆಶಿರೂರು ಈ ಭಾಗಗಳಲ್ಲಿ ಗಣಿ ಕಾರ್ಯಾಚರಣೆ ತೀವ್ರ ಗತಿಯಲ್ಲಿ ನಡೆದಿದೆ. 1939ರಲ್ಲಿ ನಾರಾಯಣದಾಸ್ ಗಿರಿಧರ ದಾಸ್, 1950ರಲ್ಲಿ ಮೆಸರ್ಸ್ ಆಕ್ಲೆ ಡಂಕನ್ ಕಂಪನಿ, ಗದಗಿನ ಹೊಸೂರು ಬಳಿಯ ಗಣಿಯನ್ನು ಅಭಿವೃದ್ಧಿ ಮಾಡಿದವು. ಕಬುಲಿಯಾತ್ ಕಟ್ಟೆ ಗಣಿ 527 ಕಿಗ್ರಾಂ ಚಿನ್ನವನ್ನು ಕೊಟ್ಟಿದೆ. ಇದರ ದಕ್ಷಿಣಕ್ಕಿರುವ ಅತ್ತಿಕಟ್ಟೆ ಗಣಿ ಮಾಡುವ

ಮೊದಲು ಅಲ್ಲಿನ ಬೆಣಚು ಕಲ್ಲಿನಲ್ಲಿ ಹೊಳೆಯುತ್ತಿದ್ದ ಚಿನ್ನದ ರೇಖುಗಳನ್ನು ಕಾಣಬಹುದಾಗಿತ್ತೆಂದು ಬ್ರೂಸ್‌ಫುಟ್ ವರದಿ ಮಾಡಿದ್ದಾನೆ. ಇಲ್ಲಿ ಎರಡು ಕೂಪಗಳು 120.4 ಹಾಗೂ 52.75 ಮೀ ಆಳ ಇಳಿದಿವೆ. ಮೂರು ಹಂತದಲ್ಲಿ ಗಣಿ ಕಾರ್ಯಾಚರಣೆ ನಡೆದಿದೆ. ಅತ್ತಿಕಟ್ಟೆಯ ಗಣಿಗೆ ದಕ್ಷಿಣಕ್ಕಿರುವ ಮೈಸೂರು ಗಣಿಗಳಲ್ಲಿ ನಾಲ್ಕು ಕೂಪಗಳನ್ನು 106 ಮೀ ಆಳದವರೆಗೆ ಗಣಿ ಮಾಡಿದ್ದಾರೆ. ಈ ಗಣಿಯೊಳಗೆ ಚಿನ್ನವನ್ನು ಹೊಂದಿರುವ ಮೂರು ಬೆಣಚುಕಲ್ಲಿನ ಸಿರಗಳು ಪತ್ತೆಯಾಗಿವೆ. ಗಣಿಯೊಳಗೆ ಸುರಂಗಗಳೂ ವಿಸ್ತರಿಸಿವೆ.

ಸಾಂಗ್ಲಿ ಗೋಲ್ಡ್ ಮೈನಿಂಗ್ ಕಂಪನಿ ಗಣಿ ಮಾಡಿರುವ ಸಾಂಗ್ಲಿ ಗಣಿಗಳು ಮೈಸೂರು ಗಣಿಗಳ ದಕ್ಷಿಣಕ್ಕಿವೆ. ಕಬುಲಿಯಾತ್ ಕಟ್ಟೆಯ ಪಶ್ಚಿಮಕ್ಕೆ ಆರು ಕಿಮೀ ದೂರವಿರುವ ಹೊಸೂರು ಛಾಂಪಿಯನ್ ರೀಫ್ ಗಣಿಗಳು ಉತ್ಕೃಷ್ಟ ಚಿನ್ನದ ಅದಿರನ್ನು ಹೊಂದಿರುವುದು ಬೆಳಕಿಗೆ ಬಂದಿದೆ. ಕಪ್ಪತ್ತಮಲ್ಲಯ್ಯನ ಮಠವಿರುವ ಬಳಿ ಹರಿಯುವ ಹಳ್ಳದಲ್ಲಿ ಹಾಗೂ ಸುರಟೂರಿನ ಬಳಿ ಜಾಲಗಾರರ ತಂಡೋಪತಂಡಗಳು 1874ರಲ್ಲೇ ಚಿನ್ನವನ್ನು ದೊಡ್ಡ ಪ್ರಮಾಣದಲ್ಲಿ ಸೋಸುತ್ತಿದ್ದವು. ಇದರಂತೆ ಸುರಟೂರು ದೋಣಿ, ಜೆಲಿಗಾಂ ಮುಂತಾದ ಕಪ್ಪತ್ತಗುಡ್ಡದ ಪಶ್ಚಿಮ ಇಳಿಜಾರಿನ ತೊರೆಗಳಲ್ಲಿ ಮೆಕ್ಕಲು ಚಿನ್ನ ಧಾರಾಳವಾಗಿ ದೊರೆತಿದೆ. ಗದುಗಿನ ಮೈಸೂರು ಗಣಿಯನ್ನು ಹಟ್ಟಿ ಚಿನ್ನದ ಕಂಪನಿ ಸಾಂಗ್ಲಿ ಗಣಿಗಳನ್ನು ರಾಷ್ಟ್ರೀಯ ಖನಿಜಾಭಿವೃದ್ಧಿ ಕಾರ್ಪೊರೇಷನ್, ಹೊಸೂರು ಗಣಿಗಳನ್ನು ಭಾರತ ಗೋಲ್ಡ್ ಮೈನಿಂಗ್ ಕಂಪನಿ ಈಗ ಅಭಿವೃದ್ಧಿ ಪಡಿಸುತ್ತಿವೆ.

**ಸ್ವರ್ಣ ಸಿರಗಳು :** ಗದಗಿನ ಪದರ ಶಿಲಾ ಜಾಡಿನಲ್ಲಿ ಪ್ರಮುಖವಾಗಿ ಮೂರು ಸಿರಗಳು ಸ್ವರ್ಣಭರಿತವಾಗಿವೆ. ಪಶ್ಚಿಮ ಸಿರ, ಮಧ್ಯ ಹಾಗೂ ಪೂರ್ವ ಸಿರ ಸಮೂಹಗಳು. ಇವುಗಳ ಪೈಕಿ ಪಶ್ಚಿಮ ಸಿರ ರೂಪಾಂತರಿತ ಬಸಾಲ್ಟ್ ಮತ್ತು ಆಮ್ಲೀಯ ಜ್ವಾಲಾಮುಖಿ ಶಿಲೆಯಲ್ಲಿದೆ. ಮಧ್ಯದ ಸಿರ ಜ್ವಾಲಾಮುಖಿ ಶಿಲೆ ಮತ್ತು ರೂಪಾಂತರಿತ ಜಲಜ ಶಿಲೆಗಳ ಸಂಪರ್ಕ ಭಾಗದಲ್ಲಿದೆ. ಪೂರ್ವ ಸಿರ ಸಂಪೂರ್ಣವಾಗಿ ಗ್ರೇವೇಕ್ ಎಂಬ ಜಲಜ ಶಿಲೆಗಳಲ್ಲಿ ನೆಲೆಯಾಗಿದೆ. ಈ ಎಲ್ಲ ಸಿರಗಳ ಒಟ್ಟು ಉದ್ದ 32 ಕಿಮೀ.

ಪಶ್ಚಿಮ ಸಿರ ಸಮೂಹದಲ್ಲಿ ಹೊಸೂರು, ಛಾಂಪಿಯನ್, ಎಲ್‌ಸಿರೂರು, ವೆಂಕಟಾಪುರ ಗಣಿಗಳಿವೆ. ಮಧ್ಯದ ಸಿರದಲ್ಲಿ ಕಬುಲಿಯಾತ್ ಕಟ್ಟೆ, ಅತ್ತಿ ಕಟ್ಟೆ, ಸಾಂಗ್ಲಿ, ಮೈಸೂರು ಗಣಿಗಳಿವೆ. ಪೂರ್ವ ಸಿರದಲ್ಲಿ ಸಂಕತೊಡಕ ಗಣಿ ಇದೆ. ಈ ಪೈಕಿ ಹೊಸೂರು ಛಾಂಪಿಯನ್ ಸಿರ 4.238 ಟನ್ನು ಚಿನ್ನವಿರುವ 1630 ದಶಲಕ್ಷ ಟನ್ನು ಅದಿರನ್ನು. ಮೈಸೂರು ಗಣಿ 0.690 ಟನ್ನು ಚಿನ್ನವಿರುವ 0.230 ದಶಲಕ್ಷ ಟನ್ನು ಅದಿರನ್ನು, ಸಾಂಗ್ಲಿ ಗಣಿ 4.143 ಟನ್ನು ಚಿನ್ನವಿರುವ 1.099 ದಶಲಕ್ಷ ಟನ್ನು ಅದಿರನ್ನು ಹೊಂದಿರುವುದಾಗಿ ಪರಿಶೋಧನೆಗಳಿಂದ ಖಚಿತವಾಗಿದೆ.

ಪ್ರಮುಖ ಚಿನ್ನದ ಜಾಡುಗಳಲ್ಲದೆ ಕರ್ನಾಟಕದಲ್ಲಿ ಕಂಡು ಬಂದಿರುವ, ಆಧುನಿಕ ಖನಿಜ ಪರಿಶೋಧಕರ ಗಮನ ಸೆಳೆದಿರುವ ಕೆಲವು ಪ್ರಾಚೀನ ಗಣಿಗಳ ಸಂಕ್ಷಿಪ್ತ ವಿವರಣೆ:

**ಬೆಳ್ಳಾರ ಚಿನ್ನದ ಗಣಿಗಳು :** ತುಮಕೂರು ಜಿಲ್ಲೆಯಲ್ಲಿ ಬೆಳ್ಳಾರ ಗಣಿಗಳು ಮತ್ತು ಅಜ್ಜನಹಳ್ಳಿ ಚಿನ್ನದ ಗಣಿಗಳಿವೆ. ಈ ಎರಡೂ ಗಣಿಗಳನ್ನು ಆಧುನಿಕವಾಗಿಯೂ ಸಾಕಷ್ಟು ಶೋಧಿಸಿ ಚಿನ್ನವನ್ನು ಪಡೆಯಲಾಗಿದೆ.

ಬೆಳ್ಳಾರ ಗಣಿ ಇರುವುದು ಸಿರಾ ಹುಳಿಯಾರು ರಸ್ತೆಯಲ್ಲಿ ಎರಡು ಕಿಲೋ ಮೀಟರು ಈಶಾನ್ಯಕ್ಕೆ. ಸು. ಎರಡು ಸಾವಿರ ವರ್ಷಗಳ ಹಿಂದೆಯೇ ಪ್ರಾಚೀನರು ಇಲ್ಲಿ ಚಿನ್ನಕ್ಕಾಗಿ ಗಣಿ ಮಾಡಿದ್ದಾರೆ ಎಂಬ ಅಭಿಪ್ರಾಯವನ್ನು ಪ್ರಾಚ್ಯ ಸಂಶೋಧಕರು ವ್ಯಕ್ತಪಡಿಸಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಈ ಗಣಿಯನ್ನು ತೋಡಿರುವುದರಿಂದ ಇಂಡಿಯನ್ ಮೈನ್ಸ್ ಡೆವಲಪ್‌ಮೆಂಟ್ ಸಿಂಡಿಕೇಟ್ ಎಂಬ ಗಣಿಗಾರಿಕೆ ಸಂಸ್ಥೆ 1900–08ರ ನಡುವೆ ಮತ್ತಷ್ಟು ಗಣಿ ಕಾರ್ಯ ಮಾಡಿತು. ಬೆಳ್ಳಾರ ಸಿರದಲ್ಲಿರುವ ಕೂಪಗಳು 70 ಮೀ ಆಳಕ್ಕೆ ಇಳಿದಿವೆ. ಕೆರೆಯ ಸಿರದಲ್ಲಿ ಇವುಗಳ ಆಳ 122 ಮೀ.

ಹಳೆಯ ಗಣಿಗಳನ್ನು ಆಧರಿಸಿ ಮೈಸೂರು ಭೂವಿಜ್ಞಾನ ಇಲಾಖೆ 1944–54ರ ವರೆಗೆ ಇಲ್ಲಿ ತೀವ್ರ ಪರಿಶೋಧನಾ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿತು. ಕೆರೆಯ ಸಿರವನ್ನು ಎರಡು ಹಂತಗಳಲ್ಲಿ ಶೋಧಿಸಿ ಬೆಣಚು ಎಳೆಯನ್ನು ಛೇದಿಸಿದರೂ ಉತ್ತಮ ದರ್ಜೆಯ ಅದಿರು ದೊರೆಯಲಿಲ್ಲ. 1954ರಲ್ಲಿ ಜಾನ್ ಟೇಲರ್ ಕಂಪನಿ ಇಲ್ಲಿನ ಗಣಿಗಾರಿಕೆ ಲಾಭದಾಯಕವಲ್ಲವೆಂದು ವರದಿ ಮಾಡಿತು. ಮತ್ತೆ ದೊಡ್ಡ ಪ್ರಮಾಣದ ಗಣಿಗಾರಿಕೆ ಇಲ್ಲಿ ಮುಂದುವರಿಯಲಿಲ್ಲ. 1944–54ರ ವರೆಗೆ ಬೆಳ್ಳಾರದ ಚಿನ್ನದ ಗಣಿಗಳು 62 ಕಿಗ್ರಾಂ ಚಿನ್ನವನ್ನು ಉತ್ಪಾದಿಸಿದೆ. ಹಿಂದೆ ಗಣಿ ಮಾಡಿ ವ್ಯರ್ಥ ಪದಾರ್ಥವೆಂದು ಶೇಖರಿಸಿದ್ದ ಶಿಲಾ ಪುಡಿಯಲ್ಲಿ ಸಾಕಷ್ಟು ಚಿನ್ನವಿತ್ತು. ಅದನ್ನು ಜಾಲಿಸಿ 1000 ತೊಲ ಚಿನ್ನವನ್ನು ಗಣಿ ಇಲಾಖೆ ಸಂಗ್ರಿಹಿಸಿತ್ತು.

ಬೆಳ್ಳಾರದ ಗಣಿಗಳೂ ಕೂಡ ಚಿತ್ರದುರ್ಗ ಹಸುರು ಪದರ ಶಿಲಾವಲಯದ ಮಧ್ಯ ಇವೆ. ಅದೇ ಜಾಡಿನಲ್ಲಿ ಉತ್ತರಕ್ಕೆ ಆನೆಸಿದ್ರಿ ಎಂಬ ಬಳಿಯೂ ಪುರಾತನ ಚಿನ್ನದ ಗಣಿಗಳಿವೆ. ಈ ವಲಯ ಸಾಕಷ್ಟು ಬಿರುಕಾಗಿದ್ದು ಅಲ್ಲಿ ಚಿನ್ನ ಸಂಗ್ರಹಣೆಗೆ ಅನುಕೂಲವಾಗಿದೆ.

ಅಜ್ಜನಹಳ್ಳಿ ಗಣಿಗಳು : ಬೆಳ್ಳಾರದಿಂದ 12 ಕಿಮೀ ಉತ್ತರಕ್ಕಿರುವ ಅಜ್ಜನಹಳ್ಳಿ ಗಣಿ ಕೂಡ ಉತ್ತರ ದಕ್ಷಿಣವಾಗಿ ವಿಸ್ತರಿಸಿರುವ ಛಿದ್ರ ವಲಯದಲ್ಲಿ ನೆಲೆಯಾಗಿದೆ. ಚಿತ್ರದುರ್ಗದ ಹಸುರು ಶಿಲಾ ಪಟ್ಟಿಯಲ್ಲಿರುವ ಪಟ್ಟೆ ರೂಪದ ಕಬ್ಬಿಣ ಶಿಲೆಯಲ್ಲಿ ಚಿನ್ನ ದೊರೆಯುವುದು ಈ ಗಣಿಗಳ ವಿಶೇಷ. ಬರಿಗಣ್ಣಿಗೆ ಇಲ್ಲಿ ಚಿನ್ನ ಕಾಣಿಸುವುದಿಲ್ಲ. ಆದರೂ ಪ್ರಾಚೀನರು ಇವು ಸ್ವರ್ಣಭರಿತ ಶಿಲೆಗಳೆಂದು ಗುರುತಿಸಿ ಗಣಿಗಳನ್ನು ತೋಡಿ ಚಿನ್ನವನ್ನು ಸಂಗ್ರಹಸಿದ್ದಾರೆ. ಈ ಪ್ರಾಚೀನ ಗಣಿಗಳನ್ನು ಆಧರಿಸಿ ಇಂಡಿಯನ್ ಮೈನ್ಸ್ ಡೆವಲಪ್‌ಮೆಂಟ್ ಸಿಂಡಿಕೇಟ್ ಸಂಸ್ಥೆ ಅನೇಕ ಸುರಂಗಗಳನ್ನು ತೆಗೆದು 1907–08ರ ವರೆಗೆ ಗಣಿ ಕಾರ್ಯಾಚರಣೆ ನಡೆಸಿತು. ಇಲ್ಲಿ 90 ಮೀ ಆಳದವರೆಗೆ ಗಣಿಗಳು ಇಳಿದಿವೆ. ಗವಿ ಗುಡ್ಡ ಎಂಬ ಬೆಟ್ಟದ ಮೇಲೆ ಚಿನ್ನದ ಗಣಿಗಳಿವೆ. ಯುರೋಪಿನ ಸಂಸ್ಥೆಗಳು ಪರಿಶೋಧಿಸಿ ಟನ್ನಿಗೆ 13.6 ಗ್ರಾಂ ಚಿನ್ನವಿರುವ ಅನೇಕ ವಲಯಗಳನ್ನು ಇಲ್ಲಿ ಗುರುತಿಸಿದುವು. ಛಿದ್ರವಾಗಿರುವ ಪಟ್ಟೆ ಕಬ್ಬಿಣ ಶಿಲೆಯಲ್ಲಿ ಬೆಣಚಿನ ಸಿರಗಳು ಮತ್ತು ಕಾರ್ಬೊನೇಟ್ ಅಂಶವಿರುವ ಭಾಗಗಳು ಸ್ವರ್ಣಭರಿತವಾಗಿವೆ. ಇಲ್ಲಿ ಚಿನ್ನವಿರುವ ಸು. ಆರು ಸಮಾನಾಂತರ ವಲಯಗಳನ್ನು ಗುರುತಿಸಲಾಗಿದೆ. ಇಲ್ಲಿ ಚಿನ್ನವು ಪಿರ್ಹೋಟೈಟ್, ಆರ್ಸೆನೋ ಪೈರೈಟ್, ಚಾಲ್ಕೋಪೈರೈಟ್ ಖನಿಜಗಳೊಂದಿಗೆ ದೊರೆಯುತ್ತದೆ. ಭಾರತೀಯ ಭೂವಿಜ್ಞಾನ ಸರ್ವೇಕ್ಷಣ ಸಂಸ್ಥೆ ಈಚೆಗೆ ದೊಡ್ಡ ಪ್ರಮಾಣದಲ್ಲಿ ಇಲ್ಲಿ ಪರಿಶೋಧನೆ ನಡೆಸಿ, ಟನ್ನಿಗೆ 3.5 ಗ್ರಾಂ ಚಿನ್ನವಿರುವ 30 ಲಕ್ಷ ಟನ್ನು ಚಿನ್ನದ ಅದಿರಿರುವುದಾಗಿ ವರದಿ ಮಾಡಿದೆ.

ಹಟ್ಟಿ ಚಿನ್ನದ ಕಂಪನಿ ಪ್ರಯೋಗಾರ್ಥವಾಗಿ ಇಲ್ಲಿ ತೆರೆದ ಗಣಿ ಕಾರ್ಯಾಚರಣೆ ಕೈಗೊಂಡಿದೆ. ಇಲ್ಲಿನ ಅದಿರನ್ನು ಚಿತ್ರದುರ್ಗದ ತಾಮ್ರದ ಅದಿರು ಸಂಸ್ಕರಿಸುವ ಘಟಕಕ್ಕೆ ಕಳಿಸಿ ಚಿನ್ನವನ್ನು ಸಂಸ್ಕರಣೆ ಮಾಡಲಾಗುತ್ತಿದೆ.

ಕೆಂಪಿನಕೋಟೆ ಗಣಿಗಳು: ಹಾಸನ ಜಿಲ್ಲೆಯ ನುಗ್ಗೇಹಳ್ಳಿ ಪದರು ಶಿಲಾ ಪಟ್ಟಿಯಲ್ಲಿ ದಕ್ಷಿಣದ ತುದಿಯಲ್ಲಿರುವ ಕೆಂಪಿನಕೋಟೆ ಗ್ರಾಮದ ಬಳಿ ಪುರಾತನ ಚಿನ್ನದ ಗಣಿಗಳಿವೆ. ಹಳೆಯ ಗಣಿಗಳ ಪೈಕಿ ಒಂದು 200 ಮೀ ಉದ್ದವಿದೆ. ಏಷ್ಯದ ಪ್ರಾಚೀನ ಚಿನ್ನದ ಗಣಿಗಳ ಪೈಕಿ ಇದೇ ಅತ್ಯಂತ ದೊಡ್ಡದು ಎಂದು ರಾಬರ್ಟ್ ಬ್ರೂಸ್‌ಫುಟ್ ಎಂಬ ವಿಜ್ಞಾನಿ ಈ ಭಾಗವನ್ನು ಸಮೀಕ್ಷೆ ಮಾಡಿ ವರದಿ ಮಾಡಿದ (1986). ಈ ಗಣಿಗಳ ಕುರಿತು ಮೊದಲು ವರದಿ ಮಾಡಿದ ಲ್ಯಾವೆಲ್ಲರ್ ಎಂಬ ವಿಜ್ಞಾನಿ ಬಹುಶಃ 17ನೆಯ ಶ. ಚನ್ನರಾಯಪಟ್ಟಣವನ್ನು ಆಳುತ್ತಿದ್ದ ಪಾಳೆಯಗಾರರು ತಮ್ಮ ಟಂಕಸಾಲೆಗಾಗಿ ಈ ಗಣಿಗಳನ್ನು ನಿರ್ವಹಿಸುತ್ತಿದ್ದರೆಂದು ವರದಿ ಮಾಡಿದ್ದಾನೆ. 1893–96ರವರೆಗೆ ಕೆಂಪಿನಕೋಟೆ ಗೋಲ್ಡ್ ಫೀಲ್ಡ್ ಎಂಬ ಕಂಪನಿ 155 ಮೀ ಆಳದವರೆಗೆ ಕೂಪವನ್ನು ತೋಡಿತ್ತು. ಇಲ್ಲಿ ಹಾರ್ನ್‌ಬ್ಲೆಂಡ್ ಮತ್ತು ಅಲ್ಟ್ರಾಮೆಫಿಕ್ ಶಿಲೆಗಳ ಬೆಣಚಿನ ಎಳೆಗಳಲ್ಲಿ ಚಿನ್ನ ದೊರೆಯುತ್ತದೆ. ಹೆಚ್ಚು ಸಲ್ಫೈಡ್ ಖನಿಜಗಳು ಬೆರೆತಿಲ್ಲದಿರುವುದರಿಂದ ಚಿನ್ನವನ್ನು ಪ್ರತ್ಯೇಕಿಸುವುದು ಸುಲಭ. 1886ರಲ್ಲಿ ಪ್ರಾಯೋಗಿಕವಾಗಿ 1000 ಟನ್ನು ಅದಿರನ್ನು ಅರೆದು, 1440 ಗ್ರಾಂ ಚಿನ್ನವನ್ನು ಸಾರೀಕರಿಸಲಾಗಿತ್ತು. 1890ರಲ್ಲಿ ಆರ್ಥಿಕ ಕೊರತೆಯಿಂದಾಗಿ ಗಣಿಯನ್ನು ಮುಚ್ಚಬೇಕಾಯಿತು. ಇತ್ತೀಚೆಗೆ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ ಮತ್ತು ಖನಿಜ ಪರಿಶೋಧನಾ ನಿಗಮ, ಸ್ವರ್ಣಭರಿತ ಸಿರಗಳ ವ್ಯಾಪ್ತಿಯನ್ನು ಅರಿಯಲು ಪರಿಶೋಧನಾ ಬೈರಿಗೆ ಕಾರ್ಯಾಚರಣೆ ನಡೆಸಿವೆ. ಕೆಂಪಿನಕೋಟೆ ಚಿನ್ನದ ಗಣಿಗಳಲ್ಲಿ ಟನ್ನಿಗೆ 7.46 ಗ್ರಾಂ ಚಿನ್ನವಿರುವ 3,32,000 ಟನ್ನು ಅದಿರು ಇದೆ ಎಂದು ವರದಿ ಮಾಡಿದೆ.

**ಅಂಬಳೆ– ವಳಗೆರೆ ಗಣಿಗಳು :** ಮೈಸೂರಿನ ನಂಜನಗೂಡು ತಾಲ್ಲೂಕಿನಲ್ಲಿರುವ ಅಂಬಳೆ–ವಳಗೆರೆ ಗಣಿಗಳು, ಗಾರ್ನೆಟ್ ಖನಿಜವಿರುವ ಆಂಫಿಬೋಲೈಟ್ ಎಂಬ ರೂಪಾಂತರಿತ ಶಿಲೆಗಳಲ್ಲಿವೆ. ಅಂಬಳೆಯ ಬಳಿ ಪುರಾತನ ಗಣಿಗಳಿರುವುದನ್ನು 1895ರಲ್ಲಿ ಪತ್ತೆಹಚ್ಚಲಾಯಿತು. 1899–01ರ ನಡುವೆ ಇಲ್ಲಿ ಕೂಪ ತೋಡಿ 60 ಮೀ ಆಳಕ್ಕೆ ಗಣಿಗಳನ್ನು ಮಾಡಿದ್ದಾರೆ. ಬೆಣಚು ಸಿರದಲ್ಲಿ ಚಿನ್ನದ ಎಳೆಗಳಿದ್ದು, ಟನ್ನಿಗೆ 0.8–7.7 ಗ್ರಾಂ ವರೆಗೆ ಲೋಹವನ್ನು ನೀಡಿದೆ. ಗಣಿ ಕಾರ್ಯಾಚರಣೆಯನ್ನು ಮತ್ತೆ ಮುಂದುವರಿಸಲಿಲ್ಲ.

ಅಂಬಳೆಯ ಉತ್ತರಕ್ಕೆ ಅದೇ ಜಾಡಿನಲ್ಲಿ ನಾಲ್ಕು ಕಿಮೀ ದೂರದಲ್ಲಿರುವ ವಳಗೆರೆ ಬಳಿ ಬಹು ದೊಡ್ಡ ತೆರೆದ ಗಣಿ ಇದೆ. ಇಲ್ಲಿ 30 ಮೀ ಆಳಕ್ಕೆ ತೋಡಿದ ಕೂಪದಲ್ಲಿ ಉತ್ಕೃಷ್ಟ ದರ್ಜೆಯ ಅದಿರು ದೊರೆತಿತ್ತು. 1905ರಲ್ಲಿ ಈ ಗಣಿಯನ್ನು ನಂಜನಗೂಡು ಗೋಲ್ಡ್ ಕಂಪನಿ ವಹಿಸಿಕೊಂಡಿತ್ತು. ಹೆಚ್ಚು ಸಲ್ಫೈಡ್ ಖನಿಜವಿರುವ ಸಿರ ಆಳದಲ್ಲಿ ಸುಮಾರು ಏಳು ಮೀಟರು ಅಗಲವಾಗಿದೆ ಎಂದು ತಿಳಿದು ಬಂದಿದೆ. ಟನ್ನಿಗೆ 9.6 ಗ್ರಾಂ ಚಿನ್ನವಿರುವ ಅದಿರನ್ನು ಹಿಂದೆ ಇಲ್ಲಿ ಸಂಸ್ಕರಿಸಲಾಗಿದೆ. ಭಾರತೀಯ ಭೂವೈಜ್ಞಾನಿಕ ಸಂಸ್ಥೆ ಇಲ್ಲಿ ವ್ಯಾಪಕ ಗಣಿ ಪರಿಶೋಧನೆಯನ್ನು ಕೈಗೆತ್ತಿಕೊಂಡಿದೆ.

ಸಿದ್ದರಹಳ್ಳಿ : ಚಿಕ್ಕಮಗಳೂರು ಜಿಲ್ಲೆಯ ಸಿದ್ದರಹಳ್ಳಿಯ ಬಳಿ, ಅಷ್ಟೇನೂ ಎತ್ತರವಲ್ಲದ ಗುಡ್ಡದ ಮೇಲೆ 1907–09ರ ನಡುವೆ ಚಿನ್ನಕ್ಕಾಗಿ ಕೂಪ ತೋಡಿದ್ದಾರೆ. ಕ್ಲೋರೈಟ್ ಪದರ ಶಿಲೆಯನ್ನು ಹಾಯುವ ಬೆಣಚು ಕಲ್ಲಿನಲ್ಲಿ ಸು. 30 ಮೀ ಆಳದಲ್ಲಿ ತೋಡಿರುವ ಅಡ್ಡ ಸುರಂಗದಲ್ಲಿ ಸ್ವರ್ಣಭರಿತ ಶಿಲೆಗಳು ದೊರೆತಿವೆ. ಒಂದು ಟನ್ನು ಅದಿರಿಗೆ ಆಗಿನ

ವರದಿಯಂತೆ 14.7 ಗ್ರಾಂ ಚಿನ್ನವಿದೆ ಎಂದು ತಿಳಿದುಬಂದಿದೆ. ಆಳ ಇಳಿದಂತೆ ಈ ಸ್ವರ್ಣಸಿರ ಕಿರಿದಾಗುತ್ತ ಬಂದಿದ್ದರಿಂದ ಗಣಿ ಕಾರ್ಯಾಚರಣೆಯನ್ನು ನಿಲ್ಲಿಸಬೇಕಾಯಿತು (1913).

ನಂದಿ ಮತ್ತು ಸಿದ್ದರಹಳ್ಳಿಯ ನಡುವೆ ಎರಡು ಪ್ರಾಚೀನ ಚಿನ್ನದ ಗಣಿಗಳಿವೆ. ಒಂದು 40 ಮೀ ಇನ್ನೊಂದು 70 ಮೀ ಆಳವಿದೆ. ಅಷ್ಟೇನೂ ಉತ್ಕೃಷ್ಟ ದರ್ಜೆಯ ಅದುರು ದೊರೆಯದ ಕಾರಣ ಗಣಿ ಕಾರ್ಯಾಚರಣೆ ಉತ್ತೇಜನಕಾರಿಯಾಗಲಿಲ್ಲ.

ಅಜ್ಜಂಪುರದ ಪಶ್ಚಿಮಕ್ಕೆ ನಾಲ್ಕು ಕಿಮೀ ದೂರದಲ್ಲಿ ತರೀಕೆರೆ ಗ್ರಾನೈಟ್ ಇರುವ ಅಂಚಿನಲ್ಲಿ ಕ್ಲೋರೈಟ್ ಪದರ ಶಿಲೆಯಲ್ಲಿ ಎರಡು ಪ್ರಾಚೀನ ಗಣಿಗಳಿವೆ. ಒಂದರ ಹೆಸರು ಹೊನ್ನದೋಣಿ, ಇನ್ನೊಂದು ಹಕ್ಕಿದೋಣಿ. ನೂರು ಮೀ ಆಳದವರೆಗೆ ತೋಡಿರುವ ಬಾಗಿದ ಕೂಪ ಹಕ್ಕಿ ದೋಣಿಯಲ್ಲಿದೆ. ಹಿಂದೆ ಈ ಗಣಿಗಳಿಂದ ಎಷ್ಟು ಚಿನ್ನ ಉತ್ಪಾದನೆಯಾಗಿದೆ ಎಂಬ ಬಗ್ಗೆ ಸ್ಪಷ್ಟ ವಿವರಗಳಿಲ್ಲ.

ಕುದುರೆಕೊಂಡ ಪಲ್ಲವನಹಳ್ಳಿ ಗಣಿಗಳು : ಹೊನ್ನಾಳಿ–ಸವಳಂಗ ಹೆದ್ದಾರಿಯಲ್ಲಿರುವ ಕುದುರೆಕೊಂಡ ಮತ್ತು ಪಲ್ಲವನಹಳ್ಳಿ ಸುತ್ತಮುತ್ತ ಮೆಕ್ಕಲು ಚಿನ್ನ ದೊರೆಯುವುದರ ಬಗ್ಗೆ ಹಿಂದಿನಿಂದಲೂ ಸಾಕಷ್ಟು ವರದಿಗಳಿವೆ. 1880–85ರ ವರೆಗೆ ಈ ಭಾಗದಲ್ಲಿ 80 ಮೀ ಆಳದ ಕೂಪ ತೋಡಿ ಚಿನ್ನದ ಸಿರವನ್ನು ಗಣಿ ಮಾಡಲಾಗಿದೆ. ಹೊನ್ನಾಳಿ ಸ್ವರ್ಣಕ್ಷೇತ್ರ ಎಂದೇ ಈ ಭಾಗಕ್ಕೆ ಹೆಸರು. ಹೊನ್ನಾಳಿ ಗ್ರಾನೈಟ್ ಮತ್ತು ಈಶಾನ್ಯದಲ್ಲಿ ಸೌಲಂಗ ಗ್ರಾನೈಟ್ ನಡುವಿನ ಕ್ಲೋರೈಟ್ ಪದರ ಶಿಲೆಯಲ್ಲಿ ಸ್ವರ್ಣ ಸಿರಗಳು ಹಾಯ್ದಿವೆ. ಕುದುರೆಕೊಂಡ, ಪಲ್ಲವನಹಳ್ಳಿ, ಸುರಹೊನ್ನೆ, ನ್ಯಾಮತಿ ಭಾಗಗಳಲ್ಲಿ ಮಣ್ಣಿನಲ್ಲಿ ತೇಲಿದಂತೆ ಆಗಾಗ ಚಿನ್ನದ ಗಟ್ಟಿ ದೊರೆಯುತ್ತವೆ. ಕುದುರೆಕೊಂಡದ ಗಣಿಗಳನ್ನು ಎರಡನೇ ಮಹಾಯುದ್ಧದ ಸಮಯದಲ್ಲಿ ಮುಚ್ಚಬೇಕಾಯಿತು.

**ಹೊನ್ನೇಹಟ್ಟಿ ಗಣಿಗಳು:** ಭದ್ರಾವತಿಯ ದಕ್ಷಿಣಕ್ಕೆ ಭದ್ರಾ ನದಿಗೆ ಸಮೀಪವಿರುವ ಹೊನ್ನೇಹಟ್ಟಿ ಹೆಸರೇ ತಿಳಿಸುವಂತೆ ಹೊನ್ನಿನ ಕ್ಷೇತ್ರ. 1887–90ರ ವರೆಗೆ ಇಲ್ಲಿ ಚಿನ್ನಕ್ಕಾಗಿ ವ್ಯಾಪಕ ಪರಿಶೋಧನೆ ನಡೆಸಲಾಗಿದೆ. ಬೆಣಚು ಸಿರಗಳಲ್ಲಿ ಚಿನ್ನದೊಂದಿಗೆ ಪೈರೈಟ್ ಖನಿಜ ಬೆರೆತಿದ್ದು ಹೊನ್ನೇಗುಡ್ಡದ ಮೇಲೆ ಕೂಪಗಳನ್ನು ತೋಡಲಾಗಿದೆ. ಸ್ವರ್ಣಭರಿತ ಸಿರದಿಂದ ಸಂಗ್ರಹಿಸಿದ ಮಾದರಿಯಲ್ಲಿ ಟನ್ನಿಗೆ 4.3 ಗ್ರಾಂ ಚಿನ್ನವಿದ್ದುದಾಗಿ ವರದಿಗಳು ತಿಳಿಸುತ್ತವೆ. ಬೆಟ್ಟದ ಪಾದದಲ್ಲೂ ಅನೇಕ ಪ್ರಾಚೀನ ಗಣಿಗಳಿವೆ. ಆದರೆ ಇವು ಅಷ್ಟೇನೂ ಆಳವಲ್ಲ. ಸಣ್ಣ ಪ್ರಮಾಣದ ಗಣಿ ಕಾರ್ಯಾಚರಣೆಗೆ ಇವು ಯುಕ್ತವೆಂದು ತಜ್ಞರು ಶಿಫಾರಸು ಮಾಡಿದ್ದಾರೆ.

ಜಾಲಗಾರ ಗುಂಡಿ : ಸ್ಥಳನಾಮಗಳನ್ನು ಆಧಾರವಾಗಿಟ್ಟುಕೊಂಡು ಕೆಲವು ಸ್ಥಳಗಳನ್ನು ಪರಿಶೋಧಿಸಿದರೆ ಕರ್ನಾಟಕದ ಬಹಳಷ್ಟು ಸ್ಥಳಗಳಿಗೆ ಯುಕ್ತ ಹೆಸರನ್ನು ಪ್ರಾಚೀನರು ನೀಡಿರುವುದು ಸುಸ್ಪಷ್ಟ. ಇಂಥ ಹೆಸರುಗಳಲ್ಲಿ ಜಾಲಗಾರ ಗುಂಡಿಯೂ ಒಂದು. ಶಿವಮೊಗ್ಗ ಜಿಲ್ಲೆಯ ಈ ಸ್ಥಳ ಮೊದಲಿನಿಂದಲೂ ಚಿನ್ನ ಸೋಸುವ ಉದ್ಯಮದಲ್ಲಿ ಪರಿಚಿತ ಹೆಸರು. ಟಾಲ್ಕ್ ಪದರ ಶಿಲೆಯಲ್ಲಿ 70 ಮೀ ಆಳಕ್ಕೆ ತೋಡಿರುವ ಗಣಿಗಳು ಇಲ್ಲಿವೆ. ಈ ಶಿಲೆಗಳನ್ನು ಹಾಯ್ದಿರುವ ಸಿರ ಬೆಣಚುಯುಕ್ತವಾಗಿವೆ. ಇಲ್ಲಿ ಸಣ್ಣ ಪ್ರಮಾಣದ ಗಣಿ ಕಾರ್ಯಾಚರಣೆ ಮಾಡಿದಾಗ ಪ್ರತಿ ಟನ್ನು ಅದಿರಿನಲ್ಲಿ 15.5 ಗ್ರಾಂ ಚಿನ್ನವಿರುವುದಾಗಿ ತಿಳಿಯಿತು (1913). ಸ್ವರ್ಣಸಿರದ ಜೊತೆಗೆ ಕ್ಯಾಲ್ಸೈಟ್, ಕ್ಲೋರೈಟ್, ಪಟ್ಟೆರೂಪದ ಬೆಣಚು ಪದರ ಶಿಲೆ, ಕಬ್ಬಿಣದ ಆಕ್ಸೈಡ್ ಬೆರೆತಿದೆ. ಇದರಲ್ಲಿರುವ ಪೈರೈಟ್ ಖನಿಜದಲ್ಲೂ ಚಿನ್ನವಿರುವುದಾಗಿಯೂ ತಿಳಿದು ಬಂದಿದೆ.

ಮೂಕನಗವಿ ಗಣಿಗಳು : ಗುಲ್ಬರ್ಗ ಜಿಲ್ಲೆಯ ಕೃಷ್ಣಾನದಿಯ ಉತ್ತರಕ್ಕೆ ಮತ್ತು ಸುರಪುರದ ಪಶ್ಚಿಮಕ್ಕೆ ಅನೇಕ ಪ್ರಾಚೀನ ಚಿನ್ನದ ಗಣಿಗಳಿವೆ. ಮಂಗಳೂರಿನಿಂದ ವಾಯವ್ಯಕ್ಕೆ ಐದು ಕಿಮೀ ದೂರದಲ್ಲಿರುವ ಮೂಕನಗವಿ ಗಣಿ ತುಂಬ ಪ್ರಸಿದ್ಧ. ಇಲ್ಲಿ, ಛಿದ್ರವಾಗಿರುವ ಆಂಫಿಬೋಲೈಟ್ ಎಂಬ ರೂಪಾಂತರಿತ ಅಗ್ನಿಶಿಲೆಗಳಲ್ಲಿ ಹಾಯುವ ಬೆಣಚು ಶಿಲೆಗಳಲ್ಲಿ ಚಿನ್ನ ಸಂಗ್ರಹವಾಗಿದೆ. ಚಿನ್ನದೊಡನೆ ಪೈರೈಟ್, ಪಿರ್ಹೊಟೈಟ್ ಮತ್ತು ಆರ್ಸೆನೋಪೈರೈಟ್ ಖನಿಜಗಳು ಬೆರೆತಿವೆ. ಸು. 600 ಮೀ ಉದ್ದದವರೆಗೆ ಸ್ವರ್ಣಸಿರ ವಿಸ್ತರಿಸಿದೆ. 1980–94 ನಡುವೆ ಹಟ್ಟಿ ಚಿನ್ನದ ಗಣಿ ಸಂಸ್ಥೆ ಈ ಭಾಗವನ್ನು ಪರಿಶೋಧಿಸಿ 32,087 ಟನ್ನು ಅದಿರನ್ನು ಸಾಗಿಸಿ ಹಟ್ಟಿಯ ಸ್ಥಾವರದಲ್ಲಿ ಸಂಸ್ಕರಿಸಿ 117.44 ಕಿಗ್ರಾಂ ಚಿನ್ನವನ್ನು ಸಾರೀಕರಿಸಿತು.

ಚಿನ್ನದ ಪರಿಶುದ್ಧತೆ : ಚಿನ್ನದ ಪರಿಶುದ್ಧತೆಯನ್ನು ಅಳೆಯಲು ಕ್ಯಾರೆಟ್ ಎಂಬ ಮಾನವನ್ನು ಬಳಸುತ್ತೇವೆ. ಗುಲಗಂಜಿಯನ್ನು ನಮ್ಮಲ್ಲಿ ಚಿನ್ನದ ತೂಕ ಮಾಡಲು ಬಹು ಹಿಂದಿನಿಂದಲೂ ಅಕ್ಕಸಾಲಿಗರು ಬಳಸುತ್ತ ಬಂದಿದ್ದಾರೆ. ಮಧ್ಯಯುಗದಿಂದಲೂ ಯುರೋಪಿನಲ್ಲಿ ಕ್ಯಾರೋಬ್ ಮರದ ಬೀಜ ಬಳಸಿ ಚಿನ್ನವನ್ನು ತೂಕ ಮಾಡುತ್ತಿದ್ದುದುಂಟು. ಕ್ಯಾರೆಟ್ ಎಂಬ ಪದ ಇದರಿಂದ ನಿಷ್ಪತ್ತಿಯಾಗಿದೆ. ಕ್ಯಾರೆಟ್ ಎಂದರೆ ಈಗ ಇಷ್ಟು ಗುಲಗಂಜಿ ತೂಕ ಎಂಬ ಅರ್ಥವಲ್ಲ. ಚಿನ್ನದ ಪರಿಶುದ್ಧತೆಯ ಪ್ರಮಾಣ. ಪರಿಶುದ್ಧ ಚಿನ್ನವನ್ನು 24 ಕ್ಯಾರೆಟ್ ಎನ್ನುತ್ತಾರೆ. ಆದರೆ ನಿಸರ್ಗದಲ್ಲೂ ಪರಿಶುದ್ಧ ಚಿನ್ನ ದೊರೆಯುವುದಿಲ್ಲ. ಅಪರಂಜಿ ಚಿನ್ನವೂ 24 ಕ್ಯಾರೆಟ್ ಇರುವುದಿಲ್ಲ. ಸ್ವಲ್ಪ ಪ್ರಮಾಣದ ಇತರ ಲೋಹಗಳೂ ಬೆರೆತಿರುತ್ತವೆ. 24 ಕ್ಯಾರೆಟ್ ಎಂದರೆ 22 ಭಾಗ ಚಿನ್ನ ಉಳಿದ 2 ಭಾಗ ತಾಮ್ರ, ಬೆಳ್ಳಿ, ಸತುವು, ಪ್ಲಾಟಿನಮ್ ಪೆಲ್ಲಾಡಿಯಮ್ ಈ ಯಾವುದೇ ಧಾತುಗಳಿಂದ ಕೂಡಿರಬಹುದು ಇಲ್ಲವೇ ಆಭರಣ ತಯಾರಕರು ಈ ಧಾತುಗಳನ್ನು ಮಿಶ್ರಣ ಮಾಡುತ್ತಾರೆ. ಏಕೆಂದರೆ ಅಪರಂಜಿ ಚಿನ್ನ ತುಂಬ ಮೃದು. ಚಾಕುವಿನಿಂದ ಗೀರಬಹುದು ಅಂತಹ ಚಿನ್ನದಿಂದ ನೇರವಾಗಿ ಆಭರಣ ತಯಾರಿಸಲಾಗುವುದಿಲ್ಲ.

ಸಾಮಾನ್ಯವಾಗಿ ಆಭರಣಕ್ಕಾಗಿ 22 ಕ್ಯಾರೆಟ್ ಶುದ್ಧತೆಯ ಚಿನ್ನವನ್ನು ಬಳಸುತ್ತಾರೆ. ಚಿನ್ನದಲ್ಲಿ ಬೆಳ್ಳಿಯ ಪ್ರಮಾಣ ಹೆಚ್ಚಿದಷ್ಟೂ ಅದು ಬಿಳಿ ಚಿನ್ನವಾಗುತ್ತದೆ (ಎಲೆಕ್ಟ್ರಮ್) ಹಾಗೆಯೇ ಬಿಸ್ಮತ್ ಬೆರೆತಿದ್ದರೆ ಅದು ಕಪ್ಪು ಚಿನ್ನ. (ಬಿ.ಪಿ.ಕೆ.)

**ಕರ್ನಾಟಕ ಏಕೀಕರಣ :** 2006 ನವೆಂಬರ್ 1ನೆಯ ತಾರೀಕಿಗೆ ಕರ್ನಾಟಕ ಏಕೀಕರಣವಾಗಿ ಐವತ್ತು ವರ್ಷಗಳು ತುಂಬಿವೆ. ಕರ್ನಾಟಕ ಏಕೀಕರಣದ ಇತಿಹಾಸ ಬಲ್ಲವರಿಗೆ ಏಕೀಕರಣಕ್ಕೆ ನಡೆದ ಹೋರಾಟವು ಕಹಿ–ಸಿಹಿ ಘಟನೆಗಳ ಸ್ಮೃತಿ. ಒಡೆದುಕೊಳ್ಳುವ ಮತ್ತು ಕೂಡಿಕೊಳ್ಳುವ ಕನ್ನಡಿಗರ ಸ್ವಭಾವ ಇತಿಹಾಸಕ್ಕೆ ಹೊಸದಲ್ಲ. ಈ ಒಡೆದುಕೊಳ್ಳುವ ಮನೋಭಾವಕ್ಕೆ ಯಾವಾಗಲೂ ಪ್ರೇರಣೆಯಾಗಿರುವುದು ಬಹುತೇಕ ಅಧಿಕಾರದ ಆಸೆ. ಒಂದಾಗಲು ಕಾರಣವಾಗಿರುವುದು ಭಾಷೆ ಮತ್ತು ಸಂಸ್ಕೃತಿಯ ಬಗೆಗಿನ ಪ್ರೀತಿ ಮತ್ತು ಗೌರವ.

ಹೊಯ್ಸಳರು ಮತ್ತು ಸೇವುಣರ ನಡುವಿನ ರಾಜಕೀಯ ಸೆಣಸಾಟದಲ್ಲಿ ಕರ್ನಾಟಕವು ಎರಡು ಭಾಗವಾಯಿತು. ತುಂಗಭದ್ರಾ ನದಿಯ ಉತ್ತರಕ್ಕೆ ಸೇವುಣರೂ, ದಕ್ಷಿಣಕ್ಕೆ ಹೊಯ್ಸಳರೂ ಆಳಿದರು. ಇದು ನಡೆದದ್ದು 13ನೆಯ ಶತಮಾನದ ಆರಂಭದಲ್ಲಿ; ಆಗ ಬೇರೆಯಾದ ಕನ್ನಡಿಗರು ಆಡಳಿತಾತ್ಮಕವಾಗಿ ಒಂದಾದದ್ದು 1956ರಲ್ಲಿ. ಅಂದರೆ ಸುಮಾರು 750 ವರ್ಷಗಳ ಕಾಲ ಕನ್ನಡಿಗರೇ ಅಧಿಕವಾಗಿದ್ದ ಭಾಗಗಳನ್ನು ಆಳಿದವರು ಕನ್ನಡೇತರರು. ಆಳುವ ವರ್ಗವು ಬಯಸುವ ಭಾಷೆಯನ್ನು ಆಡಳಿತದಲ್ಲಿ ಬಳಸುವುದು ವಾಡಿಕೆ. ಯಾವುದೇ ಭಾಷೆಯ ಬಳಕೆ ಕಡಿಮೆಯಾದರೆ, ಆ ಭಾಷೆಯ ಅವನತಿ ಆರಂಭವಾಗುತ್ತದೆ. ಭಾಷೆಯ ಅವನತಿಯೊಡನೆ ಆ ಭಾಷಿಕರ ಸಂಸ್ಕೃತಿಯೂ ಅನ್ಯಾಕ್ರಾಂತವಾಗುತ್ತದೆ ಮತ್ತು ಕ್ರಮೇಣ ತನ್ನ ಸ್ವರೂಪದಲ್ಲಿ ಗುರುತಿಸಲಾಗದಷ್ಟು ಬದಲಾವಣೆಗಳನ್ನು ಪಡೆಯುತ್ತದೆ.

ಕರ್ನಾಟಕದ ಗಡಿರೇಖೆಯು ಎಂದೂ ಸ್ಥಿರವಾಗಿರಲಿಲ್ಲ. ಕದಂಬ–ಗಂಗ–ಬಾದಾಮಿ ಚಳುಕ್ಯ ವಂಶಗಳ ಆಳ್ವಿಕೆಯ ಸಂದರ್ಭದಲ್ಲಿ ಗೋದಾವರಿ ನದಿಯನ್ನು ಉತ್ತರ ಗಡಿಯಾಗಿಯೂ, ಕಾವೇರಿ ನದಿಯು ಸಮುದ್ರವನ್ನು ಸೇರುವ ಭಾಗದವರೆಗಿನ ಭಾಗವನ್ನು ದಕ್ಷಿಣ ಗಡಿಯಾಗಿಯೂ ಹೊಂದಿದ್ದ ಕರ್ನಾಟಕವು ಬಾದಾಮಿ ಚಳುಕ್ಯ ವಂಶದ ಇಮ್ಮಡಿ ಪುಲಕೇಶಿಯ ಕಾಲದಲ್ಲಿ ನರ್ಮದೆಯವರೆಗೆ ತನ್ನ ಆಡಳಿತವನ್ನು ವಿಸ್ತರಿಸಿಕೊಳ್ಳುವ ಅವಕಾಶಗಳಿದ್ದರೂ ಹಾಗೆ ಮಾಡಲಿಲ್ಲ. ಶ್ರೀವಿಜಯನು, ತನ್ನ 'ಕವಿರಾಜಮಾರ್ಗ' ದಲ್ಲಿ 'ಕಾವೇರಿಯಿಂದಮಾಗೋದಾವರಿವರಮಿರ್ದ' ನಾಡು ಕನ್ನಡ ನಾಡು ಎಂದು ವರ್ಣಿಸಿದ್ದಾನೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯ ಕಾಲಕ್ಕೆ ಈಗಿನ ಮಹಾರಾಷ್ಟ್ರದ ದಕ್ಷಿಣ ಭಾಗಗಳು ಮತ್ತು ಆಂಧ್ರದ ಪಶ್ಚಿಮ ಭಾಗಗಳು ಆಗಿನ ಕರ್ನಾಟಕದ ಅವಿಭಾಜ್ಯ ಭಾಗಗಳಾಗಿದ್ದವು. ಈಗಾಗಲೇ ತಿಳಿಸಿರುವಂತೆ ಹೊಯ್ಸಳರು ಮತ್ತು ಸೇವುಣರ ಕಾಲದಲ್ಲಿ ಒಡೆದುಕೊಂಡ ಕರ್ನಾಟಕವು ಒಂದಾಗಲು ಹಲವು ಶತಮಾನಗಳು ಬೇಕಾಯಿತು; ಹೋರಾಟವೂ ಅನಿವಾರ್ಯವಾಯಿತು. ಇದು ವಿಪರ್ಯಾಸ ಎನಿಸಿದರೂ, ಮರೆಮಾಚಲಾಗದ ಸತ್ಯ. ಹೊಯ್ಸಳರು ಮತ್ತು ಸೇವುಣರ ಅನಂತರ ಆಳಿದ ವಿಜಯನಗರದ ಅರಸರ ಕಾಲದಲ್ಲೂ ಕರ್ನಾಟಕವು ತನ್ನ ಹಿಂದಿನ ಸ್ವರೂಪವನ್ನು ಪಡೆಯಲಿಲ್ಲ. ದಕ್ಷಿಣ ಭಾರತದ ಬಹುತೇಕ ಭಾಗವನ್ನು ವಿಜಯನಗರದ ಅರಸರು ಆಳಿದರು; ಆದರೆ ಆ ಮೊದಲು ಕರ್ನಾಟಕದ ಭಾಗವಾಗಿದ್ದ ಮತ್ತು ಈಗ ಕರ್ನಾಟಕಕ್ಕೆ ಸೇರಿರುವ ರಾಯಚೂರು, ಗುಲಬರ್ಗ ಮತ್ತು ಬೀದರ್ ಜಿಲ್ಲೆಗಳು ವಿಜಯನಗರದ ವ್ಯಾಪ್ತಿಗೆ ಸೇರಿರಲಿಲ್ಲ. ಅವೆಲ್ಲವೂ ಆದಿಲ್ ಷಾಹಿಗಳ ವಶದಲ್ಲಿದ್ದವು. ಮೈಸೂರು ರಾಜ್ಯವನ್ನು ವಿಸ್ತರಿಸಲು ಹೈದರ್ ಮತ್ತು ಟಿಪ್ಪು ಪ್ರಯತ್ನಿಸಿದರು. ಟಿಪ್ಪುವು ತುಂಗಭದ್ರಾ ನದಿಯ ಆಚೆಯ ಕೆಲವು ಪ್ರದೇಶಗಳನ್ನು ಗೆದ್ದನಾದರೂ, 1791ರರಲ್ಲಿ ಪೇಶ್ವೆಗಳೊಡನೆ ಆದ ಒಪ್ಪಂದದ ಪ್ರಕಾರ, ವರದಾ ನದದಿಯ ಉತ್ತರ ಭಾಗವನ್ನು ಪೇಶ್ವೆಗಳಿಗೂ, ಕೊಡಗು ಮತ್ತು ಮಲಬಾರ್ ಪ್ರಾಂತಗಳನ್ನು ಬ್ರಿಟಿಷರಿಗೂ ನೀಡಬೇಕಾಯಿತು. 1787ರಲ್ಲಿ ತುಂಗಭದ್ರೆಯು ತನ್ನ ರಾಜ್ಯದ ಉತ್ತರ ಗಡಿ ಎಂದು ಒಪ್ಪಿಕೊಂಡಿದ್ದ ಟಿಪ್ಪುವು, 1799ರಲ್ಲಿ ಮರಣ ಹೊಂದಿದ ಅನಂತರ, ಅಂದರೆ 4ನೆಯ ಮೈಸೂರು ಯುದ್ಧದ ಅನಂತರ ಬ್ರಿಟಿಷರು ಮತ್ತು ಹೈದರಾಬಾದ್‌ನ ನಿಜಾಮನ ನಡುವೆ ಆಗಿದ್ದ ಒಪ್ಪಂದದ ಪ್ರಕಾರ ಮೈಸೂರು ಸಂಸ್ಥಾನವು ಮಾತ್ರ ಮೈಸೂರಿನ ಒಡೆಯರಿಗೆ ಉಳಿಯಿತು. ಬೆಳಗಾಂವಿ,

ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಬ್ರಿಟಿಷರ ಮುಂಬಯಿ ಆಧಿಪತ್ಯಕ್ಕೂ, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಬ್ರಿಟಿಷರ ಮದರಾಸಿನ ಆಧಿಪತ್ಯಕ್ಕೂ, ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳು ಹೈದರಾಬಾದ್ ನಿಜಾಮನ ಆಳ್ವಿಕೆಗೂ ಸೇರಿದವು. ಕೊಡಗು ಜಿಲ್ಲೆಯು ಬ್ರಿಟಿಷರ ಒಂದು ಅಧೀನ ರಾಜ್ಯವಾಗಿ ಉಳಿಯಿತು. ಕೆಲವು ಪ್ರದೇಶಗಳು ಸ್ಥಳೀಯ ಮರಾಠೀ ಸಂಸ್ಥಾನಿಕರ ವಶದಲ್ಲಿ ಉಳಿದವು.

ಹೀಗೆ ರಾಜಕೀಯವಾಗಿ ಒಡೆದುಕೊಂಡು, ಭಿನ್ನ-ಭಿನ್ನ ಆಡಳಿತ ವ್ಯಾಪ್ತಿಗೆ ಸೇರಿದ ಕನ್ನಡ ಭಾಷಿಕರ ಪ್ರಾಂತಗಳಲ್ಲಿ, ಆಳುವ ವರ್ಗದವರ ಮರ್ಜಿಯಂತೆ, ಆಡಳಿತದ ಭಾಷೆಯ ಬಳಕೆ ಆಯಿತು. ಈಗಿನಂತೆಯೇ, ಹಿಂದೆಯೂ ಜನರ ಭಾಷೆಯ ಬದಲು, ಆಳುವವರ ಅಥವಾ ಆಳುವ ವರ್ಗದ ಅನುಕೂಲಕ್ಕಾಗುವ ಭಾಷೆಯು ಆಡಳಿತದಲ್ಲಿ ಬಳಕೆ ಆಯಿತು. ಕೇವಲ ಕೆಲವರೇ ಇದ್ದ ಆಳುವವರು, ಬಹು ಸಂಖ್ಯಾತ ಆಳಿಸಿಕೊಳ್ಳುವವರ ಭಾಷೆಯನ್ನು ಕಲಿಯಲಿಲ್ಲ; ಆಡಳಿತದಲ್ಲಿ ಬಳಸಿಕೊಳ್ಳಲಿಲ್ಲ. ಬದಲಿಗೆ ಬಹು ಸಂಖ್ಯಾತ ಆಳಿಸಿಕೊಳ್ಳುವವರು ಅಲ್ಪ ಸಂಖ್ಯಾತ ಆಳುವವರ ಭಾಷೆಯನ್ನು ಕಲಿತರು. ಇದಕ್ಕೆ ಕಾರಣ ಆಳುವವರ ಯಾಜಮಾನ್ಯ ಪ್ರವೃತ್ತಿ ಮತ್ತು ಆಳಿಸಿಕೊಳ್ಳುವವರ ಗುಲಾಮ ಪ್ರವೃತ್ತಿ. ತಮಗೆ ಅರ್ಥವಾಗದೆ ಇದ್ದರೂ ಆಳುವವರ ಭಾಷೆಯನ್ನು ಒಪ್ಪಿಕೊಂಡ ಜನ ಕ್ರಮೇಣ ಆಳುವವರ ಭಾಷೆಯನ್ನು ಬಲವಂತವಾಗಿಯಾದರೂ ಕಲಿತರು.

ಆಳುವ ಜನ ತಮ್ಮ ಅನುಕೂಲಕ್ಕೆ ಆಡಳಿತ ನಡೆಸುವುದು ಸಹಜ. ಬ್ರಿಟಿಷರಾಗಲೀ, ಹೈದರಾಬಾದ್ ನಿಜಾಮನಾಗಲೀ, ಮರಾಠೀ ದೇಸಾಯಿಗಳಾಗಲೀ ತಮಗೆ ಮಾತ್ರ ಅರ್ಥವಾಗುವ ಭಾಷೆಯಲ್ಲಿ ಆಡಳಿತ ನಡೆಸಿದರು. ತಾವು ಹೇಳಿದ್ದು ತಮಗೆ ಅರ್ಥವಾಗಬೇಕು ಎಂಬ ಅವರ ನಿರೀಕ್ಷೆಯಂತೂ ಸರಿ; ಆದರೆ ತಮ್ಮ ಮಾತು ಯಾರಿಗೆ ತಲುಪಬೇಕೋ ಅವರಿಗೆ ತಲುಪುತ್ತಿದೆಯೇ ಎಂದು ತಿಳಿಯುವ ಪ್ರಯತ್ನವನ್ನೂ ಆಳುವ ಜನ ಮಾಡಿದಂತೆ ತೋರುವುದಿಲ್ಲ. ಈ ಮಾತು ಎಲ್ಲ ಕಾಲಕ್ಕೆ ಮತ್ತು ಆಳಿದ ಎಲ್ಲರಿಗೂ ಅನ್ವಯಿಸುವುದಿಲ್ಲ. ಬ್ರಿಟಿಷರಲ್ಲಿ ಕೆಲವು ಅಧಿಕಾರಿಗಳು ಭಾರತಕ್ಕೆ ಬಂದ ಮೇಲೆ ಇಲ್ಲಿನ ಸ್ಥಳೀಯ ಭಾಷೆಗಳನ್ನು ಕಲಿತು, ಆ ಭಾಷೆಯಲ್ಲೇ ಮಹತ್ವದ ಸಾಧನೆಗಳನ್ನು ಮಾಡಿದರು. ಆ ನಿಟ್ಟಿನಲ್ಲಿ ಯೂರೋಪಿಯನ್ ವಿದ್ವಾಂಸರ ಕಾರ್ಯವಿಧಾನವನ್ನು ಮೆಚ್ಚಲೇಬೇಕಾಗುತ್ತದೆ. ಕರ್ನಾಟಕದ ಉತ್ತರ ಭಾಗದಲ್ಲಿಯೂ 18ನೆಯ ಶತಮಾನದ ಹೊತ್ತಿಗೆ ಮರಾಠೀ ಭಾಷೆಯ ಪ್ರಭಾವ ಅಧಿಕವಾಗಿತ್ತು. 1817ರಲ್ಲಿ ಸೋತ ಬಾಜೀರಾಯನಿಂದ ಬ್ರಿಟಿಷರು ಪೇಶವೆಗಳ ಆಳ್ವಿಕೆಗೆ ಸೇರಿದ್ದ ಎಲ್ಲಾ ಭಾಗಗಳನ್ನೂ ವಶಪಡಿಸಿಕೊಂಡರು.

ಆಡಳಿತಾತ್ಮಕ ಕಾರಣಗಳಿಂದ 1826ರಲ್ಲಿ ಧಾರವಾಡ ಜಿಲ್ಲೆಯನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸಲು ಆಗ ಬಳ್ಳಾರಿಯಲ್ಲಿ ಕಲೆಕ್ಟರ್ ಆಗಿದ್ದ ಸರ್ ಥಾಮಸ್ ಮನ್ರೋ ಶಿಫಾರಸು ಮಾಡಿ, ಮುಂಬಯಿ ಕರ್ನಾಟಕ ಪ್ರಾಂತವನ್ನು 'ದಕ್ಷಿಣ ಮರಾಠ ಪ್ರಾಂತ್ಯ' ಎಂದು ಕರೆದು ತಪ್ಪು ಮಾಡಿರುವೆನೆಂದು ಒಪ್ಪಿಕೊಂಡಿದ್ದ. ಶಾಶ್ವತ ಏಕೀಕರಣವನ್ನು ಸಾಧಿಸುವುದರಿಂದ ಒಟ್ಟು ಕನ್ನಡ ಜನರಿಗೆ ಹಿತ ಆಗುತ್ತದೆ ಎಂಬುದು ಮನ್ರೋನ ಆಸೆಯಾಗಿತ್ತು. ದಕ್ಷಿಣ ಮರಾಠ ಪ್ರಾಂತ್ಯದ ಆ ಭಾಗಗಳಲ್ಲಿ ಆಳುತ್ತಿದ್ದ ಮರಾಠೀ ದೇಸಾಯರು ಮತ್ತು ಜಹಗೀರುದಾರರು ಆಡಳಿತದಲ್ಲಿ ಇಡಿಯಾಗಿ ಮರಾಠೀ ಭಾಷೆಯನ್ನು ಜಾರಿಗೆ ತಂದಿದ್ದರು. ಆದ್ದರಿಂದ ಜನತೆಯು ಅನಿವಾರ್ಯವಾಗಿ ಮರಾಠೀ ಕಲಿಯಬೇಕಾಯಿತು. ಕನ್ನಡವು ಕೇವಲ ಮನೆಮಾತಾಗಿ ಉಳಿಯಿತು. ಆಡಳಿತಕ್ಕೆ ಪೂರ್ಣವಾಗಿ ಬಳಕೆ ಆಗುತ್ತಿದ್ದ ಮರಾಠೀ ಭಾಷೆಗೆ ಶಿಕ್ಷಣದಲ್ಲೂ ಆದ್ಯತೆ ದೊರೆಯಿತು. ಈ ವಿಪರ್ಯಾಸವನ್ನು ಸರಿಪಡಿಸಲು ಸರ್ ವಾಲ್ಟರ್ ಎಲಿಯಟ್ ಪ್ರಯತ್ನಿಸಿದ.

ಡೆಪ್ಯುಟಿ ಚೆನ್ನಬಸಪ್ಪ

1826ರಲ್ಲಿ ಮುಂಬಯಿ ಆಧಿಪತ್ಯದ ಸರ್ಕಾರವು ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ ಒಂದೊಂದು ಮರಾಠೀ ಶಾಲೆಯನ್ನು ಆರಂಭಿಸಿತು. ಆಡಳಿತದಲ್ಲಿ ಮರಾಠಿಯ ಪ್ರಾಬಲ್ಯವೇ ಹೆಚ್ಚಾಗಿದ್ದುದರಿಂದ ಸರ್ಕಾರದೊಂದಿಗಿನ ಸಂಪರ್ಕಕ್ಕೆ ಅದೇ ಸುಲಭ ಭಾಷೆ ಎಂಬ ಅಭಿಪ್ರಾಯ ಅಧಿಕಾರಿಗಳಿಗಿದ್ದಂತೆ ತೋರುತ್ತದೆ. ಆದರೆ ಸರ್ ವಾಲ್ಟರ್ ಎಲಿಯಟ್ ಆಲೋಚಿಸಿದ ರೀತಿಯೇ ಬೇರೆ ಆಗಿತ್ತು. 'ಇಲ್ಲಿಯ ಬಹುತೇಕ ಜನರ ಭಾಷೆ ಕನ್ನಡ ಆಗಿರುವುದರಿಂದ ಕನ್ನಡವೇ ಆಡಳಿತ ಭಾಷೆಯಾಗುವುದು ಸೂಕ್ತ' ಎಂಬ ಅಭಿಪ್ರಾಯದಿಂದ ಧಾರವಾಡದಲ್ಲಿ ಕನ್ನಡ ಶಾಲೆಯೊಂದನ್ನು ಆರಂಭಿಸಲು ತಾನೇ 1830ರಲ್ಲಿ ಅರ್ಜಿ ಸಲ್ಲಿಸಿದ. ಆದರೆ ಸರ್ಕಾರ ಅನುಮತಿ ನೀಡಲಿಲ್ಲ. 1833 ರವರೆಗೆ, ಮೂರು ವರ್ಷಗಳ ಕಾಲ ಎಲಿಯಟ್ ಸ್ವಂತ ಖರ್ಚಿನಲ್ಲೇ ಶಾಲೆಯನ್ನು ನಡೆಸಿದ.

ಸರ್ ವಾಲ್ಟರ್ ಎಲಿಯಟ್ ಆರಂಭಿಸಿದ ಕೆಲಸವನ್ನು, ಎಂಜಿನಿಯರಿಂಗ್ ಶಿಣ ಪಡೆದರೂ ಶಿಕ್ಷಣ ಇಲಾಖೆಯಲ್ಲಿ ದುಡಿದು ಕನ್ನಡದ 'ಡೆಪ್ಯುಟಿ' ಎನಿಸಿಕೊಂಡು ಕನ್ನಡದ ರಕ್ಷಣೆ ಮಾಡಿದ ಡೆಪ್ಯುಟಿ ಚೆನ್ನಬಸಪ್ಪ ಮುಂದುವರಿಸಿದರು. ಅವರಿಗೆ ಆಗಿನ ವಿದ್ಯಾ ಇಲಾಖೆಯ ದಕ್ಷಿಣ ವಿಭಾಗದ ಇನ್ಸ್‌ಪೆಕ್ಟರ್ ಆಗಿದ್ದ ರಸೆಲ್ ಪ್ರೋತ್ಸಾಹ ನೀಡಿದರು. ಡೆಪ್ಯುಟಿ ಚೆನ್ನಬಸಪ್ಪನವರು ಬೆಳಗಾಂವಿಯ ನಾರ್ಮಲ್ ಸ್ಕೂಲಿನ ಪ್ರಿನ್ಸಿಪಾಲರಾಗಿದ್ದಾಗ 'ಮಠಪತ್ರಿಕೆ' ಎಂಬ ಕನ್ನಡ ಪತ್ರಿಕೆಯನ್ನೂ ಆರಂಭಿಸಿದರು.

1837ರಲ್ಲಿ ಬೆಳಗಾಂವಿಯ ಜಿಲ್ಲಾಧಿಕಾರಿಯಾಗಿದ್ದ ಜಾನ್.ಎ.ಡನ್‌ಲಪ್ ಅವರು ಧಾರವಾಡದ ಸಂದರ್ಶಕ ನ್ಯಾಯಾಂಗ ಕಮೀಷನರ್ ಅವರಿಗೆ 20-4-1837ರಂದು ಬರೆದದಿರುವ ಪತ್ರದಲ್ಲಿ ಬೆಳಗಾಂವಿಯ ಜಿಲ್ಲೆಯಾದ್ಯಂತ ಕನ್ನಡವನ್ನೇ ಆಡಳಿತ ಹಾಗೂ ವ್ಯವಹಾರದ ಭಾಷೆಯನ್ನಾಗಿ ಜಾರಿಗೆ ತರಲು ಆದೇಶ ಹೊರಡಿಸಿರುವುದನ್ನು ತಿಳಿಸಿದ್ದಾರೆ. ಅಂತೆಯೇ ಆಗಿನ ಮುಂಬಯಿ ಗವರ್ನರ್ ಆರ್.ಗ್ರಾಂಟ್ ಅವರ 19-9-1837ರ ಪತ್ರವು ಕನ್ನಡಕ್ಕೆ ದೊರೆಯಲೇ ಬೇಕಾದ ಪ್ರಾಶಸ್ತ್ಯದ ಬಗ್ಗೆ ಮನವರಿಕೆ ಮಾಡಿದೆ.

ಹೈದರಾಬಾದ್ ಸಂಸ್ಥಾನದಲ್ಲೂ ಕನ್ನಡದ ಪರಿಸ್ಥಿತಿಯು ಕೆಟ್ಟಿತ್ತು. ಅಲ್ಲಿ ಮರಾಠೀ ಭಾಷೆಯ ಜೊತೆಗೆ ಉರ್ದು ಭಾಷೆಯೂ ಪ್ರಭಾವಶಾಲಿಯಾಗಿತ್ತು. ಶಿಕ್ಷಣದಲ್ಲೂ ಉರ್ದುವೇ ಮುಖ್ಯವಾಗಿತ್ತು. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕನ್ನಡದ ಪರಿಸ್ಥಿತಿ ತೀರಾ ಹದಗೆಟ್ಟಿರಲಿಲ್ಲ.

ಕನ್ನಡಿಗರೇ ಅಧಿಕವಾಗಿದ್ದ ಭಾಗಗಳಲ್ಲಿ ಕನ್ನಡ ಭಾಷೆಯ ಪರಿಸ್ಥಿತಿ ಇದಾದರೆ, ಕನ್ನಡ ಸಂಸ್ಕೃತಿಯ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟಿತ್ತು. ಕನ್ನಡ ಭಾಷೆ ಮತ್ತು ಆ ಮೂಲಕ ರೂಪುಗೊಳ್ಳುವ ಸಂಸ್ಕೃತಿಯನ್ನು ಉಳಿಸಲು ಕನ್ನಡಿಗರೇ ಹೆಚ್ಚು ವಾಸಿಸುವ ಪ್ರದೇಶಗಳನ್ನು ಒಂದೇ ಆಡಳಿತ ವ್ಯಾಪ್ತಿಗೆ ತರುವ ಅಗತ್ಯ ಇತ್ತು. ಅದಕ್ಕಾಗಿ ಅವಶ್ಯಕ ವಾತಾವರಣ ನಿರ್ಮಾಣವಾದದ್ದು 1905ರ ಸುಮಾರಿನಲ್ಲಿ;

**ಬಂಗಾಲ ವಿಭಜನೆ :** ಒಡೆದು ಆಳುವ ನೀತಿಗೆ ಪ್ರಸಿದ್ಧರಾಗಿದ್ದ ಅಂದಿನ ಬ್ರಿಟಿಷ್ ಆಳುವ ವರ್ಗವು ಈಶಾನ್ಯ ಭಾರತವನ್ನು ಒಡೆದು ಆಳಲು ನಿರ್ಧಾರ ಮಾಡಿದ ಫಲವಾಗಿ, ಬಂಗಾಲದ ವಿಭಜನೆ ಆಯಿತು. ಮೊದಲಿನಿಂದಲೂ ರಾಷ್ಟ್ರೀಯತೆಗಾಗಿ ಬ್ರಿಟಿಷರನ್ನು ವಿರೋಧಿಸುತ್ತಲೇ ಇದ್ದ ಬಂಗಾಲದ ಜನ ಬ್ರಿಟಿಷ್ ರಾಜಕೀಯ ತಂತ್ರವನ್ನು ಒಪ್ಪಲಿಲ್ಲ. ಬಂಗಾಲದ ವಿಭಜನೆಯಾದ ದಿನ ಅಂದರೆ, 16-8-1905ರಂದು ಬಂಗಾಲದ ಯಾವ ಮನೆಯಲ್ಲೂ ಒಲೆಗಳನ್ನು ಹತ್ತಿಸಲಿಲ್ಲ. ಆ ದಿನವನ್ನು ಸಂತಾಪ ದಿನ ವಾಗಿ ಆಚರಿಸಲಾಯಿತು. ಹೋರಾಟವು ನಿರಂತರವಾಗಿ ಮುಂದುವರಿದು 1912ರಲ್ಲಿ ಬಂಗಾಲದ ವಿಭಜನೆ ರದ್ದಾಯಿತು. ಸರ್ಕಾರವೇ ನೇಮಿಸಿದ್ದ ಸಮಿತಿಯು 1918ರಲ್ಲಿ ಸಲ್ಲಿಸಿದ ಮಾಂಟ್ ಫೋರ್ಡ್ ವರದಿಯು 'ಬ್ರಿಟಿಷರ ಆಡಳಿತದ ಅವರೆಗಿನ ಭಾರತದ ಆಡಳಿತ ವಿಭಾಗಗಳು ಅಸಮರ್ಪಕ ಮತ್ತು ಜನತೆಯ ಹಿತವನ್ನು ಅನುಸರಿಸಿಲ್ಲ' ಎಂದು ಸ್ಪಷ್ಟಪಡಿಸಿತು.

**ವಿದ್ಯಾವರ್ಧಕ ಸಂಘ :** ಕನ್ನಡ ಶಿಕ್ಷಣದ ಬಗೆಗಿನ ಜಾಗೃತಿ ಒಂದೆಡೆಗಾದರೆ, ಕನ್ನಡ ಸಾಹಿತ್ಯ, ಸಂಸ್ಕೃತಿ, ಭಾಷೆ ಮತ್ತಿತರ ಕನ್ನಡಿಗರ ಸಮಸ್ಯೆಗಳನ್ನು ಅರ್ಥೈಸಿ, ನಿವಾರಿಸಿ, ಕನ್ನಡ ಭಾಷಿಕರನ್ನು ಒಂದಾಗಿಸುವ ಪ್ರಯತ್ನದ ಫಲವೇ 'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಸ್ಥಾಪನೆ. ಕರ್ನಾಟಕ ವಿದ್ಯಾವರ್ಧಕ ಸಂಘವು ರಾ.ಹ.ದೇಶಪಾಂಡೆ ಅವರ ಕಲ್ಪನೆಯ ಕೂಸು. ರಾ.ಹ.ದೇಶಪಾಂಡೆ ಅವರು ಆ ಭಾಗದಲ್ಲಿ ಎಂ.ಎ., ಪಡೆದ ಮೊದಲ ವ್ಯಕ್ತಿ ಎಂಬ ಕೀರ್ತಿಗೆ ಪಾತ್ರರಾದವರು. ವಿದ್ಯಾವರ್ಧಕ ಸಂಘದ ಮೂಲ ಉದ್ದೇಶವು 1)ಕನ್ನಡದಲ್ಲಿ ಉಪಯುಕ್ತ ಕೃತಿಗಳ ರಚನೆಗೆ ಪ್ರೋತ್ಸಾಹ 2) ಇತರ ಭಾಷೆಗಳ ಉಪಯುಕ್ತ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಬಹುಮಾನ ನೀಡಿಕೆ. 3) ಸಂಪನ್ಮೂಲಗಳಿಗೆ ತಕ್ಕಂತೆ ಹೊಸ ಕನ್ನಡ ಗ್ರಂಥ ಭಂಡಾರಗಳ ಸ್ಥಾಪನೆ ಅಥವಾ ಇರುವ ಗ್ರಂಥ ಭಂಡಾರಗಳಿಗೆ ನೆರವು 4) ಕಡಿಮೆ ಬೆಲೆಯಲ್ಲಿ ರಾಜಕೀಯ ಸ್ವರೂಪವಿರದ ಉಪಯುಕ್ತ ಸಾವಧಿಕ ಪತ್ರಿಕೆಗಳ ಪ್ರಕಟಣೆ ಅಥವಾ ಈಗಾಗಲೇ ಇರುವ ಅಂತಹ ಪತ್ರಿಕೆಗಳಿಗೆ ಸಹಾಯ ಹಾಗೂ 5) ಕನ್ನಡಿಗರಿಗೆ ಸಮರ್ಥವಾಗಿ ಸಂಪಾದಿತವಾದ ಪ್ರಾಚೀನ ಕನ್ನಡ ಕೃತಿಗಳನ್ನು ದೊರಕಿಸುವುದೇ ಆಗಿತ್ತು. 1890 ಜುಲೈ 30ರ ಸಂಜೆ ಧಾರವಾಡದಲ್ಲಿ ಆರಂಭವಾದ ಸಂಘವು ತನ್ನ ಉದ್ದೇಶಗಳಿಗೆ ತಕ್ಕಂತೆ ಕೆಲಸ ಮಾಡಿತು. ಹಲವು ಗ್ರಂಥಗಳನ್ನು ಪ್ರಕಟಿಸಿತು ಮತ್ತು 'ವಾಗ್ಭೂಷಣ' ಎಂಬ ಮಾಸಪತ್ರಿಕೆಯನ್ನೂ ಪ್ರಕಟಿಸಿತು. ಕರ್ನಾಟಕದಾದ್ಯಂತ ಹಲವಾರು ಲೇಖಕರನ್ನು ಬೆಳೆಸಿದ ಸಂಘವು ಕನ್ನಡ ಗ್ರಂಥಗಳ ಭಾಷೆಯು ಏಕರೂಪವಾಗಿರಬೇಕು ಎಂಬ ಅಭಿಪ್ರಾಯದಿಂದ ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳನವನ್ನು ಧಾರವಾಡದಲ್ಲಿ 1907ರ ಜೂನ್ ತಿಂಗಳ ಮೊದಲ ವಾರದಲ್ಲಿ ನಡೆಸಿತು. ಎರಡನೆಯ ಸಮ್ಮೇಳನವನ್ನು ಮೈಸೂರು

ಸರ್ಕಾರದ ವಿದ್ಯಾ ಇಲಾಖೆಯವರು ಬೆಂಗಳೂರಿನಲ್ಲಿ ನಡೆಸಬೇಕಾಗಿತ್ತು. ಕಾರಣಾಂತರಗಳಿಂದ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಲಿಲ್ಲ. ಎರಡನೆಯ ಸಮ್ಮೇಳನವೂ ಧಾರವಾಡದಲ್ಲೇ ನಡೆಯಿತು.

**ಕನ್ನಡ ಸಾಹಿತ್ಯ ಪರಿಷತ್ತು :** ಮೂರನೆಯ ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳನವಾದರೂ ಬೆಂಗಳೂರಿನಲ್ಲಿ ನಡೆಯಬೇಕೆಂಬ ಕೆಲವು ಗಣ್ಯರ ಅಪೇಕ್ಷೆಯು ಕರ್ನಾಟಕ(ಕನ್ನಡ)ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣವಾಯಿತು. ಎರಡೂ ಸಂಘಟನೆಗಳು ಸಾಹಿತ್ಯಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಟ್ಟರೂ ಸಹ, ಅವಕಾಶ ದೊರೆತಾಗಲೆಲ್ಲಾ ಏಕೀಕರಣದ ವಿಷಯದಲ್ಲೂ ಸಮರ್ಥವಾಗಿ ಕಾರ್ಯೋನ್ಮುಖವಾದವು. ಕರ್ನಾಟಕ ವಿದ್ಯಾವರ್ಧಕ ಸಂಘವು 7–10–1917ರಂದು ನಡೆದ ತನ್ನ ವ್ಯವಸ್ಥಾಪಕ ಸಮಿತಿಯ ಸಭೆಯಲ್ಲಿ ಏಕೀಕರಣಕ್ಕೆ ಸಂಬಂಧಿಸಿದಂತೆ ಸ್ವೀಕಾರ ಮಾಡಿದ ಗೊತ್ತುವಳಿಯು ಈ ಕೆಳಕಂಡಂತಿದೆ. 'ಬ್ರಿಟಿಷ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರಕಾರಕ್ಕೆ ಬಿನ್ನಹ ಮಾಡಬೇಕು. ಉದಾಹರಣಾರ್ಥ ಸೊಲ್ಲಾಪುರ ಜಿಲ್ಲೆಯ ಕೆಲವು ಭಾಗ ಕನ್ನಡವಿರುತ್ತದೆ. ಮದ್ರಾಸ್ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಈ ಜಿಲ್ಲೆಗಳು ಪೂರ್ಣ ಕನ್ನಡವಿದ್ದು ಕಡಪಾ, ಕರ್ನೂಲ, ಅನಂತಪುರ ಮುಂತಾದ ಜಿಲ್ಲೆಗಳಲ್ಲಿ ಎಷ್ಟೋ ಹಳ್ಳಿಗಳೂ ತಾಲೂಕುಗಳೂ ಕನ್ನಡ ಇರುತ್ತವೆ. ಇವುಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ರಾಜಕೀಯ ವಿಭಾಗವನ್ನು ಮಾಡಿದರೆ ಕನ್ನಡಿಗರ ಐಕ್ಯಕ್ಕೂ ಹಿತಕ್ಕೂ ಬೆಳವಣಿಗೆಗೂ ಅನುಕೂಲವಾಗುವುದು'.

ಆಲೂರು ವೆಂಕಟರಾಯರು

ಬೆನಗಲ್ ರಾಮರಾವ್

ಮೈಸೂರು ಸಂಸ್ಥಾನ ಮಾತ್ರವಲ್ಲದೆ ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಆಧಿಪತ್ಯ, ಕೊಡಗು ಇತ್ಯಾದಿ ಕನ್ನಡ ಪ್ರಾಂತಗಳ ಪ್ರಾತಿನಿಧ್ಯವೂ ಇದ್ದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಾಹಿತ್ಯ ಸಮ್ಮೇಳನಗಳಲ್ಲಿ ಏಕೀಕರಣದ ಪರವಾಗಿ ನಿರ್ಣಯ ಸ್ವೀಕರಿಸುವುದಲ್ಲದೆ, ತನ್ನ 'ಕನ್ನಡ ನುಡಿ' ಮತ್ತು 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಗಳಲ್ಲಿ ಏಕೀಕರಣದ ಪರವಾದ ಲೇಖನಗಳನ್ನು ಪ್ರಕಟಿಸಿ ಏಕೀಕರಣಕ್ಕೆ ಶ್ರಮಿಸಿತು.

ಕಡಪ ರಾಘವೇಂದ್ರರಾವ್

**ಕರ್ನಾಟಕ ಸಭೆ :** ರಾಷ್ಟ್ರೀಯ ನಾಯಕರು ಕರ್ನಾಟಕ ಏಕೀಕರಣದ ವಿಷಯದಲ್ಲಿ ಆಸಕ್ತಿ ವಹಿಸಿದ ಅನಂತರ ಅದಕ್ಕೊಂದು ನಿಶ್ಚಿತ ಎಂಬ ಸ್ವರೂಪ ದೊರೆಯಿತು. ಈ ನಿಟ್ಟಿನಲ್ಲಿ ಯಾಜಮಾನ್ಯ ವಹಿಸಿದವರು ಆಲೂರು ವೆಂಕಟರಾಯರು. 1905ರಿಂದಲೂ ಕರ್ನಾಟಕ ಏಕೀಕರಣಕ್ಕೆ ದುಡಿದು, ಏಕೀಕರಣ ಆದದ್ದನ್ನು ನೋಡಿ ಸಂತೋಷಪಟ್ಟ ಹಿರಿಯರಾದ ಆಲೂರು ವೆಂಕಟರಾಯರನ್ನು 'ಕನ್ನಡ ಕುಲಪುರೋಹಿತ' ಎಂದೇ ಕರೆಯಲಾಗಿದೆ. ಆಲೂರರ ಕರ್ನಾಟಕ ಏಕೀಕರಣ ಪರ ಹೋರಾಟಕ್ಕೆ 'ಹೋಂರೂಲ್' ಸಂದರ್ಭದಲ್ಲಿ ತಿಲಕರು ಆಡಿದ್ದ 'ಕನ್ನಡದಲ್ಲಿ ಮಾತನಾಡಿ ಕನ್ನಡ ಭಾಷೆಯ ಹಕ್ಕನ್ನು ಸ್ಥಾಪಿಸು'ಎಂಬ ಮಾತುಗಳೂ ಪ್ರೇರಣೆ ಆಗಿದ್ದವು. ಕನ್ನಡ ಮತು ಕರ್ನಾಟಕದ ಬಗ್ಗೆ ಆಲೂರರಿಗೆ ಇದ್ದ ಗೌರವ, ಅಭಿಮಾನ ಮತ್ತು ಕಳಕಳಿಗಳನ್ನು ಅವರ 'ಕರ್ನಾಟಕ ಗತ ವೈಭವ' ಕೃತಿಯಲ್ಲಿ ಗುರುತಿಸಬಹುದು.

ಮುದವೀಡು ಕೃಷ್ಣರಾವ್

ಆಲೂರರ ಜೊತೆಗೆ ವೆಂಕಟರಂಗೋಕಟ್ಟಿ, ಮುದವೀಡು ಕೃಷ್ಣರಾಯರು, ಬಿಂದೂರಾವ್ ಮುತಾಲಿಕ ದೇಸಾಯಿ, ಕಡಪಾ ರಾಘವೇಂದ್ರ ರಾವ್, ಗದಿಗೆಯ್ಯ ಹೊನ್ನಾಪುರ ಮಠ, ಪಾಟೀಲ ಸಂಗಪ್ಪ ಮುಂತಾದ ಹಿರಿಯ ರಾಷ್ಟ್ರೀಯ ನಾಯಕರಿದ್ದರು. ಗದಿಗೆಯ್ಯ ಹೊನ್ನಾಪುರ ಮಠ ಅವರ ಅಟ್ಟದ ಮೇಲೆ 1916ರಲ್ಲಿ ಆಲೂರರು, ಕಡಪಾ ರಾಘವೇಂದ್ರ ರಾಯರು, ನರಗುಂದಕರರು ಒಟ್ಟಾಗಿ ಸ್ಥಾಪಿಸಿದ 'ಕರ್ನಾಟಕ ಸಭೆ'ಯು ಕರ್ನಾಟಕ ಏಕೀಕರಣವನ್ನೇ ಪ್ರಧಾನ ವಿಷಯವನ್ನಾಗಿ ಸ್ವೀಕರಿಸಿ ಕಾರ್ಯತತ್ಪರವಾಯಿತು.

ಗದಿಗಯ್ಯ ಹುಚ್ಚಯ್ಯ ಹೊನ್ನಾಪುರಮಠ

**ಕರ್ನಾಟಕ ರಾಜಕೀಯ ಪರಿಷತ್ತು :** 1918ರಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಸ್ಥಾಪನೆ ಆಯಿತು. ಏಕೀಕರಣ ವಿಚಾರಗಳಿಗೆ ರಾಜಕೀಯ ಬೆಂಬಲವೂ ದೊರೆಯಿತು. ಪರಿಷತ್ತಿನ ಮೊದಲ ಅಧಿವೇಶನವು 1920ರಲ್ಲಿ ಧಾರವಾಡದ ಉಳವಿ ಚೆನ್ನಬಸಪ್ಪನ ಗುಡ್ಡದ ಮೇಲೆ, ಮೈಸೂರು ಸಂಸ್ಥಾನದ ನಿವೃತ್ತ ದಿವಾನ್ ವಿ.ಪಿ.ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಅಧಿವೇಶನದಲ್ಲಿ ಕಾಂಗ್ರೆಸ್ ಸಂಸ್ಥೆಯು ಕನ್ನಡ ಮಾತನಾಡುವ ಜನರ ಪ್ರದೇಶವನ್ನೆಲ್ಲ ಸೇರಿಸಿ ಒಂದು ಸ್ವತಂತ್ರ ಪ್ರಾಂತವನ್ನಾಗಿಸಬೇಕೆಂಬ ನಿರ್ಣಯವನ್ನು ಸ್ವೀಕರಿಸಿತು. ಅದೇ ವರ್ಷ ನಾಗಪುರದಲ್ಲಿ ಸೇರಿದ್ದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ರಚನೆಗೆ ಅವಕಾಶ ದೊರೆಯಿತು. ಕಡಪಾ ರಾಘವೇಂದ್ರ ರಾಯರು ಮತ್ತು ಶಾಂತಕವಿಗಳೆಂದು ಹೆಸರಾಗಿದ್ದ ಸಕ್ಕರಿ ಬಾಳಾಚಾರ್ಯರ ಪ್ರಯತ್ನದಿಂದಾಗಿ ಆ ಅಧಿವೇಶನಕ್ಕೆ ಕರ್ನಾಟಕದಿಂದ ಸುಮಾರು 800 ಪ್ರತಿನಿಧಿಗಳು ಹೋಗಿದ್ದರು. 'ಪ್ರಾಂತಗಳನ್ನು ಗುರುತಿಸಲು ಭಾಷೆಯೇ ಸರಿಯಾದ ಆಧಾರ' ಎಂಬ ನಂಬಿಕೆಯಿದ್ದ ಮಹಾತ್ಮ ಗಾಂಧೀಜಿ ಅವರಿಗೆ ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಒಲವಿತ್ತು.

ಬಿ. ಶಿವಮೂರ್ತಿಶಾಸ್ತ್ರೀ

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ರಚನೆಯಾದ ಮೇಲೆ ಸಮಿತಿಯ ವ್ಯಾಪ್ತಿಗೆ ಕನ್ನಡ ಮಾತನಾಡುವ ಜನರಿರುವ ಪ್ರದೇಶಗಳೆಲ್ಲ ಸೇರ್ಪಡೆ ಆಗಬೇಕೆಂದೂ ನಿರ್ಣಯವಾಗಿತ್ತು. ಈ ಹಿನ್ನೆಲೆಯಲ್ಲೇ ಕನ್ನಡಿಗರು ಪರಸ್ಪರ ಒಂದಾಗಿ ಸಭೆ, ಸಮಾರಂಭಗಳನ್ನು ಹಮ್ಮಿಕೊಳ್ಳುವ, ಸಮ್ಮೇಳನಗಳನ್ನು ನಡೆಸುವ ಸೌಹಾರ್ದದ ವಾತಾವರಣವನ್ನು ಸೃಷ್ಟಿಸಿಕೊಂಡರು.

**ಕೇಳ್ಕರ್ ಸಮಿತಿ ವರದಿ :** ಆದರೆ ಕೆ.ಪಿ.ಸಿ.ಸಿ ರಚನೆಯಾದ ಸಂದರ್ಭದಲ್ಲೇ ಬಳ್ಳಾರಿ ಜಿಲ್ಲೆಯು ಎಲ್ಲಿಗೆ ಸೇರಬೇಕು ಎಂಬ ಬಗ್ಗೆ ಕರ್ನಾಟಕ ಮತ್ತು ಆಂಧ್ರದ ನಾಯಕರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಅದನ್ನು ಬಗೆಹರಿಸಲು ಕಾಂಗ್ರೆಸ್ ಸಂಸ್ಥೆಯು ಕೇಳಕರ್ ಸಮಿತಿಯನ್ನು ನೇಮಿಸಿತು. ಕೇಳಕರ್ ಸಮಿತಿಯ ವರದಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳು ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೆ ಸೇರಿತು. ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ರಚನೆಯ ನಂತರ ಕರ್ನಾಟಕ ಏಕೀಕರಣವೇ ಆಗಿಹೋಯಿತು ಎಂಬ ಭಾವನೆಯಿಂದ ಹಲವು ಹಿರಿಯ ನಾಯಕರು ನಿರ್ಲಿಪ್ತರಾದರು.

**ಬೆಳಗಾಂವಿ ಕಾಂಗೆಸ್ ಅಧಿವೇಶನ ಮತ್ತು ಕರ್ನಾಟಕ ಏಕೀಕರಣ ಸಂಘ :** 1924ರಲ್ಲಿ ಬೆಳಗಾಂವಿಯಲ್ಲಿ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಕರ್ನಾಟಕ ಏಕೀಕರಣ ವಿಚಾರಕ್ಕೆ ಮತ್ತೆ ಅತ್ಯಪೂರ್ವ ಚಾಲನೆ ದೊರೆಯಿತು. ಆ ಸಂದರ್ಭಕ್ಕೆಂದೇ 'ಕರ್ನಾಟಕದ ಕೈಪಿಡಿ' ಎಂಬ ಗ್ರಂಥವನ್ನು ಕಾಂಗ್ರೆಸ್ ಸಮಿತಿಯೇ ಪ್ರಕಟಿಸಿತು. ಜೊತೆಗೆ ಬೆಳಗಾವಿಯ ಆರ್.ಬಿ. ಕುಲಕರ್ಣಿ ಕಾವ್ಯರತ್ನ ಎನ್ನುವವರು ಬರೆದ 'ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ' ಎಂಬ ಕೃತಿಯು ಬಿಡುಗಡೆ ಆಯಿತು. ಅದೇ ಸಂದರ್ಭದಲ್ಲಿ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಕವನವು ಹಾಡಲ್ಪಟ್ಟಿತು. ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ನಿಶ್ಚಿತ ರೂಪು-ರೇಷೆಗಳು ರೂಪುಗೊಂಡದ್ದೇ ಬೆಳಗಾವಿಯಲ್ಲಿ ಕಾಂಗ್ರೆಸ್ ಮಹಾಧಿವೇಶನ ನಡೆದ ಸಂದರ್ಭದಲ್ಲಿ ಎನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಏಕೆಂದರೆ ಅದೇ ಸಂದರ್ಭದಲ್ಲಿ 'ಕರ್ನಾಟಕ ಏಕೀಕರಣ ಸಂಘ'ದ ಸ್ಥಾಪನೆ ಆಯಿತು ಮತ್ತು ಅದರ ಮೊಟ್ಟ ಮೊದಲ ಪರಿಷತ್ತೂ ಸಹ ನಡೆಯಿತು. ಅದರ ಅಧ್ಯಕ್ಷತೆ ವಹಿಸಿದ್ದವರು ರಾವ್ ಬಹದ್ದೂರ್ ಸಿದ್ದಪ್ಪ ಕಂಬಳಿ; ಆಗ ಅವರು ಮುಂಬಯಿ ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿದ್ದರು. ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದವರು ದ.ವೆ.ಬೆಳವಿ. ಕರ್ನಾಟಕ ಏಕೀಕರಣ ಸಂಘದ ಹತ್ತನೆಯ ಪರಷತ್ತು ನಡೆದದ್ದು ಮುಂಬಯಿಯಲ್ಲಿ. ಆಗ ಉದ್ಘಾಟಕರು ವಲ್ಲಭಭಾಯಿ ಪಟೇಲ್ ಮತ್ತು ಅಧ್ಯಕ್ಷತೆ ವಹಿಸಿದ್ದವರು ಆಗ ಮುಂಬಯಿ ಆಧಿಪತ್ಯದ ಮುಖ್ಯ ಮಂತ್ರಿಗಳಾಗಿದ್ದ ಬಿ.ಜಿ.ಖೇರ್. ಏಕೀಕರಣಕ್ಕೆಂದೇ ರೂಪುಗೊಂಡ 'ಕರ್ನಾಟಕ ಏಕೀಕರಣ ಸಂಘ'ವು ಪ್ರತಿ ಪರಿಷತ್ತಿನಲ್ಲೂ ಏಕೀಕರಣ ವಿಚಾರದ ಬಗ್ಗೆ ವಿಶೇಷ ಪ್ರಸ್ತಾವನೆ ಮಾಡಿದೆ.

**ಮಾಂಟೆಗೋ-ಚೆಲ್ಮ್ಸ್‌ಫರ್ಡ್ ಸಮಿತಿ :** ಬಂಗಾಲದ ವಿಭಜನೆ ಮತ್ತು ಆನಂತರದ ಬೆಳವಣಿಗೆಗಳು ಬ್ರಿಟಿಷ್ ಸರ್ಕಾರದ ಒಡೆದು ಆಳುವ ನೀತಿಗೆ ಸಹಕಾರಿ ಆಗಿರಲಿಲ್ಲ. 1912ರಲ್ಲಿ ಆಗಿನ ಭಾರತದ ಗವರ್ನರ್ ಜನರಲ್ ಮತ್ತು ಭಾರತದ ಕಾರ್ಯದರ್ಶಿಗಳು ಭಾರತವನ್ನು ಭಾಷಾವಾರು ಸ್ವಾಯತ್ತ ಪ್ರಾಂತಗಳನ್ನಾಗಿ ವಿಭಾಗಿಸಲು ಇಚ್ಛಿಸಿದ್ದರು. 1918 ರಲ್ಲಿ ಸಂವಿಧಾನ ಪರಿಷ್ಕರಣೆಯ ಸಲುವಾಗಿ ಮಾಂಟೆಗೋ-ಚೆಲ್ಮ್ಸ್‌ಫರ್ಡ್ ನೇಮಕಗೊಂಡಿತು. ಸಮಿತಿಯು 1919ರಲ್ಲಿ ವರದಿಯನ್ನು ಸಲ್ಲಿಸಿತು. ಭಾಷಾವಾರು ಪ್ರಾಂತ ರಚನೆಯನ್ನು ಕೋರಿ ಕರ್ನಾಟಕದಲ್ಲೂ ಸಮಿತಿಗೆ ಮನವಿಗಳು ಸಲ್ಲಿಸಲ್ಪಟ್ಟವು. ಜನತೆಯ ಅಭಿಪ್ರಾಯವನ್ನು ಪುರಸ್ಕರಿಸುವ ಹಾಗೂ ಆಡಳಿತದ ಅನುಕೂಲದ ಕಾರಣದಿಂದಲೂ ಸಹ ಭಾಷಾವಾರು ಪ್ರಾಂತ ರಚನೆ ಒಳಿತು ಎಂಬ ಅಭಿಪ್ರಾಯ ಸಮಿತಿಯದಾಗಿತ್ತು. ಆ ವರದಿಯ ಹಿನ್ನೆಲೆಯಲ್ಲಿಯೇ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ರಚನೆ ಆಯಿತು.

**ಮೋತಿಲಾಲ್ ನೆಹರೂ ಸಮಿತಿ :** ನಂತರದ ವರ್ಷಗಳಲ್ಲಿ, ಸುಮಾರು ಮೂವತ್ತನಾಲ್ಕು ರಾಜಕೀಯ ಸಂಸ್ಥೆಗಳ ಸರ್ವಪಕ್ಷ ಸಮ್ಮೇಳನವು ನಿರ್ಣಯಿಸಿದಂತೆ, ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು ಮೋತಿಲಾಲ್ ನೆಹರೂ ಅವರ ನೇತೃತ್ವದಲ್ಲಿ ಒಂದು ಸಮಿತಿಯ ರಚನೆ ಆಯಿತು. 1928 ಮೇ 19ರಂದು ನೇಮಕಗೊಂಡ ಸಮಿತಿಯು ಸುಮಾರು 25 ಬಾರಿ ಸಭೆ ಸೇರಿ ವರದಿಯನ್ನು ಸಿದ್ಧಪಡಿಸಿತು. ಬಾಷಾವಾರು ಪ್ರಾಂತ ರಚನೆಯನ್ನು ಅವಶ್ಯಕ ಎಂದು ಪರಿಗಣಿಸಿದ ಸಮಿತಿಯು ಕರ್ನಾಟಕ ಮತ್ತು ಆಂಧ್ರ ಪ್ರಾಂತಗಳ ರಚನೆಗೆ ಸೂಕ್ತ ಏರ್ಪಾಡನ್ನು ಮಾಡಲು ಶಿಫಾರ್ಸು ಮಾಡಿತು. ಆದರೆ ಆಳುತ್ತಿದ್ದ ಯಾವುದೇ ಸರ್ಕಾರ ಆ ಬಗ್ಗೆ ಆಸಕ್ತಿ ವಹಿಸಲಿಲ್ಲ.

**ವಿಧಾನ ಪರಿಷತ್ತುಗಳಲ್ಲಿ ಪ್ರಸ್ತಾವನೆ :** ಮದರಾಸ್ ಮತ್ತು ಮುಂಬಯಿಯ ವಿದಾನ ಪರಿಷತ್ತುಗಳಲ್ಲಿ ಕರ್ನಾಟಕ ಪ್ರದೇಶಗಳನ್ನು ಪ್ರತಿನಿಧಿಸುತ್ತಿದ್ದ ಅನೇಕ ಗಣ್ಯರು ಕರ್ನಾಟಕ ಪ್ರಾಂತ ರಚನೆಯ ಸಂಬಂಧವಾಗಿ ಪ್ರಶ್ನಿಸುತ್ತಲೇ ಇದ್ದರು. ನೆಹರೂ ವರದಿ ಸಲ್ಲಿಕೆ ಆದ ನಂತರವೂ ಕರ್ನಾಟಕ ಏಕೀಕರಣದ ಪ್ರಶ್ನೆಗೆ ವಿಧಾನ ಪರಿಷತ್ತುಗಳು ಸ್ಪಂದಿಸಲಿಲ್ಲ. ವಿಧಾನ ಪರಿಷತ್ತುಗಳ ಬೆಂಬಲವಿಲ್ಲದೆ ಕೇಂದ್ರ ಶಾಸನ ಸಭೆ ಭಾಷಾವಾರು ಪ್ರಾಂತ ರಚನೆಯನ್ನು ಒಪ್ಪುವುದು ಸಾಧ್ಯವಿರಲಿಲ್ಲ.ಕರ್ನಾಟಕ ಪ್ರಾಂತ ರಚನೆಗೆ ಕನ್ನಡಿಗರ ಬೆಂಬಲವಿಲ್ಲ ಎಂದು ಮುಂಬಯಿ ಸರ್ಕಾರ ವಾದ ಮಾಡಿತು. ಆದರೆ ಜಾತಿ, ಮತ ಭೇದವಿಲ್ಲದೆ ಕರ್ನಾಟಕ ಏಕೀಕರಣ ಕುರಿತಂತೆ ಸಂಘ-ಸಂಸ್ಥೆಗಳು, ಪತ್ರಿಕೆಗಳು, ವಾಚನಾಲಯಗಳು, ವಿವಿಧ ಪರಿಷತ್ತುಗಳು ಕಾರ್ಯನಿರತವಾದವು. ಏಕೀಕರಣದ ಪರವಾಗಿ 36000 ವಯಸ್ಕರ ಸಹಿಯನ್ನೊಳಗೊಂಡ ಮನವಿಯನ್ನು ಸಲ್ಲಿಸುವಲ್ಲಿ ಎನ್.ಎಸ್.ಹರ್ಡೀಕರ್ ಶ್ರಮಿಸಿದರು.

ಮೈಸೂರು ಸಂಸ್ಥಾನದ ಜನತೆಗೆ ಕರ್ನಾಟಕ ಏಕೀಕರಣದ ಕಲ್ಪನೆ ಬರಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಉತ್ತರ ಕರ್ನಾಟಕದ ಹಲವು ನಾಯಕರಿಗಿತ್ತು. ಆದರೆ ಸರ್.ಎಂ.ವಿಶ್ವೇಶ್ವರಯ್ಯನವರ ದೂರದರ್ಶಿತ್ವದ ಫಲವಾಗಿ ರೂಪುಗೊಂಡ ಕನ್ನಡ ಸಾಹಿತ್ಯ ಪರಿಷತ್ತು ಭಾವನಾತ್ಮಕವಾಗಿ ಕನ್ನಡಿಗರನ್ನು ಒಂದುಗೂಡಿಸುವ ಕೆಲಸ ಮಾಡುತ್ತಿತ್ತು. ಉತ್ತರ ಕರ್ನಾಟಕದಲ್ಲಿದ್ದ ಹಲವು ದೇಶೀ ಸಂಸ್ಥಾನಗಳು ಏಕೀಕರಣಕ್ಕೆ ಒಪ್ಪುವ ಬಗ್ಗೆ ಅನೇಕರಿಗೆ ಅನುಮಾನಗಳು ಇದ್ದವು. ಅಂತಹ ಬಹುತೇಕ ಸಂಸ್ಥಾನಗಳ ಒಡೆತನ ಇದ್ದದ್ದು ಮರಾಠೀ ಜನರ ಕೈಗಳಲ್ಲಿ ; ಅನುಮಾನಗಳಿಗೆ ಆ ವಿಚಾರವೂ ಕಾರಣವಾಗಿತ್ತು.

1928ರ ಆಗಸ್ಟ್ 28ರಿಂದ 31ರವರೆಗೆ ಲಖನೌನಲ್ಲಿ ನಡೆದ ಸರ್ವಪಕ್ಷ ಸಮಿತಿಯು ಮೋತಿಲಾಲ್ ನೆಹರೂ ಅವರ ವರದಿಯನ್ನು ಅಂಗೀಕರಿಸಿತು.28-12-1928ರಂದು ಕೋಲ್ಕತದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನವೂ ನೆಹರೂ ಸಮಿತಿಯ ವರದಿಯನ್ನು ಅಂಗೀಕರಿಸಿತು.

**ಸೈಮನ್ ಆಯೋಗ :** ಭಾರತದ ಸಂವಿದಾನದ ಪುನರ್ಘಟನೆಗೆ ಸಂಬಂಧಿಸಿದಂತೆ ನೇಮಕಗೊಂಡ ಸೈಮನ್ ಆಯೋಗವನ್ನು ಕಾಂಗ್ರೆಸ್ ಬಹಿಷ್ಕರಿಸಿತು. ಸೈಮನ್ ಆಯೋಗದ ವರದಿಯನ್ನನುಸರಿಸಿ ಸಿಂಧ್ ಮತ್ತು ಒರಿಸ್ಸಾ ಪ್ರಾಂತಗಳ ರಚನೆ ಆಯಿತು. ಕಾಂಗ್ರೆಸ್ ಸಂಸ್ಥೆಯು ಸೈಮನ್ ಆಯೋಗವನ್ನು ಬಹಿಷ್ಕರಿಸಿತಾದರೂ, ದುಂಡು ಮೇಜಿನ ಪರಿಷತ್ತನ್ನು ಬಹಿಷ್ಕರಿಸಲಿಲ್ಲ. ಆ ಪರಿಷತ್ತಿನಲ್ಲೂ ಭಾಷಾವಾರು ಪ್ರಾಂತ ರಚನೆಯ ವಿಷಯ ಪ್ರಸ್ತಾಪ ಆಗಿತ್ತು.

1937ರಲ್ಲಿ ಭಾರತಕ್ಕೆ ಸ್ವಾಯತ್ತತೆ ಲಭಿಸಿತಾದರೂ, ಸಿಂಧ್ ಮತ್ತು ಒರಿಸ್ಸಾ ಪ್ರಾಂತಗಳ ನಿರ್ಮಾಣ ಆದರೂ ಕರ್ನಾಟಕದ ನಿರ್ಮಾಣ ಆಗಲಿಲ್ಲ.

**ಕರ್ನಾಟಕ ಏಕೀಕರಣ ಪರಿಷತ್ತುಗಳು ಮತ್ತು ಕರ್ನಾಟಕಸ್ಥರ ಮಹಾಸಭೆ :** 1924ರಿಂದ ಆರಂಭವಾಗಿ 1946ರವರೆಗೆ ನಡೆದ ಹತ್ತು ಕರ್ನಾಟಕ ಏಕೀಕರಣ ಪರಿಷತ್ತುಗಳ ಮುಖ್ಯ ಉದ್ದೇಶವೂ ಕರ್ನಾಟಕ ಏಕೀಕರಣವೇ ಆಗಿತ್ತು. ಬೇರೆ ಬೇರೆ ಸ್ಥಳಗಳಲ್ಲಿ ನಡೆದ ಈ ಪರಿಷತ್ತುಗಳಲ್ಲಿ ಸ್ವಾಗತಾಧ್ಯಕ್ಷರಾಗಲೀ, ಉದ್ಘಾಟಕರಾಗಲೀ ಅಥವಾ ಅಧ್ಯಕ್ಷರಾಗಲೀ ಕರ್ನಾಟಕ ಏಕೀಕರಣವನ್ನು ಹೊರತುಪಡಿಸಿ ಬೇರೇನನ್ನೂ ಪ್ರಸ್ತಾಪಿಸಿದಂತೆ ತೋರುವುದಿಲ್ಲ. ಹತ್ತನೆಯ ಪರಿಷತ್ತಿನ ಉದ್ಘಾಟಕರಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲರು ಭಾಷಾವಾರು ಪ್ರಾಂತ ರಚನೆಯ ಅಗತ್ಯತೆಯನ್ನು ತಿಳಿಸಿ, ಸಧ್ಯದಲ್ಲೇ ಕರ್ನಾಟಕ ಪ್ರಾಂತ ರಚನೆ ಆಗುವುದೆಂದು ತಿಳಿಸಿದ್ದರು. 31-8-1946ರಂದು ದಾವಣಗೆರೆಯಲ್ಲಿ ಕರ್ನಾಟಕಸ್ಥರ ಮಹಾಸಭೆ ನಡೆಯಿತು. ಸ್ವಾಗತಾಧ್ಯಕ್ಷರಾಗಿದ್ದವರು ಉರವಕೊಂಡ ಜಗದ್ಗುರುಗಳು ಮತ್ತು ಮಹಾ ಸಭೆಯನ್ನು ಉದ್ಘಾಟಿಸಿದವರು ಕೆ.ಆರ್.ಕಾರಂತರು. ಸಭೆಯ ಅಧ್ಯಕ್ಷತೆಯನ್ನು ಎಂ.ಪಿ.ಪಾಟೀಲರು ವಹಿಸಿದ್ದರು. ಬಹುತೇಕ ಕರ್ನಾಟಕದ ಎಲ್ಲಾ ಭಾಗಗಳಿಂದ, ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮಹಾಸಭೆಗೆ ಬಂದಿದ್ದರು. ಭಾರತಕ್ಕೆ ಸ್ವಾತಂತ್ರ ಬರುವ ದಿನಗಳು ಹತ್ತಿರದಲ್ಲಿವೆ ಎಂದು ಅಲ್ಲಿದ್ದ ಬಹುತೇಕ ಎಲ್ಲರಿಗೂ ತಿಳಿದಿತ್ತು. ರಾಜಕೀಯ ಘಟನೆ ಸಿದ್ಧವಾಗುವುದಕ್ಕೆ ಮೊದಲೇ ಭಾಷಾವಾರು ಪ್ರಾಂತಗಳ ರಚನೆ ಆಗುವುದು ಒಳಿತು ಹಾಗೂ ಸೂಕ್ತ ಎಂಬುದು ಅನೇಕರ ಅಭಿಪ್ರಾಯವಾಗಿತ್ತು. ಆ ಸಭೆಯಲ್ಲಿ 'ಸಾಧ್ಯವಾದರೆ ಮೈಸೂರನ್ನು ಒಳಗೊಂಡು, ಅಗತ್ಯವಾದರೆ ಅದನ್ನು ಬಿಟ್ಟು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು' ಎಂಬ ಗೊತ್ತುವಳಿಯನ್ನು ಬಳ್ಳಾರಿಯ ಕೋ.ಚೆನ್ನಬಸಪ್ಪ ಮಂಡಿಸಿದರು. ಅದನ್ನು ಬೆಂಗಳೂರಿನ ಬಿ.ಬಸವಲಿಂಗಪ್ಪ ಅನುಮೋದಿಸಿದರು. ಗೊತ್ತುವಳಿಗೆ ಕೆಂಗಲ್ ಹನುಮಂತಯ್ಯನವರು ಒಂದು ತಿದ್ದುಪಡಿ ತಂದರು. ಅದು ಪ್ರಮುಖವಾದ ಹಾಗೂ ಬಹು ಮುಖ್ಯವಾದ ತಿದ್ದುಪಡಿ ಆಗಿತ್ತು. ಆ ತಿದ್ದುಪಡಿಯು 'ಮೈಸೂರನ್ನು ಒಳಗೊಂಡು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು' ಎಂದಿತ್ತು. ತಿದ್ದುಪಡಿಯ ವಿಷಯದಲ್ಲಿ ಶ್ರೀರಂಗರ ಪಾತ್ರ ಮುಖ್ಯವಾಗಿತ್ತು .ಬ್ರಿಟಿಷ್ ಕರ್ನಾಟಕ, ಸಂಸ್ಥಾನ ಕರ್ನಾಟಕ ಎಂಬ ಭೇದವನ್ನೆಣಿಸದೆ, ಕರ್ನಾಟಕ ಏಕೀಕರಣ ಮತ್ತು ಭಾಷಾನುಗುಣ ಪ್ರಾಂತ ರಚನೆಗೆ ಘಟನಾ ಸಮಿತಿಯಲ್ಲಿ ಆದ್ಯತೆ - ಈ ಎರಡು ವಿಚಾರಗಳಿಗೆ ನಿರ್ಣಯ ಸ್ವೀಕರಿಸಿದ ಮಹಾ ಸಭೆಯು ಮೇಲಿನ ಉದ್ದೇಶ ಸಾಧನೆಗೆ ಮೂವರು ಸದಸ್ಯರ ಸಮಿತಿಯನ್ನು ನೇಮಿಸಿತು. ಆ

ಸಮಿತಿಯಲ್ಲಿದ್ದವರೆಂದರೆ, 1)ಎಂ.ಪಿ.ಪಾಟೀಲ, 2)ಎಸ್.ನಿಜಲಿಂಗಪ್ಪ ಮತ್ತು 3) ಶ್ರೀ ಕೆ.ಬಿ.ಜಿನರಾಜ ಹೆಗಡೆ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಆರಂಭವಾದಾಗಿನಿಂದಲೂ ಅದಕ್ಕೆ 1)ಭಾರತಕ್ಕೆ ಸ್ವಾತಂತ್ರ್ಯ ಮತ್ತು 2)ಕರ್ನಾಟಕ ಏಕೀಕರಣ–ಎರಡೂ ಗುರಿಗಳಿದ್ದವು. ಈ ನಿಟ್ಟಿನಲ್ಲಿ ಬ್ರಿಟಿಷ್ ಕರ್ನಾಟಕ ಭಾಗಗಳ ಜನತೆಯ ಪ್ರಯತ್ನಗಳು ಪ್ರಮುಖವಾಗಿದ್ದವು. ಮೊದಮೊದಲಿಗೆ, ಮೈಸೂರು ಸಂಸ್ಥಾನದಲ್ಲಿ ಏಕೀಕರಣಕ್ಕೆ ತೀವ್ರ ವಿರೋಧ ಇಲ್ಲದಿದ್ದರೂ, ಕೆಲವರಿಗೆ ಆಸಕ್ತಿಯಂತೂ ಇರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬರುವ ದಿನಗಳು ಹತ್ತಿರವಾದಂತೆಲ್ಲಾ ಎಲ್ಲರಿಗೂ ಕರ್ನಾಟಕ ಏಕೀಕರಣ ಆಗಲೇಬೇಕೆಂಬ ಆಸಕ್ತಿ ಹೆಚ್ಚಿತು.

ಹತ್ತನೆಯ ಕರ್ನಾಟಕ ಏಕೀಕರಣ ಪರಿಷತ್ತು ಮತ್ತು ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಈಗಾಗಲೇ ತಿಳಿಸಿರುವಂತೆ ಮುಂಬಯಿಯಲ್ಲಿ 1946ರಲ್ಲಿ ನಡೆದ ಹತ್ತನೆಯ ಕರ್ನಾಟಕ ಏಕೀಕರಣ ಪರಿಷತ್ತು ಏಕೀಕರಣದ ವಿಷಯದಲ್ಲಿ ಮಹತ್ವ ಪಡೆಯಿತು. ಕರ್ನಾಟಕ ಏಕೀಕರಣ ಪರಿಷತ್ತಿನ ಹನ್ನೊಂದನೆಯ ಪರಿಷತ್ತು 29–12–1947ರಂದು ಕಾಸರಗೋಡಿನಲ್ಲಿ ನಡೆಯಿತು. ಅದೇ ಸಂದರ್ಭದಲ್ಲಿ , 31ನೆಯ ಕನ್ನಡ ಸಾಹಿತ್ಯ ಸಮ್ಮೇಳನವೂ ಕಾಸರಗೋಡಿನಲ್ಲೇ ನಡೆಯಿತು. ಆ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ತಿ.ತಾ.ಶರ್ಮ. ಅವರ ಅಧ್ಯಕ್ಷ ಭಾಷಣದಲ್ಲೂ ಏಕೀಕರಣದ ವಿಚಾರ ಪ್ರಸ್ತಾಪವಾಯಿತು. ಏಕೀಕರಣ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದ ಎ.ಬಿ.ಶೆಟ್ಟರು ಕಾರಣಾಂತರಗಳಿಂದ ಬರಲಾಗಲಿಲ್ಲ. ಆದ್ದರಿಂದ ಪರಿಷತ್ತಿನ ಅಧ್ಯಕ್ಷತೆಯನ್ನು ಕೇಂದ್ರ ಶಾಸನ ಸಭೆಯ ಆರ್.ಆರ್.ದಿವಾಕರ್ ವಹಿಸಿದರು. ಕೆ.ಆರ್.ಕಾರಂತರು ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದರು. ಪರಿಷತ್ತಿನ ಉದ್ಘಾಟನೆ ಮಾಡಿದವರು ಮೈಸೂರು ಸಂಸ್ಥಾನದ ಎಚ್.ಸಿದ್ದಯ್ಯನವರು. ಭಾರತಕ್ಕೆ ಸ್ವಾತಂತ್ರ ಸಿಕ್ಕ ಮೇಲೂ ಏಕೀಕರಣ ವಿಳಂಬವಾಗುತ್ತಿರುವುದನ್ನು ಬಹುತೇಕ ಎಲ್ಲ ನಾಯಕರೂ ಆಕ್ಷೇಪಿಸಿದರು. ಏಕೀಕರಣಕ್ಕೆ ಇರುವ ಅಡೆ ತಡೆಗಳೇನು ಎಂದು ಸ್ಪಷ್ಟವಾಗಬೇಕು ಎಂಬುದೇ ಬಹು ಮುಖ್ಯ ಪ್ರಶ್ನೆಯಾಗಿತ್ತು. ರಾಜ್ಯಘಟನೆ ಜಾರಿಯಾಗುವುದರೊಳಗೆ ಕರ್ನಾಟಕ ಪ್ರಾಂತ ನಿರ್ಮಾಣ ಆಗದಿದ್ದರೆ ತೀವ್ರ ಚಳವಳಿಯ ಮೂಲಕ ಅದನ್ನು ವಿರೋಧಿಸಲಾಗುವುದು ಎಂದು ಎಚ್ಚರಿಸಿದ ಆ ಸಭೆಯಲ್ಲಿ ಏಳು ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

**ಮುಂಬಯಿ ಶಾಸನ ಸಭೆಯಲ್ಲಿ ವಿಷಯ ಮಂಡನೆ :** 1–4–1947ರಂದು ಮುಂಬಯಿ ಶಾಸನ ಸಭೆಯಲ್ಲಿ ಪ್ರತ್ಯೇಕ ಕರ್ನಾಟಕ ರಚನೆಗೆ ಸಂಬಂಧಿಸಿದಂತೆ ಅಂದಾನಪ್ಪ ದೊಡ್ಡಮೇಟಿ ಅವರು ಮಂಡಿಸಿದ ಒಂದು ಖಾಸಗಿ ಗೊತ್ತುವಳಿಯು, ಮುರಾಜಿ ದೇಸಾಯಿ ಅವರ ವಿರೋಧದ ನಡುವೆಯೂ, ಮುಖ್ಯ ಮಂತ್ರಿ ಬಿ.ಜಿ. ಖೇರರು ಸೂಚಿಸಿದ ತಿದ್ದುಪಡಿಗಳೊಂದಿಗೆ, ಪರವಾಗಿ 60 ಮತ್ತು ವಿರುದ್ಧವಾಗಿ 8 ಮತಗಳಿಂದ ಸ್ವೀಕೃವಾತವಾಯಿತು.

**ಮದರಾಸು ಶಾಸನ ಸಭೆಯಲ್ಲಿ ವಿಷಯ ಮಂಡನೆ :** 1947 ಏಪ್ರಿಲ್ 27ರಂದು ಮದರಾಸು ಶಾಸನ ಸಭೆಯಲ್ಲಿ ಪಿ.ಸುಬ್ಬರಾಯನ್ ಅವರು 'ಭಾರತದ ಸಂವಿಧಾನವನ್ನು ರಚಿಸುವಾಗ ಭಾಷಾನುಗುಣವಾಗಿ ಪ್ರಾಂತಗಳ ಪುನರ್ರಚನೆ ಅತ್ಯಂತ ಅವಶ್ಯಕವಾಗಿದೆ. ಆದ್ದರಿಂದ ಘಟನಾ ಸಮಿತಿಯು ತನ್ನ ಪ್ರಥಮ ಸಭೆಯಲ್ಲೇ ಈ ವಿಷಯವನ್ನು ಕೈಗೆತ್ತಿಕೊಳ್ಳಬೇಕು' ಎಂದು ನಿರ್ಣಯ ಮಂಡಿಸಿದರು

**ಘಟನಾ ಸಮಿತಿಯ ನಿರ್ಣಯ** : ಸ್ವತಂತ್ರ ಭಾರತದ ಸಂವಿಧಾನವನ್ನು ಸಿದ್ಧಪಡಿಸಲು ರಚಿತವಾಗಿದ್ದ ಘಟನಾ ಸಮಿತಿಯು, ಭಾಷಾವಾರು ಪ್ರಾಂತ ರಚನೆಯ ವಿಚಾರವನ್ನೂ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕಾಗಿತ್ತು. 1946ರ ಡಿಸೆಂಬರ್‌ನಲ್ಲಿ ಘಟನಾ ಸಮಿತಿಯ ಸಭೆಯು ದೆಹಲಿಯಲ್ಲಿ ಒಂದು ವಾರ ಕಾಲ ನಡೆದಾಗ. ಭಾಷಾವಾರು ಪ್ರಾಂತ ರಚನೆಯನ್ನು ಕುರಿತು ಕರ್ನಾಟಕದ ಪರ ವಾದ ಮಂಡಿಸುವವರಿಗೆ ನೆರವಾಗಲು ನೆಗಳೂರು ರಂಗನಾಥ ಹೋಗಿದ್ದರು. ಇದ್ದಕ್ಕಿದ್ದಂತೆ ರಂಗನಾಥರು ಶ್ರೀರಂಗರನ್ನು ದೆಹಲಿಗೆ ಕರೆಸಿಕೊಂಡರು. ಆ ಸಮಯದಲ್ಲಿ ಒಂದು ದಿನ(25–1–1947) ಶ್ರೀರಂಗರು ಕರ್ನಾಟಕದ ಇಬ್ಬರು ಕಾಂಗ್ರೆಸ್ ನಾಯಕರ ಜೊತೆಗೆ ನೆಹರೂ ಅವರನ್ನು ಕಂಡು, ಭಾಷಾವಾರು ಪ್ರಾಂತ ರಚನೆಯ ಅವಶ್ಯಕತೆ ಮತ್ತು ಅಗತ್ಯತೆಗಳನ್ನು ಕುರಿತು ವಿವರಿಸಿದರು. ಅಂದೇ ಘಟನಾ ಸಮಿತಿಯ ಸಭೆಯಲ್ಲಿ ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಚರ್ಚೆ ನಡೆದು, ಆ ಸಂಬಂಧ ವರದಿಯನ್ನು ಸಿದ್ಧಪಡಿಸಲು ಎಂಟು ಜನರ ಉಪ ಸಮಿತಿಯೊಂದನ್ನು ರಚಿಸಲಾಯಿತು.

**ಬೆಂಗಳೂರು ಮತ್ತು ಬೀರೂರುಗಳ ಕಾಂಗ್ರೆಸ್ ಅಧಿವೇಶನ :** 10–8–1947ರಂದೇ ಮೈಸೂರಿನ ಮಹಾರಾಜರು ಭಾರತ ಒಕ್ಕೂಟದಲ್ಲಿ ಸೇರುವ ಒಪ್ಪಂದಕ್ಕೆ ಸಹಿ ಹಾಕಿದ್ದರು. ಆದರೆ ಭಾರತಕ್ಕೆ ಸ್ವಾತಂತ್ರ ಬಂದ 15–8–1947ರಂದು ಮೈಸೂರು ಸಂಸ್ಥಾನ ಅದರಲ್ಲಿ ಸೇರಲಿಲ್ಲ. ಮೈಸೂರು ಸಂಸ್ಥಾನದ ಜನತೆ ಮೈಸೂರು ಚಲೋ ಚಳವಳಿ ಮಾಡಿದರು. 24–10–1947ರಂದು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವು ಅಸ್ತಿತ್ವಕ್ಕೆ ಬಂದಿತು.ಕೆ.ಸಿ.ರೆಡ್ಡಿ ಅವರು ಮೊದಲ ಮುಖ್ಯ ಮಂತ್ರಿಯಾದರು. 6–11–1948ರಂದು ಬೀರೂರಿನಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಕೆ.ಸಿ.ರೆಡ್ಡಿ ಅವರು ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ರಾಜ್ಯವು ಅಡ್ಡಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಅದಕ್ಕೆ ಮೊದಲೇ 1946ರ ನವೆಂಬರ್‌ನಲ್ಲಿ, ಬೆಂಗಳೂರಿನ ಸುಭಾಷ್ ನಗರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಸಮಿತಿಯ ವಾರ್ಷಿಕ ಸಭೆಯಲ್ಲಿ, ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿಹೋಗಿರುವ ಭಾಗಗಳನ್ನೆಲ್ಲಾ ಒಗ್ಗೂಡಿಸಿ, ಶೀಘ್ರವೇ ಕರ್ನಾಟಕ ರಚನೆ ಆಗಬೇಕೆಂಬ ಗೊತ್ತುವಳಿ ಸ್ವೀಕರಿಸಿತ್ತು.

ಬೀರೂರಿನ ಕಾಂಗ್ರೆಸ್ ಅಧಿವೇಶನದಲ್ಲಿ ಆಗಿದ್ದ ನಿರ್ಣಯದಂತೆ ನೇಮಕಗೊಂಡ ಸಮಿತಿಯಲ್ಲಿ ಟಿ.ಸಿದ್ದಲಿಂಗಯ್ಯ, ಟಿ.ಸುಬ್ರಹ್ಮಣ್ಯ, ಎಸ್.ಚನ್ನಯ್ಯ, ಕೆ.ಜಿ. ಒಡೆಯರ್, ಜಿ.ಬಂಡಿ ಗೌಡ ಮತ್ತು ನಾಮಕರಣಗೊಂಡಿದ್ದ ಬಿ.ಪಿ.ಹಾಲಪ್ಪ ಇದ್ದರು.ಈ ಸಮಿತಿಯು ಕರ್ನಾಟಕದ ಎಲ್ಲ ಭಾಗಗಳಲ್ಲಿ ಪ್ರವಾಸ ಮಾಡಿ ತನ್ನ ವರದಿಯನ್ನು ಸಲ್ಲಿಸಿತು.

**ಧರ್ ಆಯೋಗ :** ಭಾರತದ ಘಟನಾ ಸಮಿತಿಯು ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು ಅಲಹಾಬಾದ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಎಸ್.ಕೆ.ಧರ್ ಅವರ ಅಧ್ಯಕ್ಷತೆಯಲ್ಲಿ 17–6–1948 ರಂದು ಆಯೋಗವೊಂದನ್ನು ನೇಮಕ ಮಾಡಿತು. ಆ ಆಯೋಗದಲ್ಲಿ ಕರ್ನಾಟಕದ ಪರವಾಗಿ ಟೇಕೂರು ಸುಬ್ರಹ್ಮಣ್ಯಂ ಮತ್ತು ಆರ್.ಆರ್.ದಿವಾಕರ್ ಸಹಾಯಕ ಸದಸ್ಯರಾಗಿದ್ದರು. ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ – ಇವುಗಳಲ್ಲಿ ಯಾವ ಹೊಸ ಪ್ರಾಂತಗಳ ರಚನೆ ಆಗಬೇಕು ಮತ್ತು ಇವುಗಳ ಖಚಿತ ಗಡಿಯ ನಿರ್ಧಾರ ಆಗುವವರೆಗೆ ತಾತ್ಕಾಲಿಕ ಗಡಿ ಯಾವುದಿರಬೇಕು ಹಾಗೂ ಈ ಪ್ರಾಂತಗಳ ನಿರ್ಮಾಣದಿಂದ ಅವುಗಳ ಆಡಳಿತ , ಆರ್ಥಿಕ ಮತ್ತು ಇತರ ವಿಷಯಗಳ ಮೇಲೆ ಆಗುವ ಪರಿಣಾಮಗಳೇನು ಎಂಬುದನ್ನು ಆಯೋಗ ಅಧ್ಯಯನ ಮಾಡಿ ವರದಿ ಸಲ್ಲಿಸಬೇಕಾಗಿತ್ತು. 19–7–1948ರಂದು ಮೊದಲ ಬಾರಿಗೆ ಹೊಸದೆಹಲಿಯಲ್ಲಿ ಸಭೆ ಸೇರಿದ ಆಯೋಗವು ಭಾಷಾವಾರು ಪ್ರಾಂತ ರಚನೆಯ ಅಗತ್ಯತೆ, ವಿಧಾನ, ಪರಿಣಾಮ ಇತ್ಯಾದಿಗಳ ಬಗ್ಗೆ ತಿಳಿಯಲು ಇಪ್ಪತ್ತು ಪ್ರಶ್ನೆಗಳನ್ನು ಸಿದ್ಧಪಡಿಸಿ, 16–8–1948, ಅಂದರೆ 28 ದಿನಗಳ ಒಳಗಾಗಿ ಉತ್ತರವನ್ನು ದೆಹಲಿಗೆ ತಲುಪಿಸುವಂತೆ ಸೂಚಿಸಿ, ಪ್ರಶ್ನೆಗಳನ್ನು ಪ್ರಕಟಿಸಿತು. ಆಯೋಗದ ಕಾಟಾಚಾರದ ಕೆಲಸವನ್ನು ಜನತೆ ಹಗುರವಾಗಿ ಕಾಣಲಿಲ್ಲ. ಆಯೋಗದ ಪ್ರಶ್ನೆಗಳಿಗೆ ಗಂಬೀರವಾಗಿ ಉತ್ತರಿಸಿತು. ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಆಯೋಗವು ದೆಹಲಿಯಲ್ಲೇ ಕೆಲವು ಸಾಕ್ಷಿಗಳನ್ನು ಪರಿಶೀಲಿಸಿತು. ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ವಿಶಾಖ ಪಟ್ಟಣ, ಮದರಾಸು, ಮದುರೆ, ಮಂಗಳೂರು, ಕಲ್ಲಿಕೋಟೆ, ಕೊಯಮತ್ತೂರು, ನಾಗಪುರ, ಹುಬ್ಬಳ್ಳಿ, ಪುಣೆ ಮತ್ತು ಮುಂಬಯಿಗಳಲ್ಲಿ ಸಾಕ್ಷಿಗಳನ್ನು ಸಂದರ್ಶಿಸಿ, ಮಾಹಿತಿ ಸಂಗ್ರಹಿಸಿ, 1000ದಷ್ಟು ಮನವಿಗಳನ್ನು ಸ್ವೀಕರಿಸಿ, ಸುಮಾರು 700 ಸಾಕ್ಷಿಗಳನ್ನು ಪರೀಕ್ಷಿಸಿದ್ದಾಗಿ ತಿಳಿಸಿದ ಆಯೋಗವು ನವೆಂಬರ್ 20 ಮತ್ತು 21 ರಂದು ಸಭೆ ಸೇರಿ, ವಿಚಾರ ವಿನಿಮಯ ಮಾಡಿ ಡಿಸೆಂಬರ್ 10ರಂದು ತನ್ನ ವರದಿಯನ್ನು ಘಟನಾ ಸಮಿತಿಗೆ ಸಲ್ಲಿಸಿತು.

ಧರ್ ಆಯೋಗದ ಪ್ರಶ್ನಾವಳಿಗೆ ದಕ್ಷಿಣ ಕನ್ನಡ ಜಿಲ್ಲೆ, ನೀಲಗಿರಿ ಜಿಲ್ಲೆ, ಕೊಯಮತ್ತೂರು, ಪೆನುಗೊಂಡ, ಬಳ್ಳಾರಿ, ಬೆಜವಾಡ, ಮದ್ರಾಸ್,ಕೊಳ್ಳೇಗಾಲ, ಹೊಸೂರು ಮತ್ತು ಕಾಸರಗೋಡಿನ ಹಲವು ನಾಯಕರು ಉತ್ತರ ಸಲ್ಲಿಸಿದ್ದರು. ಸೊಲ್ಲಾಪುರದ ಜನತೆಯೂ ಜಯದೇವಿ ತಾಯಿ ಲಿಗಾಡೆ ಅವರ ನೇತೃತ್ವದಲ್ಲಿ ತಾವು ಕರ್ನಾಟಕಕ್ಕೆ ಸೇರುವುದಾಗಿ ಮನವಿ ಮಾಡಿತು.

ಧರ್ ಆಯೋಗವು ಸಲ್ಲಿಸಿದ ವರದಿಯಲ್ಲಿ, ಭಾಷಾವಾರು ಪ್ರಾಂತ ರಚನೆಗೆ ವಿಶೇಷವಾಗಿ ಆಂಧ್ರ , ಕರ್ನಾಟಕ ಮತ್ತು ಕೇರಳಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ಪ್ರಸ್ತಾಪಿಸಲಾಗಿತ್ತು. ಈ ಭಿನ್ನಾಭಿಪ್ರಾಯಗಳು ಭಾಷಾವಾರು ಪ್ರಾಂತ ರಚನೆಗೆ ಅಡ್ಡಿಯಾಗಿವೆ ಎಂದು ತಿಳಿಸಿದ ಆಯೋಗವು ಕರ್ನಾಟಕ ಪ್ರಾಂತ ರಚನೆಯೇ ಹೆಚ್ಚು ತೊಡಕಾಗಿದೆ ಎಂದು ಸೂಚನೆ ನೀಡಿತ್ತು. ಆಯೋಗವು, 'ನಮ್ಮ ಅಭಿಪ್ರಾಯದಲ್ಲಿ ಸದ್ಯಕ್ಕೆ ರಾಷ್ಟ್ರವು ಗಂಡಾಂತರ ಪರಿಸ್ಥಿತಿಯಲ್ಲಿದೆ. ಈಗಿನ ಕಾಲದಲ್ಲಿ ಹಿಂದುಸ್ಥಾನವನ್ನೊಂದು ರಾಷ್ಟ್ರವನ್ನಾಗಿಸುವುದು ಮೊದಲನೇ ಮತ್ತು ಕೊನೆಯ ಅವಶ್ಯಕತೆಯಾಗಿದೆ. 555. ರಾಷ್ಟ್ರೀಯ ಭಾವನೆಗೆ ಪೋಷಕವಿದ್ದುದೆಲ್ಲವನ್ನೂ ಕೈಕೊಳ್ಳತಕ್ಕದ್ದು. ಅದರ ಮಾರ್ಗದಲ್ಲಿ ತೊಂದರೆಗಳನ್ನೊಡ್ಡುವ ಎಲ್ಲವನ್ನೂ ನಿರಾಕರಿಸತಕ್ಕದ್ದು ಅಥವಾ ತಡೆಹಿಡಿಯತಕ್ಕದ್ದು' ಎಂದು ತಿಳಿಸಿ ಸದ್ಯದ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ರಚನೆ ಸಮರ್ಥನೀಯವಲ್ಲ ಎಂದು ತಿಳಿಸಿತು.

**ಜೆ.ವಿ.ಪಿ. (ತ್ರಿಮೂರ್ತಿ) ಸಮಿತಿ :** ಧರ್ ಆಯೋಗದ ವರದಿ ಸಲ್ಲಿಕೆ ಆದ ಒಂದು ವಾರದಲ್ಲೇ (ಡಿಸೆಂಬರ್ 18, 19) ರಾಷ್ಟ್ರೀಯ ಕಾಂಗ್ರೆಸ್‌ನ ಐವತ್ತೈದನೆಯ ಅಧಿವೇಶನವು ಜಯಪುರದಲ್ಲಿ ನಡೆಯಿತು. ಆಗ ಧರ್ ಆಯೋಗದ ವರದಿಯನ್ನು ಪರಿಶೀಲಿಸಿ, ಮೂರು ತಿಂಗಳ ಒಳಗೆ ವರದಿ ಮಾಡಲು ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಲಾಯಿತು.

ಆ ಸಮಿತಿಯಲ್ಲಿ ಸರ್ದಾರ್ ವಲ್ಲಭ ಭಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ ಮತ್ತು ಜವಹರಲಾಲ್ ನೆಹರೂ ಇದ್ದರು. ಈ ತ್ರಿಮೂರ್ತಿ(ಜೆ.ವಿ.ಪಿ.)ಸಮಿತಿಯ ವರದಿಯು 1–4–1949 ರಂದು ಪ್ರಕಟವಾಯಿತು. ಧರ್ ಆಯೋಗದ ವರದಿಯನ್ನು ಜೆ.ವಿ.ಪಿ.ಸಮಿತಿಯೂ ಎತ್ತಿ ಹಿಡಿಯಿತು. ಕೇರಳ ಮತ್ತು ಕರ್ನಾಟಕ ಪ್ರಾಂತ ರಚನೆಯು ಸಮಸ್ಯಾತ್ಮಕವಾಗಿದೆ ಎಂಬ ಅಭಿಪ್ರಾಯದಿಂದ, ಹೊಸದಾಗಿ ರಾಷ್ಟ್ರ ನಿರ್ಮಾಣವಾಗುತ್ತಿರುವ ಸಂದರ್ಭದಲ್ಲಿ ಭಾಷಾವಾರು ಪ್ರಾಂತ ರಚನೆಯು ರಾಷ್ಟ್ರದ ಐಕ್ಯತೆ ಹಾಗೂ ಆರ್ಥಿಕ ಪ್ರಗತಿಗೆ ಧಕ್ಕೆ ತರಬಹುದು ಎಂಬ ಸಂಶಯವನ್ನು ಜೆ.ವಿ.ಪಿ ಸಮಿತಿ ವ್ಯಕ್ತಪಡಿಸಿತು.

8–5–1949ರಂದು ಕರ್ನಾಟಕ ಪ್ರಾಂತಿಕ ಸಮಿತಿಯು ಹುಬ್ಬಳ್ಳಿಯಲ್ಲಿ ಸಭೆ ಸೇರಿ, ತ್ರಿಮೂರ್ತಿ ಸಮಿತಿಯ ವರದದಿಯ ಬಗ್ಗೆ ತನ ಅತೃಪ್ತಿ ವ್ಯಕ್ತಪಡಿಸಿತು. ಅಂತೆಯೇ 20–5–1949ರಂದು ಹುಬ್ಬಳ್ಳಿಯಲ್ಲೇ ಕರ್ನಾಟಕ ಏಕೀಕರಣ ಮಹಾ ಸಮಿತಿಯು ಸಭೆ ಸೇರಿ 'ಕರ್ನಾಟಕ ಪ್ರಾಂತ ನಿರ್ಮಾಣವಾಗದಿದ್ದರೆ ಕನ್ನಡ ನಾಡಿನಲ್ಲೆಲ್ಲಾ ಅತ್ಯಂತ ಅತೃಪ್ತಿ ಮತ್ತು ಅಸಂತೋಷಗಳುಂಟಾಗಿ ಜನತೆಯ ತಾಳ್ಮೆಯು ಕೊನೆಯ ಮಟ್ಟಕ್ಕೆ ಮುಟ್ಟುತ್ತದೆ ' ಎಂದು ಗೊತ್ತುವಳಿ ಸ್ವೀಕರಿಸಿತು. ಅನಂತರ 23–5–1949ರಂದು ಎಂಟು ಸದಸ್ಯರ ಶಿಷ್ಟ ಮಂಡಳವು ಡೆಹರಾಡೂನ್‌ನಲ್ಲಿ ಕಾಂಗ್ರೆಸ್ ಸಮಿತಿಯನ್ನು ಕಂಡು ಕರ್ನಾಟಕದ ಜನತೆಗೆ ಆಗಿರುವ ಅತೀವ ನಿರಾಶೆಯನ್ನು ತಿಳಿಸಿ, ಭಾಷಾವಾರು ಪ್ರಾಂತ ರಚನೆಯು ಒಮ್ಮೆಗೇ ಆಗುವುದು ಅವಶ್ಯಕ ಮತ್ತು ನ್ಯಾಯಯುತ ಎಂದು ಮನವರಿಕೆ ಮಾಡಿತು. ಆದರೆ ಕೇಂದ್ರ ಕಾಂಗ್ರೆಸ್ ಸಮಿತಿಯು 16–11–1949ರಂದು ಕೇವಲ ಆಂಧ್ರಪ್ರದೇಶ ರಚನೆಗೆ ಗೊತ್ತುವಳಿ ಸ್ವೀಕರಿಸಿತು. ಇದನ್ನು ಪ್ರತಿಭಟಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು 3–12–1949ರಂದು ಸಭೆ ಸೇರಿ ಕರ್ನಾಟಕ ಪ್ರಾಂತ ರಚನೆಗೆ ಅಡ್ಡಿಯಾಗಿರುವ ಕಾಂಗ್ರೆಸ್‌ನ ನಿರ್ಣಯವನ್ನು ವಿರೋಧಿಸಿ, ಕೇಂದ್ರ ಹಾಗೂ ಪ್ರಾಂತ ಶಾಸನ ಸಭೆಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದ 12 ಜನರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ, ರಾಜೀನಾಮೆ ಪತ್ರಗಳನ್ನು ಕೆ.ಪಿ.ಸಿ.ಸಿ. ಅಧ್ಯಕ್ಷರಿಗೆ ತಲುಪಿಸಿದರು. ಆ ಹನ್ನೆರಡು ಜನರಲ್ಲಿ ಎಸ್.ನಿಜಲಿಂಗಪ್ಪನವರೂ ಒಬ್ಬರಾಗಿದ್ದರು.ಇದೇ ಸಂದರ್ಭದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯೂ ಕರ್ನಾಟಕ ಪ್ರಾಂತ ರಚನೆಯಲ್ಲಿ ಮೈಸೂರು ಮಹಾರಾಜರು ಅಡ್ಡಿಯಾಗುವುದಿಲ್ಲ ಎಂದು ತಿಳಿಸಿತ್ತು.

22–12–1949ರಂದು ಕಾಂಗ್ರೆಸ್ ಪಕ್ಷದ ಕೇಂದ್ರ ಕಾರ್ಯಕಾರೀ ಸಮಿತಿಯು ಸಮಾವೇಶಗೊಂಡಾಗ ಹಾಜರಿದ್ದ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಎಸ್.ನಿಜಲಿಂಗಪ್ಪನವರು ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಕನ್ನಡಿಗರ ಅಭಿಪ್ರಾಯಗಳನ್ನು ತಿಳಿಸಿ, ಆಗಲೇ ತಮ್ಮ ವಶಕ್ಕೆ ಬಂದಿದ್ದ 12 ರಾಜೀನಾಮೆಗಳನ್ನು ಸಮಿತಿಗೆ ಸಲ್ಲಿಸಿದರು. ಸಮಿತಿಯು ರಾಜೀನಾಮೆಗಳನ್ನು ಸ್ವೀಕರಿಸಲಿಲ್ಲ. ಈ ಮಧ್ಯೆ ಆಂಧ್ರಪ್ರದೇಶದ ರಚನೆಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ವಿಭಜನೆಗೆ ಆಗುತ್ತಿದ್ದ ಸನ್ನಾಹವನ್ನು ಆದವಾನಿಯ ಜನ ವಿರೋಧಿಸಿದರು. 9–1–1950ರಂದು ಗದಗದಲ್ಲಿ ನಡೆದ ಕೆ.ಪಿ.ಸಿ.ಸಿ.ಸಭೆಯು ಆಂಧ್ರಪ್ರದೇಶದ ರಚನೆಗೆ ಮುಂದಾಗಿ ಕರ್ನಾಟಕ ಪ್ರಾಂತ ರಚನೆಗೆ ವಿಳಂಬ ಮಾಡುತ್ತಿರುವ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ರಾಜೀನಾಮೆ ಸಲ್ಲಿಕೆಗೆ ಅನುಮತಿ ಕೇಳಿದರು.

26–1–1950ರಂದು ಭಾರತವು ಗಣರಾಜ್ಯವಾಯಿತು. ಆದರೆ ಭಾಷಾವಾರು ಪ್ರಾಂತ ರಚನೆ ಆಗಲಿಲ್ಲ. 20–4–1951ರಂದು ರಾಷ್ಟ್ರೀಯ ಕಾಂಗ್ರೆಸ ಅಧ್ಯಕ್ಷರಾದ ಪುರುಷೋತ್ತಮ ದಾಸ್ ಟಂಡನ್ ಬೆಂಗಳೂರಿಗೆ ಬಂದಿದ್ದಾಗ, ಬೆಂಗಳೂರಿನ ಏಕೀಕರಣ ಸಂಘವು ನಗರದ ಪ್ರಮುಖರ ಜೊತೆಗೆ ಅವರನ್ನು ಸನ್ಮಾನಿಸಿ, ಕರ್ನಾಟಕ ಪ್ರಾಂತ ರಚನೆಗೆ ಅವಕಾಶ ಕಲ್ಪಿಸಲು ಮನವಿ ಮಾಡಿತು. ಅದೇ ವರ್ಷ ಜುಲೈ ತಿಂಗಳ 13 ರಂದು ಬೆಂಗಳೂರಿನ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಟೌನ್‌ಹಾಲ್‌ನಲ್ಲಿ ಅಖಿಲ ಕರ್ನಾಟಕ ಪ್ರಾಂತ ರಚನಾ ಸಮ್ಮೇಳನ ನಡೆಯಿತು. ಅದೇ ಸಮಯದಲ್ಲಿ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯೂ ಸಮಾವೇಶಗೊಂಡಿತ್ತು. ಮಹಾರಾಷ್ಟ್ರ, ಮದ್ರಾಸ್ ಮತ್ತು ಆಂಧ್ರ ಪ್ರದೇಶದ ಪ್ರತಿನಿಧಿಗಳೆಲ್ಲ ಸೇರಿದ್ದ ಸಮಾವೇಶದಲ್ಲಿ ಎಲ್ಲರೂ ಕರ್ನಾಟಕ ಏಕೀಕರಣವನ್ನು ಬೆಂಬಲಿಸಿ ಮಾತನಾಡಿದರು.

**ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು :** ಕರ್ನಾಟಕದ ಅನೇಕ ನಾಯಕರಿಗೆ ಕಾಂಗ್ರೆಸ್‌ಅನ್ನು ನಂಬಿದರೆ ಕರ್ನಾಟಕ ಏಕೀಕರಣವು ಕನಸಿನ ಮಾತಾಗಬಹುದೆಂದು ತೋರಿತು. ಆ ಕಾರಣದಿಂದ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತನ್ನು ನಡೆಸಲು ಮುಂದಾದರು. ಹೊಸಮನಿ ಸಿದ್ದಪ್ಪನವರ ನೇತೃತ್ವದಲ್ಲಿ ಮೊದಲ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು 1951ರ ಮೇ 25 ಮತ್ತು 26ರಂದು ಸಮಾವೇಶಗೊಂಡಿತು. ಇದರಲ್ಲಿ ಕನ್ನಡ ಪ್ರದೇಶಗಳ ಬಹುತೇಕ ಎಲ್ಲ ರಾಜಕೀಯ ಪಕ್ಷಗಳೂ ಒಂದಾದವು. ಈ ಪರಿಷತ್ತಿನಲ್ಲಿ ಮುಂಬಯಿ, ಮದರಾಸು ಮತ್ತು ಹೈದರಾಬಾದ್ ಪ್ರಾಂತಗಳ ಕನ್ನಡ ಪ್ರದೇಶಗಳು, ಮೈಸೂರು ಮತ್ತು ಕೊಡಗು ರಾಜ್ಯಗಳನ್ನು ಸೇರಿಸಿ ಕೂಡಲೇ ಕರ್ನಾಟಕ ಪ್ರಾಂತ ರಚನೆ ಆಗಬೇಕು. ಹಾಗೆ ಆಗದಿದ್ದರೆ ಮುಂಬರುವ ಚುನಾವಣೆಗಳಲ್ಲಿ ಕರ್ನಾಟಕ ಪ್ರಾಂತ ರಚನೆಯ ಉದ್ದಿಶ್ಯವನ್ನು ಮುಖ್ಯವಾಗಿ ಹೊಂದಿರುವ ರಾಜಕೀಯ ಪಕ್ಷಗಳಿಗೆ ಬೆಂಬಲ ನೀಡಲಾಗುವುದು ಹಾಗೂ ಪ್ರಸ್ತುತ ರಾಜಕೀಯ ಅಧಿಕಾರ ಸ್ಥಾನಗಳಲ್ಲಿರುವ ಕರ್ನಾಟಕದ ಪ್ರತಿನಿಧಿಗಳು ತಮ್ಮ ಸ್ಥಾನಗಳಿಗೆ ಕೂಡಲೇ ರಾಜೀನಾಮೆ ನೀಡಬೇಕು ಎಂಬ ಪ್ರಮುಖ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು. ಗೊತ್ತುವಳಿಗಳ ಅನುಷ್ಠಾನಕ್ಕೆ ಸಮಿತಿಯೊಂದು ರಚಿತವಾಯಿತು ಮತ್ತು 1952ರಲ್ಲಿ ಚುನಾವಣೆಗಳು ನಡೆದಾಗ ಕರ್ನಾಟಕ ಏಕೀಕರಣ ಪಕ್ಷದ ಅಭ್ಯರ್ಥಿಗಳು ಗುಡಿಸಲಿನ ಗುರುತಿನ ಮೂಲಕ ಚುನಾವಣೆಯಲ್ಲಿ ಸ್ಪರ್ಧಿಸಿದರು.

**ಪೊಟ್ಟಿ ಶ್ರೀರಾಮುಲು ಉಪವಾಸ ಮತ್ತು ಮರಣ** : ಈ ಮಧ್ಯೆ ಆಂಧ್ರ ಪ್ರಾಂತ ರಚನೆಗೆ ಒತ್ತಾಯ ತೀವ್ರವಾಗಿ 15–8–1951ರಿಂದ ಸ್ವಾಮಿ ಸೀತಾರಾಮರು ತಿರುಪತಿಯಲ್ಲಿ ಆಮರಣಾಂತ ಉಪವಾಸ ಕೈಗೊಂಡರು. ಕೇಂದ್ರ ಮತ್ತು ಆಂಧ್ರ ಶಾಸನ ಸಭೆಗಳಲ್ಲಿ ಆಂಧ್ರ ಪ್ರಾಂತ ರಚನೆಯ ವಿಷಯ ಪ್ರಸ್ತಾಪಕ್ಕೆ ಬಂದಿತಾದರೂ ನಿರ್ಣಯಗಳ ಸ್ವೀಕಾರ ಆಗಲಿಲ್ಲ. 1952ರ ಸಾರ್ವತ್ರಿಕ ಚುನಾವಣೆಗಳು ಮುಗಿದ ಅನಂತರ ಜುಲೈ ಎರಡನೆಯ ವಾರ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಭಾಷಾವಾರು ಪ್ರಾಂತ ರಚನೆಯ ಗೊತ್ತುವಳಿಯನ್ನು ಮಂಡಿಸಿದವು. ಗೊತ್ತುವಳಿಯನ್ನು ವಿರೋಧಿಸಲು ಕಾಂಗ್ರೆಸ್ ಪಕ್ಷವು ತನ್ನ ಸದಸ್ಯರಿಗೆ ಆದೇಶ ನೀಡಿತು. ಆದರೆ ವಿಷಯದ ಬಗ್ಗೆ ಚರ್ಚೆ ನಡೆದಾಗ ಎಸ್.ನಿಜಲಿಂಗಪ್ಪನವರು ಭಾಷಾವಾರು ಪ್ರಾಂತ ರಚನೆಯ ಪರವಾಗಿಯೇ ವಿಚಾರಗಳನ್ನು ಮಂಡಿಸಿದರು. ಲೋಕಸಭೆಯಲ್ಲಿ ಗೊತ್ತುವಳಿಯು ಅತ್ಯಧಿಕ ಬಹುಮತದಿಂದ ಬಿದ್ದುಹೋಯಿತು. ಆಂಧ್ರ ಪ್ರಾಂತ ರಚನೆ ವಿಳಂಬವಾಗುತ್ತಿರುವುದನ್ನು ಸಹಿಸದ ತೆಲುಗರು ಪುನಃ ಸತ್ಯಾಗ್ರಹ, ಚಳವಳಿ ಇತ್ಯಾದಿಗಳನ್ನು ಆರಂಭಿಸಿದರು. ಆಗಲೇ ಆಂಧ್ರದ ಪೊಟ್ಟಿ ಶ್ರೀರಾಮುಲು ಅವರು 58 ದಿನಗಳ ಉಪವಾಸದ ಅನಂತರ 15–12–1952ರಂದು ನಿಧನರಾದರು. ಕೇಂದ್ರ ಸರ್ಕಾರವು ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿತು. 19–12–1952ರಂದು ಲೋಕಸಭೆಯಲ್ಲಿ ವಿಷಯದ ಪ್ರಸ್ತಾವನೆಯಾಗಿ, ಮದ್ರಾಸ್ ನಗರವನ್ನು ಹೊರತುಪಡಿಸಿ ಆಂಧ್ರ ಪ್ರಾಂತ ರಚನೆಗೆ ಮುಂದಾದ ಕೇಂದ್ರ ಸರ್ಕಾರವು, ಈ ಬಗ್ಗೆ ವರದಿ ನೀಡಲು ಕೆ.ಎನ್.ವಾಂಛೂ ಸಮಿತಿಯನ್ನು ನೇಮಿಸಿತು.

**ನಾನಲ್ ನಗರ ಅಧಿವೇಶನ :** 1953ರ ಜನವರಿ ತಿಂಗಳಿನಲ್ಲಿ ಹೈದರಾಬಾದ್‌ನ ನಾನಲ ನಗರದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ವಾರ್ಷಿಕಾಧಿವೇಸನ ನಡೆದಾಗ ಮೈಸೂರು ರಾಜ್ಯದ ಮುಖ್ಯ ಮಂತ್ರಿ ಕೆ.ಹನುಮಂತಯ್ಯನವರು ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ಸಂಸ್ಥಾನವು ಅಡ್ಡಿಯಾಗಿಲ್ಲ ಎಂದು ಸ್ಪಷ್ಟಪಡಿಸಿದರು. ಆ ಅಭಿಪ್ರಾಯವನ್ನು ಹಾರನಹಳ್ಳಿ ರಾಮಸ್ವಾಮಿ ಸಮರ್ಥಿಸಿದರು.

**ವಾಂಛೂ ಸಮಿತಿ :** ಆಂದ್ರ ಪ್ರಾಂತ ರಚನೆಯ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರವು ರಾಜಸ್ತಾನದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಕೆ.ಎನ್.ವಾಂಛೂ ಅವರನ್ನು 5–1–1953ರಂದು ನೇಮಿಸಿತು. 31–1–1953 ಅಂದರೆ ಕೇವಲ 26 ದಿನಗಳ ಒಳಗೆ ಆಯೋಗವು ವರದಿಯನ್ನು ಸಲ್ಲಿಸಬೇಕಾಗಿತ್ತು. ವಾಂಛೂ ಅನೇಕ ಸಂಘ–ಸಂಸ್ಥೆಗಳ ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಂದ ಮನವಿಗಳನ್ನು ಸ್ವೀಕರಿಸಿದರು.ವಾದ–ಪ್ರತಿ ವಾದಗಳನ್ನು ಕೇಳಿದರು. ಆಯೋಗವು ಕೆ.ಪಿ.ಸಿ.ಸಿ ಅಧ್ಯಕ್ಷ ಎಸ್.ನಿಜಲಿಂಗಪ್ಪ ಅವರನ್ನೂ ಭೇಟಿ ಮಾಡಿತ್ತು. 7–2–2953ರಂದು ವಾಂಛೂ ತಮ್ಮ ವರದಿಯನ್ನು ಸಲ್ಲಿಸಿದರು. ಹೈದರಾಬಾದ್ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಸೇರಿರುವ, ತೆಲುಗೇ ಹೆಚ್ಚು ಜನರ ಮಾತೃಭಾಷೆ ಆಗಿರುವ ಹನ್ನೊಂದು ಜಿಲ್ಲೆಗಳನ್ನು ಮಾತ್ರ ಸೇರಿಸಿ ಆಂಧ್ರ ಪ್ರಾಂತ ರಚನೆ ಮಾಡಲು ಆಯೋಗವು ಶಿಫಾರ್ಸು ಮಾಡಿತು. ಬಳ್ಳಾರಿ ಜಿಲ್ಲೆಯು ಆಂಧ್ರದೊಡನೆ ಸೇರಲು ಹಲವು ತೊಂದರೆಗಳಿದ್ದುದನ್ನು ಆಯೋಗವು ತಿಳಿಸಿತು. 1921ರಲ್ಲಿ ಕೇಳಕರ್ ಅವರ ಶಿಪಾರ್ಸಿನ ಮೇಲೆ ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೆ ಸೇರಿತ್ತು.

**ಮಿಶ್ರಾ ಸಮಿತಿ :** ಬಳ್ಳಾರಿ ಜಿಲ್ಲೆಯ ಬಗ್ಗೆ ಸ್ಪಷ್ಟ ತೀರ್ಮಾನ ಕೊಡಲು ವಿಫಲ ಆದ ವಾಂಛೂ ವರದಿಯನ್ನು ಆಧರಿಸಿ 25–3–1953ರಂದು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ನೀಡಿದ ಪ್ರಕಟಣೆಯ ಪ್ರಕಾರ ಬಳ್ಳಾರಿ ಜಿಲ್ಲೆಯನ್ನು ಒಂದೇ ಘಟಕವೆಂದು ಪರಿಗಣಿಸಲು ಸಾಧ್ಯವಿಲ್ಲವಾದ್ದರಿಂದ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಆಂಧ್ರ ಪ್ರದೇಶಕ್ಕೂ, ಹರಪನಹಳ್ಳಿ , ಹಡಗಲಿ, ಕೂಡ್ಲಿಗಿ, ಸೊಂಡೂರು ಮತ್ತು ಸಿರಗುಪ್ಪ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೂ ಸೇರಿಸಬಹುದಾದರೂ, ಮಿಶ್ರ ಭಾಷೆಯ ಬಳ್ಳಾರಿ ತಾಲ್ಲೂಕಿನ ಸಮಸ್ಯೆಯು ಕೇವಲ ಭಾಷೆಗೆ ಮಾತ್ರ ಸೀಮಿತವಾಗಿರದೆ, ತುಂಗಭದ್ರಾ ಅಣೆಕಟ್ಟೆಯ ಕಾರಣದಿಂದ ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳನ್ನೂ ಒಳಗೊಂಡಿರುವದರಿಂದ ಅದನ್ನು ಬಗೆಹರಿಸಲು ಭಾರತದ ರಾಷ್ಟ್ರಪತಿಗಳು ಹೈದರಾಬಾದ್‌ನ ಮುಖ್ಯ ನ್ಯಾಯಾಧೀಶ ಎಲ್.ಎಸ್.ಮಿಶ್ರಾ ಅವರನ್ನು 21–4–1953ರಂದು ನೇಮಿಸಿ, 15–5–1953ರ ಒಳಗೆ ವರದಿ ಸಲ್ಲಿಸಲು ಕೋರಿದರು. ವಾಂಛೂ ಸಮಿತಿಯ ನೇಮಕವಾದಾಗಲೇ ಕರ್ನಾಟಕ ಪ್ರಾಂತ ರಚನೆ ವಿಳಂಬವಾಗುತ್ತಿದೆ ಎಂದು ಕರ್ನಾಟಕ ಏಕೀಕರಣ ವಾದಿಗಳಿಗೆ ಅತೃಪ್ತಿ

ಮತ್ತು ಅಸಂತೋಷಗಳಾಗಿದ್ದವು. ಇದರಿಂದ ಬೇಸತ್ತ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು ಕೇಂದ್ರ ಸರ್ಕಾರದ ಕ್ರಮವನ್ನು ಪ್ರತಿಭಟಿಸಿತು. ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷಗಳು ಏಕೀಕರಣ ಬೇಡಿಕೆಯನ್ನು ಪ್ರಧಾನ ಮಾಡಿದವು. ಈ ಬೇಡಿಕೆಗೆ ಹಿರಿಯ ರಾಜಕೀಯ ನಾಯಕರ ಮಾತ್ರವಲ್ಲದೆ ಜನತೆಯ ಬೆಂಬಲವೂ ದೊರೆಯಿತು.

**ಅದರಗುಂಚಿ ಶಂಕರಗೌಡ ಪಾಟೀಲರ ಉಪವಾಸ ಸತ್ಯಾಗ್ರಹ :** ಮಿಶ್ರಾ ಸಮಿತಿಯ ನೇಮಕದಿಂದ ಜನತೆಗೆ ಆಗಿದ್ದ ಅಸಮಾಧಾನದ ಪ್ರತೀಕವಾಗಿ ಅದರಗುಂಚಿ ಶಂಕರಗೌಡ ಪಾಟೀಲರ ಆಮರಣಾಂತ ಉಪವಾಸ ಆರಂಭವಾಯಿತು. ಹುಬ್ಬಳ್ಳಿಯ ಸಮೀಪದ ಸಣ್ಣ ಹಳ್ಳಿಯಲ್ಲೇ ಯಾವ ಪೂರ್ವ ಪ್ರಚಾರವೂ ಇಲ್ಲದೆ ಆರಂಭವಾದ ಅದರಗುಂಚಿ ಶಂಕರಗೌಡ ಪಾಟೀಲರ ಆಮರಣಾಂತ ಉಪವಾಸ ಸತ್ಯಾಗ್ರಹ ಕ್ರಮೇಣ ರಾಜಕೀಯ ನಾಯಕರು ಮತ್ತು ಪತ್ರಿಕಾ ಮಾಧ್ಯಮದವರನ್ನು ಆಕರ್ಷಿಸಿತು. 28–3–1953ರಂದು ಅದರಗುಂಚಿಯ ಕಲ್ಮೇಶ್ವರ ದೇವಾಲಯದಲ್ಲೇ ಉಪವಾಸ ಸತ್ಯಾಗ್ರಹ ಆರಂಭವಾಯಿತು. ಎಸ್.ನಿಜಲಿಂಗಪ್ಪನವರೂ ಸೇರಿದಂತೆ ಹಲವಾರು ನಾಯಕರು ಅದರಗುಂಚಿಗೆ ಹೋಗಿ ಶಂಕರಗೌಡ ಪಾಟೀಲರನ್ನು ಕಂಡರು. ಆ ಸಂದರ್ಭದಲ್ಲಿ ಬೆನ್ನಿನ ಮಣಿಶಿರದ ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಜಯದೇವಿ ತಾಯಿ ಲಿಗಾಡೆ ಅವರು, ತಮ್ಮ ಉಪವಾಸ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿ, ರಕ್ತಾಂಕಿತ ಪತ್ರವನ್ನು ಬರೆದಿದ್ದರೆಂದು ಶಂಕರಗೌಡ ಪಾಟೀಲರು ತಮ್ಮ ಅಪ್ರಕಟಿತ 'ನನ್ನ ದಿನಚರಿ'ಯಲ್ಲಿ ದಾಖಲಿಸಿದ್ದಾರೆ. ಶಂಕರಗೌಡ ಪಾಟೀಲರ ಉಪವಾಸ ಸತ್ಯಾಗ್ರಹದ ವಿಷಯವನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿದ ಅಳವಂಡಿ ಶಿವಮೂರ್ತಿಸ್ವಾಮಿ ಅವರು, ಶೀಘ್ರವೇ ಕರ್ನಾಟಕ ಪ್ರಾಂತ ರಚನೆ ಆಗದಿದ್ದರೆ ಪರಿಸ್ಥಿತಿ ಉಲ್ಬಣಗೊಳ್ಳುತ್ತದೆ ಎಂಬ ಸೂಚನೆ ನೀಡಿದರು.ಮುಂಬಯಿ ಮತ್ತು ಹೈದರಾಬಾದ್ ಕರ್ನಾಟಕದ ಬಹುತೇಕ ಎಲ್ಲ ಭಾಗಗಳಿಂದ ಅನೇಕರು ಅದರಗುಂಚಿಗೆ ಬಂದು ತಮ್ಮ ಬೆಂಬಲ ಸೂಚಿಸಿದರು. ಕರ್ನಾಟಕ ಏಕೀಕರಣ ಸಮಸ್ಯೆಯು ಕೇವಲ ಕೆಲವು ರಾಜಕೀಯ ನಾಯಕರ ಸಮಸ್ಯೆ ಆಗಿ ಉಳಿಯದೆ ಇಡೀ ಜನತೆಯ ವಿಷಯವಾಗಿ ಪರಿಣಮಿಸಿತು.

**ಹುಬ್ಬಳ್ಳಿ ಗಲಭೆ :** 19–4–1953ರಂದು ಹುಬ್ಬಳ್ಳಿಯ ಪುರಸಭಾ ಭವನದಲ್ಲಿ ಕೆ.ಪಿ.ಸಿ.ಸಿ.ಯ ವಿಶೇಷ ಕಾರ್ಯಕಾರೀ ಸಮಿತಿ ಸಭೆ ನಡೆಯಲಿತ್ತು. ಇದು ಕಾಂಗ್ರೆಸ್ಸೇತರ ಪಕ್ಷಗಳ ನಾಯಕರಿಗೂ ತಿಳಿದಿತ್ತು. ರಾಜೀನಾಮೆ ನೀಡುತ್ತೇವೆ ಎಂದು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಾ, ಯಾವುದೇ ರೀತಿಯ ನಿರ್ಧಾರಕ್ಕೆ ಅವಕಾಶ ನೀಡದ ಕಾಂಗ್ರೆಸ್ ನಾಯಕರಿಂದ ರಾಜೀನಾಮೆ ಕೇಳಲು ಜನ ಸಿದ್ಧರಾದರು. ಹಳ್ಳಿ ಹಳ್ಳಿಗಳಿಂದ ಚಕ್ಕಡಿಗಳಲ್ಲಿ ಹುಲ್ಲು ಹೇರಿಕೊಂಡು ಬಂದ ಸುಮಾರು ಇಪ್ಪತ್ತೈದು ಸಾವಿರ ಜನ ಹುಬ್ಬಳ್ಳಿಯ ಗುಳಕವ್ವನ ಕಟ್ಟೆಯಲ್ಲಿ ಜಮಾಯಿಸಿದರು. ಅದೇ ಸಂದರ್ಭದಲ್ಲಿ ಅದೇ ಮೈದಾನದಲ್ಲಿ ಒಂದು ಸರ್ಕಸ್ ಕಂಪೆನಿ ಸಹ ಪ್ರದರ್ಶನ ನಡೆಸಿತ್ತು. ಬಹುತೇಕ ಕರ್ನಾಟಕದ ಎಲ್ಲ ಭಾಗಗಳ ಜನ ಅಲ್ಲಿ ಸೇರಿದ್ದರು. ಪುರಭವನಕ್ಕೆ ಕಾಂಗ್ರೆಸ್ ನಾಯಕರು ಆಗಮಿಸುತ್ತಿದ್ದಂತೆಯೇ ಜನರು ಧಿಕ್ಕಾರ ಹೇಳುತ್ತಾ ಸ್ವಾಗತಿಸುತ್ತಿದ್ದರು. ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಹೋದ ಕೆಲವರು ಕಾಂಗ್ರೆಸ್ ನಾಯಕರಿಗೆ ಅರಿಶಿನ–ಕುಂಕುಮ ಹಚ್ಚಿ, ಬಳೆ ತೊಡಿಸಿದರು. ಹಳ್ಳಿಕೇರಿ ಗುದ್ಲೆಪ್ಪನವರ ಜೀಪಿಗೆ ಯಾರೋ ಬೆಂಕಿ ಹಚ್ಚಿದರು. ಜನರನ್ನು ನಿಯಂತ್ರಿಸುವುದು ಕಷ್ಟ ಎಂದು ತಿಳಿದ ಪೋಲೀಸರು ಲಾಠೀಛಾರ್ಜ್‌ಗೆ ಆಜ್ಞೆ ಮಾಡಿದರು. ಅದಕ್ಕೆ ಬೆದರದ ಜನ ಲಾಠಿಗಳಿಗೆ ಎದೆಯೊಡ್ಡಿ ನಿಂತರು. ಲಾಠೀಛಾರ್ಜ್ ಪರಿಣಾಮಕಾರಿ ಆಗಲಿಲ್ಲ ಎಂದು ಪೋಲೀಸರು ಗೋಲೀಬಾರ್‌ಗೆ ಆದೇಶ ನೀಡಿದರು. ಜನರು ಅದಕ್ಕೂ ಎದೆಯೊಡ್ಡಿ ನಿಂತರು. ಈ ಎಲ್ಲ ವಿಷಯಗಳನ್ನು ಸ್ಥಳೀಯ ಪತ್ರಿಕೆಗಳಲ್ಲದೆ ನ್ಯೂಯಾರ್ಕ್ ಟೈಂಸ್ ಪತ್ರಿಕೆಯು ಮುಖ ಪುಟದಲ್ಲೇ ವರದಿ ಮಾಡಿತು. ಆ ಗಲಭೆಯಲ್ಲಿ ಕೆಲವರನ್ನು ಬಂಧಿಸಿ, ವಿಚಾರಣೆಗೆ ಗುರಿ ಪಡಿಸಲಾಯಿತು. ಬಂಧಿತರಾಗಿದ್ದವರ ಪರವಾಗಿ ಎಸ್.ಆರ್.ಬೊಮ್ಮಾಯಿ ಅವರು ವಾದಿಸಿದರು. ಹುಬ್ಬಳ್ಳಿಯಲ್ಲಿ ಒಂದೆಡೆ ಗಲಭೆ ಆದರೆ, ಮತ್ತೊಂದೆಡೆ ಕೆ.ಪಿ.ಸಿ.ಸಿ. ಸಭೆ ನಡೆದು ಗದ್ದಲದ ನಡುವೆಯೇ ಕರ್ನಾಟಕ ಏಕೀಕರಣದ ಪರವಾಗಿ ನಿರ್ಣಯವನ್ನು ಸ್ವೀಕರಿಸಲಾಯಿತು.

ಹುಬ್ಬಳ್ಳಿಯ ಗಲಭೆಯ ನಂತರ ಕರ್ನಾಟಕದ ಕಾಂಗ್ರೆಸ್ ನಾಯಕರು ಪ್ರಧಾನ ಮಂತ್ರಿ ನೆಹರೂ ಅವರನ್ನು ಏಕೀಕರಣಕ್ಕೆ ಒತ್ತಾಯಿಸತೊಡಗಿದರು. ಕಾಂಗ್ರೆಸ್ಸೇತರ ಪಕ್ಷಗಳ ಕೆಲವು ನಾಯಕರು ರಾಜ್ಯ ನಿರ್ಮಾಣವನ್ನೇ ಪ್ರಮುಖ ಗುರಿಯಾಗಿಟ್ಟುಕೊಂಡು ರೂಪಿಸಿದ ಸಂಸ್ಥೆಯೇ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು.

**ಮಿಶ್ರಾ ಸಮಿತಿ :** ಈ ಮೊದಲೇ ಪ್ರಸ್ತಾಪಿಸಿರುವಂತೆ 21–4–1953ರಂದು, ಅಂದರೆ ಹುಬ್ಬಳ್ಳಿ ಗಲಭೆ ನಡೆದ ಎರಡು ದಿನಕ್ಕೆ ಬಳ್ಳಾರಿ ನಗರ ಮತ್ತು ತಾಲ್ಲೂಕಿನ ಸಮಸ್ಯೆಯ ಪರಿಶೀಲನೆಗೆ ಎಲ್.ಎಸ್.ಮಿಶ್ರಾ ಸಮಿತಿಯ ನೇಮಕ ಆಯಿತು. ಮಿಶ್ರಾ ಅವರು 27–4–1953ರಿಂದಲೇ ಬಳ್ಳಾರಿಯಲ್ಲಿ ವಿಚಾರಣೆಯನ್ನು ಆರಂಭಿಸಿದರು. 10–5–1953ರಂದು ಮಿಶ್ರಾ ವರದಿಯು ಸಲ್ಲಿಕೆಯಾಗಿ, 13–8–1953ರಿಂದ 19–8–1953ರವರೆಗೆ ಲೋಕಸಭೆಯಲ್ಲಿ ಆ ಬಗ್ಗೆ ಚರ್ಚೆನಡೆಯಿತು. ಚರ್ಚೆಯಲ್ಲಿ ಕರ್ನಾಟಕದ ಪರವಾಗಿ ಪ್ರಮುಖವಾಗಿ ಎಸ್.ನಿಜಲಿಂಗಪ್ಪ, ಅಳವಂಡಿ ಶಿವಮೂರ್ತಿ ಸ್ವಾಮಿ, ಟಿ.ಸುಬ್ರಹ್ಮಣ್ಯಂ, ಸ್ವಾಮಿ ರಮಾನಂದ ತೀರ್ಥ, ಎಂ.ಎಸ್.ಗುರುಪಾದ ಸ್ವಾಮಿ, ಎನ್.ರಾಚಯ್ಯ ಅವರು ಪಾಲ್ಗೊಂಡರು. ಇವರೆಲ್ಲರ ಚರ್ಚೆಯಲ್ಲಿ ಬಳ್ಳಾರಿಯಂತೆಯೇ ಮದ್ರಾಸ್ ಸರ್ಕಾರಕ್ಕೆ ಸೇರಿಕೊಂಡ ದಕ್ಷಿಣ ಕನ್ನಡ, ನೀಲಗಿರಿ, ಕೊಳ್ಳೇಗಾಲ ಭಾಗಗಳೂ ಆ ಸಂದರ್ಭದಲ್ಲೇ ಮೈಸೂರು ಸಂಸ್ಥಾನಕ್ಕೆ ಸೇರುವುದು ಸೂಕ್ತ ಎಂಬ ವಿಚಾರವು ಪ್ರಮುಖವಾಗಿತ್ತು. ಸಚಿವ ಸಂಪುಟವು ಮಿಶ್ರಾ ವರದಿಯನ್ನು 20–5–1953ರಂದು ಸ್ವೀಕರಿಸಿತು. ಬಳ್ಳಾರಿ ತಾಲ್ಲೂಕು ಇಡಿಯಾಗಿ, ಕೆಲವು ತಾತ್ಕಾಲಿಕ ಏರ್ಪಾಡುಗಳಿಗೆ ಒಳಪಟ್ಟು ಮೈಸೂರು ಸಂಸ್ಥಾನಕ್ಕೆ ಸೇರಬೇಕು ಎಂಬುದು ಮಿಶ್ರಾ ವರದಿಯ ಪ್ರಮುಖ ಅಂಶವಾಗಿತ್ತು.

**ಅ.ಕ.ರಾ.ನಿ. ಪರಿಷತ್ತು :** ಅ.ಕ.ರಾ.ನಿ.ಪರಿಷತ್ತಿನ ಮೊದಲ ಅಧಿವೇಶನ 28–5–1953ರಂದು ದಾವಣಗೆರೆಯಲ್ಲಿ ನಡೆಯಿತು. ಕೆ.ಆರ್.ಕಾರಂತ ಅದರ ಅಧ್ಯಕ್ಷತೆ ವಹಿಸಿದ್ದರು. ಉದ್ಘಾಟನೆ ಮಾಡಿದವರು ಅಳವಂಡಿ ಶಿವಮೂರ್ತಿ ಸ್ವಾಮಿ. 1953ರ ಸೆಪ್ಟೆಂಬರ್ ಮೊದಲ ವಾರದಲ್ಲಿ 'ಕರ್ನಾಟಕ ವಾರ'ವನ್ನು ಆಚರಿಸಲು ಅ.ಕ.ರಾ.ನಿ.ಪರಿಷತ್ತು ಕರೆ ನೀಡಿತು. ವಿದ್ಯಾರ್ಥಿಗಳು, ವ್ಯಾಪಾರಿಗಳು, ನಾಗರಿಕರು ಒಂದಾಗಿ ಹರತಾಳ, ಸಭೆ, ಮೆರವಣಿಗೆಗಳನ್ನು ನಡೆಸಿದರು. ಅ.ಕ.ರಾ.ನಿ.ಪರಿಷತ್ತಿನ ಹಲವು ಮುಖಂಡರನ್ನು ಮುಂಬಯಿ ಸರ್ಕಾರವು ಬಂಧಿಸಿತು. ಇದನ್ನು ಪ್ರತಿಭಟಿಸಿ ಅ.ಕ.ರಾ.ನಿ.ಪರಿಷತ್ತು 26–9–1953ರಂದು ಪ್ರತಿಭಟನಾ ದಿನವನ್ನು ಆಚರಿಸಿತು.

14–9–1953ರಂದು ಎಸ್.ನಿಜಲಿಂಗಪ್ಪನವರ ನೇತೃತ್ವದಲ್ಲಿ ಕೆ.ಪಿ.ಸಿ.ಸಿ.ನಿಯೋಗವು ಪ್ರಧಾನಿ ನೆಹರೂ ಅವರನ್ನು ಭೇಟಿ ಮಾಡಿ, ಹುಬ್ಬಳ್ಳಿಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೋಲಾಗಿ, ಕರ್ನಾಟಕ ಏಕೀಕರಣ ಪಕ್ಷದ ಅಭ್ಯರ್ಥಿಗೆ ಗೆಲುವಾಗಿರುವುದನ್ನು ಪ್ರಸ್ತಾಪಿಸಿದರು. ಆಗ ನೆಹರೂ ಅವರು ಇಡಿಯಾಗಿ ಭಾರತಕ್ಕೆ ಸಂಬಂಧಿಸಿದಂತೆಯೇ ರಾಜ್ಯ ಪುನರ್ವಿಂಗಡಣಾ ಆಯೋಗವೊಂದನ್ನು ಸಧ್ಯದಲ್ಲೇ ರಚಿಸುವುದಾಗಿ ಭರವಸೆ ನೀಡಿದರು.

**ಮೈಸೂರಿಗೆ ಬಳ್ಳಾರಿ ಸೇರ್ಪಡೆ :** 1–10–1953ರಂದು ಆಂಧ್ರ ಪ್ರಾಂತದ ಉದಯವಾಯಿತು. ಅದೇ ದಿನ ಬಳ್ಳಾರಿಯು ಮೈಸೂರು ಸಂಸ್ಥಾನದೊಡನೆ ವಿಲೀನಗೊಂಡಿತು. 2–10–1953ರಂದು ಬಳ್ಳಾರಿಯ ಬಿ.ಡಿ.ಎ.ಎ. ಮೈದಾನದಲ್ಲಿ ಬಳ್ಳಾರಿ–ಮೈಸೂರು ವಿಲೀನ ಸಮಾರಂಭ ನಡೆಯಿತು. ಅದರಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆ.ಹನುಮಂತಯ್ಯ ಪಾಲ್ಗೊಂಡು, ಬಳ್ಳಾರಿಯ ಜನತೆಯನ್ನು ಮೈಸೂರು ರಾಜ್ಯಕ್ಕೆ ಸ್ವಾಗತಿಸಿದರು. ಈ ಸಂತೋಷದ ಸಮಾರಂಭಕ್ಕೆ ಸಿದ್ಧತೆ ಮಾಡುತ್ತಿದ್ದ ರಂಜಾನ್ ಸಾಹೇಬ್ ಎಂಬ ಕನ್ನಡ ಪ್ರೇಮಿ ಕೆಲವು ದುಷ್ಟರ ಸಂಚಿಗೆ ಸಿಕ್ಕಿ 30–9–1953ರ ರಾತ್ರಿ ಆಸಿಡ್ ಬಲ್ಬ್‌ಗೆ ಬಲಿಯಾದದ್ದು ಆ ಸಂದರ್ಭದ ಕಹಿ ನೆನಪಾಗಿದೆ.

ಅ.ಕ.ರಾ.ನಿ.ಪರಿಷತ್ತಿನ ಎರಡನೆಯ ಅಧಿವೇಶನವು 3–12–1953ರಂದು ಹಂಪೆಯಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿಯವರನ್ನು ಪರಿಷತ್ತು ತನ್ನ 'ಡಿಕ್ಟೇಟರ್'ಎಂದು ನಾಮಕರಣ ಮಾಡಿತು.

22–12–1953ರಂದು ನೆಹರೂ ಅವರು ಲೋಕಸಭೆಯಲ್ಲಿ ಭಾರತದ ರಾಜ್ಯಗಳ ಪುನರ್ವಿಂಗಡನೆಗಾಗಿ ಫಜಲ್ ಆಲಿ ಅವರ ಅಧ್ಯಕ್ಷತೆಯಲ್ಲಿ ವರಿಷ್ಠ ಸಮಿತಿಯೊಂದನ್ನು ನೇಮಿಸಲಿರುವುದಾಗಿ ಘೋಷಿಸಿದರು. 29–12–1953ರಂದು ರಾಜ್ಯ ಪುನರ್ವಿಂಗಡಣಾ ಆಯೋಗದ ನೇಮಕವಾಯಿತು.

**ರಾಜ್ಯ ಪುನರ್ವಿಂಗಡಣಾ ಆಯೋಗ :** ಆಯೋಗದ ಅಧ್ಯಕ್ಷರಾಗಿ ಒರಿಸ್ಸ ರಾಜ್ಯಪಾಲರಾಗಿದ್ದ ಫಜಲ್ ಅಲಿ ಮತ್ತು ಸದಸ್ಯರಾಗಿ ರಾಜ್ಯಸಭಾ ಸದಸ್ಯ ಹೃದಯನಾಥ ಕುಂಜ್ರೂ ಮತ್ತು ಈಜಿಪ್ಟಿನಲ್ಲಿ ಭಾರತದ ರಾಯಭಾರಿಯಾಗಿದ್ದ ಕೆ.ಎಂ.ಪಣಿಕ್ಕರ್ ನಾಮಕರಣಗೊಂಡಿದ್ದರು. 30–6–1955ರ ಒಳಗೆ ವರದಿಯನ್ನು ಸಲ್ಲಿಸಲು ಆಯೋಗಕ್ಕೆ ಸೂಚನೆ ನೀಡಲಾಯಿತು.

23–2–1954ರಂದು ಆಯೋಗವು ನೀಡಿದ ಪತ್ರಿಕಾ ಪ್ರಕಟಣೆಗೆ ಉತ್ತರವಾಗಿ ಸುಮಾರು 1,52,250 ಮನವಿಗಳು ಸ್ವೀಕೃತವಾದುವು. ಅವುಗಳಲ್ಲಿ ಸುಮಾರು 2000 ಮನವಿಗಳು ವಿಸ್ತೃತವಾಗಿದ್ದವು. ಜೊತೆಗೆ 1954ರ ಮಾರ್ಚ್ ತಿಂಗಳಿನ ಆರಂಭದಲ್ಲಿ ಆರಂಭವಾದ ಗೌಪ್ಯ ಸಂದರ್ಶನ ಕಾರ್ಯಕ್ರಮ ಮುಗಿದದ್ದು 1954ರ ಅಂತ್ಯಕ್ಕೆ . 8–4–1954ರಿಂದ ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿದ ಆಯೋಗವು ಸುಮಾರು 9000 ವ್ಯಕ್ತಿಗಳನ್ನು ಸಂದರ್ಶಿಸಿತು. ಅಂತಿಮವಾಗಿ ಆಯೋಗವು ತನ್ನ ವರದಿಯನ್ನು 30–9–1955ರಂದು ಸಲ್ಲಿಸಿತು.

ನೇಮಕಗೊಂಡ ತಕ್ಷಣವೇ ತನ್ನ ಕಾರ್ಯವನ್ನು ಆರಂಭಿಸಿದ ಆಯೋಗವು ವಿಳಂಬಕ್ಕೆ ಅವಕಾಶವಿಲ್ಲದಂತೆ ಕಾರ್ಯತತ್ಪರವಾಯಿತು. 1954ರಲ್ಲಿ ಕಲ್ಕತ್ತೆಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ರಾಜ್ಯ ಪುನರ್ವಿಂಗಡಣೆಗೆ ಸಂಬಂಧಿಸಿದಂತೆ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಮನವಿಯನ್ನು ಸಲ್ಲಿಸಬಹುದೆಂದು ತೀರ್ಮಾನವಾಯಿತು. ಅನಂತರ

ಹುಬ್ಬಳ್ಳಿಯಲ್ಲಿ 4–2–1954ರಂದು ನಡೆದ ಕೆ.ಪಿ.ಸಿ.ಸಿ. ಮಹಾಸಭೆಯು, 29–4–1949ರಂದು ದಾವಣಗೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಪ್ರತಿನಿಧಿಗಳ ಸಮ್ಮೇಳನದಲ್ಲಿ ಬಿ.ಬಸವಲಿಂಗಪ್ಪನವರು ಮಂಡಿಸಿ, ಕೋ.ಚೆನ್ನಬಸಪ್ಪನವರು ಅನುಮೋದಿಸಿದ್ದ ನಿರ್ಣಯದ ಪ್ರಕಾರ ಕೆ.ಪಿ.ಸಿ.ಸಿ.ಯು ಎಲ್ಲಾ ಕನ್ನಡಿಗರ ಪರವಾಗಿ ಮನವಿಯನ್ನು ಸಿದ್ಧಪಡಿಸಿ, ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಲು ವ್ಯವಸ್ಥೆ ಮಾಡುವ ಅಧಿಕಾರವನ್ನು ಎಸ್.ನಿಜಲಿಂಗಪ್ಪನವರಿಗೆ ನೀಡಿತು.

**ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಮನವಿ ಸಲ್ಲಿಕೆ :** ಆರ್.ಎ.ಜಹಗೀರದಾರ್ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಸಮಿತಿಯು, ಆ ವರೆಗಿನ ಎಲ್ಲಾ ಬೆಳವಣಿಗೆಗಳನ್ನೂ ಗಮನದಲ್ಲಿಟ್ಟುಕೊಂಡು, ಆವರೆಗಿನ ಎಲ್ಲಾ ಅಧ್ಯಯನಗಳನ್ನು ಆಧರಿಸಿ ಸಿದ್ಧಪಡಿಸಿದ ಮನವಿಯನ್ನು ಆಯೋಗಕ್ಕೆ ಸಲ್ಲಿಸಿತು. ಇಡಿಯಾಗಿ ಮೈಸೂರು ಸಂಸ್ಥಾನ, ಮುಂಬಯಿ ಕರ್ನಾಟಕದ ಧಾರವಾಡ, ಉತ್ತರ ಕನ್ನಡ ಜಿಲ್ಲೆ, ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳು ಸಂಪೂರ್ಣವಾಗಿ ಮತ್ತು ಅವುಗಳಿಗೆ ಹೊಂದಿಕೊಂಡ ಕೆಲವು ಪ್ರದೇಶಗಳು, ಹೈದರಾಬಾದ್ ಭಾಗದ ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳು, ಮದ್ರಾಸ್ ರಾಜ್ಯದ ದಕ್ಷಿಣ ಕನ್ನಡ ಹಾಗೂ ನೀಲಗಿರಿ ಜಿಲ್ಲೆಗಳು ಮತ್ತು ಹೊಂದಿಕೊಂಡ ಕೊಯಮತ್ತೂರು, ಸೇಲಂ ಜಿಲ್ಲೆಯ ಭಾಗಗಳು ಹಾಗೂ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ ಮತ್ತು ಕರ್ನೂಲು ಜಿಲ್ಲೆಯ ಕೆಲವು ಭಾಗಗಳು ಮತ್ತು ಕೊಡಗು ಜಿಲ್ಲೆಯನನ್ನಿ ಸೇರಿಸಿ, ಕರ್ನಾಟಕ ರಾಜ್ಯವನ್ನು ನಿರ್ಮಿಸಲು ಕೆ.ಪಿ.ಸಿ.ಸಿ.ಯು ಮನವಿ ಮಾಡಿತು. ಅಂತೆಯೇ ದಾವಣಗೆರೆಯ ಅಖಿಲ ಕರ್ನಾಟಕ ಪ್ರತಿನಿಧಿ ಸಮಾವೇಶ, ಗುಡಿಬಂಡೆ ಪುರಸಭೆ, ಹುಬ್ಬಳ್ಳಿಯ ಬಹುತೇಕ ಸಂಘ–ಸಂಸ್ಥೆಗಳು ಮತ್ತು ಗಣ್ಯರು, ಅ.ಕ.ರಾ.ನಿ. ಪರಿಷತ್ತು, ಮಂಗಳೂರಿನ ಅನೇಕ ಸಂಘ–ಸಂಸ್ಥೆಗಳು, ಬೆಳಗಾವಿಯಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸಮಿತಿ, ಬೆಳಗಾಂವಿ ನಗರ ಕಾಂಗ್ರೆಸ್ ಸಮಿತಿ, ಕೆ.ಎಲ್.ಇ.ಸೊಸೈಟಿ ಮುಂತಾದ ಸಂಘ–ಸಂಸ್ಥೆಗಳಲ್ಲದೆ ಅಲ್ಲಿಯ ಅಲ್ಪಸಂಖ್ಯಾತ ಜನಾಂಗದವರು ತಾವು ಕರ್ನಾಟಕದ ಪರ ಇರುವುದನ್ನು ತಿಳಿಸಿದರು. ಬೆಂಗಳೂರಿನಲ್ಲೂ ಆಯೋಗವು ಹಲವಾರು ಗಣ್ಯರನ್ನು ಕಂಡು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಮುಖ್ಯಮಂತ್ರಿ ಕೆ.ಹನುಮಂತಯ್ಯನವರು, ರಾಜ್ಯದಾದ್ಯಂತ ಸಂಚರಿಸುತ್ತಾ ಸಂಸ್ಥಾನವು ಕರ್ನಾಟಕ ಏಕೀಕರಣದ ಪರ ಇರುವುದನ್ನು ಜನತೆಗೆ ಮನದಟ್ಟು ಮಾಡಿಕೊಡುತ್ತಿದ್ದರು. 10–10–1955 ರಂದು ಆಯೋಗವು ಕೇಂದ್ರ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ರಾ.ಪು.ಆಯೋಗವು ಶಿಫಾರಸು ಮಾಡಿದ್ದ ಪ್ರಕಾರ ಕರ್ನಾಟಕವು ಈ ಕೆಳಕಂಡ ಪ್ರದೇಶಗಳನ್ನು ಸೇರಿಸಿಕೊಂಡು ರಚನೆ ಆಗಬೇಕಾಗಿತ್ತು.

1. ಹಾಲಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಿರುಗುಪ್ಪ, ಹೊಸಪೇಟೆ ತಾಲ್ಲೂಕುಗಳು ಮತ್ತು ತುಂಗಭದ್ರಾ ಅಣೆ ಕಟ್ಟು ಇರುವ ಮಲ್ಲಾಪುರ ಉಪ ತಾಲ್ಲೂಕಿನ ಸ್ವಲ್ಪ ಭಾಗಗಳನ್ನು ಬಿಟ್ಟು ಈಗ ಇರುವ ಮೈಸೂರು ರಾಜ್ಯ.

2. ಮುಂಬಯಿ ರಾಜ್ಯದ ದಕ್ಷಿಣದ ಧಾರವಾಡ, ಬಿಜಾಪುರ, ಉತ್ತರ ಕನ್ನಡ ಮತ್ತು ಚಾಂದಗಡ ತಾಲ್ಲೂಕನ್ನುಳಿದು ಬೆಳಗಾಂವಿ – ಈ ನಾಲ್ಕೂ ಜಿಲ್ಲೆಗಳು

3. ರಾಯಚೂರು ಮತ್ತು ಗುಲಬರ್ಗ ಜಿಲ್ಲೆಗಳು

4. ಕಾಸರಗೋಡು ತಾಲ್ಲೂಕನ್ನುಳಿದು ದಕ್ಷಿಣ ಕನ್ನಡ ಜಿಲ್ಲೆ

5. ಮದ್ರಾಸ್ ರಾಜ್ಯದ ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು

6. ಕೊಡಗು

ಈ ವರದಿಯಿಂದ ಕನ್ನಡಿಗರಿಗೆ ಆಘಾತವಾಯಿತು. ಕೇವಲ ಎರಡು ವರ್ಷದ ಹಿಂದೆ ಸೇರಿದ್ದ ಬಳ್ಳಾರಿ ಜಿಲ್ಲೆಯ ಮೂರು ತಾಲ್ಲೂಕುಗಳು ,ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲ್ಲೂಕು, ಇಡಿಯಾಗಿ ಬೀದರ್ ಜಿಲ್ಲೆ ಕರ್ನಾಟಕಕ್ಕೆ ಸೇರಿರಲಿಲ್ಲ. ಕಾಸರಗೋಡಿನ ಜನರಿಗೆ ನೋವಾಗಿತ್ತು. ಅದನ್ನು ಆ ಭಾಗದ ಕವಿ ಕಯ್ಯಾರ ಕಿಂಜ್ಞಣ್ಣರೈ ತಮ್ಮ 'ಬೆಂಕಿ ಬಿದ್ದಿದೆ ಮನೆಗೆ 'ಕವನದಲ್ಲಿ ಅಭಿವ್ಯಕ್ತಿ ಮಾಡಿದ್ದಾರೆ. ಬಳ್ಳಾರಿಯ ಭಾಗದ ಜನರು 16–11–1955ರಿಂದ ನೀರಿನ ಸತ್ಯಾಗ್ರಹವನ್ನು ಆರಂಭಿಸಿದರು. ಮಹಿಳೆ, ಮಕ್ಕಳೆನ್ನದೆ ಬಳ್ಳಾರಿಯ ಆಸುಪಾಸಿನ ಜನತೆ ಈ ಚಳವಳಿಯಲ್ಲಿ ಭಾಗವಹಿಸಿತು.

ರಾ.ಪು. ಆಯೋಗದ ವರದಿಯ ಬಗ್ಗೆ ಸಾರ್ವಜನಿಕರಿಗೆ ಇದ್ದ ಅಭಿಪ್ರಾಯಗಳನ್ನು ಗಮನಿಸಿಯೇ ಲೋಕಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು 16–3–1956ರಂದು ಭಾರತ ಸರ್ಕಾರವು ವಿಧೇಯಕವನ್ನು ಮಂಡಿಸಿತು. ಆ ಪ್ರಕಾರ ಕೆಳಕಂಡ ಭಾಗಗಳು ಸೇರಿ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕಾಗಿತ್ತು.

1.ಇಡಿಯಾಗಿ ಮೈಸೂರು ರಾಜ್ಯ.

2.ಮುಂಬಯಿ ರಾಜ್ಯದ ಬಿಜಾಪುರ, ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾಂವಿ (ಚಾಂದಗಡ ತಾಲ್ಲೂಕನ್ನು ಬಿಟ್ಟು) ಜಿಲ್ಲೆಗಳು

3. ಹೈದರಾಬಾದ್ ರಾಜ್ಯದ ಗುಲಬರ್ಗಾ ಜಿಲ್ಲೆ(ಕೊಡಂಗಲ್ಲು ಮತ್ತು ತಾಂಡೂರು ತಾಲ್ಲೂಕುಗಳನ್ನು ಬಿಟ್ಟು), ರಾಯಚೂರು ಜಿಲ್ಲೆ(ಆಲಂಪುರ ಮತ್ತು ಗದ್ವಾಲ ತಾಲ್ಲೂಕುಗಳನ್ನು ಬಿಟ್ಟು) ಮತ್ತು ಬೀದರ್ ಜಿಲ್ಲೆಯ ಬೀದರ್, ಭಾಲ್ಕಿ, ಔರಾದ್, ಹುಮನಾಬಾದ್ ತಾಲ್ಲುಕುಗಳು

4. ಮದ್ರಾಸ್ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲ್ಲೂಕು ಮತ್ತು ಅಮೀನ್ ದ್ವೀಪಗಳನ್ನು ಬಿಟ್ಟು) ಮತ್ತು ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು

5. ಕೊಡಗು

ರಾ.ಪು. ಆಯೋಗದ ಶಿಫಾರಸುಗಳ ಪ್ರಕಾರ ಬೀದರ್ ಜಿಲ್ಲೆಯ ಬಸವಕಲ್ಯಾಣ ಮಹಾರಾಷ್ಟ್ರ ಪ್ರಾಂತಕ್ಕೂ, ಗದ್ವಾಲ್ ತಾಲ್ಲೂಕು ಕರ್ನಾಟಕಕ್ಕೂ ಸೇರಬೇಕಾಗಿತ್ತು. ಆದರೆ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ನಾಯಕರ ನಡುವೆ ಸಮಾಲೋಚನೆ ನಡೆಸಿ, ಆದ ಒಪ್ಪಂದದ ಪ್ರಕಾರ ಬಸವಕಲ್ಯಾಣವು ಬೀದರ್ ಜಿಲ್ಲೆಗೂ ಗದ್ವಾಲ್ ತಾಲ್ಲೂಕನ್ನು ಆಂಧ್ರಕ್ಕೂ ಸೇರಿಸಲಾಯಿತು.

**ಲೋಕಸಭೆಯಲ್ಲಿ ವಿಧೇಯಕದ ಮಂಡನೆ ಮತ್ತು ಸ್ವೀಕಾರ :** ವಿಧೇಯಕವನ್ನು ಎಲ್ಲಾ ರಾಜ್ಯಗಳ ವಿಧಾನ ಮಂಡಲಗಳೂ ಒಪ್ಪಿದ ನಂತರ, 18–4–1956ರಂದು ಗೃಹ ಸಚಿವ ಗೋವಿಂದ ವಲ್ಲಭ ಪಂತರು ಲೋಕಸಭೆಯಲ್ಲಿ ಮಂಡಿಸಿದರು. ಮೂರು ದಿನಗಳ ಚರ್ಚೆಯ ನಂತರ ವಿಧೇಯಕವನ್ನು ಸಂಯುಕ್ತ ಪರಿಶೀಲಕ ಸಮಿತಿಗೆ ಕಳುಹಿಸಲು ನಿರ್ಣಯ ಮಾಡಲಾಯಿತು. ಈ ನಿರ್ಣಯವನ್ನು 2–5–1956ರಂದು ರಾಜ್ಯಸಭೆಯೂ ಒಪ್ಪಿತು. ಅರವತ್ತು ಜನರಿದ್ದ ಸಂಯುಕ್ತ ಪರಿಶೀಲನ ಸಮಿತಿಯಲ್ಲಿ ಕನ್ನಡಿಗರಾದ ಎಸ್.ನಿಜಲಿಂಗಪ್ಪ, ಬಿ.ಎನ್.ದಾತಾರ್ ಮತ್ತು ಶ್ರೀನಿವಾಸ ಮಲ್ಯ ಇದ್ದರು. ಪರಿಶೀಲಕ ಸಮಿತಿಯು ಪರಿಶೀಲಿಸಿದ ವಿಧೇಯಕವು ಲೋಕಸಭೆಯ ಮುಂದೆ 26–7–1956ರಂದು ಚರ್ಚೆಗೆ ಬಂದು 10–8–1956ರಂದು ಸ್ವೀಕರಿಸಲ್ಪಟ್ಟಿತು. 16–8–1956ರಿಂದ 23–8–1956ರವರೆಗೆ ವಿಧೇಯಕದ ಬಗ್ಗೆ ರಾಜ್ಯ ಸಭೆಯಲ್ಲೂ ಚರ್ಚೆ ನಡೆದು, ಅಲ್ಲಿಯೂ ಒಪ್ಪಿಗೆ ದೊರೆಯಿತು. 31–8–1956ರಂದು ರಾ.ಪು.ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಗೀಕಾರವೂ ದೊರೆಯಿತು. 1956ರ ನವೆಂಬರ್ ಒಂದರಂದು ಪುನರ್ವಿಂಗಡಣೆಗೊಂಡ ರಾಜ್ಯಗಳೆಲ್ಲವೂ ಅಸ್ತಿತ್ವಕ್ಕೆ ಬರುವುವೆಂಬ ಸಾರ್ವಜನಿಕ ಪ್ರಕಟಣೆ ಹೊರಬಿದ್ದಿತು. ಹೊಸದಾಗಿ ನಿರ್ಮಾಣಗೊಂಡ ಕನ್ನಡಿಗರ ರಾಜ್ಯದ ಹೆಸರು 'ಮೈಸೂರು' ಎಂದೇ ಉಳಿಯಿತು. ಕಾಸರಗೋಡು ಮತ್ತು ಸೊಲ್ಲಾಪುರಗಳು ಕರ್ನಾಟಕದಿಂದ ಹೊರಗುಳಿದದ್ದು ನೋವಿನ ವಿಷಯವಾಯಿತು.

ಎಲ್ಲಾ ಕನ್ನಡ ಪ್ರದೇಶಗಳ ವಿಧಾನ ಸಭಾ ಸದಸ್ಯರೂ 21–10–1956ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಎಸ್.ನಿಜಲಿಂಗಪ್ಪನವರನ್ನು ತಮ್ಮ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿಕೊಂಡರು. ಮೈಸೂರು ಸಂಸ್ಥಾನ ಮತ್ತು ಕರ್ನಾಟಕ ಪ್ರದೇಶಗಳೆರಡರ ಜೊತೆಗೂ ಸಂಪರ್ಕ ಹೊಂದಿದ್ದ ನಿಜಲಿಂಗಪ್ಪನವರು ಏಕೀಕರಣಗೊಂಡ ಕರ್ನಾಟಕದ ಪ್ರಥಮ ಮುಖ್ಯಮಂತ್ರಿ ಆದರು.

**'ವಿಶಾಲ ಮೈಸೂರು' ರಾಜ್ಯದ ಉದ್ಘಾಟನೆ :** 1956ರ ನವೆಂಬರ್ ಒಂದನೆಯ ತಾರೀಕು ಬೆಳಗ್ಗೆ ನಡೆದ ಸಮಾರಂಭದಲ್ಲಿ 'ವಿಶಾಲ ಮೈಸೂರು' ರಾಜ್ಯವನ್ನು ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು. ಅಂದೇ ಹೊಸ ರಾಜ್ಯದ ರಾಜ್ಯಪಾಲರಾಗಿ ಜಯಚಾಮರಾಜ ಒಡೆಯರ್ ಮತ್ತು ಮುಖ್ಯಮಂತ್ರಿಯಾಗಿ ಎಸ್.ನಿಜಲಿಂಗಪ್ಪ ಅವರು ಅಧಿಕಾರ ಸ್ವೀಕರಿಸಿದರು.

ಅದೇ ದಿನ ಹಂಪೆಯಲ್ಲಿ ವಿರೂಪಾಕ್ಷನ ಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಕರ್ನಾಟಕ ಕುಲ ಪುರೋಹಿತರೆನಿಸಿ ಖ್ಯಾತರಾದ ಆಲೂರು ವೆಂಕಟರಾಯರ ನೇತೃತ್ವದಲ್ಲಿ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು. ಕನ್ನಡಿಗರ ಬಹು ದಿನಗಳ ಕನಸು ನನಸಾದರೂ, ಅನಂತಪುರ, ಮಡಕಶಿರಾ, ನೀಲಗಿರಿ, ಹೊಸೂರು, ಸೊಲ್ಲಾಪುರ, ಅಕ್ಕಲಕೋಟೆ ಮತ್ತು ಕಾಸರಗೋಡು ಪ್ರದೇಶಗಳು ವಿಶಾಲ ಮೈಸೂರಿನಲ್ಲಿ ವಿಲೀನವಾಗದೆ ಉಳಿದದ್ದು ಒಂದು ನೋವಾಗಿ ಈಗಲೂ ಕಾಡುತ್ತಿವೆ.

'ಕರ್ನಾಟಕ' ವಾದ 'ವಿಶಾಲ ಮೈಸೂರು'

1973ರ ನವೆಂಬರ್ ಒಂದನೆಯ ತಾರೀಕು ರಾಜ್ಯದ ಹೆಸರು 'ಕರ್ನಾಟಕ' ಎಂದು ಬದಲಾಯಿತು.

**ಮಹಾಜನ್ ಆಯೋಗದ ವರದಿ :** ಬೆಳಗಾಂವಿ ನಗರ ತಮಗೆ ಸೇರಬೇಕೆಂದು ಮಹಾರಾಷ್ಟ್ರದ ರಾಜಕಾರಣಿಗಳು ತಗಾದೆ ಆರಂಭಿಸಿದಾಗ, ಬೆಳಗಾಂವಿ ಮತ್ತು ಕಾಸರಗೋಡಿನ ಸಮಸ್ಯೆಯನ್ನು ಬಗೆಹರಿಸಲು, ಮೊದಲಿಗೆ ಪಾಟಸ್ಕರ್ ಆಯೋಗ ಮತ್ತು ಅದರ ವರದಿ ಸಮರ್ಪಕ ಎನಿಸದಿದ್ದಾಗ ಮಹಾಜನ್ ಆಯೋಗದ ನೇಮಕ ಆಯಿತು. ಮೊದಲಿಗೆ ಮೈಸೂರಿನವರು ಮಹಾಜನ್ ಆಯೋಗವನ್ನು ಒಪ್ಪಲಿಲ್ಲ. ಆದರೆ ಮಹಾರಾಷ್ಟ್ರದವರು ಮಹಾಜನ್ ಆಯೋಗವೇ ಬೇಕು ಎಂದರು. ಮಹಾಜನ್ ಆಯೋಗದ ವರದಿಯ ಪ್ರಕಾರ ಬೆಳಗಾಂವಿ ಕರ್ನಾಟಕದಲ್ಲೇ ಉಳಿಯುತ್ತದೆ ಎಂದು ತಿಳಿದಾಗ ಮಹಾರಾಷ್ಟ್ರದವರು, ತಮ್ಮ ಮಾತನ್ನೇ ಮರೆತು ಮಹಾಜನ್ ವರದಿಯನ್ನು ತಿರಸ್ಕರಿಸುತ್ತಿದ್ದಾರೆ. ಈ ಮಧ್ಯೆ

ಕಾಸರಗೋಡು ಅತಂತ್ರವಾಗಿದೆ. ಮಹಾರಾಷ್ಟ್ರ-ಕರ್ನಾಟಕ-ಕೇರಳ ಗಡಿ ವಿವಾದವನ್ನು ಬಗೆಹರಿಸಲು ರಾಜಕಾರಣಿಗಳಿಗೆ ಆಸಕ್ತಿ ಇಲ್ಲವಾಗಿದೆ. ಈ ಚದುರಂಗದಾಟದಲ್ಲಿ ಗಡಿ ಭಾಗದ ಕನ್ನಡಿಗರು ನೋವಿನಿಂದ ನರಳುತ್ತಿದ್ದಾರೆ ಎಂಬುದನ್ನು ರಾಜಕಾರಣಿಗಳು ಅಲ್ಲಗಳೆಯಬಹುದು; ಜನತೆಯ ಅಳಲಿಗೆ ಪರಿಹಾರ ನೀಡಬಲ್ಲ ಜನ ಪ್ರತಿನಿಧಿಗಳು ಯಾವಾಗ ದೊರೆಯುತ್ತಾರೋ ಕಾದು ನೋಡಬೇಕಾಗಿದೆ. **(ಪರಿಷ್ಕರಣೆ: ಎಚ್.ಎಸ್. ಗೋಪಾಲ ರಾವ್)**

**ಕರ್ನಾಟಕ ಇತಿಹಾಸ :** ಭಾರತದ ಪೂರ್ವಶಿಲಾಯುಗ ಸಂಸ್ಕೃತಿಯಲ್ಲಿ ದಕ್ಷಿಣ ಭಾರತ ಪ್ರಧಾನ ಪಾತ್ರ ವಹಿಸಿತ್ತು. ಇಲ್ಲಿ ವಿಶಿಷ್ಟವಾಗಿ ಕಂಡುಬಂದಿರುವುದೆಂದರೆ ಕೈಗೊಡಲಿ ಸಂಸ್ಕೃತಿ. ಕರ್ನಾಟಕದಲ್ಲಿ ಸಹ ಈ ಸಂಸ್ಕೃತಿಯ ಅವಶೇಷಗಳು ಹಲವೆಡೆಗಳಲ್ಲಿ ದೊರಕಿವೆ. ಹಳೆಯ ಮೈಸೂರು ಪ್ರದೇಶದ ಚಿತ್ರದುರ್ಗ ಜಿಲ್ಲೆಯ ತಾಳ್ಯ, ಜ್ಯಾಂಕಲ್, ಶಿವಮೊಗ್ಗ ಜಿಲ್ಲೆಯ ನ್ಯಾಮತಿ, ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿ ಮುಂತಾದೆಡೆಗಳಲ್ಲಿ ರಾಬರ್ಟ್ ಬ್ರೂಸ್‌ಫುಟ್ ಕೆಲವು ಪೂರ್ವ ಶಿಲಾಯುಧಗಳನ್ನು ಶೇಖರಿಸಿದ್ದರು. ಶೇಷಾದ್ರಿಯವರು ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯ ಬಳಿಯಲ್ಲಿ ಈ ಸಂಸ್ಕೃತಿಯ ನೆಲೆಯೊಂದನ್ನು ಗುರುತಿಸಿದ್ದಾರೆ. ಇದು ಬಾಣಸಂದ್ರ ಬೆಟ್ಟಗಳ ಶ್ರೇಣಿಯ ಬುಡದಲ್ಲಿದೆ. ಹಳೆಯ ಮೈಸೂರು ಪ್ರದೇಶದಲ್ಲಿ ಇದೇ ಅತಿಮುಖ್ಯವೂ ವಿಸ್ತಾರವೂ ಆದ ನೆಲೆ. ರೋಸ್ಟ್ರೋಕ್ಯಾರಿನೇಟ್ ಎಂಬ ಬಹಳ ಹಳೆಯ ರೀತಿಯ ಉಪಕರಣಗಳಿಂದ ಹಿಡಿದು ಅಬ್ಬೆವಿಲಿಯನ್ ಮತ್ತು ಮುಂದುವರಿದ ಅಷ್ಯೂಲಿಯನ್ ಹಂತದ ಕೈಗೊಡಲಿಗಳ ಹಾಗೂ ಕೊಕ್ಕಿನಂತೆ ಮೊನೆಯುಳ್ಳ ಕ್ಲಾಕ್ಟನ್ ರೀತಿಯ ಚಕ್ಕೆಕಲ್ಲಿನ ಉಪಕರಣಗಳವರೆಗೆ ಹಲವಾರು ಉಪಕರಣಗಳು ಇಲ್ಲಿ ದೊರಕಿವೆ. ಆ ಕಾಲದಲ್ಲಿ ಮರಗೆಲಸಕ್ಕೆ ಉಪಯೋಗಿಸುತ್ತಿದ್ದ ಡೊಂಕಾದ ಒರೆಯುವ ಆಯುಧಗಳು ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಆದ್ದರಿಂದ ಆಗ ಮರದ ಉಪಕರಣಗಳು ಹೆಚ್ಚಾಗಿ ಬಳಕೆಯಲ್ಲಿದ್ದುವೆಂದು ಭಾವಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಹಲಕುಂಡಿ, ಕುರಿಕುಪ್ಪ, ಗಾದಿಗನೂರು, ದಾರೋಜಿ ಮತ್ತು ಅಂಗೂರುಗಳಲ್ಲೂ ರಾಬರ್ಟ್ ಬ್ರೂಸ್‌ಫುಟ್ ಪೂರ್ವ ಶಿಲೋಪಕರಣಗಳನ್ನು ಸಂಗ್ರಹಿಸಿದ್ದ.

ಜೋಷಿಯವರು ಉತ್ತರ ಕರ್ನಾಟಕದ ಮಲಪ್ರಭಾ ಘಟಪ್ರಭಾ ನದೀ ಕಣಿವೆಗಳಲ್ಲಿ ಈ ಸಂಸ್ಕೃತಿಯ ಹಲವಾರು ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಮಲಪ್ರಭಾ ದಂಡೆಯ 21 ನೆಲೆಗಳಲ್ಲಿ ಮೆಣಸ್ಗಿ ಮತ್ತು ಖ್ಯಾಡ್ ಮುಖ್ಯವಾದವು. ಖ್ಯಾಡ್ ನೆಲೆಯಲ್ಲಿ ಅಷ್ಯೂಲಿಯನ್ ಸಂಸ್ಕೃತಿಯ ಅಂತ್ಯಕಾಲಕ್ಕೆ ಸೇರುವ, ಚಕ್ಕೆ ಕಲ್ಲಿನ ಉತ್ತಮ ಕೆಲಸಗಾರಿಕೆಯ ಕೈಗೊಡಲಿಗಳೂ ಕ್ಲೀವರ್ ರೀತಿಯ ಕೈಗೊಡಲಿಗಳೂ ಗಮನಾರ್ಹ. ಘಟಪ್ರಭಾ ನದೀ ದಂಡೆಯಲ್ಲಿ ನಿಕ್ಷಿಪ್ತವಾದ ಗುಂಡುಕಲ್ಲುಗಳ ಪದರದಲ್ಲಿ ಮರಳುಕಲ್ಲಿನಲ್ಲಿ ಮಾಡಿದ ಅಬ್ಬೆವಿಲಿಯನ್-ಅಷ್ಯೂಲಿಯನ್ ಹಂತದ ಉಪಕರಣಗಳು ಹೇರಳವಾಗಿ ದೊರಕಿವೆ. ಅಷ್ಯೂಲಿಯನ್ ಹಂತದ ಅಂತ್ಯಭಾಗಕ್ಕೆ ಸೇರುವ ಉಪಕರಣಗಳು ಸಹ ಅಲ್ಪಸಂಖ್ಯೆಯಲ್ಲಿ ಕಂಡುಬಂದಿವೆ. ಕರ್ನಾಟಕದಲ್ಲಿ ಆದಿಮಾನವ ಕಷ್ಟಜೀವಿಯಾಗಿದ್ದು, ಬೇಟೆ ಮತ್ತು ಮೀನುಗಾರಿಕೆಯಿಂದ ತನ್ನ ಮತ್ತು ತನ್ನವರ ಜೀವನ ನಿರ್ವಹಣೆ ಮಾಡುತ್ತಿದ್ದನೆಂಬುದು ಮೇಲಿನ ವಿವರಗಳಿಂದ ತಿಳಿದು ಬರುತ್ತದೆ.

ಆಹಾರ ಸಂಗ್ರಹಣೆಯ ಪೂರ್ವಶಿಲಾಯುಗ ಮತ್ತು ಆಹಾರೋತ್ಪಾದನೆಯ ನವಶಿಲಾಯುಗಗಳ ಮಧ್ಯೆ ಯುರೋಪ್ ಮತ್ತಿತರೆಡೆಗಳಲ್ಲಿ ಮಧ್ಯಶಿಲಾಯುಗಕ್ಕೆ ಸೇರಿದ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ. ಭಾರತದಲ್ಲಿ ಆ ಹಂತದ ಸಂಸ್ಕೃತಿ ಇರಲಿಲ್ಲವೆಂದು ಇದುವರೆಗೂ ಭಾವಿಸಲಾಗಿದ್ದರೂ ಇತ್ತೀಚೆಗೆ ಹಲವೆಡೆಗಳಲ್ಲಿ ಆ ಕಾಲಕ್ಕೆ ನಿಯೋಜಿಸಬಹುದಾದ ಅವಶೇಷಗಳು ದೊರಕಿರುವುದು ಗಮನಾರ್ಹ. ಬಿಜಾಪುರ ಜಿಲ್ಲೆಯ ಸಾಲ್ವಡಗಿಯಲ್ಲಿ ದೊರಕಿರುವ ಸೂಕ್ಷ್ಮ ಶಿಲಾಯುಧಗಳಲ್ಲಿ ಒರೆಯುವ ಮತ್ತು ಕೊರೆಯುವ ಉಪಕರಣಗಳೂ ಚಕ್ಕೆ ಕಲ್ಲಿನ ಚಾಕುಗಳೂ ಅಲ್ಲದೆ ಹರಪ್ಪ ಸಂಸ್ಕೃತಿಯ ವಿಶಿಷ್ಟ ಅಂಶವಾದ ಉದ್ದನೆಯ ಚಕ್ಕೆ ಕಲ್ಲಿನ ಪಟ್ಟಿಕೆಗಳೂ ಇರುವುದರಿಂದ ಇಲ್ಲಿಯ ಸಂಸ್ಕೃತಿಯೊಂದಿಗೆ ತಾಮ್ರಶಿಲಾಯುಗ ಸಂಸ್ಕೃತಿಯ ಸಂಪರ್ಕವಿದ್ದಿರಬಹುದೆಂದೂ ಊಹಿಸಿದ್ದಾರೆ.

ನವಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಭಾರತದ ಇತರ ಪ್ರದೇಶಗಳಿಗಿಂತ ಹೇರಳವಾಗಿ ದೊರಕಿರುವುದರಿಂದ ನವಶಿಲಾಯುಗ ಕಾಲದಲ್ಲಿ ಕರ್ನಾಟಕ ಮಾನವನ ಪ್ರಮುಖ ಕಾರ್ಯಕ್ಷೇತ್ರವಾಗಿತ್ತೆಂದು ಹೇಳಬಹುದಾಗಿದೆ. ಈ ಸಂಸ್ಕೃತಿಗೆ ಸೇರಿದ ಕೊಡಲಿ, ಬಾಚಿ ಮತ್ತು ಇತರ ಆಯುಧಗಳನ್ನು ಮಾಡಲು ಪ್ರಮುಖವಾಗಿ ಉಪಯೋಗಿಸುತ್ತಿದ್ದ ಟ್ರಾಪ್ ಶಿಲೆಗಳು ಹೆಚ್ಚಾಗಿ ಸಿಕ್ಕುತ್ತಿದ್ದುದೂ ಪಶುಸಂಗೋಪನೆ, ಬೇಟೆ ಮತ್ತು ಪ್ರಾರಂಭದೆಶೆಯ ವ್ಯವಸಾಯ ವೃತ್ತಿಗಳಿಗೆ ಬೇಕಾದ ಸೌಲಭ್ಯಗಳು ಇಲ್ಲಿದ್ದುದರಿಂದಲೂ ನವಶಿಲಾಯುಗದ ಮಾನವ ಈ ಪ್ರದೇಶದಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸಿದ್ದಿರಬಹುದು. ಉಪಕರಣಗಳ ಅಂಚುಗಳನ್ನು ಉಜ್ಜಿ ನಯಗೊಳಿಸಲು ಉಪಯೋಗಿಸಿದ ಹಳ್ಳಗಳು ಬಳ್ಳಾರಿ ಮತ್ತು ಅಕ್ಕಪಕ್ಕದ ಜಿಲ್ಲೆಗಳ ಹಲವೆಡೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ಬಳ್ಳಾರಿಯ ಉತ್ತರ ಬೆಟ್ಟದಲ್ಲಿ, ಕಂಡುಬಂದಿವೆ. ಈ ಜನರು ಕೇವಲ ಅಂಚುಗಳನ್ನು ಅಥವಾ ಇಡೀ ಉಪಕರಣವನ್ನು ಬಂಡೆಗಳ ಮೇಲೆ ಉಜ್ಜಿ ನಯಗೊಳಿಸಿ ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡುತ್ತಿದ್ದುದರಿಂದ ಈ ಸಂಸ್ಕೃತಿಗೆ ನಯಗೊಳಿಸಿದ ಶಿಲೋಪಕರಣ ಸಂಸ್ಕೃತಿಯೆಂದೂ ಹೆಸರಿದೆ. ಈ ಸಂಸ್ಕೃತಿಯಲ್ಲಿ ಕೊಡಲಿ, ಬಾಚಿ, ಉಳಿ, ಸುತ್ತಿಗೆಕಲ್ಲುಗಳು, ಮಧ್ಯದಲ್ಲಿ ರಂಧ್ರವಿದ್ದು ಅಗೆಯುವ ಮರದ ಕೋಲುಗಳಿಗೆ ಭಾರವನ್ನೊದಗಿಸುತ್ತಿದ್ದ ಚಕ್ರಾಕಾರದ ಕಲ್ಲುಗಳು ಮತ್ತು ಚಕ್ಕೆಕಲ್ಲುಗಳನ್ನು ಮುಖ್ಯ ಉಪಕರಣಗಳಾಗಿ ಉಪಯೋಗಿಸಲಾಗುತ್ತಿತ್ತು. ಪಶುಪಾಲನೆ, ಬೇಟೆ, ಮೀನು ಹಿಡಿಯುವಿಕೆ, ಮೂಲಭೂತ ಅಥವಾ ಹಿಂದುಳಿದ ವ್ಯವಸಾಯ- ಇವು ಈ ಜನರ ಮುಖ್ಯ ವೃತ್ತಿಗಳಾಗಿದ್ದುವು. ತಮ್ಮ ಆಹಾರಧಾನ್ಯಗಳನ್ನು ಹಿಟ್ಟು ಮಾಡಲು ಅವರು ಬೀಸುವ-ಅರೆಯುವ ಕಲ್ಲುಗಳನ್ನು ಉಪಯೋಗಿಸುತ್ತಿದ್ದರು. ಮೊತ್ತಮೊದಲಿಗೆ ಈ ಜನರು ಮಣ್ಣಿನ ಪಾತ್ರೆಗಳನ್ನು ಉಪಯೋಗಿಸಲಾರಂಭಿಸಿ, ನಯಗೊಳಿಸಿದ ಬೂದುಬಣ್ಣದ ಮಡಕೆ-ಕುಡಿಕೆಗಳನ್ನು ಕೈಯಿಂದಲೇ ರೂಪಿಸಿ ಅನಂತರ ಸುಡುತ್ತಿದ್ದರು. ಕ್ರಮೇಣ ಈ ಸಂಸ್ಕೃತಿಯ ಅಂತ್ಯಕಾಲದ ಹೊತ್ತಿಗೆ ನಿಧಾನವಾಗಿ ಸುತ್ತುವ ಮಣೆ ಅಥವಾ ಚಕ್ರಗಳನ್ನು ಮಣ್ಣಿನ ಪಾತ್ರೆಗಳನ್ನು ಮಾಡಲು ಉಪಯೋಗಿಸಿರಬಹುದಾದರೂ ಈಗ ಉಪಯೋಗದಲ್ಲಿರುವ ಕುಂಬಾರಚಕ್ರ ಬಳಕೆಗೆ ಬಂದಿದ್ದಂತೆ ಕಾಣುವುದಿಲ್ಲ. ಮೇಲೆ ಹೇಳಿದ ಬೂದು ಬಣ್ಣದ ಮಡಕೆಗಳಲ್ಲದೆ ಕ್ರಮೇಣ ಕಂದು, ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಗಳು ಉಪಯೋಗಕ್ಕೆ ಬಂದವು. ಈ ಸಂಸ್ಕೃತಿಯ ಕೊನೆಗಾಲದಲ್ಲಿ ದೊರಕುವ ಮಡಕೆಗಳ ಆಕಾರ ಮತ್ತು ಅಲಂಕಾರ ವಿಧಾನಗಳಿಂದ ಮಧ್ಯ ಭಾರತದ ತಾಮ್ರ-ಶಿಲಾಯುಗ ಸಂಸ್ಕೃತಿಯೊಂದಿಗೆ ಸಂಪರ್ಕ ಬೆಳೆದುಬಂದಿತ್ತೆಂದೂ ತಿಳಿದುಬಂದಿದೆ. ಈ ಸಂಸ್ಕೃತಿಯ ಅವಶೇಷಗಳು ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ದೊರಕಿವೆ. ಉತ್ಖನನದ್ವಾರಾ ಶೋಧಿಸಲಾಗಿರುವ ನೆಲೆಗಳಲ್ಲಿ ಬ್ರಹ್ಮಗಿರಿ, ಸಂಗನಕಲ್ಲು, ಪಿಕ್ಲಿಹಾಳ್, ಮಸ್ಕಿ, ತೆಕ್ಕಲಕೋಟೆ ಮತ್ತು ತಿರುಮಕೂಡಲ ನರಸೀಪುರ ಮುಖ್ಯವಾದವು.

ತಾಮ್ರ-ಶಿಲಾಯುಗ ಸಂಸ್ಕೃತಿ ದಕ್ಷಿಣ ಭಾರತದಲ್ಲಿ ಇರಲಿಲ್ಲವೆಂಬ ವಾದ ನಿಜವಲ್ಲ. ಬ್ರಹ್ಮಗಿರಿ, ಸಂಗನಕಲ್ಲು, ಮಸ್ಕಿ, ಅನಂತರದಲ್ಲಿ ಸಂಶೋಧಿಸಲಾದ ತೆಕ್ಕಲಕೋಟೆ, ಹಳ್ಳೂರು ಮುಂತಾದೆಡೆಗಳಲ್ಲಿ ನವಶಿಲಾಯುಗದ ಉತ್ತರಾರ್ಧದಲ್ಲಿ ತಾಮ್ರ-ಶಿಲಾಯುಗ ಸಂಸ್ಕೃತಿಯ ಪ್ರಭಾವ ತಾಮ್ರ ಮತ್ತು ಕಂಚು, ಕಪ್ಪು ಬಣ್ಣದಿಂದ ಚಿತ್ರಿತವಾದ ಕೆಂಪು ಮಡಕೆಗಳು ಮತ್ತು ಕಲ್ಲುಪಟ್ಟಿಕೆಗಳ ಬಳಕೆಯಿಂದ ಕಂಡುಬರುತ್ತದೆ. ಕರ್ನಾಟಕದಲ್ಲಿ ಈ ಸಂಸ್ಕೃತಿ ಮಧ್ಯ ಮತ್ತು ಪಶ್ಚಿಮ ಭಾರತ ಅಥವಾ ಸಿಂಧೂನದಿ ಪ್ರದೇಶಗಳಲ್ಲಿದ್ದಷ್ಟು ಪ್ರಬಲವಾಗಿಲ್ಲದಿದ್ದರೂ, ವಾಣಿಜ್ಯ ಸಂಪರ್ಕಗಳ ಪ್ರಭಾವದಿಂದ ಲೋಹದ ಬಳಕೆ, ಕುಂಬಾರಚಕ್ರದ ಉಪಯೋಗ, ಮುಂದುವರಿದ ವ್ಯವಸಾಯ ಪದ್ಧತಿ ಮತ್ತು ಗ್ರಾಮೀಣ ಜೀವನ ರೀತಿಗಳನ್ನು ಕ್ರಮೇಣ ಅಳವಡಿಸಿಕೊಂಡುದಕ್ಕೆ ಸಾಕಷ್ಟು ಪುರಾವೆಗಳು ದೊರಕಿವೆ. ಕೇಂದ್ರಸರ್ಕಾರದ ಪ್ರಾಕ್ತನಶಾಸ್ತ್ರ ಇಲಾಖೆಯ ಆಶ್ರಯದಲ್ಲಿ ನಡೆದ ಸಂಶೋಧನೆಗಳಿಂದ ಬಿಜಾಪುರ, ಧಾರವಾಡ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಈ ಸಂಸ್ಕೃತಿಯ ಹದಿಮೂರಕ್ಕೂ ಹೆಚ್ಚು ನೆಲೆಗಳು ಕಂಡುಬಂದಿವೆ.

ತಾಮ್ರ-ಶಿಲಾಯುಗದ ಅನಂತರ ಕರ್ನಾಟಕದಲ್ಲಿ ಕಬ್ಬಿಣಯುಗದ ಸಂಸ್ಕೃತಿಗೆ ಸೇರುವ ಬೃಹತ್ ಶಿಲಾಸಮಾಧಿ ಸಂಸ್ಕೃತಿ ಪ್ರಾಮುಖ್ಯ ಪಡೆಯಿತು. ಮೆಡಿಟರೇನಿಯನ್ ಸಮುದ್ರ ಪ್ರದೇಶದಲ್ಲಿ ಪ್ರ.ಶ.ಪೂ. ಸು. 4ನೆಯ ಸಹಸ್ರಮಾನದಲ್ಲಿ ಹುಟ್ಟಿ, ಕ್ರಮೇಣ ಯುರೋಪ್, ಆಫ್ರಿಕ ಮತ್ತು ಪಶ್ಚಿಮ ಏಷ್ಯಗಳಲ್ಲಿ ಹರಡಿ, ವಿವಿಧ ಸಂಸ್ಕೃತಿಗಳು ಮತ್ತು ಪ್ರಾದೇಶಿಕ ಹಿನ್ನೆಲೆಗಳಿಂದ ಪ್ರಭಾವಿತವಾಗಿ ದಕ್ಷಿಣ ಭಾರತವನ್ನು ತಲಪುವ ವೇಳೆಗೆ ಕಬ್ಬಿಣಯುಗೀನ ಸಂಸ್ಕೃತಿಯ ಹಂತವನ್ನು ಮುಟ್ಟಿದ್ದೇ ಅಲ್ಲದೆ, ಅನೇಕ ಆಂತರಿಕ ಬದಲಾವಣೆಗಳಿಗೂ ಒಳಗಾಗಿ ದಕ್ಷಿಣ ಭಾರತದ ಆದ್ಯ ಐತಿಹಾಸಿಕ ಸಂಸ್ಕೃತಿಯಾಗಿ ರೂಪುಗೊಂಡಿತು. ಕರ್ನಾಟಕದಲ್ಲಿ ನವಶಿಲಾ-ತಾಮ್ರಶಿಲಾಯುಗಗಳ ಅನಂತರ ತ್ವರಿತಗತಿಯಲ್ಲಿ ಪ್ರಭಾವಶಾಲಿಯಾಗಿ ಹಬ್ಬಿದ ಈ ಸಂಸ್ಕೃತಿಯ ಮುಖ್ಯ ಲಕ್ಷಣಗಳೆಂದರೆ, ಸತ್ತವರ ಅವಶೇಷಗಳನ್ನು ದೊಡ್ಡ ಕಲ್ಲುಗಳಿಂದ ರಚಿತವಾದ ಸಮಾಧಿಗಳಲ್ಲಿ ಹೂಳುವುದು, ಉಪಕರಣಗಳಿಗೆ ಕಬ್ಬಿಣವನ್ನು ಉಪಯೋಗಿಸುವುದು, ಮೇಲ್ಭಾಗದಲ್ಲಿ ಕೆಂಪು ಅಥವಾ ಕಂದಾಗಿಯೂ ತಳ ಮತ್ತು ಒಳಭಾಗಗಳಲ್ಲಿ ಕಪ್ಪಾಗಿಯೂ ಇರುವ (ಕಪ್ಪು ಮತ್ತು ಕೆಂಪು) ಮಡಕೆಗಳನ್ನು ಉಪಯೋಗಿಸುವುದು, ನೀರಾವರಿಯ ಸಹಾಯದಿಂದ ಪ್ರಗತಿಪರ ವ್ಯವಸಾಯ, ನಗರೀಕರಣಕ್ಕೆ ಪೂರ್ವಭಾವಿಯಾದ ವಿಶಾಲ ಗ್ರಾಮೀಣ ಜೀವನ ಮುಂತಾದವು. ಈ ಸಂಸ್ಕೃತಿಯ ಪ್ರಾರಂಭದಿಂದ ದಕ್ಷಿಣ ಭಾರತದಲ್ಲಿ ಚಾರಿತ್ರಿಕ ಯುಗದ ಆರಂಭವಾಯಿತೆಂದು ಹೇಳಬಹುದು. ಈ ಸಂಸ್ಕೃತಿಯ ನಿರ್ಮಾತೃಗಳಾದ, ದ್ರಾವಿಡ ಭಾಷೆಯನ್ನು ಬಳಸುತ್ತಿದ್ದ ಜನ ಈ ಸಮಯದಲ್ಲಿ ದಕ್ಷಿಣ ಭಾರತಕ್ಕೆ ಬಂದು ನೆಲಸಿದುದಾಗಿ ತಿಳಿದುಬರುತ್ತದೆ. ಚೇರ, ಪಾಂಡ್ಯ, ಚೋಳರಾಜ್ಯಗಳು ದಕ್ಷಿಣದಲ್ಲೂ ಸಾತವಾಹನ ಚಕ್ರಾಧಿಪತ್ಯ ದಖನ್ ಪ್ರಸ್ಥಭೂಮಿಪ್ರದೇಶದಲ್ಲೂ ಶೀಘ್ರದಲ್ಲಿಯೇ ಸ್ಥಾಪಿತವಾಗಿ ಚಾರಿತ್ರಿಕ ಯುಗ ನೆಲೆಗೊಂಡಿತು. ಈ ಸಂಸ್ಕೃತಿಯ ಅವಶೇಷಗಳು ಅನೇಕ ನೆಲೆಗಳಲ್ಲಿ ಕಂಡುಬಂದಿದ್ದರೂ

ವೈಜ್ಞಾನಿಕ ಸಂಶೋಧನೆಗಳು ಬ್ರಹ್ಮಗಿರಿ, ಸಂಗನಕಲ್ಲು, ಮಸ್ಕಿ, ಜಡಿಗೇನಹಳ್ಳಿ ಮುಂತಾದೆಡೆಗಳಲ್ಲಿ ಮಾತ್ರ ನಡೆದಿವೆ.

**ಪುರಾಣೇತಿಹಾಸ ಕಾಲದಲ್ಲಿ ಕರ್ನಾಟಕ :** ದಕ್ಷಿಣಭಾರತಕ್ಕೆ ಆರ್ಯರ ಪ್ರವೇಶವಾದ ಕಾಲದಿಂದ ಈ ಪ್ರದೇಶದ ಇತಿಹಾಸ ಆರಂಭವಾಗುತ್ತದೆ. ಅಗಸ್ತ್ಯ ದಕ್ಷಿಣದಲ್ಲಿ ಆರ್ಯ ಸಂಸ್ಕೃತಿ ಹರಡಿದನೆಂಬ ಸಂಗತಿ ಕಾವ್ಯ ಪುರಾಣಗಳಲ್ಲಿ ವಿಸ್ತೃತವಾಗಿದೆ. ಮಹಾಭಾರತದ ರೀತ್ಯಾ ಅಗಸ್ತ್ಯ ಕರ್ನಾಟಕದ ಉತ್ತರಭಾಗದಲ್ಲಿದ್ದ ವಾತಾಪಿ ಇಲ್ವಲರೆಂಬ ಆರ್ಯಕುಲದ್ವೇಷಿಗಳಾದ ದೈತ್ಯಸೋದರರಲ್ಲಿ ಕಿರಿಯನಾದ ಇಲ್ವಲನನ್ನು ಭಂಜಿಸಿ ವಾತಾಪಿಯ ಗರ್ವಭಂಗ ಮಾಡಿದ. ಚಾಳುಕ್ಯ ರಾಜಧಾನಿಯಾದ ವಾತಾಪಿ (ಈಗಿನ ಬಾದಾಮಿ) ಈ ದೈತ್ಯಸೋದರರ ಸ್ಥಳವಾಗಿತ್ತೆಂದು ಇತಿಹಾಸಕಾರರ ನಂಬಿಕೆ. ಜಮದಗ್ನಿಪುತ್ರ ಪರಶುರಾಮ ಕ್ಷತ್ರಿಯ ನಿಗ್ರಹದ ಅನಂತರ ಇಡೀ ಭೂಮಿಯನ್ನು ಬ್ರಾಹ್ಮಣರಿಗೆ ದಾನಮಾಡಿ ಅನಂತರ ತನ್ನ ವಾಸಕ್ಕಾಗಿ ವರುಣದೇವನ ಪ್ರಸಾದದ ಫಲವಾಗಿ ಸಮುದ್ರದವರೆಗಿನ ಪಶ್ಚಿಮ ಕರಾವಳಿ ಕ್ಷೇತ್ರವನ್ನು ಪಡೆದನಂತೆ. ಇದು ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಐತಿಹ್ಯ. 12ನೆಯ ಶತಮಾನದ ಈ ಪ್ರದೇಶದ ಶಾಸನಗಳಲ್ಲೂ ಇದು ಉಕ್ತವಾಗಿದೆ.

ರಾಮಾಯಣದ ದಂಡಕಾರಣ್ಯ ಪ್ರದೇಶವೇ ಅನಂತರದ ಕರ್ನಾಟಕದ ಭೂಭಾಗ. ವಾನರಪ್ರಭುಗಳಾದ ವಾಲಿಸುಗ್ರೀವರ ಕಿಷ್ಕಿಂಧಾರಾಜ್ಯ ತುಂಗಭದ್ರಾ ತೀರದ ಈಗಿನ ಹಂಪೆಯ ಬಳಿಯಿರುವ ಪಂಪಾಸರೋವರದ ಪ್ರದೇಶವೆಂದು ಹೇಳಲಾಗಿದೆ. ಅಭಿನವ ಪಂಪನೆಂದು ಹೆಸರಾದ ನಾಗಚಂದ್ರನಿಂದ (ಸು.1100) ರಚಿತವಾದ ರಾಮಚಂದ್ರಚರಿತ ಪುರಾಣದಲ್ಲಿ ಕಿಷ್ಕಿಂಧೆಯ ರಾಜನೂ ಪ್ರಜೆಗಳೂ ವಾನರರಲ್ಲವೆಂದೂ ಅವರ ಧ್ವಜದ ಲಾಂಛನ ವಾನರಸಂಕೇತ ಹೊಂದಿದ್ದುದರಿಂದ ಅವರನ್ನು ಹಾಗೆಂದು ವರ್ಣಿಸಲಾಗಿದೆಯೆಂದೂ ಹೇಳಿದೆ.

ಇತಿಹಾಸ ದೃಷ್ಟಿಯಿಂದ ಕರ್ಣಾಟಕದ ಪ್ರಸ್ತಾಪ ಮೊಟ್ಟಮೊದಲಿಗೆ ಮಹಾಭಾರತದಲ್ಲಿ ಬಂದಿದೆ. ಮಹಿಷಕ, ವನವಾಸಕ ಮತ್ತು ಕುಂತಳಗಳು ಉಕ್ತವಾಗಿವೆ. ಮಹಿಷಕವೆಂದರೆ ಅನಂತರ ಕಾಲದ ಮಹಿಷಮಂಡಲ (ಈಗಿನ ಮೈಸೂರು); ಈಗಿನ ಬನವಾಸಿ ಪ್ರಾಂತ್ಯವೇ ವನವಾಸಕವೆಂದೂ ಅನಂತರ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿದ್ದ ರಾಜ್ಯವೇ ಕುಂತಳವೆಂದೂ ಗುರುತಿಸಬಹುದಾಗಿದೆ. ರಾಮಾಯಣ ಮಹಾಭಾರತಗಳ ಘಟನಾವಳಿಗಳ ಕಾಲ ಚರ್ಚಾಸ್ಪದವಾಗಿದ್ದರೂ ಈಗಿನ ರೂಪದಲ್ಲಿ ಅವನ್ನು ಪ್ರ.ಶ.ಪೂ. 20 ರಿಂದ 10ನೆಯ ಶತಮಾನಗಳ ಕಾಲಕ್ಕೆ ವಿದ್ವಾಂಸರು ನಿರ್ದೇಶಿಸಿರುತ್ತಾರೆ. ಆದುದರಿಂದ ಕ್ರಿಸ್ತಶಕೆಗೂ ಮುನ್ನವೇ ಕರ್ನಾಟಕ ಅಸ್ತಿತ್ವಕ್ಕೆ ಬಂದಿತ್ತು.

ಪ್ರ.ಶ.ಪೂ. ನಾಲ್ಕನೆಯ ಶತಮಾನದಲ್ಲಿ ಮಗಧ ರಾಜ್ಯದ ನಂದ ಸಾರ್ವಭೌಮರ ಕಾಲದಲ್ಲಿ ಅವರ ಪ್ರಭಾವ ಕರ್ನಾಟಕದವರೆಗೂ ಹಬ್ಬಿತ್ತೆಂದು ತಿಳಿಸುವ ಐತಿಹಾಸಿಕ ಮಾಹಿತಿಗಳು ದೊರಕುತ್ತವೆ. ಮೌರ್ಯ ವಂಶದ ಸ್ಥಾಪಕನಾದ ಚಂದ್ರಗುಪ್ತ (ಪ್ರ.ಶ.ಪೂ.ಸು. 324–300) ಕರ್ನಾಟಕದ ಶ್ರವಣಬೆಳಗೊಳದಲ್ಲಿ ತನ್ನ ಗುರುವಿನೊಡನೆ ಬಂದು ನೆಲೆಸಿದುದಾಗಿ ಐತಿಹ್ಯಗಳೂ ಮಧ್ಯಕಾಲೀನ ಶಾಸನಗಳೂ ತಿಳಿಸುತ್ತವೆ. ಆತನ ಮೊಮ್ಮಗನಾದ ಅಶೋಕನ ಶಿಲಾಶಾಸನಗಳು ಈ ರಾಜ್ಯದ ಮಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ದೊರಕಿರುವುದಲ್ಲದೆ ಮಸ್ಕಿಯ ಬಳಿಯ ಸುವರ್ಣಗಿರಿ ಮತ್ತು ಬ್ರಹ್ಮಗಿರಿಯ ಬಳಿಯ ಇಸಿಲ ನಗರಗಳು ಆತನ ಪ್ರಾದೇಶಿಕ ಮುಖ್ಯ ನಗರಗಳಾಗಿದ್ದುವೆಂಬ ಅಂಶವನ್ನು ತಿಳಿಸುತ್ತವೆ. ಇದರಿಂದ ಕರ್ನಾಟಕದ ಬಹುಭಾಗ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂದು ತಿಳಿದುಬರುತ್ತದೆ. ಅಶೋಕನ ರಾಜ್ಯ ಕಂಚಿಯವರೆಗೂ ಹಬ್ಬಿದ್ದು ಇಡೀ ಕರ್ನಾಟಕ ಅದರಲ್ಲಿ ಸೇರಿತ್ತೆಂಬುದು ನೀಲಕಂಠಶಾಸ್ತ್ರಿಯವರ ಅಭಿಪ್ರಾಯ.

**ಸಾತವಾಹನರು:** ಅನಂತರ ದಕ್ಷಿಣಾಪಥದ ಸಾರ್ವಭೌಮರಾಗಿದ್ದ ಸಾತವಾಹನರ ಆಡಳಿತಕ್ಕೆ ಕರ್ನಾಟಕದ ಬಹುಭಾಗ ಸೇರಿದ್ದಂತೆ ಕಾಣುತ್ತದೆ. ಸಾತವಾಹನರ ಮೂಲಪುರುಷನಾದ ಸೀಮುಕ (ಪ್ರ.ಶ.ಪೂ. ಸು.60) ಕರ್ನಾಟಕದವನೆಂದೂ ಈತ ಬಳ್ಳಾರಿ ಜಿಲ್ಲೆಗೆ ಸೇರಿದವನೆಂದೂ ಹಲವಿದ್ವಾಂಸರು ಪ್ರತಿಪಾದಿಸಿದ್ದಾರೆ. ಈ ಪ್ರದೇಶದ ಮೇಲೆ ಅವರ ಆಳ್ವಿಕೆಯಿತ್ತೆಂಬುದಾಗಿ ಅನಂತರದ ಅನೇಕ ಶಾಸನಗಳು ಸೂಚಿಸುತ್ತವೆ. ಕರ್ನಾಟಕದ ಉತ್ತರಭಾಗ ಅವರ ಆಳ್ವಿಕೆಯಲ್ಲಿದ್ದರೆ ದಕ್ಷಿಣದಲ್ಲಿ ಪುನ್ನಾಟ ಮೊದಲಾದ ಹಲವು ಸಣ್ಣರಾಜ್ಯಗಳಿದ್ದುವು. ಈ ಕಾಲದಲ್ಲಿ ಸಾತವಾಹನರು ಮೆಡಿಟರೇನಿಯನ್ ಸಮುದ್ರದ ಪ್ರದೇಶಗಳೊಂದಿಗೂ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಪರ್ಕಗಳನ್ನು ಪಡೆದಿದ್ದುದರಿಂದ ಕರ್ನಾಟಕದ ಜನರೂ ಅವುಗಳ ಪ್ರಯೋಜನ ಪಡೆಯುವಂತಾಯಿತು. ಇವರು ಪೂರ್ವದಿಕ್ಕಿನಲ್ಲಿ ಬಂಗಾಲ ಕೊಲ್ಲಿಯಿಂದಾಚೆಯಿದ್ದ ಪ್ರದೇಶಗಳೊಂದಿಗೂ ವ್ಯಾಪಾರ, ಸಾಂಸ್ಕೃತಿಕ ಸಂಪರ್ಕಗಳನ್ನು ಹೊಂದಿದ್ದರೆಂಬುದಕ್ಕೆ ಅನೇಕ ಆಧಾರಗಳಿವೆ. ತತ್ಸಂಬಂಧವಾದ ಸಂಶೋಧನೆಗಳು ಇನ್ನೂ ಮುಂದುವರಿಯಬೇಕಾಗಿದೆ. ಸಾತವಾಹನರ ವಂಶಕ್ಕೆ ಸೇರಿದ ಹಲವು ರಾಜರು ಕರ್ನಾಟಕದೊಡನೆ ಹೆಚ್ಚಿನ ಸಂಬಂಧ ಪಡೆದಿದ್ದರು. ಪುರಾಣಗಳಲ್ಲಿ ಈ ವಂಶದ ರಾಜನೊಬ್ಬನನ್ನು ಕುಂತಳ ಸಾತಕರ್ಣಿಯೆಂದು ಕರೆಯಲಾಗಿದೆ. ಸಾತವಾಹನ ವಂಶದ 17ನೆಯ ದೊರೆಯೆಂದು ಹೇಳಲಾದ ಹಾಲ ಕುಂತಳದ ದೊರೆಯೆಂದು ವರ್ಣಿತನಾಗಿದ್ದಾನೆ. ಗಾಥಾ ಸಪ್ತಶತಿಯ ಕರ್ತೃ ಈತನೇ ಎಂದು ಹೇಳಲಾಗಿದೆ.

ಸುಮಾರು ಈ ಕಾಲದಲ್ಲಿದ್ದ ಕೆಲವು ಪಾಶ್ಚಾತ್ಯ ಲೇಖಕರು ಕರ್ನಾಟಕದ ಕೆಲವು ಪ್ರದೇಶಗಳ ಪ್ರಸ್ತಾಪ ಮಾಡಿದ್ದಾರೆ. ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ ಎಂಬ ಗ್ರಂಥದಲ್ಲಿ (1ನೆಯ ಶತಮಾನ) ಮತ್ತು ಪ್ಲಿನಿಯ (77–78), ಬರೆಹಗಳಲ್ಲಿ ಈ ಪ್ರಸ್ತಾಪಗಳಿವೆ. ಬಾದಾಮಿ (ಬಡಿಯಮಇಯೊಇ), ಮುದ್ಗಲ್ (ಮದೌಗೌಲ್ಯ), ಬನವಾಸಿ (ಬನಔಆಸೆಇ), ಹೂವಿನ ಹಿಪ್ಪರಗಿ (ಹಿಪ್ಪೊಕೌರ)ಗಳನ್ನೂ ಪುನ್ನಾಟದ (ಪೌನ್ನಾಟ) ವೈಡೂರ್ಯಗಳನ್ನೂ ದಕ್ಷಿಣ ಕನ್ನಡ ಜಿಲ್ಲೆಯ ಮಲ್ಪೆಯನ್ನೂ (ಮಲಿಪ್ಪಲ) ಟಾಲೆಮಿ (ಸು. 150) ಹೆಸರಿಸುತ್ತಾನೆ. ಸು. 290ರಲ್ಲಿ ರಚಿತವಾದ ಗ್ರೀಕ್ ಪ್ರಹಸನವೊಂದರಲ್ಲಿ ಬರುವ ಕೆಲವು ಶಬ್ದಗಳು ಕನ್ನಡದವೆಂದು ವಿದ್ವಾಂಸರು ವಾದಿಸಿದ್ದಾರೆ. ಈ ಎಲ್ಲ ಆಧಾರಗಳಿಂದ ಆ ವೇಳೆಗಾಗಲೇ ಕರ್ನಾಟಕ ಅಸ್ತಿತ್ವಕ್ಕೆ ಬಂದಿದ್ದುದಲ್ಲದೆ ತನ್ನದೇ ಆದ ಸಂಸ್ಕೃತಿಯನ್ನು ನಿರ್ಮಿಸಿಕೊಂಡಿದ್ದು ಪರಕೀಯರೊಂದಿಗೂ ಸಂಪರ್ಕ ಬೆಳೆಸಿಕೊಂಡಿತ್ತೆಂದು ಹೇಳಬಹುದು.

ಸಾತವಾಹನರ ಅನಂತರ ಚುಟುವಂಶದ ರಾಜರು ಬನವಾಸಿ ಪ್ರಾಂತ್ಯದಲ್ಲಿ ಪ್ರಬಲರಾದರು. ಸ್ವಲ್ಪಕಾಲಾನಂತರ ಈ ಪ್ರದೇಶದಲ್ಲಿ ಕದಂಬರೂ ದಕ್ಷಿಣ ಕರ್ನಾಟಕದಲ್ಲಿ ಗಂಗರೂ ಇತರ ಭಾಗಗಳಲ್ಲಿ ಬಾಣರೂ ಆಳುಪರೂ ಸೇಂದ್ರಕರೂ ನಳರೂ ಸಣ್ಣ ಸಣ್ಣ ರಾಜ್ಯಗಳನ್ನು ಸ್ಥಾಪಿಸಿಕೊಂಡಿದ್ದರೆಂದು ತಿಳಿದುಬರುತ್ತದೆ. ಚುಟುವಂಶದ ರಾಜರ ವಿಷಯ ಹೆಚ್ಚು ತಿಳಿಯದಿದ್ದರೂ ಬನವಾಸಿಯ ನಾಗಶಾಸನದಲ್ಲಿ ಉಕ್ತನಾಗಿರುವ ಹಾರೀತಿಪುತ್ರ ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿ ಇವರಲ್ಲೊಬ್ಬ. ಈಗಿನ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿರುವ ನಾಗಶಿಲೆಯ ಶಾಸನದಲ್ಲಿ ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿ, ಆತನ ಪುತ್ರಿ ಶಿವಸ್ಕಂಧನಾಗಶ್ರೀ– ಇವರ ಹೆಸರುಗಳು ಉಕ್ತವಾಗಿವೆ. ವಿಣ್ಹುಕಡ ಸಾತಕರ್ಣಿ ಬನವಾಸಿಯ ದೊರೆಯೆಂದು ಮಳವಳ್ಳಿ ಶಾಸನ ತಿಳಿಸುತ್ತದೆ. ಬಹುಶಃ ಮಳವಳ್ಳಿ ಶಾಸನದ ವಿಣ್ಹುಕಡ ಸಾತಕರ್ಣಿ ಅದೇ ಹೆಸರಿನ 2ನೆಯ ವ್ಯಕ್ತಿಯಾಗಿದ್ದು 1ನೆಯ ಸಾತಕರ್ಣಿಯ ಮೊಮ್ಮಗನೂ ಶಿವಸ್ಕಂಧ ನಾಗಶ್ರೀಯ ಮಗನೂ ಆಗಿದ್ದಿರಬಹುದು. ಶಿವಸ್ಕಂಧ ನಾಗಶ್ರೀ ಮತ್ತು ಸಮಕಾಲೀನ ಪಲ್ಲವದೊರೆ ಶಿವಸ್ಕಂಧವರ್ಮ– ಈ ಹೆಸರುಗಳಲ್ಲಿ ಹೋಲಿಕೆಯಿರುವುದರಿಂದಲೂ ಆ ಕಾಲದಲ್ಲಿ ಪಲ್ಲವರು ಬಳ್ಳಾರಿ ಪ್ರದೇಶದ ಮೇಲೆ ಅಧಿಕಾರ ಪಡೆದಿದ್ದುದರಿಂದಲೂ ಇವರುಗಳಲ್ಲಿ ಸಂಬಂಧವಿದ್ದಿರಬಹುದೆಂದು ಭಾವಿಸಲಾಗಿದೆ. ಕದಂಬ ಸಂತತಿಯ ಸ್ಥಾಪಕ ಮಯೂರಶರ್ಮ ಪಲ್ಲವರಿಂದ ತನ್ನ ರಾಜ್ಯಪ್ರದೇಶವನ್ನು ಗೆದ್ದನೆಂಬ ಅಂಶ ಈ ವಾದಕ್ಕೆ ಸಹಾಯಕವಾಗಿದೆ. ಬಾಣರು ಪ್ರಸಕ್ತ ಶಕೆಯ ಆರಂಭಕಾಲದಿಂದ ಸುಮಾರು 10ನೆಯ ಶತಮಾನದವರೆಗೂ ಕೋಲಾರ ಜಿಲ್ಲೆಯ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದರು. ಬಾಣರು ಪೂರ್ವಭಾಗದಲ್ಲಿದ್ದರೆ ಆಳುಪರು ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಪ್ರಸಕ್ತ ಶಕೆಯ ಆರಂಭದಿಂದ 15ನೆಯ ಶತಮಾನದವರೆಗೂ ರಾಜ್ಯಭಾರ ಮಾಡುತ್ತಿದ್ದರು. ಶಿವಮೊಗ್ಗ ಪ್ರದೇಶದಲ್ಲಿ ಸೇಂದ್ರಕರೂ ಬಳ್ಳಾರಿಯ ಸುತ್ತುಮುತ್ತಣ ನಳರೂ ಆಳುತ್ತಿದ್ದರು.

**ಕದಂಬರು :** ಸಾತವಾಹನರ ಅನಂತರ ಪ್ರಾಮುಖ್ಯ ಗಳಿಸಿದ ಕದಂಬ ಸಂತತಿಯನ್ನು 300ರ ಸುಮಾರಿನಲ್ಲಿ ಸ್ಥಾಪಿಸಿದಾತ ಬ್ರಾಹ್ಮಣ ಕುಲದ ಮಯೂರಶರ್ಮ. ಈಚೆಗೆ ಇವರ



**ಗೋವೆಯ ಕದಂಬರ ಲಾಂಛನ**

ರಾಜಧಾನಿ ಬನವಾಸಿ ಬಳಿಯ ಗುಡ್ನಾಪುರದಲ್ಲಿ ದೊರಕಿದ ರವಿವರ್ಮನ ಶಾಸನದಲ್ಲಿ ಈತನ ತಂದೆತಾತಂದಿರ ವಿಷಯವಾಗಿ ಕೆಲವು ಮಾಹಿತಿಗಳು ದೊರಕಿವೆ. ಪಲ್ಲವರಿಗೆ

ಸೇರಿದ ಪ್ರದೇಶಗಳನ್ನು ಗೆದ್ದು ಕದಂಬ ರಾಜ್ಯ ಸ್ಥಾಪನೆ ಮಾಡಿದ ಅನಂತರ ಬಾಣರೇ ಮೊದಲಾದ ದೊರೆಗಳನ್ನು ಸೋಲಿಸಿದುದಾಗಿ ಇವನ ಚಂದ್ರವಳ್ಳಿಯ ಶಾಸನ ತಿಳಿಸುತ್ತದೆ. ಇವನು ಅರಸನಾದ ಮೇಲೆ ಶರ್ಮ ಹೆಸರಿನ ಸ್ಥಳದಲ್ಲಿ 'ವರ್ಮ' ಎಂಬ ಬಿರುದು ಧರಿಸಿ ಕ್ಷತ್ರಿಯನಾಗಿ ಕಾಣಿಸಿಕೊಂಡನು. ಇವನ ಅನಂತರ ಕಾಕುತ್ಸ್ಥವರ್ಮ, ಶಾಂತಿವರ್ಮ, ಮೃಗೇಶವರ್ಮ ಮುಂತಾದವರೂ ಸಿಂಹಾಸನವನ್ನೇರಿ ತಮ್ಮ ವಂಶದ ಗೌರವವನ್ನು ಹೆಚ್ಚಿಸಿದರು. ಇವರಲ್ಲಿ ಕಡೆಯವನಾದ ಹರಿವರ್ಮನನ್ನು ಇದೇ ವಂಶದ ಮತ್ತೊಂದು ಶಾಖೆಯ 2ನೆಯ ಕೃಷ್ಣವರ್ಮ ಸೋಲಿಸಿ ರಾಜ್ಯವನ್ನು ಪುನರೇಕೀಕರಣಗೊಳಿಸಿದ. ಎರಡು ಶತಮಾನಗಳಿಗೂ ಹೆಚ್ಚು ಕಾಲ ಆಳಿದ ಆದಿ ಕದಂಬರ ಹಲವಾರು ಶಾಸನಗಳು ಅವರ ರಾಜ್ಯ ವಿಸ್ತಾರ, ಯುದ್ಧ ವಿಜಯಗಳು ಮತ್ತಿತರ ಸಾಧನೆಗಳನ್ನು ತಿಳಿಸುತ್ತವೆ. ಕದಂಬ ರಾಜ್ಯ ಈಗಿನ ಬೆಳಗಾಂವಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಕೆಲವು ಭಾಗ ಮತ್ತು ಬಳ್ಳಾರಿ ಜಿಲ್ಲೆಗಳನ್ನೊಳಗೊಂಡಿದ್ದು ಅವರ ರಾಜಧಾನಿಗಳು ಕ್ರಮವಾಗಿ ಬೆಳಗಾಂವಿ ಜಿಲ್ಲೆಯ ಹಲಸಿ, ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಮತ್ತು ಬಳ್ಳಾರಿ ಜಿಲ್ಲೆಯ ಉಚ್ಚಂಗಿದುರ್ಗಗಳಲ್ಲಿದ್ದುವು. ಕರ್ನಾಟಕದ ಪ್ರಾಚೀನ ಅರಸುಮನೆತನಗಳಲ್ಲೊಂದಾದ ಕದಂಬ ವಂಶದ ದೊರೆಗಳು ಪ್ರಾಕೃತ ಭಾಷೆಯನ್ನು ತಮ್ಮ ಶಾಸನಗಳಿಗೆ ಬಳಸುತ್ತಿದ್ದರು. ಕ್ರಮೇಣ ಸಂಸ್ಕೃತ ರಾಜಭಾಷೆಯಾಯಿತು. ಐದನೆಯ ಶತಮಾನದ ಬೇಲೂರು ತಾಲ್ಲೂಕಿನ ಹಲ್ಮಿಡಿ ಶಾಸನವು ಇವರ ಕಾಲದ ಪ್ರಥಮ ಕನ್ನಡ ಶಾಸನವಾಗಿದೆ. ಕಾಳಿದಾಸ ಇವರ ಆಸ್ಥಾನಕ್ಕೆ ಭೇಟಿ ಕೊಟ್ಟಿದ್ದನೆಂದು ಕುಂತಳೇಶ್ವರ ದೌತ್ಯಂ ಎಂಬ ಕೃತಿಯಿಂದ ತಿಳಿದುಬರುತ್ತದೆ. ಕದಂಬ ರಾಜಪುತ್ರಿಯನ್ನು ಸಮಕಾಲೀನ ಗುಪ್ತ ಚಕ್ರವರ್ತಿ ವಿವಾಹವಾಗಿದ್ದನೆಂದರೆ ಇವರ ಪ್ರಾಮುಖ್ಯ ಅರಿವಾಗುತ್ತದೆ. ಆ ಚಕ್ರವರ್ತಿ 1ನೆಯ ಕುಮಾರಗುಪ್ತನಾಗಿರಬಹುದು. 540ರಲ್ಲಿ ಚಾಳುಕ್ಯರ ಒಂದನೆಯ ಪುಲಕೇಶಿ ಇವರನ್ನು ಸೋಲಿಸಿದ ಅನಂತರ ಕೆಲಕಾಲ ಈ ವಂಶಜರು ಆಳುತ್ತಿದ್ದರೂ ಸ್ವತಂತ್ರ ಕದಂಬ ವಂಶದ ಅಂತ್ಯವಾಯಿತೆಂದು ಹೇಳಬಹುದು. 14ನೆಯ ಶತಮಾನದವರೆಗೂ ಇವರು ಬೇರೆ ರಾಜರ ಸಾಮಂತರಾಗಿ ಕರ್ನಾಟಕದ ಕೆಲಭಾಗಗಳಲ್ಲಿ ಆಳುತ್ತಿದ್ದರು. ಕರ್ನಾಟಕ ಮತ್ತು ಹಿಂದೂ ಸಂಸ್ಕೃತಿಗಳಿಗೆ ಇವರ ಕೊಡುಗೆ ಗಮನಾರ್ಹ. ವೈದಿಕ ಧರ್ಮನಿರತರಾದ ಇವರ ಆಶ್ರಯದಲ್ಲಿ ವೇದಾಭ್ಯಾಸಕ್ಕೆ ಉತ್ತೇಜನ ದೊರೆಯಿತು. ವೈಷ್ಣವ–ಶೈವಧರ್ಮಗಳು ವೃದ್ಧಿಗೊಂಡುವು. ಜೈನ ಮತ್ತು ಬೌದ್ಧ ಧರ್ಮಗಳಿಗೂ ಪ್ರೋತ್ಸಾಹವಿತ್ತು. ಎಲ್ಲ ಧರ್ಮಗಳ ದೇವಮಂದಿರಗಳಿಗೂ ದಾನದತ್ತಿಗಳನ್ನು ನೀಡಿದ್ದರು. ಕೆಲಶಾಸನಗಳಲ್ಲಿ ಜೈನಾಚಾರ್ಯರಾದ ಪೂಜ್ಯಪಾದ, ನಿರವದ್ಯಪಂಡಿತ ಮುಂತಾದವರ ಹೆಸರುಗಳಿವೆ. ಹಾನಗಲ್ ಮತ್ತು ಪುಲಿಗೆರೆಗಳು ಜೈನ ಕೇಂದ್ರಗಳಾಗಿದ್ದರೆ ಅಜಂತ ಮತ್ತು ಬನವಾಸಿಗಳು ಬೌದ್ಧ ಕೇಂದ್ರಗಳಾಗಿದ್ದು ಆ ಧರ್ಮದ ಉಚ್ಛ್ರಾಯಸ್ಥಿತಿಯನ್ನು ಸೂಚಿಸುತ್ತವೆ. ಸು.636ರ ವೇಳೆಗೆ ಬನವಾಸಿಗೆ ಬಂದ ಚೀನ ದೇಶದ ಪ್ರವಾಸಿ ಯುವಾನ್ ಚಾಂಗ್ ಅಲ್ಲಿ ಹೀನಯಾನ ಮತ್ತು ಮಹಾಯಾನ ಪಂಥಗಳೆರಡೂ ನೆಲೆಸಿದ್ದುವೆಂದೂ ಒಂದು ನೂರು ಬೌದ್ಧ ಸಂಘಾರಾಮಗಳೂ ಹತ್ತು ಸಾವಿರ ಭಿಕ್ಷುಗಳೂ ಇದ್ದರೆಂದೂ ತಿಳಿಸುತ್ತಾನೆ. ಅಶೋಕ ನಿರ್ಮಿತ ಸ್ತೂಪವೂ ಅಲ್ಲಿತ್ತೆಂಬುದೂ ಆತನಿಂದ ತಿಳಿದುಬರುವ ಅಂಶ. ವಾಸ್ತು ಮತ್ತು ಮೂರ್ತಿಶಿಲ್ಪಕಲೆಯ ವೃದ್ಧಿಗೂ ಪ್ರೋತ್ಸಾಹವಿದ್ದು ಅನಂತರಕಾಲದ ವೇಸರಶೈಲಿಗೆ ತಳಹದಿಯನ್ನೊದಗಿಸಿದ ಕೀರ್ತಿ ಇವರಿಗೆ ಸಲ್ಲಬೇಕು.

**ಗಂಗವಂಶ :** ದಕ್ಷಿಣ ಕರ್ನಾಟಕದಲ್ಲಿ ಆಳಿದ ಗಂಗವಂಶವನ್ನು 325ರಲ್ಲಿ ಕೊಂಗುಣಿ ವರ್ಮ ಸ್ಥಾಪಿಸಿದ. ಮೊದಲಿಗೆ ಇವನ ರಾಜಧಾನಿ ಕೋಲಾರದಲ್ಲಿತ್ತು. ಈ ವಂಶಜರು 10ನೆಯ ಶತಮಾನದ ಕೊನೆಯವರೆಗೂ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇವರು ಕ್ರಮೇಣ ಕಾವೇರೀ ತೀರದಲ್ಲಿ ಪ್ರಬಲರಾದರು. ಹರಿವರ್ಮನ ಕಾಲದಲ್ಲಿ ತಲಕಾಡು (ಮೈಸೂರು ಜಿಲ್ಲೆ) ಇವರ ರಾಜಧಾನಿಯಾಯಿತು. ಈ ವಂಶದ ಪ್ರಮುಖ ದೊರೆಗಳಲ್ಲಿ ಅವಿನೀತ, ದುರ್ವಿನೀತ, ಭೂವಿಕ್ರಮ, ಶಿವಮಾರ 1, ಶ್ರೀಪುರುಷ, ಪೃಥ್ವೀಪತಿ, ಎರಡನೆಯ ರಾಚಮಲ್ಲ ಮತ್ತು ಎರಡನೆಯ ಬೂತುಗರ ಹೆಸರುಗಳನ್ನು ಇಲ್ಲಿ ಸೂಚಿಸಬಹುದು. ಚಳುಕ್ಯ, ರಾಷ್ಟ್ರಕೂಟ ಮತ್ತು ಕಲ್ಯಾಣಿ ಚಾಳುಕ್ಯರ ಕಾಲದಲ್ಲಿ ಇತಿಹಾಸದ ರೂಪರೇಷೆಗಳನ್ನು ನಿರ್ಮಿಸುವುದರಲ್ಲಿ ಈ ಅರಸರು ಪ್ರಮುಖಪಾತ್ರ ವಹಿಸಿದರು. 2ನೆಯ ಪುಲಕೇಶಿ 642ರಲ್ಲಿ ಯುದ್ಧದಲ್ಲಿ ಮಡಿದು ಆ ರಾಜ್ಯ ಪಲ್ಲವರ ಕೈಸೇರಿದಾಗ, ಅವರೊಂದಿಗೆ ವಿವಾಹಸಂಬಂಧ ಬೆಳೆಸಿದ ಈ ವಂಶದ ರಾಜರು 1ನೆಯ ವಿಕ್ರಮಾದಿತ್ಯ ರಾಜ್ಯವನ್ನು ಪುನಃ ಗಳಿಸಲು ಹೆಚ್ಚಿನ ನೆರವು ನೀಡಿದರು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಅವರ ಸಾಮಂತರಾಗಿದ್ದ ಗಂಗರಸರ ನೆರವು ವಿಶೇಷವಾಗಿತ್ತು. 2ನೆಯ ಶಿವಮಾರ ರಾಷ್ಟ್ರಕೂಟರೊಂದಿಗೆ ಹೋರಾಟ ನಡೆಸಿ, ಹೆಚ್ಚುಕಾಲ ಸೆರೆಯಲ್ಲಿದ್ದು ಬಹುಶಃ ಅಲ್ಲೇ ಮೃತನಾದ. 2ನೆಯ ಬೂತುಗ ತನ್ನ ಭಾವನಾದ ರಾಷ್ಟ್ರಕೂಟ ಮೂರನೆಯ ಕೃಷ್ಣನ ಪರವಾಗಿ ಅನೇಕ ಯುದ್ಧಗಳಲ್ಲಿ ಧೈರ್ಯಪರಾಕ್ರಮಗಳಿಂದ ಹೋರಾಡಿ ಕೀರ್ತಿಶಾಲಿಯಾದ. ಕನ್ನಡದ ಆದಿಕವಿಗಳಲ್ಲೊಬ್ಬನಾದ ನೃಪತುಂಗನ ಕವಿರಾಜಮಾರ್ಗದಲ್ಲಿ ಉಕ್ತನಾದ ದುರ್ವಿನೀತನೆಂಬಾತ ಈ ವಂಶದ ದೊರೆಯಾದ ದುರ್ವಿನೀತನೇ–ಎಂಬುದು ಕೆಲವರ ವಾದ. ಶಬ್ದಾವತಾರ, ಗುಣಾಢ್ಯನ ವಡ್ಡಕಥೆಯ ಸಂಸ್ಕೃತ ಭಾಷಾಂತರ, ಭಾರವಿಯ ಕಿರಾತಾರ್ಜುನೀಯದ ಮೇಲೆ ವ್ಯಾಖ್ಯಾನ – ಇವು ಈತನ ಮುಖ್ಯ ಸಾಹಿತ್ಯಕ ಕೊಡುಗೆಗಳು. ಈ ವಂಶದ 2ನೆಯ ಮಾರಸಿಂಹ ಮತ್ತು 4ನೆಯ ರಾಚಮಲ್ಲರ ಮಂತ್ರಿಯಾದ

ಗಂಗರಾಜರ ಲಾಂಛನ

ಚಾವುಂಡರಾಯನೇ ಶ್ರವಣಬೆಳಗೊಳದ ವಿಶ್ವವಿಖ್ಯಾತ ಗೊಮ್ಮಟಮೂರ್ತಿಯನ್ನು ಕಡೆಯಿಸಿದವ. 1004ರಲ್ಲಿ ಚೋಳರಿಂದ ಪರಾಜಿತರಾದಾಗ ಇವರ ಸ್ವತಂತ್ರ ಅಸ್ತಿತ್ವ ನಷ್ಟವಾದರೂ 1116ರಲ್ಲಿ ಹೊಯ್ಸಳರು ತಲಕಾಡನ್ನು ಗೆದ್ದುಕೊಂಡು ಇವರ ಧ್ಯೇಯವನ್ನು ಮುಂದುವರಿಸಿದರು.

ಗಂಗರ ರಾಜ್ಯಕ್ಕೆ ಗಂಗವಾಡಿ ಎಂಬ ಹೆಸರಿದ್ದು ಇತ್ತೀಚಿನವರೆಗೂ ಅದು ಬಳಕೆಯಲ್ಲಿತ್ತು. ಪಶ್ಚಿಮದಲ್ಲಿ ಕದಂಬರ ಮತ್ತು ಪೂರ್ವದಲ್ಲಿ ಪಲ್ಲವರ ರಾಜ್ಯಗಳ ನಡುವಣ ಈ ರಾಜ್ಯ ಮೊದಲಿಗೆ ಅನಂತಪುರ ಮತ್ತು ಕಡಪ ಜಿಲ್ಲೆಗಳನ್ನೊಳಗೊಂಡಿದ್ದು ಕುವಲಾಲಪುರವನ್ನು (ಕೋಲಾರ) ರಾಜಧಾನಿಯಾಗಿ ಪಡೆದಿತ್ತು. ಅನಂತರ ಕಾಲದಲ್ಲಿ ತುಮಕೂರು, ಬೆಂಗಳೂರು, ಕೊಡಗು, ಮೈಸೂರು ಪ್ರದೇಶಗಳೂ ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳೂ ಅವರ ವಶವಾದುವು. ಕದಂಬರು 4ನೆಯ ಶತಮಾನದ ಪ್ರಾರಂಭಕ್ಕೆ ಬಾದಾಮಿ ಚಳುಕ್ಯ ರಾಜ್ಯದ ಬಹುಪೂರ್ಣವಾಗಿ ಸೋತ ಮೇಲೆ ಹಿಂದಿನ ಹಳೆಯ ಮೈಸೂರು ರಾಜ್ಯದ ಬಹು ಭಾಗ ಹಂಗರ ಆಧಿಪತ್ಯಕ್ಕೆ ಒಳಪಟ್ಟು ಗಂಗವಾಡಿ 16000ವೆಂದು ಪ್ರಸಿದ್ಧವಾಯಿತು. ಕಾವೇರಿತೀರದ ತಲವನಪುರಕ್ಕೆ (ತಲಕಾಡು) ಅವರ ರಾಜಧಾನಿ ಬದಲಾಯಿತು. ಅನಂತರ ಏಳನೆಯ ಶತಮಾನದಲ್ಲಿ, ಚನ್ನಪಟ್ಟಣದ ಬಳಿಯ ಮಾನ್ಯಕುಂಡವನ್ನೂ ತದನಂತರ ಬೆಂಗಳೂರು ಜಿಲ್ಲೆಯ ಮಾನ್ಯಪುರವನ್ನೂ (ಮನ್ನೆ) ಇವರು ರಾಜಧಾನಿಯನ್ನಾಗಿ ಮಾಡಿಕೊಂಡರು. ಇವರ ರಾಜ್ಯಸ್ಥಾಪನೆಗೆ ಸಹಾಯಕನಾದ ಜೈನಾಚಾರ್ಯ ಸಿಂಹನಂದಿಯ ಪ್ರಭಾವದಿಂದ ಜೈನಧರ್ಮ ಪ್ರಾಬಲ್ಯ ಪಡೆದು ಕೊನೆಯವರೆಗೂ ಅದು ಗಂಗರಸರ ಪ್ರೋತ್ಸಾಹ ಪಡೆದಿತ್ತು. ಆದರೂ ಸರ್ವಧರ್ಮಗಳಿಗೂ ಇವರು ಆಶ್ರಯದಾತರಾಗಿದ್ದರು. ವಿಷ್ಣುಗೋಪ ಇವರನ್ನು ನಾರಾಯಣನ ಪಾದಾರವಿಂದಗಳ ಪೂಜಾನಿರತರೆಂದು ವರ್ಣಿಸಿರುವುದೇ ಇವರು ವೈಷ್ಣವಧರ್ಮಕ್ಕೆ ಪ್ರೋತ್ಸಾಹ ನೀಡಿದುದಕ್ಕೆ ಸಾಕ್ಷಿ. ಗಂಗರಸ ಅವಿನೀತ ವಿದ್ಯಾಪಕ್ಷಪಾತಿ; ಗಜಶಾಸ್ತ್ರ, ಅಶ್ವವಿದ್ಯೆ ಮತ್ತು ಶರವಿದ್ಯೆಗಳಲ್ಲಿ ಪ್ರವೀಣ. ಶಾಸನಗಳ ಪ್ರಕಾರ ಈತ ಹರಚರಣಾರವಿಂದ ಪ್ರಣಿಪಾತ (ಶಿವಭಕ್ತ)ನಾಗಿದ್ದ. ಇವನ ಪುತ್ರ ದುರ್ವಿನೀತ ಸ್ವತಃ ವಿದ್ವಾಂಸನಾಗಿದ್ದುದಲ್ಲದೆ ವಿದ್ವಜ್ಜನಪಕ್ಷಪಾತಿಯಾಗಿದ್ದು ಭಾರವಿಗೆ ಆಶ್ರಯದಾತನೆಂದು ಕವಿ ದಂಡಿ ತಿಳಿಸುತ್ತಾನೆ. ಮತ್ತೊಬ್ಬ ದೊರೆ ಶ್ರೀಪುರುಷ ಗಜಶಾಸ್ತ್ರವೆಂಬ ವಿದ್ವತ್ಪೂರ್ಣ ಕೃತಿಯ ರಚನೆಮಾಡಿ ತನ್ನ ಪಾಂಡಿತ್ಯಪ್ರದರ್ಶನ ಮಾಡಿದ್ದಾನೆ. ಆತ ವಿದ್ವಾಂಸರಿಗೆ ಆಶ್ರಯದಾತನೂ ಆಗಿದ್ದ. ಎರಡನೆಯ ಶಿವಮಾರ ಆಗಿಂದಾಗ್ಗೆ ರಾಷ್ಟ್ರಕೂಟ ಸಾಮ್ರಾಜ್ಯದ ಕೋಪಕ್ಕೆ ಪಾತ್ರನಾಗಿ ಸೆರೆವಾಸ ಮಾಡುತ್ತಿದ್ದರೂ ಉಳಿದ ಕಾಲದ ಬಹುಭಾಗ ರಣರಂಗಗಳಲ್ಲಿದ್ದು ಭೀಮಕೋಪನೆಂಬ ಬಿರುದು ಧರಿಸಿದ್ದರೂ

ಕೆಲವಾರು ಜೈನಬಸದಿಗಳನ್ನು ನಿರ್ಮಿಸಿದ. ಈತ ಮನ್ಮಥನನ್ನು ನಾಚಿಸುವಷ್ಟು ಸುಂದರ; ಇವನ ಜ್ಞಾಪಕಶಕ್ತಿ ಅಸಾಧಾರಣ ; ಈತ ಕುಶಾಗ್ರಮತಿ, ಸಕಲವಿದ್ಯಾಪ್ರವೀಣ-ಎಂದೆಲ್ಲ ಹೊಗಳಲಾಗಿದೆ. ಗಜಾಷ್ಟಕ ಮತ್ತು ಸೇತುಬಂಧನವೆಂಬ ಕೃತಿಗಳು ಈತನವೆಂದು

ನಂಬಲಾಗಿದೆ. ಇಮ್ಮಡಿ ನೀತಿಮಾರ್ಗ ವೀರಸೇನಾನಿಯಾಗಿದ್ದುದಲ್ಲದೆ ಸಂಗೀತನೃತ್ಯಗಳಲ್ಲಿ ಭರತನೆಂದೂ ವ್ಯಾಕರಣ ರಾಜ ನೀತಿಶಾಸ್ತ್ರಪರಿಣತನೆಂಬುದೂ ಶಾಸನದ ಉಕ್ತಿ. ಗಂಗರ ಇತಿಹಾಸದಲ್ಲೇ ವೈಶಿಷ್ಟ್ಯ ಪೂರ್ಣನಾದ ಇಮ್ಮಡಿ ಬೂತುಗ ಜೈನಧರ್ಮ ಮತ್ತು ಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿದ್ದ. ಮಂತ್ರಿಯಾಗಿ ಈ ವಂಶಕ್ಕೆ ಸೇವೆ ಸಲ್ಲಿಸಿದ ಚಾವುಂಡರಾಯ ಅಪ್ರತಿಮ ಸೇನಾನಿ, ಅದ್ವಿತೀಯ ರಾಜಕಾರಣಿ, ವಿದ್ಯಾಪಕ್ಷಪಾತಿ; ತರ್ಕ, ವ್ಯಾಕರಣ, ಗಣಿತ, ವೈದ್ಯಶಾಸ್ತ್ರ ಮತ್ತು ಸಾಹಿತ್ಯಗಳಲ್ಲಿ ಪಾರಂಗತ. ಚಾವುಂಡರಾಯಪುರಾಣವನ್ನು ರಚಿಸಿದವನೀತನೇ. ಈಗಿನ ಬಾಗಿಲಕೋಟೆ ಜಿಲ್ಲೆಯ ಬಾದಾಮಿ ಇವರ ಪ್ರಮುಖ ರಾಜಧಾನಿ.

**ಬಾದಾಮಿ ಚಳುಕ್ಯರು:** ಕದಂಬ-ಗಂಗರ ಅನಂತರ ಕರ್ನಾಟಕದ ಪ್ರಮುಖ ರಾಜಮನೆತನವೆಂದರೆ ಬಾದಾಮಿ ಚಳುಕ್ಯವಂಶ. ಇವರ ಮೂಲ ಸರಿಯಾಗಿ ಗೊತ್ತಿಲ್ಲ. ಒಂದನೆಯ ಪುಲಕೇಶಿಯ ಕಾಲದಿಂದ (ಸು. 540) ಪ್ರಾಬಲ್ಯ ಪಡೆದ ಈ ವಂಶ ಎರಡು ಶತಮಾನಕ್ಕೂ ಹೆಚ್ಚು ಕಾಲ ಕರ್ನಾಟಕದ ಕೀರ್ತಿಧ್ವಜವನ್ನು ಎತ್ತಿಹಿಡಿಯಿತು. ಕೀರ್ತಿವರ್ಮನಿಂದ ವಿಸ್ತೃತವಾದ ಈ ರಾಜ್ಯ ಇಮ್ಮಡಿ ಪುಲಕೇಶಿಯ ಕಾಲದಲ್ಲಿ ಕೀರ್ತಿಶಿಖರ ತಲುಪಿತು. ದಕ್ಷಿಣ ಭಾರತದ ರಾಜರುಗಳನ್ನು ಗೆದ್ದು ದಕ್ಷಿಣಾಪಥೇಶ್ವರನೆನಿಸಿಕೊಂಡ ಈತ ಉತ್ತರಭಾರತದ ಸಾಮ್ರಾಟ ಹರ್ಷನನ್ನು ನರ್ಮದಾ ತೀರದಲ್ಲಿ ಸೋಲಿಸಿ ತನ್ನ ಬಿರುದನ್ನು ಸಾರ್ಥಕಗೊಳಿಸಿಕೊಂಡ. ಹರ್ಷನ ಆಸ್ಥಾನ ಕವಿ ಬಾಣ ಮತ್ತು ಸಮಕಾಲೀನ ಚೀನೀ ಪ್ರವಾಸಿ ಯುವಾನ್ ಚಾಂಗ್ ಆ ಕಾಲದ ಕರ್ನಾಟಕ ಸಾಮ್ರಾಜ್ಯದ ವೈಭವವನ್ನು ಹೊಗಳಿದ್ದಾರೆ. ಆದರೆ ಈತ 642ರಲ್ಲಿ ಪಲ್ಲವ ನರಸಿಂಹವರ್ಮನಿಂದ ಸೋತು ಮಡಿದ. 13 ವರ್ಷಗಳ ಅನಂತರ 655ರಲ್ಲಿ ಚಾಳುಕ್ಯ ರಾಜ್ಯ ಮೊದಲನೆಯ ವಿಕ್ರಮಾದಿತ್ಯನಿಂದ ಪುನಃ ಸ್ಥಾಪಿತವಾಯಿತು. ವಿಕ್ರಮಾದಿತ್ಯ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಪಲ್ಲವ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಅದರ ದಕ್ಷಿಣದ ಎಲ್ಲೆಯಾದ ಉರಗಪುರದ (ಈಗಿನ ಉರೈಯೂರು-ತಿರಚಿರಾಪಳ್ಳಿಯ ಸಮೀಪ) ವರೆಗಿನ ಪ್ರದೇಶವನ್ನೆಲ್ಲ 674ರಲ್ಲಿ ಜಯಿಸಿದ. ನಾನಾ ವಿಜಯಗಳಿಂದಲೂ ಸುವ್ಯವಸ್ಥಿತ ಆಡಳಿತದಿಂದಲೂ ಆತ ಚಳುಕ್ಯ ರಾಜ್ಯವೈಭವವನ್ನು ಮೆರೆಸಿದ. 2ನೆಯ ವಿಕ್ರಮಾದಿತ್ಯನೂ ಪಲ್ಲವರ ಮೇಲಿನ ದ್ವೇಷವನ್ನು ಮುಂದುವರಿಸಿ ತನ್ನ ಯುವರಾಜ್ಯಕಾಲದಲ್ಲೂ ಆಳ್ವಿಕೆಯ ಸಮಯದಲ್ಲೂ ಮೂರು ಬಾರಿ ಪಲ್ಲವ ರಾಜಧಾನಿಯಾದ ಕಂಚಿಯನ್ನು ವಶಪಡಿಸಿಕೊಂಡಿದ್ದ. ವಾಯುವ್ಯ ಗಡಿಯಲ್ಲಿ ಉಪಟಳ ಕೊಡುತ್ತಿದ್ದ ಅರಬರನ್ನು ಸೋಲಿಸಿ ಗುಜರಾತಿನಲ್ಲಿ ತನ್ನ ಅಧಿಕಾರವನ್ನು ನೆಲೆಗೊಳಿಸಿದ. ಉದಾರಚರಿತನಾದ ಈತ ಶತ್ರು ರಾಜಧಾನಿಯಾದ ಕಂಚಿಯ ಬ್ರಾಹ್ಮಣರಿಗೂ ದೇವಾಲಯಗಳಿಗೂ ಧನಕನಕಗಳನ್ನು ವಿಪುಲವಾಗಿ ಕೊಟ್ಟುದಾಗಿ ಶಾಸನಗಳು ತಿಳಿಸುತ್ತವೆ. ವಿನಯಾದಿತ್ಯ, ವಿಜಯಾದಿತ್ಯ ಮತ್ತು ಇಮ್ಮಡಿ ವಿಕ್ರಮಾದಿತ್ಯರ ಕಾಲದಲ್ಲಿ ಅತ್ಯಂತ ಉಚ್ಛ್ರಾಯ ದೆಸೆಯಲ್ಲಿದ್ದ ಈ ವಂಶದ ಅರಸರು 757ರ ಸುಮಾರಿನಲ್ಲಿ ಈ ವಂಶದ ಕೊನೆಯ ದೊರೆ ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ರಾಷ್ಟ್ರಕೂಟರಿಗೆ ಸಾಮಂತರಾದರು.

ಬಾದಾಮಿ ಚಳುಕ್ಯರ ಕಾಲದಿಂದಲೇ ಕರ್ನಾಟಕದ ಪ್ರಾದುರ್ಭಾವವಾಯಿತೆಂದು ಅನೇಕ ಇತಿಹಾಸತಜ್ಞರು ಅಭಿಪ್ರಾಯಪಡುತ್ತಾರೆ. ಆ ಮೊದಲು ಇತರ ರಾಜಮನೆತನಗಳು ಅಲ್ಲಲ್ಲಿ ಆಳುತ್ತಿದ್ದರೂ ಕರ್ನಾಟಕದ ಹೆಚ್ಚು ಭಾಗ ಒಂದುಗೂಡಿ ಅದರ ಇತಿಹಾಸಕ್ಕೆ ಒಂದು ನಿರ್ದಿಷ್ಟರೂಪ ದೊರೆಕಿದ್ದು ಚಳುಕ್ಯರ ಕಾಲದಲ್ಲಿ. ಇವರು ಅದರ ಸಾಂಸ್ಕೃತಿಕ ಮೇರೆಗಳನ್ನು ವಿಸ್ತರಿಸಿದರು ; ರಾಜ್ಯದಲ್ಲಿ ಸುವ್ಯವಸ್ಥಿತ ಆಡಳಿತ ನಿರ್ಮಿಸಿದರು. ಬಾದಾಮಿ ಇವರ ರಾಜಧಾನಿ. ಎಲ್ಲ ದಿಕ್ಕುಗಳಿಗೂ ರಾಜ್ಯ ಹರಡಿತ್ತು. ಉತ್ತರದಲ್ಲಿ ನರ್ಮದಾ ಪೂರ್ವದಲ್ಲಿ ಕರ್ನೂಲು, ಗುಂಟೂರು ಮತ್ತು ನೆಲ್ಲೂರು ಪ್ರದೇಶಗಳು, ದಕ್ಷಿಣದಲ್ಲಿ ಕಾವೇರಿ ಮತ್ತು ಪಶ್ಚಿಮದಲ್ಲಿ ಅರಬ್ಬೀ ಸಮುದ್ರ- ಇವು ಈ ರಾಜ್ಯದ ಉಚ್ಛ್ರಾಯ ಕಾಲದಲ್ಲಿ ಎಲ್ಲೆಗಳಾಗಿದ್ದುವು. ಇದಲ್ಲದೆ ಈ ವಂಶಜರು ಗುಜರಾತ್ ಮತ್ತು ಆಂಧ್ರಪ್ರದೇಶಗಳಲ್ಲೂ ರಾಜ್ಯ ಸ್ಥಾಪನೆ ಮಾಡಿದರು. ಕ್ರಮೇಣ ಅವು ಸ್ವತಂತ್ರರಾಜ್ಯಗಳಾಗಿ ಕರ್ನಾಟಕ ಸಂಸ್ಕೃತಿಯ ಹೊರಕೇಂದ್ರಗಳಾದುವು. ಪುರಾತನ ಕಾಲದಲ್ಲಿ ನಡೆದ ಈ ಕರ್ನಾಟಕ ಏಕೀಕರಣದಿಂದ ಜನರಲ್ಲಿ ಭಾವೈಕ್ಯವುಂಟಾಯಿತು. ನಾಡಿನ ರಕ್ಷಣೆಗೆ ಸುಶಿಕ್ಷಿತವೂ ಶಿಸ್ತಿನಿಂದ ಕೂಡಿದ್ದೂ ಆದ ಕರ್ನಾಟಕಬಲದ ನಿರ್ಮಾಣವಾಯಿತು. ರಾಷ್ಟ್ರಕೂಟ ದಂತಿದುರ್ಗ ಕರ್ನಾಟಕ ಬಲದ ಪ್ರಸ್ತಾಪಮಾಡಿದ್ದಾನೆ. ಮತೀಯ, ಸಾಮಾಜಿಕ, ಭಾಷಾ, ಸಾಹಿತ್ಯ ಮತ್ತು ಕಲಾರಂಗಗಳ ಮೇಲೂ ಈ ಏಕೀಕರಣದ ಪ್ರಭಾವ ಅದ್ಭುತವಾಗಿತ್ತು. ಸಾಮಾಜಿಕ ಪಂಗಡಗಳ ಮೇಲೆ ಸಂಸ್ಥಾಜೀವನದ ಆದರ್ಶ ಪರಿಣಾಮ ಬೀರಿ ಆತ್ಮಗೌರವವನ್ನು ವೃದ್ಧಿಗೊಳಿಸಿತು. ಯುವಾನ್‌ಚಾಂಗ್ ತಿಳಿಸಿರುವಂತೆ ಕರ್ನಾಟಕದ ಜನತೆ ಧರ್ಮಭೀರುಗಳಾಗಿದ್ದು ವರ್ಣಾಶ್ರಮ ಧರ್ಮಗಳನ್ನು ಪಾಲಿಸುತ್ತ ನ್ಯಾಯಪರರಾಗಿದ್ದರು. ಅಭಿಮಾನಿಗಳು, ಉತ್ಸಾಹಿಗಳು, ವೀರರು, ಉಪಕಾರಿಗಳಿಗೆ ಪ್ರತ್ಯುಪಕಾರಿಗಳು, ಅನ್ಯಾಯದ ದ್ವೇಷಿಗಳು, ಶರಣಾಗತರಿಗಾಗಿ ಸ್ವಾರ್ಥ ತ್ಯಾಗ ಮಾಡಬಲ್ಲವರು- ಎಂದು ಇವರು ವರ್ಣಿತರಾಗಿದ್ದಾರೆ. ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ, ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್ ಎಂದು ಆ ಕಾಲದ ಶಾಸನವೊಂದು ಆಗಿನ ಕಾಲದ ಜನರ ಮುಂದಿದ್ದ ಆದರ್ಶವನ್ನು ಹೇಳುತ್ತದೆ.

ಶೈವ, ವೈಷ್ಣವ, ಜೈನ ಮತ್ತು ಬೌದ್ಧಧರ್ಮಗಳಿಗೆ ಸಮಾನಾಶ್ರಯವಿತ್ತು. ಅತ್ಯಂತ ಪುರಾತನ ಧರ್ಮಗಳಲ್ಲೊಂದಾದ ಶೈವಧರ್ಮಕ್ಕೆ ಇವರ ಕಾಲದಲ್ಲಿ ಸಾಕಷ್ಟು ಪ್ರೋತ್ಸಾಹವಿತ್ತು. ಮಂಗಲೀಶನ ಕಾಲದಲ್ಲಿ ನಿರ್ಮಿತವಾದ ಮಹಾಕೂಟ ದೇವಾಲಯ ಶೈವ ಪುಣ್ಯಕ್ಷೇತ್ರವೆಂದು 602ರ ಶಾಸನವೊಂದು ತಿಳಿಸುತ್ತದೆ. 700ರ ಶಾಸನವೊಂದು ಕಿಗ್ಗದಲ್ಲಿ ದೊರಕಿದ್ದು ಪಾಶುಪತಮತದ ಪ್ರಸ್ತಾಪವನ್ನೊಳಗೊಂಡಿದೆ. ಚಾಳುಕ್ಯರ ಆಶ್ರಯದಲ್ಲಿ ಕಲ್ಲೇಶ್ವರ, ದುರ್ಗಾ, ಮಲ್ಲಿಕಾರ್ಜುನ, ವಿರೂಪಾಕ್ಷ, ಪಾಪನಾಥೇಶ್ವರ ಮುಂತಾದ ಅನೇಕ ದೇವಾಲಯಗಳು ನಿರ್ಮಿತವಾಗಿ ರಾಜರಿಂದ ಹಲವಾರು ದಾನ ದತ್ತಿಗಳನ್ನು ಪಡೆದಿದ್ದು ಈ ಮತದ ಜನಪ್ರಿಯತೆಗೆ ನಿದರ್ಶನವಾಗಿದೆ. ವಿಕ್ರಮಾದಿತ್ಯ ಕಂಚಿಯನ್ನು ಗೆದ್ದಾಗ ಅಲ್ಲಿಯ ಮುಖ್ಯ ದೇಗುಲವಾದ ರಾಜಸಿಂಹೇಶ್ವರ (ಈಗಿನ ಕೈಲಾಸನಾಥ) ದೇವಾಲಯಕ್ಕೆ ಅನೇಕ ದತ್ತಿಗಳನ್ನು ಬಿಟ್ಟಿದ್ದ. ವೈಷ್ಣವ ಧರ್ಮ ಚಾಳುಕ್ಯರಾಜರ ಮುಖ್ಯಧರ್ಮವಾಗಿದ್ದಂತೆ ತಿಳಿದುಬರುತ್ತದೆ. ಮಂಗಲೀಶ ನಿರ್ಮಿತವಾದ ಬಾದಾಮಿಯ ವಿಷ್ಣುವಿನ ಗುಹಾಂತರ್ದೇವಾಲಯ ಇದಕ್ಕೆ ಮೊದಲ ನಿದರ್ಶನ. ಮಂಗಲೀಶ, ವಿಷ್ಣುವರ್ಧನ, ವಿಕ್ರಮಾದಿತ್ಯ, ವಿಜಯಾದಿತ್ಯ ಮುಂತಾದ ಈ ರಾಜರ ನಾಮಧೇಯಗಳೂ ಪರಮಭಾಗವತ, ಪರಮಭಟ್ಟಾರಕ, ಶ್ರೀಪೃಥ್ವೀವಲ್ಲಭ ಎಂಬ ಬಿರುದುಗಳೂ ಈ ಅಂಶವನ್ನು ಸ್ಥಿರೀಕರಿಸುತ್ತವೆ. ಚಾಳುಕ್ಯ ಯುಗದಲ್ಲಿ ತಮಿಳುನಾಡಿನಲ್ಲಿ ಆಳ್ವಾರುಗಳೆಂದು ಪ್ರಸಿದ್ಧರಾದ ಸಂತರಿಂದ ಶ್ರೀವೈಷ್ಣವಧರ್ಮದ ಪುನರುಜ್ಜೀವನ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಅದರ ಪ್ರಭಾವ ಕನ್ನಡನಾಡಿನಲ್ಲೂ ಬಹುಮಟ್ಟಿಗೆ ಹರಡಿತು. ಜೈನಧರ್ಮದ ಪ್ರಭಾವವೂ ಸಾಕಷ್ಟು ಇತ್ತೆಂದು ಸಮಕಾಲೀನ ಗುಹಾಂತರ್ದೇವಾಲಯಗಳಿಂದಲೂ ಚಾಳುಕ್ಯರ ಪ್ರಮುಖ ಸಾಮಂತರಾದ ಗಂಗರಸರ ಇತಿಹಾಸದಿಂದಲೂ ತಿಳಿದುಬರುತ್ತದೆ. ಐಹೊಳೆ ಶಾಸನದ ಕರ್ತೃವಾದ ರವಿಕೀರ್ತಿ ಜೈನಮತೀಯ. ಈತ ತನ್ನ ಪ್ರತಿಭೆ ವಿದ್ವತ್ತುಗಳಿಂದ 2ನೆಯ ಪುಲಕೇಶಿಯ ಮೆಚ್ಚುಗೆಗೆ ಪಾತ್ರನಾಗಿ ಆಸ್ಥಾನ ಕವಿಯಾಗಿದ್ದ. ಆ ಕಾಲದ ಪ್ರಸಿದ್ಧ ಜೈನಾಚಾರ್ಯರಲ್ಲಿ ದಂಡಿಕವಿಯ

ಸ್ತುತಿಗೆ ಪಾತ್ರರಾದ ತುಂಬಲೂರಿನ ಶ್ರೀವರ್ಧದೇವ (ತುಂಬಲೂರಾಚಾರ್ಯ) ಮತ್ತು ಪೂಜ್ಯಪಾದರು ಹೆಸರಾದವರು. ಅವರಿಂದ ಸಾಹಿತ್ಯಸೇವೆ ಅಧಿಕ ಪ್ರಮಾಣದಲ್ಲಿ ನಡೆದಿತ್ತು. ಬೌದ್ಧಧರ್ಮವೂ ಆ ಕಾಲದಲ್ಲಿ ಪ್ರಭಾವಯುತವಾಗಿತ್ತೆಂಬುದಕ್ಕೆ ಆಧಾರಗಳಿವೆ. ಬೌದ್ಧಯಾತ್ರಿಕ ಯುವಾನ್ ಚಾಂಗನ ಬರವಣಿಗೆಗಳಿಂದ ಕರ್ನಾಟಕದಲ್ಲಿ ಆ ಧರ್ಮ ಪ್ರಚಾರದಲ್ಲಿತ್ತೆಂದು ತಿಳಿದುಬರುತ್ತದೆ. ಚಳುಕ್ಯರಾಜ್ಯದ ಅಂಗವಾಗಿದ್ದ ಬನವಾಸಿ ಪ್ರದೇಶದಲ್ಲಿ ನೂರಾರು ಬೌದ್ಧವಿಹಾರಗಳು ಸ್ತೂಪಗಳೂ ಸಾವಿರಾರು ಭಿಕ್ಷುಭಿಕ್ಷುಣಿಯರೂ ಇದ್ದುದಾಗಿ ಈತ ವರ್ಣಿಸಿದ್ದಾನೆ. ಹೀನಯಾನ ಮಹಾಯಾನ ಪಂಥಗಳೆರಡಕ್ಕೂ ಸಮಾನಾವಕಾಶವಿತ್ತು. ಒಟ್ಟಿನಲ್ಲಿ ಎಲ್ಲ ಮತಧರ್ಮಗಳಿಗೂ ಸಮನಾದ ಪ್ರೋತ್ಸಾಹವಿದ್ದು ಕನ್ನಡಿಗರ ಮೂಲತತ್ತ್ವವಾದ ಸರ್ವಧರ್ಮ ಸಮನ್ವಯತೆ ರೂಢಿಯಲ್ಲಿತ್ತೆಂದು ಹೇಳಬಹುದು.

ಸಮಾಜ ಚಾತುರ್ವರ್ಣಯುಕ್ತವಾಗಿದ್ದು ಅದರಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಹೆಚ್ಚಿನ ಪ್ರಾಧಾನ್ಯವಿತ್ತು. 7ನೆಯ ಶತಮಾನದ ವಿಕ್ರಮಾದಿತ್ಯನ ಶಾಸನವೊಂದರಲ್ಲಿ ಒಟ್ಟು ಜನಸಮುದಾಯವನ್ನು ಹದಿನೆಂಟು ಪ್ರಕೃತಿಗಳಾಗಿ ವಿಭಾಗಿಸಲಾಗಿದೆ. ಆಯಾ ಪ್ರಕೃತಿಗಳಿಗೆ ಸಂಬಂಧಿಸಿದ ಶ್ರೇಣಿ ಅಥವಾ ಉದ್ಯೋಗ ಸಂಘಗಳ ಪ್ರಸ್ತಾಪವೂ ಇದೆ. ವರ್ಣಾಶ್ರಮದ ಹೊರಗಿದ್ದ ಅಗಸ, ಕಲ್ಕುಟಿಗ, ಉಪ್ಪಾರ ಮತ್ತು ಮಾಲೆಗಾರರ ಪ್ರಸ್ತಾಪವೂ ಕೆಲವು ಕಡೆ ಬರುತ್ತದೆ. ಸಮಾಜದ ಹಲವಾರು ಕ್ಷೇತ್ರಗಳಲ್ಲಿ ಸಾಂಘಿಕ ಚಟುವಟಿಕೆಗಳಿದ್ದುವು. ಬೌದ್ಧವಿಹಾರಗಳು, ಚತುರ್ವೇದಿ ಮಂಗಲಗಳು. ಅಯ್ಯಾವೊಳೆಯ (ಐಹೊಳೆ) ಐನೂರ್ವರು ಎಂಬ ವ್ಯಾಪಾರ ಸಂಘ, ಮಹಾಜನ ಹಾಗೂ ನಕರಗಳು ಮತ್ತು ವೃತ್ತಿವರ್ಗಗಳ ಶ್ರೇಣಿಗಳು ಇದಕ್ಕೆ ನಿದರ್ಶನಗಳು, ಸಮಾಜ ಪಿತೃಪ್ರಧಾನವಾಗಿದ್ದು ಆಸ್ತಿಯ ಹಕ್ಕು ಗಂಡುಮಕ್ಕಳ ಮುಖಾಂತರ ಬರುತ್ತಿದ್ದರೂ ಸ್ತ್ರೀಯರಿಗೆ ಹೆಚ್ಚಿನ ಸ್ಥಾನಮಾನಗಳಿದ್ದುವು. ಚಾಳುಕ್ಯವಂಶದ ಹಲವಾರು ರಾಜಸ್ತ್ರೀಯರು ವಿಖ್ಯಾತರಾಗಿದ್ದಾರೆ. ಇಮ್ಮಡಿ ಪುಲಕೇಶಿಯ ಸೊಸೆ ವಿಜಯ ಭಟ್ಟಾರಿಕೆ ಚಾಳುಕ್ಯವಂಶಭೂಷಣಳೆಂದು ವರ್ಣಿತಳಾಗಿದ್ದು, ವಿದ್ಯೆ ಮತ್ತು ಕಲೆಗಳಲ್ಲಿ ಪ್ರವೀಣೆಯೆಂದೂ ಕನ್ನಡ ಸಂಸ್ಕೃತಗಳೆರಡರಲ್ಲೂ ಸರಸ್ವತಿಯೆಂದೂ ಪ್ರಶಂಸಿತಳಾಗಿದ್ದಾಳೆ. ಈಕೆ ತನ್ನನ್ನು ಕರ್ಣಾಟೀ ಎಂದು ಕರೆದುಕೊಂಡಿದ್ದಾಳೆ. ವಿನಯಾದಿತ್ಯನ ರಾಣಿ ವಿನಯವತಿ ರಾಜಧಾನಿಯ ದೇವಾಲಯಗಳಿಗೆ ಕರತೆರಿಗೆಗಳ ಮೂಲಕ ಉತ್ಪನ್ನ ಬರುವ ಏರ್ಪಾಡು ಮಾಡಿದ್ದಳು. ಇಮ್ಮಡಿ ವಿಕ್ರಮಾದಿತ್ಯನ ಇಬ್ಬರು ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯಮಹಾದೇವಿಯವರು ಎರಡು ಶಿವಾಲಯಗಳ (ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ) ನಿರ್ಮಾಪಕಿಯರಾಗಿದ್ದು ಕೆಲಶಾಸನಗಳನ್ನೂ ಹೊರಡಿಸಿದ್ದಾರೆ. ಚಂದ್ರಾದಿತ್ಯನ ರಾಣಿ ವಿಜಯಭಟ್ಟಾರಿಕೆಯೇ ಕೌಮುದೀಮಹೋತ್ಸವವೆಂಬ ಸಂಸ್ಕೃತಕಾವ್ಯದ ಕರ್ತೃವಾದ ವಿಜ್ಜಿಕಾ ಎಂಬುದು ಕೆಲವರ ಅಭಿಪ್ರಾಯ. ಆಡಳಿತ, ಸಮಾಜ, ಸಾಹಿತ್ಯ ಮತ್ತು ಕಲಾರಂಗಗಳಲ್ಲಿ ಸ್ತ್ರೀಯರು ಪ್ರಮುಖರಾಗಿದ್ದಂತೆ ನೃತ್ಯಸಂಗೀತ ಕಲಾವಿದರಾದ ವೇಶ್ಯಾ ಸ್ತ್ರೀಯರೂ ಸಮಾಜದ ಪ್ರಮುಖ ಅಂಗವಾಗಿದ್ದರು. ವಿಜಯಾದಿತ್ಯ ದೊರೆಯ ಪ್ರಿಯವಲ್ಲಭೆಯಾಗಿದ್ದವಳು ವಿನಾ ಪೋಟಿ ಎಂಬ ವೇಶ್ಯೆ. ಗೋವಿಂದ ಪೊಡ್ಡಿಯ ಪುತ್ರಿ ಬದಿ ಪೊಡ್ಡಿ ದೇವಾಲಯವೊಂದರ ದೇವದಾಸಿ. ಇವರಿಬ್ಬರೂ ಅನೇಕ ದಾನಕಾರ್ಯಗಳನ್ನು ಮಾಡಿದ್ದರು. ಚಾಲಬ್ಬೆಯೆಂಬ ಪಣ್ಯಾಂಗನೆ ವಿಜಯೇಶ್ವರ ದೇವಾಲಯದ ಕಂಬಗಳನ್ನು ಮಾಡಿಸಿಕೊಟ್ಟಿದ್ದಳು. ಈ ನಿದರ್ಶನಗಳಿಂದ ವೇಶ್ಯೆಯರಿಗೆ ಸಮಾಜದಲ್ಲಿದ್ದ ಸ್ಥಾನಮಾನಗಳ ಪರಿಚಯ ದೊರಕುತ್ತದೆ.

ಆರ್ಥಿಕವಾಗಿ ಜನ ಉತ್ತಮ ಸ್ಥಿತಿಯಲ್ಲಿದ್ದರು. ಅನೇಕ ರೀತಿಯ ಹಣ್ಣು ಹಂಪಲುಗಳೂ ಅಕ್ಕಿ, ಗೋದಿ ಮುಂತಾದವೂ ಮುಖ್ಯ ಆಹಾರ ಪದಾರ್ಥಗಳಾಗಿದ್ದು ಈರುಳ್ಳಿ ಬೆಳ್ಳುಳ್ಳಿಗಳು ವರ್ಜ್ಯವಾಗಿದ್ದುವು. ಹಾಲು, ತುಪ್ಪ, ಬೆಲ್ಲ, ಸಕ್ಕರೆಗಳು ಸಾಮಾನ್ಯ ಆಹಾರವಾಗಿದ್ದರೆ ಮೀನು ಮಾಂಸಗಳು ಮೃಷ್ಟಾನ್ನಗಳೆಂದು ಪರಿಗಣಿತವಾಗಿದ್ದುವು. ರಾಗಿಯೂ ಬಳಕೆಯಲ್ಲಿತ್ತು. ಕುಡಿತ ಮನುಷ್ಯರಿಗೆ ಮಾತ್ರ ಸೀಮಿತವಾಗಿರಲಿಲ್ಲ ; ಯುದ್ಧದಾನೆಗಳಿಗೂ ಕುಡಿಸುತ್ತಿದ್ದರೆಂದು ಯುವಾನ್ ಚಾಂಗ್ ಹೇಳಿದ್ದಾನೆ. ಸುರೆಯಲ್ಲದೆ ಇನ್ನೂ ಹನ್ನೊಂದು ಬಗೆಯ ಪಾನೀಯಗಳು ಬಳಕೆಯಲ್ಲಿದ್ದುವು. ದ್ರಾಕ್ಷಿ ಕಬ್ಬುಗಳಿಂದ ತಯಾರಿಸಲಾದ ಪಾನೀಯಗಳಲ್ಲದೆ ಉಗ್ರವಾದ ಭಟ್ಟಿಸೆರೆಯೂ ಉಪಯೋಗದಲ್ಲಿತ್ತು.

ರಾಜಪುರುಷರು ಅಮೂಲ್ಯ ಉಡುಗೆಗಳನ್ನೂ ಅನರ್ಘ್ಯ ಆಭರಣಗಳನ್ನೂ ಉಪಯೋಗಿಸುತ್ತಿದ್ದರೆ ಬ್ರಾಹ್ಮಣರ ಉಡುಗೆಗಳು ಸರಳವಾಗಿರುತ್ತಿದ್ದುವೆಂದು ಯುವಾನ್ ಚಾಂಗ್ ಹೇಳುತ್ತಾನೆ. ಶುಭ್ರವರ್ಣದ ಬಟ್ಟೆಗಳು ಪ್ರಿಯವಾಗಿದ್ದುವು. ಗಂಡಸರು ಸೊಂಟಕ್ಕೆ ಸುತ್ತಿದ ತುಂಡುವಸ್ತ್ರವನ್ನು ಎಡಭುಜದ ಮೇಲೆ ಹಾಕಿಕೊಳ್ಳುತ್ತಿದ್ದರೆ ಹೆಂಗಸರು ಉದ್ದವಾದ ವಸ್ತ್ರವನ್ನು ಸುತ್ತಿಕೊಂಡು ಎರಡು ಭುಜಗಳನ್ನೂ ಮುಚ್ಚಿಕೊಳ್ಳುತ್ತಿದ್ದರು. ಬಡವರು, ಕೆಳದರ್ಜೆಯವರು ನಾರುಬಟ್ಟೆಯ ಒಂದು ತುಂಡನ್ನು ಮಾತ್ರ ಬಳಸುತ್ತಿದ್ದರು. ಮೇಲಿನ ಹೇಳಿಕೆಗಳನ್ನು ಸಮಕಾಲೀನ ಶಿಲ್ಪಗಳಿಂದಲೂ ಸಮರ್ಥಿಸಬಹುದು. ಈ ಶಿಲ್ಪಗಳಿಂದ ಹೆಣ್ಣುಗಂಡುಗಳ ವಿವಿಧ ಆಭರಣಗಳ ವಿವರ ಮತ್ತು ಕಲೆ ಕೂದಲನ್ನು ಅಲಂಕರಿಸುತ್ತಿದ್ದ ವಿಧಾನಗಳು ತಿಳಿದುಬರುತ್ತವೆ. ಕರ್ಣಕುಂಡಲ, ಕಂಠಹಾರ, ತೋಳಬಂದಿ, ಕಂಕಣ, ಒಡ್ಯಾಣ, ಉಂಗುರಗಳು ಶ್ರೀಮಂತರ ಆಭರಣಗಳು, ನಡುಪಟ್ಟಿಗಳು ವಿಶೇಷವಾಗಿ ಬಳಕೆಯಲ್ಲಿದ್ದುವು.

ಪಾಶ್ಚಾತ್ಯ ಪೌರಸ್ತ್ಯ ದೇಶಗಳೊಂದಿಗೂ ಭಾರತದ ಇತರ ಪ್ರದೇಶಗಳೊಂದಿಗೂ ಕರ್ನಾಟಕದ ವ್ಯಾಪಾರ ನಡೆಯುತ್ತಿತ್ತು. ಪಶ್ಚಿಮತೀರದ ಕಲ್ಯಾಣ, ಮಾಂಗರೂರ್ (ಮಂಗಳೂರು), ಮಲ್ಪೆಗಳ ಮುಖಾಂತರ ಸರಕುಗಳನ್ನು ಸಾಗಿಸುತ್ತಿದ್ದರು. ರೋಮನ್



ಬಾದಾಮಿ ಚಳುಕ್ಯರ ಲಾಂಛನ

ಸಾಮ್ರಾಜ್ಯ ಕಾಲದಲ್ಲಿ ಕರ್ನಾಟಕದೊಡನೆಯ ಸಂಪರ್ಕದ ಬಗ್ಗೆ ಪ್ರವಾಸಿಗಳ ಕಥನಗಳು ತಿಳಿಸುತ್ತವೆ. ಇಮ್ಮಡಿ ಪುಲಕೇಶಿ ಈ ಸಂಬಂಧವಾಗಿ ಪರ್ಷಿಯದೊಡನೆ ಸಂಪರ್ಕ ಬೆಳೆಸಿದುದಕ್ಕೆ ಅಜಂತದ 1ನೆಯ ಗುಹೆಯ ವರ್ಣಚಿತ್ರವೂ, ಪರ್ಷಿಯದ ಇತಿಹಾಸಕಾರ ಟಬರಿಯ ಬರವಣಿಗೆಯೂ ಆಧಾರಗಳಾಗಿವೆ. ಆ ದೇಶದ ಚಕ್ರವರ್ತಿ ಮೂರನೆಯ ಖುಸ್ರು ರಾಯಭಾರಿಯನ್ನು ಕಳಿಸಿದುದಾಗಿ ಈ ಆಧಾರಗಳಿಂದ ತಿಳಿದುಬರುತ್ತದೆ. ವ್ಯಾಪಾರದ ಸೌಕರ್ಯಕ್ಕಾಗಿ ತೂಕ ಮತ್ತು ಅಳತೆಯ ಸಾಧನಗಳೂ ಬಳಕೆಯಲ್ಲಿದ್ದುವು. ಮಣ, ಸೇರು, ವೀಶ, ಭಾಂಡಪೇರು, ಕುಳ, ಸೊಂಟಿಕೆ, ಸವುಟು ಮುಂತಾದ ಮಾಪಕಗಳ ಉಲ್ಲೇಖ ದೊರಕುತ್ತದೆ. ಮತ್ತರ ಅಥವಾ ಮತ್ತಲ ಮತ್ತು ನಿವರ್ತನಗಳು ಭೂಮಿಯನ್ನು ಅಳೆಯುವ ಸಾಧನಗಳು. ಖಜ್ಜನ ವಾಗುಲ ಕಚ್ಛಕ್ಷೇತ್ರ, ಗಜ್ದೆ—(ಗದ್ದೆ), ನೆಲ್ಲುಗೆ ಮುಂತಾದವು ಭೂಮಿಯ ವಿಂಗಡಣೆಯನ್ನು ಸೂಚಿಸುವ ಪದಗಳು.

ಕನ್ನಡ, ಸಂಸ್ಕೃತ ಭಾಷೆಗಳು ಬಳಕೆಯಲ್ಲಿದ್ದುವು. ಈ ಎರಡು ಭಾಷೆಗಳ ಶಾಸನಗಳೂ ದೊರಕಿವೆ. ಎರಡಕ್ಕೂ ಲಿಪಿ ಮಾತ್ರ ಕನ್ನಡದ್ದೇ ಆಗಿದ್ದಂತೆ ತಿಳಿದು ಬರುತ್ತದೆ. ಸಂಸ್ಕೃತ ಸಾಹಿತ್ಯ ಈ ಕಾಲದಲ್ಲಿ ಬಹುಶಃ ವಿಶೇಷವಾಗಿ ಅಭಿವೃದ್ಧಿ ಹೊಂದಿತು. ಮಹಾಕೂಟ ಸ್ತಂಭಶಾಸನದಲ್ಲಿ ವರ್ಣಿಸಲಾಗಿರುವ ಕೀರ್ತಿವರ್ಮನ ದಿಗ್ವಿಜಯವನ್ನು ಕಾಳಿದಾಸಕೃತ ರಘುವಿನ ದಿಗ್ವಿಜಯಕ್ಕೆ ಸಮವೆಂದು ಹೇಳಬಹುದು. ಶಾಸನಕಾವ್ಯದ ರವಿಕೀರ್ತಿ ಯಾರಿಗೂ ಕಡಿಮೆಯಲ್ಲ. ಈ ಮೊದಲೇ ಹೇಳಿದಂತೆ ವಿಜ್ಜಿಕಾನಿರ್ಮಿತ ಕೌಮುದೀಮಹೋತ್ಸವಕಾವ್ಯ ಪ್ರಸಿದ್ಧಕೃತಿ. ಕಾಳಿದಾಸನನ್ನು ಬಿಟ್ಟರೆ ವಿಜ್ಜಿಕೆಯಂತೆ ವೈದರ್ಭೀ ಶೈಲಿಯಲ್ಲಿ ಬರೆಯಬಲ್ಲವರಿಲ್ಲವೆಂದು ರಾಜಶೇಖರ ಈ ಕವಯಿತ್ರಿಯನ್ನು ಶ್ಲಾಘಿಸಿದ್ದಾನೆ. ಅಕಳಂಕ ಕವಿವಿರಚಿತ ತತ್ತ್ವಾರ್ಥ ರಾಜವಾರ್ತಿಕವೆಂಬ ಮೇರುಕೃತಿ ಈ ಕಾಲದ್ದು. ಇವಲ್ಲದೆ ಅನೇಕ ಉದ್ಗ್ರಂಥಗಳೂ ಚಾಳುಕ್ಯರ ಆಶ್ರಯದಲ್ಲಿ ರಚಿತವಾಗಿದ್ದುವು.

**ರಾಷ್ಟ್ರಕೂಟರು** : ರಾಷ್ಟ್ರಕೂಟ ವಂಶದವರು ಮೊದಲಿಗೆ ಬಾದಾಮಿ ಚಳುಕ್ಯರ ಮಾಂಡಲಿಕರಾಗಿದ್ದರು. ಚಳುಕ್ಯ 2ನೆಯ ವಿಕ್ರಮಾದಿತ್ಯ ಮತ್ತು ಕೀರ್ತಿವರ್ಮರ ಕಾಲದಲ್ಲಿ ಈ ವಂಶದ ದಂತಿದುರ್ಗ ಪ್ರಬಲನಾಗಿ ಚಾಳುಕ್ಯರಿಂದ ಸಾರ್ವಭೌಮಾಧಿಕಾರವನ್ನು ವಶಪಡಿಸಿಕೊಂಡ. 1ನೆಯ ಕೃಷ್ಣ, ಧ್ರುವ, 3ನೆಯ ಗೋವಿಂದ, ಅಮೋಘವರ್ಷ ನೃಪತುಂಗ, 2ನೆಯ ಕೃಷ್ಣ, 3ನೆಯ ಕೃಷ್ಣ ಮುಂತಾದ ಪ್ರಮುಖ ರಾಷ್ಟ್ರಕೂಟ ದೊರೆಗಳ ಕಾಲದಲ್ಲಿ ಕರ್ನಾಟಕ ರಾಜ್ಯವೈಭವ ಅತ್ಯುಚ್ಚ ದೆಶೆ ತಲುಪಿತು. ಮಾನ್ಯಖೇಟ ಅಥವಾ ಈಗಿನ ಮಳಖೇಡ (ಗುಲ್ಬರ್ಗ ಜಿಲ್ಲೆ) ಇವರ ಪ್ರಧಾನ ರಾಜಧಾನಿಯಾಗಿತ್ತು. 1ನೆಯ ಕೃಷ್ಣನ ಕಾಲದಲ್ಲಿ ಚಾಳುಕ್ಯರು ನಾಮಾವಶೇಷರಾದರು. ಆತ ಜೊತೆಗೆ ಕೊಂಕಣ, ಗಂಗ ಮತ್ತು ವೆಂಗಿ ರಾಜ್ಯಗಳನ್ನು ಗೆದ್ದು ತನ್ನ ಅಧಿಕಾರವನ್ನು ಬಲಗೊಳಿಸಿದ. ಉತ್ತರಭಾರತದಲ್ಲಿ ಅವ್ಯವಸ್ಥಿತವಾಗಿದ್ದ ಕನೌಜ್ ರಾಜ್ಯದ ಮೇಲೆ ಕಣ್ಣುಹಾಕಿದ್ದ ಮಾಳ್ವದ ಪ್ರತೀಹಾರ ವತ್ಸರಾಜ ಮತ್ತು ಬಂಗಾಲದ ಧರ್ಮಪಾಲನನ್ನು ಧ್ರುವ ಸೋಲಿಸಿ ಕನೌಜಿನಿಂದ ಕಾಶಿಯವರೆಗೂ ಕರ್ನಾಟಕದ ಪ್ರಭಾವವನ್ನು ಹಬ್ಬಿಸಿದ. ದಕ್ಷಿಣದಲ್ಲಿ ಗಂಗ ಮತ್ತು ಪಲ್ಲವರನ್ನೂ

ಪರಾಜಯಗೊಳಿಸಿದ. ಮೂರನೆಯ ಗೋವಿಂದ ಉತ್ತರಭಾರತದಲ್ಲಿ ಪುನಃ ತಲೆದೋರಿದ್ದ ಪ್ರತೀಹಾರ-ಬಂಗಾಳಗಳ ವಿವಾದದಲ್ಲಿ ಪ್ರವೇಶಿಸಿ ಮೊದಲು ಪ್ರತೀಹಾರ ನಾಗಭಟನನ್ನು ಸೋಲಿಸಿ ಕನೌಜನ್ನು ವಶಪಡಿಸಿಕೊಂಡ. ಬಂಗಾಳದ ಧರ್ಮಪಾಲ ತಾನಾಗಿಯೇ

ರಾಷ್ಟ್ರಕೂಟರ ಸಾಮ್ರಾಜ್ಯ

ಶರಣಾಗತನಾದ. ವೆಂಗಿ ರಾಜ್ಯದಲ್ಲಿ ತನ್ನ ಹಸ್ತಕನಿಗೆ ರಾಜ್ಯ ಕೊಡಿಸಿ ಅನಂತರ ದಕ್ಷಿಣದಲ್ಲಿ ಗಂಗ, ಪಲ್ಲವ, ಪಾಂಡ್ಯ, ಕೇರಳಗಳ ಒಕ್ಕೂಟವನ್ನು ಎದುರಿಸಿ ಸದೆಬಡಿದು, ಕಂಚಿಯನ್ನು ವಶಪಡಿಸಿಕೊಂಡ. ರಾಜ್ಯಾಡಳಿತವೂ ಸುವ್ಯವಸ್ಥಿತವಾಯಿತು. ಮೂರನೆಯ ಕೃಷ್ಣನ ಕಾಲದಲ್ಲಿ ಚೋಳರು ಪ್ರಬಲರಾಗುತ್ತಿದ್ದರು. ಅವರ ಉಪಟಳ ತಪ್ಪಿಸಲು, ಆತ ಆ ವಂಶದ ಪರಾಂತಕನನ್ನು ತಕ್ಕೋಲದಲ್ಲಿ ಸೋಲಿಸಿ ಯುವರಾಜ ರಾಜಾದಿತ್ಯನನ್ನು ಕೊಂದುಹಾಕಿದ. ಕಂಚಿಯೂ ರಾಜಧಾನಿಯಾದ ತಂಜಾವೂರೂ ರಾಷ್ಟ್ರಕೂಟರ ವಶವಾಯಿತು. ಆತ ರಾಮೇಶ್ವರದವರೆಗೂ ಹೋಗಿ ಅಲ್ಲಿ ತನ್ನ ಜಯಸ್ತಂಭ ನೆಡಿಸಿದ. ಈ ದಂಡಯಾತ್ರೆಯಲ್ಲಿ ಅಮೋಘ ಸೇವೆ ಸಲ್ಲಿಸಿದ ಗಂಗರಸ ಭೂತುಗನಿಗೆ ಬನವಾಸಿ ಮುಂತಾದ ಪ್ರಾಂತ್ಯಗಳನ್ನು ಕೊಟ್ಟ. ಈ ವಿಜಯಗಳಿಂದ ಚೋಳರ ಕ್ಲೈಬ್ಯ ನೂರು ವರ್ಷಗಳವರೆಗೆ ಮುಂದುವರಿಯಿತು. ಮೂರನೆಯ ಕೃಷ್ಣ ಉತ್ತರ ಭಾರತದಲ್ಲೂ ಕೆಲವು ವಿಜಯಗಳನ್ನು ಗಳಿಸಿದ. ಈ ರೀತಿಯಾಗಿ ದಕ್ಷಿಣದಲ್ಲಿ ಚೋಳರನ್ನೂ ಉತ್ತರದ ಅನೇಕ ರಾಜರನ್ನೂ ಸೋಲಿಸಿ ಕನೌಜಿನಿಂದ ಕನ್ಯಾಕುಮಾರಿಯವರೆಗೂ ಗುಜರಾತಿನಿಂದ ಬಂಗಾಳದವರೆಗೂ ರಾಷ್ಟ್ರಕೂಟರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. 3ನೆಯ ಕೃಷ್ಣನ (939-968) ಕಾಲದಲ್ಲಿ ಪರಮಾವಧಿ ತಲಪಿದ್ದ ಇವರ ರಾಜಕೀಯ ಪ್ರಭಾವ ಅನಂತರ ಇಳಿಮುಖವಾಯಿತು. ಗಂಗವಂಶದ ಮಾರಸಿಂಹನ ಅಮಿತ ಪ್ರಯತ್ನವೂ ವಿಫಲವಾಗಿ ಕಲ್ಯಾಣ ಚಾಳುಕ್ಯ ಮನೆತನದ ಇಮ್ಮಡಿ ತೈಲಪನಿಂದ ರಾಷ್ಟ್ರಕೂಟ ಮನೆತನ 973ರಲ್ಲಿ ಕೊನೆಗೊಂಡಿತು.

ರಾಷ್ಟ್ರಕೂಟರು ಕದಂಬ, ಚಳುಕ್ಯರಂತೆ ಕರ್ನಾಟಕದವರು. ಅವರು ವಿದರ್ಭ ಪ್ರದೇಶದಲ್ಲಿ ಮೊದಲಿಗೆ ಇದ್ದುದರಿಂದ ಮತ್ತು ಆ ಪ್ರದೇಶ ಈಗ ಮಹಾರಾಷ್ಟ್ರಕ್ಕೆ ಸೇರಿರುವುದರಿಂದ ಅವರನ್ನು ಮರಾಠರ ಮೂಲಕ್ಕೆ ನಿರ್ದೇಶಿಸಲಾಗದು. ಆ ರಾಜರ ಹೆಸರುಗಳು, ಅವರ ಕಾಲದಲ್ಲಿ ಕನ್ನಡ ಭಾಷೆ ಸಾಹಿತ್ಯಗಳಿಗೆ ದೊರಕಿದ ಪ್ರೋತ್ಸಾಹ, ಆ ಕಾಲದ ಶಾಸನಗಳ ಭಾಷೆ ಮತ್ತು ಲಿಪಿ- ಈ ಆಧಾರಗಳಿಂದ ಅವರ ಕನ್ನಡ ಮೂಲ ಸಂದೇಹಾತೀತವಾಗಿದೆ. ವಿಷ್ಣುವಾಹನವಾದ ಗರುಡ ಅವರ ಲಾಂಛನ; ಅವರ ತಾಮ್ರ ಶಾಸನಗಳ ಮುದ್ರೆಯಲ್ಲೂ ಇದು ಕಾಣುತ್ತದೆ. ಈ ದೊರೆಗಳು ವಲ್ಲಭ, ಶ್ರೀಪೃಥ್ವೀವಲ್ಲಭ ಮುಂತಾದ ಚಾಳುಕ್ಯ ಬಿರುದುಗಳನ್ನು ಧರಿಸಲು ಚಾಳುಕ್ಯರಿಂದ ಅಧಿಕಾರ ಪಡೆದು, ಅದೇ ಪದ್ಧತಿಯನ್ನು ಮುಂದುವರಿಸಿಕೊಂಡು ಹೋದದ್ದು ಸ್ಪಷ್ಟವಾಗಿದೆ.

ಬಹುಶಃ ಲಟ್ಟಲೂರು (ಈಗಿನ ಹೈದರಾಬಾದ್ ಬಳಿಯ ಲಾಟೂರು) ಇವರ ಮೂಲಸ್ಥಾನವೂ ಮೊದಲ ರಾಜಧಾನಿಯೂ ಆಗಿತ್ತು. ಅನಂತರ ಅಚಲಾಪುರಕ್ಕೆ (ಈಗಿನ ಎಲಿಚ್‌ಪೂರ್, ವಿದರ್ಭ ಪ್ರದೇಶ) ಇವರು ಸ್ಥಾನಾಂತರ ಹೊಂದಿದರು. ದಂತಿದುರ್ಗ ಎಲ್ಲೋರವನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡ. ನೃಪತುಂಗನ ಕಾಲದಲ್ಲಿ ಅನಂತರ ಮಾನ್ಯಖೇಟ (ಈಗಿನ ಮಾಲ್ಖೇಡ್) ರಾಷ್ಟ್ರಕೂಟರ ರಾಜಧಾನಿಯಾಯಿತು.

ಅನೇಕ ರೀತಿಗಳಲ್ಲಿ ರಾಷ್ಟ್ರಕೂಟರ ಕಾಲ ಬಹಳ ಮುಖ್ಯವಾದದ್ದು. ಬಾದಾಮಿ ಚಳುಕ್ಯ ಸಾಮ್ರಾಜ್ಯದ ಉತ್ತರಾಧಿಕಾರಿಗಳಾದ ಇವರು ತಮ್ಮ ಸಾಮ್ರಾಜ್ಯದ ಗಡಿಗಳನ್ನು ಬಹಳವಾಗಿ ವಿಸ್ತರಿಸಿದರು. ನರ್ಮದೆಯಿಂದ ಕಾವೇರಿಯವರೆಗಿನ ಭೂಭಾಗ ಇವರ ನೇರ ಆಳ್ವಿಕೆಗೆ ಸೇರಿತ್ತು. ಅಲ್ಲದೆ ದಕ್ಷಿಣ ಗುಜರಾತ್, ಮಾಳ್ವ, ಆಂಧ್ರದ ಬಹುಭಾಗ, ಕಂಚಿ ಮತ್ತು ತಂಜಾವೂರು ಪ್ರದೇಶಗಳ ಮೇಲೆ ಅನೇಕ ಬಾರಿ ತಮ್ಮ ಅಧಿಕಾರ ಸ್ಥಾಪಿಸಿದರು. ಮತ್ತೆ ಈ ವಂಶದ ಧೀರೋದಾತ್ತ ಸಮ್ರಾಟರು ಕನ್ಯಾಕುಮಾರಿಯಿಂದ ಹಿಮಾಲಯದವರೆಗೂ ಸೌರಾಷ್ಟ್ರದಿಂದ ಕಾಮರೂಪದವರೆಗೂ ತಮ್ಮ ಅಸಮಾನವಾದ ಸೈನ್ಯಗಳೊಂದಿಗೆ ಯುದ್ಧವಿಜಯಿಗಳಾಗಿ ಹಲವಾರು ಬಾರಿ ಸಂಚರಿಸಿದರು. ಪಶ್ಚಿಮ-ಮಧ್ಯಭಾರತಗಳಲ್ಲಿ ಘೂರ್ಜರ ಪ್ರತೀಹಾರರೂ ಪೂರ್ವದಲ್ಲಿ ಪಾಲರೂ ದಕ್ಷಿಣದಲ್ಲಿ ಚೋಳರೂ ಆ ಕಾಲದ ಪ್ರಮುಖ ರಾಜವಂಶಗಳು. ಅವರೆಲ್ಲರನ್ನೂ ಹಲವಾರು ಬಾರಿ ಹತ್ತಿಕ್ಕಿದ ಸಾಹಸ ರಾಷ್ಟ್ರಕೂಟರಿಗೆ ಸೇರಿದ್ದು. ಈ ಮಹತ್ತರ ಸಾಹಸಗಳಿಗೆ ಸುಶಿಕ್ಷಿತವಾದ ಕರ್ನಾಟಕ ಬಲ ಮುಖ್ಯ ಕಾರಣವಾಗಿತ್ತು. ರಾಜಕೀಯ ಮತ್ತು ಸೇನಾಬಲಗಳ ಇತಿಹಾಸದಲ್ಲಿ ಸಮಕಾಲೀನ ಭಾರತದ ಅಪ್ರತಿಮ ರಾಷ್ಟ್ರವಾಗಿತ್ತು. ಅರಬ್ಬೀ ಇತಿಹಾಸಕಾರ ಸುಲೇಮಾನ ಆ ಕಾಲದ ವಿಶ್ವದ ನಾಲ್ಕು ಬೃಹದ್ರಾಷ್ಟ್ರಗಳಲ್ಲಿ ಇದೂ ಒಂದೆಂದು ಹೇಳಿರುವುದೇ ಇವರ ಮಹತ್ತ್ವಕ್ಕೆ ಸಾಕ್ಷಿ. ಕರ್ಣಾಟಕರು ಯುದ್ಧವಿದ್ಯೆಯಲ್ಲಿ ಪರಿಣತರೆಂದೂ, ಸೇನಾನಿರ್ವಹಣದಲ್ಲಿ ಚತುರರೆಂದು ಆ ಕಾಲದ ಲೇಖಕನಾದ ರಾಜಶೇಖರ ಹೊಗಳಿದ್ದಾನೆ. ರಾಜರು ಸ್ವತಃ ಯುದ್ಧಗಳಲ್ಲಿ ಭಾಗವಹಿಸಿ ಸೈನಿಕರಿಗೆ ಪ್ರೋತ್ಸಾಹ ನೀಡುತ್ತಿದ್ದುದಲ್ಲದೆ ಶೌರ್ಯ ಧೈರ್ಯಗಳನ್ನು ಪ್ರದರ್ಶಿಸಿದ ಸಾಮಂತರಿಗೂ ದಳಪತಿಗಳಿಗೂ ಸೂಕ್ತ ಬಹುಮಾನಗಳನ್ನೂ ಐಶ್ವರ್ಯವನ್ನೂ ನೀಡುತ್ತಿದ್ದರು. ಇವರು ನಿರಂಕುಶಾಧಿಕಾರಿಗಳಾದಾಗ್ಯೂ ಅನೇಕ ಬಾರಿ ರಾಜಬಂಧುಗಳ ಮಂತ್ರಿ ಅಮಾತ್ಯರ ಸಲಹೆಗನುಗುಣವಾಗಿ ಯುದ್ಧ, ಆಡಳಿತಗಳನ್ನು ನಿರ್ವಹಿಸುತ್ತಿದ್ದರು. ಅವಿರತ ಯುದ್ಧಭಾಗಿಗಳಾಗಿದ್ದರೂ ಸಾಹಿತ್ಯ ಕಲಾಪ್ರೋತ್ಸಾಹರಾಗಿದ್ದು ದೇಶದ ಸರ್ವತೋಮುಖ ಪ್ರಗತಿಗೆ ಕಾರಣರಾದರು. ಸಾಮಾಜಿಕ ಜೀವನದಲ್ಲಿ ಬಾದಾಮಿ ಚಳುಕ್ಯರ ಕಾಲದಲ್ಲಿದ್ದ ಆಚಾರವ್ಯವಹಾರಗಳೇ ಬಹುವಾಗಿ ಮುಂದುವರಿದುವು. ಚಳುಕ್ಯರ ಸಾಮಂತರಾಗಿದ್ದು, ಅನಂತರ ಅವರ ಉತ್ತರಾಧಿಕಾರಿಗಳಾದ ರಾಷ್ಟ್ರಕೂಟರ ಕಾಲದಲ್ಲಿ ಯಾವುದೇ ರೀತಿಯ ಸಾಮಾಜಿಕ ಏರುಪೇರುಗಳಾದಂತೆ ಕಾಣುವುದಿಲ್ಲ. ಆದರೆ ಮತೀಯ, ಧಾರ್ಮಿಕರಂಗಗಳಲ್ಲಿ ಕೆಲವು ಪ್ರಮುಖ ಬದಲಾವಣೆಗಳೇರ್ಪಟ್ಟುವು. ಮತೀಯ ಭಾವನೆಗಳಲ್ಲಿ ವಿಶಾಲದೃಷ್ಟಿಯಿಂದ ಕೂಡಿದ್ದ ಈ ಸಮ್ರಾಟರು ಸರ್ವಧರ್ಮಸಮತೆಯನ್ನು ಆದರ್ಶವಾಗಿಟ್ಟುಕೊಂಡಿದ್ದರು. ಆದರೆ ಚಳುಕ್ಯರಾಶ್ರಯದಲ್ಲಿ ರೂಢಿಯಲ್ಲಿದ್ದ ಯಜ್ಞಯಾಗಾದಿಗಳು ಈ ಕಾಲದಲ್ಲಿ ಮುಂದುವರಿದುದಕ್ಕೆ ಸಾಕ್ಷ್ಯಗಳು ದೊರಕುವುದಿಲ್ಲ. ಅಹಿಂಸೆಯೇ ಮುಖ್ಯತತ್ತ್ವವಾಗುಳ್ಳ ಜೈನಧರ್ಮದ ಪ್ರಭಾವ ಇದಕ್ಕೆ ಕಾರಣವಾಗಿರಬಹುದು. ರಾಷ್ಟ್ರಕೂಟ ದೊರೆಗಳು ತಮ್ಮ ವೈಯಕ್ತಿಕ ನಂಬಿಕೆಗನುಸಾರವಾಗಿ ವೈಷ್ಣವ ಅಥವಾ ಶೈವಧರ್ಮದ ಅನುಯಾಯಿಗಳಾಗಿರುತ್ತಿದ್ದು ವೈಷ್ಣವಸಂಕೇತವಾದ ಗರುಡ ಮತ್ತು ಶೈವಸಂಕೇತವಾದ ಮಹಾಯೋಗಿ ಶಿವನ ಮೂರ್ತಿಗಳನ್ನು ತಮ್ಮ ಲಾಂಛನವಾಗಿ ಉಪಯೋಗಿಸುತ್ತಿದ್ದರು. ಇವರ ಶಾಸನಗಳ ಮಂಗಳಶ್ಲೋಕಗಳಲ್ಲಿ ವಿಷ್ಣುಶಿವರಿಬ್ಬರನ್ನೂ ಸ್ತುತಿಸುತ್ತಾರೆ. ಈ ವಂಶದ ಪ್ರಸಿದ್ಧ ದೊರೆಯಾದ ಅಮೋಘವರ್ಷ ನೃಪತುಂಗ ಜೈನದೀಕ್ಷೆ ವಹಿಸಿ ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದ; ಹಲವಾರು ಸಾಮಂತ ದಳಪತಿಗಳು ಜೈನಧರ್ಮೀಯರಾಗಿದ್ದರು. ಇವರ ಪೈಕಿ ಬಂಕೇಶ ಮತ್ತು ಲೋಕಾದಿತ್ಯರು ಪ್ರಮುಖರು. ವಿದ್ಯಾನಂದ, ಜಿನಸೇನ, ಗುಣಚಂದ್ರ, ಪಂಪ ಮುಂತಾದ ಅನೇಕ ಜೈನಯತಿಗಳು ಜೈನಶಾಸ್ತ್ರವೇತ್ತರೂ ವಿದ್ಯಾಪಕ್ಷಪಾತಿಗಳೂ ಸಾಹಿತಿಗಳೂ ಆಗಿದ್ದು ಜೈನಧರ್ಮದ ಪ್ರಾಬಲ್ಯಕ್ಕೆ ಕಾರಣರಾಗಿದ್ದರು. ಬೌದ್ಧಧರ್ಮ ಕೆಲವು ಕೇಂದ್ರಗಳಲ್ಲಿ (ಕನ್ಹೇರಿ, ಕಂಪಿಲ, ಡಂಬಳ) ಅಸ್ತಿತ್ವದಲ್ಲಿದ್ದು ಅದಕ್ಕೂ ರಾಜಾಶ್ರಯವಿದ್ದರೂ ಅದು ಅಷ್ಟು ಪ್ರವರ್ಧಮಾನವಾಗಿರಲಿಲ್ಲ. ಸಾಮಾನ್ಯಜನ ತಮ್ಮ ಸಹಜಪ್ರವೃತ್ತಿಗನುಗುಣವಾಗಿ ಯಾವುದಾದರೊಂದು ಧರ್ಮವನ್ನು ಅಥವಾ ಎಲ್ಲ ಧರ್ಮಗಳನ್ನೂ ಅನುಸರಿಸುತ್ತಿದ್ದರು. ನೃಪತುಂಗ ಜೈನಧರ್ಮೀಯನಾಗಿದ್ದೂ ಮಹಾಲಕ್ಷ್ಮಿಯ ಭಕ್ತನಾಗಿದ್ದ. ಒಮ್ಮೆ ಕ್ಷಾಮದ ಉಪಟಳದಿಂದ ಪ್ರಜೆಗಳನ್ನು ರಕ್ಷಿಸಲು ತನ್ನ ಕೈಬೆರಳನ್ನೇ ಕತ್ತರಿಸಿ ದೇವಿಗೆ ಅರ್ಪಿಸಿದನೆಂದು ಪ್ರತೀತಿ. ಈ ರೀತಿ ವಿವಿಧ ಧರ್ಮಗಳ ಸಮಾಗಮದ ಫಲವಾಗಿ ಪರಸ್ಪರ ಗೌರವನಿಷ್ಠೆ ಸಾಮರಸ್ಯಗಳು ಬೆಳೆಯಲು ಸಾಧ್ಯವಾಯಿತು. ದೇವಾಲಯಗಳು ಸಾಮಾಜಿಕ ಜೀವನದ ಕೇಂದ್ರಗಳಾಗಿ, ಭಕ್ತಜನರ ದಾನದತ್ತಿಗಳನ್ನು ಪಡೆದು ಸಂಪದ್ಯುಕ್ತವಾಗಿದ್ದುವು. ದೇವಾಲಯಗಳ ಪ್ರಾಮುಖ್ಯ ಮತ್ತು ಜನರ ಧಾರ್ಮಿಕ ಪ್ರವೃತ್ತಿಗೆ ಉತ್ತಮ ನಿದರ್ಶನವೆಂದರೆ ಎಲ್ಲೋರ (**ನೋಡಿ**) ಕೈಲಾಸದೇವಾಲಯ. ಇದು ವಿಶ್ವದ ಅದ್ಭುತಗಳಲ್ಲೊಂದು. ಇದನ್ನು ನಿರ್ಮಿಸಲು ಆಶ್ರಯ

ಕೊಟ್ಟ ದೊರೆಗೆ ಗೌರವ ತರುವಂತಿದೆ, ಯಾವ ದೇಶವೂ ಹೆಮ್ಮೆಪಟ್ಟುಕೊಳ್ಳಬಹುದಾದ ಸಾಧನೆಯಿದು– ಎಂದು ವಿನ್ಸೆಂಟ್ ಎ. ಸ್ಮಿತ್ ಈ ದೇವಾಲಯವನ್ನು ಹೊಗಳಿದ್ದಾನೆ.

ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಿಗೆ ಅದೊಂದು ಮಹತ್ತ್ವದ ಯುಗ. ಆ ಕಾಲದಲ್ಲಿದ್ದ ದುರ್ಗಸಿಂಹ ಕಾತಂತ್ರಸೂತ್ರಗಳ ಮೇಲೆ ತನ್ನ ವೃತ್ತಿಯನ್ನೂ ಅದರ ಮೇಲೊಂದು ವ್ಯಾಖ್ಯಾನವನ್ನೂ ರಚಿಸಿದ. ಶಾಕಟಾಯನ ವ್ಯಾಕರಣ ಪ್ರಸ್ಥಾನವೂ ಆ ಕಾಲಕ್ಕೆ ಸೇರಿದ್ದು, ಆತ ಶಬ್ದಾನುಶಾಸನವನ್ನೂ ಅದರ ಮೇಲಣ ವೃತ್ತಿಯನ್ನೂ ರಚಿಸಿ ಅದನ್ನು ಅಮೋಘವೃತ್ತಿಯೆಂದು ಕರೆದ. ಈ ಕಾಲದ ತಾಮ್ರ ಮತ್ತು ಶಿಲಾಶಾಸನಗಳು ಕೂಡ ಕಾವ್ಯಮಯವಾಗಿವೆ. ಇದುವರೆಗೆ ದೊರೆತಿರುವ ಚಂಪೂ ಕಾವ್ಯಗಳಲ್ಲಿ ಮೊದಲನೆಯದೆಂದು ಕಾಲನಿರ್ದಿಷ್ಟ ಮಾಡಬಹುದಾದ ನಳಚಂಪೂ ಕಾವ್ಯದ ನಿರ್ಮಾತೃವಾದ ತ್ರಿವಿಕ್ರಮನೇ ಬೇಗುಮ್ರಾ ತಾಮ್ರಶಾಸನವನ್ನೂ ಮದಾಲಸ ಚಂಪೂವನ್ನೂ ರಚಿಸಿದ. ನೃಪತುಂಗ ಸಂಸ್ಕೃತದಲ್ಲಿ ಪ್ರಶ್ನೋತ್ತರಮಾಲಿಕ ಎಂಬ ಮಧುರ ವೈರಾಗ್ಯಗೀತೆಯ ಕರ್ತೃ. ಇವನ ಆಶ್ರಿತನಾಗಿದ್ದ ಮಹಾವೀರಾಚಾರ್ಯನ ಕೃತಿ ಗಣಿತಸಾರಸಂಗ್ರಹ. ಹಲಾಯುಧಕೋಶವೆಂಬ ನಿಘಂಟು, ಕವಿರಹಸ್ಯ ಮತ್ತು ಮೃತಸಂಜೀವಿನಿಗಳ ಲೇಖಕನಾದ ಹಲಾಯುಧ 3ನೆಯ ಕೃಷ್ಣ ಸಮ್ರಾಟನ ಆಶ್ರಿತ. ಅದ್ವೈತಮತಸ್ಥಾಪಕರಾದ ಶಂಕರಾಚಾರ್ಯರೂ ಅವರ ಮುಖ್ಯ ಶಿಷ್ಯ ಸುರೇಶ್ವರಾಚಾರ್ಯರೂ ಈ ಕಾಲದವರಾಗಿದ್ದರು. ಇವರಿಬ್ಬರ ಅನೇಕ ಕೃತಿಗಳು ವಿದ್ವತ್ಪೂರ್ಣವಾಗಿಯೂ ಭಾರತೀಯ

ದರ್ಶನದ ಅಮೂಲ್ಯ ಕೊಡುಗೆಗಳಾಗಿಯೂ ಇವೆ. ರಾಷ್ಟ್ರಕೂಟರ ಆಶ್ರಿತರಾದ ವೇಮುಲವಾಡ ಚಾಳುಕ್ಯರಾಜರ ಆಶ್ರಿತನಾದ ಜೈನ ಸೋಮದೇವಸೂರಿ, ಯಶಸ್ತಿಲಕವೆಂಬ ವಿಶ್ವಕೋಶಸದೃಶವಾದ ನೀತಿವಾಕ್ಯಾಮೃತವನ್ನೂ ರಚಿಸಿದ್ದಾನೆ. ವೀರಸೇನ ಜಿನಸೇನರ ಧವಳಾ ಮತ್ತು ಜಯಧವಳಾ ಎಂಬ ಬೃಹತ್ ಭಾಷ್ಯಾಗಳೂ ಆ ಕಾಲದವು. ಜಿನಸೇನ ಪ್ರಾರಂಭಿಸಿದ ಭರತ ಬಾಹುಬಲಿಗಳ ಚರಿತ್ರೆ ಆದಿಪುರಾಣವನ್ನು ಗುಣಭದ್ರ ತನ್ನ ಉತ್ತರ ಪುರಾಣದಲ್ಲಿ ಪೂರ್ಣಗೊಳಿಸಿದ. ಆದಿಪುರಾಣ ಕನ್ನಡ ಚಂಪೂಕಾವ್ಯಗಳಿಗೆ ಪ್ರಚೋದನೆ ನೀಡಿದ ಗ್ರಂಥವೆಂದು ಪರಿಗಣಿತವಾಗಿದೆ. ಜಿನಸೇನನ ಮತ್ತೊಂದು ಕೃತಿ ಪಾರ್ಶ್ವಾಭ್ಯುದಯ (ಸಮಸ್ಯಾಪೂರಣವೆಂಬ ಕಾವ್ಯತಂತ್ರದಲ್ಲಿ ಬರೆಯಲಾದ ಈ ಕೃತಿಯಲ್ಲಿ ಕಾಳಿದಾಸನ ಮೇಘದೂತದ ಪ್ರತಿ ಪಾದಕ್ಕೂ ಕವಿ ತನ್ನ ಮೂರು ಪಾದಗಳನ್ನು ಸೇರಿಸಿ ಪಾರ್ಶ್ವನಾಥನ ವರ್ಣನೆ ಬರುವಂತೆ ನಿರ್ಮಿಸಿದ್ದಾನೆ.) ಅಸಗನ ವರ್ಧಮಾನ ಪುರಾಣ ಈ ಕಾಲದ ಕೃತಿ. ಈತ ಕನ್ನಡದಲ್ಲೂ ಹೆಸರಾಂತ ಕವಿ. ವಿದ್ಯಾನಂದನೆಂಬ ಜೈನಯತಿ ಸಮಂತಭದ್ರನ ಆಪ್ತಮೀಮಾಂಸಾ ಗ್ರಂಥದ ಮೇಲೆ ಅಷ್ಟಸಾಹಸ್ರೀ ಎಂದು ಪ್ರೌಢ ವ್ಯಾಖ್ಯಾನವನ್ನೂ ಆಪ್ತಪರೀಕ್ಷಾ ಎಂಬ ಕೃತಿಯನ್ನೂ ರಚಿಸಿದ್ದಾನೆ.

ರಾಷ್ಟ್ರಕೂಟರದು ಕನ್ನಡ ಸಾಹಿತ್ಯದ ಪರ್ವಕಾಲ. ಇದಕ್ಕೂ ಮೊದಲೇ ಕನ್ನಡ ನಾಡನುಡಿಯಾಗಿತ್ತು. 5ನೆಯ ಶತಮಾನದಿಂದಲೇ ಶಾಸನ ಸಾಹಿತ್ಯವಾಗಿ ಕನ್ನಡ ಬಳಕೆಯಲ್ಲಿತ್ತು. ಆದರೆ ರಾಷ್ಟ್ರಕೂಟರ ಕಾಲಕ್ಕೆ ಮುಂಚಿನ ಯಾವುದೇ ಕನ್ನಡ ಕೃತಿಯೂ ಈವರೆಗೆ ದೊರೆತಿಲ್ಲ. ಆದರೂ ಕನ್ನಡದಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತಿತ್ತೆಂಬುದಕ್ಕೆ ಅನೇಕ ಆಧಾರಗಳಿವೆ. ನೃಪತುಂಗ ಕವಿರಾಜಮಾರ್ಗದಲ್ಲಿ ಪ್ರಸ್ತಾಪಿಸಿರುವ ಕವಿಗಳಲ್ಲಿ ಕೆಲವರಾದರೂ ರಾಷ್ಟ್ರಕೂಟರ ಕಾಲಕ್ಕೂ ಹಿಂದಿನವರು. ಚಾಳುಕ್ಯಕುಲತಿಕೆ ವಿಜ್ಜಿಕೆ ಅಥವಾ ವಿಜಯ ಭಟ್ಟಾರಿಕೆ ಕನ್ನಡ ಸರಸ್ವತಿಯೆಂದು ಹೆಸರಾದವಳು. ಕನ್ನಡ ಸಾಹಿತ್ಯದ ಅಗ್ರಮಾನ್ಯರಾದ ಪಂಪ, ಪೊನ್ನ, ಅಸಗ, ಚಾವುಂಡರಾಯರಂಥ ಶ್ರೇಷ್ಠ ಸಾಹಿತಿಗಳದೂ ವಡ್ಡಾರಾಧನೆಯಂಥ ಪ್ರೌಢಗದ್ಯದ ವಿಶಿಷ್ಟ ಕಥಾ ಸಾಹಿತ್ಯದ್ದೂ ರಾಷ್ಟ್ರಕೂಟರ ಕಾಲವೆಂಬುದರಿಂದ ಆ ಯುಗ ಎಷ್ಟೊಂದು ಮಹತ್ತ್ವದ್ದೆಂಬುದರ ಅರಿವುಂಟಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಈವರೆಗೆ ದೊರೆಕಿರುವುದರಲ್ಲಿ ಅತ್ಯಂತ ಪ್ರಾಚೀನವಾದ ಕವಿರಾಜಮಾರ್ಗದ ಕರ್ತೃ ರಾಷ್ಟ್ರಕೂಟ ಚಕ್ರವರ್ತಿಯಾದ ನೃಪತುಂಗ ಒಂದನೆಯ ಅಮೋಘವರ್ಷನೆಂದು ಹಲವು ವಿದ್ವಾಂಸರು ತರ್ಕಿಸಿದ್ದಾರೆ. ಅಥವಾ ಕವೀಶ್ವರ ಇದರ ಕರ್ತೃವಾಗಿದ್ದರೆ, ಅದಕ್ಕೆ ನೃಪತುಂಗನ ಅಭಿಮತವಿದೆ. ಕನ್ನಡಿಗರ ಜಾಣ್ಮೆಯ ಬಗೆಗೆ ಇಲ್ಲಿರುವ, ಪದನರಿದು ನುಡಿಯಲುಂ । ನುಡಿದುದನರಿದಾರಯಲುಱಿ ಮಾರ್ಪರಾ ನಾಡವರ್ಗಳ್ ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ॥ ಎಂಬ ಪದ್ಯ ಉತ್ತಮನಿದರ್ಶನ. ಅಸಗ, ಗುಣನಂದಿ ಮತ್ತು ಗುಣವರ್ಮರು ಈ ಕಾಲದವರಾದರೂ ಅವರ ಕೃತಿಗಳು ದೊರಕಿಲ್ಲ. ಅನಂತರ ಕಾಲದ ಕವಿಗಳು ಇವರ ಕೃತಿಗಳಿಂದ ಉದ್ಧರಿಸುವ ಭಾಗಗಳು ಮಾತ್ರ ನಮಗೆ ಲಭ್ಯ. ವೇಮುಲವಾಡ ಚಾಳುಕ್ಯ ಅರಿಕೇಸರಿಯ ಬಾಲ್ಯದ ಗೆಳೆಯನೂ ಅನಂತರ ಆತನ ಮಂತ್ರಿ ಸೇನಾನಿಯೂ ಆಗಿದ್ದ ಪಂಪ ಕವಿಸಾರ್ವಭೌಮ, ಕನ್ನಡದ ಆದಿಕವಿ. ಈತ ಜೈನ. ಆತ್ಮೋದ್ಧಾರಕ್ಕಾಗಿ ಆದಿಪುರಾಣವೆಂಬ ಧರ್ಮಗ್ರಂಥವನ್ನೂ ಲೋಕವ್ಯವಹಾರ ಮತ್ತು ಆಶ್ರಯದಾತನ ಪ್ರೀತಿಗಾಗಿ ವಿಕ್ರಮಾರ್ಜುನ ವಿಜಯವೆಂಬ ಜನಪ್ರಿಯ ಭಾರತವನ್ನೂ ಬರೆದ. 3ನೆಯ ಕೃಷ್ಣನ ಆಸ್ಥಾನದಲ್ಲಿ ವರಕವಿಯಾಗಿದ್ದ ಪಂಪನ ಸಮಕಾಲೀನ ಉಭಯಕವಿ ಚಕ್ರವರ್ತಿ ಪೊನ್ನ ಶಾಂತಿಪುರಾಣ, ಭುವನೈಕರಾಮಾಭ್ಯುದಯ ಎಂಬ ಗ್ರಂಥಗಳನ್ನೂ ಜಿನಾಕ್ಷರಮಾಲೆಯೆಂಬ 39 ಕಂದಗಳ ಕಿರುಕೃತಿಯನ್ನೂ ರಚಿಸಿದ್ದಾನೆ. 4ನೆಯ ರಾಚಮಲ್ಲ ಗಂಗರಾಜನ ಮಂತ್ರಿ, ಶ್ರವಣಬೆಳಗೊಳದ ಗೊಮ್ಮಟ ವಿಗ್ರಹದ ನಿರ್ಮಾಪಕ ಚಾವುಂಡರಾಯ ಚಾವುಂಡರಾಯಪುರಾಣದ ಕರ್ತೃ. ಆ ಕಾಲದ ಅತ್ಯಂತ ವೈಭವಪೂರ್ಣ ಗ್ರಂಥ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ. ಸುಕುಮಾರಸ್ವಾಮಿ, ನಾಗಶ್ರೀ ಕಥೆಗಳು, ವಿದ್ಯುಚ್ಚೋರನ ಕಥೆ, ಕಾರ್ತಿಕ ಋಷಿಯ ಕಥೆ, ಮಲಯಸುಂದರನ ಕಥೆ ಮುಂತಾದವು ಕನ್ನಡ ಸಾಹಿತ್ಯಕ್ಕೆ ಅಪರೂಪ ಕೊಡುಗೆಗಳು. ಆ ಕಾಲದ ಶಾಸನಗಳ ಕನ್ನಡ ಸಹ ವ್ಯಾಕರಣಬದ್ಧವಾಗಿದ್ದುದಲ್ಲದೆ ಭಾಷಾ ಬೆಳವಣಿಗೆ, ಸಾಹಿತ್ಯ ಪ್ರಗತಿಗಳ ಅಭ್ಯಾಸಕ್ಕೆ ಪ್ರಯೋಜನಕಾರಿಯಾಗಿದೆ.

**ಕಲ್ಯಾಣ ಚಾಳುಕ್ಯರು :** ರಾಷ್ಟ್ರಕೂಟರ ಅನಂತರ ಪ್ರವರ್ಧಮಾನಕ್ಕೆ ಬಂದ ಕಲ್ಯಾಣ ಚಾಳುಕ್ಯವಂಶ ಕರ್ನಾಟಕದ ಕೀರ್ತಿಧ್ವಜವನ್ನು ಎತ್ತಿಹಿಡಿದು ದಕ್ಷಿಣದಲ್ಲಿ ಅತಿ ಪ್ರಬಲರಾಗಿದ್ದ ಚೋಳರೊಡನೆ ಸತತ ಹೋರಾಟ ನಡೆಸಿದುದಲ್ಲದೆ ಮಧ್ಯ ಮತ್ತು ಪಶ್ಚಿಮ ಭಾರತಗಳಲ್ಲಿ ತನ್ನ ಬಲವನ್ನು ವಿಸ್ತರಿಸಿತು. ಸತ್ಯಾಶ್ರಯ ಇರಿವ ಬೆಡಂಗ, ಜಯಸಿಂಹ, ಸೋಮೇಶ್ವರ ಆಹವಮಲ್ಲ ಮತ್ತು ಇಮ್ಮಡಿ ಸೋಮೇಶ್ವರರಂಥ ಪ್ರಸಿದ್ಧ ದೊರೆಗಳ ಅನಂತರ ಸಿಂಹಾಸನವನ್ನೇರಿದ ಆರನೆಯ ವಿಕ್ರಮಾದಿತ್ಯ (1077–1127) ಕರ್ನಾಟಕದ ಅತ್ಯಂತ ಪ್ರಸಿದ್ಧ ದೊರೆ. ಚಾಳುಕ್ಯ ವಿಕ್ರಮಶಕೆಯ ಮೂಲಪುರುಷನೀತನೇ. ಚೋಳ, ಲಾಟ ಮತ್ತು ಉಚ್ಚಂಗಿಯ ಪಾಂಡ್ಯರನ್ನು ಈತ ಸದೆಬಡಿದ. ತನ್ನಣ್ಣನಾದ ಎರಡನೆಯ ಸೋಮೇಶ್ವರನನ್ನು ಮೂಲೆಗೊತ್ತಿ ಸಿಂಹಾಸನವನ್ನಾಕ್ರಮಿಸಿದ ವಿಕ್ರಮಾದಿತ್ಯ ತನ್ನ ತಮ್ಮ ಜಯಸಿಂಹನ ದಂಗೆಯನ್ನೂ ಹತ್ತಿಕ್ಕಿದ. ಮಾಳ್ವವನ್ನು ಮೂರು ಭಾರಿ ಜಯಿಸಿ ನರ್ಮದೆಯ ದಕ್ಷಿಣಕ್ಕಿದ್ದ ಪ್ರದೇಶಗಳನ್ನು ವಶಪಡಿಸಿಕೊಂಡ. ಅನಂತರ ತನ್ನ ಸಾಮಂತರ ಪೈಕಿ, ಪುಂಡರೆನಿಸಿದ್ದವರನ್ನು ಸದೆಬಡಿದ. ತನ್ನ ಬದ್ಧ ವೈರಿಯಾದ ಒಂದನೆಯ ಕುಲೋತ್ತುಂಗ ಚೋಳನ ವಿರುದ್ಧ ಸಂಚುಹೂಡಿ ವೆಂಗಿಯಲ್ಲಿ ಚೋಳರ ಪ್ರಾಬಲ್ಯ ಮುರಿದ. ಪೂರ್ವ ಪಶ್ಚಿಮ ಸಮುದ್ರಗಳವರೆಗೂ ಚಾಳುಕ್ಯ ರಾಜ್ಯ ವಿಸ್ತಾರಗೊಂಡಿತು. ಆದರೆ ಇವನ ಆಳ್ವಿಕೆಯ ಕಡೆಗಾಲದಲ್ಲೇ ಚಾಳುಕ್ಯ ರಾಜ್ಯದ ಅವನತಿಯೂ ಪ್ರಾರಂಭವಾಗಿ ಉತ್ತರಭಾಗದಲ್ಲಿ ಕಳಚುರ್ಯರೂ ದಕ್ಷಿಣದಲ್ಲಿ ಹೊಯ್ಸಳರೂ ಪ್ರಬಲರಾದರು. ಬಿಜ್ಜಳನಿಂದ ಪ್ರಾಮುಖ್ಯ ಪಡೆದ ಕಳಚುರ್ಯರು 1162 ರಿಂದ 1184ರವರೆಗೂ ಸಿಂಹಾಸನವನ್ನು ತಮ್ಮ ವಶಪಡಿಸಿಕೊಂಡಿದ್ದು ಪುನಃ ಚಾಳುಕ್ಯ 4ನೆಯ ಸೋಮೇಶ್ವರನಿಂದ ಪರಾಭವಗೊಂಡರು. ಬಿಜ್ಜಳನ ಆಳ್ವಿಕೆಯ ಮಹತ್ತ್ವವೆಂದರೆ ಅವನ ಭಂಡಾರಿಯೂ ಅನಂತರ ಮಂತ್ರಿಯೂ

ಆಗಿದ್ದರೆಂದು ಹೇಳಲಾದ ವೀರಶೈವ ಧರ್ಮ ಪ್ರವರ್ಧಕ ಬಸವೇಶ್ವರರು ಅವನ ಆಸ್ಥಾನದಲ್ಲಿದ್ದದು. 4ನೆಯ ಸೋಮೇಶ್ವರ 1198ರವರೆಗೂ ಆಳುತ್ತಿದ್ದ.



ಕಳಚುರಿಗಳ ಲಾಂಛನ

ಹತ್ತನೆಯ ಶತಮಾನದ ಆದಿಭಾಗದಿಂದ ಹಲವು ಪ್ರದೇಶಗಳಲ್ಲಿ ಅಧಿಕಾರ ಪಡೆದಿದ್ದ ಸೇವುಣ ಅಥವಾ ದೇವಗಿರಿಯ ಯಾದವರು ಕಲ್ಯಾಣ ಚಾಳುಕ್ಯರ ಅನಂತರ ಉತ್ತರಭಾಗದಲ್ಲಿ ಪ್ರಬಲರಾದರು. ಆ ವಂಶದ 4ನೆಯ ಸಿಂಘಣ, 5ನೆಯ ಭಿಲ್ಲಮ, 2ನೆಯ ಸಿಂಘಣ ಮುಂತಾದ ಶಕ್ತ ದೊರೆಗಳು ತಮ್ಮ ರಾಜ್ಯವನ್ನು ವಿಸ್ತರಿಸಿ, ದಕ್ಷಿಣದಲ್ಲಿ ಪ್ರಬಲರಾಗಿದ್ದ ಹೊಯ್ಸಳರೊಂದಿಗೆ ಕರ್ನಾಟಕದ ಸ್ವಾಮ್ಯಕ್ಕಾಗಿ ಹೋರಾಡಿದರು. ಆ ವಂಶದ ಕೊನೆಯ ಪ್ರಸಿದ್ಧ ದೊರೆಯಾದ ರಾಮಚಂದ್ರ ಮಹಮ್ಮದೀಯ ಅಕ್ರಮಣಕಾರರ ವಿರುದ್ಧ ಹೋರಾಡಿದ. ಕೊನೆಗೆ ದಾಳಿಕೋರ ಅಲ್ಲಾವುದ್ದೀನನೊಂದಿಗೆ ಸಂಧಿ ಮಾಡಿಕೊಳ್ಳಬೇಕಾಯಿತು. ಪುನಃ 1307ರಲ್ಲಿ ಅಲ್ಲಾವುದ್ದೀನ ಸೇನಾನಿ ಮಲಿಕ್ ಕಾಫೂರನಿಂದ ದೇವಗಿರಿ ರಾಜ್ಯ ನಾಶ ಹೊಂದಿತು.

**ಹೊಯ್ಸಳರು:** ಹೊಯ್ಸಳರು ಇಂದಿನ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಅಂಗಡಿ ಗ್ರಾಮದಲ್ಲಿ ಹತ್ತನೆಯ ಶತಮಾನದಲ್ಲಿ ಪ್ರಥಮವಾಗಿ ರಾಜ್ಯ ಕಟ್ಟಿದರು. ಮುಂದೆ ದ್ವಾರಸಮುದ್ರ ಅಥವಾ ಇಂದಿನ ಬೇಲೂರು ತಾಲ್ಲೂಕಿನ ಹಳೇಬೀಡನ್ನು ಶಾಶ್ವತ ರಾಜಧಾನಿಯಾಗಿ ಮಾಡಿಕೊಂಡರು. ಹನ್ನೊಂದನೆಯ ಶತಮಾನದ ಅಂತ್ಯದಲ್ಲಿ ಕರ್ನಾಟಕದ ದಕ್ಷಿಣಭಾಗದಲ್ಲಿ ಪ್ರಬಲರಾಗುತ್ತಿದ್ದ ಹೊಯ್ಸಳರು 12–13ನೆಯ ಶತಮಾನಗಳಲ್ಲಿ ಕರ್ನಾಟಕದ ಅತ್ಯಂತ ಪ್ರಮುಖ ಶಕ್ತಿಯಾಗಿ ಬಾಳಿದರು. ವಿಷ್ಣುವರ್ಧನನ (1108–1152) ತಲಕಾಡು ವಿಜಯದೊಂದಿಗೆ (1116) ಈ ರಾಜವಂಶದ ಉಚ್ಛ್ರಾಯ ಕಾಲ ಆರಂಭವಾಯಿತು. ಈ ವಂಶದಲ್ಲಿ ನರಸಿಂಹ, ಇಮ್ಮಡಿ ಬಲ್ಲಾಳ, ಸೋಮೇಶ್ವರ, ರಾಮನಾಥ ಮತ್ತು ಮುಮ್ಮಡಿ ಬಲ್ಲಾಳರಂಥ ಮಹಾವ್ಯಕ್ತಿಗಳು ತಲೆದೋರಿ ಉತ್ತರದಲ್ಲಿ ಯಾದವರನ್ನೂ ದಕ್ಷಿಣದಲ್ಲಿ ಚೋಳ ಪಾಂಡ್ಯರನ್ನೂ ಹತೋಟಿಯಲ್ಲಿಟ್ಟುಕೊಂಡು ಕರ್ನಾಟಕದ ಪ್ರಸಿದ್ಧಿ ಹೆಚ್ಚಿಸಿದರು. ವಿಷ್ಣುವರ್ಧನ ಚೋಳರಿಂದ ತಲಕಾಡನ್ನು ಗೆದ್ದುಕೊಂಡ ಮೇಲೆ ಕೋಲಾರ ನಂಗಿಲಿಗಳನ್ನು ವಶಪಡಿಸಿಕೊಂಡಿದ್ದಲ್ಲದೆ ಕಂಚಿಯನ್ನೂ ಗೆದ್ದು ರಾಮೇಶ್ವರದವರೆಗೂ ಹೋಗಿ ಪಾಂಡ್ಯರೊಡನೆ ಹೋರಾಡಿದನೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅನಂತರ ಕೊಂಗಾಳ್ವರನ್ನೂ ನಿಡುಗಲ್ಲಿನ ಚೋಳರನ್ನೂ ಜಯಿಸಿದ. ಕೊಂಗುದೇಶವನ್ನು ಗೆದ್ದು ರಾಜ್ಯ ವಿಸ್ತರಿಸಿದ. ಅನಂತರ ಉಚ್ಚಂಗಿಯ ಪಾಂಡ್ಯರನ್ನೂ ಕುಮ್ಮಟವನ್ನೂ ಗೆದ್ದ. ಬೆಳ್ವೊಲನಾಡನ್ನು ಆಕ್ರಮಿಸಿದಾಗ ಚಾಳುಕ್ಯ ಚಕ್ರವರ್ತಿ 6ನೆಯ ವಿಕ್ರಮಾದಿತ್ಯ ತನ್ನ ಈ ದಂಗೆಕೋರ ಸಾಮಂತನನ್ನೆದುರಿಸಿ ಸೋತುದರ ಫಲವಾಗಿ ಹೊಯ್ಸಳರು ನಿಜಕ್ಕೂ ಸ್ವತಂತ್ರರಾದರು. ಅನಂತರ ಹಾನುಗಲ್ಲಿನ ಕದಂಬರೂ ಸೋತರು. ಆದರೆ ಚಾಳುಕ್ಯ ಸಾಮಂತ ಇಮ್ಮಡಿ ಆಚುಗಿ 1122ರಲ್ಲಿ ವಿಷ್ಣುವರ್ಧನನ್ನು ಸೋಲಿಸಿದ. ಹೊಯ್ಸಳರು ಹೆಸರಿಗೆ ಮಾತ್ರ ಸಾಮಂತರಾಗಿದ್ದರೂ, ವಾಸ್ತವವಾಗಿ ಸ್ವತಂತ್ರರಾಗಿಯೇ ಇದ್ದರು. ವಿಷ್ಣುವರ್ಧನ 1136ರ ಸಮಯಕ್ಕೆ ಬಳ್ಳಾರಿ ಪ್ರದೇಶದ ಅನೇಕ ಭಾಗಗಳನ್ನೂ ಬಂಕಾಪುರವನ್ನೂ ಚಾಳುಕ್ಯರಿಂದ ಗೆದ್ದುಕೊಂಡ. ಹಾನುಗಲ್ಲು ಪುನರ್ವಶವಾಯಿತು.

ಇಮ್ಮಡಿ ಬಲ್ಲಾಳನ (1173–1220) ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯ ಅತ್ಯುನ್ನತ ವೈಭವವನ್ನು ತಲುಪಿತು. ಚೆಂಗಾಳ್ವ, ಕೊಂಗಾಳ್ವ, ಉಚ್ಚಂಗಿ ಪಾಂಡ್ಯರನ್ನೂ ಬನವಾಸಿ ಹಾನಗಲ್ಲುಗಳನ್ನೂ ಗೆದ್ದರೂ ಕಳಚುರಿ ಸಂಕಮನಿಂದ ಈತ 1179ರಲ್ಲಿ ಸೋತ. ಕೆಲಕಾಲನಂತರ ಬೆಳ್ವೊಲವನ್ನು ಗೆದ್ದ. ಸೇವುಣರೊಂದಿಗೆ ದೀರ್ಘಕಾಲ ಹೋರಾಡಿ 1190 ರಲ್ಲಿ ಸೊರಟೂರು ಕದನದಲ್ಲಿ ಅವರನ್ನು ಸೋಲಿಸಿದ. ರಾಯಚೂರು ಬಳ್ಳಾರಿ ಪ್ರದೇಶಗಳೂ ಇವನ ವಶವಾದುವು. 1215ರಲ್ಲಿ ಸೇವುಣ ಇಮ್ಮಡಿ ಸಿಂಘಣನಿಂದ ಸೋತು ಶಿವಮೊಗ್ಗೆಯಾಚೆಯ ಪ್ರದೇಶಗಳನ್ನು ಕಳೆದುಕೊಂಡ. ತನ್ನ ಕೊನೆಗಾಲದಲ್ಲಿ ಕಷ್ಟದಲ್ಲಿದ್ದ ತನ್ನ ಬಂಧುವಾದ ಚೋಳರಾಜ ಮುಮ್ಮಡಿ ಕುಲೋತ್ತುಂಗನ ಸಹಾಯಾರ್ಥವಾಗಿ ಹೋಗಿ ಪಾಂಡ್ಯರನ್ನು ಸೋಲಿಸಿ ಚೋಳರಾಜ್ಯವನ್ನು ಭದ್ರಗೊಳಿಸಿದ. ಹೊಯ್ಸಳದೊರೆ ಎರಡನೆಯ ನರಸಿಂಹ ಚೋಳ ಚಕ್ರವರ್ತಿ ಮುಮ್ಮಡಿ ರಾಜನನ್ನು ಕಾಡವ ಕೋಪ್ಪೆರುಜಿಂಗನ ಸೆರೆಯಿಂದ ಬಿಡಿಸಿದುದಲ್ಲದೆ ತನ್ನ ಪ್ರಭುತ್ವವನ್ನು ತಮಿಳುದೇಶದಲ್ಲಿ ಸ್ಥಾಪಿಸಿ, ಕಣ್ಣಾನೂರನ್ನು (ತಿರುಚಿರಾಪಳ್ಳಿಯ ಬಳಿಯಿರುವ ಈಗಿನ ಸಮಯಪುರ) ಉಪರಾಜಧಾನಿಯಾಗಿ ಮಾಡಿಕೊಂಡ. ಹೊಯ್ಸಳರು ದಕ್ಷಿಣ ಭಾರತದ ಅತ್ಯಂತ ಪ್ರಬಲ ರಾಜರಾಗಿದ್ದ ಕಾಲವಿದು. ಇಮ್ಮಡಿ ಬಲ್ಲಾಳ ಈ ಕಾರ್ಯಗಳನ್ನು ಸಾಧಿಸುವುದರ ಜೊತೆಗೆ ಮುಸ್ಲಿಮರ ದಾಳಿಗಳಿಂದ ದಕ್ಷಿಣಭಾರತವನ್ನೂ ಹಿಂದೂ ಧರ್ಮವನ್ನೂ ರಕ್ಷಿಸುವ ಸಲುವಾಗಿ ಹೆಣಗಿದ. ಕರ್ನಾಟಕದ ರಾಜರಲ್ಲೆಲ್ಲ ಅತ್ಯಂತ ಪ್ರಮುಖರಲ್ಲೊಬ್ಬನೆಂದು ಕರೆಸಿಕೊಂಡಿರುವ ಈತ ತನ್ನ ರಾಜಧಾನಿಯನ್ನು ಬದಲಾಯಿಸುತ್ತ ಮುಸ್ಲಿಮರೊಂದಿಗೆ ಹೋರಾಡುತ್ತಿದ್ದು ಕಡೆಗೆ ತನ್ನ 80ನೆಯ ವಯಸ್ಸಿನಲ್ಲಿ 1342ರಲ್ಲಿ ತಿರುಚಿರಾಪಳ್ಳಿಯಲ್ಲಿ ಮುಸ್ಲಿಮರ ಕುತಂತ್ರಕ್ಕೊಳಗಾಗಿ ಪ್ರಾಣ ತೆತ್ತ.

ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣ ಚಾಳುಕ್ಯರ, ದೇವಗಿರಿಯ ಯಾದವರ ಮತ್ತು ಹೊಯ್ಸಳರ ಕಾಲ ಅಮೋಘವಾದುದು. ಈ ಯುಗದಲ್ಲಿ ಸರ್ವತೋಮುಖ ಪ್ರಗತಿ ಕಂಡುಬಂದು ಕರ್ನಾಟಕದ ಘನತೆ ಹೆಚ್ಚಿತು. ರಾಜಕಾರಣ, ಯುದ್ಧನೀತಿ, ಪ್ರಜಾರಂಜಕ ಆಡಳಿತ, ಸಾಮಾಜಿಕ ಸಮಗ್ರತೆ, ಮತೀಯ ಸಮನ್ವಯ, ವಿದ್ಯಾ ಪ್ರಗತಿ, ಭಾಷಾ–ಸಾಹಿತ್ಯಗಳ ಅಭಿವೃದ್ಧಿ, ಕಲಾನೈಪುಣ್ಯಗಳು ಈ ಕಾಲದ ವೈಶಿಷ್ಟ್ಯಗಳು. ರಾಷ್ಟ್ರಕೂಟ ದಂತಿದುರ್ಗ ಯಾವ ಕರ್ನಾಟಕಬಲವನ್ನು ಹತ್ತಿಕ್ಕಿದುದಾಗಿ ಹೇಳಿಕೊಂಡನೋ ಅದೇ

ಸೇವುಣರ ಲಾಂಛನ

ಕರ್ನಾಟಕಬಲದ ಸಹಾಯದಿಂದ ಅದೇ ಚಾಳುಕ್ಯ ವಂಶೋದ್ಭವನಾದ ಇಮ್ಮಡಿ ತೈಲ, ರಾಷ್ಟ್ರಕೂಟರನ್ನು ಸೋಲಿಸಿ ಚಾಳುಕ್ಯ ರಾಜ್ಯವನ್ನು ಕರ್ನಾಟಕದಲ್ಲಿ ಪುನಃ ಸ್ಥಾಪಿಸಿದ. ಈ ವಂಶದ ವೀರ ಯೋಧರಾದ ಸತ್ಯಾಶ್ರಯ ಇರಿವಬೆಡಂಗ, ಜಯಸಿಂಹ ವಲ್ಲಭ, 1ನೆಯ ಸೋಮೇಶ್ವರ ಆಹವಮಲ್ಲ ಮತ್ತು 6ನೆಯ ವಿಕ್ರಮಾದಿತ್ಯರಂಥ ರಾಜರು ಕರ್ನಾಟಕದ ಹಿರಿಮೆಯನ್ನು ವೃದ್ಧಿಗೊಳಿಸಿದರು. ಇವರ ಯುದ್ಧ ವಿಜಯಗಳು ರಾಷ್ಟ್ರಕೂಟರ ವಿಜಯಗಳಷ್ಟು ವ್ಯಾಪ್ತವಾಗಿರಲಿಲ್ಲವೆಂಬುದೇನೋ ನಿಜ. ಭಾರತದ ಮಾರ್ಪಟ್ಟ ರಾಜಕೀಯ ಪರಿಸ್ಥಿತಿ ಇದಕ್ಕೆ ಕಾರಣ. ಪ್ರಬಲರೂ ಸಾರ್ವಭೌಮಾಧಿಕಾರಾಕಾಂಕ್ಷಿಗಳೂ ಆಗಿದ್ದ ಚೋಳರು ದಕ್ಷಿಣದಲ್ಲೂ ಪರಮಾರರು ಉತ್ತರದಲ್ಲೂ ಇವರ ರಾಜ್ಯ ವಿಸ್ತರಣಕ್ಕೆ ಪ್ರಮುಖ ಆಡಚಣೆಗಳಾಗಿದ್ದರೂ ಇವರು ತಮ್ಮ ರಾಜ್ಯದ ಸಮಗ್ರತೆಯನ್ನು ರಕ್ಷಿಸಿಕೊಂಡುದಲ್ಲದೆ ಪೂರ್ವದಲ್ಲಿ ವೆಂಗಿರಾಜ್ಯವನ್ನೂ ಪಶ್ಚಿಮದಲ್ಲಿ ಶಿಲಾಹಾರ ಮತ್ತು ಕದಂಬರನ್ನೂ ತರಿದು,

ಪೂರ್ವ ಪಶ್ಚಿಮ ಸಮುದ್ರಗಳ ನಡುವಣ ಇಡೀ ಭೂಭಾಗಕ್ಕೆ ಒಡೆಯರಾಗಿದ್ದರು. ಉದಾರನೀತಿಯ ವಿಶಾಲ ಮನೋಭಾವದ ಇವರ ಆಡಳಿತದಲ್ಲಿ ಜನಜೀವನ ಪ್ರಗತಿದಾಯಕವಾಗಿತ್ತು. ಅವಿರತಯುದ್ಧಗಳಿದ್ದಾಗ್ಯೂ ಸಾಮಾನ್ಯಜನತೆ ತಮ್ಮ ವೃತ್ತಿಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗಿತ್ತು. ಆಡಳಿತದಲ್ಲಿ ಅನಾವಶ್ಯಕ ಕೇಂದ್ರೀಕರಣವಿಲ್ಲದಿದ್ದು, ಪ್ರದೇಶಾಧಿಕಾರಿಗಳೂ ಸಾಮಂತರೂ ತಂತಮ್ಮ ಕ್ಷೇತ್ರಗಳಲ್ಲಿ ಉತ್ತಮ ಆಡಳಿತ ನಡೆಸಿಕೊಂಡು ಹೋಗುತ್ತಿದ್ದರು. ಗ್ರಾಮಾಡಳಿತದಲ್ಲಿ ವಿಕೇಂದ್ರೀಕರಣದಿಂದ ಉತ್ತಮ ಪರಿಣಾಮವುಂಟಾಯಿತು. ತಮ್ಮ ನಿತ್ಯಜೀವನ ಕ್ರಮವನ್ನು ಆವಶ್ಯಕತೆಗನುಗುಣವಾಗಿ ರೂಪಿಸಿಕೊಳ್ಳಲು ಸಾಧ್ಯವಾಯಿತು. ಅಗ್ರಹಾರಗಳಿಗೆ ಹೆಚ್ಚಿನ ಸ್ವಾತಂತ್ರ್ಯವಿತ್ತು. ಸೀಮಿತವಾಗಿಯಾದರೂ ಸ್ವಯಮಾಡಳಿತ ಪ್ರಜ್ಞೆ, ಪ್ರಜೆಗಳಲ್ಲಿ ವೃದ್ಧಿ ಹೊಂದಿ, ರಾಜ್ಯದ ಪ್ರಗತಿಗೆ ಸಾಧಕವಾಯಿತು. ಪರಸ್ಪರ ಸಹಕಾರೀ ಪ್ರಜ್ಞೆಯಿಂದ ಮೂಡಿದ ಸ್ವಯಮಾಡಳಿತ ಸಂಸ್ಥೆಗಳಿಗೆ ಈ ಮೊದಲೇ ಉಕ್ತವಾದ ಅಯ್ಯಾವೊಳೆಯ ಐನೂರ್ವರ ಸಂಘ ಉತ್ತಮ ನಿದರ್ಶನ. ಐಹೊಳೆಯಲ್ಲಿ ಐನೂರು ಮಂದಿ ಸದಸ್ಯರಿಂದ ಮೊದಲಿಗೆ ಸ್ಥಾಪಿತವಾದ ಇದು ವ್ಯಾಪಾರಿಗಳ, ವೃತ್ತಿಕಾರರ ಮತ್ತು ಕೆಲಸಗಾರರ ಸಂಸ್ಥೆಯಾಗಿದ್ದು ಇಡೀ ಕರ್ನಾಟಕದಲ್ಲಿ ಮಾತ್ರವಲ್ಲದೆ ತಮಿಳು ದೇಶ ಗುಜರಾತುಗಳಲ್ಲೂ ಪ್ರಾಬಲ್ಯ ಪಡೆದಿತ್ತು. ಕೈಗಾರಿಕೆಗಳಲ್ಲಿ ತೊಡಗಿದ್ದವರಿಗೆ ರಕ್ಷಣೆ ನೀಡಿ ಉತ್ತೇಜನಗೊಳಿಸುವುದೇ ಈ ಸಂಘದ ಧ್ಯೇಯವಾಗಿತ್ತು. ದೇಶ ವಿದೇಶಗಳಲ್ಲಿ ವ್ಯಾಪಾರ ನಡೆಸುತ್ತಾ ಭಾರತದ ಆರ್ಥಿಕ ಚಟುವಟಿಕೆಗೆ ಉತ್ತಮ ಉತ್ತೇಜನ ಕೊಡುವ ಸಂಸ್ಥೆ ಇದಾಗಿತ್ತು. ಯಾದವ ವಂಶದ ಆಳ್ವಿಕೆಯಲ್ಲಿ ಅಂಥ ಪ್ರಮುಖ ಘಟನೆಗಳಾವುವೂ ಸಂಭವಿಸಿಲ್ಲ. 12ನೆಯ ಶತಮಾನದ ಅಂತ್ಯದಲ್ಲಿ ಉತ್ತರ ಕರ್ನಾಟಕದಲ್ಲಿ ಸ್ವತಂತ್ರರಾದ ಯಾದವರಲ್ಲಿ 5ನೆಯ ಭಿಲ್ಲಮ ಮತ್ತು 2ನೆಯ ಸಿಂಘಣರನ್ನುಳಿದರೆ ಇತರರು ದುರ್ಬಲರಾಗಿದ್ದರು. ಅವರ ಶಕ್ತಿಸಾಮರ್ಥ್ಯ ಮತ್ತು ಐಶ್ವರ್ಯಗಳೆಲ್ಲ ಹೊಯ್ಸಳ ರಾಜರೊಂದಿಗೆ ಹೋರಾಡುವುದರಲ್ಲೇ ವ್ಯಯವಾಯಿತು. ಅವರ ಪತನದಿಂದ ಉತ್ತರದ ಮುಸ್ಲಿಮರಿಗೆ ಕರ್ನಾಟಕದಲ್ಲಿ ಯಾವ ತಡೆಯೂ ಇಲ್ಲದಂತಾಯಿತು.

ಆದರೆ ದಕ್ಷಿಣ ಕರ್ನಾಟಕದಲ್ಲಿ ಕಲ್ಯಾಣ ಚಾಳುಕ್ಯರ ಉತ್ತರಾಧಿಕಾರಿಗಳಾದ ಹೊಯ್ಸಳರ ಕಾಲ ಸ್ಮರಣೀಯವಾದುದು. ಆರಂಭದಲ್ಲಿ ಅನೇಕ ಕಷ್ಟಕಾರ್ಪಣ್ಯಗಳನ್ನನುಭವಿಸಿದರೂ



ಕಲ್ಯಾಣ ಚಾಳುಕ್ಯರ ಸಾಮಂತರಾಗಿ ಒಂದು ಶತಮಾನಕ್ಕೂ ಹೆಚ್ಚು ಕಾಲ ಬಾಳಬೇಕಾಗಿದ್ದರೂ ವಿಷ್ಣುವರ್ಧನ, ಇಮ್ಮಡಿಬಲ್ಲಾಳ, ಸೋಮೇಶ್ವರ ಮತ್ತು ಮುಮ್ಮಡಿ ಬಲ್ಲಾಳರಂಥ ಧೀರೋದಾತ್ತ ಸುಸಂಸ್ಕೃತ ದೊರೆಗಳ ನೇತೃತ್ವದಲ್ಲಿ ಅಪೂರ್ವ ಪ್ರಗತಿ ಸಾಧಿಸಿ ಕರ್ನಾಟಕವೇ ಅಲ್ಲದೆ ಭಾರತದ ಇತಿಹಾಸದಲ್ಲೇ ಈ ವಂಶ ಮನ್ನಣೆಗೆ ಪಾತ್ರವಾಯಿತು. ಈ ಆಳ್ವಿಕೆಯ ಗಮನಾರ್ಹಸಾಧನೆಯೆಂದರೆ ದೇಶಪ್ರೇಮ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟ. ಆಗಿಂದಾಗ್ಗೆ ಈ ವಂಶದಲ್ಲಿ ತಲೆದೋರಿದ ಅಪ್ರತಿಮವೀರರ ನಾಯಕತ್ವದಲ್ಲಿ ದಕ್ಷಿಣ ಕರ್ನಾಟಕ ಅಥವಾ ಮೈಸೂರು ಪ್ರದೇಶದಲ್ಲಿ ನೆರೆನಿಂತ ಚೋಳರ ಆಳ್ವಿಕೆಯನ್ನು ಕೊನೆಗಾಣಿಸಿದುದೇ ಅಲ್ಲದೆ ಅನಂತರ ಕಾಲದಲ್ಲಿ ದಕ್ಷಿಣ ಭಾರತದಲ್ಲೆಲ್ಲಾ ಪ್ರಾಬಲ್ಯ ಪಡೆದು ದುಃಸ್ಥಿತಿಗೀಡಾದ ಚೋಳ ರಾಜರನ್ನು ರಕ್ಷಿಸಿ, ಚೋಳ ಸಾಮ್ರಾಜ್ಯ ಪ್ರತಿಷ್ಠಾಪನಾಚಾರ್ಯರೆಂಬ ಬಿರುದಿಗೆ ಇವರು ಅರ್ಹರಾದರು. ಹೊಯ್ಸಳ ಬಾಹುಬಲದೆದುರು ಚೋಳ, ಪಾಂಡ್ಯ, ಯಾದವ, ಕಾಕತೀಯರಂಥ ಪ್ರಬಲರಾಜವಂಶಗಳೂ ಮತ್ತಿತರ ಸಣ್ಣಪುಟ್ಟ ರಾಜರೂ ತಲ್ಲಣಿಸಬೇಕಾಯಿತು. ಎರಡು ಶತಮಾನಗಳ ಅನಂತರ–13ನೆಯ ಶತಕದಲ್ಲಿ–ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ತರವಾದ ದುರ್ಘಟನೆಯೊಂದು ಸಂಭವಿಸಿತು. ಉತ್ತರ ಭಾರತದಲ್ಲಿ ಆ ವೇಳೆಗೆ ಅಪ್ರತಿಹತವಾದ ಅಧಿಕಾರ ಪಡೆದಿದ್ದ ಮುಸ್ಲಿಮರ ದೃಷ್ಟಿ ದಕ್ಷಿಣದತ್ತ ಹೊರಳಿ ದಕ್ಷಿಣದ ಹಿಂದೂ ರಾಜ್ಯಗಳು ಒಂದೊಂದಾಗಿ ಅವರ ದಾಳಿಗಳಿಗೀಡಾಗಿ ನಿರ್ನಾಮವಾದುವು. ಯಾದವ, ಕಾಕತೀಯ ಮತ್ತು ಕಿರಿದಾದರೂ ಅಸಾಧಾರಣ ಶೌರ್ಯಪ್ರದರ್ಶಿಸಿದ ಕಂಪಿಲರಾಜ್ಯಗಳು ಧೂಳೀಪಟವಾದರೂ ಮುಸ್ಲಿಮರ ಆಕ್ರಮಣ ಬಾಧೆಯನ್ನು ಸಮಯೋಚಿತವಾದ ಯುಕ್ತಿ ಶಕ್ತಿಗಳಿಂದ ಎದುರಿಸಿದ ಹಿಂದೂ ರಾಜನೆಂದರೆ ಆ ವಂಶದ ಕೊನೆಯ ದೊರೆಯಾದ ಮುಮ್ಮಡಿ ಬಲ್ಲಾಳ, ಕಾಲಕ್ರಮದಲ್ಲಿ ಈತ ಮುಸ್ಲಿಮರ ವಂಚನೆಗೀಡಾಗಿ ಅಳಿದರೂ ಈತನ ಯುಕ್ತಿಯುಕ್ತವಾದ ನೀತಿಯ ತಳಹದಿಯ ಮೇಲೆಯೇ ದಕ್ಷಿಣಭಾರತದ ಮಹೋನ್ನತ ಸಾಮ್ರಾಜ್ಯವೂ ಹಿಂದೂ ಧರ್ಮರಕ್ಷಣೆಗೆ ಬದ್ಧಕಂಕಣ ತೊಟ್ಟುದೂ ಆದ ವಿಜಯನಗರದ ಸ್ಥಾಪನೆಯಾಯಿತು.

ಗಂಗರಸರ ಉತ್ತರಾಧಿಕಾರಿಗಳೂ ಕೆಲಕಾಲ ಚಾಳುಕ್ಯರ ಸಾಮಂತರೂ ಆಗಿದ್ದ ಹೊಯ್ಸಳರು ಆ ರಾಜರುಗಳ ಆಡಳಿತ ಪದ್ಧತಿಯನ್ನೇ ಅನುಸರಿಸಿದರೂ ಸಮಯೋಚಿತವಾದ

**ಹೊಯ್ಸಳರ ಲಾಂಛನ**

ಕೆಲವು ಮಾರ್ಪಾಡು ಮಾಡಿಕೊಂಡಿದ್ದರು. ಕೇಂದ್ರ, ಪ್ರಾಂತೀಯ ಮತ್ತು ಗ್ರಾಮೀಣ ಹಂತಗಳಲ್ಲಿ ಆಡಳಿತ ವ್ಯವಸ್ಥಿತವಾಗಿತ್ತು. ವಿವಿಧ ಅಧಿಕಾರಿಗಳ ಮೇಲೆ ಮಂತ್ರಿಮಂಡಳ, ರಾಣಿ, ರಾಜಬಂಧುಗಳು– ಇವರಿಂದ ರಾಜ ಸಲಹೆ ಪಡೆದು ಮುಕ್ತ ಉಸ್ತುವಾರಿ ವಹಿಸುತ್ತಿದ್ದ. ಪಂಚಪ್ರಧಾನರೆಂದು ಶಾಸನಗಳಲ್ಲಿರುವ ಉಲ್ಲೇಖದಿಂದ ಐದು ಮಂತ್ರಿಗಳಿದ್ದರೆಂಬುದು ವ್ಯಕ್ತವಾಗುತ್ತದೆ. ಸಂಧಿವಿಗ್ರಹಿ (ಒಳಾಡಳಿತ ಮತ್ತು ವಿದೇಶ ಸಚಿವ), ಶ್ರೀಕರಣಾಧಿಕಾರಿ (ರಾಜ್ಯಾಡಳಿತ ಸಚಿವ), ಹಿರಿಯ ಭಾಂಡಾರಿ (ಹಣಕಾಸಿನ ಸಚಿವ), ಸೇನಾಧಿಕಾರಿ (ರಕ್ಷಣಾ ಸಚಿವ) ಮತ್ತು ಮಹಾಪಸಾಯತ (ರಾಜಮನೆತನದ ವ್ಯವಹಾರ ಸಚಿವ) – ಇವರೇ ಪಂಚಪ್ರಧಾನರು. ರಾಜ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಪಾಲಕನಾಗಿದ್ದು ಪ್ರಜಾಕೋಟಿಯ ಇಹಪರಗಳೆರಡರ ಒಳಿತಿಗೂ ದುಡಿಯುತ್ತಿದ್ದ. ಆನೆ ಮತ್ತು ಅಶ್ವಬಲಗಳಿಂದ ಕೂಡಿದ್ದ ಸೇನೆಯ ಮುಖ್ಯ ಅಂಗ ಕಾಲ್ಬಲವಾಗಿತ್ತು. ರಾಜನನ್ನು ತಮ್ಮ ಪ್ರಾಣತ್ಯಾಗದಿಂದಲಾದರೂ ರಕ್ಷಿಸುವ ಪಣತೊಟ್ಟಿದ್ದ ಗರುಡರೆಂಬ ವಿಶಿಷ್ಟಯೋಧರು ತಮ್ಮ ಶಕ್ತಿ ಸಾಮರ್ಥ್ಯಗಳಿಗೆ ಹೆಸರಾದವರು. ಸಾಮಂತರು ರಾಜನ ಹತೋಟಿಗೊಳಪಟ್ಟಿದ್ದರೂ ತಮ್ಮ ಪ್ರದೇಶಗಳಲ್ಲಿ ಸ್ವಯಮಾಡಳಿತ ನಡೆಸುತ್ತಿದ್ದರು. ನಾಡ ಪ್ರಭು, ನಾಡ ಗೌಡ ಮತ್ತು ನಾಡ ಸೇನಬೋವರೆಂಬ ಇತರ ಅಧಿಕಾರಿಗಳು ಇದ್ದರು.

ಗ್ರಾಮಪ್ರತಿನಿಧಿಗಳಾದ ಹಿರಿಯರ ನೇತೃತ್ವದಲ್ಲಿ ಗ್ರಾಮಾಡಳಿತ ನಡೆಯುತ್ತಿತ್ತು. ಕೇಂದ್ರ ಸರ್ಕಾರ ಮತ್ತು ಕೆಳಗಿನ ಹಂತಗಳಲ್ಲಿ ವಿವಿಧ ಮಟ್ಟಗಳ ಅಧಿಕಾರಿಗಳು ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ಒಂಬತ್ತನೆಯ ಶತಮಾನದಲ್ಲಿ ಅದ್ವೈತ ಪ್ರತಿಪಾದಕ ಆದಿ ಶಂಕರಾಚಾರ್ಯರು ಶೃಂಗೇರಿಯಲ್ಲಿ ಮಠ ಸ್ಥಾಪಿಸಿದ್ದು ಮತ್ತು ಹತ್ತನೆಯ ಶತಮಾನದಲ್ಲಿ ಗಂಗ ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ಬಾಹುಬಲಿ ವಿಗ್ರಹ ಸ್ಥಾಪಿಸಿದ್ದು ರಾಜ್ಯದ ಧಾರ್ಮಿಕ ವಿಕಾಸದಲ್ಲಿ ಮೈಲಿಗಲ್ಲುಗಳೆನ್ನಬಹುದು. ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ 11, 12, 13ನೆಯ ಶತಮಾನಗಳ ಅವಧಿ ಬಹಳ ಮಹತ್ತ್ವದ ಕಾಲ. ಶೈವಧರ್ಮದ ವಿಭಾಗವಾದ ಕಾಳಾಮುಖ ಪಂಥದ ಸ್ಥಾಪಕ ಲಕುಲೀಶನ ಉಲ್ಲೇಖಗಳು ಆ ಕಾಲದ ಶಾಸನಗಳಲ್ಲಿ ಕಂಡುಬರುತ್ತವೆ. ಕಲ್ಯಾಣ ಚಾಳುಕ್ಯರರಸ 2ನೆಯ ಜಯಸಿಂಹ ಜೈನಧರ್ಮದಿಂದ ಶೈವಧರ್ಮಕ್ಕೆ ಪರಿವರ್ತಿತನಾದ. ಶೈವಗುರುಗಳು ತಪೋನಿಷ್ಠರೂ ವಿದ್ವಾಂಸರೂ ಆಗಿದ್ದು ಸಾರ್ವತ್ರಿಕವಾಗಿ ಗೌರವ ಪಡೆದಿದ್ದರು. 12ನೆಯ ಶತಕದಲ್ಲಿ ಬಸವೇಶ್ವರರು ವೀರಶೈವ (ಲಿಂಗಾಯತ) ಧರ್ಮ ಸ್ಥಾಪನೆ ಮಾಡಿ ಧಾರ್ಮಿಕ ಕ್ರಾಂತಿಯನ್ನುಂಟುಮಾಡಿದರು. ಇವರ ಜೀವನ ಮತ್ತು ಭಕ್ತಿಮಾರ್ಗಗಳು ಸರಳವಾಗಿದ್ದು ಜನತೆಯನ್ನು ವೀರಶೈವ ಧರ್ಮದ ಕಡೆಗೆ ಆಕರ್ಷಿಸಿದುವು. ಜಾತಿ, ಮತ, ಲಿಂಗಭೇದಗಳನ್ನು ಲಕ್ಷಿಸಿದ, ಸಮಾಜದ ಸುಪ್ತ ಚೈತನ್ಯಗಳನ್ನು ಹೊರತರಬಲ್ಲ ಈ ಸಾಮಾಜಿಕ ಆಂದೋಳನದಿಂದ ಅದ್ಭುತ ಪರಿಣಾಮಗಳುಂಟಾದುವು. ಜನಸಾಮಾನ್ಯರ ಭಾಷೆಯಾದ ಕನ್ನಡವನ್ನು ತತ್ತ್ವಪ್ರಚಾರಕ್ಕೆ ಬಳಸಿದುದಿಂದ ಸರಳವೂ ಸತ್ತ್ವಪೂರ್ಣವೂ ಆದ ವಚನ ಸಾಹಿತ್ಯ ಹುಟ್ಟಿಕೊಂಡಿತು. ಅನೇಕಾನೇಕ ಶರಣರೂ ವೀರಶೈವ ಧರ್ಮಪ್ರಚಾರಕರೂ ದೇಶಾದ್ಯಂತ ಸಂಚರಿಸಿ, ಸರಳವೂ ಜನಪ್ರಿಯವೂ ಆದ ವಚನಗಳಿಂದ ಜನರನ್ನು ಆಕರ್ಷಿಸಿದರು. ಈ ರೀತಿಯ ಮತ ಪ್ರಸಾರ ನಡೆಯುತ್ತಿದ್ದರೂ ಧರ್ಮಾಂಧತೆಯಿಲ್ಲದಿದ್ದು ಜನಸಾಮಾನ್ಯರಲ್ಲಿ ಪರಧರ್ಮಸಹನೆ ಪ್ರಧಾನವಾಗಿತ್ತೆನ್ನಬಹುದು.

ಶೈವಧರ್ಮಾವಲಂಬಿಗಳಾದ ರಾಜರೂ ಜೈನಧರ್ಮಕ್ಕೆ ಉತ್ತೇಜನ ನೀಡುತ್ತಿದ್ದರು. ಕ್ಷೀಣಗತಿಯಲ್ಲಿದ್ದ ಬೌದ್ಧಧರ್ಮದ ಬಗೆಗೂ ಸಹನೆ ತೋರುತ್ತಿದ್ದರು. ಚಾಳುಕ್ಯ ವಂಶದ ಜಯಸಿಂಹರಾಜನ ಆಸ್ಥಾನದಲ್ಲಿ ವಿದ್ಯೆಗೆ ಹೆಚ್ಚಿನ ಪ್ರೋತ್ಸಾಹವಿದ್ದು, ಶೈವ, ಜೈನ ಆಚಾರ್ಯರು ಸಮೃದ್ಧ ಧಾರ್ಮಿಕಜೀವನಕ್ಕೂ ದಾರ್ಶನಿಕಸಾಹಿತ್ಯಕ್ಕೂ ಕಾರಣರಾಗಿದ್ದರು. ಅನ್ಯಮತಸಹಿಷ್ಣುತೆಯೊಂದಿಗೆ ವಿವಿಧ ಮತಧರ್ಮಗಳಲ್ಲಿ ಶ್ರದ್ಧೆಯಿದ್ದ ವ್ಯಕ್ತಿಗಳೂ ಹಲವಾರು ಜನರಿದ್ದು ಎಲ್ಲ ಮತದ ದೇವರುಗಳನ್ನೂ ಪೂಜಿಸಿ ಗೌರವಿಸುತ್ತಿದ್ದ ನಿದರ್ಶನಗಳು ಹಲವಾರಿವೆ. 1129ರ ಶಾಸನದ ವಾಕ್ಯವೊಂದು ಇದಕ್ಕೆ ಉತ್ತಮ ನಿದರ್ಶನ: ಹರಿ–ಹರ–ಕಮಲಾಸನ–ವೀತರಾಗ–ಬೌದ್ಧಾಲಯಂಗಳಂದಿನ ವಸುಂಧರೆಗೆಸೆವ ಪಂಚಶರದಂತಿರೆ ಪಂಚಮಠಂಗಳೆಸೆವುವಾಪಟ್ಟಣದೊಳ್ ಎಂದು ಅದು ಬಳ್ಳಿಗಾವೆಯನ್ನು ವರ್ಣಿಸುತ್ತದೆ.

ಹೊಯ್ಸಳರ ಆಶ್ರಯದಲ್ಲಿ ಈ ನೀತಿಗೆ ಹೆಚ್ಚಿನ ಪ್ರಾಧಾನ್ಯವಿತ್ತೆಂದು ತಿಳಿದುಬರುತ್ತದೆ. ಅವರ ಶಾಸನಗಳಲ್ಲಿ ವಿಶೇಷವಾಗಿ ಉಪಯೋಗಿಸಿರುವ ಧ್ಯಾನ ಶ್ಲೋಕ ಇದಕ್ಕೆ ನಿದರ್ಶನ. ಶಿವನೆಂಬ ಹೆಸರಿನಿಂದ ಶೈವರೂ, ಬ್ರಹ್ಮವೆಂದು ವೇದಾಂತಿಗಳೂ ಬುದ್ಧನೆಂದು ಬೌದ್ಧರೂ ಕರ್ತನೆಂದು ನೈಯಾಯಿಕರೂ ಅರ್ಹನೆಂದು ಜೈನರೂ ಕರ್ಮವೆಂದು ಮೀಮಾಂಸಕರೂ ಯಾರನ್ನು ಪೂಜಿಸುವರೋ ಆ ಕೇಶವೇಶ ನಮ್ಮನ್ನು ರಕ್ಷಿಸಲೆಂಬುದು ಆ ಶ್ಲೋಕಾರ್ಥ. ಈ ತತ್ತ್ವದ ಅನುಷ್ಠಾನ ಎಷ್ಟುಮಟ್ಟಿಗೆ ಬಳಕೆಯಲ್ಲಿತ್ತೆಂಬುದನ್ನು ಸಮಕಾಲೀನ ಶಾಸನಗಳೂ ಸಾಹಿತ್ಯವೂ ತೋರಿಸುತ್ತವೆ. ಎಲ್ಲ ಧರ್ಮಗಳ ದೇವತೆಗಳಿಗೂ ಆಲಯಗಳನ್ನು ಕಟ್ಟಿ ದಾನದತ್ತಿಗಳನ್ನು ನೀಡಲಾಗಿತ್ತು. ಶೈವರಲ್ಲಿ ವೈದಿಕರು, ಲಕುಲೀಶ ಪಾಶುಪತ ಸಂಪ್ರದಾಯದವರು ಮತ್ತು ವೀರಶೈವರೆಂಬ ತ್ರಿವರ್ಗಗಳವರಿದ್ದರು. ವೈಷ್ಣವರಲ್ಲಿ ವಾಸುದೇವನ ಆರಾಧಕರಾದ ಭಾಗವತರು, ದಕ್ಷಿಣದೇಶದ ಆಳ್ವಾರುಗಳ ಪಂಥ ಮತ್ತು ಅದರಿಂದ ವಿಕಾಸಗೊಂಡ ರಾಮಾನುಜೀಯ ಶ್ರೀವೈಷ್ಣವಪಂಥ ಮತ್ತು ಹೊಯ್ಸಳಯುಗದ ಕೊನೆಯ ಭಾಗದಲ್ಲಿ ಮಧ್ವಮುನಿ ಸಂಚಾಲಿತ ವೈಷ್ಣವಪಂಥಗಳು ಪ್ರಧಾನವಾಗಿದ್ದುವು. ವಿಷ್ಣುವಿನ ವಿವಿಧ ಅವತಾರಗಳೂ ಸೂರ್ಯ, ಶಕ್ತಿ, ಸರಸ್ವತಿ, ಕಾರ್ತಿಕೇಯ, ಗಣಪತಿಗಳನ್ನು ಪೂಜಿಸುತ್ತಿದ್ದ ಮತಪ್ರಭೇದಗಳೂ ರೂಢಿಯಲ್ಲಿದ್ದುವು.

ಈ ಕಾಲದಲ್ಲಿ ಹಿಂದೂ ಧರ್ಮದ ಇಬ್ಬರು ಮಹಾನ್ ಆಚಾರ್ಯಪುರುಷರು ದಕ್ಷಿಣ ಕರ್ನಾಟಕದಲ್ಲಿ ಬಾಳಿ ತಮ್ಮ ಉಪದೇಶಾಮೃತದಿಂದ ಧಾರ್ಮಿಕ ಪ್ರವೃತ್ತಿಯ ಬೆಳೆವಣಿಗೆಗೆ ಕಾರಣರಾದರು. ತಮಿಳು ದೇಶದಲ್ಲಿ 5ನೆಯ ಶತಮಾನದಿಂದ ಆಳ್ವಾರುಗಳು ಪ್ರಸಾರಮಾಡಿದ ತತ್ತ್ವಗಳನ್ನು 11ನೆಯ ಶತಕದಲ್ಲಿ ನಾಥಮುನಿಯೂ ಆತನ ಮೊಮ್ಮಗ ಯಾಮುನಾಚಾರ್ಯರು ಜನಪ್ರಿಯಗೊಳಿಸಿದ್ದರು. ಅದೇ ಸಂಪ್ರದಾಯಕ್ಕೆ ಸೇರಿದ ರಾಮಾನುಜಾಚಾರ್ಯರು (1071–1137) ತಮಿಳುನಾಡಿನ ಶ್ರೀ ಪೆರಂಬುದೂರಿನಲ್ಲಿ ಜನಿಸಿದರಾದರೂ ತಮ್ಮ ಜೀವನದ ಸಂಧಿಕಾಲದಲ್ಲಿ ಇವರು ಕರ್ನಾಟಕದಲ್ಲಿ ಆಶ್ರಯ ಪಡೆದರು. ಶ್ರೀವೈಷ್ಣವ ಅಥವಾ ವಿಶಿಷ್ಟಾದ್ವೈತ ಪಂಥವನ್ನು ಪ್ರತಿಷ್ಠಾಪಿಸಿದ ಆಚಾರ್ಯರು ಶೈವನಾಗಿದ್ದ ಚೋಳರಾಜನ ಹಿಂಸೆಗೊಳಗಾಗಿ ತಮಿಳುನಾಡಿನಿಂದ ಕರ್ನಾಟಕದ ಸಾಲಿಗ್ರಾಮ, ತೊಂಡನೂರು, ಮೇಲುಕೋಟೆಗಳಲ್ಲಿ ಬಹುಕಾಲ ನೆಲೆಸಿದ್ದರು. ಇವರು ತೊಂಡನೂರಿನಲ್ಲಿದ್ದಾಗ ಹೊಯ್ಸಳ ವಿಷ್ಣುವರ್ಧನ ಇವರ ಪ್ರಭಾವಕ್ಕೊಳಗಾದ. ರಾಮಾನುಜರು ಕರ್ನಾಟಕದಲ್ಲಿ ತಮ್ಮ ತತ್ತ್ವಗಳನ್ನು ಬೋಧಿಸಿ ವಿಶಿಷ್ಟಾದ್ವೈತ ಮತವನ್ನು ಇಲ್ಲೂ ನೆಲೆಗೊಳಿಸಿದರು. ಜಾತಿ ವೈಷಮ್ಯಗಳನ್ನು ಎದುರಿಸಿ ಎಲ್ಲ ಜಾತಿಗಳವರನ್ನೂ ತಮ್ಮ ಪಂಥಕ್ಕೆ ಸೇರಿಸಿಕೊಂಡರಲ್ಲದೆ ಅವುಗಳ ನಿರ್ಮೂಲಕ್ಕೂ ಶ್ರಮಿಸಿದರು. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಭಕ್ತಿಮಾರ್ಗವನ್ನು ಉತ್ತೇಜಿಸಿದರು. ಪ್ರಪತ್ತಿಮಾರ್ಗದಿಂದ ಮೋಕ್ಷ ಸಾಧನೆ ಸಾಧ್ಯವೆಂಬುದು ಇವರ ಬೋಧನೆ. ತಲಕಾಡು, ಬೇಲೂರು, ತೊಂಡನೂರು, ಮೇಲುಕೋಟೆ ಮತ್ತು ಗದಗಗಳಲ್ಲಿ ನಾರಾಯಣ ದೇಗುಲಗಳ ಸ್ಥಾಪನೆಯೂ ಇವರು ಕರ್ನಾಟಕದಲ್ಲಿ ಸಾಧಿಸಿದ ಕಾರ್ಯಗಳಲ್ಲೊಂದೆಂದು ಹೇಳಲಾಗಿದೆ. ಮುಂದಿನ ಶತಮಾನದಲ್ಲಿದ್ದ ಮಧ್ವಾಚಾರ್ಯರು (ಆನಂದತೀರ್ಥ, ಪೂರ್ಣಪ್ರಜ್ಞ–ಸು. 1238–1317) ಉಡುಪಿಯ ಬಳಿ ಪಾಜಕವೆಂಬಲ್ಲಿ ಜನಿಸಿ ಬಾಲ್ಯದಲ್ಲೇ ವೇದಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದರು. ಗುರುಗಳಾದ ಅಚ್ಯುತಪ್ರೇಕ್ಷರಿಂದ ಸನ್ಯಾಸ ಪಡೆದು ಅನಂತರ ಕಾಲದಲ್ಲಿ ವೈಷ್ಣವ ಅಥವಾ ದ್ವೈತಮತಸ್ಥಾಪಕರಾದರು. ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದುದಲ್ಲದೆ ಕರ್ನಾಟಕ ಮತ್ತು ದಕ್ಷಿಣ ಭಾರತದ ಇತರ ಭಾಗಗಳಲ್ಲಿ ತಮ್ಮ ಮತಪ್ರಸಾರ ಮಾಡಿದರು. ಈ ಧರ್ಮದ ಪ್ರಭಾವ ಉತ್ತರದಲ್ಲಿ ಬಂಗಾಲ ಗುಜರಾತುಗಳಿಗೂ ವ್ಯಾಪಿಸಿತ್ತು. ಎಂಟನೆಯ ಶತಮಾನದ ಶಂಕರಾಚಾರ್ಯರು, ಅನಂತರದ ರಾಮಾನುಜಾಚಾರ್ಯರು, ಮಧ್ವಾಚಾರ್ಯ, ಬಸವೇಶ್ವರ ಮುಂತಾದ ಮಹಾಪುರುಷರ ಉಪದೇಶದ ಫಲವಾಗಿ ಕರ್ನಾಟಕದ ಜನತೆಯಲ್ಲಿ ಕ್ರಾಂತಿಕಾರಿ ಸುಧಾರಣಾ ಮನೋಭಾವಗಳು ಬೆಳೆದುವಲ್ಲದೆ, ನೈತಿಕ, ಧಾರ್ಮಿಕ ಮತ್ತು ಸದಾಚಾರಯುಕ್ತ ಭಾವನೆಗಳು ಬೆಳೆದುವು. ಶಂಕರರು ಜ್ಞಾನಮಾರ್ಗ ಪ್ರತಿಪಾದಕರಾಗಿದ್ದರೆ ಉಳಿದ ಮೂವರೂ ಭಕ್ತಿಪಂಥದ ಪ್ರಸಾರಕರಾಗಿದ್ದರು. ರಾಮಾನುಜ, ಮಧ್ವರು ಸಂಪ್ರದಾಯವಾದಿಗಳಾಗಿದ್ದು ವೇದಶಾಸ್ತ್ರ ಪುರಾಣಗಳ ಮೂಲಕವೇ ಮೋಕ್ಷಸಾಧನೆಯ ಮಾರ್ಗ ತೋರಿಸಿದರೆ ಬಸವೇಶ್ವರರು ಸಾಮಾನ್ಯರಿಗೂ ಅರ್ಥವಾಗುವ ಆಡುನುಡಿಯಲ್ಲಿ ಕಾಯಕ, ಸತ್ಯ, ಸದಾಚಾರಗಳ ಉತ್ಕೃಷ್ಟತೆಯನ್ನು ಬೋಧಿಸಿದರು. ಮಧ್ವಾಚಾರ್ಯರ ಮುಖ್ಯಶಿಷ್ಯರೂ ಒರಿಸ್ಸರಾಜ್ಯದ ರಾಜಪ್ರತಿನಿಧಿಯೂ ಆಗಿದ್ದ, ಅನಂತರ ಸನ್ಯಾಸದೀಕ್ಷೆ ವಹಿಸಿದ ನರಹರಿತೀರ್ಥರು ಅನಂತರ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಾಬಲ್ಯಪಡೆದ ಹರಿದಾಸ ಸಂಪ್ರದಾಯದ ಅಸ್ತಿಭಾರವನ್ನು ನಿರ್ಮಿಸಿದರು. ಈ ರೀತಿಯಲ್ಲಿ ಈ ಮೂರು ಶತಕಗಳ ಕಾಲ ಕರ್ನಾಟಕದ ಮತ ಧರ್ಮಗಳ ಇತಿಹಾಸದಲ್ಲಿ ಬಹಳ ಮಹತ್ತ್ವಪೂರ್ಣಯುಗವಾಗಿತ್ತು.

ಈ ಕಾಲದಲ್ಲಿ ಸಾಮಾಜಿಕ ಹಾಗೂ ಆರ್ಥಿಕರಂಗಗಳಲ್ಲಿ ಹೆಚ್ಚಿನ ಬದಲಾವಣೆಗಳೇನೂ ಕಂಡುಬರುವುದಿಲ್ಲ. ಕರ್ನಾಟಕದಾದ್ಯಂತ ಆರನೆಯ ಶತಮಾನದಿಂದ ರೂಢಿಯಲ್ಲಿದ್ದ ಆಚಾರ ವ್ಯವಹಾರಗಳು ಮುಂದುವರಿದುಕೊಂಡು ಬರುತ್ತಿದ್ದುವು. ಆದರೂ ರಾಜಕೀಯ ಮತ್ತು ಮತೀಯ ಕ್ಷೇತ್ರಗಳಲ್ಲುಂಟಾದ ಮಹತ್ತ್ವಪೂರಿತ ಮಾರ್ಪಾಟುಗಳ ಪ್ರಭಾವ ಅಲ್ಲಲ್ಲಿ ಕಾಣಬರುತ್ತವೆ. ಕುಟುಂಬಜೀವನ ಸಾಮಾಜಿಕ ವ್ಯವಸ್ಥೆಯನ್ನನುಸರಿಸಿಕೊಂಡು ಹೋಗಬೇಕಾಗಿದ್ದುದರಿಂದ ಇಂಥ ಬದಲಾವಣೆಗಳು ಕಂಡುಬರುತ್ತವೆ. ಪಿತೃಪ್ರಧಾನ ಸಮಾಜಪದ್ಧತಿ ಬಳಕೆಯಲ್ಲಿದ್ದರೂ ಕುಟುಂಬದ ಇತರ ಸದಸ್ಯರು ತಮ್ಮ ಮತ ಮತ್ತು ವೃತ್ತಿಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಪಡೆದಿದ್ದರು. ಒಂದೇ ಕುಟುಂಬದಲ್ಲಿ ಬೇರೆ ಬೇರೆ ಧರ್ಮಗಳ ಅನುಯಾಯಿಗಳಿದ್ದ ಪ್ರತ್ಯೇಕವೃತ್ತಿಗಳನ್ನನುಸರಿಸುತ್ತಿದ್ದ ವ್ಯಕ್ತಿಗಳಿದ್ದುದಕ್ಕೆ ಹಲವಾರು ನಿದರ್ಶನಗಳಿವೆ. ದೊರೆಗಳು ವರ್ಣಾಶ್ರಮ ಧರ್ಮಗಳ ರಕ್ಷಕರಾಗಿದ್ದರೆಂದು ಶಾಸನಗಳು ತಿಳಿಸುತ್ತವೆ. ಆದರೆ ಯುದ್ಧವಿದ್ಯಾಪರಿಣತರಾದ ಬ್ರಾಹ್ಮಣರ ಮತ್ತು ವೈಶ್ಯರ ಉಲ್ಲೇಖಗಳು ಕಂಡುಬರುತ್ತವೆ. ಮಧ್ಯಮವರ್ಗದವರಲ್ಲಿ ವ್ಯಾಪಾರಿಗಳಾದ ಶೆಟ್ಟಿ ಎಂಬ ವರ್ಗದವರು ಮುಖ್ಯರಾಗಿದ್ದರು. ಇವರಲ್ಲದೆ ವೀರಪಾಂಚಾಲರೆಂದು ಹೆಸರಾದ ಶಿಲ್ಪಕಾರರೂ ಅಕ್ಕಸಾಲಿಗ, ಬಡಗಿ, ಕಮ್ಮಾರ, ಕಂಚುಗಾರ, ಕುಂಬಾರ ಮುಂತಾದ ವೃತ್ತಿಗಾರರೂ ಸಮಾಜದ ಮುಖ್ಯ ವರ್ಗಗಳಲ್ಲಿದ್ದರು. ವೈವಾಹಿಕ ಪದ್ಧತಿಗಳ ವಿಷಯವಾಗಿ ಹೆಚ್ಚಿನ ಮಾಹಿತಿಗಳು ದೊರಕದಿದ್ದರೂ ಮೇಲ್ಜಾತಿಗಳವರು ಹಿಂದೂ ಶಾಸ್ತ್ರೋಕ್ತ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಂತೆ ಕಂಡುಬರುತ್ತದೆ. ಶ್ರೀಮಂತ–ರಾಜಪುರುಷರಲ್ಲಿ ಬಹುಪತ್ನೀತ್ವ ರೂಢಿಯಲ್ಲಿದ್ದರೂ ಜನಸಾಮಾನ್ಯರಲ್ಲಿ ಏಕಪತ್ನೀತ್ವ ಆದರ್ಶವಾಗಿತ್ತು. ಮಹಿಳೆಯರಿಗೆ ಗೌರವಾದರಗಳು ಹಿಂದಿನಂತೆ ದೊರೆಯುತ್ತಿದ್ದು, ರಾಜಕಾರಣ, ವಿದ್ಯೆ ಮತ್ತು ಕಲೆಗಳಲ್ಲಿ ಅವರು ಪ್ರಾವೀಣ್ಯಗಳಿಸಿದ್ದರು. ವಿಷ್ಣುವರ್ಧನನ ರಾಣಿ ಶಾಂತಲೆ, ಸಾಮಂತ ಬರಮಯ್ಯನ ಪತ್ನಿ ಬಾಗನಬ್ಬೆ, ಕುಂಜೇಶ್ವರ ದೇವಾಲಯದ ನಿರ್ಮಾತೃ ಕುಂಜುನಂಬಿಶೆಟ್ಟಿಯ ಪುತ್ರಿಯೂ ಆ ದೇವಾಲಯದ ಮೇಲ್ವಿಚಾರಕಳೂ ಆದ ಘನಕುಮಾರಿ ಚಂದವ್ವೆ– ಇವರು ಇಂಥ ಕೆಲವರು. ಅಂತೆಯೇ ಸಾಹಿತ್ಯ ಕ್ಷೇತ್ರದಲ್ಲಿ ಅತ್ತಿಮಬ್ಬೆಯೊಬ್ಬ ಉಲ್ಲೇಖಾರ್ಹ ವ್ಯಕ್ತಿ. ಸಾಹಿತ್ಯಾಭಿರುಚಿಯಿಂದ ಆಕೆ ರನ್ನ ಕವಿಯ ಪೋಷಕಳೂ ಆಗಿದ್ದಳು. ಪೊನ್ನಕವಿಯ ಶಾಂತಿನಾಥಪುರಾಣದ ಒಂದು ಸಾವಿರ ಪ್ರತಿಗಳನ್ನು ಮಾಡಿಸಿ ವಿದ್ವಾಂಸರಿಗೆ ಹಂಚಿದ ಕೀರ್ತಿ ಆಕೆಯದು. 1,500 ಜೈನಬಸದಿಗಳನ್ನು ನಿರ್ಮಿಸಿ, ಅವುಗಳಲ್ಲಿ ಸ್ಥಾಪಿಸಲು ವಿಗ್ರಹಗಳನ್ನೂ ಆಕೆ ದಾನ ಮಾಡಿದಳು. ದಾನಚಿಂತಾಮಣಿಯೆಂಬ ಬಿರುದು ಆಕೆಗೆ

ಅನ್ವರ್ಥವಾದುದೇ. ಇಮ್ಮಡಿ ಜಯಸಿಂಹ ದೊರೆಯ ಅಕ್ಕ ಅಕ್ಕಾದೇವಿ ಪ್ರಾಂತ್ಯಾಧಿಕಾರಿಣಿಯಾಗಿದ್ದುದಲ್ಲದೆ ಯುದ್ಧರಂಗದಲ್ಲಿ ಶೌರ್ಯ ತೋರಿ ಅಮರಳಾದಳು. ಆಕೆಯ ಬಿರುದು ರಣಭೈರವೀ. ಬಸವೇಶ್ವರರ ಪ್ರಭಾವದಿಂದ ಸ್ತ್ರೀಯರಿಗೆ ಹೆಚ್ಚು ಅವಕಾಶ ದೊರಕಿತು. ಅವರ ಪತ್ನಿಯರಾದ ಗಂಗಾಂಬಿಕೆ ನೀಲಾಂಬಿಕೆಯೂ ಅಕ್ಕನಾದ ಅಕ್ಕನಾಗಮ್ಮನೂ ಶಿವಶರಣೆಯರಾದ ಅಕ್ಕಮಹಾದೇವಿ ಮುಕ್ತಾಯಕ್ಕರೂ ಕರ್ನಾಟಕದ ನಾರೀಮಣಿಗಳಾಗಿ ಶೋಭಿಸಿದರು. 3ನೆಯ ಭಿಲ್ಲಮನ ಬಾಲ್ಯದಲ್ಲಿ ಯಾದವವಂಶದ ರಾಣಿ ಲಚ್ಚಿಯವ್ವ ರಾಜಪ್ರತಿನಿಧಿಯಾಗಿದ್ದು ಉತ್ತಮ ಆಡಳಿತ ನಡೆಸಿದಳು.

ಆ ಕಾಲದ ಸಾಹಿತ್ಯದ ಬೆಳೆವಣಿಗೆ ಗಮನಾರ್ಹವಾದದ್ದು. ಸಂಸ್ಕೃತ ಕನ್ನಡ ಸಾಹಿತ್ಯಗಳು ಏಕಮುಖವಾಗಿ ಬೆಳೆದರೂ ಜನಸಾಮಾನ್ಯರ ಭಾಷೆಯಾಗಿ ಬಹುಮುಖವಾಗಿ ವಿಕಸಿಸುತ್ತಿದ್ದ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಿದುದು ನ್ಯಾಯವೇ. ಕಲ್ಯಾಣ ಚಾಳುಕ್ಯರ ಆಶ್ರಯದಲ್ಲಿ ಸಂಸ್ಕೃತ ಸಾಹಿತ್ಯಲೋಕದಲ್ಲಿ ಕೀರ್ತಿವೆತ್ತ ವಾದಿರಾಜ, ಬಿಲ್ಹಣ, ವಿಜ್ಞಾನೇಶ್ವರರಂಥ ಪ್ರಭೃತಿಗಳಿದ್ದರು. ಈ ವಂಶದ ಜಗದೇಕಮಲ್ಲನ ಆಸ್ಥಾನದಲ್ಲಿ ವಾದಿರಾಜನಿದ್ದ. ಆತ ಸರ್ತರ್ಕ ಷಣ್ಮುಖ, ಸ್ಯಾದ್ವಾದ ವಿದ್ಯಾಪತಿ, ಜಗದೇಕಮಲ್ಲವಾದಿ ಎಂಬ ಬಿರುದುಗಳನ್ನು ಪಡೆದಿದ್ದುದಲ್ಲದೆ ಸಮಕಾಲೀನ ಮತ್ತು ಅನಂತರಕಾಲದ ಶಾಸನಗಳಲ್ಲೂ ವಿಶೇಷವಾಗಿ ಕೀರ್ತಿತನಾಗಿದ್ದಾನೆ. ಆತನ ಹಲವಾರು ಕೃತಿಗಳ ಪೈಕಿ ಯಶೋಧರಚರಿತ, ಪಾರ್ಶ್ವನಾಥಚರಿತ, ನ್ಯಾಯವಿನಿಶ್ಚಯ ಟೀಕಾ, ಪ್ರಮಾಣ ನಿರ್ಣಯ– ಇವು ಮುಖ್ಯವಾದವು. ಇವುಗಳಲ್ಲಿ ನ್ಯಾಯ ವಿನಿಶ್ಚಯ ಟೀಕಾ ಆತನ ಆಳವಾದ ಪಾಂಡಿತ್ಯಕ್ಕೆ ಸಾಕ್ಷಿ ಮತ್ತು ಭಾರತೀಯ ದಾರ್ಶನಿಕ ಸಾಹಿತ್ಯದಲ್ಲೊಂದು ಅಪೂರ್ವಗ್ರಂಥ. ಬಳ್ಳಿಗಾವೆಯ ಲಕುಲೀಶ ಪಂಡಿತನೆಂಬ ಶೈವಗುರು ವಾದಿರಾಜನನ್ನು ವಾದದಲ್ಲಿ ಸೋಲಿಸಿದನೆಂದು 1036ರ ಶಾಸನವೊಂದರಲ್ಲಿ ಹೇಳಲಾಗಿದೆ. ಜಗದೇಕಮಲ್ಲನ ಆಸ್ಥಾನದಲ್ಲಿದ್ದ ಎರಡನೆಯ ನಾಗವರ್ಮ ಸುಪ್ರಸಿದ್ಧ; ಕನ್ನಡ ಮತ್ತು ಸಂಸ್ಕೃತ ಕವಿ. ಆತ ರಚಿಸಿದ ಕೋಶಗ್ರಂಥವೀಗ ಉಪಲಬ್ಧವಿಲ್ಲದಿದ್ದರೂ ಇತರ ಕೃತಿಗಳಲ್ಲಿ ಉದ್ಧೃತವಾದ ಕೆಲವು ಭಾಗಗಳು ದೊರಕಿವೆ. ಶಾಕಟಾಯನ ವ್ಯಾಕರಣವನ್ನೊಳಗೊಂಡ ರೂಪಸಿದ್ಧಿ ಗ್ರಂಥಕಾರ ದಯಾಪಾಲ ಈ ಕಾಲದ ಮತ್ತೊಬ್ಬ ಕವಿ. 6ನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದು ಐತಿಹಾಸಿಕ ಕಾವ್ಯಗಳನ್ನು ರಚಿಸಿದವರಲ್ಲಿ ಪ್ರಮುಖ ಬಿಲ್ಹಣ. ಆತ ತನ್ನ ಆಶ್ರಯದಾತನ ಜೀವನ ಚರಿತ್ರೆಯನ್ನು ತಿಳಿಸುವ ವಿಕ್ರಮಾಂಕದೇವಚರಿತ ಮತ್ತು ಶೃಂಗಾರರಸಭರಿತವಾದ ಚೌರಪಂಚಾಶಿಕಾ ಅಥವಾ ಬಿಲ್ಹಣ ಕಾವ್ಯ– ಇವುಗಳ ಕರ್ತೃ. ಅದೇ ಕಾಲದ ವಿಜ್ಞಾನೇಶ್ವರನ ಮಿತಾಕ್ಷರ ಗ್ರಂಥ ಧರ್ಮಶಾಸ್ತ್ರಗಳ ಮತ್ತು ಯಾಜ್ಞವಲ್ಕ್ಯ ಸ್ಮೃತಿಯ ಸಾರಸಂಗ್ರಹವಾಗಿದ್ದು, ಅನಂತರ ಕಾಲದ ಅನೇಕ ವ್ಯಾಖ್ಯಾನ ವಿವರಗಳಿಗೆ ಮೂಲವಾಗಿತ್ತಲ್ಲದೆ ಬ್ರಿಟಿಷರ ಆಳ್ವಿಕೆಯಲ್ಲಿ ಪ್ರಮುಖ ಪರಾಮರ್ಶನ ಗ್ರಂಥವಾಗಿತ್ತು. 3ನೆಯ ಸೋಮೇಶ್ವರನ ಕೃತಿಯೆಂದು ಹೇಳಲಾದ ಅಭಿಲಷಿತಾರ್ಥ ಚಿಂತಾಮಣಿ ಅಥವಾ ಮಾನಸೋಲ್ಲಾಸ ವಿಶ್ವಕೋಶ ಸದೃಶ ಮಹದ್ಗ್ರಂಥ. ಇದು ಆತನ ಆಸ್ಥಾನದಲ್ಲಿದ್ದ ವಿದ್ವಾಂಸರೆಲ್ಲ ಸೇರಿ ಆತನ ನೇತೃತ್ವದಲ್ಲಿ ಸೃಷ್ಟಿಸಿದ್ದಿರಬಹುದು. ಇವಲ್ಲದೆ ಇನ್ನೂ ಹಲವಾರು ಕೃತಿಗಳು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಸಂಸ್ಕೃತದಲ್ಲಿ ರಚಿತವಾದುವು.

ಹೊಯ್ಸಳ ರಾಜ್ಯದಲ್ಲಿ ಸಂಸ್ಕೃತ ಸಾಹಿತ್ಯದ ಕೆಲವು ಗಮನಾರ್ಹ ಕೃತಿಗಳು ರಚಿತವಾದುವು. ರಾಮಾನುಜ, ಮಧ್ವ ಮತ್ತು ಅವರ ಶಿಷ್ಯಸಮುದಾಯದ ಅನೇಕ ಕೃತಿಗಳು ಶ್ರೀವೈಷ್ಣವ ಮತ್ತು ವೈಷ್ಣವ ತತ್ತ್ವಗಳನ್ನು ನಿರೂಪಿಸುತ್ತವೆ. ರಾಮಾನುಜರು ಭಗವದಾರಾಧನ ಕ್ರಮ, ಗದ್ಯತ್ರಯವೆಂಬ ಆಚಾರ ನಿತ್ಯಕರ್ಮಗಳಿಗೆ ಸಂಬಂಧಿಸಿದ ಕೃತಿಗಳನ್ನೂ ಬ್ರಹ್ಮ ಸೂತ್ರವನ್ನೂ ಪವಿತ್ರ ಶ್ರೀ ಭಾಷ್ಯವನ್ನೂ ಗೀತಾಭಾಷ್ಯವನ್ನೂ ವೇದಾಂತಸಂಗ್ರಹವೆಂಬ ಉಪನಿಷದ್ವ್ಯಾಖ್ಯಾನವನ್ನೂ ವೇದಾಂತ ಸಾರ ಮತ್ತು ವೇದಾಂತ ದೀಪಿಕಾ ಎಂಬ ಗ್ರಂಥಗಳನ್ನೂ ರಚಿಸಿದರು. ಇವಲ್ಲದೆ ವಿಶಿಷ್ಟಾದ್ವೈತಕ್ಕೆ ಸಂಬಂಧಿಸಿದ ಹಲವಾರು ಕೃತಿಗಳು ಅವರ ಶಿಷ್ಯರಿಂದ ನಿರ್ಮಿತವಾದುವು. ಈ ಪರಂಪರೆಯ ಕೊನೆಯಲ್ಲಿ, ವಿಜಯನಗರ ಕಾಲದಲ್ಲಿ, ವೇದಾಂತದೇಶಿಕರ ಗ್ರಂಥಗಳು ಬಂದುವು. ಮಧ್ವಾಚಾರ್ಯರ ಋಗ್ಭಾಷ್ಯ, ಸದಾಚಾರಸ್ಮೃತಿ, ತಂತ್ರಸಾರ, ಕೃಷ್ಣಾಮೃತಮಹಾರ್ಣವ ಮುಂತಾದ ಕೃತಿಗಳು ವೇದಸಾಹಿತ್ಯ ಮತ್ತು ಆಚಾರಗಳಿಗೆ ಸಂಬಂಧಿಸಿದ್ದರೆ, ಬ್ರಹ್ಮ ಸೂತ್ರಗಳ ಮೇಲಣ ನಾಲ್ಕು ಗ್ರಂಥಗಳು, ಗೀತೆಯ ಮೇಲಣ ಎರಡು, ಉಪನಿಷತ್ತುಗಳ ವ್ಯಾಖ್ಯಾನ– ಇವು ದಾರ್ಶನಿಕ ಸಾಹಿತ್ಯಕ್ಕೆ ಸೇರುತ್ತವೆ. ಅವರ ಭಾರತ ಮತ್ತು ಭಾಗವತ ಸಂಗ್ರಹಗಳು ಉತ್ತಮ ಪೌರಾಣಿಕ ಸಾಹಿತ್ಯ. ಕರ್ಮನಿರ್ಣಯ ಮತ್ತು ಖಂಡನತ್ರಯಗಳು ಸ್ವಮತ ಸಮರ್ಥನೆ ಮತ್ತು ಇತರ ಮತಾಚಾರ್ಯರ ಸಿದ್ಧಾಂತಗಳ ಖಂಡನೆಗೆ ಮೀಸಲಾಗಿವೆ. ಇವರ ಶಿಷ್ಯವರ್ಗಕ್ಕೆ ಸೇರಿದ ತ್ರಿವಿಕ್ರಮಪಂಡಿತ, ನಾರಾಯಣಪಂಡಿತ, ಪದ್ಮನಾಭತೀರ್ಥ ಮತ್ತು ನರಹರಿತೀರ್ಥರ ಅನೇಕ ಕೃತಿಗಳು ತತ್ತ್ವಶಾಸ್ತ್ರ ಸಾಹಿತ್ಯಕ್ಕೆ ಉತ್ತಮ ಕೊಡುಗೆಗಳು. ಈ ಇಬ್ಬರು ಮಹಾನ್ ಆಚಾರ್ಯರ ಮತ್ತು ಅವರ ಶಿಷ್ಯಸಮೂಹದ ಅವಿರತ ಚಟುವಟಿಕೆಗಳಿಂದ ಜಾಗೃತರಾದ ಅನೇಕ ಪ್ರಸಿದ್ಧ ಅದ್ವೈತ ಗ್ರಂಥಕಾರರು ಕಾಣಬರುತ್ತಾರೆ. ಆನಂದಬೋಧಭಟ್ಟಾಚಾರ್ಯ, ವಾದೀಂದ್ರ, ಭುವನಸುಂದರಸೂರಿ ಮತ್ತು ಅಮಲಾನಂದ ವ್ಯಾಸಾಶ್ರಯರು ಇವರಲ್ಲಿ ಮುಖ್ಯರು. ಹೊಯ್ಸಳಯುಗದ ಅಂತ್ಯದಲ್ಲಿ ಬಾಳಿದ, ಅನಂತರ ವಿಜಯನಗರದ ಸ್ಥಾಪಕರೆಂದು ಹೆಸರಾದ, ವಿದ್ಯಾರಣ್ಯ–ಮಾಧವರು ಅದ್ವೈತ ಸಿದ್ಧಾಂತದ ಮಹಾಪುರುಷರಲ್ಲೊಬ್ಬರು. ಸಂಸ್ಕೃತಸಾಹಿತ್ಯಕ್ಕೆ ಸೇವೆ ಮಾಡಿದ ಜೈನ ವಿದ್ವಾಂಸರಲ್ಲಿ ಸಾರಚತುಷ್ಟಯದ ವ್ಯಾಖ್ಯಾನಕಾರ ಬಾಲಚಂದ್ರ, ಗುರುಪಂಚ ಸ್ಮೃತಿಯ ಕರ್ತೃ ರಾಮಚಂದ್ರ ಮಾಲಾಧಾರಿ ಮುಖ್ಯರು. ಹೊಯ್ಸಳ ರಾಜ್ಯ ಭಾಗಗಳಲ್ಲಿದ್ದ ಪಾಲ್ಕುರಿಕೆ ಸೋಮನಾಥ, ಗುರು ಲಿಂಗಾರ್ಯ, ಬೊಬ್ಬೂರು ಸಂಗಣ, ಮಲ್ಲಿನಾಥ, ಚೆನ್ನರಾಮ ಮುಂತಾದವರು ಪ್ರಮುಖ ಶೈವಲೇಖಕರು. ಈ ಲೌಕಿಕ ಸಾಹಿತ್ಯರಂಗದಲ್ಲಿ ಗಮನಾರ್ಹವಾದುದು ಹೊಯ್ಸಳರ ಆಶ್ರಿತರಾಗಿದ್ದ ವಿದ್ಯಾಚಕ್ರವರ್ತಿಗಳೆಂಬ ಬಿರುದಿದ್ದ ಕವಿಗಳ ಮನೆತನ. 1ನೆಯ ವಿದ್ಯಾ ಚಕ್ರವರ್ತಿ ಎರಡನೆಯ ಬಲ್ಲಾಳನ ಆಸ್ಥಾನದಲ್ಲಿದ್ದ. ಅವನ ಮೊಮ್ಮಗ 2ನೆಯ ವಿದ್ಯಾಚಕ್ರವರ್ತಿ, ಗದ್ಯಕರ್ಣಾಮೃತದ ಕರ್ತೃ, 2ನೆಯ ನರಸಿಂಹನ ಆಸ್ಥಾನಿಕ. ಅವನ ಮೊಮ್ಮಗ ಮೂರನೆಯ ವಿದ್ಯಾ ಚಕ್ರವರ್ತಿ ರುಕ್ಮಿಣೀ ಕಲ್ಯಾಣವೆಂಬ ಮಹಾಕಾವ್ಯದ ಕರ್ತೃ; ಕಾವ್ಯಪ್ರಕಾಶಕ್ಕೂ ಅಲಂಕಾರಸರ್ವಸ್ವಕ್ಕೂ ವ್ಯಾಖ್ಯಾನಕಾರ. ಈ ರೀತಿ ಈ ಯುಗದಲ್ಲಿ ಸಂಸ್ಕೃತಸಾಹಿತ್ಯ ಸಂಪದ್ಯುಕ್ತವಾಗಿಯೂ ಚೈತನ್ಯಪೂರ್ಣವಾಗಿಯೂ ಬೆಳೆಯಿತು.

ಕಲ್ಯಾಣ ಚಾಳುಕ್ಯ ಸಾಮ್ರಾಜ್ಯಕಾಲದ ವೇಳೆಗೆ ಕನ್ನಡಸಾಹಿತ್ಯ ಪ್ರಗತಿ ಸಾಧಿಸಿತ್ತು. ಕನ್ನಡದ ಆದಿಕವಿ ಪಂಪನ ಪ್ರಭಾವ ಈ ಕಾಲದ ಸಾಹಿತಿಗಳ ಮೇಲೆ ಅಮಿತವಾಗಿತ್ತು. ಚಾಳುಕ್ಯರ ಆಶ್ರಿತರಾಗಿದ್ದ ಕನ್ನಡ ಕವಿಗಳಲ್ಲಿ ಮೊದಲಿಗನೆಂದರೆ ಕವಿಚಕ್ರವರ್ತಿ, ಕವಿರತ್ನ ಎಂದು ಪ್ರಸಿದ್ಧನಾದ ರನ್ನ. ಮುಧೋಳದಲ್ಲಿ ಜನಿಸಿ ಅಜಿತಸೇನರ ಬಳಿ ಶಿಕ್ಷಣ ಪಡೆದ ರನ್ನ ಚಾವುಂಡರಾಯ ಮತ್ತು ಅತ್ತಿಮಬ್ಬೆ ಇವರ ಕೃಪಾಪೋಷಿತನಾಗಿ ಕೊನೆಗೆ ಸತ್ಯಾಶ್ರಯದ ಬೆಡಂಗನ ಆಶ್ರಯ ಪಡೆದ. ರನ್ನನ ಅಜಿತಪುರಾಣ, ಸಾಹಸಭೀಮವಿಜಯ ಅಥವಾ ಗದಾಯುದ್ಧ ಮತ್ತು ರನ್ನ ಕಂದ– ಈ ಮೂರು ಕೃತಿಗಳು ಲಭ್ಯವಾಗಿವೆ. ರನ್ನನ ಸಮಕಾಲೀನನಾದ ಒಂದನೆಯ ನಾಗವರ್ಮ ಛಂದೋಂಬುಧಿ ಮತ್ತು ಕರ್ಣಾಟಕ ಕಾದಂಬರಿಗಳ ಕರ್ತೃ. ಅನಂತರಕಾಲದ ಎರಡನೆಯ ಜಯಸಿಂಹನ ಆಸ್ಥಾನದಲ್ಲಿದ್ದ 2ನೆಯ ಚಾವುಂಡರಾಯ ಲೋಕೋಪಕಾರವೆಂಬ ಕೋಶಗ್ರಂಥ ರಚಿಸಿದ. ಆ ಕಾಲದ ಚಂದ್ರರಾಜ ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಮದನತಿಲಕವೆಂಬ ಕೃತಿಯ ನಿರ್ಮಾಪಕ. ಜೈನಕವಿ ಶ್ರೀಧರಾಚಾರ್ಯ ಸೋಮೇಶ್ವರ ಒಂದನೆಯ ಆಹವಮಲ್ಲನ ಪೋಷಣೆಯಲ್ಲಿ ಜಾತಕತಿಲಕವೆಂಬ ಜ್ಯೋತಿಷಕಾವ್ಯ ರಚಿಸಿದ. ಚಾಳುಕ್ಯ ಯುವರಾಜ ಕೀರ್ತಿವರ್ಮನ (ವಿಕ್ರಮಾದಿತ್ಯನ ಸೋದರ) ಗೋವೈದ್ಯವೆಂಬ ಪಶುವೈದ್ಯಗ್ರಂಥ ಉಪಯುಕ್ತ ಕೃತಿ. ದುರ್ಗಸಿಂಹನ ಪಂಚತಂತ್ರ ಸಂಸ್ಕೃತ ಪಂಚತಂತ್ರದ ಆಧಾರದ ಮೇಲೆ ರಚಿಸಿದ ನೀತಿಗ್ರಂಥ. ಬನವಾಸಿಯ ಅಧಿಕಾರಿ ಲಕ್ಷ್ಮಣರಾಜನ ಆಶ್ರಿತನಾದ ಶಾಂತಿನಾಥನ ಚಂಪೂಕಾವ್ಯ ಸುಕುಮಾರಚರಿತೆ ಪಂಪನ ಪ್ರಭಾವವನ್ನು ಪ್ರದರ್ಶಿಸಿದರೂ ಶಕ್ತಿಯುತವಾದ ಉತ್ತಮ ಕೃತಿ.

ಕಲ್ಯಾಣ ಚಾಳುಕ್ಯರ ಕೊನೆಗಾಲ ಮತ್ತು ಕಳಚುರಿಗಳ ಕಾಲವನ್ನು ಕರ್ನಾಟಕದ ವಚನ ಸಾಹಿತ್ಯಯುಗವೆಂದು ಹೇಳಬಹುದು. ವಚನಕಾರರಲ್ಲಿ ಮೊದಲಿಗನಾದ ದೇವರದಾಸಿಮಯ್ಯ (ಸು.1040) ನೇಕಾರ. ರಾಣಿ ಸುಗ್ಗಲೆಯನ್ನು ಶಿಷ್ಯಳಾಗಿ ಹೊಂದಿದ್ದ ಇವನ ವಚನಗಳು ಸರಳವೂ ಕಾವ್ಯಮಯವೂ ಆಗಿವೆ. ಬಸವೇಶ್ವರರು ವಚನಕಾರರಲ್ಲಿ ಅತ್ಯುನ್ನತಸ್ಥಾನ ಗಳಿಸಿದ್ದಾರೆ. ದೈಹಿಕಶ್ರಮ, ಸತ್ಯ, ಜಾತ್ಯಂಧತೆಯ ಖಂಡನೆ, ಪ್ರಾಣಿದಯೆ, ಸರ್ವಸಮತೆಗಳನ್ನು ಬೋಧಿಸಿದ ಇವರ ವಚನಸಾಹಿತ್ಯ ಭಾರತೀಯ ಸಾಹಿತ್ಯಕ್ಕೆ, ಧಾರ್ಮಿಕ ಸಿರಿಗೆ ಕರ್ನಾಟಕದ ಅನುಪಮ ಕೊಡುಗೆ. ಅನಂತರದ ವಚನಕಾರರಲ್ಲಿ ಅಲ್ಲಮಪ್ರಭು, ಚೆನ್ನಬಸವ, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಂಬಿಗ ಚೌಡಯ್ಯ, ಉರಿಲಿಂಗದೇವ, ಗಜೇಶ ಮಸಣಯ್ಯ ಮೊದಲಾದವರು ಸ್ಮರಣೀಯರು. ವಚನಗಳನ್ನು ರಚಿಸಿದ ಸ್ತ್ರೀಯರಲ್ಲಿ ಅಗ್ರಸ್ಥಾನ ಅಕ್ಕಮಹಾದೇವಿಗೆ ಸಲ್ಲತಕ್ಕದ್ದು. ಈಕೆಯ ವಚನಗಳು ಭಾವಗೀತೆಗಳಂತಿವೆ. ಮುಕ್ತಾಯಕ್ಕ, ನೀಲಮ್ಮ ಮುಂತಾದವರೂ ಈ ಕ್ಷೇತ್ರದಲ್ಲಿ ಉನ್ನತವರ್ಗದ ವ್ಯಕ್ತಿಗಳು. ವಚನ ಸಾಹಿತ್ಯ ಕನ್ನಡ ಭಾಷಾಸಿರಿಯನ್ನು ಸುವ್ಯಕ್ತಪಡಿಸಿ ಹೊಸಜೀವನದ ಹೆದ್ದಾರಿ ನಿರ್ಮಿಸಿತು. ಕಲ್ಯಾಣ ಚಾಳುಕ್ಯಯುಗದ ಇತರ ಕೃತಿಗಳಲ್ಲಿ ನಯಸೇನನ ಧರ್ಮಾಮೃತ ಗಮನಾರ್ಹ. 2ನೆಯ ನಾಗವರ್ಮ ಕವಿ ಜನ್ನನ ಗುರು. ಅಭಿನವ ಶರ್ವವರ್ಮನೆಂಬ ಬಿರುದಿದ್ದ ಈತನ ಕಾವ್ಯಾವಲೋಕನ, ಭಾಷಾಭೂಷಣ ಮತ್ತು ಅಭಿಧಾನ ವಸ್ತುಕೋಶ– ಈ ಮೂರು ಕೃತಿಗಳು ದೊರಕಿವೆ. ಬ್ರಹ್ಮಶಿವನ ಕೃತಿಯಾದ ಸಮಯ ಪರೀಕ್ಷೆ ವಿವಿಧ ಮತ ತತ್ತ್ವಗಳನ್ನು ಪರಿಶೀಲಿಸುತ್ತದೆ.

ಹೊಯ್ಸಳರ ಕಾಲದಲ್ಲಿ ಒಂದನೆಯ ಬಲ್ಲಾಳನ ಆಸ್ಥಾನ ಕವಿಯಾದ ನಾಗಚಂದ್ರ ಪಂಪನಿಂದ ಪ್ರಭಾವಿತನಾಗಿ, ಅಭಿನವ ಪಂಪನೆಂದು ಹೇಳಿಕೊಂಡಿದ್ದಾನೆ. ಪಂಪರಾಮಾಯಣವೆಂಬ ಕೀರ್ತಿ ಪಡೆದಿರುವ ರಾಮಚಂದ್ರ ಚರಿತಪುರಾಣ ಮತ್ತು ಮಲ್ಲಿನಾಥಪುರಾಣ ಇವನ ಕೃತಿಗಳು. ಇವನ ಮತ್ತು ಸಮಕಾಲೀನಳಾದ ಕಂತಿಯ

ನಡುವೆ ನಡೆದ ಸಮಸ್ಯಾಪೂರಾಣ ಪರೀಕ್ಷೆ ಕಂತಿಹಂಪನ ಸಮಸ್ಯೆಗಳೆಂದು ಹೆಸರಾಗಿದೆ. ವಿಷ್ಣುವರ್ಧನನ ಆಸ್ಥಾನಕವಿ ರಾಜಾದಿತ್ಯ ಗಣಿತದಲ್ಲಿ ಪಾರಂಗತನಾಗಿದ್ದು, ಕ್ಷೇತ್ರಗಣಿತ, ವ್ಯವಹಾರಗಣಿತ ಮತ್ತು ಲೀಲಾವತಿಗಳೆಂಬ ಕೃತಿಗಳನ್ನು ಕಾವ್ಯರೂಪದಲ್ಲಿ ನಿರ್ಮಿಸಿದ. ಜನ್ನನ ತಂದೆ ಸುಮನೋಬಾಣ ಒಂದನೆಯ ನರಸಿಂಹನ ಆಸ್ಥಾನದಲ್ಲಿದ್ದು ಕೆಲವು ಕೃತಿಗಳನ್ನು ನಿರ್ಮಿಸಿದ. ಕೀತಿವರ್ಮನ ಗೋವೈದ್ಯದ ಅನಂತರ ರಚಿತವಾದ, ಜಗದ್ದಳ ಸೋಮನಾಥನ ಕರ್ನಾಟಕ ಕಲ್ಯಾಣಕಾರಕವೆಂಬ ವೈದ್ಯಗ್ರಂಥದ ಪರಿಷ್ಕರಣವನ್ನು ಸುಮನೋಬಾಣ ಮಾಡಿದನೆಂದು ಹೇಳಲಾಗಿದೆ. ಆ ಕಾಲದ ಹರಿಹರನ ಗಿರಿಜಾಕಲ್ಯಾಣ ಕನ್ನಡ ಮಹಾಕಾವ್ಯಗಳಲ್ಲೊಂದಾಗಿದೆ. ರಗಳೆಯೆಂಬ ಪದ್ಯಜಾತಿ ಕನ್ನಡ ಸಾಹಿತ್ಯದ ಸುಪ್ರಸಿದ್ಧ ರೀತಿಯಾಗಿದ್ದು, ಈ ರೀತಿಗೆ ಈತನ ಕೊಡುಗೆ ಅಮೋಘವಾಗಿದೆ. ಭಕ್ತಿಪ್ರಚೋದಕವಾದ ನೂರಕ್ಕೂ ಹೆಚ್ಚಿನ ಹರಿಹರನ ರಗಳೆಗಳು ಶಿವಭಕ್ತರ ಕಥಾನಕಗಳು. ಅವನ ಸೋದರಳಿಯ ರಾಘವಾಂಕ. ಈತ ಕನ್ನಡದಲ್ಲಿ ಷಟ್ಪದೀಕಾವ್ಯ ಪ್ರವರ್ತಕ. ಹರಿಹರನ ಪ್ರಭಾವಕ್ಕೊಳಗಾದ ಈತನ ಹರಿಶ್ಚಂದ್ರಕಾವ್ಯ, ಸಿದ್ಧರಾಮ ಪುರಾಣ, ಸೋಮನಾಥ ಚರಿತೆ, ವೀರೇಶ ಚರಿತೆ, ಶರಭಸಾಹಿತ್ಯ ಈ ಕೃತಿಗಳು ಲಭ್ಯವಾಗಿವೆ. ಸಮಕಾಲೀನನೂ ಬೇಲೂರು ಕೆರೆಯ ನಿರ್ಮಾತನೂ ಆದ ಕೆರೆಯ ಪದ್ಮರಸ ಹರಿಹರನ ಅನುಸರಣೆ ಮಾಡಿ ರಗಳೆಯಲ್ಲಿ ದೀಕ್ಷಾಬೋಧೆಯನ್ನು ರಚಿಸಿದ. ಎರಡನೆಯ ಬಲ್ಲಾಳನ ಮಂತ್ರಿ ಬೂಚಿರಾಜ ಸಾಹಿತ್ಯಪ್ರಿಯ ಮತ್ತು ಸ್ವತಃ ಸಾಹಸಿ. ಈ ಕಾಲದ ಶಾಸನ ಕವಿಗಳಲ್ಲಿ ದೇವಪ್ರಿಯ, ವಿರೂಪಾಕ್ಷಪಂಡಿತ, ಕಲ್ಲಯ್ಯ, ಮಲೆಯ ಮುಂತಾದವರು ಮುಖ್ಯರು. ಮೊತ್ತಮೊದಲಿಗೆ ಬ್ರಾಹ್ಮಣ ಕವಿಗಳು ಕನ್ನಡ ಕೃತಿ ರಚನೆಗಿಳಿದಿದ್ದ ಕಾಲದಲ್ಲಿ ರುದ್ರಭಟ್ಟನ ಜಗನ್ನಾಥವಿಜಯ ರಚಿತವಾಯಿತು. ಇದೇ ಕಾಲದ ನೇಮಿಚಂದ್ರನ ನೇಮಿನಾಥಪುರಾಣ ಅಪೂರ್ಣಕೃತಿ. ಲೀಲಾವತಿ ಈತನ ಇನ್ನೊಂದು ಕೃತಿ. ವರ್ಧಮಾನಪುರಾಣವನ್ನು ಆಚಣ್ಣ ಕವಿ ಬರೆದ. ಈ ಕಾಲದ ಪ್ರಸಿದ್ಧ ಕವಿಯಾದ, ಕವಿಚಕ್ರವರ್ತಿಯೆನಿಸಿಕೊಂಡ ಜನ್ನನ ಅಮರಕೃತಿ ಯಶೋಧರ ಚರಿತೆ. ಅನಂತನಾಥಪುರಾಣ ಈತನ ಇನ್ನೊಂದು ಕೊಡುಗೆ. ಈತ ಅನೇಕ ಕಾವ್ಯಮಯ ಶಾಸನಗಳ ರಚಕ. 2ನೆಯ ನರಸಿಂಹನ ಸೇನಾನಿ ಪೋಲಾಳ್ವ ದಂಡನಾಥ ಹರಿಹರದಲ್ಲಿ ಹರಿಹರೇಶ್ವರ ದೇವಾಲಯದ ನಿರ್ಮಾತೃವೂ ಹೌದು; ಹರಚಾರಿತ್ರದ ಕರ್ತೃವೂ ಹೌದು. ಸೋಮೇಶ್ವರನ ಆಶ್ರಯದಲ್ಲಿ ಜನ್ನನ ತಂಗಿಯ ಗಂಡ ಮಲ್ಲಿಕಾರ್ಜುನ ಹೊಯ್ಸಳವಂಶದ ಚಾರಿತ್ರಿಕ ಸಂಗತಿಗಳನ್ನರುಹುವ ಸೂಕ್ತಿಸುಧಾರ್ಣವವನ್ನು ರಚಿಸಿದ. ಈ ಕವಿಯ ಮಗನೂ ಕನ್ನಡದ ಉಚ್ಚ ವೈಯಾಕರಣೆಯೂ ಆದ ಕೇಶಿರಾಜನ ವಿದ್ವತ್ಪೂರ್ಣ ಶಬ್ದಮಣಿದರ್ಪಣದ ಅಧ್ಯಯನ ಮಾಡದವರ ಜ್ಞಾನ ಅಪೂರ್ಣವೆಂದು ಭಾವಿಸಲಾಗಿದೆ. ಸಂಸ್ಕೃತದ ಹಿಡಿತದಿಂದ ಕನ್ನಡವನ್ನು ತಪ್ಪಿಸುವ ಹೊಸಹಾದಿಯ ತೀವ್ರವಾದಿ ಆಂಡಯ್ಯನ ಕಬ್ಬಿಗರ ಕಾವ್ಯ ಈ ಕಾಲದ್ದು. ಈ ಕಾಲದ ಅನೇಕ ಶಾಸನಗಳು ಪ್ರೌಢಕಾವ್ಯ ಶೈಲಿಯಲ್ಲಿ ರಚಿಸಲ್ಪಟ್ಟಿವೆ. ಒಟ್ಟಿನಲ್ಲಿ ಈ ಕಾಲದ ಕನ್ನಡ ಸಾಹಿತ್ಯದಲ್ಲಿ ಸರ್ವತೋಮುಖ ಬೆಳೆವಣಿಗೆ ಕಂಡುಬರುತ್ತದೆ.

**ಸಾಮಂತ ಮನೆತನಗಳು :** ಬಾದಾಮಿಯ ಚಳುಕ್ಯರ ಕಾಲದಿಂದ ಹೊಯ್ಸಳ ವಂಶದ ಅಂತ್ಯವಾಗುವವರೆಗೂ ಕರ್ನಾಟಕದ ಇತಿಹಾಸ ಒಂದು ಸಮತಂತ್ರದ ಹಾದಿಯಲ್ಲಿ, ಸಾಮಾನ್ಯ ತಳಹದಿಯ ಮೇಲೆ ನಿಂತಿತ್ತು. ಈ ದೀರ್ಘ ಕಾಲದುದ್ದಕ್ಕೂ ಕೆಲವು ಸಮಾನ ಮೌಲ್ಯಗಳನ್ನು ಜನಜೀವನ, ರಾಜಕೀಯ ಮತ್ತು ಸಾಮಾಜಿಕ ರಂಗಗಳಲ್ಲಿ ಕಾಣಬಹುದಾಗಿತ್ತು. ಆದರೆ ಅನಂತರ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಹೊಸ ಧ್ಯೇಯ ಧೋರಣೆಗಳು ಕಾಣಬರುತ್ತವೆ. ಆದುದರಿಂದ ಒಂದು ಹೊಸ ಅಧ್ಯಾಯವೇರ್ಪಟ್ಟಿತೆಂದರೆ ತಪ್ಪಾಗಲಾರದು. ಈ ಕಾಲದ ಸಾಮಂತ ಮನೆತನಗಳ ಸ್ಥೂಲ ಪರಿಚಯವನ್ನು ಮುಂದೆ ಕೊಡಲಾಗಿದೆ.

ಶಿಲಾಹಾರರು ಆದಿಯಿಂದಲೂ ಕರ್ನಾಟಕದಲ್ಲಿ ಸಾಮಂತರಾಜರಾಗಿದ್ದರು. ಕೊಂಕಣದಲ್ಲಿ ಪ್ರಬಲರಾಗಿದ್ದ ಇವರಲ್ಲಿ ನಾಲ್ಕು ಶಾಖೆಗಳಿದ್ದುವು. ಇವರಲ್ಲಿ 1187ರ ಸುಮಾರಿನಲ್ಲಿದ್ದ ಅಪರಾದಿತ್ಯ ಪ್ರಸಿದ್ಧ. ಸೌಂದತ್ತಿಯ ರಟ್ಟರು ಬೆಳಗಾಂವಿ ಜಿಲ್ಲೆಯಲ್ಲಿ ರಾಷ್ಟ್ರಕೂಟ-ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದರು. ಹಾನುಗಲ್ಲಿನ ಮತ್ತು ಗೋವಾದ ಎರಡು ಕದಂಬ ಮನೆತನಗಳವರೂ ಬನವಾಸಿ ಕದಂಬರ ವಂಶಕ್ಕೆ ಸೇರಿದ್ದು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಪ್ರಮುಖ ಸಾಮಂತರಾಗಿದ್ದರು. ಬಾದಾಮಿ ಧಾರವಾಡ ಪ್ರದೇಶಗಳಲ್ಲಿದ್ದ ಸಿಂದವಾಡಿಯ ಸಿಂದರು ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದರು. ಇವರಲ್ಲಿ ಇಮ್ಮಡಿ ಅಚ್ಚ ಮತ್ತು ಪೆರ್ಮಾಡಿ ಪ್ರಮುಖರು. ಧಾರವಾಡ ಪ್ರದೇಶದಲ್ಲಿಯ ಗುತ್ತವೊಳಲಿನ ಗುತ್ತರದು ಇನ್ನೊಂದು ಪ್ರಮುಖ ಸಾಮಂತ ಮನೆತನ, ಕಲ್ಯಾಣಿ ಚಾಳುಕ್ಯ-ಸೇವುಣರ ಅಧೀನರಾದ ಇವರಲ್ಲಿ ಮಲ್ಲಿದೇವ, ಇಮ್ಮಡಿ ಜೋಯಿದೇವ ಮುಖ್ಯರು. ಸಾಂತರರು ಪ್ರಬಲರಾಗಿದ್ದು ಬಾದಾಮಿಯ ಚಳುಕ್ಯ-ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಬೆಂಬಲಿಗರಾಗಿದ್ದರು. 1432ರಲ್ಲಿ ಕಾರ್ಕಳದ ಗೊಮ್ಮಟನ ಪ್ರತಿಷ್ಠೆ ಮಾಡಿಸಿದ ವೀರಪಾಂಡ್ಯನೂ ಈ ವಂಶದವ. ಉತ್ತರ ಕನ್ನಡ ಜಿಲ್ಲೆಯ ಸಾಳುವರು ಯಾದವರ ಬಲಗೈಯಾಗಿದ್ದು ಅನಂತರ ವಿಜಯನಗರದ ಸಾಳುವ ವಂಶದ ಮೂಲಪುರುಷರಾದರು. ಮೈಸೂರು ಜಿಲ್ಲೆಯ ಕೆಲಭಾಗಗಳಲ್ಲಿ ಆಳುತ್ತಿದ್ದ ಚೆಂಗಾಳ್ವರು ಚೋಳರೊಂದಿಗೂ ಹೊಯ್ಸಳರೊಂದಿಗೂ ಹೋರಾಡುತ್ತ ಅವರ ಅಧೀನರಾಗಿದ್ದರು. ವಿಜಯನಗರದ ಸಾಮಂತರೂ ಆಗಿದ್ದ ಇವರು ಕೊನೆಗೆ ಮೈಸೂರಿನ ರಾಜಒಡೆಯರಿಂದ 1614ರಲ್ಲಿ ನಾಶಹೊಂದಿದರು. ಹಾಸನ-ಕೊಡಗು ಪ್ರದೇಶಗಳಲ್ಲಿ ಆಳುತ್ತಿದ್ದ ಕೊಂಗಾಳ್ವರು ಚೋಳರ ಸಾಮಂತರಾಗಿದ್ದು ಹೊಯ್ಸಳರ ಕಾಲದಲ್ಲಿ ಕ್ಷೀಣರಾದರು. ಉಚ್ಚಂಗಿಯ ಪಾಂಡ್ಯರು ಕಲ್ಯಾಣಿ ಚಾಳುಕ್ಯರ ಮಾಂಡಲಿಕರಾಗಿದ್ದರು. ಅನಂತರ ಹೊಯ್ಸಳರಿಂದ ಸೋತು ಕಣ್ಮರೆಯಾದರು. ಇವರಲ್ಲದೆ ನೊಳಂಬರು, ಸೇಂದ್ರಕ, ಆಳುಪ ಮುಂತಾದ ಸಣ್ಣಪುಟ್ಟ ಮನೆತನಗಳೂ ಕರ್ನಾಟಕದ ವಿವಿಧ ಭಾಗಗಳಲ್ಲಿ ಅಧಿಕಾರ ಪಡೆದಿದ್ದು ಸಮಕಾಲೀನ ಪ್ರಬಲರಾಜರಿಗೆ ಅಧೀನರಾಗಿದ್ದರೆಂದು ತಿಳಿದುಬರುತ್ತದೆ.

**ಹೊರನಾಡುಗಳಲ್ಲಿ ಕನ್ನಡ ವಂಶಗಳು:** ಕರ್ನಾಟಕದಲ್ಲಿ ಪ್ರಬಲವಾಗಿದ್ದ ಚಾಳುಕ್ಯ ಮತ್ತು ರಾಷ್ಟ್ರಕೂಟ ವಂಶಗಳು ಭಾರತದ ಇತರ ಭಾಗಗಳಿಗೂ ತಮ್ಮ ಪ್ರಭಾವ ಬೀರಿ ಹಲವೆಡೆಗಳಲ್ಲಿ ತಮ್ಮ ರಾಜ್ಯಗಳನ್ನು ಸ್ಥಾಪಿಸಿದ್ದುವು. ಬಾದಾಮಿ ಚಾಳುಕ್ಯರ ಇಮ್ಮಡಿ ಪುಲಕೇಶಿ ತನ್ನ ತಮ್ಮ ಕುಬ್ಜವಿಷ್ಣುವರ್ಧನನ ನೇತೃತ್ವದಲ್ಲಿ ಆಂಧ್ರದ ವೆಂಗಿಚಾಳುಕ್ಯ ಮನೆತನ ಸ್ಥಾಪಿಸಿದ. ಈ ಮನೆತನ ಆರೇಳು ಶತಮಾನಗಳ ಕಾಲ ಅಧಿಕಾರ ನಡೆಸುತ್ತಿತ್ತು. ಇದೇ ಕಾಲದಲ್ಲಿ ಪುಲಕೇಶಿಯಿಂದ ಗುಜರಾತಿನ ಲಾಟದಲ್ಲಿ ಧರಾಶ್ರಯ ಜಯಸಿಂಹನ ನೇತೃತ್ವದಲ್ಲಿ ಸ್ಥಾಪಿತವಾದ ಚಾಳುಕ್ಯ ಮನೆತನವೂ ದೀರ್ಘಕಾಲ ಆಳುತ್ತಿತ್ತು. ಒರಿಸ್ಸದಲ್ಲಿ ಆಳುತ್ತಿದ್ದ ಪೂರ್ವಗಂಗ ಮತ್ತು ಕದಂಬ ಕುಲಗಳೂ ಕರ್ನಾಟಕದ ಮೂಲದವರೆಂದು ಹಲವು ವಿದ್ವಾಂಸರ ಅಭಿಪ್ರಾಯ. ಅನಂತರಕಾಲದಲ್ಲಿ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಳುಕ್ಯ ದೊರೆಗಳ ಕಾಲದಲ್ಲೂ ಕರ್ನಾಟಕದ ಯೋಧರು ಇತರ ಪ್ರದೇಶಗಳಿಗೆ ಹೋಗಿ ತಮ್ಮ ಬಾಹುಬಲವನ್ನು ಪ್ರದರ್ಶಿಸುತ್ತಿದ್ದರು. ಇವರಲ್ಲಿ ಮಧ್ಯಪ್ರದೇಶದ ಬಸ್ತಾರ್ ಪ್ರಾಂತ್ಯದಲ್ಲಿ ಆಳುತ್ತಿದ್ದ ಛಿಂದಕ ನಾಗರು, ಒರಿಸ್ಸದ ರಾಷ್ಟ್ರಕೂಟರು, ಶ್ರೀಕಾಕುಳಂ ಜಿಲ್ಲೆಯ ತೈಲಪವಂಶಿಗಳು, ಬಂಗಾಳದ ಸೇನರು, ಮಿಥಿಲೆಯ ಕರ್ನಾಟರು ಮುಖ್ಯರಾಗಿದ್ದು ಇಲ್ಲಿ ಸ್ಮರಿಸಲರ್ಹರು. **(ನೋಡಿ– ಕನ್ನಡ ಅರಸು ಮನೆತನಗಳು, ಹೊರನಾಡಿನಲ್ಲಿ)**

**ವಿಜಯನಗರ ಸಾಮ್ರಾಜ್ಯ :** 14ನೆಯ ಶತಮಾನದ ದ್ವಿತೀಯ ಪಾದದಿಂದ ಮೂರು ಶತಮಾನಗಳ ಕಾಲ ಕರ್ನಾಟಕ ರಾಜ್ಯಶ್ರೀಯ ಉತ್ತುಂಗ ಸ್ಥಿತಿಗೆ ಕಾರಣವಾದ ವಿಜಯನಗರ ಸಾಮ್ರಾಜ್ಯ 1336ರಲ್ಲಿ ಸಂಗಮವಂಶಜರಾದ ಹರಿಹರ ಬುಕ್ಕ ಮೊದಲಾದ ಐವರು



ಸೋದರರಿಂದ ಸ್ಥಾಪಿತವಾಯಿತು. ಮಹಮ್ಮದೀಯರ ದಬ್ಬಾಳಿಕೆಗೆ ಸಿಕ್ಕಿ ತತ್ತರಿಸುತ್ತಿದ್ದ ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಹಿಂದೂ ಧರ್ಮರಕ್ಷಣೆಗೆ ಟೊಂಕಕಟ್ಟಿ ನಿಂತ ಈ ಸಾಮ್ರಾಜ್ಯವನ್ನು ಸಂಗಮ, ಸಾಳುವ, ಮತ್ತು ತುಳುವ ಮನೆತನದ ಅರಸರು ರಕ್ಷಿಸಿದರು. ಇಮ್ಮಡಿ ದೇವರಾಯ, ನರಸರಾಯ, ವೀರನರಸಿಂಹ, ಕೃಷ್ಣದೇವರಾಯ

ಮುಂತಾದವರು ಈ ರಾಜ್ಯದ ವೈಭವವನ್ನು ಹೆಚ್ಚಿಸಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪಕನಾದ 1ನೆಯ ಹರಿಹರ ಮಹಾಯೋಧ. ಇವನ ನಾಲ್ವರು ಸೋದರರು ಈತನಿಗೆ ಹೆಚ್ಚಿನ ಸಹಾಯ ಮಾಡಿದರು. ಈ ಕಾಲದ ಮತ್ತೊಂದು ಮುಖ್ಯ ಘಟನೆಯೆಂದರೆ 1347ರಲ್ಲಿ ಬಹಮನಿ ರಾಜ್ಯ ಸ್ಥಾಪನೆ. ಅಲ್ಲಾವುದ್ದೀನ್ ಹಸನ್ ಬಹಮನ್ ಷಾನಿಂದ ಸ್ಥಾಪಿತವಾದ ಈ ರಾಜ್ಯಕ್ಕೂ ವಿಜಯನಗರ ಸಾಮ್ರಾಜ್ಯಕ್ಕೂ ಅನೇಕ ತಲೆಮಾರುಗಳವರೆಗೂ ಹೋರಾಟ ನಡೆಯಿತು. ಅನಂತರ ಅಧಿಕಾರಕ್ಕೆ ಬಂದ 1ನೆಯ ಬುಕ್ಕ ದೊರೆಯ ಕಾಲದಲ್ಲಿ (1356–79) ಸಾಮ್ರಾಜ್ಯ ವಿಸ್ತರಣೆ ನಡೆದುದಲ್ಲದೆ ಆಡಳಿತ ವ್ಯವಸ್ಥೆಗೊಂಡಿತು. ವೀರಕಂಪಣ ಕಂಚಿ ಮಧುರೆಗಳನ್ನು ಗೆದ್ದು ತನ್ನ ಅಧಿಕಾರವನ್ನು ಈ ಭಾಗದಲ್ಲಿ ನೆಲೆಗೊಳಿಸಿದ. ಇಮ್ಮಡಿ ದೇವರಾಯ (1424–46) ಬಹಮನಿ ಸುಲ್ತಾನನನ್ನೂ ಒರಿಸ್ಸದ ಗಜಪತಿಯನ್ನೂ ಸಿಂಹಳದ ರಾಜರನ್ನೂ ಹಲವು ಬಾರಿ ಸೋಲಿಸಿ ತನ್ನ ಸಾಮ್ರಾಜ್ಯದ ಮೇರೆಗಳನ್ನು ಹೆಚ್ಚಿಸಿದ. ಉತ್ತಮ ಆಡಳಿತಗಾರನೂ ಧೀರ ಯೋಧನೂ ಆದರ್ಶ ರಾಜಕಾರಣಿಯೂ ಆದ ಈತನ ಕಾಲದಲ್ಲಿ ಸಾಮ್ರಾಜ್ಯದ ವೈಭವ ಉನ್ನತ ಸ್ಥಿತಿ ಮುಟ್ಟಿತು. ಎಲ್ಲ ಧರ್ಮೀಯರಿಗೂ, ಮುಸ್ಲಿಮರಿಗೆ ಕೂಡ, ಈತ ಸಮಾನಾವಕಾಶಗಳನ್ನು ಕೊಟ್ಟಿದ್ದ. ಕೃಷ್ಣದೇವರಾಯನ ಕಾಲದಲ್ಲಿ ಕರ್ನಾಟಕದ ಕೀರ್ತಿ ಬೆಳೆಯಿತು. ವ್ಯಾಪಾರೋದ್ದೇಶದಿಂದ ಈತನ ಆಸ್ಥಾನಕ್ಕೆ ಬರುತ್ತಿದ್ದ ಪೋರ್ಚುಗೀಸರು ಅದರ ವೈಭವವನ್ನು ಅಮೋಘವೆಂದು ಹೊಗಳಿದ್ದಾರೆ. 1337ರಲ್ಲಿ ಸ್ಥಾಪನೆಯಾದಾಗಿನಿಂದ ಈ ಹಿಂದೂ ಸಾಮ್ರಾಜ್ಯದ ಬದ್ಧವೈರಿಗಳಾಗಿದ್ದ ಬಹಮನಿ ಸುಲ್ತಾನರನ್ನೂ ಇತರ ಶತ್ರುರಾಜರನ್ನೂ ಈತ ಸೋಲಿಸಿದ. ದೇಶದ ಸರ್ವತೋಮುಖ ಏಳಿಗೆ ಸಾಧಿಸಿದ. ಈತನ ಆಶ್ರಯದಲ್ಲಿ ಕನ್ನಡ, ತೆಲುಗು ಮತ್ತು ಸಂಸ್ಕೃತ ಸಾಹಿತ್ಯಗಳು ಬೆಳೆದುವು. ಸ್ವತಃ ಕವಿಯಾದ ಈತ ಅಮುಕ್ತಮಾಲ್ಯದವೆಂಬ ತೆಲುಗು ಕಾವ್ಯವನ್ನೂ ಜಾಂಬವತಿಕಲ್ಯಾಣವೆಂಬ ಸಂಸ್ಕೃತನಾಟಕವನ್ನೂ ರಚಿಸಿದನೆಂದು ನಂಬಲಾಗಿದೆ. ಸುಪ್ರಸಿದ್ಧ ಮಾಧ್ವಯತಿ ವ್ಯಾಸತೀರ್ಥರೂ ಕನಕದಾಸ ಪುರಂದರದಾಸರೂ ಈ ಕಾಲಕ್ಕೆ ಸೇರಿದವರು. ವಾಸ್ತುಶಿಲ್ಪಕಲೆಗೆ ಈತನ ಕಾಣಿಕೆ ಅಪೂರ್ವ, ದಕ್ಷಿಣ ಭಾರತದ ಎಲ್ಲ ಪ್ರಮುಖ ದೇವಾಲಯಗಳಿಗೂ ಈತ ಗೋಪುರ ಮಂಟಪಗಳನ್ನು ಸೇರಿಸಿದನೆಂದು ತಿಳಿದುಬರುತ್ತದೆ. ರಾಜಧಾನಿಯ ಕೃಷ್ಣಸ್ವಾಮಿಗುಡಿ ಈತನ ನಿರ್ಮಾಣ. ಭಾರತದ ಹಿರಿಯ ಸಮ್ರಾಟರಲ್ಲಿ ಈತನೂ ಒಬ್ಬ. ಅನಂತರ ಅಧಿಕಾರಕ್ಕೆ ಬಂದ ಅಳಿಯ ರಾಮರಾಯನ ಕಾಲದಲ್ಲಿ ನಡೆದ ರಕ್ಕಸತಂಗಡಿ ಯುದ್ಧದಲ್ಲಿ ಇವನ ವಿರುದ್ಧ ಒಂದುಗೂಡಿದ ಮುಸ್ಲಿಂ ಸೈನ್ಯಗಳು ವಿಜಯನಗರ ಸಾಮ್ರಾಜ್ಯದ ಸೈನ್ಯಗಳನ್ನು 1565ರಲ್ಲಿ ಸೋಲಿಸಿ ರಾಜಧಾನಿಯಾದ ವಿಜಯನಗರವನ್ನು ಸೂರೆಮಾಡಿದುವು. ಇಲ್ಲಿಗೆ ಈ ಸಾಮ್ರಾಜ್ಯದ ದಿಕ್ಕು ಬದಲಾಯಿತು. ಅನಂತರದ ಅರವೀಡು ವಂಶದ ರಾಜರು ರಾಜಧಾನಿಯನ್ನು ಪೆನುಗೊಂಡೆಗೂ ಚಂದ್ರಗಿರಿಗೂ ವೆಲ್ಲೂರಿಗೂ ಬದಲಾಯಿಸುತ್ತ 80 ವರ್ಷಕಾಲ ಹೋರಾಡಿದರು. ಇವರಲ್ಲಿ 2ನೆಯ ವೆಂಕಟಪತಿಯರಸ ಮುಖ್ಯ. ಮಹಮ್ಮದೀಯರನ್ನು ಅನೇಕ ಬಾರಿ ಸೋಲಿಸಿದ. ಕಡೆಯ ದೊರೆಯಾದ 6ನೆಯ ಶ್ರೀರಂಗರಾಯ ಗೋಲ್ಕೊಂಡದ ಸುಲ್ತಾನನಿಗೆ ತನ್ನ ರಾಜಧಾನಿಯನ್ನೊಪ್ಪಿಸಿ 1746ರಲ್ಲಿ ಇಕ್ಕೇರಿಯ ಶಿವಪ್ಪನಾಯಕನ ರಕ್ಷಣೆಗೊಳಗಾದ. ಇದರೊಂದಿಗೆ ಕೊನೆಯಾದ ವಿಜಯನಗರ ಸಾಮ್ರಾಜ್ಯದ ಅನಂತರ, ಆ ಅರಸರ ಆಶ್ರಿತರಾಗಿದ್ದ ಮೈಸೂರು, ಇಕ್ಕೇರಿ, ಗೇರುಸೊಪ್ಪೆ ಮತ್ತು ಭಟ್ಕಳದ ಅರಸರೂ ಸಣ್ಣ ಮನೆತನಗಳಿಗೆ ಸೇರಿದ ಪಾಳೆಯಗಾರರೂ ಕರ್ನಾಟಕದ ವಿವಿಧ ಭಾಗಗಳಲ್ಲಿ ಆಳಲಾರಂಭಿಸಿದರು.

ವಿಜಯನಗರ ಸಾಮ್ರಾಜ್ಯದ ಸಾಧನೆ ನ್ಯೂನತೆಗಳ ಸಿಂಹಾವಲೋಕನ ಮಾಡಿದಾಗ ಅದು ಪ್ರತಿಯೊಬ್ಬರ ಮೆಚ್ಚಿಗೆ ಗೌರವಾದಾರಗಳನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಬಾದಾಮಿ ಚಾಳುಕ್ಯರಿಂದ ದಕ್ಷಿಣಭಾರತದಲ್ಲಿ–ಅದರಲ್ಲೂ ಕರ್ನಾಟಕದಲ್ಲಿ–ಉದಯವಾಗಿ ಅನೂಚಾನವಾಗಿ ನಡೆದುಬಂದ ಹಿಂದೂಸಾಮ್ರಾಜ್ಯಗಳಲ್ಲಿ ಅತ್ಯಂತ ವೈಭವೋಪೇತವಾದ, ಕರ್ನಾಟಕ ಸಂಸ್ಕೃತಿಯನ್ನು ಪರಾಕಾಷ್ಠೆಗೊಯ್ದ ಕೊನೆಯ ಐತಿಹಾಸಿಕ ಸಾಮ್ರಾಜ್ಯವಿದು. ಈ ಸಾಮ್ರಾಜ್ಯದ ಸ್ಥಾಪಕರು ಹಿಂದೂ ಧರ್ಮರಕ್ಷಣೆ ಮತ್ತು ಪರಕೀಯರ ದಬ್ಬಾಳಿಕೆಯಿಂದ ಸ್ವಾತಂತ್ರ ರಕ್ಷಣೆಗಳನ್ನು ತಮ್ಮ ಧ್ಯೇಯವನ್ನಾಗಿಟ್ಟುಕೊಂಡು ಸು. ಮೂರು ಶತಮಾನಗಳ ಕಾಲ ಕರ್ನಾಟಕ ಮಾತ್ರವಲ್ಲ. ಇಡೀ ದಕ್ಷಿಣಭಾರತದ ನಾಗರಿಕತೆಯನ್ನು ಸರ್ವತೋಮುಖವಾಗಿ ಬೆಳೆಸಿದರು. ಕರ್ನಾಟಕದ ಭವ್ಯ ಇತಿಹಾಸದಲ್ಲಿ ಅತ್ಯುಜ್ವಲ ಕಾಲವಿದು. ಈ ಸಾಮ್ರಾಜ್ಯದ ಸ್ಥಾಪನೆಗೆ ರಾಜರ ವೈಯಕ್ತಿಕ ಆಶೆ, ವೈಭವ ಲಾಲಸೆ, ಸ್ವಂತ ಹಿರಿಮೆಗಳಿಗಿಂತ ರಾಷ್ಟ್ರೀಯತೆಯೇ ಪ್ರಚೋದಕವಾಗಿತ್ತು. ಸ್ವಧರ್ಮ ಸ್ವಕೀಯ ಸಂಸ್ಕೃತಿಗಳ ರಕ್ಷಣಾ ಚಳವಳಿಯಲ್ಲಿ ಸಾಮ್ರಾಜ್ಯದ ಜನತೆ ಸ್ವೇಚ್ಛೆಯಿಂದ ಪಾಲ್ಗೊಂಡು ಭಾರತೀಯ ಧರ್ಮ ಸಂಸ್ಕೃತಿಗಳಿಗಾಗಿ ಹೋರಾಡಿದರು. ಇಂಥ ಉದ್ದೇಶಗಳಿಂದ ಅಸ್ತಿತ್ವಕ್ಕೆ ಬಂದಿದ್ದರೂ ಸುಸಂಸ್ಕೃತ ಪ್ರಭುಗಳ ನೇತೃತ್ವದಲ್ಲಿ ಅಲ್ಪಸಂಖ್ಯಾತರಾಗಿದ್ದ ಜೈನ ಮುಸ್ಲಿಂ ಇನ್ನಿತರ ಮತೀಯರನ್ನೂ ಪರಕೀಯರನ್ನೂ ಪ್ರೀತ್ಯಾದರಗಳಿಂದ ಸ್ವಾಗತಿಸುತ್ತಿದ್ದು ವಿಶ್ವದ ಎಲ್ಲ ಮೂಲೆಗಳಲ್ಲೂ ಅರ್ಹವಾದ ಗೌರವ ಹೊಂದಿತ್ತು. ದಕ್ಷರೂ ಶಕ್ತರೂ ಧರ್ಮಭೀರುಗಳೂ ಆದ ಈ ರಾಯರುಗಳ ನಡುವೆ ಒಬ್ಬಿಬ್ಬ ಅಪ್ರಯೋಜಕ ದೊರೆಗಳೂ ಕಾಣಸಿಗುತ್ತಾರೆ. ಈ ಕಾಲದಲ್ಲಿ ಆಗಾಗ್ಗೆ ಕಾಣಿಸಿಕೊಂಡ ದೊರೆಗಳ ಅಶಕ್ತತೆ, ಆಂತರಿಕ ಕಲಹ, ತತ್ಫಲವಾಗಿ ಉಂಟಾದ ವಂಶಪಲ್ಲಟಗಳಂಥ ಪರಿಸ್ಥಿತಿಯಲ್ಲೂ ಇದು ತನ್ನ ಶಕ್ತಿ ಧ್ಯೇಯ ಹಿರಿಮೆಗಳ ನಿರಂತರತೆಯನ್ನುಳಿಸಿಕೊಂಡು ಹೊರಗಿನ ವಿಪತ್ತುಗಳನ್ನು ಧೈರ್ಯದಿಂದ ಎದುರಿಸಿ ಗುರಿಮುಟ್ಟಿತು. ವಿಜಯನಗರ ಸಾಮ್ರಾಜ್ಯ ಸುಸಂಸ್ಕೃತ ರಾಷ್ಟ್ರವಾಗಿದ್ದುದಲ್ಲದೆ ಸಮಕಾಲೀನ ಸಾಮ್ರಾಜ್ಯಗಳಲ್ಲಿ ಅತ್ಯುನ್ನತ ಸ್ಥಾನ ಪಡೆದಿತ್ತೆಂಬುದಕ್ಕೆ ಹೊರದೇಶದ ಪ್ರವಾಸಿ– ಇತಿಹಾಸಕಾರರ ಲೇಖನಗಳೇ ಸಾಕ್ಷ್ಯಗಳಾಗಿವೆ. ಸುವ್ಯವಸ್ಥಿತ ಆಡಳಿತ, ಸುಭದ್ರಸರ್ಕಾರ, ಆಂತರಿಕ ಶಾಂತಿ ಮತ್ತು ಪ್ರಜಾಹಿತ ಸಂಪನ್ನತೆಗಳಿಗಾಗಿ ಶ್ರಮಿಸುವ ಪ್ರಭುತ್ವ, ಮತೀಯ ಮತ್ತು ಬೌದ್ಧಿಕ ಜೀವನದಲ್ಲಿ ಸ್ವಾತಂತ್ರ್ಯ– ಈ ಲಕ್ಷಣಗಳಿಂದ ಕೂಡಿದ್ದ ವಿಜಯನಗರ ಸಾಮ್ರಾಜ್ಯ ಪೂರ್ವಪಶ್ಚಿಮ ದಿಕ್ಕುಗಳ ಕೆಲವು ರಾಜ್ಯಗಳೊಡನೆ ರಾಯಭಾರ ಸಂಪರ್ಕಗಳನ್ನೂ ಹೊಂದಿತ್ತು. ವಿವಿಧ ದೇಶಗಳ ರಾಯಭಾರಿಗಳೂ ವರ್ತಕರೂ ವಿಜಯನಗರಕ್ಕೆ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದರು. ಅಂಥವರ ಬರಹಗಳಲ್ಲಿ ಕಂಡುಬರುವ ವಿಜಯನಗರದ ವರ್ಣನೆಗಳು ನಂಬಲಸಾಧ್ಯವೆನಿಸುವಂಥ ವೈಭವ, ಮಹತ್ತ್ವಗಳನ್ನು ಸೂಚಿಸುತ್ತವೆ. ಅನಾಸಕ್ತರಾದ ಈ ವಿದೇಶೀ ಬರೆಹಗಾರರ ವರ್ಣನೆಯಿಲ್ಲದಿದ್ದರೆ, ಈ ವೈಭವ ಮಹತ್ತ್ವಗಳನ್ನು ಒಪ್ಪಿಕೊಳ್ಳಲು ಕಷ್ಟವಾಗುತ್ತಿತ್ತು.

ಹಿಂದಿನಿಂದಲೂ ನಡೆದುಬಂದ ಆಡಳಿತ ಪದ್ಧತಿಯನ್ನೇ ವಿಜಯನಗರದ ದೊರೆಗಳೂ ಮುಂದುವರಿಸಿಕೊಂಡು ಬಂದರು. ಸಾಮ್ರಾಜ್ಯದಲ್ಲಿ ರೂಢಿಯಲ್ಲಿದ್ದ ಆಡಳಿತ ವ್ಯವಸ್ಥೆಯ



ಮಹಾನವಮಿ ದಿಬ್ಬ, ಹಂಪಿ

ವರ್ಣನೆಯೇ ಕೃಷ್ಣದೇವರಾಯನ ಅಮುಕ್ತಮಾಲ್ಯದದಲ್ಲಿ ಉಕ್ತವಾಗಿದೆ. ಅಧಿಕ ಕರ ತೆರಿಗೆಗಳನ್ನು ವಿಧಿಸದೆ, ರಾಜನೀತಿ ವಿಶಾರದರ ಸಲಹೆಯ ಮೇರೆಗೆ, ಪ್ರಜಾಹಿತಕ್ಕಾಗಿ ಆಡಳಿತ ನಡೆಸುವುದಲ್ಲದೆ, ಶತ್ರುನಿಗ್ರಹದಿಂದ ಪ್ರಜೆಗಳನ್ನು ರಕ್ಷಿಸುವುದೇ ಅವರ ನೀತಿಯಾಗಿತ್ತು. ವರ್ಣಸಂಕರ, ಜಾತ್ಯಂಧತೆಗಳನ್ನು ತಡೆಯುವುದರ ಸಹಿತ ಎಲ್ಲ ಧರ್ಮಗಳಿಗೂ ಸಮಾನಾವಕಾಶ ಮತ್ತು ಪ್ರೋತ್ಸಾಹಗಳನ್ನು ನೀಡುವುದು ಅವರ ಕರ್ತವ್ಯವಾಗಿತ್ತು. ನಗರ ನೈರ್ಮಲ್ಯಕ್ಕೆ ಅವರು ಪ್ರಾಶಸ್ತ್ಯ ಕೊಟ್ಟಿದ್ದರು. ಭವ್ಯಮಂದಿರಗಳಿಂದ, ಅಪಾರ ಧನಸಂಪತ್ತಿನಿಂದ ಕೂಡಿದ್ದ ಜನನಿಬಿಡವಾದ ರಾಜಧಾನಿ ಅವರ ದಕ್ಷ ಉದಾರ ಆಡಳಿತಕ್ಕೆ ಸಾಕ್ಷಿಯಾಗಿತ್ತು. ರಾಜ್ಯವನ್ನು ಮಂಡಲ, ಮಹಾರಾಜ್ಯಗಳಾಗಿ ವಿಂಗಡಿಸಲಾಗಿತ್ತು. ಸೀಮೆ, ನಾಡು, ಕಾರು ಮತ್ತು ಗ್ರಾಮ – ಇವು ಉಪ ವಿಭಾಗಗಳಾಗಿದ್ದುವು. ಒಟ್ಟು ಆರು ಪ್ರಾಂತ್ಯಗಳಿದ್ದು, ಅವುಗಳಲ್ಲಿ ಒಂದೊಂದೂ ಒಬ್ಬೊಬ್ಬ ನಾಯಕನ ಆಳ್ವಿಕೆಯಲ್ಲಿತ್ತು. ಚಕ್ರವರ್ತಿ ಒಟ್ಟು ಆಡಳಿತದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ಕೇಂದ್ರದ ಅಮಾತ್ಯವರ್ಗ ಮತ್ತು ಹಿರಿಯ ಅಧಿಕಾರಿಗಳಲ್ಲದೆ ಪ್ರಾಂತ್ಯಗಳಲ್ಲಿ ಕರಸಂಗ್ರಹಣಾಧಿಕಾರಿ ದಂಡನಾಯಕರೂ ಇದ್ದರು. ಗ್ರಾಮಾಡಳಿತ ಪಂಚಾಯಿತಿಗಳ ಕರ್ತವ್ಯವಾಗಿತ್ತು. ಸೇನಬೋವ, ತಳವಾರ ಮುಂತಾದ ಗ್ರಾಮಾಧಿಕಾರಿಗಳಿದ್ದರು. ಭೂಕಂದಾಯವೇ ಮುಖ್ಯ ರಾಜ್ಯಾದಾಯ. 1/6—ಭಾಗ ಪ್ರಭುತ್ವಕ್ಕೆ ಸೇರಬೇಕಾಗಿತ್ತು. ಅನೇಕ ರೀತಿಯ ತೆರಿಗೆ ಸುಂಕಗಳೂ ರೂಢಿಯಲ್ಲಿದ್ದುವು. ದೇಶರಕ್ಷಣೆಗೆ ಸುವ್ಯವಸ್ಥಿತ ಅಶ್ವ, ಗಜ, ಫಿರಂಗಿ ಮತ್ತು ಕಾಲಾಳು ಪಡೆಗಳಿದ್ದು ದಂಡನಾಯಕರು ಅವುಗಳ ಹೊಣೆಹೊತ್ತಿದ್ದರು. ನ್ಯಾಯಪಾಲನೆ ಮುಖ್ಯಕರ್ತವ್ಯವೆಂದು ಪರಿಗಣಿತವಾಗಿದ್ದು ಹಲವು ಮಟ್ಟದ ನ್ಯಾಯಾಲಯಗಳಿದ್ದುವು. ಕೊನೆಯ ತೀರ್ಪು ಸಮ್ರಾಟನಿಗೆ ಸೇರಿದ್ದು. ಪ್ರಾಡ್ವಿವಾಕ ಮತ್ತು ಸಭ್ಯರೆಂಬ ನ್ಯಾಯಾಧಿಕಾರಿಗಳಲ್ಲದೆ, ಮಾಂಡಲಿಕರೂ ಅಮಾತ್ಯರೂ ನ್ಯಾಯವಿಚಾರಣೆ ಮಾಡುತ್ತಿದ್ದರು. ಪ್ರಾಚೀನ ಸಂಪ್ರದಾಯ ಮತ್ತು ಧರ್ಮಶಾಸ್ತ್ರಗಳು

ನ್ಯಾಯವಿಮರ್ಶನಕ್ಕೆ ಮಾರ್ಗದರ್ಶಿಗಳಾಗಿದ್ದುವು. ಉಗ್ರದಂಡನೆಗಳು ಬಳಕೆಯಲ್ಲಿದ್ದುವು. ಮರಣದಂಡನೆ, ಅಂಗಭೇದಗಳು ಸಾಮಾನ್ಯ.

ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಪರಿಶೀಲನೆ ಮಾಡುವಾಗ ಇವರ ರಾಜಧಾನಿಯ ಸ್ಥಿತಿಗಳಿಗೆ ಪ್ರಾಧಾನ್ಯ ನೀಡಬೇಕಾಗುತ್ತದೆ. ಪ್ರಪಂಚದ ಸಮಕಾಲೀನ ಮಹಾನಗರಗಳಲ್ಲೊಂದಾದ ಈ ನಗರಕ್ಕೆ ಅನೇಕ ದೇಶಗಳ ಪ್ರವಾಸಿಗಳು ಬರುತ್ತಿದ್ದರು. ಯೂರೋಪಿನಲ್ಲೇ ದೊಡ್ಡದಾದ ರೋಂ ನಗರದಿಂದ ಇಲ್ಲಿಗೆ ಬಂದ ಡೊಮಿಂಗೊ ಪೆಯಿಸ್ ಎಂಬ ಪ್ರವಾಸಿ ವಿಜಯನಗರ ರೋಮಿಗಿಂತಲೂ ಹಿರಿದೆಂದು ವರ್ಣಿಸಿದ್ದರೆ, ನಿಕೊಲೊ ಕಾಂಟಿ ಎಂಬ ಇಟಲಿಯ ಪ್ರವಾಸಿ ಅದರ ಸುತ್ತಳತೆ 60 ಮೈಲಿಗಳೆಂದು ಹೇಳಿದ್ದಾನೆ. ಪರ್ಷಿಯದ ಅಬ್ದುರ್ ರಜಾಕ್, ತಾನು ಹಿಂದೆಂದೂ ನೋಡಿಲ್ಲದಂಥ ಕೇಳಿಲ್ಲದಂಥ ಅದ್ಭುತ ನಗರವಿದೆಂದು ಕೊಂಡಾಡಿದ್ದಾನೆ. ಇದರ ಜನಸಂಖ್ಯೆ 5 ಲಕ್ಷವಿದ್ದಿರಬಹುದೆಂದು ಪೆಯಿಸ್‍ನ ಊಹೆ. ಗಂಗಾದೇವಿ ತನ್ನ ಮಧುರಾ ವಿಜಯದಲ್ಲಿ ಈ ನಗರವನ್ನು ಇಂದ್ರನ ಅಮರಾವತಿಗೆ ಹೋಲಿಸಿ ಇದೊಂದು ಸಮಸ್ತ ಸಂಪತ್ತಿನ ನೆಲೆಯೆಂದು ವರ್ಣಿಸುತ್ತಾಳೆ. ಅನೇಕ ಉಪನಗರಗಳಿಂದಲೂ ಭವ್ಯವಾದ ದೇವಾಲಯ, ವಿಶಾಲ ಭವನ, ಬಜಾರ ಮತ್ತು ಉಪನಗರಗಳಿಂದಲೂ ಕೂಡಿದ್ದ ಈ ನಗರದಲ್ಲಿ ವಜ್ರ ಮತ್ತಿತರ ಬೆಲೆಬಾಳುವ ರತ್ನಗಳಿಂದ ಹಿಡಿದು ಎಲ್ಲ ರೀತಿಯ ಸರಕುಗಳ ಮಾರುಕಟ್ಟೆಯಿದ್ದು ಇದು ವಿಶ್ವದ ವಾಣಿಜ್ಯಕೇಂದ್ರವಾಗಿತ್ತು. ಈ ನಗರದ ಸುಭದ್ರಕೋಟೆಗೆ ದಕ್ಷಿಣದಲ್ಲಿ ಮುಖ್ಯದ್ವಾರವೂ ಕಂಪಿಲಿಯ ಕಡೆಯಿಂದ ಪೂರ್ವದ್ವಾರವೂ ಇದ್ದುವು. ತುಂಗಭದ್ರೆಯ ನೀರು ನಾಲೆಗಳ ಮೂಲಕ ರಾಜಧಾನಿಗೆ ಸರಬರಾಜಾಗುತ್ತಿತ್ತು. ಕನಕದಾಸನ ಮೋಹನತರಂಗಿಣಿಯಲ್ಲಿ ಕಾಣುವ ದ್ವಾರಕೆಯ ವರ್ಣನೆ ಇದರ ವರ್ಣನೆಯೇ. ಕುಬೇರನಿಗೂ ಸಾಲ ಕೊಡುವ ಶಕ್ತಿಯಿದ್ದ ವರ್ತಕರು ಅಂಗಡಿ ಬೀದಿಗಳಲ್ಲಿ ತಮ್ಮ ಐಶ್ವರ್ಯದ ಮಧ್ಯದಲ್ಲಿ ರಾರಾಜಿಸುತ್ತಿದ್ದರೆಂದು ಆತ ಹೇಳಿದ್ದಾನೆ. ಪಟ್ಟಣಸೆಟ್ಟಿಗಳೆಂಬ ಹೆಸರಿನ ಅನೇಕ ಅಧ್ಯಕ್ಷರ ವಶದಲ್ಲಿ ನಗರಾಡಳಿತವಿತ್ತು. ಬಂಕಾಪುರ, ರಾಯಚೂರು, ಆದವಾನಿ, ಭಟ್ಕಳ, ಹೊನ್ನಾವರ, ಅಂಕೋಲ, ಮಂಗಳೂರು, ಪೆನುಗೊಂಡೆ, ಇಕ್ಕೇರಿ, ದೋರಸಮುದ್ರ, ಶ್ರೀರಂಗಪಟ್ಟಣ – ಇವು ಈ ಸಾಮ್ರಾಜ್ಯದ ಇತರ ಮುಖ್ಯ ಪಟ್ಟಣಗಳು.

ರಾಜ್ಯದಲ್ಲಿ ಹಿಂದೂಗಳು ಅಧಿಕಸಂಖ್ಯಾತರಾಗಿದ್ದರೂ ಮುಸ್ಲಿಮರೂ ಜೈನರೂ ಧರ್ಮಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯಗಳನ್ನು ಅನುಭವಿಸುತ್ತ ಬಾಳುತ್ತಿದ್ದರು. ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೀರಶೈವ, ವೈಶ್ಯರು ಪ್ರಮುಖರಾಗಿದ್ದು ಅಸ್ಪೃಶ್ಯರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಬ್ರಾಹ್ಮಣರು ಸಸ್ಯಾಹಾರಿಗಳೂ ಏಕಪತ್ನೀಕರೂ ಆಗಿದ್ದು ಮತೀಯ ವಿಷಯ ಮತ್ತು ವಿದ್ಯಾಭ್ಯಾಸಕ್ಕೆ ಮಹತ್ತ್ವ ಕೊಡುತ್ತಿದ್ದರು. ರಾಜ್ಯಪಾಲನೆಯ ವೃತ್ತಿ ಕೈಗೊಂಡಿದ್ದ ಕ್ಷತ್ರಿಯರು ಬಹುಪತ್ನೀಕರೂ ಯೋಧರೂ ಆಗಿರುತ್ತಿದ್ದರು. ಇವರಲ್ಲಿ ಸತಿ ಪದ್ಧತಿ ರೂಢಿಯಲ್ಲಿತ್ತು. ಲಿಂಗಧಾರಿಗಳಾದ ವೀರಶೈವರು ಸಸ್ಯಾಹಾರಿಗಳೂ ಏಕಪತ್ನೀವ್ರತಸ್ಥರೂ ಆಗಿದ್ದು ಬಹುವಾಗಿ ವ್ಯಾಪಾರ ವಾಣಿಜ್ಯಗಳಲ್ಲಿ ನಿರತರಾಗಿರುತ್ತಿದ್ದರು. ಸಮಾಜದಲ್ಲಿ ಸ್ತ್ರೀಯರಿಗೆ ಗೌರವ ಸ್ಥಾನವಿದ್ದರೂ ಬಹುಮಂದಿ ಕುಟುಂಬ ಜೀವನದಲ್ಲಿ ತೃಪ್ತರಾಗಿರುತ್ತಿದ್ದರು. ಸಂಗೀತ ನೃತ್ಯ ಇವರ ವಿಶೇಷ ಕ್ಷೇತ್ರ. ಕತ್ತಿಗುರಾಣಿಗಳನ್ನು ಹಿಡಿದು ಹೋರಾಡುವ, ಮಲ್ಲಯುದ್ಧವಿಶಾರದೆಯಾದ, ವ್ಯವಹಾರ ಕುಶಲೆಯರಾದ ಮತ್ತು ಸಾಹಿತಿಗಳಾದ ಸ್ತ್ರೀಯರು ಕಾಣಬರುತ್ತಿದ್ದರೆಂದು ಶಾಸನಗಳಿಂದ ಮತ್ತು ವಿದೇಶೀ ಪ್ರವಾಸಿಗಳಿಂದ ತಿಳಿದುಬರುತ್ತದೆ. ವೇಶ್ಯಾವೃತ್ತಿ, ದೇವದಾಸಿಪದ್ಧತಿ, ಸತಿಪದ್ಧತಿಗಳು, ಸ್ತ್ರೀಸಮಾಜದಲ್ಲಿದ್ದ ಕೆಲವು ನ್ಯೂನತೆಗಳು. ಜನಸಾಮಾನ್ಯರ ಊಟ ರೊಟ್ಟಿಸಾರುಗಳಿಂದ ಕೂಡಿರುತ್ತಿತ್ತು. ವರ್ತಕರು ಧೋತಿ, ಅಂಗಿ, ಪೇಟ, ಛಾದರಗಳನ್ನೂ ಕಾಲಿಗೆ ಚಪ್ಪಲಿಯನ್ನೂ ಧರಿಸುತ್ತಿದ್ದರೆಂದು ಪುರಂದರದಾಸರು ಒಂದು ಕಡೆ ಹಾಡಿದ್ದಾರೆ. ಸ್ತ್ರೀಯರು ಸೀರೆಯನ್ನುಡುತ್ತಿದ್ದರು. ರಾಜಪುರುಷರೂ ಶ್ರೀಮಂತರೂ ಭವ್ಯಗೃಹಗಳಲ್ಲಿ ವಾಸಿಸುತ್ತಿದ್ದರೆ ಬಡವರ ವಾಸಗೃಹಗಳು ಇಂದಿನ ನಗರಗಳ ಕೊಳಚೆಪ್ರದೇಶಗಳಂತೆ (ಸ್ಲಮ್ಸ್) ಇದ್ದುವೆಂದು ಉತ್ಖನನಗಳಿಂದ ತಿಳಿದುಬಂದಿದೆ. ಬಡವರ ವಸತಿಗಳು ಹುಲ್ಲು ಗುಡಿಸಲುಗಳಾಗಿದ್ದರೂ ಚೊಕ್ಕವಾಗಿದ್ದುವೆಂದು ವಿದೇಶೀ ಪ್ರವಾಸಿಗಳು ತಿಳಿಸಿದ್ದಾರೆ. ಜನಪದ ಸಂಸ್ಕೃತಿಯ ಆಚಾರ ವಿಚಾರಗಳೇ ಸಾಮಾನ್ಯರ ಜೀವನವನ್ನು ನಿಯಂತ್ರಿಸುತ್ತಿದ್ದ ಸೂತ್ರಗಳು. ಜನಪದೀಯರು ಸ್ಥಳೀಯ ಅಥವಾ ನಾಡು ಕಲೆಗಳನ್ನು ಪೋಷಿಸುತ್ತಿದ್ದರು. ವೈಜ್ಞಾನಿಕ ಅರಿವಿನ ಕೊರತೆಯಿಂದ ಮೂಢನಂಬಿಕೆಗಳು ಹಾಸುಹೊಕ್ಕಾಗಿದ್ದವು.

ವ್ಯವಸಾಯ ಜನರ ಮುಖ್ಯವೃತ್ತಿ. ಫಲವತ್ತಾದ ಭೂಮಿ, ಒಳ್ಳೆಯ ಬೆಳೆ ಮತ್ತು ಪುಷ್ಟವಾದ ದನಕರುಗಳ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಬತ್ತ, ಗೋದಿ, ದ್ವಿದಳ ಧಾನ್ಯಗಳು, ಹತ್ತಿ ಮತ್ತು ಎಣ್ಣೆಬೀಜಗಳು ಮುಖ್ಯಬೆಳೆಗಳು. ಪಶುಸಂಗೋಪನೆಯ ಕ್ಷೇತ್ರಗಳು ಸಮೃದ್ಧವಾಗಿದ್ದುವು. ನೀರಾವರಿ ಪದ್ಧತಿ ಬಳಕೆಯಲ್ಲಿದ್ದು, ಕೆರೆ, ಕಾಲುವೆಗಳನ್ನು ಅರಸರು ನಿರ್ಮಿಸುತ್ತಲೂ ದುರಸ್ತಿ ಮಾಡಿಸುತ್ತಲೂ ಇದ್ದರು. ಅಂತರ್ದೇಶೀಯ ಮತ್ತು ವಿದೇಶೀ ವ್ಯಾಪಾರ ಉತ್ತಮಸ್ಥಿತಿಯಲ್ಲಿದ್ದು ಐಶ್ವರ್ಯವೃದ್ಧಿಗೆ ಕಾರಣವಾಗಿತ್ತು. ಅಬ್ದುರ್ ರಜಾಕನ ಹೇಳಿಕೆಯ ಮೇರೆಗೆ ವಿಜಯನಗರಕ್ಕೆ ಸೇರಿದಂತೆ 300 ಬಂದರುಗಳಿದ್ದುವು. ಹಿಂದೂಸಾಗರದ ದ್ವೀಪಗಳು, ಮಲಯ, ಬರ್ಮ, ಚೀನ, ಅರೇಬಿಯ, ಪರ್ಷಿಯ, ಆಫ್ರಿಕ ಮತ್ತು ಪೋರ್ಚುಗಲ್ಲುಗಳೊಂದಿಗೆ ಆನೆ, ಕುದುರೆ, ಮುತ್ತು, ಹವಳ, ತಾಮ್ರ, ರೇಷ್ಮೆ ಮತ್ತಿತರ

ವಿಜಯನಗರ ಸಾಮ್ರಾಜ್ಯ ಲಾಂಛನ

ಬಟ್ಟೆಗಳು ಮುಂತಾದ ವಸ್ತುಗಳಲ್ಲಿ ವ್ಯಾಪಾರ ನಡೆಯುತ್ತಿತ್ತು. ಇವರು ಹಡುಗುಗಳನ್ನು ಸ್ವತಃ ನಿರ್ಮಿಸುತ್ತಿದ್ದರು. ಗಣಿ ಕೈಗಾರಿಕೆ ಉತ್ತಮ ಸ್ಥಿತಿಯಲ್ಲಿತ್ತು. ಕೊಯಮತ್ತೂರು ಮತ್ತು ಗೋವೆ ಬಟ್ಟೆಗಳ ವ್ಯಾಪಾರಕ್ಕೂ ವಿಜಯನಗರ ರತ್ನವ್ಯಾಪಾರಕ್ಕೂ ಭಟ್ಕಳ ಕಬ್ಬಿಣದ ವ್ಯಾಪಾರಕ್ಕೂ ಕೇಂದ್ರಗಳಾಗಿದ್ದುವು. ಆಯಾತಗಳ ಪೈಕಿ ಮುಖ್ಯವಾಗಿದ್ದವೆಂದರೆ ಕುದುರೆಗಳು. ರಾಜ್ಯದುದ್ದಕ್ಕೂ ಉತ್ತಮಸಾರಿಗೆ ವ್ಯವಸ್ಥೆಯಿದ್ದು, ಎಲ್ಲ ಮಾರ್ಗಗಳೂ ವಿಜಯನಗರವನ್ನು ಮುಟ್ಟುತ್ತಿದ್ದುವು. ವಿಜಯನಗರದ ನಾಣ್ಯಪದ್ಧತಿಯಿಂದ ಅದರ ಸಂಪತ್ತಿನ ಪರಿಚಯವಾಗುತ್ತದೆ. ಚಿನ್ನ, ಬೆಳ್ಳಿ ಮತ್ತು ತಾಮ್ರಗಳ ಅನೇಕ ರೀತಿಯ ನಾಣ್ಯಗಳು ಹನುಮಾನ್, ಗರುಡ, ಆನೆ, ಶಿವ-ಪಾರ್ವತಿ, ಲಕ್ಷ್ಮೀನಾರಾಯಣ, ಸರಸ್ವತಿ-ಬ್ರಹ್ಮ, ಲಕ್ಷ್ಮೀ-ನರಸಿಂಹ, ನಂದಿ-ಶೂಲ, ಸೂರ್ಯ, ಚಂದ್ರ, ದುರ್ಗಾ, ವರಾಹ, ಶಂಖ, ಚಕ್ರಗಳ ಚಿಹ್ನೆಗಳನ್ನು ಒಂದು ಕಡೆಯೂ ಸಂಬಂಧಿಸಿದ ಚಕ್ರವರ್ತಿಯ ಅಂಕಿತವನ್ನು ಮತ್ತೊಂದು ಕಡೆಯೂ ಹೊಂದಿರುತ್ತಿದ್ದುವು. ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಈ ನಾಣ್ಯಗಳು ಸಾಮ್ರಾಜ್ಯದ ಸಮೃದ್ಧ ಪರಿಸ್ಥಿತಿಯನ್ನೂ, ವ್ಯಾಪಾರೋದ್ಯಮಗಳಿಗಿದ್ದ ಪ್ರಾಮುಖ್ಯವನ್ನೂ ಸೂಚಿಸುತ್ತವೆ. ಆರವೀಡು ವಂಶದ ನಾಣ್ಯಗಳ ಮೇಲೆ ಶ್ರೀವೆಂಕಟೇಶ್ವರನ ಚಿತ್ರ ಮತ್ತು ಶ್ರೀವೆಂಕಟಪತಿರಾಯನೆಂಬ ಅಂಕಿತಗಳಿವೆ.

ಮುಸಲ್ಮಾನರ ದಾಳಿಗಳಿಂದ 13ನೆಯ ಶತಮಾನದ ಆದಿಭಾಗದಲ್ಲಿ ದಿಗ್ಭ್ರಾಂತವಾಗಿದ್ದ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ಪರಂಪರಾಗತ ಸತ್ತ್ವ ಸ್ಫೂರ್ತಿಗಳನ್ನೊದಗಿಸಿ ಧಾರ್ಮಿಕ ಜಾಗೃತಿಯನ್ನು ಉತ್ತೇಜಿಸಿದ ಕೀರ್ತಿ ಈ ಸಾಮ್ರಾಜ್ಯದ ಸ್ಥಾಪಕರಿಗೆ ಸಲ್ಲುತ್ತದೆ. ಹಿಂದುರಾಯಸುರತ್ರಾಣರೆಂಬ ಬಿರುದು ಧರಿಸಿ, ಸನ್ನಿವೇಶಗಳ ಸುಳಿಯಲ್ಲಿ ಸಿಕ್ಕಿಬಿದ್ದು ತೊಳಲುತ್ತಿದ್ದ ಹಿಂದೂ ಧರ್ಮವನ್ನು, ದೈತ್ಯಬಾಧೆಯಿಂದ ಸಮುದ್ರದಲ್ಲಿ ಮುಳುಗಿ ಹೋಗುತ್ತಿದ್ದ ಭೂಮಿಯನ್ನು ಮೇಲೆತ್ತಿದ ವರಾಹನಂತೆ ರಕ್ಷಿಸುವ ಧ್ಯೇಯದ ಸೂಚಕವಾಗಿ ವರಾಹವನ್ನೇ ಲಾಂಛನವಾಗಿಟ್ಟುಕೊಂಡ ಈ ಅರಸರು ಜೈನ, ಮುಸಲ್ಮಾನ, ಕ್ರೈಸ್ತ ಮುಂತಾದ ಇತರ ಧರ್ಮಗಳಿಗೂ ಆಶ್ರಯ ನೀಡಿದ್ದುದು ಇವರ ಹಿರಿಮೆಯ ದ್ಯೋತಕವಾಗಿದೆ. ಈ ಯುಗದಲ್ಲಿ ಮತೀಯ ರಂಗದಲ್ಲಿ ಕೆಲವು ಸೀಮಾಪುರುಷರು ಕಾಣಿಸಿಕೊಂಡಿದ್ದಾರೆ. ಇವರಲ್ಲಿ ಸಾಮ್ರಾಜ್ಯಸ್ಥಾಪನೆಗೆ ಕಾರಣರೆಂದು ಪರಿಗಣಿತರಾಗಿರುವ ವಿದ್ಯಾರಣ್ಯರು ಮೊದಲಿಗರು. ವಿಜಯನಗರದ ಸ್ಥಾಪನೆಗೆ ಸ್ಫೂರ್ತಿ ನೀಡಿದವರು ಇವರು ಹೌದೇ ಅಲ್ಲವೇ, ಪ್ರಖ್ಯಾತ ವೇದಭಾಷ್ಯಕಾರ ಮಾಧವಾಚಾರ್ಯರೂ ವಿದ್ಯಾರಣ್ಯರೂ ಒಬ್ಬರೇ, ಭಿನ್ನರೇ, ಇವರ ನಿರ್ದಿಷ್ಟ ಕಾಲ ಯಾವುದು- ಎಂಬ ಸಮಸ್ಯೆಗಳು ಉಳಿದುಬಂದಿದ್ದರೂ ಹರಿಹರಸೋದರರ ಮಾರ್ಗದರ್ಶಿಗಳಾದ ವಿದ್ಯಾರಣ್ಯರು ವೇದಭಾಷ್ಯಕಾರರಾದ ಸಾಯಣಾಚಾರ್ಯರ ಸೋದರರೆಂದೂ ಅನಂತರಕಾಲದ ಶೃಂಗೇರಿ ಪೀಠದ ಜಗದ್ಗುರುಗಳೆಂದೂ ಅನೇಕ ವಿದ್ವಾಂಸರು ಒಪ್ಪಿದ್ದಾರೆ. ಇವರು ಅದ್ವೈತಸಿದ್ಧಾಂತದ ಮಹತ್ತ್ವ ಪ್ರತಿಪಾದನೆಯಲ್ಲಿ ಪ್ರಮುಖರು. ವಾಚಸ್ಪತಿ, ಅಮಲಾನಂದ, ಅಪ್ಪಯ್ಯದೀಕ್ಷಿತ ಮತ್ತು ಲಕ್ಷ್ಮೀನರಸಿಂಹ- ಇವರು 13 ರಿಂದ 17ನೆಯ ಶತಕಗಳಲ್ಲಿದ್ದರು. ವಾಚಸ್ಪತಿಗಳು

ಶಂಕರಾಚಾರ್ಯರ ಬ್ರಹ್ಮಸೂತ್ರಭಾಷ್ಯಕ್ಕೆ ಭಾಮತಿಯೆಂಬ ವ್ಯಾಖ್ಯೆಯನ್ನೂ ಅಮಲಾನಂದರು ಭಾಮತಿಗೆ ವೇದಾಂತಕಲ್ಪತರುವೆಂಬ ವಿವೃತಿಯನ್ನೂ ಅಪ್ಪಯ್ಯದೀಕ್ಷಿತರು ಪರಿಮಳದಲ್ಲಿ ವೇದಾಂತ ಕಲ್ಪತರುವಿಗೆ ವಾರ್ತಿಕವನ್ನೂ ಲಕ್ಷ್ಮೀನರಸಿಂಹ ವೇದಾಂತಕಲ್ಪಪತರುವಿಗೆ ಅಭೋಗವೆಂಬ ಟೀಕೆಯನ್ನೂ ರಚಿಸಿ ಭಾಮಿತಿಕಾರ ಪರಂಪರೆಯವರೆಂದು ಹೆಸರಾಗಿದ್ದಾರೆ. ವಿವರಣಾ ಸಂಪ್ರದಾಯ ಪದ್ಧತಿಯಲ್ಲಿ ಪದ್ಮಪಾದರು ಶಂಕರಾಭಾಷ್ಯಕ್ಕೆ ಪಂಚಪಾದಿಕಾ ಎಂಬ ಟೀಕೆ ಬರೆದರೆ, ಪ್ರಕಾಶಾತ್ಮನ್ ತಮ್ಮ ಪಂಚಪಾದಿಕಾ ವಿವರಣಾ ರಚಿಸಿದರು. ಈ ಗ್ರಂಥದ ಮೇಲೆ ವಿದ್ಯಾರಣ್ಯರು ವಿವರಣಾ ಪ್ರಮೇಯ ಸಂಗ್ರಹ ನಿರ್ಮಿಸಿದರು. ವಿದ್ಯಾರಣ್ಯರ ಇತರ ಕೃತಿಗಳು ಪಂಚದಳಿ ಮತ್ತು ಜೀವನ್ಮುಕ್ತಿ ವಿವೇಕ.

ವಿಜಯನಗರ ಕಾಲದಲ್ಲಿ ಶ್ರೀವೈಷ್ಣವಧರ್ಮ ಹೊಸ ಚೈತನ್ಯದಿಂದ ಕೂಡಿ ಜನಪ್ರಿಯತೆ ಗಳಿಸಿತು. ಒಂದು ಕಡೆ ವೇದಸಂಪ್ರದಾಯಕ್ಕೂ ಮತ್ತೊಂದು ಕಡೆ ತಮಿಳು ಆಳ್ವಾರುಗಳಿಂದ ನಿರ್ಮಿತವಾದ ದಿವ್ಯ ಪ್ರಬಂಧಗಳಿಗೂ ಏಕರೀತಿಯಾಗಿ ಮನ್ನಣೆ ನೀಡುವ ಉಭಯವೇದಾಂತ ಸಂಪ್ರದಾಯ ರೂಢಿಗೆ ಬಂತು. ಕೃಷ್ಣದೇವರಾಯನಿಗೆ ಈ ಧರ್ಮದಲ್ಲೂ ತಮಿಳು ಆಳ್ವಾರುಗಳಲ್ಲೂ ವಿಶೇಷ ಶ್ರದ್ಧೆಯಿತ್ತು. ಇದೇ ಕಾಲದಲ್ಲಿದ್ದ, ಕವಿ ತಾರ್ಕಿಕಸಿಂಹರೆಂದು ಬಿರುದು ಗಳಿಸಿದ್ದ, ವೇದಾಂತದೇಶಿಕರು ಶ್ರೀವೈಷ್ಣವ ಸಂಪ್ರದಾಯದ ಪ್ರತಿಪಾದಕರಾದರೂ ದ್ವೈತ ಅದ್ವೈತ ಆಚಾರ್ಯರುಗಳೊಂದಿಗೆ ಮೈತ್ರೀಭಾವದಿಂದ ಇದ್ದರು. ಇವರು ವಿದ್ಯಾರಣ್ಯರ ಪರಮಮಿತ್ರರು. ಶ್ರೀವೈಷ್ಣವರಲ್ಲಿ ವಡಗಲೈ (ಉತ್ತರದ ಶಾಖೆ) ಮತ್ತು ತೆಂಗಲೈ (ದಕ್ಷಿಣದ ಶಾಖೆ) ಎಂಬೆರಡು ಪ್ರಭೇದಗಳು ತಲೆದೋರಿದುವು. ವಡಗಲೈಗಳು ಸಂಸ್ಕೃತ ಅರ್ಥಾತ್ ವೈದಿಕ ಸಂಪ್ರದಾಯಕ್ಕೂ ತೆಂಗಲೈಗಳು ದ್ರಾವಿಡ ಅಥವಾ ತಮಿಳು ಸಂಪ್ರದಾಯಕ್ಕೂ ಪ್ರಾಧಾನ್ಯ ನೀಡುತ್ತಿದ್ದರು. ವೇದಾಂತ ದೇಶಿಕರು ಮತ್ತು ಪಿಳ್ಳೈ ಲೋಕಾಚಾರ್ಯರು ಅನುಕ್ರಮವಾಗಿ ಈ ಸಂಪ್ರದಾಯಗಳ ಪ್ರವರ್ತಕರು. ವಡಗಲೈ ಸಂಪ್ರದಾಯದವರಾಗಿದ್ದ ದೇಶಿಕರು ತಮಗಿಂತ ಹಿರಿಯರಾಗಿದ್ದ ತೆಂಗಲೈ ಸಂಪ್ರದಾಯದ ಪಿಳ್ಳೈ ಲೋಕಾಚಾರ್ಯರೊಡನೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಭಗವದ್ದಯಾಸಂಪಾದನೆಗೆ ಪುರುಷ ಪ್ರಯತ್ನ ಬೇಕೆಂದು ವಡಗಲೈಯವರು ನಂಬಿದರೆ ತೆಂಗಲೈಯವರು ನಿರ್ಹೇತುಕ ದೈವಕೃಪೆಯಲ್ಲಿ ನಂಬಿಕೆ ಇಟ್ಟವರು. ಅನುಕ್ರಮವಾಗಿ ಇವನ್ನು ಮರ್ಕಟ ಕಿಶೋರ ಮತ್ತು ಮಾರ್ಜಾಲಕಿಶೋರ ನ್ಯಾಯಗಳೆಂದು ಹೇಳುತ್ತಾರೆ. ಕಪಿಯ ಮರಿ ಸ್ವಪ್ರಯತ್ನದಿಂದ ತಾಯಿಯನ್ನು ಅಪ್ಪಿಹಿಡಿಯಬೇಕು. ಅದರಂತೆ ಭಗವತ್ಕೃಪೆಯೂ ಪ್ರಯತ್ನಲಭ್ಯವೆಂಬುದು ವಡಗಲೈ ವಾದ. ಆದರೆ ಬೆಕ್ಕಿನಮರಿ ಅಪ್ರಯತ್ನಕವಾಗಿ ತಾಯಿಯ ಹಿಡಿತದಿಂದ ಸ್ಥಳ ಬದಲಾವಣೆ ಪಡೆಯುತ್ತದೆ. ಅಂತೆಯೇ ಅಪ್ರಾರ್ಥಿತವಾಗಿ ಭಕ್ತನ ಉದ್ಧಾರ ಮಾಡುವುದು ಭಗವಂತನಿಗೆ ಸೇರಿದ್ದೆಂಬುದಾಗಿ ತೆಂಗಲೈ ನಂಬಿಕೆ. ಅಳಿಯ ರಾಮರಾಯ ಶ್ರೀವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ. ಈತನ ಆಶ್ರಿತರಾದ ತಾಳ್ಲಪಾಕಂ ತಿರುವೇಂಗಡನಾಥರೂ ಅದೇ ವಂಶದಲ್ಲಿ ಅನಂತರ ಕಾಲದಲ್ಲಿ ಉದಿಸಿದ ಪ್ರಸಿದ್ಧ ವಾಗ್ಗೇಯಕಾರ ಅಣ್ಣಮಾಚಾರ್ಯರೂ ಸದಾಶಿವರಾಯನ ಆಶ್ರಯದಲ್ಲಿದ್ದ ಆಚಾರಯ್ಯನವರೂ ಆವಂಶದ ಅನಂತರ ಕಾಲದ ಲಕ್ಷ್ಮೀಕುಮಾರ ತಾತಾಚಾರ್ಯ ಮತ್ತು ಕೋಟಿ ಕನ್ಯಾದಾನಂ ತಾತಾಚಾರ್ಯರೂ ಶ್ರೀವೈಷ್ಣವಚಾರ್ಯರಲ್ಲಿ ಸ್ಮರಣೀಯರು.

ದ್ವೈತಮತದ ಇತಿಹಾಸದಲ್ಲಿ ಈ ಕಾಲ ಬಹಳ ಮುಖ್ಯವಾದದ್ದು. ಮಧ್ವಾಚಾರ್ಯರ ನೇರಶಿಷ್ಯರಾದ ಪದ್ಮನಾಭತೀರ್ಥ, ನರಹರಿತೀರ್ಥ, ಮಾಧವತೀರ್ಥ ಮತ್ತು ಅಕ್ಷೋಭ್ಯತೀರ್ಥರು ದ್ವೈತ ತತ್ತ್ವಗಳನ್ನು ಪ್ರಚಾರಮಾಡಿದರು. ಅನಂತರ ಅಕ್ಷೋಭ್ಯರ ಶಿಷ್ಯಶ್ರೇಷ್ಠರಾದ ಜಯತೀರ್ಥರು ಆ ಮತ ಪ್ರಸಾರದಲ್ಲಿ ಪ್ರಬಲಪಾತ್ರ ವಹಿಸಿದರು. ವಿದ್ಯಾರಣ್ಯರ ಸಮಕಾಲೀನರಾದ ಜಯತೀರ್ಥರು ಅವರ ಗೌರವಾದಾರಗಳಿಗೆ ಪಾತ್ರರಾದರು. ಮಧ್ವರ ಎಲ್ಲ ಗ್ರಂಥಗಳಿಗೂ ವ್ಯಾಖ್ಯಾನ ರಚಿಸಿದ ಜಯತೀರ್ಥರು ಟೀಕಾಚಾರ್ಯರೆಂದು ಪ್ರಸಿದ್ಧರಾಗಿದ್ದಾರೆ. ಅವರ ನ್ಯಾಯಸುಧಾ ಗ್ರಂಥದಲ್ಲಿ ಷಡ್ದರ್ಶನಗಳ ಸಮಾಲೋಚನೆ ನಡೆಸಿ ದ್ವೈತಮತದ ಹಿರಿಮೆಯನ್ನು ಪ್ರತಿಪಾದಿಸಲಾಗಿದೆ. ಅನಂತರ ಕಾಲದಲ್ಲಿ ಪ್ರಖ್ಯಾತರಾದವರು ವ್ಯಾಸರಾಯರು. ಸಾಳುವ ಮತ್ತು ತುಳುವ ವಂಶದ ನರಸಿಂಹ, ವೀರನರಸಿಂಹ ಕೃಷ್ಣದೇವ ಮತ್ತು ಅಚ್ಯುತರಾಯರಿಗೆ ರಾಜಗುರುಗಳಾಗಿ 1480 ರಿಂದ 1539ರ ವರೆಗೆ ತಮ್ಮ ವಿದ್ವತ್ಪೂರ್ಣವಾದ ವೈಖರಿ, ಗ್ರಂಥರಚನೆ ಮತ್ತು ಶಾಸ್ತ್ರಬೋಧನೆಗಳ ಮೂಲಕ ಅಮರರಾಗಿದ್ದಾರೆ. ದೇಶದ ಎಲ್ಲ ಪ್ರದೇಶಗಳಿಂದಲೂ ಇವರ ಬಳಿಗೆ ಶಿಷ್ಯಕೋಟಿ ಬರುತ್ತಿದ್ದು, ಅವರೊಂದು ಜೀವಂತ ವಿಶ್ವವಿದ್ಯಾನಿಲಯದಂತಿದ್ದರು. ಅವರ ಶಿಷ್ಯರಲ್ಲಿ ಪ್ರಖ್ಯಾತರಾದ ಕೆಲವರು ವಿಜಯೀಂದ್ರತೀರ್ಥ, ವಾದಿರಾಜ, ಪುರಂದರದಾಸ ಮತ್ತು ಕನಕದಾಸರು. ವ್ಯಾಸತೀರ್ಥರ ಕೃತಿಗಳಾದ ನ್ಯಾಯಾಮೃತ, ತರ್ಕತಾಂಡವ ಮತ್ತು ತಾತ್ಪರ್ಯಚಂದ್ರಿಕಾ ಎಂಬ ಮೂರು ಗ್ರಂಥಗಳಲ್ಲಿ ಸಮಸ್ತ ತಾತ್ತ್ವಿಕ ವಿಷಯಗಳೂ ಅಡಕವಾಗಿದ್ದು ಅವರ ಪಾಂಡಿತ್ಯದ ಸ್ಮಾರಕಗಳಾಗಿವೆ. ಮೇಲೆ ಹೇಳಿದ ಎಲ್ಲ ದ್ವೈತಾಚಾರ್ಯರ ಪ್ರಯತ್ನದಿಂದ ಆ ಮತ ಕರ್ನಾಟಕಾದ್ಯಂತವೇ ಅಲ್ಲದೆ ಒರಿಸ್ಸ, ಬಂಗಾಳ, ಗಯಾ, ವಾರಣಾಸಿಗಳಿಗೂ ಹಬ್ಬಿತು. ಬಂಗಾಳದ ಚೈತನ್ಯಪಂಥಕ್ಕೆ ಮಧ್ವಮತವೇ ಮೂಲ. ಚೈತನ್ಯದೇವನಿಗೆ ದೀಕ್ಷೆ ನೀಡಿದ ಕೇಶವಭಾರತೀ, ಮುಖ್ಯಸಹಾಯಕ ನಿತ್ಯಾನಂದ, ಭಕ್ತಿಮಾರ್ಗವನ್ನುಪದೇಶಿಸಿದ ಈಶ್ವರಪುರಿ– ಇವರೆಲ್ಲರೂ ಮಾಧ್ವ ಸಂತರು. ಅನಂತರ ಕಾಲದಲ್ಲಿ ಈ ಮತಪ್ರಸಾರ ಕಾರ್ಯದಲ್ಲಿ ಪ್ರಮುಖವೆಂದರೆ ವಾದಿರಾಜರು (1480–1600). ಅವರ ತೀರ್ಥಪ್ರಬಂಧ ಭಾರತದ ವಿವಿಧ ಪುಣ್ಯಕ್ಷೇತ್ರಗಳ ವರ್ಣನೆಯಿಂದ ಕೂಡಿದೆ. ಉಡುಪಿಯ ಅಷ್ಟಮಠಗಳಲ್ಲೊಂದಾದ ಸೋದೆ ಮಠದ ಅಧಿಪತಿಗಳಿವರು. ಅಲ್ಲಿಯ ಕೃಷ್ಣದೇವಾಲಯದಲ್ಲಿ ಒಂದೊಂದು ಮಠದ ಸ್ವಾಮಿಗಳು ಎರಡೆರಡು ವರ್ಷಗಳ ಕಾಲ ಸರದಿಯ ಪ್ರಕಾರ ಪೂಜೆ ನಡೆಸಬೇಕೆಂಬ ನಿಯಮವನ್ನು ರೂಢಿಗೆ ತಂದವರು ಇವರೇ. ಆ ಪದ್ಧತಿ ಪರ್ಯಾಯವೆಂಬ ಹೆಸರಿನಿಂದ ಇನ್ನೂ ನಡೆದುಬರುತ್ತಿದೆ. ವಿಜಯನಗರ ಸಾಮ್ರಾಜ್ಯಕಾಲ ದ್ವೈತ ಮತದ ಉಚ್ಛ್ರಂಗ ಯುಗವೆಂದರೆ ತಪ್ಪಾಗಲಾರದು.

ವೀರಶೈವಧರ್ಮ ಈ ಕಾಲದಲ್ಲಿ ನೆರೆಹೊರೆಯ ಪ್ರಾಂತ್ಯಗಳಾದ ಆಂಧ್ರ ಮತ್ತು ತಮಿಳು ದೇಶಗಳಿಗೂ ಹಬ್ಬಿತು. ವಿಜಯನಗರ ಕಾಲದ ಧರ್ಮಪ್ರಚಾರಶ್ರದ್ಧೆಯ ಫಲವಿದು. ವೀರಶೈವ ಮತದ ಜನ್ಮಪ್ರದೇಶವಾದ ಕಲ್ಯಾಣಪ್ರಾಂತ್ಯ ಮುಸ್ಲಿಮರ ವಶವಾದುದೂ ಇದಕ್ಕೆ ದ್ಯೋತಕವಾಯಿತು. ಆಂಧ್ರದಲ್ಲಿ ಕ್ರಮೇಣ ಈ ಧರ್ಮ ಪ್ರವರ್ಧಮಾನಕ್ಕೆ ಬಂತು. ವೀರಶೈವತತ್ತ್ವವೇತ್ತರು ಈ ಮತದ ತತ್ತ್ವಗಳನ್ನು ಸಮನ್ವಯಗೊಳಿಸಿದರು. ಇಮ್ಮಡಿ ದೇವರಾಯ ಈ ಮತಕ್ಕೆ ವಿಶೇಷ ಪ್ರೋತ್ಸಾಹ ನೀಡಿದ. ವೀರಶೈವ ಜ್ಞಾನಿಗಳಲ್ಲಿ ಶ್ರೀಪತಿ ಪಂಡಿತ (ಸು.1400) ಆಂಧ್ರದ ವಿಜಯವಾಡ ಪ್ರಾಂತ್ಯದವನು. ಈತ ಬ್ರಹ್ಮಸೂತ್ರಗಳಿಗೆ ಭಾಷ್ಯ ರಚಿಸಿ ವೀರಶೈವತತ್ತ್ವಗಳಿಗೆ ಅವನ್ನು ಅಳವಡಿಸಿಕೊಂಡಿದ್ದಾನೆ. ಕಣ್ಣಿಗೆ ಕಾಣುವ ಜಗತ್ತು ಸತ್ಯ, ಶಾಶ್ವತ ; ಎಲ್ಲವೂ ಪರಮಾತ್ಮನ ಶಕ್ತಿಯಲ್ಲಿ ಅಡಕವಾಗಿವೆ ; ಏಕತ್ವ, ಅನೇಕತ್ವಗಳು ಆತನ ಎರಡು ಮುಖಗಳು– ಎಂದು ಈತ ತನ್ನ ಶ್ರೀಕರ ಭಾಷ್ಯದಲ್ಲಿ ಪ್ರತಿಪಾದಿಸಿದ್ದಾನೆ. ಶಿವ–ಜೀವರದು ಪೂಜ್ಯಪೂಜಕ ಸಂಬಂಧ ; ಶಿವ ಸರ್ವವ್ಯಾಪಕ, ಸರ್ವಜ್ಞ ; ಜೀವ ಮಿತಜ್ಞಾನಿ ; ಶಿವಶಕ್ತಿಯರ ನಿರಂತರ ಮಿಲನದಿಂದ ವೀರಶೈವ ಮತಕ್ಕೆ ಶಕ್ತಿವಿಶಿಷ್ಟಾದ್ವೈತವೆಂದು ಹೆಸರು ಬಂದಿದೆ. ಲಿಂಗವೆಂಬುದು ಶಿವಶಕ್ತಿಯರ ಸತ್ ಸ್ವರೂಪ; ಪರಶಿವನೇ ಸೃಷ್ಟಿಗೆ ಮೂಲ– ಇವು ಈತ ನಿರೂಪಿಸಿದ ತತ್ತ್ವಗಳಲ್ಲಿ ಮುಖ್ಯವಾದವು.

ಜೈನಧರ್ಮೀಯರಿಗೂ ಆ ಕಾಲದಲ್ಲಿ ರಾಜಾಶ್ರಯ ದೊರಕಿತ್ತೆಂಬುದಕ್ಕೆ ಬುಕ್ಕರಾಯನ 1368ರ ಶಾಸನ ಸಾಕ್ಷ್ಯವೀಯುತ್ತದೆ. ಜೈನ–ಶ್ರೀವೈಷ್ಣವ ನಡುವಣ ವಿವಾದವನ್ನು ಬಗೆಹರಿಸಿ ಪರಸ್ಪರ ಮೈತ್ರಿಯನ್ನು ಏರ್ಪಡಿಸಿದ ಪ್ರಸಂಗವನ್ನು ಈ ಶಾಸನದಲ್ಲಿ ಹೇಳಲಾಗಿದೆ. ರಾಜಾಶ್ರಯದಲ್ಲಿದ್ದ ಇರುಗಪ್ಪ ದಂಡನಾಥ, ಮಧುರ, ನೇಮಿಚಂದ್ರ ಮತ್ತು ವಿದ್ಯಾನಂದರು ಕವಿಗಳು; ಕಳಸ–ಕಾರ್ಕಳದ ಭೈರರಸರು, ಅಜಿಲರು, ಚೌಟರು ಜೈನಧರ್ಮೀಯರು. 1ನೆಯ ದೇವರಾಯನ ರಾಣಿ ಭೀಮಾದೇವಿ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯಳಾಗಿದ್ದು ಶ್ರವಣಬೆಳಗೊಳದ ಮಾಂಗಾಯಿ ಬಸದಿಯಲ್ಲಿ ಶಾಂತಿನಾಥನ ವಿಗ್ರಹ ಸ್ಥಾಪಿಸಿದಳು; ಇಮ್ಮಡಿ ದೇವರಾಯನ ಕಾಲದಲ್ಲಿ ರಾಜಕುಲದವರೂ ಸಾಮಂತರೂ ಜೈನಧರ್ಮಕ್ಕೆ ಆಶ್ರಯ ನೀಡಿದ್ದರು.

ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಇದೊಂದು ಉಜ್ವಲಕಾಲ. ದೇಶದ ಇತರ ಭಾಗಗಳಲ್ಲಿ ಅಶಾಂತಿಯಿದ್ದುದರಿಂದ ಕವಿಗಳೂ ಪಂಡಿತರೂ ವಿಜಯನಗರದ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು. ರಾಜರೂ ಸಾಮಂತರೂ ಶ್ರೀಮಂತರೂ ವಿದ್ವಜ್ಜನರಿಗೆ ಪ್ರೋತ್ಸಾಹ ನೀಡುತ್ತಿದ್ದರು. ವಿಪುಲವಾದ ಸಾಹಿತ್ಯ ನಿರ್ಮಾಣ ಅವಿಚ್ಛಿನ್ನವಾಗಿ ನಡೆಯುತ್ತಿತ್ತು. ಆದರೂ ಸೃಷ್ಟ್ಯಾತ್ಮಕ ಸಾಹಿತ್ಯ ದೃಷ್ಟಿಯಿಂದ ಈ ಕಾಲದ ಕೊಡುಗೆ ಹೆಚ್ಚಿಲ್ಲ. ವಿದ್ವಾಂಸರಿಗೆ ಮಾತ್ರ ರುಚಿಸುವ ಮತಸಂಬಂಧವಾದ ಗ್ರಂಥಗಳೂ ಪ್ರಮಾಣ ಗ್ರಂಥಗಳೂ ಬಹುವಾಗಿ ರಚಿತವಾದುವು. ವ್ಯಾಖ್ಯಾನಗಳೂ ಗೌಣಗ್ರಂಥಗಳೂ ಹೆಚ್ಚು. ಸ್ವತಂತ್ರ ಕೃತಿಗಳು ವಿರಳ. ಇವುಗಳಲ್ಲಿ ಅನೇಕ ಗ್ರಂಥಗಳು ಮಾಧವೀಯ ಎಂದು ಹೆಸರಾಗಿವೆ. ವಿಜಯನಗರದ ಪ್ರಾರಂಭಕಾಲದಲ್ಲಿ ಮಾಧವ ಸಾಯಣರೆಂಬ ಸೋದರರಾದ ಉತ್ತಮ ವಿದ್ವಾಂಸರಿದ್ದುದು ತಿಳಿದ ಸಂಗತಿ. ಇವರಲ್ಲಿ ಹಿರಿಯರಾದ ಮಾಧವಾಚಾರ್ಯರಿಂದ ನಿರ್ಮಿತವಾದ ಅನೇಕ ಕೃತಿಗಳು ಕಂಡುಬರುತ್ತವೆ. ಇವರೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ನೆರವು ನೀಡಿದ, ಅನಂತರ ರಾಜಗುರುಗಳಾದ, ವಿದ್ಯಾರಣ್ಯರೆಂದು ಇತ್ತೀಚಿನವರೆಗೂ ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿತ್ತು. ವಿದ್ಯಾರಣ್ಯರು ಅನಂತರಕಾಲದವರೆಂದೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಸಹಾಯಮಾಡಿ ರಾಜಗುರುಗಳಾದವರು ಕ್ರಿಯಾಶಕ್ತಿಯೆಂಬ ಶೈವ ಗುರುಗಳೆಂದೂ ಈಚೆಗೆ ಒಂದು ವಾದವಿದೆ. ಇದು ಹೇಗಾದರೂ ಇರಲಿ. ಮಾಧವೀಯವೆಂದು ಕರೆಯಲಾಗುವ ಗ್ರಂಥಗಳು ಅನೇಕವಿದ್ದು ಅವೆಲ್ಲವನ್ನೂ ಒಬ್ಬರೇ ರಚಿಸಿರುವುದು ಅಸಾಧ್ಯ. ವಿದ್ವಜ್ಜನರಿಗೆ ಆಶ್ರಯದಾತರಾಗಿದ್ದ ವಿದ್ಯಾರಣ್ಯ ಅಥವಾ ಮಾಧವರ ಹೆಸರಿನಲ್ಲಿ ಆಶ್ರಿತವಿದ್ವಾಂಸರು ಕೃತಿರಚನೆ ಮಾಡಿರಬಹುದು. ಸಮಕಾಲೀನ ಸಂಸ್ಕೃತ ಸಾಹಿತ್ಯದ ಬೃಹತ್ಕೃತಿ ವೇದಾರ್ಥಪ್ರಕಾಶ. ಸಾಯಣರು ಮಾಧವರ ನೇತೃತ್ವದಲ್ಲಿ ಎಲ್ಲ ವಿದ್ವಾಂಸರ ನೆರವಿನಿಂದ ಇದನ್ನು ರಚಿಸಿರಬೇಕು. ಈ ವಿದ್ವಾಂಸರಲ್ಲಿ ಪಂಚಾಗ್ನಿ ಮಾಧವ, ನಾರಾಯಣ ವಾಜಪೇಯಿ, ವಾಮನಭಟ್ಟ, ನರಹರಿಸೋಮಯಾಜಿ, ಫಂಡರಿ ದೀಕ್ಷಿತ ಮತ್ತು ನಾಗಾಭರಣ– ಇವರ

ಹೆಸರುಗಳು ತಿಳಿದುಬಂದಿವೆ. ಸಾಮಾನ್ಯರಿಗೂ ತಿಳಿಯುವಂತೆ ಸಮಸ್ತ ವೇದಗಳಿಗೂ ಮೊದಲಬಾರಿಗೆ ವ್ಯಾಖ್ಯಾನ ನಿರ್ಮಿಸಿ, ಆ ಸಂಸ್ಕೃತಿಯನ್ನು ಅಚ್ಚಳಿಯದಂತೆ ನಿಲ್ಲಿಸಿದ ಕೀರ್ತಿ ಇವರಿಗೆ ಸೇರಿದ್ದು.

ಕೃಷ್ಣದೇವರಾಯ ಪ್ರೌಢಪಂಡಿತನಾಗಿದ್ದು ಸಕಲ ಕಲಾಭೋಜರಾಜನೆಂದು ಕರೆಸಿಕೊಳ್ಳುತ್ತಿದ್ದ. ಈತ ಸಂಸ್ಕೃತದಲ್ಲಿ ಮದಾಲಸಚರಿತ ಸತ್ಯವಧೂಸಾಂತ್ವನ, ಸಕಲಕಥಾಸಾರಸಂಗ್ರಹ, ರಸಮಂಜರಿ ಮತ್ತು ಜ್ಞಾನಚಿಂತಾಮಣಿ ಎಂಬ ಗ್ರಂಥಗಳನ್ನು ತೆಲುಗಿನಲ್ಲಿ ಅಮುಕ್ತಮಾಲ್ಯದವೆಂಬ ಕೃತಿಯನ್ನು ರಚಿಸಿದ. ಈತನ ಆಸ್ಥಾನದ ಡಿಂಡಿಮ ಸಭಾಪತಿ, ತೆಲುಗು ಕವಿ ಪೆದ್ದನ, ಲೊಲ್ಲಲಕ್ಷ್ಮೀಧರ ಮತ್ತು ದಿವಾಕರ ಇವರು ಹೆಸರಾಂತ ಸಾಹಿತಿಗಳು. ದಿವಾಕರನ ಭಾರತಾಮೃತ ಉತ್ತಮ ಕಾವ್ಯ. ಕವಿಯಿತ್ರಿಯರಲ್ಲಿ ಅಭಿರಾಮ ಕಾಮಾಕ್ಷಿ ಮತ್ತು ತಿರುಮಲಾಂಬಾ–ಇವರು ಪ್ರಸಿದ್ಧರು.

ಕನ್ನಡ ಸಾಹಿತ್ಯರಂಗದಲ್ಲಿ ಈ ಮುನ್ನ ಬಳಕೆಗೆ ಬಂದಿದ್ದ ದೇಸಿಶೈಲಿ ಈ ಕಾಲದಲ್ಲಿ ಬೆಳೆಯಿತು. ಹಳಗನ್ನಡ ಮರೆಯಾಗಿ, ಆಗಿನ ಆಡುನುಡಿಯಲ್ಲಿ ಸಾಹಿತ್ಯ ರಚನೆ ಸಾಮಾನ್ಯವಾಯಿತು. ಶಿವ ಮತ್ತು ವಿಷ್ಣುಪರವಾದ ಇಬ್ಬಗೆಯ ಭಕ್ತಿಪಂಥಗಳು ಪ್ರಬಲವಾಗಿ, ಭಕ್ತಿ ಸಾಹಿತ್ಯ ಸೃಷ್ಟಿ ಅಪಾರವಾಗಿ ನಡೆಯಿತು. ಭಕ್ತಿಗೀತೆಗಳು ಎಲ್ಲ ಮತದವರಿಂದಲೂ ರಚಿತವಾಗಿ ಜನಸಾಮಾನ್ಯರಲ್ಲಿ ಪ್ರಚಾರಕ್ಕೆ ಬಂದುವು. ಈ ಕಾಲದ ವಿಪುಲವಾದ ಸಾಹಿತ್ಯಸಂಪತ್ತನ್ನು ಪ್ರಮುಖವಾಗಿ ಜೈನ ಮಹಾಕಾವ್ಯಗಳು ಮತ್ತು ಕಥೆಗಳು ; ಶೈವಸಂತರಾದ ಅರವತ್ತುಮೂವರ ಇತಿಹಾಸ ಮತ್ತು ಶಿವಪುರಾಣಗಳು ; ಬ್ರಾಹ್ಮಣ ಮಹಾಪುರಾಣಗಳು; ಇತರ ಐತಿಹ್ಯಗಳು – ಎಂದು ವಿಭಾಗಿಸಬಹುದಾಗಿ ವಿದ್ವಾಂಸರೊಬ್ಬರು ಸೂಚಿಸಿದ್ದಾರೆ.

ಈ ಕಾಲದಲ್ಲಿ ವೀರಶೈವಸಾಹಿತ್ಯದ ಹೊಸಮಾರ್ಗವೊಂದು ಕಂಡುಬರುತ್ತದೆ. ವೀರಶೈವರಿಗೆ ನೇರ ರಾಜಾಶ್ರಯ ತಪ್ಪಿತ್ತು. ಹಿಂದೂ ಸಂಸ್ಕೃತಿಯ ಪುನರುಜ್ಜೀವನದ ಕಾಲದಲ್ಲಿ ಪ್ರಾಬಲ್ಯಗಳಿಸಿದ ವೈದಿಕ ಸಂಪ್ರದಾಯದ ಪ್ರಾಬಲ್ಯದೆದುರಿನಲ್ಲಿ ಜನಪ್ರಿಯತೆ ಗಳಿಸಲು ಇವರು ದೇಶದಾದ್ಯಂತ ಹರಡಿ, ಮಠಗಳನ್ನೂ ದೇವಾಲಯಗಳನ್ನೂ ನಿರ್ಮಿಸಲಾರಂಭಿಸಿ, ಧರ್ಮತತ್ತ್ವಗಳ ಸಂಗ್ರಹ ಮತ್ತು ಕ್ರೋಡೀಕರಣ ರೂಪದ ಸಾಹಿತ್ಯ ನಿರ್ಮಾಣ ಮಾಡಿದರು.

**ಕೆಳದಿ, ಮೈಸೂರು:** ವಿಜಯನಗರದ ಸಾಮ್ರಾಜ್ಯಾನಂತರದ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಅನೇಕ ಸಣ್ಣಪುಟ್ಟ ಮನೆತನಗಳು ಅಧಿಕಾರ ನಡೆಸಿದರೂ, ಅವುಗಳಲ್ಲಿ ಮುಖ್ಯವಾದವು ಕೆಳದಿ ಮತ್ತು ಮೈಸೂರು ರಾಜ್ಯಗಳು. ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡದ ಬಹುಭಾಗ, ಗುತ್ತಿ ಮತ್ತು ಆರಗ ಪ್ರದೇಶಗಳನ್ನೊಳಗೊಂಡಿದ್ದ, ಇಕ್ಕೇರಿ ಮತ್ತು ಬಿದನೂರು ಎಂಬ ಹೆಸರುಗಳನ್ನೂ ಪಡೆದಿದ್ದ, ಕೆಳದಿಯ ರಾಜ್ಯ 15ನೆಯ ಶತಮಾನದ ಅಂತ್ಯದಲ್ಲಿ ಚೌಡಪ್ಪನಿಂದ ಪ್ರಾರಂಭವಾಯಿತು. ಈ ರಾಜ್ಯದ ಸದಾಶಿವನಾಯಕ ಕೃಷ್ಣದೇವರಾಯನ ಪ್ರಮುಖ ದಳವಾಯಿಗಳಲ್ಲೊಬ್ಬನಾಗಿದ್ದ. ವೆಂಕಟಪ್ಪನಾಯಕ (1582–1629) ವಿಜಯನಗರದ ಪತನಾನಂತರ ಸ್ವತಂತ್ರವಾಗಿ ಬಿಜಾಪುರದ ದಳಪತಿ ರಣದುಲ್ಲಾಖಾನನನ್ನೂ ಗೇರುಸೊಪ್ಪೆಯ ರಾಣಿಯನ್ನೂ ಬಗ್ಗುಬಡಿದ. ಕೆಳದಿ ರಾಜ್ಯ ಇವನ ಕಾಲದಲ್ಲಿ ಪ್ರಭಾವಯುತವಾಗಿದ್ದು ಮಲಬಾರಿನವರೆಗೂ ಹಬ್ಬಿತ್ತು. ಶಿವಪ್ಪನಾಯಕನ ಕಾಲದಲ್ಲಿ (1645–1660) ರಾಜ್ಯಾಡಳಿತವನ್ನು ಉತ್ತಮಗೊಳಿಸಲಾಗಿದ್ದು ಶಿಸ್ತು ಎಂಬ ಭೂಗಂದಾಯಪದ್ಧತಿ ಜಾರಿಗೆ ಬಂತು. ಈತ ವಿಜಯನಗರದರಸು ಶ್ರೀರಂಗರಾಯನಿಗೆ ಆಶ್ರಯವಿತ್ತು, ಬೇಲೂರು ಮತ್ತು ಸಕ್ಕರೆಪಟ್ಟಣಗಳ ಆಡಳಿತ ವಹಿಸಿಕೊಟ್ಟ. ಕ್ರಮೇಣ ಶಿಥಿಲವಾಗುತ್ತಿದ್ದ ರಾಜ್ಯದಲ್ಲಿ ಸೋಮಶೇಖರನಾಯಕನ ವಿಧವೆ ಚೆನ್ನಮ್ಮಾಜಿ (1671–1697) ವೀರರಾಣಿಯಾಗಿದ್ದು ಮೊಗಲರಿಂದ ತಪ್ಪಿಸಿಕೊಂಡು ಓಡಿಬಂದ ಮರಾಠರ ದೊರೆ ರಾಜಾರಾಮನಿಗೆ ಆಶ್ರಯ ನೀಡಿ ಮರಾಠರ ಅಧಿಕಾರ ಉಳಿಯಲು ಕಾರಣಳಾದಳು. ಅನಂತರ 2ನೆಯ ಸೋಮಶೇಖರನಾಯಕ ಮುಸ್ಲಿಮರನ್ನು ಸೋಲಸಿದನಾದರೂ ಅವನತಿಮುಖವಾಗಿದ್ದ ಈ ರಾಜ್ಯವನ್ನು 1763ರಲ್ಲಿ ಮೈಸೂರಿನ ಹೈದರ್ ಅಲಿ ವೀರಮ್ಮಾಜಿಯಿಂದ ವಶಪಡಿಸಿಕೊಂಡ.

1499ರಿಂದ 1763ರವರೆಗೂ ಕರ್ನಾಟಕದ ಕೇಂದ್ರಸ್ಥಾನವೆಂಬಂತೆ ಕೆಳದಿ ಮೆರೆಯಿತಾದರೂ ಆ ಗೌರವಕ್ಕೆ ನಿಜವಾಗಿ ಅರ್ಹತೆ ಪಡೆದ ಮೈಸೂರು ರಾಜ್ಯದ ತಳಹದಿಯನ್ನು 1610ರಲ್ಲಿ ರಾಜ ಒಡೆಯರು ಹಾಕಿದ್ದರು. 1578ರಿಂದ 1617ರವರೆಗೆ ಮೈಸೂರಿನ ರಾಜರಾಗಿದ್ದ ಇವರು ಶ್ರೀ ಕೃಷ್ಣನ ವಂಶವೆಂದು ಹೆಸರಾದ ಯಾದವ ಕುಲಕ್ಕೆ ಸೇರಿದವರು. ಇವರ ಮೂಲಪುರುಷರಾದ ಯದುರಾಜರು ದ್ವಾರಕೆಯಿಂದ ಕರ್ನಾಟಕಕ್ಕೆ 1399ರಲ್ಲಿ ಬಂದು ರಾಜ್ಯಸ್ಥಾಪನೆ ಮಾಡಿದರೆಂದೂ ಈ ವಂಶದ ಬೆಟ್ಟದ ಚಾಮರಾಜ ಒಡೆಯರು ಮೈಸೂರನ್ನು ರಾಜಧಾನಿಯನ್ನಾಗಿ ಮಾಡಿದರೆಂದೂ ಹೇಳಲಾಗಿದೆ. ರಾಜ ಒಡೆಯರು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಶ್ರೀರಂಗಪಟ್ಟಣದ ಪ್ರತಿನಿಧಿಯಾದ ತಿರುಮಲರಾಯನ ಅಧೀನರಾಗಿದ್ದರು. ಆದರೆ ಚಕ್ರವರ್ತಿಯ ತಿರಸ್ಕಾರಕ್ಕೆ ಪಾತ್ರನಾಗಿದ್ದ ತಿರುಮಲನನ್ನು ಶ್ರೀರಂಗಪಟ್ಟಣದಿಂದ ಓಡಿಸಿ 1610ರಲ್ಲಿ ಚಕ್ರವರ್ತಿಯ ಒಪ್ಪಿಗೆ ಪಡೆದು ತಾವೇ ಶ್ರೀರಂಗಪಟ್ಟಣದ ಗದ್ದುಗೆಯನ್ನೇರಿ ಆಧುನಿಕ ಮೈಸೂರಿನ ಸ್ಥಾಪಕರಾದರು. ಮೈಸೂರರಸರು ಕೆಲಕಾಲ ವಿಜಯನಗರ ಸಾಮಂತರೆಂಬ ಅಭಿಧಾನ ಪಡೆದಿದ್ದು ಕ್ರಮೇಣ ಸ್ವತಂತ್ರರಾದರು. ಮೈಸೂರಿನಲ್ಲಿ ವೈಶಿಷ್ಟ್ಯಪೂರ್ಣ ನವರಾತ್ರಿ ಉತ್ಸವ ಪ್ರಾರಂಭಿಸಿದವರು




ಇವರೇ. ಅನಂತರದ ಪ್ರಮುಖ ದೊರೆ ಕಂಠೀರವ ನರಸರಾಜ ಒಡೆಯರು (1638–59) ಸುಪ್ರಸಿದ್ಧ ಮಲ್ಲರಾಗಿದ್ದು ಬಿಜಾಪುರದ ದಳಪತಿ ರಣದುಲ್ಲಾಖಾನನನ್ನು ಸೋಲಿಸಿದುದಲದೆ ರಾಜ್ಯದ ಆರ್ಥಿಕ ಪ್ರಗತಿಯನ್ನು ಸಾಧಿಸಿದರು. ತರುವಾಯ ಚಿಕ್ಕದೇವರಾಜ ಒಡೆಯರು (1673–1704) ದಕ್ಷರಾಗಿದ್ದು ರಾಜ್ಯ ವಿಸ್ತರಿಸಿದರು. ಇವರು ಶಿವಾಜಿಯನ್ನು ಕೂಡ ಸೋಲಿಸಿದ್ದರು. ಇವರು ಮರಾಠರನ್ನು ಹಲವು ಬಾರಿ ಸೋಲಿಸಿ ಅಪ್ರತಿಮ ವೀರನೆಂಬ ಬಿರುದು ಪಡೆದರು. ರಾಜ್ಯಾಡಳಿತ ಪದ್ಧತಿಯನ್ನು ಸುಧಾರಿಸಿ ಅಂಚೆ ವ್ಯವಸ್ಥೆ ಏರ್ಪಡಿಸಿದರು. ಔರಂಗಜೇಬನೂ ಇವರ ಅಧಿಕಾರಕ್ಕೆ ಮನ್ನಣೆ ನೀಡಬೇಕಾಯಿತು. ಸ್ವತಃ ವಿದ್ವಾಂಸರಾದ ಇವರು ಅನೇಕ ಕವಿ ವಿದ್ವಾಂಸರಿಗೆ ಆಶ್ರಯ ನೀಡಿದ್ದರು. ಅನಂತರದ ದೊರೆಗಳಾದ ದೊಡ್ಡ ಕೃಷ್ಣರಾಜ ಮತ್ತು ಚಾಮರಾಜ ಮತ್ತು ಚಿಕ್ಕ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿನ ದುರ್ದೆಶೆ ಪ್ರಾರಂಭವಾಗಿ ಇದನ್ನು ತಡೆಗಟ್ಟಲು ಮುಸ್ಲಿಂ ಸರದಾರ ಹೈದರನ ಪ್ರವೇಶವಾಗಬೇಕಾಯಿತು. ಹೈದರ್ ಅಲಿ (1761–1782) ಮತ್ತು ಅವನ ಮಗ ಟಿಪ್ಪು ಸುಲ್ತಾನರ (1782–1799) ಕಾಲದಲ್ಲಿ ಮೈಸೂರು ರಾಜ್ಯದ ಗಡಿ ವಿಸ್ತರಣೆ ಹೊಂದಿ ಕರ್ನಾಟಕದ ಚೈತನ್ಯಕ್ಕೆ ಹೊಸ ಮೆರುಗು ದೊರೆಯಿತು. ತನ್ನ ಸಾಹಸ ಯುಕ್ತಿಗಳಿಂದ ಹೈದರ್ ರಾಜವಂಶಕ್ಕೆ ಸೇರಿದ ಅರಸರನ್ನು ಹೆಸರಿಗೆ ಸಿಂಹಾಸನದಲ್ಲಿ ಕೂರಿಸಿದ್ದು ಸರ್ವಾಧಿಕಾರಿಯಾಗಿದ್ದರೂ ರಾಜ್ಯ ವಿಸ್ತಾರಮಾಡಿ ಹಿಂದೂ ಮುಸ್ಲಿಂ ಧರ್ಮಗಳೆರಡನ್ನೂ ಪ್ರೋತ್ಸಾಹಿಸುತ್ತ ಬಂದ. ಅವನ ಮಗ ಟಿಪ್ಪು ತಾನೇ ಗದ್ದುಗೆಯನ್ನೇರಿದರೂ ರಾಜ್ಯದ ಹಿತಸಾಧನೆಗೆ ಅಮೋಘವಾಗಿ ಶ್ರಮಿಸಿದ. ಬ್ರಿಟಿಷರನ್ನು ಸೋಲಿಸಿದಲ್ಲದೆ ದೇಶದ ಹಿತಸಾಧನೆಯಾಗಲಾರದೆಂದು ತಿಳಿದು, ಈ ಉದ್ದೇಶ ಸಾಧನೆಗಾಗಿ ಈತ ದಕ್ಷಿಣ ಭಾರತದ ಹಲವು ಅರಸರ ಮತ್ತು ಫ್ರೆಂಚ್ ಚಕ್ರವರ್ತಿ ನೆಪೋಲಿಯನನ ಸ್ನೇಹ ಗಳಿಸಿದರೂ ಅಂತಿಮವಾಗಿ 1799ರಲ್ಲಿ ಬ್ರಿಟಿಷರಿಂದ ಸೋತು ಮಡಿಯಬೇಕಾಯಿತು. ಈತ ಮೈಸೂರಿನ ಹುಲಿ ಎಂದು ಪ್ರಸಿದ್ಧನಾಗಿದ್ದ. ವಿಜಯಿಗಳಾದ ಬ್ರಿಟಿಷರು ಟಿಪ್ಪುವಿನ ಆಡಳಿತಕ್ಕೊಳಪಟ್ಟಿದ್ದ ರಾಜ್ಯವನ್ನು ತುಂಡರಿಸಿ, ಅದರಲ್ಲೊಂದು ಭಾಗದ ಅಧಿಕಾರವನ್ನು ಮೈಸೂರು ಅರಸುಮನೆತನಕ್ಕೆ ಮತ್ತೆ ವಹಿಸಿಕೊಟ್ಟು ಮುಮ್ಮಡಿ ಕೃಷ್ಣರಾಜರಿಗೆ ಪಟ್ಟ ಕಟ್ಟಿದರು. ಆ ಕಾಲದಲ್ಲಿ ರಾಜ್ಯ ಆರ್ಥಿಕ ದುಸ್ಥಿತಿಗೀಡಾಯಿತೆಂಬ ಕಾರಣದಿಂದ 1831 ರಿಂದ 1881ರವರೆಗೆ ಅಧಿಕಾರ ಬ್ರಿಟಿಷ್ ಪ್ರತಿನಿಧಿಯ ಆಡಳಿತಕ್ಕೆ ಒಳಪಟ್ಟಿತ್ತು. 1881ರಲ್ಲಿ ಮೈಸೂರು ರಾಜವಂಶದ ಚಾಮರಾಜೇಂದ್ರ ಒಡೆಯರಿಗೆ ವಹಿಸಿಕೊಡಲಾಯಿತು. ಈ ಕಾಲದಲ್ಲಿ ದಿವಾನರುಗಳು

ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಅವರ ಅನಂತರ 1902ರಲ್ಲಿ ಸಿಂಹಾಸನವನ್ನೇರಿದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರು ಮೈಸೂರಿನ ಸರ್ವತೋಮುಖ ಪ್ರಗತಿಗೆ ಶ್ರಮಿಸಿ ಅದಕ್ಕೆ ಮಾದರಿ ಮೈಸೂರೆಂಬ ಅಭಿಧಾನ ದೊರಕಿಸಿಕೊಟ್ಟರು. ಅವರ ಮರಣಾನಂತರ 1940ರಲ್ಲಿ ಸಿಂಹಾಸನಸ್ಥರಾದ ಜಯಚಾಮರಾಜೇಂದ್ರ ಒಡೆಯರ ಕಾಲದಲ್ಲಿ, ಭಾರತದ ಸ್ವಾತಂತ್ರ್ಯಾನಂತರ, 1947ರಲ್ಲಿ, ಮೈಸೂರು ಸಂಸ್ಥಾನದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪಿತವಾಯಿತು. ಅನಂತರ ಭಾರತದ ರಾಜ್ಯಪುನರ್ವಿಂಗಡಣೆಯಾದಾಗ, 1956ರ ನವೆಂಬರ್ ಒಂದರಂದು. ಮೈಸೂರು ರಾಜ್ಯವೆಂಬ ಅಭಿಧಾನದಲ್ಲಿ ಏಕೀಕೃತ ಕರ್ನಾಟಕ ರಾಜ್ಯ ಸ್ಥಾಪನೆಯಾಯಿತು. **(ನೋಡಿ– ಕರ್ನಾಟಕ ಏಕೀಕರಣ)**

ಮೈಸೂರು ಒಡೆಯರ ಕಾಲದಲ್ಲಿ ರಾಜ್ಯಭಾರವನ್ನು ಪುರಾತನ ರಾಜನೀತಿ ಮತ್ತು ಧರ್ಮಶಾಸ್ತ್ರ ಗ್ರಂಥಗಳಿಗನುಸಾರವಾಗಿ ನಡೆಸುತ್ತಿದ್ದರು. ರಾಜ್ಯಾಧಿಕಾರ ಸಾಮಾನ್ಯವಾಗಿ ಹಿರಿಯ ರಾಜಕುಮಾರನಿಗೆ ದೊರೆಯುತ್ತಿದ್ದರೂ ಸಂಕಟಕಾಲದಲ್ಲಿ ಶಕ್ತರಾದ ಇತರ ರಾಜಕುಮಾರರಲ್ಲೊಬ್ಬನಿಗಾಗಲಿ ರಾಜವಂಶಕ್ಕೆ ಸೇರಿದ ಬೇರೆಯವರಿಗಾಗಲಿ ಸಂದ ನಿದರ್ಶನಗಳೂ ಇವೆ. ಬೆಟ್ಟದ ಚಾಮರಾಜರಿಗೆ ಸಲ್ಲಬೇಕಾದ ಪದವಿ, ಪರಿಸ್ಥಿತಿಯ ದೃಷ್ಟಿಯಿಂದ ಶಕ್ತರಾದ ಅವರ ತಮ್ಮನಾದ ರಾಜ ಒಡೆಯರಿಗೆ ದೊರಕಿತು. ಮಂತ್ರಿವರ್ಗದವರೂ ಅಧಿಕಾರಿಗಳೂ ನೆರೆದಿದ್ದ ವಿಶೇಷ ದರ್ಬಾರಿನಲ್ಲಿ ಕಿರೀಟಧಾರಣೆ ನಡೆಯುತ್ತಿತ್ತು. ದಳವಾಯಿ ಹೊಸ ರಾಜನನ್ನು ಸಿಂಹಾಸನದ ಮೇಲೆ ಕೂಡಿಸುತ್ತಿದ್ದ. ಯುವರಾಜ ಆಡಳಿತದಲ್ಲಿ ಪಾಲ್ಗೊಳ್ಳುತ್ತಿದ್ದು, ಪ್ರಾಂತ್ಯವೊಂದರ ಆಡಳಿತ ನೋಡಿಕೊಳ್ಳುತ್ತಿದ್ದ. ಅರಸನ ಅನುಪಸ್ಥಿತಿಯಲ್ಲಿ ಯುವರಾಜ ರಾಜ್ಯಭಾರವನ್ನು ನೋಡಿಕೊಳ್ಳಬೇಕಾಗುತ್ತಿತ್ತು. ಪ್ರಜೆಗಳ ಹಿತರಕ್ಷಣೆಯೇ ಅರಸರ ಪ್ರಥಮ ಕರ್ತವ್ಯವೆಂಬ ನೀತಿಯನ್ನು ಈ ಅರಸರು ಪಾಲಿಸಿಕೊಂಡು ಬಂದರು. ನ್ಯಾಯ ಪರಿಪಾಲನೆ, ವರ್ಣಾಶ್ರಮ ಧರ್ಮರಕ್ಷಣೆ ಮತ್ತು ಸರ್ವಧರ್ಮ ಸಮಾನತೆಗಳನ್ನು ಆದರ್ಶವಾಗಿರಿಸಿಕೊಂಡಿದ್ದರು. ಆಗಾಗ ರಾಜ್ಯದಲ್ಲಿ ಸಂಚಾರ ಮಾಡುತ್ತಿದ್ದು ಪ್ರಜೆಗಳ ಕುಂದು ಕೊರತೆಗಳನ್ನು ತಿಳಿದು, ಅವನ್ನು ಪರಿಹರಿಸುತ್ತಿದ್ದರು. ಮತೀಯ ಧಾರ್ಮಿಕ ವಿಚಾರಗಳಲ್ಲಿ ಅವ್ಯವಸ್ಥೆಯೇರ್ಪಟ್ಟ ಹೊರತು ರಾಜ ಪ್ರವೇಶಮಾಡಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ.

ಆಡಳಿತ ಕಾರ್ಯದಲ್ಲಿ ಸಚಿವ ಪರಿಷತ್ತು ನೆರವು ನೀಡುತ್ತಿತ್ತು. ಪ್ರಧಾನ, ದಳವಾಯಿ, ರಾಜಮನೆತನದವರು ಮತ್ತು ಹಿರಿಯ ಅಧಿಕಾರಿಗಳು ಮಂತ್ರಾಲೋಚನ ಸಭೆಯಲ್ಲಿ ಭಾಗವಹಿಸುತ್ತಿದ್ದರು. ಮೂರರಿಂದ ಐದು ಮಂತ್ರಿಗಳಿರುತ್ತಿದ್ದು ವಿವಿಧ ಆಡಳಿತ ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದರು. ಇದಲ್ಲದೆ ಅರಮನೆಯ ಹಿರಿಯರ ಸಭೆಯೊಂದು ಇರುತ್ತಿತ್ತು; ಮಂತ್ರಿಗಳು ವಿಶೇಷ ಅರ್ಹತೆ ಪಡೆದಿದ್ದು ರಾಜನಿಷ್ಠರಾಗಿರಬೇಕಿತ್ತು. ಪೂರ್ವ ಸಂಪ್ರದಾಯವನ್ನು ಬಿಟ್ಟು, ಯೋಗ್ಯರಾದ ಯಾವ ಜಾತಿಯವರನ್ನಾದರೂ ಮಂತ್ರಿಗಳಾಗಿ ನೇಮಿಸಬಹುದಾಗಿತ್ತು. ಪ್ರಧಾನ ಉಚ್ಚಸ್ಥಾನ ಪಡೆದಿದ್ದು, ಕೆಲಬಾರಿ ಸರ್ವಾಧಿಕಾರಿಯೂ ಆಗಿರುತ್ತಿದ್ದ. ದಳವಾಯಿ ರಕ್ಷಣಾ ಮಂತ್ರಿಯೂ ಕೋಶಾಧಿಕಾರಿ ಅರ್ಥಸಚಿವನೂ ಇನ್ನೊಬ್ಬ ಲೆಕ್ಕಪತ್ರಗಳ ಸಚಿವನೂ ಆಗಿರುತ್ತಿದ್ದರು. ಆಡಳಿತವನ್ನು ಮೊದಲಿಗೆ ಅಠವಣ (ಕಂದಾಯ ವಿಭಾಗ), ಕಂದಾಚಾರ (ಸೇನಾವಿಭಾಗ), ಬೊಕ್ಕಸ ಮತ್ತು ಅರಮನೆಯ ವಿಭಾಗಗಳೆಂದು ವಿಭಾಗಿಸಿದ್ದರೆ, ಅನಂತರ ಕಾಲದಲ್ಲಿ (ಚಿಕ್ಕದೇವರಾಜರ ಸಮಯದಲ್ಲಿ) 18 ಚಾವಡಿ ಅಥವಾ ಇಲಾಖೆಗಳಾಗಿ ವಿಭಾಗಿಸಿದರು. ಈ 18 ಇಲಾಖೆಗಳ ಆಡಳಿತ ವ್ಯವಸ್ಥೆಯೇ ಅಠಾರಾ ಕಚೇರಿ ಎಂಬ ಪದದ ಮೂಲ. ಇವುಗಳಲ್ಲೊಂದೊಂದಕ್ಕೂ ಗೊತ್ತುಗಾರ ಅಥವಾ ಮುಖ್ಯಾಧಿಕಾರಿ ಮತ್ತು ಇತರರ ಅಧಿಕಾರವರ್ಗವಿರುತ್ತಿತ್ತು. ಅಧಿಕಾರಿಗಳಿಗೆ ಸಂಬಳ ಅರ್ಧ ಧಾನ್ಯರೂಪದಲ್ಲೂ ಅರ್ಧ ನಗದಾಗಿಯೂ ಸಿಕ್ಕುತ್ತಿತ್ತು. ಅಧಿಕಾರಿಗಳ ಕರ್ತವ್ಯ ಪಾಲನೆಯ ಬಗೆಗೆ ಆಡಳಿತಕ್ಕೆ ಗುಪ್ತಚಾರರಿಂದ ವರದಿಗಳು ಬರುತ್ತಿದ್ದುವು. ಅಧಿಕಾರಿಗಳ ಲಂಚಗುಳಿತನ ಮತ್ತು ಕರ್ತವ್ಯಲೋಪಗಳಿಗೆ ಶಿಕ್ಷೆ ವಿಧಿಸಲಾಗುತ್ತಿತ್ತು. ರಾಜಾದಾಯದ ಮುಖ್ಯಾಧಾರಗಳೆಂದರೆ ಭೂಕಂದಾಯವಲ್ಲದೆ ಇತರ ಹಲವಿಧವಾದ ತೆರಿಗೆಗಳು, ಸುಂಕಗಳು. ಉತ್ಪನ್ನದ 1/3 ರಿಂದ ಅರ್ಧ ಭಾಗ ರಾಜ್ಯಕ್ಕೆ ಸಲ್ಲುತ್ತಿತ್ತು. ತೆರಿಗೆ, ಸುಂಕಗಳನ್ನು ಧನ ಮತ್ತು ಧಾನ್ಯ ರೂಪಗಳಲ್ಲಿ ಕೊಡಬಹುದಿತ್ತು. ವೃತ್ತಿ ತೆರಿಗೆಗಳೂ ವಿಧಿಸಲ್ಪಡುತ್ತಿದ್ದುವು. ಬೊಕ್ಕಸದಲ್ಲಿ ಶೇಖರವಾದ ಐಶ್ವರ್ಯವನ್ನು ವೇತನ, ದೇಶರಕ್ಷಣೆ, ಕಾಮಗಾರಿ, ಸಾಹಿತ್ಯ, ಕಲಾಭಿವೃದ್ಧಿ ಮತ್ತು ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತಿತ್ತು. ನ್ಯಾಯ ವಿತರಣೆಗೆ ಹೆಚ್ಚಿನ ಪ್ರಾಮುಖ್ಯ ದೊರಕಿತ್ತು. ರಾಜ ಸರ್ವೋನ್ನತ ನ್ಯಾಯಾಧಿಕಾರಿ. ಮಂತ್ರಿವರ್ಗ, ಜಿಲ್ಲಾಧಿಕಾರಿಗಳು ಮತ್ತು ಪ್ರತ್ಯೇಕ ನ್ಯಾಯಾಧಿಕಾರಿಗಳೂ ನ್ಯಾಯ ಪೂರೈಸುವ ಹೊಣೆ ಇತ್ತು. ಗ್ರಾಮ ಪಂಚಾಯತರು ಮತ್ತು ಊರಗೌಡ– ಇವರು ಸ್ಥಳೀಯ ನ್ಯಾಯಮೂರ್ತಿಗಳೆನಿಸಿದ್ದರು. ವಿಧ್ಯುಕ್ತವಾಗಿ ವಿಚಾರಣೆ ನಡೆಸಿ, ತೀರ್ಮಾನ ಕೊಡಲಾಗುತ್ತಿತ್ತು. ಕಣ್ಣು ಕೀಳಿಸುವುದು, ಸರ್ವಸ್ವಾಪಹಾರ, ಮರಣದಂಡನೆ, ಜುಲ್ಮಾನೆ ಮುಂತಾದ ಕ್ರೂರಶಿಕ್ಷೆಗಳು ರೂಢಿಯಲ್ಲಿದ್ದುವು. ದೇಶದಲ್ಲಿ ಆರಕ್ಷಕ (ಪೊಲೀಸ್) ವ್ಯವಸ್ಥೆಯಿತ್ತು. ಸೈನಿಕರೂ ನಗರ ಮತ್ತು ಗ್ರಾಮ ರಕ್ಷಣಾಧಿಕಾರಿಗಳೂ ಆಂತರಿಕ ಶಾಂತಿಪಾಲನೆ ಮಾಡುತ್ತಿದ್ದರು. ಒಟ್ಟಿನಲ್ಲಿ ಶಾಂತಿ ಶಿಸ್ತುಗಳ ಪಾಲನೆ ಸಮರ್ಪಕವಾಗಿತ್ತು. ರಾಜಕೀಯ ವಿಚಾರಗಳಲ್ಲಿ ಜನಸಾಮಾನ್ಯರಿಗೆ ಹೆಚ್ಚಿನ ಆಸಕ್ತಿಯಿರಲಿಲ್ಲ. ಪಾಳೆಯಗಾರರೂ ಅವರ ಪರಿವಾರದವರೂ ಮಾತ್ರ ಆಸಕ್ತಿವಹಿಸುತ್ತಿದ್ದರು.

ಈ ಕಾಲದ ಜನಜೀವನದಲ್ಲಿ ಹಲವಾರು ಮಾರ್ಪಾಡುಗಳು ಕಾಣಬರುತ್ತವೆ. ವರ್ಣಾಶ್ರಮಗಳನ್ನು ರಾಜರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಒಡೆಯರ ಬಿರುದುಗಳೂ ಕಂಠೀರವ ನರಸರಾಜ, ದೊಡ್ಡದೇವರಾಜ ಮತ್ತು ಚಿಕ್ಕದೇವರಾಜರ ಕಾಲದ ಕೃತಿಗಳೂ ಈ ವಿಷಯದಲ್ಲಿ ವಿವರಗಳನ್ನು ನೀಡುತ್ತವೆ. ಮುಮ್ಮಡಿ ಕೃಷ್ಣರಾಜರು ಜಾತಿ ಸಂಪ್ರದಾಯಗಳನ್ನು ಮೀರಿದವರಿಗೆ ಕಠಿಣಶಿಕ್ಷೆ ವಿಧಿಸುತ್ತಿದ್ದರು. ಬೌದ್ಧಧರ್ಮ ಕಣ್ಮರೆಯಾಗಿದ್ದು ಜೈನಮತ ಕ್ಷೀಣಾವಸ್ಥೆಯಲ್ಲಿತ್ತು. ವೈಷ್ಣವ, ಶೈವ ಮತ್ತು ವೀರಶೈವ ಧರ್ಮಗಳು ಪ್ರಬಲವಾಗಿದ್ದುವು. ರಾಜಾಶ್ರಯ ಎಲ್ಲರಿಗೂ ಸಮನಾಗಿದ್ದು ಸರ್ವಧರ್ಮಸಮನ್ವಯ ಮತ್ತು ಸಮಾನತೆಗಳೇ ಆಡಳಿತದ ಗುರಿಗಳಾಗಿದ್ದುವು. ಕ್ರೈಸ್ತ ಮತ್ತು ಮುಸ್ಲಿಂ ಧರ್ಮಗಳು ಪ್ರಬಲವಾಗಿರಲಿಲ್ಲ. ರಾಜರ ನೀತಿ ಎಷ್ಟೇ ಉದಾರವಾಗಿದ್ದರೂ ಕೆಳವರ್ಗದ–ಅದರಲ್ಲೂ ಅಸ್ಪೃಶ್ಯರ–ಪರಿಸ್ಥಿತಿ ಶೋಚನೀಯವಾಗಿತ್ತು. ಕೃಷಿ ಕಾರ್ಮಿಕರಲ್ಲಿ ಅವರೇ ಹೆಚ್ಚಿನವರಾಗಿದ್ದರೂ ಊರ ಹೊರಗಡೆ ಕೇರಿಗಳಲ್ಲಿ ವಾಸಿಸುತ್ತಿದ್ದರು. ಹೊರರಾಜ್ಯಗಳಿಂದ ವಲಸೆ ಬಂದ ಜನ ಏಳಿಗೆ ಹೊಂದುತ್ತಿದ್ದರು. ಕ್ರಮೇಣ ಹೊಸ ಸಾಮಾಜಿಕ ವರ್ಗಗಳು ತಲೆಯೆತ್ತಿದುವಲ್ಲದೆ, ಪರಂಪರಾಗತ ವೃತ್ತಿಗಳನ್ನು ತ್ಯಜಿಸಿ ಹೊಸವೃತ್ತಿಗಳನ್ನು ಆಯ್ದುಕೊಳ್ಳುವುದು ಸಾಮಾನ್ಯವಾಯಿತು. ಈ ರೀತಿಯ ಸಾಮಾಜಿಕ ಆಂದೋಲನ ಅಷ್ಟೇನೂ ಪ್ರಬಲವಾಗಿರಲಿಲ್ಲ. ಭಕ್ತಿಪಂಥ ಮತ್ತು ವೀರಶೈವ ಮತ್ತು ಜೈನ ಚಳವಳಿಗಳಿಂದ ಕ್ರಮೇಣ ಬ್ರಾಹ್ಮಣರ ಪ್ರಭಾವ ಕ್ಷೀಣಮುಖವಾಯಿತು. ಆದರೂ ಸಂಪ್ರದಾಯಬದ್ಧ ಜೀವನವನ್ನೇ ಸಾಮಾನ್ಯ ಜನರು ಇತ್ತೀಚಿನವರೆಗೂ ಮುಂದುವರಿಸಿಕೊಂಡು ಬಂದರು. ಪಾಶ್ಚಾತ್ಯ ವಿದ್ಯಾಭ್ಯಾಸ ಮತ್ತು ಸಂಸ್ಕೃತಿಗಳ ಪ್ರಭಾವ ಹಬ್ಬಿದ ಅನಂತರವೇ ಈ ಸಮಾಜವ್ಯವಸ್ಥೆ ಬದಲಾಯಿಸಿತು.

ಸಮಾಜದಲ್ಲಿದ್ದ ಹಲವಾರು ವರ್ಗಗಳು ತಮ್ಮ ಉದ್ದೇಶ ಸಾಧನೆಗಾಗಿ ಸಂಘಸಂಸ್ಥೆಗಳನ್ನು ಏರ್ಪಡಿಸಿಕೊಳ್ಳಲಾರಂಭಿಸಿದುವು. ಇವುಗಳ ಉಲ್ಲೇಖಗಳು ಹಲವಾರು ಎಡೆಗಳಲ್ಲಿ ದೊರೆಯುತ್ತವೆ. ಅನೇಕ ಸಂದರ್ಭಗಳಲ್ಲಿ ಈ ಸಂಸ್ಥೆಗಳು ಒಂದುಗೂಡಿ ದಾನದತ್ತಿಗಳನ್ನೂ ಲೋಕೋಪಯೋಗಿ ಕಾರ್ಯಗಳನ್ನೂ ಮಾಡಿರುವುದಕ್ಕೆ ಆಧಾರಗಳಿವೆ. ಈ ಕಾಲದಲ್ಲಿ ಸ್ತ್ರೀಯರಿಗೆ ಗೌರವದ ಸ್ಥಾನಮಾನಗಳಿದ್ದುದೇನೋ ನಿಜ. ಸಂಚಿಯ ಹೊನ್ನಮ್ಮ, ಕಿತ್ತೂರ ಚನ್ನಮ್ಮ, ವೀರಮ್ಮಾಜಿ, ರಾಣೀ ಲಕ್ಷ್ಮಮ್ಮಣ್ಣಿ ಮುಂತಾದ ಸಾಹಿತಿಗಳೂ ಆಡಳಿತ ಪಟುಗಳೂ ಇದ್ದರು. ಆದರೆ ಸಂಪ್ರದಾಯ ಶರಣರಾದ ಈ ಜನರಲ್ಲಿ ಬದಲಾಗುತ್ತಿದ್ದ ಸಾಮಾಜಿಕ ಪರಿಸ್ಥಿತಿಗಳ ಪ್ರಭಾವ ಅಷ್ಟೇನೂ ಬಿದ್ದಿರಲಿಲ್ಲವಾದ್ದರಿಂದ ಸ್ತ್ರೀಸಾಮಾನ್ಯರ ಸ್ಥಿತಿಗತಿಗಳು ಉತ್ತಮವಾಗಿರಲಿಲ್ಲ. ಬಾಲ್ಯವಿವಾಹ ರೂಢಿಯಲ್ಲಿತ್ತು. ವರದಕ್ಷಿಣೆ ಮತ್ತು ಕನ್ಯಾಶುಲ್ಕ ಪದ್ಧತಿಗಳು ಕ್ರಮೇಣ ಪ್ರಬಲವಾದುವು. ವೃದ್ಧರು ಬಾಲಿಕೆಯರನ್ನು ವಿವಾಹವಾಗುವುದೂ ಸಾಮಾನ್ಯವಾಗಿತ್ತು. ವಿವಾಹವಿಚ್ಛೇದ, ವಿಧವಾವಿವಾಹ ಮುಂತಾದವು ಜನಪ್ರಿಯವಾಗಿರಲಿಲ್ಲ. ವಿಧವೆಯರು ಕೇಶಮುಂಡನ ಮಾಡಿಸಿಕೊಳ್ಳಬೇಕಾಗುತ್ತಿತ್ತು. ಹಲವಾರು ಸೌಲಭ್ಯಗಳನ್ನು ಕಳೆದುಕೊಳ್ಳಬೇಕಾಗಿತ್ತು. ಏಕಪತ್ನೀತ್ವ ಹೆಚ್ಚು ಬಳಕೆಯಲ್ಲಿದ್ದರೂ ಬಹುಪತ್ನೀತ್ವ ನಿಷಿದ್ಧವಾಗಿರಲಿಲ್ಲ. ವ್ಯಭಿಚಾರ ವಿರಳವಾಗಿತ್ತು. ಆದರೆ ಗಣಿಕ ಜೀವನ ತಿರಸ್ಕೃತವಾಗಿರಲಿಲ್ಲ. ಅವರು ಸಂಪ್ರದಾಯದಂತೆ ಸಂಗೀತನೃತ್ಯಗಳಲ್ಲಿ, ಪ್ರಾಶಸ್ತ್ಯ ಪಡೆದಿರುತ್ತಿದ್ದರು. ಅವರಿಗೆ ಪ್ರತ್ಯೇಕ ಸ್ಥಳಗಳಿದ್ದುವಲ್ಲದೆ ವಿಶಿಷ್ಟ ಹಕ್ಕುಬಾಧ್ಯತೆಗಳೂ ಇದ್ದುವು.

ಆ ಕಾಲದ ನಗರ ಮತ್ತು ಗ್ರಾಮಜೀವನಗಳ ಬಗ್ಗೆ ಸಾಕಷ್ಟು ವಿಚಾರಗಳು ತಿಳಿದು ಬರುತ್ತವೆ. ಅಗ್ರಹಾರಗಳಲ್ಲಿ ಬ್ರಾಹ್ಮಣರೂ ಪೇಟೆ ಪ್ರದೇಶದಲ್ಲಿ ಅನ್ಯವರ್ಣೀಯರೂ ವಾಸಿಸುತ್ತಿದ್ದರು. ವಿವಿಧ ವೃತ್ತಿಗಳವರಿಗೆ ಕೆಲಬಾರಿ ಪ್ರತ್ಯೇಕ ಸ್ಥಾನಗಳಿರುತ್ತಿದ್ದುದುಂಟು. ಜನನಿಬಿಡವಾದ ನಗರಗಳಲ್ಲಿ ಕಲ್ಲೋಲವಿದ್ದರೆ ಗ್ರಾಮಗಳ ಜೀವನ ಶಾಂತವಾಗಿರುತ್ತಿತ್ತು. ವ್ಯವಸಾಯ ಮತ್ತಿತರ ಕಸಬುಗಳಲ್ಲಿ ತೊಡಗಿದ್ದ ಜನ ಧರ್ಮಭೀರುಗಳಾಗಿಯೂ ಜಾತಿವೈಷಮ್ಯರಹಿತರಾಗಿಯೂ ಸಾಂಪ್ರದಾಯಿಕ ಜೀವನ ನಡೆಸುತ್ತಿದ್ದರು. ವೇದಶಾಸ್ತ್ರಪಾರಂಗತರಾದ, ನೈಷ್ಠಿಕ ಕರ್ಮಾನುಯಾಯಿಗಳಾದ ಪಂಡಿತರ ಬಗೆಗೆ ಸಾಕಷ್ಟು ವರ್ಣನೆಗಳು ದೊರಕುತ್ತವೆ. ಇವು ಜನರ ಸದಾಚಾರ ಜೀವನದ ವಿಷಯವನ್ನು ತಿಳಿಸುತ್ತವೆ. ರಾಜರೂ ರಾಜವರ್ಗದವರೂ ಉತ್ತಮ ವಸ್ತ್ರಾಭರಣಗಳನ್ನು ಧರಿಸುತ್ತ ಮೋದದ ಜೀವನ ನಡೆಸುತ್ತಿದ್ದು, ಅಪರಿಮಿತವಾದ ಪರಿವಾರದಿಂದೊಡಗೂಡಿದ್ದರು. ರಾಜಾಸ್ಥಾನ ಸಾಂಸ್ಕೃತಿಕ ಜೀವನದ ಕೇಂದ್ರವಾಗಿತ್ತು. ವಿದ್ವಾಂಸರೂ ಸಂಗೀತ ಮೊದಲಾದ ಕಲೆಗಳಲ್ಲಿ ಪರಿಣತರೂ ಅಲ್ಲಿ ಆಶ್ರಯ ಪಡೆದಿರುತ್ತಿದ್ದರು. ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹವಿತ್ತು. ವಿಜಯನಗರದ ಅರಸರ ಕಾಲದಲ್ಲಿ ಆಚರಿಸಲಾಗುತ್ತಿದ್ದು, ರಾಜ ಒಡೆಯರ ಕಾಲದಲ್ಲಿ ಹೊಸಕಳೆಯಿಂದ ಮೈಸೂರಿನಲ್ಲಿ ಮುಂದುವರಿದ ದಸರಾಮಹೋತ್ಸವ ಕ್ರಮೇಣ ಜಗತ್ಪ್ರಸಿದ್ಧವಾಯಿತು. ಒಡೆಯರ ನಿತ್ಯದೋಲಗವೇ ವೈಭವಪೂರ್ಣವಾಗಿತ್ತೆಂದು ಹಲವರು ವರ್ಣಿಸಿದ್ದಾರೆ.

ಜನರ ಆಹಾರ ಪಾನೀಯಗಳ ವಿಚಾರವಾಗಿಯೂ ಮಾಹಿತಿಗಳು ದೊರಕುತ್ತವೆ. ಅಕ್ಕಿ, ರಾಗಿ, ಜೋಳ ಮತ್ತು ದ್ವಿದಳಧಾನ್ಯಗಳು ಬೆಳೆಯುತ್ತಿದ್ದುವು. ಕೋಳಿ, ಕುರಿ, ಆಡು ಮತ್ತು ಹಂದಿಗಳ ಮಾಂಸ ಸೇವಿಸುವವರೂ ಇದ್ದರು. ಬಡವರು ರಾಗಿಯನ್ನೂ ಧನಿಕರು ಅಕ್ಕಿ ಮತ್ತು ಗೋದಿಗಳನ್ನೂ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ತರಕಾರಿ ಹಣ್ಣುಹೂಗಳು ಯಥೇಚ್ಛವಾಗಿ ಬೆಳೆಯುತ್ತಿದ್ದುವು. ಮಂಗರಸನ ಸೂಪಶಾಸ್ತ್ರದಲ್ಲಿ ಸಮಕಾಲೀನ ಭಕ್ಷ್ಯಭೋಜ್ಯಗಳ ವರ್ಣನೆಯಿದೆ. ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯದಲ್ಲಿ ಅರಮನೆಯ ಭೋಜನದ ವೈಶಿಷ್ಟ್ಯವನ್ನು ತಿಳಿಸಲಾಗಿದೆ. ಮಾದಕವಸ್ತುಗಳು ಅಧಿಕತರವಾಗಿ ನಿಷಿದ್ಧವಸ್ತುಗಳಾಗಿದ್ದುವು. ಕೆಳವರ್ಗದವರಲ್ಲಿ ಮಾತ್ರ ಅವು ರೂಢಿಯಲ್ಲಿದ್ದುವು. ಮಲ್ಲಯುದ್ಧ, ಹುಲಿ ಚಿರತೆಗಳೇ ಮುಂತಾದ ದುಷ್ಟಪ್ರಾಣಿಗಳೊಂದಿಗೆ ಕಾಳಗ, ಬೇಟೆ ಮುಂತಾದವು ರಾಜರ ಮತ್ತು ಶ್ರೀಮಂತರ ವಿಹಾರಸಾಧನಗಳಾಗಿದ್ದುವು. ಚದುರಂಗ ಮತ್ತು ಪಗಡೆಯಾಟಗಳು ಜನಪ್ರಿಯವಾಗಿದ್ದುವು. ಜೂಜು ಸಾಮಾನ್ಯವಾಗಿತ್ತು. ವನವಿಹಾರ, ಜಲಕ್ರೀಡೆ, ಉಯ್ಯಾಲೆ– ಇವು ಶ್ರೀಮಂತ ತರುಣಿಯರ ಕ್ರೀಡೆಗಳಾಗಿದ್ದುವೆಂದು ಗೋವಿಂದ ವೈದ್ಯ ತನ್ನ ಕೃತಿಯಲ್ಲಿ ತಿಳಿಸುತ್ತಾನೆ. ನೃತ್ಯ, ಕೋಲಾಟ ಮತ್ತು ಸಂಗೀತಗಳು ಸರ್ವಜನರಿಗೂ ಪ್ರಿಯವಾಗಿದ್ದುವು. ಡೊಂಬರೂ ಗಾರುಡಿಗರೂ ಹಾವಾಡಿಗರೂ ಜನರಿಗೆ ವಿನೋದವನ್ನೊಗಿಸುತ್ತಿದ್ದರು. ಮಂತ್ರಮಾಟಗಳು ರೂಢಿಯಲ್ಲಿದ್ದುವು.

ಸಮಾಜದಲ್ಲಿ ಅವಿಭಕ್ತ ಕುಟುಂಬಪದ್ಧತಿ ವಿಶೇಷವಾಗಿ ರೂಢಿಯಲ್ಲಿತ್ತು. ಜೀವನಾವಶ್ಯಕತೆಗಳನ್ನು ಪೂರೈಸುವುದು ಗಂಡಸಿನ ಕರ್ತವ್ಯ. ಆದರೆ ಕೆಳವರ್ಗದವರಲ್ಲಿ ಸ್ತ್ರೀ ಪುರುಷರಿಬ್ಬರೂ ದುಡಿಯುತ್ತಿದ್ದರು.

ವಿಜಯನಗರೋತ್ತರ ಕಾಲದಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ಮತೀಯ ಧಾರ್ಮಿಕ ಬದಲಾವಣೆಗಳೇನೂ ಆಗಲಿಲ್ಲ. ವೈಷ್ಣವಪಂಥದ ಹರಿದಾಸರು ರಾಯಚೂರು ಮತ್ತು ಅದರ ಪರಿಸರದಲ್ಲಿ ಭಕ್ತಿಪೂರ್ಣ ಭಾವಗೀತೆಗಳನ್ನು ರಚಿಸಿ ತಮ್ಮ ತತ್ತ್ವಪ್ರಚಾರಕಾರ್ಯ ಮುಂದುವರಿಸಿದರು. ಇವರಲ್ಲಿ ಪ್ರಸಿದ್ಧರಾದವರು ವಿಜಯದಾಸರು, ಗೋಪಾಲದಾಸರು, ಪ್ರಸನ್ನವೆಂಕಟದಾಸರು, ಪ್ರಾಣೇಶದಾಸರು ಮತ್ತು ಮೋಹನದಾಸರು. ಸುಪ್ರಸಿದ್ಧ ದಾಸಸಾಹಿತಿ ಪುರಂದರರ ಮೇಲ್ಪಂಕ್ತಿಯಲ್ಲಿ ಇವರು ನೀತಿ ತತ್ತ್ವ ಬೋಧನೆಗಳನ್ನೊಳಗೊಂಡ, ದೇವರನಾಮಗಳೆಂದು ಹೆಸರಾದ, ಭಕ್ತಿಗೀತೆಗಳನ್ನು ರಚಿಸಿ ಹಾಡಿದ್ದಾರೆ. ಮಾಧ್ವತತ್ತ್ವ ಪ್ರತಿಪಾದಕವಾದ, ಜಗನ್ನಾಥದಾಸ ಕೃತವಾದ ಹರಿಕಥಾಮೃತಸಾರದಲ್ಲಿ ಈ ಕಾರ್ಯ ಮುಂದುವರಿಯಿತು. ಶ್ರೀ ಮಧ್ವಾಚಾರ್ಯರ ಪ್ರೌಢವೂ ಕಠಿಣವೂ ಆದ ತಾತ್ತ್ವಿಕ ಬೋಧೆಯನ್ನು ಸರಳ ಶುದ್ಧ ಕನ್ನಡದಲ್ಲಿ ಹೇಳಿ ಧರ್ಮ ಪ್ರಸಾರಮಾಡಿದ ಕೀರ್ತಿ ಹರಿದಾಸರದು. ಬಾಹ್ಯಾಡಂಬರದ ಮತಾಚಾರಗಳನ್ನು ತಿರಸ್ಕರಿಸಿ ಭಗವದ್ಭಕ್ತಿ ಮತ್ತು ಉದಾತ್ತ ಜೀವನ ರೀತಿಗಳನ್ನು ಇವರು ಪ್ರಶಂಸಿಸಿದರು. ಕರ್ನಾಟಕದ ಹರಿದಾಸರ ನುಡಿಮುತ್ತುಗಳು ನಿಜವಾಗಿ ಉಪನಿಷತ್ ತತ್ತ್ವಗಳಂತೆಯೇ ಇವೆ ಎಂದು ಫಾದರ್ ಹೆರಾಸ್ ಹೇಳಿದ್ದಾನೆ. ವೇದೋಪನಿಷತ್ತುಗಳ ಸಾರಪೂರ್ಣವಾದ ಅವರ ಬೋಧೆಗಳು ಮಾನವನಲ್ಲಿದ್ದ ಸಾತ್ತ್ವಿಕಾಂಶಗಳನ್ನು ಪ್ರಚೋದಿಸಿ ಪರಮಾರ್ಥದೆಡೆಗೆ ಕೊಂಡೊಯ್ಯುತ್ತವೆ. ಉಡುಪಿಯ ಅಷ್ಟಮಠಗಳೂ ಇತರ ದ್ವೈತಮಠಗಳೂ ಧರ್ಮಪ್ರಸಾರಕೇಂದ್ರಗಳಾಗಿವೆ. ಇವು ಪಾಠಶಾಲೆ ಮತ್ತು ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತ ಧರ್ಮಪೀಠಗಳ ಆದರ್ಶವನ್ನು ಎತ್ತಿ ಹಿಡಿಯುತ್ತಿವೆ. ಅದ್ವೈತ ವೇದಾಂತದ ನೆಲೆಯಾದ ಶೃಂಗೇರಿ ಪೀಠದ ಕೆಲವು ಆಚಾರ್ಯರು ತಾತ್ತ್ವಿಕ ಪರಂಪರೆಯಲ್ಲಿ ಅಗಾಧ ಶ್ರದ್ಧೆಯುಳ್ಳವರಾಗಿದ್ದು ತಮ್ಮ ಘನಪಾಂಡಿತ್ಯದಿಂದ ಜನರಲ್ಲಿ ಧಾರ್ಮಿಕ ಶ್ರದ್ಧೆಯನ್ನು ಮೂಡಿಸುತ್ತಿದ್ದಾರೆ. ಇವರ ಉಪಪೀಠಗಳಾದ ಶಿವಗಂಗೆ, ಆವನಿ ಮತ್ತು ಕೂಡ್ಲಿ ಮಠಗಳು ಅದ್ವೈತ ತತ್ತ್ವಗಳ ಅಭ್ಯಾಸ ಮತ್ತು ಪ್ರಚಾರ ಕೇಂದ್ರಗಳಾಗಿವೆ. ಕರ್ನಾಟಕವೂ ಶ್ರೀವೈಷ್ಣವ ಧರ್ಮದ ಮುಖ್ಯ ಕೇಂದ್ರಗಳಲ್ಲೊಂದು. ತಮಿಳುದೇಶದ ಶ್ರೀರಂಗಂ ಮತ್ತು ಆಂಧ್ರದ ಅಹೋಬಿಲಗಳಂತೆ ಕರ್ನಾಟಕದ ಮೇಲುಕೋಟೆ ಮತ್ತು ಮೈಸೂರಿನ ಪರಕಾಲ ಮಠಗಳು ರಾಮಾನುಜರ ತತ್ತ್ವಗಳನ್ನು ಪ್ರಸರಿಸುವ ಕೇಂದ್ರಗಳಾಗಿದ್ದು ಜನರ ಧರ್ಮಭಾವನೆಗಳ ಪ್ರತೀಕಗಳಾಗಿವೆ.

ವಿಜಯನಗರ ಪತನಾನಂತರ ಹರಿದು ಹಂಚಿ ಹೋಗಿದ್ದ ವೀರಶೈವ ಧರ್ಮ ಕೇಂದ್ರಗಳು ಕ್ರಮೇಣ ಕೆಳದಿ ಮುಂತಾದ ರಾಜ್ಯಗಳಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿಕೊಂಡುವು. ಈ ಕಾಲದಲ್ಲಿ ವೀರಶೈವ ಧಾರ್ಮಿಕ ಆಚಾರ ಸಂಪ್ರದಾಯಗಳು ರಾಜಕೀಯದಿಂದ ಪ್ರಭಾವಿತವಾದುವು. ಕೆಳದಿಯ ರಾಜರ ಧರ್ಮವಾಗಿದ್ದು ಪ್ರಭಾವಶಾಲಿಯಾಗಿದ್ದ ಈ ಧರ್ಮ ಸಾಮಾಜಿಕ ಜೀವನದ ಮೇಲೂ ತನ್ನ ಮುದ್ರೆಯನ್ನೊತ್ತಿತ್ತು. ಮೈಸೂರರಸರಲ್ಲಿ ಕೆಲವರು ಈ ಧರ್ಮದ ಪಕ್ಷಪಾತಿಗಳಾಗಿದ್ದರು. ಎಲ್ಲರೂ ಇದಕ್ಕೆ ಪ್ರೋತ್ಸಾಹಕರಂತೂ ಆಗಿದ್ದರು. ಮೈಸೂರರಸರನ್ನು ವೀರಶೈವ ಧರ್ಮದ ಪೋಷಕರೆಂದು ಹೇಳಬಹುದು. ಸುಮಾರು 20ನೆಯ ಶತಮಾನದವರೆಗೆ ಕೇವಲ ಪದ್ಯರೂಪದಲ್ಲೂ ಅನಂತರ ಗದ್ಯರೂಪದಲ್ಲೂ ಇವರ ಧಾರ್ಮಿಕ ಸಾಹಿತ್ಯ ಬೆಳೆದು ಜನತೆಯ ಮೇಲೆ ಪ್ರಭಾವ ಬೀರಿತು. ಅಲ್ಲಮ, ಬಸವಣ್ಣ ಮುಂತಾದವರು ಹಾಕಿಕೊಟ್ಟ ಹಾದಿಯಲ್ಲಿ ಮುಂದುವರಿಯುತ್ತಿರುವ ವೀರಶೈವ ಮಠಗಳಿಂದಲೂ ತತ್ತ್ವಜ್ಞಾನಿಗಳಿಂದಲೂ ಈ ಪರಂಪರೆ ಬೆಳೆದುಕೊಂಡು ಬಂದಿದೆ. ಬಸವಕಲ್ಯಾಣ, ಕೂಡಲಸಂಗಮ ಮುಂತಾದ ಕೇಂದ್ರಗಳು ಬಸವೇಶ್ವರರ ತತ್ತ್ವಗಳಲ್ಲಿ ಹೊಸ ನಿಷ್ಠೆಯನ್ನು ಮೂಡಿಸುತ್ತಿವೆ. ಅನೇಕ ಮಠಗಳು ವಿದ್ಯಾಶಾಲೆಗಳನ್ನೂ ವಿದ್ಯಾರ್ಥಿನಿಲಯಗಳನ್ನೂ ನಡೆಸುತ್ತ ಜನತೆಯ ನೈತಿಕ ಮತ್ತು ಬೌದ್ಧಿಕ ಪ್ರಗತಿಗೆ ಶ್ರಮಿಸುತ್ತಿವೆ. ಆಧುನಿಕ ವಿದ್ಯಾಪ್ರಸಾರದಲ್ಲಿ ಅವುಗಳ ಪಾತ್ರ ಗಣನೀಯವಾಗಿದೆ.

ಜೈನಧರ್ಮ ರಾಜಾಶ್ರಯವಿಲ್ಲದೆ ಕ್ರಮೇಣ ಕ್ಷೀಣಸ್ಥಿತಿಯಲ್ಲಿದ್ದರೂ ವಿಜಯನಗರೋತ್ತರ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಬಲಗೊಂಡಿತು. ಅಲ್ಲಿದ್ದ ವಿಜಯನಗರ ರಾಜ್ಯದ ಸಾಮಂತರು ಕೊಡುತ್ತಿದ್ದ ಪ್ರೋತ್ಸಾಹದಿಂದ ಅನಂತರವೂ ತನ್ನ ಪ್ರಭಾವ ಉಳಿಸಿಕೊಂಡಿತು. ಚಾವುಂಡರಾಯನ ವಂಶಜನೆಂದು ಹೇಳಲಾದ ತಿಮ್ಮರಾಜ 1604ರಲ್ಲಿ ಇಲ್ಲಿಯ ವೇಣೂರಿನಲ್ಲಿ ಗೊಮ್ಮಟ ಮೂರ್ತಿಯನ್ನು ನಿರ್ಮಿಸಿದ. ಹಾಸನಜಿಲ್ಲೆಯ ಶ್ರವಣಬೆಳಗೊಳ ಭಾರತಾದ್ಯಂತದ ಜೈನರಿಗೆ ಪರಮೋನ್ನತ ಯಾತ್ರಾ ಸ್ಥಳ. ಈಗಲೂ 12 ವರ್ಷಗಳಿಗೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕ ಕಾಲದಲ್ಲಿ ಇದು ಲಕ್ಷಾಂತರ ಜನರನ್ನು ಆಕರ್ಷಿಸುತ್ತದೆ. ಅಲ್ಲಿಯ ಜೈನಮಠ ಆ ಧರ್ಮದ ಪ್ರಮುಖ ಕೇಂದ್ರಗಳಲ್ಲೊಂದು. ಶ್ರವಣಬೆಳಗೊಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯ ಕುರುಹುಗಳನ್ನು ನೋಡಿದರೆ ಈ ಧರ್ಮದ ದೀರ್ಘಪರಂಪರೆಯ ಚಿತ್ರ ದೊರಕುತ್ತದೆ. ಧರ್ಮಸ್ಥಳದಲ್ಲಿ ಜಿನಮೂರ್ತಿಯ ಬೃಹತ್ ಶಿಲಾ ಪ್ರತಿಮೆ ಸ್ಥಾಪಿತವಾಗಿದೆ. ಧರ್ಮಸ್ಥಳದ ಹೆಗ್ಗಡೆ ಪರಂಪರೆಯಿಂದಲೂ ಅನೇಕ ಪ್ರಾಚೀನ ಜೈನ ಕೇಂದ್ರಗಳಿಂದಲೂ ಕರ್ನಾಟಕದಲ್ಲಿ ಜೈನಧರ್ಮದ ಸೆಲೆಗಳು ಉಳಿದ ಬಂದಿವೆ. ಭಾರತಾದ್ಯಂತ ಪ್ರಚಲಿತವಾಗಿರುವ ಜೈನಧರ್ಮ ಸಮಾಜ, ಮಹಾವೀರ ಸಂಸ್ಥೆ, ಜೈನಧರ್ಮ ಪ್ರಚಾರ ಪರಿಷತ್ ಮತ್ತು ಅಣುವ್ರತ ಸಮಿತಿಗಳ ಪ್ರಯತ್ನಗಳಿಂದಲೂ ಅದರ ಪ್ರಭಾವ ಪುನರುಜ್ಜೀವನಗೊಳ್ಳುವ ಸೂಚನೆ ಕಂಡುಬರುತ್ತಿದೆ. ಬೌದ್ಧಧರ್ಮ ಅತ್ಯಲ್ಪಸಂಖ್ಯೆಯ ಅನುಯಾಯಿಗಳನ್ನೊಳಗೊಂಡಿದ್ದು ಪ್ರಭಾವಹೀನವಾಗಿದ್ದರೂ ಮಹಾಬೋಧಿಸಂಸ್ಥೆಯ ಚಟುವಟಿಕೆಗಳಿಂದ ಇನ್ನೂ ಜೀವಂತವಾಗಿದೆ.

ಕರ್ನಾಟಕ ಜನಜೀವನದ ಮೇಲೆ ಆರು ಶತಮಾನಗಳಿಂದ ಇಸ್ಲಾಂ ಮತವೂ 19ನೆಯ ಶತಮಾನದಿಂದೀಚೆಗೆ ಕ್ರೈಸ್ತಧರ್ಮವೂ ತಕ್ಕಮಟ್ಟಿನ ಪ್ರಭಾವ ಬೀರಿವೆ. 8ನೆಯ ಶತಮಾನದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯಕಾಲದಲ್ಲಿ ಕರ್ನಾಟಕ ಇಸ್ಲಾಂ ಧರ್ಮದೊಂದಿಗೆ ಸಂಪರ್ಕ ಪಡೆದರೂ 1347ರಲ್ಲಿ ಗುಲ್ಬರ್ಗ ರಾಜಧಾನಿಯಾಗಿ ಉಳ್ಳ ಬಹಮನೀ ರಾಜ್ಯಸ್ಥಾಪನೆಯಾಗುವವರೆಗೂ ಇದರ ಪ್ರಭಾವ ಗಣನೀಯವಾಗಿರಲಿಲ್ಲ. ಸು.200 ವರ್ಷ ಬಾಳಿದ ಈ ರಾಜ್ಯದ ಸುಲ್ತಾನರು ಪರ್ಷಿಯ ಮತ್ತು ತುರ್ಕಿ ದೇಶಗಳ ಜನರನ್ನು ಸ್ವಾಗತಿಸಿದರು. ಅನಂತರ ಉತ್ತರ ಭಾರತದ ಮುಸ್ಲಿಮರೂ ಆಫ್ರಿಕದ ಸಿದ್ದಿಗಳೂ ಇಲ್ಲಿ ನೆಲಸಿದರು. ಈ ಮಧ್ಯೆ ಸ್ಥಳೀಯವಾಗಿ ಮತಾಂತರ ಹೊಂದಿದವರ ಸಂಖ್ಯೆಯೂ ಹೆಚ್ಚುತ್ತಿತ್ತು. ಹಲಭಾಷೆಗಳ ಮಿಶ್ರವಾದ ದಖನೀ ಇವರ ಭಾಷೆಯಾಯಿತು. ಈ ರಾಜ್ಯದ ಪತನಾನಂತರ 15ನೆಯ ಶತಮಾನದ ಅಂತ್ಯ ಮತ್ತು 16ನೆಯ ಶತಮಾನದ ಪ್ರಾರಂಭಕಾಲದಲ್ಲಿ ಬಿಜಾಪುರದ ಆದಿಲ್‌ಷಾಹಿ ಮತ್ತು ಗೋಲ್ಕೊಂಡದ ಕುತುಬ್‌ಷಾಹಿ ಮನೆತನಗಳ ಆಶ್ರಯದಲ್ಲಿ ಖುಷ್ನುದ್, ರುಸ್ತುಮಿನುಸ್ಸಾತಿ, ಮೀರಾನ್ ಹಾಕ್ಷಿಮಿ, ವಝಿ, ಗವ್ವಾಸಿ ಮುಂತಾದ ಲೇಖಕರು ದಖನಿ ಸಾಹಿತ್ಯವನ್ನು ಬೆಳೆಸಿದರು. 1686ರಲ್ಲಿ ಔರಂಗಜೇಬನ ನೀತಿಯಿಂದ ಈ ರಾಜ್ಯಗಳು ನಾಶವಾಗಿ ಹೈದರಾಬಾದಿನ ನಿಜಾಂ ರಾಜ್ಯಸ್ಥಾಪನೆಯಾದ ಅನಂತರ ಉರ್ದುವಿಗೆ ಪ್ರಾಮುಖ್ಯ ದೊರೆತು ಅದು ಸಾಹಿತ್ಯಭಾಷೆಯಾಯಿತು. ದಕ್ಷಿಣ ಕರ್ನಾಟಕದ ಮೇಲೆ ಮುಸ್ಲಿಮರ ಪ್ರಭಾವ ಗಣನೀಯವಾಗಿ ಬಿದ್ದುದು 18ನೆಯ ಶತಮಾನದ ಉತ್ತರಾರ್ಧದಲ್ಲಿ, ಹೈದರ್ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ಆಡಳಿತವರ್ಗದವರ ಕೃಪೆ ಸಂಪಾದಿಸಲು ಹಲವಾರು ಮಂದಿ ಇಸ್ಲಾಮಿಗೆ ಮತಾಂತರ ಹೊಂದಿದ ನಿದರ್ಶನಗಳು ವಿಪುಲವಾಗಿವೆ. ಟಿಪ್ಪುವಿನ ಕಾಲದಲ್ಲಿ ಬಲಾತ್ಕಾರ ಮತಾಂತರವೂ ನಡೆದದ್ದುಂಟು. ಇಷ್ಟಾದರೂ ಕರ್ನಾಟಕದ ಮೇಲೆ ಧಾರ್ಮಿಕವಾಗಿ ಇಸ್ಲಾಮಿನ ಪ್ರಭಾವ ಬಹಳ ಸೀಮಿತವಾಗಿತ್ತು. ಬಹುಮಟ್ಟಿಗೆ ಇವರು ಪ್ರತ್ಯೇಕವಾಗಿಯೇ ಉಳಿದರು. ಹಿಂದು ಮುಸ್ಲಿಮರು ಪರಸ್ಪರವಾಗಿ ಸುಪ್ತವಾಗಿ ಪ್ರಭಾವ ಬೀರಿದರು. ಭಾಷೆ, ಜನಜೀವನ, ವಾಸ್ತುಶಿಲ್ಪ ಮತ್ತು ಕಲೆ– ಈ ಕ್ಷೇತ್ರಗಳಲ್ಲಿ ಇಸ್ಲಾಮೀ ಪ್ರಭಾವ ಸಾಕಷ್ಟು ಮಟ್ಟಿಗೆ ಪ್ರಭಾವ ಬೀರಿದೆ. ಆಡಳಿತ, ಉಡಿಗೆ ತೊಡಿಗೆ, ವ್ಯವಹಾರ, ಊಟ ತಿಂಡಿ ಮುಂತಾದವಕ್ಕೆ ಸಂಬಂಧಿಸಿದಂತೆ ಅನೇಕ ಶಬ್ದಗಳು ಪರ್ಷಿಯನ್ ಮೂಲದಿಂದ ಕನ್ನಡಕ್ಕೆ ಬಂದುವು. ಜಾಗಿರ್, ಕಾನೂನು, ಅರ್ಜಿ, ಮಹಜರ್, ರುಮಾಲು, ಇಜಾರ, ಪಲಾವ್, ಬಿರಿಯಾನಿ, ಹಲ್ವ, ಬರ್ಫಿ– ಇವು ಕೆಲವು ಉದಾಹರಣೆಗಳು. ಹೈದರಾಬಾದ್ ಕರ್ನಾಟಕವೆಂದು ಹೆಸರಾಗಿರುವ ಬಿದರೆ ಗುಲ್ಬರ್ಗ ಪ್ರದೇಶಗಳಲ್ಲಿ ಉರ್ದುವಿನ ಪ್ರಭಾವವಿತ್ತು. ಇತ್ತೀಚಿನವರೆಗೂ ಅಲ್ಲಿ ವಿದ್ಯಾಭ್ಯಾಸ ಆ ಭಾಷೆಯಲ್ಲೇ ನಡೆಯುತ್ತಿತ್ತು. ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಹಲವಾರು ಪ್ರದೇಶಗಳ ಜನತೆ ಮುಸ್ಲಿಂ ಸಂತರಿಗೆ, ಅವರ ದರ್ಗಾ ಅಥವಾ ಸಮಾಧಿಗಳಿಗೆ ಗೌರವ ತೋರುವುದು ಮತ್ತು ಮೊಹರಂ ಹಬ್ಬದಲ್ಲಿ ಭಾಗವಹಿಸುವುದು ಇಂದಿಗೂ ಬಳಕೆಯಲ್ಲಿರುವ ಸಂಪ್ರದಾಯ. ಬಿಜಾಪುರ

ಮತ್ತು ಗುಲ್ಬರ್ಗ ಪ್ರದೇಶಗಳಲ್ಲಿ, ಬೆಂಗಳೂರು ಮತ್ತು ಶ್ರೀರಂಗಪಟ್ಟಣಗಳಲ್ಲಿ ಇವರ ವಾಸ್ತುಶೈಲಿಯ ಉತ್ತಮ ಪ್ರತೀಕಗಳು ಉಳಿದುಬಂದಿವೆ (**ನೋಡಿ– ಕರ್ನಾಟಕದ–ವಾಸ್ತುಶಿಲ್ಪ**). ಚಿತ್ರಕಲೆಯಲ್ಲಿ ಪರ್ಷಿಯನ್ ಶೈಲಿಯನ್ನು ಇವರು ಕರ್ನಾಟಕಕ್ಕೆ ತಂದರು. ಮಹಮ್ಮದ್ ಖಲೀಲನ ನೌರಸ್ ನಾಮಾ ಮತ್ತು ಶ್ರೀರಂಗಪಟ್ಟಣದ ಅರಮನೆಯ ವರ್ಣಚಿತ್ರಗಳು ಇದಕ್ಕೆ ನಿದರ್ಶನಗಳು. ಶ್ರೀಗಂಧ ಮತ್ತು ಬೀಟೆ ಮರದ ವಸ್ತುಗಳ ಮೇಲೆ ದಂತದ ತುಣುಕುಗಳನ್ನು ಹುದುಗಿಸಿ ಅಲಂಕರಿಸುವ ಕೆತ್ತಿಕೂಡಣೆ (ಇನ್–ಲೇ) ಕಲೆ ಇವರ ಕೊಡುಗೆ. ಈಗಲೂ ಇದು ಮೈಸೂರಿನಲ್ಲಿ ಪ್ರಚಲಿತವಾಗಿದೆ. ಒಂದು ಲೋಹದ ತಗಡಿನ ಮೇಲೆ ಮತ್ತೊಂದು ಲೋಹದ ಕಂಬಿಗಳನ್ನು ಹೊದ್ದಿಸಿ ಅಲಂಕರಿಸುವ ಡಮಾಸ್ಕನಿಂಗ್ ಕಲೆ ಇವರ ಕೊಡುಗೆ. ಈಗಲೂ ಸುಪ್ರಸಿದ್ಧವಾದ ಬೀದರಿ ಪಾತ್ರೆಗಳು (ಬಿದ್ರಿವೇರ್) ಬೀದರ್ ಪ್ರದೇಶದಲ್ಲಿ ತಯಾರಾಗುತ್ತವೆ. ಅರೇಬಿಯ ಮತ್ತು ಪರ್ಷಿಯಗಳಿಂದ ಮುಸ್ಲಿಮರು ಭಾರತಕ್ಕೆ ಮತ್ತು ಕರ್ನಾಟಕಕ್ಕೆ ತಂದ ಸಸ್ಯಗಳಲ್ಲಿ ಸೂಫಿ ಸಂತ ಬಾಬಾಬುಡನ್ ತಂದ ಕಾಫಿ ಮುಖ್ಯವಾದ್ದು. ಇದು ಈಗ ಕರ್ನಾಟಕದ ವಿಶಿಷ್ಟ ಬೆಳೆಯಾಗಿದೆ.

ಭಾರತಕ್ಕೆ ಕ್ರೈಸ್ತಧರ್ಮ ಕ್ರಿಸ್ತಶಕೆಯ ಆದಿಯಲ್ಲೇ ಬಂದಿತ್ತಾದರೂ ಅದರ ಪ್ರಭಾವ ಬೆಳೆದುದು ಮತ್ತು ಕರ್ನಾಟಕಕ್ಕೆ ಪ್ರವೇಶಿಸಿದುದು 14ನೆಯ ಶತಮಾನದಲ್ಲಿ. ಡೊಮಿನಿಕನ್ ಪಂಥದವರು ತಮ್ಮ ಸುವಾರ್ತೆಗಳನ್ನು 1335ರಲ್ಲಿ ಮೈಸೂರು ರಾಜ್ಯದೊಳಗೆ ಪ್ರಚಾರ ಮಾಡಿದರು. ಬೆಂಗಳೂರಿನ ಬಳಿಯ ಆನೇಕಲ್ಲಿನಲ್ಲಿ 1400ರ ಕ್ರೈಸ್ತ ಸಮಾಧಿಶಿಲೆಯೊಂದು ಸಿಕ್ಕಿದೆ. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಪೋರ್ಚುಗೀಸರ ಮೂಲಕ ಈ ಧರ್ಮ ಕರ್ನಾಟಕದಲ್ಲಿ ಹರಡಿತು. ಕೆಳದಿಯ ಶಿವಪ್ಪನಾಯಕನ ಸಣ್ಣ ರಾಜ್ಯದಲ್ಲಿ 30,000 ಕ್ರೈಸ್ತರಿದ್ದುದಾಗಿ ತಿಳಿದುಬರುತ್ತದೆ. 16–17ನೆಯ ಶತಮಾನಗಳಲ್ಲಿ ಯುರೋಪಿನ ವರ್ತಕರೊಂದಿಗೆ ಈ ಧರ್ಮ ಭಾರತ ಮತ್ತು ಕರ್ನಾಟಕಗಳಲ್ಲಿ ಪ್ರಭಾವ ಗಳಿಸಲಾರಂಭಿಸಿತು. ಉತ್ತರ ಕರ್ನಾಟಕದಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಮೊದಲು ಪ್ರಬಲವಾಗಿ ಅನಂತರ ಎಲ್ಲ ಭಾಗಗಳಿಗೂ ಕ್ರೈಸ್ತರ ಚಟುವಟಿಕೆ ಹರಡಿತು. ಬ್ರಿಟಿಷರ ಅಧಿಕಾರ ಸ್ಥಾಪಿತವಾದ ಅನಂತರ ಕ್ರೈಸ್ತ ಪಾದ್ರಿಗಳ ಪ್ರಭಾವ ಬೆಳೆಯಿತು. ಶಾಲೆ, ಆಸ್ಪತ್ರೆ ಮುಂತಾದವನ್ನು ತೆರೆದು ಜನಸೇವಾ ನಿರತರಾಗಿ ಇವರು ಲಕ್ಷಾಂತರ ಮಂದಿಯನ್ನು ಆಕರ್ಷಿಸಿ ಮತಾಂತರಿಸಿದರು. ಇದರಲ್ಲಿ ಅನೇಕ ಸಂತರೂ ಪಾದ್ರಿಗಳೂ ನಿಸ್ಪೃಹಸೇವೆಯಿಂದಲೂ ಕರುಣಾಪೂರಿತ ನಡೆವಳಿಕೆಯಿಂದಲೂ ಜನರ ಪ್ರೀತಿ ಗಳಿಸಿದ್ದಾರೆ. ರಾಜಾಶ್ರಯ, ಮಿಷನರಿಗಳ ಚಟುವಟಿಕೆ ಮುಂತಾದ ಕಾರಣಗಳಿಂದಲೂ ಇಂಗ್ಲಿಷ್ ವಿದ್ಯಾಭ್ಯಾಸ ಪದ್ಧತಿ ಮತ್ತು ಆಡಳಿತ ನೀತಿಗಳಿಂದಲೂ ಕ್ರೈಸ್ತರ ಪ್ರಭಾವ ಬೆಳೆಯಿತು. ಜನಜೀವನದ ಎಲ್ಲ ರಂಗಗಳಲ್ಲೂ ಇದರ ಪ್ರಭಾವವನ್ನು ಕಾಣಬಹುದು.

ಸಂಸ್ಕೃತ ಸಾಹಿತ್ಯಕ್ಕೆ ವಿಜಯನಗರೋತ್ತರ ಕಾಲದಲ್ಲಿ ಕೆಳದಿ ಮತ್ತು ಮೈಸೂರು ರಾಜ ಮನೆತನಗಳೂ ಕರ್ನಾಟಕದ ವಿವಿಧ ಧಾರ್ಮಿಕ ಮಠಗಳೂ ಪ್ರೋತ್ಸಾಹ ನೀಡಿದುವು. ಈ ಕಾಲದ ಹೆಚ್ಚಿನ ಗ್ರಂಥಗಳು ಆಯಾ ಧರ್ಮ ಮತ್ತು ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದವು. ಶುದ್ಧ ಸಾಹಿತ್ಯಕೃತಿಗಳು ವಿರಳ. ಮಠಗುರುಗಳ ಜೀವನಚರಿತ್ರೆ ಮತ್ತು ಭಕ್ತಿಸ್ತೋತ್ರಗಳು ಈ ಕಾಲದ ವಿಶಿಷ್ಟ ರಚನೆಗಳು.

18ನೆಯ ಶತಮಾನದ ಉತ್ತರಾರ್ಧದಿಂದ ಈಚೆಗೆ ಸಂಸ್ಕೃತ ಸಾಹಿತ್ಯರಂಗದಲ್ಲಿ ಕೆಲವು ಗಮನಾರ್ಹ ಕಾರ್ಯಗಳು ಜರುಗಿವೆ. ಅನೇಕ ಸಂಸ್ಕೃತ ಶಾಸ್ತ್ರ ಮತ್ತು ಕಾವ್ಯಕೃತಿಗಳು ಕನ್ನಡಕ್ಕೆ ಅನುವಾದವಾಗಿವೆ; ಅಥವಾ ಸಂಸ್ಕೃತ ಮೂಲವನ್ನನುಸರಿಸಿದ ಕನ್ನಡ ಕೃತಿಗಳು ಬಂದಿವೆ.

ಉತ್ತರ ಕರ್ನಾಟಕ ಪ್ರದೇಶಗಳಲ್ಲಿಯೂ ಹಲವಾರು ಶಾಸ್ತ್ರ ಮತ್ತು ಸಾಹಿತ್ಯ ಕೃತಿಗಳು ರಚಿತವಾದುವು. ಧಾರವಾಡದ ದಂಡವತಿ ಮಹಾದೇವಶಾಸ್ತ್ರಿ, ಉಪ್ಪಿನ ಬೆಟಗೇರಿ ನಾಗೇಶಶಾಸ್ತ್ರಿ, ಮಳಗಿ ವೇದವ್ಯಾಸಾಚಾರ್ಯ, ವೈದ್ಯನಾಥಶಾಸ್ತ್ರಿ, ರೆಡ್ಡಿ ರಂಗಾಚಾರ್ಯ, ಗೋಕರ್ಣದ ದೇವರಾತ ಮಹರ್ಷಿ, ಶಿರಸಿಯ ಕಪಾಲೀಶಾಸ್ತ್ರಿ, ಪಾಂಪ್ರಿ ತಾತಾಚಾರ್ಯ, ಚಿಕ್ಕೋಡಿ ಭಗವಂತರಾಯರು ಮೊದಲಾದವರು ವೇದ ಮತ್ತು ಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಕೃತಿಗಳನ್ನೂ ವ್ಯಾಖ್ಯಾನಗಳನ್ನೂ ರಚಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸಮಕಾಲೀನ ಸಾಹಿತ್ಯ ಕೊಡುಗೆ ಬಹುವಾಗಿ ದ್ವೈತ ಮತ್ತು ಜೈನಧರ್ಮಗಳ ಸಮರ್ಥನೆಗೆ ಮೀಸಲಾಗಿದೆ. ಉಡುಪಿ ಮತ್ತು ಮೂಡಬಿದರೆಗಳು ಈ ಮತಗಳ ಕೇಂದ್ರಗಳು.

ಈ ಕಾಲದ ಕನ್ನಡಸಾಹಿತ್ಯದಲ್ಲಿ ವೈಯಕ್ತಿಕ ಸಾಧನೆಗಳು ಪ್ರಧಾನವಾಗಿದ್ದು, ಸಾಮೂಹಿಕ ಚಟುವಟಿಕೆ ಕಾಣಬರುವುದಿಲ್ಲ. ವಿಜಯನಗರ ಸಾಮ್ರಾಜ್ಯದ ಪತನಾ ನಂತರ ಸಾಹಿತಿಗಳಿಗೆ ರಾಜಾಶ್ರಯ ತಪ್ಪಿತು. ಹಲಕೆಲವು ಸಣ್ಣ ರಾಜರೂ ಅನಂತರ ಮೈಸೂರರಸರೂ ಮುಖ್ಯವಾಗಿ ಚಿಕ್ಕದೇವರಾಜ ಒಡೆಯರ ಅನಂತರದ ಅರಸರೂ ಸಾಹಿತ್ಯಾಭಿಮಾನಿಗಳಾಗಿದ್ದು ಸಾಹಿತಿಗಳಿಗೆ ಪೋಷಣೆ ನೀಡುತ್ತಿದ್ದುದೇನೋ ನಿಜ. ಆದರೂ ನಾಡಿನ ವಿವಿಧ ಭಾಗಗಳಲ್ಲಿದ್ದ ಸ್ವತಂತ್ರ ಲೇಖಕರ ಕಾಣಿಕೆಯೂ ಗಮನಾರ್ಹವಾಗಿದೆ.

ಚಿಕ್ಕದೇವರಾಜ ಒಡೆಯರ ಮುಂಚಿನ ಕಾಲದ ಸಾಹಿತ್ಯ ಕೃತಿಗಳಲ್ಲಿ ಎದ್ದುನಿಲ್ಲುವ ಎರಡು ವಾರ್ಧಕಷಟ್ಪದೀ ಕಾವ್ಯಗಳಲ್ಲಿ ಒಂದು ಲಕ್ಷ್ಮೀಶನ ಜೈಮಿನಿ ಭಾರತ ; ಮತ್ತೊಂದು ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ.

ಬ್ರಾಹ್ಮಣ–ವೀರಶೈವ ಕವಿಗಳಿಗೆ ಷಟ್ಪದಿ ಪ್ರಿಯವಾದ ಸಾಹಿತ್ಯ ಪ್ರಕಾರವಾಗಿದ್ದರೆ, ಜೈನರಲ್ಲಿ ಸಾಂಗತ್ಯಕ್ಕೆ ಪ್ರಾಧಾನ್ಯವಿತ್ತು. ಬ್ರಾಹ್ಮಣ, ವೀರಶೈವರಿಂದಲೂ ಸಾಂಗತ್ಯದ ಕೃತಿ ರಚನೆ ನಡೆದಿತ್ತು.

17ನೆಯ ಶತಕದ ಕೊನೆಯ ಭಾಗ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟ. 1672ರಲ್ಲಿ ಸಿಂಹಾಸನವನ್ನೇರಿದ ಚಿಕ್ಕದೇವರಾಜರು ಸ್ವತಃ ಸಾಹಿತಿ ಮತ್ತು ಸಾಹಿತಿಗಳ ಪೋಷಕ. ಅವರ ಕೃತಿಗಳಲ್ಲಿ ಮುಖ್ಯವಾದವು ಗೀತಗೋಪಾಲ ಮತ್ತು ಚಿಕ್ಕದೇವರಾಜ ಬಿನ್ನಪ. ಇವೆರಡನ್ನೂ ಅವರ ಆಶ್ರಿತ ತಿರುಮಲಾರ್ಯ ರಚಿಸಿರಬಹುದೆಂಬ ಊಹೆ ಇದೆ. ತಿರುಮಲಾರ್ಯ (1646–1706) ಚಿಕ್ಕದೇವರಾಜ ವಿಜಯ ಮತ್ತು ಚಿಕ್ಕದೇವರಾಜ ವಂಶಾವಳಿ ಎಂಬೆರಡು ಐತಿಹಾಸಿಕ ಗ್ರಂಥಗಳನ್ನೂ ಅಪ್ರತಿಮವೀರ ಚರಿತವೆಂಬ ಅಲಂಕಾರಗ್ರಂಥವನ್ನೂ ರಚಿಸಿದ್ದಾನೆ.

ಒಡೆಯರ ಇನ್ನೊಬ್ಬ ಮಂತ್ರಿ ಚಿಕುಪಾಧ್ಯಾಯ ಸುಮಾರು 30 ಗ್ರಂಥಗಳನ್ನು ಗದ್ಯ, ಸಾಂಗತ್ಯ ಮತ್ತು ಚಂಪೂರೀತಿಗಳಲ್ಲಿ ರಚಿಸಿದ್ದಾನೆ. ತನ್ನ ಹೆಚ್ಚಿನ ಕೃತಿಗಳಲ್ಲಿ ಅರಸರ ವಂಶಾವಳಿ ವಿಜಯಗಳನ್ನೂ ಶ್ರೀವೈಷ್ಣವ ತತ್ತ್ವಗಳನ್ನೂ ಪ್ರತಿಪಾದಿಸುತ್ತಾನೆ. ವಿಷ್ಣುಪುರಾಣ, ದಿವ್ಯಸೂರಿಚರಿತೆ, ಅರ್ಥಪಂಚಕ, ತಿರುವಾಯ್ಮೊ__ ಮತ್ತು ಅನೇಕ ಸ್ಥಳ ಮಾಹಾತ್ಮ್ಯಗಳು ಈತನ ರಚನೆಗಳು.

ತಿರುಮಲಾರ್ಯನ ಸೋದರನಾದ ಸಿಂಗರಾರ್ಯ (1680) ಮಿತ್ರವಿಂದಾ ಗೋವಿಂದ ಎಂಬ ಹೆಸರಿನಲ್ಲಿ ಶ್ರೀಹರ್ಷನ ಸಂಸ್ಕೃತನಾಟಕ ರತ್ನಾವಳಿಯನ್ನು ರೂಪಾಂತರಿಸಿದ್ದಾನೆ. ಹೊನ್ನಮ್ಮನ ಹದಿಬದೆಯ ಧರ್ಮ (1680), ಶೃಂಗಾರಮ್ಮನ ಪದ್ಮಿನೀಕಲ್ಯಾಣ (1685) ಮತ್ತು ಹೆಳವಕಟ್ಟೆ ಗಿರಿಯಮ್ಮನ ಚಂದ್ರಹಾಸನ ಕಥೆ, ಉದ್ದಾಳಿಕನ ಕಥೆ ಮತ್ತು ಸೀತಾಕಲ್ಯಾಣ (1750) ಈ ಕಾಲದ ಸ್ತ್ರೀಯರ ಕೃತಿಗಳಲ್ಲಿ ಮುಖ್ಯವಾದವು.

ಇದೇ ಸುಮಾರಿನಲ್ಲಿ ಸರ್ವಜ್ಞಕವಿ ತನ್ನ ಸರಳ ಭಾಷೆಯಲ್ಲಿ ಜನಪ್ರಿಯ ವಚನಗಳನ್ನು ರಚಿಸಿದ.

ಅನಂತರ 19ನೆಯ ಶತಮಾನದ ಪ್ರಾರಂಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹದಿಂದ ಪುನಃ ಸಾಹಿತ್ಯಾಭಿವೃದ್ಧಿಯಾದುದು ಕಂಡುಬರುತ್ತದೆ.

ಯಕ್ಷಗಾನ ಸಾಹಿತ್ಯಕ್ಕೆ ಉತ್ತೇಜನ ದೊರಕಿತು. ದಕ್ಷಿಣ ಕನ್ನಡ ಜಿಲ್ಲೆಯ ಪಾರ್ತಿಸುಬ್ಬ ಈ ರಂಗದಲ್ಲಿ ಶ್ರಮಿಸಿದ್ದು ಈ ಕಾಲದಲ್ಲಿ. ಸಂಸ್ಕೃತ ಗ್ರಂಥಗಳ ಭಾಷಾಂತರದಿಂದ ಕನ್ನಡ ಸಾಹಿತ್ಯ ಸಂಪದ್ಭರಿತವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ರಾಮಾಯಣ ಮತ್ತು ಮಹಾಭಾರತದ ಅನುವಾದಗಳು, ಬಸವಪ್ಪಶಾಸ್ತ್ರಿಗಳ ಶಾಕುಂತಲ– ಇವು ಉತ್ತಮ ಕೃತಿಗಳು. ಆಧುನಿಕ ಕನ್ನಡ ಗದ್ಯಸಾಹಿತ್ಯದಲ್ಲಿ ಇದೊಂದು ಪರ್ವಕಾಲ. ದೇವಚಂದ್ರನ ರಾಜಾವಳೀ ಕಥೆ ಐತಿಹಾಸಿಕವಾಗಿ ಗಮನಾರ್ಹ ಕೃತಿ. ಆತನ ಇನ್ನೊಂದು ಕೃತಿ ರಾಮಕಥಾವತಾರ ಚಂಪೂ. ಕೆಂಪುನಾರಾಯಣನ (1823) ಮುದ್ರಾಮಂಜೂಷವೊಂದು ವಿಶಿಷ್ಟ ಶೈಲಿಯ ಕೃತಿ.

ನಂದಳಿಕೆ ಲಕ್ಷ್ಮೀನಾರಾಯಣಪ್ಪನ ಕಾವ್ಯನಾಮ ಮುದ್ದಣ. ಅದ್ಭುತ ರಾಮಾಯಣ, ರಾಮಪಟ್ಟಾಭಿಷೇಕ ಮತ್ತು ರಾಮಾಶ್ವಮೇಧಗಳು ಈತನ ಕೃತಿಗಳು.

ರೆವರೆಂಡ್ ಕಿಟ್ಟೆಲ್, ಬಿ.ಎಲ್.ರೈಸ್, ಇ.ಪಿ.ರೈಸ್, ಕಾಲ್ಡ್‌ವೆಲ್– ಇವರ ಹೆಸರುಗಳನ್ನು ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ಮರೆಯುವಂತಿಲ್ಲ. ಸಾಹಿತ್ಯ ಮತ್ತು ಭಾಷೆಯ ಬೆಳವಣಿಗೆಗೆ ಇವರು ಕೊಡುಗೆಯನ್ನು ಮುಂದುವರಿಸಿದವರು ಎಸ್.ಜಿ.ನರಸಿಂಹಾಚಾರ್ ಮತ್ತು ರಾಮಾನುಜಯ್ಯಂಗಾರ್. ಆರ್.ನರಸಿಂಹಾಚಾರ್ಯರ ಕರ್ನಾಟಕ ಕವಿಚರಿತೆ ಅಮೂಲ್ಯವಾದ ಗ್ರಂಥ. ಕನ್ನಡ ಸಾಹಿತ್ಯ ಸಂಪತ್ತಿನ ಪ್ರಗತಿಗೆ ಇವೆಲ್ಲವೂ ಕಾರಣವಾದುವು.

ಈ ರೀತಿ ಕರ್ನಾಟಕದ 2,000 ವರ್ಷಗಳಿಗೂ ದೀರ್ಘವಾದ ಇತಿಹಾಸ ಮಹತ್ತ್ವಪೂರ್ಣವೂ ವೈಭವೋಪೇತವೂ ಆಗಿದೆ. ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ ಅಪಾರ. ಅದರ ಪಕ್ಷಿನೋಟವನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಆಧುನಿಕ ಕರ್ನಾಟಕವು ಭಾಷಾವಾರು ಆಧಾರಿತವಾಗಿ ರಚನೆಯಾಗಿದ್ದು ಕನ್ನಡ ಮಾತನಾಡುವ ಅಧಿಕ ಜನರನ್ನು ಒಳಗೊಂಡ ಪ್ರದೇಶವಾಗಿದೆ. ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದ ಮಹನೀಯರ ಮತ್ತು ಹೋರಾಟಗಾರರ ಪ್ರಯತ್ನದ ಫಲವಾಗಿ ಹಾಗೂ ಕೇಂದ್ರ ಸರ್ಕಾರ ಕೈಗೊಂಡ ನಿರ್ಧಾರದ ಕಾರಣದಿಂದ ಅಖಂಡ ಕರ್ನಾಟಕ ಅಸ್ತಿತ್ವಕ್ಕೆ ಬಂತು. ಇಂದು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ವಿಕಾಸದಲ್ಲಿ ಕರ್ನಾಟಕ ಉನ್ನತ ಸಾಧನೆಗಳನ್ನು ಮಾಡಿದೆ. ಭಾರತದ ಪ್ರಮುಖ ರಾಜ್ಯಗಳಲ್ಲಿ ಒಂದಾದ ಕರ್ನಾಟಕ ರಾಜಕೀಯವಾಗಿ ಮಾತ್ರವಲ್ಲದೆ ಆರ್ಥಿಕವಾಗಿಯೂ ಪ್ರಮುಖ ಹೆಜ್ಜೆಗಳನ್ನಿಟ್ಟಿದೆ. ಬೆಂಗಳೂರು ಭಾರತದ ಸಿಲಿಕಾನ್ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. (ಬಿ.ಕೆ.ಜಿ.)

**ಕರ್ನಾಟಕ ಸ್ವಾತಂತ್ರ್ಯ ಚಳವಳಿ :** ಬ್ರಿಟಿಷರ ಆಕ್ರಮಣ ಕಾಲದಿಂದಲೇ ಒಂದು ದೃಷ್ಟಿಯಲ್ಲಿ ಆರಂಭವಾಗಿ, 19ನೆಯ ಶತಮಾನದ ನಡುಗಾಲದಿಂದ ಕ್ರಮೇಣ ತೀವ್ರವಾಗಿ, 20ನೆಯ ಶತಮಾನದಲ್ಲಿ ವ್ಯಾಪಕವಾಗಿ ಹಬ್ಬಿ, 1947ರಲ್ಲಿ ಯಶಸ್ವಿಯಾಗಿ ಪರ್ಯವಸಾನ ಹೊಂದಿನ ಭಾರತೀಯ ಸ್ವಾತಂತ್ರ್ಯ ಚಳವಳಿಯ ಅಂಗವಾಗಿದ್ದೂ ವಿಶಿಷ್ಟವಾಗಿ ವಿಕಾಸಗೊಂಡ ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ಸ್ಥೂಲವಾಗಿ ಮೂರು ಕಾಲಗಳಾಗಿ ವಿಂಗಡಿಸಬಹುದಾಗಿದೆ. ಅಂತಾರಾಷ್ಟ್ರೀಯವೆನ್ನಬಹುದಾದ ರೀತಿಯಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟಗಳದು ಮೊದಲನೆಯ ಘಟ್ಟ. ಬ್ರಿಟಿಷರು ಭಾರತದಲ್ಲಿ ಭದ್ರವಾಗಿ ನೆಲೆಗೊಳ್ಳುತ್ತಿದ್ದ ಕಾಲದಲ್ಲಿ ಇವರ ಆಡಳಿತವನ್ನು ಪ್ರತಿಭಟಿಸಿ ಅಲ್ಲಲ್ಲಿ ಸಂಭವಿಸಿದ ಸಶಸ್ತ್ರ ಬಂಡಾಯಗಳದು ಎರಡನೆಯ ಘಟ್ಟ. ಮುಂದೆ, ಸುಮಾರು ಮುಕ್ಕಾಲು ಶತಮಾನದ ಅನಂತರ, ಸಾರ್ವತ್ರಿಕವಾಗಿ ಪರಿಣಮಿಸಿ ಬ್ರಿಟಿಷರ ಉಚ್ಚಾಟನೆಗೆ ಕಾರಣವಾದ ಅಹಿಂಸಾತ್ಮಕ ಸಮರದ್ದು ಮೂರನೆಯ ಘಟ್ಟ. ಈ ಮೂರು ಘಟ್ಟಗಳನ್ನೂ ಈ ಲೇಖನದಲ್ಲಿ ವಿವೇಚಿಸಲಾಗಿದೆ.

18ನೆಯ ಶತಮಾನ ಮುಗಿಯುವ ವೇಳೆಗೆ ಆಗಲೇ ಬ್ರಿಟಿಷರು ಭಾರತದ ಭಾವೀ ಆಡಳಿತಗಾರರು ಎಂಬ ಅಂಶ ಸ್ಪಷ್ಟವಾಗಿತ್ತು. 16–17ನೆಯ ಶತಮಾನಗಳಲ್ಲಿ ಸಮಗ್ರ ಭಾರತವನ್ನಾಳಿ (ದಕ್ಷಿಣದ ಕೆಲವು ಪ್ರದೇಶಗಳು ಹೊರತು) ಮೆರೆದ ಮೊಗಲ್ ಸಾಮ್ರಾಜ್ಯ 18ನೆಯ ಶತಮಾನದ ಆರಂಭ ಕಾಲಕ್ಕೇ ಕ್ಷೀಣಿಸಿತು. ಮರಾಠರು ಆ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಲೆತ್ನಿಸಿ ವಿಫಲರಾದರು; ಮೂರನೆಯ ಪಾಣಿಪಟ್ ಕದನದಲ್ಲಿ (1761) ಅವರ ಪ್ರಯತ್ನಗಳೆಲ್ಲ ಮಣ್ಣುಗೂಡಿದುವು. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದಿದ್ದ ಇಂಗ್ಲಿಷರು ಭಾರತದ ರಾಜಕೀಯ ಗೊಂದಲವನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಂಡರು. 1757ರಲ್ಲಿ ನಡೆದ ಪ್ಲಾಸಿ ಕದನದ ಅನಂತರ ಬಹು ಬೇಗ ಬಂಗಾಳ ಅವರ ಸ್ವಾಧೀನವಾಯಿತು. ದಕ್ಷಿಣ ಭಾರತದಲ್ಲೂ ಅವರು ದೇಶೀಯರ ಪಕ್ಷ–ಪ್ರತಿಪಕ್ಷ ಹೋರಾಟಗಳಲ್ಲಿ ಭಾಗವಹಿಸಿದರು. 1760ರಲ್ಲಿ ನಡೆದ ವಂಡಿವಾಷ್ ಕದನದಲ್ಲಿ ಅವರು ಗಳಿಸಿದ ವಿಜಯದ ಫಲವಾಗಿ ಅಲ್ಲೂ ಅವರೇ ಆಳರಸರಾಗುವುದು ಖಂಡಿತವೆಂಬುದು ಸ್ಪಷ್ಟವಾಯಿತು. ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಗೆ ಈ ಘಟನೆಗಳೇ ಹಿನ್ನೆಲೆಯೆನ್ನಬಹುದು.

ಕೊಂಚಕೊಂಚವಾಗಿ ಪ್ರಬಲಿಸಿ ಇಡೀ ಭಾರತವನ್ನೇ ಸ್ವಾಧೀನಪಡಿಸಿಕೊಳ್ಳುತ್ತಿದ್ದ ಬ್ರಿಟಿಷರನ್ನು ಹೊಡೆದೋಡಿಸುವ ಪ್ರಯತ್ನದಲ್ಲಿ 18ನೆಯ ಶತಮಾನದ ಉತ್ತರಾರ್ಧ ಕಾಲದಲ್ಲೇ ನಿರತರಾಗಿದ್ದವರೆಂದರೆ ಮೈಸೂರಿನ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್

ಹೈದರ್ ಅಲಿ

ಮೊದಮೊದಲು ಹೈದರನಿಗೆ ಇಂಗ್ಲಿಷರ ಬಗ್ಗೆ ದ್ವೇಷವೇನೂ ಇರಲಿಲ್ಲ. ಆದರೆ ಮೊಗಲ್ ಶಕ್ತಿಯ ದಿವಾಳಿತನದಿಂದಾಗಿ ಛಿದ್ರವಾಗಿದ್ದ ಪ್ರದೇಶ ಗಳನ್ನು ಗೆದ್ದುಕೊಳ್ಳುವುದರಲ್ಲಿ ಆಸಕ್ತರಾಗಿದ್ದ ದೇಶೀಯ ಅಧಿಪತಿಗಳ ಶಕ್ತಿವರ್ಧನವನ್ನು ಇಂಗ್ಲಿಷರು ಸಹಿಸಲಿಲ್ಲ. ಇಂಗ್ಲಿಷರ ಪ್ರಾಬಲ್ಯದಿಂದ ಸಂಭವಿಸಲಿದ್ದ ವಿಪತ್ತನ್ನು ಹೈದರ್ ಕಂಡುಕೊಂಡ. ಇಂಗ್ಲಿಷರನ್ನೆದುರಿಸಿ ಕಾದಾಡಲು ಹೈದರಾಬಾದಿನ ನಿಜಾಮನೊಂದಿಗೂ ಮರಾಠರೊಂದಿಗೂ ಸಹಕರಿಸಲು ಹೈದರ್ ಸಿದ್ಧನಾಗಿದ್ದನಾದರೂ ಅವರು ಮೊದಲು ಇವನ ಸ್ನೇಹಹಸ್ತವನ್ನು ಸ್ವೀಕರಿಸಲಿಲ್ಲ. ಆದರೂ ಹೈದರ್ ಉಪಾಯದಿಂದ ಅವರನ್ನು ಇಂಗ್ಲಿಷರಿಂದ ಬೇರ್ಪಡಿಸಿ ತನ್ನತ್ತ ಸೆಳೆದುಕೊಂಡ. ನಿಜಾಮನೊಂದಿಗೆ ಸೇರಿ ಇಂಗ್ಲಿಷರನ್ನು ಕದನವೊಂದರಲ್ಲಿ ಸೋಲಿಸಿದ. ಆದರೆ ಈ ವಿಜಯ ತಾತ್ಕಾಲಿಕವಾಯಿತು. ನಿಜಾಮ ಜಾರಿಕೊಂಡು ಬ್ರಿಟಿಷರೊಂದಿಗೆ ರಾಜಿ ಮಾಡಿಕೊಂಡ. ಹೈದರನೂ ವಿಧಿಯಿಲ್ಲದೆ ಅವರೊಂದಿಗೆ ಕೌಲು ಮಾಡಿಕೊಳ್ಳಬೇಕಾಯಿತು. ಏತನ್ಮಧ್ಯೆ ಹೈದರನ ಸೇನೆಗಳು ಮರಾಠರೊಂದಿಗೆ ಯುದ್ಧಮಾಡಬೇಕಾಗಿ ಬಂದಾಗ ಇಂಗ್ಲಿಷರು ಅವನಿಗೆ ಸಹಾಯ ಮಾಡಬೇಕಾಗಿತ್ತು. ಆದರೆ ಇಂಗ್ಲಿಷರು ದ್ರೋಹ ಬಗೆದರು. ಕೌಲಿನ ಷರತ್ತನ್ನು ಮುರಿದರು. ಮರಾಠರು ದೇಶವನ್ನು ಕೊಳ್ಳೆಹೊಡೆದು ಹಿಂದುರಿಗಿದರು. ಇಂಗ್ಲಿಷರ ಬಗ್ಗೆ ಹೈದರನಿಗೆ ಯಾವ ಪ್ರೀತಿಯೂ ಉಳಿಯುವುದು ಸಾಧ್ಯವಿರಲಿಲ್ಲ. ಅವನು ಇಂಗ್ಲಿಷರ ಕಡುದ್ವೇಷಿಯಾದ. ಅವರನ್ನು ಇಲ್ಲಿಂದ ಓಡಿಸುವುದೇ ಅವನ ಮುಖ್ಯ ಸಂಕಲ್ಪವಾಯಿತು. ಮುಂದೆ ಹೈದರ್ ಮತ್ತೆ ನಿಜಾಮನನ್ನೂ ಮರಾಠರನ್ನೂ ಸೇರಿಸಿಕೊಂಡು ಇಂಗ್ಲಿಷರನ್ನು ಓಡಿಸಲುದ್ಯುಕ್ತನಾದ. ಆದರೆ ಆ ವೇಳೆಗೆ ಯೂರೋಪಿನಲ್ಲಿ ಇಂಗ್ಲೆಂಡಿಗೂ ಫ್ರಾನ್ಸಿಗೂ ನಡುವೆ ಆರಂಭವಾದ ಯುದ್ಧದಿಂದಾಗಿ ಭಾರತದಲ್ಲೂ ಈ ಎರಡು ಪಕ್ಷಗಳೂ ಕಾದಾಡಲಾರಂಭಿಸಿದುವು. ಇಂಗ್ಲಿಷರ ಕೈ ಮೇಲಾಯಿತು. ಭಾರತದಲ್ಲಿ ಫ್ರೆಂಚರು ದುರ್ಬಲರಾದುದರಿಂದ ಹೈದರನಿಗಿದ್ದ ಆಸರೆ ತಪ್ಪುವಂತಾಯಿತು. ಆದರೂ ಹೈದರ್ ಚಾಣಾಕ್ಷತನದಿಂದ ನಿಜಾಮನೊಂದಿಗೂ ಮರಾಠರೊಂದಿಗೂ ಸಖ್ಯ ಬೆಳೆಸಿ ಇಂಗ್ಲಿಷರನ್ನೆದುರಿಸುತ್ತಲೇ ಇದ್ದ. ಇಂಗ್ಲಿಷರೂ ಇವರ ಸಂಘಟನೆಯನ್ನು ಮುರಿಯಲು ನಾನಾ ತಂತ್ರಗಳನ್ನು ಬಳಸಿ ಗೆದ್ದರು. ಇಂಗ್ಲಿಷರನ್ನು ಉಚ್ಚಾಟಿಸಬೇಕೆಂಬ ತನ್ನ ಕನಸು ನನಸಾಗಿಯೇ ಹೈದರ್ ಅಕಾಲ ಮರಣಕ್ಕೀಡಾದ.

ಆದರೆ ಅನಂತರ ಟಿಪ್ಪು ತನ್ನ ತಂದೆಯ ಹೋರಾಟವನ್ನು ಮುಂದುವರಿಸಿದ. ಹಿಂದೂಸ್ತಾನವನ್ನು ಇಂಗ್ಲಿಷರ ಹಿಡಿತದಿಂದ ತಪ್ಪಿಸಬೇಕೆಂಬುದೇ ಟಿಪ್ಪುವಿಗೆ ಹೈದರನ

ಟಿಪ್ಪು ಸುಲ್ತಾನ್

ಚರಮಸಂದೇಶವಾಗಿತ್ತು. ಆದರೆ 1783ರಲ್ಲಿ ಯುರೋಪಿನಲ್ಲಿ ಸಹಿ ಹಾಕಲಾದ ವರ್ಸೇಲ್ಸ್ ಕೌಲಿನಿಂದ ಫ್ರೆಂಚರಿಗೂ ಇಂಗ್ಲಿಷರಿಗೂ ನಡುವಣ ವೈರ ಕೊನೆಗೊಂಡಿತು. ಟಿಪ್ಪುವೂ ನಿಜಾಮನೂ ಮರಾಠರೂ ಒಂದಾಗಿ ಹೋರಾಡಲಾರದೆ ಹೋದರು. ಪರಸ್ಪರ ದ್ವೇಷಾಸೂಯೆಗಳೂ ಇಂಗ್ಲಿಷರು ಯಶಸ್ವಿಯಾಗಿ ಅನುಸರಿಸಿದ ಒಡೆದು ಆಳುವ ತಂತ್ರವೂ ಇವರ ಸಂಘಟನೆಯ ವೈಫಲ್ಯಕ್ಕೆ ಮುಖ್ಯ ಕಾರಣ. ಇಂಗ್ಲಿಷರೊಂದಿಗೆ ಆತ ಏಕಾಕಿಯಾಗಿ ಹೋರಾಡಬೇಕಾಗಿ ಬಂತು. ಟಿಪ್ಪು ಮೂರನೆಯ ಮೈಸೂರು ಯುದ್ಧದಲ್ಲಿ ಸೋತು ಅರ್ಧರಾಜ್ಯವನ್ನೇ ಬ್ರಿಟಿಷರಿಗೆ ಕೊಡಬೇಕಾಯಿತು. ಬ್ರಿಟಿಷರ ಬೆಂಬಲಿಗರಾಗಿದ್ದ ನಿಜಾಮನಿಗೂ ಮರಾಠರಿಗೂ ಕೆಲವು ಪ್ರಾಂತ್ಯಗಳನ್ನು ಕೊಡಬೇಕಾಯಿತು. ಅದಕ್ಕಿಂತಲೂ ಹೆಚ್ಚು ಅಪಮಾನಕರ ಪ್ರಸಂಗವೆಂದರೆ, ಮೂರು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಪರಿಹಾರದ್ರವ್ಯವನ್ನು ಕೊಡಲೊಪ್ಪಿ, ಅದರರ್ಧವನ್ನು ಆಗಲೇ ಸಲ್ಲಿಸಿ, ಉಳಿದರ್ಧಕ್ಕಾಗಿ ತನ್ನೆರಡು ಮಕ್ಕಳನ್ನು ಇಂಗ್ಲಿಷರಿಗೆ ಒತ್ತೆಯಾಗಿ ಒಪ್ಪಿಸಬೇಕಾದದ್ದು. ಈ ತೇಜೋವಧೆಯನ್ನು ಟಿಪ್ಪು ಸಹಿಸಲಾರದೆ ಹೋದ. ಹೇಗೂ ಆ ಹಣವನ್ನು ಅವರಿಗೆ ಸಲ್ಲಿಸಿ ಮಕ್ಕಳನ್ನು ಕರೆಸಿಕೊಂಡ. ಆದರೆ



ಧೋಂಡಿಯ ವಾಘನ ಶಕ್ತಿ

ಇಂಗ್ಲಿಷರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಹಠ ಬೆಳೆಯಿತು. ಇದರ ಪರಿಣಾಮವೇ ನಾಲ್ಕನೆಯ ಮೈಸೂರು ಯುದ್ಧ ಮತ್ತು ಟಿಪ್ಪುವಿನ ಮರಣ (1799). ಅವನ ಸಾವಿನಿಂದ ಮೈಸೂರು ಹರಿದು ಹಂಚಿಹೋಯಿತು.

**ಸಶಸ್ತ್ರ ಬಂಡಾಯಗಳು :** ಕರ್ನಾಟಕದ ಇತರ ಕಡೆಗಳಲ್ಲಿ ಪ್ರತಿಭಟನೆ ಮುಂದುವರಿಯಿತು : ಉತ್ತರ ಕರ್ನಾಟಕದಲ್ಲಿ ಬ್ರಿಟಿಷರನ್ನು ಮೊದಲು ಪ್ರತಿಭಟಿಸಿದವನು ಧೋಂಡಿಯ ವಾಘ್. ಈತ ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯವ, ಶೂರ, ಸಾಹಸಿ ; ಚಿಕ್ಕವಯಸ್ಸಿನಲ್ಲೇ ಯುದ್ಧವಿದ್ಯೆ ಕಲಿತು ಎಲ್ಲರ ಮೆಚ್ಚುಗೆ ಗಳಿಸಿದ. 1780ರಲ್ಲಿ ಹೈದರನ ಸೈನ್ಯಕ್ಕೆ ಸೇರಿದ. ಕೊಂಚ ಕಾಲ ಅಲ್ಲಿದ್ದು ತರಬೇತಿ ಪಡೆದ. ಅಲ್ಲಿಂದ ತಪ್ಪಿಸಿಕೊಂಡು ಧಾರವಾಡ ಜಿಲ್ಲೆಗೆ ಹೋಗಿ ಅಲ್ಲಿ ಒಂದು ಸಣ್ಣ ಪಾಳೆಯಪಟ್ಟನ್ನು ನಿರ್ಮಿಸಿಕೊಳ್ಳಲೆತ್ನಿಸಿದ. ಅವನ ಧೈರ್ಯಸಾಹಸಗಳ ವಿಷಯ ಟಿಪ್ಪುವಿನ ಕಿವಿಗೆ ಬಿದ್ದು, ಅವನು ಧೋಂಡಿಯನನ್ನು ತನ್ನ ಸೈನ್ಯಕ್ಕೆ ಆಹ್ವಾನಿಸಿದ. ಶ್ರೀರಂಗಪಟ್ಟಣಕ್ಕೆ ಹೋದಾಗ ಅವನನ್ನು ಬಲಾತ್ಕಾರದಿಂದ ಇಸ್ಲಾಂ ಧರ್ಮಕ್ಕೆ ಸೇರಿಸಿಬಿಟ್ಟರು. 1799ರ ಗೊಂದಲದಲ್ಲಿ ಆತ ಅಲ್ಲಿಂದ ತಪ್ಪಿಸಿಕೊಂಡು ಬಿದನೂರಿಗೆ ಬಂದ. ಅಲ್ಲಿ ಒಂದು ಸಣ್ಣ ಸಂಸ್ಥಾನವನ್ನು

ಆಕ್ರಮಿಸಿಕೊಂಡು ಎರಡು ಲೋಕಗಳಿಗೊಡೆಯ ಎಂಬ ಬಿರುದು ಧರಿಸಿ ಇಂಗ್ಲಿಷರೊಂದಿಗೆ ಹೋರಾಡಲು ಅವರ ವೈರಿಗಳಿಗೆ ಕರೆ ನೀಡಿದ. ಆಗ ಇಂಗ್ಲಿಷರು ಸುಮ್ಮನಿರಲಾಗಲಿಲ್ಲ. ಆರ್ಥರ್ ವೆಲ್ಲೆಸ್ಲಿ ಸೈನ್ಯದೊಂದಿಗೆ ಸಿದ್ಧನಾದ. ಕೋಣಗಲ್ಲಿನಲ್ಲಿ ಕದನ ನಡೆದು ಧೋಂಡಿಯ ಹತನಾದ. 1819ರಲ್ಲಿ ರಾಯಚೂರು ಜಿಲ್ಲೆಯಲ್ಲಿರುವ ಕೊಪ್ಪಳದಲ್ಲೂ ಮರುವರ್ಷ ಬಿದರೆಯಲ್ಲೂ ಸಣ್ಣ ಬಂಡಾಯಗಳು ನಡೆದುವು. ಅವುಗಳನ್ನು ಅಡಗಿಸಲಾಯಿತು.

**ಕಿತ್ತೂರು :** ಕಿತ್ತೂರಿನಲ್ಲಿ ನಡೆದ ಪ್ರತಿಭಟನೆ ದೊಡ್ಡದು. ಅದರ ದೊರೆ (ದೇಸಾಯಿ) ಶಿವಲಿಂಗರುದ್ರಸರ್ಜನ 1824ರ ಸೆಪ್ಟೆಂಬರ್ 11ರಂದು ಕಾಲವಾದ. ಅವನಿಗೆ ಮಕ್ಕಳಿರಲಿಲ್ಲ. ಆದರೆ ಹಿಂದಿನ ದೇಸಾಯಿಯ ಕಾಲದಲ್ಲೇ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಳ್ಳಲಾಗಿತ್ತು.




ಆ ದತ್ತು ಸ್ವೀಕಾರಕ್ಕೆ ಒಪ್ಪಿಗೆ ದೊರಕದಂತೆ ದಖನಿನ ಕಮಿಷನರ್ ಆಗಿದ್ದ ಚಾಪ್ಲಿನನೂ ರಾಜಕೀಯ ನಿಯೋಗಿಯಾಗಿದ್ದ ಥ್ಯಾಕರೆಯೂ ಸನ್ನಾಹ ನಡೆಸಿದರು. ವಾರಸುದಾರರಿಲ್ಲವೆಂಬ ನೆಪದಿಂದ ಕಿತ್ತೂರು ಸಂಸ್ಥಾನವನ್ನು ಸ್ವಾಧೀನಪಡಿಸಿಕೊಳ್ಳುವುದೇ ಅವರ ಉದ್ದೇಶವಾಗಿತ್ತು. ಶಿವಲಿಂಗರುದ್ರಸರ್ಜನ ಮಲತಾಯಿ ರಾಣಿ ಚೆನ್ನಮ್ಮ ಈ ಬಿಕ್ಕಟ್ಟನ್ನು ಶಾಂತಿಯಿಂದ ಪರಿಹರಿಸಲೆತ್ನಿಸಿದಳು ; ಆದರೆ ಅವಳ ಪ್ರಯತ್ನ ಫಲಿಸಲಿಲ್ಲ. ಕೊನೆಗೆ ಕಿತ್ತೂರಿನ ಜನ ಪ್ರತಿಭಟಿಸಿ ನಿಂತರು. ಥ್ಯಾಕರೆಯ ಅವಿಚಾರವರ್ತನೆಯಿಂದ ಪರಿಸ್ಥಿತಿ ಹದಗೆಟ್ಟಿತು. ಆತ ಹತನಾದ. ಕ್ಯಾಪ್ಟನ್ ಬ್ಲಾಕನನ್ನೂ ಕೊಂದರು. ಮದರಾಸು, ಬೊಂಬಾಯಿ, ಷೋಲಾಪುರ, ಮೈಸೂರುಗಳಿಂದ ಬ್ರಿಟಿಷ್ ಪಡೆಗಳು ಕಿತ್ತೂರಿನ ಕಡೆ ನುಗ್ಗಿದುವು. 1824ರ ಡಿಸೆಂಬರ್ 24ರಂದು ಕಾಳಗ ನಡೆಯಿತು. ಬ್ರಿಟಿಷರು ಗೆದ್ದರು. ಚೆನ್ನಮ್ಮನನ್ನು ಸೆರೆಹಿಡಿದು ಬೈಲಹೊಂಗಲದಲ್ಲಿ ಬಂಧಿಸಿಟ್ಟರು. ಶಾಂತಿಯನ್ನರಿಸಿ, ಅದು ದೊರೆಕದಂತಾದಾಗ ದಿಟ್ಟತನದಿಂದ ಹೋರಾಡಿದ ಚೆನ್ನಮ್ಮನನ್ನು ಕನ್ನಡಿಗರೆಲ್ಲ ಇಂದಿಗೂ ಸ್ಮರಿಸುತ್ತಾರೆ. ಅವಳ ಧೈರ್ಯ ಸ್ಥೈರ್ಯಗಳನ್ನು ಮನ ನಾಟುವಂತೆ ಚಿತ್ರಿಸುವ ಲಾವಣಿಗಳನ್ನು ಹಾಡುತ್ತಾರೆ ; ನಾಟಕಗಳನ್ನಾಡುತ್ತಾರೆ. ಆಕೆಯ ಜೀವನವನ್ನು ಕುರಿತ ಚಲನಚಿತ್ರವೂ ತಯಾರಾಗಿದೆ. **(ನೋಡಿ ಚೆನ್ನಮ್ಮ, ಕಿತ್ತೂರು ರಾಣಿ)**

**ಸಂಗೊಳ್ಳಿ ರಾಯಣ್ಣ :** ರಾಣಿ ಚೆನ್ನಮ್ಮನ ಬಂಧನದಿಂದ ಕಿತ್ತೂರಿನ ಪ್ರತಿಭಟನೆ ನಿಲ್ಲಲಿಲ್ಲ. ಚೌಕಿದಾರ ಸಂಗೊಳ್ಳಿ ರಾಯಣ್ಣ ಕಿತ್ತೂರಿನ ರಕ್ಷಣೆಗಾಗಿ ಹೋರಾಡಿ ಸೆರೆಸಿಕ್ಕಿ ಕೆಲಕಾಲ ಬಂಧನದಲ್ಲಿದ್ದ. ಯುದ್ಧ ಮುಗಿದ ಮೇಲೆ ಬಿಡುಗಡೆ ಹೊಂದಿ, ಶಿವಲಿಂಗಪ್ಪನ ಪರವಾಗಿ ಬ್ರಿಟಿಷರೊಡನೆ ಹೋರಾಡಲು ಪಣತೊಟ್ಟು ನಿಂತ. ರಾಯಣ್ಣನಿಗೆ ಬೆಂಬಲವಾಗಿ ಅನೇಕ ಯೋಧರು ದೊರಕಿದರು. ಮದ್ದುಗುಂಡುಗಳನ್ನು ಕೂಡಿಟ್ಟುಕೊಂಡು, ಮರಸುಕಾಳಗವನ್ನಾರಂಭಿಸಿದ. ಸರ್ಕಾರಿ ಕಟ್ಟಡಗಳು ಬೂದಿಯಾದುವು. ಖಜಾನೆಗಳ ಲೂಟಿಯಾಯಿತು. ಬ್ರಿಟಿಷ್ ಸೈನ್ಯದ ತುಕಡಿಗಳು ನಾಶವಾದುವು. ಆದರೆ ನುರಿತ ಸುಸಜ್ಜಿತ ಸೈನ್ಯದೆದುರು ರಾಯಣ್ಣನ ಸೈನ್ಯ ಹೆಚ್ಚು ಕಾಲ ನಿಲ್ಲಲಿಲ್ಲ. 1830ರ ಏಪ್ರಿಲ್ 8ರಂದು ಅವನು ಸೆರೆ ಸಿಕ್ಕಿದ. ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆದು ಅವನಿಗೆ ಗಲ್ಲಿನ ಶಿಕ್ಷೆಯಾಯಿತು.

**ಬಾದಾಮಿ:** 1841ರಲ್ಲಿ ಬಾದಾಮಿಯಲ್ಲೂ ಹೀಗೆಯೇ ಒಂದು ಬಂಡಾಯ ಜರುಗಿತು. ಇದರ ನಾಯಕ ನರಸಿಂಗ ದತ್ತಾತ್ರೇಯ ಪೇಟ್ಕರ್ ಅಥವಾ ನರಸಿಂಗರಾವ್. ಈತ ಒಂದು ಸಾವಿರಕ್ಕೂ ಹೆಚ್ಚಿನ ದಳವೊಂದನ್ನು ಕೋಟೆಯ ಮೇಲೇರಿಸಿ ಆ ಕೋಟೆಯನ್ನು ವಶಪಡಿಸಿಕೊಂಡ. ಸಾತಾರದ ದೊರೆಯ ಧ್ವಜವನ್ನು ಕೋಟೆಯ ಮೇಲೇರಿಸಿ ತಾನು ಆ ದೊರೆಗೆ ಅಧೀನನೆಂದು ಸಾರಿಕೊಂಡ. ಧಾರವಾಡ ಮತ್ತು ಬೆಳಗಾಂವಿಗಳಿಂದ ಬ್ರಿಟಿಷ್ ಸೈನ್ಯ ಬಂದು ಅದನ್ನು ವಶಪಡಿಸಿಕೊಂಡಿತು. ನರಸಿಂಗರಾಯನನ್ನು ಬೆಳಗಾಂವಿಗೆ ಕರೆದುಕೊಂಡು ಹೋಗಿ ಅಲ್ಲಿ ವಿಚಾರಣೆಗೊಳಪಡಿಸಿ ಅವನಿಗೂ ಮರಣದಂಡನೆ ವಿಧಿಸಲಾಯಿತು. ಆದರೆ ಆತ ಕುರುಡನಾಗಿದ್ದುದರಿಂದ ಅದನ್ನು ಜೀವಾವಧಿ ಶಿಕ್ಷೆಗೆ ಬದಲಾಯಿಸಿ ಅಹಮದಾಬಾದ್ ಜೈಲಿಗೆ ಕಳುಹಿಸಲಾಯಿತು.

**ಹಲಗಲಿ :** ಮುಧೋಳ ಸಂಸ್ಥಾನಕ್ಕೆ ಸೇರಿದ್ದ ಹಲಗಲಿಯ ಬೇಡರು ನೀಡಿದ ಪ್ರತಿಭಟನೆ ಹೃದಯಸ್ಪರ್ಶಿಯಾದದ್ದು. ಬ್ರಿಟಿಷರು ಸಿಪಾಯಿದಂಗೆ ಎಂದು ಕರೆದ 1857ರ ಬಂಡಾಯದಲ್ಲಿ ಭಾರತೀಯರ ಬ್ರಿಟಿಷ್ ವಿರೋಧ ರುದ್ರರೂಪ ತಾಳಿತ್ತು. ಭಾರತೀಯರು ಆಯುಧಗಳನ್ನಿಟ್ಟುಕೊಳ್ಳುವುದನ್ನೇ ನಿಷೇಧಿಸಿದರೆ ಬ್ರಿಟಿಷರ ವಿರುದ್ಧ ಹೋರಾಟ ನಿಲ್ಲಬಹುದೆಂಬ ಭಾವನೆಯಿಂದ 1857ರ ಸೆಪ್ಟೆಂಬರ್ 11ರಂದು ಅಸ್ತ್ರಗಳ ಕಾಯಿದೆಯೊಂದನ್ನು ಸರ್ಕಾರ ಜಾರಿಗೆ ತಂದಿತ್ತು. ಅಸ್ತ್ರಗಳನ್ನು ಹೊಂದಿದ್ದ ಭಾರತೀಯರೆಲ್ಲ ಅವನ್ನು ಸರ್ಕಾರಕ್ಕೆ ತೋರಿಸಿ ಅವರಿಂದ ಅಪ್ಪಣೆ ಚೀಟಿ (ಲೈಸೆನ್ಸ್) ಪಡೆಯಬೇಕಾಗಿತ್ತು. ತಮ್ಮ ಅಸ್ತ್ರಗಳು ಪವಿತ್ರವೆಂದು ಭಾವಿಸಿದ್ದ ಬೇಡರು ಈ ಕಾನೂನನ್ನು ಪ್ರತಿಭಟಿಸಿದರು. ಆಯುಧಗಳನ್ನು ಹೊಂದಿರುವುದು ತಮ್ಮ ಆಜನ್ಮಸಿದ್ಧ ಹಕ್ಕು ಎಂದು ವಾದಿಸಿದರು. ಹಲಗಲಿಯ ನೆರೆಯ ಹಳ್ಳಿಗಳಾದ ಮಂಟೂರು, ಭೋಧಾನಿ, ಅಲಗುಂಡಿಗಳಿಂದಲೂ ಬೇಡರು ತಂಡತಂಡವಾಗಿ ಬಂದು ಹಲಗಲಿಯಲ್ಲಿ ನಿಂತರು. ಬ್ರಿಟಿಷರ ಸೈನ್ಯವೇ ಬಂದರೂ ಎದುರಿಸಿ ಮಡಿಯಲು ಸಿದ್ಧರಾದರು. ಬಿಜಾಪುರದಿಂದ ಕುದುರೆಯ ದಂಡೊಂದು ಬಂತು. ಬೇಡರು ಮನೆಗಳೊಳಗೆ ಅಡಗಿಕೊಂಡು ಗುಂಡು ಹಾರಿಸತೊಡಗಿದರು. ಊರ ಮಧ್ಯದ ಚೌಕವನ್ನು ವಶಪಡಿಸಿಕೊಳ್ಳಲು ಸೈನ್ಯ ಮಾಡಿದ ಪ್ರಯತ್ನ ವಿಫಲವಾಯಿತು. ಪ್ರತಿಮನೆಯೂ ಒಂದು ಬುರುಜಾಯಿತು ; ಪ್ರತಿಯೊಬ್ಬ ಬೇಡನೂ ಆವೇಶದಿಂದ ಹೋರಾಡಿದ. ಈ ಪ್ರತಿಭಟನೆಯೆದುರು ಆ ಸುಸಜ್ಜಿತ ಸೈನ್ಯಕ್ಕೂ ಮುಂದುವರಿಯಲಾಗಲಿಲ್ಲ. ಕೊನೆಗೆ ಸೇನಾಧಿಪತಿ ಸೇಟರ್ ಕೆರ್ ಆ ಮನೆಗಳಿಗೆ ಬೆಂಕಿ ಹೊತ್ತಿಸಲು ಸೈನಿಕರಿಗೆ ಆಜ್ಞೆ ಮಾಡಿದ. ಮನೆಗಳು ಹತ್ತಿ ಉರಿಯತೊಡಗಿದುವು. ಹೊರಗೆ ಬಂದರೆ ಸಾವು ; ಅದಕ್ಕಿಂತ ಹೆಚ್ಚು ಅಸಹನೀಯವಾದ ಅಪಮಾನ ಎಂದು ಭಾವಿಸಿ ಬೇಡರು ಯಾರೂ ಹೊರಗೆ ಬರಲೇ ಇಲ್ಲ. ಅವರೂ ಅವರ ಪರಿವಾರದವರೂ ಸುಟ್ಟು ಬೂದಿಯಾದರು. ಇದರಿಂದ ಒಳ್ಳೆಯದೇ ಆಯಿತು ; ಮುಂದೆ ಬ್ರಿಟಿಷರ ಅಧಿಕಾರವನ್ನು ಪ್ರತಿಭಟಿಸಿ ನಿಲ್ಲುವೆನೆನ್ನುವ ಭಾರತೀಯನಿಗೆ ಪಾಠ ಕಲಿಸಿದಂತಾಯಿತು – ಎಂದು ಸೇನಾಧಿಪತಿ ಸರ್ಕಾರಕ್ಕೆ ವರದಿ ಮಾಡಿದ.

**ಸುರಪುರ :** 1857–58. ಗುಲ್ಬರ್ಗ ಜಿಲ್ಲೆಯಲ್ಲಿ ಯಾದಗಿರಿಯಿಂದ ಮೂವತ್ತು ಮೈಲಿ ದೂರದಲ್ಲಿರುವ ಸುರಪುರ ಈಗ ಒಂದು ಸಣ್ಣ ಊರು. ಹತ್ತೊಂಬತ್ತನೆಯ



ಕಿತ್ತೂರ ಚೆನ್ನಮ್ಮನ ಪ್ರತಿಮೆ, ಬೆಳಗಾಂವಿ

ಶತಮಾನದ ಪೂರ್ವಾರ್ಧದಲ್ಲಿ ಇದು ಚೆನ್ನಾಗಿ ಬಾಳುತ್ತಿದ್ದ ಸಣ್ಣ ರಾಜ್ಯವಾಗಿತ್ತು. ಅಲ್ಲಿನ ಜನ ಹೆಚ್ಚಾಗಿ ಬೇಡರು. ಅವರು ಶೂರರು, ಸ್ವಾತಂತ್ರ್ಯ ಪ್ರಿಯರು. 14ನೆಯ ಶತಮಾನದಲ್ಲಿದ್ದ

ನಂಜುಂಡಕವಿ ಬರೆದ ಕಂಪಿಲರಾಮನಾಥಚರಿತದಲ್ಲಿ ಅವರ ಸ್ವಭಾವ ಸಂಪನ್ನತೆಗಳ ವರ್ಣನೆಯಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅವರು ಬಹುಸಂಖ್ಯೆಯಲ್ಲಿ ಅದರ ಸೈನ್ಯಕ್ಕೆ ಸೇರಿ ಉತ್ತರದ ಗಡಿಪ್ರಾಂತವನ್ನು ಮುಸ್ಲಿಮರ ದಾಳಿಯಿಂದ ಕಾಪಾಡಿದ್ದರು. ಮುಂದೆ ಅವರು ಸುರಪುರಕ್ಕೆ ಬಂದು ನೆಲಸಿದರು. ಔರಂಗಜೇಬ್ ಕಾಲವಾದ (1707) ಮೇಲೆ ಮರಾಠರು ಪ್ರಬಲರಾಗಿ ಸುರಪುರದ ನಾಯಕರಿಂದ ಕಪ್ಪ ವಸೂಲು ಮಾಡುತ್ತಿದ್ದರು. ಅನಂತರ ನಿಜಾಮನೂ ಮರಾಠರೊಂದಿಗೆ ಸೇರಿಕೊಂಡು ಅವರಿಂದ 50,000 ರೂ. ಕಸಿದುಕೊಂಡ. ಈ ಮಧ್ಯೆ ಬ್ರಿಟಿಷರೂ ಈ ವ್ಯವಹಾರಗಳಲ್ಲಿ ಕೈಹಾಕಿ ಲಾಭ ಗಳಿಸಿದರು. ಈ ವ್ಯವಹಾರಗಳ ಪರಿಣಾಮವಾಗಿ ಸುರಪುರದ ಖಜಾನೆ ಬರಿದಾಯಿತು.

1841ರಲ್ಲಿ ಸುರಪುರದ ರಾಜ ಕೃಷ್ಣಪ್ಪನಾಯಕ ಕಾಲವಾದಾಗ ಅವನ ಮಗ ವೆಂಕಟಪ್ಪನಾಯಕ ದೊರೆಯಾಗಿದ್ದ. ಮೆಡೋಸ್ ಟೇಲರನನ್ನು ರಾಜಕೀಯ



ಕಿತ್ತೂರಿನ ಐತಿಹಾಸಿಕ ಅವಶೇಷಗಳು

ನಿಯೋಗಿಯಾಗಿ ಬ್ರಿಟಿಷ್ ಸರ್ಕಾರ ಸುರಪುರಕ್ಕೆ ಕಳುಹಿಸಿತು. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಲ್ಲದೆ ದೊರೆಯ ವಿದ್ಯಾಭ್ಯಾಸದ ಮೇಲ್ವಿಚಾರಣೆ ನಡೆಸುವುದೂ ಟೇಲರನ ಕೆಲಸವಾಗಿತ್ತು. ಸಮರ್ಥನಾದ ಟೇಲರ್ ಆ ಎರಡು ಕಾರ್ಯಗಳನ್ನೂ ನೆರವೇರಿಸಿ ಎಲ್ಲರ ವಿಶ್ವಾಸವನ್ನೂ ಸಂಪಾದಿಸಿದ. ವೆಂಕಟಪ್ಪನಾಯಕ ಪ್ರಾಪ್ತವಯಸ್ಕನಾದ ಮೇಲೆ ಟೇಲರ್ ಹಿಂತಿರುಗಿದ (1853). ಆಗ ಗವರ್ನರ್-ಜನರಲ್ ಆಗಿದ್ದವನು ಡಾಲ್‍ಹೌಸಿ; ಇನ್ನೂ ಕೆಲಕಾಲ ರಾಜ್ಯದ ಆಡಳಿತದ ಮೇಲ್ವಿಚಾರಣೆ ನಡೆಸಿ ಸೂಕ್ತ ಸಲಹೆ ಕೊಡುವುದಕ್ಕೆ ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಇಟ್ಟುಕೊಂಡಿರಬೇಕೆಂದು ಆತ ದೊರೆಗೆ ತಿಳಿಸಿದ. ಹೊಸ ಅಧಿಕಾರಿಗಾಗಿ ವರ್ಷಕ್ಕೆ 20,000 ರೂ. ಖರ್ಚು ಮಾಡುವುದು ಆಗಿನ ಹಣಕಾಸು ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂಬುದು ದೊರೆಯ ಉತ್ತರವಾಗಿತ್ತು. ನಿರ್ದಾಕ್ಷಿಣ್ಯವಾಗಿ ಬರೆದಿದ್ದ ಈ ಉತ್ತರವನ್ನೋದಿ ಡಾಲ್‍ಹೌಸಿಗೆ ಅಸಮಾಧಾನ ವುಂಟಾಯಿತು. ಒಂದು ಕಡೆ ನಿಜಾಮನೂ ಇನ್ನೊಂದು ಕಡೆ ಬ್ರಿಟಿಷರೂ ಸುರಪುರ ರಾಜ್ಯದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದುದರಿಂದ ವೆಂಕಟಪ್ಪನಾಯಕನ ಪೂರ್ವಿಕರು ಆಳುತ್ತಿದ್ದ ರಾಜ್ಯ ಆ ವೇಳೆಗಾಗಲೇ ಚಿಕ್ಕದಾಗಿತ್ತು. ಅವರ ಸುಲಿಗೆಯಿಂದಾಗಿ

ಸಂಗೊಳ್ಳಿ ರಾಯಣ್ಣನ ಪ್ರತಿಮೆ, ಬೆಳಗಾಂವಿ

ಸುರಪುರದ ಖಜಾನೆಯೂ ಬರಿದಾಗಿತ್ತು. ಜನರಲ್ಲಿ ಬ್ರಿಟಿಷರ ಬಗ್ಗೆ ಅಸಮಾಧಾನ ವ್ಯಾಪಕವಾಗಿ ಬೆಳೆದಿತ್ತು. ಬ್ರಿಟಿಷರನ್ನು ಭಾರತದಿಂದ ಓಡಿಸಿದ್ದಲ್ಲದೆ ಉಳಿಗಾಲವಿಲ್ಲ ಎಂಬುದು 19 ವರ್ಷದ ಉತ್ಸಾಹಿ ಯುವಕ ವೆಂಕಟಪ್ಪನಾಯಕನಿಗೆ ಅರಿವಾಯಿತು. ಆತ ಸೈನ್ಯವನ್ನು ಬಲಗೊಳಿಸಲೆತ್ನಿಸಿದ. ರೋಹಿಲರು, ಅರಬರು ಮುಂತಾದವರನ್ನು ಸೈನ್ಯಕ್ಕೆ ಸೇರಿಸಿ ತರಬೇತಿ ಕೊಡಿಸಿದ. ನಾನಾ ಸಾಹೇಬನಿಗೆ ನಿಯೋಗ ಹೋಯಿತು. ಅಲ್ಲಿಂದಲೂ ನಿಯೋಗಿಗಳು ಸುರಪುರಕ್ಕೆ ಬಂದರು. ರಾಯಚೂರು ಮುಂತಾದ ಪ್ರದೇಶಗಳ ಪಾಳೆಯಗಾರರೂ ಜಮೀನ್ದಾರರೂ ಅವನಿಗೆ ನೆರವು ನೀಡುವ ಭರವಸೆಯಿತ್ತರು. ಸುರಪುರ ಪಿತೂರಿಯ ಕೇಂದ್ರವಾಯಿತು.

ಇದೆಲ್ಲವೂ ಬ್ರಿಟಿಷ್ ಅಧಿಕಾರಿಗಳಿಗೆ ತಿಳಿಯದಿರಲಿಲ್ಲ. ಲಿಂಗಸುಗೂರು, ಕರ್ನೂಲು, ಕಲಾದಗಿ ಧಾರವಾಡ ಮುಂತಾದ ಕಡೆಗಳಲ್ಲಿದ್ದ ಸೈನ್ಯಗಳಿಗೆ ಕರೆ ಹೋಯಿತು. ಕೆಲವು ದಿನಗಳಲ್ಲೇ ದೊಡ್ಡ ಸೈನ್ಯವೊಂದು ಸುರಪುರದ ಕೋಟೆಯೆದುರು ನಿಂತಿತು. ಆದರೆ ಅದನ್ನು ವಶಪಡಿಸಿಕೊಳ್ಳಲು ಬ್ರಿಟಿಷ್ ಸೈನ್ಯ ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು. ಕೊನೆಗೆ ವಾಗನಗೇರಿ ಭೀಮರಾಯನೆಂಬ ದೇಶದ್ರೋಹಿ ಬ್ರಿಟಿಷರ ಸಹಾಯಕ್ಕೆ ದೊರಕಿದ. ಆತ ವೆಂಕಟಪ್ಪನಾಯಕನ ಆಪ್ತ ಸಲಹೆಗಾರ. ಕೋಟೆಯೊಳಕ್ಕೆ ಬರುವ ಗುಪ್ತದ್ವಾರವನ್ನು ಬ್ರಿಟಿಷರಿಗೆ ತೋರಿಸಿ, ಆ ಕೂಡಲೆ ವೆಂಕಟಪ್ಪನಾಯಕನ ಹತ್ತಿರ ಹೋಗಿ, ಶತ್ರುಗಳು ಒಳಗೆ ನುಗ್ಗಿದರು ; ತಪ್ಪಿಸಿಕೊಂಡು ಹೋಗು ಎಂದು ಸಲಹೆಯಿತ್ತ. ವೆಂಕಟಪ್ಪನಾಯಕ ಕೂಡಲೆ ಊರು ಬಿಟ್ಟು ಹೈದರಾಬಾದ್ ಕಡೆ ಹೊರಟ. ಅವನ ಜೊತೆ ಹೊರಟ ಭೀಮರಾಯ ದಾರಿಯಲ್ಲಿ ದೊರೆ ತಂದಿದ್ದ ಹಣ, ಜವಾಹಿರಿಯೆಲ್ಲವನ್ನೂ ಕದ್ದು ಪರಾರಿಯಾದ. ಹೈದರಾಬಾದ್ ತಲಪಿದ ಕೂಡಲೆ ವೆಂಕಟಪ್ಪನಾಯಕನ ಗುರುತು ಸಿಕ್ಕಿ, ಅವನನ್ನು ಸಿಕಂದರಾಬಾದಿನಲ್ಲಿ ಬಂಧನದಲ್ಲಿಟ್ಟರು. ವಿಚಾರಣೆ ನಡೆದು ಅವನಿಗೆ ನಾಲ್ಕು ವರ್ಷ ಸಜಾ ವಿಧಿಸಲಾಯಿತು. ವೆಂಕಟಪ್ಪನಾಯಕನನ್ನು ಜೈಲಿಗೆ ಕೊಂಡೊಯ್ಯುತ್ತಿದ್ದಾಗ ದಾರಿಯಲ್ಲಿ ಆತ ಆತ್ಮಹತ್ಯೆ ಮಾಡಿಕೊಂಡ. 1861ರಲ್ಲಿ ಸುರಪುರವನ್ನು ನಿಜಾಂ ರಾಜ್ಯಕ್ಕೆ ಸೇರಿಸಲಾಯಿತು. **(ನೋಡಿ– ವೆಂಕಟಪ್ಪನಾಯಕ 2)**

**ನರಗುಂದ: ಬಾಬಾ ಸಾಹೇಬ:** ರಾಜರಾಗಲಿ ಜಮೀನ್ದಾರರಾಗಲಿ ದತ್ತುಸ್ವೀಕಾರಕ್ಕೆ ಸರ್ಕಾರದ ಅನುಮತಿ ಪಡೆಯಬೇಕು. ಹಾಗೆ ಮಾಡದಿದ್ದರೆ ದತ್ತು ಪುತ್ರ ಆಸ್ತಿಗೆ ಹಕ್ಕುದಾರನಾಗುವುದಿಲ್ಲ-ಎಂದು ಗವರ್ನರ್-ಜನರಲ್ ಡಾಲ್‍ಹೌಸಿ ಹೊರಡಿಸಿದ ನಿರೂಪಿಸಿದ ಪರಿಣಾಮವಾಗಿ ಜನರಲ್ಲಿ ಅಸಮಧಾನವುಂಟಾಗಿತ್ತು. ಧಾರ್ಮಿಕ ಸಂಪ್ರದಾಯವಾಗಿದ್ದ ದತ್ತುಸ್ವೀಕಾರಕ್ಕೂ ಬ್ರಿಟಿಷರು ಅಡ್ಡಿಯೊಡ್ಡುತ್ತಾರೆ; ಆಸ್ತಿ ಕಬಳಿಸುವುದೇ ಇವರ ಉದ್ದೇಶ-ಎಂದು ಜನ ಭಾವಿಸಿದ್ದರು. ನರಗುಂದದ ಭಾಸ್ಕರರಾವ್ ಅಥವಾ ಬಾಬಾಸಾಹೇಬ ತನಗೇ ಮಕ್ಕಳಿಲ್ಲದ್ದರಿಂದ ದತ್ತು ಸ್ವೀಕಾರಕ್ಕೆ ಅನುಮತಿ ಕೇಳಿದ. ಅದು ಅವನಿಗೆ ದೊರಕಲಿಲ್ಲ. ಅದರಿಂದ ಆತ ಕೆರಳಿ ಬಿಟಿಷರನ್ನು ದೇಶದಿಂದ ಹೊಡೆದಟ್ಟಲು ನಿರ್ಧರಿಸಿದ. ದೇಶದ ನಾನಾಕಡೆಗೆ ಗುಪ್ತದೂತರನ್ನು ಕಳುಹಿಸಿ, ಬಂಡಾಯಕ್ಕೆ ಕರೆಕೊಟ್ಟ. ಉತ್ತರ ಭಾರತದಲ್ಲಾಗಲೇ ಬಿಟಿಷರಿಗೆ ವಿರೋಧವಾಗಿ ಬಂಡಾಯ ಪಾರಂಭವಾಗಿತ್ತು. ದತ್ತುಸ್ವೀಕಾರಕ್ಕೆ ಅನುಮತಿ ದೊರಕದಿರಲು ಮುಖ್ಯ ಕಾರಣನಾದ ಬ್ರಿಟಿಷ್ ಅಧಿಕಾರಿ ಮ್ಯಾನ್‍ಸನ್ ಕೊಲೆಗೀಡಾದ. ಆದರೆ ಮ್ಯಾನ್‍ಸನನ ಹತ್ತಿರ ಇದ್ದ ಕಾಗದಪತ್ರಗಳನ್ನು ನೋಡಿದಾಗ, ತನ್ನ ಅನುಯಾಯಿಗಳಲ್ಲೇ ಕೆಲವರು ದ್ರೋಹಿಗಳಿದ್ದುದು ಬಾಬಾಸಾಹೇಬನಿಗೆ ತಿಳಿದುಬಂತು. ಸೇಡು ತೀರಿಸಿಕೊಂಡದ್ದಾಯಿತು. ಇನ್ನು ಅವನಿಗೆ ಉಳಿದಿದ್ದ ಒಂದೇ ಮಾರ್ಗವೆಂದರೆ ನರಗುಂದದಲ್ಲಿ ನಿಂತು ಹೋರಾಡುವುದು. ಬ್ರಿಟೀಷ್ ಸೈನ್ಯ ನರಗುಂದದ ಕೋಟೆಗೆ ಮುತ್ತಿಗೆ ಹಾಕಿದಾಗ ಭೀಕರ ಕದನ ನಡೆಯಿತು. ಕೋಟೆ ಶತ್ರುಗಳ ಕೈವಶವಾಗುತ್ತದೆಂದು ತಿಳಿದಾಗ ಬಾಬಾ ಸಾಹೇಬ ಅಲ್ಲಿಂದ ತಪ್ಪಿಸಿಕೊಂಡ. ಆದರೆ ತೋರಗಲ್ ಕಾಡಿನಲ್ಲಿ ಹೋಗುತ್ತಿದ್ದಾಗ ಸೆರೆಸಿಕ್ಕಿದ. ಬೆಳಗಾಂವಿಯಲ್ಲಿ ವಿಚಾರಣೆ ನಡೆಸಿ ಅವನನ್ನು ಗಲ್ಲಿಗೇರಿಸಲಾಯಿತು.

ಮುಂಡರಗಿ ಭೀಮರಾವ್ ಇನ್ನೊಬ್ಬ ಬಂಡಾಯಗಾರ. ಈತ ಶ್ರೀಮಂತ ಮನೆತನದವನಲ್ಲ; ಸ್ವಶಕ್ತಿಯಿಂದ ಬಾಳುತ್ತಿದ್ದ ಮಧ್ಯಮವರ್ಗದ ಮನೆತನಕ್ಕೆ ಸೇರಿದ್ದವ; ಆದರೆ ಮೇಧಾವಂತ, ಶೂರ, ಸಾಹಸಿ, ಉತ್ತಮ ಬೇಟೆಗಾರನೆಂದು ಹೆಸರು ಪಡೆದಿದ್ದ. ವಿದ್ಯಾವಂತನಾಗಿ ಹರಪನಹಳ್ಳಿ., ಬಳ್ಳಾರಿ ಈ ಎರಡು ಕಡೆಗಳಲ್ಲಿ ತಹಸೀಲ್ದಾರನಾಗಿ ಕೆಲಸ ಮಾಡಿದ್ದ. ನಾಡಿನ ಪರಿಸ್ಥಿತಿ, ಉತ್ತರ ಭಾರತದಲ್ಲಿ ನಡೆಯುತಿದ್ದ ವಿದ್ಯಮಾನಗಳು-ಎಲ್ಲರನ್ನೂ ಅರಿತಿದ್ದ ಅವನಿಗೆ ಬ್ರಿಟಿಷ್ ಸರ್ಕಾರದ ನೌಕರನಾಗಿರಲು ಸಾಧ್ಯವಾಗಲಿಲ್ಲ. ಹೆಮ್ಮಿಗೆಯ ಕೆಂಚನಗೌಡ, ಸೊರಟೂರಿನ ದೇಸಾಯಿ ಮುಂತಾದ ನಾಯಕರನ್ನೂ ಅವರ ಅನುಯಾಯಿಗಳನ್ನೂ ಕೂಡಿಕೊಂಡು ಒಂದು ಪಡೆ ನಿರ್ಮಿಸಿ ಡಂಬಳದ ಖಜಾನೆಯನ್ನು ಲೂಟಿ ಮಾಡಿ ಕೊಪ್ಪಳಕ್ಕೆ ಹೋಗಿ ಅದರ ಕೋಟೆಯನ್ನು ವಶಪಡಿಸಿಕೊಂಡ. ಆಗ ಸರ್ಕಾರ ಎಚ್ಚತ್ತು ಹೈದರಾಬಾದ್, ರಾಯಚೂರು, ಧಾರವಾಡ ಮುಂತಾದ ಕಡೆಗಳಿಂದ ಸೈನ್ಯವನ್ನು ತರಿಸಿತು. ಕೊಪ್ಪಳದ ಸುತ್ತ ಭಾರಿ ಕದನ ನಡೆಯಿತು.

ಮದ್ದುಗುಂಡು ತೀರಿ ಇನ್ನು ಗೆಲ್ಲುವ ಆಸೆಯಿಲ್ಲವೆಂದು ಕಂಡುಬಂದಾಗ ಭೀಮರಾವ್ ಆತ್ಮಹತ್ಯೆ ಮಾಡಿಕೊಂಡ.

**ಅಸಹಕಾರ ಚಳುವಳಿ:** ಬಲಪ್ರಯೋಗದಿಂದ ಬ್ರಿಟಿಷನ್ನು ದೇಶದಿಂದೋಡಿಸುವುದು ಸಾಧ್ಯವಿಲ್ಲವೆಂಬುದು ಖಚಿತವಾಯಿತು. ಇನ್ನು ಉಳಿದಿದದ್ದ ಮಾರ್ಗವೊಂದೇ: ಅವರು



ಸುರಪುರದ ಕೋಟೆ

ದೇಶವನ್ನಾಳುವುದೇ ಸಾಧ್ಯವಿಲ್ಲದಂತೆ ಮಾಡಿ, ತಾವಾಗಿಯೇ ದೇಶವನ್ನು ಬಿಟ್ಟು ಹೋಗುವಂತೆ ಮಾಡುವುದು. ಬ್ರಿಟಿಷರ ಆದಳಿತ ಭಾರತದಲ್ಲಿ ಸ್ಥಿರವಾದಂತೆಲ್ಲಾ ಈ ನಿಟ್ಟಿನಲ್ಲಿ ಜನರ ಸಂಘಟನೆ ಬೆಳೆಯಲಾರಂಭಿಸಿತು.

ಬ್ರಿಟಿಷರು ಭಾರತದಲ್ಲಿ ತಮ್ಮ ಭಾಷೆ, ಧರ್ಮ ಸಂಸ್ಕೃತಿಗಳನ್ನು ಹರಡಬೇಕೆಂಬ ಉದ್ದೇಶದಿಂದ ಇಂಗ್ಲಿಷ್ ವಿದ್ಯೆ ಹರಡುವಂತೆ ಪ್ರೋತ್ಸಾಹ ಕೊಟ್ಟರು. ಸಾವಿರಾರು




ವರ್ಷಗಳಿಂದ ತಮ್ಮದೇ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದ ಭಾರತೀಯರು ಪಾಶ್ಚಾತ್ಯರ ಭಾಷೆ ಸಾಹಿತ್ಯಗಳನ್ನು ಕಲಿತದ್ದೂ ಅಲ್ಲದೆ, ಬ್ರಿಟಿಷರು ತಮ್ಮ ದೇಶದಲ್ಲಿ ಅನುಸರಿಸುತ್ತಿದ್ದ ರಾಜಕೀಯ ನೀತಿ ತತ್ವಗಳಿಗೂ ಭಾರತದಲ್ಲಿ ಅವರ ರಾಜ್ಯನೀತಿಗೂ ಇದ್ದ ಭಿನ್ನತೆಯನ್ನು ಅರಿತುಕೊಂಡರು. ಇಂಗ್ಲೆಂಡಿನಲ್ಲಿದ್ದುದು ಉದಾರನೀತಿ; ಭಾರತದಲ್ಲಿ ಪ್ರಗತಿವಿರೋಧ ನೀತಿ. ಇಂಗ್ಲೆಂಡಿನಲ್ಲಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ಇತ್ತು; ಭಾರತದಲ್ಲಿ ಅದು ಸಾಮ್ರಾಜ್ಯ ನೀತಿಯನ್ನನುಸರಿಸುತ್ತಿತ್ತು. ಇಂಡಿಯ ಕೌನ್ಸಿಲ್ ಸದಸ್ಯನಾಗಿದ್ದ ಸರ್ ಎರ್‌ಸ್ಕಿನ್ ಪೆರಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದ. ಇಂಗ್ಲೆಂಡಿನಲ್ಲಿ ಆಗ ಉದಾರವಾದಿ ಪಕ್ಷ ಜನಮನ್ನಣೆ ಪಡೆದಿತ್ತು. ಇಷ್ಟೂ ಅಲ್ಲದೆ ಸುರೇಂದ್ರನಾಥ ಬ್ಯಾನರ್ಜಿ. ದಾದಾಭಾಯಿ ನವರೋಜಿ ಮುಂತಾದ ಕೆಲವು ಪ್ರತಿಭಾವಂತ ಭಾರತೀಯರು ಬ್ರಿಟಿಷರ ಆಡಳಿತದಿಂದ ದೇಶಕೊದಗಿದ್ದ ಅನರ್ಥ ಪರಂಪರೆಗಳನ್ನು ತಮ್ಮ ಭಾಷಣಗಳಲ್ಲಿ ಹೃದಯಂಗಮವಾಗಿ ಚಿತ್ರಿಸುತ್ತಿದ್ದರು. ಅಷ್ಟೂ ಅಲ್ಲದೆ, 1861 ರಿಂದ 1899ರ ವರೆಗಿನ ಅವಧಿಯಲ್ಲಿ, ಆರು ದೊಡ್ಡ ಕ್ಷಾಮಗಳೂ ಅನಾವೃಷ್ಟಿಯಿಂದ ಪದೇ ಪದೇ ಅಭಾವ ಪರಿಸ್ಥಿತಿಯೂ ಸಂಭವಿಸಿ ಜನ ಕಂಗೆಟ್ಟಿದ್ದರು. 1876–77ರ ಕ್ಷಾಮದಲ್ಲಿ ಬಳ್ಳಾರಿ ಜಿಲ್ಲೆಯ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ನಾಲ್ಕರಲ್ಲೊಂದು ಭಾಗ ಜನ ಸತ್ತರು. ದಕ್ಷಿಣ ಭಾರತದಲ್ಲಿ ಈ ಕ್ಷಾಮಕ್ಕೆ ಬಲಿಯಾದವರ ಸಂಖ್ಯೆ ಐವತ್ತು ಲಕ್ಷ. ದೇಶ ಇಂಥ ಆಪತ್ತಿಗೆ ಈಡಾಗಿದ್ದಾಗ, ಸಾಮ್ರಾಜ್ಯವಾದಿ ವೈಸಾರಾಯ್ ಲಾರ್ಡ್ ಲಿಟನ್, ವಿಕ್ಟೋರಿಯ ರಾಣಿ ಭಾರತದ ಸಾಮ್ರಾಜ್ಞಿಯೆಂಬ ಬಿರುದನ್ನು ಧರಿಸಿದುದರ ಗೌರವಾರ್ಥವಾಗಿ ವೈಭವದ ದರ್ಬಾರ್ ನಡೆಸಿದ. ಈ ಆಡಂಬರಕ್ಕಾದ ಖರ್ಚಿನಿಂದ ಹೊಟ್ಟೆಗಿಲ್ಲದೆ ಸಾಯುತ್ತಿದ್ದ ಲಕ್ಷಾಂತರ ಭಾರತೀಯರಿಗೆ ಈ ಹಣದಿಂದ ಅನ್ನ ಒದಗಿಸಬಹುದಾಗಿತ್ತು.

**ಕಾಂಗ್ರೆಸ್ ಸ್ಥಾಪನೆ:** ಭಾರತೀಯರಿಗೆ ತಮ್ಮ ಪರಿಸ್ಥಿತಿಯ ಅರಿವು ಹೆಚ್ಚಾದಂತೆ ಬ್ರಿಟಿಷರ ವಿಷಯದಲ್ಲಿ ಅಸಮಾಧಾನ ಬೆಳೆಯಿತು. ಉದಾರವಾದಿಗಳಾದ ಕೆಲವು ಬ್ರಿಟಿಷರೂ ಭಾರತೀಯರಲ್ಲಿ ಸಹಾನುಭೂತಿ ಹೊಂದಿದ್ದರು. ಕೊನೆಗೆ 1885ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಿತವಾಯಿತು. ರಾಷ್ಟ್ರದ ನಾನಾ ಕಡೆಗಳ ಜನ ಇದಕ್ಕೆ ಸದಸ್ಯರಾದರು. ಕಾಂಗ್ರೆಸ್ ತನ್ನ ಆರಂಭದೆಶೆಯಲ್ಲಿ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ ದೊರಕಿಸಿಕೊಳ್ಳಬೇಕೆಂಬ ಆಶೋತ್ತರವನ್ನೇನೂ ಇಟ್ಟುಕೊಂಡಿರಲಿಲ್ಲ. ಸರ್ಕಾರ ಕೂಡ ಮೊದಮೊದಲು ಈ ಸಂಸ್ಥೆಯ ಬಗ್ಗೆ ಸೌಹಾರ್ದಭಾವನೆಯನ್ನೇ ತಳೆದಿತ್ತು. ಕೇಂದ್ರದಲ್ಲೂ ಪ್ರಾಂತ್ಯಗಳಲ್ಲೂ ಸ್ವಯಮಾಡಳಿತವಿರಬೇಕು. ಪ್ರತಿಯೊಬ್ಬ ಭಾರತೀಯನಿಗೂ ವಿದ್ಯಾಭ್ಯಾಸ ದೊರಕಬೇಕು. ಸರ್ಕಾರದಲ್ಲಿ ಜವಾಬ್ದಾರಿಯ ಉದ್ಯೋಗಗಳು ಭಾರತೀಯರಿಗೆ ದೊರಕಬೇಕು, ಸೈನ್ಯದ ಎಲ್ಲಾ ಹುದ್ದೆಗಳಲ್ಲೂ ಭಾರತೀಯರಿಗೆ ಅವಕಾಶವಿರಬೇಕು. ಇಂಗ್ಲೆಂಡಿನಲ್ಲಿಯ ಇಂಡಿಯ ಕೌನ್ಸಿಲ್ ರದ್ದಾಗ ಬೇಕು. ಸರ್ಕಾರದ ಕಾರ್ಯಾಂಗ ನ್ಯಾಯಾಂಗಗಳನ್ನು ಪ್ರತ್ಯೇಕಿಸಬೇಕು. ಇವೇ ಆಗ ಕಾಂಗ್ರೆಸ್ಸಿನ ಮುಖ್ಯ ಬೇಡಿಕೆಗಳು. ಈ ಬೇಡಿಕೆಗಳನ್ನು ಕೂಡ ಸರ್ಕಾರ ಗಣನೆಗೆ ತೆಗೆದುಕೊಳ್ಳಲಿಲ್ಲ.

ಉತ್ತರ ಕರ್ನಾಟಕದ ಬಹುಭಾಗ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಹೋಗಿ ಮಹಾರಾಷ್ಟ್ರದ ಮುಖಂಡರ ಪ್ರಭಾವಕ್ಕೊಳಗಾಗಿತ್ತು. ಅಲ್ಲಿ ಲೋಕಮಾನ್ಯ ಬಾಲ ಗಂಗಾಧರ ತಿಲಕರ ಸ್ಫೂರ್ತಿಯುತ ಭಾಷಣಗಳೂ ಅವರ ಕೇಸರಿ ಪತ್ರಿಕೆಯ ಲೇಖನಗಳೂ ಆ ಪ್ರಾಂತ್ಯದ ಕನ್ನಡಿಗರನ್ನು ಹುರಿದುಂಬಿಸಿದವು. ಭಯವನ್ನು ಬಿಡಬೇಕೆಂದೂ ನಿರುತ್ಸಾಹವನ್ನು ನೀಗಬೇಕೆಂದು ಮಾತೃಭೂಮಿಯ ಹಿರಿಮೆ ಘನತೆ ಗೌರವಗಳಿಗೆ ತಕ್ಕಂತೆ ಬಾಳಬೇಕೆಂದೂ ಸ್ವಾಮಿ ವಿವೇಕಾನಂದರು ಎಲ್ಲಾರಿಗೂ ಕರೆಕೊಟ್ಟರು. ರಾಷ್ಟ್ರ ಪ್ರೇಮವನ್ನು ಕೆರಳಿಸಿ ಜನರಿಗೆ ನವೋತ್ಸಾಹವನ್ನು ನೀಡುವ ಭವಾನಿ ತಲಪಾರ್, ರಾಣಾಭೀಮದೇವ್ ಮುಂತಾದ ಅನೇಕ ನಾಟಕಗಳು ರಂಗಭೂಮಿಯ ಮೇಲೆ ಪ್ರಯೋಗವಾದವು. ಕೆಲವು ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ರ್‍ಯಾಂಡ್, ಐರ್ಸ್ಟ್ ಎಂಬ ಬ್ರಿಟಿಷ್ ಅಧಿಕಾರಿಗಳನ್ನು ಕೊಲೆ ಮಾಡಿದವರು ಗಲ್ಲಿಗೆ ಗುರಿಯಾದರು. ಇದರಿಂದ ಜನ ಹೆಚ್ಚು ಕೆರಳಿದರು. ಜನರ ಬಾಯಿ ಮುಚ್ಚಿಸಲೂ ವೃತ್ತಪತ್ರಿಕೆಗಳ ಸ್ವಾತಂತ್ರ್ಯವನ್ನು ಕಸಿದುಕ್ಕೊಳ್ಳಲೂ ಹೊಸ ಕಾನೂನುಗಳು ಜಾರಿಗೆ ಬಂದವು. ಜನತೆ ಹೆಚ್ಚುತ್ತಿದ್ದ ಕಾಲದಲ್ಲಿ ಇಂಥ ದಮನನೀತಿಯ ಪರಿಣಾಮವೆಂದರೆ, ಜವಾಹರಲಾಲ್ ನೆಹರು ಹೇಳಿದಂತೆ ಮೊತ್ತಮೊದಲಿಗೆ ಭಾರತ ರಾಜಕೀಯದಲ್ಲಿ ಬಾಂಬಿನ ಪ್ರವೇಶ. ಬಂಗಾಳದ ವಿಭಜನೆ ಸಾಲದೆಂಬಂತೆ, ವೈಸರಾಯ್ ಕರ್ಜನ್ ಭಾರತೀಯರನ್ನು ತುಚ್ಛವಾಗಿ ಪರಿಗಣಿಸಿದ. ನನಗೆ ಇಬ್ಬರು ಹೆಂಡರು: ಒಬ್ಬಳು ಹಿಂದು, ಒಬ್ಬಳು ಮುಸಲ್ಮಾನ್. ಎರಡನೆಯವಳೇ ನನಗೆ ಅಚ್ಚುಮೆಚ್ಚು–ಎಂದು ವಿಭಜಿತ ಬಂಗಾಲದ ಒಂದು ಭಾಗದ ಗವರ್ನರಾಗಿ ಫುಲ್ಲರ್ ಆಡಿದ ಅಸಭ್ಯ ನುಡಿಯನ್ನು ಜನ ಸಹಿಸದಾದರು. ಲೋಕಮಾನ್ಯರ ನಾಯಕತ್ವದಲ್ಲಿ ಕರ್ನಾಟಕ ಜನತೆಯೂ ಸ್ವದೇಶಿ, ಬಹಿಷ್ಕಾರ (ಬಾಯ್‌ಕಾಟ್) ಮುಂತಾದ ಚಳವಳಿಗಳನ್ನು ನಡೆಸಿತು. 1905–6ರಲ್ಲಿ ಲೋಕಮಾನ್ಯರು ಉತ್ತರ ಕರ್ನಾಟಕದಲ್ಲಿ ಪ್ರವಾಸ ಮಾಡಿದರು. ನಿಮ್ಮ ಆರ್ಷೇಯ ಧರ್ಮ ಸಂಸ್ಕೃತಿಗಳನ್ನು ನೆನೆಯಿರಿ. ಅವುಗಳ ಪುನರುಜ್ಜೀವನಕ್ಕೆ, ಭಾರತದ ಹಿರಿಮೆಯನ್ನು ಪುನಃ ಮೆರೆಯುವುದಕ್ಕೆ, ಸ್ವದೇಶಿ ಚಳುವಳಿ, ಬಹಿಷ್ಕಾರ, ದೇಶಿಯ ವಿದ್ಯಾಶಿಕ್ಷಣ, ಇವು ಮೂಲಸಾಧನಗಳು–ಎಂದು ಜನಕ್ಕೆ ಭೋಧಿಸಿದರು. ಅಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು ಸಕ್ಕರಿ ಬಾಳಾಚಾರ್ಯ ಮುಂತಾದ ಕನ್ನಡಿಗ ನಾಯಕರು ಕರ್ನಾಟಕದಲ್ಲೆಲ್ಲ ಪ್ರವಾಸ ಮಾಡಿ ಸ್ವದೇಶೀ ಸ್ವರಾಜ್ಯಗಳ ಸಂಕೇತವನ್ನು ಹರಡಿದರು. ಸ್ವದೇಶಿ ಕೈಗಾರಿಕೆಗಳು ನಾನಾಕಡೆ ಸ್ಥಾಪಿತವಾದವು; ಕಿತ್ತೂರಿನಲ್ಲೂ ಬಾದಾಮಿಯಲ್ಲೂ ನೇಯ್ಗೆ, ಧಾರವಾಡದಲ್ಲಿ ಬೆಂಕಿಕಡ್ಡಿ,

ಲಕ್ಷ್ಮೇಶ್ವರದಲ್ಲಿ ಪಿಂಗಾಣಿ ಸಾಮಾನು– ಹೀಗೆ ನಾನಾ ಕಡೆಗಳಲ್ಲಿ ದಿನಬಳಕೆಯ ಸಾಮಾನು ತಯಾರಿಕೆ ಪ್ರಾರಂಭವಾಯಿತು. ಇದಕ್ಕೆ ಪೋಷಕವಾಗಿ ರಾಷ್ಟ್ರೀಯ ಬ್ಯಾಂಕ್‌ಗಳನ್ನೂ ಸ್ಥಾಪಿಸಿದರು. ರಾಣಿಬೆನ್ನೂರು ಮುಂತಾದ ಕಡೆಗಳಲ್ಲಿ ವಿದೇಶಿ ಬಟ್ಟೆಗಳನ್ನು ಸುಟ್ಟರು. ಧಾರವಾಡ, ಬೆಳಗಾಂವಿ, ನವಗುಂದ, ಹಾನಗಲ್ ಮುಂತಾದ ಅನೇಕ ಕಡೆಗಳಲ್ಲಿ ರಾಷ್ಟ್ರೀಯ ವಿದ್ಯಾಶಾಲೆಗಳು ಸ್ಥಾಪಿತವಾದವು.

ಲೋಕಮಾನ್ಯ ತಿಲಕರು ಕೇಸರಿ ಪತ್ರಿಕೆಯಲ್ಲಿ ಬರೆದಿದ್ದ ಒಂದು ಲೇಖನ ರಾಜದ್ರೋಹವೆಂದು ಅವರನ್ನು ನ್ಯಾಯಸ್ಥಾನದಲ್ಲಿ ವಿಚಾರಣೆಗೊಳಪಡಿಸಿ ಅವರಿಗೆ ಆರು ವರ್ಷ ಕಾರಾಗೃಹ ಶಿಕ್ಷೆವಿಧಿಸಿಧಾಗ ಇದಕ್ಕೆ ವಿರೋಧವಾಗಿ ಮೆರವಣಿಗೆಗಳೂ ಸಭೆಗಳು ದೇಶದ ನಾನಾಕಡೆ ಜರುಗಿದವು. ಇವುಗಳನ್ನಡಗಿಸುವುದಕ್ಕೆ ಲಾಠಿ ಪ್ರಯೋಗವೇ ಮುಂತಾದ ಕ್ರಮಗಳನ್ನು ಸರ್ಕಾರ ಕೈಗೊಂಡಿತು. ಕರ್ನಾಟಕದಲ್ಲೂ ಸರ್ಕಾರಕ್ಕೆ ಪ್ರತಿಭಟನೆ ವ್ಯಾಪಕವಾಗಿತ್ತು. ದಕ್ಷಿಣ ಕನ್ನಡದಲ್ಲಿ ಅಮ್ಮೆಂಬಳ ಶ್ರೀನಿವಾಸ ಪೈ, ಸುಬ್ಬರಾಯ ಬಾಳಿಗ ಮುಂತಾದವರು. ಬಳ್ಳಾರಿಯ ಕಡೆ ಕೋಲಾಚಲಂ ವೆಂಕಟರಾವ್ ಮತ್ತು ಸಭಾಪತಿ ಮೊದಲಿಯಾರ್ ಮುಂತಾದವರು ಸರ್ಕಾರವನ್ನು ಖಂಡಿಸಿದಲ್ಲದೆ ಕಾಂಗ್ರೆಸ್ ಚಳುವಳಿಯನ್ನು ಮುಂದುವರೆಸಿದರು. 1909ರಲ್ಲಿ ಮಾರ್ಲೆ–ಮಿಂಟೋ ಸುಧಾರಣೆಗಳು ಬಂದಾಗ ಕಾಂಗ್ರೆಸ್ ಅದನ್ನು ವಿರೋಧಿಸಿತು.

1914ರಲ್ಲಿ ಯುರೋಪಿನಲ್ಲಿ ಒಂದನೆಯ ಮಹಾಯುದ್ಧ ಪ್ರಾರಂಭವಾಯಿತು. ಪ್ರಜಾಪ್ರಭುತ್ವದ ಉಳಿವಿಗಾಗಿ ಈ ಯುದ್ಧ ನಡೆಯುತ್ತಿತ್ತೆಂಬುದಾಗಿ ಮಿತ್ರರಾಷ್ಟ್ರಗಳು ಘೋಷಿಸಿಕೊಂಡರೂ ಭಾರತದಲ್ಲಿ ಮಾತ್ರ ಅದನ್ನು ಸ್ಥಾಪಿಸುವ ಸೂಚನೆಗಳಿರಲಿಲ್ಲ. ಆದರೂ ಭಾರತ ಬ್ರಿಟನ್‌ಗೆ ನೀಡಿದ ನೆರವು ಅಪಾರ. ಇದರ ಫಲವಾಗಿ 1919ರ ಸುಧಾರಣೆಗಳು ಬಂದವು. ಆದರೆ ಇವು ಕಾಂಗ್ರೆಸ್ಸಿಗೆ ತೃಪ್ತಿಕೊಡಲಿಲ್ಲ. ಗಾಂಧೀಜಿಯವರಾಗಲೇ ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಬಂದಿದ್ದರು. ಮುಂದೆ ಭಾರತದ ಹೋರಾಟ ನಿರ್ದಿಷ್ಟ ಮಾರ್ಗದಲ್ಲಿ ಮುಂದುವರಿಯಿತು.

**ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನ:** ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ಬೆಳಗಾಂವಿಯಲ್ಲಿ ಜರುಗುವುದೆಂಬ ತೀರ್ಮಾನವಾದಾಗ ಕನ್ನಡ ಜನ ಹೆಮ್ಮೆಯಿಂದಲೂ ಉತ್ಸಾಹದಿಂದಲೂ ಅದಕ್ಕೆ ಸಿದ್ಧತೆ ಮಾಡಿಕೊಂಡರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧಿವೇಶನ, ಬಿಜಾಪುರ ಜಿಲ್ಲಾ ಕಾಂಗ್ರೆಸ್ ಅಧಿವೇಶನ, ಕರ್ನಾಟಕ ಖಿಲಾಫತ್ ಪರಿಷತ್, ಭಗಿನೀಮಂಡಲ ಪರಿಷತ್, ಕರ್ನಾಟಕ ಸಾಹಿತ್ಯ ಸಮ್ಮೇಳನ, ಸ್ವಯಂಸೇವಕರ ಸಮ್ಮೇಳನ ಇವು ಬಿಜಾಪುರದಲ್ಲಿ ಜರುಗಿದವು. ಖಾದಿ ವಸ್ತು ಪ್ರದರ್ಶನ, ದನಗಳ ಜಾತ್ರೆ ಮತ್ತು ರಾಷ್ಟ್ರೀಯ ಗೀತೆಗಳ ಕಂಠಪಾಠ ಸ್ಪರ್ಧೆಗಳೂ ಸಾಂಗವಾಗಿ ನೆರವೇರಿದವು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮ್ಮೇಳನಕ್ಕೆ ಸಿ. ರಾಜಗೋಪಾಲಚಾರಿಯವರೇ ಅಧ್ಯಕ್ಷರು. ಕಾರ್ನಾಡ್ ಸದಾಶಿವರಾವ್, ಹರ್ಡೇಕರ್ ಮಂಜಪ್ಪ ಎನ್.ಸಿ. ಕೇಳ್ಕರ್ ಮುಂತಾದ ಅಖಿಲಭಾರತ ಖ್ಯಾತಿ ಪಡೆದ ಅನೇಕರು ಅಧಿವೇಶನದಲ್ಲಿ ಹಾಜರಿದ್ದರು. ಆದರೆ ಎಲ್ಲಾಕ್ಕಿಂತ ಹೆಚ್ಚಾಗಿ, ಕರ್ನಾಟಕದ ಭಾಗ್ಯವಿಶೇಷವೆಂಬಂತೆ ಗಾಂಧೀಜಿಯವರೇ ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು.


ಕಾಂಗ್ರೆಸ್ ಅಧಿವೇಶನ, ಬೆಳಗಾಂವಿ

ಗಾಂಧೀಜಿಯುವರು ತಮ್ಮ ಅಧ್ಯಕ್ಷಭಾಷಣದಲ್ಲಿ ನಾಡಿನ ಐಕ್ಯಮತ್ಯ, ಅಸ್ಪೃಶ್ಯತಾ ನಿವಾರಣೆ, ಖಾದಿಪ್ರಚಾರ, ಗ್ರಾಮೋದ್ಯೋಗ, ಸ್ವದೇಶಿ, ಅಹಿಂಸೆ– ಮುಂತಾದವುಗಳ ಬಗ್ಗೆ ಭಾಷಣ ಮಾಡಿದರು. ಈ ರಚಾನಾತ್ಮಕ ಕಾರ್ಯಗಳೂ ಸ್ವಾತಂತ್ರ್ಯ ಚಳವಳಿಯಷ್ಟೆ ಮುಖ್ಯವೆಂದು ಒತ್ತಿ ಹೇಳಿದರು. ಕರ್ನಾಟಕ ಜನತೆಯಲ್ಲಿ ಹೊಸ ಸ್ಫೂರ್ತಿ ಮೂಡಿತು. ನಾಡಿನ ಮುಖಂಡರೆಲ್ಲ ಕರ್ನಾಟಕದ ನಾನಾ ಕಡೆ ಸಂಚರಿಸಿ ಗಾಂಧೀಜಿಯವರ ಸಂದೇಶವನ್ನು ಜನರಲ್ಲಿ ಹರಡಿದರು. ಮೈಸೂರು ಸಂಸ್ಥಾನದಲ್ಲಿ ಕೆಲವು ಕಡೆ ಮೆರವಣಿಗೆ ಭಾಷಣಗಳನ್ನು ಅಧಿಕಾರಿಗಳು ನಿಷೇಧಿಸಿದರೂ ರಚನಾತ್ಮಕ ಕಾರ್ಯಗಳಿಗೆ ಸರ್ಕಾರ ಅಡ್ಡಿ ಬರಲಿಲ್ಲ. ಆದರೆ ಕರ್ನಾಟಕದ ಇತರ ಕಡೆಗಳಲ್ಲಿ ಚಳವಳಿಗಾರರಿಗೂ ಅಧಿಕಾರಿಗಳಿಗೂ ಘರ್ಷಣೆ ಅನಿವಾರ್ಯವೆಂಬುದು ಸ್ಪಷ್ಟವಾಯಿತು. ಹೋರಾಟ ಮುಂದುವರಿಯಬೇಕಿತ್ತು. ಕರ್ನಾಟಕದ ಜನರೂ ಸಿದ್ಧವಾಗಿದ್ದರು.

**ಕಾನೂನುಭಂಗ ಚಳವಳಿ:** ಗಾಂಧೀಜಿಯವರು 1930ರ ಎಪ್ರಿಲ್ 6ರಂದು ದಂಡಿಯಾತ್ರೆ ಪ್ರಾರಂಭಿಸಿದರು. ಕರ್ನಾಟಕದ ತಂಡದಲ್ಲಿ ಮೊದಲಿಂದ ಇದ್ದವರು ಮೈಲಾರ ಮಹದೇವಪ್ಪ ಮಾತ್ರ (**ನೋಡಿ– ಮಹಾದೇವಪ್ಪ, ಮೈಲಾರ**). ಆದರೆ ಹುಬ್ಬಳ್ಳಿ, ಬೆಳಗಾಂವಿ, ಮಂಗಳೂರು ಮುಂತಾದ ಕಡೆಗಳಿಂದ ಸ್ವಯಂಸೇವಕರು ಬಂದು ಸೇರಿಕೊಂಡರು. ಸರ್ಕಾರದ


ಕಾಂಗ್ರೆಸ್ ಅಧಿವೇಶನ ಬೆಳಗಾಂವಿ : ಗಾಂಧಿಯವರಿಂದ ಅಧ್ಯಕ್ಷತಾ ಸ್ವೀಕಾರ

ಮುಖಂಡರನ್ನು ಹಿಡಿದು ಶಿಕ್ಷೆಗೊಳಪಡಿಸಿತು. ವಿದ್ಯಾರ್ಥಿಗಳೂ ಬಂದು ಸೇರಿಕೊಂಡರು. ಸರ್ಕಾರದ ದಬ್ಬಾಳಿಕೆ ಹೆಚ್ಚಿದಂತೆ ಸತ್ಯಾಗ್ರ ಹಿಗಳ ಸಂಖ್ಯೆಯೂ ಹೆಚ್ಚಿತು. ಸ್ತ್ರೀಯರೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸತೊಡಗಿದರು. ಗಾಂಧೀಜಿಯವರು ದರ್ಶನದಲ್ಲಿದ್ದ ಉಪ್ಪಿನ

ಕಾಂಗ್ರೆಸ್ ಅಧಿವೇಶನ, ಬೆಳಗಾಂವಿ, ಗಾಂಧಿಯವರ ಭಾಷಣ

ಉಗ್ರಾಣದ ಮೇಲೆ ಧಾಳಿ ನಡೆಸಿದಾಗ, ಕರ್ನಾಟಕದ ತಂಡ ಸಾಣುಕಟ್ಟೆ ಉಗ್ರಾಣಕ್ಕೆ ಹೋಗಿ ನೂರಾರು ಪೌಂಡು ಉಪ್ಪನ್ನು ಸಾಗಿಸಿ ಕುಮಟದಲ್ಲಿ ಮಾರಿತು. ಮೇ 4ರಂದು ಗಾಂಧೀಜಿಯವರನ್ನು ಬಂಧಿಸಿ ಯೆರವಾಡ ಸೆರೆಮನೆಗೆ ಕೊಂಡೊಯ್ದರು. ಹರತಾಳ ಖಂಡನಾಸಭೆ ಪ್ರದರ್ಶನಗಳು ಎಲೆಲ್ಲೂ ಜರುಗಿದವು. ಉಪ್ಪಿಗೆ ಮಾತ್ರ ಸೀಮಿತವಾಗಿದ್ದ ಕಾನೂನು ಉಲ್ಲಂಘನೆ ಆಗ ಇತರ ಕೆಲವು ವಸ್ತುಗಳಿಗೂ ಹರಡಿತು. ಸತ್ಯಾಗ್ರಹದ ಸಮಾಚಾರ ಹರಡದಂತೆ ಸರ್ಕಾರ ಹೊಸ ವೃತ್ತಪತ್ರಿಕಾ ಆಜ್ಞೆಗಳನ್ನು ಹೊರಡಿಸಿತು; ಜನ ಕಲ್ಲಚ್ಚಿನ ಪತ್ರಿಕೆಗಳನ್ನು ಹೊರಡಿಸಿ ಜನರಲ್ಲಿ ಹಂಚಿದರು. ಸತ್ಯಾಗ್ರಹಿಗಳಿಗೆ ಯಾವ ರೀತಿಯ ಆಶ್ರಯವನ್ನೂ ಕೊಡಬಾರದೆಂದು ಸರ್ಕಾರ ಆಜ್ಞೆ ಹೊರಟಿತು. ಗೃಹಿಣಿಯರು ಕೂಡ ಇದನ್ನು ಉಲ್ಲಂಘಿಸಿ ಅವರಿಗೆ ಆಶ್ರಯ ನೀಡಿದರು.

ಸತ್ಯಾಗ್ರಹ ವ್ಯಾಪಕವಾಯಿತು. ಹೊರದೇಶಗಳ ಬಟ್ಟೆಗಳಿಗೆ ಬಹಿಷ್ಕಾರ, ಅರಣ್ಯ ಸತ್ಯಾಗ್ರಹ, ಮದ್ಯದಂಗಡಿಗಳ ಮುಂದೆ ತಡೆಕಾವಲು, ಕರನಿರಾಕರಣೆ, ಮುಂತಾದ ಎಲ್ಲಾ ಚಟುವಟಿಕೆಗಳೂ ಕರ್ನಾಟಕದಲ್ಲೂ ಪ್ರಾರಂಭವಾದವು. ಮೈಸೂರು ಸಂಸ್ಥಾನದಲ್ಲೂ ಸರ್ಕಾರ ಕಾಂಗ್ರೆಸ್ಸಿಗರ ಮೇಲೆ ಲಾಠಿ ಪ್ರಯೋಗಗಳೇ ಮುಂತಾದ ಕ್ರಮಗಳನ್ನು ಕೈಗೊಂಡಿತು. ಆದರೆ ಚಳವಳಿ ಬೆಳೆಯುತ್ತಲೇ ಹೋಯಿತು. ಇಲ್ಲಿ ಒಂದು ಗಮನೀಯ ಅಂಶ ಮೊದಲ ಬಾರಿಗೆ ಕಂಡುಬಂತು. ಹರಿದು ಹಂಚಿಹೋಗಿದ್ದ ಕರ್ನಾಟಕದ ಜನ ತಮ್ಮ ಶೋಚನೀಯ ಪರಿಸ್ಥಿತಿಯನ್ನರಿತರು. ಕನ್ನಡಿಗರೆಲ್ಲಾ ಒಂದಾಗಿ ಬಾಳಬೇಕೆಂಬ ಆಸೆ ಅವರಲ್ಲಿ ಬಲಗೊಂಡಿತು. ಕರ್ನಾಟಕ ಪ್ರಾಂತ್ಯನಿರ್ಮಾಣಕ್ಕೆ ಈ ಹೋರಾಟದ ಕಾಲದಲ್ಲಿ ಬಲ ದೊರಕಿತು. ಈ ಹೋರಾಟಕ್ಕೆ ಪ್ರತಿಭಾವಂತರೂ ಸಮರ್ಥರೂ ಆದ ನಾಯಕರೂ ದೊರೆತರು. ಗಂಗಾಧರರಾವ್ ದೇಶಪಾಂಡೆ, ಕಡಪ ರಾಘವೇಂದ್ರರಾವ್, ಶ್ರೀನಿವಾಸರಾವ್ ಕೌಜಲಗಿ, ಹರ್ಡೇಕರ್ ಮಂಜಪ್ಪ, ಸದಾಶಿವರಾವ್ ಕಾರ್ನಾಡ್, ಎಸ್.ಎಸ್. ಸೆಟ್ಲೂರ್, ಆರ್. ಆರ್. ದಿವಾಕರ, ಶಿವಮೂರ್ತಿಶಾಸ್ತ್ರಿ ಇಂಥವರ ಮುಂದಾಳುತನದಲ್ಲಿ ಕರ್ನಾಟಕವೂ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಗಣನೀಯ ಪಾತ್ರವಹಿಸಿತು. ಕರನಿರಾಕರಣೆಯಲ್ಲಿ ಅಂಕೋಲ, ಶಿರಸಿ, ಸಿದ್ದಾಪುರ ಪ್ರಾಂತ್ಯಗಳು ಮಾಡಿದ ಬಲಿದಾನ ವೃತ್ತಾಂತವನ್ನು ಸರ್ದಾರ್ ಪಟೇಲರು ಕೇಳಿ, ಆ ನನ್ನ ದೇಶ ಬಾಂದವರ ತ್ಯಾಗ, ದೇಶಪ್ರೇಮ, ಅವರು ಅನುಭವಿಸಿದ ಕಷ್ಟನಷ್ಟಗಳು ಇವುಗಳಿಂದ ನಾನು ತುಂಬ ಮನನೊಂದಿದ್ದೇನೆ–ಎಂದರು. ಸ್ಕೂಲು ಕಾಲೇಜುಗಳಿಂದ ವಿದ್ಯಾರ್ಥಿಗಳು ಹೊರಬಂದು ಅಧಿಕ ಸಂಖ್ಯೆಯಲ್ಲಿ ಭಾಗವಹಿಸತೊಡಗಿದರು. ಸಂಸ್ಥಾನಗಳ ಪ್ರಜಾ ಸಮ್ಮೇಳನ, ಮೈಸೂರು ಯುವಕ ಸಮ್ಮೇಳನಗಳು 1930ರಲ್ಲಿ ಬೆಂಗಳೂರಿನಲ್ಲಿ ಜರುಗಿ ಮೈಸೂರಿನಲ್ಲೂ ಶಾಸನಬದ್ಧ ರಾಜಪ್ರಭುತ್ವವೇರ್ಪಡಬೇಕು ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ಹರ್ಡೇಕರ್ ಮಂಜಪ್ಪ



ಕಾರ್ನಾಡ್ ಸದಾಶಿವರಾವ್

ಈ ಮಧ್ಯೆ ಬ್ರಿಟೀಷರೂ ಕಾಂಗ್ರೆಸನ್ನು ಒಲಿಸಿಕೊಳ್ಳಲು ಅರೆಮನಸ್ಸಿನ ಯತ್ನ ನಡೆಸಿದರು. ಮೂರು ಚಕ್ರಗೋಷ್ಠಿಗಳಾದವು. ಕಾಂಗ್ರೆಸ್ಸಿಗೆ ತೃಪ್ತಿಯಾಗುವ ಯಾವ ತೀರ್ಮಾನವನ್ನೂ ಕೈಗೊಳ್ಳಲಾಗಲಿಲ್ಲ. ಆದರೂ ಸಂಧಾನಗಳ ಫಲವಾಗಿ 1934ರಲ್ಲಿ ಕಾಂಗ್ರೆಸ್ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಿತು. 1935ರಲ್ಲಿ ಪ್ರಾತೀಯ ಸ್ವಯಮಾಧಿಪತ್ಯವನ್ನು ಭಾರತಕ್ಕೆ ಕೊಡಲಾಯಿತು. ಕಾಂಗ್ರೆಸ್ಸಿನ ಕೆಲವರಿಗೆ ಇದು ಇಷ್ಟವಿಲ್ಲದಿದ್ದರೂ ಉಳಿದವರು ಇದನ್ನು ಒಪ್ಪಿದರು. 1937ರಲ್ಲಿ ಪ್ರಾಂತ್ಯಗಳಲ್ಲಿ ಹೊಸ ಸರ್ಕಾರಗಳನ್ನು ರಚಿಸಲಾಯಿತು. ಆದರೆ 1939ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ, ಭಾರತವನ್ನು ಕೇಳದೆ ಬ್ರಿಟನ್ ಅದನ್ನು ಯುದ್ಧಕ್ಕೆ ಎಳೆದದ್ದು ತಪ್ಪು ಎಂಬ ಕಾರಣದಿಂದ ಪ್ರಾಂತೀಯ ಮಂತ್ರಿಮಂಡಲಗಳು ರಾಜಿನಾಮೆಯಿತ್ತವು. ಈ ಯುದ್ಧ ತಮ್ಮದಲ್ಲವೆಂದು ಹೇಳುವ ಸ್ವಾತಂತ್ರವೂ ಜನಕ್ಕಿರಲಿಲ್ಲವಾದ್ದರಿಂದ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹ ಪ್ರಾರಂಭಿಸಿದರು. ಯುದ್ಧವಿರೋಧಿ ಘೋಷಣೆಗಳನ್ನು ಕೂಗಿ ಸೆರೆಮನೆ ಸೇರುವ ಈ ವಿಶಿಷ್ಟ ಸತ್ಯಾಗ್ರಹದಲ್ಲಿ ಭಾಗವಹಿಸಿ ದಸ್ತಗಿರಿಯಾದ ನಿಷ್ಠಾವಂತ ಸತ್ಯಾಗ್ರಹಿಗಳಲ್ಲಿ ಕನ್ನಡಿಗರೂ ಇದ್ದರು.



ದೇಶಪಾಂಡೆ ಗಂಗಾಧರರಾವ್

1942ರಲ್ಲಿ ಬ್ರಿಟಿಷರನ್ನು ಭಾರತದಿಂದ ಉಚ್ಚಾಟಿಸುವ ಚಳವಳಿ ಆರಂಭವಾಯಿತು. ಗಾಂಧೀಜಿ ಆದಿಯಾಗಿ ಅನೇಕ ಮುಖಂಡರು ದಸ್ತಗಿರಿಯಾದಾಗ ರಂಗನಾಥ ದಿವಾಕರ, ಹುಕ್ಕೇಕರ, ಡಿ.ಪಿ.ಕರಮರಕರ, ಚೆನ್ನಬಸಪ್ಪ ಅಂಬಲಿ ಮುಂತಾದವರು ಬೊಂಬಾಯಿಯಲ್ಲಿ ಭೂಗತರಾಗಿ ಚಳವಳಿಯನ್ನು ನಿರ್ದೇಶಿಸಿದರು. ಗಂಗಾಧರರಾವ್ ದೇಶಪಾಂಡೆ, ಎನ್.ಎಸ್. ಹರ್ಡೀಕರ, ಕಬ್ಬೂರ ಮುಂತಾದ ಅನೇಕರು ಬಂಧಿತರಾದರು. ಮೊದಲು ನಗರಕ್ಕೆ ಮಾತ್ರ ಸೀಮಿತವಾಗಿದ್ದ ಸಂಪು ಹಳ್ಳಿಗಳಿಗೂ ಹರಡಿತು. ಚಳವಳಿ ಉಗ್ರವಾಯಿತು. 1942ರ ಆಗಸ್ಟ್ 9ರಿಂದ ಒಂದು ವರ್ಷದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಬಂಧಿತರಾದವರ ಸಂಖ್ಯೆಯನ್ನು ಮುಂದೆ ಕೊಟ್ಟಿದೆ:

| | |
|---|---|
| ಬೆಳಗಾಂವಿ | 1,255 |
| ಧಾರವಾಡ | 1,147 |
| ಉತ್ತರ ಕನ್ನಡ | 515 |
| ಬಿಜಾಪುರ | 500 |
| ದಕ್ಷಿಣ ಕನ್ನಡ | 27 |
| ಬಳ್ಳಾರಿ | 112 |
| ಮೈಸೂರು ಸಂಸ್ಥಾನ | 2,500 |
| ಕೊಡಗು | 74 |

ಗೋಲಿಬಾರು ನಡೆದ ಕೆಲವು ಸ್ಥಳಗಳ ಹೆಸರು, ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆ–ಇವನ್ನು ಮುಂದೆ ಕೊಟ್ಟಿದೆ:

| | ಸತ್ತವರ ಸಂಖ್ಯೆ: | ಗಾಯಗೊಂಡವರ ಸಂಖ್ಯೆ: |
|---|---|---|
| ಬೈಲಹೊಂಗಲ | 7 | 9 |
| ನಿಪ್ಪಾಣಿ | 2 | 8 |
| ಶಿಲಾಪುರ | 1 | 1 |
| ಕೋಳೀಗುಡ್ಡ | – | 2 |
| ಖಿವಟಕೊಪ್ಪ | 1 | 6 |
| ಹುಬ್ಬಳ್ಳಿ | 1 | 18 |
| ಮೈಸೂರು ಸಂಸ್ಥಾನ | 156 | 789 |

ಲಾಠಿ ಪ್ರಹಾರಗಳ ವಿವರ ಈ ರೀತಿ ಇದೆ:

| | ಪ್ರಹಾರ ಸಂಖ್ಯೆ: | ಗಾಯಗೊಂಡವರ ಸಂಖ್ಯೆ: |
|---|---|---|
| ಬೆಳಗಾಂವಿ | 6 | 65 |
| ಗದಗ | 3 | 3 |
| ಹಾವೇರಿ | 2 | 8 |
| ತಾಳೀಕೋಟೆ | 1 | 2 |
| ಅಂಕೋಲ | 2 | – |
| ಮಂಗಳೂರು | 6 | 50 |
| ಕಾರ್ಕಳ | 1 | 11 |
| ಬೆಂಗಳೂರು | 12 | 60 |

ಜನರನ್ನು ಚದುರಿಸಲು ಬೆಂಗಳೂರಿನ ಕಾಲ್ದಳ ಕುದುರೆಗಳನ್ನು ಬಳಸಲಾಗಿತ್ತು. ಚಳುವಳಿಯಲ್ಲಿ ಭಾಗವಹಿಸಿದ್ದವರನೇಕರಿಗೆ ಸರ್ಕಾರ ಬಗೆಬಗೆಯ ಉಗ್ರದಂಡನೆ ವಿಧಿಸುತ್ತಿತ್ತು. ಛಟಕೀ ಶಿಕ್ಷೆ ಇಂಥವುಗಳಲ್ಲೊಂದು. ಅಲ್ಲದೆ ಸಾಮೂಹಿಕ ದಂಡಕ್ಕೆ ಅನೇಕ ಹಳ್ಳಿಗಳ ಜನ ತುತ್ತಾದರು. ಬೆಳಗಾಂವಿಯ ಜಿಲ್ಲೆಯಲ್ಲಿ 8 ಹಳ್ಳಿಗಳ ಮೇಲೆ 1,78,000ರೂ.ಗಳನ್ನು ಧಾರವಾಡ ಜಿಲ್ಲೆಯಲ್ಲಿ 18 ಹಳ್ಳಿಗಳ ಮೇಲೆ 53,500ರೂ.ಗಳನ್ನು ಬಿಜಾಪುರ ಜಿಲ್ಲೆಯಲ್ಲಿ 2 ಹಳ್ಳಿಗಳ ಮೇಲೆ 30,000 ರೂ.ಗಳನ್ನೂ ಮೈಸೂರು ಸಂಸ್ಥಾನದಲ್ಲಿ 4 ಹಳ್ಳಿಗಳ ಮೇಲೆ 2,000 ರೂ.ಗಳನ್ನೂ ದಂಡವಾಗಿ ವಿಧಿಸಲಾಯಿತು. ಸತ್ಯಾಗ್ರಹಿಗಳಿಗೆ ಮಾರ್ಗದರ್ಶಕರಾಗಿ ಮುಖಂಡರಿಲ್ಲದಿದ್ದರೂ ಚಳವಳಿಗಾರರ ಕಾರ್ಯಕ್ರಮಬದ್ಧವಾಗಿ ಮುಂದುವರಿಯಿತು. ಕೊಂಚವೂ ಧೃತಿಕೆಡದೆ ಒಂದೇ ಸಮನಾಗಿ ಹೋರಾಡಿ ಕೊನೆಗೆ

ಆತ್ಮಾರ್ಪಣೆ ಮಾಡಿದ ಮಹದೇವಪ್ಪ ಮೈಲಾರ, ಯಾರಿಗೂ ಹಿಂಸೆ ಕೊಡದೆ ಸರ್ಕಾರದ ಕಟ್ಟಡಗಳಿಗೆ ಬೆಂಕಿಯಿಡುವುದೇ ಮುಂತಾದ ವಿಧ್ವಂಸಕ ಕಾರ್ಯ ನಡೆಸಿದ ಚೆನ್ನಪ್ಪ ವಾಲಿ ಮತ್ತು ಸಂಗಡಿಗರು, ಸೈನ್ಯದ ತುಕಡಿಯೊಂದನ್ನು ತರುತ್ತಿದ್ದ ರೈಲನ್ನು ತಡೆಯಲು ಅದಕ್ಕೆ ಅಡ್ಡವಾಗಿ ಕಂಬಿಗಳ ಮಧ್ಯೆ ನಿಂತು ಸೈನ್ಯಾಧಿಕಾರಿಯ ಗುಂಡಿಗೆ ಬಲಿಯಾದ ದಾವಣಗೆರೆಯ ಹಲ್ಲೂರು ನಾಗಪ್ಪ, ಹುಬ್ಬಳ್ಳಿಯಲ್ಲಿ ಪೋಲೀಸರ ಗುಂಡು ತಗುಲಿ ಸಾಯುವ ಸ್ಥಿತಿಯಲ್ಲಿದ್ದಾಗ ಡಾಕ್ಟರು ಅನುಕಂಪದಿಂದ ಮಗು ನಿನಗೇನು ಬೇಕಪ್ಪ? ಎಂದು ಕೇಳಿದಾಗ ತನಗೆ ಸ್ವರಾಜ್ಯ ಬೇಕು ಎಂದು ದಿಟ್ಟತನದಿಂದ ಉತ್ತರ ಕೊಟ್ಟ 16 ವರ್ಷದ ಹುಡುಗ ನಾರಾಯಣ ದೋಣಿ–ಇಂಥ ಸತ್ಯಾಗ್ರಹಿಗಳು ಅನೇಕ.

ಮೈಸೂರು ಹೈದರಾಬಾದು ಸಂಸ್ಥಾನಗಳಲ್ಲಿ ನಡೆದ ಚಳವಳಿ ಇಬ್ಬಗೆಯಾದುದು: ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದರ ಜೊತೆಗೆ ದೇಶಿಯ ಅರಸರು ಸಾಂಕುಶ ಪ್ರಭುಗಳಾಗಿರಲೊಪ್ಪಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವಂತೆ ಮಾಡುವುದು. 1920ರಲ್ಲಿ ನಾಗಪುರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ದೇಶಿಯ ಸಂಸ್ಥಾನಗಳು ಕೂಡ ಅದರ ಕಕ್ಷೆಯೊಳಕ್ಕೆ ಬಂದವು. ಈ ಕಾಲದಲ್ಲಿ ಮೈಸೂರಿನಲ್ಲೂ ರಾಜಕೀಯ ಸಮ್ಮೇಳನಗಳು ನಡೆದು ಸಂಸ್ಥಾನ ಜನರ ಆಶೋತ್ತರಗಳು ಖಚಿತವಾದವು. 1924ರಲ್ಲಿ ಬೆಳಗಾಂವಿಯಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಮೈಸೂರಿನವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. 1927ರಲ್ಲಿ ಗಾಂಧೀಜಿಯವರು ಮೈಸೂರಿಗೆ ಭೇಟಿ ನೀಡಿದರು. ಇದರಿಂದ ಜನರಲ್ಲಿ ಜಾಗೃತಿ ಅಧಿಕವಾಯಿತು.

ಸಂಸ್ಥಾನ ಸರ್ಕಾರದ ನೀತಿಯೂ ಆಗ ಕಟುವಾಗಿಯೇ ಇತ್ತು. ಅನಾವೃಷ್ಟಿಯಿಂದಾಗಿ ಬೆಳೆಗಳು ಸರಿಯಾಗಿ ಆಗದಿದ್ದರೂ ಸರ್ಕಾರ ನಿರ್ದಯೆಯಿಂದ ಕಂದಾಯ ವಸೂಲು ಮಾಡುತ್ತಿದುದ್ದ ದನ್ನು ಪ್ರತಿಭಟಿಸಿ ಶಿವಮೊಗ್ಗ, ಶಿರಾಳಕೊಪ್ಪ ಮತ್ತು ಮಂಡ್ಯದ ರೈತರು ಕರನಿರಾಕರಣೆ ಚಳವಳಿ ಕೈಗೊಂಡರು. ಕಾರ್ಮಿಕ ಚಳವಳಿಯೂ ಬಲಗೊಂಡಿತು. 1928ರಲ್ಲಿ ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಸಂಸ್ಥೆ ಸ್ಥಾಪಿತವಾಯಿತು. 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಮೈಸೂರಿನವರೂ ಭಾಗವಹಿಸಿದ್ದರು. ದೇಶಿಯ ಸಂಸ್ಥಾನಗಳ ಪ್ರತಿನಿಧಿಗಳ ಸಮ್ಮೇಳನಗಳು ಜವಾಬ್ದಾರಿ ಸರ್ಕಾರ ಹೋರಾಟಕ್ಕೆ ಪುಷ್ಟಿಕೊಟ್ಟವು. ಮೈಸೂರು ಸಂಸ್ಥಾನದ ಹೋರಾಟದ ಇತಿಹಾಸದಲ್ಲಿ 1937 ಇನ್ನೊಂದು ಮುಖ್ಯ ಘಟ್ಟ. ಮೈಸೂರಿನಲ್ಲಿದ್ದ ಎರಡು ಪ್ರಮುಖ ಪಕ್ಷಗಳಾದ ಪ್ರಜಾಪಕ್ಷವೂ ಕಾಂಗ್ರೆಸ್ಸೂ ಆಗ ಒಂದಾದುವು.

ಯು. ರಾಮರಾವ್

ದೇಶಿಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಹೋರಾಟ ನಡೆಸಲು ಅವಕ್ಕೆ ಪ್ರತ್ಯೇಕವಾದ ಕಾಂಗ್ರೆಸ್ ಸಂಸ್ಥೆ ಇರಬೇಕೆಂಬ ತತ್ತ್ವವನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸೂ ಒಪ್ಪಿತು. 1938ರಲ್ಲಿ ಶಿವಪುರದಲ್ಲಿ ಸೇರಿದ್ದ ಮೈಸೂರು ಕಾಂಗ್ರೆಸ್ ಅಧಿವೇಶನದಿಂದ ಚಳವಳಿ ಉಗ್ರವಾಯಿತು. 1942ರಲ್ಲಿ ಚಳವಳಿಯ ಕಾಲದಲ್ಲಿ ಇದು ಅಖಿಲಭಾರತ ಚಳವಳಿಯೊಂದಿಗೆ ಸಮಾವೇಶಗೊಂಡಿತು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸ್ವತಂತ್ರರೆಂದು ಘೋಷಿಸಲ್ಪಟ್ಟ ಸಂಸ್ಥಾನಾಧೀಶರು ಭಾರತದ ಒಕ್ಕೂಟದಲ್ಲಿ ತಮ್ಮ ಸಂಸ್ಥಾನವನ್ನು ವಿಲೀನಗೊಳಿಸಬೇಕೆಂದೂ ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂದೂ ಮೈಸೂರು ಚಲೋ ಚಳವಳಿ ಅತ್ಯಂತ ಉಗ್ರವಾಗಿ ನಡೆಯಿತು. ಮೈಸೂರಿನಲ್ಲೂ ಪ್ರಜಾಪ್ರತಿನಿಧಿಗಳ ಸರ್ಕಾರ ಸ್ಥಾಪಿತವಾಯಿತು.

ಹುಕ್ಕೇರಿಕರ ರಾಮರಾವ್

**ಈಸೂರು ಪ್ರಕರಣ:** ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಚಿರಸ್ಮರಣೀಯವಾದದೆಂದರೆ ಈಸೂರು ಪ್ರಕರಣ. ಈಸೂರು ಶಿವಮೊಗ್ಗ ಜಿಲ್ಲೆಯಲ್ಲಿರುವ ಶಿಕಾರಿಪುರ ತಾಲ್ಲೂಕಿನ ಒಂದು ಸಣ್ಣ ಗ್ರಾಮ. ಇಲ್ಲಿಯ ಜನ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವೇರ್ಪಡಬೇಕು ಎಂದು 1929ರಲ್ಲಿ ಸಂಸ್ಥಾನದ ಪ್ರಜೆಗಳು ನಡೆಸಿದ ಚಳವಳಿಯಲ್ಲಿ ಭಾಗವಹಿಸಿದ್ದರು. 1942ರ ಚಳವಳಿಯಲ್ಲೂ ಮೊದಲಿನಿಂದ ಪಾಲುಗೊಂಡಿದ್ದರು. 1942ರ ಮಧ್ಯಕಾಲದಲ್ಲಿ ಅವರು ತಮ್ಮದೇ ಆದ ಒಂದು ವಿಶಿಷ್ಟ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಸುಮಾರು ಇನ್ನೂರು ಜನರನ್ನು (ಅದರಲ್ಲಿ ಹೆಚ್ಚು ಮಂದಿ ತರುಣರೇ) ಒಳಗೊಂಡ ಒಂದು ಮೆರವಣಿಗೆ ಆ ಹಳ್ಳಿಯ ಬೀದಿಗಳಲ್ಲಿ ಪ್ರತಿನಿತ್ಯ ಹೊರಡುತ್ತಿತ್ತು. ಕಚೇರಿಗೆ ಬೆಂಕಿಯಿಟ್ಟು ಸುಡಿ, ಗೌಡರ ಶಾನುಭೋಗರ ಸರ್ಕಾರಿ ಲೆಕ್ಕಪುಸ್ತಕಗಳನ್ನು ಸುಟ್ಟುಹಾಕಿ, ಸರ್ಕಾರದ ನೌಕರರಿಗೆ ಎಂದೂ ಗೌರವವನ್ನೂ ಕೊಡಕೂಡದು, ಕೊಟ್ಟವರ ಮನೆಯನ್ನು ಸುಡುತ್ತೇವೆ, ತೇಗದ ಮರಗಳನ್ನು ಕಡಿದುರುಳಿಸಿ, ಯಾರೂ ಭೂಕಂದಾಯವನ್ನು ಕೊಡಕೂಡದು– ಇಂಥವೇ ಅವರ ಕೂಗುಗಳು. ಒಂದು ದಿನ ಅಲ್ಲಿಯ ಶ್ಯಾನುಭೋಗ ಮತ್ತು ಪಟೇಲ ಬಂದಾಗ ಅವರ ಸರ್ಕಾರಿ ಪುಸ್ತಕಗಳನ್ನೆಲ್ಲಾ ಅವರಿಂದ ಕಸಿದುಕೊಂಡರು. ಮಾರನೆಯ ದಿನವೇ ಆ ಹಳ್ಳಿಗೆ ಸ್ವತಂತ್ರಹಳ್ಳಿ ಎಂಬ ಹೆಸರಿಟ್ಟು ಒಂದು ಬೋರ್ಡನ್ನೂ ಬರೆದು ತಗಲುಹಾಕಿದರು. ಹೊಸ ಸರ್ಕಾರವನ್ನೇ ಸ್ಥಾಪಿಸಿದರು ಈ ಯುವಕರು. ಹತ್ತು ವರ್ಷದ ಹುಡುಗ ಜಯಪ್ಪ ಅಮಲ್ದಾರನಾಗಿ ನೇಮಕ ಹೊಂದಿದ. 12ವರ್ಷದ ಮಲ್ಲಪ್ಪ ಸರ್ವಾಧಿಕಾರಿಯಾದ. ಇತರ ಅಧಿಕಾರಿಗಳನ್ನೂ ನೇಮಿಸಲಾಯಿತು.

ಎನ್.ಎಸ್. ಹರ್ಡೀಕರ್



ಎಲ್ಲರೂ ನಿಯಮಬದ್ಧರಾಗಿ ಹುರುಪಿನಿಂದ ಕೆಲಸ ಮಾಡತೊಡಗಿದರು. ಪ್ರತಿಯೊಬ್ಬನೂ ಖಾದಿಟೋಪಿ ಧರಿಸಬೇಕೆಂಬ ನಿಯಮವನ್ನು ಜಾರಿಗೆ ತರಲಾಯಿತು. ಎಲ್ಲರೂ

ಸೇರಿದಾಗ ಕರೆಗಂಟೆ ಬಾರಿಸುತ್ತಿದ್ದರು. ಹುಡುಗರ ಶಿಸ್ತು, ನಿಯಮ ಪಾಲನೆ ಎಲ್ಲರನ್ನು ಅಚ್ಚರಿಗೊಳಿಸಿತು. ಸೆಪ್ಟೆಂಬರ್ 28ರಂದು ಅಮಲ್ದಾರರು ತಕ್ಕ ಸಿಬ್ಬಂದಿಯೊಡನೆ ಈ ಸ್ವತಂತ್ರ್ಯ ಹಳ್ಳಿಗಳಿಗೆ ಬಂದರು. ಊರಿನ ಕರೆಗಂಟೆ ಬಾರಿಸಿತು. ಎಲ್ಲರೂ ಕಲೆತರು. ಅಮುಲ್ದಾರರಿಗೆ ಧರಿಸಲು ಖಾದಿ ಟೋಪಿ ಕೊಟ್ಟರು. ಅವರು ಶಾಂತರಾಗಿದ್ದರೂ ಅವರೊಂದಿಗೆ ಇದ್ದ ಪೋಲೀಸ್ ಅಧಿಕಾರಿಗೆ ಇದು ಸಹಿಸಲಿಲ್ಲ. ಲಾಠಿ ಹೊಡೆತ ಪ್ರಾರಂಭವಾಯಿತು. ಕಾಳಗವೇ ನಡೆಯಿತು. ಪೋಲೀಸ್ ಅಧಿಕಾರಿ, ಅಮಲ್ದಾರ ಇಬ್ಬರೂ ಸಾವಿಗೆ ಈಡಾದರು. ಸ್ವಲ್ಪ ಕಾಲದಲ್ಲೇ ಹೆಚ್ಚು ಪೋಲೀಸರಲ್ಲದೆ ಒಂದು ಸೈನ್ಯದ ತುಕಡಿಯೂ ಬಂದಿತು. ಇವರು ಅಮಾನುಷ ರೀತಿಯಲ್ಲಿ ಆ ಹಳ್ಳಿಯವರ ಮೇಲೆ ಸೇಡು ತೀರಿಸಿಕೊಂಡರು. ನಲವತ್ತೊಂದು ಮಂದಿ ನ್ಯಾಯಸ್ಥಾನದಲ್ಲಿ ವಿಚಾರಣೆಗೊಳಗಾದರು. ಅವರಲ್ಲಿ ಐದು ಜನಕ್ಕೆ ಮರಣದಂಡನೆ ವಿಧಿಸಲಾಯಿತು.

ಹೈದರಾಬಾದ್ ಕರ್ನಾಟಕವೂ ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಹಿಂದೆ ಬಿದ್ದಿರಲಿಲ್ಲ. 1857ರ ಸಂಗ್ರಾಮದಲ್ಲಿ ಕೊಪ್ಪಳದ ಮುಂಡರಗಿ ಭೀಮರಾವ್, ಸುರಪುರದ ವೆಂಕಟಪ್ಪನಾಯಕ ಮುಂತಾದವರು ಬ್ರಿಟಿಷರೊಂದಿಗೆ ಹೋರಾಡಿ ಮಡಿದಿದ್ದರು. ತಿಲಕರ ರಾಜಕೀಯ ಆಂದೋಲನದಿಂದ ಈ ಜಾಗೃತಿ ಬೆಳೆಯಿತು: ಗಾಂಧೀಜಿಯವರ ಅಸಹಕಾರ ಚಳವಳಿಯ ಸಮಯದಲ್ಲಿ ಖಚಿತವಾಗತೊಡಗಿತು. ನಿಜಾಂ ಕನ್ನಡಿಗರ ಸರ್ವತೋಮುಖ ಏಳಿಗೆಗಾಗಿ ನಿಜಾಂ ಕರ್ನಾಟಕ ಪರಿಷತ್ತೊಂದನ್ನು ಸ್ಥಾಪಿಸಬೇಕೆಂದು 1934ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ತೀರ್ಮಾನವಾಯಿತು. ಅದರಂತೆ 1937ರಲ್ಲಿ ಹೈದರಾಬಾದಿನಲ್ಲಿ ಪರಿಷತ್ತು ಸೇರಿತು. ಆಂಧ್ರ ಮಹಾರಾಷ್ಟ್ರ ವಿಭಾಗಗಳೂ ಇದೇ ಬಗೆಯ ಚಟುವಟಿಕೆಗಳನ್ನಾರಂಭಿಸಿದ್ದವು. ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಟುವಟಿಕೆಗಳು ಅಧಿಕೃತವಾಗಿ ಪ್ರಾರಂಭವಾದದ್ದು ಆಗಲೇ. ಇದೇ ಕಾಲಕ್ಕೆ ಬಿರುಸಾಗಿ ನಡೆದ ವಂದೇ ಮಾತರಂ ಚಳವಳಿಯಲ್ಲಿ ಅನೇಕ ಕನ್ನಡ ವಿದ್ಯಾರ್ಥಿಗಳು ಪಾತ್ರವಹಿಸಿದರು.

ಮೈಲಾರದ ಮಹದೇವಪ್ಪ

ಇಡೀ ಹೈದರಾಬಾದ್ ಸಂಸ್ಥಾನಕ್ಕೆ ಒಂದು ರಾಜಕೀಯ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ ಪ್ರಯತ್ನಗಳು ನಡೆದದ್ದು 1938ರಲ್ಲಿ. ಆದರೆ ಇದಕ್ಕೆ ಸರ್ಕಾರ ಅನುಮತಿ ಕೊಡಲಿಲ್ಲ. ಇದಕ್ಕಾಗಿ ಸತ್ಯಾಗ್ರಹ ಹೂಡಲಾಯಿತು. ಇದಕ್ಕೆ ಜಾತೀಯತೆಯ ಬಣ್ಣ ಬಳಿಯಲು ಸರ್ಕಾರ ಹವಣಿಸಿತು.

1940ರಲ್ಲಿ ಬಿದರೆಯಲ್ಲಿ ಕರ್ನಾಟಕ ಪರಿಷತ್ತಿನ ಎರಡನೆಯ ಅಧಿವೇಶನ ಸೇರಿತು. ಅದು ಮುಗಿದ ಅನಂತರ ಕೆಲವು ಪುಂಡರು ಸೇರಿಕೊಂಡು ಆ ನಗರಕ್ಕೆ ಬೆಂಕಿಯಿಟ್ಟರು. ಜನ ಉಗ್ರವಾಗಿ ಪ್ರತಿಭಟಿಸಿದರು. ಸಂಸ್ಥಾನ ಕಾಂಗ್ರೆಸ್ಸಿನ ಮೇಲಿನ ಬಹಿಷ್ಕಾರ ತೆಗೆಯಬೇಕೆಂಬ ಚಳವಳಿಯೂ ಸಾಗಿತು. 1942ರಲ್ಲಿ ಆರಂಭವಾದ ಅಖಿಲಭಾರತ ಸ್ವಾತಂತ್ರ್ಯ ಚಳವಳಿಯ ಬಿಸಿ ಹೈದರಾಬಾದಿಗೂ ತಟ್ಟದೆ ಇರಲಿಲ್ಲ. ಆ ಸಮಯದಲ್ಲಿ ಕರ್ನಾಟಕ ಪರಿಷತ್ತಿನ ಮೂರನೆಯ ಅಧಿವೇಶನ ಸುರಪುರದಲ್ಲಿ ಸೇರಿ ಜನರ ಜವಾಬ್ದಾರಿ ಸರ್ಕಾರದ ಬೇಡಿಕೆಗಳನ್ನು ಮುಂದಿಟ್ಟಿತು. ಆದರೆ ಸರ್ಕಾರ ಇದಕ್ಕೆ ಲಕ್ಷ್ಯ ಕೊಡಲಿಲ್ಲ. ಪರಿಷತ್ತಿನ ನಾಲ್ಕು, ಐದನೆಯ ಅಧೀವೇಶನಗಳೂ ಸೇರಿ ಹೊಣೆಗಾರ ಪ್ರಭುತ್ವ ಸ್ಥಾಪನೆಗಾಗಿ ಸರ್ಕಾರಕ್ಕೆ ಒತ್ತಾಯ ಹಾಕಿದವು. 946ರಲ್ಲಿ ಸೇರಿದ್ದ ಅಖಿಲಭಾರತ ದೇಶಿಯ ಸಂಸ್ಥಾನಗಳ ಪರಿಷತ್ತಿನ ಅಧಿವೇಶನ ಹೈದರಾಬಾದಿನ

ಚೆನ್ನಪ್ಪ ವಾಲಿ

ಹೋರಾಟಕ್ಕೆ ನೈತಿಕ ಬೆಂಬಲ ನೀಡಿತಲ್ಲದೆ ಹೈದರಾಬಾದ್ ರಾಜ್ಯ ಕಾಂಗ್ರೆಸ್ಸಿನ ಮೇಲಿನ ನಿರ್ಬಂಧವನ್ನು ಸರ್ಕಾರ ತೆಗೆದುಹಾಕಬೇಕೆಂದೂ ಇಲ್ಲದಿದ್ದರೆ ಸತ್ಯಾಗ್ರಹ ಹೂಡಬೇಕೆಂದೂ ನಿರ್ಣಯ ಮಾಡಿತು. ಸರ್ಕಾರ ಈ ಕ್ರಮಕ್ಕೆ ಹೆದರಿ ನಿರ್ಬಂಧವನ್ನು ರದ್ದು ಮಾಡಿತು. ಅಲ್ಲಿಂದಾಚೆಗೆ ಹೋರಾಟ ಹೆಚ್ಚು ಬಿರುಸಿನಿಂದ ಸಾಗಿತು. 1947ರಲ್ಲಿ ರಾಜ್ಯ ಕಾಂಗ್ರೆಸ್ ಮೊದಲನೆಯ ಅಧಿವೇಶನ ಸೇರಿತು. ಆ ವರ್ಷದ ಆಗಸ್ಟಿನಲ್ಲಿ ಭಾರತ ಸ್ವತಂತ್ರವಾದಾಗ ಸಂಸ್ಥಾನದ ನಿಜಾಮ ಭಾರತದಿಂದ ಪ್ರತ್ಯೇಕವಾಗಿರಬೇಕೆಂದು ಮಾಡಿದ ಪ್ರಯತ್ನ ವಿಫಲವಾಗೊಂಡಿತು. ಸ್ವತಂತ್ರ ಭಾರತಸರ್ಕಾರದ ಪೋಲೀಸ್ ಕಾರ್ಯಾಚರಣೆಯಿಂದಾಗಿ ಹೈದರಾಬಾದಿನ ಜನರ ಆಶೋತ್ತರಗಳು ಪೂರೈಸಿದವು. ಈ ನಡುವೆ ಅಲ್ಲಿಯ ಜನ ಧೈರ್ಯಸಾಹಸಗಳಿಂದ ಹೋರಾಟ ನಡೆಸುತಿದ್ದರು. ಪ್ರತ್ಯೇಕ ಮುಸ್ಲಿಂ ರಾಜ್ಯದ ಕನಸುಕಟ್ಟಿ ಉನ್ನತ ಸಾಹಸದಿಂದ ಕ್ರೂರಕೃತ್ಯಗಳೆನ್ನೆಸಗುತ್ತಿದ್ದ ರಜಾಕಾರರ ಹಿಂಸೆಗಳನ್ನೂ ಅವರು ಸಹಿಸಿ ಗೆದ್ದರು.

ಹೀಗೆ ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಜನರು ರಾಜಕೀಯ ಸ್ವಾತಂತ್ರ್ಯ ಗಳಿಸಿದರಾದರೂ ಅವರ ಹೋರಾಟ ಇನ್ನೂ ಮುಗಿದಿರಲಿಲ್ಲ. ಮುಂಬಯಿ, ಹೈದರಾಬಾದು, ಮದ್ರಾಸ್ ಪ್ರಾಂತ್ಯಗಳ ಕರ್ನಾಟಕ ಭಾಗಗಳನ್ನೂ ಮೈಸೂರು ಕೊಡಗುಗಳನ್ನೂ ಒಂದುಗೂಡಿಸಿ ಅಖಂಡ ಕರ್ನಾಟಕವನ್ನು ಸ್ಥಾಪಿಸುವ ಕಾರ್ಯ ಉಳಿದಿತ್ತು. ಈ ಗುರಿ ಸಾಧಿಸಿದ್ದು 1956ರಲ್ಲಿ. ಆ ವರ್ಷದ ನವೆಂಬರ್ ಒಂದರಂದು ಕನ್ನಡ ರಾಜ್ಯೋದಯವಾಯಿತು.

**(ನೋಡಿ– ಕರ್ನಾಟಕ ಏಕೀಕರಣ)** **(ಎ.ಎಂ.)**

**ಕರ್ನಾಟಕ ಗ್ಯಾಸೆಟಿಯರ್:** ಒಂದು ಪ್ರದೇಶದ ಅಥವಾ ಜಿಲ್ಲೆಯ ನಿಖರವಾದ ಸಮಗ್ರವಾದ ಸ್ಥಳೀಯ ಮಾಹಿತಿ ಒದಗಿಸುವ ಆಕರ ಗ್ರಂಥವೇ ಗ್ಯಾಸೆಟಿಯರ್ (ದೇಶ ವಿಷಯಕೋಶ.)

ಗ್ಯಾಸೆಟಿಯರ್ ಎಂಬುದು ಆಧುನಿಕ ನಮೂನೆಯ ಮಾಹಿತಿಕೋಶ. ಇದೇ ಬಗೆಯ ಕಲ್ಪನೆ ಮತ್ತು ಉದ್ದೇಶಗಳನ್ನೊಳಗೊಂಡ ಗ್ರಂಥಗಳು ಪ್ರಾಚೀನ ಭಾರತೀಯರಲ್ಲಿದ್ದವು. ವಾಯುಪುರಾಣದಲ್ಲಿರುವ ಭೌಗೋಳಿಕ ವಿವರಣೆ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವ ಭೂಮಿ, ಹವಾಮಾನ, ಸಂಪನ್ಮೂಲ ಆಡಳಿತ ವಿಭಾಗಗಳು, ತೆರಿಗೆಗಳ ವಿವರ, ಸಂಸ್ಕೃತದಲ್ಲಿರುವ ವರಾಹಮಿಹಿರನ ಬೃಹತ್ ಸಂಹಿತೆ, ಸೋಮೇಶ್ವರನ ಮಾನಸೋಲ್ಲಾಸ ಮೊದಲಾದ ಕೃತಿಗಳಲ್ಲಿರುವ ಸಂಕ್ಷಿಪ್ತ ಮಾಹಿತಿಗಳೂ ಗ್ಯಾಸೆಟಿಯರ್‌ನಲ್ಲಿ ಕಂಡುಬರುವ ವಿವರಗಳನ್ನು ತಕ್ಕಮಟ್ಟಿಗೆ ಹೋಲುತ್ತವೆ. ಸ್ಥಳ ಪುರಾಣಗಳು ಮತ್ತು ಪಾಶ್ಚಾತ್ಯ ಪ್ರವಾಸಿಗಳು ಒದಗಿಸಿರುವ ಕಥನಗಳು ಇದೇ ಗುಂಪಿಗೆ ಸೇರುತ್ತವೆ. ಅಬುಲ್ ಫಜಲನ ಡಿನ್–ಇ–ಅಕ್ಬರಿ ಗ್ಯಾಸೆಟಿಯರ್ ಮಾದರಿಯ ಗ್ರಂಥ.

ಕೈಗಾರಿಕಾ ಕ್ರಾಂತಿ, ಆಧುನಿಕ ಗ್ಯಾಸೆಟಿಯರ್‌ಗಳ ಪ್ರಕಟಣೆಗೆ ದಾರಿ ಮಾಡಿಕೊಟ್ಟಿತು. ಭಾರತದ ಅತ್ಯಂತ ಹಳೆಯ ಗ್ಯಾಸೆಟಿಯರ್‌ಗಳೆಂದರೆ ಈಸ್ಟ್ ಇಂಡಿಯ ಕಂಪನಿಯವು. ಆಂಗ್ಲರ ಆಡಳಿತದ ಅಂಗವಾಗಿ ಬಂದ ಗ್ಯಾಸೆಟಿಯರ್‌ಗಳು ಪ್ರಾರಂಭದಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಕಟಗೊಂಡವು.

ಆಂಗ್ಲ ಅಧಿಕಾರಿಗಳ ಆಡಳಿತಾನುಕೂಲಕ್ಕಾಗಿ ವಾಲ್ಟರ್ ಹ್ಯಾಮಿಲ್ಟನ್ ಮತ್ತು ಎಡ್ವರ್ಡ್ ಥಾರ್ನಟನ್ 1815ರಲ್ಲಿ ಸಿದ್ಧಪಡಿಸಿದ ಈಸ್ಟ್ ಇಂಡಿಯಾ ಗ್ಯಾಸೆಟಿಯರ್, ಅನಂತರ 1854ರಲ್ಲಿ ಗ್ಯಾಸೆಟಿಯರ್ ಆಫ್ ದಿ ಟೆರಿಟರಿಸ್ ಅಂಡರ್ ದಿ ಈಸ್ಟ್ ಇಂಡಿಯ ಕಂಪನಿ ಎಂಬ ಕೃತಿಗಳು ಭಾರತದಲ್ಲಿ ಬೆಳಕು ಕಂಡ ತೀರಾ ಮೊದಲಿನ ಗ್ಯಾಸೆಟಿಯರ್‌ಗಳು. 1874–84ರ ಅವಧಿಯಲ್ಲಿ ಮುಂಬಯಿ ಪ್ರಾಂತ್ಯದ ಜಿಲ್ಲೆಗಳ ಬಗ್ಗೆ ಅತ್ಯಂತ ಮಹತ್ವದ ಮಾಹಿತಿಗಳನ್ನೊಳಗೊಂಡ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಜೇಮ್ಸ್ ಕಾಂಪಬೆಲ್ ಪ್ರಕಟಿಸಿದ. ಅನಂತರ ಬಿ.ಎಲ್.ರೈಸ್ ಅವರು 1877–78ರಲ್ಲಿ ಹಳೆಯ ಮೈಸೂರು ರಾಜ್ಯದ ಕೊಡಗು ಸೇರಿದಂತೆ ಮೂರು ಸಂಪುಟಗಳಲ್ಲಿ ಗ್ಯಾಸೆಟಿಯರ್ ಪ್ರಕಟಿಸಿದರು. ಇವುಗಳನ್ನು ಪುನಃ 1907ರಲ್ಲಿ ಪರಿಷ್ಕರಿಸಲಾಯಿತು. 1881ರಲ್ಲಿ ಸರ್ ವಿಲಿಯಂ ಹಂಟರ್ ಅವರ ನೇತೃತ್ವದಲ್ಲಿ ಇಂಪೀರಿಯಲ್ ಗ್ಯಾಸ್ಟಿಯರ್ ಆಫ್ ಇಂಡಿಯದ ಒಂಬತ್ತು ಸಂಪುಟಗಳು ಪ್ರಕಟಗೊಂಡವು. ಹೈದರಾಬಾದ್ ಸರ್ಕಾರ 1921ರಲ್ಲಿ ಈ ಪ್ರಕಟಣೆಗಳನ್ನು ಬಳಕೆಗೆ ತಂದಿತು.

ಹಳೆಯ ಮೈಸೂರು ರಾಜ್ಯಕ್ಕೆ (ಈಗ ಕರ್ನಾಟಕ) ಸಂಬಂಧಿಸಿದಂತೆ ಸಿ.ಹಯವದನರಾವ್ ಅವರು 20ನೆಯ ಶತಮಾನದ ಮೂರನೆಯ ದಶಕದಲ್ಲಿ ಮೈಸೂರು ಗ್ಯಾಸೆಟಿಯರ್‌ಗಳನ್ನು ಎಂಟು ಭಾಗಗಳಲ್ಲಿ ಹೊರತಂದರು. ಸ್ವಾತಂತ್ರ್ಯಾನಂತರ ಕೇಂದ್ರ ಸರ್ಕಾರ ನೇಮಿಸಿದ ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಪ್ರತಿರಾಜ್ಯವೂ ಗ್ಯಾಸೆಟಿಯರ್ ಪ್ರಕಟಣಾ ಕಾರ್ಯ ಕೈಗೊಂಡವು (1955). ಸಮಿತಿಯ ಮಾರ್ಗ ಸೂಚಿಯಂತೆ ಹಿಂದಿನ ಗ್ಯಾಸೆಟಿಯರ್‌ಗಳ ಪರಿಷ್ಕರಣ ಹಾಗೂ ಪುನರ್ ಮುದ್ರಣ ಕಾರ್ಯ ಪ್ರಾರಂಭವಾಯಿತು. ರಾಜ್ಯಗಳ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಕಾರ್ಯವು ಚಾಲನೆಗೊಂಡಿತು. ರಾಜ್ಯ ಗ್ಯಾಸೆಟಿಯರನ್ನು ಪ್ರಕಟಿಸಿದ ಮೊದಲನೆಯ

ರಾಜ್ಯ ಕರ್ನಾಟಕ. ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಿಸುವಲ್ಲಿಯೂ ಪ್ರಥಮ ದಾಖಲೆ ಸ್ಥಾಪಿಸಿದ್ದೂ ಕರ್ನಾಟಕವೇ.

ಕರ್ನಾಟಕ ರಾಜ್ಯ ಸರ್ಕಾರ 1958ರಲ್ಲಿ ಗ್ಯಾಸೆಟಿಯರ್ ಘಟಕ ಪ್ರಾರಂಭಿಸಿತು. ರಾಜ್ಯದ ಆಯಾ ಜಿಲ್ಲೆಗೆ ಸಂಬಂಧಿಸಿದ ಸಮಕಾಲೀನ ಮತ್ತು ಪ್ರಾಚೀನ ವಿಷಯಗಳನ್ನು ಒಳಗೊಂಡಿರುವ ಅತ್ಯಂತ ಮೌಲಿಕ ಹಾಗೂ ಬಹೂಪಯೋಗಿ ಆಕರ ಗ್ರಂಥ ಗ್ಯಾಸೆಟಿಯರ್. ಕರ್ನಾಟಕ ರಾಜ್ಯದ ರಜತ ಮಹೋತ್ಸವದ ಸವಿ ನೆನಪಿಗಾಗಿ 1984ರಲ್ಲಿ ಮೊದಲ ಬಾರಿ ಕನ್ನಡದಲ್ಲಿ ಗ್ಯಾಸೆಟಿಯರ್ ಪ್ರಕಟಿಸಲಾಯಿತು.

ಬಹುಕಾಲ ನಿಲ್ಲಬಹುದಾದ ವಿಶ್ವಕೋಶ ಮಾದರಿಯ ಸರ್ಕಾರದ ಅಧಿಕೃತ ಪ್ರಕಟಣೆಯ ಆಕರ ಗ್ರಂಥಗಳಾದ ಇವು ಒಂದು ಪ್ರದೇಶದ ಸಮಗ್ರ ಕೈಪಿಡಿಯಾಗಿ ಅಧ್ಯಯನಶೀಲರಿಗೆ, ವೃತ್ತಿನಿರತರಿಗೆ, ಆಡಳಿತಗಾರರಿಗೆ ಉಪಯುಕ್ತ ಮಾಹಿತಿ ನೀಡಬಲ್ಲ ಗ್ರಂಥಗಳಾಗಿವೆ.

ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಜನಗಣತಿ ಇಲಾಖೆ ಸರ್ಕಾರದ ಇತರೆ ಇಲಾಖೆಗಳ ವಿವಿಧ ಆಕರ ಗ್ರಂಥಗಳ ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಂದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸುವ ಮಾಹಿತಿಗಳನ್ನು ಆಧರಿಸಿ ಮುಖ್ಯ ಸಂಪಾದಕರ ಮಾರ್ಗದರ್ಶನದಲ್ಲಿ ಸಂಪಾದಕರು ಸಿದ್ಧಪಡಿಸುವ ಗ್ಯಾಸೆಟಿಯರ್‌ಗಳನ್ನು ಪರಿಶೀಲಿಸಲು ಸರ್ಕಾರ ತಜ್ಞರ ಸಮಿತಿ ನೇಮಿಸಿದೆ. ಈ ಸಮಿತಿಯಲ್ಲಿ ಆಯಾ ಜಿಲ್ಲೆಗೆ ಸಂಬಂಧಿಸಿದ ವಿಷಯತಜ್ಞರೂ ಭಾಷಾಕೋವಿದರೂ ಸದಸ್ಯರಾಗಿರುತ್ತಾರೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷರಾಗಿರುತ್ತಾರೆ. ಗ್ಯಾಸೆಟಿಯರ್ ಇಲಾಖೆಯ ಮುಖ್ಯ ಸಂಪಾದಕರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

ಸಂಪಾದಕ ವರ್ಗ, ಅನ್ವೇಷಕರು ಮತ್ತು ಅಗತ್ಯ ಕಛೇರಿ ಸಿಬ್ಬಂದಿಯನ್ನು ಹೊಂದಿರುವ ಈ ಇಲಾಖೆ ಬೆಂಗಳೂರಿನಲ್ಲಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತಕ್ಕೊಳಪಟ್ಟ ಸರ್ಕಾರಿ ಕಛೇರಿ ಇದಾಗಿದೆ.

ಗ್ಯಾಸೆಟಿಯರ್ ಸ್ವರೂಪ ಕೇಂದ್ರ ಸರ್ಕಾರದ ಗ್ಯಾಸೆಟಿಯರ್ ಮಾದರಿಯಲ್ಲಿ ಸ್ಥಳೀಯ ಅಗತ್ಯಕ್ಕೆ ಸೂಕ್ತವೆನಿಸಿದ ಮಾರ್ಪಾಡಿನೊಂದಿಗೆ ರಚನೆಯಾಗುತ್ತದೆ. ಸಾಮಾನ್ಯವಾಗಿ ಪ್ರತಿ ಗ್ಯಾಸೆಟಿಯರ್ ಈ ಕೆಳಕಂಡ 17 ಅಧ್ಯಾಯಗಳಲ್ಲಿ ವಿವಿಧ ಮಾಹಿತಿಗಳ್ನು ನೀಡುವಂತಿರುತ್ತದೆ.

1.ಪ್ರಾಸ್ತಾವಿಕ, 2.ಇತಿಹಾಸ, 3.ಜನತೆ, 4.ಕೃಷಿ ಮತ್ತು ನೀರಾವರಿ, 5.ಕೈಗಾರಿಕೆ, 6.ಬ್ಯಾಂಕಿಂಗ್ ಹಣಕಾಸು ವ್ಯವಹಾರ ಮತ್ತು ವಾಣಿಜ್ಯ, 7.ಸಾರಿಗೆ ಮತ್ತು ಸಂಪರ್ಕ, 8.ಆರ್ಥಿಕ ಪ್ರವೃತ್ತಿಗಳು, 9.ಆಡಳಿತ ಮತ್ತು ರಾಜಸ್ವ, 10.ನ್ಯಾಯಾಡಳಿತ ಮತ್ತು ಶಾಂತಿ ಪಾಲನೆ, 11.ಇತರೆ ಇಲಾಖೆಗಳು, 12.ಸ್ಥಳೀಯ ಸ್ವಯಂ ಸೇವಾ ಆಡಳಿತ ಸಂಸ್ಥೆಗಳು, 13.ಶಿಕ್ಷಣ ಮತ್ತು ಕ್ರೀಡೆ, 14.ಸಾಹಿತ್ಯ ಮತ್ತು ಸಂಸ್ಕೃತಿ, 15.ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು, 16.ಇತರ ಸೇವಾ ಸೌಲಭ್ಯಗಳು 17.ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳಗಳು ಹಾಗೂ ವಿವಿಧ ಜಾತಿಗಳ ಆಚಾರ ವಿಚಾರ ಸಂಪ್ರದಾಯಗಳ ಸಂಕ್ಷಿಪ್ತ ಮಾಹಿತಿಗಳು. ಕಳೆದ 50 ವರ್ಷಗಳ ಹಿಂದಿನ ಮಳೆಯ ಪ್ರಮಾಣ, 100 ವರ್ಷಗಳಿಂದ ಜನಸಂಖ್ಯೆ ಬೆಳೆವಣಿಗೆ, ಜಿಲ್ಲೆಯ ನಕ್ಷೆ, ಗ್ರಾಮಗಳ ಪಟ್ಟಿ ಈ ಮುಂತಾದ ಉಪಯುಕ್ತ ಮಾಹಿತಿಯನ್ನು ಇತಿಹಾಸ ಪೂರ್ವಕಾಲದಿಂದ ಇತ್ತೀಚಿನವರೆಗೆ ಕಾಲಕ್ರಮದ ಅನ್ವಯ ವಿವರದ ವೈವಿಧ್ಯಗಳನ್ನು ಇಲ್ಲಿ ಕಾಣುತ್ತೇವೆ. ಪೂರಕವಾಗಿ ವಿವಿಧ ಅಂಕಿ ಅಂಶಗಳ ಪಟ್ಟಿ, ನಕಾಶೆ, ಚಿತ್ರಗಳು, ಶಬ್ದಸೂಚಿ ಮೊದಲಾದ ಉಪಯುಕ್ತ ಮಾಹಿತಿಗಳು ಗ್ಯಾಸೆಟಿಯರ್‌ನಲ್ಲಿರುತ್ತವೆ.

ಜಿಲ್ಲಾ ಗ್ಯಾಸೆಟಿಯರ್‌ಗಳಲ್ಲದೆ ರಾಜ್ಯಕ್ಕೆ ಅನ್ವಯವಾಗುವ ರಾಜ್ಯ ಗ್ಯಾಸೆಟಿಯರ್ ಸಂಪುಟಗಳನ್ನು (1982–83) ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸಲಾಗಿದೆ. ಇಲಾಖೆಯ ವಿಶೇಷ ಪ್ರಕಟಣೆಯಾಗಿ ಸಮಗ್ರ ಕರ್ನಾಟಕವನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಇಂಗ್ಲಿಷ್ ಭಾಷೆಯಲ್ಲಿ ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ ಮತ್ತು ಕನ್ನಡದಲ್ಲಿ ಕರ್ನಾಟಕ ಕೈಪಿಡಿಗಳನ್ನು ಪ್ರಕಟಿಸಲಾಗಿದೆ (1996–97). ಕರ್ನಾಟಕದ ಗ್ಯಾಸೆಟಿಯರ್ ಇಲಾಖೆಯ ಮುಖ್ಯ ಸಂಪಾದಕರಾಗಿ ಬಿ.ಎಲ್.ರೈಸ್, ಹಯವದನರಾವ್, ಬಿ.ಎನ್.ಶ್ರೀಸತ್ಯನ್, ಕೆ.ಅಭಿಶಂಕರ, ಸೂರ್ಯನಾಥ್ ಕಾಮತ್, ಟಿ.ಎ.ಪಾರ್ಥಸಾರಥಿ ಮೊದಲಾದವರು ಸ್ಮರಣೀಯರು.

ಸರ್ಕಾರದ ಆಡಳಿತ ನೀತಿಯಂತೆ ಇ-ಗವರ್ನೆನ್ಸ್ ಯೋಜನೆಯ ಅಡಿಯಲ್ಲಿ ಗ್ಯಾಸೆಟಿಯರ್‌ಗಳ ಇಲಾಖೆಯ ಎಲ್ಲಾ ಪ್ರಕಟಣೆಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಗಣಕೀಕೃತಗೊಳಿಸುವ, ಈವರೆಗೆ ಪ್ರಕಟವಾದ ಗ್ಯಾಸೆಟಿಯರ್‌ಗಳನ್ನು ಸಿ.ಡಿ.ರೂಪದಲ್ಲಿ ಹೊರತರುವ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮಹತ್ತರ ಯೋಜನೆಯನ್ನು ಇಲಾಖೆ ಹಮ್ಮಿಕೊಂಡಿದೆ. (ಎಂ.ವಿ.ಎನ್.)

**ಕರ್ನಾಟಕ ಗ್ರಂಥಮಾಲೆ :** ಮೈಸೂರಿನಿಂದ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸುಮಾರು 1893ರ ಹೊತ್ತಿಗೆ ಪ್ರಕಟಣೆ ಪ್ರಾರಂಭಿಸಿ ಇಪ್ಪತ್ತನೆಯ ಶತಮಾನದ ಮೂರನೆಯ ದಶಕದ ಮಧ್ಯದವರೆಗೆ ನಡೆದು ಸುಮಾರು ಮೂರು ದಶಕಗಳವರೆಗೆ ಕನ್ನಡ ಸಾಹಿತ್ಯಸೇವೆ ಸಲ್ಲಿಸಿದ ಒಂದು ಮಾಸಪತ್ರಿಕೆ. ಹೆಸರೇ ಹೇಳುವಂತೆ ಇದು ಗ್ರಂಥಗಳ ಮಾಲೆ. ಪ್ರತಿಯೊಂದು ಸಂಚಿಕೆಯಲ್ಲಿಯೂ ನಾಟಕ, ಕಾದಂಬರಿಗಳ ಒಂದೊಂದು ಭಾಗವನ್ನೂ ಸಾಮಾಜಿಕ ಆಧ್ಯಾತ್ಮಿಕ ಗ್ರಂಥಗಳ ಭಾಗಗಳನ್ನೂ ಪ್ರತಿ ತಿಂಗಳೂ ಕ್ರಮವಾಗಿ ಪ್ರಕಟಿಸಲಾಗುತ್ತಿತ್ತು. ಅಲ್ಲದೆ ಅನೇಕ ಸಂಸ್ಕೃತ ಗ್ರಂಥಗಳ ಅನುವಾದಗಳನ್ನು ಟಿಪ್ಪಣಿಗಳೊಂದಿಗೆ ಅನುಕ್ರಮವಾಗಿ ಕೊಡಲಾಗುತ್ತಿತ್ತು. ಕಾದಂಬರಿಗಳಿಗೂ ಅವಶ್ಯವಾದ ಅಡಿಟಿಪ್ಪಣಿ ಒದಗಿಸುವ ಪದ್ಧತಿ ಇಲ್ಲಿ ಕಂಡುಬರುತ್ತದೆ. ಸಂಚಿಕೆಯಲ್ಲಿ ಆಯಾ ಗ್ರಂಥಗಳ ಕ್ರಮವಾದ ಪುಟಸಂಖ್ಯೆ ಹಾಕುವ ಏರ್ಪಾಡಿತ್ತು. ಬಿಡಿ ಬಿಡಿಯಾಗಿ ಸಂಚಿಕೆಗಳಲ್ಲಿ ಬಂದ ಗ್ರಂಥಭಾಗಗಳನ್ನೆಲ್ಲ ಕೂಡಿಸಿ ಒಟ್ಟುಗೂಳಿಸಿಕೊಳ್ಳುವುದಕ್ಕೆ ಓದುಗರಿಗೆ ಸೌಲಭ್ಯ ಕಲ್ಪಿಸುವುದು ಈ ಕ್ರಮದ ಉದ್ದೇಶ. ಪ್ರಕಟವಾದ ಲೇಖನ ಮತ್ತು ಗ್ರಂಥಗಳನ್ನು ಗಮನಿಸಿದಾಗ ವಿದ್ವಾಂಸರಿಗೆ ಪ್ರಾಧಾನ್ಯವಿರುವುದು ಕಂಡುಬರುತ್ತದೆ. ಪ್ರತಿ ಸಂಚಿಕೆಯೂ ರಾಯಲ್ ಆಕಾರದ 92 ಪುಟಗಳನ್ನು ಒಳಗೊಂಡಿರುತ್ತಿತ್ತು. ಬಿಡಿ ಸಂಚಿಕೆಯ ಬೆಲೆ 4 ಆಣೆ. ವಾರ್ಷಿಕ ಚಂದಾ ಅಂಚೆ ಹಾಸಲು ಸೇರಿಸಿ ರೂ 2– 8– 0. ಸಂಪಾದಕರು, ಪ್ರಕಾಶಕರು, ವ್ಯವಸ್ಥಾಪಕರು: ಬಿ. ಸುಬ್ಬರಾವ್, ಮೈಸೂರಿನ ಜಿ.ಟಿ.ಎ. ಪ್ರೆಸ್ಸಿನಲ್ಲಿ ಇದು ಮುದ್ರಣವಾಗುತ್ತಿತ್ತು. ಅನೇಕ ಉತ್ತಮ ಗ್ರಂಥಗಳನ್ನು ಪ್ರಕಟಗೊಳಿಸಿದ ಕೀರ್ತಿ ಇದರದು. (ಎಸ್.ವಿ.ಪಿ.ಎ.)

**ಕರ್ನಾಟಕ ಚಿತ್ರಕಲಾ ಪರಿಷತ್ತು :** ಬೆಂಗಳೂರಿನ ಪ್ರತಿಷ್ಠಿತ ಕಲಾ ಶಾಲೆ. ಚಿತ್ರಕಲಾ ಪ್ರದರ್ಶನ, ಪ್ರಚಾರ, ಶಿಕ್ಷಣ, ಕಲಾವಿದರ ಸಂಘಟನೆಯಲ್ಲಿ ತೊಡಗಿರುವ ಈ ಸಂಸ್ಥೆ 1964ರಲ್ಲಿ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ಪೂರ್ಣಪ್ರಮಾಣದಲ್ಲಿ ಆರಂಭವಾಯಿತು. ಇದರ ಫಲವಾಗಿ ಎಂ.ಎಸ್. ನಂಜುಂಡರಾವ್ ಅವರು ಕರ್ನಾಟಕದ ಕಲಾವಿದರಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಒಂದು ಸಂಘಟನೆಯ ಆವಶ್ಯಕತೆಯನ್ನು ಅರಿತು ಮಾಜಿ ಮುಖ್ಯಮಂತ್ರಿ ಕೆ. ಹನುಮಂತಯ್ಯ ಅವರ ಪ್ರೇರಣೆ ಪ್ರೋತ್ಸಾಹದಿಂದ ಎಂ.ಆರ್ಯಮೂರ್ತಿ, ಎಸ್.ಎಸ್.ಕುಕ್ಕೆ ಯವರೊಂದಿಗೆ ಸೇರಿ 1960ರಲ್ಲಿ ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಈ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿ ಆರ್ಯಮೂರ್ತಿಯವರೂ ಕಾರ್ಯದರ್ಶಿಯಾಗಿ ನಂಜುಂಡರಾವ್ ಅವರೂ ಖಜಾಂಚಿಯಾಗಿ ಇನಾಮತಿಯವರೂ ಆಯ್ಕೆಯಾಗಿದ್ದರು. ಕುಕ್ಕೆಯವರು ಉಪಾಧ್ಯಕ್ಷರಾಗಿದ್ದರು.

ಈ ಸಂಸ್ಥೆಯ ಪ್ರಮುಖ ಉದ್ದೇಶಗಳು ಇವು: 1 ಭಾರತೀಯ ಚಿತ್ರಕಲೆಯ ರಕ್ಷಣೆ, ಪ್ರೋತ್ಸಾಹ ಮತ್ತು ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸುವುದು 2 ಭಾರತೀಯ ಚಿತ್ರಕಲೆಯ

**ಚಿತ್ರಕಲಾ ಪರಿಷತ್ತಿನ ಕಟ್ಟಡ, ಬೆಂಗಳೂರು**

ರಕ್ಷಣೆಗಾಗಿ ಕಲಾಸಂಸ್ಥೆಗಳು, ಕಲಾಕೃತಿ ಸಂಗ್ರಹಾಲಯ, ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಗಳ ಸಹಕಾರದಿಂದ ಭಾರತ ಮತ್ತು ವಿದೇಶಗಳಲ್ಲಿ ಉಪನ್ಯಾಸ, ಪ್ರಾತ್ಯಕ್ಷಿಕೆ, ವಿಚಾರಸಂಕಿರಣ, ಸಮೂಹಚರ್ಚೆ ಮತ್ತು ಪ್ರದರ್ಶನಗಳನ್ನು ಏರ್ಪಡಿಸುವುದು, ಕಲಾಕ್ಷೇತ್ರದ ನಾಮಾಂಕಿತ ಹಿರಿಯರನ್ನು ಗೌರವಿಸುವುದು. 3 ಕಲೆಗೆ ಸಂಬಂಧಿಸಿದಂತೆ ಶಾಲೆ, ಕಾಲೇಜುಗಳನ್ನು ಬೆಂಗಳೂರು ಮತ್ತು ಕರ್ನಾಟಕದ ಇತರೆಡೆಗಳಲ್ಲಿ ತೆರೆಯುವುದು. 4 ಪುಸ್ತಕ, ನಿಯತಕಾಲಿಕೆ, ಪತ್ರಿಕೆ, ವಿಶ್ವಕೋಶ, ಡೈರೆಕ್ಟರಿ ಮುಂತಾದವುಗಳ ಪ್ರಕಟಣೆ. 5 ಬೆಂಗಳೂರು ಮತ್ತು ಕರ್ನಾಟಕದ ಇತರ ಸ್ಥಳಗಳಲ್ಲಿ ಇಂದಿನ ಮತ್ತು ಹಿಂದಿನ ಹೆಸರಾಂತ ಕಲಾವಿದರ ಚಿತ್ರಗಳ ಪ್ರದರ್ಶನಕ್ಕೆ ಶಾಶ್ವತ ಕಲಾಗ್ಯಾಲರಿಗಳನ್ನು ತೆರೆಯಲು ಪ್ರೋತ್ಸಾಹಿಸುವುದು. 6 ಕರ್ನಾಟಕದಲ್ಲಿರುವ ಕಲಾವಿದರು ಮತ್ತು ಕಲಾವಿದರ ಗುಂಪುಗಳನ್ನು ಪ್ರೋತ್ಸಾಹಿಸುವುದು. ಕಲಾವಿದರ ಕಾಲೋನಿ ನಿರ್ಮಿಸಲು, ಮನೆ ಕಟ್ಟಲು ಸರ್ಕಾರ ಮತ್ತು ಗೃಹಮಂಡಳಿಯವರು ನೀಡುವ ಸವಲತ್ತುಗಳನ್ನೂ ಸಹಾಯವನ್ನೂ ಉಪಯೋಗಿಸಿಕೊಳ್ಳುವುದು.

ಹೀಗೆ ಕಲಾವಿದರ ಸರ್ವಾಂಗೀಣ ಉನ್ನತಿಗೆ ಕಾರಣವಾಗುವ ಉದ್ದೇಶ ಇಟ್ಟುಕೊಂಡ ಈ ಸಂಸ್ಥೆಯ ಕರ್ಣಧಾರತ್ವವನ್ನು ಎಂ. ಎಸ್. ನಂಜುಂಡರಾವ್ ವಹಿಸಿದ್ದರು. ಮೊಟ್ಟಮೊದಲಾಗಿ ಕರ್ನಾಟಕ ಕಲಾವಿದರ ಸಮ್ಮೇಳನ ವಿಧಾನಸೌಧದ ಔತಣ ಸಭಾಂಗಣದಲ್ಲಿ ಏರ್ಪಾಡಾಯಿತು. ಈ ಸಂಸ್ಥೆ 1962ರಿಂದ ಪ್ರತಿವರ್ಷವೂ ಒಂದರಂತೆ ಸಮ್ಮೇಳನಗಳನ್ನೂ ಕಲಾಪ್ರದರ್ಶನಗಳನ್ನೂ ಏರ್ಪಡಿಸಿ ಕರ್ನಾಟಕದ ಕಲೆ ಹಾಗೂ ಕಲಾವಿದರ ಪ್ರಮುಖ ಕೇಂದ್ರವಾಗಿ ಬೆಳೆಯಿತು. ಕರ್ನಾಟಕದ, ಭಾರತದ ಮತ್ತು ವಿದೇಶೀಯ ಕಲಾವಿದರನ್ನು ಸಂಪರ್ಕಿಸಿ ಅವರ ಕಲಾಪ್ರದರ್ಶನ, ಪ್ರಾತ್ಯಕ್ಷಿಕೆ, ಚರ್ಚಾಗೋಷ್ಠಿ, ಉಪನ್ಯಾಸಗಳಿಗೆ ಅವಕಾಶ ದೊರಕಿತು.

ಈ ಕಲಾಶಾಲೆಯಲ್ಲಿ ಈಗ ಪ್ರತಿವರ್ಷ ನೂರು ಕಲಾವಿದರು ರೂಪುಗೊಳ್ಳುತ್ತಾರೆ. ಇಲ್ಲಿ ಸ್ನಾತಕೋತ್ತರ ಮಟ್ಟದ ಶಿಕ್ಷಣ ಸೌಲಭ್ಯವೂ ಇದೆ. ಕಲಾವಿದ್ವಾಂಸರು ಸಂಶೋಧನೆ ಕೈಗೊಳ್ಳಲು, ಸಂಪ್ರಬಂಧ ಮಂಡಿಸಿ ಪಿಎಚ್.ಡಿ. ಪದವಿ ಪಡೆಯಲು ಅವಕಾಶವಿದೆ. ಹೆಸರಾಂತ ಕಲಾವಿದರೂ ಶಿಕ್ಷಕರೂ ಸಮರ್ಥ ಮಾರ್ಗದರ್ಶನ ನೀಡುತ್ತಿದ್ದಾರೆ. ಇದುವರೆಗೆ ಈ ಸಂಸ್ಥೆಯಿಂದ 1200 ಕ್ಕೂ ಹೆಚ್ಚು ಪದವೀಧರರು ಶಿಕ್ಷಣ ಪಡೆದು ದೇಶ ವಿದೇಶಗಳಲ್ಲಿ ಕಲಾ ಸೇವೆಯಲ್ಲಿದ್ದಾರೆ.

ಶಿಲ್ಪಕಲೆ ಮತ್ತು ನಿಸರ್ಗ ಅಧ್ಯಯನಕ್ಕಾಗಿ ಬೆಂಗಳೂರಿನಿಂದ ಅಜಂತಾವರೆಗೆ 50 ಕಲಾವಿದರ ತಂಡದ ಅಧ್ಯಯನ ಪ್ರವಾಸ (1967), ದಕ್ಷಿಣ ಭಾರತದ ಜನಪದ ಕಲೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಮಲ್ಲೇಶ್ವರದ ಮೈದಾನದಲ್ಲಿ ಒಂದು ತಿಂಗಳ ಕಾಲ ನಡೆದ ಜನಪದ ವಸ್ತು – ಕಲಾಪ್ರದರ್ಶನ (1971), ಅಖಿಲಭಾರತ ಮಟ್ಟದ ಜನಪದ ಕಲಾವಿದರನ್ನು ಆಹ್ವಾನಿಸಿ ಜನಪದ ಕಲೆಯ ವಿವಿಧ ಮುಖಗಳ ಅಧ್ಯಯನಕ್ಕೆ ಅವಕಾಶ (1971) ಇವು ಈ ಸಂಸ್ಥೆಯ ಕೆಲವು ಸಾಧನೆಗಳು. ಸಂಸ್ಥೆಯ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದ ವಿವಿಧ ವಿಭಾಗಗಳ ಅಧ್ಯಯನಕ್ಕೆ ಅವಕಾಶವಿದೆ. ಶಿಲ್ಪಕಲೆಯ ಅಧ್ಯಯನಕ್ಕೂ ಸೌಲಭ್ಯಗಳಿವೆ.

ವಿದೇಶದಿಂದ ಬಂದು ಕರ್ನಾಟಕದಲ್ಲಿ ನೆಲೆಸಿದ್ದ ಪ್ರಸಿದ್ಧ ಕಲಾವಿದ ಸ್ವೆತಾಸ್ಲಾವ್ ರೋರಿಕ್ ಅವರ 117 ಚಿತ್ರಕಲಾ ಕೃತಿಗಳನ್ನು ಪರಿಷತ್ತಿನಲ್ಲಿ ಶಾಶ್ವತವಾಗಿ ಪ್ರದರ್ಶಿಸಲಾಗಿದೆ. ಈ ಅಪರೂಪದ ಕೃತಿಗಳು ಕಲೆಯ ಅಧ್ಯಯನಕ್ಕೆ ಅಪಾರ ಅವಕಾಶ ಒದಗಿಸುತ್ತಿವೆ. ರೋರಿಕ್ ಗ್ಯಾಲರಿಯಲ್ಲಿ ಹಿಮಾಲಯದ ವೈವಿಧ್ಯಮಯ ಚಿತ್ರಗಳಿವೆ. ರೋರಿಕ್ ಅವರ ಹೆಸರಿನಲ್ಲಿ ಆರಂಭಿಸಲಾಗಿರುವ ಸಂಸ್ಥೆಯಲ್ಲಿ (ರೋರಿಕ್ ಇನ್‌ಸ್ಟಿಟ್ಯೂಟ್ ಆಫ್ ಫೈನ್ ಆರ್ಟ್ಸ್) ಚಿತ್ರಕಲೆಯ ಮೂಲಭೂತ ಅಧ್ಯಯನದ ಸೌಲಭ್ಯವೂ ಉಂಟು.

ಎಚ್.ಕೆ. ಕೆಜ್ರಿವಾಲಾ ಎಂಬುವರು ತಮ್ಮ ತಂದೆ ಸಂಗ್ರಹಿಸಿದ ಅಮೂಲ್ಯ ಕಲಾಕೃತಿಗಳೊಂದಿಗೆ ತಾವು ಸಂಗ್ರಹಿಸಿದ ಕಲಾಕೃತಿಗಳನ್ನು ಪರಿಷತ್ತಿನ ಎಚ್.ಕೆ. ಕೆಜ್ರಿವಾಲಾ ಶಾಶ್ವತ ಗ್ಯಾಲರಿಯಲ್ಲಿ ಪ್ರದರ್ಶನಕ್ಕಿಡಲಾಗಿದೆ. ಇದರಲ್ಲಿ 350 ಕಲಾಕೃತಿಗಳಿವೆ. ಕವಿ ರವೀಂದ್ರನಾಥ ಠಾಕೂರರ ಚಿತ್ರಗಳಿಂದ ಇತ್ತೀಚಿನ ಭಾರತೀಯ ಕಲಾವಿದರವರೆಗಿನ ಹಲವಾರು ಅಮೂಲ್ಯ ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಕಲಾಸಾಧನೆಯಲ್ಲಿ ತೊಡಗಿದ ವಿದ್ಯಾರ್ಥಿಗಳಿಗೆ 1998 ರಿಂದ ಎಚ್.ಕೆ. ಕೆಜ್ರಿವಾಲಾ ಪ್ರಶಸ್ತಿ ನೀಡಲಾಗುತ್ತಿದೆ. ಇದಲ್ಲದೆ ಅಂತಾರಾಷ್ಟ್ರೀಯ ಗ್ರಾಫಿಕ್ ಕಲಾವಿದ ಕೃಷ್ಣಾರೆಡ್ಡಿ (ನ್ಯೂಯಾರ್ಕ್) ಅವರ ಗ್ರಾಫಿಕ್ ಚಿತ್ರಗಳೂ ಎಸ್.ಎನ್.ಕುಕ್ಕೆಯವರ ಕಲಾಕೃತಿಗಳೂ ಇಲ್ಲಿ ಪ್ರದರ್ಶಿತವಾಗಿವೆ. ಮೈಸೂರಿನ ಸಾಂಪ್ರದಾಯಿಕ ಚಿತ್ರಕಲೆಯ ಕೃತಿಗಳನ್ನು ವೈ.ಸುಬ್ರಹ್ಮಣ್ಯರಾಜು ಅವರ ಮಾರ್ಗದರ್ಶನದಲ್ಲಿ ಪುನರುಜ್ಜೀವನಗೊಳಿಸಿ ಪ್ರದರ್ಶನಕ್ಕಿಡಲಾಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಹಿಂದೆ ಪ್ರಚಲಿತವಿದ್ದ ತೊಗಲುಗೊಂಬೆಗಳನ್ನು ಸಂಗ್ರಹಿಸಿ, ರಕ್ಷಿಸಿ ಪ್ರದರ್ಶಿಸಲಾಗುತ್ತಿದೆ. ಸಮಕಾಲೀನ ಶಿಲ್ಪಕಲೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಮೂರು ಗ್ಯಾಲರಿಗಳಲ್ಲಿ ಖಾಯಂ ಶಿಲ್ಪಕಲಾ ಪ್ರದರ್ಶನ ಏರ್ಪಡಿಸಿದೆ. ಕರ್ನಾಟಕ, ಭಾರತೀಯ, ವಿದೇಶೀಯ ಕಲಾವಿದರ ಚಿತ್ರಗಳನ್ನು ಪ್ರದರ್ಶಿಸಲು ನಿರ್ದಿಷ್ಟ ಕಾಲಾವಧಿಯ ಪ್ರದರ್ಶನಕ್ಕೂ ಗ್ಯಾಲರಿಗಳ ಸೌಲಭ್ಯವಿದೆ. ಇಲ್ಲಿ ಪ್ರತಿನಿತ್ಯ ಬೇರೆ ಬೇರೆ ಕಲಾವಿದರ ಕಲಾ ಪ್ರದರ್ಶನಗಳು ನಡೆಯುತ್ತಲೇ ಇರುತ್ತವೆ.

ಇಲ್ಲಿ ಚಿತ್ರಕಲೆ–ಶಿಲ್ಪ–ಇತಿಹಾಸಗಳಿಗೆ ಸಂಬಂಧಿಸಿದ ಹತ್ತುಸಾವಿರಕ್ಕೂ ಹೆಚ್ಚು ಅಮೂಲ್ಯ ಪುಸ್ತಕಗಳ ಸಂಗ್ರಹವುಂಟು. ಭಾರತದ ಮತ್ತು ವಿದೇಶದ ತಜ್ಞರು ಬರೆದ ಅಮೂಲ್ಯ ಗ್ರಂಥ ಭಂಡಾರ ವಿದ್ಯಾರ್ಥಿಗಳ ಸಂಶೋಧನೆ, ಅಧ್ಯಯನಗಳಿಗೆ ಉಪಯುಕ್ತವೆನಿಸಿದೆ.

ಚಿತ್ರಕಲಾ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ ವಿಭಾಗ ಲಘು ಅವಧಿ ಹಾಗೂ ದೀರ್ಘ ಅವಧಿಗಳ ಸಂಶೋಧನ ಪರಿಯೋಜನೆಗಳನ್ನು ಆರಂಭಿಸಿ ಉಪನ್ಯಾಸ, ಚರ್ಚಾಗೋಷ್ಠಿ, ಕಾರ್ಯಾಗಾರ, ವಿಚಾರಸಂಕಿರಣಗಳ ಮೂಲಕ ಹೊಸ ಹೊಸ ಸಂಶೋಧನೆಗೆ ಪ್ರೋತ್ಸಾಹ ನೀಡುತ್ತಿದೆ. ತುಂಬ ಹಳೆಯ, ಮಾಸಿ ಹೋದ, ಬಣ್ಣಗೆಟ್ಟ ಕಲಾಕೃತಿಗಳನ್ನು ಪುನರುಜ್ಜೀವನಗೊಳಿಸುವ ವಿಭಾಗವೂ ಇಲ್ಲುಂಟು.

ತರುಣ ಕಲಾವಿದರಿಂದ ಹಿರಿಯ ಕಲಾವಿದರವರೆಗೆ ಎಲ್ಲರನ್ನೂ ಪ್ರೋತ್ಸಾಹಿಸಲು, ಅವರ ಕಲಾಪ್ರದರ್ಶನಕ್ಕೆ ಅನುವು ಮಾಡಿಕೊಡಲು ಇಲ್ಲಿ ಐದು ಗ್ಯಾಲರಿಗಳನ್ನು ಕಾದಿರಿಸಲಾಗಿದೆ. ಪರಿಷತ್ತಿನ ಖಾಯಂ ಪ್ರದರ್ಶನ ಗ್ಯಾಲರಿಯಲ್ಲಿ ಪ್ರಸಿದ್ಧ ಚಿತ್ರಕಾರರಾದ ಜೆಮಿನಿ ರಾಯ್, ಅವನೀಂದ್ರನಾಥ ಠಾಕೂರ್, ಗಣನೇಂದ್ರ ಠಾಕೂರ್, ನಂದಲಾಲಬೋಸ್, ರಾಯ್ ಚೌಧರಿ, ಅಬ್ದುಲ್ ರೆಹಮಾನ್, ಕೆ.ಕೆ.ಹೆಬ್ಬಾರ್, ಚುಗತ್ತಾಯ, ಅಮೃತಾ ಶೇರ್‌ಗಿಲ್, ಜಿ.ಎಸ್.ಶೆಣೈ, ಖಂಡೇರಾವ್, ರಮೇಶ್‌ರಾವ್, ಎಂ.ಎಸ್. ಚಂದ್ರಶೇಖರ್, ಸುಬ್ರಹ್ಮಣ್ಯರಾಜು, ಕೇಶವಯ್ಯ, ಎಸ್.ಎನ್.ಸ್ವಾಮಿ, ಪಿ.ಆರ್.ತಿಪ್ಪೇಸ್ವಾಮಿ ಮೊದಲಾದವರ ಚಿತ್ರಗಳಿವೆ.

ಮುಂದಿನ ಯೋಜನೆಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕಲಾವಿದರ ಚಿತ್ರಪ್ರದರ್ಶನದ ಗ್ಯಾಲರಿಗಳನ್ನೂ ಕರ್ನಾಟಕದವರದೇ ಒಂದು ಗ್ಯಾಲರಿಯನ್ನೂ ನಿರ್ಮಿಸುವ ವಿಚಾರವಿದೆ. ಅದಕ್ಕಾಗಿ ಚಿತ್ರಗಳ ಸಂಗ್ರಹಕಾರ್ಯ ನಡೆದಿದೆ. ಪರಿಷತ್ತಿನ ಕಟ್ಟಡ 1988ರಲ್ಲಿ ಕಟ್ಟಿ ಮುಗಿದ ಅನಂತರ ಅದರ ಎರಡನೆಯ ಹಂತದ ಕಟ್ಟಡ ವಿಸ್ತರಣೆಯ ಕಾರ್ಯ ಮುಗಿದು ಮೂರನೆಯ ಹಂತದ ಕಾರ್ಯ ಮುಂದುವರಿದಿದೆ. ಯಲಹಂಕದಲ್ಲಿ ಇಪ್ಪತ್ತು ಎಕರೆ ಸ್ಥಳದಲ್ಲಿ ಲಲಿತಕಲೆಗಳ ಕಾಲೇಜನ್ನೂ ವಿದ್ಯಾರ್ಥಿನಿಲಯವನ್ನೂ ಅಧ್ಯಾಪಕರಿಗಾಗಿ ವಸತಿಗೃಹಗಳನ್ನೂ ನಿರ್ಮಿಸುವ ಯೋಜನೆಯಿದೆ. ಪರಿಷತ್ತಿನಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ. ಇವುಗಳ ನೆರವಿನಿಂದ ಗ್ರಾಫಿಕ್ ವಿಭಾಗ ಬೆಳೆಸಬೇಕೆಂಬ ಉದ್ದೇಶವಿದೆ.

ಪ್ರಸಿದ್ಧ ಕಲಾವಿದರಾದ ಕೆ.ಕೆ.ಹೆಬ್ಬಾರ್, ರೋರಿಕ್, ಶಂಭು ಚೌಧರಿ, ಬಿ.ಸಿ.ಸನ್ಯಾಲ, ಕೃಷ್ಣಾರೆಡ್ಡಿ, ರುಮಾಲೆ ಚನ್ನಬಸಪ್ಪ, ಎಸ್.ಎಸ್.ಸ್ವಾಮಿ, ಎಂ.ವೀರಪ್ಪ, ನಾರಾಯಣ ಸಂಗಮ, ಎಂ.ಎ.ಚೆಟ್ಟಿ, ಟಿ.ಪಿ.ಅಕ್ಕಿ, ಶಂಕರರಾವ್ ಆಳಂದಕರ್, ಕೆ.ಸಿ.ಎನ್. ಪಣಿಕ್ಕರ್, ಎಸ್.ಧನಪಾಲ, ಕೊರಂಚಿ, ಕುಟ್ಟಿ, ನಾಡಕರ್ಣಿ (ಮುಂಬಯಿ), ಆರ್.ಸಂತೋಷ್ (ಜಮ್ಮು), ಬಿಕಾಶ ಭಟ್ಟಾಚಾರ್ಯ (ಕೋಲ್ಕತ), ಪಿ.ಟಿ.ರೆಡ್ಡಿ (ಆಂಧ್ರಪ್ರದೇಶ) ಮೊದಲಾದವರು ಈ ಸಂಸ್ಥೆಯ ಬೆಳೆವಣಿಗೆಗೆ ಸಹಕಾರ ನೀಡಿದ್ದಾರೆ.

1975ರಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್ ಆರಂಭವಾಯಿತು. ಇದು ಪರಿಷತ್ತಿಗೆ ಸಂಬಂಧಿಸಿದ ಆಸ್ತಿ ಪಾಸ್ತಿಗಳ ರಕ್ಷಣೆ ಹಾಗೂ ಬೆಳೆವಣಿಗೆಯ ಕಾರ್ಯವನ್ನು ನೋಡಿಕೊಳ್ಳುತ್ತಿದೆ. (ಎಸ್.ಎಂ.ಕೆ.)

**ಕರ್ನಾಟಕ ಜನಪದ ನೃತ್ಯ :** ಹಾಡು, ಕಥೆಗಳಂತೆ ನೃತ್ಯವೂ ಜಾನಪದ ಸಂಪತ್ತಿನ ಒಂದು ಮುಖ್ಯ ಅಂಗ. ಕರ್ನಾಟಕದ ವಿವಿಧ ಭಾಗಗಳಲ್ಲಿ ಅನೇಕ ರೀತಿಯ ನೃತ್ಯವಿಧಾನಗಳು ಬಳಕೆಯಲ್ಲಿವೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ– ಈ ಪ್ರದೇಶಗಳಲ್ಲಿ ವೈಶಿಷ್ಟ್ಯ ಪಡೆದಿರುವ ನೃತ್ಯಗಳಲ್ಲಿ ಮುಖ್ಯವಾದವನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದೆ.

ಗುಡ್ಡಬೆಟ್ಟಗಳಲ್ಲಿ ವಾಸಿಸುವ ಲಂಬಾಣಿಯರ ಜನಪದ ನೃತ್ಯಗಳು ರಮಣೀಯವಾಗಿವೆ. ಕಸೂತಿ, ಮಣಿ, ಕನ್ನಡಿಗಳಿಂದ ಹೊಲೆದಿರುವ ಬಣ್ಣದ ಲಂಗ, ಕುಪ್ಪಸಗಳನ್ನು ತೊಟ್ಟುಕೊಂಡು, ಕಾಲುಬೆರಳುಗಳಿಂದ ತಲೆಯ ಕೂದಲಿನವರೆಗೂ ಆಭರಣಗಳನ್ನು ಧರಿಸಿ, ಕೈಗಳನ್ನು ಜೋತುಹಾಕಿ ಸಾಮೂಹಿಕವಾಗಿ ಕುಣಿಯುವಾಗ ಈ ನೃತ್ಯದ ಚಲನೆಗಳ ಲಾಲಿತ್ಯ ಎದ್ದುಕಾಣುತ್ತದೆ.

ಕರ್ನಾಟಕದ ಎಲ್ಲ ಕಡೆಗಳಲ್ಲೂ ಕೋಲಾಟಗಳು ಆಕರ್ಷಣೀಯವಾಗಿರುತ್ತವೆ. ಅವುಗಳಲ್ಲಿ ವೀರರಸ ಹೆಚ್ಚು. ಸೊಗಸಾದ ಗೀತೆಗಳನ್ನು ಹಾಡುತ್ತ ನರ್ತಕರು ಕೋಲು ಹಿಡಿದು ಚಕ್ರಾಕಾರವಾಗಿ ನಿಂತು ಹಾಡಿಗೆ ಸರಿಯಾಗಿ ಗೆಜ್ಜೆಕಾಲಿನ ಹೆಜ್ಜೆಗಳನ್ನು ಹಾಕುತ್ತ, ಕೋಲು ಹೊಯ್ಯುತ್ತ ಕುಣಿಯುತ್ತಾರೆ. ನೃತ್ಯ ಸಾಗಿದಂತೆ ಪದ್ಮ, ಚಕ್ರ, ಕೋಟೆ, ಜಡೆ ಮುಂತಾದ ಆಕೃತಿಗಳಲ್ಲಿ ನರ್ತಿಸುತ್ತಾರೆ. ಪದವನ್ನು ಚೆನ್ನಾಗಿ ಹಾಡುವವನೇ ಮುಖಂಡ. ದಿನವೆಲ್ಲ ದುಡಿದುಸೋತ ರೈತರು ಸುಗ್ಗಿಯ ದಿನಗಳ ರಾತ್ರಿ ಬೆಳದಿಂಗಳಲ್ಲಿ ಕೋಲುಗಳನ್ನು ಕುಟ್ಟುತ್ತ ಪದವನ್ನು ಹಾಡುತ್ತ ಗುಂಪುಗುಂಪಾಗಿ ಕೋಲಾಟವಾಡುತ್ತಾರೆ. ಈ ಕೋಲು ಪದ್ಯಗಳ ಸಾಹಿತ್ಯ ಬಹಳ ಸೊಗಸು. ಈ ಪದಗಳಲ್ಲಿ ಉತ್ಸಾಹ ಆನಂದ ರಸಗಳೇ ಪ್ರಧಾನ. ಗಂಡಸರೇ ಹೆಚ್ಚಾಗಿ ನಡೆಸುವ ಈ ಕೋಲಾಟಗಳನ್ನು ಕೆಲವೆಡೆ ಹೆಂಗಸರೂ ಆಡುತ್ತಾರೆ. ಕೋಲಾಟಗಳಲ್ಲಿ–ಒಂಟಿಕೋಲು, ಜೋಡಿಕೋಲು, ತೊಟ್ಟಿಲುಕೋಲು, ಸುತ್ತುಕೋಲು ಇತ್ಯಾದಿ ವಿಧಗಳಿವೆ. ಕೋಲಾಟವಾದ ಮೇಲೆ ಕೋಲುಗಳನ್ನು ಭೂಮಿತಾಯಿಗೆ ಒಪ್ಪಿಸುವುದರಲ್ಲೂ ಒಂದು ರೀತಿ ಇದೆ.

ಸುಗ್ಗಿಯ ಕುಣಿತ ಅನೇಕ ಕಡೆಗಳಲ್ಲಿ ಪ್ರಚಾರದಲ್ಲಿದೆ. ಅದರಲ್ಲಿ ರಂಗದ ಕುಣಿತ, ಮಾರಿ ಕುಣಿತ ಎಂಬ ವಿಧಾನಗಳಿವೆ. ಸುಗ್ಗಿಯ ಸಂತೋಷ ದುಡಿದ ರೈತನಿಗಲ್ಲದೆ ಇನ್ನಾರಿಗೆ ತಿಳಿದೀತು ? ಅವನ ಕಷ್ಟ, ಶ್ರಮ, ಜಾಗರಣೆ, ಮಳೆಯ ಹಂಬಲ, ಇವೆಲ್ಲ ಕಾಳಿನ ರಾಶಿಯನ್ನು ನೋಡುವಾಗ ಮಾಯವಾಗುತ್ತವೆ. ಹಾಡು, ಕುಣಿತಗಳಲ್ಲಿ ಅವನ ಸಂತೋಷ ಹೊರಹೊಮ್ಮುತ್ತದೆ. ಒಂದು ತಮಟೆಯ ತಾಳಕ್ಕೆ ನಾಲ್ಕಾರು ಜನ ಸಾಲಾಗಿ ನಿಂತು ಹೆಜ್ಜೆಹಾಕಲು ಆರಂಭಿಸುತ್ತಾರೆ. ಒಂದು ಕೈಯಲ್ಲಿ ಬಣ್ಣದ ಚೌಕ ಹಿಡಿದು ಇನ್ನೊಂದು ಕೈಯನ್ನು ಸೊಂಟದ ಮೇಲಿಟ್ಟು ಬಳುಕುತ್ತ, ಕುಪ್ಪಳಿಸುತ್ತ ಕುಣಿಯುತ್ತಾರೆ. ಹಳ್ಳಿಯ ಗುಡಿಯ ಹೊರಾಂಗಣದಲ್ಲಿ ಉರಿಹಾಕಿ ತಮಟೆ ಬಾರಿಸಿ ಕೇಕೆ ಹಾಕುತ್ತಿರುವಾಗ ಹಳ್ಳಿಯ ಜನರೆಲ್ಲ ಸೇರಿ ಇದರಲ್ಲಿ ಭಾಗವಹಿಸುತ್ತಾರೆ. ಹೀಗೆಯೇ ಅನೇಕ ಬಗೆಯ ನೃತ್ಯಗಳು

ಕರ್ನಾಟಕದಲ್ಲಿ ಲಭ್ಯವಾಗುತ್ತವೆ. ವೀರಭದ್ರ ಕುಣಿತ, ವೀರಮಕ್ಕಳ ಕುಣಿತಗಳು ಮೈಸೂರಿನಲ್ಲಿವೆ. ವೀರಕುಣಿತ ವೀರರಿಗೆ ಸಾಧ್ಯ. ಕಾಳಗಕ್ಕೆ ಮುಂಚೆಯೋ ಬೇಟೆಯ ಕೊನೆಯಲ್ಲೋ

ಸುಗ್ಗಿ ಕುಣಿತ

ಹುಮ್ಮಸ್ಸು ಹುರುಪುಗಳನ್ನು ಹೊರ ಸೂಸುವ ಈ ವೀರಕುಣಿತ ಆವೇಶಭರಿತವಾದುದು. ಕುಣಿವಾಗಿನ ಈ ವೀರರ ಕೇಕೆ ಹಲವಾರು ಮೈಲಿಗಳವರೆಗೆ ಕೇಳುತ್ತಿರುತ್ತದೆ.



ತಮಟೆ

ಹಳೆಯ ಮೈಸೂರಿನ ಬೀಸುಕಂಸಾಳೆ ನೃತ್ಯಗಳಲ್ಲಿ ಕಂಸಾಳೆಯ ಗತ್ತಿಗನುಸಾರವಾಗಿರುವ ಹಿನ್ನೆಲೆ ಸಂಗೀತಕ್ಕೆ ಹೊಂದುವಂತೆ ನೃತ್ಯಗಾರರು ಆಕರ್ಷಣೀಯವಾಗಿ ಕುಣಿಯುತ್ತಾರೆ. ಕಂಸಾಳೆ ಕುಣಿತದಲ್ಲಿ ಒಂದು ಕಂಚಿನ ಬಟ್ಟಲು ಮತ್ತು ತಾಳಗಳನ್ನು ಉಪಯೋಗಿಸುತ್ತಾರೆ. ಕಂಸಾಳೆ ಪದ ಲಾವಣಿ ರೂಪದ ಹಾಡು. ನೃತ್ಯಗಾರರ ಜೊತೆಗೆ ಇಬ್ಬರು ಕಂಸಾಳೆ ಬಾರಿಸುತ್ತ ಪಲ್ಲವಿ ಹಾಡುತ್ತಾರೆ. ಒಬ್ಬ ಕಂಸಾಳೆಯನ್ನು ಬಡಿಯುತ್ತ ಬಾಗಿ ಬಳುಕಿ ಕುಣಿಯುತ್ತಾನೆ.

ನಂದಿಕಂಬದ ಕುಣಿತವನ್ನು (ನಂದಿಕೋಲು) ಸಾಮಾನ್ಯವಾಗಿ ಮೆರವಣಿಗೆಗಳಲ್ಲಿ ಕಾಣಬಹುದು. ಯಾವುದಾದರೂ ವಿಜೃಂಭಣೆಯ ಮೆರವಣಿಗೆ ಹೊರಟಾಗ ಅಲಂಕೃತವಾದ 30–40 ಅಡಿ ಎತ್ತರದ ಕಂಬವನ್ನು ನೃತ್ಯಕಾರರು ಹೊಟ್ಟೆಗೆ ಜೋತುಹಾಕಿಕೊಂಡು ತಮ್ಮಟೆಯ ತಾಳಕ್ಕೆ ಸರಿಯಾಗಿ ಕುಣಿಯುತ್ತ ಕೋಲನ್ನು ನೆಟ್ಟಗೆ ನಿಲ್ಲಿಸುವುದು ಆಶ್ಚರ್ಯಕರ.

ಕರಗದ ಕುಣಿತ ಮೈಸೂರಿನ ವಿಶೇಷ ಜನಪದ ನೃತ್ಯ. ಅಲಂಕೃತ ಕರಗವನ್ನು ತಲೆಯ ಮೇಲೆ ಧರಿಸಿ, ಭಕ್ತಿಪರವಶನಾದ ಒಬ್ಬ ನೃತ್ಯಗಾರ ವಿವಿಧ ರೀತಿಯ ಕೈಚಲನೆ, ಕಾಲುಚಲನೆಗಳಿಂದ ನರ್ತಿಸುತ್ತಾನೆ. ವಾದ್ಯಗೋಷ್ಠಿಯ ನಾದಕ್ಕೆ ಸ್ಫೂರ್ತಿಗೊಂಡು ದಿಗ್ಭ್ರಾಂತನಂತೆ ಕುಣಿದರೂ ಆತನ ತಲೆಯ ಮೇಲಿನ ಕರಗ ಒಂದಿಷ್ಟೂ ಅಲುಗಾಡುವುದಿಲ್ಲ, ತುಳುಕುವುದಿಲ್ಲ. ಜೊತೆಗೆ ಖಡ್ಗ ಹಿಡಿದು ಅವನನ್ನು ಹಿಂಬಾಲಿಸುವ ಪಂಗಡ ಆ ದೃಶ್ಯಕ್ಕೆ ಕಳೆ ಕೊಡುತ್ತದೆ. ಜಡೆ ಮತ್ತು ಚಿತ್ರಗೋಪುರ ಎಂಬವು ಕರಗದ ಇತರ ವಿಧಗಳು. ಇವುಗಳಲ್ಲದೆ ಡೊಳ್ಳುಕುಣಿತ, ಬಣಜದ ತಾಂಡ ಕುಣಿತ, ಕುದುರೆ ಕುಣಿತ, ಪೂಜಾ ಕುಣಿತ, ವೀರಗಾಸೆ ಕುಣಿತ, ಪಟ್ಟಾ ಕುಣಿತ, ಮುಂತಾದ ಹಲವಾರು ಕುಣಿತಗಳಿವೆ.

ಕೊಡಗಿನ ಹುತ್ತರಿ ನೃತ್ಯ ಮತ್ತು ಬೋಳ್‌ಕಾಟ ನೃತ್ಯಗಳು ಜನಪ್ರಿಯವಾದುವು. ದೇವರ ಪೂಜಾವಿಧಾನವಾದ ಈ ನೃತ್ಯವನ್ನು ಧಾರ್ಮಿಕ ಸಂದರ್ಭಗಳಲ್ಲಿ ಗಂಡಸರು



ನಂದಿಕೋಲು ಕುಣಿತ

ಮಾಡುತ್ತಾರೆ. ಸುಗ್ಗಿಯ ಕಾಲದಲ್ಲಿ, ಉತ್ಸವ, ಮದುವೆ ಸಮಾರಂಭಗಳಲ್ಲಿ ಕೊಡವರು ಕಪ್ಪು ಬಣ್ಣದ ಉದ್ದ ನಿಲುವಂಗಿ, ಧೋತಿ ಧರಿಸಿ, ತಲೆಗೆ ರುಮಾಲು ಸುತ್ತಿ, ಪೀಚ ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಆನಂದದಿಂದ ನರ್ತಿಸುತ್ತಾರೆ. ಹಾಡುಗಾರಿಕೆಯ ಜೊತೆಗೆ ಚರ್ಮವಾದ್ಯ ಬಾರಿಸುವವರು ಮಧ್ಯದಲ್ಲಿ ನಿಂತು ತಾಳವನ್ನು ಕೊಡುತ್ತಿರಲು



ಸಮೂಹ ಕುಣಿತ

ಸುತ್ತಲೂ ನೃತ್ಯಗಾರರು ಡಮರು ನಾದಕ್ಕೆ ಚಾಮರಗಳನ್ನು ಬೀಸಿ ನರ್ತಿಸುವ ದೃಶ್ಯ ಮೋಹಕವಾದುದು.

ತುಳುನಾಡಿನಲ್ಲಿ ಅನೇಕ ವಿಧದ ಜನಪದ ನೃತ್ಯಗಳು ರೂಢಿಯಲ್ಲಿವೆ. ಅಲ್ಲಿನ ಹರಿಜನರು ಲೇ ಲೇ ಲೇ ಲೋ ಎಂಬ ಪಲ್ಲವಿ ಹಾಡುತ್ತ ದುಡಿಯ ತಾಳಕ್ಕೆ ಕುಣಿಯುತ್ತಾರೆ. ಒಬ್ಬಾತ ದುಡಿಯನ್ನು ಬಾರಿಸುತ್ತಾನೆ. ಹೆಂಗಸರು ಬಳುಕಿ, ಬಾಗಿ, ಕೈ ಅಲುಗಿಸಿ ಹಿಂದೆ ಮುಂದೆ

ಸರಿದು ಕೂಟನೃತ್ಯದಲ್ಲಿ ಭಾಗವಹಿಸುತ್ತಾರೆ. ಕುಂದಾಪುರ, ಉಡುಪಿಯ ಹರಿಜನರಲ್ಲಿ 5–6 ಯುವಕರು ಚಿಕ್ಕ ಕೋಲುಗಳನ್ನು ಹಿಡಿದು ಸರಳವಾಗಿ ಹೆಜ್ಜೆ ಹಾಕಿ ಕುಣಿಯುತ್ತಾರೆ.



ಕಂಸಾಳೆ

ಹಿನ್ನೆಲೆ ಸಂಗೀತಕ್ಕೆ ಇಬ್ಬರು ಚರ್ಮವಾದ್ಯದವರು, ಒಬ್ಬ ಕೊಳಲು ಬಾರಿಸುವವನು ಇರುತ್ತಾರೆ. ಹೆಂಗಸೊಬ್ಬಳು ದೊಡ್ಡ ತಾಳಗಳನ್ನು ಬಾರಿಸುತ್ತಾಳೆ. ಸಂಗೀತದ ಲಯ



ಜನಪದ ವಾದ್ಯಗಳು

ಹೆಚ್ಚಾದಂತೆ ನೃತ್ಯಗಾರರ ಆವೇಶ ಹೆಚ್ಚಾಗುತ್ತದೆ. ಪುತ್ತೂರು ತಾಲ್ಲೂಕಿನ ಮೇರಾ ಜನರಲ್ಲಿ ಹೆಂಗಸರು ಮಾಡುವ ಕೂಟನೃತ್ಯಗಳಿವೆ. ಇಬ್ಬರು ಗಂಡಸರು ಡುಡಿಬಡಿದಂತೆ ಬಿಳಿ ಸೀರೆ ಉಟ್ಟ ಹೆಂಗಸರು ಕೈಚಪ್ಪಾಳೆಗಳಿಂದ ಹಿಂದೆಮುಂದೆ ಬಳುಕಿ ಬಾಗಿ ವಾದ್ಯಗಾರರ ಸುತ್ತಲೂ ಕುಣಿಯುತ್ತಾರೆ. ಅವರ ಸರಳ ಲಲಿತ ಚಲನೆಗಳಲ್ಲಿ ಸ್ನೇಹಪರವಶತೆಯ ಆನಂದ ಉಕ್ಕಿ ಹರಿಯುತ್ತದೆ. ರಾಣಿಯಾರ್ ಪಂಗಡದವರು ಭಕ್ತಿ ಶಕ್ತಿಗಳಿಂದ ಕೋಲಾಟ ಮಾಡುವಾಗ ಅವರ ಕೋಲುಗಳೂ ಕಾಲುಗೆಜ್ಜೆಗಳೂ ಮಾತನಾಡುವಂತೆ ಭಾಸವಾಗುತ್ತದೆ. ಕಾರ್ಕಳ ತಾಲ್ಲೂಕಿನ ಕುಡುಬಿಯರಲ್ಲಿ ಸುಂದರ ಕೂಟ ನೃತ್ಯವಿದೆ. ಗಂಡಸರು ಬಿಳಿ ಬಟ್ಟೆಯುಟ್ಟು ಕೆಂಪು ರುಮಾಲು ಸುತ್ತಿ, ಕೈಯಲ್ಲಿ ಮಣ್ಣಿನ ವಾದ್ಯ ಹಿಡಿದು ಎರಡು ಸಾಲಾಗಿ ನಿಂತು ಹಾಡುತ್ತ ಸಂಭಾಷಣೆ ನಡೆಸುತ್ತಾರೆ.

ಪಶ್ಚಿಮ ಘಟ್ಟದ ಮಲೆಕುಡಿಯರ ಪಂಗಡಗಳಲ್ಲಿ ವಿಶೇಷ ತರಹದ ಒಂದು ಭೂತನೃತ್ಯವಿದೆ. ಮೂವರು ಯುವಕರು ಖಡ್ಗಾಯುಧರಾಗಿ ಕಹಳೆ–ಕೊಂಬು ವಾದ್ಯಕ್ಕೆ ಹೊಂದಿದಂತೆ ಮೈಮರೆತು ಕುಣಿಯುತ್ತಾರೆ. ಈ ನೃತ್ಯ ಅನಾಗರಿಕರ ಯುದ್ಧನೃತ್ಯವನ್ನು ಹೋಲುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತಗಳ ಕುಣಿತ ಹೆಸರಾದುದು. ಬೇರೆ ಬೇರೆ ಜನರು ಬೇರೆ ಬೇರೆ ಭೂತಗಳನ್ನು ನಂಬಿ ಪೂಜಿಸುತ್ತಾರೆ. ವರ್ಷದ ನಾನಾಕಾಲಗಳಲ್ಲಿ ಈ ದೆವ್ವಗಳಿಗೆ ಜಾತ್ರೆ ನಡೆಯುತ್ತದೆ. ದೆವ್ವದ ಆವೇಶ ಪಡೆಯುವವರ ಜಾತಿಯೇ ಬೇರೊಂದಿದೆ. ಈ ನೃತ್ಯಗಳೆಲ್ಲ ಭಕ್ತಿಪ್ರಧಾನವಾದುವು. ಭಕ್ತರು ತಾವು ನಂಬುವ ಭೂತಗಳ ತೃಪ್ತಿಗಾಗಿ ಅವನ್ನು ಆಹ್ವಾನಿಸಿ, ಉಣಿಸುವರು. ಭೂತದ ಆವೇಶ ಪಡೆಯುವ ಪೂಜಾರಿ ವಿಶಿಷ್ಟ ವೇಷಭೂಷಣಗಳನ್ನು ಧರಿಸಿ ಬಣ್ಣ ಲೇಪಿಸಿಕೊಂಡು ವೀರಾವೇಶದಿಂದ ಕುಣಿದು ತನ್ನನ್ನೇ ಮರೆಯುತ್ತಾನೆ. ಆತನ ಬಾಯಿಂದ ಬರುವ ಮಾತುಗಳು ಭೂತದ ಮಾತುಗಳೆಂಬ ಭ್ರಾಂತಿ ಜನರಲ್ಲಿ ಮೂಡುತ್ತದೆ. ಬೇರೆ ಬೇರೆ ಭೂತಗಳಿಗೆ ತಕ್ಕ ನಡೆ, ನೃತ್ಯ, ವೇಷ, ಕಿರೀಟ, ಭೂಷಣಗಳಿರುತ್ತವೆ. ಸಾಮಾನ್ಯವಾಗಿ ಭೂತಗಳ ಉಗ್ರಸ್ವರೂಪ ಆಯಾ ವೇಷದಲ್ಲಿ ವ್ಯಕ್ತವಾಗುತ್ತದೆ. ಇಂಥ ನೃತ್ಯ ಸಂಪ್ರದಾಯದಲ್ಲಿ ನಾಗನೃತ್ಯ ವಿಚಿತ್ರವಾದುದು. ವೈದ್ಯರೆಂಬ ಪೂಜಾರಿಗಳ ಈ ನೃತ್ಯಕ್ಕೆ ನಾಗಮಂಡಲವೆನ್ನುತ್ತಾರೆ. ರಂಗಮಂಟಪದಲ್ಲಿ ಮಹಾಶೇಷನ ರಂಗೋಲಿಯನ್ನು ಹಾಕಿಸುತ್ತಾರೆ. ಪೂಜಾರಿ ಕೆಂಪು ರೇಷ್ಮೆಯನ್ನುಟ್ಟು ಚದುರಿದ ಕೂದಲನ್ನು ಬಿಟ್ಟು ಸುಬ್ಬರಾಯನಾಗಿ ಬಂದು ನಿಲ್ಲುತ್ತಾನೆ. ಅವನ ಮುಂದೆ ಪ್ರಕೃತಿ ಪುರುಷ ಸೂಚಕವಾಗಿ ಅರ್ಧ ಗಂಡಸಿನ ಅರ್ಧ ಹೆಂಗಸಿನ ಉಡುಪನ್ನು ಧರಿಸಿದ ನೃತ್ಯಗಾರ ನಿಂತಿರುತ್ತಾನೆ. ಹಿಮ್ಮೇಳದ ಗಾಯಕರು ದೇವರ ಲೀಲೆಗಳನ್ನು ಹಾಡುತ್ತಾರೆ. ಒಂದು ಡಮರು, ಒಂದು ಜೊತೆ ತಾಳಕ್ಕೆ ಅನುಗುಣವಾಗಿ ನಾಗದ ಆವೇಶ ತಂದುಕೊಂಡು ದೇಹಕ್ಕೆ ಮೂಳೆಗಳೇ ಇಲ್ಲವೆಂಬಂತೆ ನಾಗನರ್ತನ ನರ್ತಿಸುವಾಗ ಅದು ಪ್ರೇಕ್ಷಕರಿಗೆ ರೋಮಾಂಚನಕಾರಿಯಾಗಿ ಪರಿಣಮಿಸುತ್ತದೆ. ನಾಗಬ್ರಹ್ಮನೇ ಪ್ರತ್ಯಕ್ಷವಾಗಿ ಎದುರಿಗೆ ಬಂದಂತೆ ಭಾಸವಾಗುತ್ತದೆ.

ಕನ್ನಡ ನಾಡಿನ ಯಕ್ಷಗಾನ ಬಯಲಾಟದ ಪರಂಪರೆ ಆ ಸಂಸ್ಕೃತಿಯ ಅತ್ಯಂತ ಸುಂದರವಾದ ಅಂಗವಾಗಿದೆ. ಯಕ್ಷಗಾನ ಬಯಲಾಟ ಪ್ರೇಕ್ಷಣೀಯ ನೃತ್ಯ ಸಂಪ್ರದಾಯ. ಮಹಾಭಾರತ ರಾಮಾಯಣಾದಿ ಕಥಾನಕಗಳಲ್ಲಿ ಬರುವ ಪಾತ್ರಗಳು ಅತಿಮಾನುಷ ವೇಷಭೂಷಣ, ಕಿರೀಟ, ಬಣ್ಣಲೇಪನಗಳಿಂದ ಕೂಡಿದ್ದು ಪ್ರೇಕ್ಷಕರನ್ನು ಮೈಮರೆಸುತ್ತಾರೆ. ತಾಳ ನೃತ್ಯಕ್ಕೂ ಸಂಗೀತಕ್ಕೂ ಹೊಂದಿಕೊಂಡು ಭಾವಾವೇಶವನ್ನೂ ಸ್ಫೂರ್ತಿಯನ್ನೂ ಒದಗಿಸುತ್ತದೆ. ಸಾಹಿತ್ಯ ಪಂಡಿತಪಾಮರರನ್ನು ರಂಜಿಸುವಂತಿರುತ್ತದೆ. ಭಾಗವತರು ಚಂಡೆ, ಮದ್ದಳೆ, ಶ್ರುತಿ, ತಾಳಗಳೊಡನೆ ಕಥೆಯನ್ನು ಆರಂಭಿಸುತ್ತಾರೆ. ಇಬ್ಬರು ಎತ್ತಿಹಿಡಿದ ಪರದೆಯ ಹಿಂದಿನಿಂದ ಅದ್ಭುತವೇಷಧಾರಿಗಳು ನೃತ್ಯಕ್ಕೆ ಸಿದ್ಧರಾಗುತ್ತಾರೆ. ಪಾತ್ರಧಾರಿಗಳು ನರ್ತಿಸುತ್ತಿರಲು ಭಾಗವತರು ಜಾಗಟೆ ಕೋಲುಗಳಿಂದ ತಾಳ ಸೂಚಿಸುತ್ತ ಪ್ರಸಂಗದ ಸಾಹಿತ್ಯವನ್ನು ಹಾಡಿ ಸಭಿಕರಾಗಿ ಹಾಸ್ಯಗಾರರಾಗಿ ಕಥಾಸರಣಿಯನ್ನು ಮುಂದುವರಿಸುತ್ತಾರೆ. ಯಕ್ಷಗಾನ ವೀರರಸ ಪ್ರಧಾನವಾದದ್ದು. ಅಲ್ಲಿನ ವೇಷಗಳ ಅಲಂಕಾರಾದಿಗಳಲ್ಲಿ ಚಿತ್ರಕಲಾಪ್ರೌಢಿಮೆಯಿದೆ; ಧರ್ಮವಿಷಯವನ್ನು ಸರಳ ಮಾತಿನಲ್ಲಿ ಉದಾಹರಣೆ ಸಹಿತ ಕಥಾರೂಪಕವಾಗಿ ಬೋಧಿಸುವ ಮಧುರ ಸಂಭಾಷಣೆಯಿದೆ. ವೇದೋಪನಿಷತ್ತುಗಳ ತತ್ತ್ವಾರ್ಥವನ್ನು ಯಕ್ಷಗಾನ ಸುಲಭವಾಗಿ ತಿಳಿಸುತ್ತದೆ. ದೇದೀಪ್ಯಮಾನರಾದ ಪುರಾಣವ್ಯಕ್ತಿಗಳ ಪಾತ್ರಧಾರಿಗಳು ರಂಗಸ್ಥಳದ ಎತ್ತರವಾದ ಕಾಲು ದೀಪಗಳ, ದೀವಟಿಗೆಗಳ ಬೆಳಕಿನಲ್ಲಿ ಸಂಜೆಯಿಂದ ಮುಂಜಾನೆಯವರೆಗೆ ನರ್ತಿಸುವಾಗ ಪ್ರೇಕ್ಷಕರು ತನ್ಮಯರಾಗುತ್ತಾರೆ. ಯಕ್ಷಗಾನ ಬಯಲಾಟ ಅವರನ್ನು ಮಾಯೆಯ ಸುಂದರ ಕಲಾಜಗತ್ತಿಗೆ ಕೊಂಡೊಯ್ಯುತ್ತದೆ.

### ಗೊಂಬೆ ಕುಣಿತಗಳು

**ಗಾರುಡಿ ಗೊಂಬೆ :** ಮೆರವಣಿಗೆಯ ಒಂದು ಸಾಲಿನಲ್ಲಿ ಮೊದಲು ಕಾಣುವುದು ದೊಡ್ಡ ಗೊಂಬೆಗಳು– ಒಂದು ಹೆಣ್ಣು, ಒಂದು ಗಂಡು. ಅವುಗಳ ಮೈ ಬಿದಿರ ಬುಟ್ಟಿಗಳದ್ದು.

ಸೂತ್ರದ ಗೊಂಬೆ (ಕುಂದಾಪುರ)

ಮೇಲಿನ ಹೊದಿಕೆ ಹರಕು ಸೀರೆ, ತಲೆಗೆ ಒಂದು ಮಡಕೆ. ರಂಗಕ್ಕೆ ಸಿದ್ಧವಾದ ಮೇಲೆ ಅವಕ್ಕೆ ಗಾರುಡಿಗತನದ ಆವೇಶ ಬರುತ್ತದೆ. ಅವುಗಳ ಜಡ ದೇಹದಲ್ಲಿ ಜೀವ ಸುಳಿದಾಡುತ್ತದೆ. ಅವಕ್ಕೆ ಹೀಗೆ ಜೀವ ಕೊಡುವವ ಅವನ್ನು ಕುಣಿಸುವಾತ; ಬೊಂಬೆಯ ಬುಟ್ಟಿಯೊಳಗೆ ಸೇರಿಕೊಂಡು ನರ್ತಿಸುವ ಮನುಷ್ಯ !

**ಸೂತ್ರದ ಗೊಂಬೆ :** ಈ ಆಟ ಯಕ್ಷಗಾನದ ಇನ್ನೊಂದು ಪದ್ಧತಿ. ಗೊಂಬೆಗಳನ್ನು ಕುಣಿಸುವ ಆಟಗಾರರು ಪರದೆಯ ಹಿಂದೆ ನಿಂತು, ಅಲಂಕೃತ ಗೊಂಬೆಗಳನ್ನು ಪರದೆಯ ಮುಂದೆ ಬಿಟ್ಟು ಪ್ರೇಕ್ಷಕರಿಗೆ ಕಾಣದಂತೆ ಇದ್ದು ದಾರಗಳಿಂದ ಅವನ್ನು ಆಡಿಸುತ್ತಾರೆ. ಅವು

ಕುಣಿದಂತೆ ಹಿಂದೆ ನಿಂತವರು ಹಾಡುತ್ತಾರೆ; ಅವುಗಳ ಅಂಗಾಂಗಗಳ ಚಲನೆಗನುಸಾರವಾಗಿ ಮಾತನಾಡುತ್ತಾರೆ. ಕಥೆ ಸಾಗುತ್ತ ಪ್ರೇಕ್ಷಕರು ಆಟಗಾರನ ಕೈಗೊಂಬೆಗಳಾಗುತ್ತಾರೆ. ಈ ಕೌಶಲ ಅದ್ಭುತವಾದುದು. ಕಥೆಯ ಪಾತ್ರಧಾರಿಗಳಲ್ಲಿ ಹುಟ್ಟುವ ನವರಸಗಳೆಲ್ಲವೂ ಗೊಂಬೆಗಳ ಚಲನೆಗಳ ಮೂಲಕ ಪ್ರೇಕ್ಷಕನಲ್ಲಿ ಉದ್ಭವಿಸಿ ಮಾಯೆಯ ವಾತಾವರಣವನ್ನು ಕಲ್ಪಿಸುತ್ತವೆ.

**ತೊಗಲು ಗೊಂಬೆಯ ಆಟ :** ಈ ಗೊಂಬೆಗಳು ಕಾಗದದಂತೆ ತೆಳ್ಳಗಿರುವ ಹದ ಮಾಡಿದ ಚರ್ಮದವು. ಹಿಂದೆ ಪ್ರಕಾಶವಾದ ಬೆಳಕಿಟ್ಟರೆ ಅವು ಪರದೆಯ ಮೇಲೆ ಕಾಣುತ್ತವೆ.



ತೊಗಲು ಗೊಂಬೆ

ಅವಕ್ಕೆ ಬಣ್ಣ ಹಾಕಿರುತ್ತಾರೆ. ತೆಳ್ಳನೆ ಪರದೆಯ ಹಿಂದೆ ಪ್ರಕಾಶವಾದ ಒಂದು ದೀಪವನ್ನು ಕೊಂಚ ಪಕ್ಕಕ್ಕೆ ನೇತುಹಾಕಿರುತ್ತಾರೆ. ಆಟಗಾರನ ಇಡೀ ಸಂಸಾರವೇ ಈ ಆಟದಲ್ಲಿ ಭಾಗವಹಿಸುತ್ತದೆ. ಒಂದೊಂದಾಗಿ ಗೊಂಬೆಗಳನ್ನು ತೆಗೆದು ಕೊಡುವುದು, ಅವನ್ನು ಕ್ರಮವಾಗಿ ಜೋಡಿಸುವುದು ಮುಂತಾದ ಕೆಲಸವನ್ನು ಹೆಂಡತಿ ಮಕ್ಕಳು ನಿರ್ವಹಿಸುತ್ತಾರೆ. ಗೊಂಬೆಗಳ ಕೈಕಾಲುಗಳಿಗೆ ಕಡ್ಡಿಗಳನ್ನು ಸಿಕ್ಕಿಸಿ, ತನ್ನ ನೆರಳು ಪರದೆಯ ಮೇಲೆ ಬೀಳದಂತೆ ಬೆಳಕಿನ ಹಿಂದೆ ನಿಂತು ಅವನ್ನು ಯಜಮಾನ ಪರದೆಗೆ ಅಂಟಿಸುತ್ತಾನೆ. ಅವುಗಳ ಕೈಕಾಲು ಆಡಿಸಿ ಅದಕ್ಕೆ ಸರಿಯಾಗಿ ಮಾತನಾಡುತ್ತಾನೆ. ಹೆಣ್ಣು ಗೊಂಬೆಗೆ ಹೆಂಡತಿಯ ಸ್ವರ ಸೇರುತ್ತದೆ. ಗೊಂಬೆಗಳು ಕುಣಿಯುವಾಗ ಮಕ್ಕಳ ಹಾಡುಗಳು, ಗೆಜ್ಜೆಶಬ್ದ, ಗಡಸು ಗಂಡಸಿನ ಮಾತುಗಳಿಗೆ ಗಂಡಿನ ಕಂಠ– ಹೀಗೆ ಈ ತೊಗಲು ಗೊಂಬೆಯ ಆಟ ಮೂಕ ಚಲನಚಿತ್ರಕ್ಕೆ ಶಬ್ದ ಜೋಡಿಸಿದಂತಿರುತ್ತದೆ.

**ಜನಪದ ನೃತ್ಯ ಗೀತೆಗಳು :** ಕರ್ನಾಟಕದಲ್ಲಿ ಸಾವಿರಾರು ಬಗೆಯ ಜನಪದ ಗೀತೆಗಳಿವೆ. ಇವಕ್ಕೆ ಕೆಲವು ಗಾನನೃತ್ಯಗಳೂ ಇವೆ. ಶಿವಶರಣರ ವಚನಗಳು, ಭಾರತ ವಾಚನ, ಹರಿಕಥೆ, ಶಿವಕಥೆ, ಕೀರ್ತನೆ ಇವುಗಳೆಲ್ಲ ಜನತೆಯಲ್ಲಿ ಜ್ಞಾನ ಪ್ರಸಾರಮಾಡಲು ರೂಢಿಯಲ್ಲಿದ್ದ ವಿಧಾನಗಳು. ಇವುಗಳಲ್ಲಿ ಸಂಗೀತ, ಸಾಹಿತ್ಯ, ನಾಟ್ಯ, ಅಭಿನಯ ಇವುಗಳೆಲ್ಲ ಹದವಾಗಿ ಕೂಡಿಕೊಂಡಿದ್ದು ಪಂಡಿತ ಪಾಮರರೆಂಬ ಭೇದಭಾವವಿಲ್ಲದೆ ಎಲ್ಲರಿಗೂ ಮನರಂಜಕವಾಗಿ ವಿಷಯಬೋಧಕವಾಗಿವೆ. ಈಚೆಗೆ ಆಧುನಿಕ ರೀತಿಯ ನಾಟಕ ಚಲನಚಿತ್ರಗಳು ಬಂದು ಹಳೆಯ ಜನಪದ ನೃತ್ಯ ನಾಟಕಾದಿಗಳು ಹಿಂದೆ ಬಿದ್ದಿವೆ. (ಯು.ಎಸ್.ಕೆ.)

**ಕರ್ನಾಟಕ ಜನಪದ ಸಂಗೀತ :** ಜನಪದ ಸಂಗೀತದ ವೈವಿಧ್ಯ, ಪ್ರಾಶಸ್ತ್ಯ, ಸೊಗಸು, ರೀತಿನೀತಿಗಳನ್ನು ಕುರಿತು ಇಲ್ಲಿ ಸಮಾಲೋಚಿಸಲಾಗಿದೆ. ಇಂದಿಗೂ ಹಳ್ಳಿಗಳಲ್ಲಿ ಮುಂಜಾನೆ ಹೆಣ್ಣುಮಕ್ಕಳು ರಾಗಿ ಬೀಸುತ್ತ 'ಏಳುತಲೆ ನಾನೆದ್ದು ಯಾರ್‍ಯಾರ ನೆನೆಯಾಲಿ ಎಳ್ಳುಜೀರಿಗೆ ಬೆಳಿಯೋಳ– ಭೂತಾಯ ಎದ್ದೊಂದು ಗಳಿಗೆ ನೆನೆದೇನು' ಎಂದು ಹಾಡಲು ಮೊದಲು ಮಾಡುತ್ತಾರೆ. ತಂಬೂರಿ ಹಿಡಿದ ಹರಿದಾಸರು 'ಏಳು ನಾರಾಯಣ ಏಳು ಲಕ್ಷ್ಮೀರಮಣ' ಎಂದು ಸುಪ್ರಭಾತ ಹಾಡಿಕೊಂಡು ಬರುತ್ತಾರೆ. ಏಕನಾದ ಹಿಡಿದ ಜಂಗಮಯ್ಯಗಳು 'ನಂಬಿ ಕರೆದೆಡೆ ಓ ಎಂಬ ಶಿವನು' ಎಂಬ ವಚನ ಹಾಡಿಕೊಂಡು ಬೀದಿಯಲ್ಲಿ ಅಡ್ಡಾಡುತ್ತಾರೆ. ತಾಯಂದಿರು ಎಳೆ ಮಗುವನ್ನು ಮಲಗಿಸುವಾಗ 'ಯಾಕಳುವೆ ಎಲೆ ರಂಗ ಬೇಕಾದ್ದು ನಿನಗಿದೆ ನಾಕೆಮ್ಮೆ ಕರೆದ ನೊರೆಹಾಲುಸಕ್ಕರೆ ನೀ ಕೇಳಿದಾಗ ನಾ ಕೊಡುವೆ ಎಂದು ಜೋ ಜೋ ಜೋಗುಳವನ್ನು ಇಂಪಾಗಿ ಹಾಡಿ ಕೂಸನ್ನು ನಿದ್ದೆ ಹೋಗಿಸುತ್ತಾರೆ. ಬೆಳಗಿನಿಂದ ರಾತ್ರಿ ಮಲಗುವವರೆಗೂ ಧಾರ್ಮಿಕ ಲೌಕಿಕ ಕಾರ್ಯಗಳೆರಡಕ್ಕೂ ಸಮಯೋಚಿತ ಹಾಡುಗಳು ಇದ್ದೇ ಇವೆ. ಸಂಪ್ರದಾಯವಾಗಿ, ವಂಶಪಾರಂಪರ್ಯವಾಗಿ ಇವು ಬೆಳೆದು ಬಂದಿವೆ. ರೇಡಿಯೊ, ಸಿನಿಮಾಗಳು ಬಂದ ಮೇಲೆಯೂ ಪಟ್ಟಣದವರು ಈ ಬಗೆಯ ಹಾಡುಗಳನ್ನು ಕೇಳುವ ಆಸಕ್ತಿ ತೋರುತ್ತಿದ್ದಾರೆ.

ಶತಮಾನಗಳಿಂದ, ಬಾಯಿಂದ ಬಾಯಿಗೆ ಬಂದ ಹಳ್ಳಿಹಾಡು ಸರಳ, ಅತಿ ಮನೋಹರ, ಕಲಿಯಲು ಸುಲಭ. ಶಾಸ್ತ್ರೀಯ ಸಂಗೀತದ ಕಷ್ಟ ಇದಕ್ಕಿಲ್ಲ. ನಾಲ್ಕು ಬಾರಿ ಕೇಳಿದಲ್ಲಿ ಬಂದೇ ಬಿಡುವುದು. ಜನಸಾಮಾನ್ಯರು ಆಡುವ, ಅತಿ ಬಳಕೆಯಲ್ಲಿರುವ, ಪದಗಳನ್ನೇ ಉಪಯೋಗಿಸಿಕೊಂಡು ಮಲ್ಲಿಗೆಮೊಗ್ಗುಕಟ್ಟಿದಂತೆ ಇದನ್ನು ಕಟ್ಟಿರುವರು. ಯಾರು ರಚಿಸಿದರೋ ಎಂದು ರಚಿಸಿದರೋ ಒಬ್ಬರೇ ಬರೆದರೋ ಖಂಡಿತವಾಗಿ ಹೇಳುವುದಕ್ಕೆ ಆಧಾರ ಸಾಲದು. ಗಂಡಸರೂ ಕಟ್ಟಿರಬಹುದು, ಹೆಂಗಸರೂ ಕಟ್ಟಿರಬಹುದು, ಓದು ಬರೆಹ ಬಾರದವರೂ ಕಟ್ಟಿರಬಹುದು. ಪಾಮರರು ಹಾಡಿಕೊಳ್ಳಲಿ ಎಂದು ಕೊನೆಗೆ ಒಳ್ಳೆಯ ಪಂಡಿತರು ರಚಿಸಿದವೂ ಇಲ್ಲಿ ಸೇರಿರಬಹುದು. ಆಯಾ ಬುಡಕಟ್ಟಿನ ಆಯಾ ಪ್ರದೇಶದ ಜನಜೀವನದ ಎಲ್ಲ ಸಂದರ್ಭಕ್ಕೆ ಸೂಕ್ತವಾದ ಸಂಗೀತವನ್ನಿಲ್ಲಿ ಸಾದರಪಡಿಸಲಾಗಿದೆ. ಕೇವಲ ಓದಿಕೊಂಡಾಗ ಸಾಹಿತ್ಯ ಸಪ್ಪೆ ಎನಿಸಿದರೂ ಹಾಡಿದಾಗ ಮೈಮರೆವಂತಾಗುತ್ತದೆ, ರೋಮಾಂಚನವಾಗುತ್ತದೆ. ಒಮ್ಮೊಮ್ಮೆ ಜಗತ್ತಿನ ಶ್ರೇಷ್ಠ ಕವಿತೆಗೂ ಸಮತೂಗುವ ಭಾವನೆ, ಉಪಮೆ, ಅಲಂಕಾರವಸ್ತು ಇವುಗಳಲ್ಲಿ ಸಿಗುತ್ತವೆ. ಹಲಕೆಲವು ಅಶ್ಲೀಲ ಕೃತಿಗಳೆಂದು ಕಂಡುಬಂದರೂ ದನಿ ಎತ್ತಿದಾಗ ಮಹಾ ಒರಟು ಎಂದು ಕಿವಿಗೆ ಅನಿಸಿದರೂ ಕ್ಷಣಾರ್ಧದಲ್ಲಿ ಸನಾತನ ಗ್ರಾಮ್ಯಸೌಂದರ್ಯದ ಸತ್ವಾಂಶದ ಗಂಗೆ ಭೋರ್ಗರೆದು ಹರಿದು ಬಂದ ಅನುಭವವಾಗುತ್ತದೆ. ಹಳ್ಳಿಯ ಸಮಸ್ತರೂ ಇದರ ಬೆಳವಣಿಗೆಗೆ ಪೋಷಕರಾಗಿದ್ದಾರೆ. ಸಕಲರ ಹಿತಕ್ಕಾಗಿ ಸಕಲರ ಆನಂದಕ್ಕಾಗಿ, ಸರ್ವತೋಮುಖವಾಗಿ ರಚನೆಯಾದ ಸಾಹಿತ್ಯಸಂಗೀತವಿದು.

ಗಂಡಸರು ಹಾಡುವ ಪದಗಳೇ ಬೇರೆ. ಹೆಂಗಸರು ಹಾಡುವ ಪದಗಳೇ ಬೇರೆ. ಕೂಡಿ ಹಾಡುವ ಪದಗಳೇ ಬೇರೆ. ಗುಂಪು ಗುಂಪಾಗಿ, ತಂಡತಂಡವಾಗಿ ಹಾಡುವ ಪದಗಳೇ ಬೇರೆ. ಒಬ್ಬರೇ ಹಾಡುವ ಪದ ಬೇರೆ. ಸಾಮಾನ್ಯವಾಗಿ ಲಾವಣಿ, ಕೋಲಾಟದ ಪದ, ಬಂಡಿಪದ, ಕಂಸಾಳೆ ಪದ, ಕೊಡಗರ ಬೊಳಕಾಟದ ಪದ, ಕಾಡು ಜನರ ಪದ, ಸೋಲಿಗರ ಪದ– ಇವುಗಳಲ್ಲಿ ಕೇವಲ ಗಂಡಸರೇ ಭಾಗವಹಿಸುವರು. ಹೆಣ್ಣುಮಕ್ಕಳು ತ್ರಿಪದಿ, ಸಾಂಗತ್ಯ, ಜೋಗುಳ, ಸುವ್ವಿ ಪದ, ಸೋಭಾನೆ, ಕಳೆ ಕೀಳುವ ಪದ– ಮೊದಲಾದವನ್ನು ಹಾಡುತ್ತಾರೆ. ಇವುಗಳಲ್ಲದೆ ಡೊಳ್ಳಿನ ಪದ, ಹಂತಿ ಪದ, ಹಚ್ಚೆಯ ಪದ, ಕುಟ್ಟೋ ಪದ, ತಿಂಗಳುಮಾವನ ಪದ, ಬೀಗಿತಿ ಪದ, ಏಲ ಪದ, ಉರುಟಣೆ ಪದ, ಎಣ್ಣೆ ಒತ್ತೋ ಪದ, ಮಾರಿ ಪದ, ಬೇಟೆ ಪದ, ಸುಗ್ಗಿ ಪದ, ಮಕ್ಕಳ ಪದ, ದಾಸರ ಪದ, ತತ್ತ್ವದ ಪದ, ಬಯಲಾಟದ ಪದ, ಭೂತನ ಪದ ಮತ್ತು ಓಬೇಲೆ ಪದಗಳೂ ಉಂಟು.

**ಲಾವಣಿ :** ಗರಡಿಯ ಅಂಗಸಾಧನೆಯಲ್ಲಿ ಪರಿಶ್ರಮ ಹೊಂದಿದ ಆಸಾಮಿಗಳು ಗಮ್ಮತ್ತಿನಿಂದ ಲಾವಣಿ ಹಾಡುತ್ತಾರೆ. ಯುದ್ಧ ಬಂದಾಗ ಜನರನ್ನು ಜಾಗೃತಿಗೊಳಿಸಿ, ಹೋರಾಡಲು ಹುರುಪುಗೊಳಿಸುವ ಸಮ್ಮೋಹನಾಸ್ತ್ರವಿದು. ಪಶ್ಚಿಮದ ಜನಪದ ಸಾಹಿತ್ಯದ ಬ್ಯಾಲಡ್ ರಚನೆಗೆ ಇದನ್ನು ಹೋಲಿಸಬಹುದು. ಈಗಲೂ ಧಾರವಾಡ, ಹುಬ್ಬಳ್ಳಿ ಕಡೆ ತಲೆಗೆ ರಂಗಿನ ಮುಂಡಾಸು ಕಟ್ಟಿಕೊಂಡು, ಕಾಲಿಗೆ ಗೆಜ್ಜೆಕಟ್ಟಿಕೊಂಡು, ಕಡ ಹಿಡಿದುಕೊಂಡು ಲಾವಣಿಕಾರನಾದವ ತನ್ನ ಜೊತೆಗೆ ಮತ್ತೊಬ್ಬ ಅದೇ ರೀತಿ ಹಾಡುವವನನ್ನು ನಿಲ್ಲಿಸಿಕೊಂಡು ಬಲುಮೋಜಿನಿಂದ ಹಾಡುವುದುಂಟು.

ಈ ಜಾತಿಯಲ್ಲಿ ತುರಾಯಿಲಾವಣಿ ಮತ್ತು ಕಲ್ಗಿಲಾವಣಿ ಎಂಬ ಭೇದವುಂಟು. ತುರಾಯಿಯವ ತಾಳಹಾಕುವ ಕಡಕ್ಕೆ ಹೂವಿನ ಅಲಂಕಾರ ಮಾಡುತ್ತಾನೆ. ಕಲ್ಗಿಯವ ಮಣಿಯನ್ನೋ ನವಿಲುಗರಿಯನ್ನೋ ತೊಡಿಸುತ್ತಾನೆ. ತುರಾಯಿಯವ ಹರಿಭಕ್ತನಾದರೆ ಕಲ್ಗಿಯವ ಶಿವ ಹಾಗೂ ಪರಾಶಕ್ತಿಯ ಭಕ್ತ. ಚೆನ್ನಾಗಿ ಹಾಡಿದಲ್ಲಿ ಲಾವಣಿ ಮಂದಿಯ ಮನಸ್ಸನ್ನು ಹೊಡೆದು ಎಬ್ಬಿಸುವುದರಲ್ಲಿ ಸಂದೇಹವಿಲ್ಲ. **(ನೋಡಿ– ಕಲ್ಗಿ ತುರಾಯಿ)**

ಪಿರಿಯಾಪಟ್ಟಣದ ಕಾಳಗದ ಲಾವಣಿ ಚಾರಿತ್ರಿಕ ಲಾವಣಿಗೊಂದು ಉತ್ತಮ ನಿದರ್ಶನ. ವೀರರಾಜನಿಗೂ ಮೈಸೂರಿನ ದಳವಾಯಿಗೂ ನಡೆದ ಯುದ್ಧವನ್ನಿದು ವರ್ಣಿಸುತ್ತದೆ.

*ಪೆರಿಯಾಪಟ್ಟಣದ ಜಗಳವ ಹೇಳುತೀನಿ ಕೇಳಿರಣ್ಣ ನೀವ್ ಸಭೆಯಲ್ಲಾ*
*ಅರಿಯದ ಹಸುಮಗ ದಳವಾಯ್ ಹೊಂಟರು ಮಾಡಲಿಕೆ ಹಲ್ಲಾ ॥ ಪ ॥*
*ಎಂಥ ಮಾತನು ಬರದೋ ರಣಹೇಡಿ ನಾಚಿಕೆಯಿಲ್ಲವೇ ನಿನಗೆ,*
*ಮತ್ತೆ ಮದ್ದುಗುಂಡು ಸಾಲದೆ ಹೋದರೆ ಕೊಡತೀನಿ ನಿನಗೆ,*

*ವ್ಯರ್ಥ ಹಮ್ಮು ನೀ ಮಾಡಿ ಕೆಡಬೇಡ ಬಾರೊ ರಣಾಗ್ರದೊಳಗೆ ॥*
*ಸಮಸಾಟಿಯಾಗಿ ಎರಡು ಕೂಡಿತು ದಂಡು ಬೈಲಿನಾಗೆ*
*ಜಮಾಯಿಸಿ ಜಗಳ ಹತ್ತಿತು ನೋಡೊ ಕರ್ನ ಪಾರ್ಥರೀಗೆ*
*ನೇಮದಿ ಕಾದಿರುವಳು ಪೆರಿಯಪಟ್ಟಣದ ಮಾರಿ ಹೀಗೆ*
*ವೀರರಾಜಭೂಪಾಲನ ಅಗಲದೆ ಬೆನ್‌ಮ್ಯಾಗೆ*
*ತಮಾಂ ದಂಡು ಉರುಳಿ ಹೋಯಿತು ಮೂರು ಪಟಾಲಂ ದಳವಾಯ್ ಕಡೆಗೆ ॥*

ಹಲಗಲಿ ಬಂಟರ ಹತಾರದ ಕದನದ ಲಾವಣಿಯಿಂದ ಆರಿಸಿದ್ದು ಈ ಮುಂದಿನದು :

*ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿಹಿಡಿಯುವ ಜನಕ*
*ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊ ದಡಕ ॥*
*ವಿಲಾಯಿತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ*
*ಎಲ್ಲ ಜನರಿಗೆ ಜೋರಮಾಡಿ ಕಸಿದುಕೊಳ್ಳಿರಿ ಹತಾರ ।*
*ಕಾರಸಾಹೇಬ ಬೆಂಕಿ ಚೂರಾದ ಲೂಟ್ ಮಾಡಂತನೋ ಊರಾ*
*ಸಿಟ್ಟಲೆ ಹೊಡೆದರು ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾದ ಭರಪೂರಾ ।*
*ರಾಮನ ಕಡಿದ ವಿಪರೀತಾ ಕಾಲುವೆ ಹರಿತೊ ರಕ್ತಾ*
*ಸಾವಿರ ಆಳಿಗೆ ಒಬ್ಬ ಕೂಗತಾನೊ ಕಡಿ ಕಡಿರಿ ಅಂತ ಮತ್ತಾ*
*ಊರು ಊರೆ ಇಲ್ಲದಾಯ್ತು ಊರಾಗಾಯ್ತು ಅಂತ ಲೂಟಾ*
*ಮನಿಮನಿ ಹೊಕ್ಕು ದಂಡು ಹುಡಿಕಿತು, ದನಕರ ಸಹಿತ ಲೂಟಾ*
*ಕೂಸುಕುನ್ನಿ, ಹೋದಾವ ಸತ್ತು, ಬೆಂಕಿ ಹಚ್ಯಾರೊ ಕೂತ*
*ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರುತುಳಿಯಲಿಲ್ಲ ಎಳ್ಳಷ್ಟು*
*ಹಾಳಾಗಿ ಹೋಯಿತೋ ! ಅತ್ತು ವರ್ಣಿಸಿ ಹೇಳಲಿನಾನೆಷ್ಟು.*

ಲಾವಣಿಪದಗಳಲ್ಲಿ ದೇವತಾಸ್ತುತಿ, ದೇಶಪ್ರೇಮ, ಜನತೆಯ ಡೊಂಕನ್ನು ತಿದ್ದುವ ನೀತಿ, ಶೃಂಗಾರ, ವೀರ– ಇವೆಲ್ಲ ಉಂಟು.

*ಅಂಬಾ ನಿನ್ನ ನಂಬಿದೆನು ಸಂಭ್ರಮದಿ ಸಲಹುವೆ ಕುಂಭಿಣಿಯೊಳೆಡಬಿಡದೆ*
*ಅಂಬಾ ತಾಯಿ । ಹಂಬಲಿಸಿ ಅಸುರರ ಕಂದರನ ಕೈಹಿಡಿದು ಸಲಹುವೆ*
*ಶಾಂಭವಿ ಸತಿ ಮಾಯಿ । ಅರುಣ ಕಿರಣವುಳ್ಳ ಧರಣಿ ಚಾಮುಂಡಿ ನಿನ್ನ*
*ಚರಣ ಶೃಂಗಾರವ ಪೇಳುವೆನು– ಇದು ಸ್ತುತಿ.*

**ಇದು ಬಹು ಗಮ್ಮತ್ತಿನ ಶ್ರೀರಂಗಪಟ್ಟಣದ ಲಾವಣಿ :**

*ಬೇಷಕ್ ತಮಾಷಾ ಟೈಗರ್ ನಿಶಾನಾ ಟೀಪುಸುಲ್ತಾನನ ಬಿರುದಾಯ್ತು*
*ಮಸಲತ್ ಮಾಡಿದ ಮೀರ್‌ಸಾದಕನಿಗೆ ದೇಶದ್ರೋಹಿ ಎಂದ್ಹೆಸರಾಯ್ತು ॥ ಪ ॥*

*ಚಾಲ್*

*ಸ್ವರಾಜ್ಯ ರಕ್ಷಣೆಗೋಸ್ಕರ ಸುಲ್ತಾನ್ ರಣಾಗ್ರಕ್ಹೊರಟನು ರೋಷದಲಿ*
*ಪರಂಗಿ ಸೋಲ್‌ಜರ್ ಮಧ್ಯದಿ ತುರಂಗಬಿಟ್ಟನು ತತ್ವದಲಿ ।*
*ಪರಂಪರ ವಿರೋಧಿ ಫೌಜನು ಕುರಿಗಳಂದದಿ ಖಡ್ಗದಲಿ*
*ಸರಾಸರಿ ಇಲ್ ಬರೆಯಲು ಸಾಗದು ತರಿದನು ಎಷ್ಟೋ ಶಿಬಿರದಲಿ*
*ಪರಾಕ್ರಮದಿ ಬಲು ಹೋರಾಡಿ ಬಿದ್ದನು ಸಾರಂಗ ಬಾಗಿಲ ಗವಿಯ ಬಳಿ*
*ಪರಂಗಿ ಫೌಜಿನ ತರಂಗ ನುಗ್ಗಿತು ಶ್ರೀರಂಗಧಾಮನ ಪಟ್ನದಲಿ.*

ಲಾವಣಿಗಳಲ್ಲಿ ಪಲ್ಲವಿ, ಚಾಲ್ ಉಡಾನ್, ಚಿಕ್ಕಉಡಾನ್, ಶ್ಲೋಕಗಳು ಅಡಕವಾಗಿರುತ್ತವೆ. ಆದಿ ಝಂಪ, ಚಾಪು ತಾಳಗಳನ್ನು ಸರಾಗವಾಗಿ ಉಪಯೋಗಿಸಲಾಗುತ್ತದೆ. ಜನಸಾಮಾನ್ಯರಲ್ಲಿ ಬಳಕೆಯಾದ ರಾಗಗಳನ್ನೇ ಇಲ್ಲಿ ಕಾಣಬಹುದು. ಉದಾ: ಯಮನ್, ಪೀಲು ಸಿಂಧುಭೈರವಿ, ಶಂಕರಾಭರಣ, ಮಧ್ಯಮಾವತಿ, ಮೋಹನ, ಇತ್ಯಾದಿ. ಹಾಡುವ ಶೈಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗಬಹುದು. ಶ್ಲೋಕಕ್ಕೆ ತಾಳವಿಲ್ಲ. ಮಿಕ್ಕ ಚಾಲ್ ಉಡಾನ್‌ಗಳಿಗೆ ತಾಳದ ಗತಿ ಉಂಟು. ಸರ್ಜಪ್ಪನಾಯಕನ ಲಾವಣಿಯೂ ಪ್ರಸಿದ್ಧವಿದೆ. ಐದುನೂರು ಪಾಳೆಯಗಾರರ ಕುರಿತು ಲಾವಣಿಗಳಿವೆ.

**ಕೋಲಾಟದ ಪದ :** ಕೋಲು ಹಾಕಲು ಕನಿಷ್ಠ ಆರು ಜನ ಬೇಕು. ಹನ್ನೆರಡಿದ್ದರೆ ದೊಡ್ಡ ಗುಂಪು. ಕಾಲಿಗೆ ಗೆಜ್ಜೆಕಟ್ಟಿಕೊಂಡು, ಭಾಗವಹಿಸುವ ಎಲ್ಲ ಮಂದಿ ಬಣ್ಣ ಬಣ್ಣದ ಬಟ್ಟೆ ಧರಿಸಿಕೊಂಡು ಕೋಲಿನ ತಾಳಕ್ಕೆ ಸರಿಯಾಗಿ ಹಾಡುತ್ತ ಕುಣಿಯುತ್ತಾರೆ. ಮೊದಲು ಪ್ರಾರಂಭಕ್ಕೆ, ಮತ್ತೆ ಮುಕ್ತಾಯಕ್ಕೆ ಸರಿಯಾಗಿ ಕಲಿಸಿದವನ ಸಂಕೇತ ಉಂಟು. ಬಗೆಬಗೆಯ ನಡಿಗೆ, ತಿರುಗುವಿಕೆ, ದನಿಯ ಏರು ಇಳಿತ ಮಂದಗತಿ, ತೀವ್ರ ಗತಿಗಳ ವಿನ್ಯಾಸ ಉಂಟು. ಚಿಕ್ಕ ಕೋಲಾಟ, ಜಡೆಕೋಲಾಟಗಳ ಮಾದರಿಗಳು ಬೇರೆ ಬೇರೆ. ಒಬ್ಬ ಸೊಲ್ಲು ಹೇಳಿಕೊಟ್ಟಂತೆ ಮಿಕ್ಕವರು ಹಾಡುವರು. ಸಪ್ತತಾಳಗಳೂ ಜನಪ್ರಿಯವಾದ ನವರಾಗಗಳೂ ಬಳಕೆಯಲ್ಲುಂಟು.

ಕೋಲು ರನ್ನದಾ ಕೋಲನ್ನ–ಏಕೋಲು ಕೋಲು ಕೋಲನ್ನ ಅಥವಾ ತಾನು ತಾನಂದನೋ ತಂದನೋ ತಾನಾನು ತಂದನಾನೋ– ಎಂದು ತಾಳದ ಗತಿಗೆ ಹಾಡಿಕೊಳ್ಳುತ್ತಿರುವಂತೆ ಕೋಲಾಟ ಮೊದಲಾಗುತ್ತದೆ. ಉದಾ.–ಮಾತಾಡ್ ಮಾತಾಡ್ ಮಲ್ಲಿಗೆ–ಶಾವಂತಿಗೆ ಇರುವಂತಿಗೆ.

w¥ÀUÀ¼ÀAvÉAiÀÄ°è UÉ¸ÀgÀ¥À¹ PÉÆÃ¯ÁlÃVgÉ

*ಮೂಡಲ್ ಕುಣಿಗಲುಕೆರೆ ನೋಡೋಕ್ ಒಂದ್ಯೆಭೋಗ*
*ಮೂಡೀ ಬರ್ತಾನೆ ಚಂದಿರಾಮಾ–ತಾನಂದನೋ*
*ಮೂಡೀ ಬರ್ತಾನೆ ಚಂದಿರಾಮಾ*
*ಬಾಳೇಯ ಹಣ್ಣಂತೆ ಬಾಗಿದ್ ಕುಣಿಗಲ್‌ಕೆರೆ*
*ಭಾವ ತಂದನೆ ಬಣ್ಣದ್ ಸೀರೆ–ತಾನಂದನೋ*
*ಭಾವ ತಂದನೆ ಬಣ್ಣದ್ ಸೀರೆ ॥*

**ಬಂಡಿಯ ಪದ:** ಗಾಡಿಯನ್ನು ಹೊಡೆಯುತ್ತ ಎತ್ತಿಗೆ ಕಟ್ಟಿದ ಗೆಜ್ಜೆಗಳ ಹಾಗೂ ಬಂಡಿಯ ಚಕ್ರದ ದನಿಯನ್ನು ಮೀರಿ ಎತ್ತರದ ದನಿಯಲ್ಲಿ ಒಬ್ಬನೇ 'ಬೇಲೂರ ಹೆಣ್ಣೆ ಬೇಗನೆ ರಾಗಿ ಮಾಡೆ । ಕೂರಿಗೆ ನಿಂತಾವೆ ಹೊಲದಾಗೆ ಎಲೆ ಹೆಣ್ಣೆ ಜಾಣ ನಿಂತವ್ನೆ ಬಿಸುಲಾಗೆ'– ಎಂದು ಹಾಡಿ ಕೇಕೆ ಹಾಕಿದಾಗ ಮುಗಿಲು ಮಾರ್ದನಿಸುವುದು. ಬಂಡಿಪದ ಹಾಡಲು, ಹಾಗೇ ಕಪಿಲೆ ನೀರೆತ್ತುವಾಗ ಹಾಡಲು ಎಂಟು ಎದೆ ಬೇಕಾದೀತು. ಬ್ರಹ್ಮಾಂಡಕ್ಕೆ ದನಿಮುಟ್ಟುವಂತೆ ಹಾಡಿ ಕೇಕೆ ಹಾಕುವುದು ಬಂಡಿ ಪದ ಹಾಡುವವರ ಗತ್ತು.

**ಕಿನ್ನರಿ ಪದ :** ಕಿನ್ನರಿವಾದ್ಯ ಹಿಡಿದು, ಮಧ್ಯಮ ಶೃತಿಯಲ್ಲಿ ತಂತಿಮೀಟುತ್ತ ದನಿಗೂಡಿಸಿ ಬಹಳ ಇಂಪಾಗಿ ಹಾಡುವ ಪದಗಳಿವು.

*ಚೆಲುವಯ್ಯ ಚೆಲುವೋ – ತಾನಿತಂದನ್ನಾ । ಚಿನ್ಮಾಯಾರೂಪೇ  ಕೋಲೆನ್ನ ಕೋಲೇ*
*ಬೆಟ್ಟದ ಮ್ಯಾಗಳ ಜಲ್ಲೇಬಿದಿರು – ಬೇಲಿ ಮ್ಯಾಗಳ್ ಸೋರೆ ಬುರುಡೆ*
*ಲೋಲುಕಿನ್ನುರಿ ನುಡಿಸೋನ್ ಯಾರಯ್ಯ –*

ಎಂದು ಹಾಡು ಮೊದಲಾಗುತ್ತದೆ.

**ಕಂಸಾಳೆ ಪದ :** ಕೈಯಲ್ಲಿ ಕಂಚಿನ ಬಟ್ಟಲು; ಅದಕ್ಕೊಂದು ಮುಚ್ಚಳ ಹಿಡಿದುಕೊಂಡು ತಾಳ ಬಾರಿಸಿಕೊಂಡು ಬೆಟ್ಟದ ಮಾದೇಶ್ವರನ ಮೇಲೆ ಪದಗಳನ್ನು ಹೇಳುವವರು ಉದ್ದಕ್ಕೂ ಸಾಹಿತ್ಯ ಜೋಡಿಸಿಕೊಂಡು ಒಂದೇ ರಾಗದಲ್ಲಿ ಹಾಡುತ್ತಾರೆ. ಕನಿಷ್ಠವೆಂದರೆ ಮೇಳದಲ್ಲಿ ಮೂರು ಮಂದಿ ಗಂಡಸರಿರುವರು. ಒಬ್ಬಾತ ತ್ರಿಶೂಲಕ್ಕೆ ಹೂವಿನ ಅಲಂಕಾರ ಮಾಡಿ ಹಿಡಿದುಕೊಂಡಿರುತ್ತಾನೆ ; ಮತ್ತಿಬ್ಬರು ಹಾಡುತ್ತಾರೆ.

**ಕೊಡಗರ ಬೊಳ್‌ಕಾಟ:** ಕೊಡಗಿನಲ್ಲಿ ಗಂಡಸರು ಮಂಗಲದ ಸಮಯದಲ್ಲಿ ಹಾಗೂ ಹುತ್ತರಿ ಹಬ್ಬದ ಸಮಯದಲ್ಲಿ ಹತ್ತಾರು ಜನ ಸೇರಿಕೊಂಡು ಕುಣಿಯುವರು ; ಕರಿನಿಲುವಂಗಿ, ಜರತಾರಿ ನಡುಕಟ್ಟು, ತಲೆಗೆ ಬಿಳಿಜರತಾರಿ ರುಮಾಲು, ಸೊಂಟದಲ್ಲಿ ಕತ್ತಿ, ಒಂದು ಕೈಯಲ್ಲಿ ಚವರಿ– ಹೀಗೆ ತಮ್ಮ ಪಂಗಡದ ವಿಶೇಷ ಅಲಂಕಾರಗಳಲ್ಲಿರುವ ಅವರನ್ನು ಆಗ ನೋಡಲು ಸೊಗಸೆನಿಸುತ್ತದೆ. ದುಡಿಯ ದನಿಗೆ ಸರಿಯಾಗಿ ವೃತ್ತಾಕಾರದಲ್ಲಿ ನಿಂತು ಹಿಂದಕ್ಕೂ ಮುಂದಕ್ಕೂ ಅಕ್ಕಪಕ್ಕಗಳಿಗೂ ಬಳುಕಾಡುವರು. ಇದೇ ಇವರ ನೃತ್ಯ. ಕೊಡಗಿನ ಭಾಷೆಯ ಬಾಳೋ ಬಾಳೋ ಎಂಬ ಪಾಟು ಹಾಡುವರು. ದೂರಕ್ಕೆ ಆ ದನಿ ದುಂಬಿ ಗುನುಗುಟ್ಟುವಂತೆ, ಪುಂಗಿ ಬಾರಿಸಿದಂತೆ ಕೇಳುವುದು. ಪುನ್ನಾಗವರಾಳಿ, ನಾದನಾಮಕ್ರಿಯ ಮಿಶ್ರವಾಗಿರುವುದಲ್ಲದೆ ತಾಳಗತಿಯಲ್ಲಿ ತಧಿತ್ತಯ್ಯಾ, ತಧಿತ್ತಯ್ಯಾ, ತಧಿತ್ತಯ್ಯಾ ತಧಿತ್ತಾವ ಎಂಬಂತೆ ಹಾಡು ಮುಂದುವರಿಯುವುದು. ಈ ಕುಣಿತ, ಹಾಡುಗಾರಿಕೆ, ದುಡಿಯ ಬಳಕೆ ಗಂಟೆಗಟ್ಟಲೆ ನಡೆಯುವುದು.

*ಬಾಳೋ ಬಾಳೋ ನಂಗಡಾ, ಬಾಳೋ ಬಾಳೋ ಮಾದೇವ*
*ಪಾಡಿ ನೋಡಿ ಕಂಡಲ್ಲಿ ಪೊರ್ಮಾಲೆ ಕೊಡುದೇಶ*
*ಆದಿಮೂಲಾ ಲೇ ಲೇ ಲೋ ॥ – ಇದು ಒಂದು ಹಾಡಿನ ಪಲ್ಲವಿ.*

**ಗೀಗೀಪದ :** ಏಕನಾದದ ಶೃತಿಗೆ ಕಥನಕವನವನ್ನೋ ಸಂತರ, ವೀರರ ಕಥೆಯ ಹಾಡನ್ನೋ ಇಬ್ಬರು ಕೂಡಿ ಹಾಡುವರು. ಪ್ರತಿ ಚರಣ ಮುಗಿದೊಡನೆ ಗೀಗೀ ಗೀಗೀ ಎಂದು ತಾಳಕ್ಕೆ ಸರಿಯಾಗಿ ಶೃತಿಗೂಡಿಸುವರು. ತೆಲುಗಿನಲ್ಲಿ ತಂದ ನಾನು ತಂದಾನುತಾನಾ ಎನ್ನುವರು. ಇಡೀ ರಾತ್ರಿ, ಮಲೆನಾಡಿನ ಅಡಕೆತೋಟದ ಪ್ರದೇಶಗಳಲ್ಲಿ ಮನೋರಂಜನೆಯಾಗಿ ಈ ಪದ ಹಾಡುವುದು ವಾಡಿಕೆ. ಮರಾಠಿಯಲ್ಲೂ ಇಂಥ ಪದಗಳಿವೆ.

**ಗೊಂದಲ:** ಮಲೆನಾಡಿನಲ್ಲಿ ಹಾಗೂ ಉತ್ತರ ಕರ್ನಾಟಕದ ಕರೆನಾಡಲ್ಲಿ ಭವಾನಿ ದೇವಿಯ ಭಕ್ತರು ಗೊಂದಲದ ಪದ ಹಾಡಿಸುವ ವಾಡಿಕೆಯಿದೆ. ಅಂಬಾ ಭವಾನಿ ಪೂಜೆ ನಡೆದಾಗ ಇಡೀ ರಾತ್ರಿ ಗೊಂದಲ ನಡೆಸುವರು. ಗೊಂದಲದವರ ಪಕ್ಕವಾದ್ಯ ಚೌಡಿಕೆಯಂತಿರುತ್ತದೆ. ತಾಮ್ರದ ಕೊಳಗಕ್ಕೆ ನರದ ತಂತಿ ಕಟ್ಟಿ ಅದನ್ನು ಥೊಯ್ ಥೊಯ್ ಎಂದು ಮೀಟುತ್ತ ದೇವಿಯ ಸ್ತುತಿರೂಪವಾದ ಪದಗಳನ್ನು ಅವರು ಹಾಡುತ್ತಾರೆ. ಗೊಂದಲ ಹಾಕುವವರು ಗಂಡಸರು. ಕಂಬಳಿ ಹೊದ್ದು ಕವಡೆ ಹಾರ ಹಾಕಿಕೊಂಡು, ಮುಖಕ್ಕೆ ಭಂಡಾರ ಕುಂಕುಮ ಹಚ್ಚಿಕೊಂಡು, ತಲೆಗೆ ಕರಡಿ ಚರ್ಮದ ಟೊಪ್ಪಿಗೆ ಹಾಕಿಕೊಂಡು ಸಿದ್ಧರಾಗುವ ಗೊಂದಲದವರ ವೇಷ ವಿಚಿತ್ರವಾಗಿರುತ್ತದೆ. ಗೊಂದಲ

ಮರಾಠಿ ಭಜನೆಯನ್ನು ಹೋಲುತ್ತದೆ. ವಾದ್ಯದ ನಾದ, ಪದಗಳ ಗುಂಗು, ತಾಳ, ಕುಣಿತ– ಎಲ್ಲ ಸೇರಿದಾಗ ಹಾಡುವವರಿಗೂ ನೋಡುವವರಿಗೂ ಭಕ್ತಿಯ ಆವೇಶ ಬಂದಂತಾಗುತ್ತದೆ.

ಪಾಡ್ದನ ಮತ್ತು ಓಬೇಲೆ ಪದ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷೆಯಲ್ಲಿ ಭೂತನನ್ನು ಕುರಿತು ಹಾಡುವ ಪದಗಳಿವು. ಸಾವಿನ ಸಮಯದಲ್ಲೂ ಹಾಡುವುದಿದೆ. ಹಾಡುವವರು ಭೂತ ಮೈಮೇಲೆ ಬಂದಂತೆ ಭಯಾನಕವಾಗಿ ಕುಣಿಯುತ್ತ ದನಿ ಗೈಯ್ಯುವರು. ಓಬೇಲೆ ಪದಗಳನ್ನು ನೇಜಿ (ನೆಲ್ಲು) ನೆಡುವಾಗ ಹೆಣ್ಣು ಮಕ್ಕಳು ಹಾಡುವ ವಾಡಿಕೆ. ದೋಣಿ ನಡೆಸುವಾಗಲೂ ಬಂದರಿನಲ್ಲಿ ಸಾಮಾನು ಹೊರುವಾಗಲೂ ಓಬೇಲೆ ಹಾಗೂ ಐಸಾ ಪದಗಳನ್ನು ಸಾಮಾನ್ಯವಾಗಿ ಹಾಡುತ್ತಿರುತ್ತಾರೆ.

**ತ್ರಿಪದಿ :** ಹಳ್ಳಿಯ ಪದಗಳಲ್ಲಿ ತ್ರಿಪದಿಯ ಸ್ಥಾನ ಮಹತ್ತ್ವದ್ದು. ಹೆಣ್ಣು ಮಕ್ಕಳ ಹಾಡುಗಳಲ್ಲಿ ಬಹುಭಾಗ ಈ ಮಟ್ಟಿನಲ್ಲಿದೆ. ಹಾಲು ಜೇನು ಸುರಿದಂತೆ ಇದರ ಸವಿ. ಮಲ್ಲಿಗೆ ಮೊಗ್ಗು ಅರಳಿದಂತೆ ಇದರ ಪರಿಮಳ. ಮೂರೇ ಪಾದಗಳು ಕಂಡರೂ ಹಾಡುವಾಗ ನಡುವಿನ ಪಾದದ ಪುನರಾವರ್ತನೆಯಿಂದ ತ್ರಿಪದಿಗೆ ನಾಲ್ಕು ಪಾದಗಳಾಗುತ್ತವೆ. ಕುಟ್ಟುವಾಗ, ಬೀಸುವಾಗ, ಜೋಗುಳ ಹಾಡುವಾಗ, ಪೂಜೆ ಮಾಡುವಾಗ, ಜೀವನದ ರಸಸಮಯಗಳಲ್ಲಿ ತ್ರಿಪದಿಯ ಹಾಡುಗಳನ್ನು ಜನ ಬಳಸುತ್ತಾರೆ. ಒಬ್ಬರೋ ಇಬ್ಬರೋ ಹಲವರೋ ಹಾಡುವುದು ಉಂಟು. ರಾಗಗಳು ಒಂದೊಂದು ಕಡೆ ಒಂದೊಂದು ರೀತಿಯವಾಗಿರುತ್ತವೆ. ದಕ್ಷಿಣಾದಿ ಸಂಗೀತದ ಮಧ್ಯಮಾವತಿ, ಕಾಂಭೋಧಿ, ಆನಂದ ಭೈರವಿ, ನಾದನಾಮಕ್ರಿಯೆ, ನವರೋಜು ರಾಗಗಳು ಬಳಕೆಯಲ್ಲಿವೆ. ಆದರೂ ಎಲ್ಲಿಯೂ ಶಾಸ್ತ್ರೀಯ ಸಂಗೀತದ ಛಾಯೆ ಕಾಣದು. ದನಿಯಲ್ಲಿ ಎಳೆತದಲ್ಲಿ ತಾಳಲಯಗಳಲ್ಲಿ ದೇಸಿಯ ಸೊಗಡೇ ಹೆಚ್ಚು. ಇಡೀ ಕನ್ನಡ ನಾಡಿನಲ್ಲೆಲ್ಲ ತ್ರಿಪದಿಯ ಬೆಳೆ ಹುಲುಸಾಗಿ ಹಬ್ಬಿದೆ. ನಾಡು ನುಡಿ ಒಂದೇ ಎಂಬುದಕ್ಕೆ ತ್ರಿಪದಿಯೂ ಒಂದು ಆಧಾರ. ಇದರ ಸಾಹಿತ್ಯ ಮತ್ತು ಸಂಗೀತ ಹಿಂದಿನ ಮತ್ತು ಇಂದಿನ ಉತ್ತಮ ಕವಿಗಳಿಗೆ ಸ್ಫೂರ್ತಿ ಕೊಟ್ಟಿದೆ.

*ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ*
*ಮೊಗ್ಗಾಗಿ ಕಣ್ಣ ತೆರದಾನ– ಲಿಂಗಯ್ಯನ*
*ನೋಡುತಲೆ ನಿದ್ದಿ ಬಯಲಾದೊ*

*ಮುಂಗೋಳಿ ಕೂಗ್ಯಾವು ಮೂಡುಕೆಂಪೇರ್‍ಯಾವು*
*ನಾರಾಯಣಸಾಮಿ ರಥವೇರಿ–ಬರುವಾಗ*
*ನಾವೆದ್ದು ಕೈಯಾ ಮುಗಿದೇವು*

*ಹೊತ್ತು ಮುಳುಗಿದರೇನು ಕತ್ತಲಾದರೇನು*
*ಅಪ್ಪನಿನ ಗುಡಿಗೆ ಬರುವೇನು–ಮಾದಯ್ಯ*
*ಮುತ್ತಿನ ಬಾಗಿಲ ತೆರದೀರು.*

**ಮದುವೆಯ ಹಾಡುಗಳು:** ಮದುವೆಯ ಸಂದರ್ಭದಲ್ಲಿನ ಎಣ್ಣೆಯೊತ್ತುವ ಹಾಡು, ಉರುಟಣೆ ಹಾಡು, ಸೋಬಾನೆ ಪದ, ಬೀಗಿತ್ತಿ ಹಾಸ್ಯದ ಪದಗಳು, ಆರತಿ ಪದಗಳು ಹೇರಳವಾಗಿ ಬಳಕೆಯಲ್ಲಿವೆ. ಇವಕ್ಕೆ ಒಂದೊಂದು ಉದಾಹರಣೆ ನೋಡಬಹುದು.

ಎಣ್ಣೆಯೊತ್ತುವ ಪದ :
*ಎಣ್ಣೆಯನ್ನೊತ್ತಿದರು–ರಘುಕುಲತಿಲಕಗೆ*
*ದಶರಥ ಸುತನಿಗೆ–ಧರ್ಮ ಪರಿಪಾಲನಿಗೆ*
*ನಿರ್ಮಲರೂಪ ಶ್ರೀರಾಮಚಂದ್ರನಿಗೆ*

ಉರುಟಣೆ ಹಾಡು:
*ಉರುಟಾಣೆ ಹೇಳೊ ಹರಿಯೆ ಉರಗಶಯನದೊರೆಯೆ*
*ನಂದಗೋಪಿ ಕುಮಾರ, ನತ ಜಗದುದ್ಧಾರ*
*ನಂದನಂದನ ಸಿಂಧುಶಯನ ನೀಬಾರೊ*
*ಬಂದಿರುವೆನು ಮಂಟಪದೊಳು–ಮರದಿಂದಲಿ*

ಸೋಬಾನೆ ಪದ:
*ಬಾಳೆಯಾ ಮರದ ಕೆಳಗೆ ಬಾವನ ಮಗಳು ಮೈನೆರೆದಳು*
*ನಿಂಬಿಯ ಮರದ ಕೆಳಗೆ ರಂಭೆ ಮೈನೆರೆದಳು*
*ಸೋಬಾನವೇ ಸೋಬಾನವೇ.*

**ತಿಂಗಳುಮಾವನ ಪದ** : ಹುಣ್ಣಿಮೆ ಹಬ್ಬದ ರಾತ್ರಿ ಬೆಳುದಿಂಗಳ ಆನಂದದಲ್ಲಿ ಕೂಡಿಕೊಂಡು ಹೆಣ್ಣುಮಕ್ಕಳು ಕೈ ಕೈ ಹಿಡಿದುಕೊಂಡು ಗರಗರನೆ ಸುತ್ತು ತಿರುಗುತ್ತ ಈ ಪದಗಳನ್ನು ಹಾಡುವರು.

*ತಿಂಗಳು ತಿಂಗಳಿಗೆ ತಿಂಗಳು ಮಾವನ ಪೂಜೆ*
*ಗರುಡನ ಪೂಜೆ ಗನಪೂಜೆ–ಕೋಲು ಮಲ್ಲಿಗೆ ಕೋಲೆ*
*ತಿಂಗಳು ಮಾವನಿಗೆ ನಿನ ಪೂಜೆ ಗಂಗೆ ದಡದಾಗೆ*
*ತಿಂಗಳು ಮಾವನ ತಂಗೇರೇಳು ಮಂದಿ*
*ಬಂಗಾರದೋಲೆ ಬಳೆಯೋರು–ಕೋಲು ಮಲ್ಲಿಗೆ ಕೋಲೆ*
*ಹೊಂದೇರ್ ಹಕ್ಕಿ ಬಂದಾವಕ್ಕ ಗರಗರನಾಡಿ ನಿಂದಾವಕ್ಕ*
*ಕಾಮಾನೂರಾ ಹೋಳಿಯಿಂದಾ ಕುಂತು ನಿಂತು ಬರುತ್ತಿದ್ದ*
*ಕಾಮನ್ ಯಾರೇ ತಡೆದೋರು*
*ಭೀಮನ್ ಯಾರೇ ತಡೆದೋರು*
*ಬಾರಯ್ಯ ಬೆಳುದಿಂಗಳೇ ನಮ್ಮೂರ ಹಾಲಿನಂಥ ಬೆಳುದಿಂಗಳೇ.*

**ಮಾನವಮಿ ಪದ** : ನವರಾತ್ರಿ ನಾಡಹಬ್ಬದಲ್ಲಿ ಮಕ್ಕಳು ಹರಕೆ ಪದ ಹಾಡುವ ಸಂಪ್ರದಾಯ ಹಿಂದಿನಿಂದ ಬಂದಿದೆ. ಚೌಪದಿಯಲ್ಲಿ ನಾಲ್ಕು ಸಾಲು ಬರುತ್ತದೆ.

*ಆಶ್ವೀಜ ಶುದ್ಧ ಮಾನವಮಿ ಬರಲೆಂದು*
*ಲೇಸಾಗಿ ಹರಸಿದೆವು ಬಾಲಕರು ಬಂದು*
*ಈಶ ನಿಮಗಧಿಕ ಸೌಖ್ಯ ಕೊಡಲೆಂದು*
*ಶಾಶ್ವತದಿ ಹರಸಿದೆವು ನಾವಿಂದು ಬಂದು.*
*ಮಳೆ ಹೊಯ್ದು ಬೆಳೆಬೆಳೆದು ಇಳೆ ತಣಿಯಲೆಂದು*
*ತಿಳಿಗೊಳಗಳುಕ್ಕಿ ಗೋಗಳು ಕರೆಯಲೆಂದು*
*ನಳಿನಮುಖಿಯರು ಸುಪುತ್ರರ ಪಡೆಯಲೆಂದು*
*ಇಳೆಯೊಳಗೆ ಹರಿಸಿದೆವು ಬಾಲಕರು ಬಂದು*

ಅಂತೂ ಲಾವಣಿ, ತ್ರಿಪದಿಗಳು ಹಳ್ಳಿಯ ಹಾಡಿನಲ್ಲಿ ಮಹತ್ತ್ವದ ಸ್ಥಾನ ಪಡೆದಿವೆ. ಹೀಗೆಯೆ ಸಾಂಗತ್ಯ ಮತ್ತು ರಗಳೆಗಳಿಗೂ ಜನಪದ ಸಂಗೀತವೇ ಮೂಲವಾಗಿದ್ದಿರಬಹುದು. ಅಲ್ಲದೆ ಶ್ರಮಜೀವಿಗಳ ಹಾಡುಗಳು, ಹಂತಿ ಪದ, ಡೊಳ್ಳು ಪದ, ಮದುವೆ ಹಾಡು, ಜುಂಜಪ್ಪನ ಪದ, ಸುಪ್ಪಿ ಪದ, ಲಾಲಿ ಪದ, ಉತ್ತರೆ ಮಳೆ ಹಾಡು, ಕೊರವಂಜಿ ಹಾಡು, ಕಣಿ ಹೇಳೋ ಹಾಡು, ಹಚ್ಚೆ ಕಟ್ಟಿಸಿಕೊಳ್ಳುವ ಹಾಡು– ಈ ಮೊದಲಾದವೂ ಇವೆ. ಜಾತ್ರೆ ಮತ್ತು ಪರಿಷೆಯ ಮಹಾಮೇಳಗಳಲ್ಲಿ ಕೊಂಬು, ಕಹಳೆ, ಉರುಮೆ, ಡೊಳ್ಳು, ಮದ್ದಲೆ, ಕರಡೆ ವಾದ್ಯಗಳ ಸೊಲ್ಲು ಮುಗಿಲು ಮುಟ್ಟುತ್ತದೆ. ಅವಕ್ಕೆ ಅನುಸರಿಸಿ ಜನ ಹಾಡುತ್ತಾರೆ, ಕುಣಿಯುತ್ತಾರೆ ; ನಂದಿಕೋಲು ಕುಣಿಸುತ್ತಾರೆ; ಮನಬಂದಂತೆ ಪದ ಹಾಡುತ್ತಾರೆ ; ಜಯಕಾರ ಮೊಳಗಿಸುತ್ತಾರೆ.

**ಕಥನಗೀತಗಳು :** ನಾಡಿನ ವೀರಾಗ್ರಣಿಗಳ ಹಾಗೂ ವೀರಮಾತೆಯರ ಮಹಾತ್ಯಾಗಜೀವಿಗಳ ಚರಿತೆಯನ್ನು ಸುಲಭವಾಗಿ ಹಾಡುವಂತೆ ರಚನೆ ಮಾಡಿದ್ದಾರೆ. ಅದರಲ್ಲಿ ಕೆರೆಗೆ ಹಾರ ಎಂಬ ನೀಳ್ಗವನದಲ್ಲಿ ಕರುಣರಸ ಮಡುಗಟ್ಟಿ ನಿಂತಿದೆ. ಒಂದು ಹಳ್ಳಿಯ ಮಲ್ಲನಗೌಡರು ಕೆರೆ ಕಟ್ಟಿಸಿದಾಗ ನೀರು ನಿಲ್ಲಲಿಲ್ಲ. ಬಲಿ ಕೊಡಬೇಕೆಂದು ಜೋಯಿಸರು ಸಲಹೆ ಕೊಟ್ಟರು. ಕಿರಿಯ ಸೊಸೆ ಭಾಗೀರಥಿ ಮುಂದೆ ಬಂದು ಕೆರೆಗೆ ಆಹಾರವಾಗುತ್ತಾಳೆ. ಗಂಗೆ ಒಡಮೂಡುತ್ತಾಳೆ. ಅಂಥ ಹೆಂಡತಿಯನ್ನು ಕಳೆದುಕೊಂಡ ಗಂಡನೂ ಪ್ರಾಣಾರ್ಪಣೆ ಮಾಡುತ್ತಾನೆ.

*ಸಾವಿರ ಕೊಟ್ಟರೂ ಸಿಗಲಾರದ ಸತಿ ನೀನು*
*ಬಿಟ್ಟನು ಕಣ್ಣೀರ, ಹಾರಿದ ಕೆರೆ ನೀರಿನಾಗ.*

ಈ ಪದ ಖಂಡಜಾತಿ ಚಾಪು ತಾಳದಲ್ಲಿದೆ. ಏಕನಾದದ ಜೊತೆಯಲ್ಲಿ ಹಾಡಿದರೆ ಬಹು ಸ್ವಾರಸ್ಯವಾಗಿರುತ್ತದೆ.

ಕೆರೆಗೆ ಹಾರದಂತೆಯೇ ಗೋವಿನ ಕಥೆ ಮತ್ತೊಂದು ಅಮರವಾದ ಪದ

*ಧರಣಿ ಮಂಡಲ ಮಧ್ಯದೊಳಗೆ, ಮೆರೆಯುತಿಹ ಕರ್ನಾಟದೇಶದಿ*
*ಇರುವ ಕಾಳಿಂಗನೆಂಬ ಗೊಲ್ಲನ ಪರಿಯ ನಾನೆಂತು ಪೇಳ್ವೆನು*
*ಕೊಟ್ಟ ಭಾಷೆಗೆ ತಪ್ಪಲಾರೆನು । ಕೆಟ್ಟ ಯೋಚನೆ ಮಾಡಲಾರೆನು*
*ನಿಷ್ಠೆಯಿಂದಲಿ ಪೋಪೆನಲ್ಲಿಗೆ । ಕಟ್ಟಕಡೆಗಿದು ಖಂಡಿತ*
*ಸತ್ಯವೆಂಬುದು ತಾಯಿತಂದೆ, ಸತ್ಯವೆಂಬುದು ಬಂಧುಬಳಗವು*
*ಸತ್ಯವಾಕ್ಯಕ್ಕೆ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು.*

ಪುಣ್ಯಕೋಟಿ ಎಂಬ ಗೋವು ಹುಲಿರಾಯನಿಗೆ ಭಾಷೆ ಕೊಟ್ಟು, ಅದರಂತೆ ನಡೆದು ಹುಲಿರಾಯನನ್ನು ಸೋಲಿಸಿದ ಕಥೆಯಿದು.

ದಾಸರಪದ ಮತ್ತು ವಚನಗಳೂ ಜನಪ್ರಿಯವಾಗಿ ನಾಡಿನಲ್ಲೆಲ್ಲ ಹಬ್ಬಿವೆ ; ವೇದ, ಪುರಾಣಗಳ ತಿರುಳನ್ನು ತಿಳಿಗನ್ನಡದಲ್ಲಿವು ಸಾರಿವೆ. ಹಾಡಿಕೊಳ್ಳಲು ಯೋಗ್ಯವಾಗಿವೆ. ಇವುಗಳ ಹಾಡುಗಾರಿಕೆಯೇ ಒಂದು ಬಗೆಯ ಸಂಪ್ರದಾಯವಾಗಿದೆ. ರಾಗ, ಭಾವ, ಲಯ ಪ್ರಧಾನವಾದ ಇವಕ್ಕೆ ಸಂಗೀತದಲ್ಲೂ ಸಾಹಿತ್ಯದಲ್ಲೂ ಹಿರಿಯ ಸ್ಥಾನವೇರ್ಪಟ್ಟಿದೆ.

*ಆವ ಕುಲವಾದರೇನು ಆವನಾದರೇನು*
*ಆತ್ಮಭಾವ ಅರಿತಮೇಲೆ ಮನುಜಾ*
*ತಲ್ಲಣಿಸದಿರು ಕಂಡ್ಯ ತಾಳು ಮನವೆ*

*ಎಲ್ಲರನು ಸಲಹುವನು ಇದಕ್ಕೆ ಸಂಶಯ ಬೇಡ*
*ದಯವಿಲ್ಲದ ಧರ್ಮ ಆವುದಯ್ಯ*
*ದಯವೇ ಬೇಕು ಸಕಲ ಪ್ರಾಣಿಗಳಲ್ಲಿ*
*ದಯವೇ ಧರ್ಮದ ಮೂಲವಯ್ಯ*

**ಯಕ್ಷಗಾನ :** ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಒಂದು ಪ್ರದರ್ಶನ ಕಲೆಯಿದು. ರಾಮಾಯಣ, ಭಾರತ, ಭಾಗವತ, ಪುರಾಣಗಳಿಂದ ಆರಿಸಿದ ಸಂದರ್ಭಗಳನ್ನು ಪ್ರಸಂಗಗಳಿಗೆ ಅಳವಡಿಸಿಕೊಂಡಿದ್ದಾರೆ. ಇದರಲ್ಲಿ ಸಂಗೀತ, ನೃತ್ಯಗಳೇ ಹೆಚ್ಚು. ಮಾತುಗಾರಿಕೆಯೂ ಉಂಟು. ಸಂಗೀತ, ಕುಣಿತ, ವಚನಗಳು–ಪ್ರಸಂಗದ ಮೂರು ಮುಖ್ಯ ಅಂಶಗಳು. ದಕ್ಷಿಣಾದಿ ಸಂಗೀತಶಾಸ್ತ್ರ ಸಂಪ್ರದಾಯದ ಘನರಾಗಗಳನ್ನೇ ಹೆಚ್ಚಾಗಿ ಬಳಸುವರು. ನಾಟಿ, ಮೋಹನ, ಆನಂದಭೈರವಿ, ಶಂಕರಾಭರಣ, ಬೇಹಾಗ್, ಬೇಗಡೆ, ಕಾನಡ, ಸುರಟಿ, ಕೇದಾರಗೌಳ, ಸಿಂಧುಭೈರವಿ, ನಾದನಾಮ ಕ್ರಿಯ, ಮುಖಾರಿ ಮೊದಲಾದ ರಾಗಗಳು ಬಳಕೆಯಲ್ಲಿವೆ. ಬೇರೆ ಬೇರೆ ಪ್ರದೇಶಗಳಲ್ಲಿ ಶೈಲಿಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಪ್ರಸಂಗದಲ್ಲಿ ಭಾಗವತರು ಬಹಳ ಮುಖ್ಯ. ಅವರೇ ಪ್ರಸಂಗವನ್ನು ನಡೆಸಿಕೊಡುವ ಸೂತ್ರಧಾರರು. ನಾಂದಿ ಹಾಡುಗಳು, ಭರತವಾಕ್ಯ– ಎಲ್ಲ ಅವರವೇ. ಜಾಗಟೆ ಬಡಿದು ಅವರು ಹಾಡಿನ ಗತಿ ತೋರಿಸುತ್ತಾರೆ. ಮದ್ದಲೆಯವನು ಮದ್ದಲೆ ಬಾರಿಸುತ್ತಾನೆ. ಹಿಂದೆ ಶೃತಿಗೆ ಚಿಟ್‌ಮೇಳ, ಪುಂಗಿಗಳನ್ನು ಉಪಯೋಗಿಸುತ್ತಿದ್ದರು. ಈಗ ಹಾರ್ಮೋನಿಯಂ ಪೆಟ್ಟಿಗೆ ಇಟ್ಟುಕೊಳ್ಳುತ್ತಾರೆ. ಇಡೀ ರಾತ್ರಿ ಯಕ್ಷಗಾನ ಪ್ರಸಂಗ ನಡೆಯುತ್ತದೆ. ಅರುಣೋದಯಕ್ಕೆ ಸರಿಯಾಗಿ ಮಂಗಳ ಹಾಡುತ್ತಾರೆ. ಯಕ್ಷಗಾನ ಕಲೆಗೊಂದು ಶಾಸ್ತ್ರೀಯ ಬುನಾದಿ ಉಂಟು. ಹತ್ತಾರು ವರ್ಷ ಅದನ್ನು ಅಭ್ಯಾಸ ಮಾಡುವವರಿದ್ದಾರೆ. ಕಲೆಗಳಲ್ಲೆಲ್ಲ ಇದು ಬಹು ತೂಕವಾದುದೆಂಬುದು ನಿರ್ವಿವಾದವಾದ ಅಂಶ.

ಯಕ್ಷಗಾನದ ಒಂದು ರೂಪವಾದ ತಾಳ ಮದ್ದಲೆಯಲ್ಲಿ ಪಾತ್ರಧಾರಿಗಳು ರಂಗಮಂಟಪದಲ್ಲಿ ಕುಳಿತು ವೇಷಭೂಷಣ ಮತ್ತು ನೃತ್ಯಗಳಲ್ಲದೆ ಪ್ರಸಂಗವನ್ನು ಮಾತ್ರ ನಡೆಸಿಕೊಡುವರು. ಭಾಗವತರು, ಹಿಮ್ಮೇಳದವರು ಬಯಲಾಟದಲ್ಲಿನಂತೆ ಇರುವರು ; ಅರ್ಥಧಾರಿಗಳು ಸಮಯಸ್ಫೂರ್ತಿಯಿಂದ ಮಾತಾಡುವರು. ಅನೇಕ ಕಡೆ ಪಾತ್ರಧಾರಿಗಳ ಬುದ್ಧಿವಂತಿಕೆ ಎದ್ದು ಕಾಣುವುದು. ವಾಕ್‌ಚಾತುರ್ಯ, ಆಶುಭಾಷಣಗಳೂ ಉಂಟು. ಹಲವೇಳೆ ವಾಗ್ಯುದ್ಧಗಳಾಗುತ್ತವೆ. ಈ ಕಲೆ ಸಾವಿರ ವರ್ಷದಿಂದಲೂ ಬೆಳೆದುಬಂದಿದೆ.

**ಹಾಸ್ಯದ ಪದ :** ಅಸಂಬದ್ಧ ಪ್ರಲಾಪವಾದಾಗ ನಗು ಸಹಜ. ಹೀಗೆ ನಗು ಉಕ್ಕಿಸುವ ಹಾಡುಗಳಿಗೆ ಜನಪದ ಸಾಹಿತ್ಯದಲ್ಲಿ ಕೊರತೆಯೇನಿಲ್ಲ.

*ಸುಳ್ಳೂ ನಮ್ಮಲಿಲ್ಲ ಸುಳ್ಳೇ ನಮ್ಮನಿ ದೇವರು*
*ಗೊದ್ದ ಗೋಡೆ ಹಾಕಿದ್ ಕಂಡೆ ; ಬೆಕ್ಕು ರೊಟ್ಟಿ ತಟ್ಟಿದ್ ಕಂಡೆ ;*
*ಮೆಣಸಿಕಾಯಿ ಕಂಡೆ ನಕ್ಕ ಮನಸ್ ತೋರಾವಾ*
*ಕೋಳಿ ಕೋಟೆ ಗೆದ್ದದ್ ಕಂಡೆ ; ಹಕ್ಕಿ ಕಂಬ್ಳಿ ನೇಯೋದ್ ಕಂಡೆ ;*
*ಅವರೆ ಕಂಡೇನಕ್ಕ ಆನೇಗಾತ್ರವಾ ;*
*ಮತ್ತೆ ಪಾರಿವಾಣ ಕೋರಿ ಹುಳು ಚಿಕ್ಕಾಟನ ಮೇಲ್*
*ಸಬರ್‌ಹಾಕಿ ಮಲೆನಾಡು ಮಲದೇಶ ತಿರುಗಿ ತಾನು ತಂದು ಕೊಟ್ಟಿತು ಸಣ್ಣಕ್ಕಿ*
*ಹಾಳಿಹದ್ದು ಬಂದು ಹೋಳಿಗಿ ಮಾಡಿತು ಬಹಳ ಬಹಳ ಹೂರಣಹಾಕಿ*
*ಮೀನು ಬಂದು ಖುರುಬಾನ ಬಸ್ತಿತು. ನೊಣ ಬಂದು ಅರಸಿಣ ಹಚ್ಚಿತು.*
*ಬೆಕ್ಕು ಬಾಸಿಂಗ ಕಟ್ಟಿತು; ಕಟ್ಟಿರುವೆ ಕಂಕಣ ಕಟ್ಟಿತು.*
*ಇರುವೆ ಬಂದು ನೀರ ಬಡಿಸಿತು; ಇಲಿ ಬಂದು ಎಲೆ ಅಡಿಕೆ ಕೊಟ್ಟಿತು.*

ಮತ್ತೊಂದು ಪದದಲ್ಲಿ ಕಿವುಡನ ಕೂಡೆ ಸರಸದ ಒಂದು ಪ್ರಸಂಗ ಬರುತ್ತದೆ :

*ಚಪ್ಪರದೊಳಗೊಬ್ಬ ಕೆಪ್ಪನ ನೋಡಿ ತಪ್ಪದೆ ಮಾತಾಡಿದ ದನಿಗೂಡಿ*
*ನಾಮಾಂಕಿತವೇನಯ್ಯ, ನಿಮಗೆ ? ಸೋಮವಾರ ಒಪ್ಪತ್ತಯ್ಯ ನಮಗೆ.*
*ಅವಧಾನಂಗಳಿಗಾವೂರಾಯ್ತು ? ದವಸವು ನಮ್ಮಲಿ ಬಹು ಬೆಲೆಯಾಯ್ತು.*
*ಹೆಂಡರುಮಕ್ಕಳು ಎಲ್ಲಿದ್ದಾರೆ ? ಪಂಡಿತರಾಸ್ತಿಗೆ ಕ್ರಯಗಳೆ ಬೇರೆ.*
*ಎಣ್ಣೂರಿಗೆ ತರಿಸಲೆ ನಿಮಗೆ ? ಕನ್ನಿಕೆ ನೆರೆದೊ ಚಿನ್ನದ ಹಾಗೆ.*
*ಚೆನ್ನಾಗಿದೆಯ ಹುಣಸೆ ಸಾರು ? ಚನ್ನಯ್ಯನ ಅಂಗಡೀಲ್ ಕಡಿಮೆ ಸೇರು.*
*ಬಾಳೆಹಣ್ಣಿನ ಸೀಕರಣೆ ಬೇಕೆ ? ಸೂಳೇರಾಟ ಇನ್ಯಾತಕೆ ನಮಗೆ ?*
*ಕೆಪ್ಪರ ಕೂಟ ಮಾತೇ ಹೀಗೆ !*

**ಮಕ್ಕಳ ಹಾಡು :** ಶಿಶುಸಾಹಿತ್ಯದ ರಚನೆ ಬಹಳ ಕಷ್ಟ ಹಾಡೂ ಅಷ್ಟೆ ಸಣ್ಣದಾಗಿರಬೇಕು. ಕಂಠಪಾಠ ಮಾಡುವಂತಿರಬೇಕು, ಮಹಾಪ್ರಾಣಾಕ್ಷರಗಳು, ಒತ್ತಕ್ಷರಗಳು ಹೆಚ್ಚಿಗಿರಬಾರದು. ಅವರು ಆನಂದಪಟ್ಟು ಕುಣಿಯುತ್ತ ಹಾಡುವಂತಿರಬೇಕು. ಇದರಲ್ಲೂ ಹಳ್ಳಿಯವರು ಹಿಂದೆ ಬಿದ್ದಿಲ್ಲ. ಶರಣು ಶರಣುವಯ್ಯ ಗಣನಾಯ್ಕ ನಮ್ಮ ಕರುಣದಿಂದಲೆ ಕಾಯೊ ಗಣನಾಯ್ಕ ; ಎಳ್ಳುಂಡೆ ಜೇನುತುಪ್ಪ ಗಣನಾಯ್ಕ ನಮ್ಗೆ ವಿದ್ಯಾವ ಕಲಿಸಯ್ಯ ಗಣನಾಯ್ಕ– ಎಂಬ ಗಣಪತಿಯ ಕೋಲಾಟದ ಪದವನ್ನು ಯಾವ ಮಗುತಾನೆ ಹಾಡಲು ಒಲ್ಲೆ ಅನ್ನುತ್ತದೆ !

ಆಂಗ್ಲರ ಶಿಶು ಪ್ರಾಸಕ್ಕೆ (ನರ್ಸರಿ ರೈಮ್) ಸಮನಾದ ಮತ್ತೊಂದು ಪದ : ಇದು ಕುಟ್ಟುವಾಗ ಹೇಳುವ ಹಾಡಾದರೂ ಶಿಶುಗಳಿಗೆ ಪ್ರಿಯವಾಗಿದೆ.

ಎಂದೂ ಬಾರದ ಮಳೆ ಬಂದಿತಣ್ಣ. ಮಳೆ ಬಂದಿದ್ದ ಕಂಡು ಚಿಗುರೊಡೆದಿದ್ದಿತಣ್ಣ. ಚಿಗುರೊಡೆದಿದ್ದ ಕಂಡು ಬೀರಪ್ಪ ಕುರಿಗಳ ಬಿಟ್ಟನಣ್ಣ. ಬೀರಪ್ಪ ಕುರಿಗಳ ಬಿಟ್ಟಿದ್ದ ಕಂಡು ಮಾಳವ್ವ ಹಿಟ್ಟಿನ್ ಮುದ್ದೆ ಹೊತ್ತಳಣ್ಣ ; ಮಾಳವ್ವ ಹಿಟ್ಟಿನ್ ಮುದ್ದೆ ಹೊತ್ತಿದ್ದ ಕಂಡು ಬೀರಪ್ಪ ಉಣ್ಣಲಿಕೆ ಕುಂತನಣ್ಣ ; ಬೀರಪ್ಪ ಉಣ್ಣಲಿಕೆ ಕುಂತಿದ್ದ ಕಂಡು ತೋಳಪ್ಪ ಕುರಿಗಳ ಕದ್ದನಣ್ಣ. ತೋಳಪ್ಪ ಕುರಿಗಳ ಕದ್ದಿದ್ದ ಕಂಡು ಬೀರಪ್ಪ ದೊಣ್ಣೆ ತೆಕ್ಕೊಂಡು ಹೊಂಟನಣ್ಣ ; ಬೀರಪ್ಪ ದೊಣ್ಣೆ ತಕೊಂಡು ಹೊಂಟಿದ್ದ ಕಂಡು ನಾಯಪ್ಪ ಹಿಟ್ಟಿನ್ ಮುದ್ದೆ ತಿಂದನಣ್ಣ ; ನಾಯಪ್ಪ ಹಿಟ್ಟಿನ್ ಮುದ್ದೆ ತಿಂದಿದ್ದ ಕಂಡು ಬೀರಪ್ಪ ಬಿಕ್ಕಿ ಬಿಕ್ಕಿ ಅತ್ತನಣ್ಣ ; ಬೀರಪ್ಪ ಬಿಕ್ಕಿ ಬಿಕ್ಕಿ ಅತ್ತಿದ್ದ ಕಂಡು ಮಾಳವ್ವ ಕಿಸಿಕಿಸಿ ನಕ್ಕಳಣ್ಣ !

ಮತ್ತೊಂದು ನವಿಲಿನ ಹಾಡು ; ಕೂಲಿಗಾರರು ಭಾರ ಎತ್ತುವಾಗ ಇದನ್ನು ಹಾಡುತ್ತಾರೆ, ಮಕ್ಕಳಿಗೆ ಚೆನ್ನಾಗಿದೆ.

*ನವ್ವಾಲೆ ಬಂದಿತ್ತು ನವ್ವಾಲೆ ಸೋಗೇರಿ ಬಣ್ಣದ ನವ್ವಾಲೆ*
*ಬರಗನೆ ಮೇಯದು ನವ್ವಾಲೆ ಬರಗದ್ದೂವನೆ ಮೇಯದು ನವ್ವಾಲೆ ॥*
*ಬರಗದ ಒಡಿಕಾಡು ಬೆನ್ನತ್ತಿ ಬರುವಾಗ ಬರಬರನೆ ಓಡಿತು ನವ್ವಾಲೆ*
*ರಾಗೀಯ ಮೇಯೊದು ನವ್ವಾಲೆ ರಾಗಿ ಹೂವನೆ ಮೇಯೋದು ನವ್ವಾಲೆ*
*ರಾಗೀಯ ಒಡಿಕಾಡು ಬೆನ್ನತ್ತಿಬರುವಾಗ ರಾಗವ ಪಾಡಿತು ನವ್ವಾಲೆ*
*ಬತ್ತವ ಮೇಯದು ನವ್ವಾಲೆ ಬತ್ತದ್ದೂವನೆ ಮೇಯದು ನವ್ವಾಲೆ*
*ಬತ್ತವ ಒಡಿಕಾಡು ಬೆನ್ನತ್ತಿ ಬರುವಾಗ ರೆಕ್ಕೆಯನುದುರಿಸಿತು ನವ್ವಾಲೆ.*

ಇನ್ನೂ ಒಂದು ಸೊಗಸಾದ ಹಾಡು– ಮಲ್ಲಿಗೆ ಹಾಡು.

*ಮಲ್ಲೀಗೆ ಮಲ್ಲಿಗೆ ಬಾಡದಿರುವ ಮಲ್ಲಿಗೆ*
*ಬಾಡಿದರ ಶಿವನಾ ಪಾದದಾಣೆ ಮಲ್ಲಿಗೆ*
*ದುಂಡು ದುಂಡು ಮಲ್ಲಿಗೆ ಕೋಲು ಕೋಲುಮಲ್ಲಿಗೆ*
*ಏಳುಸುತ್ತಿನ್ ಮಲ್ಲಿಗೆ । ಕಾಕಡಾ ಮಲ್ಲಿಗೆ ।*
*ಬಾಲೇರ್ ಮುಡಿಯಾ ಮಲ್ಲಿಗೆ । ಗರತೇರ್ ಮುಡಿಯಾ ಮಲ್ಲಿಗೆ ।*
*ಮಿತ್ರೇರ್ ಮುಡಿಯಾ ಮಲ್ಲಿಗೆ । ರಂಭೇರ್ ಮುಡಿಯಾ ಮಲ್ಲಿಗೆ ।*
*ಬಂಗಾರದ ಮಲ್ಲಿಗೆ । ಸಿಂಗಾರದ ಮಲ್ಲಿಗೆ*
*ಮೈಸೂರು ಮಲ್ಲಿಗೆ । ಕರುನಾಡ ಮಲ್ಲಿಗೆ ॥*

ಸಂಗೀತ, ನೃತ್ಯಗಳ ಜೊತೆಗೆ ಉತ್ತಮ ಸಾಹಿತ್ಯ ಜನಪದ ಸಂಗೀತದಲ್ಲಿ ಹುಲುಸಾಗಿ ಮೂಡಿದೆ. ಮಾಣಿಕ್ಯದಂಥ ಮಾತುಗಳು ನೂರಾರು ಹಳ್ಳಿಯ ಪದಗಳಲ್ಲಿ ಸಿಗುತ್ತವೆ : ಮಲ್ಲಯ್ಯ ನೀನಡಸು ಸರುವೆಲ್ಲ ; ಬಂಗಾರದ ಬಿಸಿಲು ಒಡೆದಾದ ; ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾದಿ ; ಹಡದವ್ವ ನೀ ಕೊಟ್ಟ ಮನೆಗೆ ಹೆಸರಾದೆ; ಹಡದವ್ವ ನೀ ಇದ್ದರೆ ನಮಗೆ ಸರಿರಾಜ್ಯ ; ಅಡವ್ಯಾಗ ವಸತಿ ಇಳಿದಾಂಗ ; ಜೋಡಕಿನ್ನರಿ ನುಡಿದಾಂಗ; ಗಂಜೀಯ ಕುಡಿದರು ಗಂಡನ ಮನೆ ಲೇಸು ; ಅಣ್ಣಯ್ಯನ ಕುಣಸ್ಯಾಡುತಾಳ ಅತ್ತೀಗಿ; ನಮ್ಮಣ್ಣ ಬಂದರೆ ನಿಚ್ಚ ದೀವಳಿಗಿ ಮನಿಯಾಗ ; ಕುಲವೆರಡು ನಮ್ಮ ಮನವೊಂದು ; ಗುಣಕ ಕಟ್ಟೀನಿ ಗೆಳೆತನ ; ಆಕಿ ಮಾತು ಬೆಣ್ಯಾಗ ಮುಳ್ಳು ಮುರಿದ್ಹಾಂಗ. ಗಂಡಹೆಂಡಿರ ಜಗಳ ಗಂಧ ತೀಡೀಧಾಂಗ. ಮಡದೀನ ಬಡಿದಾನ ಮನದಾಗ ಮರುಗ್ಯಾನ ; ಸೆರಗ ಹಿಡಿಯೂತ ಕೇಳ್ಯಾನ – ನಾ ಹೆಚ್ಚೊ ನಿನ್ನ ತವರ್ಹೆಚ್ಚೊ.

ಎಲ್ಲಾ ರೂಪವು ತಾನಂತೆ ಎಲ್ಲೆಲ್ಲಿಯೂ ತಾನಿಹನಂತೆ– ಎಂಬ ನಾಡಪದದಂತೆ ಹಳ್ಳಿಹಾಡು ಹುಲ್ಲು ಬೆಳೆಯಂತೆ ಇಡೀ ನಾಡಿನಲ್ಲಿ ಸಹಜವಾಗಿ ಬೆಳೆದು ಅಲ್ಲಿನ ಭೂಮಿಯನ್ನೆಲ್ಲ ಆಕ್ರಮಿಸಿದೆ. ಹಳ್ಳಿಹಳ್ಳಿಯಲ್ಲೂ ವಿಧವಿಧವಾದ ಪದಗಳು ಸಿಗುತ್ತವೆ. ಅವನ್ನು ಶೇಖರಿಸಿ ಅಚ್ಚು ಮಾಡಿಸುವ ಕೆಲಸ ಮೊದಲು ಆಗಬೇಕು. ಅಷ್ಟೇ ಸಾಲದು. ಹಾಗೆ ಮುದ್ರಿಸಿದಾಗಲೂ ಅವನ್ನು ಹಾಡುವ ಕ್ರಮ ಎಲ್ಲರಿಗೂ ಗೊತ್ತಾಗದು. ಹಳ್ಳಿಗರ ಹಾಡಿನ ಗತ್ತುಗಳನ್ನು ಧ್ವನಿಮುದ್ರಣ ಮಾಡಬೇಕು. ಹಾಗೆ ಮಾಡಿದಲ್ಲಿ ಗಾಯಕರು ಮನಸ್ವಿ ಹಾಡಿ ಅವುಗಳ ರೀತಿ ನೀತಿಗಳನ್ನು ಕೆಡಿಸುವ ಸಂಭವವಿದೆ. ಈಚೆಗೆ ಅಲ್ಲಲ್ಲಿ ಈ ಕೆಲಸವೂ ನಡೆಯುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದವರು ಆಸ್ಥೆಯಿಂದ ಧ್ವನಿಮುದ್ರಣದ ಕಾರ್ಯವನ್ನು ಕೈಗೊಂಡಿದ್ದಾರೆ. ಬೆಂಗಳೂರಿನ ಆಕಾಶವಾಣಿಯವರೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರೂ ಈ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಶಿವರಾಮ ಕಾರಂತರು ಯಕ್ಷಗಾನದ ಸಂಗೀತದ ಒಳಹೊರಗನ್ನು ಶಾಸ್ತ್ರೀಯವಾಗಿ ವಿಮರ್ಶಿಸಿದ್ದಾರೆ.

ಒಟ್ಟಿನಲ್ಲಿ ಜಾನಪದದ ಬಹು ಮುಖ್ಯ ಅಂಗವಾದ ಜನಪದ ಸಂಗೀತ ಈಚೆಗೆ ನಾಡಿನ ಹಿರಿಯರ, ವಿದ್ವಾಂಸರ ಗಮನ ಸೆಳೆದ ವಿಷಯವಾಗಿದೆ. **(ಆರ್.ಬಿ.ಎಸ್.)**

**ಕರ್ನಾಟಕ ಜಾನಪದ :** ಕರ್ನಾಟಕ ಜಾನಪದ ಅಧ್ಯಯನವನ್ನು ಕೈಗೊಳ್ಳುವಾಗ ಸೌಲಭ್ಯ ದೃಷ್ಟಿಯಿಂದ ಹಲವು ಪ್ರಾದೇಶಿಕ ವಿಭಾಗಗಳನ್ನು ಮಾಡಿಕೊಳ್ಳಬೇಕಾದುದು ಅನಿವಾರ್ಯವೆನಿಸುತ್ತದೆ. ಕೆಲವು ಜಾನಪದ ಪ್ರಕಾರಗಳು ವಿಶ್ವ ವ್ಯಾಪಕ ಆಶಯಗಳನ್ನು ಪಡೆದಿದ್ದರೂ ಪ್ರಾದೇಶಿಕ ಎನ್ನಬಹುದಾದ ಕೆಲವು ಬಗೆಗಳನ್ನೂ ಗುರುತಿಸಬಹುದು. ಭಾಷಿಕ, ಸಾಂಸ್ಕೃತಿಕ, ಭೌಗೋಳಿಕ ಹಿನ್ನೆಲೆಗಳಲ್ಲಿ ಇಂಥ ವಿಭಜನೆ ಸಾಧ್ಯವಾಗುತ್ತದೆ. ಕರ್ನಾಟಕ ಜಾನಪದವನ್ನು ಅಭ್ಯಸಿಸುವಾಗ ಪ್ರಾದೇಶಿಕವಾಗಿ ಐದು ಪ್ರಮುಖ ವಿಭಾಗಗಳನ್ನು ಮಾಡಿಕೊಳ್ಳಬಹುದು. 1. ದಕ್ಷಿಣ ಕರ್ನಾಟಕ (ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು ಜಿಲ್ಲೆಗಳು). 2. ಉತ್ತರ ಕರ್ನಾಟಕ (ಧಾರವಾಡ, ಬೆಳಗಾಂ, ಬಿಜಾಪುರ, ಗುಲ್ಬರ್ಗ, ಬಿದರೆ, ರಾಯಚೂರು, ಹಾಗೂ ಬಳ್ಳಾರಿ ಜಿಲ್ಲೆಗಳು). 3. ಉತ್ತರ ಕನ್ನಡ ಜಿಲ್ಲೆ. 4. ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡಿನ ಭಾಗಗಳನ್ನೂ ಒಳಗೊಂಡಂತೆ). 5. ಕೊಡಗು. ಸಮಗ್ರ ಕರ್ನಾಟಕದ ಜನಪದ ಸಾಹಿತ್ಯ, ಕಲೆಗಳು, ಸಂಪ್ರದಾಯಗಳು, ಆಚರಣೆಗಳು, ವೈದ್ಯ, ಕ್ರೀಡೆಗಳು, ಮುಂತಾದವಕ್ಕೆ ಸಂಬಂಧಿಸಿದಂತೆ ಪರಿಶೀಲನೆಯನ್ನು ಕೈಗೊಂಡರೆ ಬಹುಮಟ್ಟಿಗೆ ಸಾಮ್ಯ ಕಂಡುಬಂದರೂ ಆಯಾ ಪ್ರದೇಶಕ್ಕೆ ವಿಶಿಷ್ಟವಾದ ಕೆಲವು ಬಗೆಗಳು ಲಭ್ಯವಾಗುತ್ತವೆ. ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಕಾರಣಗಳಿಂದಾಗಿ ಇಂಥ ಪ್ರಮುಖ ಭೇದಗಳು ಉಳಿದು ಬರುತ್ತವೆ. ಪ್ರಾದೇಶಿಕ ಹಿನ್ನೆಲೆಯ ವಿಭಾಗ ಕ್ರಮ ಅವುಗಳ ವಿವರವಾದ ಅಧ್ಯಯನಕ್ಕೆ ಪೂರಕವಾಗುತ್ತದೆ.

ಕರ್ನಾಟಕದಲ್ಲಿ ಜಾನಪದ ಸಂಗ್ರಹ ಕಳೆದ ಶತಮಾನದಿಂದ ನಡೆಯುತ್ತಿದ್ದರೂ ಗೀತೆ, ಲಾವಣಿ, ಗಾದೆ– ಹೀಗೆ ಕೆಲವು ಪ್ರಕಾರಗಳಿಗೆ ಸೀಮಿತವಾದಂತೆ ಮಾತ್ರ ಅದು ನಡೆಯುತ್ತಿದ್ದು ಕ್ರಮಬದ್ಧವಾದ, ವೈಜ್ಞಾನಿಕವಾದ ಸಂಗ್ರಹ ಈ ದಶಕದಲ್ಲಿ ಆರಂಭವಾಯಿತೆನ್ನಬಹುದು. ಜಾನಪದದ ಎಲ್ಲ ಪ್ರಕಾರಗಳಲ್ಲಿಯೂ ಇತ್ತೀಚೆಗೆ ಸಂಗ್ರಹ ಕಾರ್ಯ ನಡೆಯುತ್ತಿರುವುದು ಕಂಡುಬರುತ್ತಿದೆ. ಸಮಗ್ರ ಕರ್ನಾಟಕದ ಜಾನಪದ ಸಂಗ್ರಹ, ಸಂಶೋಧನೆಗಳು ಪ್ರಾದೇಶಿಕ ಹಿನ್ನೆಲೆಯಲ್ಲಿ, ಶಾಸ್ತ್ರೀಯ ಕ್ರಮಗಳಲ್ಲಿ ನಡೆಯಲು ಕೆಳಕಂಡ ಪರಿಶೀಲನ ಲೇಖನಗಳು ಸಹಾಯಕವಾಗುತ್ತವೆ.

**ದಕ್ಷಿಣ ಕರ್ನಾಟಕದ ಜಾನಪದ:** ಅತ್ಯಂತ ವಿಸ್ತಾರವಾದ ಉತ್ತರ ಕರ್ನಾಟಕದ ಹಾಗೂ ದಕ್ಷಿಣ ಕರ್ನಾಟಕದ ಪ್ರದೇಶಗಳ ಜಾನಪದದ ವಿವಿಧ ಪ್ರಕಾರಗಳಲ್ಲಿ ಬಹುಮಟ್ಟಿನ ಸಾಮ್ಯ ಕಂಡುಬಂದರೂ ಜನಪದ ಕಲೆಗಳಲ್ಲಿ, ಸಾಹಿತ್ಯದಲ್ಲಿ ಸಾಕಷ್ಟು ವೈವಿಧ್ಯವನ್ನು ಗುರುತಿಸಬಹುದು. ಉಳಿದ ಭಾಗಗಳು ಬಹಳ ಚಿಕ್ಕವಾದರೂ ಭೌಗೋಳಿಕ ಕಾರಣಗಳಿಂದಾಗಿ ಆಯಾ ಪ್ರದೇಶಗಳಿಗೆ ವಿಶಿಷ್ಟವಾದ ಕೆಲವು ಜಾನಪದ ಬಗೆಗಳು ತೋರಿಬರುತ್ತವೆ. ಸಮಗ್ರ ಕರ್ನಾಟಕದ ಸಂಸ್ಕೃತಿಯನ್ನು ಅಖಂಡವಾಗಿ ಪರಿಶೀಲಿಸುವಾಗ ಪ್ರಾದೇಶಿಕ ವೈವಿಧ್ಯಗಳನ್ನು ಉಪೇಕ್ಷಿಸುವಂತಿಲ್ಲ. ಕೊಡಗಿನ ಹುತ್ತರಿ ಕುಣಿತ, ಬೊಳ್‌ಕಾಟಗಳು, ಕೈಲ್ ಮಹೋತ್ಸವಗಳು ಅಲ್ಲಿಗೆ ಮಾತ್ರ ಮೀಸಲಾದವು. ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆಯ ಹಿನ್ನೆಲೆಯಲ್ಲಿ ಬರುವ ಪಾಡ್ದನ ಸಂಪ್ರದಾಯ, ಕೋಲ, ನೇಮಗಳು ಆಟಿಕೊಡೆಂಜ ಬೈದ್ಯನೃತ್ಯ ಮುಂತಾದವು ಬೇರೆಡೆಗಳಲ್ಲಿಲ್ಲ. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಗೌಡರ ಕುಣಿತ ಕರ್ನಾಟಕದ ಬೇರೆಡೆಗಳಲ್ಲಿ ಲಭ್ಯವಾಗುವುದಿಲ್ಲ. ಉತ್ತರ ಕರ್ನಾಟಕದ ಕರಡಿಮಜಲು, ಗೊಂದಲಿಗರ ಮೇಳ, ಶ್ರೀಕೃಷ್ಣಪಾರಿಜಾತ ಮುಂತಾದವು ಉಳಿದೆಡೆಗಳಲ್ಲಿ ತುಂಬ ವಿರಳವೆನ್ನಬೇಕು. ದಕ್ಷಿಣ ಕರ್ನಾಟಕದ ಕಂಸಾಳೆ ಮೇಳ, ನೀಲಗಾರರ ಸಂಪ್ರದಾಯ, ಅಂಟಿಕ ಪಂಟಿಕೆ, ಭಾಗವಂತಿಕೆ ಮೇಳಗಳು ಇತರ ಪ್ರದೇಶಗಳಲ್ಲಿ ಕಾಣಬರುವುದಿಲ್ಲ. ಹೀಗೆ ಭಾಷಿಕ, ಧಾರ್ಮಿಕ, ಜನಾಂಗಿಕ ಹಾಗೂ ಭೌಗೋಳಿಕ ಕಾರಣಗಳಿಂದಾಗಿ ವಿಭಿನ್ನ ಜಾನಪದ ಸಂಪ್ರದಾಯಗಳು ಕರ್ನಾಟಕ ಸಂಸ್ಕೃತಿಯ ವ್ಯಾಪ್ತಿಯನ್ನು, ವೈಶಿಷ್ಟ್ಯವನ್ನು ಒಂದು ವಿಸ್ತಾರವಾದ ಭೂಮಿಕೆಯ ಮೇಲೆ ಕಡೆದು ನಿಲ್ಲಿಸುತ್ತವೆ. ಹಾಗೆಯೇ ಸಮಗ್ರ ಕರ್ನಾಟಕ ವ್ಯಾಪ್ತಿಯನ್ನು ಪಡೆದ ಜಾನಪದ ಪ್ರಕಾರಗಳೂ ಗಮನಾರ್ಹವಾಗಿಯೇ ತೋರಿ ಬರುತ್ತವೆ. ಜನಪದ ಕಥೆ, ಗೀತೆ, ಲಾವಣಿ, ಗಾದೆ, ಒಗಟು, ನಂಬಿಕೆ, ಸಂಪ್ರದಾಯ, ಆಚರಣೆ, ಕಲೆ, ವೈದ್ಯ, ವಸ್ತುವಿಶೇಷಗಳ ಬಳಕೆ, ಉಡುಗೆತೊಡುಗೆ– ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಎದ್ದುತೋರುವ ಸಾಮ್ಯಗಳನ್ನು ಪ್ರಮುಖವಾಗಿ ನೋಡಬಹುದು.

ಜನಪದ ತ್ರಿಪದಿಸಾಹಿತ್ಯದಲ್ಲಿ ಬಹುಮಟ್ಟಿಗೆ ಒಂದೇ ಬಗೆಯ ಹಾಡುಗಳು ಕಂಡುಬರುತ್ತವೆ. ಉತ್ತರದೇವಿಯ ಕಥೆ ನಾಡಿನ ಎಲ್ಲ ಕಡೆಗಳಲ್ಲೂ ಲಭ್ಯವಾಗಿದೆ. ಯಕ್ಷಗಾನ ಬಯಲಾಟಗಳ ಎಲ್ಲ ಕಡೆಯ ಸಂಪ್ರದಾಯಗಳಲ್ಲೂ ಸಾಕಷ್ಟು ಹೋಲಿಕೆಯಿದೆ. ಈ ಎಲ್ಲ ಜಾನಪದ ಪ್ರಕಾರಗಳನ್ನು ಪ್ರಾದೇಶಿಕ ಭಿನ್ನರೂಪಗಳೆನ್ನಬಹುದೇ ಹೊರತು ಮೂಲತಃ ಅವೆಲ್ಲ ಒಂದೇ ಸಂಸ್ಕೃತಿಯ ಕಾಣಿಕೆಗಳೆಂಬುದನ್ನು ಮರೆಯುವಂತಿಲ್ಲ.

ಜಾನಪದ ಅಧ್ಯಯನವನ್ನು ಕೈಗೊಳ್ಳುವ ಸಂಶೋಧಕ ಮೇಲಿನ ಈ ಎರಡು ಬಗೆಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳುವುದು ಆವಶ್ಯಕವಾಗಿದೆ. ಪ್ರಾದೇಶಿಕ ವಿಭಜನೆಯ ಔಚಿತ್ಯ ಈ ಅರ್ಥದಲ್ಲಿ ಮಾತ್ರ ತನ್ನ ಸಾರ್ಥಕತೆಯನ್ನು ಸಾಧಿಸಿಕೊಳ್ಳುತ್ತದೆ. ದಕ್ಷಿಣ ಕರ್ನಾಟಕದ ಜಾನಪದ ಸಮೀಕ್ಷೆಯನ್ನು ಈ ಹಿನ್ನೆಲೆಯನ್ನು ಇಲ್ಲಿ ಸ್ಥೂಲವಾಗಿ ಪರಿಶೀಲಿಸಬೇಕಾಗಿದೆ.

ದಕ್ಷಿಣ ಕರ್ನಾಟಕ ಜಾನಪದ ಸಾಹಿತ್ಯದ ಸಮೃದ್ಧ ನೆಲೆ. ಅಪಾರ ಸಂಖ್ಯೆಯ ಗಾಯಕರೂ ಕಥೆಗಾರರೂ ಅಲ್ಲಿಯ ವಿವಿಧ ಭಾಗಗಳಲ್ಲಿ ಕಾಣಸಿಗುತ್ತಾರೆ. ವಿಸ್ತಾರದ ದೃಷ್ಟಿಯಿಂದ, ವೈವಿಧ್ಯದ ದೃಷ್ಟಿಯಿಂದ ಇಲ್ಲಿಯ ಲಾವಣಿಗಳು ತಮ್ಮವೇ ಆದ ಹಲವು ಸಂಪದ್ರಾಯಗಳನ್ನು ರೂಪಿಸಿಕೊಂಡಿವೆ. ಧಾರ್ಮಿಕ ಹಾಗೂ ಲೌಕಿಕ ಎಂದು ಈ ಸಂಪ್ರದಾಯಗಳನ್ನು ವಿಭಜಿಸಿ ಪ್ರಮುಖವಾದದನ್ನು ಇಲ್ಲಿ ಹೆಸರಿಸಬಹುದು.

| | | |
|---|---|---|
| ಧಾರ್ಮಿಕ : | ಕಂಸಾಳೆಯವರು | |
| | ನೀಲಗಾರರು | |
| | ಚೌಡಿಕೆಯವರು | |
| | ಗೊರವರು | |
| | ಜುಂಜಪ್ಪನವರು | |
| | ಜೋಗತಿಯವರು | |
| ಲೌಕಿಕ : | ಹೆಳವರು | ದೊಂಬಿದಾಸರು |
| | ತೆಲುಗು ಬಣಜಿಗರು | |
| | ತಂಬೂರಿಯವರು | |
| | ಕರಪಾಲದವರು | |
| | ಜೋಗಿಗಳು | |

ಧಾರ್ಮಿಕ ಸಂಪ್ರದಾಯ ಯಾವುದಾದರೂ ಆರಾಧ್ಯದೈವದ ಹಿನ್ನೆಲೆಯಲ್ಲಿ ವಿಶಿಷ್ಟ ವರ್ಗದ ಗಾಯಕರನ್ನು ಸೃಷ್ಟಿಸಿಕೊಳ್ಳುತ್ತದೆ. ತಮ್ಮ ದೈವದ ಮಹಿಮೆಯನ್ನು ವಿಸ್ತಾರಮಾಡುತ್ತ ಅದ್ಭುತ ಕಥೆಗಳನ್ನು ಕಟ್ಟಿ ಹಾಡುತ್ತ ಈ ಕಲಾವಿದರು ತಮ್ಮ ಧರ್ಮಕ್ಕೆ ನಿಷ್ಠೆಯಿಂದ ನಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ಕಲಾವಿದರೆಲ್ಲರೂ ವಂಶಪಾರಂಪರ್ಯವಾಗಿಯೋ

ನೀಲಗಾರ

ಗುರುಶಿಷ್ಯ ಸಂಬಂಧವಾಗಿಯೋ ಆಯಾ ದೈವದ ಹೆಸರಿನಲ್ಲಿ ದೀಕ್ಷೆಯನ್ನು ಸ್ವೀಕರಿಸಿ ತಮ್ಮ ಬದುಕಿನ ಉದ್ದಕ್ಕೂ ಹಾಡುಗಾರಿಕೆಯನ್ನು ವಿಶೇಷ ವೃತ್ತಿಯಾಗಿ ಸ್ವೀಕರಿಸುತ್ತಾರೆ; ಶ್ರದ್ಧೆಯಿಂದ ತಮ್ಮ ದೈವದ ಕಥೆಗಳನ್ನು ಅಭ್ಯಸಿಸಿ ವಿಶಿಷ್ಟ ಸಂದರ್ಭಗಳಲ್ಲಿ, ಹಬ್ಬಹರಿದಿನಗಳಲ್ಲಿ ಸಮಗ್ರ ರಾತ್ರಿಯೆಲ್ಲ ಕಥೆಯನ್ನು ಹಾಡಿ ಕಾಣಿಕೆ ಪಡೆಯುತ್ತಾರೆ. ಉಳಿದ ದಿನಗಳಲ್ಲಿ ತಮ್ಮ ದೈವದ ಹೆಸರಿನಲ್ಲಿ ಭಿಕ್ಷಾಟನೆ ನಡೆಸುತ್ತಾರೆ. ಈ ಭಿಕ್ಷಾಟನೆಗೂ ಗೊತ್ತಾದ ದಿನಗಳು ಇರಬಹುದು.

ದಕ್ಷಿಣ ಕರ್ನಾಟಕದ ದಕ್ಷಿಣಭಾಗದಲ್ಲಿ ಕಂಸಾಳೆಯವರೂ ನೀಲಗಾರರೂ ಪ್ರಮುಖವಾಗಿ ಕಂಡುಬರುವ ಧಾರ್ಮಿಕ ವೃತ್ತಿಗಾಯಕರು. ಕಂಸಾಳೆಯವರು ಮಲೆಯ ಮಾದೇಶ್ವರನಿಗೆ ನಡೆದುಕೊಳ್ಳುವ ಶರಣರು (**ನೋಡಿ– ಕಂಸಾಳೆ**). ಕಂಸಾಳೆ ಎಂಬ ವಿಶಿಷ್ಟ ಸ್ವರೂಪದ ಒಂದು ಕಂಚಿನ ವಾದ್ಯವನ್ನು ಇವರು ಬಳಸುವುದರಿಂದ ಕಂಸಾಳೆಯವರು ಎಂದು ಕರೆಯಲಾಗಿದೆ. ದೇವರ ಗುಡ್ಡರು ಎಂಬ ಹೆಸರಿನಲ್ಲೂ ಇವರನ್ನು ಗುರುತಿಸಲಾಗುವುದು.

ಕಂಸಾಳೆಯವರು ಮಲೆಯ ಮಾದೇಶ್ವರನ ಕಥೆಯನ್ನು ಅನೇಕ ರಾತ್ರಿಗಳವರೆಗೆ ಹಲವು ಕವಲುಗಳಲ್ಲಿ ಹಾಡಬಲ್ಲರು. ಗದ್ಯಪದ್ಯಮಿಶ್ರಿತ ಚಂಪೂ ರೀತಿಯ ಶೈಲಿಯಲ್ಲಿ, ಮಾದೇಶ್ವರ ಪವಾಡಗಳನ್ನು ಈ ಕಥೆಗಳು ರಮ್ಯವಾಗಿ ಚಿತ್ರಿಸುತ್ತವೆ. ತಾಳುಗಥೆ, ಶಂಕಮ್ಮನ ಕಥೆ, ಬೇವಿನಕಾಳಿಕಥೆ, ಜುಂಜೇಗೌಡನ ಕಥೆ–ಇವೆಲ್ಲವೂ ಈ ಸಂಪ್ರದಾಯದ ಕಥೆಗಳಲ್ಲಿ ಪ್ರಮುಖವಾದುವು. ಇವೆಲ್ಲವೂ ಕಂಸಾಳೆಯವರ ಧಾರ್ಮಿಕ ಕಥೆಗಳು.

ತಮ್ಮ ಧಾರ್ಮಿಕ ಕಥೆಗಳ ಜೊತೆಗೆ ಅನೇಕ ಲೌಕಿಕ ಕಥೆಗಳನ್ನೂ ಈ ಸಂಪ್ರದಾಯದ ಹಾಡುಗಾರರು ಜನಪ್ರಿಯತೆಯ ದೃಷ್ಟಿಯಿಂದ ಕಲಿಯುತ್ತಾರೆ. ಮುಖ್ಯವಾದ ಕೆಲವು ಕಥೆಗಳನ್ನು ಮಾತ್ರ ಇಲ್ಲಿ ಹೆಸರಿಸಬಹುದು.

1. ಪಿರಿಯಾಪಟ್ಟಣದ ಲಾವಣಿ, 2. ನಂಜಯ್ಯ–ಚಾಮುಂಡಿ, 3. ಚೆಲುವರಾಯ ವರನಂದಿ, 4. ಕೊಡಗಿನ ಲಿಂಗರಾಜಮ್ಮ, 5. ಸಾರಂಗಧರ, 6. ಚೆನ್ನಿಗರಾಯ, 7. ಘನಪತಿರಾಯ, 8. ಬಾಲನಾಗಮ್ಮ, 9. ಬಂಜೆಹೊನ್ನಮ್ಮ, 10. ಲವಕುಶರ ಕಥೆ, 11. ಕೊಂತಿಯ ಕಥೆ, 12. ಬಸವಣ್ಣನವರ ಕಥೆಗಳು. ಈ ಒಂದೊಂದು ಲಾವಣಿಯೂ ವಿಸ್ತಾರ ಹಾಗೂ ವೈವಿಧ್ಯದ ದೃಷ್ಟಿಯಿಂದ ಗಮನಾರ್ಹ ರಚನೆಯಾಗಿದೆ.

ನೀಲಗಾರರು ಕಂಸಾಳೆಯವರಂತೆಯೇ ಮೇಲಿನ ಲೌಕಿಕ ಕಥೆಗಳನ್ನೆಲ್ಲ ತಮ್ಮ ನಾಡು–ತಂಬೂರಿಯ ಹಿನ್ನೆಲೆಯಲ್ಲಿ ಹಾಡುತ್ತಾರೆ. ಆದರೆ ಅವರ ಧಾರ್ಮಿಕ ಲಾವಣಿ ಮಂಟೇಸ್ವಾಮಿಯ ಕಥೆ, ಮಂಟೇಸ್ವಾಮಿ ಮಾದೇಶ್ವರನಂತೆಯೇ ಒಬ್ಬ ಮಹಿಮಾ ಪುರುಷ: ಉತ್ತರದಿಂದ ದಕ್ಷಿಣಕ್ಕೆ ಬಂದು ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನ ಪುರದಲ್ಲಿ ಮಠಮಾನ್ಯಗಳನ್ನು ಸ್ಥಾಪಿಸಿದವನು. ಅವನ ಶಿಷ್ಯ ರಾಚಪ್ಪಾಜಿ ಮತ್ತು ಸಿದ್ಧಪ್ಪಾಜಿ ತಮ್ಮ

ಚೌಡಿಕೆಯವರು

ತಪೋಭೂಮಿಯನ್ನಾಗಿ ಪ್ರತ್ಯೇಕ ನೆಲೆಗಳನ್ನು ಆರಿಸಿಕೊಂಡರು. ಕೊಳ್ಳೇಗಾಲದ ಆಚೆ ಚಿಕ್ಕಲ್ಲೂರು ಸಿದ್ಧಪ್ಪಾಜಿಗೂ ಸಮೀಪದ ಕಾವೇರಿ ತೀರದ ಕಪ್ಪಡಿ ರಾಚಪ್ಪಾಜಿಗೂ ತಪೋಭೂಮಿಗಳಾದುವು. ಈ ಗುರುಶಿಷ್ಯರ ಸುವಿಸ್ತಾರ ಕಥೆಯನ್ನು ನೀಲಗಾರರು ಹಾಡುತ್ತಾರೆ. ಮಂಟೇಸ್ವಾಮಿಯ ಕಥೆಯನ್ನು ಹಾಡುವ ಈ ಕಥೆಗಾರರನ್ನೂ ಮಂಟೇದಯ್ಯ, ಮಂಟೇದವರು, ಮಂಟೇಸ್ವಾಮಿ ಎಂದೂ ಕರೆಯುವುದುಂಟು.

ಕಂಸಾಳೆಯವರು ಮತ್ತು ನೀಲಗಾರರು ಮೈಸೂರು, ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಗಳ ಪೂರ್ವ, ದಕ್ಷಿಣ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

ಚೌಡಿಕೆಯವರು ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ನೆಲೆಸಿರುವ ಧಾರ್ಮಿಕ ಗಾಯಕರು. ಸವದತ್ತಿ ಎಲ್ಲಮ್ಮನ ಈ ಭಕ್ತಪರಂಪರೆ ದೇವಿಯ ಕಥೆಯನ್ನು ಅನೇಕ ಅಧ್ಯಾಯಗಳಲ್ಲಿ ಹಾಡಿಕೊಂಡು ಬಂದಿದೆ. ಚೌಡಿಕೆ ಎನ್ನುವುದು ಈ ಪರಂಪರೆಯವರು ಬಳಸುವ ವಾದ್ಯ. ಇದೊಂದು ತಂತೀವಾದ್ಯ. ಕೊಳಗದಾಕಾರದ ಮರದ ಹೋಳಿಗೆ ಒಂದು ಕಡೆ ಚರ್ಮವನ್ನು ಬಿಗಿದು ಅದರಿಂದ ಎಳೆದು ಕಟ್ಟಿದ ತಂತಿಯನ್ನು ಕಡ್ಡಿಯೊಂದರ ಸಹಾಯದಿಂದ ಮೀಟುವುದರ ಮೂಲಕ ಉಂಟಾಗುವ ನಾದದ ಹಿನ್ನೆಲೆಯಲ್ಲಿ ಇವರು ಲಾವಣಿಗಳನ್ನು ಹಾಡುತ್ತಾರೆ. ಇಬ್ಬರು ಅಥವಾ ಮೂವರು ಕಲೆತು ಮೇಳವನ್ನು ನಡೆಸುವುದೂ ವಿಶಿಷ್ಟ ಗತ್ತಿಯಲ್ಲಿ ಕುಣಿಯುವುದೂ ಚೌಡಿಕೆ ಸಂಪ್ರದಾಯದ ಒಂದು ಗಮನಾರ್ಹ ಅಂಶ.

ಚೌಡಿಕೆಯವರು ಅನೇಕ ಲೌಕಿಕ ಕಥೆಗಳನ್ನು ಹಾಡುತ್ತಾರೆ. ಪ್ರಸಿದ್ಧವಾದ ಸರ್ಜಪ್ಪನಾಯಕನ ಲಾವಣಿ ಇವರಲ್ಲಿ ಮಾತ್ರ ಹೆಚ್ಚಾಗಿ ಪ್ರಚುರವಾಗಿದೆ.

ಗೊರವರು ಮೈಲಾರ ಕ್ಷೇತ್ರಕ್ಕೆ ಮೀಸಲಾದ ಗುಡ್ಡರು. ಗೊರವ, ಗಡಬಡಯ್ಯ ಮುಂತಾದ ಹೆಸರುಗಳಿಂದ ಪರಿಚಿತರಾಗಿರುವ ಇವರು ದಕ್ಷಿಣ ಕರ್ನಾಟಕದ ಅನೇಕ ಕಡೆಗಳಲ್ಲಿ ಮೈಲಾರದ ಉಪಕ್ಷೇತ್ರಗಳಿಗೆ ನಡೆದುಕೊಳ್ಳುತ್ತಾರೆ. ತಲೆಯ ಮೇಲೆ ಕರಡಿಯ ಕೂದಲು, ಮೈಮೇಲೆ ಕವಡೆಯ ಸರಗಳಿಂದ ಕೂಡಿದ ಅಡ್ಡಪಟ್ಟಿಗಳು, ಕೈಯಲ್ಲಿ ಪಿಳ್ಳಂಗೋವಿ, ಡಮರುಗ, ತ್ರಿಶೂಲ, ಕಂಕುಳಲ್ಲಿ ದೋಣಿ, ಕರಿಕಂಬಳಿಯ ಉದ್ದನೆಯ ನಿಲುವಂಗಿ– ಇವು ಇವರನ್ನು ಸುಲಭವಾಗಿ ಗುರುತಿಸಬಹುದಾದ ವೇಷಭೂಷಣ, ಗೊರವರ ನೃತ್ಯ ಆಕರ್ಷಕವಾದುದು. ಅಷ್ಟೇ ಸುಂದರವಾದುದು– ಇವರು ಹಾಡುವ ಮೈಲಾರಲಿಂಗನ ಕಥೆ. ಮೈಲಾರಲಿಂಗ ಮತ್ತು ಕೋಮಲೆ ಇವರ ಪ್ರಣಯಕಥೆಯನ್ನು ಡಮರುಗ ನುಡಿಸುತ್ತ ಇವರು ಹಾಡುತ್ತಾರೆ. ಕುರುಬರ ಜನಾಂಗದಲ್ಲಿ ಹೆಚ್ಚು ಮಂದಿ ಗೊರವರನ್ನು ಕಾಣಬಹುದು.

ಜುಂಜಪ್ಪನ ಕಥೆ ಕಾಡುಗೊಲ್ಲರಿಗೆ ಸೀಮಿತವಾದುದು. ಈ ಜನಾಂಗದ ಅಧಿದೈವ ಜುಂಜಪ್ಪ. ಕನ್ನಡ ಜನಪದ ಕಾವ್ಯಗಳಲ್ಲಿ ಜುಂಜಪ್ಪನ ಕಥೆ ವಿಶೇಷವಾದ ಸ್ಥಾನಕ್ಕೆ ಅರ್ಹವಾದುದು. ಜುಂಜಪ್ಪನ ಗಣೆಯನ್ನು ಹೊತ್ತು ಊರೂರ ಮೇಲೆ ಬರುವ ಗಣೆಯವರು ಆ ಸುದೀರ್ಘ ಕಥೆಯನ್ನು ಎರಡು ಮೂರು ರಾತ್ರಿ ಹಾಡುತ್ತಾರೆ. ಗಣೆ ಎಂಬ ಕೊಳಲಿನಾಕಾರದ ದೊಡ್ಡ ವಾದ್ಯದ ಹಿನ್ನೆಲೆಯಲ್ಲಿ ಈ ಕಥೆಯನ್ನು ಹಾಡುವ ಸಂಪ್ರದಾಯವೂ ಉಂಟು.

ಮೇಲಿನ ವೃತ್ತಿಗಾಯಕರೆಲ್ಲ ಪುರುಷವರ್ಗಕ್ಕೆ ಸೇರಿದವರು. ಕಥೆಗಾರಿಕೆಯನ್ನು, ಹಾಡುಗಾರಿಕೆಯನ್ನು ವೃತ್ತಿಯನ್ನಾಗಿ ಪಡೆದ ಸ್ತ್ರೀಯರನ್ನು ಅಲ್ಲಲ್ಲಿ ಕಾಣಬಹುದು. ಇವರಲ್ಲಿ ಕೆಲವರು ಯಾವುದಾದರೂ ದೈವದ ಹೆಸರಿನಲ್ಲಿ ಜೋಗಿತಿಯರಾದವರು. ಸುದೀರ್ಘ ಲಾವಣಿಗಳನ್ನು ಹಾಡುವುದರಲ್ಲಿ ನಿಷ್ಣಾತರಾದ ಇವರು ಕೆಲವು ಪುಣ್ಯಕಥೆಗಳನ್ನು ಹಾಡುತ್ತಾರೆ. ಅಣಜಿ ಹೊನ್ನಮ್ಮ ಇಂಥದೊಂದು ಧಾರ್ಮಿಕ ಕಥೆ. ಉಚ್ಚಂಗಿ ಎಲ್ಲಮ್ಮನ ಆಶಯದಂತೆ ಕಟ್ಟಿದ ಅಣಜಿಯ ಕೆರೆಗೆ ಹೊನ್ನಮ್ಮ ಬಲಿಯಾಗಿ ಮುಂದೆ ತಾನು ಆರಾಧ್ಯದೈವವೇ ಆಗುತ್ತಾಳೆ. ಎಲ್ಲಮ್ಮನ ಮಹಿಮೆ, ಹೊನ್ನಮ್ಮನ ತ್ಯಾಗ ಇವುಗಳನ್ನು ಮನೋಜ್ಞವಾಗಿ ಬಣ್ಣಿಸುವ ಈ ಕಥೆಯನ್ನು ವಿಶೇಷ ಪೂಜೆಯೊಡನೆಯೇ ಹಾಡಿಸುವುದು ಇಲ್ಲಿಯ ವೈಶಿಷ್ಟ್ಯ. ಕಾಳಿಂಗರಾಯ, ಗುಣಸಾಗರಿ ಮುಂತಾದ ಕೆಲವು ದೀರ್ಘಲಾವಣಿಗಳನ್ನು ಇಂಥ ಸಂದರ್ಭಗಳಲ್ಲಿ ಹಾಡಲಾಗುವುದು.

ಲೌಕಿಕ ಕಥೆಗಳನ್ನು ಯಾವ ದೈವದ ಸಂಪ್ರದಾಯಕ್ಕೂ ಶರಣಾದವರಲ್ಲ. ಆದರೆ ಎಲ್ಲ ದೈವಗಳ ಕಥೆಗಳನ್ನೂ ಇವರು ಹಾಡಬಹುದು. ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ವಸ್ತುವಿನ ಸುತ್ತ ಹೆಣೆಯಲ್ಪಟ್ಟ ಇವರ ಕಥೆಗಳಲ್ಲಿ ಅತಿಮಾನುಷ, ರಮ್ಯ, ಅದ್ಭುತ, ವಾಸ್ತವಿಕ ಮುಂತಾದ ಎಲ್ಲ ಕಥಾವರ್ಗಗಳ ಮಾದರಿಗಳನ್ನೂ ಕಾಣಬಹುದು. ನೀತಿಪ್ರಧಾನವಾದ ಕಥೆಗಳೂ ಕೆಲವು ಗಾಯಕರಲ್ಲಿ ಹೆಚ್ಚಾಗಿ ಕಂಡುಬರುತ್ತವೆ.



ನೀಲಗಾರರ ತಂಬೂರಿ

ಲೌಕಿಕ ಕಥೆಗಾರರಲ್ಲಿ ಕರಪಾಲದವರು (**ನೋಡಿ– ಕರಪಾಲ ಮೇಳ**) ಕಥೆಗಳನ್ನು ಹಾಡುವುದಕ್ಕಿಂತ ಅಭಿನಯಪೂರ್ವಕವಾಗಿ ಅದನ್ನು ನಿರೂಪಿಸುವುದೇ ಹೆಚ್ಚು. ನೃತ್ಯ, ಗೀತ, ಸಾಹಿತ್ಯಗಳ ಮೇಳದಿಂದ ಕರಪಾಲದ ಕಥೆಗಳು ರಂಜಿಸುತ್ತವೆ. ಕರಪಾಲದವರು ಲಾವಣಿ ಸ್ವರೂಪದ ಯಾವ ಕಥೆಗಳನ್ನೂ ಹಾಡುವುದಿಲ್ಲ. ಆಕರ್ಷಕ ಜನಪದ ಕಥೆಗಳನ್ನು ತಮ್ಮ ಮೇಳಕ್ಕೆ ಇವರು ಅಳವಡಿಸಿಕೊಳ್ಳುತ್ತಾರೆ. ಕೆಲವು ಗೊತ್ತಾದ ಹಾಡುಗಳನ್ನು ನಡುವೆ ಸೇರಿಸಿಕೊಂಡು ಸಂದರ್ಭಾನುಸಾರ ಅದನ್ನು ಎಲ್ಲ ಕಥೆಗಳಿಗೂ ಕೂಡಿಸಿಕೊಳ್ಳುತ್ತ ಮೂವರು ಸಾಲಾಗಿ ನೃತ್ಯ ಮಾಡುತ್ತಾರೆ. ಮುಖ್ಯ ನಿರೂಪಕನೊಬ್ಬ ಕಥಾಭಾಗವನ್ನು ವಿಶಿಷ್ಟವಾದ ಶೈಲಿಯಲ್ಲಿ ನಾಟಕೀಯವಾಗಿ ನಿರೂಪಿಸುತ್ತ

ಹೋಗುತ್ತಾನೆ. ಅವನ ಕೌಶಲ ಪ್ರತಿಭೆಗಳಿಗನುಗುಣವಾಗಿ ಕಥೆ ಎಷ್ಟು ಗಂಟೆಗಳವರೆಗಾದರೂ ಸಾಗಬಹುದು.

ಕರಪಾಲಮೇಳದಲ್ಲಿ ಕಾಡಸಿದ್ದಮ್ಮ, ಬಸವಕುಮಾರ, ಲೋಹಿತಕುಮಾರ, ಶಿವಯೋಗಿ–ಪರಯೋಗಿ, ನೀಲಕಂಠ–ರೂಪವತಿ, ಮುಂತಾದ ಕೆಲವು ಕಥೆಗಳನ್ನೇ ಹೆಚ್ಚಾಗಿ ಕಾಣಬಹುದಾದರೂ ಕೆಲವೆಡೆಗಳಲ್ಲಿ ಹೊಸ ಕಥೆಗಳೂ ಉಪಕಥೆಗಳೂ ಸೇರಿಕೊಳ್ಳುತ್ತವೆ. ತುಮಕೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕರಪಾಲ ಮೇಳ ಅಲ್ಲಲ್ಲಿ ಇಂದಿಗೂ ಉಳಿದಿದೆ. ಕರಪಾಲದವರು ಬಳಸುವ ಮುಖ್ಯ ವಾದ್ಯ ಗುಮ್ಮಟೆ ಮತ್ತು ತಾಳ. ಹಾರ್ಮೋನಿಯಂ ಮತ್ತು ಮೃದಂಗಗಳನ್ನು ಇವುಗಳ ಜೊತೆಗೆ ಇತ್ತೀಚೆಗೆ ಬಳಸಲಾಗುತ್ತಿದೆ.



ಚೌಡಿಕೆ

ಜೋಗಿಗಳು ಜನಪದ ಗಾಯಕರಲ್ಲಿ ಅತ್ಯಂತ ಪ್ರಮುಖವಾದ ಒಂದು ವರ್ಗವಾಗಿ ಇಂದಿಗೂ ಕಾಣಸಿಗುತ್ತಾರೆ. ಅವರು ಬಳಸುವ ವಾದ್ಯ ಕಿನ್ನರಿ. ಇದೊಂದು ತಂತೀವಾದ್ಯ. ಭಾರತದ ನಾನಾ ಕಡೆಗಳಲ್ಲಿ ಈ ವಾದ್ಯವನ್ನು ಗುರುತಿಸಬಹುದಾದರೂ ಕರ್ನಾಟಕದ ಜನಪದ ವಾದ್ಯಗಳಲ್ಲಿ ಇದಕ್ಕೆ ವಿಶೇಷವಾದ ಸ್ಥಾನವಿದೆ. ಉದಾಹರಣೆಗೆ, ಶರಣ ಕಿನ್ನರಿ ಬೊಮ್ಮಯ್ಯನ ಹೆಸರನ್ನು ನೆನೆಯಬಹುದು. ಕನ್ನಡ ಜನಪದ ಸಾಹಿತ್ಯದಲ್ಲಂತೂ ಮೇಲಿಂದ ಮೇಲೆ ಇದರ ಉಲ್ಲೇಖ ಕಂಡುಬರುತ್ತದೆ. ಒಂದು ಕಾಲಕ್ಕೆ ಕನ್ನಡ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನ ಈ ಕಿನ್ನರಿಗೆ ಲಭ್ಯವಾಗಿತ್ತು ಎಂಬುದು ಇದರಿಂದ ವೇದ್ಯವಾಗುತ್ತದೆ. ಕಿನ್ನರಿ ಜೋಗಿಗಳು ಅರ್ಜುನ ಜೋಗಿಯ ಕಥೆಯನ್ನೂ ಮಹಾಭಾರತದ ಇತರ ಪ್ರಸಂಗಗಳನ್ನೂ ಕಿನ್ನರಿಗೆ ಹೊಂದಿಸಿಕೊಂಡು ಹಾಡುತ್ತಾರೆ. ತಾವು ಅರ್ಜುನನ ಪರಂಪರೆಯವರೆಂದು ಹೇಳಿಕೊಳ್ಳುವ ಇವರು ಆಕರ್ಷಕ ರೀತಿಯ ವೇಷಭೂಷಣಗಳನ್ನು ಧರಿಸುತ್ತಾರೆ. ಕಿನ್ನರಿ ಹಿಡಿದು, ನಾನಾ ರೀತಿಯಲ್ಲಿ ಅಲಂಕೃತವಾದ ಕುಲಾವಿಯನ್ನೋ ರುಮಾಲನ್ನೋ ತಲೆಗೆ ಧರಿಸಿ ಕರಿಯ ನಿಲುವಂಗಿ, ಕಚ್ಚೆಗಳಿಂದ ಶೋಭಿಸುತ್ತ ಕಿನ್ನರಿಯನ್ನು ಹಿಡಿದರೆಂದರೆ ಅದರ ಮಧುರ ನಾದದಂತೆಯೇ ಮಧುರವಾದ ಕಂಠದಲ್ಲಿ ಚಿಮ್ಮಿಬರುವ ಜೋಗಿಯ ಹಾಡಿಗೆ ಎಲ್ಲರೂ ಮಾರುಹೋಗುತ್ತಾರೆ.

ತಂಬೂರಿಯವರು ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಣಬರುವ ವೃತ್ತಿ ಗಾಯಕರು. ನೀಲಗಾರರ ವಾದ್ಯವನ್ನೇ ಇವರು ಬಳಸಿದರೂ ಯಾವ ವಿಶಿಷ್ಟ ದೈವದ ಸಂಪ್ರದಾಯಕ್ಕೂ ಇವರು ಸೇರಿದವರಲ್ಲ, ರಮ್ಯ ಜನಪದ ಕಥೆಗಳನೇಕವನ್ನು ಲಾವಣಿ ಅಳವಡಿಸಿಕೊಂಡು ಹಾಡುವ ಇವರು ನೀಲಗಾರರಿಂದ ಯಾವ ರೀತಿಯಲ್ಲಿಯೂ ಪ್ರಭಾವಿತರಾದಂತೆ ತೋರುವುದಿಲ್ಲ.

ದಕ್ಷಿಣ ಕರ್ನಾಟಕದ ವೃತ್ತಿಗಾಯಕರಲ್ಲಿ ದೊಂಬಿದಾಸರು, ಹೆಳವರು, ತೆಲುಗು ಬಣಜಿಗರು ಮುಂತಾದವರ ಮನೆಮಾತು ತೆಲುಗು. ಇವರ ವೃತ್ತಿ ಕನ್ನಡ ಹಾಡುಗಳನ್ನೂ ಲಾವಣಿಗಳನ್ನೂ ಹಾಡುವುದು. ದೊಂಬಿದಾಸರು ಕನ್ನಡ ನಾಟಕಗಳನ್ನು ತೀರ ಇತ್ತೀಚಿನವರೆಗೂ ಅಭಿನಯಿಸುತ್ತಿದ್ದವರು. ಇವರು ಕರ್ನಾಟಕದಲ್ಲಿ ಎಂದೋ ಒಂದು ಕಾಲದಲ್ಲಿ ಬಂದು ನೆಲೆಸಿ ಇಲ್ಲಿ ಪ್ರಚಲಿತವಾಗಿದ್ದ ಸಾಹಿತ್ಯವನ್ನು ಅಭ್ಯಾಸ ಮಾಡಿಕೊಂಡಿರಬಹುದು ; ತೆಲುಗಿನ ಕಥೆಗಳನ್ನು ಕನ್ನಡಕ್ಕೆ ರೂಪಾಂತರಿಸಿಕೊಂಡಿರಬಹುದು. ಕರ್ನಾಟಕದ ಪೂರ್ವಪ್ರದೇಶದ ಈ ಗಾಯಕರ ಪ್ರಸಿದ್ಧ ಲಾವಣಿಗಳನ್ನು ಇಲ್ಲಿ ಪಟ್ಟಿ ಮಾಡಬಹುದು :

1. ಚಾಮುಂಡಿ ಪುರಾಣ, 2. ಮಾಗಡಿ ಕೆಂಪೇಗೌಡ, 3. ಬಾಲನಾಗಮ್ಮ, 4. ಕರಿಬಂಟ, 5. ಶಿವಕಥೆಗಳು, 6. ಕೃಷ್ಣಕಥೆಗಳು, 7. ಕಲಿಯುಗದ ಬಾಲೆ ಬಂಜೆ ಹೊನ್ನಮ್ಮ– ಇತ್ಯಾದಿ.

ಈ ಹಾಡುಗಾರರಲ್ಲಿ ಹೆಳವರು ಗಂಟೆಯನ್ನು ತಮ್ಮ ಪ್ರಮುಖ ವಾದ್ಯವಾಗಿ ಬಳಸುತ್ತಾರೆ. ಇವರ ಹೊಗಳುವ ಪದಗಳು, ಭಕ್ತಿಗೀತೆಗಳು ಕಥೆಗಳಿಗಿಂತ ಹೆಚ್ಚು ಜನಪ್ರಿಯತೆಯನ್ನು ಸಾಧಿಸಿಕೊಂಡಿವೆ.

ದೊಂಬಿದಾಸರು, ತೆಲುಗು ಬಣಜಿಗರು ಏಕತಾರಿಯನ್ನು ತಮ್ಮ ಪ್ರಮುಖ ವಾದ್ಯವಾಗಿ ಬಳಸುತ್ತಾರೆ. ಭಿಕ್ಷಾಟನೆಯನ್ನೇ ಪ್ರಧಾನವಾಗಿ ಅವಲಂಬಿಸಿರುವ ಈ ಕಲಾವಿದರು ಮೂವರು

ಗೊರವ

ಕಲೆತು ಕೆಲವೆಡೆಗಳಲ್ಲಿ ಮೇಳವನ್ನು ನಡೆಸುವುದೂ ಉಂಟು. ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಇವರ ಹಟ್ಟಿಗಳನ್ನು ಕಾಣಬಹುದಾದರೂ ಪುರುಷರು ಏಕತಾರಿಯನ್ನು ಹಿಡಿದು ಸದಾ ಸಂಚಾರಶೀಲರಾಗಿ ನಾಡಿನ ನಾನಾ ಕಡೆಗಳಿಗೆ ಹೋಗಿ ಬರುತ್ತಾರೆ.

ದಕ್ಷಿಣ ಕರ್ನಾಟಕದ ಅಪಾರ ಸಂಖ್ಯೆಯ ವೃತ್ತಿಗಾಯಕರಂತೆ ಹಾಡುವುದೊಂದು ವೃತ್ತಿಯಿಲ್ಲದಿದ್ದರೂ ಅಷ್ಟೇ ಉನ್ನತ ಮಟ್ಟದ ಅಪಾರ ಸಾಹಿತ್ಯವನ್ನು ಕರಗತ ಮಾಡಿಕೊಂಡ ಸಹಸ್ರಾರು ಗಾಯಕರನ್ನು ಎಲ್ಲ ಕಡೆಯಲ್ಲೂ ಕಾಣಬಹುದು. ಗಾಯಕರನ್ನು ಎಲ್ಲ ಕಡೆಯಲ್ಲೂ ಕಾಣಬಹುದು. ಹರಿಜನರು, ಕಾಡುಗೊಲ್ಲರು, ಒಕ್ಕಲಿಗರು, ವೀರಶೈವರು, ಪರಿವಾರದವರು– ಹೀಗೆ ಒಂದೊಂದು ಮತದಲ್ಲಿಯೂ ಸುದೀರ್ಘ ಲಾವಣಿಗಳನ್ನೂ ಗೀತೆಗಳನ್ನೂ ಹಾಡುವ ಸ್ತ್ರೀಪುರುಷರು ಲಭ್ಯವಾಗುತ್ತಾರೆ. ಉತ್ತರದೇವಿ, ಈರೋಬಿ,



ಜುಂಜಪ್ಪನ ಗಣೆ

ನಾಗಮ್ಮ ಮುಂತಾದ ಕಥನಗೀತೆಗಳನ್ನು ಸ್ತ್ರೀಯರು ಹೊಲಗೆಲಸದಲ್ಲಿ, ಇತರ ಸಂದರ್ಭಗಳಲ್ಲಿ ಹಾಡಿಕೊಂಡರೆ, ದೇವರ ಉತ್ಸವ ಸಂದರ್ಭದಲ್ಲಿ ಮತ್ತು ಬೀಸುವಾಗ, ಸಹಸ್ರಾರು ಸ್ತುತಿಗೀತೆಗಳನ್ನು ಹಾಡುತ್ತಾರೆ. ಗರತಿಯ ಸಾಹಿತ್ಯ ಉನ್ನತಭಾವನೆಗಳಿಂದಲೂ ಶ್ರೇಷ್ಠ ಭಾವಗೀತೆಯ ಸತ್ತ್ವದಿಂದಲೂ ನೈಜಕಲ್ಪನೆಗಳಿಂದಲೂ ಕೂಡಿ ಅತ್ಯುತ್ಕೃಷ್ಟ ಕಾವ್ಯದ ಸೊಡಗನ್ನೂ ಸೊಗಸನ್ನೂ ಹೊಂದಿದೆ. ಬೀಸುವಾಗ ತನ್ನ ಕುಲದೈವವನ್ನು ಕುರಿತು,

ಬಂಧುಬಳಗವನ್ನು ಕುರಿತು, ತ್ಯಾಗಜೀವಿಗಳನ್ನು ಕುರಿತು ಸುಂದರ ತ್ರಿಪದಿಗಳನ್ನು ಗರತಿ ಹಾಡಿಕೊಳ್ಳುತ್ತಾಳೆ. ಬೀಸುವ ಪದಗಳಿಂದ ಆರಂಭವಾಗುವ ಗರತಿಯ ಸಾಹಿತ್ಯ ಹತ್ತು ಹಲವು ರೂಪಗಳಲ್ಲಿ ಬದುಕಿನ ಬೇರೆ ಬೇರೆ ಸಂದರ್ಭಗಳಿಗನುಗುಣವಾಗಿ ಮೂಡಿ ಬರುತ್ತದೆ. ಮಕ್ಕಳನ್ನು ತೂಗುವಾಗ ಹಾಡುವ ಲಾಲಿಯ ಪದಗಳು, ತಿಂಗಳ ಮಾವನ ಪೂಜೆ, ಕೊಂತಿ ಪೂಜೆಗಳಲ್ಲಿ ವಿವಿಧ ಮಟ್ಟುಗಳಲ್ಲಿ ಹಾಡುವ ಸಂಪ್ರದಾಯದ ಪದಗಳು, ಮದುವೆ, ಒಸಗೆ ಮುಂತಾದ ಸಂದರ್ಭಗಳಲ್ಲಿ ಕ್ರಮವತ್ತಾಗಿ ಹಾಡುವ ಶಾಸ್ತ್ರದ ಪದಗಳು, ನಾಟಿ ಹಾಕುವಾಗ, ಕಳೆ ಕೀಳುವಾಗ, ಹಾಡುವ ಬಿಡಿಪದಗಳು– ಹೀಗೆ ಒಂದೊಂದು ಬಗೆಯಲ್ಲಿಯೂ ಅಪಾರ ಸಂಖ್ಯೆಯ ತ್ರಿಪದಿಗಳು ಹಳ್ಳಿಹಳ್ಳಿಗಳಲ್ಲೂ ಲಭ್ಯವಾಗುತ್ತವೆ.

ಬ್ರಾಹ್ಮಣ ಸ್ತ್ರೀಯರು ಪರಂಪರಾನುಗತವಾಗಿ ಕಂಠಸ್ಥ ಸಂಪ್ರದಾಯದಲ್ಲಿ ಬಂದ ವಿಶಿಷ್ಟ ಸ್ವರೂಪದ ಜನಪದಗೀತೆಗಳನ್ನೂ ಕಥನಗೀತೆಗಳನ್ನೂ ಅನೇಕ ಮಟ್ಟುಗಳಲ್ಲಿ ಹಾಡುತ್ತಾರೆ. ಸಾಹಿತ್ಯ ಹಾಗೂ ಭಾಷಾದೃಷ್ಟಿಯಿಂದ ಇತರ ಜನಪದಸಾಹಿತ್ಯಕ್ಕಿಂತ ಇದು ಭಿನ್ನ.

ಸ್ತ್ರೀಯರ ಪದಗಳಲ್ಲಿ ಕೊರವಂಜಿಗಳು ಹಾಡುವ ಹಚ್ಚೆಯ ಪದಗಳನ್ನೇ ಪ್ರತ್ಯೇಕವಾಗಿ ಪ್ರಸ್ತಾಪಿಸಬೇಕು. ಹಚ್ಚೆ ಹೊಯ್ಯುವ ಸಂಪ್ರದಾಯ ದಕ್ಷಿಣ ಕರ್ನಾಟಕದ ಎಲ್ಲ ಕಡೆಗಳಲ್ಲೂ ಕಾಣಬರುತ್ತದೆ. ಕೊರಮಿತಿಯರು ಈ ಹಚ್ಚೆಯ ಕಲೆಯಲ್ಲಿ ನೈಪುಣ್ಯ ಸಾಧಿಸಿಕೊಂಡವರು. ಹಚ್ಚೆಯನ್ನು ಎಷ್ಟೋ ಹೊತ್ತಿನವರೆಗೆ ಹೊಯ್ಯುವಲ್ಲಿ ಚುಚ್ಚುವ ನೋವು ಕಾಣದಂತೆ ಸೊಗಸಾದ ಮಟ್ಟಿನಲ್ಲಿ ಹಚ್ಚೆಯನ್ನು ಕುರಿತ ಪದಗಳನ್ನೇ ಇವರು ಹಾಡುತ್ತಾರೆ. ಕೆಲವು ಕಥನ ಗೀತೆಗಳನ್ನೂ ಈ ಸಂದರ್ಭದಲ್ಲಿ ಹಾಡುವ ವಾಡಿಕೆಯುಂಟು.

ಶಿಶುಪ್ರಾಸಗಳು ದಕ್ಷಿಣ ಕರ್ನಾಟಕದ ಜನಪದ ಸಾಹಿತ್ಯದ ಒಂದು ಅಂಗ. ಕೇವಲ ರಚನೆಯ ದೃಷ್ಟಿಯಿಂದ ಪರಿಶೀಲಿಸಬೇಕಾದ ಈ ಚುಟಕ ರೂಪದ ಸಾಹಿತ್ಯವನ್ನು ಅರಿಯದ ಮಕ್ಕಳಿಲ್ಲ.

ಕಾಗೆ ಕಾಗೆ ಕವ್ವ
ಯಾರು ಬತ್ತಾರವ್ವ
ಮಾವ ಬತ್ತಾನವ್ವ

ಹೀಗೆ ಕಾಗೆಯ ಕೂಗಿಗೊಂದು ಅರ್ಥವನ್ನು ಆರೋಪಿಸುವಂಥ ಯಾವುದೋ ನಂಬಿಕೆಯ ಸುಳುಹನ್ನೂ ಕೊಡುವಂಥ ರಚನೆಗಳು ಕಾಣಬಂದರೂ ಅವುಗಳ ಅರ್ಥ ಸ್ವಾರಸ್ಯಕ್ಕಿಂತ ರಚನಾಕೌಶಲ ಮೆಚ್ಚುವಂತಿರುತ್ತದೆ. ಬಹುಪಾಲು ಶಿಶುಪ್ರಾಸಗಳು ಮಕ್ಕಳ ಆಟಗಳ ಜೊತೆಯಲ್ಲಿ ಬೆರೆತು ಬೆಳೆದಿವೆ.

ಪುರುಷರ ಗೀತೆಗಳಲ್ಲಿ ಕಗ್ಗದ ಪದಗಳು ತ್ರಿಪದೆ ರೂಪದಲ್ಲೇ ದೊರೆಯುತ್ತವೆ. ಶೃಂಗಾರ, ಹಾಸ್ಯ, ವಿಡಂಬನೆಗಳಿಗೆ ಸಂಬಂಧಿಸಿದಂತೆ ಅಪೂರ್ವ ಗೀತೆಗಳನ್ನು ಇಲ್ಲಿ ಕಾಣಬಹುದು. ಆಲೆ ಆಡಿಸುವಾಗ, ಕಪಿಲೆ ಹೊಡೆಯುವಾಗ, ಬಂಡಿ ಓಡಿಸುವಾಗ, ಮಂದೆಗಳನ್ನು ತಡೆಯುವಾಗ ಇಂಥ ಪದಗಳು ಹೇರಳವಾಗಿ ಕೇಳಿಬರುತ್ತವೆ. ಪುರುಷರೇ ವಿಶೇಷವಾಗಿರುವ ಇಂಥ ಸಂದರ್ಭಗಳಲ್ಲಿ ಕೆಲಸದ ಬೇಸರವನ್ನೂ ರಾತ್ರಿಯ ಏಕತಾನತೆಯನ್ನೂ ನಿವಾರಿಸಿಕೊಳ್ಳಲು ಅನೇಕ ಅಶ್ಲೀಲ ಗೀತೆಗಳೂ ಪ್ರೇಮಗೀತೆಗಳೂ ಅವತರಿಸುವುದು ಇಲ್ಲಿಯೇ.

ಕೋಲಾಟ, ವೀರಮಕ್ಕಳ ಕುಣಿತ, ಬೀಸುಕಂಸಾಳೆ, ರಂಗದ ಕುಣಿತ, ಮುಂತಾದ ಕೆಲವು ಜನಪದ ನೃತ್ಯಗಳಲ್ಲೂ ಗೀತೆಗಳು ಅನಿವಾರ್ಯವಾಗಿ ಬರುತ್ತವೆ.

ದಕ್ಷಿಣ ಕರ್ನಾಟಕದ ಕೋಲಾಟದ ಪದಗಳು ಆ ನೃತ್ಯದಷ್ಟೇ ಜನಪ್ರಿಯವಾದವು. ಭಕ್ತಿ, ಪ್ರೇಮ, ಸಾಮಾಜಿಕ ವಿಡಂಬನೆಯ ಹಿನ್ನೆಲೆಯಲ್ಲಿ ಈ ಹಾಡುಗಳ ಸೃಷ್ಟಿಯಾಗಿದೆ. ವಿರಳವಾದ ಕೆಲವು ಕಥನಗೀತೆಗಳೂ ಕೋಲಾಟಕ್ಕೆ ಅಳವಟ್ಟಿರುತ್ತವೆ. ವಿವಿಧ ಮಟ್ಟುಗಳಲ್ಲಿ ತ್ರಿಪದಿಗಳನ್ನೇ ತಾಳಕ್ಕೆ ತಕ್ಕಂತೆ ಹಿಗ್ಗಿಸಿಕೊಂಡು ಆಡುವ ಕೌಶಲ ಇಲ್ಲಿ ಮೆಚ್ಚುವಂತಿರುತ್ತದೆ.

ರಂಗದ ಕುಣಿತದಲ್ಲಿ, ದೇವರ ಉತ್ಸವ ಹೊರಟಾಗ ತಮ್ಮಟೆಯ ಗತ್ತನ್ನೂ ನಿಲ್ಲಿಸಿ ಆ ದೈವವನ್ನು ಕೊಂಡಾಡುವಲ್ಲಿ, ಸೋಮನ ಕುಣಿತದಲ್ಲಿ ಸಾಮಾನ್ಯವಾಗಿ ದೈವಸ್ತುತಿಪ್ರಧಾನ ಗೀತೆಗಳೇ ಹೆಚ್ಚಾಗಿ ಹಾಡಲ್ಪಡುತ್ತವೆ.

ಅಂಟಿಕೆ – ಪಂಟಿಕೆ **(ನೋಡಿ– ಅಂಟಿಕೆ ಪಂಟಿಕೆ)** ಸಂಪ್ರದಾಯ ಮಲೆನಾಡಿನಲ್ಲಿ ದೀಪಾವಳಿಯ ಸಂದರ್ಭದಲ್ಲಿ ಕಾಣಬರುತ್ತದೆ. ಈ ಸಂದರ್ಭದಲ್ಲಿ ಮಲೆನಾಡಿನ ಯುವಕರು ಮನೆಯಿಂದ ಮನೆಗೆ, ಊರಿಂದ ಊರಿಗೆ ದೀವಳಿಗೆಯ ದೀಪವನ್ನು ಸಾಗಿಸುವಾಗ ಸುಂದರವಾದ ಗೀತೆಗಳನ್ನು ಹಾಡುತ್ತಾರೆ. ಒಳ್ಳೆಯ ಕಥನಗೀತೆಗಳೂ ಬಿಡಿಹಾಡುಗಳೂ ಅಂಟಿಕೆ–ಪಂಟಿಕೆಯ ದೀಪಧಾರಿಗಳಲ್ಲಿ ಉಳಿದು ಬಂದಿವೆ.

ಭಾಗವಂತಿಕೆ ಮೇಳ ದೀಪಾವಳಿಯಲ್ಲಿ ಬಯಲು ಸೀಮೆಯಲ್ಲಿ ಕಾಣಬರುವ ಒಂದು ವಿಶಿಷ್ಟ ಸಂಪ್ರದಾಯ. ವೈಷ್ಣವ ಸಂಪ್ರದಾಯ ಹೆಚ್ಚಾಗಿರುವ ಭಾಗಗಳಲ್ಲಿ ಈ ಮೇಳ ನಡೆಯುತ್ತದೆ. ಊರಿನ ದೇವರೊಡನೆ ಭಾಗವಂತಿಕೆ ಪದಗಳನ್ನು ಹೇಳಿಕೊಂಡು ಊರೂರ ಮೇಲೆ ಹೊರಡುವ ತಂಡವನ್ನು ದೀವಳಿಗೆಯ ದಂಡು ಎಂದು ಕರೆಯಲಾಗುತ್ತದೆ. ಇವರೆಲ್ಲ ಭಾಗವಂತಿಕೆ ಪದವನ್ನು ಹಾಡಬಲ್ಲ ಕುಶಲಿಗಳು, ಇವರ ಜೊತೆಗೆ ಕೋಡಂಗಿಯ ವೇಷಧಾರಿಯೊಬ್ಬ ಸೇರಿಕೊಂಡು ಸೂತ್ರಧಾರನಾಗಿ ನಿಲ್ಲುತ್ತಾನೆ. ಭಾಗವಂತಿಕೆಯ ಪದಗಳಲ್ಲಿ ರಾಮಾಯಣ, ಭಾರತ, ಭಾಗವತಗಳ ಕಥೆಗಳನ್ನೇ ಹಾಡಲಾಗುತ್ತದೆ. ಇಲ್ಲಿನ ಕೋಡಂಗಿಯ ನೃತ್ಯ ಗಮನಾರ್ಹವಾದುದು. ಸಾಮೂಹಿಕವಾಗಿ ಹಾಡುವ ತಂಡಗಳು ಕರ್ನಾಟಕದಲ್ಲಿ ವಿರಳವಾದರೂ ಭಾಗವಂತಿಕೆ ಮೇಳದಲ್ಲಿ ಇದೊಂದು ವೈಶಿಷ್ಟ್ಯವಾಗಿ ಉಳಿದು ಬಂದಿದೆ.

ಮಾನೋಮಿಯ ಹರಕೆಯ ಪದಗಳು ಇತ್ತೀಚೆಗೆ ಮರೆಯಾಗುತ್ತಿವೆ. ನವರಾತ್ರಿಯ ಕಾಲದಲ್ಲಿ ಕೂಲಿಯ ಮಠದ ಮಕ್ಕಳು ಅಥವಾ ಯಕ್ಷಗಾನ ತಂಡದ ಉತ್ಸಾಹಿಗಳು ತಮ್ಮ ಅಂತ್ಯಗಳ ಜೊತೆ ಊರಾಡಲು ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಶುಭಕಾಮನೆಗಳಿಂದ ಕೂಡಿದ ಚೌಪದಿಗಳನ್ನು ಹಾಡಿಕೊಂಡು ತಮಗೆ ಕಡಲೆ ಬೆಲ್ಲವನ್ನೂ ತಮ್ಮಯ್ಯಗಳಿಗೆ ಉಡುಗೊರೆಗಳನ್ನೂ ಕಾಣಿಕೆಯಾಗಿ ಪಡೆಯುತ್ತಿದ್ದರು.



ದೊಂಬಿದಾಸರ ಏಕತಾರಿ

ದಕ್ಷಿಣ ಕರ್ನಾಟಕದ ಜನಪದ ನೃತ್ಯಗಳಲ್ಲಿ ಕೋಲಾಟ, ವೀರಮಕ್ಕಳ ಕುಣಿತ, ರಂಗದ ಕುಣಿತ, ವೀರಗಾಸೆ ಕುಣಿತ ಮುಂತಾದುವು ಸಾಮೂಹಿಕ ನೃತ್ಯಗಳು. ಈ ಯಾವ ನೃತ್ಯಗಳಲ್ಲೂ ಪ್ರಧಾನವಾದ ವೇಷಭೂಷಣಗಳೇನೂ ಇಲ್ಲದಿದ್ದರೂ ಕಾಲಗೆಜ್ಜೆ, ತಲೆಯ ಪೇಟ, ನಡುವಿಗೆ ಸುತ್ತಿದ ವಸ್ತ್ರ, ನಿಲುವಂಗಿ, ವೀರಗಾಸೆಗಳು ಮುಖ್ಯವಾದುವು. ಕೋಲಾಟದಲ್ಲಿ ಕೋಲುಗಳನ್ನು ಹೊರತು ಇನ್ನಾವ ವಾದ್ಯಗಳನ್ನೂ ಬಳಸುವುದಿಲ್ಲ. ರಂಗದ ಕುಣಿತಕ್ಕೆ ತಮ್ಮಟೆ ಪ್ರಧಾನ. ವೀರಮಕ್ಕಳ ಕುಣಿತದಲ್ಲಿ ತಮ್ಮಟೆಯ ಸ್ಥಾನದಲ್ಲಿ ಚಕ್ರವಾದ್ಯ ಕಾಣಿಸಿಕೊಳ್ಳುತ್ತದೆ. ವೀರಗಾಸೆ ಕುಣಿತದಲ್ಲಿ ವೀರಭದ್ರನ ಖಡ್ಗ ಹೇಳುವುದರ ಜೊತೆಗೆ ಕರಡೆ, ಸಮೇಳ ಮುಂತಾದ ವಾದ್ಯಗಳನ್ನು ಬಳಸಲಾಗುತ್ತದೆ. ಪಟಾಕುಣಿತ ದಕ್ಷಿಣ ಕರ್ನಾಟಕದ ಮತ್ತೊಂದು ಜನಪ್ರಿಯ ನೃತ್ಯ. ಈ ಕುಣಿತವೂ ರಂಗದ ಕುಣಿತದ ಗತ್ತನ್ನೇ ಪಡೆದಿದ್ದರೂ ಉದ್ದವಾದ ಅಲಂಕೃತ ಗಳುಗಳನ್ನು (ಇದನ್ನು ಬಿರಡೆಕುಣಿತ ಎನ್ನುವುದುಂಟು) ಹಿಡಿದು ಕುಣಿಯುವುದು ಇಲ್ಲಿನ ಒಂದು ವೈಶಿಷ್ಟ್ಯ.

ಇಬ್ಬರು ಅಥವಾ ಒಬ್ಬರು ಕುಣಿಯುವ ಜನಪದ ನೃತ್ಯಗಳಲ್ಲಿ ಸೋಮನ ಕುಣಿತ, ನಂದಿಕೋಲು ಕುಣಿತ, ಲಿಂಗದ ಬೀರರ ಕುಣಿತ, ಪೂಜಾ ಕುಣಿತ, ಕರಗ ಕುಣಿತಗಳು ಮುಖ್ಯವಾದುವು. ಸೋಮನ ಕುಣಿತದಲ್ಲಿ ದೊಡ್ಡ ಮುಖವಾಡಗಳನ್ನು ಧರಿಸಿ, ಬಣ್ಣದ ವಸ್ತ್ರದ ಕಾಸೆಯನ್ನು ಹಾಕಿ ತಮ್ಮಟೆ ಮತ್ತು ಇತರ ವಾದ್ಯಮೇಳಗಳ ಹಿನ್ನೆಲೆಯಲ್ಲಿ ಕುಣಿಯಲಾಗುವುದು. ನಂದಿಕೋಲು ಕುಣಿತ ಅತ್ಯಂತ ಕಷ್ಟಸಾಧ್ಯವಾದುದು, ಸಾಹಸಯುತವಾದುದು. ಭಾರವಾದ ಅನೇಕ ಗಗ್ಗರ; ನಂದಿಗಳಿಂದ ಕೂಡಿದ ಎತ್ತರವಾದ ಕೋಲುಗಳನ್ನು ನಾಲ್ಕಾರು ಜನರ ನೆರವಿನಿಂದ ಒಬ್ಬರು ಎತ್ತಿಹಿಡಿದು ತಮ್ಮಟೆಯ ಗತ್ತಿಗೆ ಕುಣಿಯುವ ವೈಖರಿ ರೋಮಾಂಚಕಾರಿಯಾದುದು.

ಲಿಂಗದ ಬೀರರು ಲೋಹದ ಅನೇಕ ಬಿರುದಾವಳಿಗಳನ್ನು ಧರಿಸಿ ಒಂದು ಕೈಯಲ್ಲಿ ಖಡ್ಗವನ್ನು ಹಿಡಿದು ವೀರಭದ್ರನ ಹಲಗೆಯನ್ನು ಧರಿಸಿ ಖಡ್ಗವನ್ನು ಹೇಳಿಕೊಂಡು ಕುಣಿಯುತ್ತಾರೆ. ವಿಶಿಷ್ಟವಾದ ಆಭರಣಗಳ ಸೊಗಸು ಇಲ್ಲಿ ಗಮನಾರ್ಹವಾದುದು.

ಪೂಜಾ ಕುಣಿತ ಏಳು ಅಥವಾ ಒಂಬತ್ತು ಕಳಸಗಳ ದೇವತೆಯ ಪೂಜೆಯನ್ನು, ಕಳಸದ ಮೇಲೆ ಧರಿಸಿ ಕುಣಿಯುವ ಮತ್ತೊಂದು ಕೌಶಲಪೂರ್ಣ ನೃತ್ಯ. ನೆತ್ತಿಯ ಮೇಲೆ ಚಚ್ಚೌಕವಾದ ವಿಸ್ತಾರವಾದ ಭಾರವಾದ ಪೂಜೆಯನ್ನು ಹೊತ್ತು, ಎರಡೂ ಕೈಗಳನ್ನು ಬಿಟ್ಟು ಕುಣಿಯುವ ಒಬ್ಬನ ಜೊತೆಗೆ, ಒನಕೆಯನ್ನು ನೆತ್ತಿಯ ಮೇಲಿಟ್ಟು

ಕುಣಿಯುವ ಮತ್ತೊಬ್ಬ ಸೇರಿಕೊಳ್ಳುತ್ತಾನೆ. ತಮಟೆಯ ಗತ್ತಿನಲ್ಲಿ ಈ ನೃತ್ಯ ದೊಡ್ಡ ಅದ್ಭುತವಾಗಿ ತೋರಿಬರುತ್ತದೆ.

ಕರಗ (**ನೋಡಿ**) ಕುಣಿತ ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಪ್ರಸಿದ್ಧವಾಗಿದೆ. ನೆತ್ತಿಯಲ್ಲಿ ಅಲಂಕೃತ ಕರಗವನ್ನು ಧರಿಸಿ ಕೈಬಿಟ್ಟು ನಾನಾ ಭಂಗಿಗಳಲ್ಲಿ ಕುಣಿಯುವ ಚಾತುರ್ಯದಂತೆಯೇ ಕುಣಿತವೂ ಆಕರ್ಷಕವಾಗಿರುತ್ತದೆ.



ಜೋಗಿಗಳ ಕಿನ್ನರಿ

ಕೋಲಾಟವೊಂದನ್ನು ಉಳಿದು ದಕ್ಷಿಣ ಕರ್ನಾಟಕದ ಎಲ್ಲ ಜನಪದ ನೃತ್ಯಗಳಿಗೂ ಧಾರ್ಮಿಕ ಹಿನ್ನೆಲೆಯನ್ನು ಆರೋಪಿಸಬೇಕಾಗುತ್ತದೆ. ಯಾವುದೊ ಧರ್ಮದ, ದೈವದ ಹೆಸರಿನಲ್ಲಿ ಈ ನೃತ್ಯಗಳು ನಡೆಯುತ್ತವೆ. ಅಲ್ಲದೆ ಇವು ಕೆಲವು ವಿಶಿಷ್ಟವಾದ ಸಂದರ್ಭಗಳಲ್ಲಿ ಮಾತ್ರ ಕಾಣಬರುತ್ತವೆ. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ ಸಿನೆಮಾ ಹಾಗೂ ಕಂಪನಿ ನಾಟಕಗಳಿಂದಾಗಿ ಇತ್ತೀಚೆಗೆ ಸಂಪೂರ್ಣವಾಗಿ ಮರೆಯಾಗುತ್ತಿದ್ದರೂ ಅಲ್ಲಲ್ಲಿ ಇಂದಿಗೂ ಉಸಿರಾಡುತ್ತಿದೆ. ಯಕ್ಷಗಾನ ಬಯಲಾಟ, ಸೂತ್ರದ ಗೊಂಬೆಯಾಟ, ತೊಗಲುಗೊಂಬೆಯಾಟಗಳು ಸಮಗ್ರ ದಕ್ಷಿಣ ಕರ್ನಾಟಕದ ಪ್ರಸಿದ್ಧ ಮೇಳಗಳಾಗಿದ್ದವು. ಮೂಡಲಪಾಯ ಎಂದು ಪ್ರಸಿದ್ಧವಾದ ಯಕ್ಷಗಾನ ಸಂಪ್ರದಾಯ ಹಾಡುಗಾರಿಕೆ, ಮಾತುಗಾರಿಕೆ, ವೇಷಭೂಷಣ, ಕುಣಿತ ಎಲ್ಲದರಲ್ಲಿಯೂ ಬಹುಮಟ್ಟಿಗೆ ದಕ್ಷಿಣ ಕನ್ನಡದ ಎರಡು ಪ್ರಸಿದ್ಧ ಸಂಪ್ರದಾಯಗಳಾದ ತೆಂಕತಿಟ್ಟು ಬಡಗುತಿಟ್ಟುಗಳಿಂದ ಭಿನ್ನವಾಗಿ ಹಳ್ಳಿಹಳ್ಳಿಯಲ್ಲಿಯೂ ಜನಪ್ರಿಯವಾಗಿತ್ತು. ಸೂತ್ರದ ಗೊಂಬೆಯಾಟದಲ್ಲಿ ತಿಪಟೂರು ಸಮೀಪದ ಹೀಚನೂರು, ಬೆಳ್ಳೂರು ಮಾಗಡಿ ಹಾಗೂ ನಂಜನಗೂಡು ಸುತ್ತಿನ ಮೇಳಗಳೂ ಕರ್ನಾಟಕದ ಬಯಲು ಸೀಮೆಯಲ್ಲೆಲ್ಲ ಕಾಣಬರುತ್ತದೆ. ಮಲೆನಾಡಿನ ಭಾಗಗಳಲ್ಲಿ ಘಟ್ಟದ ಕೆಳಗಿನ ಯಕ್ಷಗಾನ ಸಂಪ್ರದಾಯಗಳ ಪ್ರಭಾವವಿರುವುದನ್ನು ಕಾಣಬಹುದು.

ದಕ್ಷಿಣ ಕರ್ನಾಟಕ ಜಾನಪದದ ಎಲ್ಲ ಬಗೆಗಳಲ್ಲೂ ತನ್ನ ಪ್ರಾಮುಖ್ಯವನ್ನು ಕಾಪಾಡಿಕೊಂಡು ಬಂದಿದೆ. ಜನಪದ ಕಥೆ, ಗಾದೆ, ಒಗಟುಗಳಲ್ಲಿ ಈ ಪ್ರದೇಶಕ್ಕೆ ಗಣ್ಯವಾದ ಸ್ಥಾನ ಲಭ್ಯವಾಗುವುದೆಂಬುದಕ್ಕೆ ಉತ್ತಮ ನಿದರ್ಶನವಾಗಿ ಒಳ್ಳೆಯ ಸಂಕಲನಗಳು ಪ್ರಕಟವಾಗಿವೆ. ನಂಬಿಕೆಗಳು, ಆಚಾರ, ವೈದ್ಯ, ಅಡುಗೆ, ಕ್ರೀಡೆಗಳು, ಸಂಪ್ರದಾಯಗಳು ಮುಂತಾದವುಗಳ ಬಗ್ಗೆಯೂ ಸಾಕಷ್ಟು ಅಭ್ಯಾಸ ನಡೆಯುತ್ತಿದ್ದು ಆ ಕ್ಷೇತ್ರದಲ್ಲಿಯೂ ಅದ್ವಿತೀಯವಾದ ಸಾಧನೆ ಕಂಡುಬರುತ್ತಿದೆ. ಸಮಗ್ರ ಕರ್ನಾಟಕದ ಸಂಸ್ಕೃತಿಗೆ ಈ ಪ್ರದೇಶದ ಕಾಣಿಕೆ ಅಲ್ಪವಾದುದೇನಲ್ಲ ಎಂಬುದು ಇದರಿಂದ ಶ್ರುತ ಪಡುತ್ತದೆ. (ಜಿ.ಎಸ್.ಪಿ.)

**ಉತ್ತರ ಕರ್ನಾಟಕದ ಜಾನಪದ:** ಪಂಪ, ಪೊನ್ನ, ದುರ್ಗಸಿಂಹ, ನಯಸೇನ, ಹರಿಹರ, ರಾಘವಾಂಕ, ಕುಮಾರವ್ಯಾಸ ಮುಂತಾದವರ ಗ್ರಂಥಗಳಲ್ಲಿ ಗಾದೆಗಳ ಹಾಗೂ ಜನಪದ ಕಥೆಗಳ ಅನೇಕ ಉಲ್ಲೇಖಗಳಿವೆ. ಜೋಕುಮಾರನ ಉಲ್ಲೇಖ ಶ್ರೀಧರಾಚಾರ್ಯನ ಜಾತಕತಿಲಕದಲ್ಲಿದೆ (1049). ಗಲಗಲಿ ಅಮ್ಮನವರ ಮದುವೆಯ ಹಾಡುಗಳೂ ಹೆಳವನಕಟ್ಟೆ ಗಿರಿಯಮ್ಮನವರ (18ನೆಯ ಶತಕ) ದಶಾವತಾರದ ಹಾಡುಗಳೂ ಹರಪನಹಳ್ಳಿಯ ಭೀಮಯ್ಯನ ಹಾಗೂ ಸಾವಂತ್ರಾದೇವಿಯ ಹಾಡುಗಳೂ ಜಾನಪದ ಸರಣಿಯನ್ನು ಹೊಂದಿವೆ.

ಅಬ್ಬೆ ದುಬಾಯ್ (1816) ಉತ್ತರ ಕರ್ನಾಟಕದ ನಾಲ್ಕು ಜನಪದ ಕಥೆಗಳನ್ನೂ ಗಾದೆಗಳನ್ನೂ ನಂಬಿಕೆಗಳನ್ನೂ ತನ್ನ ಗ್ರಂಥದಲ್ಲಿ ತಂದಿದ್ದಾನಲ್ಲದೆ 1871ರ ಮೊದಲೇ ಕೆಲವು ಕ್ರೈಸ್ತ ಪಾದ್ರಿಗಳು ಈ ತೆರನಾದ ಸಂಗ್ರಹ ಮಾಡಿದ್ದರು. ಕಿಟ್ಟೆಲ್, ಫ್ಲೀಟ್, ಬಿ.ಎಲ್.ರೈಸರೂ ಲಾವಣಿ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದರು.

ಹಲಸಂಗಿಯ ಮಧುರಚೆನ್ನ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ– ಇವರು ಕೂಡಿ ಪ್ರಕಟಿಸಿದ ಗರತಿಯ ಹಾಡು (1931) ಹೆಣ್ಣಿನ ವಿವಿಧ ಜೀವನದ ಧ್ವನಿಪೂರ್ಣವಾದ ಸುಂದರ ತ್ರಿಪದಿಗಳ ಸಂಕಲನ. ಇಲ್ಲಿನ ಭಾವಲಾಲಿತ್ಯ ಹಾಗೂ ಆಡುಮಾತಿನ ಸೊಗಸುಗಳು ವಿಸ್ಮಯಕಾರಿಯಾಗಿವೆ.

ಕಾಪಸೆಯವರ ಮಲ್ಲಿಗೆದಂಡೆಯಲ್ಲಿ (1935) ಸಂಪ್ರದಾಯದ ಹಾಡುಗಳೂ ಬರದ ಹಾಡು ಎತ್ತಿನ ಹಾಡಿನಂಥ ಭಾವಪೂರ್ಣ ಹಾಡುಗಳೂ ಎಳ್ಳಮಾವಾಸ್ಯೆಯ ಹಾಡಿನಂಥ ಕಥೆಯ ಹಾಡೂ ಹಾಸ್ಯದ ಹಾಡುಗಳೂ ಇದ್ದು ಇದೊಂದು ಪ್ರಾತಿನಿಧಿಕ ಸಂಗ್ರಹವಾಗಿದೆ. ಸಿಂಪಿ ಲಿಂಗಣ್ಣ ಮತ್ತು ಧೂಲಾ ಸಾಹೇಬರ ಜೀವನ ಸಂಗೀತವೆಂಬ ಸಂಕಲನದಲ್ಲಿ ಅತ್ಯುತ್ತಮವಾದ ಶೃಂಗಾರ ಲಾವಣಿಗಳಿವೆ.

ಶಿವೇಶ್ವರ ದೊಡ್ಡಮನಿಯವರ ನವಿಲೂರ ಮನೆಯಿಂದ (1952) ಗ್ರಂಥದಲ್ಲಿ ಬೇರೆಡೆ ಕಾಣದ ಕೂಲಿ, ಅಂಜಿಕೆ ಮುಂತಾದ ಪ್ರಗತಿಶೀಲ ಜನಪದ ಹಾಡುಗಳಿವೆ. ಗದ್ದಗೀಮಠದ ಸಂಗ್ರಹದಲ್ಲಿನ ಶಿವಶರಣರ ಚರಿತ್ರೆಗಳೂ ಮಹಾಭಾರತದ ಹಾಡುಗಳೂ ಹಿರಿಯ ಹಾಡುಗಬ್ಬಗಳೂ ಲೋಕಗೀತೆಗಳೂ ಸಂಪ್ರದಾಯದ ಹಾಗೂ ಕೋಲು ಪದಗಳೂ ಚೆನ್ನಾಗಿವೆ. ಎಂ. ಜೀವನ ಅವರ ಜನಪದ ಗೀತೆಗಳೂ, ಈಶ್ವರಚಂದ್ರ ಚಿಂತಾಮಣಿಯವರ ಗರತಿಯರ ಮನೆಯಿಂದ (1955), ಹಾರೇಶ ಮೇಟಿಯವರ ಹಂತಿಯ ಪದಗಳು (1960), ಕೀರ್ತಿನಾಥ ಕುರ್ತಕೋಟಿಯವರ ಸಂಗ್ಯಾ–ಬಾಳ್ಯಾ (1966), ಮತಿಘಟ್ಟ ಕೃಷ್ಣಮೂರ್ತಿಯವರ ಏಳುಕೊಳ್ಳದ ಎಲ್ಲಮ್ಮ ಎಂಬ ಸಂಗ್ರಹಗಳ ಅನಂತರ ಚಂದ್ರಶೇಖರ ಕಂಬಾರರ ಬಣ್ಣೀಸಿ ಹಾಡವ್ವ ನನ ಬಳಗ (1968), ವಿರೂಪಾಕ್ಷಗೌಡ ಮತ್ತು ಮುದೇನೂರು ಸಂಗಣ್ಣ ಅವರ ಹಳ್ಳಿಯ ಪದಗಳು (1968) ಮತ್ತು ಜ್ಯೋತಿ ಹೊಸೂರರ ಬೆರೆಸಿ ಇಟ್ಟೇನ ಬೆಲ್ಲ ನೆನಗಡಲಿ (1969) ಮೊದಲಾದ ಕೃತಿಗಳು ಪ್ರಕಟವಾಗಿ ಈ ಸಾಹಿತ್ಯದ ಹಿರಿಮೆಯನ್ನು ಎತ್ತಿಹಿಡಿದಿವೆ.

ಭಾಗವಂತಿಕೆ ಮೇಳದ ಕೋಡಂಗಿ

**ಲಾವಣಿಗಳು:** ಹಾಡುವ ಧಾಟಿಗಳ ಗತ್ತಿನ ಕುಣಿತ–ಮಣಿತ ಪ್ರಾಸಗಳ ವೈಖರಿ, ನಾಟಕೀಯ ಸಂಭಾಷಣೆಗಳ ಹದಿರು, ಹಾಡುಗಾರರ ವಿಶಿಷ್ಟವಾದ ಆಡುಮಾತಿನ ಮೋಡಿ ಸೇರಿ ಇಲ್ಲಿಯ (ವಿಶೇಷವಾಗಿ ಹಿಂದಿನ) ಲಾವಣಿಗಳ ಸೊಗಸು ಅತಿಶಯವಾಗಿದೆ. ಇವು ಗಂಡುಗಾಡಿಯ ಪದಗಳು. ಇಲ್ಲಿನ ಶೃಂಗಾರಲಾವಣಿಗಳಲ್ಲಿ ಹರಿದೇಸಿ (ತುರಾಯಿ), ನಾಗೇಸಿ (ಕಲ್ಗಿ) ಎಂಬ ರೀತಿಗಳಿವೆ.

ಪೌರಾಣಿಕ ಲಾವಣಿಗಳಲ್ಲಿ ಮಹಾಲಿಂಗಪುರದ ಕುಬಣ್ಣನವರ ವತ್ಸಲಾಹರಣ ಕಥೆಗಾರಿಕೆಯಲ್ಲಿ ಮಿಗಿಲಾದುದು. "ಜೀವನ ಸಂಗೀತ"ದಲ್ಲಿನ ಸಂಗಣ್ಣನ ಗೋಕುಲಾಷ್ಟಮಿ ಪೌರಾಣಿಕ ವಸ್ತುವಿನ ಶೃಂಗಾರಲಾಣಿ. ಬಾಗೇವಾಡಿಯ ಗೋಪಾಳಪ್ಪ, ಮುರಗೋಡದ ಕುಬಣ್ಣ, ತೇರದಾಳದ ಪ್ರಭುದೇವ ಮೊದಲಾದ ಕವಿಗಳ ಅಂಕಿತಗಳಿಂದ ಕೂಡಿದ ಪೌರಾಣಿಕ ಲಾವಣಿಗಳು ತುಂಬ ಇವೆಯೆಂದು ಬೆಟಗೇರಿ ಕೃಷ್ಣಶರ್ಮರು ಹೇಳುತ್ತಾರೆ. ಆದರೆ ಅವು ಅಚ್ಚಾದಂತಿಲ್ಲ.

ಚಾರಿತ್ರಿಕ ಲಾವಣಿಗಳು ಈಚೆಗೆ ಹೆಚ್ಚು ಬೆಳಕಿಗೆ ಬಂದಿವೆ. ಕಿತ್ತೂರ ಚೆನ್ನಮ್ಮ ಮತ್ತು ಹಲಗಲಿ ಹತಾರ ಕದನ– ಶ್ರೇಷ್ಠ ಲಾವಣಿಗಳು. ನರಗುಂದ ಬಾಬಾ ಸಾಹೇಬ, ಸಂಗೊಳ್ಳಿ ರಾಯಣ್ಣ ಮತ್ತು ಕುಮಾರರಾಮರನ್ನು ಕುರಿತ ಲಾವಣಿಗಳಲ್ಲದೆ ಇತ್ತೀಚಿನ ರಜಾಕಾರರ ಒಂದು ಲಾವಣಿಯೂ ಉಂಟು.

ವಾಸ್ತವಿಕ ಲಾವಣಿಗಳಲ್ಲಿ ಒಬ್ಬ ಒಡ್ಡರವನಿಂದ ಎಲ್.ಆರ್.ಹೆಗಡೆಯವರು ಸಂಗ್ರಹಿಸಿದ ಲಾವಣಿಯೊಂದು ನಡೆದ ಘಟನೆಯನ್ನು ವರ್ಣಿಸುತ್ತದೆ. ಹೆಣ್ಣನ್ನು ಮೋಹಿಸಿದವನೊಬ್ಬ ಅವಳು ಮಡಿದಮೇಲೆ, ಹುಗಿದ ಸ್ಥಳದಿಂದ ಅವಳ ಹೆಣವನ್ನೆಬ್ಬಿಸಿ ಅದರೊಡನೆ ಭೋಗಿಸಿದ ಕಥೆಯನ್ನು ಅದು ಹೇಳುತ್ತದೆ. ಸಂಗ್ಯಾ–ಬಾಳ್ಯಾ ಕಥೆಯ ಹೊಂಗಲ ಸಂಗ್ಯಾ ಲಾವಣಿ ಹಾಗೂ ಇತ್ತೀಚಿನ ಪಂಚವಾರ್ಷಿಕ ಯೋಜನೆಗಳ, ಕುಟುಂಬ ಯೋಜನೆಯ ಮತ್ತು ಭೂದಾನ ಚಳವಳಿಯ ಲಾವಣಿಗಳನ್ನು ನೋಡಿದರೆ ಲಾವಣಿ ರಚನೆ ಇನ್ನೂ ಬಳಕೆಯಲ್ಲಿರುವುದು ಕಂಡುಬರುತ್ತದೆ.

ವಿಡಂಬನಾತ್ಮಕ ಲಾವಣಿಗಳಲ್ಲಿ ಜೀವನ ಸಂಗೀತದ "ಅಷ್ಟರ ಮಾತಿದು" ಎಂಬುದು ನವನಾಗರಿಕತೆಯ ವಿಡಂಬನೆ. ಬಸರಿದ್ದೀನ್ಹೆಸರನ್ನೇನಿಡೂನ, ನೂಲೊ ಲ್ಯಾಕ ಚೆನ್ನೀ (ಮಲ್ಲಿಗೆ ದಂಡೆ). ಖಾಜ್ಯಾಭಾಯಿಯ "ಅಪಸ್ವರದ ಲಾವಣಿಯ ಕಥೆ– ಇವು ಸಾಕಷ್ಟು ಪ್ರಸಿದ್ಧವಾಗಿವೆ.

ಮಾಂತ್ರಿಕ ಲಾವಣಿಗಳು, ಮದ್ದುಮಾಟಗಳ ಸಲುವಾಗಿ ಬಳಕೆಯಾದುವು. ಇಲ್ಲಿ ಇದ್ದಂತಿಲ್ಲ. ಈ ವಿಭಾಗದಲ್ಲಿ ವೇದಾಂತದ ಹಾಗೂ ಸ್ತುತಿಯ ಲಾವಣಿಗಳನ್ನು ಹೇಳಬಹುದು. "ನಿರಾಕಾರದಾಗ ನೀರಿನ ಹೊರತು ಇದ್ದಿದ್ದಿಲ್ಲ ವಿನಾ", "ಅಚಿತ್ರ ಮಿಕಾ ಒಂದು ಕಂಡೆನಲಾ" ಎಂಬ ಲಾವಣಿಗಳಲ್ಲದೆ ಗುರುವಿನ ಮಹತ್ತ್ವದ ಲಾವಣಿಗಳೂ ಇಲ್ಲಿ ಕಾಣಸಿಗುತ್ತವೆ.

ದೇವುಡು ಅವರು ಸವಾಲ್ ಲಾವಣಿ ಎಂಬ ಪ್ರಶ್ನೋತ್ತರ ಲಾವಣಿಗಳನ್ನೂ ಝಡಿತಿ ಎಂಬ ಅದರ ಉಪಜಾತಿಯನ್ನೂ ಹೇಳಿದ್ದಾರೆ.

ರಂಗು ಎಂಬ ಶೃಂಗಾರಲಾವಣಿಗಳು ಬಹಳ ಸೊಗಸಾದುವು. ಉದಾ. ಸಂಪಗಿತೆನೆಯಂಥ ಹುಡುಗ, ಕರಿಹುಡುಗಿ ಇತ್ಯಾದಿ. ಗದ್ದಗೀಮಠದ ದುಂದುಮೆ ಪದಗಳಲ್ಲಿಯೂ ಇವುಗಳ ಲಕ್ಷಣಗಳನ್ನು ಗುರುತಿಸಬಹುದು. (ಲಾವಣಿ ಹಾಡುವಾಗ ಸೂರಿನವನು ಜೀಜೀ ಅಥವಾ ಗೀಗೀ ಎನ್ನುವ ಪದ್ಧತಿಯಿದೆ).

ಲಾವಣಿಕಾರರ ಹೆಸರುಗಳು ಅವುಗಳ ಕೊನೆಗಿರುವುದು ಇಲ್ಲಿನ ಪರಂಪರೆಯ ವೈಶಿಷ್ಟ್ಯ. ಮಹಾಲಿಂಗಪುರದ ರಾಣಿ–ಕುಬಣ್ಣ, ಹಲಸಂಗಿಯ ಖಾಜ್ಯಾಭಾಯಿ, ಸಿದ್ಧ–ಶಿವಲಿಂಗ ಮತ್ತು ಸಂಗೂರಾಯಪ್ಪ, ತೇರದಾಳದ ಗೋಪಾಳ ದುರ್ದುಂಡಿ ಮತ್ತು ನೇಮಣ್ಣ ಹಾಗೂ ಜನವಾಡದ ನಾನಾಸಾಹೇಬ– ಇವರು ಶ್ರೇಷ್ಠ ಲಾವಣಿಕಾರರು. ಚಾಂದಕೋಟೆಯ ಗುಡುಸಾಹೇಬ, ಕೋರಹಳ್ಳಿಯ ಸಿದುರಾಮ ತಳವಾದ ಮತ್ತು ಕೆರೂರಿನ ಸತ್ಯಪ್ಪ ಈ ಮೂವರ ಹೆಸರುಗಳನ್ನು ಸಿಂಪಿ ಲಿಂಗಣ್ಣನವರು ಸೂಚಿಸಿದ್ದಾರೆ. ಎಲ್.ಆರ್.ಹೆಗಡೆಯವರು ಸಂಗ್ರಹದಲ್ಲಿ ಹೊಸ್ತಾನ ಹುಸೇನ ಸಾಹೇಬ ಮತ್ತು ರಾವುಕುವಣ್ಣರ ಹೆಸರುಗಳಿರುವ ಲಾವಣಿಗಳಿವೆ.

**ದುಂದುಭಿ ಪದಗಳು :** ದುಂದುಭಿ ಮತ್ತು ದುಂದುಮೆ ಪದಗಳು ಹೋಳಿಯಲ್ಲಿ ಹಾಡುವ ಪದಗಳಾದರೂ ಇವುಗಳ ತಾಳ–ಲಯ, ಗತಿ, ರಾಗ ಬೇರೆ (ಗದ್ದಗೀಮಠ), ಕಲಿಕಾಲ ಹೋಳಿ, ಮಲ್ಲಸರ್ಜ ದುಂದುಭಿಗಳು ಮಲ್ಲಸರ್ಜನ ದುಂದುಮೆಯೂ ಉಂಟು. ಕುಮಾರರಾಮನ ದುಂದುಮೆ ಬಹಳ ಸೊಗಸಾಗಿದೆ.

ಕಂಬಿಯ ಪದಗಳು : ಇವನ್ನು ಕಂಬಿ ಕೋಲುಗಳನ್ನು ಹಿಡಿದು ಯಾತ್ರೆಗೆ ಹೊರಟ ಶ್ರೀಗಿರಿ ಮಲ್ಲಯ್ಯನ ಭಕ್ತರು ಶಿವರಾತ್ರಿ ಹಾಗೂ ಯುಗಾದಿಗಳಲ್ಲಿ ಹಾಡುವರು. (**ನೋಡಿ– ಕಂಬಿಯ ಪದಗಳು**)

ಹಂತಿಯ ಪದಗಳು : ಇವು ಬೈಲುಸೀಮೆಯ ಸುಗ್ಗಿಯ ಹಾಡುಗಳು, ಜಾತಿಗರ

**ಸೋಮನ ಕುಣಿತ**

ಚೌಡಯ್ಯ, ಕಿನ್ನರಿ ಬೊಮ್ಮಯ್ಯ, ಮಾದರ ಚೆನ್ನಯ್ಯ, ಮೇದಾರ ಕೇತಯ್ಯ, ಬಿಜ್ಜ ಮಹಾದೇವಿ, ಬೇಡರ ಕನ್ನಯ್ಯ, ಕುಂಬಾರ ಗುಂಡಯ್ಯ ಮೊದಲಾದ ಶರಣರ ಚರಿತ್ರೆಗಳನ್ನೂ ಎತ್ತುಗಳ ಮೇಲೆಯೂ ಬಸವಣ್ಣನವರ ಮೇಲೆಯೂ ಕಟ್ಟಿದ ಹಾಡುಗಳನ್ನೂ ಹಂತಿ ಹೊಡೆಯುವಾಗಲೂ ಏತ (ಮೊಟ್ಟೆ) ಕಾಯಕದಲ್ಲಿಯೂ ಹೇಳುವರು. ನಡುವೆ ಹಾಸ್ಯದ ಹಾಡುಗಳನ್ನೂ ಪ್ರಣಯಗೀತೆಗಳನ್ನೂ ಅನುಭವದ ಸೂತ್ರಕಥೆಗಳನ್ನೂ ಹಾಡುವರು. ಹಂತಿಯ ಪದಗಳ ಶ್ರೇಷ್ಠಕವಿ ಸಾವಳಿಗೇಶ.

ಡೊಳ್ಳಿನ ಪದಗಳು : ಬೀರೇದೇವರ ಸ್ತುತಿಪದಗಳೂ ಗದ್ಯಪದ್ಯಾತ್ಮಕವಾದ ಸಾಂಖ್ಯಿತೊಂಡನ ಕಥೆ. ರಘುಪತಿಯ ಕಥೆಗಳೂ ಕುರುಬರಿಂದ ಹೇಳಲ್ಪಡುತ್ತವೆ.

ಹೋಳಿಯ ಪದಗಳು : ಹುಬ್ಬಳ್ಳಿ ಮಂಗ್ಯಾನ ದುಂದುಮೆಯಂಥ ಶೃಂಗಾರ ಪದಗಳು ಬಳಕೆಯಲ್ಲಿವೆ. ಹರಿಜನರೂ ಕಸಬಿಯರೂ ಒಟ್ಟಾಗಿ, ಗಂಡು ಹೆಣ್ಣುಗಳು ಕೈಗೆ ಕೈ ಕೊಟ್ಟು ಹಾಡುವ ಈ ಶೃಂಗಾರದ ಪದಗಳಲ್ಲಿ ಆಶ್ಲೀಲತೆ ಇಣಕಿ ಹಾಕಿದರೆ ಆಶ್ಚರ್ಯವೇನಿಲ್ಲ.

**ಪೂಜಾ ಕುಣಿತ**

ಕರ್ಬಲಾ ಪದಗಳು : ಮೊಹರಂ ಹಬ್ಬದಲ್ಲಿ ಹೇಳುವ ಹಸನ್ ಮತ್ತು ಹುಸೇನರ ಬಲಿದಾನದ ಕಥಾನಕಗಳಿವು. ಅಲವಿ ಪದಗಳೆಂದೂ ಕರೆಯುವರು. ಇವುಗಳಲ್ಲಿ ಆಡುಮಾತಿನ ಸರಳಸೌಂದರ್ಯವೂ ಶೌರ್ಯ ಮತ್ತು ಶೋಕದ ಪರಿಣಾಮಕಾರಿಯಾದ ಭಾವನೆಗಳೂ ಇವೆಯೆಂದು ಬಿ. ಎ. ಸನದಿಯವರು ಅಭಿಪ್ರಾಯಪಡುತ್ತಾರೆ.

ಜೋಗಿಯರು, ಗೊಂದಲಿಗರು : ಮಹಾಭಾರತದ ಕಥಾನಕಗಳನ್ನು ಹಾಡುವ ಕಿಂದರಿಜೋಗಿಗಳು ಬೇರೆ. ಸವದತ್ತಿಯ ಅಥವಾ ಕೊಕಟನೂರಿನ ಎಲ್ಲಮ್ಮನ ಮಹಿಮೆಯನ್ನು ಬಿತ್ತರಿಸುವ ಜೋಗಿಯರು ಬೇರೆ. ಎಲ್ಲಮ್ಮ ಜೋಗಿಯರು ಎನ್ನೂ ಇತರ ಅದ್ಭುತರಮ್ಯ ಕಥೆಗಳನ್ನು ಹಾಡುತ್ತಾರೆ.

ಗೊಂದಲಿಗರು ಕೊಲ್ಲಾಪುರದ ತುಳಜಾಭವಾನಿಯ ಮಹಿಮೆಗಳನ್ನು ಹಾಡಿ ಕಥೆಗಳನ್ನು ವಿಸ್ತರಿಸಿ ರಾತ್ರಿ ಮೊದಲ್ಗೊಂಡು ಬೆಳಗಿನವರೆಗೆ ಕುಣಿಯುವರು. ಜೋಗಿಯರೂ ಗೊಂದಲಿಗರೂ ಕೆಲವು ಸಾರಿ ಒಂದೇ ಕಥೆ ಹೇಳಿದರೂ ಹಾಡುವ ದನಿಯಲ್ಲಿಯೂ ಚೌಡಿಕೆವಾದ್ಯದಲ್ಲಿಯೂ ಭೇದವಿದೆ. ಅಡವಿಗೆ ಗುರಿಯಾದ ರಾಜ ರಾಣಿಯರ ಕಥೆಗಳು ಹೆಚ್ಚಾಗಿ ಬರುವುದುಂಟು. ಗೊಂದಲಿಗರಲ್ಲಿ ಬಳಕೆಯಲ್ಲಿರುವ ಚಿತ್ರಶೇಖರ–ರಾಜಶೇಖರ ಕಥೆಯೂ ಜೋಗಿಗಳಲ್ಲಿ ಬಳಕೆಯಲ್ಲಿರುವ ಲೋಹಿತ ಕುಮಾರ–ಬಸಂತಕುಮಾರರ ಕಥೆಯೂ ಒಂದೇ. ಇತ್ತೀಚೆಗೆ ಸಂಗೊಳ್ಳಿ ರಾಯಣ್ಣ, ಕಿತ್ತೂರ ಚೆನ್ನಮ್ಮ ಇತ್ಯಾದಿ ಕನ್ನಡ ವೀರರ ಕಥೆಗಳೂ ಅದ್ಭುತರಮ್ಯ ಅಂಶಗಳನ್ನು ಸೇರಿಸಿ ಹಾಡತೊಡಗಿದ್ದಾರೆ.

ಹಾವೇರಿ ಕಡೆಯ ಗೊರವರು ಮೈಲಾರಲಿಂಗನ ಅವತಾರ ಕಥೆಯನ್ನು ಹೇಳುತ್ತಾರೆ.

ಹೆಂಗಸರ ಹಬ್ಬದ ಹಾಡುಗಳು : ಅರಳೆಲೆ ಬಸವನ ಹಬ್ಬದಲ್ಲಿನ ಕೋಲುಹಾಡು ಮತ್ತು ಇತರ ಹಾಡುಗಳು, ಗುಳ್ಳವ್ವನ ಪೂಜೆಯ ಹಾಡು, ನಾಗರಪಂಚಮಿಯ ಜೋಕಾಲಿಯ ಹಾಡು, ಭಾದ್ರಪದ ಶುದ್ಧ ಅಷ್ಟಮಿಯ ಜೋಕುಮಾರನ ಪೂಜೆಯ ಹಾಡು ಮತ್ತು ಗುರ್ಚಿಯ ಹಾಡು ಈ ಭಾಗದಲ್ಲಿ ವಿಶಿಷ್ಟವಾದುವು. ಬನ್ನಿಹಬ್ಬ, ಶೀಗಿ ಹುಣ್ಣಿಮೆ, ಗೌರೀಹಬ್ಬ, ದೀವಳಿಗೆ, ಶಿವರಾತ್ರಿ, ಹೋಳಿ, ಯುಗಾದಿ ಮುಂತಾದ ಹಬ್ಬಗಳ ಹಾಡುಗಳು ಉತ್ತರ ಕರ್ಣಾಟಕದ ಜಾನಪದದ ವೈವಿಧ್ಯ, ವೈಪುಲ್ಯಗಳನ್ನು ತೋರಿಸುತ್ತವೆ.

ವಾರದ ಹಾಡುಗಳು : ಎಲ್ಲ ವಾರಗಳಿಗೂ ಪ್ರತ್ಯೇಕ ಹಾಡುಗಳಿವೆ. ಮಂಗಳ ಗೌರಿಯ ಹಾಡು, ಶುಕ್ರವಾರದ ಹಾಡು ಇತ್ಯಾದಿ. ರವಿವಾರ ರಾಮನ ಹಾಡು, ಸೂರ್ಯನ ಹಾಡು. ವೈಷ್ಣವರು ಗುರುವಾರ ಶ್ರೀ ರಾಘವೇಂದ್ರ ಗುರುಗಳ ಹಾಡು ಹೇಳುತ್ತಾರೆ.

ಕೆಲಸದ ಹಾಡುಗಳು : ಜಾನಪದದಲ್ಲಿ ಗರತಿಯರು ಬೀಯಿಸುವಾಗಲೂ ಕುಟ್ಟುವಾಗಲೂ ತೊಟ್ಟಿಲು ತೂಗುವಾಗಲೂ ಹಾಡುವ ಹಾಡುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಗ್ರಹವಾಗಿವೆ. ಜಾನಪದದ ತನಿಕೆನೆಯಾಗಿ ಇವುಗಳಲ್ಲಿ ಭಾವ, ಸಂಸ್ಕೃತಿ ಒಡ ಮೂಡಿವೆ. ಪಟ್ಟ ಪಾಡೆಲ್ಲವೂ ಹುಟ್ಟು ಹಾಡಾಗಿ ಇವುಗಳಲ್ಲಿ ಕಂಗೊಳಿಸುತ್ತವೆ.

ಕಥನಕವನಗಳು : ಹತ್ತಿ ಬಿಡಿಸುವಾಗಲೂ ಗೋದಿ ಕೀಳುವಾಗಲೂ ಹಾಡುವ ಸಂಪ್ರದಾಯದಲ್ಲಿ ವಿನೋದಕ್ಕಾಗಿಯೂ ದೇವರ ಭಕ್ತಿ–ನೈವೇದ್ಯವೆಂತಲೂ ಅನೇಕ ಕಥನಕವನಗಳನ್ನು ಹಾಡುತ್ತಾರೆ. ಶಿವಶರಣರ ಚರಿತ್ರೆಯ ಹಾಡುಗಳನ್ನು ವೀರಶೈವ ಮಹಿಳೆಯರು ಈ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಕೆಲವು ಸಹ ಹಂತಿಯ ಹಾಡುಗಳನ್ನೂ

ಲಿಂಗದ ಬೀರ

ಬಳಸುವುದಲ್ಲದೆ ಕಲ್ಪನಾರಮ್ಯವಾದ ಸುಂದರ ವರ್ಣನೆಗಳಿಂದ ಕೂಡಿದ ಅರ್ಜುನಜೋಗಿಯ ಹಾಡುಗಬ್ಬವನ್ನೂ ಹಾಡುತ್ತಾರೆ.

ಗದ್ದಗೀಮಠರು ಕೊಟ್ಟಿರುವ ಕೋಲುಪದಗಳು ಹೆಣ್ಣುಮಕ್ಕಳು ಕೋಟೆ ಕಟ್ಟಿ ಕೋಲುಹಾಕಿ ಹಾಡುವಂಥದು. ಇವುಗಳಲ್ಲಿ ಶಿವ, ಗಂಗೆ, ಗೌರಿಯರ ಸ್ವಾರಸ್ಯವಾದ ಕಥೆಗಳೂ ಮಲವ್ವೆ ಸೆಟ್ಟಿ, ಸಿರಿಯಾಳ–ಚೆಂಗಳೆ, ಬಸವಣ್ಣ, ಶ್ರೀಕೃಷ್ಣ ಇವರ ಚರಿತ್ರೆಗಳಲ್ಲದೆ ಕಿತ್ತೂರಿನ ಇತಿಹಾಸದ ಕಥೆಯೂ ಸೇರಿವೆ. ಸಣ್ಣ ಸೊಸೆ ಭಾಗೀರಥಿಯ ಹಾಡು, ಕೊರವಂಜಿ ಹಾಡು, ಬರದ ಹಾಡು, ಹರಿಗೋಲ ಹಾಡು, ಗುಣಸಾಗರವ್ವನ ಹಾಡು, ಹೇಮರೆಡ್ಡಿ ಮಲ್ಲಮ್ಮನ ಹಾಡು, ಕುಮಾರರಾಮನ ಹಾಡು, ಮಲ್ಲ–ಮಲ್ಲಾಣಿಯರ ಹಾಡುಗಳಲ್ಲದೆ ಇನ್ನೂ ಅನೇಕ ಪೌರಾಣಿಕ ಜನಪದ ಕಥನಕವನಗಳು ಹೆಣ್ಣು ಮಕ್ಕಳಲ್ಲಿ ಪ್ರಚಲಿತವಾಗಿವೆ.

**ಕಥೆಗಳು :** ಈ ನಾಡಿನಲ್ಲಿ ಕಥಾಸಾಹಿತ್ಯ ಬಹು ಸಮೃದ್ಧವಾಗಿವೆ ; ಆದರೆ ಸಂಗ್ರಹ ಹೆಚ್ಚಾಗಿಲ್ಲ. ಊರು, ಕೇರಿ, ಕೆರೆ–ಕೊತ್ತಳ, ಹೊಳೆ ಹಳ್ಳ, ಮನೆ, ಹೊಲಗದ್ದೆಗಳಿಗೂ ಕಥೆಗಳುಂಟು. ಬಸವಣ್ಣ ಪಟ್ಟೆ, ನೆಟ್ಟಗಲ್ಲ–ಚಾಹುರ, ಕಲ್ಲಗುತ್ತಿ, ಹೊಲ ಇವೆಲ್ಲ ಐತಿಹ್ಯದ



ಡೊಳ್ಳು ಕುಣಿತ

ಮಾದರಿಗಳು. ದೇವಾಲಯದ ಸುತ್ತಲೂ ಕಥೆಗಳಿವೆ. ಉದಾ. ಉಗಾರದ ಪದ್ಮಾಂಬೆಯ ಕಥೆ. ಅನೇಕ ಪಾಳೆಯಗಾರರ ಐತಿಹಾಸಿಕ ಕಥೆಗಳಿವೆ. ಚಿಂಚಲಿ ಮಾಯಮ್ಮ, ಸವದತ್ತಿ ಎಲ್ಲಮ್ಮ, ಬಾದಾಮಿ ಬನಶಂಕರಿ ಮುಂತಾದ ದೇವತೆಗಳ ಮಹಿಮೆಗಳಲ್ಲಿ ಇತಿಹಾಸದ ಅಂಶಗಳುಳ್ಳ ಜನಪದ ಕಥೆಗಳು ಹಲವಿದೆ. ಅನೇಕ ಹೆಳವರು (ಹಳೆಯರು) ಹೇಳುವ ಹೊಗಳಿಕೆಗಳಲ್ಲಿ ಮನೆತನಗಳ ಕಥೆಗಳಿವೆ.

ಗೊಂದಲಿಗರೂ ಕಿಂದರಿಜೋಗಿಗಳೂ ಒಂದು ಬಗೆಯ ಚಂಪೂ ರೂಪದಲ್ಲಿ ಕಥೆ ಹೇಳುತ್ತ ಪ್ರಾಚೀನ ಜನಪದ ಕಥೆಗಳನ್ನು ಕಾದಿಟ್ಟುಕೊಂಡು ಬಂದಿದ್ದಾರೆ.

ಪಂಡಿತ ಕವಲಿ, ಸಿಸು ಸಂಗಮೇಶ, ಮೇವುಂಡಿ ಮಲ್ಲಾರಿ ಇತ್ಯಾದಿ ಅನೇಕರು ಶಿಶು ಸಾಹಿತ್ಯ ಕಥೆಗಳನ್ನು ಬರೆದು ಪ್ರಕಟಿಸಿದ್ದಾರೆ. ಉಷಾ ಮಿರ್ಜಿಯವರ ಹಾಗೂ ವಾಡೇದ ಅವರ ಜನಪದ ಕಥೆಗಳು ಪ್ರಕಟವಾಗಿವೆ.

ಬೆಟಗೇರಿ ಕೃಷ್ಣಶರ್ಮರು ಉಲ್ಲೇಖಿಸಿದ ಹೇನಿಯ ಕಥೆ. ಸಿಂಪಿ ಲಿಂಗಣ್ಣನವರ ಹಿಟ್ಟಿನ ಗೊಂಬೆಯ ಕಥೆ, ಚೋಟಪ್ಪನ ಕಥೆ, ಮಿರ್ಜಿ ಅಣ್ಣಾರಾಯರು ಹೇಳಿದ ಒಂಟೆ ಮೇಲಿನ ಶಹಜ್ಯಾನ ಕಥೆ, ನೆಲಗಡಲೆ ಕಾಲಿನ ಕಥೆ. ಗದ್ದಗೀಮಠರು ತಿಳಿಸಿದ ಕರಿಗಡುಬಿನ ಕಥೆ– ಇವು ಉತ್ತರ ಕರ್ನಾಟಕದ ಕಥಾಸಂಪತ್ತಿನ ಮುನ್ಸೂಚನೆ ಕೊಡುತ್ತವೆ.

ಹೆಗಡೆಯವರ ಸಂಗ್ರಹದಲ್ಲಿನ ಬಣಜಿಗರ ಹೆಣ್ಣಿನ ಕಥೆ, ಬಾಂಬಿ ರಾಕ್ಷಸಿ, ಆನೆ ಹೊಡೆದ ಮಹಾರಾಜನ ಕಥೆ, ಬೆಳ್ಳಿಕಟ್ಟೆ ಚಿನ್ನದ ಗಿಡದ ಕಥೆ, ರುದ್ರಶೇಖರ ಮಹಾರಾಜನ ಕಥೆ ಮುಂತಾದುವು ಉತ್ತರ ಕರ್ನಾಟಕದ ಕಥೆಗಳಾಗಿವೆ.

**ಒಗಟುಗಳು :** ಶಂ. ಬಾ. ಜೋಶಿಯವರ ಒಡಪುಗಳು ಪ್ರಕಟವಾಗಿವೆ (1946). ಗದ್ದೀಮಠರು ಹೇಳಿರುವ ಕೆಲವು ಒಗಟುಗಳು ಕೃಷ್ಣರುಕ್ಮಿಣಿಯರ ಒಗಟುಗಳನ್ನು ಹೋಲುತ್ತವೆ. ಬೆಟಗೇರಿಯವರು ಅನೇಕ ಸ್ವಾರಸ್ಯ ಒಗಟುಗಳನ್ನು ಹೇಳಿದ್ದಾರೆ. [ನೆಲ್ಲನೊಳಗಿನ ಮರಿ (ಚುರುಮರಿ), ರಾಟೆಯ ಕುರಿತಾದ ಅಡ್ಡಂಗಿ ಜುಡ್ಡಂಗಿ ಒಗಟು ಇತ್ಯಾದಿ]. ಈಶ್ವರಚಂದ್ರ ಚಿಂತಾಮಣಿಯವರ "ಗರತಿಯರ ಮನೆಯಿಂದ" ಸಂಕಲನದಲ್ಲಿ ಒಳ್ಳೆಯ ಒಗಟುಗಳಿವೆ.

ಗಾದೆಗಳು : ಕಿಟ್ಟೆಲರ ಅರ್ಥಕೋಶದಲ್ಲಿ ಇಲ್ಲಿನ ಅನೇಕ ಗಾದೆಗಳಿವೆ. ಬೈಲುಸೀಮೆಯ ಗಾದೆಗಳನ್ನೇ ಪ್ರತ್ಯೇಕವಾಗಿ ಸಂಗ್ರಹಿಸಿ ಪ್ರಕಟಿಸುವ ಅಗತ್ಯ ಇನ್ನೂ ಇದೆ.

ಜಾನಪದ ರಂಗಭೂಮಿ : ದೊಡ್ಡಾಟ, ಸಣ್ಣಾಟ, ಕಿಳ್ಳಿಕ್ಯಾತರ ಆಟ, ಮೂಡಲ ಪಾಯ– ಇತ್ಯಾದಿ ಅನೇಕ ವೈವಿಧ್ಯದ ಆಟಗಳಿವೆ. ಸಂಗ್ಯಾ–ಬಾಳ್ಯ ಒಂದು ಜನಪ್ರಿಯ ನಾಟಕ.

ಉತ್ತರ ಕರ್ನಾಟಕದ ಜಾನಪದ ಪ್ರಭಾವ ದಕ್ಷಿಣ ಕರ್ನಾಟಕದ ಕರಪಾಲದವರು, ಚೌಟಿಗೆ (ಚೌಡಿಕೆ)ಯವರು, ಗೊರವರು ಹಾಗೂ ಇತರರ ಮೇಲೆ ಗಾಢವಾಗಿದೆ. ದಕ್ಷಿಣದ ಲಾವಣಿಗಳು ಉತ್ತರ ಕನ್ನಡದಲ್ಲಿಯೂ ಪ್ರಚಾರದಲ್ಲಿವೆ.

**ಉತ್ತರ ಕನ್ನಡ ಜಿಲ್ಲೆ:** ಉತ್ತರ ಕನ್ನಡ ಜಿಲ್ಲೆಯ ಇಲ್ಲಿನ ಸಾಹಿತ್ಯಸಂಗ್ರಹ ವಿಠೋಬ ವೆಂಕನಾಯಕ ತೊರ್ಕೆಯವರಿಂದ 1933ರಲ್ಲಿಯೇ ಪ್ರಾರಂಭವಾದರೂ ಇನ್ನೂ ಬಹುಪಾಲು ಜಾನಪದದ ಸಂಗ್ರಹವಾಗಿಲ್ಲ. ತೊರ್ಕೆಯವರ "ಹಳ್ಳಿಯ ಹಾಡುಗಳು" ಹೆಣ್ಣುಮಕ್ಕಳು ಬತ್ತ ಕುಟ್ಟುವಾಗ ಹಾಗೂ ಬಾಲರನ್ನಾಡಿಸುವಾಗ ಹಾಡುವ ಸುಂದರ ತ್ರಿಪದಿಗಳ ಸಂಗ್ರಹ. ಮ. ಗ. ಶೆಟ್ಟಿಯವರ ಒಕ್ಕಲಿಗರ ಹಾಡು (1938) ಬೆಳಂಬಾರ ಭಾಗದ ಸುಗ್ಗಿ ಕುಣಿತದ ಪದಗಳನ್ನು ಒಳಗೊಂಡಿದೆ. ಅವರು ಉತ್ತರ ಕನ್ನಡದ ದೇಸಿ ಶಬ್ದಗಳನ್ನು ವಿವಿಧ ವರ್ಗಗಳಲ್ಲಿ ವಿಂಗಡಿಸಿ ಜೀವನ ಪತ್ರಿಕೆಯಲ್ಲಿ ಹಿಂದೆ ಪ್ರಕಟಿಸಿದ್ದರು. ಆತ್ಮಾರಾಮ, ವೆಂಕಟರಮಣ ಕೆರೇಕೈ, ಭಾಗೀರಥಿಬಾಯಿ ಬಳಗುಂಡಿ, ಬಾಳೆಗದ್ದೆ ಶಿವರಾಮ ಹೆಗಡೆ, ಸಾವಿತ್ರೀಬಾಯಿ, ಸುಬ್ರಾಯ ಜೋಶಿ ಮೂಲೆಮನೆ, ಜಾಗನಳ್ಳೀ ಗಣಪತಿ ಹೆಗಡೆ, ಸುಬ್ರಾಯ ಹೆಗಡೆ ಗಂಗಾಜಿ, ರಾಮಚಂದ್ರ ಭಟ್ಟ ಕಡತೋಕಾ ಇತ್ಯಾದಿ ಜನ ಹಾಡುಗಳನ್ನು ರಚಿಸಿಯೋ ಶೇಖರಿಸಿಯೋ ಜಾನಪದದ ಪೋಷಣೆ ಮಾಡಿದ್ದಾರೆ.

ಕುಮಟೆಯ ಜಿ.ಆರ್. ಹೆಗಡೆಯವರು ದೊಡ್ಡ ಪ್ರಮಾಣದಲ್ಲಿ ಜಾನಪದ ಸಂಕಲನ ಮಾಡಿದ್ದಾರೆ. ಗ್ರಾಮಜೀವನ ಮತ್ತು ಇತರ ಪತ್ರಿಕೆಗಳಲ್ಲಿ ಹಲವು ಹಾಡುಗಳನ್ನು ಮತ್ತು ವಿಮರ್ಶೆ ಲೇಖನಗಳನ್ನು ಪ್ರಕಟಿಸಿದ್ದಾರೆ. ಎಲ್.ಆರ್.ಹೆಗಡೆಯವರು ಸಂಗ್ರಹಿಸಿದ ಹಾಡುಗಳಲ್ಲಿ ತಿಮ್ಮಕ್ಕನ ಪದಗಳು ಎಂಬ ಸಂಕಲನ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದೆ. ನೂರಾರು ಕಥನಕವನಗಳೂ ಬಿಡಿಹಾಡುಗಳೂ ಜನಪದ ಕಥೆಗಳೂ ಇವರ ಸಂಗ್ರಹದಲ್ಲುಂಟು.

ಗೋಕರ್ಣದ ಕೆ.ಜಿ.ಶಾಸ್ತ್ರಿಯವರು, ಗೌರೀಶ ಕಾಯ್ಕಿಣಿಯವರು ಹಾಡು–ಕಥೆಗಳನ್ನು ಸಂಗ್ರಹಿಸಿದ್ದಾರೆ. ಹೊನ್ನಾವರದ ಎನ್.ಆರ್.ನಾಯ್ಕ ದಂಪತಿಗಳು ದೊಡ್ಡ ಪ್ರಮಾಣದಲ್ಲಿ ತ್ರಿಪದಿಗಳನ್ನು, ಇತರ ಜಾನಪದ ಸಾಹಿತ್ಯವನ್ನು ಸಂಗ್ರಹಿಸುತ್ತಿದ್ದಾರೆ. ಅಂಕೋಲ ತಾಲ್ಲೂಕಿನ ಕೆಲವು ಪ್ರಾಧ್ಯಾಪಕರೂ ವಿದ್ಯಾರ್ಥಿಗಳೂ ಸಾಮೂಹಿಕವಾಗಿ ಜಾನಪದ ಸಂಗ್ರಹದ ಪ್ರಯೋಗವನ್ನು ಮಾಡಿದ್ದಾರೆ. ಆರ್.ಎಸ್.ಪಂಚಮುಖಿಯವರ "ಕರ್ನಾಟಕ ಜಾನಪದ ಗೀತಗಳು" ಗ್ರಂಥದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿನ ಹಾಡುಗಳೇ ಅಧಿಕವಾಗಿವೆ. ಗೋಕರ್ಣದ ಸಣ್ಣಭಡತಿ ಗಣಪಕ್ಕ, ಪನ್ನ ಲಕ್ಷೀಬಾಯಿ, ಭಟಕಳದ ಶಾಂತೀಬಾಯಿ ಮುಂತಾದ ಕಳೆದ ಶತಮಾನದ ಹೆಂಗಳೆಯರ ಸಾಹಿತ್ಯವನ್ನು ಸರೋಜಿನಿ ಮಹಿಷಿಯವರು ಕಲೆಹಾಕಿದ್ದಾರೆ. ಮತಿಘಟ್ಟ ಕೃಷ್ಣಮೂರ್ತಿಯವರ "ನಾಡಪದಗಳು" ಗ್ರಂಥದಲ್ಲಿಯೂ ಈ ಜಿಲ್ಲೆಯ ಕೆಲವು ಹಾಡುಗಳಿವೆ.

ಇಲ್ಲಿನ ಜಾನಪದದಲ್ಲಿನ ಹವ್ಯಕರ ಹಾಡುಗಳು ಹೆಚ್ಚಾಗಿ ಹೆಂಗಸರು ಹೇಳುವಂಥವು. ಇವು ಮದುವೆ, ಮುಂಜಿ, ಹಬ್ಬಹರಿದಿನಗಳು, ಹಾಗೂ ಶಿಶು ಸಂಗೋಪನೆ ಮುಂತಾದ

ಮನೆವಾರ್ತೆಯ ಹಾಡುಗಳನ್ನೊಳಗೊಂಡಿದ್ದು ಜನಪದ ಸಂಸ್ಕೃತಿಯನ್ನೂ, ದೇವತಾಭಕ್ತಿಯನ್ನೂ ಪ್ರಭಾವಿ ರೀತಿಯಲ್ಲಿ ಚಿತ್ರಿಸುತ್ತವೆ. ಗದ್ದೆ, ಬೇಸಾಯ, ಕೂಲಿನಾಲಿ, ಮಾಡಿ ಜೀವಿಸುವ ಅಶಿಕ್ಷಿತ ಒಕ್ಕಲಿಗರಲ್ಲಿ ಅಪಾರವಾದ ಜಾನಪದ ಸಂಪತ್ತಿಯಿದೆ. ಅವರಲ್ಲಿ ಹಾಲಕ್ಕಿ ಒಕ್ಕಲಿಗರು, ನಾಮಧಾರಿಗಳು, ಗ್ರಾಮೊಕ್ಕಲು, ಅಂಬಿಗರು, ಜೋಗಿಯರು, ತೊಮಾರಪಂತರು, ಗೊಂಡರು ಘಟ್ಟದ ಮೇಲಿನ ಕೋಟೆ ಕ್ಷತ್ರಿಯರು, ಕರೆ ಒಕ್ಕಲಿಗರು ಮುಖ್ಯರು.

ಸಂಪ್ರದಾಯದ ಹಾಡುಗಳು : ವಿವಿಧ ದೇವಾಲಯಗಳ ಜಾತ್ರೆ, ನವರಾತ್ರಿ, ಗಂಗಾಷ್ಟಮಿ ಹಾಗೂ ಸ್ಥಾನಿಕ ದೇವತೆಗಳ ಸ್ತೋತ್ರಗಳು ಇತ್ಯಾದಿಗಳ ಹಾಡುಗಳ ವರ್ಗವರ್ಗಗಳಲ್ಲಿಯೂ ಊರಿಂದೂರಿಗೆ ಬೇರೆಯಾಗಿವೆ. ಪಂಚಮುಖಿಯವರ ಸಂಗ್ರಹದಲ್ಲಿ ಇಂಥ ಸಂಪ್ರದಾಯದ ಹಾಡುಗಳು ಬಹಳವಾಗಿವೆ. ಮದುವೆಯ ವಿವಿಧ ಹಾಡುಗಳಲ್ಲಿ ಮೀನಾಕ್ಷಿಕಲ್ಯಾಣ, ಉಷಾ-ವಿವಾಹದಂಥ ಕಥನಕವನಗಳು ವಾದವಿವಾದವೂ ಇತರ ಹಾಡುಗಳೂ ಉಂಟು.

ಭಾವ, ಭಾಷೆಗಳ ಸಹಜತೆ ಸರಳತೆ ಲಾಲಿತ್ಯ ಒಕ್ಕಲಿಗರ ಹಾಡುಗಳಲ್ಲಿ ವಿಶೇಷವಾಗಿವೆ. ದೀಪಾವಳಿಯ ಬಲಿಚಕ್ರವರ್ತಿಯ ಹಾಡು, ತುಲಸಿ ಮದುವೆಯ ಹಾಡು ಗಂಟೆಹಬ್ಬದ ಗೋಪೂಜೆ ಹಾಡು, ಗಂಗಾಷ್ಟಮಿಯ ಗಂಗೆಯ ಕಥೆಯ ಹಾಡು, ಕೃಷ್ಣಾಷ್ಟಮಿಯ ಕೃಷ್ಣನ ಹಾಡುಗಳು ವಿಶೇಷವಾಗಿವೆ. ಶಿರಸಿಯ ಭಾಗದ ಹರಿಜನ ಹೆಂಗಸರ ಶಿರಸಿ ಅಮ್ಮನವರನ್ನು ಕುರಿತಾದ ಪದಗಳು, ಗುತ್ತಿ ಜಾತ್ರೆಯ ಪದಗಳು, ಮಾಸ್ತಿಕಲ್ಲಿನ ಹಾಡು, ಕೆರೆ ತೆಗೆಯುವ ಹಾಡು-ಮುಂತಾದವು ಸಂಗ್ರಹವಾಗಬೇಕಾದವು.

ಹಾಲಕ್ಕಿ ಒಕ್ಕಲಿಗರ ಹಾಗೂ ಗೊಂಡರ ತಿರುಪತಿ ತಿಮ್ಮಪ್ಪನ ಯಾತ್ರೆಯ ಹಾಡುಗಳು ವಿಶಿಷ್ಟವಾಗಿವೆ.

ತ್ರಿಪದಿಗಳು : ಜೀವನದ ವಿವಿಧ ಅನುಭವಗಳು ತ್ರಿಪದಿಗಳಲ್ಲಿ ಬಣ್ಣನೆ ಪಡೆದಿವೆ. ಅನೇಕ ಶಕ್ತಿಯುತ ಭಾವನೆಗಳು ಈ ಹಾಡುಗಳಲ್ಲಿವೆ. ಇವುಗಳಲ್ಲಿ ಹವ್ಯಕರ ಮತ್ತು ಒಕ್ಕಲಗಿತ್ತಿಯರ ಶಿಶುಗಳ ಲಾಲಿಯ ಹಾಡುಗಳೂ ಬತ್ತ ಕುಟ್ಟುವ ಹಾಡುಗಳೂ ವಿಶೇಷವಾಗಿವೆ.

ಕೃಷಿ ಪದಗಳು : ಗದ್ದೆ ಬಿತ್ತನೆಯ ಕಾಲದಲ್ಲಿಯೂ ಕಳೆ ಕೀಳುವಾಗಲೂ ಬತ್ತದ ಕದಿರುಗಳನ್ನು ತರುವಾಗಲೂ ಬತ್ತ ಅಳೆಯುವಾಗಲೂ ಹರಿಜನ ಹೆಂಗಸರು ಬತ್ತವನ್ನು ಬೇಡುವಾಗಲೂ ಹೇಳುವ ಹಾಡುಗಳುಂಟು.

ಕಥನಕವನಗಳು : ಉತ್ತರ ಕನ್ನಡ ಕಥನಕವನಗಳ ಗಣಿ. ಜೋಗಿಯರ ಮಹಾಭಾರತದ ಹಾಗೂ ಇತರ ಕಥೆಗಳ ಹಾಡುಗಳು ಪ್ರಾಚೀನ ಪರಂಪರೆಯವು. ಮಹಾಭಾರತದ ಅನೇಕ ಜಾನಪದ ಕವನಗಳು ಹಾಲಕ್ಕಿ ಒಕ್ಕಲಿಗರಲ್ಲಿಯೂ ನಾಮಧಾರಿಗಳಲ್ಲಿಯೂ ಭಟಕಳದ ಗೊಂಡರಲ್ಲಿಯೂ ಇವೆ. ಜೋಗಿಯರ ಹಾಡುಗಳಲ್ಲಿ ದ್ರೌಪದಿ ಪಗಡೆಯಾಡಿ ಕೌರವನನ್ನು ಸೋಲಿಸಿದ್ದು, ಸುಭದ್ರಾಕಲ್ಯಾಣ, ಜೋಗಿಯರ ಹುಟ್ಟಿನ ಕಥೆ, ಗೊಂಡರ ಗುರದೇವನ ಕಥೆಯಲ್ಲಿ ಭೀಮ ಹೆಣ್ಣುವೇಷದಲ್ಲಿ ಗುರು ದೇವನನ್ನು (ಕೌರವ ?) ಕೊಲ್ಲುವುದು, ಹಾಲಕ್ಕಿ ಒಕ್ಕಲಿಗರ ಭೀಮ ಕೆಂದಾಳಿರಾಯನನ್ನು ಸೋಲಿಸಿದ ಮತ್ತು ಶಂಬರಾಸುರನನ್ನು ಕೊಂದ ಕಥೆಗಳಂಥ ಜಾನಪದ ಸರಣಿಯ ಭಾರತ ಕಥೆಗಳಿವೆ. ರಾಮಾಯಣದ ಮತ್ತು ಭಾಗವತದ ವಿಶಿಷ್ಟ ಕಥೆಗಳಲ್ಲದೆ ಅನೇಕ ಜಾನಪದ-ಪುರಾಣಕಥೆಗಳ ಹಾಡುಗಳಿವೆ. ಶಿವನು ಸಿಟ್ಟಿಗೆದ್ದು ಮಣ್ಣಿನುಂಡೆಗಳನ್ನು ಒಗೆದಾಗ ಅದರಿಂದ ಗಣಪತಿ ಹುಟ್ಟಿದ್ದು, ಕುಂತ್ಯಮ್ಮನ ಮಗ ಸೂರ್ಯನಾರಾಯಣ ಗಂಗೆಯನ್ನು ಮೋಹಿಸಿ ಬಿಸಿಲುರಿಯಲ್ಲಿ ತಿರುಗುವಂತೆ ಶಾಪ ಪಡೆದದ್ದು ಇಂಥ ಕಥೆಗಳಿವೆ.

ಗದ್ದೆ ನೆಡುವ ಸಮಯದಲ್ಲಿ ಅನೇಕ ಕಥನಕವನಗಳನ್ನೂ ಕಥೆಗಳನ್ನೂ ಹೇಳುವುದುಂಟು. ಜಾಯಿ-ಮಾಯಿ ಗಾಣಿಗನ ಕಥೆ, ಗುಣಸಾಗರಿಯ ಕಥೆ, ಹೊನ್ನಮ್ಮನ ಕಥೆ, ಕಾಸರಗೋಡು ತಿಮ್ಮಣ್ಣನ ಕಥೆ, ಸಿರಿಕೌಲಿಯ ಕಥೆ, ಶಿವನೊಡನೆ ಮಕ್ಕಳನ್ನು ಬೇಡಿದ ಎಲೆಗೌರಿಯ ಕಥೆ, ಕಾಣ್ ಕಾಣ್ ಕನ್ನಡಿ, ರಾಮ ರಾಮಾ ತಂದನಾನಾ, ಏ ಗಿಣಿ ಏ ಗಿಣಿಯೇ, ನದ್ಯಾನ್ ಹೇಳೋ, ತುಂಬೆ ತುಂಬೆ, ಲೋಲೋ ಉತ್ತುಂಬೆ, ಕತುನವೆ ತಾನ, ಸುವ್ವೆ ಸುವ್ವೆ, ಸುವ್ವಾಲಿ, ಜೀಜೀಜೀ- ಮುಂತಾದ ಪಲ್ಲವಿಯ ಅಸಂಖ್ಯ ಕಥನಕವನಗಳಿವೆ. ಸಂದಾಮನ ಹಾಡು, ಗುಣಸಾಗರಿಯ ಕಥೆ, ಸೀತಾಕಲ್ಯಾಣ, ಸೀತಾವನದಾಸ, ಇತ್ಯಾದಿ, ಹೆಳವನಕಟ್ಟೆ ಗಿರಿಯಮ್ಮ, ಸಾವಂತಾದೇವಿ ಅಥವಾ ಭೀಮವ್ವ ಮುಂತಾದವರಿಂದ ರಚಿತವಾದರೂ ಇಲ್ಲಿನ ಭಾಷೆಯಲ್ಲಿ ಹಾಡಲ್ಪಟ್ಟುತ್ತವೆ.

ಗುಮಟೆ ಪದಗಳು : ಜೋಗಿಯರ ಮತ್ತು ಗೊಂಡರ ಪದಗಳನ್ನು ಬಿಟ್ಟರೆ ಗಂಡಸರ ಹಾಡುಗಳು ಬಹ್ವಂಶದಲ್ಲಿ ಇವೇ ಆಗಿವೆ. ಹಾಲಕ್ಕಿ ಒಕ್ಕಲಿಗರು, ಕೋಮಾರಪಂತರು, ಗಾಡಿಗರು, ಉಪ್ಪಾರರು, ಅಂಬಿಗರು, ಮುಕ್ತಿಗಳು ಹೆಚ್ಚಾಗಿ ಇವನ್ನು ಹೇಳುತ್ತಾರೆ.

ಸೊಗಸಾದ ಕಥನ ಕವನಗಳು, ದೇವರ ಸ್ತುತಿ ಪದಗಳು, ತತ್ತ್ವಪದಗಳು, ಹೋಳಿಪದಗಳು ಇವುಗಳಲ್ಲಿವೆ.

ಸುಗ್ಗಿ ಕೋಲಾಟದ ಪದಗಳೂ ಗಂಡಸರ ಪದಗಳೇ. ಇಲ್ಲಿ ಕಾವ್ಯಗುಣಕ್ಕಿಂತ ತಾಳದ ಗತ್ತಿಗೇ ಹೆಚ್ಚು ಪ್ರಾಧಾನ್ಯವಿದೆ. ಶೃಂಗಾರದ ಆಮೋದ, ದೇವರ ಸ್ತುತಿ, ಮತ್ತು ನಡೆದ ಘಟನೆಗಳು ಈ ಪದಗಳಲ್ಲಿ ಸೇರಿವೆ.

ಸುಗ್ಗಿ ಪದಗಳಲ್ಲಿ ಕಥನ ಕವನಗಳನ್ನು ಹೇಳುವರಾದರೂ ತುಂಡುಪದಗಳೇ ಹೆಚ್ಚು. ಇತ್ತೀಚೆಗೆ ರಂಗುಲಾಲ ಪಲ್ಲವಿಯ ಸುಗ್ಗಿ ಪದಗಳೂ ರೂಢಿಯಲ್ಲಿವೆ. ಸುಗಾವಿಯ ಹೊಲೆಯ ಹರಿಜನರ ಸುಗ್ಗಿ ಪದಗಳಲ್ಲಿ ಚಿಗರಿ ಬಂದಾದ ಹೊಲಕೆ ಎಂಬಂಥ ಬಯಲುಸೀಮೆಯ ಭಾಷೆಯ ಪದಗಳಿವೆ.

ಅಂಬಿಗರ ದೋಣಿ ಹಾಡುಗಳು : ಅಂಬಿಗರ ದೋಣಿ ಹಾಡುಗಳು ಸಂಗ್ರಹವಾಗದೆ, ಹಳೆತಲೆಗಳು ಮರೆಯಾದಂತೆ ಕಣ್ಮರೆಯಾಗುತ್ತಲಿವೆ. ಎಲ್. ಆರ್. ಹೆಗಡೆ ಅವರು ಗುಮಟೆ ಪದಗಳನ್ನೂ ಕೆಲವು ಹೆಂಗಸರ ಹಾಡುಗಳನ್ನೂ ಸಂಗ್ರಹಿಸಿದುದುಂಟು.

**ಜನಪದ ಕಥೆಗಳು :** ಉತ್ತರ ಕನ್ನಡ ಜನಪದ ಕಥಾಪರಂಪರೆ ಸಮೃದ್ಧವಾಗಿವೆ. ಗುಮಟೆಪದಗಳೂ ಜೋಗಿಯರ ಪದಗಳೂ ಜನಪದ ಕಥೆಗಳ ಕಣಜಗಳು. ಮಳೆಗಾಲದಲ್ಲಿ ಅಡಕೆಗೆ ಕೊಳೆರೋಗ ಬಾರದಂತೆ ರಕ್ಷಣೆ ಒದಗಿಸಲು ಕೊಟ್ಟೆಕಟ್ಟುವ ಸಮಯದಲ್ಲಿಯೂ ಅಡಕೆ ಸಿಪ್ಪೆ ಸುಲಿಯುವಾಗಲೂ ಕೆರೆಕಟ್ಟುವಾಗಲೂ ಗಜನಿಯ (ಚೌಳು ಭೂಮಿ) ಕಟ್ಟುಕಟ್ಟುವಾಗಲೂ ರಾತ್ರಿಯಲ್ಲಿ ಸಾಮೂಹಿವಾಗಿ ಜನ ಕೂಡಿದ ಅನೇಕ ಸಂದರ್ಭಗಳಲ್ಲಿಯೂ ಕಥೆ ಹೇಳುವ ರೂಢಿಯಿದೆ.



**ಗುಮಟೆ ವಾದ್ಯ**

ಪಟ್ಟಣದ ರಾಮಭಟ್ಟ, ಕೆಕ್ಕಾರ ಸುಬ್ರಾಯ ಗುನಗ, ವಂದೂರ ಈರು ಭಂಡಾರಿ, ಬಾಡದ ನಾರಾಯಣ ಭಂಡಾರಿ, ನವಿಲಗೋಣಕಥೆ, ಸುಬ್ಬಣ್ಣ, ಬೆತ್ತಗೇರಿ ಜೋಯಿಸರು, ಇಡಗುಂಜಿ ನರಸಿಂಹಭಟ್ಟರು, ಬಾಡದ ಮಹಾದೇವಭಟ್ಟ, ದೇವನೀಮತ, ಕಾನಗೋಡ ನರಸಿಂಹಜ್ಜ- ಇತ್ಯಾದಿ ಹಳೆತಲೆಮಾರಿನ ಹಿರಿಯ ಕಥೆಗಾರರಿದ್ದರು. ಇತ್ತೀಚೆಗೆ ಎಲ್. ಆರ್. ಹೆಗಡೆಯವರು ಸುಮಾರು ನಲವತ್ತೈದು ಕಥೆಗಳನ್ನೂ ಲೇಖಕರ ಹೆಸರುಗಳನ್ನೂ ಪತ್ರಿಕೆಗಳ ಮೂಲಕ ಪ್ರಕಟ ಮಾಡಿದ್ದಾರೆ.

ಜಿ. ಆರ್. ಹೆಗಡೆಯವರ ಸಂಗ್ರಹದಿಂದ "ಲೋಕಪ್ರಿಯ ಕಥೆಗಳು" ಪ್ರಕಟವಾಗಿದೆ. ಗೌರೀಶ ಕಾಯ್ಕಿಣಿಯವರು ಗೋಕರ್ಣದ ಮಣಿಭದ್ರನ ಕಥೆಯ ಐತಿಹ್ಯವನ್ನೂ ಸೌತೆಪಲ್ಲೆ ಕುರಿತ ಒಂದು ಅಂತೆ-ಕಂತೆಯನ್ನೂ ಉಲ್ಲೇಖಿಸಿದ್ದಾರೆ.

ಚಿಕ್ಕಮಕ್ಕಳನ್ನು ರಂಜಿಸುವ ಗುಡುಗುಡು ಗುಮ್ಮಟದೇವರು ಹೋತಪ್ಪರಾಯನ ಕಥೆ, ಹುಲಿಗೆ ನಾಮಹಾಕುವ ಕಥೆ, ಐಬಾಯಿಹುಲಿಯ ಕಥೆ ಮುಂತಾದ ಪ್ರಾಣಿಕಥೆಗಳಲ್ಲದೆ, ಆಲಾಜಾಯಿ ಹೂವಿನ ಕಥೆ, ಸುಟ್ಟವು (ಎಂಬ ಕಜ್ಜಾಯ ಬೆಳೆಯುವ) ಮರದ ಕಥೆ, ನದಿ ನಿದ್ರಿಸುವ ಕಥೆ, ವಡೆಮರನ ಕಥೆ, ಕೆಸುವಿನ ಸೊಪ್ಪಿನ ಕಥೆ, ಮಡಹಾಗಲಕಾಯಿ ಕಥೆ- ಮುಂತಾದ ವಿಶಿಷ್ಟ ಕಥೆಗಳಿವೆ. ಮದ್ದೂದ್ರಾಯನಂಥ ಹೆಡ್ಡರ ಕಥೆಗಳಿವೆ.

ಪ್ರೌಢ ಜಾನಪದ ಕಥೆಗಳ ಭಾಗ ಶ್ರೇಷ್ಠವಾಗಿದೆ. ಭಾನುಮತಿಯ ಕಥೆ, ಯುಕ್ತಿರಾಜ-ಮೈನಾವತಿ, ರಾಜಕುಮಾರಿಯ ನ್ಯಾಯತೀರ್ಪು, ಹೆಣ್ಣು-ಗಜನಿಂಬೆ ಹಣ್ಣು, ಎಂದೂ ಅರಳದಿದ್ದ ಮಲ್ಲಿಗೆ ಮುಂತಾದವು ಪ್ರಪಂಚದ ಉತ್ತಮ ಜಾನಪದ ಕಥೆಗಳಿವೆ ಸರಿದೊರೆಯಾಗಿವೆ. ಮನೋವೈಜ್ಞಾನಿಕ ತತ್ತ್ವಗಳನ್ನು ಪ್ರತಿಬಿಂಬಿಸುವ ಕಥೆಗಳುಂಟು. "ಬಂಗಾರದ ಕಾಲುದೀಪ"ದಲ್ಲಿ ತಂದೆಯೇ ಮಗಳನ್ನು ಮೋಹಿಸುತ್ತಾನೆ. ವಿಧಿ ಬರೆದ ಬರಹದಲ್ಲಿ (ಅಪ್ರಕಟಿತ) ಮಗನೇ ತಿಳಿಯದೆ ತಾಯಿಯನ್ನು ಮದುವೆಯಾಗುವ ವೃತ್ತಾಂತವಿದೆ. ಜಾನಪದ ಕಥಾಮೃತದ "ಅವಳ ಮಗನೇ ಅವಳ ಗಂಡ" ಕಥೆಯ ವಸ್ತುವೂ ಇದೇ. ಆದರೆ ತಾಯಿ ಮಗನಿಂದ ಮಗುವನ್ನು ಪಡೆಯುವುದು ನಮ್ಮಲ್ಲಿನ ಕಥೆಯ ವೈಶಿಷ್ಟ್ಯ. ಅಣ್ಣನೇ ತಂಗಿಯನ್ನು ಮೋಹಿಸಿ ಮದುವೆಯಾಗಲೆಳಸುವ ಬಿಂಬಾಲಿಯ ಕಥೆಯಿದೆ.

ಸಮಸ್ಯಾತ್ಮಕ ಕಥೆ ಈ ಜಿಲ್ಲೆಯಲ್ಲಿ ಕಡಿಮೆ. "ಯುಕ್ತಿರಾಜ-ಮೈನಾವತಿ"ಯಲ್ಲಿ ಇಂಥ ಮೂರು ಕಥೆಗಳಿವೆ.

ಸ್ಥಳಕಥೆ-ದಂತಕಥೆ ಬಹಳ ಉಂಟು. ಅವುಗಳ ಸಂಗ್ರಹ ಕಾರ್ಯ ಇನ್ನೂ ಆಗಬೇಕಾಗಿದೆ.

ಬರೇ ರುಂಡವನ್ನು ಹಡೆದ ಕಥೆ, ಮುತ್ತಿನ ಗೊಂಚಲನ್ನು ಮೇಯುವ ಐರಾವತ, ಒರಳ ಕಲ್ಲುಗುಂಡನ್ನು ನುಂಗಿ ಅರವತ್ತು ಖಂಡುಗದನ್ನವನ್ನು ಜೀರ್ಣಿಸಿಕೊಳ್ಳುವ ಧಾಂಡಿಗ ಮುಂತಾದ ವಿಶಿಷ್ಟ ಸರಣಿಗಳಿವೆ.

ಅನೇಕ ಕಥೆ–ಗಾದೆಗಳಿವೆ. "ಬಿಟ್ಟರೆ ಸಿಕ್ಕ–ಉಂಡರೆ ಮಲಗ" ಸ್ವಾರಸ್ಯವಾದ ಒಂದು ಗಾದೆ–ಕಥೆ. "ಅದೇ ಭಟ್ಟ ಸೋದೆಗೆ ಹೋದ" ಎಂಬುದು. ಯಂಕು ಪಣಂಬೂರಿಗೆ ಹೋದ ಕಥೆಯಂಥದು. ಅರಸನ ಮಗಳಿಗೆ ಬತ್ತದ ಸುಂಗು (ಸೂಜಿಯಂಥ ತುದಿ) ನಟ್ಟಿದ್ದು ಅಶ್ಲೀಲ ಗಾದೆ–ಕಥೆ.

ಒಗಟುಗಳು : ಮ. ಗ. ಶೆಟ್ಟಿಯವರು ತಮ್ಮ ಸಂಗ್ರಹದಲ್ಲಿ ಐವತ್ತು ಅರವತ್ತು ಒಗಟುಗಳನ್ನು ಸಂಗ್ರಹಿಸಿದುದುಂಟು. ಮದುವೆಯಲ್ಲಿ ಬೀಗ–ನೆಂಟರ ಕಡೆಯವರು ಇದಿರುಬದಿರಾಗಿ ಕೂತು ಸೋಬಾನೆ, ಒಗಟುಗಳ ಪ್ರಶ್ನೋತ್ತರಗಳನ್ನು ಹೇಳುವ ಸ್ವಾರಸ್ಯವಾದ ಪದ್ಧತಿಯ ಐವತ್ತು ಹಾಡುಗಳಲ್ಲಿ ಸದ್ಯಕ್ಕೆ ಅರ್ಧದಷ್ಟನ್ನು ಉಳಿಸಲು ಸಾಧ್ಯವಾಗಿದೆ.

ಗಾದೆಗಳು : ಹಳ್ಳಿಹಳ್ಳಿಯ ಮೂಲೆಗಳಲ್ಲಿ ಅಸಂಖ್ಯ ಗಾದೆಗಳುಂಟು. ಎಲ್. ಆರ್. ಹೆಗಡೆಯವರು ಮುನ್ನೂರರಷ್ಟು ಹೊಸ ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ರಾಗೌ ಅವರ ನಮ್ಮ ಗಾದೆಗಳು ಒಂದು ವಿಶಿಷ್ಟ ಸಂಗ್ರಹ.

ಜನಪದ ನಾಟಕ : ಯಕ್ಷಗಾನ ಪದಗಳಲ್ಲಿ ಜನಪದ ಸಾಹಿತ್ಯದ ಲಕ್ಷಣಗಳಿವೆ. ಎಷ್ಟೋ ಹಳ್ಳಿ ಹಾಡುಗಳು ಯಕ್ಷಗಾನ ಮಟ್ಟಿನಲ್ಲಿವೆ. "ಧುಂಡೋಜಿಯಂಥಾ ಪುಂಡ ಶಿಪಾಯೀ ಮಂಡಲದೊಳಗಿಲ್ಲ" ಎಂಬುದು ಹಾಸ್ಯಗಾರನ ಒಂದು ಹಾಡಿನ ಪಲ್ಲವಿ.

ಭಟಕಳ ಭಾಗದ ಜೋಗಿಯರಲ್ಲಿ ಆನೆಶೇಖರ ಮಹಾರಾಜನ ಕಥೆಯನ್ನು ಜನಪದ ಗೀತೆಯ ಹಿನ್ನೆಲೆಯಲ್ಲಿ ವೇಷಭೂಷಣಗಳನ್ನು ಧರಿಸುವ ಪಾತ್ರಧಾರಿಗಳು ಅಭಿನಯಿಸುವ ವಿಶಿಷ್ಟ ಜನಪದ ಆಟವಿದೆ. ಹಗರಣ (ಪಗರಣ) ಎಂದು ಜಾತ್ರೆಗಳ ರಾತ್ರಿಗಳಲ್ಲಿಯೂ ಇತರ ವಿಶೇಷ ಪ್ರಸಂಗಗಳಲ್ಲಿಯೂ ವಿವಿಧ ಸೋಗುಗಳನ್ನಭಿನಯಿಸುವಾಗ ಬಳಸುವ ಪದಗಳಿವೆ.

ಉದಾ : ಅಣ್ಣ ಬಂದ ಬಾಳ ದಿನದಿನಕ

ಕಂಬಳಿ ಮೇಲೆ ಕುಳಿರಣ್ಣ ಉಣಲಾ ಕ

ಉತ್ತರ ಕನ್ನಡ ಜಾನಪದಗಳಲ್ಲಿ ಕೊಂಕಣಿಯ ಹಾಗೂ ಕುಣಬಿ ಮರಾಠಿಗಳ ರಾಮಾಯಣ ಭಾರತಗಳ ಹಾಡುಗಳೂ ಇತರ ಹಾಡುಗಳೂ ಇರುತ್ತಿದ್ದು ಅವುಗಳ ಸಂಗ್ರಹವಿನ್ನೂ ಆಗಬೇಕಾಗಿದೆ. (ಎಲ್.ಆರ್.ಎಚ್.)

**ದಕ್ಷಿಣ ಕನ್ನಡ ಜಿಲ್ಲೆ:** ಕರ್ನಾಟಕದ ಜಾನಪದ ಸಂಪತ್ತಿಗೆ ದಕ್ಷಿಣ ಕನ್ನಡದ ಕೊಡುಗೆ ಗಮನೀಯವಾದುದು. ವಿವಿಧ ನಂಬಿಕೆಗಳ, ರೀತಿನೀತಿಗಳ ಆಗರವಾಗಿದೆ, ಕರ್ನಾಟಕದ ಈ ಸೆರಗು.

ಭೂತಾರಾಧನೆ ಇಲ್ಲಿ ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳೆದುಬಂದಿದೆ. ಇದು ಇಲ್ಲಿನ ಜನರ ಎಲ್ಲ ವಿಚಾರ, ವ್ಯವಹಾರ, ಸಾಹಿತ್ಯ, ಕಲೆಗಳ ಮೇಲೆ ತನ್ನದೇ ಆದ ಮುದ್ರೆಯನ್ನೊತ್ತಿದೆ. ಚಂದ್ರಯಾತ್ರೆಯ ಈ ದಿನಗಳಲ್ಲೂ ಅದು ಜೀವಂತವಾಗಿ, ಪ್ರಭಾವಶಾಲಿಯಾಗಿ ಉಳಿದಿದೆ. ಭೂತಾರಾಧನೆಯಲ್ಲಿ ನೇಮ, ಕೋಲ, ಅಯನ, ಮೆಚ್ಚಿ, ಬಂಡಿ, ತಂಬಿಲ, ಅಗೆಲು– ಇತ್ಯಾದಿ ಹಲವು ರೀತಿಗಳಿವೆ. ವರ್ಷದ ಬೇರೆ ಬೇರೆ ಕಾಲದ ಈ ಭಾಗದ ಬೇರೆ ಬೇರೆ ಕಡೆಗಳಲ್ಲಿ ಜನಪ್ರಿಯ ವಿನೋದ ವೇಷಗಳಾಗಿದ್ದೂ ಕೆಲವೊಂದು ನಂಬಿಕೆಗಳ ನೆರಳನ್ನು ಹೊದ್ದಿರುವ ಆಟಿಕಳೆಂಜ, ಸೋಣಜೋಗಿ, ಕೋರತನಿಯ ಸಿದ್ದವೇಷ, ಎರುಕೋಲ, ಕುದುರೆಕೋ, ಗೊಂದಲ ಕುಣಿತ– ಇವೆಲ್ಲವುಗಳಲ್ಲಿ ಭೂತಪೂಜೆಯ ಪ್ರಭಾವ ನಿಚ್ಚಳವಾಗಿದೆ. ಭೂತೋಪಾಸನೆಯಲ್ಲಿ ವೇಷಧರಿಸುವವರು ಪಂಬದ, ಪರವ, ಪಾಣಾರ ನಲ್ಕೆಯ, ಮಲೆಯ ಇತ್ಯಾದಿಯಾಗಿ ಸಮಾಜದ ಕೆಳವರ್ಗದಲ್ಲಿದ್ದವರು. ಭೂತಾರಾಧನೆಯಲ್ಲಿ ಬಣ್ಣಗಾರಿಕೆ, ಕುಣಿಕೆ, ಉಡುಗೆ ತೊಡುಗೆ, ವಾದ್ಯವಾದನ, ಆಭರಣ ವಿಶೇಷ, ಮುಗ ಮೂರ್ತಿಗಳು, ಖಡ್ಗಲೆ, ಮಣಿ, ಕೂಚಿ, ಗಿಂಡೆ, ಗಗ್ಗರ, ಮಣಿ, ಮಂಚ ಇತ್ಯಾದಿ ಹಲವಾರು ತರದ ಕಲಾಪರಿಕರಗಳು ಸಮ್ಮಿಳನಗೊಂಡಿವೆ. ಭೂತದ ಶೃಂಗಾರಕ್ಕೆ ನಿರ್ಮಿಸುವ ಅಣಿಯ ವೈವಿಧ್ಯ, ವೈಚಿತ್ರ್ಯ ಅಭ್ಯಾಸಯೋಗ್ಯವಾಗಿವೆ. ಇಲ್ಲಿನ ಜನಪದ ಸಾಹಿತ್ಯದ ಪ್ರಧಾನ ಅಂಶವಾದ ಪಾಡ್ದನಗಳಲ್ಲಿ (**ನೋಡಿ– ಪಾಡ್ದನ**) ಹೆಚ್ಚಿನವು ಭೂತಾರಾಧನೆಗೆ ಸಂಬಂಧಪಟ್ಟವುಗಳೇ.

ಅಭಿಜಾತವಾಗಿದ್ದೂ ಇಲ್ಲಿನ ಜನಪದದ ಮೇಲೆ ಅಪಾರ ಪ್ರಭಾವಬೀರಿದ ಕಲೆ ಯಕ್ಷಗಾನ ಬಯಲಾಟ. ತೆಂಕು ಮತ್ತು ಬಡಗು ಈ ಎರಡೂ ತಿಟ್ಟುಗಳು ಜನರ ಸಂಸ್ಕೃತಿಯನ್ನು ರೂಪಿಸುವುದರಲ್ಲಿ ಪ್ರಧಾನ ಪಾತ್ರ ವಹಿಸಿವೆ.

ದೇವಸ್ಥಾನ ಭೂತಸ್ಥಾನ, ಗರೋಡಿ, ಆಲಡೆ, ನಾಗಬನ, ಬ್ರಹ್ಮಸ್ಥಾನ, ಕಟ್ಟೆ ಕಲ್ಲು, ಮಣಿ, ಮಂಚ– ಇವು ಕೆಲವುಗಳಲ್ಲಿ ಈ ಜನ ತಮ್ಮ ದೈವತ್ವವನ್ನು ಕೇಂದ್ರೀಕರಿಸಿ ಆರಾಧಿಸುತ್ತಾರೆ.

ದೇಗುಲಗಳಲ್ಲಿ ಕಾಲಕಾಲಕ್ಕೆ ಜರಗುವ ಉತ್ಸವಗಳ ಅಂಗಳಾದ ಉತ್ಸವ ಮೂರ್ತಿಯ ಬಲಿ, ತೆಪ್ಪೋತ್ಸವ ಆರಾಟ, ಪೇಟೆ ಸವಾರಿ, ಕಟ್ಟೆಪೂಜೆ, ಕೆರೆದೀಪ, ಭೂತಭೇಟಿ, ವಿವಿಧ ವಾದನಗಳ ಬಲಿಗಳಲ್ಲಿ (ಪ್ರದಕ್ಷಿಣೆ) ಮಾತ್ರವಲ್ಲ ಇತರ ಕಟ್ಟಳೆಗಳಲ್ಲೂ ಪ್ರಾದೇಶಿಕತೆ ಇದೆ. ಪ್ರಾಣಿಬಲಿ ಸಹಿತವಾದ ಮಾರಿಪೂಜೆ ಮತ್ತು ಗ್ರಾಮದ ಗಡಿಯ ಹೊರಗೆ ಮಾರಿ ಓಡಿಸುವ ಸಂಪ್ರದಾಯವೂ ಇಲ್ಲಿ ಸಾಮಾನ್ಯ.

ಸಿರಿಯ ಸಂಧಿ ಎಂಬ ದೀರ್ಘ ಪಾಡ್ದನದಲ್ಲಿ ಬರುವ ಸಿರಿ, ಕುಮಾರ ಸ್ವಾಮಿ ಅಳ್ವೆದಿ, ಅಬ್ಬಗೆ, ದಾರಗೆ, ಸೊನ್ನೆ, ಗಿಂಡಿ ಈ ಪರಿವಾರದ ವ್ಯಕ್ತಿಗಳು ಗ್ರಾಮೀಣ ಗಂಡು ಹೆಣ್ಣುಗಳ ಮೈತುಂಬಿ ದರ್ಶನ ಬರುವ ಸೂಕೆ ಎಂಬ ಸಂಪ್ರದಾಯದಲ್ಲಿ ಸಾಮಾನ್ಯವಾಗಿದೆ. ಇದರ ಸಾಮೂಹಿಕ ದೃಶ್ಯವನ್ನು ಮೂಲ್ಕಿಯ ಹತ್ತಿರದ ಕವತಾರು ಮತ್ತು ಉಡುಪಿಯ ಹತ್ತಿರದ ಹಿರಿಯಡ್ಕ ದೇವಸ್ಥಾನಗಳಲ್ಲಿ ಮೇಷಮಾಸದ ಹುಣ್ಣಿಮೆಯ ದಿನ ಈಗಲೂ ಕಾಣಬಹುದು. ಬೇರೆ ಕೆಲವು ದೇವಸ್ಥಾನಗಳಲ್ಲೂ ಈ ಸಂಪ್ರದಾಯ ಇದೆ.

ಭೂತ ಕುಣಿತ

ದೇಶದ ಯಾವ ಕಡೆಗಳಲ್ಲೂ ಕಾಣಸಿಗದ ಕೋಣಗಳ ಓಟದ ಸ್ಪರ್ಧೆಯಾಟವಾದ ಕಂಬಳ (**ನೋಡಿ– ಕಂಬಳ**) ಇಲ್ಲಿನ ಪ್ರಮುಖ ಜಾನಪದ ವಿನೋದಗಳಲ್ಲಿ ಒಂದು. ಈ ಓಟದಲ್ಲಿ ಕನಪಲಯಿ, ಗೋರಪಲಯಿ, ಪುಡಿಪು, ನೇಗಿಲು ಎಂಬಿತ್ಯಾದಿ ವಿವಿಧ ವಿಧಾನಗಳಿವೆ.

ಕೋಳಿ ಅಂಕ (**ನೋಡಿ– ಕೋಳಿ ಅಂಕ**) ಈ ಪ್ರದೇಶದ ಮತ್ತೊಂದು ಜಾನಪದ ಮನರಂಜನೆ, ಬಾಳು (ಸಪೂರವಾದ ಕತ್ತಿ) ಕಟ್ಟಿದ ಕೋಳಿ ಕಾಳಗದಲ್ಲಿ ಜೂಜು ಸಾಮಾನ್ಯ.

ತೆಂಗಿನಕಾಯಿ ಕಟ್ಟುವುದು, ತಪ್ಪಂಗಾಯಿ, ಚೆನ್ನೆಯಾಟ, ಕುಟ್ಟಿದೊಣ್ಣೆ, ಪಲ್ಲಿ ಹಿಡಿತ, ಸತ್ತಿಕಲ್ಲು, ಸೂಟೆದಾರೆ– ಇವು ಇನ್ನು ಕೆಲವು ಆಟ, ಪಂದ್ಯಾಟಗಳು.

ಚೆಂಡಾಟ ಇಲ್ಲಿನ ಉತ್ಸಾಹಿಗಳ ಹುಮ್ಮಸಿನ ಆಟ. ಕೆಲವೊಮ್ಮೆ ಇದಕ್ಕೆ ಧಾರ್ಮಿಕ ಹಿನ್ನಲೆಯೂ ಕಾಣುತ್ತದೆ. ಈ ಜಿಲ್ಲೆಯ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಪೊಳಲಿ ಚೆಂಡಿನ ಉತ್ಸವ ಬಹಳ ಪ್ರಸಿದ್ಧವಾದುದು. ಇತರ ಎಷ್ಟೋ ದೇವಸ್ಥಾನ, ಭೂತಸ್ಥಾನಗಳ ಉತ್ಸವಗಳ ಅಂಗವಾಗಿಯೂ ಚೆಂಡಾಟ ನಡೆಯುತ್ತದೆ.

ಕುಣಿತಗಳಲ್ಲಿ, ಅದರಲ್ಲೂ ಭೂತದ ಕುಣಿತಗಳಲ್ಲೇ ನೂರಾರು ಬಗೆಗಳನ್ನು ಕಾಣಬಹುದು. ಇದಲ್ಲದೆ ಕೊರಗರ ಡೋಲಿನ ಕುಣಿತ, ಮಾರಿ ಹೊಲೆಯರ ದುಡಿಯ ಕುಣಿತ ಮತ್ತು ಡೋಲಿನ ಕುಣಿತ, ನಲ್ಕೆಯವರ ಮಾದಿರ ಮೊದಲಾದ ಕುಣಿತಗಳು, ಹೋಳಿ ಕುಣಿತ, ಕರಂಗೋಲು ಕುಣಿತ, ಮುಸಲ್ಮಾನರ ರತೀಬ್ ಮತ್ತು ಅಲಾಬಿ ಕುಣಿತಗಳು, ಕ್ರೈಸ್ತರ ಗುಮಟೆಯಾಟ– ಹೀಗೆ ಹಲವಾರು ಬಗೆಯ ಕುಣಿತದ ಭಂಗಿಗಳನ್ನು ಕಾಣಬಹುದು.

ಇಲ್ಲಿ ನಾಗಾರಾಧನೆ ಪ್ರಸಿದ್ಧವಾದುದು. ಕಲ್ಲನಾಗನಿಗೆ ಹಾಲೆರೆಯುವುದರಿಂದ ತೊಡಗಿ ಬ್ರಾಹ್ಮಣ ಪಾತ್ರಿಗಳು ಆವಿಷ್ಟರಾಗಿ ನರ್ತಿಸುವುದರ ತನಕ ಈ ಆರಾಧನೆಯ ಹರವು ಇದೆ. ನಾಗಪಾತ್ರಿಗಳು ದರ್ಶನ ಬಂದು ಕುಣಿಯುವ ಈ ಪೂಜಾವಿಶೇಷಕ್ಕೆ ಢಕ್ಕೆ ಬಲಿ ಎನ್ನುತ್ತಾರೆ. ಇದರ ವಿಸ್ತೃತ ರೂಪದ ವೈಶಿಷ್ಟ್ಯಪೂರ್ಣ ಆರಾಧನೆಗೆ ನಾಗಮಂಡಲ ಎನ್ನುತ್ತಾರೆ. ನಾಗಮಂಡಳದಲ್ಲಿನ ಹಾಡು, ಕುಣಿತ, ವಾದನ ಎಲ್ಲವುಗಳಲ್ಲಿ ಅನನ್ಯತೆಯಿದೆ.

ಈ ಪ್ರದೇಶದ ಜನಪದ ಸಾಹಿತ್ಯ, ಪಾಡ್ದನ, ಕಬಿತೆ, ತ್ರಿಪದಿ, ಸೋಬಾನೆ ಪದಗಳು, ಉರಲ್, ಕಥೆ, ಎದುರುಕಥೆ, ಗಾದೆ, ನುಡಿಗಟ್ಟುಗಳಲ್ಲಿ ಸಮೃದ್ಧವಾಗಿದ್ದು ಜನಜೀವನದ ಸಂಸ್ಕೃತಿಗೆ ಕನ್ನಡಿ ಹಿಡಿಯುತ್ತದೆ.

ಶುಭಾಶುಭ ಕಟ್ಟುಕಟ್ಟಳೆಯಲ್ಲಿಯೂ ಇಲ್ಲಿ ಪ್ರತ್ಯೇಕತೆ ಎದ್ದು ಕಾಣುತ್ತದೆ.

ಉಡುಗೆ ತೊಡುಗೆ, ಆಭರಣ ಅಲಂಕಾರಾದಿಗಳಲ್ಲೂ ಕೆಲವು ತನ್ನತನಗಳನ್ನು ಗುರುತಿಸಬಹುದಾಗಿದೆ. ಹೊಂಬಾಳೆಯ ತಲೆದೊಡುಗೆ (ಮುಟ್ಟಾಳೆ) ಇಲ್ಲಿ ಸರ್ವಸಾಮಾನ್ಯ ಗ್ರಾಮೀಣ ಶಿರೋಭೂಷಣ. ತಲೆಗೂದಲ ಕ್ಷೌರದ ವಿಧಾನದಲ್ಲೂ ಬೇರೆ ಬೇರೆ ಮಾದರಿಗಳಿದ್ದು ವಿಶೇಷತೆ ಇತ್ತು ; ಈಚೆಗಿದು ಕಡಿಮೆಯಾಗುತ್ತಿದೆ.

ಮನೆಗಳನ್ನು ದೂರದೂರ ಕಟ್ಟಿ ವಾಸಿಸುವ ಹವ್ಯಾಸ, ಮನೆಯ ನಿರ್ಮಾಣಕ್ರಮ, ದಿನಬಳಕೆಯ ವಸ್ತುಗಳ ರಚನಾವಿಧಾನ ತಿಂಡಿತಿನಿಸುಗಳ ತಯಾರಿಕೆಯ ಬಗೆ, ಕೃಷಿಯ ಕ್ರಮ, ನಡವಳಿಕೆ, ನಂಬಿಕೆ– ಇವೆಲ್ಲವುಗಳಲ್ಲೂ ಇಲ್ಲಿಯ ಮಣ್ಣಿನ ವಾಸನೆ ಇದೆ.

ಪಶ್ಚಿಮದಲ್ಲಿ ವಿಶಾಲ ಸಾಗರ, ಪೂರ್ವದಲ್ಲಿ ಸೆಟೆದು ನಿಂತ ಪರ್ವತ ಮಾಲೆಗಳ ಮಧ್ಯೆ ಚಾಚಿರುವ ಈ ನೆಲದಲ್ಲಿ ಅರಳಿದ ಜಾನಪದ ಕಲಾಕುಸುಮದ ತನ್ನದೇ ಆದ ಸೌರಭ ಇಂದೂ ಆಘ್ರಾಣಿಸಲು ಯೋಗ್ಯವಾಗಿ ಇಲ್ಲಿ ಪರಿಮಳಿಸುತ್ತಿದೆ. **(ಎ.ಎಲ್.ಎ.)**

**ಕೊಡಗಿನ ಜಾನಪದ**: ಕೊಡಗು ಕನ್ನಡ ನಾಡಿನ ಬಹು ಚಿಕ್ಕ ಜಿಲ್ಲೆ. ಆದರೆ ಕನ್ನಡ ನಾಡಿನ ಸಂಪತ್ಸಮೃದ್ಧ ಜಿಲ್ಲೆಗಳಲ್ಲೊಂದು. ನಿಸರ್ಗದ ನೆಲೆವೀಡಾದ ಈ ಜಿಲ್ಲೆಯ ಜನರ ಜೀವನ ವರ್ಣರಂಜಿತ, ಕೊಡವರ ನಡೆನುಡಿ ಆಚಾರ ವಿಚಾರಗಳು ವಿಶಿಷ್ಟ ಹಾಗೂ ವಿಭಿನ್ನವಾದುವು. ಕರ್ನಾಟಕ ಸಂಸ್ಕೃತಿಯಲ್ಲಿ ಕೊಡಗಿನ ಸಂಸ್ಕೃತಿಗೆ ಒಂದು ವಿಶೇಷವಾದ ಸ್ಥಾನವಿದೆ. ಅಲ್ಲಿನ ಜಾನಪದವೂ ಕೊಡಗಿನ ಬೆಡಗಿನಂತೆಯೇ, ಪ್ರಕೃತಿಯ ಐಸಿರಿಯಂತೆಯೇ ಉತ್ಕೃಷ್ಟವಾದುದು, ವಿಪುಲವಾದುದು.

ಕೊಡವರ ಭಾಷೆಗೆ ಪ್ರತ್ಯೇಕ ಲಿಪಿಯಿಲ್ಲ. ಆ ಜನಾಂಗದ ಮೂಲದ ಬಗ್ಗೆಯೂ ಯಾವ ವಿಷಯಗಳೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಕ್ರಿ.ಶ.994ರ ಶಾಸನವೊಂದರಲ್ಲಿ ಕೊಡವರ ಪ್ರಸ್ತಾಪ ಬರುತ್ತದೆ. ಆದುದರಿಂದ ಆಗಿನಿಂದಲೂ ಕೊಡವ ಭಾಷೆ ಬಳಕೆಯಲ್ಲಿತ್ತೆಂದು ಹೇಳಬಹುದು. ಈ ಭಾಷೆಯಲ್ಲಿ ಕನ್ನಡದ ಬಹುತೇಕ ಪದಗಳೂ ತಮಿಳು ಮತ್ತು ಮಲೆಯಾಳ ಭಾಷೆಗಳ ಕೆಲವು ಪದಗಳೂ ತುಳು ಭಾಷೆಯ ಪದಗಳೂ ಕಾಣಬರುತ್ತದೆ. ಜೊತೆಗೆ ಸೇಕಡ ಇಪ್ಪತ್ತೈದರಷ್ಟು ಕೊಡವ ಭಾಷೆಯ ಪದಗಳೂ ಇವೆ. ಮಿಶ್ರಭಾಷೆಯಾದ ಕೊಡವರ ಭಾಷೆಗೆ ಕನ್ನಡ ಲಿಪಿಯನ್ನು ಬಳಸಲಾಗುತ್ತದೆ. ಈ ಭಾಷೆಯಲ್ಲಿ ಸಾಹಿತ್ಯ ರಚನೆ ಅಷ್ಟಿಷ್ಟು ಆಗಿದ್ದರೂ ಜನಪದ ಸಾಹಿತ್ಯದ ನಿರ್ಮಾಣವೇ ಹೆಚ್ಚು. ಆದ್ದರಿಂದ ಕೊಡಗಿನ ಸಾಹಿತ್ಯವನ್ನು ಪರಿಗಣಿಸುವಾಗ ಕಂಠಸ್ಥ ಸಂಪ್ರದಾಯದಲ್ಲಿ ಬಂದ ಜನಪದ ಸಾಹಿತ್ಯವೇ ವಿಶೇಷ ಸ್ಥಾನವನ್ನು ಕೊಡಬೇಕಾಗುತ್ತದೆ.

ಕೊಡಗಿನ ಜನಪದ ಸಾಹಿತ್ಯದಲ್ಲಿ ಜನಜೀವನದ ವಿವಿಧ ಮುಖಗಳ ಸುಂದರ ಚಿತ್ರಣವಿದೆ. ಮಾನವ ಜೀವನದ ವಿವಿಧಘಟ್ಟಗಳಿಗೆ ಸಂಬಂಧಿಸಿದ ಹಾಡುಗಳು ಕೊಡವರ ಮೂಲವನ್ನು ಕುರಿತ ಪದಗಳು ಕಾವೇರಿಯ ಮಹಾತ್ಮೆ, ಇಕ್ಕೇರಿ ಅರಸು ಮನೆತನವನ್ನು

ಹುತ್ತರಿ ಕುಣಿತ

ಕುರಿತ ಹಾಡುಗಳು, ಆಂಗ್ಲೇಯರ ಆಳ್ವಿಕೆಯನ್ನು ಕುರಿತ ಪದಗಳು, ಲಾಲಿಯ ಪದಗಳು, ಹುತ್ತರಿ ಹಾಡುಗಳು, ಕೊಡವ ಮನೆತನದ ಮೂಲಪುರುಷರ ಪದಗಳು, ಮದುವೆ ಹಾಡುಗಳು, ಬೇಸಾಯದ ಹಾಡುಗಳು, ಸ್ಥಳೀಯ ದೇವತೆಗಳನ್ನು ಕುರಿತ ಹಾಡುಗಳು – ಹೀಗೆ ವೈವಿಧ್ಯಮಯ ಹಾಡುಗಳನ್ನು ಇಲ್ಲಿನ ಜಾನಪದ ಪರಂಪರೆಯಲ್ಲಿ ಕಾಣಬಹುದು. ಕಚ್ಚಿದುಡಿ ಎಂಬ ಕಿರಿಯ ಡೋಲನ್ನು ಬಾರಿ ಸುತ್ತ ಸಾಮೂಹಿಕವಾಗಿ ಗೀತೆಗಳನ್ನು ಹಾಡುವುದು ವಾಡಿಕೆ. ನೃತ್ಯಗಳಲ್ಲೂ ವಿಶಿಷ್ಟ ಗೀತೆಗಳನ್ನು ಬಳಸಲಾಗುತ್ತದೆ. ಸಾಮೂಹಿಕ ನೃತ್ಯಗಳು ಹೆಚ್ಚು ಆಕರ್ಷಕವಾದವು. ಕೊಡವರ ಮೂಲವನ್ನು ಕುರಿತು ಯಾವ ಖಚಿತವಾದ ಅಭಿಪ್ರಾಯಗಳು ಕಾಣಬರದಿದ್ದರೂ ಕೊಡವರ ಹಾಡೊಂದರಲ್ಲಿ ಅವರು ಪಾಂಡವರ ವಂಶಕ್ಕೆ ಸೇರಿದ ಕ್ಷತ್ರಿಯರೆಂದು ಹೇಳಲಾಗಿದೆ. ಅವರ ದೇಶೀಯ ಉಡುಪು ನಡವಳಿಕೆಗಳು, ಪಾಂಡವರ ಉಡುಪು ಮತ್ತು ನಡವಳಿಕೆಗಳನ್ನು ಹೋಲುತ್ತವೆ ಎಂಬ ವಿಷಯವನ್ನು ಆ ಹಾಡಿನಲ್ಲಿ ಪ್ರಸ್ತಾಪಿಸಲಾಗಿದೆ.

ಶಂತನು ಚಕ್ರವರ್ತಿ ಸುಗಂಧಿನಿಗೆ ತನ್ನ ಸಮಸ್ತ ಹಕ್ಕನ್ನೂ ಧಾರೆ ಎರೆದಂತೆ ಕೊಡವರಲ್ಲೂ ಒಕ್ಕಪರಜೆ ಎಂಬ ವಿವಾಹ ಪದ್ಧತಿಯಿದೆ. ಇಲ್ಲಿ ವಿವಾಹವಾದ ಪತ್ನಿಗೆ ಪುರುಷ ತನ್ನ ಎಲ್ಲ ಹಕ್ಕುಗಳನ್ನೂ ಧಾರೆ ಎರೆದುಕೊಡುತ್ತಾನೆ. ಪಾಂಡವರೈವರೂ ಒಬ್ಬಳೇ ಹೆಣ್ಣನ್ನು ಕೂಡಿದಂತೆ, ಕೊಡವರಲ್ಲಿ ಅಣ್ಣ ಮಡಿದರೆ ಅವನ ಪತ್ನಿಯನ್ನು ತಮ್ಮನೂ ತಮ್ಮ ಮಡಿದರೆ ಅವನ ಮಡದಿಯನ್ನು ಅಣ್ಣನೂ ಕೈ ಹಿಡಿಯುವ ಪದ್ಧತಿಯಿದೆ. ಪಾಂಡವರು ಅಜ್ಞಾತವಾಸದ ಸಂದರ್ಭದಲ್ಲಿ ಹೇಗೆ ತಮ್ಮ ಆಯುಧಗಳನ್ನೆಲ್ಲ ಬನ್ನಿಯ ಮರವೊಂದರ ಮೇಲಿಟ್ಟು ಅಜ್ಞಾತವಾಸದ ಅನಂತರ ಅವನ್ನು ಕೆಳಕ್ಕೆ ಇಳಿಸಿ, ಶುದ್ಧಗೊಳಿಸಿ ಧೂಪಾರತಿ ಎತ್ತಿ ಪೂಜಿಸಿದಂತೆ ಕೊಡವರಲ್ಲೂ ಕೈಲ್ ಮುಹೂರ್ತ ಹಬ್ಬದ ದಿನ ಆ ವರೆಗೆ ಅಟ್ಟದ ಮೇಲಿಟ್ಟಿದ್ದ ತಮ್ಮ ಕತ್ತಿ ಕೋವಿ ಮುಂತಾದ ಆಯುಧಗಳನ್ನು ಹೊರತೆಗೆದು, ಶುಚಿಗೊಳಿಸಿ, ಧೂಪಾರತಿ ಎತ್ತಿ ಪೂಜಿಸುತ್ತಾರೆ. ಇಂಥ ಅನೇಕ ಸಂದರ್ಭಗಳನ್ನು ಆ ಹಾಡಿನಲ್ಲಿ ಪ್ರಸ್ತಾಪಿಸಿ ಪಾಂಡವರ ಸಂಬಂಧವನ್ನು ಕಲ್ಪಿಸಲಾಗಿದೆ.

ಕಾವೇರಿ ಕೊಡವರ ಕುಲದೇವತೆ. ಅವಳ ಮೇಲೆ ಕೊಡವರಿಗೆ ಅಪಾರ ಭಕ್ತಿ, ಪ್ರತಿ ವರ್ಷ ತುಲಾ ಸಂಕ್ರಮಣ ಕಾಲದಲ್ಲಿ (ಅಕ್ಟೋಬರ್ 16–17 ರಂದು) ಕೊಡಗಿನಲ್ಲಿ ಕಾವೇರಿ ಜಾತ್ರೆ ವೈಭವದಿಂದ ಜರುಗುತ್ತದೆ. ಕಾವೇರಿ ಮಾತೆಯನ್ನು ಭಕ್ತಿಯಿಂದ ಪೂಜಿಸಿ, ಅವಳ ಮಹಿಮೆಗಳನ್ನು ಕುರಿತು ಹಾಡುತ್ತಾರೆ. ಬ್ರಹ್ಮದೇವನ ಮಾನಸ ಪುತ್ರಿಯಾದ ಲೋಪಾಮುದ್ರೆ, ಕವೇರ ಮುನಿಯ ದತ್ತು ಪುತ್ರಿ ಕಾವೇರಿಯಾಗಿ ಬ್ರಹ್ಮಗಿರಿಯಲ್ಲಿ ಉದಿಸುತ್ತಾಳೆ. ಅಗಸ್ತ್ಯರ ಮಡದಿಯಾಗಿ, ಕೊನೆಗೆ ಬ್ರಹ್ಮಸಂಕಲ್ಪದಂತೆ ಜಲರೂಪವನ್ನು ಧರಿಸಿ ಕಾವೇರಿ ನದಿಯಾಗಿ ಹರಿಯುತ್ತಾಳೆ. ಆ ನೀರಿನಲ್ಲಿ ಮಿಂದ ಕೊಡವ ನಾರಿಯರ ಸೀರೆಯ ನೆರಿಗೆ ಮುಂಭಾಗದಿಂದ ಹಿಂಭಾಗಕ್ಕೆ ಜರುಗುತ್ತದೆ. ಕಾವೇರಿ ಮಾತೆಯ ಆದೇಶದಂತೆ ಅಲ್ಲಿಂದ ಮುಂದೆ ಅದೇ ರೀತಿಯಲ್ಲಿ ತಮ್ಮ ಸೀರೆಗಳನ್ನುಡುವ ಪದ್ಧತಿಯನ್ನು ಕೊಡವ ಸ್ತ್ರೀಯರು ಪಾಲಿಸುತ್ತ ಬಂದರೆಂಬ ಸ್ವಾರಸ್ಯ ವಿಷಯ ಬರುತ್ತದೆ. ಹಾಡಿನ ಕೊನೆಯಲ್ಲಿ ಕಾವೇರಿಯ ಸ್ನಾನ ಎಷ್ಟು ಪವಿತ್ರವಾದುದು ಎಂಬ ಅಂಶವೂ ಬರುತ್ತದೆ–

ಕಾಲೋರಾಂಡೆಕೋರಮ್ಮ । ಕನ್ನಿಯಾರ್ ಪೋಕ್‌ಲೊ<br>
ಬ್ರಹ್ಮ ಕುಂಡಿಕೆರೊಳ್ಳಂಜೆ । ನೀಲಕೊಡಿ ತೀರ್‌ತ<br>
ನೊರೆ ಬಂದುಕ್ಕಿ ಮಲಿವಕ್ಕ । ಮೈಮುಕ್ಕಿ ಕುಳಿಚೆನೊ<br>
ಅಜ್ಜಂಡಜ್ಜ ಕಾಲತ್ । ಕೆಜ್ಜ ಪಾಪ ತ್ತೋರುಲಾ ।<br>
ಪೊದ್ದಶನಿ ನೀಂಗುಲಾ

ಕೊಡಗಿನ ಹುತ್ತರಿ ಕುಣಿತ ಪ್ರಸಿದ್ಧವಾದುದು ; ಹುತ್ತರಿಯ ಹಬ್ಬವೂ ಅಷ್ಟೇ ಪ್ರಮುಖವಾದುದು. ಕಾವೇರಿ ಮಾತೆಯ ಕೃಪೆಯಿಂದ ಹುಲುಸಾಗಿ ಬೆಳೆದ ಧಾನ್ಯದೇವತೆಯನ್ನು ಪೂಜಿಸಿ ಕರೆತಂದು ಮನೆತುಂಬಿಸಿಕೊಳ್ಳುವ ಹಿನ್ನೆಲೆ ಇಲ್ಲಿ ಗಮನಿಸಬೇಕಾದುದು. ಇದು ಕೊಡಗಿನ ಸುಗ್ಗಿಯ ಹಬ್ಬ ; ನವೆಂಬರ್ ಅಥವಾ ಡಿಸಂಬರಿನಲ್ಲಿ ಬರುತ್ತದೆ. ಹಬ್ಬದ ದಿನ ಮನೆಯನ್ನು ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಶುಭ ಮುಹೂರ್ತದಲ್ಲಿ ಬತ್ತದ ಗದ್ದೆಗೆ ತೆರಳಿ ಅನ್ನಲಕ್ಷ್ಮಿಯನ್ನು ಆರಾಧಿಸಿ ಕೆಲವು ಬತ್ತದ ಪೈರನ್ನು ಕತ್ತರಿಸಿ "ಅನ್ನ ಲಕ್ಷ್ಮಿಯೇ ಅಕ್ಷಯವಾಗು" (ಪೊಲಿ ಪೊಲಿ ದೇವ) ಎಂದು ಸಾಮೂಹಿಕವಾಗಿ ಕೂಗುತ್ತ ವಾದ್ಯ ವಿಶೇಷಗಳೊಡನೆ ಮನೆಗೆ ಸಾಗಿಸುತ್ತಾರೆ. ಈ ಹಬ್ಬದ ಅಂಗವಾಗಿ ಸುಮಾರು ಒಂದು ವಾರದವರೆಗೆ "ಮಂದ್" ಎಂಬ ಗ್ರಾಮರಂಗದಲ್ಲಿ ಕುಣಿತ, ಕೋಲಾಟಗಳಲ್ಲಿ ನಿರತರಾಗುತ್ತಾರೆ. ಸುಂದರ ಜನಪದ ಗೀತೆಗಳನ್ನು ಈ ಸಂದರ್ಭದಲ್ಲಿ ಹಾಡುತ್ತಾರೆ. ಇವೇ ಹುತ್ತರಿ ಹಾಡುಗಳು.

ಹುತ್ತರಿಯ ಹಾಡುಗಳಲ್ಲಿ ಬತ್ತದ ಬೇಸಾಯದ ವಿವಿಧ ಹಂತಗಳು, ಹಬ್ಬದ ವರ್ಣನೆ, ವಿನೋದಯುಕ್ತ ವಿಷಯಗಳ ರಸವತ್ತಾದ ನಿರೂಪಣೆ ಬರುತ್ತದೆ. ಹಬ್ಬದ ದಿನ ಮನೆಮಂದಿ ಹಾಡುತ್ತ ಗದ್ದೆಗೆ ತೆರಳಿ, ದೇವತಾ ಪ್ರಾರ್ಥನೆ ಮಾಡಿ, ಆಕಾಶದತ್ತ ಗುಂಡೊಂದನ್ನು ಹಾರಿಸಿ ಬತ್ತದ ಕದಿರನ್ನು ಕೊಯ್ದು ಹಿಗ್ಗುತ್ತ ಮನೆಗೆ ಮರಳುವ ವರ್ಣನೆ ಆಕರ್ಷಕವಾದುದು–

ಆಡಿಪಾಡಿ ಪೋಯಿತ್ ಏಳ್‌ಮೂಲೆ ಆಕಡ<br>
ಕ್‌ಕೇರಿಲ್ ನಿಂದಿತ್ । ಕೇಕ್‌ಕ್ ಮೊಗವಾಯಿ<br>
ದೇವರ ನೆನೆತಿತ್ । ತಿತ್ತ್ ಬೊಡಿ ಬೆಚ್ಚಿತ್<br>
ಕಳಿಕಳಿ ನಟ್ಟಾನ । ಪೊಲಿ ಪೊಲಿ ಕೊಜ್ಜತ್ ॥

ಹುತ್ತರಿ ಕುಣಿತ ಕರ್ನಾಟಕದ ಜನಪದ ನೃತ್ಯಗಳಲ್ಲಿ ವಿಶಿಷ್ಟವಾದುದು. ಕೊಡಗಿನ ಸಾಂಪ್ರದಾಯಿಕ ಉಡುಪನ್ನು ಧರಿಸಿ ಕೋಲುಹೊಯ್ಯುತ್ತ ಹಾಡುವ ಕೊಡವ ಪದಗಳೂ ಅಷ್ಟೇ ರಮ್ಯವಾದವು. ವಿವಿಧ ಗತ್ತುಗಳಲ್ಲಿ ಆ ಹಾಡುಗಳನ್ನು ಹಾಡಲಾಗುತ್ತದೆ.

ಪೂಮಾಲೆ ಮಂದ್‌ಲ್ ಕೋಲ್‌ಕಳಿಂಜ । ಪೊಯಿಲೇ ಪೊಯಿಲೇ
ಓಂಕಾರ ಬೆಚ್ಚಿತ್ ಊದುವ ಕೊಂಬ್ । ಪೊಯಿಲೇ ಪೊಯಿಲೇ
ರೀಂಕಾರ ಬೆಚ್ಚಿತ್ ಕೊಟ್ಟುವ ಪರೆ । ಪೊಯಿಲೇ ಪೊಯಿಲೇ

ಕೋಲಾಟ ಮುಗಿದ ಮೇಲೆ ಈ ಆಟಗಾರರ ತಂಡ ಊರಿನ ಮನೆ ಮನೆಗೂ ಹೋಗಿ ಮನೆಯವರನ್ನು ಮನಸಾರ ಹಾಡಿ ಹೊಗಳಿ ಕಾಣಿಕೆಗಳನ್ನು ಸಂಗ್ರಹಿಸುತ್ತಾರೆ.

ನಂದಾಡ್ ಈ ಮನೆ ನಂದಿ ಮಹದೇವ
ಒಂದಾಂಗೊಂದ್ ಕೂಡಿ ಪೊಲಂಜಿ ಬರಡ್
ಪತ್ತಾಯ ಚಿತ್ತಾರಿ ತೊನೆಯತಿರಡೊ
ತೊಟ್ಟ್‌ಲ್ ಪಾಕು ಈ ತಪ್ಪತಿರಡೊ
ಕೊಟ್ಟಿಲ್ ಕರಪತ್ತ ತಪ್ಪತಿರಡೊ
ಪೊಟ್ಟಿಲ್ ಚೀರಾಳಿ ನೀಂಗತಿರಡೊ
ಚಿಪ್ಪ್‌ಲ್ ಪೊಂಬಣನಂಗತಿರಡೊ

ಮಹಾದೇವಾ ಈ ಮನೆಯವರಿಗೆ ಮಂಗಳವನ್ನು ಕರುಣಿಸು. ಈ ಮನೆ ಎಲ್ಲ ರೀತಿಯಲ್ಲಿಯೂ ಅಭಿವೃದ್ಧಿ ಹೊಂದಲಿ ; ಇದರ ಕಣಜದಲ್ಲಿ ಸಣ್ಣಕ್ಕಿ ತುಂಬಿ ತುಳುಕಲಿ, ತೊಟ್ಟಿಲಲ್ಲಿ ಹಾಲುಹಸುಳೆ ಸದಾ ಆಡಲಿ, ಕೊಟ್ಟಿಗೆಯಲ್ಲಿ ಕರೆಯುವ ಗೋವು ತಪ್ಪದೆ ಇರಲಿ, ಪೆಟ್ಟಿಗೆಯಲ್ಲಿ ಬಟ್ಟೆಬರೆ ಬೇಕಾದಷ್ಟಿರಲಿ, ಹಣದ ಪೆಟ್ಟಿಗೆಯಲ್ಲಿ ಹೊನ್ನು ಹಣ ಝಣ ಝಣಿಸುತ್ತಿರಲಿ. ಇದು ಮೇಲಿನ ಹಾಡಿನ ಭಾವ.

ಕೊಡವರ ಮದುವೆಯೂ ವಿಶಿಷ್ಟವಾದುದು. ಗಂಡು–ಹೆಣ್ಣಿನ ವಿವಾಹ ಸಂಬಂಧ ಶಾಸ್ತ್ರಗಳು ಅವರವರ ಮನೆಗಳಲ್ಲಿಯೇ ಮೊದಲು ವಿಜೃಂಭಣೆಯಿಂದ ನಡೆದು, ಗಂಡು ಹೆಣ್ಣಿನ ಮನೆಗೆ ತೆರಳಿ, ಪಾಣಿಗ್ರಹಣಮಾಡಿ ಕರೆತರುವವರೆಗಿನ ಎಲ್ಲ ನಡವಳಿಕೆ, ಕಟ್ಟು, ಕಟ್ಟಳೆಗಳು ಗಮನಾರ್ಹವಾದವು. ಕೊಡವರಲ್ಲಿ ಪುರೋಹಿತರ ಅವಶ್ಯಕತೆಯಿಲ್ಲ ; ಮಾಂಗಲ್ಯಧಾರಣ ಪದ್ಧತಿಯೂ ಇಲ್ಲ. ಮದುವೆಯ ಆರಂಭದಿಂದ ಅಂತ್ಯದವರೆಗೆ ಹಾಡುಗಳು ಮಾತ್ರ ಪ್ರಧಾನವಾಗಿ ಕಂಡುಬರುತ್ತವೆ. ಈ ಹಾಡುಗಳಲ್ಲಿ ಮದುವೆಯ ಸರ್ವವಿವರಗಳ ವರ್ಣನೆಯೂ ಬರುತ್ತದೆ. ಜೊತೆಗೆ ಮದುವಣಿಗನ ಸಮಸ್ತ ಜೀವನ ವಿವರಗಳನ್ನೂ ಆಕರ್ಷಕವಾಗಿ ಬಣ್ಣಿಸಿ ಜನನ, ಬಾಲ್ಯ, ಯೌವನ, ವಿವಾಹಾಕಾಂಕ್ಷೆ, ಕನ್ಯಾನ್ವೇಷಣೆ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಲಾಗುತ್ತದೆ. ಯುವಕ ತನ್ನ ಅಂತರಂಗದ ವಿವಾಹಾಕಾಂಕ್ಷೆಯನ್ನು ತನ್ನ ತಾಯಿಯ ಮುಂದೆ ಧ್ವನಿ ಪೂರ್ಣವಾಗಿ ಮಂಡಿಸುತ್ತಾನೆ–

ಪೊಣ್ಣಿಲ್ಲತ ಮನೆತನ । ಕಣ್ಣಿಲ್ಲತ ಜೀವಮಾನ
ಆಳಿಲ್ಲತ ದೊರೆತನ । ಕಟ್ಟಿನೋ ಫಲವಿಲ್ಲೆ
ಮಕ್ಕಳಿಲ್ಲತ ಒಕ್ಕಾಮೆ । ಕೆಜ್ಜಿನೋ ಫಲವಿಲ್ಲೆ
ನೀರಿಲ್ಲತ ನೀಕೆರೆ । ತೋಡಿನೋ ಫಲವಿಲ್ಲೆ
ಪೂವಿಲ್ಲತ ಪೂತೋಟ । ಮಾಡಿನೋ ಫಲವಿಲ್ಲೆ

"ಅಮ್ಮ ಹೆಣ್ಣಿಲ್ಲದ ಮನೆತನ ಕಣ್ಣಿಲ್ಲದ ಬದುಕಿನಂತೆ, ಆಳಿಲ್ಲದ ಅರಸನಂತೆ, ಮಕ್ಕಳಿಲ್ಲದ ಮನೆಯಂತೆ, ನೀರಿಲ್ಲದ ಕೆರೆಯಂತೆ, ಹೂವಿಲ್ಲದ ಹೂದೋಟದಂತೆ ನಿಷ್ಫಲ. ಆದ್ದರಿಂದ ತನಗೊಪ್ಪುವ ಮಡದಿಯನ್ನು " ತರುವುದಾಗಿ ತನ್ನ ಹೃದಯದ ಭಾವವನ್ನು ಸ್ವಾರಸ್ಯವಾದ ರೀತಿಯಲ್ಲಿ ಮುಂದಿಡುತ್ತಾನೆ.

ಹೀಗೆ ಕೊಡವರ ಮದುವೆಯ ಹಾಡುಗಳು ಅರ್ಥಪೂರ್ಣವಾದ ಧ್ವನಿಪೂರ್ಣವಾದ ಸುಂದರ ಭಾವಗೀತೆಗಳಂತೆ ರಂಜಿಸುತ್ತವೆ. ಪ್ರೇಮಮಯ ಸನ್ನಿವೇಶಗಳೂ ವಧುತೌರನ್ನು ತೊರೆಯುವಾಗಿನ ಹೃದಯ ಕಲಕುವ ಸಂದರ್ಭಗಳೂ ಮನಮುಟ್ಟುವಂತೆ ಈ ಗೀತೆಗಳಲ್ಲಿ ಚಿತ್ರಿತವಾಗಿವೆ.

ಕೊಡವರ ಜನಪದ ಸಾಹಿತ್ಯದಲ್ಲಿ ಮರಣದ ಹಾಡುಗಳು ಒಂದು ಪ್ರಮುಖ ವರ್ಗವಾಗಿಯೇ ಬರುತ್ತವೆ. ಮಾನವ ಜೀವನದ ನಶ್ವರತೆಯನ್ನು ಎತ್ತಿ ತೋರಿಸಿ, ಮೃತರ ಬಂಧುಗಳನ್ನು ಸಂತೈಸುವ ಅಪೂರ್ವ ಸನ್ನಿವೇಶಗಳೂ ಈ ಗೀತೆಗಳಲ್ಲಿ ತಲಸ್ಪರ್ಶಿಯಾಗಿ ಚಿತ್ರಿತವಾಗಿವೆ. ಈ ಬದುಕು ಪವಿತ್ರವಾದುದು. ಮರಣಕಾರಿವೆಂಬುದು ನಾರಾಯಣ ದೇವರ ಕೈಯ ಕನ್ನಡಿ ಕೈತಪ್ಪಿ, ಕೆಳಗೆ ಬಿದ್ದು ಒಡೆದಂತೆ–

ನಾರಾಯಣ ದೇವಂಡ । ನೋಟುವಳ ಕನ್ನಡಿ
ಕೈತಪ್ಪಿ ನೆಲತಾಂದ್ । ಬಂದ್ದೊಡಂದ್ ಪೋನೋಲೆ
ನಿಂಗೊಡಂದ್ ಪೋಯಿರೋ

ಹೀಗೆ ಶ್ರೇಷ್ಠತಮ ಬದುಕು ಹುಡಿಗೂಡಿ ಹೋಗುವಾಗ ಯಾರೂ ತಡೆಯುವಂತಿಲ್ಲ. ಏಕೆಂದರೆ ಜನನ ಮರಣದ ನಿಯಮವನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ವೃಥಾ ಚಿಂತಿಸಿ ಫಲವಿಲ್ಲ– ಎಂಬ ತತ್ತ್ವವನ್ನು ಮನೋಜ್ಞವಾಗಿ ನಿರೂಪಿಸುವ ಹಾಡುಗಳೂ ಬರುತ್ತವೆ.

ಕೇಳಿ ಕೇಳಿ ಕುಂ ಇ್ಯ ಳೇ । ಏರ ದುಃಖ ಮಾಡಂಡ
ಅವಿಜ ಜಳಂದಕ್ಕ । ಅಂಗಯಿ ತಡ್‌ಪ್‌ಲೆ
ಕ್ ಬ್ಬೂಮಿ ಕುಡ್‌ಂದಕ । ಅಂಗಾಲ್ ತಡ್‌ಪ್‌ಲೆ
ಚಾವದೂ ಪರಪದೂ । ಈ ಭೂಮಿ ಉಳ್ಳದ್

"ಮಕ್ಕಳೇ, ನೀವು ಹೆಚ್ಚು ಶೋಕಿಸಬೇಡಿ,– ಆಕಾಶ ಬಿದ್ದಾಗ ಅಂಗೈ ತಡೆಯಲು ಸಾಧ್ಯವೇ ! ಭೂಲೋಕ ಕುಸಿದಾಗ ಅಂಗಾಲು ತಡೆಯುವುದೇ. ಹುಟ್ಟು ಸಾವು ಈ ಜಗತ್ತಿನ ನಿಯಮ."

ಸಂಗೀತ : ಸಾಮಾನ್ಯವಾಗಿ ಕೊಡವ ಜನಪದ ಗೀತೆಗಳಲ್ಲಿ ನಿಯಮಬದ್ಧ ಹಾಗೂ ವೈವಿಧ್ಯಮಯ ಸಂಗೀತಕ್ಕೆ ವಿಶೇಷ ಪ್ರಾಧಾನ್ಯವಿಲ್ಲ. ಗೀತೆಗಳನ್ನು ಸಾಮೂಹಿಕವಾಗಿ ಹಾಡುವುದು ವಾಡಿಕೆ. ನಾಲ್ಕು ಜನ ಜೊತೆ ಸೇರಿ, ಒಬ್ಬೊಬ್ಬರಿಗೂ ಒಂದೊಂದು ದುಡಿಯನ್ನು ಹಿಡಿದು, ಅದನ್ನು ಚಿಕ್ಕ ಕೋಲೊಂದರಿಂದ ಬಾರಿಸುತ್ತ ಒಟ್ಟಾಗಿ ಹಾಡುವುದು ಸಂಪ್ರದಾಯ. ಹಾಡುಗಾರಿಕೆಯಲ್ಲಿ ಹೆಚ್ಚಿನ ಏರಿಳಿತಗಳಿರುವುದಿಲ್ಲ ; ಆದಿಯಿಂದ ಅಂತ್ಯದವರೆಗೂ ಒಂದೇ ತೆರನಾದ ರಾಗದಲ್ಲಿ ಹಾಡುತ್ತಾರೆ. ಹುತ್ತರಿ ಹಬ್ಬದ ಕೋಲಾಟ, ಬೊಳಕಾಟ್‌ಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುವವರು ಬಹುತೇಕ ಪುರುಷರೇ. ಉಮ್ಮತ್ತಾಟ್ ಎಂಬ ಸ್ತ್ರೀಯರ ಜನಪದ ನೃತ್ಯದಂಥ ಅಪೂರ್ವ ಸಂದರ್ಭಗಳಲ್ಲಿ ಮಾತ್ರ ಮಹಿಳೆಯರು ಹಾಡುತ್ತಾರೆ.

ಮೇಲೆ ಹೇಳಿದ ದುಡಿಯನ್ನುಳಿದರೆ ಕೊಡಗಿನ ಜನಪದ ವಾದ್ಯಗಳ ಪೈಕಿ ಡೋಲು, ಹರೆ, ನಾಗಸ್ವರವನ್ನು ಹೋಲುವ ಮೋರಿ ಎಂಬ ಓಲಗ, ಹಿಂದಿನ ಕಾಲದ ಕಹಳೆಗಳಂಥ ಅರ್ಧವೃತ್ತಾಕಾರದ ಕೊಂಬು ಎಂಬ ದೊಡ್ಡ ತುತ್ತೂರಿ ಮತ್ತು ಕಂಚಿನ ತಾಳ– ಇವು ಇರುತ್ತವೆ. ಇವನ್ನು ಬಾರಿಸುವವರು ಅಥವಾ ನುಡಿಸುವವರು ಹರಿಜನರು. ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಇಂಥ ವಾದ್ಯಗಾರರ ಒಂದು ತಂಡ ಇರುತ್ತದೆ. ಇದಲ್ಲದೆ ಸ್ಥಳೀಯ, ಎಂದರೆ ಗ್ರಾಮದ ದೇವದೇವತೆಯರ ಹಬ್ಬ ಉತ್ಸವ ಮುಂತಾದ ಸಂದರ್ಭಗಳಲ್ಲಿ ಮದ್ದಲೆಯ ಮಾದರಿ ಇನ್ನೊಂದು ಡೋಲನ್ನು (ಕೊಡವ ಮಾತಿನಲ್ಲಿ ಚಂಡೆ) ಬಾರಿಸುವುದುಂಟು. ಇದನ್ನು ಬಾರಿಸುವವರೇ ಬೇರೆ ಇರುತ್ತಾರೆ.

ನೃತ್ಯಗಳು : ಕೊಡಗಿನ ಜನಪದ ನೃತ್ಯಗಳನ್ನು ಸಾಮಾಜಿಕ, ಧಾರ್ಮಿಕ ಮತ್ತು ಶೌರ್ಯಪ್ರದರ್ಶನದ ನೃತ್ಯಗಳೆಂದು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು. ಈ ಪೈಕಿ ತುಂಬ ಸಾಮಾನ್ಯವು ಜನಪ್ರಿಯವೂ ಆದ ನೃತ್ಯವೆಂದರೆ ಅನೇಕ ಮಂದಿ ಗುಂಪಾಗಿ ನರ್ತಿಸುವ ಸಾಮಾಜಿಕ ನೃತ್ಯ. ಇದು ಇತರ ನೃತ್ಯಗಳಷ್ಟು ಸುವ್ಯವಸ್ಥಿತವಲ್ಲ. ಸ್ವಲ್ಪ ಬಿರುಸಿನದೆನ್ನಬಹುದಾದ ಈ ನೃತ್ಯದಲ್ಲಿ ಶಿಸ್ತಿಗೆ ವಿಶೇಷ ಮನ್ನಣೆಯಿಲ್ಲ. ಏಕತೆಯೂ ಅಷ್ಟಾಗಿ ಕಂಡುಬರುವುದಿಲ್ಲ. ಇದು ಸಾಮಾನ್ಯವಾಗಿ ಕೊಡವರ ವಿವಾಹ ಮತ್ತಿತರ ಸಾಮಾಜಿಕ ಸಮಾರಂಭಗಳಲ್ಲಿ ನಡೆಯುವಂಥದು.

ಇನ್ನೊಂದು ಜನಪ್ರಿಯ ನೃತ್ಯ ಕೋಲಾಟ. ಮೇಲಿನದರಂತೆ ಇದರಲ್ಲೂ ಎಷ್ಟು ಮಂದಿ ಬೇಕಾದರೂ ಭಾಗವಹಿಸಬಹುದು. ನರ್ತಿಸುವವರು ತಮ್ಮ ಎರಡು ಕೈಗಳಲ್ಲೂ ಸುಮಾರು ಒಂದು ಒಂದೂವರೆ ಗಜ ಉದ್ದದ ಬೆತ್ತದ ಕೋಲುಗಳನ್ನು ಹಿಡಿದು, ತಮ್ಮ ಕಾಲುಗಳ ಕ್ರಮಬದ್ಧ ಚಲನೆಗೆ ತಕ್ಕಂತೆ ಅವನ್ನು ನಾನಾ ಭಂಗಿಗಳಲ್ಲಿ ಬೀಸುತ್ತ ವರ್ತುಲಾಕಾರದಲ್ಲಿ ನರ್ತಿಸುತ್ತಾರೆ. ಜೊತೆಗೆ ಇದಕ್ಕೆ ಸಂಬಂಧಿಸಿದ ಹಾಡುಗಳನ್ನೂ ಹಾಡುತ್ತಾರೆ. ಈ ನೃತ್ಯದಲ್ಲಿ ನಯವಿದೆ, ನಾಜೂಕಿದೆ, ಶಿಸ್ತೂ ಇದೆ. ಇದು ಕೊಡಗಿನ ಸುಗ್ಗಿಯ ಹಬ್ಬವಾದ ಹುತ್ತರಿಯ ಸಂದರ್ಭದಲ್ಲಿ ನಡೆಯುತ್ತದೆ.

ಕೊಡವರ ಜನಪದ ನೃತ್ಯಗಳಲ್ಲೆಲ್ಲ ಪ್ರಸಿದ್ಧವಾದುದೆಂದರೆ ಬೊಳಕಾಟ್ ಎಂಬ ದೀಪ ನೃತ್ಯ. ಇದರಲ್ಲಿ ಸುಮಾರು 30 ಬಗೆಗಳಿವೆ. ಇವು ಸ್ವಲ್ಪಮಟ್ಟಿಗೆ ಶಾಸ್ತ್ರೀಯವಾಗಿದ್ದು ಉತ್ತಮದರ್ಜೆಗೆ ಸೇರಿದವುಗಳಾಗಿವೆ. ನೃತ್ಯವನ್ನು ಪ್ರಾರಂಭಿಸುವ ಮುನ್ನ ನೃತ್ಯ ರಂಗದ ನಡುಮಧ್ಯೆ ದೊಡ್ಡ ಕಂಚಿನ ದೀಪಗಳನ್ನಿಡುತ್ತಾರೆ. ಅವುಗಳ ಸುತ್ತ ನಾಲ್ವರು ಹಿರಿಯರು ದುಡಿಗಳನ್ನು ಬಾರಿಸುತ್ತ ನೃತ್ಯಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಆಗ ನರ್ತಕರು ಒಬ್ಬೊಬ್ಬರಾಗಿ ಮುಂದೆ ಬಂದು ವೃತ್ತಾಕಾರವನ್ನು ರಚಿಸಿಕೊಂಡು ನರ್ತಿಸತೊಡಗುತ್ತಾರೆ. ಪ್ರತಿಯೊಬ್ಬರ ಕೈಯಲ್ಲೂ ಒಂದೊಂದು ಒಡಿಕತ್ತಿ ಎಂಬ ಅಗಲವಾದ ಅಲಗುಳ್ಳ ದೊಡ್ಡ ಖಡ್ಗ ಮತ್ತು ಒಂದೊಂದು ಬಿಳಿಯ ಚಾಮರಗಳಿದ್ದು, ಅವನ್ನು ಅವರು ತಾಳಬದ್ಧವಾಗಿ ನಾನಾ ಭಂಗಿಗಳಲ್ಲಿ ಬೀಸುತ್ತ ನರ್ತಿಸುತ್ತಾರೆ. ಮಧ್ಯೆ ಮಧ್ಯೆ ತಮ್ಮ ಸ್ಥಾನಗಳನ್ನು ಅದಲು ಬದಲು ಮಾಡಿಕೊಳ್ಳುವುದಲ್ಲದೆ ನರ್ತನದ ರೀತಿಯನ್ನೂ ಬದಲಿಸಿಕೊಳ್ಳುತ್ತಾರೆ. ಈ ಸುವ್ಯವಸ್ಥಿತ ನೃತ್ಯ ಧಾರ್ಮಿಕ ಸಂಬಂಧವಾಗಿದ್ದು ಹೆಚ್ಚಾಗಿ ದೇವಸ್ಥಾನಗಳಲ್ಲಿ, ಇತರ ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುತ್ತದೆ.

ಕೊಡವರ ಇನ್ನೊಂದು ನೃತ್ಯವೆಂದರೆ ಪಡೆಕಳಿ ಅಥವಾ ಪರಿಯಕಳಿ, ಇದು ಒಂದು ರೀತಿಯ ಸಮರ ನೃತ್ಯ, ಕೊಡವ ಜನಾಂಗದವರಲ್ಲಿ ಪರಂಪರಾನುಗತವಾಗಿ ಬಂದ ಸಮರೋತ್ಸಾಹವನ್ನೂ, ಕ್ರೀಡಾಭಿಮಾನವನ್ನೂ ಈ ನೃತ್ಯದಲ್ಲಿ ಕಾಣಬಹುದು. ಇದರಲ್ಲಿ ಸಮಾನಶಕ್ತಿ ಮತ್ತು ಶೌರ್ಯಗಳುಳ್ಳ ಈರ್ವರು, ತಮ್ಮ ಬಲಗೈಯಲ್ಲಿ ಬೆತ್ತದ ಕೋಲನ್ನು ಎಡಗೈಯಲ್ಲಿ ಬೆತ್ತದ ಗುರಾಣಿಯನ್ನೂ ಹಿಡಿದು ಪರಸ್ಪರ ಕಾದಾಡುವ ರೀತಿಯಲ್ಲಿ ನರ್ತಿಸುತ್ತಾರೆ. ಅವರ ನಡುವೆ ಒಂದು ರೀತಿಯ ಅಣಕು ಹೋರಾಟವೇ ನಡೆಯುತ್ತದೆ. ಕೊನೆಯಲ್ಲಿ ಕ್ರೀಡಾಭಿಮಾನಿಗಳಿಗೆ ಯೋಗ್ಯವಾದ ರೀತಿಯಲ್ಲಿ ಅವರು ಪರಸ್ಪರ ಆಲಂಗಿಸಿ ನಗುನಗುತ್ತ ಅಗಲುತ್ತಾರೆ. ಸಾಮಾನ್ಯವಾಗಿ ಹುತ್ತರಿಹಬ್ಬದ ಕೋಲಾಟದ ಕೊನೆಯಲ್ಲಿ ಈ ನೃತ್ಯ ನಡೆಯುತ್ತದೆ.

ಮೇಲೆ ಹೇಳಿದಂತೆ ಈ ಎಲ್ಲ ನೃತ್ಯಗಳಲ್ಲಿ ಭಾಗವಹಿಸುವವರು ಪುರುಷರೇ. ಅವರು ತಮ್ಮ ದೇಶೀಯ ಸಮವಸ್ತ್ರಗಳನ್ನು ತೊಟ್ಟು ಈ ನೃತ್ಯಗಳಲ್ಲಿ ತೊಡಗುವುದು ಸಂಪ್ರದಾಯ. ಈ ಸಮವಸ್ತ್ರ ಷರ್ವಾನಿಯಂಥ ಒಂದು ಉದ್ದದ ಕಪ್ಪುವರ್ಣದ ಮೇಲು ಕೋಟು, ಅದರ ಮೇಲೆ ಸೊಂಟದ ಸುತ್ತ ಸುತ್ತಿದ ಕೆಂಪು ರೇಷ್ಮೆಯ ನೀಳ ನಡುದಟ್ಟಿ, ಅದರ ನಡುವೆ ಸ್ವಲ್ಪ ಬಲಕ್ಕೆ ಸಿಕ್ಕಿಸಿದ ಪೀಚೆಕತ್ತಿ ಎಂಬ ಚಿಕ್ಕ ಕತ್ತಿ ಮತ್ತು ತಲೆಗೆ ಸುತ್ತಿದ ಉದ್ದದ ಬಿಳಿಯ ಜರಿ ರುಮಾಲು– ಇವುಗಳನ್ನೊಳಗೊಂಡಿರುತ್ತದೆ.

ಈ ನೃತ್ಯಗಳಲ್ಲದೆ ಕೊಡಗಿನ ಉತ್ತರ ಭಾಗದಲ್ಲಿ ಕಾಣಸಿಗುವ ಇನ್ನೊಂದು ನೃತ್ಯವೆಂದರೆ ಸುಗ್ಗಿಕುಣಿತ. ಹುತ್ತರಿಹಬ್ಬದ ಕೋಲಾಟಕ್ಕೆ ಸ್ವಲ್ಪ ಭಿನ್ನವಾದ ಈ ನೃತ್ಯದಲ್ಲಿ ಕೊಡವೇತರರು ಮಾತ್ರ ಭಾಗವಹಿಸುತ್ತಾರೆ. ಪ್ರತಿಯೊಬ್ಬ ನರ್ತಕನ ಕೈಯಲ್ಲೂ ಒಂದೊಂದು ಉದ್ದನೆಯ ಕಠಾರಿಯಿರುತ್ತದೆ. ಅದನ್ನು ವಿವಿಧ ಭಂಗಿಗಳಲ್ಲಿ ಬೀಸುತ್ತ ಅವರು ಬಿರುಸಾಗಿ ನರ್ತಿಸುತ್ತಾರೆ. ಕೆಲವು ನೃತ್ಯಗಳಿಗೆ ಕಠಾರಿಯ ಬದಲು ಮರದ ಕೋಲುಗಳನ್ನು ಉಪಯೋಗಿಸುತ್ತಾರೆ.

ಇನ್ನು ಕೊಡವ ಸ್ತ್ರೀಯರು ನರ್ತಿಸುವ ಇನ್ನೊಂದು ಸರಳ ಹಾಗೂ ಸುಂದರ ನೃತ್ಯವಿದೆ. ಇದನ್ನು ಕೊಡವ ನುಡಿಯಲ್ಲಿ ಉಮ್ಮತ್ತಾಟ್ ಎಂದು ಕರೆಯುತ್ತಾರೆ. ಈ ನೃತ್ಯದಲ್ಲಿ ಭಾಗವಹಿಸುವ ಸ್ತ್ರೀಯರೂ ಸಮವಸ್ತ್ರ ಧರಿಸಿ (ಇವರು ಸೀರೆಯ ನೆರಿಗೆಯನ್ನು ಹಿಂದಕ್ಕೆ ಬಿಟ್ಟು, ಸೀರೆಯ ಒಂದು ಕೊನೆಯನ್ನು ಬೆನ್ನಿನ ಮೇಲಿಂದ ಎದೆಯ ಮೇಲೆ ಹಾಯಿಸಿ ಬಲಗಡೆ ಬಿಗಿಯಾಗಿ ಗಂಟು ಹಾಕುತ್ತಾರೆ. ಜೊತೆಗೆ ತಲೆಯ ಮೇಲಿಂದ ಬೆನ್ನಿನ ಮೇಲೆ ಹರಡುವಂತೆ ಒಂದು ವಿಶಾಲ ಶಿರವಸ್ತ್ರವನ್ನು ಧರಿಸುತ್ತಾರೆ.) ಕೈಯಲ್ಲಿ ತಾಳ ಹಿಡಿದು, ಅದನ್ನು ಕ್ರಮಬದ್ಧವಾಗಿ ತಟ್ಟುತ್ತ ಅದರ ನಾದಕ್ಕೆ ತಕ್ಕಂತೆ ಬಾಗುತ್ತ ಬಳುಕುತ್ತ ನರ್ತಿಸುತ್ತಾರೆ. ನೃತ್ಯದ ಜೊತೆಗೆ ಅದಕ್ಕೆ ಸಂಬಂಧಿಸಿದ ಜನಪದ ಹಾಡುಗಳನ್ನು ಹಾಡುತ್ತಾರೆ. ಕೊಡವ ಸ್ತ್ರೀಯರ ಈ ನಯನಮನೋಹರ ನೃತ್ಯ ಇತ್ತೀಚೆಗೆ ತೀರಾ ಅಪೂರ್ವವಾಗುತ್ತಿದೆ.

ಕೊಡಗಿನ ಜನಪದ ಸಾಹಿತ್ಯ ಹೀಗೆ ಅಲ್ಲಿನ ಸಂಸ್ಕೃತಿಗೆ, ಜನ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ. ಕೊಡವರ ಆಚಾರ ವಿಚಾರಗಳೂ ಸಂಪ್ರದಾಯ ನಂಬಿಕೆಗಳೂ ದಟ್ಟವಾಗಿ ಅರ್ಥಪೂರ್ಣವಾಗಿ ಈ ಸಾಹಿತ್ಯದಲ್ಲಿ ಚಿತ್ರಿತವಾಗಿವೆ.

ಕೊಡವರ ಜನಪದ ಸಾಹಿತ್ಯದ ಸಮರ್ಪಕ ಸಂಗ್ರಹ, ಅಧ್ಯಯನ ಇನ್ನೂ ಆಗಬೇಕಾಗಿದೆ. ಅನೇಕ ಮಂದಿ ವಿದ್ವಾಂಸರು ಸಂಗ್ರಹಕಾರ್ಯವನ್ನು ನಡೆಸಿದ ನಿದರ್ಶನಗಳನ್ನು ಅಲ್ಲಲ್ಲಿ ಕಾಣಬಹುದು. ಈ ಪೈಕಿ ದಿವಂಗತ ನಡಿಕೇರಿಯಂಡ ಚಿಣ್ಣಪ್ಪನವರಿಗೆ ಅಗ್ರಸ್ಥಾನ ಸಲ್ಲಬೇಕು. ಅವರು ಕೊಡವ ಭಾಷೆಯ ಅಳಿದುಳಿದ ಜನಪದ ಗೀತೆಗಳನ್ನು ಸಂಗ್ರಹಿಸಿ ಸೂಕ್ತ ವಿವರಣೆ ಮತ್ತು ಟಿಪ್ಪಣಿಗಳೊಂದಿಗೆ ಪಟ್ಟೋಲೆ ಪಳಮೆ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಐ. ಮಾ. ಮುತ್ತಣ್ಣನವರು ಆಂಗ್ಲಭಾಷೆಯಲ್ಲಿ ಬರೆದಿರುವ ಕೊಡಗಿನ ಚರಿತ್ರೆಯಲ್ಲಿ ಅಲ್ಲಿನ ಜನಪದ ಸಾಹಿತ್ಯದ ಸ್ಥೂಲ ಪರಿಚಯ ಮಾಡಿಕೊಟ್ಟಿದ್ದಾರೆ. ಪೇರಿಯಂಡ ಚಂಗಪ್ಪ ಅವರು ಕೊಡವರ ಅಪೂರ್ವ ಜನಪದ ಗೀತೆಗಳನ್ನು ಕಲೆಹಾಕಿ "ಕೊಡವಡ ಅಂದೋಳತ್ ಪಾಟ್" ಎಂಬ ಕೃತಿಯನ್ನು ಹೊರತಂದಿದ್ದಾರೆ. ಬಿ. ಡಿ. ಗಣಪತಿಯವರೂ ತಮ್ಮ ಕೃತಿಗಳಲ್ಲಿ ಕೊಡವ ಜನಪದ ಸಾಹಿತ್ಯದ ಪರಿಚಯವನ್ನು ಅಲ್ಲಲ್ಲಿ ಮಾಡಿಕೊಟ್ಟಿದ್ದಾರೆ. ಕೆಲವು ಕೊಡವ ಹಾಡುಗಳನ್ನು ಆಂಗ್ಲ ಹಾಗೂ ಜರ್ಮನ್ ಬರೆಹಗಾರರು ವಿದೇಶೀ ಭಾಷೆಗಳಿಗೂ ಅನುವಾದ ಮಾಡಿದ್ದಾರೆ. ಆದರೆ ಸಮಗ್ರ ಕೊಡಗಿನ ಜಾನಪದ ಇನ್ನೂ ವ್ಯಾಪಕವಾಗಿ, ಶಾಸ್ತ್ರೀಯವಾಗಿ ಸಂಗ್ರಹಿತವಾಗಬೇಕಾದ ಅಗತ್ಯ ಇದ್ದೇ ಇದೆ. (ಕೆ.ಪಿ.ಬಿ.)

**ಕರ್ನಾಟಕ ಜಾನಪದ ಪರಿಷತ್ತು** : ತರೀಕೆರೆಯಲ್ಲಿ ನಡೆದ ಜಾನಪದ ಸಮ್ಮೇಳನದ ಅಂಗವಾಗಿ ಕರ್ನಾಟಕ ಜಾನಪದ ಪರಿಷತ್ತು ಮೈಸೂರಿನಲ್ಲಿ ಸ್ಥಾಪಿತಗೊಂಡಿತು (13–1–1968). ಕರ್ನಾಟಕದ ನಾನಾ ಮೂಲೆಗಳಲ್ಲಿ ಅಡಗಿ ಹೋಗಿರುವ ಜನಪದ ಸಾಹಿತ್ಯ, ಕಲೆಗಳನ್ನೂ ಅದರ ಪರಿಚಯವುಳ್ಳ ಕಲಾವಿದರನ್ನೂ ಗುರುತಿಸಿ ಬೆಳಕಿಗೆ ತರುವುದು; ಆಧುನಿಕ ನಾಗರಿಕತೆಯ ಬೆಳೆವಣಿಗೆಯ ಭರದಲ್ಲಿ ನಶಿಸಿ ಹೋಗುತ್ತಿರುವ ಪ್ರಾಚೀನ ಕಲೆಯನ್ನು ಇಂದಿನ ನಾಗರಿಕ ಜನತೆಗೆ ಪರಿಚಯ ಮಾಡಿಕೊಡುವುದು; ಅವುಗಳಿಗೆ ಒಂದು ಸ್ಥಾಯೀಸ್ಥಾನ ಒದಗುವಂತೆ ಮಾಡುವುದು– ಇವು ಪರಿಷತ್ತಿನ ಮುಖ್ಯ ಉದ್ದೇಶ. ಪರಿಷತ್ತಿನ ಅಂಗವಾಗಿ ಜಾನಪದ ಎಂಬ ಒಂದು ದ್ವೈವಾರ್ಷಿಕ ಪತ್ರಿಕೆ ಪ್ರಕಟಗೊಳ್ಳುತ್ತಿದೆ. ಜಾನಪದ ಸಂಗ್ರಹ, ಶಾಸ್ತ್ರೀಯ ಅಧ್ಯಯನ ಮತ್ತು ಪ್ರಕಟಣೆಗಳಿಗೆ ಮೀಸಲಾದ ಹೊತ್ತಿಗೆ ಇದು ಈಗ ಪ್ರಕಟಣೆ ಸ್ಥಗಿತಗೊಂಡಿದೆ. *

**ಕರ್ನಾಟಕ ನಂದಿನಿ** : ಮಹಿಳೆಯರ ಶಿಕ್ಷಣ, ಅವರಲ್ಲಿ ಧರ್ಮನೀತಿಗಳ ಬೆಳೆವಣಿಗೆ, ಸೌಜನ್ಯಾಭಿವೃದ್ಧಿ ಇವುಗಳಿಗಾಗಿಯೇ ಮೀಸಲಾಗಿದ್ದ, ಮಹಿಳೆಯೊಬ್ಬರಿಂದ ಸಂಪಾದಿತವಾಗಿ ಪ್ರಕಟವಾಗುತ್ತಿದ್ದ ಪತ್ರಿಕೆ. ಪತ್ರಿಕಾ ಪ್ರಪಂಚದಲ್ಲಿ ಸಾಹಿತ್ಯ ಲೋಕದಲ್ಲಿ ಮಹಿಳೆಯರ ಸಾಹಸದ ಗುರುತಾಗಿ ಅದು ಕಂಗೊಳಿಸಿತು. ಮೂರು ವರ್ಷಗಳ ಕಾಲ ಈ ಪತ್ರಿಕೆ ಪ್ರಕಟವಾಗುತ್ತಿದ್ದು ಅನಂತರ ನಿಂತರೂ ಪತ್ರಿಕಾ ಪ್ರಪಂಚದಲ್ಲೂ ಸಾಹಿತ್ಯ ಸಂವರ್ಧನೆಯಲ್ಲೂ ಅದು ತಕ್ಕಮಟ್ಟಿಗೆ ಸೇವೆ ಸಲ್ಲಿಸಿತು.

ಮೈಸೂರಿನ ಬಳಿಯ ನಂಜನಗೂಡಿನಲ್ಲಿ ಸತೀಹಿತೈಷಿಣೀ ಗ್ರಂಥಮಾಲೆಯ ತಿರುಮಲಾಂಬಾ 1916ರ ಅಕ್ಟೋಬರಿನಲ್ಲಿ ಈ ಪತ್ರಿಕೆಯನ್ನು ಪ್ರಾರಂಭಿಸಿದರು. ಅವರು 1913ರಲ್ಲಿ ಪ್ರಾರಂಭಿಸಿದ ಸತೀ ಹಿತೈಷಿಣೀ ಗ್ರಂಥಮಾಲೆಯಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳಿಗೆ ದೊರೆತ ಪ್ರೋತ್ಸಾಹವೇ ಇದಕ್ಕೆ ಪ್ರೇರಣೆ. ಆದರೆ ಆರ್ಥಿಕ ತೊಂದರೆಯಿಂದಾಗಿ ಅವರು ಈ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು (1920). ಇದರ ಚಂದಾದಾರರ ಸಂಖ್ಯೆ ಆಗ ಸುಮಾರು 300. ಆದರೆ ಕರ್ನಾಟಕದ ಹೊರಗಿನ ಮುಂಬಯಿ, ಕಲ್ಕತ್ತ, ಆಗ್ರ ಮೊದಲಾದ ಸ್ಥಳಗಳಲ್ಲೂ ಇದರ ಪ್ರಸಾರ ಸಾಕಷ್ಟಿತ್ತು. ಮಂಗಳೂರಿನಲ್ಲಿ ವಿಶೇಷವಾದ ಪ್ರಸಾರವಿತ್ತು.

ಪತ್ರಿಕೆ ನಂಜನಗೂಡಿನಿಂದ ಪ್ರಕಟವಾಗುತ್ತಿದ್ದರೂ ಮುದ್ರಣವಾಗುತ್ತಿದ್ದುದು ಧಾರವಾಡದ ಕೃಷ್ಣ ಮುದ್ರಣಾಲಯದಲ್ಲಿ. ಈ ಮುದ್ರಣಾಲಯದೊಂದಿಗೆ ಲೋಕಮಾನ್ಯ ತಿಲಕರ ಸಂಬಂಧವಿದ್ದುದರಿಂದ ಪತ್ರಿಕೆಯ ಮುದ್ರಣಕ್ಕೆ ಸರ್ಕಾರ ಪ್ರತಿಬಂಧಕ ಹೇರಬಯಸಿದಾಗ, ತಮ್ಮ ಪತ್ರಿಕೆಯಲ್ಲಿ ರಾಜಕೀಯ ವಿಚಾರಗಳನ್ನು ಪ್ರಕಟಿಸುವುದಿಲ್ಲವೆಂದು ಬರೆದುಕೊಟ್ಟು ಪ್ರಕಟಣೆಗೆ ಅನುಮತಿ ಪಡೆಯಬೇಕಾಯಿತು.

ಮೊದಲ ಪುಟ ಕವನದಿಂದ ಪ್ರಾರಂಭವಾಗುತ್ತಿತ್ತು. ಸಾಮಾನ್ಯವಾಗಿ ಇದು ದೇವತಾ ಪ್ರಾರ್ಥನೆಯಾಗಿರುತ್ತಿತ್ತು. ಶ್ರೀಪಾದರೇಣು ಅವರ ಕವಿತೆಗಳೇ ಹೆಚ್ಚು. ಮೊದಲ ಪುಟದ ಪಕ್ಕದಲ್ಲಿ ರನ್ನಗನ್ನಡಿಯಲ್ಲಿ ಪರಿಚಯ ಮಾಡಿಸುತ್ತಿದ್ದ ಪ್ರಸಿದ್ಧ ವ್ಯಕ್ತಿಗಳ ಚಿತ್ರ ಪ್ರಕಟಿಸುತ್ತಿದ್ದರು. ಮುಖಪುಟದಲ್ಲಿ 'ವಂದೇ ತ್ವಾ ಭೂದೇವಿ ಆರ್ಯ ಮಾತರಂ' ಎಂಬ ವಾಕ್ಯವಿರುತ್ತಿತ್ತು. ಕ್ರೌನ್ ಅಷ್ಟಪತ್ರದ 52 ಪುಟಗಳಿಂದ ಕೂಡಿದ್ದ ಪತ್ರಿಕೆಯ ಬಿಡಿ ಪ್ರತಿಯ ಬೆಲೆ 2½ ಆಣೆ: ವಾರ್ಷಿಕ ಚಂದಾ 1½ ರೂ ಅಂಚೆ ವೆಚ್ಚ ಸೇರಿ.

ಸ್ತ್ರೀ ಶಿಕ್ಷಣ, ಸ್ತ್ರೀ ಸುಧಾರಣೆ, ಸ್ತ್ರೀ ನೀತಿ, ಭಕ್ತಿ ಮುಂತಾದ, ಸ್ತ್ರೀಯರಿಗೆ ಸಂಬಂಧಿಸಿದ, ಅನೇಕ ಲೇಖನಗಳೂ ಧಾರಾವಾಹಿಯಾಗಿ ಐತಿಹಾಸಿಕ ಕಾದಂಬರಿಗಳೂ ಪ್ರಬಂಧಗಳೂ ಆಧ್ಯಾತ್ಮಿಕ ಲೇಖನಗಳೂ ಪ್ರಕಟವಾಗುತ್ತಿದ್ದುವು. ವಿವಾಹ ವಯಸ್ಸನ್ನು ಏರಿಸುವುದರ ಆವಶ್ಯಕತೆಯನ್ನು ಕುರಿತು ಪ್ರಕಟವಾದ ಒಂದು ಲೇಖನ ಉತ್ತಮವಾದದ್ದು. ಪ್ರಬಂಧ ಸ್ಪರ್ಧೆಯನ್ನೂ ಏರ್ಪಡಿಸಲಾಗುತ್ತಿತ್ತು.

ಮಹಿಳೆಯರು ಪತ್ರಿಕೆ ಹೊರಡಿಸಬಾರದು ಎಂದು ಹೇಳಿ ಹಲವರು ಈ ಪತ್ರಿಕೆಯನ್ನು ನಿಲ್ಲಿಸಲು ಯತ್ನಿಸಿದಾಗ ಶುಭೋದಯದಲ್ಲಿ ಇವರ ಪರವಾಗಿ ಶ್ರೀ ಶೇಷ ಪಾರಿಶ್ವಾಡರು ಲೇಖನ ಬರೆದು ಬೆಂಬಲ ನೀಡಿದರು. ಈ ಪತ್ರಿಕೆಯ ಲೇಖಕರಿಗೆ ಅಲ್ಪಸ್ವಲ್ಪವಾದರೂ ಗೌರವಧನ ನೀಡಲಾಗುತಿತ್ತು.

ಕರ್ನಾಟಕ ನಂದಿನಿಯಲ್ಲಿ ತಿರುಮಲಾಂಬ ಅವರು ಪ್ರಕಟಿಸಿದ ಲೇಖನಗಳು ಇಂದಿಗೂ ಪ್ರಸ್ತುತ. ಇಂದಿನ ಮಹಿಳಾ ಪತ್ರಿಕೆಗಳನ್ನು ನೋಡಿದಾಗ ಅಲ್ಲಿ ಆಭರಣಗಳು, ಉಡುಗೆ ತೊಡುಗೆ, ಅಲಂಕರಣ ಸಾಮಗ್ರಿಗಳಿಗೆ ನೀಡುವ ಪ್ರಾಧಾನ್ಯತೆ ನೋಡಿದಾಗ, ಕರ್ನಾಟಕ ನಂದಿನಿಯಲ್ಲಿ ಬರೆದ 'ಒಡವೆಗಳಿಗಾಗಿ ನೀವು ಹಣವನ್ನು ವೆಚ್ಚ ಮಾಡ ಬೇಕೆ?' ಎಂಬ ಲೇಖನ ಗಮನಾರ್ಹ. ಬಂಗಾರದ ಬೆಲೆ ಇಳಿದ ಸಮಯದಲ್ಲಿ ಚಿನ್ನ ಕೊಳ್ಳುವ ಸಂಭ್ರಮದಲ್ಲಿದ್ದ ಮಹಿಳೆಯರು, ಪುರುಷರಿಗೆ ಮಾರ್ಗದರ್ಶನ ನೀಡುವ ಲೇಖನ; "ನೀವು ನಿಮ್ಮ ಹೆಣ್ಣು ಮಕ್ಕಳಿಗೆ ಒಳ್ಳೆಯ ಒಡವೆ ಮಾಡಿಸುವುದಕ್ಕೆ ಕೆಲವು ಕಾಸುಗಳನ್ನೂ, ಕೆಲವು ರೂಪಾಯಿಗಳನ್ನು ತೆಗೆದಿಟ್ಟಿರಬಹುದಲ್ಲವೆ? ಈ ಹಣವನ್ನು ವೆಚ್ಚ ಮಾಡಿ ನಿಮ್ಮ ಮಗಳಿಗೆ ಚೆನ್ನಾಗಿ ವಿದ್ಯೆ ಕಲಿಸಿದ್ದರೆ, ಮುಂದೆ ಅದರಿಂದ ಎಷ್ಟು ಲಾಭವುಂಟೆಂಬುದನ್ನು ಯೋಚಿಸಿ ನೋಡಿರಿ.

ಒಂದು ವೇಳೆ ನೀವು ನಿಮ್ಮ ಮಗಳಿಗೆ ಆಭರಣಗಳ ರೂಪವಾಗಿ ಸ್ವಲ್ಪ ಆಸ್ತಿ ಮಾಡಿಟ್ಟರೆ ಅವಳ ಗಂಡನು ತನ್ನ ಆಸ್ತಿಯನ್ನು ಹಾಳು ಮಾಡಿಕೊಂಡರೂ ಅವಳ ಕುಟುಂಬದ ಜೀವನಕ್ಕೆ ಅನುಕೂಲವಾಗಬಹುದೆಂದು ಯೋಚಿಸಬಹುದು. ಆದರೆ ಒಡವೆಗಳ ರೂಪವಾಗಿ ನೀವು ಆಸ್ತಿ ಮಾಡಿ ಕೊಡುವುದರಿಂದ ಮತ್ತಷ್ಟು ಅಪಾಯವೇ ಹೊರತು ಪ್ರಯೋಜನವಿಲ್ಲ. ಏಕೆಂದರೆ ತನ್ನ ಆಸ್ತಿಯನ್ನೆಲ್ಲಾ ಹಾಳು ಮಾಡಿಕೊಳ್ಳುವಷ್ಟು ಅವಿವೇಕಿಯಾದ ಗಂಡ, ಹೆಂಡತಿಯ ಒಡವೆಗಳನ್ನು ಹಾಳು ಮಾಡದೆ ಬಿಡುವನೆ?' ಆದುದರಿಂದ ನೀವು ನಿಮ್ಮ ಮಕ್ಕಳಿಗೆ ಒಡವೆಗಳನ್ನು ಮಾಡುವುದರ ಬದಲು ಷೇರುಗಳನ್ನು,

ಕ್ಯಾಷ್‌ಸರ್ಟಿಫಿಕೇಟ್‌ಗಳನ್ನು ಅವರ ಹೆಸರಿನಲ್ಲಿ ತೆಗೆದು ಅವರಿಗೆ ಆಸ್ತಿಮಾಡಿಕೊಡಿ" ಎಂದು ಸಲಹೆ ಮಾಡಿದ್ದಾರೆ (ಕರ್ನಾಟಕ ನಂದಿನಿ 1920 ಮಾರ್ಚ್ ಸಂಚಿಕೆ).

ತಿರುಮಲಾಂಬ 'ಕರ್ನಾಟಕ ನಂದಿನಿ' ಮಾಸಪತ್ರಿಕೆ ಪ್ರಕಟಿಸಿ ಸಾಕಷ್ಟು ಕೈಸುಟ್ಟುಕೊಂಡರೂ ಧೃತಿಗೆಡಲಿಲ್ಲ. 'ಸನ್ಮಾರ್ಗದರ್ಶಿನಿ' ಎಂಬ ತಿಳಿಗನ್ನಡ ನುಡಿಯ ಮಾಸ ಪತ್ರಿಕೆಯನ್ನು 1922ರಲ್ಲಿ ಆರಂಭಿಸಿದರು. ಅದು 1925ರವರೆಗೂ ನಡೆಯಿತು.

(ಎಸ್.ವಿ.ಪಿ.ಎ.; ಎಂ.ಬಿ.ಎಸ್.)

**ಕರ್ನಾಟಕ ಬಂಧು :** ಗದಗ ಜಿಲ್ಲೆ ಗದಗಿನಿಂದ ಪ್ರಕಟ ವಾಗುತ್ತಿರುವ, ಮುಖ್ಯವಾಗಿ ಪ್ರಾದೇಶಿಕ ಸ್ವರೂಪದ ವಾರಪತ್ರಿಕೆ. ಸ್ಥಾನಿಕ ಸಮಸ್ಯೆಗಳ ಮತ್ತು ಸ್ಥಾನಿಕ ಸಮಾಜಗಳ ಪರಿಚಯ, ಕಥೆ, ಕವನ, ಪ್ರಬಂಧಗಳನ್ನು ಒಳಗೊಂಡಿರುತ್ತದೆ. ಇದು 1930ರ ಅಕ್ಟೋಬರಿನಲ್ಲಿ ಆರಂಭವಾಯಿತು.

ಚೆನ್ನಬಸವಸ್ವಾಮಿ ವಿರೂಪಾಕ್ಷಯ್ಯಸ್ವಾಮಿ ಹಿರೇಮಠ ಅವರು ಪತ್ರಿಕೆಯ ಒಡೆಯರು, ಸಂಪಾದಕರು ಮತ್ತು ಪ್ರಕಾಶಕರು. ಪ್ರಾರಂಭದಲ್ಲಿ ಪತ್ರಿಕೆಯಲ್ಲಿ ಕಿರೀಟ ಅರ್ಧ ಆಕಾರದ 16 ಪುಟಗಳಿದ್ದುವು. 1934ರಲ್ಲಿ ಇದನ್ನು 28ಕ್ಕೆ ಹೆಚ್ಚಿಸಲಾಯಿತು. ಅಲ್ಲದೆ ಲೇಖನಗಳೊಂದಿಗೆ ಚಿತ್ರಗಳನ್ನು ಪ್ರಕಟಿಸಲು ಉಪಕ್ರಮಿಸಿ ಪತ್ರಿಕೆಯ ಸ್ವರೂಪವನ್ನು ಆಕರ್ಷಕವಾಗಿಸಿ ಸಚಿತ್ರ ಗೊಳಿಸಲಾಯಿತು.

ಪತ್ರಿಕೆಯ ಪ್ರಸಾರ ಪ್ರಾರಂಭದಲ್ಲಿ 700–800. ಆದರೆ ಪುಟಗಳ ಸಂಖ್ಯೆಯನ್ನು ಹೆಚ್ಚಿಸಿದಾಗ ಬೆಲೆ ಒಂದೇ ಆಣೆ ಇದ್ದುದ ರಿಂದ ಪತ್ರಿಕೆಯ ಪ್ರಸಾರ ಮೊದಲಿದ್ದ ರಿಂದ ಸು.5,000–6,000ಕ್ಕೆ ಏರಿತ್ತು. ಈಗ ಇದರ ಪ್ರಸಾರ ಸಂಖ್ಯೆಯೂ ಪುಟಗಳ ಸಂಖ್ಯೆಯೂ ಕಡಿಮೆಯಾಗಿದೆ. ಡಿಮ್ಮೈ ಅರ್ಧ ಆಕಾರದ 12 ಪುಟಗಳಿವೆ. *

**ಕರ್ನಾಟಕ ಬ್ಯಾಂಕ್ :** ಅಖಿಲ ಭಾರತದಲ್ಲೇ ಆರ್ಥಿಕ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ನವವಿಕ್ರಮ ಸಾಧಿಸಿದ ಜಿಲ್ಲೆ ಅವಿಭಜಿತ ದಕ್ಷಿಣಕನ್ನಡ. 1906–1945, ಈ ನಾಲ್ಕು ದಶಕಗಳು ಜಿಲ್ಲೆಯ ಮಟ್ಟಿಗೆ ದಾಖಲೆ. 22 ಸಣ್ಣ ಹಾಗೂ ದೊಡ್ಡ ಬ್ಯಾಂಕುಗಳ ಉಗಮ. ಈ ಜಿಲ್ಲೆಯ ನೆಲ ಬ್ಯಾಂಕಿಂಗ್ ರಂಗಕ್ಕೆ ತೊಟ್ಟಿಲು. 1924ರಲ್ಲಿ ಬೆಳಗಾಂವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ, ಮಹಾತ್ಮಾಜಿ ನೀಡಿದ ಸ್ವದೇಶಿ ಆಂದೋಳನದ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿ ಜನ್ಮತಳೆಯಿತು ಕರ್ನಾಟಕ ಬ್ಯಾಂಕು ಇದೀಗ ದೇಶದ ಉದ್ದಗಲಗಳನ್ನು ವ್ಯಾಪಿಸಿ ಎಂಟು ದಶಕಗಳ ನಿರಂತರ ಸೇವೆಯಿಂದ ಖಾಸಗಿರಂಗದ ಅಗ್ರಗಣ್ಯ ಬ್ಯಾಂಕುಗಳಲ್ಲಿ ಒಂದಾಗಿದೆ.

ಬಿ.ಆರ್. ವ್ಯಾಸರಾಯಾಚಾರ್ ಅವರ ಅಧ್ಯಕ್ಷತೆಯಲ್ಲಿ 18 ಫೆಬ್ರವರಿ 1924ರಂದು ಮಂಗಳೂರಿನಲ್ಲಿ ತನ್ನ ನೋಂದಾಯಿತ ಕಚೇರಿ ತೆರೆದ ಬ್ಯಾಂಕಿನ ಬಂಡವಾಳ ಕೇವಲ ರೂ. 11,580/–. ಒಂದು ರೀತಿಯಲ್ಲಿ ಕಾಲದೊಂದಿಗೆ ಬೆಳೆದು ಬಂದ ಕರ್ನಾಟಕ ಬ್ಯಾಂಕು, ಇಂದು ಅಗಾಧ ವಿಸ್ತಾರಕ್ಕೆ ಬೆಳೆದಿದ್ದರೆ ಶ್ರೀಸಾಮಾನ್ಯರು ಬ್ಯಾಂಕಿನ ಮೇಲಿಟ್ಟ ವಿಶ್ವಾಸ, ಕಾಲದಿಂದ ಕಾಲಕ್ಕೆ ಬ್ಯಾಂಕನ್ನು ನಿಸ್ವಾರ್ಥ ಸೇವೆಯಿಂದ ಮುಂದೊಯ್ದ ಅಧ್ಯಕ್ಷರುಗಳು. ಆಡಳಿತ ವರ್ಗ ಮತ್ತು ಸಿಬ್ಬಂದಿಯ ಸೇವಾ ತತ್ಪರತೆಗಳೇ ಅದಕ್ಕೆ ಕಾರಣ,.

**ಅಡಿಗರ ಬ್ಯಾಂಕು :** 1945 ಕರ್ನಾಟಕ ಬ್ಯಾಂಕ್ ಚರಿತ್ರೆಯಲ್ಲಿ ಒಂದು ಗಮನಾರ್ಹ ವರ್ಷ. ಕೇವಲ 31ರ ಹರೆಯದ ಕೆ. ಸೂರ್ಯನಾರಾಯಣ ಅಡಿಗರು ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಾದರು. ಆಗ ಒಟ್ಟು ಠೇವಣಿ ಕೇವಲ ರೂ. 39.33 ಲಕ್ಷ. ಮುಂಗಡ ರೂ. 20.81 ಲಕ್ಷ. ಶಾಖಾ ಸಂಖ್ಯೆ ಕೇವಲ 6. ನಿರ್ದೇಶಕರಾಗಿ ಬಳಿಕ ಬ್ಯಾಂಕಿನ ಪೂರ್ಣಕಾಲೀನ ಅಧ್ಯಕ್ಷರಾಗಿ ಕರ್ನಾಟಕ ಬ್ಯಾಂಕಿನ ಬೆಳವಣಿಗೆಯಲ್ಲಿ ಅಡಿಗರ ಕೊಡುಗೆ ಬ್ಯಾಂಕ್ ಇತಿಹಾಸದಲ್ಲಿ ನಿಜಕ್ಕೂ ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟಿದೆ. ಅಡಿಗರ ನಂತರ ಬಂದ ಅಧ್ಯಕ್ಷರುಗಳಾದ ಕೆ.ಎನ್. ಬಾಸ್ರಿ, ಪಾಂಗಾಳ ರಘುರಾಮರಾವ್, ಪಿ. ಸುಂದರರಾವ್, ಎಚ್.ಎಂ. ರಾಮರಾವ್, ಯು.ವಿ. ಭಟ್, ಎಂ.ಎಸ್. ಕೃಷ್ಣಭಟ್ ತಮ್ಮ ತಮ್ಮ ಸಾಧನೆಗಳಿಂದ ಬ್ಯಾಂಕನ್ನು ರಾಷ್ಟ್ರೀಯ ವ್ಯಾಪ್ತಿಗೆ ಏರಿಸುವಲ್ಲಿ ಸಮರ್ಥರಾದರು.

ಕರ್ತವ್ಯ ದಕ್ಷತೆ, ಪ್ರಾಮಾಣಿಕತೆ ತುಂಬಿಕೊಂಡ ಅನಂತಕೃಷ್ಣ ಕರ್ನಾಟಕ ಬ್ಯಾಂಕ್ ಸೇರಿದ್ದು 1971ರಲ್ಲಿ ಅಧಿಕಾರಿಯಾಗಿ. ಜುಲೈ 2000ದಲ್ಲಿ ಅನಂತಕೃಷ್ಣ ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾಗಿ ಅದರ ಸಾರಥ್ಯ ವಹಿಸಿಕೊಂಡಾಗ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಆರ್ಥಿಕ ಕ್ಷೇತ್ರಗಳಲ್ಲಿ ಒಂದು ರೀತಿಯ ನಿರಾಶಾದಾಯಕ ಮಬ್ಬು ಬೆಳಕು ಕವಿದಿತ್ತು. ಒಂದು ರೀತಿಯಲ್ಲಿ ಬ್ಯಾಂಕಿಂಗ್ ರಂಗಕ್ಕೆ ಸವಾಲಾದ ನಾನಾ ಸ್ಪರ್ಧೆಗಳು. ಉದಾರೀಕರಣ, ವಿಶ್ವ ವಾಣಿಜ್ಯೀಕರಣ, ವಿದೇಶಿ ಬ್ಯಾಂಕುಗಳ ಆಗಮನ–ಸ್ಪರ್ಧೆ, ಆರ್ಥಿಕ ಕ್ಷೇತ್ರದ ಸತತ ಹಿನ್ನಡೆ, ಪ್ರಾಕೃತಿಕ ವೈಪರೀತ್ಯಗಳಿಂದಾಗಿ ವಾಣಿಜ್ಯ ಕ್ಷೇತ್ರಕ್ಕಾದ ಸರಿಪಡಿಸಲಾಗದ ದುರಂತಗಳ ಹಿನ್ನೆಲೆ, ಬ್ಯಾಂಕ್ ವ್ಯವಹಾರಕ್ಕೆ ಪೆಡಂಭೂತವಾಗಿ ಇದಿರಾದ ಅನುತ್ಪಾದಕ ಸಾಲದ ಹೊರೆಗಳು ಹೀಗೆ ಒಂದೆರಡಲ್ಲ. ಅವೆಲ್ಲವನ್ನೂ ಸವಾಲಾಗಿ ಸ್ವೀಕರಿಸಿ, ಅಹರ್ನಿಶಿ ದುಡಿದು ಕೇವಲ ನಾಲ್ಕು ವರ್ಷಗಳಲ್ಲಿ ಅನಂತಕೃಷ್ಣ ಕರ್ನಾಟಕ ಬ್ಯಾಂಕನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಿದರು ಕರ್ನಾಟಕ ಬ್ಯಾಂಕು, ಅದರ ಪರಂಪರೆಗೆ ಅನುಗುಣವಾಗಿ ಮುನ್ನಡೆಯುತ್ತಿದೆ. ಆಧುನಿಕ ಬ್ಯಾಂಕಿಂಗ್‌ನತ್ತ ಸಂಪೂರ್ಣ ಹೊರಳಿದರೂ ತನ್ನ ಪರಂಪರಾಗತ ಶ್ರದ್ಧೆ, ಶ್ರೀಸಾಮಾನ್ಯರ ನಿಕಟ ಸಂಪರ್ಕವನ್ನು ಎಂದಿಗೂ ತ್ಯಜಿಸಲಿಲ್ಲ. ಒಂದು ಪರಂಪರಾಗತ ಬ್ಯಾಂಕು, ಎಲ್ಲಾ ಮೈ ಚಳಿ ಬಿಟ್ಟು, ಕಾಲ ಒಡ್ಡಿದ ಅಗ್ನಿಪರೀಕ್ಷೆಯಲ್ಲಿ ಗೆದ್ದು ಹೊಸತಲೆಮಾರಿನ ಬ್ಯಾಂಕುಗಳೊಂದಿಗೆ ಸ್ಪರ್ಧಿಸುವಂತಹ ಮಟ್ಟ ಮುಟ್ಟಲು ಹಳೆ ತತ್ತ್ವ ಹೊಸ ಸತ್ವಗಳ ಸಮ್ಮಿಲನದಿಂದ ಸಾಧ್ಯವಾಯ್ತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬ್ಯಾಂಕಿಂಗ್‌ನ ನಿಕಟ ಪರಿಚಯ, ನಿಡುಗಾಲದ ಅಧ್ಯಯನ, ಸಂಶೋಧನೆ, ನಿರಂತರ ಸಂಚಾರದ ಫಲಶ್ರುತಿಯಾಗಿ ಕರ್ನಾಟಕ ಬ್ಯಾಂಕಿಗೆ ಹೊಸ ಸ್ವರೂಪ ದೊರೆಯಿತು.

ಕರ್ನಾಟಕ ಬ್ಯಾಂಕ್ ಅನೇಕ ದಾಖಲೆಗಳನ್ನು ದಾಖಲಿಸಿದೆ. ಬ್ಯಾಂಕಿನ ವ್ಯವಹಾರ ದುಪ್ಪಟ್ಟುಗೊಂಡಿದ್ದು 7,625 ಕೋಟಿ ರೂಪಾಯಿಗಳಿಂದ 14,000 ಕೋಟಿ ರೂಪಾಯಿಗೆ ಏರಿದ್ದು, ನಿವ್ವಳ ಲಾಭ ಮೂರು ಪಟ್ಟು ಹೆಚ್ಚುವರಿಗೊಂಡಿದೆ. 4 ವರ್ಷಗಳ ಹಿಂದೆ 40.71 ಕೋಟಿ ರೂ.ಗಳಷ್ಟಿದ್ದ ಲಾಭ 2004 ಮಾರ್ಚ್ ಅಂತ್ಯಕ್ಕೆ ರೂ 133.17 ಕೋಟಿಗೆ ಏರಿತು. 23 ಹೊಸ ಶಾಖೆಗಳು ಸ್ಥಾಪಿಸಲ್ಪಟ್ಟು ಶಾಖಾ ಸಂಖ್ಯೆ 370ಕ್ಕೆ ಏರಿದೆ. 225 ಶಾಖೆಗಳಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಅಳವಡಿಸಲಾಗಿದ್ದು ಶೇ. 87ರಷ್ಟು ವ್ಯವಹಾರವನ್ನು ಇದರ ವ್ಯಾಪ್ತಿಗೆ ತರಲಾಗಿದೆ.

ಕರ್ನಾಟಕ ಬ್ಯಾಂಕ್ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸುವ ಮೂಲಕ ಈ ವ್ಯವಸ್ಥೆಯನ್ನು ಅಳವಡಿಸಿದ ಹಿಂದಿನ ಪೀಳಿಗೆಯ ಖಾಸಗಿರಂಗದ ಪ್ರಪ್ರಥಮ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಯ್ತು. ಬ್ಯಾಂಕು ಎ.ಟಿ.ಎಂ. ಸೇವೆ ಪ್ರಾರಂಭಿಸಿದುದಲ್ಲದೇ ದೇಶ, ವಿದೇಶಗಳ ಪ್ರತಿಷ್ಠಿತ ವಿಮಾ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿಮಾ ಸೇವೆಗಳನ್ನು ತನ್ನ ಗ್ರಾಹಕರಿಗೆ ವಿಸ್ತರಿಸಿದೆ. ಅನೇಕ ಗ್ರಾಹಕ ಸ್ನೇಹಿ ಸಾಲ ಯೋಜನೆಗಳನ್ನು ಅತ್ಯಂತ ಸ್ಪರ್ಧಾತ್ಮಕ ಬಡ್ಡಿದರಗಳಲ್ಲಿ ಬ್ಯಾಂಕು ನೀಡುತ್ತಿದೆ.

ಈಗ ಈ ಬ್ಯಾಂಕು ಮಂಗಳೂರು ನಗರದ ಕಂಕನಾಡಿಯ ಬಳಿ 1,25,000 ಘನ ಅಡಿ ವಿಸ್ತಾರದ ಬಹುಮಹಡಿಯ ಸಂಪೂರ್ಣ ಹವಾನಿಯಂತ್ರಿತ ಸ್ವಂತ ಕಾರ್ಪೋರೇಟ್ ಕಚೇರಿಗೆ ಸ್ಥಳಾಂತರಗೊಂಡು ನಗರದ ಅತ್ಯಾಕರ್ಷಕ ಸೌಧಗಳಲ್ಲಿ ಒಂದೆನ್ನುವ ಕೀರ್ತಿಗೆ ಪಾತ್ರವಾಯ್ತು.

ಬ್ಯಾಂಕು 2002ರಲ್ಲಿ ಅಂಗೀಕರಿಸಿದ ಧ್ಯೇಯ ವಾಕ್ಯ ಹೀಗಿದೆ. "ತಾಂತ್ರಿಕ ಜ್ಞಾನ ಸಂಪನ್ನ, ಗ್ರಾಹಕ ಕೇಂದ್ರೀಕೃತ, ಅತ್ಯುತ್ತಮ ಸಾಂಸ್ಥಿಕ ಆಡಳಿತ ಹೊಂದಿದ, ನೈತಿಕ ಮೌಲ್ಯಗಳಿಂದ ಪ್ರೇರಿತ. ರಾಷ್ಟ್ರ ವ್ಯಾಪಿ ಪ್ರಗತಿಶೀಲ ಬ್ಯಾಂಕ್ ಎನಿಸುವುದೇ ನಮ್ಮ ಪರಮ ಧ್ಯೇಯ". ಈ ಧ್ಯೇಯ ವಾಕ್ಯದ ಪಥದಲ್ಲಿಯೇ ಬ್ಯಾಂಕು ನಡೆದಿದೆ.

ಹೊಸ ತಲೆಮಾರಿನ ವಿದೇಶಿ ಬ್ಯಾಂಕುಗಳು ಭಾರತೀಯ ನೆಲದ ಮೇಲೆ ಕಾರ್ಯವೆಸಗತೊಡಗಿದಾಗ, ವಿಶ್ವಮಾರುಕಟ್ಟೆ, ಅಂತಾರಾಷ್ಟ್ರೀಯ ವೇದಿಕೆ ಬ್ಯಾಂಕಿಂಗ್ ರಂಗಕ್ಕೆ ಉಪಲಬ್ಧವಾದಾಗ, ಭಾರತೀಯ ಪರಂಪರಾಗತ ಬ್ಯಾಂಕುಗಳು ಹೊಸ ಪಂಥಾಹ್ವಾನಗಳನ್ನು ಎದುರಿಸಬೇಕಾಯಿತು. ರಾಷ್ಟ್ರೀಯ – ಅಂತಾರಾಷ್ಟ್ರೀಯ ಆರ್ಥಿಕ ರಂಗ ಸತತ ಹಿನ್ನಡೆ ಕಂಡಿದ್ದರಿಂದಲೂ ಬ್ಯಾಂಕಿಂಗ್ ಉದ್ಯಮವು ದಾರುಣವಾಗಿ ಬಾಧೆಗೊಳಗಾಗಿ ಪ್ರತಿ ಆರ್ಥಿಕ ವರ್ಷಾಂತ್ಯಕ್ಕೂ ಅಗ್ನಿ ಪರೀಕ್ಷೆಗೆ ಒಳಗಾಗಬೇಕಾದ ಸ್ಥಿತಿ ಒದಗಿತು.

ದಿನೇ ದಿನೇ ಬ್ಯಾಂಕಿಂಗ್ ಕ್ಷೇತ್ರವು ಬಹುಮುಖೀ ಹಾಗೂ ಬಹುರೂಪಿ ಸವಾಲುಗಳನ್ನು ಎದುರಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ತೀವ್ರ ಸ್ಪರ್ಧಾತ್ಮಕ ಮಾರುಕಟ್ಟೆ, ಅತ್ಯಾಧುನಿಕ ತಂತ್ರಜ್ಞಾನದ ನಿರೀಕ್ಷೆ, ಬದಲಾಗುತ್ತಿರುವ ಗ್ರಾಹಕರ ಆವಶ್ಯಕತೆಗಳು, ಜತೆಗೆ ಭಾರತದಲ್ಲಿ ಬ್ಯಾಂಕಿಂಗ್ ಉದ್ಯಮವನ್ನು ನಿರ್ವಹಿಸುವ ರೀತಿಗಳಲ್ಲಿ ಉಂಟಾಗಿರುವ ಸಮಗ್ರ ಬದಲಾವಣೆ ಮುಂತಾದ ಎಲ್ಲಾ ಸವಾಲುಗಳನ್ನು ಜಾಗರೂಕತೆಯಿಂದ ಮತ್ತು ಸ್ವಸಾಮರ್ಥ್ಯದಿಂದ ಎದುರಿಸಿಕೊಂಡು ಕರ್ನಾಟಕ ಬ್ಯಾಂಕ್ ಇಂದು ಯಶೋಗಾಥೆ ಹಾಡಿದೆ.

2004, ಮಾರ್ಚ್ ವರ್ಷಾಂತ್ಯದಲ್ಲಿ ಕರ್ನಾಟಕ ಬ್ಯಾಂಕು ರೂ. 14,000 ಕೋಟಿ ರೂಪಾಯಿಗಳ ವ್ಯವಹಾರ ಗುರಿ ಸಾಧಿಸಿದೆ. ಬ್ಯಾಂಕಿನ ಒಟ್ಟು ಠೇವಣಿಗಳ ಮೊತ್ತ ರೂ. 9406.94 ಕೋಟಿಗೆ ಏರಿದ್ದು ಬ್ಯಾಂಕಿನ ಒಟ್ಟು ಮುಂಗಡ 4667.92 ಕೋಟಿ ರೂಪಾಯಿಗಳಿಗೆ ಏರಿದೆ. ಬ್ಯಾಂಕಿನ ನಿವ್ವಳ ಲಾಭ 133.17 ಕೋಟಿಗೆ ಏರಿ ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ.

ಬ್ಯಾಂಕು ಈಗಾಗಲೇ ಪ್ರತಿ ಶೇರುದಾರರಿಗೆ ಪ್ರತಿ ಶೇರಿಗೆ ಒಂದು ಶೇರನ್ನು ಬೋನಸ್ ಆಗಿ ನೀಡಿದ್ದು ಈ ಬಾರಿ ಶೇ.40 ಡಿವಿಡೆಂಡ್ ನೀಡಲು ಶಿಫಾರಸು ಮಾಡಲಾಗಿದೆ. ಪ್ರತಿ ಶೇರಿನ ತಲಾ ಪುಸ್ತಕ ಮೌಲ್ಯ ರೂ. 172.70ಕ್ಕೆ ಏರಿದೆ.

ಈಗ ಕರ್ನಾಟಕ ಬ್ಯಾಂಕಿನಲ್ಲಿ ಅತ್ಯುನ್ನತ ಮಟ್ಟದ ಕಾರ್ಪೋರೇಟ್ ಆಡಳಿತ. ಇಲ್ಲಿ ಅತ್ಯಂತ ಪಾರದರ್ಶಕತೆಗೆ ಆದ್ಯ ಸ್ಥಾನ. ಬ್ಯಾಂಕು ಸಮಗ್ರವಾಗಿ ಎದುರಿಸುವ ಸಂಭಾವ್ಯ

ಅಪಾಯಗಳನ್ನು ಗುರುತಿಸಲು, ನಿಗಾವಹಿಸಲು ಮತ್ತು ನಿಭಾಯಿಸಲು ಜತೆಗೆ ತನ್ನ ಆಯವ್ಯಯಗಳ ಮೇಲೆ ಇವುಗಳು ಬೀರುವ ಪ್ರತಿಕೂಲ ಪರಿಣಾಮಗಳನ್ನು ಕಡಿಮೆಗೊಳಿಸಲು ಪರ್ಯಾಪ್ತ ವ್ಯವಸ್ಥೆಗಳನ್ನು ಜಾರಿಗೆ ತಂದಿದೆ.

ಸಂಕುಚಿತಗೊಳ್ಳುತ್ತಿರುವ ಬಡ್ಡಿಯ ವಿಸ್ತಾರ ಮತ್ತು ಕ್ಷಿಪ್ರ ಬದಲಾವಣೆಗೊಳ್ಳುತ್ತಿರುವ ಭವಿಷ್ಯತ್ತಿನ ಬಗ್ಗೆ ಬ್ಯಾಂಕು ಸಂಪೂರ್ಣ ಅರಿವು ಹೊಂದಿದ್ದು, ಸೇವಾವಿಧಾನಗಳಲ್ಲಿ ಹೆಚ್ಚುತ್ತಿರುವ 'ವೇಗ'ವನ್ನು ತನ್ನಲ್ಲಿ ಅಳವಡಿಸಿಕೊಂಡಿತು. ಕೋರ್ ಬ್ಯಾಂಕಿಂಗ್ ಸೆಲ್ಯೂಶನ್ – 'ಫಿನ್ಯಾಕಲ್', ಕಂಪ್ಯೂಟರ್ ತಂತ್ರಜ್ಞಾನದ ಅಳವಳಿಕೆಯ ಬಳಿಕ ಬ್ಯಾಂಕಿನ 370 ಶಾಖೆಗಳಲ್ಲಿ 225 ಶಾಖೆಗಳು ಫಿನ್ಯಾಕಲ್ ಜಾಲಕ್ಕೆ ಸೇರಿ ಅತ್ಯಂತ ತ್ವರಿತ ಸೇವೆಯೊಂದಿಗೆ ಗ್ರಾಹಕರಿಗೆ ಸೇವೆ ನೀಡುತ್ತಿದೆ. "ನಿಮ್ಮ ಕುಟುಂಬದ ಬ್ಯಾಂಕ್ – ಭಾರತದಾದ್ಯಂತ" ಎನ್ನುವುದು ಬ್ಯಾಂಕಿನ ಧೋರಣಾ ಘೋಷಣೆಯೂ ಆಗಿದೆ.

ಇಂದು 'ವೇಗ' ಅನ್ನುವುದು ನಿರ್ವಹಣೆಯ ಗಾತ್ರ ಮತ್ತು ವಿಸ್ತಾರಕ್ಕಿಂತಲೂ ಹೆಚ್ಚು ಮಹತ್ವಪೂರ್ಣ ಅಂಶವಾಗುತ್ತಾ ಇದೆ. "ಸಾಮರ್ಥ್ಯವುಳ್ಳವನು ಉಳಿಯುತ್ತಾನೆ" ಎನ್ನುವ ಬದಲಾಗಿ "ವೇಗೋತ್ಕರ್ಷವುಳ್ಳವನು ಉಳಿಯುತ್ತಾನೆ" ಅನ್ನುವುದು ಇಂದಿನ ಕಾಲಕ್ಕೆ ಪ್ರಸ್ತುತವಾದ ಧ್ಯೇಯ ವಾಕ್ಯ ಎಂದು ಕರ್ನಾಟಕ ಬ್ಯಾಂಕು ಭಾವಿಸಿದೆ. ಬ್ಯಾಂಕಿನ ಕೇಂದ್ರೀಕೃತ ಬ್ಯಾಂಕಿಂಗ್ ಪ್ರಕ್ರಿಯೆ ಇಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಗಮನ ಸೆಳೆದಿವೆ. 'ಫಿನ್ಯಾಕಲ್'ನ ಯಶಸ್ಸು ಅನೇಕ ರಾಷ್ಟ್ರೀಯ ಬ್ಯಾಂಕುಗಳ ಹಾಗೂ ಅಂತಾರಾಷ್ಟ್ರೀಯ ಬ್ಯಾಂಕುಗಳ ಅಧ್ಯಯನ ತಂಡಕ್ಕೆ ಸಂಶೋಧನಾ ವಿಷಯವಾಗಿದೆ. ಅನೇಕ ಅಧ್ಯಯನ ತಂಡಗಳು ಬ್ಯಾಂಕ್ ಪ್ರಧಾನ ಕಚೇರಿಯನ್ನು ಸಂದರ್ಶಿಸಿವೆ.

2005 ಮಾರ್ಚ್ ಅಂತ್ಯಕ್ಕೆ ರೂ. 17,000 ಕೋಟಿ ವ್ಯವಹಾರ ಗುರಿ, ರೂ. 11,000 ಕೋಟಿ ಠೇವಣಿ ಸಂಗ್ರಹ ಗುರಿ ಹಾಗೂ ರೂ. 6000 ಕೋಟಿ ಮುಂಗಡ ಗುರಿ ಹೊಂದಿದ ಬ್ಯಾಂಕು 20 ಹೊಸ ಶಾಖೆಗಳ ಸ್ಥಾಪನೆ ಇನ್ನೂ 50 ಶಾಖೆಗಳಿಗೆ ಕಂಪ್ಯೂಟರ್ ಆಂತರಿಕ ಜಾಲ ವಿಸ್ತರಿಸುವ ಗುರಿ ಹೊಂದಿದೆ. ಮೊಬೈಲ್ ಬ್ಯಾಂಕಿಂಗ್, ಡೆಬಿಟ್‌ಕಾರ್ಡ್, ಇಂಟರ್‌ನೆಟ್ ಬ್ಯಾಂಕಿಂಗ್, ಎಟಿಎಂ ಜಾಲ ವಿಸ್ತರಣೆ. ಭಾರತೀಯ ಹಣಕಾಸು ಜಾಲ, ಸಂಧಾನಕರ ವ್ಯವಹಾರ ವ್ಯವಸ್ಥೆ, ಹೂಡಿಕೆಗಳ ಇತ್ಯರ್ಥ ವ್ಯವಸ್ಥೆ, ಕೇಂದ್ರೀಕೃತ ನಿಧಿ ನಿರ್ವಹಣಾ ವ್ಯವಸ್ಥೆ, ಮತ್ತು ತತ್‌ಕ್ಷಣ ಸ್ಥೂಲ ಇತ್ಯರ್ಥ ವ್ಯವಸ್ಥೆ ಮುಂತಾದ ತಾಂತ್ರಿಕ ಮೂಲಭೂತ ಸೌಕರ್ಯಗಳಲ್ಲಿನ ಮೇಲ್ದರ್ಜೆಗೇರಿಕೆ ಇವುಗಳು ಭಾರತದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸಶಕ್ತ, ಸಮರ್ಥ ಮತ್ತು ಸ್ಥಿತಿ ಸ್ಥಾಪಕತ್ವವುಳ್ಳವನ್ನಾಗಿ ಮಾಡಿದ್ದು ಅದು ಜಾಗತಿಕ ಸ್ಪರ್ಧೆಯನ್ನು ಎದುರಿಸಲು ಶಕ್ತವಾಗುವಂತೆ ಕರ್ನಾಟಕ ಬ್ಯಾಂಕು ಸಹ ಸಜ್ಜಾಗಿದೆ.

ಕರ್ನಾಟಕ ರಾಜ್ಯದ ಕರಾವಳಿ ಬ್ಯಾಂಕ್‌ಗಳ ತವರು. ಅಲ್ಲಿ ಸ್ಥಾಪಿತವಾದ ದೇಶ ವಿದೇಶಗಳಲ್ಲಿ ಹರಡಿದ ಬ್ಯಾಂಕ್‌ಗಳು ಕೆಲವಿವೆ. ಅವುಗಳಲ್ಲಿ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮತ್ತು ವಿಜಯಾ ಬ್ಯಾಂಕ್‌ಗಳು ಪ್ರಮುಖವಾದವು. ಮೈಸೂರು ಬ್ಯಾಂಕ್ ಮೈಸೂರು ಸಂಸ್ಥಾನದಲ್ಲಿ 1919ರಲ್ಲಿ ಸರ್ಕಾರದಿಂದಲೇ ಸ್ಥಾಪಿತವಾದ ಬ್ಯಾಂಕ್. (ಜಿ.ಕೆ.ಐ)

**ಕರ್ನಾಟಕ ಭಾರತಿ :** ಸೃಜನ, ವಿಮರ್ಶನ, ಸಂಶೋಧನ ಮತ್ತು ವಿಜ್ಞಾನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿರುವ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟ ವಾಗುತ್ತಿರುವ ತ್ರೈಮಾಸಿಕೆ. ಸ್ವಾತಂತ್ರ್ಯೋತ್ಸವ ದಿನ, ಕನ್ನಡ ರಾಜ್ಯೋದಯ ದಿನ, ಸಂಕ್ರಮಣ ಮತ್ತು ಅಕ್ಷಯತೃತೀಯೆಗಳ ಸಮಯಗಳಲ್ಲಿ ಕ್ರಮವಾಗಿ ಪ್ರಕಟವಾಗುತ್ತದೆ. ಬಿಡಿ ಸಂಚಿಕೆಯ ಬೆಲೆ ರೂ. 2.50 ವಾರ್ಷಿಕ ಚಂದಾ ರೂ. 8.

ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷಿನಲ್ಲಿ ಸೈನ್ಸ್ (1956), ಹ್ಯುಮಾನಿಟೀಸ್ (1957) ಮತ್ತು ಸೋಷಿಯಲ್ ಸೈನ್ಸಸ್ (1965) ಪತ್ರಿಕೆಗಳು ಪ್ರಕಟವಾಗುತ್ತಿವೆ. ಹ್ಯುಮಾನಿಟೀಸ್ ಪತ್ರಿಕೆ ಇಂಗ್ಲಿಷ್ ಲೇಖನಗಳ ಜೊತೆಗೆ ಕೆಲವು ಕನ್ನಡ ಲೇಖನಗಳನ್ನೂ ಒಳಗೊಂಡಿರುತ್ತಿತ್ತು. ಆದರೆ ಪ್ರಕಟಣೆಗೆ ಬರುತ್ತಿದ್ದ ಕನ್ನಡ ಲೇಖನಗಳ ಸಂಖ್ಯೆ ಹೆಚ್ಚಾದಂತೆ ಆ ಪತ್ರಿಕೆಯಲ್ಲಿ ಅವಕ್ಕೆ ಸ್ಥಳ ಸಾಲದಾಯಿತು. ಅಲ್ಲದೆ, ಅದೇ ಹೊತ್ತಿಗೆ ಉತ್ತರ ಕರ್ನಾಟಕದ ಓದುಗರ ಹಾಗೂ ಲೇಖಕರ ಬಳಗಕ್ಕೆ ಆ ಭಾಗದಲ್ಲಿ ಪ್ರೌಢವಾದ ಸಂಶೋಧನ ಹಾಗೂ ಸೃಜನಾತ್ಮಕ ಲೇಖನಗಳನ್ನು ಪ್ರಕಟಿಸಬಲ್ಲ ಉನ್ನತಮಟ್ಟದ ನಿಯತಕಾಲಿಕೆಯೊಂದರ ಆವಶ್ಯಕತೆಯಿತ್ತು. ಸಾಹಿತ್ಯದಂತೆಯೇ ವಿಜ್ಞಾನದ ವಿವಿಧ ಶಾಖೆಗಳ ಹಾಗೂ ನಾನಾ ಶಾಸ್ತ್ರಗಳ ಜ್ಞಾನವನ್ನು ಕನ್ನಡ ಮಾಧ್ಯಮದ ಮೂಲಕ ಜನತೆಯಲ್ಲಿ ಹರಡುವ ಮತ್ತು ಭಾಷೆಯನ್ನು ಅದಕ್ಕೆ ಒಗ್ಗಿಸಿ ಪುಷ್ಟಿಗೊಳಿಸುವ ಕಾರ್ಯ ತೀವ್ರಗತಿಯಿಂದ ನಡೆಯಬೇಕಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯ ಈ ಪರಿಸ್ಥಿತಿಯನ್ನು ಮನಗಂಡು, ಕರ್ನಾಟಕ ಭಾರತಿ ಎಂಬ ಹೆಸರಿನಲ್ಲಿ ಷಾಣ್ಮಾಸಿಕ ಪತ್ರಿಕೆಯೊಂದನ್ನು ಪ್ರಕಟಿಸಲು ನಿಶ್ಚಯಿಸಿ, 1968ರ ರಾಜ್ಯೋದಯ ದಿನದಂದು (ನವೆಂಬರ್ 1) ಅದರ ಪ್ರಥಮ ಸಂಚಿಕೆಯನ್ನು ಬಿಡುಗಡೆಗೊಳಿಸಿತು. ಡೆಮ್ಮಿ ಅಷ್ಟಪತ್ರಾಕಾರದಲ್ಲಿ 200ಕ್ಕೂ ಹೆಚ್ಚು ಪುಟಗಳನ್ನೊಳಗೊಂಡಿದ್ದ ಆ ಪತ್ರಿಕೆಯ ಬಿಡಿಸಂಚಿಕೆಯ ಬೆಲೆ ರೂ. 3; ವಾರ್ಷಿಕ ಚಂದಾ ರೂ. 5. ಮೊದಲ ಎರಡು ಸಂಪುಟಗಳ ನಾಲ್ಕು ಸಂಚಿಕೆಗಳು ಪ್ರಕಟವಾದ ಮೇಲೆ, 1970ರ ಆಗಸ್ಟ್ 15ರ ಸಂಚಿಕೆಯಿಂದ ಅದು ತ್ರೈಮಾಸಿಕೆಯಾಯಿತು. ಲೇಖನಗಳ ಜೊತೆಗೆ ಗ್ರಂಥಾವಲೋಕನ, ಸಂಪಾದಕೀಯ, ಲೇಖಕರ ಪರಿಚಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ಗ್ರಂಥಗಳ ಕ್ರಯಪಟ್ಟಿ ಇವನ್ನು ಪ್ರತಿಸಂಚಿಕೆಯೂ ಒಳಗೊಂಡಿರುತ್ತದೆ. ಸಂಪಾದಕ ಮಂಡಲಿಯ ಸದಸ್ಯರು ಬೇರೆ ಬೇರೆ ವ್ಯಾಸಂಗ ವಿಭಾಗಗಳನ್ನು ಪ್ರತಿನಿಧಿಸುತ್ತಾರೆ. ಲೇಖಕರಿಗೆ ಅವರ ಲೇಖನ ಪ್ರಕಟವಾದ ಸಂಚಿಕೆಯೊಂದಿಗೆ ಆ ಲೇಖನದ ಮೇಲಚ್ಚಿನ ಇಪ್ಪತ್ತೈದು ಪ್ರತಿಗಳನ್ನು ಉಚಿತವಾಗಿ ಕೊಡಲಾಗುತ್ತದೆ. (ಸಿ.ಕೆ.ವಿ.)

**ಕರ್ನಾಟಕ ಯುದ್ಧಗಳು :** ಭಾರತದ ಕೋರಮಂಡಲ ತೀರಪ್ರದೇಶ ಮತ್ತು ಅದರ ಹಿನ್ನಾಡಿನಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ನಡುವೆ 18ನೆಯ ಶತಮಾನದಲ್ಲಿ ನಡೆದ ಯುದ್ಧಗಳು. ಇವು ನಡೆದ ಪ್ರದೇಶವನ್ನು ಐರೋಪ್ಯರು ಕರ್ನಾಟಕವೆಂದು (ಕರ್ನಾಟಿಕ್) ಕರೆಯುತ್ತಿದ್ದುದರಿಂದ ಈ ಯುದ್ಧಗಳಿಗೆ ಕರ್ನಾಟಕ ಯುದ್ಧಗಳೆಂದು ಹೆಸರು ಬಂದಿದೆ. ಯುರೋಪಿನಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ನಡುವೆ ಯುದ್ಧ ಸಂಭವಿಸಿದಾಗ ಭಾರತದಲ್ಲೂ ಆರಂಭವಾದ ಈ ಯುದ್ಧಗಳ ತತ್‌ಕ್ಷಣದ ಕಾರಣಗಳೂ ಫಲಗಳೂ ಅತಿ ಕ್ಷುಲ್ಲಕವೆನಿಸಿದರೂ ಇವುಗಳಿಂದ ಅಂತಿಮವಾಗಿ ಭಾರತದಲ್ಲಿ ಇಂಗ್ಲಿಷರ ಸ್ಥಾನ ಭದ್ರವಾಗಿ ಫ್ರೆಂಚರ ಬಲ ಕುಂದಿದ್ದರಿಂದ ಈ ದೇಶದ ಚರಿತ್ರೆಯಲ್ಲಿ ಕರ್ನಾಟಕ ಯುದ್ಧಗಳನ್ನು ಅತ್ಯಂತ ಪ್ರಮುಖ ಘಟನೆಗಳೆಂದು ಪರಿಗಣಿಸಲಾಗಿದೆ. (ಪಿ.ಎಂ.ಯು.ಎನ್.)

ಸುಮಾರು 1740ರ ವೇಳೆಗೆ ಕೋರಮಂಡಲ ತೀರದಲ್ಲಿ ಮದ್ರಾಸ್ ಮತ್ತು ಪುದುಚೇರಿಗಳು ಇಂಗ್ಲಿಷ್ ಮತ್ತು ಫ್ರೆಂಚ್ ಜನರ ಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದುವು. ಇವರು ಅಲ್ಲಿ ಭದ್ರವಾದ ಕೋಟೆಗಳನ್ನು ಕಟ್ಟಿಕೊಂಡಿದ್ದರು. ಜೊತೆಗೆ ಪುದುಚೇರಿಗೆ ಸ್ವಲ್ಪ ದಕ್ಷಿಣದಲ್ಲಿ ಇಂಗ್ಲಿಷರಿಗೆ ಫೋರ್ಟ್ ಸೇಂಟ್ ಡೇವಿಡ್ ಎಂಬ ಕೋಟೆಯೊಂದಿತ್ತು. ಇವರು ಈ ಮೂರು ಸ್ಥಳಗಳಲ್ಲೂ ಸಮುದ್ರದ ಮೇಲೆ ಹತೋಟಿ ಹೊಂದಿದ್ದುದರಿಂದ ತಮ್ಮ ದೇಶಗಳಿಂದ ಸರಕುಗಳನ್ನೂ ಅಗತ್ಯವಾದ ನೆರವನ್ನೂ ಪಡೆಯುವುದು ಸುಲಭವಾಗಿತ್ತು. ಸ್ಥಳೀಯ ಅಧಿಕಾರಿಗಳ ಸಂಬಂಧವಾಗಿಯೂ ಇವರದೇ ಮೇಲುಗೈಯಾಗಿತ್ತು. ಏಕೆಂದರೆ ಸ್ಥಳೀಯರಿಗೆ ನೌಕಾಬಲವಾಗಲಿ ಹೊರಗಿನ ನೆರವಾಗಲಿ ದೊರಕುವಂತಿರಲಿಲ್ಲ. ಭೂಸೈನ್ಯದ ವಿಚಾರದಲ್ಲಿ ಕೂಡ ಅವರು ದುರ್ಬಲರಾಗಿದ್ದರು. ಇಡೀ ಕರ್ನಾಟಕ ನೆಲದ ರಾಜಕೀಯವೇ ಆಗ ಅನಿಶ್ಚಿತವಾಗಿತ್ತು. ಇದು ಆಗ ದಖನಿನ ಸುಭಾದಾರನ ಆಶ್ರಯದಲ್ಲಿದ್ದ ಒಮದು ಪ್ರಾಂತ್ಯ. ಇದರ ಅಧಿಪತಿಗೆ ನವಾಬನೆಂಬ ಹೆಸರಿತ್ತು. ಆರ್ಕಾಟ್ ಅವನ ಆಡಳಿತ ಕೇಂದ್ರ. ದಖನಿನ ಸುಭಾದಾರನಾಗಿದ್ದ ನಿಜಾಂ ಉಲ್‌ಮುಲ್ಕ್ ತಾನು ಸ್ವತಂತ್ರನೆಂದೇ ವರ್ತಿಸುತ್ತಿದ್ದದರಿಂದ ಅವನ ಆಶ್ರಿತನಾಗಿದ್ದ ಆರ್ಕಾಟ್ ನವಾಬ ಕೂಡ ತಾನು ಯಾರ ಅಧೀನನೂ ಅಲ್ಲವೆಂಬಂತೆಯೇ ನಡೆದುಕೊಳ್ಳುತ್ತಿದ್ದ. ನಿಜಾಂ ಆಗ ಮರಾಠರನ್ನು ಎದುರಿಸಬೇಕಾಗಿದ್ದುದರಿಂದ ಆರ್ಕಾಟಿನ ನವಾಬನ ಮೇಲೆ ತನ್ನ ಅಧಿಕಾರ ಚಲಾಯಿಸಲು ಅವಧಾನವೇ ಇರಲಿಲ್ಲ.

1740ರಲ್ಲಿ ಮರಾಠರು ಕರ್ನಾಟಕದ ಮೇಲೆ ಆಕ್ರಮಣ ನಡೆಸಿ, ಕೊಳ್ಳೆ ಹೊಡೆದು, ಮಂಡಲಾಧಿಪತಿಯಾಗಿದ ನವಾಬ್ ದೋಸ್ತ್ ಅಲಿಯನ್ನು ಸಂಹರಿಸಿ, ಅವನ ಅಳಿಯನಾದ ಚಂದಾ ಸಾಹೇಬನನ್ನು ಸೆರೆ ಹಿಡಿದಿದ್ದರು. ದೋಸ್ತ್ ಅಲಿಯ ಮಗ ಸಫ್ದರ್ ಅಲಿ ಮರಾಠರಿಗೆ ಒಂದು ಕೋಟಿ ರೂಪಾಯಿ ಕೊಡುವುದಾಗಿ ಹೇಳಿ ಜೀವ ಉಳಿಸಿಕೊಂಡಿದ್ದ. ಆದರೆ ಅವನ ದಾಯಾದಿಯೊಬ್ಬ ಅವನನ್ನು ಕೊಂದು ಅವನ ವಯಸ್ಸಿನ ಮಗನನ್ನು ನವಾಬನೆಂದು ಘೋಷಿಸಿದ. ಎಲ್ಲೆಲ್ಲೂ ಅಶಾಂತಿ ಅತೃಪ್ತಿಗಳು ಬೆಳೆದುವು. ಆದ್ದರಿಂದ 1743ರಲ್ಲಿ ನಿಜಾಂ–ಉಲ್–ಮುಲ್ಕ್ ಕರ್ನಾಟಕಕ್ಕೆ ಬಂದು ಪರಿಸ್ಥಿತಿಯನ್ನು ಸರಿಪಡಿಸಲು ಯತ್ನಿಸಿದ. ತನ್ನ ನೆಚ್ಚಿನ ಅನುಚರನಾಗಿದ್ದ ಅನ್ವರುದ್ದೀನ್ ಖಾನನನ್ನು ನವಾಬನನ್ನಾಗಿ ನೇಮಿಸಿದ. ಆದರೆ ನವಾಬ್ ದೋಸ್ತ್ ಅಲಿಯ ಬಂಧುವರ್ಗಕ್ಕೆ ಇದು ಹಿಡಿಸಲಿಲ್ಲ. ಅನೇಕ ಕೋಟೆಗಳು ಇನ್ನೂ ಅವರ ವಶದಲ್ಲೇ ಇದ್ದುವು. ಅನ್ವರುದ್ದೀನ್ ಖಾನ್ ಅವರ ದೃಷ್ಟಿಯಲ್ಲಿ ಒಬ್ಬ ಪ್ರತಿಸ್ಪರ್ಧಿಯಾಗಿದ್ದ.

ಇಂಥ ಪರಿಸ್ಥಿತಿಯಲ್ಲಿ ಇಂಗ್ಲಿಷರೂ ಫ್ರೆಂಚರೂ ಇಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿಕೊಂಡಿದ್ದರು. ವ್ಯಾಪಾರವಷ್ಟೇ ಅವರ ಆಗಿನ ಉದ್ದೇಶ. ತಮ್ಮ ಹಿತಗಳಿಗೆ ಧಕ್ಕೆ

ಒದಗಿದಾಗಲಲ್ಲದೆ ಬೇರೆ ಸಂದರ್ಭಗಳಲ್ಲಿ ಅವರು ಸ್ಥಳೀಯ ರಾಜಕಾರಣದಲ್ಲಿ ಕೈ ಹಾಕುತ್ತಿರಲಿಲ್ಲ. ಸ್ಥಳೀಯ ಅಧಿಕಾರಿಗಳೂ ಅವರ ಇರವನ್ನು ಅಷ್ಟಾಗಿ ಗಮನಿಸುತ್ತಿರಲಿಲ್ಲ.

**ಒಂದನೆಯ ಕರ್ನಾಟಕ ಯುದ್ಧ :** 1740ರಲ್ಲಿ ಯುರೋಪಿನಲ್ಲಿ ಆಸ್ಟ್ರಿಯನ್ ಸಿಂಹಾಸನದ ಉತ್ತರಾಧಿಕಾರದ ವಿಚಾರವಾಗಿ ಏರ್ಪಟ್ಟ ವಿವಾದವೊಂದರಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ನಡುವೆ ಯುದ್ಧ ಸಂಭವಿಸಿತು. ತತ್ಫಲವಾಗಿ ಭಾರತದಲ್ಲೂ ಇಂಗ್ಲಿಷ್ ಮತ್ತು ಫ್ರೆಂಚ್ ಕಂಪನಿಗಳು ಪರಸ್ಪರ ಶತ್ರುಗಳಾದ ಹಾಗಾಯಿತು. ಆದರೆ ಯುರೋಪಿನಲ್ಲೂ ಭಾರತದಲ್ಲೂ ಇದ್ದ ಫ್ರೆಂಚ್ ಅಧಿಕಾರಿಗಳು ಭಾರತದಲ್ಲಿ ತಟಸ್ಥ ನೀತಿ ಅನುಸರಿಸಬೇಕೆಂದೇ ಇಚ್ಛಿಸಿದರು. ಪುದುಚೇರಿಯ ರಾಜ್ಯಪಾಲ ಡ್ಯುಪ್ಲೆಕ್ಸ್ (**ನೋಡಿ : ಡ್ಯುಪ್ಲೆಕ್ಸ್ ಜೋಸೆಫ್ ಫ್ರ್ಯಾಂಕಾಯ್**) ಈ ಉದ್ದೇಶದಿಂದ ಇಂಗ್ಲಿಷರೊಂದಿಗೆ ನೇರ ಸಂಧಾನವನ್ನಾರಂಭಿಸಿದ. ಆದರೆ ಇಂಗ್ಲೆಂಡಿನಲ್ಲಿದ್ದ ಅಧಿಕಾರಿಗಳು ಇದಕ್ಕೆ ಒಡಂಬಡಲಿಲ್ಲ. ಆದ್ದರಿಂದ ಭಾರತದಲ್ಲಿದ್ದ ಇಂಗ್ಲಿಷರು ತಟಸ್ಥ ನೀತಿಗೆ ಬದ್ಧರಾಗಿರುವುದು ಸಾಧ್ಯವಾಗಲಿಲ್ಲ. ತಮ್ಮ ಹತೋಟಿಯಲ್ಲಿದ್ದ ಸಮುದ್ರದ ಮೇಲೆ ಫ್ರೆಂಚರ ಹಡಗುಗಳ ಸುರಕ್ಷತೆಯ ಭರವಸೆ ಕೊಡುವುದಾಗಲಿಲ್ಲ.

ಇಂಗ್ಲಿಷರು ಬಾರ್ನೆಟನ ನೇತೃತ್ವದಲ್ಲಿ ಫ್ರೆಂಚರ ಹಡಗುಗಳನ್ನು ಹಿಡಿದುಕೊಂಡರು. ಆಗ ಫ್ರೆಂಚರಿಗೆ ಭಾರತದ ಸಮುದ್ರ ಪ್ರದೇಶದಲ್ಲಿ ಯುದ್ಧ ನೌಕೆಗಳಿರಲಿಲ್ಲ. ಮಾರಿಷಸಿನ ಫ್ರೆಂಚರಿಗೆ ಭಾರತದ ಸಮುದ್ರ ಪ್ರದೇಶದಲ್ಲಿ ಯುದ್ಧ ನೌಕೆಗಳಿರಲಿಲ್ಲ. ಮಾರಿಷಸಿನ ಫ್ರೆಂಚ್ ರಾಜ್ಯಪಾಲ ಲಾ ಬೂರ್ಡಾನೆಗೆ ನೆರವಿಗಾಗಿ ಡ್ಯುಪ್ಲೆಕ್ಸನಿಂದ ಪ್ರಾರ್ಥನೆ ಹೋಯಿತು. ಆತ ಹಾಗೂ ಹೀಗೂ ಒಂದು ನೌಕಾ ಪಡೆಯನ್ನು ಸಜ್ಜುಗೊಳಿಸಿಕೊಂಡು ಡ್ಯುಪ್ಲೆಕ್ಸನ ನೆರವಿಗೆ ಬಂದ. ಆದರೆ ಆತ ಆಗಮಿಸಿದಾಗ ಇಂಗ್ಲಿಷ್ ನೌಕೆಗಳು ಮದ್ರಾಸ್ ತೀರಪ್ರದೇಶವನ್ನು ಬಿಟ್ಟು ಹೂಗ್ಲಿಗೆ ಹೊರಟು ಹೋದುವು. ಇದರಿಂದ ಪರಿಸ್ಥಿತಿಯೇ ಬದಲಾವಣೆಯಾಯಿತು. ಫ್ರೆಂಚರು ನೆಲಜಲಗಳೆರಡರ ಮೂಲಕವೂ ಮದ್ರಾಸನ್ನು ಮುತ್ತಿದರು. ಒಂದೇ ವಾರದಲ್ಲಿ ಮದ್ರಾಸು ಫ್ರೆಂಚರ ವಶವಾಯಿತು. ಡ್ಯುಪ್ಲೆಕ್ಸನ ಕೈ ತಡೆಯುವವರು ಯಾರೂ ಇರಲಿಲ್ಲ.

ಈ ಸಮಯದಲ್ಲಿ ಸಂಭವಿಸಿದ ಘಟನೆಯೊಂದರಿಂದ ಭಾರತದ ಭವಿಷ್ಯದ ಇತಿಹಾಸದ ದಿಕ್ಕೇ ಬದಲಾಯಿತೆನ್ನಬಹುದು. ಕರ್ನಾಟಕದ ನೂತನ ನವಾಬ ಅನ್ವರುದ್ದೀನ್ ತನ್ನ ನಾಡಿನಲ್ಲಿ ನಡೆಯುತ್ತಿದ್ದ ಈ ಸ್ಪರ್ಧೆಯನ್ನು ವೀಕ್ಷಿಸುತ್ತಿದ್ದ. ಮೊದಮೊದಲು ಇಂಗ್ಲಿಷರ ಕೈ ಮೇಲಾಗಿದ್ದಾಗ, ತನ್ನ ಹಡುಗುಗಳಿಗೆ ರಕ್ಷಣೆ ನೀಡಬೇಕೆಂದು ಡ್ಯುಪ್ಲೆಕ್ಸನಿಂದ ನವಾಬನಿಗೂ ಪ್ರಾರ್ಥನೆ ಹೋಗಿತ್ತು. ನವಾಬ ನಿರ್ವೀರ್ಯನೆಂಬುದು ಗೊತ್ತಿದ್ದರೂ ಹೆಸರಿಗಾದರೂ ಆತ ಆ ಪ್ರದೇಶದ ಒಡೆಯನಾಗಿದ್ದದ್ದರಿಂದ ಡ್ಯುಪ್ಲೆಕ್ಸ್ ಈ ಕ್ರಮ ಕೈಕೊಂಡಿದ್ದ. ಆದರೆ ನವಾಬನ ಅಧಿಕಾರವನ್ನು ಇಂಗ್ಲಿಷರು ಪುರಸ್ಕರಿಸಲಿಲ್ಲವಾದ್ದರಿಂದ ಅವನ ಪ್ರತಿಭಟನೆಗಳನ್ನು ಅವರು ಅಲಕ್ಷಿಸಿದ್ದರು. ಫ್ರೆಂಚರು ಮದ್ರಾಸನ್ನು ಹಿಡಿದುಕೊಂಡಾಗ ಇಂಗ್ಲಿಷರು ನವಾಬನ ರಕ್ಷಣೆ ಬೇಡಿದರು. ಅನ್ವರುದ್ದೀನನಿಗೆ ಒಮ್ಮಿಂದೊಮ್ಮೆಗೇ ತನ್ನ ಸ್ಥಾನಮಹತ್ತ್ವದ ಅರಿವು ಬಂದಿತ್ತು. ಮದ್ರಾಸಿನ ಆಕ್ರಮಣವನ್ನು ತೆರವು ಮಾಡಬೇಕೆಂದು ಅವನು ಡ್ಯುಪ್ಲೆಕ್ಸನಿಗೆ ಕೋರಿಕೆ ಕಳಿಸಿದ. ಹಿಂದೆ ಇಂಗ್ಲಿಷರು ಮಾಡಿದಂತೆ ಆಗ ಫ್ರೆಂಚರು ಅನ್ವರುದ್ದೀನನ ಮಾತನ್ನು ಕಡೆಗಣಿಸಿದರು. ಫ್ರೆಂಚರ ಹಡಗುಗಳನ್ನು ಇಂಗ್ಲಿಷರು ಹಿಡಿದು ಕೊಂಡಿದ್ದಾಗ ಅವನ್ನು ಬಿಡಿಸಲು ನವಾಬನಲ್ಲಿ ನೌಕಾಸೇನೆ ಇದ್ದಿರಲಿಲ್ಲವಾದರೂ ಡ್ಯುಪ್ಲೆಕ್ಸ್ ಮದ್ರಾಸನ್ನು ಹಿಡಿದುಕೊಂಡಾಗ ಅದನ್ನು ಬಿಡಿಸಲು ಭೂಸೇನೆ ಕಳಿಸುವುದು ಅನ್ವರುದ್ದೀನನಿಗೆ ಸಾಧ್ಯವಿತ್ತು. ಡ್ಯುಪ್ಲೆಕ್ಸನಿಗೆ ಇದು ಅರ್ಥವಾಯಿತು. ಅನ್ವರುದ್ದೀನನಿಗೆ ಒಪ್ಪಿಸುವ ಉದ್ದೇಶದಿಂದಲೇ ಮದ್ರಾಸನ್ನು ತಾನು ಆಕ್ರಮಿಸಿ ಕೊಂಡುದಾಗಿ ನವಾಬನಿಗೆ ಹೇಳಿದ. ಆದರೆ ನವಾಬ ಇದನ್ನು ನಂಬಲಿಲ್ಲ. ತನ್ನ ಮಾತಿನಂತೆ ಫ್ರೆಂಚರು ನಡೆದುಕೊಳ್ಳದ್ದರಿಂದ ಮದ್ರಾಸಿಗೆ ಮುತ್ತಿಗೆ ಹಾಕಿದ್ದ ಫ್ರೆಂಚರೊಂದಿಗೆ ಯುದ್ಧ ಮಾಡಲು ಸೈನ್ಯ ಕಳಿಸಿದ.

ಫ್ರೆಂಚರ ಸೈನ್ಯ ಚಿಕ್ಕದಾದರೂ ಅಚ್ಚುಕಟ್ಟಾಗಿತ್ತು. ಅದು ಮಾಡಿದ ಪ್ರತಿದಾಳಿಯ ಮುಂದೆ ನವಾಬನ ಸೈನ್ಯ ಚೆಲ್ಲಾಪಿಲ್ಲಿಯಾಯಿತು. ಅದು ಸೇಂಟ್‌ಥೊಮೆಗೆ ಹಿಮ್ಮೆಟ್ಟಿ, ಬಲ ಕೂಡಿಸಿಕೊಂಡು ಮತ್ತೆ ಬಂದು ಎರಗಿತಾದರೂ ಆ ವೇಳೆಗೆ ಫ್ರೆಂಚರ ಸೇನಾಬಲ ಹೆಚ್ಚಿದ್ದುದರಿಂದ ನವಾಬನ ಸೈನ್ಯಕ್ಕೆ ಸೋಲು ಸಂಭವಿಸಿತು.

ಫ್ರೆಂಚರಿಗೆ ಗೆಲುವಾಗಿ ಅವರ ಗೌರವ ಪ್ರತಿಷ್ಠೆಗಳು ಅಧಿಕಗೊಂಡಿದ್ದರೂ ಅವರವರಲ್ಲೇ ಛಿದ್ರಗಳು ತಲೆದೋರಿದುವು. ಸಾಕಷ್ಟು ಹಣ ಪಡೆದು ಮದ್ರಾಸನ್ನು ಬಿಟ್ಟುಕೊಡಲು ಲಾ ಬೂರ್ಡಾನೆ ವಾಗ್ದಾನ ಮಾಡಿದ್ದ. ಆದರೆ ಡ್ಯುಪ್ಲೆಕ್ಸನಿಗೆ ಈ ನೀತಿ ಒಪ್ಪಿಗೆಯಾಗಲಿಲ್ಲ. ಇವರಿಬ್ಬರ ಜಗಳ ದೀರ್ಘಕಾಲ ನಡೆಯಿತು. ಕೊನೆಗೆ ಲಾ ಬೂರ್ಡಾನೆಯ ಕ್ರಮಕ್ಕೆ ಡ್ಯುಪ್ಲೆಕ್ಸ್ ಒಪ್ಪುವುದರಲ್ಲಿದ್ದ. ಆದರೆ ಅಷ್ಟರಲ್ಲಿ ಮತ್ತೆ ಅನಿರೀಕ್ಷಿತ ಘಟನೆಯೊಂದು ಸಂಭವಿಸಿತು. ಸಮುದ್ರದಲ್ಲಿ ಭೀಕರ ಗಾಳಿಯೆದ್ದು ಫ್ರೆಂಚ್ ನೌಕೆಗಳಿಗೆ ನಷ್ಟವುಂಟಾಯಿತು. ಇದರಿಂದ ಲಾ ಬೂರ್ಡಾನೆ ತನ್ನ ಹಡಗುಗಳೊಂದಿಗೆ ನಿರ್ಗಮಿಸಿದ. ಆತ ಮಾಡಿಕೊಂಡಿದ್ದ ಕೌಲನ್ನು ಡ್ಯುಪ್ಲೆಕ್ಸ್ ಕಡೆಗಣಿಸಿ ಮದ್ರಾಸನ್ನು ಕೊಳ್ಳೆ ಹೊಡೆದ.

ಲಾ ಬೂರ್ಡಾನೆಯ ನಿರ್ಗಮನದಿಂದ ಸಮುದ್ರದ ಮೇಲೆ ಇಂಗ್ಲಿಷರು ಪ್ರಬಲರಾದರು. ಹದಿನೆಂಟು ತಿಂಗಳ ಕಾಲ ಮುತ್ತಿಗೆ ಹಾಕಿಯೂ ಸೇಂಟ್ ಡೇವಿಡ್ ಕೋಟೆಯನ್ನು ಡ್ಯುಪ್ಲೆಕ್ಸ್ ವಶಪಡಿಸಿಕೊಳ್ಳಲಾಗಲಿಲ್ಲ. ರೀರ್ ಆಡ್ಮಿರಲ್ ಬಾಸ್ಕೊಯೆನನ ನೇತೃತ್ವದಲ್ಲಿ ಇಂಗ್ಲೆಂಡಿನಿಂದ ದೊಡ್ಡ ದಳವೊಂದು ಬಂತು. ಇಂಗ್ಲಿಷರು ಪುದುಚೇರಿಯ ಮೇಲೆ ನೆಲಜಲಗಳೆರಡರಿಂದಲೂ ಮುತ್ತಿಗೆ ಹಾಕಿದರು. ಆದರೆ ಅವರ ಪ್ರಯತ್ನಕ್ಕೆ ಯಶಸ್ಸು ದೊರಕಲಿಲ್ಲ. ಮತ್ತೆ ಅವರ ಮೇಲೆ ಆಕ್ರಮಣ ನಡೆಸಬೇಕೆಂದು ಇಂಗ್ಲಿಷರು ಸನ್ನಾಹ ನಡೆಸುತ್ತಿದ್ದ ಸಮಯಕ್ಕೆ ಸರಿಯಾಗಿ ಯುರೋಪಿನಲ್ಲಿ ಯುದ್ಧ ನಿಂತು ಎಕ್ಸ್ ಲಾ ಷಾಪೆಲ್ ಕೌಲು ಏರ್ಪಟ್ಟಿತು (1748). ಆ ಕೌಲಿನ ಷರತ್ತಿನಂತೆ ಮದ್ರಾಸನ್ನು ಇಂಗ್ಲಿಷರಿಗೆ ಹಿಂದಕ್ಕೆ ಕೊಡಲಾಯಿತು. ಬಾಸ್ಕೊಯೆನ್ ಸ್ವದೇಶಕ್ಕೆ ಮರಳಿದ. ಹೀಗೆ ಒಂದನೆಯ ಕರ್ನಾಟಕ ಯುದ್ಧ ಕೊನೆಗೊಂಡಿತು.

**ಎರಡನೆಯ ಕರ್ನಾಟಕ ಯುದ್ಧ :** ಶಾಂತಿಕೌಲಿನ ಫಲವಾಗಿ ಇಂಗ್ಲಿಷರಿಗೂ ಫ್ರೆಂಚರಿಗೂ ನಡುವೆ ಸಮಾಧಾನವೇನೋ ಏರ್ಪಟ್ಟಿತು. ಆದರೆ ವಾಸ್ತವ ಪರಿಸ್ಥಿತಿ ಮೂಲಭೂತವಾಗಿ ಬದಲಾಗಿತ್ತು. ಸಮುದ್ರದ ಮೇಲೆ ಯಾರು ಹತೋಟಿ ಹೊಂದಿರುತ್ತಾರೋ ಅವರ ಕೈಯೇ ಮೇಲೆಂಬುದನ್ನು ಡ್ಯುಪ್ಲೆಕ್ಸ್ ಅರಿತುಕೊಂಡ. ಈ ವಿಚಾರದಲ್ಲಿ ಫ್ರೆಂಚರು ಇಂಗ್ಲಿಷರನ್ನು ಸರಿಗಟ್ಟುವಂತಿರಲಿಲ್ಲ. ಅಲ್ಲದೆ ಫ್ರೆಂಚರ ಚಟುವಟಿಕೆಗಳು ಕರ್ನಾಟಕ ಭಾಗಕ್ಕೆ ಮಾತ್ರ ಸೀಮಿತವಾಗಿದ್ದುವು. ಇಂಗ್ಲಿಷರಿಗಾದರೋ ಬಂಗಾಲ ಮುಂಬಯಿಗಳಲ್ಲೂ ನೆಲೆಗಳಿದ್ದುವು. ಆದರೆ ದೇಶೀಯ ರಾಜರ ಅಶಿಕ್ಷಿತ ಸೈನ್ಯ ಎಷ್ಟೇ ದೊಡ್ಡದಿರಲಿ ಶಿಸ್ತಿನಿಂದ ಕೂಡಿದ ಐರೋಪ್ಯ ಸೈನ್ಯದ ಮುಂದೆ ಅದು ತತ್ತರಿಸುವುದೆಂಬುದು ಅನ್ವರುದ್ದೀನನ ಸೈನ್ಯಕ್ಕಾಗಿದ್ದ ಪರಾಭವದಿಂದ ಡ್ಯುಪ್ಲೆಕ್ಸನಿಗೆ ಗೊತ್ತಾಗಿತ್ತು. ದೇಶೀಯ ರಾಜರು ನೆಲದಾಸೆಗಾಗಿ ತಂತಮ್ಮಲ್ಲೇ ಬಡಿದಾಡುತ್ತಿದ್ದ ಆ ಕಾಲದಲ್ಲಿ ಡ್ಯುಪ್ಲೆಕ್ಸನ ನೆರವನ್ನು ಬಯಸಿ ಅದಕ್ಕಾಗಿ ಏನನ್ನಾದರೂ ಕೊಡಲು ಸಿದ್ಧರಿರದ್ದವರೂ ಇಲ್ಲದೆ ಇರಲಿಲ್ಲ. ಈ ಬಗೆಯಿಂದ ದೇಶೀಯರ ಬೆಂಬಲ ಗಳಿಸಿ ಇಂಗ್ಲಿಷರ ಸೊಕ್ಕು ಮುರಿಯಬಹುದೆಂಬುದು ಡ್ಯುಪ್ಲೆಕ್ಸನ ತರ್ಕವಾಗಿತ್ತು.

ಅನ್ವರುದ್ದೀನ್ ಖಾನನನ್ನು ಕರ್ನಾಟಕದ ನವಾಬನನ್ನಾಗಿ ನೇಮಕಮಾಡಿದ್ದರಿಂದ ದೋಸ್ತ್ ಅಲಿಯ ಕಡೆಯವರಿಗೆ ಆಗಿದ್ದ ಅಸಮಾಧಾನ ಕಾಲಕ್ರಮೇಣ ಮನಸ್ತಾಪವಾಗಿ ಬೆಳೆಯಿತು. 1741ರಲ್ಲಿ ಮರಾಠರ ಸೆರೆಯಾಳಾಗಿದ್ದ ಚಂದಾ ಸಾಹೇಬ (ದೋಸ್ತ್ ಅಲಿಯ ಅಳಿಯ)ಏಳು ವರ್ಷಗಳ ಅನಂತರ ಬಿಡುಗಡೆ ಹೊಂದಿದ. ತನ್ನ ಮಾವನ ಸಿಂಹಾಸನವನ್ನು ಮತ್ತೆ ಪಡೆಯುವುದು ಅವನ ಉದ್ದೇಶವಾಗಿತ್ತು. ದಖನ್ ರಾಜ್ಯಸ್ಥಾಪಕನಾದ ಅಸಫ್ ಜಾ ನಿಜಾಂ-ಉಲ್-ಮುಲ್ಕ್ ಆ ವೇಳೆಗೆ ಕಾಲವಾದ್ದರಿಂದ (1748) ಆ ಸಿಂಹಾಸನಕ್ಕಾಗಿಯೂ ಸ್ಪರ್ಧೆ ನಡೆದಿತ್ತು. ಅಸಫ್ ಜಾನ ಮಗ ನಾಸಿರ್ ಜಂಗ್ ಅಧಿಕಾರಕ್ಕೆ ಬಂದಿದ್ದನಾದರೂ ಮೊಗಲ್ ಚಕ್ರವರ್ತಿ ತನ್ನನ್ನು ದಖ್ಖನಿನ ಸುಭಾದಾರನನ್ನಾಗಿ ನೇಮಕ ಮಾಡಿದ್ದುದರಿಂದ ತಾನೇ ಸಿಂಹಾಸನವನ್ನೇರಬೇಕೆಂಬುದು ಮೊಮ್ಮಗನಾದ ಮುಜಾಫರ್ ಜಂಗನ ವಾದ.

ಈ ವ್ಯಾಜ್ಯಗಳು ಡ್ಯುಪ್ಲೆಕ್ಸನಿಗೆ ಅನುಕೂಲವಾಗಿ ಒದಗಿ ಬಂದುವು. ಚಂದಾಸಾಹೇಬನನ್ನು ಕರ್ನಾಟಕದ ನವಾಬನನ್ನಾಗಿಯೂ ಮುಜಾಫರ್ ಜಂಗನನ್ನು ದಖನಿನ ಸುಭಾದಾರನನ್ನಾಗಿಯೂ ಸ್ಥಾಪಿಸುವುದಾಗಿಯೂ ಅವರೊಂದಿಗೆ ರಹಸ್ಯವಾಗಿ ಕೌಲು ಮಾಡಿಕೊಂಡ. ಮೂವರೂ ಸೇರಿ ಯುದ್ಧಮಾಡಿ, ವೆಲ್ಲೂರಿನ ಬಳಿ ಅಂಬೂರ್ ಕದನದಲ್ಲಿ ಅನ್ವರುದ್ದೀನನನ್ನು ಸೋಲಿಸಿ ಕೊಂದರು (ಆಗಸ್ಟ್ 3, 1749). ಅನ್ವರುದ್ದೀನನ ಮಗ ಮಹಮ್ಮದ್ ಅಲಿ ತಿರುಚಿರಾಪಳ್ಳಿಗೆ ಓಡಿಹೋದ. ಫ್ರೆಂಚ್ ಸೇನೆ ಅಲ್ಲಿಗೂ ಹೋಯಿತು.

ಈ ಘಟನೆ ಸಹಜವಾಗಿಯೇ ಇಂಗ್ಲಿಷರ ಗಮನ ಸೆಳೆಯಿತು. ಫ್ರೆಂಚರ ಪ್ರಾಬಲ್ಯದಿಂದ ತಮ್ಮ ಹಿತಕ್ಕೂ ಅಪಾಯ ಒದಗುವುದೆಂಬುದನ್ನು ಅವರು ಕಂಡುಕೊಳ್ಳದಿರಲಿಲ್ಲ. ಆದರೆ ಡ್ಯುಪ್ಲೆಕ್ಸನ ತಂತ್ರದ ಮುಂದೆ ಅವರು ನಿರುಪಾಯರಾಗಿದ್ದರು. ದಖನಿನ ಸುಭಾದಾರನಾಗಿದ್ದ ನಾಸಿರ್ ಜಂಗನನ್ನು ಯುದ್ಧಕ್ಕೆ ಪ್ರಚೋದಿಸಿದರಲ್ಲದೆ ತಿರುಚಿನಾಪಳ್ಳಿಯ ಕೋಟೆಯಲ್ಲಿ ಫ್ರೆಂಚರ ವಿರುದ್ಧ ರಕ್ಷಣೆ ಪಡೆದುಕೊಂಡಿದ್ದ ಮಹಮ್ಮದ್ ಅಲಿಗೂ ನೆರವು ಕಳುಹಿಸಿದರು. ಆದರೂ ಡ್ಯುಪ್ಲೆಕ್ಸನ ಕೈ ಮೇಲಾಗಿತ್ತು. ನಾಸಿರ್‌ಜಂಗನಿಗೆ ಮೊದಮೊದಲು ಅಲ್ಪಸ್ವಲ್ಪ ವಿಜಯ ಪ್ರಾಪ್ತವಾಯಿತಾದರೂ ಕೊನೆಗೆ, 1750ರ ಡಿಸೆಂಬರಿನಲ್ಲಿ ಆತ ಯುದ್ಧದಲ್ಲಿ ಮಡಿದ. ಸೆರೆಯಲ್ಲಿದ್ದ ಮುಜಾಫರ್ ಜಂಗನನ್ನು ಫ್ರೆಂಚರು ಬಿಡುಗಡೆ ಮಾಡಿ ದಖನಿನ ಸುಭಾದಾರನೆಂದು ಘೋಷಿಸಿದರು. ಮುಜಾಫರ್ ಜಂಗ್ ಫ್ರೆಂಚರಿಗೆ ನಾನಾ ಬಗೆಯಲ್ಲಿ ತನ್ನ ಕೃತಜ್ಞತೆ ಸೂಚಿಸಿದ. ಕೃಷ್ಣಾ ನದಿಯ ದಕ್ಷಿಣಕ್ಕಿದ್ದ ಮೊಗಲ್ ಪ್ರದೇಶಕ್ಕೆಲ್ಲ ಡ್ಯುಪ್ಲೆಕ್ಸನನ್ನು ರಾಜ್ಯಪಾಲನಾಗಿ (ಗವರ್ನರ್) ನೇಮಿಸಿದನಲ್ಲದೆ ಪುದುಚೇರಿಯ ಬಳಿಯ ಪ್ರದೇಶವನ್ನೂ ಮಚಲಿಪಟ್ಟಣವನ್ನು ಒಳಗೊಂಡ ಒರಿಸ್ಸ ಕರಾವಳಿ ಪ್ರದೇಶವನ್ನೂ ಫ್ರೆಂಚರಿಗೆ ಕೊಟ್ಟ. ಮುಜಾಫರ್ ಜಂಗನ ಅಪೇಕ್ಷೆಯಂತೆ ಡ್ಯುಪ್ಲೆಕ್ಸ್ ತನ್ನ ಅತ್ಯಂತ ದಕ್ಷ ಅಧಿಕಾರಿಯೆನಿಸಿಕೊಂಡಿದ್ದ ಬುಸ್ಸಿಯ ಅಧೀನದಲ್ಲಿ ಫ್ರೆಂಚ್ ಸೇನೆಯೊಂದನ್ನು ನಿಜಾಮನ ನೆರವಿಗೆ ಕೊಟ್ಟ. ಇದರಿಂದ ನಿಜಾಮನ ಆಸ್ಥಾನದಲ್ಲಿ ಫ್ರೆಂಚ್ ಪ್ರಭಾವ ಪ್ರಬಲವಾಯಿತು. ಚಂದಾಸಾಹೇಬ ಆರ್ಕಾಟಿನ ಅಧಿಪತಿಯಾಗಿ ಸ್ಥಾಪಿತನಾದ.

ತಿರುಚಿನಾಪಳ್ಳಿಯ ಕೋಟೆಯಲ್ಲಿ ಭದ್ರವಾಗಿ ಕುಳಿತಿದ್ದ ಮಹಮ್ಮದ್ ಅಲಿಯನ್ನೂ ಡ್ಯುಪ್ಲೆಕ್ಸ್ ವಿಚಾರಿಸಿಕೊಳ್ಳಬೇಕಾಗಿತ್ತು. ಸೈನ್ಯಬಲದಿಂದ ಅವನನ್ನು ಕದಲಿಸುವುದು ಅಸಾಧ್ಯವೆನಿಸಿದಾಗ ಡ್ಯುಪ್ಲೆಕ್ಸ್ ಸಂಧಾನದ ಹಾದಿ ಹಿಡಿದ. ಆದರೆ ಇದು ಫಲಿಸಲು ಇಂಗ್ಲಿಷರು ಅವಕಾಶ ಕೊಡಲಿಲ್ಲ. ಇಂಗ್ಲಿಷರ ಚಿತಾವಣೆಯಿಂದ ಮಹಮ್ಮದ್ ಅಲಿ ಬಿಗಿಯಾದ.

ಅಷ್ಟರಲ್ಲಿ ಇಂಗ್ಲಿಷರ ರಾಜ್ಯಪಾಲನಾಗಿ ಬಂದಿದ್ದ (1750) ಸಾಂಡರ್ಸನ ನಾಯಕತ್ವದಲ್ಲಿ ಇಂಗ್ಲಿಷರು ಹೊಸ ಉತ್ಸಾಹ ತಳೆದರು. ಇಂಗ್ಲೆಂಡಿನ ಸರ್ಕಾರವು ಬೆಂಬಲವಾಗಿ ನಿಂತುಕೊಂಡಿತು. ಯುರೋಪಿನಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ವೈರವಿಲ್ಲದಿದ್ದರೂ ಭಾರತದಲ್ಲಿ ಇವರಿಬ್ಬರ ನಡುವೆ ಯುದ್ಧಸ್ಥಿತಿ ಏರ್ಪಟ್ಟಿತು. ಇಂಗ್ಲಿಷರ ಸೈನ್ಯಸಹಾಯ ಬರುವವರೆಗೂ ಅವರ ಸಲಹೆಯಂತೆ ಮಹಮ್ಮದ್ ಅಲಿ ಡ್ಯುಪ್ಲೆಕ್ಸನೊಂದಿಗೆ ಸಂಧಾನದ ನೆವದಲ್ಲಿ ಕಾಲ ತಳ್ಳಿದ. 1751ರ ಮೇಯಲ್ಲಿ ಇಂಗ್ಲಿಷ್ ಸೇನೆ ತಿರುಚಿನಾಪಳ್ಳಿಯ ಕಡೆಗೆ ಪ್ರಯಾಣ ಬೆಳೆಸಿತು. ಲಾನ ನಾಯಕತ್ವದಲ್ಲಿ ಫ್ರೆಂಚ್ ಸೇನೆ ಅಲ್ಲಿಗೆ ಹೋಯಿತು. ಆ ವರ್ಷದ ಅಂತ್ಯದ ವೇಳೆಗೆ ಮೈಸೂರು ತಂಜಾವೂರುಗಳ ಅರಸರೂ ಮಹಮ್ಮದ್ ಅಲಿಯ ನೆರವಿಗೆ ಬಂದರು.

ಮದ್ರಾಸಿನಲ್ಲಿ ಇಂಗ್ಲಿಷ್ ಕಂಪನಿಯ ನೌಕರನಾಗಿ ಬಂದು ಸೈನ್ಯ ಸೇರಿ ಮುಂದಕ್ಕೆ ಬರುತ್ತಿದ್ದ ರಾಬರ್ಟ್ ಕ್ಲೈವನ **(ನೋಡಿ– ಕ್ಲೈವ್, ರಾಬರ್ಟ್)** ಉಪಾಯವೊಂದರಿಂದ ಭಾರತದಲ್ಲಿ ಫ್ರೆಂಚರ ಭವಿಷ್ಯ ಮಣ್ಣುಪಾಲಾಯಿತು. ಆರ್ಕಾಟಿನ ಮುತ್ತಿಗೆಗಾಗಿ ಇಂಗ್ಲಿಷರು ಸೈನ್ಯವೊಂದನ್ನು ಕಳಿಸಿದರೆ ಚಂದಾಸಾಹೇಬ ತನ್ನ ಸೈನ್ಯದಲ್ಲಿ ಒಂದು ಭಾಗವನ್ನು ಅತ್ತ ಕಳಿಸಬೇಕಾಗುವುದೆಂದೂ ಆಗ ತಿರುಚಿನಾಪಳ್ಳಿಯ ಮೇಲಣ ಒತ್ತಡ ಕಡಿಮೆಯಾಗುವುದರಿಂದ ಅಲ್ಲಿ ಜಯ ಸಾಧಿಸಬಹುದೆಂದೂ ಕ್ಲೈವ್ ಸಲಹೆ ಮಾಡಿದ. ಮಹಮ್ಮದ್ ಅಲಿಯೂ ಹಿಂದೆಯೇ ಈ ರೀತಿ ಸಲಹೆ ಮಾಡಿದ್ದ. ಸಾಂಡರ್ಸನಿಗೂ ಇದು ಒಪ್ಪಿಗೆಯಾಗಿತ್ತು. ಕೇವಲ 200 ಮಂದಿ ಐರೋಪ್ಯರು ಮತ್ತು 300 ಮಂದಿ ಸಿಪಾಯಿಗಳೊಂದಿಗೆ ಕ್ಲೈವನೇ ಈ ಸಾಹಸಕಾರ್ಯದಲ್ಲಿ ಕೈಯಿಕ್ಕಿದ. ಅವನ ನಿರೀಕ್ಷೆಯಂತೆ ಚಂದಾಸಾಹೇಬ ದೊಡ್ಡ ಸೈನ್ಯವೊಂದನ್ನು ತಿರುಚಿನಾಪಳ್ಳಿಯಿಂದ ಆರ್ಕಾಟಿನ ಕಡೆಗೆ ತಿರುಗಿಸಿದ. 53 ದಿನಗಳ ಕಾಲ ಕ್ಲೈವ್ ಇದನ್ನು ಎದುರಿಸಿದ. ಕೊನೆಗೂ ಚಂದಾಸಾಹೇಬನ ಸೈನ್ಯ ಹಿಂದಿರುಗಬೇಕಾಯಿತು.

ಇದರಿಂದ ಇಂಗ್ಲಿಷರ ಪ್ರತಿಷ್ಠೆ ಬೆಳೆದು ಫ್ರೆಂಚರಿಗೆ ಮುಖಭಂಗವಾಯಿತು. ತಿರುಚಿನಾಪಳ್ಳಿಯ ಮುತ್ತಿಗೆಯಲ್ಲಿ ನಿರತನಾಗಿದ್ದ ಫ್ರೆಂಚ್ ಸೇನಾನಿ ಲಾ ಗೆ ಧೈರ್ಯ ಕುಗ್ಗಿ ಆತ ಶ್ರೀರಂಗದಲ್ಲಿ ತಲೆ ಮರೆಸಿಕೊಂಡ. ಇಂಗ್ಲಿಷರು ಅದನ್ನೂ ಮುತ್ತಿದರು. ಇನ್ನಷ್ಟು ಫ್ರೆಂಚ್ ಸೇನೆ ಅಲ್ಲಿಗೆ ಧಾವಿಸಿತು. ಆದರೆ ಪ್ರಯೋಜನವಾಗಲಿಲ್ಲ. 1752ರ ಜೂನ್ 9 ರಂದು ಆ ಸೈನ್ಯ ಇಂಗ್ಲಿಷರಿಗೆ ಶರಣಾಗತವಾಯಿತು. ಮೂರು ದಿನಗಳ ಅನಂತರ ಲಾನೂ ಅವನ ಪಡೆಯೂ ಸೆರೆ ಸಿಕ್ಕಬೇಕಾಯಿತು. ಚಂದಾ ಸಾಹೇಬನೂ ಶರಣಾದ. ತಂಜಾವೂರಿನ ಸೇನಾಧಿಪತಿ ಚಂದಾಸಾಹೇಬನ ತಲೆ ತೆಗೆದ.

ಡ್ಯುಪ್ಲೆಕ್ಸನ ಕನಸು ಮುರಿದು ಬಿತ್ತು. ಇದಕ್ಕೆ ಆತ ನಂಬಿದ್ದ ಸೇನಾಧಿಕಾರಿಗಳ ಅದಕ್ಷತೆಯೇ ಬಹಳ ಮಟ್ಟಿಗೆ ಕಾರಣ. ಆದರೂ ಆತ ಎದೆಗುಂದಲಿಲ್ಲ. ಮುರಾರಿರಾವ್ ಮತ್ತು ಮೈಸೂರಿನ ಅರಸರನ್ನು ಒಲಿಸಿಕೊಂಡ. ತಂಜಾವೂರಿನ ದೊರೆ ತಟಸ್ಥನಾಗಿರುವಂತೆ ಒಪ್ಪಂದ ಮಾಡಿಕೊಂಡ. ತಿರುಚಿನಾಪಳ್ಳಿಯನ್ನೇ ಮತ್ತೆ ಮುತ್ತಿಗೆ ಹಾಕಿದ.

ಆದರೆ ಡ್ಯುಪ್ಲೆಕ್ಸನ ಹಂಚಿಕೆಗಳು ಫ್ರಾನ್ಸಿನಲ್ಲಿದ್ದ ಅಧಿಕಾರಿಗಳಿಗೆ ಒಪ್ಪಿಗೆಯಾಗಲಿಲ್ಲ. ಆತನೇನೋ ಅತ್ಯಂತ ಮೇಧಾವಿಯೇ ಆಗಿದ್ದರೂ ಅವನ ಸಾಹಸಕೃತ್ಯಗಳ ವೈಫಲ್ಯದಿಂದಾಗಿ ಫ್ರೆಂಚರಿಗೆ ಬಹಳ ನಷ್ಟವಾಗಿತ್ತು. ಫ್ರೆಂಚರು ಡ್ಯುಪ್ಲೆಕ್ಸನನ್ನು ಹಿಂದಕ್ಕೆ ಕರೆಸಿಕೊಂಡರು. ಹೊಸ ಫ್ರೆಂಚ್ ಅಧಿಕಾರಿ ಇಂಗ್ಲಿಷರೊಂದಿಗೆ ಸಂಧಾನ ಹೂಡಿ ಕೌಲು ಮಾಡಿಕೊಂಡ (1754). ಎರಡನೆಯ ಕರ್ನಾಟಕ ಯುದ್ಧ ಕೊನೆಗೊಂಡಿತು. ದೇಶೀಯ ರಾಜರ ವ್ಯಾಜ್ಯಗಳಲ್ಲಿ ಕೈ ಹಾಕಬಾರದೆಂದು ಎರಡು ಪಕ್ಷಗಳೂ ಒಪ್ಪಿಕೊಂಡುವು. ಕೌಲು ಮಾಡಿಕೊಂಡ ಸಮಯದಲ್ಲಿ ಯಾರಾಗೆ ಯಾವ ಯಾವ ಪ್ರದೇಶ ಸೇರಿತ್ತೋ ಅದದು ಅವರವರ ವಶದಲ್ಲೇ ಇರತಕ್ಕದ್ದೆಂದೂ ಒಡಂಬಡಿಕೆಯಾಯಿತು. ನಿಜಾಮನ ಆಸ್ಥಾನದಲ್ಲಿ ಫ್ರೆಂಚರ ಪ್ರಭಾವವೂ ಕರ್ನಾಟಕದಲ್ಲಿ ಇಂಗ್ಲಿಷರ ಪ್ರಭಾವವೂ ಮುಂದುವರಿದು ಒಂದು ಬಗೆಯ ಸಮಸ್ಥಿತಿ ಏರ್ಪಟ್ಟಿತೆನ್ನಬಹುದು.

**ಮೂರನೆಯ ಕರ್ನಾಟಕ ಯುದ್ಧ:** 1756ರಲ್ಲಿ ಯುರೋಪಿನಲ್ಲಿ ಏಳು ವರ್ಷಗಳ ಯುದ್ಧ ಆರಂಭವಾದಾಗ ಫ್ರಾನ್ಸೂ ಇಂಗ್ಲೆಂಡೂ ಪಕ್ಷವಿಪಕ್ಷಗಳಾದುವು. ಭಾರತದಲ್ಲೂ ಈ ಎರಡು ಪಕ್ಷಗಳೂ ಪರಸ್ಪರ ಕದನ ಹೂಡಿದುವು. ಈ ಬಾರಿಯ ಯುದ್ಧ ಕರ್ನಾಟಕದ ಎಲ್ಲೆಯನ್ನೂ ದಾಟಿ ಬಂಗಾಳಕ್ಕೂ ಹಬ್ಬಿತು. ದಖನಿನಂತೆ ಬಂಗಾಳಕ್ಕೂ ಆಗ ಹೆಸರಿಗೆ ಮಾತ್ರ ದೆಹಲಿಯ ಮೊಗಲ್ ಚಕ್ರವರ್ತಿಯ ಅಧೀನದಲ್ಲಿ ನವಾಬ್ ಅಲಿವರ್ದೀಖಾನನೆಂಬ ಸುಭಾದಾರನಿದ್ದ. ಹಿಂದಿನ ನವಾಬ ಸರ್ಫರಾಜ಼್ ಖಾನನ ವಿರುದ್ಧ ಬಂಡಾಯ ಹೂಡಿ ಅಧಿಕಾರಕ್ಕೆ ಬಂದಿದ್ದ ಆಲಿವರ್ದೀಖಾನ್ ಸಮರ್ಥ. ಆದರೆ ಪದೇಪದೇ ಆಕ್ರಮಣ ನಡೆಸುತ್ತಿದ್ದ ಮರಾಠರನ್ನೆದುರಿಸುವುದೇ ಅವನ ಪರಿಪಾಟಲಾಗಿತ್ತು. ಆ ವೇಳೆಗೆ ಸಂಭವಿಸಿದ ಎರಡನೆಯ ಕರ್ನಾಟಕ ಯುದ್ಧದಲ್ಲಿ ಇಂಗ್ಲಿಷರ ವರ್ತನೆಯನ್ನರಿತುಕೊಂಡ ಆಲಿವರ್ದೀಖಾನನಿಗೆ ಅವರ ಬಗ್ಗೆಯೂ ಸಂಶಯ ಮೂಡಿತ್ತು. ಗಂಡು ಮಕ್ಕಳಿಲ್ಲದ ಈ ನವಾಬ 1756ರಲ್ಲಿ ತೀರಿಕೊಂಡಾಗ ಇವನ ಕೊನೆಯ ಮಗಳ ಮಗ ಸಿರಾಜುದ್ದೌಲ ನವಾಬನಾದ. ಇಂಗ್ಲಿಷರು ಅಲಿವರ್ದೀಖಾನನ ಇನ್ನೊಬ್ಬ ಮಗಳಾದ ಘಸೀಟಿ ಬೇಗಮಳ ಪಕ್ಷ ವಹಿಸಿ ತನ್ನ ಮೇಲೆ ಯುದ್ಧ ಹೂಡಲು ಸನ್ನಾಹ ಮಾಡುತ್ತಿರವರೆಂದು ಸಿರಾಜುದ್ದೌಲನಿಗೆ ಸಂಶಯ ಮೂಡಿತು. ಇಂಗ್ಲಿಷರ ವರ್ತನೆಯಾದರೂ ಈ ಸಂಶಯ ಪ್ರಬಲವಾಗುವಂತೆಯೇ ಇತ್ತು. ಇಂಗ್ಲಿಷರು ಕಲ್ಕತ್ತದ ಹಳೆಯ ಕೋಟೆಯ ಮೇಲೆ ಫಿರಂಗಿಗಳನ್ನು ಸ್ಥಾಪಿಸಿದ್ದರಲ್ಲದೆ ಹೊಸದಾಗಿ ಕೋಟೆಯೊಂದನ್ನು ಕಟ್ಟತೊಡಗಿದ್ದರು. ಇವನ್ನು ತೆಗೆಯಬೇಕೆಂಬ ಸಿರಾಜುದ್ದೌಲನ ಆಜ್ಞೆಗೆ ಇಂಗ್ಲಿಷರು ಬೆಲೆಕೊಡಲಿಲ್ಲ. ಸಿರಾಜುದ್ದೌಲ ಮಿಂಚಿನಂತೆ ಕಾರ್ಯಪ್ರವೃತ್ತನಾದ. ದೊಡ್ಡಮ್ಮನಾದ ಘಸೀಟಿ ಬೇಗಮಳನ್ನು ತನ್ನ ಅರಮನೆಗೆ ವರ್ಗಾಯಿಸಿದ. ಆಕೆಯೊಂದಿಗೆ ಇಂಗ್ಲಿಷರ ಸಂಪರ್ಕ ಕಡಿದುಬಿತ್ತು. ಕಾಸಿಂ ಬಾಜ಼ಾರಿನಲ್ಲಿದ್ದ ಇಂಗ್ಲಿಷರ ಕಾರ್ಖಾನೆಯ ಮೇಲೆರಗಿ ಅದನ್ನು ವಶಪಡಿಸಿಕೊಂಡ. ಕಲ್ಕತ್ತದ ಮೇಲೆಯೂ ಏರಿ ಹೋದ. ಇಂಗ್ಲಿಷರು ಕೋಟೆ ತೊರೆದು ಹಡಗುಗಳ ಮೇಲೆ ಅಡಗಿಕೊಂಡರು. ವಿಲಿಯಂ ಕೋಟೆಯ ಪತನವಾಯಿತು.

ಇಂಗ್ಲಿಷರ ಸೋಲಿನ ಸುದ್ದಿ ಮದ್ರಾಸಿಗೆ ಮುಟ್ಟಿದಾಗ ಕ್ಲೈವನ ನೇತೃತ್ವದಲ್ಲಿ ಇಂಗ್ಲಿಷ್ ಸೈನ್ಯವೊಂದು ಕಲ್ಕತ್ತಕ್ಕೆ ಅಭಿಮುಖವಾಗಿ ಪ್ರಯಾಣ ಬೆಳೆಸಿತು. ಕಲ್ಕತ್ತದ ಇಂಗ್ಲಿಷರು ಸಿರಾಜುದ್ದೌಲನ ಕ್ಷಮಾಭಿಕ್ಷೆ ಬೇಡುತ್ತಿದ್ದಾಗ ಕ್ಲೈವನ ಸೇನೆ ಬಂತು. ಕಲ್ಕತ್ತ ಮತ್ತೆ ಇಂಗ್ಲಿಷರ ವಶವಾಯಿತು. ಸಿರಾಜುದ್ದೌಲನ ಶಾಂತಿಯ ಅಭಿಲಾಷೆಯನ್ನು ಅವರು ಕಡೆಗಣಿಸಿದರು. ಫ್ರೆಂಚರ ಕೇಂದ್ರವಾಗಿದ್ದ ಚಂದ್ರ ನಗರವನ್ನೂ ಗೆದ್ದರು. ಫ್ರೆಂಚರು ಅಲ್ಲಿಂದ ಪಲಾಯನ ಮಾಡಿ ಸಿರಾಜುದ್ದೌಲನಲ್ಲಿ ರಕ್ಷಣೆ ಪಡೆದರು. ಅವರನ್ನು ಬ್ರಿಟಿಷರಿಗೆ ಬಿಟ್ಟುಕೊಡಲು ಸಿರಾಜುದ್ದೌಲ ಒಪ್ಪಲಿಲ್ಲ. ಇಂಗ್ಲಿಷರು ಮುಂದೆ ಬಗೆಬಗೆಯ ತಂತ್ರ ಹೂಡಿ ಸಿರಾಜುದ್ದೌಲನನ್ನು ಮೋಸಗೊಳಿಸಿ ಪ್ಲಾಸಿ ಕದನದಲ್ಲಿ ಅವನನ್ನು ಸೋಲಿಸಿದರು. **(ನೋಡಿ– ಪ್ಲಾಸಿ ಕದನ)**

1756ರಲ್ಲಿ ಯುರೋಪಿನಲ್ಲಿ ಆರಂಭವಾಗಿದ್ದ ಯುದ್ಧದ ಫಲವಾಗಿ ಭಾರತದಲ್ಲೂ ಫ್ರೆಂಚರೂ ಇಂಗ್ಲಿಷರೂ ಮತ್ತೆ ಪರಸ್ಪರ ಯುದ್ಧ ನಿರತರಾದರು. ಆದರೆ ಕರ್ನಾಟಕ ಪ್ರದೇಶದಲ್ಲಿ ಯುದ್ಧದ ಬಿಸಿ ತಟ್ಟಿದ್ದು ಬಂಗಾಳದಲ್ಲಿ ಇಂಗ್ಲಿಷರ ಸಾಹಸಕ್ಕೆ ವಿಜಯ ದೊರಕಿದ ಮೇಲೆ ಅದುವರೆಗೂ ಫ್ರೆಂಚರೂ ಹೈದರಾಬಾದಿನಲ್ಲಿದ್ದ ಬುಸ್ಸಿಗೆ ನೆರವು ನೀಡುವುದರಲ್ಲಿ ನಿರತರಾಗಿದ್ದರು. 1758ರಲ್ಲಿ ಇಂಗ್ಲಿಷರೂ ಫ್ರೆಂಚರೂ ಬಿರುಸಿನಿಂದ ಪರಸ್ಪರ ಯುದ್ಧಸನ್ನದ್ಧರಾಗ ತೊಡಗಿದರು. ಬಂಗಾಳಕ್ಕೆ ಹೋಗಿದ್ದ ಇಂಗ್ಲಿಷ್ ನೌಕಾಪಡೆ ವಾಪಸಾಯಿತು. ಫ್ರೆಂಚರ ಪರವಾಗಿ ಯುದ್ಧ ನಿರ್ವಹಿಸಲು ಕೌಂಟ್ ದ ಲಾಲಿ ನಿಯುಕ್ತನಾದ, ಆದರೆ ಫ್ರೆಂಚ್ ನೌಕಾಪಡೆ ಮಾತ್ರ ಡ್ಯಾಷನ ಅಧೀನದಲ್ಲಿತ್ತು. ಇದರಿಂದ ಫ್ರೆಂಚರ ಪಕ್ಷದಲ್ಲಿ ಅನೈಕ್ಯವೂ ದ್ವೇಷಾಸೂಯೆಗಳೂ ಬೆಳೆಯುವಂತಾಯಿತು.

ಕೌಂಟ್ ದ ಲಾಲಿ ಬುದ್ಧಿವಂತ. ಮದ್ರಾಸಿನ ಮೇಲೆ ಏರಿಹೋಗಿ ಅದನ್ನು ಸ್ವಾಧೀನಪಡಿಸಿಕೊಂಡು ಕರ್ನಾಟಕದಲ್ಲಿ ಇಂಗ್ಲಿಷರ ಅಧಿಕಾರದ ಬುಡಕ್ಕೇ ಪೆಟ್ಟು ತಾಕಿಸಬೇಕೆಂಬುದು ಲಾಲಿಯ ಹಂಚಿಕೆ. ಅದರಂತೆ ಆತ ಸೇಂಟ್ ಡೇವಿಡ್ ಕೋಟೆಗೆ ಮುತ್ತಿಗೆ ಹಾಕಿದ. ಆದರೆ ಇಂಗ್ಲಿಷರ ಸಮ್ಮುಖದಲ್ಲಿ ಸೋಲುಂಡು ಅನುಭವ ಪಡೆದಿದ್ದ ಡ್ಯಾಷನಿಂದ ಲಾಲಿಗೆ ಕಡಲ ಪಡೆಯ ನೆರವು ಒದಗಲಿಲ್ಲ. ಇಂಗ್ಲಿಷರ ಜೀವನಾಡಿಯೇ ಕಡಲು. ಬಂಗಾಳದೊಂದಿಗೆ ಸಂಪರ್ಕವಿದ್ದದ್ದೂ ಅವರಿಗೊಂದು ವರವಾಗಿತ್ತು. ಫ್ರೆಂಚರಿಗೆ ಇವೆರಡು ಅನುಕೂಲಗಳೂ ಇಲ್ಲದ್ದರಿಂದ ಲಾಲಿಯ ಪ್ರಯತ್ನಗಳೆಲ್ಲ ವಿಫಲವಾದುವು. ಆತ ಆರ್ಥಿಕ ತೊಂದರೆಗಳಿಗೆ ಸಿಕ್ಕಿಬಿದ್ದ. ತಂಜಾವೂರಿನ ರಾಜ ಫ್ರೆಂಚರಿಗೆ ಕೊಡಬೇಕಾಗಿದ್ದ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಲಾಲಿ ಆ ಊರಿಗೆ ಮುತ್ತಿಗೆ ಹಾಕಿದ. ಆದರೆ ಸಾಕಷ್ಟು ಮದ್ದುಗುಂಡುಗಳಿಲ್ಲದ್ದರಿಂದ ಪ್ರಯೋಜನವಾಗಲಿಲ್ಲ. ಅಲ್ಲದೆ ಲಾಲಿ ಶೀಘ್ರ ಕೋಪಿ, ದುರಭಿಮಾನಿ. ಈ ಸ್ವಭಾವ ಸೈನ್ಯದ ಸಿಬ್ಬಂದಿಗೆ ಹಿಡಿಸುತ್ತಿರಲಿಲ್ಲ. ಆದ್ದರಿಂದ ಯುದ್ಧದಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಆ ವೇಳೆಗೆ ಇಂಗ್ಲಿಷ್ ನೌಕಾಪಡೆಯಿಂದ ಡ್ಯಾಷನ ನೌಕೆಗಳಿಗೆ ಬಿದ್ದ ಪೆಟ್ಟಿನಿಂದಾಗಿ ಫ್ರೆಂಚ್ ನೌಕಾ ಬೆಂಬಲ ಲಾಲಿಗೆ ಸಿಗುವಂತಿರಲಿಲ್ಲ. ಲಾಲಿ ತಂಜಾವೂರಿನ ಮುತ್ತಿಗೆಯನ್ನು ಹಿಂತೆಗೆದುಕೊಂಡ. ಇದರಿಂದ ಅವನ ಗೌರವಕ್ಕೆ ಭಂಗ ಬಂತು. ಮದ್ರಾಸಿಗೆ ರಕ್ಷಣೆಯಾಗಿ ನಿಂತಿದ್ದ ಇಂಗ್ಲಿಷ್ ನೌಕಾಪಡೆಯನ್ನು ನಿವಾರಿಸಿಕೊಳ್ಳದೆ ಆ ನಗರವನ್ನು ವಶಪಡಿಸಿಕೊಳ್ಳುವುದಂತೂ ಲಾಲಿಗೆ ಅಸಾಧ್ಯವಾಗಿತ್ತು. ಅಲ್ಲಿ ಬಂದರು ಸೌಲಭ್ಯವಿಲ್ಲದ್ದರಿಂದ ಮಳೆಗಾಲದಲ್ಲಿ ಇಂಗ್ಲಿಷ್ ನೌಕೆಗಳು ಅಲ್ಲಿಂದ ಹೊರಹೋಗುವುದನ್ನೇ ಕಾದುಕೊಂಡಿದ್ದು ಆಗ ಆತ ಮದ್ರಾಸಿಗೆ ಮುತ್ತಿಗೆ ಹಾಕಿದ (14 ಡಿಸೆಂಬರ್ 1758). ಇದು ಮರುವರ್ಷದ ಫೆಬ್ರುವರಿ 16ರ ವರೆಗೂ ಮುಂದುವರಿಯಿತು. ಆಗ ಇಂಗ್ಲಿಷ್ ನೌಕಾಬಲ ಮತ್ತೆ ಬಂತು. ಲಾಲಿ ಹಿನ್ನೆಡೆದ.

ಇದು ಫ್ರೆಂಚರಿಗೆ ಬಿದ್ದ ಭಾರಿ ಪೆಟ್ಟು. ಇದರಿಂದ ಭಾರತದಲ್ಲಿ ಅವರ ಭವಿಷ್ಯ ಕುಸಿದು ಬಿತ್ತು. ಇದೇ ಕಾಲಕ್ಕೆ ಲಾಲಿ ಇನ್ನೊಂದು ತಪ್ಪು ಮಾಡಿದ. ಹೈದರಾಬಾದಿನಲ್ಲಿದ್ದ ಬುಸ್ಸಿಯನ್ನು ಕರೆಸಿಕೊಂಡು ಅಲ್ಲಿಯ ಸೈನ್ಯವನ್ನು ಅಸಮರ್ಥ ಅಧಿಕಾರಿಗಳ ವಶಕ್ಕೆ ಬಿಟ್ಟ. ಇದನ್ನು ಗಮನಿಸಿದ ಕ್ಲೈವ್ ತತ್‍ಕ್ಷಣವೇ ಕಾರ್ಯಾಚರಣೆಯಲ್ಲಿ ತೊಡಗಿದ. ಬಂಗಾಳದಿಂದ ಇಂಗ್ಲಿಷ್ ಸೈನ್ಯವೊಂದು ಬಂದು ಉತ್ತರ ಸರ್ಕಾರ್ ಪ್ರದೇಶದಲ್ಲಿ ಫ್ರೆಂಚರನ್ನು ಸೋಲಿಸಿತು. ರಾಜಮಹೇಂದ್ರಿಯೂ ಮಚಲಿಪಟ್ಟಣವೂ ಇಂಗ್ಲಿಷರ ವಶವಾದುವು. ನಿಜಾ಼ಂ ಸಲಾಬತ್ ಜಂಗನೊಂದಿಗೆ ಇಂಗ್ಲಿಷರು ಕೌಲೊಂದನ್ನು ಮಾಡಿಕೊಂಡರು.

ಕರ್ನಾಟಕದಲ್ಲೂ ಫ್ರೆಂಚರಿಗೆ ವ್ಯತಿರಿಕ್ತವಾದ ಪರಿಸ್ಥಿತಿ ಏರ್ಪಟ್ಟಿತು. ಕಾಂಚೀಪುರದ ಬಳಿಯಲ್ಲಿ ಬ್ರಿಟಿಷರಿಗೆ ಸೋಲಾಯಿತಾದರೂ ಆಗ ಪಡೆದ ವಿಜಯದ ಪೂರ್ಣ ಪ್ರಯೋಜನವನ್ನು ಫ್ರೆಂಚರು ಪಡೆದುಕೊಳ್ಳಲಿಲ್ಲ. ಸಂಬಳ ದೊರಕಲಿಲ್ಲವೆಂಬ ಕಾರಣದಿಂದ ಸೈನಿಕರಲ್ಲಿ ಅಸಮಾಧಾನವೂ ಬಂಡಾಯ ಮನೋಭಾವವೂ ಬೆಳೆದುವು. ಫ್ರೆಂಚ್ ನೌಕಾಪಡೆಗೆ ಮತ್ತೊಮ್ಮೆ ಇಂಗ್ಲಿಷರು ಪೆಟ್ಟು ಕೊಟ್ಟರು. ಡ್ಯಾಷ್ ಭಾರತವನ್ನು ಬಿಟ್ಟುಹೋದ. ಭಾರತದ ಕಡಲಿನ ಮೇಲಿನ ಇಂಗ್ಲಿಷರ ಒಡೆತನ ಭದ್ರವಾಯಿತು. 1859ರ ಅಕ್ಟೋಬರಿನಲ್ಲಿ ಜನರಲ್ ಕೂಟ್ ಬಂದಮೇಲೆ ಇಂಗ್ಲಿಷರು ಇನ್ನೂ ತೀವ್ರವಾಗಿ ಕದನ ಮುಂದುವರಿಸಿದರು. ವಾಂಡಿವಾಷಿನ ಕೋಟೆಯನ್ನು ಮುತ್ತಿದ್ದ ಲಾಲಿಯ ಸೈನ್ಯವನ್ನು ಇಂಗ್ಲಿಷರು ನಿರ್ನಾಮ ಮಾಡಿದರು. ಕೂಟ್ ಅಲ್ಲಿಗೇ ಬಿಡಲಿಲ್ಲ. ಆಕ್ರಮಣವನ್ನು ಮುಂದುವರಿಸಿದ. ಜಿಂಜೀ ಪುದುಚೇರಿಗಳನ್ನುಳಿದು ಮಿಕ್ಕೆಲ್ಲ ಫ್ರೆಂಚ್ ಠಾಣ್ಯಗಳೂ ಇಂಗ್ಲಿಷರ ವಶವಾದುವು. 1760ರ ಮೇ ತಿಂಗಳಲ್ಲಿ ಇಂಗ್ಲಿಷರು ಪುದುಚೇರಿಗೆ ನೆಲಜಲಗಳೆರಡರಿಂದಲೂ ಮುತ್ತಿಗೆ ಹಾಕಿದರು. ಕೊನೆಯವರೆಗೂ ಸರ್ವಪ್ರಯತ್ನಗಳನ್ನೂ ಮಾಡಿ ಗೆಲ್ಲಬೇಕೆಂಬ ಸಂಕಲ್ಪದಿಂದ ಲಾಲಿ ಮೈಸೂರಿನ ಹೈದರ್ ಅಲಿಯೊಂದಿಗೆ ಸಖ್ಯ ಬೆಳೆಸಿದ. ಹೈದರನ ಸೇನೆ ಪುದುಚೇರಿಗೆ ಬಂತಾದರೂ ಫ್ರೆಂಚರೊಂದಿಗೆ ಕೂಡಿ ಕಾರ್ಯಾಚರಣೆ ನಡೆಸುವುದು ಹೇಗೆಂಬ ಬಗ್ಗೆ ಸ್ಪಷ್ಟವಾದ ಕಲ್ಪನೆ ಇಲ್ಲದ್ದರಿಂದ ಅದು ಮರಳಿತು. ಫ್ರೆಂಚರಿಗೆ ಹಣದ ಮುಗ್ಗಟ್ಟು ಬೇರೆ ಸಂಭವಿಸಿತು. ಕೊನೆಗೂ ಫ್ರೆಂಚರು ನಿರಾಶರಾದರು. 1761ರ ಜನವರಿ 16ರಂದು ಪುದುಚೇರಿ ಬೇಷರತ್ ಶರಣಾಗತವಾಯಿತು. ವಿಜಯಿ ಇಂಗ್ಲಿಷರು ನಿರ್ದಯೆಯಿಂದ ಪುದುಚೇರಿಯ ಕೋಟೆಕೊತ್ತಲಗಳನ್ನೂ ಮನೆಗಳನ್ನೂ ನೆಲಸಮ ಮಾಡಿದರು. ಜಿಂಜೀ ಮತ್ತು ಮಾಹೆಗಳೂ ಇಂಗ್ಲಿಷರ ವಶವಾದುವು. ಭಾರತದಲ್ಲಿ ಫ್ರೆಂಚರು ತಮ್ಮ ನೆಲೆಗಳನ್ನೆಲ್ಲ ಕಳೆದುಕೊಂಡರು. ಲಾಲಿಯನ್ನು ಇಂಗ್ಲೆಂಡಿನಲ್ಲಿ ಎರಡು ವರ್ಷಗಳ ಕಾಲ ಬಂಧಿಯನ್ನಾಗಿ ಇಡಲಾಗಿತ್ತು. 1763ರಲ್ಲಿ ಅವನನ್ನು ವಿಮೋಚನೆಗೊಳಿಸಿ ಫ್ರಾನ್ಸಿಗೆ ಕಳುಹಿಸಲಾಯಿತು. ಆದರೆ ಫ್ರೆಂಚ್ ಸರ್ಕಾರ ಅವನನ್ನು ಬಂಧಿಸಿ ಎರಡು ವರ್ಷಕಾಲ ಇಟ್ಟಿದ್ದು ಕೊನೆಗೆ ಅವನಿಗೆ ಮರಣ ದಂಡನೆ ವಿಧಿಸಿತು.

ಲಾಲಿ ಬುದ್ಧಿವಂತನಾಗಿದ್ದರೂ ತನ್ನ ಕೆಲವು ಅವಗುಣಗಳಿಂದಾಗಿ ಪರಿಸ್ಥಿತಿಯನ್ನು ಹದಗೆಡಿಸಿದ ನಿಜ, ಆದರೆ ಇಂಗ್ಲಿಷರಿಗೆ ಅನೇಕ ಅನುಕೂಲಗಳಿದ್ದುದರಿಂದ ಎಂಥ ನಾಯಕತ್ವದ ಅಡಿಯಲ್ಲೂ ಫ್ರೆಂಚರು ಅಂತಿಮವಾಗಿ ವಿಜಯ ಸಾಧಿಸುವ ಸಂಭವವೇ ಇರಲಿಲ್ಲವೆಂಬುದು ಇತಿಹಾಸಕಾರರ ಅಭಿಪ್ರಾಯ. *

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಮೈಸೂರು ನಗರದ ಮಾನಸಗಂಗೋತ್ರಿ ಆವರಣದಲ್ಲಿರುವ ಒಂದು ದೂರಶಿಕ್ಷಣ ವಿಶ್ವವಿದ್ಯಾಲಯ. ಮೈಸೂರು ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯಾಗಿದ್ದ ಹಿಂದಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯನ್ನು (1969–96) ಉನ್ನತೀಕರಿಸಿ ಸ್ಥಾಪಿಸಲಾಗಿದೆ. ಆರಂಭದಲ್ಲಿ ಅಂಚೆ ಬೋಧನೆ ಮೂಲಕ ಬಿ.ಎ., ಬಿ.ಕಾಂ., ಎಂ.ಎ., ಎಂ.ಕಾಂ., ಮತ್ತು ಇತರ ಶಿಕ್ಷಣಗಳನ್ನು ನೀಡುತ್ತಿತ್ತು. ನವದೆಹಲಿಯಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಸ್ಥಾಪಿತವಾದ (1985) ಮೇಲೆ ದೂರಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳಾದುವು. ಇದರ ಫಲವಾಗಿ ಅಂಚೆ ಬೋಧನೆ ವಿಧಾನದಿಂದ ದೂರ ಶಿಕ್ಷಣ ವಿಧಾನಕ್ಕೆ ಬೋಧನೆಯನ್ನು ಬದಲಾಯಿಸಿಕೊಳ್ಳಲಾಯಿತು. ಕರ್ನಾಟಕದ ಶೈಕ್ಷಣಿಕ ಅಗತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು 1996 ಜೂನ್ 26ರಂದು ಈ ವಿಶ್ವವಿದ್ಯಾನಿಲಯ ಸ್ಥಾಪಿತವಾಯಿತು.

ಮುಕ್ತ ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯಗಳಿವು: ವಿದ್ಯಾರ್ಥಿಗಳಿಗೆ ಅವರ ಕಲಿಕಾ ವೇಗಕ್ಕೆ ಅನುಗುಣವಾಗಿ ಮನೆ ಬಾಗಿಲಿಗೆ ಉನ್ನತ ಶಿಕ್ಷಣವನ್ನು ನೀಡುವುದು, ವಯೋಮಾನದ ಆಧಾರದ ಮೇಲೆ ಪ್ರತಿಯೊಬ್ಬರಿಗೂ ಶಿಕ್ಷಣವನ್ನು ನೀಡುವುದು, ವೃತ್ತಿಪರತೆ ಮತ್ತು ವೃತ್ತಿ ನೈಪುಣ್ಯ ತಂದುಕೊಡುವ ರೀತಿಯಲ್ಲಿ ಅಗತ್ಯವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವುದು, ಸರಳ ಪ್ರವೇಶ ನಿಬಂಧನೆಗಳು, ವಿದ್ಯಾರ್ಥಿ ಆಸಕ್ತಿ ಹಾಗೂ ಅನುಕೂಲಕ್ಕೆ ಅನುಗುಣವಾಗಿ ಅಧ್ಯಯನ ಮಾಡುವ ಅವಕಾಶ ಒದಗಿಸುವುದು, ಪೂರ್ಣಕಾಲಿಕ ವಿದ್ಯಾರ್ಥಿಗಳಂತೆ ಅಧ್ಯಯನ ಮುಂದುವರಿಸಲು ಸಾಧ್ಯವಾಗದ ಉದ್ಯೋಗಸ್ಥರಿಗೆ, ಗ್ರಾಮಾಂತರ ಪ್ರದೇಶದ ಜನರಿಗೆ ಶಿಕ್ಷಣನೀಡುವುದು, ಪುರುಷರಿಗೆ ಹಾಗೂ ಮಹಿಳೆಯರಿಗೆ ಶಿಕ್ಷಣ ನೀಡುವುದು, ಆಧುನಿಕ ಮಾಹಿತಿ ತಂತ್ರಜ್ಞಾನದ ಬೆಳೆವಣಿಗೆಗಳನ್ನು ಅನುಸರಿಸಿ ಹೊಸ ಶಿಕ್ಷಣಗಳನ್ನು ತೆರೆಯುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನೀಡುವ ವಿವಿಧ ಶಿಕ್ಷಣ ಕ್ರಮಗಳು ಹೀಗಿವೆ: ಪದವಿ ಶಿಕ್ಷಣಗಳು: ಬಿ.ಎ., ಬಿ.ಕಾಂ., ಬಿ.ಎಡ್., ಬಿ.ಎಲ್.ಐ.ಎಸ್.ಸಿ., ಬಿ.ಎಸ್‍ಸಿ. (ಐ.ಟಿ.). ಸ್ನಾತಕೋತರ ಶಿಕ್ಷಣ ಕ್ರಮಗಳು: ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಸಂಸ್ಕೃತ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಜೊತೆಗೆ ಎಂ.ಕಾಂ., ಎ.ಎಡ್., ಎಂ.ಎಸ್‍ಸಿ. (ಐ.ಟಿ). ಡಿಪ್ಲೊಮ ಶಿಕ್ಷಣ ಕ್ರಮಗಳು: ಪ್ರಿ–ಯೂನಿವರ್ಸಿಟಿ ಅನಂತರದ ಕನ್ನಡ ಡಿಪ್ಲೊಮ, ಪತ್ರಿಕೋದ್ಯಮ ಡಿಪ್ಲೊಮ, ನಿರ್ವಹಣಾಶಾಸ್ತ್ರ ಡಿಪ್ಲೊಮ, ಆಹಾರ ಪೋಷಣೆ ಮತ್ತು ಆರೋಗ್ಯ ಶಿಕ್ಷಣ ಡಿಪ್ಲೊಮ ಗ್ರಾಮೀಣ ಅಭಿವೃದ್ಧಿ ಡಿಪ್ಲೊಮ, ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಡಿಪ್ಲೊಮ, ಮಾನವ ಸಂಪನ್ಮೂಲ ನಿರ್ವಹಣೆ, ಸ್ನಾತಕೋತ್ತರ ಡಿಪ್ಲೊಮ, ಉನ್ನತ ಶಿಕ್ಷಣ ಸ್ನಾತಕೋತ್ತರ ಡಿಪ್ಲೊಮ, ಕ್ರಿಯಾತ್ಮಕ ಇಂಗ್ಲಿಷ್ ಡಿಪ್ಲೊಮ. ಸರ್ಟಿಫಿಕೇಟ್ ಶಿಕ್ಷಣಗಳು: ಕನ್ನಡ ಸರ್ಟಿಫಿಕೇಟ್ ಶಿಕ್ಷಣಕ್ರಮ, ಇಂಗ್ಲಿಷ್ ಬೋಧನೆ ಸರ್ಟಿಫಿಕೇಟ್ ಶಿಕ್ಷಣಕ್ರಮ, ಆಹಾರ ಮತ್ತು ಪೋಷಣೆ ಸರ್ಟಿಫಿಕೇಟ್ ಶಿಕ್ಷಣಕ್ರಮ (ಸಿ.ಎಫ್.ಎನ್.), ಗಣಕೀಕರಣ ಸರ್ಟಿಫಿಕೇಟ್ ಶಿಕ್ಷಣ ಕ್ರಮ (ಸಿ.ಐ.ಸಿ). ಇವುಗಳ ಜೊತೆಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಫಿಲ್. ಪದವಿ ಶಿಕ್ಷಣಕ್ರಮವಿದೆ.

ಈಗಾಗಲೇ ಕರ್ನಾಟಕದ ಹಲವು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ 57 ಅಧ್ಯಯನ ಕೇಂದ್ರಗಳು ಸ್ಥಾಪಿತವಾಗಿದ್ದು ಕಾರ್ಯನಿರತವಾಗಿವೆ. ಹೊರ ರಾಜ್ಯಗಳಲ್ಲಿ 4 ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದಂತೆ ಬಿ.ಎಡ್.ಶಿಕ್ಷಣಕ್ರಮಕ್ಕೆ 5 ಅಧ್ಯಯನ ಕೇಂದ್ರಗಳನ್ನೂ ಎಂ.ಎಡ್.ಶಿಕ್ಷಣ ಕ್ರಮಕ್ಕೆ 8 ಅಧ್ಯಯನ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ವಿವಿಧ ಶಿಕ್ಷಣಗಳಿಗೆ ಅಧ್ಯಾಪಕ ವಿದ್ಯಾರ್ಥಿ ಸಂಪರ್ಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಪ್ರಸ್ತುತ ಇರುವ ವಿದ್ಯಾರ್ಥಿಗಳ ಸಂಖ್ಯೆ 36,000 (2003).

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಆಡಳಿತ ಕಛೇರಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 50 ಮಂದಿ ಪೂರ್ಣಾವಧಿ ಅಧ್ಯಾಪಕರೂ 22 ಮಂದಿ ಅತಿಥಿ ಅಧ್ಯಾಪಕರೂ ಇದ್ದಾರೆ. ಕೇಂದ್ರ ಕಾರ್ಯಾಲಯದಲ್ಲಿನ ಈ ಅಧ್ಯಾಪಕ ವೃಂದದ ಜೊತೆಗೆ ವಿವಿಧ ಅಧ್ಯಯನ ಕೇಂದ್ರಗಳಲ್ಲಿ 700 ಮಂದಿ ಶೈಕ್ಷಣಿಕ ಸಮಾಲೋಚಕರಿದ್ದಾರೆ. ಬೋಧಕೇತರ ಸಿಬ್ಬಂದಿ ಸಂಖ್ಯೆ 109. ವಿದ್ಯಾರ್ಥಿಗಳಿಗೆ ಮಾಧ್ಯಮಗಳ ಬಳಕೆ–ರೇಡಿಯೋ ಸಮಾಲೋಚನೆ (ಆಕಾಶವಾಣಿ ಹಾಗೂ ಎಫ್.ಎಂ.) ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಈ ವಿಶ್ವವಿದ್ಯಾನಿಲಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಮನ್‍ವೆಲ್ತ್ ಆಫ್ ಲರ್ನಿಂಗ್ (ಸಿ.ಒ.ಎಲ್.), ಕೆನಡ ಸಂಸ್ಥೆಯೊಡನೆ ಸಹಯೋಗವನ್ನು ಪಡೆದುಕೊಂಡಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿ ಸಿ.ಅಂಜನಾಮೂರ್ತಿ (1996–99). ಎಸ್.ಎಸ್.ರಾಮೇಗೌಡ (1999–2003) ದ್ವಿತೀಯ ಕುಲಪತಿ. ಕೆ.ಸುಧಾರಾವ್, ಮುಂದೆ ವಿವೇಕ ರೈ ಬಿ.ಎ. ಈಗಿನ ಕುಲಪತಿ ಕೆ.ಎಸ್. ರಂಗಪ್ಪ (ಎಸ್.ಎಲ್.)

**ಕರ್ನಾಟಕ ವಿದ್ಯಾವರ್ಧಕ ಸಂಘ :** ನಾಡು ನುಡಿಗಳ ಸೇವೆಯನ್ನೇ ಉದ್ದೇಶವಾಗಿಟ್ಟುಕೊಂಡು ಧಾರವಾಡದಲ್ಲಿ 1890ರ ಜುಲೈ 20ರಂದು ಪ್ರಾರಂಭವಾದ ಒಂದು ಮುಖ್ಯ ಸಂಸ್ಥೆ. ಅಖಿಲ ಕರ್ನಾಟಕದ ವ್ಯಾಪ್ತಿಯನ್ನುಳ್ಳ ಸಂಸ್ಥೆಗಳಲ್ಲಿ ಮೊಟ್ಟ ಮೊದಲಿನದೆನಿಸಿದ ಈ ಸಾಂಸ್ಕೃತಿಕ ಸಂಸ್ಥೆಯ ಪ್ರಥಮ ಅಧ್ಯಕ್ಷ ಶಾಮರಾವ್ ಕೈಕಿಣಿ, ಪ್ರಥಮ ಕಾರ್ಯದರ್ಶಿ ರಾ. ಹ. ದೇಶಪಾಂಡೆ.

ಬೊಂಬಾಯಿ, ಮದ್ರಾಸ್, ಪೂನ, ಅಹಮ್ಮದನಗರ, ಹೈದ್ರಾಬಾದ್, ಕಾರವಾರ, ಮಂಗಳೂರು, ಮೈಸೂರು, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಮಡಿಕೇರಿ ಇತ್ಯಾದಿ ಕರ್ನಾಟಕದ ಒಳ ಹೊರಗಿನ ಪಟ್ಟಣಗಳ ಕನ್ನಡಿಗರು. ಕನ್ನಡಾಭಿಮಾನಿಗಳು ಇದರ ಆಜೀವ ಸದಸ್ಯರಾಗಿ ಅಂದಿಗೆ ಈ ಸಂಸ್ಥೆಯನ್ನು ಇಡೀ ಕರ್ನಾಟಕದ ಪ್ರಾತಿನಿಧಿಕ

ಸಂಸ್ಥೆಯನ್ನಾಗಿ ಮಾಡಿದರು. ಎಂಥ ಹಿರಿಯರ ಮಾರ್ಗದರ್ಶನ ಈ ಸಂಸ್ಥೆಗೆ ಇತ್ತೆಂಬುದಕ್ಕೆ ಮುಂದಿನ ಪಟ್ಟಿಯೇ ನಿದರ್ಶನವಾಗಿದೆ. ಶಾಮರಾವ್ ಕೈಕಿಣಿ, ಸಿ ಸಿ. ಹುಲಕೋಟಿ ಮುಂತಾದವರು ಅಧ್ಯಕ್ಷರು; ಬಿ. ಎಲ್. ರೈಸ್, ಕಿಟ್ಟೆಲ್, ಫ್ಲೀಟ್, ಭಂಡಾರಕರರಂಥ ಎತ್ತರದ ವ್ಯಕ್ತಿಗಳು ಗೌರವ ಸದಸ್ಯರು; ಬೆಳವಿ ವಕೀಲರು, ಬಿ.ಎಂ.ಶ್ರೀ. ಮೊದಲಾದವರು ಉದ್ಧಾರಕರು. ರಾಮಚಂದ್ರರಾವ್ ದೇಶಪಾಂಡೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದವರು ಪ್ರದಾತೃಗಳು; ಆಲೂರ ವೆಂಕಟರಾವ್, ಮುದವೀಡು ಕೃಷ್ಣರಾವ್, ಎಸ್. ಸಿ. ನಂದೀಮಠ. ಟಿ. ಕೆ. ತುಕೋಳ್, ಕೆ. ಜಿ. ಕುಂದಣಗಾರ, ಎ. ಆರ್.

ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖ್ಯ ಕಟ್ಟಡ

ಕೃಷ್ಣಶಾಸ್ತ್ರೀ, ಎಂ.ಎಚ್. ಕೃಷ್ಣ, ಕಡೆಂಗೋಡ್ಲು ಶಂಕರಭಟ್ಟ, ಮಧುರಚೆನ್ನ, ಬಿ. ವೆಂಕಟಾಚಾರ್ಯರಂಥ ಕೀರ್ತಿವಂತ ಕನ್ನಡಿಗರು ಸದಸ್ಯರು. ಈ ಸಂಘ ಮೈಸೂರ ಅರಸರು, ವಂಟಮುರಿ ಸಿರಸಿಂಗಿ ದೇಸಾಯಿಗಳು ಮೊದಲುಗೊಂಡು, ಶ್ರೀಸಾಮಾನ್ಯರವರೆಗಿನ ಅನೇಕಾನೇಕ ವ್ಯಕ್ತಿಗಳ ಉದಾರಾಶ್ರಯದಲ್ಲಿ ಬೆಳೆಯಿತು. ಪ್ರತಿವರ್ಷದ ವಾರ್ಷಿಕ ಸಭೆಗೆ ಮೈಸೂರಿನಿಂದ ಪ್ರತಿನಿಧಿಗಳನ್ನು ಕರೆಸಿಕೊಂಡುದುಂಟು (11–3–1900ರ ಸಭೆಗೆ ಮೈಸೂರು ಸರ್ಕಾರದವರು ಬಿ. ಎಂ. ಶ್ರೀ. ಅವರನ್ನು ಕಳಿಸಿದ್ದರು). ಕಟ್ಟಡದ ಉಪಸಭೆಗೆ ಬೆಳಗಾಂವಿ, ಬಿಜಾಪುರ, ರಾಯಚೂರು, ಗುಲ್ಬರ್ಗ, ಬಳ್ಳಾರಿಗಳಿಂದ ಗಣ್ಯ ವ್ಯಕ್ತಿಗಳನ್ನು ಬರಮಾಡಿಕೊಳ್ಳಲಾಗಿತ್ತು. ಹೀಗೆ ಎಲ್ಲ ಪ್ರದೇಶಗಳ ಎಲ್ಲ ವರ್ಗದ ಪ್ರಜಾಸ್ತೋಮಕ್ಕೆ ಮುಕ್ತ ದ್ವಾರವಾಗಿ ನಿಂತು ಅಖಿಲ ಕರ್ನಾಟಕವನ್ನೇ ಪ್ರತಿನಿಧಿಸುವ ಸಂಸ್ಥೆಯಾಗಿ ಇದು ಬೆಳೆದು ಬಂತು.

ಈ ಸಂಘ ಹುಟ್ಟಿದ 25 ವರ್ಷಗಳ ತರುವಾಯ ಇದರ ದುಡಿಮೆ, ಬಯಕೆಗಳ ಫಲವಾಗಿ ಕರ್ನಾಟಕದಲ್ಲಿ ಮಿಕ್ಕ ಸಂಸ್ಥೆಗಳು ಹುಟ್ಟಿದುವು; ಅನೇಕ ಕಡೆಗೆ ಕನ್ನಡ ಸಂಘಗಳು ಉದಯಿಸತೊಡಗಿದುವು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೇರೂರಿತು. ಒಟ್ಟಾರೆ ವಿದ್ಯಾವರ್ಧಕ ಸಂಘದ 25 ವರ್ಷಗಳ ಕನಸು ಒಂದೊಂದೇ ನಿಜಸ್ವರೂಪ ತಾಳತೊಡಗಿದುವು. ಪ್ರಾರಂಭದಲ್ಲಿ ಈ ಸಂಘದ ಶಾಖೆಯೊಂದು ವಿಜಾಪುರದಲ್ಲಿದ್ದು ಮುಂದೆ ಕಾರವಾರಕ್ಕೆ ಸ್ಥಳಾಂತರಿಸಲ್ಪಟ್ಟಿತು.

**ಕನ್ನಡ ಭಾಷೆಯ ಪುನರುಜ್ಜೀವನ :** ಮುಂಬಯಿ ಕರ್ನಾಟಕದಲ್ಲಿ ಮರಾಠಿ, ನಿಜಾಮ ಕರ್ನಾಟಕದಲ್ಲಿ ಉರ್ದು, ತೆಲುಗು, ಮದ್ರಾಸ್ ಕರ್ನಾಟಕದಲ್ಲಿ ತಮಿಳು ಭಾಷೆಗಳ ಪ್ರಾಬಲ್ಯದಿಂದ ಕನ್ನಡ ಕಡೆಗಣಿಸಲ್ಪಟ್ಟ ಸಮಯದಲ್ಲಿ ಈ ಸಂಘ ಕನ್ನಡದ ಪುನರುಜ್ಜೀವನಕ್ಕೆ ಅಹೋರಾತ್ರಿ ದುಡಿಯಿತು. ಕನ್ನಡ ಭಾಗಗಳಲ್ಲಿನ ಶಾಲೆಗಳಲ್ಲಿ ಕಲಿಸುತ್ತಿದ್ದ ಮರಾಠಿಯನ್ನು ವ್ಯವಸ್ಥಿತವಾಗಿ ನಿಲ್ಲಿಸಿತು. ಮುಂಬೈ ವಿಶ್ವವಿದ್ಯಾಲಯದಲ್ಲಿ ಮರಾಠಿ, ಗುಜರಾತಿಗಳ ಜೊತೆ ಕನ್ನಡವನ್ನೂ ಎಂ. ಎ. ಪರೀಕ್ಷೆಗೆ ಅಂಗೀಕರಿಸಲು ಒತ್ತಾಯಿಸಿತು. ಸಂಘಕ್ಕೆ ಕನ್ನಡದ ಬಗ್ಗೆ ಇರುವ ಆಸ್ಥೆಯನ್ನು ಕಂಡು ಹರ್ಷಪಟ್ಟ ಜೆ. ಎಫ್. ಫ್ಲೀಟ್‌ರು 1959ರಲ್ಲಿ ಒಂದು ಪತ್ರ ಬರೆದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

**ಉಪನ್ಯಾಸ ಮಾಲೆ :** ವ್ಯವಹಾರದಿಂದ ದೂರವಾಗುತ್ತಿದ್ದ ಕನ್ನಡವನ್ನು ಉಪನ್ಯಾಸಕ್ಕೆ ಯೋಗ್ಯವಾಗುವಂತೆ ಪಳಗಿಸಲು ಸಂಸ್ಥೆ 1891ರಿಂದ ಮುಂದೆ ಪ್ರತಿವರ್ಷವೂ ವಾಕ್ ಸ್ಪರ್ಧೆಗಳನ್ನು ಏರ್ಪಡಿಸಿತು. ವಿದ್ಯಾರ್ಥಿಗಳಿಗಾಗಿ 1929ರಿಂದ ಲೋಕಮಾನ್ಯ ವಕ್ತೃತ್ವ ಸ್ಪರ್ಧೆ, 1945ರಿಂದ ತಾರಾನಾಥ ವಕ್ತೃತ್ವ ಸ್ಪರ್ಧೆಗಳನ್ನು ನಡೆಸಿಕೊಂಡು ಬರುವುದರ ಜೊತೆಗೆ ವಿದ್ವಾಂಸರಿಗಾಗಿ 1936ರಿಂದ ನಾಸನೂರ ವ್ಯಾಖ್ಯಾನ ಮಾಲೆಯನ್ನು ನಡೆಸಿಕೊಂಡು ಬರುತ್ತಿದೆಯಲ್ಲದೆ, ಸಾಹಿತ್ಯ, ಸಂಸ್ಕೃತಿ ಏಳ್ಗೆಯ ಅಭೀಪ್ಸೆ ಹೊಂದಿರುವ ಅನೇಕ ಮಹನೀಯರು ಇರಿಸಿದ ದತ್ತಿಗಳಿಂದ ಬಸವ ಜಯಂತಿ, ಕಿತ್ತೂರು ಚೆನ್ನಮ್ಮ ವಿಜಯೋತ್ಸವ ದಿನಾಚರಣೆ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲದೆ ನಾಡು–ಹೊರನಾಡುಗಳ ಸಾಹಿತಿ ಕಲಾವಿದರುಗಳ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಮುನ್ನಡೆದಿದೆ. ಇತ್ತೀಚಿನ ದಿನಗಳಲ್ಲಿ ಸಂಘ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ತನ್ನ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಸಾಗಿರುವುದಲ್ಲದೆ ನೆರೆಯ ರಾಜ್ಯಗಳಾದ ಗೋವ, ಮುಂಬಯಿಗಳಲ್ಲೂ ಕನ್ನಡ ಸಮ್ಮೇಳನ ಏರ್ಪಡಿಸಿ ಜನಮನವನ್ನು ಮುಟ್ಟುತ್ತಿರುವುದಲ್ಲದೆ ಕನ್ನಡಿಗರ ಸಂಘಟನೆಯಲ್ಲೂ ವಿಶೇಷ ಪಾತ್ರವನ್ನು ವಹಿಸುತ್ತಲಿದೆ.

**ಸಾಹಿತ್ಯ ಪರೀಕ್ಷೆಗಳು :** ಹಳಗನ್ನಡ ಅಭ್ಯಾಸದ ಅಗತ್ಯವನ್ನು ಮನಗಂಡು ಪ್ರಾಚೀನ ಕಾವ್ಯ ಭಾಗಗಳನ್ನು ಪಠ್ಯವೆಂದು ನಿರ್ದಿಷ್ಟಪಡಿಸಿ ಪ್ರತಿವರ್ಷ ಸಂಘದಿಂದ ಪರೀಕ್ಷೆಗಳನ್ನು ಜರುಗಿಸಲಾಯಿತು. ಇವಕ್ಕೆ ಪರೀಕ್ಷಕರಾಗಿ ಹೊರಗಿನಿಂದ ಅನೇಕ ವಿದ್ವಾಂಸರು ಬರುತ್ತಿದ್ದುದೂ ಉಂಟು.

**ಗ್ರಂಥಕರ್ತರ ಸಮ್ಮೇಳನ :** ಗ್ರಂಥಪ್ರಚಾರ, ಗ್ರಂಥಸ್ಥ ಭಾಷೆಯ ಏಕರೂಪತೆ, ಸಾಹಿತಿಗಳ ಪರಸ್ಪರ ಪರಿಚಯಗಳಿಗಾಗಿ ಧಾರವಾಡದಲ್ಲಿ 1907 ಜೂನ್ 2 ಮತ್ತು 3 ರಂದು ಅಖಿಲ ಕರ್ನಾಟಕದ ಗ್ರಂಥಕರ್ತರ ಮೊದಲ ಸಮ್ಮೇಳನವನ್ನು ಕರೆಯಲಾಯಿತು. ದೇಶದ ಎಲ್ಲ ಭಾಗಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಇದರ ಫಲವಾಗಿ ಪಠ್ಯಪುಸ್ತಕ, ಪಾರಿಭಾಷಿಕ ಪದ, ರಂಗಭೂಮಿ ನಾಟ್ಯ, ಇತಿಹಾಸ, ಸಾಹಿತ್ಯಗಳಿಗೆ ಸಂಬಂಧಪಟ್ಟ ಹಲವಾರು ಯೋಜನೆಗಳು ರೂಪುಗೊಂಡುವು.

**ಜಿಲ್ಲಾ ಸಾಹಿತ್ಯ ಸಮ್ಮೇಳನ :** 1939ರಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಪ್ರಾರಂಭ ಮಾಡಲಾಯಿತು. ಧಾರವಾಡದಲ್ಲಿ ಜರುಗಿದ ಪ್ರಥಮ ಸಮ್ಮೇಳನಕ್ಕೆ ಅಧ್ಯಕ್ಷರು ಕಡೆಂಗೋಡ್ಲು ಶಂಕರಭಟ್ಟರು, ತರುವಾಯ ಗದಗ, ಹಾವೇರಿ, ನವುಲಗುಂದ, ರಾಣೆಬೆನ್ನೂರ, ಹುಬ್ಬಳ್ಳಿ ಮೊದಲಾದ ಸ್ಥಳಗಳಲ್ಲಿ ಈ ಸಮ್ಮೇಳನಗಳು ಜರುಗಿದುವು. ಮೂರು ದಿನ ನಡೆದ ಹುಬ್ಬಳ್ಳಿ ಸಮ್ಮೇಳನದ ಕವಿಗೋಷ್ಠಿ. ನಾಟ್ಯ ಗೋಷ್ಠಿ, ವಿಜ್ಞಾನಗೋಷ್ಠಿ, ಕರ್ನಾಟಕದ ವಿಶ್ವವಿದ್ಯಾಲಯ ಗೋಷ್ಠಿಗಳು ಈ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಕಾರ್ಯಸ್ವರೂಪವನ್ನು ವ್ಯಕ್ತಪಡಿಸುತ್ತವೆ.

**ವಾಗ್ಭೂಷಣ ಪತ್ರಿಕೆ :** ಸಂಸ್ಥೆಯ ಮುಖಪತ್ರವಾಗಿ 1896ರಲ್ಲಿ ಈ ಮಾಸ ಪತ್ರಿಕೆಯನ್ನು ಹೊರತರಲಾಯಿತು. ಕರ್ನಾಟಕ ಹಾಗೂ ಮೈಸೂರು ಸೀಮೆಯ ಗ್ರಂಥಸ್ಥ ಭಾಷೆ ಸಾಧ್ಯವಿದ್ದ ಮಟ್ಟಿಗೆ ಒಂದೇ ಆಗುವಂತೆ ಮಾಡುವುದೇ ಈ ಮಾಸಪತ್ರಿಕೆಯ ಉದ್ದೇಶ. ಹಳಗನ್ನಡ ಗ್ರಂಥಸಂಶೋಧನ, ಪರಿಷ್ಕರಣ, ಹೊಸಗನ್ನಡದ ಹೊಸ ಸಾಹಿತ್ಯ ನಿರ್ಮಾಣಗಳಿಗೆ ಈ ಪತ್ರಿಕೆ ಪ್ರೋತ್ಸಾಹ ಕೊಟ್ಟಿತು. 23 ವರ್ಷಗಳಲ್ಲಿ ಧರ್ಮ, ಇತಿಹಾಸ, ಸಂಶೋಧನೆ, ವಿಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ಸಂಬಂಧಿಸಿ 85 ಗ್ರಂಥಗಳು ಪ್ರಕಟವಾದುವು. ಇವುಗಳಲ್ಲಿ ಧಾರವಾಡದ ಕುರಡಿ ಅವರು ಬರೆದ ಆರ್. ನರಸಿಂಹಾಚಾರ್ ಚರಿತ್ರೆ, ಮೈಸೂರಿನ ಬಿ. ವೆಂಕಟಾಚಾರ್ಯರು ಬರೆದ ಅಮೃತಪುಲಿನಗಳು ಪರಸ್ಪರ ಬಾಂಧವ್ಯದ ಪ್ರತೀಕಗಳಾಗಿವೆ.

**ಗ್ರಂಥ ಪ್ರಕಟನೆ :** ಉನ್ನತಮಟ್ಟದ ಗ್ರಂಥಗಳನ್ನು ಹೊರತರಲು ಬಯಸಿದ ಸಂಸ್ಥೆ ಮಾಲವಿಕಾಗ್ನಿಮಿತ್ರ, ಉತ್ತರರಾಮಚರಿತೆ, ವೇಣೀಸಂಹಾರ, ಕನ್ನಡ, ತಮಿಳು ಮೊದಲನೆಯ ಪುಸ್ತಕ, ಬಾಣ ಕಾದಂಬರಿ, ಕನ್ನಡದ ನೆಲೆ, ಕರ್ನಾಟಕ ಜನಜೀವನ, ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ, ಕನ್ನಡ ಕಾನೂನು ಪದ ವಿವರಣಕೋಶ, ಗೋಕಾಕ ವರದಿ, ಕಾವ್ಯಯಾನ, ಸ್ವಾತಂತ್ರ್ಯ ಚಿಂತನೆ, 20ನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು, ಬಯಲ ಬೇರು ಚಿಗುರು, ಕವಿ ಬಿ. ಎ, ಸನದಿ ಕಾವ್ಯಾವಲೋಕನ, ಶಬ್ದಾನುಶಾಸನ, ದಿ ಹರಿದಾಸಾಸ್ ಆಫ್ ಕರ್ನಾಟಕ–ಮೊದಲಾದ ನೂರಾಹತ್ತಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ.

**ಕನ್ನಡ ಬರಹಗಾರರಿಗೆ ಪ್ರೋತ್ಸಾಹ :** 1900–1940ರ ಅವಧಿಯಲ್ಲಿ ಈ ಸಂಘ 175 ಗ್ರಂಥಕಾರರಿಗೆ 18,990 ರೂಪಾಯಿಗಳ ಸಂಭಾವನೆಯನ್ನು ನೀಡಿದೆ. ಪ್ರತಿಯೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಸಂಶೋಧನೆ 44, ಶಿಕ್ಷಣ 7, ಪ್ರಬಂಧ 9, ಪೌರಾಣಿಕ 33, ವೇದಾಂತ 23 ಸಾಹಿತ್ಯ ವಿಮರ್ಶೆ 11, ಕಾವ್ಯ 31, ಗಣಿತ 1, ಶಾಸ್ತ್ರೀಯ ವಿಷಯ 10, ಇತರ 32, ಚರಿತ್ರೆ 60, ಇತಿಹಾಸ 28, ಕಾದಂಬರಿ 95, ನಾಟಕ 30, ಒಕ್ಕಲುತನ 9–ಹೀಗೆ 423 ಪುಸ್ತಕಗಳಿಗೆ ಸಂಭಾವನೆ ನೀಡಿದೆ. ಈಗಲೂ ಮಾತೊಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನವನ್ನು ಪ್ರತಿವರ್ಷ ತಪ್ಪದೆ ನಡೆಸಿಕೊಂಡು ಮುನ್ನಡೆದಿದೆ.

**ವಾಚನಾಲಯ :** ಸಾವಿರ ರೂಪಾಯಿ ಸಂಗ್ರಹವಾದ ಕೂಡಲೇ 300 ರೂ. ಗಳನ್ನು ವಾಚನಾಲಯಕ್ಕೆ ವಿನಿಯೋಗಿಸಬೇಕೆಂದು ತನ್ನ ಮೊದಲ ಸಭೆ (20–7–1890) ಯಲ್ಲಿಯೇ ನಿರ್ಧರಿಸಿ ಅಂದೇ ಗ್ರಂಥ ಸಂಗ್ರಹಕ್ಕೆ ಮೊದಲು ಮಾಡಲಾಯಿತು. 1940ರಲ್ಲಿ ಶಾಂತೇಶ ವಾಚನಾಲಯವನ್ನು ಒಳಗು ಮಾಡಿಕೊಂಡು ಗ್ರಂಥ ಭಂಡಾರವನ್ನು ವಿಸ್ತರಿಸಿಕೊಂಡಿತು. ಅಹಮ್ಮದಾಬಾದ್, ಪುಣೆ ಧಾರವಾಡಗಳಲ್ಲಿ ಕ್ರಮವಾಗಿ ಗುಜರಾತಿ, ಮರಾಠಿ, ಕನ್ನಡ ಗ್ರಂಥಗಳ ಪ್ರಾದೇಶಿಕ ಗ್ರಂಥಾಲಯಗಳನ್ನು ಪ್ರಾರಂಭಿಸಲು ಬೊಂಬಾಯಿ

ಸರಕಾರ ಬಯಸಿದಾಗ ಕರ್ನಾಟಕದ ಎಲ್ಲ ಸಂಸ್ಥೆಗಳೂ ಪತ್ರಿಕೆಗಳೂ ಆ ಹೊಣೆಗೆ ವಿದ್ಯಾವರ್ಧಕ ಸಂಘವೇ ಯೋಗ್ಯ ಎಂದು ಸೂಚಿಸಿದುವು. ಈ ಸೂಚನೆ ಆ ಕಾಲದಲ್ಲಿ ಸಂಘ ಸಾಧಿಸಿದ್ದ ಗೌರವ, ಪ್ರತಿಷ್ಠೆಯನ್ನು ವ್ಯಕ್ತಪಡಿಸುತ್ತದೆ. ಹತ್ತು ಸಾವಿರ ರೂಪಾಯಿಗಳ ಈ ಹೊಣೆಯನ್ನು ಸಂಘ ಹೊತ್ತು ವಾಚನಾಲಯಗಳನ್ನು ನಡೆಸಿತು. ಈಗ ಶಾಂತಕವಿಗಳ ಹೆಸರಿನಲ್ಲಿ 'ಶಾಂತೇಶ ವಾಚನಾಲಯ'ವನ್ನು ನಡೆಸುತ್ತಲಿದ್ದು, ಅದು ಸಂಶೋಧನ ವಿದ್ಯಾರ್ಥಿಗಳಿಗೆ ಆಕರ ಸಾಮಗ್ರಿಯನ್ನು ಒದಗಿಸುವಂತಹ ಹಿರಿಮೆಯನ್ನು ಹೊಂದಿದೆ. ಈಗಾಗಲೇ ಸಂಘವನ್ನು, ವಾಚನಾಲಯವನ್ನು ಕುರಿತು ಇಬ್ಬರು ವಿದ್ಯಾರ್ಥಿಗಳು ಸಂಶೋಧನೆಗೈದು ಪಿ.ಎಚ್.ಡಿ. ಪದವಿ ಪಡೆದಿದ್ದಾರೆ.

**ಕನ್ನಡ ಸಂಶೋಧನ ಕೇಂದ್ರ :** ಬೊಂಬಾಯಿ ಸರಕಾರ ಕನ್ನಡ ಸಂಶೋಧನೆ ಕೇಂದ್ರವನ್ನು ಸ್ಥಾಪಿಸುವ ಯೋಚನೆ ನಡೆಸಿದಾಗ ಈ ಸಂಘ ಮುಂದೆ ಬಂದು ಯೋಜನೆಯನ್ನು ಸಿದ್ಧಪಡಿಸಿ ಹೊಣೆ ಹೊರಲು ಮುಂದಾಗಿ ಅದರ ಯಶಸ್ಸಿಗೆ ದುಡಿಯಿತು.

**ನಾಡಹಬ್ಬ :** 1926ರಲ್ಲಿ ಬೆಟಗೇರಿ ಕೃಷ್ಣಶರ್ಮ ಮತ್ತು ದ. ರಾ. ಬೇಂದ್ರೆಯವರಿಂದ ಪ್ರಾರಂಭವಾದ ನಾಡಹಬ್ಬ ಕಾರ್ಯಕ್ರಮವನ್ನು ಸಂಘ ಪ್ರತಿವರ್ಷ ತಪ್ಪದೇ ಆಚರಿಸುತ್ತ ಬಂದಿದೆ. ಈ ಸಮಾರಂಭದಲ್ಲಿ ಉಪನ್ಯಾಸ, ಗೋಷ್ಠಿ, ಸಂಗೀತ, ಕಲಾ ಪ್ರದರ್ಶನ, ವ್ಯಾಯಾಮ, ಸ್ಪರ್ಧೆ, ನಾಟಕ ಮೊದಲಾದ ಕಾರ್ಯಕ್ರಮಗಳು ಈವರೆಗೆ ನಡೆಯುತ್ತಲಿವೆ. ಇದಕ್ಕೆ ನಾಡಹಬ್ಬವೆಂಬ ಮನ್ನಣೆ ಲಭಿಸಲು ಮೂಲಕಾರಣ ಈ ಸಂಘವೇ.

**ಪಠ್ಯಪುಸ್ತಕ, ಆಕಾಶವಾಣಿ :** ಸಂಘದಂಥ ಸಂಸ್ಥೆಗೆ ವರ್ನ್ಯಾಕ್ಯುಲರ ಟೆಕ್ಸ್ಟ್‌ಬುಕ್ ಕಮಿಟಿಯಲ್ಲಿ ಪ್ರಾತಿನಿಧ್ಯ ಅವಶ್ಯ (10–2–1931). ಪಠ್ಯಪುಸ್ತಕಗಳ ಭಾಷೆಯಲ್ಲಿ ಏಕರೂಪ ಅವಶ್ಯ (2–3 ಜೂನ್ 1907). ಅಖಿಲ ಭಾರತ ಆಕಾಶವಾಣಿಯಲ್ಲಿ ಕನ್ನಡಕ್ಕೆ ಮಿಕ್ಕ ಭಾಷೆಗಳ ಕಾರ್ಯಕ್ರಮದಷ್ಟೇ ಸ್ಥಾನ ಬೇಕು. (12–9–1939) ಇವೇ ಮೊದಲಾದ ಗೊತ್ತುವಳಿಗಳನ್ನು ಅಂಗೀಕರಿಸಿ ಅವನ್ನು ಕಾರ್ಯಕ್ರಮಕ್ಕೆ ತರಲು ಸಂಘ ಮಾಡಿದ ಪ್ರಯತ್ನಗಳು ಸ್ಮರಣೀಯವಾಗಿವೆ.

**ಸಾಹಿತ್ಯ ಸಮ್ಮೇಳನಕ್ಕೆ ಆಮಂತ್ರಣ :** ಸಾಹಿತ್ಯ ಸಮ್ಮೇಳನವನ್ನು ಧಾರವಾಡದಲ್ಲಿ ನಡೆಸಲು ಬೆಂಗಳೂರು ಪರಿಷತ್ತು ಯೋಚಿಸಿದಾಗ ಸಂಘ ಎರಡು ಸಲ ಮುಂದೆ ಬಂದು ಹೊಣೆ ಹೊತ್ತಿತು. ಆರ್. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ 4ನೆಯ ಸಮ್ಮೇಳನ, ಚಂದ್ರಶೇಖರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ 25ನೆಯ ಸಮ್ಮೇಳನಗಳ ಹೊಣೆಯನ್ನು ತ್ರಿಕರಣಪೂರ್ವಕವಾಗಿ ನಿರ್ವಹಿಸಿತು.

ಕನ್ನಡ, ಕನ್ನಡಿಗ ಹಾಗೂ ಕರ್ನಾಟಕದ ಹಿತಕ್ಕೆ ಧಕ್ಕೆ ಬಂದಾಗ ಸಂಘ ಸ್ಥಳೀಯ ಸಂಘಟನೆಗಳ ಸಹಕಾರ–ಸಹಾಯವನ್ನು ಪಡೆದುಕೊಂಡು ರಾಜ್ಯಮಟ್ಟದ ಚಳವಳಿಗಳನ್ನು ಕೈಗೊಂಡಿದೆ. ಇದಕ್ಕೆ ಉದಾಹರಣೆ : ಕನ್ನಡ ಭಾಷಾನೀತಿಗೆ ಸಂಬಂಧಪಟ್ಟಂತೆ 'ಗೋಕಾಕ ಚಳವಳಿ' ಯನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿದುದು. ಇತ್ತೀಚೆಗೆ 'ರವಿವಾರದ ನಾಟಕಶಾಲೆ'ಯನ್ನು ಪ್ರಾರಂಭಿಸಿ ಉದಯೋನ್ಮುಖ ಕಲಾವಿದರಿಗೆ ರಂಗತರಬೇತಿ ನೀಡುವಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ಸಂಘ ಸಾಹಿತ್ಯ ಮಂಟಪ, ವಿಜ್ಞಾನ ಮಂಟಪ, ಜಾನಪದ ಮಂಟಪ, ಕಾನೂನು ಮಂಟಪ, ಯುವಜನ ಮಂಟಪ, ಶಿಕ್ಷಣ ಮಂಟಪ, ಮಕ್ಕಳ ಮಂಟಪ–ಎಂದು ಬೇರೆ ಬೇರೆ ಮಂಟಪಗಳನ್ನು ರಚಿಸಿಕೊಂಡು ತನ್ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ.

ಕನ್ನಡದ ಮತ್ತು ಕರ್ನಾಟಕದ ಹಿತರಕ್ಷಣೆಗೆ ಈ ಸಂಘ ಬದ್ಧವಾಗಿ ಐತಿಹಾಸಿಕ ಪಾತ್ರವಹಿಸಿದೆ. ಕರ್ನಾಟಕ ಏಕೀಕರಣಕ್ಕಾಗಿ ಪ್ರಥಮ ಗೊತ್ತುವಳಿ ಅಂಗೀಕರಿಸಿದ (1917) ಹೆಗ್ಗಳಿಕೆ ಇದಕ್ಕಿದೆ. ಈ ಸಂಬಂಧದ ಚಳವಳಿಯಲ್ಲೂ ಸಕ್ರಿಯ ಪಾತ್ರವಹಿಸಿತು. ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಯಾಗುವಲ್ಲಿ ಇದು ಮುಖ್ಯ ಪಾತ್ರವಹಿಸಿತು. ಸಂಘ, ಸರಕಾರ ಹಾಗೂ ನಾಡಿನ ಹಿರಿಯ ದಾನಿಗಳ ಸಹಾಯ, ಸಹಕಾರದಿಂದ ಸಂಘದ ಶತಮಾನೋತ್ಸವದ ಸ್ಮಾರಕವಾಗಿ ದೊಡ್ಡ ಸಭಾಭವನವನ್ನು ನಿರ್ಮಿಸಿದ್ದು, ಅದಕ್ಕೆ ನಾಡೋಜ 'ಡಾ. ಪಾಟೀಲ ಪುಟ್ಟಪ್ಪ ಸಭಾಭವನ' ಎಂದು ನಾಮಕರಣ ಮಾಡಲಾಗಿದೆ. ಸಂಘ ಪ್ರತಿವರ್ಷ ಜುಲೈ 20ರಂದು ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಿ ಅದರಲ್ಲಿ ನಾಡು–ನುಡಿಯ ಸೇವೆ ಸಲ್ಲಿಸಿದ ಮಹನೀಯರುಗಳನ್ನು ಗೌರವಿಸಿ ಸನ್ಮಾನಿಸುವ ಸತ್ಕಾರ್ಯವನ್ನು ಕೈಕೊಳ್ಳುತ್ತ ಮುನ್ನಡೆದಿದೆ. ಕರ್ನಾಟಕ ಸರ್ಕಾರ ಸಂಘ, ಸಂಸ್ಥೆಗಳಿಗೆ ನೀಡುತ್ತಲಿರುವ ರಾಜ್ಯೋತ್ಸವ ಪ್ರಶಸ್ತಿಯ ಮೊದಲ ಗರಿಯನ್ನು ಮುಡಿದುಕೊಂಡ ಹಿರಿಯ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘವಾಗಿದೆ. (ಸಿ.ಕೆ)

**ಕರ್ನಾಟಕ ವಿಶ್ವವಿದ್ಯಾಲಯ :** ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲೊಂದು. ಧಾರವಾಡದಲ್ಲಿ ಆಡಳಿತ ಕೇಂದ್ರ ಮತ್ತು ಮುಖ್ಯ ಕಾಲೇಜುಗಳನ್ನು ಹೊಂದಿದೆ. ಧಾರವಾಡ, ಗದಗ, ಹಾವೇರಿ, ಬಾಗಲಕೋಟೆ, ಬೆಳಗಾಂವಿ, ಬಿಜಾಪುರ, ಉತ್ತರ ಕನ್ನಡ ಇದರ ಪ್ರಾದೇಶಿಕ ವ್ಯಾಪ್ತಿಯಲ್ಲಿವೆ. ಈ ವಿಶ್ವವಿದ್ಯಾಲಯ ಮುಂಬಯಿ ರಾಜ್ಯದ 1949ನೆಯ ಕರ್ನಾಟಕ ವಿಶ್ವವಿದ್ಯಾಲಯ ಕಾಯಿದೆ ಪ್ರಕಾರ 1950 ಮಾರ್ಚ್ 1ರಂದು ಧಾರವಾಡದಲ್ಲಿ ಸ್ಥಾಪಿತವಾಯಿತು. 1956ರಲ್ಲಿ ನೂತನ ಮೈಸೂರು ರಾಜ್ಯದ ಆಡಳಿತದಲ್ಲಿ ಸಮಾವೇಶಗೊಂಡಿತು. ಧಾರವಾಡ, ಬೆಳಗಾಂವಿ, ಬಿಜಾಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತವಾಗಿದ್ದ ವಿಶ್ವವಿದ್ಯಾಲಯದ ಕಕ್ಷೆ 1957ರಲ್ಲಿ ಬಿದರೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಿಗೂ 1965ರಲ್ಲಿ ಬಳ್ಳಾರಿ ಜಿಲ್ಲೆಗೂ ವಿಸ್ತರಿಸಿತು. ಪ್ರಾರಂಭವಾದಾಗ ಕೇವಲ ಹನ್ನೊಂದು ಕಾಲೇಜುಗಳನ್ನು ಪಡೆದಿದ್ದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂದು 19 ಸರ್ಕಾರಿ ಕಾಲೇಜುಗಳು, 100 ಸರ್ಕಾರಿ ಅನುದಾನಿತ ಕಾಲೇಜುಗಳು, 100 ಅನುದಾನ ರಹಿತ ಕಾಲೇಜುಗಳಿವೆ. ಇದಲ್ಲದೆ 18 ಕಾನೂನು ಕಾಲೇಜುಗಳು ಹೆಚ್ಚಿನ ವಿದ್ಯಾರ್ಥಿಗಳನ್ನೂ ಪಡೆದಿವೆ.

ಧಾರವಾಡದಲ್ಲಿ 365 ಎಕರೆಗಳ ವಿಸ್ತಾರವಾದ ರಮಣೀಯ ನಿವೇಶನ, ಸುವ್ಯವಸ್ಥಿತವಾದ ರಸ್ತೆಗಳು, ಉದ್ಯಾನಗಳು, ಭವ್ಯವಾದ ಶೈಕ್ಷಣಿಕಸೌಧ, ಆಡಳಿತ ಭವನ, ವಿಶ್ವಚೇತನ, ವಿದ್ಯಾರ್ಥಿನಿಲಯಗಳು, ಅತಿಥಿಭವನ, ಗಾಂಧೀಭವನ ಮುಂತಾದ ಕಟ್ಟಡಗಳು, ಪ್ರಾಧ್ಯಾಪಕರ ಹಾಗೂ ಅಧಿಕಾರಿಗಳ ವಸತಿಗಳು, ಬಾಲೋದ್ಯಾನ, ಕ್ರೀಡಾಂಗಣ, ಈಜುಕೊಳ, ಜಂಖಾನ ಮುಂತಾದವುಗಳಿಂದ ತುಂಬಿದ ವಿಶ್ವವಿದ್ಯಾಲಯದ ಆವರಣ ಅತ್ಯಂತ ಸುಂದರವಾದುದೆಂದು ಪ್ರಸಿದ್ಧವಾಗಿದೆ. ಎತ್ತರದ ಗುಡ್ಡದ ತಪ್ಪಲಿನಲ್ಲಿರುವುದರಿಂದ ಸಮಶೀತೋಷ್ಣ ಹವೆಯನ್ನು ಪಡೆದಿದ್ದು, ಈ ಬಡಾವಣೆಗೆ ಛೋಟಾ ಮಹಾಬಲೇಶ್ವರ ಎಂಬ ಹೆಸರು ಬಂದಿದೆ.

ಸ್ನಾತಕೋತ್ತರ ಶಿಕ್ಷಣ ಹಾಗೂ ಸಂಶೋಧನೆ, ಪೂರಕ ಹಾಗೂ ಸಂಯೋಜಿತ ಕಾಲೇಜುಗಳ ಅಂಗೀಕಾರ ಹಾಗೂ ಶಿಕ್ಷಣ ಆಡಳಿತ, ಪರೀಕ್ಷೆಗಳ ಮೇಲ್ವಿಚಾರಣೆಯ ಕಾರ್ಯ, ಜನಸಾಮಾನ್ಯರಿಗೆ ಜ್ಞಾನಪ್ರಸಾರಮಾಡುವ ವ್ಯಾಸಂಗ ವಿಸ್ತರಣಯೋಜನೆ ಹಾಗೂ ವಿಶೇಷ ತರಬೇತಿ ಕಾರ್ಯಕಮಗಳ ಮೂಲಕ ಕರ್ನಾಟಕ ವಿಶ್ವವಿದ್ಯಾಲಯ ಈ ಭಾಗದ ಜನತೆಯ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಮಾತೃಸಂಸ್ಥೆಯಾಗಿದೆ.

ಸ್ನಾತಕೋತ್ತರ ಶಿಕ್ಷಣಕ್ಕಾಗಿ ಧಾರವಾಡ, ಬಿಜಾಪುರ ಮತ್ತು ಕಾರವಾರಗಳಲ್ಲಿ ಕೇಂದ್ರಗಳಿವೆ. ಅಲ್ಲದೆ ಇದರ ಪ್ರಾದೇಶಿಕ ವ್ಯಾಪ್ತಿಗೊಳಪಡುವ ಹಲವು ಕಾಲೇಜುಗಳು ಪದವಿ ಪೂರ್ವ ಶಿಕ್ಷಣವನ್ನು ನೀಡುತ್ತಿದ್ದು ವಿಶ್ವವಿದ್ಯಾಲಯ ಪದವಿ ಪರೀಕ್ಷೆಗಳನ್ನೂ ನಡೆಸುತ್ತದೆ. ಕರ್ನಾಟಕ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ವಿಶ್ವವಿದ್ಯಾಲಯದ ಲಾ ಕಾಲೇಜು, ವಿಶ್ವವಿದ್ಯಾಲಯದ ಶಿಕ್ಷಣ ಕಾಲೇಜು–ಇವು ವಿಶ್ವವಿದ್ಯಾಲಯದ ಆಂಗಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತವೆ. ಸ್ನಾತಕೋತ್ತರ ಶಿಕ್ಷಣವನ್ನು ನೆರವೇರಿಸಲು ಕನ್ನಡ,ಇಂಗ್ಲಿಷ್, ಸಂಸ್ಕೃತ, ಭೌತವಿಜ್ಞಾನ, ರಸಾಯನವಿಜ್ಞಾನ, ಭೂಗರ್ಭಶಾಸ್ತ್ರ, ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ, ವಾಣಿಜ್ಯಶಾಸ್ತ್ರ ಮುಂತಾದ ವಿಭಾಗಗಳನ್ನು ತೆರೆಯಲಾಗಿದೆ. ಈ ಎಲ್ಲ ವಿಭಾಗಗಳಲ್ಲಿ ಎಂ.ಎ. ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದರ ಜೊತೆಗೆ, ಸಂಶೋಧನ ಕಾರ್ಯ ವ್ಯವಸ್ಥಿತವಾಗಿ ಸಾಗುತ್ತಿದೆ. ವಿದೇಶೀಯ ಭಾಷಾಭ್ಯಾಸ ವಿಭಾಗದಲ್ಲಿ ಫ್ರೆಂಚ್, ಜರ್ಮನ್ ಮತ್ತು ರಷ್ಯನ್ ಭಾಷೆಗಳ ಅಭ್ಯಾಸಕ್ಕೆ ಅವಕಾಶ ಒದಗಿಸಿದೆ. ಈ ಭಾಷೆಗಳಲ್ಲಿ ಡಿಪ್ಲೊಮ, ಹಾಗೂ ಪದವಿ ಮಟ್ಟದ ಅಭ್ಯಾಸಕ್ಕೆ ವ್ಯವಸ್ಥೆಯಿದೆ. ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದಲ್ಲಿ ಲಿಪಿಶಾಸ್ತ್ರದ ಬಗ್ಗೆ ಒಂದು ಸರ್ಟಿಫಿಕೆಟ್ ಕೋರ್ಸ್ ನಡೆಸಲಾಗುತ್ತಿದೆ. ಕನ್ನಡ ವಿಭಾಗದಲ್ಲಿ ಭಾಷಾಶಾಸ್ತ್ರ, ಭಾಷಾಂತರ ವಿಷಯಗಳಲ್ಲಿ ಡಿಪ್ಲೊಮ ತರಗತಿಗಳನ್ನು ತೆರೆಯಲಾಗಿದೆ. ಪದವಿ ಹಾಗೂ ಪದವಿಪೂರ್ವ ಶಿಕ್ಷಣಮಟ್ಟದಲ್ಲಿ ಅಪರಾಧಶಾಸ್ತ್ರ ಮತ್ತು ಫೋರೆನ್ಸಿಕ್ ಸೈನ್ಸ್ ಅಭ್ಯಾಸದ ವ್ಯವಸ್ಥೆ ಮಾಡಲಾಗಿದೆ.

1970ರಿಂದ ಗುಲ್ಬರ್ಗದಲ್ಲಿ ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ತೆರೆಯಲಾಯಿತು. ಈ ಕೇಂದ್ರ 1980ರಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ರೂಪುಗೊಂಡಿತು.

ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್.ಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ವ್ಯವಸ್ಥೆ ಸಹ ಧಾರವಾಡದಲ್ಲಿ ಇದೆ. ಅಭ್ಯಾಸ, ಸಂಶೋಧನೆಗಳಿಗಾಗಿ ದೇಶವಿದೇಶದ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕ ಹಾಗೂ ಸಂಶೋಧಕರ ವಿನಿಮಯಕ್ಕೆ ವಿಶೇಷ ಅವಕಾಶಗಳಿವೆ. ಶಿಕ್ಷಣವೇತನ, ವಿದ್ಯಾರ್ಥಿವೇತನ ಹಾಗೂ ಪಾರಿತೋಷಿಕಗಳ ವಿಶಿಷ್ಟ ಸೌಕರ್ಯಗಳೂ ಉಂಟು.

ಸ್ನಾತಕೋತ್ತರ ವಿಭಾಗಗಳು ಸಂಶೋಧನೆಯನ್ನೂ ಕೈಗೊಳ್ಳುತ್ತವೆ. ಅಲ್ಲದೆ, ಇತರ ಸಂಸ್ಥೆಗಳು ಮತ್ತು ವಿಶೇಷ ಯೋಜನೆಗಳು ಸಹ ಇವೆ. ಪ್ರಾಚೀನ ಇತಿಹಾಸ, ಭೂಗರ್ಭ ಸಂಶೋಧನೆ ಹಾಗೂ ಗ್ರಂಥ ಪ್ರಕಟನೆಯ ಕಾರ್ಯವನ್ನು ನೆರವೇರಿಸುತ್ತಿರುವ ಕನ್ನಡ ಸಂಶೋಧನ ಸಂಸ್ಥೆ (**ನೋಡಿ– ಕನ್ನಡ ಸಂಶೋಧನ ಸಂಸ್ಥೆ**) ಇಲ್ಲಿನ ಒಂದು ವಿಶೇಷ. ಈ ಸಂಸ್ಥೆಯಲ್ಲಿ ಒಂದು ವಸ್ತು ಸಂಗ್ರಹಾಲಯವೂ ಇದ್ದು ಬೆಲೆಯುಳ್ಳ ಹಾಗೂ ಮಹತ್ತ್ವದ ಶಿಲ್ಪಕೃತಿಗಳೂ ವರ್ಣಚಿತ್ರಗಳೂ ಹಸ್ತಪ್ರತಿಗಳೂ ಪುರಾತನ ಸಂಸ್ಕೃತಿಯ ಅವಶೇಷಗಳೂ ನಾಣ್ಯಗಳೂ ಇವೆ. ಅಲ್ಲದೆ, ಚಾರಿತ್ರಿಕ ಸ್ಥಳಗಳ ಉತ್ಖನನ ಈ ವಿಭಾಗದ ಒಂದು ವಿಶೇಷ ಕಾರ್ಯಕ್ರಮ. ಇತ್ತೀಚಿನ ಉತ್ಖನನಗಳಿಂದ ಕರ್ನಾಟಕ ಹಾಗೂ ಭಾರತದ ಗತ ಇತಿಹಾಸದ ಮೇಲೆ ವಿಶೇಷ ಬೆಳಕು ಬಿದ್ದಿದೆ. ಅನೇಕ ಶಾಸನ ಸಂಪುಟಗಳನ್ನೂ ಇತಿಹಾಸದ ಗ್ರಂಥಗಳನ್ನೂ ಈ ಸಂಸ್ಥೆ ಪ್ರಕಟಿಸಿದೆ.

ಸಮಗ್ರ ವಚನ ವಾಙ್ಮಯ ಸಂಶೋಧನ ಹಾಗೂ ಪ್ರಕಟನೆಯ ಯೋಜನೆಯನ್ನು ಕನ್ನಡ ವಿಭಾಗ ಕೈಗೊಂಡು ಸಾವಿರಾರು ಓಲೆಗ್ರಂಥಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಈಗಾಗಲೇ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಶೂನ್ಯ ಸಂಪಾದನೆ ಎಂಬ ಆಧ್ಯಾತ್ಮಿಕ ಗ್ರಂಥವನ್ನು ಆರು ಸಂಪುಟಗಳಲ್ಲಿ ಇಂಗ್ಲಿಷಿಗೆ ಭಾಷಾಂತರಿಸುವ ಯೋಜನೆ ಮುಕ್ತಾಯ ಘಟ್ಟ ತಲುಪಿದೆ. ಇಷ್ಟಲ್ಲದೆ ಜೈನ ಹಾಗೂ ಬ್ರಾಹ್ಮಣ ಸಾಹಿತ್ಯ ಸಂಶೋಧನ ಕಾರ್ಯವೂ ಕನ್ನಡ ವಿಭಾಗದಲ್ಲಿ ನಡೆಯುತ್ತಿದೆ. ಭಾಷಾವಿಜ್ಞಾನ, ಜಾನಪದ, ತೌಲನಿಕ ತತ್ತ್ವಶಾಸ್ತ್ರಗಳ ಅಧ್ಯಯನ ಈ ವಿಭಾಗದ ಒಂದು ವಿಶೇಷ ಅಂಶವಾಗಿದೆ. ಕನ್ನಡ ವಿಭಾಗವನ್ನು ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠವೆಂದು ಕರೆಯಲಾಗಿದೆ.

ವಿಶ್ವವಿದ್ಯಾಲಯ ಸಂಗ್ರಹಿಸಿದ ಹಾಗೂ ಸಂಶೋಧಿಸಿದ ವಿಶೇಷ ಜ್ಞಾನವನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಕಾರ್ಯ ನೆರವೇರಿಸಲು ವ್ಯಾಸಂಗ ವಿಸ್ತರಣ ವಿಭಾಗವನ್ನು ತೆರೆಯಲಾಗಿದೆ. ಹಳ್ಳಿಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಿ ಆ ಉಪನ್ಯಾಸಗಳನ್ನು ಕಿರುಹೊತ್ತಗೆಗಳಾಗಿ ಪ್ರಕಟಿಸಲಾಗುತ್ತಿದೆ. ಲಕ್ಷಾಂತರ ಪ್ರತಿಗಳು ಮಾರಾಟವಾಗಿರುವುದು ಈ ಯೋಜನೆಯ ಜನಪ್ರಿಯತೆಯನ್ನು ಸೂಚಿಸುತ್ತದೆ. ಪ್ರೌಢ ವ್ಯಾಸಂಗ ಹಾಗೂ ಸಂಶೋಧನೆಗೆ ನೆರವಾಗಲು ಸಂಶೋಧನ ಗ್ರಂಥಮಾಲೆ, ವಿಶೇಷೋಪನ್ಯಾಸ ಗ್ರಂಥಮಾಲೆ, ಕನ್ನಡ ಕಾವ್ಯಮಾಲೆ, ಅರ್ಥಶಾಸ್ತ್ರ ಗ್ರಂಥಮಾಲೆ ಮುಂತಾದುವುಗಳ ಮೂಲಕ ಕನ್ನಡದಲ್ಲಿ, ಇಂಗ್ಲಿಷಿನಲ್ಲಿ ನೂರಾರು ಸಂಶೋಧನ ಗ್ರಂಥಗಳೂ ಈ ವಿಭಾಗದ ಪ್ರಕಟಣೆಗಳಾಗಿವೆ. ವಿಜ್ಞಾನ, ಮಾನವಿಕ ವಿಜ್ಞಾನ ಹಾಗೂ ಸಾಮಾಜಿಕ ವಿಜ್ಞಾನ ಕ್ಷೇತ್ರದ ಸಂಶೋಧನೆಗಳನ್ನು ಬೆಳಕಿಗೆ ತರುವ ನಿಯತಕಾಲಿಕಗಳನ್ನು ನಡೆಸಿಕೊಂಡು ಬರಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಮೀಸಲಾದ ಕರ್ನಾಟಕ ಭಾರತಿ (**ನೋಡಿ– ಕರ್ನಾಟಕ ಭಾರತಿ**) ಎಂಬ ತ್ರೈಮಾಸಿಕವೂ ವಿಶ್ವವಿದ್ಯಾಲಯದ ಬುಲೆಟಿನ್ ಎಂಬ ಮಾಸಿಕ ಪತ್ರಿಕೆಯೂ ಪ್ರಕಟವಾಗುತ್ತಿವೆ.

ದೇಶೀಯ ಭಾಷೆಗಳು ಉನ್ನತ ವ್ಯಾಸಂಗದ ಶಿಕ್ಷಣ ಮಾಧ್ಯಮವಾಗಲು ಬೇಕಾದ ಎಲ್ಲ ಪಠ್ಯ ಹಾಗೂ ಪೂರಕ ಗ್ರಂಥಗಳ ರಚನೆ ಹಾಗೂ ಪ್ರಕಟನ ಕಾರ್ಯ ವಿಶ್ವವಿದ್ಯಾಲಯದ ಪಠ್ಯಪುಸ್ತಕ ಡೈರೆಕ್ಟೊರೇಟಿನಿಂದ ನೆರವೇರುತ್ತಿದೆ. ಪದವಿ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಬೇಕಾಗುವ ಪಠ್ಯಪುಸ್ತಕ, ಪೂರಕ ಗ್ರಂಥ, ಭಾಷಾಂತರ ಕೃತಿಗಳನ್ನು ಪ್ರಕಟಿಸುವ ಯೋಜನೆಯ ಕಾರ್ಯ ಮುಂದುವರಿದಿದೆ. ತಜ್ಞ ಪ್ರಾಧ್ಯಾಪಕರಿಂದ ವಿವಿಧ ವಿಷಯಗಳಲ್ಲಿ ಮೂಲಗ್ರಂಥ ರಚನೆಯ ಹಾಗೂ ತಾಂತ್ರಿಕ ಶಬ್ದಕೋಶಗಳ ರಚನೆಯ ಕಾರ್ಯ ಸಾಗುತ್ತಿದೆ. ಎಂಜಿನಿಯರಿಂಗ್, ಕಾಯಿದೆ ಹಾಗೂ ವೈದ್ಯವಿಷಯಗಳನ್ನು ಜನಪ್ರಿಯಗೊಳಿಸುವ ಸಲುವಾಗಿ ಜನಪ್ರಿಯವಿಜ್ಞಾನ ಗ್ರಂಥಮಾಲೆಯನ್ನು ತೆರೆಯಲಾಗಿದೆ. ಸಂಶೋಧನೆ ಮತ್ತು ಅಧ್ಯಯನಕ್ಕೆ ಸಹಕಾರಿಯಾಗಿ ವಿಶ್ವವಿದ್ಯಾಲಯದ ಗ್ರಂಥಾಲಯವಿದೆ. ಇಲ್ಲಿ ಲಿಂಗ್ವಾಫೋನ್, ಮೈಕ್ರೋ ಫಿಲ್ಮ್, ಮೈಕ್ರೋ ಕಾರ್ಡುಗಳ ವ್ಯವಸ್ಥೆಯಂಥ ವಿಶೇಷ ಸೌಕರ್ಯಗಳಿವೆ.

ಚುನಾಯಿತ ಹಾಗೂ ನೇಮಿತ ಸದಸ್ಯರನ್ನುಳ್ಳ ಸೆನೆಟ್ ಮತ್ತು ಅಕೆಡಮಿಕ್ ಕೌನ್ಸಿಲ್‌ಗಳ ನಿರ್ದೇಶನದ ಮೇರೆಗೆ, ಈ ಎರಡು ಅಂಗಗಳಿಂದ ಆರಿಸಲ್ಪಟ್ಟ ವಿಶ್ವವಿದ್ಯಾಲಯದ ಪರಮಾಧಿಕಾರಿ ಸಂಸ್ಥೆಯಾದ ಸಿಂಡಿಕೇಟ್ ವ್ಯವಹಾರ ನಡೆಸುತ್ತಿತ್ತು. ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮಕ್ಕೆ ತಿದ್ದುಪಡಿ ಮಾಡಿರುವುದರಿಂದ ಸೆನೆಟ್ ರದ್ದಾಗಿದೆ. ಶಿಕ್ಷಣ ಮಂಡಳಿಯ ಸ್ವರೂಪ ಬದಲಾಗಿದೆ. ಸಿಂಡಿಕೇಟ್ ಪ್ರಮುಖ ಕಾರ್ಯನೀತಿ ನಿರ್ದೇಶನ ಸಮಿತಿಯಾಗಿದೆ. ಕುಲಾಧಿಪತಿಗಳಿಂದ ನೇಮಕವಾಗುವ ಕುಲಪತಿ, ವಿಶ್ವವಿದ್ಯಾಲಯದ ಸರ್ವೋಚ್ಚ ಕಾರ್ಯ ನಿರ್ವಹಣಾಧಿಕಾರಿ. ವಿಶ್ವವಿದ್ಯಾಲಯದ ಆಡಳಿತದ ಮುಖ್ಯಾಧಿಕಾರಿಯಾದ ಕುಲಸಚಿವರು ತಮ್ಮ ಅಧಿಕಾರದಲ್ಲಿರುವ ಸಹಾಯಕ ಕುಲಸಚಿವರುಗಳ, ಲೆಕ್ಕಪತ್ರಾಧಿಕಾರಿಗಳ, ಆಡಳಿತ ವಿಭಾಗಾಧಿಕಾರಿಗಳ ಸಹಕಾರದಿಂದ ವಿಶ್ವವಿದ್ಯಾಲಯದ ಎಲ್ಲ ಆಡಳಿತವನ್ನೂ ನಿರ್ವಹಿಸುವರು. ಪರೀಕ್ಷಾ ವಿಭಾಗದ ಕಾರ್ಯಗಳನ್ನು ಪರೀಕ್ಷಾ ನಿಯಂತ್ರಣಾಧಿಕಾರಿಗಳು, ತಮ್ಮ ಸಹಾಯಕ ಅಧಿಕಾರಿಗಳ ನೆರವಿನಿಂದ ನೆರವೇರಿಸುವರು. ಸ್ಥಾನಿಕ ಎಂಜಿನಿಯರನ್ನೊಳಗೊಂಡ ಕಟ್ಟಡ ವಿಭಾಗದವರು ವಿಶ್ವವಿದ್ಯಾಲಯದ ಕಟ್ಟಡಗಳ, ರಸ್ತೆಗಳ ನಿರ್ಮಾಣ ಹಾಗೂ ರಕ್ಷಣೆಯ ಕೆಲಸವನ್ನು ನಿರ್ವಹಿಸುವರು. ಉದ್ಯಾನವನ, ಸಸ್ಯಶಾಸ್ತ್ರಕ ಉದ್ಯಾನಗಳ ರಕ್ಷಣೆಯನ್ನು ಉದ್ಯಾನಾಧಿಕಾರಿಗಳೂ ಸಂಶೋಧನ ಸಲಕರಣೆಗಳನ್ನು ಸಿದ್ಧಗೊಳಿಸುವ ಹಾಗೂ ರಿಪೇರಿ ಮಾಡುವ ಕಾರ್ಯಗಳನ್ನು ಕಾರ್ಯಾಗಾರದ ಅಧಿಕಾರಿಗಳೂ ನೋಡಿಕೊಳ್ಳುತ್ತಾರೆ. ವಿದ್ಯಾರ್ಥಿವಿದ್ಯಾರ್ಥಿನಿಯರ ವಸತಿ ಗೃಹಗಳ ಆಡಳಿತ ಹಾಗೂ ಮೇಲ್ವಿಚಾರಣೆಗೆ ವಿಶೇಷಾಧಿಕಾರಿಗಳು ನಿಯಮಿತರಾಗಿದ್ದಾರೆ. ವಿವಿಧ ಕ್ರೀಡೆಗಳು ಹಾಗೂ ಯುವಜನ ಕಾರ್ಯಕ್ರಮ ಹಾಗೂ ಯೋಜನಾಕಾರ್ಯಗಳ ಮೇಲ್ವಿಚಾರಣೆಗೂ ವಿಶೇಷಾಧಿಕಾರಿಗಳು ಇದ್ದಾರೆ.

ಆರ್.ಎ.ಜಹಗೀರ್‌ದಾರ್, ಸಿ.ಸಿ.ಹುಲಕೋಟಿ, ಡಿ.ಸಿ.ಪಾವಟೆ, ಎ.ಎಸ್.ಅಡಕೆ, ಎಂ.ಜಯಲಕ್ಷ್ಮಣ್ಣಿ, ಆರ್.ಸಿ.ಹಿರೇಮಠ, ಡಿ.ಎಂ.ನಂಜುಂಡಪ್ಪ, ಎಸ್.ಎಸ್.ಒಡೆಯರ್, ಎ.ಎಂ.ಪಠಾಣ್, ಎಸ್.ರಾಮೇಗೌಡ, ಎಸ್.ಜಿ.ದೇಸಾಯಿ, ಜಿ.ಕೆ.ನಾರಾಯಣರೆಡ್ಡಿ, ಎಂ. ಖಾಜಪೀರ್ ಇವರು ಕ್ರಮವಾಗಿ ಇದರ ಕುಲಪತಿಗಳಾಗಿದ್ದರು. ವಾಲೀಕಾರ್ ಇಂದಿನ ಕುಲಪತಿಗಳು (2012). *

**ಕರ್ನಾಟಕ ವೃತ್ತ :** ಮುದವೀಡು ಕೃಷ್ಣರಾಯರ ಸಂಪಾದಕತ್ವದಲ್ಲಿ ಧಾರವಾಡದಿಂದ ಪ್ರಕಟವಾಗುತ್ತಿದ್ದ ವಾರಪತ್ರಿಕೆ. 1892ರಲ್ಲಿ ಪ್ರಾರಂಭವಾದ ಈ ಪತ್ರಿಕೆಯಲ್ಲಿ ಅನಂತರ ಧನಂಜಯವೂ ಸಮಾವೇಶವಾಗಿ ಕರ್ನಾಟಕ ವೃತ್ತ ಮತ್ತು ಧನಂಜಯ ಎಂಬ ಹೆಸರಿನಿಂದ ಇದು 1936ರ ವರೆಗೂ ನಡೆಯಿತು. 1924ರಲ್ಲಿ ಕೆಲಕಾಲ ದಿನಪತ್ರಿಕೆಯಾಗಿತ್ತು. ರಾಷ್ಟ್ರೀಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದಕ್ಕೆ ಪತ್ರಿಕೆ ಮಹತ್ತ್ವ ಕೊಟ್ಟರೂ ಬರೆವಣಿಗೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಕಾನೂನಿನ ಮಿತಿಯೊಳಗೆ ಇರಿಸಿಕೊಂಡಿತ್ತು. ಸಂಪಾದಕರಾದ ಮುದವೀಡು ಅವರು ತಮ್ಮ ಉಗ್ರ ವಿಚಾರಗಳಿಗಾಗಿ ಹಾಗೂ ಭಾಷಣಗಳಿಗಾಗಿ ಕಾರಾಗೃಹ ಸೇರಿದ್ದರೂ ಪತ್ರಿಕೆಯ ಮೇಲೆ ಸರ್ಕಾರ ತೀವ್ರಕ್ರಮ ಕೈಗೊಂಡಿರಲಿಲ್ಲ. ಜಲಿಯನ್‌ವಾಲಾಬಾಗ್ ದುರಂತ ಪ್ರಕರಣದಲ್ಲಿ ಗೋಲಿಬಾರು ಆಜ್ಞೆಗೆ ಕಾರಣನಾದ ಜನರಲ್ ಡಯರನನ್ನೂ ಧಾರವಾಡದ ಕಲೆಕ್ಟರನಾದ ಪೇಂಟರನನ್ನೂ ಹೋಲಿಸಿ 1920ರಲ್ಲಿ ಬರೆದ ವ್ಯಂಗ್ಯ ಲೇಖನಕ್ಕಾಗಿ ಸರ್ಕಾರ ಅದರ ಮೇಲೆ ಮೊಕದ್ದಮೆ ಹೂಡಿದರೂ ಅದು ವಿಫಲವಾಯಿತು.

ಕರ್ನಾಟಕ ವೃತ್ತದಲ್ಲಿ ರಾಜಕೀಯ ಸುದ್ದಿಗಳಲ್ಲದೆ ಸ್ವದೇಶೀಪ್ರಚಾರ, ಕನ್ನಡ ಭಾಷೆಯ ಪುನರುಜ್ಜೀವನ, ಕರ್ನಾಟಕದ ಏಕೀಕರಣ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಸುದ್ದಿಗಳೂ ಅಭಿಪ್ರಾಯಗಳೂ ಪ್ರಕಟವಾಗುತ್ತಿದ್ದವು. ಪ್ರತಿ ಸಂಚಿಕೆಯೂ ಡಿಮ್ಮೈ ಪೂರ್ಣಾಕಾರದ 4 ರಿಂದ 8ರ ವರೆಗೆ ಪುಟಗಳನ್ನೊಳಗೊಂಡಿರುತ್ತಿತ್ತು. (ಪಿ.ಎ.ಎ.)

**ಕರ್ನಾಟಕ ವೈಭವ :** ಮರಾಠಿ ವರ್ಚಸ್ಸಿಗೊಳಗಾಗಿದ್ದ ವಿಜಾಪುರ ಪ್ರದೇಶದಲ್ಲಿ ಕನ್ನಡತನದ ಅರಿವುಂಟುಮಾಡಲು ಮತ್ತು ರಾಷ್ಟ್ರೀಯ ಜಾಗೃತಿಗಾಗಿ ಶ್ರಮಿಸಲು ಸವಣೂರು ಗುಂಡೂರಾಯರು 1892ರಲ್ಲಿ ವಿಜಾಪುರದಲ್ಲಿ ಪ್ರಾರಂಭಿಸಿದ ವಾರಪತ್ರಿಕೆ.

ಮುಂಬೈ ಕರ್ನಾಟಕದಲ್ಲಿ ಮನೆಮಾತಾಗಿದ್ದ ಲೋಕಮಾನ್ಯ ಟಿಳಕರ 'ಕೇಸರಿ' ಪತ್ರಿಕೆ, ಕರ್ನಾಟಕ ವೈಭವಕ್ಕೆ ಪ್ರೇರಕ. ಸ್ವಾತಂತ್ರ್ಯ ಹೋರಾಟಕ್ಕೂ ಸ್ಫೂರ್ತಿ ನೀಡುತ್ತಿದ್ದ ಕೇಸರಿಯಂತೆಯೇ ಕರ್ನಾಟಕ ವೈಭವ ಆರಂಭವಾಯಿತು. ಸಾರ್ವಜನಿಕರಿಂದ 'ಕರ್ನಾಟಕ ವೈಭವ'ಕ್ಕೆ ಹಾಗೂ ಆ ಪತ್ರಿಕೆ ಮುದ್ರಿಸುತ್ತಿದ್ದ ಗ್ರಾಮಾಧಿಕಾರಿ ಮುದ್ರಣಾಲಯಕ್ಕೆ ಸಾರ್ವಜನಿಕರಿಂದ ನಿಧಿ ಕೂಡಿಸಲಾಯಿತು. ಕರ್ನಾಟಕ ಏಕೀಕರಣದ ಮೂಲಮಂತ್ರ ಉದ್ಭವವಾದದ್ದು ಕರ್ನಾಟಕ ವೈಭವದಿಂದ.

ಸವಣೂರು ಗುಂಡೂರಾಯರು ಸರ್ಕಾರಿ ನೌಕರರಾಗಿದ್ದರೂ ಪತ್ರಿಕೆಯಲ್ಲಿ ರಾಷ್ಟ್ರೀಯ ವಿಚಾರಗಳು ತುಂಬ ಪ್ರಕಟವಾಗುತ್ತಿದ್ದುವು. 1904 ರಿಂದ 1908ರ ವರೆಗೆ ಬಂಗಾಲ ವಿಭಜನೆಯ ಆಂದೋಲನದ ಸಮಯದಲ್ಲಿ ಈ ಪತ್ರಿಕೆ ಅತಿ ಉಗ್ರ ಲೇಖನಗಳನ್ನು ಬರೆಯಿತು. ಆಗ ಭಾರತಕ್ಕೆ ಬಂದಿದ್ದ ಲಂಡನ್ ಟೈಮ್ಸ್ ವರದಿಕಾರ ವ್ಯಾಲಂಟೈನ್ ಚಿರೋಲ್ ಇಂಡಿಯನ್ ಅನ್‌ರೆಸ್ಟ್ ಪುಸ್ತಕದಲ್ಲಿ ಕರ್ನಾಟಕ ವೈಭವ ಉಗ್ರ ಕ್ರಾಂತಿಕಾರಿ ಪತ್ರಿಕೆಯೆಂದು ಬರೆದಿದ್ದಾನೆ.

1920ರಲ್ಲಿ ಜಯರಾವ್ ದೇಶಪಾಂಡೆಯವರು ಇದರ ಸಂಪಾದಕತ್ವ ವಹಿಸಿಕೊಂಡರು. ಅಸಹಕಾರ ಚಳವಳಿಯ ಸಮಯದಲ್ಲಿ ಈ ಪತ್ರಿಕೆಯ ಪ್ರಸಾರ ತುಂಬ ಹೆಚ್ಚಿತು. ಶತಮಾನದ ಆರಂಭದ ಮೊದಲಿನ ಮೂರು ದಶಕಗಳಲ್ಲಿ ಈ ಪತ್ರಿಕೆ ಮೈಸೂರು, ಕೊಡಗು, ಮುಂಬಯಿ, ಮದ್ರಾಸ್, ಹೈದರಾಬಾದ್ ಕರ್ನಾಟಕದಲ್ಲಿ ಜನ ತುಂಬ ಉತ್ಸಾಹದಿಂದ ಈ ಪತ್ರಿಕೆಯನ್ನು ಓದುತ್ತಿದ್ದರು. ಪತ್ರಿಕೋದ್ಯಮದ ದಿಗ್ಗಜರೆಂದು ಪರಿಚಿತರಾದ ಮೊಹರೆ ಹಣಮಂತರಾಯರನ್ನು ಪರಿಚಯಿಸಿದ, ರೂಪಿಸಿದ ಪತ್ರಿಕೆ. ಮೊಹರೆ ಹಣಮಂತರಾಯರು ಆಗ ಇದರಲ್ಲಿ ಸಂಪಾದಕೀಯ ಲೇಖನಗಳನ್ನು ಬರೆಯತೊಡಗಿದ್ದರು. ಅವರು ಬರೆದ ಒಂದು ಅಗ್ರಲೇಖನಕ್ಕಾಗಿ ಸಂಪಾದಕರು ದಂಡ ತೆರಬೇಕಾಯಿತು. ಮುಂದೆ ಹಣಮಂತರಾಯರೇ ಅದರ ಸಂಪಾದಕರಾದರು. ಅವರು 1923ರಲ್ಲಿ ಬರೆದ ಕರ್ನಾಟಕ ವೀರರು ಅಗ್ರಲೇಖನಕ್ಕಾಗಿ ಸೆರೆಮನೆ ವಾಸದ ಶಿಕ್ಷೆ ಅನುಭವಿಸಬೇಕಾಯಿತು. ಆಗ ಎರಡು

ವರ್ಷ ಕಾಲ ಕೌಜಲಗಿ ಹಣಮಂತರಾಯರು ಪತ್ರಿಕೆಯ ಸಂಪಾದಕರಾಗಿದ್ದರು. ಹಣಮಂತರಾವ್ ಮೊಹರೆಯವರು ಸೆರೆಮನೆಯಿಂದ ಬಿಡುಗಡೆಯಾಗಿ ಬಂದ ಅನಂತರ ಮತ್ತೆ ಇದರ ಸಂಪಾದಕತ್ವ ವಹಿಸಿಕೊಂಡು, ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗುವ ವರೆಗೆ ಇದಕ್ಕಾಗಿ ಶ್ರಮಿಸಿದರು. ಅನಂತರ ಹಲವಾರು ವರ್ಷಗಳ ಕಾಲ ನಾಯಕ ವೆಂಕಟರಾಯರೂ ಎನ್. ಎಚ್. ನಾಯಕರೂ ಸಂಪಾದಕರಾಗಿದ್ದರು. ಈಗ ಇದು ದ್ವಿಸಾಪ್ತಾಹಿಕವಾಗಿದೆ.

ಪತ್ರಿಕೆಯಲ್ಲಿ ಮೊದಮೊದಲು ಕನ್ನಡದಲ್ಲಿ ಮಾತ್ರವೇ ಅಲ್ಲದೆ ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಲ್ಲೂ ಲೇಖನಗಳು ಪ್ರಕಟವಾಗುತ್ತಿದ್ದುವು. ಕೆರೂರು ವಾಸುದೇವಾಚಾರ್ಯ ಮತ್ತು ಶ್ರೀನಿವಾಸ ರಾಜಪುರೋಹಿತ ಕನ್ನಡದಲ್ಲೂ ನಾನಾಸಾಹೇಬ ದೇಸಾಯ್ ಮತ್ತು ಗುರುನಾಥ ಬೇವೂರ್ ಇಂಗ್ಲಿಷಿನಲ್ಲೂ ಬರೆಯುತ್ತಿದ್ದರು. ಜಿ. ಆರ್. ಕುಲಕರ್ಣಿಯವರ ಲೇಖನಗಳು ತುಂಬ ಉಗ್ರವಾಗಿರುತ್ತಿದ್ದುವು. ಮೊಹರೆ ಹಣಮಂತರಾಯರು ಮತ್ತು ನಾಯಕ ವೆಂಕಟರಾಯರು ಗಂಡು ಭಾಷೆಯ ಕನ್ನಡದಲ್ಲಿ ಬರೆದ ಲೇಖನಗಳೂ ಅಗ್ರಲೇಖನಗಳೂ ವಿಲಕ್ಷಣ ಜನಜಾಗೃತಿಯನ್ನುಂಟುಮಾಡಿದುವು. (ಎಸ್.ವಿ.ಪಿ.ಎ.)

**ಕರ್ನಾಟಕ ಸಂಘಗಳು :** ಕನ್ನಡದೇಶ ಹಲವಾರು ರಾಜಕೀಯ ಕ್ಷೇತ್ರಗಳಿಗೆ ಹಂಚಿಹೋಗಿದ್ದ ಕಾಲದಿಂದಲೂ ಜನತೆಯಲ್ಲಿ ಭಾಷಾಭಿಮಾನ ದೇಶಾಭಿಮಾನಗಳನ್ನು ಹುಟ್ಟಿಸಿ ನಾಡು, ನುಡಿಯ ಸೇವೆಗಾಗಿ ಪಣತೊಟ್ಟು ದುಡಿಯುತ್ತಿರುವ ಸಂಸ್ಥೆಗಳು. ಕರ್ಣಾಟಕ ಸಂಘ ಎಂಬ ಮಾತು ಕನ್ನಡನಾಡಿನಲ್ಲಿ ಮಾತ್ರವಲ್ಲದೆ ಹೊರಗೂ– ಭಾರತದಾದ್ಯಂತ ಕನ್ನಡ ಜನ ಎಲ್ಲೆಲ್ಲಿ ನೆಲಸಿರುವರೋ ಅಲ್ಲೆಲ್ಲ–ಮನೆ ಮಾತಾಗಿದೆ ಎಂದರೆ ಅತಿಶಯೋಕ್ತಿಯಾಗದು. ಆದರೆ, ಈ ಮಾತಿನ ಹಿಂದೆ, ಕನ್ನಡ ನಾಡು ನುಡಿ ನಯಗಳ ಉಳಿವಿಗೂ ಬೆಳೆವಣಿಗೆಗೂ ಕನ್ನಡಿಗರು ನಡೆಸಿದ ಮತ್ತು ನಡೆಸುತ್ತಿರುವ ಹೋರಾಟದ ಕಥೆ ಅಡಗಿದೆ. ಎಂಬ ಸಂಗತಿ ಬಹುಶಃ ಅನೇಕರಿಗೆ ತಿಳಿಯದು.

ಒಂದೇ ಭಾಷೆಯನ್ನಾಡುವ ಜನ ಒಂದೇ ಕಡೆ–ಎಂದರೆ ಒಂದು ನಿರ್ದಿಷ್ಟ ವಿಸ್ತಾರದ ಭೂಮಿಯಲ್ಲಿ ನೆಲೆಸಿ ಬದುಕು ಸಾಗಿಸುವುದು ಮಾನವನ ಇತಿಹಾಸದಲ್ಲಿ ಅನಾದಿ ಕಾಲದಿಂದ ನಡೆದು ಬಂದಿರುವ ಒಂದು ಸಾಮಾಜಿಕ ನಿಯಮ. ಹೀಗೆ, ನುಡಿ, ನಾಡು, ಜನ ಎಂಬ ಮೂರು ಘಟಕಗಳೂ ಒಂದುಗೂಡಿ ಒಂದು ಜನಾಂಗ ಅಥವಾ ಜನಪದ ಏರ್ಪಡುತ್ತದೆ. ಇಂಗ್ಲೆಂಡು ಎಂದ ಕೂಡಲೆ ಆಂಗ್ಲನೆಲ, ಆಂಗ್ಲನುಡಿ, ಆಂಗ್ಲಜನ ಈ ಮೂರು ಘಟಕಗಳೂ ಮನಸ್ಸಿನ ಮುಂದೆ ಬಂದು ನಿಲ್ಲುತ್ತವೆ; ಇಂಗ್ಲಿಷ್ ಎಂದಾಗ ಭಾಷೆ ಒಂದೇ. ಹೀಗೆಯೇ, ಕನ್ನಡ ನಾಡು ಅಥವಾ ಕರ್ಣಾಟಕ ಎಂದಾಗ ಕನ್ನಡ ನುಡಿ, ಕನ್ನಡದ ನೆಲ, ಕನ್ನಡ ಜನ– ಈ ಮೂರೂ ಕಲ್ಪನೆಗಳೂ ಬೋಧೆಯಾಗುತ್ತವೆ. ಸುಮ್ಮನೆ ಕನ್ನಡ ಎಂದರೆ ಕನ್ನಡ ಭಾಷೆ ಮಾತ್ರ.

ಒಂದೆ ಭಾಷೆಯನ್ನಾಡುವ ಜನ ಕೆಲವೊಮ್ಮೆ ಹಂಚಿ ಹೋಳಾಗಿ ಬದುಕಬೇಕಾದ ಪ್ರಸಂಗಗಳು ಇತಿಹಾಸದಲ್ಲಿ ಜರುಗಿವೆ. ಹಿಂದೆ. ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ಬಂಗಾಳವನ್ನು ಒಡೆದರು. ಬಂಗಾಳ ಇಬ್ಭಾಗವಾದುದನ್ನು ಪ್ರತಿಭಟಿಸಿ, ವಂಗಭಂಗ ಚಳವಳಿ ಆಯಿತು. ಪರಿಣಾಮವಾಗಿ, ಬಂಗಾಳ ಮತ್ತೆ ಒಂದುಗೂಡಿತು. ಈಚೆಗೆ, ಭಾರತದಲ್ಲಿ ಪಾಕಿಸ್ತಾನ ನಿರ್ಮಾಣವಾದಾಗ, ಹಿಂದೂ ಮತ್ತು ಮುಸ್ಲಿಂ ಜನಾಂಗ ಎಂಬ ತತ್ತ್ವದ ಆಧಾರದ ಮೇಲೆ ಬಂಗಾಳ ಎರಡಾಗಿ ಒಡೆಯಿತು–ಪಶ್ಚಿಮ ಬಂಗಾಳ ಮತ್ತು ಪೂರ್ವ ಬಂಗಾಳ ಎಂದು. ಮತಧರ್ಮದ ಆಧಾರದ ಮೇಲೆ ಜನವನ್ನು ಒಡೆದಿರುವುದು ಕೃತಕ. ಎರಡು ಬಂಗಾಳಗಳ ಜನ ತಾವು ಬಂಗಾಳಿಗಳು ಎಂಬ ಭಾವನೆಯನ್ನು ಬಿಡಲು ಸಾಧ್ಯವಾಗಿಲ್ಲ.

ಬಂಗಾಲಕ್ಕೆ ಒದಗಿದ್ದ, ಒದಗಿರುವ, ದುರ್ಗತಿ ಕನ್ನಡ ನಾಡಿಗೂ ಎಂದರೆ, ಕರ್ನಾಟಕಕ್ಕೂ 1799ರ ತರುವಾಯ ಒದಗಿತ್ತು. ಇಂಗ್ಲಿಷರು ತಾವು ಟಿಪ್ಪುಸುಲ್ತಾನನಿಂದ ಗೆದ್ದ ಮೈಸೂರು ರಾಜ್ಯವನ್ನು, ಅರ್ಥಾತ್ ಕರ್ನಾಟಕವನ್ನು, ಅನೇಕ ಭಾಗಗಳಾಗಿ ಒಡೆದು, ಬೇರೆ ಬೇರೆ ಸರ್ಕಾರಗಳ ಅಧೀನಕ್ಕೆ ಒಳಪಡಿಸಿದರು. ಹೀಗೆ ಅಸ್ತಿತ್ವಕ್ಕೆ ಬಂದವು– ಮೈಸೂರು ಸಂಸ್ಥಾನ, ಉತ್ತರ ಕನ್ನಡ ಜಿಲ್ಲೆಯನ್ನೂ ಒಳಗೊಂಡ ಬೊಂಬಾಯಿ ಕರ್ನಾಟಕ ಅಥವಾ ಉತ್ತರ ಕರ್ನಾಟಕ, ದಕ್ಷಿಣ ಕನ್ನಡವನ್ನು ಒಳಗೊಂಡ ಹೈದರಾಬಾದು ಕರ್ನಾಟಕ, ಮದ್ರಾಸು ಕರ್ನಾಟಕ ಮತ್ತು ಕೊಡಗು.

ಮೈಸೂರು ಸಂಸ್ಥಾನದಲ್ಲಿ ಎಂದಿನಿಂದಲೂ ಆಳರಸರಾದ ಒಡೆಯರು ಕನ್ನಡ ಭಾಷಾಸಾಹಿತ್ಯಗಳಿಗೆ ಪ್ರೋತ್ಸಾಹವನ್ನು ಕೊಡುತ್ತ ಬಂದಿದ್ದರು. ಈ ಪ್ರೋತ್ಸಾಹ ಚಿಕ್ಕದೇವರಾಜ ಒಡೆಯರ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವಿಶೇಷವಾಗಿ ಸಾಹಿತ್ಯದ ಸೃಷ್ಟಿಗೆ ಕಾರಣವಾಯಿತು. ಮುಮ್ಮಡಿಯವರ ಕಾಲದಲ್ಲಿಯೇ ಇಂಗ್ಲೀಷು ವಿದ್ಯಾಭ್ಯಾಸದ ಅಂಕುರಾರ್ಪಣವಾಗಿ, ಚಾಮರಾಜ ಒಡೆಯರ ಕಾಲದಲ್ಲಿ ಬೆಳೆದು, ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅದು ದೊಡ್ಡ ವೃಕ್ಷವಾಯಿತು. ಅದರಲ್ಲಿ ಬಿಟ್ಟ ದೊಡ್ಡ ಫಲ, 1916ರಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯ. ಇದರ ಆಶ್ರಯಕ್ಕೆ ಬಂದುವು ಅದಕ್ಕೂ ಮೊದಲೇ ಹುಟ್ಟಿ ಬೆಳೆದಿದ್ದ ಮೈಸೂರಿನ ಮಹಾರಾಜರವರ ಕಾಲೇಜು ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳು. ಕನ್ನಡದ ವಿದ್ಯೆಗೆ ಎಲ್ಲ ರೀತಿಯಲ್ಲೂ ಎಡೆಗೊಟ್ಟು ಉತ್ತೇಜನ ಕೊಡಬೇಕೆಂಬುದು ಸ್ಥಾಪಕರ ಉದ್ದೇಶವಾಗಿದ್ದರೂ ಬಹುಕಾಲದವರೆಗೆ ಅಲ್ಲಿ ಕನ್ನಡ ಅಂಬೆಗಾಲಿಡುತ್ತಲೇ ಬದುಕಿರಬೇಕಾಯಿತು. ಚಾಮರಾಜ ಒಡೆಯರ ಕಾಲದಲ್ಲಿ ಕನ್ನಡ ರಂಗಭೂಮಿಗೆ ದೊರೆತ ಪ್ರೋತ್ಸಾಹದ ಮಾತು ಬಿಟ್ಟರೆ, ಅರಸರ ಆಸ್ಥಾನದಲ್ಲಿ ಸೃಷ್ಟಿಯಾಗುತ್ತಿದ್ದ ಕನ್ನಡ ತನ್ನ ಹಿಂದಿನ ಕಸುವನ್ನು ಕಳೆದುಕೊಂಡು ಯಾವ ರೀತಿಯಲ್ಲೂ ಜನಕ್ಕೆ ರಸದೂಟ ಒದಗಿಸಲು ಸಮರ್ಥವಾಗಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಶಾಲಾಕಾಲೇಜುಗಳಲ್ಲಿ ಕಲಿತ ಕಲಿಯುತ್ತಿದ್ದ ಜನ ಇಂಗ್ಲಿಷಿನ ನಿರರ್ಥಕ ಪ್ರಭಾವಕ್ಕೆ ಒಳಗಾಗತೊಡಗಿದರು. ಆಡಳಿತದಲ್ಲೂ ಇಂಗ್ಲಿಷು ದರ್ಬಾರು ಮಾಡತೊಡಗಿತು. ಮೈಸೂರು ಜನದ ಬದುಕಿನಲ್ಲಿ ಇಂಗ್ಲಿಷಿನ ಉಸಿರು ಬೆರೆಯಿತು; ವ್ಯಾಮೋಹ ಬಲಿಯಿತು.

ಉತ್ತರ ಕರ್ನಾಟಕದ ಜನ ಬೊಂಬಾಯಿ ವಿಶ್ವವಿದ್ಯಾನಿಲಯದ ಕಡೆಗೂ ಮದರಾಸು ಕರ್ನಾಟಕದ ಜನ ಮದರಾಸು ವಿಶ್ವವಿದ್ಯಾನಿಲಯದ ಕಡೆಗೂ ಹೈದರಾಬಾದು ಕರ್ನಾಟಕದ ಜನ ಉಸ್ಮಾನಿಯ ವಿಶ್ವವಿದ್ಯಾನಿಲಯದ ಕಡೆಗೂ ಕನ್ನಡದ ಭಿಕ್ಷೆಗಾಗಿ ಕೈಯೊಡ್ಡಬೇಕಾಗಿತ್ತು. ಮರಾಠಿಯ ಪ್ರಭಾವದಿಂದಾಗಿ ಉತ್ತರ ಕರ್ನಾಟಕದ ಕನ್ನಡಿಗರ ಕನ್ನಡತನಕ್ಕೆ ಸಂಚಕಾರ ಬಂದಿತ್ತು. ಉಳಿದ ಕಡೆ ಕನ್ನಡದ ಅವಸ್ಥೆ ಮೇಲು ಎನ್ನುವಂತಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಕನ್ನಡಿಗರು ತಮ್ಮ ನಾಡು ನುಡಿಗಳ ಏಳಿಗೆಯ ಬಗೆಗೆ ಚಿಂತಿಸುವಂತಾದುದು ಚಾರಿತ್ರಿಕ ಘಟನೆ ಎಂದೇ ಹೇಳಬೇಕು. ಈ ಚಿಂತನೆಯ ಫಲ ಮಹತ್ವದ್ದು. ಕರ್ನಾಟಕ ಭಾಷಾ ಸಾಹಿತ್ಯಗಳ ಸಂವರ್ಧನೆಗೆ, ಸಂಘಟನೆಗೆ ನಡೆದ ಪ್ರಯತ್ನ. ಚಾಮರಾಜ ಒಡೆಯರ ಕಾಲದಲ್ಲಿ ಮೈಸೂರಿನಲ್ಲಿ ಕರ್ನಾಟಕ ಭಾಷೋಜ್ಜೀವಿನೀ ಸಭಾ ಸ್ಥಾಪಿತವಾಯಿತು; 1890ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಜನ್ಮ ತಾಳಿತು; 1915ರಲ್ಲಿ, ಬೆಂಗಳೂರಿನಲ್ಲಿ, ಕರ್ನಾಟಕ ಸಾಹಿತ್ಯ ಪರಿಷತ್ತು **(ನೋಡಿ– ಕನ್ನಡ ಸಾಹಿತ್ಯ ಪರಿಷತ್ತು)** ಅಖಿಲ ಕರ್ನಾಟಕ ಸಂಸ್ಥೆಯಾಗಿ ಅವತರಿಸಿತು. ಈ ಮೂರಕ್ಕೂ ಸಾಮಾನ್ಯವಾಗಿದ್ದ ಮುಖ್ಯ ಗುರಿ ಒಂದೇ: ಕನ್ನಡದಲ್ಲಿ ಗ್ರಂಥ ರಚನೆಗೆ ಪ್ರೋತ್ಸಾಹ; ಆ ಮೂಲಕ ಕನ್ನಡ ನುಡಿಯ ಏಳಿಗೆ. ಈ ಮೂರು ಸಂಸ್ಥೆಗಳಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘ ಕೆಲವೊಮ್ಮೆ ಪ್ರತ್ಯಕ್ಷವಾಗಿ, ಹಲವೊಮ್ಮೆ ಪರೋಕ್ಷವಾಗಿ, ನಾಡಿನಲ್ಲೆಲ್ಲ ಕಾಲಕ್ರಮದಲ್ಲಿ ಕರ್ನಾಟಕ ಸಂಘಗಳು ಹುಟ್ಟಿಕೊಳ್ಳಲು ಕಾರಣವಾದುವು. ಗಿಡವನ್ನು ಬೆಳೆಸಿದ ತೋಟಗಾರ ಅದರ ಅಂಟುಗಳನ್ನು ಕತ್ತರಿಸಿ ನಟ್ಟು ಹತ್ತಾರು ಗಿಡ ಬೆಳೆಸುವ ಹಾಗೆ, ಈ ಸಂಸ್ಥೆಗಳ ಹಿರಿಯರು ಅವುಗಳ ಉದ್ದೇಶವನ್ನೇ ಬೇರೆಯ ವಿಧಾನದಲ್ಲಿ ಸಾಧಿಸಲು ಕಿರಿಯರನ್ನು ಒಂದೂಗೂಡಿಸಿದರು; ಸಂಘಗಳನ್ನು ಕಟ್ಟಿದರು. ಆಲೂರು ವೆಂಕಟರಾಯರು, ಬೆಳ್ಳಾವೆ ವೆಂಕಟನಾರಾಯಪ್ಪನವರು, ಬಿ.ಎಂ. ಶ್ರೀಕಂಠಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು, ಟಿ.ಎಸ್. ವೆಂಕಣ್ಣಯ್ಯನವರು, ದ.ರಾ. ಬೇಂದ್ರೆ– ಈ ಮೊದಲಾದವರೂ ಮೊದಲು ಹುಟ್ಟಿದ ಸಂಘಗಳಾದ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ, ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘ, ಧಾರವಾಡದ ಗೆಳೆಯರ ಗುಂಪು– ಇವುಗಳ ಹುಟ್ಟು ಬೆಳೆವಣಿಗೆಗಳಲ್ಲಿ (ಬೇರೆ ಬೇರೆಯಾಗಿ, ಬೇರೆ ಬೇರೆ ಕಾಲಗಳಲ್ಲಿ) ಪ್ರಮುಖ ಪಾತ್ರವಹಿಸಿದರು.

ಈ ಸಂದರ್ಭದಲ್ಲಿ, ಒಂದು ವಿಶೇಷ ವಿವರಣೆಯನ್ನು ಕೊಡಬೇಕಾದದ್ದು ಅಗತ್ಯ. ಪರಿಷತ್ತು ಹಾಗೂ ವಿದ್ಯಾವರ್ಧಕ ಸಂಘಗಳು, ರಾಜಕೀಯವಾಗಿ ಒಡೆದು ಹೋಗಿದ್ದ ಕನ್ನಡ ನಾಡಿನ ಜನರನ್ನು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ದೃಷ್ಟಿಯಿಂದ ಒಂದುಗೂಡಿಸುವ ಗುರಿಯನ್ನು ಹೊಂದಿದ್ದುವು. ಅಖಿಲ ಕರ್ನಾಟಕ ವ್ಯಾಪ್ತಿ ಈ ಎರಡರ ಕಾರ್ಯಕ್ಷೇತ್ರವಾಗಿದ್ದರೂ ಕಾಲಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಕಾರ್ಯ ಕ್ಷೇತ್ರ ಧಾರವಾಡದ ಸುತ್ತಮುತ್ತಣ ಪ್ರಾಂತಕ್ಕೆ ಸೀಮಿತವಾಯಿತು. ಗೆಳೆಯರ ಗುಂಪು ಸಂಖ್ಯಾದೃಷ್ಟಿಯಿಂದ ಕೆಲವರ ಸಂಘವೇ ಆಗಿತ್ತು; ನಿಯಮ ನಿಬಂಧನೆಗಳಿಲ್ಲದ, ಅಧಿಕಾರಿವರ್ಗ ಇಲ್ಲದ, ಅದರೂ ಕನ್ನಡದ ಊಳಿಗಕ್ಕೆ ಟೊಂಕ ಕಟ್ಟಿನಿಂತ ಸಂಘವದು. ಸೆಂಟ್ರಲ್ ಕಾಲೇಜಿನ ಸಂಘ ವಿದ್ಯಾರ್ಥಿ ವೃಂದಕ್ಕೆ ಮಾತ್ರ ಸೀಮಿತವಾದದ್ದು. ಕನ್ನಡದಲ್ಲಿ ಬರೆಯ ಬಲ್ಲವರು, ಕನ್ನಡದ ಅಭಿಮಾನಿಗಳು, ಒಟ್ಟುಗೂಡಿ ಕನ್ನಡಕ್ಕಾಗಿ ದುಡಿಯಲು ಸಂಘವಾಗಿ ಸೇರಬೇಕು ಎನ್ನುವವರಿಗೆ ಗೆಳೆಯರ ಗುಂಪು ಮೇಲುಪಂಕ್ತಿಯಾಯಿತು. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸೆಂಟ್ರಲ್ ಕಾಲೇಜಿನ ಸಂಘ ಮಾದರಿಯಾಯಿತು.

ಹೀಗೆ, ನಾಡಿನಲ್ಲಿ ಮೂರು ನಾಲ್ಕು ಬಗೆಯ ಕರ್ನಾಟಕ ಸಂಘಗಳು ಕಾಣಿಸಿಕೊಂಡುವು; 1 ಕರ್ಣಾಟಕ ಅಥವಾ ಕರ್ನಾಟಕ ಸಂಘ ಎಂಬ ಹೆಸರು ತಳೆದ, ಶಾಲೆ ಕಾಲೇಜುಗಳ ವಿದ್ಯಾರ್ಥಿಗಳ ಕರ್ಣಾಟಕ ಸಂಘಗಳು; ಹಲವು ಕಡೆ ಇವು ಕನ್ನಡ ಸಂಘ ಎಂಬ ಹೆಸರನ್ನೂ ತಳೆದುವು. 2 ಸ್ಥಳೀಯ ಜನರಲ್ಲಿ ಕನ್ನಡದ ಅಭಿಮಾನವನ್ನು ಹುಟ್ಟಿಸಿ, ಕನ್ನಡದ ಏಳಿಗೆಗೆ ಕೆಲಸ ಮಾಡತೊಡಗಿದ, ಜಿಲ್ಲಾ ಕೇಂದ್ರ ನಗರ ಪಟ್ಟಣ ಊರು ಹಳ್ಳಿಗಳಲ್ಲಿ ಸ್ಥಾಪಿತವಾದ (ಸಾರ್ವಜನಿಕ) ಕರ್ನಾಟಕ ಸಂಘಗಳು. 3 ಸ್ವಾತಂತ್ರ್ಯ ಪೂರ್ವದಲ್ಲೂ ಸ್ವಾತಂತ್ರ್ಯ ಬಂದಮೇಲೂ ಕನ್ನಡ ನಾಡಿನ ಹೊರಗಡೆ ನೆಲೆಸಿರುವ ಹೊರನಾಡಿನ ಕನ್ನಡಿಗರು

ನಾಡುನುಡಿಗಳ ಅಭಿಮಾನವನ್ನು ಜೀವಂತವಾಗಿರಿಸಿಕೊಳ್ಳಲು ಕಟ್ಟಿಕೊಂಡ ಸಂಘಗಳು. 4 ಬೆಂಗಳೂರಿನ ವಿಮಾನ ಕಾರ್ಖಾನೆ ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಸ್ಥಾಪಿತವಾಗಿರುವವು.

ಇನ್ನೊಂದು ಗಮನಾರ್ಹ ಸಂಗತಿ ಎಂದರೆ, ಅನೇಕ ಸಂಘಗಳು ಕರ್ನಾಟಕ ಸಂಘ ಮಾಡಬೇಕಾದ ಕಾರ್ಯಗಳಲ್ಲಿ ಹಲವನ್ನೋ ಕೆಲವನ್ನೋ ತಮ್ಮ ತಮ್ಮ ಇಚ್ಛೆ, ಉದ್ದೇಶ, ಅನುಕೂಲಗಳಿಗೆ ತಕ್ಕಂತೆ ಮಾಡಿಕೊಂಡು ಹೋಗುತ್ತಿದ್ದರೂ ಅದೇ ಹೆಸರನ್ನು ಹೊಂದಿರುವುದಿಲ್ಲ. ಕೆಲವು ಸಾಹಿತ್ಯ ಸಂಘ ಎಂಬ ಹೆಸರನ್ನು ಹೊಂದಿದ್ದರೆ ಕೆಲವು ಕನ್ನಡಿಗರ ಸಂಘವಾಗಿರುತ್ತವೆ; ಕೆಲವು ಕನ್ನಡ ಸಂಘ ಎನಿಸಿವೆ. ಸಂಘಕ್ಕೆ ಬದಲು ಕೂಟವಾಗಿರುತ್ತವೆ, ಕೆಲವು. ಭಾಷಾಸೂಚಕವಾದ ವಿಶೇಷಣವೇ ಇಲ್ಲದ, ಮಿತ್ರ ಮಂಡಲಿ, ಮಿತ್ರವೃಂದಗಳೂ ಉಂಟು. ಇಂಥವೆಲ್ಲವನ್ನೂ ಕರ್ನಾಟಕ ಸಂಘ ಎಂಬ ಸಾಮಾನ್ಯ ವಾಚಕ ಒಳಗೊಳ್ಳುತ್ತದೆ.

ಬಹು ಹಳೆಯವಾದ ಕೆಲವು ಸಂಘಗಳ ಕಾರ್ಯಕಲಾಪಗಳ ಪರಿಚಯ ಮಾಡಿಕೊಳ್ಳುವುದರ ಮೂಲಕ, ಸಾಮಾನ್ಯತಃ ಕರ್ನಾಟಕ ಸಂಘಗಳು ಮಾಡಿರುವ ಹಾಗೂ ಮಾಡುತ್ತಿರುವ, ಮುಂದೆಯೂ ಮಾಡಬೇಕಾದ, ಕೆಲಸದ ಸ್ವರೂಪವನ್ನು ತಿಳಿದುಕೊಳ್ಳಬಹುದು.

**ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ :** ಈ ಸಂಘವನ್ನು 1918ರಲ್ಲಿ ಆರಂಭ ಮಾಡಿ 1932ರವರೆಗೂ ನಡಸಿಕೊಂಡು ಬಂದ ಎ. ಆರ್. ಕೃಷ್ಣಶಾಸ್ತ್ರಿಗಳು ಪ್ರಬುದ್ಧ ಕರ್ಣಾಟಕದ ವಿಷಯವಾಗಿ ಪ್ರಸ್ತಾಪಿಸುತ್ತ ಸಂಘದ ವಿಚಾರವಾಗಿಯೂ ಬರೆದಿದ್ದಾರೆ. ಕನ್ನಡದ ವಿಷಯದಲ್ಲಿ ಆಗಿನ ಕಾಲದ ಧೋರಣೆ ಮತ್ತು ಸಂಘ ಸ್ಥಾಪನೆಗೆ ಇದ್ದ ಆವಶ್ಯಕತೆಗಳು ಅವರ ಮಾತುಗಳಲ್ಲಿ ಪ್ರತಿಬಿಂಬಿತವಾಗಿವೆ. ಅವರ ಅರ್ಥಪೂರ್ಣ ಮಾತುಗಳು ಇವು;

"ನಾನು ವಿದ್ಯಾರ್ಥಿಯಾಗಿದ್ದಾಗ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಇದ್ದದ್ದು ಎರಡು ಸಂಘಗಳು-(1) 1894ರಲ್ಲಿ ಹುಟ್ಟಿ ಥಾಮಸ್ ಡನ್ಸ್ಯಾಂ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಚರಿತ್ರೆ ಸಂಘ. (2) ಸುಮಾರು 1913ರಲ್ಲಿ ಬಿ. ಎಂ. ಶ್ರೀಕಂಠಯ್ಯನವರಿಂದ ಸ್ಥಾಪಿತವಾದ ಇಂಗ್ಲಿಷ್ ಸಾಹಿತ್ಯ ಸಂಘ. ಕನ್ನಡಕ್ಕೆ ಯಾವ ಸಂಘವೂ ಇರಲಿಲ್ಲ. 1915ರಲ್ಲಿ ನಾನು ಬೆಂಗಳೂರಿಗೆ ಕನ್ನಡದ ಉಪಾಧ್ಯಾಯನಾಗಿ ಹೋದಾಗ (ಸೆಂಟ್ರಲ್ ಕಾಲೇಜಿನಲ್ಲಿಯೂ) ಕನ್ನಡಕ್ಕೆ ಯಾವ ಸಂಘವೂ ಇರಲಿಲ್ಲ. ಒಂದು ಸಂಘವನ್ನು ಸ್ಥಾಪಿಸಬೇಕೆಂಬ ಯೋಚನೆ ಹೋದ ಕೂಡಲೇ ಬರಲಿಲ್ಲ. ಕನ್ನಡದಲ್ಲಿಯೂ ಕಲಿಯುವುದು ಇದೆ. ಇಂಗ್ಲಿಷಿನಂತೆಯೇ ಕಲಿಯುವುದು ಇದೆ ಎಂದು ತೋರಿಸಿ, ಕನ್ನಡದ ಸ್ಥಿತಿಯನ್ನು ಬಂಗಾಳಿ ಮರಾಠಿಗಳ ಸ್ಥಿತಿಯೊಡನೆ ಹೋಲಿಸಿ ಕನ್ನಡದಲ್ಲಿ ಒಂದು ಅಭಿಮಾನ ಹುಟ್ಟಿಸಿ ವಿದ್ಯಾರ್ಥಿಗಳ ಸಹಾನುಭೂತಿ ಸ್ನೇಹಗೌರವಗಳನ್ನು ಗಳಿಸಲು ಒಂದೆರಡು ವರ್ಷ ಬೇಕಾಯಿತು. ಈ ಮಧ್ಯೆ ಕೆಲವು ವಿದ್ಯಾರ್ಥಿಗಳು ಅತ್ಯುತ್ತಮ ಪ್ರಬಂಧಗಳನ್ನು ಬರೆದಿದ್ದರು...... ಇವರ ಬರವಣಿಗೆಯೆಲ್ಲ ವ್ಯರ್ಥವಾಗಿ ಹೋಗಿಬಿಡುವುದಲ್ಲ ಎಂದು ನನಗೆ ಒಂದು ಬಗೆಯ ಕೊರಗಾಗಿತ್ತು. ಇವೆಲ್ಲವನ್ನೂ ಒಂದು ಪ್ರಕಟಣೆಯಾಗಿ ಅಚ್ಚು ಮಾಡಿಸಬಹುದೆಂದು ಹೇಳಿದೆ. ಬಹುಮಂದಿ ಉತ್ಸಾಹಶಾಲಿಗಳಾಗಿ ಮುಂದೆ ಬಂದರು. ಅದರ ಜೊತೆಯಲ್ಲಿಯೇ ಸಂಘದ ಯೋಚನೆಯೂ ಹುಟ್ಟಿತು. ವಿದ್ಯಾರ್ಥಿಗಳು ಕೊಡುವ ಹಣವನ್ನು ಸಂಘದ ಚಂದಾ ಎಂದು ಭಾವಿಸಿ ಪತ್ರಿಕೆಯನ್ನು ಉಚಿತವಾಗಿ ಕೊಡಬಹುದು ಎಂದೆ. ಅದಕ್ಕೂ ವಿದ್ಯಾರ್ಥಿಗಳು ಒಪ್ಪಿದರು. ಮೊದಲು ಸಂಘದ ಏರ್ಪಾಡು. ಈಗ ಕರ್ಣಾಟಕ ಸಂಘ ಎಂಬುದು ಸುಪರಿಚಿತವಾದ ಹೆಸರು, ಆಗ ಈ ಸಂಸ್ಥೆಗೆ ಏನು ಹೆಸರು ಇಡಬೇಕೆಂದೇ ನಾನು ಬಹುದಿನ ಯೋಚಿಸಿದೆ-ಸಾಹಿತ್ಯ ಸಮಾಜವೇ, ಕನ್ನಡ ಸಮಾಜವೇ, ಕರ್ಣಾಟಕ ಸಮಾಜವೇ, ಇತ್ಯಾದಿ, ಆಗ್ಗೆ ಇಂಗ್ಲಿಷಿನಲ್ಲಿ ರೂಢಿಯಾಗಿದ್ದ ಸೊಸೈಟಿ ಎಂಬ ಪದಕ್ಕೆ ಸಮಾನವಾಗಿ ಸಮಾಜವೇ ಮುಂದೆ ಬರುತ್ತಿತ್ತು. ಆದರೆ ಏಕೋ ಅದರಲ್ಲಿ ಸತ್ತ್ವವಿಲ್ಲವೆಂದು ಭಾಸವಾಗಿ ಕೊನೆಗೆ ಬಾಯಿ ತುಂಬ ಬರುವ, ಗಂಭೀರವಾಗಿ ಕೇಳುವ, ಕರ್ಣಾಟಕ ಸಂಘ ಎಂಬುದನ್ನು ನಿಷ್ಕರ್ಷೆ ಮಾಡಿಯಾಯಿತು."

ಈ ನಿಷ್ಕರ್ಷೆ ಫಲಿಸಿ, ಆಗಸ್ಟ್ 1918ರಲ್ಲಿ ಸಂಘ ಆರಂಭವಾಯಿತು. ಕೃಷ್ಣಶಾಸ್ತ್ರಿಗಳೇ ಸಂಘದ ಅಧ್ಯಕ್ಷರಾಗಬೇಕೆಂದು ವಿದ್ಯಾರ್ಥಿಗಳು ಬಯಸಿದರು. ಆದರೆ ಅವರು ಒಪ್ಪಲಿಲ್ಲ. ದೊಡ್ಡವರನ್ನು ಮುಂದಿಟ್ಟುಕೊಂಡು ಕೆಲಸ ಮಾಡಬೇಕೆಂದು ತಿಳಿಸಿ, ಪರಿಷತ್ತಿನಲ್ಲಿ ಕೆಲಸ ಮಾಡಿ ಗೌರವವನ್ನು ಗಳಿಸಿದ್ದ ವ್ಯಕ್ತಿಯಾಗಿದ್ದ, ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿದ್ದ, ಬೆಳ್ಳಾವೆ ವೆಂಕಟನಾರಾಯಣಪ್ಪನವರನ್ನು ಅಧ್ಯಕ್ಷರಾಗಿ ಇಟ್ಟುಕೊಳ್ಳಬೇಕೆಂದು ಶಾಸ್ತ್ರಿಗಳು ಸೂಚಿಸಿದರು. ಅದೇ ಮೇರೆಗೆ ಬಿ. ವೆಂಕಟನಾರಾಯಣಪ್ಪನವರು ಸಂಘದ ಪ್ರಥಮ ಅಧ್ಯಕ್ಷರಾದರು; ಕೃಷ್ಣಶಾಸ್ತ್ರಿಗಳು ಉಪಾಧ್ಯಕ್ಷರಾದರು. ಕಾರ್ಯದರ್ಶಿ ಮಾತ್ರ ವಿದ್ಯಾರ್ಥಿಯೇ ಆಗಿರಬೇಕೆಂದೂ ಸಂಘ ವಿದ್ಯಾರ್ಥಿಗಳಿಗೆ ಒಂದು ಶಿಕ್ಷಣ ಕ್ಷೇತ್ರವಾಗಿರಬೇಕೆಂದೂ ಖಂಡಿತವಾಗಿ ಹೇಳಿದರು, ಶಾಸ್ತ್ರಿಗಳು. ಅದೇ ಮೇರೆಗೆ, ಡಿ. ಗುರುರಾಯರು ಕಾರ್ಯದರ್ಶಿಯಾಗಿ ನಿಯಮಿತರಾದರು. (ಚುನಾಯಿತರಾಗಲಿಲ್ಲ-ಎಂಬ ಮಾತನ್ನು ಅರ್ಥಪೂರ್ಣವಾಗಿ ತಿಳಿಸಿದ್ದಾರೆ ಶಾಸ್ತ್ರಿಗಳು). ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಮೊದಲ ವರ್ಷದ ಆರಂಭ ಭಾಷಣ ಮಾಡಿದರು.

ಪ್ರಬುದ್ಧ ಕರ್ಣಾಟಕ ಕನ್ನಡ ನಾಡಿಗೆ ಈ ಸಂಘದ ಅಮೂಲ್ಯ ಕೊಡುಗೆ ಎಂದು ಧಾರಾಳವಾಗಿ ಹೇಳಬಹುದು. ಪರ್ಯಾಯವಾಗಿ, ಕೃಷ್ಣಶಾಸ್ತ್ರಿಗಳ ಕೊಡುಗೆ ಎಂದರೂ ತಪ್ಪಾಗುವುದಿಲ್ಲ. ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘ, ಕೃಷ್ಣಶಾಸ್ತ್ರಿಗಳು, ಪ್ರಬುದ್ಧ ಕರ್ಣಾಟಕ ಈ ಮೂರು ಒಟ್ಟಿಗೆ ನೆನೆಯತಕ್ಕವು.

ಕೃಷ್ಣಶಾಸ್ತ್ರಿಗಳ ಸ್ಫೂರ್ತಿದಾಯಕ ನೇತೃತ್ವದಲ್ಲಿ ಸಂಘವೂ ಅದರ ಪತ್ರಿಕೆಯೂ ವಿದ್ಯಾರ್ಥಿಗಳ ಪ್ರಯೋಜನಕ್ಕೆ ಮಾತ್ರವಲ್ಲದೆ ಮಹಾಜನರ ಪ್ರಯೋಜನಕ್ಕೂ ಒದಗಿಬಂದುವು. ಪ್ರಬುದ್ಧ ಕರ್ಣಾಟಕದ ಲೇಖನಗಳು ಪುಡಿಪುಡಿಯಾಗಿರಬಾರದೆಂದೂ ಸಾರವತ್ತಾಗಿ ನಾಲ್ಕುಕಾಲ ನಿಲ್ಲುವಂತಿರಬೇಕೆಂದೂ ಸಾಧ್ಯವಾದರೆ ಕೆಲವು ಸಂಚಿಕೆಗಳಲ್ಲಿ ಬಂದ ಲೇಖನಗಳನ್ನು ಸೇರಿಸಿ ಅಚ್ಚುಕಟ್ಟಾದ ಒಂದು ಪುಸ್ತಕ ಮಾಡುವಂತಿರಬೇಕೆಂದೂ ನಿರ್ಧರಿಸಲಾಗಿತ್ತು. ಹೀಗೆ ಪ್ರಕಟವಾದ ಲೇಖನಗಳೆಲ್ಲ ಸೇರಿ, 1945ರ ವೇಳೆಗೆ ಒಟ್ಟು 43 ಗ್ರಂಥಗಳಾಗಿ ಪ್ರಕಟವಾಗಿ ಪ್ರಬುದ್ಧ ಕರ್ಣಾಟಕವನ್ನು ಪುಷ್ಟಿಗೊಳಿಸಿ, ಕರ್ಣಾಟಕ ಸಂಘದ ಗ್ರಂಥ ಭಂಡಾರವನ್ನು ಬೆಳೆಸಿದುವು. ಡಿ. ವಿ. ಜಿ. ಯವರ ಕನ್ನಡಸಾಹಿತ್ಯ ಮತ್ತು ಜನಜೀವನ, ಭಾಸನ ಪ್ರತಿಮಾನಾಟಕ (ಮೈಸೂರು ಸೀತಾರಾಮಶಾಸ್ತ್ರಿಗಳ ಅನುವಾದ), ಎ. ವೆಂಕಟಸುಬ್ಬಯ್ಯನವರ ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ, ಮುದ್ದಣ ಪ್ರಶಸ್ತಿಗ್ರಂಥ, ಬಿ. ಎಂ. ಶ್ರೀಯವರ ಗದಾಯುದ್ಧ ನಾಟಕ, ಮತ್ತು ಅಶ್ವತ್ಥಾಮನ್, ಬಿ. ವೆಂಕೋಬರಾಯರ ಮೈಸೂರು ದೇಶದ ವಾಸ್ತುಶಿಲ್ಪ, ಕೆ.ವಿ. ಪುಟ್ಟಪ್ಪನವರ ಯಮನ ಸೋಲು, ಮತ್ತು ಮಲೆನಾಡಿನ ಚಿತ್ರಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರರ ಸುಬ್ಬಣ್ಣ- ಇವು ಕೆಲವನ್ನು ಪ್ರಾತಿನಿಧಿಕವಾಗಿ ಹೆಸರಿಸಬಹುದು. ಇವು ಹೊಸಗನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಮೈಲಿಗಲ್ಲುಗಳಾಗಿವೆ, ಈ ಗ್ರಂಥಗಳು, ಸಂಘ ಬಿಡಿಯಾಗಿ ಪ್ರಕಟಿಸಿದ ನಾಲ್ಕಾರು ಗ್ರಂಥಗಳಲ್ಲಿ ಶ್ರೀಯವರ ಇಂಗ್ಲಿಷ್ ಗೀತಗಳು ಚರಿತ್ರಾರ್ಹ ಪ್ರಕಟನೆ; ಕನ್ನಡ ಕಾವ್ಯಪ್ರಪಂಚದಲ್ಲಿ ಹೊಸ ವಸಂತವನ್ನು ಸಾರಿತಂದ ಗ್ರಂಥವಿದು.

ಪತ್ರಿಕಾ ಪ್ರಕಟಣೆ ಮತ್ತು ಗ್ರಂಥ ಪ್ರಕಟಣೆ ಸಂಘದ ಶಾಶ್ವತಕಾರ್ಯಗಳಾದುವು. ಇವುಗಳ ಜೊತೆಗೆ, ನಿತ್ಯಗಟ್ಟಳೆಯ ಕಾರ್ಯಗಳಾಗಿ ಉಪನ್ಯಾಸ ಉತ್ತವಾದಿಗಳನ್ನು ಸಂಘ ಏರ್ಪಡಿಸುತ್ತಿತ್ತು. ಸೆಂಟ್ರಲ್ ಕಾಲೇಜಿನ ಸಂಘದ ವಾರ್ಷಿಕೋತ್ಸವ ಎಂದರೆ ರಸದೌತಣ ಎಂಬ ಪ್ರತೀತಿ ಇತ್ತು; ಪ್ರಸಿದ್ಧ ವಿದ್ವಾಂಸರು, ಮುಖ್ಯ ಅತಿಥಿಗಳಾಗಿರುತ್ತಿದ್ದರು. 1924ರ ವಾರ್ಷಿಕೋತ್ಸವದಲ್ಲಿ ಅಗ್ರಾಸನ ವಹಿಸಿದ್ದ ಬೆನಗಲ್ ರಾಮರಾಯರು ತಾವು ಮುದ್ದಣನ ಹೆಸರಿನಲ್ಲಿ ಪ್ರತಿವರ್ಷ ಒಂದು ಸುವರ್ಣಪದಕವನ್ನು ಕೊಡುವುದಾಗಿ ಘೋಷಿಸಿ ಮುದ್ದಣ ಸ್ಮಾರಕ ಸಣ್ಣಕಥೆಗಳ ಸ್ಪರ್ಧೆಯನ್ನು ಏರ್ಪಡಿಸಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಪದಕ ಕೊಡತಕ್ಕದೆಂದು ಏರ್ಪಾಡು ಮಾಡಿದರು. ಮುದ್ದಣ ಸ್ವರ್ಣಪದಕ ಪಡೆದವರಲ್ಲಿ ಇಬ್ಬರಾದ ಆನಂದರೂ ಕೆ. ಗೋಪಾಲಕೃಷ್ಣರಾಯರೂ ಮುಂದೆ ಪ್ರಸಿದ್ಧ ಕಥೆಗಾರರಾದರು. ಸಂಘ ನಡೆಸಿದ ಸ್ಮರಣಾರ್ಹ ಕಾರ್ಯಕ್ರಮ ಎಂದರೆ, ಕೆ.ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿ ಕವಿ ಸಮ್ಮೇಳನ (1928). ಹೀಗೆ ಹೊಸಗನ್ನಡ ಸಾಹಿತ್ಯದ ನಿರ್ಮಾಣ ಕಾರ್ಯದಲ್ಲಿ ಈ ಸಂಘ ಪ್ರಮುಖಪಾತ್ರ ವಹಿಸಿದೆ. ಜಿ. ಪಿ. ರಾಜರತ್ನಂ ಸಂಘದ ನಾಯಕರಾಗಿದ್ದ ಕಾಲದಲ್ಲಿ ವಿದ್ಯಾರ್ಥಿಗಳ ಬರವಣಿಗೆಗೆ ವಿಶೇಷ ಪ್ರೋತ್ಸಾಹ ಕೊಟ್ಟು, ಗುರುಗಳು ಹಾಕಿದ್ದ ಸಂಪ್ರದಾಯವನ್ನು ಮುಂದುವರಿಸಿದರು. ಇವರ ನೇತೃತ್ವದಲ್ಲಿ ವಿದ್ಯಾರ್ಥಿ ಲೇಖಕರಿಂದ ಸಿದ್ಧವಾದ ಅನೇಕ ಗ್ರಂಥಗಳು ಪ್ರಕಟವಾದುವು. 1968ರಲ್ಲಿ ಸಂಘ ಚಿನ್ನದ ಹಬ್ಬವನ್ನು ಆಚರಿಸಿತು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬೇರೆ ಬೇರೆ ಕನ್ನಡ ಉನ್ನತ ಪರೀಕ್ಷೆಗಳಲ್ಲಿ ಮೊದಲಿಗರಾಗಿ ಬಂದವರಿಗೆ ಟಿ. ಪಿ. ಕೈಲಾಸಂ, ಎ. ಆರ್. ಕೃಷ್ಣಶಾಸ್ತ್ರೀ-ಇವರ ಹೆಸರಿನಲ್ಲಿ ಚಿನ್ನದ ಪದಕಗಳ ನೀಡಿಕೆಗೆ ವ್ಯವಸ್ಥೆ ಮಾಡಿ, ತನ್ನ ಹೆಸರನ್ನು ಚಿನ್ನದ ಅಕ್ಷರಗಳಲ್ಲಿ ಬರೆದುಕೊಂಡಿದೆ ಈ ಸಂಘ.

**ಮೈಸೂರು ಮಹಾರಾಜರವರ ಕಾಲೇಜು ಕರ್ನಾಟಕ ಸಂಘ:** ಟಿ. ಎಸ್. ವೆಂಕಣ್ಣಯ್ಯನವರೂ ಎ. ಆರ್. ಕೃಷ್ಣಶಾಸ್ತ್ರಿಗಳೂ ಕನ್ನಡದ ಅಶ್ವಿನೀ ದೇವತೆಗಳು ಎಂದು ಪ್ರಸಿದ್ಧರಷ್ಟೆ. ಸಂಘಸೇವೆಯಲ್ಲೂ ಇಬ್ಬರದ್ದೂ ಅವಳಿಯೋಗಿ. ಎ. ಆರ್. ಕೃಷ್ಣಶಾಸ್ತ್ರಿಗಳು ಮೈಸೂರಿಗೆ ವರ್ಗವಾದಾಗ, ವೆಂಕಣ್ಣಯ್ಯನವರು ಸೆಂಟ್ರಲ್ ಕಾಲೇಜು ಸಂಘದ ಉಪಾಧ್ಯಕ್ಷರಾಗಿ ಕೆಲವರ್ಷ ದುಡಿದರು. ಅವರು 1926-27ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿ ನೇಮಕಗೊಂಡ ಮೇಲೆ, ಅಲ್ಲೊಂದು ಕರ್ಣಾಟಕ ಸಂಘವನ್ನು ಹುಟ್ಟುಹಾಕಿದರು. ಆಗ ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಅಧ್ಯಕ್ಷರಾಗಿದ್ದ ಬಿ. ಎಂ. ಶ್ರೀಕಂಠಯ್ಯನವರು ಈ ಸಂಘಕ್ಕೂ ಅಧ್ಯಕ್ಷರಾದರಲ್ಲದೆ ತಾವು ನಿವೃತ್ತರಾಗುವವರೆಗೂ ಎರಡೂ ಸಂಘಗಳ ಅಧ್ಯಕ್ಷರಾಗಿದ್ದರು. ಸಂಘ ಪ್ರಾರಂಭವಾದ ಮಾರನೆಯ ವರ್ಷವೇ ಕಿರಿಯ ಕಾಣಿಕೆ-ವಿದ್ಯಾರ್ಥಿಗಳಿಂದ ರಚಿತವಾದ ಕವನಗಳ ಸಂಕಲನ-ಪ್ರಕಟವಾಯಿತು. 1930ರಲ್ಲಿ ಅದೇ ಮಾದರಿಯ ತಳಿರು ಎಂಬ ಹೊತ್ತಗೆ ಪ್ರಕಟವಾಯಿತು. ಇಂಗ್ಲಿಷ್ ಗೀತೆಗಳು ಸಂಕಲನದಿಂದ ಸ್ಫೂರ್ತಿಗೊಂಡು ಹೊಸಕವಿತೆಯ ಸೃಷ್ಟಿಗೆ ತೊಡಗಿದ್ದ ತರುಣ

ಕವಿಗಳು ಇವೆರಡರ ಮೂಲಕ ಬೆಳಕಿಗೆ ಬಂದರು. ಅವರ ಪೈಕಿ ಕಾವ್ಯ ರಚನೆಯನ್ನು ಮುಂದುವರಿಸಿಕೊಂಡು ಬಂದವರು–ಕೆ. ವಿ. ಪುಟ್ಟಪ್ಪ (ಕುವೆಂಪು), ಪು. ತಿ. ನರಸಿಂಹಾಚಾರ್, ಜಿ. ಪಿ. ರಾಜರತ್ನಂ, ರಾಘವ (ಎಂ.ವಿ. ಸೀತಾರಾಮಯ್ಯ) ಮತ್ತು ದಿನಕರ ದೇಸಾಯಿ. 1930ರಲ್ಲಿ, ಪ್ರಸಿದ್ಧ ಕಾದಂಬರಿಕಾರ ಗಳಗನಾಥರನ್ನು ಸಂಘ ಬರಮಾಡಿಕೊಂಡು ಸನ್ಮಾನಿಸಿ ಬಿನ್ನವತ್ತಳೆ ಅರ್ಪಿಸಿತು. ಕುಮಾರವ್ಯಾಸ ಜಯಂತಿಯನ್ನು (1931) ನಡೆಸಿ ಮೂರು ದಿನ ಸುಪ್ರಸಿದ್ಧ ಗಮಕಿಗಳಿಂದ ಕನ್ನಡ ಭಾರತದ ಕಥಾ ಪ್ರಸಂಗಗಳನ್ನು ವಾಚನ ಮಾಡಿಸಿತು. ಈ ಉತ್ಸವದ ಸ್ಮಾರಕವಾಗಿ, 1940ರಲ್ಲಿ ಕುಮಾರವ್ಯಾಸ ಪ್ರಶಸ್ತಿ ಪ್ರಕಟವಾಯಿತು. ಆಷಾಢಭೂತಿ, ಸಾವಿನ ಸಮಸ್ಯೆ, ನಾಗಾನಂದ–ಇವು ಸಂಘದ ಇತರ ಪ್ರಕಟಣೆಗಳು. ಈ ಸಂಘದ ಕಾರ್ಯಪ್ರಮಾಣ ಚಿಕ್ಕದಾದರೂ ತನ್ನ ಹಿರಿಯ ಸೋದರ ಸಂಘದೊಂದಿಗೆ – ಮುಂದೆ ನಾಡಿನ ಕಾಲೇಜುಗಳಲ್ಲಿ ಶಾಲೆಗಳಲ್ಲಿ ಇತರ ಕಡೆಗಳಲ್ಲಿ ಅಸಂಖ್ಯಾತವಾಗಿ ಕರ್ನಾಟಕ ಸಂಘಗಳು ಸ್ಥಾಪನೆಗೊಳ್ಳಲು ಮಾರ್ಗದರ್ಶಕವಾಗಿ ಕೆಲಸಮಾಡಿತು.

**ಬೆಂಗಳೂರು ಸರ್ಕಾರಿ ಕಾಲೇಜಿನ ಕರ್ನಾಟಕ ಸಂಘ :** ಕಾಲೇಜಿನ ಕರ್ನಾಟಕ ಸಂಘಗಳು ಏನೆಲ್ಲ ಮಾಡಬಹುದು ಎಂಬುದಕ್ಕೆ ಈ ಸಂಘ ಇನ್ನೊಂದು ನಿದರ್ಶನ. 1959ರಲ್ಲಿ ಪ್ರಾರಂಭವಾದ ಈ ಸಂಘ ಅದ್ಭುತವಾಗಿ ಕೆಲಸಮಾಡಿದೆ. ಚೀಣೀ ಆಕ್ರಮಣ ಕಾಲದಲ್ಲಿ ಸಮರ ಸಮಯ ಕವಿಸಮ್ಮೇಳವೊಂದನ್ನು ಸಂಘ ನಡೆಸಿತು. ವಿದ್ಯಾರ್ಥಿ ಬರಹಗಳ ಪ್ರಕಟಣೆಯ ಜೊತೆಗೆ, ಎಂ. ವಿ. ಸೀತಾರಾಮಯ್ಯನವರಿಂದ ಸಂಪಾದಿತವಾದ ಕವಿರಾಜಮಾರ್ಗವನ್ನು ಪ್ರಕಟಿಸಿ ಸಂಪಾದಕರ ಸಂಭಾವನೆಯನ್ನೂ ತನ್ನ ಲಾಭಾಂಶವನ್ನೂ ಕೂಡಿಸಿ ಕನ್ನಡ ಎಂ. ಎ. ಪದವೀಧರರಿಗೆ ಚಿನ್ನದ ಪದಕವನ್ನು ಕೊಡಲೆಂದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದತ್ತಿಯನ್ನು ಇಟ್ಟಿತು.

1921ರಷ್ಟು ಹಿಂದೆಯೇ ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದ ಕೆ. ಪಿ. ಪುಟ್ಟಣ್ಣಶೆಟ್ಟರು 'ಪ್ರತಿಯೊಂದು ಊರಿನಲ್ಲಿಯೂ ಕರ್ನಾಟಕ ಸೇವಾ ಸಂಘಗಳು ಏರ್ಪಡಬೇಕು. ಅವೆಲ್ಲವೂ ಈ ಸಂಸ್ಥೆಗೆ (ಪರಿಷತ್ತಿಗೆ) ಶಾಖೆಗಳಾಗಬೇಕು' ಎಂದೂ ಪ್ರತಿಯೊಂದು ಊರಿನ ಪಾಠಶಾಲೆಯ ಅಧ್ಯಾಪಕರೂ ವಿದ್ಯಾರ್ಥಿಗಳೂ ಕೂಡಿ ಇಂಥ ಸಂಘಗಳನ್ನು ಕಟ್ಟಬೇಕೆಂದೂ ಹೇಳಿ ಕನ್ನಡದ ಅಭಿಮಾನಿಗಳೆಲ್ಲರ ಅಂತರಂಗದ ಅಪೇಕ್ಷೆಗೆ ನುಡಿಗೊಟ್ಟರು; ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಆದರ್ಶವನ್ನು ಮುಂದಿಟ್ಟರು.

1934ರಲ್ಲಿ ಡಿ.ವಿ. ಗುಂಡಪ್ಪನವರು ಪರಿಷತ್ತಿನ ಉಪಾಧ್ಯಕ್ಷರಾದಾಗ, ಕರ್ನಾಟಕ ಸಂಘಗಳನ್ನು ಪರಿಷತ್ತಿನ ಅಂಗಸಂಸ್ಥೆಗಳಾಗಿ ಸೇರಿಸಿಕೊಳ್ಳಲು ನಿಯಮಾವಳಿಯೊಂದು ಸಿದ್ಧವಾಯಿತು. 1936ರಲ್ಲಿ, ಪರಿಷತ್ತಿನ ವಸಂತಸಾಹಿತ್ಯೋತ್ಸವದ ಸಂದರ್ಭದಲ್ಲಿ ಸಂಘಗಳ ಸಮ್ಮೇಳನ ನಡೆಯಿತು. ಆ ವೇಳೆಗಾಗಲೇ ಶಿವಮೊಗ್ಗ, ಚಿಕ್ಕಮಗಳೂರು, ಮಧುಗಿರಿ, ತಿಪಟೂರು, ಮೈಸೂರು, ಚನ್ನರಾಯಪಟ್ಟಣ, ಮಂಡ್ಯ, ಕೋಲಾರ, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಹೈದರಾಬಾದು, ಬೆಳಗಾಂವಿ, ಕೊಪ್ಪಳ, ಕೊಲ್ಹಾಪುರ, ಕುಮಟ, ಕಾಶೀ ವಿಶ್ವವಿದ್ಯಾನಿಲಯ ಮುಂತಾದ ನಾನಾ ನಗರಗಳಲ್ಲೂ ನಾಡಿನ ಅನೇಕ ಶಾಲೆ ಕಾಲೇಜುಗಳಲ್ಲೂ ಸಂಘಗಳು ಸ್ಥಾಪನೆಯಾಗಿದ್ದವು. 1936ರಲ್ಲಿ 30 ಸಂಘಗಳು ಪರಿಷತ್ತಿಗೆ ಅಂಗಸಂಸ್ಥೆಗಳಾಗಿ ಸೇರಿದ್ದುವು.

ಪರಿಷತ್ತು ಏರ್ಪಡಿಸಿದ್ದ ಪ್ರಥಮ ಸಂಘ ಸಮ್ಮೇಳನದಲ್ಲಿ ಒಟ್ಟು 23 ಸಂಘಗಳಿಂದ 25 ಪ್ರತಿನಿಧಿಗಳು ಬಂದು ಭಾಗವಹಿಸಿದ್ದರು. ಎಲ್ಲ ಕರ್ನಾಟಕ ಸಂಘಗಳೂ ಪರಿಷತ್ತಿನೊಡನೆ ಕಲೆತು ಒಮ್ಮುಖವಾಗಿ ಹೇಗೆ ಕೆಲಸ ಮಾಡಬಹುದು. ಅನುಸರಿಸಬೇಕಾದ ಕಾರ್ಯಕ್ರಮಗಳು ಮತ್ತು ಮಾಡಬೇಕಾದ ಕೆಲಸಗಳು ಯಾವುವು ಎಂಬ ವಿಚಾರಗಳನ್ನು ಕುರಿತ 15 ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಅಂದಿನಿಂದ ಈವರೆಗೆ, ವಿಶೇಷವಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದು ಕರ್ನಾಟಕ ರಾಜ್ಯ ನಿರ್ಮಾಣವಾದ ಮೇಲೆ, ಕರ್ನಾಟಕ ಸಂಘಗಳ ಸಂಖ್ಯೆ ಇಮ್ಮಡಿ ಮುಮ್ಮಡಿಯಾಗಿ ಬೆಳೆದಿದೆ. ಬೆಂಗಳೂರು ನಗರವೊಂದರಲ್ಲೇ ಸುಮಾರು 15–20 ಸಂಘಗಳು ಗಣ್ಯವಾಗಿ ಕೆಲಸಮಾಡುತ್ತಿವೆ.

ಸ್ಥಳೀಯ ಸಂಘವೊಂದು ಎಷ್ಟರಮಟ್ಟಿಗೆ ಕೆಲಸಮಾಡಬಹುದು ಎಂಬುದಕ್ಕೆ ಶಿವಮೊಗ್ಗದ ಕರ್ನಾಟಕ ಸಂಘವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

**ಶಿವಮೊಗ್ಗ ಕರ್ನಾಟಕ ಸಂಘ :** ಎ. ಸೀತಾರಾಂ ಮತ್ತು ಬಿ. ಆರ್. ಪುಟ್ಟ ನಂಜಪ್ಪ ಇವರ ಉತ್ಸಾಹದ ಫಲವಾಗಿ, ಆ ವೇಳೆಗಾಗಲೇ ಕನ್ನಡದ ಶ್ರೇಷ್ಠಕವಿ ಎಂದು ಹೆಸರಾಗಿದ್ದ ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ 1930ರ ನವೆಂಬರ್ 8ರಂದು ಸ್ಥಾಪಿತವಾದ ಶಿವಮೊಗ್ಗದ ಕರ್ನಾಟಕ ಸಂಘ ಈಗ 80 ವರ್ಷ ಪ್ರಾಯದ ಸಂಸ್ಥೆ. 1934ರಲ್ಲಿ ಈ ಸಂಘ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘವನ್ನು ಬರಮಾಡಿಕೊಂಡು ಒಂದು ಉಪನ್ಯಾಸ ಸಪ್ತಾಹವನ್ನು ಏರ್ಪಾಡು ಮಾಡಿತ್ತು. ಈ ವಿಶೇಷ ಕಾರ್ಯಕ್ರಮದ ಬಗೆಗೆ ಬರೆಯುತ್ತ ಪ್ರಬುದ್ಧ ಕರ್ನಾಟಕ ತನ್ನ 57ನೆಯ ಸಂಚಿಕೆಯಲ್ಲಿ (1934ರ 15–3ನೆಯ ಸಂಚಿಕೆ) ವ್ಯಕ್ತಪಡಿಸಿದ ಪ್ರಶಂಸೆಯ ಮಾತುಗಳು ಉಲ್ಲೇಖನಾರ್ಹ: 'ಶಿವಮೊಗ್ಗದ ಕರ್ನಾಟಕ ಸಂಘ ನಮ್ಮ ನಾಡಿನ ಒಂದು ಅತ್ಯಂತ ಪ್ರಬಲವಾದ ಸಂಘ. ಅದು ಹುಟ್ಟಿ ಮೂರೇ ವರ್ಷಗಳಾಗಿದ್ದರೂ ಅದರ ಕಾರ್ಯ ವಿಸ್ತಾರವೂ ಗ್ರಂಥ ಪ್ರಕಟಣೆಯೂ ಧನ ಸಂಪತ್ತಿಯೂ ಅದಕ್ಕೆ ಕರ್ನಾಟಕ ಸಂಘಗಳಲ್ಲಿ ಅಗ್ರಸ್ಥಾನವನ್ನು ಗಳಿಸುವಂತಿವೆ. ಇವು ಕೇವಲ ಅಭಿಮಾನದ ಇಲ್ಲವೆ ಅತಿಶಯೋಕ್ತಿಯ ಮಾತಲ್ಲ ಎಂಬುದು, ಸಂಘ ಈವರೆಗೆ ನಡೆಸಿರುವ ವೈವಿಧ್ಯಪೂರ್ಣವೂ ವಿಪುಲವೂ ಆದ ಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯದಿಂದ ಮಾತ್ರ ವೇದ್ಯವಾಗತಕ್ಕದು'.

ಸಂಘ ನಡೆಸಿರುವ ಕಾರ್ಯಕ್ರಮಗಳನ್ನು (ಅವು ಸಂಘದ ಮೂಲ ಉದ್ದೇಶಗಳಿಗೆ ಅನುಗುಣವಾಗಿಯೂ ಇರುವುದರಿಂದ) ಹೀಗೆ ವರ್ಗೀಕರಿಸಬಹುದು. (1) ಕವಿಗಳನ್ನೂ ಲೇಖಕರನ್ನೂ ಬರಮಾಡಿಕೊಂಡು ಅವರ ಕೈಯಿಂದ ಕನ್ನಡ ಸಮಕಾಲೀನ ಸಾಹಿತ್ಯದ ಪರಿಚಯ ಮಾಡಿಸಿಕೊಡುವುದು; (2) ಆಧುನಿಕ ನಾಟಕಗಳ ಅಭಿನಯ ; (3) ಕನ್ನಡ ಪ್ರಾಚೀನ ಸಾಹಿತ್ಯದ ವಿಮರ್ಶಾತ್ಮಕ ಪರಿಚಯ; (4) ವಿದ್ಯಾರ್ಥಿಗಳಿಗಾಗಿ ಕಾವ್ಯವಾಚನ ಸ್ಪರ್ಧೆ ; (5) ಕರ್ನಾಟಕದ ಕವಿಗಳ, ಮಹಾಪುರುಷರ ಜಯಂತ್ಯುತ್ಸವಗಳು ; (6) ಸಂಸ್ಕೃತಕಾವ್ಯಗಳ ಪರಿಚಯ ಭಾಷಣಗಳು; (7) ಆಂಗ್ಲ ಮತ್ತು ಇತರ ಭಾಷಾ ಸಾಹಿತ್ಯಗಳ ಪರಿಚಯಾತ್ಮಕ ಭಾಷಣಗಳು ; (8) ಪುಸ್ತಕಭಂಡಾರ ಸ್ಥಾಪನೆ.

ಉಭಯ ಭಾಷಾವಿದ್ವಾಂಸರಾಗಿದ್ದ ದಿವಂಗತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು ಸಂಘದ ಅಧ್ಯಕ್ಷರಾಗಿದ್ದುದು ಸ್ಮರಣೀಯ. ದೇಶಪಾಂಡೆ ಗುರುರಾಯರೂ (ಇವರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘಕ್ಕೂ ಪ್ರಥಮ ಕಾರ್ಯದರ್ಶಿಗಳಾಗಿದ್ದುದು ಗಮನಾರ್ಹ) ಕೂಡಲಿ ಚಿದಂಬರಂ (ಈಗಿನ ಕಾವ್ಯಾಲಯ ಪ್ರಕಾಶನದ ಮಾಲೀಕರು) ಅವರೂ ಸಂಘದ ಪ್ರಥಮ ಕಾರ್ಯದರ್ಶಿಗಳು.

ಮೇಲ್ಕಂಡ ಕಾರ್ಯಕ್ರಮಗಳ ಪ್ರಕಾರ ನಡೆದ ಉಪನ್ಯಾಸಗಳು, ಕಾವ್ಯವಾಚನಗಳು, ನಾಟಕಪ್ರದರ್ಶನಗಳು ಮುಂತಾದವನ್ನು ಹೆಸರಿಸುತ್ತ ಹೋದರೆ ದೊಡ್ಡ ಪಟ್ಟಿಯಾಗುವುದು. ಆದರೆ, ಸಂಘ ಪ್ರಕಟಿಸಿರುವ ಗ್ರಂಥಮಾಲೆಯನ್ನೂ ಒಂದೆರಡು ವಿಶೇಷ ಸಂಗತಿಗಳನ್ನೂ ತಿಳಿಸಿದ್ದರೆ, ಇತರ ಸಂಘಗಳಿಗೆ ಸ್ಫೂರ್ತಿಕೊಡುವಂಥ ಅಂಶಗಳನ್ನೇ ಮರೆತಂತಾಗುವುದು.

ಸಂಘ ಈವರೆಗೆ ಪ್ರಕಟಿಸಿರುವ ಗ್ರಂಥಗಳು ಇವು : ಮೊದಲ ಮೂರು ವರ್ಷಗಳಲ್ಲಿ ಕೆ. ವಿ. ಪುಟ್ಟಪ್ಪನವರ ಸಾಹಿತ್ಯ ಪ್ರಚಾರ, ರಕ್ತಾಕ್ಷಿ, ಪಾಂಚಜನ್ಯ ; ಜಿ. ಪಿ. ರಾಜರತ್ನಂ ಅವರ ಗಂಡುಗೊಡಲಿ, ಹನಿಗಳು. ಆಮೇಲೆ, ಬೇರೆ ಬೇರೆ ವರ್ಷಗಳಲ್ಲಿ–ಆನಂದರ ಮಾಟಗಾತಿ ; ಪುಟ್ಟಪ್ಪನವರ ನವಿಲು; ನಾ. ಕಸ್ತೂರಿಯವರ ಪಾತಾಳದಲ್ಲಿ ಪಾಪಚ್ಚಿ (ಆಲಿಸ್ ಇನ್ ವಂಡರ್‌ಲ್ಯಾಂಡ್) ಎಂಬ ಸಚಿತ್ರ ಮಕ್ಕಳ ಪುಸ್ತಕ; ಟಿ. ಎಸ್. ವೆಂಕಣ್ಣಯ್ಯ ಮತ್ತು ಡಿ. ಎಲ್. ನರಸಿಂಹಾಚಾರ್ಯರು ಸಹಕರಿಸಿ ಸಂಪಾದನೆ ಮಾಡಿದ ರಾಘವಾಂಕನ ಸಿದ್ಧರಾಮ ಚರಿತೆ; ರಾಜರತ್ನಂ ಅವರ ನರಕದಲ್ಲಿ ನ್ಯಾಯ; ಎ. ಎನ್. ಮೂರ್ತಿರಾಯರ ಹಗಲುಗನಸುಗಳು; ಡಿ. ಎಲ್. ನರಸಿಂಹಾಚಾರ್ಯರಿಂದ ಸಂಪಾದಿತವಾದ ಶಾಂತಿನಾಥನ ಸುಕುಮಾರ ಚರಿತೆ; ಎಸ್. ವಿ. ಕೃಷ್ಣಮೂರ್ತಿರಾಯರ ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ–ಇತ್ಯಾದಿ.

ಸಂಘ 1950ರಲ್ಲಿ ಪರಿಷತ್ತಿನ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಿತು. ಕವಿ ದ. ರಾ. ಬೇಂದ್ರೆ ಆ ವರ್ಷದ ಸಮ್ಮೇಳನಾಧ್ಯಕ್ಷರು.

ಶಿವಮೊಗ್ಗದ ಪ್ರಸಿದ್ಧ ಮಂಡಿವರ್ತಕರಾದ ಹಸೂಡಿ ವೆಂಕಟಶಾಸ್ತ್ರಿಗಳು 40,000 ರೂಪಾಯಿ ಮುಟ್ಟಿಸಿ, ಸಂಘಕ್ಕೆ ಭವ್ಯ ಭವನವನ್ನು ಕಟ್ಟಿಸಿಕೊಟ್ಟರು. 11ನೆಯ ಫೆಬ್ರವರಿ 1943ರಲ್ಲಿ ಮೈಸೂರಿನ ಅಂದಿನ ಶ್ರೀಮನ್ಮಹಾರಾಜರವರಾದ ಜಯಚಾಮರಾಜೇಂದ್ರ ಒಡೆಯರವರು ಭವನದ ಉದ್ಘಾಟನೆ ಮಾಡಿದರು. ಪ್ರಾಯಶಃ ಕರ್ನಾಟಕ ಸಂಘಗಳಲ್ಲೆಲ್ಲ ಶಿವಮೊಗ್ಗ ಕರ್ನಾಟಕ ಸಂಘವೇ ಸ್ವಂತ ಕಟ್ಟಡವನ್ನು ಹೊಂದಿರುವುದರಲ್ಲಿ ಮೊದಲನೆಯದು ಎಂದು ಕಾಣುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಕನ್ನಡಿಗರು ವಿಶೇಷವಾಗಿ ಮದರಾಸು, ಬೊಂಬಾಯಿ, ಕಲ್ಕತ್ತ ಈ ಮೂರು ನಗರಗಳಲ್ಲಿ ಮಾತ್ರ ನೆಲಸಿದ್ದರು. ಸ್ವಾತಂತ್ರ್ಯ ಬಂದಮೇಲೆ, ಉದ್ಯೋಗಕ್ಷೇತ್ರ ವಿಸ್ತಾರವಾಗಿ ಕನ್ನಡಿಗರು ಭಾರತದ ಪ್ರಮುಖ ನಗರಗಳಲ್ಲೆಲ್ಲ ಹರಡಿಕೊಂಡಿದ್ದಾರೆ. ಹತ್ತು ಜನ ಕನ್ನಡಿಗರಿರುವ ಕಡೆ ಒಂದು ಕನ್ನಡ ಸಂಘ ಹುಟ್ಟಿಕೊಂಡಿದೆ. ಅವೆಲ್ಲ ಪತ್ರಿಕೆಗಳ ಮೂಲಕ ಪ್ರಖ್ಯಾತವಾಗಿಲ್ಲದಿರಬಹುದು. ಆದರೆ ಅವು ಹೊರನಾಡ ಕನ್ನಡಿಗರ ಕನ್ನಡತನವನ್ನು ಉಳಿಸಿ ಬೆಳೆಸುವ ಹೊಣೆ ಹೊತ್ತಿರುವುದಲ್ಲದೆ, ಪರಪ್ರಾಂತಗಳಲ್ಲಿ ಕನ್ನಡಿಗರ ಸಾಂಸ್ಕೃತಿಕ ರಾಯಭಾರಿಗಳಾಗಿವೆ. ಈ ಹೊರನಾಡ ಕರ್ನಾಟಕ ಸಂಘಗಳು ಮೇಲಿನ ಮೂರು ಸಂಘಗಳ ಕಾರ್ಯಸಮೀಕ್ಷೆಯಲ್ಲಿ ಉಲ್ಲೇಖಿಸಿದ ಕೆಲಸವನ್ನೇ ಮಾಡುತ್ತಿವೆ. ಈ ಸಂಘಗಳ ಪೈಕಿ ಬೊಂಬಾಯಿ ಕರ್ನಾಟಕ ಸಂಘ (1933), ಮುಂಬಯಿಯ ಕನ್ನಡ ಸಂಘ (1936), ನಾಗಪುರದ ಕರ್ನಾಟಕ ಸಂಘ (1944), ರಂಗಂಪೇಟೆಯ ಕನ್ನಡಸಾಹಿತ್ಯ ಸಂಘ (1943), ದೆಹಲಿ ಕರ್ನಾಟಕ ಸಂಘ ಇವು ಕೆಲವು ಇಂದಿಗೂ ಕೆಲಸಮಾಡಿಕೊಂಡು ಹೋಗುತ್ತಿವೆ. ಸಿಕಂದರಾಬಾದಿನ ಕನ್ನಡ ಮೈತ್ರೀ ಸಂಘ (1956), ಬೊಂಬಾಯಿಯ ಕರ್ನಾಟಕ ಸಂಘ, ನಾಗಪುರದ ಕರ್ನಾಟಕ ಸಂಘ–ಕರ್ನಾಟಕ ಸಂಘ ಇವು ತಮ್ಮದೇ ಆದ ಸ್ವಂತ ಭವನಗಳನ್ನು ಕಟ್ಟಿಕೊಂಡಿವೆ. ಇನ್ನು ಕೆಲವು ಆ ಪ್ರಯತ್ನದಲ್ಲಿವೆ.

ಪ್ರಪಂಚದ ಯಾವುದೇ ಭಾಷಾಲೋಕದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಭಾಷಾ ಸಾಹಿತ್ಯ ಪ್ರಚಾರಕ್ಕಾಗಿ ಸಂಘಗಳು ಹುಟ್ಟಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಈ ಒಂದು

ವಿಷಯ ಕನ್ನಡನಾಡು ಈ ಹಿಂದೆ ಅನುಭವಿಸಿದ ಇನ್ನೂ ಅನುಭವಿಸುತ್ತಿರುವ ಅನ್ಯಾಯ ಕ್ಲೇಶ ಪರಂಪರೆಗಳ ದ್ಯೋತಕವಾಗಿರುವುದಲ್ಲದೆ. ಭವ್ಯಭವಿಷ್ಯದ ಸೂಚಕವೂ ಆಗಿದೆ.

ಕರ್ನಾಟಕ ಮತ್ತು ಕನ್ನಡಕ್ಕೆ ಸಂಬಂಧಿಸಿದ ಸಂಘಗಳು ಇಂದು ಅಸಂಖ್ಯ ಸಂಖ್ಯೆಯಲ್ಲಿವೆ. ಕನ್ನಡ ಸಾಹಿತ್ಯ ಪರಿಷತ್ತು **(ನೋಡಿ)** ಇಡೀ ರಾಜ್ಯಾದ್ಯಂತ ಹೋಬಳಿ ಮಟ್ಟದವರೆಗೂ ತನ್ನ ಶಾಖಾ ಸಂಸ್ಥೆಗಳನ್ನು ಹೊಂದಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಪೋಷಣೆ ಮತ್ತು ಪ್ರಸಾರಕ್ಕೆ ಕಂಕಣಬದ್ಧವಾಗಿದೆ. ಇದರಲ್ಲದೆ ಕರ್ನಾಟಕ ಹಿತರಕ್ಷಣಾ ಸಮಿತಿ; ಕರ್ನಾಟಕ ರಕ್ಷಣಾ ವೇದಿಕೆ ಮೊದಲಾದ ಸಂಘಗಳು ಶಾಖೋಪಶಾಖೆಗಳಾಗಿ ತಮ್ಮ ಧ್ಯೇಯಧೋರಣೆಗಳಿಗನುಸಾರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸಿಕೊಂಡು ಬರುತ್ತಿವೆ. ಸರ್ಕಾರವೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರಗಳನ್ನು ರಚಿಸಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಹಿತಕಾಯುತ್ತಿದೆ. ಕನ್ನಡ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಇಂದು ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಒಂದಾಗಿ ಪ್ರತ್ಯೇಕ ಸಚಿವ ಖಾತೆಯನ್ನು ಹೊಂದಿದೆ. (ಎಂ.ವಿ.ಎಸ್.)

**ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗಗಳು :** ಹಿಂದುಳಿದ ವರ್ಗಗಳೆಂದು ಪರಿಗಣಿತವಾದ ಜಾತಿಗಳು ಮತ್ತು ಸಮುದಾಯಗಳ ಉನ್ನತಿಗಾಗಿ ಕರ್ನಾಟಕ ಸರ್ಕಾರ ಕಾಲದಿಂದ ಕಾಲಕ್ಕೆ ಅನೇಕ ಆಯೋಗಗಳನ್ನು ರಚಿಸಿದೆ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಹಿಂದುಳಿದ ವರ್ಗಗಳೆಂಬ ಪರಿಕಲ್ಪನೆ ಸಾರ್ವಜನಿಕ ವಲಯದಲ್ಲಿ ಕೇಳಿ ಬಂತು. ಅದುವರೆಗೂ ಬ್ರಿಟಿಷರ ನೇರ ಅಧೀನದ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಸರ್ಕಾರಿ ನೌಕರಿಗಳನ್ನು ವಿವೇಚನೆಯ ಮತ್ತು ಅರ್ಹತೆಯ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿತ್ತು. ಇದರಲ್ಲಿ ಶೇ. ಸು.75ರಷ್ಟು ಭಾಗ ಬ್ರಾಹ್ಮಣರೇ ಇರುತ್ತಿದ್ದರು. ಈ ಸಮುದಾಯ ವಿದ್ಯೆಯಲ್ಲಿ ಅದರಲ್ಲೂ ಇಂಗ್ಲಿಷ್ ವಿದ್ಯಾಭ್ಯಾಸದಲ್ಲಿ ಮುಂದಿರುತ್ತಿತ್ತು. ಉಳಿದಂತೆ ಐರೋಪ್ಯ ಅಧಿಕಾರಿಗಳು ಮತ್ತು ಅರಸು ಮನೆತನ ಮೂಲದವರು ಆಡಳಿತದಲ್ಲಿದ್ದರು. ಬ್ರಾಹ್ಮಣ ವರ್ಗ ಆಡಳಿತದ ಎಲ್ಲ ಶಾಖೆಗಳಲ್ಲಿ ಬೇರೂರಿದ್ದಲ್ಲದೆ ರಾಜಕೀಯವಾಗಿಯೂ ಮುಂಚೂಣಿಗೆ ಬಂದಿತು. ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲೂ ಬ್ರಾಹ್ಮಣರು ಮುಂದಾಳುಗಳಾಗಿದ್ದರು. ಇದನ್ನು ಗಮನಿಸಿದ ಬ್ರಿಟಿಷ್ ಪ್ರಭುತ್ವ ಸಮಾಜವನ್ನು ಹಿಂದು–ಮುಸ್ಲಿಮ್ ಎಂದು ಬೇರ್ಪಡಿಸಿದ್ದಂತೆ ಬ್ರಿಟಿಷರ ಆಳಿಕೆಯನ್ನು ಪ್ರಶ್ನಿಸುವ ಬ್ರಾಹ್ಮಣರನ್ನು ಇತರ ಬಹುಸಂಖ್ಯಾತ ಸಮುದಾಯಗಳಿಂದ ಬೇರ್ಪಡಿಸಿದರೆ ಸ್ವಾತಂತ್ರ್ಯ ಚಳವಳಿಯನ್ನು ಸಮರ್ಥವಾಗಿ ಹತ್ತಿಕ್ಕಬಹುದೆಂಬ ಚಿಂತನೆ ಮಾಡಿತು. ಜೊತೆಗೆ ಆಗತಾನೇ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿದ್ದ ಮುಸ್ಲಿಮರೂ ಸೇರಿದಂತೆ ಹಲವಾರು ಹಿಂದುಳಿದ ವರ್ಗಗಳ ವಿದ್ಯಾವಂತ ಯುವಕರು ಬ್ರಾಹ್ಮಣರನ್ನು ಸ್ಪರ್ಧೆಯಲ್ಲಿ ಸರಿಗಟ್ಟಲು ಸಾಧ್ಯವಾಗದೆ ಚಡಪಡಿಸುತ್ತಿದ್ದರು. ಈ ಅತೃಪ್ತಿ ಪತ್ರಿಕೆಗಳಲ್ಲಿ ಸಾರ್ವಜನಿಕ ಹಾಗೂ ಖಾಸಗೀ ಸಭೆಗಳ ಮೂಲಕ ಪ್ರಕಟವಾಗತೊಡಗಿತು. ಮಹಾರಾಷ್ಟ್ರದಲ್ಲಿ ಜ್ಯೋತಿಭಾಫುಲೆ ಈ ಚಳವಳಿಗೆ ಒಂದು ರೂಪುಕೊಟ್ಟರೆ, ಮದರಾಸಿನಲ್ಲಿ ಪೆರಿಯಾರ್ ಅವರು ಇದನ್ನು ಸಂಘಟಿಸಿದರು. ಅಲ್ಲಿ ಜಸ್ಟೀಸ್ ಪಾರ್ಟಿ ಎಂಬ ಒಂದು ರಾಜಕೀಯ ಸಂಘಟನೆ ಪ್ರಾರಂಭವಾಗಿ ಅದು ಬ್ರಾಹ್ಮಣೇತರ ಹಿಂದುಳಿದವರಿಗೆ ರಾಜಕೀಯ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವಂತೆ ಒತ್ತಾಯಿಸಿತು. ಅಲ್ಲಿ ಕೆಲಸ ಮಾಡಿ ಮೈಸೂರು ಸಂಸ್ಥಾನದ ಸೇವೆಗೆ ಸೇರಿದ ಸಿ.ಆರ್.ರೆಡ್ಡಿ ಮೊದಲಾದ ಹಿಂದುಳಿದ ವರ್ಗದ ಅಧಿಕಾರಿಗಳು ಮೈಸೂರಿನಲ್ಲಿ ಅದಕ್ಕೊಂದು ಸಂಸ್ಥಾರೂಪವನ್ನು ನೀಡಲು ಶ್ರಮಿಸಿದರು. ಒಕ್ಕಲಿಗ ಜನಾಂಗದ ಕೆ.ಎಚ್.ರಾಮಯ್ಯನವರು ಇದೇ ಕಾಲದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿದ್ದರು. ಎಂ.ಬಸವಯ್ಯ, ಎಚ್.ಚನ್ನಯ್ಯ, ಗುಲಾಮ್ ಅಹಮ್ಮದ್, ಕಲಾಮಿ ಮೊದಲಾದವರು ಪ್ರಜಾಮಿತ್ರ ಮಂಡಳಿ ಎಂಬ ಪ್ರಥಮ ಹಿಂದುಳಿದವರ ರಾಜಕೀಯ ಸಂಘಟನೆ ಅಸ್ತಿತ್ವಕ್ಕೆ ಬರಲು ಕಾರಣರಾದರು. 1918ರ ಫೆಬ್ರವರಿಯಲ್ಲಿ ಈ ನಿಯೋಗ ಮಹಾರಾಜರನ್ನು ಭೇಟಿ ಮಾಡಿ ತಮ್ಮ ಅಹವಾಲನ್ನು ಸಲ್ಲಿಸಿತು.

**ಲೆಸ್ಲಿ ಮಿಲ್ಲರ್ ಸಮಿತಿ :** ಹಿಂದುಳಿದ ವರ್ಗದ ಪ್ರತಿನಿಧಿಗಳು ಸರ್ಕಾರಿ ಉದ್ಯೋಗಗಳು, ಶಿಕ್ಷಣ ಪ್ರವೇಶ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ತಮ್ಮ ಸಮುದಾಯಗಳಿಗೆ ಮೀಸಲಾತಿ ಇರಬೇಕೆಂದು ಕೋರಿ ಒತ್ತಾಯಿಸಿದ್ದರು. ಯುವರಾಜ ನರಸಿಂಹರಾಜ ಒಡೆಯರ್ ಈ ಬೇಡಿಕೆ ಬಗ್ಗೆ ಸಹಾನುಭೂತಿ ಉಳ್ಳವರಾಗಿದ್ದರು. ಇದರ ಫಲವಾಗಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಮುಖ್ಯ ನ್ಯಾಯಾಧೀಶರಾಗಿದ್ದ ಲೆಸ್ಲಿ ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಬ್ರಾಹ್ಮಣೇತರ ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ಅವರ ಏಳಿಗೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಿದರು. ಈ ಅವಧಿಯಲ್ಲಿ ಎಂ.ವಿಶ್ವೇಶ್ವರಯ್ಯನವರು **(ನೋಡಿ– ವಿಶ್ವೇಶ್ವರಯ್ಯ ಮೋಕ್ಷಗುಂಡಂ)** ದಿವಾನರಾಗಿದ್ದರು. ಅವರು ಮೈಸೂರು ರಾಜ್ಯ ಸರ್ವತೋಮುಖ ಪ್ರಗತಿ ಸಾಧಿಸಬೇಕೆಂದು ಶಿಕ್ಷಣ, ವ್ಯವಸಾಯ, ಕೈಗಾರಿಕೆ – ಈ ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಮುಂದುವರಿಯುತ್ತಿದ್ದರು. ಮೀಸಲಾತಿಯ ಬಗ್ಗೆ ತಮ್ಮದೇ ಆದ ನಿಲುವು ಹೊಂದಿದ್ದರು. ಹಿಂದುಳಿದ ವರ್ಗದವರನ್ನು ಉತ್ತಮ ಶಿಕ್ಷಣದ ಮೂಲಕ ಹೆಚ್ಚು ಅರ್ಹರನ್ನಾಗಿ ಮಾಡಿ ಸರ್ಕಾರಿ ಸೇವೆಗಳಲ್ಲಿ ನೇಮಿಸುವುದರಿಂದ ಆಡಳಿತದಲ್ಲಿ ದಕ್ಷತೆ ಹೆಚ್ಚುತ್ತದೆ ಹಾಗೂ ಮಿತವಾದ ಮೀಸಲಾತಿಯ ಮೂಲಕ ಹಂತಹಂತವಾಗಿ ಇದನ್ನು ಸಾಧಿಸಿದರೆ ಇತರರಲ್ಲಿ ಅತೃಪ್ತಿ ಕಡಿಮೆ ಪ್ರಮಾಣದಲ್ಲುಳಿದು ಸಾಮರಸ್ಯ ಸಾಧನೆಯೂ ಆಗುತ್ತದೆ ಎಂಬುದು ಅವರ ಖಚಿತ ನಿಲುವಾಗಿತ್ತು. ಆದರೆ ಮಹಾರಾಜರು ಬಹು ಜನಾಭಿಪ್ರಾಯದಂತೆ ಮಿಲ್ಲರ್ ಸಮಿತಿ ನೇಮಿಸಿದ್ದು, ಆ ಸಮಿತಿಗೆ ವಹಿಸಲಾದ ಕಾರ್ಯಸೂಚಿಗಳೂ ಮೊದಲಾದವುಗಳ ಬಗ್ಗೆ ವಿಶ್ವೇಶ್ವರಯ್ಯನವರಿಗೆ ಸಮಾಧಾನವಿರಲಿಲ್ಲ. ವಿಶ್ವೇಶ್ವರಯ್ಯನವರು ಈ ಕಾರಣಕ್ಕಾಗಿ ರಾಜೀನಾಮೆ ಕೊಟ್ಟರು ಎಂಬ ಮಾತು ಅಂದಿನ ದಿನಗಳಲ್ಲಿ ಹೆಚ್ಚಾಗಿ ಕೇಳಿಬಂದರೂ ಅವರಿಗೆ ರಾಜೀನಾಮೆ ನೀಡಲು ಇನ್ನೂ ಹಲವಾರು ರಾಜಕೀಯ ಒತ್ತಡಗಳು ಕಾರಣವಾಗಿದ್ದವು. 1918ರಲ್ಲಿ ರಚಿತವಾದ ಈ ಸಮಿತಿ 1919ರಲ್ಲಿ ತನ್ನ ಕಾರ್ಯವನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿತು.

ಲೆಸ್ಲಿ ಮಿಲ್ಲರ್ ಸಮಿತಿ ನೀಡಿದ ವರದಿಯಲ್ಲಿ ಮುಂದಿನ 7 ವರ್ಷಗಳಲ್ಲಿ ಸರ್ಕಾರದ ಸೇಕಡ 50 ರಷ್ಟು ಉನ್ನತ ಹುದ್ದೆಗಳು ಮತ್ತು ಮೂರನೆಯ ಎರಡು ಭಾಗ ಕೆಳದರ್ಜೆಯ ಹುದ್ದೆಗಳು ಹಿಂದುಳಿದ ವರ್ಗಗಳಿಗೆ ಪ್ರಾಪ್ತವಾಗಬೇಕೆಂಬ ಅಂಶ ಅಡಕವಾಗಿತ್ತು. ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ಮತ್ತು ವಿಶೇಷ ವಿದ್ಯಾರ್ಥಿವೇತನಗಳು ಈ ವರ್ಗಕ್ಕೆ ಲಭ್ಯವಾಗಬೇಕೆಂಬ ಸಲಹೆಗಳಿದ್ದವು. ಈ ವರದಿಯ ಕೆಲವು ಶಿಫಾರಸುಗಳು 1921ರಲ್ಲಿ ಸರ್ಕಾರಿ ಆದೇಶದ ಮೂಲಕ ಅನುಷ್ಠಾನಕ್ಕೆ ಬಂದವು. ಅಂದಿನಿಂದ ಇಂದಿನವರೆಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಆಯೋಗಗಳು ರಚನೆಯಾಗುತ್ತಲೇ ಬಂದಿವೆ.

1920ರ ದಶಕದ ಕೊನೆಯ ಹೊತ್ತಿಗೆ ಬ್ರಾಹ್ಮಣರನ್ನು ಬಿಟ್ಟು ಇತರ ಎಲ್ಲ ವರ್ಗಗಳಿಗೂ ನೀಡಿದ್ದ ಮೀಸಲಾತಿಯ ಅನುಷ್ಠಾನದಲ್ಲಿ ಪಕ್ಷಪಾತವಾಗಿರುವುದನ್ನು ಗುರುತಿಸಲಾಯಿತು. ಮುಸ್ಲಿಮರು, ವೀರಶೈವರು, ಜೈನರು ಮೊದಲಾದ, ಆಗ ಶಿಕ್ಷಣದಲ್ಲಿ ಸ್ವಲ್ಪ ಹೆಚ್ಚು ಮುಂದಿದ್ದ ಜಾತಿ ವರ್ಗಗಳು ಈ ಸೌಲಭ್ಯದ ಗರಿಷ್ಠ ಲಾಭ ಪಡೆದವೆಂಬ ದೂರು ಕೇಳಿಬರತೊಡಗಿತು. ಇದರ ಪರಿಣಾಮ ಎಷ್ಟಿತ್ತೆಂದರೆ 'ಪ್ರಜಾಮಿತ್ರ ಮಂಡಳಿಯಿಂದ ಸಿಡಿದುಹೋದ ಒಂದು ಗುಂಪು' ಪ್ರಜಾಪಕ್ಷವೆಂಬ ಹೊಸ ಪಕ್ಷವನ್ನೇ ಕಟ್ಟಿಕೊಂಡಿತು. ಆದರೆ ರಾಜಕೀಯ ಸಂಘಟನೆಗಾಗಿ ಅವೆರಡೂ 1935ರಲ್ಲಿ ಒಂದಾಗಿ 'ಪ್ರಜಾಸಂಯುಕ್ತ ಪಕ್ಷ' ಅಸ್ತಿತ್ವಕ್ಕೆ ಬಂದಿತು.

ಮೀಸಲಾತಿ ಕುರಿತ ವಾದವಿವಾದಗಳು ಮುಂದುವರಿಯುತ್ತಲೇ ಇದ್ದವು. ಆದರೆ ಸಮಾಜದಲ್ಲಿ ಹೊಸ ರಾಜಕೀಯ ಬೆಳೆವಣಿಗೆ ಕಾಣಿಸಿಕೊಂಡಿತು. ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬ್ರಾಹ್ಮಣರು ಉತ್ಸಾಹದಿಂದ ಭಾಗವಹಿಸುತ್ತಿದ್ದು ತಮಗಾದ ನಷ್ಟವನ್ನು ಮರೆತು ಇತರರೊಂದಿಗೆ ಬೆರೆಯತೊಡಗಿದರು. ಸ್ವಾತಂತ್ರ್ಯ ಚಳವಳಿ ಎಲ್ಲ ವರ್ಗದ ಜನರನ್ನೂ ಆಕರ್ಷಿಸಿತು. 1937ರಲ್ಲಿ 'ಪ್ರಜಾಸಂಯುಕ್ತ ಪಕ್ಷ' ಕಾಂಗ್ರೆಸ್ ಪಕ್ಷದಲ್ಲಿ ವಿಲೀನವಾಯಿತು. ಮುಂದೆ ಸ್ವಾತಂತ್ರ್ಯ ಚಳವಳಿಗೆ ಧುಮುಕಿದ ಎಲ್ಲ ವರ್ಗದ ಮುಖಂಡರು ಈ ಮೀಸಲಾತಿಯ ಅಸಮಾಧಾನಗಳನ್ನು ಮರೆತು ಭಾವೈಕ್ಯ ತೋರಿದರು. ಬಹುಕಾಲದವರೆಗೆ ಮಿಲ್ಲರ್ ಸಮಿತಿಯ ವರದಿಯ ಶಿಫಾರಸುಗಳೇ ಪ್ರಮುಖ ಮಾರ್ಗದರ್ಶಿ ಸೂತ್ರಗಳಾಗಿ ಮೀಸಲಾತಿ ವ್ಯವಸ್ಥೆ ಅನುಷ್ಠಾನದಲ್ಲಿತ್ತು.

**ನಾಗನ ಗೌಡ ಸಮಿತಿ:** ಸ್ವಾತಂತ್ರ್ಯಾನಂತರದ ಒಂದು ದಶಕ ಸಂವಿಧಾನದ ಅಳವಡಿಕೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಅನುಷ್ಠಾನ ಮತ್ತು ರಾಜ್ಯಗಳ ಪುನರ್ವಿಂಗಡಣೆಯ ಪ್ರಕ್ರಿಯೆಯಲ್ಲಿ ಕಳೆದುಹೋಯಿತು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳಿಗೆ ಸಂವಿಧಾನ ನೀಡಿದ ವಿಶೇಷ ಮೀಸಲಾತಿಯಿಂದ ಆ ವರ್ಗಗಳು ಮೀಸಲಾತಿ ದೃಷ್ಟಿಯಿಂದ ಹಿಂದುಳಿದ ವರ್ಗಗಳಿಂದ ಬೇರೆಯಾದವು. ಸರ್ಕಾರ ಕೈಗೊಂಡ ವಿವಿಧ ಅಭಿವೃದ್ಧಿ ಯೋಜನೆಗಳ ಫಲ ಎಲ್ಲ ಸಮುದಾಯಗಳಿಗೂ ಸಮಾನವಾಗಿ ಸಿಕ್ಕಲಿಲ್ಲ. ಭೂರಹಿತ ಕಾರ್ಮಿಕರು ಮತ್ತು ಚಿಕ್ಕ ಪುಟ್ಟ ಉಪಕಸಬುಗಳನ್ನು ಮಾಡುತ್ತಿದ್ದ ಜನರಿಗೆ ಸೂಕ್ತ ಪ್ರಾತಿನಿಧ್ಯವಿಲ್ಲವೆಂಬ ಕೂಗು ಕೇಳಿಬಂತು. ಈ ಹಿನ್ನೆಲೆಯಲ್ಲಿ 1960ರಲ್ಲಿ ಸರ್ಕಾರ ಡಾ.ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಅದಕ್ಕೆ ಹಿಂದುಳಿದ ವರ್ಗಗಳ ವಿಂಗಡಣೆ ಮತ್ತು ಮೀಸಲಾತಿಯ ಪ್ರಮಾಣವನ್ನು ನಿರ್ಧರಿಸಿ ವರದಿ ಸಲ್ಲಿಸುವಂತೆ ಕೋರಿತು.

ಈ ಸಮಿತಿ ಅಧ್ಯಯನ ಕೈಗೊಂಡು ಒಂದು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿತು. ಅದು ಒಟ್ಟು 399 ಜಾತಿಗಳನ್ನು ಮೀಸಲಾತಿಗೆ ಅರ್ಹವೆಂದು ಪರಿಗಣಿಸಿತ್ತು. ಈ ಜಾತಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಸೇಕಡ 45ರಷ್ಟು ಮತ್ತು ಶಿಕ್ಷಣ ಪ್ರವೇಶದಲ್ಲಿ ಸೇಕಡ 50ರಷ್ಟು ಮೀಸಲಾತಿ ಇರಬೇಕೆಂದು ಸಲಹೆಮಾಡಿತ್ತು. ಈ ಸಮಿತಿ ಲಿಂಗಾಯತ ಸಮುದಾಯವನ್ನು ಮೀಸಲಾತಿ ಪಟ್ಟಿಯಿಂದ ಕೈ ಬಿಟ್ಟಿತ್ತು. ವ್ಯವಸಾಯ ಮತ್ತು ಕೈಗಾರಿಕೆ ಅಭಿವೃದ್ಧಿ ಹಾಗೂ ಗೃಹಕೈಗಾರಿಕೆಗಳಿಗಾಗಿ ಹಿಂದುಳಿದ ವರ್ಗಗಳಿಗೆ ವಿಶೇಷ ಹಣಕಾಸು ನೆರವು ನೀಡಲೂ ಈ ಸಮಿತಿ ಶಿಫಾರಸು ಮಾಡಿತ್ತು. ಆದರೆ ಸರ್ಕಾರ ಈ ವರದಿಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿ 1962ರಲ್ಲಿ ಒಂದು ಆದೇಶ ಹೊರಡಿಸಿತು. ಅದರಲ್ಲಿ ಹಿಂದುಳಿದ ವರ್ಗಗಳು ಮತ್ತು ಅತಿ ಹಿಂದುಳಿದ ವರ್ಗಗಳು ಎಂಬ ಎರಡು

ಗುಂಪುಗಳನ್ನು ಮಾಡಲಾಗಿತ್ತು. ಈ ವರ್ಗಗಳಿಗೆ ಅನುಕ್ರಮವಾಗಿ ಶೇಕಡ 28ರಷ್ಟು ಮತ್ತು ಸೇಕಡ 22ರಷ್ಟು ಮೀಸಲಾತಿ ನೀಡಲಾಗಿತ್ತು. ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಅದು ಅನೂರ್ಜಿತಗೊಳಿಸಲ್ಪಟ್ಟಿತು. ಈ ತೀರ್ಪಿನ ಹಿನ್ನೆಲೆಯಲ್ಲಿ 1963ರಲ್ಲಿ ಹಾಗೂ 1968ರಲ್ಲಿ ಮಾರ್ಪಾಡಾದ ಸರ್ಕಾರಿ ಆದೇಶಗಳು ಹೊರಟವು. ಎಲ್ಲ ಹಿಂದುಳಿದ ವರ್ಗಗಳು ಸೇರಿದಂತೆ ಸೇಕಡ 30ರಷ್ಟು ಮೀಸಲಾತಿ ನೀಡಲಾಯಿತು. ಆದಾಯ ಮಿತಿಯನ್ನು 2400 ರೂಪಾಯಿಗಳೆಂದು ನಿಗದಿಗೊಳಿಸಲಾಯಿತು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಒಟ್ಟು ಸೇಕಡ 18ರಷ್ಟು ಮೀಸಲಾತಿ ಪ್ರತ್ಯೇಕವಾಗಿ ಮುಂದುವರಿಯಿತು. ಇದಕ್ಕೆ ಆದಾಯ ಮಿತಿ ಇರಲಿಲ್ಲ.

**ಹಾವನೂರು ಆಯೋಗ:** 1970ರ ದಶಕದ ಪ್ರಾರಂಭದ ಹೊತ್ತಿಗೆ ಕರ್ನಾಟಕದ ರಾಜಕೀಯ ವಿದ್ಯಮಾನಗಳು ಹೊಸ ತಿರುವನ್ನು ಪಡೆದವು. ಬಡವರ ಏಳ್ಗೆಗಾಗಿ ಶ್ರಮಿಸುವುದು ಸರ್ಕಾರದ ಮುಖ್ಯ ಹೊಣೆ ಎಂಬ ವಿಚಾರ ಪ್ರಚಲಿತ ಮೌಲ್ಯ ಪಡೆಯಿತು. ಆಗಿನ ಮುಖ್ಯ ಮಂತ್ರಿ ಡಿ.ದೇವರಾಜ ಅರಸು **(ನೋಡಿ– ದೇವರಾಜ ಅರಸು, ಡಿ)** ಅವರು ಹಿಂದುಳಿದ ವರ್ಗಗಳ ನಾಯಕರಾಗಿ ಪ್ರತಿಬಿಂಬಿಸಲ್ಪಟ್ಟರು. ಅವರು ಈ ವರ್ಗಗಳ ಬಗ್ಗೆ ವಿಶೇಷ ಕಾಳಜಿ ಹೊಂದಿ ಗೇಣಿ ಶಾಸನ, ಲೇವಾದೇವಿ ರದ್ದಾಯಿತಿ ಶಾಸನ, ಬಾಡಿಗೆ ನಿಯಂತ್ರಣ ಕಾಯಿದೆ ಮೊದಲಾದವನ್ನು ಜಾರಿಗೆ ತಂದರು. ಬಡವರಿಗೆ ಮನೆ, ನಿವೇಶನ ನೀಡುವ ಮತ್ತು ಉಪ ಕಸಬುಗಳಿಗೆ ಉತ್ತೇಜನ ನೀಡುವ ಹಲವಾರು ಯೋಜನೆಗಳು ಜಾರಿಗೆ ಬಂದವು. ಹಿಂದುಳಿದ ವರ್ಗಗಳ ಮೀಸಲಾತಿ ಮತ್ತಿತರ ವಿಚಾರಗಳನ್ನು ಪರಿಶೀಲಿಸಿ ಸಲಹೆ ಮಾಡಲು ನ್ಯಾಯವಾದಿ ಎಲ್.ಜಿ. ಹಾವನೂರ್ ಅವರ ಅಧ್ಯಕ್ಷತೆಯಲ್ಲಿ 1972ರಲ್ಲಿ ಒಂದು ಸಮಿತಿ ರಚಿಸಲಾಯಿತು. ಈ ಸಮಿತಿ 1975ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತು.

ಈ ವರದಿಯಲ್ಲಿ ವಿವಿಧ ಬ್ರಾಹ್ಮಣೇತರ ವರ್ಗಗಳನ್ನು ಮೀಸಲಾತಿಯಿಂದ ಕೈಬಿಡಲಾಗಿತ್ತು. ಅವುಗಳಲ್ಲಿ ಲಿಂಗಾಯತ ಅಥವಾ ವೀರಶೈವ, ಜೈನ, ಬಂಟ, ಕ್ರೈಸ್ತ, ಅರಸು ಮತ್ತಿತರ ಸಮುದಾಯಗಳು ಮುಖ್ಯವಾಗಿದ್ದವು. ಈ ವರ್ಗಗಳಿಂದ ಬರಬಹುದಾದ ಪ್ರತಿಭಟನೆಯ ಬಗ್ಗೆ ಆತಂಕಗೊಂಡ ಸರ್ಕಾರ ವರದಿಯ ಅನುಷ್ಠಾನವನ್ನು ಸ್ವಲ್ಪಕಾಲ ಮುಂದೂಡಿತು. ಮುಂದೆ ರಾಷ್ಟ್ರದಲ್ಲಿ ತುರ್ತುಸ್ಥಿತಿ ಜಾರಿಗೆ ಬಂದು ಸರ್ಕಾರ ಹೆಚ್ಚು ಪ್ರಬಲವಾದಾಗ ದೇವರಾಜ ಅರಸು ಅವರು ಈ ವರದಿಯ ಅನುಷ್ಠಾನಕ್ಕೆ ಧೈರ್ಯ ತೋರಿದರು. ಸರ್ಕಾರ 1977 ಫೆಬ್ರವರಿ 22ರಂದು ಈ ವರದಿಯನ್ನು ಅಂಗೀಕರಿಸಿ ಆದೇಶ ಹೊರಡಿಸಿತು. ಅದರಲ್ಲಿ ವಿವಿಧ ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಲಾಗಿತ್ತು. (1) ಹಿಂದುಳಿದ ಸಮುದಾಯಗಳು (ಶೇ.20); (2) ಹಿಂದುಳಿದ ಜಾತಿಗಳು (ಶೇ.10); (3) ಹಿಂದುಳಿದ ಪಂಗಡಗಳು (ಶೇ.5). ಇವುಗಳ ಜೊತೆಗೆ ಮುಂದುವರಿದವೆಂದು ಪರಿಗಣಿತವಾದ ವಿವಿಧ ಸಮುದಾಯಗಳ ಬಡವರನ್ನು ವಿಶೇಷ ಗುಂಪೆಂದು ಪರಿಗಣಿಸಿ ಅವುಗಳಿಗೆ ಶೇ.5ರಷ್ಟು ಮೀಸಲಾತಿಯನ್ನು ನೀಡಲಾಯಿತು. ಈ ಎಲ್ಲ ವರ್ಗಗಳ ಹಿಂದುಳಿದ ಜಾತಿ ಮತ್ತು ಸಮುದಾಯಗಳ ವ್ಯಕ್ತಿಗಳಿಗೆ ಮೀಸಲಾತಿ ಸೌಲಭ್ಯ ಪಡೆಯಲು ವಾರ್ಷಿಕ 10,000 ರೂಪಾಯಿಗಳ ಆದಾಯ ಮಿತಿಯನ್ನು ವಿಧಿಸಲಾಯಿತು. ಈ ವರದಿ ಹಿಂದುಳಿದ ವರ್ಗಗಳ ಆಯೋಗಗಳಲ್ಲಿ ಮಾತೃಸ್ಥಾನ ಪಡೆದಿದೆ. ಈ ಆಯೋಗದ ಮಾರ್ಗದರ್ಶಿ ಸಲಹೆಗಳ ಆಧಾರಗಳು ವೈಜ್ಞಾನಿಕವಾದ ಭದ್ರ ಅಂಕಿ–ಅಂಶಗಳಿಂದ ಕೂಡಿದ್ದವು. ಈ ಸಂದರ್ಭದಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ವಿಚಾರ ಪ್ರಶ್ನೆಯಾಗುಳಿಯದೆ ಹಿಂದುಳಿದ ವರ್ಗಗಳಲ್ಲಿ ಯಾರನ್ನು ಮೀಸಲಾತಿಯಿಂದ ಕೈಬಿಡಬೇಕು ಮತ್ತು ಯಾರನ್ನು ಸೇರಿಸಬೇಕು ಎಂಬ ಪ್ರಶ್ನೆ ಬೃಹದಾಕಾರ ಪಡೆಯಿತು. ಯಾವುದೇ ಮಾನದಂಡದಿಂದ ನೋಡಿದರೂ ಒಂದು ಸಮುದಾಯದಲ್ಲಿ ಹಿಂದುಳಿದ ವ್ಯಕ್ತಿಗಳ ಸಮೂಹ ಇದ್ದೇ ಇರುತ್ತಿತ್ತು. ಮುಖ್ಯಮಂತ್ರಿ ದೇವರಾಜ ಅರಸರಿಗೆ ತಮ್ಮ ಅರಸು ಸಮುದಾಯವನ್ನು ಹಿಂದುಳಿದ ಪಟ್ಟಿಯಿಂದ ಹಾವನೂರ್ ಆಯೋಗ ಕೈಬಿಟ್ಟಿದ್ದು ಸರಿಕಾಣಲಿಲ್ಲ. ಕೆಲವು ಕೈ ಬಿಟ್ಟ ಜನಾಂಗಗಳೊಡನೆ ಅರಸು ಸಮುದಾಯವನ್ನು ಸೇರಿಸಿ ಅರಸು ಸರ್ಕಾರ ಮೀಸಲಾತಿ ಆದೇಶ ಹೊರಡಿಸಿತು.

ಯಥಾಪ್ರಕಾರ ಹಾವನೂರು ಆಯೋಗದ ವರದಿಯನ್ನು ಆಧರಿಸಿದ ಸರ್ಕಾರಿ ಆದೇಶವೂ ನ್ಯಾಯಾಲಯದಲ್ಲಿ ಪ್ರಶ್ನಿಸಲ್ಪಟ್ಟಿತ್ತು. ನ್ಯಾಯಾಲಯ ಹೊಸದಾಗಿ ಸರ್ಕಾರದಿಂದ ಸೇರಿಸಲಾದ ಸಮುದಾಯಗಳನ್ನು ಅನೂರ್ಜಿತಗೊಳಿಸಿತು. 1979ರಲ್ಲಿ ಈ ಸಂಬಂಧವಾದ ಮರು ಆದೇಶವನ್ನು ಸರ್ಕಾರ ಹೊರಡಿಸಿತು. ಇಡೀ ಹಿಂದುಳಿದ ವರ್ಗಗಳಿಗೆ ಶೇ.50ರಷ್ಟಕ್ಕೆ ಮೀರದಂತೆ ಮೀಸಲಾತಿಯನ್ನು ನಿಗದಿಪಡಿಸಲಾಯಿತು. ಅದರಲ್ಲಿ ಶೇ.5ರಷ್ಟು ಮೀಸಲಾತಿ ಪಡೆದಿದ್ದ ವಿಶೇಷ ಗುಂಪಿಗೆ ಮೀಸಲಾತಿಯನ್ನು ಶೇ.15ಕ್ಕೆ ಹೆಚ್ಚಿಸಲಾಯಿತು.

**ವೆಂಕಟಸ್ವಾಮಿ ಆಯೋಗ:** ಹಿಂದುಳಿದ ವರ್ಗಗಳ ಮೀಸಲಾತಿ ಪ್ರಶ್ನೆ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲು ಹತ್ತಿತ್ತು. ಅಲ್ಲಿ ತೋರಿಬಂದ ಕೆಲವು ನ್ಯೂನತೆಗಳ ಸಂಬಂಧವಾಗಿ ಕರ್ನಾಟಕ ಸರ್ಕಾರ ನ್ಯಾಯಾಲಯಕ್ಕೆ ಒಂದು ದೃಢೀಕರಣ ಪತ್ರ ನೀಡಿ ಇನ್ನೊಂದು ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲು ತಾನು ಬದ್ಧವಿರುವುದಾಗಿ ತಿಳಿಸಿತು. 1983ರಲ್ಲಿ ರಾಮಕೃಷ್ಣಹೆಗ್ಗಡೆಯವರ ನೇತೃತ್ವದ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ವೆಂಕಟಸ್ವಾಮಿ ಅವರ ಅಧ್ಯಕ್ಷತೆಯ ಎರಡನೆಯ ಹಿಂದುಳಿದ ಆಯೋಗ ಅಸ್ತಿತ್ವಕ್ಕೆ ಬಂದಿತು. ಅದು 17 ವಿವಿಧ ಸೂಚಕಗಳನ್ನು ಪರಿಶೀಲಿಸಿ ವಿವಿಧ ಹಿಂದುಳಿದ ವರ್ಗಗಳಿಗೆ ಸಲ್ಲಬೇಕಾದ ಮೀಸಲಾತಿಯ ಪ್ರಮಾಣವನ್ನು ನಿರ್ಧರಿಸಿ 1986ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯಲ್ಲಿ ಕೆಲವು ಸಮುದಾಯಗಳನ್ನು ಮೀಸಲಾತಿಯಿಂದ ಕೈಬಿಟ್ಟಿದ್ದರಿಂದ ಉಂಟಾದ ರಾಜಕೀಯ ಒತ್ತಡಕ್ಕೆ ಮಣಿದ ಸರ್ಕಾರ ಕೆಲವು ಕಾರಣಗಳನ್ನು ನೀಡಿ ಈ ಆಯೋಗದ ವರದಿಯನ್ನು ತಿರಸ್ಕರಿಸಿತು.

ಈ ನಡುವೆ ಸರ್ಕಾರ 1986ರ ಅಕ್ಟೋಬರ್ ತಿಂಗಳಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಒಂದು ಮಧ್ಯಂತರ ಆಜ್ಞೆಯನ್ನು ಹೊರಡಿಸಿತು. ಅದರ ಪ್ರಕಾರ 'ಎ', 'ಬಿ', 'ಸಿ', 'ಡಿ' ಮತ್ತು 'ಈ' ಗುಂಪುಗಳಾಗಿ ಹಿಂದುಳಿದವರನ್ನು ವಿಂಗಡಿಸಲಾಯಿತು. ಕೊನೆಯದು ಹಿಂದಿನಂತೆ ವಿಶೇಷ ಗುಂಪಾಗಿ ಪರಿಗಣಿತವಾಯಿತು. ಹಾವನೂರು ಆಯೋಗದಲ್ಲಿ ಅವಕಾಶ ಪಡೆಯದಿದ್ದ ಲಿಂಗಾಯತರು ಅಥವಾ ವೀರಶೈವರು ಮತ್ತಿತರರೂ ಇದರಲ್ಲಿ ಅವಕಾಶ ಪಡೆದದ್ದು ಗಮನಾರ್ಹವಾಗಿತ್ತು. 'ಎ' ಗುಂಪಿಗೆ ಆದಾಯ ಮಿತಿಯ ನಿರ್ಬಂಧ ತೆಗೆದು ಹಾಕಲಾಯಿತು.

**ಚಿನ್ನಪ್ಪರೆಡ್ಡಿ ಆಯೋಗ:** ಹಿಂದುಳಿದ ವರ್ಗಗಳ ಮೀಸಲಾತಿಯ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯಗಳು ಉದ್ಭವಿಸಿದರೂ ಆಯೋಗಗಳಿಗೆ ಪುನರಪಿ ಮರಣ ಪುನರಪಿ ಜನನದ ಅವಸ್ಥೆ ತಪ್ಪಲಿಲ್ಲ. ಮತ್ತೆ ಕರ್ನಾಟಕ ಸರ್ಕಾರ ಚಿನ್ನಪ್ಪರೆಡ್ಡಿಯವರ ನೇತೃತ್ವದಲ್ಲಿ ಮೂರನೆಯ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿತು. ಈ ಆಯೋಗ ಹಿಂದುಳಿದ ವರ್ಗಗಳನ್ನು ಕುರಿತು ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಪರಿಶೀಲನೆ ನಡೆಸಿತು. ಈ ಆಯೋಗ 1960ರ ದಶಕದಲ್ಲಿದ್ದಂತೆ ಅತ್ಯಂತ ಹಿಂದುಳಿದವರು, ಅತಿ ಹಿಂದುಳಿದವರು ಮತ್ತು ಹಿಂದುಳಿದವರು ಎಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಈ ವರ್ಗಗಳನ್ನು ವಿಭಜಿಸಿ ಪ್ರಮಾಣಾನುಗುಣವಾಗಿ ಮೀಸಲಾತಿಯನ್ನು ನಿಗದಿಪಡಿಸಿತು. ಆ ಪ್ರಕಾರ ಇಡೀ ವರ್ಗವನ್ನು ಒಟ್ಟು ನಾಲ್ಕು ಗುಂಪುಗಳಾಗಿ ವಿಂಗಡಿಸಿತು. ಗರಿಷ್ಠ ಶೇ.50ರಷ್ಟು ಮೀಸಲಾತಿ ನಿಗದಿಪಡಿಸಿತು. ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ವೃತ್ತಿ ನಡೆಸುವ ಹಿಂದುಳಿದವರಿಗೆ ಹೇಗೆ ಸರ್ಕಾರ ನೆರವಾಗಬೇಕೆಂಬ ಬಗ್ಗೆಯೂ ಯೋಜನೆ ಹಾಕಿಕೊಟ್ಟಿತು. ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯವೆಂದು ಸಲಹೆ ಮಾಡಿತು.

ಈ ಆಯೋಗದ ವರದಿಯನ್ನು 1990ರ ಏಪ್ರಿಲ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಲಾಯಿತು. 1992ರಲ್ಲಿ ಕೇಂದ್ರ ಸರ್ಕಾರ ಹಿಂದುಳಿದ ವರ್ಗಗಳನ್ನು ಕುರಿತು ವರದಿ ಸಲ್ಲಿಸಲು ನೇಮಿಸಿದ್ದ ಮಂಡಲ್ ಆಯೋಗದ ವರದಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಪು ನೀಡಿತು. ಅದನ್ನು ಅನುಸರಿಸಿ 1993ರಲ್ಲಿ ಕೇಂದ್ರ ಸರ್ಕಾರ ಒಂದು ಪರಿಷ್ಕೃತ ಆದೇಶ ಹೊರಡಿಸಿತು. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ನೀಡುವ ಮೀಸಲಾತಿಯೂ ಸೇರಿದಂತೆ ಯಾವುದೇ ಮೀಸಲಾತಿಯೂ ಶೇ.50ಕ್ಕೆ ಮೀರಬಾರದೆಂಬುದು ನ್ಯಾಯಾಲಯದ ನಿರ್ದೇಶನವಾಗಿತ್ತು. ಜೊತೆಗೆ ರಾಜ್ಯ ಸರ್ಕಾರದ ಚಿನ್ನಪ್ಪರೆಡ್ಡಿ ಆಯೋಗ ಹಿಂದುಳಿದವರ ಪಟ್ಟಿಯಿಂದ ಕೈಬಿಟ್ಟಿದ್ದ ಕೆಲವು ಸಮುದಾಯಗಳನ್ನು ಮಂಡಲ್ ಆಯೋಗ ಹಿಂದುಳಿದದ್ದೆಂದು ಪರಿಗಣಿಸಿತ್ತು. ಉದಾಹರಣೆಗೆ, ಕರ್ನಾಟಕದ ಒಕ್ಕಲಿಗ ಸಮುದಾಯ. ಚಿನ್ನಪ್ಪರೆಡ್ಡಿ ಆಯೋಗದ ಅನುಷ್ಠಾನಕ್ಕೆ ಆದೇಶ ಹೊರಟಾಗ ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆಗಳು ಪ್ರಕಟವಾದವು. ಇದರಿಂದ ವಿಚಲಿತವಾದ ರಾಜ್ಯಸರ್ಕಾರ ಈ ವರದಿಯ ಅನುಷ್ಠಾನವನ್ನು ಹಿಂದಕ್ಕೆ ತೆಗೆದುಕೊಂಡಿತು. ಅನಂತರದಲ್ಲಿ ಮಧ್ಯಂತರ ಆದೇಶವೇ ಅಧಿಕೃತವಾಯಿತು. ಮಧ್ಯಂತರ ಆದೇಶದ ಕಲಂಗಳಿಗೆ 2ಎ, 2ಬಿ, 3ಎ, 3ಬಿ ಎಂಬ ಉಪವಿಂಗಡನೆಗಳನ್ನೂ ಮಾಡುವ ಮೂಲಕ ಕೆಲವು ಸುದಾಯಗಳಿಗೆ ನಿರ್ದಿಷ್ಟ ಪ್ರಮಾಣದ ಮೀಸಲಾತಿ ನಿಗದಿಪಡಿಸಲಾಗಿದೆ. ಪ್ರತಿಯೊಂದು ಸಮುದಾಯಕ್ಕೂ ಮೀಸಲಾತಿಯ ಸೌಲಭ್ಯ ಒದಗಿಸುವುದೇ ಈ ಒಳವಿಂಗಡನೆಯ ಉದ್ದೇಶ. ಆದರೆ ಹಿಂದುಳಿದ ವರ್ಗಗಳ ವಿಷಯ ಮತ್ತು ವಿಚಾರ ಸದಾ ಪರಿಶೀಲನೆಗೆ ಅರ್ಹವಾದುವೆಂದೂ ಅವುಗಳಿಗೆ ನೀಡಬೇಕಾದ ಸೌಲಭ್ಯಗಳು ಸದಾ ವೀಕ್ಷಣೆಗೆ ಒಳಪಡಬೇಕೆಂದೂ ಸಾರ್ವಜನಿಕ ಅಭಿಪ್ರಾಯ ರೂಪಿತವಾಯಿತು. ಇದನ್ನನುಸರಿಸಿ ಸರ್ಕಾರ 1994ರಲ್ಲಿ ಹಿಂದುಳಿದ ವರ್ಗಗಳ ಖಾಯಂ ಆಯೋಗ ರಚನೆಗೆ ಕ್ರಮಕೈಗೊಂಡಿತು. ಹೀಗೆ ರಚಿತವಾದ ಖಾಯಂ ಆಯೋಗದ ಮೊದಲ ಅಧ್ಯಕ್ಷರು ನಿವೃತ್ತ ನ್ಯಾಯಾಧೀಶರಾಗಿದ್ದ ಕುದೂರು ನಾರಾಯಣಪೈಗಳು.

ಇಪ್ಪತ್ತನೆಯ ಶತಮಾನ ಹಿಂದುಳಿದ ವರ್ಗಗಳ ಜಾಗೃತಿಯ ಶತಮಾನ. ದೀರ್ಘ ಕಾಲದ ಹೋರಾಟ ಮತ್ತು ಪ್ರಜಾಪ್ರಭುತ್ವ ಸರ್ಕಾರಗಳ ಕಾಳಜಿಯ ಫಲವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯೂ ಸೇರಿದಂತೆ ವಿವಿಧ ಅಭಿವೃದ್ಧಿ ಸವಲತ್ತುಗಳು ಜಾರಿಗೆ ಬಂದಿವೆ. ಸರ್ಕಾರ ಹಿಂದುಳಿದ ವರ್ಗಗಳ ಕುಂದುಕೊರತೆಗಳನ್ನು ಗಮನಿಸಿ ಸೌಲಭ್ಯ ಕಲ್ಪಿಸಲು ಒಂದು ಇಲಾಖೆಯನ್ನೇ ತೆರೆದಿದೆ. ಈ ವರ್ಗಗಳ ಹಣಕಾಸು ನೆರವಿಗಾಗಿ

ಹಣಕಾಸು ಕಾರ್ಪೋರೇಷನ್ ರಚಿತವಾಗಿದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಈ ಮೇಲಿನ ಆಯೋಗಗಳ ಕೊಡುಗೆ ಅಪಾರವಾದದ್ದೂ ಬೆಲೆಯುಳ್ಳದ್ದೂ ಆಗಿರುವುದು ಗಮನಾರ್ಹ ವಿಚಾರವಾಗಿದೆ. (ಡಿ.ಎಸ್.ಜಿ.)

**ಕರ್ನಾಟಕದ ಅರಣ್ಯ ಸಂಪತ್ತು :** ಕರ್ನಾಟಕದ ಅರಣ್ಯ ಸಂಪತ್ತು ಹೇರಳವಾದುದು. ಪುರಾತನ ಕಾಲದಲ್ಲಿ ಕರ್ನಾಟಕ ರಾಜ್ಯ ದಂಡಕಾರಣ್ಯದ ಒಂದು ಮುಖ್ಯ ಪ್ರದೇಶವಾಗಿದ್ದು ಮೃಗಗಳ ಬೇಟೆಯಲ್ಲಿ ಆಸಕ್ತಿಯಿದ್ದ ಅಂದಿನ ಅರಸರಿಂದ ಅನೇಕ ರೀತಿಯಲ್ಲಿ ಪೋಷಿತವಾಗಿದ್ದಿತು. ಪ್ರಸಿದ್ಧ ವೆನಿಶಿಯನ್ ಪ್ರವಾಸಿ ಮಾರ್ಕೋಪೋಲೋ ಕರ್ನಾಟಕದ ಅರಣ್ಯ ಸಂಪತ್ತನ್ನು ಸಾಕಷ್ಟು ಪ್ರಶಂಸಿಸಿದ್ದಾನೆ. ವಿಜಯನಗರಕ್ಕೆ ಭೇಟಿ ನೀಡಿದ ಅನೇಕ ವಿದೇಶೀ ಪ್ರವಾಸಿಗಳೂ ಇಲ್ಲಿನ ಕಾಡಿನ ದಟ್ಟತೆ ಮತ್ತು ಸಮೃದ್ಧತೆಯ ಬಗ್ಗೆ ವರ್ಣಿಸಿದ್ದಾರೆ. ವಿಜಯನಗರ ಸಾಮ್ರಾಜ್ಯದಲ್ಲಿ ಅರಣ್ಯಗಳಿಗೆ ತುಂಬಾ ಪ್ರಾಮುಖ್ಯ ನೀಡಲಾಗಿತ್ತು. ಅಂದು ವಿಜಯನಗರವನ್ನು ಸಂದರ್ಶಿಸಿದ ಅರೇಬಿಯದ ವ್ಯಾಪಾರಿ ಅಬ್ದುಲ್ ರಜಾಕ್ ಎಂಬಾತ ಕರ್ನಾಟಕದ ಅರಣ್ಯ ಸಂಪತ್ತು ಹಾಗೂ ಅದರ ವಾಣಿಜ್ಯ ಪ್ರಾಮುಖ್ಯತೆಯ ಬಗ್ಗೆ ಬಹುವಾಗಿ ವಿವರಿಸಿದ್ದಾನೆ. ವಿಜಯನಗರ ಸಾಮ್ರಾಜ್ಯ ಇರುವವರೆಗೂ ದಕ್ಷರೀತಿಯಿಂದ ನಡೆಯುತ್ತಿದ್ದ ಅರಣ್ಯಗಳ ಆಡಳಿತ 1565ರ ತಾಳೀಕೋಟೆಯ ಕದನದ ಅನಂತರ ಕುಸಿಯಿತು. ಸಾಗುವಳಿಗೆ ಸಾಕಷ್ಟು ಜಮೀನಿಲ್ಲದೆ ಜನ ಅರಣ್ಯ ಒತ್ತುವರಿ ಮಾಡಿ ವ್ಯವಸಾಯ ಮಾಡಲು ಪ್ರಾರಂಭಿಸಿದರು. ತರುವಾಯ ಹೈದರ್ ಅಲಿ ಹಾಗೂ ಟಿಪ್ಪುಸುಲ್ತಾನರ ಕಾಲದಲ್ಲಿ ಶ್ರೀಗಂಧದ ಮರವನ್ನು ರಾಜವೃಕ್ಷ ಎಂದು ಪರಿಗಣಿಸಲಾಯಿತು. ಜೊತೆಗೆ ಬಹುಮುಖ್ಯ ಪ್ರಯೋಜನಕಾರಿ ಸಾಗುವಾನಿ ತೇಗದ ಮರಕ್ಕೂ ಸರ್ಕಾರದ ರಕ್ಷಣೆ ದೊರೆಯಿತು.

ಕಾಡುಗಳ ಆಡಳಿತ ಹಾಗೂ ಸಂರಕ್ಷಣೆಯಲ್ಲಿ ಬ್ರಿಟಿಷರ ಕೊಡುಗೆ ಅಪಾರ. ವೈಜ್ಞಾನಿಕ ವಿಧಾನದಲ್ಲಿ ಕಾಡುಗಳ ವಿಂಗಡನೆ ಹಾಗೂ ಸಂರಕ್ಷಣೆಯನ್ನು ಇಡೀ ಭಾರತದಲ್ಲಿ ಪ್ರಾರಂಭಿಸಿದವರೂ ಬ್ರಿಟಿಷರೇ. ಕರ್ನಾಟಕದ ಸ್ಥಿತಿಯೂ ಬೇರೆಯಲ್ಲ. 1799ರ ಅನಂತರ ಬ್ರಿಟಿಷರ ಅಧೀನಕ್ಕೊಳಪಟ್ಟ ಕರ್ನಾಟಕದ ಭಾಗದಲ್ಲಿ ಮೊದಲು ಶ್ರೀಗಂಧ ಹಾಗೂ ತೇಗದ ಮರಗಳಿಗೆ ಮಾತ್ರ ಪ್ರಾಮುಖ್ಯವಿತ್ತು. ಗವರ್ನರ್ ಜನರಲ್ ಡಾಲ್ ಹೌಸಿಯ 1850ರ ಆದೇಶ, ಕರ್ನಾಟಕದ ಅರಣ್ಯ ರಕ್ಷಣೆ, ಅಭಿವೃದ್ಧಿ, ಮಾರ್ಪಾಡು ಎಲ್ಲವೂ ಕಾನೂನು ಕಟ್ಟಳೆಗಳಿಗೆ ಒಳಪಟ್ಟು ವೈಜ್ಞಾನಿಕ ರೀತಿಯಲ್ಲಿ ಬೆಳೆದುಬರುವಂತೆ ಮಾಡಿತು.

ಹಿಂದೆ ಅರಬ್ಬರು, ಆಫ್ರಿಕನ್ನರು ಅನಂತರ ಭಾರತಕ್ಕೆ ಬಂದ ಬ್ರಿಟಿಷರು ಹಡಗುಗಳ ನಿರ್ಮಾಣಕ್ಕೆ ಸಾಗುವಾನಿ ಮತ್ತು ಸುರಹೊನ್ನೆ ಮರಗಳನ್ನು ಕಡಿದು ಉಪಯೋಗಿಸುತ್ತಿದ್ದರು. ಇಂಗ್ಲೆಂಡಿನ ಓಕ್ ಮರ ನಶಿಸುತ್ತ ಬಂದಂತೆಲ್ಲ ಕರ್ನಾಟಕದ ಸಾಗುವಾನಿ ಮರಗಳಿಗೆ ಬೇಡಿಕೆ ಹೆಚ್ಚುತ್ತ ಬಂದಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಇಡೀ ಭಾರತದಲ್ಲಿ ಸಾಕಷ್ಟು ಪ್ರಮಾಣದ ಮರದ ದಿಮ್ಮಿ, ಕಂಬಗಳಿಗಾಗಿ ಅರಣ್ಯ ನಾಶ ಮುಂದುವರಿಯಿತು. ಜೊತೆ ಜೊತೆಯಲ್ಲೇ ಅರಣ್ಯದ ಮರಮುಟ್ಟುಗಳ ವಿಚಾರವಾಗಿ ವೈಜ್ಞಾನಿಕ ಸಂಶೋಧನೆ ಪ್ರಾರಂಭವಾಯಿತು. ನೆಡುತೋಪುಗಳು, ಸಾಲುಮರಗಳು, ಗುಂಡು ತೋಪುಗಳನ್ನು ಅಲ್ಲಲ್ಲಿ ಬೆಳೆಸಿದರು. ಆದರೂ ಜನಸಂಖ್ಯೆಯ ಹೆಚ್ಚಳದಿಂದಾಗಿಯೂ ಹೆಚ್ಚು ಬೆಳೆ ಬೆಳೆಯುವ ಆಂದೋಲನದಿಂದಾಗಿಯೂ ಯೋಗ್ಯವಾದ ಕಾಡುಗಳು ನಾಶವಾಗುತ್ತ ಬಂದವು. ಕೈಗಾರಿಕೆಗಳಿಗೆ ಬೇಕಾದ ಮರಮುಟ್ಟು, ಸೌದೆ, ಇದ್ದಿಲುಗಳಿಗಾಗಿ ಪ್ರತಿವರ್ಷ ಸು. 1 ಲಕ್ಷ ಹೆಕ್ಟೇರು ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ ಎಂದು 1970ರ ದಶಕದ ಅಂಕಿ ಸಂಖ್ಯೆಗಳು ತಿಳಿಸುತ್ತವೆ. ಆದರೆ ಇತ್ತೀಚೆಗೆ ನೆಡುತೋಪುಗಳನ್ನು ಹೆಚ್ಚಿಸುವ, ಸಸ್ಯಗಳನ್ನು ನೆಟ್ಟು ಅರಣ್ಯಗಳನ್ನು ಅಭಿವೃದ್ಧಿಪಡಿಸುವ ಹಾಗೂ ಸಾಮಾಜಿಕ ಅರಣ್ಯ ಕಾರ್ಯಕ್ರಮಗಳಿಂದಾಗಿ ಕರ್ನಾಟಕದ ಅರಣ್ಯ ಕ್ಷೇತ್ರ ಗಣನೀಯವಾಗಿಯಲ್ಲದಿದ್ದರೂ ನಿಧಾನವಾಗಿ ವೃದ್ಧಿಯಾಗುತ್ತಿದೆ.

1960ರ ದಶಕದಲ್ಲಿ ಕರ್ನಾಟಕದಲ್ಲಿ 35,21,000 ಹೆಕ್ಟೇರು ಅರಣ್ಯವಿದ್ದು, ಇದು ಕರ್ನಾಟಕದ ಭೂಭಾಗದ ಶೇ. 23 ಭಾಗದಷ್ಟಾಗುತ್ತಿತ್ತೆಂದು ದಾಖಲೆಗಳು ತಿಳಿಸುತ್ತವೆ. 1985ರ ವೇಳೆಗೆ ಕರ್ನಾಟಕದ ಅರಣ್ಯ ಪ್ರದೇಶದ ವಿಸ್ತೀರ್ಣ ಸುಮಾರು ಶೇ. 19.5ಕ್ಕೆ ಕುಸಿಯಿತು. ಅಂಕಿ ಅಂಶಗಳ ಪ್ರಕಾರ 2002-03ರಲ್ಲಿ ಕರ್ನಾಟಕದ ಅರಣ್ಯ ಪ್ರದೇಶದ ವಿಸ್ತೀರ್ಣ 30,70,000 ಹೆಕ್ಟೇರು. ವಿವಿಧ ಸಂರಕ್ಷಣಾ ತಂತ್ರಗಳಿಂದಾಗಿಯೂ ಈಗ ಕರ್ನಾಟಕದ ಭೂಭಾಗ ಶೇಕಡ 14.8 ಭಾಗ ಮಾತ್ರ ಅರಣ್ಯದಿಂದ ಆವೃತವಾಗಿದೆ.

ಕರ್ನಾಟಕದಲ್ಲಿ ಇಷ್ಟು ಅರಣ್ಯ ಪ್ರದೇಶವಿದ್ದರೂ ಇದಷ್ಟೂ ಮಾನವನ ಪ್ರಯೋಜನಕ್ಕೆ ಅರ್ಹವಾದುದೆಂದು ಹೇಳಲು ಸಾಧ್ಯವಿಲ್ಲ. ಕಾರಣಾಂತರಗಳಿಂದ ಒಟ್ಟು ಅರಣ್ಯದ ಶೇ. 25ರಷ್ಟು ಭಾಗ ಕ್ಷೀಣದೆಸೆಯಲ್ಲಿದೆ. ಇಂಥ ಅಪ್ರಯೋಜಕ ಪ್ರದೇಶವನ್ನು ವೈಜ್ಞಾನಿಕ ಪ್ರಯೋಗಗಳ ಮೂಲಕ ಮೇಲ್ದರ್ಜೆಗೆ ಏರಿಸುವುದು ಸರ್ಕಾರದ ಉದ್ದೇಶ. ಈ ದಿಶೆಯಲ್ಲಿ ಅರಣ್ಯ ಇಲಾಖೆಯ ಅನೇಕ ವರ್ಷಗಳ ಪ್ರಯತ್ನದ ಫಲವಾಗಿ ಇಂದು ಮಾನವ ನಿರ್ಮಿತ ನೆಡುತೋಪುಗಳ ವಿಸ್ತೀರ್ಣ ಸು.1,500ಚ.ಕಿಮೀ. ಈ ನೆಡುತೋಪುಗಳಲ್ಲಿ ಆಧುನಿಕ ಕೈಗಾರಿಕೆಗೆ ಬೇಕಾಗುವ ಯೂಕಲಿಪ್ಟಸ್, ನೀಲಗಿರಿ, ತೇಗ, ರಬ್ಬರ್, ಕೋಕೋ, ಸಂಬಾರ, ಶ್ರೀಗಂಧ, ಗೇರು, ಎಣ್ಣೆ ಗಿಡಗಳು ಮುಂತಾದವು ಹೇರಳವಾಗಿವೆ. ಇತ್ತೀಚೆಗೆ ಜಾರಿಗೆ ಬಂದಿರುವ ಅರಣ್ಯವಿಭಾಗ ಬಿಡುಗಡೆ ಕಾನೂನು ಕಾಡಿನ ನಾಶವನ್ನು ಸಾಕಷ್ಟು ಪ್ರಮಾಣದಲ್ಲಿ ತಡೆಗಟ್ಟಿದೆ. ಜನತೆಗೆ ಬೇಕಾದ ಮರಮುಟ್ಟು, ಸೌದೆ, ಹಸಿಗೊಬ್ಬರ, ವ್ಯವಸಾಯದ ಉಪಕರಣಗಳು ಮುಂತಾದವುಗಳನ್ನು ಅರಣ್ಯ ಕೃಷಿಯ ಮೂಲಕ ಸರಿತೂಗಿಸಿಕೊಳ್ಳಬೇಕಾದುದು ಅನಿವಾರ್ಯ.

**ಅರಣ್ಯದ ಪ್ರಾಮುಖ್ಯ:** ಅತಿವೇಗದಿಂದ ಬೀಸುವ ಗಾಳಿ ಮತ್ತು ಬಿರುಸಾಗಿ ಬೀಳುವ ಮಳೆ ವ್ಯವಸಾಯ ಪ್ರದೇಶದ ಮೇಲ್ಮಣ್ಣನ್ನು ಕೊಚ್ಚುತ್ತದೆ. ಇದರ ಕೊಚ್ಚುವಿಕೆಯಿಂದ ಭೂಮಿ ವ್ಯವಸಾಯಕ್ಕೆ ಅನುಪಯುಕ್ತವಾಗುತ್ತದೆ. 2.5ಸೆಂಮೀ. ದಪ್ಪದ ಮಣ್ಣು ಭೂಮಿಯ ಮೇಲೆ ರೂಪುಗೊಳ್ಳಲು ಸು.600 ವರ್ಷ ಬೇಕು. ಆದರೆ ಅದನ್ನು ಗಾಳಿ ಹಾಗೂ ಮಳೆಗಳು ಕೇವಲ ಒಂದು ವರ್ಷದಲ್ಲಿ ಕೊಚ್ಚಿಹಾಕಬಲ್ಲವು. ಅರಣ್ಯ ಅತಿವೇಗದ ಗಾಳಿಯ ಒತ್ತಡವನ್ನು ತಡೆದು ಅದರ ಹಾವಳಿಯನ್ನು ಕುಗ್ಗಿಸುತ್ತವೆ. ಅಂತೆಯೇ ಬಿರುಸಾಗಿ ಬೀಳುವ ಮಳೆಯ ಹನಿ ನೇರವಾಗಿ ನೆಲಕ್ಕೆ ಬೀಳದಂತೆ ಮರಗಳ ನೆತ್ತಿ, ಎಲೆ, ಕೊಂಬೆಗಳು ತಡೆದು ಮಳೆಯ ರಭಸವನ್ನು ಕುಗ್ಗಿಸುತ್ತವೆ. ಜೊತೆಗೆ ನೆಲದ ಮೇಲೆ ಬೀಳುವ ಎಲೆಗಳು, ಮೆಕ್ಕಲು ಮಣ್ಣು ಮಳೆಯ ನೀರನ್ನು ಹಿಡಿದಿಟ್ಟುಕೊಂಡು ಅದನ್ನು ಭೂಮಿ ನಿಧಾನವಾಗಿ ಹೀರಲು ಸಹಕಾರಿಯಾಗುತ್ತವೆ. ಇದರಿಂದ ಭೂಮಿಯ ಒಳಗೆ ನೀರಿನ ಮಟ್ಟ ಏರಲು ಅನುಕೂಲವಾಗುತ್ತದೆ. ಇದಲ್ಲದೆ ಅರಣ್ಯಕ್ಕೆ ಮಳೆಯನ್ನು ಆಕರ್ಷಿಸುವ ಶಕ್ತಿಯೂ ಉಂಟು. ಜೊತೆಗೆ ದಟ್ಟವಾದ ಅರಣ್ಯ ಅತಿವೃಷ್ಟಿ ಅನಾವೃಷ್ಟಿಗಳನ್ನು ಸಮತೋಲನಗೊಳಿಸಿ ಅವುಗಳ ಹಾವಳಿಯನ್ನು ತಡೆಗಟ್ಟುತ್ತದೆ.

ಮನೆಕಟ್ಟಲು, ಬಟ್ಟೆ, ಸೌದೆ, ಬೆರಣಿ, ಇದ್ದಿಲು, ಕಾಗದ, ಪೆನ್ಸಿಲ್‌ಗಳ ತಯಾರಿಕೆಗೆ ರೈಲು, ಬಸ್ಸು, ಲಾರಿ, ಹಡಗು, ವಿಮಾನಗಳ ನಿರ್ಮಾಣಕ್ಕೆ ಕೃಷಿ ಉಪಕರಣ, ಹಸುರೆಲೆ ಗೊಬ್ಬರ ಮೊದಲಾದವುಗಳಿಗೆ ಅರಣ್ಯ ಸಂಪತ್ತು ಉಪಯುಕ್ತವಾಗುತ್ತದೆ.

ಕರ್ನಾಟಕದಲ್ಲಿ ವರ್ಷಂಪ್ರತಿ ಸು. 7,00,000 ಟನ್ ಹಸುರೆಲೆ ಗೊಬ್ಬರವನ್ನು 1,80,000 ಹೆಕ್ಟೇರು ಭೂಮಿಗೆ ಉಪಯೋಗಿಸಲಾಗುತ್ತದೆ. ಪ್ಲೈವುಡ್, ವಿನೀರ್, ರೆಯಾನ್, ಗಂಧ, ನೀಲಗಿರಿ ಎಣ್ಣೆ, ಪೀಠೋಪಕರಣ ಮುಂತಾದ ಹಲವಾರು ಕೈಗಾರಿಕೆಗಳಿಗೆ ಅರಣ್ಯದ ಆಸರೆ ಅನಿವಾರ್ಯ. ಮಿಗಿಲಾಗಿ ಅರಣ್ಯ ಕೈಗಾರಿಕೆಗಳು ಲಕ್ಷಾಂತರ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿದೆ. ಜೊತೆಗೆ ಅರಣ್ಯ ಸಂಪತ್ತಿನ ಹಲವಾರು ಬಾಬುಗಳು ವಿದೇಶಿ ವಿನಿಮಯವನ್ನುಗಳಿಸಲು ಸಹಾಯಕವಾಗಿವೆ. ಬೀಟೆಮರ, ಸಾಗುವಾನಿ, ಬಲ್ಲಿ, ಗಂಧದಮರ, ಏಲಕ್ಕಿ, ಸಂಬಾರ, ರಬ್ಬರ್ ಮುಂತಾದ ಹಲವಾರು ಅರಣ್ಯ ಉತ್ಪನ್ನಗಳಿಗೆ ವಿದೇಶಗಳಿಂದ ವಿಶೇಷ ಬೇಡಿಕೆ ಇದೆ.

ಅರಣ್ಯದಲ್ಲಿ ವಾಸಿಸುವ ವನ್ಯಮೃಗಗಳಿಂದಲೂ ನಮಗೆ ಅನೇಕ ರೀತಿಯ ಉಪಯೋಗಗಳಿವೆ. ಅನೇಕ ವನ್ಯಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿ ಬಳಸಲಾಗುತ್ತದೆ. ಸಂರಕ್ಷಣೆ ದೃಷ್ಟಿಯಿಂದ ಪ್ರಾಣಿಗಳನ್ನು ಕೊಲ್ಲುವುದನ್ನು ನಿಷೇಧಿಸಲಾಗಿದೆ. ಆದರೆ ಕೆಲವು ಮೂಲನಿವಾಸಿಗಳಿಗೆ ಹಿಂದೆ ವನ್ಯಪ್ರಾಣಿಗಳ ಮಾಂಸವಲ್ಲದೆ ಬೇರೆ ಆಹಾರವಿರಲಿಲ್ಲ. ಜೇನಂತೂ ಆಹಾರ ಹಾಗೂ ಔಷಧಿಗುಣವುಳ್ಳ ಪ್ರಾಣಿಜನ್ಯ ವಸ್ತು. ವನ್ಯಪ್ರಾಣಿಗಳ ಚರ್ಮ ಪಾದರಕ್ಷೆ ಹಾಗೂ ಇನ್ನಿತರ ಚರ್ಮದ ಪರಿಕರಗಳಿಗೆ ಉಪಯೋಗವಾಗುತ್ತವೆ. ಕೊಂಬು, ದಂತಗಳನ್ನು ಅಲಂಕರಣ ವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಅರಗು, ಅಂಟು ಹಾಗೂ ಕೆಲವು ಸುವಾಸನಾಯುಕ್ತ ವಸ್ತುಗಳು ವನ್ಯ ಪ್ರಾಣಿಗಳಿಂದ ದೊರೆಯುತ್ತವೆ.

ಅರಣ್ಯದಲ್ಲಿರುವ ನಮ್ಮ ವನ್ಯಮೃಗ-ಪಕ್ಷಿಗಳನ್ನು ನೋಡಲು ವರ್ಷಂಪ್ರತಿ ಸಾವಿರಾರು ವಿದೇಶೀಯರು ಬರುವುದರಿಂದ ಪ್ರವಾಸೋದ್ಯಮ ಬೆಳೆದು ವಿದೇಶಿ ವಿನಿಮಯ ಗಳಿಸಲು ಸಹಾಯಕವಾಗುತ್ತದೆ. ಅರಣ್ಯವಸ್ತುಗಳ ಮಾರಾಟದಿಂದ ಕೂಡ ಸರ್ಕಾರಕ್ಕೆ ಹೇರಳವಾದ ಆದಾಯವಿದೆ.

**ಪ್ರಕೃತಿ ಸಂಪತ್ತು:** ಕರ್ನಾಟಕ ರಾಜ್ಯದ ವಿಸ್ತೀರ್ಣ 1,91,773 ಚ.ಕಿಮೀ. ಇದರಲ್ಲಿ 38,723.56 ಚ.ಕಿಮೀ ದಾಖಲಾದ ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟ ಅರಣ್ಯ ಪ್ರದೇಶವಾಗಿದೆ. ಖಾಸಗಿ ಆಡಳಿತಕ್ಕೆ ಒಳಪಟ್ಟ ಕಾಡು ಪ್ರದೇಶವಿದ್ದರೂ ಅದು ಅತ್ಯಲ್ಪ ಪ್ರಮಾಣದ್ದು. ಒಟ್ಟು ಭೂವಿಸ್ತೀರ್ಣದಲ್ಲಿ ಶೇ.20.19 ಭಾಗ ದಾಖಲೆಯಾದದ್ದು ಮಾತ್ರ ಅರಣ್ಯ ಪ್ರದೇಶವಾಗಿದೆ. ಪ್ರಪಂಚದ ಅನೇಕ ದೇಶಗಳ ಅರಣ್ಯ ಸಂಪತ್ತಿನೊಡನೆ ಹೋಲಿಸಿದಲ್ಲಿ ಕರ್ನಾಟಕದ್ದು ಬಹಳ ಕಡಿಮೆ. ಉದಾಹರಣೆಗೆ ಪ್ರಪಂಚದ ವಿವಿಧ ದೇಶಗಳ ಭೂಭಾಗದ ಶೇಕಡಾವಾರು ಅರಣ್ಯ ಪ್ರದೇಶ ಈ ರೀತಿ ಇದೆ. ರಷ್ಯ 40.6, ಕೆನಡ 44.5, ಅಮೆರಿಕ 31.6, ಮಯನ್ಮಾರ್ 66.8, ಭಾರತದ ಒಟ್ಟು ವಿಸ್ತೀರ್ಣದ ಶೇಕಡವಾರು ಅರಣ್ಯ ಪ್ರದೇಶ 22.9.

ಒಂದು ದೇಶದ ಸಮಗ್ರ ಅಭಿವೃದ್ಧಿಗೆ ಆ ದೇಶದ ಒಟ್ಟು ಭೂ ವಿಸ್ತೀರ್ಣದ ಮೂರನೆಯ ಒಂದು ಭಾಗವಾದರೂ ಅರಣ್ಯ ಪ್ರದೇಶವಾಗಿರಬೇಕೆಂಬುದು ತಜ್ಞರ ಅಭಿಪ್ರಾಯ, ಕರ್ನಾಟಕದ ಅರಣ್ಯ ಪ್ರಮಾಣ ಕೇವಲ ಶೇ. 20.19 ಇದ್ದು, ಅದು ರಾಷ್ಟ್ರದ ಅರಣ್ಯ ಪ್ರದೇಶದ ಪ್ರಮಾಣಕ್ಕಿಂತ ಕಡಿಮೆ ಇದೆ ಎಂಬುದು ಗಮನಿಸಬೇಕಾದ ಅಂಶ.

**ಅರಣ್ಯಗಳ ವರ್ಗೀಕರಣ :** ಹವಾಗುಣ, ಮಣ್ಣು, ಉಷ್ಣತೆ, ಗಾಳಿ, ಮಳೆ, ಸಮುದ್ರಮಟ್ಟದಿಂದ ಇರುವ ದೂರ ಮತ್ತು ಎತ್ತರ ಮತ್ತು ಆ ಪ್ರದೇಶದ ಸಸ್ಯ ಸಮುದಾಯಕ್ಕೆ ಹಿಂದೆ ಸಿಕ್ಕಿರುವ ಉಪಚಾರ ಇವೇ ಮೊದಲಾದ ಅಂಶಗಳ ಆಧಾರದ ಮೇಲೆ ಕರ್ನಾಟಕದ ಅರಣ್ಯಗಳನ್ನು ವಿವಿಧ ಬಗೆಗಳಾಗಿ ವಿಂಗಡಿಸಲಾಗಿದೆ.

ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಪ್ರಕಾರದ ಮಣ್ಣಿದೆ. ವರ್ಷಕ್ಕೆ 250–800ಮೀಮೀ ಮಳೆ ಬಿದ್ದು ಉಷ್ಣತೆ 15–40 ಸೆಲ್ಸಿಯಸ್ ವರೆಗೆ ವ್ಯತ್ಯಾಸವಾಗುತ್ತದೆ. ನೆಲದ ಎತ್ತರ ಸಮುದ್ರ ಮಟ್ಟದಿಂದ 1700ಮೀ ವರೆಗೆ ವಿವಿಧ ಜಾತಿಯ ಸಸ್ಯಗಳನ್ನೊಳಗೊಂಡ ವಿವಿಧ ನೈಜ ಅರಣ್ಯಗಳಿಗೆ ಎಡೆ ಮಾಡಿ ಕೊಟ್ಟಿದೆ.

ವಿವಿಧ ಸಸ್ಯಪ್ರಭೇದ ಸಮೂಹ ಮತ್ತು ವಿಸ್ತರಣೆಗಳ ಆಧಾರದ ಮೇಲೆ ಕರ್ನಾಟಕದ ಅರಣ್ಯ ಪ್ರದೇಶವನ್ನು ಈ ಕೆಳಕಂಡಂತೆ ವಿಂಗಡಿಸಬಹುದು (ಚಾಂಪಿಯನ್ ಮತ್ತು ಸೇತ್ ಎಂಬ ತಜ್ಞರ ವರ್ಗೀಕರಣದ ಪ್ರಕಾರ)

1. ದಕ್ಷಿಣಾರ್ಧದ ಉಷ್ಣವಲಯದ ತೇವಪೂರಿತ ನಿತ್ಯ ಹರಿದ್ವರ್ಣದ ಅರಣ್ಯ
2. ದಕ್ಷಿಣಾರ್ಧದ ಉಷ್ಣವಲಯದ ಆಂಶಿಕ ನಿತ್ಯ ಹರಿದ್ವರ್ಣದ ಅರಣ್ಯ
3. ದಕ್ಷಿಣ ಭಾರತದ ತೇವ ಮಿಶ್ರಿತ ಪರ್ಣಪಾತಿ ಅರಣ್ಯ
4. ದಕ್ಷಿಣಾರ್ಧದ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯ
5. ದಕ್ಷಿಣಾರ್ಧದ ಉಷ್ಣವಲಯದ ಕುರುಚಲು ಅರಣ್ಯ

ಇದರ ಜೊತೆಗೆ ಆಯಾ ಸ್ಥಳದ ಸೂಕ್ಷ್ಮ ಹವಾಗುಣವನ್ನು ಅವಲಂಬಿಸಿ ಮಾರ್ಪಾಡಾಗಿರುವ ಸಣ್ಣ ಪುಟ್ಟ ಬಗೆಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಇನ್ನೊಂದು ಮುಖ್ಯವಾದ ಅಂಶವೆಂದರೆ ಮೇಲೆ ನಮೂದಿಸಿರುವ ವರ್ಗಗಳು ಒಂದರೊಡನೊಂದು ಸೇರಿಕೊಳ್ಳುವುದು ಅಥವಾ ಒಂದು ಜಾತಿಯ ಗಿಡಮರಗಳ ಗುಂಪಿನಲ್ಲಿ ಮತ್ತೊಂದು ಬಗೆಯವು ಅಡಕವಾಗಿರುವುದು. ಜೊತೆಗೆ ದಟ್ಟ ಅರಣ್ಯದ ನಡುವೆ ಗಿಡಮರಗಳಿಲ್ಲದೆ ಕೇವಲ ಹುಲ್ಲು ಮಾತ್ರ ಬೆಳೆದಿದ್ದು ಕೆಲವು ಸಸ್ಯಾಹಾರಿ ಪ್ರಾಣಿಗಳಿಗೆ ಮೇವು ನೀಡುವ ಹುಲ್ಲುಗಾವಲುಗಳೂ ಕಂಡುಬರುತ್ತವೆ.

ಜೌಗಿನಿಂದ ಕೂಡಿದ ಪ್ರದೇಶಗಳನ್ನು 'ಹಡ್ಲು' ಎಂದು ಕರೆಯುತ್ತಾರೆ. ಇಳಿಜಾರಿನ ಪ್ರದೇಶಗಳಲ್ಲಿ ಗಾಳಿಯ ಒತ್ತಡದಿಂದ ಗಿಡಮರಗಳು ಬೆಳೆಯದೆ ಕೇವಲ ಕಲ್ಲುಮಣ್ಣುಗಳಿಂದಾವೃತವಾದ ನಿರುಪಯುಕ್ತ ಸ್ಥಳಗಳೂ ಅರಣ್ಯದ ಮಧ್ಯದಲ್ಲಿವೆ. ಈ ಸ್ಥಳಗಳನ್ನು ಶೋಲಾಗಳೆನ್ನುತ್ತಾರೆ.

**1. ದಕ್ಷಿಣಾರ್ಧದ ಉಷ್ಣವಲಯದ ತೇವಪೂರಿತ ನಿತ್ಯ ಹರಿದ್ವರ್ಣದ ಅರಣ್ಯ:** ಪಶ್ಚಿಮ ಕರಾವಳಿಯ ಉದ್ದಕ್ಕೂ ಬೆಳಗಾವಿಯಿಂದ ಕೊಡಗಿನವರೆಗೂ ಈ ಬಗೆಯ ಅರಣ್ಯವನ್ನು ಕಾಣಬಹುದು. ಇಲ್ಲಿ ವಾರ್ಷಿಕವಾಗಿ ಸು.2500–8000 ಮಿಮೀ ಮಳೆಯಾಗುತ್ತದೆ. ಸಮುದ್ರ ಮಟ್ಟದಿಂದ 500–1000ಮೀ ಎತ್ತರದವರೆಗೂ ಈ ಅರಣ್ಯ ವಿಸ್ತರಿಸಿದೆ.

ದಟ್ಟವಾಗಿ ಬೆಳೆಯುವ ಇವುಗಳಲ್ಲಿ ವಿವಿಧ ಜಾತಿಯ ಮರಗಳನ್ನು ಕಾಣಬಹುದು. ಈ ಗುಂಪಿನ ಅರಣ್ಯಗಳ ಅತಿಮುಖ್ಯ ಲಕ್ಷಣವೆಂದರೆ ಮೇಲ್ಛಾವಣಿಯಲ್ಲಿರುವ ಮರಗಳು ನೀಳವಾಗಿ ಬೆಳೆದಿರುತ್ತವೆ. ಮೊದಲನೆಯ ಕೊಂಬೆಗೂ ನೆಲಕ್ಕೂ ಸು.30ಮೀ ಅಂತರವಿರುತ್ತದೆ. ಮರಗಳ ಸುತ್ತಳತೆ ಸು.5ಮೀ ಇರುತ್ತದೆ.

ನಿತ್ಯ ಹರಿದ್ವರ್ಣದ ಅರಣ್ಯ ಸಾಮಾನ್ಯವಾಗಿ ಮೂರು ಶ್ರೇಣಿಯ ಸಸ್ಯಜಾತಿಗಳನ್ನೊಳಗೊಂಡಿವೆ. ಈ ಗುಂಪಿನ ಕಾಡುಗಳಲ್ಲಿ ಧೂಮ, ಸುರಹೊನ್ನೆ, ಕಿರಾಳಭೋಗಿ, ಮಾವು, ಗುಳಮಾವು, ಬೆನ್ನಾಟೆ, ಹೊಳೆಗಾರ, ಹೊಳೆಹೊನ್ನೆ, ಬಿಲ್ಲಿ, ನಾಗಸಂಪಿಗೆ, ಬಿಳಿದೇವದಾರು, ಪಾಲಿ, ಸಂಪಿಗೆ, ಸಾಲುಧೂಪ, ಹೆಬ್ಬಲಸು, ನೂಗ, ಬಲಂಜೆ, ಸಟ್ಟಗ, ದಾಲ್ಚಿನ್ನಿ, ಹೈಗ, ಕಾಯಿಧೂಪ, ನೀಲಿ, ಬಗನಿ, ನೇರಳೆ, ಸಾಗಡೆ, ರಂಚ, ಅರಿಶಿನಗುರಿಗೆ, ತೊರತ್ತಿ, ರಾಮನಡಿಕೆ, ಬೊಂಬು, ವಾಟೆ, ಗುರಿಗೆ, ಕೇದಗೆ, ಬೆತ್ತ ಮೊದಲಾದ ಗಿಡ ಮರಬಳ್ಳಿಗಳು ಕಂಡುಬರುತ್ತವೆ. ಈ ಅರಣ್ಯಗಳ ಪಾತ್ರ ದೇಶದ ಹಿತದೃಷ್ಟಿಯಿಂದ ಬಹುಮುಖ್ಯವಾದುದು. ನೇರವಾಗಿ ಬೆಳೆಯುವ ಮರಗಳಿಂದ ವಿದ್ಯುಚ್ಛಕ್ತಿ ಕಂಬಗಳು, ರೈಲುಕಂಬಿಗಳ ಆಸರೆಯ ದಿಮ್ಮಿಗಳು, ಕಾಗದದ ಉತ್ಪತ್ತಿಗೆ ಬೇಕಾದ ನಾರು ತಿರುಳು, ತೆಳುಹೊದಿಕೆ ಮರದ ಹಾಳೆಗಳು ಮುಂತಾದವು ದೊರಕುವವು.

**2. ದಕ್ಷಿಣಾರ್ಧದ ಉಷ್ಣವಲಯದ ಆಂಶಿಕ ನಿತ್ಯ ಹರಿದ್ವರ್ಣದ ಅರಣ್ಯ:** ಈ ಗುಂಪಿನ ಕಾಡುಗಳು ಪಶ್ಚಿಮ ಕರಾವಳಿಯಲ್ಲಿ ನಿತ್ಯಹರಿದ್ವರ್ಣ ಅರಣ್ಯ ಮತ್ತು ತಾತ್ಕಾಲಿಕ ಪರ್ಣಪಾತಿ ಅರಣ್ಯಗಳ ಮಧ್ಯ ಹರಡಿವೆ. ಇಲ್ಲಿ ನಿತ್ಯಹರಿದ್ವರ್ಣ ವೃಕ್ಷ ಮತ್ತು ಬೇಸಗೆಯಲ್ಲಿ ಎಲೆ ಉದುರಿಸುವ ವೃಕ್ಷಗಳ ಸಮ್ಮಿಶ್ರಣವನ್ನು ಕಾಣಬಹುದು. ಜಂಬೆಮರಗಳು ಅತಿಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಆಸರೆಯ ಕಾಂಡಗಳುಳ್ಳ ಮರಗಳೂ ಇಲ್ಲಿ ಇವೆ. ಸಟ್ಟಗ, ಬೂರುಗ ಮುಂತಾದವು ಈ ಗುಂಪಿಗೆ ಸೇರುತ್ತವೆ. ಸಾಮಾನ್ಯವಾಗಿ ಮರಗಳ ತೊಗಟೆ ಸ್ವಲ್ಪ ದಪ್ಪವಾಗಿಯೂ ಗಡುಸಾಗಿಯೂ ಇರುವುದು. ಈ ಬಗೆಯ ಅರಣ್ಯವಿರುವ ಪ್ರದೇಶಗಳಲ್ಲಿ 2000–2500ಮಿಮೀ ಮಳೆಯಾಗುತ್ತದೆ. ಸಾಮಾನ್ಯವಾಗಿ ಈ ಕಾಡಿನಲ್ಲಿ ಹನಾಲು, ಕರಿಮರ, ನಂದಿ, ಹೊಳೆಗಾರ ಹೈಗ, ಬೆನ್ನಾಟೆ, ಸಂಪಿಗೆ, ದಾಲ್ಚಿನ್ನಿ, ಕಿರಾಳಭೋಗಿ, ಹೆಬ್ಬಲಸು, ಸಟ್ಟಗ, ರಂಗುಮಾಲೆ, ಗರಿಗೆ, ಹೆಬ್ಬಿದಿರು ಮೊದಲಾದವು ವಿಶೇಷವಾಗಿ ಬೆಳೆಯುವುವು.

**3. ದಕ್ಷಿಣ ಭಾರತದ ತೇವ ಮಿಶ್ರಿತ ಪರ್ಣಪಾತಿ ಅರಣ್ಯ:** ಪಶ್ಚಿಮ ಕರಾವಳಿಯ ಪೂರ್ವಪಾರ್ಶ್ವದ ಉದ್ದಕ್ಕೂ ಈ ಬಗೆಯ ಅರಣ್ಯವನ್ನು ಕಾಣಬಹುದು. ಇಲ್ಲಿನ ಮಳೆಯ ಪರಿಮಾಣ 1500–2000 ಮಿಮೀ. ತೇಗ ಮತ್ತಿ, ನಂದಿ, ಹೊನ್ನೆ, ಹೇತ್ತೇಗ, ಬೀಟೆ, ಬಿಳಿಮತ್ತಿ, ತಾರೆ, ಜಂಬೆ, ಸಾಗಡೆ, ಕೌಲು, ಹಲಸು, ತಡಸಲು, ಬೂರುಗ, ನೆಲ್ಲಿ ಮುಂತಾದವು ಇಲ್ಲಿನ ಮುಖ್ಯ ಸಸ್ಯಜಾತಿಗಳು. ಜೊತೆಗೆ ನೀರಿನ ಆಸರೆಯಿರುವ ಕಡೆಗಳಲ್ಲೆಲ್ಲ ಹೆಬ್ಬಿದಿರು ಬಲು ಸಾಮಾನ್ಯವಾಗಿ ಕಂಡುಬರುತ್ತದೆ. ಕಿರಿಬಿದಿರಾದರೂ ಶುಷ್ಕ ಹವೆ ಪ್ರದೇಶಗಳಲ್ಲೆಲ್ಲಾ ಕಂಡುಬರುತ್ತದೆ. ಇಲ್ಲಿನ ಮರಗಳಿಗೆ ಒಣಹವೆಯನ್ನು ತಡೆದುಕೊಳ್ಳುವ ಶಕ್ತಿ ಇದೆ. ಈ ಕಾಡುಗಳ ಕೆಳಗಿನ ಶ್ರೇಣಿಯಲ್ಲಿ ಕೆಲವು ಸಣ್ಣ ನಿತ್ಯಹರಿದ್ವರ್ಣ ವೃಕ್ಷಗಳು ಕೂಡಾ ಕಂಡುಬರುತ್ತವೆ.

**4. ದಕ್ಷಿಣಾರ್ಧದ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯ:** ವರ್ಷದಲ್ಲಿ 850 ರಿಂದ 1500ಮಿಮೀ ಮಳೆ ಬೀಳುವ ಪ್ರದೇಶದಲ್ಲಿ ಈ ಬಗೆಯ ಅರಣ್ಯ ಕಂಡುಬರುತ್ತದೆ. ಕೆಲವು ಸಲ ಶೀಘ್ರವಾಗಿ ಆರುವ ಒಣಮಣ್ಣು ಇರುವ ಹಾಗೂ 1900ಮಿಮೀ ಮಳೆ ಬೀಳುವ ಪ್ರದೇಶದಲ್ಲೂ ಕಾಣಬಹುದು. ಯಾವ ಪ್ರದೇಶದಲ್ಲಿ ಮಳೆ 750ಮಿಮೀಗಿಂತ ಕಡಿಮೆ ಬೀಳುತ್ತದೊ ಅಲ್ಲಿ ಕುರುಚಲು ಅರಣ್ಯಕ್ಕೆ ಎಡೆಮಾಡಿಕೊಡುತ್ತದೆ. ಈ ಅರಣ್ಯಗಳು 450 –600ಮೀ ಎತ್ತರದಲ್ಲಿದ್ದು ಸಣ್ಣಪುಟ್ಟ ಗುಡ್ಡಗಳನ್ನು ಆಕ್ರಮಿಸಿಕೊಂಡಿವೆ. ಬಹುಶಃ ಮೈದಾನ ಪ್ರದೇಶವನ್ನೆಲ್ಲಾ ವ್ಯವಸಾಯಕ್ಕೆ ಉಪಯೋಗಿಸಿರುವುದು ಇದಕ್ಕೆ ಕಾರಣವಿರಬೇಕು.

ಪರಾಕಾಷ್ಠೆಯನ್ನು ತಲಪಿರುವ ಈ ಅರಣ್ಯಗಳಲ್ಲಿ ಮೇಲಿನ ಮರಶ್ರೇಣಿ ಇಕ್ಕಟ್ಟಾಗಿರುತ್ತದೆಯಾದರೂ ದಟ್ಟವಾಗಿರುವುದಿಲ್ಲ. ಇಲ್ಲಿ ಕಂಡುಬರುವ ಬಹುಪಾಲು ವೃಕ್ಷಗಳೆಲ್ಲವೂ ಬೇಸಿಗೆಯಲ್ಲಿ ಎಲೆಯುದುರುವಂಥವು. ಇವುಗಳ ಎತ್ತರ 12–20ಮೀ. ಮರಗಳ ಕೆಳಗೆ ಕಿರುಬಿದಿರುಗಳು, ಅನೇಕ ಜಾತಿಯ ಹುಲ್ಲುಗಳು, ಅಡರು ಬಳ್ಳಿಗಳು ಬೆಳೆದಿರುತ್ತವೆ. ಬೆತ್ತ ಮತ್ತು ತಾಳವೃಕ್ಷಗಳು ಈ ಅರಣ್ಯಗಳಲ್ಲಿ ಕಂಡುಬರುವುದಿಲ್ಲ.

ಈ ಅರಣ್ಯಗಳಲ್ಲಿ ಕೆಲವೆಡೆ ಸಾಗುವಾನಿ ಜಾತಿಯ ಮರಗಳು ಹಾಗೂ ದಿಂಡಿಲು ಮತ್ತು ಮತ್ತಿ ಜಾತಿಯ ಮರಗಳು ಬೆಳೆಯುತ್ತವೆ. ಸಾಗುವಾನಿ ಜಾತಿಯ ಮರಗಳು ಕಂಡುಬರದ ಪ್ರದೇಶಗಳಲ್ಲಿ ದಿಂಡಿಗ, ಮತ್ತಿ, ಬೆಂಡೆ, ನಂದಿ, ಹೆತ್ತೇಗ, ಕಣಗಲು, ಹಿಪ್ಪೆ, ಬೂರುಗ, ತಡಸಲು, ಹೊನ್ನೆ, ಗಂಧ, ಹುರುಗಲು, ತಾರೆ, ಕಮರ, ಕಗ್ಗಲು, ನೂನಲು, ಬಿಲ್ವಪತ್ರೆ, ಬೇಲ, ನೆಲ್ಲಿ, ಎಲಚಿ, ಬಿಕ್ಕೆ, ಬಾಗೆ, ಬಂದರಿಕೆ, ಲಂಟಾನ, ಎಡಮುರಿ, ಮುತ್ತುಗ, ಜಗಳಗಂಟಿ, ಸಾಗಡೆ, ಕೂಳಿ, ದೊಡ್ಡ ತೊಪ್ಪೆ ಹಾಗೂ ಅನೇಕ ಜಾತಿಯ ಮುಳ್ಳಿನ ಗಿಡಗಳು ಕಂಡುಬರುತ್ತವೆ.

ತೇವಮಿಶ್ರಿತ ಪರ್ಣಪಾತಿ ಅರಣ್ಯ ಹಾಗೂ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯಗಳು ತಾತ್ಕಾಲಿಕವಾಗಿ ಎಲೆ ಉದುರುವ ಅರಣ್ಯಗಳು. ಈ ಅರಣ್ಯಗಳಲ್ಲಿ ವನ್ಯಮೃಗದ ಸಂಪತ್ತು ಹೇರಳವಾಗಿದೆ. ಇವುಗಳಲ್ಲಿ ಪ್ರಮುಖವಾದ ಪ್ರಾಣಿಗಳು ಆನೆ, ಹುಲಿ, ಕಾಡುಕೋಣ, ಚಿರತೆ, ಕಡವೆ, ಚುಕ್ಕಿ ಜಿಗರೆ, ಕಾಡುಹಂದಿ, ಕರಡಿ, ಸೀಳುನಾಯಿ ಮುಂತಾದವು. ವರ್ಣರಂಜಿತ ಪಕ್ಷಿಗಳಾದ ನವಿಲು, ಕಾಡುಕೋಳಿ, ಕೆಂಬೂತ ಇವು ಮುಖ್ಯವಾದ ಪಕ್ಷಿಗಳು.

**5. ದಕ್ಷಿಣಾರ್ಧದ ಉಷ್ಣವಲಯದ ಕುರುಚಲು ಅರಣ್ಯ:** ಇವುಗಳಲ್ಲಿ ಮರಗಿಡಗಳ ಎಲೆಗಳು ಸಾಮಾನ್ಯವಾಗಿ ಬೇಸಗೆಯಲ್ಲಿ ಉದುರುತ್ತವೆ. ಇಲ್ಲಿನ ಮಳೆಯ ಪ್ರಮಾಣ ಸು.250–1000ಮಿಮೀ. ಈ ಅರಣ್ಯಗಳಲ್ಲಿ ಮುಳ್ಳಿನ ಗಿಡಗಳ ಪ್ರಮಾಣ ಹೆಚ್ಚು. ಈ ಗುಂಪಿನ ಕಾಡುಗಳು ದೇಶದ ಆದಾಯದ ದೃಷ್ಟಿಯಿಂದ ಹೆಚ್ಚು ಉಪಯುಕ್ತವಲ್ಲ. ಪ್ರಕೃತಿಯ ವಿಕೋಪಕ್ಕಿಂತ ಹೆಚ್ಚಾಗಿ ಮಾನವ ಚಟುವಟಿಕೆಯಿಂದಾಗಿ ಈ ಬಗೆಯ ಕಾಡು ನಶಿಸಿ ಹೋಗುತ್ತಿದೆ.

ಈ ಅರಣ್ಯಗಳಲ್ಲಿ ದಿಂಡಿಗ, ಗೊಬ್ಬಳಿ, ಬಿಳಿಜಾಲಿ, ಕತ್ತಾಳೆ, ಬನ್ನಿ, ಬಬ್ಬಿಲಿ, ಬಿಲ್ವಾರ, ಬಾಗೆ, ಮತ್ತಿ, ತಾರೆ, ಅಳಲೆ, ಬಿಲ್ವಪತ್ರ, ಬೇಲ, ಸಾಂಬ್ರಾಣಿ, ನವಿಲಾಡಿ, ಗಂಧ, ಹುರುಗಲು, ಬೇವು, ಕಗ್ಗಲಿ, ದೇವದಾರು, ಹಂಗರು ಮುಂತಾದ ಗಿಡಮರಗಳನ್ನು ಕಾಣಬಹುದು. ಜೊತೆಗೆ ಎಲಚಿ, ಸೀತಾಫಲ, ಈಚಲು, ಎಕ್ಕ, ಕಾರೆಗಿಡ, ಪಾಪಾಸುಕಳ್ಳಿ, ಚಂಡರಿಕೆ, ಲಂಟಾನ ಮುಂತಾದವುಗಳೂ ಕಂಡುಬರುತ್ತವೆ.

ಕರ್ನಾಟಕದಲ್ಲಿ ಈ ಎಲ್ಲ ಐದು ಬಗೆಯ ಅರಣ್ಯಗಳಿದ್ದರೂ ರಾಜ್ಯದ ಹಾಗೂ ದೇಶದ ಅಭಿವೃದ್ಧಿಗೆ ಮೊದಲ ಮೂರು ವಿಧದ ಅರಣ್ಯಗಳ ಕೊಡುಗೆ ಮಹತ್ವದ್ದು. ಈ ಬಗೆಯ ಅರಣ್ಯಗಳಲ್ಲಿ ಬೆಲೆಬಾಳುವ ಮರಗಳು ಹೆಚ್ಚು. ಅವು ಸಮೃದ್ಧವಾಗಿಯೂ ಬೆಳೆಯುತ್ತವೆ. ಆದರೆ ಈ ಬಗೆಯ ಅರಣ್ಯಗಳ ಪ್ರಮಾಣ ಕುರುಚಲು ಅರಣ್ಯಗಳಿಗಿಂತ ಕಡಿಮೆ ಇದೆ ಎಂಬುದು ಗಮನಿಸಬೇಕಾದ ಅಂಶ. ಕರ್ನಾಟಕದಲ್ಲಿರುವ ವಿವಿಧ ಬಗೆಯ

ಅರಣ್ಯಗಳು, ಅವುಗಳ ಸೇಕಡಾವಾರು ಪ್ರಮಾಣ, ವಿಸ್ತೀರ್ಣ ಮುಂತಾದ ಅಂಕಿ ಸಂಖ್ಯೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

| ಅ | ಅರಣ್ಯ ವಿಧ | ವಿಸ್ತೀರ್ಣ (1000 ಹೆಕ್ಟೇರುಗಳಲ್ಲಿ) | ಒಟ್ಟು ಅರಣ್ಯದ ಶೇಕಡಾವಾರು |
|---|---|---|---|
| 1. | ದಕ್ಷಿಣಾರ್ಧದ ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣದ ಅರಣ್ಯ | 580 | 15.11 |
| 2. | ದಕ್ಷಿಣಾರ್ಧದ ಉಷ್ಣವಲಯದ ಆಂಶಿಕ ನಿತ್ಯಹರಿದ್ವರ್ಣದ ಅರಣ್ಯ | 578 | 14.96 |
| 3. | ದಕ್ಷಿಣ ಭಾರತದ ತೇವಮಿಶ್ರಿತ ಪರ್ಣಪಾತಿ ಅರಣ್ಯ | 727 | 18.64 |
| 4. | ದಕ್ಷಿಣಾರ್ಧದ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯ | 818 | 21.11 |
| 5. | ದಕ್ಷಿಣಾರ್ಧದ ಉಷ್ಣವಲಯದ ಕುರುಚಲು ಅರಣ್ಯ | 1161 | 30.18 |
| | ಒಟ್ಟು | **3864** | **100.00** |

**ಅರಣ್ಯ ಇಲಾಖೆಯ ಆಡಳಿತ:** ಭಾರತದ ಸಂವಿಧಾನದ ವಿಧಿಗನುಗುಣವಾಗಿ ಅರಣ್ಯ ಇಲಾಖೆಯ ಆಡಳಿತ ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ. ಅರಣ್ಯ ಇಲಾಖೆಯ ಆಡಳಿತದ ಉನ್ನತ ಹುದ್ದೆಗಳಿಗೆ ಆಯ್ಕೆ, ಅರಣ್ಯ ವಿದ್ಯಾಭ್ಯಾಸ ಹಾಗೂ ವೈಜ್ಞಾನಿಕ ಸಂಶೋಧನೆಗಳ ಮೇಲ್ವಿಚಾರಣೆ ಭಾರತ ಸರ್ಕಾರಕ್ಕೆ ಸೇರಿದೆ. ಅರಣ್ಯ ಹುಟ್ಟುವಳಿಗಳ ರಫ್ತು ಆಮದುಗಳು ಕೂಡಾ ಕೇಂದ್ರ ಮೇಲ್ವಿಚಾರಣೆಯಲ್ಲಿಯೇ ನಡೆಯುತ್ತವೆ.

ಕರ್ನಾಟಕದ ಅರಣ್ಯ ಇಲಾಖೆಯ ಎಲ್ಲಾ ಕಾರ್ಯ ಚಟುವಟಿಕೆಗಳೂ ಅರಣ್ಯಖಾತೆ ಮಂತ್ರಿಗಳ ನೇತೃತ್ವದಲ್ಲಿ ಅರಣ್ಯ ಕಾರ್ಯದರ್ಶಿಗಳ ಮುಖಾಂತರ ಸಾಗುತ್ತವೆ. ಅರಣ್ಯ ಇಲಾಖೆಗೆ ಸಂಬಂಧಿಸಿದ ಎಲ್ಲ ನಿಯಮಾವಳಿಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಗಳಿಗೆ ಸೇರಿದೆ. ಇವರ ಅಧೀನದಲ್ಲಿ ಅರಣ್ಯ ವಿಭಾಗ, ವನ್ಯಜೀವಿ ವಿಭಾಗ ಹಾಗೂ ಅರಣ್ಯ ಕಾರ್ಪೊರೇಶನ್ ಎಂಬ ಮೂರು ಮುಖ್ಯ ಘಟಕಗಳಿವೆ. ಮುಖ್ಯ ಸಂರಕ್ಷಣಾಧಿಕಾರಿಗಳು ಈ ಘಟಕಗಳ ಮುಖ್ಯಸ್ಥರು. ಇವರ ಅಧೀನದಲ್ಲಿ ವೃತ್ತ ಸಂರಕ್ಷಣಾಧಿಕಾರಿಗಳು, ವಿಭಾಗ ಸಂರಕ್ಷಣಾಧಿಕಾರಿಗಳು, ವಲಯ ಅರಣ್ಯಾಧಿಕಾರಿಗಳು, ವನಾಧಿಕಾರಿಗಳು, ಅರಣ್ಯ ರಕ್ಷಕರು ಮುಂತಾದವರಿರುತ್ತಾರೆ. ಕರ್ನಾಟಕದಲ್ಲಿ ಒಟ್ಟು 14 ವೃತ್ತಗಳು, 58 ವಿಭಾಗಗಳು, 198 ವಲಯಗಳೂ ಇವೆ. ಇದರೊಂದಿಗೆ ಅಭಿವೃದ್ಧಿ ಮುಖ್ಯ ಸಂರಕ್ಷಣಾಧಿಕಾರಿ, ಅರಣ್ಯ ಕೈಗಾರಿಕೆಗಳ ಮುಖ್ಯ ಅಧಿಕಾರಿ, ಮುಖ್ಯ ವನ್ಯಪ್ರಾಣಿ ಸಂರಕ್ಷಣಾಧಿಕಾರಿ ಮುಂತಾದ ಹುದ್ದೆಗಳಿವೆ. ಬೆಂಗಳೂರಿನಲ್ಲಿ ಒಂದು ಅರಣ್ಯ ವೈಜ್ಞಾನಿಕ ಸಂಶೋಧನ ಕೇಂದ್ರವೂ ಇದೆ. ಅರಣ್ಯ ಉಸ್ತುವಾರಿಗಾಗಿ ಗ್ರಾಮ ಅರಣ್ಯ ಸಮಿತಿಗಳನ್ನು ಅನೇಕ ಕಡೆ ಅಸ್ತಿತ್ವಕ್ಕೆ ತರಲಾಗಿದೆ.

ಅರಣ್ಯ ರಕ್ಷಕರಿಗೆ ತರಬೇತಿ ನೀಡಲು ಕುಶಾಲನಗರ, ಯಲ್ಲಾಪುರ, ಹನುಮನಹಟ್ಟಿ ಮತ್ತು ಬೀದರಗಳಲ್ಲಿ ತರಬೇತಿ ಶಾಲೆಗಳಿವೆ. ವನಾಧಿಕಾರಿಗಳು ಮತ್ತು ಮೋಜಣಿದಾರರ (ಸರ್ವೇಯರ್) ತರಬೇತಿಗೆಂದು ಅಂಬಿಕಾನಗರದ ಸಮೀಪ ತರಬೇತಿಶಾಲೆ ಇದೆ. ವಲಯಾಧಿಕಾರಿಗಳಿಗೆ ತರಬೇತಿ ನೀಡಲು ಕೊಯಮತ್ತೂರಿನಲ್ಲಿಯೂ ಭಾರತೀಯ ಅರಣ್ಯ ಸೇವಾ ಅಧಿಕಾರಿಗಳಿಗೆ ತರಬೇತಿ ನೀಡಲು ಡೆಹರಾಡೂನಿನಲ್ಲಿಯೂ ಅರಣ್ಯ ಕಾಲೇಜುಗಳಿವೆ. ಅರಣ್ಯಗಳ ಬಗ್ಗೆ ಹೆಚ್ಚಿನ ವ್ಯಾಸಂಗ, ಮಾಹಿತಿ ಪಡೆಯಲು, ಮೇಲ್ದರ್ಜೆಯ ಅಧಿಕಾರಿಗಳಿಗೆ ವಿದೇಶಗಳಿಗೆ ಭೇಟಿ ನೀಡುವ ಅವಕಾಶಗಳೂ ಇವೆ.

ಕರ್ನಾಟಕದಲ್ಲಿ ಅತ್ಯಂತ ಸಂಪದ್ಭರಿತ ಅರಣ್ಯಗಳಿದ್ದರೂ ಅನೇಕ ಕಾರಣಗಳಿಂದಾಗಿ ಅರಣ್ಯಪ್ರದೇಶ ದಿನೇ ದಿನೇ ಕ್ಷೀಣಿಸುತ್ತಿದೆ. ಅರಣ್ಯಪ್ರದೇಶವನ್ನು ವ್ಯವಸಾಯೋದ್ದೇಶಕ್ಕಾಗಿ ಬಳಸುತ್ತಿರುವುದು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಉದ್ದೇಶಗಳಿಗಾಗಿ ಜಲಾಶಯಗಳನ್ನು ನಿರ್ಮಿಸುತ್ತಿರುವುದು, ನಿರ್ವಸಿತರಿಗೆ ಮರುವಸತಿ ಕಲ್ಪಿಸಲು ಕಾಡುಗಳನ್ನು ಕಡಿಯುವುದು ಅತಿಯಾಗಿ ಮೇಯಿಸುವುದು, ಕಾಡ್ಗಿಚ್ಚು, ಅತಿಕ್ರಮಣ ಚಟುವಟಿಕೆ– ಇವು ಅರಣ್ಯನಾಶಕ್ಕೆ ಮುಖ್ಯ ಕಾರಣಗಳು. ಕಳೆದ ಕೆಲವು ವರ್ಷಗಳಿಂದ ಅರಣ್ಯಾಭಿವೃದ್ಧಿಗೆ, ವನ್ಯಪ್ರಾಣಿ ಸಂರಕ್ಷಣೆಗೆ ಸಾಕಷ್ಟು ಗಮನ ಹರಿಸಲಾಗಿದೆ. ಅರಣ್ಯದ ಇಳುವರಿಯನ್ನು ಹೆಚ್ಚಿಸುವುದು, ಭೂ ಸವಕಳಿಯನ್ನು ತಪ್ಪಿಸುವುದು, ನಾಶಗೊಂಡ ಅರಣ್ಯಗಳಲ್ಲಿ ಪುನಃ ಮರಗಳನ್ನು ಬೆಳೆಸುವುದು, ಸಣ್ಣ ಪ್ರಮಾಣದ ಅರಣ್ಯೋತ್ಪನ್ನಗಳ ಅಭಿವೃದ್ಧಿ, ಅರಣ್ಯ ಸಂಪರ್ಕ ಮಾರ್ಗಗಳ ಅಭಿವೃದ್ಧಿ, ಮೃದು ಮರಗಳನ್ನು, ಬೆಂಕಿಕಡ್ಡಿ ಮರಗಳನ್ನು ಬೆಳೆಸುವುದು, ಪರರಾಷ್ಟ್ರಗಳಿಂದ ಬಂದ ಭಾರತೀಯ ನಿರಾಶ್ರಿತರ ಪುನರ್ ವಸತಿಗಾಗಿ ರಬ್ಬರ್ ತೋಟ ಬೆಳೆಸುವುದು, ಸೌದೆಗಾಗಿ ಮರಗಳನ್ನು ವೃದ್ಧಿಸುವುದು, ಕೋಕೋ ಗಿಡಗಳನ್ನು ಬೆಳೆಸುವುದು ಮುಂತಾದ ಅನೇಕ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಈಗ ಪ್ರತ್ಯೇಕವಾದ ಸಾಮಾಜಿಕ ಅರಣ್ಯ ವಿಭಾಗವನ್ನೇ ಪ್ರಾರಂಭಿಸಲಾಗಿದೆ. ಕರ್ನಾಟಕ ಅರಣ್ಯ ಕೈಗಾರಿಕಾ ಮಂಡಳಿಯನ್ನು ಕೂಡಾ ಸ್ಥಾಪಿಸಲಾಗಿದೆ. ಅರಣ್ಯ ರಕ್ಷಣೆಗಾಗಿ ಬಂದೋಬಸ್ತ್ ನೋಡಿಕೊಳ್ಳಲು ಮತ್ತು ಅರಣ್ಯ ಉತ್ಪನ್ನಗಳನ್ನು ಸಾಗಿಸಲು ಅರಣ್ಯ ಇಲಾಖೆ ಅರಣ್ಯ ಪ್ರದೇಶದಲ್ಲಿ 2938ಕಿಮೀ ರಸ್ತೆ ನಿರ್ಮಾಣ ಮಾಡಿದೆ (1995).

**ಅರಣ್ಯ ಉದ್ಯಮಗಳು:** ಕರ್ನಾಟಕದ ಅರಣ್ಯ ಪ್ರದೇಶ ವಿವಿಧ ಸಸ್ಯವರ್ಗಗಳ ತವರೂರು. ಶ್ರೀಗಂಧ, ಹೊನ್ನೆ, ನಂದಿ, ಮತ್ತಿ, ಹನಾಲು, ಕರಡಿ, ಸಾಗುವಾನಿ, ಬೀಟೆ, ಹೆತ್ತೇಗ, ತಡಸಲು, ಭೋಗಿ, ನೊಗ, ಬೂರುಗ, ಮಾಕಾಳಿ, ದೊಡ್ಡತೊಪ್ಪೆ, ಸಟ್ಟುಗ, ಬಿಲ್ವಾರ, ಗೊದ್ದ, ತಾರೆ, ದಿಂಡಿಗ, ಬೆಂಡೆ, ಜಂಬೆ, ನೇರಳೆ, ಬಲ್ಲಿ, ಹಲಸು, ಹೆಬ್ಬಲಸು, ಗುಳಮಾವು, ನಾಗ ಸಂಪಿಗೆ, ಕಿರಾಳ ಭೋಗಿ, ಬಿಳಿದೇವದಾರು, ಬೆನ್ನಾಟೆ, ಬಲಂಜಿ, ಹೊಳೆಗಾರ, ನೀಲಿ ಸಂಪಿಗೆ, ಹಾಲುಮಡ್ಡಿ, ಮದ್ದಾಲೆ, ಚುಂಗ, ಧೂಮ, ಸಾಲ್‌ಧೂಪ, ಕಾಯಿಧೂಪ, ಸುರಹೊನ್ನೆ, ಪಾಲಿ, ಕೊಟ್ಟಿ, ಮಾವು ಮುಂತಾದ ಪ್ರಮುಖ ವೃಕ್ಷಗಳು ಬೆಳೆಯುತ್ತವೆ. ಜೊತೆಗೆ ಬಿದಿರು, ವಾಟೆ ಮತ್ತು ಬೆತ್ತ ಅರಣ್ಯದಲ್ಲಿ ವಿಪುಲವಾಗಿವೆ. ಅರಣ್ಯ ವೈವಿಧ್ಯಮಯವಾಗಿರುವಂತೆ ಕರ್ನಾಟಕದ ಅರಣ್ಯ ಉದ್ಯಮಗಳೂ ವೈವಿಧ್ಯಪೂರ್ಣವಾಗಿವೆ.

ಅನಾದಿಕಾಲದಿಂದಲೂ ಮಾನವನ ಜೀವನ ಅರಣ್ಯದೊಡನೆ ಬೆರೆತುಹೋಗಿದೆ. ಆದಿಮಾನವ ದಿನಬಳಕೆಯ ಆಹಾರವಸ್ತುಗಳಾದ ಗಿಡಮೂಲಿಕೆ, ಹಣ್ಣು ಹಂಪಲು, ಮೊಟ್ಟೆ, ಮಾಂಸಗಳನ್ನು, ಮನೆಕಟ್ಟಲು ಬಳಸುವ ಸಾಮಗ್ರಿಯನ್ನೂ ಮೈ ಮುಚ್ಚುವ ಉಡುಪನ್ನೂ ಬೆಂಕಿಯನ್ನೂ ಆಯುಧ ಉಪಕರಣಗಳನ್ನೂ ಅರಣ್ಯದಿಂದಲೇ ಪಡೆಯುತ್ತಿದ್ದ. ಒಂದು ದೇಶದಲ್ಲಿ ಸೌದೆ ಮತ್ತು ಕೈಗಾರಿಕೆಗೆ ಉಪಯೋಗಿಸುತ್ತಿರುವ ಅರಣ್ಯ ಉತ್ಪನ್ನಗಳ ಬಳಕೆಯ ಮೇಲೆ ಅಲ್ಲಿನ ಕೈಗಾರಿಕಾ ಪ್ರಗತಿಯನ್ನು ನಿರ್ಧರಿಸಲಾಗುತ್ತದೆ. ಕೈಗಾರಿಕಾ ಪ್ರಗತಿಯುಳ್ಳ ದೇಶದಲ್ಲಿ ಅರಣ್ಯದ ಕಚ್ಚಾವಸ್ತುಗಳು ಕೈಗಾರಿಕೆಗಳಿಗೆ ಬಳಕೆಯಾಗುತ್ತವೆ. ಅಲ್ಪಭಾಗ ಮಾತ್ರ ಸೌದೆಗೆ ಉಪಯೋಗವಾಗುತ್ತದೆ. ಆದರೆ ನಮ್ಮಲ್ಲಿ ಕಾಡಿನ ಮರಗಳನ್ನು ಸೌದೆಗೆ ಹೆಚ್ಚು ಬಳಸುವುದು ಕಂಡುಬರುತ್ತಿದೆ ಗ್ರಾಮೀಣ ವಸತಿ ಇದಕ್ಕೆ ಮುಖ್ಯ ಕಾರಣ. ಈ ಮುಂದೆ ತಿಳಿಸಿರುವಂತೆ ಸಸ್ಯಗಳನ್ನು ವಿಶ್ವವ್ಯಾಪ್ತಿಯುಳ್ಳ ಕಚ್ಚಾವಸ್ತುಗಳನ್ನಾಗಿ ಪರಿಗಣಿಸಬಹುದು. ಏಕೆಂದರೆ ಅವನ್ನು ಮಣ್ಣು, ಲೋಹ, ಗಾಜು, ನೇಯ್ದ ವಸ್ತುಗಳ ಬದಲಾಗಿ ಬಳಸಬಹುದು.

ಕರ್ನಾಟಕದಲ್ಲಿ ವ್ಯವಸಾಯವೇ ಪ್ರಧಾನವಾದ ಕಸಬು. ವ್ಯವಸಾಯಕ್ಕೆ ಅರಣ್ಯದ ಅಗತ್ಯ ಬಹಳ ಇದೆ. ಹೆಚ್ಚು ಯಾಂತ್ರಿಕತೆ ಇಲ್ಲದ ಬೇಸಾಯಕ್ಕೆ ಅಗತ್ಯವಾದ ನೇಗಿಲು, ಕೊರಡು, ಕುಂಟೆ, ರೆಂಟೆ ಮುಂತಾದ ಉಪಕರಣಗಳನ್ನು ತಯಾರಿಸಲು ಮರದ ಅಗತ್ಯವಿದೆ. ಎಲೆಗೊಬ್ಬರವಂತೂ ವ್ಯವಸಾಯಕ್ಕೆ ಪೌಷ್ಟಿಕವೆಂದು ಪರಿಗಣಿಸಲಾಗುತ್ತದೆ. ಹಸುರೆಲೆಗಳನ್ನು ಬಳಸಿ ಕಾಂಪೋಸ್ಟ್ ಗೊಬ್ಬರವನ್ನೂ ತಯಾರಿಸಲಾಗುತ್ತದೆ. ದನದ ಮೇವು, ಮರದ ಸಕ್ಕರೆ, ಮಾದಕ ಪಾನೀಯ, ಶ್ರೀಗಂಧ, ನೀಲಗಿರಿ, ನಿಂಬೆಹುಲ್ಲಿನ ಎಣ್ಣೆ, ರೆಯಾನ್, ಪಾಲಿಫೈಬರ್, ಸೌದೆ, ಇದ್ದಿಲು, ಬೆಂಕಿಕಡ್ಡಿ, ವಿದ್ಯುಚ್ಛಕ್ತಿ, ಮನೆಗೆ ಮರಮುಟ್ಟು, ಪೀಠೋಪಕರಣ, ಪ್ಲೈವುಡ್ ಮತ್ತು ವಿನೀರ್, ಸ್ಲೀಪರ್‌ಗಳು, ರೈಲ್ವೆಬೋಗಿ, ರೈಲು ಹಾಗೂ ಬಸ್ಸಿನ ಚೌಕಟ್ಟು, ದೋಣಿ, ಹಡಗು ಮಾಡಲು, ಟೀ ಪೆಟ್ಟಿಗೆಗಳು, ಸಾಮಾನು ಸಾಗಣೆ ಪೆಟ್ಟಿಗೆಗಳು, ಕಾಗದ, ಪೆನ್ಸಿಲ್, ಚಿತ್ರೋದ್ಯಮದ ಕಾಗದ, ಪಾರದರ್ಶಕ ಅಂಟು ಮುಂತಾದವುಗಳಿಗೆಲ್ಲ ಅರಣ್ಯಗಳ ಕೊಡುಗೆ ಅಪಾರವಾದುದು. ಕಳೆದ ಎರಡು ಶತಮಾನಗಳಿಂದ ಕರ್ನಾಟಕದಲ್ಲಿ ಅರಣ್ಯ ಆಧಾರಿತವಾದ ಹಲವಾರು ಉದ್ಯಮಗಳು ಸ್ಥಾಪಿತವಾಗಿವೆ.

**ಶ್ರೀಗಂಧದ ಉದ್ಯಮ:** ಶ್ರೀಗಂಧದ ಮರ ಕರ್ನಾಟಕಕ್ಕೆ ಪ್ರಕೃತಿದತ್ತ ವರ. ರಾಷ್ಟ್ರದ ಒಟ್ಟು ಉತ್ಪತ್ತಿಯ ಶೇ. 80 ಭಾಗ ಕರ್ನಾಟಕದಲ್ಲಿಯೇ ದೊರೆಯುತ್ತದೆ. ಹೀಗಾಗಿ ಶ್ರೀಗಂಧದ ಬೀಡು ಎನ್ನುವ ಮಾತಿದೆ. ಶ್ರೀಗಂಧದ ತೈಲ ಅತಿ ಪರಿಮಳಯುಕ್ತ ಸುಗಂಧ ದ್ರವ್ಯಗಳಲ್ಲಿ ಒಂದು. ಇದು ಪ್ರಾಚೀನ ಕಾಲದಿಂದ ಇಂದಿನವರೆಗೂ ಪ್ರಪಂಚದಾದ್ಯಂತ ಜನಪ್ರಿಯವಾಗಿದೆ. ಮಧ್ಯಯುಗದಲ್ಲಿ ವರ್ತಕರು ಈ ಸುಗಂಧವನ್ನು ಪರ್ಷಿಯ, ಅರೇಬಿಯ, ಏಷ್ಯಮೈನರ್, ಈಜಿಪ್ಟ್, ಗ್ರೀಸ್ ಮತ್ತು ರೋಮ್‌ಗಳಿಗೆ ಸಾಗಿಸುತ್ತಿದ್ದುದರ ಬಗ್ಗೆ ಉಲ್ಲೇಖವಿದೆ.

ಕರ್ನಾಟಕದ ಶ್ರೀಗಂಧ ಸ್ಯಾಂಟಲಮ್ ಆಲ್ಬಮ್ ಪ್ರಭೇದಕ್ಕೆ ಸೇರುತ್ತದೆ. ಇದರಿಂದ ಗಂಧದೆಣ್ಣೆಯನ್ನು ತೆಗೆಯುತ್ತಾರೆ. ಆಸ್ಟ್ರೇಲಿಯದಲ್ಲಿ ಬೆಳೆಯುವ ಗಂಧದಮರ ಸ್ಯಾಂಟಲಮ್ ಸ್ಪೈಕೇಟಮ್‌ದಿಂದ ತೆಗೆಯುವ ತೈಲದೊಡನೆ ತೀವ್ರ ಪೈಪೋಟಿ ಇದೆಯಾದರೂ ಅದು ಕರ್ನಾಟಕದ ಎಣ್ಣೆಯಷ್ಟು ಉತ್ತಮ ದರ್ಜೆಯದಲ್ಲ. ಆದರೂ ಸುಧಾರಿತ ಭಟ್ಟಿ ಇಳಿಸುವ ವಿಧಾನ, ಸಂಯೋಜಿಸುವ ಮತ್ತು ಮಿಶ್ರಣಮಾಡುವ ವಿಧಾನ, ಉತ್ತಮ ದರ್ಜೆಯ ನಿರ್ವಹಣೆ ಮುಂತಾದವುಗಳಿಂದಾಗಿ ಆಸ್ಟ್ರೇಲಿಯದ ಗಂಧದೆಣ್ಣೆ ಕರ್ನಾಟಕದ ತೈಲದೊಡನೆ ಪೈಪೋಟಿ ನಡೆಸಲು ಸಾಧ್ಯವಾಗಿದೆ. ಇಂಡೋನೇಷ್ಯದಲ್ಲಿ ತಯಾರಿಸುವ ಗಂಧದೆಣ್ಣೆಯೂ ಸ್ವಲ್ಪಮಟ್ಟಿಗೆ ನಮ್ಮ ಶ್ರೀಗಂಧದೆಣ್ಣೆಯೊಂದಿಗೆ ಸ್ಪರ್ಧಿಸುತ್ತಿದೆ.

1912ರ ವರೆಗೂ ಕರ್ನಾಟಕದಿಂದ ಶ್ರೀಗಂಧದ ಚಕ್ಕೆ ಬೇರೆ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಜರ್ಮನಿಗೆ ರಫ್ತಾಗುತ್ತಿತ್ತು. ಅಲ್ಲಿ ಚಕ್ಕೆಯಿಂದ ತೈಲವನ್ನು ತೆಗೆದು ವಿವಿಧ ದೇಶಗಳಿಗೆ ಮಾರುತ್ತಿದ್ದರು. ಒಂದನೆಯ ಮಹಾಯುದ್ಧದ ಪ್ರಯುಕ್ತ ಇದರ ಮಾರಾಟ ನಿಂತುಹೋಯಿತು. ಆಗ ಮೈಸೂರಿನ ದಿವಾನರಾಗಿದ್ದ ಎಂ. ವಿಶ್ವೇಶ್ವರಯ್ಯನವರು ಮರದಿಂದ ಗಂಧದ ಎಣ್ಣೆಯನ್ನು ಹೊರತೆಗೆಯುವ ಯೋಜನೆಯನ್ನು ರೂಪಿಸಿ 1916ರಲ್ಲಿ ಬೆಂಗಳೂರಿನಲ್ಲಿ ಗಂಧದ ಎಣ್ಣೆಯ ಕಾರ್ಖಾನೆಯನ್ನು ಸ್ಥಾಪಿಸಿದರು. 1917ರಲ್ಲಿ ಈ ಕಾರ್ಖಾನೆಯನ್ನು ಮೈಸೂರಿಗೆ ಸ್ಥಳಾಂತರಿಸಲಾಯಿತು. ಮಲೆನಾಡು ಪ್ರದೇಶದಲ್ಲಿ ಮರದಿಂದ ಗಂಧವನ್ನು ಕೆತ್ತಿ ಸಾಗಿಸಿದ ಮೇಲೆ ಉಳಿದ ಚಿಲ್ವಾ ಗಂಧದ ಚಕ್ಕೆಯನ್ನು ವಿಕ್ರಯಿಸುವುದು ಸಮಸ್ಯೆಯಾಯಿತಾದ್ದರಿಂದ ಅದನ್ನು ಉಪಯೋಗಿಸಲು ಶಿವಮೊಗ್ಗದಲ್ಲಿ ಒಂದು ಪರಿವರ್ತನ ಕಾರ್ಖಾನೆಯನ್ನು ಪ್ರಾರಂಭಿಸಲಾಯಿತು. ಇದು 1963ರಲ್ಲಿ ಪೂರ್ಣ ಗಂಧದ ಎಣ್ಣೆ ಕಾರ್ಖಾನೆಯಾಗಿ ಪರಿವರ್ತಿತವಾಯಿತು. ವರ್ಷಂಪ್ರತಿ 2000 ಟನ್ ಶ್ರೀಗಂಧದ ಮರವನ್ನು ಇವೆರಡು ಕಾರ್ಖಾನೆಗಳು ಉಪಯೋಗಿಸುತ್ತಿವೆ.

ಗಂಧದ ಎಣ್ಣೆಗೆ ಯುರೋಪ್, ಅಮೆರಿಕ ಮತ್ತು ಅರಬ್ ದೇಶಗಳಿಂದ ಹೆಚ್ಚು ಬೇಡಿಕೆ ಉಂಟು. ಗಂಧದ ಎಣ್ಣೆಯನ್ನು ಸುಗಂಧ ದ್ರವ್ಯಗಳ ಹಾಗೂ ಮೈ ಸಾಬೂನು ತಯಾರಿಕೆಯಲ್ಲಿ ಬಳಸಲಾಗುತ್ತದೆ. ಗಂಧದ ಪರಿಮಳ ಮನಮೆಚ್ಚುವಂಥದು. ಜೊತೆಗೆ ಗಂಧದಿಂದ ಎಣ್ಣೆಯನ್ನು ತೆಗೆದ ಮೇಲೆ ಬರುವ ಗಂಧದ ಪುಡಿಯಿಂದ ಊದಿನ ಕಡ್ಡಿಯನ್ನು ತಯಾರುಮಾಡುತ್ತಾರೆ. ಈಗ 80 ದೇಶಗಳಿಗೆ ಊದಿನಕಡ್ಡಿ ನಿರ್ಯಾತವಾಗುತ್ತಿದ್ದು ಇದರಿಂದ ಪ್ರತಿವರ್ಷ ಸು. 100 ಕೋಟಿಗಿಂತಲೂ ಹೆಚ್ಚು ವಿದೇಶೀ ವಿನಿಮಯ ಬರುತ್ತಿದೆ. ಗಂಧದ ಮರವನ್ನು ಕೆತ್ತನೆ ಕೆಲಸಕ್ಕೂ ಉಪಯೋಗಿಸುತ್ತಾರೆ. ಮೈಸೂರು, ಬೆಂಗಳೂರು, ಸಾಗರ, ಸೊರಬ, ಕುಮಟ, ಕಾರವಾರಗಳಲ್ಲಿ ಗಂಧದ ಮರದಿಂದ ಕೆತ್ತನೆ ಕೆಲಸ ಮಾಡುವ ಗುಡಿಗಾರಿಕೆಯ ಕುಶಲ ಕೆಲಸಗಾರರರಿದ್ದಾರೆ. ಗಂಧದ ಮರಗಳನ್ನು ಕದ್ದು ಕಡಿದು ಸಾಗಿಸುವ ದಂಧೆಯಿಂದಾಗಿ ಅವುಗಳ ರಕ್ಷಣೆ ದೊಡ್ಡ ಸಮಸ್ಯೆಯಾಗಿದ್ದು ಅವುಗಳ ಲಭ್ಯತೆ ಕ್ಷೀಣಿಸಿದೆ.

**ಕಾಗದದ ಕಾರ್ಖಾನೆಗಳು:** ಬೊಂಬಿನಿಂದ ಕಾಗದವನ್ನು ತಯಾರುಮಾಡುವ ಕಾರ್ಖಾನೆಗಳಾದ ಭದ್ರಾವತಿಯ ಮೈಸೂರು ಕಾಗದದ ಕಾರ್ಖಾನೆ, ದಾಂಡೇಲಿಯ ಪಶ್ಚಿಮ ಕರಾವಳಿಯ ಕಾಗದದ ಕಾರ್ಖಾನೆ (ವೆಸ್ಟ್‌ಕೋಸ್ಟ್ ಪೇಪರ್ ಮಿಲ್) ಇವು ಮುಖ್ಯವಾದವು. ಮೈಸೂರು ಕಾಗದದ ಕಾರ್ಖಾನೆ ವರ್ಷಂಪ್ರತಿ ಸು. 30,000 ಟನ್ ಕಾಗದವನ್ನು ತಯಾರಿಸುತ್ತಿತ್ತು. ದಾಂಡೇಲಿಯಲ್ಲಿರುವ ಪಶ್ಚಿಮ ಕರಾವಳಿಯ ಕಾಗದ ಕಾರ್ಖಾನೆ 1958ರಲ್ಲಿ ಕಾರ್ಯಾರಂಭ ಮಾಡಿತು. ಈ ಕಾರ್ಖಾನೆ ಪ್ರತಿವರ್ಷ ಸು. 45,000 ಟನ್ ಕಾಗದವನ್ನು ತಯಾರಿಸುತ್ತಿತ್ತು. ಇವುಗಳ ಜೊತೆಗೆ ಬೆಳಗೊಳದ ಮಂಡ್ಯ ನ್ಯಾಷನಲ್ ಕಾಗದ ಕಾರ್ಖಾನೆ ಮತ್ತು ಮುನಿರಾಬಾದ್‌ನ ತುಂಗಭದ್ರಾ ಕಾಗದ ಹಾಗೂ ಸ್ಟ್ರಾಬೋರ್ಡ್ ಕಾರ್ಖಾನೆಗಳು ಕಬ್ಬಿನ ಸಿಪ್ಪೆ ಹಾಗೂ ಹುಲ್ಲನ್ನು ಕಚ್ಚಾವಸ್ತುವನ್ನಾಗಿ ಉಪಯೋಗಿಸಿ ಕಾಗದ ತಯಾರಿಸುತ್ತಿದ್ದ ಕಾರ್ಖಾನೆಗಳು. ಈ ಪೈಕಿ ಮೈಸೂರಿನ ಬಳಿ ಬೆಳಗೊಳದ ಕಾರ್ಖಾನೆಯಲ್ಲಿ ಬೊಂಬನ್ನು ಕಚ್ಚಾವಸ್ತುವನ್ನಾಗಿ ಉಪಯೋಗಿಸಿ ಕಾಗದ ತಯಾರಿಕೆಯನ್ನು ಹೆಚ್ಚಿಸುವ ಪ್ರಯತ್ನ ನಡೆಯಿತಾದರೂ ಈ ಯೋಜನೆ ಕಾರ್ಯಗತವಾಗುವ ಮೊದಲೇ ಅನಿವಾರ್ಯವಾಗಿ ಈ ಕಾರ್ಖಾನೆಯನ್ನು ಮುಚ್ಚಲಾಯಿತು. ಇವುಗಳೊಂದಿಗೆ ಕಾರವಾರ ಹಾಗೂ ನಂಜನಗೂಡಿನಲ್ಲಿ ಖಾಸಗಿ ಸ್ವಾಮ್ಯದಲ್ಲಿರುವ ಕಾಗದದ ಕಾರ್ಖಾನೆಗಳೂ ಇವೆ. ಇಂದು ರಾಜ್ಯದಲ್ಲಿ ಒಟ್ಟು 14ಕಕ್ಕೂ ಹೆಚ್ಚು ಕಾಗದದ ಕಾರ್ಖಾನೆಗಳಿವೆ.

**ರಬ್ಬರ್ ಉದ್ಯಮ :** ರಬ್ಬರ್ ಉದ್ಯಮಕ್ಕೆ ಕೇರಳ ಹೆಚ್ಚು ಪ್ರಸಿದ್ಧಿಯಾಗಿದೆ. ಆದರೆ 1961ರಿಂದ ಈಚೆಗೆ ಕರ್ನಾಟಕದಲ್ಲಿ ಸಾವಿರಾರು ಹೆಕ್ಟೆರ್ ಅರಣ್ಯ ಪ್ರದೇಶದಲ್ಲಿ ರಬ್ಬರ್ ನೆಡುತೋಪುಗಳನ್ನು ಬೆಳೆಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ, ಬೆಳ್ತಂಗಡಿ, ಮೂಡುಬಿದರೆ ತಾಲ್ಲೂಕುಗಳಲ್ಲಿ ಹಾಗೂ ಕೊಡಗು ಜಿಲ್ಲೆಯ ಪಶ್ಚಿಮ ಇಳಿಜಾರು ಪ್ರದೇಶಗಳಲ್ಲಿ ಇಂಥ ನೆಡುತೋಪುಗಳಿವೆ. ಈಗ ವರ್ಷಕ್ಕೆ ಸು. 2000 ಟನ್ ರಬ್ಬರ್ ಉತ್ಪಾದನೆಯಾಗುತ್ತಿದೆ. ರಬ್ಬರ್ ನೆಡುತೋಪುಗಳ ಕಾರ್ಯಕ್ರಮದೊಂದಿಗೆ ಶ್ರೀಲಂಕಾದಿಂದ ಬಂದ ನಿರಾಶ್ರಿತರಿಗೆ ಪುನರ್ವಸತಿಕಲ್ಪಿಸುವ ಕಾರ್ಯಕ್ರಮವನ್ನು ಜೋಡಿಸಲಾಗಿದ್ದು, ಈ ಕಾರ್ಯಕ್ರಮದ ಅಡಿಯಲ್ಲಿ ಸು. 10,000 ಮಂದಿಗೆ ಪುನರ್ವಸತಿ ದೊರೆತಿದೆ. ರಬ್ಬರ್ ತಯಾರಿಕೆಯನ್ನು ಆಧರಿಸಿದ, ವಾಹನಗಳ ಚಕ್ರದ ಟ್ಯೂಬು ಹಾಗೂ ಟೈರುಗಳನ್ನೂ ತಯಾರಿಸುವ ಕಾರ್ಖಾನೆಗಳೂ ಈಗ ಕರ್ನಾಟಕದಲ್ಲಿ ಸ್ಥಾಪಿತವಾಗಿವೆ. ಈಗ ಪ್ರತ್ಯೇಕವಾದ ರಬ್ಬರ್ ಉದ್ಯಮ ನಿಗಮವನ್ನೂ ಕೂಡಾ ಪ್ರಾರಂಭಿಸಲಾಗಿದೆ.

**ಸ್ಲೇಟು ಹಾಗೂ ಫೋಟೋ ಚೌಕಟ್ಟಿನ ಉದ್ಯಮಗಳು:** ಚಿಕ್ಕಮಗಳೂರು, ಸಾಗರ, ಕುಶಾಲನಗರ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಸ್ಲೇಟು ಹಾಗೂ ಫೋಟೋ ಚೌಕಟ್ಟಿನ ಅನೇಕ ಉದ್ಯಮಗಳಿವೆ. ಈ ಉದ್ಯಮಗಳು ಸಿಲ್ವರ್ ಓಕ್ ಮತ್ತು ಬೆನ್ನಾಟೆ ಮರಗಳನ್ನು ಉಪಯೋಗಿಸಿಕೊಳ್ಳುತ್ತವೆ. ಜೊತೆಗೆ ಆಂಧ್ರಪ್ರದೇಶದಲ್ಲಿರುವ ಕೆಲವು ಕಾರ್ಖಾನೆಗಳ ಆವಶ್ಯಕತೆಯ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಕರ್ನಾಟಕದ ಅರಣ್ಯಗಳು ಪೂರೈಸುತ್ತಿವೆ.

**ಮರ ಕುಯ್ಯುವ ಕಾರ್ಖಾನೆಗಳು:** ಕರ್ನಾಟಕದಲ್ಲಿ ಸರ್ಕಾರದ ಮತ್ತು ಖಾಸಗಿ ಆಡಳಿತಕ್ಕೊಳಪಟ್ಟಿರುವ 500ಕ್ಕೂ ಹೆಚ್ಚು ಮರ ಕೊಯ್ಯುವ ಕಾರ್ಖಾನೆಗಳಿದ್ದು ಕರ್ನಾಟಕದ ಪ್ರಮುಖ ಉದ್ಯಮವರ್ಗಗಳಲ್ಲಿ ಒಂದು ಎನಿಸಿಕೊಂಡಿದೆ.

**ಕರಕುಶಲ ವಸ್ತುಗಳು :** ಕರ್ನಾಟಕ ಅನಾದಿ ಕಾಲದಿಂದಲೂ ತನ್ನ ಕರಕುಶಲ ಕಲೆಗಳಿಗೆ ಪ್ರಸಿದ್ಧಿಯಾಗಿದೆ. ಕರ್ನಾಟಕದಾದ್ಯಂತ ಕುಶಲ ಕಲೆಗಾರರಿದ್ದಾರೆ. ಮೈಸೂರು, ಚನ್ನಪಟ್ಟಣ, ಬೆಂಗಳೂರು, ಶಿವಮೊಗ್ಗ, ಸಾಗರ, ಸೊರಬ, ಶಿರಸಿ, ಹೊನ್ನಾವರ, ಕುಮಟದ ಕುಶಲಕಲೆಗಾರರು ವಿಶೇಷ ಮನ್ನಣೆಯನ್ನು ಪಡೆದಿದ್ದಾರೆ. ಕೆತ್ತನೆಯ ಕೆಲಸಕ್ಕೆ ಶ್ರೀಗಂಧ, ಆನೆಯ ದಂತ, ಬೀಟೆ, ಹೆತ್ತೇಗ, ಕೂಳ, ಹಲಸು, ಕರಿಮರ ಮುಂತಾದ ಹಲವಾರು ವಸ್ತುಗಳು ಬಳಕೆಯಾಗುತ್ತವೆ.

**ಪ್ರಾಣಿ ಪಕ್ಷಿಗಳ ಚರ್ಮ ಪ್ರಸಾದನ ಉದ್ಯಮಗಳು:** ಕರ್ನಾಟಕದ ಅರಣ್ಯಗಳು ವನ್ಯಪ್ರಾಣಿಗಳ ತವರುಗಳಾಗಿವೆ. ಇತ್ತೀಚಿನವರೆಗೂ ಬೇಟೆಗಾರರಿಗೆ ಅವಕಾಶವಿದ್ದುದರಿಂದ ಬೇಟೆಯಾದ ಪ್ರಾಣಿಪಕ್ಷಿಗಳ ಚರ್ಮವನ್ನು ಹದಗೊಳಿಸುವ ಹಾಗೂ ಆ ಪ್ರಾಣಿಗಳ ಸ್ಥಿರ ಆಕಾರ ನೀಡುವ ಉದ್ಯಮ ಬಹಳ ಹೆಸರುವಾಸಿಯಾಗಿತ್ತು. ಜೊತೆಗೆ ಪಾದರಕ್ಷೆಗಳು ಹಾಗೂ ಇನ್ನಿತರ ಚರ್ಮದ ವಸ್ತುಗಳನ್ನು ತಯಾರಿಸುವ ಉದ್ಯಮವೂ ಸಾಗುತ್ತಿತ್ತು. ಈಗ ಬೇಟೆಯಾಡುವುದು ನಿಷಿದ್ಧವಾದ್ದರಿಂದ ಇಂಥ ಉದ್ಯಮಗಳು ಕಡಿಮೆಯಾಗಿವೆ. ಚರ್ಮದ ಬದಲು ಪ್ಲಾಸ್ಟಿಕ್ ಅಥವಾ ಕೃತಕವಾಗಿ ತಯಾರಿಸಿದ ವಸ್ತುಗಳನ್ನು ಈ ಉದ್ಯಮಗಳಿಗೆ ಬಳಸಲಾಗುತ್ತಿದೆ.

**ಪೆಟ್ಟಿಗೆ ಉದ್ಯಮಗಳು:** ಬೆಂಗಳೂರು, ಮೈಸೂರು, ಹಾಸನ, ಮಂಡ್ಯ, ಬೆಳಗಾಂವಿ, ಸುಳ್ಯ, ಚಾಮರಾಜನಗರ ಮುಂತಾದೆಡೆಗಳಲ್ಲಿ ಮರದ ಪೆಟ್ಟಿಗೆ ತಯಾರಿಕೆಯಲ್ಲಿ ನಿರತವಾದ ಅನೇಕ ಕಾರ್ಖಾನೆಗಳಿವೆ.

**ಪ್ಲೈವುಡ್ ಮತ್ತು ವಿನೀರ್ ಉದ್ಯಮಗಳು:** ಧಾರವಾಡ, ದಾಂಡೇಲಿ, ತಾಳಗುಪ್ಪ, ಸಿದ್ಧಾಪುರ, ಸುಬ್ರಹ್ಮಣ್ಯ, ಮೈಸೂರು, ಹುಣಸೂರು, ಬೆಂಗಳೂರು, ಬಂಟ್ವಾಳ ಮತ್ತು ಹುಬ್ಬಳ್ಳಿಗಳಲ್ಲಿ ಪ್ಲೈವುಡ್ ಮತ್ತು ವಿನೀರ್ ಕಾರ್ಖಾನೆಗಳಿವೆ. ಬಲಂಜಿ, ಅರಶಿನ, ತೇಗ, ಬಿಲ್ವಾರ, ಮದ್ದಾಲೆ, ಕದಂಬ, ಹೆಬ್ಬಲಸು, ಹಲಸು, ಸುರಹೊನ್ನೆ, ಕಾಯಿಧೂಪ, ಗಂಧಗರಿಗೆ, ಬೀಟೆ, ಧೂಮ, ಬಿಳಿದೇವದಾರು, ಪಟ್ಟಗ, ನೇರಳೆ, ಕೂರಿ, ಗೊದ್ದ, ಸಿಲ್ವರ್ ಓಕ್, ದೊಡ್ಡತೊಪ್ಪಾ, ಬೆಂಡೆ, ನಂದಿ, ಬೆನ್ನಾಟೆ, ಗುಳಮಾವು, ಸಂಪಿಗೆ, ಪಾಲಿ ಬೂರುಗ, ಸಾಗುವಾನಿ, ಮತ್ತಿ ಜಾತಿಯ ಮರಗಳು, ಸಾಲುಧೂಪ ಮುಂತಾದ ವೃಕ್ಷಗಳು ಪ್ಲೈವುಡ್ ಮಾಡಲು ಬಳಕೆಯಾಗುತ್ತವೆ.

ಕರ್ನಾಟಕದ ಪ್ಲೈವುಡ್ಡಿಗೆ ಇರಾನ್, ಇರಾಕ್, ಸೌದಿ, ಕುವೈತ್, ಅರೇಬಿಯ, ಶ್ರೀಲಂಕಾ, ಸಿಂಗಪುರ, ಇಂಗ್ಲೆಂಡ್, ಕೆನಡ, ಅಮೆರಿಕ, ಜಪಾನ್, ಜರ್ಮನಿ ಮುಂತಾದ ದೇಶಗಳಿಂದ ಅಧಿಕ ಬೇಡಿಕೆಯಿದೆ. ಈ ಕಾರ್ಖಾನೆ ಅತ್ಯಂತ ಹೆಚ್ಚಿನ ಜನರಿಗೆ ಉದ್ಯೋಗವನ್ನು ಕಲ್ಪಿಸುವ ಮತ್ತು ವಿದೇಶೀ ವಿನಿಮಯವನ್ನು ಒದಗಿಸುವ ಒಂದು ಉದ್ಯಮವಾಗಿದೆ.

**ಬೆಂಕಿಕಡ್ಡಿ ಕಾರ್ಖಾನೆಗಳು:** ಇವು ಮುಖ್ಯವಾಗಿ ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿವೆ. ಈ ಎರಡು ಜಿಲ್ಲೆಗಳಲ್ಲಿ 20 ಕಾರ್ಖಾನೆಗಳಿವೆ. ಅಲ್ಲದೆ ಧಾರವಾಡ, ಚಾಮರಾಜನಗರ, ಸಾಗರ, ಪುತ್ತೂರುಗಳಲ್ಲಿಯೂ ಸಣ್ಣ ಸಣ್ಣ ಕಾರ್ಖಾನೆಗಳಿವೆ. ಆದರೆ ಇವು ಯಾವುವೂ ಪೂರ್ಣ ಪ್ರಮಾಣದ ಕಾರ್ಖಾನೆಗಳಲ್ಲ. ಆದ್ದರಿಂದ ಈ ಕಾರ್ಖಾನೆಗಳು ಕಡ್ಡಿಗಳನ್ನು ಶಿವಕಾಶಿಯಲ್ಲಿರುವ ಕಾರ್ಖಾನೆಗಳಿಗೂ ವಿಮ್‌ಕೋ ಕಂಪನಿಗೂ ಮಾರುತ್ತವೆ. ವಿಮ್‌ಕೋ ಕಂಪನಿ ಚೆನ್ನೈ, ಅಂಬರನಾಥ, ಚೂಟರ್ ಬುಕ್‌ಗಂಜ್, ಕಲ್ಲಿಕೋಟೆ ಹಾಗೂ ಪೋರ್ಟ್‌ಬ್ಲೆರ್‌ಗಳಲ್ಲಿರುವ ತನ್ನ ಕಾರ್ಖಾನೆಗಳಿಗೆ ಬೆಂಕಿಕಡ್ಡಿಗಳನ್ನು ಕಳುಹಿಸಿ ಪೊಟ್ಟಣಗಳನ್ನು ತಯಾರಿಸುತ್ತದೆ. ಶಿವಮೊಗ್ಗದಲ್ಲಿ ಬೆಂಕಿ ಪೊಟ್ಟಣಗಳನ್ನು ತಯಾರಿಸುವ ಕಾರ್ಖಾನೆ ಇದೆ. ಇತ್ತೀಚೆಗೆ ಕೆಲವು ಅದ್ದುವ ಕಾರ್ಖಾನೆಗಳು ಪ್ರಾರಂಭವಾಗಿವೆ. ಮರದ ಕಡ್ಡಿಯ ಬದಲು ಎಣ್ಣೆ ಕಾಗದದ ಕಡ್ಡಿಗಳನ್ನು ತಯಾರಿಸಲಾಗುತ್ತದೆ.

**ಹರಿಹರ ಪಾಲಿಫೈಬರ್ ಕಾರ್ಖಾನೆ:** ಇದು 1970ರಲ್ಲಿ ಕಾರ್ಯಾರಂಭ ಮಾಡಿತು. ಈ ಕಾರ್ಖಾನೆಗೆ ದಿನವಹಿ 1200 ಟನ್ನು ನೀಲಗಿರಿ ಮರ ಕಚ್ಚಾವಸ್ತುವಾಗಿ ಬೇಕಾಗುತ್ತದೆ. ಈ ಕಾರ್ಖಾನೆ ಸಾವಿರಾರು ಮಂದಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಿದೆಯಲ್ಲದೆ ಪರೋಕ್ಷವಾಗಿ 10,000 ಮಂದಿಗೆ ಉದ್ಯೋಗ ದೊರಕುವಂತೆ ಮಾಡಿದೆ. ಇದರೊಂದಿಗೆ ಕೇರಳದ ಮಾವೂರಿನಲ್ಲಿರುವ ಗ್ವಾಲಿಯರ್ ರೆಯಾನ್ ಕಾರ್ಖಾನೆಗೆ ಇತ್ತೀಚಿನವರೆಗೂ ಕರ್ನಾಟಕದ ಅರಣ್ಯಗಳಿಂದ ಬೊಂಬು ಮತ್ತು ಸೌದೆ ಸರಬರಾಜಾಗುತ್ತಿದ್ದವು.

**ಮರ ಸಂರಕ್ಷಣೆ ಕಾರ್ಯಾಗಾರ:** ಎರಡನೆಯ ಮಹಾಯುದ್ಧದ ಅನಂತರ ಸಾಗುವಾನಿ ಮರ ನಶಿಸುತ್ತ ಬಂದಿದ್ದರಿಂದ ಕೆಳದರ್ಜೆಯ ಜಾತಿಯ ಮರಗಳನ್ನು ಸಾಗುವಾನಿ ಮರದ ಬದಲು ಉಪಯೋಗಿಸುವ ಸಾಧ್ಯತೆಯನ್ನು ಕುರಿತು ಅಧ್ಯಯನ ನಡೆಸಲಾಗಿದೆ.

ರಕ್ಷಕ ರಾಸಾಯನಿಕ ಪದಾರ್ಥವನ್ನು ಉಪಯೋಗಿಸಿ ಮರಗಳನ್ನು ಅಧಿಕ ಕಾಲಾವಧಿಯವರೆಗೂ ಉಪಯೋಗಕ್ಕೆ ಬರುವಂತೆ ಮಾಡುವ ತಂತ್ರವನ್ನು ಕಂಡುಹಿಡಿಯಲಾಗಿದೆ. ಈಗ ಸರ್ಕಾರದ ಅಧೀನದಲ್ಲಿ ಮಂಗಳೂರು ಮತ್ತು ಶಿವಮೊಗ್ಗದಲ್ಲಿ ಮರ ಸಂರಕ್ಷಕ ಕಾರ್ಯಾಗಾರಗಳಿವೆ. ಮುಖ್ಯವಾಗಿ ವಿದ್ಯುಚ್ಛಕ್ತಿ ಕಂಬಗಳಿಗೆ ಹಾಗೂ ರೈಲ್ವೆ ಹಳಿಗಳ ಕೆಳಗೆ ಉಪಯೋಗಿಸುವ ಅಡಿಮರಗಳನ್ನು ಇಲ್ಲಿ ಸಂಸ್ಕರಿಸಲಾಗುವುದು. ಖಾಸಗಿ ಆಡಳಿತಕ್ಕೊಳಪಟ್ಟ ಇನ್ನೊಂದು ಕಾರ್ಯಾಗಾರ ಹುಬ್ಬಳ್ಳಿಯಲ್ಲಿದೆ. ಇತ್ತೀಚೆಗೆ ವಿದ್ಯುತ್ ಕಂಬಗಳಿಗೆ ಹಾಗೂ ರೈಲ್ವೆ ಹಳಿಗಳ ಅಡಿಪಟ್ಟಿಗಳಿಗೆ ಮರದ ಬದಲು ಕಾಂಕ್ರೀಟ್ ಕಂಬಗಳನ್ನು ಬಳಸುವುದರ ಮೂಲಕ ಮರಗಳನ್ನು ಕಡಿದು ಉಪಯೋಗಿಸುವುದನ್ನು ಕಡಿಮೆ ಮಾಡಲಾಗುತ್ತಿದೆ. ಕರ್ನಾಟಕದ ಕಾಡುಗಳಲ್ಲಿ ನಾಟಾಕ್ಕೆ ಉಪಯುಕ್ತವಾದ ಮರಗಳ ಪ್ರಮಾಣ ತುಂಬಾ ಕ್ಷೀಣಿಸಿದ್ದರಿಂದ ಆಗ್ನೇಯ ಏಷ್ಯದ ರಾಷ್ಟ್ರಗಳಿಂದ ಮತ್ತು ಆಫ್ರಿಕದಿಂದ ಮರದ ದಿಮ್ಮಿಗಳನ್ನು ಆಮದು ಮಾಡಿಕೊಳ್ಳುವುದು ಹೆಚ್ಚಿದೆ.

**ಪೀಠೋಪಕರಣಗಳ ಉದ್ಯಮ:** ಈ ಉದ್ಯಮಕ್ಕೆ ಬೆತ್ತ, ಮರ ಮತ್ತು ಪ್ಲೈವುಡ್‌ಗಳನ್ನು ಉಪಯೋಗಿಸುತ್ತಾರೆ. ಕೊಡಗಿನ ಮೂರ್‌ಕಲ್ ಮತ್ತು ಶಿವಮೊಗ್ಗದಲ್ಲಿ ಸರ್ಕಾರದ ಅಧೀನಕ್ಕೊಳಪಟ್ಟ ಪೀಠೋಪಕರಣ ತಯಾರಿಕೆಯ ಎರಡು ಘಟಕಗಳಿವೆ. ಇವುಗಳ ಜೊತೆಗೆ ಖಾಸಗಿ ಕ್ಷೇತ್ರದಲ್ಲಿ ಸಾವಿರಾರು ಘಟಕಗಳು ಕೆಲಸಮಾಡುತ್ತಿವೆ. ಇದಲ್ಲದೆ ವಿವಿಧ ಜಿಲ್ಲೆಗಳಲ್ಲಿರುವ ಬಂದೀಖಾನೆಗಳಲ್ಲಿ ಕೂಡಾ ಪೀಠೋಪಕರಣಗಳ ತಯಾರಿಕೆಯ ಕೆಲಸ ನಡೆಯುತ್ತದೆ.

**ಚಿಪ್ ಬೋರ್ಡ್ ಉದ್ಯಮ:** ಯಾವ ಕೈಗಾರಿಕೆಗಳಿಗೂ ಬಾರದ ವಿವಿಧ ಜಾತಿಯ ಸಣ್ಣಮರದ ತುಂಡುಗಳಿಂದ ಚಿಪ್ ಬೋರ್ಡ್‌ನ್ನು ತಯಾರಿಸಬಹುದು. ಅರಣ್ಯ ಉದ್ಯಮದಲ್ಲಿ ಇದೊಂದು ಬಹುಮುಖ್ಯ ಪ್ರಗತಿಪರ ಹೆಜ್ಜೆ. ಚಿಪ್ ಬೋರ್ಡ್‌ಗಳನ್ನು ಶಕ್ತಿ ಪ್ರಾಧನ್ಯವಿಲ್ಲದ ಭಾಗಗಳಲ್ಲಿ ಹಲಗೆಗಳ ಬದಲಾಗಿ ಉಪಯೋಗಿಸಬಹುದು.

1973ರಲ್ಲಿ ಕರ್ನಾಟಕ ಸರ್ಕಾರ ಅರಣ್ಯ ಕೈಗಾರಿಕಾ ನಿಗಮವನ್ನು ರಚಿಸಿತು. ನಿರ್ದೇಶಕರೊಬ್ಬರ ನೇತೃತ್ವದಲ್ಲಿ ಈ ನಿಗಮ ಅರಣ್ಯೋತ್ಪನ್ನಗಳನ್ನು ಅವಲಂಬಿಸಿದ ಉದ್ಯಮಗಳ ಉಸ್ತುವಾರಿ ನಡೆಸುತ್ತದೆ. ಈ ನಿಗಮ ಉತ್ತರ ಕನ್ನಡದಲ್ಲಿ ಕಾಗದದ ಕಾರ್ಖಾನೆ, ಧಾರವಾಡ ಮತ್ತು ದಕ್ಷಿಣ ಕನ್ನಡದಲ್ಲಿ ವಿನೀರ್ ಉದ್ಯಮ, ಅನೇಕ ಜಿಲ್ಲೆಗಳಲ್ಲಿ ಹುಲ್ಲಿನ ಪೆಲ್ಲಟೈಸೇಶನ್ ಉದ್ಯಮ, ಶಿವಮೊಗ್ಗದಲ್ಲಿ ಬೆಂಕಿಕಡ್ಡಿ ಕಾರ್ಖಾನೆಗಳನ್ನು ಸ್ಥಾಪಿಸಿದೆ. ಮೈಸೂರಿನಲ್ಲಿರುವ ಖಾಸಗಿ ಸ್ವಾಮ್ಯದ ರಬ್ಬರ್ ಚಕ್ರದ ಉದ್ಯಮಗಳ ಮೇಲುಸ್ತುವಾರಿಯನ್ನೂ ಮಾಡುತ್ತಿದೆ. 1971ರಲ್ಲಿ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಕರ್ನಾಟಕದ ಅರಣ್ಯ ಅಭಿವೃದ್ಧಿ ನಿಗಮ ರಾಜ್ಯದಲ್ಲಿ ವಿವಿಧ ಪ್ರಕಾರದ ನೆಡುತೋಪುಗಳನ್ನು ಬೆಳೆಸಿ ಅರಣ್ಯಪ್ರದೇಶವನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಗೇರು ನೆಡುತೋಪುಗಳನ್ನು ಬೆಳೆಸಲು 1978ರಲ್ಲಿ ಗೇರು ಅಭಿವೃದ್ಧಿ ನಿಗಮ ರಚಿತವಾಗಿದೆ. ಇದಲ್ಲದೆ ಅರಣ್ಯ ಪ್ರವಾಸಿ ವಸತಿ ಗೃಹಗಳು ಮತ್ತು ಪ್ರವಾಸಿ ತಾಣಗಳ ನಿಗಮವೂ ಇದೆ. ಇದಕ್ಕೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳೇ ವ್ಯವಸ್ಥಾಪಕ ನಿರ್ದೇಶಕರು. ಇಷ್ಟೆಲ್ಲ ಬೃಹತ್ ವ್ಯವಸ್ಥೆಯೊಂದಿಗೆ ಅರಣ್ಯವನ್ನು ಉಳಿಸಿ, ಬೆಳೆಸಿ, ಬಳಸಿಕೊಳ್ಳುವ ಏರ್ಪಾಡು ನಡೆದಿದೆ. ಆದರೆ ಅರಣ್ಯ ನೋಡುನೋಡುತ್ತಲೇ ಕ್ಷೀಣಿಸುತ್ತಿರುವುದು ಮತ್ತು ಅದರಲ್ಲಿನ ಬೆಲೆಬಾಳುವ ಮರಗಳು ಕಣ್ಮರೆಯಾಗುತ್ತಿರುವುದು ವ್ಯವಸ್ಥೆಯಲ್ಲಿನ ದೌರ್ಬಲ್ಯಕ್ಕೆ ಸಾಕ್ಷಿಯಾಗಿದೆ. ಇದರಿಂದ ಪಾರಾಗುವ ಅಗತ್ಯವಿದೆ. (ಬಿ.ಬಿ.)

**ಕರ್ನಾಟಕದ ಆರ್ಥಿಕ ಪ್ರಗತಿ :** ಏಕೀಕರಣದ ಅನಂತರ ಕರ್ನಾಟಕ ಸಾಧಿಸಿರುವ ಆರ್ಥಿಕ ಪ್ರಗತಿಯನ್ನು ಈ ಲೇಖನದಲ್ಲಿ ವಿವೇಚಿಸಲಾಗಿದೆ. ಕರ್ನಾಟಕದ ಒಟ್ಟು ವರಮಾನ 1956-57ರಲ್ಲಿ ರೂ.495 ಕೋಟಿ ಇದ್ದದ್ದು 1968-69ರಲ್ಲಿ ರೂ.1,360 ಕೋಟಿಗೆ ಏರಿತ್ತು. ಸರಾಸರಿ ತಲಾ ವರಮಾನ ರೂ.200 ರಿಂದ ರೂ.500ಕ್ಕೆ ಅಧಿಕಗೊಂಡಿತ್ತು.

ವ್ಯವಸಾಯ, ನೀರಾವರಿ ಮತ್ತು ವಿದ್ಯುಚ್ಛಕ್ತಿ: ಕರ್ನಾಟಕದ ಆರ್ಥಿಕ ಜೀವನದಲ್ಲಿ ಬಹುಮುಖ್ಯ ಪಾತ್ರವಹಿಸಿವೆ. ಕೈಗಾರಿಕೆಯ ಬೆಳವಣಿಗೆಯಾಗುತ್ತಿದ್ದರೂ ಕರ್ನಾಟಕ ಈಗಲೂ ಭಾರತದ ಇತರ ರಾಜ್ಯಗಳಂತೆಯೇ ವ್ಯವಸಾಯ ಪ್ರಧಾನ ರಾಜ್ಯವಾಗಿದೆ. 1971ರ ಜನಗಣತಿಯ ಪ್ರಕಾರ ಶೇ. 24.3ರಷ್ಟು ಜನ ಮಾತ್ರ ಪಟ್ಟಣವಾಸಿಗಳಾಗಿದ್ದರು. ಉಳಿದವರು ಗ್ರಾಮವಾಸಿಗಳು. ಇವರ ಕಸುಬು ಪ್ರಧಾನವಾಗಿ ವ್ಯವಸಾಯ. ಈ ರಾಜ್ಯದ ಒಟ್ಟು ವರಮಾನದಲ್ಲಿ ವ್ಯವಸಾಯ ಮೂಲದಿಂದ ಬರುವುದು ಅರ್ಧಕ್ಕಿಂತಲೂ ಹೆಚ್ಚು ಇದ್ದಿತು. 1968-69ರ ಅಂದಾಜಿನ ಪ್ರಕಾರ, ದೇಶದ ಒಟ್ಟು ವರಮಾನದಲ್ಲಿ ಶೇ. 58ರಷ್ಟು ವ್ಯವಸಾಯದಿಂದ ಬಂದದ್ದು. ವ್ಯವಸಾಯ, ಮೀನುಗಾರಿಕೆ, ಪಶುಪಾಲನೆ ಮತ್ತು ಅರಣ್ಯಸಂಪತ್ತಿನ ವರಮಾನಗಳೆಲ್ಲವನ್ನೂ ಒಟ್ಟಿಗೆ ಸೇರಿಸಿದರೆ ರಾಜ್ಯದ ಒಟ್ಟು ವರಮಾನದಲ್ಲಿ ಇದು ಶೇ. 64 ಆಗುತ್ತಿತ್ತು.

ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯ ಕ್ಷೇತ್ರಕ್ಕೆ ಪ್ರಾಮುಖ್ಯ ಕೊಟ್ಟಿದೆ. ಬೇಸಾಯಕ್ಕೊಳಪಟ್ಟ ಜಮೀನಿನ ವಿಸ್ತೀರ್ಣ 1957-67ರ ದಶಕದಲ್ಲಿ 0.04 ಕೋಟಿ ಹೆಕ್ಟೇರುಗಳಷ್ಟು ಅಧಿಕವಾಯಿತು. ಆಹಾರ ಧಾನ್ಯಗಳನ್ನು ಬೆಳೆಯುವ ಭೂವಿಸ್ತೀರ್ಣ ಇದೇ ಅವಧಿಯಲ್ಲಿ 6.5 ಲಕ್ಷ ಹೆಕ್ಟೇರುಗಳಷ್ಟು ಅಧಿಕವಾಯಿತು. ಆಹಾರ ಧಾನ್ಯದ ಉತ್ಪಾದನೆ ಕಳೆದ ಹತ್ತು ವರ್ಷಗಳಿಂದ ಹೆಚ್ಚಾಗಿದ್ದರೂ ಇದು ಬೇಡಿಕೆಗೆ ಸಮನಾದ ಮಟ್ಟ ಮುಟ್ಟಲಿಲ್ಲ. 1969-70ರಲ್ಲಿ ಆಹಾರಧಾನ್ಯದ ಉತ್ಪಾದನೆ 51.8 ಲಕ್ಷ ಟನ್‌ಗಳಷ್ಟಿತ್ತು. ಬೇಸಾಯ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಿಸಲು ಸರ್ಕಾರದವರು ಕಳೆದ ಹತ್ತು ದಶಕಗಳಲ್ಲಿ ಅನೇಕ ಯೋಜನೆಗಳನ್ನು ಕೈಗೊಂಡಿದ್ದಾರೆ. ಭೂಮಿಯ ಅಭಿವೃದ್ಧಿ, ರಾಸಾಯನಿಕ ಗೊಬ್ಬರದ ಬಳಕೆ, ಉತ್ತಮ ಬಗೆಯ ಬಿತ್ತನೆ ಬೀಜ, ಸಾಲ ನೀಡಿಕೆ, ಸಸಿಗಳ ರೋಗ ನಿವಾರಣೆ, ಒಳ್ಳೆಯ ಕೃಷಿ ವಿಧಾನಗಳ ಅನುಸರಣೆ, ನೀರಾವರಿ ಯೋಜನೆ ಮುಂತಾದವು ಇವುಗಳಲ್ಲಿ ಸೇರಿವೆ. ಸರ್ಕಾರ ವ್ಯವಸಾಯಾಭಿವೃದ್ಧಿಗೆ ಸಾವಿರಾರು ಕೋಟಿ ರೂ. ವೆಚ್ಚ ಮಾಡಿದೆ. ಈ ಕಾರ್ಯಗಳಿಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಕ್ರಮೇಣ ಹೂಡಿಕೆಯನ್ನು ಹೆಚ್ಚಿಸಲಾಯಿತು. ಈ ಎಲ್ಲ ಕಾರ್ಯಕ್ರಮಗಳಿಂದ ಹೆಚ್ಚಿಗೆ ಉತ್ಪಾದನೆ ಮಾಡಲು ರೈತರಿಗೆ ಹೆಚ್ಚು ಅವಕಾಶ ದೊರೆತಿದೆ.

ಬೇಸಾಯ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಿಸಲು ನೀರಿನ ಸರಬರಾಜು ಸಹ ಅತ್ಯಾವಶ್ಯಕ. ಇದಕ್ಕಾಗಿ ಸರ್ಕಾರ ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡಿದೆ. ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭಿಸುವ ಮುನ್ನ ಕರ್ನಾಟಕದಲ್ಲಿ ಮಧ್ಯಮ ಮತ್ತು ದೊಡ್ಡ ನೀರಾವರಿ ಯೋಜನೆಗಳಿಂದ ಒಟ್ಟು 6.9 ಲಕ್ಷ ಹೆಕ್ಟೇರುಗಳಿಗೆ ಸೌಲಭ್ಯ ಒದಗಿತ್ತು. ಈಗ ಎಲ್ಲ ಬಗೆಯ ಯೋಜನೆಗಳಿಂದ ಸುಮಾರು 12 ಲಕ್ಷ ಹೆಕ್ಟೇರುಗಳಷ್ಟು ಜಮೀನಿಗೆ ನೀರು ಸರಬರಾಜಾಗುತ್ತಿದೆ. ಇದೇ ರೀತಿಯಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯೂ ಹೆಚ್ಚಾಗಿದೆ. ಒಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಗೆ ಸರ್ಕಾರ 30 ಕೋಟಿ ರೂ.ಗಳಷ್ಟು ವೆಚ್ಚ ಮಾಡಿತ್ತು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ 175 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿತ್ತು. ಪ್ರಸ್ತುತ ಈ ಬಾಬಿನಲ್ಲಿ ಸಾವಿರಾರು ಕೋಟಿಗಳ ಹೂಡಿಕೆಯಾಗುತ್ತಿದೆ.

**ಅರಣ್ಯ ಸಂಪತ್ತು:** ಕರ್ನಾಟಕದ ಅರಣ್ಯದ ವಿಸ್ತೀರ್ಣ ಭಾರತದ ಸರಾಸರಿ ಅರಣ್ಯ ಸಂಪತ್ತಿನ ವಿಸ್ತೀರ್ಣಕ್ಕಿಂತ ಕಡಿಮೆ ಇದೆ. ಭಾರತದ ವಿಸ್ತೀರ್ಣ ಒಟ್ಟು ನೆಲದ ಸು.22% ರಷ್ಟು; ಕರ್ನಾಟಕದಲ್ಲಿ ಸು. ಶೇ.18 ರಷ್ಟಿದೆ. ಆದರೆ ಈ ಸ್ವಲ್ಪ ಪ್ರದೇಶದಲ್ಲಿಯೇ ಅರಣ್ಯಸಂಪತ್ತು ವಿಪುಲವಾಗುಂಟು. ಒಂದು ಚದರ ಕಿಮೀ. ಅರಣ್ಯದ ವಾರ್ಷಿಕ ವರಮಾನ ಸುಮಾರು 3,000 ರೂ. 1956ಕ್ಕೆ ಮುಂಚೆ ಅರಣ್ಯ ಇಲಾಖೆಯಿಂದ ಸರ್ಕಾರಕ್ಕೆ ಸುಮಾರು 4.97 ಕೋಟಿ ರೂ.ಗಳಷ್ಟು ಉತ್ಪತ್ತಿ ಇತ್ತು. 1968-69ರಲ್ಲಿ ಇದರ ಆದಾಯ 13.5 ಕೋಟಿ ರೂ.ಗಳಿಗೇರಿತ್ತು. ಪ್ರಸ್ತುತ ಸಾಮಾಜಿಕ ಅರಣ್ಯ ಬೆಳಸುವ ಮೂಲಕ ಮತ್ತು ತೇಗ, ನೀಲಗಿರಿ ಪ್ಲಾಂಟೇಷನ್‌ಗಳನ್ನು ರೂಪಿಸುವ ಮೂಲಕ ಅರಣ್ಯಗಳ ಉತ್ಪತ್ತಿ ಹೆಚ್ಚಿಸಲಾಗಿದೆ.

ಮೀನುಗಾರಿಕೆ: ಪಂಚವಾರ್ಷಿಕ ಯೋಜನೆಗಳಲ್ಲಿ ಮೀನುಗಾರಿಕೆಗೆ ಹೆಚ್ಚು ಗಮನ ಸಂದಿದೆ. ಯಂತ್ರದ ದೋಣಿಗಳನ್ನು ಕಟ್ಟಲೂ ಮೀನು ಹಿಡಿಯಲು ಬೇಕಾಗುವ ಯಂತ್ರೋಪಕರಣಗಳನ್ನು ಒದಗಿಸಲೂ ಮೀನುಗಾರಿಕೆಯಲ್ಲಿ ಶಿಕ್ಷಣ ಕೊಡಲೂ ಸಾಕಷ್ಟು ಹಣ ವೆಚ್ಚವಾಗುತ್ತಿದೆ.

**ಖನಿಜಸಂಪತ್ತು:** ಕರ್ನಾಟಕದ ಖನಿಜಸಂಪತ್ತು ರಾಜ್ಯದ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲಕರ. ಕಬ್ಬಿಣದ ಅದಿರಿನ ಅಭಿವೃದ್ಧಿಗಾಗಿ ರಾಷ್ಟ್ರೀಯ ಖನಿಜಸಂಪತ್ತಿನ ಅಭಿವೃದ್ಧಿ ಸಂಸ್ಥೆ ಒಂದು ಯೋಜನೆಯನ್ನು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಕೈಗೊಂಡಿದೆ. ಭಾರತದಲ್ಲಿ ಕಬ್ಬಿಣದ ಅದಿರನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ ನಾಲ್ಕನೆಯ ಸ್ಥಾನ. ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಭಾಗಗಳಲ್ಲೂ ಇರುವ ನಿಕ್ಷೇಪಗಳು ಸೇರಿ ಕರ್ನಾಟಕದಲ್ಲಿ 120 ರಿಂದ 150 ಕೋಟಿ ಟನ್‌ಗಳಷ್ಟು ಉತ್ತಮ ದರ್ಜೆಯ ಕಬ್ಬಿಣದ ಅದಿರು ದೊರೆಯುತ್ತದೆಂದು ಅಂದಾಜು ಮಾಡಲಾಗಿದೆ. ಇತ್ತೀಚಿನ ದಶಕಗಳಲ್ಲಿ ಬಳ್ಳಾರಿ ಹಾಗೂ ಕುದುರೆಮುಖ ಗಣಿಗಳಲ್ಲಿ ಹೇರಳ ಅದಿರು ತೆಗೆದು ರಫ್ತು ಮಾಡಿ ಭಾರಿ ವಿದೇಶಿ ವಿನಿಮಯ ಗಳಿಸಲಾಯಿತು. ಆಂತರಿಕ ಬಳಕೆಗೂ ಕಬ್ಬಿಣ ಸುಲಭ ಬೆಲೆಯಲ್ಲಿ ದೊರಕಿತು.

**ಕೈಗಾರಿಕೆಗಳು :** ಕರ್ನಾಟಕದ ಕೈಗಾರಿಕೆಯ ಚರಿತ್ರೆ ಗಮನಾರ್ಹವಾದದ್ದು. ಏಕೆಂದರೆ 19ನೆಯ ಶತಮಾನದ ಕೊನೆಯಲ್ಲಿಯೇ ಈ ದೇಶದಲ್ಲಿ ಕೈಗಾರಿಕೆಗಳ ಬೆಳವಣಿಗೆ ಪ್ರಾರಂಭವಾಯಿತೆಂದು ಹೇಳಬಹುದು. 1885ರಲ್ಲಿ ಕರ್ನಾಟಕದಲ್ಲಿ ಮೊದಲನೆಯ ಹತ್ತಿಗಿರಣಿ ಪ್ರಾರಂಭವಾಯಿತು. 1902ರಲ್ಲಿ ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ ಮಾಡಲು ಆರಂಭಿಸಿದಾಗಿನಿಂದ ಕರ್ನಾಟಕದ ಕೈಗಾರಿಕಾಭಿವೃದ್ಧಿಗೆ ಬಹಳ ಅನುಕೂಲವಾಯಿತು. ವಿದ್ಯುಚ್ಛಕ್ತಿಯ ಉತ್ಪಾದನೆ ಪ್ರಾರಂಭವಾದ ಹತ್ತು ವರ್ಷಗಳಲ್ಲಿ ಸುಮಾರು 100 ಕೈಗಾರಿಕೆಗಳು ಬಂದುವು. 1913ರಲ್ಲಿಯೇ ಆಗಿನ ಮೈಸೂರು ಸರ್ಕಾರ ಉತ್ಪಾದನಾಂಗಗಳ ಸರಬರಾಜಿನ ಅಂದಾಜು ಮಾಡಿ ಅದರಿಂದ ಅನೇಕ ಕೈಗಾರಿಕೆಗಳ ಸ್ಥಾಪನೆಯ ಸಾಧ್ಯತೆಯನ್ನು ತೋರಿಸಿಕೊಟ್ಟಿತು. ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾದ ಮೇಲೆ (1912-18) ಕೈಗಾರಿಕೆಗಳ ನವಯುಗ ಪ್ರಾರಂಭವಾಯಿತು. ಮಹಾರಾಜ

ನಾಲ್ವಡಿಕೃಷ್ಣರಾಜ ಒಡೆಯರ ಪ್ರೋತ್ಸಾಹದೊಂದಿಗೆ ಅವರು ಹತ್ತು ಹಲವು ಕೈಗಾರಿಕೆಗಳನ್ನು ಸ್ಥಾಪಿಸಿದರು, ಕೈಗಾರಿಕಾ ತರಬೇತಿ ತೆರೆದರು. ಆಗ ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ಜನ್ಮತಾಳಿದುವು. ಅವುಗಳಲ್ಲಿ ಮುಖ್ಯವಾದವೆಂದರೆ ಕಬ್ಬಿಣ, ಚಿನ್ನದ ಗಣಿ, ಹತ್ತಿ, ರೇಷ್ಮೆ, ಕಂಬಳಿ, ಸಕ್ಕರೆ, ರಸಾಯನಿಕ ಗೊಬ್ಬರ ಮತ್ತು ಕಾಗದದ ಕೈಗಾರಿಕೆ. 1945ರ ವೇಳೆಗೆ ಸುಮಾರು 600 ದೊಡ್ಡ ಕೈಗಾರಿಕೆಗಳು ಇದ್ದು ಇವುಗಳಲ್ಲಿ ಸುಮಾರು 80,000 ಜನ ಕೆಲಸ ಮಾಡುತ್ತಿದ್ದರು. ಬೆಂಗಳೂರು, ಮೈಸೂರು ಮತ್ತು ಕೋಲಾರದ ಚಿನ್ನದ ಗಣಿ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ಇದ್ದುದರಿಂದ ಕೈಗಾರಿಕೆಗಳು ಅಲ್ಲಿ ಕೇಂದ್ರೀಕೃತವಾದುವು. ಇತ್ತೀಚೆಗೆ ರಾಜ್ಯದ ಹಲವು ಕಡೆಗಳಲ್ಲಿ ಕೈಗಾರಿಕೆಗಳನ್ನು ಏರ್ಪಡಿಸಲು ಸರ್ಕಾರ ಉತ್ತೇಜನ ನೀಡುತ್ತಿದೆ. ಸಣ್ಣ ಕೈಗಾರಿಕೆಗಳಲ್ಲಿ ಮುಖ್ಯವಾದುವೆಂದರೆ ಬುಟ್ಟಿ ಹೆಣಿಕೆ, ನೇಯ್ಗೆ, ಮಡಕೆ ಹೆಂಚು ತಯಾರಿಕೆ, ಎಣ್ಣೆ ತೆಗೆಯುವುದು, ಚಿನ್ನ ಬೆಳ್ಳಿ ಸಾಮಾನುಗಳ ತಯಾರಿಕೆ, ಮರದ ಕೆಲಸ, ಚಾಪೆ ಹೆಣಿಕೆ, ಚರ್ಮ, ಬೀಡಿ, ಅಗರಬತ್ತಿ ತಯಾರಿಕೆ ಮುಂತಾದವು. ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಮೊದಲಿನಿಂದಲೂ ವಿಶಿಷ್ಟ ಸ್ಥಾನವನ್ನು ಕೊಡಲಾಗಿದೆ. ಇದರಿಂದ ಲಕ್ಷಾಂತರ ಜನ ಜೀವನ ಸಾಗಿಸುತ್ತಿದ್ದಾರೆ.

ವಿಶಾಲ ಕರ್ನಾಟಕ ರಚನೆಯಾದ ಮೇಲೆ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಮತ್ತಷ್ಟು ಉತ್ತೇಜನ ಕೊಡಲಾಗಿದೆ. ಇದರಿಂದ ಸಾವಿರಾರು ದೊಡ್ಡ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ರಾಜ್ಯದಲ್ಲಿ ಸ್ಥಾಪಿತವಾದುವು. ಇವು ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳೆರಡಲ್ಲಿಯೂ ಸ್ಥಾಪಿತವಾಗಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾಭಿವೃದ್ಧಿಗಾಗಿ ನೂರಾರು ಕೋಟಿ ರೂ.ಗಳನ್ನು ಮೀಸಲಿಡಲಾಯಿತು. ಇದರ ಫಲವಾಗಿ ಕರ್ನಾಟಕದ ಒಟ್ಟು ಕಾರ್ಖಾನೆಗಳ ಸಂಖ್ಯೆ 1956–67ರ ಅವಧಿಯಲ್ಲಿ 1,640 ರಿಂದ 3,100ಕ್ಕೆ ಏರಿತು. ಇದೇ ಅವಧಿಯಲ್ಲಿ ಈ ಕಾರ್ಖಾನೆಯಲ್ಲಿ ಕೆಲಸ ಮಾಡುವವರ ಸಂಖ್ಯೆ 1.96 ಲಕ್ಷದಿಂದ 2.42 ಲಕ್ಷಕ್ಕೇರಿತು. ಕೈಗಾರಿಕಾ ಕ್ಷೇತ್ರದ ಉತ್ಪಾದನೆ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ದಿನೇ ದಿನೇ ಹೆಚ್ಚುತ್ತಿದೆ.

**ಸಾರಿಗೆ ಮತ್ತು ಸಂಪರ್ಕ:** ರಾಜ್ಯದ ಪಂಚವಾರ್ಷಿಕ ಯೋಜನೆಯಲ್ಲಿ ಸಾರಿಗೆ ಸಂಪರ್ಕಗಳ ಅಭಿವೃದ್ಧಿಗಾಗಿಯೂ ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಇದರ ಫಲವಾಗಿ 1956ರಲ್ಲಿ 10060 ಕಿಮೀಗಳ ರಸ್ತೆಗಳಿದ್ದು 1969ರಲ್ಲಿ 45600 ಕಿಮೀಗಳಿಗೆ ಹೆಚ್ಚಿತ್ತು. ಎಲ್ಲ ಹಳ್ಳಿಗಳಿಗೂ ಪಟ್ಟಣಗಳಿಗೂ ರಸ್ತೆಯ ಮೂಲಕ ಸಂಪರ್ಕ ಏರ್ಪಡಿಸಿ ಸಾಮಾನು ಸಾಗಾಣಿಕೆಗೂ ವ್ಯಾಪಾರಕ್ಕೂ ಅನುಕೂಲ ಮಾಡುವುದು ಸರ್ಕಾರದ ಉದ್ದೇಶ. ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆ ಈ ವಿಷಯದಲ್ಲಿ ಮಹತ್ತರವಾದ ಕೆಲಸ ಮಾಡುತ್ತಿದೆ. ಹಾಸನ–ಮಂಗಳೂರು ಮತ್ತು ಬೆಂಗಳೂರು–ಸೇಲಂ ರೈಲುದಾರಿಗಳು ಸಾರಿಗೆ ಸಂಪರ್ಕದಲ್ಲಿ ಮಹತ್ವದವಾದವು. ಬೆಂಗಳೂರಿಗೆ ರಾಷ್ಟ್ರದ ಎಲ್ಲ ಮುಖ್ಯ ಪಟ್ಟಣಗಳೊಂದಿಗೂ ರೈಲು ಮತ್ತು ವಿಮಾನ ಸಂಪರ್ಕವುಂಟು. ಸಾರಿಗೆ ಸಂಪರ್ಕಗಳು ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಸುವರ್ಣ ಚತುರ್ಥ ಯೋಜನೆ ಜಾರಿಗೆ ತಂದಿದೆ. ಅನೇಕ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳು ರೂಪಿತವಾಗಿವೆ.

**ರಾಜ್ಯದ ರಫ್ತು ವ್ಯಾಪಾರ** : ಪುರಾತನ ಗ್ರೀಸ್ ಮತ್ತು ರೋಂ ನಾಗರಿಕತೆಗಳ ಕಾಲದಿಂದಲೂ ಕರ್ನಾಟಕಕ್ಕೂ ಪಾಶ್ಚಾತ್ಯ ಲೋಕಕ್ಕೂ ಸಂಪರ್ಕವುಂಟು. ಇದೇ ರೀತಿ ದಕ್ಷಿಣ ಏಷ್ಯ ಮತ್ತು ಆಗ್ನೇಯ ಏಷ್ಯ ಪ್ರದೇಶಗಳ ಜೊತೆಯಲ್ಲಿಯೂ ಕರ್ನಾಟಕ ವ್ಯಾಪಾರ ಮತ್ತು ಸಂಸ್ಕೃತಿ ಸಂಬಂಧ ಇಟ್ಟುಕೊಂಡಿದ್ದುದಕ್ಕೂ ಸಾಕಷ್ಟು ನಿದರ್ಶನಗಳಿವೆ. ಅಂತೆಯೇ ಈಗಲೂ ಕರ್ನಾಟಕದ ಪದಾರ್ಥಗಳು ಹೊರದೇಶಗಳಿಗೆ ಹೆಚ್ಚುಹೆಚ್ಚಾಗಿ ರಫ್ತಾಗುತ್ತಿವೆ. 1967–68ರಲ್ಲಿ ಕರ್ನಾಟಕದ ಒಟ್ಟು ರಫ್ತು ಮೌಲ್ಯ 38 ಕೋಟಿ ರೂ.ಗಳಷ್ಟಿತ್ತು. ಇದರಲ್ಲಿ ಕಬ್ಬಿಣದ ಅದುರಿನಿಂದ 13.95 ಕೋಟಿ ರೂ. ಮತ್ತು ಕಾಫಿಯಿಂದ 12.34 ಕೋಟಿ ರೂ. ಆದಾಯ ಬಂದಿತ್ತು. ಎಂಜಿನಿಯರಿಂಗ್ ಪದಾರ್ಥಗಳು ರಾಜ್ಯಕ್ಕೆ 2.25 ಕೋಟಿ ರೂ.ಗಳಷ್ಟು ಆದಾಯ ನೀಡಿ, ರಫ್ತು ಸಾಮಗ್ರಿಗಳಲ್ಲಿ ಮೂರನೆಯ ಸ್ಥಾನ ಗಳಿಸಿತು. ಗೋಡಂಬಿ, ರೇಷ್ಮೆ, ಹೊಗೆಸೊಪ್ಪು, ರಫ್ತು ವಸ್ತುಗಳಲ್ಲಿ ಪ್ರಾಮುಖ್ಯ ಪಡೆದವು. ಈ ಎಲ್ಲ ವಸ್ತುಗಳ ರಫ್ತು ಮೌಲ್ಯ ರಾಜ್ಯದ ಒಟ್ಟು ರಫ್ತು ಮೌಲ್ಯದ ಶೇ. 85ರಷ್ಟು. ಇತ್ತೀಚೆಗೆ ಎಂಜಿನಿಯರಿಂಗ್ ಸಾಮಾನುಗಳಿಗೆ ಹೊರದೇಶದಿಂದ ಬೇಡಿಕೆ ಹೆಚ್ಚುತ್ತಿದೆ. ಈಗ ರಾಜ್ಯದ ರಫ್ತು ವಸ್ತುಗಳಲ್ಲಿ ಖನಿಜ, ಕಾಫಿ, ಸಂಬಾರ ವಸ್ತುಗಳು ಗೋಡಂಬಿ, ರೇಷ್ಮೆ, ಹತ್ತಿ, ಹೂಗಳು, ಉಡುಪು, ಯಂತ್ರಗಳ ಬಿಡಿಭಾಗಗಳು ಪ್ರಮುಖವಾಗಿವೆ.

**ಹಣಕಾಸಿನ ಸಂಸ್ಥೆಗಳು:** ಆರ್ಥಿಕ ಅಭಿವೃದ್ಧಿಗೆ ಅವಶ್ಯವಾದ ಹಣಕಾಸಿನ ಬೇಡಿಕೆ ಪೂರೈಸುವ ಉದ್ದೇಶದಿಂದ ಕರ್ನಾಟಕದಲ್ಲಿ ಅನೇಕ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಉಳಿತಾಯಕ್ಕೆ ಉತ್ತೇಜನ ನೀಡುವುದೂ ಅದನ್ನು ಠೇವಣಿಗಳ ರೂಪದಲ್ಲಿ ಸಂಗ್ರಹಿಸಿ ಉತ್ಪಾದಕ ಕಾರ್ಯಗಳಿಗೆ ಸಾಲನೀಡುವುದೂ ಈ ಸಂಸ್ಥೆಗಳ ಉದ್ದೇಶ. ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಸಂಘಗಳು ಇವುಗಳ ಪೈಕಿ ಬಹಳ ಮುಖ್ಯವಾದವು. ಸಹಕಾರ ಸಂಘಗಳು ಮುಖ್ಯವಾಗಿ ರೈತರಿಗೆ ವ್ಯವಸಾಯಕ್ಕಾಗಿ ಸಾಲ ಕೊಡುವುದಲ್ಲದೆ, ಸುಗ್ಗಿಯ ವೇಳೆಯಲ್ಲಿ ರೈತರು ತಮ್ಮ ಆಹಾರಧಾನ್ಯಗಳನ್ನು ಶೇಖರಿಸಲೂ ಸರಿಯಾದ ಕಾಲದಲ್ಲಿ ಆಹಾರಧಾನ್ಯಗಳನ್ನು ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆಗೆ ಬಿಕರಿ ಮಾಡಲೂ ಸಹಾಯ ಮಾಡುತ್ತವೆ.

ವಾಣಿಜ್ಯ ಬ್ಯಾಂಕುಗಳ ಸ್ಥಾಪನೆಯಲ್ಲಿಯೂ ಕರ್ನಾಟಕ ಹಿಂದೆ ಬಿದ್ದಿಲ್ಲ. 1870ಕ್ಕಿಂತ ಮುಂಚೆಯೇ ಚಿತ್ರದುರ್ಗದಲ್ಲಿ ಒಂದು ವಾಣಿಜ್ಯ ಬ್ಯಾಂಕು ಸ್ಥಾಪಿತವಾಗಿತ್ತು. ಕೈಗಾರಿಕೆ ವಾಣಿಜ್ಯಗಳಿಗೆ ಹೆಚ್ಚಾಗಿ ಕಿರುಸಾಲ ನೀಡುವ ಮುಖ್ಯ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಅವು ವ್ಯವಸಾಯಕ್ಕೂ ಸಣ್ಣ ಕೈಗಾರಿಕೆಗಳಿಗೂ ಸಾಲ ನೀಡುತ್ತಿವೆ. 1913ರಲ್ಲಿ ಸ್ಥಾಪಿತವಾದ ಮೈಸೂರು ಬ್ಯಾಂಕ್ ಪ್ರಥಮ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಅಸ್ತಿತ್ವಕ್ಕೆ ಬಂದಿವೆ. ಬ್ಯಾಂಕ್‌ಗಳ ಬ್ಯಾಂಕ್ ನಬಾರ್ಡ್ ಮತ್ತು ರಿಸರ್ವ್ ಬ್ಯಾಂಕ್ ಇತರ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಪೋಷಕವಾಗಿವೆ. ಇಂದು ಪ್ರತಿಯೊಂದು ಪಟ್ಟಣಗೂ ಹಾಗೂ ದೊಡ್ಡ ಗ್ರಾಮಗಳನ್ನು ಬ್ಯಾಂಕ್‌ಗಳ ಸೇವೆ ತಲುಪಿದೆ.

**ಜಾಗತೀಕರಣದ ಬೆಳಕಲ್ಲಿ :** ಕರ್ನಾಟಕ ರಾಜ್ಯ ಜಾಗತೀಕರಣದ ಬೆಳಕಲ್ಲಿ ಆರ್ಥಿಕವಾಗಿ ದಾಪುಗಾಲು ಹಾಕುತ್ತಿದೆ. 1990ರ ದಶಕದಲ್ಲಿ ಪ್ರಾರಂಭವಾದ ಜಾಗತೀಕರಣ ಪ್ರಕ್ರಿಯೆ ವಿಶ್ವ ಮಾರುಕಟ್ಟೆಗಳನ್ನು ರಾಜ್ಯದ ನಿಲುಕಿಗೆ ತಂದಿತು. ಮಾಹಿತಿ ಕ್ಷೇತ್ರದಲ್ಲಿ ಆದ ಕ್ರಾಂತಿಯ ಪ್ರಯೋಜನ ಪಡೆಯುವಲ್ಲಿ ರಾಜ್ಯ ಸಫಲವಾಗಿದೆ. ಭಾರತದಲ್ಲಿ ಬೆಂಗಳೂರು ಅತಿದೊಡ್ಡ ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಿವೆ. ವಿದೇಶಿ ಕಂಪನಿಗಳು ವಿಶೇಷವಾಗಿ ಬೆಂಗಳೂರಿನಲ್ಲೂ ಸಾಮಾನ್ಯವಾಗಿ ಇತರೆಡೆ ಸ್ಥಾಪಿತವಾಗಿವೆ. ರಾಜ್ಯದ ಬೊಕ್ಕಸಕ್ಕೆ ಅಪಾರ ಪ್ರಮಾಣದ ಆದಾಯ ಹರಿದು ಬರುತ್ತಿದೆ. ಇದು ಸಾರಿಗೆ ಆರೋಗ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಅಧಿಕ ಆಕರ್ಷಣೆಯ ಅಭಿವೃದ್ಧಿಗೆ ಕಾರಣವಾಗಿದೆ. ತಂತ್ರಜ್ಞರಿಗೆ ಉದ್ಯೋಗ ನೀಡುವಲ್ಲಿ ಬೆಂಗಳೂರು ರಾಷ್ಟ್ರಕ್ಕೇ ಆಕರ್ಷಣೆಯ ಕೇಂದ್ರವಾಗಿದೆ. ಜೈವಿಕ ತಂತ್ರಜ್ಞಾನದಲ್ಲಿನ ಕ್ರಾಂತಿಯು ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಕಲ್ಪಿಸಿದೆ. ಸೇವಾ ಕ್ಷೇತ್ರದಲ್ಲಿ ಪ್ರಗತಿಯಾಗಿದೆ. ರಾಜ್ಯದ ಸುಶಿಕ್ಷಿತರು, ತಂತ್ರಜ್ಞರು, ವೈದ್ಯರು ವಿದೇಶಗಳಲ್ಲಿ ನೆಲಸಿ ಅಪಾರ ಪ್ರಮಾಣದ ವಿದೇಶಿ ವಿನಿಮಯಗಳನ್ನು ದೇಶದೊಳಗೆ ಹರಿಯಬಿಟ್ಟಿದ್ದಾರೆ. 2012ರ ಮಾರ್ಚ್‌ನಲ್ಲಿ ರಾಜ್ಯ ಸರ್ಕಾರ ಮಂಡಿಸಿದ ಆಯವ್ಯಯದ (ಬಜ್ಜೆಟ್) ಮೊತ್ತ 1 ಲಕ್ಷ ಕೋಟಿ ರೂ.ಗಳನ್ನು ದಾಟಿದೆ. ಕೃಷಿ ಕ್ಷೇತ್ರಕ್ಕೆ 19660 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಗ್ರಾಮೀಣಾಭಿವೃದ್ಧಿಗೆ ನಿಗದಿಯಾದ ಮೊತ್ತ 6896 ಕೋಟಿ ರೂ.ಗಳು, ಜಲ ಸಂಪನ್ಮೂಲಕ್ಕೆ 8101 ಕೋಟಿ ರೂ.ಗಳನ್ನು ವೆಚ್ಚ ಮಾಡುವ ಉದ್ದೇಶವಿದೆ. ಶಿಕ್ಷಣದ ಪಾಲು 15071 ಕೊಟಿ ರೂ.ಗಳು ಹೀಗೆ ರಾಜ್ಯ ಅಭಿವೃದ್ಧಿ ಪಥದತ್ತ ಸಾಗಿದ್ದು ತಲಾದಾಯವೂ ಹೆಚ್ಚಿದೆ. ಅದೇ ವೇಳೆಗೆ ಜೀವನ ವೆಚ್ಚ ಹೆಚ್ಚಿದ್ದು ಆಸ್ತಿ ವ್ಯವಹಾರಗಳ ಮೌಲ್ಯ ಗಗನಕ್ಕೇರಿದೆ. ವಿವಿಧ ಪ್ರಾದೇಶಿಕ ಅಸಮಾನತೆ ಮತ್ತು ವಿವಿಧ ವೃತ್ತಿಗಳ ಆದಾಯ ಸಾಮರ್ಥ್ಯದ ಕೊರತೆ ಸಮಾಜದಲ್ಲಿ ಅಸಮತೋಲನ ಸೃಷ್ಟಿಸುತ್ತದೆ. ಕಪ್ಪುಹಣದ ಸೃಷ್ಟಿ ಅಧಿಕವಾಗುತ್ತಿದೆ. ಈ ಸಮಸ್ಯೆಗಳನ್ನು ನೀಗಿಸಿಕೊಂಡು ಆಗುತ್ತಿರುವ ಆರ್ಥಿಕ ಪ್ರಗತಿ ಸಮಾಜಕ್ಕೆ ಮಾರಕವಾಗದೆ ಪೂರಕವಾಗುವಂತೆ ಮಾಡುವ ಹೊಣೆ ಸರ್ಕಾರದ ಮೇಲಿದೆ. (ಎಂ.ಎ.ಎಂ.)

**ಕರ್ನಾಟಕದ ಚಿತ್ರಕಲೆ :** ಭಾರತದ ಇತರ ಭಾಗಗಳಲ್ಲಿರುವಂತೆ ಕರ್ನಾಟಕದಲ್ಲೂ ಚಿತ್ರಕಲಾ ಸಂಪ್ರದಾಯ ಪ್ರಾಚೀನಕಾಲದಿಂದಲೂ ಬಂದಿದೆ. ಕನ್ನಡ ನಾಡಿನ ಚಿತ್ರಕಲೆಯ ಬಹುಭಾಗ ದೇವಾಲಯಗಳಿಗೆ ಸಂಬಂಧಿಸಿದ್ದು. ಮರದಲ್ಲಿ ದೇವಾಲಯಗಳನ್ನು ನಿರ್ಮಿಸುತ್ತಿದ್ದಾಗ, ಮರದಲ್ಲಿಯೇ ಮೂರ್ತಿಗಳನ್ನು ಕಡೆಯುತ್ತಿದ್ದಾಗ, ರಮ್ಯತೆಗಾಗಿ ಅವುಗಳ ಮೇಲೆ ಬಣ್ಣ ಮೂಡಿಸುತ್ತಿದ್ದರು. ಹಿಂದಿನ ದೇವಾಲಯಗಳಲ್ಲಿ ಉತ್ಸವಮೂರ್ತಿಯಲ್ಲದೆ ಮರದ ಮೂಲಮೂರ್ತಿಯಲ್ಲೇ ಎರಡು ಬಗೆ ಇರುತ್ತಿದ್ದುವು. ಧ್ರುವಬೇರ ಎನಿಸಿಕೊಳ್ಳುವ ಮೂಲದೇವರಿಗೆ ಅಭಿಷೇಕವಿಲ್ಲ; ಅದರ ಮೇಲೆ ಸ್ಟಕ್ಕೋ ಲೇಪನ ಬಳಿದು ಬಣ್ಣಗಳಿಂದ ಅಲಂಕರಿಸುತ್ತಿದ್ದರು. ನಿತ್ಯದ ಅಭಿಷೇಕಕ್ರಿಯೆಗಳಿಗೆ ಸ್ನಪನಬೇರ ಎನಿಸಿಕೊಳ್ಳುವ ಮೂರ್ತಿಗಳು ಇರುತ್ತಿದ್ದುವು. ವರ್ಣಚಿತ್ರಕಲೆಯ ಉಗಮ ಧ್ರುವಬೇರ ಮೂರ್ತಿಗಳಲ್ಲಿ ಆಯಿತು. ಪ್ರಾಚೀನ ಚಿತ್ರಕಲೆ ದೇವಾಲಯದಲ್ಲೇ ಆರಂಭವಾಗಿ ಬಹುಕಾಲ ಶಿಲ್ಪಕ್ಕೆ ಸಹಕಾರಿ ಮಾತ್ರ ಆಗಿದ್ದಿತು. ಆದರೆ ಎಂಟನೆಯ ಶತಮಾನದ ವೇಳೆಗೆ ಈ ಕಲೆ ಪ್ರತ್ಯೇಕವಾಗಿ ವಿಶಿಷ್ಟವಾಗಿದ್ದಿತೆನ್ನಲು ನೆಲಮಂಗಲದ ಮನ್ನೆಫಲಕ ಆಧಾರ ; ಗಂಗರಾಜರ ಆಶ್ರಯದಲ್ಲಿದ್ದ ಶಾಸನದ ಲಿಪಿಕಾರ ತನ್ನನ್ನು ಸರ್ವಕಲಾಧಾರಭೂತ, ಚಿತ್ರಕಲಾಭಿಜ್ಞೇಯ ಎಂದು ಕರೆದುಕೊಂಡಿದ್ದಾನೆ.

ಹೊಯ್ಸಳರ ಕಾಲಕ್ಕೇ ಶಿಲ್ಪಿಗಳು ದೇವಾಲಯದ ಸೊಬಗನ್ನು ಹೆಚ್ಚಿಸಲು ಚಿತ್ರ ಕಲಾವಿದರನ್ನು ಕರೆಯುತ್ತಿದ್ದರು. ದೇವಾಲಯದ ಭುವನೇಶ್ವರಿ, ಮತ್ತು ಹಜಾರದ ಒಳಗೋಡೆಗಳು ಚಿತ್ರಗಳಿಂದ ತುಂಬಿರುತ್ತಿದ್ದುವು. ಇದರಲ್ಲಿದ್ದ ಗೊಂಬೆಗಳು ಚಿತ್ರಾಭಾಸವೆನಿಸಿಕೊಳ್ಳುತ್ತಿದ್ದುವು. ಎಂದರೆ ನಿಜವಾಗಿಯೇ ಇರುವಂತೆ ಭಾಸವಾಗುತ್ತಿದ್ದುವೆಂದರ್ಥ. ಶಿಲ್ಪದಲ್ಲಿ ಘನರೂಪವಿದೆ; ದುಂಡುಮೂರ್ತಿಗಳು ಶಕ್ಯ. ಆದರೆ ಚಿತ್ರಕಲೆಯಲ್ಲಿ ಘನರೂಪವನ್ನು ಸಾಂಕೇತಿಕವಾಗಿ ತೋರಿಸಬೇಕಷ್ಟೆ. ತಿರುಗಿಕೊಂಡ ಗೊಂಬೆಗಳಿದ್ದರೆ, ಮುಖದ ಒಂದು ಪಾರ್ಶ್ವ ಮಾತ್ರ ಕಾಣುವಂತಿದ್ದರೆ ಅವು ಅರ್ಧ ಚಿತ್ರ

ಎನಿಸಿಕೊಳ್ಳುತ್ತಿದ್ದುವು. ಇತ್ತೀಚೆಗೆ ದೊರಕಿರುವ ಹಸ್ತಪ್ರತಿಯೊಂದರಲ್ಲಿ ಆ ಕಾಲದ ವರ್ಣಚಿತ್ರವೊಂದಿದೆ. ಹೊಯ್ಸಳ ಕಾಲದ ವರ್ಣಚಿತ್ರಗಳಲ್ಲಿ ನಮಗೆ ದೊರಕಿರುವುದು ಇದೊಂದೆ.

ವಿಜಯನಗರದ ಕಾಲಕ್ಕೆ ಮುಂಚಿನವೆಂಬ ಒರಟು ಚಿತ್ರಗಳು ಆನೆಗೊಂದಿಯ ಅರಮನೆಯಲ್ಲಿವೆ. ಇವು ಬಂಗಾಳದ ಪಟವರ್ಣಚಿತ್ರಗಳ (ಪಾಟ್ ಪೇಂಟಿಂಗ್) ಮಾದರಿಯಲ್ಲಿವೆ.

ರಾಣಿ ಮತ್ತು ಪರಿವಾರ : ಬಾದಾಮಿ

ವಿಜಯನಗರದ ಕಾಲದಲ್ಲಿ ಹಂಪಿಯ ಪಂಪಾಪತಿಯ ದೇವಾಲಯದಲ್ಲಿ ರಂಗಮಂಟಪದ ಭುವನೇಶ್ವರಿಯ ಮೇಲೆ ಕಲ್ಯಾಣಸುಂದರ ಮತ್ತಿತ್ತರ ಚಿತ್ರಗಳಿವೆ. ಇವು ತಂಜಾವೂರು ಶೈಲಿಯವೆನ್ನಬಹುದು. ಸಿತ್ತನ್ನವಾಸಲ್, ಮಾಮಂಡೂರು, ಎಲ್ಲೂರ ಮತ್ತು ತಂಜಾವೂರು ಶೈಲಿಗಳು ಸಮ್ಮಿಳಿತವಾದ ಕಾಲ ಅದು. ಲೇಪಾಕ್ಷಿಯ ಚಿತ್ರಗಳು, ಸೋಮಪಲ್ಲಿಯ ಚೆನ್ನಕೇಶವ ದೇವಾಲಯದ ಚಿತ್ರಗಳು, ತಂಜಾವೂರಿನ ಬೃಹದೀಶ್ವರ ದೇವಾಲಯದ ಚಿತ್ರಗಳು– ಇವೆಲ್ಲವೂ ಈ ಸಮ್ಮಿಳಿತಶೈಲಿಯ ನಿದರ್ಶನಗಳು. ಇಮ್ಮಡಿ ವೆಂಕಟಪತಿ ದೇವರಾಯನ ಕಾಲದಲ್ಲಿ (1586 ರಿಂದ 1614), ಪೋರ್ಚುಗೀಸ್ ಚಿತ್ರಕಾರರು ಹಲವಾರು ಮಂದಿ ಆಸ್ಥಾನದಲ್ಲಿದ್ದರು. ಇವರ ಪ್ರಭಾವ ಕರ್ನಾಟಕ ಚಿತ್ರಕಾರರ ಮೇಲೆ ಬಿತ್ತು.

ಹಾಸನ ತಾಲ್ಲೂಕಿನ ಜಕ್ಕನಹಳ್ಳಿಯಲ್ಲಿರುವ ಕಾಳೇಶ್ವರ ದೇವಾಲಯದ ನವರಂಗದಲ್ಲಿ ಭುವನೇಶ್ವರಿಯು ವರ್ಣಚಿತ್ರಿತವಾಗಿರುವುದನ್ನು ನೋಡಬಹುದು. ಇದು ಹೊಯ್ಸಳ ನರಸಿಂಹನ ಕಾಲದಲ್ಲಿ (ಸು. 1170) ಕಾಳಿಮಯ್ಯ ಹೆಗ್ಗಡೆಯೆಂಬವನಿಂದ ಕಟ್ಟಿಸಲ್ಪಟ್ಟಿತು. ಅದೇ ಕಾಲದ ಶ್ರವಣಬೆಳಗೊಳದ ಶಾಂತಿನಾಥ ಬಸದಿಯಲ್ಲೂ ವರ್ಣಚಿತ್ರಗಳು ಬರೆಸಲ್ಪಟ್ಟುವು ; ಈಗ ಅದರ ಬಹುಭಾಗ ಅಳಿಸಿಹೋಗಿದೆ. ಎಡೆಯೂರಿನ ತೋಂಟದ ಸಿದ್ದಲಿಂಗೇಶ್ವರ ದೇವಸ್ಥಾನದ ಮಹಾದ್ವಾರದಲ್ಲಿ ಬಹುಶಃ 15ನೆಯ ಶತಮಾನದಲ್ಲಿ ಚಿತ್ರಗಳನ್ನು ಮೂಡಿಸಿದ್ದಾರೆ ; ಅದರ ಮುಖಮಂಟಪದಲ್ಲಿ ಜಂಗಮ ಗುರುವಾದ ಸಿದ್ಧಲಿಂಗನ ಜೀವಿತಕ್ಕೆ ಸಂಬಂಧಪಟ್ಟ ಚಿತ್ರಗಳೂ ಶಿವನ ಪಂಚವಿಂಶತಿ ಲೀಲಾಮೂರ್ತಿಗಳೂ ಚಿತ್ರಿತವಾಗಿವೆ. (ಈಗ ನಾಶವಾಗಿವೆ).

ಹಿರಿಯೂರಿನ ತಿರುಮಲ್ಲೇಶ್ವರ ಗುಡಿಯಲ್ಲಿ (16ನೆಯ ಶತಮಾನ) ಶೈವಪುರಾಣದ ಪ್ರಸಂಗಗಳು ಚಿತ್ರಿತವಾಗಿವೆ. 17ನೆಯ ಶತಮಾನದ ವಸ್ತಾರೆಯ ಪದ್ಮಾವತೀ ಗುಡಿಯಲ್ಲಿ, 18ನೆಯ ಶತಮಾನದ ಮಾಗಡಿ ಸೋಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಹರದನಹಳ್ಳಿಯ ದಿವ್ಯಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ ವರ್ಣಚಿತ್ರಿತ ಭುವನೇಶ್ವರಿಗಳಿವೆ.

ತುಮಕೂರು ಜಿಲ್ಲೆಯ ಗುಬ್ಬಿ ಮೈಲಪ್ಪನ ಗುಡಿಯ ಮುಖಮಂಟಪದಲ್ಲಿ ಶಿವನ ಪಂಚವಿಂಶತಿ ಲೀಲಾಮೂರ್ತಿಗಳನ್ನು ಚಿತ್ರಿಸಿದ್ದಾರೆ. ಮಾಗಡಿಯ ಸೋಮೇಶ್ವರ ದೇವಾಲಯದ ಎಡಪಕ್ಕದಲ್ಲಿ 1712ರಲ್ಲಿ ಮೂರನೆಯ ಕೆಂಪವೀರಗೌಡ ನಿರ್ಮಿತವಾದ ಕೆಂಪೇಗೌಡನ ಹಜಾರದ ಗೋಡೆಗಳ ಮತ್ತು ಭುವನೇಶ್ವರಿಯ ಮೇಲೂ ವರ್ಣಚಿತ್ರಗಳಿದ್ದ ಗುರುತಿವೆ. ಬೆಳಕವಾಡಿಯ ಮಂಟೇಸ್ವಾಮಿ ಮಠದ ಹಜಾರದ ಮರದ ಕಂಬದ ಮೇಲೆ ರಾಮಾಯಣದ ಮತ್ತು ಶಿವ ಪುರಾಣ ಪ್ರಸಂಗಗಳನ್ನು ಚಿತ್ರಿಸಲಾಗಿದ್ದು ಈಗ ಸುಣ್ಣ ಬಳಿಯಲಾಗಿದೆ. ವಿಜಯನಗರ ಕಾಲದ ಲೇಪಾಕ್ಷಿಯ ಪಾಪನಾಶೇಶ್ವರ ದೇವಸ್ಥಾನದಲ್ಲಿ ಸಾವಿರಾರು ಸೊಗಸಾದ ವರ್ಣಚಿತ್ರಗಳಿವೆ; ಇವನ್ನು ಮೂಡಿಸಿದ ವಿರೂಪಣ್ಣ ಕನ್ನಡನಾಡಿನವ; ಚಿತ್ರಕಾರರೂ ಕನ್ನಡದವರು.

ಮೈಸೂರಿನಲ್ಲಿ ವರ್ಣಚಿತ್ರಕಲೆಗೆ ಬಹುವಾಗಿ ಪ್ರೋತ್ಸಾಹವಿತ್ತವರೆಂದರೆ ಹೈದರ್ ಅಲಿ, ಟಿಪ್ಪು ಸುಲ್ತಾನ್ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು. 18ನೆಯ ಶತಮಾನದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ವಾಸಸ್ಥಾನವಾಗಿದ್ದ ಶ್ರೀರಂಗಪಟ್ಟಣದ ದರಿಯಾದೌಲತ್ ಅರಮನೆಯ ಹೊರಗೋಡೆಗಳ ಮೇಲೆ ಮುಸಲ್ಮಾನ ಮಾದರಿಯ ನೂರಾರು ವರ್ಣ ಚಿತ್ರಗಳಿವೆ. ಅಲ್ಲಲ್ಲಿ ನಡೆದ ಯುದ್ಧದ ದೃಶ್ಯಗಳು, ದಳವಾಯಿಗಳ ಚಿತ್ರಗಳು, ಮದಕರಿ ನಾಯಕ, ಚಿತ್ತೂರಿನ ರಾಣಿ ಮತ್ತು ಸವಣೂರಿನ, ಆರ್ಕಾಟಿನ ನವಾಬರು ಮುಂತಾದವರ

ಅಜಿತ ಮತ್ತು ಮಹಾಮಾನಸಿ ಹಸ್ತಪ್ರತಿಯ ಮೇಲಣ ಹೊಯ್ಸಳ ವರ್ಣಚಿತ್ರ, ಮೂಡಬಿದ್ರಿ

ವ್ಯಕ್ತಿ ಚಿತ್ರಗಳೂ ಇಲ್ಲಿವೆ. ಬೆಂಗಳೂರಿನ ಟಿಪ್ಪು ಸುಲ್ತಾನನ ಅರಮನೆಯಲ್ಲೂ 1791ರ ಕಾಲಕ್ಕೆ ಸೇರಿದ ವರ್ಣಚಿತ್ರಗಳಿವೆ. ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವತಃ ರಸಿಕರು, ಕಲಾಭಿಮಾನಿಗಳು. ಅವರ ಆಪ್ತವರ್ಗದಲ್ಲೇ ಹಲವಾರು ಚಿತ್ರಗಾರರಿದ್ದರು. ಅವರಲ್ಲಿ ಕೆ.ವೆಂಕಟಪ್ಪನವರ ತಾತಂದಿರೂ ಒಬ್ಬರಾಗಿದ್ದರು. ತಮ್ಮ ತಂದೆ ಖಾಸಾ ಚಾಮರಾಜ



ಪಾರ್ವತೀ ಪರಿಣಯ : ವಿರೂಪಾಕ್ಷ ದೇವಾಲಯ, ಹಂಪಿ

ಒಡೆಯರ ಸ್ಮಾರಕವಾಗಿ ಅರಸರು ಚಾಮರಾಜನಗರದಲ್ಲಿ 1810ರ ಸುಮಾರಿಗೆ ಚಾಮರಾಜೇಶ್ವರ ದೇವಸ್ಥಾನವನ್ನು ಕಟ್ಟಿಸಿದರು. ಇದರ ಜನ್ಮಮಂಟಪದಲ್ಲಿ ಅನೇಕ ಭಿತ್ತಿಚಿತ್ರಗಳಿವೆ. ತಲಕಾಡಿನ ಬಳಿ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಚಿತ್ರಮಂಟಪವೆಂದೇ ಪ್ರತ್ಯೇಕ ಸ್ಥಳವಿದೆ. ಇಲ್ಲಿನ ಗೋಡೆಗಳ ತುಂಬ ಶೈವ ಪುರಾಣದ ಚಿತ್ರಗಳಿವೆ. ಮೈಸೂರಿನ ಪ್ರಸನ್ನ ವೆಂಕಟರಮಣಸ್ವಾಮಿ ಗುಡಿಯಲ್ಲಿಯೂ ಒಂದು ಚಿತ್ರಮಂಟಪವಿದೆ. ಇಲ್ಲಿ ಪೌರಾಣಿಕ ಚಿತ್ರಗಳು ಮಾತ್ರವಲ್ಲದೆ ಪ್ರಕೃತಿಚಿತ್ರಗಳೂ ವ್ಯಕ್ತಿಚಿತ್ರಗಳೂ ಇವೆ. ವ್ಯಾಸ, ಮಧ್ವಾಚಾರ್ಯರು, ಪೂರ್ಣಯ್ಯ, ಸುಬ್ಬರಾಯದಾಸರು, ಸೀನಪ್ಪ, ಮುಮ್ಮಡಿ ಕೃಷ್ಣರಾಜ ಒಡೆಯರು ಮುಂತಾದವರ ವ್ಯಕ್ತಿಚಿತ್ರಗಳು ತುಂಬ ಚೆನ್ನಾಗಿವೆ. 19ನೆಯ ಶತಮಾನದ ಶ್ರವಣಬೆಳಗೊಳದ ಜೈನಮಠಗಳಲ್ಲಿ ಪಂಚಪರಮೇಷ್ಠಿಗಳ, ಜಿನರ, ಜೈನರಾಜರ ಚಿತ್ರಗಳು ಅನೇಕ ಇವೆ. ಇವುಗಳಲ್ಲಿ ಮುಮ್ಮಡಿ ಕೃಷ್ಣರಾಜರ ಒಡೆಯರು ದಸರಾ ದರ್ಬಾರಿನ ಚಿತ್ರವೂ ಒಂದು ಸೇರಿದೆ. ಪಾರ್ಶ್ವನಾಥನ ಸಮವಸರಣದ ದೃಶ್ಯ ಸೊಗಸಾಗಿದೆ. ಲೇಶ್ಯದ ಚಿತ್ರಣ ಸ್ವಾರಸ್ಯವಾಗಿದೆ.

1861ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಜಗನ್ಮೋಹನ ಅರಮನೆಯನ್ನು ಕಟ್ಟಿಸಲು ಆರಂಭಿಸಿದರು. ಕಾಲಕ್ರಮೇಣ ಇದು ಸಂಸ್ಥಾನದ ಅತ್ಯುತ್ತಮ ಚಿತ್ರಶಾಲೆಯಾಗಿ ಪರಿಣಮಿಸಿತು. ಇದರಲ್ಲಿ 19ನೆಯ ಶತಮಾನಕ್ಕೆ ಸೇರಿದ ಅನೇಕ ಕಲಾಕೃತಿಗಳಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ ಸಚಿತ್ರ ವಂಶವೃಕ್ಷ, ಮೈಸೂರು ಆಳರಸರ

ವಂಶಾವಳಿಯನ್ನು ಚಿತ್ರಿಸುವ ಸಂತಾನಾಂಬುಜ, ವಿಜಯ ದಶಮಿಯಂದು ನಡೆದ ಮುಮ್ಮಡಿ ಕೃಷ್ಣರಾಜ ಒಡೆಯರ ಜಂಬೂಸವಾರಿ (ಇದರಲ್ಲಿ ರಾಜರು ಆರು ಆನೆಗಳನ್ನು ಕಟ್ಟಿದ ರಥದಲ್ಲಿ ಕುಳಿತಿದ್ದಾರೆ), ಇವುಗಳಲ್ಲದೆ ಕಿತ್ತೂರು, ಗೊತ್ತಗಾಲ, ಚಟ್ಟನಹಳ್ಳಿಗಳಲ್ಲಿ



ತ್ರಿಪುರಾಂತಕ : ವಿರೂಪಾಕ್ಷ ದೇವಾಲಯ, ಹಂಪಿ

ನಡೆದ ಹುಲಿಶಿಕಾರಿ, ಚಾಮರಾಜನಗರದ ಕಾಡಿನಲ್ಲಿ ಪಟ್ಟದಾನೆಯಾದ ಕೆಂಪನಂಜಯ್ಯನನ್ನು ಹಿಡಿದ ದೃಶ್ಯ, ಕೃಷ್ಣರಾಜ ಒಡೆಯರು ಚದುರಂಗದಾಟವನ್ನು ಆಡುತ್ತಿರುವ ದೃಶ್ಯಗಳು, ವಸಂತೋತ್ಸವದ ದೃಶ್ಯ, ದೇವೀಸಾಯುಜ್ಯ, ಶ್ರೀಕಂಠಸಾಯುಜ್ಯ ಎಂಬ ಆಟಗಳು ಸೊಗಸಾದ ಬಣ್ಣಗಳಲ್ಲಿ ಚಿತ್ರಿತವಾಗಿವೆ. ಅಲ್ಲದೆ, ರಣಜಿತ್‌ಸಿಂಗ್, ಕೊಡಗಿನ ವೀರರಾಜೇ ಅರಸು,



ಅಶೋಕನ ಮನಃಪರಿವರ್ತನೆ : ಹೆಬ್ಬಾರರ ಚಿತ್ರ

ಪೇಷ್ವೆಗಳು, ನಾನಾ ಫಡ್ನವೀಸ್, ಕೇರಳ ಮತ್ತು ತಿರುವಾಂಕೂರಿನ ರಾಜರು, ಅರಮನೆ ಅಧಿಕಾರಿಗಳು, ಪರಕಾಲಮಠದ ಸ್ವಾಮಿಗಳು, ಮಹಾರಾಜರ ಬಂಧುಗಳು ಹೀಗೆ ನೂರಾರು ವ್ಯಕ್ತಿಚಿತ್ರಗಳಿವೆ.

ನಾಲ್ವಡಿ ಕೃಷ್ಣರಾಜ ಒಡೆಯರೂ ಚಿತ್ರಕಲೆಯ ಪಕ್ಷಪಾತಿಗಳು. ಅವರ ಆಸ್ಥಾನದಲ್ಲಿ ಕೆ.ವೆಂಕಟಪ್ಪ, ಕೇಶವಯ್ಯ ಮುಂತಾದ ನಿಪುಣ ಕಲೆಗಾರರಿದ್ದರು. ಈಚೆಗೆ ನಾಡಿನ ಲಲಿತಕಲಾ ಅಕೆಡೆಮಿಯವರಿಂದ ಪುರಸ್ಕೃತರಾದ ಕೆ.ವೆಂಕಟಪ್ಪ ಅವರು ಕಲ್ಕತ್ತೆಯ ಕಲಾಶಾಲೆಯಲ್ಲಿ ಪರ್ಸಿಬ್ರೌನ್ ಮತ್ತು ಅವನೀಂದ್ರನಾಥ ಠಾಕೂರರ ಬಳಿ ಏಳು ವರ್ಷಗಳು ಅಭ್ಯಾಸ ಮಾಡಿದ ನಂತರ ಆಸ್ಥಾನ ಕಲಾವಿದರಾಗಿದ್ದು ಕೊಂಡು ನೂರಾರು ಅತ್ಯುತ್ತಮ ವರ್ಣಚಿತ್ರಗಳನ್ನು ಬಿಡಿಸಿದ್ದಾರೆ.

ಕೈಲಾಸಂ : ಆರ್.ಎಸ್.ಎನ್. ಅವರ ಕೃತಿ

ಇವುಗಳಲ್ಲಿ ನೀಲಗಿರಿಯ ದೃಶ್ಯಗಳು ಜಗತ್ತಿನ ಶ್ರೇಷ್ಠ ಕೃತಿಗಳಲ್ಲಿ ಸೇರಿವೆಯೆಂದು ತಜ್ಞರ ಮತ. ಇವರು ದಂತದ ಮೇಲೆ ತಮ್ಮ ಗುರು ಅವನೀಂದ್ರನಾಥರ ಮತ್ತು ತಮ್ಮ ಆಶ್ರಯದಾತ ಕೃಷ್ಣರಾಜ ಒಡೆಯರ ಪ್ರತಿ ಕೃತಿಗಳನ್ನು ನೈಜವಾದ ವರ್ಣಗಳಲ್ಲಿ ಚಿತ್ರಿಸಿದ್ದಾರೆ. ಮೊಗಲರ ಕಾಲಕ್ಕೇ ಅಸ್ತಂಗತವಾಗಿದ್ದ ಈ ಕ್ಲಿಷ್ಟ ಕಲೆಯನ್ನು

ದೇವರೆಡೆಗೆ : ಪಿ. ರಾಜಶೇಖರ ಅವರ ಕೃತಿ

ವೆಂಕಟಪ್ಪನವರು ಪುನರುಜ್ಜೀವನ ಗೊಳಿಸಿದ್ದಾರೆ. ಇವರು ವರ್ಣಚಿತ್ರಕಾರರಲ್ಲದೆ ಉತ್ತಮ ಶಿಲ್ಪಿಯೂ, ನಿಪುಣ ವೈಣಿಕರೂ ಆಗಿದ್ದರು.

ಈಚಿನವರಲ್ಲಿ ವೆಂಕಟಪ್ಪನವರಲ್ಲದೆ ಮೈಸೂರು ವೀರಪ್ಪ ಮತ್ತು ಸುಬ್ಬುಕೃಷ್ಣ, ಬೆಳಗಾಂವಿಯ ಕೆ.ಎಸ್.ಕುಲಕರ್ಣಿ, ಗೋವದ ಲಕ್ಷ್ಮಣ ಪೈ, ದಕ್ಷಿಣ ಕನ್ನಡ ಜಿಲ್ಲೆಯ ಕೆ.ಕೆ.ಹೆಬ್ಬಾರ್, ಹುಬ್ಬಳ್ಳಿಯ ಆರ್.ಎಸ್.ಮಿಣಜಿಗಿ, ಕಮಡೋಳಿ ಮುಂತಾದ ಚಿತ್ರಕಾರರು ಕರ್ನಾಟಕಕ್ಕೆ ಹೆಮ್ಮೆಯನ್ನು ತಂದಿದ್ದಾರೆ.

ಕರ್ನಾಟಕ ಶೈಲಿಯ ಚಿತ್ರಕಲೆಯ ಉಗಮ ಅಜಂತ ಗುಹಾಂತ ರ್ದೇವಾಲಯಗಳಲ್ಲಿ ಎಂಬುದು ನಿರ್ವಿವಾದ. ಪ್ರ.ಶ.ಪೂ. 1ನೆಯ ಶತಮಾನದಲ್ಲಿ ಅಜಂತದ ಗುಹೆಗಳಲ್ಲಿ ಬೋಧಿಸತ್ವಯಾನಕ್ಕೆ ಸೇರಿದ ಬೌದ್ಧಭಿಕ್ಷುಗಳು ವಾಸಿಸುತ್ತಿದ್ದು, ತಮ್ಮ ಯೋಗಾಭ್ಯಾಸ ಧ್ಯಾನಕ್ರಿಯೆಗಳಿಗೆ ಸಹಕಾರಿಯಾಗಿ ಭಿತ್ತಿಚಿತ್ರಗಳನ್ನು ಮೂಡಿಸಿದರು. ಈ ಭಿತ್ತಿಚಿತ್ರಗಳಲ್ಲಿ ಸಾಂಕೇತಿಕ ಅರ್ಥವೇ ಹೆಚ್ಚು. ಆ ವೇಳೆಗಾಗಲೇ ಅಭಿಜಾತ ಚಿತ್ರಶೈಲಿ ಬಳಕೆಯಲ್ಲಿದ್ದು ಪ್ರೌಢದೆಶೆಯನ್ನು ಮುಟ್ಟಿದಂತೆ ತಿಳಿದುಬರುತ್ತದೆ. ವರ್ಣಗಳ ನಿರ್ಮಾಣ, ಮೆರುಗು ಕೊಡುವ ಪದ್ಧತಿ, ಸ್ಥೂಲರೇಖೆಗಳನ್ನು ರೂಪಿಸಿ ಒಳಭಾಗಗಳನ್ನು ಸ್ಪಷ್ಟವಾಗಿ ವಿವಿಕ್ತವಾಗಿ ಬಣ್ಣಗಳಿಂದ ತುಂಬಿಸುವ ಸಂವಿಧಾನ – ಇವು ಇಲ್ಲಿ ಕಾಣುತ್ತವೆ. ರೇಖಾಚಿತ್ರದ ಹಿರಿಮೆಯನ್ನೂ ಲತಾವಿನ್ಯಾಸದ ಭಂಗಿಗಳನ್ನೂ ಆ ಭಿಕ್ಷುಕಲಾವಿದರು ಚೆನ್ನಾಗಿ ಅರಿತಿದ್ದರು.

ಇವು ಕನ್ನಡ ಕಲಾವಿದರ ಕೈಚಳಕವೆಂಬುದನ್ನು ಸೂಚಿಸಲು ಅಜಂತ 1ನೆಯ ಗುಹೆಯಲ್ಲಿ ಗೋಡೆಯ ಮೇಲೆ ಬಿಡಿಸಿರುವ 2ನೆಯ ಪುಲಕೇಶಿಯ ಒಡ್ಡೋಲಗದ ಚಿತ್ರಣ ನೆರವಾಗುತ್ತದೆ. ಬಾದಾಮಿಯಲ್ಲಿ ಕಾಣುವ ಚಿತ್ರಶೈಲಿಗೂ ಈ ಚಿತ್ರಶೈಲಿಗೂ

ಚುಟುಗು ನಶ್ಯ – ಎಸ್. ನಂಜುಂಡಸ್ವಾಮಿ ಅವರ ಕೃತಿ

ತುಂಬ ಸಾಮ್ಯವಿದೆ. ಎರಡೂ ಕಡೆಯ ಕಲಾವಿದರು ಒಂದೇ ಸಂಪ್ರದಾಯಕ್ಕೆ ಸೇರಿದವರು. ಇದು ಹೇಗೇ ಇರಲಿ, ಕರ್ನಾಟಕದ ರಾಜಪರಂಪರೆಗಳಲ್ಲಿ ಪ್ರಮುಖವಾದ ಚಾಳುಕ್ಯ ಅರಸರ ಉಲ್ಲೇಖವಂತೂ ನಿರ್ವಿವಾದವಾದ ನಿದರ್ಶನ. ಚಾಳುಕ್ಯ ಚಕ್ರೇಶ್ವರನೆಂದು

ಪ್ರಖ್ಯಾತನಾದ ಇಮ್ಮಡಿ ಪುಲಿಕೇಶಿಯ ಬಳಿ ಪರ್ಷಿಯ ದೇಶದ ರಾಯಭಾರಿಗಳು ಬಂದು ಉಡುಗೊರೆಗಳನ್ನು ಅರ್ಪಿಸುತ್ತಿದ್ದ ಹಾಗೆ ಈ ಚಿತ್ರ ತೋರಿಸುತ್ತದೆ. ಆ ಕಾಲಕ್ಕೆ

ಸಮಾಲೋಚನೆ – ಕೆ. ವಿಠಲಭಂಡಾರಿ ಅವರ ಕೃತಿ

ಈ ಪ್ರದೇಶ ಚಾಳುಕ್ಯರ ಅಧೀನದಲ್ಲಿತ್ತು. ರಾಷ್ಟ್ರಕೂಟ ಕೃಷ್ಣರಾಜ ಈ ಗುಹೆಯ ನಿರ್ಮಾತೃವೆಂದು ಹೇಳುವವರೂ ಇದ್ದಾರೆ.

ಅಜಂತ ದೇವಾಲಯಗಳ ಭಿತ್ತಿಗಳ ಮೇಲೆ ಮಹಾಯಾನ ಬೌದ್ಧಪಂಥಕ್ಕೆ ಸೇರಿದ ದೇವದೇವತೆಗಳ ಚಿತ್ರಣ ಬಹುವಾಗಿ ಮೂಡಿಬಂದಿವೆ. ಇವುಗಳಲ್ಲಿ ಪದ್ಮಪಾಣಿ ಅವಲೋಕಿತೇಶ್ವರ ಬೋಧಿಸತ್ತ್ವನ ಚಿತ್ರಣ ತುಂಬ ಪ್ರಸಿದ್ಧವಾಗಿದೆ. ಈ ಸಂಪ್ರದಾಯವನ್ನು ಒಳಗೊಂಡ ಪದ್ಧತಿ ಮುಂದೆ ದಕ್ಷಿಣದೇಶ, ಅದರಲ್ಲೂ ಕರ್ನಾಟಕದಲ್ಲಿ, ವಿಶೇಷವಾಗಿ ಪ್ರಚಲಿತವಾಯಿತು. ಬಾದಾಮಿಯ ಭಿತ್ತಿಚಿತ್ರಗಳು ಈ ಪದ್ಧತಿಗೆ ಸೇರಿದುವು.

ಈ ಪದ್ಧತಿಯಲ್ಲಿ ಪ್ರಕೃತಿಚಿತ್ರಣಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು. 7ನೆಯ ಶತಮಾನದವರೆಗೂ ಬೆಳೆದುಬಂದ ಈ ಸಂಪ್ರದಾಯ ಕಾರಣಾಂತರದಿಂದ ಮರೆಯಾದ ಅನಂತರ ಚಿತ್ರಕಲೆ

ಗುಹೆಯಿಂದ ಗಗನಕ್ಕೆ ಮಾನವನ ಮುನ್ನಡೆ – ಕೆ.ಕೆ. ಹೆಬ್ಬಾರರ ಕೃತಿಗಳಲ್ಲೊಂದು

16, 17ನೆಯ ಶತಮಾನಗಳವರೆಗೆ ಏಳಿಗೆಗೆ ಬರಲಿಲ್ಲ. ವಿಜಯನಗರಕಾಲದಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿಯೂ ಆನೆಗೊಂದಿಯಲ್ಲಿರುವ ಉಚ್ಚಪ್ಪ ಮಠದಲ್ಲಿಯೂ ಕಂಚಿಯ ವರದರಾಜಸ್ವಾಮಿ ದೇವಾಲಯದಲ್ಲಿಯೂ ಲೇಪಾಕ್ಷಿಯ ವೀರಭದ್ರಸ್ವಾಮಿ ಗುಡಿಯಲ್ಲಿಯೂ ಕಂಡುಬರುವ ಚಿತ್ರಗಳು ವಿಜಯನಗರದ ಕಾಲದಲ್ಲಿ ಕನ್ನಡಿಗ ಕಲೆಗಾರರು ಬಿಡಿಸಿದ ಚಿತ್ರಗಳು. ಈ ಸಂಪ್ರದಾಯಕ್ಕೆ ಸೇರಿದ ಚಿತ್ರಗಳೆಂದರೆ ತಂಜಾವೂರಿನಲ್ಲಿ ನಾಯಕರ ಆಳ್ವಿಕೆಯಲ್ಲಿ ಬೃಹದೀಶ್ವರ ದೇವಾಲಯದಲ್ಲಿ ಮೂಡಿಸಿರುವ ಚಿತ್ರಗಳು.

17ನೆಯ ಶತಮಾನದ ಅಂತ್ಯಭಾಗದಿಂದ ಕರ್ನಾಟಕದಲ್ಲಿ ಚಿತ್ರಕಲೆಯ ಅವನತಿ ಮೊದಲಾಯಿತು. ಕನ್ನಡನಾಡಿನ ಪುಣ್ಯವಿಶೇಷದಿಂದ ಭಾರತದಲ್ಲಿ ಚಿತ್ರಕಲೆಯ



ಮನುನೀತಿ ಕೂಡ ಚೋಳನನ್ನು ಶಿವ ಅನುಗ್ರಹಿಸುತ್ತಿರುವುದು – ಲೇಪಾಕ್ಷಿ

ಪುನರುಜ್ಜೀವನಕಾರ್ಯಕ್ಕೆ ಕನ್ನಡ ಕಲಾವಿದರು ಅಜಂತ ಗುಹೆಗಳಲ್ಲಿ ಬಿಡಿಸಿದ ಕಲಾಕೃತಿಗಳೇ ಸ್ಫೂರ್ತಿಯನ್ನಿತ್ತುವು. 1906ರಲ್ಲಿ ಲೇಡಿ ಹೆರ್ರಿಂಗ್‌ಹ್ಯಾಂ ಎಂಬಾಕೆ ಭಾರತಕ್ಕೆ ಬಂದು

ರೇಖಾಚಿತ್ರ–ಮೂರ್ತಿ ಅವರ ಕೃತಿ

ಅವನೀಂದ್ರನಾಥ ಠಾಕೂರರ ಆದೇಶದಂತೆ ಅಜಂತ ಭಿತ್ತಿಚಿತ್ರಗಳ ರೇಖಾಪ್ರತಿಕೃತಿಗಳನ್ನು ಮಾಡುತ್ತಿದ್ದಾಗ ಈ ಕೆಲಸದಲ್ಲಿ ನೆರವಾದ ಕಲಾವಿದರಲ್ಲಿ ಕೆ. ವೆಂಕಟಪ್ಪನವರು ಪ್ರಮುಖರು. ಅವನೀಂದ್ರ ಠಾಕೂರರಿಂದ ಆರಂಭವಾದ ನವ್ಯಸಂಪ್ರದಾಯದಲ್ಲಿ ಪ್ರಾಚೀನಸತ್ತ್ವ ತುಂಬಲು ಈ ಪ್ರತಿಕೃತಿಗಳು ನೆರವಾದುವು. ಹಳೆಯ ಕನ್ನಡಶೈಲಿಗೆ ಹೊಸ ಸಂವಿಧಾನದ ಉಡುಗೆಯನ್ನು ತೊಡಿಸಿ ಕಲಾರಾಧನೆ ಮಾಡಿದವರು ವೆಂಕಟಪ್ಪನವರು. ಆಧುನಿಕ ಚಿತ್ರ ಕಲಾವಿದರಲ್ಲಿ ಇವರು ಪ್ರಮುಖರು, ವಿಶ್ವವಿಖ್ಯಾತರು. ಬಂಗಾಲೀ ಪದ್ಧತಿಯ ಸ್ಫೂರ್ತಿ ಪಡೆದು ಕರ್ನಾಟಕದಲ್ಲಿ ಚಿತ್ರಕಲೆ ಈ ಕಾಲದಲ್ಲಿ ಮತ್ತೆ ತಲೆಯೆತ್ತಿತ್ತು.

ಈ ಸಂಪ್ರದಾಯವಲ್ಲದೆ ಪಾಶ್ಚಾತ್ತ್ಯ ದೇಶಗಳ ಪ್ರಗತಿಯ ಪ್ರಕಾರಗಳನ್ನು ಅಧ್ಯಯನ ಮಾಡಿ ಬೊಂಬಾಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್, ಬೆಂಗಳೂರಿನ ಕೆನ್‌ಸ್ಕೂಲ್ ಮುಂತಾದೆಡೆ ತಾಂತ್ರಿಕ ಶಿಕ್ಷಣ ಪಡೆದ ಕಲೆಗಾರರು ಸ್ವತಂತ್ರ ಮನೋವೃತ್ತಿಯಿಂದ ಕಲಾಸೇವೆ ಮಾಡುತ್ತಿದ್ದಾರೆ. ಇವರಲ್ಲಿ ಹಲವರು ನಾಡಿನ ಗೌರವ ಪಡೆದಿದ್ದಾರೆ. ಈ ಬಗ್ಗೆ ಕೆಲವಾರು ವರ್ಷಗಳಿಂದ ಬೆಂಗಳೂರಿನಲ್ಲಿರುವ ಚಿತ್ರಕಲಾವಿದರು ಚಿತ್ರಕಲಾಪರಿಷತ್ ಎಂಬ ಸಂಸ್ಥೆಯನ್ನು ರೂಪಿಸಿಕೊಂಡು ಆ ಸಂಸ್ಥೆಯ ವತಿಯಿಂದ ಕಲಾಶಾಲೆಯೊಂದನ್ನು ನಡೆಸುತ್ತಿದ್ದಾರೆ. ಕರ್ನಾಟಕದ ಕಲೆಗಾರರ ಆಶೋತ್ತರಗಳನ್ನು ಈಡೇರಿಸಿ ಅವರ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳಲು ಈ ಸಂಸ್ಥೆ ಶ್ರಮಿಸುತ್ತಿದೆ. **(ಎಸ್.ಕೆ.ಆರ್.)**

**ಕರ್ನಾಟಕದ ಧರ್ಮಗಳು :** ಕರ್ನಾಟಕದ ಧರ್ಮಗಳು ಬಹುಮಟ್ಟಿಗೆ ಭಾರತದ ಎಲ್ಲ ಧರ್ಮಗಳನ್ನೂ ಒಳಗೊಂಡಿವೆ. ಭಾರತದ ಧರ್ಮ ಒಂದು ಧಾರ್ಮಿಕ ಮಹಾಸಾಗರ. ಈ ಸಾಗರಕ್ಕೆ ಭಾರತದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಭಾಗಗಳಿಂದ ಬೇರೆ ಬೇರೆ ಕಾಲಗಳಲ್ಲಿ ಧಾರ್ಮಿಕ ವಿವೇಚನೆಯ ಪ್ರವಾಹಗಳು ಹರಿದು ಬಂದು ಸೇರಿವೆ. ಭಾರತದಲ್ಲೇ ಹುಟ್ಟಿದ ಧರ್ಮಗಳಲ್ಲದೆ, ಭಾರತದ ಆಚೆನಿಂದ ಬಂದ ಧರ್ಮಗಳೂ ಅದರ ಧಾರ್ಮಿಕ ವಿವೇಚನೆಯನ್ನು ಚೇತನಗೊಳಿಸಿವೆ. ಭಾರತದಲ್ಲೇ ಹುಟ್ಟಿದ ಧರ್ಮಗಳು ವೈದಿಕ, ಶೈವ, ವೈಷ್ಣವ, ತಾಂತ್ರಿಕ, ಶಾಕ್ತೇಯ, ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳು. ಹೊರಗಿನಿಂದ ಬಂದವು – ಕ್ರೈಸ್ತ, ಇಸ್ಲಾಂ ಮತ್ತು ಜರತುಷ್ಟ್ರ ಧರ್ಮಗಳು. ಭಾರತ ಅನಾದಿಕಾಲದಿಂದ

ಪೋಷಿಸಿದ ಸರ್ವಮತಸಹಿಷ್ಣುತೆಯ ನೀತಿಯನ್ನು ಕರ್ನಾಟಕವೂ ಅನುಸರಿಸಿ ಪುಷ್ಟಿಗೊಳಿಸಿದೆ.

ಭಾರತದ ಧರ್ಮ ಕನಿಷ್ಠಪಕ್ಷ ನಾಲ್ಕು ಸಾವಿರ ವರ್ಷಗಳಷ್ಟು ಹಳೆಯದು. ಅಂದಿನಿಂದ ಇಂದಿನವರೆಗೂ ಅದು ಬೆಳೆಯುತ್ತಿರುವ ಧರ್ಮ, ಅದರ ಬೆಳೆವಣಿಗೆ ಏಕಮುಖವಾದುದಲ್ಲ; ಬಹುಮುಖವಾದುದು. ಅದು ವೈಶಿಷ್ಟ್ಯದಿಂದ ಕೂಡಿದ ಏಕತೆಯನ್ನು ಏರ್ಪಡಿಸಿಕೊಂಡ ಧರ್ಮ; ಹಳೆಯದನ್ನು ಬಿಡದೆ ಹೊಸದನ್ನು ತನ್ನಲ್ಲಿ ಲೀನಗೊಳಿಸಿಕೊಳ್ಳುವುದು ಅದರ ಹುಟ್ಟುಗುಣ.

**ವೈದಿಕ ಧರ್ಮ** : ಭಾರತದ ಧರ್ಮಕ್ಕೆ ಮೂಲ ವೇದಗಳು. ಅವುಗಳ ಹರವು ಸುಮಾರು ಮೂರು ಸಾವಿರ ವರ್ಷಗಳಷ್ಟು ದೀರ್ಘಕಾಲದ್ದು. ಹರವು ದೀರ್ಘವಾಗಿರುವಂತೆಯೆ ಅವುಗಳ ಬೆಳೆಯೂ ಅಪಾರವಾದದ್ದು ಮತ್ತು ಅಸಾಧಾರಣ ವೈವಿಧ್ಯದಿಂದ ಕೂಡಿದ್ದು. ವೇದ ಸಾಹಿತ್ಯದಷ್ಟು ವಿಶಾಲ ಮತ್ತು ವೈವಿಧ್ಯಮಯ ಸಾಹಿತ್ಯ ವಿಶ್ವದ ಬೇರೆಲ್ಲೂ ಕಂಡುಬರುವುದಿಲ್ಲ.

ವೇದಗಳು ನಾಲ್ಕು: ಋಗ್, ಯಜುರ್, ಸಾಮ ಮತ್ತು ಅಥರ್ವಣ. ಈ ಒಂದೊಂದು ವೇದದಲ್ಲೂ ಕ್ರಮವಾಗಿ ಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳು ಎಂಬ ನಾಲ್ಕು ಭಾಗಗಳಿವೆ. ಸಂಹಿತೆಗಳು ದೇವತೆಗಳ ಸ್ತೋತ್ರಗಳು. ಯಜ್ಞಯಾಗಾದಿಗಳನ್ನು ತಿಳಿಸುವವು ಬ್ರಾಹ್ಮಣಗಳು. ಅವುಗಳ ಗೂಢಾರ್ಥವನ್ನು ವಿವೇಚಿಸುವವು ಆರಣ್ಯಕಗಳು. ಅಧ್ಯಾತ್ಮವನ್ನು ಬೋಧಿಸುವವು ಉಪನಿಷತ್ತುಗಳು. ಈ ವಿಭಾಗಗಳಲ್ಲಿ ಕೊನೆಯದಾದ ಉಪನಿಷತ್ತುಗಳು ವೈದಿಕಧರ್ಮಗಳ ಸಾರ ಸಂಗ್ರಹ.

ಋಗ್ವೇದಸಂಹಿತೆಯಲ್ಲಿ 1028 ಋಕ್ ಅಥವಾ ಸ್ತೋತ್ರಗಳು 10 ಮಂಡಲಗಳಲ್ಲಿ ಅಡಕವಾಗಿವೆ. ವಿವಿಧ ಮಹರ್ಷಿಗಳಿಂದ, ದ್ರಷ್ಟಾರರಿಂದ ರೂಪುಗೊಂಡ ಇವು ಮಾನವನಿರ್ಮಿತವಲ್ಲ. ಇವು ಅಪೌರುಷೇಯವೆಂದು ಹಿಂದೂಗಳ ನಂಬಿಕೆ. ಇಲ್ಲಿ ಸ್ತುತರಾಗಿರುವ ದೇವತೆಗಳನ್ನು ಭೂಮಿಯ, ಅಂತರಿಕ್ಷದ ಮತ್ತು ದ್ಯೌ ಅಥವಾ ಸ್ವರ್ಗದ ದೇವತೆಗಳೆಂದು ವಿಂಗಡಿಸಲಾಗಿದೆ. ಮೊದಲು ವರುಣ, ಅನಂತರ ಇಂದ್ರ ಇವರಲ್ಲಿ ಅಧಿದೇವತೆಗಳಾಗಿದ್ದರು. ಋಗ್ವೇದದ ಕೊನೆಯ ಕಾಲದಲ್ಲೇ ಏಕೇಶ್ವರ ವಾದದ ಬೀಜಾಂಕುರವಾಗಿತ್ತೆಂದು ಹೇಳಬಹುದು.

ವೇದೋಕ್ತವಾದ ಯಜ್ಞಯಾಗಾದಿ ಕರ್ಮಗಳನ್ನು ವಿವರಿಸುವ, ಅವುಗಳ ಆಚರಣೆಯ ಕ್ರಮವನ್ನು ತಿಳಿಸುವ ಸಾಹಿತ್ಯಕೃತಿಗಳಿಗೆ ಬ್ರಾಹ್ಮಣಗಳೆಂದು ಹೆಸರು. ಇವುಗಳಲ್ಲಿ ಅತ್ಯಂತ ಪುರಾತನವಾದುದು ಋಗ್ವೇದಕ್ಕೆ ಸೇರಿದ ಐತರೇಯ ಬ್ರಾಹ್ಮಣ. ಯಜುರ್ವೇದಕ್ಕೆ ಸೇರಿದ ತೈತ್ತಿರೀಯ ಪ್ರಮುಖ ಬ್ರಾಹ್ಮಣಗ್ರಂಥ. ಇತರ ವೇದಗಳಿಗೆ ಸೇರಿದ ಬ್ರಾಹ್ಮಣಗಳೂ ಉಂಟು.

ಯಜ್ಞಯಾಗಾದಿಗಳ ಗೂಡಾರ್ಥವನ್ನು ತಿಳಿಸುವ, ಸಾಮಾನ್ಯವಾಗಿ ಅರಣ್ಯಗಳಲ್ಲಿ ಗೋಪ್ಯವಾಗಿ ಬೋಧಿಸುತ್ತಿದ್ದ ಸಾಹಿತ್ಯಕ್ಕೆ ಆರಣ್ಯಕಗಳೆಂದು ಹೆಸರು.

ವೈದಿಕ ಸಾಹಿತ್ಯದ ಅಂತ್ಯಭಾಗದಲ್ಲಿ ಬರುವ ಉಪನಿಷತ್ತುಗಳಲ್ಲಿ ವೈದಿಕ ಆರ್ಯರ ತತ್ತ್ವವಿವೇಚನೆ ಶಿಖರವನ್ನು ಮುಟ್ಟಿದೆ. ಅವುಗಳಲ್ಲಿ ಕಂಡುಬರುವ ಸ್ವತಂತ್ರ ಆಲೋಚನೆ ಮತ್ತು ವಿಶಾಲಭಾವನೆ ಅಸದೃಶವಾದದ್ದು. ಯಜ್ಞಕರ್ಮಗಳು ಜೀವನದ ಆಚೆಯ ದಡವನ್ನು ಮುಟ್ಟಲು ಯೋಗ್ಯವಾದ ದೋಣಿಗಳಲ್ಲ, ಆಧ್ಯಾತ್ಮಿಕ ತತ್ತ್ವಜ್ಞಾನವೊಂದೇ ಮಾನವನ ಮುಕ್ತಿಗೆ ದಾರಿ ಎಂಬುದು ಇವುಗಳ ಉಪದೇಶ. ಜ್ಞಾನಸಿದ್ಧಿಗೆ ಬೇಕಾದ ಚಿತ್ತಶುದ್ಧಿಗೆ ಕರ್ಮ ಅಗತ್ಯವೆಂದು ಇವು ತಿಳಿಸುತ್ತವೆ. ಉಪನಿಷತ್ತುಗಳಲ್ಲಿ ಜೀವನ್ಮುಕ್ತಿಯಲ್ಲದೆ ಕ್ರಮಮುಕ್ತಿಯೂ ವರ್ಣಿತವಾಗಿದೆ.

ಇಲ್ಲಿನ ಮೋಕ್ಷಸಾಧನೆಗೆ ಅಗತ್ಯವಾದ ಉಪಾಸನೆ ಬ್ರಹ್ಮದ ಉಪಾಸನೆ. ಇಲ್ಲಿರುವುದೆಲ್ಲ ಬ್ರಹ್ಮವೇ (ಸರ್ವಂ ಖಲ್ವಿದಂ ಬ್ರಹ್ಮ). ಆತ್ಮವೂ ಬ್ರಹ್ಮವೂ ಒಂದೇ (ಅಯಮಾತ್ಮಾ ಬ್ರಹ್ಮ), ಬ್ರಹ್ಮವೇ ಅದು (ತತ್ತ್ವಮಸಿ) ಎಂಬ ಹೊಸ ಭಾವನೆಗಳು ಇಲ್ಲಿ ಪ್ರಕಾಶಕ್ಕೆ ಬಂದಿವೆ. ಋಗ್ವೇದದ ಕೊನೆಯ ಕಾಲದಲ್ಲಿ ಸತ್ ಒಂದೇ ಎಂಬ ಏಕತ್ವತತ್ತ್ವ ಕಂಡುಬರುತ್ತದೆ. ಆದರೆ ಉಪನಿಷತ್ತುಗಳಲ್ಲಿ ಆ ಏಕತ್ವತತ್ತ್ವ ಆತ್ಮರೂಪವಾದದ್ದು ಎಂಬ ಹೊಸ ಭಾವನೆ ಹೊರಹೊಮ್ಮುತ್ತದೆ. ವಿಶ್ವವನ್ನು ಆವರಿಸಿರುವ ತತ್ತ್ವವೂ ಮಾನವನಲ್ಲಿರುವ ಆತ್ಮವೂ ಒಂದೇ ಎಂಬ ಭಾವನೆ ಉಪನಿಷತ್ತುಗಳಿಗೇ ವಿಶಿಷ್ಟವಾದದ್ದು.

ಉಪನಿಷತ್ತುಗಳಲ್ಲಿ ಬೋಧಿಸಿರುವ ಬ್ರಹ್ಮನ್ ಏಕರೀತಿಯ ಬ್ರಹ್ಮವಲ್ಲ. ಬ್ರಹ್ಮನ್ ಮತ್ತು ಆತ್ಮಕ್ಕೂ ಬ್ರಹ್ಮನ್ ಮತ್ತು ವಿಶ್ವಕ್ಕೂ ಇರುವ ಸಂಬಂಧ ಏಕರೀತಿಯದಲ್ಲ. ಉಪನಿಷತ್ತುಗಳ ಕೆಲವು ಭಾಗಗಳಲ್ಲಿ ಬ್ರಹ್ಮವೊಂದೇ ಸತ್ಯ. ಜಗತ್ತು ಬರಿಯ ತೋರಿಕೆ ಎಂಬ ಭಾವನೆ ಇದೆ. ಇನ್ನು ಕೆಲವು ಭಾಗಗಳಲ್ಲಿ ಜಗತ್ತು ತೋರಿಕೆಯಲ್ಲ. ಅದೂ ಸತ್ಯ. ಆದರೆ ಅದು ಬ್ರಹ್ಮದಿಂದ ಬೇರೆಯಾಗಿ ಸ್ವತಂತ್ರವಿಲ್ಲ– ಎಂಬ ಭಾವನೆ ಇದೆ. ಆದುದರಿಂದಲೇ ಈ ಹೇಳಿಕೆಗಳ ಆಧಾರದ ಮೇಲೆ ಶಂಕರ, ರಾಮಾನುಜ, ಮಧ್ವ ಮುಂತಾದ ಭಾಷ್ಯಕಾರರು ಭಿನ್ನ ಭಿನ್ನ ಸಿದ್ಧಾಂತಗಳನ್ನು ಮಂಡಿಸಿದ್ದಾರೆ.

ಉಪನಿಷತ್ತುಗಳ ಕೆಲವು ಭಾಗಗಳಲ್ಲಿ ಬ್ರಹ್ಮನ್ ಪರಿಪೂರ್ಣ ಗುಣಗಳುಳ್ಳ ಸಗುಣ ಬ್ರಹ್ಮವೆಂದೂ ಮತ್ತೆ ಕೆಲವು ಭಾಗಗಳಲ್ಲಿ ಬ್ರಹ್ಮನ್ ಗುಣಾತೀತ ನಿರ್ಗುಣ ಬ್ರಹ್ಮವೆಂದೂ ಹೇಳಿದೆ. ಇನ್ನು ಕೆಲವು ಭಾಗಗಳಲ್ಲಿ ಸಗುಣ ವಿವರಣೆ, ನಿರ್ಗುಣ ವಿವರಣೆ ಎರಡೂ ಒಂದಾದ ಮೇಲೆ ಒಂದು ಬರುತ್ತವೆ. ಈ ಭಿನ್ನ ವಿವರಣೆಗಳ ಆಧಾರದ ಮೇಲೆ ಭಾಷ್ಯಕಾರರು ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ದ್ವೈತಾದ್ವೈತ ಇತ್ಯಾದಿ ಸಿದ್ಧಾಂತಗಳನ್ನು ಸ್ಥಾಪಿಸಲು ಯತ್ನಿಸಿದ್ದಾರೆ.

ಉಪನಿಷತ್ತುಗಳು ಬ್ರಹ್ಮವಿದ್ಯೆಯ ಸಾಧನಾವಿಧಾನವನ್ನು ಸ್ಪಷ್ಟವಾಗಿ ವಿವರಿಸಿರುತ್ತವೆ. ಆ ಸಾಧನಗಳು ಮೂರು– ಶ್ರವಣ, ಮನನ, ಧ್ಯಾನ. ಗುರುಮುಖೇನ ಅಧ್ಯಯನ ಮಾಡುವುದು ಶ್ರವಣ. ಹಲವು ತಲೆಮಾರಿನವರಿಂದ ಪರಂಪರಾನುಗತವಾಗಿ ಬೆಳೆದ ಸತ್ಯವನ್ನು ನಾಲ್ಕಾರು ವರ್ಷಗಳಲ್ಲಿ ತಿಳಿದುಕೊಳ್ಳಲು ಅತ್ಯಂತ ಅಗತ್ಯವಾದ ಸಾಧನ ಗುರು. ಎಷ್ಟೇ ಚತುರನಾದ ಗುರುವಿನ ಮೂಲಕ ವಿದ್ಯೆಯನ್ನು ಕೇಳಿ ತಿಳಿದುಕೊಂಡರೂ ಅದು ನಿಶ್ಚಿತ ಸತ್ಯವಾಗಿ ನಿಲ್ಲುವುದಿಲ್ಲ. ಆದ್ದರಿಂದ ಉಪನಿಷತ್ತುಗಳು ಸತ್ಯವನ್ನು ನಿಶ್ಚಿತಗೊಳಿಸಿಕೊಳ್ಳಲು ಮನನವನ್ನು ಎರಡನೆಯ ಸಾಧನವಾಗಿ ನಿಯೋಜಿಸುತ್ತವೆ. ಬೌದ್ಧಿಕವಾಗಿ ತಿಳಿದ ಸತ್ಯ ಪ್ರತ್ಯಕ್ಷಾನುಭವವಾದಾಗಲೇ ಪರಿಪಕ್ವವಾಗುವುದು. ಇದಕ್ಕೆ ಅಗತ್ಯವಾದ ಸಾಧನ ಧ್ಯಾನ. ಧ್ಯಾನದ ಮೂಲಕ ಸತ್ಯ ಸಾಕ್ಷಾತ್ಕಾರವಾಗುತ್ತದೆ. ಬ್ರಹ್ಮಸಾಕ್ಷಾತ್ಕಾರವೇ ಉಪನಿಷತ್ತುಗಳ ಅಂತಿಮಗುರಿ. ಚೇತನದ ಸಾಧನೆಗೆ ಚಿತ್ತಶುದ್ಧಿ ಅತ್ಯಗತ್ಯ. ಸ್ವಾರ್ಥ ತೊಲಗಿ ಸಕಲಪ್ರಾಣಿಗಳಲ್ಲೂ ಔದಾರ್ಯ ಮತ್ತು ಅನುಕಂಪ ಹೊಮ್ಮದ ಹೊರತು ಸರ್ವಂ ಖಲ್ವಿದಂ, ಬ್ರಹ್ಮ ಎಂಬ ಅನುಭೂತಿ ಸಿದ್ಧಿಸುವುದಿಲ್ಲ. ನಿಸ್ವಾರ್ಥಕ್ಕಾಗಿ ಮತ್ತು ಸಾರ್ವತ್ರಿಕ ಪ್ರೀತಿಯೇ ಸಂನ್ಯಾಸ. ಅದು ಇಲ್ಲೇ ಈ ಜನ್ಮದಲ್ಲೇ ಇಹಲೋಕದಲ್ಲೇ ಜೀವನ್ಮುಕ್ತಿಪಡೆಯಲು ಅಗತ್ಯವಾದ ಮಾರ್ಗ.

ಹಿಂದೂ ಧರ್ಮಕ್ಕೆ ವೇದಗಳು ಎಷ್ಟು ಮುಖ್ಯವೋ ಅವುಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಿರುವ ವರ್ಣಾಶ್ರಮ ಧರ್ಮವನ್ನು ವೈದಿಕ ಸಂಸ್ಕಾರಗಳನ್ನು ಸುವ್ಯವಸ್ಥೆಗೊಳಿಸಿದ ಕಲ್ಪಸೂತ್ರಗಳೂ ವೇದದಲ್ಲಿ ಅಷ್ಟು ಪ್ರಸಿದ್ಧರಲ್ಲದ ವಿಷ್ಣುಶಿವರನ್ನು ದೇವಾಧಿದೇವ ಪಟ್ಟಕ್ಕೆ

ವಿದ್ಯಾಶಂಕರ ದೇವಾಲಯ, ಶೃಂಗೇರಿ

ಏರಿಸಿದ ಪುರಾಣೇತಿಹಾಸಗ್ರಂಥಗಳೂ ಶೈವ, ವೈಷ್ಣವ, ತಾಂತ್ರಿಕ ಮತ್ತು ಶಾಕ್ತೇಯ ಮತಗಳಿಗೆ ಆಧಾರವಾದ ಉಪನಿಷತ್ತುಗಳೂ ಪಾಶುಪತ ಮತ್ತು ಪಂಚರಾತ್ರಾಗಮಗಳೂ ಅಷ್ಟೇ ಮುಖ್ಯ. ಈ ಎಲ್ಲವುಗಳ ಮೂಲಕ ವಿಸ್ತರಿಸಿದ ಧರ್ಮವೇ ಹಿಂದೂ ಧರ್ಮ.

ಉಪನಿಷತ್ತುಗಳ ಅನಂತರಕಾಲದಲ್ಲಿ ಸೂತ್ರಸಾಹಿತ್ಯ ಬಂತು. ಧರ್ಮ, ಗೃಹ್ಯ, ಶ್ರೌತ ಮುಂತಾದ ಈ ಸೂತ್ರಸಾಹಿತ್ಯ ತತ್ತ್ವಶಾಸ್ತ್ರವಿವೇಚನೆಯನ್ನು ಕೈಬಿಟ್ಟು ಜನ ದಿನದಿನದ ಜೀವನದಲ್ಲಿ ಅನುಸರಿಸಬೇಕಾದ ವಿವಿಧ ಆಚಾರವಿಚಾರಗಳ ವಿಷಯದಲ್ಲಿ ಮಾರ್ಗದರ್ಶನ ನೀಡುತ್ತದೆ. ಸಮಾಜವನ್ನು ವರ್ಣಾಶ್ರಮಧರ್ಮಕ್ಕನುಸಾರವಾಗಿ ವಿಭಜಿಸಿ ಆಯಾ ವರ್ಗದವರ ಕರ್ತವ್ಯಕರ್ಮಗಳನ್ನು ನಿರ್ದೇಶಿಸುತ್ತದೆ. ಆ ಕಾಲದಲ್ಲಿ ಸಮಾಜದ ಸುವ್ಯವಸ್ಥೆಗೆ ಆಧಾರವಾಗಿದ್ದ ಈ ವರ್ಣಾಶ್ರಮವ್ಯವಸ್ಥೆ ಕಾಲಕ್ರಮದಲ್ಲಿ ಹೇಗೆ ಸಂಕುಚಿತ ಮನೋಭಾವಗಳಿಗೀಡಾಗಿ ಸಮಾಜದ ಮೇಲೆ ದುಷ್ಪರಿಣಾಮಗಳನ್ನುಂಟುಮಾಡಿತೆಂಬುದು ಎಲ್ಲರಿಗೂ ಸುವಿದಿತವಾಗಿದೆ. ಬುದ್ಧನಿಂದ ಗಾಂಧಿಯವರೆಗೂ ಈ ದುಷ್ಪರಿಣಾಮಗಳನ್ನು ತೊಡೆಯುವ ಪ್ರಯತ್ನ ನಡೆದು ಬಂದಿದೆ.

ವೇದಗಳ ಅನಂತರ ನಾಲ್ಕೈದು ಶತಮಾನಗಳಲ್ಲಿ ವೈದಿಕ ಸಂಸ್ಕೃತಿ ವ್ಯವಸ್ಥೆಗೊಂಡಿತಲ್ಲದೆ ಅದರಲ್ಲಿ ಅಮುಖ್ಯವೆಂದು ಪರಿಗಣಿಸಿದ್ದ ಶಿವ ಮತ್ತು ವಿಷ್ಣು ಪ್ರಧಾನರಾದರು.

ವೇದದ ಕೊನೆಯ ಕಾಲದಲ್ಲಿ ಶ್ವೇತಾಶ್ವತರ ಉಪನಿಷತ್ತು ಹುಟ್ಟಿದಾಗ ಶಿವನಿಗೆ ದೇವಾಧಿದೇವ ಪಟ್ಟ ದೊರೆಯುತ್ತದೆ. ಶಿವ ವೇದಾನಂತರದ ಕಾಲದಲ್ಲಿ ಇನ್ನೂ ಹೆಚ್ಚು ಪ್ರಾಶಸ್ತ್ಯ ಪಡೆದುದಕ್ಕೆ ವೇದಗಳಿಂದ ಭಿನ್ನವಾದ ಶೈವಾಗಮಗಳು ಕಾರಣ. ಶೈವಾಗಮಗಳಲ್ಲಿ ಭಕ್ತಿ ಮತ್ತು ಪ್ರಸಾದಗಳಿಗೆ ಮಾನ್ಯಸ್ಥಾನ ದೊರೆಯುತ್ತದೆ. ಮಹಾಭಾರತದ ಕಾಲದಿಂದ ಇಂದಿನವರೆಗೂ ಶೈವಮತ ಕಾಶ್ಮೀರಶೈವ, ಪಾಶುಪತ, ಲಕುಲೀಶ, ದ್ರಾವಿಡ ಶೈವ ಮತ್ತು ಕರ್ನಾಟಕ ವೀರಶೈವ ಮುಂತಾದವುಗಳ ಮೂಲಕ ಬಹುಮುಖವಾಗಿ ಬೆಳೆದಿದೆ. ಇವುಗಳ ವಿವರವನ್ನು ಮುಂದೆ ಕೊಡಲಾಗುವುದು.

ಇದೇ ಕಾಲದಲ್ಲೇ ವಿಷ್ಣುವಿನ ಆರಾಧನೆಯೂ ಹೆಚ್ಚಾಗಿ ಬಳಕೆಗೆ ಬಂತು. ಸಂಹಿತೆಗಳಲ್ಲಿ ವಿಷ್ಣುವನ್ನು ತ್ರಿವಿಕ್ರಮನೆಂದು ವರ್ಣಿಸಿದೆ. ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳ ಪ್ರಕಾರ ವಿಷ್ಣುವಿನ ಪರಮಪದವನ್ನು ಮುಟ್ಟುವುದೇ (ತದ್ವಿಷ್ಣೋಃ ಪರಮಂ ಪದಂ) ಜೀವನದ ಅಂತಿಮ ಗುರಿ. ವೇದಕ್ಕಿಂತ ಸ್ವಲ್ಪ ಈಚಿನ ಕಾಲದಲ್ಲಿ ರಚಿತವಾದ ಮಹಾನಾರಾಯಣ ಉಪನಿಷತ್ತಿನಲ್ಲಿ ನಾರಾಯಣ ಉಚ್ಚಪದವಿಯನ್ನು ಪಡೆದಿದ್ದಾನೆ. ಮಹಾಭಾರತದಲ್ಲಿ ಅವನನ್ನು ಧರ್ಮದ ಪುತ್ರನೆಂದು ವರ್ಣಿಸಿದೆ. ಈ ವರ್ಣನೆಯಿಂದ ವಿಷ್ಣು ಕೇವಲ ವಿಶ್ವವ್ಯಾಪಿಯಲ್ಲ, ಅವನು ಧರ್ಮಾಧ್ಯಕ್ಷನೆಂಬುದೂ ಸ್ಪಷ್ಟವಾಗುತ್ತದೆ. ವೈಷ್ಣವಧರ್ಮಕ್ಕೆ ವೇದದಿಂದ ಪ್ರತ್ಯೇಕವಾದ ಬೇರೊಂದು ಕಡೆಯಿಂದ ಪುಷ್ಟಿ ದೊರೆತಿದೆ. ಮಹಾಭಾರತದ ಮತ್ತು ಭಗವದ್ಗೀತೆಯ ಕೃಷ್ಣಭಗವಾನನ ಭಾವನೆ ವೇದದ ವಿಷ್ಣುನಾರಾಯಣ ಭಾವನೆಯೊಂದಿಗೆ ಮಿಳಿತವಾಗಿ ಕೃಷ್ಣ ವಿಷ್ಣುವಿನ ಒಂದು ಅವತಾರವೆಂಬ ಭಾವನೆ ಹುಟ್ಟಿತು. ಈ ಅವತಾರಗಳ ಕಲ್ಪನೆಯೇ ಹಿಂದೂಗಳಲ್ಲಿರುವ ಅಪರಿಮಿತ ದೇವತೆಗಳನ್ನು ಅಧಿದೇವತೆಯ ರೂಪ ಭೇದ ಅಥವಾ ಅವತಾರಗಳೆಂದು ಭಾವಿಸಲು ಮತ್ತು ವೈದಿಕಧರ್ಮವಿರೋಧಿಯಾದ ಗೌತಮಬುದ್ಧನನ್ನೂ ವಿಷ್ಣುವಿನ ಅವತಾರಪ್ರಭೇದಗಳಲ್ಲಿ ಸೇರಿಸಲು ಸಾಧ್ಯವಾಗಿಸಿತು. ಶಿವ ವಿಷ್ಣುರೂಪಿ, ವಿಷ್ಣು ಶಿವರೂಪಿ (ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ) ಎಂಬ ಭಾವನೆ ಹುಟ್ಟಿದ್ದಕ್ಕೂ ಇದೇ ಮೂಲ. ವೈಷ್ಣವಧರ್ಮ ಶೈವಧರ್ಮಗಳಂತೆಯೇ ಭಕ್ತಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದೆ. ಅದು ಯಜ್ಞಯಾಗಾದಿಗಳಲ್ಲಿ ಪಶುವಧೆಯನ್ನು ನಿಷೇಧಿಸುತ್ತದೆ. ವೈಷ್ಣವಭಕ್ತರು ಕುದುರೆಯನ್ನು ಕೊಲ್ಲದೆ ಅಶ್ವಮೇಧಯಾಗವನ್ನು ನಡೆಸಿದರೆಂದು ಮಹಾಭಾರತದಲ್ಲಿ ವರ್ಣಿಸಿದೆ. ಈ ಸಂಪ್ರದಾಯವನ್ನು ಅನುಸರಿಸಿ ಮಾಧ್ವರು ಯಜ್ಞಗಳಲ್ಲಿ ಹಿಟ್ಟಿನಿಂದ ಮಾಡಿದ ಪ್ರಾಣಿಯನ್ನು ಅರ್ಪಿಸುತ್ತಾರೆ. ಕರ್ತವ್ಯಭಾಷೆಯಲ್ಲೂ ಭಗವದ್ಗೀತೆಯ ಮೂಲಕ ಬದಲಾವಣೆಯುಂಟಾಯಿತು. ಫಲಾಪೇಕ್ಷೆ ಇಲ್ಲದೆ ಮಾಡಿದ ನಿಷ್ಕಾಮಕರ್ಮವೇ ಶ್ರೇಷ್ಠವೆಂಬುದು ಆ ಹೊಸ ಭಾವನೆ.

ಈ ಕಾಲದಲ್ಲಿ ಶೈವವೈಷ್ಣವ ಧರ್ಮಗಳು ಮುಂದಕ್ಕೆ ಬಂದುವಲ್ಲದೆ, ನಿರೀಶ್ವರ ಮತಗಳೂ ತಲೆ ಎತ್ತಿದುವು. ಇವು ಮೂರು ಬಗೆಯಾಗಿವೆ– 1. ಸ್ವಭಾವವಾದ 2. ಜೈನತತ್ತ್ವ 3. ಬೌದ್ಧತತ್ತ್ವ. ಸ್ವಭಾವವಾದದ ಇತರ ಹೆಸರುಗಳು ಲೋಕಾಯತ ಮತ್ತು ಚಾರ್ವಾಕ. ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣುವ ಮಣ್ಣು, ನೀರು, ಬೆಂಕಿ, ಗಾಳಿ ಎಂಬ ನಾಲ್ಕು ಭೂತಗಳೇ ಎಲ್ಲಕ್ಕೂ ಕಾರಣ. ಈ ಲೋಕವಲ್ಲದೆ ಬೇರೆ ಲೋಕವಾಗಲಿ ಸೃಷ್ಟಿಕರ್ತನೆಂಬ ದೇವರಾಗಲಿ, ನಾಲ್ಕು ಭೂತಗಳಿಂದ ಕೂಡಿದ ಶರೀರವನ್ನು ಬಿಟ್ಟು ಅದಕ್ಕಿಂತ ಬೇರೆಯಾದ ಆತ್ಮವಾಗಲಿ ಇಲ್ಲವೆಂಬುದು ಲೋಕಾಯತಮತ. ಇದು ವೈದಿಕ ಕರ್ಮಗಳನ್ನು ನಿರಾಕರಿಸುತ್ತದೆ. ದುಃಖಕರವಾದುದನ್ನು ಬದಿಗೊತ್ತಿ ಸುಖಕರವಾದುದನ್ನು ಆಯ್ದುಕೊಂಡು ಬಾಳುವುದೇ ವಿವೇಕ; ಅರ್ಥ ಮತ್ತು ಕಾಮಗಳೇ ಪರಮಪುರುಷಾರ್ಥಗಳು ಎಂಬುದು ಇದರ ನೀತಿ.

ವೈದಿಕಧರ್ಮಕ್ಕೆ ವಿರುದ್ಧವಾಗಿ ಹುಟ್ಟಿದ ಮತಗಳಲ್ಲಿ ಭಾರತದ ಈಶಾನ್ಯಭಾಗದಲ್ಲಿ ಹುಟ್ಟಿಕೊಂಡ ಜೈನಧರ್ಮ ಮತ್ತು ಬೌದ್ಧಧರ್ಮಗಳು ತುಂಬ ಪ್ರಬಲವಾದುವು. ಇವು ವೈದಿಕ ಕರ್ಮಗಳನ್ನು ಬಹಿಷ್ಕರಿಸುತ್ತವೆ; ಸೃಷ್ಟಿಕರ್ತನಾದ ಈಶ್ವರನನ್ನೂ ಜಾತಿಭೇದಗಳನ್ನೂ ನಿರಾಕರಿಸುತ್ತವೆ. ಆದರೆ ಇವೆರಡೂ ಜನತೆಗೆ ಅರ್ಥವಾಗುವ ಪ್ರಾಕೃತಭಾಷೆಗಳ ಮೂಲಕ ಸ್ವಾರ್ಥತ್ಯಾಗ ಮತ್ತು ಅಹಿಂಸೆಗಳನ್ನು ಪರಮಧರ್ಮಗಳೆಂದು ಸಾರಿದುವು. ಇವುಗಳ ತತ್ತ್ವವನ್ನು ಮುಂದೆ ವಿವರಿಸಲಾಗುತ್ತದೆ.

ಅನಂತರಕಾಲದಲ್ಲಿ ಭಾರತೀಯ ಷಡ್ದರ್ಶನಗಳೆಂದು ಹೆಸರಾಗಿರುವ ವೇದಾಂತ, ಪೂರ್ವಮೀಮಾಂಸಾ, ಸಾಂಖ್ಯ, ಯೋಗ, ನ್ಯಾಯ ಮತ್ತು ವೈಶೇಷಿಕ ಶಾಸನಗಳು ರೂಪಗೊಂಡುವು. ಬಹುಶಃ ಇದೇ ಕಾಲದಲ್ಲೇ ತಾಂತ್ರಿಕ ಮತ್ತು ಶಾಕ್ತ ಆಗಮಗಳು ಹುಟ್ಟಿರಬೇಕು. ಇವು ಕಾಲಾಂತರದಲ್ಲಿ ಶೈವ ಮತ್ತು ಬೌದ್ಧಧರ್ಮಗಳನ್ನು ಆವರಿಸಿದುವು.

ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರ.ಶ. 8ನೆಯ ಶತಮಾನದವರೆಗೆ ವೈಷ್ಣವ, ಶೈವ, ಶಾಕ್ತಮತಗಳನ್ನೊಳಗೊಂಡ ವೈದಿಕಧರ್ಮಗಳೂ ಬೌದ್ಧ ಜೈನಧರ್ಮಗಳೂ ವಾಯುವ್ಯ ಈಶಾನ್ಯಗಳ ಕಡೆಯಿಂದ ದಕ್ಷಿಣ ಪ್ರದೇಶಗಳಿಗೆ ಹಬ್ಬಿದುವು. 2ನೆಯ ಶತಮಾನದಲ್ಲಿ ಕ್ರೈಸ್ತ ಧರ್ಮ ದಕ್ಷಿಣದ ಕೊಚಿನ್ ಪ್ರದೇಶದಲ್ಲಿ ಕಾಲಿಟ್ಟಿತು. ಆಂಗ್ಲೇಯರು ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ಮೇಲೆ ಅದು ಉತ್ಕರ್ಷ ಹೊಂದಿತು. ಇಸ್ಲಾಂ ಧರ್ಮ 712ರಲ್ಲಿ ಸಿಂಧ್ ಪ್ರದೇಶವನ್ನು ಹೊಕ್ಕು ದಕ್ಷಿಣಕ್ಕೆ 13ನೆಯ ಶತಮಾನದಲ್ಲಿ ಕಾಲಿಟ್ಟಿತು; ತರುವಾಯ 19ನೆಯ ಶತಮಾನದವರೆಗೂ ಭಾರತಾದ್ಯಂತ ವಿಶೇಷವಾಗಿ ಬೆಳೆಯಿತು.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಎಲ್ಲ ಪ್ರಮುಖ ಧರ್ಮಗಳನ್ನೂ ಪರಿಶೀಲಿಸಬಹುದು.

**ಬೌದ್ಧಧರ್ಮ :** ಬೌದ್ಧಧರ್ಮ ಕರ್ನಾಟಕಕ್ಕೆ ಬಂದದ್ದು ಚಕ್ರವರ್ತಿ ಅಶೋಕನ ಕಾಲದಲ್ಲಿ. ಅವನ ಶಾಸನಗಳು ಕರ್ನಾಟಕದ ಹಲವೆಡೆಗಳಲ್ಲಿವೆ. ಸಾತವಾಹನರ ಕಾಲದಲ್ಲಿ ಬನವಾಸಿಯಲ್ಲಿ ಬೌದ್ಧವಿಹಾರಗಳು ಸ್ಥಾಪಿತವಾದುವು. ಶೈವಕ್ಷೇತ್ರವಾಗುವುದಕ್ಕೆ ಮುಂಚೆ ಶ್ರೀಶೈಲ ಬೌದ್ಧಧರ್ಮದ ಕೇಂದ್ರವಾಗಿತ್ತು. ಕಾಲಕ್ರಮದಲ್ಲಿ ಜೈನ ಮತ್ತು ಹಿಂದೂ ಧರ್ಮಗಳು ಪ್ರಬಲಗೊಂಡು ಕರ್ನಾಟಕದಲ್ಲಿ ಬೌದ್ಧಧರ್ಮ ಕ್ಷೀಣವಾಯಿತು. ಆದರೂ ಅದು 12ನೆಯ ಶತಮಾನದವರೆಗೂ ಕರ್ನಾಟಕದಲ್ಲಿ ಕೆಲವು ಕಡೆ ಉಳಿದುಕೊಂಡಿತ್ತು. ಧಾರವಾಡ ಜಿಲ್ಲೆಯ ಡಂಬಳ ಎಂಬಲ್ಲಿನ 1095ರ ಒಂದು ಶಾಸನದಲ್ಲಿ ಹದಿನಾರು ಶ್ರೇಷ್ಠಿಗಳು ಅಲ್ಲಿ ಒಂದು ಬೌದ್ಧವಿಹಾರವನ್ನೂ ಬೌದ್ಧದೇವತೆಯಾದ ತಾರಾದೇವಿಯ ದೇವಾಲಯವನ್ನೂ ಕಟ್ಟಿಸಿದರೆಂದು ಉಕ್ತವಾಗಿದೆ.

ಬೌದ್ಧಧರ್ಮ ವೈದಿಕ ಯಜ್ಞಯಾಗಾದಿಗಳನ್ನೂ ಪಶುಬಲಿಯನ್ನೂ ನಿಷೇಧಿಸಿತು ; ಜಾತಿಭೇದಗಳನ್ನು ಎಣಿಸದೆ ಎಲ್ಲರಿಗೂ ಜೀವನದಿಂದ ಮುಕ್ತಿಯನ್ನು ಪಡೆಯುವ ಮಾರ್ಗವನ್ನು ಬೋಧಿಸಿತು; ತೀವ್ರದೇಹಶೋಷಣೆಯ ಮಾರ್ಗವನ್ನೂ ಭೋಗಲಾಲಸೆಯ ಲೋಕಾಯತ ನೀತಿಯನ್ನೂ ಬಿಟ್ಟು ಮಾಧ್ಯಮಿಕ ಸಂಯಮದಿಂದ ಗುರಿ ಸಾಧಿಸುವ ಮಾರ್ಗವನ್ನು ತೋರಿಸಿತು. ಆಸೆಯೇ ದುಃಖಕ್ಕೆ ಮೂಲ. ಅದರ ನಿರ್ಮೂಲನವೇ ಮುಕ್ತಿಸಾಧನೆಗೆ ಮಾರ್ಗ. ಸಮ್ಯಕ್ ಜ್ಞಾನ ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್ ಮತ್ತು ಸತ್‌ಚಾರಿತ್ರ– ಈ ನಾಲ್ಕು ಎಲ್ಲರೂ ಅನುಸರಿಸಬೇಕಾದವು. ಅಷ್ಟಾಂಗಯೋಗಗಳ ಮಾರ್ಗ ಬೌದ್ಧಸಂನ್ಯಾಸಿಗಳಿಗೆ. ಬುದ್ಧದೇವ ದೇವತಾಪೂಜೆಯನ್ನು ನಿಷೇಧಿಸಿದ್ದರೂ ಕಾಲಾಂತರದಲ್ಲಿ ಬೌದ್ಧರಲ್ಲಿ ಮೂರ್ತಿಪೂಜೆ ಆಚರಣೆಗೆ ಬಂತು. ಹಿಂದೂ ಧರ್ಮ ಪುನರುದ್ಧಾರ ಕಾಲದಲ್ಲಿ ಬುದ್ಧ ವಿಷ್ಣುವಿನ ಒಂದು ಅವತಾರವಾಗಿ ಬೌದ್ಧಧರ್ಮ ಹಿಂದೂ ಧರ್ಮದಲ್ಲಿ ಲೀನವಾಯಿತು. ಗೌಡಪಾದ ಮತ್ತು ಶಂಕರರು ಮಾಧ್ಯಮಿಕರ ತರ್ಕವನ್ನೇ ಉಪಯೋಗಿಸಿಕೊಂಡು ಜಗತ್ತು ಅನಿತ್ಯ ಬ್ರಹ್ಮವೊಂದೇ ನಿತ್ಯಸತ್ಯವೆಂಬ ಉಪನಿಷತ್ತಿನ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಈ ಕಾರಣಗಳಿಂದ ಕರ್ನಾಟಕದಲ್ಲಿ ಬೌದ್ಧಧರ್ಮ ಕ್ಷಯಿಸಿ ಅದರ ಅವಶೇಷಗಳು ಮಾತ್ರ ಉಳಿದಿವೆ.

ಬೌದ್ಧಧರ್ಮ ಕರ್ನಾಟಕದಲ್ಲಿ ಕ್ಷೀಣವಾದರೂ ಬುದ್ಧ ಬೋಧಿಸಿದ ಪರಮತ ಸಹಿಷ್ಣುತೆಯ ಸಂದೇಶ ಮಾತ್ರ ಕರ್ನಾಟಕದಲ್ಲಿ ಇಂದಿಗೂ ಬೇರೂರಿದೆ. ಕರ್ನಾಟಕದಲ್ಲಿ ಪ್ರಸಕ್ತಶಕದ ಪ್ರಾರಂಭಕಾಲದಿಂದ ಬೌದ್ಧಸಂನ್ಯಾಸಿಗಳು ತಮ್ಮ ಧಾರ್ಮಿಕ ಗ್ರಂಥಗಳ ರಚನೆಯ ಮೂಲಕ ಕನ್ನಡ ಸಾಹಿತ್ಯದ ಉಗಮ ಮತ್ತು ಬೆಳೆವಣಿಗೆಗೆ ಕಾರಣರಾಗಿದ್ದಿರಬಹುದೆಂದೂ ಆ ಧರ್ಮದ ಅವನತಿಯೊಂದಿಗೆ ಆ ಸಾಹಿತ್ಯವೂ ಕಣ್ಮರೆಯಾಗಿರಬಹುದೆಂದೂ ಟಿ.ಎಸ್.ವೆಂಕಣ್ಣಯ್ಯನವರು ಅಭಿಪ್ರಾಯಪಟ್ಟಿದ್ದಾರೆ.

**ಜೈನಧರ್ಮ :** ಜೈನಧರ್ಮಪ್ರತಿಷ್ಠಾಪಕನಾದ ಮಹಾವೀರ ಬುದ್ಧನಿಗಿಂತ ಸ್ವಲ್ಪ ಮುಂಚಿನವನು. ಅದು ಕರ್ನಾಟಕಕ್ಕೆ ಪ್ರ.ಶ.ಪೂ.4ನೆಯ ಶತಮಾನದ ಅಂತ್ಯದಲ್ಲಿ ಪ್ರವೇಶಿಸಿತು. ಚಂದ್ರಗುಪ್ತ ಮೌರ್ಯ ತನ್ನ ಗುರು ಭದ್ರಬಾಹುವಿನೊಂದಿಗೆ ಇಲ್ಲಿಗೆ ಬಂದು ಶ್ರವಣಬೆಳಗೊಳದಲ್ಲಿ ನೆಲೆಸಿದನೆಂದು ಐಹಿತ್ಯವಿದೆ. 8ನೆಯ ಶತಮಾನದ ಕೆಲವು ಶಾಸನಗಳೂ ಈ ವಿಷಯವನ್ನು ತಿಳಿಸುತ್ತವೆ. ಬೌದ್ಧಧರ್ಮ ಕರ್ನಾಟಕದಲ್ಲಿ ಲುಪ್ತವಾದರೂ ಜೈನಧರ್ಮ ಇಲ್ಲಿಯವರೆಗೆ ಸಾರೋದ್ಧಾರವಾಗಿ ಬೆಳೆದು ಬಂದಿದೆ. ಗಂಗರಾಜರು 325 ರಿಂದ 1000ದ ವರೆಗೆ ಜೈನರಿಗೆ ಆಶ್ರಯ ಕೊಟ್ಟು ಅವರ ಅಭ್ಯುದಯಕ್ಕೆ ಕಾರಣರಾದರು. ರಾಷ್ಟ್ರಕೂಟರಲ್ಲಿ ಅನೇಕರು ಜೈನಧರ್ಮಾವಲಂಬಿಗಳಾಗಿದ್ದರು. ಕರ್ನಾಟಕದ ಸಂಸ್ಕೃತಿಗೆ ಮತ್ತು ಕನ್ನಡ ಸಾಹಿತ್ಯಕ್ಕೆ ಜೈನರ ಕೊಡುಗೆ ಅಪಾರವಾದುದು.

ಹರಿಭದ್ರ ಜೈನದರ್ಶನವನ್ನು ಸಂಗ್ರಹವಾಗಿ ಹೀಗೆ ವರ್ಣಿಸಿರುತ್ತಾನೆ; ಜೈನಧರ್ಮದ ತತ್ತ್ವಗಳು ಒಂಬತ್ತು–ಜೀವ, ಅಜೀವ, ಪುಣ್ಯ, ಪಾಪ, ಆಸ್ರವ ಸಂವರ, ಬಂಧ, ನಿರ್ಜರ ಮತ್ತು ಮೋಕ್ಷ. ಚೇತನಾತ್ಮಕವಾದ ಜೀವ ಪಾಪಪುಣ್ಯಗಳ ಕರ್ತ ಮತ್ತು ಅವುಗಳ ಫಲದ ಭೋಕ್ತ. ತದ್ವಿರುದ್ಧ ಲಕ್ಷಣವುಳ್ಳದ್ದು ಅಜೀವ. ಜೀವವಾಗಲಿ ಅಜೀವವಾಗಲಿ ಸೃಷ್ಟಿಯಾದುವಲ್ಲ. ಜೀವ ರೂಪರಸಗಂಧಸ್ಪರ್ಶನಗಳಿಗೆ ಕಾರಣವಾದ ಪುದ್ಗಲದ ಸಂಪರ್ಕದಿಂದ. ಪುಣ್ಯಪಾಪಕರ್ಮಗಳಿಂದ ತುಂಬಿಕೊಳ್ಳುತ್ತದೆ. ಸತ್ಕರ್ಮ ಪುದ್ಗಲವೇ ಪುಣ್ಯ ; ದುಷ್ಕರ್ಮ ಪುದ್ಗಲವೇ ಪಾಪ. ಅಜ್ಞಾನ, ರಾಗ, ರತಿ, ಮೋಹ ಮುಂತಾದುವುಗಳಿಂದ ಹುಟ್ಟಿದ ಪಾಪಕರ್ಮ ಜೀವರುಗಳಲ್ಲಿ ತುಂಬಿಕೊಳ್ಳುವುದಕ್ಕೆ ಆಸ್ರವ ಎಂದು ಹೆಸರು. ಆಸ್ರವ ಆತ್ಮದ ಬಂಧನಕ್ಕೆ ಕಾರಣ. ಪುಣ್ಯ ಪಾಪಗಳು ಜೀವರುಗಳನ್ನು ಜನ್ಮಾಂತರಗಳವರೆಗೆ ಹಿಂಬಾಲಿಸುತ್ತವೆ. ಪಾಪ ಬಂದು ಸೇರದಂತೆ ತಡೆಯಲು ಸಾಧ್ಯ. ಅಹಿಂಸೆ, ಸತ್ಯವಚನ, ಅಪರಿಗ್ರಹ, ಬ್ರಹ್ಮಚರ್ಯ, ಸ್ವಾರ್ಥತ್ಯಾಗ ಮುಂತಾದ ವ್ರತ ಅನುಷ್ಠಾನಗಳಿಂದ ಪಾಪವನ್ನು ತಡೆಯಬಹುದು. ಇದಕ್ಕೆ ಸಂವರ ಎಂದು ಹೆಸರು. ಈಗಾಗಲೇ ಬಂದು ತುಂಬಿಕೊಂಡಿರುವ ಪಾಪಕರ್ಮವನ್ನು ಶರೀರ ಆತ್ಮದಿಂದ ಬೇರೆಯಾದದ್ದು ಎಂಬ ನಿಶ್ಚಿತಜ್ಞಾನದಿಂದ ಸುಟ್ಟುಹಾಕಬಹುದು. ಹಿಂದಿನದನ್ನು ತೊಡೆದುಹಾಕುವುದಕ್ಕೆ ನಿರ್ಜರ ಎಂದು ಹೆಸರು. ಎಲ್ಲ ಬಗೆಯ ಆವರಣಗಳೂ ತೇಲಿ ಹೋಗಿ ಆತ್ಮಜ್ಞಾನ ಫಲಿಸಿದಾಗ ಜೀವರುಗಳಿಗೆ ಮೋಕ್ಷ ದೊರೆಯುತ್ತದೆ. ಮೋಕ್ಷ ದೊರೆತಾಗ ಆತ್ಮ ತನಗೆ ಸಹಜವಾದ ಅನಂತಜ್ಞಾನ, ಅನಂತವೀರ್ಯ, ಅನಂತಸುಖಗಳನ್ನು

ಪಡೆಯುತ್ತದೆ. ಸಮ್ಯಕ್‌ದರ್ಶನ, ಸಮ್ಯಕ್‌ಚಾರಿತ್ರ, ಸಮ್ಯಕ್‌ಜ್ಞಾನವೆಂಬ ತ್ರಿರತ್ನಗಳು ಮೋಕ್ಷಸಾಧನಗಳು. ಜೈನಧರ್ಮವನ್ನು ಸ್ವತಂತ್ರವಾಗಿ ಗ್ರಹಿಸಿ ನಿರ್ವಾಣವನ್ನು ಪಡೆದವರು ತೀರ್ಥಂಕರರು. ಇಂಥ ಇಪ್ಪತ್ತನಾಲ್ಕು ತೀರ್ಥಂಕರರನ್ನು ಜೈನರು ದೇವರುಗಳೆಂದು ಪೂಜಿಸುತ್ತಾರೆ. ಇಪ್ಪತ್ತನಾಲ್ಕನೆಯ ತೀರ್ಥಂಕರನೇ ವರ್ಧಮಾನ ಮಹಾವೀರ. ಮಹಾವೀರನ ತರುವಾಯ ಬೋಧೆಯಿಂದ ಮುಕ್ತಿಪಡೆದವರು ಕೇವಲಿಗಳು. ಇವರು ಗೌರವಾರ್ಹರಾದರೂ ಪೂಜಾರ್ಹರಲ್ಲ.

**ಶೈವಧರ್ಮ :** ಇದರ ಪ್ರಾಚೀನತೆಯನ್ನು ಕುರಿತು ಹಿಂದೆ ಪ್ರಸ್ತಾಪಮಾಡಲಾಗಿದೆ. ಕರ್ನಾಟಕದಲ್ಲಿ ಕಡೆಯ ಪಕ್ಷ ಸಾತವಾಹನರ ಕಾಲದಿಂದ ಈ ಧರ್ಮ ರೂಢಿಯಲ್ಲಿದ್ದಂತೆ ತಿಳಿದುಬರುತ್ತದೆ. ಸಾತವಾಹನ ಮತ್ತು ಚುಟುಕುಲದ ರಾಜರು ತಾಳಗುಂದದ ಪ್ರಣವೇಶ್ವರನ ಅರ್ಚಕರಾಗಿದ್ದರೆಂದು ಶಾಸನ ತಿಳಿಸುತ್ತದೆ. ಅನಂತರದ ಕದಂಬರು ತಮ್ಮ ವಂಶ ಈಶ್ವರನಿಂದ ಉತ್ಪತ್ತಿಯಾದ ಮುಕ್ಕಣ್ಣ ಅಥವಾ ತ್ರಿನೇತ್ರ ಕದಂಬನಿಂದ ಪ್ರಾರಂಭವಾಯಿತೆಂದು ಹೇಳಿಕೊಂಡಿದ್ದಾರೆ. ಕದಂಬ, ಚಾಳುಕ್ಯ ರಾಜರನೇಕರು ಶೈವಧರ್ಮಾನುಯಾಯಿಗಳಾಗಿದ್ದರು. ಆ ಕಾಲದಲ್ಲಿ ಶೈವರಲ್ಲಿ ಮತಪ್ರಭೇದಗಳು ಹುಟ್ಟಿಕೊಂಡುವು. ಪಾಶುಪತ, ಕಾಳಾಮುಖ, ಲಾಕುಳ, ಮಹೇಶ್ವರಪಂಥಗಳು ಹೆಚ್ಚು ಕಡಿಮೆ ಒಂದೇ ಆಗಿರುವಂತೆ ತೋರುತ್ತದೆ. ಶಂಕರಾಚಾರ್ಯರು ಪಾಶುಪತರನ್ನೂ ಮಾಧವರು ಲಕುಲೀಶ ಪಾಶುಪತರನ್ನೂ ಮಾಹೇಶ್ವರರೆಂದು ಕರೆದಿರುತ್ತಾರೆ. ಸಿರಾ ಮತ್ತು ಸಕಲೇಶಪುರದ ಶಾಸನಗಳು ಕಾಳಾಮುಖರೂ ಲಕುಲೀಶರೂ ಒಂದೇ ಪಂಥದವರೆಂದು ತಿಳಿಸುತ್ತವೆ. ಪಾಶುಪತ ಶೈವಧರ್ಮ ಸ್ವಚ್ಛವಾದ ಸಾತ್ವಿಕಧರ್ಮ. ಕರ್ನಾಟಕದಲ್ಲಿ, ಮುಖ್ಯವಾಗಿ ಶ್ರೀಶೈಲದಲ್ಲಿ ಶಂಕರಾಚಾರ್ಯರ ಕಾಲದಲ್ಲಿ ಪ್ರಚಾರದಲ್ಲಿದ್ದದ್ದು ಉಗ್ರಭೈರವ ಉಪಾಸಕರ ಕಾಪಾಲಿಕ ಮತ. ಇವರು ಶಿವನನ್ನು ಒಲಿಸಿಕೊಳ್ಳಲು ನರಬಲಿ ಕೊಡುತ್ತಿದ್ದರು; ಮದ್ಯವನ್ನು ಸೇವಿಸಿ ಭೀಕರವಾಗಿ ನರ್ತಿಸುತ್ತಿದ್ದರು. ಮೂಕಾಂಬಿಕೆಯ ಕ್ಷೇತ್ರ ಶಕ್ತಿ ಉಪಾಸಕರ ಕ್ಷೇತ್ರವಾಗಿತ್ತು.

ಶೈವಧರ್ಮಕ್ಕೆ ಹತ್ತಿರದ ಸಂಬಂಧದ ಮತ ಗಾಣಾಪತ್ಯ ಮತ. ಈ ಮತದವರಲ್ಲಿ ಆರು ಬಗೆಗಳುಂಟು. 1. ಪ್ರಳಯಕಾಲದಲ್ಲೂ ನಾಶಹೊಂದದೆ ಉಳಿಯುವ ಮಹಾಗಣಪತಿ ಪೂಜಕರು. 2. ಋಗ್ವೇದದಲ್ಲಿ ಉಕ್ತವಾಗಿರುವ ಬೃಹಸ್ಪತಿರೂಪನಾದ ಹರಿದ್ರಾ ಗಣಪತಿ ಪೂಜಕರು. 3. ಶಾಕ್ತರಂತೆ ವಾಮಾಚಾರ ನಡೆಸುವ, ಉತ್ತಿಷ್ಠ ಗಣಪತಿ ಉಪಾಸಕರು. 4. ನವೀನ ಗಣಪತಿ ಪೂಜಕರು. 5. ಸ್ವರ್ಣಗಣಪತಿ ಪೂಜಕರು. 6. ಸಂತಾನ ಗಣಪತಿ ಪೂಜಕರು.

ಶೈವಮತಕ್ಕೆ ಹತ್ತಿರದ ಸಂಬಂಧಿಯಾದ ಇನ್ನೊಂದು ಮತ ಸ್ಕಾಂದಮತ. ಈ ಮತದ ಮುಖ್ಯ ದೇವತೆ ಕಾರ್ತಿಕೇಯ. ಕುಮಾರನೆಂದೂ ಷಣ್ಮುಖನೆಂದೂ ಈ ದೇವತೆಯನ್ನು ಸಂಬೋಧಿಸುವುದುಂಟು. ಕರ್ನಾಟಕದಲ್ಲಿ ಸೊಂಡೂರು ಬೆಟ್ಟದಲ್ಲಿ ಕುಮಾರಸ್ವಾಮಿಯ ಪ್ರಾಚೀನ ದೇವಾಲಯವಿದೆ. ಕದಂಬ ಮತ್ತು ಪೂರ್ವ ಚಾಳುಕ್ಯ ಶಾಸನಗಳಲ್ಲಿ ಕಾರ್ತಿಕೇಯನ ಪ್ರಶಸ್ತಿ ಇದೆ.

ಶಂಕರಾಚಾರ್ಯರು ಕರ್ನಾಟಕದಲ್ಲಿ ಪ್ರಚಾರಮಾಡಿದ ಕಾಲದಲ್ಲಿ ಕಾಪಾಲಿಕರ ಘೋರಕೃತ್ಯಗಳನ್ನು ಖಂಡಿಸಿ, ಶಾಕ್ತರೂ ಗಾಣಾಪತ್ಯರೂ ಆಚರಿಸುತ್ತಿದ್ದ ಪಂಚಮಕಾರಗಳನ್ನು ನಿರ್ಮೂಲಗೊಳಿಸಿ ಪರಿಶುದ್ಧವಾದ ಶೈವ, ಶಾಕ್ತ, ಗಾಣಾಪತ್ಯ ಮತಗಳನ್ನು ಸ್ಥಾಪಿಸಿದರು. ಕರ್ನಾಟಕದ ಶೃಂಗೇರಿಯಲ್ಲಿ ಇವರು ಸ್ಥಾಪಿಸಿದ ಮಠ ದಕ್ಷಿಣದಲ್ಲೆಲ್ಲ ಅತ್ಯಂತ ಪ್ರಸಿದ್ಧವಾದುದು. ಇದು ವಿಷ್ಣುಸರ್ವೋತ್ತಮ ಶಿವಸರ್ವೋತ್ತಮವೆಂಬ ಭೇದವೆಣಿಸದೆ ಎಲ್ಲ ಬಗೆಯ ಸೇಶ್ವರ ಭಾವನೆಗಳಿಗೂ ಸಮಾನ ಗೌರವ ಸಲ್ಲಿಸುವ ಸ್ಮಾರ್ತ ಸಂಪ್ರದಾಯದ ಮುಖ್ಯ ಕೇಂದ್ರ. ವಿಜಯನಗರದ ಅಭ್ಯುದಯದಕಾಲದಲ್ಲಿ ಇದಕ್ಕೆ ವಿಶೇಷ ರಾಜಾಶ್ರಯ ದೊರೆಯಿತು. **(ನೋಡಿ– ಅದ್ವೈತ)**

ಶಂಕರಾಚಾರ್ಯರ ತರುವಾಯ ಕರ್ನಾಟಕದಲ್ಲಿ ಶೈವಮತ–ಅದರಲ್ಲೂ ವೀರಶೈವಧರ್ಮ–ವಿಶೇಷವಾಗಿ ಬೆಳೆಯಿತು. ಇದು ಅನೇಕ ಕಡೆಗಳಿಂದ ಸ್ಫೂರ್ತಿಪಡೆದು ಬೆಳೆದ ಮತ. 6ನೆಯ ಶತಮಾನದಿಂದ 9ನೆಯ ಶತಮಾನಗಳವರೆಗಿದ್ದ ತಮಿಳುದೇಶದ 63 ಪುರಾತನರ ಚರಿತ್ರೆಯನ್ನು ಒಳಗೊಂಡ ಪೆರಿಯಪುರಾಣದಿಂದ ಇದು ಸ್ಫೂರ್ತಿ ಪಡೆಯಿತು. ತಮಿಳು ವೀರಶೈವರು ಸ್ಥವಿರ ಲಿಂಗಪೂಜಕರು. ಕರ್ನಾಟಕ ವೀರಶೈವರಾದರೋ ಇಷ್ಟಲಿಂಗಧಾರಿಗಳು. ಕನ್ನಡ ವೀರಶೈವರು, ಪಶು, ಪತಿ, ಪಾಶ ಎಂಬ ಮೂರು ಮುಖ್ಯತತ್ತ್ವಗಳನ್ನೊಳಗೊಂಡ ಪಾಶುಪತವನ್ನು ಅನುಸರಿಸಿದರು. ವೀರಶೈವ ಧರ್ಮದ ಉಗಮ ರೇವಣಸಿದ್ಧ, ಮರುಳುಸಿದ್ಧ, ಪಂಡಿತಾರಾಧ್ಯ ಏಕೋರಾಮ, ವಿಶ್ವಾರಾಧ್ಯ ಎಂಬ ಪಂಚಾಚಾರ್ಯರಿಂದಾಯಿತೆಂದು ಕೆಲವು ವೀರಶೈವಗ್ರಂಥಗಳಲ್ಲಿ ಉಕ್ತವಾಗಿದೆ. ಶ್ರೀಪತಿಪಂಡಿತನೂ ಶ್ರೀಕಂಠನೂ ಬ್ರಹ್ಮಸೂತ್ರಗಳ ಮೇಲೆ ಶಿವಪರವಾಗಿ ಬರೆದಿರುವ ಭಾಷ್ಯಗಳಿಂದಲೂ ವೀರಶೈವರು ಸ್ಫೂರ್ತಿಪಡೆದಿರುತ್ತಾರೆ. ಇವೆಲ್ಲಕ್ಕಿಂತ ಮುಖ್ಯವಾಗಿ ಇದು ಶರಣರ ಸಾಹಿತ್ಯದಿಂದ, ಶರಣರ ಪ್ರಚಾರಕಾರ್ಯದಿಂದ ಬಲಗೊಂಡ ಮತ. ನಮಗೆ ತಿಳಿದಮಟ್ಟಿಗೆ ಜೇಡರ ದಾಸಿಮಯ್ಯ, ಏಕಾಂತದ ರಾಮಯ್ಯ– ಇವರು ಬಸವಣ್ಣನವರ ಕಾಲಕ್ಕಿಂತ ಬಹುಶಃ ಒಂದು ಶತಮಾನಕ್ಕಿಂತ ಮುಂಚೆ ವೀರಶೈವಧರ್ಮವನ್ನು ಪ್ರಚಾರಮಾಡಲು ತುಂಬ ಶ್ರಮಿಸಿದವರು. ಬಸವಣ್ಣನವರ ಕಾಲಕ್ಕೆ ಶಿವಶರಣರ ಗುಂಪು ತುಂಬ ಬೆಳೆದಿತ್ತು. ಸ್ವಾನುಭವ, ಸಚ್ಚಾರಿತ್ರ್ಯ, ಪರಿಶುದ್ಧ ಶಕ್ತಿಗಳಿಂದ ತುಂಬಿದ ಈ ಶರಣರ ಮತದಿಂದ ಬಸವಣ್ಣನವರು ಆಕರ್ಷಿತರಾಗಿ ಇವರನ್ನು ಅತಿಶಯವಾಗಿ ಸತ್ಕರಿಸಿ ಈ ಮತದ ಉದ್ಧಾರಕರಾದರು. ಇವರು ಚೆನ್ನಬಸವಣ್ಣ, ಅಲ್ಲಮಪ್ರಭು ಮತ್ತು ಸಿದ್ಧರಾಮ ಮುಂತಾದವರ ಸಹಕಾರದಿಂದ ಅನುಭವಮಂಟಪವನ್ನು ಕಟ್ಟಿದರು. ಈ ಅನುಭವಮಂಟಪಕ್ಕೆ ಅಕ್ಕಮಹಾದೇವಿಗೂ ಪ್ರವೇಶ ದೊರೆಯಿತು. ಈ ಮಂಟಪದಲ್ಲಿ ಆತ್ಮ–ಆತ್ಮ ಮಥಿಸಿ ಅನುಭಾವ ಹುಟ್ಟಿತು; ವಚನಗಳ ಮೂಲಕ ಅಭಿವ್ಯಕ್ತವಾಯಿತು. ಈ ನಾಲ್ವರಿಂದಲ್ಲದೆ ಅನೇಕ ಶರಣರಿಂದ ಹೊರಬಿದ್ದ ವಚನಕೃತಿಗಳೂ ಸೇರಿ ಒಂದು ವಚನವಾರಿಧಿ ಏರ್ಪಟ್ಟಿತು. ವಚನಕಾರರು ಶೈವಾಗಮಗಳಿಗಿಂತ ಪಾಶುಪತ, ಕಾಳಾಮುಖ ಮುಂತಾದ ಶುಷ್ಕತತ್ತ್ವ ಸಿದ್ಧಾಂತಗಳಿಗಿಂತ ಸ್ವಾನುಭವದಿಂದ ಷಟ್‌ಸ್ಥಲವಿಧಾನದ ಮೂಲಕ ಕ್ರಮವಾಗಿ ತಳದ ಮೆಟ್ಟಿಲಿಂದ ಮೇಲಿನ ಮೆಟ್ಟಿಲಿಗೆ ಹತ್ತಿ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರೆ. ವಚನಸಾಹಿತ್ಯದಲ್ಲಿ ತತ್ತ್ವಗಳ ವಿವರಣೆ ಇಲ್ಲದಿಲ್ಲ. ಮಹಾಭಾರತದಲ್ಲಿ ಒಂದು ಕಡೆ ಉಕ್ತವಾಗಿರುವ ವಿಶ್ವೋತ್ಪತ್ತಿ ಕ್ರಮವನ್ನು ಚೆನ್ನಬಸವಣ್ಣನವರು ಕರಣ ಹಸುಗೆಯಲ್ಲಿ ವರ್ಣಿಸಿರುತ್ತಾರೆ. ವೀರಶೈವ ಪಂಥ ಶಕ್ತಿವಿಶಿಷ್ಟಾದ್ವೈತಪರವಾದುದೆಂದು ಕ್ರಿಯಾಸಾರಕರ್ತೃವಾದ ನೀಲಕಂಠನೂ ಅದ್ವೈತಪರವಾದುದೆಂದು ಮಗ್ಗೇಯ ಮಾಯಿದೇವನೂ ಹೇಳಿರುತ್ತಾನೆ.

ಅದು ಹೇಗಾದರೂ ಇರಲಿ. ವೀರಶೈವಕ್ಕೆ ಜೀವಪ್ರಾಯವಾದ ಷಟ್‌ಸ್ಥಲಕ್ರಮ ದ್ವೈತದಿಂದ ವಿಶಿಷ್ಟಾದ್ವೈತ, ವಿಶಿಷ್ಟಾದ್ವೈತದಿಂದ ಅದ್ವೈತಸಿದ್ಧಿಯನ್ನು ಮುಟ್ಟುವ ಸೋಪಾನ. ವೀರಶೈವ ಧರ್ಮ ಹುಟ್ಟಿದ್ದು ಕೆಲವರಿಗಲ್ಲ ಸಕಲರಿಗೆ; ಕೇವಲ ಒಂದು ಮಾನಸಿಕ ಮಟ್ಟದವರಿಗಲ್ಲ ಎಲ್ಲ ಮಟ್ಟದವರಿಗೂ. ವೀರಶೈವರ ಷಟ್‌ಸ್ಥಲಗಳು ಒಬ್ಬೊಬ್ಬನೂ ತನ್ನ ಆಧ್ಯಾತ್ಮಿಕ ಶಕ್ತಿಸಾಮರ್ಥ್ಯಗಳಿಗನುಗುಣವಾಗಿ ಎಷ್ಟೆಷ್ಟು ಮೇಲಕ್ಕೆ ಏರಬಹುದೋ ಅಷ್ಟಕ್ಕೂ ಅವಕಾಶ ಕೊಡುತ್ತವೆ. ಈ ವಿಚಾರವನ್ನು ಎಸ್. ಸಿ. ನಂದೀಮಠ ಅವರು ಈ ರೀತಿ ಉಪಸಂಹಾರಮಾಡಿರುತ್ತಾರೆ. ಭಕ್ತಿಜ್ಞಾನ, ವೈರಾಗ್ಯ, ದ್ವೈತ, ವಿಶಿಷ್ಟಾದ್ವೈತ, ಅದ್ವೈತ– ಇವುಗಳೆಲ್ಲವನ್ನೂ ಷಟ್‌ಸ್ಥಲ ಒಳಗೊಂಡಿರುವಂತೆ ತೋರುವುದು. ಷಟ್‌ಸ್ಥಲಗಳಲ್ಲಿ ಮೊದಲಿನ ಎರಡಾದ ಭಕ್ತಿ ಮತ್ತು ಮಾಹೇಶ್ವರಸ್ಥಲಗಳು ಭಕ್ತಿಯನ್ನೂ ದ್ವೈತವನ್ನೂ ಮೂರನೆಯ ಮತ್ತು ನಾಲ್ಕನೆಯವಾದ ಪ್ರಸಾದಿ ಮತ್ತು ಪ್ರಾಣಲಿಂಗಿಸ್ಥಲಗಳು ಜ್ಞಾನವನ್ನೂ ವಿಶಿಷ್ಟಾದ್ವೈತವನ್ನೂ ಸೂಚಿಸುತ್ತವೆ ಎಂದು ತಿಳಿಯಬಹುದು. ಭಕ್ತ ಮಹೇಶ ಸ್ಥಲಗಳಲ್ಲಿ ಸ್ವಾಮಿ–ಭೃತ್ಯ ಸಂಬಂಧವಿದೆ. ಸ್ವಾಮಿ ಶಿವ; ಭೃತ್ಯ ಜೀವ. ಆದ್ದರಿಂದ ಇಲ್ಲಿ ದ್ವೈತಭಾವವಿದೆಯೆಂದು ಕಲ್ಪಿಸಲಾಗಿದೆ. ಆತ್ಮ ಹೆಚ್ಚು ಹೆಚ್ಚು ಶುದ್ಧನಾದಂತೆ ಈ ದ್ವೈತಭಾವ ಕಡಿಮೆಯಾಗುತ್ತ ಹೋಗುವುದು. ಪ್ರಸಾದಿ ಮತ್ತು ಪ್ರಾಣಲಿಂಗಿಸ್ಥಲಗಳಲ್ಲಿ ಸತಿ–ಪತಿ ಭಾವವಿದೆ. ಇವರಿಬ್ಬರೂ ಶರೀರದಿಂದ ಬೇರೆಯಾದರೂ ಒಂದೇ ಮನಸ್ಸುಳ್ಳವರೂ ಒಂದೇ ಭಾವವುಳ್ಳವರೂ ಆಗಿರುವರು; ಆದ್ದರಿಂದ ಇಲ್ಲಿ ವಿಶಿಷ್ಟಾದ್ವೈತವಿದೆಯೆಂದು ಗ್ರಹಿಸಲಾಗಿದೆ. ಶರಣ ಐಕ್ಯಸ್ಥಲಗಳಲ್ಲಿ ಶಿವ ಜೀವರ ಸಂಪೂರ್ಣ ಐಕ್ಯವೂ ಸಂಸಾರದಿಂದ ಅಲಿಪ್ತತೆಯೂ ಇರುವುದರಿಂದ ಇಲ್ಲಿ ಅದ್ವೈತವಿದೆಯೆಂದು ಗ್ರಹಿಸಲಾಗಿದೆ. ಈ ಸ್ಥಲಗಳು ಆತ್ಮನ ಆಧ್ಯಾತ್ಮಿಕಕೋನ್ನತಿಯ ಮೆಟ್ಟಿಲುಗಳಾಗಿರುವುವು.

ಇಲ್ಲಿಯ ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತಗಳು ಮಧ್ವ, ರಾಮಾನುಜ ಮತ್ತು ಶಂಕರರ ಮತಗಳಿಗಿಂತ ಭಿನ್ನವಾದುದು. ವೀರಶೈವ ಧರ್ಮ ಸಾಹಿತ್ಯ ವಿಶೇಷವಾಗಿ ಕನ್ನಡಭಾಷೆಯಲ್ಲಿರುವುದು ಅದರ ಒಂದು ವೈಶಿಷ್ಟ್ಯ. ಇದು ಕಾಯಕಕ್ಕೆ ಮನ್ನಣೆ ಕೊಟ್ಟಿದೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷ, ಪಂಚಾಕ್ಷರೀ ಮಂತ್ರ– ಇವು ಮೊದಲಾದ ಅಷ್ಟಾವರಣಗಳು ವೀರಶೈವರ ರಕ್ಷಾಕವಚಗಳೆನಿಸಿವೆ.

ಬಸವಣ್ಣನವರ ತರುವಾಯ ವೀರಶೈವಧರ್ಮ ತುಂಬ ಬೆಳೆಯಿತು. ಇದಕ್ಕೆ ರಾಜಾಶ್ರಯವೂ ಜನರ ವಿಶ್ವಾಸವೂ ದೊರೆಯಿತು. ವಿಶೇಷ ಪ್ರೋತ್ಸಾಹ ಕೊಟ್ಟವರು ಕೆಳದಿಯ ನಾಯಕರು. ವೀರಶೈವ ಧರ್ಮವನ್ನು ಕುರಿತ ಸಂಸ್ಕೃತ ಗ್ರಂಥಗಳು ಇವರ ಪ್ರೋತ್ಸಾಹದಿಂದ ಹುಟ್ಟಿದುವು.

**ಶ್ರೀವೈಷ್ಣವಧರ್ಮ :** ಶ್ರೀವೈಷ್ಣವಧರ್ಮಕ್ಕೆ ಉಪನಿಷತ್ತುಗಳೂ ಪಂಚರಾತ್ರಾಗಮವೂ ಮಹಾಭಾರತದ ಭಗವದ್ಗೀತೆಯೂ ಆಧಾರಗಳೆಂದು ಈಗಾಗಲೇ ತಿಳಿಸಿದೆ. ಶಂಕರಾಚಾರ್ಯರಿಗಿಂತ ಮುಂಚೆ ದಕ್ಷಿಣ ದೇಶಗಳಲ್ಲಿ ವೈಷ್ಣವಮತ ಅನೇಕ ರೂಪಗಳಲ್ಲಿ ಪ್ರಚಾರದಲ್ಲಿತ್ತು. ಅನಂತಶಯನಕ್ಕೆ ಶಂಕರಾಚಾರ್ಯರು ಬಂದ ಕಾಲದಲ್ಲಿ ಅಲ್ಲಿ ಭಕ್ತ,

ಭಾಗವತ, ವೈಷ್ಣವ, ಪಂಚರಾತ್ರ, ವೈಖಾನಸ ಮತ್ತು ಕರ್ಮಹೀನ ಎಂಬ ಆರು ಬಗೆಯ ವೈಷ್ಣವ ಸಂಪ್ರದಾಯಗಳಿದ್ದುವು. ಈ ವೈಷ್ಣವರನ್ನು ಅದ್ವೈತಕ್ಕೆ ಒಳಪಟ್ಟ ಭಾಗವತರನ್ನಾಗಿ ಶಂಕರಾಚಾರ್ಯರು ಪರಿವರ್ತಿಸಿದರು. ಶಂಕರಾಚಾರ್ಯರು ತಮ್ಮ ಜನ್ಮಸ್ಥಳವಾದ ಕಾಲಟಿಯಲ್ಲಿ ವಿಷ್ಣುದೇವಾಲಯವನ್ನು ಸ್ಥಾಪಿಸಿದರು. ಹರಿದ್ವಾರ, ಬದರಿನಾಥ್ ಎಂಬ ಉತ್ತರದ ಪುಣ್ಯಸ್ಥಳಗಳಲ್ಲಿ, ಬೌದ್ಧರ ಪ್ರಾಬಲ್ಯದಿಂದ ನಿಂತುಹೋಗಿದ್ದ ವಿಷ್ಣುಪೂಜೆಯನ್ನು ಪುನರುಜ್ಜೀವನಗೊಳಿಸಿದರು.

ಮೇಲೆ ಹೇಳಿದ ವೈಷ್ಣವಸಂಪ್ರದಾಯಗಳಲ್ಲದೆ ತಮಿಳುನಾಡಿನಲ್ಲಿ 5ನೆಯ ಶತಮಾನದಿಂದ ಆಳ್ವಾರುಗಳೆಂಬ ವೈಷ್ಣವಭಕ್ತರ ಧರ್ಮವೊಂದು ಬೆಳೆದು ಬಂದಿತ್ತು. ಇವರು ಭಕ್ತಿಗೆ ಹೆಚ್ಚು ಬೆಲೆ ಕೊಟ್ಟು ಪ್ರಬಂಧಗಳೆಂಬ ಹಾಡುಗಳ ಮೂಲಕ ತಮ್ಮ ಧರ್ಮವನ್ನು ಅಭಿವ್ಯಕ್ತಿಗೊಳಿಸಿದರು. ಈ ಪಂಥದ ಏಳಿಗೆಗೆ ಕಾರಣರಾದವರು– 9 ಮತ್ತು 10ನೆಯ ಶತಮಾನದಲ್ಲಿದ್ದ ನಾಥಮುನಿಗಳು ಮತ್ತು ಅವರ ಮೊಮ್ಮಕ್ಕಳಾದ ಯಾಮುನಾಚಾರ್ಯರು. ವೇದಾಭ್ಯಾಸಪಾರಂಗತರಾದ ಯಾಮುನಾಚಾರ್ಯರು ಬೋಧಿಸಿದ ಶ್ರೀವೈಷ್ಣವಸಂಪ್ರದಾಯವನ್ನು ಕರಗತಮಾಡಿಕೊಂಡು ಅದರ ಪ್ರಚಾರಕ್ಕೆ ತೊಡಗಿದ್ದಾಗ ಅವರ ಅಂತ್ಯವಾಯಿತು. ಅವರ ಆಶಯವನ್ನು ಈಡೇರಿಸುವ ಕಾರ್ಯವನ್ನು ರಾಮಾನುಜರು ಕೈಗೊಂಡರು. ಆಚಾರ, ಸಂಪ್ರದಾಯಗಳ ತೊಡಕಿನಿಂದ ಮುಕ್ತರಾಗಲು ರಾಮಾನುಜರು ಸಂನ್ಯಾಸವಹಿಸಿ ಜ್ಞಾನಪ್ರಸಾರಣ ಕಾರ್ಯದಲ್ಲಿ ಉದ್ಯುಕ್ತರಾದರು.

ರಾಮಾನುಜರು ಗದ್ಯತ್ರಯ, ನಿತ್ಯಗ್ರಂಥ ಮತ್ತು ಗೀತಾಭಾಷ್ಯ, ಬ್ರಹ್ಮಸೂತ್ರದ ಮೇಲೆ ವಿಶಿಷ್ಟಾದ್ವೈತಪರವಾದ ಶ್ರೀಭಾಷ್ಯ– ಇವರನ್ನು ಬರೆದರು. ಬ್ರಹ್ಮನ ಶಕ್ತಿರೂಪಳಾದ ಲಕ್ಷ್ಮಿಗೆ ಉಚ್ಚಸ್ಥಾನವನ್ನು ಕೊಟ್ಟುದೇ ಶ್ರೀಭಾಷ್ಯದ ವೈಶಿಷ್ಟ್ಯ. ಇದಾದಮೇಲೆ ರಾಮಾನುಜರು ವೇದಾಂತದೀಪ, ವೇದಾಂತಸಾರ, ವೇದಾರ್ಥಸಂಗ್ರಹ ಎಂಬ ಗ್ರಂಥಗಳನ್ನು ಬರೆದರು. ಉಪನಿಷತ್ತುಗಳ ಮೇಲೆ ಭಾಷ್ಯ ಬರೆಯದಿದ್ದರೂ ವೇದಾರ್ಥಸಂಗ್ರಹದಲ್ಲಿ ಅವುಗಳ ಸಾರವನ್ನು ಇವರು ತಿಳಿಸಿದ್ದಾರೆ. ಇವರು ಆಳ್ವಾರುಗಳ ಪ್ರಬಂಧಗಳನ್ನು ದ್ರಾವಿಡವೇದವೆಂದು ಕರೆದು ಅವುಗಳಿಗೆ ವೇದಕ್ಕೆ ಸಮಾನವಾದ ಸ್ಥಾನವನ್ನು ಕೊಟ್ಟರು. ಬ್ರಹ್ಮಸೂತ್ರಗಳ, ಭಗವದ್ಗೀತೆಯ ಮತ್ತು ಪ್ರಬಂಧಗಳ ತತ್ತ್ವ ವಿಶೇಷ ಸಹಿತವಾದ ಬ್ರಹ್ಮನ್– ಎಂಬ ವಿಶಿಷ್ಟಾದ್ವೈತ ತತ್ತ್ವವನ್ನು ರಾಮಾನುಜರು ಸ್ಪಷ್ಟಪಡಿಸಿದರು.

ಪರತತ್ತ್ವವೆಂಬುದು ನಾರಾಯಣನೇ. ಜಗತ್ತಿಗೆ ಕಾರಣವಾದ ಪ್ರಕೃತಿಯ ಕಾರಣ ನಾರಾಯಣನೇ. ಜೀವೇಶ್ವರಭೇದ ಸಹಜವಾದದ್ದು. ಆತ್ಮ ಪರಮಾತ್ಮದ ಅಂಶ. ಪರಮೇಶ್ವರನಾದ ನಾರಾಯಣನಲ್ಲಿ ಶ್ರದ್ಧೆ ಇಡುವುದರಿಂದ ಮಾತ್ರ ಮುಕ್ತಿ. ಪ್ರೇಮರೂಪವಾದ ಭಕ್ತಿಯೇ ಈ ಶ್ರದ್ಧೆ. ಇದೇ ಶರಣಾಗತಿ. ಶರಣಾಗತಿಯೇ ಪ್ರಪತ್ತಿ. ಇದೇ ಮೋಕ್ಷಸಾಧನೆಗೆ ನೇರವಾದ ಮಾರ್ಗ. ಇದು ರಾಮಾನುಜರ ತತ್ತ್ವದ ಸಾರ. ದೋಷರಹಿತನೂ ನಿತ್ಯನೂ ಚೇತನಾಚೇತನ ವಸ್ತುಗಳಲ್ಲಿ ವ್ಯಾಪ್ತನೂ ಅಂತರ್ಯಾಮಿ ಸ್ವರೂಪನೂ ಸಚ್ಚಿದಾಂನದಸ್ವರೂಪನೂ ಆದ ಈಶ್ವರ ಐದು ಬಗೆಯಾಗಿ ಪ್ರಕಟವಾಗುವನೆಂಬುದು ಶ್ರೀವೈಷ್ಣವಧರ್ಮಕ್ಕೆ ವಿಶಿಷ್ಟವಾದ ಭಾವನೆ.

ರಾಮಾನುಜರ ಸುಧಾರಕ ಮನೋಧರ್ಮಕ್ಕೆ ಅಂತ್ಯಜರಲ್ಲಿ ಅವರು ತೋರಿದ ಪ್ರೇಮ ಒಂದು ಕುರುಹು. ಗಾಂಧಿಯವರು ಅಂತ್ಯಜರನ್ನು ಹರಿಜನರೆಂದು ಕರೆದರು. ಅವರಿಗಿಂತ ಎಂಟನೂರು ವರ್ಷಗಳ ಹಿಂದೆ ರಾಮಾನುಜರು ಅವರನ್ನು ತಿರುಕುಲತ್ತಾರ್ ಎಂದರೆ ಶ್ರೇಷ್ಠಕುಲದವರು ಎಂದು ಕರೆದರು. ಮೇಲುಕೋಟೆಯ ಚೆಲುವನಾರಾಯಣ ದೇವಸ್ಥಾನಕ್ಕೆ ಇವರಿಗೆ ವರ್ಷದಲ್ಲಿ ಮೂರು ದಿನಗಳ ಪ್ರವೇಶ ದೊರೆಯುವಂತೆ ಕಟ್ಟುಮಾಡಿದರು; ಜಾತಿಭೇದವನ್ನೆಣಿಸದೆ ಎಲ್ಲರಿಗೂ ಪಂಚಸಂಸ್ಕಾರಗಳು ದೊರೆಯುವಂತೆ ಮಾಡಿದರು.

ರಾಮಾನುಜರ ಅನಂತರ ವೈಷ್ಣವಧರ್ಮ ವಿಶೇಷವಾಗಿ ಬೆಳೆಯಿತು. ಮೈಸೂರು ಪ್ರಾಂತ್ಯದಲ್ಲಿ ಶ್ರೀವೈಷ್ಣವರು ಹೇರಳವಾಗಿದ್ದಾರೆ. ರಾಮಾನುಜರ ಅನಂತರ ಶ್ರೀವೈಷ್ಣವರಲ್ಲಿ ತೆಂಗಲೈ (ದಕ್ಷಿಣದ) ವಡಗಲೈ (ಉತ್ತರದ) ಎಂಬ ಎರಡು ಬೇಧಗಳು ಹುಟ್ಟಿಕೊಂಡುವು. ನೀನೇ ಗತಿ ಎಂದು ನಾರಾಯಣನಲ್ಲಿ ಶರಣಾಗತ ಭಾವ ತಳೆದ ಜೀವರಿಗೆ ಪ್ರಯತ್ನವಿಲ್ಲದೆಯೇ ಮುಕ್ತಿಕೊಡುವಷ್ಟು ನಾರಾಯಣಪ್ರೇಮ ಅಪಾರ ಎಂಬುದು ತೆಂಗಲೆಯವರ ಮತ. ಮೋಕ್ಷಸಾಧನೆಗೆ ಮಾನವ ಪ್ರಯತ್ನ ಅಗತ್ಯ ಎಂಬುದು ವಡಗಲೆಯವರ ಮತ. ಪಿಳ್ಳೈಲೋಕಾಚಾರ್ಯರು ತೆಂಗಲೈ ಆಚಾರ್ಯರು, ವೇದಾಂತ ದೇಶಿಕರು ವಡಗಲೈ ಆಚಾರ್ಯರು.

ಅದ್ವೈತ ವೇದಾಂತದಂತೆ ವಿಶಿಷ್ಟಾದ್ವೈತವೇದಾಂತವೂ ದಕ್ಷಿಣದಲ್ಲಿ ಹುಟ್ಟಿ ಉತ್ತರದ ದೇಶಗಳಿಗೆ ಹಬ್ಬಿತು. ವಿಶಿಷ್ಟಾದ್ವೈತ ಮತದಿಂದ ಸ್ಫೂರ್ತಿಪಡೆದ ರಮಾನಂದರು 14–15ನೆಯ ಶತಮಾನಗಳಲ್ಲಿ ಉತ್ತರದೇಶಗಳಲ್ಲಿ ಈ ಮತವನ್ನು ಪ್ರಚಾರ ಮಾಡಿದರು.

**ಮಾಧ್ವಮತ:** ವೈಷ್ಣವಸಂಪ್ರದಾಯಗಳಲ್ಲಿ ಮಾಧ್ವಮತ ಬ್ರಹ್ಮ ಸಂಪ್ರದಾಯಕ್ಕೆ ಸೇರಿದ್ದು. ಇದೂ ಭಕ್ತಿಮಾರ್ಗದ ಪಂಥವೇ. ಇದರದು ಅದ್ವೈತ, ವಿಶಿಷ್ಟಾದ್ವೈತ ತತ್ತ್ವಗಳಿಗಿಂತ ಭಿನ್ನವಾದ ದ್ವೈತತತ್ತ್ವ. ಶಂಕರಾಚಾರ್ಯರ ಪ್ರಕಾರ ಭೇದರಹಿತವಾದ ನಿರ್ಗುಣಬ್ರಹ್ಮವೇ ಪರಮಾತ್ಮ. ರಾಮಾನುಜಾಚಾರ್ಯರ ಪ್ರಕಾರ ವಿಶೇಷಸಹಿತವಾದ ಪ್ರಕೃತಿಯನ್ನು ಶರೀರವಾಗಿ ಉಳ್ಳ, ಆತ್ಮಗಳನ್ನು ಅಂಶಗಳಾಗಿ ಉಳ್ಳ, ಗುಣಪರಿಪೂರ್ಣವಾದ ಬ್ರಹ್ಮವೇ ಪರಮಾತ್ಮ. ಮಧ್ವಾಚಾರ್ಯರ ಪ್ರಕಾರ ಬ್ರಹ್ಮ ಪ್ರಕೃತಿಗಿಂತ ಬೇರೆ ; ಜೀವಾತ್ಮರು ಇವೆರಡಕ್ಕಿಂತ ಭಿನ್ನ. ಜೀವಪ್ರಕೃತಿಗಳು ಬ್ರಹ್ಮಕ್ಕೆ ಅಧೀನ. ಬ್ರಹ್ಮವೊಂದೇ ಸ್ವತಂತ್ರ, ಉಳಿದವು ಪರತಂತ್ರ. ಇದೂ ಪ್ರಸ್ಥಾನತ್ರಯಗಳ ಆಧಾರದ ಮೇಲೆಯೇ ರೂಪಗೊಂಡ ತತ್ತ್ವ. ಮಧ್ವಾಚಾರ್ಯರು ಈ ಮೂರರ ಮೇಲೂ ಭಾಷ್ಯಗಳನ್ನು ಬರೆದಿದ್ದಾರೆ. ಇವುಗಳಲ್ಲದೆ ಅವರು ಹತ್ತು ಪ್ರಕರಣ ಗ್ರಂಥಗಳನ್ನೂ ಬರೆದಿದ್ದಾರೆ. ಇವುಗಳ ಮೇಲೆ ಜಯತೀರ್ಥರೂ ವ್ಯಾಸರಾಜರೂ ವ್ಯಾಖ್ಯಾನಗಳನ್ನು ಬರಿದಿರುವರಲ್ಲದೆ ಸ್ವತಂತ್ರ ಗ್ರಂಥಗಳನ್ನೂ ಬರೆದಿದ್ದಾರೆ. ರಾಘವೇಂದ್ರಸ್ವಾಮಿಗಳು ಎಲ್ಲ ಟೀಕೆಗಳ ಮೇಲೂ ಟಿಪ್ಪಣಿಗಳನ್ನು ರಚಿಸಿದ್ದಾರೆ. ದ್ವೈತವೇದಾಂತ ಸಾಹಿತ್ಯ ಅಪರಿಮಿತವಾಗಿದೆ. ವ್ಯಾಸರಾಯಸ್ವಾಮಿಗಳು ಮಧ್ವಮತದ ಮುಖ್ಯ ತತ್ತ್ವಗಳನ್ನು ಒಂದು ಶ್ಲೋಕದಲ್ಲಿ ಸಂಗ್ರಹಿಸಿ ಹೇಳಿದ್ದಾರೆ. ಅದರ ತಾತ್ಪರ್ಯ ಹೀಗಿದೆ : ಹರಿಯೇ ಪರಬ್ರಹ್ಮ. ಜಗತ್ತು ಮಿಥ್ಯೆಯಲ್ಲ ಸತ್ಯ. ಎಲ್ಲೆಲ್ಲೂ ಕಾಣಬರುವ ಭೇದ ನಿಜವಾದದ್ದು. ಜೀವಾತ್ಮರು ಪರಮಾತ್ಮನ ದಾಸರು. ಅವರಲ್ಲಿ ಉಚ್ಚನೀಚ ಎಂಬ ಭೇದಗಳಿವೆ. ನೈಜಸುಖಾನುಭವವೇ ಮುಕ್ತಿ. ನಿರ್ಮಲವಾದ ಭಕ್ತಿಯೇ ಅದಕ್ಕೆ ಸಾಧನ. ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ ಮೂರೇ ಪ್ರಮಾಣಗಳು. ಎಲ್ಲ ವೇದಗಳಲ್ಲೂ ಪ್ರಶಂಸನೀಯವಾದ ಮುಖ್ಯದೇವತೆ ಹರಿಯೊಬ್ಬನೇ. ಈ ಒಂಬತ್ತು ಮುಖ್ಯಾಂಶಗಳು ಮಧ್ವಮತದ ನವರತ್ನಗಳೆಂದು ಪ್ರಸಿದ್ಧವಾಗಿವೆ.

ಮಧ್ವಾಚಾರ್ಯರು ಕರ್ನಾಟಕದವರು. ಉಡುಪಿಯ ಹತ್ತಿರದಲ್ಲಿರುವ ಪಾಜಕವೆಂಬ ಗ್ರಾಮದಲ್ಲಿ ಜನಿಸಿದರು (1238). ಸಂನ್ಯಾಸಾಶ್ರಮ ಪಡೆದಮೇಲೆ ಪೂರ್ಣಪ್ರಜ್ಞ, ಆನಂದತೀರ್ಥ ಎಂಬ ಹೆಸರುಗಳಿಂದ ಪ್ರಸಿದ್ಧಿ ಪಡೆದರು. ಕರ್ಣಾಟಕ, ತಮಿಳುನಾಡು ಮತ್ತು ಹಿಮಾಚಲದವರೆಗಿನ ಉತ್ತರದೇಶಗಳನ್ನು ಸುತ್ತಿ ತಮ್ಮ ವೈಷ್ಣವಮತವನ್ನು ಪ್ರಚಾರ ಮಾಡಿದರು. ಉತ್ತರ ಹಿಂದೂಸ್ಥಾನದಲ್ಲಿ ಈಗ ಪ್ರಚಾರದಲ್ಲಿರುವ ಚೈತನ್ಯ ಮತ ಮಧ್ವಮತದ ಶಾಖೆಯಾಗಿದೆ.

**ದಾಸ ಪಂಥ** : ಮಧ್ವಾಚಾರ್ಯರ ತರುವಾಯ ಅವರ ಮತ ವಿಶೇಷವಾಗಿ ಪ್ರಚಾರಕ್ಕೆ ಬಂದದ್ದು ಕನ್ನಡದಲ್ಲಿ ರಚನೆಯಾದ ದಾಸ ಸಾಹಿತ್ಯದ ಮೂಲಕ. ಸುಲಭವಾಗಿ ಅರ್ಥವಾಗುವ ಶೈಲಿಯಲ್ಲಿ ರಚನೆಗೊಂಡ ಕರ್ಣಾಮೃತವಾದ ಪದಗಳು, ದೇವರ ನಾಮಗಳು, ಸುಳಾದಿ, ಸುವ್ವಾಲೆ, ತ್ರಿಪದಿ, ಚೌಪದಿ, ಕಂದ, ವಚನ ಮುಂತಾದುವುಗಳ ಮೂಲಕ ಅವರ ತತ್ತ್ವ ಪ್ರಚಾರಕ್ಕೆ ಬಂತು. ಶಿವನ ಸೇವೆಗೆ ಶರಣರು ದುಡಿದಂತೆ ಹರಿದಾಸರು ವಿಷ್ಣುಸೇವೆಗೆ ಶ್ರಮಿಸಿದರು.

ಪ್ರಾಯಶಃ ಹರಿದಾಸರಲ್ಲಿ ನರಹರಿತೀರ್ಥ ಮೊದಲಿಗರು (1300). ಶ್ರೀಪಾದ ರಾಜ ವಿಜಯನಗರದ ರಾಜರಿಂದ ಸನ್ಮಾನಿತರು (1450). ಇವರು ಕನ್ನಡದಲ್ಲಿ ಬರೆದಿರುವ ವೇಣುಗೀತೆ, ಭ್ರಮರಗೀತೆ, ಗೋಪಾಲಗೀತೆಗಳನ್ನು ಶ್ರೀರಂಗದ ಮಠದಲ್ಲಿ ಪೂಜೆಯ ಕಾಲದಲ್ಲಿ ಹಾಡುತ್ತಾರೆ. ವ್ಯಾಸರಾಯರು ಬನ್ನೂರಿನವರು (1449–1537) ; ಶ್ರೀಪಾದರಾಯನಿಂದ ದೀಕ್ಷೆ ಪಡೆದು ತರ್ಕತಾಂಡವ, ನ್ಯಾಯಾಮೃತ, ಚಂದ್ರಿಕೆ ಎಂಬ ಉದ್ದಾಮ ಸಂಸ್ಕೃತಗ್ರಂಥಗಳನ್ನಲ್ಲದೆ ಕನ್ನಡದಲ್ಲಿ ಕೀರ್ತನೆಗಳನ್ನೂ ಬರೆದಿದ್ದಾರೆ. ಇವರ ಕಾಲದಲ್ಲಿ ವ್ಯಾಸಕೂಟ, ದಾಸಕೂಟಗಳು ಪ್ರಚಾರಕ್ಕೆ ಬಂದುವು. ವ್ಯಾಸರಾಯ ದಾಸಕೂಟಕ್ಕೆ ಪ್ರಮುಖರು. ಪುರಂದರದಾಸ, ಕನಕದಾಸ, ವಿಜಯೀಂದ್ರಸ್ವಾಮಿ, ವಾದಿರಾಜ, ವೈಕುಂಠರಾಜ– ಈ ಮೊದಲಾದವರು ವ್ಯಾಸರಾಯರ ಶಿಷ್ಯರು. ವ್ಯಾಸರಾಯರು ವಿಜಯನಗರದ ರಾಜರಿಗೆ ಗುರು. ಪುರಂದರದಾಸರು ದಾಸಾಗ್ರಗಣ್ಯರು. ಈತನ ಸಂಗೀತ ಪ್ರತಿಭೆಯನ್ನು ಕಂಡು ಈತನನ್ನು ನಾರದರ ಅವತಾರರೆಂದು ಭಾವಿಸಲಾಗಿತ್ತು. ಈತನ ಕೀರ್ತನೆಗಳು ಈತ ಬದುಕಿದ್ದ ಹದಿನೈದನೆಯ ಶತಮಾನದಿಂದ ಇಂದಿನವರೆಗೂ ಅತಿಶಯವಾದ ಮೆಚ್ಚುಗೆಗೆ ಪಾತ್ರವಾಗಿವೆ. ತ್ಯಾಗರಾಜರಿಗೆ ಈ ಕೀರ್ತನೆಗಳು ಸ್ಫೂರ್ತಿಕೊಟ್ಟುವು. ಕನಕದಾಸರ ಪ್ರಭಾವ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದ ಉಡುಪಿಯವರೆಗೆ ಹಬ್ಬಿತ್ತು. ಇವರು ಕೀರ್ತನೆಗಳನ್ನಲ್ಲದೆ ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯಚರಿತ್ರೆ, ಮೋಹನತರಂಗಿಣಿ ಎಂಬ ಗ್ರಂಥಗಳನ್ನೂ ಬರೆದಿದ್ದಾರೆ. ಜಗನ್ನಾಥದಾಸ ರಾಯಚೂರು ಜಿಲ್ಲೆಯವರು (1727). ಅನೇಕ ಕೀರ್ತನೆಗಳನ್ನೂ ಪದ್ಯಗಳನ್ನೂ ಸುಳಾದಿಗಳನ್ನೂ ರಚಿಸಿರುವುದಲ್ಲದೆ ಬ್ರಹ್ಮಸೂತ್ರ ಮತ್ತು ದಶೋಪನಿಷತ್ತುಗಳಿಗೆ ವ್ಯಾಖ್ಯಾನವನ್ನೂ ಮಧ್ವಮತ ತತ್ತ್ವಗಳನ್ನು ಒಳಗೊಂಡ ಹರಿಕಥಾಮೃತಸಾರವೆಂಬ ಕನ್ನಡ ಗ್ರಂಥವನ್ನೂ ಬರೆದಿದ್ದಾರೆ. ದಾಸಪಂಥದವರಲ್ಲಿ ಹೆಂಗಸರೂ ಇದ್ದರು.

**ಕ್ರೈಸ್ತಧರ್ಮ:** ಇದು ಪ್ರಪಂಚದ ಧರ್ಮಗಳಲ್ಲಿ ಹಿರಿದಾದ ಧರ್ಮ; ಭೌಗೋಳಿಕ ಎಲ್ಲೆಯನ್ನು ದಾಟಿ ಇದು ವಿಶ್ವದ ಎಲ್ಲ ದೇಶಗಳಲ್ಲೂ ಪ್ರಚಾರದಲ್ಲಿದೆ. ಹುಟ್ಟಿದ ಎರಡು

ಹೋಲಿ ಟ್ರಿನಿಟಿ ಚರ್ಚ್, ಬೆಂಗಳೂರು

ಶತಮಾನಗಳಲ್ಲೇ ಸಂತರು ಈ ಧರ್ಮವನ್ನು ದಕ್ಷಿಣಭಾರತದ ಕೊಚಿನ್ ಪ್ರದೇಶಕ್ಕೆ ತಂದರು. 16ನೆಯ ಶತಮಾನದಲ್ಲಿ ಪೋರ್ಚುಗೀಸರೂ ಅನಂತರ ಡಚ್ಚರೂ ಇಲ್ಲಿಗೆ ವ್ಯಾಪಾರಿಗಳಾಗಿ ಬಂದು ಭಾರತದ ಕೆಲವು ಸಮುದ್ರತೀರಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು ಆ ಪ್ರದೇಶಗಳಲ್ಲಿ ಕ್ರೈಸ್ತಮತವನ್ನು ಪ್ರಚಾರಮಾಡಿದರು. ಅನಂತರ ಫ್ರೆಂಚರೂ ಆಂಗ್ಲೇಯರೂ ಭಾರತದಲ್ಲಿ ಕಾಲಿಟ್ಟರು. ಆಂಗ್ಲೇಯರು ಭಾರತವನ್ನು ಗೆದ್ದು ಅದನ್ನು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಒಳಪಡಿಸಿಕೊಂಡ ಮೇಲೆ ಅನೇಕ ಭಾರತೀಯರನ್ನು ಕ್ರೈಸ್ತರನ್ನಾಗಿ ಪರಿವರ್ತಿಸಿದರು. ಅನೇಕ ಬಗೆಯ ಕ್ರೈಸ್ತಧರ್ಮ ಪ್ರಚಾರಸಂಘಗಳು ಭಾರತದ ಎಲ್ಲ ಭಾಗಗಳಲ್ಲೂ ತಮ್ಮ ಧರ್ಮಪ್ರಚಾರವನ್ನು ಬಿರುಸಿನಿಂದ ನಡೆಸಿದುವು. ಈ ಸಂಘಗಳಿಗೆ ಆಗಿನ ಬ್ರಿಟಿಷ್ ಸರ್ಕಾರದ ಬೆಂಬಲವೂ ಇತ್ತು.

ಕರ್ನಾಟಕದಲ್ಲಿ ಸುಮಾರು ಒಂದು ಶತಮಾನದ ಹಿಂದೆ ಕ್ರೈಸ್ತಧರ್ಮ ಪ್ರಚಾರ ಸಂಘಗಳು ಕಾಲಿಟ್ಟವು. ಬಾಸೆಲ್ ಮಿಷನ್, ವೆಸ್ಲಿಯನ್ ಮಿಷನ್ ಮುಂತಾದ ಪ್ರಚಾರ ಸಂಘಗಳು ಮಂಗಳೂರು, ಉತ್ತರ ಕರ್ನಾಟಕ ಮತ್ತು ಹಳೆಯ ಮೈಸೂರು ಪ್ರಾಂತ್ಯಗಳಲ್ಲಿ ತುಂಬ ಚಟುವಟಿಕೆಯಿಂದ ಕೆಲಸಮಾಡಿದುವು; ಜನರ ಸಂಪರ್ಕವನ್ನು ಬೆಳೆಸಿಕೊಳ್ಳಲು ಪಾಠಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಿದುವು. ತಮ್ಮ ಪವಿತ್ರ ಗ್ರಂಥಗಳನ್ನು ಕನ್ನಡ ಜನರಿಗೆ ಪರಿಚಯ ಮಾಡಿಕೊಡಲು ಕ್ರೈಸ್ತಧರ್ಮಪ್ರಚಾರಕರು ಅವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಧರ್ಮಪ್ರಚಾರಕ್ಕಾಗಿ ಕನ್ನಡ ಭಾಷೆಯನ್ನು ಕಲಿಯುವುದು ಅಗತ್ಯವೆನಿಸಿದಾಗ ಇವರು ತುಂಬ ಆಸಕ್ತಿಯಿಂದ ಕನ್ನಡಸಾಹಿತ್ಯದ ಪರಿಚಯ ಮಾಡಿಕೊಂಡರು. ಅಲ್ಲದೆ ಕಲಿಕೆಗೆ ಅಗತ್ಯವಾದ ಕೋಶಗಳನ್ನು ಸಿದ್ಧಮಾಡಿದರು; ಉದ್ದಾಮ ಗ್ರಂಥಗಳನ್ನು ತಿದ್ದಿ ಪ್ರಕಟಿಸಿದರು.

ಕ್ರೈಸ್ತಧರ್ಮ ಭಾರತದ ಧಾರ್ಮಿಕ ಭಾವನೆಗಳಲ್ಲಿ ಉದಾರತೆಯನ್ನು ಹುಟ್ಟಿಸಿ ಧರ್ಮಸುಧಾರಣೆಗೆ ಪ್ರೇರಕವಾಗಿದೆ. ಕನ್ನಡನಾಡಿನ ಕ್ರೈಸ್ತರೂ ಕನ್ನಡಕ್ಕೆ ಸೇವೆ ಸಲ್ಲಿಸಿದ್ದಾರೆ. ಉತ್ತಂಗಿ ಚನ್ನಪ್ಪನವರು ಸರ್ವಜ್ಞವಚನಗಳನ್ನು ಸಂಪಾದಿಸಿದ್ದಾರೆ. ದೇಶೀಯ ಕ್ರೈಸ್ತರಲ್ಲಿ ಒಂದು ವಿಧವಾದ ವಿನಯವಿದೆ. ಯಾವ ಒಂದು ಮತೀಯ ಇಕ್ಕಟ್ಟಿಗೂ ಕಾರಣರಾಗದೆ ಹಿಂದೂಗಳೊಡನೆ ಅವರು ಸಹಬಾಳ್ವೆ ನಡೆಸುತ್ತಿದ್ದಾರೆ. ಇನ್ನು ಕೆಲವರು ಇನ್ನೂ ಮುಂದೆ ಹೋಗಿ ಭಾರತದ ಧರ್ಮಗಳಲ್ಲಿ ಸಾರವತ್ತಾದ ಭಾವನೆಗಳನ್ನು ಕ್ರೈಸ್ತಧರ್ಮಕ್ಕೆ ಅಳವಡಿಸುತ್ತಿದ್ದಾರೆ.

**ಇಸ್ಲಾಂ ಧರ್ಮ:** ಈ ಧರ್ಮದ ತತ್ತ್ವ ತುಂಬ ಸರಳ. ಇದರ ಮುಖ್ಯಾಂಶಗಳು ಹೀಗಿವೆ. ದೇವರು ಒಬ್ಬನೇ. ಅವನು ಕರುಣಾಳು, ದುಷ್ಟಶಿಕ್ಷಕ, ಶಿಷ್ಟರಕ್ಷಕ, ಸರ್ವಶಕ್ತ, ಪವಿತ್ರ ಕುರಾನ ದೇವರ ವಾಕ್ಯ. ಇದರಲ್ಲಿ ಮುಸಲ್ಮಾನ ಆಚರಿಸಬೇಕಾದ ಎಲ್ಲ ವಿಷಯಗಳೂ ಸೇರಿವೆ. ದೇವರು ಪ್ರತಿಯೊಬ್ಬನ ಬಾಳಿನ ಸರಿ ತಪ್ಪುಗಳನ್ನು ತೂಗಿ ಕೊನೆಯ ದಿನ ಸಚ್ಚಾರಿತ್ರರಿಗೆ ಸ್ವರ್ಗವಾಸವನ್ನೂ ಪಾಪಿಗಳಿಗೆ ಘೋರ ನರಕವನ್ನೂ ವಿಧಿಸುತ್ತಾನೆ. ಕುರಾನಿನಲ್ಲಿ ಮದುವೆ ಮತ್ತು ದಾಯ ಭಾಗಕ್ಕೆ ಸಂಬಂಧಪಟ್ಟ ನ್ಯಾಯನಿಬಂಧನೆಗಳಿವೆ. ಪ್ರಾರ್ಥನೆ, ಉಪವಾಸ, ದಾನ, ಯಾತ್ರೆಗಳ ವಿಧಾನವನ್ನು ಇದು ಸ್ಪಷ್ಟವಾಗಿ ತಿಳಿಸುತ್ತದೆ; ಭ್ರಾತೃತ್ವ, ಮಾತಾಪಿತೃ ಸೇವೆ, ಕಾಯಕ ಗೌರವ– ಇವುಗಳಿಗೆ ಪ್ರಾಧಾನ್ಯ ಕೊಟ್ಟಿದೆ. ಕುರಾನಿನ ಪ್ರಕಾರ ಪುನರ್ಜನ್ಮವಿಲ್ಲ. ಈ ಜನ್ಮದಲ್ಲಿ ಮಾಡಿದ್ದೇ ಜೀವರುಗಳ ಅಂತಿಮಗತಿಗೆ ಕಾರಣವಾದ್ದರಿಂದ ಈ ಜನ್ಮದಲ್ಲಿ ತುಂಬ ಎಚ್ಚರದಿಂದ ಬಾಳಬೇಕೆಂದು ಇದು ತಿಳಿಸುತ್ತದೆ. ದೇವದೂತರು ಉತ್ತಮರನ್ನು ಸನ್ಮಾರ್ಗದಲ್ಲಿ ನಡೆಸಿ ಸ್ವರ್ಗಕ್ಕೆ ಒಯ್ಯುವರು. ಸೈತಾನರು ನೀಚರನ್ನು ದುರ್ಮಾರ್ಗಕ್ಕೆಳೆದು ನರಕಕ್ಕೆ ನೂಕುವರು.

ಹುಟ್ಟಿದ ಒಂದು ಶತಮಾನದೊಳಗೆ ಇಸ್ಲಾಂ ಧರ್ಮ ಸಿಂಧೂ ಪ್ರಾಂತ್ಯದೊಳಗೆ ಪ್ರವೇಶಿಸಿತು. ಮುಸಲ್ಮಾನ ಜೈತ್ರಯಾತ್ರೆಗಳು ಯಶಸ್ವಿಯಾಗಿ ಕೊನೆಯಲ್ಲಿ ಭಾರತದಲ್ಲಿ ಮುಸ್ಲಿಮರ ಚಕ್ರಾಧಿಪತ್ಯ ಸ್ಥಾಪನೆಯಾದ ಮೇಲೆ ಉತ್ತರ ದೇಶಗಳಲ್ಲಿ ಬಹುಮುಖವಾಗಿ ವರ್ಧಿಸಿತು. ದಕ್ಷಿಣದಲ್ಲಿ ಇದು 13ನೆಯ ಶತಮಾನದಲ್ಲಿ ಪ್ರಬಲವಾಗಿ ಬಹಮನಿ ರಾಜ್ಯಸ್ಥಾಪನೆಯಿಂದ ಇನ್ನೂ ಬೆಳೆಯಿತು. ವಿಜಯನಗರ ರಾಜ್ಯ ಮುಸಲ್ಮಾನ ದಾಳಿಯಿಂದ ನುಚ್ಚುನೂರಾದ ಅನಂತರ ದಕ್ಷಿಣದಲ್ಲಿ ಮುಸಲ್ಮಾನರ ಪ್ರಾಬಲ್ಯ ಹೆಚ್ಚಿತು. ಹೈದರಾಬಾದಿನ ನಿಜಾಮಶಾಹೀ ಮತ್ತು ಮೈಸೂರಿನ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ ಆಳ್ವಿಕೆಯಲ್ಲಿ ರಾಜಾಶ್ರಯ ದೊರಕಿ ಇಸ್ಲಾಂ ಧರ್ಮ ಕರ್ನಾಟಕದಲ್ಲಿ ವರ್ಧಿಸಿತು.

ಮಹಾತ್ಮ ಗಾಂಧಿಯವರ ಬೋಧೆಯ ಪರಿಣಾಮವಾಗಿ ಈ ಎರಡು ಧರ್ಮದವರಲ್ಲೂ ಶಾಂತಿಯ ಸಹಬಾಳ್ವೆ ಕುದುರುವ ಚಿಹ್ನೆಗಳಿದ್ದರೂ ಹಿಂದೂ ಧರ್ಮದವರಿಗೂ ಮುಸ್ಲಿಮರಿಗೂ ಆಗಾಗ ತಿಕ್ಕಾಟ ನಡೆಯುತ್ತಿರುತ್ತದೆ. ಮುಸ್ಲಿಮರಲ್ಲಿ ಕನ್ನಡದ ಪರಿಚಯ ಹೆಚ್ಚುತ್ತಿದೆ. ಕುರಾನಿನ ಕನ್ನಡದ ಭಾಷಾಂತರ ಹೊರಬಿದ್ದಿದೆ. ಮಹಮ್ಮದನ ಜೀವನಚರಿತ್ರೆಯನ್ನೂ ಅವನ ಧಾರ್ಮಿಕ ಸಂದೇಶವನ್ನೂ ಕನ್ನಡ ಪುಸ್ತಕಗಳ ಮೂಲಕ, ಭಾಷಣಗಳ ಮೂಲಕ ಕನ್ನಡ ಜನತೆಗೆ ಪರಿಚಯ ಮಾಡಿಕೊಡುತ್ತಿದ್ದಾರೆ. ಕರ್ನಾಟಕದ ಎಲ್ಲ ಧರ್ಮದವರಿಗೂ ಮುಸ್ಲಿಮರಿಗೂ ಇನ್ನೂ ಹೆಚ್ಚಿನ ಸ್ನೇಹ ವರ್ಧಿಸಬೇಕಾಗಿದೆ.

**ಕರ್ನಾಟಕದಲ್ಲಿ ಪರಮತ ಸಹಿಷ್ಣುತೆ :** ಅಶೋಕ ಇಡೀ ಭಾರತದಲ್ಲೂ ಕರ್ನಾಟಕದಲ್ಲೂ ಸಾರಿದ ಪರಮತ ಸಹಿಷ್ಣುತೆಯ ಸಂದೇಶ ಕರ್ನಾಟಕದ ಚರಿತ್ರೆಯುದ್ದಕ್ಕೂ ಪ್ರತಿಧ್ವನಿಸುತ್ತಿದ್ದು, ಕರ್ನಾಟಕ ಅನೇಕ ಧರ್ಮಗಳ ಸಹಬಾಳ್ವೆಗೆ ಅವಕಾಶ ಮಾಡಿಕೊಟ್ಟಿದೆ. ಶಿವ, ವಿಷ್ಣು, ಅಂಬಿಕೆ, ಗಣಪತಿ, ಸೂರ್ಯ ಈ ಎಲ್ಲ ದೇವತೆಗಳನ್ನೂ ಸಮಾನರೆಂದು ಭಾವಿಸಿ ಪೂಜಿಸಬೇಕೆಂದು ಶಂಕರಾಚಾರ್ಯರು ಬೋಧಿಸಿದರು. ಉತ್ತರದಿಂದ ಬಂದ ಜೈನಧರ್ಮದವರು ಕರ್ನಾಟಕದಲ್ಲಿ ಚೆನ್ನಾಗಿ ಬಾಳಿ ಈ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾದರು.

ವಿಜಯನಗರದ ಅರಸರ ಕಾಲದಲ್ಲಿ ಶೈವ, ವೈಷ್ಣವ, ಜೈನಧರ್ಮದವರು ಒಂದೇ ಸಮನಾದ ರಾಜಾಶ್ರಯಕ್ಕೆ ಪಾತ್ರರಾಗಿದ್ದರು. ಆಕಸ್ಮಿಕವಾಗಿ ಇವರಲ್ಲಿ ವೈಮನಸ್ಯ ಹುಟ್ಟಿದ ಸಂದರ್ಭಗಳಲ್ಲಿ ರಾಜರು ಉದಾರ ಮನಸ್ಸಿನಿಂದ ಅದನ್ನು ಶಾಂತಗೊಳಿಸುತ್ತಿದ್ದರು. ಬುಕ್ಕರಾಯನ ಒಂದು ಶಾಸನ ಅವರ ಉದಾರನೀತಿಗೆ ಹೆಗ್ಗುರುತಾಗಿದೆ. ಅಧಿಕಸಂಖ್ಯಾತರಾದ ಶ್ರೀವೈಷ್ಣವರು ಅಲ್ಪಸಂಖ್ಯಾತರಾದ ಜೈನರಿಗೆ ತೊಂದರೆ ಮಾಡಿದಾಗ ಬುಕ್ಕರಾಯ ಅವರಲ್ಲಿ ಮೈತ್ರಿಯನ್ನೇರ್ಪಡಿಸಬೇಕೆಂದು ಒಂದು ಶಾಸನದಲ್ಲಿ ಹೇಳಿದೆ.

ಎಲ್ಲ ಮತಗಳೂ ಪೂಜ್ಯವೆಂದೂ ಅವು ಭಾವಿಸಿದ ವಸ್ತು ಒಂದೇ ಎಂದೂ ಹರಿಹರ ದೇವನ ಕಾಲದ ಬೇಲೂರು ಶಾಸನದ ಪ್ರಾರ್ಥನಾಶ್ಲೋಕ ಪ್ರತಿಬಿಂಬಿಸುತ್ತದೆ.

*ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ ।*
*ಬೌದ್ಧಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ॥*
*ಅರ್ಹನ್ನಿತ್ಯಥ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ ।*
*ಸೋಽಯಂ ವೋ ವಿದಧಾತು ವಾಂಛಿತಫಲಂ ಶ್ರೀಕೇಶವಸ್ಸರ್ವದಾ ॥*

ಇದರ ಕನ್ನಡ ಭಾಷಾಂತರವಿದು: ಶಿವನೆಂದು ಶೈವರೂ ಬ್ರಹ್ಮನೆಂದು ವೇದಾಂತಿಗಳೂ ಬುದ್ಧನೆಂದು ಬೌದ್ಧರೂ ಕರ್ತನೆಂದು ಪ್ರಮಾಣಪಟುಗಳಾದ ನೈಯಾಯಿಕರೂ ಅರ್ಹನೆಂದು ಜೈನಧರ್ಮದವರೂ ಕರ್ಮವೆಂದು ಮೀಮಾಂಸಕರೂ ಉಪಾಸಿಸುವ ಆ ಕೇಶವ ಸದಾ ನಮ್ಮ ಬಯಕೆಯನ್ನು ಪೂರೈಸಲಿ.

ಈಗಲೂ ಈ ಶ್ಲೋಕವನ್ನು ಸಾರ್ವಜನಿಕ ಸಭೆಗಳ ಆರಂಭದಲ್ಲಿ ಪ್ರಾರ್ಥನಾ ಶ್ಲೋಕವಾಗಿ ಹೇಳುವುದು ಕರ್ನಾಟಕದಲ್ಲಿ ರೂಢಿಯಲ್ಲಿದೆ. (ಜಿ.ಎಚ್.)

**ಕರ್ನಾಟಕದ ನಾಣ್ಯಗಳು :** ಕರ್ನಾಟಕದಲ್ಲಿ ನಾಣ್ಯಗಳ ಪ್ರಾಚೀನತೆಯ ವಿಷಯದಲ್ಲಿ ಅತಿ ಖಚಿತವಾದ ಮಾಹಿತಿ ದೊರಕಿಲ್ಲವಾದುದರಿಂದ, ಅವು ಇಲ್ಲಿ ಯಾವಾಗಿನಿಂದ ಬಳಕೆಯಲ್ಲಿವೆ ಎಂದು ಹೇಳುವುದು ಕಷ್ಟ.. ಉತ್ತರ ಭಾರತದಲ್ಲಿದ್ದಂತೆಯೇ ಇಲ್ಲಿಯೂ ಪ್ರಾಚೀನ ಕಾಲದಲ್ಲಿ ಮುದ್ರಾಂಕಿತ ನಾಣ್ಯಗಳು (ಪಂಚ್‌ಮಾರ್ಕ್ಡ್ ಕಾಯಿನ್ಸ್; ಚೈತ್ಯ,

ಸ್ತೂಪ, ಬೆಟ್ಟಗಳೇ ಮುಂತಾದ ವಿವಿಧ ಚಿಹ್ನೆಗಳನ್ನು ಬೆಳ್ಳಿ ಅಥವಾ ತಾಮ್ರದ ತೆಳುಪಟ್ಟಿಗಳ ಮೇಲೆ ಮುದ್ರೆಯೊತ್ತಿ ಉಪಯೋಗಿಸುತ್ತಿದ್ದ ಭಾರತದ ಪ್ರಾಚೀನ ಪದ್ಧತಿಯ ನಾಣ್ಯಗಳು) ಬಳಕೆಯಲ್ಲಿದ್ದುವೆಂದು ಗೊತ್ತಾಗುತ್ತದೆ. ಆದರೆ ಇಲ್ಲಿ ಈ ನಾಣ್ಯಗಳ ವೈಶಿಷ್ಟ್ಯವೇನೆಂಬುದು ತಿಳಿದಿಲ್ಲ. ನಮಗೆ ಖಚಿತವಾದ ಮಾಹಿತಿ ದೊರಕುವುದು ಸಾತವಾಹನರ ಕಾಲದಿಂದ. ಕರ್ನಾಟಕದ ಬಹುಭಾಗ ಅವರ ಆಧಿಪತ್ಯಕ್ಕೆ ಒಳಪಟ್ಟಿತ್ತು. ಈ ಭಾಗಗಳಲ್ಲಿ ಅವರ ನಾಣ್ಯಗಳು ಹೇರಳವಾಗಿ ದೊರಕಿವೆ. ಸಾತವಾಹನರ ನಾಣ್ಯಗಳು ವೈವಿಧ್ಯ ಪೂರ್ಣವಾಗಿಯೂ ಅವರ ಇತಿಹಾಸ ರಚನೆಗೆ ಬಹು ಉಪಯುಕ್ತವೂ ಆಗಿವೆ. ಅವರ ನಾಣ್ಯಗಳು ವಿಶೇಷವಾಗಿ ಸೀಸ ಮತ್ತು ತಾಮ್ರಗಳಲ್ಲಿವೆ. ಬೆಳ್ಳಿಯ ನಾಣ್ಯಗಳು ಬಲು ವಿರಳ. ಆದರೆ ಚಿನ್ನದ ನಾಣ್ಯಗಳು ದೊರಕಿಲ್ಲ. ಆ ನಾಣ್ಯಗಳಲ್ಲಿ ವಿದೇಶೀಯ ಪ್ರಭಾವ ಕಾಣಬರುವುದಿಲ್ಲ. ಅಲ್ಲದೆ ಅವು ಕಲಾತ್ಮಕವಾಗಿಯಾಗಲಿ ನೋಡಲು ಸುಂದರವಾಗಿಯಾಗಲಿ ಇಲ್ಲ. ಬೆಳ್ಳಿಯ ನಾಣ್ಯಗಳಲ್ಲಿ ಒಂದು ಕಡೆ ರಾಜನ ಚಿತ್ರವೂ ಮತ್ತೊಂದು ಕಡೆ ಆನೆ, ಕುದುರೆ, ಸಿಂಹ, ಬಿಲ್ಲು–ಬಾಣ ಮುಂತಾದ ಚಿತ್ರಗಳೂ ಇವೆ. ಕೆಲವು ನಾಣ್ಯಗಳಲ್ಲಿ ಶಾಸನಗಳೂ ಉಂಟು. ಗೌತಮೀಪುತ್ರ ಸಾತಕರ್ಣಿ ದೊರೆ ನಹಪಾಣನನ್ನು ಸೋಲಿಸಿ ಅವನ ರಾಜ್ಯವನ್ನು ತನ್ನ ವಶಪಡಿಸಿಕೊಂಡು ಆ ಪ್ರದೇಶದಲ್ಲಿ ಬಳಕೆಯಲ್ಲಿದ್ದ ನಹಪಾಣನ ನಾಣ್ಯಗಳನ್ನು ಹಿಂದಕ್ಕೆ ತೆಗೆದುಕೊಂಡು ಅವುಗಳ ಮೇಲೆ ತನ್ನ ಹೆಸರಿನ ಶಾಸನ ಮುದ್ರಿಸಿದ. ಮತ್ತೊಬ್ಬ ಸಾತವಾಹನ ದೊರೆ ಯಜ್ಞಶ್ರೀ ಸಾತಕರ್ಣಿಯ ನಾಣ್ಯಗಳಲ್ಲಿ ಹಡಗಿನ ಚಿತ್ರವಿದೆ. ಆ ಕಾಲದಲ್ಲಿ ನೌಕಾಯಾನ ಎಷ್ಟೊಂದು ಮುಂದುವರಿದಿತ್ತೆಂಬುದನ್ನು ಇದು ಸೂಚಿಸುತ್ತದೆ. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯಲ್ಲಿ ಉತ್ಖನನ ಮಾಡಿದಾಗ ಸಾತವಾಹನರ ಅನೇಕ ನಾಣ್ಯಗಳು ದೊರೆತುವು. ಇಲ್ಲಿ ದೊರೆತ ಚೀನೀ ನಾಣ್ಯವೊಂದು ಪ್ರ.ಶ.ಪೂ. 2ನೆಯ ಶತಮಾನಕ್ಕೆ ಸೇರಿದುದೆಂದು ಭಾವಿಸಲಾಗಿತ್ತು. ಆದರೆ ಅದು ಅಷ್ಟೊಂದು ಪ್ರಾಚೀನವಾದುದಲ್ಲವೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸಾತವಾಹನರ ಕಾಲದಲ್ಲಿ ಸಮಕಾಲೀನರೂ ಸಾಮಂತರೂ ಆದ ದೊರೆಗಳು ಆಳುತ್ತಿದ್ದರು. ಮಹಾರಥಿಗಳು ಅಥವಾ ಸದಕನ ವಂಶಿಕರು ಎಂದು ಪ್ರಸಿದ್ಧರಾಗಿರುವ ಇವರು ಸೀಸದ ನಾಣ್ಯಗಳನ್ನು ಅಚ್ಚುಹಾಕಿಸಿದರು. ಅಗಲವಾದ ಈ ನಾಣ್ಯಗಳಲ್ಲಿ ಒಂದು ಕಡೆ ಎತ್ತಿನ ಚಿತ್ರವೂ ಮತ್ತೊಂದು ಕಡೆ ಬೇಲಿಯೊಳಗಿರುವ ವೃಕ್ಷದ ಚಿತ್ರವೂ ಇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾತವಾಹನರ ಸಾಮಂತರೇ ಆದ ಆನಂದ ವಂಶದ ರಾಜರು ಆಳುತ್ತಿದ್ದರು. ಚುಟುಕುಲಾನಂದ, ಮುಡಾನಂದ ಎಂಬ ರಾಜರು ಆಳುತ್ತಿದ್ದುದು ಇವರ ಸೀಸದ ನಾಣ್ಯಗಳಿಂದ ತಿಳಿದುಬರುತ್ತದೆ. ಅಗಲವಾಗಿರುವ ಇವರ ನಾಣ್ಯಗಳಲ್ಲಿ ಬ್ರಾಹ್ಮೀ ಲಿಪಿಯ ಶಾಸನ, ಬೇಲಿಯೊಳಗಿನ ವೃಕ್ಷ, ಕಮಾನುಗಳ ಗುಡ್ಡ ಇವುಗಳ ಚಿತ್ರವನ್ನು ಕಾಣಬಹುದು. ಬನವಾಸಿ, ಕಾರವಾರ, ಚಂದ್ರವಳ್ಳಿ ಮುಂತಾದೆಡೆಗಳಲ್ಲಿ ಇವರ ನಾಣ್ಯಗಳು ದೊರೆಕಿವೆ.

ಪ್ರಸಕ್ತಶಕೆಯ ಮೊದಲ ಶತಮಾನಗಳಲ್ಲಿ ಕರ್ನಾಟಕಕ್ಕೂ ರೋಮಿಗೂ ವ್ಯಾಪಾರ ಸಂಪರ್ಕಗಳು ವಿಶೇಷವಾಗಿದ್ದುವು. ಇದರ ಕುರುಹಾಗಿ ಕರ್ನಾಟಕದಲ್ಲಿ ಅನೇಕ ಕಡೆ ರೋಮನ್ ನಾಣ್ಯಗಳು ದೊರಕಿವೆ. ಇವುಗಳಲ್ಲಿ ಮುಖ್ಯವಾದವು ಬೆಂಗಳೂರು ಮತ್ತು ಚಂದ್ರವಳ್ಳಿಗಳಲ್ಲಿ ದೊರಕಿವೆ. ಈ ಬೆಳ್ಳಿಯ ನಾಣ್ಯಗಳಲ್ಲಿ ರೋಮನ್ ಚಕ್ರವರ್ತಿಗಳ (ಆಗಸ್ಟಸ್, ಟೈಬೀರಿಯಸ್, ಕ್ಯಾಲಿಗುಲ) ಚಿತ್ರವೂ ಶಾಸನವೂ ಇವೆ.

ಸಾತವಾಹನರ ಅನಂತರ ಕರ್ನಾಟಕದಲ್ಲಿ ರಾಜ್ಯವಾಳಿದ ಬನವಾಸಿಯ ಕದಂಬರ ನಾಣ್ಯಗಳು ಪದ್ಮಟಂಕವೆಂಬ ಗುಂಪಿಗೆ ಸೇರುತ್ತವೆ. ಇವು ಚಿನ್ನದವು. ಪದ್ಮಟಂಕ ನೋಡಲು ಸಣ್ಣದಾದರೂ ಬಟ್ಟಲಿನ ಆಕಾರದಲ್ಲಿದೆ. ಇದರ ಮಧ್ಯದಲ್ಲಿ ಪದ್ಮಚಿಹ್ನೆಯೂ ಸುತ್ತಲೂ ವಿವಿಧ ಚಿಹ್ನೆಗಳೂ ಇವೆ. ಬನವಾಸಿಯ ಕದಂಬರ ನಾಣ್ಯಗಳಲ್ಲಿ ಹಿಮ್ಮುಖವಾಗಿರುವ ಸಿಂಹ ಗಮನಾರ್ಹವಾದುದು. ಮೇಲೆ ಬರೆಹವಿಲ್ಲದಿರುವುದರಿಂದ ಇವು ಖಚಿತವಾಗಿ ಕದಂಬರ ನಾಣ್ಯಗಳೆಂದು ಹೇಳಲಾಗುವುದಿಲ್ಲ.

ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಗಂಗಮನೆತನದ ಅರಸರು ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚುಹಾಕಿಸಿದರು. ಇವರ ಬೆಳ್ಳಿಯ ನಾಣ್ಯಗಳು ಬೆಳಕಿಗೆ ಬಂದಿಲ್ಲ. ಇವರ ನಾಣ್ಯಗಳು ಸುಮಾರು ಐವತ್ತರಿಂದ ಅರವತ್ತು ಗ್ರೇನ್ ಭಾರವಾಗಿದ್ದು ಅಲಂಕೃತ ಆನೆಯ ಚಿತ್ರವನ್ನೂ ಹಿಂಭಾಗದಲ್ಲಿ ಹೂವಿನ ಚಿತ್ರ ಮತ್ತು ಶಾಸನವನ್ನೂ ಹೊಂದಿವೆ. ಮತ್ತೊಂದು ನಮೂನೆಯ ಚಿನ್ನದ ನಾಣ್ಯಗಳು ಆರು ಮತ್ತು ಒಂದೂವರೆ ಗ್ರೇನ್ ತೂಕವುಳ್ಳವುಗಳಾಗಿ ಆನೆಯ ಚಿತ್ರ ಹೊಂದಿವೆ. ವರಾಹ ಚಿನ್ನೆಯುಳ್ಳ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದವರು ಬಾದಾಮಿಯ ಚಾಳುಕ್ಯರೆಂದು ಹೇಳಬಹುದು. ಐವತ್ತೈದು ಗ್ರೇನ್ ತೂಕವಿರುವ, ಒಂದು ಭಾಗದಲ್ಲಿ ವರಾಹ ಚಿಹ್ನೆಯೂ ಮತ್ತೊಂದು ಭಾಗದಲ್ಲಿ ಪದ್ಮವೂ ಇರುವ ನಾಣ್ಯಗಳು ಮೊದಲನೆಯ ಪುಲಕೇಶಿಯ ನಾಣ್ಯಗಳು. ಶಂಖ, ಚಕ್ರ, ಧನಸ್ಸುಗಳನ್ನೂ ಶ್ರೀ ಎಂಬ ಅಕ್ಷರವನ್ನೂ ಉಳ್ಳ ಹಿಂಭಾಗ ಮತ್ತು ವರಾಹ ಚಿಹ್ನೆಯಿರುವ ಮುಂಭಾಗ ಹೊಂದಿರುವ ನಾಣ್ಯಗಳು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿವೆ. ಇವು ಬಾದಾಮಿ ಚಳುಕ್ಯರ ನಾಣ್ಯಗಳೆಂದು ಅನೇಕ ವಿದ್ವಾಂಸರು ಒಪ್ಪಿದ್ದಾರೆ. ಆದರೆ ಶಾಸನವಿಲ್ಲದೆ ಇರುವುದರಿಂದ ಖಚಿತವಾಗಿ ಹೀಗೆಂದು ಹೇಳಲಾಗುವುದಿಲ್ಲ.

ಕರ್ನಾಟಕದ ಇತಿಹಾಸದಲ್ಲಿ ಮಾತ್ರವಲ್ಲದೆ ಭಾರತೀಯ ಇತಿಹಾಸದಲ್ಲೇ ವಿಶೇಷ ಸ್ಥಾನ ಗಳಿಸಿರುವ ಶ್ರೇಷ್ಠ ರಾಜಮನೆತನದವರಾದ ರಾಷ್ಟ್ರಕೂಟರ ನಾಣ್ಯಗಳು ಇದುವರೆಗೂ ದೊರಕಿಲ್ಲ. ರಾಷ್ಟ್ರಕೂಟರು ವಿಶೇಷವಾಗಿ ಚಿನ್ನದ ನಾಣ್ಯಗಳನ್ನೇ ಬಳಸುತ್ತಿದ್ದರೆಂದು ವಿದ್ವಾಂಸರು ಊಹಿಸುತ್ತಾರೆ. ಆ ಕಾಲದಲ್ಲಿ ದ್ರಮ್ಮ, ಸುವರ್ಣ, ಗದ್ಯಾಣ, ಕಳಂಜು ಮತ್ತು ಕಾಸು ಎಂಬ ನಾಣ್ಯಗಳು ಬಳಕೆಯಲ್ಲಿದ್ದುದು ಅವರ ಶಾಸನಗಳಿಂದ ತಿಳಿದು ಬರುತ್ತದೆ. ರಾಷ್ಟ್ರಕೂಟರ ಅನಂತರ ಕರ್ನಾಟಕದಲ್ಲಿ ಆಳಿದ ಕಲ್ಯಾಣದ ಚಾಳುಕ್ಯರ ಅನೇಕ ನಾಣ್ಯಗಳು ಲಭ್ಯವಾಗಿವೆ. ಎರಡನೆಯ ಜಯಸಿಂಹ, ಮೊದಲನೆಯ ಮತ್ತು ಎರಡನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ– ಇವರ ಚಿನ್ನದ ನಾಣ್ಯಗಳು ದೊರಕಿವೆ. ಎರಡನೆಯ ಜಯಸಿಂಹನ ನಾಣ್ಯದಲ್ಲಿ ಎತ್ತರವಾದ ಗೋಪುರವೂ ಅದರ ಸುತ್ತಲೂ ಜಗದೇಕಮಲ್ಲ ಎಂಬ ಬರವಣಿಗೆಯೂ ಮುದ್ರಿತವಾಗಿವೆ. ಇವನ ಇನ್ನೊಂದು ರೀತಿಯ ನಾಣ್ಯದಲ್ಲಿ ಐದು ಸಿಂಹಗಳನ್ನು ಮತ್ತು ಇವನ ಬಿರುದನ್ನು (ಜಗದೇಕಮಲ್ಲ) ಮುದ್ರಿಸಿರುವುದನ್ನು ಕಾಣಬಹುದು. ಎರಡನೆಯ ಸೋಮೇಶ್ವರನ ನಾಣ್ಯಗಳಲ್ಲಿ ಒಂಬತ್ತು ಮುದ್ರೆಗಳಿವೆ. ಭುಜ ಎಂಬ ಶಾಸನವಿರುವ ನಾಣ್ಯಗಳು ಆರನೆಯ ವಿಕ್ರಮಾದಿತ್ಯನೆಂದು ಊಹೆ. ಕಲ್ಯಾಣದ ಚಾಳುಕ್ಯರ ಸಮಕಾಲೀನರಾದ ಕಳಚುರಿಗಳ ನಾಣ್ಯಗಳು ಅಷ್ಟಾಗಿ ದೊರಕಿಲ್ಲ. ಸಾತಾರಾ ಜಿಲ್ಲೆಯಲ್ಲಿ ದೊರಕಿರುವ ಚಿನ್ನದ ನಾಣ್ಯಗಳು ಆ ಮನೆತನದ ರಾಜರದೆಂದು ಊಹಿಸಲಾಗಿದೆ. ಇವುಗಳ ತೂಕ 55 ಗ್ರೇನ್. ನಾಣ್ಯಗಳ ಮೇಲೆ ಮುರಾರಿ ಎಂಬ ಶಾಸನವುಂಟು. ಇವು ಕಳಚುರಿ ರಾಜ ದಾಯಮುರಾರಿ ಸೋವಿದೇವನ ನಾಣ್ಯಗಳೆಂದು ಹೇಳಬಹುದು.

ಕರ್ನಾಟಕದ ಪ್ರಮುಖ ರಾಜಮನೆತನದವರಾದ ಹೊಯ್ಸಳರ ನಾಣ್ಯಗಳ ವಿಷಯದಲ್ಲಿಯೂ ನಮಗೆ ದೊರಕಿರುವ ಮಾಹಿತಿ ಕಡಿಮೆ. ಈ ರಾಜರಲ್ಲಿ ವಿಷ್ಣುವರ್ಧನ ಮತ್ತು ಎರಡನೆಯ ನರಸಿಂಹರು ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದರು. ವಿಷ್ಣುವರ್ಧನ ಮೂರು ರೀತಿಯ ನಾಣ್ಯಗಳನ್ನು ಟಂಕಿಸಿದ. ಮುಂಭಾಗದಲ್ಲಿ ಸಿಂಹ, ಹಿಂಭಾಗದಲ್ಲಿ ಶ್ರೀತಲಕಾಡಗೊಂಡ ಎಂಬ ಕನ್ನಡ ಶಾಸನವಿರುವ ನಾಣ್ಯಗಳನ್ನೂ ಆತ ಮುದ್ರಿಸಿದ್ದು ತನ್ನ ತಲಕಾಡು ವಿಜಯದ ಜ್ಞಾಪಕಾರ್ಥವಾಗಿ ಸಿಂಹದ ಮೇಲೆ ಕುಳಿತಿರುವ ಚಾಮುಂಡಿಯ ಚಿತ್ರವೂ ಹಿಂಭಾಗದಲ್ಲಿ ಶ್ರೀನೊಳಂಬವಾಡಿಕೊಂಡ ಎಂಬ ಕನ್ನಡ ಶಾಸನವೂ ಇರುವ ನಾಣ್ಯಗಳು ನೊಳಂಬರ ಮೇಲಿನ ವಿಜಯದ ಸ್ಮರಣಾರ್ಥ ಮುದ್ರಿಸಿದವು. ಮೂರನೆಯ ನಮೂನೆಯ ನಾಣ್ಯಗಳಲ್ಲಿ ಶ್ರೀಮಲಪರೊಳು ಗಂಡ ಎಂಬ ಕನ್ನಡ ಶಾಸನವಿದೆ. ಇವು ವರಾಹ, ಪಣ ಮತ್ತು ಅರ್ಧಪಣ ಮೌಲ್ಯದ ನಾಣ್ಯಗಳೆಂದು ಊಹಿಸಲಾಗಿದೆ. ನರಸಿಂಹನ ನಾಣ್ಯಗಳಲ್ಲಿ ಶ್ರೀ ಪ್ರತಾಪ ನಾರಸಿಂಘ ಎಂಬ ಶಾಸನವೂ ಸಿಂಹ, ಚಾಮುಂಡಿ ಮುಂತಾದ ದೇವತೆಗಳ ಚಿತ್ರಗಳೂ ಇವೆ.

ಉತ್ತರ ಕರ್ನಾಟಕದಲ್ಲಿ ಆಳಿದ ದೇವಗಿರಿಯ ಸೇವುಣರ ನಾಣ್ಯಗಳೂ ಚಿನ್ನದ ಪದ್ಮ ಟಂಕಗಳು. ಸುಮಾರು 57 ಗ್ರೇನ್ ತೂಕವಿರುವ ಈ ನಾಣ್ಯಗಳ ಮುಂಭಾಗದಲ್ಲಿ ಪದ್ಮವೂ ಅದರ ಸುತ್ತಲೂ ಶಂಖ, ಚಕ್ರ ಮುಂತಾದ ಚಿಹ್ನೆಗಳೂ ಹಿಂಭಾಗದಲ್ಲಿ ದೇವನಾಗರೀಲಿಪಿಯಲ್ಲಿ ರಾಜರ ಹೆಸರಿನ ಶಾಸನಗಳೂ ಇವೆ. 5ನೆಯ ಭಿಲ್ಲಮ, ಸಿಂಘಣ, ಕೃಷ್ಣ, ಮಹಾದೇವ ಮತ್ತು ರಾಮಚಂದ್ರ ಇವರ ನಾಣ್ಯಗಳು ಮಾತ್ರ ಇದುವರೆಗೆ ದೊರಕಿವೆ. ಇವರ ಸಮಕಾಲೀನರೇ ಆದ ಗೋವೆಯ ಕದಂಬರು ಚಿನ್ನದ ನಾಣ್ಯಗಳನ್ನು ಮುದ್ರಿಸಿದರು. ಮುಂಬದಿಯಲ್ಲಿ ಗಜಶಾರ್ದೂಲ ಮತ್ತು ಕೇವಲ ಶಾರ್ದೂಲದ ಚಿತ್ರವೂ ಹಿಂಬದಿಯಲ್ಲಿ ನಾಗರೀಲಿಪಿಯ ಶಾಸನವೂ ತ್ರಿಶೂಲವೂ ಇರುವ ನಾಣ್ಯಗಳನ್ನು ಒಂದನೆಯ ಜಯಕೇಶಿ ಅಚ್ಚು ಹಾಕಿಸಿದ. ಇದೇ ರೀತಿಯ ನಾಣ್ಯಗಳನ್ನು ಸ್ವಲ್ಪ ಬದಲಾವಣೆಗಳೊಂದಿಗೆ ಸೋಯಿದೇವ, ಶಿವಚಿತ್ತ, ಹೆಮ್ಮಡಿದೇವ ಮುಂತಾದರಾಜರೂ ಮುದ್ರಿಸಿದರು. ಕರ್ನಾಟಕದಲ್ಲಿ ಸಾಮಂತರಾಗಿ ಆಳಿದ ಅನೇಕ ಮನೆತನಗಳ ನಾಣ್ಯಗಳೂ ದೊರಕಿವೆ. ಆದರೆ ಅವುಗಳ ವಿಷಯದಲ್ಲಿ ಖಚಿತವಾದ ಮಾಹಿತಿ ಸಿಕ್ಕಿಲ್ಲ.

ವಿಜಯನಗರ ಸಾಮ್ರಾಜ್ಯ ಕಾಲದಿಂದೀಚೆಗೆ ಕರ್ನಾಟಕದ ನಾಣ್ಯಗಳ ಬಗೆಗೆ ವಿಪುಲವಾದ ಮಾಹಿತಿ ದೊರಕುತ್ತದೆ. ನಾಣ್ಯಗಳ ದೃಷ್ಟಿಯಿಂದಲೂ ಅದು ಸುವರ್ಣಯುಗವೇ ಸರಿ. ವಿಜಯಗನರ ನಾಣ್ಯಗಳು ವಿಶೇಷವಾಗಿ ಚಿನ್ನದಲ್ಲಿವೆ. ಅನಂತರ ಬಂದ ಅನೇಕ ರಾಜರೂ ಐರೋಪ್ಯ ಕಂಪನಿಗಳವರೂ ಹೈದರನೂ ಟಿಪ್ಪುವೂ ಮೈಸೂರು ರಾಜರೂ ಈ ನಾಣ್ಯಗಳನ್ನು ಅನುಕರಿಸಿದರು. ವಿಜಯನಗರದ ಅರಸರ ಚಿನ್ನದ ನಾಣ್ಯಗಳು ವರಾಹ, ಅರ್ಧ ವರಾಹ ಮತ್ತು ಕಾಲು ವರಾಹಗಳ ಮೌಲ್ಯಗಳಲ್ಲಿವೆ. ಈ ನಾಣ್ಯಗಳಲ್ಲಿ ಸಾಮಾನ್ಯವಾಗಿ ಹಿಂದೂ ದೇವತೆಗಳ ಚಿತ್ರಗಳೂ ರಾಜನ ಹೆಸರಿನ ಕನ್ನಡ, ತೆಲುಗು ಅಥವಾ ನಾಗರೀಲಿಪಿಯ ಶಾಸನಗಳೂ ಇವೆ. ಅವರ ನಾಣ್ಯಗಳು ಕಲಾತ್ಮಕವಾಗಿದ್ದು ವಿಜಯನಗರದ ಶ್ರೀಮಂತಿಕೆಗೆ ಸಾಕ್ಷಿಯಾಗಿವೆ. ವಿಜಯನಗರದ ಪ್ರಾಚೀನತಮ ನಾಣ್ಯಗಳಲ್ಲಿ ಕನ್ನಡಲಿಪಿಯ ಶಾಸನಗಳಿರುವುದು ಗಮನಾರ್ಹವಾದ ಸಂಗತಿ. ಸಂಗಮ ವಂಶದ ಮೊದಲನೆಯ

ಹರಿಹರ, ಹನುಮಂತ ಮತ್ತು ಗರುಡ ಇರುವ ನಾಣ್ಯಗಳನ್ನು ಅಚ್ಚುಹಾಕಿಸಿದ. ಗರುಡ ಚಿಹ್ನೆಯುಳ್ಳ ನಾಣ್ಯಗಳನ್ನು ಬುಕ್ಕರಾಯನೂ ಕೃಷ್ಣದೇವರಾಯನೂ ಮುದ್ರಿಸಿದರು. ಎರಡನೆಯ ಹರಿಹರ ತನ್ನ ನಾಣ್ಯಗಳಲ್ಲಿ ಹೊಸ ಚಿಹ್ನೆಗಳನ್ನು ಪ್ರಾರಂಭಿಸಿದ. ಇವನ ನಾಣ್ಯಗಳ ಮೇಲೆ ಶಿವ–ಪಾರ್ವತಿ, ಲಕ್ಷ್ಮೀ–ನಾರಾಯಣ, ಲಕ್ಷ್ಮೀ–ನರಸಿಂಹ ಮುಂತಾದ ದೇವತೆಗಳ ಚಿತ್ರಗಳಿವೆ. ಅನಂತರ ಆಳಿದ ದೇವರಾಯ ಚಿನ್ನದ ನಾಣ್ಯಗಳ ಮೇಲೆ ಶಿವಪಾರ್ವತಿಯರ ಚಿತ್ರವನ್ನೂ ತಾಮ್ರದ ನಾಣ್ಯಗಳ ಮೇಲೆ ಆನೆಯ ಚಿತ್ರವನ್ನೂ ಅಚ್ಚುಹಾಕಿಸಿದ ಇವನ ಕೆಲವು ನಾಣ್ಯಗಳಲ್ಲಿ ಗಜಬೇಂಟೆಕಾರ ಎಂಬ ಶಾಸನವೂ ಉಂಟು. ತುಳುವ ವಂಶದ ಅರಸರು ಶಿವಪಾರ್ವತಿಯರ ಚಿತ್ರದ ನಾಣ್ಯಗಳನ್ನು ಮುಂದುವರಿಸಿದ್ದೇ ಅಲ್ಲದೆ ವೆಂಕಟೇಶ್ವರ ಮತ್ತು ಬಾಲಕೃಷ್ಣರ ಚಿತ್ರವಿರುವ ನಾಣ್ಯಗಳನ್ನು ಚಲಾವಣೆಗೆ ತಂದರು. ಕೃಷ್ಣದೇವರಾಯನ ನಾಣ್ಯಗಳಲ್ಲಿ ಈ ಚಿತ್ರಗಳ ಜೊತೆಗೆ ಶ್ರೀಪತಾಪಕೃಷ್ಣರಾಯ ಎಂಬ ಶಾಸನವನ್ನು ಕಾಣಬಹುದು. ಅಚ್ಯುತರಾಯನ ಶಾಸನಗಳಲ್ಲಿ ಗಂಡಭೇರುಂಡದ ಚಿತ್ರವಿರುವುದು ಗಮನಾರ್ಹ. ವೆಂಕಟಪತಿಯ ನಾಣ್ಯಗಳಲ್ಲಿ ಶ್ರೀ ವೆಂಕಟೇಶ್ವರಾಯ ನಮಃ ಎಂಬ ಶಾಸನವೂ ವಿಷ್ಣುವಿನ ಚಿತ್ರವೂ ಇವೆ.

ವಿಜಯನಗರದ ಪತನಾನಂತರ ಹುಟ್ಟಿಕೊಂಡು ಅನೇಕ ಸಣ್ಣಪುಟ್ಟ ರಾಜ್ಯಗಳು ವಿಜಯನಗರದ ನಾಣ್ಯಗಳನ್ನೇ ಸೂಕ್ತ ಬದಲಾವಣೆಗಳೊಂದಿಗೆ ಮುಂದುವರಿಸಿದುವು. ಈ ಗುಂಪಿಗೆ ಸೇರಿದವೆಂದರೆ ಇಕ್ಕೇರಿ ಮತ್ತು ಚಿತ್ರದುರ್ಗದ ಪಾಳೆಯಗಾರರ ನಾಣ್ಯಗಳು. ಇಕ್ಕೇರಿಯ ಪಾಳೆಯಗಾರ ಸದಾಶಿವನಾಯಕನ ನಾಣ್ಯಗಳಲ್ಲಿ ಶಿವಪಾರ್ವತಿಯರ ಚಿತ್ರವೂ ಹಿಂಭಾಗದಲ್ಲಿ ಶ್ರೀ ಸದಾಶಿವ ಎಂಬ ನಾಗರೀಲಿಪಿಯ ಬರೆಹವೂ ಇವೆ. ಚಿತ್ರದುರ್ಗದ ನಾಯಕರ ನಾಣ್ಯಗಳ ಒಂದು ಬದಿಗೆ ದುರ್ಗಿಯ ಚಿತ್ರವನ್ನೂ ಇನ್ನೊಂದು ಬದಿಗೆ ನಾಯಕರಾಯ ಎಂಬ ನಾಗರೀಲಿಪಿಯ ಬರೆಹವನ್ನೂ ಕಾಣಬಹುದು. ಇವನ್ನು ದುರ್ಗಿ ಪಗೋಡವೆಂದೂ ಕರೆಯುತ್ತಾರೆ. ಬಿಜಾಪುರದ ಸುಲ್ತಾನರು ಮತ್ತು ಮರಾಠರು ಕರ್ನಾಟಕದ ಕೆಲವು ಭಾಗಗಳನ್ನು ತಮ್ಮ ವಶಮಾಡಿಕೊಂಡಮೇಲೆ ತಮ್ಮವೇ ಆದ ನಾಣ್ಯಗಳನ್ನು ಅಚ್ಚುಹಾಕಿಸಿದರು. ಇವು ಹೆಚ್ಚಾಗಿ ದೊರಕಿಲ್ಲ. ಶಿವಮೊಗ್ಗ, ಬೆಂಗಳೂರು ಮತ್ತು ಕೋಲಾರಗಳ ಕೆಲವೆಡೆಗಳಲ್ಲಿ ಶಾಹೀ ನಾಣ್ಯಗಳು ದೊರಕಿವೆ.

ಕರ್ನಾಟಕದ ಕೆಲವು ಭಾಗಗಳು ಮೊಗಲರ ಆಳ್ವಿಕೆಗೆ ಸೇರಿದ್ದುದರಿಂದ ಇಲ್ಲಿ ಅವರ ನಾಣ್ಯಗಳೂ ದೊರಕಿವೆ. ಅವೆಲ್ಲವೂ ಅಖಿಲ ಭಾರತೀಯ ವ್ಯಾಪ್ತಿಯುಳ್ಳವಾದ್ದರಿಂದ ಕರ್ನಾಟಕದ ವೈಶಿಷ್ಟ್ಯವೇನೂ ಅವುಗಳಲ್ಲಿ ಕಾಣಬರುವುದಿಲ್ಲ (**ನೋಡಿ– ಮೊಗಲರು**).

ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ನಾಣ್ಯಗಳು ಕರ್ನಾಟಕ ನಾಣ್ಯ ಇತಿಹಾಸದಲ್ಲಿ ವಿಶೇಷ ಸ್ಥಾನ ಗಳಿಸಿವೆ. ಹೈದರ್ ಬಿದನೂರನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲಿ ಒಂದು ಟಂಕಸಾಲೆ ಸ್ಥಾಪಿಸಿ ಬಹಾದುರೀ ನಾಣ್ಯಗಳನ್ನು ಮುದ್ರಿಸಿದ. ಅವುಗಳ ಮೇಲೆ ಶಿವಪಾರ್ವತಿಯರ ಚಿತ್ರವೂ ಹಿಂಭಾಗದಲ್ಲಿ ಹೆ ಎಂಬ ಅಕ್ಷರವೂ ಇವೆ. ಹೈದರ್ ಬೆಂಗಳೂರಿನಲ್ಲಿ ಮುದ್ರಿಸಿದ ನಾಣ್ಯಗಳು ದೊಡ್ಡ ತಲೆ ಬೆಂಗಳೂರಿ ಎಂದು ಪ್ರಸಿದ್ಧವಾಗಿದ್ದುವು. ಇವುಗಳ ಜೊತೆಗೆ ಈತ ಅರ್ಧ ಪಗೋಡ ಮತ್ತು ಫಣಮ್ ಎಂಬ ನಾಣ್ಯಗಳನ್ನೂ ಮುದ್ರಿಸಿದ್ದ. ಇವನ ತಾಮ್ರದ ನಾಣ್ಯಗಳ ಮುಂಬದಿಯಲ್ಲಿ ಆನೆಯೂ ಹಿಂಬದಿಯಲ್ಲಿ ತೇದಿಯೂ ಟಂಕಸಾಲೆಯ ಹೆಸರೂ ಇವೆ. ಟಿಪ್ಪುಸುಲ್ತಾನನ ನಾಣ್ಯಗಳು ನಾಣ್ಯಶಾಸ್ತ್ರಜ್ಞರನ್ನು ಚಕಿತಗೊಳಿಸುತ್ತವೆ. ಅವುಗಳ ವೈವಿಧ್ಯವೂ ನಾಣ್ಯ ವಿಷಯದಲ್ಲಿ ಹೈದರ್ ತಳೆದಿದ್ದ ಆಸಕ್ತಿಯೂ ಭಾರತೀಯ ನಾಣ್ಯಶಾಸ್ತ್ರದಲ್ಲಿಯೇ ವಿಶಿಷ್ಟವೆನ್ನಬಹುದು. ಕೊನೆಯ ಪಕ್ಷ ಹದಿನಾರು ಟಂಕಸಾಲೆಗಳು ಹೈದರನ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದುವು. ಶ್ರೀರಂಗಪಟ್ಟಣ, ಬೆಂಗಳೂರು, ಚಿತ್ರದುರ್ಗ, ನಗರ, ಗುತ್ತಿ, ಮೈಸೂರು, ಧಾರವಾಡ, ಸತ್ಯಮಂಗಲ ಮುಂತಾದ ಸ್ಥಳಗಳಲ್ಲಿ ಮುಖ್ಯ ಟಂಕಸಾಲೆಗಳಿದ್ದುವು. ಟಿಪ್ಪುವಿನ ಆಡಳಿತದ ಮೊದಲ ನಾಲ್ಕು ವರ್ಷಗಳಲ್ಲಿ ನಾಣ್ಯಗಳಿಗೆ ಹಿಜಿರ ಕಾಲವನ್ನೇ ಬಳಸಲಾಗುತ್ತಿತ್ತು. ಅನಂತರ ಆತ ಮೌಲದಿ ಕಾಲಮಾನವನ್ನು ಬಳಕೆಗೆ ತಂದ. ತಾನು ಅಚ್ಚುಹಾಕಿಸಿದ ನಾಣ್ಯಗಳಿಗೆ ಅಹ್ಮದೀ, ಸದೀಕೀ, ಫಾರೂಕೀ ಮುಂತಾದ ಹೊಸ ಹೆಸರುಗಳನ್ನು ಕೊಟ್ಟ. ಎರಡು ರೂಪಾಯಿ, ಒಂದು ರೂಪಾಯಿ, ಅರ್ಧ ರೂಪಾಯಿ, ಕಾಲು ರೂಪಾಯಿ, ಎಂಟನೆಯ ಒಂದು ರೂಪಾಯಿ ಇತ್ಯಾದಿಯಾಗಿ ಎಂಟನೆಯ ಒಂದು ಪೈಸಾದವರೆಗಿನ ಮೌಲ್ಯದ ನಾಣ್ಯಗಳನ್ನು ಮುದ್ರಿಸಲಾಯಿತು. ಹೊಸ ರೀತಿಯ ಮಾಸದ ಹೆಸರೂ ಹಿಂದೂ ಪಂಚಾಂಗ ರೀತಿಯೂ ಬಳಕೆಗೆ ಬಂದುವು. ಅಹಮದನ ಧರ್ಮ ಹೈದರನ ವಿಜಯಗಳಿಂದ ಪ್ರಕಾಶಿತವಾಗಿದೆ ಎಂಬ ಬರೆಹ ಅಹ್ಮದೀ ನಾಣ್ಯಗಳ ಮೇಲಿದೆ. ಅವನೇ ನ್ಯಾಯವಾದಿ, ಅವನೇ ಸುಲ್ತಾನ ಎಂಬ ಬರೆಹ ಇನ್ನು ಕೆಲವು ನಾಣ್ಯಗಳ ಮೇಲಿದೆ. ಕೆಲವು ನಾಣ್ಯಗಳ ಮೇಲೆ ಆನೆಯ ಚಿತ್ರವುಂಟು.

ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ ಮೈಸೂರು ದೊರೆಗಳ ನಾಣ್ಯಗಳೂ ವೈವಿಧ್ಯಪೂರ್ಣವಾದವು. ಕಂಠೀರವ ನರಸರಾಜ ಒಡೆಯರು ಮೊಟ್ಟ ಮೊದಲನೆಯದಾಗಿ ಟಂಕಸಾಲೆಯನ್ನು ಸ್ಥಾಪಿಸಿದರು. ಇವರು ಅಚ್ಚುಹಾಕಿಸಿದ ಕಂಠೀರಾಯಹಣದ ಒಂದು ಬದಿಯಲ್ಲಿ ನರಸಿಂಹನ ಚಿತ್ರವೂ ಹಿಂಬದಿಯಲ್ಲಿ ಸೂರ್ಯ ಚಂದ್ರ ಮತ್ತು ಶ್ರೀಕಂಠೀರವ ಎಂಬ ಶಾಸನವೂ ಇವೆ. ಚಿಕ್ಕದೇವರಾಯ ಹಣದಲ್ಲಿ ಮುಂಬದಿಯಲ್ಲಿ ಚಾಮುಂಡಿಯ ಚಿತ್ರವನ್ನೂ ಹಿಂಬದಿಯಲ್ಲಿ ಕನ್ನಡದಲ್ಲಿ ಚಿಕ್ಕದೇವರಾಯ ಎಂಬ ಬರೆಹವನ್ನೂ ಕಾಣಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ನಾಣ್ಯಗಳ ಮೇಲೆ ಶಿವಪಾರ್ವತಿಯರ ಚಿತ್ರ ಮತ್ತು ಶ್ರೀ ಕೃಷ್ಣರಾಜ ಎಂದು ನಾಗರೀಲಿಪಿಯ ಬರೆವಣಿಗೆ ಇವೆ. ಪೂರ್ಣಯ್ಯನವರು ಅಚ್ಚು ಹಾಕಿಸಿದ ನಾಣ್ಯ ಗಿಡ್ಡು ಕಂಠೀರಾಯ ಹಣವೆಂದು ಪ್ರಸಿದ್ಧವಾಗಿದೆ. 1843ರಲ್ಲಿ ಮೈಸೂರು ಒಡೆಯರ ನಾಣ್ಯಗಳು ಅಚ್ಚಾಗುವುದು ನಿಂತುಹೋಯಿತು. ಒಟ್ಟಿನಲ್ಲಿ ಈ ನಾಣ್ಯಗಳು ಕಲಾತ್ಮಕವಾಗಿವೆ.

ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಪೋರ್ಚುಗೀಸರು, ಫ್ರೆಂಚರು, ಡಚ್ಚರು ಮತ್ತು ಬ್ರಿಟಿಷರು ತಮ್ಮದೇ ಆದ ನಾಣ್ಯಗಳನ್ನು ಬಳಕೆಗೆ ತಂದರು. ಇವು ಮೊದಮೊದಲು ಮೊಗಲ್ ನಾಣ್ಯಗಳ ಅನುಕರಣೆಗಳೇ ಆಗಿದ್ದುವೆನ್ನಬಹುದು. ಭಾರತ ಸ್ವತಂತ್ರವಾದ ಅನಂತರ ಕಾಲದಲ್ಲಿ ಸರ್ಕಾರ ಅಚ್ಚುಹಾಕಿಸಿ ಚಲಾವಣೆಗೆ ತರುತ್ತಿರುವ ನಾಣ್ಯಗಳು ಅಖಿಲಭಾರತದ ವ್ಯಾಪ್ತಿಯುಳ್ಳವು. ಆದ್ದರಿಂದ ಈಗಿನ ನಾಣ್ಯಗಳಲ್ಲಿ ಕರ್ನಾಟಕದ ಪ್ರತ್ಯೇಕತೆ ಕಾಣಿಸುವುದಿಲ್ಲ. (ಎ.ವಿ.ಎನ್.)

**ಕರ್ನಾಟಕದ ಪ್ರಾಣಿಸಂಪತ್ತು :** ಮಾಮೇಲಿಯ ಎಂದರೆ ಸಸ್ತನಿ ವರ್ಗದ ಹಲವಾರು ಗಣಗಳ ಪ್ರತಿನಿಧಿಗಳು ಕರ್ನಾಟಕದಲ್ಲಿವೆ. ಇವುಗಳ ಹಾಗೂ ಇತರ ಪ್ರಾಣಿಗಳ ವಿವರಗಳನ್ನು ಮುಂದೆ ಬರೆದಿದೆ. ಮಾನವನನ್ನೊಳಗೊಂಡ (ಹೋಮೋ ಸೇಪಿಯನ್ಸ್) ಪ್ರೈಮೇಟ್ ಗಣ ಈ ವರ್ಗಕ್ಕೆ ಸಂಬಂಧಿಸಿದ್ದೇ. ಈ ಗಣದ ಆರು ಪ್ರೈಮೇಟುಗಳು ಕರ್ನಾಟಕದಲ್ಲಿವೆ. ಎಲ್ಲರಿಗೂ ಚಿರಪರಿಚಿತವಾಗಿರುವ ಕೋತಿ ಅಥವಾ ಕಪಿ ಇವುಗಳಲ್ಲೊಂದು. ಇದಕ್ಕೆ ಇಂಗ್ಲಿಷಿನಲ್ಲಿ ಬಾನೆಟ್ ಮಕಾಕ್ ಎಂದು ಹೆಸರು. ಇದು ವೈಜ್ಞಾನಿಕ ಹೆಸರು. ಇದರ ವೈಜ್ಞಾನಿಕ ಹೆಸರು ಮೆಕಾಕ ರೇಡಿಯೇಟ. ಕುಳಿತುಕೊಂಡಾಗ ಇದರ ಎತ್ತರ ಸುಮಾರು 60 ಸೆಂಮೀ. ಬಾಲದ ಉದ್ದ ತಲೆ ಮತ್ತು ದೇಹದ ಉದ್ದಕ್ಕಿಂತಲೂ ಹೆಚ್ಚು. ಗಂಡಿನ ತೂಕ ಸುಮಾರು 6 ರಿಂದ 9 ಕೆ.ಜಿ.; ಹೆಣ್ಣಿನ ತೂಕ 3–4 ಕೆ.ಜಿ.; ಇವು ಸಾಮಾನ್ಯವಾಗಿ ಮನುಷ್ಯ ವಾಸಿಸುವ ನೆಲೆಗೆ ಹತ್ತಿರವಾಗಿ ಕಂಡುಬಂದರೂ ಕಾಡಿನಲ್ಲೂ ವಾಸಿಸುತ್ತವೆ. ಎರಡನೆಯದು ಸಿಂಗಲೀಕ. ಇದರ ಬಾಲ ಸಿಂಹದ ಬಾಲದಂತಿರುವುದರಿಂದ ಇದಕ್ಕೆ ಲಯನ್ ಟೈಲ್ಡ್ ಮಕಾಕ್ ಎಂದು ಹೆಸರು. ಇದರ ವೈಜ್ಞಾನಿಕ ನಾಮ ಮಕಾಕ ಸೈಲ್‌ನಸ್. ಇದರ ತಲೆ ಮತ್ತು ದೇಹ ಉದ್ದ ಸುಮಾರು 50–60, ಬಾಲ 10–15 ಸೆಂಮೀ. ಹೆಣ್ಣು ಗಂಡಿಗಿಂತ ಚಿಕ್ಕದು. ಇದು ಪಶ್ಚಿಮಘಟ್ಟ ಮತ್ತು ಉತ್ತರ ಕನ್ನಡ ಜಿಲ್ಲೆಗಳ ದಟ್ಟ ಕಾಡಿನಲ್ಲಿ ವಾಸಿಸುತ್ತವೆ. ಗಲ್ಲ ಮತ್ತು ಕೆನ್ನೆಗಳ ಮೇಲೆ ಉದ್ದವಾದ ಕಂದುಬಣ್ಣದ ಕೂದಲುಂಟು. ಇಡೀ ದೇಹದ ಮೇಲಿನ ಕೂದಲು ಮಿರುಗುವ ಕಪ್ಪು ಬಣ್ಣದ್ದು. ನಾಚಿಕೆಪಡುವ ಈ ಜೀವಿಗಳ ವಾಸ ಗುಂಪು ಗುಂಪಾಗಿ, ಒಂದೊಂದು ಗುಂಪಿನಲ್ಲೂ ಸುಮಾರು 12 ರಿಂದ 20 ಪ್ರಾಣಿಗಳಿರುತ್ತವೆ. ಮರಗಳ ಮೇಲೆಯೇ ಇವುಗಳ ಚಲನವಲನ. ಕೆಲವು ಸಂದರ್ಭಗಳಲ್ಲಿ ಇವು ಮರಗಳಿಂದ ಇಳಿದು ಭೂಮಿಯ ಮೇಲೂ ಓಡಾಡುತ್ತವೆ. ಇವನ್ನು ಪಳಗಿಸುವುದು ಕಷ್ಟ. ಮೂಸು ಅಥವಾ ಮುಸುವ ಎಂಬ ಮತ್ತೊಂದು ಬಗೆಯ ವೃಕ್ಷವಾಸಿ ಕಾಡುಗಳಲ್ಲಿ ಹಳ್ಳಿಗಳ ಬಳಿ ಕಂಡುಬರುತ್ತದೆ. ಹನುಮಾನ್ ಕೋತಿ ಇದರ ಪರ್ಯಾಯ ನಾಮ. ಕಾಮನ್ ಲಂಗೂರ್ ಎಂಬ ಸಾಮಾನ್ಯ ಇಂಗ್ಲಿಷ್ ಹೆಸರೂ ಪ್ರೆಸ್‌ಬೈಟಿಸ್ ಎಂಟೆಲಸ್ ಎಂಬ ವೈಜ್ಞಾನಿಕ ಹೆಸರೂ ಇದಕ್ಕಿವೆ. ಇದು ನೀಳಗಾಲಿನ ನೀಳಬಾಲದ ಕಪ್ಪುಮುಖದ ಕೋತಿ. ಇದು ಭಾರತಾದ್ಯಂತ ಹರಡಿದೆ. ಸಾಮಾನ್ಯವಾಗಿ ಕೊಳ ಮತ್ತು ದೇವಾಲಯಗಳ ಬಳಿ ಇರುವುದು ಹೆಚ್ಚು. ಕೆಲವೆಡೆ ಹಿಂದೂಗಳು ಈ ಕೋತಿಯನ್ನು ಪೂಜಿಸುವುದೂ ಉಂಟು. ಇದರ ಆಹಾರ ಹೂ ಹಣ್ಣು ಮೊಗ್ಗು ಇತ್ಯಾದಿ. ಪ್ರೆಸ್‌ಬೈಟಿಸ್ ಜಾನಿ (ನೀಲಗಿರಿ ಲಂಗೂರ್) ಎಂಬ ಇನ್ನೊಂದು ಬಗೆಯ ಕೋತಿ ಕೊಡಗು ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಕಾಡುಗಳಲ್ಲಿ ಇದೆ. ಇದರ ತಲೆ ಹಳದಿ ಮತ್ತು ಕಂದುಬಣ್ಣದ ಮಿಶ್ರಣ. ಮೈಮೇಲಿನ ಕೂದಲು ಕಪ್ಪು ಮಿಶ್ರಿತ ಬೂದು. ಹಚ್ಚಹಸಿರು ತುಂಬಿದ ಬೆಟ್ಟಗುಡ್ಡ ಕಾಡುಗಳೇ ಇದರ ವಾಸಸ್ಥಾನ; ಕೆಲವು ವೇಳೆ ತೋಟ ಮತ್ತು ಸಾಗುವಳಿ ಪ್ರದೇಶಗಳಿಗೆ ನುಗ್ಗಿ ಹಾವಳಿ ಮಾಡುವುದೂ ಉಂಟು. ಇದರ ಸುಂದರವಾದ ತುಪ್ಪಳಕ್ಕಾಗಿ ಜನರು ಇದನ್ನು ನಾಯಿಗಳ ಸಹಾಯದಿಂದ ಬೇಟೆಯಾಡುವುದುಂಟು. ಲೋರಿಸ್ ಟಾರ್ಡಿಗ್ರೇಡಸ್ ಎಂಬ ಶಾಸ್ತ್ರೀಯ ಹೆಸರುಳ್ಳ ಕಾಡುಪಾಪ ಅಥವಾ ಅಡವಿ ಮನುಷ್ಯ ಕರ್ನಾಟಕದಲ್ಲೂ ಕಂಡುಬಂದಿದೆ. ಕೊಡಗುಜಿಲ್ಲೆ ಇದರ ತವರು ಪ್ರದೇಶ. ಇದೂ ಕೂಡ ವೃಕ್ಷವಾಸಿಯೇ. ಒಂದೊಂದೂ ಸುಮಾರು 280–340 ಗ್ರಾಂ ತೂಗುತ್ತದೆ. ಗಂಡಿಗಿಂತ ಹೆಣ್ಣು ಸ್ವಲ್ಪ ಚಿಕ್ಕದು. ಬಾಹುಗಳು ನೀಳ ಮತ್ತು ತೆಳು, ಬಾಲ ಇಲ್ಲ. ಮೂತಿ ಚೂಪು; ಕಿವಿಗಳು ದೊಡ್ಡವು. ರಾತ್ರಿಯ ವೇಳೆ ಚಟುವಟಿಕೆಯಿಂದಿದ್ದು ಹಗಲಿನಲ್ಲಿ ಎಲೆಯ ಮರೆಯಲ್ಲಿ ವಿಶ್ರಮಿಸಿಕೊಳ್ಳುತ್ತದೆ. ಹೆಣ್ಣು

ಹಂಪಲೇ ಇದರ ಆಹಾರವಾದರೂ ಭೂಮಿಗಿಳಿದಾಗ ಕೀಟ, ಹಲ್ಲಿ, ಕಪ್ಪೆ ಮತ್ತು ಸಣ್ಣ ಸಣ್ಣ ಪಕ್ಷಿಗಳನ್ನು ತಿನ್ನುತ್ತದೆ.

ಒಂದು ಬಗೆಯ ವಿಶಿಷ್ಟ ಮಾಂಸಾಹಾರಿಗಳ ಗಣವಾದ ಕಾರ್ನಿವೊರದ ಪ್ರತಿನಿಧಿಗಳು ಕರ್ನಾಟಕದಲ್ಲಿ ಉಂಟು. ಈ ಗಣದಲ್ಲಿ ಹಲವು ಕುಟುಂಬಗಳಿವೆ. ಅವುಗಳಲ್ಲಿ ಬೆಕ್ಕು, ಹುಲಿ ಮೊದಲಾದುವನ್ನು ಒಳಗೊಂಡ ಫೆಲಿಡೀ ಕುಟುಂಬ ಒಂದು. ದುಂಡು ತಲೆ, ಒಳಕ್ಕೆ ಎಳೆದುಕೊಳ್ಳಬಹುದಾದ ಮೊನೆಯುಗುರು ಅಥವಾ ನಖಗಳು ಈ ಕುಟುಂಬದ ಪ್ರಾಣಿಗಳ ವಿಶೇಷ ಲಕ್ಷಣ. ಬಹು ಹಿಂದೆ ಸಿಂಹಗಳು ದಟ್ಟವಾದ ದಂಡಕಾರಣ್ಯದಲ್ಲಿ ವಾಸಿಸುತ್ತಿದ್ದುವೆಂದೂ ಹೇಳಲಾಗಿದ್ದರೂ ಈಗ ಇವು ಕನ್ನಡನಾಡಿನಲ್ಲಿ ಇಲ್ಲವೇ ಇಲ್ಲ. ಹುಲಿ (ಪ್ಯಾಂತೆರ ಟೈಗ್ರಿಸ್) ಕರ್ನಾಟಕದ ದಟ್ಟವಾದ ಕಾಡುಗಳಲ್ಲಿ ಕಂಡುಬರುತ್ತದೆ. ಇದು ವಾಸಿಸುವ ಕಾಡುಗಳಲ್ಲಿ ಸಾಕಷ್ಟು ಆಹಾರಜೀವಿಗಳು, ಮರಗಳು, ನೆರಳು, ಬಾಯಾರಿಕೆಯನ್ನು ನೀಗುವ ಜಲಾಶಯ ಆವಶ್ಯಕ. ಹುಲಿಯ ಮೈಮೇಲಿನ ರೋಮದ ಬಣ್ಣ ಮೋಹಕ

ಕರಡಿ

ಹಾಗೂ ಉಜ್ವಲ. ಇದೇ ಕುಟುಂಬಕ್ಕೆ ಸೇರಿದ ಚಿರತೆಗಳು (ಪ್ಯಾಂತೆರ ಪಾರ್ಡಸ್) ಗುಡ್ಡಪ್ರದೇಶಗಳಲ್ಲಿ ಹೆಚ್ಚಾಗಿ ದೊರಕುತ್ತಿದ್ದುವಂತೆ. ಇವು ಸಾಮಾನ್ಯವಾಗಿ ಮಾನವನ ನೆಲೆಯ ಸನಿಹದಲ್ಲಿಯೇ ವಾಸಿಸುತ್ತಿದ್ದು ದನ ಕುರಿ ಮೇಕೆ ಮೊದಲಾದ ಸಾಕುಪ್ರಾಣಿಗಳಿಗೆ ಉಪದ್ರವವನ್ನುಂಟು ಮಾಡುತ್ತಿದ್ದುವು. ಮಾನವನ ಬೇಟೆಯಿಂದ ಇವುಗಳ ಸಂಖ್ಯೆ ಸಾಕಷ್ಟು ಕ್ಷೀಣವಾಗಿ ಈಗ ಇವು ವಿರಳವಾಗಿ ಹೋಗಿವೆ. ಇವನ್ನು ಮೃಗಾಲಯಗಳಲ್ಲಿ ಮಾತ್ರ ನೋಡಬಹುದು. ಚಿರತೆ ಬೆಕ್ಕು ಅಥವಾ ಕಾಡುಬೆಕ್ಕು (ಫೆಲಿಸ್ ಬೆಂಗಾಲೆನ್ಸಿಸ್) ಕರ್ನಾಟಕದ ಕಾಡುಗಳಲ್ಲಿ ಕಂಡುಬರುತ್ತದೆ. ಇದರ ಗಾತ್ರ ಸಾಕುಬೆಕ್ಕಿನಷ್ಟು. ಆದರೆ ಕಾಲುಗಳು ಮಾತ್ರ ನೀಳ. ದೇಹದ ರಚನೆಯಂತೂ ಪುಟ್ಟ ಚಿರತೆಯಂತೆಯೇ ಇರುತ್ತದೆ. ದೇಹ ಹಳದಿಬಣ್ಣ. ಫೆಲಿಸ್ ಕೇಯಸ್ ಎಂಬ ಶಾಸ್ತ್ರೀಯ ಹೆಸರನ್ನು ಮಂಟ ಬೆಕ್ಕು ಅಥವಾ ಕಾಡುಬೆಕ್ಕಿಗೆ ಇಡಲಾಗಿದೆ. ಇದೂ ಕೂಡ ಸಾಕು ಬೆಕ್ಕಿಗಿಂತ ದೊಡ್ಡದು. ಇದರ ಬಾಲ ಮಾತ್ರ ಚಿಕ್ಕದು. ಕಾಲುಗಳು ನೀಳ, ಕಣ್ಣುಗಳು ಮಂದಹಸಿರುಬಣ್ಣ. ಕಾಡುಗಳಲ್ಲಿ ವಾಸಿಸಿದರೂ ಕಾಡುಗಳ ಸಮೀಪದಲ್ಲಿರುವ ಹಳ್ಳಿಗಳಿಗೂ ರಾತ್ರಿವೇಳೆ ಬರುವುದುಂಟು. ಬೇಟೆಯ ಚಿರತೆ (ಅಸಿನೋನಿಕ್ಸ್ ಜೂಬೇಟಸ್) ಕನ್ನಡನಾಡಿನ ಉತ್ತರದ ಬಯಲಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಒಂದು ಕಾಲಕ್ಕೆ ಇತ್ತು. ಇದರ ಕಾಲುಗಳು ತೆಳು. ಇದು ನಖಗಳನ್ನು ಸಂಪೂರ್ಣವಾಗಿ ಒಳಕ್ಕೆ ಸೆಳೆದುಕೊಳ್ಳಲಾರದು. ವೇಗವಾಗಿ ಓಡುವ ಜಿಂಕೆಗಳನ್ನು ಹಿಂಬಾಲಿಸಿ ಬೇಟೆಯಾಡುವುದು ಇದಕ್ಕೆ ಪ್ರಿಯ. ಮಾನವ ಇವುಗಳ ಉಪದ್ರವವನ್ನು ತಾಳಲಾರದೆ ಇವನ್ನು ಬೇಟೆಯಾಡಿ ಬಯಲಿನಲ್ಲಿ ಸಿಗದಂತೆ ಮಾಡಿದ್ದಾನೆ. ಈಗಲೂ ಆಗಾಗ ಗ್ರಾಮಗಳಿಗೆ ನುಗ್ಗಿ ನಾಯಿ, ಜಾನುವಾರಗಳನ್ನು ಹಿಡಿಯುತ್ತವೆ. ಇವು ಕನ್ನಡ ನಾಡಿನ ಬಯಲಿನಲ್ಲಿ ಸ್ವೇಚ್ಛೆಯಾಗಿ ಸಿಗುತ್ತವೆಯೋ ಇಲ್ಲವೋ ತಿಳಿಯದು. ಇವನ್ನು ಮೃಗಾಲಯಗಳಲ್ಲಂತೂ ನೋಡೇ ನೋಡಬಹುದು.

ವೈವೆರಿಡೀ ಕುಟುಂಬಕ್ಕೆ ಸೇರಿದ ಪುನುಗು ಬೆಕ್ಕಿನ (ವೈವಿರಿಕ್ಯುಲ ಇಂಡಿಕ) ವಾಸ ಕಾಡು ಮತ್ತು ಗುಡ್ಡಪ್ರದೇಶಗಳಲ್ಲಿ ಆಗಿದ್ದರೂ ಇದು ಎತ್ತರವಾಗಿ ಬೆಳೆಯುವ ಹುಲ್ಲು ಮೈದಾನದಲ್ಲಿ ಹೇರಳವಾಗಿ ದೊರೆಯುತ್ತದೆ. ಉದ್ದ ಸುಮಾರು 90 ಸೆಂಮೀ. ತೂಕ ಸುಮಾರು 3–4 ಕೆ.ಜಿ. ದೇಹ ಬೂದುಬಣ್ಣ. ಬಾಲ ಸ್ವಲ್ಪಮಟ್ಟಿಗೆ ಪಟಪಟ್ಟೆಬಣ್ಣ. ಕೆಲವು ಸಂದರ್ಭಗಳಲ್ಲಿ ಇದನ್ನು ಹಳ್ಳಿಗಳ ಮನೆಗಳಲ್ಲೂ ಚರಂಡಿಗಳಲ್ಲೂ ಕಾಣಲಾಗಿದೆ. ಇದು ಮರವನ್ನು ಹತ್ತಬಲ್ಲದು. ಇಲಿ, ಮೀನು, ಅಳಿಲು ಸಣ್ಣಸಣ್ಣ ಪಕ್ಷಿಗಳು ಇದರ ಆಹಾರ. ವೃಷಣಕೋಶ ಪೂರ್ವಪ್ರದೇಶದಲ್ಲಿರುವ ಸುಗಂಧ ಗ್ರಂಥಿಗಳಿಂದ ಪುನುಗನ್ನು ಉತ್ಪಾದಿಸಿ ಇದು ಮರಗಳಿಗೆ ಒರಸುತ್ತದೆ. ಕೇರ ಬೆಕ್ಕು ಅಥವಾ ಕಬ್ಬೆಕ್ಕು (ಪ್ಯಾರಡಾಕ್ಸೂರಸ್ ಹರ್ಮಾಫ್ರೊಡೈಟಸ್) ಇದೇ ಕುಟುಂಬಕ್ಕೆ ಸೇರಿದ್ದು. ಇದು ಕಾಡುಗಳಲ್ಲಿ ಮರಗಳ ಮೇಲೆ ಕೆಲವು ಸಂದರ್ಭಗಳಲ್ಲಿ ಹಳ್ಳಿಗಳ ಹೊರ ವಲಯದಲ್ಲಿರುವ ಮಾವಿನಮರ ಮತ್ತು ಈಚಲು ಮರಗಳ ಮೇಲೂ ವಾಸಿಸುತ್ತದೆ. ಅಲ್ಲದೆ ಮಾನವ ವಾಸಿಸುವ ಮನೆ ಅಥವಾ ಹಳೆಮನೆ ಪಾಳುಬಿದ್ದ ದೇವಸ್ಥಾನ ಮೋರಿ ಚರಂಡಿಗಳಲ್ಲೂ ಕಂಡುಬಂದಿದೆ.

ಹುಲಿ

ಎರಡು ಜಾತಿಯ ಕೀರಗಳು (ಮುಂಗುಸಿ) ಕನ್ನಡ ನಾಡಿನಲ್ಲಿ ಇವೆ. ಇವು ಹರ್ಪೆಸ್ಟಿಡೀ ಕುಟುಂಬಕ್ಕೆ ಸೇರಿದವು. ಸಾಮಾನ್ಯವಾಗಿ ತಿಳಿದಿರುವ ಕೀರ (ಹರ್ಪೆಸ್ಟಿಸ್ ಎಡ್ವರ್ಸಿ) 90 ಸೆಂಮೀ ಉದ್ದವಿದೆ. ದೇಹದಷ್ಟೇ ಉದ್ದದ ಬಾಲವೂ ಉಂಟು. ಇದರ ತೂಕ 1.4 ಕೆಜಿ. ಕಾಡುಗಳು ಇದರ ತವರು ಪ್ರದೇಶವಾದರೂ ಕುರುಚಲು ಕಾಡುಗಳಲ್ಲಿ ಹಾಗೂ ಸಾಗುವಳಿ ಪ್ರದೇಶಗಳಲ್ಲಿ ಇದು ಸಾಮಾನ್ಯವಾಗಿ ಕಂಡುಬರುತ್ತದೆ. ಇದು ಬೆಕ್ಕುಗಳಂತೆ ಇಲಿಗಳನ್ನು ಬೇಟೆಯಾಡಿ ತಿನ್ನುತ್ತದೆ. ಅಲ್ಲದೆ ನಾಗರಹಾವು ಮೊದಲಾದ ವಿಷದ ಹಾವುಗಳೊಡನೆ ಹೋರಾಡುವ ಪ್ರವೃತ್ತಿಯೂ ಇದಕ್ಕಿದೆ. ಮತ್ತೊಂದು ಬಗೆಯ ತೀರ ಕೆಂಪುಕೀರ (ಹ.ವಿಟಿಕಾಲಿಸ್) ಇದರ ಕುತ್ತಿಗೆಯ ಬಳಿ ಮತ್ತು ಕುತ್ತಿಗೆಯ ಹಿಂಭಾಗದಲ್ಲಿ ನೀಳವಾದ ಬಾಲವಿದೆ; ಅದು ದೇಹದ ಉದ್ದಕ್ಕಿಂತಲೂ ಕಡಿಮೆ. ಇಲಿ, ಹಾವು, ಚೇಳು, ಕೀಟಗಳೇ ಇದರ ಆಹಾರ. ಪಶ್ಚಿಮಘಟ್ಟದ ಕಾಡು ಪ್ರದೇಶಗಳಲ್ಲಿ ಈ ಕೀರ ಕಂಡುಬರುತ್ತದೆ.

ಕತ್ತೆಕಿರುಬ ಅಥವಾ ನಾಯಿಹುಲಿ ಹೈನಿಡಿ ಕುಟುಂಬದ ಪ್ರತಿನಿಧಿಯಾಗಿ ಬೆಟ್ಟಗುಡ್ಡಗಳ ಗುಹೆಗಳಲ್ಲಿ ಮತ್ತು ಎತ್ತರವಾಗಿ ಬೆಳೆಯುವ ಬಯಲು ಪ್ರದೇಶದಲ್ಲಿ ಸಾಮಾನ್ಯವಾಗಿ ದೊರಕುತ್ತದೆ. ಕಾಡುಪ್ರದೇಶಗಳಲ್ಲಿ ವಿರಳ. ಇದು ಹಗಲಿನಲ್ಲಿ ವಿಶ್ರಾಂತಿ ಪಡೆದು ರಾತ್ರಿಯ ವೇಳೆ ಬೇಟೆಗೆ ಹೊರಡುತ್ತದೆ.

ಹುಲ್ಲೆ

ನಾಯಿಕುಟುಂಬ ಕೇನಿಡೀಗೆ ಸೇರಿದ ಪ್ರಾಣಿಗಳು ತೋಳ (ಕೇನಿಸ್ ಲೂಪುಸ್) ನರಿ ಅಥವಾ ಕುನ್ನಾನರಿ (ಕೇನಿಸ್ ಆರಿಯಸ್), ಗುಳ್ಳೇನರಿ ಅಥವಾ ಕೆಂಪುನರಿ (ವುಲ್ಪೆಸ್ ಬೆಂಗಾಲೆನ್ಸಿಸ್) ಮತ್ತು ಸೀಳುನಾಯಿ ಅಥವಾ ಕಾಡುನಾಯಿ (ಕ್ಯೂಆನ್ ಆಲ್ಪೈನಸ್). ತೋಳ ಕಾಡುಗಳಲ್ಲಿ ವಾಸಿಸಿ ಕಾಡಿನ ದನಕರು ಜಿಂಕೆಗಳನ್ನು ತಿಂದು ಜೀವಿಸುತ್ತದೆ. ನರಿ, ಕೆಂಪುನರಿಗಳು ಮಾಂಸಹಾರಿಗಳಾಗಿರುವುದೇ ಅಲ್ಲದೆ ಕಬ್ಬು, ಕಾಫಿ ಮತ್ತು ನೆಲಗಡಲೆ ಫಸಲುಗಳಿಗೆ ಉಪದ್ರವವನ್ನುಂಟುಮಾಡುತ್ತವೆ. ಸೀಳು ನಾಯಿಗಳು ಜಿಂಕೆ ಮೊಲ ಮೊದಲಾದವನ್ನು ಹಿಡಿದು ತಿಂದು ಜೀವಿಸುತ್ತವೆ.

ಕರ್ನಾಟಕದ ಕರಡಿಗಳು (ಮೆಲರ್ಸಸ್ ಅರ್ಸಿನಸ್) ಕೂಡ ಕಾರ್ನಿವೋರ ಗಣಕ್ಕೆ ಸೇರಿದವು. ಇವು ಮಂಡ್ಯ, ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಬೆಟ್ಟಗುಡ್ಡಗಳ ಗುಹೆಗಳಲ್ಲಿ ವಾಸಿಸುತ್ತವೆ. ಇವು ಕೀಟಗಳನ್ನೇ ಅಲ್ಲದೆ ಹಣ್ಣು ಮತ್ತು ಜೇನುಗೂಡಿನಿಂದ ಪಡೆದ ಜೇನುತುಪ್ಪವನ್ನೂ ತಿನ್ನುತ್ತವೆ. ಇವುಗಳ ಮೈ ಮೇಲೆ ನೀಳವಾದ ಕೂದಲಿವೆ.

ಪಕ್ಷಿಗಳು

ಮುಸ್ಟೆಲ್ಲಿಡೆ ನೀರುನಾಯಿ (ಲುಟ್ರ ಲುಟ್ರ) ಮುರ್ರನಾಯಿ (ಮಾರ್ಟೀಸ್ ಗ್ವಾಲ್ಕಿನ್ಸಿ) ಮೆಲಿವೋರ ಕ್ಯಾಪೆನ್ಸಿಸ್ ಮೊದಲಾದುವುಗಳಿವೆ. ಇವುಗಳ ಮುಖ್ಯ ಆಹಾರ ಮೀನು. ನೀರುನಾಯಿ ಕೊಡಗು ಜಿಲ್ಲೆಯ ಎತ್ತರವಾದ ಶೀತಪ್ರದೇಶದ ನೀರಿನಲ್ಲಿ ವಾಸಿಸುತ್ತದೆ. ದೇಹ ಸ್ವಲ್ಪಮಟ್ಟಿಗೆ ಕಪ್ಪು. ಇದನ್ನು ಹಿಡಿದು ಸುಲಭವಾಗಿ ಸಾಕಬಹುದು. ಇದೇ ಜಾತಿಗೆ ಸೇರಿದ ಮತ್ತೊಂದು ಬಗೆಯ ಕೆಂಚು ನೀರುನಾಯಿ ಲುಟ್ರ ಪರ್ಸಿಸಿಲ್ಲಾಟದ ದೇಹದ ಬಣ್ಣ ಕೆಂಪಾಗಿರುತ್ತದೆ. ಇದು ಕೂಡ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ದೊರಕುತ್ತದೆ. ಮುರ್ರನಾಯಿಯ ಮುಖ ಸ್ವಲ್ಪ ಕಪ್ಪು, ಕುತ್ತಿಗೆಯ ತಳಭಾಗ ಬಿಳುಪು ಮತ್ತು ಹಳದಿ. ದೇಹದ ಹಿಂಭಾಗ ಸ್ವಲ್ಪ ಕಪ್ಪು. ಕೊಡಗಿನ ಬೆಟ್ಟಗುಡ್ಡಗಳಲ್ಲಿ ವಾಸ. ಅಲ್ಲದೆ ಇದು ಮರದಮೇಲೂ ಹತ್ತಿ ಓಡಾಡಬಲ್ಲದು. ನಖಗಳಿಲ್ಲದ ನೀರುನಾಯಿ (ಅಯೋನಿಕ್ಸ್ ಸಿನರಿಯ) ಕೊಡಗಿನ ಬೆಟ್ಟಗಳಲ್ಲಿ ಹರಿಯುವ ಸಣ್ಣಸಣ್ಣ ನದಿಗಳಲ್ಲಿ ಕಂಡುಬರುತ್ತದೆ. ತಾರಕರಡಿ (ಮೆಲಿವೋರ ಕ್ಯಾಪೆನ್ಸಿಸ್) ಒಣಮೈದಾನ ಪ್ರದೇಶಗಳಲ್ಲಿ ದೊರಕುತ್ತದೆ. ಕರಡಿಯಂತೆ ಇದರ ಕಾಲು ಮೋಟು ದಪ್ಪ ; ಬಾಲ ಚಿಕ್ಕದು. ಪಾದಗಳು ಅಗಲ. ಪಕ್ಷಿಗಳು, ಜೇನು, ಹಣ್ಣು, ಸರೀಸೃಪಗಳು ಇದರ ಆಹಾರ. ಇದು ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುವ ಕಾಡುಪ್ರದೇಶದಲ್ಲಿ ಕಂಡುಬರುವುದಿಲ್ಲ.



ಹೆಬ್ಬಾವು

ಇನ್ಸೆಕ್ಟಿವೊರ ಗಣದ ಪ್ರತಿನಿಧಿಗಳೂ ಕರ್ನಾಟಕದಲ್ಲಿವೆ. ಇವು ಕೀಟಭಕ್ಷಿಗಳು. ಇವುಗಳಲ್ಲಿ ಮರದ ಮುಳ್ಳಿಲಿ (ಅನತಾನ ಎಲೋಟಿ) ಕಂದು ಮೂಗಿಲಿ (ಪ್ಯಾರ ಎಕೈನಸ್ ಮೈಕ್ರೋಪಸ್) ಮತ್ತು ಸುಂಡಿಲಿಗಳು (ಸಂಕಸ್ ಮ್ಯುರಿನಸ್) ಪ್ರಸಿದ್ಧವಾದವು. ಮರದ ಮುಳ್ಳಿಲಿ ಒಣಪ್ರದೇಶದಲ್ಲಿ ವಾಸಿಸುತ್ತದೆ. ದೇಹ 18-20 ಸೆಂಮೀ. ಉದ್ದ. ಬಾಲ 20-23 ಸೆಂಮೀ. ಕಂದು ಮೂಗಿಲಿಯ ದೇಹದ ಉದ್ದ 15-18 ಸೆಂಮೀ. ಬಾಲ 2-5 ಸೆಂಮೀ. ಗೂಟದಂಥ ಮೂಗು ಮೋಟುಬಾಲ ಇದರ ವೈಶಿಷ್ಟ್ಯ. ಇದರ ವಾಸ ಮೈದಾನ ಪ್ರದೇಶ. ಅಪೂರ್ವಕ್ಕೆ ಮನೆಗಳನ್ನೂ ಪ್ರವೇಶಿಸುವುದುಂಟು. ಸುಂಡಿಲಿ ಬಯಲಿನಲ್ಲಿಯೇ ಅಲ್ಲದೆ ಮನೆಗಳಲ್ಲಿಯೂ ವಾಸಿಸುತ್ತದೆ. ದೇಹ 15 ಸೆಂಮೀ. ಬಾಲ 8 ಸೆಂಮೀ ಉದ್ದ. ಮೂತಿ ನೀಳ ಮತ್ತು ಚೂಪು. ಇದು ಕೀರಲು ಧ್ವನಿ ಮಾಡುತ್ತದೆ.

ಬಾವಲಿಗಳು ಕೈರಾಪ್ಟರ ಗಣಕ್ಕೆ ಸೇರಿದವು. ಬಾವಲಿಯ ಮುಂಗಾಲಿನ ಬೆರಳುಗಳು ಲಂಬವಾಗಿ ಬೆಳೆದು ಜಾಲಪಟಲದಿಂದ ಕೂಡಿರುವುದೇ ಅಲ್ಲದೆ ಈ ಪಟಲ ವಿಶಾಲವಾಗಿದೆ.

ಆನೆಗಳು

ಇದು ದೇಹದ ಪಕ್ಕ ಮತ್ತು ಹಿಂಗಾಲುಗಳನ್ನು ಬಂಧಿಸಿ ಹಾರಲು ನೆರವಾಗುವುದು ಒಂದು ವೈಶಿಷ್ಟ್ಯ. ಸಾಮಾನ್ಯವಾಗಿ ಮರಗಳ ಕೊಂಬೆ, ಕೆಲವು ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಮನೆ ದೇವಾಲಯಗಳ ತೊಲೆಗಳು ಇಲ್ಲೆಲ್ಲ ಜೋಲಾಡುತ್ತಿರುತ್ತವೆ. ಇವು ಸಾಮಾನ್ಯವಾಗಿ ಹಗಲಿನಲ್ಲಿ ಒಂದೆಡೆಯಿದ್ದು ಸಂಜೆಯಾಗುತ್ತಲೇ ತಮ್ಮ ಬೀಡಿನಿಂದ ಹೊರಬಂದು ಚಟುವಟಿಕೆಯಿಂದ ಹಾರಿ ಆಹಾರವನ್ನು ಸಂಪಾದಿಸುತ್ತವೆ. ಇವುಗಳಿಗಿರುವ ಜ್ಞಾನೇಂದ್ರಿಯ ಸೂಕ್ಷ್ಮ ಹಾಗೂ ತೀಕ್ಷ್ಣತಮವಾದದ್ದು. ಕನ್ನಡ ನಾಡಿನಲ್ಲಿ ತೊಗಲ ಬಾವಲಿ (ಟಿರೋಪಸ್ ಎಡ್ವರ್ಸಿ) ಅಗಲಗಿವಿಯ ಬಾವಲಿ (ರೈನೊಲೋಫಸ್) ಹಣ್ಣು ಬಾವಲಿ ಮೊದಲಾದುವು ಇವೆ. ಇವು ಹಣ್ಣುಗಳನ್ನು ತಿನ್ನುವುದರಿಂದ ಬಾಳೆ, ಸೀಬೆ ಮೊದಲಾದ ತೋಟಗಳಿಗೆ ಇವುಗಳ ಉಪದ್ರವ ಹೆಚ್ಚು.

ಅಳಿಲುಗಳ ಗುಂಪಿನ ರೊಡೆಂಶಿಯದ ಪ್ರತಿನಿಧಿಗಳೆಲ್ಲವೂ ಮಾನವನ ದವಸ ಧಾನ್ಯ ಹಣ್ಣು ಹಂಪಲು ಮೊದಲಾದುವನ್ನು ತಿಂದು ನಾಶಪಡಿಸತಕ್ಕವು. ಸಾಮಾನ್ಯವಾಗಿ ಕಂಡುಬರುವ ಅಳಿಲಿಗೆ ಬೆನ್ನಿನ ಮೇಲೆ ಮೂರು ನೀಳವಾದ ಬಿಳಿಯ ಪಟ್ಟೆಗಳಿವೆ. ಈ ಅಳಿಲು (ಫ್ಯುನಾಂಬ್ಯುಲಸ್ ಪಾಮೇರಮ್) ಸಾಗುವಳಿ ಪ್ರದೇಶಗಳಲ್ಲಿಯೇ ಅಲ್ಲದೆ ಇತರ ಬಯಲಿನಲ್ಲೂ ಕಾಡಿನ ಸರಹದ್ದಿನಲ್ಲೂ ಮಾನವನ ವಸತಿಯ ಸನಿಹದಲ್ಲೂ ಕಂಡುಬರುತ್ತದೆ. ಇದರ ಸೋದರ ಅಳಿಲುಗಳು ಉದಾಹರಣೆಗೆ ಪಟ್ಟೆ ಅಳಿಲು (ಫ್ಯು. ರಫ್ಟೋನಿ) ಕೊಡಗು ಜಿಲ್ಲೆ ಮತ್ತು ಹಾಸನಜಿಲ್ಲೆಗಳಲ್ಲಿ ಕಂಡುಬಂದರೆ ಕಾಡು ಅಳಿಲು (ಫ್ಯು. ನ್ಯೂಮೇರಿಯಸ್) ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯ ಕಾಡುಗಳಲ್ಲಿ ಉಂಟು. ಬೂದು ಅಳಿಲು (ಸ್ಕೈಯೂರಸ್ ಇಂಡಿಕಸ್) ಎಂಬ ದೊಡ್ಡ ಅಳಿಲು ಪಶ್ಚಿಮ ಘಟ್ಟಗಳ ದಟ್ಟಡವಿಗಳಲ್ಲಿ ವಾಸಿಸುತ್ತದೆ. ಬಯಲಿನ ಇಲಿ ಅಥವಾ ಕೋಕ (ನಿಕೋಸಿಯ ಬೆಂಗಾಲೆನ್ಸಿಸ್) ಎಂಬ ಇಲಿ ಬಯಲಿನಲ್ಲಿ ಬಿಲ ತೋಡಿ ಅದರಲ್ಲಿ ವಾಸಿಸುತ್ತದೆ. ಸಾಗುವಳಿ ಪ್ರದೇಶದಲ್ಲಿ ಇದರ ಹಾವಳಿ ಹೆಚ್ಚು. ಹೆಗ್ಗಣ (ಸೆಸೋಸಿಯ ಬ್ಯಾಂಡಿಕೋಟ) ಇದು ಬಿಲಗಳಲ್ಲಿ ವಾಸಿಸಿ ಕಣಜಗಳಿಗೆ ದಾಳಿ ಇಡುತ್ತದೆ. ಮನೆಯಿಲಿ (ಮಸ್ ಡೆಕುಮಾನಸ್), ಮನೆ ಬುರ್ಗಿಲಿ (ಮಸ್ ಮಸ್ಕುಲಸ್) ಮತ್ತು ಕರಿಯಿಲಿ (ಮಸ್ ರ್‍ಯಾಟ್ಟಸ್) ಮಾನವನ ವಸತಿಗೃಹಗಳಲ್ಲಿಯೇ ಕಂಡುಬರುತ್ತದೆ. ಧಾನ್ಯದವಸಗಳಿಗೆ ಇವುಗಳ ಹಾವಳಿ ಹೆಚ್ಚು. ಬೂದಿಬಣ್ಣದ ಕೌಲಿಲಿ (ಮಸ್ ಪ್ಲಾಟಿತ್ರಿಕ್ಸ್), ಕೆರೆಯಿಲಿ (ಮಸ್ ಮೆಟ್ಟಾಡ) ಸಹ ಉಂಟು. ಇವುಗಳಿಂದಲೂ ಸಾಗುವಳಿಗೆ ತೊಂದರೆ ಇದೆ. ಮರದ ಇಲಿಗೆ (ಮಸ್ ಓಲೆರೇಸಿಯಸ್) ಉದ್ದವಾದ ಬಾಲವಿದೆ. ಮುಳ್ಳುಹಂದಿ (ಹಿಸ್ಟ್ರಿಕ್ಸ್ ಲ್ಯೂಕೂರ) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇದೆ. ಇದು ಕಾಫಿ ಮತ್ತು ಕಬ್ಬಿನ ತೋಟಗಳಿಗೆ ನುಗ್ಗಿ ಹಾವಳಿ ಮಾಡುವುದುಂಟು. ಕರ್ನಾಟಕದ ಕಾಡುಗಳಲ್ಲಿ ಎರಡು ಬಗೆಯ ಮೊಲಗಳು ಮುಖ್ಯವಾದವು. ಒಂದು, ಮೊಲ (ಲೀಪಸ್ ರುಫಿಕಾಡೇಟಸ್), ಇನ್ನೊಂದು ಕರಿ ಕಂಠದ ಮೊಲ (ಲೀ. ನೈಗ್ರಿ ಕಾಲಿಸ್).

ಕರ್ನಾಟಕದ ಪಶ್ಚಿಮಘಟ್ಟದ ಕಾಡುಗಳಲ್ಲಿ ಸ್ವೇಚ್ಛೆಯಾಗಿ ಜೀವಿಸುವ ಅತ್ಯಂತ ದೊಡ್ಡ ಪ್ರಾಣಿಯೆಂದರೆ ಆನೆ (ಎಲಿಫಾಸ್ ಮ್ಯಾಕ್ಸಿಮಸ್). ಇದು ಅಂಗ್ಯುಲೇಟ ಗಣದಲ್ಲಿರುವ ಪ್ರೋಬಾಸಿಡೀ ಎಂಬ ಉಪಗಣಕ್ಕೆ ಸೇರಿದ್ದು. ಇದರ ಬೀಡು ಸಾಮಾನ್ಯವಾಗಿ ಶಿವಮೊಗ್ಗ ಜಿಲ್ಲೆಯಿಂದ ಹಿಡಿದು ಮೈಸೂರು ಜಿಲ್ಲೆಯವರೆಗೂ ಇದೆ.

ಮೆಲುಕುಹಾಕುವ ಎರಡು ಗೊರಸುಗಳುಳ್ಳ ಹಸು, ಕುರಿ, ಮೇಕೆ, ಜಿಂಕೆ ಮೊದಲಾದ ಪ್ರಾಣಿಗಳು ಅಂಗ್ಯುಲೇಟ ಗಣ ಆರ್ಟಿಯೋಡ್ಯಾಕ್ಟೈಲ ಉಪಗಣಕ್ಕೆ ಸೇರಿವೆ. ದನಕರುಗಳನ್ನು

(ಬಾಸ್ ಇಂಡಿಕಸ್) ಪುರಾತನ ಕಾಲದಿಂದಲೂ ಪಳಗಿಸಿ ಬೇಸಾಯಕ್ಕೆ ಉಪಯೋಗಿಸುವುದೇ ಅಲ್ಲದೆ ಹಾಲುಮೊಸರುಗಳಿಗಾಗಿಯೂ ಸಾಕುತ್ತಾರೆ. ಕುರಿ (ಓವಿಸ್) ಮತ್ತು ಆಡುಗಳನ್ನು ಮುಖ್ಯವಾಗಿ ಮಾಂಸಕ್ಕಾಗಿ ಸಾಕುತ್ತಾರೆ. ಬೈಬಾಸ್ ಗೌರುಸ್ ಎಂಬ ವೈಜ್ಞಾನಿಕ ಹೆಸರು ಇರುವ ಕಾಡೆಮ್ಮೆ ಪಶ್ಚಿಮಘಟ್ಟದ ಕಾಡುಗಳಲ್ಲಿ ಮಂದೆಗೂಡಿ ವಾಸಿಸುತ್ತವೆ. ಕಾಡಿನಲ್ಲಿ ಸ್ವೇಚ್ಛೆಯಾಗಿ ಜೀವಿಸುವ ಕಾಡೆಮ್ಮೆಗಳು ಸ್ವಭಾವತಃ ದರ್ಪ ಗಾಂಭೀರ್ಯಗಳಿಂದ ಕೂಡಿದವು. ಸುಮಾರು 65–70 ಸೆಂಮೀ ಎತ್ತರ 78–90 ಸೆಂಮೀ ಉದ್ದ ಬೆಳೆಯುತ್ತದೆ. ಇದರೊಡನೆ ಒಳನಾಡಿದ ಸಾಕು ಎಮ್ಮೆಗಳು ಗಬ್ಬವಾಗಿರುವುದು ತಿಳಿದುಬಂದಿದೆ. ಕೊಳ್ಳೆಗಾಲದ ಕಾಡುಗಳಲ್ಲಿ ಕಾಡು ಆಡು ಅಥವಾ ಬುರ್ರೆ ಆಡುಗಳು (ಹೆಮಿತಟ್ರೇಗಸ್ ಹೈಲೋಕ್ರಸ್) 4,000' ಎತ್ತರ ಪ್ರದೇಶಗಳಲ್ಲಿ ವಾಸಿಸುತ್ತವೆ.

ಚಿಗರೆ, ಹುಲ್ಲೆಕರ, ಜಿಂಕೆ, ಸಾರಂಗ, ಮೊದಲಾದ ಪ್ರಾಣಿಗಳು ಸರ್ವಿಡೀ ಕುಟುಂಬಕ್ಕೆ ಸೇರಿದವು. ಈ ಕುಟುಂಬದ ಜೀವಿಗಳ ಕೊಂಬು ಟೊಳ್ಳಾಗಿರದೆ ಗಟ್ಟಿಯಾಗಿರುತ್ತದೆ. ಕೊಂಡ ಕುರಿಗಳು (ಟ್ರ್ಯಾ ಸೆರಸ್ ಕ್ವಾರ್ಡಿಕಾರ್ನಿಸ್) ಕನ್ನಡನಾಡಿನ ದಕ್ಷಿಣ ತೀರದ ಪಶ್ಚಿಮಘಟ್ಟಗಳಲ್ಲಿ ವಾಸಿಸುತ್ತವೆ. ಹೆಣ್ಣುಜೀವಿಗಳಿಗೆ ಕೊಂಬುಗಳಿರುವುದಿಲ್ಲ. ಆದರೆ ಗಂಡುಗಳಿಗೆ ಎರಡು ಜೊತೆ ಕೊಂಬುಗಳಿವೆ. ಮುಂದಿನ ಜೊತೆಯ ಕೊಂಬುಗಳು ಹಿಂದಿನ ಜೊತೆಗಿಂತ ಚಿಕ್ಕವು. ಭಾರತದ ಚಿಗರಿಗಳು ಗಜ಼ೆಲ್ ಬೆನೆಟಿ ಉತ್ತರ ಕರ್ನಾಟಕದ ಬಯಲು ಸೀಮೆಯ ಒಣಪ್ರದೇಶದ ಕುರುಚಲು ಕಾಡುಗಳಲ್ಲಿ ವಾಸಿಸುತ್ತವೆ. ಇವು ಆಡುಗಾತ್ರದ ಸುಂದರ ಪ್ರಾಣಿಗಳು. ಇವುಗಳ ಕುತ್ತಿಗೆ ನೀಳ ಮತ್ತು ಸಣ್ಣ ; ಕಣ್ಣುಗಳು ದೊಡ್ಡವು ಮತ್ತು ಸುಂದರವಾದವು ; ಮೈಗೂದಲು ನಯ ಮತ್ತು ಬಾಲ ಮೋಟು. ಹೆಣ್ಣುಗಳಿಗೆ ಸಾಮಾನ್ಯವಾಗಿ ಕೊಂಬುಗಳು ಲೋಪ. ಆದರೆ ಕೆಲವಕ್ಕೆ ನೀಳವಾದ ಅರ್ಧ ಚಂದ್ರಾಕಾರವಾಗಿ ಬೆನ್ನಿನ ಭಾಗಕ್ಕೆ ಬಾಗಿದ ಕೊಂಬುಗಳ ಮೇಲೆ ಬುಡದಿಂದ ತುದಿಯವರೆಗೂ ವೃತ್ತಾಕಾರದ ದಿಬ್ಬಗಳಿರುತ್ತವೆ. ಹುಲ್ಲೆಕರಗಳು (ಆಂಟಿಲೋಪ್ ಸರ್ವಿಕಾಪ್ರ) ಕನ್ನಡ ನಾಡಿನ ಕಾಡಿನಲ್ಲಿ ಕಂಡು ಬರುತ್ತವೆ. ಇವಕ್ಕೆ 35 ಸೆಂಮೀ ಎತ್ತರ ಬೆಳೆಯುವ ಕೊಂಬುಗಳಿವೆ. ಹಲವಾರು ಸುತ್ತುವರಿದ ದಿಬ್ಬಗಳಿಂದ ಕೂಡಿದ ಕೊಂಬುಗಳು ನೆಟ್ಟಗಿರದೆ ಸ್ವಲ್ಪ ಸ್ವಲ್ಪ ವಂಕಿ ವಂಕಿಯಾಗಿರುತ್ತವೆ. ಕೊಂಬುಗಳು ಗಂಡು ಹೆಣ್ಣುಗಳೆರಡರಲ್ಲೂ ಕಂಡುಬರುತ್ತವೆ. ಸಾಂಬಾರ್ ಅಥವಾ ಕಡವೆಗಳು (ಸರ್ವಸ್ ಯಾನಿಕಲರ್) ಜಿಂಕೆಯ ಜಾತಿಗಳಲ್ಲೆಲ್ಲ ದೊಡ್ಡವು. ಸುಮಾರು 65–70 ಸೆಂಮೀ ಎತ್ತರ. ಮೈಗೂದಲು ಒರಟು. ಇದಕ್ಕೆ ಕುತ್ತಿಗೆಯ ಬಳಿ ನೀಳವಾದ ಕೂದಲಿದೆ. ಇವು ಕಾಡಿನ ಪ್ರಾಣಿಗಳು. ಸಾರಂಗ ಅಥವಾ ಚಿತ್ರಾಂಗ ಜಿಂಕೆಗಳು (ಆಕ್ಸಿಸ್ ಆಕ್ಸಿಸ್) ಕನ್ನಡ ನಾಡಿನ ಪಶ್ಚಿಮಘಟ್ಟದ ಕಾಡುಗಳಲ್ಲಿ ಮಂದೆಮಂದೆಯಾಗಿ ವಾಸಿಸುತ್ತದೆ. ಈ ಬಗೆಯ ಜಿಂಕೆಗಳು ಇತರ ಜಿಂಕೆಗಳಿಗಿಂತ ಚಿಕ್ಕವು. ಬೊಗಳುವ ಜಿಂಕೆಗಳೂ (ಮಂಟೈಯಕಸ್ ಮಂಟ್ಜಾಕ್) ನಮ್ಮ ನಾಡಿನ ಕಾಡುಗಳಲ್ಲಿ ದೊರಕುತ್ತವೆ. ಇವು ನಾಯಿ ಬೊಗಳಿದಂತೆಯೇ ಶಬ್ದ ಮಾಡುತ್ತವೆ. ಒಂದು ಕವಲಿನಿಂದ ಕೂಡಿದ ಕೊಂಬು ಮೋಟು. ಬಾಲವೂ ಮೋಟು.

ಕರ್ನಾಟಕದ ಕಾಡುಹಂದಿ (ಸಸ್ ಕ್ರಿಸ್ಟೇಟಸ್) ಕಾಡುಗಳಲ್ಲಿ ಒಂಟೊಂಟಿಯಾಗಿ ಜೀವಿಸುತ್ತದೆ. ಇದರ ಮೇಲುದವಡೆಯ ಮೇಲೆ ಕೋರೆ ಹಲ್ಲುಗಳು ಕಮಾನಿನಂತೆ ಮೇಲ್ಮುಖನಾಗಿ ಬಾಗಿ ಬಾಯಿಯಿಂದ ಹೊರಚಾಚಿರುತ್ತವೆ. ಅಲ್ಲದೆ ಇವುಗಳ ಕೋರೆಹಲ್ಲುಗಳು ಚಿರಕಾಲ ಬೆಳೆಯತಕ್ಕವು. ಕೋರೆಹಲ್ಲುಗಳ ಸಹಾಯದಿಂದ ಗೆಡ್ಡೆಗೆಣಸುಗಳನ್ನು ಅಗೆದು ತಿನ್ನುತ್ತವೆ. ಇವುಗಳಿಗೆ ನಾಲ್ಕು ಬೆರಳುಗಳಿದ್ದರೂ ನಡೆಯುವಾಗ ಎರಡು ಮಾತ್ರ ಭೂಮಿಯನ್ನು ಮುಟ್ಟುತ್ತವೆ.

ಬರ್ಕ ಅಥವಾ ಕೂರಂದಿ (ಟ್ರ್ಯಾಗ್ಯುಲಸ್ ಮೆಮಿನ್ನ) ಕನ್ನಡನಾಡಿನ ಪಶ್ಚಿಮಘಟ್ಟದ ಕಾಡುಗಳಲ್ಲಿ ಇದೆ. ಇದರ ಎತ್ತರ ಸುಮಾರು 13 ಸೆಂಮೀ. ಜಿಂಕೆಯಂಥ ಈ ಪ್ರಾಣಿಗಳ ದೇಹದ ರಚನೆ ಜಿಂಕೆ ಮತ್ತು ಹಂದಿಗಳ ರಚನೆಯ ಮಧ್ಯವರ್ತಿಯಾಗಿದೆ.

ಫಾಲಿಡೋಟ ವರ್ಗದ ಪ್ರತಿನಿಧಿಯಾಗಿ ಕರ್ನಾಟಕದಲ್ಲಿ ಚಿಪ್ಪು ಹಂದಿ (ಮೇನಿಸ್ ಕ್ರಾಸಿಕಾಡೇಟ) ದೊರಕುತ್ತದೆ. ಇದಕ್ಕೆ ಮೈಮೇಲೆಲ್ಲ ಹಂಚಿನಂತೆ ಅಳವಡಿಸಿರುವ ಅಗಲವಾದ ಹುರುಪುಗಳಿವೆ. ಕಾಲುಗಳು ಮೋಟು. ಐದು ಬೆರಳುಗಳಿವೆ. ಮೂತಿ ಉದ್ದ ಮತ್ತು ಚೂಪು. ಮುಂಗಾಲಿನ ಬೆರಳುಗಳಿಗೆ ಬಲಯುತವಾದ ನಖಗಳಿವೆ. ಹಲ್ಲು ಲೋಪ. ಇರುವೆ, ಗೆದ್ದಲು ಮೊದಲಾದ ಕೀಟಗಳೇ ಇದರ ಆಹಾರ. ನಿಶಾಚರಿಯಾದ ಈ ಪ್ರಾಣಿ ಬಿಲತೋಡಿ ಜೀವಿಸುತ್ತದೆ. ಅಪಾಯಸನ್ನಿಹಿತವಾದರೆ ದೇಹವನ್ನು ಚೆಂಡಿನಂತೆ ಮುದುರಿಕೊಂಡು ಆತ್ಮರಕ್ಷಣೆಮಾಡಿಕೊಳ್ಳುತ್ತದೆ.

ಕರ್ನಾಟಕದ ಪಕ್ಷಿಗಳೆಲ್ಲವೂ ಹಾರುವ ಗುಂಪಿಗೆ ಸೇರಿದವು. ಇಲ್ಲಿಯೇ ವಾಸಿಸುವ ಪಕ್ಷಿಗಳಿದ್ದರೂ ಇತರ ನೆರೆಹೊರೆಯ ರಾಜ್ಯಗಳಿಗೆ ವಲಸೆ ಹೋಗುವ ಪಕ್ಷಿಗಳೂ ಇವೆ. ಅಲ್ಲದೆ ಹೊರದೇಶದಿಂದ (ಆಫ್ಘಾನಿಸ್ತಾನ, ಸೈಬೀರಿಯ ಇತ್ಯಾದಿ) ಬರುವ ಪಕ್ಷಿಗಳಿವೆ. ಭಾರತದ ರಾಷ್ಟ್ರಪಕ್ಷಿಯೆಂದು ಪರಿಗಣಿಸಲಾಗಿರುವ ನವಿಲು (ಫಾರ್ಮೀವೋ ಕ್ರಿಸ್ಟೇಟಸ್) ಗಾಲಿಪೇಸ್ ಕುಟುಂಬದ ಪ್ರತಿನಿಧಿ. ಇದು ಕರ್ನಾಟಕದ ಕಾಡುಗಳಲ್ಲಿ ಸಾಮಾನ್ಯವಾಗಿ ನೀರಿರುವ ಕಡೆಗಳಲ್ಲಿ ಕಂಡುಬರುತ್ತದೆ. ಹೆಣ್ಣಿಗಿಂತಲೂ ಗಂಡು ಆಕರ್ಷಕವಾದ ಜೀವಿ. ಗಂಡು ತನ್ನ ಬಾಲದ ಮೋಹಕ ಹಾಗೂ ನೀಳವಾದ ರೆಕ್ಕೆಗಳನ್ನು ನೆಟ್ಟಗೆಮಾಡಿ ನರ್ತನ ಮಾಡುವುದು ಒಂದು ವೈಶಿಷ್ಟ್ಯ. ನವಿಲಿಗೆ ಹೆಚ್ಚು ಹಾರಲು ಆಗದಿದ್ದರೂ ಮರದಿಂದ ಮರಕ್ಕೆ ಹಾರಬಲ್ಲದು. ಕೆಲವು ಹಳ್ಳಿಗಳಲ್ಲಿ ಇದನ್ನು ಪಳಗಿಸಿ ಸಾಕುವುದೂ ಉಂಟು.

ಸಾಕು ಕೋಳಿಗಳಿಗೆ ಪೂರ್ವಜರೆನ್ನಿಸಿಕೊಂಡಿರುವ ಭಾರತದ ಕಾಡು ಕೋಳಿ (ಗ್ಯಾಲಸ್ ಗ್ಯಾಲಸ್) ಕರ್ನಾಟಕದ ಕಾಡುಗಳಲ್ಲಿಯೂ ದೊರಕುತ್ತದೆ. ಇದರ ವಾಸ ಸಾಮಾನ್ಯವಾಗಿ ಕುರುಚಲುಗಿಡಗಳು ಮತ್ತು ಬಿದಿರು ಮೆಳೆಗಳಲ್ಲಿ. ಇದೇ ಗುಂಪಿಗೆ ಸೇರಿದ ಕೆಂಗುಚ್ಚದ ಕೋಳಿ (ಗ್ಯಾಲೋಪೆರ್ಡಿಕ್ಸ್ ಸ್ಪೆಂಡಿಸೆನ್ಸ್) ಮತ್ತು ಕಂದು ಕಾಡುಕೋಳಿ (ಗ್ಯಾಲ್ಸ ಸೊನೆರಾಟಿ) ಕಾಡುಗಳಲ್ಲಿ ಕಂಡುಬರುತ್ತದೆ. ಇದರ ವಾಸ ಸಾಮಾನ್ಯವಾಗಿ ಕಾಡಿನ ಪೊದರು. ಸಾಗುವಳಿ ಪ್ರದೇಶಕ್ಕೆ ಲಾವಕ್ಕಿಗಳು ಚಳಿಗಾಲದಲ್ಲಿ ಭೇಟಿಕೊಡುತ್ತವೆ. ಈ ಗುಂಪಿನಲ್ಲಿ ಹಲವು ಬಗೆಯ ಲಾವಕ್ಕಿಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಕಪ್ಪೆದೆಯ ಲಾವಕ್ಕಿ ಸಾಮಾನ್ಯವಾಗಿ ಹುಲುಸಾದ ಹುಲ್ಲುಗಾವಲುಗಳಲ್ಲಿ ಹಾಗೂ ಸಾಗುವಳಿ ಪ್ರದೇಶದ ಸನಿಹದಲ್ಲಿ ಕಂಡುಬರುತ್ತದೆ. ಪೊದರು ಲಾವಕ್ಕಿಗಳು ತೆರೆದ ಕಾಡುಪ್ರದೇಶಗಳಲ್ಲಿ ಮಂದೆಗೂಡಿ ಜೀವಿಸುತ್ತವೆ. ಬಿಳಿ ಎದೆಯ ನೀರಕ್ಕಿ (ಆಮೋರಾರ್ನಿಸ್ ಫೋನಿಕ್ಯೂರಸ್) ಕೆರೆ ಕಾಲುವೆಗಳ ದಂಡೆಗಳಲ್ಲಿ ದಟ್ಟವಾಗಿ ಬೆಳೆವ ಜೊಂಡುಗಳ ನಡುವೆ ವಾಸಿಸುತ್ತದೆ.

ಪಾರಿವಾಳ ಮತ್ತು ಕಪೋತಗಳು ತೆಳು ಹಾಗೂ ಹೆಚ್ಚು ಬಲಯುತವಲ್ಲದ ಕೊಕ್ಕುಗಳನ್ನುಳ್ಳವು. ಕಾಳುಕಡ್ಡಿ ಹಣ್ಣುಗಳೇ ಇವುಗಳ ಆಧಾರ. ಇದು ಕೊಲಂಬಿ ಫಾರ್ಮೀಸ್ ಗಣಕ್ಕೆ ಸೇರಿದವು. ಪಾರಿವಾಳ (ಕೊಲಂಬ ಲೀವಿಯ) ಸಾಮಾನ್ಯವಾಗಿ ಮನೆ ಮಠ ಮತ್ತು ಮರಗಳ ಮೇಲೆ ವಾಸಿಸುತ್ತದೆ. ಇದನ್ನು ಕೆಲವರು ಮನೆಗಳಲ್ಲಿ ಸಾಕುವುದೂ ಉಂಟು. ದಪ್ಪಕೊಕ್ಕು, ದೊಡ್ಡ ದೇಹದ ಹಸಿರು ಪಾರಿವಾಳ (ಕ್ರೋಕೋಪಸ್ ಫೀನಿಕಾಪ್ಟರಿಕ್ಸ್) ಕಾಡುಗಳ ಮರಗಳ ಮೇಲೆಯೇ ವಾಸಿಸುತ್ತದೆ. ಇವುಗಳ ಕಾಲುಗಳು ಭೂಮಿಯ ಮೇಲೆ ಓಡಾಡಲು ಪರಿಪೂರ್ಣತೆ ಪಡೆದಿಲ್ಲ. ಬಿಳಿಯ ಚುಕ್ಕೆಗಳಿಂದ ಕೂಡಿದ ಬೂದುಬಣ್ಣದ ಕಪೋತಗಳು ಸಾಮಾನ್ಯವಾಗಿ ಬಯಲು ಪ್ರದೇಶದ ವಾಸಿಗಳು. ಇವು ಸಾಮಾನ್ಯವಾಗಿ ಸಾಗುವಳಿ ಪ್ರದೇಶಗಳಲ್ಲಿ ಆಗಾಗ್ಗೆ ಒಂಟೊಂಟಿಯಾಗಿ ಅಥವಾ ಗುಂಪು ಗುಂಪಾಗಿ ಕಂಡುಬರುವುದೂ ಉಂಟು.

ಮುಂಜಾನೆ ಕಾಕಾ ಎಂದು ಕೂಗಿ ಬೆಳಗಾಗುವುದನ್ನು ಸೂಚಿಸುವ ಕಾಗೆಗಳು ಕರ್ನಾಟಕದಲ್ಲೂ ಇವೆ. ಊರುಕಾಗೆ (ಕಾರ್ವಸ್ ಸ್ಪ್ಲೆಂಡಿಯನ್ಸ್) ಮತ್ತು ಕಾಡುಕಾಗೆ (ಕಾ. ಮ್ಯಾಕ್ರೋರಿಂಕಸ್) ಎಂಬ ಎರಡು ಬಗೆಗಳ ಕಾಗೆಗಳಿವೆ. ಕಾಡುಕಾಗೆಗಳು ಸಾಮಾನ್ಯವಾಗಿ ಕಾಡು ಮರಗಳ ಮೇಲೆ ಕಂಡುಬಂದರೂ ಆಗಾಗ್ಗೆ ಕಾಡುಗಳ ಸಮೀಪದಲ್ಲಿರುವ ಹಳ್ಳಿ ಊರುಗಳಲ್ಲೂ ಕಂಡುಬರುತ್ತವೆ. ಎರಡು ಬಗೆಯ ಕಾಗೆಗಳ ದೇಹಗಳೂ ಕಪ್ಪು. ಆದರೆ ಊರುಕಾಗೆಯ ಕಂಠ ಬೂದುಬಣ್ಣದ್ದಾಗಿದ್ದರೆ ಕಾಡುಕಾಗೆಗೆ ಅದು ಸಹ ಕಪ್ಪಾಗಿರುತ್ತದೆ.

ಕವಿಗಳ ಗಮನವನ್ನು ಅನಾದಿ ಕಾಲದಿಂದಲೂ ಸೆಳೆದಿರುವ ಭಾರತದ ಕೋಗಿಲೆಗಳು (ಯುಡೈನಮಿಸ್ ಸ್ಕೋಲೋಪೇಸೆಯಸ್) ಕರ್ನಾಟಕದ ಕಾಡು ತೋಟಗಳಲ್ಲಿಯೂ ಇವೆ. ಗಂಡು ಅಚ್ಚಕಪ್ಪು, ಹೆಣ್ಣುಪಕ್ಷಿ ಸ್ವಲ್ಪಮಟ್ಟಿಗೆ ಕಂದು ಬಣ್ಣ, ರೆಕ್ಕೆ, ಎದೆ ಹೊಟ್ಟೆಯ ಭಾಗಗಳಲ್ಲಿ ಬಿಳಿಯ ಚುಕ್ಕೆಗಳಿವೆ. ಇವು ಸಾಮಾನ್ಯವಾಗಿ ಕಾಗೆಗಳ ಗೂಡುಗಳಲ್ಲಿ ಮೊಟ್ಟೆಗಳನ್ನಿಟ್ಟು ಕಾಗೆಗಳ ಸಹಾಯದಿಂದ ತಮ್ಮ ಮೊಟ್ಟೆಗಳಿಗೆ ಕಾವು ಕೊಡಿಸುತ್ತವೆ. ಅಲ್ಲದೆ ಒಮ್ಮೊಮ್ಮೆ ಆ ಗೂಡಿನಲ್ಲಿ ಕಾಗೆಗಳ ಮೊಟ್ಟೆಗಳಿದ್ದರೆ ಅವನ್ನು ನಾಶಪಡಿಸುವುದೂ ಉಂಟು. ಸಾಕುತಾಯಿ ಕಾಗೆ ಆ ಮೊಟ್ಟೆಗಳನ್ನು ತನ್ನ ಮೊಟ್ಟೆಗಳೇ ಎಂದು ಭ್ರಮಿಸಿ ಕಾವುಕೊಟ್ಟು ಮರಿಗಳು ಮೊಟ್ಟೆಯಿಂದ ಹೊರಬಂದಮೇಲೆ ಗುಟುಕುಕೊಟ್ಟು ಸಾಕುತ್ತದೆ. ದೊಡ್ಡದಾಗಿ ಬೆಳೆದ ಮರಿಗಳು ಕೋಗಿಲೆಯ ಮರಿಗಳೆಂದು ತಿಳಿದಮೇಲೆ ಅದು ಅವನ್ನು ಓಡಿಸಿಬಿಡುತ್ತದೆ. ಈ ಕೋಗಿಲೆಗಳಿಗೆ ಸಂಬಂಧಿಸಿದಂತೆ ನಾಲ್ಕೈದು ಬಗೆಯ ಕೋಗಿಲೆ ಜೀವಪ್ರಭೇದಗಳು ಇಲ್ಲಿಯ ಕಾಡಿನಲ್ಲೂ ಇವೆ.

ಕರ್ನಾಟಕದ ಕಾಡು, ತೋಪು, ತೋಟಗಳಲ್ಲಿ ಹಲವು ಬಗೆಯ ಗಿಳಿಗಳು ಇವೆ. ಇವೆಲ್ಲ ಪ್ಸಿಟ್ಟಾಸಿ ಫಾರ್ಮಿಸ್ ಗಣಕ್ಕೆ ಸೇರಿದವು. ಸಾಮಾನ್ಯವಾಗಿ ಕಾಣಬರುವ ಹಸಿರು ಗಿಳಿ (ಸಿಟ್ಟಾಕುಲ ಕ್ರಾಮೇರಿ) ನಾಡಿನಾದ್ಯಾಂತ ಉಂಟು. ಪ್ಸಿ, ಯೂಪಾತ್ರ ಜಾತಿಯ ದೊಡ್ಡ ಗಿಳಿ ಕಾಡುಗಳಿಗೆ ಸೀಮಿತವಾಗಿದೆ. ಇದು ಗೂಡು ಕಟ್ಟಲಾರದು. ಮರದ ಪೊಟರೆಗಳಲ್ಲಿ ಒಂದೆರಡು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತದೆ.

ಗೂಬೆಗಳು ನಿಶಾಚರ ಪಕ್ಷಿಗಳು. ಇವು ಸ್ಟ್ರಿಂಜೀಫಾರ್ಮಿಸ್ ಗಣಕ್ಕೆ ಸೇರಿದವು. ರಾತ್ರಿ ವೇಳೆಯಲ್ಲಿ ಪುಟ್ಟ ಅಳಿಲು ಇಲಿ ಮುಂತಾದವನ್ನು ಹಿಡಿದು ಜೀವಿಸುತ್ತವೆ. ಇವುಗಳ ತಲೆ ದೊಡ್ಡದು. ಕಣ್ಣುಗಳು ಸಹ ದೊಡ್ಡವಾಗಿದ್ದು ಮುಮ್ಮುಖವಾಗಿ ಅಳವಡಿಕೆಗೊಂಡಿರುತ್ತವೆ. ಕೊಕ್ಕು ಚಿಕ್ಕದು. ಕೊಕ್ಕೆಯಂತೆ ಬಾಗಿದೆ. ಪಾಳುಮನೆ, ಸಮಾಧಿ, ಮಂಟಪಗಳೇ ಇವುಗಳ

ವಾಸ. ಮರದ ಕೊಂಬೆಗಳ ಮೇಲೆ ಕೂರುವ ಸೌಕರ್ಯವಿದೆ. ಅಥೇನಿ ಬ್ರಾಮ (ಚುಕ್ಕಿ ಗೂಬೆ) ಮತ್ತು ಸ್ಟ್ರಿಕ್ಸ್ ಆಸಲೇಟಂ (ಮರದ ಮಚ್ಚೆಗೂಬೆ) ಅಲ್ಲದೆ ಇತರ ಗೂಬೆಯ ಭೇದಗಳೂ ಕರ್ನಾಟಕದಲ್ಲಿವೆ.

ಮಾಂಸಭಕ್ಷಿಗಳಾದ ಗರುಡ, ಡೇಗೆ, ಗಿಡುಗ, ಹದ್ದು, ರಣಹದ್ದುಗಳು ಫಾಲ್ಕನಿಫಾರ್ಮಿಸ್ ಅಥವಾ ಆಕ್ಸಿಪಿಟ್ರೆಸ್ ಗಣಕ್ಕೆ ಸೇರಿದವು. ಇವುಗಳ ಕೊಕ್ಕು ಚಿಕ್ಕವು, ಹರಿತವಾದವು, ಬಲಯುತವಾದವು. ಕಾಲುಬೆರಳುಗಳಲ್ಲಿರುವ ನಖಗಳೂ ಬಲಯುತವಾದವು. ತಮ್ಮ ಆಹಾರ ಜೀವಿಯನ್ನು ಹಿಡಿದುಕೊಳ್ಳುವುದರಲ್ಲಿ ಮತ್ತು ಹರಿದು ಚಿಂದಿ ಮಾಡುವುದರಲ್ಲಿ ನೆರವಾಗತಕ್ಕವು. ಇವುಗಳ ಆಹಾರ ಇತರ ಸಣ್ಣಸಣ್ಣ ಪಕ್ಷಿಗಳು ಅಥವಾ ಸಸ್ತನಿಗಳು. ರಣಹದ್ದುಗಳ ಕುತ್ತಿಗೆ ಮತ್ತು ತಲೆ ಬೋಳಾಗಿವೆ. ಇವು ಸಾಮಾನ್ಯವಾಗಿ ಸತ್ತಪ್ರಾಣಿಗಳ ಮಾಂಸವನ್ನು ಭಕ್ಷಿಸುತ್ತವೆ. ಇವು ದೊಡ್ಡ ದೊಡ್ಡ ಮರಗಳ ಮೇಲೆ ಬೆಟ್ಟಗಳ ಶಿಖರಗಳ ಮೇಲೆ ವಾಸಿಸುವುದು ಸಾಮಾನ್ಯ. ಗರುಡಪಕ್ಷಿ ಕನ್ನಡ ನಾಡಿನಾದ್ಯಂತ ಉಂಟು.

ಆನ್ಸೆರಿಫಾರ್ಮಿಸ್ ಗಣಕ್ಕೆ ಸೇರಿದ ಬಾತುಕೋಳಿಗಳು ಕರ್ನಾಟಕದ ಜಲಾಶಯಗಳಲ್ಲಿ ಇವೆ. ಇವುಗಳ ಕೊಕ್ಕು ಅಗಲವಾಗಿರುವುದರಿಂದ ಇವು ಮೀನುಗಳನ್ನು ಸುಲಭವಾಗಿ ಹಿಡಿಯಬಲ್ಲವು. ಒಂದು ಜಾತಿಯ ಬಾತುಕೋಳಿಯನ್ನು ಹಳ್ಳಿಗಳಲ್ಲಿ ಸಾಕುವುದೂ ಉಂಟು. ಇದರ ಮೊಟ್ಟೆ ಮನುಷ್ಯನ ಆಹಾರವೂ ಹೌದು. ಕೆಲವು ಬಗೆಯ ಬಾತುಕೋಳಿಗಳು ಈಜುವುದೇ ಅಲ್ಲದೆ ನೀರಿನಲ್ಲಿ ಮುಳುಗಿ ಮೀನುಗಳನ್ನು ಹಿಡಿಯಬಲ್ಲವು ಮತ್ತು ಒಂದೆಡೆಯಿಂದ ಮತ್ತೊಂದೆಡೆಗೆ ಹಾರಲೂ ಬಲ್ಲವು. ನಟ್ಕ ಅಥವಾ ಹೆಣೆಗೆ ಬಾತು (ಸಾರ್ಕಿಡಿ ಯಾರ್ನಿಸ್ ಮೆಲನೋಟಸ್) ಮಲೆನಾಡಿನ ಜಲಾಶಯಗಳಲ್ಲಿ ಸಾಮಾನ್ಯವಾಗಿ ಇರುವ ಪಕ್ಷಿ. ಥೀಲ್ ಅಥವಾ ಅರಳೆಬಾತು (ನೆಟ್ಟೋಪಸ್) ಕೂಡ ನಾಡಿನಾದ್ಯಂತ ದೊರಕುವ ಪಕ್ಷಿ. ಕೆಲವು ಜಾತಿಯ ಬಾತುಕೋಳಿಗಳು ಕನ್ನಡನಾಡಿಗೆ ಉತ್ತರದಿಂದ ಚಳಿಗಾಲದಲ್ಲಿ ವಲಸೆ ಬರುವುದು ಉಂಟು.

ಕಬ್ಬಾರೆ, ಕೊಕ್ಕರೆ, ಕ್ರೌಂಚಪಕ್ಷಿ, ನಾರಾಯಣಿಪಕ್ಷಿ ಮೊದಲಾದವು ಜಲಾಶಯದಲ್ಲಿ ಅಥವಾ ಅದರ ಬಳಿ ವಾಸಿಸತಕ್ಕ ಪಕ್ಷಿಗಳು. ಇವು ಸಿಕೋನಿಫಾರ್ಮಿಸ್ ಗಣಕ್ಕೆ ಸೇರಿದವು. ಇವಕ್ಕೆ ಹಾರುವ ಶಕ್ತಿ ಅಗಾಧ. ಕಾಲುಗಳು, ಕಾಲು ಬೆರಳುಗಳು ಕೊಕ್ಕು ಮತ್ತು ಕುತ್ತಿಗೆ ಎಲ್ಲವೂ ಉದ್ದ. ಅನೇಕವು ವಲಸೆಗಾರ ಪಕ್ಷಿಗಳು. ಆರ್ಡೀಯ ಸಿನೇರೆಯ ಎಂಬ ಜಾತಿಯ ಕ್ರೌಂಚಪಕ್ಷಿ ನಮ್ಮ ನಾಡಿನ ಹಲವಾರು ಕಡೆ ಇದೆ. ಇದರ ಮುಖ್ಯ ಆಹಾರ ಮೀನು. ಕಬ್ಬಾರೆ ಪಕ್ಷಿಗಳು ಒಂಟೊಂಟಿಯಾಗಿ ಕೊಳ, ನದಿ, ಕೆರೆಗಳ ಬಳಿ ವಾಸಿಸುತ್ತವೆ. ಒಮ್ಮೊಮ್ಮೆ ನೀರಿನಲ್ಲಿ ಅಲುಗಾಡದೆ ನಿಂತಿರುತ್ತವೆ. ಬುಬುಲ್‌ಕಸ್ ಐಬಿಸ್ ಎಂಬ ಕ್ರೌಂಚಪಕ್ಷಿ ಸಾಮಾನ್ಯವಾಗಿ ದನಗಳ ಹಿಂಡಿನ ಮಧ್ಯೆ ಇರುತ್ತದೆ. ಇದು ದನಕರುಗಳ ಮೈಮೇಲಿನ ಉಣ್ಣಿಗಳನ್ನು ಹಿಡಿದು ತಿನ್ನುವುದನ್ನು ಕಾಣಬಹುದು. ಆರ್ಡೆಯೋಲ ಗ್ರೇಯಿ ಜಾತಿಯ ಕಬ್ಬಾರೆ ಬತ್ತದ ಗದ್ದೆಗಳಲ್ಲಿ ಇರುವುವು. ಅನಸ್ಟೋಮಸ್ ಜಾತಿಯ ಕಬ್ಬಾರೆಯನ್ನು ಜೌಗುಪ್ರದೇಶಗಳಲ್ಲಿ ಅದರ ಅಗಲವಾದ ಕೊಕ್ಕಿನ ಸಹಾಯದಿಂದಲೇ ಗುರುತಿಸಬಹುದು. ಪ್ಲಾಟೇಲಿಯ ಲ್ಯೂಕೋರೋಡಿಯ ಎಂಬ ಕೊಕ್ಕರೆ ಈ ರಾಜ್ಯದಲ್ಲಿದೆ. ಕ್ಸೀನೋರಿಂಕಸ್ ಏಷಿಯಾಟಿಕಸ್ ಎಂಬ ಜಾತಿಯ ಕರಿಕುತ್ತಿಗೆಯ ಕೊಕ್ಕರೆಗಳು ಆಗಾಗ್ಗೆ ನದಿ ಕೆರೆಗಳ ಬಳಿ ಕಾಣುವುದುಂಟು. ಪೋಡಿಸಿಪಿಫಾರ್ಮೀಸ್ ಗಣದ ಪ್ರತಿನಿಧಿಗಳು ಕರ್ನಾಟಕದಲ್ಲಿವೆ. ಪೋಡಿಸಿಪೆಸ್ ರುಫಿಕಾಲಿಸ್ ಎಂಬ ಜಾತಿಯ ಜಲಚರ ಪಕ್ಷಿ ಈ ರಾಜ್ಯದಲ್ಲಿ ದೊರಕುವ ಅತ್ಯಂತ ಚಿಕ್ಕಪಕ್ಷಿ. ನೀರ್ಗಾಲಿಕ್ಕುವ ಕೆಲವು ಪಕ್ಷಿಗಳು ಕರಾಡ್ರಿಫಾರ್ಮೀಸ್ ಗಣಕ್ಕೆ ಸೇರಿದವು. ಇವು ನೀರಿನಲ್ಲಿ ಎತ್ತುಗಾಲಿಕ್ಕಿ ನಡೆಯುವುದೇ ಅಲ್ಲದೆ ಹಾರಬಲ್ಲವು. ಹೈಡ್ರೋಫೇಸಿಯಾನಸ್ ಚಿರುರ್ಗಸ್ ಕೊಳ, ಕೆರೆ, ಮೊದಲಾದ ಜೌಗು ಪ್ರದೇಶಗಳಲ್ಲಿ ಕಂಡುಬರುವ ಪಕ್ಷಿ. ಲೋಬೋಪ್ಲುವಿಯ ಮಲಬಾರಿಗ ಎಂಬ ಹಳದಿ ಬಣ್ಣದ ದೇವನಹಕ್ಕಿಗೆ ತೆರೆದ ಒಣಮೈದಾನ ಪ್ರದೇಶವೇ ವಾಸ. ಟ್ರಿಂಗ ಜಾತಿಯ ಪಕ್ಷಿ ಯೂರೋಪ್ ಉತ್ತರ ಏಷ್ಯಾದಲ್ಲಿ ಸಂತಾನೋತ್ಪತ್ತಿ ಮಾಡಿ ನಮ್ಮ ದೇಶಕ್ಕೂ ವಲಸೆ ಬರುವ ಪಕ್ಷಿ. ಕ್ಯಾಪೆಲ್ಲ ಜಾತಿಯ ಉಲ್ಲಂಗಿಪಕ್ಷಿ ಕಾಶ್ಮೀರದಲ್ಲಿ ತನ್ನ ಸಂತಾನವನ್ನು ಬೆಳೆಸಿ ನಮ್ಮ ನಾಡಿಗೆ ಚಳಿಗಾಲದಲ್ಲಿ ವಲಸೆ ಬರುವ ಪಕ್ಷಿ. ಇದರಲ್ಲಿ ಎರಡು ಪ್ರಭೇದಗಳು ಮುಖ್ಯವಾದವು. ಒಂದು ಕ್ಯಾ. ಗಾಲಿನಾಗೊ ಮತ್ತು ಕ್ಯಾ. ಸ್ಟೆನೂರ. ಸ್ಕೋಲೋಪಾಕ್ಸ್ ರಸ್ಟಿಕೋಲ ಎಂಬ ಜಾತಿಯ ಕಾಡುಕೋಳಿಯೂ ಪಶ್ಚಿಮ ಘಟ್ಟಗಳಿಗೆ ವಲಸೆಬರುವ ಪಕ್ಷಿ.

ಕೋರಾಸಿಫಾರ್ಮೀಸ್ ಗಣದ ಪ್ರತಿನಿಧಿಗಳೂ ಇಲ್ಲಿವೆ. ಈ ಬಗೆಯ ಪಕ್ಷಿಗಳಿಗೆ ಮೂರು ಕಾಲುಬೆರಳುಗಳು ಸಾಮಾನ್ಯವಾಗಿ ಒಟ್ಟಿಗೆ ಕೂಡಿರುವುದು ಒಂದು ವೈಶಿಷ್ಟ್ಯ. ಉರುಳಕ್ಕಿ (ಕೋರಾಸಿಯಸ್ ಇಂಡಿಕ) ಉಜ್ಜ್ವಲ ಬಣ್ಣಗಳಿಂದ ಕೂಡಿದೆ. ಬೇಸಾಯ ಪ್ರದೇಶವೇ ಇದರ ವಾಸ. ಕೀಟ ಮೊದಲಾದವೇ ಇದರ ಆಹಾರ. ಜೇನು ಮುಕ್ಕ (ಮೆರಾಪ್ಸ್ ಓರಿಯಂಟ್ಯಾಲಿಸ್) ಸಾಮಾನ್ಯವಾಗಿ ಮಾನವನ ವಸತಿಗಳ ಸನಿಹದಲ್ಲಿ ವಾಸಿಸುತ್ತದೆ. ಇದರ ಆಹಾರ ಜೇನುನೊಣಗಳು, ಕಣಜ ಮತ್ತು ಇತರ ಕೀಟಗಳು. ಡೈಕೋಸಿರಾಸ್ ಬೈಕಾರ್ನಿ ಜಾತಿಯ ಪಕ್ಷಿಗಳು ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕಂಡುಬರುತ್ತವೆ.

ಕರ್ನಾಟಕದ ಪಾಲಕೀ ಹಕ್ಕಿಗಳಿಗೆ (ಸ್ಯಾಂಡ್‌ಗ್ರೌಸಸ್) ಹಾರುವ ಶಕ್ತಿ ಹೆಚ್ಚಾಗಿದೆ. ಇವನ್ನು ಸಾಮಾನ್ಯವಾಗಿ ಬಯಲು ಸೀಮೆಯ ಕುರುಚಲು ಕಾಡುಗಳಲ್ಲಿ ಕಾಣಬಹುದು. ಕೆಲವು ವಲಸೆಗಾರ ಪ್ರವೃತ್ತಿಯುಳ್ಳವು. ಇವುಗಳ ಆಹಾರ ದವಸಧಾನ್ಯ, ಸಂಜೆ ಮತ್ತು ಬೆಳಗಿನ ಹೊತ್ತು ಮಂದೆಮಂದೆಯಾಗಿ ಸಾಗುವಳಿ ಪ್ರದೇಶಕ್ಕೆ ನುಗ್ಗಿ ದಾಳಿಮಾಡುವುದೂ ಉಂಟು. ಟಿರೋಕ್ಲೆಸ್ ಇಂಡಿಕಸ್ ಮತ್ತು ಟಿ.ಎಕ್ಸುಟಸ್ ಎಂಬವು ಮುಖ್ಯವಾದುವು. ಗುಬ್ಬಚ್ಚಿ (ಪ್ಯಾಸರ್ ಡೊಮೆಸ್ಟಿಕಸ್) ಫ್ರಿಂಜಿಲ್ಲಿಡೀ ಕುಟುಂಬಕ್ಕೆ ಸೇರಿದ ಪಕ್ಷಿ. ಇದರ ಕೊಕ್ಕು ದಪ್ಪ ಶಂಖಾಕೃತಿ. ಕಾಳಿನ ಸಿಪ್ಪೆ ಸುಲಭವಾಗಿ ಬಿಡಿಸಿ ತಿನ್ನುವ ವೈಶಿಷ್ಟ್ಯ ಇದರದ್ದು. ಮಾನವನ ವಸತಿಯ ಆಸುಪಾಸುಗಳಲ್ಲಿ ಇದರ ಬೀಡು. ಕಳ್ಳಿಪಿಟಕ ಅಥವಾ ದಾಸರಿ ಹಕ್ಕಿಗಳಲ್ಲಿ (ವ್ಯಾಗ್‌ಟೈಲ್) ಕೆಲವು ಪ್ರಭೇದಗಳನ್ನು ಕನ್ನಡ ನಾಡಿನಲ್ಲೂ ಕಾಣಬಹುದು. ಇವುಗಳ ಕೊಕ್ಕು ತೆಳು ಮತ್ತು ನೀಳ. ಬಾಲ ನೀಳ. ಮೋಟಸಿಲ್ಲ ಕೈನೀರಿಯ ಬಯಲು ಪ್ರದೇಶ ಮತ್ತು ವಸತಿಗೃಹಗಳ ಬಳಿ ಕಂಡು ಬರುತ್ತದೆ. ಸಾಗುವಳಿ ಬೆಳೆಗಳು, ಕಾಳುಕಡ್ಡಿಗಳೇ ಇದರ ಆಹಾರ. ಆಂತಸ್ ರುಫುಲಸ್ ಎಂಬ ದಾಸರಿಹಕ್ಕಿಯೂ ಮೊಟಸಿಲ್ಲದಂತೆಯೇ ಜೀವನ ಸಾಗಿಸುತ್ತದೆ ಶಿಖೆಯ ಟಿಟ್ಟಿಭಪಕ್ಷಿ (ಕ್ರೆಸ್ಟೆಡ್ ಲಾರ್ಕ್) ದಾಸರಿಹಕ್ಕಿಯಂತೆಯೇ ಇರುತ್ತದೆ. ಆದರೆ ಬಾಲ ಸ್ವಲ್ಪ ಮೋಟು. ಇದರ ವೈಜ್ಞಾನಿಕ ಹೆಸರು ಗಲೇರಿಟ ಕ್ರಿಸ್ಟೇಟ. ಇದು ಮುಗಿಲಿನಲ್ಲಿ ಹಾರುವಾಗ ಸಿಳ್ಳು ಹಾಕುವುದು ಒಂದು ವೈಶಿಷ್ಟ್ಯ. ಬೂದು ಕಿರೀಟದ ಟಿಟ್ಟಿಭ ಪಕ್ಷಿಗಳು ಸಾಗುವಳಿ ಪ್ರದೇಶಗಳಲ್ಲಿ ಕಂಡುಬರುತ್ತದೆ. ಕದಿರುಗಣಿಗಳ ಕೊಕ್ಕು ನೀಳ, ಚೂಪು ಅಲ್ಲದೆ ಸ್ವಲ್ಪ ಕಮಾನಿನಂತೆ ಬಾಗಿರುತ್ತದೆ. ಇವು ಸಾಮಾನ್ಯವಾಗಿ ಒಂಟೊಂಟಿ ಅಥವಾ ಎರಡೆರಡಾಗಿರುವ ಗುಂಪಿನಲ್ಲಿ ಕಂಡುಬರುತ್ತವೆ. ಕಾಡು ತೋಪುಗಳಲ್ಲಿ ಇವು ಸಾಮಾನ್ಯ. ಇವು ಕೀಟಗಳನ್ನು ತಿನ್ನವುದೇ ಅಲ್ಲದೆ ಹೂವಿನ ಮಕರಂದವನ್ನು ಹೀರಲು ಆಸೆಪಡುತ್ತವೆ. ಭಾರತದ ಪಿಟ್ಟ (ಪಿಟ್ಟ ಬ್ರಾಕಿಯೂರ) ಕುರುಚಲುಗಿಡಗಳ ಕಾಡಿನಲ್ಲಿ ವಾಸಿಸುತ್ತದೆ. ಕೀಟ ಮತ್ತು ಅವುಗಳ ಮೊಟ್ಟೆಗಳೇ ಇವುಗಳ ಮುಖ್ಯ ಆಹಾರ.

ಪಿಸಿಡೀ ಕುಟುಂಬಕ್ಕೆ ಸೇರಿದ ಮರಕಟುಕ ಹಕ್ಕಿಗಳು ಕರ್ನಾಟಕದಾದ್ಯಂತ ಇವೆ. ಸಾಮಾನ್ಯವಾಗಿ ಕುರುಚಲು ಗಿಡಗಳ ಕಾಡುಗಳಿಗಿಂತ ದೊಡ್ಡ ಕಾಡುಗಳೇ ಇವಕ್ಕೆ ಪ್ರಿಯ. ಹೂಪೋ ಪಕ್ಷಿಗೆ (ಯೂಪ್ಯುಪ) ತಲೆಯ ಮೇಲೆ ಒಂದು ಶಿಖೆಯಿದೆ. ಇದು ಮರವನ್ನು ಕುಟುಕಿ ಗೂಡುಮಾಡುವುದಿಲ್ಲ ; ಬದಲು ಮೊದಲೇ ಇರುವ ಗೂಡು, ಪೊಟರೆಗಳಲ್ಲಿ ವಾಸಿಸುತ್ತದೆ. ತಲೆಯ ಮೇಲಿರುವ ಶಿಖೆ ಬೀಸಣಿಗೆಯಂತೆ ಮುಚ್ಚಿಕೊಳ್ಳುವಂತಿದೆ. ತೋಟದ ಹೊಲಗಳಲ್ಲಿ ಬೆಳೆ ತೆನೆಗಳಿಂದ ಕೂಡಿದ ಕಾಲದಲ್ಲಿ ಸಾಮಾನ್ಯವಾಗಿ ಕಂಡುಬರುವ ಹಕ್ಕಿಗಳು ಮೈನಾಗಳು (ಪ್ಯಾಸ್ಟರ್ ರೋಸಿಯಸ್). ಕಂದು ತಲೆಯ ಮೈನ (ಸ್ಟರ್ನಿಯ ಮಲಬಾರಿಕ) ತೆರೆದ ಕಾಡು ಪ್ರದೇಶಗಳಲ್ಲಿ ಇದೆ. ಆಕ್ರಿಡೋ ತೆರಿಸ್ ಟ್ರಿಸ್ಟಿಸ್ ಜಾತಿಯ ಮೈನಾ ಹಕ್ಕಿಗಳು ನಮ್ಮ ನಾಡಿನಾದ್ಯಂತ ದೊರಕುವ ಪಕ್ಷಿಗಳು. ಇವನ್ನು ಪಳಗಿಸಿ ಮಾತು ಕಲಿಸಬಹುದು. ಗೀಜಗನ ಹಕ್ಕಿಗಳು ಸಾಗುವಳಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಈ ಬಗೆಯ ಹಕ್ಕಿಗಳಲ್ಲಿ ನಾಲ್ಕೈದು ಪ್ರಭೇದಗಳನ್ನು ಗುರುತಿಸಬಹುದು. ನಮ್ಮ ನಾಡಿನ ಕುರುಚಲು ಗಿಡದ ಕಾಡುಗಳಲ್ಲಿ ಕೆಲವು ಬಾರಿ ದರ್ಜಿ ಹಕ್ಕಿಗಳ ಪರಿಚಯವಾಗುತ್ತವೆ. ಇವು ಎಲೆಗಳನ್ನು ಹೊಲೆದು ಗೂಡುಕಟ್ಟುವ ಕುಶಲತೆಯನ್ನು ಕಲಿತಿವೆ. ಕನ್ನಡನಾಡಿನ ಪಕ್ಷಿ ಸಂಪತ್ತು ಇನ್ನೂ ವಿಪುಲವಾಗಿದೆ. ಆದರೆ ಇಲ್ಲಿನ ಕೆಲವು ಪಕ್ಷಿಗಳಿಗೆ ಸಾಮಾನ್ಯ ಹೆಸರುಗಳ ಅಭಾವವಿದೆ. ಪಕ್ಷಿಗಳ ದೇಹರಚನೆ, ಜೀವನ ವಿಶೇಷತೆ, ಅವುಗಳ ವಲಸೆಗಾರಿ ಪ್ರವೃತ್ತಿ ಮೊದಲಾದವುಗಳ ಅಧ್ಯಯನಕ್ಕೆ ಇಲ್ಲಿ ಹೆಚ್ಚು ಅವಕಾಶವಿದೆ.

ಕಾಳಿಂಗ ಸರ್ಪ

ಕನ್ನಡನಾಡಿನ ದೊಡ್ಡ ಸರೀಸೃಪ ಮೊಸಳೆ ಎಂದು ಹೇಳಬಹುದು (ಕ್ರಾಕೊಡೈಲಸ್ ಪಾಲುಸ್ಟ್ರಿಸ್). ಇದು ನದಿ ಕೆರೆಗಳಲ್ಲಿ ವಾಸಿಸುತ್ತದೆ. ಇದರ ಕಾಲು ಬೆರಳುಗಳು ಚೀಲ ಪಾದಗಳಿಂದ ಕೂಡಿದೆ. ಸಮುದ್ರವನ್ನು ಸೇರುವ ನದಿ ಮುಖಜ ಪ್ರದೇಶಗಳಲ್ಲಿ ಜೀವಿಸುವ ಮೊಸಳೆ ಕ್ರಾಪೋರೋಸಸ್. ಇವೇ ಕ್ರಾಕೊಡೀಲಿಯ ಗಣದ ಪ್ರತಿನಿಧಿಗಳು. ಲಾಸೆಟೀಲಿಯ

ಉಪಗಣದ ಪ್ರತಿನಿಧಿಗಳು ಸುಮಾರಾಗಿ ಕಂಡುಬರುತ್ತವೆ. ಮನೆಗಳಲ್ಲಿ ವಾಸಿಸುವ ಹಲ್ಲಿಯ (ಹೆಮಿಡ್ಯಾಕ್ಟೈಲಸ್ ಬ್ರೂಕಿ) ಕಾಲಿನ ಬೆರಳುಗಳಲ್ಲಿ ನಖಗಳಿವೆ. ಪಾದಗಳು ಗೋಡೆ

ಕಾಡೆಮ್ಮೆಗಳು

ಗಾಜುಗಳ ಮೇಲೆ ಓಡಾಡಲು ಅನುಕೂಲವಾಗಿವೆ. ತೆರೆದ ಕಾಡುಗಳಲ್ಲಿ, ಬೇಲಿ, ಮೆಳೆಗಳಲ್ಲಿ ಮೈದಾನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಲಾಸೆರ್ಟಿಲಿಯ ಎಂದರೆ ಹೆಂಟೆಗೊದ್ದ (ಕ್ಯಾಲೋಟಿಸ್ ವರ್ಸಿಕೋಲಾರ್) ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಕಾಡುಗಳಲ್ಲಿ ಕ್ಯಾಲೋಟಿಸ್ ಎಲ್ಲಿಯೋಟಿ ಪ್ರಭೇದದ ಹೆಂಟೆಗೊದ್ದಗಳು ದೊರಕುತ್ತವೆ. ಕೊಳ್ಳೆಗಾಲ ತಾಲ್ಲೂಕಿನಲ್ಲಿ ಸಾಲಿಯ ಹಾರ್ಸಿ ಫೀಲ್ಡೀ ಜಾತಿಯ ಹೆಂಟೆಗೊದ್ದ ಉಂಟು. ಕರ್ಣಾಟಕದ ಬಯಲು ನಾಡಿನ ಗುಡ್ಡ ಪ್ರದೇಶಗಳಲ್ಲಿ ಪ್ಯಾಮೋಮಿಲಸ್ ಡಾರ್ಸಾಲಿಸ್ ಎಂಬ ಬಗೆಯ ದೊಡ್ಡಹಲ್ಲಿ (ಬಂಡೆಹಲ್ಲಿ) ಸಿಗುತ್ತದೆ. ಬಣ್ಣ ಬದಲಾಯಿಸಿಕೊಳ್ಳುವ ಗೋಸುಂಬೆ (ಕ್ಯಾಮೆಲಿಯಾನ್ ಜಿಲ್ಯಾನಿಕಸ್) ಕಾಡುಗಳ ಮರಗಳ ಮೇಲೆ ವಾಸಿಸುತ್ತದೆ. ಹಾವುರಾಣಿಗಳಲ್ಲಿ ನಾಲ್ಕು ಜೀವಜಾತಿಗೆ ಸೇರಿದವು ನಮ್ಮ ನಾಡಿನಲ್ಲಿವೆ. ಮಬೂಯ–ಇದು ಬಯಲು, ಬೇಲಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಲೈಗೊಸೋಮ ಸೆಪೊಫಸ್ ಮತ್ತು ರಿಸ್ಪೆಲ್ಲ–ಇವು ಇತರ ಹಾವುರಾಣಿ ಸಂಬಂಧಿಗಳು. ಉಡ (ವೆರಾನಸ್ ಮಾನಿಟರ್) ಬಯಲು ಮೈದಾನ ಪ್ರದೇಶ ಮತ್ತು ಕಾಡುಗಳಲ್ಲಿ ವಾಸಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದ ಕಾಡುಗಳಲ್ಲಿ ಹಾರುವ ಹಲ್ಲಿ (ಡ್ರಾಕೋ ಡಸ್ಸಿಮಿಯೆರಿ) ಕಂಡು ಬಂದಿದೆ.

ಕಿಲೋನಿಯದ ಪ್ರತಿನಿಧಿಗಳೇ ಆಮೆಗಳು. ಇವು ನದಿ, ಕಾಲುವೆ, ಕೆರೆಗಳಲ್ಲಿ ವಾಸಿಸುತ್ತವೆ. ಹಾಗೂ ಕೆಲವು ಬಗೆಗಳು ಭೂಮಿಯ ಮೇಲೂ ಜೀವಿಸುತ್ತವೆ ಮತ್ತೆ ಕೆಲವಕ್ಕೆ ಸಾಗರಗಳೇ ತವರು ಪ್ರದೇಶ. ಮಲೆನಾಡಿನ ಬೆಟ್ಟಗುಡ್ಡಗಳಲ್ಲಿ ಜೀವಿಸುವ ನೆಲದ ಆಮೆ ಟೆಸ್ಟುಡೋ ಎಲೆಗಾನ್ಸ್. ನದಿ ಮತ್ತು ಜೌಗು ಪ್ರದೇಶದಲ್ಲಿ ವಾಸಿಸತಕ್ಕ ನೀರಾಮೆಗಳು ಟ್ರೈಯೋನಿಕ್ಸ್ ಲೆಯಿತಿ ಪ್ರಭೇದಕ್ಕೆ ಸೇರಿದವು. ಇವುಗಳ ಚಿಪ್ಪನ್ನು ಮೃದು ಚರ್ಮ ಮುಚ್ಚಿರುತ್ತದೆ. ಕಾಲುಬೆರಳುಗಳು ಪ್ರತ್ಯೇಕವಾಗಿರುತ್ತವೆ. ನದಿ ಕಾಲುವೆಗಳಲ್ಲಿ ವಾಸಿಸುವ ನೀರಾಮೆಗಳು ಜಿಯೋಮೈಡ ಟ್ರೈಜುಗ ಜಾತಿಗೆ ಸೇರಿವೆ. ಇವುಗಳ ಕಾಲುಬೆರಳುಗಳ ಮಧ್ಯೆ ಜಲಪಾದಗಳಿವೆ. ಚಿಪ್ಪನ್ನು ಕೊಂಬಿನ ಫಲಕಗಳು ಮುಚ್ಚಿವೆ. ಇವು ತಮ್ಮ ತಲೆಯನ್ನು ಸಂಪೂರ್ಣವಾಗಿ ಚಿಪ್ಪಿನ ಒಳಭಾಗಕ್ಕೆ ಎಳೆದುಕೊಳ್ಳಬಲ್ಲವು.

ಕನ್ನಡ ನಾಡಿನಲ್ಲಿ ಹಾವುಗಳಿಗೆ ಬರವಿಲ್ಲ–ವಿಷರಹಿತ ಮತ್ತು ವಿಷಪೂರಿತ ಹಾವುಗಳೆರಡೂ ಇವೆ. ವಿಷರಹಿತ ಹಾವುಗಳಲ್ಲಿ ಟಿಫ್ಲಾಪ್ಸ್ ಬ್ರಾಮಿನಸ್ ಎಂಬುದು ಅತ್ಯಂತ ಚಿಕ್ಕ ಹಾವು. ಇದು ಬೆಂಗಳೂರು ಜಿಲ್ಲೆಯಲ್ಲಿ ಕಂಡುಬರುತ್ತದೆ. 17–18 ಸೆಂಮೀ ಉದ್ದ ಬೆಳೆಯುತ್ತದೆ. ಹೆಬ್ಬಾವು ಅಥವಾ ದಾಸರಹಾವು (ಪೈಥಾನ್ ಮಾಲ್ಯುರಸ್) ಕನ್ನಡ ನಾಡಿನಲ್ಲಿ ಅತ್ಯಂತ ದೊಡ್ಡದಾಗಿ ಬೆಳೆಯುವ ಹಾವು. ತೇವಮಯವಾದ ಬಂಡೆಗಳಿಂದ ಕೂಡಿದ ಮೈದಾನ ಪ್ರದೇಶಗಳಲ್ಲಿ ಇದು ಗರಿಷ್ಠ 700 ಸೆಂಮೀ ಉದ್ದ ಬೆಳೆಯಬಹುದು. ನೇತ್ರಗೊಡ್ಡಿ ಹಾವು (ಎರಿಕ್ಸ್ ಕೋನಿಕಸ್) ಕರ್ನಾಟಕದಾದ್ಯಂತ ಕಂಡುಬರುವ ಹಾವು. ಬೂದಿಮಿಶ್ರಿತ ಪಾಟಲ ವರ್ಣದ ಮೈಮೇಲೆ ದೊಡ್ಡ ದೊಡ್ಡ ಕಂದುಬಣ್ಣದ ಮಚ್ಚೆಗಳಿಂದ ಇದನ್ನು ಗುರುತಿಸಬಹುದು. ಕಣ್ಣುಗಳು ಬಲು ಚಿಕ್ಕವು. ಸಾಮಾನ್ಯವಾಗಿ ಮರಳು ತುಂಬಿದ ಭೂಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಹುದುಗಿರುತ್ತದೆ. ಬಾಲ ಮೋಟು, ಯೂರೋಪಿಲ್ಟಿಡೀ ಕುಟುಂಬಕ್ಕೆ ಸೇರಿದ ಮೆಲನೋಫಿಡಿಯಂ ಜಾತಿಯ ಎರಡು ಪ್ರಭೇದಗಳು ಕೊಡಗು ಜಿಲ್ಲೆಯಲ್ಲಿ ಸಿಗುತ್ತವೆ. ಪ್ಲೆಕ್ಟುರಸ್ ಕನಾರಿಕಸ್, ಯೂರೋಪಿಲ್ಟಿಡ್ ಓಸೆಲ್ಲೆಟಸ್, ಯೂ. ಆರ್ಕ್ಟಿಸೆಪ್ಸ್, ಯೂ. ರೂಬ್ರೊಲೀನಿಯೇಟಸ್, ಯೂ. ಫಿಪ್ಸೋನಿ, ಯೂ. ಮೈಹೇಂದ್ರೆ, ಯೂ. ಮ್ಯಾಕುಲೇಟಸ್ ಜಾತಿಯ ಹಾವುಗಳು ನಮ್ಮ ಪಶ್ಚಿಮಘಟ್ಟದ ಕಾಡುಗಳಲ್ಲಿ ಇವೆ.

ಕೊಲಂಬ್ರಿಡೀ ಕುಟುಂಬದ ಕೇರೆ ಹಾವು (ಟಿಯಸ್ ಮೂಕೋಸಸ್) ಕರ್ನಾಟಕದಾದ್ಯಂತ ಉಂಟು. ಇದು ಮರವನ್ನು ಸ್ವಲ್ಪ ಹತ್ತಬಲ್ಲುದು. ಆಗಾಗ್ಗೆ ಕಪ್ಪೆ ಇಲಿಗಳನ್ನು ತಿನ್ನಲು ಕಣಜಗಳನ್ನು ಹೊಗುವುದುಂಟು. ಈ ಹಾವು ನಾಗರಹಾವಿನೊಡನೆ ಸಂಭೋಗ ಬೆಳೆಸಿ ಸಂತಾನೋತ್ಪತ್ತಿ ಮಾಡುತ್ತದೆಯೆಂಬ ನಂಬಿಕೆಗೆ ಯಾವ ಸಾಕ್ಷ್ಯಾಧಾರಗಳೂ ಇಲ್ಲ. ಪಟ್ಟೆ ಹಾವು ಓಲಿಗೊಡಾನ್ ವೆನೂಸ್ಟಸ್ ಪಶ್ಚಿಮಘಟ್ಟಗಳಲ್ಲಿಯೇ ಅಲ್ಲದೆ ಮಲೆನಾಡಿನ ಜಿಲ್ಲೆಗಳಲ್ಲಿಯೂ ಇದೆ. ಇದರ ಮೈ ಮೇಲಿನ ಪಟ್ಟೆಗಳು ಕಟ್ಟುಹಾವಿನಂತೆ ಕಂಡುಬರುತ್ತವೆ. ಇದೇ ಜಾತಿಯಲ್ಲಿನ ನಾಲ್ಕು ಪ್ರಭೇದಗಳೂ (ಟ್ರಾವಂಕೂರೆನ್ಸಿಸ್, ಅಫಿನಿಸ್, ಆರ್ನೆನ್ಸಿಸ್ ಮತ್ತು ಬ್ರೆವಿಕಾಡ) ನಮ್ಮ ನಾಡಿನಲ್ಲಿ ಇವೆ. ಪಶ್ಚಿಮತೀರಕ್ಕೆ ಹರಿಯುವ ನದಿಗಳ ಅಳವೆಗಳಲ್ಲಿ ನರೂಲಿ ಹಾವು (ಆಕ್ರೋಕೊರ್ಡುಪ್ ಗ್ರಾನುಲೇಟಸ್) ವಾಸಿಸುತ್ತದೆ. ಇದು ನೀರಿನಲ್ಲಿ ಚೆನ್ನಾಗಿ ಈಜಲಾರದು. ಅಲ್ಲಿನ ಬೆಸ್ತರಿಗೆ ಮೀನು ಹಿಡಿಯುವ ಬಲೆಗಳಿಗೆ ಆಗಾಗ್ಗೆ ಇದು ಸಿಕ್ಕಿಹಾಕಿಕೊಳ್ಳುತ್ತಿರುತ್ತದೆ. ಇದು ಮೊಟ್ಟೆಗಳನ್ನಿಡುವುದರ ಬದಲು ಒಮ್ಮೆಗೆ 6–8 ಮರಿಗಳನ್ನು ಈಯುತ್ತದೆ. ಕರೀಹಸುರು ಹಾವು (ಕ್ರೈಸೋಪೆಲಿಯ ಓರ್ನಾಟ) ಎಂಬುದು ಪಶ್ಚಿಮಘಟ್ಟದ ಕಾಡುಗಳಲ್ಲಿ ಇದೆ. ತಲೆ ಸಾಮಾನ್ಯವಾಗಿ ಕಪ್ಪು ಬಣ್ಣ. ಅದರ ಮೇಲೆ ಹಳದಿಯ ಅಥವಾ ಹಸಿರಿನ ಅಡ್ಡಾದಿಡ್ಡಿ ಮಚ್ಚೆಗೆರೆಗಳು. ಮರಗಳ ಕೊಂಬೆಗಳಿಗೆ ತನ್ನ ದೇಹದಿಂದ ಸುರುಳಿಸುತ್ತಿ ತೂಗಾಡುವುದು ಇದರ ವೈಶಿಷ್ಟ್ಯ. ಆಗಾಗ್ಯೆ ವಸತಿಗೃಹಗಳನ್ನು ಪ್ರವೇಶಿಸುವ ತೋಟದ ಹಾವಿಗೆ ಲೈಕೊಡಾನ್ ಆಲಿಕಸ್ ಎಂದು ಹೆಸರು. ಇದು ಸಾಮಾನ್ಯವಾಗಿ ನಿಶಾಚರಪ್ರಾಣಿ. ಮರಗಳನ್ನು ಸುಲಭವಾಗಿ ಹತ್ತಬಲ್ಲುದು. ಭೂಮಿಯ ಮೇಲೆ ಅದು ಚುರುಕಿನಿಂದ ಹರಿದಾಡಲಾರದು. ಚೌಕಳಿ ಹಾವು. ಒಳ್ಳೆ ಹಾವು ಅಥವಾ ನೀರು ಹಾವು (ನಾಟ್ರಿಕ್ ಪಿಸ್ಕಟಾರ್) ನೀರ ವಸತಿಯ ಬಳಿ ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಬತ್ತದ ಗದ್ದೆಗಳನ್ನು ಪ್ರವೇಶಿಸುವುದುಂಟು. ಹಸಿರು ಕಟ್ಟಿನ ಹಾವು (ಮ್ಯಾಕ್ರೋಪಿಸ್ಥೊಡಾನ್ ಪ್ಲಂಬಿಕೊಲಾರ್) ಬೆಟ್ಟಗುಡ್ಡಗಳಿರುವ ಮೈದಾನ ಪ್ರದೇಶಗಳಲ್ಲಿ ಆಗಾಗ್ಗೆ ಕಂಡುಬರುತ್ತದೆ. ಇದನ್ನು ಕೆಣಕಿದರೆ ನಾಗರಹಾವಿನಂತೆ ಹೆಡೆ ಎತ್ತುತ್ತದೆ. ಎರಡು ಬಗೆಯ ಚೆಂಗಿ ಹಾವುಗಳು ಕನ್ನಡ ನಾಡಿನಲ್ಲಿವೆ. ಒಂದು ಬೊಯ್ಗ ಟ್ರೈಗೊನೇಟ ಮತ್ತು ಬೊ. ಸಿಲೋನೆನ್ಸಿಸ್. ಮೊದಲನೆಯದು ನಾಡಿನಾದ್ಯಂತ ಕಂಡುಬಂದರೆ ಎರಡನೆಯದು ಪಶ್ಚಿಮಘಟ್ಟಗಳಿಗೆ ಸೀಮಿತವಾಗಿದೆ. ಹಸಿರು ಎಲೆ ಹಾವು ಅಥವಾ ಹಸಿರು ಹಾವು (ಡ್ರೈಯೋಫಿಸ್ ನಾಸೂಟಸ್)

ಕಾಡುಹಂದಿ

ಎಲ್ಲ ಕಡೆಯೂ ಉಂಟು. ಇದರ ವಾಸ ಸಾಮಾನ್ಯವಾಗಿ ಹಸುರು ತುಂಬಿದ ಬೇಲಿ, ಎತ್ತರವಾಗಿ ಬೆಳೆದ ಹುಲ್ಲು. ದೇಹ ಬಲು ಉದ್ದ. ಸುಮಾರು 194 ಸೆಂಮೀ. ಇವೇ ಅಲ್ಲದೆ ಇನ್ನೂ ಇತರ ವಿಷರಹಿತ ಹಾವುಗಳು (ಕೊಲುಬೆರ್, ಲಿಯೋಪೆಲ್ಟಿಸ್, ಕೋರೋನೆಲ್ಲ, ಅಹೆಟುಲ್ಲ ಇತ್ಯಾದಿ) ಈ ರಾಜ್ಯದಲ್ಲಿವೆ. ಅತ್ಯಂತ ವಿಷಪೂರಿತ ಹಾವುಗಳ ಸಂಖ್ಯೆ ಕಡಿಮೆಯಾಗಿದ್ದರೂ ಅವುಗಳ ಅಪಾಯದ ಪ್ರಭಾವ ಬಹಳ ದೊಡ್ಡದು. ನಾಡಿನ ಕಡಲ ನೀರಿನಲ್ಲಿ ವಾಸಿಸುವ ಕಡಲ ಹಾವುಗಳು ಅತ್ಯಂತ ವಿಷಪೂರಿತವಾದುವು. ಇವುಗಳ ಬಾಲ ಹುಟ್ಟಿನಂತೆ ಚಪ್ಪಟೆಯಾಗಿದ್ದು ಚಲನೆಗೆ ಬಲು ನೆರವಾಗುತ್ತವೆ. ಹೈಡ್ರೋಫಿಸ್ ಸಿರುಲೆಸೆನ್ಸ್ ಜಾತಿಯ ಕಡಲ ಹಾವು ಸಾಮಾನ್ಯವಾಗಿ ಬೆಸ್ತರ ಮೀನು ಬಲೆಗೆ ಬೀಳುತ್ತದೆ. ಭೂಮಿಯ ಮೇಲೆ ಇದು ನಿಸ್ಸಹಾಯಕ. ಬೆಸ್ತರು ಬಲೆಗೆ ಬಿದ್ದ ಈ ಹಾವುಗಳನ್ನು ಕೈಗಳಿಂದಲೇ ಹಿಡಿದು ನೀರಿಗೊ ದಡಕ್ಕೊ ಬಿಸಾಡುತ್ತಾರೆ. ಇದೇ ಅಲ್ಲದೆ ಲಾಟಿಕೌಡ, ಪ್ರೆಸ್ಕುಟಾಟ, ಎನ್ಹೈಡ್ರಿನ, ಹೈಡ್ರೋಫಿಸ್, ಲಾಪೆಮಿಸ್, ಮೈಕ್ರೋಸೆಫಾಲೋಫಿಸ್ ಮತ್ತು ಪೆಲಾಮಿಸ್ ಜಾತಿಯ ಕಡಲ ಹಾವುಗಳು ನಾಡಿನ ಕಡಲಿನಲ್ಲಿ ದೊರಕುತ್ತವೆ. ಕಟ್ಟುಹಾವು ಅಥವಾ ಕಡಂಬಳ (ಕ್ರೈಟ್, ಬಂಗಾರಸ್ ಸಿರೂಲಿಯಸ್) ನಾಡಿನಾದ್ಯಂತ ಕಂಡುಬರುತ್ತದೆ. ಇದರ ದೇಹದ ಬಣ್ಣ ಕಪ್ಪು ಮಿಶ್ರಿತವಾದ ನೀಲಿ. ಬಿಳಿಯ ಕಟ್ಟುಗಳು ದೇಹದಾದ್ಯಂತ

ಹರಡಿವೆ. ನಾಗರಹಾವು (ನಾಜ ನಾಜ) ಹೆಡೆಯೆತ್ತಿ ಆಡುವ ವಿಷಸರ್ಪ. ಇದು ಸಾಕಷ್ಟು ಇದೆ. ಕೃಷ್ಣಸರ್ಪ ಅಥವಾ ಕಾಳಿಂಗಸರ್ಪ (ನಾಜ ಹನ್ನ) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇದೆ. ನಾಗರಹಾವಿಗೆ ಹೆಡೆಯ ಮೇಲೆ ಕನ್ನಡಕದಂಥ ಮಚ್ಚೆಯುಂಟು. ಕೃಷ್ಣ ಸರ್ಪದ ತಲೆಯ ಹಿಂದಿನ ದೇಹಭಾಗದ ಸುತ್ತು 10–15 ಬಿಳಿಯ ಪಟ್ಟೆಗಳಿವೆ. ಇದು 540 ಸೆಂಮೀ ವರೆಗೂ ಬೆಳೆಯಬಲ್ಲುದು.

ಮಂಡಲದ ಹಾವಿಗೆ (ರಸ್ಸೆಲ್ಸ್ ವೈಪರ್) ಕನ್ನಡಿ ಹಾವು, ಬಲಿವಡಕ ಹಾವು ಎಂಬ ಪರ್ಯಾಯ ಹೆಸರುಗಳೂ ಇವೆ. ಇದರ ವೈಜ್ಞಾನಿಕ ನಾಮ ವೈಪೆರ ರಸ್ಸೇಲಿ. ಇದು ನಮ್ಮ ನಾಡಿನಾದ್ಯಂತ ಸಾಮಾನ್ಯವಾಗಿ ಕಂಡುಬರುತ್ತದೆ. ಬೂದು ದೇಹದ ಮೇಲೆ ಮೂರು ಸಾಲಿನಲ್ಲಿ ದೊಡ್ಡ ದೊಡ್ಡ ಮಚ್ಚೆಗಳಿವೆ. ಬೆನ್ನಿನ ಮೇಲಿರುವ ಮಚ್ಚೆಗಳು ಪಕ್ಕದ ಮಚ್ಚೆಗಳಿಗಿಂತ ಸ್ವಲ್ಪ ದೊಡ್ಡವು. ಸಾಮಾನ್ಯವಾಗಿ ಬಂಡೆಗಳ ಹಾಗೂ ಪೊದೆಗಳ ಬಳಿಯ ಪರಿಸರದ ಬಣ್ಣದಂತೆಯೇ ಕಂಡುಬರುತ್ತದೆ. ಇದು ಮೂರು ದಿನಗಳ ಹೆರಿಗೆಯಲ್ಲಿ 97 ಮರಿಗಳನ್ನು ಹೆರಬಲ್ಲುದು ಕಲ್ಲು ಹಾವು (ಎಕಿಸ್ ಕ್ಯಾರಿನೇಟಸ್) ಮಂಡಲದ ಹಾವಿನ ಹತ್ತಿರ ಸಂಬಂಧಿ; ನಾಡಿನಾದ್ಯಂತ ಹರಡಿದೆ. ತಲೆಯ ಮೇಲಿನ ಬಾಣದ ಗುರುತಿನಿಂದ ಸುಲಭವಾಗಿ ಇದನ್ನು ಗುರುತಿಸಬಹುದು. ದೇಹ ಬಣ್ಣ ಬೂದುಮಿಶ್ರಿತವಾಗಿದೆ, ತಳಭಾಗ ಬಿಳುಪು. ದೇಹದ ಮೇಲೆ ಅಲೆಅಲೆಗಳ ವಿನ್ಯಾಸದಂತಿರುವ ಎರಡು ರೇಖೆಗಳು ತಲೆಯಿಂದ ಕಾಲಿನವರೆಗೂ ವ್ಯಾಪಿಸಿದೆ. ಇದು ಕೂಡ ಮರಿಗಳನ್ನು ಈನತಕ್ಕ ಹಾವು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಆಗಾಗ್ಯೆ ಪಶ್ಚಿಮ ಘಟ್ಟಗಳಲ್ಲಿ ಕಂಡುಬರುವ ಹಸುರು ಮಂಡಲದ ಹಾವು (ಟ್ರೈ ಮೆರೆಸುರಸ್ ಗ್ರಾಮಿನೆಯಸ್) ಸಾಮಾನ್ಯವಾಗಿ ಹುಲ್ಲು ಅಥವಾ ಬಿದಿರು ಮೆಳೆಗಳಲ್ಲಿ ಆಸರೆ ಪಡೆದು ಪರಿಸರದಲ್ಲಿ ಐಕ್ಯವಾಗಿರುತ್ತದೆ. ಇದೂ ಕೂಡ ಮರಿಗಳನ್ನು ಈನುತ್ತದೆ. ಟ್ರೈಮೆರೆಸುರಸ್ ಜಾತಿಗೆ ಸಂಬಂಧಿಸಿದಂತೆ ಅದರ ಇತರ ಮೂರು (ಮ್ಯಾಕ್ರೋಲೆಪಿಸ್, ಮಲಬಾರಿಕಸ್, ಸ್ಟ್ರಿಗೇಟಸ್) ಪ್ರಭೇದಗಳು ಕಂಡುಬರುತ್ತವೆ. ಉತ್ತರ ಕರ್ನಾಟಕದ ಸರಹದ್ದಿನಲ್ಲಿರುವ ಗೂನು ಮೂಗಿನ ಮಂಡಲದ ಹಾವು (ಆನ್ಸಿಸ್ಟ್ರೊಡಾನ್ ಹಿಪ್ನಾಲೆ) ಕೂಡ ವಿಷಪೂರಿತ ಹಾವು.

ಅಂಫೀಬಿಯ ವರ್ಗದ ಪ್ರತಿನಿಧಿಯಾಗಿ ಕಪ್ಪೆ, ನೆಲಗಪ್ಪೆ, ಹಿತ್ತಲಮಂಡಲ, ರಾನಹೈಲ, ನನ್ನೊಬಟ್ರಾಕಸ್, ಫಿಲೋಟಸ್, ರಾಮನೆಲ್ಲ. ಮೈಕ್ರೊಹೈಲ ಮೊದಲಾದ ಜಾತಿಯ ಕಪ್ಪೆಗಳೂ ಬ್ಯೂಫೋ, ಯೂಪರೂಡಾನ್ ಮೊದಲಾದ ನೆಲಗಪ್ಪೆಯ ಜಾತಿಗಳೂ ಕಂಡುಬರುತ್ತವೆ. ಕಾಲುಗಳಿಲ್ಲದ ಭೂ ಜಲಚರಿ ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದಲ್ಲಿ ಸಿಗುವ ಹಿತ್ತಲ ಮಂಡಲ (ಇಕ್ತಿಯೋಫಿಸ್ ಗ್ಲೊಟಿನೋಸಸ್). ಇದು ಜೌಗು ಪ್ರದೇಶದಲ್ಲಿ ಬಿಲದಲ್ಲಿ ಹುದುಗಿ ಜೀವಿಸುತ್ತದೆ. ಹೆಣ್ಣು ಸಂತಾನೋತ್ಪತ್ತಿ ಕಾಲದಲ್ಲಿ ಮೊಟ್ಟೆಗಳ ಗೊಂಚಲಿನ ಸುತ್ತ ತನ್ನ ದೇಹವನ್ನು ಸುರುಳಿಯಂತೆ ಸುತ್ತಿ ಸಂತಾನ ಪಾಲನೆ ಮಾಡುತ್ತದೆ.

ಮೀನಿನ ಸಂಪತ್ತು ಕರ್ನಾಟಕದಲ್ಲಿ ಅಧಿಕ. ನಾನಾ ತೆರದ ಮೀನುಗಳು ಕಡಲು, ನದಿ, ಕೆರೆ, ಕಟ್ಟೆ ಮೊದಲಾದುವುಗಳಲ್ಲಿ ದೊರಕುತ್ತವೆ. ಸಿಹಿನೀರಿನಲ್ಲಿ ಸಾಮಾನ್ಯವಾಗಿ ಬರಿಯ ಎಲುಬು ಮೀನುಗಳು ಕಂಡು ಬಂದರೆ, ಕಡಲಿನ ಉಪ್ಪು ನೀರಿನಲ್ಲಿ ಎಲುಬು ಮತ್ತು ಮೆಲ್ಲೆಲುಬು ಮೀನುಗಳೆರಡೂ ಜೀವಿಸುತ್ತವೆ.

ಕಡಲಿನ ಮೆಲ್ಲೆಲುಬು ಮೀನುಗಳು ವಿವಿಧ ಬಗೆಯವು. ಇವುಗಳಲ್ಲಿ ನೇರವಾಗಿ ಮರಿಗಳನ್ನೇ ಹೆರುವಂಥ ಸೊರಮೀನು ಅಥವಾ ಚಾಟೇಮೀನು (ಸ್ಕೋಲಿಯೋಡಾನ್), ಕೊಡತಿಮೀನು (ಲೈಗೋನಬ್ಲಾಕಿ) ಮತ್ತು ಹುಲಿಮೀನು (ಸ್ಟೀಗೋಸ್ಟೋಮ) ಮೊದಲಾದುವೂ ಮೊಟ್ಟೆಗಳನ್ನಿಡುವಂಥ ಚಿಟ್ಟೆಮೀನು (ರೇ ಫಿಷ್), ನೀರುಮಂದಿ ಮೀನು (ಸ್ಕೇಟ್), ಗರಗಸ ಮೀನು (ಪ್ರಿಸ್ಟಿಸ್) ಮುಂತಾದವೂ ಮುಖ್ಯವಾದುವು. ಇವುಗಳಲ್ಲಿ ಕೆಲವನ್ನು ಆಹಾರವಾಗಿ ಬಳಸುತ್ತಾರೆ. ದೊಡ್ಡ ಗಾತ್ರದವುಗಳ ಈಲಿಯಿಂದ ಎಣ್ಣೆಯನ್ನು ತೆಗೆಯುತ್ತಾರೆ. ಎಲುಬು ಮೀನುಗಳಲ್ಲಿ ಮುಖ್ಯವಾದುವು ಇವು – ಮ್ಯಾಕರಲ್, ಬೈಗೆ ಅಥವಾ ಬೂತಾಯಿ (ಸಾರ್ಡಿನ್), ಬಂಗಡ (ಸ್ಕ್ಯಾಂಬರ್ ಮೈಕ್ರೋಲೆಪಿಡೋಟಸ್) ಥೇಡೆ (ಈರಿಯಸ್ ಡಸ್ಸುಮಿಯರಿ), ದೊರಸ್ (ಕೈರೋ ಸೆಂಟ್ರಸ್ ದೊರಸ್) ಮಲೆಟ್, ಪಾಂಫ್ರೆಟ್ (ಸ್ಟ್ರನೇಟಿಯಸ್), ಒಂದು ಬಗೆಯ ಹಾವು ಮೀನು (ಓಫಿಕ್ತಿಸ್ ಬೋರೊ) ಮತ್ತು ಟ್ಯೂನ. ಇವುಗಳಲ್ಲಿ ಬಲುರುಚಿಯಾದ ಮೀನುಗಳೆಂದು ಹೆಸರಾದ ಮ್ಯಾಕರಲ್, ಬೈಗೆ, ಬಂಗಡ ಮುಂತಾದುವನ್ನು ಬೆಸ್ತರು ಮಾರಿ ಬಲೆಗಳನ್ನು ಬೀಸಿ ರಾಶಿಗಟ್ಟಲೆಯಾಗಿ ಹಿಡಿಯುತ್ತಾರೆ. ಕಡಲು ಮೀನುಗಳೆಲ್ಲ ಹೆಚ್ಚಾಗಿ ಸಮುದ್ರದ ಉಪ್ಪು ನೀರಿಗೇ ಸೀಮಿತವಾಗಿದ್ದರೂ ಕೆಲವು ಬಾರಿ ನದೀಮುಖಜ ಪ್ರದೇಶಗಳಲ್ಲೂ ಕಂಡುಬರುವುದುಂಟು.

ನದಿಗಳಲ್ಲಿ ದೊರಕುವ ಮೀನುಗಳಲ್ಲಿ ಮುಖ್ಯವಾದುವು ಇವು– ಕಾರ್ಪ್, ಕಟ್ಲ ಮೀನು (ಕಾಟ್ಲ ಕಾಟ್ಲ), ರೋಹಮೀನು ಅಥವಾ ಮಂಡಕಾರ್ಲು (ಲೇಬಿಯೊ ರೋಹಿತ), ಕೆಮ್ಮೀನು (ಲೇಬಿಯೊ ಫಿಂಬ್ರಿಯೇಟಸ್), ಕುರಿಮೀನು (ಲೇ. ಕಾಲ್ಬಸ್), ಕಮ್ಮಚ್ಚಲು (ಲೇ. ಕಲ್ಬಾಸು), ಮಹಶೀರ್ ಮೀನು (ಬಾರ್ಬಸ್), ಕನ್ನಡಿ ಮೀನು (ಮಿರರ್ ಕಾರ್ಪ್), ಗೆಂಡೆಮೀನು (ಪಂಕ್ಟಿಯಸ್ ಕರ್ನಾಟಿಕಸ್), ಕೂರಲು ಮೀನು (ಪಂ. ಡೂಬಿಯಸ್) ಬೆಟ್ಟಗುಡ್ಡಗಳ ಝರಿಗಳಲ್ಲಿ ಅರ್ಜಮೀನು (ಸಿರಿನ ರೇಬ ಮತ್ತು ಸುರಾಯಿ ಅಥವಾ ಮೃಗಾಲಮೀನು (ಸಿ. ಮೃಗಾಲ) ಸಿಕ್ಕುತ್ತವೆ. ಮೀಸೆ ಮೀನು (ಕ್ಯಾಟ್ ಫಿಷ್), ಬಾಳೆಮೀನು (ವಲಾಗೊ ಅಟ್ಟು), ಕೆತ್ತಲು ಮೀನು (ಮಿಸ್ಟಸ್ ಜಾತಿ) ಮೊದಲಾದ ದೊಡ್ಡ ಗಾತ್ರದ ಮೀನುಗಳೂ ಚೇಳುಮೀನು (ಹೆಟರೋ ನ್ಯೂಸ್ಟಸ್ ಫಾಸಿಲಿಸ್), ಆಣಿ ಮೀನು (ಕ್ಲೇರಿಯಸ್ ಜಾತಿ) ಮುಂತಾದ ಸಣ್ಣಗಾತ್ರದ ಮೀನುಗಳೂ ಕೆರೆ ಕಟ್ಟೆಗಳಲ್ಲಿ ಸಾಮಾನ್ಯ. ಸಣ್ಣಗಾತ್ರದ ಮೀನುಗಳು ತಮ್ಮಲ್ಲಿನ ಅನುಷಂಗಿಕ ಶ್ವಸನಾಂಗಗಳ ಸಹಾಯದಿಂದ ಗಾಳಿಯನ್ನೇ ನೇರವಾಗಿ ಉಸಿರಾಡಬಲ್ಲವು. ಹರಿಯುವ ನದಿ ತೊರೆಗಳಲ್ಲೂ ಕೆರೆ ಕಟ್ಟೆಗಳಲ್ಲೂ ಜೀವಿಸುವ ಮೀನುಗಳೂ ಇವೆ; ಚೌಲುಮೀನು (ಚಾನಾ ಮರೂಲಿಯಸ್), ಕೊರವಮೀನು (ಚಾ. ಸ್ಟ್ರಯೇಟಸ್) ಕುಚ್ಚುಮೀನು (ಚಾ. ಗೌಡ), ಹೂವುಮೀನು (ಚಾ. ಪಂಕ್ಟೇಟಸ್), ಹಾವು ಮೀನು (ಮಸ್ಟಸೆಂಬ್ಲಸ್ ಪಂಕಾಲಸ್), ಚಪ್ಪಲುಮೀನು (ನೋಟಾಪ್ಟೆರಸ್), ಬೆಳಚಿಮೀನು (ಚೇಲ), ಅಗಸಗಿತ್ತಿಮೀನು (ಬಾರಿಲಿಯಸ್)– ಇವು ಮುಖ್ಯವಾದವು. ಸಿಹಿನೀರಿನ ಮೀನುಗಳಲ್ಲಿ ಬಹುಬಗೆಯವು ತಿನ್ನಲು ಯೋಗ್ಯವಾದುವಾದರೂ ಕಾರ್ಪ್, ಮೀಸೆ ಮೀನು, ಬಾಳೆಮೀನು, ಗೆಂಡೆಮೀನು, ಔಲುಮೀನು, ಹಾವುಮೀನು, ಮಹಶೀರ್‌ಮೀನು ಬಲುರುಚಿಯಾದ ಮೀನುಗಳೆಂದು ಹೆಸರಾಗಿವೆ.

ಬೆನ್ನೆಲುಬಿಲ್ಲದ ಅಥವಾ ಅಕಶೇರುಕ ಪ್ರಾಣಿಗಳೂ ವಿಪುಲವಾಗಿವೆ. ಪ್ರೋಟೋಜೋವ ವಂಶದ ಅಮೀಬ ಯೋಗ್ಲಿನ, ಪ್ಯಾರಮೀಸಿಯಂ, ವೊರ್ಟಿಸೆಲ, ಯುಪ್ಲಾಟಿಸ್, ಸ್ಟೈಲೋನಿಕಿಯ ಮೊದಲಾದ ಹಲವು ಜೀವಜಾತಿಗಳು ಕೆರೆಕೊಳ ಮೊದಲಾದ ಜಲಾಶಯಗಳಲ್ಲಿ ಕಂಡುಬರುತ್ತವೆ. ಮಲೇರಿಯ ಕಾಯಿಲೆಗೆ ಕಾರಣವಾದ ಪ್ಲಾಸ್ಮೋಡಿಯಂ ಜಾತಿಯ ಪರತಂತ್ರ ಜೀವಿಗಳು ರಾಸಾಯನಿಕಗಳ ಪ್ರಭಾವದಿಂದ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿವೆ. ಇವೇ ಅಲ್ಲದೆ, ಇತರ ಜೀವಿಗಳ ದೇಹಗಳ ಪರತಂತ್ರ ಜೀವಿಗಳಾಗಿರುವ ಎಂಟಮೀಬ ಉಪಲ್ಯೆನ, ಬ್ಯಾಲು ಟೀಡಿಯಂ, ನಿಕ್ಟೋತೀರಸ್ ಮೊದಲಾದ ಪರತಂತ್ರ ಜೀವಿಗಳೂ ಕಂಡುಬರುತ್ತವೆ. ರೇಷ್ಮೆ ಹುಳುಗಳಿಗೆ ಉಪದ್ರವಕಾರಿಯಾದ ಕೆಲವು ಬಗೆಯ ಏಕಕೋಶಿಕ ಜೀವಿಗಳೂ ಇವೆ.

ಕೆಲವು ಬಗೆಯ ಸ್ಪಂಜು ಪ್ರಾಣಿಗಳು ಕಡಲಿನಲ್ಲಿ ದೊರೆಯುತ್ತವೆ. ಇವು ಸಣ್ಣ ಸಣ್ಣ ಗಿಡಗಳು ಬೆಳೆಯುವಂತೆ ನೀರಿನಲ್ಲಿ ಬೆಳೆಯುತ್ತವೆ. ಸೀಲೆಂಟರೇಟ ಗುಂಪಿನ ಪ್ರಾಣಿಗಳಲ್ಲಿ ಹೈಡ್ರ ಕೆರೆಕೊಳಗಳಲ್ಲಿ ಕಂಡುಬರುತ್ತದೆ. ಉಳಿದೆಲ್ಲ ಬಗೆಯ ಜೀವಿಗಳು ಕಡಲಿನಲ್ಲಿ ವಾಸಿಸುತ್ತವೆ. ಬಂಡೆಗೆ ಅಂಟಿಕೊಂಡು ನೀರಿನಲ್ಲಿ ವಾಸಿಸುವ ಕಡಲ ಹೂಗಳು (ಸೀ ಅನಿಮೋನು) ವರ್ಣರಂಜಿತವಾಗಿವೆ. ನದಿಮುಖಗಳಲ್ಲಿ ಕಡಲ ಕೆರೆಗಳಲ್ಲಿ ಜೆಲ್ಲಿಫಿಷ್ ಅಥವಾ ಅಂಬಲಿ ಮೀನುಗಳು ತೇಲುತ್ತಿರುವುದು ಸಾಮಾನ್ಯ ದೃಶ್ಯ.ಅಲ್ಲಿಯ ಆಸುಪಾಸು ಜನರು ಇದನ್ನು ಸೂರ್ಯನ ಸಿಂಬಳ ಎಂದು ಕರೆಯುವುದುಂಟು.

ಚಪ್ಪಟೆ ದೇಹದ ಪ್ರಾಣಿಗುಂಪಿನಲ್ಲಿ ವಿವಿಧ ಜಾತಿಯ ಸ್ವತಂತ್ರ ಜೀವಿಗಳನ್ನು ಜೌಗುಪ್ರದೇಶದಲ್ಲಿ ಕಲ್ಲುಗಳ ಕೆಳಗೆ ಹರಿದಾಡುವುದನ್ನು ಕಾಣಬಹುದು. ಪರತಂತ್ರ ಜೀವಿಗಳಾದ ಲಾಡಿಹುಳುಗಳೂ ಪಕ್ಷಿ, ಸ್ತನಿ ಮೊದಲಾದುವುಗಳ ಕರುಳಿನಲ್ಲೂ ಜೀವಿಸುತ್ತವೆ. ಇವನ್ನು ಕೋಲಾರ, ತುಮಕೂರು, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಕಾಣಬಹುದು. ಕುರಿಗಳ ಯಕೃತ್ತಿನಲ್ಲಿ ಪರತಂತ್ರ ಜೀವಿ ವಾಸಿಸುತ್ತವೆ. ದುಂಡುಹುಳುಗಳ ವಂಶದ ಜೀವಿಗಳೆಲ್ಲವೂ ಪರತಂತ್ರ ಜೀವಿಗಳು. ಆನೆಕಾಲು ರೋಗಕ್ಕೆ ಕಾರಣವಾದ ದುಂಡುಹುಳು ಕಡಲು ತೀರಪ್ರದೇಶಗಳ ಜಿಲ್ಲೆಗಳಲ್ಲಿ ವ್ಯಾಪಕವಾಗಿದೆ. ಶೇ. 90–95 ಜನರ ಹೊಟ್ಟೆಯಲ್ಲಿ ಜಂತುಹುಳು, ಗುದದ ಹುಳುಗಳು ಸಾಮಾನ್ಯ. ನಾರುಹುಣ್ಣಿನ ರೋಗವನ್ನುಂಟುಮಾಡುವ ಡ್ರಾಕಂಕ್ಯುಲಸ್ ಮೆಡಿನೆಸ್ಸಿಸ್ ಬಳ್ಳಾರಿ ಮತ್ತು ಚಿತ್ರದುರ್ಗಗಳಲ್ಲಿ ಹರಡಿವೆ. ಇದೇ ಅಲ್ಲದೆ ಸಸ್ಯವರ್ಗ ಮತ್ತು ಇತರ ಜೀವಿಗಳಲ್ಲಿ ಪರತಂತ್ರವಾಗಿರುವ ದುಂಡುಹುಳುಗಳು ಅನೇಕವಿವೆ.

ವಲಯವಂತವಂಶದ ಹುಳುಗಳ ಪ್ರತಿನಿಧಿಗಳು ಅನೇಕ ಜಾತಿಗಳಿಗೆ ಸಂಬಂಧಿಸಿವೆ. ಕಡಲಿನಲ್ಲಿರುವ ನೀರಿಸ್ ಮೊದಲಾದ ಸ್ವತಂತ್ರ ಜೀವಿಗಳು ಕಡಲ ತೀರದ ಬಂಡೆಗಳ ಬಿರುಕುಗಳಲ್ಲಿ ವಾಸಿಸುತ್ತವೆ. 10–15 ಬಗೆಯ ಎರೆಹುಳುಗಳಿವೆ. ಇವನ್ನು ಕೆಲವು ಕಡೆ ಭೂನಾಗವೆಂದೂ ಕರೆಯುವುದುಂಟು. ಜೌಗು ಪ್ರದೇಶದಲ್ಲಿ ಹಾಗೂ ನೀರಿನ ಆಸರೆಯಲ್ಲಿ ತಾತ್ಕಾಲಿಕ ಪರತಂತ್ರವಾಗಿ ಜೀವಿಸುವ ಜಿಗಣೆಗಳು ನಾಡಿನ ಹಲವೆಡೆ ದೊರೆತರೂ ಮಲೆನಾಡಿನ ಕಾಡುಗಳಲ್ಲಿ ಅವು ಅಧಿಕ. ಇವಕ್ಕೆ ಕಶೇರುಕಗಳ ರಕ್ತವೇ ಆಹಾರ. ಹಲವಾರು ಜಾತಿಯ ಬೇರೆ ಬೇರೆ ಬಗೆಯ ಜಿಗಣೆಗಳು ಮೃದ್ವಂಗಿ ಮೊದಲಾದ ಪ್ರಾಣಿಗಳಲ್ಲಿ ಜೀವನ ಸಾಗಿಸುವುದೂ ಕಂಡುಬರುತ್ತದೆ.

ಮೃದ್ವಂಗಿಗಳ ಪ್ರತಿನಿಧಿಗಳೂ ಅಪರಿಮಿತ. ಕಪ್ಪೆಚಿಪ್ಪಿನ ಪ್ರಾಣಿಗಳು ನದಿ ಮತ್ತು ದೊಡ್ಡ ಕೆರೆಗಳಲ್ಲಿ ವಾಸಿಸುತ್ತವೆ. ಪೈಲಜಾತಿಯ ಹಾಗೂ ಇತರ ಬಗೆಯ ಬಸವನ ಹುಳುಗಳು ಬೆಂಗಳೂರು ಮೈಸೂರು ಮಂಡ್ಯ ತುಮಕೂರು ಹಾಸನ ಜಿಲ್ಲೆಗಳ ತೋಟಗಳಲ್ಲಿ ಕೆರೆಕಾಲುವೆಗಳಲ್ಲಿ ಸರ್ವೇಸಾಧಾರಣವಾಗಿ ಕಂಡುಬರುವ ಪ್ರಾಣಿಗಳು. ಸಮುದ್ರದ ದಂಡೆಯಲ್ಲಿ ಮೃದ್ವಂಗಿಗಳ ವಿವಿಧ ಜಾತಿಗಳು ವಿಪುಲವಾಗಿವೆ. ಕೈಟಾನ್ ಎಂಬ ಮೃದ್ವಂಗಿ ಕಡಲ

ಬಂಡೆಗಳಿಗೆ ಅಂಟಿಕೊಂಡು ಜೀವಿಸುತ್ತವೆ. ವಿವಿಧ ಜಾತಿಯ ಶಂಖ ಪ್ರಾಣಿಗಳು ಕರ್ನಾಟಕದ ಕಡಲ ತೀರದಲ್ಲಿ ಬಹುವಾಗಿವೆ. ಬೆಸ್ತರ ಬಲೆಗೆ ಲಾಲಿಗೊ ಸೆಪಿಯ ಮೊದಲಾದ ಶಿರಪಾದಿಗಳು ಬೀಳುತ್ತವೆ. ದೊಡ್ಡ ದೊಡ್ಡ ಸೆಪಿಯಗಳನ್ನು ಕಡಲ ತೀರದ ಜನರು ಆಹಾರವನ್ನಾಗಿ ಉಪಯೋಗಿಸುವುದುಂಟು. ಕಂಟಕಚರ್ಮಿಗಳು, ಕಡಲತೀರಗಳಿಗೆ ಮಾತ್ರ ಸೀಮಿತ. ಮುಳ್ಳುಗೊಂಡೆ (ಸೀ ಅರ್ಚಿನ್) ಮತ್ತು ಪೆಡಸುನಕ್ಷತ್ರಗಳೇ (ಬ್ರಿಟಲ್‌ಸ್ಟಾರ್) ನಕ್ಷತ್ರಮೀನುಗಳಿಗಿಂತ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತವೆ. ಇವುಗಳ ಜಾತಿಯ ಸಂಖ್ಯೆಯೂ ಹೆಚ್ಚು. ಕಡಲ ಸೌತೆ, ಕಡಲ ಲಿಲ್ಲಿಗಳೂ ಕರ್ನಾಟಕದ ಕಡಲಿನಲ್ಲಿ ದೊರೆಯುತ್ತವೆ. ಸಂಧಿಪದಿ ವಂಶದ ಪ್ರಾಣಿಸಂಪತ್ತು ಹೇರಳವಾಗಿದೆ ; ಮತ್ತು ವಿಭಿನ್ನವಾಗಿದೆ. ಬಗೆಬಗೆಯ ಸಿಗಡಿ ಚಿಟ್ಟೆ, ಬೆಣಸ, ನಳ್ಳಿ, ಏಡಿ ಮೊದಲಾದವು ಈ ವಂಶಕ್ಕೆ ಸೇರಿದವು. ಇವು ಸಾಮಾನ್ಯವಾಗಿ ಮನುಷ್ಯನ ಆಹಾರ. ಕೀಟವರ್ಗದಲ್ಲಿ ಮನುಷ್ಯನ ದವಸಧಾನ್ಯಗಳಿಗೆ ಹಾಗೂ ಸಾಗುವಳಿ ಬೆಳೆಗಳಿಗೆ ಉಪದ್ರವವನ್ನುಂಟುಮಾಡುವ ಕೀಟಗಳಿವೆ. ಮಲೇರಿಯ, ಆನೆಕಾಲು ರೋಗ ಮೊದಲಾದ ಕಾಯಿಲೆಗಳನ್ನು ಹರಡುವ ಸೊಳ್ಳೆಗಳಿವೆ. ಮಿಡತೆ, ಮೊರವ, ಚಿಟ್ಟೆ ಮತ್ತು ಪತಂಗ, ಕೊಡತಿ ಹುಳು, ಜೀರುಂಡೆ ಮೊದಲಾದ ಕೀಟಗಳಲ್ಲಿ ಹಲವು ಬಗೆಯ ಜಾತಿಗಳಿವೆ. ಮಾನವನಿಗೆ ಉಪಕಾರಿಗಳಾದ ಜೇನುನೊಣ ಮತ್ತು ರೇಷ್ಮೆಹುಳು ಕೀಟವರ್ಗಕ್ಕೆ ಸೇರಿದವು. ಮೈಸೂರು, ಕೊಳ್ಳೇಗಾಲ, ನಂಜನಗೂಡು, ಚನ್ನಪಟ್ಟಣ, ರಾಮನಗರ ಮೊದಲಾದ ಮುಖ್ಯ ಊರುಗಳ ಮತ್ತು ಅದರ ಆಸುಪಾಸು ಹಳ್ಳಿಗಳಲ್ಲಿ ರೇಷ್ಮೆ ಹುಳುಗಳನ್ನು ಜನರು ಸಾಕಿ ಲಾಭ ಪಡೆದರೆ, ಕೊಡಗು, ಶಿವಮೊಗ್ಗಗಳನ್ನೊಳಗೊಂಡ ಮಲೆನಾಡಿನಲ್ಲಿ ನಿಶಾಚಾರಿಗಳಾದ ಜರಿ ಅಥವಾ ಶತಪದಿ (ಸ್ಕೊಲೋಪೆಂಡ್ರ) ಮನೆ ಮಠಗಳಲ್ಲಿ, ಬಯಲಿನಲ್ಲಿ ಕಂಡುಬರುತ್ತದೆ. ಇದು ಸಾಮಾನ್ಯವಾಗಿ ತೇವವಾಗಿರುವ ಶೀತಪ್ರದೇಶದಲ್ಲಿ ವಾಸಿಸುತ್ತದೆ. ಸಾವಿರಕಾಲು ಅಥವಾ ಚಿಗಟೆಗಳು ಬಯಲು ಜೀವಿಗಳು; ನಿಧಾನವಾಗಿ ನಡೆಯತಕ್ಕವು; ಮತ್ತು ಮುಟ್ಟಿದರೆ ಸುರುಳಿ ಸುತ್ತಿಕೊಂಡು ಉಂಡೆಯಾಗುವ ಪ್ರವೃತ್ತಿಯುಳ್ಳವು. ಉಣ್ಣೆ ಚಿಗಟಗಳು ನಾಯಿ ಹಸು ಮೊದಲಾದ ಸಸ್ತನಿಗಳ ಮೇಲೆ ಪರತಂತ್ರ ಜೀವನ ಸಾಗಿಸುವ ಜೀವಿಗಳು. ಜೇಡರಹುಳುಗಳ ಜೀವಜಾತಿಗಳಂತೂ ಅಧಿಕ ಸಂಖ್ಯೆಯಲ್ಲೇ ಕಂಡುಬರುತ್ತವೆ. ನೀಳಗಾಲಿನಗೋರ್ಕ ಹಾರ್ವೆಸ್ಟ್‌ಮ್ಯಾನ್ ಸಿಹಿನೀರಿನ ಮೇಲೆ ಮಂದೆಗೂಡಿ ವಾಸಿಸುತ್ತವೆ. ಇವನ್ನು ಬತ್ತ ಕಬ್ಬು ಮೊದಲಾದ ಸಾಗುವಳಿ ಪ್ರದೇಶದಲ್ಲಿ ಕಾಣಬಹುದು. ಚೇಳುಗಳಲ್ಲಿ ಎರಡು ಮೂರು ಬಗೆಗಳಿವೆ. ಅಡಕೆ, ತೆಂಗು, ಬಾಳೆತೋಟಗಳಲ್ಲಿ ಚಿಟ್ಟ ಚೇಳು ಸಾಮಾನ್ಯವಾಗಿ ದೊರಕುತ್ತವೆ. ಇವು ಚೇಳಿನಂತೆಯೇ ಇರುತ್ತವೆ. ಆದರೆ ಉದರ ಚಿಕ್ಕದು. ಕೊಂಡಿಯಿರುವುದಿಲ್ಲ.

ಹೀಗೆ ಕರ್ನಾಟಕದ ಪ್ರಾಣಿಸಂಪತ್ತು ವೈವಿಧ್ಯ ಹಾಗೂ ಸಂಪದ್ಭರಿತವಾಗಿದೆ.

(ಬಿ.ಎನ್.ಬಿ.)

**ಕರ್ನಾಟಕದ ಮೂರ್ತಿಶಿಲ್ಪ :** ಕರ್ನಾಟಕದಲ್ಲಿ ಪ್ರಶ.ಪೂ. 3ನೆಯ ಶತಮಾನದಲ್ಲಿ ರೂಢಿಗೆ ಬಂದ ಬೌದ್ಧಧರ್ಮ ಪ್ರಭಾವದಿಂದ ಮೂರ್ತಿ ಶಿಲ್ಪ ಹುಟ್ಟಿಕೊಂಡಿತೆಂಬ ವಾದವಿದೆ. ಅನಂತರ ಸಾತವಾಹನರ ಕಾಲದಲ್ಲಿ ಪ್ರೋತ್ಸಾಹ ದೊರಕಿದರೂ ಅವರೂ

ಸೋಮನಾಥಪುರದ ಕೇಶವ ದೇವಾಲಯ

ಕದಂಬರೂ ವೈದಿಕ ಧರ್ಮಾನುಯಾಯಿಗಳಾದ್ದರಿಂದ ಕ್ರಮೇಣ ಆ ಧರ್ಮ ಪ್ರಬಲಿಸಿ, ಬೌದ್ಧರ ವರ್ಚಸ್ಸು ನಶಿಸಿತು. ಆದರೂ ಕೆಲಪ್ರದೇಶಗಳಲ್ಲಿ– ಗುಲ್ಬರ್ಗ ಜಿಲ್ಲೆಯ ಸನ್ನತಿ (**ನೋಡಿ– ಸನ್ನತಿ**), ಬನವಾಸಿ ಪ್ರದೇಶಗಳಲ್ಲಿ–ಅವರ ಪ್ರಭಾವವಿದ್ದಿತು. 1065ರಲ್ಲಿ ಬಳ್ಳಿಗಾವೆಯಲ್ಲಿ ಸ್ಥಾಪಿತವಾದ ತಾರಾಭಗವತಿಯ ಮಂದಿರದ ತಾರಾಮೂರ್ತಿ ಸರ್ವಾಭರಣಭೂಷಿತೆಯಾಗಿ ಬಹಳ ಸುಂದರಳಾಗಿ ನಿರೂಪಿತಳಾಗಿದ್ದಾಳೆ.

ಕರ್ನಾಟಕದಲ್ಲಿ ಜೈನರ ಪ್ರಭಾವ ಹೆಚ್ಚು. ಗಂಗ, ಚಾಳುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳರ ಕಾಲದಲ್ಲಿ ಜೈನರು ಪ್ರಬಲರಾಗಿದ್ದು ಅವರ ಅಮೋಘವಾದ ಶಿಲ್ಪಗಳು ನಿರ್ಮಿತವಾದುವು. ಆದರೆ ಮೂರ್ತಿಶಿಲ್ಪಕ್ಕೆ ಪ್ರಾಶಸ್ತ್ಯ ದೊರಕಿದುದು ಹಿಂದೂ ಧರ್ಮದ ಆಶ್ರಯದಲ್ಲಿ. ಗಂಗ, ಚಾಳುಕ್ಯ, ರಾಷ್ಟ್ರಕೂಟರ ಕಾಲಗಳಲ್ಲಿ ಕ್ರಮೇಣ ವರ್ಧಿಸುತ್ತ ಬಂದ ಈ ಕಲೆ ಹೊಯ್ಸಳರ ಆಶ್ರಯದಲ್ಲಿ ಅತ್ಯುನ್ನತ ಶಿಖರವನ್ನು ಮುಟ್ಟಿತು. ಆ ಕಾಲದ ಶಿಲ್ಪಗಳನ್ನು ಅವುಗಳ ಅಲಂಕರಣ ವಿಧಾನಗಳನ್ನು ವಿದ್ವಾಂಸರು ಚಿನ್ನದಲ್ಲಿ ಅಕ್ಕಸಾಲಿಗರು ಮಾಡಬಹುದಾದ ಕುಸುರಿ ನಕಾಶೆ ಕೆಲಸಗಳಿಗೆ ಹೋಲಿಸಿದ್ದಾರೆ. ಮೂರ್ತಿಶಿಲ್ಪಗಳ ನೈಜತೆ ಮತ್ತು ಸೌಂದರ್ಯ ಅತ್ಯಮೋಘವಾಗಿವೆ. ಅನಂತರ ವಿಜಯನಗರ ಕಾಲದಲ್ಲಿ ಈ ನಯಗಾರಿಕೆ ಕಂಡು ಬರದಿದ್ದರೂ ಕಂಬಗಳ ಮೇಲೆ ಕುದುರೆ ಸವಾರರ, ದೇವತೆಗಳ ಮತ್ತು ಪುರಾಣದೃಶ್ಯಗಳ ಚಿತ್ರಣಗಳು ತಮ್ಮದೇ ಆದ ಘನತೆ ಸೌಂದರ್ಯಗಳನ್ನು ಸೂಸುತ್ತವೆ. ಇಕ್ಕೇರಿ ಮತ್ತು ಮೈಸೂರರಸರ ಆಶ್ರಯದಲ್ಲಿ ಹಲಕೆಲವು ಶಿಲ್ಪಗಳು ನಿರ್ಮಿತವಾದರೂ ಅವು ಹಳೆಯ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತವೆ.

ಗರುಡ

ಕರ್ನಾಟಕದಲ್ಲಿ ದೊರಕುವ ಅತ್ಯಂತ ಪುರಾತನ ಶಿಲ್ಪವೆಂದರೆ ಬನವಾಸಿಯ (**ನೋಡಿ– ಬನವಾಸಿ**) ಮಧುಕೇಶ್ವರ ದೇವಾಯಲದಲ್ಲಿ ರಕ್ಷಿಸಿಟ್ಟಿರುವ ನಾಗಶಿಲ್ಪ. ಇದು ಕ್ರಿ.ಶ. 2ನೆಯ ಶತಮಾನಕ್ಕೆ ಸೇರುತ್ತದೆ. 3ನೆಯ ಶತಮಾನಕ್ಕೆ ನಿರ್ದೇಶಿಸ ಬಹುದಾದ ತ್ರಿಮೂರ್ತಿ ಶಿಲ್ಪವೊಂದು ಗೋಕಾಕ ಜಲಪಾತದ ಬಳಿ ಇದೆ. ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿ ಸುಣ್ಣಕಲ್ಲಿನಲ್ಲಿ ಮಾಡಿದ ಶಿಲ್ಪಗಳಿದ್ದು ಅವುಗಳ ಮೇಲೆ 1 ರಿಂದ 3ನೆಯ ಶತಮಾನಗಳಿಗೆ ನಿರ್ದೇಶಿಸಬಹುದಾದ ಶಾಸನಗಳಿವೆ. ಅಮರಾವತಿ, ನಾಗಾರ್ಜುನಕೊಂಡಗಳ ಶೈಲಿಯ ಈ ಶಿಲ್ಪಗಳು ಸಮಕಾಲೀನ ಜನಜೀವನದ ಮೇಲೆ ಬೆಳಕು ಬೀರುತ್ತವೆ. ಆದಿಕಾಲದ ಕದಂಬ ಶೈಲಿಯ ಶಿಲ್ಪಗಳಾವುವೂ ಈವರೆಗೆ ದೊರಕಿಲ್ಲ. ಗಂಗರ ಕಾಲದ ಹಲವಾರು ಶಿಲ್ಪಗಳು ದೊರಕಿವೆ. ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಮೇಲಿನ ಗೊಮ್ಮಟಮೂರ್ತಿ ಇವುಗಳಲ್ಲಿ ಅತ್ಯಂತ ಸುಂದರವಾದುದು. ಇದಕ್ಕೂ ಮೊದಲ ಕಾಲಕ್ಕೆ ನಿರ್ದೇಶಿತವಾಗಬಹುದಾದ ಚಂದ್ರಗಿರಿ ಬಸದಿಗಳ ಪಾರ್ಶ್ವನಾಥ, ಪದ್ಮಾವತಿ, ಕೂಷ್ಮಾಂಡಿನಿ, ಧರಣೀಂದ್ರ ಯಕ್ಷ, ಚಂದ್ರಪ್ರಭ ಮುಂತಾದುವೂ ಅನಂತರ ಕಾಲದ ಕೂಗೆಬ್ರಹ್ಮದೇವರ ಕಂಬದ ಬ್ರಹ್ಮ, ತ್ಯಾಗದಬ್ರಹ್ಮದೇವರ ಕಂಬದ ಚಾವುಂಡರಾಯ ಶಿಲ್ಪಗಳೂ ಸುಂದರವಾಗಿವೆ. ದೊಡ್ಡ ಬೆಟ್ಟದ ಗೊಮ್ಮಟಮೂರ್ತಿ 983ರಲ್ಲಿ ಗಂಗರಸ ರಾಚಮಲ್ಲನ (974–99) ಮಂತ್ರಿ ಚಾವುಂಡರಾಯನಿಂದ ನಿರ್ಮಿತವಾಯಿತು. 58 ಅಡಿ ಎತ್ತರದ ಈ ಶಿಲ್ಪ ಏಕಶಿಲೆಯಲ್ಲಿ ಕೆತ್ತಲ್ಪಟ್ಟು ಸೌಂದರ್ಯ, ಸೌಮ್ಯತೆಗಳ ಪ್ರತೀಕವಾಗಿದೆ. ಶಿಲ್ಪದ ಕೆಳಭಾಗದಲ್ಲಿ ಬಂಡೆಯನ್ನು ಕೆತ್ತದೆ ಹುತ್ತದಾಕಾರವಾಗಿ ಉಳಿಸಿ ಅದರಿಂದ ಹಾವುಗಳು ಹರಿದು ಬರುತ್ತಿರುವಂತೆ ತೋರಿಸಲಾಗಿದೆ. ವಿಸ್ತಾರವಾದ ಎದೆ ಭುಜ ಮತ್ತು ನೀಳವಾಗಿ ಇಳಿಬಿದ್ದಿರುವ ತೋಳುಗಳಿಂದ ಕೂಡಿದ ಈ ಭವ್ಯ ಬೆತ್ತಲೆಮೂರ್ತಿಯ ಕೈಕಾಲುಗಳಿಗೆ ಮಾಧವೀಲತೆ ಸುತ್ತಿಕೊಂಡಿದೆ. ಪ್ರಪಂಚದ ಏಕಶಿಲಾ ವಿಗ್ರಹಗಳಲ್ಲೆಲ್ಲ ಹಿರಿದಾದ ಈ ಅಪೂರ್ವ ಮಹಾಮೂರ್ತಿ ತನ್ನ ಸ್ಥಾನವಿಶೇಷ ಮತ್ತು ಗಾತ್ರಗಳಿಂದ ಈಜಿಪ್ಟಿನ ರ್ಯಾಮ್ಸೆಸ್ ವಿಗ್ರಹಗಳಿಗಿಂತಲೂ ಆಕರ್ಷಣೀಯವಾಗಿದೆ. ಈ ವಿಶ್ವವಿಖ್ಯಾತ ಮೂರ್ತಿಯ ಮುಗುಳ್ನಗೆಯ ಪ್ರಸನ್ನ ಮುಖಮುದ್ರೆ, ಗುಂಗುರು ತಲೆಕೂದಲು ಮನೋಹರವಾಗಿವೆ. ಜೈನತತ್ತ್ವಗಳಾದ ತ್ಯಾಗ, ವೈರಾಗ್ಯಗಳನ್ನು ಈ ಶಿಲ್ಪ ಎತ್ತಿ ತೋರುತ್ತದೆ. ಇಮ್ಮಡಿ ಭೂತುಗನ ಕಾಲದ (950) ಆತಕೂರುಶಾಸನದ ಮೇಲಿರುವ ನಾಯಿ ಮತ್ತು ಹಂದಿಗಳ ಶಿಲ್ಪ ನೈಜವಾಗಿಯೂ ದೊಡ್ಡಹುಂಡಿ ಶಾಸನದ ಮೇಲಿರುವ ನೀತಿಮಾರ್ಗನ ಸಾವಿನ

ಶಿಲ್ಪಕರುಣರಸಭರಿತವಾಗಿಯೂ ಇವೆ. ಶ್ರವಣಬೆಳಗೊಳ (**ನೋಡಿ– ಶ್ರವಣಬೆಳಗೊಳ**) ಮಠದ 2 ಅಡಿಗಳೆತ್ತರದ ಕಂಚಿನ ಜಿನಮೂರ್ತಿ ಗಂಗರಾಜ ಮಾರಸಿಂಹನ ಸೋದರಿ ಕುಂದಣ ಸೋಮಿದೇವಿಯ ನಿರ್ಮಾಣವೆಂದು ಕಾಣುತ್ತದೆ. ಗಂಗಶಿಲ್ಪದ ಪ್ರಭಾವ ಕಂಬದಹಳ್ಳಿ (**ನೋಡಿ– ಕಂಬದಹಳ್ಳಿ**) ಆದಿನಾಥ ಬಸದಿ, ನಂದಿಯ ಭೋಗ ನಂದೀಶ್ವರ ಮತ್ತು ನರಸಮಂಗಲದ ರಾಮೇಶ್ವರ ದೇವಾಲಯಗಳ ಶಿಲ್ಪಗಳ ಮೇಲೂ ಕಂಡುಬರುತ್ತದೆ.

ಬಾದಾಮಿ ಚಳುಕ್ಯರ ಕಾಲದಲ್ಲಿ ಕರ್ನಾಟಕದ ಶಿಲ್ಪಸಂಪ್ರದಾಯ ತನ್ನ ವಿಶಿಷ್ಟ ಶೈಲಿಯನ್ನು ಬೆಳೆಸಿಕೊಂಡಿತು. ಬಾದಾಮಿ (**ನೋಡಿ– ಬಾದಾಮಿ**) ಗುಹೆಗಳಲ್ಲಿನ ಶಿಲ್ಪಗಳು ರಮಣೀಯವಾಗಿವೆ. 1ನೆಯ ಗುಹೆಯ 18 ಕೈಗಳ ನಟರಾಜ, 2' 2" ಎತ್ತರ ಅರ್ಧನಾರೀಶ್ವರ, ಹಾರುತ್ತಿರುವ ಗಂಧರ್ವರು ಮನುಷ್ಯ ತಲೆಯ ಮೇಲೆ 5 ಹೆಡೆಗಳುಳ್ಳ ಸುರುಳಿಯಾದ ದೇಹವುಳ್ಳ ನಾಗ ಶಿಲ್ಪಗಳು ನಾಜೂಕಾಗಿ ಕೆತ್ತಲ್ಪಟ್ಟಿವೆ 2ನೆಯ ಗುಹೆಯಲ್ಲಿನ ಭವ್ಯ ಭೂವರಾಹ, ರಾಕ್ಷಸನೊಬ್ಬನನ್ನು ಮೆಟ್ಟುತ್ತಿರುವ ತ್ರಿವಿಕ್ರಮ ಶಿಲ್ಪಗಳೂ 3ನೆಯ ಗುಹೆಯಲ್ಲಿನ 11 ಅಡಿಗಳೆತ್ತರದ ನರಸಿಂಹ, ಹರಿಹರ, ಆಸನಸ್ಥ ವಿಷ್ಣುಶಿಲ್ಪಗಳೂ, 4ನೆಯ ಗುಹೆಯ ಪದ್ಮಾವತಿ, ಆದಿನಾಥ ಮತ್ತು ಮಾಧವೀಲತೆಗಳಿಂದ ಆವೃತನಾದ ಗೊಮ್ಮಟಮೂರ್ತಿಗಳೂ ಸತ್ತ್ವಪೂರ್ಣ ಸುಂದರಕೃತಿಗಳು. ಚಾಳುಕ್ಯರ ಕಲಾದೇಗುಲವೆನಿಸಿದ ಐಹೊಳೆಯಲ್ಲಿ (**ನೋಡಿ– ಐಹೊಳೆ**) ವಿಷ್ಣು ಮತ್ತು ಶಿವನ ಅನೇಕ ಅವತಾರಗಳು ಕೆತ್ತಲ್ಪಟ್ಟಿವೆ. 2 ರಿಂದ 18 ಕೈಗಳಿರುವ ನಟರಾಜ ಮೂರ್ತಿಗಳೂ ಗೋವರ್ಧನಧಾರಿಕೃಷ್ಣ ರಾಮಾಯಣ, ಭಾಗವತ, ಹರಿವಂಶಗಳ ದೃಶ್ಯಗಳೂ ಶಿವ–ಪಾರ್ವತಿಯರ ಕಲ್ಯಾಣ ಮುಂತಾದ ಶಿಲ್ಪಗಳೂ ಜೀವಂತ ಸತ್ತ್ವಪೂರ್ಣ ಕೃತಿಗಳಾಗಿವೆ. ಈ ಶಿಲ್ಪಗಳ ಚಪ್ಪಟೆಯಾದ ಮುಖ, ತುಂಬುಗಲ್ಲ, ಚೈತನ್ಯ ಭರಿತ ಮುಖಭಾವಗಳಿಂದ ಇವನ್ನು ಸಮಕಾಲೀನ ಪಲ್ಲವ ಮತ್ತು ಇತರ ಕೃತಿಗಳಿಂದ ಪ್ರತ್ಯೇಕಿಸಬಹುದಾಗಿದೆ. ಇವರ ಮತ್ತೊಂದು ಕಲಾಕೇಂದ್ರವಾದ ಪಟ್ಟದಕಲ್ಲಿನ (**ನೋಡಿ– ಪಟ್ಟದಕಲ್ಲು**) ಅನೇಕ ಶಿಲ್ಪಗಳು ಸದೃಢವಾಗಿಯೂ ಸ್ಫುಟವಾಗಿಯೂ ನಾಜೂಕಾಗಿಯೂ ಕೆತ್ತಲ್ಪಟ್ಟಿವೆ. ಇಲ್ಲಿನ ತ್ರೈಲೋಕೇಶ್ವರ ದೇವಾಲಯದ ಕಂಬಗಳಲ್ಲಿ ಪಂಚತಂತ್ರದ ಕಥೆಗಳು ನಿರೂಪಿತವಾಗಿವೆ. ವಿರೂಪಾಕ್ಷ ದೇವಾಲಯದ ಶಿವ, ನಾಗ ಮತ್ತು ರಾಮಾಯಣ ಶಿಲ್ಪಗಳ ವಿಷಯವಾಗಿ ಬರೆಯುತ್ತ ಪರ್ಸಿ ಬ್ರೌನ್ ಕಟ್ಟಡ ಶೈಲಿಯೊಂದಿಗೆ ಮಿಳಿತವಾದ ಈ ಶಿಲ್ಪಗಳು ಅಮೋಘವೆಂದಿದ್ದಾನೆ. ಈ ರೀತಿಯಾಗಿ ಚಳುಕ್ಯರ ಮೂರ್ತಿ ಶಿಲ್ಪದಲ್ಲಿ ಪೌರಾಣಿಕ ವ್ಯಕ್ತಿಗಳ, ದೇವ ದೇವಿಯರ ವಿಗ್ರಹಗಳನ್ನೂ ಸತ್ತ್ವಪೂರ್ಣವಾಗಿ ನಿರೂಪಿಸಲಾಗಿದೆ.

ನೃತ್ಯ ಸರಸ್ವತಿ

ನರ್ತಕಿ

ರಾಷ್ಟ್ರಕೂಟರ ಕಾಲದಲ್ಲಿ ಶಿಲ್ಪಕಲೆ ವೃದ್ಧಿ ಹೊಂದಿ ಆ ಕಾಲದ ಮಹೋನ್ನತ ನಿದರ್ಶನವಾಗಿ ಎಲ್ಲೋರದ (**ನೋಡಿ– ಎಲ್ಲೋರ**) ಕೈಲಾಸನಾಥ ಮಂದಿರದ ಶಿಲ್ಪಗಳು ಉಳಿದು ಬಂದಿವೆ. ಈ ಶೈವ ಮಂದಿರದಲ್ಲಿ ಅರ್ಧನಾರೀಶ್ವರ, ಹರಿಹರ, ಗಂಗಾ, ಯಮುನಾ ಮತ್ತು ಶಿವ–ಪಾರ್ವತಿಯರು ಪಗಡೆಯಾಡುವ, ರಾವಣನು ಕೈಲಾಸವೆತ್ತುವ ಶಿಲ್ಪಗಳಿವೆ. ಇವುಗಳಲ್ಲಿ ಕಡೆಯ ಶಿಲ್ಪದಲ್ಲಿ ಕೈಲಾಸವನ್ನೇ ಎತ್ತಲು ಪ್ರಯತ್ನಿಸುವ ಆವೇಶಭರಿತ ರಾವಣ, ಭಯಗ್ರಸ್ತ ಪರ್ವತವಾಸಿಗಳು, ನಿಶ್ಚಲ ಶಾಂತಿಪೂರ್ಣ ಶಿವ ಇವುಗಳ ಚಿತ್ರಣ ಅಮೋಘವಾಗಿವೆ. ಮಾಮಲ್ಲಪುರದ ಶಿಲ್ಪಗಳ ಪ್ರಭಾವ ಇಲ್ಲಿ ಎದ್ದು ಕಾಣುತ್ತದೆ. ಇದಲ್ಲದೆ ಇಲ್ಲಿರುವ ಹಿಂದೂ ಮತ್ತು ಜೈನ ಗುಹೆಗಳ ಶಿಲ್ಪಗಳೂ ಗಮನಾರ್ಹ. ಈ ಶೈಲಿಗೆ ಸೇರಿದ ಕೊನೆಯ ನಿರ್ಮಾಣವೆಂದರೆ ಬೊಂಬಾಯಿ ಬಳಿಯ ಎಲಿಫೆಂಟ (**ನೋಡಿ– ಎಲಿಫೆಂಟ್**) ದ್ವೀಪದ ಶಿಲ್ಪಗಳು. ಇಲ್ಲಿನ ಗುಹಾಂತರದೇವಾಲಯದಲ್ಲಿ ಬೃಹದಾಕಾರದ ಹತ್ತು ಶಿವನ ಮೂರ್ತಿಗಳಿವೆ. ಇವುಗಳಲ್ಲಿ ಉತ್ತರ ದ್ವಾರದ ಎದುರಿರುವ ತ್ರಿಮೂರ್ತಿಶಿಲ್ಪ ಅಮೋಘವಾದುದು; ಮಧ್ಯದಲ್ಲಿ ಶಿವಮಹಾದೇವ. ಎರಾಡದಲ್ಲಿ ಅಘೋರ ಭೈರವ ಮತ್ತು ಬಲಭಾಗದಲ್ಲಿ ಶಾಂತ ಉಮೆಯ ಮುಖಗಳಿರುವ ಈ ತ್ರಿಮೂರ್ತಿ ಶಿಲ್ಪ ಜಗತ್ತಿನ ಶ್ರೇಷ್ಠ ಕಲಾಕೃತಿಗಳಲ್ಲೊಂದು.

ನೃತ್ಯ ಗಣಪತಿ

ಅನಂತರ ಕಾಲದಲ್ಲಿ ಕಲ್ಯಾಣದ ಚಾಳುಕ್ಯರ ಆಶ್ರಯದಲ್ಲಿ ನಿರ್ಮಿತವಾದ ಹಲವಾರು ದೇವಾಲಯಗಳಲ್ಲಿನ ವಿಗ್ರಹಗಳು ಗಮನಾರ್ಹವಾಗಿವೆ. ಬಳ್ಳಿಗಾವೆಯ ಐದು ದೇವಾಲಯಗಳಲ್ಲಿ ಕೆಲವು ಉತ್ತಮ ಶಿಲ್ಪಗಳಿವೆ (ಕಾಲ 1060). ಹೊಯ್ಸಳ ಕಾಲದ ಶಿಲ್ಪಗಳಿಗೆ ಇವು ತಳಹದಿಯೆಂದು ಪಿ. ವೆಂಕೋಬರಾಯರು ತಿಳಿಸುತ್ತಾರೆ. ಇಲ್ಲಿನ ತ್ರಿಪುರಸಂಹಾರ, ನಾಗಕನ್ಯೆಯರು, ನರ್ತಕಿಯರು ಮತ್ತು ಪಂಚತಂತ್ರದ ಶಿಲ್ಪಗಳೂ ಸತ್ತ್ವಪೂರ್ಣವಾಗಿವೆ. ಬಳ್ಳಾರಿ, ಧಾರವಾಡ ಮತ್ತು ಹೈದರಾಬಾದು ಕರ್ನಾಟಕ ಜಿಲ್ಲೆಗಳ ದೇವಾಲಯಗಳ ಬಾಗಿಲುವಾಡಗಳ ಶಿಲ್ಪಗಳು ಸುಂದರವಾಗಿವೆ. ಲೊಕ್ಕುಂಡಿಯ ಕಾಶೀವಿಶ್ವೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ ಮತ್ತು ಇಟಗಿಯ (**ನೋಡಿ– ಇಟಗಿ**) ಮಹಾದೇವ ಮಂದಿರಗಳಲ್ಲಿನ ಕೆತ್ತನೆ ಕೆಲಸ ಅಸಾಧಾರಣವಾಗಿವೆ. ಕುರುವತ್ತಿ ದೇವಾಲಯದ ಮದನಿಕೆ ವಿಗ್ರಹಗಳು ಮೋಹಕವಾಗಿವೆ. ಇಲ್ಲಿನ ಗೋಪುರದಲ್ಲಿನ ಕಪಿಗಳ ಗುಂಪು ಆಕರ್ಷಕವಾಗಿದೆ. ಬಳ್ಳಿಗಾವೆಯ ಗಂಡಭೇರುಂಡ ಸ್ತಂಭದ ಮೇಲಿನ ಅರ್ಧಮಾನವ, ಅರ್ಧ ಪಕ್ಷಿಯಾಕಾರದ ಗಂಡಭೇರುಂಡ ವಿಗ್ರಹ ನೈಜ ಸೌಂದರ್ಯದ ಪ್ರತೀಕವಾಗಿದೆ.

ಹೊಯ್ಸಳರ ಕಾಲದ ಮಂದಿರಗಳಲ್ಲಿ ಮೂರ್ತಿಶಿಲ್ಪ ಕಲೆ ಅತ್ಯುಚ್ಚಶೃಂಗ ಮುಟ್ಟುತ್ತದೆ. ಇವರು ಉಪಯೋಗಿಸಿದ ನಯವಾದ ಬಳಪಕಲ್ಲಿನ ಶಿಲ್ಪಗಳು ವರ್ಣನಾತೀತವಾದುವೆಂದೂ ಬೆಂಜಮಿನ್ ರೋಲಂಡ್ ಹೇಳುತ್ತಾನೆ. 80ಕ್ಕೂ ಮೀರಿದ ಹೊಯ್ಸಳ ಕಾಲದ ಗುಡಿಗಳಲ್ಲಿ ಬೇಲೂರು (**ನೋಡಿ– ಬೇಲೂರು**), ಹಳೇಬೀಡು (**ನೋಡಿ– ಹಳೇಬೀಡು**), ಸೋಮನಾಥಪುರ (**ನೋಡಿ– ಸೋಮನಾಥಪುರ**) ಮಂದಿರಗಳ ಶಿಲ್ಪಗಳು ಹೆಚ್ಚು ಪ್ರಖ್ಯಾತವಾದುವು. ಚಿನ್ನಬೆಳ್ಳಿಯ ಕುಸುರಿ ಕೆಲಸಕ್ಕೆ ಹೋಲಿಸಲಾಗಿರುವ ಹಳೇಬೀಡಿನ ಕೆತ್ತನೆ, ಜೀವಚಿತ ಸೌಂದರ್ಯಖನಿಗಳೆನಿಸಿರುವ ಬೇಲೂರಿನ ಶಿಲಾಬಾಲಿಕೆಯರು, ದೇವದೇವಿಯರ, ಪ್ರಾಣಿಪಕ್ಷಿಗಳ ಹೂ ಬಳ್ಳಿಗಳ ಶಿಲ್ಪಗಳು, ಕರ್ನಾಟಕ ರೂವಾರಿಗಳ ದಿವ್ಯಕೌಶಲದ ಪ್ರತೀಕಗಳಾಗಿವೆ. ಹೊಯ್ಸಳ ಮಂದಿರಗಳಲ್ಲಿ ಕೆತ್ತಿರುವ ನೂರಾರು ಆನೆಗಳು ಸತ್ತ್ವಪೂರ್ಣ, ನೈಜ, ವೈವಿಧ್ಯಮಯ ಶಿಲ್ಪಗಳು. ಹೊರಗೋಡೆಗಳ ಮೇಲೆ ಕೆತ್ತಿರುವ ದೇವತಾ ಮೂರ್ತಿಗಳು ಅದ್ಭುತವಾಗಿವೆ. ಪ್ರಾಯಶಃ ಹೊಯ್ಸಳ ರಾಣಿ, ನಾಟ್ಯ ಪ್ರವೀಣೆ ಶಾಂತಲೆಯ ಪ್ರತಿಕೃತಿಗಳೆನಿಸಿರುವ, ಅಥವಾ ನಾಟ್ಯ ಮೋಹಿನಿಯ ವಿವಿಧ ಭಂಗಿಗಳಾಗಿರಬಹುದಾದ ಶಿಲಾಬಾಲಿಕೆಯರ ಪ್ರತಿಮೆಗಳು ಮಾನವ ಕೈಚಳಕದ ಅನುಪಮ ಕೃತಿಗಳು. ಪರ್ಸಿಬ್ರೌನ್ ಹೊಯ್ಸಳ ಮಂದಿರಗಳನ್ನು ವಾಸ್ತುಶಿಲ್ಪಗಳೆನ್ನುವುದಕ್ಕಿಂತ ಅನ್ವಯಿಕ ಕಲಾರೀತಿಯೆಂದು ಹೊಗಳಿದ್ದಾನೆ. ಆ ಮಂದಿರಗಳ ನವರಂಗಗಳ ಭುವನೇಶ್ವರಿ, ಕಂಬ, ಅವುಗಳ ಮೇಲಿನ ಕೆತ್ತನೆ, ಹೊರಗೋಡೆಗಳ ಮೇಲಿನ ಅಲಂಕರಣ ಇವುಗಳಿಗೆ ಹೋಲಿಕೆಗಳಿಲ್ಲ. ಈ ಕಾಲದ ಜೈನಶಿಲ್ಪಗಳೂ ಗಮನಾರ್ಹ. ಬಸ್ತಿಹಳ್ಳಿಯಲ್ಲಿ ಪಾರ್ಶ್ವ, ಆದಿ ಮತ್ತು ಶಾಂತಿನಾಥರ ವಿಗ್ರಹಗಳಿದ್ದು, ಮೊದಲನೆಯದು ಮತ್ತು ಮೂರನೆಯದು

14 ಅಡಿ ಎತ್ತರವಾಗಿವೆ. ಮೂರೂ ಬಹಳ ಸುಂದರ ವಿಗ್ರಹಗಳಾಗಿವೆ. ಈ ಕಾಲಕ್ಕೆ ಸೇರುವ ನಂಜನಗೂಡು (**ನೋಡಿ– ನಂಜನಗೂಡು**) ದೇವಾಲಯದ ಉಚ್ಚಿಷ್ಟ ಗಣಪತಿ, ಹಳೇಬೀಡಿನ ನೃತ್ಯಸರಸ್ವತಿ, ನೃತ್ಯಗಣಪತಿ, ನುಗ್ಗಿಹಳ್ಳಿಯ (**ನೋಡಿ– ನುಗ್ಗೆಹಳ್ಳಿ**) ಗೋವರ್ಧನಧರ ಕೃಷ್ಣ ಮತ್ತು ಹಯಗ್ರೀವ– ಇವು ಪ್ರಸಿದ್ಧ ಕೃತಿಗಳು.

ವಿಜಯನಗರ ಕಾಲದಲ್ಲಿ ಶಿಲ್ಪಕಲೆ ಹೊಸದಿಕ್ಕಿನಲ್ಲಿ ಪ್ರವಹಿಸಿತು. ಪ್ರಸಿದ್ಧ ಕಲಾಭಿಜ್ಞರೊಬ್ಬರು ಹೇಳುವಂತೆ ಪರಿಷ್ಕೃತವಾದ ಮುಗಿತಾಯದಲ್ಲೂ ಸೂಕ್ಷ್ಮ ವಿವರಗಳ ನಿಷ್ಕೃಷ್ಟತೆಯಲ್ಲೂ ಹೊಯ್ಸಳಕಲೆ, ಪ್ರಮಾಣಬದ್ಧತೆಯಲ್ಲೂ ಘನತೆ ಗಾಂಭೀರ್ಯಗಳಲ್ಲೂ ಪಲ್ಲವಕಲೆ ಅಸಾದೃಶ್ಯವಾಗಿದ್ದರೆ, ನಯವಾದ ಸತ್ತ್ವಪೂರ್ಣ ಭಾವ ನಿರೂಪಣದಲ್ಲಿ ವಿಜಯನಗರ ಶಿಲ್ಪ ಅವನ್ನು ಮೀರಿಸುತ್ತವೆ. ಬೃಹದಾಕಾರದ 22 ಅಡಿಗಳ ಏಕಶಿಲಾ ಮೂರ್ತಿ ನರಸಿಂಹ ಮತ್ತು ಹನುಮಂತನ ಶಿಲ್ಪಗಳಲ್ಲಿ ಭಯಂಕರತೆ ಎದ್ದು ಕಾಣುತ್ತದೆ. ಹಂಪಿಯ (**ನೋಡಿ– ಹಂಪೆ**) ಹಜಾರ ರಾಮಸ್ವಾಮಿಯ ಅಂಗಳದ ಗೋಡೆಗಳ ಮೇಲಿನ ರಾಮಾಯಣ ಶಿಲ್ಪಗಳು ಜೀವಂತ ಸತ್ತ್ವಶಾಲಿ ಸುಂದರ ಕೃತಿಗಳು. ವಿಠಲ ಸ್ವಾಮಿಯ ದೇವಾಲಯದ ಮುಖಮಂಟಪದ ಜಗತಿಯಲ್ಲಿರುವ ವಿಪುಲ ಶಿಲ್ಪಗಳೂ ಕಂಬಗಳ ಮೇಲಿನ, ದೊಡ್ಡ ಅಳತೆಯ ವಿಗ್ರಹಗಳೂ ಭಾವಪೂರ್ಣವಾಗಿದ್ದು ಸೌಂದರ್ಯದ ಪ್ರತೀಕಗಳಾಗಿವೆ. ಈ ಕಾಲದ ಕೆತ್ತನೆಗಳಲ್ಲಿ ಕಾಣುವ ಮೃಗ ಪಕ್ಷಿಗಳ ಕೆತ್ತನೆ ಮುಖ್ಯವಾಗಿ ಆನೆ ಕುದುರೆಗಳ ಶಿಲ್ಪಗಳು ಕಣ್ಸೆಳೆಯುತ್ತವೆ. ಕರ್ನಾಟಕದ ಹೊರಗಿದ್ದರೂ ವಿಜಯನಗರದ ಅರಸರ ಆಶ್ರಯದಲ್ಲಿ ನಿರ್ಮಿತವಾದ ತಾಡಪತ್ರಿ, ಲೇಪಾಕ್ಷಿ (**ನೋಡಿ– ಲೇಪಾಕ್ಷಿ**) ವಿರಿಂಚಿ ಪುರಗಳ ಶಿಲ್ಪವೈಭವವನ್ನು ಸ್ಮರಿಸದಿರಲು ಸಾಧ್ಯವಿಲ್ಲ. ತಾಡಪತ್ರಿಯ ಶಿಲ್ಪಗಳು ಈ ಕಾಲದ ಉಳಿದೆಲ್ಲ ಕೃತಿಗಳಿಗಿಂತಲೂ ಹೆಚ್ಚು ಕಲಾಭಿರುಚಿಯನ್ನು ಪ್ರದರ್ಶಿಸುತ್ತವೆಂದು ಜೇಮ್ಸ್ ಫರ್ಗ್ಯುಸನ್ ತಿಳಿಸುತ್ತಾನೆ. ಈ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಿತವಾದ ಕಾರ್ಕಳದ (**ನೋಡಿ– ಕಾರ್ಕಳ**) ವೇಣೂರಿನ ಗೊಮ್ಮಟ ಮೂರ್ತಿಗಳೂ ಮೈಸೂರು ಜಿಲ್ಲೆಯ ಶ್ರಮಣರ ಗುಡ್ಡದ ಗೊಮ್ಮಟ ಮೂರ್ತಿಯೂ ಜೈನಶಿಲ್ಪದ ಸುಂದರ ಕೃತಿಗಳಾಗಿವೆ.

ಅನಂತರ ಕಾಲದ ಇಕ್ಕೇರಿ ಶಿಲ್ಪಶೈಲಿಯಲ್ಲಿ ಹೊಯ್ಸಳ ಮತ್ತು ವಿಜಯನಗರ ಶಿಲ್ಪಗಳ ಛಾಯೆಯಿದ್ದರೂ ಅವುಗಳ ಪ್ರೌಢಿಮೆ ಕಾಣಬರುವುದಿಲ್ಲ. ವೀರಭದ್ರ ಮಂದಿರದ ಭುವನೇಶ್ವರಿ ದೇವಾಲಯದ ಗೋಡೆಗಳ ಮೇಲಿನ ಆಲಂಕಾರಿಕ ನೃತ್ಯಕಾರ, ಸಂಗೀತಕಾರರ ಶಿಲ್ಪಗಳೂ ಐತಿಹಾಸಿಕ ಪ್ರಾಮುಖ್ಯ ಪಡೆದಿವೆ. ಕಂಬಗಳ ಮೇಲಿನ ಯಕ್ಷ–ಯಕ್ಷಿಯರ ಸುಂದರ ಪ್ರತಿಮೆಗಳು ಹಂಸ ಮತ್ತು ಸಿಂಹಗಳ ಶಿಲ್ಪಗಳೂ ಆಕರ್ಷಕವಾಗಿವೆ.

ವಿಜಯನಗರ ಕಾಲದಿಂದ ಮೈಸೂರು ರಾಜ್ಯ ಪ್ರದೇಶದಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಕಲೆ ಹೊಯ್ಸಳ ಮತ್ತು ದ್ರಾವಿಡ ಶೈಲಿಗಳ ಮಿಲನದಿಂದ ಹೊಸ ರೂಪುರೇಖೆಗಳನ್ನು ಪಡೆಯುತ್ತವೆ. ಶೃಂಗೇರಿಯ (**ನೋಡಿ– ಶೃಂಗೇರಿ**) ವಿದ್ಯಾಶಂಕರ (1356), ಕೋಲಾರ ಜಿಲ್ಲೆಯ ವಿರೂಪಾಕ್ಷಪುರದ ವಿರೂಪಾಕ್ಷ (1420) ಗುಡಿಗಳ ಶಿಲ್ಪಗಳು ಈ ಹೊಸ ಶೈಲಿಯ ನಿದರ್ಶನಗಳಾಗಿವೆ. ವಿದ್ಯಾಶಂಕರ ದೇವಾಲಯವಂತೂ ಪ್ರತಿಮಾಗೃಹವೆಂದು ಕರೆಯಲರ್ಹವಾಗಿದೆ. ಇಲ್ಲಿನ ದೇವವಿಗ್ರಹಗಳೂ ಪೌರಾಣಿಕ ದೃಶ್ಯಗಳೂ ಕಲ್ಲಿನ ಶಿಲ್ಪಗಳೂ ಉನ್ನತ ಕೃತಿಗಳಾಗಿವೆ. 16ನೆಯ ಶತಮಾನದ ಆವನಿಯ (**ನೋಡಿ– ಆವನಿ**) ದೇವಸ್ಥಾನಗಳ ಹೊರಗೋಡೆಗಳ ಮೇಲಿನ ಶಿಲ್ಪಗಳೂ ಭುವನೇಶ್ವರಿಯ ಅಷ್ಟದಿಕ್ಪಾಲಕ ಶಿಲ್ಪಗಳೂ ಸುಂದರ ಕೃತಿಗಳು. 1560ರ ಕೃಷ್ಣರಾಜ ಸಾಗರದ ಗೋಪಾಲಕೃಷ್ಣ ಗುಡಿಯ ಮೂಲ ಮೂರ್ತಿ ಆರಡಿ ಎತ್ತರವಾಗಿದ್ದು, ದೇವತೆ, ಮುನಿ, ಗೋಪಗೋಪಿಯರು ಮತ್ತು ಹಸುಗಳಿಂದ ಸುತ್ತುವರಿದ ಬಹಳ ಸುಂದರ ಕೃತಿ. 17ನೆಯ ಶತಮಾನದ ತೆರಕಣಾಂಬಿಯ ದೇವಾಲಯದ ಕಂಬಗಳ ಮೇಲಿರುವ ದೇವತಾವಿಗ್ರಹಗಳಲ್ಲಿ ಭಾರ್ಹುತ್ ಶಿಲ್ಪಗಳ ಛಾಯೆ ಕಂಡುಬರುತ್ತದೆ. ಕುದುರೆ ಸವಾರಿ ಮಾಡುತ್ತಿರುವ ನಾಲ್ಕು ಕೈಗಳ ವಿಷ್ಣುಮೂರ್ತಿ ಅಪೂರ್ವವಾದುದು. ಈ ಕಾಲದ (1664) ಚಾಮುಂಡಿಬೆಟ್ಟದ 11 ಅಡಿ ಎತ್ತರದ ಬಸವ ಕಲಾಪೂರ್ಣವಾದ ಸುಂದರ ಕೃತಿ. 17ನೆಯ ಶತಮಾನದಲ್ಲಿ ಮೈಸೂರರಸರ ಆಶ್ರಯದಲ್ಲಿ ನಿರ್ಮಿತವಾದ ಗುಂಡ್ಲುಪೇಟೆಯ ಪರವಾಸುದೇವ ಮಂದಿರದಲ್ಲಿನ ಶಿಲ್ಪಗಳು ಗಮನಾರ್ಹವಾಗಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನೂರಾರು ಮೂರ್ತಿಶಿಲ್ಪಗಳು ಸೃಷ್ಟಿಯಾದವು. ನಂಜನಗೂಡಿನಲ್ಲಿರುವ ಶೈವಪುರಾತನರ ಮೂರ್ತಿಗಳ ಸಾಲು, ಭಕ್ತರ ವಿಗ್ರಹಗಳು ಇವಕ್ಕೆ ಮಾದರಿಗಳು. ಅನಂತರ ಕಾಲದಲ್ಲಿ ಅನೇಕ ದೇವಾಲಯಗಳೂ ಮೂರ್ತಿಶಿಲ್ಪಗಳೂ ನಿರ್ಮಿತವಾಗಿದ್ದರೂ ಅವುಗಳ ಕಾಣಿಕೆ ಗಮನಾರ್ಹವಾಗಿಲ್ಲ. ಈಚಿನ ಮೈಸೂರು ಅರಮನೆಯ ಅಲಂಕರಣಕ್ಕೆ ಮಾಡಲ್ಪಟ್ಟ ಶಿಲ್ಪಕೃತಿಗಳಲ್ಲಿ ವಿವಿಧ ಕಾಲಗಳ ಶಿಲ್ಪಿಗಳ ಮತ್ತು ಆಧುನಿಕ ಯುಗದ ವರ್ಣಚಿತ್ರಗಳ ಪ್ರಭಾವವಿದ್ದು ಕಲಾತ್ಮಕವಾಗಿವೆಯೆಂದು ವಿನ್ಸೆಂಟ್. ಎ. ಸ್ಮಿತ್ ಅಭಿಪ್ರಾಯಪಡುತ್ತಾನೆ. ವರ್ತಮಾನ ಕಾಲದ ಸುಪ್ರಸಿದ್ಧ ಶಿಲ್ಪಿಗಳಾಗಿದ್ದ ಸಿದ್ಧಲಿಂಗ ಸ್ವಾಮಿಗಳ ಶಿಲ್ಪಗಳೂ ಕೋಲಾರ ಜಿಲ್ಲೆಯ ಶಿವಾರಪಟ್ಟಣದ ಶಿಲ್ಪಗಳ ಸಂತತಿಯೂ ಈ ಗುಂಪಿಗೆ ಸೇರಿದ್ದು ಪುರಾತನ ಸಂಪ್ರದಾಯದ ಆಧುನಿಕ ಅನುಕರಣೆಯ ನಿದರ್ಶನಗಳಾಗಿವೆ. (ಎಸ್.ಕೆ.ಆರ್.)

**ಕರ್ನಾಟಕದ ವಾಸ್ತುಶಿಲ್ಪ :** ಕರ್ನಾಟಕದ ವಾಸ್ತು ಶಿಲ್ಪ ಚಾರಿತ್ರಿಕಯುಗದ ಆರಂಭಕಾಲದಿಂದಲೂ ಪ್ರಾಮುಖ್ಯ ಗಳಿಸಿಕೊಂಡಿದೆ. ಇಲ್ಲಿಯ ನಾನಾ ಅರಸುತನಗಳೂ ಶ್ರೀಮಂತ ವಂಶಗಳೂ ಇದಕ್ಕೆ ಯಾವಾಗಲೂ ಪ್ರೋತ್ಸಾಹ ನೀಡುತ್ತಾ ಬಂದಿವೆ. ಅಲ್ಲದೆ ಈ ನಾಡು ತನ್ನ ವಿಶಿಷ್ಟ ಭೌಗೋಳಿಕ ಸನ್ನಿವೇಶದ ಕಾರಣದಿಂದಾಗಿ ಅನೇಕ ವಾಸ್ತುಶೈಲಿಗಳ ಸಂಗಮ ಸ್ಥಾನವಾಗಿದೆ. ಆದ್ದರಿಂದ ಕರ್ನಾಟಕದ ವಾಸ್ತುಶಿಲ್ಪಸಂಪತ್ತು ಗಮನಾರ್ಹವೂ ವೈವಿಧ್ಯಪೂರ್ಣವೂ ಆದದ್ದು. ವಿವಿಧ ರಾಜವಂಶಗಳ ಕಾಲದಲ್ಲಿ ಕರ್ನಾಟಕದ ಈ ಕಲೆ ಬೆಳೆದು ಬಂದ ಬಗೆಯನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.

**ಮೌರ್ಯರ ಮತ್ತು ಸಾತವಾಹನರ ಕಾಲ:** ಕರ್ನಾಟಕದಲ್ಲಿ ವಾಸ್ತುಶಿಲ್ಪ ಅತ್ಯಂತ ಪುರಾತನವಾದದ್ದಾದರೂ ಯಾವಾಗ ಪ್ರಾರಂಭವಾಯಿತೆಂದು ಹೇಳಲು ಖಚಿತ ಆಧಾರಗಳಿಲ್ಲ. ಅಶೋಕನ ಕಾಲದ ಕಟ್ಟಡಗಳು ಕರ್ನಾಟಕದಲ್ಲಿ ಇದ್ದಿರಬಹುದಾದರೂ ಅವು ನಾಶವಾಗಿರಬಹುದು. ಅಶೋಕನ ಪ್ರಾಂತೀಯ ಸರ್ಕಾರವಿದ್ದ ಮಾಸ್ಕಿಯಂಥ



ಆದಿನಾಥ ಬಸದಿ, ಶ್ರವಣಬೆಳಗೊಳ

ಪಟ್ಟಣದಲ್ಲಿಯೂ ಯಾವ ಕಟ್ಟಡಗಳೂ ಉಳಿದುಬಂದಿಲ್ಲ. ಇಸಿಲದಲ್ಲಿ (ಬ್ರಹ್ಮಗಿರಿ–ಚಿತ್ರದುರ್ಗ ಜಿಲ್ಲೆ) ವೀಲರ್ ನಡೆಸಿದ ಭೂಶೋಧನೆಯಲ್ಲಿ ತುಂಬ ಶಿಥಿಲವಾದ, ಇಟ್ಟಿಗೆಯ, ಬೌದ್ಧ ಕಟ್ಟಡವೊಂದು ಮಾತ್ರ ಸಿಕ್ಕಿತು (**ನೋಡಿ– ಇಸಿಲ**).

ಸಾತವಾಹನರ ಕಟ್ಟಡಗಳೂ ಅಪೂರ್ವವೇ. ಚಂದ್ರವಳ್ಳಿ (ಚಿತ್ರದುರ್ಗ ಜಿಲ್ಲೆ) ಭೂಶೋಧನೆಯಲ್ಲಿ ಕಟ್ಟಡಗಳು ಸಿಕ್ಕದಿದ್ದರೂ ಸಾತವಾಹನ ಕಾಲದ ದೊಡ್ಡ ಗಾತ್ರದ (16" x 10" x 13") ಇಟ್ಟಿಗೆಗಳು ಸಿಕ್ಕಿದುವು. ಇಟ್ಟಿಗೆ ಕಟ್ಟಡಗಳು ಚಿತ್ತಾಪುರ ಆ ಕಾಲದಲ್ಲಿದ್ದವೆಂದು ಊಹಿಸಬಹುದು. ಇವುಗಳಿಂದ ಇಟ್ಟಿಗೆ ಕಟ್ಟಡಗಳು ತಾಲ್ಲೂಕಿನ ಸನ್ನತಿ ಎಂಬಲ್ಲಿ ಸಾತವಾಹನ ಕಾಲದ ಬೌದ್ಧಸ್ತೂಪಗಳ ಆಯಕ ಕಂಬಗಳು ಮತ್ತು ಸ್ತೂಪಗಳ ಮೇಲೆ ಜೋಡಿಸಿದ ಸುಣ್ಣಕಲ್ಲಿನ ಶಿಲ್ಪಗಳೂ ವಿಪುಲವಾಗಿ ಸಿಕ್ಕಿವೆ. ಇವುಗಳ ಮೇಲೆ ಸಾತವಾಹನ ಕಾಲದ ಲಿಪಿಯ ಪ್ರಾಕೃತ ಶಾಸನಗಳಿವೆ. ಇವುಗಳ ಕಾಲ ಕ್ರಿ.ಶ. 1ರಿಂದ 3ನೇ ಶತಮಾನ. ಶಿಲ್ಪದ ರೀತಿ ಅಮರಾವತಿ ಮತ್ತು ನಾಗಾರ್ಜುನಕೊಂಡದವನ್ನು ಹೋಲುತ್ತದೆ. ಈ ಶಿಲ್ಪಗಳು ಆಗಿನ ಕಾಲದ ಸಾಮಾಜಿಕ ಜೀವನ ಮತ್ತು ಕಲೆಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿವೆ. ಇತ್ತೀಚಿಗೆ ನಡೆದ ಪ್ರಾಕ್ತನ ಉತ್ಖನನದಲ್ಲಿ ಬನವಾಸಿಯಲ್ಲಿ ಕುದುರೆಯ ಲಾಳಾಕೃತಿಯಲ್ಲಿರುವ (ಗಜಪೃಷ್ಠಾಕೃತಿ) ಎರಡು ದೇವಗೃಹಗಳು ಕಂಡುಬಂದಿವೆ. ಇವುಗಳಲ್ಲೊಂದರಲ್ಲಿ ಎರಡು, ಮತ್ತೊಂದರಲ್ಲಿ ಮೂರು ವಲಯಗಳಿದ್ದು ಈ ವಲಯಗಳ ಮಧ್ಯೆ ಇಕ್ಕಟ್ಟಾದ ಪ್ರದಕ್ಷಿಣ ಮಾರ್ಗ(?)ವಿದೆ. ಇದರಲ್ಲೊಂದರ ನಕ್ಷೆ ವಿಶದವಾಗಿ ತಿಳಿದಿದ್ದು ಮುಂದುಗಡೆ ಆಯಾಕಾರದ ಕೊಠಡಿಗಳೂ ಹಿಂಭಾಗದಲ್ಲಿ ಒಂದು ಎತ್ತರದ ಜಗತಿಯೂ ತಿಳಿದುಬರುತ್ತದೆ. ಈ ಜಗತಿ ಲಾಳಾಕಾರಕ್ಕೆ ಹೊಂದಿಕೊಂಡಿರುವುದರಿಂದ ಮೇಲಿನ ಕಟ್ಟಡವೂ ಅದೇ ಆಕೃತಿಯಲ್ಲಿದೆ. ಇಲ್ಲಿಯ ಸುಮಾರು ಐದಡಿಗಳ ದಪ್ಪದ ಗೋಡೆಗಳು ಆ ಕಾಲದ ಕಟ್ಟಡಗಳ ಸುಭದ್ರತೆಯನ್ನು ತೋರುತ್ತದೆ.

**ಕದಂಬರ ಕಾಲ:** ಕದಂಬರು ಕರ್ನಾಟಕದಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಅವರ ಮುಖ್ಯ ಪಟ್ಟಣಗಳು ಬನವಾಸಿ ಮತ್ತು ಹಲಸಿ. ಕದಂಬರ ಕಾಲದಲ್ಲಿ ಗರ್ಭಗೃಹ ಮುತ್ತು ಸುಕನಾಸಿ ಬೇರೆಬೇರೆಯಾಗಿ ನಿರ್ಮಾಣವಾಗಲು ಪ್ರಾರಂಭವಾಯಿತೆಂದು ಮೊರೇಸ್ ಅಭಿಪ್ರಾಯಪಡುತ್ತಾನೆ.

5ನೆಯ ಶತಮಾನದ ತಾಲಗುಂದದ ಶಾಸನದಲ್ಲಿ ಪ್ರಣವೇಶ್ವರ ದೇವಾಲಯದ ಪ್ರಸ್ತಾಪವಿದೆ. ಅದು 450ಕ್ಕಿಂತ ಹಿಂದಿನದು. ಅದರ ಗರ್ಭಗೃಹದ ಬಾಗಿಲಿನ ಮೇಲೆ ಕದಂಬ ಮೃಗೇಶವರ್ಮನ ರಾಣಿ ಪ್ರಭಾವತಿಯ ಶಾಸನವಿದೆ. ಹಲಸಿಯ ಜಿನದೇವಾಲಯವೂ ಮೃಗೇಶವರ್ಮನ ಕಾಲದ್ದೆಂದು ಫ್ಲೀಟ್ ತಿಳಿಸಿದ್ದಾನೆ.

ಹಲಸಿಯ ಕಲ್ಲೇಶ್ವರ ದೇವಾಲಯಲ್ಲಿ ಕದಂಬರ ವಾಸ್ತುಶಿಲ್ಪದ ಮುಂದಿನ ಹಂತವನ್ನು ನೋಡಬಹುದು. ಇಲ್ಲಿ ನಾಲ್ಕು ಮತ್ತು ಎಂಟು ಮುಖಗಳುಳ್ಳ ಕಂಬಗಳಿವೆ. ಗರ್ಭಗೃಹ, ಸುಖನಾಸಿಯ ಜೊತೆಗೆ ಮಂಟಪವೂ ಸೇರಿಕೊಂಡಿದೆ.

ಕ್ರಮೇಣ ಚಿಕ್ಕದಾಗುವ, ಸಮತಲ ಅಂತಸ್ತುಗಳಿಂದ ಕೂಡಿರುವ ಶಿಖರ ಕದಂಬ ವಾಸ್ತುಶಿಲ್ಪದ ಮತ್ತೊಂದು ವೈಶಿಷ್ಟ್ಯ. ಇದನ್ನು ಯಲವಟ್ಟಿಯ ದೇವಾಲಯದಲ್ಲೂ ಕೆಲವು ಹೊಯ್ಸಳ ದೇವಾಲಯಗಳಲ್ಲೂ ಕಾಣಬಹುದು. ದೊಡ್ಡ ಗದ್ದವಳ್ಳಿಯ ಲಕ್ಷ್ಮೀದೇವಾಲಯ ಇದಕ್ಕೆ ಉದಾಹರಣೆ.



ನೀಲಕಂಠೇಶ್ವರ ದೇವಾಲಯ, ಜಂಬಿಟ್ಟಿಗೆ

**ಗಂಗರ ಕಾಲ:** ಗಂಗರ ವಾಸ್ತುಶಿಲ್ಪ ಹೆಚ್ಚಾಗಿ ಉಳಿದುಬಂದಿಲ್ಲ. ಅನೇಕ ಕಟ್ಟಡಗಳು ಅವರ ರಾಜಧಾನಿಯಾದ ತಲಕಾಡಿನ ಮುರಳುಗುಡ್ಡೆಗಳಲ್ಲಿ ಹೂತುಹೋಗಿರಬಹುದು. ಗಂಗರ ಕಂಬಗಳು ಅತ್ಯಂತ ಸೊಗಸಾದುವು. ಇವು ಬುಡದಲ್ಲಿ ಘನಾಕಾರವಾಗಿದ್ದು ತುದಿಯಲ್ಲಿ ಚೂಪಾಗಿದ್ದು ಬೋದಿಗೆಯ ಕೆಳಗಡೆ ಚಕ್ರದ ಆಕೃತಿ ಹೊಂದಿದೆ. ಆರ್ಕೇಶ್ವರ, ಮರಳೇಶ್ವರ, ಪಾತಾಳೇಶ್ವರ ಮೊದಲಾದ ದೇವಾಲಯಗಳು 8ನೆಯ ಶತಮಾನಕ್ಕೆ ಸೇರಿದವು.

ಗಂಗ ಕಾಲದ ವಾಸ್ತುಶಿಲ್ಪ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಉಳಿದುಬಂದಿದೆ. ಚಂದ್ರಪ್ರಭ ಬಸದಿ ಶಿವಮಾರನಿಂದ 800ರಲ್ಲಿ ಕಟ್ಟಲ್ಪಟ್ಟಿತು. ಚಾವುಂಡರಾಯ ಬಸದಿ ಚಾವುಂಡರಾಯನಿಂದ 982ರಲ್ಲಿ ಕಟ್ಟಲ್ಪಟ್ಟಿತು. ವಿಶ್ವವಿಖ್ಯಾತವಾದ ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಮೇಲಿರುವ ಬಹಳ ಸುಂದರವಾದ ಗೊಮ್ಮಟೇಶ್ವರ ವಿಗ್ರಹದ ಶಿಲ್ಪಿಯ ಹೆಸರು ತಿಳಿಯದು. ಈ ಶಿಲ್ಪ ಸುಮಾರು ಅರುವತ್ತು ಅಡಿ ಉದ್ದದ ಗ್ರಾನೈಟ್ ಶಿಲೆಯಲ್ಲಿ ಕೆತ್ತಲ್ಪಟ್ಟಿದೆ. ಪಾದದ ಹತ್ತಿರದ ಬಂಡೆಯ ಮೇಲಿರುವ ಗಂಗ ಕಾಲದ ಶಾಸನ ಈ ವಿಗ್ರಹವನ್ನು ಚಾವುಂಡರಾಯ ಮಾಡಿಸಿದನೆಂದು ತಿಳಿಸುತ್ತದೆ. ಚಾವುಂಡರಾಯ ಗಂಗರಸ ರಾಚಮಲ್ಲನ (974–84) ಮಂತ್ರಿಯಾಗಿದ್ದ. 978ರಲ್ಲಿ ರಚಿಸಲ್ಪಟ್ಟ ಚಾವುಂಡರಾಯಪುರಾಣ ಚಾವುಂಡರಾಯ ಮಾಡಿದ ಹಲವಾರು ಕೆಲಸಗಳನ್ನು ತಿಳಿಸುತ್ತದೆಯಾದರೂ ಈ ಮೂರ್ತಿಯನ್ನು ಪ್ರತಿಷ್ಠೆ ಮಾಡಿದ ವಿಷಯವನ್ನು ಹೇಳಿಲ್ಲ. ಆದುದರಿಂದ ಇದರ ಕಾಲ 978ರ ಅನಂತರವೆಂದು ಊಹಿಸಬಹುದು. **(ನೋಡಿ– ಕರ್ನಾಟಕದ ಮೂರ್ತಿಶಿಲ್ಪ)**

ಬಾಣಸಂದ್ರದ ಬಳಿಯ ಅರಳಗುಪ್ಪೆಯ **(ನೋಡಿ– ಅರಳಗುಪ್ಪೆ)** ಪಂಚಲಿಂಗ ದೇವಾಲಯದಲ್ಲಿ ಗಂಗ ಶೈಲಿಯ ಕಂಬಗಳಿರುವುದರಿಂದ ಅದನ್ನು ಆ ಕಾಲದ್ದೆಂದು ಊಹಿಸಬಹುದು. ಅದರ ಪ್ರಾಕಾರದಲ್ಲಿ ಸತ್ಯವಾಕ್ಯ ರಾಚಮಲ್ಲ ಪೆರ್ಮಾನಡಿಯ 10ನೆಯ ಶತಮಾನದ ವೀರಗಲ್ಲಿದೆ. ಈ ದೇವಾಲಯ ಬಹಳ ಸುಂದರವಾದುದು. ಮಧ್ಯದಲ್ಲಿರುವ ಲಿಂಗಕ್ಕೆ ಕಲ್ಲೇಶ್ವರ ಎಂದು ಹೆಸರು. ಕಲ್ಲೇಶ್ವರ ದೇವಾಲಯದ ನವರಂಗದ ಕಂಬಗಳು ಮತ್ತು ಅಷ್ಟದಿಕ್ಪಾಲಕರೊಂದಿಗೆ ಕೂಡಿದ ಶಿವನನ್ನು ಹೊಂದಿರುವ ಭುವನೇಶ್ವರಿ ಹೆಚ್ಚು ಕಲಾಪೂರ್ಣವಾದುವು.

ಶ್ರವಣಬೆಳಗೊಳದ ಸಮೀಪದಲ್ಲಿರುವ ಕಂಬದಹಳ್ಳಿ **(ನೋಡಿ)** ಕರ್ನಾಟಕ ವಾಸ್ತುಶಿಲ್ಪದಲ್ಲಿ ವಿಖ್ಯಾತವಾದುದು. ಅಲ್ಲಿ 900ರ ಸುಮಾರಿನ ಕೆಲವು ಕಟ್ಟಡಗಳಿದ್ದು ಅವುಗಳಲ್ಲಿ ಆದಿನಾಥ ಬಸದಿ ಮುಖ್ಯವಾದುದು. ಇದರ ಶಿಖರ ನಂದಿಯಲ್ಲಿರುವ ಭೋಗ ನಂದೀಶ್ವರ ಮತ್ತು ನರಸಮಂಗಲದ ರಾಮೇಶ್ವರ ದೇವಾಲಯಗಳ ಶಿಖರಗಳನ್ನು ಹೋಲುತ್ತದೆ. ಗಂಗ ಶಿಲ್ಪದ ಪ್ರಭಾವ ಕಂಬದಹಳ್ಳಿಯ ಕಟ್ಟಡಗಳ ಮೇಲಿರಬಹುದೆಂದು ಅನೇಕ ವಿದ್ವಾಂಸರ ಊಹೆ.

**ಚಳುಕ್ಯರ ಕಾಲ :** ಬಾದಾಮಿ ಚಳುಕ್ಯರು ಗುಹಾಂತರ ದೇವಾಲಯಗಳನ್ನಲ್ಲದೆ ತಮ್ಮದೇ ಆದ ಶೈಲಿಯ ದೇವಾಲಯಗಳನ್ನೂ ಕಟ್ಟಡಗಳನ್ನೂ ಕಟ್ಟಿಸಿದರು. 1ನೆಯ ಪುಲಕೇಶಿಯ ಮಕ್ಕಳಾದ ಕೀರ್ತಿವರ್ಮ ಮತ್ತು ಮಂಗಳೇಶ (6ನೆಯ ಶತಮಾನ) ಬಾದಾಮಿಯ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದರು. ಬಾದಾಮಿಯ ಕೋಟೆಯನ್ನು 1ನೆಯ ಪುಲಕೇಶಿ ಕಟ್ಟಿಸಿದ. ಬಾದಾಮಿಯಲ್ಲಿ ಮರಳುಶಿಲೆಯಲ್ಲಿ ಕೊರೆದ ನಾಲ್ಕು ಗುಹಾಂತರ ದೇವಾಲಯಗಳಿವೆ. ಅವುಗಳಲ್ಲಿ ಒಂದು ಶಿವನದು, ಒಂದು ಜಿನನದು, ಎರಡು ವಿಷ್ಣುವಿನವು. 3ನೆಯ ಗುಹಾಂತರ ದೇವಾಲಯದಲ್ಲಿ ಮಂಗಳೀಶನ ಶಾಸನವಿದೆ. ಪ್ರತಿಯೊಂದರಲ್ಲಿಯೂ ಕಂಬಗಳಿಂದ ಕೂಡಿದ ವರಾಂಡ, ಒಳಾಂಗಣ ಮತ್ತು ಚದರಾಕಾರದ ಗರ್ಭಗೃಹಗಳು ಇವೆ.

ಐಹೊಳೆ **(ನೋಡಿ)** ಚಳುಕ್ಯರ ವಾಸ್ತುಶಿಲ್ಪದ ತೌರುಮನೆಯೆಂದು ಹೇಳಬಹುದು. ಇಲ್ಲಿ 450 ರಿಂದ 650ರ ತನಕ ಬೆಳೆದು ಬಂದ ಚಳುಕ್ಯರ ಶಿಲ್ಪಪ್ರಗತಿ ಕಂಡುಬರುತ್ತದೆ. ಐಹೊಳೆಯಲ್ಲಿ ಸುಮಾರು 70 ದೇವಾಲಯಗಳಿವೆ. 2ನೆಯ ಪುಲಕೇಶಿ ಕಾಲವಾದ ಅನಂತರ ವಿಜಯಾದಿತ್ಯ ಮತ್ತು 2ನೆಯ ವಿಕ್ರಮಾದಿತ್ಯರ ಕಾಲದಲ್ಲಿ ಚಳುಕ್ಯರು ಪಲ್ಲವರನ್ನು ಸೋಲಿಸಿ ಕಂಚಿಯ ಮೇಲೆ ನುಗ್ಗಿದರಷ್ಟೆ. ಕಂಚಿಯ ರಾಜಸಿಂಹೇಶ್ವರ ದೇವಾಲಯವನ್ನು ನೋಡಿ 2ನೆಯ ವಿಕ್ರಮಾದಿತ್ಯ ತನ್ನ ಮೆಚ್ಚುಗೆ ತೋರಿಸಿದ್ದಲ್ಲದೆ ಪಲ್ಲವ ರಾಜ್ಯದಿಂದ ದೇವಾಲಯಗಳನ್ನು ನಿರ್ಮಿಸಲು ಅನೇಕ ಶಿಲ್ಪಿಗಳನ್ನು ತನ್ನ ದೇಶಕ್ಕೆ ಒಯ್ದ. ಈ ರೀತಿ ದ್ರಾವಿಡ ವಾಸ್ತುಶಿಲ್ಪದ ಅನೇಕ ಅಂಶಗಳು ಚಳುಕ್ಯರ ವಾಸ್ತುಶಿಲ್ಪಕ್ಕೆ ನೆರವಾದವು. ಐಹೊಳೆಯಿಂದ 24 ಕಿಮೀ ದೂರದ ಪಟ್ಟದಕಲ್ಲಿನಲ್ಲಿ 650ರ ಅನಂತರ ಚಳುಕ್ಯ ಶಿಲ್ಪದ ಅತ್ಯಂತ ಪ್ರಗತಿದಾಯಕವಾದ ಹಂತ ಕಾಣಬರುತ್ತದೆ. ಅಲ್ಲಿಯ ವಾಸ್ತುಶಿಲ್ಪ ವಿವಿಧ ಶೈಲಿಗಳ ಮಿಲನಕ್ಕೆ ಒಳ್ಳೆಯ ಉದಾಹರಣೆ. ಅಲ್ಲಿರುವ ಕಾಶಿನಾಥ, ಪಾಪನಾಥ ಮೊದಲಾದ ದೇವಾಲಯಗಳು ಉತ್ತರ ಭಾರತದ ನಾಗರಶೈಲಿಗೂ ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ, ಗಳಗನಾಥ ಮೊದಲಾದವು ದಕ್ಷಿಣ ಭಾರತದ ದ್ರಾವಿಡಶೈಲಿಗೂ ಸೇರಿವೆಯೆಂದು ಪರ್ಸಿ ಬ್ರೌನ್ ಅಭಿಪ್ರಾಯಪಟ್ಟಿದ್ದಾನೆ.

ನಾಗರ ಮತ್ತು ದ್ರಾವಿಡ ಇವೆರಡು ಶೈಲಿಗಳ ವೈಶಿಷ್ಟ್ಯವನ್ನು ವೇಸರ ಶೈಲಿಯಲ್ಲಿ ಅಳವಡಿಸಲಾಗಿದೆ. ಚಳುಕ್ಯರ ವಾಸ್ತುಶಿಲ್ಪದಲ್ಲಿ ನಾಗರ ಮತ್ತು ದ್ರಾವಿಡ ಶೈಲಿಗಳೆರಡೂ ಮಿಳಿತವಾಗಿದ್ದು ಇದನ್ನೇ ವೇಸರವೆಂದು ಹೇಳಲಾಗಿದೆ. ಚಳುಕ್ಯರ ವಾಸ್ತುಶಿಲ್ಪ ಮೂರು ಅಂಶಗಳಿಂದ ಕೂಡಿದೆ. 1 ಬೌದ್ಧ ಚೈತ್ಯದ ಕುದುರೆಲಾಳಾಕಾರ (ಐಹೊಳೆಯ ದುರ್ಗಾ ದೇವಾಲಯ). 2 ಎರಡೂ ಕಡೆ ಬಾಗುಳ್ಳ ಶಿಖರ. 3 ಸಮತಲ ಅಂತಸ್ತುಗಳಿಂದ ಕೂಡಿದ ಶಿಖರ.

ಆದರೆ ಪಾಪನಾಥ ಮತ್ತು ವಿರೂಪಾಕ್ಷ ದೇವಾಲಯಗಳಲ್ಲಿ ಉತ್ತರ ದಕ್ಷಿಣ ಭಾರತದ ಪ್ರಭಾವಗಳೆರಡೂ ಇವೆ. ಎರಡನೆಯ ವಿಕ್ರಮಾದಿತ್ಯನ ರಾಣಿ ಲೋಕಮಹಾದೇವಿ ವಿರೂಪಾಕ್ಷ



ಹಳೇಬೀಡಿನ ಶಿಲ್ಪ : ಅಡಿಪಾಯದ ಮೇಲಿರುವ ಯಾಳಿ ಪಟ್ಟಿಕೆ

ದೇವಾಲಯವನ್ನೂ ಆಕೆಯ ಸಹೋದರಿ ತ್ರೈಲೋಕ ಮಹಾದೇವಿ ತ್ರೈಲೋಕೇಶ್ವರ (ಮಲ್ಲಿಕಾರ್ಜುನ) ದೇವಾಲಯವನ್ನೂ ಕಟ್ಟಿಸಿದರು.

ಲಾಡ್‌ಖಾನ್ ಶಿವಾಲಯ ಐಹೊಳೆಯ ದೇವಾಲಯಗಳಲ್ಲೆಲ್ಲ ಪುರಾತನವಾದುದು. 450 ರಲ್ಲಿ ಕಟ್ಟಲ್ಪಟ್ಟ ಈ ವಿಷ್ಣು ದೇವಾಲಯದಲ್ಲಿ ಸ್ವಲ್ಪ ಕಾಲ ಮುಸಲ್ಮಾನನೊಬ್ಬ ವಾಸ ಮಾಡುತ್ತಿದ್ದುದರಿಂದ ಇದಕ್ಕೆ ಲಾಡ್‌ಖಾನ್ ದೇವಾಲಯವೆಂದು ಹೆಸರಾಯಿತು. ಇಲ್ಲಿ ಕಲಶವನ್ನು ಒಂದು ಅಲಂಕಾರದ ಚಿಹ್ನೆಯಾಗಿ ಉಪಯೋಗಿಸಲಾಗಿದೆ. ಇಲ್ಲಿನ ಮಂಟಪದ ಕಂಬಗಳ ಮೇಲಿನ ಗಂಗಾ ಮತ್ತು ಯಮುನಾ ದೇವಿಯರ ವಿಗ್ರಹಗಳು ಗುಪ್ತರ ದೇವಾಲಯಗಳ ಕುರುಹಾದರೂ ಚಾಳುಕ್ಯರು ತಮ್ಮ ವಾಸ್ತುಶಿಲ್ಪದಲ್ಲಿ ಅವನ್ನು ಉಪಯೋಗಿಸಿಕೊಂಡಿದ್ದಾರೆ. ಸು. 50 ಅಡಿ ಚದರದ ಈ ದೇವಾಲಯದಲ್ಲಿ ಬೆಳಕು ಬರಲು ಗೋಡೆಯಲ್ಲೇ ಮಾಡಿರುವ ಜಾಲಂಧ್ರಗಳು ಸುಂದರವಾಗಿಯೂ ಜಾಣ್ಮೆಯಿಂದಲೂ ಕೆತ್ತಲ್ಪಟ್ಟಿವೆ. ಇದೇ ಶೈಲಿಗೆ ಸೇರಿದ ಕೊಂಟಿ ಗುಡಿಯಲ್ಲಿ ದಪ್ಪವೂ ಕುಳ್ಳೂ ಆದ ಬೋದಿಗೆಗಳವರೆಗೂ ಚದರಾಕಾರವೂ ಆದ ನಾಲ್ಕು ಕಂಬಗಳಿವೆ. ದುರ್ಗಾದೇವಾಲಯ ಐಹೊಳೆಯ ಅತ್ಯಂತ ಸೊಗಸಾದ ಕಟ್ಟಡ. ಬೌದ್ಧ ಚೈತ್ಯಗಳ ಲಕ್ಷಣವಾದ ಕುದುರೆ ಲಾಳಾಕಾರದ ಈ ದೇವಾಲಯದ ಪಡಸಾಲೆ ಕಂಬಗಳ ಮೇಲೆ ಸುಂದರವಾದ ಶಿಲ್ಪಗಳನ್ನು ಕೆತ್ತಿದೆ. ಮೇಗುತಿ ಎಂಬ ಜೈನ ದೇವಾಲಯ 2ನೆಯ ಪುಲಿಕೇಶಿಯ ಕಾಲದಲ್ಲಿ (674) ನಿರ್ಮಿತವಾಯಿತು.

**ರಾಷ್ಟ್ರಕೂಟರ ಕಾಲ :** ಎಲ್ಲೋರ ಈಗ ಕರ್ನಾಟಕದಲ್ಲಿಲ್ಲದಿದ್ದರೂ ಒಮ್ಮೆ ಕರ್ನಾಟಕ ಚಕ್ರವರ್ತಿಗಳಾದ ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಅಲ್ಲಿರುವ ಕೈಲಾಸ ದೇವಾಲಯ ರಾಷ್ಟ್ರಕೂಟ 1ನೆಯ ಕೃಷ್ಣನಿಂದ ಎಂಟನೆಯ ಶತಮಾನದಲ್ಲಿ ನಿರ್ಮಿತವಾಯಿತು. ಅದು ಒಂದೇ ಕಲ್ಲಿನಲ್ಲಿ ಕೊರೆಯಲ್ಪಟ್ಟಿದೆ. ಅದರ ವಿನ್ಯಾಸ ಅಥೆನ್ಸ್‌ನ ಪಾರ್ಥೆನಾನ್ ಕಟ್ಟಡದಷ್ಟೇ ಆದರೂ ಅದರ ಒಂದೂವರೆಯಷ್ಟು ಎತ್ತರವಾಗಿದೆ. ಕೈಲಾಸ ದೇವಾಲಯವನ್ನು ಮೇಲಿಂದ ಕೆಳಕ್ಕೆ ಕೆತ್ತಿರುವುದರಿಂದ ಶಿಲ್ಪಿಗಳಿಗೆ ಅಟ್ಟಣಿಗೆ ಕಟ್ಟಿಕೊಂಡು ಕೆಲಸಮಾಡುವ ಪ್ರಮೇಯ ಬರಲಿಲ್ಲ.

ಮಾನ್ಯಖೇಟದಲ್ಲಿ ರಾಷ್ಟ್ರಕೂಟರ ಕಟ್ಟಡಗಳು ಉಳಿದು ಬಂದಿಲ್ಲ. ಅವರ ಕಾಲದ ಕಲ್ಲಿನ ದೇವಾಲಯಗಳು ಬಹಳ ಕಡಿಮೆ. ಸಂಡೂರಿನ ದೇವಾಲಯ ಕಲ್ಲಿನಿಂದ ಕಟ್ಟಲ್ಪಟ್ಟಿದೆಯೆಂದೂ ಅದರೊಳಗೆ ಮೂರನೆಯ ಇಂದ್ರನ ಶಿಲ್ಪವಿದೆಯೆಂದೂ ಹರ್‌ಮನ್ ಗೊಯೆಟ್ಸ್ ತಿಳಿಸುತ್ತಾನೆ.

**ಕಲ್ಯಾಣ ಚಾಳುಕ್ಯರ ವಾಸ್ತುಶಿಲ್ಪ :** ಇದು ಧಾರವಾಡ ಜಿಲ್ಲೆಯಲ್ಲಿ ಜನಿಸಿ ಪ್ರವರ್ಧಮಾನಕ್ಕೆ ಬಂದಿತಾದರೂ ಹನ್ನೊಂದನೆಯ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಗೂ ಪ್ರಸರಿಸಿತು. ಲಕ್ಕುಂಡಿಯ ಕಾಶಿವಿಶ್ವೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ ಮತ್ತು ಇಟಗಿಯ ಮಹಾದೇವ– ಇವು ಹನ್ನೆರಡನೆಯ ಶತಮಾನದ ಚಾಳುಕ್ಯ ಶೈಲಿಯ ಬಹಳ ಸುಂದರ ದೇವಾಲಯಗಳು. ನಾಗಾವಿಯಲ್ಲಿ (ನಾಗೈ) ಕಟ್ಟಲ್ಪಟ್ಟ ಮಧುಸೂಧನ ದೇವಾಲಯ ಮತ್ತೊಂದು ಪ್ರಖ್ಯಾತ ಕಟ್ಟಡ. ಅಲ್ಲಿ ಇನ್ನೂ ಅನೇಕ ಸುಂದರ ದೇವಾಲಯಗಳಿವೆ. ಹೊಯ್ಸಳರಾಜರು ಚಾಳುಕ್ಯರಿಗೆ ಅಧೀನರಾಗಿದ್ದುದರಿಂದ ಆ ಶೈಲಿಯ ಕಟ್ಟಡಗಳನ್ನು ಕಟ್ಟಲಾರಂಭಿಸಿದರು. ಶಿರಾಳಕೊಪ್ಪದ ಸಮೀಪದಲ್ಲಿರುವ ಬೆಳಗಾಮಿ (ಬಳ್ಳಿಗಾವೆ) ಇದಕ್ಕೆ ಉತ್ತಮ ನಿದರ್ಶನ. ಕುಪ್ಪಗದ್ದೆ ಮತ್ತು ಅನವಟ್ಟಿಗಳಲ್ಲೂ ಇದನ್ನು ಕಾಣಬಹುದು.

**ಹೊಯ್ಸಳರ ಕಾಲ :** ಚೋಳರ ಮೇಲಿನ ವಿಜಯಸ್ಮಾರಕವಾಗಿ ವಿಷ್ಣುವರ್ಧನ ಅನೇಕ ದೇವಾಲಯಗಳನ್ನು ಕಟ್ಟಿಸಿದ. ಇವುಗಳಲ್ಲಿ ಬೇಲೂರಿನ ವಿಜಯನಾರಾಯಣ (ಕೇಶವ) ಮತ್ತು ತಲಕಾಡಿನ ಕೀರ್ತಿನಾರಾಯಣ ದೇವಾಲಯಗಳು ಮುಖ್ಯವಾದುವು. ವಿಜಯನಾರಾಯಣ ವಿಗ್ರಹದ ಪೀಠದ ಕೆಳಗೆ ಇರುವ ಶಾಸನದಿಂದ ಬೇಲೂರು ದೇವಾಲಯ 1117ರಲ್ಲಿ ನಿರ್ಮಿಸಲ್ಪಟ್ಟಿತೆಂದು ತಿಳಿದುಬರುತ್ತದೆ. ಈ ದೇವಾಲಯದ ಜಾಲಂಧ್ರಕ್ಕೆ ಸೇರಿರುವ ಗೋಡೆಯ ಮೇಲೆ ವಿಷ್ಣುವರ್ಧನನ ದರ್ಬಾರನ್ನು ಕೆತ್ತಿದೆ.

ಹೊಯ್ಸಳರ ದೇವಾಲಯಗಳು ದಕ್ಷಿಣ ಭಾರತದ ಇತರ ದೇವಾಲಯಗಳಂತೆ ಹೆಚ್ಚು ಎತ್ತರವಾಗಿಲ್ಲ. ಅವುಗಳಿಗೆ ಉಪಯೋಗಿಸಿರುವ ಒಂದು ರೀತಿಯ ಬಳಪದ ಕಲ್ಲು ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕದಿದ್ದುದು ಇದಕ್ಕೆ ಕಾರಣವಿರಬಹುದು. ಫರ್‌ಗ್ಯುಸನ್ ಹೇಳುವಂತೆ ಹೊಯ್ಸಳ ದೇವಾಲಯಗಳನ್ನು ದೂರದಿಂದ ನೋಡಿದರೆ ಅವುಗಳ ಮಹತ್ತ್ವ ಅಷ್ಟು ಚೆನ್ನಾಗಿ ಗೋಚರವಾಗುವುದಿಲ್ಲ. ಆದರೆ ಸಮೀಪದಿಂದ ನೋಡಿದಾಗ ಅವುಗಳ ಅದ್ಭುತ ಕಲಾಕೌಶಲ ಬೆರಗುಗೊಳಿಸುತ್ತದೆ. ಹೊಯ್ಸಳರು ಚಾಳುಕ್ಯರ ಕಟ್ಟಡ ಶೈಲಿಯನ್ನೇ ಅನುಸರಿಸಿ ಬೆಳೆಸಿಕೊಂಡು ಬಂದರೂ ವಿಗ್ರಹಶಿಲ್ಪ, ಬಳ್ಳಿ, ಪ್ರಾಣಿಶಿಲ್ಪ ಮೊದಲಾದ ತಮ್ಮದೇ ಆದ ಅನೇಕ ಆಲಂಕಾರಿಕ ಅಂಶಗಳನ್ನು ಸೇರಿಸಿದರು. ಅವರ ಕೆತ್ತನೆ ಕೆಲಸ ಚಿನ್ನಬೆಳ್ಳಿಯಲ್ಲಿ ಕೆಲಸಮಾಡುವ ಅಕ್ಕಸಾಲಿಗರ ನೈಪುಣ್ಯಕ್ಕಿಂತಲೂ ಮಿಗಿಲಾದುದು.

ಹೊಯ್ಸಳರ ಕಾಲದ ದೇವಾಲಯ ಚಿಕ್ಕದಾದರೂ ಎತ್ತರವಾದ ನಕ್ಷತ್ರಾಕಾರದ ಜಗತಿಯ ಮೇಲೆ ಕಟ್ಟಿರುವುದರಿಂದ ಅದರ ಠೀವಿ ಎದ್ದು ಕಾಣುತ್ತದೆ. ಕಟ್ಟಡದ ಹೊರಗೋಡೆಗಳನ್ನು ಅಲೆಗಳ ಏರುತಗ್ಗುಗಳಂತೆ ಬಿಡಿಸಿರುವುದರಿಂದ ಅಲ್ಲಿ ಬೆಳಕು ಮತ್ತು ನೆರಳಿನ ಪ್ರತಿಕ್ರಿಯೆ ಸ್ಪಷ್ಟವಾಗಿ ಕಾಣುವುದು. ಹೊಯ್ಸಳ ದೇವಾಲಯದಲ್ಲಿ



ಲಕ್ಷ್ಮೀನರಸಿಂಹ ದೇವಾಲಯ, ನುಗ್ಗೇಹಳ್ಳಿ

ಭುವನೇಶ್ವರಿಯನ್ನು ಕೆತ್ತಿರುವ ಮಾಟ ಮತ್ತೆಲ್ಲಿಯೂ ಕಾಣದು. ಇಷ್ಟೇ ಅಲ್ಲದೆ ನವರಂಗದಲ್ಲಿ ವಿಧವಿಧವಾಗಿ ಕೆತ್ತಲ್ಪಟ್ಟಿರುವ ಕಂಬಗಳು ವೈವಿಧ್ಯಪೂರ್ಣವಾಗಿವೆ. ಅವುಗಳಲ್ಲಿ ಹದಿನಾರು ಅಥವಾ ಮೂವತ್ತೆರಡು ಮೂಲೆಯವು, ವರ್ತುಲಾಕಾರ ಅಥವಾ ಗಂಟೆಯಾಕಾರದವು ಇದ್ದು, ಕನ್ನಡಿಯ ಹೊಳಪಿನಿಂದ ಕೂಡಿವೆ.

ಬೇಲೂರು ದೇವಸ್ಥಾನವನ್ನು ಜಕಣಾಚಾರಿ ಮತ್ತು ಡಕಣಾಚಾರಿ ಎಂಬ ಪ್ರಖ್ಯಾತ ಶಿಲ್ಪಿಗಳು ಕಟ್ಟಿದರೆಂದು ಪ್ರತೀತಿ. ಆದರೆ ಇವರು ಚಾರಿತ್ರಿಕ ವ್ಯಕ್ತಿಗಳಲ್ಲ ; ಊಹಾ ಪ್ರಪಂಚಕ್ಕೆ ಸೇರಿದವರು. ಅನೇಕ ಶಿಲ್ಪಿಗಳ ಹೆಸರುಗಳನ್ನು ಬೇಲೂರು ದೇವಸ್ಥಾನದಲ್ಲಿ ಅವರು ಕೆತ್ತಿದ ಶಿಲ್ಪಗಳ ಕೆಳಗೆ ಕಾಣಬಹುದು. ದಾಸೋಜ ಮತ್ತು ಅವನ ಮಗ ಚಾವಣರೆಂಬುವರು ಬಳ್ಳಿಗಾವೆಯಿಂದ (ಬೆಳಗಾಮಿ) ಬಂದವರು. ಇವರು ಅನೇಕ ಬಿರುದುಗಳನ್ನು ಸಂಪಾದಿಸಿದ್ದರು. ದಾಸೋಜನಿಗೆ ಬಿರುದರೂವಾರಿ ಗೊಂದಲ ಬಡಿವ ಎಂದೂ ಚಾವಣನಿಗೆ ಬಿರುದರೂವಾರಿ ಮದನಮಹೇಶ ಎಂದೂ ಬಿರುದುಗಳಿತ್ತೆಂದು ಶಾಸನಗಳಿಂದ ಗೊತ್ತಾಗಿದೆ. ದಾಸೋಜ ಮತ್ತು ಚಾವಣರು ತಲಾ ನಾಲ್ಕು ಬೇಲೂರಿನ ಶಿಲಾಬಾಲಿಕೆಯರ ವಿಗ್ರಹಗಳನ್ನು ಮಾಡಿದರು. ದಾಸೋಜನ ಬೇಟೆಗಾತಿ ವಿಗ್ರಹ ಅತ್ಯದ್ಭುತವಾದುದು. ಮಂಗನೊಂದು ಯುವತಿಯ ಸೀರೆಯನ್ನೆಳೆಯುವಂತೆ ಕೆತ್ತಿದ ಚಾವಣನ ಶಿಲ್ಪ ಪ್ರಶಂಸನೀಯ. ಕೊಳಲಿನ ನೃತ್ಯದ ಶಿಲಾಬಾಲಿಕೆಯ ವಿಗ್ರಹ ಕೆತ್ತಿದ ಮಲ್ಲಿಯಣ್ಣ, ನೃತ್ಯದಲ್ಲಿ ತೊಡಗಿರುವ ಯುವತಿಯ ಶಿಲ್ಪ ಕೆತ್ತಿದ ಗದುಗಿನ ನಾಗೋಜ, ನವರಂಗದಲ್ಲಿ ಶಿಲ್ಪ ಕೆಲಸ ಮಾಡಿದ ಚಿಕ್ಕ ಹಂಪ ಮತ್ತು ಪಾದರಿ ಮಲ್ಲೋಜ ಇವರೆಲ್ಲರೂ ವಿಷ್ಣುವರ್ಧನನ ಶಿಲ್ಪಿಗಳು. ಇವರಲ್ಲದೆ ಮಸಣ, ಮಾಚಾರಿ ಎಂಬುವರ ಹೆಸರುಗಳೂ ಈ ಕಾಲದಲ್ಲಿ (1117ರ ಸುಮಾರು) ಕಾಣಸಿಗುತ್ತದೆ.

ಹಳೇಬೀಡು ಹೊಯ್ಸಳ ದೇವಾಲಯಗಳ ಬೀಡೆಂದರೆ ತಪ್ಪಲ್ಲ. ಹೊಯ್ಸಳ ರಾಜಧಾನಿಯಾಗಿದ್ದ ಹಳೇಬೀಡಿನಲ್ಲಿ ಅನೇಕ ದೇವಾಲಯಗಳಿದ್ದುದು ಆಶ್ಚರ್ಯವೇನೂ ಅಲ್ಲ. ಆದರೆ ಅಲ್ಲಿನ ಅನೇಕ ದೇವಾಲಯಗಳು ಈಗ ನಾಶವಾಗಿವೆ. ಹೊಯ್ಸಳೇಶ್ವರ ದೇವಾಲಯವನ್ನು ವಿಷ್ಣುವರ್ಧನನ ಅಧಿಕಾರಿ ಕೇತಮಲ್ಲ 1121ರಲ್ಲಿ ಕಟ್ಟಿಸಿದ. 20 ವರ್ಷಗಳ ಅನಂತರ 1ನೆಯ ನರಸಿಂಹನ ಪಟ್ಟಶಿಲ್ಪಿ ಕೇದಾರೋಜ ನಾಲ್ಕು ದ್ವಾರ ಮತ್ತು ಜಾಲಂಧ್ರಗಳನ್ನು ಸೇರಿಸಿದ. ದಕ್ಷಿಣ ದ್ವಾರದ ಮೇಲಿರುವ ಈ ಕೆಳಕಂಡ ಶಾಸನ ಇದನ್ನು ವ್ಯಕ್ತಪಡಿಸುತ್ತದೆ.

1 ಸ್ವಸ್ತಿಶ್ರೀಮತು ಪ್ರತಾಪ ಹೊಯ್ಸಳ ನರಸಿಂಹದೇವನ ರುವಾರಿ ಕೇದಾರರೊಂಜಂಗೆ ಮಲಪರಗಂಡ

2 ಭೇರುಂಡ ರೂವಾರಿ ಗಿರಿವಜ್ರದಂಡ ರೂವಾರಿ ಕಾಳಿದಾಸಿ ಗೆಯ್ದ ಮಕರತೋರಣ ಮಂಗಳಶ್ರೀ

ಇದೇ ದೇವಸ್ಥಾನದ ನೃತ್ಯಸರಸ್ವತಿಯ ವಿಗ್ರಹವನ್ನು ಹರಿಪ ಕೆತ್ತಿದ. ಅನೇಕ ಶಿಲ್ಪಿಗಳು ತಮ್ಮ ಕಲಾಕೃತಿಗಳ ಕೆಳಗೆ ನಾಮಾಂಕಿತದ ಮೊದಲನೆಯ ಅಕ್ಷರವನ್ನು ಮಾತ್ರ ಕೊರೆಯುತ್ತಿದ್ದರು. ಹೊಯ್ಸಳೇಶ್ವರ ದೇವಾಲಯದ ಸುಪ್ರಸಿದ್ಧ ಶಿಲ್ಪಿ ಮಾಬ ಮಾ ಎಂಬ ಒಂದೇ ಅಕ್ಷರ ಹಾಕಿಕೊಂಡಿದ್ದಾನೆ. ಇವರಲ್ಲದೆ ಬಲ್ಲಣ್ಣ, ಬೋಚಣ್ಣ, ಚವುಗ, ದೇವೋಜ, ಮುಂತಾದವರು ಈ ದೇವಾಲಯದಲ್ಲಿ ಶಿಲ್ಪಗಳನ್ನು ನಿರ್ಮಿಸಿದ್ದಾರೆ. 13ನೆಯ ಶತಮಾನದ

ಹೋನೋಜ ಅರಳಗುಪ್ಪೆಯ ಕೇಶವ ದೇವಾಲಯದಲ್ಲಿ 27 ಶಿಲ್ಪಗಳ ಕೆಳಗೆ ತನ್ನ ಹೆಸರನ್ನು ಹಾಕಿಕೊಂಡಿದ್ದಾನೆ. ಅವುಗಳಲ್ಲಿ ಹನ್ನೆರಡವುಗಳ ಕೆಳಗೆ ಹೋ ಮಾತ್ರ ಇದೆ.

ಹೊಯ್ಸಳರ ಕಾಲದ ಇನ್ನೂ ಅನೇಕ ವಿಖ್ಯಾತ ಶಿಲ್ಪಿಗಳ ವಿಷಯವನ್ನಿಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸಬಹುದು. ಮಲ್ಲಿತಮ್ಮ ತರೀಕೆರೆ ತಾಲ್ಲೂಕು ಅಮೃತಾಪುರದ ಅಮೃತೇಶ್ವರ ದೇವಾಲಯದ ಸೊಗಸಾದ ಭುವನೇಶ್ವರಿಗಳನ್ನು 1196ರಲ್ಲಿ ರಚಿಸಿದ. ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದಲ್ಲಿ 1249ರಲ್ಲಿಯೂ ಮಂಡ್ಯ ಜಿಲ್ಲೆಯ ಗೋವಿಂದನ ಹಳ್ಳಿಯ ಪಂಚಲಿಂಗ ದೇವಾಲಯದಲ್ಲಿಯೂ ಹಾಸನ ಜಿಲ್ಲಿಯ ಜಾವಗಲ್ಲಿನ ಲಕ್ಷ್ಮೀನೃಸಿಂಹ ದೇವಾಲಯದಲ್ಲಿಯೂ ಹಾರನಹಳ್ಳಿಯ ಕೇಶವ ದೇವಾಲಯದಲ್ಲಿ 1234 ರಲ್ಲಿಯೂ ಸೋಮನಾಥಪುರದ ಕೇಶವ ದೇವಾಲಯದಲ್ಲಿ 1268ರಲ್ಲಿಯೂ ಈತ ನಿರ್ಮಿಸಿದ ಅನೇಕ ಅಮೋಘ ಶಿಲ್ಪಗಳಿವೆ. ಸೋಮನಾಥಪುರದ ಕೇಶವ ದೇವಾಲಯ ಒಂದರಲ್ಲಿಯೇ 40 ವಿಗ್ರಹಗಳ ಕೆಳಗೆ ಇವನ ಹೆಸರಿದೆ.



ಜುಮ್ಮಾ ಮಸೀದಿ, ಶ್ರೀರಂಗಪಟ್ಟಣ

**ಚೋಳರ ವಾಸ್ತುಶಿಲ್ಪ :** ಚೋಳರ ವಾಸ್ತುಶಿಲ್ಪ ಕರ್ನಾಟಕದಲ್ಲಿ ವಿರಳವೆಂದು ಹೇಳಬಹುದು. ಕೋಲಾರ ಜಿಲ್ಲೆಯ ನಂದಿಯ ಭೋಗನಂದೀಶ್ವರ ದೇವಾಲಯದಲ್ಲಿ ಸ್ವಲ್ಪ ಮಟ್ಟಿಗೆ ಚೋಳ ಶೈಲಿಯ ಕಟ್ಟಡ ಕಾಣಬಹುದು. ಈ ದೇವಸ್ಥಾನ ಬಾಣ ವಂಶಕ್ಕೆ

ಅಘೋರೇಶ್ವರ ದೇವಾಲಯ, ಇಕ್ಕೇರಿ

ಸೇರಿದ ರತ್ನಾವಳಿಯಿಂದ ಪ್ರಾರಂಭಿಸಲ್ಪಟ್ಟಿತು. ಆದರೆ ಈ ದೇವಾಲಯದ ಬಸವ ಮಂಟಪ ರಾಜೇಂದ್ರ ಚೋಳನ ಕಾಲದಲ್ಲಿ ಸ್ಥಾಪಿತವಾಯಿತು. ಬೆಂಗಳೂರಿನ ಸಮೀಪದಲ್ಲಿರುವ ಬೇಗೂರಿನ ಸುಮಾರು 11ನೆಯ ಶತಮಾನದ ದೇವಾಲಯಗಳಲ್ಲಿ ಚೋಳರ ಶಿಲ್ಪದ ಹೋಲಿಕೆಯನ್ನುಳ್ಳ ಅನೇಕ ಸುಂದರ ವಿಗ್ರಹಗಳಿವೆ. ಮಾಲಿಂಗಿಯ ಜನಾರ್ದನ ದೇವಾಲಯ ರಾಜರಾಜನ ಕಾಲದಲ್ಲಿ ರಚಿತವಾಯಿತು. ನೆಲಮಂಗಲ ತಾಲ್ಲೂಕು ಬಿನ್ನಮಂಗಲದ ಮುಕ್ತಿನಾಥ ದೇವಾಲಯ ಒಂದನೆಯ ಕುಲೋತ್ತುಂಗನ ಕಾಲದಲ್ಲಿ ಕಟ್ಟಲ್ಪಟ್ಟಿತು.

**ವಿಜಯನಗರ ಕಾಲ :** ಹಂಪಿಯಲ್ಲಿರುವ ಮಹಾನವಮಿ ದಿಬ್ಬ ಹಿಂದೆ ಸಿಂಹಾಸನ ಜಗತಿಯಾಗಿತ್ತೆಂದೂ ಒರಿಸ್ಸದ ರಾಜನನ್ನು ಗೆದ್ದ ಜ್ಞಾಪಕಾರ್ಥವಾಗಿ ಅದನ್ನು ಕೃಷ್ಣದೇವರಾಯ ಕಟ್ಟಿಸಿದನೆಂದೂ ಪೇಸ್ ಎಂಬ ವಿದೇಶಿಯ ಹೇಳಿದ್ದಾನೆ. ಈ ಜಗತಿಯ ಕೆಳಭಾಗ ಸುಂದರ ಶಿಲ್ಪಕೃತಿಗಳಿಂದ ಅಲಂಕರಿಸಲ್ಪಟ್ಟಿದೆ. ಸಿಂಹಾಸನದ ಜಗತಿಯಂತೆಯೇ

ಬೆಂಗಳೂರು ಅರಮನೆ

ಕೃಷ್ಣದೇವರಾಯ ಹಜಾರ ರಾಮಸ್ವಾಮಿ ದೇವಾಲಯವನ್ನು ಕಟ್ಟಲು ಪ್ರಾರಂಭಿಸಿದ. ಇದರ ಕಂಬಗಳಲ್ಲಿ ಸುಂದರ ವಿಗ್ರಹಗಳಿವೆ.

ಕೃಷ್ಣದೇವರಾಯ ಉದಯಗಿರಿಯಿಂದ ತಂದ ಕೃಷ್ಣ ವಿಗ್ರಹಕ್ಕಾಗಿ ಕೃಷ್ಣಸ್ವಾಮಿ ದೇವಾಲಯವನ್ನು 1513ರಲ್ಲಿ ಕಟ್ಟಿಸಿದ. ಆತ ಸುಪ್ರಸಿದ್ಧ ವಿಠಲಸ್ವಾಮಿ ದೇವಾಲಯವನ್ನು ಪ್ರಾರಂಭಿಸಿದನೆಂದು ಶಾಸನವೊಂದು ತಿಳಿಸುತ್ತದೆ. ಈ ಕೆಲಸ ಅಚ್ಯುತರಾಯ ಮತ್ತು ಸದಾಶಿವರಾಯರ ಕಾಲದಲ್ಲಿ ಮುಂದುವರಿದರೂ ಅಪೂರ್ಣವಾಗಿಯೇ ಉಳಿಯಿತು. ಮಹಮ್ಮದೀಯರು ವಿಜಯನಗರವನ್ನು ಮುತ್ತಿದಾಗ ಇದರ ಸೊಗಸಾದ ಶಿಲ್ಪ ಮತ್ತು ಕಂಬಗಳನ್ನು ಒಡೆದುಹಾಕಿದರು. ಇದರ ಬಳಿ ಇರುವ ಕಲ್ಲಿನ ರಥವೇನೋ ಹಾಗೆಯೇ ಉಳಿದುಬಂದಿದೆ.

ಈ ಕಾಲದ ಪಂಪಾಪತಿ ದೇವಾಲಯದ ಕೆಲವು ಭಾಗಗಳು ವಿಜಯನಗರದ ಸ್ಥಾಪನೆಗಿಂತ ಮುಂಚೆಯೇ ಇದ್ದುವೆಂದು ಲಾಂಗ್‌ಹರ್ಸ್ಟ್ ತಿಳಿಸುತ್ತಾನೆ. ಈ ದೇವಾಲಯದ ರಂಗಮಂಟಪವನ್ನು ಕೃಷ್ಣದೇವಾರಾಯ ಕಿರೀಟಧಾರಣೆಯ ಜ್ಞಾಪಕಾರ್ಥವಾಗಿ 1509–10ರಲ್ಲಿ ಕಟ್ಟಿಸಿದನೆಂದು ಶಾಸನ ತಿಳಿಸುತ್ತದೆ. ಈಗಲೂ ಈ ದೇವಾಲಯ ಹಾಳುಹಂಪಿಯಲ್ಲಿ ಕರ್ಣಾಟಕದ ಹಿರಿಮೆಯನ್ನು ಎತ್ತಿ ತೋರಿಸುವಂತೆ ಕಾಣುತ್ತದೆ.

ಶ್ರೀರಂಗಂ, ಲೇಪಾಕ್ಷಿ, ತಾಡಪತ್ರಿ ಮೊದಲಾದ ಸ್ಥಳಗಳಲ್ಲಿ ವಿಜಯನಗರದ ಕಟ್ಟಡಗಳು ಉಳಿದುಬಂದಿವೆ. ಶ್ರೀರಂಗದ ಕುದುರೆ ಮಂಟಪ ಪ್ರಖ್ಯಾತವಾದುದು.

**ಹಿಂದೂ–ಮುಸ್ಲಿಂ ವಾಸ್ತು ಶಿಲ್ಪ :** ಹಿಂದೂ–ಮುಸ್ಲಿಂ ರೀತಿಯ ಕಟ್ಟಡಗಳು ಕರ್ಣಾಟಕದ ಗುಲ್ಬರ್ಗ, ಬಿದರೆ, ಬಿಜಾಪುರ ಮೊದಲಾದ ಪ್ರದೇಶಗಳಲ್ಲಿ ರೂಢಿಗೆ ಬಂದುವು. ಬಹಮನೀ ರಾಜಧಾನಿಯಾದ ಬಿದರೆಯಲ್ಲಿ ಮಹಮೂದ್ ಗಾವಾನ್ 3ನೆಯ ಮಹಮ್ಮದ್ ಷಾನ ಮಂತ್ರಿಯಾಗಿದ್ದಾಗ ಕಟ್ಟಿಸಿದ ಮದ್ರಸ ಅಥವಾ ಕಾಲೇಜಿನ ಕಟ್ಟಡ ಬಹಳ ಪ್ರಾಮುಖ್ಯವಾದುದು. ಅದರ ಎತ್ತರವಾದ ಗುಮ್ಮಟಗಳು, ಉಪನ್ಯಾಸಕ್ಕೆ ಉಪಯೋಗಿಸುತ್ತಿದ್ದ ಕೋಣೆಗಳು, ಪ್ರಾರ್ಥನಾಮಂದಿರ, ಪ್ರಾಧ್ಯಾಪಕರ ಕೋಣೆಗಳು, 3,000 ಗ್ರಂಥಗಳನ್ನು ಹೊಂದಿದ್ದ ಗ್ರಂಥಾಲಯ ಈಗಲೂ ಉಳಿದುಬಂದಿವೆ.

ಬಿದರೆಯಲ್ಲಿರುವ ರಂಗೀನ್ ಮಹಲ್ ಮತ್ತೊಂದು ಉತ್ತಮ ಕಟ್ಟಡ. ಇದರಲ್ಲಿ ಉಪಯೋಗಿಸಿರುವ ಅನೇಕ ಬಣ್ಣದ ಹೆಂಚುಗಳು, ಮರದ ಕೆತ್ತನೆ ಕೆಲಸ ಮತ್ತು ಕಪ್ಪೆಚಿಪ್ಪಿನ ಅಲಂಕಾರ ಇದಕ್ಕೆ ಈ ಹೆಸರನ್ನು ತಂದಿವೆ. ಇದನ್ನು ಅಲಿಬರೀದ್ (1542–80) ಕಟ್ಟಿಸಿದ.

ಭಾರತದಲ್ಲೇ ಅತ್ಯಂತ ಆಕರ್ಷಣೀಯವಾದ ಕಟ್ಟಡವೆಂದರೆ ಗುಲ್ಬರ್ಗ ಕೋಟೆಯಲ್ಲಿರುವ ಮಸೀದಿ. ಇದನ್ನು ಫಿರೋಜ಼್ ಷಾ ಬಹಮನಿಯ ಕಾಲದಲ್ಲಿ 1367ರಲ್ಲಿ ಕಟ್ಟಲಾಯಿತು. ಸ್ಪೇನ್ ದೇಶದ ಕಾರ್‌ಡೋವದಲ್ಲಿರುವ ದೊಡ್ಡ ಮಸೀದಿಯೇ ಇದಕ್ಕೆ ಮಾದರಿ, ಇದರ ಅಗಲ ಮತ್ತು ಉದ್ದ 216 × 176 ಅಡಿಗಳು. ವಿಚಿತ್ರವೆಂದರೆ ಮಸೀದಿ ಮೇಲ್ಛಾವಣಿಯಿಂದ ಮುಚ್ಚಲ್ಪಟ್ಟಿದೆ. ಇದನ್ನು ಕಟ್ಟಿದ ಶಿಲ್ಪಿ ರಫೀ ಉತ್ತರ ಪರ್ಷಿಯದ ಕಾಜ್‌ವಿನ್ ಎಂಬ ಪಟ್ಟಣದಿಂದ ಬಂದವ.

ಬಿಜಾಪುರದಲ್ಲಿರುವ ಆಸೆರ್‌ಮಹಲ್, ಗಗನಮಹಲ್, ಚೀನಿ ಮಹಲ್, ಸಾತ್ ಮಂಜಿಲ್ ಮೊದಲಾದುವು ಆ ಸುಲ್ತಾನರ ಕಲಾಭಿಮಾನದ ಪ್ರತೀಕಗಳು. ಹೈದರ್ ಬುರ್ಜ್ ಹತ್ತಿರವಿರುವ ದಖನಿ ಈದ್ಗಾ ಮೇಲಿರುವ ಶಾಸನ ಅದು 1538ರಲ್ಲಿ ಒಂದನೆಯ ಇಬ್ರಾಹಿಮನ ಕಾಲದಲ್ಲಿ ಕಟ್ಟಲ್ಪಟ್ಟಿತ್ತೆಂದು ತಿಳಿಸುತ್ತದೆ. ಒಂದನೆಯ ಆಲಿ ಅದಿಲ್ ಷಾ ಕಾಲದಲ್ಲಿ ಗಗನಮಹಲ್ (1561) ಮತ್ತು ಜಾಮಿ ಮಸೀದಿ ಕಟ್ಟಲ್ಪಟ್ಟವು.

ಆದಿಲ್‌ಷಾಹಿ ಕಟ್ಟಡಗಳಲ್ಲೆಲ್ಲ ಅತ್ಯಂತ ಅಮೋಘವಾದುದು ಇಬ್ರಾಹಿಂ ರೋಜ಼. ಇದರಲ್ಲಿ ಮಸೀದಿ ಮತ್ತು ಗೋರಿ ಅಡಕವಾಗಿವೆ. ಇದು ಎರಡನೆಯ ಇಬ್ರಾಹಿಮನ (1580–1627) ಕಾಲದಲ್ಲಿ ರಚಿತವಾಯಿತು. ಇಬ್ರಾಹಿಮನ ರಾಣಿ ತಾಜ್ ಸುಲ್ತಾನಳಿಗಾಗಿ ಕಟ್ಟಲ್ಪಟ್ಟು ಅವನೇ ಮೊದಲು ಸತ್ತುದರಿಂದ ಅವನ ಗೋರಿಯಾಯಿತು. ಇದರ ಆಲಂಕಾರಿಕ ಆಕರ್ಷಣೆ ಅಮೋಘವಾದುದೆಂದು ಕಸಿನ್ಸ್ ಅಭಿಪ್ರಾಯಪಡುತ್ತಾನೆ.

ಮತ್ತೊಂದು ಉತ್ತಮ ಕಟ್ಟಡ ಗೋಳಗುಮ್ಮಟ. ಗಾತ್ರದಲ್ಲಿ ಬಿಜಾಪುರದ ಕಟ್ಟಡಗಳಲ್ಲೆಲ್ಲ ಅತ್ಯಂತ ದೊಡ್ಡದಾದ ಇದನ್ನು ಎರಡನೆಯ ಇಬ್ರಾಹಿಂನ ಮಗ ಮಹಮ್ಮದ (1627–1656) ಕಟ್ಟಿಸಿದ. ಇದರ ಗೋಳ ಬಹಳ ಎತ್ತರವಾದುದು ಮತ್ತು ಇದರ ಕೆಳಗಿನ ಹಜಾರ ಪ್ರಪಂಚದಲ್ಲಿರುವ ಪಿಸುಮಾತಿನ ಹಜಾರಗಳಲ್ಲಿ (ವಿಸ್ಪರಿಂಗ್ ಗ್ಯಾಲರಿ) ಅತ್ಯಂತ ಉತ್ತಮವಾದುದು. (ಎಸ್.ಎಂ.)

ಇದೇ ರೀತಿ ಭಾಗಗಳಲ್ಲಿ ಆಳುತ್ತಿದ್ದ ಮೊಗಲ ಸರದಾರರು ಕಟ್ಟಿಸಿದ ಹಲವು ಕಟ್ಟಡಗಳು ಉಳಿದು ಬಂದಿವೆ. ಅವುಗಳಲ್ಲಿ ಶಿರಾದಲ್ಲಿರುವ ಜಮ್ಮಾಮಸೀದಿ, ಮಲ್ಲಿಕ್‌ರಿಹಾನ್ ದರ್ಗಾಗಳನ್ನು ಹೆಸರಿಸಬಹುದು.

ಕರ್ನಾಟಕದ ದಕ್ಷಿಣ ಭಾಗದಲ್ಲಿ ವಿಜಯನಗರ ಸಾಮ್ರಾಜ್ಯ ಒಡೆದು ಸಣ್ಣಸಣ್ಣ ಸ್ವತಂತ್ರ ಪಾಳೆಯಪಟ್ಟುಗಳು ತಲೆಯೆತ್ತಿಕೊಂಡಾಗ ಅಲ್ಲಿನ ಪಾಳೆಯಗಾರರು ತಮ್ಮ ತಮ್ಮ ಪರಿಮಿತಿಯಲ್ಲಿ ಕಲೆಗೆ ಪ್ರೋತ್ಸಾಹ ಕೊಟ್ಟರು. ಇವರಲ್ಲಿ ಮುಖ್ಯರಾದವರು ಕೆಳದಿಯ ನಾಯಕರು, ಚಿತ್ರದುರ್ಗದ ಪಾಳೆಯಗಾರರು, ಯಲಹಂಕದ ಪ್ರಭುಗಳು ಮತ್ತು ಮೈಸೂರು ಒಡೆಯರು.

**ಕೆಳದಿಯ ನಾಯಕರ ಕಾಲ :** ವಿಜಯನಗರದ ಶಿಲ್ಪಕಲೆಯಿಂದ ಸ್ಫೂರ್ತಿ ಪಡೆದರೂ



ಸೇಂಟ್ ಫಿಲೋಮಿನ ಚರ್ಚ್, ಮೈಸೂರು

ಇವರು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡರು. ಇವರು ದೇವಾಲಯಗಳನ್ನು ಗಟ್ಟಿ ಕಲ್ಲಿನಿಂದ ನಿರ್ಮಿಸಿದ್ದು ದ್ರಾವಿಡ ಹೊಯ್ಸಳ ಶೈಲಿಗಳನ್ನಲ್ಲದೆ ಮುಸ್ಲಿಂ ಶೈಲಿಯನ್ನೂ ಅಳವಡಿಸಿಕೊಂಡರು. ಇಕ್ಕೇರಿಯ ಅಘೋರೇಶ್ವರ ದೇವಾಲಯ ಈ ಕಾಲದ ಕಟ್ಟಡಗಳಲ್ಲಿ ಪ್ರಮುಖವಾದುದು. ಹೊಯ್ಸಳ ದೇವಾಲಯಗಳಂತೆ ಇದನ್ನೂ ಎತ್ತರವಾದ ಜಗತಿಯ ಮೇಲೆ ನಿರ್ಮಿಸಿದ್ದು ಗರ್ಭಗುಡಿಯ ಮೇಲಿನ ಕಲ್ಲಿನ ಗೋಪುರ, ನವರಂಗದ ಗುಂಡುಕಂಬಗಳು, ಹೊರಗೋಡೆಯ ಮೇಲೆ ತೆಳುವಾಗಿ ಬಿಡಿಸಿರುವ ಮೂರ್ತಿಶಿಲ್ಪಗಳು ಹೊಯ್ಸಳ ರೀತಿಯ ಅನುಕರಣೆಯನ್ನು ವಿಶಾಲವಾದ ನವರಂಗ, ಅನೇಕ ರೀತಿಯ ಕಂಬಗಳು, ಕತ್ತಲೆ ಪ್ರದಕ್ಷಿಣ ಮಾರ್ಗ ಜೋಡಿ ಸುಕನಾಸಿಗಳು ದ್ರಾವಿಡ ರೀತಿಯ ಅನುಕರಣೆಯನ್ನೂ ಅಲ್ಲಲ್ಲಿ ಕಾಣುವ ಕಮಾನುಗಳು ಮುಸ್ಲಿಂ ರೀತಿಯ ಅನುಕರಣೆಯನ್ನೂ ಸೂಚಿಸುತ್ತವೆ. ಕೆಳದಿಯ ರಾಮೇಶ್ವರ ಮತ್ತು ವೀರಭದ್ರ ದೇವಾಲಯಗಳ ನಿರ್ಮಾಣ ಕಾರ್ಯ 16ನೆಯ ಶತಮಾನಕ್ಕೆ ಸೇರಿದೆ. ಇಲ್ಲಿನ ಒಳಚಾವಣಿಗಳ ಶಿಲ್ಪ ಅಪೂರ್ವ. ಅದರಲ್ಲಿಯೂ ವಿವರವಾಗಿ ಬಿಡಿಸಿರುವ ಗಂಡಭೇರುಂಡ ಮೂರ್ತಿ ಈ ಶಿಲ್ಪಕ್ಕೆ ಮಾದರಿಯಾಗಿದೆ. ಈ ರಾಜ್ಯದ ಅನೇಕ ಕಡೆಗಳಲ್ಲಿರುವ ಸಣ್ಣ ಸಣ್ಣ ಗುಡಿಗಳು ಆ ಕಾಲದ ವಾಸ್ತುಶಿಲ್ಪದ ವೈಶಿಷ್ಟ್ಯವಾಗಿವೆ. ಎತ್ತರದ ತಳಹದಿಯ ಮೇಲೆ ಪುಟ್ಟ ಗರ್ಭಗುಡಿ, ಸುಕನಾಸಿಗಳು ಮಾತ್ರ ಇದ್ದು ಮುಂಭಾಗದಲ್ಲಿ ನೆಲದಿಂದ ಎದ್ದು ನಿಂತ ಎತ್ತರವಾದ ಕಂಬಗಳುಳ್ಳ ದ್ವಾರಮಂಟಪವಿದ್ದು ಕೆಲವು ವೇಳೆ ಗರ್ಭಗುಡಿಯ ಮೇಲೆ ಕಲ್ಲಿನ ಶಿಖರಗಳಿರುತ್ತವೆ. ಅವುಗಳ ಗೋಡೆಗಳ ಮೇಲೆ ಮೂರ್ತಿಶಿಲ್ಪಗಳಿರುತ್ತವೆ. ತೀರ್ಥಹಳ್ಳಿ, ನಗರ, ಸಾಲಗೆರೆ, ಶೃಂಗೇರಿ ಮುಂತಾದೆಡೆಗಳಲ್ಲಿರುವ ದೇವಾಲಯಗಳಿಗೆ ಜಂಬಿಟ್ಟಿಗೆ ಬಳಸಿದೆ. ಆಗ್ರಹಾರದಲ್ಲಿಯ 1733ರ ನೀಲಕಂಠೇಶ್ವರ ದೇವಾಲಯ ನಾಯಕರ ಕಾಲದ ರಚನೆಗೆ ಮಾದರಿಯಾಗಿದೆ. ಕೇವಲ 10' × 8' ಗಳ ಈ ದೇವಾಲಯದ ಗೋಡೆಗಳ ಒಳಗೂ ಹೊರಗೂ ರಾಮಾಯಣ, ಭಾರತ, ಭಾಗವತಗಳ ಕಥೆಗಳೂ ದ್ವಾರಪಾಲಕರು, ಅಷ್ಟದಿಕ್ಪಾಲಕರು, ವಿಷ್ಣುವಿನ ದಶಾವತಾರ, ಶಿವಲೀಲೆಗಳು ಮತ್ತು ಇತರ ಮೂರ್ತಿಶಿಲ್ಪಗಳೂ ರೂಪಿತವಾಗಿವೆ.

ಚಿತ್ರದುರ್ಗ ಪಾಳೆಯಗಾರರು ಕಟ್ಟಿಸಿದ ಹಲವು ದೇವಾಲಯಗಳು ಇತರ ಕಟ್ಟಡಗಳು ಚಿತ್ರದುರ್ಗದ ಬೆಟ್ಟದ ಮೇಲೆಯೂ ಇತರ ಕಡೆಗಳಲ್ಲಿಯೂ ಉಳಿದುಬಂದಿವೆ. ಇವರ ಕಾಲದಲ್ಲಿ ಪುನರ್ನಿರ್ಮಾಣಗೊಂಡ ನೀರ್ತಡಿಯ ರಂಗನಾಥ ದೇವಾಲಯ ತನ್ನ ಹೊರಗೋಡೆಯ ಮೂರ್ತಿಶಿಲ್ಪಗಳಿಗೂ ತೆಳುವಾದರೂ ಉನ್ನತವಾದ ಗೋಪುರಕ್ಕೂ ಪ್ರಸಿದ್ಧವಾಗಿದೆ. ಇದಕ್ಕಿಂತ ಮಿಗಿಲಾಗಿ ಹೊಳಲ್ಕೆರೆ ತಾಲ್ಲೂಕು ರಾಮದುರ್ಗದಲ್ಲಿ ಗುಡ್ಡವೊಂದನ್ನು ಕೊರೆದು ನಿರ್ಮಿಸಿರುವ ಗುಹಾಂತರ್ದೇವಾಲಯ ನಾಯಕರ ಸಾಧನೆಯ ಪ್ರತೀಕವಾಗಿದೆ. ಕಗ್ಗಲ್ಲಿನ ಮೊರಡಿಯಲ್ಲಿ ಕಂಡರಿಸಿರುವ ಈ ಗವಿಯಲ್ಲಿ ಕಂಬ, ಒಳಚಾವಣಿ ಮತ್ತು ತೊಲೆ–ಇವುಗಳ ಮೇಲೆ ತುಂಬಿರುವ ಶಿಲ್ಪವೈಖರಿ ಆಶ್ಚರ್ಯವುಂಟು ಮಾಡುವಂಥದು.

**ಯಲಹಂಕ ಪ್ರಭುಗಳ ಕಾಲ :** ಶಿವಗಂಗೆ, ಮಾಗಡಿ, ಬೆಂಗಳೂರು ಮುಂತಾದ ಕಡೆ ಅನೇಕ ದೇವಾಲಯಗಳನ್ನು ಕಟ್ಟಿಸಿರುವ ಕೆಂಪೇಗೌಡನ ಕಾಲದ ಕಟ್ಟಡಗಳಲ್ಲಿ ಅಲಸೂರಿನ ಸೋಮೇಶ್ವರ ದೇವಾಲಯದ ಗೋಪುರ ಉನ್ನತವೂ ಭವ್ಯವೂ ಆಗಿದೆ. ಬೆಂಗಳೂರು ಕೋಟೆ ವೆಂಕಟರಮಣಸ್ವಾಮಿ ದೇವಾಲಯವನ್ನು ಮೈಸೂರಿನ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಕಟ್ಟಿಸಿದುದೆಂದು ಪ್ರತೀತಿಯಿದ್ದರೂ ಅದು ಕೆಂಪೇಗೌಡನ ಕಾಲದ ಕಟ್ಟಡವೇ ಆಗಿರಬಹುದು. ಇವುಗಳೊಂದಿಗೆ ಗವಿ ಗಂಗಾಧರೇಶ್ವರ ದೇವಾಲಯದ ಮುಂದೆ ಬೃಹತ್ಪ್ರಮಾಣದಲ್ಲಿ ನಿಂತಿರುವ ಛತ್ರಿಗಳು, ತ್ರಿಶೂಲ, ಡಮರುಗ ಮುಂತಾದುವು ಕುತೂಹಲಕಾರಿಯಾಗಿವೆ.

**ಮೈಸೂರಿನ ಒಡೆಯರ ಕಾಲ :** ಇವರು ಮೇಲುಕೋಟೆ, ನಂಜನಗೂಡು, ಮೈಸೂರು, ಶ್ರೀರಂಗಪಟ್ಟಣ, ಗುಂಡ್ಲುಪೇಟೆ, ಮೊದಲಾದ ಕಡೆಯ ಅನೇಕ ದೇವಾಲಯಗಳಿಗೂ ಹಲವು ಮೂರ್ತಿಶಿಲ್ಪಗಳಿಗೂ ಕಾರಣರಾಗಿದ್ದಾರೆ. ರಾಜಒಡೆಯರ ಕಾಲದ್ದಾದ ಮೇಲುಕೋಟೆಯ ಅಪೂರ್ಣ ಕೋಟೆಬಾಗಿಲು ಅವರ ಕಾಲದ ಸಾಧನೆಗೆ ಒಂದು ಹೆಗ್ಗುರುತು. ದೊಡ್ಡದೇವರಾಜ ಒಡೆಯರು ನಿರ್ಮಿಸಿದ ಚಾಮುಂಡಿಬೆಟ್ಟದ ಬಸವ, ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಗುಂಡ್ಲುಪೇಟೆಯಲ್ಲಿ ನಿರ್ಮಿಸಿದ ರಾಮೇಶ್ವರ, ಪರವಾಸುದೇವ ದೇವಾಲಯಗಳು, ಶ್ರೀರಂಗಪಟ್ಟಣದಲ್ಲಿ ಕಂಠೀರವ ನರಸರಾಜ ಒಡೆಯರು ಕಟ್ಟಿಸಿದ ನರಸಿಂಹಸ್ವಾಮಿ ದೇವಾಲಯ – ಇವು ದ್ರಾವಿಡ ರೀತಿಯ ಸಾಮಾನ್ಯ ಕಟ್ಟಡಗಳಾದರೆ ಯಳಂದೂರಿನಲ್ಲಿ 17ನೆಯ ಶತಮಾನದಲ್ಲಿ ನಿರ್ಮಿಸಿರಬಹುದಾದ ಗೌರೀಶ್ವರ ದೇವಾಲಯದ ಮಹಾದ್ವಾರ ತಾಡಪತ್ರಿಯ ದೇವಾಲಯವನ್ನು ನೆನಪಿಗೆ ತರುವ ಒಂದು ಸುಂದರ ಕಲಾಕೃತಿ.

ಸಮಕಾಲಿಕ ಅಶಾಂತ ರಾಜಕೀಯ ಪರಿಸ್ಥಿತಿಯ ನಿಮಿತ್ತವಾಗಿ ಈ ಕಾಲದಲ್ಲಿ ಹಲವಾರು ಸುಭದ್ರ ಕೋಟೆಗಳು ನಿರ್ಮಿತವಾದುವು. ಕೊತ್ತಲ–ಬುರುಜುಗಳನ್ನು ಅಳವಡಿಸಿದ್ದ ಕೋಟೆಯ ಸುತ್ತಲೂ ಆಳವಾದ ಕಂದಕಗಳನ್ನು ತೋಡಿಸುವ ಪದ್ಧತಿ ಬಳಕೆಗೆ ಬಂತು. ಇಂಥ ಅಭೇದ್ಯ ಕೋಟೆಗಳನ್ನು ಹೈದರ್ ಮತ್ತು ಟಿಪ್ಪು ಕಾಲದಲ್ಲಿ ಇನ್ನೂ ಬಲಪಡಿಸಲಾಯಿತು. ಚಿತ್ರದುರ್ಗ, ಬಳ್ಳಾರಿ, ಶ್ರೀರಂಗಪಟ್ಟಣ, ದೇವನಹಳ್ಳಿ, ಬೆಂಗಳೂರು ಮುಂತಾದ ಕಡೆ ಇಂಥ ಕೋಟೆಗಳಿವೆ.

ಹೈದರ್ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ಕರ್ನಾಟಕದ ದಕ್ಷಿಣಭಾಗದಲ್ಲಿಯೂ ಕೆಲವು ಮುಸ್ಲಿಂ ರೀತಿಯ ಕಟ್ಟಡಗಳು ನಿರ್ಮಾಣವಾದುವು. ಬೆಂಗಳೂರಿನ ಟಿಪ್ಪು ಅರಮನೆ,

ಶ್ರೀರಂಗಪಟ್ಟಣದ ದರಿಯಾ ದೌಲತ್, ಜುಮ್ಮಾಮಸೀದಿ, ಗುಂಬಜ್‌ಗಳು ಇವಕ್ಕೆ ನಿದರ್ಶನಗಳು.

**ಭಾರತಾಂಗ್ಲ ವಾಸ್ತುಶೈಲಿ :** ಪಾಶ್ಚಾತ್ಯರ ಆಳ್ವಿಕೆಯೊಂದಿಗೆ ಐರೋಪ್ಯ ರೀತಿಯ ಕಟ್ಟಡಗಳ ನಿರ್ಮಾಣ ಆರಂಭವಾಯಿತು. ಮೊದಲಿಗೆ ಕಟ್ಟಡಗಳು ಪಾಶ್ಚಾತ್ಯ ಇಂಜಿನಿಯರುಗಳಿಂದ ರೂಪಿಸಲ್ಪಟ್ಟು ಯೂರೋಪಿನ ಬೇರೆ ಬೇರೆ ವಾಸ್ತುಶೈಲಿಗಳಲ್ಲಿವೆ. ಈ ಕಾಲದಲ್ಲಿ ಅನೇಕ ಚರ್ಚುಗಳು ಗಾಥಿಕ್ ಶೈಲಿಯಲ್ಲಿ ನಿರ್ಮಾಣವಾದುವು. ಬೆಂಗಳೂರಿನ ಟ್ರಿನಿಟಿ ಚರ್ಚು, ಮಂಗಳೂರಿನ ಸೇಂಟ್ ಅಲೋಯ್ಸಿಯಸ್ ಚರ್ಚು, ಮೈಸೂರಿನ ಸೇಂಟ್ ಫಿಲೋಮಿನ ಚರ್ಚುಗಳು ಈ ಶೈಲಿಯ ಅತ್ಯಂತ ಆಕರ್ಷಕ ಕಟ್ಟಡಗಳು.

ಚರ್ಚುಗಳು ಮತ್ತು ಇತರ ಮತೀಯ ಕಟ್ಟಡಗಳಿಗಿಂತ ಈ ಕಾಲದಲ್ಲಿ ಹೆಚ್ಚಾಗಿ ಸಾರ್ವಜನಿಕ ಕಟ್ಟಡಗಳ ನಿರ್ಮಾಣವಾಯಿತು. ಈ ಕಟ್ಟಡಗಳಲ್ಲಿ ಗಾಥಿಕ್ ಶೈಲಿಯೇ ಅಲ್ಲದೆ ಗ್ರೀಸ್, ಇಟಲಿ, ಫ್ರಾನ್ಸ್‌ಗಳ ಪುನರುಜ್ಜೀವನ ಶೈಲಿಯ ಅನುಕರಣೆ ಕಂಡುಬರುತ್ತದೆ. ಗಾಥಿಕ್ ಶೈಲಿಯ ಕಟ್ಟಡಗಳಿಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕಟ್ಟಡ ಉತ್ತಮ ಉದಾಹರಣೆ. ಬೆಂಗಳೂರಿನ ಅಠಾರಾ ಕಚೇರಿ, ವಸ್ತು ಸಂಗ್ರಹಾಲಯ, ಡ್ಯಾಲಿ ಮೆಮೋರಿಯಲ್ ಹಾಲ್, ಮೈಸೂರಿನ ಮಹಾರಾಜ ಕಾಲೇಜು. ಜೂಬಿಲಿ ಕಟ್ಟಡ, ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡಗಳು ಪುನರುಜ್ಜೀವನ ಶೈಲಿಯಲ್ಲಿ ನಿರ್ಮಾಣವಾಗಿವೆ. ಬೆಂಗಳೂರಿನ ಅರಮನೆ ಇಂಗ್ಲೆಂಡ್ ಮತ್ತು ನಾರ್ಮಂಡಿಗಳಲ್ಲಿ ನಿರ್ಮಿತವಾದ ಮಧ್ಯಯುಗದ ದುರ್ಗಗಳಂತಿದ್ದು ವಿಂಡ್ಸರ್ ಅರಮನೆಯ ಮಾದರಿಯಲ್ಲಿದೆ. ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಂಥ ಹಲವು ಕಟ್ಟಡಗಳಲ್ಲಿ ಅಮೆರಿಕದ ಪುನರುಜ್ಜೀವನ ಶೈಲಿಯನ್ನು ಗುರುತಿಸಬಹುದು. 19ನೆಯ ಶತಮಾನದಲ್ಲಿ ಹೀಗೆ ವಿದೇಶೀ ಶೈಲಿ ಕರ್ನಾಟಕದ ವಾಸ್ತುಶಿಲ್ಪಿಗಳಲ್ಲಿ ಹೆಚ್ಚಾಗಿ ಕಂಡರೂ ದೇಶೀಯ ಶೈಲಿಯೂ ಅಲ್ಲಲ್ಲಿ ಉಳಿದುಕೊಂಡು ಬಂದಿದೆ. ಇದರೊಂದಿಗೆ ಹಿಂದೂ, ಮುಸ್ಲಿಂ ಮತ್ತು ಪಾಶ್ಚಾತ್ಯ ಶೈಲಿಗಳು ಮಧುರವಾಗಿ ಸಮ್ಮಿಳನಗೊಂಡು ಹೊಸ ರೀತಿಯ ಕಟ್ಟಡಗಳ ಆವಿರ್ಭಾವಕ್ಕೂ ಅವಕಾಶವಾಗಿದೆ.

**ಈಚಿನ ಕಟ್ಟಡಗಳು :** 20ನೆಯ ಶತಮಾನದ ಆದಿಯಲ್ಲಿ ಕಟ್ಟಿದ ದೇವಾಲಯಗಳಲ್ಲಿ ಶೃಂಗೇರಿಯ ಶಾರದಾ ದೇವಾಲಯ ಮುಖ್ಯವಾದುದು. ಕಗ್ಗಲ್ಲಿನಲ್ಲಿ ದ್ರಾವಿಡ ರೀತಿಯಲ್ಲಿ ಕಡೆದಿರುವ ಕಂಬಗಳೂ ಅವುಗಳ ಮುಂಭಾಗದಲ್ಲಿ ಉನ್ನತವಾಗಿ ರೂಪುಗೊಂಡಿರುವ ಮೂರ್ತಿಶಿಲ್ಪಗಳೂ ದಕ್ಷಿಣದ ಶಿಲ್ಪಿಗಳು ಇಂದಿಗೂ ಉಳಿಸಿಕೊಂಡು ಬಂದಿರುವ ಶಿಲ್ಪಕಲಾ ಸಂಪ್ರದಾಯವನ್ನು ಎತ್ತಿ ತೋರಿಸುತ್ತವೆ. ಈ ದೇವಾಲಯದೊಂದಿಗೆ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಕಗ್ಗಲ್ಲಿನಲ್ಲಿ ಕಟ್ಟಿರುವ ಶಂಕರ ಮಠಗಳನ್ನೂ ಹೆಸರಿಸಬಹುದು. ನಾಗಮಂಗಲ ತಾಲ್ಲೂಕಿನ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಭವ್ಯವಾದ ಶ್ರೀ ಕಾಲಭೈರವನ ದೇವಾಲಯವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಇನ್ನೂ ಅನೇಕ ಮಠ ಮತ್ತು ಪುಣ್ಯಕ್ಷೇತ್ರಗಳಲ್ಲಿ ಆಧುನಿಕ ದೇವಾಲಯಗಳು ರೂಪುಗೊಂಡಿವೆ. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿನ ಗೊಮ್ಮಟೇಶ್ವರ ಪ್ರತಿಮೆ ಮೂರ್ತಿ ಶಿಲ್ಪಕ್ಕೆ ಕಳೆದ ಶತಮಾನದ ಕೊಡುಗೆ ಬೆಂಗಳೂರಿನ ಹನುಮಂತನ ಬೃಹತ್ ವಿಗ್ರಹ ಹಾಗೂ ಹಳೇ ವಿಮಾನ ನಿಲ್ದಾಣ ರಸ್ತೆಯ ಶಿವನ ಬೃಹತ್ ವಿಗ್ರಹ ಇತ್ತೀಚಿನ ಸೇರ್ಪಡೆ.

ಆಧುನಿಕ ಕಟ್ಟಡಗಳಲ್ಲಿ ಅತ್ಯಂತ ಸುಂದರವೂ ಭವ್ಯವೂ ಆದ ಮೈಸೂರಿನ ಅರಮನೆ ಹಿಂದೂ, ಮುಸ್ಲಿಂ ಮತ್ತು ಪಾಶ್ಚಾತ್ಯ ಶೈಲಿಗಳ ಆಕರ್ಷಣೀಯ ಸಂಗಮ. ಹೊರ ನೋಟಕ್ಕೆ ಮೊಗಲ್ ಶೈಲಿಯ ಗಾಂಭೀರ್ಯವನ್ನು ಹೊಂದಿರುವ ಈ ವಿಶಾಲವಾದ ಕಟ್ಟಡದ ಮಧ್ಯಗೋಪುರ 145 ಅಡಿಗಳಷ್ಟು ಎತ್ತರದ್ದಾಗಿದೆ. ಹಲವು ರೀತಿಯ ಕಲ್ಲುಗಳನ್ನು ಉಪಯೋಗಿಸಿ ಕಟ್ಟಿರುವ ಈ ಕಟ್ಟಡದ ತಳದಿಂದ ತುದಿಯವರೆಗೂ ಕಾಣುವ ಕುಸುರಿ ಕೆಲಸದ ಮನೋಹರ ಸೌಂದರ್ಯ ಬೆರಗುಗೊಳಿಸುವಂಥದು. ಹೊಯ್ಸಳ ರೀತಿಯಲ್ಲಿ ಬಿಡಿಸಿರುವ ಬಳ್ಳಿಗಳು, ಸುರುಳಿಗಳು, ಪಕ್ಷಿಗಳು, ಪ್ರಾಣಿಗಳು, ನಾನಾಭಂಗಿಯಲ್ಲಿ ಇರುವ ಮೂರ್ತಿಗಳು ಎಲ್ಲವೂ ಅಪರೂಪ ಕೃತಿಗಳು. ಇವುಗಳ ಮಾಟದಲ್ಲಿ, ನಿಲುವಿನಲ್ಲಿ ಗಾಥಿಕ್ ಶೈಲಿಯ ಪ್ರಭಾವವನ್ನು ಗುರ್ತಿಸಬಹುದು. ಕಲ್ಲಿನ ಕೆಲಸದೊಂದಿಗೆ ಈ ಕಟ್ಟಡದೊಳಗಿರುವ ಮರದ ಕೆತ್ತನೆ, ದಂತದ ಕೆಲಸ, ಗಾರೆ ಬಣ್ಣಗಳ ಕೃತಿ–ಇವು ಒಂದನ್ನೊಂದು ಮೀರಿಸುವಂತೆ ಚಿತ್ತಾಕರ್ಷಕವಾಗಿದ್ದು ಕಟ್ಟಡದ ಸೌಂದರ್ಯವನ್ನು ಅತ್ಯಂತ ಉನ್ನತ ಮಟ್ಟಕ್ಕೆ ಏರಿಸಿವೆ. ಭಾರತದಲ್ಲಿಯೇ ಇದನ್ನು ಮೀರಿಸುವ ಆಧುನಿಕ ಕಲ್ಲಿನ ಕಟ್ಟಡ ಬೇರೊಂದಿಲ್ಲ ಎಂಬ ಪಾಶ್ಚಾತ್ಯ ವಿದ್ವಾಂಸರೊಬ್ಬರ ಅಭಿಪ್ರಾಯ ಅತಿಶಯೋಕ್ತಿಯಲ್ಲ.

ಇತ್ತೀಚೆಗೆ ಕಟ್ಟಿದ ಬೃಹತ್ಪ್ರಮಾಣದ ಆಕರ್ಷಕ ಕಟ್ಟಡವೆಂದರೆ ವಿಧಾನ ಸೌಧ. ಆಧುನಿಕ ರೀತಿಯ ವಿಶಾಲಯವಾದ ಈ ಕಟ್ಟಡಕ್ಕೆ ಪ್ರಾಚೀನ ದ್ರಾವಿಡ ರೀತಿಯ ದೇವಾಲಯಗಳ ಗೋಪುರಗಳ ಮಾದರಿಗಳನ್ನಳವಡಿಸಿ, ಗಾಂಭೀರ್ಯ ಮತ್ತು ಭವ್ಯತೆಗಳು ಎದ್ದು ಕಾಣುವಂತೆ ಮಾಡಲಾಗಿದೆ. ಅದರ ಪಕ್ಕದಲ್ಲೇ ವಿಕಾಸಸೌಧ ಎಂಬ ವಿಧಾನಸೌಧವನ್ನೇ ಹೋಲುವ ಸಚಿವಾಲಯ ಈಗ ಎದ್ದುನಿಂತಿದೆ. (ಎಂ.ಎಚ್.)

**ಕರ್ನಾಟಕದ ಶಾಸನಗಳು :** ಬಹುಶಃ ತಮಿಳುನಾಡನ್ನು ಬಿಟ್ಟರೆ ಕರ್ನಾಟಕದಲ್ಲಿ ದೊರೆಯುವಷ್ಟು ಶಾಸನಗಳು ಭಾರತದ ಯಾವ ಪ್ರಾಂತದಲ್ಲಿಯೂ ಇಲ್ಲ. ಸು. 20,000ಕ್ಕೂ ಹೆಚ್ಚು ಶಾಸನಗಳು ಕರ್ನಾಟಕದಲ್ಲಿ ಈವರೆಗೆ ದೊರಕಿವೆ. ಅವುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಶಾಸನಗಳು ಅಚ್ಚಾಗಿವೆ. ಕರ್ನಾಟಕದಲ್ಲಿ ದೊರೆಯುವ ಅತ್ಯಂತ ಪ್ರಾಚೀನವಾದ ಶಾಸನಗಳೆಂದರೆ ಮೌರ್ಯ ವಂಶದ ಅಶೋಕ ಚಕ್ರವರ್ತಿಯ (ಪ್ರ.ಶ.ಪೂ. 272–232) ಧರ್ಮಲಿಪಿಗಳು. ಭಾರತದ ಇತರೆಡೆಗಳಲ್ಲೂ ಈ ವರೆಗೆ ದೊರಕಿರುವ ಅತ್ಯಂತ



ಅಶೋಕನ ಶಾಸನ, ಬ್ರಹ್ಮಗಿರಿ

ಪ್ರಾಚೀನ ಬರೆಹಗಳೆಂದರೆ ಈತನ ಧರ್ಮಶಾಸನಗಳೇ. ಇದಕ್ಕೂ ಪೂರ್ವದ ಹರಪ್ಪ ಸಂಸ್ಕೃತಿಯ ಮುದ್ರೆಗಳ ಮೇಲಿರುವ ಚಿತ್ರಲಿಪಿಯನ್ನು ಇನ್ನೂ ಸಮರ್ಪಕವಾಗಿ ಓದಿ ಗುರುತಿಸಿಲ್ಲ. ಇಡೀ ಭಾರತದಲ್ಲಿ ಇದುವರೆಗೆ ದೊರೆತ ಅಶೋಕನ ಒಟ್ಟು 13 ಲಘು ಶಿಲಾಲೇಖಗಳಲ್ಲಿ (ಮೈನರ್ ರಾಕ್ ಈಡಿಕ್ಟ್ಸ್) 6 ಶಾಸನಗಳು ಕರ್ನಾಟಕದಲ್ಲಿಯ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗರಾಮೇಶ್ವರಗಳಲ್ಲಿಯೂ ರಾಯಚೂರು ಜಿಲ್ಲೆಯ ಮಾಸ್ಕಿ, ಗವಿಮಠ ಮತ್ತು ಪಾಲ್ಕಿಗುಂಡು ಎಂಬಲ್ಲಿಯೂ ದೊರೆತಿವೆ. ಇವು ಮೌರ್ಯಕಾಲದ ಬ್ರಾಹ್ಮೀ ಲಿಪಿಯಲ್ಲಿ ಪ್ರಾಕೃತ ಭಾಷೆಯಲ್ಲಿವೆ. ಬ್ರಹ್ಮಗಿರಿ ಗುಂಪಿನ ಮೂರು ಶಾಸನಗಳ ಕೊನೆಯ ವಾಕ್ಯವಾದ ಚಪಡೇನ ಲಿಖಿತೇ ಲಿಪಿಕರೇಣ ಎಂಬಲ್ಲಿ ಮೊದಲಿನ ಎರಡು ಶಬ್ದಗಳನ್ನು ಬ್ರಾಹ್ಮೀ ಲಿಪಿಯಲ್ಲಿ ಮತ್ತು ಲಿಪಿಕರೇಣ ಎಂಬ ಶಬ್ದವನ್ನು ಖರೋಷ್ಠೀ ಲಿಪಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಶಾಸನಗಳ ಮೊದಲ ಲಿಪಿಕಾರ ಚಪಡ ತನಗೆ ಖರೋಷ್ಠೀಲಿಪಿಯ ಜ್ಞಾನ ಇದ್ದಿತೆಂದು ತಿಳಿಸುವುದಕ್ಕಾಗಿ ಆ ಶಬ್ದವನ್ನು ಖರೋಷ್ಠೀಯಲ್ಲಿ ಬರೆದಿರಬಹುದು. ಅಶೋಕನ ಶಾಸನಗಳಲ್ಲಿ ಉಪಯೋಗಿಸಿದ ಬ್ರಾಹ್ಮೀ ಲಿಪಿಯಿಂದಲೇ ಉತ್ತರ ಹಾಗೂ ದಕ್ಷಿಣ ಭಾರತದ ಎಲ್ಲ ಪ್ರಚಲಿತ ಲಿಪಿಗಳು ಉದ್ಭವಿಸಿರುತ್ತವೆ. ಕರ್ನಾಟಕದಲ್ಲಿ ದೊರೆತ ಅಶೋಕ ಚಕ್ರವರ್ತಿಯ ಶಾಸನಗಳಿಂದ ಈ ಭಾಗ ಆತನ ರಾಜ್ಯಕ್ಕೆ ಒಳಪಟ್ಟಿತ್ತೆಂದು ಗೊತ್ತಾಗುತ್ತದೆ. ಈ ಭಾಗಕ್ಕೆ ಇಸಿಲ ಎಂಬ ಹೆಸರಿದ್ದು, ಇದು ಸುವರ್ಣಗಿರಿ ಪ್ರಾಂತ್ಯಕ್ಕೆ ಸೇರಿತ್ತೆಂಬುದು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಆತನ ಶಾಸನಗಳಿಂದ ತಿಳಿಯುತ್ತದೆ. ರಾಯಚೂರು ಜಿಲ್ಲೆಯ ಮಸ್ಕಿ ಶಾಸನದಲ್ಲಿ ಅಶೋಕನ ಹೆಸರನ್ನೇ ಉಲ್ಲೇಖಿಸಿದ್ದುದರಿಂದ ಉಳಿದ ಶಾಸನಗಳಲ್ಲಿ ಉಕ್ತವಾದ ದೇವಾನಾಂ ಪ್ರಿಯ ಪ್ರಿಯದರ್ಶಿ ರಾಜಾ ಅಥವಾ ದೇವಾನಾಂಪ್ರಿಯ ರಾಜಾ ಎಂಬ ಹೆಸರು ಅಶೋಕನಿಗೆ ಅನ್ವಯಿಸುತ್ತದೆಂಬ ವಿಷಯ ಖಚಿತವಾಯಿತು.

ಮೌರ್ಯರ ತರುವಾಯ ಕರ್ನಾಟಕದಲ್ಲಿ ರಾಜ್ಯವಾಳಿದ ಸಾತವಾಹನರ ಶಾಸನಗಳು ಈಗಿನ ಮೈಸೂರು ರಾಜ್ಯದಲ್ಲಿ ದೊರೆತಿಲ್ಲವಾದರೂ ಮೊದಲು ಬಳ್ಳಾರಿ ಜಿಲ್ಲೆಗೆ ಸೇರಿದ ಹಾಗೂ ಈಗ ಕರ್ನೂಲು ಜಿಲ್ಲೆಯಲ್ಲಿ ಸಮಾವೇಶಗೊಂಡಿರುವ ಆದವಾನಿ ತಾಲ್ಲೂಕಿನ ಮ್ಯಾಕದೋಣಿ ಎಂಬಲ್ಲಿ ಆ ವಂಶದ ಸಿರಿಪುಳುಮಾವಿಯ ಶಾಸನವೊಂದಿದೆ. ಈತ 2ನೆಯ ವಾಸಿಠೀಪುತ ಪುಳುಮಾವಿ (130–59) ಎಂದು ವಿದ್ವಾಂಸರ ಅಭಿಪ್ರಾಯ. ಸಾತವಾಹನರ ಸಾಮಂತರಾದ ಚುಟುಕುಲ ಸಾತಕಣ್ಣಿಗಳು ಬನವಾಸಿ ಪ್ರಾಂತದಲ್ಲಿ 3ನೆಯ ಶತಮಾನದಲ್ಲಿ ಆಳುತ್ತಿದ್ದು, ಆ ವಂಶದ ಅರಸು ಹಾರಿತೀಪುತ ವಿಣ್ಹುಕಡ ಚುಟುಕುಲಾನಂದ ಸಾತಕಣ್ಣಿ ಎಂಬಾತನ ಎರಡು ಶಾಸನಗಳು ಬನವಾಸಿ ಮತ್ತು ಮಳವಳ್ಳಿಗಳಲ್ಲಿ ದೊರೆತಿವೆ. ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬಲ್ಲಿ ಸು. ಮೂರನೆಯ ಶತಮಾನದ ಲಿಪಿಯಲ್ಲಿ ಬರೆದ ಮತ್ತು ನಾಗಾರ್ಜುನಕೊಂಡದ ಇಕ್ಷ್ವಾಕು ಅರಸರ ಶಾಸನಗಳ ಲಿಪಿಯನ್ನು ಹೋಲುವ 30ರಷ್ಟು ಚಿಕ್ಕಪುಟ್ಟ ಶಾಸನಗಳು ದೊರೆತಿವೆ. ಅವುಗಳಿಂದ ಮತ್ತು ಅಲ್ಲಿ ದೊರೆತ ಬೇರೆ ಅವಶೇಷಗಳಿಂದ ಆ ಸ್ಥಳ ಮೂರನೆಯ ಶತಮಾನದಲ್ಲಿ ಬೌದ್ಧರ ಪ್ರಮುಖ ಕೇಂದ್ರವಾಗಿತ್ತೆಂದು ತಿಳಿಯುವುದು. ಈ ಶಾಸನಗಳು ಪ್ರಾಕೃತ ಭಾಷೆಯಲ್ಲಿವೆ.

ಮೇಲೆ ಹೇಳಿದ ಮ್ಯಾಕದೋನಿ ಶಾಸನದಿಂದಲೂ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಎಂಬಲ್ಲಿ ದೊರೆತ ಪಲ್ಲವ ರಾಜ ಶಿವಸ್ಕಂದ ವರ್ಮನ ಪ್ರಾಕೃತಭಾಷೆಯ ತಾಮ್ರಶಾಸನದಿಂದಲೂ ಬಳ್ಳಾರಿಯ ಬಹುಭಾಗ ಸಾತವಹನಿಹಾರ ಅಥವಾ ಸಾತಾಹನಿರಟ್ಟ ಅಂದರೆ ಸಾತವಾಹನ ರಾಷ್ಟ್ರ ಎಂಬ ಪ್ರಾಂತವನ್ನೊಳಗೊಂಡಿತ್ತೆಂಬುದಾಗಿ ತಿಳಿಯುತ್ತದೆ. ಸಾತವಾಹನರ ತರುವಾಯ ಈ ಭಾಗ ಪಲ್ಲವರ ವಶದಲ್ಲಿತ್ತೆಂಬ ವಿಷಯವೂ ಈ



ಶಿವಸ್ಕಂದವರ್ಮನ ತಾಮ್ರಫಲಕಗಳು, ಹಿರೇಹಡಗಲಿ

ತಾಮ್ರಶಾಸನದಿಂದ ವಿಶದವಾಗುವುದು. 3–4ನೆಯ ಶತಮಾನದ ಈ ಶಾಸನ ಭಾರತದಲ್ಲಿ ಇದುವರೆಗೆ ದೊರೆತ ಅತ್ಯಂತ ಪ್ರಾಚೀನ ತಾಮ್ರದಾನಪತ್ರವಾಗಿರುತ್ತದೆ.

ನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಪಲ್ಲವರನ್ನು ಸೋಲಿಸಿ ಕರ್ನಾಟಕದಲ್ಲಿ



ಸನ್ನತಿ ಶಾಸನ

ಮೊಟ್ಟಮೊದಲಿಗೆ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಿದವರು ಕದಂಬರು. ಈ ವಂಶದ ಮೂಲಪುರಷ ಮಯೂರಶರ್ಮನ ಶಾಸನವೊಂದು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಬಳಿ ಬಂಡೆಗಲ್ಲಿನ ಮೇಲಿದೆ. ಇದು ಸು. ನಾಲ್ಕನೆಯ ಶತಮಾನದ ಬ್ರಾಹ್ಮೀ ಲಿಪಿಯಲ್ಲಿ ಮತ್ತು ಪ್ರಾಕೃತ ಭಾಷೆಯಲ್ಲಿದೆ. ಹೀಗೆ ಕರ್ನಾಟಕದಲ್ಲಿ ಅಶೋಕನ ಕಾಲದಿಂದ ಮಯೂರಶರ್ಮನ ಕಾಲದವರೆಗೆ ದೊರೆತ ಎಲ್ಲ ಶಾಸನಗಳೂ ಬ್ರಾಹ್ಮೀಲಿಪಿಯಲ್ಲಿ ಮತ್ತು ಪ್ರಾಕೃತ ಭಾಷೆಯಲ್ಲಿವೆ. ಆದುದರಿಂದ ಜನಸಾಮಾನ್ಯರ ಭಾಷೆ ಕನ್ನಡವಾದರೂ ಸುಶಿಕ್ಷಿತರಿಗೆ ಪ್ರಾಕೃತ ಭಾಷೆ ತಿಳಿಯುತ್ತಿತ್ತೆಂದು ತೋರುತ್ತದೆ.

ನಾಲ್ಕನೆಯ ಶತಮಾನದಿಂದ 16–17ನೆಯ ಶತಮಾನದವರೆಗಿನ ನಾಡಿನ ಚರಿತ್ರೆಯನ್ನು ತಿಳಿದುಕೊಳ್ಳಲು ಸಹಸ್ರಾರು ಶಾಸನಗಳು ಮೂಲಾಧಾರವಾಗಿವೆ. ಕದಂಬ, ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಕಳಚುರ್ಯ, ಸೇವುಣ, ಹೊಯ್ಸಳ, ವಿಜಯನಗರದ ಅರಸರು ಮುಂತಾದ ಅರಸುಮನೆತನಗಳ ಮತ್ತು ಅಧೀನ ಅರಸುಮನೆತನಗಳ ಚರಿತ್ರೆಯನ್ನು ರೂಪಿಸಲು ಶಾಸನಗಳು ಬಹಳ ಉಪಯುಕ್ತವಾಗಿವೆ. ಅರಸುಮನೆತನಗಳ ವಂಶಾವಳಿ–ಚರಿತ್ರೆಯಷ್ಟೇ ಅಲ್ಲದೆ ನಾಡಿನ ಸಂಸ್ಕೃತಿಯ ಪರಂಪರೆಯನ್ನು ತಿಳಿದುಕೊಳ್ಳಲೂ ಶಾಸನಗಳು ಅತ್ಯಮೂಲ್ಯ ಸಾಧನಗಳಾಗಿವೆ. ಆಯಾ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಭೌಗೋಲಿಕ ಮುಂತಾದ ಅನೇಕ ವಿಷಯಗಳ ಬಗ್ಗೆ ಶಾಸನಗಳು ವಿಪುಲವಾದ ಹಾಗೂ ನಿರ್ದುಷ್ಟವಾದ ಸಾಮಗ್ರಿಗಳನ್ನು ಒದಗಿಸುತ್ತವೆ. ಆಡಳಿತ ಕ್ಷೇತ್ರದಲ್ಲಿ ರಾಜ್ಯದ ವಿವಿಧ ಮಟ್ಟಗಳಲ್ಲಿರುವ ಆಡಳಿತ ವ್ಯವಸ್ಥೆ, ಆಡಳಿತಾಧಿಕಾರಿಗಳು, ಸೈನ್ಯಾಧಿಕಾರಿಗಳು, ಆದಾಯ, ತೆರಿಗೆ, ಸುಂಕ–ಸಾರಿಗೆ, ಸ್ವಾಯತ್ತೆ ಪಡೆದಿರುವ ಸಂಘ–ಸಂಸ್ಥೆಗಳು, ನ್ಯಾಯವಿತರಣೆ, ಭೂಮಿಯ ಸಾಗುವಳಿ, ಒಕ್ಕಲತನ, ನೀರಾವರಿ, ಬೆಳೆ ಮುಂತಾದ ವಿಷಯಗಳ ಬಗ್ಗೆಯೂ ಶಾಸನಗಳಿಂದ ವಿವರಗಳು ದೊರಕುತ್ತವೆ.

ಮೇಲೆ ಉಲ್ಲೇಖಿಸಿದ ಕದಂಬ ಮಯೂರಶರ್ಮನ ಚಂದ್ರವಳ್ಳಿ ಶಾಸನವನ್ನುಳಿದು ಈ ವಂಶದ ರಾಜರ ಎಲ್ಲ ಶಾಸನಗಳು ಸಂಸ್ಕೃತ ಭಾಷೆಯಲ್ಲಿವೆ. ರಾಜಾಸ್ಥಾನದ ಭಾಷೆ ಸಂಸ್ಕೃತವಿದ್ದುದರಿಂದ ಈ ಶಾಸನಗಳು ಆ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಆದರೆ 5ನೆಯ ಶತಮಾನದ ಕನ್ನಡ ಲಿಪಿಯಲ್ಲಿ ಬರೆದ ಹಲ್ಮಿಡಿ ಶಾಸನದಲ್ಲಿ ಆರಂಭದ ಶ್ಲೋಕ ಸಂಸ್ಕೃತ ಭಾಷೆಯಲ್ಲಿಯೂ ಉಳಿದ ಭಾಗ ಕನ್ನಡದಲ್ಲಿಯೂ ಬರೆಯಲ್ಪಟ್ಟಿವೆ. ಇದೇ ಇದುವರೆಗೆ ದೊರೆತ ಅತ್ಯಂತ ಪ್ರಾಚೀನ ಕನ್ನಡ ಶಾಸನ. ಭಾಷಾದೃಷ್ಟಿಯಿಂದ ಕರ್ನಾಟಕದ ಶಾಸನಗಳನ್ನು ಪ್ರಾಕೃತ, ಸಂಸ್ಕೃತ, ಕನ್ನಡ ಹಾಗೂ ಮಿಶ್ರ ಭಾಷೆಯ ಶಾಸನಗಳೆಂದು ವಿಂಗಡಿಸಬಹುದು.



ಕದಂಬ ಕಾಕುತ್ಥವರ್ಮನ ಶಾಸನ, ಹಲ್ಮಿಡಿ

ಕದಂಬರ ತರುವಾಯ ಕರ್ನಾಟಕದಲ್ಲಿ ರಾಜ್ಯವಾಳಿದ ಅರಸರ ಶಾಸನಗಳಲ್ಲಿ ಸಾಮಾನ್ಯವಾಗಿ ತಾಮ್ರಶಾಸನಗಳು ಸಂಸ್ಕೃತ ಭಾಷೆಯಲ್ಲಿಯೂ ಶಿಲಾಶಾಸನಗಳು ಕನ್ನಡ ಭಾಷೆಯಲ್ಲಿಯೂ ಇವೆ. ರಾಷ್ಟ್ರಕೂಟರ ತಾಮ್ರಶಾಸನಗಳಲ್ಲಿ ಈಗ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿರುವ ಮೂರನೆಯ ಗೋವಿಂದನ 804ರ ತಾಮ್ರಪತ್ರವೊಂದು ಮಾತ್ರ ಕನ್ನಡದಲ್ಲಿದೆ. ಇದೇ ಕನ್ನಡದ ಅತ್ಯಂತ ಪ್ರಾಚೀನ ತಾಮ್ರಶಾಸನ. ಬಾದಾಮಿ ಚಾಳುಕ್ಯರ 2ನೆಯ ಪುಲಕೇಶಿಯನ್ನು ಸೋಲಿಸಿದ ಪಲ್ಲವ ನರಸಿಂಹವರ್ಮನ ಶಿಲಾಶಾಸನವೊಂದು ಬಾದಾಮಿಯಲ್ಲಿ ದೊರೆತಿದೆ. ಇದು ಸಂಸ್ಕೃತ ಭಾಷೆಯಲ್ಲಿ ಪಲ್ಲವರ ಗ್ರಂಥಲಿಪಿಯಲ್ಲಿದೆ. ಇನ್ನು ಕರ್ನಾಟಕದ ನೆರೆಹೊರೆಯ ಪ್ರಾಂತ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳದ ಗಡಿ ಪ್ರದೇಶಗಳು ಪ್ರಾಚೀನ ಕರ್ನಾಟಕದಲ್ಲಿ ಸಮಾವೇಶವಾಗಿದ್ದುದರಿಂದ ಅಲ್ಲಿ ಕರ್ನಾಟಕದ ಅರಸುಮನೆತನಗಳಿಗೆ ಸಂಬಂಧಿಸಿದ ಅನೇಕ ಶಾಸನಗಳು ಸಂಸ್ಕೃತ ಕನ್ನಡ ಮತ್ತು ಇವೆರಡರ ಮಿಶ್ರಭಾಷೆಯಲ್ಲಿಯೂ ದೊರಕಿವೆ. ಹಾಗೂ ರಾಯಚೂರು ಬಳ್ಳಾರಿ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ತಮಿಳು ಭಾಷೆಯ ಅನೇಕ ಶಾಸನಗಳು ದೊರಕಿವೆ.

ಕರ್ನಾಟಕದ ಶಾಸನಗಳನ್ನು ತಾಮ್ರಶಾಸನ ಮತ್ತು ಶಿಲಾಶಾಸನ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ತಾಮ್ರಶಾಸನಗಳು ಸಾಮಾನ್ಯವಾಗಿ ರಾಜರಿಂದ ಮನ್ನಣೆ

ಪಡೆದ ಮತ್ತು ವೇದ, ಶಾಸ್ತ್ರ, ಪುರಾಣ, ಇತಿಹಾಸಗಳಲ್ಲಿ ಪರಿಣತಿ ಹೊಂದಿದ ಬ್ರಾಹ್ಮಣ ವಿದ್ವಾಂಸರಿಗೆ ತಮ್ಮ ಕರ್ಮಾನುಷ್ಠಾನಕ್ಕಾಗಿ ಅಗ್ರಹಾರ ಗ್ರಾಮಗಳನ್ನೂ ಇತರ ದತ್ತಿಗಳನ್ನೂ ಬಿಟ್ಟ ವಿಷಯವನ್ನು ನಿರೂಪಿಸುತ್ತವೆ. ಶಿಲಾ ಶಾಸನಗಳು ರಾಜರೂ ಅವರ ಪರಿವಾರದವರೂ



ಮಯೂರವರ್ಮನ ಶಾಸನ, ಚಂದ್ರವಳ್ಳಿ

ನಿರ್ಮಿಸಿದ ದೇವಾಲಯಗಳ ಪೂಜೆ ಪುರಸ್ಕಾರಗಳಿಗೂ ಜೀರ್ಣೋದ್ಧಾರಕ್ಕೂ ಬಿಟ್ಟ ದತ್ತಿಗಳ ವಿವರಗಳನ್ನು ತಿಳಿಸಲು ಬರೆದವುಗಳಾಗಿರುತ್ತವೆ. ಇಂಥ ಶಾಸನಗಳು ದೇವಾಲಯದ ವಿವಿಧ ಭಾಗಗಳಲ್ಲಿ ಗೋಡೆ, ಕಂಬ, ಅಸ್ತಿಭಾರ, ಬಾಗಿಲು, ಚಾವಣಿ, ಬೋದಿಗೆ ಮುಂತಾದ ಕಡೆಗಳಲ್ಲಿಯೂ ಪ್ರತ್ಯೇಕವಾಗಿ ತಯಾರಿಸಿ ನಿಲ್ಲಿಸಿದ ಶಿಲಾಫಲಕಗಳ ಮೇಲೆಯೂ ಕೆತ್ತಲ್ಪಟ್ಟಿರುತ್ತವೆ. ಕರ್ನಾಟಕದಲ್ಲಿ ದೊರೆತ ಶಾಸನಗಳಲ್ಲಿ 100ಕ್ಕೆ 80ರಷ್ಟು ವ್ಯಕ್ತಿಗಳಿಗೆ ಅಥವಾ ದೇವಾಲಯಗಳಿಗೆ ಕೊಟ್ಟ ದಾನಶಾಸನಗಳಾಗಿರುತ್ತವೆ. ಉಳಿದವು ಕೋಟೆಕೊತ್ತಲ, ಕೆರೆಬಾವಿಗಳ ನಿರ್ಮಾಣ ಮತ್ತು ಅವುಗಳ ನಿರ್ಮಾಪಕರ ವಿಷಯವನ್ನು ತಿಳಿಸುವುದಕ್ಕಾಗಿಯೂ ರಾಜರ ವಿಜಯಯಾತ್ರೆಗಳನ್ನು ವರ್ಣಿಸುವುದಕ್ಕಾಗಿಯೂ ಕೆತ್ತಲ್ಪಟ್ಟಿರುತ್ತವೆ. ಅಲ್ಲದೆ ವೀರಗಲ್ಲು, ಮಾಸ್ತಿಕಲ್ಲು, ಗರುಡಗಲ್ಲು, ಜೈನರು ಸಲ್ಲೇಖನದಿಂದ ಮಡಿದುದನ್ನು ಸೂಚಿಸುವ ನಿಸಿದಿಗಲ್ಲು ಮುಂತಾದ ರೀತಿಯ ಶಾಸನಗಳೂ ಕರ್ನಾಟಕದಲ್ಲಿ ಹೇರಳವಾಗಿವೆ. ಬಾದಾಮಿ ಚಾಳುಕ್ಯರ ಮೂಲಪುರುಷ 1ನೆಯ ಪುಲಕೇಶಿಯ 543ರ ಶಾಸನದ ಉದ್ದೇಶ ಆ ರಾಜ ವಾತಾಪಿಯಲ್ಲಿ ದುರ್ಗಮವಾದ ಕೋಟೆಯನ್ನು ಕಟ್ಟಿಸಿದನೆಂದು ತಿಳಿಸುವುದು. ಕದಂಬ ಶಾಂತಿವರ್ಮನ ತಾಳಗುಂದ ಶಾಸನದ ಉದ್ದೇಶ ಅವನ ತಂದೆ ಕಾಕುತ್ಸ್ಥವರ್ಮ, ಸ್ಥಾನಕುಂದೂರ ಅಂದರೆ ತಾಳಗುಂದದಲ್ಲಿ ಒಂದು ಕೆರೆಯನ್ನು ಕಟ್ಟಿಸಿದ ವಿಷಯವನ್ನು ತಿಳಿಸುವುದಾಗಿದೆ.

ಒಂಬತ್ತನೆಯ ಶತಮಾನದಲ್ಲಿ ಬರೆದ, ಅತ್ಯಂತ ಪ್ರಾಚೀನ ಕನ್ನಡ ಗ್ರಂಥವಾದ ನೃಪತುಂಗ ಕೃತ ಕವಿರಾಜಮಾರ್ಗಕ್ಕೂ ಮೊದಲಿನ ಕನ್ನಡ ಭಾಷೆಯ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ಶಾಸನಗಳೇ ಆಧಾರ. 5ನೆಯ ಶತಮಾನದಿಂದ 9ನೆಯ ಶತಮಾನದವರೆಗೆ ದೊರೆತ ಅನೇಕ ಕನ್ನಡ ಶಾಸನಗಳಿಂದ ಆ ಭಾಷೆಯ ಬೆಳೆವಣಿಗೆಯನ್ನು ತಿಳಿದುಕೊಳ್ಳಬಹುದು. 9ನೆಯ ಶತಮಾನದ ಅನಂತರವೂ ಕನ್ನಡ ಶಾಸನಗಳು ಸಹಸ್ರಾರು



ಗಂಗಶಾಸನ, ದೊಡ್ಡಹುಂಡಿ

ಸಂಖ್ಯೆಯಲ್ಲಿ ದೊರೆಯುವುದರಿಂದ ಮತ್ತು ಅವುಗಳಲ್ಲಿ ವಿಶೇಷವಾಗಿ ದತ್ತಿಗಳನ್ನು ವಿವರಿಸುವ ಸಂದರ್ಭದಲ್ಲಿ ಜನಸಾಮಾನ್ಯರಿಗೆ ತಿಳಿಯುವ ಭಾಷೆಯನ್ನು ಬಳಸಿರುವುದರಿಂದ ಕನ್ನಡ ಭಾಷೆಯ ಚರಿತ್ರೆಯನ್ನು ತಿಳಿಯಲು ಇವು ಮಹತ್ತ್ವದ ಸಾಧನಗಳಾಗಿವೆ.

ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಕರ್ನಾಟಕದ ಶಾಸನಗಳು ವಿಪುಲ ಸಾಮಗ್ರಿಗಳನ್ನೊದಗಿಸುತ್ತವೆ. ಅನೇಕ ಕವಿಗಳು ಈ ಶಾಸನಗಳಿಂದಲೇ ನಮಗೆ ಪರಿಚಿತರಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ತಾಳಗುಂದದ ಪ್ರಣವೇಶ್ವರ ದೇವಾಲಯದ ಎದುರಿಗಿನ ಕಂಬದಲ್ಲಿರುವ ಕದಂಬ ಶಾಂತಿವರ್ಮನ ಕಾಲದ ಸಂಸ್ಕೃತ ಶಾಸನ ಮಾತ್ರಾ–ಸಮಕವೆಂಬ ಅಪೂರ್ವ ಛಂದಸ್ಸಿನಲ್ಲಿ ಬರೆಯಲ್ಪಟ್ಟಿದೆ. ಇದನ್ನು ಕುಬ್ಜನೆಂಬ ಕವಿ ರಚಿಸಿದ್ದು ಶಾಸನವನ್ನು ಅವನೇ ಕಾವ್ಯವೆಂದು ಕರೆದಿದ್ದಾನೆ. ಕರ್ನಾಟಕದ ಇನ್ನೊಬ್ಬ ಶಾಸನಕವಿ ರವಿಕೀರ್ತಿ ಬಿಜಾಪುರ ಜಿಲ್ಲೆಯ ಐಹೊಳೆಯ ಮೇಗುಟಿ ದೇವಾಸ್ಥಾನದ ಗೋಡೆಯಲ್ಲಿರುವ ಶಾಸನದಲ್ಲಿ (634) ಬಾದಾಮಿ ಚಳುಕ್ಯ 2ನೆಯ ಪುಲಕೇಶಿಯ ಪ್ರಶಸ್ತಿಯನ್ನು ಹಾಡಿದ್ದಾನೆ. ಈ ಕವಿ ತನ್ನನ್ನು ಕಾಳಿದಾಸ ಮತ್ತು ಭಾರವಿಗಳಿಗೆ ಹೋಲಿಸಿಕೊಂಡಿದ್ದಾನೆ. ಪುಲಕೇಶಿಯ ಚಿಕ್ಕಪ್ಪ ಮಂಗಲೀಶನ, 602ರ, ರವಿಕೀರ್ತಿ ರಚಿಸಿರಬಹುದೆಂದು ಊಹಿಸಲಾಗಿರುವ, ಮಹಾಕೂಟದ ಸ್ತಂಭ ಶಾಸನದಲ್ಲಿ ಚಾಳುಕ್ಯ ವಂಶವನ್ನು ವರ್ಣಿಸುವಾಗ ಬರುವ, ಯಥಾವಿಧಿ ಹುತಾಗ್ನೀನಾಂಯಥಾ ಕಾಮಾರ್ಚಿತಾರ್ಥಿನಾಂ ಎಂಬ ಮಾತುಗಳು ರಘುವಂಶದಿಂದ ಉದ್ಧೃತವಾಗಿವೆ. ಐಹೊಳೆ ಮತ್ತು ಮಹಾಕೂಟದ ಶಾಸನಗಳು ಕಾಳಿದಾಸನ ಕಾಲನಿರ್ಣಯವಿಷಯದಲ್ಲಿ ಮಹತ್ತ್ವದ್ದಾಗಿವೆ. ಕನ್ನಡದ ಕೆಲವು ಶಾಸನಗಳು ಪುಟ್ಟ ಕಾವ್ಯಗಳಂತಿವೆ. ಧಾರವಾಡ ಜಿಲ್ಲೆಯ ಕಳಸದಲ್ಲಿರುವ ರಾಷ್ಟ್ರಕೂಟ ಗೋವಿಂದನ 930ರ ಶಾಸನ, ಅದೇ ಜಿಲ್ಲೆಯ ಲಕ್ಕುಂಡಿಯಲ್ಲಿರುವ ಕಲ್ಯಾಣ ಚಾಳುಕ್ಯರ ಇಜೆವಬೆಡಂಗ ಸತ್ಯಾಶ್ರಯನ ಕಾಲದ 1007ರ ಅತ್ತಿಮಬ್ಬೆಯ ಶಾಸನ, ಬೆಳಗಾಂವಿ ಜಿಲ್ಲೆಯ ಶಿರಸಂಗಿಯ 1186ರ



ಒಂದನೆಯ ಪುಲಕೇಶಿ ಶಾಸನ, ಬಾದಾಮಿ

ಶಾಸನ, ಶ್ರವಣಬೆಳಗೊಳದ ದೊಡ್ಡಬೆಟ್ಟದ ಮೇಲಿರುವ ಬೊಪ್ಪಣಪಂಡಿತನ ಗೊಮ್ಮಟ ಸ್ತುತಿಯ ಶಾಸನಗಳನ್ನು ಈ ವಿಷಯದಲ್ಲಿ ಉದಾಹರಿಸಬಹುದು. ಕಳಸದ ಶಾಸನವನ್ನು ರಚಿಸಿರುವ ಕವಿರಾಜ, ಮಹಾಸ್ರಗ್ಧರೆ, ಉತ್ಪಲಮಾಲೆ, ಚಂಪಕ ಮಾಲೆ ಮತ್ತು ಮತ್ತೇಭವಿಕ್ರೀಡಿತ ವೃತ್ತಗಳಲ್ಲಿ ಸೊಗಸಾದ ಪದ್ಯಗಳನ್ನು ಬರೆದಿದ್ದಾನೆ. ದಾನಚಿಂತಾಮಣಿ ಅತ್ತಿಮಬ್ಬೆಯ ಪ್ರಶಿಸ್ತಿಯಾದ ಲಕ್ಕುಂಡಿಯ ಶಾಸನವನ್ನು ರನ್ನಕವಿಯೇ ರಚಿಸಿರಬಹುದೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಬಾದಾಮಿಯ ಕಪ್ಪೆ ಅರಭಟ್ಟನ 7ನೆಯ ಶತಮಾನದ ಶಾಸನ, ದಕ್ಷಿಣ ಕನ್ನಡಜಿಲ್ಲೆಯ ತಳಂಗೆರೆಯ 10–11ನೆಯ ಶತಮಾನದ ಜಯಸಿಂಹನ ಶಾಸನ, ಬಿಜಾಪುರ ಜಿಲ್ಲೆಯ ಚಡಚಣದ 11ನೆಯ ಶತಮಾನದ ಕಳಚುರ್ಯ ತನ್ನಮರಸನ ಶಾಸನ ಮುಂತಾದವು ಕನ್ನಡ ಛಂದಸ್ಸಿನ ಅಭ್ಯಾಸದ ದೃಷ್ಟಿಯಿಂದ ಅಮೂಲ್ಯವಾಗಿವೆ. ಅಲ್ಲದೆ ಬಳ್ಳಾರಿ ಜಿಲ್ಲೆಯ ಕೋಗಳಿಯಲ್ಲಿ ದೊರೆತ 11ನೆಯ ಶತಮಾನದ ಶಾಸನವೊಂದರಲ್ಲಿ ಬರೆದ ಪದ್ಯವನ್ನು ತೋಮರ ರಗಳೆಯೆಂದು ಕರೆಯಲಾಗಿದೆ. ಇಲ್ಲಿರುವ ತೋಮರ ರಗಳೆಗೂ ಸುಪ್ರಸಿದ್ಧ ಲಲಿತ ರಗಳೆಗೂ ವ್ಯತ್ಯಾಸವಿಲ್ಲ.

ಕರ್ನಾಟಕದ ಶಾಸನಗಳಲ್ಲಿ ತೇದಿಯ ವಿವರಗಳನ್ನು ವಿವಿಧ ರೀತಿಯಾಗಿ ಕೊಡಲಾಗಿದೆ. ಇಲ್ಲಿ ದೊರೆತ ಅಶೋಕನ ಶಾಸನಗಳಲ್ಲಿ ಯಾವ ತೇದಿಯ ನಿರ್ದೇಶನವೂ ಇಲ್ಲ. ಬನವಾಸಿಯ ವಿಣ್ಹುಕಡ ಚುಟುಕುಲಾನಂದ ಸಾತಕಣ್ಣಿಯ ಶಾಸನದಲ್ಲಿ ರಾಜನ ಆಳ್ವಿಕೆಯ ಹನ್ನೆರಡನೆಯ ವರ್ಷ ಹಾಗೂ ಹೇಮಂತಋತುವಿನ ಏಳನೆಯ ಪಕ್ಷದ ಒಂದನೆಯ ದಿವಸ ಎಂದು ತೇದಿಯನ್ನು ಉಲ್ಲೇಖಿಸಿದೆ. ಇದರಿಂದ ಒಂದು ವರ್ಷವನ್ನು ಹೇಮಂತ,

ಶಿಶಿರ, ಗ್ರೀಷ್ಮ ಎಂಬ ಮೂರು ಋತುಗಳಾಗಿ ವಿಂಗಡಿಸಿ ಪ್ರತಿಯೊಂದು ಋತುವಿನಲ್ಲಿ ಎಂಟು ಪಕ್ಷಗಳನ್ನು ಗಣಿಸುತ್ತಿದ್ದರೆಂದು ತಿಳಿಯುತ್ತದೆ. ಈ ಪದ್ಧತಿ ಕದಂಬರ ಕಾಲದ ಒಂದೆರಡು ಶಾಸನಗಳಲ್ಲಿ ಕಂಡುಬಂದರೂ ಅಲ್ಲಿ ಸಾಮಾನ್ಯವಾಗಿ ರಾಜನ ಆಳ್ವಿಕೆಯ



ಮೂರನೆಯ ಕೃಷ್ಣನ ಪ್ರಶಸ್ತಿ, ಜುರಾ

ವರ್ಷವನ್ನೂ ಚೈತ್ರಾದಿ ಮಾಸಗಳು ಮತ್ತು ಶುಕ್ಲ ಹಾಗೂ ಬಹುಳ ಪಕ್ಷಗಳನ್ನು ನಿರ್ದೇಶಿಸಲಾಗಿದೆ. 78ರಲ್ಲಿ ಕುಷಾಣ ಅರಸು ಕನಿಷ್ಕ ಪ್ರಾರಂಭಿಸಿದನೆಂದು ತಿಳಿಯಲಾದ ಶಕವರ್ಷದ ಉಲ್ಲೇಖ ಕರ್ನಾಟಕ ಶಾಸನಗಳಲ್ಲಿ ಮೊಟ್ಟಮೊದಲು ಬಾದಾಮಿ ಚಳುಕ್ಯರ ಶಾಸನಗಳಲ್ಲಿ ಬರುತ್ತದೆ. ಈ ವಂಶದ ಒಂದನೆಯ ಪುಲಕೇಶಿಯ ಬಾದಾಮಿ ಬಂಡೆಗಲ್ಲಿನ ಶಾಸನದಲ್ಲಿ ಶಕವರ್ಷೇಷು ಚತುಶ್ಶತೇಷು ಪಞ್ಚಷಷ್ಟಿಯು ತೇಷು ಎಂದು ತೇದಿಯನ್ನು ಕೊಡಲಾಗಿದೆ. ಶಕ 465 ಅಂದರೆ ಕ್ರಿ.ಶ. 543 ಎಂದಾಗುತ್ತದೆ. ಈ ಶಾಸನ ಹೀಗೆ ಶಕವರ್ಷದ ನಿಶ್ಚಿತ ಉಲ್ಲೇಖವಿರುವ ಭಾರತ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದದ್ದು. 2ನೆಯ ಪುಲಕೇಶಿಯ ಐಹೊಳೆ ಪ್ರಶಸ್ತಿ ಶಾಸನದಲ್ಲಿ ಶಕವರ್ಷ 556ರ ಜೊತೆಗೆ ಭಾರತ ಯುದ್ಧಾನಂತರ 3235ನೆಯ ವರ್ಷದ ಅಪೂರ್ವವಾದ ಉಲ್ಲೇಖವೂ ಇರುತ್ತದೆ. ಚಾಳುಕ್ಯರ ಉಳಿದ ಶಾಸನಗಳಲ್ಲಿ ಶಕವರ್ಷ, ಅರಸನ ಆಳ್ವಿಕೆಯ ವರ್ಷ, ಚೈತ್ರಾದಿಮಾಸ, ಪಕ್ಷ (ಶುಕ್ಲ ಅಥವಾ ಬಹುಳ) ಮತ್ತು ತಿಥಿಗಳನ್ನು ವಿವರಿಸಲಾಗಿದೆ. ಮಂಗಲೇಶನ ಮಹಾಕೂಟಶಾಸನದಲ್ಲಿ ಮಾತ್ರ ಚಾಂದ್ರಮಾನದ 60 ವರ್ಷಗಳ ಸಂವತ್ಸರಗಳ ಪೈಕಿ ಸಿದ್ಧಾರ್ಥಿ ಸಂವತ್ಸರವನ್ನು ಉಲ್ಲೇಖಿಸಿದೆ, ಅದರಂತೆ ಒಂದನೆಯ ವಿಕ್ರಮಾದಿತ್ಯನ ಶಕ 596ರ (674) ಗದ್ವಾಲ ತಾಮ್ರಶಾಸನ ಮತ್ತು ವಿನಯಾದಿತ್ಯನ ಶಕ 614ರ (692) ಸೊರಬ ತಾಮ್ರಶಾಸನ ಮುಂತಾದ ಕೆಲವೇ ಶಾಸನಗಳಲ್ಲಿ ತಿಥಿಯ ಜೊತೆಗೆ ವಾರದ ಉಲ್ಲೇಖವೂ ಇರುತ್ತದೆ. ಮುಂದೆ ರಾಷ್ಟ್ರಕೂಟರ ಶಾಸನಗಳಲ್ಲಿ ಎಲ್ಲ ವಿವರಗಳನ್ನು-ಶಕವರ್ಷ, ಸಂವತ್ಸರ, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ವ್ಯತೀಪಾತ, ಗ್ರಹಣ ಮುಂತಾದವುಗಳನ್ನು-ಕೊಡಲಾಗಿದೆ. ಈ ವಿವರಗಳು ಕರ್ನಾಟಕದ ಉಳಿದ ಅರಸುಮನೆತನಗಳ ಶಾಸನಗಳಲ್ಲೂ ಕಂಡುಬರುತ್ತವೆ. ಕಲ್ಯಾಣ ಚಾಳುಕ್ಯ 6ನೆಯ ವಿಕ್ರಮಾದಿತ್ಯ ಪಟ್ಟವನ್ನೇರಿದ ಅನಂತರ (1076) ಚಾಳುಕ್ಯ ವಿಕ್ರಮ ವರ್ಷವೆಂಬ ಕಾಲಮಾನವನ್ನು ಸ್ಥಾಪಿಸಿದ. ಇದು ಆತನ ಆಳ್ವಿಕೆಯ 50-51 ವರ್ಷ ಮತ್ತು ಮುಂದೆ ಕೆಲವೇ ವರ್ಷಗಳವರೆಗೆ ಪ್ರಚಲಿತವಾಗಿದ್ದಿತು. ಈ ಚಾಳುಕ್ಯರ ಮಾಂಡಲಿಕರಾದ ಗೋವೆಯ ಕದಂಬರ ಶಾಸನಗಳಲ್ಲಿ ಪ್ರಶ.ಪೂ. 3102ರಲ್ಲಿ ಪ್ರಾರಂಭವಾದ ಕಲಿಯುಗ ಸಂವತ್ಸರದ ತೇದಿಗಳನ್ನು ಉಲ್ಲೇಖಿಸಲಾಗಿದೆ. ಶಕವರ್ಷ ಎಂಬ ಶಬ್ದ ಮೊಟ್ಟಮೊದಲು ಬಾದಾಮಿ ಚಳುಕ್ಯರ ಶಾಸನಗಳಲ್ಲಿ ಕಾಣಿಸಿಕೊಂಡರೆ ಶಾಲಿವಾಹನ ಶಕ ಎಂಬ ಪದವನ್ನು ದೇವಗಿರಿಯ ಯಾದವರ ಶಾಸನಗಳಲ್ಲಿ ಮೊದಲಿಗೆ ಬರೆಯಲಾಗಿದೆ. ಅಂತೂ 78ರಲ್ಲಿ ಆರಂಭವಾದ ಶಕ ಅಥವಾ ಶಾಲಿವಾಹನ ಶಕವರ್ಷ ಕರ್ನಾಟಕದ ಶಾಸನಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದುದಾಗಿ ತಿಳಿಯುತ್ತದೆ. ಬೆಳಗಾಂವಿ ಜಿಲ್ಲೆಯ ಗೋಕಾಕದಲ್ಲಿ ದೊರೆತ ರಾಷ್ಟ್ರಕೂಟ ದೆಜ್ಜ ಮಹಾರಾಜನ 6-7ನೆಯ ಶತಮಾನದ ತಾಮ್ರಶಾಸನದಲ್ಲಿ ತೇದಿಯನ್ನು ಆಗುಪ್ತಾಯಿಕ ಅರಸರ 845 ವರ್ಷಗಳು ಸಂದಾಗ ಎಂದು ಉಲ್ಲೇಖಿಸಿದೆ. ಈ ರೀತಿಯಾಗಿ ತೇದಿಯನ್ನು ಉಲ್ಲೇಖಿಸಿರುವ ಶಾಸನ ಇದೊಂದೇ

ಬಿಜ್ಜಳನ ಶಾಸನ, ಮುತ್ತಗಿ

ಇರುವುದರಿಂದ ಆಗುಪ್ತಾಯಿಕ ಅರಸರು ಯಾರು ಮತ್ತು ಈ ಗಣನೆಯನ್ನು ಯಾವಾಗ ಆರಂಭಿಸಿದರು ಎಂಬುದರ ಬಗ್ಗೆ ಏನೂ ತಿಳಿದಿಲ್ಲ.

ಕರ್ನಾಟಕ ಶಾಸನಗಳ ಒಂದು ವೈಶಿಷ್ಟ್ಯವೆಂದರೆ ಊರು, ಗ್ರಾಮ, ನಾಡು ಮುಂತಾದ ಸ್ಥಳನಾಮಗಳ ಮುಂದೆ ಬರುವ ಸಂಖ್ಯಾವಾಚಕಗಳು. ಉದಾ : ಬನವಾಸಿ-12,000 ; ಪಲಸಿಗೆ-12,000 ; ಗಂಗವಾಡಿ-95,000 ; ನೊಳಂಬವಾಡಿ-32,000; ಪಾನುಂಗಲ್ಲ-500 ; ಪುರಿಗೆರೆ-300 ; ಬೆಳ್ವೊಲ-300 ; ಕುಕ್ಕನೂರು-30-ಇತ್ಯಾದಿ. ಈ ಸಂಖ್ಯೆಗಳ ಉದ್ದೇಶದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಈ ಸಂಖ್ಯೆಗಳು ರಾಷ್ಟ್ರಬೊಕ್ಕಸಕ್ಕೆ ಆಯಾ ಭಾಗಗಳಿಂದ ಬರುವ ಆದಾಯದ ಹಣದ ಮೊತ್ತವನ್ನು ಸೂಚಿಸುತ್ತವೆಂದು ಹೇಳಿದರೆ ಇನ್ನು ಕೆಲವರು ಇವು ಜನಸಂಖ್ಯೆಯನ್ನು ಸೂಚಿಸುತ್ತವೆಂದು ಭಾವಿಸಿದ್ದಾರೆ. ಈ ಅಭಿಪ್ರಾಯಗಳು ಸಮಂಜಸವಾಗಿ ತೋರುವುದಿಲ್ಲ. ಕಡಿಮೆ ಸಂಖ್ಯೆಗಳುಳ್ಳ ಸ್ಥಳ ನಾಮಗಳಲ್ಲಿ-ಪುರಿಗೆರೆ-300 ಮತ್ತು ಬೆಳ್ವೊಲ 300-ಆ ಸಂಖ್ಯೆಗಳು ಅವುಗಳ ಆದಾಯ ಅಥವಾ ಜನಸಂಖ್ಯೆಗಳನ್ನು ಸೂಚಿಸುತ್ತವೆಯೆಂದು ತಿಳಿಯುವುದು ಅಸಾಧ್ಯ. ಈ ಸಂಖ್ಯೆಗಳು ಆಯಾ ಭಾಗಗಳಲ್ಲಿ ಸಮಾವೇಶಗೊಂಡಿದ್ದ ಗ್ರಾಮಗಳನ್ನು ಸೂಚಿಸುತ್ತವೆಂಬ ಅಭಿಪ್ರಾಯವನ್ನು ಬಹುಜನ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಕಡಿಮೆ ಸಂಖ್ಯೆಯುಳ್ಳ ಭಾಗಗಳಲ್ಲಿ ನಿಜವಾಗಿ ಸಂಖ್ಯೆಗಳು ಸೂಚಿಸುವಷ್ಟು ಗ್ರಾಮಗಳು ಇರುತ್ತವೆಯೆಂದೂ 12,000, 32,000 ಮತ್ತು 96,000 ಮುಂತಾದ ಭಾಗಗಳಲ್ಲಿ ಸಂಖ್ಯೆಯನ್ನು ಸಾಂಕೇತಿಕವಾಗಿ ಅಥವಾ ಅತಿಶಯೋಕ್ತಿಯಿಂದ ಹೇಳಿದೆಯೆಂದು ತಿಳಿಯುವುದು.

ಮೇಲಿನ ವಿವೇಚನೆಯಿಂದ ಕರ್ನಾಟಕದ ಶಾಸನಗಳು ಕರ್ನಾಟಕದ ಮೂಲಕ ಭಾರತ ದೇಶದ ಇತಿಹಾಸ-ಸಂಸ್ಕೃತಿಗಳ ಶಾಸ್ತ್ರೀಯ ಅಧ್ಯಯನಕ್ಕೆ ಅಮೂಲ್ಯವಾದ ಸಾಧನಗಳೆಂಬುದು ಸ್ಪಷ್ಟವಾಗುತ್ತದೆ. ಈ ಶಾಸನಗಳ ಬಗ್ಗೆ ಇನ್ನಷ್ಟು ವಿವರಗಳಿಗೆ ಕನ್ನಡ ಶಾಸನಗಳು ಎಂಬ ಲೇಖನವನ್ನೂ ಪ್ರಮುಖ ಶಾಸನಗಳ ಬಗ್ಗೆ ಕೊಟ್ಟಿರುವ ಪ್ರತ್ಯೇಕ ಲೇಖನಗಳನ್ನೂ ನೋಡಿ (**ನೋಡಿ- ಕನ್ನಡ ಶಾಸನಗಳು**). (ಜಿ.ಎಸ್.ಜಿ.)

**ಕರ್ನಾಟಕದ ಸಂಸ್ಕೃತಿ :** 'ಸಂಸ್ಕೃತಿ' ಎಂಬ ಶಬ್ದದ ಅರ್ಥ ಬಹು ವ್ಯಾಪಕವಾಗಿ ಬೆಳೆಯುತ್ತ ಬಂದಿದೆ; ಹೊಸ ಹೊಸ ಅರ್ಥಗಳನ್ನು ಒಳಗೊಂಡಿದೆ. ಸಮಷ್ಟಿ ಜೀವನದ

ಅಂತರಂಗದ ಸಾಧನೆಗೆ ಸಹಕಾರಿಯಾದ ಸಾಮಗ್ರಿಗಳಿಂದ ಹಿಡಿದು, ವ್ಯಷ್ಟಿ ಜೀವನದ ವಿಕಾಸಕ್ಕೆ ಕಾರಣವಾದ ಸಂಸ್ಕಾರದವರೆಗೆ ಈ ಪದದ ಅರ್ಥ ಬೆಳೆದಿದೆ. ವ್ಯಕ್ತಿಯ ವಿಕಾಸಕ್ಕೆ ಕಾರಣವಾಗುವ ಸಾಮಾಜಿಕ ಪರಿಕರಗಳು ಸಹ ಸಂಸ್ಕೃತಿಯಲ್ಲಿಯೇ ಸಮಾವೇಶಗೊಳ್ಳುತ್ತವೆ. ಈ ಅರ್ಥದಲ್ಲಿ ಅದನ್ನು ಕೆಲವು ವೇಳೆ ದೇಶವಾಚಕವಾಗಿ ಬಳಸುವುದುಂಟು. ಒಟ್ಟು ಜನಜೀವನದ ಅಂತರಂಗದ ಅನುಭವ ಇಲ್ಲಿ ಪ್ರಧಾನವಾದ ಅಂಶವಾಗಿ ಗೋಚರವಾಗುತ್ತದೆ. ಆಯಾ ಪ್ರದೇಶ, ಭಾಷೆ, ಧರ್ಮಗಳ ಜನರು ತಂತಮ್ಮ ಬಹುಮುಖ ಸಮಸ್ಯೆಗಳಿಗೆ ಉತ್ತರವನ್ನು ಕಾಣಬಯಸುವ ಅಂತರಂಗದ ಸಾಧನೆಯೇ ಸಂಸ್ಕೃತಿಯ ಮೂಲಸಾಮಗ್ರಿ.

ಸಾವಿರಾರು ವರ್ಷಗಳಿಂದ ಬಾಳಿ, ಬದುಕಿನಲ್ಲಿ ಬಿಳಲು ಬಿಟ್ಟು, ವಿಸ್ತಾರವಾಗಿ ಬೆಳೆದು ನೆರಳನ್ನೀಯುತ್ತ ಸಾರ್ಥಕ ಮಾರ್ಗದಲ್ಲಿ ನಡೆದಿರುವ ಕರ್ನಾಟಕ ಸಂಸ್ಕೃತಿ ಒಂದು ಸನಾತನ ವೃಕ್ಷ. ಕಾಲದಿಂದ ಮತ್ತು ಸತ್ತ್ವದಿಂದ ಅದು ಸನಾತನ; ಆದರೆ ಅದರ ಚೇತನ ನಿತ್ಯನೂತನ. ಇಂದೂ ಹೊಸ ಹೊಸ ಬಿಳಲುಗಳು ಬೇರೂರಿ ಬೆಳೆಯುತ್ತಿವೆ; ಟಿಸಿಲುಗಳು ಕುಡಿಯೊಡೆದು ಹೂವುಗಳು ಅರಳುತ್ತಿವೆ. ನಿರಂತರವಾಗಿ ಬೆಳೆದುಬಂದ ಭಾರತೀಯ ಪರಂಪರೆಯಿಂದ ಅದು ಪೋಷಿತವಾಗುತ್ತದೆ.

ನಿಜವಾಗಿ ನೋಡಿದರೆ ಕರ್ನಾಟಕ ಸಂಸ್ಕೃತಿ ಎಂಬುದು ಭಾರತೀಯ ಸಂಸ್ಕೃತಿಗಿಂತ ಭಿನ್ನವಾದುದೇನಲ್ಲ. ಭರತಖಂಡದ ಒಂದು ಅವಿಭಾಜ್ಯ ಅಂಗವಾಗಿರುವ ಕರ್ನಾಟಕ ತನ್ನ ಆಶಯ ಆಶೋತ್ತರಗಳಲ್ಲಿ, ಅವುಗಳ ಸಾಧನೆಯ ಮಾರ್ಗದಲ್ಲಿ, ಅನುಭವದ ಅಭಿವ್ಯಕ್ತಿಯ ಮಾಧ್ಯಮವನ್ನು ರೂಪಿಸಿಕೊಳ್ಳುವ ಕುಶಲಕಲೆಯಲ್ಲಿ ಭಾರತೀಯ ಮನೋಧರ್ಮವನ್ನೇ ಅವಲಂಬಿಸಿ ಬೆಳೆಯಿತು. ಆದರೆ ಅದರ ಪ್ರಾದೇಶಿಕ ವೈವಿಧ್ಯಕ್ಕೆ ತನ್ನ ವಿಶಿಷ್ಟ ಸ್ವರೂಪವನ್ನಿತ್ತು ಅದರ ಶ್ರೀಮಂತಿಕೆಗೆ ಕಾರಣವಾಯಿತು.

ಕರ್ನಾಟಕವನ್ನಾಳಿದ ವಿವಿಧ ರಾಜವಂಶಗಳು, ಈ ನಾಡಿಗೆ ಬಂದ ಮತ್ತು ಇಲ್ಲಿಯೇ ಹುಟ್ಟಿ ಬೆಳೆದ ಧಾರ್ಮಿಕ ಆಂದೋಲನಗಳು, ಜನಪದವನ್ನು ಅವು ರೂಪಿಸಿದ ಬಗೆ, ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳು ಪಡೆದ ಅಭಿವ್ಯಕ್ತಿ, ವಾಸ್ತುಶಿಲ್ಪ, ಶಿಲ್ಪ ಸಂಗೀತ ನೃತ್ಯ ಚಿತ್ರಾದಿ ಕುಶಲ ಕಲೆಗಳ ಸಾಧನೆ–ಈ ಎಲ್ಲ ಅಂಶಗಳಲ್ಲಿಯೂ ಕರ್ನಾಟಕದ ವೈಶಿಷ್ಟ್ಯವನ್ನು ಗುರುತಿಸಬಹುದು. ಮುಖ್ಯವಾಗಿ ಇಲ್ಲಿ ಕಾಣುವುದು ಒಂದು ಸಮನ್ವಯ ಮತ್ತು ಸಾಮರಸ್ಯ ದೃಷ್ಟಿ.

ರಾಜಕೀಯ ಚರಿತ್ರೆಯನ್ನು ನೋಡಿದರೆ ಕದಂಬರು, ಗಂಗರು ಅಥವಾ ಅವರಿಗಿಂತ ಹಿಂದಿನ ಶಾತವಾನರಿಂದ ಹಿಡಿದು, ಕೆಳದಿ ಮೈಸೂರು ಅರಸರವರೆಗೂ ಎಲ್ಲ ರಾಜವಂಶಗಳೂ ಉದಾತ್ತ ಹಿನ್ನೆಲೆಯಲ್ಲಿಯೇ ಬೆಳೆದುಬಂದುವು. ತಮ್ಮ ಜಾತಿ ಮತ ಭಾವಗಳಲ್ಲಿ ಅಂಧರಾಗಿ ಇತರರನ್ನು ಹಿಂಸಿಸಲು ಹೊರಟ ರಾಜರು ಈ ದೀರ್ಘ ಇತಿಹಾಸದಲ್ಲಿ ಅಪ್ಪಿತಪ್ಪಿ ಕೂಡ ಕಾಣಸಿಗಲಾರರೆಂಬುದು ಗಮನಾರ್ಹವಾದ ಸಂಗತಿ. ಈ ನೆಲದ ಗುಣವೇ ಅದನ್ನುವಷ್ಟರ ಮಟ್ಟಿಗೆ ಸಮನ್ವಯ ಮತ್ತು ಸಾಮರಸ್ಯ ಭಾವನೆಯನ್ನು ಅವರು ರೂಪಿಸಿಕೊಂಡರು. ರಾಜರ ವೈಯಕ್ತಿಕ ಬಲವನ್ನು ಅವಲಂಬಿಸಿ ಒಂದೊಂದು ಕಾಲದಲ್ಲಿ ಒಂದೊಂದು ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕಿರಬಹುದು. ಒಂದೇ ವಂಶದಲ್ಲಿಯೂ ಒಬ್ಬೊಬ್ಬ ರಾಜರು ಒಂದೊಂದು ಧರ್ಮಕ್ಕೆ ಹೆಚ್ಚಾಗಿ ಒಲಿಯುತ್ತಿದ್ದುದೂ ಉಂಟು. ರಾಷ್ಟ್ರಕೂಟ ರಾಜರಲ್ಲಿ ಅನೇಕರು ಹಿಂದೂ ಧರ್ಮವನ್ನು ಅದರಲ್ಲಿಯೂ ವಿಶೇಷವಾಗಿ ಶೈವಧರ್ಮವನ್ನು ಅವಲಂಬಿಸಿದ್ದರೆ, ನೃಪತುಂಗ ಜೈನ ಧರ್ಮಕ್ಕೆ ಮನಸೋತಿದ್ದ. ಹೊಯ್ಸಳ ಒಂದನೇ ಬಲ್ಲಾಳ ಶೈವನಾದರೆ, ಅವನ ತಮ್ಮ ವಿಷ್ಣುವರ್ಧನ ವೈಷ್ಣವ. ಅದು ಅವರ ವೈಯಕ್ತಿಕ ಒಲವು. ಆದರೆ ಸಾರ್ವತ್ರಿಕವಾಗಿ ಅವರು ಸರ್ವಧರ್ಮ ರಕ್ಷಕರೆಂಬುದನ್ನು ಮರೆತಿರಲಿಲ್ಲ. ಹೆಚ್ಚೆಂದರೆ ತಾವು ಒಲಿದ ಧರ್ಮಕ್ಕೆ ಸ್ವಲ್ಪ ಹೆಚ್ಚು ಪ್ರೋತ್ಸಾಹ ಕೊಟ್ಟಿರಬಹುದು. ಆದರೆ ಇತರ ಧರ್ಮಗಳ ಮೇಲೆ ದ್ವೇಷವನ್ನು ಸಾಧಿಸಿದ ದುರ್ಘಟನೆ ಕರ್ನಾಟಕ ರಾಜಕೀಯದ ಇತಿಹಾಸದಲ್ಲಿ ಒಮ್ಮೆಯೂ ಸಂಭವಿಸಲಿಲ್ಲ. ಚಾಳುಕ್ಯರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿಯ ನಾಯಕರು–ಈ ಎಲ್ಲ ಅರಸುಮನೆತನಗಳಿಗೂ ಈ ಮಾತನ್ನು ಅನ್ವಯಿಸಬಹುದು.

ರಾಜಕೀಯ ಚರಿತ್ರೆಯಲ್ಲಿ ಉದ್ದಕ್ಕೂ ಕಾಣುವ ಒಂದು ಪ್ರಧಾನವಾದ ಅಂಶವೆಂದರೆ ಯುದ್ಧಗಳು. ಇದು ಕರ್ನಾಟಕಕ್ಕೆ ಮಾತ್ರವಲ್ಲ. ಇಡೀ ಭರತಖಂಡಕ್ಕೆ ಅಥವಾ ಪ್ರಾಚೀನ ಪ್ರಪಂಚಕ್ಕೆಲ್ಲ ಅನ್ವಯಿಸುವ ಮಾತು. ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅದು ಅನಿವಾರ್ಯವಾಗಿತ್ತು. ಇಂಥ ವೀರಜೀವನದಲ್ಲಿಯೂ ಕರ್ನಾಟಕದ ಸಾಧನೆ ಅನುಪಮವಾದುದು. ಅಖಿಲ ಭಾರತ ವ್ಯಾಪ್ತಿಯ ಮನ್ನಣೆಯನ್ನು ಪಡೆದಂಥ ವೀರರು ಈ ನಾಡಿನಲ್ಲಿ ಆಗಿಹೋದರು. ಕದಂಬ ವಂಶದ ಸ್ಥಾಪಕನಾದ ಮಯೂರಶರ್ಮನಿಂದ ಹಿಡಿದು ಅವಿರತವಾಗಿ ಬೆಳೆದುಬಂದ ಈ ವೀರ ಪರಂಪರೆಯಲ್ಲಿ ಕೆಲವು ಹೆಸರುಗಳನ್ನು ಸ್ಮರಿಸಿಕೊಳ್ಳಬಹುದಾದರೆ ಎರಡನೆಯ ಪುಲಕೇಶಿ, ಧ್ರುವ ಧಾರಾವರ್ಷ, ಮೂರನೆಯ ಗೋವಿಂದ, ಆರನೆಯ ವಿಕ್ರಮ, ವಿಷ್ಣುವರ್ಧನ, ಎರಡನೆಯ ಬಲ್ಲಾಳ, ಮುಮ್ಮಡಿ ಬಲ್ಲಾಳ, ಕುಮಾರರಾಮ, ಇಮ್ಮಡಿ ಪ್ರೌಢದೇವರಾಯ, ಕೃಷ್ಣದೇವರಾಯ–ಈ ಒಂದೊಂದು ಹೆಸರೂ ಪರಾಕ್ರಮದ ಸಂಕೇತವಾಗಿದೆ. ಕೆಲವರ ಕಾಲದಲ್ಲಂತೂ ಉತ್ತರ ಭಾರತವೂ ತತ್ತರಿಸಿತು. ಕನ್ನಡ ಸೈನಿಕರ ಕುದುರೆಗಳು ಗಂಗಾನದಿಯಲ್ಲಿ ಮಿಂದು ಹಿಮಾಲಯದ ತಪ್ಪಲನ್ನು ಕಂಡವು. ನೇಪಾಳದವರೆಗೂ ಕನ್ನಡ ರಾಜವಂಶಗಳ ಪ್ರಭಾವ ಹಬ್ಬಿತು. ಅಲ್ಲಿಯೇ ಕೆಲವರು ನೆಲೆಸಿ ತಮ್ಮ ಶಾಖೆಯನ್ನು ಪ್ರಾರಂಭಿಸಿದಂತೆಯೂ ತೋರುತ್ತದೆ. ನಾನ್ಯ ದೇವನನ್ನು ರಾಜನನ್ನಾಗಿ ಪಡೆದು ಆಳಿದ ಕರ್ನಾಟಕ ರಾಜವಂಶವೊಂದು ನೇಪಾಳದಲ್ಲಿ ಕಂಡುಬರುತ್ತದೆ. ಹಾಗೆಯೇ ಬಂಗಾಳದ ಸೇನರು. ಜೋಧಪುರ ಮತ್ತು ಬಿಕನೇರಿನ ರಾಠೋಡರು ಕರ್ನಾಟಕ ವಂಶಕ್ಕೆ ಸೇರಿದವರು.

ಕರ್ನಾಟಕದ ರಾಜರು ಧರ್ಮವಿಜಯಿಗಳಾಗಿದ್ದರು. ಶತ್ರುಗಳೊಡನೆ ಹೋರಾಡುತ್ತಿದ್ದಾಗಲೂ ಉದಾತ್ತ ಆದರ್ಶ ಅವರ ಕಣ್ಣ ಮುಂದಿರುತ್ತಿತ್ತು. ವಿಜಯಿಗಳಾದಾಗಲೂ ಕ್ಷಮಾಗುಣ ಅವರ ಪರಾಕ್ರಮಕ್ಕೆ ಅಲಂಕಾರಪ್ರಾಯವಾಗಿ ಶೋಭಿಸುತ್ತಿತ್ತು. ಶರಣಾಗತ ರಕ್ಷಣೆ ಕರ್ನಾಟಕದ ರಾಜರುಗಳಲ್ಲಿ ಕಂಡುಬರುವ ಬಹುದೊಡ್ಡ ಗುಣ. ಕೆಳದಿಯ ರಾಣಿ ಚೆನ್ನಮ್ಮನ ಸಾಹಸವನ್ನು ಸ್ಮರಿಸಿಕೊಳ್ಳಬಹುದು. ಶಿವಾಜಿಯ ಮಗನಿಗೆ ಆಶ್ರಯವನ್ನು ಕೊಟ್ಟು ಆಕೆ ಅದಕ್ಕಾಗಿ ಔರಂಗ್‌ಜೇಬನನ್ನು ದಿಟ್ಟತನದಿಂದ ಎದುರಿಸಿದುದು ಮಾತ್ರವಲ್ಲದೆ ಸೋಲಿಸಿ ಹಿಮ್ಮೆಟ್ಟಿಸಲು ಸಮರ್ಥಳಾದಳೆಂಬುದು ನೈತಿಕ ಬಲದ ಮಹಾವಿಜಯವನ್ನು ಸಾರಿಹೇಳುತ್ತದೆ. ಕೆಳದಿಯ ಶಿವಪ್ಪನಾಯಕನೂ ಈ ಸಂದರ್ಭದಲ್ಲಿ ಸ್ಮರಣೀಯ ವ್ಯಕ್ತಿ.

ಪ್ರಾಚೀನ ರಾಜ್ಯಪದ್ಧತಿಯಲ್ಲಿ ರಾಜವಂಶಗಳ ಶಕ್ತಿ ನಾಡಿನ ಆಗುಹೋಗುಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿತ್ತು. ನಾಡಿನ ರಾಜಕೀಯ ಚರಿತ್ರೆಯೆಂದರೆ ರಾಜವಂಶಗಳ ಚರಿತ್ರೆಯೇ. ಆದರೂ ಜನಜೀವನದ ಎಲ್ಲ ಅಂಶಗಳನ್ನೂ ಅದು ವ್ಯಾಪಿಸಲಿಲ್ಲ. ಜನಪದ ಜೀವನದ ಅಂತರಂಗವನ್ನು ಆವರಿಸಿದ್ದು ರಾಜ್ಯಶಕ್ತಿಯಲ್ಲ ; ಧರ್ಮಶಕ್ತಿ. ರಾಜರು ಸಹ ಅದಕ್ಕೆ ಅಧೀನರಾಗಿ ನಡೆಯುತ್ತಿದ್ದರು. ಆಡಳಿತ ಕ್ರಮವನ್ನೂ ಆರ್ಥಿಕ ರೀತಿನೀತಿಗಳನ್ನೂ ರೂಪಿಸುವುದರಲ್ಲಿ ಸಹ ರಾಜನಿಗೆ ಧರ್ಮಶಾಸ್ತ್ರಗಳೇ ಮಾರ್ಗದರ್ಶಕವಾಗಿದ್ದುವು. ರಾಜ್ಯಶಕ್ತಿ ಧರ್ಮಶಕ್ತಿಗೆ ಅಧೀನವಾಗಿ ನಡೆಯುತ್ತಿತ್ತು.

ಶಾಸನಗಳಿಂದಲೂ ಈ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು ತಿಳಿಯುವುದಕ್ಕೆ ಶಾಸನಗಳು ಅಮೂಲ್ಯವಾದ ಆಧಾರಗಳಾಗಿ ಪರಿಣಮಿಸಿವೆ. ಊರಿನ ಮತ್ತು ನಾಡಿನ ರಕ್ಷಣೆಗಾಗಿ, ಕೆಡುಕಿನ ನಾಶಕ್ಕಾಗಿ, ಒಳಿತಿನ ಸಂವರ್ಧನೆಗಾಗಿ ನಾಡಿನ ವೀರರು ತಮ್ಮನ್ನು ಅರ್ಪಿಸಿಕೊಳ್ಳುತ್ತಿದ್ದ ಧರ್ಮ ವೀರತ್ವವನ್ನು ಅಸಂಖ್ಯಾತ ವೀರಗಲ್ಲುಗಳು ತೋರಿಸಿಕೊಡುತ್ತವೆ. ದಾನಶಾಸನ ದತ್ತಿಶಾಸನಗಳನ್ನು ನೋಡಿದಾಗ ನಾಡಿನ ಧಾರ್ಮಿಕ ಜೀವನದ ವಿವಿಧ ಮುಖಗಳ ಪರಿಚಯವಾಗುತ್ತದೆ. ರಾಜರು ಸಾಮಂತರು ಅಧಿಕಾರಿಗಳು ರಾಣಿಯರು ಮಾತ್ರವಲ್ಲದೆ ಸಾಮಾನ್ಯ ಕೆಲಸಗಾರರೂ ಸೇವಕರೂ ದಾನವಿತ್ತು ಶಾಸನಸ್ಥರಾಗಿರುವುದು ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ ವಿಶೇಷ ಅಂಶ. ಧರ್ಮಸಮನ್ವಯವನ್ನು ಶಾಸನಗಳು ಸಾಧಿಸಿರುವ ರೀತಿ ಕರ್ನಾಟಕದ ಶಾಸನಗಳ ಇನ್ನೊಂದು ಪ್ರಮುಖ ಸಾಧನೆ. ಸರ್ವಧರ್ಮಧೇನು ನಿವಹಕ್ಕಾಡುಂಬೊಲಂ ಬೆಳ್ವೊಲಂ– ಎಂದು ಒಂದು ಶಾಸನ ಹೇಳುವ ಮಾತನ್ನು ಇಡೀ ಕರ್ನಾಟಕಕ್ಕೇ ಅನ್ವಯಿಸಬಹುದು. ನಾಡಿನ ಇತಿಹಾಸದ ಪ್ರಾರಂಭದಲ್ಲಿಯೇ ಜೈನಧರ್ಮ ಇಲ್ಲಿ ಕಾಲಿಟ್ಟು ಇನ್ನೆಲ್ಲೂ ಸಿಕ್ಕದಿರುವ ರಕ್ಷಣೆಯನ್ನು ಪಡೆದು ಬೆಳೆಯಿತು. ಬೌದ್ಧಧರ್ಮದ ಪ್ರಚಾರಕ್ಕೂ ಇದು ಕೇಂದ್ರವಾಗಿತ್ತೆಂಬುದು ಇಲ್ಲಿ ದೊರೆಯುವ ಅಶೋಕನ ಶಾಸನಗಳಿಂದ ವ್ಯಕ್ತವಾಗುತ್ತದೆ. ಅನಂತರ ಶೈವಧರ್ಮ ವಿಶೇಷ ಪ್ರಾಬಲ್ಯಕ್ಕೆ ಬಂತು. ಶ್ರೀ ಶಂಕರಾಚಾರ್ಯರ ಕಾವ್ಯಕ್ಷೇತ್ರದ ಕೇಂದ್ರವಾಗಿ ಅವರ ಒಂದು ಮಠ ಇಲ್ಲಿ ಸ್ಥಾಪಿತವಾಯಿತು. ಶ್ರೀ ರಾಮಾನುಜರನ್ನು ಅವರ ಜನ್ಮಭೂಮಿಯಾದ ತಮಿಳುನಾಡೇ ಹೊರದೂಡಲು ಕನ್ನಡ ದೇಶ ಅವರಿಗೆ ಆಶ್ರಯವನ್ನಿತ್ತು ಶ್ರೀವೈಷ್ಣವಧರ್ಮವನ್ನು ಸ್ವಾಗತಿಸಿತು. ಮಧ್ವಾಚಾರ್ಯರಂತೂ ಕನ್ನಡ ಗರ್ಭದಿಂದಲೇ ಮೂಡಿಬಂದವರು. ಈ ಎಲ್ಲ ಧರ್ಮಗಳನ್ನೂ ಸಮಾನ ಭಾವನೆಯಿಂದ ಕಾಣುವ ಸಮನ್ವಯ ಸಂಸ್ಕೃತಿ ಕರ್ನಾಟಕದ ಸಹಜಗುಣ.

ಜನಪದ ಸಂಸ್ಕೃತಿಯ ಸ್ವರೂಪವನ್ನೂ ಸಾರವನ್ನೂ ಇನ್ನೂ ಸಾರವತ್ತಾಗಿ ಮತ್ತು ಜೀವಂತವಾಗಿ ತೋರಿಸಿಕೊಡುವ ಮಾಧ್ಯಮವೆಂದರೆ ಜನಪದ ಸಾಹಿತ್ಯ. ಸಮಷ್ಟಿ ಮನಸ್ಸಿನ ನೇರವಾದ ಅಭಿವ್ಯಕ್ತಿ ಇದು. ಸಾಮಾನ್ಯ ಜನಗಳ ಅನುಭವಗಳಿಂದ ಮತ್ತು ಆಶೋತ್ತರಗಳಿಂದ ಇದು ಸಹಜವಾಗಿ ಹುಟ್ಟುತ್ತದೆ. ಕರ್ನಾಟಕ ಜನಪದ ಸಾಹಿತ್ಯ ವಿಪುಲತೆ ವೈವಿಧ್ಯಗಳಲ್ಲಿ ಅಪಾರವಾಗಿರುವಂತೆ, ಸತ್ತ್ವದಲ್ಲಿ ಮಹೋನ್ನತವೂ ಮಹತ್ತ್ವ ಪೂರ್ಣವೂ ಆಗಿದೆ. ಬಹುಮುಖವಾದ ಜೀವನದ ಹರಹನ್ನೂ ಹಾಸುಬೀಸುಗಳನ್ನೂ ಶಕ್ತಿ ಸಂಪನ್ನವಾದ ರೀತಿಯಲ್ಲಿ ಜನಸಾಮಾನ್ಯರ ಭಾಷೆ ಹಿಡಿದಿಟ್ಟಿರುವ ಪವಾಡ ಇಲ್ಲಿಯ ಜನಪದ ಸಾಹಿತ್ಯದಲ್ಲಿ ಕಾಣುತ್ತದೆ. ಲಾವಣಿಗಳು, ಗರತಿಯ ಹಾಡುಗಳು, ಕೋಲಾಟದ ಪದಗಳು ನಲ್ಲಹರಕೆಗಳು ದೇವರಗುಡ್ಡರ ಪದಗಳು ಮೊದಲಾದವು ಜನಪದ ಸಾಹಿತ್ಯದ ವೈಶಿಷ್ಟ್ಯಕ್ಕೆ ಕರ್ನಾಟಕದ ಕೊಡುಗೆಗಳೆನ್ನಬಹುದು. ಯಕ್ಷಗಾನ ಬಯಲಾಟಗಳು, ತೊಗಲು ಬೊಂಬೆಯ ಆಟ, ಹುಲಿವೇಷ ಸುಗ್ಗಿಯ ಕುಣಿತ– ಮೊದಲಾದ ಜನಪದ ನೃತ್ಯಗಳನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ.

ಜನತೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿರುವ ಅಷ್ಟೇ ಪ್ರಭಾವಶಾಲಿಯಾದ ಇನ್ನೊಂದು ಮುಖ, ಪ್ರೌಢಸಾಹಿತ್ಯ, ಇದಕ್ಕೆ ಹಿನ್ನಲೆಯಾಗಿ ವಿವಿಧ ಧರ್ಮಪರಂಪರೆಗಳೂ ಬೆಳೆದುಬಂದುವು. ಜನಜೀವನದ ಅಂತರಂಗದ ಸಂಸ್ಕಾರಗಳನ್ನೂ ಅದಕ್ಕನುಗುಣವಾದ ಬಹಿರಂಗದ ನಡೆನುಡಿಗಳನ್ನೂ ರೂಪುಗೊಳಿಸುವುದರಲ್ಲಿ ಧರ್ಮ ಮತ್ತು ಸಾಹಿತ್ಯಗಳ ಸ್ಥಾನ ಅತಿ ಪ್ರಬಲವಾದುದು. ಕರ್ನಾಟಕದಲ್ಲಿ ಇವೆರಡೂ ಒಂದಕ್ಕೊಂದು ಪೂರಕವಾದುವು; ಒಂದೇ ಶಕ್ತಿಯ ಎರಡು ಮುಖಗಳಾಗಿ ಪರಿಣಮಿಸಿದವು. ಸಾಹಿತ್ಯಕ್ಕೆ ಧರ್ಮ ಪ್ರೇರಕಶಕ್ತಿಯಾಯಿತು; ಧರ್ಮಕ್ಕೆ ಸಾಹಿತ್ಯ ಪೂರಕಶಕ್ತಿಯಾಯಿತು. ಜನತೆಯ ಜಾಗೃತಿಗಾಗಿ ಇವೆರಡೂ ಮೀಸಲಾದುವು.

12ನೆಯ ಶತಮಾನವಂತೂ ಭರತಖಂಡದ ಧಾರ್ಮಿಕ ಮತ್ತು ಸಾಹಿತ್ಯ ಇತಿಹಾಸದಲ್ಲಿಯೇ ಒಂದು ಅದ್ವಿತೀಯವಾದ ಯುಗ. ಭರತಖಂಡ ಆ ಕಾಲದಲ್ಲಿ ಕಂಡರಿಯದಂಥ ಸಾಮಾಜಿಕ ಮತ್ತು ಧಾರ್ಮಿಕ ಸಮತೆಯನ್ನು ಬೋಧಿಸಿದುದಲ್ಲದೆ ಸಾಧಿಸಿಯೂ ತೋರುವ ಅಪೂರ್ವ ಅವಕಾಶ ಕರ್ನಾಟಕಕ್ಕೆ ಬಂತು. ಅದನ್ನು ತಂದುಕೊಟ್ಟವರು ಬಸವಣ್ಣನವರು ಮತ್ತು ಶರಣರು. ಅಸ್ಪೃಶ್ಯತೆಯ ನಿರ್ಮೂಲನ, ಕಾಯಕದ ಮಹತ್ತ್ವ ಮೊದಲಾದ ಅವರ ಕ್ರಾಂತಿಕಾರಕ ಸಾಧನೆಗಳು ಕರ್ನಾಟಕ ಸಂಸ್ಕೃತಿಯ ಒಂದು ಮಹತ್ತರ ಘಟ್ಟ. ಅವರ ಆ ಪುಣ್ಯಸಾಹಸದ ಫಲವಾಗಿ ರೂಪುಗೊಂಡಿದ್ದು ವಚನ ಸಾಹಿತ್ಯ. ಈ ವಚನಗಳದು ಬಹುಶಃ ಇನ್ನಾವ ಭಾರತೀಯ ಭಾಷೆಗೂ ಇಲ್ಲದ ಒಂದು ವಿಶಿಷ್ಟ ರೂಪ. ಇವು ಒಂದು ಹೊಸ ವೀರಶೈವ ಧರ್ಮ ಪರಂಪರೆಯ ಮೇಲ್ಮೆಗೆ ನಾಂದಿಯಾಯಿತು.

ಕರ್ನಾಟಕದ ಗರ್ಭದಿಂದ ಆವಿರ್ಭವಿಸಿದ ಇನ್ನೊಬ್ಬ ಆಚಾರ್ಯ ಮಧ್ವರು ಪ್ರತಿಪಾದಿಸಿದ ತತ್ತ್ವಸಿದ್ಧಾಂತದ ಮೇಲೆ ಬೆಳೆದು ಪುರಂದರಾದಿ ದಾಸರ ಕೀರ್ತನೆಗಳಿಗೆ ಕಾರಣವಾದ ದಾಸಸಾಹಿತ್ಯ ಕನ್ನಡದ ಇನ್ನೊಂದು ವೈಶಿಷ್ಟ್ಯ. ಅಂತೆಯೇ ನಿಜಗುಣ ಶಿವಯೋಗಿಗಳೇ ಮೊದಲಾದ ಸಂತರಿಂದ ಬೆಳೆದುಬಂದ ತತ್ತ್ವಸಾಹಿತ್ಯ ಅಗಾಧವಾದುದು. ಚಂಪೂ ರಗಳೆ ಷಟ್ಪದಿ ಸಾಂಗತ್ಯ ತ್ರಿಪದಿ ವಚನ ಹಾಡು–ಈ ಮೊದಲಾದ ವೈವಿಧ್ಯಗಳು ಕನ್ನಡ ಸಾಹಿತ್ಯ ಸಾಧನೆಯ ವಿಶಿಷ್ಟ ಅಂಶಗಳು. ಪ್ರಯೋಗಶೀಲತೆ ಕನ್ನಡ ಸಾಹಿತ್ಯದ ದಾರಿದೀಪ; ಪರಿಪಕ್ವ ಅನುಭವ ಆ ದಾರಿಯಲ್ಲಿ ಮುನ್ನಡೆಸುವ ಚೈತನ್ಯಶಕ್ತಿ.

ಇತರ ಕಲೆಗಳಲ್ಲಿಯೂ ಕರ್ನಾಟಕ ಸಂಸ್ಕೃತಿಯ ಅಭಿವ್ಯಕ್ತಿ ಹಲವಾರು ರೂಪಗಳಲ್ಲಿ ಬೆಳೆದುಬಂದಿದೆ. ವಾಸ್ತುಶಿಲ್ಪ, ಶಿಲ್ಪ, ಸಂಗೀತ, ನೃತ್ಯ, ಚಿತ್ರ ಈ ಎಲ್ಲ ಕಲೆಗಳಲ್ಲೂ ಇದರ ಅಭಿವ್ಯಕ್ತಿಯ ಅನೇಕ ಮುಖಗಳು ಕಂಡುಬರುತ್ತವೆ. ಜನರ ಸೌಂದರ್ಯದೃಷ್ಟಿ ಮತ್ತು ಉದಾತ್ತವಾದ ಮನೋಧರ್ಮ ಇವುಗಳಲ್ಲಿ ಉಜ್ಜ್ವಲವಾಗಿ ವ್ಯಕ್ತವಾಗಿದೆ. ಯಾವುದೇ ಕಲಾಕೃತಿ ಮಹೋನ್ನತವಾಗಬೇಕಾದರೆ ತಾನು ಹುಟ್ಟಿದ ಪರಿಮಿತವಾದ ಪರಿಸರವನ್ನು ಮೀರಿ ಬೆಳೆದು ವಿಶ್ವವ್ಯಾಪಕವಾಗಬೇಕು; ಮತ್ತು ವೈಯಕ್ತಿಕತೆಯಿಂದ ಮೇಲೇರಿ ಸರ್ವಸಾಧಾರಣವಾದ ಮಾನವೀಯ ಭಾವಗಳನ್ನು ಮಿಡಿಯಬೇಕು. ಈ ಅಂಶಗಳನ್ನು ಕರ್ನಾಟಕದ ಕಲಾಕೃತಿಗಳು ಸಾಧಿಸಿ ತೋರಿಸಿವೆ. ಎತ್ತರದ ಗಿರಿಶಿಖರದ ಮೇಲೆ ನಿಂತಿರುವ ಬೃಹತ್ ಭವ್ಯ ಗೊಮ್ಮಟೇಶ್ವರನನ್ನು ಕಂಡಾಗ, ಅಪೂರ್ವವಾದ ರೀತಿಯಲ್ಲಿ ಎರಡು ದೇವಾಲಯಗಳನ್ನು ಒಟ್ಟಾಗಿ ಸೇರಿಸಿದ ಹೊಯ್ಸಳೇಶ್ವರ ದೇವಾಲಯವನ್ನು ಪ್ರವೇಶಿಸಿದಾಗ, ಇಡೀ ಕಲ್ಲುಗುಡ್ಡವನ್ನೇ ಕೊರೆದು ನಿರ್ಮಿಸಿದ ಆಭೂತಪೂರ್ವವಾದ ಕೈಲಾಸದೇವಾಲಯದ ಬಳಿ ಸಾರಿದಾಗ, ಅಪಾರ ಅನುಕಂಪೆಯ ಚೈತನ್ಯ ಮೂರ್ತಿಯಾದ ಬೋಧಿಸತ್ತ್ವ ಪದ್ಮಪಾಣಿಯ ಪ್ರಭಾವಲಯಕ್ಕೆ ಒಳಗಾದಾಗ, ಎಲಿಫೆಂಟ ಗುಹೆಯನ್ನು ಹೊಕ್ಕು ಸೃಷ್ಟಿಸ್ಥಿತಿಪ್ರಳಯಗಳ ಸಾಂಕೇತಿಕ ನಿರೂಪಣೆಯ ಮಹಾ ಕಲಾಕೃತಿಯಾದ ತ್ರಿಮೂರ್ತಿಯ ಮುಂದೆ ನಿಂತಾಗ–ದೇಶಕಾಲಗಳ ಪರಿಮಿತ ವಲಯದಿಂದ ಮೇಲೇರಿ ವಿಶ್ವಮಾನವನ ಮಹತ್ಸಾಧನೆಯ ಸಾಕ್ಷಾತ್ಕಾರವನ್ನು ಪಡೆಯುತ್ತೇವೆ. ಕರ್ನಾಟಕ ಸಂಸ್ಕೃತಿಯ ಈ ಶಿಖರಗಳನ್ನು ಕಂಡು ಫರ್‌ಗೂಸನ್, ಹ್ಯಾವೆಲ್, ಕಸಿನ್ಸ್, ಪರ್ಸಿ ಬ್ರೌನ್, ಚಾರ್ಲ್ಸ್ ಫ್ಯಾಬ್ರಿ ಮೊದಲಾದ ಅನೇಕ ಪಾಶ್ಚಾತ್ಯ ತಜ್ಞರು ಮಾರುಹೋಗಿದ್ದಾರೆ.

ಕರ್ನಾಟಕದ ಕಲಾಕೃತಿಗಳು ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡಿವೆ. ಆದರೆ ಆ ಸ್ವಂತಿಕೆ ಅವುಗಳ ಸುತ್ತಕಟ್ಟಿದ ಒಂದು ಬೇಲಿಯಾಗಿರದೆ, ಮೇಲೇರುವ ನಿಚ್ಚಣಿಗೆಯಾಗಿ ಪರಿಣಮಿಸಿದೆ. ವೈಶಿಷ್ಟ್ಯವೆನ್ನುವುದು ಇತರರಿಂದ ಸಂಪೂರ್ಣ ಭಿನ್ನವಾಗಿರಲೇಬೇಕೆಂಬ ವಿಕೃತ ಸಿದ್ಧಾಂತಕ್ಕೆಡೆಕೊಡಬಾರದು. ಕರ್ನಾಟಕದ ಕಲೆಗಳು ಮತ್ತು ಅವುಗಳನ್ನು ರೂಪಿಸಿದ ಜೀವನದೃಷ್ಟಿ ಸಹ ಇದರಿಂದ ಮುಕ್ತವಾಗಿವೆ. ಇತರ ಶೈಲಿಗಳಲ್ಲಿ ಕಾಣುವ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡು ಮತ್ತು ಅರಗಿಸಿಕೊಂಡು ಅವು ಪರಿಪುಷ್ಟವಾಗಿ ಬೆಳೆದಿವೆ. ಕಲಾವಂತಿಕೆಗಿರಬೇಕಾದ ಈ ಉದಾರಮನೋಭಾವದ ವಿಕಾಸಕ್ಕೆ ಕರ್ನಾಟಕ ಪೋಷಕ ಭೂಮಿಯಾಗಿ ಪರಿಣಮಿಸಿತು. ಧರ್ಮದಲ್ಲಿಯೇ ಆಗಲಿ, ಸಾಹಿತ್ಯದಲ್ಲಿಯೇ ಆಗಲಿ, ಇತರ ಯಾವ ಕಲಾಮಾಧ್ಯಮಗಳಲ್ಲಿಯೇ ಆಗಲಿ ಇನ್ನೊಂದು ಕಡೆಯಿಂದ ಒಳ್ಳೆಯದನ್ನು ತೆಗೆದುಕೊಳ್ಳಲು ಇದು ಎಂದೂ ಹಿಂದೆಮುಂದೆ ನೋಡಿಲ್ಲ. ಇದು ಅನುಕರಣೆಯಲ್ಲ, ಗುಣಗ್ರಾಹಿತನ, ಕರ್ನಾಟಕ ಒಳ್ಳೆಯದನ್ನೆಲ್ಲ ಗ್ರಹಿಸಿತು; ಅನುಕರಿಸಲಿಲ್ಲ; ತನ್ನ ಪುನರನುಭವದಿಂದ ನೂತನವಾಗಿ ಸೃಷ್ಟಿಸಿತು. ಆದುದರಿಂದ ಕರ್ನಾಟಕ ಸಂಸ್ಕೃತಿಯಲ್ಲಿ ಮತ್ತು ಅದರ ಕಲಾಭಿವ್ಯಕ್ತಿಯಲ್ಲಿ ಎಲ್ಲ ಒಳ್ಳೆಯ ಅಂಶಗಳೂ ಸಮಾವೇಶಗೊಂಡುವು. ವಿಪುಲವೂ ವೈವಿಧ್ಯಪೂರ್ಣವೂ ವಿಸ್ತಾರವೂ ವ್ಯಾಪಕವೂ ಗಂಭೀರವೂ ಪೂರ್ಣದೃಷ್ಟಿ ಸಮನ್ವಿತವೂ ಆಗಿ ಬೆಳೆಯಲು ಈ ಮನೋಧರ್ಮ ಕಾರಣವಾಯಿತು.

ಒಂದು ಸಂಸ್ಕೃತಿಯ ಹಿರಿಮೆ ಇರುವುದು ಅದರ ಶಿಖರಗಳಲ್ಲಿ ಮಾತ್ರವಲ್ಲ. ಅದರತ್ತ ಏರುವ ಒಂದೊಂದು ಹೆಜ್ಜೆಯಲ್ಲಿಯೂ ಅದು ವ್ಯಕ್ತವಾಗುತ್ತದೆ. ಪರಿಪಕ್ವ ಮನಸ್ಸಿನ ಪರಿಣತ ಫಲ ಸಂಸ್ಕೃತಿ. ಇದರ ಹಿನ್ನೆಲೆಯನ್ನು ಒಳಗೊಂಡ ಕಲಾಕೃತಿಗಳು ಕಲಾವಿದನ ಪ್ರತಿಭೆಯ ಪ್ರತಿನಿಧಿ ಮಾತ್ರವಲ್ಲದೆ ಜನಾಂಗದ ನಿಧಿಯೂ ಆಗುತ್ತವೆ. ಅವುಗಳ ವಿಕಾಸದಲ್ಲಿ ಜನಜೀವನದ ಪ್ರತಿಬಿಂಬವನ್ನೇ ಕಾಣುತ್ತೇವೆ. ಈ ಅರ್ಥದಲ್ಲಿ ಕಲೆ ಎನ್ನುವುದು ಸಮಾಜದ ಆತ್ಮಕಥೆ. ಕರ್ನಾಟಕದ ಕಲೆಗಳಿಗೆ ಈ ಮಾತು ಸಂಪೂರ್ಣವಾಗಿ ಅನ್ವಯಿಸುತ್ತದೆ. ಕನ್ನಡನಾಡಿನ ಆತ್ಮಕಥೆಯನ್ನು ಹೇಳುವ ಶಕ್ತಿಸಾಧನಗಳಾಗಿ ಅವು ಉಳಿದಿವೆ. ಆಂತರಂಗಿಕ ಅನುಭವದ ಆಧ್ಯಾತ್ಮಿಕ ಸಾಧನೆಗಳು, ಧಾರ್ಮಿಕ ಆಚರಣೆಗಳು, ಹಬ್ಬ ಹರಿದಿನಗಳು, ಸಾಹಿತ್ಯಕಲೆಗಳು–ಮೊದಲಾದವುಗಳಿಂದ ಹಿಡಿದು ಬಹಿರಂಗದ ಪರಿಕರಗಳೆನ್ನ ಬಹುದಾದ ಬಟ್ಟೆ ನೇಯುವುದು– ಬುಟ್ಟಿ ಹೆಣೆಯುವುದು. ಬಣ್ಣಹಾಕುವುದರ ವರೆಗಿನ ಎಲ್ಲ ಚಟುವಟಿಕೆಗಳೂ ವಿಶಾಲವಾದ ಅರ್ಥದಲ್ಲಿ ಈ ವಲಯದೊಳಕ್ಕೇ ಬರುತ್ತವೆ. ಜೀವನದ ಎಲ್ಲ ಅಂಗಗಳಲ್ಲಿಯೂ ಊರುಗಳ ಮತ್ತು ವ್ಯಕ್ತಿಗಳ ಹೆಸರುಗಳಲ್ಲಿಯೂ ನಾಡಿನ ಸಂಸ್ಕೃತಿಯ ಆತ್ಮಕಥೆ ಮಿಡಿಯುತ್ತಿದೆ.

ಬದಲಾಗುತ್ತಿರುವ ಸನ್ನಿವೇಶಕ್ಕೆ ಅನುಗುಣವಾಗಿ ಜನಜೀವನ ಹೊಂದಿಕೊಳ್ಳಬೇಕಾಗುತ್ತದೆ. ಹೊಸ ಹೊಸ ವಿಚಾರಗಳ ಮಥನದಿಂದ ಅನೇಕ ಹಳೆಯ ನಂಬಿಕೆಗಳು ಕುಸಿಯುತ್ತವೆ; ಹೊಸ ಬೆಳಕು ಮೂಡುತ್ತದೆ. ಅದು ಅನಿವಾರ್ಯ ಮತ್ತು ಅಗತ್ಯ; ಹಣ್ಣೆಲೆ ಉದುರಿ ಹೊಸ ಎಲೆ ಚಿಗುರುವಂತೆ ಸಹಜವೂ ಹೌದು. ವೃಕ್ಷ ಜೀವಂತವಾಗಿರುವುದರ ಲಕ್ಷಣ ಅದು. ಕರ್ನಾಟಕ ಸಂಸ್ಕೃತಿ ಇಂಥ ಜೀವಂತ ಲಕ್ಷಣವನ್ನು ಪಡೆದು ಹೊಸ ಹೊಸ ಚಿಗುರನ್ನು, ಹೂವುಹಣ್ಣುಗಳನ್ನು ಅರಳಿಸುತ್ತ ಬಂದಿದೆ. ತಳದಲ್ಲಿರುವ ತಾಯಿಬೇರಿನ ಸತ್ತ್ವದಿಂದ ಮೇಲೆ ಪಲ್ಲವಿಸಿ ನಿತ್ಯನೂತನವಾಗಿ ನಳನಳಿಸುತ್ತಿದೆ.

ಇಂದಿನ ಜಾಗತೀಕರಣ ಮತ್ತು ಅಭಿವೃದ್ಧಿ ಬಲಗಳ ಒತ್ತಡದ ಪರಿಸರದಲ್ಲಿ ಕರ್ನಾಟಕ ನವೀನ ಸಂಸ್ಕೃತಿಯ ಆವಿರ್ಭಾವದ ಯುಗಕ್ಕೆ ಪ್ರವೇಶಿಸಿದೆ. ಬೆಂಗಳೂರು ಸಿಲಿಕಾನ್ ನಗರವಾಗಿ ಭಾರತದ ತಂತ್ರಜ್ಞಾನದ ರಾಜಧಾನಿ ಎನಿಸಿಕೊಂಡಿದೆ. ಇತರ ನಗರಗಳೂ ಆ ದಾರಿಯಲ್ಲಿವೆ. ಎಲ್ಲೆಡೆ ಶಕ್ತಿಉತ್ಪಾದನಾ ಉದ್ಯಮಗಳು, ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಹೊರತೆಗೆಯುವ ಉದ್ಯಮಗಳು ಬೆಳೆಯುತ್ತಿವೆ. ಇದರಿಂದ ಭೂಮಿಯ ಬಳಕೆಯ ಬಗ್ಗೆ ಒತ್ತಡ ಹೆಚ್ಚಿದೆ. ರಾಜ್ಯದೊಳಗಿನ ಅಪಾರ ಬಂಡವಾಳ ಹರಿದು ಬರುತ್ತಿರುವುದರಿಂದ ಉದ್ಯೋಗಾವಕಾಶಗಳು ಸೃಷ್ಟಿಯಾಗಿ ಜೀವನ ಶೈಲಿಯಲ್ಲಿ ಬದಲಾವಣೆಗಳಾಗುತ್ತಿವೆ. ಶಿಕ್ಷಣ ಕ್ಷೇತ್ರ ಅಪೂರ್ವ ಪ್ರಗತಿ ಸಾಧಿಸುತ್ತಿದೆ. ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗಳು, ತಲ್ಲಣ ಅನುಭವಿಸುತ್ತಿವೆ. ಬಡವ–ಬಲ್ಲಿದರ ನಡುವೆ ಅಂತರ ಹೆಚ್ಚಿದೆ. ಕನ್ನಡ ಭಾಷೆ, ಹೊರಗಿನ ಒತ್ತಡದಿಂದ ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲು ಮತ್ತು ಜವಾಬುಗಳ ಯುಗದಲ್ಲಿ ಭಾರತೀಯ ಸಂಸ್ಕೃತಿಯ ಹೊಸ ಮಾರ್ಪಾಡಿನೊಂದಿಗೆ ಕರ್ನಾಟಕ ಸಂಸ್ಕೃತಿಯೂ ಹೆಜ್ಜೆ ಹಾಕುತ್ತಿದೆ– ಯಶಸ್ವಿಯಾಗಿ. (ಎಚ್.ಟಿ.)

**ಕರ್ನಾಟಕದ ಹಬ್ಬಗಳು :** ಭಾರತದ ಅವಿಭಾಜ್ಯ ಅಂಗವಾಗಿರುವ ಕರ್ನಾಟಕದಲ್ಲಿ ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿರುವ ಎಲ್ಲ ಹಬ್ಬಗಳೂ ಸಾಮಾನ್ಯವಾಗಿ ಆಚರಣೆಯಲ್ಲಿವೆ. ಅಲ್ಲದೆ ಹಲವು ಮತ ಪಂಥಗಳ ಜನರು ಶತಶತಮಾನಗಳಿಂದ ಇಲ್ಲಿ ನೆಲೆಸಿರುವ ಕಾರಣ ಅವರ ಹಬ್ಬಗಳೂ ಆಚರಣೆಯಲ್ಲಿವೆ. ಮುಸಲ್ಮಾನರ ಈದ್‌ಮಿಲಾದ್, ಮೊಹರಂ, ರಂಜ಼ಾನ್ ಮುಂತಾದವು; ಕ್ರಿಶ್ಚಿಯನ್ನರ ಈಸ್ಟರ್ ಹಾಗೂ ಕ್ರಿಸ್‌ಮಸ್ ; ಜೈನರ ಮಹಾವೀರ ಜಯಂತಿ ; ಬೌದ್ಧರ ಬುದ್ಧ ಜಯಂತಿ; ಶೈವರ ಬಸವಣ್ಣನವರ ಜಯಂತಿ ; ಮಾಧ್ವರ ಮಧ್ವನವಮೀ ; ರಾಮಾನುಜರ ತಿರುನಕ್ಷತ್ರಗಳು ಕನಕದಾಸ ಜಯಂತಿ– ಮುಂತಾದುವು ಮುಖ್ಯವಾದವು. ಆಯಾಯ ಸಂಪ್ರದಾಯಸ್ಥರಿಗೆ ಮೀಸಲಾದ ಹಬ್ಬಗಳನ್ನು ಮುಕ್ತವಾಗಿ ಆಚರಿಸಲಾಗುವುದು. ಒಟ್ಟಿನಲ್ಲಿ ಕರ್ನಾಟಕದಲ್ಲಿ ಪ್ರತಿದಿನವೂ ಒಂದಲ್ಲ ಒಂದು ಹಬ್ಬ ಆಚರಿಸಲಾಗುವುದೆಂದು ಹೇಳಬಹುದು.

ಮನೆಮನೆಯಲ್ಲೂ ಉತ್ಸಾಹದಿಂದ ಆಚರಿಸಲಾಗುವ ವಿಶೇಷ ಉತ್ಸವಗಳನ್ನು ಹಬ್ಬವೆನ್ನಬಹುದು. ಮೂಲತಃ ಈ ಹಬ್ಬಗಳು ವಿಜಯೋತ್ಸವಗಳಾಗಿರಬೇಕು. ದುಷ್ಟಶಕ್ತಿಯನ್ನು ದಮನ ಮಾಡಿದುದರ ಜ್ಞಾಪಕಾರ್ಥವಾಗಿ ಇವು ಆಚರಣೆಯಲ್ಲಿ ಬಂದಿರಬೇಕು. ಕೆಲವೊಂದು ಹಬ್ಬಗಳು ಅಂಥ ವಿಜಯಕ್ಕೆ ಕಾರಣರಾದ ಮಹಾ ಪುರುಷರು ಹುಟ್ಟಿದ ದಿನಗಳಾಗಿವೆ. ಇವುಗಳಲ್ಲಿ ಕೆಲವು ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸಲಾಗುವುದು. ಕೆಲವು ಹಬ್ಬಗಳು ಆಯಾ ಸಂಪ್ರದಾಯದವರಿಗೆ ಮಾತ್ರ ಮೀಸಲು. ಇನ್ನು ಕೆಲವು ಅನುಕರಣೆಯಿಂದಲೂ

ಬಂದಿರಬಹುದು. ಅಂಥವುಗಳ ಹಿಂದಿನ ಐತಿಹ್ಯವನ್ನು ಹೇಳುವುದು ಕಷ್ಟ. ಆದರೆ ಎಲ್ಲ ಹಬ್ಬಗಳಿಗೂ ಸಾಮಾನ್ಯವಾಗಿ ಒಂದಲ್ಲ ಒಂದು ಐತಿಹ್ಯವಿದ್ದೇ ಇರುತ್ತದೆ; ಇವುಗಳಿಗೆ ಪುರಾಣ, ಸ್ಮೃತಿ ಇಲ್ಲವೆ ಸಂಪ್ರದಾಯಗಳು ಹಿನ್ನೆಲೆಯಾಗಿರುತ್ತವೆ. ಕೆಲವಾರು ವ್ರತಗಳೂ ಹಬ್ಬಗಳ ಸಾಲಿನಲ್ಲಿ ಸೇರಿಹೋಗಿವೆ. ಕರಗ, ರಥೋತ್ಸವ ಮುಂತಾದುವು ಊರಿಗೆ ಊರೇ ಆಚರಿಸಲಾಗುವ ಹಬ್ಬಗಳು. ಇತ್ತೀಚೆಗೆ ಸ್ವಾತಂತ್ರ್ಯ ದಿನೋತ್ಸವ, ಗಣರಾಜ್ಯೋತ್ಸವ, ಗಾಂಧೀ ಜಯಂತಿಯಂಥ ರಾಷ್ಟ್ರೀಯ ಹಬ್ಬಗಳೂ ಆಚರಣೆಯಲ್ಲಿವೆ.

ತಳಿರು ತೋರಣಗಳಿಂದ ಮನೆಯನ್ನು ಅಲಂಕರಿಸುವುದು ಹಬ್ಬದ ಕುರುಹು. ಆಗ ಎಳೆಬಟ್ಟಿನ ರಂಗವಲ್ಲಿಯಿಂದ ಮನೆಯನ್ನಲಂಕರಿಸಲಾಗುವುದು. ಮಾವಿನ ಹಸಿರೆಲೆಯ ತೋರಣ ಹಬ್ಬದ ತೋರ್ ಬೆರಳಿದ್ದಂತೆ. ಅಂಥ ಸಂದರ್ಭಗಳಲ್ಲಿ ಜನ ಮನೆಯನ್ನು ಸಾರಿಸಿ ಗುಡಿಸಿ ರಂಗುರಂಗಿನ ರಂಗವಲ್ಲಿಯಿಂದ ವಿಶೇಷವಾಗಿ ಸಿಂಗರಿಸುತ್ತಾರೆ. ಸಿಹಿ ಅಡಿಗೆಯಂತೂ ಆಗಲೇಬೇಕು. ಒಂದೊಂದು ಹಬ್ಬದಲ್ಲೂ ವಿಶಿಷ್ಟವಾದ ಪೂಜೆ ಇತ್ಯಾದಿ ಇದ್ದೇ ಇರುತ್ತದೆ. ಪೂಜೆಗಾಗಿ ಆರತಿಯನ್ನು ಸಿದ್ಧಪಡಿಸುವುದೂ ವಾಡಿಕೆ. ಹೀಗೆ ಹಬ್ಬದ ಆಚರಣೆಯಲ್ಲಿ ಕಲೋಪಾಸನೆಗೂ ಸೌಂದರ್ಯಪ್ರಜ್ಞೆಗೂ ರಸಿಕತೆಗೂ ಸಾಮಾಜಿಕ ಚೈತನ್ಯದ ಜಾಗೃತಿಗೂ ಸಾಕಷ್ಟು ಎಡೆ ದೊರೆತಿದೆ.

**ವಸಂತ ಋತುವಿನ ಹಬ್ಬಗಳು :** ಯುಗಾದಿ : ಚೈತ್ರಮಾಸದ ಮೊದಲದಿನ. ಚತುರ್ಮುಖ ಬ್ರಹ್ಮದೇವ ಶ್ವೇತವರಾಹಕಲ್ಪದಲ್ಲಿ ಸೃಷ್ಟಿಯನ್ನು ಆರಂಭಿಸಿದನೆಂದೂ ಆದುದರಿಂದ ನವವರ್ಷಾರಂಭದ ಗಣನೆಯನ್ನು ಅಂದಿನಿಂದ ಮಾಡಬೇಕೆಂದೂ ಐತಿಹ್ಯವಿದೆ. ಇದನ್ನು ಚಾಂದ್ರಮಾನದ ರೀತ್ಯಾ ಆಚರಿಸಲಾಗುವುದು. ಶಾಲಿವಾಹನ ಶಕೆಯ ಆರಂಭವನ್ನು ಅಂದಿನಿಂದ ಲೆಕ್ಕಹಾಕುತ್ತಾರೆ. ಈ ಹಬ್ಬದ ಆಚರಣೆಯಲ್ಲಿ ಮುಖ್ಯವಾದುದು ಬೇವು-ಬೆಲ್ಲ. ಅದನ್ನು ತಿನ್ನಲೇ ಬೇಕೆಂದು ವಿಧಿ. ಪ್ರಾತಃ ಕಾಲವೇ ಎದ್ದು ಅಭ್ಯಂಜನ ಸ್ನಾನಮಾಡಿ, ದೇವರನ್ನು ಪ್ರಾರ್ಥಿಸಿಕೊಳ್ಳಬೇಕು. ಅನಂತರ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯಬೇಕು. ಮಧ್ಯಾಹ್ನ ಬೇವು-ಬೆಲ್ಲವನ್ನು ಊಟಕ್ಕೆ ಮುಂಚೆ ಸೇವಿಸಬೇಕು. ಸಾಯಂಕಾಲ ಪಂಚಾಂಗ ಶ್ರವಣ ಮಾಡಬೇಕು. ಯುಗಾದಿಯಂದು ರೈತರು ಹೊಸದಾಗಿ ಸಿದ್ಧಪಡಿಸಿರುವ ಮರದ ನೇಗಿಲುಗಳನ್ನು ಪೂಜಿಸಿ, ಬಿತ್ತನೆಮಾಡುವ ಎಲ್ಲ ಧಾನ್ಯಗಳ ಮಾದರಿ ಬೆಳೆಯನ್ನು ಬಿತ್ತಿ ಪೂಜಿಸುತ್ತಾರೆ. ಈ ಮಾದರಿಬೆಳೆ ಹುಲುಸಾಗಿ ಬಂದರೆ ಆ ವರ್ಷದ ಬೆಳೆಯೂ ಚೆನ್ನಾಗಿ ಆಗುತ್ತದೆ ಎಂಬುದು ರೈತರ ನಂಬಿಕೆ. ಈ ಹಬ್ಬದ ಮಾರನೆಯ ದಿನವನ್ನು ಹಬ್ಬದ ಕರಿ ಎಂದು ಆಚರಿಸುತ್ತಾರೆ.

**ಸೌರಮಾನ ಯುಗಾದಿ :** ಸೌರಮಾನದ ರೀತ್ಯ ಆಚರಿಸುವರು, ಸೂರ್ಯ ಮೇಷ ಸಂಕ್ರಾಂತಿ ವ್ರತವನ್ನು ಪ್ರವೇಶಿಸಿದ ದಿನ ಯುಗಾದಿಯನ್ನು ಆಚರಿಸುತ್ತಾರೆ. ಇದರ ಆಚರಣೆ ಚಾಂದ್ರಮಾನ ಯುಗಾದಿಯಂತೆಯೇ.

ಮುಸಲ್ಮಾನರು ಮೊಹರಂನ ಹತ್ತನೆಯ ದಿನದಂದು ಚಾಂದ್ರಮಾನ ರೀತ್ಯ ಹಿಜರಿಯನ್ನು ಯುಗಾದಿಯಾಗಿ ಆಚರಿಸಿದರೆ, ಕ್ರಿಶ್ಚಿಯನ್ನರು ಜನವರಿ ಮೊದಲನೆಯ ತಾರೀಖಿನಂದು ಯುಗಾದಿಯನ್ನು (ನ್ಯೂ ಇಯರ್ಸ್ ಡೇ) ಆಚರಿಸುತ್ತಾರೆ. ಕರ್ನಾಟಕದಲ್ಲಿರುವ ಮಾರವಾಡಿಗಳು ದೀಪಾವಳಿಯ ದಿನ ಯುಗಾದಿಯನ್ನು ಆಚರಿಸುವರು.

**ರಾಮನವಮೀ :** ಚಾಂದ್ರಮಾನ ಸೌರಮಾನ ಭೇದದಿಂದ ಈ ಹಬ್ಬವನ್ನು ಬೇರೆ ಬೇರೆ ತಿಥಿಯಲ್ಲಿ ಆಚರಿಸುತ್ತಾರೆ. ಚೈತ್ರ ಶುಕ್ಲ ನವಮಿಯಂದು ರಾವಣನ ಸಂಹಾರಕ್ಕಾಗಿ ಪರಬ್ರಹ್ಮ ದಾಶರಥಿ ರಾಮನಾಗಿ ಅವತರಿಸಿದನೆಂದು ಈ ದಿನವನ್ನು ಇಂದಿಗೂ ವೈಭವದಿಂದ ಆಚರಿಸುತ್ತಾರೆ. ತಂಪಾದ ಪಾನಕ, ಕೋಸಂಬರಿ ಆ ದಿನದ ಪ್ರಾಶಸ್ತ್ಯ. ಹರಿಕಥೆ, ಸಂಗೀತ, ಕಲೆ ಮುಂತಾದವುಗಳಿಗೆ ಪೋಷಕವಾಗಿರುವ ಈ ನವಮಿಯನ್ನು ಪ್ರತಿ ಊರಿನಲ್ಲೂ ಅನೇಕ ದಿನಗಳವರೆಗೆ ಸಾಮೂಹಿಕವಾಗಿ ಆಚರಿಸುವುದನ್ನೂ ನೋಡಬಹುದು. ರಾಮ ಪಟ್ಟಾಭಿಷೇಕದೊಂದಿಗೆ ಈ ಹಬ್ಬ ಮುಕ್ತಾಯವಾಗುತ್ತದೆ.

**ವಸಂತ ನವರಾತ್ರಿ :** ಚೈತ್ರ ಶುಕ್ಲ ಪಾಡ್ಯಮಿಯಿಂದ ನವಮಿಯವರೆಗೆ ಒಂಬತ್ತು ದಿನಗಳನ್ನು ವಸಂತ ನವರಾತ್ರಿಯಾಗಿ ಕೆಲವರು ಆಚರಿಸುತ್ತಾರೆ.

**ಚಿತ್ರಾಪೂರ್ಣಿಮಾ :** ಇದನ್ನು ಕರಗದ ಹುಣ್ಣಿಮೆ, ದವನದ ಹುಣ್ಣಿಮೆ ಎಂದೂ ಕರೆಯುತ್ತಾರೆ. ಅನೇಕ ಊರುಗಳಲ್ಲಿ ಈ ದಿನದಂದು ಕರಗ ನಡೆಯುತ್ತದೆ. ಬೆಂಗಳೂರಿನ ಧರ್ಮರಾಯಸ್ವಾಮಿ ಕರಗ ಪ್ರಸಿದ್ಧವಾಗಿದೆ. ಇದು ರಥೋತ್ಸವಕ್ಕೆ ಹೆಸರಾಂತ ದಿನ. ದೊಡ್ಡ ದಿನ ಎಂದು ಪ್ರಸಿದ್ಧಿ. ಮುತ್ತೈದೆಯರಿಗೆ ಅರಿಸಿನ ಕುಂಕುಮ ಹೂವು ದವನ ಮುಂತಾದ ಮಂಗಳ ಹಾಗೂ ಶೃಂಗಾರದ್ರವ್ಯಗಳನ್ನು ದಾನ ಮಾಡಬೇಕೆಂದು ವಿಧಿ. ಚಿತ್ರಾನ್ನವನ್ನು ಊಟಮಾಡುವುದು ವಾಡಿಕೆ. ಇಂದಿನಿಂದ ವೈಶಾಖ ಸ್ನಾನ ಆರಂಭ.

ಚೈತ್ರ ಮಾಸದಲ್ಲಿ ಪಾನಕದಾನಕ್ಕೆ ವಿಶೇಷ ಮಹತ್ತ್ವವಿರುವುದರಿಂದ ಅನುಕೂಲವಿದ್ದವರು ವ್ಯಕ್ತಿಶಃ ಇಲ್ಲವೆ ಸಾಮೂಹಿಕವಾಗಿ ಅರವಟ್ಟಿಗೆಗಳನ್ನು ನಡೆಸುವುದು ಹಿಂದಿನಿಂದಲೂ ವಾಡಿಕೆಯಲ್ಲಿದೆ. (ನೋಡಿ- ಕರಗ)

**ಅಕ್ಷತೃತೀಯಾ :** ತ್ರೇತಾಯುಗ ಪ್ರಾರಂಭವಾದ ದಿನ. ದೊಡ್ಡ ದಿನ ಎಂದೂ ಪ್ರಸಿದ್ಧಿ. ಸ್ನಾನ ದಾನಾದಿಗಳಿಗೆ ಪ್ರಶಸ್ತವಾದುದು. ಪರಶುರಾಮ ಜಯಂತಿ, ಅನಂತ ಕಲ್ಪಾದಿಗಳು ಆಚರಿಸಲ್ಪಡುತ್ತವೆ.

**ವೈಶಾಖ ಶುಕ್ಲ ಪಂಚಮೀ :** ಷಣ್ಮತಸ್ಥಾಪನಾಚಾರ್ಯ ಶ್ರೀ ಶಂಕರಭಗವತ್ಪಾದರ ಜಯಂತಿಯ ದಿನವಿದು. ಇದೇ ತಿಂಗಳಿನಲ್ಲಿ ಭಾಷ್ಯಕಾರರ ತಿರುನಕ್ಷತ್ರವೂ ಬರುತ್ತದೆ.

**ವೈಶಾಖಶುಕ್ಲ ದಶಮೀ :** ವೆಂಕಟೇಶ ಕಲ್ಯಾಣ ಮಹೋತ್ಸವ ನಡೆದ ದಿನವೆಂದು ಪ್ರಸಿದ್ಧಿ. ವೆಂಕಟೇಶ ಮಹಾತ್ಮೆ ಪುರಾಣವನ್ನು ಹೇಳಿಸಿ ಕಲ್ಯಾಣ ಮಹೋತ್ಸವವನ್ನಾಚರಿಸುತ್ತಾರೆ. ವರ್ಧಮಾನ ತೀರ್ಥಂಕರರ ಕೇವಲಜ್ಞಾನ ಕಲ್ಯಾಣದ ದಿನವಾದುದರಿಂದ ಜೈನರಿಗೂ ಇದು ಪುಣ್ಯದಿನ.

**ನೃಸಿಂಹ ಜಯಂತಿ :** ವೈಶಾಖ ಶುಕ್ಲ ಚತುರ್ದಶೀ. ಮಹಾವಿಷ್ಣು ಪ್ರಹ್ಲಾದನ ತಂದೆಯಾದ ಹಿರಣ್ಯಕಶಿಪುವಿನ ಸಂಹಾರಕ್ಕಾಗಿ ಕಂಭದಿಂದ ನೃಸಿಂಹನಾಗಿ ಅವತರಿಸಿದ ದಿನ. ಈ ದಿವಸ ಸಾಧ್ಯವಿದ್ದವರು ಉಪವಾಸ ಮಾಡಿ ವ್ರತವನ್ನಾಚರಿಸುತ್ತಾರೆ. ಸಾಧ್ಯವಿಲ್ಲವಾದ ಪಕ್ಷಕ್ಕೆ ಒಂದು ಹೊತ್ತು ಮಾತ್ರ ಊಟ ಮಾಡಬೇಕೆಂದು ವಿಧಿ. ಶೈವರು ಲಿಂಗವ್ರತವನ್ನೂ ಓಂಕಾರೇಶ್ವರನ ಪೂಜೆಯನ್ನೂ ಮಾಡುತ್ತಾರೆ.

**ವೈಶಾಖೀ ಪೂರ್ಣಿಮಾ :** ಉದುಕುಂಭದಾನಕ್ಕೆ ಶ್ರೇಷ್ಠವಾದ ದಿನ. ಯಥಾಶಕ್ತಿ ತಂಪಾದ ಪಾನೀಯವನ್ನು ದಾನ ಮಾಡಬೇಕೆಂದು ವಿಧಿ. ವ್ಯಾಸಪೂರ್ಣಿಮಾ ಎಂದು ಪ್ರಸಿದ್ಧಿ. ಅನೇಕ ಕಡೆಗಳಲ್ಲಿ ಕರಗ ಹಾಗೂ ರಥೋತ್ಸವಗಳು ನಡೆಯುತ್ತವೆ.

ವೈಶಾಖಮಾಸ ಸ್ನಾನಕ್ಕೆ ಪ್ರಶಸ್ತವಾದ ಮಾಸ. ಬಿಸಿಲಿನಿಂದ ಬಾಯಾರಿ ಬರುವ ಮಾನವರಿಗೂ ಪ್ರಾಣಿಗಳಿಗೂ ತಂಪಾದ ಪಾನೀಯವನ್ನು ದಾನ ಮಾಡಲು ಚೈತ್ರದಂತೆ ವೈಶಾಖವೂ ಉಚಿತಕಾಲವೆಂದು ನಂಬಿಕೆ. ಆದುದರಿಂದ ಅನುಕೂಲಸ್ಥರು ಅರವಟ್ಟಿಗೆಗಳನ್ನು ನಡೆಸುತ್ತಾರೆ.

**ಗ್ರೀಷ್ಮಋತುವಿನ ಹಬ್ಬಗಳು :** ಕಾರುಹುಣ್ಣಿಮೆ : ಜ್ಯೇಷ್ಠ ಮಾಸದ ಹುಣ್ಣಿಮೆ. ಅಚಲವಾದ ಮರ್ತ್ಯಪ್ರೇಮ ಕಾಲಮೃತ್ಯುವನ್ನು ಗೆದ್ದ ಮಹೋತ್ಸವದ ದಿನ. ಹೆಣ್ಣು ಮಕ್ಕಳಿಗೆ ಇದು ಮುಖ್ಯವಾದ ಹಬ್ಬ. ಸಾವಿತ್ರಿ ಸೌಭಾಗ್ಯವನ್ನು ಪಡೆದ ದಿನ. ಇಂದು ಆಲದ ಮರಕ್ಕೆ ಪೂಜೆ ಸಲ್ಲಿಸಬೇಕೆಂದು ವಿಧಿ. ಕೆಲವರು ಉಪವಾಸವನ್ನು ಮಾಡಿ ಮಾರನೆಯ ದಿನ ಪಾರಣೆ ಮಾಡುತ್ತಾರೆ.

**ಅಮಾವಾಸ್ಯೆ :** ಇದನ್ನು ಮಣ್ಣೆತ್ತಿನ ಅಮಾವಾಸ್ಯೆ ಎಂದು ಕರೆಯುತ್ತಾರೆ. ಇದು ರೈತರ ಹಬ್ಬ. ಶ್ರಮದಿಂದ ಉತ್ತು, ಬಿತ್ತಿ, ಲೋಕಕ್ಕೆ ಅನ್ನವನ್ನು ಕೊಡುವ ಬಸವನ ಬಗ್ಗೆ ಕೃತಜ್ಞತೆಯನ್ನು ಸೂಚಿಸುವ ದಿನ. ಚಕ್ಕುಲಿಯನ್ನು ಮಾಡಿ ಬಸವನಿಗೆ ನೈವೇದ್ಯ ಮಾಡುತ್ತಾರೆ. ಮಣ್ಣಿನಲ್ಲಿ ಮಾಡಿದ ಬಸವನಿಗೆ ಇಂದು ಪೂಜೆ ಮಾಡಲೇಬೇಕೆಂದು ವಿಧಿ.

**ದಕ್ಷಿಣಾಯನ ಪುಣ್ಯಕಾಲ :** ಆಷಾಢಮಾಸದಲ್ಲಿಯೇ ದಕ್ಷಿಣಾಯನ ಪುಣ್ಯಕಾಲ ಬರುತ್ತದೆ. ಸೂರ್ಯ ಮಿಥುನರಾಶಿಯನ್ನು ಬಿಟ್ಟು ಕರ್ಕಾಟಕ ರಾಶಿಯಲ್ಲಿ ಪ್ರವೇಶ ಮಾಡುವ ಕಾಲವನ್ನು ದಕ್ಷಿಣಾಯನ ಪುಣ್ಯಕಾಲವೆಂದು ಕರೆಯುತ್ತಾರೆ. ಪುಣ್ಯಕಾಲ ಇಪ್ಪತ್ತು ಘಳಿಗೆ ಪೂರ್ವದಲ್ಲೇ ಪ್ರಾರಂಭವಾಗಿರುತ್ತದೆಂದು ಸ್ಮೃತಿವಾಕ್ಯ. ಆ ದಿವಸ ಸಕಲ ಜಲಾಶಯಗಳಲ್ಲೂ ಗಂಗಾದೇವಿಯ ಸಾನಿಧ್ಯವಿರುವುದರಿಂದ ಸ್ನಾನಕ್ಕೆ ಮಹತ್ತ್ವ. ಗಂಗಾಪೂಜೆಮಾಡಿ ನೈವೇದ್ಯವನ್ನು ಕೊಡುವುದೂ ಪ್ರವಾಹದಲ್ಲಿ ದೀಪದಾನ ಮಾಡುವುದೂ ವಾಡಿಕೆ. ಪಿತೃ ತರ್ಪಣಕ್ಕೆ ಪ್ರಾಶಸ್ತ್ಯ.

**ಆಷಾಢ ಬಹುಳ ಅಮಾವಾಸ್ಯೆ :** ಈ ದಿನ ಜ್ಯೋತಿರ್ಭೀಮೇಶ್ವರ ವ್ರತವನ್ನು ಆಚರಿಸುತ್ತಾರೆ. ಬ್ರಾಹ್ಮಣ ಕನ್ಯೆಯೋರ್ವಳನ್ನು ಹಣದಾಸೆಗೆ ಕಡುಬಡವರಾದ ತಂದೆತಾಯಿಗಳು ಮೃತರಾಜಕುಮಾರನಿಗೆ ಕೊಟ್ಟು ಧಾರೆಯೆರೆಯುತ್ತಾರೆ. ಆಗ ಆ ಕನ್ಯೆ ತನ್ನ ದೃಢವಾದ ನಿಲವಿನಿಂದಲೂ ಭಕ್ತಿಯಿಂದಲೂ ಉಮಾಮಹೇಶ್ವರರನ್ನು ಪೂಜಿಸಿ ಅವರ ವರಪ್ರಸಾದದಿಂದ ಶಾಶ್ವತವಾದ ಸೌಮಾಂಗಲ್ಯ ಭಾಗ್ಯವನ್ನು ಪಡೆದಳೆಂಬ ಐತಿಹ್ಯ ಈ ವ್ರತಾಚರಣೆಯ ಹಿನ್ನೆಲೆಯಾಗಿದೆ. ದೀಪಸ್ತಂಭದಲ್ಲಿ ಉಮಾಮಹೇಶ್ವರರನ್ನು ಪೂಜಿಸುವುದು ವಿಧಿ.

**ಆಡಿಶುಕ್ರವಾರ :** ಕರ್ಕಾಟಕ ಮಾಸದಲ್ಲಿ ಬರುವ ಶುಕ್ರವಾರಗಳಲ್ಲಿ ಲಕ್ಷ್ಮೀ ಪೂಜೆಯನ್ನು ಮಾಡುವ ಪದ್ಧತಿ ದ್ರಾವಿಡ ಸಂಪ್ರದಾಯಸ್ಥರಲ್ಲಿದೆ. ಆಡಿ ಎಂಬುದು ಆಷಾಢದ ತಮಿಳು ರೂಪ.

**ಆಷಾಢ ಶುಕ್ಲ ಏಕಾದಶಿ :** ಇದಕ್ಕೆ ಗಾಳಿಪಟದ ಹಬ್ಬವೆಂದೂ ಹೆಸರು. ಗಾಳಿ ಪಟವನ್ನು ಹಾರಿಸುವುದು ರೂಢಿ. ಪ್ರಥಮೈಕಾದಶೀ ಎಂದೂ ಪ್ರಸಿದ್ಧಿ. ಮಹಾ ವಿಷ್ಣು ಮಲಗುವ ದಿನ. ಇಂದಿನಿಂದ ಚಾತುರ್ಮಾಸ್ಯ ವ್ರತಾರಂಭ.

**ವರ್ಷಋತುವಿನ ಹಬ್ಬಗಳು :** ಲಕ್ಷ್ಮೀಪೂಜೆ : ಚೈತ್ರಶುಕ್ಲ ತದಿಗೆಯಿಂದ ಮೂರು ತದಿಗೆಗಳು ವಸಂತ ಗೌರೀಪೂಜೆಗೆ ಹೇಗೆ ಪ್ರಶಸ್ತವೋ ಹಾಗೆಯೇ ಶ್ರಾವಣ ಮಾಸದ ಶುಕ್ರವಾರಗಳೆಲ್ಲವೂ ಲಕ್ಷ್ಮೀಪೂಜೆಗೆ ಪ್ರಶಸ್ತ. ವಿಶೇಷವಾಗಿ ಹುಣ್ಣಿಮೆಯ ಹಿಂದಿನ ಶುಕ್ರವಾರ ವರಮಹಾಲಕ್ಷ್ಮಿಯ ಪೂಜೆಗೆ ಮೀಸಲು. ಗೋಧೂಳಿಯ ಲಗ್ನದಲ್ಲಿ ಲಕ್ಷ್ಮೀಪೂಜೆ

ಮಾಡಬೇಕೆಂದು ವಿಧಿ. ತಳಿರುತೋರಣ ಬಾಳೆಕಂಬ ಮುಂತಾದುವುಗಳಿಂದ ಅಲಂಕೃತವಾದ ಮಂಟಪದ ಮಧ್ಯದಲ್ಲಿ ರತ್ನಾಭರಣಗಳಿಂದಲೂ ಮಾಂಗಲ್ಯದ್ರವ್ಯಗಳಿಂದಲೂ ಸಿಂಗರಿಸಿರುವ ಲಕ್ಷ್ಮಿಯ ಪ್ರತಿಕೃತಿಯನ್ನು ಇಟ್ಟು ಷೋಡಶೋಪಚಾರಗಳಿಂದ ಪೂಜಿಸಿ ಮರದ ಬಾಗಿನ ಕೊಟ್ಟು ಮುತ್ತೈದೆಯರಿಗೆ (ದಂಪತಿಗಳಾದರೆ ಉತ್ತಮ) ಭೋಜನ ಮಾಡಿಸುತ್ತಾರೆ. ಕಲಶದಲ್ಲಿ ಲಕ್ಷ್ಮಿಯನ್ನು ಆವಾಹನ ಮಾಡಿ ಪೂಜಿಸುವ ಪದ್ಧತಿಯೂ ಇದೆ. ಆ ದಿನ ಮಹಿಳೆಯರು ಸಂಪತ್ ಶುಕ್ರವಾರದ ಹಾಡು ಎಂಬ ವ್ರತಕಥೆಯನ್ನು ಹೇಳುವ ವಾಡಿಕೆಯೂ ಇದೆ.

**ಶ್ರಾವಣ ಶನಿವಾರಗಳು :** ತಿರುಪತಿ ಶ್ರೀನಿವಾಸನಿಗೆ ಮೀಸಲು ವಾರಗಳಿವು. ಆ ದೇವರ ಒಕ್ಕಲು ಆ ದಿನಗಳಲ್ಲಿ ತ್ರಿಪುಂಡ್ರವನ್ನು ಧರಿಸಿ, ವೆಂಕಟೇಶಾಯ ಮಂಗಳಂ ಎಂದು ಹೇಳುತ್ತ ಐದು ಮನೆಗಳಿಗಾದರೂ ಹೋಗಿ ಭಿಕ್ಷೆ ತರಬೇಕೆಂದೂ ಶ್ರೀನಿವಾಸನ ಪ್ರೀತ್ಯರ್ಥ ಯಥಾಶಕ್ತಿ ದಾನ, ಸಂತರ್ಪಣೆಗಳನ್ನು ಮಾಡಬೇಕೆಂದೂ ನಿಯಮ. ಬಡವ ಬಲ್ಲಿದರೆಲ್ಲರಿಗೂ ಈ ವಿಧಿ ಇದೆ. ಇದನ್ನು ಸಿರಿಸಂಪತ್‌ಪ್ರದ ಶನಿವಾರವೆಂದು ತಿಳಿದು ತಂಬಿಟ್ಟಿನ ತುಪ್ಪದ ದೀಪವನ್ನು ಹಚ್ಚಿಡುತ್ತಾರೆ. ಅಂಬಲಿ ಊಟಕ್ಕೆ ಪ್ರಾಶಸ್ತ್ಯ. ಈ ದಿನಗಳಲ್ಲಿ ತಿರುಪತಿಗೆ ಶ್ರೀನಿವಾಸನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರೆ ಹೋಗುತ್ತಾರೆ.

**ಮಂಗಳಗೌರೀ :** ಶ್ರಾವಣ ಮಾಸದಲ್ಲಿ ಪ್ರತಿ ಮಂಗಳವಾರವೂ ಕಲಶದಲ್ಲಿ ಮಂಗಳಗೌರಿಯನ್ನು ಆವಾಹನ ಮಾಡಿ ಸ್ತ್ರೀಯರು ಷೋಡಶೋಪಚಾರಗಳಿಂದ ಪೂಜೆ ಮಾಡುತ್ತಾರೆ.

**ನಾಗರಚೌತಿ :** ಶ್ರಾವಣ ಶುಕ್ಲ ಚೌತಿಯ ದಿನ ಬೆಳಗ್ಗೆ ಸ್ತ್ರೀಯರು ತಣ್ಣೀರಿನಲ್ಲಿ ಸ್ನಾನ ಮಾಡಿ ಹುತ್ತಕ್ಕೂ ನಾಗರಕಲ್ಲಿಗೂ ಹಾಲು ನೀರಿನಿಂದ ಅಭಿಷೇಕ ಮಾಡಿ ಹಸಿ ತಂಬಿಟ್ಟು ಚಿಗಳಿಗಳಿಂದ ತನಿ ಎರೆಯುತ್ತಾರೆ. ಮನೆಯ ಒಳಗೂ ಅಂಗಳದಲ್ಲೂ ದೊಡ್ಡ ದೊಡ್ಡ ನಾಗರಹಾವಿನ ಕುಂಡಲಿಯನ್ನು ರಂಗವಲ್ಲಿಯಲ್ಲಿ ಬರೆಯುವುದೂ ಪೂಜಿಸುವುದೂ ವಾಡಿಕೆ.

**ಪಂಚಮೀ :** ನಾಗಪಂಚಮೀ ಅಥವಾ ಗರುಡಪಂಚಮೀ ಎಂದು ಈಗ ಪ್ರಸಿದ್ಧಿ. ಸಹೋದರರ ಬೆನ್ನುಹುರಿಗೆ ದೂರ್ವೆಯಿಂದ ಹಾಲು ನೀರು ಪ್ರೋಕ್ಷಿಸಿ, ಪೂಜಿಸಿ ಅವರಿಗೆ ತಂಬಿಟ್ಟಿನ ಬಾಗಿಣವನ್ನು ಕೊಡುತ್ತಾರೆ. ಬಂಧುಬಾಂಧವರಿಗೂ ಇಷ್ಟಮಿತ್ರರಿಗೂ ತಂಬಿಟ್ಟು ಕೊಡುವುದು ರೂಢಿಯಲ್ಲಿದೆ. ಸಹೋದರನ ಸುಖಸಂತೋಷಕ್ಕೂ ದೀರ್ಘ ಜೀವನಕ್ಕೂ ಹೆಣ್ಣುಮಕ್ಕಳು ಪ್ರಾರ್ಥಿಸಿಕೊಳ್ಳುತ್ತಾರೆ. ಇದರಿಂದ ಅಪಮೃತ್ಯು ಪರಿಹಾರವಾಗುವುದೆಂದು ನಂಬಿಕೆ. ಬಾಗಿಲಿನಲ್ಲಿ ಅರಿಸಿನದಿಂದ ನಾಗರಹಾವಿನ ಚಿತ್ರವನ್ನು ಬರೆದು ಹಳದಿ ಗೆಜ್ಜೆವಸ್ತ್ರದಿಂದ ಪೂಜಿಸುತ್ತಾರೆ.

**ಸಿರಿಯಾಳ ಷಷ್ಠೀ :** ಮಣ್ಣಿನಲ್ಲಿ ಸಿರಿಯಾಳನನ್ನು (ವಿರುದ್ಧ ದಿಕ್ಕಿನಲ್ಲಿ ತಲೆಮಾಡಿ ಮಲಗಿರುವ ಎರಡು ಹಸುಳೆಗಳ ಪ್ರತಿಕೃತಿ) ಮಾಡಿ ಷೋಡಶೋಪಚಾರಗಳಿಂದ ಪೂಜಿಸಿ ಮೊಸರನ್ನವನ್ನೂ ಕಡುಬನ್ನೂ ನೈವೇದ್ಯ ಮಾಡುತ್ತಾರೆ. ಅನಂತರ ಚಿಕ್ಕ ಮಕ್ಕಳಿರುವ ಮನೆಗೆ ಬುತ್ತಿ ಮತ್ತು ಕಡುಬು ಬೀರಿ ಬರುವುದು ವಾಡಿಕೆ.

**ಶ್ರಾವಣೀ :** ಶ್ರಾವಣ ಮಾಸದಲ್ಲಿ ಹುಣ್ಣಿಮೆಯ ದಿನ ಉಪಾಕರ್ಮವನ್ನು (ನೋಡಿ–ಉಪಾಕರ್ಮ) ಆಚರಿಸಲಾಗುವುದು. ಯಜುರ್ವೇದಿಗಳಿಗೆ ಹುಣ್ಣಿಮೆ ತಿಥಿಯೂ ಋಗ್ವೇದಿಗಳಿಗೆ ಶ್ರವಣ ನಕ್ಷತ್ರವೂ ಮುಖ್ಯವಾಗಿರುವುದರಿಂದ ಒಮ್ಮೊಮ್ಮೆ ಈ ಉಪಾಕರ್ಮದ ಹಬ್ಬ ಹಿಂದೆ ಮುಂದೆ ಬರುತ್ತದೆ. ಸಾಮವೇದಿಗಳು ಇದನ್ನು ಭಾದ್ರಪದ ಮಾಸದಲ್ಲಿ ಹಸ್ತಾನಕ್ಷತ್ರವಿರುವ ದಿನ ಆಚರಿಸುತ್ತಾರೆ. ವೇದೋಕ್ತ ಕರ್ಮಗಳಲ್ಲಿ ವರ್ಷದಲ್ಲಾಗಿರುವ ಲೋಪದೋಷಗಳ ನಿವಾರಣಾರ್ಥವಾಗಿ ಮಾಡುವ ಪ್ರಾಯಶ್ಚಿತ್ತ ಕರ್ಮವೆಂತಲೂ ನಂಬಿಕೆ. ನೂತನ ಯಜ್ಞೋಪವೀತವನ್ನು ಧರಿಸಿ ದೇವಋಷಿಪಿತೃಗಳಿಗೆ ತರ್ಪಣ ಕೊಡುವುದು ಪದ್ಧತಿ.

ಈ ಹಬ್ಬವನ್ನು ರಾಖೀ ಅಥವಾ ರಕ್ಷಾಬಂಧನದ ಹಬ್ಬವೆಂದೂ ಆಚರಿಸುತ್ತಾರೆ. ಇದು ಭ್ರಾತೃಭಾವ ವಿಕಾಸಕ್ಕೆ ಪೋಷಕವಾದ ಹಬ್ಬ.

**ಗಾಯತ್ರೀಪ್ರತಿಪದಾ :** ಉಪಾಕರ್ಮದ ಮರುದಿವಸ ಸಹಸ್ರ ಗಾಯತ್ರಿಯನ್ನು ಮಾಡಬೇಕೆಂಬ ವಿಧಿ ಇದೆ.

**ಕೃಷ್ಣ ಜನ್ಮಾಷ್ಟಮೀ :** ದುಷ್ಟಶಕ್ತಿಗಳ ದಮನ ಮತ್ತು ಶಿಷ್ಟರ ಪೋಷಣಾ ಕಾರ್ಯದಲ್ಲಿ ನಿರತನಾದ ಅರ್ಜುನನಿಗೆ ಗೀತೆಯನ್ನು ಉಪದೇಶಿಸಿದ ಮಹಾನುಭಾವ ಶ್ರೀಕೃಷ್ಣನ ಜನ್ಮದಿನ. ಚಾಂದ್ರ, ಸೌರಮಾನಗಳ ರೀತ್ಯಾ ಈ ಹಬ್ಬವನ್ನು ಬೇರೆ ಬೇರೆ ದಿನಗಳಲ್ಲಿ ಆಚರಿಸುತ್ತಾರೆ. ಶ್ರಾವಣ ಬಹುಳ ಅಷ್ಟಮೀ ಮಧ್ಯರಾತ್ರಿ ಚಂದ್ರೋದಯ ಕಾಲದಲ್ಲಿ ಅರ್ಘ್ಯವನ್ನು ಕೊಡಬೇಕೆಂಬುದು ವಿಧಿ. ಅದಕ್ಕೆ ಮುಂಚೆ ಶ್ರೀಕೃಷ್ಣ ಮತ್ತು ಗೋಕುಲದ ಪ್ರತಿಮೆಗಳನ್ನು ಮಣ್ಣಿನಲ್ಲಿ ಮಾಡಿಟ್ಟು ಷೋಡಶೋಪಚಾರ ಪೂಜೆಯನ್ನು ಮಾಡುತ್ತಾರೆ. ಆ ದಿನ ಬಗೆಬಗೆಯ ತಿಂಡಿ ತಿನುಸುಗಳನ್ನು ಮಾಡಿ ಕೃಷ್ಣನಿಗೆ ನಿವೇದಿಸುತ್ತಾರೆ.

ರೋಹಿಣಿ ನಕ್ಷತ್ರ ಇರುವ ದಿನ ಈ ಹಬ್ಬವನ್ನು ಆಚರಿಸಿದರೆ, ಅದಕ್ಕೆ ಕೃಷ್ಣ ಜಯಂತೀ ಎಂದು ಹೆಸರಾಗುತ್ತದೆ. ಪೂಜೆ ರಾತ್ರಿ ವೇಳೆ ನಡೆಯುವುದರಿಂದ ಆ ದಿನ ಉಪವಾಸವಿರುವುದು ಸೂಕ್ತ. ತಿಥಿಭಾಂತೇಚ ಪಾರಣಂ ಎಂಬ ವಿಧಿವಾಕ್ಯಕ್ಕೆ ಅರ್ಥ ಮಾಡುವಲ್ಲಿ ವ್ಯತ್ಯಾಸವಿರುವ ಕಾರಣ ಪಾರಣೆಯ ವಿಷಯದಲ್ಲೂ ಮತಭೇದ ಕಂಡುಬರುತ್ತದೆ.

**ಸ್ವರ್ಣಗೌರೀ :** ಭಾದ್ರಪದ ಶುಕ್ಲತದಿಗೆ ಹೆಣ್ಣುಮಕ್ಕಳಿಗೆ ಸಂಭ್ರಮದ ಹಬ್ಬ. ಇದೇ ಗೌರೀ ತದಿಗೆ. ಇದು ಸೌಭಾಗ್ಯಪ್ರದವಾದ ವ್ರತ. ದೊಡ್ಡಗೌರೀ ಮುಂತಾದ ಹೆಸರಿನಿಂದ ಪ್ರಸಿದ್ಧವಿದೆ. ತಳಿರುತೋರಣಗಳಿಂದ ಅಲಂಕೃತವಾದ ಮಂಟಪದ ಮಧ್ಯದಲ್ಲಿ ಗೌರಿಯ ಪ್ರತಿಮೆಯನ್ನು ಅಥವಾ ಪ್ರತಿಕೃತಿಯನ್ನು ಇಟ್ಟು ಷೋಡಶೋಪಚಾರಗಳಿಂದ ಪೂಜಿಸಿ ವ್ರತಕಥೆಯನ್ನು ಕೇಳುತ್ತಾರೆ. ಮತ್ತು ಮೊರದ ಬಾಗಿನವನ್ನು ಕೊಡುತ್ತಾರೆ. ಅಂಥ ಬಾಗಿನವನ್ನು ಹೊತ್ತು ಸಂಭ್ರಮದಿಂದ ಓಡಾಡುವ ಸುಮಂಗಲಿಯರನ್ನು ಅಂದಿನಿಂದ ಒಂದುವಾರ ಕಾಲ ನೋಡಬಹುದು.

**ಗಣೇಶಚತುರ್ಥೀ :** ವಿಘ್ನನಿವಾರಕ ವಿನಾಯಕನ ಹಬ್ಬ. ಸಿದ್ಧಿವಿನಾಯಕ ವಿದ್ಯಾಗಣಪತಿ ಮುಂತಾದ ಹೆಸರಿನಿಂದ ಇವನನ್ನು ಪೂಜಿಸುತ್ತಾರೆ. ಪ್ರತಿ ಮನೆಯಲ್ಲೂ, ಭಕ್ತಿಯ ಜೊತೆಗೆ ಕಲಾವಂತಿಕೆಯನ್ನು ಈ ಹಬ್ಬದಲ್ಲಿ ತೋರಿಸುತ್ತಾರೆ. ಮಣ್ಣಿನಲ್ಲಿ ರಂಗುರಂಗಿನ ಬಣ್ಣದಿಂದ ತಯಾರಾಗಿರುವ ಗಣಪತಿಯನ್ನು ಅಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಿ, ಪೂಜಿಸುತ್ತಾರೆ. ಸಾಮೂಹಿಕವಾಗಿಯೂ ಈ ಹಬ್ಬವನ್ನು ಆಚರಿಸುತ್ತಾರೆ. ಕಡಬು ಗಣಪತಿಗೆ ಪ್ರಿಯವಾದ ಭಕ್ಷ್ಯ.

ಭಾದ್ರಪದಶುಕ್ಲ ಚತುರ್ಥೀ ದಿನ ಈ ಹಬ್ಬ ಬರುತ್ತದೆ. ಆ ದಿನ ಚಂದ್ರನನ್ನು ನೋಡಬಾರದೆಂಬ ನಿಯಮ. ಅಕಸ್ಮಾತ್ ನೋಡಿದರೆ ದೋಷಪರಿಹಾರಕ್ಕಾಗಿ ಸ್ಯಮಂತಕೋಪಾಖ್ಯಾನವನ್ನು ಕೇಳಲೇಬೇಕೆಂದು ವಿಧಿ. ಅದೂ ಸಾಧ್ಯವಿಲ್ಲದಿದ್ದಾಗ

*ಸಿಂಹಃ ಪ್ರಸೇನಮವಧೀತ್ ಸಿಂಹೋ ಜಾಂಬವತಾ ಹತಃ*
*ಸುಕುಮಾರಕ ಮಾರೋದೀಃ ತವ ಹ್ಯೇಷ ಸ್ಯಮಂತಕಃ*

ಎಂಬ ಶ್ಲೋಕವನ್ನಾದರೂ ಹೇಳಿಕೊಳ್ಳಬೇಕೆನ್ನುತ್ತಾರೆ. ಕನಿಷ್ಠ ಪಕ್ಷ ಇಪ್ಪತ್ತೊಂದು ಮನೆಗಳಿಗಾದರೂ ಹೋಗಿ ಗಣೇಶನನ್ನು ನೋಡಿ ನಮಸ್ಕರಿಸಬೇಕೆಂದು ನಿಯಮವಿರುವ ಕಾರಣ ಬಾಲಕರು ತಂಡೋಪತಂಡವಾಗಿ ಮನೆಮನೆಗೂ ಹೋಗಿಬರುವ ದೃಶ್ಯ ಮನಮೋಹಕವಾಗಿರುತ್ತದೆ. ಶುಭಮುಹೂರ್ತದಲ್ಲಿ ಗಣೇಶನ ವಿಸರ್ಜನೆ ನಡೆಯುತ್ತದೆ. ಆಗ ನಡೆಯುವ ಗಣೇಶನ ಮೆರವಣಿಗೆ ವರ್ಣಮಯವಾಗಿರುತ್ತದೆ.

ಹಿಂದುಗಳಲ್ಲಿ ಪ್ರತಿಯೊಂದು ಶುಭಕಾರ್ಯವೂ ವಿಘ್ನೇಶ್ವರನ ಪೂಜೆಯೊಂದಿಗೆ ಪ್ರಾರಂಭವಾಗುತ್ತದೆ.

**ಋಷಿಪಂಚಮೀ :** ಸ್ತ್ರೀಯರು ಋತುದೋಷ ಪರಿಹಾರಕ್ಕಾಗಿ ಸಪ್ತಋಷಿಗಳನ್ನು ಪೂಜಿಸಬೇಕೆಂಬ ವಿಧಿಗನುಸಾರವಾಗಿ ಭಾದ್ರಪದ ಶುಕ್ಲಪಂಚಮಿಯಂದು ಈ ವ್ರತವನ್ನು ಆಚರಿಸುತ್ತಾರೆ. ಆ ದಿನ ಸಾಮಾನ್ಯವಾಗಿ ಅವರು ಊಟ ಮಾಡುವುದಿಲ್ಲ. ತಾಯಿಯ ಪರವಾಗಿ ಗಂಡು ಮಕ್ಕಳು ಈ ವ್ರತವನ್ನಾಚರಿಸುವುದುಂಟು. ಸಪ್ತಋಷಿಗಳನ್ನು ಏಳು ವರ್ಷಗಳ ಕಾಲ ಪೂಜಿಸಿ, ಹವನ ಹೋಮಾದಿಗಳಿಂದ ಉದ್ಯಾಪನ ಮಾಡಿ ಯಥಾಶಕ್ತಿ ದಾನಾದಿಗಳನ್ನು ಕೊಡಬೇಕೆಂಬುದು ನಿಯಮ. ಅರುಂಧತೀ ಬಾಗಿನವನ್ನು ಕೊಡುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಒಂದು ವ್ರತಕಥೆಯೂ ಇದೆ.

**ಅನಂತಪದ್ಮನಾಭ ಪೂಜೆ :** ಭಾದ್ರಪದ ಶುಕ್ಲ ಚತುರ್ಥೀ ದಿವಸ ಅನಂತಪದ್ಮನಾಭಸ್ವಾಮಿಯನ್ನು ಪೂರ್ಣಕಲಶದಲ್ಲಿ ಆವಾಹನ ಮಾಡಿ ಷೋಡಶೋಪಚಾರಗಳಿಂದ ಪೂಜಿಸಿ ಅನಂತನ ದಾರವನ್ನು ದಾನ ಮಾಡಿ ಧರಿಸಬೇಕೆಂದು ನಿಯಮ. ಇದಕ್ಕೂ ವ್ರತಕಥೆ ಇದೆ.

**ಅನಂತನ ಹುಣ್ಣಿಮೆ :** ಭಾದ್ರಪದ ಶುಕ್ಲ ಪೂರ್ಣಿಮಾ ದಿನಕ್ಕೆ ಈ ಹೆಸರಿದೆ. ಉಮಾಮಹೇಶ್ವರ ವ್ರತವನ್ನು ಆಚರಿಸುವುದು ಇಂದೇ. ಅನೇಕ ಕಡೆಗಳಲ್ಲಿ ಈ ದಿನ ರಥೋತ್ಸವ ನಡೆಯುತ್ತದೆ.

**ಭಾದ್ರಪದ ಬಹುಳ :** ಪಿತೃಪೂಜೆಗೆ ಮೀಸಲು. ಈ ಹದಿನೈದು ದಿನಗಳಲ್ಲಿ ಮಾಡುವ ಶ್ರಾದ್ಧಕರ್ಮಕ್ಕೆ ಪಕ್ಷ ಎಂದು ಹೆಸರು. ಮುಖ್ಯವಾಗಿ ಮಹಾಭರಣಿ, ಮಧ್ಯಾಷ್ಟಮೀ, ಅವಿಧವಾ ನವಮೀ, ಘಾತ ಚತುರ್ದಶೀ ಮತ್ತು ಮಹಾಲಯ ಅಮಾವಾಸ್ಯೆ–ಈ ದಿನಗಳು ಈ ಪಕ್ಷದಲ್ಲಿ ಮುಖ್ಯವಾದುವೆಂದು ಪ್ರಸಿದ್ಧಿ.

**ಶರದೃತುವಿನ ಹಬ್ಬಗಳು :** ನವರಾತ್ರಿ : ಆಶ್ವೀಜ ಶುಕ್ಲ ಪಾಡ್ಯಮೀ ದಿನದಿಂದ ದಶಮಿಯವರೆಗೆ ಬರುವ ದಿನಗಳನ್ನು ನವರಾತ್ರಿ ಅಥವಾ ದಶಹರಾ ಎಂದೂ ಶರನ್ನವರಾತ್ರಿ ಎಂದೂ ಕರೆಯುವರು. ನವರಾತ್ರಿ ಹಬ್ಬದ ಸಾಲು. ಈ ಹಬ್ಬವನ್ನು ಮೂಲಾನಕ್ಷತ್ರ ಇರುವ ದಿನದಿಂದ ಶ್ರವಣ ನಕ್ಷತ್ರ ಇರುವವರೆಗೂ ವಿಶೇಷವಾಗಿ ಆಚರಿಸಲಾಗುವುದು. ನವರಾತ್ರಿ ನಾಡಹಬ್ಬ. ಇದಕ್ಕೆ ವಿಜಯನಗರದ ವೈಭವದ ಹಿನ್ನೆಲೆಯೂ ಇದೆ. ಮನೆಮನೆಯಲ್ಲೂ ಗೊಂಬೆಗಳನ್ನು ಸಿಂಗರಿಸಿ ಒಪ್ಪವಾಗಿ ಕೂಡಿಸಿ ಪೂಜಿಸುತ್ತಾರೆ. ಕಲಾವಂತಿಕೆ ಮತ್ತು ಸೌಂದರ್ಯ ಪ್ರಜ್ಞೆಯ ಪ್ರಕಾಶನಕ್ಕೆ ಇದೊಂದು ಸುಸಮಯ. ಸಂಜೆಯ ಸಮಯದಲ್ಲಿ ಹೆಣ್ಣು ಮಕ್ಕಳು ಶೃಂಗಾರಗೊಂಡು ಮನೆಯಿಂದ ಮನೆಗೆ

ಹೋಗಿ ಹಾಡು ಹೇಳಿ ಕೋಲಾಟವಾಡುವ ದೃಶ್ಯ ಕಣ್ಮನಗಳನ್ನು ಸೆಳೆಯುವಂತಿರುತ್ತದೆ. ಶಕ್ತಿ ದೇವತಾ ಪೂಜೆಗೆ ಮೀಸಲಾದ ಈ ದಿನಗಳಲ್ಲಿ ಕಲಶವನ್ನಿಟ್ಟು ಪೂಜಿಸುವುದೂ ವಾಡಿಕೆ. ಇಲ್ಲಿ ನಾಲ್ಕು ದಿನಗಳ ಹಬ್ಬಗಳು ಬಹು ಪ್ರಸಿದ್ಧವಿವೆ.

**ಸರಸ್ವತೀಪೂಜೆ :** ಮೂಲೇನಾವಾಹಯೇತ್ ದೇವೀಂ ಶ್ರವಣೇನ ವಿಸರ್ಜಯೇತ್ ಎಂಬ ಆಧಾರೋಕ್ತಿಯಂತೆ ಮೂಲಾನಕ್ಷತ್ರದ ದಿನ ಗ್ರಂಥಗಳನ್ನೆಲ್ಲ ಇಟ್ಟು ಪೂಜೆ ಮಾಡುತ್ತಾರೆ. ಸರಸ್ವತೀ ಪೂಜೆ ಎಂದಿದು ಪ್ರಸಿದ್ಧಿ ಪಡೆದಿದೆ. ಪಾಡ್ಯಮಿಯಿಂದ ನಂದಾದೀಪವನ್ನಿಡಲು ಸಾಧ್ಯವಿಲ್ಲದವರು ಸರಸ್ವತೀಪೂಜೆಯ ದಿನದಿಂದಲಾದರೂ ನಂದಾದೀಪವನ್ನಿಟ್ಟು ಹಬ್ಬವನ್ನು ಆಚರಿಸುತ್ತಾರೆ. ಸಂಗೀತ ಕಲೆ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ಸಕಲ ಸಲಕರಣೆ ಮತ್ತು ಪುಸ್ತಕಗಳಿಗೆ ಅಂದು ಪೂಜೆ ಸಲ್ಲುತ್ತದೆ.

**ದುರ್ಗಾಷ್ಟಮಿ :** ಮಹಿಷಾಸುರನನ್ನು ಸಂಹರಿಸಿದ ದುರ್ಗಾದೇವಿಯ ಪ್ರೀತ್ಯರ್ಥವಾಗಿ ವಿಶೇಷ ಪೂಜೆಯನ್ನು ಮಾಡುವ ದಿನ.

**ಮಹಾನವಮೀ :** ವಾಹನಗಳಿಗೆಲ್ಲ ಪೂಜೆ ಸಲ್ಲಿಸುವ ದಿನ. ಶಸ್ತ್ರಾಸ್ತ್ರಗಳಿಗೂ ಜೀವನೋಪಾರ್ಜನೆಗೆ ಸಹಾಯಕವಾದ ಯಂತ್ರಾದಿಗಳಿಗೂ ಅಂದು ಪೂಜೆ ಸಲ್ಲುತ್ತದೆ. ಮಹಾನವಮಿಯ ದಿನ ಶಮೀಪತ್ರವನ್ನು ಪರಮಾತ್ಮನಿಗೆ ಸಮರ್ಪಿಸಲಾಗುವುದು. ಸರಸ್ವತಿಗೆ ವಿಶೇಷ ಪೂಜೆ ಮತ್ತು ನೈವೇದ್ಯವನ್ನೂ ಸಲ್ಲಿಸಲಾಗುವುದು. ಪರಬ್ರಹ್ಮನ ಸರ್ವವ್ಯಾಪಕತ್ವವನ್ನು ಮನದಟ್ಟು ಮಾಡಿಕೊಡಲೆಂದೇ ಮೀಸಲಾಗಿರುವ ಹಬ್ಬವಿದು.

**ವಿಜಯದಶಮೀ :** ದೊಡ್ಡ ದಿನವೆಂದು ಪ್ರಸಿದ್ಧಿ. ಚಾತುರ್ಮಾಸ್ಯ ಸಂಕಲ್ಪ ಮಾಡಿ ಒಂದೇ ಕಡೆ ಕುಳಿತಿರುವ ಸಂನ್ಯಾಸಿಗಳೂ ಸಂಚಾರ ಹೊರಡುವ ದಿನ. ಸೀಮೋಲ್ಲಂಘನ ಮಾಡಬೇಕೆಂದು ವದಂತಿ. ಮೈಸೂರಿನಲ್ಲಿ ವಿಜಯನಗರದ ಪರಂಪರೆಗನುಸಾರವಾಗಿ ಜಂಬೂಸವಾರಿ ನಡೆಯುತ್ತಿತ್ತು. ಪ್ರತಿ ಊರಿನಲ್ಲೂ ದೇವರ ಉತ್ಸವ ನಡೆಯುತ್ತದೆ. ಶಮೀವೃಕ್ಷವನ್ನೂ ಪೂಜಿಸುವುದು ಮುಖ್ಯ. ಪರಸ್ಪರ ಶಮೀ ಕೊಟ್ಟು ನಮಸ್ಕರಿಸುವುದೂ ಶುಭಾಶಯವನ್ನು ಹೇಳುವುದೂ ವಾಡಿಕೆ. ಆಗ,

*ಶಮೀ ಶಮಯತೇ ಪಾಪಂ ಶಮೀ ಶತ್ರುವಿನಾಶಿನೀ*
*ಧರಿತ್ರ್ಯರ್ಜುನಬಾಣಾನಾಂ ರಾಮಸ್ಯ ಪ್ರಿಯವಾದಿನೀ*

ಎಂಬ ಶ್ಲೋಕವನ್ನು ಹೇಳಬೇಕು.

ಸರಸ್ವತಿಯನ್ನು ವಿಸರ್ಜಿಸಿ ಏನಾದರೂ ಓದಲೇಬೇಕೆಂದೂ ನಿಯಮವಿದೆ. ಆ ದಿನ ಆರಂಭಿಸಿದ ಕಾರ್ಯದಲ್ಲಿ ಜಯ ಸಿಗುವುದೆಂದೂ ನಂಬಿಕೆ. ಶ್ರೀರಾಮ ಲಂಕೆಗೆ ದಿಗ್ವಿಜಯಕ್ಕೆ ಹೊರಟ ದಿನವೆಂದೂ ದ್ವೈತವಾದ ಪ್ರತಿಷ್ಠಾಪನಾಚಾರ್ಯರಾದ ಶ್ರೀ ಮನ್ಮಧ್ವಾಚಾರ್ಯರು ಅವತರಿಸಿದ ದಿನವೆಂದೂ ಇದು ಪ್ರಸಿದ್ಧವಾಗಿದೆ. ಈ ದಿನದ ಹಿನ್ನೆಲೆಯಾಗಿ ಅನೇಕ ವೃತ್ತಾಂತಗಳು ಪುರಾಣಗಳಲ್ಲಿ ಬರುತ್ತವೆ.

ನವರಾತ್ರಿ ಉತ್ಸವ ಕೊನೆಗೊಳ್ಳುವ ದಿನವಾದ ಇಂದು ಆವಾಹಿತ ಸಕಲ ದೇವದೇವತೆಗಳನ್ನೂ ವಿಸರ್ಜಿಸಲಾಗುವುದು. ವೆಂಕಟೇಶ ಮಹಾತ್ಮ್ಯೆಯ ಪುರಾಣ ಹೇಳಿ ಮಂಗಳವನ್ನಾಚರಿಸುತ್ತಾರೆ. ಸುಂದರಕಾಂಡ ರಾಮಾಯಣವನ್ನು ಪಾರಾಯಣ ಮಾಡಿ ಮುಗಿಸುವುದೂ ಉಂಟು.

**ಶಿಗಿ ಹುಣ್ಣಿಮೆ :** ಆಶ್ವೀಜ ಶುಕ್ಲ ಪೂರ್ಣಿಮಾಕ್ಕೆ ಶಿಗಿ ಹುಣ್ಣಿಮೆ ಅನ್ನುತ್ತಾರೆ. ಇದು ರೈತರ ಹಬ್ಬ. ಮುತ್ತೈದೆಯರು ಹಸುರು ಪಯಿರನ್ನು (ಸಾಮಾನ್ಯವಾಗಿ ರಾಗಿ) ಬೆಳೆಸಿರುವ ಗೆರಸಿಯನ್ನು ತಲೆಯ ಮೇಲೆ ಹೊತ್ತು ಹಾಡುಗಳನ್ನು ಹೇಳುತ್ತ ಜಲಾಶಯಕ್ಕೆ ಹೋಗಿ ಶಿಗಿ ಗೌರಿಯನ್ನು ಪೂಜೆ ಮಾಡಿ ಬರುತ್ತಾರೆ. ಭೂಮಿ ತಾಯಿಗೆ ಬಯಕೆ ಊಟ ಮಾಡಿಸಲು ಬಗೆಬಗೆಯ ತಿಂಡಿತಿನಿಸುಗಳನ್ನು ತೆಗೆದುಕೊಂಡು ಹೋಗಿ ಹೊಲಗದ್ದೆಗಳಲ್ಲಿ ಎಡೆಯಿಟ್ಟು ಊಟ ಮಾಡಿ ಬರುತ್ತಾರೆ. ಕೆಲವರು ಬೆಳದಿಂಗಳಲ್ಲಿ ಪಾಯಸದ ಊಟ ಮಾಡುತ್ತಾರೆ. ಇದು ಮಳೆ ಬೆಳೆಯನ್ನು ಕೊಡುವ ದೇವೇಂದ್ರನನ್ನು ತೃಪ್ತಿಪಡಿಸಲು ಮಾಡುವ ಹಬ್ಬವೆಂದು ನಂಬಿಕೆ.

**ನೀರು ತುಂಬುವ ಹಬ್ಬ :** ನರಕಚತುರ್ದಶಿಯ ಹಿಂದಿನ ರಾತ್ರಿ. ಚತುರ್ದಶಿಯ ದಿನ ಚಂದ್ರೋದಯದ ಸಮಯದಲ್ಲಿ ಅಭ್ಯಂಜನ ಮಾಡಲು ಅನುಕೂಲವಾಗುವಂತೆ ಬಚ್ಚಲ ಮನೆಯಲ್ಲಿ ಎಲ್ಲವನ್ನೂ ತೊಳೆದು, ಅಲಂಕರಿಸಿ ನೀರು ತುಂಬುತ್ತಾರೆ. ಜಲಂಧರನ ಭಯದಿಂದ ಪರಶಿವ ಮಾಲಿಂಗನ ಬಳ್ಳಿಯಲ್ಲಿ ಅವಿತುಕೊಂಡನೆಂದೂ ಅದನ್ನು ಪಾರ್ವತಿ ನೀರಿನ ಹಂಡೆಯ ಸುತ್ತಲೂ ಸುತ್ತಿಟ್ಟು ಆ ದುಷ್ಟನ ಕೈಗೆ ಪರಶಿವ ಸಿಗದಂತೆ ಮಾಡಿದಳೆಂದೂ ಒಂದು ಐತಿಹ್ಯ. ಅಳಿಯಂದಿರು ಮನೆಗೆ ಬಂದಾಗ ಈ ಹಬ್ಬದ ಸಂಭ್ರಮವೇ ಸಂಭ್ರಮ. ಇಂದಿನಿಂದ ದೀಪಾವಳೀ ಹಬ್ಬ ಪ್ರಾರಂಭವಾಗುತ್ತದೆ.

**ನರಕ ಚತುರ್ದಶೀ :** ಭೂಮಿಯ ಪುತ್ರನಾದ ನರಕಾಸುರ ಲೋಕಕಂಟಕ ನಾದಾಗ ಭೂಮಾತೆಯೇ ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡು ನರಕಾಸುರನನ್ನು ಸಂಹಾರ ಮಾಡಿಸಿದಳೆಂದು ಪುರಾಣಪ್ರಸಿದ್ಧ ಕಥೆಯಿದೆ. ಆದುದರಿಂದಲೇ ಆ ಭೂಮಾತೆಯ ಆದೇಶದಂತೆ ಸೂರ್ಯೋದಯಕ್ಕೆ ಮುನ್ನ ಚಂದ್ರೋದಯ ಕಾಲದಲ್ಲಿ ಅಭ್ಯಂಜನ ಮಾಡಲೇಬೇಕೆಂದು ವಿಧಿ ಇದೆ. ಅಳಿಯನಿಗೆ ಈ ಹಬ್ಬದಲ್ಲಿ ಪ್ರಾಶಸ್ತ್ಯ. ರಾತ್ರಿ ಹಬ್ಬದೂಟವಾದ ಮೇಲೆ ಬಾಣಬಿರುಸುಗಳನ್ನು ಹಚ್ಚಿ ನಲಿಯುತ್ತಾರೆ.

**ಅಮಾವಾಸ್ಯೆ :** ಆಶ್ವೀಜ ಬಹುಳ ಅಮಾವಾಸ್ಯೆಯಂದು ಲಕ್ಷ್ಮೀಪೂಜೆ ನಡೆಯುತ್ತದೆ. ವ್ಯಾಪಾರಿಗಳು ಈ ಹಬ್ಬವನ್ನು ವಿಜೃಂಭಣೆಯಿಂದ ಮಾಡುತ್ತಾರೆ.

**ಬಲಿಪಾಡ್ಯಮಿ :** ವಾಮನಾವತಾರದ ಕಥೆಯ ಹಿನ್ನಲೆಯಲ್ಲಿ ಲೋಕ ಪ್ರಸಿದ್ಧವಾದ ಬಲಿಪಾಡ್ಯಮಿಯ ಹಬ್ಬ ನಡೆಯುತ್ತದೆ. ಇದು ಗೋಕ್ರೀಡನಕ್ಕೆ ಹೆಸರಾದ್ದು. ಬೆಳಗ್ಗೆ ಗೋಪೂಜೆಯನ್ನು ಮಾಡಬೇಕು. ಸಂಜೆಯ ಹೊತ್ತಿಗೆ ಮನೆಯ ಹೊಸಲಿನಲ್ಲೆಲ್ಲ ಬಲೀಂದ್ರನನ್ನು ಮಾಡಿಟ್ಟು ಷೋಡಶೋಪಚಾರಗಳಿಂದ ಪೂಜಿಸಬೇಕು. ಬಾಣಬಿರುಸುಗಳನ್ನು ಹಾರಿಸುವುದುಂಟು. ಬಲೀಂದ್ರ ಭೂಲೋಕಕ್ಕೆ ಬಂದು ಮೂರೂಮುಕ್ಕಾಲು ಘಳಿಗೆ ಇರುವನೆಂದು ಜನರ ನಂಬಿಕೆ.

ಅಳಿಯನನ್ನು ಕರೆಸಿಕೊಂಡಿರುವವರು ಭಾವನ ಬಿದಿಗೆ ಅಕ್ಕನ ತದಿಗೆ ಮುಂತಾಗಿ ಕಾರ್ತೀಕ ಶುಕ್ಲ ಬಿದಿಗೆ ತದಿಗೆ ಮತ್ತು ಕಡೆ ಪಂಚಮಿ ಎಂದು ಪಂಚಮಿಯವರೆಗೂ ಹಬ್ಬವನ್ನು ಆಚರಿಸುತ್ತಾರೆ. ಕಡೆ ಪಂಚಮಿಗೆ ದೀಪಾವಳೀ ಹಬ್ಬ ಮುಗಿಯುತ್ತದೆ. ಭಾವನಬಿದಿಗೆ ದಿವಸ ಸಹೋದರಿಯ ಮನೆಯಲ್ಲಿ ಅವಳ ಕೈಯಿಂದ ಊಟ ಮಾಡಬೇಕೆಂದೂ ಯಮಧರ್ಮರಾಯ ಹಾಗೆ ಮಾಡಿದ್ದನೆಂದೂ ಅಕ್ಕನ ತದಿಗೆ ದಿವಸ ಸಹೋದರಿಯರಿಗೆ ಔತಣವನ್ನು ಮಾಡಸಬೇಕೆಂದೂ ಪ್ರರಾಣಪ್ರಸಿದ್ಧಿ ಇದೆ.

**ತುಳಸೀ ಹಬ್ಬ :** ಕಾರ್ತೀಕ ಶುದ್ಧ ಏಕಾದಶೀ ದಿವಸ ಅಂಗಳದಲ್ಲಿನ ತುಳಸೀ ವೃಂದಾವನವನ್ನು ತಳಿರು ತೋರಣಗಳಿಂದ ಅಲಂಕರಿಸಿ ಅದರಲ್ಲಿ ನೆಲ್ಲಿಯ ಟೊಂಗೆಯನ್ನು ನೆಟ್ಟು, ದ್ವಾದಶೀ ಬೆಳಗ್ಗೆ ಪೂಜೆ ಮಾಡುತ್ತಾರೆ. ತುಳಸಿಯೇ ವೃಂದಾ ಎಂದು ನಂಬಿಕೆ. ಈ ಹಬ್ಬ ತುಳಸಿಯ ವಿವಾಹ ಮಹೋತ್ಸವವೆಂದು ಪ್ರಸಿದ್ಧಿ. ಚಾತುರ್ಮಾಸದಲ್ಲಿ ಮಲಗಿದ್ದ ಮಹಾವಿಷ್ಣು ಏಳುವ ದಿನವಾದ್ದರಿಂದ ಇದನ್ನು ಉತ್ಥಾನದ್ವಾದಶೀ **(ನೋಡಿ– ಉತ್ಥಾನ ದ್ವಾದಶೀ)** ಎಂತಲೂ ಕರೆಯುತ್ತಾರೆ. ಕ್ಷೀರಾಬ್ಧಿ ಪೂಜೆಯನ್ನು ಮಾಡಬೇಕೆಂಬ ವಿಧಿ ಇದೆ. ರಾತ್ರಿಯೂ ಪೂಜೆ ನಡೆಯುತ್ತದೆ.

**ಕಾರ್ತೀಕ ಪೂರ್ಣಿಮಾ :** ವ್ಯಾಸಪೂಜೆ ಮಾಡಿ ಕಾರ್ತೀಕ ಮಾಸ ಮಹಾತ್ಮ್ಯೆಯ ಮಂಗಳವನ್ನಾಚರಿಸುತ್ತಾರೆ. ರಾತ್ರಿ ಮನೆಯಲ್ಲೂ ಮಂದಿರಗಳಲ್ಲೂ ದೀಪಗಳನ್ನು ಬೆಳಗಿಸುತ್ತಾರೆ. ದೀಪೋತ್ಸವ ನಡೆಯುವುದು ಇಂದಿನಿಂದಲೇ. ಈ ದಿನ ದೀಪ ದಾನಕ್ಕೆ ಮಹತ್ತ್ವ. ಇದನ್ನು ದೊಡ್ಡ ಗೌರೀ ಹುಣ್ಣಿಮೆ ಎಂದು ಕರೆಯುತ್ತಾರೆ. ಸ್ತ್ರೀಯರು ಗೌರೀಪೂಜೆಯನ್ನು ಮಾಡುತ್ತಾರೆ.

ಕಾರ್ತೀಕ ಮಾಸದಲ್ಲಿ ಸ್ನಾನ ಮಾಡಬೇಕೆಂದು ವಿಧಿ ಇದೆ. ಸ್ನಾನ ಸೂರ್ಯೋದಯಕ್ಕೆ ಮುಂಚಿತವಾಗಿ ಮುಗಿದಿರಬೇಕು. ಕಾವೇರಿ ನದಿಯ ಸ್ನಾನಕ್ಕೆ ವಿಶೇಷ ಮಹತ್ತ್ವ. ತುಲಾಮಾಸವೂ ಬಂದಿರುವುದರಿಂದ ತುಲಾಕಾವೇರಿಯ ಸ್ನಾನ ಅನಂತಪುಣ್ಯಪ್ರದವೆಂದು ನಂಬಿಕೆ. ಕಾರ್ತೀಕ ಮಾಸದಲ್ಲಿ ಒಮ್ಮೆಯಾದರೂ ಸಾಮೂಹಿಕವಾಗಿ ವನಭೋಜನ ಮಾಡುವುದೂ ಆ ದಿನ ಧಾತ್ರೀಹವನ ನಡೆಸುವುದೂ ಒಂದು ವಿಶೇಷ.

**ಕಾರ್ತೀಕ ಬಹುಳ ಅಮಾವಾಸ್ಯಾ :** ಕಡೆಯ ಕಾರ್ತೀಕ ಎಂದು ಪ್ರಸಿದ್ಧಿ. ದೀಪೋತ್ಸವಕ್ಕೆ ಹೆಸರಾದ ದಿನ. ಪಂಜನ್ನು ಹಿಡಿದು ತಿರುಗಿಸುತ್ತ ಊರಿನಲ್ಲೆಲ್ಲ ಸುತ್ತು ಹಾಕುವ ಪದ್ಧತಿ ಹಿಂದೆ ಇತ್ತು. ಉತ್ತರ ಗೋಗ್ರಹಣದ ಜ್ಞಾಪಕಾರ್ಥವಾಗಿ ಹಾಗೆ ಮಾಡಬೇಕೆಂದು ನಂಬಿಕೆ. ಪಿತೃದೇವತೆಗಳಿಗೆ ಮರಳಿ ಹೋಗಲು ದಾರಿತೋರುವ ವಿಧಾನವಿದೆಂದು ಪುರಾಣ ವಾಕ್ಯ. ಎಲ್ಲೆಡೆಯಲ್ಲೂ ದೀಪೋತ್ಸವ, ತೆಪ್ಪೋತ್ಸವ ಮುಂತಾದುವು ವಿಜೃಂಭಣೆಯಿಂದ ನಡೆಯುತ್ತವೆ.

**ಹೇಮಂತ ಋತುವಿನ ಹಬ್ಬಗಳು :** ಸ್ಕಂದಷಷ್ಠೀ : ಮಾರ್ಗಶೀರ್ಷಮಾಸದ ಶುಕ್ಲ ಷಷ್ಠಿಗೆ ಸ್ಕಂದ ಷಷ್ಠೀ ಅಥವಾ ಸುಬ್ರಾಯ ಷಷ್ಠೀ ಎಂದು ಕರೆಯುತ್ತಾರೆ. ಸ್ಕಂದನ ಹೆಸರಿನಲ್ಲಿ ವಿಶೇಷ ಪೂಜೆ ನಡೆಸಬೇಕು ಮತ್ತು ಬ್ರಹ್ಮಚಾರಿಗಳಿಗೆ ಭೋಜನ ಮಾಡಿಸಬೇಕೆಂಬ ವಿಧಿ ಇದೆ. ಅನೇಕ ಸ್ಕಂದಕ್ಷೇತ್ರಗಳಲ್ಲಿ ರಥೋತ್ಸವವೂ ನಡೆಯುತ್ತದೆ.

**ಹನುಮಜ್ಜಯಂತಿ :** ಮಾರ್ಗಶೀರ್ಷಮಾಸದ ದ್ವಾದಶಿ ಶ್ರೀರಾಮಭಕ್ತ ಹನುಮಂತ ಜನಿಸಿದ ದಿನ. ಅವನ ಹೆಸರಿನಿಂದ ಈ ಜಯಂತಿ ಆಚರಿಸಲಾಗುತ್ತದೆ. ಹನುಮದ್ವಿಲಾಸ ಹರಿಕಥೆ ನಡೆಸುವುದು ವಿಶೇಷ. ಕೆಲವು ಕಡೆ ರಾಮದೇವರ ಸಂಗಡ ಹನುಮಂತನ ಪಲ್ಲಕ್ಕಿ ಉತ್ಸವವನ್ನೂ ಮಾಡುತ್ತಾರೆ.

**ಮಾರ್ಗಶಿರ ಪೂರ್ಣಿಮಾ :** ತ್ರಿಮೂರ್ತಿಗಳು ಅನಸೂಯಾದೇವಿಯ ಪಾತಿವ್ರತ್ಯವನ್ನು ಪರೀಕ್ಷಿಸಿದ ದಿನ. ದೀಪೋತ್ಸವವನ್ನು ಆಚರಿಸುತ್ತಾರೆ. ಹೊಸ್ತಲ ಹುಣ್ಣಿಮೆ ಎಂದು ಪ್ರಸಿದ್ಧಿ.

**ಎಳ್ಳಮಾವಾಸ್ಯೆ :** ತಂದೆಯ ಆಜ್ಞೆಯಂತೆ ತಾಯಿಯ ಶಿರಚ್ಛೇದನ ಮಾಡಿದ ಪರಶುರಾಮ ಮಾತೃಹತ್ಯೆಯ ದೋಷದಿಂದ ಮುಕ್ತನಾದ ದಿನ. ಎಳ್ಳಿನಷ್ಟೂ ಪಾಪವಿಲ್ಲದಂತೆ ತೊಳೆದುಹಾಕುವ ಈ ದಿನ ಸ್ನಾನಕ್ಕೆ ಪ್ರಾಶಸ್ತ್ಯ. ಸೂರ್ಯೋದಯಕ್ಕೆ ಮುಂಚಿತವಾಗಿ ಸ್ನಾನ ಮಾಡಬೇಕು. ಅನೇಕ ಕಡೆಗಳಲ್ಲಿ ಜಾತ್ರೆ ನಡೆಯುತ್ತದೆ.

**ಧನುರ್ಮಾಸ** : ಸೂರ್ಯದೇವ ವೃಶ್ಚಿಕ ಮಾಸದಂದು ಸಂಕ್ರಮಿಸಿ ಧನುರ್ ರಾಶಿಗೆ ಪ್ರವೇಶ ಮಾಡುವ ದಿನ ಮೊದಲ್ಗೊಂಡು ಆತ ಮಕರಸಂಕ್ರಾಂತಿ ಪ್ರವೇಶಿಸುವವರೆಗೂ ಧನುರ್ಮಾಸವೆನ್ನುತ್ತಾರೆ. ಮಹಾವಿಷ್ಣುವನ್ನು ಸೂರ್ಯೋದಯಕ್ಕೆ ಮುಂಚಿತವಾಗಿಯೇ ಷೋಡಶೋಪಚಾರಗಳಿಂದ ಪೂಜಿಸಿ ಹುಗ್ಗಿಯನ್ನು (ಪೊಂಗಲ್)ನೈವೇದ್ಯ ಮಾಡಬೇಕೆಂದು ವಿಧಿ. ತಿಂಗಳಲ್ಲಿ ಪ್ರತಿ ದಿನ ಮಾಡಲು ಅಸಮರ್ಥರಾದವರು ಒಂದು ದಿನವಾದರೂ ಹುಗ್ಗಿ ಮಾಡಿ ದಾನ ಮಾಡಬಹುದು.

**ಬನದ ಹುಣ್ಣಿಮೆ:** ಪುಷ್ಯಶುಕ್ಲ ಹುಣ್ಣಿಮೆಗೆ ಬನದ ಹುಣ್ಣಿಮೆ ಎಂದು ಹೆಸರು.

**ಮಕರ ಸಂಕ್ರಾಂತಿ:** ಪೊಂಗಲ್ ಎಂದು ಪ್ರಸಿದ್ಧಿ. ಸೂರ್ಯ ಮಕರರಾಶಿಗೆ ಪ್ರವೇಶಿಸುವ ದಿನ. ಉತ್ತರಾಯಣ ಪುಣ್ಯಕಾಲವೆಂದು ಆಚರಣೆಯಲ್ಲಿದೆ. ಎಳ್ಳು ಬೀರುವುದು ವೈಶಿಷ್ಟ್ಯ. ದ್ರಾವಿಡ ಸಂಪ್ರದಾಯಸ್ಥರಿಗೆ ಇದೊಂದು ಸಂಭ್ರಮದ ದಿನ. ಇಂದು ಸ್ವರ್ಗದ ಬಾಗಿಲು ತೆರೆಯುತ್ತದೆಂದು ನಂಬಿಕೆ. ರೈತರಿಗೆ ಇಂದು ಬಿಡುವು. ಜಾನುವಾರುಗಳಿಗೆ ಮೈತೊಳೆದು ಸಿಂಗರಿಸಿ ಮೆರವಣಿಗೆ ಮಾಡುತ್ತಾರೆ. ಸಂಜೆ ಉರಿಯುವ ಬೆಂಕಿ ಹಾಯಿಸುತ್ತಾರೆ.

ಪುಷ್ಯ ಬಹುಳ ಅಮಾವಾಸ್ಯೆ: ದಾಸಶ್ರೇಷ್ಠರಾದ ಪುರಂದರದಾಸರ ಪುಣ್ಯತಿಥಿ. ಪ್ರಸಿದ್ಧ ವಾಗ್ಗೇಯಕಾರರೂ ಭಕ್ತ ಶ್ರೇಷ್ಠರೂ ಆದ ತ್ಯಾಗರಾಜ ಭಾಗವತರ ಆರಾಧನೆಯನ್ನೂ ಈ ದಿನದಲ್ಲಿ ಆಚರಿಸುತ್ತಾರೆ. ಸಂಗೀತ, ಹರಿಕಥೆ ಮುಂತಾದ ಸಾಮೂಹಿಕ ಕಾರ್ಯಕ್ರಮಗಳು ಜರುಗುತ್ತವೆ.

**ಶಿಶಿರ ಋತುಮಿನ ಹಬ್ಬಗಳು:** ರಥಸಪ್ತಮೀ: ಮಾಘಶುಕ್ಲ ಸಪ್ತಮೀ ದಿನದಂದು ಸೂರ್ಯನ ರಥಕ್ಕೆ ಪೂಜೆ. ಅಂಗಳದಲ್ಲಿ ರಂಗವಲ್ಲಿಯಿಂದ ರಥವನ್ನು ಬರೆದು ಪೂಜಿಸುತ್ತಾರೆ. ಹಾಲನ್ನು ಉಕ್ಕು ಬರುವಂತೆ ಕಾಯಿಸಿ ಪಾಯಸ ಮಾಡಿ ಸೂರ್ಯನಾರಾಯಣನಿಗೆ ನೈವೇದ್ಯ ಮಾಡುತ್ತಾರೆ. ಎಕ್ಕದ ಎಲೆಯನ್ನು ಧರಿಸಿ ಸ್ನಾನ ಮಾಡುವ ವಿಧಿ ಇದೆ. ವೈವಸ್ವತಮನ್ವಂತರದ ಮೊದಲ ದಿನವಿದು ; ಮನ್ವಾದಿ.

**ಮಾಘ ಪೂರ್ಣಿಮೆ** : ಈ ದಿನ ಕೆಲವರು ಕುಲಧರ್ಮವನ್ನು ಆಚರಿಸುತ್ತಾರೆ. ವ್ಯಾಸಪೂಜೆ ನಡೆಯುತ್ತದೆ. ಮಾಘಸ್ನಾನದ ಕೊನೆಯ ದಿನವಿದು. ಅನೇಕ ಕಡೆಗಳಲ್ಲಿ ರಥೋತ್ಸವಗಳು ಜಾತ್ರೆಗಳು ನಡೆಯುತ್ತವೆ.

**ಮಹಾಶಿವರಾತ್ರಿ** : ಮಾಘ ಬಹುಳದಲ್ಲಿ ಪ್ರದೋಷ ವ್ಯಾಪಿನಿಯಾದ ಚತುರ್ದಶೀ ದಿವಸ ಶಿವರಾತ್ರಿಯನ್ನು ಆಚರಿಸಬೇಕೆಂದು ಸ್ಮೃತಿಯಲ್ಲಿ ಹೇಳಿದೆ. ಇಂದು ಶೈವರು ಉಪವಾಸವನ್ನಾಚರಿಸಿ ವಿಶೇಷ ಪೂಜಾದಿಗಳನ್ನು ಮಾಡುತ್ತಾರೆ.

***ನ ಸ್ನಾನೇನ ನ ವಸ್ತ್ರೇಣ ನ ಧೂಪೇನ ನ ಚಾರ್ಚಯಾ***
***ತುಷ್ಯಾಮಿ ನ ತಥಾ ಪುಷ್ಪೈಃ ಯಥಾ ತತ್ರೋಪವಾಸತಃ***

ಎಂಬ ಆರ್ಷ ವಾಕ್ಯಾನುಸಾರ ಈ ದಿನ ಉಪವಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ. ರಾತ್ರಿಯಲ್ಲಿ ಪ್ರತಿ ಯಾಮದಲ್ಲೂ ಬಿಲ್ವಾದಿಗಳಿಂದ ಶಿವನನ್ನು ಪೂಜಿಸಬೇಕು. ವೈಷ್ಣವರು ಈ ದಿನ ಹಬ್ಬವನ್ನು ಆಚರಿಸುತ್ತಾರೆ. ಶಿವಮಂದಿರಕ್ಕೆ ಹೋಗಿ ದರ್ಶನ ಮಾಡಲೇಬೇಕೆಂಬ ವಿಧಿ ಇದೆ. ಜಾಗರಣೆಯನ್ನು ವಿಧಿಸಲಾಗಿದೆ. ಶಿವರಾತ್ರಿಯ ವ್ರತಕಥೆ ಮತ್ತು ಮಹಾತ್ಮ್ಯೆ ಸಾಮಾನ್ಯವಾಗಿ ಎಲ್ಲ ಪುರಾಣಗಳಲ್ಲೂ ಬಂದಿದೆ. ಅನೇಕ ಪುಣ್ಯಸ್ಥಳಗಳಲ್ಲಿ ರಥೋತ್ಸವಗಳೂ ಜಾತ್ರೆಗಳೂ ಜರುಗುತ್ತವೆ.

**ಅಮಾವಾಸ್ಯೆ:** ಇಂದು ಶಿವರಾತ್ರಿಯ ಪಾರಣೆ, ರಥೋತ್ಸವ, ದೀಪೋತ್ಸವಾದಿಗಳು ಹಲವು ಶೈವಕ್ಷೇತ್ರಗಳಲ್ಲಿ ನಡೆಯುತ್ತವೆ.

**ಕಾಮನ ಪಾಡ್ಯ** : ಫಾಲ್ಗುಣ ಶುಕ್ಲ ಪಾಡ್ಯಮಿ ದಿನವನ್ನು ಕಾಮನ ಪಾಡ್ಯ ಎಂದು ಆಚರಿಸುತ್ತಾರೆ. ಕಾಮನ ಪ್ರತಿಕೃತಿಯನ್ನು ಬರೆದು ಪೂಜಿಸಿ ಹಬ್ಬವನ್ನಾಚರಿಸುವ ಸಂಪ್ರದಾಯ ಕೆಲವರಲ್ಲಿದೆ.

**ಹೋಳೀಹಬ್ಬ** : ಫಾಲ್ಗುಣ ಶುಕ್ಲಪಕ್ಷದಲ್ಲಿ ಹೋಳೀಹಬ್ಬವನ್ನಾಚರಿಸುತ್ತಾರೆ. ಕಾಮನ ಹಬ್ಬವೆಂದೂ ಇದು ಪ್ರಸಿದ್ಧಿ. ಈ ಎರಡು ಹೆಸರುಗಳಿಗೆ ಎರಡು ಬಗೆಯ ಐತಿಹ್ಯಗಳಿವೆ. ಭಕ್ತಾಗ್ರಣಿಯಾದ ಪ್ರಹ್ಲಾದನಿಗೆ ಹೋಲಿಕಾ ಎಂಬ ರಾಕ್ಷಸಿಯಿಂದ ಹಿಂಸೆಯಾಗುತ್ತಿತ್ತು. ಆಗ ದೈತ್ಯಬಾಲಕರೇ ಅವಳನ್ನು ಅಟ್ಟಿಸಿಕೊಂಡು ಹೋಗಿ ಕೋಲು ಕಟ್ಟಿಗೆಗಳಿಂದ ಬಡಿದು ಸಾಯಿಸಿ, ಮನೆಮನೆಯಿಂದಲೂ ಕಟ್ಟಿಗೆ, ಬೆರಣಿ ಹರಕು ಮುರುಕು ಉರವಲುಗಳನ್ನು ತಂದು ಊರ ಮಧ್ಯದಲ್ಲೇ ಅವಳನ್ನು ಸುಟ್ಟು ಭಸ್ಮ ಮಾಡಿದರೆಂದು ಒಂದು ಸಂಪ್ರದಾಯ ಕಥೆ. ಅದರ ಅನುಕರಣೆಯೇ ಹೋಳೀಹಬ್ಬ.

ತಾರಕಾಸುರನಿಂದ ಪೀಡಿತರಾದ ದೇವತೆಗಳು ಮದನನ್ನು ಪ್ರಾರ್ಥಿಸಿಕೊಂಡು ಸಮಾಧಿಸ್ಥನಾದ ಶಿವನನ್ನು ಎಬ್ಬಿಸಿ ಘೋರತಪಸ್ಸಾಧನೆಯಲ್ಲಿ ತೊಡಗಿದ್ದ ಪಾರ್ವತಿಯ ಕಲ್ಯಾಣ ಮಹೋತ್ಸವಕ್ಕೆ ಸಹಾಯಕನಾಗಲು ಕಳುಹಿಸಿಕೊಟ್ಟರೆಂದೂ ಆಗ ಕಾಮದೇವ ವಸಂತನನ್ನು ಮುಂದಿಟ್ಟುಕೊಂಡು ಕೋಗಿಲೆಯ ಕಲಕಂಠದಿಂದ ಕೇಕೆ ಹಾಕುತ್ತ ಪುಷ್ಪಬಾಣನಾಗಿ ಮೂರುವರೆ ಘಳಿಗೆಯಲ್ಲಿ ಮೂರು ಲೋಕವನ್ನೂ ಗೆದ್ದು ಸಕಲರ ಮನಸ್ಸಿನಲ್ಲೂ ಕಾಮ ಪ್ರಚೋದನೆಯನ್ನು ಉಂಟು ಮಾಡಿ ಮನ್ಮಥನಾದನೆಂದೂ ಹೇಳಲಾಗಿದೆ. ದೇವತೆಗಳ ಒಂದು ಘಟಿ, ಮಾನವ ಮಾನದಂತೆ ಒಂದು ದಿನವಾಗುವುದರಿಂದ ದ್ವಾದಶಿಯಿಂದ ಮೊದಲ್ಗೊಂಡು ಹುಣ್ಣಿಮೆವರೆಗೆ ಈ ಹಬ್ಬವನ್ನು ಆಚರಿಸಲಾಗುವುದು. ಕಾಮನನ್ನು ಸುಂದರವಾದ ರತ್ನಾಭರಣಗಳಿಂದ ಅಲಂಕೃತವಾದ ಪ್ರತಿಮೆಯಲ್ಲಿ ಆವಾಹನ ಮಾಡುತ್ತಾರೆ. ಕಾಮನ ಚಪ್ಪರದಲ್ಲಿ ನೃತ್ಯಗೀತಾದಿಗಳೂ ನಡೆಯುತ್ತವೆ. ಅಂದಿನ ನಡೆವಳಿಕೆಯಲ್ಲಿ ಸ್ವಲ್ಪ ಉಚ್ಛೃಂಖಲ ಪ್ರವೃತ್ತಿ ತೋರಿಬರುವುದೂ ಉಂಟು. ಹುಣ್ಣಿಮೆಯ ದಿನ ದಿಗ್ವಿಜಯೋತ್ಸವ ಸಂಕೇತವಾಗಿ ರಂಗಿನ ಓಕಳಿಯನ್ನಾಡುತ್ತಾರೆ. ಬಡವಬಲ್ಲಿದನೆಂಬ ಭೇದ ಭಾವವನ್ನು ತೊರೆದು ಹಬ್ಬವನ್ನಾಚರಿಸುವುದೂ ಉಂಟು. ಕಾಮದೇವನ ಈ ಎಲ್ಲ ಉಪಟಳದಿಂದಲೂ ಪುಷ್ಪ ಬಾಣ ಪ್ರಯೋಗದಿಂದಲೂ ವಿಚಲಿತನಾಗಿ ಮಹಾದೇವ ಮೂರನೆಯ ಕಣ್ತೆರೆದು ನೋಡಿದಾಗ ಕಾಮದೇವ ಸುಟ್ಟು ಬೂದಿಯಾದನಾದ್ದರಿಂದ ಮೆರವಣಿಗೆಯ ಅನಂತರ ಕಾಮನನ್ನು ದಹಿಸುವುದು ರೂಢಿಗೆ ಬಂದಿದೆ. ಆಗ ರತಿ ಬಂದು ಶೋಕಾರ್ತಳಾಗಿ ಶಿವನನ್ನು ಪ್ರಾರ್ಥಿಸಿದ್ದರಿಂದಲೂ ದೇವತೆಗಳು ಬಂದು ಕ್ಷಮಾಯಾಚನೆ ಮಾಡಿ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿದ್ದರಿಂದಲೂ ಆಶುತೋಷನಾದ ಶಿವ ಸಂತೃಪ್ತಿಯಿಂದ ಕಾಮನನ್ನು ಬದುಕಿಸಿದನಲ್ಲದೆ ರತಿಗೆ ಶಾಶ್ವತ ಸೌಭಾಗ್ಯವನ್ನು ಕರುಣಿಸಿದ. ಅಂದಿನಿಂದ ಕಾಮ ಅನಂಗನಾದ. ಆ ನೆನಪಿಗಾಗಿ ಜನ ಆನಂದದಿಂದ ಒಬ್ಬರನ್ನೊಬ್ಬರು ಆಲಂಗಿಸಿಕೊಂಡು ನಕ್ಕುನಲಿಯುತ್ತಾರೆ. ಈ ಹಬ್ಬಕ್ಕೆ ಮದನೋತ್ಸವವೆಂದೂ ಹೆಸರು. ಸಾಮಾಜಿಕ ಹಬ್ಬಗಳಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವಿದೆ. ಸಕಲ ಕಲೆಗಳಿಗೂ ಇದರಲ್ಲಿ ಅವಕಾಶವಿದೆ. (ಎಂ.ಕೆ.ಬಿ.ಆರ್.)

**ಕರ್ನಾಟಕದಲ್ಲಿ ವೈದ್ಯ:** ಕರ್ನಾಟಕದ ವೈದ್ಯಕೀಯ (ಎಂದರೆ ಆಯುರ್ವೇದದ) ಇತಿಹಾಸವನ್ನು ಮೂರು ಯುಗಗಳಾಗಿ ವಿಂಗಡಿಸಬಹುದು: 1. ಆದಿಯುಗ ಪ್ರ.ಶ.ಪೂ. 260 – ಪ್ರ.ಶ. 1300; 2. ಮಧ್ಯಯುಗ 1300 – 1800; 3. ಆಧುನಿಕ ಯುಗ 1800 ರಿಂದೀಚೆಗೆ.

**ಆದಿಯುಗ:** ಕರ್ನಾಟಕದ ಉತ್ತರ ಭಾಗ ಅಶೋಕನ ರಾಜ್ಯದಲ್ಲಿದ್ದುದರಿಂದ ಆತ ಸ್ಥಾಪಿಸಿದ್ದ ಮನುಷ್ಯರ ಮತ್ತು ಪಶುಗಳ ಔಷಧಾಲಯಗಳು ಈ ಪ್ರದೇಶದಲ್ಲಿ ಇದ್ದಿರಬಹುದೆಂದು ಊಹಿಸಿ ಕರ್ನಾಟಕದ ವೈದ್ಯ ಇತಿಹಾಸವನ್ನು ಪ್ರ.ಶ.ಪೂ.260 ರಿಂದ ಪ್ರಾರಂಭಿಸಬಹುದು. ರಸಾಯನ ಮತ್ತು ಲೋಹಶಾಸ್ತ್ರಗಳ ಪಿತನೆಂಬ ಗೌರವಕ್ಕೆ ಪಾತ್ರನಾಗಿದ್ದ, ಸಾತವಾಹನರ ಕಾಲದ ಬೌದ್ಧಭಿಕ್ಷು ನಾಗಾರ್ಜುನ ಶ್ರೀಶೈಲ ಪರ್ವತದಲ್ಲಿ ವಾಸವಾಗಿದ್ದು ರಸಾಯನ ಪ್ರಯೋಗಗಳಲ್ಲಿ ತೊಡಗಿದ್ದ. ರಸರತ್ನಾಕರ, ಲೋಹಶಾಸ್ತ್ರ ಮುಂತಾದ ವೈದ್ಯಗ್ರಂಥಗಳನ್ನು ಬರೆದ ಈತನನ್ನು ಕರ್ನಾಟಕದ ಪ್ರಥಮ ವೈದ್ಯವ್ಯಕ್ತಿ ಎನ್ನಬಹುದಾಗಿದೆ. ಸಾತವಾಹನರ ಅನಂತರ ರಾಜ್ಯ ಕಟ್ಟಿದ ಗಂಗರು ಜೈನಧರ್ಮಾವಲಂಬಿಗಳಾಗಿದ್ದರು. ಗಂಗರಸ ದುರ್ವಿನೀತನ (605–650) ಗುರುವಾಗಿದ್ದ ದಿಗಂಬರಜೈನ ಯತಿ ಪೂಜ್ಯಪಾದ ವೈದ್ಯಶಾಸ್ತ್ರದಲ್ಲಿಯೂ ಪಂಡಿತನಾಗಿದ್ದ. ಇವನು ಬರೆದ ಕಲ್ಯಾಣಕಾರಕ ಎಂಬ ಸಂಸ್ಕೃತ ವೈದ್ಯಗ್ರಂಥವನ್ನು ಮುಂದಿನ ಎಲ್ಲ ವಿದ್ವಾಂಸರೂ ಗೌರವದಿಂದ ಸ್ಮರಿಸಿದ್ದಾರೆ. ಈತನ ಸೋದರಳಿಯ ಸಿದ್ಧ ನಾಗಾರ್ಜುನ (690) ರಸಾಯನ ಮತ್ತು ಲೋಹವಿದ್ಯೆಗಳಲ್ಲಿ ಖ್ಯಾತಿಯನ್ನು ಪಡೆದಿದ್ದ. ರಸೇಂದ್ರ ಮಂಗಳ, ಕಕ್ಷಪುಟತಂತ್ರ, ನಾಗಾರ್ಜುನತಂತ್ರ ಮುಂತಾದುವು ಈತನ ಕೃತಿಗಳು. ಕರ್ನಾಟಕದ ದಕ್ಷಿಣಭಾಗದ ಬನ್ನೂರಿನಲ್ಲಿ ರಾಜ್ಯವಾಳುತ್ತಿದ್ದ ಗಂಗರಾಜ ಶ್ರೀಪುರುಷ(775) ಗಜಶಾಸ್ತ್ರವನ್ನೂ ಆತನ ಮಗನಾದ ಸೈಗೊಟ್ಟ ಶಿವಮಾರ ಗಜಾಷ್ಟಕವನ್ನೂ ಬರೆದಿದ್ದಾರೆ (800). ಶಿವಮಾರನ ಗಜಾಷ್ಟಕ ಕನ್ನಡಭಾಷೆಯ ಪ್ರಥಮಶಾಸ್ತ್ರಗ್ರಂಥ. ರಾಷ್ಟ್ರಕೂಟ ರಾಜ ನೃಪತುಂಗನ (815–871) ಆಸ್ಥಾನದಲ್ಲಿದ್ದ ಉಗ್ರಾದಿತ್ಯನೆಂಬ ಜೈನ ವೈದ್ಯ ಕಲ್ಯಾಣಕಾರಕ ಎಂಬ ಗ್ರಂಥವನ್ನು ಬರೆದಿದ್ದಾನೆ. ಜೈನಧರ್ಮದ ನಿಷ್ಠೆಯನ್ನು ಪಾಲಿಸಿರುವ ಈ ಗ್ರಂಥದಲ್ಲಿ ಮದ್ಯ, ಮಾಂಸ ಮತ್ತು ಮಧುಗಳನ್ನು ಔಷಧಾರ್ಥವಾಗಿಯೂ ವರ್ಜಿಸಿರುವುದು ಒಂದು ವೈಶಿಷ್ಟ್ಯ. ಚಾಳುಕ್ಯರಾಜ ಇಮ್ಮಡಿ ಜಯಸಿಂಹನ (1015–1042) ಆಸ್ಥಾನದ ಬ್ರಾಹ್ಮಣ ಕವಿ ಚಾವುಂಡರಾಯ ತನ್ನ ಕನ್ನಡ ಗ್ರಂಥವಾದ ಲೋಕೋಪಕಾರದಲ್ಲಿ ಆಯುರ್ವೇದ ಶಾಸ್ತ್ರವನ್ನು ವಿಸ್ತಾರವಾಗಿ ವಿವರಿಸಿದ್ದಾನೆ.

ಚಂದ್ರರಾಜನ (1079) ಮದನತಿಲಕ, ಕೀರ್ತಿವರ್ಮನ (1125) ಗೋವೈದ್ಯ, ಚಾಳುಕ್ಯ ಚಕ್ರವರ್ತಿ ಸೋಮೇಶ್ವರನ (1126–38) ಮಾನಸೋಲ್ಲಾಸದಲ್ಲಿನ ಆಯುರ್ವೇದದ ವಿವರಣೆ ಮತ್ತು ಜೈನ ವೈದ್ಯ ಜಗದ್ದಳ ಸೋಮನಾಥನ (1150) ಕರ್ಣಾಟಕ ಕಲ್ಯಾಣಕಾರಕ, ದೇವೇಂದ್ರ ಮುನಿಯ (1200) ಬಾಲಗ್ರಹ ಚಿಕಿತ್ಸೆ, ಕೇಶವ ಪಂಡಿತನ (1240) ಸಿದ್ಧಮಂತ್ರ, ಬೋಪದೇವನ (1263) ಸಿದ್ಧ ಮಂತ್ರ ಪ್ರಕಾಶ, ವೈದ್ಯಶತಕ, ಹೃದಯ ದೀಪಿಕ ನಿಘಂಟು, ಯಾದವರಾಜ ಮಹಾದೇವನ ಮುಖ್ಯಮಂತ್ರಿಯಾಗಿದ್ದ ಹೇಮಾದ್ರಿಯ (1260–1309) ಆಯುರ್ವೇದ ರಸಾಯನವೆಂಬ ಅಷ್ಟಾಂಗ ಹೃದಯದ ಮೇಲಿನ ವ್ಯಾಖ್ಯಾನ, ಅಮೃತನಂದಿಯ ಅಕಾರಾದಿ ನಿಘಂಟು – ಇವು ಈ ಯುಗದ ಕೆಲವು ಮುಖ್ಯ ವೈದ್ಯಗ್ರಂಥಗಳು.

ಆಯುರ್ವೇದದ ಅಧ್ಯಯನ ಅಧ್ಯಾಪನಗಳು ದೇವಾಲಯಗಳಲ್ಲಿ ಇರುತ್ತಿದ್ದ ಪಾಠ ಶಾಲೆಗಳಲ್ಲಿ ನಡೆಯುತ್ತಿದ್ದವು. ಅವುಗಳ ನಿರ್ವಹಣೆಗಾಗಿ ರಾಜರು ಭೂಮಿ ಮತ್ತು

ಗ್ರಾಮಗಳನ್ನು ದೇವಾಲಯಗಳ ಹೆಸರಿನಲ್ಲಿ ದಾನ ಮಾಡುತ್ತಿದ್ದರು. ಶಾಸ್ತ್ರಜ್ಞರಾದ ವೈದ್ಯರನ್ನು ರಾಜಾಸ್ಥಾನದಲ್ಲಿ ನೇಮಕ ಮಾಡಲಾಗುತ್ತಿತ್ತು. ವೈದ್ಯರು ತಾವೇ ಗಿಡಮೂಲಿಕೆಗಳಿಂದ ಔಷಧಗಳನ್ನು ಬೇಕಾದಾಗ ತಯಾರಿಸಿ ಉಚಿತವಾಗಿ ರೋಗಿಗಳಿಗೆ ಕೊಡುತ್ತಿದ್ದರು. ಕಾಷ್ಠೌಷಧಿಗಳು ಅದರಲ್ಲೂ ಗಿಡಮೂಲಿಕಾ ಪ್ರಯೋಗಗಳೇ ಪ್ರಾಮುಖ್ಯ ಪಡೆದಿದ್ದುವು. ಕೆಲವು ದೇವಾಲಯಗಳಲ್ಲಿ ಸಹ ಔಷಧಿಗಳನ್ನು ಜನರಿಗೆ ಉಚಿತವಾಗಿ ನೀಡಲಾಗುತ್ತಿತ್ತು. ವೈದ್ಯರಿಗೆ ಸಮಾಜದಲ್ಲಿ ಗೌರವಾದರಗಳು ದೊರಕುತ್ತಿದ್ದುವು. ವಸ್ತುರೂಪವಾದ ಸಂಭಾವನೆಯೇ ಹೆಚ್ಚಾಗಿದ್ದರೂ ಕೆಲವು ವೇಳೆ ಧನರೂಪ ಸಂಭಾವನೆ ವೈದ್ಯರಿಗೆ ದೊರಕುತ್ತಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಶಾಸ್ತ್ರಜ್ಞರಾದ ಅರ್ಚಕರು, ಜ್ಯೋತಿಷಿಗಳು ವೈದ್ಯ ವೃತ್ತಿಯನ್ನು ನಡೆಸುತ್ತಿದ್ದರು.

**ಮಧ್ಯಯುಗ:** ವಿಜಯನಗರ ಸಾಮ್ರಾಜ್ಯದ ದಕ್ಷ ಆಡಳಿತ ಈ ಯುಗದ ಪ್ರಮುಖ ಘಟನೆ. ಈ ಅರಸರು ಹಿಂದೂ ಧರ್ಮದ ಪುನರುಜ್ಜೀವನಕ್ಕಾಗಿ ಮಾಡಿದ ಕಾರ್ಯಗಳಿಂದ ಪ್ರಾಚೀನ ವಿದ್ಯೆಗಳು ಬದುಕಿಕೊಂಡುವು. ವಿದ್ಯಾರಣ್ಯರ ತತ್ತ್ವಶಾಸ್ತ್ರ ಗ್ರಂಥಗಳು, ಸಾಯಣರ ಚತುರ್ವೇದ ಭಾಷ್ಯಗಳು ಸಮಾಜದಲ್ಲಿ ಹಿಂದೂ ಧರ್ಮವನ್ನು ಸ್ಥಿರಗೊಳಿಸಿದುವು. ಪರಧರ್ಮ ಸಹಿಷ್ಣುಗಳಾಗಿದ್ದ ರಾಯರು ಅವನ್ನೂ ಪೋಷಿಸಿದರು. ವಿಜಯನಗರದ ಅಧಿರಾಜನಾಗಿದ್ದ ಮುಗಳೀಪುರದ ಅರಸ ಮಂಗರಾಜ (1360) ವಿಷ ಚಿಕಿತ್ಸೆಯಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ. ಈತನ ಖಗೇಂದ್ರ ಮಣಿದರ್ಪಣ ಕನ್ನಡ ಶಾಸ್ತ್ರ ಸಾಹಿತ್ಯದಲ್ಲಿ ಶ್ರೇಷ್ಠ ಗ್ರಂಥ. ಒಂದನೆಯ ಬುಕ್ಕರಾಯನ (1356–76) ಆಸ್ಥಾನ ವೈದ್ಯ ವಿಷ್ಣುದೇವನ ರಸರಾಜಲಕ್ಷ್ಮಿ, ಇಮ್ಮಡಿ ಬುಕ್ಕರಾಯನ (1404–24) ಆಸ್ಥಾನ ವೈದ್ಯ ಲಕ್ಷ್ಮಣಪಂಡಿತನ ವೈದ್ಯರಾಜ ವಲ್ಲಭ, ಅಭಿನವ ಚಂದ್ರನ (1400) ಅಶ್ವಶಾಸ್ತ್ರ, ವಲ್ಲಭೇಂದ್ರನ (1435) ವೈದ್ಯ ಚಿಂತಾಮಣಿ, ಕಲ್ಲರಸನ (1450) ಜನವಶ್ಯವೆಂಬ ಕಾಮಶಾಸ್ತ್ರ ಗ್ರಂಥ, ಕವಿಲಿಂಗನ (1490) ಕಾಮಶಾಸ್ತ್ರದ ಪದಗಳು, ದಾಮೋದರ ಪಂಡಿತನ ಆರೋಗ್ಯ ಚಿಂತಾಮಣಿ, ಭಟ್ಟನರಹರಿಯ ವಾಗ್ಭಟ ಮಂಡನ, ಶ್ರೀಧರ ದೇವನ (1500) ವೈದ್ಯಾಮೃತ, ಬಾಚರಸನ (1500) ಅಶ್ವವೈದ್ಯ, ಮೂರನೆಯ ಮಂಗರಸನ (1508) ಸೂಪಶಾಸ್ತ್ರ, ಸಾಳ್ವನ (1550) ವೈದ್ಯಸಾಂಗತ್ಯ, ರಘುನಾಥ ಸೂರಿಯ, ಭೋಜನ ಕುತೂಹಲ, ಯಳಂದೂರು ಚನ್ನರಾಜನ (1570) ವೈದ್ಯಸಾರ ಸಂಗ್ರಹ, ವೀರಭದ್ರರಾಜನ (1600) ಹಸ್ತಾಯುರ್ವೇದ ಟೀಕೆ, ರಾಮಚಂದ್ರ ಪಂಡಿತನ (1625) ಅಶ್ವಶಾಸ್ತ್ರ, ಪದ್ಮಣ ಪಂಡಿತನ (1627) ಹಯಸಾರ ಸಮುಚ್ಚಯ, ಬಿಜಾಪುರದ ಸುಲ್ತಾನ್ ಇಮ್ಮಡಿ ಆದಿಲ್‌ಷಹನ (1626–56) ಆಸ್ಥಾನದಲ್ಲಿದ್ದ ಲೋಲಂಬರಾಜನ ಸದ್ವೈದ್ಯಜೀವನ ಮತ್ತು ವೈದ್ಯಾವತಂಸಗಳು, ಕೊಟ್ಟೂರು ಬಸವರಾಜನ (1670) ಶಿವತತ್ತ್ವರತ್ನಾಕರದಲ್ಲಿ ಆಯುರ್ವೇದದ ವಿವರಣೆ, ಶ್ರೀಕಂಠ ನಂದಿಯ ಪರ್ಯಾಯ ಮಂಜರಿ, ಶ್ರೀಕಂಠ ಪಂಡಿತನ ವೈದ್ಯಸಾರ ಸಂಗ್ರಹ, ಶ್ರೀಪಂಡಿತನ ಯೋಗಶತಕ, ಕೃಷ್ಣಾರ್ಯನ ಸಿದ್ಧಯೋಗ ಸಮುಚ್ಚಯ, ಸಲಾದು ಮಾಧವಾಚಾರ್ಯನ ಚಿಕಿತ್ಸಾಸಾರ ಸಂಗ್ರಹ, ಗಂಗಾಧರನ ಭೇಷಜ ಕಲ್ಪ, ಕಳಲೆಯ ವೀರರಾಜನ (1720) ಸಕಲ ವೈದ್ಯ ಸಂಹಿತಾ ಸಾರಾರ್ಣವ, ನಂಜರಾಜನ (1740) ವೈದ್ಯಸಾರಸಂಗ್ರಹ, ತಿಮ್ಮರಾಜ ಗೌಡನ (1750) ಸ್ತ್ರೀ ವೈದ್ಯ, ಇಮ್ಮಡಿ ಕೃಷ್ಣರಾಜ ಒಡೆಯನ (1759) ಬಾಹಟ ಟೀಕೆ, ಲಕ್ಷ್ಮಣಪಂಡಿತನ (1775) ಅಕಾರಾದಿ ನಿಘಂಟು– ಈ ಯುಗದ ಮುಖ್ಯ ವೈದ್ಯಗ್ರಂಥಗಳು.

ಹದಿನೈದನೆಯ ಶತಮಾನದವರೆಗೆ ದಕ್ಷಿಣ ಭಾರತದಲ್ಲಿ ಏಕೈಕ ವೈದ್ಯ ಪದ್ಧತಿಯಾಗಿದ್ದ ಆಯುರ್ವೇದಕ್ಕೆ ಎದುರಾಳಿಗಳಾಗಿ ಯುನಾನಿ ಪದ್ಧತಿ ಹದಿನಾರನೆಯ ಶತಮಾನದಲ್ಲೂ ಐರೋಪ್ಯ ಪದ್ಧತಿ ಹದಿನೇಳನೆಯ ಶತಮಾನದಲ್ಲೂ ಕ್ರಮೇಣ ನೆಲೆಯೂರಿದುವು. ಮುಸ್ಲಿಂ ಸುಲ್ತಾನರ ಕಾಲದಲ್ಲಿ ಯುನಾನಿ ಹಕೀಮರು ರಾಜಾಸ್ಥಾನ ಮತ್ತು ಸಮಾಜದಲ್ಲಿ ವೈದ್ಯವೃತ್ತಿಯನ್ನಾರಂಭಿಸಿದರು. ಹಿಂದೂಶಾಸ್ತ್ರಜ್ಞರು ಮುಸ್ಲಿಂ ದಾಳಿಕಾರರ ಹೆದರಿಕೆಯಿಂದ ತಮ್ಮಲ್ಲಿದ್ದ ಗ್ರಂಥಗಳನ್ನು ತೆಗೆದುಕೊಂಡು ಗ್ರಾಮಾಂತರ ಪ್ರದೇಶಗಳಿಗೆ ವಲಸೆ ಹೋದರು. ತತ್ಪರಿಣಾಮವಾಗಿ ಶಾಸ್ತ್ರೀಯ ಅಧ್ಯಯನವಿಲ್ಲದೆ ಕುಹಕವೈದ್ಯರು ಸಮಾಜದಲ್ಲಿ ಹೆಚ್ಚಿ ಜನರ ನಿಂದೆಗೆ ಗುರಿಯಾದರು. ಸುಲಭವಾದ ಮೂಲಿಕಾವೈದ್ಯಕ್ಕೆ ಬದಲಾಗಿ ರಸಾಯನ ಪ್ರಯೋಗಗಳಿಂದ ಔಷಧಿಗಳನ್ನು ತಯಾರಿಸುವ ಕ್ರಮ ಹೆಚ್ಚು ರೂಢಿಗೆ ಬಂದುದು ಈ ಯುಗದ ಮತ್ತೊಂದು ಪ್ರಮುಖ ಘಟನೆ.

**ಆಧುನಿಕ ಯುಗ:** ಬ್ರಿಟಿಷ್ ಆಡಳಿತ ಭಾರತದ ಆದ್ಯಂತ ಕ್ರಮ ಕ್ರಮವಾಗಿ ಹರಡಿದ ಪರಿಣಾಮವಾಗಿ ಯುರೋಪಿನ ವೈದ್ಯಪದ್ಧತಿ ರಾಜಮಾನ್ಯತೆಯನ್ನು ಪಡೆಯಿತು. ಜನಾರೋಗ್ಯ ರಕ್ಷಣಾಕ್ಷೇತ್ರದಲ್ಲಿ ಪ್ರಥಮವಾಗಿ ಕಾರ್ಯನಿರತವಾದ ಈ ಪದ್ಧತಿ ದಿನೇ ದಿನೇ ಬೆಳೆಯುತ್ತ ಇಂದು ಎಲ್ಲೆಲ್ಲಿಯೂ ರೂಢಮೂಲವಾಗಿದೆ. ಪ್ರಾಚೀನ ಆಯುರ್ವೇದಕ್ಕೆ ಇದರಿಂದ ಬಹುಮಟ್ಟಿನ ಧಕ್ಕೆ ತಗುಲಿತಾದರೂ ತನ್ನ ಅಂತಃಸತ್ತ್ವದಿಂದ ಅದು ಇಂದಿಗೂ ಉಳಿದು ತನ್ನ ವೈಶಿಷ್ಟ್ಯದಿಂದ ಜನತಾಸೇವೆಯನ್ನು ಯಥಾಶಕ್ತಿ ಸಲ್ಲಿಸುತ್ತಿದೆ. ಪ್ರಾಚೀನ ಸಂಸ್ಕೃತಿವತ್ಸಲರಾದ ಮೈಸೂರು ರಾಜಮನೆತನದ ಒಡೆಯರು ಇದರ ಏಳಿಗೆಗಾಗಿ ಪ್ರಯತ್ನಗಳನ್ನು ಮಾಡಿದ್ದಾರೆ. ಆಯುರ್ವೇದಾಧ್ಯಯನವನ್ನು ವ್ಯವಸ್ಥೆಗೊಳಿಸುವ ಉದ್ದೇಶದಿಂದ ಮಹಾರಾಜ ಚಾಮರಾಜ ಒಡೆಯರು ಮೈಸೂರು ನಗರದ ಸಂಸ್ಕೃತ ಮಹಾಪಾಠ ಶಾಲೆಯಲ್ಲಿ 1908ರಲ್ಲಿ ಆಯುರ್ವೇದ ವಿಭಾಗವೊಂದನ್ನು ಸ್ಥಾಪಿಸಿದರು. 1930ರಲ್ಲಿ ಪ್ರತ್ಯೇಕವಾದ ವಿದ್ಯಾಶಾಲೆಯೊಂದು ಏರ್ಪಟ್ಟು ಇಂದಿನವರೆಗೆ ಸಾವಿರಾರು ವಿದ್ಯಾರ್ಥಿಗಳನ್ನು ವೈದ್ಯರನ್ನಾಗಿ ಮಾಡಿದೆ. ಇತ್ತೀಚೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯುರ್ವೇದಾಭಿವೃದ್ಧಿ ಗಾಗಿ ಅನೇಕ ಯೋಜನೆಗಳನ್ನು ಕೈಗೊಂಡಿವೆ. (ಕೆ.ಆರ್.ಎಸ್.)

**ಕರ್ನಾಟಕದಲ್ಲಿ ಶಿಕ್ಷಣ:** ಭಾರತದ ಸಂವಿಧಾನದ ಪ್ರಕಾರ ಶಿಕ್ಷಣ ಮುಖ್ಯವಾಗಿ ರಾಜ್ಯ ಸರ್ಕಾರಗಳಿಗೆ ಸೇರಿದ ವಿಷಯ. ವಿವಿಧ ರಾಜ್ಯಗಳಲ್ಲಿಯ ಉಚ್ಚ ಶಿಕ್ಷಣ ಮತ್ತು ಸಂಶೋಧನೆಗಳ ಮಟ್ಟವನ್ನು ನಿರ್ಧರಿಸುವುದೂ ಅವನ್ನು ಕ್ರೋಡೀಕರಿಸುವುದೂ ಕೇಂದ್ರ ಸರ್ಕಾರದ ಹೊಣೆ. 19ನೆಯ ಶತಮಾನದಲ್ಲಿ ಇಂಗ್ಲೆಂಡಿನ ಶಿಕ್ಷಣ ವ್ಯವಸ್ಥೆಯ ಮಾದರಿಯಲ್ಲಿ ಭಾರತದಲ್ಲಿ ಸ್ಥಾಪಿತವಾದ ವ್ಯವಸ್ಥೆಯನ್ನೇ ಕರ್ನಾಟಕದಲ್ಲೂ ಕಾಣಬಹುದಾದರೂ ಇದರಲ್ಲಿ ಕರ್ನಾಟಕಕ್ಕೆ ವಿಶಿಷ್ಟವಾದ ಕೆಲವು ಲಕ್ಷಣಗಳನ್ನು ಕಾಣಬಹುದಾಗಿದೆ. ಸುಮಾರು ಎರಡು ಸಾವಿರ ವರ್ಷಗಳಿಂದ ಕರ್ನಾಟಕದಲ್ಲಿ ಬೆಳೆದು ಬಂದ ಶಿಕ್ಷಣಾಪರಂಪರೆಯೊಂದು ಇದಕ್ಕೆ ದತ್ತವಾಗಿದೆ. ಇಂದಿಗೂ ಅಲ್ಲಲ್ಲಿ ಉಳಿದಿರುವ ಹಳೆಯ ಪದ್ಧತಿಯ ಕೆಲವು ಅಂಶಗಳಿಂದ ಕರ್ನಾಟಕದ ಪ್ರಾಚೀನ ಮತ್ತು ಮಧ್ಯಯುಗಗಳ ಶಿಕ್ಷಣ ಇತಿಹಾಸವನ್ನು ಸ್ಥೂಲವಾಗಿ ರೂಪಿಸಬಹುದಾಗಿದೆ. ಪ್ರಾಚೀನ ಕಾಲ, ಮಧ್ಯಯುಗ ಮತ್ತು ಆಧುನಿಕ ಯುಗಗಳಲ್ಲಿ ಕರ್ನಾಟಕದಲ್ಲಿ ಶಿಕ್ಷಣ ಪದ್ಧತಿ ರೂಪುಗೊಂಡ ಬಗೆಯನ್ನೂ ಕರ್ನಾಟಕಕ್ಕೆ ಸಂಬಂಧಿಸಿದಂತೆ ಶಿಕ್ಷಣದ ಮುಖ್ಯ ಅಂಕಿಅಂಶಗಳನ್ನೂ ಪ್ರಕೃತ ಲೇಖನದಲ್ಲಿ ಕೊಡಲಾಗಿದೆ.

**ಪ್ರಾಚೀನ ಕರ್ನಾಟಕದಲ್ಲಿ:** ಕರ್ನಾಟಕದ ಜನಜೀವನ ಹಲವು ಕ್ಷೇತ್ರಗಳಲ್ಲಿ ವಿಶಿಷ್ಟವಾದದ್ದಾದರೂ ಅದರ ಶಿಕ್ಷಣಪದ್ಧತಿ ಅಖಂಡ ಭಾರತದ ಶಿಕ್ಷಣ ಪ್ರವಾಹದೊಡನೆ ಬೆಳೆದು ಬಂದದೇ ಆಗಿದೆ. ಪ್ರ.ಶ.ಪೂ.3ನೆಯ ಶತಮಾನಕ್ಕೆ ಹಿಂದೆ ಇಲ್ಲಿಯ ಶಿಕ್ಷಣ ಹೇಗಿತ್ತೆಂಬುದನ್ನು ಊಹಿಸುವುದು ಕಷ್ಟ. ಪ್ರ.ಶ.ಪೂ.2ನೆಯ ಶತಮಾನದಿಂದ ಈಚಿನ ಕಾಲದಲ್ಲಿ ದೊರೆತಿರುವ ಹಲವು ಆಧಾರಗಳನ್ನು ಅನುಸರಿಸಿ ಕರ್ನಾಟಕದಲ್ಲಿ ಶಿಕ್ಷಣ ಹೇಗಿತ್ತು, ಹೇಗೆ ಬೆಳೆದು ಬಂತು ಎಂಬುದನ್ನು ವಿವರಿಸಲು ಇಲ್ಲಿ ಯತ್ನಿಸಿದೆ.

ಕರ್ನಾಟಕದ ರಾಜಕೀಯ ಇತಿಹಾಸ ಸಾತವಾಹನ ಅರಸರ ಕಾಲದಿಂದ ಆರಂಭವಾಗುವುದಾದರೂ ಅದಕ್ಕೂ ಹಿಂದಿನ ಕಾಲದಲ್ಲೂ ಇಲ್ಲಿ ವಿಶಿಷ್ಟವಾದ ಶಿಕ್ಷಣ ಪದ್ಧತಿಯೊಂದು ಬೆಳೆದಿತ್ತೆಂದು ಭಾವಿಸಬಹುದಾಗಿದೆ. ಚಂದ್ರಗುಪ್ತಮೌರ್ಯ ತನ್ನ ಗುರು ಭದ್ರಬಾಹುವಿನೊಂದಿಗೆ ಕ್ರಿ.ಪೂ. 4ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಆಗಮಿಸಿದನೆಂದೂ ಅವರೊಂದಿಗೆ ಇಲ್ಲಿಗೆ ಜೈನಧರ್ಮವೂ ಜೈನ ಸಂಸ್ಕೃತಿ ಸಂಪ್ರದಾಯಗಳೂ ಆಗಮಿಸಿದುವೆಂದೂ ಹೇಳಲಾಗಿದೆ. ಆ ಧರ್ಮದ ತತ್ತ್ವಪ್ರಚಾರಕ್ಕಾಗಿ ಜೈನಬಸದಿಗಳು ಅಸ್ತಿತ್ವಕ್ಕೆ ಬಂದುವು. ಅಂದಿಗಾಗಲೆ ಕರ್ನಾಟಕದಲ್ಲಿ ಅನುಷ್ಠಾನದಲ್ಲಿದ್ದಿರಬಹುದಾದ ಹಿಂದೂ (ವೈದಿಕ) ವ್ರತಾಚಾರಗಳ ಮೇಲೆ ಅವು ನೂತನ ಪ್ರಭಾವ ಬೀರಿದುವು. ಮೋಕ್ಷಸಾಧನೆಗೆ ಭಕ್ತಿ, ನಂಬಿಕೆ, ಆರಾಧನೆಗಳ ಜೊತೆಗೆ ಸುಜ್ಞಾನದ ಆವಶ್ಯಕತೆಯನ್ನು ಎತ್ತಿ ಹಿಡಿದು ಅದರ ಸಾಧನೆಗೆ ಶಿಕ್ಷಣದ ಅನಿವಾರ್ಯತೆಯ ಕಡೆ ಗಮನ ಕೊಡುವಂತಾಯಿತು. ಧಾರ್ಮಿಕ ಮತ್ತು ಮತೀಯ ಕೇಂದ್ರಗಳಲ್ಲಿ ಶಿಕ್ಷಣ ಸೇವಾಕಾರ್ಯಕ್ಕೆ ಈ ಮೂಲಕ ಒಂದು ಮತೀಯ ಅನುಮೋದನೆ ದೊರಕಿತು. ಆದರೆ ಶಿಕ್ಷಣ ಕೇವಲ ವೈಯಕ್ತಿಕ ಕಾರ್ಯವಾಗಿತ್ತೇ ಹೊರತು ಅದರ ವಿಶಿಷ್ಟ ಹೊಣೆಗಾರಿಕೆಯ ನಿರ್ವಹಣೆಗೆ ಸಂಘಟಿತ ಸಂಸ್ಥೆಗಳ ಸ್ಥಾಪನೆಯಾಗಲಿಲ್ಲ.

ಅನಂತರ ಚಂದ್ರಗುಪ್ತ ಮೌರ್ಯನ ಮೊಮ್ಮಗನಾದ ಅಶೋಕ ಬೌದ್ಧಧರ್ಮವನ್ನವಲಂಬಿಸಿ ಕರ್ನಾಟಕದಲ್ಲಿ ಅದರ ಪ್ರಚಾರಕ್ಕಾಗಿ ಶಾಸನಗಳನ್ನು ಸ್ಥಾಪಿಸಿದನಷ್ಟೆ. ಬ್ರಾಹ್ಮೀ ಲಿಪಿಯಲ್ಲಿ ಬರೆದ ಪ್ರಾಕೃತ ಭಾಷೆಯ ಈ ಶಾಸನಗಳು ರಾಯಚೂರು ಜಿಲ್ಲೆಯ ಕೊಪ್ಪಳ, ಮಸ್ಕಿ, ಬ್ರಹ್ಮಗಿರಿ, ಸಿದ್ದಾಪುರ ಮುಂತಾದೆಡೆ ದೊರಕಿವೆ. ಆಗ ಪ್ರಚಾರದಲ್ಲಿದ್ದ ಸಂಸ್ಕೃತದ ಬದಲು ದೇಶೀಯ ಭಾಷೆಯ ಪ್ರಚಾರಕ್ಕೆ ಇವು ನಾಂದಿಯಾದುವು. ಜೊತೆಗೆ ಅವುಗಳನ್ನು ಅರಿಯಬೇಕಾದರೆ ಸಾಮಾನ್ಯ ಶಿಕ್ಷಣದ ಅಗತ್ಯವೂ ಕಂಡುಬಂದು ಅದರ ಪ್ರಚಾರಕ್ಕೆ ನಿರ್ದಿಷ್ಟ ಸಂಸ್ಥೆಗಳು ಅಗತ್ಯವೆನಿಸಿದುವು.

ಅಂದಿಗಾಗಲೆ ಬೌದ್ಧಧರ್ಮ ದಕ್ಷಿಣದಲ್ಲಿ ಪ್ರಚಾರದಲ್ಲಿತ್ತು. ಅದರ ಪ್ರಚಾರಕ್ಕಾಗಿ ಏರ್ಪಟ್ಟಿದ್ದ ಬೌದ್ಧಭಿಕ್ಷುಗಳ ಶಿಕ್ಷಣಕ್ಕಾಗಿ ಉತ್ತರದಲ್ಲಿ ಮಠಗಳು ಸಂಘಟಿತಸಂಸ್ಥೆಗಳು ರೂಪದಲ್ಲಿ ಆರಂಭವಾಗಿದ್ದುವು. ವೈದಿಕ ಧರ್ಮ ಶಿಕ್ಷಣದಲ್ಲಿ ಈ ಬಗೆಯ ಸಂಘಟನೆ ಇರಲಿಲ್ಲ. ಅದು ವೈಯಕ್ತಿಕವಾಗಿ ಗುರುಕುಲ, ಆಶ್ರಮ ಮುಂತಾದೆಡೆಗಳಲ್ಲಿ ನಡೆಯುತ್ತಿತ್ತು. ಆದರೆ ಬೌದ್ಧರು ಶಿಕ್ಷಣ ಕೇವಲ ಕೆಲವರ ಸೊತ್ತಲ್ಲವೆಂಬ ತತ್ತ್ವವನ್ನು ಎತ್ತಿ ಹಿಡಿದು, ಬಡವರು ಬಲ್ಲಿದರು, ಹೆಂಗಸರು, ಗಂಡಸರು, ಉತ್ತಮರು, ಅಧಮರು ಎಲ್ಲರಿಗೂ ಅದು ಸಮಾನವೆಂದು ಶಿಕ್ಷಣದಲ್ಲಿ ಲೋಕಸತ್ತೆಯನ್ನು ತಂದರು. ಅದಕ್ಕಾಗಿ ವಿಹಾರಗಳನ್ನೂ ಮಠಗಳನ್ನೂ ಸ್ಥಾಪಿಸಿದರು. ಅಲ್ಲಿ ಧಾರ್ಮಿಕ ಶಿಕ್ಷಣದಂತೆ ಲೌಕಿಕ ಶಿಕ್ಷಣವನ್ನೂ ನೀಡುತ್ತಿದ್ದರು. ಅವು ಆ ರೀತಿಯಲ್ಲಿ ಕೆಲಸ ಮಾಡುತ್ತಿರುವುದು ಅಲ್ಲಲ್ಲಿ ಇಂದಿಗೂ ಉಳಿದುಕೊಂಡು

ಬಂದಿದೆ. ಪ್ರ.ಶ.1ನೆಯ ಶತಮಾನದ ವೇಳೆಗೆ ದೇಶಾದ್ಯಂತ ಅಲ್ಲಲ್ಲಿ ಅವು ಆರಂಭವಾಗಿದ್ದುವು. ವಿದ್ಯಾದಾನ ಮಹಾ ಪುಣ್ಯಕಾರ್ಯವೆಂಬ ದೃಷ್ಟಿ ಬೆಳೆದು ಬಂದಿತ್ತು. ರಾಜರೂ ಧನಿಕರೂ ವಿಹಾರಗಳನ್ನು ಸ್ಥಾಪಿಸಿ ಅವಕ್ಕೆ ದತ್ತಿ ಕೊಡುವ ಪದ್ಧತಿ ಆರಂಭವಾಗಿತ್ತು. ಕ್ರಿ.ಶ.3ನೆಯ ಶತಮಾನದ ಬನವಾಸಿಯ ಒಂದು ಶಾಸನದಂತೆ ಶಿವಸ್ಕಂದ ನಾಗಶ್ರೀ ಎಂಬ ಚುಟು ರಾಜಕುಮಾರಿ ವಿದ್ಯಾದಾನಕ್ಕಾಗಿ ಒಂದು ಬೌದ್ಧ ವಿಹಾರವನ್ನು ನಿರ್ಮಿಸಿದ್ದಳು. ಇದೇ ನಮಗೆ ದೊರಕುವ ಬೌದ್ಧವಿಹಾರದ ಮೊಟ್ಟ ಮೊದಲ ಪರಿಚಯ. ಅಂದಿಗಾಗಲೆ ದೇಶದಲ್ಲಿ ಬೆಳೆಯುತ್ತಿದ್ದ ವಿಹಾರಗಳ ಸಂಖ್ಯೆ 7ನೆಯ ಶತಮಾನದ ಎರಡನೆಯ ಪುಲಕೇಶಿಯ ಆಳ್ವಿಕೆಯ ಹೊತ್ತಿಗೆ ನೂರಕ್ಕೆ ಏರಿತ್ತು. ಅಲ್ಲಿ ನೂರಾರು ಯತಿಗಳು ಇದ್ದರೆಂಬುದು ಯುವಾನ್ ಚಾಂಗನ ವರದಿಯಿಂದ ತಿಳಿದುಬರುತ್ತದೆ. ಜನಸಾಮಾನ್ಯರು ಪಾಂಡಿತ್ಯಪ್ರಿಯರೆಂಬುದನ್ನೂ ಅದೇ ವರದಿ ಸೂಚಿಸುತ್ತದೆ. ಇವೆರಡರ ಆಧಾರದ ಮೇಲೆ, ವಿಹಾರಗಳು ಸಂನ್ಯಾಸಿಗಳಿಗೆ ಧಾರ್ಮಿಕ ಶಿಕ್ಷಣವೀಯುವುದರ ಜೊತೆಗೆ ಮಠಗಳೂ ಜನರಿಗೆ ಪ್ರಾಥಮಿಕ ಮತ್ತು ಉನ್ನತ ಲೌಕಿಕ ಶಿಕ್ಷಣವನ್ನು ದೊರಕಿಸುತ್ತಿದ್ದುವು ಎಂದು ತಿಳಿಯಬಹುದು. ಏಳು ವರ್ಷ ವಯಸ್ಸಿನ ಮಕ್ಕಳು ಅಲ್ಲಿಗೆ ಸೇರುತ್ತಿದ್ದರು. ಅಲ್ಲಿ ಅಕ್ಷರಾಭ್ಯಾಸ ನಡೆದು ವ್ಯಾಕರಣ, ಕುಶಲವೃತ್ತಿ, ಯಂತ್ರೋಪಕರಣ ಕಲೆ, ಜ್ಯೋತಿಷ್ಯ, ವೈದ್ಯಶಾಸ್ತ್ರ, ಮಂತ್ರಪ್ರಯೋಗ, ತರ್ಕಶಾಸ್ತ್ರ, ಆತ್ಮವಿಜ್ಞಾನ ಇವನ್ನು ಬೋಧಿಸುತ್ತಿದ್ದರು. ಉನ್ನತ ಶಿಕ್ಷಣ ಪಡೆಯತಕ್ಕವರು 20, 22, 24ನೆಯ ವರ್ಷಗಳ ತನಕ ಶಿಕ್ಷಣ ಪಡೆಯುತ್ತಿದ್ದರು.

ಮೌರ್ಯರ ಕಾಲದಿಂದ ರಾಷ್ಟ್ರಕೂಟರ ಕಾಲದವರೆಗೆ ಎಂದರೆ 8–9ನೆಯ ಶತಮಾನಗಳ ತನಕ ವೈದಿಕ ಮತ್ತು ಜೈನ ಶಿಕ್ಷಣಗಳೊಡನೆ ಬೌದ್ಧ ಶಿಕ್ಷಣವೂ ಪ್ರಚಾರದಲ್ಲಿತ್ತು. ಬಾದಾಮಿ ಚಳುಕ್ಯರ ಆಳ್ವಿಕೆಯ ಕೊನೆಯ ವೇಳೆಗೆ ಬೌದ್ಧ ಶಿಕ್ಷಣ ವ್ಯವಸ್ಥೆ ಅವನತಿಗಿಳಿಯುತ್ತ ಬಂದಂತೆ ಕಾಣುತ್ತದೆ. ಕರ್ನಾಟಕದಲ್ಲಿ ಸ್ತಿತ್ವಕ್ಕೆ ಬಂದ ಕೊನೆಯ ಬೌದ್ಧವಿಹಾರಗಳಲ್ಲಿ 1095ರ ಸುಮಾರಿನಲ್ಲಿ ಸಂಗಮದ ಶೆಟ್ಟಿ ಧಾರವಾಡ ಜಿಲ್ಲೆಯ ಡಂಬಳದಲ್ಲಿ (ಧರ್ಮವೊಳಲ್) ಕಟ್ಟಿಸಿದ್ದೂ ಒಂದೆಂದು ಹೇಳುತ್ತಾರೆ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾಮೆಯಲ್ಲಿ 12ನೆಯ ಶತಮಾನದವರೆಗೂ ಬೌದ್ಧಧರ್ಮವನ್ನು ಅಧ್ಯಯನ ವಿಷಯವನ್ನಾಗಿ ಮಾಡಿಕೊಳ್ಳಲಾಗಿತ್ತು.

**ಪ್ರಾಥಮಿಕ ಶಿಕ್ಷಣ:** ಪ್ರಾಚೀನ ಭಾರತದ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೊರೆತಿರುವ ಸಾಕ್ಷ್ಯಾಧಾರಗಳೆಲ್ಲ ಬಹುಮಟ್ಟಿಗೆ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದವು. ಪ್ರಾಥಮಿಕ ಶಿಕ್ಷಣಕ್ಕಿದ್ದ ಸೌಲಭ್ಯಗಳನ್ನು ಈಚೆಗೆ ಇಲ್ಲಿಯ ದೇಶೀಯ ಶಿಕ್ಷಣಪದ್ಧತಿಯಲ್ಲಿದ್ದ ವ್ಯವಸ್ಥೆಯ ಆಧಾರದ ಮೇಲೆ ಊಹಿಸಿಕೊಳ್ಳಬೇಕಾಗಿದೆ. ರಾಜಮಹಾರಾಜರೂ ಇತರ ಧನಿಕರೂ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಪಂಡಿತರನ್ನು ನೇಮಿಸಿಕೊಳ್ಳುತ್ತಿದ್ದರೆನ್ನಬಹುದು; ಅಂತೆಯೆ ಕೆಲವು ವರ್ಣೀಯರಿಗೆ ಮತೀಯವಾದ ಸೌಲಭ್ಯಗಳು ಇದ್ದಿರಬಹುದು. ಮಿಕ್ಕ ಬಹುತೇಕ ಮಂದಿಗೆ ಪ್ರಾಥಮಿಕ ಶಿಕ್ಷಣದ ಸೌಲಭ್ಯ ಬಹುಶಃ ಇದ್ದಿರಲಾರದು. ಊರಿನ ದೇವಾಲಯದಲ್ಲಿ, ಚಾವಡಿಯಲ್ಲಿ, ಧನಿಕರ ಪಡಸಾಲೆಗಳಲ್ಲಿ ಮಕ್ಕಳಿಗಾಗಿ ಅಕ್ಷರಾಭ್ಯಾಸದ ತರಗತಿಗಳು ನಡೆಯುತ್ತಿದ್ದಿರಬಹುದು. ಕ್ರಿ.ಶ. ದ ಆರಂಭದ ಹೊತ್ತಿಗೆ ಬೌದ್ಧಧರ್ಮದ ಪ್ರಚಾರದ ಫಲವಾಗಿ ಕನ್ನಡ ಅಕ್ಷರಾಭ್ಯಾಸಕ್ಕೆ ಪ್ರೋತ್ಸಾಹ ಬಂದಿರಬೇಕು. ಅದನ್ನು ಬಾಲಶಿಕ್ಷೆ, ಕನ್ನಡ ಶಿಕ್ಷೆ ಎನ್ನುತ್ತಿದ್ದರು. ಊರಿನಲ್ಲಿ ಪುರಾಣ ಮಾಡುತ್ತಿದ್ದ ಭಟ್ಟರು ಅನೇಕ ವೇಳೆ ಆ ಕಾರ್ಯಕ್ಕೆ ನೇಮಕವಾಗುತ್ತಿದ್ದರು. ಅದಕ್ಕಾಗಿ ಅವರಿಗೆ ಧನ, ಧಾನ್ಯ, ಭೂಮಿ ಅಥವಾ ಇತರ ರೂಪದ ಸಂಭಾವನೆ ದೊರಕುತ್ತಿದ್ದುವೆಂಬುದು ಅನೇಕ ಶಾಸನಗಳಿಂದ ಗೊತ್ತಾಗುತ್ತದೆ. ಅವರನ್ನು ಪಂಡಿತರೆಂದೂ ಕರೆಯುತ್ತಿದ್ದರು. ನರಸಿಂಹರಾಜಪುರದ ಪಂಡಿತರೊಬ್ಬರಿಗೆ 12 ಗದ್ಯಾಣಗಳೂ ತಾಳಗುದದ ಪಂಡಿತರಿಗೆ, 7 ಗದ್ಯಾಣಗಳೂ ಸಿಕ್ಕುತ್ತಿದ್ದುವೆಂದು ಶಾಸನದಲ್ಲಿ ಉಲ್ಲೇಖಗಳಿವೆ. ಉಚ್ಚಶಿಕ್ಷಣಕ್ಕಾಗಿ ಏರ್ಪಟ್ಟಿದ್ದ ಅಗ್ರಹಾರ ಬ್ರಹ್ಮಪುರಿಗಳಲ್ಲೂ ಪ್ರಾಥಮಿಕಶಿಕ್ಷಣಕ್ಕೆ ಅವಕಾಶವಿತ್ತು. ಅಲ್ಲಿ ಉಚ್ಚಶಿಕ್ಷಣದ ಪಂಡಿತರಿಗೆ ಹೆಚ್ಚು ಸಂಭಾವನೆಯೂ ಪ್ರಾಥಮಿಕ ಶಿಕ್ಷಣದ ಪಂಡಿತರಿಗೆ ಕಡಿಮೆ ಸಂಭಾವನೆಯೂ ಬರುತ್ತಿದ್ದುವೆಂದು ರಾಯಲ್ ಏಷ್ಯಾಟಿಕ್ ಸೊಸೈಟಿಯ ಬೊಂಬಾಯಿ ಶಾಖೆಯ ಪತ್ರಿಕೆಯ 9ನೆಯ ಸಂಪುಟದಲ್ಲಿ ಹೇಳಲಾಗಿದೆ. ಅಲ್ಲಿ ಕಲಿಸುತ್ತಿದ್ದುದು ಮುಖ್ಯವಾಗಿ ಅಕ್ಷರಾಭ್ಯಾಸ, ಕಾಗುಣಿತ, ಕನ್ನಡ ಭಾಷೆಯ ಓದು, ಬರೆಹ, ಹ್ಯುಯೆನ್ ತ್ಸಾಂಗನ ಕಾಲಕ್ಕೆ ಆಗಲೆ ಕನ್ನಡದಲ್ಲಿ ಕಾವ್ಯಗಳೂ ಬಂದಿರಬೇಕು. ಅವನ್ನು ಓದಿ ಅರ್ಥಮಾಡಿಕೊಡುವ ಕಾರ್ಯ ಪ್ರಾಥಮಿಕ ತರಗತಿಯ ಅಂತಿಮ ಘಟ್ಟದ ವೇಳೆಗೆ ನಡೆಯುತ್ತಿದ್ದಿರಬೇಕು. ಅಲ್ಲಿಯ ಬೋಧನ ಕ್ರಮ ಇತ್ತೀಚಿನ ವರೆಗೂ ಹಳ್ಳಿಯ ಕೂಲಿಮಠಗಳಲ್ಲಿ ಇದ್ದಂತೆಯೇ ಇದ್ದಿರಬಹುದು. ಮಕ್ಕಳು ಬೆರಳಿನಿಂದ ಮರಳಿನ ಮೇಲೆ ಅಕ್ಷರ ಬರೆದು ಅದನ್ನು ಗಟ್ಟಿಯಾಗಿ ಪಠಿಸುತ್ತ ಕಲಿಯುತ್ತಿದ್ದರು. ಮಗ್ಗಿಯನ್ನು ಸಾಮೂಹಿಕವಾಗಿ ಹೇಳಿಕೊಂಡು ಅಭ್ಯಸಿಸುತ್ತಿದ್ದರು. ಪಾಠವನ್ನು ಅಧ್ಯಾಪಕರು ಹೇಳಿಕೊಡುವಾಗ ಮಕ್ಕಳು ಅದರಂತೆ ಉಚ್ಚರಿಸುತ್ತಿದ್ದರು. ಮಾರನೆಯ ದಿನ ಅದನ್ನು ಮನೆಯಲ್ಲಿ ಓದಿಕೊಂಡು ಬಂದು ಉಪಾಧ್ಯಾಯರ ಮುಂದೆ ಒಪ್ಪಿಸುತ್ತಿದ್ದರು.

**ಉನ್ನತ ಶಿಕ್ಷಣ:** ಶಾಲೆ ಎಂಬ ಪದವನ್ನು ಪ್ರಾಥಮಿಕ ಮತ್ತು ಉನ್ನತಶಿಕ್ಷಣ ಸಂಸ್ಥೆಗಳೆರಡಕ್ಕೂ ಬಳಸುತ್ತಿದ್ದುದು ಕಂಡುಬರುತ್ತದೆ. ಘಟಿಕಗಳು, ಅಗ್ರಹಾರಗಳು, ಬ್ರಹ್ಮಪುರಿಗಳು, ಮಠಗಳು ಮತ್ತು ದೇಗುಲದ ವಿದ್ಯಾಲಯಗಳು ಉನ್ನತಶಿಕ್ಷಣವೀಯುತ್ತಿದ್ದ ಇತರ ಸಂಸ್ಥೆಗಳಾಗಿದ್ದುವು. ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಇವು ಬೇರೆಬೇರೆ ಕಾಲಗಳಲ್ಲಿ ಆರಂಭವಾಗಿ ಬೇರೆಬೇರೆ ಕಾಲಾವಧಿಯ ವರೆಗೆ ಅಸ್ತಿತ್ವದಲ್ಲಿದ್ದ ಸಂಗತಿ ತಿಳಿದುಬರುತ್ತದೆ. ಅವೆಲ್ಲ ಬಹುಮಟ್ಟಿಗೆ ಖಾಸಗಿ ಸಂಸ್ಥೆಗಳಾಗಿದ್ದು, ಆಳರಸರಿಂದಲೂ ದಾನಿಗಳಿಂದಲೂ ದೊರೆಯುತ್ತಿದ್ದ ದತ್ತಿ, ಪುದುವಟ್ಟು, ಕೊಡುಗೆ ಇತ್ಯಾದಿಗಳ ಬೆಂಬಲದಿಂದ ನಡೆದುಕೊಂಡು ಬರುತ್ತಿದ್ದುವು. ಪ್ರ.ಶ.400 ರಿಂದ 1200ರ ತನಕ ಇಡೀ ಭರತಖಂಡದಲ್ಲೆ ಬೌದ್ಧಮಠಗಳೂ ಹಿಂದೂ ದೇವಾಲಯಗಳೂ ಎಲ್ಲೆಲ್ಲೂ ಆರಂಭವಾಗುತ್ತಿದ್ದವು. 500 ರಿಂದ ಅವುಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮ ದಿನಚರಿಯಾಗುತ್ತ ಬಂತು. ಆದರೆ ಹಿಂದೂ ದೇವಾಲಯಗಳಲ್ಲಿ ಉನ್ನತ ಶಿಕ್ಷಣದ ವ್ಯವಸ್ಥೆಯ ಬಗ್ಗೆ ಸಾಕ್ಷ್ಯ ದೊರೆತಿರುವುದು 10ನೆಯ ಶತಮಾನದ ಸುಮಾರಿನದು. ಬಹುಶಃ ಅದಕ್ಕೂ ಹಿಂದೆ ಅವು ಆ ಕಾರ್ಯ ಮಾಡುತ್ತಿದ್ದಿರಬಹುದು. ಅವುಗಳಲ್ಲಿ ಕೆಲವನ್ನು ನಿದರ್ಶನಗಳಾಗಿ ಆಯ್ದುಕೊಂಡು ಪರಿಶೀಲಿಸುವುದರಿಂದ ಅವು ನೀಡುತ್ತಿದ್ದ ಶಿಕ್ಷಣದ ಸ್ವರೂಪವನ್ನು ಪರಿಚಯ ಮಾಡಿಕೊಳ್ಳಬಹುದು.

1. ಘಟಿಕಗಳು: ಇವು ಸಂಖ್ಯೆಯಲ್ಲಿ ವಿರಳವಾಗಿದ್ದರೂ ಕದಂಬರ ಕಾಲದಿಂದಲೂ ಇವುಗಳ ಉಲ್ಲೇಖವುಂಟು. ಕದಂಬವಂಶದ ಮೂಲಪುರುಷನಾದ ಮಯೂರಶರ್ಮ ಕಂಚಿಯ ಒಂದು ಘಟಿಕದಲ್ಲಿ ಶಿಕ್ಷಣ ಪಡೆಯಲು ಯತ್ನಿಸಿದ್ದ. ಕಂಚಿಯ ಘಟಿಕ ಉತ್ತರದಲ್ಲಿ ಈ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ನಲಂದ ವಿಶ್ವವಿದ್ಯಾಲಯದಂತಿದ್ದಿರಬಹುದು. ಅದು ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಅಗ್ರಸ್ಥಾನ ಪಡೆದಿತ್ತು. ಮಹಾಜನರೆಂಬ ಸಂರಕ್ಷಕರ ಮಂಡಲಿ ಅದರ ಕಾರ್ಯನಿರ್ವಹಿಸುತ್ತಿತ್ತು. ಸಾಮಾನ್ಯವಾಗಿ ಅವನ್ನು ದೇವಸ್ಥಾನಗಳಲ್ಲಿ ನಡೆಸುತ್ತಿದ್ದರು. ಕರ್ಣಾಟಕದ ಘಟಿಕಗಳಲ್ಲಿ ಪ್ರಸಿದ್ಧವಾದದ್ದು ಗುಲ್ಬರ್ಗದ ಬಳಿಯ ನಾಗೈಯಲ್ಲಿತ್ತು. ಅಲ್ಲಿ ಒಂದು ಆವರಣದಲ್ಲಿ 257 ವಿದ್ಯಾರ್ಥಿಗಳೂ ಮತ್ತೊಂದರಲ್ಲಿ 400 ವಿದ್ಯಾರ್ಥಿಗಳೂ ಇದ್ದರು. ಅಲ್ಲಿ ವೇಳಾನಿಗದಿಕಾರರೂ ಕಾವಲುಗಾರರೂ ಇದ್ದರು. 200 ಮಂದಿ ವೇದಗಳನ್ನೂ 52 ಮಂದಿ ಶಾಸ್ತ್ರಗಳನ್ನೂ ಅಧ್ಯಯನ ಮಾಡುತ್ತಿದ್ದರು. ವೇದಪಾಠಕ್ಕೆ ಮೂವರೂ ಶಾಸ್ತ್ರಪಾಠಕ್ಕೆ ಮೂವರೂ ಪಂಡಿತರಿದ್ದರು. ಅವರು ಭಟ್ಟದರ್ಶನ, ನ್ಯಾಸ (ವ್ಯಾಕರಣ) ಮತ್ತು ಪ್ರಭಾಕರಗಳನ್ನು ಬೋಧಿಸುತ್ತಿದ್ದರು. ಅಲ್ಲಿ ಒಂದು ದೊಡ್ಡ ಗ್ರಂಥಾಲಯವೂ ಅದನ್ನು ನೋಡಿಕೊಳ್ಳಲು ಆರು ಜನ ಅಧಿಕಾರಿಗಳೂ (ಸರಸ್ವತಿ ಭಂಡಾರಿ) ಇದ್ದರು. ಆ ಘಟಿಕಕ್ಕೆ ಸಂಬಂಧಿಸಿದ ದೇವಾಲಯವೊಂದನ್ನು ನೋಡಿ ಕೊಳ್ಳುವುದಕ್ಕೂ ಅಧ್ಯಾಪಕರ ಮತ್ತು ಇತರರ ರಕ್ಷಣೆಗೂ ಪ್ರತ್ಯೇಕ ಪ್ರತ್ಯೇಕವಾಗಿ ಭೂ ಕೊಡುಗೆಯಿತ್ತು. ಹೀಗೆಯೆ ಇತರ ಕಡೆಗಳಲ್ಲೂ ಘಟಿಕಗಳಿದ್ದುವು. ಅವುಗಳಲ್ಲಿ ಕಡಿಯೂರ್, ಕುಕ್ಕೂರ್, ಹಂಜೇರು (ತುಮಕೂರು ಜಿಲ್ಲೆ) ಮೊರಿಗೆರೆ, ರಾಯಬಾಗ್– ಇವು ಮುಖ್ಯವಾದವು. ಘಟಿಕದಲ್ಲಿ ಶಿಕ್ಷಣವನ್ನು ಮುಗಿಸಿದವರಿಗೆ ಘಟಿಕ ಸಾಹಸ ಎಂಬ ಪದವಿ ಸಿಗುತ್ತಿತ್ತು. ಇದನ್ನು ಘನವಿದ್ವಾಂಸರಿಗೆ ಒಂದು ಗೌರವ ಪದವಿಯಾಗಿಯೂ ಕೊಡಲಾಗುತ್ತಿತ್ತು.

**ಅಗ್ರಹಾರ:** ಕರ್ನಾಟಕದ ಅಗ್ರಹಾರಗಳಲ್ಲಿ ಶಿವಮೊಗ್ಗದ ತಾಳಗುಂದದ ಅಗ್ರಹಾರ ಅತ್ಯಂತ ಪ್ರಾಚೀನವಾದ್ದು. ಇದನ್ನು ಮಯೂರಶರ್ಮನ ಪೂರ್ವಿಕನಾದ ಮುಕ್ಕಣ್ಣ ಕದಂಬ ಸ್ಥಾಪಿಸಿದ. ಅವನು ಉತ್ತರದ ಅಹಿಚ್ಛತ್ರ ಎಂಬ ಸ್ಥಳದಿಂದ 32 ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ಅಲ್ಲಿ ನೆಲೆಸುವಂತೆ ಮಾಡಿದ. ಅವರು ವೇದ, ವೇದಾಂಗ, ಉಪಾಂಗ, ಮೀಮಾಂಸೆ, ತರ್ಕಪದ್ಧತಿ, ಸ್ಮೃತಿ, ಪುರಾಣ, ನಾಟಕ ಇತ್ಯಾದಿಗಳಲ್ಲಿ ಪರಿಣತರಾಗಿದ್ದರು (1091ರ ಶಾಸನ).

ಮೊದಲ ಕದಂಬರು ತಾಳಗುಂದದ ಸ್ಥಾಪನೆಗೆ ಹೆಸರಾಗಿದ್ದಂತೆ ಬಾದಾಮಿ ಚಳುಕ್ಯರು ಬಾದಾಮಿಯ ಅಗ್ರಹಾರಗಳನ್ನು ಸ್ಥಾಪಿಸಿದರು. 699ರ ಒಂದು ಶಾಸನದಂತೆ ವಾತಾಪಿ ಅಥವಾ ಬಾದಾಮಿಯನ್ನು ಒಂದು ಅಧಿಷ್ಠಾನವೆಂದು ಹೆಸರಿಸಿದ್ದರೂ ಅದರ ವರ್ಣನೆಯಿಂದ ಅದೊಂದು ಅಗ್ರಹಾರವಾಗಿತ್ತೆಂಬುದು ಶ್ರುತಪಟ್ಟಿದೆ. ಅಲ್ಲಿ ಚತುರ್ದಶಶಾಸ್ತ್ರ ವಿದ್ಯೆಗಳಲ್ಲಿ ಪರಿಣತರಿದ್ದರು; 2,000 ಮಂದಿ ವಿದ್ವಾಂಸರಿದ್ದರು. ಅದು ಧಾರ್ಮಿಕ ಹಾಗೂ ವೈದಿಕ ಶಿಕ್ಷಣದ ಕೇಂದ್ರವಾಗಿತ್ತೆಂದು ಅದರ ಹೆಸರು ಸೂಚಿಸುವುದಾದರೂ ಅಲ್ಲಿ ಲೌಕಿಕ ವಿದ್ಯೆಗೂ ಪ್ರಾಶಸ್ತ್ಯವಿತ್ತು.

ಚಳುಕ್ಯರ ಮತ್ತೊಂದು ಅಗ್ರಹಾರ ಐಹೊಳೆಯಲ್ಲಿತ್ತು. ಸೋಮಯಾಜಿ ಎಂಬುವನು ಐಹೊಳೆಯ (ಆರ್ಯಪುರ) 500 ಮಂದಿ ಚತುರ್ವೇದಿಗಳ ತಂಡಕ್ಕೆ ದತ್ತಿ ನೀಡಿರುವುದು 8–9ನೆಯ ಶತಮಾನದ ಶಾಸನವೊಂದರಲ್ಲಿ ಉಲ್ಲೇಖವಾಗಿದೆ. ಆ ಅಗ್ರಹಾರ ಅನಂತರವೂ 2–3 ಶತಮಾನಗಳ ತನಕ ಪ್ರಸಿದ್ಧಿ ಉಳಿಸಿಕೊಂಡುಬಂತೆಂದು 1191ರ ಶಾಸನದಿಂದ ತಿಳಿಯಬರುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಬಿಜಾಪುರ ಜಿಲ್ಲೆಯ ಸಾಲೊಟಗಿ ಪ್ರಮುಖ ಅಗ್ರಹಾರವೆನಿಸಿತ್ತು. ಇದನ್ನು ಕೆಲವು ಇತಿಹಾಸಕಾರರು ದೇಗುಲ ವಿದ್ಯಾಲಯ (ಟೆಂಪಲ್ ಕಾಲೇಜ್) ಎಂದೂ

ಪರಿಗಣಿಸುತ್ತಾರೆ. ಇದರ ಹಿಂದಿನ ಹೆಸರು "ಪಾವಿಟ್ಟಿಗೆ". ಇದರೊಡನೆ "ಶಾಲೆ" ಸೇರಿ ಅನಂತರ ಅವೆರಡರ ಹ್ರಸ್ವರೂಪವಾಗಿ "ಸಾಲೊಟಿಗೆ" ಪ್ರಚಾರಕ್ಕೆ ಬಂತು. 3ನೆಯ ಕೃಷ್ಣರಾಜನ ಮುಖ್ಯಮಂತ್ರಿ ನಾರಾಯಣ ಅಲ್ಲಿ 945ರಲ್ಲಿ ಭವ್ಯ ಮಂದಿರವೊಂದನ್ನು ಕಟ್ಟಿಸಿದ. ಅಲ್ಲಿ ವಿವಿಧಭಾಗಗಳಿಂದ ಆಗಮಿಸಿದ್ದ ವಿದ್ವಾಂಸರಿದ್ದರು. ಅವರ ರಕ್ಷಣೆಗಾಗಿ ಸಾಕಷ್ಟು ಭೂಮಿಕಾಣಿಗಳನ್ನು ಒದಗಿಸಲಾಗಿತ್ತು. ಅವರ ವಾಸಕ್ಕೆ ಗೃಹವನ್ನೂ ಅಗ್ರಹಾರದ ಕಾರ್ಯಕ್ರಮಗಳ ನಿರ್ವಹಣೆಗಾಗಿ ಭೂಮಿಯನ್ನೂ ಕೊಡುಗೆಯಾಗಿ ಅಲ್ಲಿನ ಅಧಿಕಾರಿಗಳು ಕೊಟ್ಟರು. ಈ ದಾನಗಳ ಮೇಲೆ ತೆರಿಗೆ ಎತ್ತುತ್ತಿರಲಿಲ್ಲ. ಗ್ರಾಮಸ್ಥರು ವಿದ್ವಾಂಸರಿಗೆ ಮದುವೆ, ಮುಂಜಿ, ಚೌಲ ಮುಂತಾದ ದಿನಗಳಲ್ಲಿ ಕಾಣಿಕೆ ಕೊಟ್ಟು ಗೌರವಿಸುತ್ತಿದ್ದರು.

ಕಲ್ಯಾಣಿ ಚಾಳುಕ್ಯರ ಕಾಲದಲ್ಲಿ ಗದಗಿನ ಬಳಿಯ ಉಮ್ಮಜಿಗೆಯಲ್ಲಿ ಒಂದು ಉನ್ನತ ಶಿಕ್ಷಣಕೇಂದ್ರವನ್ನು ಸ್ಥಾಪಿಸಲಾಗಿತ್ತು. ಅಲ್ಲಿ ಒಂದು ಮಹಾವಿದ್ಯಾಲಯವೂ ಛಾತ್ರಾಲಯವೂ ಇದ್ದುವು. ಅಲ್ಲಿಯ ಅಧ್ಯಾಪಕರಿಗೆ ವಾಸದ ಮನೆಯನ್ನೂ ಜೀವನೋಪಾಯಕ್ಕೆ ಭೂಮಿಯ ಕೊಡುಗೆಯನ್ನೂ ನೀಡಲಾಗಿತ್ತು. ಅಲ್ಲಿ ಶಿಕ್ಷಣ ನೀಡುತ್ತಿದ್ದವರು ಅಕ್ಕರಿಗರು (ಅಕ್ಷರ ಬೋಧಕ). ಇವರು ಗಣಿತ, ಖಗೋಳವಿಜ್ಞಾನ, ಛಂದಸ್ಸು, ವ್ಯಾಕರಣ, ಕಾವ್ಯಶಾಸ್ತ್ರ ಮುಂತಾದವುಗಳ ರಚಕರೂ ಬೋಧಕರೂ ಆಗಿದ್ದರು. ಇವರಿಗೆ ಬೇಕಾದ ಹಾಗೆ ಭೂಮಿಯನ್ನು ದಾನವಾಗಿ ಕೊಡಲಾಗಿತ್ತು. ಅದರಿಂದ ಬಂದ ಆದಾಯದಲ್ಲಿ ತಾವು ಜೀವಿಸುವುದಲ್ಲದೆ ತಮ್ಮ ಶಿಷ್ಯರಿಗೆ ದಿನಕ್ಕೆ ಒಂದು ಊಟವನ್ನೂ ವರ್ಷಕ್ಕೊಮ್ಮೆ ಬಟ್ಟೆಯನ್ನೂ ಒದಗಿಸಬೇಕಾಗಿತ್ತು.

ಮೇಲಿನ ಅಗ್ರಹಾರಗಳ ಜೊತೆಗೆ ಇನ್ನೂ ಅನೇಕ ಅಗ್ರಹಾರಗಳು ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿದ್ದುದು ತಿಳಿದು ಬಂದಿದೆ. ಕದಂಬರಾಜ್ಯದ ಅರಸನಾದ ಶಿವಚಿತ್ತನ ರಾಣಿ ಕಮಲಾದೇವಿ ಬೆಳಗಾಂವಿ ಜಿಲ್ಲೆಯ ಡಿಗಾಂವಿಯಲ್ಲಿ ಒಂದು ಅಗ್ರಹಾರವನ್ನು ಸ್ಥಾಪಿಸಿದ್ದಳು. ಅದಕ್ಕಾಗಿ ಭಾರತದ ಬೇರೆಬೇರೆ ಭಾಗಗಳಿಂದ ವಿದ್ವಾಂಸರನ್ನು ಕರೆಸಿ ಅವರ ಸಂರಕ್ಷಣೆಗಾಗಿ ದತ್ತಿಯನ್ನು ಹಾಕಿಸಿಕೊಟ್ಟಳು. ಅಲ್ಲಿ ವೇದ, ವೇದಾಂಗ, ನ್ಯಾಯ, ಮೀಮಾಂಸೆ, ಸಾಂಖ್ಯ, ಯೋಗ, ವೇದಾಂತ, ಸ್ಮೃತಿ, ಇತಿಹಾಸ, ಪುರಾಣ, ಖಗೋಳಶಾಸ್ತ್ರ– ಇವುಗಳ ಬೋಧನೆಗೆ ಅವಕಾಶ ಕಲ್ಪಿಸಲಾಗಿತ್ತು. ಆಯಾ ಅಧ್ಯಾಪಕರ ವಿಷಯಪಾಂಡಿತ್ಯಕ್ಕೂ ಕಾರ್ಯಮಹತ್ತ್ವಕ್ಕೂ ಅನುಗುಣವಾಗಿ ದಾನಗಳನ್ನು ನೀಡಲಾಗಿತ್ತು. ಹೀಗೆಯೆ ಕರ್ನಾಟಕದ ಇತರೆಡೆಗಳಲ್ಲೂ ಅಗ್ರಹಾರಗಳು ಸ್ಥಾಪನೆಯಾಗಿದ್ದುವು.

**ಬ್ರಹ್ಮಪುರಿ:** ಅಗ್ರಹಾರಗಳಂತೆ ಬ್ರಹ್ಮಪುರಿಗಳೂ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಉನ್ನತ ಶಿಕ್ಷಣ ಸಂಸ್ಥೆಗಳು. ಅಗ್ರಹಾರ ಶಿಕ್ಷಣಕ್ಕಾಗಿ ಏರ್ಪಟ್ಟ ವಿಶಿಷ್ಟ ಗ್ರಾಮವಾಗಿದ್ದರೆ ಬ್ರಹ್ಮಪುರಿ ನಗರದ ಒಂದು ಭಾಗ ಮಾತ್ರವಾಗಿತ್ತು. ಬೆಳಗಾಂವಿಯಲ್ಲಿ ಬನವಾಸಿಯ ಪ್ರಾಂತ್ಯಾಧಿಕಾರಿಯಾದ ಕೇಶವದೇವ ಬ್ರಹ್ಮಪುರಿಯೊಂದನ್ನು ಸ್ಥಾಪಿಸಿದ್ದ. ಅಲ್ಲಿ 38 ಮಂದಿ ಕೀರ್ತಿವೆತ್ತ ವಿದ್ವಾಂಸರಿದ್ದರು. ಅವರು ಪುರಾಣ, ಸ್ಮೃತಿ, ಭಾಷ್ಯ, ಕಾವ್ಯ, ನಾಟಕ ಇತ್ಯಾದಿ ಜ್ಞಾನಕ್ಷೇತ್ರಗಳಲ್ಲಿ ಪಂಡಿತರೆನಿಸಿದ್ದು ಆಯಾ ಜ್ಞಾನವನ್ನು ಬೋಧಿಸುತ್ತಿದ್ದರು. ಆ ನಗರದ ದಕ್ಷಿಣದ ಫಲವತ್ತಾದ ನೆಲವನ್ನು ಅವರ ವಸತಿಗೂ ಜೀವನೋಪಾಯಕ್ಕೂ ಕೇಶವದೇವ ದಾನವಾಗಿ ಕೊಟ್ಟಿದ್ದ. ಅಲ್ಲಿ ಒಂದು ಸುಂದರವಾದ ದೇಗುಲ ಕಟ್ಟಿಸಿ ಅದರ ಮುಂದೆ ವೀರಕೇಶವಪುರ ಎಂಬ ನಗರವನ್ನು ನಿರ್ಮಿಸಿದ್ದ. ಅನೇಕ ವಸತಿಗಳನ್ನು ಕಟ್ಟಿಸಿ ಅವುಗಳನ್ನು ಪೀಠೋಪಕರಣಾದಿಗಳಿಂದ ಸಜ್ಜುಗೊಳಿಸಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅನುಕೂಲ ಮಾಡಿಕೊಟ್ಟಿದ್ದ. ಅಧ್ಯಾಪಕರ ವಸತಿಗೃಹಗಳನ್ನು ಕಟ್ಟಿಸಿ ವಾಸಕ್ಕೆ ಸಜ್ಜುಗೊಳಿಸಿ (ಫರ್ನಿಷ್ಡ್) ಕೊಡಲಾಗಿತ್ತು. ಬ್ರಹ್ಮಪುರಿಗಳು ಸೂಡಿ, ಅರಸೀಬೀದಿ (ವಿಕ್ರಮಪುರ), ತಲಕಾಡು ಮುಂತಾದ ಕರ್ನಾಟಕದ ಇತರ ಕೆಲವು ನಗರಗಳಲ್ಲೂ ಇದ್ದುವು.

ದೇವಾಲಯ ವಿದ್ಯಾಕೇಂದ್ರಗಳು: ಅಗ್ರಹಾರಗಳೂ ಬ್ರಹ್ಮಪುರಿಗಳೂ ಕರ್ನಾಟಕದ ವಿಶಿಷ್ಟ ಉನ್ನತ ಶಿಕ್ಷಣಕೇಂದ್ರಗಳೆನಿಸಿದ್ದರೂ ಇವು ಆ ಕಾಲದಲ್ಲಿ ಉತ್ತರ ಭಾರತದಲ್ಲಿ ಪ್ರಚಾರದಲ್ಲಿದ್ದ ಟೋಲ್ ಎಂಬ ಶಿಕ್ಷಣ ಸಂಸ್ಥೆಗಳನ್ನು ಹೋಲುತ್ತಿದ್ದುವು. ಇವನ್ನೇ ಕೆಲವರು ದೇವಾಲಯದ ವಿದ್ಯಾಲಯಗಳೆಂದು ಕರೆದಿರುವರು. ದೇವಾಲಯ ವಿದ್ಯಾಲಯಗಳಲ್ಲಿ ಕೆಲವು ಪ್ರಾಥಮಿಕ ಶಿಕ್ಷಣವನ್ನು ಬೋಧಿಸುತ್ತಿದ್ದರೂ ಮತೆ ಕೆಲವು ಉನ್ನತಶಿಕ್ಷಣಕ್ಕೂ ಅವಕಾಶ ಕಲ್ಪಿಸಿದ್ದುವು. ಹರಿಹರದ ಹರಿಹರೇಶ್ವರ ದೇವಾಲಯವೂ ತಾಳಗುಂದದ ಪ್ರಣವೇಶ್ವರದೇವಾಲಯವೂ ಅಂಥ ಉನ್ನತ ಶಿಕ್ಷಣ ಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದುವು. ಹರಿಹರೇಶ್ವರ ದೇವಾಲಯದ ಶಿಕ್ಷಣ ಕೇಂದ್ರದಲ್ಲಿ ಋಗ್ವೇದ, ಯಜುರ್ವೇದ, ವ್ಯಾಕರಣ, ಮೀಮಾಂಸೆ ಇತ್ಯಾದಿ ವಿಷಯಗಳ ಬೋಧನೆಗೆ ಪಡಿತರಿದ್ದುದಲ್ಲದೆ ಪ್ರಾಥಮಿಕ ಶಿಕ್ಷಣದ ಅಧ್ಯಾಪಕರೂ ಇದ್ದರು. ತಾಳಗುಂದದ ಪ್ರಣವೇಶ್ವರ ದೇವಾಲಯದ ಕೇಂದ್ರದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ, ಪದಪಾಠ, ಕಲ್ಪ, ವ್ಯಾಕರಣ, ನ್ಯಾಸ, ಪ್ರಭಾಕರ, ಕಲ್ಪಾವತಾರ ಮತ್ತು ವೇದಾಂತಗಳನ್ನು ಹೇಳಿಕೊಡುತ್ತಿದ್ದರಲ್ಲದೆ ಪ್ರಾಥಮಿಕ ಶಿಕ್ಷಣಕ್ಕೂ ವ್ಯವಸ್ಥೆಗೊಳಿಸಲಾಗಿತ್ತು. ಒಬ್ಬೊಬ್ಬ ಪಂಡಿತರೂ ಎಂಟು ಮಂದಿ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರೆಂದೂ ದೇವಸ್ಥಾನದ ಆದಾಯದಿಂದ 48 ವಿದ್ಯಾರ್ಥಿಗಳಿಗೂ ಪಂಡಿತರಿಗೂ ಊಟವಸತಿಗಳನ್ನು ಏರ್ಪಡಿಸಲಾಗಿತ್ತೆಂದೂ ತಿಳಿದುಬರುತ್ತದೆ.

**ಮಠಗಳು:** ಹತ್ತನೆಯ ಶತಮಾನದ ವೇಳೆಗೆ ಕರ್ನಾಟಕದ ಅನೇಕ ಊರುಗಳಲ್ಲಿ ಧಾರ್ಮಿಕ ಮಠಗಳು ಆರಂಭವಾಗಿದ್ದುವು. ದೇವಸ್ಥಾನಗಳಿಗೆ ಮಠ ಅಥವಾ ಆಶ್ರಮಗಳನ್ನು ಸೇರಿಸುವುದೂ ಆರಂಭವಾಗಿ ದೇವಸ್ಥಾನಗಳಂತೆ ಮಠಗಳೂ ಮಕ್ಕಳ ಮತ್ತು ದೊಡ್ಡವರ ಶಿಕ್ಷಣ, ಬೋಧನೆ, ಧರ್ಮಪ್ರಚಾರ ಇತ್ಯಾದಿ ಕಾರ್ಯಗಳನ್ನು ನಡೆಸಲಾರಂಭಿಸಿದುವು. ಅವುಗಳಲ್ಲಿದ್ದ ಮಠಾಧಿಪತಿಗಳು ಮೊದಮೊದಲು ಆಯಾ ಮತಗಳ ಅನುಯಾಯಿಗಳಿಗಾಗಿ ಹಾಗೂ ಮಠಿಗಳಾಗತಕ್ಕವರಿಗಾಗಿ ಧಾರ್ಮಿಕ ಶಿಕ್ಷಣವೀಯುವ ಯತ್ನದ ಪೂರ್ವಭಾವಿಯಾಗಿ ಪ್ರಾಥಮಿಕ ಶಿಕ್ಷಣವನ್ನೂ ನೀಡಬೇಕಾಗಿತ್ತು. ಕೆಲವು ಕಡೆ ಅದಕ್ಕಾಗಿ ಮಠಾಧಿಪತಿಗಳ ಜೊತೆಗೆ ಪ್ರತ್ಯೇಕ "ಅಯ್ಯ"ಗಳೂ ಇರುತ್ತಿದ್ದರು. ಇಂಥ ಮಠಗಳಲ್ಲಿ ಪ್ರಾಥಮಿಕ ಶಿಕ್ಷಣದಂತೆ ಉನ್ನತಶಿಕ್ಷಣಕ್ಕೂ ಅವಕಾಶವಿರುತ್ತಿತ್ತು. ಮಠೀಯ ಮಠಗಳು ಕ್ರಮೇಣ ಊರುರುಗಳಲ್ಲೂ ಆರಂಭವಾದುವು. ಮೊದ ಮೊದಲು ಅವು ಧಾರ್ಮಿಕ ಸಂಸ್ಥೆಗಳಾಗಿದ್ದರೂ ಶಿಕ್ಷಣ ಕಾರ್ಯವನ್ನೂ ತಮ್ಮ ಪ್ರಧಾನ ಕರ್ತವ್ಯಗಳಲ್ಲೊಂದಾಗಿ ಮಾಡಿಕೊಂಡುವು. ಅಂಥ ಮಠಗಳಲ್ಲಿ ಕೋಡಿಮಠ ಮತ್ತು ನಾಗೈಮಠಗಳನ್ನು ಉಲ್ಲೇಖಿಸಬಹುದು. ಆಗ ಆರಂಭವಾಗಿದ್ದ (1162ರ ಶಾಸನ) ಕೋಡಿಮಠ ಬಳ್ಳಿಗಾಮೆಯ ಕೇದಾರೇಶ್ವರ ದೇವಾಲಯಕ್ಕೆ ಸೇರಿದಂತಿತ್ತು. ಅಲ್ಲಿ ಎಲ್ಲ ರೀತಿಯ ಜ್ಞಾನಬೋಧನೆಗೂ ಅವಕಾಶವಿದ್ದುದಲ್ಲದೆ ಬಡವ ಬಲ್ಲಿದರಿಗೂ ಸಬಲ ಅಬಲರಿಗೂ ಕುರುಡ ಮೂಗರಿಗೂ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು. ಅವರ ಅಶನ, ವಸನ, ವಸತಿ– ಇತ್ಯಾದಿಗಳಿಗೂ ಸೌಲಭ್ಯ ಕಲ್ಪಿಸಲಾಗಿತ್ತು; ಎಲ್ಲ ಮಠೀಯರೂ ಎಲ್ಲ ದೇಶೀಯರೂ ನಿರ್ಭಯವಾಗಿ ಅಧ್ಯಯನ ಮಾಡುವ ಸನ್ನಿವೇಶ ಅಲ್ಲಿತ್ತು. ಜೊತೆಗೆ ಅದಕ್ಕೆ ಸೇರಿದಂತೆ ಒಂದು ವೈದ್ಯಾಲಯವೂ ಛಾತ್ರಾಲಯವೂ ಇದ್ದುವು. ಈ ಪೀಠದ ಅಧ್ಯಕ್ಷತೆಯನ್ನು ಪ್ರಸಿದ್ಧ ಪಂಡಿತರು ವಹಿಸಿದ್ದರು. ಅವರಲ್ಲೊಬ್ಬರಾದ ವಾಮಶಕ್ತಿಯೆಂಬುವನು ವ್ಯಾಕರಣ, ವೇದಾಂತ, ನಾಟಕ, ಕಾವ್ಯರಚನೆ, ಸಿದ್ಧಾಂತ, ಶಿವಪದ ಇತ್ಯಾದಿ ಜ್ಞಾನಕ್ಷೇತ್ರಗಳಲ್ಲಿ ದೊಡ್ಡ ಪಂಡಿತನೆನಿಸಿದ್ದ. ಆತ ಶಿಷ್ಯರೊಡನೆ ತಳೆದಿದ್ದ ಬಾಂಧವ್ಯವನ್ನು ಕುರಿತ ಶಾಸನವೊಂದು "ತನ್ನ ಶಿಷ್ಯರೆಲ್ಲರ ಭಾವನೆಗಳೂ ಬಯಕೆಗಳೂ ಕೇಂದ್ರೀಕರಿಸಿರುವ ಏಕೈಕ ವ್ಯಕ್ತಿಯಾಗಿದ್ದ ವಾಮಶಕ್ತಿ" ಎಂದು ಉಲ್ಲೇಖಿಸಿದೆ.

ನಾಗೈನಲ್ಲಿದ್ದ ಮಧುಸೂದನ ದೇವಾಲಯಕ್ಕೆ ಸೇರಿದ ಇನ್ನೊಂದು ಮಠವನ್ನು ಮೂರಂತ್ತಸಿನ ಭವ್ಯಮಂದಿರದಲ್ಲಿ ಸ್ಥಾಪಿಸಲಾಗಿತ್ತು. ಅಲ್ಲಿ ಉನ್ನತ ಶಿಕ್ಷಣದಲ್ಲೆ ಬೇರೆ ಬೇರೆ ಅಂತಸ್ತಿನ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಗಳ ವ್ಯವಸ್ಥೆಯಿತ್ತು. ವಟುಗಳಂತೆ ವಿರಕ್ತರೂ ಅಲ್ಲಿ ಅಧ್ಯಯನ ಮಾಡುತ್ತಿದ್ದರು. ಅಲ್ಲಿ ಅವರೆಲ್ಲಿರಗೂ ಅಶನ, ವಸನ, ವಸತಿ ಇತ್ಯಾದಿ ಸೌಲಭ್ಯಗಳನ್ನು ಏರ್ಪಡಿಸಲಾಗಿತ್ತು. ಮಠದ ಆವರಣಕ್ಕೆ ಸೇರಿದಂತೆ ನೃತ್ಯಾಲಯವೂ ಇತ್ತು. ಮಠಕ್ಕೆ ಎತ್ತರವಾದ ಮುಖಮಂಟಪಗಳೂ ದ್ವಾರ ಹಜಾರಗಳೂ ವಠಾರದ ಗೋಡೆಗಳೂ ಇದ್ದುವು. ಅಲ್ಲಿಯ ಕಾರ್ಯಕರ್ತರ ಮಂಡಲಿಯಲ್ಲಿ ಮೂವರು ಅಧ್ಯಾಪಕರೂ ಒಬ್ಬ ಪುರಾಣ ಭಟ್ಟನೂ ಕಾಲೇಜಿನ ಕಟ್ಟಡಾದಿಗಳ ಮೇಲ್ವಿಚಾರಣೆ ನೋಡಿಕೊಳ್ಳಲು ನಾಲ್ಕು ಜನ ಶಿಲ್ಪಿಗಳೂ ಇದ್ದುದಲ್ಲದೆ ಆ ಮಠದ ಕಾರ್ಯನಿರ್ವಹಣೆಯ ವೆಚ್ಚಕ್ಕಾಗಿ ಬಿಟ್ಟಿದ್ದ ದತ್ತಿಯ ಭೂಮಿಯ ವ್ಯವಸಾಯವನ್ನು ನೋಡಿಕೊಳ್ಳಲು ಒಬ್ಬ ವ್ಯವಸ್ಥಾಪಕನೂ ಮೂವರು ಘಟಿಯಾರರೂ (ಆಳುಗಳೂ) ಇದ್ದರು.

ಉನ್ನತ ಶಿಕ್ಷಣಕ್ಕಾಗಿ ಏರ್ಪಟ್ಟಿದ್ದ ವಿವಿಧ ವಿದ್ಯಾಸಂಸ್ಥೆಗಳನ್ನು ಕುರಿತ ಮೇಲಿನ ವಿವರಣೆಯಿಂದ ಕೆಲವು ಸರ್ವಸಾಮಾನ್ಯ ವಿಷಯಗಳು ಎದ್ದು ಕಾಣುತ್ತವೆ. ಶಿಕ್ಷಣ ಪ್ರಾಥಮಿಕ ಅಂತಸ್ತಿನಂತೆಯೆ ವಿಕೇಂದ್ರೀಕರಣವಾಗಿದ್ದರೂ ಒಂದೊಂದಕ್ಕೂ ಪ್ರತ್ಯೇಕ ಆಡಳಿತ ವ್ಯವಸ್ಥೆಯಿತ್ತು. ಕಾರ್ಯನಿರ್ವಹಣೆಗೂ ಅಧ್ಯಾಪಕರ ಸಂಭಾವನೆಗೂ ಅಗತ್ಯವೆನಿಸುವಷ್ಟು ಉತ್ಪತ್ತಿಯಿಂದ ಬೂಕೊಡುಗೆಯಿದ್ದು ಅವು ಸ್ವಯಂಪೂರ್ಣವೂ ಸ್ವತಂತ್ರವೂ ಆಗಿದ್ದುವು. ವಿದ್ಯಾಲಯಕ್ಕೆ ಸೇರಿದ ಭೂಮಿಯನ್ನು ನೋಡಿಕೊಳ್ಳುವುದಕ್ಕೂ ಕಟ್ಟಡಗಳ ದುರಸ್ತಿಗೂ ಕಾವಲು ಕಾಯುವುದಕ್ಕೂ ತಕ್ಕ ಏರ್ಪಾಡುಗಳಿದ್ದುವು. ಸಾಮಾನ್ಯವಾಗಿ ಅವೆಲ್ಲ ವಸತಿ ವಿದ್ಯಾಲಯಗಳಂತಿದ್ದುವು. ವಿದ್ಯಾರ್ಥಿಗಳ ಅಧ್ಯಯನವನ್ನು ನೋಡಿಕೊಳ್ಳುವ ಮೇಲ್ವಿಚಾರಕರೂ ಇರುತ್ತಿದ್ದರು. ಉಪಾಧ್ಯಾಯವರ್ಗದಲ್ಲಿ ತಮ್ಮ ತಮ್ಮ ವಿಷಯದಲ್ಲಿ ಉನ್ನತಮಟ್ಟದ ಪಾಂಡಿತ್ಯ ಪಡೆದವರನ್ನು ಮಾತ್ರ ಸೇರಿಸಿಕೊಳ್ಳುವ ವ್ಯವಸ್ಥೆಯಿತ್ತು. ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಮುನ್ನ ಒಂದು ಪ್ರವೇಶಪರೀಕ್ಷೆ ಮಾಡಿ ಸೂಕ್ತರಾದವರನ್ನು, ಅವಕಾಶವಿರುವಷ್ಟು ಸಂಖ್ಯೆಯಲ್ಲಿ ಮಾತ್ರ, ಆಯ್ದುಕೊಳ್ಳಲಾಗುತ್ತಿತ್ತು.

ಮೇಲೆ ಸೂಚಿಸಿದ ವಿದ್ಯಾಲಯಗಳಲ್ಲಿ ಪಠ್ಯವಿಷಯಗಳಲ್ಲಿ ಸಾಮಾನ್ಯವಾಗಿ ವ್ಯಾಕರಣ, ವೇದ, ಆಗಮ, ಪುರಾಣ, ಕಾವ್ಯ, ನಾಟಕ ಇವನ್ನು ಗೊತ್ತುಮಾಡುತ್ತಿದ್ದರು. ವ್ಯಾಕರಣಕ್ಕೆ ಪಾಣಿನಿಯಂಥ ಅಧಿಕೃತ ಗ್ರಂಥಗಳು ಪಠ್ಯಪುಸ್ತಕಗಳಾಗಿರುತ್ತಿದ್ದುವು. ಬೇರೆ ಬೇರೆ ವಿದ್ಯಾಲಯಗಳಲ್ಲಿ ಬೇರೆ ಬೇರೆ ವಿಷಯಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಿತ್ತು. ಕೋಡಿಮಠದಲ್ಲಿ

ಭಾರತೀಯ ಷಡ್ದರ್ಶನಗಳೂ ಬೌದ್ಧತತ್ತ್ವಶಾಸ್ತ್ರಗಳೂ, ಲಕುಲರ ಯೋಗಸೂತ್ರಗಳೂ ಒಂದು ವರ್ಗದ ವಿಶಿಷ್ಟ ಅಧ್ಯಯನ ವಿಷಯಗಳಾಗಿದ್ದುವು. ಶಿವಮೊಗ್ಗ ಜಿಲ್ಲೆಯ ಕುಪ್ಪತ್ತೂರ ಮಠದಲ್ಲಿ ವಾತ್ಸಾಯನನ ಕಾಮಸೂತ್ರ ಅಧ್ಯಯನದ ವಿಶೇಷ ವಿಷಯವಾಗಿತ್ತು. ಅರಸೀಕೆರೆಯಲ್ಲಿ ಭಾಷಾಶಾಸ್ತ್ರದ ಅಧ್ಯಯನಕ್ಕೆ ಪ್ರಾಶಸ್ತ್ಯವಿತ್ತು. ನಾಗೈಯಲ್ಲಿ ಮನುಧರ್ಮಶಾಸ್ತ್ರ, ಶುಕ್ರಶಾಸ್ತ್ರ ಮತ್ತು ವ್ಯಾಸರ ಗ್ರಂಥಗಳ ಅಧ್ಯಯನ ಪ್ರಧಾನವಾಗಿತ್ತು. ಉಮ್ಮಚಿಗಿಯಲ್ಲಿ ವ್ಯಾಕರಣಶಾಸ್ತ್ರ, ಛಂದಸ್ಸು, ಗ್ರಂಥರಚನೆ ಇತ್ಯಾದಿಗಳಿಗೆ ಪ್ರಾಶಸ್ತ್ಯವಿತ್ತು.

**ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು:** ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಕಠಿಣವೆನಿಸುವ ಶಿಸ್ತಿನ ಜೀವನ ನಡೆಸಬೇಕಾಗಿತ್ತು. ಅವರು ಬ್ರಹ್ಮಚಾರಿಗಳಾಗಿರಬೇಕೆಂದೂ ಶ್ರದ್ಧೆಯಿಂದ ಕಷ್ಟಪಟ್ಟು ಅಭ್ಯಾಸಮಾಡಬೇಕೆಂದೂ ಎಲ್ಲ ಸಂಸ್ಥೆಗಳೂ ಸಾಮಾನ್ಯವಾಗಿ ನಿಬಂಧನೆ ಮಾಡಿದ್ದುವು. ಆ ನಿಯಮಗಳನ್ನು ಉಲ್ಲಂಘಿಸಿದವರನ್ನು ಸಂಸ್ಥೆಯಿಂದ ಹೊರಹಾಕುವುದು ರೂಢಿಯಲ್ಲಿತ್ತು. ಉಮ್ಮಚಿಗಿ ಅಗ್ರಹಾರದಲ್ಲಿ ಬೈಗುಳ, ಗಲಭೆ, ಹೊಡೆದಾಟ, ವ್ಯಭಿಚಾರ, ಇತ್ಯಾದಿ ದುರ್ನಡತೆಗಳಿಗಾಗಿ ವಿದ್ಯಾರ್ಥಿಗಳಿಗೆ ದಂಡ ವಿಧಿಸಲಾಗುತ್ತಿತ್ತು. ವಿದ್ಯಾರ್ಥಿಗಳಲ್ಲೂ ಅಧ್ಯಾಪಕರಲ್ಲೂ ಕೆಲವರು ನೈಷ್ಠಿಕ (ಆಜೀವ) ಬ್ರಹ್ಮಚಾರಿಗಳಿದ್ದರು. ಶಿಸ್ತಿನ ನಿಯಮಗಳು ವಿದ್ಯಾರ್ಥಿಗಳಂತೆ ಅಧ್ಯಾಪಕರಿಗೂ ಅನ್ವಯಿಸುತ್ತಿದ್ದುವು. ಅವರು ಸಿಬ್ಬಂದಿವರ್ಗದವರೇ ಆಗಿರಲಿ, ಸಂನ್ಯಾಸಿಗಳೇ ಆಗಿರಲಿ, ಮಠದಲ್ಲಿದ್ದಷ್ಟು ಕಾಲ ಕಠಿಣವಾದ ಬ್ರಹ್ಮಚರ್ಯವನ್ನು ಪಾಲಿಸಬೇಕಾಗಿತ್ತು. ಹಾಗೆ ಪಾಲಿಸದಿದ್ದವರನ್ನು ಗ್ರಾಮಸ್ಥರೂ ರಾಜ್ಯದ ಅರಸರೂ ಸಮಾಲೋಚನೆ ನಡೆಸಿ ಮಠದಿಂದ ಹೊರದೂಡುತ್ತಿದ್ದರು.

**ಹೆಣ್ಣುಮಕ್ಕಳ ಶಿಕ್ಷಣ:** ಜನಸಾಮಾನ್ಯರಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣಕ್ಕಾಗಿ ಈ ಕಾಲದಲ್ಲಿ ಯಾವ ಸೌಲಭ್ಯವಿತ್ತೆಂಬುದು ಗೊತ್ತಾಗಿಲ್ಲ. ಆದರೆ ಅರಸುಮನೆತನದ ಹೆಣ್ಣುಮಕ್ಕಳಿಗೂ ಶ್ರೀಮಂತ ಕುಟುಂಬಗಳಿಗೂ ನಿರ್ದಿಷ್ಟ ಶಿಕ್ಷಣವ್ಯವಸ್ಥೆಯೇನೋ ಇತ್ತು. ಅವರಿಗೆ ಅಕ್ಷರ ವಿದ್ಯೆಯ ಜೊತೆಗೆ ಸಂಗೀತ, ನೃತ್ಯ, ಆಡಳಿತಜ್ಞಾನ ಇತ್ಯಾದಿ ಶಿಕ್ಷಣವನ್ನು ದೊರಕಿಸಲಾಗುತ್ತಿತ್ತು. ಅದಕ್ಕಾಗಿ ಸಂಭಾವನೆಯ ಮೇಲೆ ಅಥವಾ ಇನ್ನಿತರ ಕೊಡುಗೆಯ ಮೂಲಕ ಅಧ್ಯಾಪಕರನ್ನು ನೇಮಿಸಲಾಗುತ್ತಿತ್ತು. ಬಾದಾಮಿ ಚಳುಕ್ಯರ ಚಂದ್ರಾದಿತ್ಯನ ರಾಣಿ ವಿಜಯಭಟ್ಟಾರಿಕೆ ಸ್ವತಃ ಕವಯಿತ್ರಿಯಾಗಿದ್ದು ರಾಜ್ಯದ ಆಡಳಿತವನ್ನೂ ನೋಡಿಕೊಳ್ಳುತ್ತಿದ್ದಂತೆ ಕಾಣುತ್ತದೆ. ಅವಳು ತನ್ನ ಹೆಸರಿನಲ್ಲಿ ದತ್ತಿಯೊಂದನ್ನು ನೀಡಿದ್ದಳು. ರಾಷ್ಟ್ರಕೂಟರ ಕಾಲದಲ್ಲಿ ನಾಗರಖಂಡದ ನಾಳ್ಗಾವುಂಡ ತನ್ನ ಅರಸನಿಗಾಗಿ ಹೋರಾಡಿ ಮಡಿದಾಗ ಅವನ ಮಡದಿ ಜಕ್ಕಿಯಬ್ಬೆ ಪ್ರಾಂತಾಧಿಕಾರ ವಹಿಸಿಕೊಂಡು ನಿರ್ವಹಿಸಿದುದಾಗಿಯೂ ಅನಂತರ ಆ ಕಾರ್ಯವನ್ನು ತನ್ನ ಮಗಳಿಗೆ ವಹಿಸಿದುದಾಗಿಯೂ ಐತಿಹ್ಯವುಂಟು. ಎಂದರೆ ರಾಜಕುಮಾರಿಯವರಿಗೆ ಪೂರ್ವಭಾವಿಯಾಗಿ ಅಗತ್ಯಶಿಕ್ಷಣ ಪಡೆಯುವ ವ್ಯವಸ್ಥೆ ಇದ್ದಿರಬೇಕು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕಿಸುಕಾಡಿನ ಸತ್ಯಾಶ್ರಯನ ಮಗಳಾದ ಅಕ್ಕಾದೇವಿ ಪ್ರಾಂತಾಧಿಕಾರಿಣಿಯಾಗಿ ಅಧಿಕಾರ ನಡೆಸಿದಳು. ಹಾಗೆಯೆ, ಕಳಚುರ್ಯ ಸೋವಿದೇವನ ರಾಣಿ ಸೋವಲಾದೇವಿ ವಿದ್ವಜ್ಜನರ ಸಭೆಯಲ್ಲಿ ನೃತ್ಯಕಲಾಪ್ರದರ್ಶನವಿತ್ತು ಮೆಚ್ಚುಗೆ ಪಡೆದಿದ್ದಳೆಂದು ತಿಳಿದುಬರುತ್ತದೆ. ಚೋಳಮಹಾರಾಜನ ರಾಣಿಯಾದ ಲಕ್ಷ್ಮಾದೇವಿ ರಾಜ್ಯಾಡಳಿತದಲ್ಲಿ ಪತಿಗೆ ಸರಿಸಮವಾಗಿ ನೆರವಾಗುವಷ್ಟು ವಿದ್ಯಾವಂತೆಯೆನಿಸಿದ್ದಳು. ಅವಳು ಕಾವ್ಯ, ಚಿತ್ರಕಲೆ, ಸಂಗೀತ, ನೃತ್ಯ ಮುಂತಾದವುಗಳಲ್ಲೂ ಪಾಂಡಿತ್ಯ ಪಡೆದಿದ್ದಳು. ಆ ಕಾಲದಲ್ಲಿ ಶಿಲಾಶಾಸನಗಳನ್ನು ಬರೆಯುತ್ತಿದ್ದ ಮಹಿಳೆಯರೂ ಇದ್ದರೆಂಬ ಅಂಶ ಇತ್ತೀಚೆಗೆ ತಿಳಿದುಬಂದಿದೆ. ಮಹಿಳಾಶಿಕ್ಷಣ ಬಹುಮಟ್ಟಿಗೆ ಅವರವರ ಮನೆಗಳಲ್ಲೇ ನಡೆಯುತ್ತಿದ್ದಿರಬೇಕು.

**ವೃತ್ತಿಶಿಕ್ಷಣ:** ಆಗ ಶಿಲ್ಪಕಲೆ ಎಂಥ ಉತ್ತಮ ಮಟ್ಟವನ್ನು ಮುಟ್ಟಿತ್ತೆಂಬುದನ್ನು ಇಂದಿಗೂ ಉಳಿದುಕೊಂಡು ಬಂದಿರುವ ಆ ಕಾಲದ ಕೆಲವು ದೇವಾಲಯಗಳು ಸಾರಿ ಹೇಳುತ್ತವೆ. ಕದಂಬರು, ಗಂಗರು, ರಾಷ್ಟ್ರಕೂಟರು ಮತ್ತು ಚಾಲುಕ್ಯರು ಅನೇಕ ಸುಂದರ ದೇವಾಲಯಗಳನ್ನು ನಿರ್ಮಿಸಿದರು. ಶಿಲ್ಪವಿದ್ಯೆಯನ್ನು ತಂದೆಯಿಂದ ಮಗ ಮನೆಯಲ್ಲಿ ಅಥವಾ ಅವನೊಡನೆ ಕೆಲಸಮಾಡುವಾಗ ಕಾರ್ಯಕ್ಷೇತ್ರದಲ್ಲಿ ಕಲಿಯುತ್ತಿದ್ದ. ಇತರರೂ ಉಮೇದುದಾರರಾಗಿ ಗುರುವಿನೊಡನೆ ಕೆಲಸ ಮಾಡುತ್ತ ಕಲಿತುಕೊಳ್ಳುತ್ತಿದ್ದರು. ಬೌದ್ಧವಿಹಾರಗಳೂ ಮಠಗಳೂ ಕಲೆ ಮತ್ತು ಹಸ್ತ ಕೌಶಲಗಳನ್ನು ಬೋಧಿಸುತ್ತಿದ್ದುವೆಂಬ ಅಂಶ ತಿಳಿದುಬರುತ್ತದೆ. ಹ್ಯುಯೆನ್ ತ್ಸಾಂಗ್ ಹೇಳುವಂತೆ ಅಲ್ಲಿ ಬೋಧಿಸುತ್ತಿದ್ದ ಐದು ವಿಜ್ಞಾನಗಳಲ್ಲಿ ತಾಂತ್ರಿಕ ಶಿಕ್ಷಣವೂ ಸೇರಿತ್ತು.

ಶಿಕ್ಷಣದಲ್ಲಿ ನವೋದಯ : ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಆರಂಭವಾದ ವೀರಶೈವ ಧರ್ಮದ ಪ್ರಚಾರ ಶಿಕ್ಷಣದಲ್ಲಿ ಮಹತ್ತರ ಪ್ರಗತಿ ಸಾಧಿಸಲು ಪ್ರಚೋದನೆಯಾಯಿತು. ಧರ್ಮಪ್ರಚಾರದ ಅಂಗವಾಗಿ ಜನತೆಯ ನೈತಿಕ ಜೀವನವನ್ನು ಉತ್ತಮಪಡಿಸುವಲ್ಲಿ ಶಿಕ್ಷಣವನ್ನು ಪರಿಣಾಮಕಾರಿಯಾದ ಉಪಕರಣವಾಗಿ ಮಾಡಿಕೊಳ್ಳಲಾಯಿತು. ದೇಶಾದ್ಯಂತ ಅದಕ್ಕಾಗಿ ಮಠಗಳನ್ನು ಸ್ಥಾಪಿಸಿ, ಅಲ್ಲಿಯ ಗುರುಗಳಿಗೆ ಪ್ರಧಾನ ಸ್ಥಾನವಿತ್ತು. ಜನತೆಯಲ್ಲಿ ಶಿಕ್ಷಣ ಪ್ರಚಾರಕ್ಕೆ ಅವಕಾಶ ಕಲ್ಪಿಸಿಕೊಳ್ಳಲಾಯಿತು. ಅಕ್ಷರವಿದ್ಯೆ ಲೆಕ್ಕಾಚಾರಗಳನ್ನು ಮಕ್ಕಳಿಗೂ ದೊಡ್ಡವರಿಗೂ ಹೇಳಿಕೊಡುವ ವಿಶಿಷ್ಟಕಾರ್ಯ ನಿರ್ವಹಿಸುತ್ತಿದ್ದ ಮಠಗಳೂ ಅಸ್ತಿತ್ವಕ್ಕೆ ಬಂದುವು. ಅಲ್ಲಿ ನೂಲುವುದು, ನೇಯುವುದು ವೈದ್ಯ, ವ್ಯವಸಾಯ ಇತ್ಯಾದಿ ವೃತ್ತಿಶಾಸ್ತ್ರಗಳನ್ನೂ ಬೋಧಿಸುತ್ತಿದ್ದರು. ಅದರ ಫಲವಾಗಿ ವೃತ್ತಿಶಿಕ್ಷಣಕ್ಕೆ ನೂತನ ಆಧ್ಯಾತ್ಮಿಕ ಗೌರವ ದೊರಕಿತು. ಮುಂದೆ ಈ ಮಠಗಳು ಊರೂರುಗಳಲ್ಲೂ ಅಸ್ತಿತ್ವಕ್ಕೆ ಬಂದು ಪ್ರಾಥಮಿಕ ಶಾಲೆಗಳ (ಓದುಮಠ) ಉಗಮಕ್ಕೆ ಕಾರಣವಾದುವು. ವೀರಶೈವ ಮಠಗಳು ನೂತನವಾಗಿ ಧರ್ಮಪ್ರಚಾರ ಮಾಡಲು ಯತ್ನಿಸಿದಾಗ ಜನತೆ ಅದರ ಪ್ರಸಾದ ಪಡೆಯಬೇಕಾದರೆ ಅಗತ್ಯವಾಗಿ ಪ್ರಾಥಮಿಕ ಶಿಕ್ಷಣವನ್ನಾದರೂ ಕಲಿಯಬೇಕಾಯಿತು. ಅದಕ್ಕಾಗಿ ಮಠಗಳನ್ನೂ ಅಲ್ಲಿ ಬೋಧಿಸಲು ಅಗತ್ಯ ವ್ಯವಸ್ಥೆಯನ್ನೂ ಕೈಗೊಳ್ಳಲಾಯಿತು. ಕಲ್ಯಾಣದ ಅನುಭವಮಂಟಪ ಒಂದು ದೃಷ್ಟಿಯಿಂದ ಮಠದಲ್ಲಿ ಗುರುಗಳಾಗತಕ್ಕವರಿಗೆ ತರಬೇತಿ ನೀಡುವ ಕೇಂದ್ರವಾಗಿಯೂ ಕೆಲಸ ಮಾಡಿತೆನ್ನಬಹುದು. ಅಲ್ಲಿ ನುರಿತ ಸಹಸ್ರಾರು ಪರಿವ್ರಾಜಕ ಜಂಗಮರು ಚಲವಿದ್ಯಾಲಯಗಳಂತೆ ನಾಡಿನ ಎಲ್ಲ ಕಡೆಯೂ ಸಂಚರಿಸುತ್ತ ಜನತೆಯ (ಸಾಮಾಜಿಕ) ಶಿಕ್ಷಣವನ್ನು ಬಹುಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಧರ್ಮಪ್ರಚಾರಕ್ಕಾಗಿ ಬಳಸಲಾಗುತ್ತಿದ್ದ ಆಡುಮಾತಿನ ಕನ್ನಡ ವಚನಗಳ ಕಂಠಪಾಠ ಶಾಲೆಗಳಲ್ಲೂ ಜನಸಾಮಾನ್ಯದಲ್ಲೂ ಪ್ರಚಾರಕ್ಕೆ ಬರಹತ್ತಿತು.

**ಪ್ರಾಚೀನ ಕರ್ನಾಟಕದಲ್ಲಿ ವಿದ್ಯಾಭಿಮಾನ :** ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳೆಂದು ಅಭಿವರ್ಣಿತರಾದ ಕರ್ನಾಟಕದ ಜನರಲ್ಲಿ ಶಿಕ್ಷಣದ ಬಗ್ಗೆ ಆದಿಕಾಲದಿಂದಲೂ ಪಕ್ಷಪಾತವುಂಟು. ಮಾತು ಮತ್ತು ಸಾಹಿತ್ಯ ದೇವರು ಕೊಟ್ಟ ವರಗಳೆಂದೂ ಸಾಹಿತ್ಯ ದೈವಾಂಶಸಂಭೂತವೆಂದೂ ಇಲ್ಲಿಯವರ ನಂಬಿಕೆ. ದೇವತೆಗಳು ಜ್ಞಾನಿಗಳನ್ನು ಪ್ರೀತಿಸುವರೆಂಬ ನಂಬಿಕೆಯೂ ಉಂಟು. ಮಾನವರಲ್ಲಿ ಜ್ಞಾನಿಗಳೇ ಶ್ರೇಷ್ಠರೆಂದೂ ಅಂಥ ಜ್ಞಾನ ಕೇವಲ ಬುದ್ಧಿವಂತಿಕೆಯಿಂದಾಗಲಿ, ಕಂಠಪಾಠದಿಂದಾಗಲಿ ಸಿದ್ಧಿಸುವಂಥದಲ್ಲವೆಂದೂ ಅರ್ಥಜ್ಞಾನ ಮತ್ತು ವಿವೇಚನೆಯಿಂದ ಲಭಿಸುವುದೆಂದೂ, ಕಲಿವಿಗೆ ಅಧಿದೇವತೆಯಾದ ಸರಸ್ವತಿ ಅಂಥ ಜ್ಞಾನಿಗಳಿಗೆ ಮಾತ್ರ ಒಲಿಯುವಳೆಂದೂ ನಂಬಿಕೆಯುಂಟು. ಇವೆಲ್ಲ ಕಾರಣಗಳಿಂದ ವ್ಯಕ್ತಿಗೆ ಉನ್ನತ ಶಿಕ್ಷಣ ಮುಗಿದ ಮೇಲೆ ಮುಂದುವರಿದ (ಫರ್ದರ್ ಎಜುಕೇಷನ್) ಶಿಕ್ಷಣ ಅಗತ್ಯವೆಂಬುದನ್ನು ಅರಿತುಕೊಂಡು ಕಾವ್ಯ, ನಾಟಕ, ವೇದ, ಆಗಮ, ಪುರಾಣ ಇತ್ಯಾದಿಗಳನ್ನು ಅಭ್ಯಾಸ ಮಾಡುವುದು ಜನತೆಯ ಹಾಗೂ ಸುಶಿಕ್ಷಿತರ ಜೀವನದಲ್ಲಿ ದಿನಚರಿಯಾಗಿತ್ತು. ಇಂದಿಗೂ ಇದು ಕಂಡುಬರುತ್ತದೆ. ಧಾರ್ಮಿಕ ಆಚರಣೆಗಳೂ ವ್ಯಕ್ತಿಗೆ ಒಂದು ರೀತಿಯ ಮುಂದುವರಿದ ಶಿಕ್ಷಣ ಕಾರ್ಯಕ್ರಮವೆಂದೇ ಭಾವಿಸಬಹುದು. ಇದರಿಂದ ವಿದ್ಯಾವಂತರು ಮತ್ತೆ ನಿರಕ್ಷರತೆಗೆ ಜಾರುವುದು ತಪ್ಪುತ್ತಿತ್ತು. ಪಂಚಮಹಾಯಜ್ಞದಲ್ಲಿ ಪ್ರತಿ ಕುಟುಂಬಿಯೂ ನಿತ್ಯವೂ ಸ್ವಾಧ್ಯಾಯಕ್ಕಾಗಿ ಸ್ವಲ್ಪ ಕಾಲ ಮೀಸಲಿಡಬೇಕೆಂಬ ವಿಧಿಯುಂಟು. ತಾನು ವಿದ್ಯಾರ್ಥಿದೆಶೆಯಲ್ಲಿ ಕಲಿತ ಪವಿತ್ರ ಜ್ಞಾನವನ್ನು ಸ್ಮರಿಸಕೊಳ್ಳುವುದು ಸ್ವಾಧ್ಯಾಯದ ಉದ್ದೇಶ. ನಿಜವಾದ ಜ್ಞಾನಿಗಳಿಗೆ ಸಮಾಜದಲ್ಲಿ ಉತ್ತಮಸ್ಥಾನವನ್ನು ನೀಡುವ ಪದ್ಧತಿಯಿಂದ ವಿದ್ಯಾರ್ಜನೆಯನ್ನು ನಿರಂತರವೂ ಮುಂದುವರಿಸುವ ಕಾರ್ಯಕ್ಕೆ ಸಾಮಾಜಿಕ ಗೌರವ ಸಂದಿದೆ. ಬೃಹದಾರಣ್ಯಕ ಉಪನಿಷತ್ತು ಹೇಳುವಂತೆ ಮಕ್ಕಳನ್ನು ಪಡೆಯುವುದರಿಂದಲೇ ತಂದೆಯ ಕರ್ತವ್ಯ ಮುಗಿಯುವುದಿಲ್ಲ; ಅವರಿಗೆ ತಕ್ಕ ಶಿಕ್ಷಣವೀಯುವುದೂ ಅವನ ಕರ್ತವ್ಯ. ಮಧ್ವಾಚಾರ್ಯರೂ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತಾನು ಎಷ್ಟೇ ಬಡತನದಲ್ಲಿದ್ದರೂ ಮಕ್ಕಳಿಗೆ ಹೇಗಾದರೂ ಮಾಡಿ ಪ್ರಾಥಮಿಕ ಶಿಕ್ಷಣವನ್ನಾದರೂ ಕೊಡುವುದು ತಂದೆಯ ಕರ್ತವ್ಯವಾಗಿತ್ತು.

ಶಿಕ್ಷಣವನ್ನು ವಿವಿಧ ರೀತಿಯಲ್ಲಿ ಸಮಾಜ ಪ್ರೋತ್ಸಾಹಿಸುತ್ತಿತ್ತು. ಧಾರ್ಮಿಕ ಸಂಘ ಸಂಸ್ಥೆಗಳು ಜನತೆಯ ಶಿಕ್ಷಣ ಕಾರ್ಯಗಳಲ್ಲಿ ಪಾತ್ರವಹಿಸುವ ಏರ್ಪಾಡು ಮಾಡಲಾಗಿತ್ತು. ದಾನಗಳಲ್ಲೆಲ್ಲ ವಿದ್ಯಾದಾನ ಶ್ರೇಷ್ಠವೆಂಬ ಭಾವನೆಯನ್ನು ಎತ್ತಿಹಿಡಿದಿದುದ್ದರಿಂದ ಅದಕ್ಕಾಗಿ ದಾನದತ್ತಿಗಳನ್ನು ಸಂಗ್ರಹಿಸಲು ಧಾರ್ಮಿಕ ವಾತಾವರಣ ಅನುಕೂಲ ಕಲ್ಪಿಸಿತು. ಧನಿಕರೂ ಮಾಂಡಲಿಕರೂ ರಾಜಮಹಾರಾಜರೂ ಶಿಕ್ಷಣಕ್ಕಾಗಿ ಕೊಟ್ಟಿರುವ ದಾನದ ಬಗ್ಗೆ ಬೇಕಾದ ಹಾಗೆ ಶಾಸನ ಸಾಕ್ಷ್ಯಗಳು ದೊರೆತಿವೆ. ರಾಷ್ಟ್ರಕೂಟ ದೊರೆಯಾದ ಮುಮ್ಮಡಿ ಕೃಷ್ಣನ ಸಚಿವ ನಾರಾಯಣ 945ರಲ್ಲಿ ಸಾಲೊಟಗಿಯಲ್ಲಿ ಒಂದು ಮಹಾ ವಿದ್ಯಾಲಯ (ಕಾಲೇಜು) ಕಟ್ಟಿಸಿದ. ಅದನ್ನು ನಡೆಸಿಕೊಂಡು ಬರುವ ಖರ್ಚಿಗಾಗಿ ಸ್ಥಳೀಯ ಧನಿಕರೊಬ್ಬರು 200 ನಿವರ್ತನ ಭೂಮಿಯನ್ನು ದತ್ತಿಯಾಗಿ ಬಿಟ್ಟರು. ಬಿಜಾಪುರ ಜಿಲ್ಲೆಯ ಮೇತುಂಗಿಯಲ್ಲಿ 1290ರಲ್ಲಿ ಹೊಯ್ಸಳ ಅರಸನ ಮಂತ್ರಿಯಾದ ಪೆರುಮಾಳ ಒಂದು ಮಹಾವಿದ್ಯಾಲಯವನ್ನು ಸ್ಥಾಪಿಸಿ ಅಲ್ಲಿ ವೇದ, ಶಾಸ್ತ್ರ ಕನ್ನಡ, ಮರಾಠಿ ಮತ್ತು ಸಂಸ್ಕೃತಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ. ಬೆಳಗಾಂವಿ ಜಿಲ್ಲೆಯ ಸೂರತೂರಿನಲ್ಲಿ ಶಿಕ್ಷಣಪ್ರಸಾರಕ್ಕಾಗಿ ಒಬ್ಬ ಪ್ರಾಂತಾಧಿಕಾರಿ 50 ಎಕರೆ ಭೂಮಿಯ ಕೊಡುಗೆಯಿತ್ತಿದ್ದ. ಧಾರವಾಡ ಜಿಲ್ಲೆಯ ಹಡಲೆ ಗ್ರಾಮವಾಸಿಯೊಬ್ಬ 1,084 ವಿದ್ಯಾರ್ಥಿಗಳಿಗೆ ಊಟ ಮತ್ತು ಬಟ್ಟೆ ಒದಗಿಸಲು 30 ಎಕರೆ ಭೂಮಿಯನ್ನು ಕೊಟ್ಟ. ಅದೇ ಜಿಲ್ಲೆಯ ಡಂಬಳದಲ್ಲಿ ಹನ್ನೆರಡನೆಯ ಶತಮಾನದಲ್ಲಿದ್ದ ಒಂದು ಶ್ರೀಮಂತ ವೃತ್ತಿ ಸಂಘ ತನ್ನ ಸಿಬ್ಬಂದಿಯವರಿಗಾಗಿ ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿತ್ತು.

ಮುದ್ರಣ ಇಲ್ಲಿದಿದ್ದ ಪ್ರಾಚೀನಕಾಲದಲ್ಲಿ ಗ್ರಂಥಗಳನ್ನು ಕೈಯಲ್ಲಿ ಬರೆದುಕೊಳ್ಳಬೇಕಾಗಿತ್ತು.

ವಿದ್ಯಾಕೇಂದ್ರಗಳಲ್ಲಿ ಹಾಗೆ ಬರೆದ ಗ್ರಂಥಗಳ ಸಂಗ್ರಹಣೆ ಅಗತ್ಯವೆಂಬುದನ್ನು ಅರಿತ ಸಮಾಜ ಗ್ರಂಥದಾನ ಒಂದು ಪವಿತ್ರಕಾರ್ಯವೆಂದು ಪರಿಗಣಿಸಿತ್ತು. ಯೋಗ್ಯರು ಗ್ರಂಥದಾನ ಮಾಡುವ ಅಗತ್ಯವನ್ನು ನಂದಿಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಪುರಾಣಗಳನ್ನು ದಾನ ಮಾಡುವಾಗ ಒಂದೊಂದು ಪುರಾಣದ ಗ್ರಂಥ ದಾನಕ್ಕೂ ಬೇರೆ ಬೇರೆ ಪ್ರಮಾಣದಲ್ಲಿ ಪುಣ್ಯ ದೊರೆಯಬಹುದೆಂಬ ಉಲ್ಲೇಖವೂ ಉಂಟು. ಇದರ ಫಲವಾಗಿ ಧನಿಕರೂ ಇತರರೂ ಗ್ರಂಥಗಳನ್ನು ಬರೆಯಿಸಿ ಅಥವಾ ತಾವೇ ಬರೆದು ವಿದ್ಯಾಕೇಂದ್ರಗಳಿಗೆ ದಾನವಾಗಿ ಅರ್ಪಿಸುತ್ತಿದ್ದರು.

ಹಬ್ಬ ಹುಣ್ಣಿಮೆಗಳಲ್ಲೂ ಇತರ ಶುಭಕಾರ್ಯಗಳಲ್ಲೂ ವಿದ್ಯಾರ್ಥಿಗಳನ್ನೂ ಅಧ್ಯಾಪಕರನ್ನೂ ಆಹ್ವಾನಿಸುವ ಪದ್ಧತಿ ಕರ್ನಾಟಕದ ಎಲ್ಲ ಭಾಗಗಳಲ್ಲೂ ಇತ್ತು. ಸಾಲೊಟಗಿಯ ಮಹಾಜನರಲ್ಲಿ ಈ ಪದ್ಧತಿಯಿತ್ತೆಂಬುದು ಶಾಸನವೊಂದರಿಂದ ತಿಳಿದು ಬರುತ್ತದೆ. ಹಾಗೆಯೆ ಬಡವಿದ್ಯಾರ್ಥಿಗಳಿಗೆ ಊಟಕ್ಕಾಗಿ ಸತ್ರಗಳನ್ನು ಏರ್ಪಡಿಸುತ್ತಿದ್ದರು. ಆ ಬಗ್ಗೆಯೂ ಯಥೇಚ್ಛವಾಗಿ ಸಾಕ್ಷ್ಯಗಳು ದೊರೆತಿವೆ. ಕೊಳಗಳ್ಳಿ, ಮನಗೋಳಿ, ನೀಲಗುಂದ, ನೇಸರ್ಗಿ, ಬಾಗೇವಾಡಿ, ಬೆಳಗಾಂವಿ, ಡಂಬಳ, ಗದಗ, ಬೇಹಟ್ಟಿ ಇತ್ಯಾದಿ ಸ್ಥಳಗಳ ವಿದ್ಯಾರ್ಥಿ ಛಾತ್ರಾಲಯಗಳು ಪ್ರಸಿದ್ಧಿ ಪಡೆದಿದ್ದುವು. ಊರಿನ ಧನಿಕರಿಂದ ಮಾತ್ರ ವ್ಯವಸ್ಥೆ ಏರ್ಪಡುತ್ತಿತ್ತು. ಮಿಕ್ಕವರು ವಿದ್ಯಾರ್ಥಿಗಳಿಗೆ ವಾರ, ಭಿಕ್ಷಾನ್ನ ಇತ್ಯಾದಿಗಳನ್ನು ಒದಗಿಸುವುದರ ಮೂಲಕ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುತ್ತಿದ್ದರು.

ವ್ಯಕ್ತಿ, ಸಮಾಜ, ಸಂಘ, ಸಂಸ್ಥೆಗಳಂತೆ ರಾಷ್ಟ್ರವೂ (ಸರ್ಕಾರ) ವಿದ್ಯೆಗೆ ಪ್ರೋತ್ಸಾಹ ನೀಡುತ್ತಿತ್ತು. ವಿದ್ವಜ್ಜನರಿಗೆ ರಾಜನ ಆಸ್ಥಾನದಲ್ಲಿ ಪುರಸ್ಕಾರವಿತ್ತು. ಅವರಿಗೆ ವಿವಿಧ ರೀತಿಯ ಕೊಡುಗೆ, ಸಂಭಾವನೆ, ದಕ್ಷಿಣೆ ಇತ್ಯಾದಿಗಳು ದೊರಕುತ್ತಿದ್ದುವು. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಸೂಚಿಸಿರುವ, ಶೈಕ್ಷಣಿಕ ಆಶ್ರಮಗಳಿಗಾಗಿ ಬ್ರಾಹ್ಮಣರಿಗೆ ನಿವೇಶನಗಳನ್ನು ನೀಡಬೇಕೆಂಬ ಸಲಹೆಗೆ ರಾಜರಲ್ಲಿ ಮನ್ನಣೆಯಿತ್ತು. ವಿದ್ಯಾಶ್ರಯ ರಾಜರ ಕರ್ತವ್ಯಗಳಲ್ಲೊಂದೆಂಬ ಸ್ಮೃತಿವಚನದ ಬಗ್ಗೆಯೂ ಮನ್ನಣೆಯಿತ್ತು. ಕರ್ನಾಟಕ ಇತಿಹಾಸದ ಪ್ರಥಮ ಅರಸರಾದ ಸಾತವಾಹನರೇ ಈ ಬಗ್ಗೆ ಮುಂದಿನ ರಾಜಪೀಳಿಗೆಗೆ ತಮ್ಮ ವಿದ್ಯಾಪ್ರೋತ್ಸಾಹದಿಂದ ಮೇಲ್ಪಂಕ್ತಿಯಾದರು. ರಾಜರು ವಿದ್ವಜ್ಜನರಿಗೂ ವಿದ್ಯಾಸಂಸ್ಥೆಗಳಿಗೂ ಧನ, ಕನಕ, ಭೂಮಿ, ಇತ್ಯಾದಿ ಸಹಾಯ ನೀಡಿರುವ ಅಂಶ ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಧಾರಾಳವಾಗಿ ವ್ಯಕ್ತಪಟ್ಟಿದೆ. ರಾಷ್ಟ್ರಕೂಟ ಅರಸನಾದ ನಾಲ್ವಡಿ ಗೋವಿಂದ 918ರಲ್ಲಿ ರಾಜ್ಯಾರೋಹಣ ಮಾಡಿದಾಗ 600 ಹಳ್ಳಿಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ. ಹನ್ನೊಂದನೆಯ ಶತಮಾನದ ರಾಜೇಂದ್ರ ಕುಲೋತ್ತುಂಗ ಚೋಳ ತನ್ನ ರಾಜ್ಯದ ಅಧ್ಯಾಪಕರಿಗೆಲ್ಲ ತೆರಿಗೆಯಿಂದ (ಮನೆಗಂದಾಯ) ವಿನಾಯಿತಿ ನೀಡಿದ್ದ. ವಿದ್ಯಾರ್ಥಿಗಳಿಗೂ ರಾಜ್ಯ ಸರ್ಕಾರ ಕೆಲವು ವಿನಾಯಿತಿಗಳನ್ನು ನೀಡುತ್ತಿತ್ತು. ಅವರು ನೇರವಾದ ಯಾವ ತೆರಿಗೆಯನ್ನೂ ಕೊಡಬೇಕಾಗಿರಲಿಲ್ಲ. ಹೊಳೆ ದಾಟುವಾಗ ದೋಣಿಗೆ ಪ್ರಯಾಣದ ತೆರ ಕೊಡಬೇಕಾಗಿರಲಿಲ್ಲ. ಅಭ್ಯಾಸಿಗಳಿಗೂ ವಿದ್ಯಾರ್ಥಿಗಳಿಗೂ 50 ವರ್ಷ ವಯಸ್ಸಿನವರೆಗೂ ಇಂಥ ವಿನಾಯಿತಿ ಇರುತ್ತಿತ್ತು.

ರಾಜ್ಯಗಳು ಸಾರ್ವಜನಿಕ ಶಿಕ್ಷಣವನ್ನು ನೇರ ಹೊಣೆಗಾರಿಕೆಗೆ ತೆಗೆದುಕೊಂಡಿರದಿದ್ದರೂ ಆ ಕಾಲದಲ್ಲಿ ಪ್ರಪಂಚದ ಇತರ ರಾಷ್ಟ್ರಗಳಿಗಿಂತ ಇಲ್ಲಿಯ ಸರ್ಕಾರಗಳು ವಿದ್ಯೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದುದು ತೌಲನಿಕ ಇತಿಹಾಸದ ಅಧ್ಯಯನದಿಂದ ವ್ಯಕ್ತಪಡುತ್ತದೆ. ಅದರ ಫಲವಾಗಿ ಅನೇಕ ಶಾಸ್ತ್ರಗಳೂ ವಿಜ್ಞಾನಗಳೂ ಇಲ್ಲಿ ಅಭಿವೃದ್ಧಿ ಹೊಂದಿದುವು. ಲಲಿತಕಲೆಗಳಿಗೆ ರಾಜರು ನೀಡುತ್ತಿದ್ದ ಆಶ್ರಯವನ್ನು ಇಂದಿಗೂ ಅನೇಕ ದೇವಾಲಯಗಳ ಶಿಲ್ಪ ವೈಭವ ಸಾರಿ ಹೇಳುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ಶಿಕ್ಷಣದ ಗುರಿ ಮತ್ತು ದೃಷ್ಟಿ: ಗುಣಶೀಲ ನಿರೂಪಣೆ, ವ್ಯಕ್ತಿತ್ವ ವಿಕಾಸ, ಪ್ರಾಚೀನ ಸಂಸ್ಕೃತಿ ರಕ್ಷಣೆ, ಧಾರ್ಮಿಕ– ಇವು ಶಿಕ್ಷಣದ ಪ್ರಧಾನ ಕರ್ತವ್ಯ ನಿರ್ವಹಣೆಗಾಗಿ ಕಿರಿಯ ಪೀಳಿಗೆಗೆ ಶಿಕ್ಷಣ ನೀಡಿಕೆ– ಇವು ಶಿಕ್ಷಣದ ಪ್ರಧಾನ ಗುರಿಗಳಲ್ಲಿ ಸೇರಿದ್ದುವು. ಇದು ಬಹುಮಟ್ಟಿಗೆ ಭಾರತೀಯ ಶಿಕ್ಷಣದ ಗುರಿಯೇ ಆಗಿತ್ತು. ಅದಕ್ಕಾಗಿ ಇಲ್ಲಿ ರೂಪುಗೊಂಡಿದ್ದ ಶಿಕ್ಷಣಪದ್ಧತಿ ಆ ಗುರಿಗಳನ್ನು ಪರಿಣಾಮಕಾರಿಯಾಗಿ ಸಾಧಿಸುತ್ತಿದ್ದ ಬಗ್ಗೆ ಭಾರತದ ಈ ಭಾಗದಲ್ಲಿ ಸಂಚರಿಸಿದ ಯುವಾನ್ ಚಾಂಗ್ ಮುಂತಾದ ಯಾತ್ರಿಕರು ಉಲ್ಲೇಖಿಸಿದ್ದಾರೆ.

ಹೊಯ್ಸಳರ ಕಾಲದಲ್ಲಿ ಶಿಕ್ಷಣ: ಹಿಂದಿನ ಯುಗಗಳಲ್ಲಿದ್ದ ಅಗ್ರಹಾರ, ಘಟಿಕ, ಬ್ರಹ್ಮಪುರಿ, ಮಠ ಇವೆಲ್ಲ ತಮ್ಮ ಶಿಕ್ಷಣಸೇವೆಯನ್ನು ಹೊಯ್ಸಳರ ಕಾಲದಲ್ಲೂ ಮುಂದುವರಿಸಿ ಕೊಂಡೇ ಬಂದುವು. ಅರಸೀಕೆರೆ (ಸರ್ವಜ್ಞಪುರ) ಬನವಾಸಿಯ ನಾಗರುಖಂಡ, ಶಿವಮೊಗ್ಗ ಜಿಲ್ಲೆಯ ಕೆಲ್ಲಾಂಗ್ರೆ ಈ ಅಗ್ರಹಾರಗಳು ಉಚ್ಛ್ರಾಯಸ್ಥಿತಿಯಲ್ಲಿದ್ದುವು. ನೊಣಂಬೇಶ್ವರ ದೇವಾಲಯದ ಶಿಕ್ಷಣ ಕೇಂದ್ರ ಪ್ರಸಿದ್ಧ ಘಟಿಕಾ ಸ್ಥಾನವೆಂಬ ಖ್ಯಾತಿ ಗಳಿಸಿತ್ತು. ಬೌದ್ಧವಿಹಾರಗಳಂತೆ ಕೆಲವು ಬ್ರಹ್ಮಪುರಿಗಳೂ ಈ ಕಾಲದಲ್ಲಿ ಉಚ್ಚಶಿಕ್ಷಣ ನೀಡುತ್ತಿದ್ದುವು. 1158ರ ಸುಮಾರಿನಲ್ಲಿ ಅಸ್ತಿತ್ವದಲ್ಲಿದ್ದ ತಾಳಗುಂದದ ದೇವಾಲಯಕ್ಕೆ ಸೇರಿದ ಚಿಕ್ಕ ಸಂಸ್ಕೃತ ಕಾಲೇಜು ಉಚ್ಚಶಿಕ್ಷಣದ ನವಲತ್ತು ವಿದ್ಯಾರ್ಥಿಗಳಿಗೆ ಆಶ್ರಯ ಸ್ಥಾನವಾಗಿತ್ತು. ಬನವಾಸಿಯ ರಾಜಧಾನಿಯಾದ ಬಳ್ಳಿಗಾವೆಯಲ್ಲಿ ಮೂರು ಬ್ರಹ್ಮಪುರಗಳೂ ಏಳು ಬ್ರಹ್ಮಪುರಿಗಳೂ, ಶಿವ, ಬುದ್ಧ, ಜಿನ, ಬ್ರಹ್ಮ, ವಿಷ್ಣು ಇವರಿಗೆ ಏರ್ಪಡಿಸಿದ್ದ ಐದು ಮಠಗಳೂ ಜೈನಬಸದಿಗಳೂ ಬೌದ್ಧವಿಹಾರಗಳೂ ಹಿಂದೂ ದೇವಾಲಯಗಳೂ ಇದ್ದು ಸರ್ವಧರ್ಮಗಳ ಶಿಕ್ಷಣಕ್ಕೂ ಅದು ಕೇಂದ್ರವೆನಿಸಿತ್ತು. ಅಂದಿಗೆ ಜೈನ ಶಿಕ್ಷಣಸಂಸ್ಥೆಗಳ ಪ್ರಭಾವ ಕಳೆಗುಂದುತ್ತ ಬಂದಿದ್ದರೂ ಅವು ಹೊಯ್ಸಳರ ಆಳ್ವಿಕೆಯ ಕೊನೆಯ ದಿನಗಳವರೆಗೂ ಕರ್ನಾಟಕದಲ್ಲಿ ಮುಂದುವರಿದು ಕೊಂಡು ಬಂದುವು. ಹೊಯ್ಸಳದೊರೆಗಳು ಹಿಂದೂ ಮತ್ತು ಜೈನ ಮಠಗಳೆರಡಕ್ಕೂ ಸಮಾನ ಉತ್ತೇಜನವೀಯುತ್ತ ಬಂದರು. ಎಲ್ಲ ಮಠಗಳೂ ಎಲ್ಲ ಮತದವರಿಗೂ ಉಚ್ಚ ಶಿಕ್ಷಣವೀಯುತ್ತಿದ್ದುದು ಒಂದು ವಿಶಿಷ್ಟ ಅಂಶ. ಹೊಯ್ಸಳದೊರೆಗಳೂ, ಅವರ ರಾಜ್ಯದ ವರ್ತಕರೂ ಶ್ರೀಮಂತರೂ ಮಠಗಳಿಗೂ ಇತರ ಶಿಕ್ಷಣಸಂಸ್ಥೆಗಳಿಗೂ ದತ್ತಿಗಳನ್ನು ಕೊಡುತ್ತಿದ್ದರು. ಅಲ್ಲದೆ ಚಾಳುಕ್ಯ ಮತ್ತು ಕಳಚುರ್ಯ ಅರಸರೂ ನೆರೆಹೊರೆಯ ರಾಜ್ಯಗಳ ಶ್ರೀಮಂತರೂ ಅವಕ್ಕೆ ದತ್ತಿ, ಉಂಬಳಿ, ಕೊಡುಗೆ ಇತ್ಯಾದಿಗಳನ್ನು ನೀಡುತ್ತಿದ್ದರು. ಪ್ರತಿ ಹಳ್ಳಿಯೂ ಪ್ರಾಥಮಿಕ ಶಿಕ್ಷಣದ ಮಹತ್ತ್ವವನ್ನು ಕಂಡುಕೊಂಡು ಮಕ್ಕಳಿಗೆ ಪಾಠ ಹೇಳಲು ಸಾರ್ವಜನಿಕ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಆರಂಭವಾಯಿತು. ಅದಕ್ಕಾಗಿ ಸಂಭಾವನೆಯ ಮೇಲೆ ಅಧ್ಯಾಪಕರನ್ನು ಊರವರು ನೇಮಕ ಮಾಡಿಕೊಳ್ಳುತ್ತಿದ್ದರು.

ಆ ಕಾಲದಲ್ಲಿ ಅನೇಕ ಮಹಿಳೆಯರು ಸಾಹಿತ್ಯ ಮತ್ತು ಲಲಿತಕಲೆಗಳಲ್ಲಿ ಪ್ರಾವೀಣ್ಯ ಪಡೆದಿದ್ದರು. ಕಂತಿ, ಮಹಾದೇವಿಯಕ್ಕ ಮುಂತಾದವರು ಕವಯಿತ್ರಿಯರು, ತತ್ತ್ವಜ್ಞಾನಿಗಳು. ಆದರೆ ಜನಸಾಮಾನ್ಯರಲ್ಲಿ ಮಹಿಳೆಯರಿಗೆ ಪ್ರತ್ಯೇಕ ಪ್ರಾಥಮಿಕ ಅಥವಾ ಉನ್ನತ ಶಿಕ್ಷಣ ವ್ಯವಸ್ಥೆಯಿದ್ದಂತೆ ತೋರುವುದಿಲ್ಲ. ದೇವಸ್ಥಾನ, ಮಠಗಳು, ಜಾತ್ರೆ, ಉತ್ಸವ ಮುಂತಾದವುಗಳಲ್ಲಿ ಏರ್ಪಡಿಸುತ್ತಿದ್ದ ಪುರಾಣಶ್ರವಣ ಹರಿಕಥೆ, ಶಿವಕಥೆ, ಧಾರ್ಮಿಕ ಪ್ರವಚನ, ನಾಟಕಪ್ರದರ್ಶನ ಇತ್ಯಾದಿಗಳ ಮೂಲಕವೇನೋ ಅವರಿಗೆ ಒಂದು ರೀತಿಯ ಶಿಕ್ಷಣ ದೊರಕುತ್ತಿತ್ತು.

**ವೃತ್ತಿ ಶಿಕ್ಷಣ:** ಹೊಯ್ಸಳರ ಕಾಲದಲ್ಲಿ ಯುದ್ಧಗಳು ಆಗಾಗ ನಡೆಯುತ್ತಿದ್ದುದರಿಂದ ಸೈನ್ಯಾಚರಣೆಗೆ ಸಂಬಂಧಿಸಿದ ಉದ್ಯೋಗಗಳ ಶಿಕ್ಷಣಕ್ಕೆ ಪ್ರಚೋದನೆ ದೊರಕಿತ್ತೆಂದು ಹೇಳಬಹುದು. ಸೈನಿಕ ಶಿಕ್ಷಣದಂತೆ ಯುದ್ಧೋಪಕರಣಗಳಿಗೆ ಬೇಕಾದ ಲೋಹದ ಕೆಲಸ, ಬಡಗಿ ಕೆಲಸ, ಕಮ್ಮಾರರ ಕೆಲಸ ಇತ್ಯಾದಿಗಳಲ್ಲಿ ಶಿಕ್ಷಣವೀಯಲು ಕಸಬುದಾರರ ಮನೆಯೇ ತಾಂತ್ರಿಕ ಶಿಕ್ಷಣ ಶಾಲೆಯಾಗಿ ಕೆಲಸಮಾಡುತ್ತಿತ್ತು. ಅನೇಕ ವೃತ್ತಿಗಳು ವಂಶಪಾರಂಪರ್ಯವಾಗಿ ಬಂದ ಕುಟುಂಬದ ಕಸಬುಗಳಾಗಿದ್ದರೂ ಅವರು ರೂಪಿಸಿದ ಸಾಮಗ್ರಿಗಳನ್ನು ಸಂಗ್ರಹಿಸಿ ವ್ಯಾಪಾರ ಮಾಡುವ ಸಂಸ್ಥೆಗಳು ಅಸ್ತಿತ್ವದಲ್ಲಿದ್ದು ಅಲ್ಲಿಯ ಸಿಬ್ಬಂದಿಯವರಿಗೆ ವಿವಿಧ ವೃತ್ತಿಗಳಲ್ಲಿ ಶಿಕ್ಷಣವೀಯಲು ಆ ಸಂಸ್ಥೆಗಳೇ ವ್ಯವಸ್ಥೆಗೊಳಿಸುತ್ತಿದ್ದುವು. ಇಂಥ ಸಂಸ್ಥೆಗಳಲ್ಲಿ ವೀರ ಪಂಚಾಲದ ಉದಾಹರಣೆ ಕೊಡಬಹುದು. ಅಭ್ಯಾಸಿಗಳು ತಾವು ಕಸಬನ್ನು ಕಲಿಯುವಾಗಲೂ ಹಣ ಗಳಿಸುತ್ತಿದ್ದರು. ಹೀಗೆ ಕಸಬುಗಳು ವ್ಯಕ್ತಿಯಿಂದ ವ್ಯಕ್ತಿಗೆ ಹಸ್ತಗತವಾಗುತ್ತಿದ್ದುದರ ಜೊತೆಗೆ ವ್ಯಾಪಾರ ಸಂಸ್ಥೆಗಳೂ ಆ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದುವು. ಆ ಕಾಲದಲ್ಲಿ ರೂಪುಗೊಂಡಿರುವ ಪ್ರಸಿದ್ಧ ದೇವಾಲಯಗಳನ್ನು ನೋಡಿದರೆ ಶಿಲ್ಪಕಲೆಗೂ ನಕಾಸೆ ರಚಿಸುವ ಕಲೆಗೂ ವ್ಯಾಪಕರೀತಿಯ ಶಿಕ್ಷಣವಿದ್ದಿರಬೇಕೆಂಬುದು ವ್ಯಕ್ತವಾಗುತ್ತದೆ. ಆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪುರಾಣ, ಗಣಿತ, ಚಿತ್ರಕಲೆ ಇವುಗಳ ಶಿಕ್ಷಣಕ್ಕೂ ಅವಕಾಶ ಮಾಡಿದ್ದಿರಬೇಕು. ವಾಸ್ತುಶಿಲ್ಪ, ಶಿಲ್ಪಶಾಸ್ತ್ರ, ಪ್ರತಿಮಾಶಿಲ್ಪ, ವರ್ಣಚಿತ್ರ ಇತ್ಯಾದಿ ವಿದ್ಯೆಗಳಲ್ಲಿ ಪ್ರಸಿದ್ಧಿ ಪಡೆದಿದ್ದ ಕುಟುಂಬಗಳು ಇದ್ದುವೆಂಬ ಅಂಶ ತಿಳಿದುಬಂದಿದೆ. ಸಂಗೀತ, ನೃತ್ಯ ಇತ್ಯಾದಿ ಲಲಿತಕಲೆಗಳ ಶಿಕ್ಷಣ ಸಾಮಾನ್ಯವಾಗಿ ರಾಜಮನೆತನಗಳಿಗೂ ಧನಿಕವರ್ಗದವರಿಗೂ ಸೀಮಿತವಾಗಿದ್ದರೂ ಅವನ್ನು ಕಲಿಸತಕ್ಕವರು ಸಾಮಾನ್ಯ ಜನರೇ ಆಗಿದ್ದು ಆ ಕಲೆಯ ಶಿಕ್ಷಣ ಆ ಕುಟುಂಬಕ್ಕೆ ವಂಶಪಾರಂಪರ್ಯವಾಗಿ ಬಂದುದಾಗಿತ್ತು. ಆಯುರ್ವೇದ, ಗಣಿತಶಾಸ್ತ್ರ, ಪಶುವೈದ್ಯ, ಇತ್ಯಾದಿ ಶಾಸ್ತ್ರಗಳ ಶಿಕ್ಷಣವೂ ಕೆಲಕೆಲವು ಕುಟುಂಬಗಳಲ್ಲಿ ವಂಶಪಾರಂಪರ್ಯವಾಗಿ ನಡೆದು ಬರುತ್ತಿತ್ತು. ಹೊಯ್ಸಳ ದೊರೆಗಳು ಪಶುವೈದ್ಯ ಶಾಸ್ತ್ರವನ್ನು ಅಭಿವೃದ್ಧಿಪಡಿಸಲು ತುಂಬ ಆಸಕ್ತಿ ತೋರುತ್ತಿದ್ದರು. ಆನೆಗಳ ವಿಷಯಕ್ಕೆ ಸಂಬಂಧಿಸಿದ ವ್ಯಾಸಂಗದಲ್ಲೂ ಅವರಿಗೆ ಅಷ್ಟೇ ಆಸಕ್ತಿಯಿತ್ತು.

**ಶಿಕ್ಷಣ ಮಾಧ್ಯಮ:** 1ನೆಯ ಶತಮಾನಾದ ಅನಂತರದ ಧಾರ್ಮಿಕ ಪುನರುಜ್ಜೀವನದ ಪರಿಣಾಮವೆಂದರೆ ಸಂಸ್ಕೃತಾಧ್ಯಯನಕ್ಕೆ ಲಭಿಸಿದ ಪ್ರಾಶಸ್ತ್ಯ. ದೇಶೀಯ ಭಾಷೆಯ ಪ್ರಚಾರಕರೆಂದು ಪ್ರಸಿದ್ಧರಾಗಿದ್ದ ಜೈನ ಬೌದ್ಧರೂ ಸಂಸ್ಕೃತವನ್ನೇ ವಿಶೇಷವಾಗಿ ಬಳಸಲಾರಂಭಿಸಿದರು. 4ನೆಯ ಶತಮಾನದಿಂದ ಪ್ರಾಕೃತದಲ್ಲಿ ಬರೆದ ಶಾಸನಗಳಾಗಲಿ ಇತರ ಲೇಖನಗಳಾಗಲಿ ದೊರೆತಿಲ್ಲ. ಅಂಥ ಕಾಲದಲ್ಲಿ ಸಾತವಾಹನ ಅರಸರು ಪ್ರಾಕೃತಕ್ಕೆ ಪ್ರಾಶಸ್ತ್ಯವಿತ್ತು ಎಲ್ಲ ಕಾರ್ಯಗಳಿಗೂ ಅದನ್ನು ಬಳಸಲಾರಂಭಿಸಿದ್ದರು. ಜನರು ಮನೆಯಲ್ಲೂ ಅದನ್ನೇ ಆಡಬೇಕೆಂದು ಉತ್ತರದ ಕೆಲವು ರಾಜರು ಶಾಸನ ಮಾಡಿದ್ದರು. ಆದರೆ ಅವರ ಅನಂತರದ ರಾಜರು ತಮ್ಮ ಅಂತಃಪುರದಲ್ಲಿ ಮೊದಲುಗೊಂಡು ಎಲ್ಲೆಲ್ಲೂ ಸಂಸ್ಕೃತವನ್ನೇ ಆಡಬೇಕೆಂದು ಗೊತ್ತುಮಾಡಿದರು. ಅದರ ಪ್ರಭಾವ ದಕ್ಷಿಣದ ಕರ್ನಾಟಕದ ಮೇಲೂ ಬಿದ್ದಿತ್ತು. ಪ್ರಾಥಮಿಕ ಶಾಲೆಗಳಲ್ಲೂ ಸಂಸ್ಕೃತ ವ್ಯಾಕರಣವನ್ನು ಬೋಧಿಸುವುದು

ಆರಂಭವಾಯಿತು. ಪ್ರಾಕೃತಕ್ಕಾಗಲಿ ಜನರ ಆಡುನುಡಿಗಾಗಲಿ ಪುರಸ್ಕಾರವಿಲ್ಲವಾಯಿತು. ಇದರ ಪರಿಣಾಮವಾಗಿ ಜನಸಾಮಾನ್ಯರಲ್ಲಿ ಜ್ಞಾನ ಮತ್ತು ಸಂಸ್ಕೃತಿ ಪ್ರಚಾರಕ್ಕೆ ಅಡ್ಡಿಯೊದಗಿತು. ಕನ್ನಡ ಭಾಷೆಯ ಬೆಳೆವಣಿಗೆಗೆ ಇದರಿಂದ ಅವಕಾಶವಿಲ್ಲದಂತಾಗಿರಬೇಕು. ಸಾತವಾಹನರ ಅನಂತರ ಬಂದ ಚಾಳುಕ್ಯಾದಿ ರಾಜಮನೆತನಗಳು ಕನ್ನಡಕ್ಕೆ ಪ್ರೋತ್ಸಾಹ ನೀಡತೊಡಗಿದುವು. ಅನಂತರ ಕನ್ನಡ ಅಕ್ಷರಾಭ್ಯಾಸ, ಓದು, ಬರಹ– ಇವು ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಕಲಾಪಗಳಾಗತೊಡಗಿದುವು. ಕ್ಷತ್ರಿಯರೂ ವೈಶ್ಯರೂ ಇತರರೂ ತಮ್ಮ ಉದ್ಯೋಗ ನಿರ್ವಹಣೆಗೆ ಜನಸಾಮಾನ್ಯರೊಂದಿಗೆ ಆಡುಭಾಷೆಯ ಮೂಲಕವೇ ಸಂಪರ್ಕ ಪಡೆಯಬೇಕಾಗಿದ್ದುದರಿಂದ ಅವರು ಕನ್ನಡವನ್ನೂ ಕಲಿಯುವುದು ಅಗತ್ಯವಾಗುತ್ತ ಬಂತು. ಜನಸಾಮಾನ್ಯರ ಪ್ರಾಥಮಿಕ ಶಾಲೆಗಳಲ್ಲಿ ಅಂಕಗಣಿತ, ಲೆಕ್ಕಾಚಾರ ಇವನ್ನೆಲ್ಲ ಕನ್ನಡದಲ್ಲೇ ಬೋಧಿಸುತ್ತಿದ್ದರು. ಕ್ರಮಕ್ರಮವಾಗಿ ಸಂಸ್ಕೃತಕ್ಕಿದ್ದ ಆದ್ಯತೆ ಕಡಿಮೆಯಾಗಿ ಆ ಸ್ಥಾನ ಕನ್ನಡಕ್ಕೆ ಬಂತು. ನರಸೀಪುರದಲ್ಲಿದ್ದ ಉನ್ನತ ಶಿಕ್ಷಣಕೇಂದ್ರದಲ್ಲಿಯ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯಲ್ಲೆ ಬೋಧಿಸುವುದು ಆರಂಭವಾಯಿತು. ಸಾಮಾನ್ಯ ಜನರಲ್ಲಿ ಕನ್ನಡವೇ ಎಲ್ಲ ಕಾರ್ಯಗಳಿಗೂ ಬಳಕೆಯ ಭಾಷೆಯಾಗುತ್ತ ಬಂತು. ಅವರಿಗೆ ಶಿಕ್ಷಣ ದೊರೆಯುತ್ತಿದ್ದುದು ಕನ್ನಡದಲ್ಲೆ. ಆದರೆ ಅಲ್ಲಲ್ಲಿದ್ದ ಕೆಲವು ಪಾಠಶಾಲೆಗಳಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡುತ್ತಿದ್ದರು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಂತೂ ಮಧ್ಯಯುಗದ ಆರಂಭ ಕಾಲದವರೆಗೂ ಕನ್ನಡ ಅಧ್ಯಯನವಿಷಯವಾಗಿದ್ದರೂ ಶಿಕ್ಷಣ ಮಾಧ್ಯಮವಾಗಿ ಅಷ್ಟಾಗಿ ಪ್ರಚಾರಕ್ಕೆ ಬಂದಿರಲಿಲ್ಲ.

**ಮಧ್ಯಯುಗದಲ್ಲಿ :** ಹೊಯ್ಸಳರ ಆಳ್ವಿಕೆಯ ಕೊನೆಗಾಲದೊಡನೆ ಸಂಭವಿಸಿದ ಮುಸಲ್ಮಾನರ ಆಕ್ರಮಣದ ಫಲವಾಗಿ ಹಿಂದಿನಿಂದಲೂ ನಡೆದುಕೊಂಡು ಬರುತ್ತಿದ್ದ ಶಿಕ್ಷಣಪ್ರಗತಿಗೆ ಅಡ್ಡಿಯೊದಗಿತು. ಆಗ ಅಸ್ತವ್ಯಸ್ತವಾದ ಕರ್ನಾಟಕದ ಶಿಕ್ಷಣವ್ಯವಸ್ಥೆ ಒಂದು ಸಂದಿಗ್ಧ ಸ್ಥಿತಿ ಮುಟ್ಟಿತು. ಹದಿನಾಲ್ಕನೆಯ ಶತಮಾನದಲ್ಲಿ ನಡೆದ ಅವರ ದಾಳಿಯ ಮುನ್ನಡೆಯ ಪ್ರವಾಹ ದಕ್ಷಿಣದಲ್ಲಿ ರಾಮೇಶ್ವರದ ವರೆಗೂ ಸಾಗಿ ಜನಜೀವನ ಕ್ಷೋಭೆಗೀಡಾಗಿ ಶಿಕ್ಷಣವೂ ಬಲವಾದ ಪೆಟ್ಟು ತಿಂದಿತು. ಸಾಮಾನ್ಯಜನತೆಯ ಶಿಕ್ಷಣ ಹಾಗಿರಲಿ, ರಾಜಕುಮಾರರ ಶಿಕ್ಷಣವೂ ದುರ್ವ್ಯವಸ್ಥೆಗೀಡಾಯಿತು. ಅದು ತನಕ ಒಂದೂವರೆ ಸಹಸ್ರವರ್ಷಗಳ ಹಿಂದೆಯೇ ಜೈನ ಮತ್ತು ಬೌದ್ಧ ಶಿಕ್ಷಣ ಪದ್ಧತಿಗಳು ಕರ್ನಾಟಕದ ಮೇಲೆ ದಾಳಿಮಾಡಿದ್ದರೂ ಇಲ್ಲಿಯ ಪದ್ಧತಿಗೆ ಅವು ಪರಕೀಯವೆನಿಸಿಕೊಂಡು ಉಳಿಯದೆ ಅದನ್ನು ಪರಿಪುಷ್ಟಿ ಗೊಳಿಸಿದುವು; ಅಷ್ಟೇ ಅಲ್ಲ, ಕರ್ನಾಟಕ ಜನತೆಗೆ ಅವು ಆದರಣೀಯವೆನಿಸಿ ಇಲ್ಲಿಯ ಜನಜೀವನವನ್ನು ರಸಾವಿಷ್ಟಗೊಳಿಸಿ ಜೀವನದ ಮೌಲ್ಯದಲ್ಲಿ ಹೊಸ ದಿಗಂತವನ್ನು ಕಂಡುಕೊಳ್ಳುವಂಥ ಅಮೃತ ಪರಿಣಾಮವನ್ನೂ ಬೀರಿದುವು. ಮುಸ್ಲಿಮರ ದಾಳಿ ಇಲ್ಲಿಯವರ ಜೀವನವನ್ನು ಪರಿಪೋಷಿಸುವುದು ಹಾಗಿರಲಿ, ಇಲ್ಲಿಯ ಜನತೆಗೂ ಧರ್ಮ ಸಂಸ್ಕೃತಿಗಳಿಗೂ ನಿರ್ದಿಷ್ಟವಾಗಿ ವಿಪತ್ಕಾರಿಯಾಗಿ ಪರಿಣಮಿಸಿತು. ಹಿಂದೂ ರಾಜ್ಯಗಳ ಪತನದಿಂದ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ ಇಲ್ಲವಾಯಿತು. ಮುಸಲ್ಮಾನರ ದಾಳಿಗೆ ಸಿಕ್ಕಿಯೂ ಇವು ಹಾಳಾದುವು. ತಮ್ಮ ಪರಂಪರೆಗೇ ವಿನಾಶವೊದಗೀತೆಂಬ ಭೀತಿ ಜನ ಜೀವನದಲ್ಲಿ ಆವರಿಸಿ, ಕನ್ನಡಿಗರ ಶಕ್ತಿಯನ್ನು ಸಂಘಟಿಸಿ ತಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ರಕ್ಷಿಸಬಲ್ಲ ಪ್ರಬಲರಾಷ್ಟ್ರವೊಂದರ ನಿರ್ಮಾಣಕ್ಕೆ ಪ್ರೇರಣೆಯಾಯಿತು. ಅದರ ಫಲವಾಗಿ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂತು; ಕರ್ನಾಟಕಕ್ಕೆ ಶಾಂತಿನೆಮ್ಮದಿಗಳನ್ನು ಒದಗಿಸಿ ಕೊಟ್ಟಿತು. ರಾಜರು, ಮಾಂಡಲಿಕರು, ಮತ್ತಿತರ ವರಿಷ್ಠ ಮನೆತನಗಳಲ್ಲಿ ಶಿಕ್ಷಣದ ಪ್ರಾಮುಖ್ಯದ ಅರಿವುಂಟಾಗಿ ರಾಜಕೀಯ ದೃಷ್ಟಿಯಿಂದ ಅಗತ್ಯ ವ್ಯವಸ್ಥೆಗಳು ಅನುಷ್ಠಾನಕ್ಕೆ ಬಂದುವು. ಆ ರಾಜ್ಯದ ಮೂಲ ಪುರುಷರಾದ ಬುಕ್ಕ ಹರಿಹರರೇ ಪ್ರಸಿದ್ಧ ವಿದ್ವಾಂಸರೆನಿಸಿದ್ದ ವಿದ್ಯಾರಣ್ಯರ ಶಿಷ್ಯರಾಗಿದ್ದರು. ಹರಿಹರ ಸ್ವತಃ ಪಂಡಿತಶ್ರೇಷ್ಠ, "ಕರ್ನಾಟಕದ ವಿದ್ಯಾವಿಲಾಸ" ನೆಂಬ ಕೀರ್ತಿಗೆ ಪಾತ್ರ. ವಿಜಯನಗರ ವಿದ್ಯಾಪ್ರೇಮ ಕರ್ನಾಟಕದ ಇತರ ರಾಜಮನೆತನ ಗಳಲ್ಲೂ ಪ್ರತಿಬಿಂಬಿಸಿತು. ರಾಜಕುಮಾರರಿಗೆ ಉಚಿತವಾದ ಶಾಸ್ತ್ರ ಶಿಕ್ಷಣ, ದೈಹಿಕ ಶಿಕ್ಷಣ, ರಾಜನೀತಿ, ಯುದ್ಧ ಕೌಶಲ ಇತ್ಯಾದಿ ವಿದ್ಯೆಗಳನ್ನೆಲ್ಲ ರಾಣಿ ಚೆನ್ನಮ್ಮಾಜಿ ತನ್ನ ದತ್ತಪುತ್ರ ಬಸವಪ್ಪನಿಗೆ ಕಲಿಸಿದ್ದಳು.

**ಪ್ರಾಥಮಿಕ ಶಿಕ್ಷಣ:** ಪ್ರಾಥಮಿಕ ಶಿಕ್ಷಣದಲ್ಲಿ ಲಿಪಿಗ್ರಹಣ, ಪದವಾಕ್ಯ ಪ್ರಮಾಣ, ಪುರಾಣಶ್ರವಣ, ಚರಿತ್ರೆಗಳೇ ಮುಂತಾದವು, ಭೂಗೋಳಗಳ ಅಧ್ಯಯನ, ಅಂಗಸಾಧನೆ, ಸಂಗೀತ ಇವೆಲ್ಲವನ್ನೂ ಕಲಿಸಲಾಗುತ್ತಿತ್ತು. ಆ ವೇಳೆಗೆ ಕರ್ನಾಟಕದ ಊರೂರುಗಳಲ್ಲೂ ವೀರಶೈವಮತದ ಪುನರುಜ್ಜೀವನದ ಫಲವಾಗಿ ರೂಪುಗೊಂಡಿದ್ದ ಮಠಗಳು ಕ್ರಮ ಕ್ರಮವಾಗಿ ಧಾರ್ಮಿಕ ಶಿಕ್ಷಣದ ಜೊತೆಗೆ ಮೇಲೆ ಸೂಚಿಸಿದ ಲೌಕಿಕ ಶಿಕ್ಷಣಕ್ಕೂ ಅವಕಾಶ ಮಾಡಿಕೊಟ್ಟವು. ಶಿಕ್ಷಣಕ್ಕೆ ದೊರೆತ ಪ್ರಾಮುಖ್ಯವನ್ನರಿತ ಜನಸಾಮಾನ್ಯರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ವಿಶಿಷ್ಟ ವ್ಯವಸ್ಥೆ ಮಾಡಲು ತೊಡಗಿದ್ದರು. ಅದನ್ನೇ ವಿಶಿಷ್ಟ ಉದ್ಯೋಗವನ್ನಾಗಿ ಅನುಸರಿಸುವ ಅಯ್ಯಗಳು ಕಾಣಿಸಿಕೊಳ್ಳಹತ್ತಿದರು. ಕನಕದಾಸರು ತಮ್ಮ ಮೋಹನ ತರಂಗಿಣಿಯಲ್ಲಿ ಸೂಚಿಸಿರುವಂತೆ ಕಸೆ ಅಂಗಿ ತೊಟ್ಟು ಕೈಯಲ್ಲಿ ಬೆತ್ತ ಹಿಡಿದು ಚೌಪದಿ ರಚನೆಯಲ್ಲಿ ನಿಪುಣರೆನಿಸಿದ್ದ ಅಂದಿನ ಉಪಾಧ್ಯಾಯರ ವ್ಯಕ್ತಿ ಚಿತ್ರ ಇಂದಿಗೂ ನೆನಪಾಗಿ ಉಳಿದಿದೆ. ಮರಳಿನ ಮೇಲೆ ತಿದ್ದಿ ಅಕ್ಷರಾಭ್ಯಾಸ ಮಾಡಿಸುವ ಪದ್ಧತಿಯೇ ಮುಂದುವರಿಯುತ್ತಿತ್ತು. ಸಂಖ್ಯಾಪಠನ, ಮಗ್ಗಿ, ಪೂರ್ಣಾಂಕಗಳಿಂದ ಭಿನ್ನಾಂಕಗಳನ್ನು ಗುಣಿಸುವುದು, ನಾಣ್ಯ, ಅಳತೆ, ತೂಕ, ಇವುಗಳನ್ನೊಳಗೊಂಡ ಲೆಕ್ಕ ಮಾಡುವುದು ಇವೆಲ್ಲ ಅಲ್ಲಿಯ ಪಠ್ಯ ಕ್ರಮದಲ್ಲಿ ಸೇರಿದ್ದುವು. ಅಂದಿಗಾಗಲೆ ಕನ್ನಡದಲ್ಲಿ ಗ್ರಂಥಗಳ ರಚನೆಯಾಗಿದ್ದು ಪುರಾಣ ವಾಚನವೂ ನಡೆಯುತ್ತಿತ್ತು. 17ನೆಯ ಶತಮಾನದಲ್ಲಿ ಭಾರತಪ್ರವಾಸ ಮಾಡಿದ ಪಿರಾರ್ಡ್ ದೆಲವಲ್ ಇಲ್ಲಿಯ ಬೋಧನಕ್ರಮವನ್ನು ವಿವರಿಸುತ್ತ, ಬುದ್ಧಿವಂತನಾದ ವಿದ್ಯಾರ್ಥಿ ಒಂದು ಪಾಠವನ್ನು ಪಠಿಸುತ್ತಿದ್ದ; ಮಿಕ್ಕವರು ಅದನ್ನು ಪುನರಾವರ್ತಿಸುತ್ತಿದ್ದರು. ಕಾಗದ, ಮಸಿ ಇವಾವುವೂ ವ್ಯರ್ಥವಾಗದೆ ಸರಾಗವಾಗಿ ವಿದ್ಯಾರ್ಥಿಗಳು ಪಾಠ ಕಲಿಯುತ್ತಿದ್ದ ಈ ಕ್ರಮ ತುಂಬ ಪರಿಣಾಮಕಾರಿಯೂ ಸರಳವೂ ಆದದ್ದು ಎಂದು ಹೊಗಳಿದ್ದಾನೆ. ಮಾನಿಟರ್ ಪದ್ಧತಿಯ ಈ ಬೋಧನಕ್ರಮದ ಉಲ್ಲೇಖ ಮೊಟ್ಟಮೊದಲು ಇವನ ವರದಿಯಲ್ಲಿ ಕಾಣಿಸಿಕೊಂಡಿದೆ. ಪ್ರಾಥಮಿಕ ಶಿಕ್ಷಣ 5–6 ವರ್ಷಗಳದಾಗಿದ್ದು ಮೇಲಿನ ತರಗತಿಯಲ್ಲಿ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ, ಸರಳಬಡ್ಡಿ, ತ್ರೈರಾಶಿ– ಈ ಲೆಕ್ಕಗಳನ್ನು ಕಲಿಸುತ್ತಿದ್ದರು. ಅಲ್ಲಿಯ ಶಿಕ್ಷಣಕ್ಕೆ ಕಳಸವಿಟ್ಟಂತೆ ಜೈಮಿನಿಭಾರತ, ವಿದುರನೀತಿ, ಸೋಮೇಶ್ವರ ಶತಕ, ಅಮರಕೋಶ, ಪಂಚತಂತ್ರ ಇತ್ಯಾದಿಗಳನ್ನು ಓದಿಸಲಾಗುತ್ತಿತ್ತು.

**ಉನ್ನತ ಶಿಕ್ಷಣ:** ಪ್ರಾಚೀನ ಕಾಲದ ಉನ್ನತ ಶಿಕ್ಷಣ ಸಂಸ್ಥೆಗಳು ಮಧ್ಯಯುಗಗಳಲ್ಲೂ ಮುಂದುವರಿದುಕೊಂಡು ಬಂದುವು. ಆದರೆ ವಿಜಯನಗರದ ಪತನಾನಂತರ ಕೆಲವು ಅಗ್ರಹಾರಗಳು ನಿಂತುಹೋದುವು. ಮತ್ತೆ ಕೆಲವು ಕೇವಲ ಊಟದ ಸತ್ರಗಳಾಗಿ ಪರಿಣಮಿಸಿದುವು. ಆಗಲೂ ಕೆಲವು ಹೊಸ ಅಗ್ರಹಾರಗಳು ಆರಂಭವಾದುದೇನೋ ನಿಜ. ದಳವಾಯಿ ದೇವರಾಯನ ರಾಮಚಂದ್ರಪುರದ ಅಗ್ರಹಾರ ಇದಕ್ಕೆ ಉದಾಹರಣೆ. 1748ರಲ್ಲಿ ದೇವರಾಯ ಅಲ್ಲಿ ಅಗತ್ಯವಾದ ಮನೆಮಠಗಳನ್ನು ಕಟ್ಟಿಸಿ ಸಜ್ಜುಗೊಳಿಸಿ 120 ಮಂದಿ ವೇದಾಂಗಶಾಸ್ತ್ರಗಳಲ್ಲಿ ಪಂಡಿತರೆನಿಸಿದ ಬ್ರಾಹ್ಮಣರನ್ನು ನೆಲೆಗೊಳಿಸಿದ. ಇಂಥ ಸದುದ್ದೇಶದಿಂದ ಸ್ಥಾಪನೆಯಾದ ಈ ಅಗ್ರಹಾರ 1807ರಲ್ಲಿ ಎಳಂದೂರನ್ನು ಪೂರ್ಣಯ್ಯನವರಿಗೆ ಜಹಗೀರು ಕೊಟ್ಟಾಗ ಅಂತ್ಯಗೊಂಡಿತು. ಹಿಂದಿನ ಮಠಗಳು ವಿದ್ಯಾಭ್ಯಾಸವನ್ನು ನಿರ್ಲಕ್ಷಿಸುತ್ತ ಬಂದು ಅವು ಕೇವಲ ಮತೀಯಕೇಂದ್ರಗಳಾದುವು. ಅಲ್ಲಿಯ ಗುರುಗಳನೇಕರು ಜನತೆಯ ವಿದ್ಯಾಭ್ಯಾಸದ ಕಡೆ ಗಮನವೀಯದೆ ತಮ್ಮ ಅನುಯಾಯಿಗಳ ಮೇಲೆ ಧಾರ್ಮಿಕ ಒಡೆತನ ಸಾಧಿಸುವುದರಲ್ಲಿ ಮಾತ್ರ ನಿರತರಾದರು.

**ಪಠ್ಯವಿಷಯ ಮತ್ತು ಅಧ್ಯಯನ ವಿಧಾನ:** ಅಂದಿನ ರಾಜಾಸ್ಥಾನದಲ್ಲಿ ಯಾವ ಯಾವ ಅಂಶಗಳಿಗೆ ಪ್ರಾಶಸ್ತ್ಯವಿತ್ತೊ ಆ ವಿಷಯಗಳನ್ನು ಕೆಲವು ಉನ್ನತ ಶಿಕ್ಷಣ ಕೇಂದ್ರಗಳು ಬೋಧಿಸುತ್ತಿದ್ದುವು. ಅಂಥ ವಿಷಯಗಳಲ್ಲಿ ಕಾವ್ಯ, ಗಾಯನ, ಪುರಾಣ, ಜ್ಯೋತಿಷ, ಯುದ್ಧಕಲೆ– ಇವುಗಳ ಶಿಕ್ಷಣಕ್ಕೆ ಪ್ರಾಧಾನ್ಯ ಬರಹತ್ತಿತ್ತು. ಸೋಮೇಶ್ವರ ಶತಕದಲ್ಲಿ ಹೇಳುವಂತೆ ಆ ವಿಷಯಗಳನ್ನು ಬಲ್ಲವರಿಂದ, ಶಾಸ್ತ್ರಗಳಿಂದ, ಇತರ ಕೃತಿಗಳಿಂದ, ತನ್ನ ಬೌದ್ಧಿಕ ಯತ್ನದಿಂದ ಅಥವಾ ಸಜ್ಜನರ ಸಂಗದಿಂದ ಕಲಿಯುವುದು ರೂಢಿಯಲ್ಲಿತ್ತೆಂದು ಊಹಿಸಬಹುದು. ಅಧ್ಯಯನಾನಂತರ ಪರೀಕ್ಷೆಯೊಂದು ಇರದಿದ್ದರೂ ಸರ್ಕಾರದ ಅಂಗೀಕಾರ ಪ್ರೋತ್ಸಾಹಗಳು ಬೇಕಾಗಿದ್ದರೆ ಸಾರ್ವಜನಿಕ ಪರೀಕ್ಷೆಯೊಂದಕ್ಕೆ ಸಿದ್ಧರಾಗಬೇಕಾಗಿತ್ತು. 1447ರಲ್ಲಿ ಭಾಷ್ಯಭೂಷಣ ಎಂಬ ಗ್ರಂಥರಚನಕಾರನಾದ ಆದಿತ್ಯಾಚಾರ್ಯ ಅಂಥ ಒಂದು ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ನಲ್ಲಂಗಿ ಎಂಬ ಗ್ರಾಮವನ್ನು ದತ್ತಿಯಾಗಿ ಪಡೆದ ಪ್ರಸಂಗದ ಉಲ್ಲೇಖವುಂಟು. ತನ್ನಿಂದ ಬಹುಮಾನವನ್ನಪೇಕ್ಷಿಸುತ್ತಿದ್ದವರನ್ನು ಕೃಷ್ಣದೇವರಾಯ ಸ್ವತಃ ಪರೀಕ್ಷಿಸುತ್ತಿದ್ದನಂತೆ.

**ಗುರುಶಿಷ್ಯ ಸಂಬಂಧ:** ಪ್ರಾಚೀನ ಕಾಲದಿಂದಲೂ ಬಂದ ಗುರುಗಳ ಉನ್ನತ ಸ್ಥಾನ ಮುಂದುವರಿದುಕೊಂಡು ಬಂತು. ಸರ್ವಜ್ಞ ಹೇಳುವಂತೆ "ಗುರುವಿನ ಬಳಿ ಅವನ ಎತ್ತಾಗಿ, ತೊತ್ತಾಗಿ, ಅವನ ಹಿತ್ತಲಿನ ಗಿಡವಾಗಿ, ಅವನ ಕಾಲಿನ ಒತ್ತಾಗಿ ಇರುವುದು ಶಿಷ್ಯರಿಗೆ ಅಗತ್ಯವಾಗಿತ್ತು. ಕನಕದಾಸ ಹೇಳುವಂತೆ ಗುರುವಿನ ಗುಲಾಮನಾಗುವ ವರೆಗೆ ಮುಕುತಿ ದೊರೆಯುವುದು ದುರ್ಲಭವೆಂಬ ನಂಬಿಕೆಯಿತ್ತು. ಆದರೆ ಅಂಥ ಪೂಜ್ಯತೆಯನ್ನು ಪಡೆದುಕೊಳ್ಳಬೇಕಾದರೆ ಗುರು ತನ್ನ ನೆಲೆಯನ್ನು ಅರಿತುಕೊಂಡಿರುವುದೂ ಪಾಂಡಿತ್ಯ ಘನತೆ ಗಾಂಭೀರ್ಯಾದಿ ಉನ್ನತ ಆದರ್ಶಗಳನ್ನು ತಳೆದಿರುವುದೂ ಅಗತ್ಯವಾಗಿತ್ತು. ಅಲ್ಲದೆ, ಅಂಥ ವಿದ್ವಾಂಸರು ವಿದ್ಯೆಯನ್ನು ಇತರರಿಗೆ ಕಲಿಸುವುದು ಕರ್ತವ್ಯವಾಗಿತ್ತು".

ಮುಸ್ಲಿಂ ಶಿಕ್ಷಣ: ಪ್ರ.ಶ. 4ನೆಯ ಶತಮಾನದ ಮೊದಲ ದಶಕಗಳಲ್ಲಿ ಮುಸ್ಲಿಂ ಶಿಕ್ಷಣ ಸಂಸ್ಥೆಗಳು ಉತ್ತರ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಅಸ್ತಿತ್ವಕ್ಕೆ ಬಂದುವು. ಅವುಗಳೆಲ್ಲ ಬಹುಮಟ್ಟಿಗೆ ಮಸೀದಿಗಳ ಅಂಗವಾಗಿ ಏರ್ಪಟ್ಟಿದ್ದುವು. 1343ರಲ್ಲಿ ಅಲ್ಲಿ ಪ್ರವಾಸಮಾಡಿದ ಇಬ್ನ್ ಬತೂತ ವಿವರಿಸಿರುವಂತೆ ಮಸೀದಿಗಳ ನಿಧಿಯಿಂದ ವಿದ್ಯಾರ್ಥಿವೇತನಗಳನ್ನು ಪಡೆದು ಮುಸ್ಲಿಂ ಧರ್ಮಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿದ್ದರು. ಹೊನ್ನಾವರ ಪ್ರದೇಶದಲ್ಲಿ ಮುಸ್ಲಿಂ ಹೆಣ್ಣು ಮಕ್ಕಳಿಗಾಗಿಯೆ ಅನೇಕ ಶಾಲೆಗಳು

ಆರಂಭವಾಗಿದ್ದುವು. ಅಲ್ಲಿ ವಿದ್ಯಾರ್ಥಿನಿಯರು ಬಹು ಆಸಕ್ತಿಯಿಂದ ಖುರಾನನ್ನು ಪಠಣ ಮಾಡುತ್ತಿದ್ದರು.

ಬಹಮನಿ ಅರಸ ಎರಡನೆಯ ಮಹಮ್ಮದ್ ತನ್ನ ಮುಸ್ಲಿಂ ಪ್ರಜೆಗಳಿಗೆ ಉತ್ತಮ ಶಿಕ್ಷಣ ಸೌಲಭ್ಯವನ್ನು ಒದಗಿಸಿದ್ದ. ಸ್ವತಃ ಆತ ಒಳ್ಳೆಯ ವಿದ್ಯಾವಂತನಾಗಿದ್ದು 1378ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಮದ್ರಸಾಗಳೆಂಬ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅಲ್ಲಿ ಅನಾಥವಿದ್ಯಾರ್ಥಿಗಳ ಊಟ ವಸತಿಗಳೂ ಉಚಿತ ಶಿಕ್ಷಣಕ್ಕೂ ವ್ಯವಸ್ಥೆಗೊಳಿಸಿದ್ದ. ಗುಲ್ಬರ್ಗ, ಬಿದರೆ ಮುಂತಾದೆಡೆಗಳಲ್ಲಿ ಆರಂಭವಾದ ಮದ್ರಸಾಗಳು ಬಹು ಪ್ರಸಿದ್ಧವಾಗಿದ್ದುವು. ಅಲ್ಲದೆ ಆತ ಕೆಲವು ಸೈನಿಕ ಶಾಲೆಗಳನ್ನೂ ಸ್ಥಾಪಿಸಿದ್ದ. ಅನಂತರ ಹದಿನೈದನೆಯ ಶತಮಾನದ ಕೊನೆಯಲ್ಲಿ ಅಲ್ಲಿಯ ರಾಜರ ಬಳಿ ಮಂತ್ರಿಯಾಗಿದ್ದ ಮಹಮೂದ್ ಗಾವಾನ್ ಮುಸಲ್ಮಾನರಿಗೆ ಉನ್ನತ ಶಿಕ್ಷಣಸೌಲಭ್ಯವನ್ನು ವಿಸ್ತರಿಸಿದ. 1472ರಲ್ಲಿ ಆತ ತನ್ನ ಸ್ವಂತ ಹಣದಿಂದ ಬಿದರೆಯಲ್ಲಿ ಮಹಾ ವಿದ್ಯಾಲಯವೊಂದನ್ನು ಕಟ್ಟಿಸಿದ. ಇಸ್ಲಾಂದೇಶಗಳಲ್ಲಿ ಆ ಕಾಲದಲ್ಲಿದ್ದ ವಿದ್ಯಾಮಂದಿರಗಳ ಮಾದರಿಯಲ್ಲೆ ರಚನೆಯಾಗಿದ್ದ ಈ ವಿದ್ಯಾಲಯದಲ್ಲಿ ಆತ ದಕ್ಷರಾದ ವಿಜ್ಞಾನಿಗಳನ್ನೂ ಇತರ ಪಂಡಿತರನ್ನೂ ನೇಮಿಸಿದ್ದ. ಜೊತೆಗೆ ಅಲ್ಲಿ ಅವನೂ ಪ್ರಾಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ. ಅಲ್ಲಿಯ ಪುಸ್ತಕ ಭಂಡಾರದಲ್ಲಿ ಸುಮಾರು ಮೂರು ಸಾವಿರ ಗ್ರಂಥಗಳಿದ್ದುವು.

ಬಹಮನಿ ಅರಸರ ಅನಂತರ ಅಧಿಕಾರಕ್ಕೆ ಬಂದ ಆದಿಲ್‌ಷಾಹಿ ಅರಸರು ಬಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಅವರು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೂ ತಾಂತ್ರಿಕ ಶಿಕ್ಷಣಕ್ಕೂ ಉತ್ತೇಜನ ಕೊಟ್ಟರು. ಅವರು ಅರಬೀ ಮತ್ತು ಪರ್ಷಿಯನ್ ಭಾಷೆಗಳ ಪುರೋಭಿವೃದ್ಧಿಗೆ ನೆರವು ನೀಡಿದರು. ಅವರ ಕಾಲದಲ್ಲಿ ವಾಸ್ತುಶಿಲ್ಪ ಮತ್ತು ವಿಜ್ಞಾನ ವಿದ್ಯೆಗಳಲ್ಲಿ ಪರಿಣತರಾದವರು ದೇಶದಲ್ಲಿ ಹೇರಳವಾಗಿದ್ದರು. ಕರ್ನಾಟಕಕ್ಕೆ ಆದಿಲ್‌ಷಾಹಿಗಳು ಹೊರಗಿನವರಾದರೂ ಇಲ್ಲಿಯ ಮುಸಲ್ಮಾನರ ಕಲ್ಯಾಣಕ್ಕಾಗಿ ಎಲ್ಲ ರೀತಿಯ ಶಿಕ್ಷಣಕ್ಕೂ ಪ್ರೋತ್ಸಾಹ ನೀಡುತ್ತಿದ್ದರು. ಮುಸಲ್ಮಾನ್ ಪ್ರಜೆಗಳ ಪ್ರಾಥಮಿಕ ಶಿಕ್ಷಣಕ್ಕಾಗಿ ಮಕ್ತಾಬ್ ಎಂಬ ಸಂಸ್ಥೆಗಳನ್ನು ಆರಂಭಿಸಿದ್ದರು. ಅವು ಆ ಕಾಲದಲ್ಲಿ ಉತ್ತರಭಾರತದಲ್ಲಿ ಪ್ರಚಾರದಲ್ಲಿದ್ದ ಸಂಸ್ಥೆಗಳ ಮಾದರಿಯಲ್ಲೆ ಇದ್ದು ಉರ್ದು ಭಾಷೆಯ ಅಕ್ಷರಾಭ್ಯಾಸ, ಓದುಗಾರಿಕೆ, ಬರವಣಿಗೆ ಇತ್ಯಾದಿಗಳನ್ನು ಕಲಿಸುತ್ತಿದ್ದುವು.

ಮೈಸೂರಿನ ಒಡೆಯರು ಕಲೆ, ವಿಜ್ಞಾನ, ಶಾಸ್ತ್ರ ಇತ್ಯಾದಿಗಳ ಪುರೋಭಿವೃದ್ಧಿಗೆ ಆಶ್ರಯವಿತ್ತಿದ್ದುದು ಕರ್ನಾಟಕದ ಇತಿಹಾಸದಲ್ಲಿ ಪ್ರಧಾನವಾಗಿ ಎದ್ದು ಕಾಣುತ್ತದೆ. ರಾಜ್ಯದ ಅಧಿಕಾರ ಹೈದರ್ ಅಲಿ ಟಿಪ್ಪು ಸುಲ್ತಾನರ ಕೈಸೇರಿದಾಗ ಹಿಂದೂ ಶಿಕ್ಷಣಕ್ಕೆ ಅಷ್ಟಾಗಿ ಪ್ರೋತ್ಸಾಹವಿರಲಿಲ್ಲ. ಟಿಪ್ಪುಸುಲ್ತಾನ ವಿದ್ಯಾಪ್ರೇಮಿಯಾಗಿದ್ದರೂ ಮುಖ್ಯವಾಗಿ ಮುಸ್ಲಿಂ ಶಿಕ್ಷಣದ ಕಡೆ ಗಮನ ಕೊಟ್ಟಿದ್ದ.

ಅನಂತರ ಸುಮಾರು ಐದು ಶತಮಾನಗಳ ತನಕ ಎಂದರೆ ಬ್ರಿಟಿಷರು ತಮ್ಮ ಶಿಕ್ಷಣ ಪದ್ಧತಿಯನ್ನು ಆರಂಭಿಸುವ ತನಕ ದಕ್ಷಿಣ ಭಾರತದಲ್ಲಿ ಮುಸಲ್ಮಾನರ ಆಡಳಿತ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದರೂ ಆ ಆಳರಸರು ದೇಶೀಯ ಶಿಕ್ಷಣಪದ್ಧತಿಗೆ ಪ್ರೋತ್ಸಾಹವನ್ನಾಗಲಿ ಕೊಡುಗೆಯನ್ನಾಗಲಿ ನೀಡಲಿಲ್ಲ. ಮುಸಲ್ಮಾನರ ಅಥವಾ ಆ ಮತವನ್ನು ಅನುಸರಿಸಿದವರ ಶಿಕ್ಷಣಕ್ಕಾಗಿ ಮಕ್ತಾಬ್‌ಗಳನ್ನೂ ಮದ್ರಸಾಗಳನ್ನೂ ಆರಂಭಿಸಿದರೂ ಹಿಂದೂಗಳ ಶಿಕ್ಷಣದ ಬಗ್ಗೆ ಆಸಕ್ತಿ ವಹಿಸಲಿಲ್ಲ. ಹಿಂದೆಲ್ಲ ರಾಜರೂ ಮಾಂಡಲಿಕರೂ ಹಿಂದೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೀಡುತ್ತಿದ್ದ ಆಶ್ರಯ ಇಲ್ಲವಾಯಿತು. ಅವರ ಆಕ್ರಮಣದ ದಾಳಿಯ ಕಾಲದಲ್ಲಿ ಅನೇಕ ದೇವಾಲಯಗಳೂ ಅವುಗಳಲ್ಲಿದ್ದ ಶಿಕ್ಷಣಕೇಂದ್ರಗಳೂ ಗ್ರಂಥಭಂಡಾರಗಳೂ ನಾಶವಾದುವು. ಅಲ್ಲಿದ್ದ ಅಧ್ಯಾಪಕರೂ ವಿದ್ಯಾರ್ಥಿಗಳೂ ಅವನ್ನು ಬಿಟ್ಟುಹೋಗಬೇಕಾಯಿತು. ಹಿಂದೂ ಶಿಕ್ಷಣವನ್ನು ಪಡೆದವರಿಗೆ ರಾಜ್ಯದಲ್ಲಿ ಉದ್ಯೋಗವಾಗಲಿ ಪ್ರೋತ್ಸಾಹವಾಗಲಿ ದೊರಕುವಂತಿರಲಿಲ್ಲ. ಇವೆಲ್ಲದರ ಫಲವಾಗಿ ಅಕ್ಷರಸ್ಥರ ಸಂಖ್ಯೆ ಕುಗ್ಗುತ್ತ ಬಂತು. ಉನ್ನತ ಶಿಕ್ಷಣ ಪಡೆದವರ ಸಂಖ್ಯೆಯೂ ತೀರ ಕಡಿಮೆಯಾಯಿತು. 18ನೆಯ ಶತಮಾನದ ಕೊನೆಯ ವೇಳೆಗೆ ಅಕ್ಷರಸ್ಥರ ಸಂಖ್ಯೆ ಶೇ. 15ಕ್ಕಿಂತ ಕಡಿಮೆಯಿತ್ತೆಂದೂ 12ನೆಯ ಶತಮಾನದಲ್ಲಿ ಆ ಸಂಖ್ಯೆ ಶೇ.30ಕ್ಕಿಂತ ಹೆಚ್ಚಾಗಿತ್ತೆಂದೂ ಊಹಿಸಲಾಗಿದೆ.

ಮುಸಲ್ಮಾನರ ದಾಳಿಯಿಂದ ವಿಪತ್ತಿಗೀಡಾದ ಮೇಲೆ ಕರ್ನಾಟಕದಲ್ಲಿ ಅನಾದಿ ಕಾಲದಿಂದಲೂ ಬೆಳೆದುಕೊಂಡು ಬಂದಿದ್ದ ಶಿಕ್ಷಣ ಸಂಪ್ರದಾಯ ಮುಂದೆ ಚೇತರಿಸಿಕೊಳ್ಳಲಿಲ್ಲ. ಅಲ್ಲೊಂದು ಇಲ್ಲೊಂದು ಮಠ, ಅಗ್ರಹಾರ, ಬ್ರಹ್ಮಪುರಿಗಳು ಉಳಿದುಕೊಂಡಿದ್ದರೂ ಮುಸಲ್ಮಾನ್ ರಾಜರು ಪ್ರೋತ್ಸಾಹ ನೀಡದಿದ್ದುದರ ಫಲವಾಗಿ ಅವು ಕ್ರಮಕ್ರಮವಾಗಿ ಕಾರ್ಯವಿಮುಖವಾದುವು. ಮುಂದೆ 19ನೆಯ ಶತಮಾನದಲ್ಲಿ ಇಂಗ್ಲಿಷರು ಆರಂಭಿಸಿದ ಶಿಕ್ಷಣ ಪದ್ಧತಿಯ ಮೇಲೆ ಅವು ತಮ್ಮ ಪ್ರಭಾವ ಬೀರದಾದುವು.

ಆಧುನಿಕ ಯುಗ ಆರಂಭವಾಗುವ ಎಂದರೆ 19ನೆಯ ಶತಮಾನದ ಆದಿಯವರೆಗೆ ಪಾಶ್ಚಾತ್ಯ ದೇಶಗಳಿಂದ ಮತಪ್ರಚಾರಕ್ಕಾಗಿ ಬಂದ ಪಾದ್ರಿಗಳು ಅದರ ಅಂಗವಾಗಿ ಅಥವಾ ಕ್ರೈಸ್ತ ಸಂನ್ಯಾಸಿಗಳಿಗಾಗಿ ಶಿಕ್ಷಣ ಸಂಸ್ಥೆಗಳನ್ನು ತಮ್ಮ ದೇಶಗಳಲ್ಲಿದ್ದ ಮಾದರಿಯಲ್ಲಿ ಆರಂಭಿಸಿದರು. ಗೋವ, ಮದ್ರಾಸು, ಕಲ್ಕತ್ತ ಮುಂತಾದೆಡೆ ಅಂಥ ಸಂಸ್ಥೆಗಳು 17ನೆಯ ಶತಮಾನದ ಕೊನೆಯ ಹೊತ್ತಿಗೆ ಆರಂಭವಾದರೂ ಕರ್ನಾಟಕದಲ್ಲಿ ಅವು ಹತ್ತೊಂಬತ್ತನೆಯ ಶತಮಾನದ ಮೊದಲನೆಯ ದಶಕದ ಅನಂತರವೇ ಆರಂಭವಾದದ್ದು. ಅಂಥ ಶಾಲೆಗಳು 1912ರಲ್ಲಿ ಬಳ್ಳಾರಿಯಲ್ಲೂ ಅನಂತರ ಇತರೆಡೆಗಳಲ್ಲೂ ಆರಂಭವಾದುವು. ಪೋರ್ಚುಗೀಸ್, ಫ್ರೆಂಚ್ ಮತ್ತು ಡೇನಿಷ್ ಕ್ರೈಸ್ತಪಾದ್ರಿಗಳು ಅಲ್ಲಲ್ಲಿ ತೆರೆದ ಶಿಕ್ಷಣ ಸಂಸ್ಥೆಗಳ ಮೂಲಕ ಯೂರೋಪಿನ ಕ್ರೈಸ್ತ ಶಿಕ್ಷಣ ಪದ್ಧತಿ ಭಾರತಕ್ಕೂ ಆ ಮೂಲಕ ಕರ್ನಾಟಕಕ್ಕೂ ಆಗಮಿಸಿತು. ಕ್ರೈಸ್ತಮತೀಯ ಕೇಂದ್ರಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲೆಗಳೂ ವ್ಯವಸಾಯ ಮತ್ತು ಕೈಗಾರಿಕಾ ಶಿಕ್ಷಣಕೇಂದ್ರಗಳೂ ಕೆಲವು ಉನ್ನತ ಶಿಕ್ಷಣಸಂಸ್ಥೆಗಳೂ ಕ್ರೈಸ್ತಪಾದ್ರಿಗಳ ತರಬೇತಿಗಾಗಿ ಸೆಮಿನರಿಗಳೂ ಸ್ಥಾಪಿತವಾದುವು. ಬ್ರಿಟಿಷರ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರ ಕರ್ನಾಟಕಕ್ಕೆ ವ್ಯಾಪಿಸಿದಂತೆ ಕ್ರೈಸ್ತ ಶಿಕ್ಷಣ ಪದ್ಧತಿಯ ವ್ಯಾಪ್ತಿ ಹೆಚ್ಚಲಾರಂಭಿಸಿತು. ಧರ್ಮಾರ್ಥ ಶಿಕ್ಷಣಸಂಸ್ಥೆಗಳ ಕಟ್ಟಡ, ಸಿಬ್ಬಂದಿ ಮುಂತಾದ ವೆಚ್ಚಗಳಿಗಾಗಿ ಆ ಶಾಲೆಗಳಿಗೆ ಅಷ್ಟಿಷ್ಟು ಧನ ಸಹಾಯವನ್ನು ಕಂಪೆನಿಯ ಸರ್ಕಾರ ಒದಗಿಸುತ್ತಿತ್ತು. 19ನೆಯ ಶತಮಾನದ 3–4ನೆಯ ದಶಕದ ಹೊತ್ತಿಗೆ ಅಮೆರಿಕದ ಕೆಲವು ಕ್ರೈಸ್ತ ಮತೀಯ ಸಂಸ್ಥೆಗಳೂ ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಿದುವು. ಹತ್ತೊಂಬತ್ತನೆಯ ಶತಮಾನದ 4, 5, 6ನೆಯ ದಶಕಗಳನ್ನು ಮಿಷನರಿ ಶಾಲೆಗಳ ಕಾಲವೆಂದು ಹೇಳುವುದುಂಟು. ಅಂದಿಗಾಗಲೆ ಮುಸ್ಲಿಮರ ದಾಳಿಯಿಂದಲೂ ಸ್ಥಳೀಯ ರಾಜಮಹಾರಾಜರ ಮತ್ತು ಶ್ರೀಮಂತ ದಾನಿಗಳ ಪ್ರೋತ್ಸಾಹದ ಅಭಾವದಿಂದಲೂ ದೇಶೀಯ ಶಿಕ್ಷಣ ಪದ್ಧತಿ ಕ್ಷೀಣಿಸಿತು. ನೂತನ ಶಿಕ್ಷಣ ಪದ್ಧತಿ ಬಹುಬೇಗ ದೇಶಾದ್ಯಂತ ವ್ಯಾಪಿಸಹತ್ತಿತು. ಆಗತಾನೆ ಭದ್ರವಾಗುತ್ತಿದ್ದ ಇಂಗ್ಲಿಷರ ರಾಜಕೀಯ ಬೆಂಬಲವೂ ಅದಕ್ಕೆ ದೊರೆತದ್ದರಿಂದ ಇಲ್ಲಿನವರೆಗೆ ಆ ಪದ್ಧತಿ ಆಕರ್ಷಣೀಯವಾಗಿಯೂ ಪರಿಣಮಿಸಿತು. (ಎನ್.ಎಸ್.ವಿ.)

**ಆಧುನಿಕ ಯುಗದಲ್ಲಿ:** ಬ್ರಿಟಿಷರ ಕಾಲದಲ್ಲಿ ಹಲವು ಆಡಳಿತ ವ್ಯವಸ್ಥೆಗಳ ನಡುವೆ ಹಂಚಿಹೋದ ಕರ್ನಾಟಕದಲ್ಲಿ ಸಮಗ್ರವಾದ ಶಿಕ್ಷಣವ್ಯವಸ್ಥೆ ರೂಪುಗೊಂಡದ್ದು ಏಕೀಕರಣದ ಅನಂತರವೇ. ಅದಕ್ಕೆ ಮುಂಚೆ ಇದರ ವಿವಿಧ ಭಾಗಗಳಲ್ಲಿ ಆಯಾ ಆಡಳಿತ ವ್ಯವಸ್ಥೆಗಳ ಶಿಕ್ಷಣ ಪದ್ಧತಿಗಳೇ ಬಹುತೇಕ ಜಾರಿಯಲ್ಲಿದ್ದುವು. ಮೈಸೂರು ಸಂಸ್ಥಾನ ಭಾಗದಲ್ಲಿ ಆಧುನಿಕ ಪದ್ಧತಿಯ ಶಿಕ್ಷಣ ಪ್ರಾರಂಭವಾದುದು ಹತ್ತೊಂಬತ್ತನೆಯ ಶತಮಾನದ ಆದಿಯಿಂದ. ಅದಕ್ಕೆ ಹಿಂದೆ ದೇವಾಲಯಗಳಲ್ಲಿ ವೇದಪಾಠ ಶಾಲೆಗಳೂ, ಮಸೀದಿಗಳಲ್ಲಿ ಕೊರಾನ್ ಶಾಲೆಗಳೂ ಗ್ರಾಮಾಂತರಗಳಲ್ಲಿ ಓದುಬರಹ ಲೆಕ್ಕಾಚಾರದ ಲೌಕಿಕ ಶಿಕ್ಷಣದ ಕೂಲಿಮಠಗಳೂ ಶಿಕ್ಷಣ ಸಂಸ್ಥೆಗಳಾಗಿದ್ದುವು. ಆಧುನಿಕ ಶಿಕ್ಷಣಾಶಾಲೆಗಳು ಸ್ಥಾಪಿತವಾದಂತೆ ಈ ಮೂರು ಬಗೆಯ ಶಾಲೆಗಳು ಕಡಿಮೆಯಾಗುತ್ತ ಬಂದುವು.

ಭಾರತೀಯರು ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆಯುವುದು ಅವರ ಪುರೋಭಿವೃದ್ಧಿಗೆ ಅವಶ್ಯವೆಂಬುದಾಗಿ ಭಾರತದಲ್ಲಿ ಪ್ರತಿಪಾದಿಸಿದವರೆಂದರೆ ಮಕಾಲೆ ಮತ್ತು ರಾಜಾರಾಮ ಮೋಹನರಾಯ. 1840–1850ರ ಕಾಲದಲ್ಲಿ ಮೈಸೂರು ಸಂಸ್ಥಾನದ ಕೆಲವು ಕಡೆಗಳಲ್ಲಿ ಕ್ರೈಸ್ತ ಪಾದ್ರಿಗಳೂ ಬೆಂಗಳೂರಿನಲ್ಲಿ ಸರ್ಕಾರವೂ ಮೈಸೂರು ನಗರದಲ್ಲಿ ಮಹಾರಾಜರೂ

ಸೆಂಟ್ರಲ್ ಕಾಲೇಜು, ಬೆಂಗಳೂರು

ಇಂಗ್ಲಿಷ್ ಶಾಲೆಗಳನ್ನು ತೆರೆದರು. ಭಾರತ ಸರ್ಕಾರಕ್ಕೆ 1854ರಲ್ಲಿ ಬ್ರಿಟಿಷ್ ಸರ್ಕಾರ ಕಳಿಸಿದ ವೂಡ್‌ರ ಪತ್ರದ (ವೂಡ್ಸ್ ಡೆಸ್ಪ್ಯಾಚ್) ಅಂಗವಾಗಿ ಶಿಕ್ಷಣ ವ್ಯವಸ್ಥೆ ರಚಿತವಾಯಿತು. ಭಾರತ ಸರ್ಕಾರ ನಾಲ್ಕು ವಿಭಾಗೀಯ ಇಂಗ್ಲಿಷ್ ಶಾಲೆಗಳನ್ನು ಎಂಬತ್ತು ತಾಲ್ಲೂಕು ದೇಶ ಭಾಷಾ ಶಾಲೆಗಳನ್ನೂ ಇವುಗಳ ವೆಚ್ಚಕ್ಕಾಗಿ 1,25,000 ರೂಪಾಯಿಗಳನ್ನೂ

ಮಂಜೂರು ಮಾಡಿತು. ಜೂನ್ 1857ರಲ್ಲಿ ವಿದ್ಯಾಇಲಾಖೆಯನ್ನು ಸ್ಥಾಪಿಸಿ, ಶಿಕ್ಷಣದ ಜವಾಬ್ದಾರಿಯನ್ನು ಬ್ರಿಟಿಷ್ ಕಮಿಷನ್ ತಾನೇ ವಹಿಸಿಕೊಂಡಿತು. ಕಡಿಮೆ ಬೆಲೆಯಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸಲು 1858ರಲ್ಲಿ ಸರ್ಕಾರಿ ಮುದ್ರಣಾಲಯ ಸ್ಥಾಪಿತವಾಯಿತು. ಉತ್ತಮ ಕೂಲಿ ಮಠಗಳ ಶಿಕ್ಷಕರಿಗೆ ಸಂಭಾವನೆ ಕೊಡುವುದು ಜಾರಿಗೆ ಬಂತು. ನಾರ್ಮಲ್ ಶಾಲೆಯೂ ಎಂಜಿನಿಯರಿಂಗ್ ಮತ್ತು ಸರ್ವೆ ತರಗತಿಗಳೂ ಪ್ರಾರಂಭವಾದುವು. 1864ರಿಂದ ಮುಂದೆ, 9ರೂ.ಗಳಿಗೆ ಮೇಲ್ಪಟ್ಟ ವೇತನದ ಸರ್ಕಾರೀ ಕೆಲಸಗಳಿಗೆ ನೇಮಕವಾಗುವವರು ಮಾತೃಭಾಷೆಯಲ್ಲಿ ಓದುಬರಹ ಕಲಿತಿರಬೇಕೆಂಬ ಸರ್ಕಾರಿ ಆಜ್ಞೆ ಹೊರಟಿತು.

ಗ್ರಾಮಾಂತರ ಶಿಕ್ಷಣಪ್ರಸಾರಕ್ಕಾಗಿ ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರ್ ಲೂಯಿರೈಸ್ ಹೋಬಳಿ ಶಾಲೆಗಳ ಯೋಜನೆ ತಯಾರಿಸಿದ. 1875ರಲ್ಲಿ ಇನ್ನೂ ಮೂರು ನಾರ್ಮಲ್ ಶಾಲೆಗಳು, ಎಂಜಿನಿಯರಿಂಗ್ ಶಾಲೆ, ಬೆಂಗಳೂರು ಸೆಂಟ್ರಲ್ ಕಾಲೇಜ್ ಸ್ಥಾಪಿತವಾದುವು. ಮೂರು ವಿಭಾಗಗಳ ಪ್ರೌಢಶಾಲೆಗಳು ಕೊಲಿಜಿಯೇಟ್ ಮಟ್ಟಕ್ಕೆ ಏರಿದುವು. ರೂ.20ಕ್ಕೆ ಮೇಲ್ಪಟ್ಟ ವೇತನದ ನೌಕರಿಗಳಿಗಾಗಿ ಸಾಮಾನ್ಯ ಪರೀಕ್ಷೆ (ಜನರಲ್ ಟೆಸ್ಟ್) ಪ್ರಾರಂಭವಾಯಿತು. ವೈದ್ಯಕೀಯ ಶಾಲೆ ಮತ್ತು ಸಸ್ಯಶಾಸ್ತ್ರೀಯ (ಬೊಟಾನಿಕಲ್) ಶಾಲೆ ಸ್ಥಾಪಿತವಾದುವು (1880). ಸಂಸ್ಥಾನದ ಆಡಳಿತವನ್ನು ಬ್ರಿಟಿಷ್ ಕಮಿಷನರಿಂದ ಮಹಾರಾಜರಿಗೆ ವರ್ಗ ಮಾಡಿದಾಗ (1881), ನಗರ ಮತ್ತು ಗ್ರಾಮಾಂತರ ಪ್ರದೇಶಗಳೆರಡರಲ್ಲಿಯೂ ಆಧುನಿಕ ಶಿಕ್ಷಣದ ತಳಹದಿ ರೂಪುಗೊಂಡಿತ್ತು.

ಮಹಾರಾಜರ ಸರ್ಕಾರದ ಉದಾರನೀತಿ ಮತ್ತು ಪ್ರಗತಿಪ್ರಿಯತೆಯ ಫಲವಾಗಿ ಶಾಲೆಗಳ ಮತ್ತು ಮಕ್ಕಳ ಸಂಖ್ಯೆಗಳು ಒಂದೇ ಸಮನೆ ಏರುತ್ತ ಬಂದುವು. ದಿವಾನ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಏರ್ಪಡಿಸಲಾದ ಆರ್ಥಿಕ ಸಮ್ಮೇಳನದ ಫಲವಾಗಿ ಜನಜಾಗೃತಿಯುಂಟಾಯಿತು. ಗ್ರಾಮಾಂತರ ಸಹಾಯಧನ ಶಾಲೆಗಳ ಯೋಜನೆ (1914) ಆಚರಣೆಗೆ ಬಂತು. ಕೆಲವು ಚುನಾಯಿತ ಪ್ರದೇಶಗಳಲ್ಲಿ ಒತ್ತಾಯ ಶಿಕ್ಷಣ ಜಾರಿಗೆ ಬಂತು. ವಾಣಿಜ್ಯಶಿಕ್ಷಣಶಾಲೆ ಮತ್ತು ವ್ಯವಸಾಯ ಶಿಕ್ಷಣಶಾಲೆ ಪ್ರಾರಂಭವಾದುವು. ಗ್ರಾಮಾಂತರ ಸಂಚಾರಿ ಪುಸ್ತಕಭಂಡಾರಯೋಜನೆ ಪ್ರಾಯೋಗಿಕವಾಗಿ ಆಚರಣೆಗೆ ಬಂತು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದದ್ದು 1916ರಲ್ಲಿ.

ಗ್ರಾಮಾಂತರ ಶಾಲೆಗಳ ಪರಿಸ್ಥಿತಿಯನ್ನು ಉತ್ತಮಪಡಿಸಲು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್ ಸಿ.ಆರ್.ರೆಡ್ಡಿಯವರು ಒಂದು ಶಿಕ್ಷಣ ಲಿಖಿತವನ್ನು (ಮೆಮೊರಾಂಡಂ ಆಫ್ ಎಜ್ಯುಕೇಷನ್) 1921ರಲ್ಲಿ ತಯಾರಿಸಿದರು. ಅದನ್ನು ಸರ್ಕಾರ ಅಂಗೀಕರಿಸಿತು. ಶಿಕ್ಷಣ ತೆರಿಗೆಯನ್ನು ವಿಧಿಸಿ, ಅದರಿಂದ ಬಂದ ಹಣದಿಂದ ಹೊಸ ಹೊಸ ಶಾಲೆಗಳನ್ನು ತೆರೆಯಲಾಯಿತು. 1922 ರಲ್ಲಿ ಸಂಸ್ಥಾನದಲ್ಲಿ ಶಿಕ್ಷಣ ಸಮೀಕ್ಷೆ ನಡೆಸಿ ಉತ್ತಮ ಅನುದಾನ ಶಾಲೆಗಳನ್ನು ಸರ್ಕಾರಿ ಶಾಲೆಗಳನ್ನಾಗಿ ಪರಿವರ್ತಿಸಲಾಯಿತು. ಅನಂತರ 1927–28ರಲ್ಲಿ ಮತ್ತೊಂದು ಸಮೀಕ್ಷೆ ನಡೆಸಿ ವಿದ್ಯಾಪ್ರಗತಿಯನ್ನು ಪರಿಶೀಲಿಸಿ, ಕೇಂದ್ರೀಯ ಶಾಲಾ ಯೋಜನೆಯನ್ನು ಆಚರಣೆಗೆ ತರಲಾಯಿತು. 1930ರಲ್ಲಿ ಪ್ರಾಥಮಿಕ ಶಾಲೆಗಳ ಆಡಳಿತವನ್ನು ಸ್ಥಳೀಯ ಸಂಸ್ಥೆಗಳು ವಹಿಸಿಕೊಂಡುವು.

ಈ ಕಾಲದಲ್ಲಿ ಪ್ರೌಢ (ಸೆಕಂಡರಿ) ಶಿಕ್ಷಣವೂ ಪ್ರಗತಿ ಹೊಂದಿತು. ಪೌರಸಭಾ ಪ್ರೌಢಶಾಲೆಗಳೂ ಪ್ರಾರಂಭವಾದುವು. ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಹೊಸ ವ್ಯಾಸಂಗಕ್ರಮವನ್ನು ರೂಪಿಸಿದಾಗ ಅದರಲ್ಲಿ ಮರಗೆಲಸ ಮೊದಲಾದ 23 ಕಸಬು ಕಲೆಗಳೂ ಔದ್ಯೋಗಿಕ ಪಾಠ ವಿಷಯಗಳೂ ಸೇರಿದುವು. 1937ರಲ್ಲಿ ಪ್ರೌಢಶಾಲೆಗಳ ವ್ಯಾಸಂಗಕ್ರಮದಲ್ಲಿ ಮತ್ತೆ ಬದಲಾವಣೆಗಳಾದುವು. ಕನ್ನಡ ಮಾಧ್ಯಮವೂ ಜಾರಿಗೆ ಬಂತು.

ವಿಶ್ವವಿದ್ಯಾನಿಲಯ ಇಂಟರ್‌ಮೀಡಿಯೇಟ್ ಪರೀಕ್ಷೆಯ ಜಾರಿ, ಕನ್ನಡದ ಎಂ.ಎ., ಗಣಿತದ ಎಂ.ಎ., ಎಂ.ಎಸ್‌ಸಿ. ಮತ್ತು ಬಿ.ಟಿ. ಪರೀಕ್ಷೆಗಳ ಆರಂಭ – ಇವು ಆ ಕಾಲದ ಬೆಳವಣಿಗೆಗಳು. ಮಹಾರಾಜರ ರಜತೋತ್ಸವದ ಸ್ಮಾರಕವಾಗಿ (1927) ಒಂದು ತಾಂತ್ರಿಕ ಶಿಕ್ಷಣ ಶಾಲೆ ಸ್ಥಾಪಿತವಾಯಿತು.

ಪ್ರಾಥಮಿಕ ಶಿಕ್ಷಣ ನಿರೀಕ್ಷಿಸಿದಷ್ಟು ಪ್ರಗತಿ ಪಡೆಯದಿದ್ದುದರಿಂದ ಅದರ ಆಡಳಿತವನ್ನು ಸರ್ಕಾರವೇ ಮತ್ತೆ ವಹಿಸಿಕೊಳ್ಳಬೇಕಾಯಿತು. ಅನೇಕ ಹೊಸ ಶಾಲೆಗಳು ಸ್ಥಾಪಿತವಾದುವು. ಸ್ವಲ್ಪಮಟ್ಟಿನ ಒತ್ತಾಯ ಶಿಕ್ಷಣವೂ ಆಚರಣೆಗೆ ಬಂತು. ಅನೇಕ ಗ್ರಾಮಾಂತರ ಪ್ರಾಥಮಿಕ ಶಾಲೆಗಳಲ್ಲಿ ಮಾಧ್ಯಮಿಕ ತರಗತಿಗಳ ಆರಂಭ, ಪೌರಸಭಾ ಮತ್ತು ಜಿಲ್ಲಾ ಬೋರ್ಡ್ ಪ್ರೌಢಶಾಲೆಗಳ ಸ್ಥಾಪನೆ – ಇವುಗಳಿಂದ ಶಿಕ್ಷಣ ಹೆಚ್ಚು ವ್ಯಾಪಕವಾಯಿತಾದರೂ 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದು, ಪಂಚವಾರ್ಷಿಕ ಯೋಜನೆ ರೂಪುಗೊಂಡ ಮೇಲೆಯೇ ಪ್ರಗತಿಯ ವೇಗ ಹೆಚ್ಚಿದ್ದು. ಬೇಸಿಕ್ ಶಿಕ್ಷಣ ಪದ್ಧತಿ ಜಾರಿಗೆ ಬಂತು. ಶಿಕ್ಷಣ ಪುನರ್‌ವ್ಯವಸ್ಥೆಯ ಬಗ್ಗೆ ಸಲಹೆ ನೀಡಲು ಸಿ.ಆರ್.ರೆಡ್ಡಿಯವರು 1948ರಲ್ಲಿ ನೇಮಕವಾದರು. ಅನಂತರ 1952ರಲ್ಲಿ ಶಿಕ್ಷಣ ಸುಧಾರಣಾಸಮಿತಿಯೊಂದನ್ನು ರಚಿಸಲಾಯಿತು. ಇದರ ಶಿಫಾರಸುಗಳನ್ನು ಜಾರಿಗೆ ಕೊಡುವುದರೊಳಗಾಗಿ 1956ರಲ್ಲಿ ರಾಜ್ಯಗಳ ಪುನರ್‌ವಿಂಗಡಣೆ ನಡೆದು, ಬೊಂಬಾಯಿ, ಮದ್ರಾಸು, ಹೈದರಾಬಾದು ಕನ್ನಡ ಪ್ರದೇಶಗಳೂ ಕೊಡಗೂ ಅಂದಿನ ಮೈಸೂರು ರಾಜ್ಯದೊಡನೆ ಸೇರಿ ಹೊಸ ಮೈಸೂರು ರಾಜ್ಯವಾಯಿತು.

ಏಕೀಕೃತ ಕರ್ನಾಟಕದಲ್ಲಿ ಐದು ವಿವಿಧ ಶಿಕ್ಷಣ ಪದ್ಧತಿಗಳನ್ನು ಒಂದು ರೂಪಕ್ಕೆ ತರುವ ಬೃಹತ್ ಸಮಸ್ಯೆ ತಲೆದೋರಿತು. ಇದಕ್ಕಾಗಿ ಸರ್ಕಾರ ಶಿಕ್ಷಣ ಸಂಯೋಜನ ಸಲಹಾ ಸಮಿತಿಯನ್ನು ರಚಿಸಿತು. ಪ್ರಾಥಮಿಕ ಶಿಕ್ಷಣ 7 ವರ್ಷಕಾಲ, ಪ್ರೌಢಶಿಕ್ಷಣ 4 ವರ್ಷಕಾಲ ಎಂಬುದು ಇತ್ಯರ್ಥವಾಯಿತು. ಹೊಸ ತರಗತಿಗಳ ವಿಂಗಡಣೆಯೂ ಹೊಸ ವ್ಯಾಸಂಗಕ್ರಮಗಳೂ 1959–60ರಿಂದ ಮೊದಲಾಗಿ 1964–65ಕ್ಕೆ ಪೂರ್ಣವಾಗಿ ಆಚರಣೆಗೆ ಬಂದುವು. ಇದಕ್ಕೆ ಹೊಂದುವಂತೆ ವಿಶ್ವವಿದ್ಯಾನಿಲಯಗಳು ಮೂರು ವರ್ಷದ ಪುನರ್ರಚಿತ ಪದವಿ ಶಿಕ್ಷಣವನ್ನು ಮುಂದಾಗಿ ಆಚರಣೆಗೆ ತಂದುವು.

ಭಾರತದ ಎಲ್ಲೆಡೆಗಳಂತೆ ಕರ್ನಾಟಕ ರಾಜ್ಯದಲ್ಲಿಯೂ ಶಿಕ್ಷಣ ಸಮೀಕ್ಷೆ ನಡೆಸಿ (1957–88), ಶಿಕ್ಷಣ ಸೌಕರ್ಯಗಳಿಲ್ಲದ ಪ್ರದೇಶಗಳಿಗೆ ಹೊಸ ಶಾಲೆಗಳನ್ನು ಯೋಜಿಸಲಾಯಿತು. ಕಡ್ಡಾಯ ಶಿಕ್ಷಣಕ್ಕೆ ಸ್ಪಷ್ಟರೂಪಕೊಟ್ಟು, 1961–62 ರಿಂದ ರಾಜ್ಯದಾದ್ಯಂತ ಆಚರಣೆಗೆ ತರಲಾಗಿದೆ. ಪ್ರತಿವರ್ಷ ಶಾಲಾ ಮಕ್ಕಳ ಗಣತಿ ನಡೆಸಿ ಹೆಚ್ಚು ಹೆಚ್ಚು ದಾಖಲೆ ಮಾಡುತ್ತಿರಲಾಗಿದೆ. ಉಚಿತ ಪುಸ್ತಕ ಮತ್ತು ಬಟ್ಟೆಗಳ ರೂಪದಲ್ಲಿ ವಿದ್ಯಾರ್ಥಿವೇತನಗಳು, ಕೇರ್ ಸಂಸ್ಥೆಯ ಸಹಾಯದಿಂದ ಮಧ್ಯಾಹ್ನದ ಉಪಾಹಾರ ಮೊದಲಾದ ಪ್ರೋತ್ಸಾಹಗಳಿಂದ ಹಾಜರಿಯನ್ನು ಉತ್ತಮಪಡಿಸುತ್ತಿರಲಾಗಿದೆ. ಶಾಲಾಭಿವೃದ್ಧಿ ಸಮಿತಿಗಳ ಮೂಲಕ ಪ್ರಜೆಗಳೇ ತಮ್ಮ ತಮ್ಮ ಪ್ರದೇಶಗಳ ಶಾಲೆಗಳಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಳ್ಳುವಂತಾಗಿದೆ. ಶಾಲಾಕಟ್ಟಡಗಳನ್ನು ಕಟ್ಟಿಸಿ ಕೊಡುವ ಹೊಣೆಯನ್ನು ಇಂದಿನಂತೆ ಈಗಲೂ ಗ್ರಾಮದವರಿಗೇ ವಹಿಸಲಾಗಿದೆ. ಗ್ರಾಮಾಂತರ ಶಾಲೆಗಳ ಶಿಕ್ಷಕಿಯರಿಗಾಗಿ ವಸತಿಗೃಹಗಳನ್ನು ಕಟ್ಟಿಸುವ

ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ

ಯೋಜನೆ ಕೈಗೊಳ್ಳಲಾಗಿದೆ. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅಧ್ಯಾಪಕ ಶಿಕ್ಷಣ ಸಂಸ್ಥೆಗಳನ್ನು ತೆರೆಯುತ್ತಿರಲಾಗಿದೆ. ಆಡಳಿತವನ್ನು ಪುನಃ ಸ್ಥಳೀಯ ಸಂಸ್ಥೆಗಳಿಗೆ ವಹಿಸಿ ಕೊಡುವ ಯತ್ನ ನಡೆಯುತ್ತಿದೆ.

ಪ್ರೌಢಶಿಕ್ಷಣವೂ ತೀವ್ರಗತಿಯಲ್ಲಿ ವಿಸ್ತರಿಸುತ್ತಿದೆ. ಖಾಸಗಿಯವರೂ ಸ್ಥಳೀಯ ಸಂಸ್ಥೆಗಳೂ ಹೊಸ ಪ್ರೌಢಶಾಲೆಗಳನ್ನು ತೆರೆಯಲು ಉದಾರ ಪ್ರೋತ್ಸಾಹ ಮತ್ತು ಸಹಾಯ ಧನಗಳನ್ನು ಸರ್ಕಾರ ನೀಡುತ್ತಿದೆ. ರೂ. 2,400ಕ್ಕೆ ಹೆಚ್ಚಿಲ್ಲದ ವಾರ್ಷಿಕ ವರಮಾನವುಳ್ಳವರ ಮಕ್ಕಳಿಗೆ ಪಾಠದ ಶುಲ್ಕದ ವಿನಾಯಿತಿಯುಂಟು. ಜೊತೆಗೆ ವಿದ್ಯಾರ್ಥಿ ವೇತನಗಳು ದೊರೆಯುತ್ತಿವೆ.

ಮಕ್ಕಳಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ಪಠ್ಯಪುಸ್ತಕಗಳನ್ನೊದಗಿಸುವುದಕ್ಕಾಗಿ ಪ್ರಾಥಮಿಕ ಪಠ್ಯಪುಸ್ತಕಗಳ ಮಟ್ಟಿಗೆ ಪೂರ್ಣ ರಾಷ್ಟ್ರೀಕರಣವನ್ನು ಕೈಗೊಳ್ಳಲಾಗಿದೆ. ಪಠ್ಯಪುಸ್ತಕಗಳ ಮುದ್ರಣಕ್ಕಾಗಿಯೇ ಮೈಸೂರು ನಗರದಲ್ಲಿ ಒಂದು ಸರ್ಕಾರಿ ಮುದ್ರಣಾಲಯವನ್ನು ಸ್ಥಾಪಿಸಲಾಗಿದೆ. ಪಠ್ಯಪುಸ್ತಕಗಳ ದಾಸ್ತಾನು ಮತ್ತು ಹಂಚಿಕೆಗಳಿಗಾಗಿ ರಾಜ್ಯದಲ್ಲಿ ಹತ್ತು ಕೇಂದ್ರಗಳನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ.

ಶಿಕ್ಷಕರ ಸಂಬಳಗಳನ್ನು 1957ರಲ್ಲಿ ಮತ್ತು 1961ರಲ್ಲಿ ಪುನರ್‌ವಿಮರ್ಶಿಸಲಾಯಿತು. ಖಾಸಗಿ ಶಾಲೆಗಳ ಶಿಕ್ಷಕರ ಸಂಬಳವನ್ನು ಸರ್ಕಾರಿ ಶಾಲೆಗಳವರ ಮಟ್ಟಕ್ಕೆ ಏರಿಸಲಾಯಿತು. ಅವರಿಗಾಗಿ ನಿವೃತ್ತಿವೇತನ, ಭವಿಷ್ಯನಿಧಿ, ಜೀವವಿಮೆ– ಈ ತ್ರಿವಿಧ ಸೌಲಭ್ಯ ಯೋಜನೆಯನ್ನು ರಚಿಸಲಾಗಿದೆ. ಶಿಕ್ಷಕರ ವೃತ್ತಿಮಟ್ಟವನ್ನು ಹೆಚ್ಚಿಸಲು ಸಮಾಲೋಚನ ಗೋಷ್ಠಿಗಳನ್ನು ಏರ್ಪಡಿಸಲಾಗುತ್ತಿದೆ. ಶಾಲಾ ತನಿಖೆಯನ್ನು ಉತ್ತಮ ರೀತಿಯಲ್ಲಿ ನಡೆಸಲು ವಿಷಯ ಪರೀಕ್ಷಕರು ನೇಮಕವಾಗಿದ್ದಾರೆ.

ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಹೊಸ ಹೊಸ ಸಂಸ್ಥೆಗಳನ್ನು ಕಟ್ಟುತ್ತಿರಲಾಗಿದೆ. 1958ರಲ್ಲಿ ಶಿಕ್ಷಣ ಸಂಶೋಧನಾಲಯವೂ ಶೈಕ್ಷಣಿಕ ವೃತ್ತೀಯ ಮಾರ್ಗದರ್ಶನಾಲಯವೂ 1959ರಲ್ಲಿ ರಾಜ್ಯದ ಶೈಕ್ಷಣಿಕ ಪುಸ್ತಕ ಭಂಡಾರವೂ ಸ್ಥಾಪಿತವಾದುವು.

ಪ್ರಾಥಮಿಕ ಶಿಕ್ಷಣ ಸಂಶೋಧನೆ ಮತ್ತು ಶಿಕ್ಷಕ ಶಿಕ್ಷಣಗಳಿಗಾಗಿ 1964ರಲ್ಲಿ ರಾಜ್ಯದ ಶೈಕ್ಷಣಿಕ ಕೇಂದ್ರ ಸರ್ಕಾರದ ನೆರವಿನಿಂದ ಪ್ರಾರಂಭವಾಯಿತು. ಜನರಲ್ಲಿ ವಾಚನಾಭಿರುಚಿ ಮತ್ತು ತಿಳಿವಳಿಕೆ ಹೆಚ್ಚಿಸಲು ರಾಜ್ಯದಲ್ಲಿ ಪುಸ್ತಕಭಂಡಾರ ಕಾಯಿದೆ ಜಾರಿಗೆ ಬಂದಿದೆ.

ವಿಶ್ವವಿದ್ಯಾನಿಲಯ ಕ್ಷೇತ್ರದಲ್ಲಿಯೂ ಮಹತ್ತರ ಬದಲಾವಣೆಗಳಾಗಿವೆ. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳು ಸಂಶೋಧನೆಗೆ ಸಂಪೂರ್ಣ ಗಮನ ಕೊಡಲು ಸಾಧ್ಯವಾಗುವಂತೆ ಅವುಗಳ ಅಧೀನದಲ್ಲಿದ್ದ ಬಹುತೇಕ ಕಾಲೇಜುಗಳ ಆಡಳಿತವನ್ನು ಸರ್ಕಾರ ತಾನೇ ವಹಿಸಿಕೊಂಡಿತು. ಅದಕ್ಕಾಗಿ ಒಬ್ಬ ಕಾಲೇಜು ಶಿಕ್ಷಣಾಧಿಕಾರಿಯನ್ನು ನೇಮಿಸಿತು. 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವೂ 1965ರಲ್ಲಿ ಹೆಬ್ಬಾಳದಲ್ಲಿ ವ್ಯವಸಾಯ ವಿಶ್ವವಿದ್ಯಾಲಯವೂ ಆರಂಭವಾದುವು. ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳಲು ಪ್ರತ್ಯೇಕ ಅಧಿಕಾರಿಯನ್ನು ನೇಮಿಸಿ, ಎಲ್ಲ ಜಿಲ್ಲೆಗಳಲ್ಲೂ ತಾಂತ್ರಿಕ ಶಿಕ್ಷಣ ಸೌಕರ್ಯಗಳನ್ನು ವಿಸ್ತರಿಸಲಾಗುತ್ತಿದೆ. ಶಿಕ್ಷಣ ಹೀಗೆ ವಿಸ್ತಾರದಲ್ಲಿಯೂ ಗುಣದಲ್ಲಿಯೂ ತೀವ್ರಪ್ರಗತಿ ಸಾಧಿಸುತ್ತಿದೆ.

ಕರ್ನಾಟಕದಲ್ಲಿ (2011) 20 ವಿಶ್ವವಿದ್ಯಾನಿಲಯಗಳೂ 152 ಎಂಜನಿಯರಿಂಗ್ ಸಂಸ್ಥೆಗಳೂ, 114 ವೈದ್ಯಕೀಯ ಕಾಲೇಜುಗಳೂ 248 ತಾಂತ್ರಿಕ (ಪಾಲಿಟೆಕ್ನಿಕ್) ಶಾಲೆಗಳೂ 103, ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳೂ ಇವೆ. ಕರ್ನಾಟಕದ ಪ್ರಥಮ ವಿಶ್ವವಿದ್ಯಾನಿಲಯ ಮೈಸೂರಿನಲ್ಲಿ 1916ರಲ್ಲಿ ಪ್ರಾರಂಭವಾಗಿ ಮೈಸೂರು ವಿಶ್ವವಿದ್ಯಾನಿಲಯವೆಂದು ಪ್ರಸಿದ್ಧಿ ಪಡೆಯುವುದರೊಂದಿಗೆ 5 ನಕ್ಷತ್ರ (ಸ್ಟಾರ್) ಸ್ಥಾನಮಾನವನ್ನು ವಿಶ್ವವಿದ್ಯಾನಿಲಯ ಅನುದಾನ ಆಯೋಗದ ರಾಷ್ಟ್ರೀಯ ಯೋಗ್ಯತಾ ನಿರ್ಣಯ ಸಮಿತಿ (ನ್ಯಾಕ್)ಯಿಂದ ಪಡೆದಿದೆ. ಅದರಂತೆಯೇ ಬೆಂಗಳೂರು (1964) ಗುಲ್ಬರ್ಗ (1980) ವಿಶ್ವವಿದ್ಯಾನಿಲಯಗಳೂ ಈ ಗೌರವಕ್ಕೆ ಪಾತ್ರವಾಗಿವೆ. ಮುಂದೆ ಕರ್ನಾಟಕ ವಿಶ್ವವಿದ್ಯಾನಿಲಯ (1949), ಮಂಗಳೂರು ವಿಶ್ವವಿದ್ಯಾಲಯ (1980), ಕುವೆಂಪು ವಿಶ್ವವಿದ್ಯಾಲಯ (1987) ಪ್ರಾರಂಭವಾದವು. ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ (1965) ಧಾರವಾಡದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ (1986)ರಲ್ಲಿ ಪ್ರಾರಂಭವಾದವು. ಹಂಪೆಯ ಕನ್ನಡ ವಿಶ್ವವಿದ್ಯಾಲಯ 1991 ರಿಂದ ಕಾರ್ಯಾರಂಭ ಮಾಡಿದೆ. ಬೆಂಗಳೂರಿನಲ್ಲಿ ಭಾರತ ಸಂಖ್ಯಾಶಾಸ್ತ್ರ ಸಂಸ್ಥೆ (1978) ಭಾರತ ವಿಜ್ಞಾನ ಸಂಸ್ಥೆ (1911) ಭಾರತ ಆಡಳಿತನಿರ್ವಹಣಾ ಸಂಸ್ಥೆ (1972) ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (1987) ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಸಂಸ್ಥೆ (1972) ಕೆಲಸ ಮಾಡುತ್ತಿವೆ. ಬೆಂಗಳೂರಿನಲ್ಲಿ ಖಾಸಗಿಯಾದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ, ಅಲಿಯನ್ಸ್ ವಿಶ್ವವಿದ್ಯಾಲಯಗಳೂ ಇವೆ. ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮದ ತರಬೇತಿ ಕೇಂದ್ರಗಳೂ ಇವೆ. ವೈದ್ಯ ಮತ್ತು ದಂತ ಕಾಲೇಜುಗಳನ್ನೊಳಗೊಂಡ ವೈದ್ಯಕೀಯ ವಿಶ್ವವಿದ್ಯಾನಿಲಯ ಆಯುರ್ವೇದ, ಪ್ರಕೃತಿ ಹಾಗೂ ಹೋಮಿಯೋಪತಿ ಕಾಲೇಜುಗಳ ಶಿಕ್ಷಣ ಸಂಸ್ಥೆಗಳೂ ಕರ್ನಾಟಕದಲ್ಲಿ ಪ್ರಗತಿ ಪಥದತ್ತ ನಡೆದಿವೆ. ಬಿ.ಎಡ್., ಎಂ.ಎಡ್. ಶಿಕ್ಷಣ ಹಾಗೂ ವಿವಿಧ ಬಗೆಯ ಆಧುನಿಕ ಶಿಕ್ಷಣ ಕರ್ನಾಟಕದ ಜನತೆಗೆ ದೊರಕುತ್ತಿದೆ. ಸರಾಸರಿ ಆಧುನಿಕ ಶಿಕ್ಷಣ ಕರ್ನಾಟಕದ ಜನತೆಗೆ ದೊರಕುತ್ತಿದೆ. ಸರಾಸರಿ 378 (ಮಾರ್ಚ್ 2011) ಮಂದಿ ವಿದ್ಯಾರ್ಥಿಗಳನ್ನು ಸರ್ಕಾರಿ ಕಾಲೇಜುಗಳಲ್ಲಿ ಸೇರಿಸಿಕೊಳ್ಳಲಾಗಿತ್ತು. ಸರ್ಕಾರದಿಂದ ಅರೆ ಅನುದಾನಿತ ಕಾಲೇಜುಗಳೂ ಸೇರಿದಂತೆ ಬೆಂಗಳೂರಿನ 61 ಕಾಲೇಜುಗಳಲ್ಲಿ 60,000. ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿದ್ದವು. ವಾಕ್‌ಶ್ರವಣ ಸಂಸ್ಥೆ, ಕೇಂದ್ರ ಆಹಾರ ಸಂಸ್ಕರಣ ಸಂಸ್ಥೆ ಮುಂತಾದವೂ ತಮ್ಮ ಕಾರ್ಯಕ್ಷೇತ್ರದಲ್ಲಿ ಹೆಸರು ಗಳಿಸಿವೆ. ಇವಲ್ಲದೆ 4597 ಪೂರ್ವ ಪ್ರಾಥಮಿಕ ಶಾಲೆಗಳೂ 23690 ಪ್ರಾಥಮಿಕ ಶಾಲೆಗಳೂ, 24142 ಎಲಿಮೆಂಟರಿ ಶಾಲೆಗಳೂ, 8216, ಪ್ರೌಢಶಾಲೆಗಳೂ, 1497 ಪಿ.ಯು.ಸಿ. (ಸೀನಿಯರ್ ಸೆಕೆಂಡರಿ ಶಾಲೆಗಳೂ) ಇವೆ. ಕರ್ನಾಟಕದಲ್ಲಿ ಮೊದಲಿನಿಂದಲೂ ರಾಜಾಶ್ರಯ ಹಾಗೂ ಧನಿಕರ ದಾನಿಗಳ ಉದಾರತನದಿಂದಾಗಿ ವಿದ್ಯಾಶಾಲೆಗಳು ನಡೆದುಬಂದು ಇಂದು ಎಲ್ಲಾ ರಾಷ್ಟ್ರಗಳ, ದೃಷ್ಟಿಯನ್ನೂ ತನ್ನತ್ತ ಕರ್ನಾಟಕ ಸೆಳೆಯುವಂತಹ ಪ್ರಗತಿಯನ್ನು ಶಿಕ್ಷಣ ಕ್ಷೇತ್ರದಲ್ಲಿ ತೋರಿದೆ. *

**ಕರ್ನೂಲು:** ಆಂಧ್ರಪ್ರದೇಶದ ಒಂದು ಜಿಲ್ಲೆ ಹಾಗೂ ಜಿಲ್ಲಾಡಳಿತ ಕೇಂದ್ರ ನಗರ. 15° 50' ಉ.ಅ. ಮತ್ತು 78° 4' ಪೂ.ರೇ.ದಲ್ಲಿದೆ. ತುಂಗಭದ್ರಾ ಮತ್ತು ಹಿಂದ್ರಿ ನದಿಗಳು ಇದರ ಬಳಿ ಸಂಗಮಿಸುತ್ತವೆ. ಚೆನ್ನೈಗೆ ವಾಯುವ್ಯದಲ್ಲಿ 450 ಕಿಮೀ ದೂರದಲ್ಲಿ ಸಮುದ್ರಮಟ್ಟದಿಂದ 273ಮೀ ಎತ್ತರದಲ್ಲಿ ಈ ನಗರವಿದೆ. ಜನಸಂಖ್ಯೆ 3,20,619 (2011).

ಕರ್ನೂಲ್ ಪುರಸಭೆಯನ್ನು ಸ್ಥಾಪಿಸಿದ್ದು 1866ರಲ್ಲಿ, ಸುರಕ್ಷಿತ ನೀರು ಸರಬರಾಜು ವ್ಯವಸ್ಥೆಯಾದದು 1897ರಲ್ಲಿ, ಆಂಧ್ರರಾಜ್ಯ ರಚನೆಯಾದಾಗಿನಿಂದ (1953) ಇದು 1956ರವರೆಗೂ ಆಂಧ್ರದ ರಾಜಧಾನಿಯಾಗಿತ್ತು. ಆ ವರ್ಷ ಹೈದರಾಬಾದು ಆಂಧ್ರಪ್ರದೇಶದ ರಾಜಧಾನಿಯಾಯಿತು.

ವಿಜಯನಗರದ ದೊರೆ ಅಚ್ಯುತರಾಯ ಕಟ್ಟಿಸಿದನೆಂದು ಹೇಳಲಾದ ಕೋಟೆಯ ಒಂದು ಭಾಗ ಈಗಲೂ ಇಲ್ಲಿ ಉಳಿದಿದೆ. ಬಿಜಾಪುರ ಸುಲ್ತಾನನ ಮೊದಲ ಮುಸ್ಲಿಂ ರಾಜ್ಯಪಾಲ ನಾಗಿ ಇಲ್ಲಿ ಆಳಿದ ಅಬ್ದುಲ್ ವಹಾಬನ ಗೋರಿ ಹಿಂದ್ರಿ ನದಿಯ ದಂಡೆಯ ಮೇಲಿದೆ. ಇದನ್ನು ಕಟ್ಟಿದ್ದು 1618ರಲ್ಲಿ. ಎರಡು ಗುಮ್ಮಟಗಳಿರುವ, ಬಿಜಾಪುರ ಶೈಲಿಯ ಈ ಕಟ್ಟಡವೇ ಕರ್ನೂಲಿನ ಮುಖ್ಯ ಸ್ಮಾರಕ. ಕರ್ನೂಲಿನಲ್ಲಿ ಆಳಿದ ಕೊನೆಯ ಹಿಂದೂ ದೊರೆ ಗೋಪಾಲರಾಜನದೆಂದು ಹೇಳಲಾದ ಅರಮನೆಯ ಅವಶೇಷಗಳೂ ಸಮೀಪದಲ್ಲೇ ಇವೆ.

ಆಂಧ್ರ ವಿಶ್ವವಿದ್ಯಾಲಯಕ್ಕೆ ಸಂಬದ್ಧವಾದ ಕಲಾ, ವಿಜ್ಞಾನ ಮತ್ತು ವೈದ್ಯಕೀಯ ಕಾಲೇಜುಗಳೂ ಪ್ರೌಢ ಮತ್ತು ತರಬೇತಿ ಶಾಲೆಗಳೂ ಇರುವ ಕರ್ನೂಲು ಒಂದು ಮುಖ್ಯ ವ್ಯಾಪಾರ ಕೇಂದ್ರ. ಎಣ್ಣೆ, ಹತ್ತಿ, ಜವಳಿ ಮತ್ತು ಚಾಪೆ ಇಲ್ಲಿಯ ಮುಖ್ಯ ಉತ್ಪನ್ನಗಳು. ಗುಂತಕಲ್–ಹೈದರಾಬಾದ್‌ಗಳಿಗೆ ರೈಲ್ವೆ ಸಂಪರ್ಕವಿದೆ.

ಕರ್ನೂಲು ಜಿಲ್ಲೆಯ ವಿಸ್ತೀರ್ಣ 24,027 ಚ.ಕಿಮೀ. ಜನಸಂಖ್ಯೆ 3,529,494 (2001). ಜಿಲ್ಲೆಯ ನಡುವೆ ಉತ್ತರ–ದಕ್ಷಿಣವಾಗಿ ಹಾದುಹೋಗುವ ಎರಡು ಪರ್ವತ ಶ್ರೇಣಿಗಳು ನಲ್ಲಮಲೈ (ಅತ್ಯುನ್ನತ ಶಿಖರ 912ಮೀ) ಮತ್ತು ಎಲ್ಲಮಲೈ (ಅತ್ಯುನ್ನತ ಶಿಖರ 606 ಮೀ) ಜಿಲ್ಲೆಯ ಮುಖ್ಯ ನದಿಗಳು ತುಂಗಭದ್ರಾ ಮತ್ತು ಕೃಷ್ಣಾ ಭವನಾಸಿ ನದಿ ನಲ್ಲಮಲೈಯಲ್ಲಿ ಹುಟ್ಟಿ ಸಂಗಮೇಶ್ವರಂನಲ್ಲಿ ಕೃಷ್ಣಾನದಿಯನ್ನು ಸೇರುತ್ತದೆ. ಕರ್ನೂಲು ಜಿಲ್ಲೆಯಲ್ಲಿ ಮಳೆ ಕಡಿಮೆ. ಅನಾವೃಷ್ಟಿ ಆಗಿಂದಾಗ್ಗೆ ಜಿಲ್ಲೆಯನ್ನು ಕಾಡಿಸುವುದುಂಟು, ಬೆಟ್ಟದಲ್ಲಿ ಹುಟ್ಟುವ ಅನೇಕ ಝರಿಗಳಿಗೆ ಅಡ್ಡಲಾಗಿ ಅನೇಕ ಕಟ್ಟೆಗಳನ್ನು ಕಟ್ಟಿ ನೀರಾವರಿ ಏರ್ಪಡಿಸಿಕೊಳ್ಳಲಾಗಿದೆ. ಕರ್ನೂಲು ನಗರದ ಬಳಿ ತುಂಗಭದ್ರಾ ನದಿಯಿಂದ ನಿರ್ಮಿಸ ಲಾಗಿರುವ ನಾಲೆಯ ಉದ್ದ 40 ಮೀ.

ರಾಗಿ, ಹತ್ತಿ, ಬೇಳೆಕಾಳು, ಎಣ್ಣೆಬೀಜ ಮತ್ತು ಬತ್ತ ಮುಖ್ಯ ಬೆಳೆಗಳು. ಹೊಗೆಸೊಪ್ಪೂ ಬೆಳೆಯುತ್ತದೆ. ಬ್ಯಾರೈಟ್, ಸ್ಟಿಯಾಟೈಟ್ ಮತ್ತು ಕಬ್ಬಿಣ ಮುಖ್ಯ ಖನಿಜಗಳು, ಹತ್ತಿ ಒತ್ತಣೆ, ನೇಯ್ಗೆ, ಎಣ್ಣೆ, ಸಾಲ್ಟ್‌ಪೀಟರ್ ಪರಿಷ್ಕರಣೆ ಮುಖ್ಯ ಉದ್ಯಮಗಳು. ಬಂಗನಪಲ್ಲಿಯಲ್ಲಿ ವಜ್ರದ ಗಣಿಯಿದೆ. ಮದರಾಸ್–ಮುಂಬಯಿ ಮತ್ತು ಗುಂತಕಲ್–ಹೈದರಾಬಾದ್ ರೈಲುಮಾರ್ಗಗಳು ಈ ಜಿಲ್ಲೆಯ ಮೂಲಕ ಹಾದು ಹೋಗುತ್ತವೆ.

18ನೆಯ ಶತಮಾನದಲ್ಲಿ ಕರ್ನೂಲು ನವಾಬನೊಬ್ಬನ ಜಹಗೀರಿಯಾಗಿತ್ತು. 1838ರಲ್ಲಿ ಬ್ರಿಟಿಷರು ಈ ವಂಶದ ಹಕ್ಕನ್ನು ತಪ್ಪಿಸಿದರು. ಹೈದರಾಬಾದಿನ ನಿಜಾಮನ ಆಶ್ರಿತನೊಬ್ಬನ ಜಹಗೀರಿಯಾಗಿದ್ದ ಬಂಗನಪಲ್ಲಿಯನ್ನು 1800ರಲ್ಲಿ ಆಗಿನ ಮದರಾಸಿಗೆ ಸೇರಿಸಲಾಗಿತ್ತು. ಇದನ್ನು ಕರ್ನೂಲು ಜಿಲ್ಲೆಗೆ ವರ್ಗಾಯಿಸಿದ್ದು 1948ರಲ್ಲಿ. **(ಯು.ಜೆ.ಎಂ.; ಎಸ್.ಎನ್.)**

**ಕರ್ನೂಲು ಸ್ತೋಮ:** ಆಂಧ್ರ ಪ್ರದೇಶದ ಕಡಪ ಜಿಲ್ಲೆಯಲ್ಲಿ ಕಡಪ ಶಿಲಾಸ್ತೋಮದ ಮೇಲೆ ಅನನುರೂಪವಾಗಿ ನಿಕ್ಷೇಪವಾಗಿರುವ ಶಿಲಾರಾಶಿ (ಕರ್ನೂಲ್ ಸಿಸ್ಟಂ). ಕುಂದೈರ್ ಕೊಳ್ಳದಲ್ಲೂ (ಇದು ಕೃಷ್ಣಾನದಿಯ ವರೆಗೂ ಹರಡಿದೆ) ಪಲ್‌ನಾಡ್ ಪ್ರದೇಶದಲ್ಲೂ ಈ ಶಿಲಾವರ್ಗ ಇದೆ. ಇದು ಪಶ್ಚಿಮದಲ್ಲಿ ಸುಮಾರು 366 ಮೀ ಮಂದವಾಗಿದೆ; ಪಲ್‌ನಾಡ್ ಕಡೆಗೆ ಹೋದಂತೆ ಈ ದಪ್ಪ ಹೆಚ್ಚುತ್ತದೆ. ಪೂರ್ವದ ಕಡೆ ಈ ಸ್ತೋಮ ಭೂಚಲನೆಯಿಂದ ಸ್ವಲ್ಪ ಅಸ್ತವ್ಯಸ್ತಗೊಂಡಿದೆ. ಆದರೂ ಕಡಪ ಶಿಲಾಸ್ತೋಮಗಳಷ್ಟು ಮಡಿಕೆ ಬಿದ್ದಿಲ್ಲ. ಕರ್ನೂಲ್ ಸ್ತೋಮ ಕೆಳಗಿನ ವಿಂಧ್ಯನ್ ಶಿಲಾಸ್ತೋಮಕ್ಕೆ ಸಮಕಾಲೀನವಾದದ್ದು.

ಕರ್ನೂಲ್ ಸ್ತೋಮದಲ್ಲಿ ನಾಲ್ಕು ವಿಧದ ಶಿಲಾಶ್ರೇಣಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಸುಣ್ಣಶಿಲೆ ಮುಖ್ಯವಾಗಿದ್ದರೂ ಜೇಡು ಮತ್ತು ಮರಳು ಶಿಲೆಗಳಿಗೆ ಏನೂ ಕಡಿಮೆ ಇಲ್ಲ. ವಿವರ ಮುಂದೆ ಬರೆದಿದೆ.

| | |
|---|---|
| ಕುಂದೈರ್ | ನಂದ್ಯಾಲ್ ಜೇಡುಶಿಲೆಗಳು |
| | ಕೋಯಿಲ್‌ಕುಂಟ್ಲಾ ಸುಣ್ಣ ಶಿಲೆಗಳು |
| ಪನಿಯಮ್ | ಪಿನ್ನಕ್ಲೆಡ್ ಬೆಣಚುಶಿಲೆ |
| | ಪ್ಲೇಟೋ ಬೆಣಚುಶಿಲೆ |
| ಜಮ್ಮಲಮಡಗು | ಆಕ್ ಮರಳುಶಿಲೆ |
| | ನರ್ಜಿ ಸುಣ್ಣಶಿಲೆ |
| ಬಂಗನಪಲ್ಲಿ | ಬಂಗನಪಲ್ಲಿ ಮರಳುಶಿಲೆ |

ಬಂಗನಪಲ್ಲಿ ಶಿಲೆಗಳು ಸಾಮಾನ್ಯವಾಗಿ ದಪ್ಪ ಮರಳಿನಿಂದ ಕೂಡಿವೆ. ಇವುಗಳಲ್ಲಿ ಕೆಲವು ಕಡೆ ಜೇಡು ಮತ್ತು ಕಬ್ಬಿಣಾಂಶ ಸಹ ಇದೆ. ಈ ಶಿಲೆಗಳ ಬಣ್ಣ ಬೂದು ಮತ್ತು ಕಂದು. ಇಲ್ಲಿರುವ ಬೆಣಚು, ಜಾಸ್ಪರ್, ಚರ್ಟ್ ಮತ್ತು ಸ್ಲೇಟಿನ ಉರುಟು ಕಲ್ಲುಗಳು ಶೆಯ್ಯಾರ್ ಶ್ರೇಣಿಯಿಂದ ಬಂದಿವೆ. ಬಂಗನಪಲ್ಲಿ ಶ್ರೇಣಿ ಮುಖ್ಯವಾಗಿ ವಜ್ರಗಳ ತವರುಮನೆ. 1840ರ ವರೆಗೆ ಇಲ್ಲಿ ವಜ್ರಗಳನ್ನು ತೆಗೆಯುವ ಉದ್ಯಮ ನಡೆಯುತ್ತಿತ್ತು. ಈಚೆಗೆ ಪುನಃ ಶೋಧನೆ ನಡೆಯುತ್ತಿದೆ. ಜಮ್ಮಲಮಡಗು ಶಿಲಾಶ್ರೇಣಿ ಬಂಗನಪಲ್ಲಿ ಶ್ರೇಣಿಯ ಮೇಲೆ ನಿಕ್ಷೇಪಗೊಂಡಿದೆ. ಇದರ ಕೆಳಗಿನ ಸ್ತರಗಳಲ್ಲಿ ಸುಣ್ಣ ಶಿಲೆಗಳಿವೆ; ಬಣ್ಣ ನೀಲಿ, ಬೂದು ಮತ್ತು ಕಂದು. ನರ್ಜಿ ಸುಣ್ಣದ ಶಿಲೆ ಎಂದು ಈ ಶಿಲೆಗಳ ಹೆಸರು. ಇವನ್ನು ಕಟ್ಟಡದ ಕಲ್ಲಿಗಾಗಿ ತೆಗೆಯುತ್ತಾರೆ. ಈ ಶಿಲೆಯ ಮೇಲೆ ಕಂದು ಮತ್ತು ನೇರಿಳೆ ಬಣ್ಣದ ಆಕ್ ಜೇಡುಶಿಲೆ ಸಂಚಿತವಾಗಿದೆ. ಇದರ ಮೇಲಿರುವ ಪಾನ್ಯಂ ಶಿಲಾಶ್ರೇಣಿ ಪಾನ್ಯಂ ಮತ್ತು ಉಂಡುಟ್ಲಗಳ ಸುತ್ತಮುತ್ತ ಚೆನ್ನಾಗಿ ರೂಪುಗೊಂಡಿದೆ. ಇವುಗಳಲ್ಲಿ ಮರಳುಶಿಲೆ ಮತ್ತು ಬೆಣಚುಶಿಲೆಗಳೇ ಮುಖ್ಯ. ಇವುಗಳ ಮೇಲೆ ನಿಕ್ಷೇಪಗೊಂಡಿರುವ ಶಿಲೆಗಳು, ಕುಂದೈಕ ನದಿಯ ಪಾತ್ರದಲ್ಲಿ ಚೆನ್ನಾಗಿ ರೂಪುಗೊಂಡಿರುವುದರಿಂದ ಅವುಗಳಿಗೆ ಕುಂದೈರ್ ಶಿಲಾಶ್ರೇಣಿಗಳೆಂದು ಹೆಸರು ಬಂದಿದೆ. ಇದರಲ್ಲಿ ಕೆಳಗಿನ ಮೂರನೆಯ ಒಂದು ಭಾಗ

ಸೂಕ್ಷ್ಮ ಕಣದ ಗಟ್ಟಿಶಿಲೆಯಿಂದಲೂ ಮೇಲ್ಭಾಗ ಸುಣ್ಣ ಮಿಶ್ರ ಜೇಡು ಮತ್ತು ಅಶುದ್ಧ ಸುಣ್ಣಶಿಲೆಯಿಂದಲೂ ಕೂಡಿದೆ. ಇವು ಕೋಯಿಲ್‌ಕುಂಟ್ಲ ಮತ್ತು ನಂದ್ಯಾಲ್ ಎಂಬ ಸ್ಥಳಗಳಲ್ಲಿ ಚೆನ್ನಾಗಿ ನಿಕ್ಷೇಪಗೊಂಡಿವೆ. ಆದ್ದರಿಂದ ಇವುಗಳಿಗೆ ಕೋಯಿಲ್‌ಕುಂಟ್ಲ ಸುಣ್ಣಶಿಲೆ ಮತ್ತು ನಂದ್ಯಾಲ್ ಜೇಡುಶಿಲೆಗಳೆಂಬ ಹೆಸರುಗಳಿವೆ. ಕಡಪ ಕೊಳ್ಳದ ಈಶಾನ್ಯಕ್ಕಿರುವ ಕೃಷ್ಣಾನದಿಯ ಎರಡು ದಡಗಳಲ್ಲಿ ಆವರಿಸಿ ಪಲ್ನಾಡಿನ ಸುತ್ತಮುತ್ತ ರೂಪುಗೊಂಡಿರುವ, ಕಡಪ ಶಿಲಾಸ್ತೋಮದ ಮೇಲೆ ಅನನುರೂಪವಾಗಿ ಶೇಖರವಾಗಿರುವ ಕರ್ನೂಲ್ ಸ್ತೋಮಕ್ಕೆ ಪಲ್ನಾಡ್ ಶಿಲಾಶ್ರೇಣಿ ಎಂದು ಹೆಸರು. ಈ ಸ್ತೋಮದಲ್ಲಿ ಸುಣ್ಣ ಮತ್ತು ಜೇಡುಶಿಲೆಗಳಿವೆ. (ಎಂ.ಎಸ್.ಎಸ್.)

**ಕರ್ಪೂರ:** ಒಂದು ದ್ವಿಚಕ್ರೀಯ (ಬೈ ಸೈಕ್ಲಿಕ್). ಸಂತೃಪ್ತ (ಸ್ಯಾಚುರೇಟೆಡ್) ಟರ್ಪೀನ್ ಕೀಟೋನ್ (ಕ್ಯಾಂಫರ್). ಇದರ ಆಕರ ಸಿನಮೋಮಮ್ ಕ್ಯಾಂಫೊರ ಮರ. ರೂಢಿಯಲ್ಲಿ ಇದನ್ನು ಕರ್ಪೂರದ ಮರ ಎಂದು ಕರೆಯುತ್ತಾರೆ (**ನೋಡಿ– ಕರ್ಪೂರದ ಮರ**).

**ಕರ್ಪೂರದ ಉತ್ಪಾದನೆ:** ಸಾಮಾನ್ಯವಾಗಿ 5–6 ವರ್ಷಗಳ ವರೆಗೆ ಬೆಳೆದ ಕರ್ಪೂರದ ಮರದ ಎಲೆ ಹಾಗೂ ಬೊಡ್ಡೆಗಳನ್ನು ಕಡಿದು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಮಾಡಿ ಅದರ ಹುಡಿಯನ್ನು ತಯಾರಿಸುತ್ತಾರೆ. ಹುಡಿರಾಶಿಯನ್ನು ದೊಡ್ಡ ಕೊಳಾಯಿಯಲ್ಲಿ ಹಾಕಿ ಕುಲುಮೆಯಲ್ಲಿ ಕಾಯಿಸುತ್ತಾರೆ. ಆಗ ಈ ಹುಡಿ ಬೇಗನೆ ಬಾಷ್ಪೀಭವನ ಹೊಂದುವಂಥ ವಸ್ತುವಾಗುತ್ತದೆ. ತರುವಾಯ ಇದನ್ನು ಹಬೆಯೊಂದಿಗೆ ಆಸವೀಕರಿಸುವುರು. ಹೀಗೆ ದೊರೆತ ದ್ರಾವಣಕ್ಕೆ ತಂಪು ತಗುಲಿಸಲು ಇಚ್ಛಿತ ಕರ್ಪೂರ ಬಣ್ಣರಹಿತ ಸ್ಫಟಿಕದ ರೂಪದಲ್ಲಿ ದೊರೆಯುತ್ತದೆ. ಸ್ಫಟಿಕ ಹಾಗೂ ದ್ರಾವಣದ ಈ ಮಿಶ್ರಣವನ್ನು ಸೋಸುವುದರಿಂದ ಸ್ಫಟಿಕಗಳು ಬೇರ್ಪಟ್ಟು ಎಣ್ಣೆಯಂಥ ಪದಾರ್ಥ ಉಳಿಯುತ್ತದೆ. ಇದರಲ್ಲಿ ಅಶುದ್ಧ ಕರ್ಪೂರ ಹೆಚ್ಚಿನ ಮೊತ್ತದಲ್ಲಿ ಇರುವುದು. ಈ ಎಣ್ಣೆಯಂಥ ಪದಾರ್ಥವನ್ನು ಆಂಶಿಕ ಆಸವೀಕರಣಕ್ಕೊಳಪಡಿಸಿ 180°–190° ಸೆಂ. ಉಷ್ಣತಾಮಾನದ ವರೆಗೆ ದೊರೆಯುವ ದ್ರಾವಣವನ್ನು ತಂಪಾಗಿಸುವುದರಿಂದ ಕರ್ಪೂರದ ಸ್ಫಟಿಕಗಳು ಪುನಃ ರೂಪುಗೊಳ್ಳುತ್ತವೆ. ಸ್ಫಟಿಕಗಳಿಂದ ಬೇರ್ಪಟ್ಟ ಎಣ್ಣೆಯಂಥ ಪದಾರ್ಥದಲ್ಲಿರುವ ಕರ್ಪೂರದ ಅಂಶ ಕಡಿಮೆ. ಇದರಿಂದ ಮತ್ತೆ ಕರ್ಪೂರದ ಸ್ಫಟಿಕಗಳನ್ನು ತಯಾರಿಸಲಾಗುವುದಿಲ್ಲ. ಇದನ್ನು ಸಾಬೂನು ತಯಾರಿಕೆಯಲ್ಲಿ ಉಪಯೋಗಿಸುವುದುಂಟು. ಇಂಥ ಸಾಬೂನು ಪರಿಮಳಯುಕ್ತವಾಗಿರುವುದು.



**ರಾಸಾಯನಿಕ ಸಂಯೋಜಿತ ಕರ್ಪೂರ:** ನಿಸರ್ಗದಿಂದ ದೊರೆಯುವ ಕರ್ಪೂರ ಸಾರ್ವಜನಿಕ ಬೇಡಿಕೆಯನ್ನು ಪೂರೈಸಲಾರದು. ಆದ್ದರಿಂದ ಇದನ್ನು ರಾಸಾಯನಿಕ ಸಂಯೋಜನೆಯಿಂದ ಉತ್ಪಾದಿಸಬೇಕಾಗುತ್ತದೆ. ರಾಸಾಯನಿಕ ರೀತಿಯಿಂದ ಕರ್ಪೂರದ ಅಣುವಿನ ರಚನೆಯನ್ನು ಕಂಡುಹಿಡಿಯಲು ದೀರ್ಘ ಕಾಲ ಬೇಕಾಯಿತು. ಕೊನೆಗೆ ಈ ಕಾರ್ಯದಲ್ಲಿ ವಿಜ್ಞಾನಿ ಬ್ರೆಟ್ ಎಂಬಾತ ಸಫಲನಾದ (1903).

ಆಮೇಲೆ ರಾಸಾಯನಿಕ ಸಂಯೋಜನೆಯ ಆಧಾರದ ಮೇಲಿಂದ ಅನೇಕ ವಿಧಾನಗಳು ಬಳಕೆಯಲ್ಲಿ ಬಂದವು. ಆದರೆ ಅವುಗಳಲ್ಲಿ ಬಲು ಕಡಿಮೆ ವೆಚ್ಚ ತಗಲುವ ವಿಧಾನ ಈ ಕೆಳಗಿನಂತಿದೆ. ದೇವದಾರು ಮರದ ಟರ್ಪೆಂಟೈನ್ ತೈಲದಿಂದ ಇದು ಪ್ರಾರಂಭವಾಗುತ್ತದೆ. ಟರ್ಪೆಂಟೈನ್ ತೈಲದ ಆಂಶಿಕ ಆಸವೀಕರಣದಲ್ಲಿ $150^0$–$160^0$ ಸೆಂ. ಉಷ್ಣತಾ ಮಾನದಲ್ಲಿ ದೊರೆಯುವ ದ್ರವ ಪದಾರ್ಥ ಪೈನೀನ್ ಇದನ್ನು ಒಣ ಹೈಡ್ರೋಕ್ಲೋರಿಕ್ ಆಮ್ಲ ವಾಯುವಿನೊಂದಿಗೆ ಸಂಯೋಗಿಸುವುದರಿಂದ ದೊರೆಯುವ ಮಿಶ್ರಣದ ಉಷ್ಣತಾಮಾನವನ್ನು $18^0$ ಸೆಂ.ಗೆ ಇಳಿಸುವುದರಿಂದ ಬೋರ್ನಿಲ್ ಕ್ಲೋರೈಡ್ ದೊರೆಯುತ್ತದೆ. ಇದನ್ನು ಸೋಡಿಯಂ ಫಿನಾಕ್ಸೈಡಿನೊಂದಿಗೆ ಸಂಯೋಗಿಸಿ ಆ ಮಿಶ್ರಣವನ್ನು $180^0$ ಸೆಂ. ಉಷ್ಣತಾಮಾನದಲ್ಲಿ ಕಾಯಿಸುವುದರಿಂದ ಕ್ಯಾಂಫೀನ್ ತಯಾರಾಗುತ್ತದೆ. ಇದನ್ನು ಗ್ಲೇಸಿಯಲ್ ಅಸಿಟಿಕ್ ಆಮ್ಲ ಮತ್ತು ಸಲ್ಫ್ಯೂರಿಕ್ ಆಮ್ಲದೊಂದಿಗೆ ಸಂಯೋಜಿತಗೊಳಿಸುವುದರಿಂದ ಬೋರ್ನಿಲ್ ಮತ್ತು ಐಸೋ ಬೋರ್ನಿಯೋಲ್ ಅಸಿಟೇಟುಗಳ ಮಿಶ್ರಣ ತಯಾರಾಗುತ್ತದೆ. ಈ ಮಿಶ್ರಣವನ್ನು ಮದ್ಯಾರ್ಕದಲ್ಲಿ ಕರಗಿಸಿದ ಪೊಟಾಸಿಯಂ ಹೈಡ್ರಾಕ್ಸೈಡಿನೊಂದಿಗೆ ಜಲ ವಿಶ್ಲೇಷಣೆ ಮಾಡಿದಾಗ ಬೋರ್ನಿಯೋಲ್ ಮತ್ತು ಐಸೊ ಬೋರ್ನಿಯೋಲುಗಳ ಮಿಶ್ರಣ ದೊರೆಯುತ್ತದೆ.



ಇದನ್ನು ನೈಟ್ರೊ ಬೆಂಜೀನ್ ಅಸ್ತಿತ್ವದಲ್ಲಿ ಉತ್ಕರ್ಷಿಸಲಾಗಿ ತಯಾರಾಗುವ ವಸ್ತುವೇ ರಾಸಾಯನಿಕ ಸಂಯೋಜಿತ ಕರ್ಪೂರ.

ಈ ಕ್ರಿಯೆಯ ರಾಸಾಯನಿಕ ಸೂತ್ರವನ್ನು ಇಲ್ಲಿ ತೋರಿಸಿದೆ.

**ಉಪಯೋಗಗಳು:** ಸಾಮಾನ್ಯವಾಗಿ ನರಗಳ ಉಳುಕುವಿಕೆ. ಉರಿ ಬಾವು ಮತ್ತು ವಾತಗ್ರಸ್ತ ನೋವುಗಳಿಗೆ ಲೇಪಿಸಲು ಇದನ್ನು ಉಪಯೋಗಿಸುತ್ತಾರೆ. ಅತಿಸಾರದಂಥ ರೋಗಗಳಲ್ಲಿ ಶಮನಕಾರಿಯಾಗಿ ಹೃದಯವನ್ನು ಉತ್ತೇಜನಗೊಳಿಸುವಲ್ಲಿ ಉತ್ತೇಜನಕಾರಿಯಾಗಿ ಇದರ ಉಪಯೋಗವಿದೆ. ಸೌಮ್ಯ ನಂಜುನಿರೋಧಕ ಹಾಗೂ ಸುಗಂಧಗುಣಯುಕ್ತವಾದ್ದರಿಂದ ಇದನ್ನು ಸೌಂದರ್ಯವರ್ಧಕ ವನ್ನಾಗಿಯೂ ಬಳಸುತ್ತಾರೆ. ಪೂಜಾಸಮಾರಂಭದಲ್ಲಿ ದೇವರ ಮುಂದೆ ಉರಿಸಲು ಉಪಯೋಗಿಸುವ ಕರ್ಪೂರದಲ್ಲಿ ಶುದ್ಧ ಕರ್ಪೂರದ ಪ್ರಮಾಣ ಅತ್ಯಲ್ಪ; ಏನೂ ಇರುವುದಿಲ್ಲವೆಂದರೂ ತಪ್ಪಾಗಲಾರದು.

ಸೆಲ್ಯುಲೋಸ್ ಅಸಿಟೇಟ್ ಮತ್ತು ಸೆಲ್ಯುಲೋಸ್ ನೈಟ್ರೇಟ್ ಎಂಬ ಪ್ಲಾಸ್ಟಿಕುಗಳಲ್ಲಿ ಕರ್ಪೂರವನ್ನು ಬಳಸುವುದರಿಂದ ಅವು ಮೃದುತ್ವ ಪಡೆಯುತ್ತವೆ. ಇಂಥ ಮೃದು ಪ್ಲಾಸ್ಟಿಕುಗಳಿಂದ ಬೇಕಾದ ಆಟಿಕೆಗಳನ್ನು ಹಾಗೂ ಜೀವನದ ನಿತ್ಯೋಪಯೋಗಿ ವಸ್ತುಗಳನ್ನು ತಯಾರಿಸಬಹುದು. (ಎಸ್.ಡಿ.ಎಂ)

ವೈದ್ಯಕೀಯವಾಗಿ ಕರ್ಪೂರದ ಲಕ್ಷಣಗಳಿಷ್ಟು. ಚರ್ಮ, ಲೋಳೆ ಪರೆಗಳಿಗೆ ಇದು ತಾಕಿದರೆ ಕೆರಳಿಸಿ ನೋವಿಡುತ್ತದೆ. ಹಚ್ಚಿದೆಡೆಯಲ್ಲಿ ರಕ್ತನಾಳ ಹಿಗ್ಗಿ ಕೆಂಪೇರಿ ಕೊಂಚ ನೋವು ಕಳೆಯುವುದು. ಈ ಕಾರಣದಿಂದ ಮೈ ಕೈ ಕಾಲು ಕೀಲು ನೋವುಗಳಿಗಾಗಿ ಮೇಲೆ ಹಚ್ಚುವ ಲೇಪನಗಳಲ್ಲಿ ಕರ್ಪೂರದ ಬಳಕೆ ಹೆಚ್ಚು. ಕಫವನ್ನು ಹೊರಗೆಡಹುವುದೆಂಬ ಆಸೆಯಿಂದ ಇದನ್ನು ಕೆಮ್ಮಿನ ಮದ್ದುಗಳಲ್ಲಿ ಸೇರಿಸುವುದುಂಟು. ಉಸಿರಾಟ, ಗುಂಡಿಗೆ ಬಡಿತ ನಿಂತುಹೋಗುವ ತುರ್ತಿನ ಹೊತ್ತಿನಲ್ಲಿ ವಾಯುಹರವಾಗಿ (ಕಾರ್ಮಿನೇಟಿವ್) ಹೊಟ್ಟೆಗೆ ಕೊಡುವುದುಂಟು. ಕಡಲೆಕಾಯಿ ಎಣ್ಣೆಯಲ್ಲಿ ಹಾಕಿದ ಚುಚ್ಚುಮದ್ದಾಗಿ ಬಹುಕಾಲ ಬಳಕೆಯಲ್ಲಿತ್ತು. (ಡಿ.ಎಸ್.ಎಸ್.)

**ಕರ್ಪೂರದ ಮರ:** ಲಾರೇಸೀ ಕುಟುಂಬಕ್ಕೆ ಸೇರಿದ ಸಿನಮೋಮಮ್ ಕ್ಯಾಂಫೊರ ಎಂಬ ವೈಜ್ಞಾನಿಕ ಹೆಸರಿನ ನಿತ್ಯಹರಿದ್ವರ್ಣದ ದೊಡ್ಡ ಮರ. ಇದು ಚೀನ, ಜಪಾನ್ ಮತ್ತು ಫಾರ್ಮೋಸಗಳ ಮೂಲವಾಸಿ. ಭಾರತ ಮತ್ತು ಇತರ ಕೆಲವು ದೇಶಗಳಲ್ಲಿ ಈಚೆಗೆ ಇದನ್ನು ಬೆಳೆಸಲಾಗುತ್ತಿದೆ. ಇದು ತನ್ನ ಮೂಲ ನಾಡಿನಲ್ಲಿ ಬೆಳೆಯುವ ಎತ್ತರ

ಸುಮಾರು 100', ಬುಡದ ಸುತ್ತಳತೆ 6'–8' ಭಾರತದಲ್ಲಿ ಇದು ಅಷ್ಟು ಎತ್ತರಕ್ಕೆ ಬೆಳೆಯುತ್ತಿಲ್ಲ. 50'–60' ಎತ್ತರಕ್ಕೆ ಬೆಳೆದರೆ ಅದೇ ದೊಡ್ಡದು. ಎಲೆಗಳ ಉದ್ದ 2"–4" ಅವಕ್ಕೆ ಹೊಳಪು ಹಾಗೂ ತೀಕ್ಷ್ಣ ವಾಸನೆ (ಆರೋಮಾ) ಇವೆ. ಫೆಬ್ರುವರಿ ಮಾರ್ಚಿ ತಿಂಗಳಲ್ಲಿ ಎಲೆಗಳು ಉದುರಿದರೂ ಜೊತೆಯಲ್ಲಿ ಹೊಸ ಎಲೆಗಳು ಮೂಡುತ್ತವೆ. 0.3" ದಪ್ಪವಾಗಿರುವ ಇದರ ಹಣ್ಣುಗಳು ತೀವ್ರ ಹಸುರು ಬಣ್ಣವಾಗಿದ್ದು ಅಂಡಾಕಾರವಾಗಿವೆ. ಮಾಗಿದಂತೆ ಕಪ್ಪು ಬಣ್ಣಕ್ಕೆ ತಿರುಗುತ್ತವೆ. 25 ವರ್ಷ ವಯಸ್ಸಿನ ಮರಗಳು ಉತ್ಪತ್ತಿಮಾಡುವ ಬೀಜಗಳಿಗೆ ಮಾತ್ರ ಪುನರುತ್ಪತ್ತಿ ಶಕ್ತಿ ಇದೆ. (ಎ.ಕೆ.ಎಸ್.)

ಕರ್ಪೂರದ ಮರಗಳಲ್ಲಿ ಅನೇಕ ವಿಧಗಳುಂಟು. ಇವುಗಳಲ್ಲಿ ಕೆಲವನ್ನು ಮಾತ್ರ ಕರ್ಪೂರವನ್ನು ಉತ್ಪತ್ತಿ ಮಾಡಲು ಬಳಸುವರು. ಮಿಕ್ಕವು ತೀಕ್ಷ್ಣವಾಸನೆಯ ತೈಲವನ್ನು ಮಾತ್ರ ನೀಡಬಲ್ಲವು. ಹಲವರು ಇವೆಲ್ಲ ಬೇರೆ ಬೇರೆ ಪ್ರಭೇದಗಳೆಂದು ವಾದಿಸುವರಾದರೂ ಅವೆಲ್ಲ ಒಂದೇ ಪ್ರಭೇದಕ್ಕೆ ಸೇರಿದವೆಂದು ಈಚಿನ ಅಭಿಪ್ರಾಯ. ಮಾರಿಷಸ್ ದ್ವೀಪದಲ್ಲಿ ಬೆಳೆಯುವ ಸಿನಮೋಮಮ್ ಕಾಂಫೊರದ ಮರದಿಂದ ಮಾತ್ರ ಕರ್ಪೂರವನ್ನು ಉತ್ಪತ್ತಿ ಮಾಡಲಾಗುತ್ತಿದೆ. ಆ ಗಿಡದ ಬೇರೆ ಬೇರೆ ಭಾಗಗಳಲ್ಲಿರುವ ತೈಲಕೋಶಗಳಲ್ಲಿ ಕರ್ಪೂರ ಸಂಗ್ರಹವಾಗಿರುತ್ತದೆ. ಸಸ್ಯದ ಜೀವನದ ಆರಂಭ ಕಾಲದಲ್ಲಿ ಅದು ಎಲೆಗಳಲ್ಲಿ ಹಳದಿ ತೈಲದೋಪಾದಿಯಲ್ಲಿ ಸಂಗ್ರಹವಾಗಲು ಆರಂಭಿಸಿ ಆ ತೈಲ ಕಾಲಕ್ರಮದಲ್ಲಿ ವರ್ಣರಹಿತವಾಗಿ ಕರ್ಪೂರದ ಕಣಗಳಾಗಿ ಸಸ್ಯದ ಇತರ ಭಾಗಗಳಿಗೆಲ್ಲ ಸಾಗಿಹೋಗುತ್ತದೆ. ಬೇರಿನಲ್ಲಿ ಅದು ಅತ್ಯಂತ ಹೆಚ್ಚಾಗಿ ಸಂಗ್ರಹವಾಗಿರುತ್ತದೆ. ಹಾಗೆ ಸಂಗ್ರಹವಾಗಿರುವ ಬಲಿತ ಮರದ ಭಾಗಗಳನ್ನು ಕಾಸಿಬಟ್ಟಿಯಿಳಿಸಿ ಕರ್ಪೂರವನ್ನು ತಯಾರಿಸುವರು. ಎಲೆಗಳನ್ನೊಳಗೊಂಡ ಕೊಂಬೆಗಳನ್ನು ಕಾಸಿ ಬಟ್ಟಿಯಿಳಿಸುವುದು ಅಮೆರಿಕದಲ್ಲಿ ಅಭ್ಯಾಸದಲ್ಲಿದೆ. ಚಿಗುರೆಲೆಗಳು ಹಳೆಯ ಎಲೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕರ್ಪೂರವನ್ನು ನೀಡುತ್ತವೆ.

**ಭಾರತದಲ್ಲಿ ಕರ್ಪೂರದ ಉತ್ಪಾದನೆ:** ನೀಲಗಿರಿ, ಡೆಹರಾಡೂನ್, ಸಹರಾನ್‌ಪುರ, ಕಲ್ಕತ್ತ, ಕೊಚಿನ್ ಮುಂತಾದೆಡೆಗಳಲ್ಲಿ ಕರ್ಪೂರದ ಮರಗಳನ್ನು ಬೆಳೆಸಲಾಗುತ್ತಿದೆ. ಕೊಚಿನ್ ಪ್ರದೇಶದಲ್ಲಿ ಬೆಳೆಯುವ ಮರಗಳು, ಭಾರತದಲ್ಲೆಲ್ಲ ಹೆಚ್ಚಿನ ಪ್ರಮಾಣದ ಕರ್ಪೂರವನ್ನು ಒದಗಿಸುತ್ತವೆ. ಆದರೂ ಅಮೆರಿಕ, ಆಲ್ಜೀರಿಯ, ಸಿಂಹಳ ಮುಂತಾದ ದೇಶಗಳ ಮರಗಳು ನೀಡುವ ಕರ್ಪೂರದ ಪ್ರಮಾಣದೊಡನೆ ಹೋಲಿಸಿದರೆ ಇದು ತೀರಾ ಕಡಿಮೆಯೆನ್ನಬೇಕು. ಈಚೆಗೆ ಕರ್ಪೂರವನ್ನು ಡಿ–ಪೈನೀನ್ ಎಂಬ ವಸ್ತುವನ್ನು ಬಳಸಿ ಕೃತಕ ಸಂಶ್ಲೇಷಣ ವಿಧಾನದಿಂದ ತಯಾರಿಸುವುದು ಆರಂಭವಾಗಿ ಇಂಗ್ಲೆಂಡು ಮತ್ತು ಅಮೆರಿಕಗಳಲ್ಲಿ ಅದರ ಉತ್ಪಾದನೆ ಭಾರಿ ಉದ್ಯೋಗವಾಗಿ ಬೆಳೆದಿದೆ. ಹೀಗೆ ತಯಾರಿಸಿದ ಕರ್ಪೂರವನ್ನು ಸ್ಫೋಟಕಗಳ ತಯಾರಿಕೆಯಲ್ಲೂ ಕ್ರಿಮಿನಾಶಕಗಳ ಮತ್ತು ಇತರ ರಾಸಾಯನಿಕ ವಸ್ತುಗಳ ನಿರ್ಮಾಣದಲ್ಲೂ ಬಳಸಲಾಗುತ್ತಿದೆ.

ಭಾರತೀಯ ಧರ್ಮ, ಸಂಸ್ಕೃತಿಗಳಲ್ಲಿ ಕರ್ಪೂರ ಹಾಸುಹೊಕ್ಕಾಗಿ ಹೆಣೆದುಕೊಂಡು ಬಂದಿದೆ. ಅದನ್ನು ಶುಭಕಾರ್ಯಗಳಲ್ಲಿ ಮಂಗಳದ್ರವ್ಯವಾಗಿ ಬಳಸುವುರು. ಬಗೆ ಬಗೆಯ ಚಿಕಿತ್ಸೆಗಳಲ್ಲೂ ಇದರ ಉಪಯೋಗ ಉಂಟು. ಹೊರ ನರಮಂಡಲದ ಮೇಲೆ ಅದು ಚೌಗು ಹಿಡಿಸಬಲ್ಲುದಾದ್ದರಿಂದ ಕೆಲವು ಚರ್ಮರೋಗಗಳಲ್ಲಿ ಅದನ್ನು ಹಚ್ಚುವುದುಂಟು. ಸೋಂಕುನಿವಾರಕವಾಗಿಯೂ ಅದನ್ನು ಬಳಸುವರು. ಮಾರ್ಫೀನ್ ಅಥವಾ ಇತರ ಮದ್ದುಗಳಿಂದ ಶ್ವಾಸ ಮಂದಗತಿಗಿಳಿದಾಗ ಶ್ವಾಸವನ್ನು ತೀವ್ರಗೊಳಿಸಲು ಸಣ್ಣ ಪ್ರಮಾಣದಲ್ಲಿ ಔಷಧಿಯಾಗಿ ತಿನ್ನುವರು. ಹೃದಯಕ್ರಿಯೆಯನ್ನು ಚುರುಕುಗೊಳಿಸುವುದಕ್ಕೂ ಮಯೋಕಾರ್ಡೈಟ್ ರೋಗನಿವಾರಣೆಗೂ ಅದನ್ನು ಸೇವಿಸುವುದುಂಟು. ಕೆಲವು ರೀತಿಯ ಉನ್ಮಾದಗಳಿಗೂ ತೀವ್ರ ರೀತಿಯ ಆಮಶಂಕೆಗೂ ಔಷಧಿಯಾಗಿ ಬಳಸುವರು. ಕರ್ಪೂರವನ್ನು ಚರ್ಮದ ತುರುಚನ್ನು ನಿವಾರಿಸಲು ಬಾಹ್ಯ ಲೇಪನಕ್ಕಾಗಿ ಬಳಸುವುದು ಹೆಚ್ಚು. ಉರಿಯೂತ, ಕೀಲು ಮತ್ತು ಸ್ನಾಯುಗಳ ವಾಯು ಇತ್ಯಾದಿಗಳ ನಿವಾರಣೆಗೂ ಹಚ್ಚುವರು. ಆದರೆ ಅದರ ಸೇವನೆ ಅತಿಯಾದರೆ ವಿಷವಾಗಿ ಪರಿಣಮಿಸುವುದು. ಆದರಿಂದ ಸೆಳವು, ತಲೆ ಸುತ್ತುವುದು, ಮನಸ್ಸಿನ ಕ್ಷೋಭೆ, ಚಿತ್ತಭ್ರಮಣ ಇತ್ಯಾದಿ ವಿಕಾರಗಳು ಉಂಟಾಗಬಹುದು. ಸಾವು ಸಂಭವಿಸುವುದು ವಿರಳ.

ಅಂಗಡಿಯಲ್ಲಿ ಮಾರುವ ಕರ್ಪೂರದ ತೈಲವೆಂಬುದು ಈ ಮರದಿಂದ ಕರ್ಪೂರವನ್ನು ತೆಗೆದು ಮೇಲೆ ಉಳಿಯುವ ದ್ರವ. ಇದರಿಂದ ವಿವಿಧ ಸುಗಂಧದ್ರವ್ಯಗಳನ್ನು ತಯಾರಿಸುವರು. ಕರ್ಪೂರದ ಬೀಜಗಳಿಂದ ಕೊಬರಿಯೆಣ್ಣೆಯಂಥ ಒಂದು ತೈಲವನ್ನು ಉತ್ಪತ್ತಿಮಾಡುವರು. ಇದನ್ನು ಸಾಬೂನು ತಯಾರಿಕೆಯಲ್ಲಿ ಬಳಸುವರು.

ಕಂದುಮಿಶ್ರಿತ ಹಳದಿ ಬಣ್ಣದ ಕರ್ಪೂರದ ಮರ ದೀರ್ಘಕಾಲ ಗಂಧಯುಕ್ತವಾಗುಳಿಯ ಬಲ್ಲುದಾದ್ದರಿಂದ ಅದನ್ನು ಕೆಲವು ಅಲಂಕಾರದ ಉಪಕರಣಗಳ ತಯಾರಿಕೆಯಲ್ಲಿ ಬಳಸುವರು.

*

**ಕರ್ಪೂರರಾಳಗಳು:** ಬಹುಮುಖ ಬಳಕೆಗೆ ಅಗ್ರ ಸ್ಥಾನ ಪಡೆದಿರುವ ರಾಸಾಯನಿಕ ಸಂಯುಕ್ತಗಳು (ರೆಸಿನ್ಸ್). ನೈಸರ್ಗಿಕ ಕರ್ಪೂರರಾಳಗಳು ಕಾರ್ಬನ್, ಹೈಡ್ರೊಜನುಗಳಿಂದಲೂ ಸಾಪೇಕ್ಷವಾಗಿ ಕಡಿಮೆ ಪ್ರಮಾಣದ ಆಕ್ಸಿಜನ್ನಿನಿಂದಲೂ ಉಂಟಾಗಿರುವ ಸಂಕೀರ್ಣ ಸಂಯುಕ್ತಗಳು. ಕಪ್ಪುರಾಳ ಮತ್ತು ಇಂಗಿನಿಂದ ಮೊದಲುಗೊಂಡು ಸಾಂಬ್ರಾಣಿ, ಗಂಧರಸ, ಪಳೆಯುಳಿಕೆಯಾದ ಶಿಲಾರಾಳ ಎಲ್ಲವೂ ನೈಸರ್ಗಿಕ ಕರ್ಪೂರರಾಳಗಳ ಗುಂಪಿಗೆ ಸೇರುತ್ತವೆ. ಆರಂಭದಲ್ಲಿ ಕರ್ಪೂರರಾಳ (ರೆಸಿನ್) ಎನ್ನುವ ಮಾತು ಪೈನ್ ಮತ್ತು ಫರ್ ಮರಗಳಿಂದ ಜಿನುಗುವ ಹಳದಿ ಅಥವಾ ಕಂದುಬಣ್ಣದ ಒಂದು ಬಗೆಯ ಅಂಟುವಸ್ತುವಿಗೆ ಮಾತ್ರ ಸೀಮಿತವಾಗಿತ್ತು. ನೈಸರ್ಗಿಕ ಕರ್ಪೂರರಾಳಗಳ ಬಗ್ಗೆ ತಿಳಿವು ಹೆಚ್ಚಿದಂತೆಲ್ಲ ಅವನ್ನು ಹೋಲುವ ಅನೇಕ ಇತರ ಸಂಯುಕ್ತಗಳನ್ನೂ ಈ ಗುಂಪಿಗೆ ಸೇರಿಸಲಾಗಿದೆ. ಸಂಶ್ಲೇಷಿತ ಕರ್ಪೂರರಾಳಗಳು ನೈಲಾನ್ ಮತ್ತು ಬಿಲಿಯರ್ಡ್ಸ್ ಚೆಂಡುಗಳು ಮೊದಲಾದ ಅನೇಕಾನೇಕ ಉತ್ಪನ್ನಗಳ ಮೂಲಾಧಾರವಾಗಿವೆ. ಅನೇಕ ಉದ್ಯಮಗಳಲ್ಲಿ, ವಿಶೇಷವಾಗಿ ಅಚ್ಚುಹೊಯ್ಯುವ ಮತ್ತು ಲೇಪನ ಉದ್ಯಮಗಳಲ್ಲಿ ನೈಸರ್ಗಿಕ ಕರ್ಪೂರರಾಳದ ಸ್ಥಾನದಲ್ಲಿ ಈಗ ಯಾವುದಾದರೊಂದು ಸಂಶ್ಲೇಷಿತ ಕರ್ಪೂರರಾಳವನ್ನು ಉಪಯೋಗಿಸ ಬಹುದಾಗಿದೆ.

ಕರ್ಪೂರರಾಳಗಳನ್ನು ಅವುಗಳ ಚಿರಪರಿಚಿತ ಲಕ್ಷಣಗಳಿಂದ ಪಾರದರ್ಶಕತ್ವ, ಅಸ್ಫಟಿಕಾಕೃತಿ, ಭಿದುರತೆ ಮತ್ತು ಶಂಕುವಿನಾಕೃತಿಯ ಸೀಳಿಕೆಗಳಿಂದ ಗುರುತಿಸಲಾಗುತ್ತಿತ್ತು. ಇವಾವ ಗುಣವೂ ಇಲ್ಲದ ಕೆಲವು ಬಾರಿ ವಿರುದ್ಧ ಗುಣಗಳನ್ನು ಹೊಂದಿರುವ ಕರ್ಪೂರ ರಾಳಗಳನ್ನು ಈಗ ಸಂಶ್ಲೇಷಿಸಲಾಗಿದೆ. ನೈಸರ್ಗಿಕ ಮತ್ತು ಸಂಶ್ಲೇಷಿತ ಕರ್ಪೂರರಾಳಗಳೆರಡಕ್ಕೂ ಅನ್ವಯಿಸುವ ಏಕೈಕ ಗುಣವೆಂದರೆ ಅವುಗಳ ಅಸ್ತಿತ್ವದ ಒಂದು ಹಂತದಲ್ಲಿ ಅವೆರಡೂ ಮೆದುವಾಗಿರುವುದು.

ಕರ್ಪೂರರಾಳ ಮತ್ತು ಪ್ಲಾಸ್ಟಿಕ್ಕುಗಳಿಗಿರುವ ಭೇದ ಕೇವಲ ಸೌಕರ್ಯಾತ್ಮಕ. ಐತಿಹಾಸಿಕವಾಗಿ ಲೇಪನಪ್ರಧಾನ ಸಾಮಗ್ರಿಗಳನ್ನು ಕರ್ಪೂರಗಳೆಂದೂ ರೂಪಸ್ಪಷ್ಟನೆಗೆ ಅಚ್ಚುಹೊಯ್ಯಬೇಕಾಗಿದ್ದ ಸಂಯೋಜನೆಗಳಿಗೆ ಪ್ಲಾಸ್ಟಿಕುಗಳೆಂದೂ ಕರೆದಂತಿದೆ. ಕರ್ಪೂರರಾಳಗಳು, ಪ್ಲಾಸ್ಟಿಕುಗಳು, ರಬ್ಬರ್ ಮತ್ತು ಎಳೆಗಳು–ಎಲ್ಲವೂ ಒಂದೇ ಬೃಹದ್ಗುಂಪಿನ ಬೇರೆ ಬೇರೆ ರಸಾಯನ ಸಂಯುಕ್ತಗಳೆಂಬುದು ಈಗ ನಿರ್ವಿವಾದ. ಸೂಕ್ತ ರೂಪಾಂತರಗಳಿಂದ ಮೇಲಿನ ಒಂದು ಗುಂಪಿನ ಯಾವುದೇ ಸಂಯುಕ್ತವನ್ನು ಬೇರೆ ಗುಂಪಿನ ಸಂಯುಕ್ತವಾಗಿ ಮಾರ್ಪಡಿಸಬಹುದು.

**ಕರ್ಪೂರರಾಳ ಸೃಷ್ಟಿ:** ಗಾಳಿ, ಬೆಂಕಿ, ಸಿಡಿಲು ಅಥವಾ ಬೇರಾವುದೇ ಕಾರಣದಿಂದ ತೊಗಟೆಗೆ ಹಾನಿಯಾದಾಗ ಮರದಲ್ಲಿ ಕರ್ಪೂರರಾಳ ಸೃಷ್ಟಿಯಾಗುತ್ತದೆ. ಪ್ರಾರಂಭದಲ್ಲಿ ಈ ಸ್ರಾವ ದ್ರವರೂಪದ್ದಾಗಿದ್ದು ತೈಲರಾಳ ಅಥವಾ ಗುಗ್ಗುಲದಂತೆ ಕಾಣುತ್ತದೆ. ಗಾಳಿಯ ಸಂಪರ್ಕದಲ್ಲಿ ಬಾಷ್ಪಶೀಲ ಘಟಕಗಳು ಆವಿಯಾಗುತ್ತವೆ. ಉಳಿದ ಘನವಸ್ತು ಉತ್ಕರ್ಷಣ ಹೊಂದಿ, ಬಹ್ವಂಗೀಕರಿಸಿ ಕ್ರಮೇಣ ಮೆದುವಾದ ಕರ್ಪೂರರಾಳವಾಗಿ ಮಾರ್ಪಡುತ್ತದೆ. ವೃಕ್ಷದಲ್ಲಿ ಕರ್ಪೂರರರಾಳಧಾರೆ ವಿಪುಲವಾಗಿದ್ದಾಗ ಅದರ ಕೆಲವಂಶ ಭೂಮಿಯನ್ನು ಸೇರುತ್ತದೆ. ಪರಿಣಾಮವಾಗಿ ಅನೇಕ ಪಳೆಯುಳಿಕೆ ಕರ್ಪೂರರಾಳಗಳು ಇಂದು ಭೂಮಿಯಲ್ಲಿ ನಿಕ್ಷೇಪಗಳಾಗಿ ದೊರೆಯುತ್ತಿವೆ. ಇತ್ತೀಚಿನ ಪಳೆಯುಳಿಕೆಯಾಗಿದ್ದರೂ ಅದರ ನಿರ್ಮಾಣಕ್ಕೆ ಕಾರಣವಾದ ರಸಾಯನಕ್ರಿಯೆ ಸಾವಿರಾರು ವರ್ಷಗಳವರೆಗೂ ನಡೆದಿರಬೇಕು. ಉದಾಹರಣೆಗೆ ಕೌರಿಪೈನ್ ಮರಗಳ ಆಯುಷ್ಯ ಸರಾಸರಿ 1000 ವರ್ಷಗಳು. ಹಿಂದಿನ ಅರಣ್ಯಗಳೆಲ್ಲವೂ ಸಂಪೂರ್ಣವಾಗಿ ನಾಶವಾಗಿರುವೆಡೆಗಳಲ್ಲಿ ಇಂದು ಕರ್ಪೂರರಾಳ ಸಿಕ್ಕುತ್ತಿರುವುದನ್ನು ಗಮನಿಸಿದರೆ ಅದು ಅತಿ ಪ್ರಾಚೀನವಾದುದು ಎಂಬುದು ಸ್ಪಷ್ಟ. ಅದೂ ಕೂಡ ದ್ರಾವ್ಯ. ಪಳೆಯುಳಿಕೆ ಕರ್ಪೂರರಾಳವಾದ ಶಿಲಾರಾಳ ಅಷ್ಟಾಗಿ ದ್ರಾವ್ಯವಲ್ಲ. ತೈಲರಾಳ ಕಾಲಕ್ರಮೇಣ ಕರ್ಪೂರರಾಳ, ಇತ್ತೀಚಿನ ಪಳೆಯುಳಿಕೆ ಕರ್ಪೂರರಾಳ, ಅಂತಿಮವಾಗಿ ಪಳೆಯುಳಿಕೆ ಕರ್ಪೂರರಾಳವಾಗಿ ಬಹ್ವಂಗೀಕರಣಗೊಳ್ಳಲು ಅಗತ್ಯವಾದ ಕಾಲವನ್ನು ಭೂ ಇತಿಹಾಸ ಕಾಲಮಾನದಲ್ಲಿ ಗಣಿಸಬೇಕೆಂಬುದನ್ನು ಶಿಲಾರಾಳದ ಅಸ್ತಿತ್ವವೇ ಶ್ರುತಪಡಿಸುತ್ತದೆ.

ಪ್ರಪಂಚದ ಅನೇಕ ಭಾಗಗಳಲ್ಲಿ ಕರ್ಪೂರರಾಳದ ನಿಕ್ಷೇಪಗಳು ದೊರೆತಿವೆ. ಅನೇಕವನ್ನು ಅವು ದೊರೆತ ಪ್ರದೇಶಗಳ ಹೆಸರುಗಳಿಂದಲೇ ಕರೆಯಲಾಗಿದೆ. ಚೈನೀಯರು ಮತ್ತು ಜಪಾನೀಯರು ಮೆರುಗೆಣ್ಣೆಗಳ ತಯಾರಿಕೆಯಲ್ಲಿ ಈ ಉತ್ಪನ್ನಗಳನ್ನು ಉಪಯೋಗಿಸುತ್ತಿದ್ದರು. ಇಂಕಾಗಳು ಮತ್ತು ಈಜಿಪ್ಷಿಯನ್ನರು ವಾರ್ನಿಷುಗಳನ್ನು ಬಳಸುತ್ತಿದ್ದರೆನ್ನುವುದಕ್ಕೆ ಸಾಕ್ಷ್ಯಗಳಿವೆ. ಫಿನೀಷಿಯನ್ನರು ಮತ್ತು ಗ್ರೀಕರು ಕರ್ಪೂರರಾಳಗಳ ಪರಿಚಯ ಪಡೆದಿದ್ದರು. ಶಿಲಾರಾಳವನ್ನು ಗ್ರೀಕರು ಬೆರೆನೀಸ್ ಎನ್ನುತ್ತಿದ್ದರು. ಅದರ ಅಪಭ್ರಂಶವೇ ಇಂದಿನ ವಾರ್ನಿಷ್.

ಮರದಿಂದ ಒಸರುವ ಯಾವುದೇ ಅಂಟುದ್ರವಕ್ಕೆ ಗೋಂದು ಎಂದು ಹೆಸರು. ಅರಗು ಕೀಟಸ್ರಾವವಾದುದರಿಂದ ಇದರಿಂದ ಬೇರೆಯಾಗಿದೆ. ಸಹಜ ಗೋಂದುಗಳು ನೀರಿನಲ್ಲಿ ಕರಗುತ್ತವೆ, ವಾರ್ನಿಷ್ ಗೋಂದುಗಳು ಹೀಗಲ್ಲ. ಶರ್ಕರಪಿಷ್ಟ ಪದಾರ್ಥಗಳಿಗೆ ಸಂಬಂಧಿಸಿದ ಸಹಜಗೋಂದುಗಳು ನೀರಿನಲ್ಲಿ ದ್ರಾವ್ಯ. ಆರ್ಗ್ಯಾನಿಕ್ ದ್ರವಗಳಲ್ಲಿ ಅದ್ರಾವ್ಯ. ಕಾಯಿಸಿದಾಗ ದ್ರವಿಸದೆ ವಿಭಜನೆ ಹೊಂದುತ್ತವೆ. ವಾರ್ನಿಷ್ ಗೋಂದುಗಳು, ಟರ್ಪೀನ್ ಮತ್ತು ಸುಗಂಧತೈಲಗಳಿಗೆ ಸಂಬಂಧಿಸಿದ ಕರ್ಪೂರರಾಳಗಳು ಎಣ್ಣೆಗಳಲ್ಲಿ ಮತ್ತು ಆರ್ಗ್ಯಾನಿಕ್

ದ್ರವಗಳಲ್ಲಿ ದ್ರಾವ್ಯ, ಆದರೆ ನೀರಿನಲ್ಲಿ ಅದ್ರಾವ್ಯ. ಕಾಯಿಸಿದಾಗ ಇವು ಕರಗಿ ವಿಭಜನೆ ಹೊಂದುತ್ತವೆ. ವಾರ್ನಿಷ್ ರಾಳಗಳಿಗೆ ಗೋಂದು ಎನ್ನುವ ಮಾತು ಸರಿಯಲ್ಲ. ಆದರೂ ದೀರ್ಘ ಬಳಕೆಯಿಂದಾಗಿ ಅದನ್ನು ತೊಡೆದು ಹಾಕುವುದು ಅಸಾಧ್ಯವಾಗಿದೆ. ಅಲ್ಲದೆ ಕೆಲವು ನೈಸರ್ಗಿಕ ಉತ್ಪನ್ನಗಳು ವಾರ್ನಿಷ್ ರಾಳ ಮತ್ತು ಗೋಂದು ಎರಡರ ಗುಣಗಳನ್ನೂ ತಳೆಯುತ್ತವೆ. ಭಾರತದ ಸಾಂಬ್ರಾಣಿಯಿಂದ ಗೋಂದು ಟರ್ಪೀನುಗಳು ಮತ್ತು ಕರ್ಪೂರರಾಳವನ್ನು ಬೇರ್ಪಡಿಸಲಾಗಿದೆ.

ಕರ್ಪೂರರಾಳಗಳನ್ನು ಪಾರದರ್ಶಕತ್ವ, ಭಿದುರತೆ, ಶಂಕಾವಿನಾಕೃತಿಯ ಬಿರುಕುಗಳು ಮತ್ತು ಅವುಗಳ ಬಣ್ಣವಾದ ಕಂದು ಅಥವಾ ಹಳದಿಯಿಂದ ಗುರುತಿಸಬಹುದು. ಘನಸ್ಥಿತಿಯಲ್ಲಿ ಅವಕ್ಕೆ ಯಾವ ರುಚಿ ಮತ್ತು ವಾಸನೆ ಇಲ್ಲ. ಕಾಯಿಸಿದಾಗ ವಿಶಿಷ್ಟವಾದ ಪರಿಮಳವನ್ನು ಹೊರಚೆಲ್ಲುತ್ತವೆ. ಧೂಮಮಯ ಜ್ವಾಲೆಯಿಂದ ಉರಿಯುತ್ತವೆ. ಕರ್ಪೂರರಾಳಗಳ ವರ್ಗೀಕರಣಕ್ಕೆ ಕರಗುವಿಕೆ ಮತ್ತು ಕಠಿಣತೆಗಳೇ ನಿರ್ಣಾಯಕ ಗುಣಗಳು. ಕರಗುವಿಕೆಯ ಆಧಾರದ ಮೇಲೆ ಕರ್ಪೂರರಾಳಗಳನ್ನು ಆಲ್ಕೊಹಾಲ್‌ದ್ರಾವ್ಯ ಮತ್ತು ತೈಲದ್ರಾವ್ಯಗಳೆಂದು ವಿಂಗಡಿಸಬಹುದು. ಸೆಲ್ಯುಲೋಸ್ ಮೆರುಗೆಣ್ಣೆಗಳ ತಯಾರಿಕೆಗೆ ಉಪಯೋಗಿಸುವ ಆಧುನಿಕ ಲೀನಕಾರಿಗಳನ್ನು ಕರ್ಪೂರರಾಳ ದ್ರಾವಣಗಳ ತಯಾರಿಕೆಗೂ ಉಪಯೋಗಿಸಬಹುದು.

**ಆಲ್ಕೊಹಾಲಿನಲ್ಲಿ ಕರಗುವ ಕರ್ಪೂರರಾಳಗಳು:** 1 ಗುಗ್ಗುಲಗಳು: ದ್ರವಸ್ವಭಾವದ ಕರ್ಪೂರರಾಳಗಳು. ಆರೋಗ್ಯದಾಯಿಗಳಾಗಿ ಔಷಧಿಗಳಲ್ಲಿಯೂ ಹೆಚ್ಚು ಸುವಾಸನೆಯುಳ್ಳ ಕೆಲವು ಪರಿಮಳ ಪದಾರ್ಥಗಳಲ್ಲಿಯೂ ಉಪಯೋಗದಲ್ಲಿವೆ. ಬೆಂಜೋಯಿಕ್ ಅಥವಾ ಸಿನ್ನಾಮಿಕ್ ಆಮ್ಲ ಎಸ್ಟರುಗಳಲ್ಲಿ ಹರಡಿರುವ ಕರ್ಪೂರರಾಳಗಳನ್ನು ಗುಗ್ಗುಲಗಳೆಂದೂ ಸುಗಂಧತೈಲಗಳಲ್ಲಿ ಹರಡಿರುವ ಕರ್ಪೂರರಾಳಗಳನ್ನು ತೈಲರಾಳಗಳೆಂದೂ ಪರಿಗಣಿಸಲಾಗುವುದು. ಮಸೂರಗಳನ್ನು ಅಂಟಿಸಲು ಉಪಯೋಗಿಸುವ ಕೆನಡಬಾಲ್ಸಂ, ನಿಜವಾದ ಗುಗ್ಗುಲವಲ್ಲ. ಅದು ನಿಜಕ್ಕೂ ತೈಲರಾಳ; ಟೊಲುಬಾಲ್ಸಂ, ಪೆರುಬಾಲ್ಸಂ ಮತ್ತು ಸ್ಟೋರಾಕ್ಸ್ ಬಾಲ್ಸಂಗಳು ನಿಜವಾದ ಗುಗ್ಗುಲಗಳು.

**2. ಕರ್ಪೂರತೈಲಗಳು:** ನಾನಾ ತೈಲರಾಳಗಳನ್ನು ಕರ್ಪೂರತೈಲಗಳೆಂದು ಕರೆಯಲಾಗುವುದು. ವೆನಿಸ್‌ಕರ್ಪೂರತೈಲ ಒಂದು ಜಾತಿಯ ಪೈನ್(ಲಾರ್ಚ್) ಮರದಿಂದ ಪಡೆದ ನಸುಹಸುರು ಬಣ್ಣದ ಸ್ನಿಗ್ಧ ದ್ರವ. ನಿಂಬೆಹಣ್ಣಿನ ವಾಸನೆಯ ಸ್ಟ್ರಾಸ್‌ಬೊರ್ಗ್ ಕರ್ಪೂರತೈಲ, ಬೋರ್ಡ್ರಾಕ್ಸ್ ಕರ್ಪೂರತೈಲ ಮತ್ತು ಅಮೆರಿಕದ ಅನೇಕ ಕರ್ಪೂರತೈಲಗಳು ಬಗೆಬಗೆಯ ಪೈನ್ ಮರಗಳಿಂದ ದೊರೆಯುತ್ತವೆ. ತೈಲರಾಳವನ್ನು ಬಟ್ಟಿ ಇಳಿಸಿದಾಗ ಬಾಷ್ಪಶೀಲ ಕರ್ಪೂರತೈಲ ಬೇರ್ಪಡುತ್ತದೆ.

**3 ಮ್ಯಾಸ್ಟಿಕ್:** ಮೆದು ಕರ್ಪೂರರಾಳ. ಕರಗುವ ಬಿಂದು ಸುಮಾರು 105°ಸೆಂ. ಗ್ರೀಕ್ ದ್ವೀಪಸಮುದಾಯದಲ್ಲಿ ಬೆಳೆಯುವ ಪಿಸ್ಟೇಸಿಯ ಸಂಕುಲದ ಮರಗಳಿಂದ ದೊರೆಯುತ್ತದೆ. ಇದನ್ನು ಕರ್ಪೂರತೈಲದೊಡನೆ ಮೆರುಗೆಣ್ಣೆಯಾಗಿ, ನಾರಗಸೆ ಎಣ್ಣೆಯೊಡನೆ ವರ್ಣವಾಹಕವಾಗಿ ಉಪಯೋಗಿಸಲಾಗುವುದು.

**4 ಡ್ರ್ಯಾಗನ್ಸ್‌ಬ್ಲಡ್ ಮತ್ತು ಗ್ಯಾಂಬೋಜ್:** ಈಸ್ಟ್ ಇಂಡೀಸಿನಲ್ಲಿ ಬೆಳೆಯುವ ತಾಳೆಯ ಜಾತಿಯ ಮರದ ಹಣ್ಣುಗಳಿಂದ ಸ್ರವಿಸುವ ಕರ್ಪೂರರಾಳ. ಸ್ಥೂಲವೀಕ್ಷಣೆಗೆ ಕಪ್ಪುಮಿಶ್ರಿತ ಕಂದುಬಣ್ಣ, ಆದರೆ ತೆಳುಪೊರೆ ಕುಂಕುಮ ವರ್ಣ. ಪಿಟೀಲಿಗೆ ಬಳಿಯುವ ಮೆರುಗೆಣ್ಣೆಗಳಲ್ಲಿ ಮತ್ತು ಆಲ್ಕೊಹಾಲ್ ಮೆರುಗೆಣ್ಣೆಗಳಿಗೆ ಕಡುಗೆಂಪು ಬಣ್ಣವಾಗಿ ಉಪಯೋಗಿಸಲಾಗುವುದು. ಗ್ಯಾಂಬೋಜನ್ನು ವರ್ಣವಾಹಕವಾಗಿ ಮತ್ತು ಔಷಧಿಗಳಲ್ಲಿ ಮತ್ತೊಂದು ಕರ್ಪೂರರಾಳವಾಗಿ ಉಪಯೋಗಿಸುತ್ತಾರೆ.

**5 ಡಾಮರ್:** ಸ್ವಚ್ಛ ನಸುಹಳದಿ ಬಣ್ಣದ ಮಣಿಗಳ ರೂಪದಲ್ಲಿ ದೊರೆಯುವ ಕಠಿಣತರ ಕರ್ಪೂರರಾಳ. ಕರಗುವ ಬಿಂದು ಸುಮಾರು 140°ಸೆಂ. ಇದರಿಂದ ಶ್ರೇಷ್ಠವಾದ ಮೆರುಗೆಣ್ಣೆಗಳನ್ನು ತಯಾರಿಸಬಹುದು.

**6 ಸ್ಯಾಂಡ್‌ರ್ಯಾಕ್:** ಆಸ್ಟ್ರೇಲಿಯದಲ್ಲಿ ಬೆಳೆಯುವ ಸೈಪ್ರಸ್‌ಪೈನ್‌ನಿಂದ ದೊರೆಯುವ ಕಠಿಣಕರ್ಪೂರರಾಳ ಕರಗುವ ಬಿಂದು 150°ಸೆಂ. ವಾರ್ನಿಷ್ ರೂಪದಲ್ಲಿ ಕಾಗದ, ಚರ್ಮ ಮತ್ತು ಲೋಹಗಳಿಗೆ ಬಳಿಯಲು ಉಪಯೋಗಿಸಲಾಗುವುದು.

**ತೈಲದ್ರಾವ್ಯಕರ್ಪೂರರಾಳಗಳು:** 1 ರಸಿನ್ (ಕಾಲೋಫೋನಿ): ಪೈನ್ ಮರದಿಂದ ದೊರೆತ ತೈಲರಾಳವನ್ನು ಬಟ್ಟಿ ಇಳಿಸಿದಾಗ ಉಳಿಯುವ ಘನವಸ್ತುವೇ ರಾಸಿನ್. ಮರದಿಂದ ರಂಧ್ರ ಮಾಡಿ ಇಳಿಸಿದ ಕರ್ಪೂರತೈಲದಿಂದ ಗಮ್‌ರಾಸಿನ್ ಮತ್ತು ಮರದ ತುಂಡುಗಳಿಂದ ಸಂಸ್ಕರಿಸಿದ ಕರ್ಪೂರತೈಲದಿಂದ ವುಡ್‌ರೇಸಿನ್‌ಲಭಿಸುತ್ತವೆ. ಪೆಡಸಾದ ಕೂಡಲೇ ಪುಡಿಯಾಗುವ, ಬಿಸಿಗೆ ಜಿಗುಟಾಗುವ, ಆರ್ಗ್ಯಾನಿಕ್ ದ್ರವಗಳಲ್ಲಿ ಕರಗುವ ರಾಳ ಈ ರೆಸಿನ್. ಇದರ ಪ್ರಮುಖ ಅಂಗವೆಂದರೆ ಅಬೇಟಿಕ್ ಆಮ್ಲ. ಅದರ ಅನೇಕ ಉಪಯೋಗಗಳು ಅದರ ಆಮ್ಲೀಯ ಗುಣಗಳನ್ನು ಅವಲಂಬಿಸಿವೆ. ಅಬಾಟಿಕ್ ಆಮ್ಲ ಕ್ಷಾರಗಳೊಡನೆ ಸಂಯೋಗ ಹೊಂದಿ ಸಾಬೂನುಗಳನ್ನು ಕೊಡುತ್ತದೆ. ಸೋಡಿಯಂ ಸಾಬೂನನ್ನು ಕಾಗದಕ್ಕೆ ಹೊಳಪು ಕೊಡಲು, ಸೀಸ, ಕೋಬಾಲ್ಟ್ ಮತ್ತು ಮ್ಯಾಂಗನೀಸ್



ಸಾಬೂನುಗಳನ್ನು ಬಣ್ಣ ಮತ್ತು ವಾರ್ನಿಷುಗಳಲ್ಲಿ ಶುಷ್ಕಕಾರಿಗಳಾಗಿ, ಕ್ಯಾಲ್ಸಿಯಂ ಮತ್ತು ಸತುವಿನ ಲವಣಗಳನ್ನು ಹೊಳಪು-ನುಣುಪೆಣ್ಣೆಗಳಲ್ಲಿ ಉಪಯೋಗಿಸಲಾಗುವುದು. ಗಾಳಿಯ ಸಂಪರ್ಕದಲ್ಲಿ ರೆಸಿನ್ ಸುಲಭವಾಗಿ ಉತ್ಕರ್ಷಣ ಹೊಂದಲು ಅಬೇಟಿಕ್ ಆಮ್ಲದ ಸಂಯುಗ್ಮೀದ್ವಿಬಂಧ (ಕಾಂಜ್ಯುಗೇಟೆಡ್ ಡಬಲ್ ಬಾಂಡ್) ಕಾರಣವಿರಬಹುದು. ಹೈಡ್ರೊಜನ್ನಿನೊಡನೆ ಸಂಯೋಜಿಸುವುದರ ಮೂಲಕ ರೆಸಿನನ್ನು ಮತ್ತಷ್ಟು ದೃಢಗೊಳಿಸ ಬಹುದು.

**2 ಕೋಪಲುಗಳು:** ಮೆದುಮನಿಲ ಕೋಪಲ್ ಕೌರಿಕೋಪಲ್, ಕಾಂಗೊಕೋಪಲ್, ಭೂಮಿ ಯಿಂದ ಅಗೆದು ತೆಗೆಯುವ ಜಾಂಜಿಬಾರ್ ಕೋಪಲ್ ಈ ವರ್ಗದವು. ಮೆರುಗೆಣ್ಣೆ ಉದ್ಯಮದಲ್ಲಿ ಅನೇಕ ಬಗೆಯ ಕೋಪಲುಗಳ ಬಳಕೆ ಇದೆ.

**3 ಶಿಲಾರಾಳ:** ಕಠಿಣತಮ ನೈಸರ್ಗಿಕ ಕರ್ಪೂರರಾಳ. ಪೂರ್ವ ಪ್ರಷ್ಯಾದ ನೀಲಭೂಮಿಯಲ್ಲಿ ಸಿಕ್ಕುತ್ತದೆ. ಕಾಲಾಂತರದಲ್ಲಿ ತಕ್ಕ ವಾತಾವರಣದಲ್ಲಿ ತೈಲರಾಳ ಶಿಲಾರಾಳವಾಗಬಲ್ಲದೆನ್ನುವುದಕ್ಕೆ ಪೈನ್ ಮರಗಳಿಂದ ಉತ್ಪತ್ತಿಯಾದ ಈ ರಾಳ ಸಾಕ್ಷಿ. ಸುಲಭದ್ರಾವ್ಯವಲ್ಲದ್ದರಿಂದ ಮೆರುಗೆಣ್ಣೆಗಳ ತಯಾರಿಕೆಯಲ್ಲಿ ಬಳಕೆಯಲ್ಲಿಲ್ಲ. ಮಣಿಗಳು ಮತ್ತು ಅಲಂಕಾರ ಸಾಮಗ್ರಿಗಳ ತಯಾರಿಕೆಯಲ್ಲಿ ಉಪಯೋಗ ವಾಗುವುದು.

**4 ಪೌರ್ವಾತ್ಯ ಮೆರುಗೆಣ್ಣೆ:** ಚೀನದೇಶದಲ್ಲಿ ಬೆಳೆಯುವ ಒಂದು ಮರದಿಂದ ಸಂಗ್ರಹಿಸಿದ ಹಾಲಿನಂಥ ದ್ರವ. ಬಾಷ್ಪೀಭವನದಿಂದ ಸಾಂದ್ರಗೊಳಿಸಿದ ಸ್ನಿಗ್ಧ ದ್ರವವನ್ನು ಹೊದಿಕೆಯಾಗಿ ಬಳಿದಾಗ ಒಂದು ದಿವಸದಲ್ಲೆ ಒಣಗಿಕೊಳ್ಳುತ್ತದೆ. ಬೆಳಕಿಲ್ಲದ ಶೀತಲವಾತಾವರಣದಲ್ಲಿ ಮಾತ್ರ ಒಣಗುವುದು ಇದರ ವೈಶಿಷ್ಟ್ಯ. ಇದರಲ್ಲಿ ಚರ್ಮವನ್ನು ಉದ್ರೇಕಗೊಳಿಸುವ ವಸ್ತುವಿದೆ.

**5 ಗೇರೆಣ್ಣೆ:** ಗೇರುಬೀಜಗಳಿಂದ ದೊರೆಯುವ ಫೀನಾಲುಗಳನ್ನೊಳಗೊಂಡ ಎಣ್ಣೆ. ಇದರಲ್ಲಿರುವ ಸಂಯುಕ್ತಗಳು ಚರ್ಮದ ಮೇಲೆ ಬೊಬ್ಬೆಗಳನ್ನು ಏಳಿಸುತ್ತವೆ. ತಕ್ಕ ರಸಾಯನ ಸಂಸ್ಕಾರದಿಂದ ಈ ಉದ್ರೇಕಕಾರಿವಸ್ತುಗಳನ್ನು ನಾಶಮಾಡಬಹುದು. (ಎಲ್.ಎ.ಆರ್.)

**ಕರ್ಪೂರ ಶ್ರೀನಿವಾಸರಾವ್:** 1863-1932. ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತ್ಯ ಪ್ರೇಮಿಗಳಾಗಿ ಕನ್ನಡ ನುಡಿಯ ಅಭಿವೃದ್ಧಿಗಾಗಿ ಶ್ರಮಿಸಿದವರು. ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ಮಾಣಕಾರ್ಯದಲ್ಲಿ ಇವರು ವಹಿಸಿದ

ಆಸಕ್ತಿ ಸ್ಮರಣೀಯ. ಜನನ 1863. ಇವರ ತಂದೆ ಕರ್ಪೂರ ಸುಬ್ಬರಾವ್. ಇವರ ಪೂರ್ವಿಕರು ತಿರುಪತಿಯ ತಿಮ್ಮಪ್ಪನ ದರ್ಶನಕ್ಕೆ ಮೊದಲು ಹೋದಾಗ, ಬೆಟ್ಟದ ಅಡಿಯಿಂದ ಮುಡಿಯವರೆಗೂ ಉಂಡುಂಡೆ ಕರ್ಪೂರವನ್ನು ಉರಿಸಿದ್ದರಿಂದ ಇವರ ವಂಶಕ್ಕೆ ಕರ್ಪೂರ ಎಂಬ ಹೆಸರು ಬಂತಂತೆ. ಇವರದು ಶ್ರೀಮಂತ ಮನೆತನವಾಗಿದ್ದರೂ ಇವರ ತಂದೆಯವರ ಕಾಲಕ್ಕೆ ಬಹಳ ಬಡತನದಲ್ಲಿಯೇ ಇವರ ವ್ಯಾಸಂಗ ನಡೆಯಿತು. ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ, ಇಂಟರ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವಷ್ಟರಲ್ಲಿ ಇವರ ತಂದೆಯವರು ತೀರಿಕೊಂಡರು. ಹೀಗಾಗಿ ಇವರು ಮುಂದಿನ ವ್ಯಾಸಂಗದ ಆಸೆಯನ್ನು ಬಿಟ್ಟು, ಪುಣೆಗೆ ಹೋಗಿ ಉದ್ಯೋಗಕ್ಕಾಗಿ ಪ್ರಯತ್ನಿಸಿದರು. ಈ ಸಮಯದಲ್ಲಿ ವಕೀಲರೊಬ್ಬರ ಪರಿಚಯ ವಾಯಿತು. ಆ ವಕೀಲರು ಇವರ ಪ್ರತಿಭೆಯನ್ನು ಗುರುತಿಸಿ, ಇವರ ಮುಂದಿನ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಟ್ಟರು. ಪ್ರೋತ್ಸಾಹಗೊಂಡ ಶ್ರೀನಿವಾಸರಾಯರು ಪುಣೆಯಲ್ಲಿದ್ದು ಕೊಂಡು ಬಿ.ಎಸ್‌ಸಿ., ಎಲ್.ಸಿ.ಇ. ಪದವಿಗಳನ್ನು ಗಳಿಸಿದರು. ಮುಂಬಯಿ ಪ್ರಾಂತ್ಯದ ಮರಾಮತ್ ಇಲಾಖೆಯಲ್ಲಿ ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿದ ಇವರು, ಆ ಇಲಾಖೆಯಲ್ಲಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿ, ಮುಖ್ಯ ಎಂಜಿನಿಯರ್ ಪದವಿಗೇರಿ ನಿವೃತ್ತರಾದರು.

ಇವರ ವೈಜ್ಞಾನಿಕ ಪ್ರತಿಭೆ ಕಾರ್ಯದಕ್ಷತೆಗಳನ್ನು ಗುರುತಿಸಿದ ಆಗಿನ ಮೈಸೂರು ಸರ್ಕಾರ ಇವರನ್ನು ಪ್ರಧಾನ ಎಂಜಿನಿಯರ್ ಹುದ್ದೆಗೆ ನೇಮಿಸಿಕೊಂಡಿತು.

ಕರ್ಪೂರ ಶ್ರೀನಿವಾಸರಾಯರು ಧಾರ್ಮಿಕ ಸಂಪ್ರದಾಯಶೀಲರಾಗಿದ್ದರು. ಕನ್ನಡದ ಜೊತೆಗೆ ಸಂಸ್ಕೃತ, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳನ್ನು ಕಲಿತಿದ್ದರು. ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಹೊಂದಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಸು.13 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಲವಾರು ಕನ್ನಡ ಸಂಘ ಸಂಸ್ಥೆಗಳಿಗೆ ಮತ್ತು ಕನ್ನಡ ಲೇಖಕರಿಗೆ ಇವರು ಆರ್ಥಿಕ ನೆರವನ್ನು ನೀಡಿದ್ದರು.

ಗಾಂಧೀಜಿ ಅವರ ಸ್ವಾತಂತ್ರ್ಯ ಚಳವಳಿಯಿಂದ ಪ್ರಭಾವಿತರಾಗಿದ್ದ ಶ್ರೀನಿವಾಸರಾಯರು ಖಾದಿ ಭಕ್ತರಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದಿದ್ದರೂ ಪರೋಕ್ಷವಾಗಿ ಬೆಂಬಲ ಕೊಟ್ಟಿದ್ದರು. ಇವರ ಸಾರ್ವಜನಿಕ ಸೇವೆಯನ್ನು ಗಮನಿಸಿ ಆಗಿನ ಮೈಸೂರು ಮಹಾರಾಜರು ರಾಜಸಭಾಭೂಷಣ ಎಂಬ ಬಿರುದನ್ನು ಕೊಟ್ಟು ಗೌರವಿಸಿದ್ದರು. ಹಾಸನದಲ್ಲಿ 1919ರಲ್ಲಿ ನಡೆದ 5ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಲಾಯಿತು. ಬೇರೆ ಬೇರೆ ಭಾಷೆಗಳ ಅಭ್ಯಾಸದಿಂದ ಕನ್ನಡವನ್ನು ಶ್ರೀಮಂತಗೊಳಿಸಬೇಕು; ಕನ್ನಡದಲ್ಲಿ ಉತ್ತಮ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಬೇಕು– ಎಂಬುದು ಇವರ ಹೆಬ್ಬಯಕೆಯಾಗಿತ್ತು.

ಇವರು ನಿಧನರಾದ (2 ಜೂನ್ 1932) ತರುವಾಯ ಕಾವ್ಯ ಸಂಬಂಧವಾದ ಶಾಸ್ತ್ರೀಯ ವಿಚಾರಗಳನ್ನು ಕುರಿತು ಇವರು ಬರೆದಿದ್ದ ಲೇಖನಗಳನ್ನು ಸಂಪಾದಿಸಿ ಸಾಹಿತ್ಯ ಶಾಸ್ತ್ರ (1971) ಎಂಬ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪುಸ್ತಕರೂಪದಲ್ಲಿ ಪ್ರಕಟಿಸಿದೆ.

*

**ಕರ್ಬಿ, ವಿಲಿಯಂ:** 1817–1906. ಕೆನಡದ ಕಾದಂಬರಿಕಾರ. ಫ್ರೆಂಚರ ಆಳ್ವಿಕೆಯ ಕಾಲದ ಕ್ವಿಬೆಕಿನಲ್ಲಿನ ಐತಿಹಾಸಿಕ ಸಾಹಸಮಯ ಜನಜೀವನವನ್ನು ಚಿತ್ರಿಸುವ ದಿ ಗೋಲ್ಡನ್ ಡಾಗ್ (1877) ಎಂಬ ಕಾದಂಬರಿಯನ್ನು ರಚಿಸಿ ಖ್ಯಾತಿಗಳಿಸಿದ. ಈತ ಜನಿಸಿದ್ದು ಇಂಗ್ಲೆಂಡಿನ ಕಿಂಗ್‌ಸ್ಟನ್–ಅಪಾನ್–ಹಿಲ್ ಎಂಬಲ್ಲಿ. ಚಿಕ್ಕವನಿದ್ದಾಗಲೇ ತನ್ನ ತಾಯಿತಂದೆಯ ರೊಂದಿಗೆ ಸಂಯುಕ್ತ ಸಂಸ್ಥಾನಕ್ಕೆ ಬಂದು ಆಂಟೇರಿಯೋವಿನ ನಯಾಗರಾದಲ್ಲಿ ನೆಲೆಸಿದ (1839). ಅಲ್ಲಿ ಪತ್ರಿಕೋದ್ಯಮವನ್ನು ಕೈಗೊಂಡು 20 ವರ್ಷಕ್ಕೂ ಹೆಚ್ಚು ಕಾಲ ನಯಾಗರಾ ಮೇಲ್ ಎಂಬ ಪತ್ರಿಕೆಯ ಸಂಪಾದಕನಾಗಿದ್ದ. ಸುಂಕದ ಅಧಿಕಾರಿಯಾಗೂ ಸೇವೆ ಸಲ್ಲಿಸಿದ್ದುಂಟು (1871–95). 1883ರಲ್ಲಿ ಈತ ಕೆನಡದ ರಾಯಲ್ ಸೊಸೈಟಿಯ ಚಾರ್ಟರ್ ಫೆಲೋ ಆಗಿ ಆಯ್ಕೆ ಹೊಂದಿದ.

ಒಟ್ಟಾರೆ ಈತ ಐದು ಪುಸ್ತಕಗಳನ್ನು ಬರೆದಿದ್ದಾನೆ. ಸಂಯುಕ್ತ ಸಾಮ್ರಾಜ್ಯದ ನಿಷ್ಠಾವಂತರ (ಯುನೈಟೆಡ್ ಎಂಪೈರ್ ಲಾಯಲಿಸ್ಟ್ಸ್) ವಲಸೆಯನ್ನು ಚಿತ್ರಿಸುವ, ಸ್ಪೆನ್ಸರನ ಕಾವ್ಯ ಮಾದರಿಯ ಕಾವ್ಯ ದಿ ಯು. ಇ. (1859); ದಿ ಗೋಲ್ಡನ್ ಡಾಗ್; ಮೆಮೊಯರ್ಸ್ ಆಫ್ ಸರ್ವೋಸ್ ಫ್ಯಾಮಿಲಿ (1884); ಕೆನಡದ ಪ್ರಾಕೃತಿಕ ದೃಶ್ಯಾವಳಿ, ಅಲ್ಲಿನ ಜನರ ಸಂಪ್ರದಾಯ ಮತ್ತು ಚರಿತ್ರೆಗಳನ್ನು ವರ್ಣಿಸುವ ಕವನಮಾಲೆ ಕೆನಡಿಯನ್ ಇಡಿಲ್ಸ್ (1894); ನಯಾಗರಾ ಜಿಲ್ಲೆಯ ಇತಿಹಾಸವನ್ನು ಕುರಿತ ಆನಲ್ಸ್ ಆಫ್ ನಯಾಗರಾ (1896) ಎಂಬ ಗದ್ಯಕೃತಿ– ಇವೇ ಆ ಐದು ಪುಸ್ತಕಗಳು. ದಿ ಗೋಲ್ಡನ್ ಡಾಗ್ ಇವನ ಮೇರುಕೃತಿ. ನ್ಯೂ ಫ್ರಾನ್ಸಿನ ಮೇಲ್ವಿಚಾರಕನಾದ ಫ್ರಾನ್ಕಾಯ್ಸ್ ಬಿಗಾಟನ ಜೀವನದ ಘಟನಾವಳಿಗಳನ್ನು ರೂಪಿಸುವ ಪ್ರಣಯ–ಸಾಹಸ–ರಮ್ಯಮಯ ಕಥೆಯನ್ನು ಚಿತ್ರಿಸುವಲ್ಲಿ, ಶ್ರೀಮಂತಿಕೆಯ ಮತ್ತು ಪೂರ್ವಾಚಾರದ ಮೌಲ್ಯಗಳಲ್ಲಿ, ಶೌರ್ಯದಲ್ಲಿ, ಅಧಿಕಾರದಲ್ಲಿ ಪ್ರಭು ಮತ್ತು ರಾಜ್ಯನಿಷ್ಠೆಯಲ್ಲಿ, ಸಂಪ್ರದಾಯ ಮತ್ತು ಧರ್ಮನಿಷ್ಠೆಗಳಲ್ಲಿ ತನಗಿದ್ದ ನಂಬಿಕೆಗಳನ್ನು ರಸವತ್ತಾಗಿ ಈತ ಚಿತ್ರಿಸಿದ್ದಾನೆ. ಈ ಕೃತಿ ಕೆನಡದ ಅಭಿಜಾತ ಸಾಹಿತ್ಯದ ಶ್ರೇಣಿಗೆ ಸೇರಿಹೋಗಿದೆ. ನಯಾಗರಾದಲ್ಲೇ ಈತ ನಿಧನನಾದ.

*

**ಕರ್ಮ:** ಭಾರತೀಯ ದರ್ಶನಗಳೆಲ್ಲವೂ ಒಮ್ಮತದಿಂದ ಅಂಗೀಕರಿಸಿರುವ ಸಿದ್ಧಾಂತ. ದರ್ಶನದಲ್ಲಿ ಮಾತ್ರವಲ್ಲ, ನಿತ್ಯಜೀವನದಲ್ಲೂ ಕರ್ಮದ ಕಲ್ಪನೆ ಬಹುವಾಗಿ ವಿಸ್ತಾರವಾಗಿದೆ. ಕರ್ಮವೆಂದರೆ ಕೆಲಸ (ಕೃ ಧಾತು), ಮಾಡಿದುದು, ಆದರೆ ಕರ್ಮವೆಂಬ ಪದದಲ್ಲಿ ಹಿಂದೆ ಮಾಡಿದುದರಿಂದ ಮುಂದೆ ಬಂದೇ ಬರುವ, ಬರಲಿರುವ ಅಥವಾ ಬಂದ, ಫಲ ಅಥವಾ ವಿಪಾಕದ ಅರ್ಥವೂ ಸೇರಿದೆ. ಮಾಡಿದುದನ್ನು ಉಣ್ಣಲೇಬೇಕೆಂಬ ನಿಲವಿಗೆ ಕರ್ಮಸಿದ್ಧಾಂತವೆಂದು ಹೆಸರು. ಕರ್ಮಸಿದ್ಧಾಂತಕ್ಕೆ ಮೂಲವಾಗಿ ಪುನರ್ಜನ್ಮದ ನಂಬಿಕೆಯೂ ಪ್ರಸಕ್ತವಾಗುತ್ತದೆ. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ಅನುಸಾರವಾಗಿ, ಆ ಕರ್ಮಗಳ ಫಲವಾಗಿ, ಈ ಜನ್ಮ ಸಿದ್ಧವಾಗಿದೆಯೆಂದೂ ಈ ಜನ್ಮದಲ್ಲಿ ಮಾಡುವ ಕರ್ಮಗಳಿಂದ ಮುಂದಿನ ಜನ್ಮ ನಿರ್ದಿಷ್ಟವಾಗುವುದೆಂದೂ ನಮ್ಮಲ್ಲಿನ ನಂಬಿಕೆ. ಎಂದರೆ ನಾವು ಅನುಭವಿಸುವ ಸುಖದುಃಖಗಳಿಗೆ ನಾವು ಮಾಡಿದ ಕೆಲಸಗಳೇ ಕಾರಣವೆಂದು ತಾತ್ಪರ್ಯ. ಮಾಡಿದ ಮೇಲೆ ಅದಕ್ಕೆ ನಿಯತವಾದ ಫಲವನ್ನು ಅನುಭವಿಸಲೇಬೇಕೆಂಬ ಶ್ರದ್ಧೆ ಎಲ್ಲ ಹಿಂದೂ ಜನರ ಸಂಸ್ಕಾರದಲ್ಲಿಯೂ ಸೇರಿಬಂದಿದೆ. ಪಾಪಭೀತಿಗೆ ಬಲವಾದ ಕಾರಣವೆಂದರೆ ಕರ್ಮಸಿದ್ಧಾಂತವೇ. ಬಡವರು, ರೋಗಿಗಳು, ಆರ್ತರು ತಮ್ಮ ತಮ್ಮ ಸ್ಥಿತಿಯಲ್ಲಿ ಸಮಾಧಾನಚಿತ್ತರಾಗಿದ್ದರೆ, ಶ್ರೀಮಂತರನ್ನು, ಸುಖಿಗಳನ್ನು ಕಂಡು ಕರುಬದಿದ್ದರೆ, ಕರ್ಮಸಿದ್ಧಾಂತದಲ್ಲಿನ ವಿಶ್ವಾಸ ಅದಕ್ಕೆ ಕಾರಣ. ಜನಜೀವನದಲ್ಲಿ ಅವಶ್ಯವಾದ ಎಳೆಯಂತೆ ಒದಗಿ ಬಂದಿರುವ ಕರ್ಮ ಸಿದ್ಧಾಂತಕ್ಕೆ ತಾತ್ತ್ವಿಕ ಸಮರ್ಥನೆಯಿದೆ.

ಮಾಡಿದ ಪ್ರತಿಯೊಂದು ಕರ್ಮದಿಂದಲೂ ಸಂಸ್ಕಾರ ಸಿದ್ಧವಾಗುತ್ತದೆ. ಸಂಸ್ಕಾರವೆಂದರೆ ವ್ಯಕ್ತಿಯ ಚಿತ್ತದಲ್ಲಿ ಅಥವಾ ಸ್ವಭಾವದಲ್ಲಿ ಒದಗಿಬಂದ ವಾಸನಾವಿಶೇಷ. ಕರ್ಮ ತಾತ್ಕಾಲಿಕ ವಾಗಿದ್ದು ಅದರ ಕ್ರಿಯೆ ಪ್ರಣಷ್ಟವಾದರೂ ಅದರಿಂದ ಹುಟ್ಟಿದ ಸಂಸ್ಕಾರ ಉಳಿಯುತ್ತದೆ. ಹೀಗೆ ಕರ್ಮಜನಿತ ಸಂಸ್ಕಾರಗಳ ಸಮಷ್ಟಿವ್ಯಾಪಾರವೇ ಸಂಸ್ಕಾರವೆನಿಸಿಕೊಳ್ಳುತ್ತದೆ. ಸಂಸ್ಕಾರಗಳ ಪ್ರವಾಹ ಅವಿರತವಾಗಿ, ಸ್ವರಸವಾಹಿನಿಯಾಗಿ ಸಾಗುತ್ತಿರುವುದರಿಂದಲೇ ನಮ್ಮ ಪ್ರವೃತ್ತಿಗಳೂ ಸುಖದುಃಖಾದಿ ಸಂಗತಿಗಳೂ ನಡೆಯುತ್ತಿವೆ. ಸಂಸ್ಕಾರ ಕಾರ್ಯಗತವಾಗಿ ಬಂದರೆ ವೃತ್ತಿಯೆನಿಸಿಕೊಳ್ಳುತ್ತದೆ. ಕರ್ಮದಿಂದ ಉತ್ಪನ್ನವಾದ ಸಂಸ್ಕಾರ ಪ್ರಕಟವಾಗಲೇ ಬೇಕೆಂಬ ನಿಯಮವಿಲ್ಲ; ಅದು ಪ್ರಸುಪ್ತಾವಸ್ಥೆಯಲ್ಲಿರಬಹುದು. ಕಾಲ ಪಕ್ವವಾದಾಗ ಲಬ್ಧವೃತ್ತಿಯಾಗುತ್ತದೆ. ಇದಕ್ಕೆ ಕರ್ಮವಿಪಾಕವೆನ್ನುತ್ತಾರೆ. ಕರ್ಮಕ್ಕೂ ವಿಪಾಕಕ್ಕೂ ಮಧ್ಯೆ ಕಾಲಾವಕಾಶವಿರಬಹುದು. ಈ ದೃಷ್ಟಿಯಿಂದ ಕರ್ಮವನ್ನು ಪ್ರಾರಬ್ಧ, ಸಂಚಿತ, ಆಗಾಮೀ, ಕ್ರಿಯಮಾಣ ಕರ್ಮಗಳೆಂದು ವಿಭಾಗ ಮಾಡುವುದುಂಟು.

ಮೀಮಾಂಸಕರು ಕರ್ಮವೆಂದರೆ ವಿಹಿತ ವಿಧಿಗಳೆಂದೂ ಪ್ರವೃತ್ತಿಜನಕವಾದ ಪ್ರಸಂಗಗಳೆಂದೂ ಅರ್ಥಮಾಡುತ್ತಾರೆ. ವಿಹಿತಕರ್ಮಗಳು ಅಥವಾ ವಿಧಿಗಳು ನಿತ್ಯನೈಮಿತ್ತಿಕ, ಕಾಮ್ಯ, ಪ್ರತಿಷಿದ್ಧ ಎಂದು ಮೂರು ಬಗೆ, ವಿಧಿಯೆಂದರೆ ಶ್ರುತಿಯಿಂದ ನಿರ್ದಿಷ್ಟವಾದವು. ಕರ್ಮಕ್ಕೂ ಕಾರಣಕ್ಕೂ ಭಾವನಾಸಂಬಂಧವನ್ನು ಏರ್ಪಡಿಸುವುದು ವಿಧಿಯ ಕೆಲಸ. ನಿತ್ಯವೆಂದರೆ ದಿನವೂ ಮಾಡುವ ಸಂಧ್ಯಾವಂದನ, ವೈಶ್ವದೇವ ಮುಂತಾದ ವಿಧಿಗಳು. ನೈಮಿತ್ತಿಕವೆಂದರೆ ಆಗಾಗ, ಸಂದರ್ಭಕ್ಕೆ ಉಚಿತವಾಗಿ, ಮಾಡುವ ಶ್ರುತಿವಿಹಿತ ಕರ್ಮಗಳು. ಇಂಥ ಕರ್ಮಗಳು ನಿಮಿತ್ತನಿಶ್ಚಯಾಧೀನವಾದವು. ಕಾಮ್ಯವೆಂದರೆ ಯಾವುದಾದರೂ ಕಾಮನೆಯಿಂದ ಮಾಡುವ ವಿಧಿವಿಹಿತ ಕರ್ಮ. ಸ್ವರ್ಗಕಾಮೋ ಯಜೇತ, ಅಹರಹಃ ಸಂಧ್ಯಾಮುಪಾಸೀತ–ಮುಂತಾದುವೆಲ್ಲ ವಿಧಿಗಳು, ಮಾಡಬೇಕಾದ ಕರ್ಮಗಳಲ್ಲಿ ಪ್ರವೃತ್ತಿ ಯನ್ನುಂಟುಮಾಡುವ ಆದೇಶಗಳು. ಮಾಡಬಾರದುದನ್ನು ಬೇಡವೆಂದು ಹೇಳುವುದು ನಿಷೇಧ (ನ ಕಲಂಜಂ ಭಕ್ಷಯೇತ್ ಇತ್ಯಾದಿ) ಅಥವಾ ಪ್ರತಿಷಿದ್ಧಕರ್ಮ. ವಿಧಿಗೆ ಪ್ರವರ್ತನೆ ಪ್ರಯೋಜನವೆಂದೂ ನಿಷೇಧಕ್ಕೆ ನಿವರ್ತನೆ ಪ್ರಯೋಜನವೆಂದೂ ಮೀಮಾಂಸಕರ ವಾದ. ಹೀಗೆ ಶ್ರುತಿ ಚೋದನಾರೂಪವಾದುದೆಂದು ಪರಿಗಣಿಸಿದ ಮೀಮಾಂಸಕರು ಕರ್ಮಕಾಂಡವೇ ಪ್ರಮುಖವೆನ್ನುತ್ತಾರೆ.

ಈ ರೀತಿ ಪ್ರವೃತ್ತಿ–ನಿವೃತ್ತಿಗೆ ಕಾರಣವಾದ ಕರ್ಮದಿಂದಲೇ ಸಂಸಾರ ಸಿದ್ಧವಾಗಿದೆ ಯೆಂದೂ ಸಂಸಾರದಿಂದ ಪಾರಾಗಲು ಈ ಎರಡೂ ಕರ್ಮಗಳನ್ನು ಬಿಟ್ಟುಬಿಡಬೇಕೆಂದೂ ವೇದಾಂತಿಗಳ ವಾದ. ಉಪನಿಷತ್ತಿನಲ್ಲಿ ಚಿತ್ತಶುದ್ಧಿಗೆ ಕರ್ಮ, ಉಪಾಸನಾ, ಯೋಗ ಎಂಬ ಮೂರು ಸಂವಿಧಾನಗಳನ್ನು ಹೇಳಿದೆ. ಈ ಮೂರೂ ಸೇರಿ ಜ್ಞಾನ ಉತ್ಪನ್ನವಾಗುವು ದೆಂದು ಶಂಕರಾಚಾರ್ಯರು ಅಭಿಪ್ರಾಯಪಡುತ್ತಾರೆ. ನಿಃಶ್ರೇಯಸಕ್ಕೆ ಕರ್ಮಸಂನ್ಯಾಸ ಕಾರಣವಾಗುವುದೆಂದು ಅವರ ವಾದ. ಭಗವದ್ಗೀತೆಯಲ್ಲಿ ಬರುವ ಕರ್ಮವಿಚಾರವಾದ ಪ್ರಸ್ತಾಪಕ್ಕೆ ಅವರು ಇದೇ ಅರ್ಥ ಮಾಡಿದ್ದಾರೆ.

ಭಗವದ್ಗೀತೆಯಲ್ಲಿ ಕರ್ಮವನ್ನು ಯೋಗದ ನೆಲೆಯಲ್ಲಿ ನಿಲ್ಲಿಸಲಾಗಿದೆ. ಜ್ಞಾನಯೋಗ, ಭಕ್ತಿಯೋಗಗಳೊಂದಿಗೆ ಕರ್ಮಯೋಗವೂ (ನೋಡಿ– ಕರ್ಮಯೋಗ) ಸೇರಿ ಮೂರು ದಾರಿಗಳೆಂದು ಹಿಂದೂದರ್ಶನದಲ್ಲಿ ಪ್ರಸಿದ್ಧವಾಗಿದೆ. ಭಗವದ್ಗೀತೆಯಲ್ಲಿ ಕರ್ಮವೆಂದರೆ ವರ್ಣಾಶ್ರಮವಿಹಿತವಾದ ಕರ್ಮ. ಕ್ಷತ್ರಿಯನಿಗೆ ಯುದ್ಧ ಮಾಡುವುದು ಅವಶ್ಯವಾದ ಕರ್ಮ. ಇದನ್ನು ಧರ್ಮವೆಂಬ ಅರ್ಥದಲ್ಲಿ ಹೇಳಿದ್ದಾರೆ. ಸ್ವಧರ್ಮೇ ನಿಧನಂಶ್ರೇಯಃ ಎನ್ನುವಾಗ ತಮ್ಮ ತಮ್ಮ ವರ್ಣಾಶ್ರಮಕರ್ಮಗಳನ್ನು ಮಾಡಬೇಕೆಂಬುದೇ ಆಶಯ. ಇಲ್ಲಿಯೂ ಪೂರ್ವಮೀಮಾಂಸಕರ ಪ್ರವೃತ್ತಿ ಪ್ರಚೋದಕವಾದ ಬರುತ್ತದೆ. ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ, ಅನಿಚ್ಛನ್ ಅಪಿವಾರ್ಷ್ಣೇಯ ಬಲಾದಿವ ನಿಯೋಜಿತಃ ಇತ್ಯಾದಿ ಮಾತುಗಳಲ್ಲಿ ಈ ಅರ್ಥ ಅಡಗಿದೆ. ಕರ್ಮ ಮಾಡದೆ ಒಂದು ಕ್ಷಣವಾಗಲೀ ಇರುವುದು ಸಾಧ್ಯವಿಲ್ಲವೆಂದು ಕೃಷ್ಣ ಹೇಳುವಾಗ ಸಾಮಾನ್ಯ ಕರ್ಮಸಿದ್ಧಾಂತವೇ ನಿರೂಪಿತವಾಗಿದೆ. ಆದರೆ ಫಲಾಪೇಕ್ಷೆಯನ್ನು ಬಿಟ್ಟು ನಿಃಸಂಗನಾಗಿ ಮಾಡುವ ಕರ್ಮ ಕರ್ಮಯೋಗ ವೆನಿಸಿಕೊಳ್ಳುತ್ತದೆ. ಕುರುಕರ್ಮೈವ ತ್ವಂ, ಕರ್ಮಜ್ಯಾಯೋಽಹ್ಯಕರ್ಮಣಃ ಎಂದು ಮುಂತಾಗಿ ಕರ್ಮದ ಅಗತ್ಯವನ್ನು ಹೇಳಿ ಮಾ ಫಲೇಷು ಕದಾಚನ ಎಂಬ ಪಕ್ಷವನ್ನೂ ಸೇರಿಸಿದಾಗ ಕರ್ಮಸಿದ್ಧಾಂತ ಕರ್ಮಯೋಗವಾಗಿ ಪರಿಣಮಿಸುತ್ತದೆ. ಜ್ಞಾನದ ಹೆಚ್ಚಳವನ್ನು ಹೇಳುವ ಉಪನಿಷತ್ತೂ ಕರ್ಮದ ಅಗತ್ಯವನ್ನು ಹೇಳುತ್ತದೆ. ಕುರ್ವನ್ನೇವೇಹ ಕರ್ಮಾಣಿ ಎಂಬ

ಈಶಾವಾಸ್ಯ ಉಪನಿಷತ್ತಿನ ಮಾತು ಪ್ರಸಿದ್ಧವಾದುದು. ಬ್ರಹ್ಮನ ದರ್ಶನವಾಗುವಾಗ ಎಲ್ಲ ಕರ್ಮಗಳೂ ಕ್ಷಯಿಸುತ್ತವೆ. (ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ) ಎಂದು ಹೇಳಿದರೂ ನಿತ್ಯಜೀವನದಲ್ಲಿ ಮಾಡಬೇಕಾದ ಸತ್ಯ. ಧರ್ಮ, ಕರ್ಮಗಳನ್ನು ಅಲ್ಲಗಳೆಯುವುದಿಲ್ಲ. ಜ್ಞಾನೈಕನಿಷ್ಠರಾದ ಅದ್ವೈತಿಗಳೂ ಕರ್ಮದ ಅಗತ್ಯವನ್ನು ಅಂಗೀಕರಿಸುತ್ತಾರೆ. ಶಂಕರಾಚಾರ್ಯರೂ ವೇದೋ ನಿತ್ಯಂ ಅಧೀಯತಾಂ, ತದುದಿತಂ ಕರ್ಮ ಸ್ವನುಷ್ಠೀಯತಾಂ ಎಂಬ ಆದೇಶವನ್ನು ಕೊಟ್ಟಿದ್ದಾರೆ.

ಕರ್ಮಸಿದ್ಧಾಂತದಲ್ಲಿ ಪ್ರಮುಖವಾದ ವಿಚಾರವೆಂದರೆ ಅದರಿಂದ ಒದಗುವ ಲೇಪ; ಇದರಿಂದಾಗಿ ಅಭ್ಯುದಯ, ನಿಃಶ್ರೇಯಸಗಳಿಗೆ ಒದಗುವ ಅಡ್ಡಿ. ಕರ್ಮ ಮಾಡುವುದು ಅನಿವಾರ್ಯವಾದಾಗ ನಿಷ್ಕಾಮಕರ್ಮ ಮಾಡಿದರೆ ಕರ್ಮಮಾಡಿದರೂ ಮಾಡದಂತೆಯೇ ಎಂಬ ನಿಲವು ವೇದಾಂತದಲ್ಲಿ ಕಂಡುಬರುತ್ತದೆ. ಇದೇ ದೃಷ್ಟಿ ಜೈನ, ಬೌದ್ಧದರ್ಶನಗಳಲ್ಲಿಯೂ ಇದೆ. ಜೀವದಲ್ಲಿ ಕರ್ಮ ಪ್ರಸಕ್ತವಾಗಿ ಹರಿಯತೊಡಗಿದರೆ ಅದು ಆಸ್ರವವೆಂದು ಜೈನರ ವಾದ, ಕಾಲುವೆಯಲ್ಲಿ ನೀರು ಹರಿದು ಬರುವಂತೆ ಕರ್ಮಪುದ್ಗಲ ಜೀವದಲ್ಲಿ ಒದಗಿ ಬಂದು ಜೀವವನ್ನು ಆವರಿಸುತ್ತದೆ. ಜೀವ, ಕರ್ಮ ಇವೆರಡರ ಅನ್ಯೋನ್ಯ ಸಂಬಂಧವೇ ಬಂಧನವೆನಿಸಿಕೊಳ್ಳುತ್ತದೆ. ಬಂಧನಕ್ಕೆ ವಿರುದ್ಧವಾಗಿ ಆಶ್ರವ ಒದಗಿಬರದಂತೆ ಸಂವರ ಕರ್ಮವನ್ನು ತಡೆಗಟ್ಟುವುದು. ಆಸ್ರವದಿಂದ ಎಂದರೆ ಕರ್ಮದ ಪ್ರಸಕ್ತಿಯಿಂದ, ಸಂಸಾರ ಸಿದ್ಧವಾಗುತ್ತದೆ. ಅದರ ನಿರೋಧದಿಂದ, ಎಂದರೆ ಸಂವರದಿಂದ, ಮೋಕ್ಷ ಲಭಿಸುತ್ತದೆ. ಜೈನರೂ ಜನ್ಮಾಂತರಗಳಲ್ಲಿ ಸಂಚಿತವಾದ ಕರ್ಮವನ್ನು ಒಪ್ಪಿಕೊಳ್ಳುತ್ತಾರೆ. ಇಂಥ ಕರ್ಮಗಳ ಕ್ಷಯಕ್ಕಾಗಿ ಯೋಗಮಾರ್ಗವನ್ನು ತೀರ್ಥಂಕರರು ಬೋಧಿಸಿದ್ದಾರೆ. ಸಂಚಿತ ಕರ್ಮಗಳ ಕ್ಷಯವೇ ನಿರ್ಜರವೆನಿಸಿಕೊಳ್ಳುತ್ತದೆ. ಹೀಗೆ ಜೈನರು ಹೇಳುವ ಜೀವ, ಅಜೀವ, ಆಸ್ರವ ಬಂಧ, ಸಂವರ, ನಿರ್ಜರ, ಮೋಕ್ಷ ಎಂಬ ಸಪ್ತಪದಾರ್ಥಗಳು ಕರ್ಮವನ್ನು ಪ್ರತ್ಯೇಕವಾಗಿ ಒಳಗೊಳ್ಳದಿದ್ದರೂ ಏಳರಲ್ಲೂ ಕರ್ಮದ ಪ್ರಸಕ್ತಿಯಿದೆ. ಮೋಕ್ಷಮಾರ್ಗಗಳೆಂದು ಅವರು ಹೇಳುವ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರಗಳಲ್ಲಿ ಸಮ್ಯಕ್ ಚಾರಿತ್ರವೆಂಬುದು ಕರ್ಮಕ್ಕೆ ನೇರವಾಗಿ ಸಂಬಂಧಿಸಿದುದೇ. ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಈ ಪಂಚಮಹಾವ್ರತಗಳು ಕರ್ಮಸಿದ್ಧಾಂತವನ್ನನುಸರಿಸಿ ಒದಗಿದುವೇ. ಜೈನರ ಲೇಶ್ಯಕಲ್ಪನೆಗೂ ಕರ್ಮಸಿದ್ಧಾಂತವೇ ಆಧಾರ.

ಬೌದ್ಧದರ್ಶನದಲ್ಲಿಯೂ ಕರ್ಮಸಿದ್ಧಾಂತವನ್ನು ಅವಶ್ಯವೆಂದು ಅಂಗೀಕರಿಸಿದ್ದಾರೆ. ಮಾಡುವಾಗ ಪರಿಜ್ಞಾನವಿಲ್ಲದೆ ಮಾಡಿ, ಅದರ ಫಲ ಒದಗಿದಾಗ ಅಳುಮುಖದಿಂದ ಅನುಭವಿಸುವ ಪ್ರಸ್ತಾಪ ಧಮ್ಮಪದದಲ್ಲಿ ಹಲವೆಡೆ ಬರುತ್ತದೆ. ರಾಗ, ದ್ವೇಷ, ಮೋಹಗಳಿಂದ ಕರ್ಮಬಂಧ ಒದಗುವುದೆಂದೂ ಪಂಚಕಾಮಗುಣಿಕ ರಾಗದಿಂದಲೇ ಎಂದರೆ ವಸ್ತುಕಾಮ ಮತ್ತು ಕ್ಲೇಶಕಾಮಗಳಿಂದಲೇ ಆತ್ಮಪ್ರತ್ಯಯ ಉತ್ಪನ್ನವಾಗಿ ಆತ್ಮಕ್ಕೆ ಸಂಬಂಧಪಟ್ಟ ವ್ಯಾಪಾರಗಳು, ಎಂದರೆ ಕರ್ಮಗಳು, ಪ್ರಸಕ್ತವಾಗುವುವೆಂದೂ ಬೌದ್ಧರ ವಾದ. ಸಂಸಾರದಲ್ಲಿ ಐದು ಸ್ಕಂಧಗಳ ಅವಿರತ. ಅನುಸ್ಯೂತ ವ್ಯಾಪಾರದಿಂದ ಆಯತನಗಳು (ಚಕ್ಷು ಶ್ರೋತ್ರ, ಮುಂತಾದ ಆರು ಅಜ್ಝಂತಿಕಾಯತನಗಳು, ರೂಪ, ಶಬ್ದ ಮುಂತಾದ ಆರು ಬಹಿರಾಯತನಗಳೂ ಸೇರಿ ಹನ್ನೆರಡು ಆಯತನಗಳು) ಉತ್ಪನ್ನವಾಗುತ್ತವೆ. ಈ ಆಯತನಗಳಿಂದಾಗಿ ಸ್ಕಂಧಗಳು ಉಪಾದಾನಸ್ಕಂಧಗಳಾಗಿ ಪರಿಣಮಿಸುತ್ತವೆ. ಇಂಥ ಸ್ಥಿತಿಯಲ್ಲಿ ಕರ್ಮದ ಅಗತ್ಯ ಬರುತ್ತದೆ. ಬೌದ್ಧರ ದೃಷ್ಟಿಯಲ್ಲಿ ಲೋಕಗಳು ಮೂರು–ಸತ್ತ್ವಲೋಕ (ಜೀವಿಗಳಿರುವ ಲೋಕ). ಅವಕಾಸಲೋಕ (ಭೂಮಿ ಮುಂತಾದ ಗ್ರಹಗಳು ಇರುವ ಲೋಕ) ಮತ್ತು ಸಂಸ್ಕಾರಲೋಕ (ಮನುಷ್ಯನ ದೇಹ ಮತ್ತು ಮನಸ್ಸಿನ ಎಲ್ಲ ಕ್ರಿಯೆಗಳೂ ಸೇರಿ ಆಗುವ ಲೋಕ). ಈ ಸಂಸ್ಕಾರಲೋಕದಲ್ಲೇ ಕರ್ಮನಿಯಮವಿರುವುದು. ಬೌದ್ಧರು ಪ್ರಮುಖವಾಗಿ ಮಾಸಕ್ರಿಯೆಗಳಿಗೇ ಕರ್ಮವೆನ್ನುವುದು. ಚೇತನಾऽಹಂ ಭಿಕ್ಖವೇ ಕಮ್ಮಂ ವದಾಮಿ ಎಂದು ಬುದ್ಧನೇ ಹೇಳಿದಂತೆ ಉಲ್ಲೇಖವಿದೆ.

ಚಿತ್ತ (ಸಂಕಲ್ಪ, ಇತ್ಯಾದಿ), ಋತು, ಆಹಾರ–ಇವುಗಳಿಂದ ಕರ್ಮ ನಿರ್ದಿಷ್ಟವಾಗುವು ದೆಂದು ಸ್ಥವಿರವಾದಿಗಳು ನಂಬುತ್ತಾರೆ. ಕರ್ಮಗಳಲ್ಲಿ ನಾಲ್ಕು ಬಗೆಗಳೆಂದು ಇವರ ವಾದ. ಪುನರ್ಜನ್ಮಕ್ಕೆ ಕಾರಣವಾಗುವ ಜನಕ ಕಮ್ಮ, ಇಂಥ ಕರ್ಮಗಳಿಗೆ ಆಸರೆಯಾಗಿ ಉಪಷ್ಟಂಭಕವಾಗಿರುವ ಉಪಷ್ಟಂಭಕ ಕಮ್ಮ–ಇವೆರಡೂ ಸಂಸಾರವನ್ನು ಸಿದ್ಧಮಾಡುವ ಕರ್ಮಗಳು. ಈ ಎರಡು ಕರ್ಮಗಳು ಪಕ್ವವಾಗದಂತೆ ಪ್ರತಿಬಂಧಕ ಮಾಡುವುದು ಉಪಪೀಲಕ ಕಮ್ಮ; ಈ ಎರಡು ಕರ್ಮಗಳ ಫಲ ನಾಸವಾಗುವಂತೆ ಮಾಡುವುದು ಉಪಘಾತ ಕಮ್ಮ. ಕರ್ಮಮಾಡುವವನ ದೃಷ್ಟಿಯಿಂದ ಕರ್ಮಗಳನ್ನು ಕಾಯಕರ್ಮ, ವಾಚಿಕರ್ಮ, ಮಾನಸಕರ್ಮವೆಂಬುದಾಗಿ ವಿಭಾಗಮಾಡುತ್ತಾರೆ. ಈ ವಿಭಾಗ ವೈದಿಕದರ್ಶನಗಳಲ್ಲೂ ಉಂಟು. ಫಲ ವಿಪಾಕಹೊಂದುವ ಬಗೆಯ ದೃಷ್ಟಿಯಿಂದ ಕರ್ಮದಲ್ಲಿ ನಾಲ್ಕು ವಿಧ; ಭಾರಿ ಫಲವನ್ನು ಒದಗಿಸುವ ಗುರುಕಕಮ್ಮ (ಇದರಲ್ಲಿ ತೀರ ಕೆಟ್ಟ ಕೆಲಸಗಳೂ ಧ್ಯಾನಗಳೂ ಸೇರುತ್ತವೆ), ಸಾಯುವ ಮುನ್ನ ಒದಗಿದ ಭಾವನೆಯಿಂದ ಮುಂದಿನ ಜನ್ಮವನ್ನು ನಿರ್ದೇಶನಮಾಡುವ ಆಸನ್ನಕಮ್ಮ, ಅಭ್ಯಾಸದ ಬಲದಿಂದ ಪ್ರವೃತ್ತವಾಗುವ ಆಚಿಣ್ಣ, ಮತ್ತು ಹಿಂದಿನ ಶೇಷ ಉಳಿದಿದ್ದರೆ ಕಟತ್ತಾ (ಕಟಸ್ಸ ಭಾವೋ, ಎಂದರೆ ಮಾಡಿರುವುದರ ಭವ ಅಥವಾ ಸಂಚಿತಕರ್ಮ). ಕರ್ಮ ಪಕ್ವವಾಗುವ ಕಾಲದ ದೃಷ್ಟಿಯಿಂದ ದಿಟ್ಠಧರ್ಮವೇದನೀಯ (ಇದೇ ಜನ್ಮದಲ್ಲಿ ಫಲಕೊಡುವ ಕರ್ಮಗಳು), ಉಪಪಜ್ಜವೇದನೀಯ (ಮುಂದಿನ ಜನ್ಮದಲ್ಲಿ ಫಲಕೊಡುವ ಕರ್ಮಗಳು), ಅಪರಾಪರಿಯ ವೇದನೀಯ (ಯಾವುದೋ ನಿರ್ದಿಷ್ಟವಲ್ಲದ ಮುಂದಿನ ಒಂದು ಜನ್ಮದಲ್ಲಿ ಫಲಕೊಡುವ ಕರ್ಮಗಳು), ಮತ್ತು ಅಹೋಸಿಕಮ್ಮ (ಶಕ್ತಿಯನ್ನು ಕಳೆದುಕೊಂಡ ಕರ್ಮಗಳು)–ಹೀಗೆ ವಿಭಾಗ ಮಾಡುತ್ತಾರೆ. ಪ್ರತಿಯೊಂದು ಚಿತ್ತವೃತ್ತಿಯೂ ಕರ್ಮವೆಂದೂ ಆದರಿಂದ ನಿಯತವಾದ ಫಲ ಸಿದ್ಧವಾಗುವುದೆಂದೂ ಹೇಳುವ ವಾದಕ್ಕೆ ಚಿತ್ತನಿಯಾಮವೆಂದು ಹೆಸರು.

ಬುದ್ಧ ಹೇಳಿದ ಅಷ್ಟಾಂಗಮಾರ್ಗದಲ್ಲಿಯೂ ನಾಲ್ಕನೆಯದು ಸಮ್ಯಕ್‌ಕರ್ಮಾಂತ (ಸಮ್ಮಾಕಮ್ಮಂತ) ಎನಿಸಿಕೊಳ್ಳುತ್ತದೆ. ಪ್ರಾಣಾತಿಪಾತ. ಅದತ್ತಾದಾನ ಮತ್ತು ಅಬ್ರಹ್ಮಚರ್ಯ–ಇವುಗಳಿಂದ ವಿರತಿಯೇ ಸಮ್ಮಾಕಮ್ಮಂತ, ಸಂಕಲ್ಪ, ವಾಚಾ ಕರ್ಮಾಂತ, ಆಜೀವಗಳು ಸೇರಿ ಶೀಲಸ್ಕಂಧವೆನಿಸಿಕೊಳ್ಳುತ್ತವೆ. ಜೈನರು ಹೇಳುವ ಸಮ್ಯಕ್‌ಚಾರಿತ್ರದಂತೆ ಬೌದ್ಧರ ಸಮ್ಯಕ್‌ಕರ್ಮಾಂತ.

ಮಕ್ಖಲಿ ಗೋಸಾಲನೆಂಬ ಆಜೀವಿಕ ತೀರ್ಥಂಕರ ಕರ್ಮದ ವಿಚಾರವಾಗಿ ತುಂಬ ಗಾಢವಾದ ವಿವೇಚನೆ ನಡೆಸಿದ್ದನೆಂದು ತಿಳಿದುಬರುತ್ತದೆ. ಅವನ ಪ್ರಕಾರ ಜಗತ್ತಿನಲ್ಲಿ ನಡೆಯುವ ಎಲ್ಲ ಪ್ರಸಂಗಗಳಿಗೂ ಆಧಾರವಾಗಿ ನಿಯತಿ, ಸಂಗತಿ ಮತ್ತು ಭಾವಗಳಿವೆ. ನಿಯತಿಯೆಂದರೆ ಕರ್ಮದಿಂದ ನಿರ್ದಿಷ್ಟವಾದ ಫಲ ಬಂದೇ ಬರುವುದೆಂದರ್ಥ. ಸಂಗತಿಯೆಂದರೆ ಜೀವಜಾತಿಗಳು. ಭಾವ ಪ್ರಕೃತಿ ನಿರ್ದೇಶಕವಾದ ಫಲ. ನಿಯತಿಯ ಬಲದಿಂದ ಗೋಸಾಲ ಪರಿಣಾಮವಾದವನ್ನು ಹೂಡಿದ. ಪ್ರಾಣಿಗಳೂ ಪ್ರಸಂಗಗಳೂ ಪೂರ್ವಕರ್ಮವಶದಿಂದ ಪುನಃಪುನಃ ಪ್ರವೃತ್ತವಾಗುವುವೆಂದು ಇವನ ವಾದ (ಪವುಟ್ಟ ಪರಿಹಾರವಾದ). ಅವನ ಪ್ರಕಾರ ಕರ್ಮಗಳು ಎರಡೇ ವಿಧ–ವಾಚಿಕ ಮತ್ತು ಮಾನಸಿಕ. ಮಾನಸಿಕ ಕರ್ಮ ಅರ್ಧಕರ್ಮವೆಂದು ಅವನ ಎಣಿಕೆ. ಅವನ ಸಮಸಾಮಯಿಕರಲ್ಲಿ ಕೆಲವು ತೀರ್ಥಂಕರರು (ಕಕುದ ಕಜ್ಜಾಯನ ಇತ್ಯಾದಿ) ಅಕ್ರಿಯಾ ವಾದವನ್ನು ಹಿಡಿದಿದ್ದರು. ಕರ್ಮಕ್ಕೂ ಫಲಕ್ಕೂ ಸಂಬಂಧವಿಲ್ಲವೆಂದು ವಾದ ಇದು. ಯಾವ ಕರ್ಮವೂ ಫಲಕಾರಿಯಾಗದೆಂದೂ ನಡೆಯುವ ಪ್ರಸಂಗಗಳೆಲ್ಲ ಯದೃಚ್ಛೆಯಿಂದ ಆಗುವುದೆಂದೂ ಇನ್ನೊಂದು ವಾದವಿದೆ.

ಒಟ್ಟಿನಲ್ಲಿ ಕರ್ಮಸಿದ್ಧಾಂತಕ್ಕೂ ನೈತಿಕ ಜೀವನಕ್ಕೂ ನಿಕಟವಾದ ಸಂಬಂಧವುಂಟು. ಕರ್ಮದ ಕಲ್ಪನೆಯಿಲ್ಲದಿದ್ದರೆ ಜೀವನದಲ್ಲಿ ಸಮಾಧಾನವೊದಗುವುದು ದುಸ್ತರವಾಗುತ್ತದೆ. ಕರ್ಮದಲ್ಲಿ ಶ್ರದ್ಧೆಯಿಲ್ಲದಿದ್ದರೆ ಶೀಲವನ್ನು ಬೆಳೆಸಿಕೊಳ್ಳಲು ಮನಸ್ಸು ಒದಗದು. ಕರ್ಮದ ತಾತ್ತ್ವಿಕ ಸಮರ್ಥನೆಯಿಲ್ಲದೆ ಶೀಲಕ್ಕೆ ಆಧಾರವೇ ಇರದು. ಸಂಘಜೀವಿ ಕುಶಲಕರ್ಮಗಳನ್ನೇ ಮಾಡಬೇಕೆಂಬ ದೀಕ್ಷೆಗೆ ಕರ್ಮ ವಿಪಾಕ ಸಿದ್ಧಾಂತ ಅಡಿಪಾಯ. ಇದರ ಮೇಲೆ ಪರಮಪುರುಷಾರ್ಥವನ್ನು ಸಾಧಿಸಿಕೊಳ್ಳಲು ವ್ಯವಸ್ಥಿತವಾದ ಕರ್ಮಯೋಗ ಜಗದ್ವಿಖ್ಯಾತವಾಗಿದೆ. ರಾಷ್ಟ್ರಕ್ಕೆ ಇದು ಪ್ರಯೋಜನಕಾರಿಯೆಂಬುದನ್ನು ಲೋಕಮಾನ್ಯ ಬಾಲಗಂಗಾಧರ ತಿಲಕರೂ ಸ್ವಾಮಿ ವಿವೇಕಾನಂದರೂ ತೋರಿಸಿಕೊಟ್ಟಿದ್ದಾರೆ. ಹಿಂದಿನ ಕಾಲದಿಂದ ಪ್ರಚಲಿತವಾದ ಕ್ರಿಯಾಯೋಗವೆಂಬ ಸಂವಿಧಾನವನ್ನು ಈಚೆಗೆ ಯೋಗಾನಂದ ಪರಮಹಂಸರು ಅಮೆರಿಕ ದೇಶದಲ್ಲಿ ವಿಶೇಷವಾಗಿ ಪ್ರಚಾರ ಮಾಡಿದರು. ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರಪ್ರಣಿಧಾನ–ಇವು ಕ್ರಿಯಾಯೋಗದ ವಿವರಗಳು. (ಎಸ್.ಕೆ.ಆರ್.)

**ಕರ್ಮತ್ರಯ:** ಕರ್ಮವಿಚಾರವನ್ನು ಮೊದಲು ಹೇಳಹೊರಟವರು ಮೀಮಾಂಸಕರು. ಕರ್ಮ ಎಂದರೆ ಕ್ರಿಯೆ. ಅವರ ಮತದಂತೆ ಫಲಪ್ರಾಪ್ತಿಗಾಗಿ ಮಾಡುವ ಕ್ರಿಯಾಕಲಾಪವೇ ಕರ್ಮ. ಕರ್ಮಾಣಿ ಬೋಧನಾರ್ಥ ವಿದ್ಯಾ (ಶಾಬರ ಭಾಷ್ಯ)–ಎಂದರೆ ವಿದ್ಯೆ ಕರ್ಮದಲ್ಲಿ ಪರ್ಯವಸಾನಹೊಂದಬೇಕು. ಧರ್ಮ ಅನುಷ್ಠಾನವನ್ನು ಬಯಸುತ್ತದೆ. ಆದ್ದರಿಂದಲೇ ದಾರ್ಶನಿಕರು ವಿದ್ಯಾವಬೋಧಿತಧರ್ಮವಾಗಿರುವ ಸತ್ಕ್ರಿಯೆಗೆ ಮಾತ್ರ ಕರ್ಮವೆಂದರು. ಈ ಕರ್ಮ ಶಬ್ದವನ್ನು ಧರ್ಮ ಎಂಬ ಅರ್ಥದಲ್ಲಿ ಉಪಯೋಗಿಸುವುದುಂಟು. ಆದರೆ ಕರ್ಮವೇ ಧರ್ಮವಲ್ಲ. ಅದು ಧರ್ಮಗಳಲ್ಲಿ ಒಂದು.

ಅರ್ಥ ಮತ್ತು ಕಾಮ ಸಂಪಾದನಕ್ಕಾಗಿ ಮಾಡುವ ಕಾರ್ಯಕಲಾಪಗಳಲ್ಲಿ ವೇದ ಸಮ್ಮತವಾದುದೆಲ್ಲ ಕರ್ಮವೇ. ಈ ಕಾರಣದಿಂದ ಯಾಜನಾದಿಗಳು ವಿಪ್ರರಿಗೂ ಶಿಷ್ಟಪರಿಪಾಲನ, ದುಷ್ಟನಿಗ್ರಹಾದಿಗಳು ಕ್ಷತ್ರಿಯರಿಗೂ ಕೃಷಿವಾಣಿಜ್ಯಾದಿಗಳು ವೈಶ್ಯಾದಿಗಳಿಗೂ ಅರ್ಥಸಂಪಾದನೆಗಾಗಿ ವಿಹಿತವಾಗಿರುವ ಕರ್ಮಗಳು.

**ಕರ್ಮವಿಭಾಗಗಳು:** ಕರ್ಮ ಶ್ರೌತ ಮತ್ತು ಸ್ಮಾರ್ತ ಎಂದು ಎರಡು ವಿಧ. ಕಲ್ಪಸೂತ್ರಾದಿ ಗಳಲ್ಲಿ ಹೇಳುವ ಕರ್ಮಗಳು ಶ್ರೌತ ಧರ್ಮಶಾಸ್ತ್ರವೆಂದು ಪರಿಗಣಿತವಾಗಿರುವ ಆಪಸ್ತಂಭ, ಗೌತಮ ಮತ್ತು ಆಶ್ವಲಾಯನಾದಿ ಮಹರ್ಷಿ ಪ್ರಣೀತವಾದ ಸ್ಮೃತಿಗಳಲ್ಲಿ ಹೇಳಿರುವ

ಕರ್ಮಗಳು ಸ್ಮಾರ್ತ. ಇವುಗಳಲ್ಲಿ ವಿಹಿತಕರ್ಮ ಮತ್ತು ನಿಷಿದ್ಧಕರ್ಮ ಎಂದು ಎರಡು ಬಗೆ. ಮಾಡಬೇಕು ಎಂದು ವಿಧಿರೂಪವಾಗಿ ಶ್ರುತಿ ಸ್ಮೃತಿಗಳಲ್ಲಿ ಹೇಳಿರುವುದು ವಿಹಿತಕರ್ಮ. ಸತ್ಯಂ ವದ, ಧರ್ಮಂ ಚರ–ಮುಂತಾದದ್ದು. ಮಾಡಬಾರದು ಎಂದು ಹೇಳಿರುವುದು ನಿಷಿದ್ಧ ಕರ್ಮ. ಉದಾ: ನ ಸುರಾಂಪಿಬೇತ್, ನಾನೃತಂ ವದೇತ್–ಮುಂತಾದ್ದು.

**ಕರ್ಮತ್ರಯ ಸ್ವರೂಪ:** ಮೀಮಾಂಸಕರು ಕರ್ಮವನ್ನು ನಿತ್ಯ, ನೈಮಿತ್ತಿಕ ಮತ್ತು ಕಾಮ್ಯ ಎಂದು ಮೂರು ಬಗೆಯಾಗಿ ವಿಂಗಡಿಸಿದ್ದಾರೆ. ಅವಶ್ಯ ಮಾಡಲೇ ಬೇಕಾದ ಕರ್ಮಗಳು. ನಿತ್ಯ. ಉದಾ: ಸಂಧ್ಯಾವಂದನ, ಶಿವಾರ್ಚನ, ಅಷ್ಟಕಾಶ್ರಾದ್ಧ, ಸಾಂವತ್ಸರಿಕ ಪಿತೃಶ್ರಾದ್ಧ, ಮುಂತಾದುವು. ಅನಿಯತವಾಗಿ ಮಾಡುವ ಕರ್ಮಗಳು ನೈಮಿತ್ತಿಕ, ಉದಾ: ಮಗ ಹುಟ್ಟಿದರೆ ಒಂದು ಇಷ್ಟಿಯನ್ನು (ಯಾಗ) ಮಾಡಬೇಕು. ನಿತ್ಯ ಮತ್ತು ನೈಮಿತ್ತಿಕ ಕರ್ಮಗಳನ್ನು ಮಾಡದಿದ್ದರೆ ಪ್ರತ್ಯವಾಯ (ಪಾಪ). ಮಾಡಿದರೆ ಕರ್ತವ್ಯವನ್ನು ಮಾಡಿದಂತಾಯಿತೆ ಹೊರತು ಅದಕ್ಕೆ ಬೇರೆ ಫಲವಿಲ್ಲ. ಯಾವುದಾದರೊಂದು ಕಾಮನೆ ಎಂದರೆ ಫಲೋದ್ದೇಶದಿಂದ ಮಾಡುವ ಕರ್ಮ ಕಾಮ್ಯ. ಉದಾ: ಪುತ್ರಕಾಮೇಷ್ಟಿ ಮುಂತಾದ್ದು. ಮಾಡಿದರೆ ಫಲವುಂಟು. ಮಾಡದಿದ್ದರೆ ದೋಷವಿಲ್ಲ. ಮತ್ತೊಂದು ವಿಶೇಷವೆಂದರೆ ನಿತ್ಯಕರ್ಮದಲ್ಲಿ ಪ್ರಧಾನ ಕರ್ಮವನ್ನು ಮಾಡಿ ಅಶಕ್ತಿಯಿಂದ ಅದರ ಅಂಗಕರ್ಮಗಳಿಗೆ ಅಕಸ್ಮಾತ್ ಲೋಪಬಂದರೂ ದೋಷವಿಲ್ಲ. ಕಾಮ್ಯ ಮಾತ್ರ ಹಾಗಲ್ಲ. ಇಲ್ಲಿ ಅದರ ಪ್ರತಿಯೊಂದು ಅಂಗವನ್ನೂ ಆಯಾ ಕಲ್ಪೋಕ್ತಕ್ರಮದಿಂದ ಮಾಡಲೇಬೇಕು. ಇಲ್ಲದಿದ್ದರೆ ಫಲ ದೊರೆಯುವುದಿಲ್ಲ.

ವೇದಾಂತದಲ್ಲಿ ಪುಣ್ಯಕರ್ಮ, ಪಾಪಕರ್ಮ ಮತ್ತು ಮಿಶ್ರಕರ್ಮ ಎಂದು ಕರ್ಮ ಮೂರು ಬಗೆಯಾಗಿದೆ. ಮನಸ್ಸು, ಮಾತು ಮತ್ತು ಮೈಗಳಿಂದ ಪರರಿಗೆ ಉಪಕಾರ ಮಾಡುವುದು ಪುಣ್ಯಕರ್ಮ. ದುಃಖವನ್ನು ಉಂಟುಮಾಡುವುದು ಪಾಪಕರ್ಮ. ಎರಡೂ ಬೆರಕೆಯಾಗಿದ್ದರೆ ಮಿಶ್ರವೆನಿಸುತ್ತದೆ. ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ (ಮಹಾಭಾರತ) ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ. ಕರ್ಮಮಾಡುವಲ್ಲಿ ಅಭಿಮಾನವಿರಬಾರದು, ಗೀತೆಯ ಫಲೋದ್ದೇಶದಿಂದ ಕರ್ಮ ಮಾಡಬಾರದೆಂದಿದೆ. ಮಾಡಿದೆನೆಂಬುದು ಮನದಲ್ಲಿ ಉಳಿದರೆ ಶಿವನ ಮಾಯೆ ಎಡಿಸಿ ಕಾಡುವುದು ಎಂದು ಶರಣರು ಹೇಳಿದ್ದಾರೆ. ನಿಷ್ಕಾಮಕರ್ಮ ಎಂದರೆ ಸ್ವಾರ್ಥಕ್ಕಾಗಿ ಅಲ್ಲದೆ ಪರಹಿತಕ್ಕಾಗಿ ಅಥವಾ ಕರ್ತವ್ಯದೃಷ್ಟಿಯಿಂದ ಮಾಡುವ ಕರ್ಮ. ಆಗ ಅದು ಕರ್ಮಯೋಗ ಎನಿಸುತ್ತದೆ. ಈ ಪುಣ್ಯಪಾಪಕರ್ಮಗಳು ಮಾನವನ ಸಂಚಿತ. ಪ್ರಾರಬ್ಧ ಮತ್ತು ಆಗಾಮಿ ಕರ್ಮಗಳಿಗೆ ಮೂಲ. ಮತ್ತೊಂದು ದೃಷ್ಟಿಯಿಂದ ಸಂಚಿತ, ಪ್ರಾರಬ್ಧ, ಅತೀತ ಮತ್ತು ಆಗಾಮಿ ಎಂದು ಕರ್ಮವನ್ನು ನಾಲ್ಕು ವಿಧವಾಗಿಯೂ ವಿಭಾಗಿಸುತ್ತಾರೆ.

ಮುಂದಿನ ಜನ್ಮಕ್ಕೆ ಕಾರಣವಾದ ಸ್ವರ್ಗ ಮೊದಲಾದ ಫಲದ ಉದ್ದೇಶದಿಂದ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳು ಸಂಚಿತ. ಬಹುಪ್ರಯಾಸದಿಂದ ಎಸಗಿದ ಶ್ರವಣ, ಕೀರ್ತನ, ಮನನ, ಪೂಜಾ–ಮೊದಲಾದುವುಗಳಿಂದ ಮೋಕ್ಷಸಾಧಕವೂ ವರ್ತಮಾನ ಶರೀರಕ್ಕೆ ಕಾರಣವೂ ಆದ. ಪೂರ್ವಜನ್ಮದಲ್ಲಿನ ಸುಕೃತ ಕರ್ಮಗಳು ಪ್ರಾರಬ್ಧಕರ್ಮಗಳು. ಬ್ರಹ್ಮಸಾಕ್ಷಾತ್ಕಾರವಾಗುವುದಕ್ಕೆ ಮೊದಲು ಪೂರ್ವಜನ್ಮದಲ್ಲಿ ಅಥವಾ ಜನ್ಮಾಂತರದಲ್ಲೂ ಬ್ರಹ್ಮಸಾಕ್ಷಾತ್ಕಾರದ ಉದ್ದೇಶದಿಂದ ಮಾಡಿದ ಕರ್ಮಗಳು ಅತೀತ ಕರ್ಮಗಳು. ಬ್ರಹ್ಮಸಾಕ್ಷಾತ್ಕಾರದ ತರುವಾಯ ಈ ಜನ್ಮದಲ್ಲಿ ಮಾಡಿದ ಕರ್ಮಗಳು ಆಗಾಮಿ ಕರ್ಮಗಳು.

ಬಾದರಾಯಣರು ತಮ್ಮ ಬ್ರಹ್ಮಶಾಸ್ತ್ರದ ಕೃತಾತ್ಯಯಾಧಿಕರಣದಲ್ಲಿ ಪುಣ್ಯಪಾಪ ಕರ್ಮಗಳು ಮಾನವನ ಜನ್ಮಧಾರಣೆಗೆ ಹೇಗೆ ಕಾರಣವೆಂಬುದನ್ನು ಚರ್ಚಿಸಿದ್ದಾರೆ. ಶ್ರುತಿಯಲ್ಲಿ ಪುಣ್ಯಕರ್ಮಿಗಳು ಸ್ವರ್ಗಸುಖವನ್ನು ಅನುಭವಿಸಿ ಉಳಿದ ಸಂಚಿತ ಕರ್ಮದ ಫಲವಾಗಿ ಉತ್ತಮ ಜನ್ಮಗಳನ್ನೂ ಪಾಪಕರ್ಮಿಗಳು ನರಕವಾಸದ ತರುವಾಯ ಉಳಿದ ಸಂಚಿತಕರ್ಮದಿಂದ ನೀಚ ಜನ್ಮಗಳನ್ನೂ ಧರಿಸುವರು ಎಂದು ಹೇಳಿದೆ. ಹೀಗೆ ಭೂಲೋಕದಲ್ಲಿ ಜನಿಸಿದ ಜೀವಿಗಳು ಪ್ರಾರಬ್ಧಕರ್ಮದ ಫಲವಾಗಿ ಹೊಂದಿದ ಈ ಶರೀರದಲ್ಲಿ ಅದರ ಸುಖದುಃಖಗಳನ್ನು ಅನುಭವಿಸಿಯೇ ಕಳೆಯಬೇಕು. ಉಳಿದ ಸಂಚಿತ ಮತ್ತು ಆಗಾಮಿ ಕರ್ಮಗಳು ಬ್ರಹ್ಮಜ್ಞಾನದಿಂದ ನಾಶಹೊಂದುತ್ತವೆ.

ಬ್ರಹ್ಮಜ್ಞಾನವಾದೊಡನೆಯೇ ಅದರ ಮಹಿಮೆಯಿಂದ ಮುಂದೆ ಬರುವ ಆಗಾಮಿ ಪಾಪಗಳು ಅವನನ್ನು ಮುಟ್ಟುವುದಿಲ್ಲ. ಹಿಂದೆ ಮಾಡಿದ ಸಂಚಿತ ಕರ್ಮ ನಾಶವಾಗುತ್ತದೆ. ಶ್ರುತಿ, ಸ್ಮೃತಿ ವಾಕ್ಯಗಳು ಈ ವಿಷಯವನ್ನು ಸಮರ್ಥಿಸುತ್ತವೆ. ಕೆಲವರು ಪ್ರಾರಬ್ಧಕರ್ಮವೂ ತತ್ತ್ವ (ಬ್ರಹ್ಮ)ಜ್ಞಾನದಿಂದ ನಷ್ಟವಾಗುತ್ತದೆ. ಅದೇ ಬ್ರಹ್ಮಜ್ಞಾನದ ಹಿರಿಮೆ–ಎಂದು ಹೇಳುತ್ತಾರೆ. (ಎಂ.ಜಿ.ಎನ್.)

**ಕರ್ಮಯೋಗ :** ಮಾನವ ಶಾಶ್ವತ ಸುಖಶಾಂತಿಗಳ ಅನ್ವೇಷಣೆಯ ಕಾರ್ಯದಲ್ಲಿ ಬಾಳಿನ ಕೆಲವು ಮೂಲತತ್ತ್ವಗಳನ್ನು ಅರಿತುಕೊಂಡು ಅವುಗಳ ಆಧಾರದ ಮೇಲೆ ಕೆಲವು ಸಿದ್ಧಾಂತಗಳನ್ನು ರೂಪಿಸಿಕೊಂಡಿದ್ದಾನೆ. ಭಾರತೀಯ ಧರ್ಮಗಳಲ್ಲಿ ಕಂಡುಬರುವ ಕರ್ಮವಾದ ಈ ರೀತಿಯದು. ಕರ್ಮದಂತೆ ಫಲ ಎಂಬ ಅದರ ನಿಯಮವನ್ನು ವಿಶಾಲವಾಗಿ ಅನ್ವಯಿಸಿಕೊಂಡು, ಬಾಳಿನ ಸಮಸ್ಯೆಗಳನ್ನು ಪರಿಹರಿಸಲು ಹೊರಟವರಲ್ಲಿ ಎರಡು ಪಂಥಗಳಾದುವು ಇಷ್ಟವಾದ ಫಲಗಳಲ್ಲಿಯೇ ಹೆಚ್ಚು ದೃಷ್ಟಿಯನ್ನಿಟ್ಟು ತತ್ಪ್ರಾಪ್ತಿಗಾಗಿ ತಕ್ಕ ಕರ್ಮಗಳ ಆಚರಣೆಯಲ್ಲಿಯೇ ತಾತ್ಪರ್ಯ ಕಂಡವರು. ಸ್ವರ್ಗಾದಿ ಭೋಗಗಳೇ ಅಂತಿಮ ಗುರಿ ಎಂದರಿತು. ಅದರ ಸಾಧನೆಗಾಗಿ ಯಾಗ ಯಜ್ಞಾದಿ ಕರ್ಮಗಳಲ್ಲಿಯೇ ನಿರತರಾದ ವೈದಿಕ ಕರ್ಮ ಮಾರ್ಗಿಗಳು ಈ ಸಂಪ್ರದಾಯದವರು. ಅನಿಷ್ಟ ಫಲಗಳಲ್ಲಿಯೇ ಹೆಚ್ಚು ದೃಷ್ಟಿಯನ್ನಿಟ್ಟು ಕರ್ಮಗಳಿಂದಲೇ ಬಂಧನ ಆದ್ದರಿಂದ ಅವು ತ್ಯಾಜ್ಯವೆಂದು ಇತ್ಯರ್ಥ ಮಾಡಿ, ನೈಷ್ಕರ್ಮ್ಯವೇ ಜೀವನದ ಗುರಿಯೆಂದೂ ಕರ್ಮಸಂನ್ಯಾಸವೇ ಮುಕ್ತಿಗೆ ಹಾದಿಯೆಂದೂ ವಾದಿಸಿದವರು ಕೆಲವರು. ಸಮಗ್ರ ಜೀವನಕಲೆಯ ಶಾಸ್ತ್ರವಾದ ಭಗವದ್‌ಗೀತೆಯಲ್ಲಿ ಪರಸ್ಪರ ವಿರೋಧಿಗಳೆಂದು ತೋರುವ ಈ ಕರ್ಮಾಚರಣೆ ಮತ್ತು ಕರ್ಮಸಂನ್ಯಾಸಗಳನ್ನು ಸಮನ್ವಯಗೊಳಿಸುವ ಪ್ರಯತ್ನ ನಡೆದಿದೆ. ಅದರ ಫಲವೇ ಕರ್ಮಯೋಗವೆಂಬ ಗೀತಾಭಾಗ. ಇದು ಆ ಉದ್ಗ್ರಂಥದ ಒಂದು ಅಪೂರ್ವ ವೈಶಿಷ್ಟ್ಯ.

ಭಗವದ್ದರ್ಶನ, ಪರಮಾತ್ಮಸಾಕ್ಷಾತ್ಕಾರ, ಬ್ರಹ್ಮನಿರ್ವಾಣ ಇತ್ಯಾದಿ ವಿವಿಧ ರೀತಿಯಲ್ಲಿ ನಿರ್ದೇಶಿಸಲ್ಪಟ್ಟ ಪರಿಪೂರ್ಣತೆಯ ಲಾಭವೇ ಜೀವನದ ಮುಖ್ಯ ಗುರಿ; ಅದೇ ಯೋಗ. ಕರ್ಮದ ಮೂಲಕ ಇದನ್ನು ಸಾಧಿಸುವುದೇ ಕರ್ಮಯೋಗ. ಸ್ವಜನಮೋಹದಿಂದ, ಪಾಪಭೀತಿಯಿಂದ, ಕರ್ತವ್ಯಭ್ರಷ್ಟನಾಗಿ ಕರ್ಮಸಂನ್ಯಾಸವೇ ಶ್ರೇಯಸ್ಕರವೆಂದು ಭಾವಿಸಿದ್ದ ಅರ್ಜುನನಿಗೆ, ತದ್ವಾರಾ ಮಾನವ ಕುಲಕ್ಕೆ, ಕರ್ಮದ ನಿಜಸ್ವರೂಪ, ಪ್ರಯೋಜನಗಳನ್ನು ತಿಳಿಸಲು ಹೊರಟ ಬೋಧನೆಯೇ ಕರ್ಮಯೋಗ.

ಕರ್ಮವನ್ನು ಕೈಗೊಳ್ಳಲೇಬೇಕೆ, ಯಾವ ಯಾವ ಕರ್ಮಗಳನ್ನು, ಏಕೆ, ಹೇಗೆ, ಕರ್ಮತ್ಯಾಗ ಸಾಧ್ಯವೇ, ಎಷ್ಟರಮಟ್ಟಿಗೆ, ಈ ರೀತಿಯ ವಿಚಾರಗಳ ವಿಮರ್ಶೆ ಮತ್ತು ತತ್ಫಲ ನಿಶ್ಚಿತಾಭಿಪ್ರಾಯಗಳನ್ನು ಗೀತೆಯಲ್ಲಿ ವಿಶೇಷವಾಗಿ 2, 3, 4, 5 ಮತ್ತು 18ನೆಯ ಅಧ್ಯಾಯಗಳಲ್ಲಿ ಕಾಣುತ್ತೇವೆ.

ದೇಹಧಾರಿಯಾದ, ದೇಹಬುದ್ಧಿಯುಳ್ಳ, ಜೀವಿಗೆ ಕರ್ಮ ಅನಿವಾರ್ಯ. ಕರ್ಮ ಉತ್ಪಾದಕ ಪ್ರಕೃತಿಗೆ ಅಧೀನನಾದ ಆತ ಅವಶ್ಯವಾಗಿ ಒಂದಲ್ಲ ಒಂದು ಕರ್ಮದಲ್ಲಿ ತೊಡಗಿಯೇ ಇರುತ್ತಾನೆ. ಕೇವಲ ಕರ್ಮೇಂದ್ರಿಯಗಳ ನಿರೋಧವೇ ಅಕರ್ಮವಲ್ಲ. ಅಂತರಂಗದಲ್ಲಿ ವಿಷಯಚಿಂತನಾರೂಪದ ಕ್ರಿಯೆ ನಡೆಯುತ್ತಲೇ ಇರಬಹುದು. ಕೇವಲ ಬಾಹ್ಯ ನಿರೋಧದಿಂದ ಆಧ್ಯಾತ್ಮಿಕ ಲಾಭವಿಲ್ಲ. ಇದು ಮಿಥ್ಯಾಚಾರ ಮಾತ್ರ, ಪರಿಣಾಮದಲ್ಲಿ ಅನರ್ಥಕಾರಿ. ಇದಕ್ಕೆ ಬದಲಾಗಿ ಅಂತರಂಗದಲ್ಲಿ ಸಂಯಮವಿದ್ದು, ಕರ್ಮೇಂದ್ರಿಯಗಳಿಂದ ಅನಾಸಕ್ತ ರೀತಿಯಲ್ಲಿ ಕಾರ್ಯವಂತನಾಗುವುದೇ ಶ್ರೇಯಸ್ಕರ; ಅದೇ ಕರ್ಮಯೋಗ, ನಿಯತವಾದ ಕರ್ಮವನ್ನು ಮಾಡಲೇಬೇಕು. ಅಕರ್ಮಕ್ಕಿಂತ ಕರ್ಮ ಶ್ರೇಷ್ಠ. ಕರ್ಮವಿಲ್ಲದೇ ಜೀವನಯಾತ್ರೆ ಸಾಗದು. ಇನ್ನು ಪರಮಾರ್ಥಸಾಧನೆಯಲ್ಲಿ ?

ವಾಸ್ತವವಾಗಿ ಬಂಧಿಸುವುದು ಕರ್ಮವಲ್ಲ–ನಾನು ಇದರ ಕರ್ತ, ಇದರ ಫಲ ನನಗೆ ಎಂಬ ಆಸಕ್ತಿ ಮಾತ್ರ. ತುಚ್ಛ ಸ್ವಾರ್ಥಭಾವನೆ ಬಂಧನಕ್ಕೆ ಕಾರಣವಾದರೆ, ಉಚ್ಚ ಪರಾರ್ಥ, ಪರಮಾರ್ಥಭಾವನೆ ಮುಕ್ತಿಗೆ ಸಾಧನವಾಗುತ್ತದೆ; ಕರ್ಮವನ್ನು ಯಜ್ಞವನ್ನಾಗಿ ಪರಿವರ್ತಿಸುತ್ತದೆ. ಸ್ವರ್ಗಾದಿಭೋಗ ದೃಷ್ಟಿಯಿಂದ, ಇಂದ್ರಾದಿ ದೇವತೆಗಳ ತುಷ್ಟಿಗಾಗಿ, ಅಗ್ನಿಗೆ ಆಹುತಿ ಅರ್ಪಿಸುವ ಕರ್ಮ ಮಾತ್ರ ಯಜ್ಞವಲ್ಲ. ನಿಸ್ವಾರ್ಥ, ನಿಸ್ಸಂಗ, ದೈವಸಮರ್ಪಿತ ಕರ್ಮವೇ ನಿಜವಾದ ಯಜ್ಞ. ಇಂಥ ಯಜ್ಞ ಎಂದಾದರೊಮ್ಮೆ ಮಾಡುವ ನೈಮಿತ್ತಿಕ ಕರ್ಮವಲ್ಲ. ಅದು ಜೀವನದ ಒಂದು ನಿತ್ಯ ಅಂಗ, ಸೃಷ್ಟಿಧರ್ಮದ ಮೂಲ ತತ್ತ್ವ, ಮಾನವಕುಲದ ಭುಕ್ತಿಮುಕ್ತಿಗಳಿಗೆ ದ್ವಾರ. ಮಾನವನ ಯಾವುದೇ ಕ್ರಿಯೆಯನ್ನಾಗಲಿ, ಶಕ್ತಿಯನ್ನಾಗಲಿ ನೀಚ, ಅಲ್ಪ ಪ್ರವೃತ್ತಿಗೊಳಗಾಗದಂತೆ ನಿರೋಧಿಸಿ, ಉಚ್ಚ ಉತ್ತಮ ಧ್ಯೇಯಕ್ಕೆ ಸಮರ್ಪಿಸುವುದೇ ಯಜ್ಞ. ಕರ್ಮವೇ ಮೂಲವಾದ ಈ ರೀತಿಯ ವಿವಿಧ ಯಜ್ಞಗಳು ವೇದಗಳಲ್ಲಿ ನಿರೂಪಿತವಾಗಿವೆ. ಈ ರೀತಿಯ ಯಜ್ಞರೂಪ ಕರ್ಮದಿಂದ ಸರ್ವ ಪಾಪವಿಮೋಚನ; ಸ್ವಾರ್ಥಕರ್ಮದಿಂದ ಕೇವಲ ಪಾಪಭೋಜನ. ಇಂಥ ಯಜ್ಞಾಚರಣೆಯಿಂದ ಚಿತ್ತಶುದ್ಧಿಯಾಗಿ, ಜ್ಞಾನಾಗ್ನಿ ಬೆಳಗಿ, ಸಕಲ ಪಾಪಗಳೂ ಭಸ್ಮವಾಗಿ, ಮುಕ್ತಿಯ ದ್ವಾರ ತೆರೆಯುತ್ತದೆ. ಈ ಯಜ್ಞ ವಿಧಾನದಿಂದ ಮಾಡಿದ ಕರ್ಮಫಲ ಅಮೃತವಾಗಿ ಪರಿಣಮಿಸಿ, ಅದನ್ನು ಭುಜಿಸುವ ಮಾನವನನ್ನು ಸನಾತನ ಬ್ರಹ್ಮನೆಡೆ ಒಯ್ಯುತ್ತದೆ. ಯಜ್ಞರಹಿತನಿಗೆ ಇಹದಲ್ಲೂ ಸ್ಥಾನವಿಲ್ಲವೆಂದ ಮೇಲೆ ಪರದ ಪ್ರಶ್ನೆಯೇ ಏಳದು.

ಫಲಾಸಕ್ತಿಯೇ ಬಂಧನಕಾರಿ, ಕೇವಲ (ಅಲ್ಪ) ಫಲಕ್ಕಾಗಿ ಕರ್ಮ ಮಾಡತಕ್ಕವರು ಕೃಪಣರು. ಕರ್ಮಫಲದಲ್ಲಿ ಆಸಕ್ತಿ ತೊರೆದ ಬುದ್ಧಿವಂತರೇ ಜನ್ಮಬಂಧದಿಂದ ಮುಕ್ತರಾಗಿ ಪರಮಸುಖಿಗಳಾಗುತ್ತಾರೆ. ಕೈಗೊಂಡ ಕರ್ಮದ ಸಿದ್ಧಿ ಅಸಿದ್ಧಿಗಳಲ್ಲಿ ನಿರ್ವಿಕಾರತೆ, ಸಮತಾಭಾವಗಳೇ ಯೋಗ. ಫಲಾಸಕ್ತಿಯಿಲ್ಲದ, ಶ್ರದ್ಧೆ ಮತ್ತು ನಿಷ್ಠಾಯುತ ಆಚರಣೆಯಿಂದ, ಬಂಧಿಸಬಹುದಾದ ಕರ್ಮವೂ ಮುಕ್ತಿಗೆ, ಪರಮಶ್ರೇಯಸ್ಸಿಗೆ, ಸಹಕಾರಿಯಾಗುತ್ತದೆ. ಈ ರೀತಿಯ ಕರ್ಮಕುಶಲತೆಯೇ ಯೋಗ.

ಎಲ್ಲರಿಗೂ ಒಂದಲ್ಲ ಒಂದು ರೀತಿಯ ಕರ್ಮ ಅನಿವಾರ್ಯ. ಜನಕಾದಿ ಮಹಾ ವ್ಯಕ್ತಿಗಳೂ ಕರ್ಮದಿಂದಲೇ ಸಂಸಿದ್ಧಿ ಪಡೆದರು. ತಾನು ಮುಕ್ತನಾದರೂ ಲೋಕ ಹಿತದ ದೃಷ್ಟಿಯಿಂದಲಾದರೂ ವ್ಯಕ್ತಿ ಕರ್ಮವನ್ನು ಮಾಡಲೇಬೇಕು. ಆಪ್ತಕಾಮನಾದ ಕೃತಕೃತ್ಯನಿಗೆ ಆನಂದ ಸುಖಗಳೆಲ್ಲ ತನ್ನಲ್ಲಿಯೇ ಇದ್ದು, ಬಾಹ್ಯ ಕರ್ಮದ ಅವಲಂಬನೆಯ ಅಗತ್ಯವಿಲ್ಲದಿದ್ದರೂ ಪ್ರಕೃತಿಬದ್ಧ, ಬಾಹ್ಯಾರ್ಥ ಜೀವಿಗಳ ಹಿತದ ದೃಷ್ಟಿಯಿಂದ, ಕರ್ಮದ ತ್ಯಾಗವಾಗಲೀ ಖಂಡನೆಯಾಗಲೀ ಆತನಿಗೆ ಸಲ್ಲದು. ಜಗತ್ತಿನಲ್ಲಿ ಶ್ರೇಷ್ಠರೆನಿಸಿಕೊಂಡವರ ಆಚರಣೆಯೇ ಇತರರಿಗೆ ಮೇಲ್ಪಂಕ್ತಿಯಾಗುತ್ತದೆ. ಆದ್ದರಿಂದ ಜ್ಞಾನಿ ತನ್ನ ಜೀವನರೀತಿಯಿಂದ ಇತರರನ್ನು ತಾಮಸಿಕ ನಿಷ್ಕ್ರಿಯರಾಗುವಂತೆ ಮಾಡುವುದು ನ್ಯಾಯವಲ್ಲ. ಕರ್ಮಾಸಕ್ತ ಮಂದಮತಿಗಳಿಗೆ ಆತ ಮಾರ್ಗದರ್ಶಿಯಾಗ ಬೇಕಾದುದು, ಅನಾಸಕ್ತ ಕರ್ಮಾಚರಣೆಯಿಂದ ಹೊರತು ನಿಷ್ಕ್ರಿಯೆಯಿಂದಲ್ಲ. ಸಾಕ್ಷಾತ್ ಭಗವಂತನೇ ಈ ರೀತಿಯ ಲೋಕಸಂಗ್ರಹಾರ್ಥಕ್ರಮಕ್ಕೆ ಪರಮ ನಿದರ್ಶನ. ಪರಮ ಕರ್ಮಯೋಗಿಯೇ ಆತ. ತನಗೆ ಯಾವ ಸ್ವಾರ್ಥ ಲಾಭ ಉದ್ದೇಶಗಳಿಲ್ಲದಿದ್ದರೂ ಲೋಕ ಕಲ್ಯಾಣದ ದೃಷ್ಟಿಯಿಂದ, ಕ್ಷಣಮಾತ್ರವೂ ಬಿಡುವಿಲ್ಲದೇ ಸೃಷ್ಟ್ಯಾದಿ ಕಾರ್ಯಗಳಲ್ಲಿ ನಿರತನಾಗಿದ್ದಾನೆ. ಅನಂತಕರ್ಮಿಯಾದರೂ ಫಲಾಸಕ್ತಿಯಿಲ್ಲದ ಆತನಿಗೆ ಕರ್ಮದ ಲೇಪವಿಲ್ಲ. ಆತನ ಮೇಲ್ಪಂಕ್ತಿಯನ್ನೇ ಅನುಸರಿಸಿ ಅನೇಕ ಮುಮುಕ್ಷುಗಳು ಕರ್ಮಯೋಗದಲ್ಲಿ ತೊಡಗಿದರು. ಇತರ ಮಾನವರಿಗೂ ಅದು ಶ್ರೇಯಸ್ಕರಮಾರ್ಗ.

ಕೇವಲ ಬಾಹ್ಯದೃಷ್ಟಿಯಿಂದ ಕರ್ಮಸ್ವರೂಪವನ್ನು ನಿರ್ಧರಿಸುವುದು ಕಷ್ಟಸಾಧ್ಯ. ಕರ್ಮಗತಿ ಅತಿಗಹನ. ಕರ್ಮಗಳು ವಿವಿಧ. ಶಾಸ್ತ್ರನಿಷಿದ್ಧವಾದ ವಿಕರ್ಮಗಳೂ ವಸ್ತ್ರವಿಹಿತವಾದರೂ ಬಂಧಿಸುವ ಕಾಮ್ಯಕರ್ಮಗಳೂ ಅನಾಸಕ್ತಾಚರಣೆಯಿಂದ ಮುಕ್ತಿಗೆ ಸೋಪಾನವಾಗುವ ನಿತ್ಯ ನೈಮಿತ್ತಿಕ ಕರ್ಮಗಳೂ ಮುಕ್ತನ ಲೋಕಸಂಗ್ರಹಾರ್ಥ ಕರ್ಮಗಳೂ–ಎಲ್ಲವೂ ಕರ್ಮಗಳೇ. ಕರ್ಮವೆಂದು ತೋರಿದರೂ ವಾಸ್ತವವಾಗಿ ವಿಮೋಚಕವಾದ ಅಕರ್ಮವೇ ಆದವು ಕೆಲವು. ಅಕರ್ಮವೆಂದು ತೋರಿದರೂ ವಾಸ್ತವವಾಗಿ ಬಂಧಕವಾದ ಕರ್ಮವೇ ಆದವು ಕೆಲವು. ಸಂಗಮುಕ್ತನಾದವ ಎಂಥ ಕರ್ಮದಲ್ಲೇ ತೊಡಗಿದರೂ ಅವೆಲ್ಲ ಆತನ ಪಾಲಿಗೆ ಅಕರ್ಮವೇ. ಯಜ್ಞದೃಷ್ಟಿಯಿಂದ ಮಾಡಿದ ಆತನ ಕರ್ಮಗಳೆಲ್ಲವೂ ಕರಗಿ ಹೋಗುತ್ತವೆ (ಅಧ್ಯಾಯ 4).

ಫಲಾಸಕ್ತಿಯನ್ನೂ ತಾನು ಕರ್ತಾ ಎಂಬ ಅಹಂಕಾರವನ್ನೂ ಬಿಟ್ಟು, ಕರ್ಮಬಂಧನದಿಂದ ಪಾರಾಗಲು, ಜ್ಞಾನದ ವಿಚಾರಮಾರ್ಗ ಮತ್ತು ಭಕ್ತಿಯ ಸಮರ್ಪಣಮಾರ್ಗಗಳೆರಡೂ ಸಹಕಾರಿಯಾಗುತ್ತವೆ.

ಜ್ಞಾನಮಾರ್ಗದಲ್ಲಿ ಆತ್ಮ ಅಕರ್ತ. ಪ್ರಕೃತಿಗತವಾದ ಸತ್ತ್ವ, ರಜಸ್, ತಮೋಗುಣಗಳಿಂದಲೇ ಕರ್ಮದ ಉತ್ಪತ್ತಿ ಮತ್ತು ಸ್ಥಿತಿಗಳು. ತಾನು ಕರ್ತನೆಂದು ಭಾವಿಸಿ ಕೊಳ್ಳುವವನು ಅಹಂಕಾರವಿಮೂಢನಾದ ಅಜ್ಞಾನಿ ಮಾತ್ರ. ಕರ್ಮವೆಲ್ಲ ಗುಣಗಳ ಲೀಲೆಯೆಂದರಿತ ಜ್ಞಾನಿ ಅವಕ್ಕೆ ಅಂಟಿಕೊಳ್ಳುವುದಿಲ್ಲ. ಆತ ಕಾಯೇನ ವಾಚಾ ಮನಸಾ ಕರ್ಮಗಳನ್ನು ನಡೆಸುತ್ತಿದ್ದರೂ ಕರ್ಮಲೇಪವಿಲ್ಲದೆ. ಆತ್ಮಶುದ್ಧಿಯನ್ನು ಸಾಧಿಸುತ್ತಿರುತ್ತಾನೆ. ಇಂಥ ಯುಕ್ತ ಶಾಶ್ವತ ಶಾಂತಿಯನ್ನು ಪಡೆಯುತ್ತಾನೆ; ಫಲ ಕಾಮಿಯಾದ ಅಯುಕ್ತ ಬದ್ಧನಾಗುತ್ತಾನೆ (ಅಧ್ಯಾಯ 4).

ಜ್ಞಾನಿಗಳು ನುಡಿಯುವ ನೈಷ್ಕರ್ಮ್ಯ ಸ್ಥಿತಿ ಸಾಧನೆಯ ಅಂತಿಮ ಗುರಿಯೇ ಹೊರತು ಸಾಧನಾಮಾರ್ಗವಲ್ಲ. ಕರ್ಮವನ್ನಾರಂಭಿಸದೆಯೇ ನೈಷ್ಕರ್ಮ್ಯ ಸ್ಥಿತಿಲಭಿಸದು. ಕೇವಲ ಕರ್ಮಸಂನ್ಯಾಸದಿಂದ, ಕರ್ಮತ್ಯಾಗದಿಂದ ಸಿದ್ಧಿ ದೊರೆಯದು. ತಾನು ಕರ್ತನಲ್ಲ, ತನಗೆ ಕರ್ಮವಿಲ್ಲವೆಂಬ ನಿಶ್ಚಿತ ಭಾವನೆಯೇ ಕರ್ಮಸಂನ್ಯಾಸ. ಕರ್ಮಯೋಗ ಮಾರ್ಗವೇ ಶ್ರೇಷ್ಠ ಯೋಗವಿಲ್ಲದೇ ಸಂನ್ಯಾಸ ಅಲಭ್ಯ. ಕರ್ಮಫಲವನ್ನಾಶ್ರಯಿಸಿದೆ, ನಿಯತ ಕರ್ಮಗಳನ್ನು ನಡೆಸುವವನೇ ನಿಜವಾದ ಯೋಗಿ (III 4, V, 2, 6, 8, 9, VI,I,) ಆತನೆ ಸಂನ್ಯಾಸಿ; ವಿಹಿತ ಕರ್ಮವನ್ನು ಬಿಟ್ಟವನಲ್ಲ (ಅಧ್ಯಾಯ 3,4,6).

ದೇಹ ಧರಿಸುವವರೆಗೆ ಅಶೇಷ ಕರ್ಮತ್ಯಾಗ ಸಾಧ್ಯವೇ ಇಲ್ಲ. ಆದ್ದರಿಂದ ತ್ಯಾಗಿಯೆಂದರೆ ಕರ್ಮಫಲತ್ಯಾಗಿಯೇ. ಕಾಮ್ಯಕರ್ಮಗಳ ತ್ಯಾಗ ಶಾಸ್ತ್ರಾನುಮತವಾದರೂ ಯಜ್ಞ, ದಾನ, ತಪಃಕರ್ಮಗಳು ಯಾರಿಗೂ ತ್ಯಾಜ್ಯವಲ್ಲ. ಆದರೆ ಅವುಗಳನ್ನೂ ನಿಸ್ಸಂಗವಾಗಿ ಫಲಾಸಕ್ತಿಯಿಲ್ಲದೆ ಆಚರಿಸಬೇಕು. ಇದು ಗೀತೆಯ ನಿಶ್ಚಿತ ಅಭಿಪ್ರಾಯ. ಕರ್ಮದಿಂದ ಉದ್ಭವಿಸುವ ಇಷ್ಟ ಅನಿಷ್ಟ ಮಿಶ್ರಫಲವಾವುದರ ಲೇಪವೂ ತ್ಯಾಗಿಗೆ ಇಲ್ಲ. ಅವು ಅತ್ಯಾಗಿಗೆ ಮಾತ್ರ (ಅದ್ಯಾಯ 18).

ಮತ್ತೊಂದು ದೃಷ್ಟಿಯಿಂದ ಪರಿಶೀಲಿಸಿದರೆ, ಕರ್ಮಸ್ಥಾನ, ಕರ್ತ, ಕರಣ, ಕ್ರಿಯಾವಿಧಾನ ಮತ್ತು ಅದೃಷ್ಟ (ದೈವ)–ಇವು ಐದು ಕಾರಕಗಳೇ ಹೊರತು ಕೇವಲ ಆತ್ಮನಲ್ಲ. ಆದ್ದರಿಂದಲೂ ಕರ್ತೃತ್ವಾಭಿಮಾನ ಸಲ್ಲದು. ಈ ರೀತಿಯ ಪರಿಪಕ್ವ ದೃಷ್ಟಿಯಿಂದ ಅಹಂಕಾರ ಬುದ್ಧಿರಹಿತನಾದವ ಏನನ್ನೇ ಮಾಡಿದರೂ ಈ ಲೋಕಗಳನ್ನೇ ಸಂಹರಿಸಿದರೂ ಬಂಧನಕ್ಕೆ ಒಳಗಾಗುವುದಿಲ್ಲ (ಅಧ್ಯಾಯ 18). ಭಕ್ತಿಮಾರ್ಗದಲ್ಲಿ, ಸಕಲ ಕರ್ಮಗಳಿಗೂ ಭಗವಂತನೇ ಮೂಲ, ಮಧ್ಯ, ಫಲ; ಸಕಲ ಯಜ್ಞಗಳ ಕರ್ತ, ಭೋಕ್ತಾ ಮತ್ತು ಪ್ರಭುವೂ ಆತನೇ. ಕರ್ಮೋತ್ಪಾದಕ ಪ್ರಕೃತಿಗೆ ಶಕ್ತಿ ಬರುವುದೂ ಅವನಿಂದಲೇ. ಆದ್ದರಿಂದ ನಮ್ಮ ಲೌಕಿಕ ಧಾರ್ಮಿಕ ಎಲ್ಲ ಕರ್ಮಗಳನ್ನೂ ಆತನಿಗೆ ಸಮರ್ಪಣೆಯಾಗುವಂತೆ ಮಾಡುವುದೇ ಪರಮೋಪಾಯ. ಅದೇ ಶುಭಾಶುಭ ಫಲಗಳಿಗೆ ಒಳಗಾಗದೇ ಕರ್ಮಬಂಧನದಿಂದ ಪಾರಾಗುವ ಮಾರ್ಗ (ಅಧ್ಯಾಯ 4,5,9,12).

ಇಂಥ ಕರ್ಮಯೋಗಿಗೆ ಮಾಡಬೇಕಾದ ಕರ್ಮದಲ್ಲಿ ಉಚ್ಚ ನೀಚ ಭಾವನೆಯಾಗಲೀ ರಾಗದದ್ವೇಷವಾಗಲೀ ಇಲ್ಲ. ತನ್ನ ಪಾಲಿಗೆ ಬಂದ ಸ್ವಧರ್ಮಾನುಗುಣ ಕರ್ಮವನ್ನು ಆತ ನಿರಂಹಕಾರ ಭಾವನೆಯಿಂದ ಮಾತ್ರವಲ್ಲದೆ ಧೃತಿ ಉತ್ಸಾಹಗಳಿಂದಲೂ ನಡೆಸುತ್ತಾನೆ. ಸ್ವಭಾವ ನಿಯತವಾದ ಅನಿವಾರ್ಯ ಸ್ವಕರ್ಮವನ್ನೇ ಭಗವಂತನ ಆರಾಧನೆಯ ರೂಪದಲ್ಲಿ, ಶ್ರದ್ಧೆಯಿಂದ, ಆಚರಿಸುವುದೇ ಸಂಸಿದ್ಧಿ ಲಾಭಕ್ಕೆ ಉಪಾಯ (ಅಧ್ಯಾಯ 18).

ಸ್ವಧರ್ಮ, ಸ್ವಕರ್ಮಾಚರಣೆಯಲ್ಲಿ ಸಾಧಕನಿಗೆ ಯಾವ ರೀತಿಯ ಪಾಪಭೀತಿ ಯಾಗಲೀ ದೌರ್ಬಲ್ಯ ಭಾವನೆಗಳಾಗಲೀ'ಲ್ಲದು. ಎಲ್ಲವನ್ನೂ ಮಾಡಿಸುವಾತ ಭಗವಂತ. ಮಾನವ ಆತನ ನಿಮಿತ್ತ ಮಾತ್ರನಾದರೆ ಸಾಕು (ಅಧ್ಯಾಯ 2,9,18).

ಈ ರೀತಿಯಾಗಿ ಮಾನವನನ್ನು ಪರಮ ಶ್ರೇಯಸ್ಸಿನ ಪ್ರಾಪ್ತಿಗೆ ಅಣಿಗೊಳಿಸಲು ಅನಿವಾರ್ಯ ಕರ್ಮವೇ ಮುಕ್ತಿಗೆ ಸೋಪಾನವಾಗುವಂತೆ, ಗೀತೆ ಕರ್ಮಮಾರ್ಗವನ್ನು ನಿರೂಪಿಸಿದೆ. ಕರ್ಮಗಳ ಆಚರಣೆ ಚಿತ್ತಶುದ್ಧಿಗಾಗಿ, ಭಗವತ್ಪ್ರೀತಿಗಾಗಿ ಹೊರತು, ಅವುಗಳ ಅಲ್ಪ ಫಲಗಳಿಗಾಗಿ ಅಲ್ಲ. ಕರ್ಮಕ್ಕೆ ಮಾತ್ರ ಅಧಿಕಾರ, ಫಲಕ್ಕಲ್ಲ. ಆದರೆ ಫಲವೇ ಇಲ್ಲವೆಂದಲ್ಲ. ಯೋಗ್ಯಕರ್ಮಾನುಷ್ಠಾನದಿಂದ ಅಮೂಲ್ಯ ಫಲಗಳಾದ ಏಕಾಗ್ರಬುದ್ಧಿ, ಚಿತ್ತಪ್ರಸನ್ನತೆ ಮತ್ತು ಪರಮ ಸುಖಶಾಂತಿಗಳು ಲಭಿಸುತ್ತವೆ.

ಯುಧ್ಯಸ್ವ ವಿಗತ ಜ್ವರಃ; ಅಸಕ್ತೋಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ–ಇದು ಕೃಷ್ಣ ಅರ್ಜುನನಿಗೆ ಬೋಧಿಸಿದ ಕರ್ಮಯೋಗದ ತಿರುಳು.

'ಶುಷ್ಕ ಕರ್ಮಿಯಾಗಬೇಡ. ಅಲ್ಪ ಫಲಗಳಿಗಾಗಿ ಆಸೆ ಪಟ್ಟು, ಕರ್ಮದಲ್ಲಿ ತೊಡಗಿ, ತೊಳಲಬೇಡ. ಆದರೆ ತಪ್ಪು ತಿಳಿವಳಿಕೆಯಿಂದ, ತಾಮಸ ಭಾವನೆಯಿಂದ, ಕರ್ಮವನ್ನು ತ್ಯಜಿಸಲೂ ಬೇಡ. ಜೀವನ ಸಂಗ್ರಾಮದ ಎಲ್ಲ ಕರ್ತವ್ಯಗಳನ್ನೂ ವೀರನಂತೆ ನಿರ್ವಹಿಸು. ಆದರೆ ಅಹಂಕಾರ, ಕಾತರಗಳನ್ನು ಬಿಡು. ಸರ್ವಾಂತರ್ಯಾಮಿಯೂ ಶಕ್ತಿಮೂಲನೂ ಆದ ಪರಮಾತ್ಮನಲ್ಲಿ ಸಕಲ ಕರ್ಮಗಳನ್ನೂ ಸಮರ್ಪಿಸಿ, ವ್ಯರ್ಥ ಆಸೆ ಅಭಿಮಾನಗಳನ್ನೂ ತೋರೆದು, ಶಾಂತನಾಗಿ ಹೋರಾಡು. ಅಸಕ್ತ ಕರ್ಮಾಚರಣೆಯೇ ಪರಮ ಪದಕ್ಕೆ ಮೆಟ್ಟಿಲು'–ಇದೇ ಗೀತೆಯ ಕರ್ಮಯೋಗದ ಸಾರ.

ಗೀತೆಯ ಕರ್ಮಯೋಗ ವಿಭಾಗ ಮಹಾತ್ಮ ಗಾಂಧೀಜಿಯವರ ಮೆಚ್ಚಿನ ಭಾಗವಾಗಿತ್ತು. ಅನಾಸಕ್ತಿಯೋಗವೆಂಬ ಹೆಸರಿನಲ್ಲವರು ಗೀತೆಗೆ ತಮ್ಮದೇ ಆದ ವ್ಯಾಖ್ಯಾನ ಬರೆದಿದ್ದಾರೆ. ನಿಷ್ಕಾಮ ಕರ್ಮ ಅವರ ಬೋಧನೆಯ ಮುಖ್ಯಾಂಶವಾಗಿದ್ದಂತೆ ಅವರ ವೈಯಕ್ತಿಕ ಜೀವನದ ದಾರಿದೀಪವೂ ಆಗಿತ್ತು. **(ನೋಡಿ–ಭಗವದ್ಗೀತೆ)** (ಎಸ್.ಡಬ್ಲ್ಯು.ಎಸ್.)

**ಕರ್ಮವೀರ :** ಲೋಕ ಶಿಕ್ಷಣ ಟ್ರಸ್ಟಿನಿಂದ ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ ಕನ್ನಡ ವಾರಪತ್ರಿಕೆ. ಭಾರತದ ಸ್ವಾತಂತ್ರ್ಯಕ್ಕಾಗಿ ಅಸಹಕಾರ ಚಳವಳಿ ಉಗ್ರವಾಗುತ್ತಿದ್ದ ಕಾಲದಲ್ಲಿ 1921ರ ಫೆಬ್ರುವರಿ 11ರಂದು ಪ್ರಾರಂಭವಾಯಿತು. ರಾಷ್ಟ್ರದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಗಳು ಆಗ ಪತ್ರಿಕೆಯ ಮುಖ್ಯ ಧ್ಯೇಯಗಳು. ರಂಗನಾಥ ರಾಮಚಂದ್ರ ದಿವಾಕರ, ರಾಮರಾವ್ ಹುಕ್ಕೇರಿಕರ ಮತ್ತು ಕಬ್ಬೂರ ಮಧ್ವರಾಯರು ಸಂಸ್ಥಾಪಕರು. ಪ್ರಾರಂಭದಲ್ಲಿ ದಿವಾಕರರು ಸಂಪಾದಕರಾಗಿಯೂ ಹುಕ್ಕೇರಿಕರರು ಪ್ರಕಾಶಕರಾಗಿಯೂ ಮಧ್ವರಾಯರು ಮುದ್ರಕರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿದ್ದ ದಿವಾಕರರು ಸರ್ಕಾರದಿಂದ ಬಂಧನಕ್ಕೊಳಗಾದಾಗ ಹುಕ್ಕೇರಿಕರ್ ರಾಮರಾಯರು ಮತ್ತು ಆಲೂರ ವೆಂಕಟರಾಯರು ಸಂಪಾದಕರಾಗಿ ಕೆಲಸ ನಿರ್ವಹಿಸಿದರು. ಪತ್ರಿಕೆ ಪ್ರಾರಂಭವಾದ ಮೂರು ತಿಂಗಳುಗಳಾಗುವಷ್ಟರಲ್ಲಿ ಧಾರವಾಡದ ಕಲೆಕ್ಟರರ ಗಮನ ಸೆಳೆಯಿತು. ಆಲೂರ ವೆಂಕಟರಾಯರು ಬರೆದ ಘೋರಕ್ಕಸಾಯ ಸ್ವಾಹಾ ಎಂಬ ಅಗ್ರ ಲೇಖನ ಆಗಿನ ಸರ್ಕಾರವನ್ನು ಇನ್ನಷ್ಟು ಕೆರಳಿಸಿತು. ಲಾವಣಿಯೊಂದನ್ನು ಮುದ್ರಿಸಿದ್ದಕ್ಕೆ ದಿವಾಕರರು ಶಿಕ್ಷೆ ಅನುಭವಿಸಿದರು. 1932ರಲ್ಲಿ ಕೆಲಕಾಲ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಬೇಕಾಯಿತು. 1935ರಲ್ಲಿ ಇದು ಮತ್ತೆ ಪ್ರಾರಂಭವಾದರೂ ಕೆಲವು ತಿಂಗಳು ನಡೆದು ಅನಂತರ ಸರ್ಕಾರದ ಅವಕೃಪೆಗೆ ಈಡಾಗಿ ಮತ್ತೆ ಇದರ ಪ್ರಕಟಣೆ ನಿಂತಿತು.

ಪತ್ರಿಕೆಯ ಪ್ರಕಟಣೆ ಪುನಃ ಆರಂಭವಾದದ್ದು 1940ರಲ್ಲಿ. ಹ.ರಾ. ಪುರೋಹಿತರು ಸಂಪಾದಕರಾಗಿ ಇದರ ಏಳ್ಗೆಗೆ ತುಂಬ ಶ್ರಮಿಸಿದರು. 1968ರಲ್ಲಿ ಇವರು ನಿವೃತ್ತರಾದಾಗ ದಿವಾಕರ ರಂಗರಾಯರು ಮತ್ತೆ ಇದರ ಸಂಪಾದಕತ್ವ ವಹಿಸಿಕೊಂಡರು. ಮೊಹರೆ ಹಣಮಂತರಾಯರು ಮುದ್ರಕ ಪ್ರಕಾಶಕರಾಗಿ ಈ ಪತ್ರಿಕೆಯ ಬೆಳವಣಿಗೆಗೆ ಬಹಳ ದುಡಿದರು. ಸ್ವತಃ ಅನೇಕ ದಿಟ್ಟ ಲೇಖನಗಳನ್ನು ಬರೆದರು.

ಪ್ರಾರಂಭದಲ್ಲಿ ರಾಷ್ಟ್ರೀಯ ಜಾಗೃತಿಗಾಗಿ ಶ್ರಮಿಸಿದ ಈ ಪತ್ರಿಕೆಯಲ್ಲಿ ಆಗ ಅನೇಕ ವೀರ್ಯವತ್ತಾದ ಲೇಖನಗಳು ಪ್ರಕಟವಾದುವು. ಶಂ.ಬಾ. ಜೋಶಿ, ನಾರಾಯಣ ಶರ್ಮ, ಮಿರ್ಜಿ ಮೊದಲಾದವರು ಆ ಕಾಲದ ಕೆಲವು ಲೇಖಕರು. ಪತ್ರಿಕೆಯ ಪ್ರಕಟಣೆಯನ್ನು




ಪುನಃ ಪ್ರಾರಂಭಿಸಿದ ಅನಂತರವೂ ಇದರ ರಾಷ್ಟ್ರಾಭಿಮಾನ ಮುಂದುವರಿಯಿತು. ಜೊತೆಗೆ ಜನತೆಯ ಜ್ಞಾನಭಂಡಾರ ಬೆಳೆಸುವ ಮೇಲ್ಮಟ್ಟದ ಸಾಪ್ತಾಹಿಕ ಪತ್ರಿಕೆಯಾಗಿಯೂ ಇದು ಕಾರ್ಯನಿರ್ವಹಿಸಲಾರಂಭಿಸಿತು. ಮಧ್ಯದಲ್ಲಿ ಕೆಲಕಾಲ ಗಾಂಧಿಯವರ ಹರಿಜನ ಪುರವಣಿಯನ್ನು ಕನ್ನಡದಲ್ಲಿ ಪ್ರಕಟಿಸಲಾಗುತ್ತಿತ್ತು. ಎಳೆಯರ ಬಳಗ, ಮಹಿಳಾ ಪ್ರಪಂಚ ಮೊದಲಾದ ವಿಭಾಗಗಳನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದ್ದು ಈ ಪತ್ರಿಕೆ, ವೈಚಾರಿಕ ಸಾಹಿತ್ಯ, ಪ್ರಯೋಗಶೀಲತೆ–ಇವು ಇದರ ಇತರ ವೈಶಿಷ್ಟ್ಯಗಳು. ದೀಪಾವಳಿ ಸಂಚಿಕೆಗಳಲ್ಲಿ ಸಾಹಿತ್ಯ, ಧರ್ಮ, ವಿಜ್ಞಾನ, ಅರ್ಥಶಾಸ್ತ್ರಗಳನ್ನು ಕುರಿತ ವೈಚಾರಿಕ ಅಭ್ಯಾಸಪೂರ್ಣ ಲೇಖನಗಳನ್ನು ಪ್ರಕಟಿಸುವುದರೊಂದಿಗೆ, ವಿಚಾರಸಂಕಿರಣ, ವಿವಿಧಭಾಷಾ ಸಾಹಿತ್ಯಗಳ ಪರಿಚಯ, ವಿವಿಧ ಸಮಸ್ಯೆಗಳನ್ನು ಕುರಿತ ಚರ್ಚೆ–ಹೀಗೆ ಒಂದೊಂದು ವರ್ಷ ಒಂದೊಂದು ಹೊಸ ಹೆಜ್ಜೆ ಹಾಕುತ್ತಿದೆ. ಧಾರ್ಮಿಕ ಧುರೀಣರ, ಸಮಾಜಸೇವಕರ, ಹಿರಿಯ ಸಾಹಿತಿಗಳೇ ಮುಂತಾದವರ ವಿಶೇಷ ಸಂದರ್ಶನಗಳ ಪ್ರಕಟಣೆ ಪತ್ರಿಕೆಯ ಇನ್ನೊಂದು ವೈಶಿಷ್ಟ್ಯ. ಈಚೆಗೆ ನಾಡಿನ ಮಹಾಪುರುಷರು ಮತ್ತು ಹಿರಿಯ ಸಾಹಿತಿಗಳನ್ನು ಕುರಿತು ವಿಶೇಷ ಸಂಚಿಕೆಗಳನ್ನು ಪ್ರಕಟಿಸುವ ಕ್ರಮವನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದೆ. ಹಿರಿಯರು, ಕಿರಿಯರು, ಗೃಹಿಣಿಯರು ಹೀಗೆ ಎಲ್ಲರಿಗೂ ಬೇಕಾದ ಸಚಿತ್ರ ಕೌಟುಂಬಿಕ ಪತ್ರಿಕೆಯೆನಿಸಿದೆ. ಸ್ವಲ್ಪಕಾಲ ಸ್ಥಗಿತಗೊಂಡಿದ್ದ ಕಿರೀಟ ಚೌಪತ್ರ ಆಕಾರದ ಈ ಪತ್ರಿಕೆಗೆ ಎರಡು ಬಾರಿ ಜೀವದಾನವಾಗಿತ್ತು. 1992ರಲ್ಲಿ ಮತ್ತೆ ಪ್ರಕಟಣೆಗೆ ಪ್ರಾರಂಭಿಸಿದ ಬಳಿಕ ಗರುಡನಗಿರಿ ನಾಗರಾಜ್ ಅವರು ಹೊಣೆ ನಿರ್ವಹಿಸಿದ್ದರು. ಅನಂತರ ಸಂಪಾದಕರು ಸಾಹಿತಿ ಬಾಬುಕೃಷ್ಣಮೂರ್ತಿ. 85 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ವಾರಪತ್ರಿಕೆ ಕರ್ಮವೀರ. (ಎಸ್.ವಿ.ಪಿ.ಎ.)

**ಕರ್ಮೇಂದ್ರಿಯ** : ಇಂದ್ರಿಯಗಳನ್ನು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎಂದು ಎರಡು ಬಗೆಯಾಗಿ ವಿಂಗಡಿಸಿದ್ದಾರೆ. ಜ್ಞಾನವನ್ನುಂಟುಮಾಡುವ ಸಾಮರ್ಥ್ಯವುಳ್ಳ ಇಂದ್ರಿಯಗಳು ಜ್ಞಾನೇಂದ್ರಿಯಗಳು. ಉಚ್ಚಾರಣೆ ಮೊದಲಾದ ಕ್ರಿಯೆಗಳಲ್ಲಿ ಯಾವುದಾದರೊಂದನ್ನು ಮಾಡುವ ಸಾಮರ್ಥ್ಯವುಳ್ಳ ಇಂದ್ರಿಯಗಳು ಕರ್ಮೇಂದ್ರಿಯಗಳು. ಕರ್ಮೇಂದ್ರಿಯಗಳು ಐದು ಬಗೆಯಾಗಿವೆ: ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥ. ವರ್ಣೋಚ್ಚಾರಣೆಗೆ ಸಾಧನವಾದ ಇಂದ್ರಿಯವೇ ವಾಕ್ಕು. ಇದು ಹೃದಯ, ಗಂಟಲು, ಜಿಹ್ವಾಮೂಲ, ನಾಲಗೆ, ಹಲ್ಲು, ತುಟಿ, ಮೂಗು ಮತ್ತು ಮೂರ್ಧ ಎಂಬ ಎಂಟು ಸ್ಥಾನಗಳಲ್ಲಿದೆ. ಪಶು ಪ್ರಾಣಿಗಳಲ್ಲಿ ಇದು ಸ್ಪಷ್ಟವಾಗಿಲ್ಲ. ಕೈಕೆಲಸ ಮೊದಲಾದುವನ್ನು ಮಾಡಲು ಸಾಧನವಾದ ಇಂದ್ರಿಯಪಾಣಿ; ಸಂಚಾರಕ್ಕೆ ಸಾಧನವಾದ ಇಂದ್ರಿಯವೇ ಪಾದ; ಮಲಮೂತ್ರಾದಿಗಳ ವಿಸರ್ಜನೆಗೆ ಸಾಧನವಾದ ಇಂದ್ರಿಯಗಳೇ ಪಾಯು ಎನಿಸುತ್ತವೆ. ಆನಂದವಿಶೇಷಕ್ಕೆ ಸಾಧನವಾದ ಇಂದ್ರಿಯ ಉಪಸ್ಥ; ಇದು ಜನನಾಂಗಗಳಲ್ಲಿದೆ. ಈ ಇಂದ್ರಿಯಗಳು ಸೂಕ್ಷ್ಮವಾದವು. ಜೀವನೊಡನೆ ಇವೂ ದೇಹಾಂತರಗಳಿಗೆ ಬರುವುವು. ಸೂಕ್ಷ್ಮ ರೂಪದಲ್ಲಿ ಇವು ಸ್ವಭಾವತಃ ಸಮರ್ಥವಾಗಿಯೇ ಇದ್ದರೂ ಆಯಾ ಜೀವರುಗಳ ಅದೃಷ್ಟದ ಕಾರಣ ದೋಷಯುಕ್ತವಾಗಿರುವುವು. **(ನೋಡಿ–ಇಂದ್ರಿಯಗಳು)** (ಎನ್.ಎಸ್.ಎ.)

**ಕರ್ಲಿ ಮೀನು** : ಕೈರೋಸೆಂಟ್ರಿಡೆ ಕುಟುಂಬಕ್ಕೆ ಸೇರಿದ ಕೈರೊಸೆಂಟ್ರಸ್ ದೊರಬ್ ಎಂಬ ವೈಜ್ಞಾನಿಕ ಹೆಸರಿನ ಸಮುದ್ರವಾಸಿ ಮೀನು. ಇಂಗ್ಲಿಷಿನಲ್ಲಿ ಸೇಬರ್ ಫಿಷ್ ಅಥವಾ ದೊರಬ್ ಎನ್ನುತ್ತಾರೆ. ಇದಕ್ಕೆ ಕಡಲ್ ಬಳೆ, ಕರ್ಲಿ ಬಳೆ, ಕೋಡು ಬಳೆ ಎಂದೂ ಕರೆಯುತ್ತಾರೆ. ಹೆರ್ರಿಂಗ್ ಮೀನುಗಳ ಹತ್ತಿರದ ಸಂಬಂಧಿ. ಮಧ್ಯ ಪೆಸಿಫಿಕ್ ನಿಂದ ಆಫ್ರಿಕವರೆಗೆ ಇವು ಕಂಡುಬರುತ್ತವೆ. ಭಾರತದ ಸಮುದ್ರಗಳಲ್ಲಿ ಇದು ಸರ್ವೇ ಸಾಮಾನ್ಯ. ಉದ್ದನೆಯ ಅಥವಾ ಬಲು ಸಂಕುಚಿತಗೊಂಡ ದೇಹ, ಉದರದ ಈಜುರೆಕ್ಕೆಯ ಮೇಲಿರುವ ಸಣ್ಣಕೂದಲುಗಳಂಥ ಅರಗಳು (ರೇ) ಮತ್ತು ಎದೆಯ ಭಾಗದ ಈಜುರೆಕ್ಕೆಯ ಕಕ್ಷದಲ್ಲಿರುವ ಒಂದು ಶಲ್ಕ (ಸ್ಕೇಲ್) –ಇವು ಈ ಮೀನಿನ ಮುಖ್ಯ ಲಕ್ಷಣಗಳು. ಇದು ತೀವ್ರತರವಾದ ಮಾಂಸಾಹಾರಿ ಮೀನು. ಸಾಮಾನ್ಯವಾಗಿ ಸಾಗರದ ಇತರ ಮೀನುಗಳನ್ನು ತಿಂದು ಜೀವಿಸುತ್ತದೆ. ಆಶ್ಚರ್ಯವೆಂದರೆ ಇತರೆ ಹೆರ್ರಿಂಗ್ ಮೀನುಗಳು ಸಣ್ಣ ಪ್ಲವಕಗಳನ್ನು ತಿಂದು ಜೀವಿಸುತ್ತವೆ. ದೊರಬ್ ಮೀನಿನ ಕರುಳಿನಲ್ಲಿರುವ ಸುರುಳಿ ಕವಾಟ (ಸ್ಪೈರಲ್ ವಾಲ್ವ್) ನಿಂದ ಇತರ ಹೆರ್ರಿಂಗ್ ಮೀನುಗಳಿಗಿಂತ ಇದನ್ನು ವಿಭಿನ್ನವಾಗಿಸಿದೆ. ಈ ರೀತಿಯ ಕವಾಟ ಶಾರ್ಕ್ ಮತ್ತು ರೇ ಮೀನುಗಳಲ್ಲಿ ಕಾಣಿಸುತ್ತದೆ. ಇಷ್ಟಲ್ಲದೆ ಈ ಮೀನುಗಳಿಗೆ ದೊಡ್ಡ ಕೋರೆಹಲ್ಲುಗಳೂ ಸಹ ಇವೆ. ಇದು ಸುಮಾರು 12 ಅಡಿಗಳವರೆಗೆ ಬೆಳೆಯುತ್ತದೆ. ಇತರೆ ಹೆರ್ರಿಂಗ್‌ಗಳ ಸುಮಾರು ಐದುಪಟ್ಟು. ಆಹಾರದ ಮೀನುಗಳಲ್ಲಿ ಈ ಮೀನು ಬಹು ಮುಖ್ಯವಾದುದೆಂದು ಹೆಸರಾಗಿದೆ. (ಆರ್.ಎಲ್.)

**ಕರ್ವೆ, ಧೋಂಡೊ ಕೇಶವ** : 1858–1962. ಮಹಾರಾಷ್ಟ್ರದ ಅಗ್ರಗಣ್ಯ ಸಮಾಜ ಸುಧಾರಕ, ಸ್ತ್ರೀಶಿಕ್ಷಣತಜ್ಞ, ಅಣ್ಣಾಸಾಹೇಬ್ ಎಂಬುದು ಇವರ ಉಪನಾಮ. ರತ್ನಗಿರಿ ಜಿಲ್ಲೆಯ ಶೇರವಲಿಯಲ್ಲಿ 1858ರ ಏಪ್ರಿಲ್ 18ರಂದು ಚಿತ್ಪಾವನ ಬ್ರಾಹ್ಮಣ ಮನೆತನದಲ್ಲಿ ಜನಿಸಿದರು. ತಂದೆ ಕೇಶವ ಕರ್ವೆಯ ವಾಸಸ್ಥಳ ಅದೇ ಜಿಲ್ಲೆಯ ಮುರೂಡ್

ಗ್ರಾಮ. ಈ ಮನೆತನದವರು ಪೇಶ್ವೆಗಳ ಕಾಲದಲ್ಲಿ ಪುಣೆಯಲ್ಲಿ ಸಾಹುಗಾರಿಕೆ ಮಾಡುತ್ತಿದ್ದರಾದರೂ ಕೇಶವ ಕರ್ವೆ ಬಡತನದ ಜೀವನ ನಡೆಸುತ್ತಿದ್ದರು. ಧೋಂಡೊ ಕರ್ವೆಗೆ ಪ್ರಾಥಮಿಕ ಶಿಕ್ಷಣ ಮುರೂಡ್‌ನಲ್ಲೇ ದೊರಕಿತು. ಬಹಳ ಅಡಚಣೆಗಳನ್ನು ಎದುರಿಸಿ ವಿದ್ಯಾಭ್ಯಾಸವನ್ನು ಅವರು ಮುಂದುವರಿಸಿ 1881ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದೆ ಗಣಿತವನ್ನಾರಿಸಿಕೊಂಡು ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ ಅಭ್ಯಾಸ ಮಾಡಿ ಪದವಿ ದೊರಕಿಸಿಕೊಂಡರು (1885). ಮುಂದೆ ಅವರು ಎಂ.ಎ. ತರಗತಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರಾದರೂ ಸಮಯಾಭಾವದಿಂದ ಅಭ್ಯಾಸ ಕಡಿಮೆಯಾಗಿ ಸೋಲುಂಟಾಗಿ ಆ ಪದವಿಯ ಆಸೆ ಬಿಡಬೇಕಾಯಿತು. ತಾರುಣ್ಯದಿಂದಲೂ ಶಾಲಾ ಅಧ್ಯಾಪಕವೃತ್ತಿಯಲ್ಲಿ ದುಡಿದ ಕರ್ವೆಯವರಿಗೆ ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ಅಧ್ಯಾಪಕ ಹುದ್ದೆ ಸ್ವೀಕರಿಸಬೇಕೆಂದು, ಸಹಪಾಠಿ ಗೋಪಾಲಕೃಷ್ಣ ಗೋಖಲೆಯವರಿಂದ ಆಮಂತ್ರಣ ಬಂತು. 1891 ರಿಂದ 1914ರ ವರೆಗೆ ಅಲ್ಲಿದ್ದ ಮೇಲೆ ಕರ್ವೆಯ ಬಾಳು ಸಮಾಜಸೇವೆಗೆ ಮುಡಿಪಾಯಿತು. 14ನೆಯ ವರ್ಷದಲ್ಲೇ ವಿವಾಹವಾಗಿದ್ದ ಕರ್ವೆಯವರಿಗೆ ತಾರುಣ್ಯದಲ್ಲೇ ವಿಧುರತ್ವ ಸಂಭವಿಸಿತು. ಇದೇ ಕಾಲದಲ್ಲಿ ಮುಂಬೈ ಪ್ರಾಂತ್ಯದಲ್ಲಿ ಬಲವಾಗಿದ್ದ ಆರ್ಯಸಮಾಜ, ಬ್ರಹ್ಮಸಮಾಜ ಮುಂತಾದ ಚಳವಳಿಗಳಿಂದ ಕರ್ವೆಯವರ ಮೇಲೆ ತುಂಬ ಪ್ರಭಾವ ಉಂಟಾಗಿತ್ತು. ಬಾಲ್ಯದಲ್ಲೆ ವಿಧವೆಯಾಗಿದ್ದ ಗೋದುಬಾಯಿಯನ್ನು ಅವರು ಮದುವೆಯಾದರು (1893). ಅದೇ ವರ್ಷ ಅವರು ವಿಧವಾಪುನರ್ವಿವಾಹ ಸಂಸ್ಥೆಯನ್ನು ಸ್ಥಾಪಿಸಿದರು. ಅನಾಥ ಬಾಲಿಕಾಶ್ರಮ ಸಂಘ (1896), ಪುಣೆಯ ಮಹಿಳಾ ವಿದ್ಯಾಲಯ (1907) ಮುಂತಾದ

ಸಂಸ್ಥೆಗಳನ್ನು ಸ್ಥಾಪಿಸಿದವರೂ ಅವರೇ. ಈ ಮಹಿಳಾ ವಿದ್ಯಾಲಯ ಬೆಳೆದು ಮುಂದೆ ಮುಂಬಯಿಯಲ್ಲಿ ಶ್ರೀಮತಿ ನಾಥಿಬಾಯಿ ದಾಮೋದರ ಥ್ಯಾಕರ್ಸಿ ಮಹಿಳಾ ವಿದ್ಯಾ ಪೀಠದ ಸ್ಥಾಪನೆಗೆ (1916) ಹಾದಿಮಾಡಿಕೊಟ್ಟಿತು. ಈ ವಿದ್ಯಾಪೀಠಕ್ಕೆ ಹಣ ಸಂಗ್ರಹಿಸುವ ಉದ್ದೇಶದಿಂದಲೇ ಕರ್ವೆ 1927ರಲ್ಲಿ ಫ್ರಾನ್ಸ್, ಇಂಗ್ಲೆಂಡ್, ಹಾಲೆಂಡ್, ಅಮೆರಿಕ, ಜಪಾನ್, ಚೀನ, ಮಲಯ ಮುಂತಾದ ದೇಶಗಳನ್ನೂ ಮುಂದೆ ದಕ್ಷಿಣ ಆಫ್ರಿಕವನ್ನೂ ಸಂದರ್ಶಿಸಿದರು. 1915ರಲ್ಲಿ ಮುಂಬಯಿಯಲ್ಲಿ ನಡೆದ ಸಮಾಜಸುಧಾರಣ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ಇವರು ಮಹಾರಾಷ್ಟ್ರ ಪ್ರಾಥಮಿಕ ಶಿಕ್ಷಣ ಸಂಸ್ಥೆಯ ಸ್ಥಾಪನೆಮಾಡಿದ್ದು 1936ರಲ್ಲಿ. ಮಾನವರಲ್ಲಿ ಸಮಾನತೆ ಇರಬೇಕೆಂಬ ತತ್ತ್ವವನ್ನು ಎತ್ತಿಹಿಡಿಯಲು 1944ರಲ್ಲಿ ಸಮತಾಸಂಘದ ಸ್ಥಾಪನೆಯಾಯಿತು. ಫ್ರೆಡರಿಕ್ ಜೆ. ಗೌಲ್ಡ್ 1934ರಲ್ಲಿ ಲಂಡನಿನಲ್ಲಿ ಸ್ಥಾಪಿಸಿದ ಸೊಸೈಟಿ ಫಾರ್ ದಿ ಪ್ರಮೋಶನ್ ಆಫ್ ಹ್ಯೂಮನ್ ಈಕ್ವ್ಯಾಲಿಟಿ ಸಂಸ್ಥೆಯೇ ಇದಕ್ಕೆ ಪ್ರೇರಣೆ. ಜಾತಿ ನಿರ್ಮೂಲನ ಸಂಸ್ಥೆಯನ್ನು 1948ರಲ್ಲಿ ಅವರು ಪ್ರಾರಂಭಿಸಿದರು. 1942ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಕರ್ವೆಯವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರಾಪ್ತವಾಯಿತು. ಪುಣೆ (1953), ಮಹಿಳಾ ವಿದ್ಯಾಪೀಠ (1954) ಹಾಗೂ ಬೊಂಬಾಯಿ (1958) ವಿಶ್ವವಿದ್ಯಾಲಯಗಳೂ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದುವು. ಸ್ತ್ರೀಶಿಕ್ಷಣ, ಸಮಾಜ ಸುಧಾರಣೆಗಳ ಕ್ಷೇತ್ರಗಳಿಗೆ ಸಲ್ಲಿಸಿದ ಅವಿಶ್ರಾಂತ ಸೇವೆಗಾಗಿ 1955ರಲ್ಲಿ ಇವರಿಗೆ ಪದ್ಮವಿಭೂಷಣ ಪ್ರಶಸ್ತಿಯೂ 1958ರಲ್ಲಿ (ಇವರಿಗೆ 100 ವರ್ಷ ತುಂಬಿದಾಗ) ಭಾರತರತ್ನ ಪ್ರಶಸ್ತಿಯೂ ಸಂದವು. 1962ರ ನವೆಂಬರ್ 9 ರಂದು, 105ನೆಯ ಮಯಸ್ಸಿನಲ್ಲಿ ಕರ್ವೆ ನಿಧನ ಹೊಂದಿದರು. ಕರ್ವೆಯವರು ಮರಾಠಿಯಲ್ಲಿ ಬರೆದ ಆತ್ಮಚರಿತ್ರೆ ಆತ್ಮವೃತ್ತ ಎಂಬ ಹೆಸರಿನಿಂದ 1915ರಲ್ಲಿ ಪ್ರಕಟವಾಯಿತು. ಲುಕಿಂಗ್ ಬ್ಯಾಕ್ ಎಂಬ ಹೆಸರಿನಿಂದ ಇಂಗ್ಲಿಷಿನಲ್ಲೂ (1936) ಸಿಂಹಾವಲೋಕನ ಎಂದು ಕನ್ನಡದಲ್ಲೂ (1944) ಈ ಕೃತಿ ಪ್ರಕಟವಾಗಿದೆ. **(ಎಸ್.ಎನ್.ಕೆ.ಎ.)**

**ಕರ್ಷಕ (ಯಾಂತ್ರಿಕ) :** ಇತರ ವಾಹನಗಳನ್ನು ಮತ್ತು ಸಾಮಾನುಗಳನ್ನು ಎಳೆಯುವುದಕ್ಕೂ ಎಳೆದುಕೊಂಡು ಹೋಗುವ ಇತರ ಸಲಕರಣೆಗಳನ್ನು ನಡೆಸುವುದಕ್ಕೂ ಉಪಯೋಗಿಸುವ ಸ್ವಯಂಚಾಲಿತವಾದ ವಾಹನ; ಅಥವಾ ಇಂಥ ಕೆಲಸಗಳನ್ನು ಮಾಡುವ ದಾರಿಯ ಮೇಲೆ ಓಡುವ ಯಂತ್ರಚಾಲಿತವಾದ ಗಾಡಿ (ಟ್ರ್ಯಾಕ್ಟರ್). ಹೊಲಮನೆಯ ಕರ್ಷಕ ಅನೇಕ ಕೆಲಸಗಳನ್ನು ಮಾಡಬಲ್ಲ ಶಕ್ತಿಚಾಲಿತ ಯಂತ್ರ. ಅದರಲ್ಲಿ ಬೇಸಾಯದ ಹತ್ಯಾರುಗಳನ್ನು ಎಳೆಯಲು ಸಲಾಕಿಯೂ ಸಲಕರಣೆಗಳನ್ನು ಎಳೆಯುವುದಕ್ಕೆ ಮತ್ತು ಕೊನೆಯಿಲ್ಲದ ಪಟ್ಟಿಯ ಕಪ್ಪಿಯನ್ನು ಚಲಿಸುವುದಕ್ಕೆ ಯಂತ್ರಚಾಲಿತ ವ್ಯವಸ್ಥೆಯೂ ಇರುತ್ತವೆ. ಎಷ್ಟು ಎಕರೆಗಳ ಭೂಮಿಯಲ್ಲಿ ಕೆಲಸ ಮಾಡಬೇಕು, ನೆಲದ ಸ್ವಭಾವವೇನು, ಯಾವ ನಮೂನೆಯ ಬೆಳೆಗಳನ್ನು ತೆಗೆಯುತ್ತಾರೆ ಇವನ್ನು ನೋಡಿಕೊಂಡು ಕರ್ಷಕದ ಸಂವಿಧಾನವನ್ನು ನಿಶ್ಚಯಿಸಬೇಕು. ಆದ್ದರಿಂದ ಒಂದೊಂದು ಮಾದರಿಯೂ ಅದರ ತೂಕ, ನೆಲದಿಂದ ಎತ್ತರ, ತಿರುಗಲು ಬೇಕಾದ ತ್ರಿಜ್ಯ, ಉತ್ಪತ್ತಿ ಮಾಡಬೇಕಾದ ಸಾಮರ್ಥ್ಯ– ಈ ತಪಶೀಲುಗಳಲ್ಲಿ ವ್ಯತ್ಯಾಸವಾಗುತ್ತದೆ. ಯಂತ್ರ ಬರುವ ಮುಂಚೆ ಅದನ್ನು ನಡೆಸಲು ನೆಲದಲ್ಲಿ ಅನುಕೂಲತೆಗಳಿವೆಯೇ ಎಂದು ನೋಡಬೇಕು.

ಕರ್ಷಕಗಳನ್ನು ನಾಲ್ಕು ನಮೂನೆಗಳಾಗಿ ವಿಂಗಡಿಸಬಹುದು: 1 ನಾಲ್ಕು ಗಾಲಿಗಳಿರುವಂಥವು; 2 ಎತ್ತರವಾದ ಚಕ್ರಗಳಿರುವಂಥವು; 3 ಮೂರು ಗಾಲಿಗಳಿರತಕ್ಕವು; 4 ಸಾವಕಾಶವಾಗಿ ತಿರುಗುವ ಯಂತ್ರಗಳು.

ಕರ್ಷಕಗಳನ್ನು ಅವು ಪಟ್ಟಿಯ (ಬೆಲ್ಟ್) ಹತ್ತಿರ ಎಷ್ಟು ಅಶ್ವಸಾಮರ್ಥ್ಯವನ್ನು ಒದಗಿಸಬಲ್ಲವು ಎಂಬುದನ್ನು ಆಧರಿಸಿ ವಿಭಾಗಿಸುತ್ತಾರೆ. ಚಿಕ್ಕ ಮಾದರಿಗಳು 10 ಅಶ್ವಸಾಮರ್ಥ್ಯವನ್ನೂ ದೊಡ್ಡ ಮಾದರಿಗಳು 90 ಅಶ್ವಸಾಮರ್ಥ್ಯಗಳನ್ನೂ ಒದಗಿಸಬಲ್ಲವು.

ಕರ್ಷಕದ ಮುಖ್ಯವಾದ ಭಾಗಗಳಿವು: 1 ಎಂಜಿನ್; 2 ಕ್ಲಚ್ ಮತ್ತು ಸಾಗಣೆ (ಟ್ರಾನ್ಸ್‌ಮಿಶನ್). ಈ ಭಾಗಗಳನ್ನು ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡುವ ಹಾಗೆ ಸಂವಿಧಾನ ಮಾಡುತ್ತಾರೆ. ಪ್ರಯಾಣಿಕರನ್ನು ಸಾಗಿಸುವ ರೈಲ್ವೆ ಎಂಜಿನ್ನುಗಳ ಹೆಚ್ಚಿನ ವೇಗದಲ್ಲಿ ಓಡುತ್ತವೆ; ಆದರೆ ಕರ್ಷಕದ ಎಂಜಿನ್ನುಗಳು ನಿಧಾನವಾಗಿ ಚಲಿಸುತ್ತವೆ. ಈ ಎಂಜಿನ್ನುಗಳ ಕ್ರ್ಯಾಂಕಿನ ಅಚ್ಚು ಮಿನಿಟಿಗೆ 2,000 ಸುತ್ತು ತಿರುಗಿದಾಗ ಅವುಗಳಿಂದ ಗರಿಷ್ಠ ಶಕ್ತಿ ಉತ್ಪತ್ತಿಯಾಗುತ್ತದೆ. ಎಂಜಿನ್ನುಗಳಲ್ಲಿ 1 ರಿಂದ 6ರವರೆಗೆ ಉರುಳೆಗಳು ಇರಬಹುದು. ಅವು ಪೆಟ್ರೋಲ್, ಸೀಮೆಎಣ್ಣೆ ಅನಿಲ, ಇಲ್ಲವೆ ಡೀಸಲ್ ಇಂಧನವನ್ನು ಉರಿಸಬಹುದು. ಅವು ವಿದ್ಯುತ್ತಿನ ಕಿಡಿ ಅಥವಾ ಡೀಸಲ್ ನಮೂನೆಯವಾಗಿದ್ದು ನಾಲ್ಕು ಆಂದೋಲನಗಳಲ್ಲಿ ಕೆಲಸ ಮಾಡಬಹುದು. ಎಂಜಿನ್ನುಗಳನ್ನು ನೀರಿನಿಂದ ಇಲ್ಲವೆ ಗಾಳಿಯಿಂದ ತಣ್ಣಗೆ ಮಾಡಬಹುದು. ನಿಧಾನವಾಗಿ ಹೋಗುವ ಕರ್ಷಕಗಳನ್ನು ಬಿಟ್ಟು ಉಳಿದವನ್ನು ಮೋಟಾರುಗಳ ಹಾಗೆ ಒಂದು ತಿರುಚಕ್ರವನ್ನು (ಸ್ಟೀಯರಿಂಗ್ ವ್ಹೀಲ್) ತಿರುಗಿಸಿ ಅದು ಹೋಗುವ ದಿಕ್ಕನ್ನು ಬದಲಾಯಿಸುತ್ತಾರೆ. ಬಿರಿಗಳನ್ನು ಸಾಮಾನ್ಯವಾಗಿ ಹಿಂದಿನ ಚಕ್ರಗಳಿಗೆ ತಗಲಿಸಿರುತ್ತಾರೆ. ಚಿಕ್ಕದಾದ ಕ್ರಾಲರ್ ನಮೂನೆಯ ಕರ್ಷಕಗಳನ್ನು ಬೇಸಾಯದ ಕೆಲಸಕ್ಕೂ ಉಪಯೋಗಿಸುತ್ತಾರೆ. ಇವಕ್ಕೆ ರಬ್ಬರ್ ಟಯರುಗಳಿರುವುದಿಲ್ಲ. ಉಕ್ಕಿನ ತಗಡುಗಳಿಂದ ಅಗಲವಾಗಿ ಬಳುಕುವಂತೆ ಮಾಡಿದ ಕೊನೆಯಿಲ್ಲದ ಪಟ್ಟಿಯೇ ನೆಲದ ಮೇಲೆ ಸುತ್ತುತ್ತ ಕ್ರಾಲರನ್ನು ಮುಂದೆ ಒಯ್ಯುವುದು. ಒಂದೊಂದು ಪಟ್ಟಿಯೂ ಒಂದು ಮುಂದಿನ ಚಕ್ರವನ್ನೂ ಒಂದು ಹಿಂದಿನದನ್ನೂ ಒಳಗೊಂಡಿರುತ್ತದೆ. ಒಂದೊಂದೂ ಟ್ರ್ಯಾಕ್ಟರಿನ ತೂಕವನ್ನು ಹೊರಬಲ್ಲ ರೋಲರಿನ ಪಟ್ಟಿಯ ಚೌಕಟ್ಟಿನ ಮೇಲೆ ನಿಂತಿರುತ್ತದೆ. ಹಿಂದಿನ ಚಕ್ರಗಳ ಅಂಚಿಗೆ ಹೊಂದಿಕೊಂಡಿರುವ ಹಲ್ಲುಗಳಿಂದ ಆ ಪಟ್ಟಿ ತಿರುಗುತ್ತದೆ. ಒಂದು ರೋಲರಿನ ಪಟ್ಟಿ ನಿಶ್ಚಲವಾಗಿದ್ದು ಇನ್ನೊಂದಕ್ಕೆ ಶಕ್ತಿಯನ್ನೊದಗಿಸುವ ಹಿಡಿಕೆಗಳನ್ನು ನಿಯಂತ್ರಣ ಮಾಡುವ ಸನ್ನೆಕೋಲುಗಳನ್ನು ನಡೆಸುವುದರಿಂದ ಪಟ್ಟಿಯನ್ನು ತಿರುಗಿಸುವುದು ಸಾಧ್ಯವಾಗುತ್ತದೆ.

ಕೈಗಾರಿಕೆಗಳಲ್ಲಿ ಉಪಯೋಗಿಸುವ ಟ್ರ್ಯಾಕ್ಟರುಗಳ ಸಂವಿಧಾನವೂ ಬೇಸಾಯದ ಟ್ರ್ಯಾಕ್ಟರಿನ ಸಂವಿಧಾನದ ಹಾಗೆಯೇ ಇರುತ್ತದೆ. **(ಎಚ್.ಸಿ.ಕೆ.)**

**ಕರ್ಷಕ (ವಿದ್ಯುತ್) :** ವಿದ್ಯುಚ್ಛಕ್ತಿಯ ನೆರವಿನಿಂದ ಚಲಿಸುವ ವಾಹನ (ಟ್ರ್ಯಾಕ್ಟರ್). ವಿದ್ಯುತ್ಕರ್ಷಕಗಳಲ್ಲಿ ಎರಡು ವಿಧಗಳಿವೆ. ಮೊದಲನೆಯದರಲ್ಲಿ ವಾಹನಗಳು ವಿದ್ಯುಚ್ಛಕ್ತಿಯನ್ನು ವಿದ್ಯುಜ್ಜಾಲದಿಂದ ಪಡೆಯುತ್ತವೆ; ಎರಡನೆಯದರಲ್ಲಿ ವಾಹನಗಳು ತಮಗೆ ಬೇಕಾಗುವ ವಿದ್ಯುಚ್ಛಕ್ತಿಯನ್ನು ಸ್ವಂತ ವಿದ್ಯುಜ್ಜನಕಗಳಿಂದ ಉತ್ಪಾದಿಸಿಕೊಳ್ಳುತ್ತವೆ. ಡೀಸಲ್ ವಿದ್ಯುತ್ ಬಂಡಿಗಳು ಇದಕ್ಕೆ ಒಂದು ಉದಾಹರಣೆ. ಟ್ರ್ಯಾಕ್ಟರ್‌ಗಳನ್ನು ವ್ಯವಸಾಯ, ಕಟ್ಟಡಗಳು ಮತ್ತು ರಸ್ತೆ ನಿರ್ಮಾಣದಲ್ಲಿ ಉಪಯೋಗಿಸಲಾಗುತ್ತದೆ.

ವಿದ್ಯುತ್ಕರ್ಷಕಗಳು ಇತರ ಕರ್ಷಕಗಳಿಂದ (ಟ್ರ್ಯಾಕ್ಟರ್) ಹೆಚ್ಚು ವಿಶಿಷ್ಟವಾಗಿವೆ. ಕಾರಣ: 1 ಇವುಗಳಲ್ಲಿ ವೇಗೋತ್ಕರ್ಷ ಮತ್ತು ವೇಗಾಪಕರ್ಷಗಳನ್ನು ಪಡೆಯುವುದು ಬಲು ಸುಲಭ. ದೂರದ ಪರಿಮಿತಿ ಕಡಿಮೆಯಿದ್ದಾಗ ಮತ್ತು ನಿಲ್ದಾಣಗಳು ಒಂದಕ್ಕೊಂದು ಸಮೀಪದಲ್ಲಿರುವ ದಾರಿಗಳಲ್ಲಿ ವಿದ್ಯುತ್ಕರ್ಷಕಗಳು ತುಂಬ ಉಪಯುಕ್ತವಾಗುತ್ತವೆ. 2 ಇವುಗಳಲ್ಲಿ ಹೊಗೆ ಉಂಟಾಗದು. ಆದ್ದರಿಂದ ವಿದ್ಯುತ್ಕರ್ಷಕಗಳು ವಾಯುಮಂಡಲವನ್ನು ಕಲುಷಿತಗೊಳಿಸುವುದಿಲ್ಲ. ಹಾಗಾಗಿ ಉಪನಗರಗಳ ನಡುವಣ ಸುರಂಗಮಾರ್ಗಗಳಿಗೆ ಇವು ಅತ್ಯುಪಯುಕ್ತ. 3 ಇವುಗಳ ಕ್ರಿಯಾವೆಚ್ಚ ಕಡಿಮೆ. 4 ಹತೋಟಿ ಬಲು ಸುಲಭ. ಆದರೆ ವಿದ್ಯುತ್ಕರ್ಷಕಗಳ ಪ್ರಾರಂಭಿಕ ವೆಚ್ಚ ದುಬಾರಿಯದು. ಹೆಚ್ಚು ವಿದ್ಯುಜ್ಜಾಲಗಳಿಂದ ಶಕ್ತಿಯನ್ನು ಪಡೆಯುವ ಕರ್ಷಕಗಳಲ್ಲಿ ವಿದ್ಯುತ್ ಸರಬರಾಜು ಮಧ್ಯೆ ಮಧ್ಯೆ ನಿಂತುಹೋದರೆ ಚಲನೆಯೇ ಸ್ಥಗಿತವಾಗುವುದು.

ಡೀಸಲ್ ವಿದ್ಯುತ್ಕರ್ಷಕಗಳಲ್ಲಿ ಸ್ವಂತ ಡೀಸಲ್ ಯಂತ್ರಗಳು ಇರುತ್ತವೆ. ಇವು ವಿದ್ಯುಜ್ಜನಕಗಳಿಗೆ ಸಂಯೋಜಿತವಾಗಿರುವುದರಿಂದ ವಿದ್ಯುಚ್ಛಕ್ತಿ ಉತ್ಪನ್ನವಾಗುವುದು. ಈ ವಿದ್ಯುಚ್ಛಕ್ತಿ ವಿದ್ಯುಚ್ಚಾಲಕಗಳಿಗೆ ಚಲನಶಕ್ತಿಯನ್ನು ಕೊಡುತ್ತದೆ. ವಿದ್ಯುತ್ ಕೋಶಗಳಿಂದ ಶಕ್ತಿಯನ್ನು ಪಡೆಯುವ ವಾಹನಗಳು ಕಡಿಮೆ ತೂಕದ ವಸ್ತುಗಳ ಸಾಗಾಣಿಕೆಗೆ ಉಪಯುಕ್ತವಾಗಿವೆ.

ಡೀಸೆಲ್ ಎಂಜಿನ್

**ವಿದ್ಯುತ್ ಸರಬರಾಜು :** ಏಕಮುಖಿ ಪ್ರವಾಹ (ಡಿ.ಸಿ) ಅಥವಾ ಪರ್ಯಾಯ ಪ್ರವಾಹವನ್ನು (ಎ.ಸಿ) ಬಳಸಬಹುದು. ಪರ್ಯಾಯ ಪ್ರವಾಹದಲ್ಲಿ ಒಂದು ಅಥವಾ ಮೂರು ಪ್ರಾವಸ್ಥೆಗಳನ್ನು (ಫೇಸಸ್) ಬಳಸಬಹುದು. ಏಕಮುಖಿ ಪ್ರವಾಹದ ವಿದ್ಯುತ್ಕರ್ಷಕದಲ್ಲಿ ವೋಲ್ಟೇಜ್ ಸಾಮಾನ್ಯವಾಗಿ ಇರುತ್ತದೆ. ಕೆಲವೆಡೆ ವೋಲ್ಟೇಜನ್ನು ಸಹ ಉಪಯೋಗಿಸುವುದಿದೆ. ಪರ್ಯಾಯ ಪ್ರವಾಹದ ಒಂದು ಸರಬರಾಜಿನಲ್ಲಿ ವೋಲ್ಟೇಜ್ ಸಾಮಾನ್ಯವಾಗಿ 15–25 ಕಿಲೋವ್ಯಾಟ್ ಇರುತ್ತದೆ ಮತ್ತು ಆವರ್ತಾಂಕ ಆವೃತ್ತಿ (ಫ್ರೀಕ್ವೆನ್ಸಿ) 50/3, 50/2 ಅಥವಾ 50/1 ಇರುತ್ತದೆ. ಭಾರತದಲ್ಲಿ ಬಳಕೆಯಲ್ಲಿರುವ ಆವೃತ್ತಾಂಕ 50ಹರ್ಟ್ಸ್. ಮೂರು

ಅವಸ್ಥೆಯ ಪರ್ಯಾಯ ಪ್ರವಾಹದ ಸರಬರಾಜಿದ್ದರೆ ಪ್ರೇರಿತ ಚಾಲಕಗಳನ್ನು (ಇಂಡಕ್ಷನ್ ಮೋಟಾರ್ಸ್) ಉಪಯೋಗಿಸಬಹುದು. ಇವುಗಳ ದಕ್ಷತೆಯಿಂದಾಗಿ (ಎಫಿಷಿಯೆನ್ಸಿ) ಅವುಗಳ ಉಪಯೋಗ ಅನಿವಾರ್ಯ. ಅಲ್ಲದೆ ಸಮಶ್ಚರ ವೇಗವನ್ನು (ಸಿಂಕ್ರೊನಸ್ ಸ್ಪೀಡ್) ಮೀರಿ ಅವು ತಿರುಗಿದಾಗ ವಿದ್ಯುಜ್ಜನಕದಂತೆ ವರ್ತಿಸುತ್ತವೆ. ರೆಕ್ಟಿಫೈಯರ್ ಮತ್ತು ಪ್ರೇರಿತ ಚಾಲಕಗಳಲ್ಲಿ ಎಷ್ಟು ಪ್ರಗತಿಯಾಗಿದೆಯೆಂದರೆ ಕರ್ಷಕಗಳಿಗೆ ಯಾವುದು ಅತ್ಯುಪಯುಕ್ತ ಎಂದು ಹೇಳುವುದು ಕಷ್ಟ.

**ಏಕಮುಖ ಪ್ರವಾಹ ಕರ್ಷಕ :** ಏಕಮುಖ ಪ್ರವಾಹದ ಕರ್ಷಕದಲ್ಲಿ ಶ್ರೇಣಿ (ಸೀರೀಸ್) ಅಥವಾ ಷಂಟ್ ಚಾಲಕಗಳನ್ನು ಉಪಯೋಗಿಸಬಹುದು. ಇಂಥ ಚಾಲಕಗಳ ರಚನೆ ಬಹಳ ಭದ್ರವಾಗಿರಬೇಕು. ನೀರು ಮತ್ತು ಕೆಸರಿನಿಂದ ಚಾಲಕಕ್ಕೆ ರಕ್ಷಣೆ ಬೇಕು. ಷಂಟ್ ಚಾಲಕಕ್ಕಿಂತ ಶ್ರೇಣಿ ಚಾಲಕ ಹೆಚ್ಚು ಉಪಯುಕ್ತ. ಕಾರಣ: 1 ಪ್ರಾರಂಭದಲ್ಲಿ, ಎಂದರೆ ಚಾಲಕಗಳನ್ನು ತಿರುಗಿಸಲು ಎಳೆಸಿದಾಗ, ಶ್ರೇಣಿಚಾಲಕ ಷಂಟ್ ಚಾಲಕಕ್ಕಿಂತ ಹೆಚ್ಚು ಭ್ರಾಮಕತೆಯನ್ನು (ಟಾರ್ಕ್) ಉಂಟುಮಾಡಬಹುದು. 2 ಚಾಲನಶಕ್ತಿ ಅಧಿಕವಾಗದಾಗ ತನ್ನಿಂದ ತಾನೇ ವೇಗ ಕಡಿಮೆಯಾಗುವುದು. ಇದರಿಂದಾಗಿ ಚಾಲಕಕ್ಕೆ ಹೇರುವ ತೂಕ ನಿಯಮಿತವಾಗಿರುವುದು.

**ಏಕಮುಖ ಪ್ರವಾಹ ಚಾಲಕದ ಚಾಲನೆ ಮತ್ತು ವೇಗನಿಯಂತ್ರಣ :** ಏಕಮುಖ ಶ್ರೇಣಿ (ಸೀರೀಸ್) ಚಾಲಕದ ವೇಗವನ್ನು ಬದಲಾಯಿಸಲು ಅದರ ಕ್ಷೇತ್ರವನ್ನು (ಫೀಲ್ಡ್) ಅಥವಾ ಅದರ ವೋಲ್ಟತೆಯನ್ನು ಬದಲಾಯಿಸಿದರೆ ಸಾಕು. ಚಾಲಕದ ವೋಲ್ಟತೆಯನ್ನು ನಿಯಂತ್ರಿಸಲಯ ಶ್ರೇಣಿ ನಿರೋಧಕ ಅಥವಾ ಶ್ರೇಣಿ-ಸಮಾಂತರ (ಸೀರೀಸ್-ಪ್ಯಾರಲಲ್) ನಿರೋಧಕ ಅಥವಾ ಮೆಟಾಡೈನನ್ನು ಉಪಯೋಗಿಸಬಹುದು. ಶ್ರೇಣಿಚಾಲಕದೊಡನೆ ಶ್ರೇಣಿಯಲ್ಲಿ ನಿರೋಧಕವನ್ನು ಸೇರಿಸಿ ಚಾಲಕವನ್ನು ಚಲಿಸುವುದರಿಂದ ಆ ಶ್ರೇಣಿನಿರೋಧಕದಲ್ಲಿ ಅನಗತ್ಯವಾಗಿ ಶಕ್ತಿನಷ್ಟವಾಗುವುದು. ಎರಡು ಅಥವಾ ಹೆಚ್ಚು ಚಾಲಕಗಳಿದ್ದಾಗ ಶ್ರೇಣಿ-ಸಮಾಂತರ ವಿಧಾನವನ್ನು ಉಪಯೋಗಿಸುವುದರ ಮೂಲಕ ಮೇಲೆ ಹೇಳಿರುವ ಶಕ್ತಿವ್ಯಯವನ್ನು ಕಡಿಮೆ ಮಾಡಬಹುದು. ಮೊದಲು ಎರಡು ಚಾಲಕಗಳನ್ನೂ ಒಂದು ನಿಯಂತ್ರಣ ನಿರೋಧಕವನ್ನೂ ಶ್ರೇಣಿಯಲ್ಲಿ ಸೇರಿಸಿ ಚಾಲಕಗಳನ್ನು ಅವುಗಳ ನಿಯಮಿತ ವೇಗದ ಅರ್ಧಕ್ಕೆ ಕೊಂಡೊಯ್ಯಲಾಗುವುದು. ಆ ಬಳಿಕ ಅವನ್ನು ಸಮಾಂತರವಾಗಿ ಸೇರಿಸಿ ನಿಯಮಿತ ವೇಗಕ್ಕೆ ತರಲಾಗುವುದು.

ಎ.ಸಿ. ವಿದ್ಯುತ್ ಎಂಜಿನು

**ಪರ್ಯಾಯ ಪ್ರವಾಹ ಚಾಲಕಗಳು :** ಇವುಗಳಲ್ಲಿ ಒಂದು ಅವಸ್ಥೆ (ಫೇಸ್) ಮತ್ತು ಮೂರು ಅವಸ್ಥೆ ಇರುವ ಚಾಲಕಗಳನ್ನು ಬಳಸಬಹುದು. ಒಂದು ಅವಸ್ಥೆಯ ಚಾಲಕಗಳು ಹೆಚ್ಚಾಗಿ ಪರಿವರ್ತಕವುಳ್ಳ (ಕಾಮ್ಯುಟೇಟರ್) ರೀತಿಯವು. ಶ್ರೇಣಿ ಚಾಲಕದಲ್ಲಿ ಒಂದು ಕಾಂತಮಂಡಲ (ಮ್ಯಾಗ್ನೆಟಿಕ್ ಸರ್ಕಿಟ್) ಮತ್ತು ಪರಿವರ್ತಕ ಬ್ರಶ್ಯುಗಳನ್ನು ಒಳಗೊಂಡ ಆರ್ಮೆಚರ್ ಇರುತ್ತವೆ. ಕಾಂತಮಂಡಲದ ಮುಖ್ಯ ಸುರುಳಿಯನ್ನು (ಮೇನ್ ವೈಂಡಿಂಗ್) ಆರ್ಮೆಚರಿನೊಡನೆ ಶ್ರೇಣಿಯಲ್ಲಿ ಸೇರಿಸಲಾಗುತ್ತದೆ. ಮೂರು ಅವಸ್ಥೆಯ ಪರ್ಯಾಯಪ್ರವಾಹಚಾಲಕವಾಗಿ ಪ್ರೇರಕಚಾಲಕವನ್ನು ಬಳಸುತ್ತಾರೆ.

**ಪರ್ಯಾಯ ಪ್ರವಾಹ ಚಾಲಕಗಳ ಚಾಲನೆ :** ಶ್ರೇಣಿಚಾಲಕಗಳ ಚಲನಾರಂಭ (ಸ್ಟಾರ್ಟಿಂಗ್) ಮಾಡಲು ಟ್ರಾನ್ಸ್‌ಫಾರ್ಮರುಗಳನ್ನು ಉಪಯೋಗಿಸಬಹುದು. ಇವನ್ನು ಬಳಸಿದಾಗ ಪ್ರಾರಂಭದಲ್ಲಿ ಚಾಲಕಕ್ಕೆ ಕಡಿಮೆ ವೋಲ್ಟತೆಯನ್ನು ವಿದ್ಯುತ್ತನ್ನು ಒದಗಿಸಿ ಬಳಿಕ ನಿಯಮಿತ ವೋಲ್ಟತೆಯ ವಿದ್ಯುತ್ತನ್ನು ಒದಗಿಸಬಹುದು. ಟ್ರಾನ್ಸ್‌ಫಾರ್ಮರನ್ನು ಉಪಯೋಗಿಸಿ ಶ್ರೇಣಿಚಾಲಕಕ್ಕೆ ನೀಡುವ ವಿದ್ಯುತ್ ವೋಲ್ಟತೆಯನ್ನು ನಿಯಂತ್ರಿಸುವುದರ ಮೂಲಕ ಚಾಲಕಗಳ ವೇಗವನ್ನು ನಿಯಂತ್ರಿಸಬಹುದು.

ಮೂರು ಅವಸ್ಥೆಯ ಚಾಲಕಗಳ ಚಲನಾರಂಭವನ್ನು ಮಾಡಲು ಅವುಗಳ ರೋಟರಿನ ಮಂಡಲದಲ್ಲಿ ನಿರೋಧಕಗಳನ್ನು ಸೇರಿಸುತ್ತಾರೆ. ವೇಗವನ್ನು ನಿಯಂತ್ರಿಸಲು ಎರಡು ಮಾರ್ಗಗಳಿವೆ: 1 ಧ್ರುವಗಳನ್ನು ಬದಲಾಯಿಸುವುದರ ಮೂಲಕ, 2 ಕ್ಯಾಸ್ಕೇಡ್ ಮೂಲಕ.

ಪ್ರೇರಕಚಾಲಕದ ವೇಗಧ್ರುವಗಳ ಸಂಖ್ಯೆಗಳಿಗನುಗುಣವಾಗಿ ಬದಲಾಗುವುದರಿಂದ ಆ ಸಂಖ್ಯೆಗಳನ್ನು ಬದಲಾಯಿಸಿ ವೇಗವನ್ನು ನಿಯಂತ್ರಿಸಬಹುದು. ಕ್ಯಾಸ್ಕೇಡ್ ರೀತಿಯ ವೇಗನಿಯಂತ್ರಣಕ್ಕೆ ಎರಡು ಪ್ರೇರಕಚಾಲಕಗಳು ಅಗತ್ಯ. ಇವುಗಳ ಎರಡು ರೋಟರುಗಳನ್ನೂ ಭದ್ರವಾಗಿ ಯಾಂತ್ರಿಕವಾಗಿ (ಮೆಕ್ಯಾನಿಕಲಿ) ಜೋಡಿಸುತ್ತಾರೆ. ಮೊದಲನೆಯ ಚಾಲಕದ ಸ್ಟಾರ್ಟರಿಗೆ ಮೂರು ಅವಸ್ಥೆಗಳ ವೋಲ್ಟೇಜನ್ನು ಕೊಡಲಾಗುವುದು. ಇದರ ರೋಟರನ್ನು ಎರಡನೆಯ ಮೋಟಾರಿನ ಸ್ಟಾರ್ಟರಿಗೆ ಸೇರಿಸಲಾಗುವುದು. ಇದರಿಂದ ಒಟ್ಟು ನಾಲ್ಕು ವಿವಿಧ ವೇಗಗಳನ್ನು ಪಡೆಯಲು ಸಾಧ್ಯ.

**ಬಿರಿ :** ಬಂಡಿಯ ವೇಗವನ್ನು ಕಡಿಮೆ ಮಾಡಲು ಯಾಂತ್ರಿಕ ಅಥವಾ ವಿದ್ಯುತ್ ಬಿರಿಗಳನ್ನು (ಬ್ರೇಕ್ಸ್) ಉಪಯೋಗಿಸಬಹುದು. ಯಾಂತ್ರಿಕ ಬಿರಿಗಳನ್ನು ಅಧಿಕ ಒತ್ತಡದ ಗಾಳಿಯ ಮೂಲಕ ನಡೆಸುತ್ತಾರೆ. ವಿದ್ಯುತ್ ಬಿರಿಯನ್ನು ಮೂರು ವಿಧದಲ್ಲಿ ಕಾರ್ಯರೂಪಕ್ಕೆ ತರಬಹುದು : 1 ಗತಿ ಪಲ್ಲಟ, 2 ನಿರೋಧಕ ಬಿರಿ (ರಿಯೋಸ್ಟ್ಯಾಟ್ ಬ್ರೇಕಿಂಗ್), 3 ಪುನರುತ್ಪಾದಕ ಬಿರಿ (ರೀಜನರೇಟಿವ್ ಬ್ರೇಕಿಂಗ್).

ಗತಿಪಲ್ಲಟದ ವಿಧಾನದಲ್ಲಿ ಚಾಲಕದ ತಿರುಗುವ ದಿಕ್ಕನ್ನು ಬದಲಾಯಿಸಲಾಗುವುದು. ಇದರಿಂದಾಗಿ ಚಾಲಕ ಸ್ಥಗಿತವಾಗುವುದು. ನಿರೋಧಕ ಬಿರಿಯ ವಿಧಾನದಲ್ಲಿ ಚಾಲಕಕ್ಕೆ ವಿದ್ಯುತ್ ಸರಬರಾಜನ್ನು ತಪ್ಪಿಸಿ ಅದನ್ನು ಒಂದು ನಿರೋಧಕಕ್ಕೆ ಸೇರಿಸಲಾಗುವುದು. ಈಗ ಇದು ವಿದ್ಯುಜ್ಜನಕದಂತೆ ವರ್ತಿಸಿ ಚಲನಶಕ್ತಿಯನ್ನು (ಕೈನೆಟಿಕ್ ಎನರ್ಜಿ) ನಿರೋಧಕಕ್ಕೆ ವರ್ಗಾಯಿಸುವುದು. ಪ್ರೇರಕಚಾಲಕವನ್ನು ಉಪಯೋಗಿಸುವುದರಿಂದ ಮಾತ್ರ ಪುನರುತ್ಪಾದಕ ಬಿರಿಯ ಪ್ರಯೋಗ ಸಾಧ್ಯ. ಚಾಲಕದ ವೇಗ ನಿಯಮಿತ ವೇಗವನ್ನು ಮೀರಿದಾಗ ಅದು ವಿದ್ಯುಜ್ಜನಕದಂತೆ ವರ್ತಿಸುತ್ತದೆ ಮತ್ತು ಶೇಕಡ 20ರಷ್ಟು ಶಕ್ತಿಯನ್ನು ಹಿಂತಿರುಗಿಸುತ್ತದೆ.

**ವಿದ್ಯುತ್ ಬಂಡಿಗಳಿಗೆ ವಿದ್ಯುತ್ತಿನ ಪೂರೈಕೆ :** ವಿದ್ಯುತ್ತಿನ ಪೂರೈಕೆ ಎರಡು ವಿಧಗಳಿಂದ ಸಾಧ್ಯ. ಮೊದಲನೆಯ ವಿಧಾನದಲ್ಲಿ ವಿದ್ಯುತ್‌ವಾಹಕಗಳು ಕಂಬಗಳ ಮೇಲಿರುತ್ತವೆ. ವಾಹಕವನ್ನು ತಾಗಿಕೊಂಡು ಜಾರುವ ಒಂದು ಸಾಧನ ಬಂಡಿಗೆ ವಿದ್ಯುತ್ತನ್ನು ಪೂರೈಸುವುದು. ರೈಲ್ವೇ ಕಂಬಿ ಎರಡನೆಯ ವಿದ್ಯುದ್ವಾಹಕವಾಗಿ ವರ್ತಿಸುವುದು. ಹಾಗಾಗಿ ಕಂಬದಲ್ಲಿ ಒಂದೇ ಒಂದು ವಿದ್ಯುದ್ವಾಹಕ ಸಾಕಾಗುತ್ತದೆ. 1500 ವೋಲ್ಟತೆ ಅಥವಾ ಅದಕ್ಕಿಂತ ಹೆಚ್ಚಿರುವಲ್ಲಿ ಈ ವಿಧದ ಪೂರೈಕೆ ಅಗತ್ಯ. ಎರಡನೆಯ ವಿಧದ ವಿದ್ಯುತ್ ಪೂರೈಕೆ ವೋಲ್ಟತೆ 800 ಗಿಂತ ಕಡಿಮೆಯಿದ್ದಾಗ ಬಳಕೆಗೆ ತರುವಂಥದು. ಇದರಲ್ಲಿ ಚಕ್ರಗಳು ಚಲಿಸುವ ಕಂಬಗಳ ಜೊತೆಗೆ ಪಕ್ಕದಲ್ಲಿ ಇನ್ನೊಂದು ಕಂಬಿಯೂ ಇರುತ್ತದೆ. ಇದು ವಿದ್ಯುತ್ತಿನ ಪೂರೈಕೆಯನ್ನು ಮಾಡುವುದು. ಇದರಲ್ಲೂ ರೈಲ್ವೆ ಕಂಬಿ ಎರಡನೆಯ ವಿದ್ಯುದ್ವಾಹಕವಾಗಿ ವರ್ತಿಸುವುದು. (ಎಂ.ಎಚ್.ಡಿ.)

**ಕರ್ಷಣ [1] :** ವಾಯುಮಂಡಲದ ಮೂಲಕ ಒಂದು ವಸ್ತು ಸಾಗುವಾಗ ಅದು ನಿರೋಧಬಲ Fನ್ನು ಅನುಭವಿಸುತ್ತದೆ. ಗಾಳಿಯ ಅಣುಗಳು ವಸ್ತುವಿನ ಚಲನೆಯನ್ನು ವಿರೋಧಿಸುವುದೇ ಇದರ ಕಾರಣ. ನಿರೋಧಬಲ Fನ್ನು ಎರಡು ಘಟಕಗಳಾಗಿ ಒಡೆಯಬಹುದು. ಮೊದಲನೆಯದು ನೆಗಪು (ಲಿಫ್ಟ್) (L). ಇದು ಸಾಮಾನ್ಯವಾಗಿ ಊರ್ಧ್ವ ದಿಶೆಯಲ್ಲಿದ್ದು ವಸ್ತುವಿನ ತೂಕವನ್ನು ವಿರೋಧಿಸುತ್ತದೆ. ಎರಡನೆಯದೇ ಕರ್ಷಣ (ಡ್ರ್ಯಾಗ್) (D). ಇದು ಚಲನದಿಶೆಗೆ ವಿರುದ್ಧ ದಿಶೆಯಲ್ಲಿ ವರ್ತಿಸುತ್ತದೆ.




ನೆಗಪು ಅಪೇಕ್ಷಣೀಯ; ಆದರೆ ಕರ್ಷಣವು ಶಕ್ತಿಯ ಅನಿವಾರ್ಯ ಹ್ರಾಸವನ್ನು ಸೂಚಿಸುವುದು. ವಿಮಾನಗಳ ರಾಟದಲ್ಲಿ ಈ ಹ್ರಾಸವನ್ನು ಪಡೆಯಲು ಬೇಕಾಗುವ ಶಕ್ತಿಯನ್ನು ಅದರ ಯಂತ್ರ ಪೂರೈಸಬೇಕು. ಗರಿಷ್ಠನೆಗಪು: ಕರ್ಷಣ ಈ ನಿಷ್ಪತ್ತಿ ಅಧಿಕ ಮೌಲ್ಯದ್ದಾಗಿದ್ದರೆ ಉತ್ತಮ. ಕಾರಣ, ಒಂದು ವಿಮಾನದ ಸಾಮಾನ್ಯವಾದ ಮಟ್ಟಸ ಹಾರಾಟದಲ್ಲಿ ರೆಕ್ಕೆಗಳ ನೆಗಪು ಸರಿಸುಮಾರಾಗಿ ವಿಮಾನದ ಪೂರ್ಣ ತೂಕವನ್ನು ಸರಿದೂಗಿಸುತ್ತದೆ. ಈ ನೆಗಪನ್ನು ಪೂರೈಸುವ ಹಾಗೂ ಕರ್ಷಣವನ್ನು ಮೀರಿ ಸಾಗುವ

ಕನಿಷ್ಠ ಯಂತ್ರ ಸಾಮರ್ಥ್ಯ (ಮಿನಿಮಮ್ ಎಂಜಿನ್ ಪವರ್) ಉಳ್ಳದ್ದೇ ದಕ್ಷತಮ ಎಂಜಿನ್. (ಎಚ್.ಎಸ್.ಆರ್.)

**ಕರ್ಷಣ²** : ಒಂದು ತಂತಿಯನ್ನು ಬಿಗಿಗೊಳಿಸಿದಾಗ ಅದರ ಪ್ರತಿಯೊಂದು ತುಣುಕೂ ಅನುಭವಿಸುವ ಬಲ (ಟೆನ್ಷನ್), ಎಳೆತ, ಬಿಗುಪು. ಯು ಸರಳರೇಖೆಯಲ್ಲಿರುವ ಒಂದು ಎಗರದ (ಇನ್ಎಲ್ಯಾಸ್ಟಿಕ್) ಬಿಗಿತಂತಿ.



**ಚಿತ್ರ 1**

PQ ಅದರ ಒಂದು ತುಣುಕು. ಈಗ P ಯನ್ನು T ಎಂಬ ಒಂದು ಬಲ PA ದಿಶೆಯಲ್ಲೂ Q ವನ್ನು ಅದೇ ಬಲ T ಯು QB ದಿಶೆಯಲ್ಲೂ ಎಳೆಯುತ್ತಿವೆ. ಎಂದರೆ ಇಲ್ಲಿ PQ ಮೇಲೆ ವರ್ತಿಸುತ್ತಿರುವ ಎರಡು ಕರ್ಷಣಗಳು ಸಮವಾಗಿವೆ ಮತ್ತು ವಿರುದ್ಧ ದಿಶೆಗಳಲ್ಲಿವೆ. CD ಯು ವಕ್ರರೇಖೆಯಲ್ಲಿರುವ ಒಂದು ಎಗರದ ಬಿಗಿತಂತಿ.

RS ಅದರ ಒಂದು ತುಣುಕು. ಆಗ R ಮತ್ತು S ಗಳಲ್ಲಿ ವರ್ತಿಸುವ ಕರ್ಷಣಗಳು ಸಮವಾಗಿವೆ; ಅವುಗಳ ವರ್ತನ ರೇಖೆಗಳು ವಕ್ರರೇಖೆಗೆ ಆಯಾ ಬಿಂದುಗಳಲ್ಲಿ ಸ್ಪರ್ಶಕಗಳು. ವರ್ತನ ದಿಶೆಗಳನ್ನು ಚಿತ್ರ 2ರಲ್ಲಿ ತೋರಿಸಿದೆ. ಎಗರುವ ತಂತಿಗಳಲ್ಲಿ ಬಿಂದುವಿನಿಂದ ಬಿಂದುವಿಗೆ ಕರ್ಷಣ ವ್ಯತ್ಯಾಸವಾಗುವುದು. ವಸ್ತುವಿನ ಯಾವುದೇ ಎರಡು ಬಿಂದುಗಳ ನಡುವೆ ಹಿಗ್ಗಿಸಿದಾಗ ಅದರಲ್ಲಿ ಪ್ರಕಟವಾಗುವ ಗುಣವನ್ನು ಕರ್ಷಣ ಎಂದು ವ್ಯಾಖ್ಯಿಸಬಹುದು. ಉದಾಹರಣೆಗೆ, ತಂತಿಯನ್ನು ಹೀಗೆ ಎಳೆದಾಗ ಅದರ ಬಿಗುಪು ಏರಿ ಶ್ರುತಿತಾರದತ್ತ ಸರಿಯುತ್ತದೆ. *



**ಚಿತ್ರ 2**

**ಕಲಘಟಗಿ :** ಕರ್ನಾಟಕ ರಾಜ್ಯದ ಧಾರವಾಡ ಜಿಲ್ಲೆಯ ಪಶ್ಚಿಮ ಭಾಗದಲ್ಲಿ 15° 10' ಉ. ಅ. ಮತ್ತು 74° 55' ಪೂ. ರೇ. ದಲ್ಲಿರುವ ಒಂದು ಪಟ್ಟಣ. ಇದೇ ಹೆಸರಿನ ತಾಲ್ಲೂಕಿನ ಮುಖ್ಯಸ್ಥಳ. ಹುಬ್ಬಳ್ಳಿಯಿಂದ 27 ಕಿಮೀ ಅಂತರದಲ್ಲಿ ಹುಬ್ಬಳ್ಳಿ ಧಾರವಾಡಗಳಿಂದ ಕಾರವಾರಕ್ಕೆ ಹೋಗುವ ಹೆದ್ದಾರಿಯ ಮೇಲೆ ಇದೆ. ಇದು ಈ ತಾಲ್ಲೂಕಿನಲ್ಲಿಯೇ ಅತಿ ದೊಡ್ಡ ಪಟ್ಟಣ. ವಿಸ್ತೀರ್ಣ 16 ಚ.ಕಿಮೀ. ಜನಸಂಖ್ಯೆ 14,676 (2001). ಹತ್ತು ವರ್ಷಗಳ ಅವಧಿಯಲ್ಲಿ ಇದು ಮಲೆನಾಡಿನ ಹದ್ದಿನಲ್ಲಿರುವುದರಿಂದ ಈ ಜಿಲ್ಲೆಯ ಇತರ ಭಾಗಕ್ಕಿಂತ ಇಲ್ಲಿ ಸಾಮಾನ್ಯವಾಗಿ ಮಳೆ ಹೆಚ್ಚು (ವಾರ್ಷಿಕ ಸರಾಸರಿ 88ಸೆಂಮೀ).

ಇಲ್ಲಿಯದು ಕಂದು ಬಣ್ಣ ಮಿಶ್ರಿತ ಮಸಾರಿ ಭೂಮಿ. ಬತ್ತ ಇಲ್ಲಿಯ ಮುಖ್ಯ ಬೆಳೆ. ಕೃಷಿ ಇಲ್ಲಿಯ ಮುಖ್ಯ ಕಸಬು. ಇತರ ಕಸಬುಗಳಲ್ಲೂ ಕೈಗಾರಿಕೆಗಳಲ್ಲೂ ತೊಡಗಿದವರು ಕಡಿಮೆ. ಇಲ್ಲಿ ಐದು ಬತ್ತದ ಗಿರಣಿಗಳಿವೆ. ಅವಲಕ್ಕಿ ಚುರಮುರಿಗಳನ್ನೂ ತಯಾರಿಸುವರು. ಕಲಘಟಗಿಯ ಅಕ್ಕಿ ರುಚಿಗೆ ಬಲು ಹೆಸರುವಾಸಿ. ಆದ್ದರಿಂದ ಅದಕ್ಕೆ ಬಹಳ ಬೇಡಿಕೆ ಇದೆ. ಅಕ್ಕಿಯನ್ನು ಬಹಳ ದೂರದ ಪ್ರದೇಶಗಳಿಗೆ ರವಾನಿಸುತ್ತಾರೆ. ಅರಣ್ಯ ಸಮೀಪವಾಗಿರುವುದರಿಂದ ಮರದ, ಬಿದಿರಿನ ಸರಕುಗಳನ್ನು ಇಲ್ಲಿ ತಯಾರಿಸುವರು. ಕಲಘಟಗಿಯ ಬಣ್ಣದ ಮರದ ತೊಟ್ಟಿಲುಗಳು ಒಂದು ಕಾಲಕ್ಕೆ ತುಂಬ ಪ್ರಸಿದ್ಧವಾಗಿದ್ದುವು. ಆದರೆ ಈಗ ಈ ಕೈಗಾರಿಕೆ ಅಷ್ಟಾಗಿ ನಡೆಯದಿದ್ದರೂ ಮೊದಲಿನ ಹೆಸರನ್ನು ಉಳಿಸಿಕೊಂಡಿದೆ. ಇಲ್ಲಿಯ ಮನೆಗಳು ಸಾಮಾನ್ಯವಾಗಿ ಹಂಚಿನವು. ಅಷ್ಟು ಎತ್ತರವಾಗಿರುವುದಿಲ್ಲ. ಗುರುವಾರ ಸ್ಥಾನಿಕ ಸಂತೆ ಜರುಗುತ್ತದೆ. ಪಟ್ಟಣದ ಸ್ಥಾನಿಕ ಆಡಳಿತಕ್ಕಾಗಿ ಒಂದು ಪಂಚಾಯತಿ ಇದೆ. ಪಟ್ಟಣದ ಜನಸಂಖ್ಯೆ 14,676 (2001).

ಇದೊಂದು ಇತಿಹಾಸ ಪ್ರಸಿದ್ಧ ಸ್ಥಳ. ಇಲ್ಲಿ ಐದು ಶಿಲಾಶಾಸನಗಳು ದೊರೆತಿದ್ದು ಅವುಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯನಿಗೆ (1077–1127) ಸೇರಿದ್ದು. ಮರಾಠರ ಕಾಲದಲ್ಲಿ ಇದು ಸಾಮಂತರ ಕೇಂದ್ರವಾಗಿತ್ತು. ಕಲಘಟಗಿಯಲ್ಲಿ 18ನೆಯ ಶತಮಾನದ ಮುಸ್ಲಿಂ ಸಂತ ರುಸ್ತುಂ ಶಹೀದನ ಗೋರಿಯಿದೆ. ಪ್ರತಿವರ್ಷ ಯುಗಾದಿಯ ಅನಂತರ ಇಲ್ಲಿ ಉರುಸು ನಡೆಯುತ್ತದೆ. (ಎಸ್.ವಿ.ಪಿ.ಎ.)

**ಕಲ್ಲತ್ತಗಿರಿ:** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿರುವ ಒಂದು ಪರ್ವತ. ತರೀಕೆರೆಯಿಂದ ದಕ್ಷಿಣಕ್ಕೆ 20ಕಿಮೀ ದೂರದಲ್ಲಿದೆ. ಕಲ್ಲತ್ತಗಿರಿ, ಕಲ್ಲತ್ತಿಗಿರಿ ಎಂದೂ ಕರೆಯಲಾಗುತ್ತದೆ. ಗಿರಿಪರ್ವತ ಶ್ರೇಣಿಗೆ ಸೇರಿದ ಈ ಪರ್ವತ ಸಮುದ್ರಮಟ್ಟದಿಂದ 1876ಮೀ ಎತ್ತರವಾಗಿದೆ. ಮನಮೋಹಕ ಪ್ರಕೃತಿ ಸೌಂದರ್ಯದಿಂದಲೂ ಆಹ್ಲಾದಮಯ ಹವಾಗುಣದಿಂದಲೂ ಕೂಡಿರುವ ಗಿರಿಯ ನೆತ್ತಿಯ ಮೇಲೆ ಕಟ್ಟಿನ ಚೌಡೇಶ್ವರಿ ದೇವಾಲಯವೊಂದಿದೆ.

ಕಲ್ಲತ್ತಗಿರಿಯ ಸಮೀಪದಲ್ಲಿಯೇ ಕಲ್ಲತ್ತಿಪುರ ಎಂಬ ಊರಿದೆ. ಇದು ಕೆಮ್ಮಣ್ಣುಗುಂಡಿಯಿಂದ 10ಕಿಮೀ ದೂರದಲ್ಲಿದ್ದು ನಿಸರ್ಗ ರಮಣೀಯತೆಯಿಂದ ಕೂಡಿದೆ. ಈ ಪ್ರದೇಶದಲ್ಲಿರುವ ಕಲ್ಲತ್ತ ಜಲಪಾತ ಜಿಲ್ಲೆಯ ಸುಂದರ ಜಲಪಾತಗಳಲ್ಲಿ ಒಂದು. ಇದು ಸು.130ಮೀಟರ್ (ಸು.400ಅಡಿ) ಆಳಕ್ಕೆ ಧುಮುಕುತ್ತಿದ್ದು ತನ್ನ ಪ್ರಕೃತಿ ಸಹಜ ದೃಶ್ಯದಿಂದ ನೋಡುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ.

ಪೂರ್ವದಲ್ಲಿ ಕಲ್ಲತ್ತಗಿರಿ ಪ್ರದೇಶ ಅಗಸ್ತ್ಯ ಋಷಿಯ ಆಶ್ರಮಗಳಲ್ಲಿ ಒಂದಾಗಿತ್ತೆಂದು ಪ್ರತೀತಿ. ಇಲ್ಲಿ ಎರಡು ಬಂಡೆಗಳ ನಡುವೆ ವೀರಭದ್ರನ ದೇವಾಲಯವಿದೆ. ಇದನ್ನು ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ತಿಳಿದುಬರುತ್ತದೆ. ಹೊರಗಿನಿಂದ ಇದೊಂದು ಗುಹಾದೇವಾಲಯದಂತಿದ್ದು ಇದರ ಮುಂಭಾಗದಲ್ಲಿ ಕಲ್ಲಿನಲ್ಲಿ ಕೆತ್ತಿದ ಮೂರು ಆನೆಗಳ ಚಿತ್ರಗಳಿವೆ. ಇವುಗಳ ನೆತ್ತಿಯ ಮೇಲಿನಿಂದ ಜಲಪಾತದ ನೀರು ಕೆಳಕ್ಕೆ ಧುಮ್ಮಿಕ್ಕುತ್ತದೆ. ಭಕ್ತಾದಿಗಳು ಈ ನೀರಿನಲ್ಲಿ ಮಿಂದು ದೇವರ ದರ್ಶನ ಮಾಡುತ್ತಾರೆ. ಇಲ್ಲಿ ಪ್ರತಿ ವರ್ಷ ಏಪ್ರಿಲ್ – ಮೇ ತಿಂಗಳಿನಲ್ಲಿ ಮೂರು ದಿನಗಳ ಕಾಲ ವೀರಭದ್ರನ ಜಾತ್ರೆ ನಡೆಯುತ್ತದೆ. ಇಲ್ಲಿಂದ ಸುಮಾರು ಒಂದು ಕಿಮೀ ದೂರದಲ್ಲಿ ಜಕ್ಕೆರುಪುದಿ ಎಂಬ ಸ್ಥಳವಿದೆ. ಅಲ್ಲಿ ಗಂಗಾತೀರ್ಥ ಎಂಬ ಹೆಸರಿನ ಒಂದು ಕೊಳವಿದೆ. ಅದರ ಸುತ್ತಲೂ ಜೇನುಗೂಡುಗಳಿರುವುದೊಂದು ವಿಶೇಷ. ಈ ಸ್ಥಳದಲ್ಲಿ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕುಕಾರ್ಖಾನೆಗೆ ಸೇರಿದ ಒಂದು ಪ್ರವಾಸಿ ಮಂದಿರವಿದೆ (**ನೋಡಿ: ಚಿಕ್ಕಮಗಳೂರು**). (ಎಂ.ಪಿ.ಎಂ.)

**ಕಲನಶಾಸ್ತ್ರ :** ಗಣಿತಶಾಸ್ತ್ರದಲ್ಲಿ ಒಂದು ವಿಶಿಷ್ಟ ವರ್ಗದ ಲೆಕ್ಕಾಚಾರಗಳನ್ನೂ ಅವುಗಳ ಹಿನ್ನೆಲೆಯ ಸೈದ್ಧಾಂತಿಕ ತತ್ತ್ವಗಳನ್ನೂ ಕ್ರೋಡೀಕರಿಸಿ ರೂಪಿಸಬಹುದಾದ ಯಾವುದೇ ವ್ಯವಸ್ಥೆ (ಕ್ಯಾಲ್ಕುಲಸ್). ಉತ್ಪನ್ನಗಳ (ಫಂಕ್ಷನ್ಸ್) ಮೇಲೆ ಎಸಗಬಹುದಾದ ಅವಕಲನ (ಡಿಫರೆನ್ಷಿಯೇಷನ್) ಮತ್ತು ಸಮಾಸಕಲನ (ಇಂಟೆಗ್ರೇಷನ್) ಎಂಬ ಎರಡು ಮೂಲಭೂತ ಗಣಿತ ಪರಿಕರ್ಮಗಳನ್ನು (ಮ್ಯಾಥ್ ಮ್ಯಾಟಿಕಲ್ ಅಪರೇಷನ್ಸ್) ಕುರಿತ ಅಧ್ಯಯನಕ್ಕೆ ಇಂದು ಕಲನಶಾಸ್ತ್ರಗಳ ಪೈಕಿ ವಿಶೇಷ ಪ್ರಾಮುಖ್ಯವಿದೆ. ಪ್ರಸಕ್ತ ಲೇಖನವನ್ನು ಈ ಕೆಳಗಿನ ಆರು ಪ್ರಾತಿನಿಧ್ಯಾತ್ಮಕ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗಿದೆ. 1 ಚಾರಿತ್ರಿಕ ಹಿನ್ನೆಲೆ, 2 ಅವಕಲನಶಾಸ್ತ್ರ, 3 ಸಮಾಸಕಲನಶಾಸ್ತ್ರ, 4 ಸಾಂತವ್ಯತ್ಯಾಸ ಕಲನಶಾಸ್ತ್ರ, 5 ಏರಿಳಿತಗಳ ಕಲನಶಾಸ್ತ್ರ, 6 ತಾರ್ಕಿಕ ಕಲನಕ್ರಿಯೆಗಳು.

**ಚಾರಿತ್ರಿಕ ಹಿನ್ನೆಲೆ :** ಕಲನಶಾಸ್ತ್ರದ ಸೃಷ್ಟಿಯನ್ನು ಇಂಗ್ಲೆಂಡಿನ ವಿಜ್ಞಾನಿ ಸರ್ ಐಸಾಕ್ ನ್ಯೂಟನ್ (1642–1727) ಮತ್ತು ಜರ್ಮನಿಯ ವಿಜ್ಞಾನಿ ಗಾಟ್ ಫ್ರೀಟ್ ವಿಲ್ ಹೆಲ್ಮ್ ಲೀಪ್‌ನಿಟ್ಸ್ (1646–1716) ಎಂಬವರು ಪ್ರತ್ಯೇಕವಾಗಿಯೂ ಸ್ವತಂತ್ರವಾಗಿಯೂ ಮಾಡಿದರು. ಮೊದಲಿಗೆ ಈ ಮೇಧಾವಿಗಳಿಬ್ಬರೂ ಸ್ನೇಹಿತರಾಗಿದ್ದರು. ಅಂತಾರಾಷ್ಟ್ರೀಯ ಖ್ಯಾತಿಯನ್ನೈದಿದ್ದ, ಪ್ರಪಂಚದ ಸಾರ್ವಕಾಲಿಕ ಮಹಾಮಿದುಳುಗಳಲ್ಲಿ ಒಬ್ಬನಾಗಿದ್ದ, ನ್ಯೂಟನ್ನನ ವಿಚಾರದಲ್ಲಿ ಲೀಪ್‌ನಿಟ್ಸನಿಗೆ ಪೂರ್ಣಗೌರವವಿತ್ತು. ಈತ ಇಂಗ್ಲೆಂಡಿಗೆ ಹೋಗಿಯೂ ಬಂದಿದ್ದ. ವಾಸ್ತವಿಕವಾಗಿ ಲೀಪ್‌ನಿಟ್ಸ್ ತನ್ನ ವಿಧಾನದ ಕಲನಶಾಸ್ತ್ರವನ್ನು ರೂಪಿಸುವ ಮೊದಲೇ ನ್ಯೂಟನ್ ತನ್ನ ವಿಧಾನದ ಕಲನಶಾಸ್ತ್ರವನ್ನು ಬೆಳೆಸಿದ್ದ.

ನ್ಯೂಟನ್ ವಿಧಾನದಲ್ಲಿ y ಎಂಬ ಚರದ ಅವಕಲನಾಂಕವನ್ನು $\dot{y}$ ಎಂದು y ಮೇಲೆ ಒಂದು ಚುಕ್ಕಿಯನ್ನು (dot) ಬರೆದು ನಿರೂಪಿಸಲಾಗಿತ್ತು. ಇಲ್ಲಿ ಒಂದು ಸಲದ ಅವಕಲನಕ್ರಿಯೆಯನ್ನು ಒಂದು ಚುಕ್ಕಿ ಸೂಚಿಸುವುದೆಂದು ಅರ್ಥ. ಆದ್ದರಿಂದ ಹತ್ತು ಸಲ ಒಂದು ಚರವನ್ನು ಪುನಃ ಪುನಃ ಅವಕಲಿಸಿದಾಗ ದೊರೆಯುವ ಹತ್ತನೆಯ ಕ್ರಮದ (ಆರ್ಡರ್) ಅವಕಲನಾಂಕವನ್ನು ಆ ಚರದ ಮೇಲೆ ಹತ್ತು ಚುಕ್ಕಿಗಳನ್ನು ಬರೆಯುವುದರ ಮೂಲಕ ಸೂಚಿಸಬೇಕು. ಬರವಣಿಗೆಯಲ್ಲಿ ಮತ್ತು ಗಣಿತದ ವಿಕಾಸದ ಹಾದಿಯಲ್ಲಿ ಇದು ಎಂಥ ತೊಡಕಿನ ಕ್ರಮ ಎಂಬುದು ಸ್ವಯಂವೇದ್ಯ. ಅಲ್ಲದೇ $\dot{y}$ ಎಂದು ಬರೆದಾಗ ಯಾವ ಚರವನ್ನು ಕುರಿತು y ಯನ್ನು ಅವಕಲಿಸಲಾಗಿದೆ ಎಂಬುದು ಸ್ಪಷ್ಟವಾಗುವುದಿಲ್ಲ.

ಲೀಪ್‌ನಿಟ್ಸನ ಸ್ವತಂತ್ರ ವಿಧಾನದಲ್ಲಿ $\frac{dy}{dx}$ ಎಂಬ ಸುಪ್ರಸಿದ್ಧ ಹಾಗೂ ಗಣಿತ ವಿದ್ಯಾರ್ಥಿಗಳಿಗೆ ಚಿರಪರಿಚಿತ ಸಂಕೇತ ಬಳಕೆಗೆ ಬಂದಿತು. ಇಲ್ಲಿನ $\frac{d}{dx}$ ಸಂಕೇತ ಅವಕಲನ ಕ್ರಿಯೆಯನ್ನು ಸೂಚಿಸುವುದು ಮಾತ್ರವಲ್ಲ, ಅದು x ಎಂಬ ಚರವನ್ನು ಕುರಿತು

ಇದೆ ಎಂಬುದನ್ನೂ ಸ್ಪಷ್ಟಪಡಿಸುವುದು. ಇದರ ಪ್ರಕಾರ y ಯನ್ನು n ಸಲ *x*ನ್ನು ಕುರಿತು ಪುನಃ ಪುನಃ ಅವಕಲಿಸಿದಾಗ ದೊರೆಯುವ ಅವಕಲನಾಂಕ

$$\frac{d}{dx}\ \frac{d}{dx}\ \frac{d}{dx}\cdots\cdots\frac{d}{dx}(y)=\frac{d^n y}{dx^n}$$

$$\longleftarrow \mathrm{n} \longrightarrow$$

ಆಗುತ್ತದೆ. ಇದು ತುಂಬ ಅಚ್ಚುಕಟ್ಟಾದ ಮತ್ತು ಸಾರ್ವತ್ರೀಕರಣಕ್ಕೆ ಬಲು ಅನುಕೂಲವಾದ ನಿರೂಪಣೆ. ಲೀಪ್‌ನಿಟ್ಸ್ ತಾನು ಸಂಶೋಧಿಸಿ ಪಡೆದ ಫಲಿತಾಂಶಗಳನ್ನು 1684ರಲ್ಲಿ ನ್ಯೂಟನ್ನನಿಗಿಂತ ಮೊದಲೇ ಪ್ರಕಟಪಡಿಸಿದ. ಒಂದು ವರದಿಯ ಪ್ರಕಾರ ಆ ಮೊದಲೇ ತನ್ನ ಸಂಶೋಧನಪತ್ರವನ್ನು ಗೌರವಪೂರ್ವಕವಾಗಿ ನ್ಯೂಟನ್ನನಿಗೆ ಕಳಿಸಿಯೂಕೊಟ್ಟಿದ್ದ. ಆದರೆ ನ್ಯೂಟನ್ನನ ಅನುಯಾಯಿಗಳು ಲೀಪ್‌ನಿಟ್ಸನ ವಿರುದ್ಧ ಕೃತಿಚೌರ್ಯದ (ನಿಖರವಾಗಿ ಹೇಳುವುದಾದರೆ ಪರಿಕಲ್ಪನೆಯ ಚೌರ್ಯದ) ಆಪರಾಧವನ್ನು ಆರೋಪಿಸಿದರು. ಇದರಿಂದ ಪ್ರಾರಂಭದಲ್ಲಿ ಜರ್ಮನಿಯ, ತರುವಾಯ ಇಡೀ ಯುರೋಪ್ ಖಂಡದ, ಗಣಿತಜ್ಞರು ಕುಪಿತರಾಗಿ ಇಂಗ್ಲೆಂಡಿನ ಗಣಿತದ ವಿರುದ್ಧ ಕತ್ತಿ ಝಳಪಿಸಿದರು. ಇಂಗ್ಲೆಂಡಿನವರಾದರೋ ಯುರೋಪ್ ಖಂಡದ ಗಣಿತದ ಎದುರು ಸೆಟೆದು ನಿಂತರು. ವಿಜ್ಞಾನದ ಬೆಳೆವಣಿಗೆಗೆ ಅತ್ಯಾವಶ್ಯಕವಾದ ಪರಿಕಲ್ಪನೆಗಳ ವಿನಿಮಯ ಮತ್ತು ವಿಮರ್ಶೆ ಗಣಿತರಂಗದಲ್ಲಿ, ಇಂಗ್ಲೆಂಡ್ ಮತ್ತು ಯುರೋಪ್ ದೇಶಗಳ ನಡುವೆ ಈ ಅವೈಜ್ಞಾನಿಕ ಹೋರಾಟದ ಪರಿಣಾಮವಾಗಿ, ಸ್ಥಗಿತಗೊಂಡುವು. ಬೌದ್ಧಿಕವಾಗಿ ಅಧಿಕ ಉತ್ಕೃಷ್ಟದರ್ಜೆಯದಾದ ಲೀಪ್‌ನಿಟ್ಸನ ಕಲನಶಾಸ್ತ್ರ ವಿಧಾನ ಇಂಗ್ಲೆಂಡಿನ ಗಣಿತ ವಿದ್ವಾಂಸರಿಗೆ ಅಮಾನ್ಯವಾಯಿತು. ನ್ಯೂಟನ್ನನ ತೊಡಕಿನ ಮತ್ತು ಆ ಕಾರಣದಿಂದ ಪ್ರಗತಿಗೆ ವೇಗಾಪಕರ್ಷಕಾರಿಯಾಗಿದ್ದ ವಿಧಾನವೇ ಅವರಿಗೆ ಪ್ರಿಯವಾಯಿತು. ಅಂಥ ಸ್ವದೇಶಾಭಿಮಾನದ ಮುಂದೆ ವಿಜ್ಞಾನದ ನಿರಪೇಕ್ಷ ಮಾರ್ಗ ಅವರಿಗೆ ಕಾಣಿಸಲಿಲ್ಲ. ಒಂದು ಶತಮಾನಕಾಲ ಇಂಗ್ಲೆಂಡ್ ಮತ್ತು ಯುರೋಪ್ ದೇಶಗಳ ಗಣಿತ ಪ್ರವಾಹಗಳು ಪ್ರತ್ಯೇಕವಾಗಿಯೇ ಹರಿದುವು. ಇದರಿಂದ ಕುಂಠಿತವಾದದ್ದು ಇಂಗ್ಲೆಂಡಿನ ಗಣಿತಪ್ರಗತಿ. ಈ ಅರ್ಥಹೀನವಿವಾದದ ವ್ಯರ್ಥಶ್ರಮವನ್ನು ಪರಿಗಣಿಸಿದ ಇಂಗ್ಲೆಂಡಿನ ಗಣಿತಜ್ಞರು 19ನೆಯ ಶತಮಾನದ ತರುಣದಲ್ಲಿ ಕ್ಯಾಂಬ್ರಿಜ್ಜಿನಲ್ಲಿ ಒಂದು ಸಂಘವನ್ನು ಸ್ಥಾಪಿಸಿ ಅದರ ಮೂಲಕ ಲೀಪ್‌ನಿಟ್ಸ್ ವಿಧಾನವನ್ನು ಪ್ರಚಾರಕ್ಕೆ ತರಲು ತೀವ್ರ ಪ್ರಯತ್ನ ನಡೆಸಿ ಯಶಸ್ವಿಗಳಾದರು. "ವಿಶ್ವವಿದ್ಯಾಲಯದ dot-ageನ ವಿರುದ್ಧ ಶುದ್ಧ d-ism ನ ತತ್ತ್ವಗಳ" ಸ್ಥಾಪನೆ ಅವರ ಉದ್ದೇಶವೆಂದು ನಿರೂಪಿಸಿಲಾಗಿತ್ತು. ಇಂಗ್ಲೆಂಡ್–ಯುರೋಪುಗಳ ನಡುವೆ ಈ ಭಾವ ತೀವ್ರತೆಯ ಕಲಹ ನಡೆಯಬೇಕಾಗಿಯೇ ಇರಲಿಲ್ಲ. ಬೌದ್ಧಿಕ ಪ್ರಪಂಚದಲ್ಲಿ ಉನ್ನತ ಸ್ತರ ತಲುಪಿದವರೂ ಹೇಗೆ ದುರ್ಬಲ ಗಳಿಗೆಗಳಲ್ಲಿ ಕೀಳಾಗಿ ವರ್ತಿಸಬಹುದೆಂಬುದಕ್ಕೆ ಇದೊಂದು ನಿದರ್ಶನ. ಕಲನಶಾಸ್ತ್ರದಲ್ಲಿ ಬರುವ ಒಂದು ಪ್ರಧಾನ ಪರಿಕಲ್ಪನೆ ಪರಿಮಿತಿ (ಲಿಮಿಟ್). x/y ಎಂಬ ನಿಷ್ಪತ್ತಿಯಲ್ಲಿ (ರೇಷಿಯೊ) x ಮತ್ತು yಗಳೆರಡೂ ಚರಗಳಾಗಿದ್ದು ಎರಡೂ ಶೂನ್ಯಗಾಮಿಗಳಾದಾಗ ನಿಷ್ಪತ್ತಿಯ ಬೆಲೆ ಏನಾಗುತ್ತವೆ ಎಂಬ ಪರಿಶೀಲನೆ ಈ ಪರಿಕಲ್ಪನೆ ಹುಟ್ಟಲು ಕಾರಣವಾಯಿತು. ಒಂದು ಸರಳ ಉದಾಹರಣೆಯಾಗಿ

$$y=\frac{x^2-4}{x-2}$$

ಎಂಬ ಉತ್ಪನ್ನವನ್ನು ಪರಿಶೀಲಿಸಬಹುದು. ಇಲ್ಲಿ x ಚರ 2ನ್ನು ಸಮೀಪಿಸಿದಂತೆ (ಎಂದರೆ 1.9, 1.99, 1.999,........ಇತ್ಯಾದಿ ಕೆಳಗಿನಿಂದ 2ರ ಎಡೆಗೆ ಸಾಗಬಹುದು; 2.1 2.01, 2.001,.....ಇತ್ಯಾದಿ ಮೇಲಿನಿಂದ 2ರ ಎಡೆಗೆ ಸಾಗಬಹುದು) y ಯ ಬೆಲೆಯಲ್ಲಿ ವ್ಯತ್ಯಾಸ ಆಗುತ್ತದೆ. ಅವೆಲ್ಲವನ್ನೂ ಗಣನೆಯಿಂದ ತಿಳಿಯಬಹುದು. ಊದಾಹರಣೆಗೆ x=1.999 ಆದಾಗ y=3.999; x= 2.001 ಆದಾಗ y=4.001. ಸಾಮಾನ್ಯ ಪರಿಸ್ಥಿತಿ ಇಷ್ಟು ಸರಳವಾಗಿ ತೋರಿದರೂ x=2 ಆದಾಗ y ಬೆಲೆ ಬೇರೆಯೇ ಆಗಿಬಿಡುತ್ತದೆ. ಆಗ $y=\frac{0}{0}$ ಎನ್ನುವ ಒಂದು ಅವ್ಯಾಖ್ಯಿತ ರೂಪ (ಅಂಡಿಫೈನ್ಡ್ ಫಾರಂ) ತಲೆದೋರುವುದು. ಆದ್ದರಿಂದ x ಚರ 2ನ್ನು ಸಮೀಪಿಸಿದಂತೆ ಅಥವಾ xಚರ 2_ಗಾಮಿಯಾದಂತೆ y ಚರ ಒಂದು ಪರಿಮಿತಿಯೆಡೆಗೆ ಸರಿಯುವುದು ಎಂದು ಸ್ಫುರಿಸುವುದು ಸಹಜ. ಈ ಪರಿಮಿತಿಯ ಪರಿಕಲ್ಪನೆಯನ್ನು ಒಂದು ಸಂಗತ ತಾರ್ಕಿಕ ತಳಹದಿಯಮೇಲೆ ಸ್ಥಾಪಿಸಲು ಫ್ರಾನ್ಸಿನ ಕೋಶಿ (1789–1857), ನಾರ್ವೇ ದೇಶದ ಆಬೆಲ್ (1802–29), ಜರ್ಮನಿಯ ವೈರ್‌ಸ್ಟ್ರಾಸ್ (1815–97) ಮೊದಲಾದ ಮಹಾ ವಿದ್ವಾಂಸರು ಶ್ರಮಿಸಿದ್ದಾರೆ.

**ಅವಕಲನಶಾಸ್ತ್ರ: (ಡಿಫರೆನ್ಸಿಯಲ್ ಕ್ಯಾಲ್ಕುಲಸ್):** ಈ ಶಾಸ್ತ್ರದ ಉಗಮವನ್ನು ಹುಡುಕುವ ಸಲುವಾಗಿ ಒಂದು ಮಗುವಿಗೆ ತೂಕವೃದ್ಧಿಯ ನಿದರ್ಶನವನ್ನು ಪರಿಶೀಲಿಸಿ. ಮಗುವಿಗೆ 3 ವರ್ಷ ಮಯಸ್ಸಾದಾಗ ಅದರ ತೂಕ 14 ಕೆಜಿಯೆಂದೂ 7 ವರ್ಷ ವಯಸ್ಸಾದಾಗ 22 ಕೆಜಿಯೆಂದೂ ಭಾವಿಸೋಣ. ಹಾಗಾದಲ್ಲಿ 9 ವರ್ಷ ವಯಸ್ಸಾದಾಗ ಆ ಮಗು ಎಷ್ಟು ಕೆಜಿ ತೂಗಬಹುದು? ಪ್ರೌಢಮಟ್ಟದಲ್ಲಿ ಗಣಿತವನ್ನು ಅಭ್ಯಸಿಸದಿರುವ ಜನರು ಕೂಡ ಈ ಸಮಸ್ಯೆಯನ್ನು ಸ್ವಾಭಾವಿಕವೆಂದೆನಿಸುವ ಒಂದು ವಿಶಿಷ್ಟಮಾರ್ಗದಲ್ಲಿ ಬಿಡಿಸಲೆತ್ನಿಸುತ್ತಾರೆ. ಅವರ ತರ್ಕ ಹೀಗಿರುತ್ತದೆ: 7–3=4 ವರ್ಷಗಳ ಅವಧಿಯಲ್ಲಿ ಮಗುವಿನ ತೂಕ 22–14=8 ಕೆಜಿ ಹೆಚ್ಚಿರುವುದರಿಂದ ಈ ತೂಕವೃದ್ಧಿಯ ದರ ವರ್ಷವೊಂದಕ್ಕೆ 8/4 =2 ಕೆಜಿ; ಇಷ್ಟು ದರದಂತೆ 9–3=6 ವರ್ಷಗಳ ಅವಧಿಯಲ್ಲಿ ಮಗುವಿನ ತೂಕ ಆ ಮಗುವಿಗೆ 3 ವರ್ಷ ವಯಸ್ಸಾದಾಗ ಇದ್ದುದಕ್ಕಿಂತ $6\times 2=12$ ಕೆಜಿ ಏರಿರಬೇಕು. ಆದ್ದರಿಂದ 9 ವರ್ಷ ವಯಸ್ಸಿನಲ್ಲಿ ಮಗುವಿನ ತೂಕ 14+12=26 ಕೆಜಿಗಳು. ನಾಗರಿಕಜೀವನದಲ್ಲಿ ಬಹುಕಾಲದಿಂದಲೂ ಹಾಸುಹೊಕ್ಕಾಗಿ ಬಂದಿರುವ ತ್ರೈರಾಶೀಯ ಗಣನವಿಧಾನ ಇಂಥ ಲೆಕ್ಕಾಚಾರಕ್ಕೆ ಸ್ಫೂರ್ತಿನೀಡಿದೆ. ಮಗುವಿನ ಬೆಳೆವಣಿಗೆಯ ಪ್ರಸಂಗದಲ್ಲಿ ಈ ಬಗೆಯ ಲೆಕ್ಕಾಚಾರಕ್ಕೂ ವಾಸ್ತವಿಕ ಪರಿಸ್ಥಿತಿಗೂ ಒಂದಷ್ಟು ಅಂತರವೇನೋ ಇರಬಹುದು; ಆದರೆ ಆ ಅಂತರ ತೀರ ಅಧಿಕವಾಗಿರಲಾರದೆಂಬ ಭರವಸೆಯಿರುವುದರಿಂದ ತ್ರೈರಾಶಿಯನ್ನು ಆಶ್ರಯಿಸಲು ಜನ ಹಿಂಜರಿಯರು. ಅವಕಲನಶಾಸ್ತ್ರ ಸಹ ತ್ರೈರಾಶೀಯ ಗಣಿತಪರಂಪರೆಯ ಒಂದು ಸಂಸ್ಕರಿತ ವಿಸ್ತರಣೆ.

**ಉತ್ಪನ್ನಗಳು ಮತ್ತು ನಿಷ್ಪನ್ನಗಳು (ಫಂಕ್ಷನ್ಸ್ ಅಂಡ್ ಡಿರೈವೆಟಿವ್ಸ್):** ನಮ್ಮ ನಿದರ್ಶನದಲ್ಲಿ ಮಗುವಿನ ತೂಕ ಮಗುವಿನ ವಯಸ್ಸನ್ನು ಅವಲಂಬಿಸಿದೆಯಷ್ಟೆ. ಇಂಥ ಅವಲಂಬನೆಗಳನ್ನು ಗಣಿತಜ್ಞರು ಉತ್ಪನ್ನಗಳೆಂದು (ಫಂಕ್ಷನ್ಸ್) ಕರೆದು $f, g, \phi$ ಮುಂತಾದ ಸಂಕೇತಗಳಿಂದ ಅವನ್ನು ಸೂಚಿಸುತ್ತಾರೆ. ಉದಾಹರಣೆಗೆ ಮಗುವಿನ ಮಯಸ್ಸಿನ ಮೇಲೆ ಅದರ ತೂಕ ತೋರುವ ಅವಲಂಬನೆಯನ್ನು f ಉತ್ಪನ್ನಾಕ್ಷರದಿಂದ ಸೂಚಿಸಬಹುದು. ಹಾಗೆ ಸೂಚಿಸಿದ ಬಳಿಕ ಣವರ್ಷ ವಯಸ್ಸಾದಾಗ ಆ ಮಗುವಿನ ತೂಕವನ್ನು f(t) ಎಂಬ ಬೆಲೆಯ ಸಂಕೇತಿಂದ ವ್ಯಕ್ತಪಡಿಸುವುದು ವಾಡಿಕೆ. ಈ ಸಂಜ್ಞಾಪದ್ಧರಿಯಂತೆ, 3 ವರ್ಷ ವಯಸ್ಸಾದಾಗ ಮಗು 14 ಕೆಜಿ ತೂಗುತ್ತದೆ ಎಂಬ ಕನ್ನಡ ವಾಕ್ಯ ಗಣಿತ ಭಾಷೆಯಲ್ಲಿ ಜಿ(3)=14 ಎಂದು ತರ್ಜುಮೆಯಾಗುತ್ತದೆ. ಅಂತೆಯೇ ಜಿ(7)=22 ಎಂಬುದರ ಕನ್ನಡ ಅರ್ಥ, 7 ವರ್ಷ ವಯಸ್ಸಿನಲ್ಲಿ ಮಗುವಿನ ತೂಕ 22 ಕೆಜಿ ಎಂದು ಮೇಲೆ ಹೇಳಿರುವಂತೆ ಮಗುವಿನ ತೂಕವೃದ್ಧಿಯ ವಾರ್ಷಿಕ ದರ 2 ಕೆಜಿಗಳಾದರೆ h ವರ್ಷಗಳಲ್ಲಿ ಆ ಮಗುವಿನ ತೂಕ 2h ಕೆಜಿಗಳಷ್ಟು ಏರುವುದು. ಆದ್ದರಿಂದ (3+h) ವರ್ಷ ವಯಸ್ಸಾದಾಗ ಆ ಮಗುವಿನ ತೂಕ 3 ವರ್ಷ ವಯಸ್ಸಿನಲ್ಲಿ ಇದ್ದುದಕ್ಕಿಂತ 2hಕೆಜಿಗಳಷ್ಟು ಅಧಿಕವಾಗಿರಬೇಕು. ಸಂಕೇತಗಳಲ್ಲಿ

$$f(3+h)=f(3)+2h=14+2h \qquad \text{.... [1]}$$

ಇದೊಂದು ಸರಿಸುಮಾರು ಸಮೀಕರಣ ಮಾತ್ರ; ಆಗಲೇ ತಿಳಿಸಿರುವಂತೆ ಇದಕ್ಕೂ ವಾಸ್ತವಿಕ ಪರಿಸ್ಥಿತಿಗೂ ತುಸು ಭೇದವಿರಬಹುದು. hನ ಬೆಲೆ ಅಲ್ಪವಾಗಿರುವವರೆಗೆ ಈ ಭೇದವೂ ಅಲ್ಪವಾಗಿರುತ್ತದೆ; ಅ ಬೆಲೆ ಅಧಿಕವಾದಾಗಲಾದರೋ ಸಮೀಕರಣ [1] ಕ್ಕೂ ವಾಸ್ತವಿಕ ಪರಿಸ್ಥಿತಿಗೂ ಸಂಬಂಧವನ್ನೇ ಗುರುತಿಸಲಾಗದಷ್ಟು ಭಾರಿ ಅಂತರ ಏರ್ಪಡಬಹುದು. ಉದಾಹರಣೆಗೆ 15 ವರ್ಷ ವಯಸ್ಸಿನಲ್ಲಿ ಮಗುವಿನ ತೂಕ $f(15)=f(3+12)=14+2\times 12=38$ ಕೆಜಿ ಆಗಿರುವ ಬದಲು 50 ಕೆಜಿಯೇ ಆಗಬಹುದು. ತೂಕ ಸದಾಕಾಲವೂ ವರ್ಷವೊಂದಕ್ಕೆ 2 ಕೆಜಿಗಳಷ್ಟೇ ನಿಯತ ದರದಲ್ಲಿ ಹೆಚ್ಚದಿರುವುದೇ ಇಂಥ ಅಂತರ ತಲೆದೋರಲು ಕಾರಣ. ವರ್ಷಕ್ಕೇ ಕೆಜಿಗಳ ವೃದ್ಧಿದರ 3 ವರ್ಷ ವಯಸಿನ ನೆರೆಯಲ್ಲಿ (ನೇಬರ್ಹುಡ್) ಮಾತ್ರವೇ ಅನ್ವಯಾರ್ಹ. 15 ವರ್ಷ ವಯಸ್ಸಿನ ನೆರೆಯಲ್ಲಿ ಈ ವಾರ್ಷಿಕ ವೃದ್ಧಿದರ 5 ಕೆಜಿಗಳಷ್ಟಾಗಿರಬಹುದು. ಆಗ 15 ವರ್ಷಕ್ಕೆ ಸಮೀಪವಾಗಿರುವ ವಯಸ್ಸುಗಳಿಗೆ ಹೊಂದಿಕೊಳ್ಳುವ ಸರಿಸುಮಾರು ಸಮೀಕರಣ

$$f(15+h)=f(15)+5h=50+5h \qquad \text{....(2)}$$

ಎಂಬುದೇ ವಿನಾ [1] ಅಲ್ಲ. ಅಂದಮೇಲೆ ತೂಕದ ವೃದ್ಧಿದರ ಕೂಡ ತೂಕದಂತೆಯೇ ಮಗುವಿನ ವಯಸ್ಸನ್ನು ಅವಲಂಬಿಸಿದೆಯೆಂದಾಯಿತು. ಉತ್ಪನ್ನ ಸಂಜ್ಞಾಪದ್ಧತಿಯ ಮೇರೆಗೆ ಈ ಹೊಸ ಅವಲಂಭನೆಯನ್ನು f' ಎಂಬ ಸಂಕೇತದಿಂದಲೂ t ವರ್ಷ ವಯಸ್ಸಿನ ಸಮೀಪಕ್ಕೆ ಹೊಂದಿಕೆಯಾಗುವ ತೂಕವೃದ್ಧಿಯ ವಾರ್ಷಿಕ ದರವನ್ನು f'(t) ಎಂಬ ಸಂಕೇತದಿಂದಲೂ ಸೂಚಿಸೋಣ. ಈಗ, 3 ವರ್ಷ ವಯಸ್ಸಿನ ನೆರೆಯಲ್ಲಿ ಮಗುವಿನ ತೂಕ ವರ್ಷವೊಂದಕ್ಕೆ 2 ಕೆಜಿ ದರದಂತೆ ಹೆಚ್ಚುತ್ತದೆ ಎಂಬ ಕನ್ನಡ ವಾಕ್ಯ ಗಣಿತಭಾಷೆಯಲ್ಲಿ f'(3)=2ಎಂಬ ರೂಪವನ್ನು ತಾಳುತ್ತದೆ. ಅಂತಯೇ f'(15)=5. ಇಂಥ ಸಂಜ್ಞಾಪದ್ಧರಿಯನ್ನು ನಿಯೋಜಿಸಿಕೊಂಡ ಬಳಿಕ ಯಾವುದೇ t ವರ್ಷ ವಯಸ್ಸಿನ ನೆರೆಯಲ್ಲಿ ಕಂಡುಬರಬಹುದಾದ ತೂಕ–ವಯಸ್ಸುಗಳ ಸಂಬಂಧವನ್ನು [1] ಮತ್ತು [2] ಕ್ಕೆ ಸದೃಶ ರೀತಿಯಲ್ಲಿ ಪ್ರತಿಬಿಂಬಿಸಬಲ್ಲ ಸರಿಸುಮಾರು ಸಮೀಕರಣವನ್ನು ಬರೆಯಲು ಕಷ್ಟವೇನೂ ಆಗುವುದಿಲ್ಲ. ಆ ಸಮೀಕರಣ ಹೀಗಿರುತ್ತದೆ:

$$f(t+h)=f(t)+hf'(t) \qquad \text{...[3]}$$

ಈ ಎಲ್ಲ ವಿಶ್ಲೇಷಣೆಯ ಫಲವಾಗಿ f ಎಂಬ ಒಂದು (ಅವಲಂಬನೆ ಅಥವಾ) ಉತ್ಪನ್ನದಿಂದ ಹೊರಟ ಕೆಲವು ಸಂದರ್ಭಗಳಲ್ಲಿ ನಾವು f'ಎಂಬ ಇನ್ನೊಂದು ಉತ್ಪನ್ನವನ್ನು

ಗೊತ್ತುಮಾಡಬಹುದೆಂದೂ ಆ ಎರಡನೆಯ ಉತ್ಪನ್ನ ಮೊದಲನೆಯದರ ಬೆಲೆಗಳ (ತಾತ್ಕಾಲಿಕ ಅಥವಾ ಸ್ಥಳೀಯ) ವೃದ್ಧಿದರಗಳನ್ನು ಸೂಚಿಸುತ್ತದೆಂದೂ ವೇದ್ಯವಾಗುತ್ತದೆ. ಇಂಥ f'ಗೆ f ಉತ್ಪನ್ನದ ನಿಷ್ಪನ್ನ (ಡಿರೈವೆಟಿವ್) ಎಂದು ಹೆಸರು. ನಿಷ್ಪನ್ನವು ವೃದ್ಧಿದರದ ಸೂಚಕವೆಂದಾಯಿತು. ನಿಷ್ಪನ್ನಗಳೇ ಅವಕಲನಶಾಸ್ತ್ರದ ಮೂಲಭೂತ ಅಧ್ಯಯನ ಸಾಮಗ್ರಿ..

ಅನಂತಸೂಕ್ಷ್ಮಗಳು (ಇನ್ ಫಿನಿಟೆಸಿಮಲ್ಸ್) ಮತ್ತು ಪರಿಮಿತಿಗಳ (ಲಿಮಿಟ್ಸ್) ಬಗ್ಗೆ ವಿವಾಹ: ನಿಷ್ಪನ್ನದ ಪರಿಕಲ್ಪನೆಯನ್ನು [1], [2], [3] ಎಂಬ ಸರಿಸುಮಾರು ಸಮೀಕರಣಗಳ ಮೂಲಕ ರೂಪಿಸಲು ಯತ್ನಿಸಿದ್ದೇವೆ. h ಬೆಲೆ ಅಲ್ಪವಾಗಿದ್ದಾಗ ಮಾತ್ರ ಈ ಸಮೀಕರಣಗಳು ಉಪಯುಕ್ತವಾಗಬಲ್ಲವೆಂದು ಕೂಡ ಮನಗಂಡಿದ್ದೇವೆ. ಆದರೆ ಅಲ್ಪ ಎಂದರೆ ಎಷ್ಟು ಅಲ್ಪ? ಈ ಪ್ರಶ್ನೆಯನ್ನು ಇತ್ಯರ್ಥಪಡಿಸದಿರುವಾಗ ಸರಿಸುಮಾರು ಸಮೀಕರಣಗಳ ಬಳಕೆ ತೀರ ವಿವಾದಾಸ್ಪದವಾಗಬಹುದಷ್ಟೆ. ಸೈದ್ಧಾಂತಿಕ ಸಂಸ್ಕಾರವಿಲ್ಲದ ಸರಿಸುಮಾರು ಸಮತ್ವದ ಕಲ್ಪನೆ ಗಣಿತಕ್ಕೆ ಮಾರಕ. a=b ಮತ್ತು b=c ಎಂಬೆರಡು ಸರಿಸುಮಾರು ಸಮತ್ವಗಳ ನೆರವಿನಿಂದ ಅಷ್ಟೇ ಸರಿಸುಮಾರಿನ ಎಲ್ಲೆಯೊಳಗೆ a=c ಎಂದು ತೀರ್ಮಾನಿಸಲು ಸಾಧ್ಯವಾಗದಿರುವುದೇ ಇದಕ್ಕೆ ಕಾರಣ. ಅವಕಲನಶಾಸ್ತ್ರದ ಇತಿಹಾಸದುದ್ದಕ್ಕೂ ಈ ತೀವ್ರ ಟೀಕೆಯನ್ನು ಎದುರಿಸಲು ಹಲವಾರು ಗಣಿತಜ್ಞರು ನಡೆಸಿರುವ ವಿವಿಧ ಯತ್ನಗಳು ಕಂಡುಬರುತ್ತವೆ. ಅವಕಲನಶಾಸ್ತ್ರದ ನಿರ್ಮಾತೃಗಳಲ್ಲೊಬ್ಬನಾದ ಲೀಪ್‍ನಿಟ್ಸ್‌ನ ಪ್ರಕಾರ ನಾವು ಬಳಸುವ ಸಂಖ್ಯಾವ್ಯವಸ್ಥೆಗೆ ಅನಂತಸೂಕ್ಷ್ಮಗಳೆಂಬ (ಇನ್ ಫಿನಿಟೆಸಿಮಲ್ಸ್) ಸೂಕ್ಷ್ಮಾತಿಸೂಕ್ಷ್ಮವೂ ಮಾಪನಾತೀತವೂ ಆದ ಆದರ್ಶ ಪರಿಮಾಣಗಳನ್ನು (ಐಡಿಯಲ್ ಮ್ಯಾಗ್ನಿಟ್ಯೂಡ್ಸ್) ಸೇರಿಕೊಳ್ಳಬಹುದು; ಮತ್ತು h ಎಂಬುದು ಅಂಥ ಒಂದು ಅನಂತಸೂಕ್ಷ್ಮವಾದಾಗ [1], [2], [3] ಸಂಬಂಧಗಳನ್ನು ಸರಿಸುಮಾರು ಸಮೀಕರಣಗಳೆಂದು ಭಾವಿಸುವ ಬದಲು ನಿಖರ ಸಮತ್ವಗಳೆಂದೇ ಪರಿಗಣಿಸಿಬಿಡಬಹುದು. ಇಂಥ ಅನಂತಸೂಕ್ಷ್ಮಗಳನ್ನು ಒಂದು ಸೈದ್ಧಾಂತಿಕ ಚೌಕಟ್ಟಿನೊಳಗೆ ಆಳವಡಿಸುವ ಪ್ರಯತ್ನವನ್ನೇನೂ ಲೀಪ್‍ನಿಟ್ಸ್ ಕೈಗೊಳ್ಳಲಿಲ್ಲ. ಆದಾಗ್ಯೂ ಅನಂತಸೂಕ್ಷ್ಮಗಳ ಪರಿಕಲ್ಪನೆ ಹದಿನೆಂಟನೆಯ ಶತಮಾನದ ಉತ್ತರಾರ್ಧದವರೆಗೆ ಯೂರೋಪಿನಲ್ಲಿ ಗಣಿತಶಾಸ್ತ್ರದ ಬೆಳೆವಣಿಗೆಯ ಮೇಲೆ ತನ್ನ ಅಪಾರ ಪ್ರಭಾವವನ್ನು ಬೀರಿತು. ಜಿ.ಎಫ್.ಎ.ದಲಾಪಿಥಲ್ (1661–1704) ಎಂಬಾತನ 1696ರಲ್ಲಿ ಪ್ರಕಟವಾದ ಅವಕಲನಶಾಸ್ತ್ರದ ಪ್ರಪ್ರಥಮ ಪಠ್ಯಗ್ರಂಥದಲ್ಲಿ (ಪುನರಾವೃತ್ತಿ 1715) ಅನಂತಸೂಕ್ಷ್ಮಗಳನ್ನು ಸಾಧಾರಣ ಪರಿಮಾಣಗಳಷ್ಟೇ ಸ್ವಾಭಾವಿಕವಾಗಿಯೂ ಧಾರಾಳವಾಗಿಯೂ ಬಳಸಿಕೊಂಡಿದ್ದಾನೆ. ಆದರೆ ಬರಬರುತ್ತ ಅನಂತಸೂಕ್ಷ್ಮಗಳ ಪ್ರಯೋಗದಿಂದ ಗಣಿತೀಯ ಪರಿಮಾಣಗಳು ಏಕಕಾಲದಲ್ಲಿ ವಿಭಿನ್ನವೂ ಸಮವೂ ಆಗಬೇಕಾಗುವ ಹೆಚ್ಚು ಹೆಚ್ಚು ಅಸಮಂಜಸ ಪ್ರಕರಣಗಳು ತಲೆದೋರಿ ಬಹುಸಂಖ್ಯಾತ ಗಣಿತಜ್ಞರು ಈ ಪರಿಕಲ್ಪನೆಯನ್ನು ದೋಷಯುಕ್ತವೆಂದು ತಿರಸ್ಕರಿಸತೊಡಗಿದರು. ಇದರಿಂದಾಗಿ ಅವಕಲನಶಾಸ್ತ್ರರೂಪಣೆಗೆ ಅನಂತಸೂಕ್ಷ್ಮಗಳಿಗಿಂತ ಮುಂದೆ ವಿವರಿಸಲಾಗುವ ಪರಿಮಿತಿಗಳ (ಲಿಮಿಟ್ಸ್) ಪರಿಕಲ್ಪನೆ ಹೆಚ್ಚು ಸೂಕ್ತವೆಂದು ಅಭಿಮತ ಸಲುವಳಿಗೆ ಬಂದಿತು. ಪ್ರಧಾನವಾಗಿ ಜೆ. ಲೆ. ಆರ್. ಡಾಲೆಂಬರ್ (1717–1783) ಮತ್ತು ಎ. ಎಲ್. ಕೋಶಿ ಅವರಿಂದ ಪ್ರಾರಂಭವಾದ ಈ ಅಭಿಪ್ರಾಯಪಲ್ಲಟ ವೈರ್ಸ್ಟ್ರಾಸ್ ಎಂಬಾತನಿಂದ ಪರಿಪಕ್ವಗೊಂಡು ಆಧುನಿಕ ಪಠ್ಯಕ್ರಮಗಳಲ್ಲಿ ಕಾಣುವ ರೂಪ ತಾಳಿತು. ಪರಿಮಿತಿಯ ಪರಿಕಲ್ಪನೆಯನ್ನು ವಿವರಿಸುವ ಸಲುವಾಗಿ ಸರಿಸುಮಾರು ಸಮೀಕರಣ [3] ನ್ನು ಕೆಳಗೆ ತೋರಿಸಿರುವಂತೆ ರೂಪಾಂತರಿಸೋಣ:

$$\frac{f(t+h)-f(t)}{h} = f'(t)$$

t ಯನ್ನು ಸ್ಥಿರವೆಂದೂ hಅನ್ನು ಚರವೆಂದೂ ಪರಿಗಣಿಸಿದರೆ ಮೇಲಿನ ಸಮೀಕರಣದ ಎಡಭಾಗದಲ್ಲಿ ಒಂದು ಚರರಾಶಿಯೂ ಬಲಭಾಗದಲ್ಲಿ ಒಂದು ಸ್ಥಿರರಾಶಿಯೂ ಇರುವುದು ತಿಳಿಯುತ್ತದೆ. ಈಗ ಚರರಾಶಿಯ ಬೆಲೆ h ನ ಬೆಲೆಯನ್ನು ಅವಲಂಬಿಸಿದೆ; ಅದನ್ನು ಸ್ಥಿರರಾಶಿಯಾದ f'(t)ಗೆ ಸಮವೆಂದು ಹೇಳುವುದು ಅನುಚಿತ. ವಾಸ್ತವಿಕವಾಗಿ ಸೊನ್ನೆಗೆ ಹೆಚ್ಚು ಹೆಚ್ಚು ಸಮೀಪವಾಗುವ ಬೇರೆ ಬೇರೆ ಅಲ್ಪ ಬಲೆಗಳನ್ನು hಗೆ ಆದೇಶಿಸುತ್ತ ಹೋದರೆ $\frac{f(t+h)-f(t)}{h}$ನ ಅನುರೂಪ ಬೆಲೆಗಳು ಕ್ರಮೇಣ f'(t) ಎಂಬ ಸ್ಥಿರ ಬೆಲೆಗೆ ಹೆಚ್ಚು ಹೆಚ್ಚು ಸಮೀಪವಾಗುತ್ತ ಬರುತ್ತವೆ. ಆದ್ದರಿಂದ ಮೇಲೆ ಸೂಚಿತವಾಗಿರುವ ಸರಿಸುಮಾರು ಸಮತ್ವಕ್ಕೆ ಮರೆಹೊಗುವ ಬದಲು h ಚರರಾಶಿ ಶೂನ್ಯದೆಡೆ ಗಮಿಸಿದಾಗ (ಸಂಕೇತಗಳಲ್ಲಿ $h \to 0$), [ $f(t+h)-f(t)$ ] ಎಂಬ ಚರಾಶಿ f'(t) ಎಂಬ ಸ್ಥಿರ ಪರಿಮಿತಿಯೆಡೆಗೆ ಗಮಿಸುತ್ತದೆ ಎಂದು ಹೇಳುವುದು ಸೂಕ್ತ; ಸಂಕೇತಗಳಲ್ಲಿ

$$\frac{f(t+h)-f(t)}{h} \to f'(t)$$

ಅಥವಾ $$\lim_{h \to 0} \frac{f(t+h)-f(t)}{h} = f'(t)$$

ಇಲ್ಲಿ ಬಳಸಿರುವ lim ಎಂಬ ಸಂಕೇತ ಪರಿಮಿತಿ ಪದದ ಇಂಗ್ಲಿಷ್ ರೂಪವಾದ limitನ ಸಂಕ್ಷೇಪರೂಪ. ಚರರಾಶಿಯೊಂದರ ಒಂದೊಂದು ಬಿಡಿ ಬೆಲೆಯೂ ಆ ಚರರಾಶಿಯ ಪರಿಮಿತಿಗೆ ಸಮವಾಗಬೇಕಿಲ್ಲವಾದ ಕಾರಣ ವಿಭಿನ್ನ ಪರಿಮಾಣಗಳನ್ನು ಸಮೀಕರಿಸುವ ಅಸಮಂಜಸತೆಗಳನ್ನು ಪರಿಮಿತಿಗಳ ಕಲ್ಪನೆ ನಿವಾರಿಸಬಲ್ಲುದು. ಇದು ಪರಿಮಿತಿವಾದದ ಸಾರಾಂಶ. ಆದರೆ ಇಲ್ಲಿ ಪರಿಮಿತಿಗಳು ಬೇಡುವ ದೀರ್ಘ ತಾಂತ್ರಿಕ ಪೂರ್ವಸಿದ್ಧತೆಗಳ ಆಸರೆಯನ್ನೆಲ್ಲ ನಾವು ಪೂರ್ಣವಾಗಿ ಉಪೇಕ್ಷಿಸಿದ್ದೇವೆ. ಈ ಮೊದಲು ಮಗುವೊಂದರ ವಯಸ್ಸಿನ ಮೇಲೆ ಅದರ ತೂಕ ತೋರುವ ಅವಲಂಬನೆಯನ್ನು ಉತ್ಪನ್ನದ ನಿದರ್ಶನವನ್ನಾಗಿ ಆರಿಸಿದೆವಷ್ಟೆ. ನಿತ್ಯವ್ಯವಹಾರದಲ್ಲೇ ಆಗಲಿ, ಪ್ರಾಯೋಗಿಕ ವಿಜ್ಞಾನಗಳ ಅತ್ಯಂತ ಕರಾರುವಾಕ್ಕಾದ ಅಳತೆಗಳಲ್ಲೇ ಆಗಲಿ, ಯಾರಾದರೂ ಪರಿಗಣಿಸಬೇಕಾಗಿ ಬರುವ ವಯಸ್ಸುಗಳೆಂದರೆ 1 ವರ್ಷ, 2 ವರ್ಷ, 5 3/4 ವರ್ಷ, 8.324115 ವರ್ಷ ಇಂಥವೇ ವಿನಾ $\sqrt{2}$ ವರ್ಷ, $\sqrt[3]{17}$ ವರ್ಷ, ವೃತ್ತವೊಂದರ ಪರಿಧಿ ಮತ್ತು ವ್ಯಾಸದ ನಿಷ್ಪತ್ತಿಗೆ ನಿಖರವಾಗಿ ಸಮನಾಗಿರುವ $\pi$ ವರ್ಷ ಇಂಥವಲ್ಲವೇ ಅಲ್ಲ; ಅಲ್ಲಿ ಪರಿಗಣಿಸಬೇಕಾಗಿ ಬರುವ ತೂಕಗಳ ವಿಚಾರವೂ ಹಾಗೆಯೇ. ಆದರೆ ನಿತ್ಯವ್ಯವಹಾರದಲ್ಲಿ ಹಾಗೂ ಪ್ರಾಯೋಗಿಕ ವಿಜ್ಞಾನಗಳ ಅಳತೆಗಳಲ್ಲಿ ಎದುರಾಗುವ ಪರಿಮೇಯ ಪರಿಮಾಣಗಳಿಗೆ (ರ್‍ಯಾಷನಲ್ ಕ್ವಾಂಟಿಟೀಸ್) ಮಾತ್ರ ಗಣಿತವನ್ನು ಸೀಮಿತಗೊಳಿಸಿದರೆ ಬಹಳಷ್ಟು ಚರರಾಶಿಗಳಿಗೆ ಬಹಳಷ್ಟು ಸಂದರ್ಭಗಳಲ್ಲಿ ಅಪೇಕ್ಷಿತ ಪರಿಮಿತಿಗಳೇ ದೊರಕದೆ ಪರಿಮಿತಿವಾದದ ಉಪಯುಕ್ತತೆ ತೀವ್ರವಾಗಿ ಕುಂಠಿತವಾಗುವುದು. ಹೀಗಾಗುವುದನ್ನು ತಪ್ಪಿಸುವುದಕ್ಕಾಗಿಯೇ $\sqrt{2}$, $\sqrt[3]{17}$, $\pi$ ಮುಂತಾದ ಅಪರಿಮೇಯ ಪರಿಮಾಣಗಳನ್ನು ಗಣಿತಜ್ಞರು ಸೃಷ್ಟಿಸಿಕೊಂಡಿರುವುದು. ಅಲ್ಲಿಗೆ ಯಾವುದಾದರೊಂದು ವರ್ಗದ ವಿದ್ಯಮಾನಗಳ ಬಗ್ಗೆ ಸಿದ್ಧಾಂತವೊಂದನ್ನು ರಚಿಸುವಾಗ ಅಂಥ ವಿದ್ಯಮಾನಗಳಲ್ಲಿ ಎಂದೂ ನೇರವಾಗಿ ಪ್ರವೇಶಿಸದೆ ಇರುವ, ಹಾಗೂ ಅರ್ಥಸ್ಪಷ್ಟತೆಯಿಲ್ಲದ, ಅನೇಕ ಆದರ್ಶ ಧಾತುಗಳನ್ನು (ಐಡಿಯಲ್ ಎಲಿಮೆಂಟ್ಸ್) ಆ ಸಿದ್ಧಾಂತದಲ್ಲಿ ತಂದಿಡುವ ಸ್ವಾತಂತ್ರ್ಯವನ್ನು ಪರಿಮಿತಿವಾದಿ ಗಣಿತಜ್ಞರು ಹೇಗೂ ವಹಿಸಿಕೊಂಡೇ ಇದ್ದಾರೆಂದಾಯಿತು. ಸಿದ್ಧಾಂತಗಳ ರಚನೆಯ ಸಂಬಂಧದಲ್ಲಿ ಎಲ್ಲ ಗಣಿತಜ್ಞರೂ ಒಪ್ಪಿಕೊಳ್ಳುವ ಏಕಮಾತ್ರ ನಿರ್ಣಾಯಕವೆಂದರೆ ರಚಿಸಿದ ಸಿದ್ಧಾಂತದಲ್ಲಿ ಆಂತರಿಕ ಅಸಮಂಜಸತೆಗಳಿರಬಾರದೆಂಬುದಷ್ಟೆ. ಹಾಗಿದ್ದ ಮೇಲೆ ಅಸಮಂಜಸತೆಗಳು ಅಂತರಿಕವಾಗಿ ಉದ್ಭವಿಸದೆ ಇರುವ ರೀತಿಯಲ್ಲಿ ಅವಕಲನಶಾಸ್ತ್ರದೊಳಗೆ ಅನಂತಸೂಕ್ಷ್ಮಗಳನ್ನು ಸಹ ತಂದಿಡುವುದಕ್ಕೆ ಅಡ್ಡಿಯೇನು? ಈ ಹೊಸ ಜಾಡಿನಲ್ಲಿ ಚಿಂತನೆ ನಡೆಸಿದ ಅಬ್ರಹಾಂ ರಾಬಿನ್‍ಸನ್ ಎಂಬಾತ ನಾನ್ ಸ್ಟ್ಯಾಂಡರ್ಡ್ ಅನ್ಯಾಲಿಸಿಸ್ ಎಂಬ ನೂತನ ಸಿದ್ಧಾಂತವೊಂದನ್ನು 1961ರಲ್ಲಿ ಪ್ರತಿಪಾದಿಸಿದ. ಅದು ಲೀಪ್‍ನಿಟ್ಸ್ ಸೂಚಿಸಿದ್ದ ಮಾದರಿಯ ಅನಂತಸೂಕ್ಷ್ಮಗಳ ಸಮಂಜಸತೆಯನ್ನು ಎತ್ತಿಹಿಡಿದು ಅವಕಲನಶಾಸ್ತ್ರ ತನ್ನ ಬೆಳೆವಣಿಗೆಗೆ ಅಪರಿಮೇಯ ಆಶ್ರಯಿಸಬಹುದಾದರೆ ಅವುಗಳೊಂದಿಗೆ ಅನಂತಸೂಕ್ಷ್ಮಗಳನ್ನು ಸಹ ಕನಿಷ್ಠಪಕ್ಷ ಅಷ್ಟೇ ಲಾಭದಾಯಕವಾಗಿ ಆಶ್ರಯಿಸಬಹುದೆಂದು ತೋರಿಸಿಕೊಟ್ಟಿದೆ.

**ಅವಕಲನಶಾಸ್ತ್ರದ ಒಂದು ಔಪಚಾರಿಕ ನಿರೂಪಣೆ :** ರಾಬಿನ್‍ಸನ್ನನ ಅನಂತಸೂಕ್ಷ್ಮಗಳಿಗೆ ಪರಿಮಿತಿಗಳಿಗಿಂತಲೂ ದೀರ್ಘತರ ತಾಂತ್ರಿಕ ಪೂರ್ವಸಿದ್ಧತೆಗಳು ಅವಶ್ಯವಾಗುತ್ತವೆ. ಪ್ರಸಕ್ತ ಸಂದರ್ಭದಲ್ಲಿ ಈ ಅನಂತಸೂಕ್ಷ್ಮಗಳನ್ನಾಗಲಿ ಪರಿಮಿತಿಗಳನ್ನಾಗಲಿ ನೇರವಾಗಿ ಬಳಸಿಕೊಳ್ಳದೆ ಬೇರೆ ಒಂದು ಸ್ಥೂಲ ರೀತಿಯಲ್ಲಿ ಅವಕಲನಶಾಸ್ತ್ರದ ಕೆಲ ಮುಖ್ಯಾಂಶಗಳನ್ನು ಗ್ರಹಿಸಲು ಪ್ರಯತ್ನಿಸಲಾಗುವುದು. ನಾವು ಅನುಸರಿಸುವ ಮಾರ್ಗ ಹೆಚ್ಚು ಕಡಿಮೆ ಪರಿಮಿತಿಗಳ ಪ್ರಯೋಗಕ್ಕೆ ಸಮಾನವಾಗಿರುತ್ತದೆ. ಅವಕಲನಶಸ್ತ್ರದ ಔಪಚಾರಿಕ ಸ್ವಾಭಾವಿಕವಾಗಿಯೇ ಉತ್ಪನ್ನಗಳ ಅರ್ಥವಿವರಣೆಯಿಂದ ಪ್ರಾರಂಭವಾಗಬೇಕು. a, A ಗಳು ಎರಡು ಸ್ಥಿರ ಸಾಂತ (ಫೈನೈಟ್) ಪರಿಮಾಣಗಳೆಂದೂ a<A ಎಂದೂ ಭಾವಿಸಿ. $a \le t \le A$, $a < t < A$, $a < t \le A$, $a \le t < A$ ಮಾದರಿಯ ಅಸಮತ್ವಗಳಿಗೆ ಸರಳ ಸಾಂತ ಅಂತರಗಳು (ಫೈನೈಟ್ ಲೀನಿಯರ್ ಇಂಟರ್ವಲ್ಸ್) ಎಂದು ಹೆಸರು. ಇಂಥ ಯಾವುದಾದರೊಂದು ಅಸಮತ್ವವನ್ನು $I_1$ ಎಂಬ ಸಂಕ್ಷಿಪ್ತನಾಮದಿಂದ ಕರೆಯೋಣ. $I_1$ ಅಸಮತ್ವಕ್ಕೆ t ಎಂಬ ಸಂಖ್ಯೆ ಬದ್ಧವಾಗಿದ್ದಾಗ $I_1$ ಅಂತರದಲ್ಲಿ t ಇದೆ ಎಂದು ಹೇಳುತ್ತೇವೆ. (ಇಂಥ ಹೇಳಿಕೆಯಲ್ಲಿ t ಗೆ ಬದಲು ಬೇರಾವುದಾದರೂ ಒಂದು ಸಂಕೇತವನ್ನು ಆದೇಶಿಸಬಹುದು; ಹಾಗೆ ಮಾಡಿದಾಗ $I_1$ ರಲ್ಲಿರುವ t ಯನ್ನು ಸಹ ಆ ಹೊಸಸಂಕೇತಕ್ಕೆ ಬದಲಿಸಬೇಕಾಗುವುದು.) $I_1$ ರಲ್ಲಿರುವ ಪ್ರತಿಯೊಂದು ಸಂಖ್ಯೆ t ಗೂ ಅನುರೂಪವಾಗಿ ಒಂದು ನಿರ್ದಿಷ್ಟ ಸಂಖ್ಯೆ x(t)ಯನ್ನು

ಗೊತ್ತುಮಾಡಿಕೊಡುವ ಯಾವುದೇ ($x$ ಎಂದು ಸೂಚಿಸಲಾಗುವ) ವ್ಯವಸ್ಥೆ ಉತ್ಪನ್ನವೆನಿಸಿಕೊಳ್ಳ ಬಲ್ಲುದು. ಇಲ್ಲಿ $x$(t) ನಿರ್ದಿಷ್ಟವಾಗಿರಬೇಕೆಂದು ತಿಳಿಸಿರುವುದರ ಅಭಿಪ್ರಾಯ t=u ಆದಾಗಲೆಲ್ಲ ಕಡ್ಡಾಯವಾಗಿ $x$(t)=$x$(u) ಕೂಡ ಆಗತಕ್ಕದ್ದು ಎಂದು. ಈಗ ವರ್ಣಿಸಿರುವಂಥ ಉತ್ಪನ್ನಗಳನ್ನು $I_1$ ಅಂತರದಲ್ಲಿ ವ್ಯಾಖ್ಯೆ ಮಾಡಲಾಗಿರುವ ಏಕಚರ ಉತ್ಪನ್ನಗಳೆಂದು ಕರೆಯುತ್ತೇವೆ (ಫಂಕ್ಷನ್ಸ್ ಆಫ್ ಒನ್ ವೇರಿಯಬಲ್). $x$(t)ಗೆ t ಸಂಖ್ಯೆಯ $x$ ಬಿಂಬ ($x$-ಇಮೇಜ್) ಅಥವಾ $x$ ಉತ್ಪನ್ನದ t ಬೆಲೆ [t ವ್ಯಾಲ್ಯೂ] ಎಂದು ಹೆಸರು. ಕಲನಶಾಸ್ತ್ರ ಸಾಹಿತ್ಯದಲ್ಲಿ ಈ ಬಿಂಬಸಂಕೇತ $x$(t) ಯನ್ನೇ $x$(t) ಉತ್ಪನ್ನವೆಂದು ಸಡಿಲವಾಗಿ ವರ್ಣಿಸುವುದು ವಾಡಿಕೆಯಾಗಿದೆ. ಕೆಲವು ಬೇಳೆ $I_1$ ಅಂತರದಲ್ಲಿ t ಇರುವಾಗಲೆಲ್ಲ $I_1*$ದಲ್ಲಿ $x$(t) ಇರುವಂತೆ ಯಾವುದಾದರೊಂದು ಸರಳ ಸಾಂತಾಂತರ $I_1*$ವನ್ನು ಗೊತ್ತುಮಾಡಲು ಸಾಧ್ಯವಾಗಬಹುದು; ಹಾಗಿದ್ದರೆ $I_1$ ರಲ್ಲಿ $x$ ಉತ್ಪನ್ನಕ್ಕೆ ಮೇರೆಯಿದೆ (ಬೌಂಡೆಡ್) ಎಂದು ಹೇಳುತ್ತೇವೆ. ಹೀಗಿರುವಾಗ $I_1*$ ಅಂತರದಲ್ಲಿ f ಎಂಬ (ಪ್ರಾಯಶಃ ಬೇರೊಂದು) ಉತ್ಪನ್ನ ವ್ಯಾಖ್ಯೆಯಾಗಿದ್ದರೆ fo$x$ ಎಂದು ಸೂಚಿಸಬಹುದಾದ ಮೂರನೆಯ ಉತ್ಪನ್ನವೊಂದನ್ನು ಹೀಗೆ ವ್ಯಾಖ್ಯೆ ಮಾಡಲಾಗುವುದು:

$$\text{fo}x(\text{t}) = \text{f}(x(\text{t}))$$

fo$x$ ಗೆ f ಮತ್ತು $x$ ಗಳ ಉತ್ಪನ್ನಸಂಯೋಜನೆಯೆಂದು ಹೆಸರು (ಫಂಕ್ಷನ್ ಕಾಂಪೊಸಿಷನ್). ಇದು ಮತ್ತೆ $I_1$ ಅಂತರದಲ್ಲೇ ವ್ಯಾಖ್ಯೆಯಾಗಿರುತ್ತದೆ; fo$x$ ಹಾಗೂ f.$x$ ಎಂಬೆರಡು ಉತ್ಪನ್ನ ಸಂಕೇತಗಳಿಗಿರುವ ಭೇದವನ್ನು ಗುರುತಿಸುವುದು ಅಗತ್ಯ: ಮೇಲೆ ತಿಳಿಸಿರುವಂತೆ fo$x$(t)=f($x$(t)) ಆದರೆ f.$x$(i)=f(t).$x$(t). ಪ್ರತಿಯೊಂದು ಏಕಚರ ಉತ್ಪನ್ನವೂ t ಯಂಥ ಒಂದೇ ಒಂದು ಚರರಾಶಿಯನ್ನು (ವೇರಿಯಬಲ್) ಅವಲಂಬಿಸಿದೆ; ಆದರೆ ಅವಕಲನಶಾಸ್ತ್ರದ ಪ್ರಾಥಮಿಕ ಮಟ್ಟದ ಅಧ್ಯಯನಕ್ಕೆ ಕೂಡ ಎರಡೆರಡು ಚರರಾಶಿಗಳನ್ನು ಅವಲಂಬಿಸುವ ದ್ವಿಚರ ಉತ್ಪನ್ನಗಳ ಪರಿಚಯ ಅಗತ್ಯ. ಇವನ್ನು ಪ್ರಸ್ತಾಪಿಸುವ ಸಲುವಾಗಿ b,B,c,C ಗಳು ಸಹ a,A ಗಳಂತೆಯೇ ಸ್ಥಿರ ಸಾಂತ ಪರಿಮಾಣಗಳೆಂದೂ a<A ಜೊತೆಗೆ (ba+c )<(Ba+C ) ಹಾಗೂ (bA+c )< BA+C ಎಂದೂ ಭಾವಿಸೋಣ. $a \le t \le A, (bt+c) \le h \le (Bt+C)$ ಮಾದರಿಯ ಅಸಮತ್ವದ್ವಯಗಳಿಗೆ_ಇಲ್ಲವೆ ಈ ಮಾದರಿಯಲ್ಲಿ ಗೋಚರಿಸುವ ನಾಲ್ಕು $\le$ ಚಿಹ್ನೆಗಳ ಪೈಕಿ ಕೆಲವನ್ನಾಗಲಿ ಎಲ್ಲವನ್ನೂ ಆಗಲಿ <ರೂಪಕ್ಕೆ ಬದಲಿಸುವುದರಿಂದ ಫಲಿಸುವ ಇತರ ಹದಿನೈದು ಮಾದರಿ ಅಸಮತ್ವದ್ವಯಗಳಿಗೆ_ತ್ರಾಪಿಜ್ಯಾತ್ಮಕ ಸಾಂತಾಂತರಗಳೆಂದು ಹೆಸರು (ಫೈನೈಟ್ ಟ್ರೆಪಿಝಾಯ್ಡಲ್ ಇಂಟರ್ವಲ್ಸ್). ಇನ್ನು ಮುಂದೆ ಇಂಥ ಯಾವುದಾದರೂ ತ್ರಾಪಿಜ್ಯಾತ್ಮಕ ಸಾಂತಾಂತರವನ್ನು $I_2$ ಎಂಬ ಸಂಕ್ಷಿಪ್ತ ನಾಮದಿಂದ ಸೂಚಿಸೋಣ. $I_2$ ಒಳಗೊಳ್ಳುವ ಎರಡು ಅಸಮತ್ವಗಳಿಗೆ ಯಾವುದಾದರೂ ಎರಡು ಸಂಖ್ಯೆ t ಮತ್ತು h ಗಳು ಕ್ರಮವಾಗಿ ಬದ್ಧವಾಗಿದ್ದರೆ (t;h ) ಎಂಬ ಆ ಸಂಖ್ಯೆಗಳ ಸಕ್ರಮ ಜೋಡಿ $I_2$ ಅಂತರದಲ್ಲಿದೆ ಎಂದು ಹೇಳುತ್ತೇವೆ. (ಇಂಥ ಹೇಳಿಕೆಯಲ್ಲಿ t ಮತ್ತು h ಗಳಿಗೆ ಬದಲು ಬೇರಾವುದಾದರೂ ಎರಡು ಸಂಕೇತಗಳನ್ನು ಆದೇಶಿಸಬಹುದು; ಹಾಗೆ ಮಾಡಿದಾಗ $I_2$ ರಲ್ಲಿರುವ t,h ಗಳನ್ನು ಕೂಡ ಆ ಹೊಸ ಸಂಕೇತಗಳಿಗೆ ಬದಲಿಸಬೇಕು.) $I_2$ ರಲ್ಲಿರುವ ಪ್ರತಿಯೊಂದು ಸಂಖ್ಯೆಗಳ ಸಕ್ರಮ ಜೋಡಿ (t;h) ಗೂ ಅನುರೂಪವಾಗಿ ಒಂದು ನಿರ್ದಿಷ್ಟ ಸಂಖ್ಯೆ $\phi$ (t;h )ಅನ್ನು ಯಾವುದಾದರೊಂದು ವ್ಯವಸ್ಥೆ $\phi$ಯ ಮುಖಾಂತರ ಗೊತ್ತುಮಾಡಲು ಸಾಧ್ಯವಾದರೆ ಆ $\phi$ ವ್ಯವಸ್ಥೆ $I_2$ ಅಂತರದಲ್ಲಿ ವ್ಯಾಖ್ಯೆಯಾಗಿರುವ ಒಂದು ದ್ವಿಚರ ಉತ್ಪನ್ನವೆನಿಸಿಕೊಳ್ಳುತ್ತದೆ. $\phi(t;h)$ಗೆ (t;h) ಜೋಡಿಯ $\phi$–ಬಿಂಬ ಅಥವಾ $\phi$ ಉತ್ಪನ್ನದ (t;h)–ಬೆಲೆ ಎಂದು ಹೆಸರು. ಅನೇಕ ವೇಳೆ ಈ ಬಿಂಬ ಸಂಕೇತ $\phi(t;h)$ಅನ್ನೇ $\phi(t;h)$ ಉತ್ಪನ್ನವೆಂದು ಸಡಿಲವಾಗಿ ವರ್ಣಿಸುವುದುಂಟು. $I_2$ ಅಂತರದಲ್ಲಿ (t;h) ಇರುವಾಗಲೆಲ್ಲ $I_1*$ದಲ್ಲಿ $\phi(t;h)$ ಇರುವಂತೆ ಯಾವುದಾದರೊಂದು ಸರಳ ಸಾಂತಾಂತರ $I_1*$ ವನ್ನು ಕಂಡುಹಿಡಿಯಲು ಸಾಧ್ಯವಾಗುವುದಾದರೆ $I_2$ ರ $\phi$ ಉತ್ಪನ್ನಕ್ಕೆ ಮೇರೆಯಿದೆ ಎಂದು ಹೇಳುತ್ತೇವೆ. ಈಗ $I_2$ ಮತ್ತು $I_2*$ ಗಳು ಯಾವುದಾದರೂ ಎರಡು ತ್ರಾಪಿಜ್ಯಾತ್ಮಕ ಸಾಂತಾಂತರಗಳೆಂದೂ $I_2$ ರಲ್ಲಿ $\phi$ ಮತ್ತು $\delta$ ಎಂಬೆರಡು ದ್ವಿಚರ ಉತ್ಪನ್ನಗಳು ವ್ಯಾಖ್ಯೆಯಗಿವೆಯೆಂದೂ $I_2*$ ದಲ್ಲಿ $\Delta$ ಎಂಬ ದ್ವಿಚರ ಉತ್ಪನ್ನ ವ್ಯಾಖ್ಯೆಯಾಗಿದೆಯೆಂದೂ ಭಾವಿಸಿ. (t;h) ಎಂಬ ಸಂಖ್ಯೆಗಳ ಸಕ್ರಮ ಜೋಡಿ $I_2$ ರಲ್ಲಿರುವಾಗಲೆಲ್ಲ $(\phi(t;h); \delta(t;h)$ ಜೋಡಿ $I_2*$ ದಲ್ಲಿರುವ ಪಕ್ಷಕ್ಕೆ $\Delta 00\phi 00\delta$ ಎಂದು ಸೂಚಿಸಲಾಗುವ ಮೂರು ಉತ್ಪನ್ನಗಳ ಸಂಯೋಜನೆಯೊಂದನ್ನು (ಟ್ರಿಪಲ್ ಫಂಕ್ಷನ್ ಕಾಂಪೊಸಿಷನ್) ಹೀಗೆ ವ್ಯಾಖ್ಯೆ ಮಾಡುತ್ತೇವೆ:

$$\Delta oo\phi oo\delta(t;h) = \Delta(\phi(t;h); \delta(t;h))$$

ಈ ಮೂಲಕ $\Delta 00\phi 00\delta$ ಉತ್ಪನ್ನ ಮತ್ತೆ $I_2$ ಅಂತರದಲ್ಲೇ ವ್ಯಾಖ್ಯೆಗೊಳ್ಳುತ್ತದೆ. ಅಗತ್ಯ ತೋರಿದಲ್ಲಿ ಏಕಚರ ಉತ್ಪನ್ನಗಳನ್ನು ದ್ವಿಚರ ಉತ್ಪನ್ನಗಳೆಂದೇ ಪರಿಗಣಿಸಲು ಶಕ್ಯವಿದೆ. ಏಕೆಂದರೆ $\phi(t)$ ಎಂಬುದು t ಯನ್ನು ಅವಲಂಬಿಸುವ ಒಂದು ಏಕಚರ ಉತ್ಪನ್ನವಾದಲ್ಲಿ hನ ಬೆಲೆ ಏನೇ ಆಗಿರಲಿ $\phi(t;h) = \phi(t)$ ಎಂದು ವ್ಯಾಖ್ಯೆಮಾಡಿ $\phi(t)$ಯೊಂದಿಗೆ ಐಕ್ಯವಾಗುವ ದ್ವಿಚರ ಉತ್ಪನ್ನ $\phi(t;h)$ ಅನ್ನು ರೂಪಿಸಬಹುದು. ಮೇಲಿನ ಮೂರು ಉತ್ಪನ್ನಗಳ ಸಂಯೋಜನೆಯಲ್ಲಿ $\phi(t)$ ಒಂದು ಏಕಚರ ಉತ್ಪನ್ನವಾದರೆ

$$\Delta oo\phi oo\delta(t;h) = \Delta(\phi(t); \delta(t;h))$$

ಆಗುವುದು. ಕೊನೆಯದಾಗಿ, ಹೇಗೆ ಏಕಚರ ಉತ್ಪನ್ನಗಳನ್ನು ದ್ವಿಚರ ಉತ್ಪನ್ನಗಳೆಂದು ಪರಿಗಣಿಸಬಹುದೋ ಅಂತೆಯೇ ಸ್ಥಿರಸಂಖ್ಯೆಗಳನ್ನು ಸಹ ಅಗತ್ಯವಿರುವೆಡೆ ಏಕಚರ ಆಥವಾ ದ್ವಿಚರ ಉತ್ಪನ್ನಗಳೆಂದು ಪರಿಗಣಿಸುವ ಶಕ್ಯತೆಯಿದೆ. ಅವಕಲನಶಾಸ್ತ್ರವನ್ನು ನಿರೂಪಿಸುವಲ್ಲಿ ಶೂನ್ಯಗಾಮಿಗಳೆಂಬ ಒಂದು ವಿಶಿಷ್ಟವರ್ಗದ ದ್ವಿಚರ ಉತ್ಪನ್ನಗಳನ್ನು ಮೂಲಸಾಧನವನ್ನಾಗಿ ಬಳಸಿಕೊಳ್ಳುತ್ತೇವೆ. $\phi(t;h)$ ಉತ್ಪನ್ನ $I_2$ ಎಂಬ ತ್ರಾಪಿಜ್ಯಾತ್ಮಕ ಸಾಂತಂತರದಲ್ಲಿ ವ್ಯಾಖ್ಯೆಯಾಗಿದೆಯೆಂದು ಭಾವಿಸಿ. n ಎಂಬ ಚರ ಯಾವುದಾದರೊಂದು ಧನ ಪೂರ್ಣಾಂಕವನ್ನು ಸೂಚಿಸಲಿ. ಕೆಲ ಸಂದರ್ಭಗಳಲ್ಲಿ ಇಂಥ ಪ್ರತಿ n ಗೂ ಅನುರೂಪವಾಗಿ ಇದೀಗ ತಿಳಿಸಲಿರುವ ವಿಶೇಷ ನಿಬಂಧನೆಯೊಂದಕ್ಕೆ ಹೊಂದಿಕೊಳ್ಳುವಂತೆ ಇನ್ನೊಂದು ಧನಪೂರ್ಣಾಂಕ m ಅನ್ನು ಗೊತ್ತುಮಾಡಲು ಸಾಧ್ಯವಾಗಬಹುದು. $I_2$ ಅಂತರದಲ್ಲಿನ ಸಂಖ್ಯೆಗಳ ಸಕ್ರಮ ಜೋಡಿ (t;h)ನಲ್ಲಿ t ಯ ಬೆಲೆಯೇನೇ ಆಗಿದ್ದಾಗ್ಯೂ h ಸಂಖ್ಯೆ

(–1/m) < h< (1/m) ಅಸಮತ್ವಕ್ಕೆ ಬದ್ಧವಾಗಿರುವಾಗಲೆಲ್ಲ

(–1/n) < $\delta$ (t;h) < (1/n) ಆಗಬೇಕೆಂಬುದೇ ಈ ನಿಬಂಧನೆ. ಇದಕ್ಕೆ ಸರಿಯೊಂದುವಂತೆ ಒಂದೊಂದು ಧನ ಪೂರ್ಣಾಂಕ n ಗೂ ಒಂದೊಂದು ಅನುರೂಪಪೂರ್ಣಾಂಕ m ಅನ್ನು ಕಂಡು ಹಿಡಿಯಲು ಸಾಧ್ಯವಾಗುವುದಾದರೆ $I_2$ ಅಂತರದಲ್ಲಿ $\delta(t;h)$ ಒಂದು t–ಏಕರೀತಿ h–ಸಾಪೇಕ್ಷ ಶೂನ್ಯಗಾಮಿ ಉತ್ಪನ್ನವಾಗಿದೆಯೆಂದು (ಇನ್ ಫಿನಿಟೆಸಿಮಲ್ ಫಂಕ್ಷನ್ ರಿಲೆಟಿವ್ ಟು h ಅಂಡ್ ಯೂನಿಫಾರ್ಮ್ ಇನ್ t) ವರ್ಣಿಸುತ್ತೇವೆ. ಸಂದಿಗ್ಧತೆಗಳ ಸಂಭವವಿಲ್ಲದಿರುವಾಗ ಈ ಉದ್ದನೆಯ ವರ್ಣನೆಯನ್ನು ಕೇವಲ ಶೂನ್ಯಗಾಮಿ ಎಂದು ಸಂಕ್ಷೇಪಿಸಲು ಅಡ್ಡಿಯಿಲ್ಲ. ಸಾಂಪ್ರದಾಯಿಕ ನೈಜ ಸಂಖ್ಯೆಗಳ (ರಿಯಲ್ ನಂಬರ್ಸ್) ಆಯಕಟ್ಟಿನಲ್ಲಿ $\delta(t;h)$ ಉತ್ಪನ್ನ ಒಂದು h-ಸಾಪೇಕ್ಷ ಶೂನ್ಯಗಾಮಿಯಾದಾಗ (t;0) ಎಂಬ ಸಂಖ್ಯೆಗಳ ಸಕ್ರಮಜೊಡಿ $I_2$ ರಲ್ಲಿರುವಾಗಲೆಲ್ಲ $\delta(t;0) = 0$ ಆಗಲೇಬೇಕೆಂದು ತೋರಿಸಬಹುದು. (ರಾಬಿನ್ ಸನ್ನನ ಅನಂತಸೂಕ್ಷ್ಮಗಳನ್ನು ಒಳಗೊಳ್ಳುವ ಸಂಖ್ಯಾವ್ಯವಸ್ಥೆಗಳಲ್ಲಿ ಇದು ಸಾಧ್ಯವಿಲ್ಲ; ಪ್ರಸಕ್ತ ವಿವೇಚನೆ ಸಾಂಪ್ರದಾಯಿಕ ಸಂಖ್ಯಾವ್ಯವಸ್ಥೆಗೆ ಮಾತ್ರ ಸೀಮಿತವಾದ್ದು.) $I_2$ ಅಮತರದಲ್ಲಿ $\delta(t;h)$ ಉತ್ಪನ್ನವೂ $I_2*$ ಅಂತರದಲ್ಲಿ $\Delta(t;h)$ ಉತ್ಪನ್ನವೂ t–ಏಕರೀತಿ h-ಸಾಪೇಕ್ಷ ಶೂನ್ಯಗಾಮಿಗಳಾದ ಪಕ್ಷಕ್ಕೆ ಮೂರು ಉತ್ಪನ್ನಗಳ ಸಂಯೋಜನೆ $\Delta oo\phi oo\delta(t;h)$ ಅರ್ಥಪೂರ್ಣವಾಗಿರುವಾಗಲೆಲ್ಲ ಮತ್ತೆ $I_2$ ಅಂತರದಲ್ಲಿ t–ಏಕರೀತಿ h–ಸಾಪೇಕ್ಷ ಶೂನ್ಯಗಾಮಿಯಾಗುವುದೆಂದು ಸುಲಭವಾಗಿ ಸಮರ್ಥಿಸಬಹುದು. ಈಗ $I_2$ ಅಂತರದಲ್ಲಿ $\phi(t;h), \theta(t;h), \delta(t;h), \varepsilon(t;h)$ ಎಂಬ ನಾಲ್ಕು ಉತ್ಪನ್ನಗಳು ವ್ಯಾಖ್ಯೆಯಾಗಿವೆಯೆಂದೂ ಅಲ್ಲಿ ಇವುಗಳ ಪೈಕಿ $\phi$ಗೂ $\theta$ಕ್ಕೂ ಮೇರೆ ಇದೆಯೆಂದೂ $\delta(t;h)$ ಮತ್ತು $\varepsilon(t;h)$ಗಳು (t–ಏಕರೀತಿ h–ಸಾಪೇಕ್ಷ) ಶೂನ್ಯಗಾಮಿಗಳೆಂದು ಭಾವಿಸೋಣ. ಈ ಪರಿಸ್ಥಿತಿಯಲ್ಲಿ $\delta(t;h), \varepsilon(t;h)$ ಮತ್ತು $\phi(t;h), \delta(t;h), \theta(t;h), \varepsilon(t;h)$ ಎಂಬೆರಡು ಉತ್ಪನ್ನಗಳೂ ಶೂನ್ಯಗಾಮಿಗಳೇ ಆಗುತ್ತವೆ.

$I_2$ ಅಂತರದಲ್ಲಿ $\delta(t;h)$ ಉತ್ಪನ್ನ ಯಾವುದಾದರೊಂದು (t–ಏಕರೀತಿ h–ಸಾಪೇಕ್ಷ) ಶೂನ್ಯಗಾಮಿಯಾದರೆ ಅದೇ ಅಂತರದಲ್ಲಿ $h.\delta(t;h)$ ರೂಪದ ಉತ್ಪನ್ನಗಳನ್ನು (t–ಏಕರೀತಿ h–ಸಾಪೇಕ್ಷ) ಶೂನ್ಯಸ್ಪರ್ಶಿಗಳೆಂದು (ಟ್ಯಾಂಜೆಂಟ್ಸ್ ಟು ಝೀರೊ) ಕರೆಯುತ್ತೇವೆ. ಪ್ರತಿ ಶೂನ್ಯಸ್ಪರ್ಶಿಯೂ ಒಂದು ಶೂನ್ಯಗಾಮಿಯೇ. ಆದರೆ ಎಲ್ಲ ಶೂನ್ಯಗಾಮಿಗಳೂ ಶೂನ್ಯಸ್ಪರ್ಶಿಗಳಲ್ಲ. ಈಗ $I_2$ ರಲ್ಲಿ ವ್ಯಾಖ್ಯೆಯಾಗಿರುವ $\phi(t;h)$ ಮತ್ತು $\theta(t;h)$ ಎಂಬ ಯಾವುದಾದರೂ ಎರಡು ಉತ್ಪನ್ನಗಳ ವ್ಯತ್ಯಾಸ $[\phi(t;h) - \theta(t;h)]$ ಅಲ್ಲಿ t–ಏಕರೀತಿ h–ಸಾಪೇಕ್ಷ ಶೂನ್ಯಗಾಮಿಯಾದರೆ

$$\phi(t;h)....\theta(t;h)$$

ಎಂದೂ ಆ ವ್ಯತ್ಯಾಸ ಒಂದು t–ಏಕರೀತಿ h–ಸಾಪೇಕ್ಷ ಶೂನ್ಯಸ್ಪರ್ಶಿಯಾದರೆ

$\phi(t;h)....\theta(t;h)$

ಎಂದೂ ಬರೆಯೋಣ. $\phi$ ಯಾವುದೇ ಉತ್ಪನ್ನವಾದರೂ $\phi(t;h) \sim \phi(t;h)$ ಆಗುವುದು. $\phi(t;h) \sim \theta(t;h)$ ಆದಾಗ $\theta(t;h) \sim \phi(t;h)$ ಸಹ ಆಗುತ್ತದೆ. $\phi(t;h) \sim \theta(t;h)$ ಮತ್ತು $\theta(t;h) \sim$F(t;h) ಆದರೆ $\phi(t;h) \sim$F(t;h)

ಆಗುವುದು. F(t;h) ಹಾಗೂ F*(t;h) ಇವೆರಡಕ್ಕೂ ಮೇರೆಯಿದ್ದರೆ $\phi(t;h) \sim \theta(t;h)$ ಮತ್ತು $\phi*(t;h) \sim \theta*(t;h)$ ಆದಾಗಲೆಲ್ಲ

$$F(t;h).\phi(t;h) + F^*(t;h).\phi^*(t;h)....F(t;h).\theta(t;h) + F^*(t;h).\theta^*(t;h)$$

$$F(t;h).\phi(t;h) + F^*(t;h).\phi^*(t;h)....F(t;h).\theta(t;h) + F^*(t;h).\theta^*(t;h)$$

ಆಗುತ್ತದೆ. $\phi(t;h)$ ಹಾಗೂ $\theta^*(t;h)$ಗಳಿಗೆ ಮೇರೆಯಿದ್ದರೆ $\phi(t;h) \sim \theta^*(t;h)$ ಮತ್ತು $\sim \theta^*(t;h)$ ಆದಾಗ

$$\phi(t;h).\phi^*(t;h)....\theta(t;h),\theta^*(t;h)$$

ಆಗುವುದು. ಅಷ್ಟೇ ಅಲ್ಲ. ಈ ಐದು ಪ್ರಮೇಯಗಳಲ್ಲಿ ಉದ್ದಕ್ಕೂ ~ ಚಿಹ್ನೆಯನ್ನು $\simeq$ ಚಿಹ್ನೆಗೆ ಬದಲಾಯಿಸಲೂ ಬಹುದು. $\phi(t)$ ಮತ್ತು $\theta(t)$ ಎಂಬರೆರಡು ಏಕಚರ ಉತ್ಪನ್ನಗಳನ್ನು ದ್ವಿಚರ ಉತ್ಪನ್ನಗಳೆಂದು ಪರಿಗಣಿಸಿದಾಗ ಅವು $\phi(t) \sim \theta(t)$ ಅಥವಾ $h\phi(t)...h\theta(t)$ ಆಗುವಂತಿದ್ದರೆ ಸಾರ್ವತ್ರಿಕವಾಗಿ $\phi(t) = \theta(t)$ ಆಗಬೇಕಾಗುವುದು. ಇವೆಲ್ಲ ಪ್ರಮೇಯಗಳೂ ಯಾವುದಾದರೊಂದು ಶ್ರಾಪಿಜ್ಯಾತ್ಮಕ ಸಂತಾಂತರ $I_2$ಕ್ಕೆ ಅನ್ವಯಿಸುತ್ತವೆ. ಈಗ ನಿರ್ದಿಷ್ಟವಾಗಿ $0 < h \le \frac{1}{2}, 0 < t \le h$ ಎಂಬ ಅಂತರವನ್ನು ಪರಿಶೀಲಿಸಿ. ಇದರಲ್ಲಿ $\phi(h)....\phi(t)$ ಆಗುವುದಾದರೆ $\phi(h).....\lambda$ ಆಗುವಂತೆ ಒಂದು ಸ್ಥಿರಸಾಂತ ಸಂಖ್ಯೆ $\lambda$ವನ್ನು ಗೊತ್ತುಮಾಡಬಹುದೆಂಬ ಮೂಲಭೂತ ಪ್ರಮೇಯವೊಂದಿದೆ. ಇದಕ್ಕೆ ಕೋಶಿಯ ವಿಸ್ತೃತ ಅಭಿಸರಣ ತತ್ತ್ವ (ಎಕ್ಸ್ ಟೆಂಡೆಡ್ ಪ್ರಿನ್ಸಿಪಲ್ ಆಫ್ ಕನ್ವರ್ಜೆನ್ಸ್) ಎಂದು ಹೆಸರು; ಮುಂದೆ ಸಮಾಸಕಲನಶಾಸ್ತ್ರದಲ್ಲಿ ಇದನ್ನು ಬಳಸಿಕೊಳ್ಳುತ್ತೇವೆ.

ಇಷ್ಟು ಪೀಠಿಕೆಯ ಬಳಿಕ ಅವಕಲನಶಾಸ್ತ್ರದ ಕ್ರಮಬದ್ಧ ನಿರೂಪಣೆಯನ್ನು ಪ್ರಾರಂಭಿಸಲು ಸಿದ್ಧರಾಗಿದ್ದೇವೆ. ಈ ಉಪವಿಭಾಗದಲ್ಲಿ ಇನ್ನು ಮುಂದೆಲ್ಲ $I_1$ ಅಂದರೆ $a \le t \le A$ ಎಂದೂ $I_1$ ಅಂದರೆ $a \le t \le A, a-t \le h \le A-t$ ಎಂದೂ ಭಾವಿಸಲಾಗುವುದು. $I_1$ರಲ್ಲಿ f(t) ಎಂಬ ಯಾವುದಾದರೊಂದು ಏಕಚರ ಉತ್ಪನ್ನ ವ್ಯಾಖ್ಯೆಯಾಗಿರಲ್ಲಿ. $I_2$ರಲ್ಲಿ

$$f(t+h)....f(t) \qquad ...[4]$$

ಆಗುವುದಾದರೆ $I_1$ರಲ್ಲಿ f(t) ಉತ್ಪನ್ನ ಏಕರೀತ್ಯಾ ಅವಿಚ್ಛಿನ್ನವಾಗಿದೆ. (ಯೂನಿಫಾರ್ಮ್ಲಿ ಕಂಟಿನ್ಯೂಯಸ್) ಎಂದು ಹೇಳುತ್ತೇವೆ. ಇಂಥ ಉತ್ಪನ್ನಗಳಿಗೆ $I_1$ರಲ್ಲಿ ಕಡ್ಡಾಯವಾಗಿ ಮೇರೆಯಿತ್ತದೆಂದು ಸಾಧಿಸಬಹುದು. ಈ ಹಿಂದೆ ಜೆ'(ಣ) ನಿಷ್ಪನ್ನದ ಪರಿಕಲ್ಪನೆಯನ್ನು

f(t+h)=f(t)+hf'(t)

ಎಂಬ ಸರಿಸುಮಾರು ಸಮೀಕರಣದ ಮುಖಾಂತರ ರೂಪಿಸಲು ಪ್ರಯತ್ನಿಸಿದೆವಷ್ಟೆ. ಇಲ್ಲಿರುವ = ಚಿಹ್ನೆಯನ್ನು ⊔ ಚಿಹ್ನೆಗೆ ಬದಲಾಯಿಸುವುದರ ಮೂಲಕ ಸರಿಸುಮಾರು ಸಮತ್ವಗಳ ಸಡಿಲತೆಯಿಂದ ಉಂಟಾಗುವ ಗೊಂದಲಗಳೆಲ್ಲವನ್ನೂ ನಿವಾರಿಸಬಹುದು. ಆದ್ದರಿಂದ ಈಗ ನಿಷ್ಪನ್ನದ ವ್ಯಾಖ್ಯೆಯನ್ನು ಹೀಗೆ ಮಾರ್ಪಡಿಸಿಕೊಳ್ಳುತ್ತೇವೆ: $I_2$ ಅಂತರದಲ್ಲಿ

$$f(t+h)....f(t) + hf'(t) \qquad ... [5]$$

ಆಗುವಂತೆ f'(t) ಎಂಬ ಒಂದು ಏಕಚರ ಉತ್ಪನ್ನವನ್ನು ಗೊತ್ತುಮಾಡಲು ಸಾಧ್ಯವಾಗುವುದಾದರೆ ಆ f' ಉತ್ಪನ್ನ $I_1$ರಲ್ಲಿ f ಉತ್ಪನ್ನದ ಏಕರೀತಿ ನಿಷ್ಪನ್ನವೆನಿಸಿಕೊಳ್ಳುವುದು (ಯೂನಿಫಾರ್ಮ್ ಡಿರೈವೆಟಿವ್). [ಯಾವುದೇ ಸಂದರ್ಭದಲ್ಲಾಗಲೀ ಒಂದಕ್ಕಿಂತ ಹೆಚ್ಚು ಇಂಥ f'(t) ಉತ್ಪನ್ನಗಳಿರಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕು] ಉದಾಹರಣೆಗೆ $f(t)=f^3$ ಎಂದು ಭಾವಿಸಿ. ಆಗ

$$f(t+h)...t^3 + h.3t^2 = f(t) + h.3t^2$$

ಇಲ್ಲಿ $3th+h^2$ ಎಂಬುದು ಯಾವುದೇ $I_2$ ಅಂತರದಲ್ಲಿ t–ಏಕರೀತಿ h–ಸಾಪೇಕ್ಷ ±ÀÆ£ÀåÀ«ÄiÀÄzÀÝÄzÀ h$(3th+h^2)$ ಎಂಬುದು ಅದೇ ಅಂತರದಲ್ಲಿ t–ಏಕರೀತಿ h–ಸಾಪೇಕ್ಷ ಶೂನ್ಯಸ್ಪರ್ಶಿ. ಅಲ್ಲಿಗೆ

$$f(t+h)...t^3 + h.3t^2 = f(t) + h.3t^2$$

ಎಂದಾಯಿತು. ಇದರಿಂದ ಯಾವುದೇ $I_1$ರಲ್ಲಿ $f'(t) = 3t^2$ ಎಂಬ ಉತ್ಪನ್ನ $f(t) = t^3$ ಉತ್ಪನ್ನದ ಏಕರೀತಿ ನಿಷ್ಪನ್ನವೆಂದು ಸಿದ್ಧಪಡುವುದು. ಪ್ರಸಕ್ತ ಲೇಖನದಲ್ಲಿ ಈಗ ಹೇಳಿರುವಂಥ ಏಕರೀತಿ ನಿಷ್ಪನ್ನಗಳ ಹೊರತಾಗಿ ಬೇರಾವ ಬಗೆಯ ನಿಷ್ಪನ್ನಗಳನ್ನೂ ಪ್ರಸ್ತಾಪಿಸುವುದಿಲ್ಲ. ಆದ್ದರಿಂದ ಇನ್ನು ಮುಂದೆ ಎಚ್ಚೆಪಟ್ಟಲ್ಲೆಲ್ಲ ಏಕರೀತಿ ಎಂಬ ವಿಶೇಷಣವನ್ನು ಅಧ್ಯಾಹಾರಗೊಳಿಸಲು ಯಾವ ಅಡ್ಡಿಯೂ ಇಲ್ಲ. ಕೆಲವು ಮುಖ್ಯ ಉತ್ಪನ್ನದ ನಿಷ್ಪನ್ನಗಳನ್ನು ಕೆಳಗಿನ ಪಟ್ಟಿಯಲ್ಲಿ ನಮೂದಿಸಲಾಗಿದೆ.

| ಉತ್ಪನ್ನ f(t)<br>1 | ಸಾಂತಾಂತರ $I_1, a \le t \le b$<br>2 | (ಏಕ ರೀತಿ)<br>ನಿಷ್ಪನ್ನ f'(t)<br>3 |
|---|---|---|
| ಸ್ಥಿರ ಸಂಖ್ಯೆ k | a,b ಯಾವ ಸ್ಥಿರಸಾಂತ ಸಂಖ್ಯೆಗಳು ಬೇಕಾದರೂ ಆಗಬಹುದು | 0 |
| $e^t$ | " | $e^t$ |
| k>0 ಆದಾಗ $k^t$ | " | $k^t \log_e k$ |
| t ರೇಡಿಯನ್ ಮಾನದಲ್ಲಿದ್ದಾಗ sint | " | cost |
| t ರೇಡಿಯನ್ ಮಾನದಲ್ಲಿದ್ದಾಗ cost | " | -sint |
| k ಧನ ಪೂರ್ಣಾಂಕವಾದಾಗ $t^k$ | " | $kt^k - 1$ |
| k>1 ಆದಾಗ $t^k$ | $0 \le a < b$ ಆಗಬೇಕು | $kt^k - 1$ |
| k>1 ಆದಾಗ $t^k$ | $0 < a < b$ ಆಗಬೇಕು | $kt^k - 1$ |
| k>0 ಆದಾಗ $\log_e$ k t | " 1/t | |
| k>0 ಆದಾಗ $\log_e$k t | $a < b < 0$ ಆಗಬೇಕು | -1/t |
| t ರೇಡಿಯನ್ ಮಾನದಲ್ಲಿದ್ದಾಗ tant | ಯಾವುದಾದರೊಂದುಪೂರ್ಣಾಂಕ nಗೆ $\frac{1}{2}(2n-1)\pi < a < b < \frac{1}{2}(2n+1)\pi$ ಆಗಬೇಕು | $\sec^2$t |

$I_1$ ಅಂತರದಲ್ಲಿ ಯಾವುದಾದರೊಂದು ಉತ್ಪನ್ನ f(t)ಗೆ ಏಕರೀತಿ ನಿಷ್ಪನ್ನ f'(t) ಇರುವುದಾದರೆ f'(t) ಉತ್ಪನ್ನ $I_1$ರಲ್ಲಿ ಕಡ್ಡಾಯವಾಗಿ ಏಕರೀತ್ಯಾ ಅವಿಚ್ಛಿನ್ನವಾಗಿರುತ್ತದೆಂದು ತೋರಿಸಬಹುದು. ಆದ್ದರಿಂದ $I_1$ರಲ್ಲಿ f'(t) ಗೆ ಮೇರೆ ಇರುತ್ತದೆ. ತತ್ಫಲವಾಗಿ hf'(t) ಒಂದು ಶೂನ್ಯಗಾಮಿಯಾಗುವ ಕಾರಣ f(t) ಕೂಡ $I_1$ ಅಂತರದಲ್ಲಿ ಏಕರೀತ್ಯಾ ಅವಿಚ್ಛಿನ್ನವಾಗಿರಬೇಕೆಂದು ಸುಲಭವಾಗಿ ಮನಗಾಣಬಹುದು. ಈಗ $I_1$ ಅಂತರದಲ್ಲಿ x(t) ಉತ್ಪನ್ನಕ್ಕೆ x'(t) ಎಂಬ ಏಕರೀತಿ ನಿಷ್ಪನ್ನವೂ ಪ್ರಾಯಶಃ ಇನ್ನಾವುದಾದರೊಂದು $I_1*$ ಅಂತರದಲ್ಲಿ f(t) ಉತ್ಪನ್ನಕ್ಕೆ f'(t) ಎಂಬ ಏಕರೀತಿ ನಿಷ್ಪನ್ನವೂ ಇವೆಯೆಂದು ಭಾವಿಸಿ. ಇಂಥ ಸಂದರ್ಭವಿರುವಾಗ f o x(t)=f(x)t ಉತ್ಪನ್ನ ಸಂಯೋಜನೆಯನ್ನು ವ್ಯಾಖ್ಯೆಮಾಡಲು ಸಾಧ್ಯವಾಗುವುದಾದರೆ $I_1$ರಲ್ಲಿ f o x(t) ಉತ್ಪನ್ನಕ್ಕೂ (ಏಕರೀತಿ) ನಿಷ್ಪನ್ನವಿರುತ್ತದೆಂದೂ ಆ ನಿಷ್ಪನ್ನ x'(t). f o x(t) ಗೆ ಸಮವಾಗಿರುತ್ತದೆಂದೂ ಸಾಧಿಸುತ್ತೇವೆ. ನಿಷ್ಪನ್ನಗಳವ್ಯಾಖ್ಯೆಯ ಪ್ರಕಾರ $I_2$ ಅಂತರದಲ್ಲಿನ ಯಾವುದೇ ಒಂದು ಶೂನ್ಯ ಸ್ಪರ್ಶಿ $h.\delta(t;h)$ಗೆ ಹಾಗೂ ಅನುರೂಪ $I_2*$ ಅಂತರದಲ್ಲಿನ ಯಾವುದೋ ಒಂದು ಶೂನ್ಯಸ್ಪರ್ಶಿ $h.\Delta(t;h)$ ಗೆ

$$x(t+h) = x(t) + hx'(t) + h.\delta(t;h) \text{ ಮತ್ತು}$$

$$f(t+h) = f(t)+hf'(t)+h.\Delta(t;h)$$

ಆಗಬೇಕು. ಈ ನಿತ್ಯ ಸಮೀಕರಣಗಳ ಮೇರೆಗೆ

$$\varepsilon(t;h) = \delta(t;h).f'x(t) + [x'(t) + \delta(t;h)].\Delta(x(t);hx'(t)+h\delta(t;h)$$

ಎಂದು ಬರೆದರೆ $I_2$ ಅಂತರದಲ್ಲಿ

f o x (t+h)=f o x (t)+h.x'(t).f' 0 x (t)+h. $\varepsilon$ (t;h)

ಆಗುವುದೆಂದು ಸುಲಭವಾಗಿ ತಾಳೆನೋಡಬಹುದು. ಇದೇ ಅಂತರದಲ್ಲಿ $\varepsilon(t;h)$ ಒಂದು t–ಏಕರೀತಿ h–ಸಾಪೇಕ್ಷ ಶೂನ್ಯಗಾಮಿಯೆಂದು ಮನಗಾಣುವುದೂ ಸುಲಭವೇ. ಆದ್ದರಿಂದ $h.\varepsilon.(t;h)$ಒಂದು ಶೂನ್ಯ ಸ್ಪರ್ಶಿಯಾಗಿ ಪರಿಣಮಿಸಿ $I_2$ರಲ್ಲಿ

f o x (t+h) $\simeq$ f o x (t)+h.x'(t)'.f' o x(t)

ಎಂದು ಸಿದ್ಧಪಡುತ್ತದೆ. ಇದೇ ನಾವು ಅಪೇಕ್ಷಿಸಿದ ಫಲಿತಾಂಶ. ಸಂಕೇತಗಳಲ್ಲಿ

$[f \circ x]' = x'.f' \circ x$ ...[6]

ಮತ್ತು ಈಗ $I_1$ ಅಂತರದಲ್ಲಿ x(t) ಹಾಗೂ y(t) ಉತ್ಪನ್ನಗಳಿಗೆ x'(t) ಮತ್ತು y'(t) ಎಂಬ ಏಕರೀತಿ ನಿಷ್ಪನ್ನಗಳಿವೆಯೆಂದೂ k, lಗಳು ಯಾವುದಾದರೂ ಎರಡು ಸ್ಥಿರ ಸಾಂತ ಪರಿಮಾಣಗಳೆಂದೂ ಭಾವಿಸೋಣ. ಇಂಥ ಸಂದರ್ಭದಲ್ಲಿ

$x.y(t) = x(t).y(t)$ ಹಾಗೂ $[k.x+l.y](t)=k.x(t)+l.y(t)$

ಎಂಬೆರಡು ಉತ್ಪನ್ನಗಳಿಗೂ ಏಕರೀತಿ ನಿಷ್ಪನ್ನಗಳಿರುತ್ತವೆ ಎಂದು ತೋರಿಸಬಹುದು; ಆ ನಿಷ್ಪನ್ನಗಳನ್ನು ವ್ಯಕ್ತಪಡಿಸುವ ಸೂತ್ರಗಳು ಇವು:

$[x.y]' = x'.y+x.y'$ ...[7]

$[k.x+l,y]' = k.x'+l.y'$ ...[8]

$I_1$ ಅಂತರದಲ್ಲಿ t ಇರುವಾಗಲೆಲ್ಲ $x^2(t) = [x(t)^2 \geq p$ ಆಗುವಂತೆ ಒಂದು ಸ್ಥಿರ ಧನಸಂಖ್ಯೆ p ಯನ್ನು ಗೊತ್ತುಮಾಡಲು ಸಾಧ್ಯವಿದ್ದರೆ [y/x](t)=y(t)/x(t) ಉತ್ಪನ್ನಕ್ಕೂ ಕೆಳಗೆ ವ್ಯಕ್ತಪಡಿಸಿರುವ ರೂಪದಲ್ಲಿ ಏಕರೀತಿ ನಿಷ್ಪನ್ನವಿರುತ್ತದೆ:

$[y/x]' = [y'x-yx']/x^2$ ...[9]

[7], [8] [9] ಸೂತ್ರಗಳ ಸಾಧನೆಗಳನ್ನು ಓದುಗರ ಅಭ್ಯಾಸಕ್ಕಾಗಿ ಬಿಡಲಾಗಿದೆ. ವ್ಯವಹಾರದಲ್ಲಿ ನಿಷ್ಪನ್ನಗಳ ಲೆಕ್ಕಾಚಾರಕ್ಕೆ [6], [7], [8], [9] ಸೂತ್ರಗಳ ನೆರವು ಅತ್ಯಮೂಲ್ಯವಾಗುತ್ತದೆ.

$I_1$ ಅಂತರದಲ್ಲಿ ಯಾವುದೇ y(t) ಉತ್ಪನ್ನಕ್ಕೆ ಏಕರೀತಿ ನಿಷ್ಪನ್ನ y'(t) ಇದ್ದರೆ $I_2$ ಅಂತರದಲ್ಲಿ dy ಎಂಬ ದ್ವಿಚರ ಉತ್ಪನ್ನವನ್ನು ನಾವು ಹೀಗೆ ವ್ಯಾಖ್ಯಿಸುತ್ತೇವೆ:

$dy(t;h)=h.y'(t)$ ...[10]

ಇಡೀ dy ಒಂದು ಉತ್ಪನ್ನ ಸಂಕೇತ; ಅದು d ಮತ್ತು y ಗಳ ಗುಣಲಬ್ಧವೆಂದು ಭಾವಿಸಬಾರದು. ಈ dyಗೆ y ಉತ್ಪನ್ನದ ಅವಕಲವೆಂದು (ಡಿಫರೆನ್ಷಲ್) ಹೆಸರು. ಇದೊಂದು ಶೂನ್ಯಗಾಮಿಯೆಂಬುದನ್ನು ಗಮನಿಸಿ. ಸುಸ್ಪಷ್ಟವಾಗಿ

$dy(t;h) \simeq y(t+h)-y(t)$ ...[11]

ಈಗ y ಎಂಬುದು I* ಮತ್ತು $I_1$ ಅಂತರಗಳಲ್ಲಿ ನಿಷ್ಪನ್ನಗಳಿರುವ f ಮತ್ತು x ಎಂಬ ಇನ್ನೆರಡು ಉತ್ಪನ್ನಗಳ ಉತ್ಪನ್ನಸಂಯೋಜನೆಯಾಗಿರಲಿ: ಅಂದರೆ y=f o x ಅಥವಾ y(t)=f(x(t). ಸೂತ್ರ [6]ರ ಮೇರೆಗೆ

$$dy(t;h)=h.y'(t)=h.\ x'(t).f' \circ x(t)$$

ಆದರೆ ಸೂತ್ರ [10]ರಂತೆ h.x'(t)=dx(t;h). ಆದ್ದರಿಂದ

$dy(t;h)=dx(t;h).f' \circ x(t)$ ಅಥವಾ

$d\, f \circ x(t;h)=dx(t;h).f' \circ x(t)$ . . . [12]

ಇದರಿಂದ $d\, x(t;h) \neq 0$ ಆದಾಗಲೆಲ್ಲ

$f' \circ x(t)=dy(t;h)/dx(t;h)=[dy/dx]\ (t;h)$ ...[13]

ಎಂದು ಗೊತ್ತಾಗುವುದು. f' o x(t)=f'(x(t) ಯನ್ನು y=f o x ಉತ್ಪನ್ನದ x–ಸಾಪೇಕ್ಷ ನಿಷ್ಪನ್ನ (ಡಿರೈವೆಟಿವ್ ಆಫ್ y ವಿತ್ ರೆಸ್ಪೆಕ್ಟ್ ಟು x) ಎಂದು ಕರೆಯುತ್ತೇವೆ. $dx(t;h) \neq 0$ ಆದಾಗ ಏಕಚರ ಉತ್ಪನ್ನವಾದ ಈ x- ಸಾಪೇಕ್ಷ ನಿಷ್ಪನ್ನ ದ್ವಿಚರ ಉತ್ಪನ್ನಗಳಾದ ಎರಡು ಅವಕಲಗಳ ಭಾಗಲಬ್ದ [dy/dx] ಗೆ ಸಮವಿರುತ್ತದೆಂಬ ಮೇಲಿನ ಫಲಿತಾಂಶ [13] ಗಮನಾರ್ಹವಾದ್ದು; ಅವಕಲನಶಾಸ್ತ್ರದಲ್ಲಿ ಇಂದು ಸಾಕಷ್ಟು ವ್ಯಾಪಕವಾಗಿ ಪ್ರಚಲಿತವಿರುವ ನಿಷ್ಪನ್ನಸೂಚಕ $\frac{dy}{dx}$ ಸಂಜ್ಞಾಪದ್ಧತಿಗೆ ಇದೇ ಮೂಲಾಧಾರ. [11] ಮತ್ತು [12]ನೆಯ ಸೂತ್ರಗಳು ಮುಂದೆ ಸಮಾಸಕಲನ ಶಾಸ್ತ್ರದಲ್ಲಿ ತುಂಬ ಉಪಯುಕ್ತವಾಗುತ್ತವೆ.

f(t) ಉತ್ಪನ್ನದ ಏಕರೀತಿ ನಿಷ್ಪನ್ನ f'(t)ಯನ್ನು ವ್ಯಾಖ್ಯಿಸಿದ್ದಾಯಿತು. ಈಗ f'(t) ಉತ್ಪನ್ನಕ್ಕೂ ಪುನಃ ಒಂದು ಏಕರೀತಿ ನಿಷ್ಪನ್ನ f''(t) ಇರಬಹುದಷ್ಟೆ ಹಾಗಿದ್ದಲಿ f''(t)ಗೆ f(t)ಯ (ಏಕರೀತಿ) ದ್ವಿತೀಯ ನಿಷ್ಪನ್ನ (ಸೆಕೆಂಡ್ ಡಿರೈವೆಟಿವ್) ಎಂದು ಹೆಸರು. f ಉತ್ಪನ್ನಕ್ಕೆ ಇದೇ ಪ್ರಕಾರ ತೃತೀಯ ನಿಷ್ಪನ್ನ f'''(t).ಚತುರ್ಥ ನಿಷ್ಪನ್ನ f''''(t) ಮುಂತಾದ ಉನ್ನತ ನಿಷ್ಪನ್ನಗಳೂ (ಹೈಯರ್ಡಿರೈವೆಟಿವ್ಸ್) ಇರಬಹುದು. ಉದಾಹರಣೆಗೆ $f(t)=t^8$ ಆಗಿದ್ದರೆ $f'(t)=8t^7$, $f''(t)=56t^6$, $f'''(t)=336t^5$, $f''''''(t)=1680t^4$ಇತ್ಯಾದಿ. ಏಕಚರ ಉತ್ಪನ್ನಗಳ ನಿಷ್ಪನ್ನಗಳನ್ನು ವ್ಯಾಖ್ಯಿಸುವಲ್ಲಿ ದ್ವಿಚರ ಉತ್ಪನ್ನಗಳ ನೆರವು ಅಗತ್ಯವಾಯಿತು. ಗಣಿತಜ್ಞರು ಅನೇಕ ವೇಳೆ ದ್ವಿಚರ (ಅಥವಾ ಇನ್ನೂ ಹೆಚ್ಚಿನ ಬಹುಚರ) ಉತ್ಪನ್ನಗಳ ನಿಷ್ಪನ್ನಗಳನ್ನು ಕೂಡ ಬಳಕೆಗೆ ತರಬೇಕಾಗುವುದು. ಉದಾಹರಣೆಗೆ t ಮತು t* ಎಂಬ ಸ್ವತಂತ್ರ ಚರಗಳನ್ನು (ಇಂಡೆಪರಂಡೆಂಟ್ ವೇರಿಯೆಬಲ್ಸ್) ಅವಲಂಬಿಸುವ f(t;t*) ಮಾದರಿಯ ದ್ವಿಚರ ಉತ್ಪನ್ನಗಳನ್ನು ಪರಿಶೀಲಿಸಿ.

$$f(t;t^*) = t^2 + t^{*3} - 5t^3t^{*2},\ f(t;t^*) = \sqrt{tt^*}/(t^2 + 2t^{*2})$$

ಮುಂತಾದವು ಇಂಥ ಉತ್ಪನ್ನಗಳಿಗೆ ನಿದರ್ಶನಗಳು. f(t;t*) ವನ್ನು $a \leq t \leq A.\quad a^* \leq t^* \leq A^*$ ಮಾದರಿಯ ಸಾಂತಾಂತರಗಳಲ್ಲಿ (ಇವನ್ನು $J_2$ ಎಂದು ಕರೆಯೋಣ) ವ್ಯಾಖ್ಯಿಸಲಾಗಿದೆಯೆಂದು ಭಾವಿಸುತ್ತೇವೆ. ಇದರ ನಿಷ್ಪನ್ನಗಳನ್ನು ವ್ಯಾಖ್ಯಿಸುವ ಸಲುವಾಗಿ $a \leq t \leq A.\quad a^* \leq t^* \leq A^*, a-t \leq h \leq A-t, a^*-t^* \leq h^* \leq A^*-t^*$ ಮಾದರಿಯ ಸಾಂತಾಂತರಗಳಲ್ಲಿ (ಇವನ್ನು $J_4$ ಎಂದು ಕರೆಯೋಣ) ವ್ಯಾಖ್ಯೆಯಾಗುವ $\delta(t;t^*;h;h^*)$ ಮಾದರಿಯ ಚತುಶ್ಚರ ಉತ್ಪನ್ನಗಳನ್ನು ನಾವು ಆಶ್ರಯಿಸಬೇಕಾಗುತ್ತದೆ. $J_4$ ಅಂತರದಲ್ಲಿನ ಸಂಖ್ಯೆಗಳ ಸಕ್ರಮಜೋಡಣೆ (t;t*;h;h*) ದಲ್ಲಿ t,t* ಗಳ ಬೆಲೆ ಏನೇ ಆಗಿದ್ದಾಗ್ಯೂ h;h*ಗಳು (-1/m)<h<(1/m), (-1/m)<h*<(1/m) ಎಂಬೆರಡು ಅಸಮತ್ವಗಳಿಗೆ ಬದ್ಧವಾಗಿರುವಾಗಲೆಲ್ಲ

$$(-1/n) < \delta(t;t^*;h;h^*) < (1/n)$$

ಆಗುವಂತೆ ಪ್ರತಿ ಧನಪೂರ್ಣಾಂಕ ಟಿಗೂ ಒಂದು ಅನುರೂಪ ಧನಪೂಣಾಂಕ ಟಿಅನ್ನು ಗೊತ್ತು ಮಾಡಲು ಸಾಧ್ಯವಿದ್ದರೆ $J_4$ರಲ್ಲಿ $\delta(t;t^*;h;h^*)$ ಒಂದು [(t;t*)–ಏಕರೀತಿ, (h;h*)_ಸಾಪೇಕ್ಷ] ಶೂನ್ಯಗಾಮಿ ಎನಿಸಿಕೊಳ್ಳುತ್ತದೆ. $\delta_1(t;t^*;h;h^*)$ ಮತ್ತು $\delta_2(t;t^*;h;h^*)$ ಗಳೆರಡೂ ಶೂನ್ಯಗಾಮಿಗಳಾದಲ್ಲಿ $h.\delta_1(t;t^*;h;h^*) + h^*.\delta_2(t;t^*;h;h^*)$ ಮಾದರಿಯ ಉತ್ಪನ್ನಗಳು ಶೂನ್ಯಸ್ಪರ್ಶಿಗಳಾಗುತ್ತವೆ. ಶೂನ್ಯಗಾಮಿ ಶೂನ್ಯಸ್ಪರ್ಶಿಗಳನ್ನು ಕುರಿತ ಈ ಪರಿಕಲ್ಪನೆಗಳನ್ನು ಅಧರಿಸಿ ಹಿಂದೆ $I_2$ರಲ್ಲಿ ಮಾಡಿದಂತೆಯೇ ಈಗ $J_4$ರಲ್ಲೂ ~ ಮತ್ತು $\simeq$ ಚಿಹ್ನೆಗಳನ್ನು ಬಳಕೆಗೆ ತರಬಹುದು. ಆ ಬಳಿಕ

$$f(t+h;t^*+h^*) \sim f(t;h)$$

ಸಂಬಂಧಕ್ಕೆ ಸರಿಹೊಂದುವ f(t;t*) ಉತ್ಪನ್ನಗಳನ್ನು ಏಕರೀತ್ಯಾ ಅವಿಚ್ಛಿನ್ನವಾದವೆಂದು ವರ್ಣಿಸಲು ಸಾಧ್ಯವಾಗುತ್ತದೆ. ಪುನಃ

$$f(t+h;\ t^*+h^*).....f(t;t^*)+h.\ f_1(t;t^*)+h^*.f_2(t;t^*)$$

ಸಂಬಂಧಕ್ಕೆ ಹೊಂದಿಕೊಳ್ಳುವಂತೆ $f_1(t;t^*)$ ಮತ್ತು $f_2(t;t^*)$ ಎಂಬೆರಡು ದ್ವಿಚರ ಉತ್ಪನ್ನಗಳನ್ನೂ $J_2$ರ ಅಂತರದಲ್ಲಿ ಗೊತ್ತುಮಾಡಲು ಸಾಧ್ಯವಿರುವ ಪಕ್ಷಕ್ಕೆ ಈ ಕೊನೆಯ ಎರಡು ಉತ್ಪನ್ನಗಳಿಗೆ f(t;t*) ದ ಏಕರೀತಿ ಅಂಶನಿಷ್ಪನ್ನಗಳೆಂದು (ಯೂನಿಫಾರ್ಮ್ ಪಾರ್ಷ್ಯಲ್ ಡಿರೈವೆಟಿವ್ಸ್) ನಾಮಕರಣಮಾಡಿ f(t;t*) ಉತ್ಪನ್ನ ನಿಷ್ಪನ್ನಯೋಗ್ಯವಾಗಿದೆಯೆಂದು (ಡಿಫರೆನ್ಷಯೆಬಲ್) ಹೇಳುತ್ತೇವೆ. ಇದೇ ಸಂದರ್ಭದಲ್ಲಿ ಅವಕಲಉತ್ಪನ್ನ ಜಜಿನ ಅರ್ಥನಿರೂಪಕ ಸೂತ್ರವನ್ನು ಹೀಗೆ ಇಟ್ಟುಕೊಳ್ಳುತ್ತೇವೆ:

$$df(t;t^*;h;h^*)=h.\ f_1(t;t^*)+h^*.f_2(t;t^*)$$

ಅವಕಲನಶಾಸ್ತ್ರೀಯ ಸಾಹಿತ್ಯದಲ್ಲಿ $f_1(t;t^*)$ ವನ್ನು $f_1(t;t^*)$ ಅಥವಾ $[\partial f/\partial t]$ (t;t*) ಎಂದೂ $f_2(t;t^*)$ ವನ್ನು $f_t*(t;t^*)$ ಅಥವಾ $[\partial f/\partial t^*]$ (t;t*) ಎಂದೂ ಬರೆಯುವ ವಾಡಿಕೆಯಿದೆ. f(t;t*) ನಿಷ್ಪನ್ನಯೋಗ್ಯವಾಗಿದ್ದಾಗ ಅದರ ಅಂಶನಿಷ್ಪನ್ನ $f_1(t;t^*)$ವನ್ನು ಸುಲಭಮಾರ್ಗದಲ್ಲಿ ಲೆಕ್ಕಾಚಾರ ಮಾಡಲು f(t;t*) ದಲ್ಲಿ t* ವನ್ನು ತಾತ್ಕಾಲಿಕವಾಗಿ ಒಂದು ಸ್ಥಿರಸಂಖ್ಯೆಯೆಂದೂ tಯನ್ನು ಮಾತ್ರ ಪ್ರಸ್ತುತ ಚರವೆಂದೂ ಪರಿಗಣಿಸಬಹುದು. ಹೀಗೆ ಮಾಡಿದಾಗ ನಮ್ಮ ಕರಗತವಾಗುವ ಏಕಚರ ಉತ್ಪನ್ನ f(t;t*)ದ ಮಾಮೂಲು ನಿಷ್ಪನ್ನವೇ $f_1(t;t^*)$ t* ವನ್ನು ಪ್ರಸ್ತುತ ಪ್ರಸ್ತುತ ಚರ. t ಯನ್ನು ತಾತ್ಕಾಲಿಕ ಸ್ಥಿರಸಂಖ್ಯೆ ಎಂದು ಪರಿಗಣಿಸಿ ಸದೃಶ ರೀತಿಯಲ್ಲಿ $f_2(t;t^*)$ ವನ್ನೂ ಕಂಡುಹಿಡಿಯಬಹುದು. ಉದಾಹರಣೆಗೆ $f(t;t^*)=t^2+t^{*3}-5t^3t^{*2}$ಆಗಿದ್ದರೆ

$$f_1(t;t^*)=2t-15t^2t^{*2}$$

ಮತ್ತು $f_2(t;t^*)=3t^{*2}-10t^3t^*$

ಈ ಉದಾಹರಣೆಯಲ್ಲಿ ಕಂಡುಬಂದಿರುವಂತೆ $f_1(t;t^*)$ ಮತ್ತು $f_2(t;t^*)$ಗಳು ಮತ್ತೆ ನಿಷ್ಪನ್ನಯೋಗ್ಯವಾಗಿರಬಹುದು. ಹಾಗಿರುವುದಾದರೆ ಅವುಗಳ ಅಂಶ ನಿಷ್ಪನ್ನಗಳನ್ನು

$f_{1,1}$ (t;t*),{ಅಥವಾ $f_{t,t}$ (t;t*), ಇಲ್ಲವೆ

$[\partial^2 f/\partial t^2]\,(t;t^*)\}$; $f_{1,2}(t;t^*)$,{ಅಥವಾ $f_{t,t^*}$ (t;t*), ಇಲ್ಲವೆ

$[\partial^2 f/\partial t\partial t^*]\,(t;t^*)\}$;

$[\partial^2 f/\partial t\partial t^*]\,(t;t^*)\}$; ಅಥವಾ $f_{t^*,t}(t;t^*)$, ಇಲ್ಲವೆ

$[\partial^2 f/\partial t^*\partial t(t;t^*)\}$;

$f_{2,2}$ (t;t*),{ ಅಥವಾ $f_{t^*,t^*}$ (t;t*),

ಇಲ್ಲವೆ $[\partial^2 f/\partial t^{*2}](t;t^*)$ ಎಂಬ ಸಂಕೇತಗಳಿಂದ ಸೂಚಿಸಲಾಗುವುದು. ನಮ್ಮ ಉದಾಹರಣೆಯಲ್ಲಿ $f_{1,1}(t;t^*) = 2-30t\,t^{*2}$; ಮತ್ತು $f_{1,2}(t;t^*) = -30t^2\,t^{*2}$; $f_{2,1}(t;t^*) = -30t^2\,t^{*2}$; ಮತ್ತು $f_{2,2}(t;t^*) = 6t^*-10t^3$ ಆಗುತ್ತವೆ. ಇಲ್ಲಿ $f_{1,2}(t;t^*) = f_{2,1}(t;t^*)$ ಆಗಿರುವುದನ್ನು ಗಮನಿಸಬೇಕು. ನಾವು ವ್ಯಾಖ್ಯಿಸಿರುವಂಥ ಏಕರೀತಿ ಅಂಶ ನಿಷ್ಪನ್ನಗಳ ಆಯಕಟ್ಟಿನಲ್ಲಿ ಇದು ನಿಜಕ್ಕೂ ಒಂದು ಸಾರ್ವತ್ರಿಕ ನಿತ್ಯಸಮತ್ವವೆಂದು ತೋರಿಸಬಹುದು.

ಅವಕಲನಶಾಸ್ತ್ರದ ಕೆಲವು ಉಪಯೋಗಗಳು B ಅವಕಲನಶಾಸ್ತ್ರದ ನಿರ್ಮಾತೃವಾದ ಐಸ್ಸಾಕ್ ನ್ಯೂಟನ್ ಈ ಶಾಸ್ತ್ರವನ್ನು ರೂಪಿಸಿದ್ದೇ ಚಲನೆಗೆ ಸಂಬಂಧ ಪಟ್ಟ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸುವ ಸಲುವಾಗಿ. ಕಾಯವೊಂದು tಯಷ್ಟು ಚಲಿಸುವ ದೂರ f ಆಗಿರಲಿ. ಣಿ ಬೆಲೆ ಣಯ ಬೆಲೆಯನ್ನು ಅವಲಂಬಿಸಿದೆ ಎಂದು ಸುಸ್ಪಷ್ಟ. f ಅಲ್ಲಿಗೆ ಣಯ ಒಂದು ಉತ್ಪನ್ನವಾಯಿತು:

$$f = f(t)$$

t ಮತ್ತು t+h ವೇಳೆಗಳ ನಡುವೆ ಇರುವ hನಷ್ಟು ಅಂತರದಲ್ಲಿ ಕಾಯ f(t+h)-f(t) ಯಷ್ಟು ದೂರವನ್ನು ಚಲಿಸುತ್ತದೆ. ಜಿಗೆ ನಿಷ್ಪನ್ನವಿದೆಯೆಂದು ಭಾವಿಸಿದರೆ

$$f(t+h)-f(t)\approx hf'(t)$$

ಈ ಸಂಬಂಧದಿಂದ $f'(t)$ ನಿಷ್ಪನ್ನವನ್ನು t ವೇಳೆಯಲ್ಲಿ ಕ್ಷಣಿಕವಾಗಿ ಕಾಯ ಚಲಿಸುವಾಗ ಎಂಬುದಾಗಿ ವಿವರಿಸಬಹುದೆಂದು ನಮಗೆ ಹೊಳೆಯುತ್ತದೆ. ಇದೇ ರೀತಿ $f'(t+h)-f'(t)\approx hf''(t)$ ಆಗುವುದರಿಂದ $f''(t)$ ಎಂಬ ದ್ವಿತೀಯ ನಿಷ್ಪನ್ನ ಮತ್ತೆ t ವೇಳೆಯಲ್ಲಿ ಕ್ಷಣಿಕವಾಗಿ ಕಾಯ ಗಳಿಸುತ್ತಿರುವ ವೇಗವೃದ್ಧಿಯ ವ್ಯಕ್ತಪಡಿಸಬೇಕಷ್ಟೆ. ಚಲನಶಾಸ್ತ್ರದ ನಿಯಮಗಳು ಇಂಥ ವೇಗವೃದ್ಧಿಯ ದರಕ್ಕೂ ಕಾಯದ ಮೇಲೆ ವರ್ತಿಸುತ್ತಿರುವ ಬಲಗಳಿಗೂ ಸಂಬಂಧ ಕಲ್ಪಿಸುತ್ತವೆ. ಅಂಥ ಸಂಬಂಧಗಳನ್ನು ಗಣಿತಭಾಷೆಯಲ್ಲಿ ವ್ಯಕ್ತಪಡಿಸಿದಾಗ ನಮಗೆ $f''(t)$ ಮುಂತಾದ ನಿಷ್ಪನ್ನಗಳನ್ನೊಳಗೊಂಡ ಅವಕಲನ ಸಮೀಕರಣಗಳು (ಡಿಫರೆನ್ಷಲ್ ಇಕ್ವೇಷನ್ಸ್) ದೊರೆಯುತ್ತವೆ. ಇಂಥ ಸಮೀಕರಣಗಳನ್ನು ಬಿಡಿಸುವುದರಿಂದ ಕಾಯದ ಚಲನೆಗೆ ಸಂಬಂಧಿಸಿದ ಮಾಹಿತಿಗಳೆಲ್ಲವೂ ಕರಗತವಾಗುತ್ತವೆ. ಅತಿಯಾಗಿ ಸರಳಗೊಳಿಸಿರುವ ಈ ವಿವರಣೆಯಿಂದಲೇ ಚಲನ ಸಮಸ್ಯೆಗಳ ಪರಿಹಾರದಲ್ಲಿ ಅವಕಲನಶಾಸ್ತ್ರದ ಪಾತ್ರ ಅಮೂಲ್ಯವಾದುದೆಂದು ಮನವರಿಕೆಯಾಗುವುದು. [ವಾಸ್ತವಿಕವಾಗಿ ಸಂಕೀರ್ಣ ಚಲನ ಸಮಸ್ಯೆಗಳನ್ನು ಬಿಡಿಸಬೇಕಾದರೆ ಸದಿಶ ಪರಿಮಾಣಗಳೇ (ವೆಕ್ಟರ್ಸ್) ಮೊದಲಾದ ನವಪರಿಕಲ್ಪನೆಗಳನ್ನೂ ಒಳಗೊಳ್ಳುವಂತೆ ಅವಕಲನಶಾಸ್ತ್ರದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬೇಕಾಗುತ್ತದೆ.]

ನಿರ್ದೇಶಕ ಜ್ಯಾಮಿತಿಯ (ಕೋಆರ್ಡಿನೇಟ್ ಜ್ಯಾಮಿಟ್ರಿ) ಆಯಕಟ್ಟಿನೊಳಗೆ ವಕ್ರರೇಖೆಗಳ (ಕರ್ವ್ಸ್) ಲಕ್ಷಣಗಳನ್ನು ಅಧ್ಯಯನ ಮಾಡುವಲ್ಲಿ ಕೂಡ ಅವಕಲನಶಾಸ್ತ್ರದ ನೆರವು ಅಗತ್ಯವಾಗುತ್ತದೆ. ನಿರ್ದೇಶಕ ಜ್ಯಾಮಿತಿಯಲ್ಲಿ ಬಿಂದು-ನಿರ್ದೇಶಕಗಳ ಪರಸ್ಪರ ಸಂಬಂಧ ಏಕೈಕವಾಗಿರುವುದು ಚಿರಪರಿಚಿತ ವಿಷಯ. $x'Ox$ ಮತ್ತು $x'Ox$ ಎರಡು ಪರಸ್ಪರ ಲಂಬ ಸರಳರೇಖೆಗಳು (ಇವುಗಳಿಗೆ ಅನುಕ್ರಮವಾಗಿ x-ಅಕ್ಷ ಮತ್ತು y-ಅಕ್ಷ ಎಂದು ಹೆಸರು) ರಚಿಸುವ x y-ಸಮತಲವನ್ನು ಈಗ ಪರಿಶೀಲಿಸೋಣ (ಚಿತ್ರ 1).



ಚಿತ್ರ 1

x(t) ಮತ್ತು y(t) ಎಂಬೆರಡು ಉತ್ಪನ್ನಗಳಿಗೆ $a\le t\le A$ ಅಂತರದಲ್ಲಿ $x'(t)$ ಮತ್ತು $y'(t)$ ನಿಷ್ಪನ್ನಗಳಿವೆಯೆಂದು ಭಾವಿಸೋಣ. a, A ಗಳ ನಡುವೆ ಇರುವ t ಯ ಪ್ರತಿಯೊಂದು ಬೆಲೆಗೂ ಅನುಸೂಪವಾಗಿ xy-ಸಮತಲದಲ್ಲಿ $[x(t), y(t)]$ ಎಂಬ ಬಿಂದುವೊಂದನ್ನು ಗುರ್ತಿಸಬಹುದು. ಇಂಥ ಎಲ್ಲ ಬಿಂದುಗಳ ಗಣ (ಸೆಟ್) ಒಂದು ವಕ್ರರೇಖೆಯಾಗುತ್ತದೆ. ಇದರ ಮೇಲಿನ ಎರಡು ಬಿಂದುಗಳು $P\equiv[x(t),y(t)]$, $Q\equiv[x(t+h),y(t+h)]$ ಆಗಿರಲಿ. ಅವನ್ನು PQ ಜ್ಯಾವು (ವೃದ್ಧಿಸಿದಾಗ) $x'Ox$ ನೊಡನೆ $\theta$ ಕೋನವನ್ನು ಏರ್ಪಡಿಸಲಿ. ಚಿತ್ರ 1ರಲ್ಲಿ ತೋರಿಸುವ PQR ಲಂಬ ಕೋನ ತ್ರಿಭುಜದಲ್ಲಿ

$PR = x(t+h)-x(t)\approx h.x'(t)$

ಮತ್ತು $QR = y(t+h)-y(t)\approx h.y'(t)$

ಅರ್ಥಾತ್ ಯಾವುದೋ ಎರಡು ಶೂನ್ಯಗಾಮಿ $\delta$ ಮತ್ತು $\varepsilon$ ಗಳಿಗೆ

$PQ = hx'(t)+h\,\delta(t;h)$ ಮತ್ತು

$QR = hy'(t)+h\,\varepsilon(t;h)$

ಆದ್ದರಿಂದ

$x'(t)\ne 0,\ x'(t)+\delta(t;h)\ne 0$ ಆದಲ್ಲಿ

$$\tan\theta = \frac{QR}{PR} = \frac{h[y'(t)+\varepsilon(t;h)]}{h(x'(t)+\delta(t;h)]}$$

$$= \frac{y'(t)}{x'(t)} + \frac{x'(t)\varepsilon(t;h)-y'(t)\delta(t;h)}{x'(t)[x'(t)+\delta(t;h)]}$$

$[x'(t)]^2\ge p$ ಆಗುವಂತೆ ಒಂದು ಧನಸಂಖ್ಯೆ p ಯನ್ನು ಗೊತ್ತುಮಾಡಲು ಸಾಧ್ಯವಿರುವುದಾದರೆ ಮೇಲಿನ ಸಮೀಕರಣದ ಕೊನೆಯಪದ ಒಂದು ಶೂನ್ಯಗಾಮಿಯಾಗಿ

$$\tan\theta\approx y'(t)/x'(t)$$

ಆಗುವುದು. ಈಗ $\tan\psi = y'(t)/x'(t)$ ಆಗುವಂತೆ $\psi$ ಯನ್ನು ಗೊತ್ತುಮಾಡಿಕೊಂಡು $x'Ox$ ನೊಡನೆ ಆ $\psi$ ಕೋನವನ್ನು ಏರ್ಪಡಿಸುವಂತೆ P ಮುಖಾಂತರ AP ಸರಳರೇಖೆಯನ್ನೆಳೆದರೆ AP ಮತ್ತು BP ಗಳಿಗಿರುವ ಕೋನಾಂತರ $(\psi-\theta)$ ಒಂದು ಶೂನ್ಯಗಾಮಿಯಾಗಿ ಪರಿಣಮಿಸುತ್ತದೆ. ಈ ಸಂದರ್ಭದಲ್ಲಿ t ಯನ್ನು ಸ್ಥಿರವೆಂದೂ h ಅನ್ನು ಚರವೆಂದೂ ಪರಿಗಣಿಸಿದರೆ P ಮತ್ತು APಗಳು ಸ್ಥಿರ, Q ಮತ್ತು BQ ಗಳು ಚರ ಆಗುತ್ತದೆ. AP, BP ಗಳ ಕೋನಾಂತರ ಶೂನ್ಯಗಾಮಿಯಾದ ಕಾರಣ Q ಬಿಂದು Pಯನ್ನು ಹೆಚ್ಚು ಹೆಚ್ಚು ಸಮೀಪಿಸಿದಂತೆಲ್ಲ ಸ್ಥಿರರೇಖೆ APಗೆ ವೃದ್ಧಿಸಿದ ಜ್ಯಾ BP ಹೆಚ್ಚು ಹೆಚ್ಚು ಹತ್ತಿರವಾಗಬೇಕಷ್ಟೆ. ಇದರಿಂದ AP ಯನ್ನು ವಕ್ರರೇಖೆಗೆ P ಯಲ್ಲಿ ಎಳೆದ ಸ್ಪರ್ಶಕವೆಂಬುದಾಗಿ (ಟ್ಯಾಂಜೆಂಟ್) ಪರಿಗಣಿಸಬೇಕೆಂದು ನಮಗೆ ಹೊಳೆಯುತ್ತದೆ. $x'Ox$ ನೊಡನೆ ಈ ಸ್ಪರ್ಶಕ ಏರ್ಪಡಿಸುವ $\psi$ ಕೋನವನ್ನು $\tan\psi = y'(t)/x'(t)$ ಎಂಬ ಸೂತ್ರದಿಂದ ಲೆಕ್ಕಹಾಕಬಹುದೆಂಬ ಅಂಶ ಗಮನಾರ್ಹ. ಯಾವುದೇ ದತ್ತ ವಕ್ರರೇಖೆಯ ಅಪೇಕ್ಷಿತ ಸ್ಪರ್ಶಕವೊಂದರ ನಿಖರಸ್ಥಾನವನ್ನು ಈ ಮೂಲಕ ನಿರ್ಧರಿಸಬಹುದು. ಇದೇ ಸಂಬಂಧದಲ್ಲಿ $y(t) = f\,o\,x(t)$ ಆಗಿರುವ ಪಕ್ಷಕ್ಕೆ [6] ರ ಮೇರೆಗೆ

$$y'(t) = x'(t).f'o\,x(t)$$

ಆಗುವುದರಿಂದ $\tan\psi = [y'(t)/x'(t)] = f'o\,x(t)$ ಸಹ ಆಗುತ್ತದೆಂಬ ಅಂಶವೂ ಗಮನಾರ್ಹವೇ. ಅಲ್ಲಿಗೆ $x = x(t)$ ಮತ್ತು $y = y(t)$ ಎಂಬ ಎರಡು ಉತ್ಪನ್ನಗಳನ್ನು ಉಪಯೋಗಿಸಿಕೊಂಡು ವಕ್ರರೇಖೆಗಳನ್ನು ರಚಿಸಬಹುದು; ಮತ್ತು ಲೆಕ್ಕಾಚಾರದ ಮೂಲಕ ಅಂಥ ವಕ್ರರೇಖೆಗಳ ಸ್ಪರ್ಶಕಗಳ ಸ್ಥಾನಗಳನ್ನು ನಿರ್ಧರಿಸಬಹುದು ಎಂದಾಯಿತು. ಕೆಲವು ಸನ್ನಿವೇಶಗಳಲ್ಲಿ (ವಿಶಿಷ್ಟವಾಗಿ, ವಕ್ರರೇಖೆಯನ್ನು ಒಂದಕ್ಕಿಂತ ಹೆಚ್ಚು ಬಿಂದುಗಳಲ್ಲಿ ಛೇದಿಸುವಂತೆ $y'Oy$ಗೆ ಯಾವುದೊಂದು ಸಮಾಂತರವನ್ನು ಎಳೆಯಲು ಸಾಧ್ಯವಿಲ್ಲದಿರುವಾಗ) ಈ ಎರಡು



ಚಿತ್ರ 2

ಉತ್ಪನ್ನಗಳ ಪೈಕಿ x(t) ಯನ್ನು x(t) = t ಎಂಬ ಸರಳ ರೂಪದಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದು. ಹೀಗಾದಾಗ ರಚಿತವಾಗುವ ವಕ್ರರೇಖೆ [x(t), y(t)] ಯ ಬದಲು [t, y(t)]ಯಂಥ ವಿವಿಧ ಬಿಂದುಗಳ ಗಣವಾಗುತ್ತದಷ್ಟೆ. ಇಂಥ ವಕ್ರರೇಖೆಗೆ y ಉತ್ಪನ್ನದ ಗ್ರಾಫ್ ಎಂದು ಹೆಸರು. 2 ರಿಂದ 7ರ ವರೆಗಿನ ಚಿತ್ರಗಳಲ್ಲಿ ಈ ಬಗೆಯ ಗ್ರಾಫುಗಳಿಗೆ ಅನ್ವಯಿಸುವ ಕೆಲವು ಗಮನಾರ್ಹ ಫಲಿತಾಂಶಗಳನ್ನು ಪ್ರದರ್ಶಿಸಲಾಗಿದೆ. ಪ್ರಸಕ್ತ ಲೇಖನದ

ವ್ಯಾಪ್ತಿಯೊಳಗೆ ಈ ಫಲಿತಾಂಶಗಳನ್ನು ಕ್ರಮಬದ್ಧವಾಗಿ ಸಮರ್ಥಿಸಲು ಸಾಧ್ಯವಾಗದ ಕಾರಣ ಅವನ್ನು ಇಲ್ಲಿ ಕೇವಲ ಅನೌಪಚಾರಿಕವಾಗಿ ಉಲ್ಲೇಖಿಸುತ್ತೇವೆ.

ಎಡದಿಂದ ಬಲಕ್ಕೆ ಹೋದಂತೆಲ್ಲ ಗ್ರಾಫ್ ಎಂದರೆ ವಕ್ರರೇಖೆ ಹೆಚ್ಚು ಹೆಚ್ಚು ಎತ್ತರಕ್ಕೆ ಏರುವುದಾದರೆ ಸಂಬಂಧ ಪಟ್ಟ ಅಂತರದಲ್ಲಿ $y'(t) \ge 0$ ಆಗಿರುತ್ತದೆ (ಚಿತ್ರ 2,3); ಹಾಗೆ ಏರುವ ಬದಲು ಇಳಿಯುವುದಾದರೆ $y'(t) \le 0$ (ಚಿತ್ರ 4,5). ಇನ್ನು ಮುಂದೆ y ಉತ್ಪನ್ನಕ್ಕೆ ದ್ವಿತೀಯ ನಿಷ್ಪನ್ನ y" ಕೂಡ ಇದೆಯೆಂದು ಭಾವಿಸೋಣ.




ಚಿತ್ರ 3

y ಯ ಗ್ರಾಫ್ ಊರ್ಧ್ವನಿಮ್ನವಾಗಿದ್ದರೆ (ಕಾನ್ಕೇವ್ ಅಪ್ ವರ್ಡ್ಸ್) ಸಂಬಂಧ ಪಟ್ಟ ಅಂತರದಲ್ಲಿ $y''(t) \ge 0$ (ಚಿತ್ರ 2,4); ಅದು ಊರ್ಧ್ವಪೀನವಾಗಿದ್ದರೆ (ಕಾನ್ವೆಕ್ಸ್ ಅಪ್ ವರ್ಡ್ಸ್) $y''(t) \le 0$ (ಚಿತ್ರ 3,5). ಈಗ ಚಿತ್ರ 6ನ್ನು ಗಮನಿಸಿ. ಇಲ್ಲಿ A ಮತ್ತು ಅಗಳು y ಯ ಗ್ರಾಫಿನ ಮೇಲೆ ಅವುಗಳ ಅಕ್ಕಪಕ್ಕದಲ್ಲಿರುವ ಬಿಂದುಗಳಿಗಿಂತ ಹೆಚ್ಚು ಎತ್ತರದಲ್ಲಿವೆ. B ಮತ್ತು ಆ Dಗಳಾದರೋ ಅವುಗಳ ಅಕ್ಕಪಕ್ಕದಲ್ಲಿರುವ ಬಿಂದುಗಳಿಗಿಂತ ತಗ್ಗಿನಲ್ಲಿವೆ. A,C ಗಳಂಥವಕ್ಕೆ ಗ್ರಾಫಿನ ಗರಿಷ್ಠ ಬಿಂದುಗಳೆಂದೂ (ಮ್ಯಾಕ್ಸಿಮಾ), B, Dಗಳಂಥವಕ್ಕೆ ಕನಿಷ್ಠ ಬಿಂದುಗಳೆಂದೂ (ಮಿನಿಮಾ) ಹೆಸರು. ಗರಿಷ್ಠ ಬಿಂದುಗಳ ಬಳಿ ವಕ್ರರೇಖೆ ಊರ್ಧ್ವಪೀನ ವಾಗಿರುವುದರಿಂದ ಅಲ್ಲೆಲ್ಲ $y''(t) \le 0$. ಅಂತೆಯೇ ಕನಿಷ್ಠ ಬಿಂದುಗಳಲ್ಲಿ $y''(t) \ge 0$. ಎಡದಿಂದ ಬಲಕ್ಕೆ ಹೋದಂತೆ ಚಿತ್ರ 6ರಲ್ಲಿ yಯ ಗ್ರಾಫ್ Aಸಿಗುವ ವರೆಗೆ ಏರುತ್ತದೆ, ಆ ಬಳಿಕ ಇಳಿಯತೊಡಗುತ್ತದೆ. ತತ್ಫಲವಾಗಿ Aಗೆ ತುಸು ಹಿಂದೆ $y'(t) \ge 0$ ಆಗಿಯೂ ತುಸು ಮುಂದೆ $y'(t) \le 0$ ಆಗಿಯೂ ಇರಬೇಕು. ಇದರಿಂದ A ಯಲ್ಲಿ ನಿಖರವಾಗಿ $y'(t) = 0$ ಆಗಿರುತ್ತದೆಂದು ಊಹಿಸಬಹುದು ಇದೇ ರೀತಿ ಉಳಿದೆಲ್ಲ ಗರಿಷ್ಠ ಹಾಗೂ ಕನಿಷ್ಠ ಬಿಂದುಗಳಲ್ಲೂ $y'(t) = 0$. ಆದ್ದರಿಂದ yಯ ಗ್ರಾಫಿನ ಗರಿಷ್ಠ/ಕನಿಷ್ಠ ಬಿಂದುಗಳನ್ನು ಪತ್ತೆಹಚ್ಚಲು ಬಳಸಬಹುದಾದ ನಿರ್ಣಾಯಕಗಳು ಹೀಗಿವೆ $y'(t) = 0, \quad y''(t) < 0$ ಆಗಿದ್ದರೆ ಗ್ರಾಫಿನ ಮೇಲಿರುವ [t, y(t)] ಒಂದು ಗರಿಷ್ಠ ಬಿಂದು; $y'(t) = 0, \quad y''(t) > 0$ ಆಗಿದ್ದರೆ [t, y(t)] ಒಂದು ಕನಿಷ್ಠ ಬಿಂದು. $y'(t) = 0, \quad y''(t) = 0$ ಆದ ಪಕ್ಷದಲ್ಲಿ [t, y(t)]




ಚಿತ್ರ 4




ಚಿತ್ರ 5




ಚಿತ್ರ 6

ಕನಿಷ್ಠ ಅಥವಾ ಗರಿಷ್ಠ ಬಿಂದು ಹೌದೇ ಅಲ್ಲವೇ ಎಂಬುದನ್ನು ನಿರ್ಧರಿಸಲು ಇನ್ನೂ ಹೆಚ್ಚಿನ ತನಿಖೆ ಅಗತ್ಯವಾಗುವುದು.] ಕೊನೆಯದಾಗಿ ಚಿತ್ರ 7ರಲ್ಲಿ ತೋರಿಸಿರುವ ಗ್ರಾಫ್ ಎಡದಿಂದ ಬಲಕ್ಕೆ ಹೋದಂತೆ E ವರೆಗೆ ಊರ್ಧ್ವನಿಮ್ನವೂ E ಮತ್ತು Fಗಳ ಮಧ್ಯೆ ಊರ್ಧ್ವ ಪೀನವೂ F ಆಚೆ ಪುನಃ ಊರ್ಧ್ವನಿಮ್ನವೂ ಆಗಿದೆ. E,Fಗಳಂಥ ಬಿಂದುಗಳು ಗ್ರಾಫಿನ ಪರ್ವಬಿಂದುಗಳೆನಿಸಿಕೊಳ್ಳುತ್ತವೆ (ಪಾಯಿಂಟ್ಸ್ ಆಫ್ ಇನ್ ಫ್ಲೆಕ್ಷನ್). ಪರ್ವಬಿಂದುವೊಂದರ ಒಂದು ಪಾರ್ಶ್ವದಲ್ಲಿ $y''(t) \ge 0$ ಮತ್ತು ಇನ್ನೊಂದು ಪಾರ್ಶ್ವದಲ್ಲಿ $y''(t) \le 0$ ಆಗುವುದರಿಂದ ನಿಖರವಾಗಿ ಆ ಪರ್ವಬಿಂದುವಿನಲ್ಲೇ $y''(t) = 0$ ಇರುತ್ತದೆಂದು ಊಹಿಸಬಹುದು. ಅಂದಮೇಲೆ [t, y(t)] ಪರ್ವಬಿಂದುವಾದಾಗ $y''(t) = 0$ . (ಆದರೆ ಈ ಫಲಿತಾಂಶದ ವಿಲೋಮ ಮಾತ್ರ ಯಾವಾಗಲೂ ಸತ್ಯವಾಗ ಬೇಕಾದುದೇನಿಲ್ಲ). ಚಿತ್ರ 7ರ ಗ್ರಾಫಿಗೆ E, Fಗಳಲ್ಲಿ ಎಳೆದಿರುವ ಸ್ಪರ್ಶಕಗಳ ವೈಚಿತ್ರ್ಯವನ್ನು ಗಮನಿಸಿ. ಅವು ವಕ್ರರೇಖೆಯ ಒಂದು ಪಾರ್ಶ್ವದಿಂದ ಇನ್ನೊಂದು ಪಾರ್ಶ್ವಕ್ಕೆ ಹಾದುಹೋಗಿವೆ. ಪರ್ವಬಿಂದುಗಳಲ್ಲಿ ರಚಿಸಿದ ಸ್ಪರ್ಶಕಗಳೆಲ್ಲಕ್ಕೂ ಈ ಲಕ್ಷಣವಿರುತ್ತದೆ.




ಚಿತ್ರ 7

**ಸಮಾಸಕಲನಶಾಸ್ತ್ರ (ಇಂಟೆಗ್ರಲ್ ಕ್ಯಾಲ್ಕುಲಸ್)** : ಅವಕಲನಶಾಸ್ತ್ರದಲ್ಲಿ ಉತ್ಪನ್ನಗಳ ವೃದ್ಧಿದರಗಳನ್ನು ಕುರಿತು ಅಧ್ಯಯನ ನಡೆಸಿದ್ದಾಯಿತು. ಅಲ್ಲಿ ನಾವು ಪ್ರಧಾನವಾಗಿ ಬಳಸಿಕೊಂಡ ಅಸ್ತ್ರವೆಂದರೆ ಶೂನ್ಯಗಾಮಿಗಳು. ಸಮಾಸಕಲನಶಾಸ್ತ್ರದಲ್ಲಿ ಕೂಡ ಶೂನ್ಯಗಾಮಿಗಳು ಕೇಂದ್ರೀಯ ಪಾತ್ರವನ್ನು ನಿರ್ವಹಿಸುತ್ತವೆ. ಈ ಕಾರಣದಿಂದ ಅವಕಲನ, ಸಮಾಸಕಲನಶಾಸ್ತ್ರಗಳೆರಡನ್ನೂ ಒಟ್ಟಾಗಿ ಶೂನ್ಯಗಾಮಿಗಳ (ಅಥವಾ ರಾಬಿನ್ ಸನ್ ಪರ್ಯಾಯ ನಿರೂಪಣೆಯಲ್ಲಿ ಅನಂತಸೂಕ್ಷ್ಮಗಳ) ಕಲನಶಾಸ್ತ್ರವೆಂದು (ಇನ್ ಫಿನಿಟೆಸಿಮಲ್ ಕ್ಯಾಲ್ಕುಲಸ್) ಕರೆಯಬಹುದು. ಶೂನ್ಯಗಾಮಿ ಉತ್ಪನ್ನವೊಂದರ ಅಪಾರ ಸಂಖ್ಯೆಯಷ್ಟು ಬಿಡಿಬೆಲೆಗಳ ಮೊತ್ತವನ್ನು ಅಂದಾಜುಮಾಡುವುದು ಸಮಾಸಕಲನ ಶಾಸ್ತ್ರದ ಪ್ರಧಾನ ಸಮಸ್ಯೆ. ಇಂಥ ಮೊತ್ತಗಳು ಹೇಗೆ ಸ್ವಾಭಾವಿಕವಾಗಿ ಉದ್ಭಸಬಹುದೆಂಬ ಬಗ್ಗೆ ಅರಿಯಲು $0 \le t \le 1$ ಅಂತರದಲ್ಲಿ y(t)>0 ಆಗುವಂತೆ ವ್ಯಾಖ್ಯೆಮಾಡಿರುವ ಹಾಗೂ ಮೇರೆಯಿರುವ ಯಾವುದಾದರೊಂದು y(t) ಉತ್ಪನ್ನದ ಗ್ರಾಫನ್ನು ಪರಿಶೀಲಿಸಿ (ಚಿತ್ರ 8). ಈ ಗ್ರಾಫಿನ ಅಡಿಯಲ್ಲಿ (ಆದರೆ $x'Ox$ ಅಕ್ಷದ ಮೇಲುಗಡೆ) ಇರುವ $OPP_1RO$ ಜ್ಯಾಮಿತೀಯ ಆಕೃತಿಯ ಕ್ಷೇತ್ರಫಲವನ್ನು ಅಂದಾಜು ಮಾಡುವುದು ಹೇಗೆ ? q ಎಂಬುದು ಯಾವುದಾದರೊಂದು ಧನಪೂರ್ಣಾಂಕ ಮತ್ತು h=1/(q+1) ಆಗಿರಲಿ. ಉದಾಹರಣೆಗೆ q=4, h=0.2 ಎಂದಿಟ್ಟುಕೊಳ್ಳಬಹುದು. OR ಸರಳರೇಖಾಖಂಡವನ್ನು q+1=5 ಸಮಭಾಗಗಳನ್ನಾಗಿ ವಿಭಾಗಿಸಿ ಚಿತ್ರದಲ್ಲಿ ತೋರಿಸಿರುವಂತೆ $OPQ_1R_1$, $R_1P_1Q_2R_2$, $R_2P_2Q_2R_3$, $R_3P_3Q_4R_4$, $R_4P_4Q_5R$ ಆಯತಗಳನ್ನು ರಚಿಸಿ. ಈ ಆಯತಗಳೊಂದೊಂದರ ಕ್ಷೇತ್ರಫಲವೂ ಅದರ ಉದ್ದವಾದ ಅಗಲಗಳ ಗುಣಲಬ್ಧಕ್ಕೆ ಸಮವಾಗಿರುತ್ತದಷ್ಟೆ; ಆ ಕ್ಷೇತ್ರಫಲಗಳ ಮೊತ್ತಕ್ಕೂ ಅಪೇಕ್ಷಿತ OPQRO ಆಕೃತಿಯ ಕ್ಷೇತ್ರಫಲಕ್ಕೂ ಅಷ್ಟೇನೂ ಹೆಚ್ಚು ವ್ಯತ್ಯಾಸವಿಲ್ಲವಾದ್ದರಿಂದ ಅಪೇಕ್ಷಿತ ಕ್ಷೇತ್ರಫಲ ಸರಿಸುಮಾರಾಗಿ

$$S(0.2) = (0.2)y + (0.2)\,y(0.2) + (0.2)\,y(0.4) + (0.2)\,y(0.6) + (0.2)\,y(0.8)$$

ಇಷ್ಟಿರುತ್ತದೆಂದು ಹೇಳಬಹುದು. ಒಂದು ವೇಳೆ ಈ ಅಂದಾಜು ನಮಗೆ ಅಸಮರ್ಪಕವೆನಿಸಿದರೆ qವಿನ ಬೆಲೆಯನ್ನು ಇನ್ನಷ್ಟು ಹೆಚ್ಚಿಸಿ ನಮ್ಮ ರಚನೆಯನ್ನೂ ಲೆಕ್ಕಾಚಾರವನ್ನೂ ಮತ್ತೊಮ್ಮೆ ನಿರ್ವಹಿಸಿ ಅಪೇಕ್ಷಿತ $OPP_1RO$ ಕ್ಷೇತ್ರಫಲಕ್ಕೆ ಇನ್ನಷ್ಟು ಸಮೀಪವಾದ ಅಂದಾಜನ್ನು ವ್ಯುತ್ಪಾದಿಸಬಹುದು. ಇಂಥ ವಿಧಾನದಲ್ಲಿ ನಮಗೆ ದೊರಕುವ ಪ್ರತಿ ಅಂದಾಜೂ

$$S(h) = h\,y(0) + h\,y(h) + h\,y(2h) + \ldots + h\,y(qh)$$

ರೂಪದಲ್ಲಿರುತ್ತದೆಂಬುದು ಸುಸ್ಪಷ್ಟ. q ಅಧಿಕವಾದಂತೆಲ್ಲ S(h) ನಲ್ಲಿರುವ ಪದಗಳ ಸಂಖ್ಯೆ (=q+1) ಏರುತ್ತ ಹೋಗುವುದು. yಗೆ ಮೇರೆಯಿತುವುದರಿಂದ hy(t) ಉತ್ಪನ್ನ

ಒಂದು t–ಏಕರೀತಿ h–ಸಾಪೇಕ್ಷ ಶೂನ್ಯಗಾಮಿಯಷ್ಟೆ. ಆದ್ದರಿಂದ S(h) ಮೊತ್ತದ ಒಂದೊಂದು ಪದವೂ ಈ ಶೂನ್ಯಗಾಮಿ ಉತ್ಪನ್ನದ ಒಂದೊಂದು ಬಿಡಿ ಬೆಲೆ. ಅಂದಮೇಲೆ ಅಪೇಕ್ಷಿತ OPQRO ಕ್ಷೇತ್ರಫಲದ ಬಗ್ಗೆ ನಮಗೆ ದೊರಕುವ S(h) ಮಾದರಿಯ ಪ್ರತಿ ಅಂದಾಜೂ ಯಾವುದಾದರೊಂದು ಅಧಿಕ ಸಂಖ್ಯೆಯಷ್ಟು ಶೂನ್ಯಗಾಮಿ ಉತ್ಪನ್ನ ಬೆಲೆಗಳ ಮೊತ್ತವೇ ಆಗಿರುತ್ತದೆಂದಾಯಿತು. ಈ ವಿಶ್ಲೇಷಣೆಯ ಸ್ಫೂರ್ತಿಯಿಂದ $0 \le t \le 1, -t \le h \le 1-t$ ಅಂತರದಲ್ಲಿ ವ್ಯಾಖ್ಯೆಯಾಗಿರುವ ಯಾವುದಾದರೊಂದು ಸೂಕ್ತ ಶೂನ್ಯಗಾಮಿ ಉತ್ಪನ್ನ $\delta(t;h)$ ನ ಕೆಲವಷ್ಟು ಬಿಡಿ ಬೆಲೆಗಳನ್ನು ಕೂಡಿದಾಗ ಫಲಿಸುವ

$$S_\delta(h) = \delta(0;h) + \delta(h;h) + \delta(2h;h) + \dots$$
$$+ \delta(q\,h;h)$$

ಮಾದರಿಯ ಮೊತ್ತಗಳು ಅಧ್ಯಯನಾರ್ಹವೆಂದು ನಮಗೆ ಹೊಳೆಯುತ್ತದೆ. ಈಗ ಇಂಥ $S_\delta(h)$ ಮೊತ್ತ h ಚರವನ್ನು ಅವಲಂಬಿಸುವ ಒಂದು ಉತ್ಪನ್ನವಷ್ಟೆ. ಮಾತ್ರ ಇಲ್ಲಿ h ಚರಕ್ಕೆ ಇತರ ಸಂದರ್ಭಗಳಲ್ಲಿನಂತೆ ಯಾವುದಾದರೊಂದು ಇಡೀ ಸಾಂತ ಅಂತರದಲ್ಲಿರುವ ಬೆಲೆಗಳೆಲ್ಲವನ್ನೂ ಆದೇಶಿಸಲು ಸಾಧ್ಯವಿಲ್ಲ; ಅದು ಕೇವಲ 1/(q+1) ರೂಪದ ಬೆಲೆಗಳನ್ನಷ್ಟೇ ಸ್ವೀಕರಿಸುತ್ತದೆ. (q ಒಂದು ಧನ ಪೂರ್ಣಾಂಕವಷ್ಟೆ.) ಹೀಗಿದ್ದಾಗ್ಯೂ ಶೂನ್ಯಗಾಮಿಗಳ ವ್ಯಾಖ್ಯೆಯಲ್ಲಿ ಈ ಹೊಸ ನಿಬಂಧನೆಯನ್ನು ನೇರವಾಗಿ ಸೇರಿಸಿಕೊಂಡು ಶೂನ್ಯಗಾಮಿ ಪದದ ಹಾಗೂ ~ ಚಿಹ್ನೆಯ ಅರ್ಥವ್ಯಾಪ್ತಿಯನ್ನು $S_\delta(h)$ ನಂಥ ಉತ್ಪನ್ನಗಳ ಬಗ್ಗೆಯೂ ಅನ್ವಯಿಸುವಂತೆ ವಿಸ್ತರಿಸುವುದು ಅತಿ ಸುಲಭ. ಈ ರೀತಿ ಮಾಡಿದಾಗ ಕೆಲವು ಸಂದರ್ಭಗಳಲ್ಲಿ

$$S_\delta(h) \sim \lambda$$

ಆಗುವಂತೆ ಒಂದು ನಿರ್ದಿಷ್ಟ ಸ್ಥಿರಸಂಖ್ಯೆ $\lambda$ ವನ್ನು ಕಂಡುಹಿಡಿಯಲು ಸಾಧ್ಯವಿದೆ. ಹಾಗಿರುವ ಪಕ್ಷ ಈ $\lambda$ ಕ್ಕೆ $0 \le t \le 1$ ಅಂತರ ಪೂರ್ತ $\delta(t;h)$ ಶೂನ್ಯಗಾಮಿಯ ಸಮಾಸ (ಇಂಟೆಗ್ರಲ್) ಎಂಬುದಾಗಿ ನಾಮಕರಣಮಾಡಿ

$$\lambda = \int_0^1 \delta(t;h)$$



ಚಿತ್ರ 8

ಎಂದು ಬರೆಯುತ್ತೇವೆ. $\delta(t;h)$ = h y(t) ಆಗಿದ್ದರೆ ಈ ಸಮಾಸ ಚಿತ್ರ 8ರ ಗ್ರಾಫಿನ ಅಡಿಯ ನಿಖರಕ್ಷೇತ್ರಫಲವನ್ನು ನೀಡುತ್ತದೆಂದು ಪರಿಗಣಿಸಬಹುದು. ಸಮಾಸಗಳ ಬಗ್ಗೆ ಪ್ರಥಮತಃ ನಾವು ಅರಿತುಕೊಳ್ಳಬೇಕಾದ ಸಂಗತಿ ಶೂನ್ಯಸ್ಪರ್ಶಿಗಳ ಸಮಾಸ ಸೊನ್ನೆಗೆ ಸಮವೆಂಬುದು. $0 \le t \le 1, -t \le h \le 1-t$ ಅಂತರದಲ್ಲಿ $n(t;h) = h.\delta(t;h)$ ಒಂದು t–ಏಕರೀತಿ h–ಸಾಪೇಕ್ಷ ಶೂನ್ಯಸ್ಪರ್ಶಿಯಾಗಿರಲಿ. ಆಗ h=1/(q+1) ಆಗಿದ್ದರೆ

$$S_n(h) = h[\delta(0;h) + \delta(2h;h) + \delta(2h;h) + \dots$$
$$\dots + \delta(q\,h;h)]$$

$\delta(t;h)$ ಶೂನ್ಯಗಾಮಿಯಾದ್ದರಿಂದ n ಯಾವುದೇ ಧನ ಪೂರ್ಣಾಂಕವಾದರೆ

$$0 \le t \le 1 - t \le h \le 1-t, (-1/m) < h < (1/m)$$

ಆದಾಗಲೆಲ್ಲ $(-1/n) < \delta(t;h) < (1/n)$ ಆಗುವಂತೆ ಒಂದು ಅನುರೂಪ ಧನಪೂರ್ಣಾಂಕ mಅನ್ನು ಗೊತ್ತುಮಾಡಬಹುದು. ಅಂದಮೇಲೆ $q > m$, $0 < h < 1/m$ ಆದಾಗಲೆಲ್ಲ

$$-[1/n] = -[(q+1)h/n] < S_n(h) < [(q+1)h/n] = 1/n$$

ಇದರಿಂದ $S_n(h)$ ಒಂದು h–ಸಾಪೇಕ್ಷಶೂನ್ಯಗಾಮಿಯೆಂದು ತಿಳಿದುಬರುತ್ತದೆ. ಅಂದರೆ $S_n(h) \sim 0$ ಅಥವಾ ಮೇಲೆ ತಿಳಿಸಿದಂತೆ

$$\int_0^1 n(t;h) = \int_0^1 h\,\delta(t;h) = 0$$

ಈ ಸರಳ ಫಲಿತಾಂಶದಿಂದ ಮುಖ್ಯ ಅನುಮಿತವೊಂದನ್ನು ವ್ಯುತ್ಪಾದಿಸಬಹುದು. $\delta(t;h) \approx \delta^*(t;h)$ ಆಗಿದ್ದರೆ $\delta(t;h) - \delta^*(t;h)$ ಒಂದು ಶೂನ್ಯಸ್ಪರ್ಶಿಯಷ್ಟೆ. ಆದ್ದರಿಂದ ಈ ಸಂದರ್ಭದಲ್ಲಿ

$$\int_0^1 [\delta(t;h) - \delta^*(t;h)] = 0$$

ತತ್ಫಲವಾಗಿ $\int_0^1 \delta(t;h)$ ಸಮಾಸಕ್ಕೆ ಅಸ್ತಿತ್ವವಿದ್ದರೆ $\int_0^1 \delta^*(t;h)$ ಗೂ ಅಸ್ತಿತ್ವವಿದ್ದು ಇವೆರಡು ಸಮಾಸಗಳೂ ಪರಸ್ಪರ ಸಮವಾಗುತ್ತವೆ:

$$\int_0^1 \delta(t;h) = \int_0^1 \delta^*(t;h)$$

ಈಗ $0 \le t \le 1$ ಅಂತರದಲ್ಲಿ f(t) ಉತ್ಪನ್ನ ವ್ಯಾಖ್ಯೆಯಾಗಿರಲ್ಲಿ. ಹಾಗೂ $0 \le t \le 1$, $-t \le h \le 1-t$ ಅಂತರದಲ್ಲಿ

$$\delta(t;h) = f(t+h) - f(t)$$

ಆಗಿರಲಿ. ಹೀಗಿರುವಾಗ ಸಾರ್ವತ್ರಿಕವಾಗಿ

$$S_\delta(h) = [f(h) - f(0)] + [f(2h) - f(h)] + [f(3h) - f(2h)]$$
$$+ \dots + [f)q+1)h) - f(qh)]$$
$$= f(q+1)h) - f(0) = f(1) - f(0)$$

ಆಗುತ್ತದೆ. ಆದ್ದರಿಂದ

$$\int_0^1 \delta(t;h) = \int_0^1 [f(t+h) - f(t)] = f(1) - f(0)$$

ಇನ್ನು f(t) ಉತ್ಪನ್ನಕ್ಕೆ ಏಕರೀತಿ ನಿಷ್ಪನ್ನ f'(t) ಇದ್ದರೆ ಅವಕಲನಶಾಸ್ತ್ರದ ಸೂತ್ರ [11]ರ ಮೇರೆಗೆ ( ಇಕ್ವೇಷನ್ಸ್ ಬರಬೇಕು) ತತ್ಫಲವಾಗಿ

$$d\,f(t;h) = h\,f'(t) \approx [f(t+h) - f(t)]$$

ತತ್ಫಲವಾಗಿ

$$\int_0^1 d\,f(t;h) = \int_0^1 h\,f'(t) \approx \int_0^1 [f(t+h) - f(t)]$$
$$= f(1) - f(0)$$

ಇದು ತುಂಬ ಗಮನಾರ್ಹವಾದ ಫಲಿತಾಂಶ.

$0 \le t \le 1$ ಅಂತರದಲ್ಲಿ y(t) ಏಕರೀತ್ಯಾ ಅವಿಚ್ಛಿನ್ನವಾಗಿರಲಿ. $0 \le t \le 1$,-$t \le h \le 1-t$ ಅಂತರದೊಳಗೆ $\varepsilon(t;h) = hy(t)$ ಎಂದು ಬರೆಯೋಣ. ಈ ಪರಿಸ್ಥಿತಿಯಲ್ಲಿ $\int_0^1 h\, y(t)$ ಸಮಾಸಕ್ಕೆ ತಪ್ಪದೆ ಅಸ್ತಿತ್ವವಿದ್ದೇ ಇತುತ್ತದೆಂದು ಸಮರ್ಥಿಸುತ್ತೇವೆ. y(t) ಏಕರೀತ್ಯಾ ಅವಿಚ್ಛಿನ್ನವಾಗಿರುವುದರಿಂದ $0 \le t \le 1$,-$t \le h \le 1-t$

$(-1/m) < h < (1/m)$ ಆದಾಗಲೆಲ್ಲ

$(-1/2n) < y(t+h) - y(t) < (1/2n)$ ....[14]

ಆಗುವಂತೆ ಯಾವುದೇ ಧನಪೂರ್ಣಾಂಕ nಗೆ ಅನುರೂಪವಾಗಿ ಇನ್ನೊಂದು ಧನಪೂರ್ಣಾಂಕ m ಅನ್ನು ಗೊತ್ತುಮಾಡಬಹುದು. r+1 q + 1 > m ಆಗುವಂತೆ ಇನ್ನೆರಡು ಧನಪೂರ್ಣಾಂಕ q ಮತ್ತು r ಗಳನ್ನು ಆಯ್ಕೆಮಾಡಿ h=1/(q+1) t=1/(r+1) ಎಂಬ ಸಮೀಕರಣಗಳಿಂದ h ಮತ್ತು t ಗಳನ್ನು ನಿಶ್ಚಯಿಸೋಣ. ಈಗ (q + 1) h = (r + 1) t = 1 ಆದ್ದರಿಂದ

$(q+1)h = (r+1)t = 1$ ಆದ್ದರಿಂದ

$$
\begin{aligned}
&(q+1)(r+1)[S_\varepsilon(h) - S_\varepsilon(t\,h)] \\
&= (r+1)y(0) - [y(0) + y(t\,h) + \ldots + y(r\,t\,h)] \\
&+ (r+1)y(h) - [y(h) + y(h+t\,h) + \ldots. \quad \ldots. \\
&+ y(h+r\,t\,h)] \ldots\ldots\ldots\ldots\ldots\ldots\ldots\ldots\ldots\ldots \\
&+ (r+1)\, y(q\,h) - [y(q\,h) + y(q\,h+t\,h) + \ldots.. \\
&\ldots.. + y(q\,h+r\,t\,h)]
\end{aligned}
$$

ಇದನ್ನು ಮೇಲಿನ ಅಸಮತ್ವ [14] ರೊಂದಿಗೆ ಸಂಯೋಜಿಸಿದರೆ

$(-1/2n) < S_\varepsilon(h) - S_\varepsilon(t\,h) < (1/2n)$

ಅಂತೆಯೇ $(-1/2n) < S_\varepsilon(t) - S_\varepsilon(t\,h) < (1/2n)$

ಆಗಬೇಕಾದ್ದರಿಂದ 0 < t h < 1/m ಆದಾಗಲೆಲ್ಲ

$(-1/n) < S_\varepsilon(h) - S_\varepsilon(t) < (1/n)$ ಆಗುತ್ತದೆ.

ಅಂದರೆ 0 < h 1/2, 0 < t h ಅಂತರದಲ್ಲಿ h = 1/ (q + 1), t = 1 (r + 1) ರೂಪದಲ್ಲಿರಬೇಕೆಂಬ ನಿಬಂಧನೆಗೆ ಒಳಪಟ್ಟಂತೆ $S_\varepsilon(h) - S_\varepsilon(t)$ ಉತ್ಪನ್ನ ಒಂದು t–ಏಕರೀತಿ h–ಸಾಪೇಕ್ಷ ಶೂನ್ಯಗಾಮಿ: $S_\varepsilon(h) \sim S_\varepsilon(t)$ . ತತ್ಫಲವಾಗಿ ಕೋಶಿಯ ಅಭಿಸರಣ ತತ್ತ್ವರ ಮೇರೆಗೆ $S_\varepsilon(h) \sim \lambda = \int_0^1 hy(t)$ ಆಗುವಂತೆ ಒಂದು ಸ್ಥಿರಸಂಖ್ಯೆ $\lambda$ ಇರುತ್ತದೆಂದು ಸಿದ್ಧಪಟ್ಟಿತು.

$0 \le t \le 1, -t \le h \le 1-t$ ಅಂತರದಲ್ಲಿ

$\varepsilon(t;h) = h\, y(t)$ ಹಾಗೂ $a^* \le y(t) \le A^*$ ಆದಾಗ $a^* \le S_\varepsilon(h) \le A^*$ ಎಂದು ಸುಲಭವಾಗಿ ಮನಗಾಣಬಹುದು. ಇದರಿಂದ $\int_0^1 h\, y(t)$ ಸಮಾಸಕ್ಕೆ ಅಸ್ತಿತ್ವವಿದ್ದಾಗ $a^* \int_0^1 h\, y(t) \le A^*$ ಕೂಡ ಆಗುವುದೆಂದು ತಿಳಿದುಬರುತ್ತದೆ. ಇನ್ನು ಮುಂದೆ ಹೆಚ್ಚು ಸಾರ್ವತ್ರಿಕವಾದ $a \le t \le A, a-t \le h \le A-t$ ಮಾದರಿಯ ತ್ರಾಪಿಜ್ಯಾತ್ಮಕ ಸಾಂತಾಂತರಗಳನ್ನು ಪರಿಶೀಲಿಸುವುದು ಅಗತ್ಯ. (ಇಲ್ಲಿ a < A ಎಂದು ತಿಳಿಯಬೇಕು.)

ಇಂಥದೊಂದು ಅಂತರದಲ್ಲಿ n (t ; h) ಶೂನ್ಯಗಾಮಿ ವ್ಯಾಖ್ಯೆಯಾಗಿದೆಯೆಂದು ಭಾವಿಸಿ. $\alpha, \beta$ ಎಂಬೆರಡು ಸ್ಥಿರಸಂಖ್ಯೆಗಳು $a \le t \le A$ ಅಂತರದಲ್ಲಿರಲಿ. ಈಗ

$\delta(t;h) = n(t(\alpha-\beta) + \beta; h(\alpha-\beta)$ ಎಂದು ಬರೆದರೆ

$\delta(t;h)$ ಉತ್ಪನ್ನ $0 \le t \le 1, -t \le h \le 1-t$ ಅಂತರದಲ್ಲಿ

ವ್ಯಾಖ್ಯೆಯಾಗುವ ಒಂದು ಶೂನ್ಯಗಾಮಿಯಾಗುವುದು. $\int_0^1 \delta(t;h)$ ಸಮಾಸಕ್ಕೆ ಅಸ್ತಿತ್ವವಿದ್ದಾಗ $\int_\beta^\alpha n(t;h) = \int_0^1 \delta(t;h)$ ಎಂಬ ಸಮೀಕರಣದ ಮೂಲಕ ಹೊಸ ಮಾದರಿಯ $\int_\beta^\alpha n(t;h)$ ಸಮಾಸವನ್ನು ಸಹ ವ್ಯಾಖ್ಯಿಸಬಹುದು. ಸಾರ್ವತ್ರಿಕವಾಗಿ $\delta(t;0) = 0$ ಆಗುವ ಕಾರಣ ಈ ವ್ಯಾಖ್ಯೆಯಂತೆ $\int_\alpha^\alpha n(t;h) = 0$ ಎಂಬುದನ್ನು ಗಮನಿಸಬೇಕು. ಇದುವರೆಗೆ $\int_0^1$ ಮಾದರಿಯ ಸಮಾಸಗಳ ಬಗ್ಗೆ ಸ್ಥಾಪಿಸಲಾಗಿರುವ ಫಲಿತಾಂಶಗಳನ್ನು $\int_\beta^\alpha$ ಮಾದರಿಯ ಸಮಾಸಗಳಿಗೆ ಸುಲಭವಾಗಿ ವಿಸ್ತರಿಸಬಹುದು. ಉದಾಹರಣೆಗೆ $a \le t \le A$ ಅಂತರದಲ್ಲಿ f(t) ಉತ್ಪನ್ನಕ್ಕೆ ಏಕರೀತಿ ನಿಷ್ಪನ್ನ f'(t) ಇರುವಾಗ $\int_\beta^\alpha df(t;h) = \int_\beta^\alpha hf'(t) = f(\alpha) - f(\beta)$.....(15)

ಮತ್ತು $a \le t \le A$ ಅಂತರದಲ್ಲಿ y(t) ಏಕರೀತ್ಯಾ ಅವಿಚ್ಛಿನ್ನವಾಗಿದ್ದರೆ $\int_\beta^\alpha hy(t)$ ಅಸಮಾಸಕ್ಕೆ ತಪ್ಪದೆ ಅಸ್ತಿತ್ವವಿರುತ್ತದೆ. ಈಗ y(t) ಹೀಗೆ ಏಕರೀತ್ಯಾ ಅವಿಚ್ಛಿನ್ನವಾಗಿದೆಯೆಂದು ಭಾವಿಸಿ $a \le t \le A$ ಆದಾಗಲೆಲ್ಲ $F(T) = \int_A^T hy(t)$ ಎಂದು ಬರೆಯೋಣ. $A-\alpha$ ಮತ್ತು $A-\beta$ ಗಳು ಎರಡು ಧನ ಪರಿಮೇಯ ಸಂಖ್ಯೆಗಳಾಗಿರಲಿ (ರ್‍ಯಾಷನಲ್ ನಂಬರ್ಸ್): $A-\alpha = L/M, A-\beta = N/P$; ಇಲ್ಲಿ L, M, N, P ನಾಲ್ಕು ಧನ ಪೂರ್ಣಾಂಕಗಳು. ಈಗ $0 \le t \le 1, -t \le h \le 1-t$ ಅಂತರದಲ್ಲಿ

$$
\begin{aligned}
\delta(t;h) &= h(\alpha-\beta)y(t(\alpha-\beta)+\beta) \\
\delta^*(t;h) &= h(\alpha-\beta)y(t(\alpha-\beta)+h(\alpha-\beta)+\beta) \\
\varepsilon(t;h) &= h(\alpha-A)y(t(\alpha-A)+A) \\
\theta(t;h) &= h(\beta-A)y(t(\beta-A)+A)
\end{aligned}
$$

ಎಂದಿಟ್ಟುಕೊಂಡರೆ $\delta(t;h) \square\ \delta^*(t;h)$ ಆಗಿ

$\int_\beta^\alpha hy(t) = \int_0^1 \delta(t;h) = \int_0^1 \delta^*(t;h)$ ಮತ್ತು

$F(\alpha) - F(\beta) = \int_A^\alpha hy(t) - \int_A^\beta hy(t) = \int_0^1 \varepsilon(t;h) - \int_0^1 \theta(t;h)$

ಆಗುತ್ತದಷ್ಟೆ. ಈ ಸನ್ನಿವೇಶದಲ್ಲಿ

$F(\alpha) - F(\beta) = \int_\beta^\alpha hy(t)$ .....(16)

ಎಂದು ಸಾಧಿಸುತ್ತೇವೆ. MN = LP ಆದಾಗ $\alpha = \beta$ ಆಗುವುದರಿಂದ ಸಮೀಕರಣ [16]ರ ಸತ್ಯತೆ ಸುಸ್ಪಷ್ಟ. $q \geq 2$ ಯಾವುದಾದರೊಂದು ಪೂರ್ಣಾಂಕವಾದಾಗ ಕೆಳಗಿನ ಸಮೀಕರಣಗಳಿಂದ h, j, k ಗಳನ್ನು ವ್ಯಾಖ್ಯೆಮಾಡೋಣ:

$$hq / MN - LP \setminus jqLP = kqMN = 1$$

(MN = LP ಸಂದರ್ಭ ಈಗಾಗಲೇ ಇತ್ಯರ್ಥವಾಗಿರುವುದರಿಂದ ಇಲ್ಲಿ MN $\neq$ LP ಎಂದು ಭಾವಿಸುತ್ತೇವೆ.) ಈಗ ಕೆಳಗೆ ನಮೂದಿಸಿರುವ ಸಂಬಂಧಗಳನ್ನು ಸುಲಭವಾಗಿ ತಾಳೆ ನೋಡಬಹುದು:

$$-qPMS_\varepsilon(j) = y(A) + y(A-h|\alpha-\beta|+.......$$
$$+ y(A-[qLP-1]h|\alpha-\beta);$$
$$-qPMS_\theta(k) = y(A) + y(A-h)|\alpha-\beta|) + .......$$
$$+ y(A-[qMN-1]h|\alpha-\beta|);$$
$$LP > MN$$

ಆಗಿದ್ದರೆ

$$-qPMS_\delta(h) = y(A-qMNh|\alpha-\beta|)$$
$$+ y(A-[qMN+1]h|\alpha-\beta|) + ... + y(A-$$
$$[qLP-1]h|\alpha-\beta|);$$
$$MN > LP$$

ಆಗಿದ್ದರೆ

$$-qPMS_\delta{}^*(h) = -y(A-qLPh|\alpha-\beta|)$$
$$-y(A-[qLP+1]h|\alpha-\beta|) - ... + y(A-$$
$$[qMN-1]h|\alpha-\beta|)$$

ಇವುಗಳಿಂದ $S_\varepsilon(j) - S_\theta(k) = S_\delta(h)$ ಅಥವಾ $S_\delta{}^*(h)$ ಎಂದು ಗೊತ್ತಾಗುವುದು. n ಯಾವುದೇ ಧನಪೂರ್ಣಾಂಕವಾಗಿರಲಿ. q ವನ್ನು ಸಾಕಷ್ಟು ಅಧಿಕವಾಗಿರುವಂತೆ ಆಯ್ಕೆವಾಡಿದಲ್ಲಿ $S_\varepsilon(j) - F(\alpha)$

$$S_\theta(k) - F(\beta), S_\delta(h) - \int_\beta^\alpha hy(t)$$

ಹಾಗೂ $S_{\delta*}(h) - \int^\alpha hy(t)$ ಈ ನಾಲ್ಕು ಸಂಖ್ಯೆಗಳೂ (-1/n) ಮತ್ತು (l/ n) ಗಳ ಇರುವುವೆಂಬ ಅಂಶವನ್ನು ಸ್ಮರಿಸಿಕೊಂಡರೆ

$$[F(\alpha) - F(\beta) - \int_\beta^\alpha hy(t)]$$

ಎಂಬ ಪರಿಮಾಣ (-3/n) ಮತ್ತು (3/n) ಗಳ ನಡುವೆ ಇರಬೇಕೆಂದು ಸ್ಪಷ್ಟವಾಗುತ್ತದೆ. ಈ ಪರಿಮಾಣ n ನಿಂದ ಸ್ವತಂತ್ರವಾಗಿರುವುದರಿಂದ [16]ನೆಯ ಸಮೀಕರಣ $(A-\alpha$ ಮತ್ತು $A-\beta$ ಗಳು ಧನ ಪರಿಮೇಯವಾಗಿರುವಾಗ) ಸ್ಥಾಪಿತವಾದಂತಾಯಿತು. ಈಗ $a \leq t \leq A$ ಅಂತರದಲ್ಲಿ $\alpha, \alpha', \beta, \beta'$ ಗಳು ಯಾವುದಾದರೂ ನಾಲ್ಕು ಪರಿಮಾಣಗಳಾದಾಗ

$$\int_\beta^\alpha hy(t) - \int_{\beta'}^{\alpha'} hy(t) = \int_0^1 h(\alpha-\beta)[y(t(\alpha-\beta)+\beta)$$
$$-y(t(\alpha'-\beta')+\beta')] + \int_0^1 h(\alpha-\alpha'+\beta-\beta')y(t(\alpha'-\beta')+\beta') \quad ......(17)$$

ಎಂದು ಬರೆಯಬಹುದಷ್ಟೆ. y ಉತ್ಪನ್ನ ಏಕರೀತ್ಯಾ ಅವಿಚ್ಛಿನ್ನವಾಗಿರುವುದರಿಂದ n ಯಾವುದೇ ಧನ ಪೂರ್ಣಾಂಕವಾಗಿರಲಿ, $a - t \leq h \leq A - t$ ಮತ್ತು (-1/ m)<h<(1/m) ಆದಾಗಲೆಲ್ಲ

-1/[2n(A- $-1/[2n(A-\alpha)] < y(t+h) - y(t) < /[2n(A-\alpha)]$ ಆಗುವಂತೆ ಒಂದು ಅನುರೂಪ ಧನಪೂರ್ಣಾಂಕ mಅನ್ನು ಕಂಡುಹಿಡಿಯಬಹುದು. ಅಲ್ಲದೆ yಗೆ ಮೇರೆಯಿರುವುದರಿಂದ $a \leq t \leq A$ ಆದಾಗಲೆಲ್ಲ $-A^* < f(t) < A^*$ ಆಗುವಂತೆ ಒಂದು ಸ್ಥಿರ ಧನಸಂಖ್ಯೆ A*ವನ್ನು ಕಂಡುಹಿಡಿಯಬಹುದು. ತರ್ಕಲೋಪವಿಲ್ಲದೆ m > 4A*n/3 ಎಂದು ಭಾವಿಸಬಹುದು. ಆಗ ಸಮೀಕರಣ [17]ರ ಸಹಾಯದಿಂದ $|a-a'| < 1/3m, \quad |\beta-\beta'| < 1/3m$ ಆದಾಗ

$$-\frac{1}{n} < \int_\beta^\alpha hy(t) - \int_{\beta'}^{\alpha'} hy(t) < \frac{1}{n} \quad .....(18)$$

ಎಂದು ಸಿದ್ಧಪಡುವುದು. $a \leq t \leq A$ ಅಂತರದಲ್ಲಿ $a', \beta'$ ಗಳು ಯಾವುದೇ ಎರಡು ಸಂಖ್ಯೆಗಳಾಗಲಿ, $|\alpha-\alpha'| < 1/3m, |\beta-\beta'| < 1/3m, a \leq a < A, a \leq \beta < A$ ಆಗುವಂತೆಯೂ $A-\alpha$ ಮತ್ತು $A-\beta$ ಗಳು ಪರಿಮೇಯ ಸಂಖ್ಯೆಗಳಾಗುವಂತೆಯೂ $\alpha, \beta$ ಗಳನ್ನು ಕಂಡುಹಿಡಿಯಲು ಸಾಧ್ಯ. ಆದ್ದರಿಂದ ಇಂಥ $\alpha, \beta$ ಗಳ ಆಯ್ಕೆಗೆ ಅಸಮತ್ವ [18]ರ ಜೊತೆಯಲ್ಲಿ

$$-\frac{1}{n} < \int_A^\alpha hy(t) - \int_A^{\alpha'} hy(t) = F(a) - F(a') < \frac{1}{n}$$
$$-\frac{1}{n} < \int_A^\beta hy(t) - \int_A^{\beta'} hy(t) = F(\beta) - F(\beta') < \frac{1}{n}$$

ಮತ್ತು $F(a) - F(\beta) - \int_\alpha^\beta hy(t) = 0$ ಕೂಡ ಆಗುವುದರಿಂದ

$$(-3/n) < F(a') - F(\beta') - \int_{\alpha'}^{\beta'} hy(t) < (3/n)$$

ಎಂದು ಸ್ಪಷ್ಟವಾಗುತ್ತದೆ. ಈ ಕೊನೆಯ ಅಸಮತ್ವದಲ್ಲಿ ಮಧ್ಯದ ಪದ ಮತ್ತೆ n ನಿಂದ ಸ್ವತಂತ್ರವಾಗಿರುವುದರಿಂದ $(A-\alpha', A-\beta'$ ಗಳು ಧನ ಪರಿಮೇಯ ಸಂಖ್ಯೆಗಳಾಗಲಿ ಬಿಡಲಿ

$$F(\alpha') - F(\beta') = \int_{\alpha'}^{\beta'} hy(t)$$

ಎಂದು ಸಿದ್ಧಪಡುವುದು. ಅಂದವೇಲೆ ಸಮೀಕರಣ [16], $a \leq t \leq A$ ಅಂತರದೊಳಗಿರುವ ಎಲ್ಲ ಬಗೆಯ $a, \beta$ ಗಳಿಗೂ ಸತ್ಯವೆಂದಾಯಿತು. ಸಮಾಸಕಲನಶಾಸ್ತ್ರದ ಮೂಲಭೂತ ಪ್ರಮೇಯವೆಂದು (ಫಂಡಮೆಂಟಲ್ ಥಿಯರಂ) ಪ್ರಸಿದ್ಧವಾಗಿರುವ ಫಲಿತಾಂಶವನ್ನು ವ್ಯುತ್ಪಾದಿಸಲು ಈಗ ನಾವು ಸಿದ್ಧರಾಗಿದ್ದೇವೆ. ಏಕರೀತ್ಯಾ ಅವಿಚ್ಛಿನ್ನವಾಗಿರುವ y(t) ಯಂಥ ಪ್ರತಿಯೊಂದು ಉತ್ಪನ್ನವೂ ಮತ್ತೊಂದು ಉತ್ಪನ್ನದ ಏಕರೀತಿ ನಿಷ್ಪನ್ನವಾಗಿದೆ ಎಂಬುದು ಈ ಪ್ರಮೇಯದ ಪೂರ್ವಾರ್ಧದ ಸಾರಾಂಶ. ವಿಶಿಷ್ಟವಾಗಿ y(t) ಮೇಲೆ ಹೇಳಿರುವ F(t) ಉತ್ಪನ್ನದ ಏಕರೀತಿ ನಿಷ್ಪನ್ನವಾಗುವುದು: y(t) = F'(t).

ಇದನ್ನು ಸಮರ್ಥಿಸಲು $a \leq T \leq A, a-T \leq H \leq A-T$

ಮತ್ತು $\Delta(T;H) = \int_0^1 h[y(T+tH) - y(T)]$ ಆದಾಗ

$$F(T+H)-F(T)=\int_A^{T+H} hy(t)-\int_A^T hy(t)$$
$$=\int_T^{T+H} hy(t)=\int_0^1 hHy(tH+T)$$
$$=Hy(T)\int_0^1 h+H\Delta(T;H)$$
$$=Hy(T)+H\Delta(T;H)$$

ಎಂಬುದನ್ನು ಗಮನಿಸಬೇಕು. y ಏಕರೀತ್ಯಾ ಅವಿಚ್ಛಿನ್ನವಾಗಿರುವ ಕಾರಣ n ಯಾವುದೇ ಧನ ಪೂರ್ಣಾಂಕವಾಗಲಿ $a-T\le H\le A-T,(-1/m)<H<(1/m)$ ಮತ್ತು $0\le t\le 1$ ಆಗಿರುವಾಗಲೆಲ್ಲ $(-1/n)<y(T+tH)-y(T)<(1/n)$ ಆಗುವಂತೆ ಒಂದು ಅನುರೂಪ ಧನಪೂರ್ಣಾಂಕ mಅನ್ನು ಗೊತ್ತುಮಾಡಬಹುದು. ಆದ್ದರಿಂದ $a-T\le H\le A-T,(-1/m)<H<(1/m)$ ಆದಾಗ $-(1/n)<\Delta(T;H)<(1/n)$ ಆಗುವುದು. ಈಗ T,Hಗಳನ್ನು t,hಗಳಿಗೆ ಬದಲಾಯಿಸಿದರೆ $a\le t\le A, a-t\le h\le A-t$ ಅಂತರದಲ್ಲಿ $\Delta(t;h)$ ಒಂದು t–ಏಕರೀತಿ h–ಸಾಪೇಕ್ಷ ಶೂನ್ಯಗಾಮಿ ಎಂದೂ

$$F\ (t;h)-F(t)=h\ y\ (t)+h\ \Delta\ (t;h)$$

ಎಂದೂ ಸ್ಪಷ್ಟವಾಗುವುದು. ಆದ್ದರಿಂದ $F(t+h)-F(t)\,\square\, hy(t)$ ಅಥವಾ $F'(t)=y(t)$.

y(t) ಯನ್ನು ಏಕರೀತಿ ನಿಷ್ಪನ್ನವಾಗಿ ಉಳ್ಳ ಉತ್ಪನ್ನ F(t) ಮಾತ್ರವೇ ಅಲ್ಲ. C ಯಾವುದೇ ಸ್ಥಿರಸಂಖ್ಯೆ ಆಗಿರಲಿ f(t)=F(t)+C ಆದಾಗ f'(t)=F'(t)=y(t) ಆಗುವುದು; ಮತ್ತು ಈ ಹಿಂದೆಯೇ ತೋರಿಸಿರುವಂತೆ f'(t)=y(t) ಆದಾಗಲೆಲ್ಲ $\int_\beta^\alpha hy(t)=\int_\beta^\alpha hf'(t)=f(a)-f(\beta)$ ಆಗಬೇಕು; ಅಲ್ಲದೆ $\int_\beta^\alpha hy(t)=F(a)-F(\beta)$ ಕೂಡ ಆಗುವುದರಿಂದ ಎಲ್ಲ $\alpha,\beta$ ಗಳಿಗೂ $f(a)-F(a)=f(\beta)-F(\beta)$ ಅಂದರೆ f(t)-F(t) ಒಂದು ಸ್ಥಿರ ಸಂಖ್ಯೆ: f(t)-F(t)=C . ಇದರಿಂದ y(t) ಯನ್ನು ನಿಷ್ಪನ್ನವಾಗಿ ಉಳ್ಳ ಉತ್ಪನ್ನಗಳೆಲ್ಲವೂ f(t)=F(t)+C ರೂಪದಲ್ಲೇ ಇರಬೇಕೆಂದು ಗೊತ್ತಾಗುವುದು. ಮೇಲಾಗಿ f(t) ಇಂಥ ಯಾವುದೇ ಉತ್ಪನ್ನವಾಗಲಿ

$$\int_\alpha^\beta hy(t)=f(\beta)-f(a) \qquad \text{.......(19)}$$

f'(t)=y(t) ಸಂಬಂಧಕ್ಕೆ ಸರಿಹೊಂದುವ ಯಾವುದೇ f(t) ಉತ್ಪನ್ನಕ್ಕಾಗಲಿ y(t) ಯ ಅನಿರ್ದಿಷ್ಟ ಸಮಾಸ (ಇಂಡೆಫಿನಿಟ್ ಇಂಟೆಗ್ರಲ್) ಎಂದು ಹೆಸರು. ಸಮಾಸಕಲನಶಾಸ್ತ್ರದ ಮೂಲಭೂತ ಪ್ರಮೇಯದ ಉತ್ತರಾರ್ಧವೆಂದು ಪರಿಗಣಿಸಲಾಗುವ ಫಲಿತಾಂಶ [19]ರಿಂದ ಸಮಾಸಗಳ ಬೆಲೆಗಳನ್ನು ನಿರ್ಧರಿಸಬೇಕಾದ ಕಾರಣ ಅದಕ್ಕೆ ಬಹಳ ವ್ಯಾವಹಾರಿಕ ಮಹತ್ತ್ವವಿದೆ. ಉದಾಹರಣೆಗೆ $y(t)=3t^2$ ಉತ್ಪನ್ನಕ್ಕೆ $f(t)=t^3$ ಉತ್ಪನ್ನ ಒಂದು ಅನಿರ್ದಿಷ್ಟ ಸಮಾಸವಾದ್ದರಿಂದ [ಅರ್ಥಾತ್ $f(t)=t^3$ ಉತ್ಪನ್ನದ ನಿಷ್ಪನ್ನ $y(t)=3t^2$ ಆದ್ದರಿಂದ]

$$\int_2^5 3ht^2=5^3-2^3=117$$

[ $2\le t\le 5$ ಅಂತರದಲ್ಲಿ $y(t)=3t^2$ ಉತ್ಪನ್ನದ ಗ್ರಾಫನ್ನು ಎಳೆದರೆ ಅದರ ಅಡಿಯ ಕ್ಷೇತ್ರಫಲ 117 ಆಗುವುದು.] ಸಮಾಸಕಲನಶಾಸ್ತ್ರದ ಮೂಲ ಭೂತ ಪ್ರಮೇಯದ ಪೂರ್ವಾರ್ಧಕ್ಕಾದರೋ ಅಪಾರ ತಾತ್ತ್ವಿಕ ಮಹತ್ತ್ವವುಂಟು: ಅದರ ನೆರವಿನಿಂದ ಸುಲಭವಾಗಿ ಹೊಸ ಹೊಸ ಉತ್ಪನ್ನಗಳನ್ನು ವ್ಯಾಖ್ಯಿಸಲು ಸಾಧ್ಯವಾಗುಉವುದು. ಉದಾಹರಣೆಗೆ

$$arc\tan T=\int_0^T \frac{h}{1+t^2};\ \log T=\int_1^T \frac{h}{t}$$
$$arc\sin T=\int_0^T \frac{h}{\sqrt{1-t^2}}$$
$$F(arc\sin T;u)=\int_0^T \frac{h}{\sqrt{(1-t^2)-(1-u^2t^2)}}$$

(ಇದಕ್ಕೆ ಪ್ರಥಮವರ್ಗದ ಎಲಿಪ್ಟಿಕ್ ಸಮಾಸವೆಂದು ಹೆಸರು)

**ಸಮಾಸಗಳ ಸಂಜ್ಞಾಪದ್ಧತಿ, ಮೌಲ್ಯೀಕರಣ ವಿಧಾನಗಳು ಮತ್ತು ಉಪಯೋಗಗಳು:** $a\le t\le A$ ಅಂತರದಲ್ಲಿ x(t) ಉತ್ಪನ್ನವೂ $a^*\le t\le A^*$ ದಲ್ಲಿ f(t) ಯೂ ವ್ಯಾಖ್ಯೆಯಾಗಿ $a^*\le x(t)\le A^*$ ಆಗಿದ್ದರೆ ಉತ್ಪನ್ನ ಸಂಯೋಜನೆ fox (t) = f(x(t))ಗೆ ಅಸ್ತಿತ್ವವಿರುತ್ತದಷ್ಟೆ (a<A, a*<A*). f(t) ಏಕರೀತ್ಯಾ ಅವಿಚ್ಛಿನ್ನವೂ x(t) ಏಕರೀತ್ಯಾ ನಿಷ್ಪನ್ನಯೋಗ್ಯವೂ ಆಗಿರಲಿ. ಆಗ $a^*\le t\le A^*$ ಅಂತರದಲ್ಲಿ fಗೆ ಒಂದು ಅನಿರ್ದಿಷ್ಟ ಸಮಾಸ F ಇದ್ದೇ ಇರುತ್ತದೆ; ಉದಾಹರಣೆಗೆ $F(T)=\int_{A^*}^T h\ f(t),\quad (a^*\le T\le A^*)$ ಎಂದಿಟ್ಟುಕೊಳ್ಳಬಹುದು. ಈ ಸಂಬಂಧದಂತೆ F'(t)=f(t) ಮತ್ತು ಅವಕಲನಶಾಸ್ತ್ರದ ಸೂತ್ರ [12]ರ ಪ್ರಕಾರ $F'(x(t))\ dx(t;h)=d\ Fox(t;h).\alpha,\beta$ ಗಳು $a\le t\le A$ ಅಂತರದಲ್ಲಿವೆಯೆಂದೂ $x(a)=a^*, x(\beta)=\beta^*$ ಎಂದೂ ಭಾವಿಸಿದರೆ

$$\int_\beta^\alpha hf(x(t))x'(t)=\int_\beta^\alpha f\ (x\ (t)\ dx\ (t;h)$$
$$=\int_\beta^\alpha F'(x(t))\ dx\ (t;h)=\int_\beta^\alpha d\ F\ o\ x\ (t;h)$$
$$=F\ o\ x\ (a)-F\ o\ x\ (\beta)$$
$$=F(x(a))-F(x(\beta))\ \ =\ \ F(a^*)-F(\beta^*)$$

f(x(t))dx(t;h) ಎಂಬ ಶೂನ್ಯಗಾಮಿಗೆ f(x)dx ಎಂಬ ಸಂಕ್ಷಿಪ್ತರೂಪ ನೀಡಬಹುದು. ಹಾಗೆ ಮಾಡಿದ ಬಳಿಕ ಅದರಲ್ಲಿ t ಚರ ಆಗೋಚರವಾಗುವುದರಿಂದ $\int$ ಚಿಹ್ನೆಯ ಪಕ್ಕದಲ್ಲಿ t ಗೆ ಆದೇಶಿಸಬೇಕಾದ $\alpha,\beta$ ಬೆಲೆಗಳ ಬದಲು x(t) ಗೆ ಆದೇಶಿಸಬೇಕಾದ $x(a)=a^*,\ x(\beta)=\beta^*$ ಬೆಲೆಗಳನ್ನೇ ನಮೂದಿಸುವುದು ಹೆಚ್ಚು ಪ್ರಯೋಜನಕರ.

ಈ ಕಾರಣದಿಂದ ನಾವು $\int_\alpha^\beta f(x(t))dx(t;h)$ ಸಮಾಸವನ್ನು $\int_{\beta^*}^{\alpha^*} f(x)dx$ ಎಂದೂ ಬರೆಯುವ ಸಂಜ್ಞಾಪದ್ಧತಿಯನ್ನು ಇನ್ನು ಮುಂದೆ ಜಾರಿಗೆ ತರುತ್ತೇವೆ. ಈಗ ನಮ್ಮ ಹೊಸ ಸಂಕೇತ $\int_{\beta^*}^{\alpha^*} f(x)dx$ ಇಂದು ಕಲನಶಾಸ್ತ್ರಸಾಹಿತ್ಯದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಸಮಾಸಸೂಚಕ $\int$ ......d......... ಸಂಕೇತಮಾದರಿಯೊಂದಿಗೆ ಪೂರ್ಣವಾಗಿ ಹೊಂದಿಕೊಳ್ಳುವುದಲ್ಲದೆ f(x) dx ಸಂಕೇತ ನಿಜಕ್ಕೂ f(x) (=f(x(t)) ಮತ್ತು dx (=dx (t;h)) ಗಳ ಗುಣಲಬ್ಧವೆಂಬ ಸತ್ಯಾಂಶವನ್ನು ಮರೆಮಾಚುವುದೂ ಇಲ್ಲ. ಮೇಲೆ ತೋರಿಸಿರುವಂತೆ

$$\int_{\beta^*}^{\alpha^*} f(x)dx = F(a^*) - F(\beta^*)$$

ಆಗುವುದರಿಂದ ಎಡಗಡೆಯ ಸಮಾಸದ ಮೌಲ್ಯೀಕರಣಕ್ಕೆ x(t) ಉತ್ಪನ್ನದ ಸ್ವರೂಪದ ಬಗ್ಗೆ ಅರಿವು ಅನಗತ್ಯ. ಈ ಪರಿಸ್ಥಿತಿ f(x(t)) dx ಅನ್ನು f(x) dx ಎಂದು ಸಂಕ್ಷೇಪಿಸುವುದರ ಸಾಧುತ್ವವನ್ನು ಸ್ಪಷ್ಟಪಡಿಸುವುದು. $\int_{\beta^*}^{\alpha^*} h\, f(t)$ ಕೂಡ $F(a^*) - F(\beta^*)$ ಕ್ಕೆ ಸಮವಾದ್ದರಿಂದ

$$\int_{\beta^*}^{a^*} f(x)\, dx = \int_{\beta^*}^{a^*} h\, f(t)$$

ಎಂಬುದು ಒಂದು ಸಾರ್ವತ್ರಿಕ ಸಮತ್ವ. ಇದರಿಂದ h,t ಗಳನ್ನೊಳಗೊಳ್ಳುವ ಈ ಲೇಖನದ ಸಮಾಸಸಂಕೇತಗಳನ್ನು ಸಾಹಿತ್ಯಪ್ರಚಲಿತ ರೂಪಕ್ಕೆ ತಿರುಗಿಸಲು h ಅನ್ನು dx ಗೂ t ಯನ್ನು x ಗೂ ಮಾರ್ಪಡಿಸಬಹುದೆಂದು ಗೊತ್ತಾಗುವುದು; ಪರ್ಯಾಯವಾಗಿ t ಯನ್ನು ಇದ್ದಂತೆಯೇ ಉಳಿಸಿಕೊಂಡು h ಅನ್ನು dt ಗೆ ಮಾರ್ಪಡಿಸಿದರೂ ಆಗುತ್ತದೆ.

ಸಮಾಸಗಳ ಮೌಲ್ಯೀಕರಣಕ್ಕೆ ಮುಖ್ಯವಾಗಿ ಮೂರು ಸೂತ್ರಗಳು ಉಪಯುಕ್ತವಾಗುತ್ತವೆ.

$$\int_{\beta}^{\alpha} df(t;h) = f(a) - f(\beta), F'(x(t))\, dx(t;h)$$

$$= d\, F\, o\, x\, (t\, ;\, h)$$

ಮತ್ತು $\int_{\beta}^{\alpha} y(t)\, dx\, (t;h) = [x(a)y(a) - x(\beta)y(\beta)]$

$$-\int_{\beta}^{\alpha} x(t) d\; y(t;h)$$

ಇವುಗಳ ಪೈಕಿ ಮೊದಲೆರಡನ್ನು ಈಗಾಗಲೇ ವ್ಯುತ್ಪಾದಿಸಿದ್ದಾಗಿದೆ. ಕೊನೆಯದಕ್ಕೆ ಭಾಗಶಃ ಸಮಾಸೀಕರಣ ಸೂತ್ರ (ಇಂಟೆಗ್ರೇಷನ್ ಬೈ ಪಾರ್ಟ್ಸ್) ಎಂದು ಹೆಸರು; f(t) = x(t) y(t) ಎಂದು ಬರೆದಲ್ಲಿ $df(t;h) = hf'(t) = h[x(t)y'(t) + x'(t)y(t)] = x(t)dy(t;h) + y(t)dx(t;h)$ ಆಗುತ್ತದೆಂದು ಗಮನಿಸಿದರೆ ಈ ಸೂತ್ರದ ಸತ್ಯತೆ ಸ್ಪಷ್ಟವಾಗುವುದು. ಈಗ ಸೂತ್ರಗಳ ಪ್ರಯೋಗವಿಧಾನಕ್ಕೆ ಎರಡು ಉದಾಹರಣೆಗಳು. $\cos'(t) = -\sin t$, $\log' t = \frac{1}{t}$ ಆದಕಾರಣ ( $0 \le T < \pi/2$ ಅಂತರದಲ್ಲಿ)

$$\int_0^T h \tan t = -\int_0^T \frac{-h \sin t}{\cos t} = -\int_0^T \frac{h \cos' t}{\cos t}$$

$$= -\int_0^T \log'(\cos t)\, d\, \cos(t;h) = -\int_{0^d}^T \log o \cos(t;h)$$

$$= -[\log o \cos T - \log o \cos 0] - \log \cos T$$

ಮತ್ತೆ x(t) = t ಎಂದಿಟ್ಟುಕೊಂಡರೆ dx(t;h) = hx'(t) = h ಆಗುವುದರಿಂದ ಭಾಗಶಃ ಸಮಾಸೀಕರಣದ ಸೂತ್ರಪ್ರಯೋಗದಿಂದ

$$\int_1^2 h \log t = \int_1^2 (\log t)\, dx\, (t;h)$$

$$= [x(2) \log 2 - x\,(1) \log 1] - \int_1^2 x\,(t)\; d\, \log\,(t;h)$$

$$= 2 \log 2 - \int_1^2 t.\frac{h}{t} = 2 \log 2 - \int_1^2 d\;x(t;h)$$

$$= 2 \log 2 - [x(2) - x(1)]$$

$$= 2 \log 2 - 1$$

ಸಮಾಸಗಳ ಒಂದು ಉಪಯೋಗವನ್ನು ನಾವಾಗಲೇ ಮನಗಂಡಿದ್ದೇವೆ. ಜ್ಯಾಮಿತೀಯ ಆಕೃತಿಗಳ ಕ್ಷೇತ್ರಫಲ ಕಂಡುಹಿಡಿಯುವಲ್ಲಿ ಅವು ನಮಗೆ ನೆರವಾಗುತ್ತವೆ. ಇದೇ ರೀತಿಯಲ್ಲಿ ವಕ್ರರೇಖೆಗಳ ಉದ್ದ, ಘನ ಆಕೃತಿಗಳ ಗಾತ್ರ ಹಾಗೂ ಮೇಲ್ಮೈ ಕ್ಷೇತ್ರಫಲಗಳನ್ನು ಗೊತ್ತುಮಾಡಬೇಕಾದರೆ ಸಹ ನಾವು ಸಮಾಸಗಳನ್ನೇ ಆಶ್ರಯಿಸಬೇಕು. $a \le t \le A$ ಅಂತರದಲ್ಲಿ ನಿಷ್ಪನ್ನಯೋಗ್ಯ y(t) ಉತ್ಪನ್ನದ ಗ್ರಾಫಿನ ಉದ್ದ s ಅನ್ನು ನೀಡುವ ಸೂತ್ರವನ್ನು ಇಲ್ಲಿ ನಿದರ್ಶನವಾಗಿ ಉಲ್ಲೇಖಿಸಬಹುದುಃ

$$s = \int_a^A h\sqrt{1+[y'(t)]^2}\; (= \int_a^A \sqrt{1+[y'(x)]^2 dx}) \qquad \ldots(20)$$

(ಸಮಾಸದ ಸಾಹಿತ್ಯಪ್ರಚಲಿತರೂಪವನ್ನು ಆವರಣದಲ್ಲಿ ನೀಡಿದ್ದೇವೆ.) ಭೌತಶಾಸ್ತ್ರ ಮತ್ತು ಅನ್ವಯಗಣಿತಶಾಸ್ತ್ರದಲ್ಲಿ ದ್ರವ್ಯರಾಶಿಕೇಂದ್ರ (ಸೆಂಟರ್ ಆಫ್ ಮಾಸ್) ಮುಂತಾದ ಬಿಂದುಗಳ ಸ್ಥಾನಗಳನ್ನು ನಿರ್ಧರಿಸುವುದಕ್ಕೂ ಜಡಭ್ರಮಣಾಂಕ (ಮೊಮೆಂಟ್ ಆಫ್ ಇನರ್ಷಿಯ) ಮುಂತಾದ ಪ್ರಾಚಲಗಳನ್ನು (ಪ್ಯರಾಮೀಟರ್ಸ್) ಲೆಕ್ಕ ಹಾಕುವುದಕ್ಕೂ ಸಮಾಸಗಳ ಮೌಲ್ಯೀಕರಣ ಅತ್ಯಗತ್ಯ. ಕೊನೆಯದಾಗಿ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಅವಕಲನ ಸಮೀಕರಣಗಳನ್ನು ಬಿಡಿಸುವಲ್ಲಿ ಸಮಾಸಗಳು ಅತ್ಯಂತ ಮಹತ್ತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತವೆ.

**ಸಾಂತವಯತ್ಯಾಸ ಕಲನಶಾಸ್ತ್ರ** (ಕ್ಯಾಲ್ಕುಲಸ್ ಆಫ್ ಫೈನೈಟ್ ಡಿಫರೆನ್ಸಸ್) ಃ ಅವಕಲನ ಮತ್ತು ಸಮಾಸಕಲನಶಾಸ್ತ್ರಗಳಲ್ಲಿ f ಉತ್ಪನ್ನದ ಬೆಲೆಗಳೆರಡಕ್ಕಿರುವ f(t+h)-f(t) ರೂಪದ ವ್ಯತ್ಯಾಸಗಳನ್ನು ಕುರಿತು ವಿವೇಚಿಸಿರುವೆವಷ್ಟೆ ಆದರೆ ಇಂಥ ವಿವೇಚನೆಯಲ್ಲಿ = ಚಿಹ್ನೆಯಿಂದ ವ್ಯಕ್ತವಾಗುವ ಸಾಧಾರಣ ಸಮತ್ವಗಳಿಗಿಂತ ಮಿಗಿಲಾಗಿ ಶೂನ್ಯಗಾಮಿಗಳ ಆದಾರದ ಮೇಲೆ ⊔ ಮತ್ತು ~ ಚಿಹ್ನೆಗಳು ಸೂಚಿಸುವ ಬೇರೆ ರೀತಿಯ ಸಂಬಂಧಗಳನ್ನು ನಾವು ಬಳಸಿಕೊಂಡಿದ್ದೇವೆ. ಸಾಂತವ್ಯತ್ಯಾಸ ಕಲನಶಾಸ್ತ್ರದ ಅಧ್ಯಯನವಸ್ತು ಕೂಡ f(t+h)-f(t) ರೂಪದ ವ್ಯತ್ಯಾಸಗಳೇ. ಆದರೆ ಇಲ್ಲಿ ಅವನ್ನು ಕುರಿತು ವಿವೇಚನೆ ಸಾಧಾರಣ ಸಮತ್ವಗಳ ಆಯ ಕಟ್ಟಿನಲ್ಲಿ ಮಾತ್ರ ಸಾಗಬೇಕೆಂಬ ನಿಬಂಧನೆಯುಂಟು. ಅಲ್ಲದೆ ಈ ಶಾಸ್ತ್ರದ ಪಾಲಿಗೆ ಬಹುಪದಿಗಳ (ಪಾಲಿನೋಮಿಯಲ್ಸ್) ವಿನಾ ಬೇರೆ ರೀತಿಯ ಉತ್ಪನ್ನಗಳು ಬಹುಮಟ್ಟಿಗೆ ಬಹಿಷ್ಕೃತ. ಬಹುಪದಿಯೆಂದು ಭಾವಿಸಲಾಗುವ ಉತ್ಪನ್ನವೊಂದರ ಕೆಲವೇ ಬೆಲೆಗಳನ್ನು ಕೊಟ್ಟಾಗ ಆ ಉತ್ಪನ್ನದ ಇತರ ಬೆಲೆಗಳನ್ನು ನಿರ್ಧರಿಸುವುದು ಇಲ್ಲಿಯ ಒಂದು ಮುಖ್ಯ ಸಮಸ್ಯೆ. ಇದನ್ನು ಬಿಡಿಸುವಲ್ಲಿ ದತ್ತ ಬೆಲೆಗಳ ವ್ಯತ್ಯಾಸಗಳು ಹಾಗೂ ಹಂತ ಹಂತವಾಗಿ ಅಂಥ ವ್ಯತ್ಯಾಸಗಳ ವ್ಯತ್ಯಾಸಗಳು ಬಳಕೆಗೆ ಬರಬಹುದೆಂಬ ಅಂಶವನ್ನು ಈ ಶಾಸ್ತ್ರದ ಹೆಸರು ಸೂಚಿಸುತ್ತದೆ. ಪ್ರಸಕ್ತ ಲೇಖನದ ವ್ಯಾಪ್ತಿಯಲ್ಲಿ ಈ ವಿಧಾನದ ಸ್ಥೂಲ ರೂಪರೇಖೆಗಳನ್ನು ಮಾತ್ರ ಚಿತ್ರಿಸಲಾಗುವುದು. ಈ ದೃಷ್ಟಿ ಕೋನದಿಂದ ಮೊದಲು ಒಂದು ಚಿಕ್ಕ ಉದಾಹರಣೆಯನ್ನು ಪರಿಶೀಲಿಸೋಣ. $f(t) = t^2$ ಉತ್ಪನ್ನ ಸಾಕಷ್ಟು ಸರಳವಾದುದಷ್ಟೆ. $t_0, t_1, t_2, t_3$ ಗಳು t ಚರದ ಯಾವುದಾದರೂ ನಾಲ್ಕು ಬೆಲೆಗಳಾದಲ್ಲಿ

$$f(t_i;t_{i+1}) = \frac{f(t_i) - f(t_{i+1})}{t_i - t_{i+1}}, (i = 0,1,2)$$

$$f(t_i;t_{i+1};t_{i+2}) = \frac{f(t_i;t_{i+1}) - f(t_{i+1};_{ti+2})}{t_i - t_{i+2}}, i = 0,1$$

$$f(t_0,t_1,t_2,t_3) = \frac{f(t_0;t_1;t_2) - f(t_1;t_2;t_3)}{t_o - t_3}$$

ಎಂಬ ಆರು ಪರಿಮಾಣಗಳನ್ನು ಲೆಕ್ಕಹಾಕಿ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ್ದೇವೆ. ಇವಕ್ಕೆ ವಿಭಾಜಿತ ವ್ಯತ್ಯಾಸಗಳು (ಡಿವೈಡೆಡ್ ಡಿಫರೆನ್ಸ್ಸ್) ಎಂದು ಹೆಸರು.

| t | f(t) | ವಿಭಾಜಿತ ವ್ಯತ್ಯಾಸಗಳು | | |
|---|---|---|---|---|
| | | ಪ್ರಥಮ ಹಂತ | ದ್ವಿತೀಯ ಹಂತ | ತೃತೀಯ ಹಂತ |
| $t_0$ | $t_0^2$ | $f(i_0;t_1) = t_0 + t_1$ | $f(t_0;t_1;t_2) = 1$ | $f(t_0;t_1;t_2;t_3) = 0$ |
| $t_1$ | $t_1^2$ | $f(t_1;t_2) = t_1 + t_2$ | $f(t_1;t_2;t_3) = 1$ | —— |
| $t_2$ | $t_2^2$ | $f(t_2;t_3) = t_2 + t_3$ | —— | —— |
| $t_3$ | $t_3^2$ | —— | —— | —— |

ತೃತೀಯ ಹಂತದ ವಿಭಾಜಿತವ್ಯತ್ಯಾಸ $t_0, t_1, t_2, t_3$ ಗಳ ಬೆಲೆ ಏನೇ ಇದ್ದರೂ ಸೊನ್ನೆ ಯಾಗುವ ಪರಿಸ್ಥಿತಿಯನ್ನು ಗಮನಿಸಿ. $f(t) = t^2$ ಎಂದಿಟ್ಟುಕೊಳ್ಳುವ ಬದಲು $f(t) = ct^2$ ಎಂದಿಟ್ಟುಕೊಂಡಿದ್ದರೂ (c ಸ್ಥಿರಸಂಖ್ಯೆ ) ತೃತೀಯಹಂತದ ವಿಭಾಜಿತ ವ್ಯತ್ಯಾಸ ಸೊನ್ನೆಯೇ ಆಗುತ್ತಿತ್ತು. $f(t) = bt$ ಆದಾಗ (b ಸ್ಥಿರಸಂಖ್ಯೆ) ತೃತೀಯ ಹಂತದಲ್ಲಷ್ಟೇ ಅಲ್ಲದೆ ದ್ವಿತೀಯ ಹಂತದಲ್ಲಿರುವ ಎರಡು ವಿಭಾಜಿತ ವ್ಯತ್ಯಾಸಗಳೂ ಸೊನ್ನೆ ಆಗುತ್ತವೆ, ಮತ್ತು $f(t) = a$ (ಸ್ಥಿರಸಂಖ್ಯೆ) ಆದಾಗ ಎಲ್ಲ ಹಂತಗಳಲ್ಲೂ ವಿಭಾಜಿತ ವ್ಯತ್ಯಾಸಗಳು ಸೊನ್ನೆಯಾಗುತ್ತವೆ. ಈಗ $f(t) = a + bt + ct^2$ ಆದಾಗ f(t) ಯ ವಿಭಾಜಿತ ವ್ಯತ್ಯಾಸಗಳಿಗೆ $a, bt, ct^2$ ಪದಗಳು ಪ್ರತ್ಯೇಕ ಪ್ರತ್ಯೇಕವಾಗಿ ಭಾಗಬೆಲೆಗಳನ್ನು ಸಂದಾಯಮಾಡುವುದರಿಂದ ಮತ್ತೆ ತೃತೀಯ ಹಂತದಲ್ಲಿ f(t) ಯ ವಿಭಾಜಿತ ವ್ಯತ್ಯಾಸ ಶೂನ್ಯವಾಗುವುದು. ಇದೇ ಪ್ರಕಾರ $f(t) = a_0 + a_1 t + a_2 t^2 + ..... + a_n t^n, (n$ ಧನ ಪೂರ್ಣಾಂಕ) ಆಗಿ (ಇಂಥ ಉತ್ಪನ್ನಗಳು ಬಹುಪದಿಗಳೆನಿಸಿಕೊಳ್ಳುತ್ತವೆ) f(t) ಯ (n+2) ಬೆಲೆಗಳನ್ನು ಪರಿಶೀಲಿಸಿದಾಗ (n+1) ನೆಯ ಹಂತದ ವಿಭಾಜಿತ ವ್ಯತ್ಯಾಸ ಸೊನ್ನೆಯಾಗುತ್ತದೆಂದು ತೋರಿಸಬಹುದು; ಆದರೆ ಸರಳತೆಯ ದೃಷ್ಟಿಯಿಂದ ಸದ್ಯಕ್ಕೆ $f(t) = a + bt + ct^2$ ಎಂದು ಮಾತ್ರ ಭಾವಿಸೋಣ. ವಿಭಾಜಿತ ವ್ಯತ್ಯಾಸ $f(t_0 ; t_1)$ರ ವ್ಯಾಖ್ಯೆಯ ಮೇರೆಗೆ

$$f(t_0) = f(t_1) + (t_0 - t_1) f(t_0; t_1) \qquad ......(21)$$

$f(t_0; t_1; t_2)$ ರ ವ್ಯಾಖ್ಯೆಯ ಮೇರೆಗೆ

$$f(t_0; t_1) = f(t_1; t_2) + (t_0 - t_1) f(t_0; t_1; t_2)$$ ಅಥವಾ

$$(t_0 - t_1) f(t_0; t_1) = (t_0 - t_1) f(t_1; t_2) + (t_0 - t_1)(t_0 - t_2) \; X \; f(t_0; t_1; t_2) \qquad ....(22)$$

ಅಂತೆಯೇ

$$(t_0 - t_1)\,(t_0; t_2) = f(t_0; t_1; t_2) = (t_0 - t_1)(t_0 - t_2) \; X \; f(t_1; t_2; t_3) + (t_0 - t_1)(t_0 - t_2)(t_0 - t_3) f(t_0; t_1; t_2; t_3) \qquad .....(23)$$

$f(t_0; t_1; t_2; t_3) = 0$ ಆದಕಾರಣ [21], [22], [23] ಸಮೀಕರಣಗಳನ್ನು ಕೂಡಿ $t_0 = t$ ಎಂದು ಬರೆದರೆ

$$f(t) = f(t_1) + (t - t_1) f(t_1; t_2) + (t - t_1)(t - t_2) \; X \; f(t_1; t_2; t_3) \qquad .....(24)$$

ಎಂಬ ಸಾರ್ವತ್ರಿಕ ಸೂತ್ರ ಸ್ಥಾಪಿತವಾಗುವುದು. ಇದಕ್ಕೆ ನ್ಯೂಟನ್ ಸೂತ್ರವೆಂದು ಹೆಸರು. $t_1, f(t_1); t_2, f(t_2); t_3, f(t_3)$ ಎಂಬ ಮೂರು ಜೊತೆ ಬೆಲೆಗಳನ್ನು ಕೊಟ್ಟಾಗ ಇಡಿ f(t) ಉತ್ಪನ್ನವನ್ನೇ ಈ ಸೂತ್ರದಿಂದ ಗೊತ್ತುಮಾಡಬಹುದು. ಉದಾಹರಣೆಗೆ f(1) = 6, F(2) = 20, F(5) = 122 ಆಗಿರಲಿ. ವಿಭಾಜಿತ ವ್ಯತ್ಯಾಸಗಳನ್ನು ಕೆಳಗೆ ಲೆಕ್ಕಹಾಕಲಾಗಿದೆ.

| t | f(t) | ವಿಭಾಜಿತ ವ್ಯತ್ಯಾಸ | |
|---|---|---|---|
| | | ಪ್ರಥಮ ಹಂತ | ದ್ವಿತೀಯ ಹಂತ |
| $t_1=1$ | 6 | $\frac{6-20}{1-2} = 14$ | $\frac{14-34}{1-5} = 5$ |
| $t_2=2$ | 20 | $\frac{20-122}{2-5} = 34$ | —— |
| $t_3=5$ | 122 | —— | —— |

ಆದ್ದರಿಂದ ನ್ಯೂಟನ್ ಸೂತ್ರದಂತೆ

$$f(t) = 6 + 14(t-1) + 5(t-1)(t-2) = 2t + 5t^2 \qquad ....(25)$$

ಈ ಉಕ್ತಿಯಲ್ಲಿ t ಗೆ 1, 2 ಮತ್ತು 5 ಬೆಲೆಗಳನ್ನು ಆದೇಶಿಸಿದಾಗ f(t) ಅಪೇಕ್ಷಿಸಿದಂತೆ ಕ್ರಮವಾಗಿ 6, 20 ಮತ್ತು 122 ಎಂಬ ಬೆಲೆಗಳನ್ನು ಗಳಿಸಿಕೊಳ್ಳುತ್ತದೆ. ಪ್ರಾಯೋಗಿಕ ವಿಜ್ಞಾನವೊಂದರಲ್ಲಿ t ಮತ್ತು f(t) ಗಳು ಒಂದನ್ನೊಂದು ದೃಢವಾಗಿ ಅವಲಂಬಿಸುವ ಎರಡು ಭೌತ ಪರಿಮಾಣಗಳಾಗಿರಬಹುದು; ಉದಾಹರಣೆಗೆ t ವಿದ್ಯುತ್ಮಂಡಲವೊಂದರಲ್ಲಿ ಎರಡು ಬಿಂದುಗಳ ನಡುವೆ ಇರಬಹುದಾದ ವಿಭವ ವ್ಯತ್ಯಾಸ (ಪೊಟೆನ್ಶಿಯಲ್ ಡಿಫರೆನ್ಸ್), f(t) ಆ ಮಂಡಲದ ಇನ್ನೆರಡು ಬಿಂದುಗಳ ನಡುವೆ ಹರಿಯುವ ವಿದ್ಯುತ್ಪ್ರವಾಹ (ಎಲೆಕ್ಟ್ರಿಕ್ ಕರೆಂಟ್); ಅಥವಾ ಸಮಾಜವಿಜ್ಞಾನದಲ್ಲಿ t, f(t) ಒಂದನ್ನೊಂದು ಸಡಿಲವಾಗಿ ಅವಲಂಬಿಸುವ ಎರಡು ಸಂಖ್ಯಾಪರಿಮಾಣಗಳಾಗಿರಬಹುದು. ಉದಾಹರಣೆಗೆ t ಹಳ್ಳಿಯೊಂದರಲ್ಲಿರುವ ಶಿಕ್ಷಕರ ಸಂಖ್ಯೆ, f(t) ಒಂದು ಗೊತ್ತಾದ ಅವಧಿಯಲ್ಲಿ ಆ ಹಳ್ಳಿಗರ ಪೈಕಿ ಅಕ್ಷರಸ್ಥರಾದವರ ಸಂಖ್ಯೆ. ಹಾಗಾದಲ್ಲಿ f(1) = 6, f(2) = 20, f(5) = 122 ಎಂಬಂಥ ಮಾಹಿತಿಗಳು ಸಂಶೋಧಕರಿಗೆ ಪ್ರಯೋಗದ ಅಳತೆಗಳಿಂದ ಅಥವಾ ಜನಗಣತಿಯಿಂದ ಲಭಿಸುತ್ತವೆ. ಇಂಥ ಸಂದರ್ಭಗಳಲ್ಲಿ t, f(t) ಗಳ ಸಂಬಂಧ $f(t) = a + bt + ct^2$ ಅಥವಾ $f(t) = a_0 + a_1 t + ... + a_n t^n$ ರೂಪದಲ್ಲೇ ಇರಬೇಕೆಂಬ ಸ್ವಾಭಾವಿಕ ಆಶ್ವಾಸನೆಯೇನೂ ಇರುವುದಿಲ್ಲ; ಅದಾಗ್ಯೂ ಆ ಸಂಬಂಧದ ನಿಖರ ಸ್ವರೂಪ ಅಜ್ಞಾತವಾಗಿರುವಾಗ ಅದು ಸರಿಸುಮಾರಾಗಿಯಾದರೂ ಈ ರೂಪದಲ್ಲಿರುತ್ತದೆಂದು ಭಾವಿಸುವುದರಿಂದ ಸಂಶೋಧನೆಗಳ ಪ್ರಗತಿಗೆ ಸರಳವಾದ ಗಣಿತೀಯ ಆಯಕಟ್ಟೊಂದು ದೊರಕಿ ಅನುಕೂಲವಾಗುವುದು. ಉದಾಹರಣೆಗೆ t= 3 ಆದಾಗ f(t) ಎಷ್ಟಾಗುತ್ತದೆಂದು ನೇರವಾಗಿ ಕಂಡುಹಿಡಿಯದೆ ಇರುವಾಗ ಆ ಬಗ್ಗೆ ಸಂಶೋಧಕರಿಗೆ ಅಂದಾಜೊಂದು ಆವಶ್ಯಕವಾಗಬಹುದು. ಹಾಗಾದಲ್ಲಿ ಸಮೀಕರಣ [25] ರೊಳಗೆ t = 3 ಬೆಲೆಯನ್ನು ಆದೇಶಿಸಿ f(3) = 44 ಎಂಬ ಅಂದಾಜನ್ನು ಪಡೆಯಬಹುದಷ್ಟೆ. ಅಂದಾಜಿಗೆ ಸಂಬಂಧಪಟ್ಟ t ಯ ಬೆಲೆ (t=3) ಸಂಶೋಧಕರು ನೇರ ಅಳತೆ/ಎಣಿಕೆಗಳಲ್ಲಿ ಬಳಸಿದ t ಯ ಕನಿಷ್ಠ ಮತ್ತು ಗರಿಷ್ಠ ಬೆಲೆಗಳ (t=1, t=5) ನಡುವೆ ಇದ್ದಾಗ ಅಂತರ್ವೇಶನ (ಇಂಟರ್ ಪೊಲೇಷನ್) ಎಂದೂ ಆಚೆ ಇದ್ದಾಗ ಬಹಿರ್ವೇಶನ (ಎಕ್ಸ್ ಟ್ರಾಪೊಲೇಷನ್) ಎಂದೂ ಇಂಥ ಲೆಕ್ಕಾಚಾರಕ್ಕೆ ಹೆಸರಿದೆ. ಹೀಗೆ ಅಜ್ಞಾತ f(t) ಬೆಲೆಗಳನ್ನಷ್ಟೇ ಅಲ್ಲದೆ ಕೆಲವು ವೇಳೆ f(t) ಉತ್ಪನ್ನದ ಹಲವಾರು ನಿಷ್ಪನ್ನ ಅಥವಾ ಸಮಾಸ ಬೆಲೆಗಳನ್ನು ಸಹ ಸಂಶೋಧಕರು ಅಂದಾಜು ಮಾಡಬೇಕಾಗಿ ಬರಬಹುದು; ಆಗಲೂ [25] ರಂಥ ಸಮೀಕರಣಗಳು ಒದಗಿಸುವ f(t)ಯ ಸರಿಸುಮಾರು ಉಕ್ತಿಗಳನ್ನು ಅಜ್ಞಾತ f(t) ಉತ್ಪನ್ನದ ಸ್ಥಾನಗಳಲ್ಲಿ ಆದೇಶಿಸಿಕೊಂಡು ಅಪೇಕ್ಷಿತ ನಿಷ್ಪನ್ನ ಹಾಗೂ ಸಮಾಸಗಳ ಅಂದಾಜು ಬೆಲೆಗಳನ್ನು ಲೆಕ್ಕಾಚಾರ ಮಾಡಬಹುದು.

$$f(t) = a_0 + a_1 t + a_2 t^2 + ... + a_n t^n$$

ಎಂದು ಭಾವಿಸಿ nನೆಯ ಹಂತದವರೆಗಿನ ವಿಭಾಜಿತ ವ್ಯತ್ಯಾಸಗಳನ್ನು ಎಂದಿನಂತೆ ವ್ಯಾಖ್ಯಿಸಿದಲ್ಲಿ ನ್ಯೂಟನ್ ಸೂತ್ರ [24] ಕೆಳಗೆ ತೋರಿಸಿರುವ ರೂಪವನ್ನು ತಾಳುವುದು.

$$f(t) = f(t_1) + (t - t_1) f(t_1; t_2) + (t - t_1) t - t_2) f(t_1; t_2; t_3) + .... + (t - t_1)(t - t_2) .... (t - t_n) f(t_1; t_2; t_3; ........ ........; t_n; t_n + 1$$

ಈ ಸೂತ್ರದಲ್ಲಿ $t_1, t_2, .....t_{n+1}$ ಗಳ ಬೆಲೆಗಳ ಅವರೋಹಣ ಪರಿಮಾಣ ಕ್ರಮದಲ್ಲಾಗಲಿ (ಡಿಸೆಂಡಿಂಗ್ ಆರ್ಡರ್ ಆಫ್ ಮ್ಯಾಗ್ನಿಟ್ಯೂಡ್) ಆರೋಹಣ ಪರಿಮಾಣದಲ್ಲಾಗಲಿ (ಅಸೆಂಡಿಂಗ್ ಆರ್ಡರ್) ಅಥವಾ ಯಾವುದೇ ನಿರ್ದಿಷ್ಟ ಪರಿಮಾಣಕ್ರಮವಿಲ್ಲದಂತಾಗಲಿ ಇರಬಹುದು; $(t_1 - t_2), (t_2 - t_3), ........., (t_n - t_{n+1})$ ಎಂಬ n ವ್ಯತ್ಯಾಸಗಳು ಸಹ ಕ್ರಮರಹಿತವಾಗಿರಬಹುದು. ಆದರೆ ಈ ವ್ಯತ್ಯಾಸಗಳೆಲ್ಲವೂ ಪರಸ್ಪರ ಸಮವಾಗಿರುವಂಥ ವಿಶೇಷ ಪ್ರಸಂಗಕ್ಕೆ ಹೆಚ್ಚು ಪ್ರಾಧಾನ್ಯ ಸಲ್ಲುವುದು. ಇಂಥ ಪ್ರಸಂಗದಲ್ಲಿ

$$-H = t_1 - t_2 = t_2 - t_3 = ... = t_n - t_{n+1} \qquad ......(27)$$

ಆಗಿರಲಿ. ಈಗ $t_1, t_2, ....t_{n+1}$ ಗಳು ಆರೋಹಣ ಅಥವಾ ಅವರೋಹಣ ಪರಿಮಾಣ ಕ್ರಮದಲ್ಲೇ ಇರುತ್ತವೆ. ಈ ಸಂದರ್ಭದಲ್ಲಿ $\Delta$ ಎಂಬ ಉತ್ಪನ್ನ ಪರಿವರ್ತಕ ಸಂಕೇತವನ್ನು (ಆಪರೇಟರ್ ಸಿಂಬಲ್) ಕೆಳಗಿನ ಸಮೀಕರಣದಿಂದ ವ್ಯಾಖ್ಯಿಸುತ್ತೇವೆ:

$$\Delta f(t) = f(t+H) - f(t)$$

[ಕೆಲವು ವೇಳೆ $Ef(t) = f(t+H)$ ಸಮೀಕರಣದಿಂದ ವ್ಯಾಖ್ಯೆಯಾಗುವ E ಎಂಬ ಇನ್ನೊಂದು ಉತ್ಪನ್ನ ಪರಿವರ್ತಕವೂ ಉಪಯುಕ್ತವಾಗುವುದು; ಆದರೆ ಪ್ರಸಕ್ತ ಲೇಖನದಲ್ಲಿ ನಾವು E ಯನ್ನು ಬಳಸುವುದಿಲ್ಲ]. $\Delta^2 f(t)$ ಎಂದರೆ $\Delta(\Delta f(t) = \Delta[f(t+H) - f(t)] =$ $[f(t+H+H-f(t+H)]-[f(t+H)-f(t)]$ ಎಂದು ಅರ್ಥ. ಇದು $\Delta f(t+H) - \Delta f(t)$ ಸಮ ಎಂಬುದನ್ನು ಗಮನಿಸಬೇಕು. ಇದೇರೀತಿ $\Delta^3 f(t), \Delta^4 f(l)$ ಮುಂತಾದ ಸಂಕೇತಗಳನ್ನೆಲ್ಲ ವ್ಯಾಖ್ಯಿಸಬಹುದು; i= 1, 2, 3, ... ಗಳಿಗೆ $\Delta^{i+1} f(t) = \Delta^i f(t+H) - \Delta^i f(t)$ ಆಗುವುದು. ಈಗ [27]ರಿಂದ ವ್ಯಕ್ತವಾಗುವ ವಿಶೇಷ ಪ್ರಸಂಗದಲ್ಲಿ ನ್ಯೂಟನ್ ಸೂತ್ರ [26]

$$f(t) = f(t_1) + \frac{t-t_1}{1!H}\Delta f(t_1) + \frac{(t-t_1)(t-t_2)}{2!\ \ H^2}\Delta^2 f(t_1) + \ldots$$

$$\ldots + \frac{(t-t_1)-(t-t_2)\ldots(t-t_n)}{n!H^n}\Delta^n f(t_1) \qquad \ldots\ldots(28)$$

ಎಂಬ ರೂಪವನ್ನು ತಾಳುತ್ತದೆ. ಸೂತ್ರ [28]ಕ್ಕೆ ನ್ಯೂಟನ್–ಗ್ರಿಗರಿಸೂತ್ರವೆಂದು ಹೆಸರು. ಆಗಲೇ ತಿಳಿಸಿರುವಂತೆ ಇಂಥ ಸೂತ್ರಗಳ ಮೂಲಕ f ಉತ್ಪನ್ನದ ನಿಷ್ಪನ್ನ ಹಾಗೂ ಸಮಾಸ ಬೆಲೆಗಳನ್ನು ಅಂದಾಜು ಮಾಡಬಹುದು. ಸಮಾಸ ಬೆಲೆಗಳ ಅಂದಾಜಿಗಾಗಿ ಈ ವಿಧಾನದಲ್ಲಿ ಸಿದ್ಧಪಡಿಸಿದ ಮೂರು ವಿಶಿಷ್ಟಸೂತ್ರಗಳನ್ನು ಈಗ ಉಲ್ಲೇಖಿಸುತ್ತೇವೆ. ಇವುಗಳಲ್ಲೆಲ್ಲ N ಯಾವುದಾದರೊಂದು ಧನಪೂರ್ಣಾಂಕವೆಂದೂ U = T+NH ಎಂದೂ ಪರಿಗಣಿಸಬೇಕು. N = 2, 4, 6 ... ಆದಾಗ

$$\int_T^U f(x)dx = \frac{1}{3}H\,[\{f(T)+f(U)\}$$
$$+4\{f(T+H)+f(T+3H)\ldots+f(U-H)\}$$
$$+2\{f(T+2H)+f(T+4H)+\ldots+f(U-2H)\}]$$

ಇದಕ್ಕೆ ಸಿಮ್ಸನ್ ಮೂರನೆಯ–ಒಂದು ಸೂತ್ರ ಎಂದು ಹೆಸರು. ಇದನ್ನು ವ್ಯುತ್ಪಾದಿಸಲು $T \le t \le T+2H, T+2H \le t \le T+4H, \ldots\ldots\ldots U-2H \le t \le U$ ಎಂಬ $\frac{1}{2}N$ ಅಂತರಗಳ ಪೈಕಿ ಒಂದೊಂದರಲ್ಲೂ f(t) ಉತ್ಪನ್ನ $a_0 + a_1 t + a_2 t^2$ ರೂಪದಲ್ಲಿದೆಯೆಂದು ಭಾವಿಸಬೇಕು; ಮತ್ತು ಅವುಗಳೊಂದೊಂದರಲ್ಲೂ ನ್ಯೂಟನ್–ಗ್ರಿಗರಿ ಸೂತ್ರವನ್ನು ಪ್ರಯೋಗಿಸಿ f(t) ಯನ್ನು ಸಮಾಸೀಕರಿಸಬೇಕು. ಇದೇ ಪ್ರಕಾರ ಹಲವಾರು ಅಂತರಗಳ ಪೈಕಿ ಒಂದೊಂದರಲ್ಲೂ f(t)= $a_0 + a_1 t + a_2 t^2 + a_3 t^3$ ಎಂದು ಭಾವಿಸಿದಲ್ಲಿ N = 3, 6, 9,... ಆದಾಗ

$$\int_T^U f(x)dx = \frac{3}{8}H\,[\{f(T)+f(U)\}$$
$$+3\{f(T+H)+f(T+2H)\ldots+f(U-4H)\}$$
$$+f(T+5H)+f(T+7H)+\ldots+f(U-H)\}$$
$$+2\{f(T+3H)+f(T+6H)+\ldots+f(U-3H)\}]$$

ಇದಕ್ಕೆ ಸಿಮ್ಸನ್ ಎಂಟನೆಯ–ಮೂರು ಸೂತ್ರ ಎಂದು ಹೆಸರು. ಕೊನೆಯದಾಗಿ N=6, 12, 18, . . . . ಆದಾಗ

$$\int_T^U f(x)dx = \frac{3}{10}H\,[\{f(T)+f(U)\}+5\{f(T+H)$$
$$+\{f(T+5H)+f(T+7H)+f(T+11H)+\ldots\ldots$$
$$+f(U-5H)+f(U-H)\}+\{f(T+2H)+f(T+4H)$$
$$+f(T+8H)+f(T+10H)+\ldots+f(U-4H)$$
$$+f(U-2H)\}+6\{f(T+3H)+f(T+9H)+f(T+15H)$$
$$+\ldots\ldots+f(U-3H)\}+2\{f(T+6H)+f(T+12H)$$
$$+\ldots\ldots+f(U-6H)\}]$$

ಇದಕ್ಕೆ ವೆಡ್ಲ್ ಸೂತ್ರವೆಂದು ಹೆಸರು; ಹಲವಾರು ಅಂತರಗಳ ಪೈಕಿ ಒಂದೊಂದರಲ್ಲೂ $f(t) + a_0 + a_1 t + a_2 t^2 + \ldots\ldots + a_6 t^6$ ಎಂದು ಭಾವಿಸುವುದರಿಂದ ಇದು ವ್ಯುತ್ಪತ್ತಿಯಾಗುತ್ತದೆ.

ಸಾಂತ ವ್ಯತ್ಯಾಸ ಕಲನಶಾಸ್ತ್ರದಲ್ಲಿ ಸಾಂತವ್ಯತ್ಯಾಸ ಸಮೀಕರಣಗಳೆಂಬ ಒಂದು ವಿಶಿಷ್ಟ ಪ್ರಕರಣವಿದೆ. ಇವು ಸಾಧಾರಣವಾಗಿ f(t), f(t+1), f(t+2) ಮುಂತಾದ f ಉತ್ಪನ್ನದ ಬೆಲೆಗಳ ನಡುವೆ ಇರಬೇಕೆಂದು ಅಪೇಕ್ಷಿಸಲಾದ ಸಂಬಂಧವನ್ನು ವ್ಯಕ್ತಪಡಿಸುತ್ತವೆ; A(t) f(t)+B(t) f(t+1) + C (t) f(t+2) =0 ಎಂಬುದು ಇಂಥ ಸಮೀಕರಣಗಳಿಗೊಂದು ನಿದರ್ಶನ. ಈ ಅಪೇಕ್ಷಿತ ಸಂಬಂಧಕ್ಕೆ ಸರಿಹೊಂದುವ f(t) ಉತ್ಪನ್ನಗಳನ್ನು ನಿರ್ಧರಿಸುವುದು ಸಾಂತ ವ್ಯತ್ಯಾಸ ಸಮೀಕರಣ ಪ್ರಕರಣದ ಸಮಸ್ಯೆ. ಈ ಸಂದರ್ಭದಲ್ಲಿ f(t) ಕೇವಲ ಬಹುಪದಿಯಾಗಿರಬೇಕೆಂಬ ಭಾವನೆಯನ್ನು ಸಡಿಲಗೊಳಿಸಿ t ಧನ ಪೂರ್ಣಾಂಕವಾದಾಗಲೆಲ್ಲ f(t) ವ್ಯಾಖ್ಯೆಯಾಗಿರಬೇಕೆಂಬ ನಿಬಂಧನೆಯನ್ನು ಮಾತ್ರ ಇಟ್ಟುಕೊಳ್ಳುತ್ತೇವೆ.




ಚಿತ್ರ 9

**ಏರಿಳಿತಗಳ ಕಲನಶಾಸ್ತ್ರ :** ಕೆಲವು ನಿಬಂಧನೆಗಳಿಗೆ ಒಳಪಟ್ಟ ಚರವೊಂದು ಅದಕ್ಕೆ ಪ್ರಾಪ್ತವಾಗಬಹುದಾದ ಬೆಲೆಗಳ ಪೈಕಿ ಯಾವ ಸನ್ನಿವೇಶದಲ್ಲಿ ಕನಿಷ್ಠ (ಅಥವಾ ಗರಿಷ್ಠ) ಆದುದನ್ನು ಗಳಿಸಿಕೊಳ್ಳುತ್ತದೆಂಬ ಪ್ರಶ್ನೆ ಗಣಿತಶಾಸ್ತ್ರದಲ್ಲಿ ತುಂಬ ಮುಖ್ಯವಾದದ್ದು. ಸರಳ ಪ್ರಸಂಗಗಳಲ್ಲಿ ಇಂಥ ಸಮಸ್ಯೆಯನ್ನು ಅವಕಲನಶಾಸ್ತ್ರದ ನೆರವಿನಿಂದಲೇ ಬಿಡಿಸಬಹುದು. ಉದಾಹರಣೆಗೆ ಚಿತ್ರ (9)ರಲ್ಲಿ ಸೂಚಿಸಿರುವ ವ್ಯವಸ್ಥೆಯನ್ನು ಪರಿಶೀಲಿಸಿ. ಇದರಲ್ಲಿ ಅಗತ್ಯವಿದ್ದಷ್ಟು ಉದ್ದವಿರುವ ನುಣುಪಾದ ತಂತಿಯೊಂದನ್ನು AM, MK ಸರಳರೇಖಾಖಂಡಗಳ ಜೋಡಣೆಯ ಆಕಾರವನ್ನು ತಾಳುವಂತೆ ಅದರ ಮಧ್ಯಬಿಂದು Mನಲ್ಲಿ ಬಗ್ಗಿಸಲಾಗಿದೆ; ಮತ್ತು ಅದರ ಮೂಲಕ A ಮತ್ತು K ಎಂಬ ಎರಡು ಸ್ಥಿರಬಿಂದುಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ತಂತಿಗೆ ಪೋಣಿಸಿರುವ ಒಂದು ನುಣುಪಾದ ಮಣಿಯನ್ನು Aಯಲ್ಲಿ ವೇಗರಹಿತವಾಗಿ ಬಿಡುಗಡೆ ಮಾಡಿದರೆ ಪ್ರತಿರೋಧವಿಲ್ಲದೆ ಗುರುತ್ವಾಕರ್ಷಣೆಯ ಪ್ರಭಾವದಿಂದ (ಹಾಗೆ ನಾವು ಭಾವಿಸೋಣ) ಅದು ಕೆಳಕ್ಕೆ ಜಾರುತ್ತ ಯಾವುದೋ ಒಂದು ಕಾಲಾವಧಿ f ಬಳಿಕ K ಬಿಂದುವನ್ನು ತಲುಪುವುದು. (ತೀರ ಮೊನಚಾದ ಕೋನ ಬಾರದಂತೆ Cಯ ಬಳಿ ತಂತಿಯನ್ನು ಕ್ರಮ ಕ್ರಮವಾಗಿ ಬಗ್ಗಿಸಿದ್ದರೆ ಮಣಿಯ ಅವಿಚ್ಛಿನ್ನ ಚಲನೆಗೆ ಅಲ್ಲಿ ಅಡಚಣೆಯುಂಟಾಗುವುದಿಲ್ಲ). ಮಣಿ Aಯಿಂದ Kಗೆ ಅತ್ಯಂತ ಕ್ಷಿಪ್ರವಾಗಿ ಜಾರಬೇಕಾದರೆ ಈ ವ್ಯವಸ್ಥೆಯ ವಿನ್ಯಾಸವೆಂತಿರಬೇಕು ? ಚಿತ್ರದಲ್ಲಿ ತೋರಿಸಿರುವಂತೆ A,K ಗಳ ನಡುವೆ ಇರುವ ದೂರ c (ಇದೊಂದು ಸ್ಥಿರ ಪರಿಮಾಣ), ಕೋನ KACಯು $\beta$ (ಇದೂ ಸ್ಥಿರವೇ) ಮತ್ತು ಕೋನ MAK=ಕೋನ MKA = t (ಇದು ಚರ). ಈಗ ಮಣಿ A ಯಿಂದ M ಗೆ ಚಲಿಸಲು

$$f_{AM}(t) = \{c/[g \cos t \sin(\beta + t)]\}^{\frac{1}{2}}$$

ಯಷ್ಟು ಕಾಲವನ್ನೂ M ನಿಂದ Kಗೆ ಚಲಿಸಲು

$$f_{MK}(t) = \sqrt{c}/\{\sqrt{g \cos t}\,[\sqrt{\sin(\beta + t)} + \sqrt{2 \sin \beta \cos t}\}$$

ಯಷ್ಟು ಕಾಲವನ್ನೂ ತೆಗೆದುಕೊಳ್ಳುವುದೆಂದು ತೋರಿಸಬಹುದು ; ಇಲ್ಲಿ g ಭೂಗುರುತ್ವವೇಗೋತ್ಕರ್ಷ (ಆಕ್ಸಿಲರೇಷನ್ ಆಫ್ ಗ್ರಾವಿಟಿ). ಆದ್ದರಿಂದ ಮಣಿಯ ಚಲನೆಯ ಒಟ್ಟು ಕಾಲ $f(t) = f_{AM}(t) + f_{MK}(t)$. ಈಗ $f'(t) = 0, f''(t) > 0$ ಆದಾಗ f(t) ಕನಿಷ್ಠವಾಗುವುದೆಂದು ಹಿಂದೆ ಮನಗಂಡಿದ್ದೇವಷ್ಟೆ. f(t) ಯನ್ನು ನಿರ್ಧರಿಸಿದ್ದಾಗಿರುವುದರಿಂದ ಈಗ ಅದರ ಪ್ರಥಮ ಹಾಗೂ ದ್ವಿತೀಯ ನಿಷ್ಪನ್ನಗಳನ್ನು ಲೆಕ್ಕಾಚಾರಮಾಡಿ t ಯ ಯಾವ ಬೆಲೆಗೆ f'(t)=0, f''(t)>0 ಆಗುವುದೆಂದು ಗೊತ್ತು ಮಾಡಲು ತತ್ತ್ವಶಃ ಸಾಧ್ಯವಿದೆಯಷ್ಟೆ. (ಪ್ರಸ್ತುತ ನಿದರ್ಶನದಲ್ಲಿ ಅಂಥ t ಬೆಲೆಯ ಲೆಕ್ಕಾಚಾರ ವಾಸ್ತವಿಕವಾಗಿ ತುಂಬ ಜಟಿಲವೂ ಪ್ರಯಾಸಕರವೂ ಆಗುತ್ತದೆ ; ಆದರೆ ಈ ವಿಚಾರ ನಾವು ನಿರ್ವಹಿಸುತ್ತಿರುವ ವಿವೇಚನೆಗೆ ಅಪ್ರಕೃತ). ಈ ರೀತಿ ಕನಿಷ್ಠಕಾರಕ t ಯನ್ನು ನಿಷ್ಕರ್ಷಿಸಿದ ಕೂಡಲೆ ಮಣಿಯ ಕ್ಷಿಪ್ರತಮ ಚಲನೆಗೆ ಅವಶ್ಯವಾದ ವ್ಯವಸ್ಥಾವಿನ್ಯಾಸವೂ ಇತ್ಯರ್ಥವಾಗುವುದು. ಕನಿಷ್ಠಗೊಳಿಸಬೇಕಾಗಿರುವ f ಚರ t ಎಂಬ ಏಕಮಾತ್ರ ಪ್ರಾಚಲವನ್ನು (ಪ್ಯರಾಮೀಟರ್) ಅವಲಂಬಿಸುವುದೇ ಇಲ್ಲಿ ಕನಿಷ್ಠೀಕರಣ ಸಮಸ್ಯೆ ಕೇವಲ ಅವಕಲನಶಾಸ್ತ್ರದ ಆಯಕಟ್ಟಿನೊಳಗೆ ಪರಿಹಾರವಾಗಲು ಕಾರಣ. ಅಂತೆಯೇ ತಂತಿಗಳನ್ನು ಅವುಗಳ ಮಧ್ಯಬಿಂದುಗಳಲ್ಲಿ ಮಾತ್ರ ಬಗ್ಗಿಸಬೇಕೆನ್ನುವ ಬದಲು ಎಲ್ಲಿ ಬೇಕಾದರೂ (ಎರಡೆರಡು ಸರಳ ರೇಖಾಖಂಡಗಳಾಗುವಂತೆ) ಬಗ್ಗಿಸಬಹುದೆಂಬ ನಿಯಮವನ್ನಿಟ್ಟುಕೊಂಡರೆ ಮಣಿಯ ಚಲನೆ ಎರಡು ಪ್ರಾಚಲಗಳನ್ನು ಅವಲಂಬಿಸುವುದು ; ತಂತಿಗಳನ್ನು ಮೂರು ಸರಳರೇಖಾಖಂಡಗಳ ಜೋಡಣೆಯಾಗುವಂತೆ ಯಾವುದಾದರೂ ಎರಡು ಬಿಂದುಗಳಲ್ಲಿ ಬಗ್ಗಿಸಲು ಅನುಮತಿಯಿತ್ತರೆ ಆ ಚಲನೆ ನಾಲ್ಕು ಪ್ರಾಚಲಗಳನ್ನು ಅವಲಂಬಿಸುವುದು. ಕನಿಷ್ಠೀಕರಿಸಬೇಕಾದ ಚರ (ಇಲ್ಲಿ ಮಣಿಯ ಚಲನೆಯ ಅವಧಿ) ಸಾಂತ ಸಂಖ್ಯೆಯಷ್ಟು (ಫೈನೈಟ್ ನಂಬರ್) ಪ್ರಾಚಲಗಳನ್ನು ಮಾತ್ರವೇ ಅವಲಂಬಿಸುವ ಇಂಥ ಎಲ್ಲ ಪ್ರಸಂಗಗಳಲ್ಲೂ ಅಪೇಕ್ಷಿತ ಕನಿಷ್ಠೀಕರಣವನ್ನು ಕೇವಲ ಅವಕಲನ ಶಾಸ್ತ್ರದ ನೆರವಿನಿಂದ ನಿರ್ವಹಿಸಲು ತತ್ತ್ವಶಃ ಸಾಧ್ಯ. ಆದರೆ ತಂತಿಗಳನ್ನು ಇಡಿಯಾಗಿ ನಮಗೆ ಇಚ್ಛೆ ಬಂದಂತೆ ಅನೇಕ ವಕ್ರರೇಖೆಗಳ ಆಕಾರಗಳಲ್ಲಿ ಸಹ ಬಗ್ಗಿಸಬಹುದಷ್ಟೆ (ಚಿತ್ರ 10). ಅಂಥ ಎಲ್ಲ ವಕ್ರರೇಖಾವಿನ್ಯಾಸಗಳನ್ನು ಗಣನೆಗೆ ತೆಗೆದುಕೊಂಡರೆ ಯಾವ ನಿರ್ದಿಷ್ಟ ವಿನ್ಯಾಸದಲ್ಲಿ ಮಣಿಯ ಚಲನೆ ಕ್ಷಿಪ್ರತಮವಾಗುವುದೆಂಬ ಪ್ರಶ್ನೆಯನ್ನು ಉತ್ತರಿಸಲು ಅವಕಲನಶಾಸ್ತ್ರ ಅಸಮರ್ಥವಾಗುವುದು ; ಈಗ ಮಣಿಯ ಚಲನೆಯ ವೈಖರಿ ಸಾಂತ ಸಂಖ್ಯೆಯಷ್ಟು ಪ್ರಾಚಲಗಳ ಬದಲು ಒಂದು ಇಡೀ ವಕ್ರರೇಖೆಯ ಆಕಾರವನ್ನೇ ಅವಲಂಬಿಸಿರುವುದು. ಇಂಥ ಹೊಸ ಪರಿಸ್ಥಿತಿಯಲ್ಲಿ ಕನಿಷ್ಠೀಕರಣ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಗಣಿತ ಶಾಖೆಯೇ ಏರಿಳಿತಗಳ ಕಲನಶಾಸ್ತ್ರ (ಕ್ಯಾಲ್ಕುಲಸ್ ಆಫ್ ವೇರಿಯೇಷನ್ಸ್) (ಎಸ್.ಆರ್.ಎಂ.)




**ಚಿತ್ರ 10. ತಂತಿ APQKಗೆ ವಕ್ರರೇಖೆಯ ಆಕಾರದಲ್ಲಿದೆ. ಮಣಿ ಅದರ ಮೇಲೆ ಜಾರುತ್ತಿದೆ**

ಏರಿಳಿತಗಳ ಕಲನಶಾಸ್ತ್ರ ಏಕಚರ ಉತ್ಪನ್ನಗಳ ಕನಿಷ್ಠ ಮತ್ತು ಗರಿಷ್ಠಗಳನ್ನೂ ಅಭ್ಯಸಿಸುವ ಅವಕಲನಶಾಸ್ತ್ರದ ಒಂದು ವಿಸ್ತರಣೆ. ಇಲ್ಲಿ ಕನಿಷ್ಠ ಗರಿಷ್ಠಗಳನ್ನೂ ಸ್ಥಾಯೀ ಬೆಲೆಗಳನ್ನೂ (ಸ್ಟೇಷನರಿ ವ್ಯಾಲ್ಯೂಸ್) ಒಳಗೊಂಡ ಪ್ರಶ್ನೆಗಳನ್ನು ವಿಚಾರ ಮಾಡಲಾಗುತ್ತದೆ. ಆದರೆ ಇಲ್ಲಿ ಪರಿಮಿತ ಸಂಖ್ಯೆಯ ಸ್ವತಂತ್ರ ಚರಗಳುಳ್ಳ ಉತ್ಪನ್ನಗಳನ್ನು ಕುರಿತು ಹೇಳುವುದಿಲ್ಲ ; ಬದಲು ಉತ್ಪನ್ನಗಳ ಅಥವಾ ಉತ್ಪನ್ನಕಗಳ (ಫಂಕ್ಷನಲ್ಸ್) ಗರಿಷ್ಠ ಕನಿಷ್ಠಗಳನ್ನು ಶೋಧಿಸುತ್ತೇವೆ. ಸ್ವತಂತ್ರ ಚರಗಳ ಸ್ಥಾನವನ್ನೀಗ ಒಂದು ಅಥವಾ ಹೆಚ್ಚಿನ ಚರ ಉತ್ಪನ್ನಗಳು ಪಡೆಯುತ್ತವೆ. ಗರಿಷ್ಠ ಕನಿಷ್ಠ ಅಥವಾ ಸ್ಥಾಯೀ ಬೆಲೆಗಳಿಗಾಗಿ ನಾವು ಹುಡುಕುವ ಉತ್ಪನ್ನಗಳು ಸಾಮಾನ್ಯವಾಗಿ ಈ ಚರ ಉತ್ಪನ್ನಗಳನ್ನು ಒಳಗೊಂಡ ಸಮಾಸಾಂಕ (ಇಂಟೆಗ್ರಲ್) ಆಗಿರುತ್ತದೆ. ದತ್ತ ಸಮಾಸಾಂಕಕ್ಕೆ ಗರಿಷ್ಠ ಅಥವಾ ಕನಿಷ್ಠ ಬೆಲೆ ಇರುವಂತೆ ಸ್ವೀಕರಿಸಬಹುದಾದ ಉತ್ಪನ್ನಗಳ ಒಂದು ವರ್ಗದಿಂದ (ಕ್ಲಾಸ್) ಸೂಕ್ತವಾದ ಉತ್ಪನ್ನ ಅಥವಾ ಉತ್ಪನ್ನಗಳನ್ನು ಆರಿಸುವುದೇ ಪ್ರಶ್ನೆ.

ಉದಾಹರಣೆಗಳು. 1 ಮೇಲ್ಮೈಯ ಮೇಲೆ ಹ್ರಸ್ವತಮ ರೇಖೆಗಳು (ಜಿಯೋಡೆಸಿಕ್ಸ್): ಒಂದು ಮೇಲ್ಮೈಯ ಮೇಲಣ ಎರಡು ದತ್ತ ಬಿಂದುಗಳನ್ನು ಸೇರಿಸುವ ಮತ್ತು ಆ ಮೇಲ್ಮೈಮೇಲಿರುವ ಹ್ರಸ್ವತಮ ರೇಖೆಯನ್ನು ಪಡೆಯುವ ವಿಧಾನ. ದತ್ತ ಮೇಲ್ಮೈಯ ಸಮೀಕರಣಗಳನ್ನು x=x (u,v), y=y (u,v), z=z (u, v) ಎಂದು ತೆಗೆದು ಕೊಂಡು ವಾಡಿಕೆಯ ಚಿಹ್ನೆಗಳಿಂದ

$$E = X_u^2 + y_u^2 + z_u^2, F = x_u x_v + y_u y_v + z_u z_v$$
$$G = x_v^2 + y_v^2 + z_v^2,$$

$$(x_u \equiv \frac{\partial x}{\partial u} \text{ ಇತ್ಯಾದಿ})$$

ಎಂದು ಬರೆದರೆ ಆಗ ಮೇಲ್ಮೈಯ ಮೇಲಣ $u_0, u_1$ ಬಿಂದುಗಳ v=v(u) ರೇಖೆಯ ಉದ್ದವನ್ನು

$$L = \int_{u_0}^{u_1} \sqrt{E + 2Fv' + Gv'^2}\, d^u$$

ಕೊಡುತ್ತದೆ. ಈ ಸಮಾಸಾಂಕ ಕನಿಷ್ಠವಾಗುವಂತೆ uವಿನ ಉತ್ಪನ್ನ vಯನ್ನು ಪಡೆಯುವುದೇ ಪ್ರಶ್ನೆ.

2 ಹ್ರಸ್ವಕ್ಷೇತ್ರೀಯ (ಮಿನಿಮಲ್) ಪರಿಭ್ರಮಣ ಮೇಲ್ಮೈ (ಸರ್ಫೇಸ್ ಆಫ್ ರಿವೊಲ್ಯೂಷನ್): $y = y(x) \geq 0$ ರೇಖೆಯನ್ನು x-ಅಕ್ಷದ ಸುತ್ತ ಪರಿಭ್ರಮಿಸಿದರೆ ಒದಗುವ ಪರಿಭ್ರಮಣ ಮೇಲ್ಮೈಯ ಮೇಲೆ $x_0$ ಗೂ $x_1$ ಕ್ಕೂ ನಡುವೆ ಇರುವ ಭಾಗದ ಕ್ಷೇತ್ರಫಲ

$$2\pi \int_{x_0}^{x_1} y\sqrt{1 + y'^2}\, dx, \text{ ಇಲ್ಲಿ } y' = \frac{dy}{dx}$$

3 ಬ್ರಾಕಿಸ್ಟೋಕ್ರೋನ್ ಪ್ರಶ್ನೆ : ಗುರುತ್ವಾಕರ್ಷಕ್ಕೊಳಪಟ್ಟು ಒಂದು ದತ್ತ ಬಿಂದು Aಯಿಂದ ಇನ್ನೊಂದು ಬಿಂದು Bಗೆ ಬಹುಬೇಗ ಇಳಿಯುವ ರೇಖೆಯನ್ನು ಪಡೆಯುವುದು. y-ಅಕ್ಷರವನ್ನು ನೇರ ಅಧೋಮುಖವಾಗಿ (ವರ್ಟಿಕಲಿ ಡೌನ್‌ವರ್ಡ್ಸ್) ತೆಗೆದುಕೊಳ್ಳಬೇಕು. ಈಗ ದತ್ತಬಿಂದುಗಳು $A(x_0, 0), B(x_1, y_1)$ ಆಗಿದ್ದರೆ Aಯಿಂದ ಒಂದು ಕಣ y ಎತ್ತರದಷ್ಟು ಬಿದ್ದಾಗ ಅದರ ವೇಗ $\sqrt{2gy}$ $A$ಯಿಂದ Bಗೆ ಬೀಳಲು ಕಾಲ

$$\int_{x_0}^{x_1} \left(\frac{1 + y'^2}{2gy}\right)^{\frac{1}{2}} dx$$ ಇದನ್ನು ಕನಿಷ್ಠವನ್ನಾಗಿ ಮಾಡಬೇಕು.

4 ಸಮಪರಿಧಿಯ ಲೆಕ್ಕ (ಐಸೊಪೆರಿಮೆಟ್ರಿಕ್ ಪ್ರಾಬ್ಲೆಂ) : ದತ್ತಪರಿಧಿ ಮತ್ತು ಅತ್ಯಧಿಕ ಕ್ಷೇತ್ರಫಲವುಳ್ಳ ಸಂವೃತರೇಖೆಯನ್ನು ಪಡೆಯುವುದು. ರೇಖೆ ಪೀನ (ಕಾನ್ವೆಕ್ಸ್) ಆಗಿದೆಯೆಂದು ಭಾವಿಸಿ, x-ಅಕ್ಷ ಅದನ್ನು ಸಮಕ್ಷೇತ್ರವೂ ಸಮಪರಿಧಿಯೂ ಉಳ್ಳಂತೆ ಎರಡು ಭಾಗ ಮಾಡಿದರೆ $\int_{x_0}^{x_1} \sqrt{1 + y'^2}\, dx$ = ದತ್ತ ಸ್ಥಿರಸಂಖ್ಯೆ =l ಆಗಿರುವಂತೆ $\int_{x_o}^{x_1} y(x)dx$ ಗರಿಷ್ಠವಾಗಬೇಕು. ಕಂಸದ ಮೇಲಣ ಉದ್ದ sನ್ನು ಸ್ವತಂತ್ರ ಚರವೆಂದು ಆರಿಸಿದರೆ $\int_0^1 y\sqrt{1 - y_s^2}\, ds,\ y_s = \frac{dy}{ds}$ ಎಂಬುದು ಗರಿಷ್ಠವಾಗಬೇಕೆಂಬುದೇ ಪ್ರಶ್ನೆ.

5 ಕ್ಯಾಟೆನರಿಯ ಪ್ರಶ್ನೆ : ದತ್ತ ಉದ್ದ l ಇರುವ ಒಂದು ಭಾರವಾದ ಸರಪಣಿಯನ್ನು ಅದರ ತುದಿಗಳಿಂದ ನೇತುಹಾಕಿದಾಗ ಅದು ತೂಗುವ ಆಕೃತಿಯನ್ನು ಪಡೆಯವಿಕೆ.

ಸ್ಥಿತಿಶಾಸ್ತ್ರದ ತತ್ತ್ವಗಳಿಗನುಸಾರವಾಗಿ ಗುರುತ್ವಕೇಂದ್ರದ ಎತ್ತರ ಕನಿಷ್ಠವಾಗಿರುವಂಥ ವಿರಾಮಸ್ಥಾನ ಒದಗುತ್ತದೆ. ಆದ್ದರಿಂದ

$\int_{x_0}^{x_1}\sqrt{1+y'^2}dx = l$ ಆಗಿರುವಂತೆ $\int_{x_0}^{x_1} y\sqrt{1+y'^2}dx$

ಕನಿಷ್ಠವಾಗಿರ ಬೇಕೆಂಬುದೇ ಪ್ರಶ್ನೆ.

**ಆಯಿಲರನ ಸಮೀಕರಣಗಳು:** ಏರಿಳಿತಗಳ ಕಲನಶಾಸ್ತ್ರದಲ್ಲಿ ಅತ್ಯಂತ ಸುಲಭವಾದರಿಂಯ ಲೆಕ್ಕವಾಗಿ $J(y) = \int_{x_0}^{x_1} F(x, y, y')dx$ ಎಂಬ ಸಮಾಸಾಂಕ ಕನಿಷ್ಠವಾಗುವಂತೆ y(x) ಉತ್ಪನ್ನವನ್ನು ಪಡೆಯುವುದಾಗಿದೆ. ಇಲ್ಲಿ $x_0, x_1, y(x_0), y(x_1)$ ದತ್ತ ; F ಅದರಲ್ಲಿರುವ ಚರಗಳನ್ನು ಕುರಿತು ಎರಡು ಸಲ ಅವಿಚ್ಛಿನ್ನವಾಗಿ ಅವಕಲನೀಯ (ಡಿಫರೆನ್ಷಬಲ್) ; ಮತ್ತು y(x)ಗೆ ಅವಿಚ್ಛಿನ್ನವಾದ ಎರಡನೆಯ ಅವಕಲನಾಂಕವಿದೆ ಎಂದು ಭಾವಿಸುತ್ತೇವೆ. ಅಂಗೀಕೃತಭಾವನೆಗಳ ಹಿನ್ನೆಲೆಯಲ್ಲಿ y(x) ಎಂಬುದು $\frac{d}{dx}\frac{\partial F}{\partial y'} - \frac{\partial F}{\partial y} = 0$ ಎಂಬ ಅವಕಲನ ಸಮೀಕರಣದಿಂದ ಗೊತ್ತಾಗುತ್ತದೆ ಎಂದು ತೋರಿಸಬಹುದು. ಇದಕ್ಕೆ ಆಯಿಲರನ ಸಮೀಕರಣವೆಂದು ಹೆಸರು. ಮೇಲೆ ತಿಳಿಸಿರತಕ್ಕ ಉದಾಹರಣೆಗಳಿಗೆ, ಆಯಿಲರನ ಸಮೀಕರಣಗಳು ಕೆಳಗಿನ ಫಲಿತಾಂಶಗಳನ್ನು ಒದಗಿಸುತ್ತವೆ.

1 ಹ್ರಸ್ವತಮರೇಖೆಗಳು ಃ

$$F = (E + 2Fv' + Gv'^2)^{\frac{1}{2}}$$

$$\frac{d}{du}\frac{F + Gv'}{(E + 2Fv' + v'^2)^{\frac{1}{2}}} - \frac{E_v + 2F_v v' + G_v v'^2}{2(E + 2Fv' + Gv'^2)^{\frac{1}{2}}} = 0$$

2 ಹ್ರಸ್ವಕ್ಷೇತ್ರೀಯ ಪರಿಭ್ರಮಣ ಮೇಲ್ಮೈ ಃ

$$F = y\sqrt{1+y'^2};\ yy'' = 1 + y'^2$$

3 ಬ್ರಾಕಿಸ್ಟೋಕ್ರೋನ್ ಃ

$$F = \left(\frac{1+y'^2}{y}\right)^{\frac{1}{2}};\ y'' = -\frac{1+y'^2}{2y}$$

4 ಸಮಪರಿಧಿಯ ಲೆಕ್ಕ ಃ

$$F = y\sqrt{1-y'^2};\ y\frac{d^2y}{ds^2} = \left(\frac{dy}{ds}\right)^2 - 1$$

ಇನ್ನೂ ಸಾರ್ವತ್ರಿಕ ರೂಪದ ಲೆಕ್ಕಗಳು.

1 ಅನೇಕ ಚರ ಉತ್ಪನ್ನಗಳುಳ್ಳ

$$J = \int_{x_0}^{x_1} F(x, y, z, ......, y' z', .......)dx$$

ಆಯಿಲರನ ಸಮೀಕರಣಗಳು ಃ

$$\frac{d}{dx}\frac{\partial F}{\partial y'} - \frac{\partial F}{\partial y} = 0$$

$$\frac{d}{dx}\frac{\partial F}{\partial z'} - \frac{\partial F}{\partial z} = 0$$

ಪ್ರತಿಯೊಂದು ಚರ ಉತ್ಪನ್ನಕ್ಕೂ ಒಂದು ಸಮೀಕರಣವಿದೆ.

2 ಮೇಲಣ ಅವಕಲನಾಂಕಗಳಿರುವಾಗ

$$J = \int_{x_0}^{x_1} F(x, y, y', y'', ....., y^{(n)})dx$$

ಇದಕ್ಕನುಗುಣವಾದ ಆಯಿಲರನ ಸಮೀಕರಣ

$$\frac{\partial F}{\partial y} - \frac{d}{dx}\frac{\partial F}{\partial y'} + \frac{d^2}{dx^2}\frac{\partial F}{\partial y''} - ..... + (-1)^n \frac{d^n}{dx^n}\frac{\partial F}{\partial y^n} = 0$$

3 ಅನೇಕ ಸ್ವತಂತ್ರ ಚರಗಳಿರುವಾಗ

$$J = \iint_G F(x, y; u, u_x, u_y ......)dxdy$$

ಈಗ ಆಯಿಲರನ ಪ್ರಮೇಯ $\frac{\partial}{\partial x}F_{u_x} + \frac{\partial}{\partial y}F_{u_y} - F_u = 0$ ಎಂಬ ರೂಪವನ್ನು ತಾಳುತ್ತದೆ.

4 ಇತರ ನಿಬಂಧನೆಗಳಿಂದ ಕೂಡಿರುವ ಏರಿಳಿತಗಳ ಲೆಕ್ಕಗಳು. ಇಂಥ ಪ್ರಶ್ನೆಗಳ ಅತಿಸುಲಭರೂಪದ ಉದಾಹರಣೆಯಾಗಿ ಸಾರ್ವತ್ರಿಕ ಸಮಪರಿಧಿಯ ಲೆಕ್ಕವಿದೆ.

$K = \int_{x_0}^{x_1} G(x, y, y')dx =$ ಸ್ಥಿರ ಆಗಿರುವಂತೆ $J = \int_{x_0}^{x_1} F(x, y, y')$

ಕನಿಷ್ಠ ಅಥವಾ ಗರಿಷ್ಠವಾಗಿರಬೇಕು. ಈ ಏರಿಳಿತಗಳ ಲೆಕ್ಕದ ಆಯಿಲರನ ಸಮೀಕರಣ ದೊರೆಯಬೇಕಾದರೆ ಸಮಾಸೀಯ (ಇಂಟೆಗ್ರೆಂಡ್) Fಗೆ ಬದಲು $F^* = F + \lambda G$ (ಇಲ್ಲಿ $\lambda$ ಒಂದು ಸೂಕ್ತ ಗುಣಾಂಕ) ತೆಗೆದುಕೊಂಡು ಹಾಗೆ ಬಂದ ಸಮಾಸಾಂಕ J*ಕ್ಕೆ ಅನ್ವಯಿಸುವ ಆಯಿಲರನ ಸಮೀಕರಣವನ್ನು ತೆಗೆದು ಕೊಳ್ಳುತ್ತೇವೆ. ಈಗ ಅಧಿಕ ನಿಬಂಧನೆಯನ್ನು ಬಿಟ್ಟುಬಿಡಬಹುದು.

ಆಯಿಲರನ ಸಮೀಕರಣದ ಸಾಧನೆ ಃ ಕೆಳಗಿನ ಸಂದರ್ಭಗಳಲ್ಲಿ ಆಯಿಲರನ ಸಮೀಕರಣವನ್ನು ನೇರವಾಗಿ ಸಾಧಿಸಬಹುದು.

1 Fನಲ್ಲಿ y' ಇಲ್ಲದಿದ್ದರೆ ಸಮೀಕರಣ $F_y = 0$ ಎಂದಾಗುತ್ತದೆ. ಇದರಿಂದ y ಪಡೆಯಬಹುದು.

2 Fನಲ್ಲಿ y ಇಲ್ಲದಿದ್ದರೆ ಸಮೀಕರಣ $F_{y'}$= ಸ್ಥಿರ ಎಂದು ಕೊಡುತ್ತದೆ. ಆದ್ದರಿಂದ

$$y' = \phi(x, c), y = \int \phi(x, c)dx$$

3 Fನಲ್ಲಿ x ಇಲ್ಲದಿದ್ದರೆ F=F(y,y'). ಈ ಸಂದರ್ಭದಲ್ಲಿ ಆಯಿಲರನ ಸಮೀಕರಣ $F(y,y') - y'F_{y'}(y,y') = c$ ಎಂಬುದಕ್ಕೆ ಸರಿಸಮಾನವೆಂದು ಸುಲಭವಾಗಿ ತೋರಿಸಬಹುದು. ಇದರಿಂದ y'ನ್ನು $\phi(y, c)$ ಉತ್ಪನ್ನವಾಗಿ ಪಡೆದು ಅದರಿಂದ $x = \int \frac{dy}{\phi(y, c)}$ ದೊರೆಯುತ್ತದೆ.

ಮೇಲೆ ಕೊಟ್ಟ ಉದಾಹರಣೆಗಳಿಗೆ ಇವನ್ನು ಪ್ರಯೋಗಿಸುವುದರಿಂದ ಕೆಳಗಿನ ಫಲಿತಾಂಶಗಳು ದೊರೆಯುತ್ತವೆ.

(ಎ) ಬ್ರಾಕಿಸ್ಟೋಕ್ರೋನ್ ಃ

$$x = c_1 + \frac{c^2}{2}(t - \sin t)$$

$$y = \frac{c^2}{2}(1 - \cos t)$$

ಇದು ಸೈಕ್ಲಾಯ್ಡ್.

(ಬಿ) ಹ್ರಸ್ವಕ್ಷೇತ್ರೀಯ ಪರಿಭ್ರಮಣ ಮೇಲ್ಮೈ ಃ $y = \frac{1}{c}(\cosh cx + c_1)$

ಇದು ಕ್ಯಾಟೆನರಿ.

(ಸಿ) ಸಮಪರಿಧಿಯ ಲೆಕ್ಕ :

$$y = \frac{1}{c}\sin\,(cs + c_1)$$

$$= -\frac{1}{c}\cos\,(cs + c_1) + c_2$$

ಇದು ವೃತ್ತ.

(d) ಕ್ಯಾಟೆನರಿಯ ಲೆಕ್ಕ: $F = y\sqrt{1+y'^2}, G = \sqrt{1+y'^2}$ F*ದಲ್ಲಿ

$$F^* - y'F^*y' = (y+\lambda)[(\sqrt{1+y'^2}$$

$$-\frac{y'^2}{\sqrt{1+y'^2}}\ ]\quad \frac{y+\lambda}{\sqrt{1+y'^2}} = c$$

x ಇಲ್ಲ. ಆದ್ದರಿಂದ ಇದು ಕ್ಯಾಟೆನರಿ.

$$\therefore y + \lambda = c\cosh\left(\frac{x}{c} + c_1\right)$$

ಏರಿಳಿರಗಳ ಕಲನಶಾಸ್ತ್ರ ಮತ್ತು ಗಣಿತೀಯ ಭೌತಶಾಸ್ತ್ರದ ಅವಕಲನ ಸಮೀಕರಣಗಳು: ಗಣಿತೀಯ ಭೌತಶಾಸ್ತ್ರದ ಅವಕಲನ ಸಮೀಕರಣಗಳನ್ನಾಗಿ ಬರೆಯಬಹುದು. ಉದಾಹರಣೆಗೆ ಒಂದು ಗತಿ ವ್ಯವಸ್ಥೆಯ (ಡೈನಮಿಕಲ್ ಸಿಸ್ಟಂ) ಚಲನೆಯ ಲಾಗ್ರಾಂಜನ ಸಮೀಕರಣಗಳು ಏರಿಳಿತಲೆಕ್ಕವಾದ

$\int_{t_0}^{t_1}(T - V)dt =$ ಕನಿಷ್ಠ (ಹ್ಯಾಮಿಲ್ಟನ್ನನ ತತ್ತ್ವ) ಎಂಬುದರ ಆಯಿಲರನ ಸಮೀಕರಣಗಳು. ಇಲ್ಲಿ T ಎಂಬುದು ವ್ಯವಸ್ಥೆಯ ಚಲನ ಶಕ್ತಿ (ಕೈನೆಟಿಕ್ ಎನರ್ಜಿ), V ವಿಭವಶಕ್ತಿ (ಪೊಟೆನ್ಶಿಯಲ್ ಎನರ್ಜಿ).ತೂಗಾಡುವ ದಾರಗಳ ಮತ್ತು ತಟ್ಟೆಗಳ ಸಮೀಕರಣಗಳನ್ನು ಇದೇ ರೀತಿಯಯಲ್ಲಿ ಹ್ಯಾಮಿಲ್ಟನ್ನನ ತತ್ತ್ವದಿಂದ ಪಡೆಯಬಹುದು. ಅನೇಕ ಭೌತ ಸಿದ್ಧಾಂತಗಳಲ್ಲಿ ಬರುವ ಪ್ರಸಿದ್ಧವಾದ ಲಾಪ್ಲಾಸನ ಸಮೀಕರಣ $\nabla_u^2 = 0$ ಎಂಬುದು

$\iiint (grad \quad u)^2 dT =$ ಕನಿಷ್ಠ ; ಸರಹದ್ದಿನ ಮೇಲೆ u ದತ್ತ ಎಂಬ ಪ್ರಶ್ನೆಯ ಆಯಿಲರನ ಸಮೀಕರಣವಾಗಿರುವುದು. ಅನೇಕ ಇತರ ದೃಷ್ಟಾಂತಗಳನ್ನು ಕೊಡಲು ಸಾಧ್ಯ. *(ವಿ.ಆರ್.ಟಿ.)*

**ತಾರ್ಕಿಕ ಕಲನಕ್ರಿಯೆಗಳು :** (ಪ್ರಾಪೊಸಿಷನಲ್ ಕ್ಯಾಲ್ಕುಲಸ್, ಪ್ರೆಡಿಕೇಟ್ ಕ್ಯಾಲ್ಕುಲಸ್) : ಕನ್ನಡ ಇಂಗ್ಲಿಷ್ ಮುಂತಾದ ಆಧುನಿಕ ಭಾಷೆಗಳ ಲಿಖಿತರೂಪಗಳಲ್ಲಿ ಅಕ್ಷರಗಳೆನಿಸಿಕೊಳ್ಳುವ ಕೆಲವೇ ಬಿಡಿ ಸಂಕೇತಗಳು ಉದ್ದಕ್ಕೂ ಗೋಚರಿಸುತ್ತವಷ್ಟೆ. ಈ ಅಕ್ಷರಸಂಕೇತಗಳ ವಿಧವಿಧ ಜೋಡಣೆಗಳು ಪದಗಳೂ ವಾಕ್ಯಗಳೂ ಆಗುತ್ತವೆ. ಅಕ್ಷರಗಳ ಸಂಖ್ಯೆ ಸಾಂತ (ಫೈನೈಟ್); ಪದ, ವಾಕ್ಯಗಳ ಸಂಖ್ಯೆ ಯಾದರೋ ವಿಭವಾತ್ಮಕವಾಗಿ ಅನಂತ (ಪೊಟೆನ್ಶಿಯಲಿ ಇನ್‌ಫಿನಿಟ್). ಆದರೆ ಅಕ್ಷರಗಳ ಎಲ್ಲ ಬಗೆಯ ಜೋಡಣೆಗಳೂ ಪದಗಳಾಗವು; ಪದಗಳ ಎಲ್ಲ ಬಗೆಯ ಜೋಡಣೆಗಳೂ ವಾಕ್ಯಗಳಾಗವು. ಅಂದಮೇಲೆ ಪ್ರತಿ ಭಾಷೆಯಲ್ಲೂ ವಾಕ್ಯಗಳ ರಚನೆಗೆ ಸಂಬಂಧಿಸಿದಂತೆ ಹೆಚ್ಚು ಕಡಿಮೆ ನಿರ್ದಿಷ್ಟವಾದ ಕೆಲವಾರು ನಿಯಮಗಳಿರುತ್ತವೆ. ಇಂಥ ನಿಯಮಗಳಿಗೆ ಭಾಷೆಯ ವಾಕ್ಯರಚನಾ ಮೀಮಾಂಸೆ (ಸಿಂಟಾಕ್ಸ್) ಎನ್ನಬಹುದು. ಇಲ್ಲಿ ವಾಕ್ಯರಚನೆಯನ್ನು ಸಂಪೂರ್ಣವಾಗಿ ಅರ್ಥಸ್ವತಂತ್ರವೆಂದು ಪರಿಗಣಿಸಬೇಕು; ರಚಿತವಾಕ್ಯಗಳ ಅರ್ಥಮೀಮಾಂಸೆಯ (ಸೆಮ್ಯಾಂಟಿಕ್ಸ್) ಕಡೆ ದೃಷ್ಟಿ ಹರಿಸದೆ ರಚನಾಮೀಮಾಂಸೆಯನ್ನು ಮಾತ್ರ ಅಭ್ಯಸಿಸಲು ಸಾಧ್ಯ. (ವೃತ್ತಾಕಾರದಲ್ಲಿರುವ ಚತುರ್ಭುಜವೊಂದರೊಳಗೆ ಮೂರಕ್ಕಿಂತ ಹೆಚ್ಚು ಅನಿಲಗಳಿರಲು ಸಾಧ್ಯವಿಲ್ಲ–ಎಂಬ ರಚನೆ ಅರ್ಥಶೂನ್ಯವಾದಾಗ್ಯೂ ಕನ್ನಡದ ವಾಕ್ಯರಚನೆಯ ನಿಯಮಗಳನ್ನು ಉಲ್ಲಂಘಿಸಿಲ್ಲ ; ವಾಕ್ಯರಚನೆಯ ಮೀಮಾಂಸೆಯನ್ನು ಕುರಿತ ಅಧ್ಯಯನದಲ್ಲಿ ಇದನ್ನು ಸಹ ಕ್ರಮಬದ್ಧವೆಂದು ಸ್ವೀಕರಿಸಲಾಗುವುದು.) ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಾವು ಈ ಕೆಳಕಂಡ ಹನ್ನೆರಡು ಸಂಕೇತಗಳ ಅಕ್ಷರಮಾಲೆಯನ್ನು (ಆಲ್ಫಬೆಟ್) ಆಧರಿಸುವ ಒಂದು ಹೊಸ ಲಿಖಿತ ಭಾಷೆಯನ್ನು ಎರಡು ಭಿನ್ನ ಹಂತಗಳಲ್ಲಿ ವಾಕ್ಯ ರಚನಾಮೀಮಾಂಸೆಯ ದೃಷ್ಟಿಕೋನದಿಂದ ಸೃಷ್ಟಿಸೋಣ :

$$P; Q; R; S; T; I; *; [; \rightarrow; ...; ]; \forall$$

ನಾವು ಸೃಷ್ಟಿಸುವ ಭಾಷೆಯ ಪ್ರಥಮ ಹಂತಕ್ಕೆ ಸೂತ್ರಕಲನಭಾಷೆಯೆಂದೂ (ಪ್ರಾಪೋಸಿಷನಲ್ ಕ್ಯಾಲ್ಕುಲಸ್) ದ್ವಿತೀಯಹಂತಕ್ಕೆ ಆಖ್ಯಾತಕಲನಭಾಷೆಯೆಂದೂ (ಪ್ರೆಡಿಕೇಟ್ ಕ್ಯಾಲ್ಕುಲಸ್) ಹೆಸರು. ನಿತ್ಯಜೀವನದ ಭಾಷೆಗಳಲ್ಲಿ ಪದಗಳನ್ನು ನಾಮವಾಚಕ, ಕ್ರಿಯಾವಾಚಕ ಎಂದು ಮುಂತಾಗಿ ವರ್ಗೀಕರಿಸಿರುವಂತೆ ನಾವು ಸೃಷ್ಟಿಸುತ್ತಿರುವ ಭಾಷೆಯಲ್ಲೂ ಹಲವಾರು ಪದಪ್ರಭೇದಗಳನ್ನು ವ್ಯಾಖ್ಯಿಸುತ್ತೇವೆ. ಸ್ಥಿರವಾಚಕಗಳೆಂದು (ಇಂಡಿವಿಡ್ಯುವಲ್ ಕಾನ್‌ಸ್ಟಂಟ್ಸ್) ಕರೆಯಲಾಗುವ ಕೆಲವು ಅಕ್ಷರ ಸಂಯೋಜನೆಗಳ ವರ್ಗ ಇಂಥ ಪ್ರಭೇದಗಳ ಪೈಕಿ ಮೊದಲನೆಯದು. ಸ್ಥಿರವಾಚಕಗಳನ್ನು ನಾವು ಎರಡು ವಿಶಿಷ್ಟ ನಿಯಮಗಳಿಂದ ವ್ಯುತ್ಪಾದಿಸುತ್ತೇವೆ.

ನಿಯಮ ಒಂದು, QI ಎಂಬುದನ್ನು ಒಂದು ಸ್ಥಿರವಾಚಕವೆಂದು ಪರಿಗಣಿಸತಕ್ಕದ್ದು,

ನಿಯಮ ಎರಡು, x ಒಂದು ಸ್ಥಿರವಾಚಕವಾದಲ್ಲಿ xI ಹಾಗೂ x*I ಗಳನ್ನು ಸಹ ಮತ್ತೆರಡು ಸ್ಥಿರವಾಚಕಗಳೆಂದು ಸ್ವೀಕರಿಸತಕ್ಕದ್ದು.

ಈ ಬಗೆಯ ನಿಯಮಾವಳಿಗಳಿಗೆ ಪದ/ವಾಕ್ಯವ್ಯುತ್ಪಾದಕ ಕಲನಗಳು (ವರ್ಡ್ ಜನರೇಟಿಂಗ್ ಕ್ಯಾಲ್ಕುಲೈ) ಎಂದು ಹೆಸರು. [ಇಲ್ಲಿ ಉಪಯೋಗಿಸುತ್ತಿರುವ ಪರಿಭಾಷೆಯಲ್ಲಿ ಪದಗಳಿಗೂ ವಾಕ್ಯಗಳಿಗೂ ಭಾವನಾತ್ಮಕ ಭೇದವೇನೂ ಇಲ್ಲ. ಅಕ್ಷರಗಳನ್ನು ಸಾಲಾಗಿ ಒಂದರ ಪಕ್ಕದಲ್ಲೊಂದರಂತೆ ಬರೆದು ರಚಿಸಿದ ಎಲ್ಲ ಅಕ್ಷರ ಸಂಯೋಜನೆಗಳನ್ನೂ ಸಾರ್ವತ್ರಿಕವಾಗಿ ವಾಕ್ಯಗಳೆಂದೇ ಕರೆಯುತ್ತೇವೆ. **(ನೋಡಿ– ಆಲ್ಗಾರಿತಂ)** ನಿತ್ಯಜೀವನದ ಭಾಷೆಗಳ ವಾಕ್ಯಗಳಿಗೆ ಸರಿಸುಮಾರಾಗಿ ಅನುರೂಪವಾಗುವ ರಚನೆಗಳಾದರೋ ಮುಂದೆ ನಮ್ಮ ಪರಿಭಾಷೆಯಲ್ಲಿ ವಿಶಿಷ್ಟವಾಗಿ ಸೂತ್ರಗಳೆನಿಸಿ ಕೊಳ್ಳುತ್ತವೆ.] ಸ್ಥಿರವಾಚಕಗಳ ವ್ಯುತ್ಪಾದಕ ಕಲನದ ಕ್ರಿಯಾವಿಧಾನವನ್ನು ಚಿತ್ರ (11)ರ ವೃಕ್ಷ ಪ್ರದರ್ಶಿಸುತ್ತದೆ x=QI ಎಂದಿಟ್ಟುಕೊಂಡರೆ x ಒಂದು ಸ್ಥಿರವಾಚಕ (ನಿಯಮ ಒಂದು). ಆದ್ದರಿಂದ xI=QII ಮತ್ತು x*I=QI*I ಗಳು ಮತ್ತೆರಡು ಸ್ಥಿರವಾಚಕಗಳು (ನಿಯಮ ಎರಡು). ಚಿತ್ರ (11)ರ ವೃಕ್ಷದಲ್ಲಿ QI ಮೂಲಕಾಂಡ QII ಮತ್ತು QI*I ಕೊಂಬೆಗಳಾಗಿ ಕವಲೊಡೆಯುವುದರಿಂದ ಈ ಪರಿಸ್ಥಿತಿ ವ್ಯಕ್ತವಾಗಿದೆ. ಈಗ x=QI ಎಂಬ ಗ್ರಹಿಕೆಯನ್ನು ರದ್ದುಗೊಳಿಸಿ x=QII ಅಥವಾ x=QI*I ಎಂದಿಟ್ಟುಕೊಳ್ಳಬಹುದಷ್ಟೆ.. ತತ್ಫಲವಾಗಿ QII ಮತ್ತು QI*I ಕೊಂಬೆಗಳು ಮತ್ತೆ ಕವಲೊಡೆದು QIII ; QII*I;QI*II; QI*I*I ಗಳಿಗೆ ಜನ್ಮನೀಡುತ್ತವೆ; ಯಥಾಪ್ರಕಾರ ಈ ನಾಲ್ಕು ಅಕ್ಷರ ಸಂಯೋಜನೆಗಳೂ ಸ್ಥಿರವಾಚಕಗಳೇ. ಈ ಕ್ರಮದಲ್ಲಿ ಮುಂದುವರಿಯುತ್ತ ನಮಗಿಷ್ಟಬಂದಷ್ಟು ಸ್ಥಿರವಾಚಕಗಳನ್ನು ವ್ಯುತ್ಪಾದಿಸಿಟ್ಟುಕೊಳ್ಳಬಹುದು. ಈ ಸಂದರ್ಭದಲ್ಲಿ ಓದುಗರು ಕಲನಕ್ರಿಯೆಗಳಿಗೂ ಆಲ್ಗಾರಿತಂ ಕ್ರಿಯೆಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಆಲ್ಗಾರಿತಂಗಳು ಪರ್ಯಾಯ ಸಾಧ್ಯತೆಗಳಿಗೆ ಅವಕಾಶವೀಯದೆ ಇಂಥಿಂಥ ವಾಕ್ಯಗಳನ್ನು ಇಂಥಿಂಥ ರೂಪಕ್ಕೆ ಪರಿವರ್ತಿಸಬೇಕೆಂದು ಕಡ್ಡಾಯವಾಗಿ ಆಜ್ಞಾಪಿಸುತ್ತವೆ; ಕಲನಗಳು ಕಲನೀಯ ಅಕ್ಷರ ಸಂಯೋಜನೆಯನ್ನು ಹಲವಾರು ರೂಪಗಳ ಪೈಕಿ ಯಾವುದಾದರೂ ಒಂದಕ್ಕೆ ಪರಿವರ್ತಿಸಲು ಅನುಮತಿ ನೀಡುತ್ತವೆ ಮಾತ್ರ.. ನಿರ್ದಿಷ್ಟ ಅಕ್ಷರ ಸಂಯೋಜನೆಯೊಂದರಿಂದ ಹೊರಟಾಗ ಕಲನ ಹಾಗೂ ಆಲ್ಗಾರಿತಂ ಕ್ರಿಯೆಗಳೆರಡು ಹೆಜ್ಜೆ ಹೆಜ್ಜೆಯಾಗಿ ಮುಂದೆ ಸಾಗಬಹುದಾದರೂ ಕಲನಕ್ರಿಯೆಯನ್ನು ನಮಗಿಷ್ಟಬಂದ ಕಡೆ ನಿಲ್ಲಿಸಿಬಿಡಬಹುದು. ಆಲ್ಗಾರಿತಂ ಕ್ರಿಯೆಯ ನಿಲುಗಡೆ ಮಾತ್ರ ಆ ಸಂಬಂಧದಲ್ಲಿ ವಿಧ್ಯುಕ್ತವಾಗಿರುವ ನಿರ್ದಿಷ್ಟ ನಿರ್ಣಾಯಕಗಳಿಗೇ ಬದ್ಧವಾಗಿರಬೇಕು. ಆಲ್ಗಾರಿತಂ ಕ್ರಿಯೆಗೆ ನಾವು ಇಚ್ಛಿಪಟ್ಟ ಯಾವ ಅಕ್ಷರಸಂಯೋಜನೆಯನ್ನು ಬೇಕಾದರೂ ಗುರಿಪಡಿಸಬಹುದು; ಆ ಸಂಯೋಜನೆಗೆ ಅನುರೂಪವಾಗಿ ಹೆಚ್ಚೆಂದರೆ ಒಂದೇ ಒಂದು ಸಂವಾದಿ ಅಕ್ಷರ ಸಂಯೋಜನೆ ವ್ಯುತ್ಪನ್ನವಾಗಲು ಸಾಧ್ಯ. ಕಲನಕ್ರಿಯೆಯಾದರೋ ಒಂದು ಗೊತ್ತಾದ



ಚಿತ್ರ 11

ವರ್ಗಕ್ಕೆ ಸೇರಿದ ಅಕ್ಷರಸಂಯೋಜನೆಗಳಿಂದ ಪ್ರಾರಂಭಿಸಿ ವ್ಯುತ್ಪನ್ನಸಂಯೋಜನೆಗಳ ಅನಂತ ಪರಂಪರೆಗಳನ್ನೇ ಸೃಷ್ಟಿಸುವುದು.

ನಾವು ಸೃಷ್ಟಿಸುತ್ತಿರುವ ಭಾಷೆಯಲ್ಲಿ ಗೋಚರಕ್ಕೆ ಬರುವ ಎರಡನೆಯ ಪ್ರಭೇದದ ಪದಗಳಿಗೆ ಚರವಾಚಕಗಳು (ಇಂಡಿವಿಡ್ಯುವಲ್ ವೇರಿಯಬಲ್ಸ್) ಎಂದು ನಾಮಕರಣ ಮಾಡುತ್ತೇವೆ. ಯಾವುದೇ ಸ್ಥಿರವಾಚಕದಲ್ಲಿರುವ Q ಅಕ್ಷರವನ್ನು R ಎಂದು ಮಾರ್ಪಡಿಸಿದಾಗ ಫಲಿಸುವ ಅಕ್ಷರಸಂಯೋಜನೆ ಒಂದು ಚರವಾಚಕವೆನ್ನಿಸಿಕೊಳ್ಳುವುದು. RI, RII, RI*I, RIII, RII*I, RI*II, RI*I*I ಇಂಥವೆಲ್ಲ ಚರವಾಚಕಗಳು ಇವನ್ನು ವ್ಯುತ್ಪಾದಿಸುವ ಕಲನ ನಿಯಮಗಳು ಇಂತಿವೆ : ನಿಯಮ ಒಂದು, RI ಒಂದು ಚರವಾಚಕ; ನಿಯಮ ಎರಡು, x ಒಂದು ಚರವಾಚಕದಲ್ಲಿ xI ಮತ್ತು x*I ಸಹ ಇನ್ನೆರಡು ಚರವಾಚಕಗಳು. ಸ್ಥಿರ ಹಾಗೂ ಚರವಾಚಕಗಳ ವ್ಯುತ್ಪತ್ತಿನಿಯಮಗಳಲ್ಲಿ ಕಾಣಿಸಿಕೊಂಡಿರುವ x ಚಿಹ್ನೆ ನಾವು ಸೃಷ್ಟಿಸುತ್ತಿರುವ ಭಾಷೆಯ ಅಕ್ಷರವಲ್ಲವೆಂಬುದನ್ನು ಗಮನಿಸಬೇಕು. ಸೃಷ್ಟಿಸುತ್ತಿರುವ ಭಾಷೆಯನ್ನು ವರ್ಣಿಸುವ ಸಲುವಾಗಿ ನಾವು ಗಣಿತಸಂಸ್ಕೃತಿಯ ಆರೋಪವಿರುವ ಕನ್ನಡ ಭಾಷೆಯ ಒಂದು ವಿಸ್ತೃತರೂಪವನ್ನು ಬಳಸಿಕೊಳ್ಳುತ್ತಿದ್ದೇವಷ್ಟೆ. ಈ ಕನ್ನಡಕ್ಕೆ ಅಧಿಭಾಷೆಯೆಂದೂ (ಮೆಟಾಲ್ಯಾಂಗ್ವೇಜ್) ಸೃಷ್ಟಿಯಲ್ಲಿರುವ ಹೊಸಭಾಷೆಗೆ ವಸ್ತುಭಾಷೆಯೆಂದೂ (ಆಬ್ಜಕ್ಟ್ ಲ್ಯಾಂಗ್ವೇಜ್) ಕೆಲವು ವೇಳೆ ಹೇಳುವುದುಂಟು. ಮೇಲಿನ x ಚಿಹ್ನೆ ಅಧಿಭಾಷೆಯ ಅಂಗವೇ ವಿನಾ ವಸ್ತು ಭಾಷೆಯದಲ್ಲ.

ನಮ್ಮ ಭಾಷೆಯ ಮೂರನೆಯ ಪದ ಪ್ರಭೇದ ಸಂಬಂಧವಾಚಕಗಳದು (ರಿಲೇಷನ್ ಸಿಂಬಲ್ಸ್). ಸಂಬಂಧವಾಚಕಗಳನ್ನು ಕೆಳಗಿನ ಎರಡು ಕಲನ ನಿಯಮಗಳನ್ನು ಪ್ರಯೋಗಿಸಿ ವ್ಯುತ್ಪತ್ತಿಮಾಡುತ್ತೇವೆ : ನಿಯಮ ಒಂದು, SIP ಎಂಬುದು ಒಂದು ಸಂಬಂಧವಾಚಕವೆಂದು ಪರಿಗಣಿಸತಕ್ಕದ್ದು. ನಿಯಮ ಎರಡು, x ಎಂಬ ಅಕ್ಷರಸಂಯೋಜನೆ ಕಯನ್ನು ಒಳಗೊಳ್ಳದಿರುವ ಪಕ್ಷದಲ್ಲಿ xy ಒಂದು ಸಂಬಂಧ ವಾಚಕವಾದರೆ xIy, x*Iy, xyP ಇವನ್ನು ಕೂಡ ಮತ್ತೆ ಮೂರು ಸಂಬಂಧವಾಚಕಗಳೆಂದು ಸ್ವೀಕರಿಸತಕ್ಕದ್ದು (ಇಲ್ಲಿ x ಮತ್ತು y ಎರಡೂ ಅಧಿಭಾಷೆಯ ಅಂಗಗಳು.) SIP, SIIP, SI*IP, SIPP SIIP, SII*IP SIIPP, SI*IIP, SI*I*IP, SI*IPP, SIPPP, ಇಂಥವೆಲ್ಲ ಸಂಬಂಧವಾಚಕಗಳೆಂದಾಯಿತು.

ಯಾವುದೇ ಸಂಬಂಧವಾಚಕದಲ್ಲಿರುವ ಪ್ರತಿಯೊಂದು P ಕ್ಷರದ ಸ್ಥಾನದಲ್ಲೂ ಒಂದೊಂದು ಸ್ಥಿರವಾಚಕ ಅಥವಾ ಚರವಾಚಕವನ್ನು ಆದೇಶಿಸಿದಾಗ ಫಲಿಸುವ ಅಕ್ಷರ ಸಂಯೋಜನೆಗೆ ಸೂತ್ರಮೂಲ (ಅಟಾಮಿಕ್ ಫಾರ್ಮ್ಯುಲ, ಆಟಂ) ಎಂದು ಹೆಸರು. SI*IPP ಸಂಬಂಧವಾಚಕ, QI*II*I ಸ್ಥಿರವಾಚಕ ಮತ್ತು RII*I ಚರವಾಚಕವಾದ್ದರಿಂದ SI*IRII*IQI*II*I ಎಂಬ ವಾಕ್ಯ ಸೂತ್ರಮೂಲಗಳಿಗೆ ಒಂದು ನಿದರ್ಶನ. ಸೂತ್ರಮೂಲಗಳು ನಾವು ಸೃಷ್ಟಿಸತೊಡಗಿರುವ ವಸ್ತುಭಾಷೆಯ ನಾಲ್ಕನೆಯ ಪದಪ್ರಭೇದ. ಇವನ್ನು ಆಧಾರವಾಗಿಟ್ಟುಕೊಂಡು ಸೂತ್ರಗಳೆಂಬ (ಫಾರ್ಮ್ಯುಲ) ಐದನೆಯ ವರ್ಗದ ವಾಕ್ಯ(ಪದ)ಗಳನ್ನು ವ್ಯುತ್ಪಾದಿಸುತ್ತೇವೆ. ಸೂತ್ರಗಳ ವ್ಯುತ್ಪತ್ತಿ ನಿಯಮಗಳು ಹೀಗಿವೆ : ನಿಯಮ ಒಂದು; ಪ್ರತಿಯೊಂದು ಸೂತ್ರಮೂಲವನ್ನೂ ಒಂದು ಸೂತ್ರವೆಂದು ಪರಿಗಣಿಸತಕ್ಕದ್ದು. ನಿಯಮ ಎರಡು, x ಮತ್ತು y ಗಳು ಯಾವುದೇ ಎರಡು ಸೂತ್ರಗಳಾಗಿದ್ದಲ್ಲಿ [xy], [ x] ಗಳನ್ನು ಸಹ ಇನ್ನೆರಡು ಸೂತ್ರಗಳೆಂದು ಸ್ವೀಕರಿಸತಕ್ಕದ್ದು. (ಪುನಃ ಇಲ್ಲಿ x,y ಅಧಿಭಾಷೆಯ ಅಂಗಗಳು). ಕೆಳಗೆ ಬರೆದಿರುವ ವಾಕ್ಯಗಳು ಇಂಥ ಸೂತ್ರಗಳನ್ನು ನಿದರ್ಶಿಸುತ್ತವೆ:

*[⌉SI*IRII*IQI*II*];*

*[SI*IQI*IQII → SI*I*IIQIRIRI];*

*[[SII*IRI*I → SIIIQI*II] → [⌉SIQIRII]]*

ನಮ್ಮ ವಸ್ತುಭಾಷೆಯ ಪ್ರಥಮಹಂತದ ಸೃಷ್ಟಿಯನ್ನು ಪೂರ್ಣಗೊಳಿಸಲು ಅಂತಿಮವಾಗಿ ಈಗ ಅದ್ಯುಕ್ತಿಗಳ (ಆಕ್ಸಿಯಮ್ಸ್), ಸಾಧನೆಗಳು (ಪ್ರೂಫ್ಸ್) ಮತ್ತು ಪ್ರಮೇಯಗಳು (ಥಿಯೊರಮ್ಸ್) ಎಂಬ ಇನ್ನು ಮೂರು ವಿಧದ ವಾಕ್ಯಗಳನ್ನು ವ್ಯಾಖ್ಯಿಸಬೇಕಾಗಿದೆ. x,y,z ಗಳು ಯಾವುದೇ ಮೂರು ಸೂತ್ರಗಳಾದಲ್ಲಿ

$$[x \to [y \to x]] \qquad \ldots [29]$$

$$[[z \to [x \to y]] \to [[z \to x] \to [z \to y]]] \qquad \ldots [30]$$

$$[[[\urcorner x] \to [\urcorner y]] \to [y \to x]] \qquad \ldots [31]$$

ಎಂಬ ಮಾದರಿಯ ಸೂತ್ರಗಳಿಗೆ ಅದ್ಯುಕ್ತಿಗಳು ಎಂದು ಹೆಸರು. ಅಂದಮೇಲೆ ಅದ್ಯುಕ್ತಿಗಳು ಕೆಲವಿಶಿಷ್ಟ ರೀತಿಯ ರಚನೆಗಳಿರುವ ಸೂತ್ರಗಳು ಎಂದಾಯಿತು. ಈ ವಿಶಿಷ್ಟ ರಚನೆಗಳಿಗಿರುವ ಮಹತ್ತ್ವ ಮುಂದೆ ವ್ಯಕ್ತವಾಗುವುದು. ಇನ್ನೂ ಸಾಧನೆಗಳನ್ನು ಕೆಳಕಂಡ ಮೂರು ಕಲನ ನಿಯಮಗಳ ಮೇರೆಗೆ ವ್ಯುತ್ಪಾದಿಸುತ್ತವೆ. ನಿಯಮ ಒಂದು, ಪ್ರತಿಯೊಂದು ಅದ್ಯುಕ್ತಿಯನ್ನೂ ಒಂದು ಸಾಧನೆಯೆಂದು ಪರಿಗಣಿಸತಕ್ಕದ್ದು. ನಿಯಮ ಎರಡು, x ಯಾವುದಾದರೂ ಒಂದು ಅದ್ಯುಕ್ತಿಯೂ ಯಾವುದಾದರೂ ಒಂದು ಸಾಧನೆಯೂ ಆದ ಪಕ್ಷದಲ್ಲಿ yTx ಅಕ್ಷರ ಸಂಯೋಜನೆಯನ್ನು ಕೂಡ ಒಂದು ಸಾಧನೆಯೆಂದು ಸ್ವೀಕರಿಸತಕ್ಕದ್ದು.

ನಿಯಮ ಮೂರು [ಇದಕ್ಕೆ ವಿಸರ್ಗನಿಯಮ (ರೂಲ್ ಆಫ್ ಡಿಟ್ಯಾಚ್‌ಮೆಂಟ್; ಮೋಡಸ್‌ಪೊನೆನ್ಸ್) ಎಂದು ಹೆಸರು]. x,y ಎಂಬುವು ಯಾವುದಾದರೂ ಎರಡು ಸೂತ್ರಗಳೂ z ಎಂಬುದು xT ಹಾಗೂ $T[x \to y]$ ಎಂಬ ಅಕ್ಷರ ಸಂಯೋಜನೆಗಳನ್ನಾಗಲೀ $[x \to y]T$ ಹಾಗೂ Tx ಎಂಬ ಅಕ್ಷರಸಂಯೋಜನೆಗಳನ್ನಾಗಲೀ ಒಳಗೊಳ್ಳುವ ಒಂದು ಸಾಧನೆಯೂ ಆದ ಪಕ್ಷದಲ್ಲಿ zTy ಎಂಬ ಸಂಯೋಜನೆಯನ್ನು ಸಹ ಮತ್ತೆ ಒಂದು ಸಾಧನೆಯೆಂದು ಸ್ವೀಕರಿಸತಕ್ಕದ್ದು.

ಕೊನೆಯದಾಗಿ, y ಎಂಬುದು ಯಾವುದಾದರೊಂದು ಅಕ್ಷರಸಂಯೋಜನೆಯೂ x ಎಂಬುದು ಯಾವುದಾದರೊಂದು ಸೂತ್ರವೂ yTx ಎಂಬುದು ಒಂದು ಸಾಧನೆಯೂ ಆದಪಕ್ಷದಲ್ಲಿ x ಸೂತ್ರ ಒಂದು ಪ್ರಮೇಯವೆನಿಸಿಕೊಳ್ಳುತ್ತದೆ. ಅಂದರೆ Tಯನ್ನೊಳಗೊಂಡಿರುವ ಯಾವುದೇ ಸಾಧನೆಯಲ್ಲಿ ಕೊನೆಯ T ಅಕ್ಷರದ ಬಲಪಾರ್ಶ್ವದಲ್ಲಿರುವ ಸೂತ್ರ ಒಂದು ಪ್ರಮೇಯ ಎಂದಾಯಿತು. ಈ ವ್ಯಾಖ್ಯೆಗಳ ಸ್ಪಷ್ಟನೆಗಾಗಿ ಕೆಳಗಿನ ವಾಕ್ಯವನ್ನು ಗಮನಿಸಿ:

$$[[SIQI \to [[SIQII \to SIQI] \to SIQI]]$$
$$\to [[SIQI \to SIQII \to SIQI]] \to SIQI \to SIQI]]]T$$
$$[SIQI \to [[SIQII \to SIQI \to SIQI]]$$

ಅದ್ಯುಕ್ತಿಮಾದರಿ [29]ರೊಡನೆ ಹೋಲಿಸಿದಾಗ ಈ ವಾಕ್ಯದಲ್ಲಿ T ಅಕ್ಷರದ ಬಲಭಾಗದಲ್ಲಿರುವ ಸೂತ್ರ ಒಂದು ಅದ್ಯುಕ್ತಿಯೆಂದು ಗೊತ್ತಾಗುವುದು. ಅಂತೆಯೇ ಅದ್ಯುಕ್ತಿಮಾದರಿ [ 30 ] ರ ಮೇರೆಗೆ T ಅಕ್ಷರದ ಎಡಭಾಗದಲ್ಲಿರುವುದೂ ಒಂದು ಅದ್ಯುಕ್ತಿಯೇ. ಆದ್ದರಿಂದ ಅದು ಒಂದು ಸಾಧನೆ ಕೂಡ ಆಗಿದೆ (ಸಾಧನೆಗಳ ವ್ಯುತ್ಪತ್ತಿ ನಿಯಮ ಒಂದು). ಈಗ ಸಾಧನೆಗಳ ಎರಡನೆಯ ವ್ಯುತ್ಪತ್ತಿನಿಯಮದಿಂದ ಮೇಲೆ ಬರೆದಿರುವ ಇಡಿ ವಾಕ್ಯ ಒಂದು ಸಾಧನೆಯೆಂದು ಸ್ಪಷ್ಟವಾಗುವುದು. ಈ ವಾಕ್ಯದಲ್ಲಿ ಅಡಿಗೆರೆ ಹಾಕಿ ಸೂಚಿಸಿರುವ ವಿಭಾಗಗಳ ಸಾಮ್ಯವನ್ನು ಗಮನಿಸಿ ವಿಸರ್ಗನಿಯಮವನ್ನು ಪ್ರಯೋಗಿಸಿದರೆ

$$[[SIQI \to [[SIQII \to SIQI] \to SIQI]] \to$$
$$[[SIQI \to [SIQII \to SIQI]] \to SIQI \to$$
$$SIQI]]]T[SIQI \to [[SIQII \to SIQI] \to SIQI]]T .$$
$$[[SIQI \to [SIQII \to SIQI]] \to [SIQI \to SIQI]] \qquad \ldots [32]$$

ಎಂಬುದೂ ಒಂದು ಸಾಧನೆಯೆಂದು ಸಿದ್ಧಪಡುತ್ತದೆ. ಪ್ರಮೇಯದ ವ್ಯಾಖ್ಯೆಯಂತೆ ಇದರಲ್ಲಿರುವ ಕೊನೆಯ T ಅಕ್ಷರದ ಬಲಭಾಗದಲ್ಲಿ ಅಡಿಗೆರೆಹಾಕಿ ತೋರಿಸಿರುವ ಸೂತ್ರ ಒಂದು ಪ್ರಮೇಯ. ಮತ್ತೆ ಅದ್ಯುಕ್ತಿಮಾದರಿ [29]ರ ಪ್ರಕಾರ

$$[SIQI \to [SIQII \to SIQI]] \qquad \ldots [33]$$

ಎಂಬುದು ಒಂದು ಅದ್ಯುಕ್ತಿಯಾದ ಕಾರಣ ವಾಕ್ಯ [ 32 ] ರ ಬಲತುದಿಯಲ್ಲಿ T ಅಕ್ಷರವನ್ನು ಬರೆದು ಅದಕ್ಕೆ [ 33 ]ನ್ನು ಲಗತ್ತಿಸಿದಾಗ ಫಲಿಸುವ ವಾಕ್ಯ ಸಹ ಒಂದು ಸಾಧನೆಯೇ ಆಗುತ್ತದೆ. ಈ ಸಾಧನೆಯನ್ನು ಸಂಕ್ಷಿಪ್ತವಾಗಿ [ 32 ] ಖಿ [ 33 ] ಎಂದು ಸೂಚಿಸಬಹುದು. ಪುನಃ ಇದಕ್ಕೆ ವಿಸರ್ಗನಿಯುಮವನ್ನು ಪ್ರಯೋಗಿಸಿದರೆ [32] $T$ [33] $T$ $[SIQI \to SIQI]$ ಎಂಬ ಮತ್ತೂ ಒಂದು ಸಾಧನೆ ರೂಪುಗೊಳ್ಳುತ್ತದೆ. ಇಲ್ಲಿ ಸಹ ಕೊನೆಯ T ಅಕ್ಷರದ ಬಲಪಾರ್ಶ್ವದಲ್ಲಿರುವ ಸೂತ್ರ ಒಂದು ಪ್ರಮೇಯವಾಗಬೇಕಷ್ಟೆ. ಅಂದಮೇಲೆ $[SIQI \to SIQI]$ ಎಂಬುದು ಇನ್ನೊಂದು ಪ್ರಮೇಯ ಎಂದು ಸಿದ್ಧಪಟ್ಟಿತು.

ನಾವು ಸೃಷ್ಟಿಸಿರುವ ವಸ್ತುಭಾಷೆಯಲ್ಲಿ ಸ್ಥಿರವಾಚಕ, ಚರವಾಚಕ, ಸಂಬಂಧವಾಚಕ, ಸೂತ್ರಮೂಲ, ಸೂತ್ರ, ಅದ್ಯುಕ್ತಿ, ಸಾಧನೆ ಮತ್ತು ಪ್ರಮೇಯ ಎಂಬ ಎಂಟು ವಿಶಿಷ್ಟ ಅಂಗಗಳಿವೆ. ಕೇವಲ ವಾಕ್ಯಾರಚನಾ ಮೀಮಾಂಸೆಯ ದೃಷ್ಟಿಕೋನದಿಂದ ಅಸ್ತಿತ್ವಕ್ಕೆ ಬಂದಿರುವ ಈ ಭಾಷೆಗೆ ಸೂತ್ರತರ್ಕ ಭಾಷೆ (ಪ್ರಾಪೊಸಿಷನಲ್ ಲಾಜಿಕ್) ಅಥವಾ ಸೂತ್ರಕಲನಭಾಷೆ (ಪ್ರಾಪೊಸಿಷನಲ್ ಕ್ಯಾಲ್ಕುಲಸ್) ಎಂದು ಹೆಸರು. ಇದರ ವಿವಿಧ ಅಂಗಗಳನ್ನು ರಚಿಸಲು

ಅಗತ್ಯವಾದ ವ್ಯುತ್ಪತ್ತಿನಿಯಮಗಳೆಲ್ಲವನ್ನೂ ಮೇಲೆ ಅತ್ಯಂತ ನಿಖರವಾಗಿ ನಿರೂಪಿಸಿಬಿಟ್ಟಿದ್ದೇವೆ. (ಕನ್ನಡ ಮುಂತಾದ ನಿತ್ಯ ಜೀವನದ ಭಾಷೆಗಳಲ್ಲಿ ವಾಕ್ಯವ್ಯುತ್ಪಾದಕ ನಿಯಮಗಳು ಇಷ್ಟೊಂದು ನಿಖರವಾಗಿರುವುದೇ ಇಲ್ಲ ಎಂಬುದನ್ನು ಗಮನಿಸಬೇಕು.) ಇಷ್ಟಾದರೂ ಅರ್ಥದ ಸೋಂಕೇ ಇಲ್ಲದಂಥ ಭಾಷೆಯೊಂದನ್ನು ಸೃಷ್ಟಿಸುವುದು ಮೊದಲ ನೋಟಕ್ಕೆ ಯಾರಿಗಾದರೂ ಬುದ್ಧಿವಂತಿಕೆಯ ಲಕ್ಷಣವಲ್ಲ ಎನ್ನಿಸುವುದು ಸಹಜ. ನಿಜಕ್ಕೂ ನಾವು ಅರ್ಥದ ಬಗ್ಗೆ ಈ ವರೆಗೆ ಗಮನ ಹರಿಸದಿರುವುದು ವಾಕ್ಯರಚನೆಯ ನಿಖರತೆಯನ್ನು ಭದ್ರಪಡಿಸುವ ಸಲುವಾಗಿ ಮಾತ್ರವೇ. ಒಮ್ಮೆ ಈ ಉದ್ದೇಶ ನೆರವೇರಿದ ಬಳಿಕ ನಮ್ಮ ವಸ್ತು ಭಾಷೆಗೆ ಒಂದಲ್ಲ ಒಂದು ಸೂಕ್ತರೀತಿಯಲ್ಲಿ ಅರ್ಥ ಕಲ್ಪಿಸಲು ಯಾವ ಅಡ್ಡಿಯೂ ಇಲ್ಲ. ವಾಸ್ತವವಾಗಿ ಹೊಸಭಾಷೆಯನ್ನು ನಾವು ಸೃಷ್ಟಿಸಿರುವುದಾದರೂ ಒಂದು ಪೂರ್ವಾಲೋಚಿತ ಅರ್ಥನಿರೂಪಣೆಯ ಚೌಕಟ್ಟಿಗೆ ಅದು ಹೊಂದಿಕೊಳ್ಳಬೇಕೆಂಬ ಅಪೇಕ್ಷೆಯಿಂದಲೇ ; ವಿಚಾರಪರರೆಂದು ತಿಳಿಯಬಹುದಾದ ಜನರ ವಿಚಾರಸರಣಿಗಳು ಸಾಧಾರಣವಾಗಿ ಇಂದು ಹಿಡಿದು ಸಾಗುವ ಜಾಡಿನ ಕೆಲವಷ್ಟು ಲಕ್ಷಣಗಳನ್ನು ಪ್ರತಿಬಿಂಬಿಸುವಂತೆ ನಮ್ಮ ಸೂತ್ರ ಕಲನಭಾಷೆಯನ್ನು ನಿಯೋಜಿಸಿದ್ದೇವೆ. ಇದು ಹೇಗೆ ಎಂದರಿಯಲು ಸ್ಥಿರವಾಚಕಗಳೂ ಚರವಾಚಕಗಳೂ ವಿಧವಿಧ ವಸ್ತುಗಳ ಅಥವಾ ಪರಿಕಲ್ಪನೆಗಳ ಹೆಸರುಗಳೆಂದು ಅರ್ಥಮಾಡಿಕೊಳ್ಳೋಣ. (ಸೂತ್ರಕಲನ ಭಾಷೆಯ ಮಟ್ಟಿಗೆ ಸ್ಥಿರವಾಚಕ ಚರವಾಚಕಗಳ ಪ್ರತ್ಯೇಕ ವಿಂಗಡಣೆ ಅನವಶ್ಯ). ಸಂಬಂಧ ವಾಚಕಗಳು ಇಂಥ ವಸ್ತುಗಳಲ್ಲಿ ಕಂಡುಬರಬಹುದಾದ ವೈಯಕ್ತಿಕ ಗುಣಲಕ್ಷಣಗಳನ್ನೋ ಇಲ್ಲವೇ ಅನ್ಯೋನ್ಯ ಸಂಬಂಧಗಳನ್ನೋ ಸೂಚಿಸುತ್ತವೆ. ಉದಾಹರಣೆಗೆ ಖಖಕ ಎಂಬುದು ಬೆಳ್ಳಗಿರುವ ಲಕ್ಷಣವನ್ನೂ SIPP ಪತಿ–ಪತ್ನಿ ಸಂಬಂಧವನ್ನೂ ಸೂಚಿಸಬಹುದು. ಆದರೆ SIP ಯಾವ ಪದಾರ್ಥ ಬೆಳ್ಳಗಿದೆಯೆಂದು ತಿಳಿಸುವುದಿಲ್ಲ. SIPP ಯಾರು ಯಾರು ಪತಿಪತ್ನಿಯರೆಂದು ತಿಳಿಸುವುದಿಲ್ಲ. ಈ ಬಗೆಯ ಪೂರ್ಣಮಾಹಿತಿಗಳ ಅಭಿವ್ಯಕ್ತಿ ಅನಿರ್ದಿಷ್ಟ P ಅಕ್ಷರಗಳ ಸ್ಥಾನಗಳಲ್ಲಿ ನಿರ್ದಿಷ್ಟ ಸ್ಥಿರ ಚರವಾಚಕಗಳನ್ನು ಆದೇಶಿಸಿ ರಚಿಸಬಹುದಾದ ಸೂತ್ರಮೂಲಗಳಿಂದ ಸಾಧ್ಯವಾಗುತ್ತದೆ. QI ಎಂದರೆ ಹಾಲು, QII ಎಂದರೆ ರಾಮ, QIII ಎಂದರೆ ಸೀತೆ, QIIII ಎಂದರೆ ಕಾಗೆ, QIIIII ಎಂದರೆ ಗಣಿತ ಎಂದಿಟ್ಟುಕೊಂಡರೆ

SIQI ಎಂದರೆ ಹಾಲು ಬೆಳ್ಳಗಿದೆ . . .[34]

SIQIIQIII ಎಂದರೆ ರಾಮಸೀತೆ ಪತಿಪತ್ನಿಯರು . . .[35]

SIQIIII ಎಂದರೆ ಕಾಗೆ ಬೆಳ್ಳಗಿದೆ . . .[36]

SIQIIIII ಎಂದರೆ ಗಣಿತ ಬೆಳ್ಳಗಿದೆ . . .[37]

ಎಂದು ಅರ್ಥವಾಗುವುದು. (ಇದನ್ನು ಓದಿದಾಗ [ 34 ], [ 35 ] ದಿಟವೆಂದೂ [36] ಸಟೆಯೆಂದೂ, [ 37 ] ರ ಅರ್ಥವೇ ಅಸ್ಪಷ್ಟವೆಂದೂ ಸಾಧಾರಣವಾಗಿ ನಮಗನಿಸುವುದು. ಅರ್ಥನಿರೂಪಣೆಗಳ ಸಂಬಂಧದಲ್ಲಿ ಉದ್ಭವಿಸುವ ಇಂಥ ತೊಡಕುಗಳು ಶುದ್ಧ ವಾಕ್ಯ ರಚನಾಮೀಮಾಂಸೆಯ ಆಯಕಟ್ಟಿನಲ್ಲಿ ಹೇಗೂ ಅಪ್ರಕೃತವಾಗುತ್ತವೆಂಬುದನ್ನು ಗಮನಿಸಬೇಕು.) ಈ ಉದಾಹರಣೆಗಳಿಂದ ನಿತ್ಯಜೀವನದ ಭಾಷೆಗಳ ಪೂರ್ಣವಾಕ್ಯಗಳಿಗೆ ಸೂತ್ರಕಲನ ಭಾಷೆಯಲ್ಲಿ ಹೆಚ್ಚು ಕಡಿಮೆ ಅನುರೂಪವಾಗಬಲ್ಲ ಪ್ರಪ್ರಥಮ ರಚನೆಗಳೆಂದರೆ ಸೂತ್ರಮೂಲಗಳು ಎಂದು ಸ್ಪಷ್ಟವಾಗುತ್ತದೆ. ಸೂತ್ರಮೂಲಗಳ ಈ ಲಕ್ಷಣ ಇತರ ಎಲ್ಲ ಬಗೆಯ ಸೂತ್ರಗಳಿಗೂ ಉಂಟು.

ಜನರ ವಿಚಾರಸರಣಿಗಳಲ್ಲಿ "ಹಾಗಿದ್ದರೆ ಹೀಗಾಗಿರಬೇಕು" ಎಂಬ ಮಾದರಿಯ ಚಿಂತನೆಗಳು ಪದೇ ಪದೇ ಕಾಣಿಸಿಕೊಳ್ಳುತ್ತವೆ. ಸೂತ್ರಕಲನ ಭಾಷೆಯಲ್ಲಿ ಇವನ್ನು –> ಅಕ್ಷರದ ನೆರವಿನಿಂದ ಪ್ರತಿಬಿಂಬಿಸುತ್ತೇವೆ. $[x \rightarrow y]$ ಸೂತ್ರಕ್ಕೆ "x ಆಗಿದ್ದರೆ y" ಎಂಬ ಅರ್ಥವನ್ನು ಆರೋಪಿಸುವುದರಿಂದ ಇದು ಸಾಧ್ಯವಾಗುತ್ತದೆ. ಉದಾಹರಣೆಗೆ SI*QI*I ಎಂದರೆ "ಮಳೆ ಬೀಳುತ್ತಿದೆ" ಎಂದೂ SI*IQI*IIQI*III ಎಂದರೆ "ಆಕಾಶದಲ್ಲಿ ಮೋಡವಿದೆ" ಎಂದೂ ಇಟ್ಟುಕೊಂಡರೆ [SI*IQI*I → SI*IQI*IIQI*III] ಎಂಬುದನ್ನು "ಮಳೆ ಬೀಳುತ್ತಿದ್ದರೆ ಆಕಾಶದಲ್ಲಿ ಮೋಡವಿರಬೇಕು" ಎಂದು ಅರ್ಥವಿಸಬಹುದು. ಈಗ ಯಾವುದಾದರೊಂದು ಗೊತ್ತಾದ ಕಾಲದಲ್ಲಿ "ಮಳೆ ಬೀಳುತ್ತಿದೆ" ಹಾಗೂ "ಮಳೆ ಬೀಳುತ್ತಿದ್ದರೆ ಆಕಾಶದಲ್ಲಿ ಮೋಡವಿರಬೇಕು" ಎಂಬೆರಡು ಮಾಹಿತಿಗಳೂ ನಮಗೆ ವೇದ್ಯವಾದಲ್ಲಿ ನಾವು ತಲೆಯೆತ್ತಿ ನೋಡುವ ಕ್ರಮವನ್ನು ತೆಗೆದುಕೊಳ್ಳದೆಯೇ "ಆಕಾಶದಲ್ಲಿ ಮೋಡವಿದೆ" ಎಂಬ ತೀರ್ಮಾನಕ್ಕೆ ಬರಬಹುದು. ಈ ಪರಿಸ್ಥಿತಿಯನ್ನು ಸೂತ್ರ ಕಲನಭಾಷೆಯಲ್ಲಿ ಪ್ರತಿಬಿಂಬಿಸಬೇಕಾದರೆ ಆ ಭಾಷೆಯಲ್ಲಿ SI*QI*I ಮತ್ತು [SI*IQI*I → SI*IQI*IIQI*III] ಸೂತ್ರಗಳಿಂದ ಹೊರಟು SI*IQI*IIQI*III ಸೂತ್ರವನ್ನು ವ್ಯುತ್ಪತ್ತಿಮಾಡುವ ಅವಕಾಶ ನಮಗೆ ಅಧಿಕೃತವಾಗಿ ಅಭಿಸಬೇಕಷ್ಟೆ ? ಇಂಥ ಅವಕಾಶವನ್ನು ಕಲ್ಪಿಸಿಕೊಡುವುದೇ ಸಾಧನೆಗಳ ವ್ಯುತ್ಪತ್ತಿಸಂಬಂಧದಲ್ಲಿ ನಿರೂಪಿತವಾಗಿರುವ ವಿಸರ್ಗನಿಯಮದ ಗುರಿ. ಸೂತ್ರಕಲನ ಭಾಷೆಯ ಸಾಧನೆಗಳು ಜನರ ವಿಚಾರಸರಣಿಗಳ ಒಂದು ಸಾಂಕೇತಿಕ ರೂಪವಾಗಬೇಕೆಂಬುದು ನಮ್ಮ ಅಪೇಕ್ಷೆ. ವಿಚಾರಸರಣಿಯೊಂದರಲ್ಲಿ ಒಂದು ಹೆಜ್ಜೆ ಮುಗಿದು ಮುಂದಿನ ಹೆಜ್ಜೆ ಪ್ರಾರಂಭವಾಗುತ್ತಿದೆಯೆಂಬ ಅಂಶವನ್ನು ಅನುರೂಪ ಸಾಧನೆಯ ನಡುವೆ ಕಾಣಿಸಿಕೊಳ್ಳುವ T ಅಕ್ಷರಗಳು ಸೂಚಿಸುತ್ತವೆ. ಉದಾಹರಣೆಗೆ "ಆಕಾಶದಲ್ಲಿ ಮೋಡವಿದೆ" ಎಂಬುದರ ವಿಚಾರಸರಣಿ ಹೀಗೆ ಸಾಗಬಹುದು.

. . .TSI*IQI*IT[SI*IQI*I → SI*IQI*IIQI*III]
TSI*IQI*IIQI*III. . .

ಇಲ್ಲಿರುವ T ಅಕ್ಷರಗಳು "ಮಳೆ ಬೀಳುತ್ತಿದೆ", "ಮಳೆ ಬೀಳುತ್ತಿದ್ದರೆ ಆಕಾಶದಲ್ಲಿ ಮೋಡವಿರಬೇಕು", "ಆಕಾಶದಲ್ಲಿ ಮೋಡವಿದೆ" ಎಂಬ ಸೂತ್ರಗಳು ವಿಚಾರಸರಣಿಯ ಮೂರು ಬೇರೆ ಬೇರೆ ಹೆಜ್ಜೆಗಳೆಂಬ ಅಂಶವನ್ನು ವ್ಯಕ್ತಪಡಿಸಿವೆ. ಇನ್ನು $[\neg x]$ ಮಾದರಿಯ ಸೂತ್ರಗಳ ವಿಚಾರ. $[\neg x]$ ಸಂಕೇತಕ್ಕೆ "$x$ ಆಗಿಲ್ಲ" ಅಥವಾ "x ಇಲ್ಲ" ಎಂಬುದಾಗಿ ನಾವು ಅರ್ಥಾರೋಪ ಮಾಡಬಹುದು. SI*IQI*I ಎಂದರೆ "ಮಳೆ ಬೀಳುತ್ತಿದೆ" ಎಂದಾದರೆ [¬SI*IQI*I ] ಎಂದರೆ ಮಳೆ ಬೀಳುತ್ತಿಲ್ಲ ಎಂದರ್ಥ. ಅಲ್ಲಿಗೆ ¬ ಅಕ್ಷರವನ್ನು ನಿಷೇಧಸೂಚಕವನ್ನಾಗಿ ಬಳಸಿಕೊಳ್ಳುತ್ತೇವೆಂದಾಯಿತು. ಸೂತ್ರಕಲನ ಭಾಷೆಯಲ್ಲಿ $x$ ಯಾವುದೇ ಸೂತ್ರವಾಗಿದ್ದರೂ ವಾಕ್ಯರಚನಾ ಮೀಮಾಂಸೆಯ ದೃಷ್ಟಿಕೋನದಿಂದ ಅದರ ನಿಷೇಧರೂಪ $[\neg x]$ ಅನ್ನು ವ್ಯುತ್ಪಾದಿಸಬಹುದೆಂಬುದೇನೋ ಸುಸ್ಪಷ್ಟ. ಆದರೆ ಅರ್ಥಮೀಮಾಂಸೆಯ ದೃಷ್ಟಿಕೋನದಿಂದ $x$ ಅರ್ಥಪೂರ್ಣವಾದಾಗಲೆಲ್ಲ $[\neg x]$ ಕೂಡ ಅರ್ಥಪೂರ್ಣವಾಗುತ್ತದೆಯೇ ಎಂಬ ಮಹತ್ವಪೂರ್ಣ ಪ್ರಶ್ನೆ ಹುಟ್ಟುತ್ತದೆ. ಜನರ ಸಾಮಾನ್ಯಾನುಭವಗಳ ಆಯಕಟ್ಟಿನಲ್ಲಿ $[\neg x]$ನ ಅರ್ಥಸ್ಪಷ್ಟತೆಯ ಬಗ್ಗೆ ಸಂಶಯ ಮನೋಭಾವ ತಾಳುವುದಕ್ಕೆ ಪ್ರಬಲ ಕಾರಣಗಳೇನೂ ಕಂಡುಬರುವುದಿಲ್ಲ. ಆದರೆ ಗಣಿತಶಾಸ್ತ್ರಕ್ಕೆ ಸಂಬಂಧಿಸಿದ ಅನುಭವಗಳ ವಿಶಾಲ ವ್ಯಾಪ್ತಿಯೊಳಗಡೆ $[\neg x]$ ರಚನೆಯ ಅವಿಮರ್ಶಾತ್ಮಕ ಬಳಕೆ ಅರ್ಥಹೀನವಾಗಬಹುದೆಂಬ ಟೀಕೆ ಎಲ್.ಇ.ಜೆ. ಬ್ರವರ್ (1881–1966) ಸಂಸ್ಥಾಪಿಸಿದ ಇಂಟ್ಯುಇಷನಿಸಮ್ ತಾತ್ತ್ವಿಕ ಪಂಥದಲ್ಲಿ ಕೇಂದ್ರೀಯ ಸ್ಥಾನವನ್ನು ಗಳಿಸಿಕೊಂಡಿದೆ. ನಿಜಕ್ಕೂ ಭಾಷೆಗಳು ವಾಕ್ಯರಚನಾಮೀಮಾಂಸೆಯ ಚೌಕಟ್ಟಿನಲ್ಲಿ ಗಳಿಸಬಲ್ಲ ಪರಿಪೂರ್ಣ ನಿಖರತೆಯನ್ನು ಅರ್ಥಮೀಮಾಂಸೆಯ ಚೌಕಟ್ಟಿನಲ್ಲೂ ಪ್ರದರ್ಶಿಸಬಹುದೆಂದು ನಿರೀಕ್ಷಿಸುವುದು ಸಲ್ಲದ ಮುಗ್ಧತೆಯಾದೀತು. ಆದ್ದರಿಂದ ಸೂತ್ರಕಲನಭಾಷೆಗೆ ಅರ್ಥಾರೋಪಣೆ ಮಾಡುವ ನಮ್ಮ ಪ್ರಸಕ್ತಪ್ರಯತ್ನ ಅನುಭವಗಳ ಎಲ್ಲ ಆಯಾಮಗಳಲ್ಲೂ ಏಕರೀತಿಯಲ್ಲಿ ಯಶಸ್ವಿಯಾಗುವುದೆಂದು ಆಶಿಸುವುದು ತಪ್ಪು.

ಕೊನೆಯದಾಗಿ ಅರ್ಥಾರೋಪಣೆಯ ದೃಷ್ಟಿಕೋನದಲ್ಲಿ ಅದ್ಯುಕ್ತಿಗಳಿಗೆ ಸಲ್ಲಬೇಕಾದ ಸ್ಥಾನವನ್ನು ಈಗ ಗುರುತಿಸಬೇಕಾಗಿದೆ. ಯಾವ ವಿಚಾರಸರಣಿಯಾದರೂ ಮಾನ್ಯವೆಂದು ಅಂಗೀಕರಿಸಲಾಗಿರುವ ಕೆಲವಷ್ಟು ಮೂಲಭೂತ ಆಧಾರಭಾವನೆಗಳಿಂದ ಪ್ರಾರಂಭವಾಗಬೇಕೆಂದು ಸುಸ್ಪಷ್ಟ. ಅದ್ಯುಕ್ತಿಗಳು ಇಂಥ ಆಧಾರಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಸಾಧನೆಗಳ ವ್ಯಾಖ್ಯೆಯನ್ನು ಗಮನಿಸಿದಾಗ ಸೂತ್ರಕಲನಭಾಷೆಯಲ್ಲಿ ಪ್ರತಿಯೊಂದು ಅದ್ಯುಕ್ತಿಯೂ ಅದೇ ಸ್ವತಃ ಒಂದು ಸಾಧನೆಯಾಗುತ್ತದೆಂದೂ ಅಲ್ಲದೆ ಯಾವುದೇ ಸಾಧನೆ ನಮಗಿಚ್ಚೆಬಂದ ಯಾವುದೇ ಅದ್ಯುಕ್ತಿಯನ್ನು ಬೇಕಾದರೂ ಖ ಅಕ್ಷರದೊಡನೆ ಲಗತ್ತಿಸಿ ಹೊಸಸಾಧನೆಯೊಂದನ್ನು ಪಡೆಯಬಹುದೆಂದೂ ತಿಳಿದುಬರುತ್ತದಷ್ಟೆ. ಈ ಪರಿಸ್ಥಿತಿಗಳು ಅದ್ಯುಕ್ತಿಗಳ ಅಂಗೀಕೃತ ನಿತ್ಯಮಾನ್ಯತೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ. ಇಷ್ಟಾದರೂ ಸೂತ್ರಕಲನಭಾಷೆಗೆ ವಿಶಿಷ್ಟವಾಗಿ [ 29], [30], [31] ಎಂಬ ಮೂರು ಮಾದರಿಗಳ ಸೂತ್ರಗಳನ್ನೇ ಅದ್ಯುಕ್ತಿಗಳಾಗಿ ಆಯ್ಕೆ ಮಾಡಿರುವುದಕ್ಕೆ ಕಾರಣವೇನೆಂದು ಪ್ರಶ್ನಿಸುವುದು ಸ್ವಾಭಾವಿಕವೇ. $[x \rightarrow y]$ ($x$ ಆಗಿದ್ದರೆ y ಆಗಿರಬೇಕು) ಹಾಗೂ $[\neg x]$ ($x$) ಆಗಿಲ್ಲ) ಎಂಬಂಥ ವಾಕ್ಯರಚನೆಗಳೂ ಅವುಗಳ ವಿಧವಿಧ ಸಂಯೋಜನೆಗಳೂ ಸಾಮಾನ್ಯಾನುಭವಗಳ ಬೆಳಕಿನಲ್ಲಿ ಯಾವ ಯಾವ ಲಕ್ಷಣಗಳನ್ನು ಪ್ರದರ್ಶಿಸಬೇಕೆಂದು ನಾವು ನಿರೀಕ್ಷಿಸಬಹುದೋ ಅಂಥವೆಲ್ಲ ಈ [29], [30], [31] ಮಾದರಿಗಳಿಂದ ಫಲಿಸುತ್ತವೆಂಬುದೇ ಈ ಪ್ರಶ್ನೆಗೆ ಉತ್ತರ. ಈ ಸಂಬಂಧದಲ್ಲಿ ಬಹಳ ಮುಖ್ಯವಾದ ಒಂದು ನಿದರ್ಶನವನ್ನು ತೆಗೆದುಕೊಳ್ಳುವುದಾದರೆ ಸಾಧನೆಯೊಂದರಿಂದ $x$ ಎಂಬ ಪ್ರಮೇಯ ವ್ಯುತ್ಪತ್ತಿಯಾದಲ್ಲಿ ಬೇರಾವ ಸಾಧನೆಯಿಂದಲೂ $[\neg x]$ ಸೂತ್ರ ಇನ್ನೊಂದು ಪ್ರಮೇಯವಾಗಿ ವ್ಯುತ್ಪನ್ನವಾಗಬಾರದೆಂದು ನಾವು ಆಶಿಸುತ್ತೇವಷ್ಟೆ. ಹಾಗೇನಾದರೂ ವ್ಯುತ್ಪನ್ನವಾದಲ್ಲಿ ನಮ್ಮ ಭಾಷೆ ಅಸಂಗತವಾದುದೆಂದು (ಕಾಂಟ್ರಡಿಕ್ಟರಿ, ಇನ್‌ಕನ್ಸಿಸ್ಟೆಂಟ್) ಹೇಳಬೇಕಾಗುವುದು. [28]. [29], [30] ಮಾದರಿಯ ಅದ್ಯುಕ್ತಿಗಳ ಆಯ್ಕೆಗೆ ಈ ಆಸೆಯನ್ನು ಈಡೇರಿಸಿಕೊಡುವ ಸಲ್ಲಕ್ಷಣವಿದೆ. ಅಂದಮೇಲೆ ನಮ್ಮ ಸೂತ್ರಕಲನ ಭಾಷೆ ಒಂದು ಸುಸಂಗತ (ಕನ್ಸಿಸ್ಟೆಂಟ್) ಭಾಷೆಯಾಯಿತು.

ಇಷ್ಟೆಲ್ಲ ಆದರೂ ಸೂತ್ರಕಲನ ಭಾಷೆಯ ಸಾಮರ್ಥ್ಯ ಗಣಿತಶಾಸ್ತ್ರದಲ್ಲಿ ಕಂಡುಬರುವ ವಿಚಾರಸರಣಿಗಳ ಎಲ್ಲ ಆಯಾಮಗಳನ್ನೂ ಪ್ರತಿನಿಧಿಸುವಷ್ಟಿಲ್ಲ. ಈ ಕೊರತೆಯನ್ನು ಪೂರೈಸುವ ಸಲುವಾಗಿ ಗಣಿತತರ್ಕಶಾಸ್ತ್ರಜ್ಞರು ಸೂತ್ರಕಲನ ಭಾಷೆಯನ್ನು ವಿಸ್ತರಿಸಿ

ಆಖ್ಯಾತ ಕಲನಭಾಷೆ (ಪ್ರೆಡಿಕೇಟ್ ಕ್ಯಾಲ್ಕುಲಸ್) ಎಂಬ ಇನ್ನೊಂದು ಭಾಷೆಯನ್ನು ನಿರ್ಮಿಸಿದ್ದಾರೆ. ಈ ವಿಸ್ತೃತ ಭಾಷೆಯಲ್ಲೂ ವಾಕ್ಯರಚನಾ ಮೀಮಾಂಸೆಗೆ ಪ್ರಥಮ ಪ್ರಾಮುಖ್ಯ ಸಲ್ಲುತ್ತದೆ. ಆಖ್ಯಾತ ಕಲನ ಭಾಷೆಯ ರಚನೆಗೆ ಸ್ಥಿರವಾಚಕ ಮತ್ತು ಚರವಾಚಕಗಳ ಪ್ರತ್ಯೇಕ ವಿಂಗಡಣೆ ಅತ್ಯಗತ್ಯ. ಇದರಲ್ಲಿ ಸೂತ್ರಗಳ ವ್ಯಾಪ್ತಿಯನ್ನು ಸೂತ್ರಕಲನ ಭಾಷೆಯಲ್ಲಿರುವುದಕ್ಕಿಂತ ಸ್ವಲ್ಪ ಮಟ್ಟಿಗೆ ವಿಸ್ತರಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಸೂತ್ರಗಳ ವ್ಯುತ್ಪತ್ತಿ ಸಂಬಂಧದಲ್ಲಿ ಹಿಂದೆ ನಮೂದಿಸಿದ ಎರಡು ಕಲನ ನಿಯಮಗಳ ಜೊತೆಗೆ ಇನ್ನೊಂದು ಮೂರನೆಯ ನಿಯಮವನ್ನು ಸಹ ನಾವು ಅಂಗೀಕರಿಸುತ್ತೇವೆ. $x$ ಎಂಬುದು ಒಂದು ಚರವಾಚಕವೂ y ಎಂಬುದು ಒಂದು ಸೂತ್ರವೂ ಆದಲ್ಲಿ $[x\forall y]$ ಎಂಬುದನ್ನು ಸಹ ಮತ್ತೆ ಒಂದು ಸೂತ್ರವೆಂದು ಪರಿಗಣಿಸತಕ್ಕದ್ದು. $\forall$ ಅಕ್ಷರವನ್ನು ವಿಶ್ವವಾಚಕ (ಯೂನಿವರ್ಸಲ್ ಕ್ವಾಂಟಿಫಯರ್ಸ್) ಎಂದು ಕರೆಯುವ ರೂಢಿಯಿದೆ. ಈ ಹೊಸ ವಿಯಮದ ಫಲವಾಗಿ ಅಸ್ತಿತ್ವಕ್ಕೆ ಬರುವ ಕೆಲವು ಸೂತ್ರಗಳನ್ನು ಇಲ್ಲಿ ನಮೂದಿಸಿದ್ದೇವೆ.

$$[RI\forall SII * IQI] \quad ..... \quad [38]$$

$$[RI\forall SII * IRI] \quad ..... \quad [39]$$

$$[...[RI\forall[RI\forall[RI\forall SII * IQIRI]]]] \quad ..... \quad [40]$$

$$[[RI\forall SII * IRIQIRII] \rightarrow [...[RII\forall SIII * I RIRIIQII]]] \quad ..... \quad [41]$$

$x$ ಚರವಾಚಕವೂ y ಸೂತ್ರವೂ ಆದಾಗ $[x\forall y]$ ಸೂತ್ರದಲ್ಲಿ ಗೋಚರಿಸಬಹುದಾದ $x$ ನ ಪ್ರತಿಯೊಂದು ಸ್ಥಾನವನ್ನೂ ಒಂದು ನಿರ್ಬಂಧಿತ ಸ್ಥಾನವೆಂದು (ಬೌಂಡ್ ಆಕರೆನ್ಸ್) ವರ್ಣಿಸುತ್ತೇವೆ. ಉದಾಹರಣೆಗೆ [38], [39], ಹಾಗೂ [40] ರಲ್ಲಿ ಗೋಚರಿಸುವ RI ಗಳೆಲ್ಲವೂ ನಿರ್ಬಂಧಿತ ಸ್ಥಾನಗಳಲ್ಲಿವೆ; ಆದರೆ [41]ರಲ್ಲಿ $\rightarrow$ ಚಿಹ್ನೆಯ ಎಡಗಡೆಯಲ್ಲಿರುವ ಎರಡು RI ಗಳೂ ಆ ಚಿಹ್ನೆಯ ಬಲಗಡೆಯಲ್ಲಿರುವ ಎರಡು RII ಗಳೂ ನಿರ್ಬಂಧಿತ ಸ್ಥಾನಗಳಲ್ಲಿವೆ. [41]ರಲ್ಲಿ $\rightarrow$ ಚಿಹ್ನೆಯ ಎಡಪಾರ್ಶ್ವದಲ್ಲಿರುವ RII ಆಗಲಿ ಆ ಚಿಹ್ನೆಯ ಬಲ ಪಾರ್ಶ್ವದಲ್ಲಿರುವ RI ಆಗಲಿ ನಿರ್ಬಂಧಿತ ಸ್ಥಾನಗಳಲ್ಲಿಲ್ಲವೆಂಬ ಅಂಶವನ್ನು ಗಮನಿಸಬೇಕು. ನಿರ್ಬಂಧಿತವಲ್ಲದ ಚರವಾಚಕ ಸ್ಥಾನಗಳನ್ನು ಸ್ವತಂತ್ರ ಸ್ಥಾನಗಳು (ಫ್ರೀ ಅಕರೆನ್ಸಸ್) ಎಂದು ಕರೆಯುತ್ತೇವೆ. ಕನಿಷ್ಠಪಕ್ಷ ಒಂದು ಚರವಾಚಕವನ್ನಾದರೂ ಸ್ವತಂತ್ರ ಸ್ಥಾನದಲ್ಲಿ ಒಳಗೊಳ್ಳುವ ಸೂತ್ರಗಳಿಗೆ ಆಖ್ಯಾತಗಳು (ಪ್ರೆಡಿಕೇಟ್ಸ್) ಎಂದು ಹೆಸರು. ಆಖ್ಯಾತ ಕಲನ ಭಾಷೆ ಸೂತ್ರಗಳ ಪೈಕಿ ಆಖ್ಯಾತಗಳಿಗಿರುವ ವೈಶಿಷ್ಟ್ಯವನ್ನು ಆಧರಿಸಿ ರಚಿಸಿದ ಭೇಷೆ ಎಂದು ಹೇಳಬಹುದು.

ಆಖ್ಯಾತ ಕಲನ ಭಾಷೆಯ ರಚನೆಯನ್ನು ಮುಂದುವಸುವುದಕ್ಕಾಗಿ ಆದ್ಯುಕ್ತಿ ಮಾದರಿಗಳ ವರ್ಗವನ್ನು ಸಹ ಈಗ ವಿಸ್ತರಿಸಿಕೊಳ್ಳುತ್ತೇವೆ. $x$ ಎಂಬುದು ಯಾವುದಾದರೊಂದು ಚರವಾಚಕವೂ u ಎಂಬುದು $x$ ನ್ನು ಸ್ವತಂತ್ರ ಸ್ಥಾನಗಳಲ್ಲಿ ಒಳಗೊಳ್ಳದೆ ಇರುವ ಒಂದು ಸೂತ್ರವೂ v ಎಂಬುದು ಯಾವುದಾದರೊಂದು ಸೂತ್ರವೂ ಆಗಿರಲಿ. ಇಂಥ ಸಂದರ್ಭದಲ್ಲಿ

$$[[x\forall[u \rightarrow v]] \rightarrow [u \rightarrow [xv\forall]]] \quad ..... \quad [42]$$

ಎಂಬ ಮಾದರಿಯ ಸೂತ್ರಗಳನ್ನು ಆಖ್ಯಾತಕಲನಭಾಷೆಯ ಆದ್ಯುಕ್ತಿಗಳೆಂದು ಸ್ವೀಕರಿಸುತ್ತೇವೆ. ಪುನಃ $x$ ಒಂದು ಚರವಾಚಕ ಅಥವಾ ಸ್ಥಿರವಾಚಕ, y ಒಂದು ಚರವಾಚಕ ಮತ್ತು vಒಂದು ಸೂತ್ರ ಎಂದು ಭಾವಿಸಿ. ಅಲ್ಲದೆ $[x\forall z]$ ಮಾದರಿಯ ಯಾವುದಾದರೂ ಸೂತ್ರಗಳು vಯ ಭಾಗಗಳಾಗಿದ್ದಲ್ಲಿ ಅಂಥ ಯಾವ ಸೂತ್ರವೂ y ಯನ್ನು ಸ್ವತಂತ್ರಸ್ಥಾನಗಳಲ್ಲಿ ಒಳಗೊಳ್ಳದಿರಲಿ. vಯಲ್ಲಿ ಇರಬಹುದಾದ yಯ ಪ್ರತಿಯೊಂದು ಸ್ವತಂತ್ರ ಸ್ಥಾನದಲ್ಲೂ y ಗೆ ಬದಲು xನ್ನು ಆದೇಶಿಸಿದಾಗ ಫಲಿಸುವ ಸೂತ್ರವನ್ನು w ಎಂದು ಕರೆಯೋಣ. ಇಂಥ ಸಂದರ್ಭಗಳಲ್ಲಿ ಆಖ್ಯಾತಕಲನ ಭಾಷೆಯ

$$[[y\forall v] \rightarrow \omega \quad ..... \quad [43]$$

ಎಂಬ ಮಾದರಿಯ ಸೂತ್ರಗಳನ್ನೂ ಆದ್ಯೂಕ್ತಿಗಳೆಂದು ಅಂಗೀಕರಿಸುತ್ತೇವೆ. ಅಲ್ಲದೆ ಈ [42], [43] ನಮೂನೆಗಳ ಜೊತೆಗೆ ಹಿಂದೆ ನಮೂದಿಸಿರುವ [29], [30], [31] ನಮೂನೆಗಳನ್ನು ಕೂಡ ಎಂದಿನಂತೆಯೇ ಆದ್ಯುಕ್ತಿ ಮಾದರಿಗಳೆಂದು ಈಗಲೂ ಪರಿಗಣಿಸುತ್ತೇವೆ. ಅದ್ಯುಕ್ತಿಗಳ ವ್ಯಾಪ್ತಿಯನ್ನು ಹೀಗೆ ವಿಸ್ತರಿಸಿದ ತರುವಾಯ ಸಾಧನೆಗಳ ವ್ಯುತ್ಪತ್ತಿಗಾಗಿ ಹಿಂದೆ ನಿರೂಪಿಸಿದ ಮೂರು ನಿಯಮಗಳೊಂದಿಗೆ ಇನ್ನೂ ಒಂದು ನಿಯಮವನ್ನು ಈಗ ಹೊಸದಾಗಿ ಸೇರಿಸಿಕೊಳ್ಳುತ್ತೇವೆ : $x$ ಯಾವುದಾದರೊಂದು ಚರವಾಚಕವೂ y ಯಾವುದಾದರೊಂದು ಸೂತ್ರವೂ z ಎಂಬುದು yT ಅಥವಾ Ty ಅಕ್ಷರಸಂಯೋಜನೆಗಳನ್ನು ಒಳಗೊಳ್ಳುವ ಒಂದು ಸಾಧನೆಯೂ ಆದ ಪಕ್ಷದಲ್ಲಿ $zT[x\forall y]$ ಸಂಯೋಜನೆಯನ್ನು ಸಹ ಮತ್ತೆ ಒಂದು ಸಾಧನೆಯೆಂದು ಅಂಗೀಕರಿಸತಕ್ಕದ್ದು. ಈ ಕಲನನಿಯಮಕ್ಕೆ ಸಾರ್ವತ್ರೀಕರಣ ನಿಯಮ (ಜನರಲೈಸೇಷನ್) ಎಂದು ಹೆಸರು. ಪ್ರಮೇಯಗಳ ವ್ಯಾಖ್ಯೆಯಲ್ಲಿ ಮಾತ್ರ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಆದಾಗ್ಯೂ ಸೂತ್ರ, ಅದ್ಯುಕ್ತಿ ಮತ್ತು ಸಾಧನೆ ಇವುಗಳ ವ್ಯಾಪ್ತಿವರ್ಧನೆಯ ಪರಿಣಾಮವಾಗಿಯೇ ಅಖ್ಯಾತ ಕಲನಭಾಷೆಯಲ್ಲಿ ಪ್ರಮೇಯಗಳ ವ್ಯಾಪ್ತಿ ಕೂಡ ಸೂತ್ರಕಲನ ಭಾಷೆಯಲ್ಲಿರುವುದಕ್ಕಿಂತ ಅಗಾಧವಾಗಿ ಹೆಚ್ಚಲೇಬೇಕೆಂಬುದು ಈ ಸಂದರ್ಭದಲ್ಲಿ ಗಮನಿಸತಕ್ಕ ಸಂಗತಿ.

ಈಗ ಕೇವಲ ವಾಕ್ಯರಚನಾ ದೃಷ್ಟಿಕೋನದಿಂದ ನಾವು ಸೃಷ್ಟಿಸಿರುವ ಆಖ್ಯಾತಕಲನಭಾಷೆಗೆ ಯಾವರೀತಿಯ ಅರ್ಥಾರೋಪ ಸಲ್ಲಬಹುದೆಂಬ ಪ್ರಶ್ನೆ ಉದ್ಭವಿಸುತ್ತದೆ. ಮೊದಲನೆಯದಾಗಿ ಈ ಭಾಷೆಯಲ್ಲಿ ಸ್ಥಿರವಾಚಕ ಮತ್ತು ಚರವಾಚಕಗಳಿಗೆ ಭೇದ ಕಲ್ಪಿಸಿರುವ ಉದ್ದೇಶವನ್ನು ಗ್ರಹಿಸೋಣ. ಸ್ಥೂಲವಾಗಿ ಹೇಳುವುದಾದರೆ ನಿರ್ದಿಷ್ಟ ವಸ್ತುಗಳನ್ನು (ಅಥವಾ ನಿರ್ದಿಷ್ಟ ಪರಿಕಲ್ಪನೆಗಳನ್ನು) ಕುರಿತ ಹೆಸರುಗಳಾಗಿ ಸ್ಥಿರವಾಚಕಗಳನ್ನೂ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ವಸ್ತುಗಳನ್ನು ಸೂಚಿಸುವಂಥ ಹೆಸರುಗಳಾಗಿ ಚರವಾಚಕಗಳನ್ನೂ ಬಳಸಿಕೊಳ್ಳುತ್ತೇವೆ. ಉದಾಹರಣೆಗೆ ಭೂಮಿ ಎಂಬ ಪದವನ್ನು ಗಮನಿಸಿ. ಇದು ಎಲ್ಲೇ ಲಿಖಿತವಾಗಿರಲಿ ನಾವೆಲ್ಲ ವಾಸಿಸುತ್ತಿರುವ ಏಕೈಕ ಗ್ರಹವನ್ನೇ ಸೂಚಿಸುತ್ತದೆ. ಆದರೆ ಗ್ರಹ ಎಂಬ ಪದ ಭೂಮಿಯನ್ನು ಸೂಚಿಸಬಹುದು. ಇಲ್ಲವೆ ಮಂಗಳಗ್ರಹವನ್ನು ಸೂಚಿಸಬಹುದು. ಇಲ್ಲವೆ ಮತ್ತೆ ಯಾವುದಾದರೂ ಗ್ರಹವನ್ನು ಸೂಚಿಸಬಹುದು. "ಭೂಮಿ" ಸ್ಥಿರವಾಚಕಕ್ಕೆ ಸದೃಶ, "ಗ್ರಹ" ಚರವಾಚಕಕ್ಕೆ ಸದೃಶ. ಆದರೆ ಈ ಪದಗಳು ಆಖ್ಯಾತಕಲನ ಭಾಷೆಯಲ್ಲಿಲ್ಲವಾದ್ದರಿಂದ ಆ ಭಾಷೆಯಲ್ಲಿ "ಭೂಮಿ" ಗೆ ಬದಲಾಗಿ QI*I*III ಎಂದೋ "ಗ್ರಹಕ್ಕೆ" ಬದಲಾಗಿ RI*II*III ಎಂದೋ ಮಂಗಳ ಗ್ರಹಕ್ಕೆ QI*I*III ಎಂದೋ ಬರೆಯಬಹುದು. ಆಗ RI*II*III ಒಮ್ಮೆ QI*I*II ನ್ನು ಸೂಚಿಸಿದರೆ ಇನ್ನೊಮ್ಮೆ QI*I*IIIನ್ನು ಸೂಚಿಸಬಹುದಷ್ಟೆ ; QI*I*II, QI*I*III ಮುಂತಾದುವನ್ನು RI*II*III ನ ವಿವಿಧ ಮೌಲ್ಯಗಳೆಂದು (ವೇಲ್ಯೂಸ್) ಕರೆಯುತ್ತೇವೆ. ಕನ್ನಡ ಭಾಷೆಯಲ್ಲಿ "ಗ್ರಹ" ಎಂಬುದನ್ನು ಕುರಿತಂತೆ "ಭೂಮಿ", "ಮಂಗಳ" ಮುಂತಾದ ಕೆಲವು ಮೌಲ್ಯಗಳು ಅಂಗೀಕಾರಾರ್ಹವೂ "ಕಾಗೆ", "ನಾಯಿ" ಮುಂತಾದ ಇನ್ನು ಕೆಲವು ಮೌಲ್ಯಗಳು ವರ್ಜ್ಯವೂ ಆಗುತ್ತವೆ. ಇದರಿಂದ "ಗ್ರಹ" ಪದದ ಚರವಾಚಕ ಮೊಟಕುಗೊಂಡು ಅನೇಕ ಸನ್ನಿವೇಶಗಳಲ್ಲಿ ಅದು ಸ್ಥಿರ ವಾಚಕದ ಲಕ್ಷಣಗಳನ್ನು ಗಳಿಸಿಕೊಳ್ಳುತ್ತದೆ. ಅಖ್ಯಾತ ಕಲನ ಭಾಷೆಯಲ್ಲಾದರೋ ಇಂಥ ಸಂದಿಗ್ಧತೆಗಳಿಗೆ ಎಡೆಯೇ ಇಲ್ಲ ; ಇದರಲ್ಲಿ ಪ್ರತಿಯೊಂದು ಚರವಾಚಕಕ್ಕೂ ಸಕಲ ಸ್ಥಿರವಾಚಕಗಳೂ ಅಂಗೀಕಾರಾರ್ಹ ಮೌಲ್ಯಗಳು. ಈಗ $[x\forall y]$ ರಚನೆಗೆ "ಚರವಾಚಕ x ಯಾವುದೇ ಸ್ಥಿರವಾಚಕವನ್ನು ಪ್ರತಿನಿಧಿಸಲಿ, y ಎಂಬುದು ಆಗಿಯೇ ಆಗುತ್ತದೆ" ಎಂಬ ಅರ್ಥವನ್ನು ಆರೋಪಿಸಬಹುದು. ಈ ಪರಿಸ್ಥಿತಿಯನ್ನು ನಿದರ್ಶಿಸುವ ಸಲುವಾಗಿ ಆಖ್ಯಾತಕಲನಭಾಷೆಯ ಸಂಕೇತಗಳಲ್ಲಿ "RI ಒಂದು ಗ್ರಹ" ಎಂಬ ಹೇಳಿಕೆ SI*I*IRI ಎಂಬುದಾಗಿಯೂ "RI ಸೂರ್ಯನ ಸುತ್ತ ಪರಿಭ್ರಮಿಸುತ್ತದೆ" ಎಂಬ ಹೇಳಿಕೆ SI*I*IQI*I*IRI ಎಂಬುದಾಗಿಯೂ ತರ್ಜುಮೆಯಾಗಿತ್ತವೆಂದು ಭಾವಿಸೋಣ. ಆಗ "RI ಯಾವುದೇ ಸ್ಥಿರವಾಚಕವನ್ನು ಪ್ರತಿನಿಧಿಸಿದಾಗ್ಯೂ RI ಒಂದು ಗ್ರಹವಾಗಿದ್ದರೆ ಅದು ಸೂರ್ಯನ ಸುತ್ತ ಪರಿಭ್ರಮಿಸುತ್ತದೆ" (ಅರ್ಥಾತ್ "ಎಲ್ಲ ಗ್ರಹಗಳೂ ಸೂರ್ಯನ ಸುತ್ತ ಪರಿಭ್ರಮಿಸುತ್ತವೆ") ಎಂಬ ಅಭಿಪ್ರಾಯವನ್ನು ಆಖ್ಯಾತಕಲನಭಾಷೆಯಲ್ಲಿ ವ್ಯಕ್ತಪಡಿಸುವ ಸೂತ್ರ ಇಂತಿರುವುದು :

$$[RI\forall[SI * I * IRI \rightarrow SI * I * IQI * I * IRI]]$$

ಇಂಥ ಅರ್ಥಾರೋಪಣೆಗಳ ಚೌಕಟ್ಟಿಗೆ ಸಾಧ್ಯವಾದ ಮಟ್ಟಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಈ ಭಾಷೆಯ ಅದ್ಯುಕ್ತಿಗಳನ್ನೂ ಸಾಧನೆಯ ನಿಯಮವನ್ನೂ ಆಯ್ಕೆ ಮಾಡಿದ್ದೇವೆ. ಸೂತ್ರಕಲನಭಾಷೆಯಂತೆ ಆಖ್ಯಾತ ಕಲನ ಭಾಷೆಯೂ ಒಂದು ಸುಸಂಗತ ಭಾಷೆಯೆಂದು ಶ್ರುತಪಡಿಸಬಹುದು. ಆದರೆ ಇಂಥ ಸಾಧನೆಗಳಲ್ಲಿ, ಯಾವ ವ್ಯವಸ್ಥೆಯ ಸುಸಾಂಗತ್ಯವನ್ನು ಸಮರ್ಥಿಸಬೇಕೋ ಅದರ ಉಪಕರಣಗಳನ್ನೇ ಬಳಸಿಕೊಂಡಿರುವುದರಿಂದ, ಇವು ಎಷ್ಟರ ಮಟ್ಟಿಗೆ ವಿಶ್ವಾಸಾರ್ಹವೆಂಬುದು ತೆರೆದ ಪ್ರಶ್ನೆ.

ಸೂತ್ರಕಲನಭಾಷೆಗೂ ಆಖ್ಯಾತಕಲನ ಭಾಷೆಗೂ ಇರುವ ಮುಖ್ಯ ವ್ಯತ್ಯಾಸವೊಂದನ್ನು ಇಲ್ಲಿ ಉಲ್ಲೇಖಿಸುತ್ತೇವೆ. ಯಾವುದಾದರೊಂದು ಅಕ್ಷರ ಸಂಯೋಜನೆಯನ್ನು (ವಾಕ್ಯ) ಕೊಟ್ಟರೆ ಅದು ಸ್ಥಿರವಾಚಕ ಹೌದೋ ಅಲ್ಲವೋ, ಚರವಾಚಕ ಹೌದೋ ಅಲ್ಲವೋ, ಸಂಬಂಧವಾಚಕ ಹೌದೋ ಅಲ್ಲವೋ, ಸೂತ್ರಮೂಲ ಹೌದೋ ಅಲ್ಲವೋ, ಸೂತ್ರ ಹೌದೋ ಅಲ್ಲವೋ, ಅತ್ಯುಕ್ತಿ ಹೌದೋ ಅಲ್ಲವೋ, ಸಾಧನೆ ಹೌದೋ ಅಲ್ಲವೋ ಎಂಬ ಏಳು ಪ್ರಶ್ನೆಗಳನ್ನು ಇವೆರಡು ಭಾಷೆಗಳಲ್ಲೂ ಕೇವಲ ಯಾಂತ್ರಿಕವಾದ ಆಲ್ಗಾರಿತಂ ಆಧಾರಿತ ಮಾರ್ಗಗಳಲ್ಲೇ ಇತ್ಯರ್ಥಪಡಿಸಲು ಸಾಧ್ಯವಾಗುವುದು. ಸೂತ್ರ ಕಲನಭಾಷೆಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದುವರಿದು ದತ್ತವಾಕ್ಯ ಒಂದು ಪ್ರಮೇಯವೋ ಅಲ್ಲವೋ

ಎಂಬ ಪ್ರಶ್ನೆಯನ್ನು ಕೂಡ ಸೂತ್ರ ಆಲ್ಗಾರಿತಂ ಮೂಲಕ ಇತ್ಯರ್ಥಪಡಿಸಬಹುದು. ಆದರೆ ಆಖ್ಯಾತಕಲನಭಾಷೆಯಲ್ಲಿ ಈ ಕೊನೆಯ ಪ್ರಶ್ನೆಗೆ ಉತ್ತರವನ್ನು ಹುಡುಕಿಕೊಡುವಂಥ ಯಾವ ಆಲ್ಗಾರಿತಂನ್ನೂ ನಿಯೋಜಿಸಲು ಸಾಧ್ಯವಾಗುವುದಿಲ್ಲವೆಂದು ತೋರಿಸಲಾಗಿದೆ (ಎ.ಚರ್ಚ್, 1936). ಈ ಕಾರಣಕ್ಕಾಗಿ ಸೂತ್ರಕಲನಭಾಷೆಯನ್ನು ನಿರ್ಧರಣೀಯ (ಡಿಸೈಡೆಬಲ್) ಭಾಷೆ ಎಂದೂ ಆಖ್ಯಾತಕಲನಭಾಷೆಯನ್ನು ಅನಿರ್ಧರಣೀಯ (ಅನ್‌ಡಿಸೈಡೆಬಲ್) ಭಾಷೆ ಎಂದೂ ವರ್ಣಿಸುವ ವಾಡಿಕೆಯಿದೆ. ಆಖ್ಯಾತಕಲನಭಾಷೆಯ ಪ್ರಮೇಯಗಳಿರಬಹುದೆಂದು ಶಂಕಿಸಲಾದ ಸೂತ್ರಗಳನ್ನಾಗಲೀ ಅವುಗಳ ನಿಷೇಧರೂಪಗಳನ್ನಾಗಲಿ ಕುರಿತು ಸಾಧನೆಗಳನ್ನು ನಿಯೋಜಿಸಲು ಬುದ್ಧಿವಂತಿಕೆ ಅಗತ್ಯವೆಂದಾಯಿತು.

ಈ ಲೇಖನದಲ್ಲಿ ಪ್ರಸ್ತಾಪಿಸಿರುವ ಆಖ್ಯಾತಕಲನಭಾಷೆಯ ಪೂರ್ಣ ಹೆಸರು ಪ್ರಥಮದರ್ಜೆಯ ಶುದ್ಧ ಆಖ್ಯಾತಕಲನಭಾಷೆ (ಪ್ಯೂರ್ ಪ್ರೆಡಿಕೇಟ್ ಕ್ಯಾಲ್ಕುಲಸ್ ಆಫ್ ಫಸ್ಟ್ ಆರ್ಡರ್ ; ಪ್ಯೂರ್ ಲೋವರ್ ಪ್ರೆಡಿಕೇಟ್ ಕ್ಯಾಲ್ಕುಲಸ್) ಎಂದಿದೆ. ದ್ವಿತೀಯ ವರ್ಗದ ಶುದ್ಧ ಆಖ್ಯಾತಕಲನಭಾಷೆಯಲ್ಲಿ ಸಂಬಂಧವಾಚಕಗಳನ್ನು ಸಹ ಸ್ಥಿರ ಸಂಬಂಧವಾಚಕ ಮತ್ತು ಚರಸಂಬಂಧವಾಚಕಗಳೆಂಬ ಎರಡು ವರ್ಗಗಳಾಗಿ ವಿಂಗಡಿಸಿ ಸೂತ್ರಗಳ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಲಾಗುವುದು. ಅನ್ವಯ ಆಖ್ಯಾತಕಲನಭಾಷೆಗಳಲ್ಲಿ (ಅಪ್ಲೈಡ್ ಪ್ರೆಡಿಕೇಟ್ ಕ್ಯಾಲ್ಕುಲಸ್) ಕೆಲವು ವಿಶಿಷ್ಟ ಸ್ಥಿರವಾಚಕಗಳನ್ನೂ ಸಂಬಂಧವಾಚಕಗಳನ್ನೂ ಮೊದಲಲ್ಲೇ ಹೆಸರಿಸಿ ಅವನ್ನೂ ಕುರಿತಂತೆ ಇನ್ನಷ್ಟು ಅದ್ಯುಕ್ತಿಗಳನ್ನು ಅಂಗೀಕರಿಸಲಾಗುವುದು. ಅನ್ವಯ ಕಲನ ಭಾಷೆಗಳಿಗೆ ಸಿದ್ಧಾಂತಗಳೆಂಬ (ಥಿಯೊರೀಸ್) ನಾಮಕರಣ ಬಳಕೆಯಲ್ಲಿದೆ. ಸಿದ್ಧಾಂತಗಳೆಲ್ಲವೂ ಅವುಗಳಷ್ಟಕ್ಕೇ ಅವೇ ಸುಸಂಗತವಾಗಿ ನಿಲ್ಲುತ್ತವೆಂದು ಭ್ರಮಿಸಲಾಗದು. ಕೊನೆಯದಾಗಿ ತರ್ಕವಿಧಿಗಳಿಗೂ ವ್ಯಾಕರಣವಿಧಿಗಳಿಗೂ ಇರುವ ಸಾದೃಶ್ಯವನ್ನು ಪೂರ್ಣವಾಗಿ ಗಮನಿಸಿದರೆ ಇವುಗಳ ಬಗ್ಗೆ ವಿಚಾರಪರ ದೃಷ್ಟಿಕೋನ ಬೆಳೆಯಲು ಅನುಕೂಲವಾಗುವುದು. ಒಂದು ಭಾಷೆಯ ವಿಶ್ಲೇಷಣೆಯೇ ಅದರ ವ್ಯಾಕರಣವಾಗುವ ಕಾರಣ ಭಾಷೆಯ ಅಸ್ತಿತ್ವ ವ್ಯಾಕರಣದ ಅಸ್ತಿತ್ವಕ್ಕಿಂತ ಪೂರ್ವಭಾವಿ, ಎಂತಲೆ ಜನರಾಡುವ ಜೀವಂತ ಭಾಷೆಯೊಂದನ್ನು ಸ್ಥಿರವಾಗಿ ಒಂದೇ ವ್ಯಾಕರಣಕ್ಕೆ ಅಧೀನವಾಗಿರಿಸಲು ಸಾಧ್ಯವಿಲ್ಲ. ಅಂತೆಯೇ ಜನರ ಜೀವಂತ ವಿಚಾರ ಪ್ರವೃತ್ತಿಗಳು ಅವರ ಅನುಭವಗಳ ವ್ಯಾಪ್ತಿಯನ್ನು ಅವಲಂಬಿಸುತ್ತವೆಯೇ ಹೊರತು ಸ್ಥಿರೀಕೃತ ತರ್ಕವಿಧಿಗಳನ್ನಲ್ಲ. ಆದ್ದರಿಂದ ತರ್ಕ ಆ ವಿಚಾರ ಪ್ರವೃತ್ತಿಗಳ ಸ್ಫುಟ ಚಿತ್ರಣವಾಗಬಹುದೇ ವಿನಾ ಅವುಗಳ ನಿರ್ಣಾಯಕವಲ್ಲ. ನಮ್ಮ ವಿಚಾರಪರತೆ ಹಿಡಿದು ಸಾಗುವ ಜಾಡಿನ ಸಾಧಕ ಬಾಧಕಗಳನ್ನೂ ಪರಿಮಿತಿಗಳನ್ನೂ ಗುರುತಿಸುವಲ್ಲಿ ಇಂಥ ಚಿತ್ರಣದ ಉಪಯುಕ್ತತೆ ಸಂದೇಹಾತೀತ. ಸೂತ್ರತರ್ಕಭಾಷೆ, ಆಖ್ಯಾತ ತರ್ಕಭಾಷೆ ಮುಂತಾದ ತರ್ಕವ್ಯವಸ್ಥೆಗಳ ಅಧ್ಯಯನದಿಂದ ಇದಷ್ಟೇ ಅಲ್ಲದೆ ಇನ್ನೂ ಹಲವಾರು ರೀತಿಗಳಲ್ಲಿ ತಾಂತ್ರಿಕ ಲಾಭವಾಗಬಹುದು. ಆದರೆ ಸರಿಯಾಗಿ ಆಲೋಚನೆ ಮಾಡುವುದನ್ನು ಕಲಿಯಲು ತರ್ಕವನ್ನು ಅಭ್ಯಸಿಸಬೇಕೆಂಬ ಜನಪ್ರಿಯ ಭ್ರಾಂತಿ ಹಾಸ್ಯಾಸ್ಪದ. (ಎಸ್.ಆರ್.ಎಂ.)

**ಕಲಬುರ್ಗಿ, ಎಂ ಎಂ :** (1938). ಕನ್ನಡದ ಪ್ರಸಿದ್ಧ ಸಂಶೋಧಕರು, ವಿಶ್ರಾಂತ ಕುಲಪತಿಗಳು. ಬಿಜಾಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಗುಬ್ಬೇವಾಡದಲ್ಲಿ 1938 ನವೆಂಬರ್ 29ರಂದು ಜನಿಸಿದರು. ತಂದೆ ಮಡಿವಾಳಪ್ಪ, ತಾಯಿ ಗುರಮ್ಮ. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪ್ರಶಸ್ತಿಯೊಂದಿಗೆ ಉನ್ನತಶ್ರೇಣಿಯಲ್ಲಿ ಪಡೆದರು. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಗಳಿಸಿದರು.



ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ (1962) ಇವರು ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವನ್ನು ಸೇರಿ (1966) ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ 32 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದರು. ಬಳಿಕ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡು (1998) ಮೂರು ವರ್ಷ ಕ್ರಿಯಾಶೀಲರಾಗಿ ದುಡಿದರು.

ಕಲಬುರ್ಗಿಯವರು ಸಂಶೋಧನೆಗಾಗಿ ತಮ್ಮನ್ನು ಅರ್ಪಿಸಿಕೊಂಡು ಈ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬಂದವರು. ಇವರ ಸಂಶೋಧನೆ ಎರಡು ಬಗೆಯದು. ಒಂದು, ವೈಯಕ್ತಿಕ ನೆಲೆಯಲ್ಲಿ ಕೈಗೊಂಡ ಸಂಶೋಧನೆ ಮತ್ತೊಂದು ಸಾಂಸ್ಥಿಕ ನೆಲೆಯಲ್ಲಿ ಮಾಡಿದ ಸಂಶೋಧನೆ. ಹಳಗನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಜಾನಪದ, ಶಾಸನ, ಭಾಷಾವಿಜ್ಞಾನ (ನಾಮವಿಜ್ಞಾನ) ಹೀಗೆ ಇವರ ಸಂಶೋಧನೆಯ ವ್ಯಾಪ್ತಿ ದೊಡ್ಡದು. ಇವರು 46ಕ್ಕೂ ಹೆಚ್ಚು ಗ್ರಂಥಗಳನ್ನೂ 200 ಸಂಶೋಧನ ಲೇಖನಗಳನ್ನೂ ಬರೆದಿದ್ದಾರೆ. ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ.

ಸಂಶೋಧನೆ ಸತ್ಯನಿಷ್ಠವಾಗಿರಬೇಕೆಂಬ ಸಿದ್ಧಾಂತದಲ್ಲಿ ನಂಬಿಕೆಯುಳ್ಳ ಇವರು ಸಂಶೋಧನೆ ಎನ್ನುವುದು ಸತ್ಯವನ್ನು ಶೋಧಿಸಲು ಮಾಡಿಕೊಂಡ ಪ್ರತಿಜ್ಞೆ, ಸತ್ಯ ಕಹಿಯಾಗಿರುವುದೇ ಹೆಚ್ಚು ಎಂಬುದನ್ನು ಮನಗಂಡವರು. ಸಂಶೋಧನೆಯಲ್ಲಿ ಕ್ಷೇತ್ರಕಾರ್ಯದ ಅನುಭವಗಳಿಗೂ ಹೆಚ್ಚು ಒತ್ತುಕೊಟ್ಟವರು. ಈ ಕಾರಣಕ್ಕಾಗಿ ಇವರು ನಾಡಿನಾದ್ಯಂತ ಹಾಗೂ ನಾಡಿನ ಹೊರಗೂ ಸಂಚರಿಸಿದ್ದಾರೆ. ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ನಿಂಬಸಾಮಂತ ಚರಿತೆ, ಸಿರುಮಣನಾಯಕನ ಸಾಂಗತ್ಯ, ಸಿರುಮನ ಚರಿತೆ, ಗೊಲ್ಲಸಿರುಮನ ಚರಿತೆ, ಕೊಂಡಗುಳಿ ಕೇಶಿರಾಜನ ಕೃತಿಗಳು, ವಿಜಾಪುರ ಧಾರವಾಡ ಜಿಲ್ಲೆಯ ಶಾಸನಗಳು (1976), ಕರ್ನಾಟಕ ಕೈಫಿಯತ್ತುಗಳು (1994) ಮೊದಲಾದ ಸಂಪಾದಿತ ಕೃತಿಗಳು ಕರ್ನಾಟಕದ ಇತಿಹಾಸ ರಚನೆಯಲ್ಲಿ ಅಪೂರ್ವ ಆಕರ ಗ್ರಂಥಗಳಾಗಿವೆ.

ಹಳಗನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿ ವಿದ್ವತ್ತು ಗಳಿಸಿರುವ ಇವರಿಗೆ ಪಂಪ, ವಚನಕಾರರು, ಹರಿಹರ ಅಚ್ಚುಮೆಚ್ಚು, ಹಾಗಾಗಿ ಪ್ರಾಚೀನ ಗ್ರಂಥಗಳ ಪರಿಷ್ಕರಣ ವಿಚಾರದಲ್ಲಿ ಆಸ್ಥೆ ಬೆಳೆಸಿಕೊಂಡರು. ಚೆನ್ನಬಸವಣ್ಣನವರ ಷಟ್ಸ್ಥಲವಚನ, ಮಹಾಸಂಪುಟ (1990) ಬಸವಣ್ಣನವರ ಟೀಕಿನ ವಚನಗಳು, ಹರಿಹರನ ರಗಳೆಗಳು, ಕುಮಾರರಾಮ ಸಾಂಗತ್ಯಗಳ ಸಂಪಾದನೆ ಮೂಲಕ ಆಕರ ಸಂಶೋಧನೆಗೆ ಕೊಡುಗೆ ನೀಡಿದರು. ಇವರು ರಚಿಸಿದ ಕನ್ನಡ ಗ್ರಂಥಸಂಪಾದನ ಶಾಸ್ತ್ರ (1972) ಈ ಕ್ಷೇತ್ರದ ಒಂದು ಮಹತ್ವದ ಕೃತಿ. ಕನ್ನಡ ಸಂಶೋಧನ ಶಾಸ್ತ್ರ (1992), ಹಸ್ತಪ್ರತಿ ಶಾಸ್ತ್ರ, ಕನ್ನಡ ನಾಮ ವಿಜ್ಞಾನ ಶಾಸ್ತ್ರ– ಇವು ಆಯಾ ಕ್ಷೇತ್ರದ ಅಮೂಲ್ಯ ಕೃತಿಗಳೆನಿಸಿವೆ.

ಕಲಬುರ್ಗಿಯವರ ಸಮಗ್ರ ಸಂಶೋಧನ ಬರೆಹಗಳು ಮಾರ್ಗ ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿವೆ. ಈ ಎಲ್ಲ ರಚನೆಗಳು ಸಾಹಿತ್ಯ, ಸಂಸ್ಕೃತಿ, ಶಾಸನ, ಜಾನಪದ ಕ್ಷೇತ್ರದಲ್ಲಿ ನಡೆಸಿದ ಬಹುಮುಖೀ ಸಂಶೋಧನೆಗೆ ಹಿಡಿದ ಕನ್ನಡಿಯಾಗಿವೆ. ವ್ಯಾಖ್ಯಾನ ಮತ್ತು ವಿಶ್ಲೇಷಣೆಗಳನ್ನು ಮೇಳೈಸಿ ಕೊಂಡಿರುವುದೇ ಇಲ್ಲಿನ ಸಂಶೋಧನೆಯ ವೈಶಿಷ್ಟ್ಯ. ಸಂಶೋಧನ ಪ್ರತಿಭೆಯ ಬಹುಶ್ರುತತೆಯನ್ನು ನಾವು ಈ ಲೇಖನಗಳಲ್ಲಿ ಕಾಣಬಹುದಾಗಿದೆ. ಈ ಸರಣಿಯ ನಾಲ್ಕನೆಯ ಸಂಪುಟ 2004ರಲ್ಲಿ ಬೆಳಕುಕಂಡಿದೆ.

ಕನ್ನಡ ಸಂಶೋಧನೆಗೆ ಸಂಬಂಧಿಸಿದಂತೆ ಹಲವಾರು ಉತ್ತಮ ಯೋಜನೆಗಳನ್ನು ಇವರು ರೂಪಿಸಿ, ಅದರಲ್ಲಿ ಸಂಸ್ಥೆಗಳನ್ನು ತೊಡಗಿಸಿಕೊಂಡು ಸಾಕಾರಗೊಳಿಸಿದ್ದಾರೆ. ಈ ಪೈಕಿ ಕನ್ನಡ ಹಸ್ತಪ್ರತಿಗಳ ಸಂಗ್ರಹಣೆ, ಪರಿವೀಕ್ಷಣೆ, ಸಮಗ್ರ ವಚನ ಸಾಹಿತ್ಯ ಪ್ರಕಟಣೆ, ಕರ್ನಾಟಕದ ನೆರೆಯ ರಾಜ್ಯಗಳ ಹಸ್ತಪ್ರತಿ ಸಂಗ್ರಹ, ಮಾನಸೋಲ್ಲಾಸ ಅನುವಾದ, ಅಪ್ರಕಟಿತ ವೀರಶೈವ ಗ್ರಂಥಗಳ ಪ್ರಕಟಣಾ ಯೋಜನೆ ಬೆಲೆಯುಳ್ಳವಾಗಿವೆ.

ಇವರು ತಮ್ಮ ಸಾಹಿತ್ಯಕ ಸಾಧನೆಗಾಗಿ ಅನೇಕ ಗೌರವ, ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಶಾಸನಗಳಲ್ಲಿ ಶಿವಶರಣರು (1970), ಶಾಸನ ವ್ಯಾಸಂಗ (1974) ಮೊದಲಾದ ಐದು ಗ್ರಂಥಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ವರ್ಷದ ಶ್ರೇಷ್ಠ ಪುಸ್ತಕ ಬಹುಮಾನ ಲಭ್ಯವಾಗಿದೆ. ವಿಶ್ವಮಾನವ ಪ್ರಶಸ್ತಿ (1990), ರಾಜ್ಯೋತ್ಸವ ಪ್ರಶಸ್ತಿ (1991), ವರ್ಧಮಾನ ಪ್ರಶಸ್ತಿ (1994) ಇವರಿಗೆ ಸಂದಿವೆ. ಇವರಿಗೆ 1996ರಲ್ಲಿ ಕರ್ನಾಟಕ ಸರ್ಕಾರ ಪಂಪ ಪ್ರಶಸ್ತಿ ನೀಡಿ ಗೌರವಿಸಿದೆ. ಪಂಪ ಪ್ರಶಸ್ತಿಯಿಂದ ಬಂದ ಒಂದು ಲಕ್ಷರೂಪಾಯಿಗಳನ್ನು ಇವರು ಅಣ್ಣಿಗೇರಿಯಲ್ಲಿ ಪಂಪನ ಹೆಸರಿನ ಸಂಶೋಧನ ಕೇಂದ್ರ ತೆರೆಯಲು ಕೊಡುಗೆಯಾಗಿ ನೀಡಿದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರಿಗೆ ಜಾನಪದ ತಜ್ಞ ಪ್ರಶಸ್ತಿ ನೀಡಿದೆ. ಇವರಿಗೆ ಮಹಾಮಾರ್ಗ ಎಂಬ ಗೌರವ ಗ್ರಂಥವನ್ನು ಸಮರ್ಪಿಸಲಾಗಿದೆ. (ವೈ.ಸಿ.ಬಿ.)

**ಕಲಹರಿ ಮರುಭೂಮಿ :** ದಕ್ಷಿಣ ಆಫ್ರಿಕದ ಒಂದು ಮರುಭೂಮಿ ಪ್ರದೇಶ. ದಕ್ಷಿಣ ಅಕ್ಷಾಂಶ 20° – 28° ಯ ವರೆಗೂ ಪೂರ್ವರೇಖಾಂಶ 19° ಯಿಂದ 24° ಯವರೆಗೂ ಹಬ್ಬಿದೆ. ಇದರ ವಿಸ್ತೀರ್ಣ 9,30,000 ಚ.ಕಿಮೀಗೂ ಹೆಚ್ಚು. ಮುಖ್ಯವಾಗಿ ಬೆಚುವಾನ ರಕ್ಷಿತ ಪ್ರದೇಶದ ಪಶ್ಚಿಮ ಭಾಗವನ್ನು ಈ ಹೆಸರಿನಿಂದ ಕರೆದರೂ ಪಶ್ಚಿಮ ಆಫ್ರಿಕದ ದಕ್ಷಿಣ ಭಾಗವೂ ದಕ್ಷಿಣ ಆಫ್ರಿಕ ಗಣರಾಜ್ಯದ ಗುಡ್‌ಹೋಪ್ ಭೂಶಿರದ ಭಾಗಗಳೂ ಇದರಲ್ಲಿ ಸೇರಿವೆ. ಅಕ್ಷರಶಃ ಮರುಭೂಮಿ ಎನಿಸಿಕೊಳ್ಳುವ ಪ್ರದೇಶ ಕಡಿಮೆಯೇ. ಮಳೆಯೂ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗುತ್ತದೆ : ಈಶಾನ್ಯದಲ್ಲಿ ವರ್ಷಕ್ಕೆ ಸರಾಸರಿ 50 ಸೆಂ.ಮೀ. ಮಳೆಯಿದ್ದರೆ ನೈಋತ್ಯದಲ್ಲಿ ಕೇವಲ 13 ಸೆಂಮೀ ಅನಾವೃಷ್ಟಿ ಪ್ರದೇಶದಲ್ಲಿ ಮರಳುಗುಡ್ಡಗಳನ್ನು ಕಾಣಬಹುದು. ಕಲಹರಿಯ ಎತ್ತರ ಎಲ್ಲ ಕಡೆಯೂ ಸುಮಾರು

909 ಮೀ. ಉತ್ತರಭಾಗದಲ್ಲಿ ಓಕವಾಂಗೋ ನದಿಯ ಹೆಚ್ಚಳ ಪ್ರವಾಹದಿಂದ ತುಂಬುವ ಉಪ್ಪಿನ ವಿಶಾಲವಾದ ಮಕರಿಕಾರಿ ಪ್ರದೇಶವೇ ಅತ್ಯಂತ ತಗ್ಗು. ಅಡಿಯ ಪುರಾತನ ಬಂಡೆಗಳ ಮೇಲೆ ಹೊದ್ದುಕೊಂಡಿರುವ ಕೆಮ್ಮರಳು ನೆಲವೇ ಸಾಮಾನ್ಯವಾಗಿ ಕಂಡುಬರುತ್ತದೆ. ಬಿದ್ದ ಮಳೆನೀರನ್ನು ಬೇಗ ಹೀರುವ ಗುಣ ಇದಕ್ಕಿರುವುದರಿಂದ ಒಂದೆರಡು ದಿನಕ್ಕಿಂತ ಹೆಚ್ಚು ಆಯುಸ್ಸಿರುವ ತೊರೆಗಳೇ ಇಲ್ಲಿ ಇಲ್ಲವೆನ್ನಬಹುದು.

ಬೀಳುವ ಮಳೆಗೆ ಅನುಗುಣವಾಗಿ ಇಲ್ಲಿ ಸಸ್ಯವಿತರಣೆಯಾಗಿದೆ: ಕಾಡುಗಳಿಂದ ಸಣ್ಣ ಕುರುಚಲು ಗಿಡಗಳ ವರೆಗೆ ವ್ಯತ್ಯಾಸವಾಗುತ್ತದೆ. ಮಳೆಗಾಲದಲ್ಲಿ ಎಲ್ಲ ಕಡೆಯೂ ಹುಲ್ಲು ಬೆಳೆಯುತ್ತದೆ. ಆನೆಯೇ ಮುಂತಾದ ಸಸ್ಯಹಾರಿ ಪ್ರಾಣಿಗಳಿಗೆ ಒಳ್ಳೆಯ ಮೇವುಂಟು. ಮಳೆಗಾಲದಲ್ಲಿ ಬೇಟೆಗಾರರಿಗೆ ಈ ಪ್ರದೇಶವೊಂದು ಆಕರ್ಷಣೆ. ನೈಋತ್ಯದಲ್ಲಿರುವ ಕಲಹರಿ ಜೇಮ್ಸ್ ಬಾಕ್ ರಾಷ್ಟ್ರೀಯ ಉದ್ಯಾನದ ವಿಸ್ತೀರ್ಣ ಸುಮಾರು 8,800 ಚ.ಕಿಮೀ. ಬಾಂಟು ಬುಡಕಟ್ಟಿನ ಜನ ಕಲಹರಿಯ ಅಂಚಿನಲ್ಲಿ ವಾಸಿಸುತ್ತಾರೆ. ಮರುಭೂಮಿಯ ಮಧ್ಯಪ್ರದೇಶದಲ್ಲಿರುವ ಪೊದೆ ಜನರೇ (ಬುಷ್‌ಮೆನ್) ಇಲ್ಲಿಯ ನಿಜವಾದ ಮೂಲವಾಸಿಗಳು. ಇವರ ಸಂಖ್ಯೆ ಸುಮಾರು 2,000. ಅನೇಕ ವರ್ಷಗಳ ಹಿಂದೆ ಬಾಂಟು ಜನ ಇವರನ್ನು ಮಧ್ಯಕಲಹರಿ ಪ್ರದೇಶಕ್ಕೆ ಓಡಿಸಿದರು. ಈ ಜನ ಕುಬ್ಜರು, ಮಂಗೋಲಾಯ್ಡ್ ಲಕ್ಷಣವುಳ್ಳವರು, ಪೀತವರ್ಣೀಯರು. ಬಾಂಟು ಜನರಿಂದ ವಿಶಿಷ್ಟವಾದ ಲಕ್ಷಣ ಇವರದು. ಇವರು ಅಲೆಮಾರಿಗಳು. ಚತುರ ಬೇಟೆಗಾರರೂ ಮೂಲಿಕಾಜ್ಞಾನವುಳ್ಳವರೂ ಆದ್ದರಿಂದ ಇವರು ಬದುಕು ಸಾಗಿಸುತ್ತಿದ್ದಾರೆ ; ಆ ಕಠಿಣ ಪರಿಸರದ ಮೇಲೆ ಸಂಪೂರ್ಣ ಒಡೆತನ ಸ್ಥಾಪಿಸಿದ್ದಾರೆ.

ಡೇವಿಡ್ ಲಿವಿಂಗ್‌ಸ್ಟನ್ ಮತ್ತು ವಿಲಿಯಂ ಸಿ. ಆಸ್ವೆಲ್–ಇವರೇ ಕಲಹರಿಯನ್ನು ದಾಟಿ ಗಾಮಿ ಸರೋವರವನ್ನು ಪತ್ತೆಹಚ್ಚಿದ ಮೊಟ್ಟಮೊದಲಿನ ಬಿಳಿಯರು. (1878–79)ರಲ್ಲಿ ಬೋಯರ್‌ಗಳ ದೊಡ್ಡ ಗುಂಪೊಂದು ಕಲಹರಿ ದಾಟಿತಾದರೂ ಅವರಲ್ಲಿ ಸುಮಾರು 250 ಮಂದಿಯೂ 9,000 ಜಾನುವಾರುಗಳೂ ನಾಶವಾದವು. ಈಗ ಮೋಟಾರ್ ವಾಹನ ಸೌಕರ್ಯವಿರುವುದರಿಂದ ಸಂಚಾರ ಸುಲಭವಾಗಿದೆ. ಗಾನ್‌ಜಿ ಜಿಲ್ಲೆಯಲ್ಲಿರುವ ಜಮೀನುಗಳಿಂದ ಕೇಪ್‌ಟೌನಿಗೆ ಹಾಲಿನ ಕೆನೆ ರವಾನೆಯಾಗುತ್ತದೆ. (ಬಿ.ಎಸ್.ಎಚ್.)

**ಕಲಹಾ :** ಸ್ಕಾಂದ ಪುರಾಣದಲ್ಲಿ ಉಲ್ಲೇಖಿತಳಾದ ಒಬ್ಬ ಬ್ರಾಹ್ಮಿಣಿ. ಸೌರಾಷ್ಟ್ರ ನಗರದ ಭಿಕ್ಷು ಎಂಬ ಬ್ರಾಹ್ಮಣನ ಹೆಂಡತಿ. ಪತಿಗೆ ವಿಧೇಯಳಾಗಿರದೆ ಯಾವಾಗಲೂ ಅವನಲ್ಲಿ ಕಲಹವನ್ನೇ ಮಾಡುತ್ತಿದ್ದಳು, ಪುರಾಣಪ್ರಸಿದ್ಧಳಾದ ಚಂಡಿಯಂತೆ. ಗಂಡನಿಗೆ ಸುಳಿವು ಕೊಡದಂತೆ ರುಚಿಕರವಾದ ತಿಂಡಿತಿನಿಸುಗಳನ್ನು ಮಾಡಿ ತಾನೊಬ್ಬಳೇ ತಿನ್ನುತ್ತಿದ್ದಳು. ತಾನು ಉದ್ದೇಶಿಸಿದ ಯಾವುದೇ ಧರ್ಮಕಾರ್ಯಕ್ಕೂ ಈಕೆ ಹೀಗೆ ಪ್ರತಿಕೂಲಿಸುತ್ತಿದ್ದ ಕಾರಣ ಭಿಕ್ಷು ಅನುಕೂಲಳಾದ ಮತ್ತೊಬ್ಬ ಕನ್ಯೆಯನ್ನು ಮದುವೆ ಮಾಡಿಕೊಳ್ಳಲು ಯತ್ನಿಸಿದ. ಅದಕ್ಕೆ ಕ್ರೋಧಗೊಂಡ ಕಲಹಾ ವಿಷಪಾನಮಾಡಿ ಪ್ರಾಣಬಿಟ್ಟಳು ; ಎಸಗಿದ ದುರಾಚಾರ ಮತ್ತು ತಂದುಕೊಂಡ ದುರ್ಮರಣದ ನಿಮಿತ್ತವಾಗಿ ಅನೇಕ ಹೀನ ಜನ್ಮಗಳನ್ನು ಎತ್ತಿ ಅನಂತರ ಪ್ರೇತ ಶರೀರಿಣಿಯಾದಳು. ಐದುನೂರು ವರ್ಷಗಳ ಅನಂತರ ಹಸಿವು ಬಾಯಾರಿಕೆಗಳಿಂದ ಬಳಲಿದ ಈಕೆ ವರ್ತಕನೊಬ್ಬನ ದೇಹವನ್ನು ಹೊಕ್ಕಳು. ಆ ವರ್ತಕ ಕೃಷ್ಣಾನದಿಯಲ್ಲಿ ಸ್ನಾನ ಮಾಡಿದ್ದರಿಂದ ಅವನಲ್ಲಿರಲಾರದೆ ಸಹ್ಯಾದ್ರಿಯ ಪರಿಸರದಲ್ಲಿದ್ದ ಕರವೀರಪುರವನ್ನು ಸೇರಿದಳು. ಅಲ್ಲಿ ಧರ್ಮದತ್ತನೆಂಬ ಬ್ರಾಹ್ಮಣ ಒಮ್ಮೆ ವಿಷ್ಣುವ್ರತಗಳಲ್ಲೊಂದಾದ ಕಾರ್ತಿಕ ವ್ರತವನ್ನಾಚರಿಸಿ ಜಾಗರಣೆ ಮಾಡಲು ತೀರ್ಥಾದಿಗಳೊಡನೆ ಹರಿಮಂದಿರಕ್ಕೆ ಹೋಗುವಾಗ ಅವನ ಕಣ್ಣಿಗೆ ಬಿದ್ದಳು. ಇವಳ ವಿಕೃತ ರೂಪವನ್ನು ಕಂಡು ಬ್ರಾಹ್ಮಣ ಕೈಲಿದ್ದ ಪೂಜಾದ್ರವ್ಯಗಳನ್ನು ಇವಳ ಮೇಲೆ ಎಸೆಯಲು ಅವುಗಳ ಪ್ರಭಾವದಿಂದ ಪೂರ್ವಜನ್ಮಸ್ಮೃತಿ ಬರಲಾಗಿ ತಾನು ಅದುವರೆಗೂ ಎತ್ತಿದ, ಮುಂದೆ ಎತ್ತಬೇಕಾದ ತಿರ್ಯಕ್ ಜನ್ಮಗಳನ್ನು ನೆನೆದು ಪಶ್ಚಾತ್ತಾಪಗೊಂಡು ಗೋಳಿಟ್ಟು ಬ್ರಾಹ್ಮಣನಲ್ಲಿ ಧರ್ಮಯಾಚನೆ ಮಾಡಿದಳು. ಕನಿಕರಗೊಂಡ ಧರ್ಮದತ್ತ ತಾನು ಎಸಗಿದ ಕಾರ್ತಿಕ ವ್ರತದಲ್ಲಿ ಒಂದು ಜನ್ಮದ ಅರ್ಧಫಲವನ್ನು ಈಕೆಗೆ ಧಾರೆಯೆರೆದು ಕೊಟ್ಟ. ಅದರಿಂದ ಶಾಪವಿಮುಕ್ತಳಾದ ಕಲಹಾ ಮುಂದೆ ಕೈಕೆಯಾಗಿ ಹುಟ್ಟಿ ದಶರಥನಾಗಿ ಹುಟ್ಟಿದ ಧರ್ಮದತ್ತನನ್ನು ವರಿಸಿದಳು. ಈ ವೃತ್ತಾಂತ ಕೈಕೆಯ ಗುಣಶೀಲಗಳ ಮೇಲೆ ಬೆಳಕು ಬೀರುವುದರಿಂದ ಮುಖ್ಯವೆನಿಸಿದೆ. (ಎನ್.ಎಸ್.ಆರ್.ಬಿ.)

**ಕಲಾ [1] :** ಲಲಿತಕಲೆಗಳಿಗೆ ಮೀಸಲಾಗಿದ್ದ ಕನ್ನಡ ಪತ್ರಿಕೆ. 1930 ಮಾರ್ಚ್ ತಿಂಗಳಿನಲ್ಲಿ ಆರಂಭವಾಗಿ ಸು. 4 ವರ್ಷಗಳ ಕಾಲ ನಡೆಯಿತು. ಸಂಪಾದಕರು ಎ. ಎನ್. (ಅ. ನ.) ಸುಬ್ಬರಾವ್.

'ಕಲೆಯ ಖನಿಯಂತಿದ್ದ ಕರ್ನಾಟಕದಲ್ಲಿ ಕಲೆಗಳು ಗಳಿತಾವಸ್ಥೆಯಲ್ಲಿದ್ದು, ತಕ್ಕ ವ್ಯವಸಾಯವಿಲ್ಲದೆ ಸೊರಗುತ್ತಿವೆ....ಜನಸಾಮಾನ್ಯರಲ್ಲಿ ಕಲಾಭಿಮಾನವೂ ಉದ್ಯೋಗ ತತ್ಪರತೆಯೂ ಅಳಿಸಿಹೋಗಿರುವುದು.....ಇಂಥ ಪರಿಸ್ಥಿತಿಯಿಂದ ಪಾರಾಗಿ ಕರ್ನಾಟಕದ ಕೀರ್ತಿಯನ್ನುಳಿಸಲು ವಿದ್ಯಾವಂತರೂ ಕಲಾಭಿಮಾನಿಗಳೂ ನಡೆಸಬೇಕಾದ ಕಾರ್ಯಗಳು ಅನೇಕವಿವೆ'–ಎಂಬ ಅಂಶವನ್ನು ಮನಗಂಡ ಸಂಪಾದಕರು, ಈ ಭಾಗದಲ್ಲಿ 'ಅಳಿಲು ಭಕ್ತಿ, ಮಳಲು ಸೇವೆ' ಮಾಡಲು ಉದ್ದೇಶಿಸಿ ಈ ಪತ್ರಿಕೆಯನ್ನು ಸ್ಥಾಪಿಸಿದರು.

ಪತ್ರಿಕೆಯನ್ನು ವಿದ್ಯಾ, ಲಲಿತಕಲೆ, ರಂಗಭೂಮಿ ಮತ್ತು ಕುಶಲ ವಿದ್ಯೆಗಳ ಮಾಸಪತ್ರಿಕೆ ಎಂದು ವಿವರಿಸಲಾಗಿತ್ತಾದರೂ ಇದರ ಒಲವು ಪ್ರಧಾನವಾಗಿ ಚಿತ್ರಕಲೆಯ ಕಡೆಗೆ ಇತ್ತು. ಕತೆ ಕವನಗಳೂ ಕಲಾವಿಮರ್ಶೆ ಮತ್ತು ವಿವಿಧ ಕಲೆಗಳನ್ನು ಕುರಿತ ವಿವರಣಾತ್ಮಕ ಲೇಖನಗಳೂ ಇದರಲ್ಲಿ ಪ್ರಕಟವಾಗುತ್ತಿದ್ದವು. ದೇವುಡು ನರಸಿಂಹಶಾಸ್ತ್ರೀ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ, ಬೆಳ್ಳಾವೆ ನರಹರಿಶಾಸ್ತ್ರೀ, ಆಸ್ಥಾನ ವಿದ್ವಾನ್ ಜಯರಾಮ ವೆಂಕಟಾಚಾರ್ಯ, ಶಿವರಾಮ ಕಾರಂತ, ಅ. ನ.ಕೃಷ್ಣರಾಯ, ವಿ. ಕೆ.ಗೋಕಾಕ್, ತಿ.ತಾ. ಶರ್ಮ ಮುಂತಾದ ವಿದ್ವಾಂಸರು ಈ ಪತ್ರಿಕೆಯ ಲೇಖಕ ಬಳಗಕ್ಕೆ ಸೇರಿದ್ದರು. (ಎಂ.ಎನ್.ಸಿ.ಎಚ್.)

**ಕಲಾ [2] :** ಕಾಶ್ಮೀರಶೈವಪರಿಭಾಷೆಯಂತೆ ಇದು ಮಾಯೆಯಿಂದ ಹುಟ್ಟಿ, ಅಶುದ್ಧ ಸೃಷ್ಟಿಯ ತತ್ತ್ವಗಳಿಗೆ ಮೂಲವಾಗಿದೆ. ಯಾವುದು ಸ್ವಸ್ವರೂಪಾವೇಶದಿಂದ ಇತರ ವಸ್ತುಗಳನ್ನು ತನ್ನ ಹಾಗೆ ಸಂಕುಚಿತವಾಗಿರುವಂತೆ ನಿಯಮಿಸುತ್ತದೆಯೋ ಹಾಗೆಯೇ ನಡೆಸುತ್ತದೆಯೋ ಅದು ಕಲಾ ಎನ್ನಿಸಿಕೊಳ್ಳುವುದು. ಜೀವಾತ್ಮನ ಸರ್ವಜ್ಞತ್ವ ಸರ್ವಕರ್ತೃತ್ವಾದಿ ಎಲ್ಲ ಕ್ರಿಯಾಶಕ್ತಿಯ ಪ್ರಭಾವಕ್ಕೂ ಕಲಾ ಸಂಕೋಚವನ್ನುಂಟು ಮಾಡುತ್ತದೆ. ಇದರ ಪರಿಣಾಮವಾಗಿ ಜೀವಾತ್ಮ ತನ್ನ ಸಂಕೋಚ ಸ್ಥಿತಿಯನ್ನೇ ಸ್ವರೂಪವೆಂದು ಗ್ರಹಿಸುತ್ತಾನೆ. (ಜೆ.ಆರ್.)

**ಕಲಾಂ ಅಬ್ದುಲ್, ಎ.ಪಿ.ಜೆ.** (1931–.) **:** ಭಾರತ ಗಣರಾಜ್ಯದ ಮಾಜಿ ರಾಷ್ಟ್ರಪತಿ. ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ; ತತ್ತ್ವಜ್ಞ, ಭಾರತರತ್ನ ಪ್ರಶಸ್ತಿ ಪುರಸ್ಕೃತರು.



ಇವರ ಪೂರ್ಣ ಹೆಸರು ಅವುಲ್ ಪಕೀರ್ ಜೈನುಲಬ್ದೀನ್ ಅಬ್ದುಲ್ ಕಲಾಂ ಎಂದಾದರೂ ಅಬ್ದುಲ್ ಕಲಾಂ ಎಂದೇ ಪ್ರಸಿದ್ಧರಾದವರು. ಇವರು ತಮಿಳುನಾಡಿನ ರಾಮೇಶ್ವರಂನಲ್ಲಿ 1931 ಅಕ್ಟೋಬರ್ 15ರಂದು ಜನಿಸಿದರು. ಬಡತನದ ಕುಟುಂಬದಲ್ಲಿ ಜನಿಸಿದ ಇವರು ಬಾಲ್ಯದಿಂದಲೇ ಕಷ್ಟಸಹಿಷ್ಣುತೆಯನ್ನು ಮೈಗೂಡಿಸಿ ಕೊಂಡವರು. ಕಲಿಕೆ ಮತ್ತು ಗಳಿಕೆ ಇವರಿಗೆ ಚಿಕ್ಕಂದಿನಲ್ಲೇ ರೂಢಿಯಾಯಿತು. ಪತ್ರಿಕೆಗಳನ್ನು ಮನೆಮನೆಗೆ ಹಂಚುವ ಕಾಯಕ ಮಾಡಿ ಶಾಲೆಗೆ ಹೋಗುತ್ತಿದ್ದರು. ಇವರಿಗೆ ಗಣಿತವಿಜ್ಞಾನದ ಬಗ್ಗೆ ವಿಶೇಷ ಒಲವಿದ್ದುದನ್ನು ಅಧ್ಯಾಪಕರು ಗುರುತಿಸಿದ್ದರು.

ಮುಂದೆ ತಿರುಚಿರಾಪಳ್ಳಿಯಲ್ಲಿ ಕಾಲೇಜು ಶಿಕ್ಷಣಕ್ಕೆ ಸೇರಿ 1954ರಲ್ಲಿ ವಿಜ್ಞಾನದಲ್ಲಿ ಪದವಿ ಪಡೆದರು. ಇವರ ಆಸಕ್ತಿಯ ವಿಷಯವಾಗಿದ್ದ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶೇಷ ಅಧ್ಯಯನ ಮಾಡಲು ಚೆನ್ನೈನ 'ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ಸಂಸ್ಥೆ ಸೇರಿದರು. ಆ ವಿಷಯದಲ್ಲಿ ಪದವಿ ಪಡೆದು ಡಿಆರ್‌ಡಿಓ ಸಂಸ್ಥೆಯಲ್ಲಿ ಮುಖ್ಯ ವಿಜ್ಞಾನಿಯಾಗಿ ಸೇರಿದರು. ಏರೋ ಸ್ಪೇಸ್ ಎಂಜಿನಿಯರಿಂಗ್‌ನಲ್ಲಿ ಡಾಕ್ಟೊರೇಟ್ ಪದವಿ ಗಳಿಸಿದರು. ಇವರಿಗೆ ವಿವಿಧ ಯೋಜನೆಗಳಲ್ಲಿ ಕೆಲಸ ಮಾಡುವ, ವಿಕ್ರಮ್ ಸಾರಾಭಾಯಿಯಂತಹ ಪ್ರತಿಭಾವಂತ ವಿಜ್ಞಾನಿಗಳ ನೇತೃತ್ವದಲ್ಲಿ ಕೆಲಸ ಮಾಡುವ ಅವಕಾಶ ಒದಗಿಬಂತು.

1969ರಲ್ಲಿ ಕಲಾಂ ಅವರನ್ನು ಪ್ರಸಿದ್ಧ ಬಾಹ್ಯಾಕಾಶ ಸಂಶೋಧನ ಸಂಸ್ಥೆ ಇಸ್ರೊಗೆ ವರ್ಗ ಮಾಡಲಾಯಿತು. ಇವರು ಅಲ್ಲಿ ರಾಷ್ಟ್ರದ ಪ್ರಥಮ ಉಪಗ್ರಹ ಉಡಾವಣಾವಾಹನದ (ಎಸ್‌ಎಲ್‌ವಿ) ರೂಪುರೇಷೆ ನಿರ್ಮಿಸುವಲ್ಲಿ ಭಾಗಿಯಾದರು. 1980ರ ಹೊತ್ತಿಗೆ ಇವರು ಪ್ರಧಾನವಾಗಿ ವಿನ್ಯಾಸಗೊಳಿಸಿದ್ದ ರಾಕೆಟ್ ಮೂಲಕ ರೋಹಿಣಿ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಲಾಯಿತು. ಪೋಖ್ರಾನ್‌ನಲ್ಲಿ ನಡೆಸಿದ ಅಣ್ವಸ್ತ್ರ ಪ್ರಯೋಗ ಕಾಲದಲ್ಲೂ ಕಲಾಂ ಅವರು ರಾಜಾರಾಮಣ್ಣ ಅವರ ಆಹ್ವಾನದ ಮೇರೆಗೆ ಸ್ಥಳದಲ್ಲಿ ಉಪಸ್ಥಿತರಿದ್ದರು. ಬ್ಯಾಲಿಸ್ಟಿಕ್ ಕ್ಷಿಪಣಿಗಳ ತಯಾರಿಕೆ; ಅಗ್ನಿ ಮತ್ತು ಪೃಥ್ವಿ ಕ್ಷಿಪಣಿಗಳ ಸಿದ್ಧತೆ– ಈ ಕಾರ್ಯಗಳಲ್ಲೂ ಇವರ ಪಾತ್ರ ದೊಡ್ಡದು. 1992–1999ರ ವರೆಗೂ ಭಾರತದ ಪ್ರಧಾನಮಂತ್ರಿಗಳ ಪ್ರಧಾನ ವೈಜ್ಞಾನಿಕ ಸಲಹೆಗಾರರಾಗಿ, ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಹಿರಿಮೆ ಇವರದು. ಇವರು ಅಣುವಿಜ್ಞಾನಿ, ರಾಕೆಟ್ ವಿಜ್ಞಾನಿ ಹಾಗೂ ಬಾಹ್ಯಾಕಾಶ ತಜ್ಞರಾಗಿ ದೇಶವಿದೇಶಗಳಲ್ಲಿ ಮನ್ನಣೆ ಪಡೆದಿದ್ದಾರೆ. ದೇಶೀಯ ಮತ್ತು ವಿದೇಶಿ ವಿಶ್ವವಿದ್ಯಾಲಯಗಳು

ಹಾಗೂ ಸಂಶೋಧನ ಸಂಸ್ಥೆಗಳು ಇವರಿಗೆ ಗೌರವ ಡಾಕ್ಟೊರೇಟ್ ಪದವಿಗಳನ್ನು ಮತ್ತು ಉನ್ನತ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಭಾರತದ ಪ್ರತಿಷ್ಠಿತ ಪ್ರಶಸ್ತಿಗಳಾದ ಪದ್ಮಭೂಷಣ (1981), ಪದ್ಮವಿಭೂಷಣ (1990) ಹಾಗೂ ಭಾರತರತ್ನ (1997) ಪ್ರಶಸ್ತಿಗಳಿಗೆ ಇವರು ಭಾಜನರಾಗಿ ರಾಷ್ಟ್ರದ ಹೆಮ್ಮೆ ಎನಿಸಿದ್ದಾರೆ.

ಅಬ್ದುಲ್ ಕಲಾಂ ಅವರನ್ನು ಭಾರತದ ಗಣರಾಜ್ಯದ ಹನ್ನೊಂದನೆಯ ರಾಷ್ಟ್ರಪತಿಯಾಗಿ ಆರಿಸಲಾಯಿತು. ಇವರು 2002ರ ಜುಲೈ 25 ರಿಂದ 2007 ಜುಲೈ 24ರ ವರೆಗೆ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ್ದರು. ಸರಳತೆ, ಪ್ರಾಮಾಣಿಕತೆ, ಮತ್ತು ಮೇಧಾವಿತನದ ಸಾಕಾರದಂತಿರುವ ಕಲಾಂ ಅವರು ರಾಷ್ಟ್ರಪತಿ ಹುದ್ದೆಯ ಘನತೆಯನ್ನು ಹೆಚ್ಚಿಸಿದರು. ಜನಸಾಮಾನ್ಯರ ರಾಷ್ಟ್ರಪತಿ ಎಂಬ ಕೀರ್ತಿಗೆ ಪಾತ್ರರಾದರು. ಸ್ವತಃ ಬ್ರಹ್ಮಚಾರಿ ಆದ ಇವರಿಗೆ ಮಕ್ಕಳೆಂದರೆ ಬಹು ಪ್ರೀತಿ. ಮಕ್ಕಳೊಂದಿಗೆ ಬೆರೆತು ಉಪಯುಕ್ತ ಸಲಹೆ ಸೂಚನೆ ನೀಡುವುದು ಇವರ ಪ್ರಿಯ ಹವ್ಯಾಸ. ರಾಷ್ಟ್ರಪತಿ ಹುದ್ದೆಯಿಂದ ವಿರಮಿಸಿದ ಅನಂತರವೂ ಇವರು ಜನಪ್ರಿಯ ಧುರೀಣರು ಮತ್ತು ವಿಜ್ಞಾನಿಯಾಗಿ ಕಂಗೊಳಿಸುತ್ತಿದ್ದಾರೆ. ಇವರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹತ್ತಾರು ಗ್ರಂಥಗಳನ್ನು ರಚಿಸಿದ್ದಾರೆ. 'ವಿಂಗ್ಸ್ ಆಫ್ ಫೈರ್' ಎಂಬುದು ಇವರ ಆತ್ಮಕಥೆ. ಇವರು ತಮ್ಮ 'ಇಂಡಿಯಾ ಮೈ ಡ್ರೀಮ್', 'ಇಂಡಿಯಾ 2020' ಎಂಬ ಗ್ರಂಥಗಳಲ್ಲಿ ಭವ್ಯ ಭಾರತ ನಿರ್ಮಾಣದ ಬಗ್ಗೆ ರೂಪುರೇಷೆಗಳನ್ನು ಹಾಕಿಕೊಟ್ಟಿದ್ದಾರೆ. 'ಮೈ ಜರ್ನಿ', 'ಟಾರ್ಗೆಟ್ ತ್ರಿ ಬಿಲಿಯನ್'– ಇವು ಇವರ ಇತ್ತೀಚಿನ ಕೃತಿಗಳು. ಅಪ್ರತಿಮ ದೇಶಭಕ್ತರೂ ಉತ್ತಮ ವಾಗ್ಮಿಯೂ ಆಗಿರುವ ಕಲಾಂ ಅವರು ಈಗಲೂ ದೇಶ ವಿದೇಶಗಳಲ್ಲಿ ಸಂಚರಿಸುತ್ತ ಜ್ಞಾನ–ವಿಜ್ಞಾನ ಪ್ರಸಾರದಲ್ಲಿ ತಮ್ಮ ಸಹಾಯಹಸ್ತ ನೀಡುತ್ತಿದ್ದಾರೆ. (ಡಿ.ಎಸ್.ಜೆ.)

**ಕಲಾಡಿ, ಕಾರ್ಲೊ :** 1826–90. ಕಾರ್ಲೊ ಲೊರೆನ್ಸಿ ಎಂಬ ಇಟಲಿಯ ಲೇಖಕನ ಕೃತಕನಾಮ. ಮ್ಯಾಟ್ಜಿನಿಯ ಪರವಾಗಿ ಪತ್ರಿಕೆಗಳಿಗೆ ವಿಪುಲವಾಗಿ ಬರೆದನಲ್ಲದೆ ನಾಟಕ ಮತ್ತು ಕಾದಂಬರಿಗಳನ್ನು ರಚಿಸಿ ಪ್ರಸಿದ್ಧನಾಗಲು ಯತ್ನಿಸಿದ. ಅನಂತರ ಮಕ್ಕಳಿಗಾಗಿ ಗ್ರಂಥರಚನೆ ಮಾಡಲು ಪ್ರಾರಂಭಿಸಿದ. ಈತನ ಮೊದಲೆರಡು ಕೃತಿಗಳಲ್ಲಿ ಉಪದೇಶ ಮತ್ತು ನೀತಿಬೋಧೆ ವಿಪರೀತವಾಗಿ ಬಂದಿರುವುದರಿಂದ ಸಾಹಿತ್ಯಗುಣ ಹಿಂದಾಗಿದೆ. ಅನಂತರ ಈತ ರಚಿಸಿದ ಪಿನೋಕಿಯೋನ ಸಾಹಸಗಳು ಎಂಬ ಕೃತಿ ಜಗತ್‌ಪ್ರಸಿದ್ಧವಾಗಿದೆ. ಅದು ಮೊದಲು ಧಾರಾವಾಹಿಯಾಗಿ ಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. ಮೂರು ವರ್ಷಗಳ ಅನಂತರ ಪುಸ್ತಕರೂಪವಾಗಿ ಬೆಳಕು ಕಂಡಿತು. ಅಲ್ಲಿಂದಾಚೆಗೆ ಪಿನೀಕಿಯೋ ಎಂದದು ಪ್ರಪಂಚದಾದ್ಯಂತ ಮಕ್ಕಳು ಬಹು ಪ್ರಿಯ ಕಾದಂಬರಿ ಎನಿಸಿದೆ. ತುಂಟ ಮಕ್ಕಳ ಕ್ರಮರಹಿತ ಜೀವನವನ್ನು ಚಿತ್ರಿಸುವುದು ಇಲ್ಲಿ ಕವಿಯ ಉದ್ದೇಶ. ಬಡಗಿಯೊಬ್ಬ ಮರದ ತುಂಡೊಂದರಿಂದ ಕೆತ್ತಿ ನಿರ್ಮಿಸುತ್ತಿದ್ದ ಬೊಂಬೆಯೊಂದಕ್ಕೆ ಇದ್ದಕ್ಕಿದ್ದ ಹಾಗೆ ಜೀವ ಬಂದುಬಿಡುತ್ತದೆ. ಆ ಕ್ಷಣದಿಂದ ಅದು ತುಂಟಾಟಕ್ಕೆ ಪ್ರಾರಂಭಿಸುತ್ತದೆ. ಊಟ ಉಪಚಾರಗಳಲ್ಲಿ ತಂದೆಯನ್ನು ಗೋಳು ಹುಯ್ದುಕೊಳ್ಳುತ್ತದೆ. ಮನೆ ಬಿಟ್ಟು ಓಡಿಹೋಗುತ್ತದೆ. ಕೈಯಲ್ಲಿದ್ದ ಬಾಲಬೋಧೆಯನ್ನು ಮಾರಿ ನಾಟಕ ನೋಡುತ್ತದೆ. ಕಾಸಿನ ಗಿಡ ಬೆಳೆಸಿ ಸಾಹುಕಾರನಾಗಬಹುದೆಂಬ ಭ್ರಮೆಯಿಂದ ಮೋಸಗಾರ ನರಿಯೊಂದಿಗೆ ಸೇರಿ ಇದ್ದ ಕಾಸನ್ನೆಲ್ಲ ಕಳೆದುಕೊಳ್ಳುತ್ತದೆ. ಬದುಕಿಸ ಬಂದ ಅಪ್ಸರೆಗೆ ಸುಳ್ಳು ಹೇಳಿ ಪಡಬಾರದ ಕಷ್ಟ ಪಡುತ್ತದೆ. ಓದು ಬರೆಹ ಯಾವುದೂ ಇಲ್ಲದ ಕೃತವನಗರಕ್ಕೆ ಹೋಗಿ ಆಟ ಊಟ ವಿಹಾರಗಳಲ್ಲಿ ಮಾತ್ರ ಆಸಕ್ತವಾಗಿ ಕೊನೆಗೊಮ್ಮೆ ಕತ್ತೆಯಾಗುತ್ತದೆ. ಹೀಗೆ ಪಟಿಂಗನಾಗಿ, ನಾನಾ ತೊಂದರೆಗಳಿಗೀಡಾಗಿ ಕೊನೆಗೆ ಅಪ್ಸರೆಯ ಕೃಪೆಯಿಂದ ಮತ್ತೆ ನಿಜವಾದ ಪುಟ್ಟ ಹುಡುಗನಾಗಿ ಶಾಲೆಗೆ ಹೋಗುತ್ತದೆ. ಇಲ್ಲಿ ಕಥೆಗೂ ವಾಸ್ತವಿಕತೆಗೂ ನಡುವಿನ ಅಂತರ ಮರೆತು ಹೋಗುವ ರೀತಿಯಲ್ಲಿ ಕವಿ ವಸ್ತುವನ್ನು ಬೆಳೆಸುತ್ತಾನೆ. ಅವನ ಕಲ್ಪನೆಗೆ ಇಲ್ಲಿ ಗರಿ ಮೂಡಿದೆ.

ಈ ಗ್ರಂಥ ಇಟಾಲಿಯನ್ ಭಾಷೆಯಲ್ಲೇ ಹಲವಾರು ಮುದ್ರಣ ಕಂಡಿದೆ ; ಇಂಗ್ಲಿಷಿಗೂ ಇತರ ಐರೋಪ್ಯ ಭಾಷೆಗಳಿಗೂ ಅನುವಾದವಾಗಿದೆ. ಇದರ ಹಲವು ಬಗೆಯ ಸಚಿತ್ರ ಸಂಗ್ರಹಗಳು ಬಂದಿವೆ. ವಾಲ್ಟ್ ಡಿಸ್ನೆ ಇದೇ ಹೆಸರಿನ ವರ್ಣರಂಜಿತ ವ್ಯಂಗ್ಯ ಚಿತ್ರವೊಂದನ್ನು ತಯಾರಿಸಿದ್ದಾನೆ. ಮೂಲಕಥೆಯನ್ನು ಹಿಂದಿಗೂ ಪಂಜಾಬಿಗೂ ತರ್ಜುಮೆ ಮಾಡಲಾಗಿದೆ. ಈಚೆಗೆ ಕನ್ನಡದಲ್ಲೂ ಇದು ಭಾಷಾಂತರಗೊಂಡಿದ್ದು (ಅನುವಾದ–ಎನ್. ಪ್ರಹ್ಲಾದರಾವ್) ಇದರ ಬಹುಭಾಗ ಕೈಲಾಸ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದಿದೆ. *

**ಕಲಾತ್ :** ಪಾಕಿಸ್ತಾನದ ಒಂದು ಜಿಲ್ಲೆ ಮತ್ತು ಜಿಲ್ಲಾಡಳಿತ ಕೇಂದ್ರ, ಪಟ್ಟಣ ಹಾಗೂ ವಿಭಾಗಗಳ ಕೇಂದ್ರ. ಹಿಂದೆ ಇದು ಕಲಾತ್ ಸಂಸ್ಥಾನದ ರಾಜಧಾನಿಯಾಗಿತ್ತು.

ಕಲಾತ್ ಪಟ್ಟಣ ಕ್ವೆಟ್ಟ ನಗರದಿಂದ 14 ಕಿಮೀ ದೂರದಲ್ಲಿದೆ. ಹಳೆಯ ಪಟ್ಟಣ 1935ರ ಭೂಕಂಪದ ವಿನಾಶಕ್ಕೆ ತುತ್ತಾಗುವ ಮೊದಲು ಕೋಟೆಯೊಳಗಡೆ ಇತ್ತು. ಹೊಸ ಪಟ್ಟಣವನ್ನು ಪ್ರಸ್ತುತ ಜಾಗದಲ್ಲಿ ಸ್ಥಾಪಿಸಲಾಯಿತು. ಖಾನ್–ಇ–ಕಲಾತ್ ಅರಮನೆ ನಗರದ ಆಗ್ನೇಯದಲ್ಲಿದೆ. ಕ್ವೆಟ್ಟ, ಕರಾಚಿ ಮತ್ತು ಪಾಸ್ನಿಗಳಿಗೆ ಇಲ್ಲಿಂದ ರಸ್ತೆ ಸಂಪರ್ಕವುಂಟು.

15ನೆಯ ಶತಮಾನದಲ್ಲಿ ಈ ಪಟ್ಟಣ ಮಿರ್‌ವಾರಿಗಳ ವಶವಾಯಿತು. ಅನಂತರ ಇದು ಮಿರ್ವಾರ್ ಬಣದ ಅಹ್ಮದ್‌ಜ಼ಾಯಿಖಾನರ ರಾಜಧಾನಿಯಾಗಿ ಮುಂದುವರಿಯಿತು. ಈ ಜನ ಒಮಾನಿನಿಂದ ಮಕ್ರಾನಿನ ಕೋಲ್ವ ಕಣಿವೆಗೆ ಬಂದರು. 1839ರಲ್ಲಿ ಇದನ್ನು ಬ್ರಿಟಿಷರು ಆಕ್ರಮಿಸಿಕೊಂಡು, 1842ರಲ್ಲಿ ಹಿಂದಿರುಗಿಸಿದರು. ಇದು ಮೊದಲು ಬಲೂಚ್ ಪ್ರಸಂಧಾನಕ್ಕೂ (ಕಾನ್‌ಫೆಡರಸಿ) ಅನಂತರ ಬಲೂಚಿಸ್ತಾನ ಕಮಿಷನರಿಗೆ ಅಧೀನವಾದ ಬ್ರಿಟಿಷ್ ಏಜೆಂಟನಿಗೂ ಮುಂದೆ (1952–55) ಬಲೂಚಿಸ್ತಾನ್ ಸಂಸ್ಥಾನಗಳ ಕೂಟಕ್ಕೂ ಮುಖ್ಯ ಕೇಂದ್ರವಾಗಿತ್ತು. *

**ಜಿಲ್ಲೆ :** ಇದರಲ್ಲಿ ಕಲಾತ್ ನಿಯಾಬತ್, ಸಾರವನ್, ಝಲಾವನ್ ಮತ್ತು ಕಚ್ಚಿ ಎಂಬ ನಾಲ್ಕು ಉಪ ವಿಭಾಗಗಳಿವೆ. ವಿಸ್ತೀರ್ಣ: 80,111 ಚ.ಕಿಮೀ. ಜಿಲ್ಲೆಯ ಬಹುಭಾಗ ಪರ್ವತಮಯ. ಪರ್ವತ ಶ್ರೇಣಿಗಳ ನಡುವೆ ಕಿರಿದಾದ ಕಣಿವೆಗಳಿವೆ. ಜಿಲ್ಲೆಯ ವಾಯುಗುಣ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿದ್ದು, ಕಚ್ಚಿ ಇಡೀ ಪಾಕಿಸ್ತಾನದಲ್ಲೇ ಅತ್ಯಂತ ಉಷ್ಣತೆಯ ಪ್ರದೇಶ. ಅಲ್ಲಿ ಚಳಿಗಾಲದಲ್ಲಿ ಹಿಮ ಬೀಳುವಷ್ಟು ತಣ್ಣಗಿರುವುದೂ ಉಂಟು. ಮುಖ್ಯವಾಗಿ ಬೇಸಾಯ ನಡೆಯುವುದು ನದಿಪ್ರವಾಹದಿಂದಲೇ. ಆದರೆ ಉತ್ತರದಲ್ಲಿ ಸಾಕಷ್ಟು ಮಳೆಯಾಗುತ್ತದೆ. ನೆಲದಡಿಯ ನೀರೊರತೆಗಳಿಂದಲೂ ಬೇಸಾಯವಾಗುತ್ತದೆ. ನೋವಿ, ಜೋಳ ಮತ್ತು ಹಣ್ಣು ಮುಖ್ಯ ಉತ್ಪನ್ನಗಳು. ಒಳ್ಳೆಯ ಆಕಳ ತಳಿಗಳೂ ಬಲೂಚಿಸ್ತಾನದ ಅತ್ಯುತ್ತಮ ಕುದುರೆಗಳೂ ಈ ಪ್ರದೇಶದವು. ಇಲ್ಲಿ ಕಲ್ಲಿದ್ದಲು, ಕಬ್ಬಿಣದ ಅದಿರು, ಫೆರಸ್ ಸಲ್ಫೇಟ್ ಮುಂತಾದ ಖನಿಜಗಳಿವೆ.

ಕಲಾತ್ ಸಂಸ್ಥಾನದ ರಾಜಧಾನಿಯಾಗಿದ್ದ ಖುಜ್ದಾರ್ ಇರುವುದು ಕಲಾತ್ ಪಟ್ಟಣದಿಂದ 80 ಕಿಮೀ ದೂರದಲ್ಲಿ. ದೇಶದ ಇತರ ಭಾಗಗಳಿಗೆ ಇದು ಕೇಂದ್ರದಂತಿದ್ದು ಅನೇಕ ಸಂಚಾರ ಮಾರ್ಗಗಳು ಇದರ ಮೂಲಕ ಸಾಗುತ್ತವೆ. ಇಲ್ಲಿಯ ಕಣಿವೆಪ್ರದೇಶಗಳು ಫಲವತ್ತಾದವು. 1960ರಿಂದೀಚೆಗೆ ಮಾಸ್ತುಂಗ್ ಕಣಿವೆ ಹೆಚ್ಚಾಗಿ ಅಭಿವೃದ್ಧಿ ಹೊಂದುತ್ತಿದೆ. ಹಳ್ಳಿಗಳಲ್ಲಿ ಗುಡಿಸಲುಗಳಲ್ಲೂ ಗುಡಾರಗಳಲ್ಲೂ ಜನ ವಾಸಿಸುತ್ತಾರೆ. ಕಸೂತಿ, ಜಮಖಾನೆ, ಚರ್ಮದ ಸರಕು, ತಾಳೆ ಚೀಲ, ಚಾಪೆ–ಇವನ್ನು ತಯಾರಿಸುವ ಮುಖ್ಯ ಕಸುಬುಗಳಿವೆ.

ಕಲಾತ್ ಸಂಸ್ಥಾನದ ಪ್ರಾಚೀನ ಇತಿಹಾಸ ಬಲೂಚಿಸ್ತಾನದ ಇತಿಹಾಸದೊಂದಿಗೆ ಬೆರೆತುಕೊಂಡಿದೆ. ಮೊದಲು ಇದು ಸಿಂಧಿಗೆ ಅಧೀನವಾಗಿತ್ತು. ಅನಂತರವೂ ಅರಬರೂ ಘಜ್ನೀ, ಘೋರಿ ಮತ್ತು ಮಂಗೋಲರೂ ಇದನ್ನಾಳಿದರು. ಮತ್ತೆ ಇದು ಸಿಂಧಿನ ಅಧೀನಕ್ಕೇ ಬಂತು. ಅನಂತರ ಇದನ್ನು ಮೊಗಲರು ವಶಪಡಿಸಿಕೊಂಡರು. 18ನೆಯ ಶತಮಾನದ ವೇಳೆಗೆ ಅಹಮದ್‌ಜ಼ಾಯಿಖಾನರು ಪ್ರಬಲರಾದಗಿದ್ದರೂ ಅವರು ದೆಹಲಿ ಅಥವಾ ಕಾಂದಹಾರಿನ ಸಾಮಂತರಾಗಿದ್ದರು. ಮೊದಲನೆಯ ಆಫ್ಘನ್ ಯುದ್ಧದ ಅನಂತರ ಕಲಾತ್ ಸಂಸ್ಥಾನ ಬ್ರಿಟಿಷರ ವಶವಾಯಿತು. 19 ಮತ್ತು 20ನೆಯ ಶತಕಗಳಲ್ಲಿ ಖಾನರ ಆಡಳಿತದಲ್ಲಿ ಕಲಾತ್ ಸಂಸ್ಥಾನದ ವಿಸ್ತೀರ್ಣ ಕ್ರಮೇಣ ಕಡಿಮೆಯಾಗುತ್ತ ಬಂತು.

1948ರ ಮಾರ್ಚಿ 31ರಂದು ಕಲಾತ್ ದೇಶ ಪಾಕಿಸ್ತಾನದಲ್ಲಿ ವಿಲೀನವಾಯಿತು. ಕಲಾತ್, ಮಕ್ರಾನ್ ಮತ್ತು ಲಾಸ್ ಬೇಲ ಪ್ರಾಂತ್ಯಗಳ ರಾಜರು ಬಲೂಚಿಸ್ಥಾನ್ ಸಂಸ್ಥಾನಗಳ ಕೂಟವನ್ನು ಸ್ಥಾಪಿಸಿಕೊಂಡದ್ದು 1952ರಲ್ಲಿ. ಆಗ ಇದಕ್ಕೆ ಒಂದು ಪ್ರಾಂತ್ಯದ ಸ್ವರೂಪ ಬಂತು. 1955ರ ಅಕ್ಟೋಬರಿನಲ್ಲಿ ಇದು ಹೊಸದಾಗಿ ರೂಪಿಸಲಾದ ಪಶ್ಚಿಮ ಪಾಕಿಸ್ತಾನ್ ಪ್ರಾಂತ್ಯದಲ್ಲಿ ಸೇರಿಹೋಯಿತು. ಕಲಾತ್ ಸಂಸ್ಥಾನದ ಕೆಲವು ಭಾಗಗಳನ್ನು ಕತ್ತರಿಸಿ ಉಳಿದದ್ದನ್ನು ಕಲಾತ್ ಜಿಲ್ಲೆಯೆಂದು ಕರೆಯಲಾಯಿತು.

ಕೌಸಿ ಮತ್ತು ಖುಸ್ರಾವಿ ಪ್ರದೇಶಗಳಲ್ಲಿರುವ ಕಾರೆಜ್‌ಗಳು–ಸುರಂಗ ಕಾಲುವೆಗಳು– ಪ್ರಾಚೀನ ಕಲಾತ್ ಸಂಸ್ಕೃತಿಯ ಅವಶೇಷಗಳು. ಗಬರ್‌ಬಂಡ್ ಎಂಬ ಕಲ್ಲಿನ ಅಣೆಕಟ್ಟೆಗಳನ್ನೂ ಅಗ್ನಿಯನ್ನು ಆರಾಧಿಸುತ್ತಿದ್ದ ಜನ ನಿರ್ಮಿಸಿದ ಮಣ್ಣಿನ ಒಡ್ಡುಗಳನ್ನೂ ಅಲ್ಲಲ್ಲಿ ಕಾಣಬಹುದು. ಇಂಥ ಒಡ್ಡುಗಳಲ್ಲಿ ಪುರಾತನ ಮಡಕೆ ಚೂರುಗಳು ಹೇರಳವಾಗಿ ಸಿಕ್ಕಿವೆ. ಕಚ್ಚಿಯಲ್ಲಿ ಬೌದ್ಧ ಅವಶೇಷಗಳುಂಟು. ಕಲಾತ್ ಕೋಟೆಯ ಸಮೀಪದಲ್ಲಿರುವ ದೇವಸ್ಥಾನದ ಕಾಳಿಯ ಮೂರ್ತಿ ಅಮೃತಶಿಲೆಯದು. ಈ ದೇವಸ್ಥಾನವನ್ನು ಮುಸ್ಲಿಂ ಆಳ್ವಿಕೆಗೂ ಹಿಂದೆಯೇ ನಿರ್ಮಿಸಿದ್ದಿರಬಹುದೆಂದು ನಂಬಲಾಗಿದೆ.

ಕಲಾತ್ ವಿಭಾಗದ ವಿಸ್ತೀರ್ಣ 1,88,925 ಚಕಿಮೀ ಕಲಾತ್ ಜಿಲ್ಲೆಯೂ ಮತ್ತು ಸಂಸ್ಥಾನಗಳಾದ ಖರಾನ್ ಮತ್ತು ಮಕ್ರಾನ್‌ಗಳೂ ಕಲಾತ್ ವಿಭಾಗದಲ್ಲಿ ಸೇರಿವೆ. (ಬಿ.ಎನ್.ಎ.ಜಿ.)

**ಕಲಾದಗಿ ಶ್ರೇಣಿ :** ಕರ್ನಾಟಕ ರಾಜ್ಯದ ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕಾಣುವ ಪ್ರೀಕೇಂಬ್ರಿಯನ್ ಯುಗದ ಶಿಲಾ ಶ್ರೇಣಿಯ ಶಿಲಾಸ್ತರಗಳು ಕಲಾದಗಿಯ ಬಳಿ ಅತ್ಯುತ್ತಮವಾಗಿ ಕಂಡುಬರುವುದರಿಂದ ಈ ಹೆಸರು ಬಂದಿದೆ. ಇವನ್ನು ಮೊತ್ತಮೊದಲಿಗೆ ವೀಕ್ಷಿಸಿದ (1876) ರಾಬರ್ಟ್ ಬ್ರೂಸ್‌ಫುಟ್ ಇವಕ್ಕೆ ಆ ಊರಿನ ಹೆಸರಿಟ್ಟು ಕರೆದ. ಆಗ ಈ ಊರು ಜಿಲ್ಲಾ ಕೇಂದ್ರವಾಗಿತ್ತು. ಶಿಲಾಶ್ರೇಣಿ ಅನುರೂಪ್ಯವಾಗಿ ಇದಕ್ಕಿಂತ ಹಿರಿಯದಾದ ಧಾರವಾಡ ಪದರು ಶಿಲೆಗಳು ಮತ್ತು ಗ್ರಾನಿಟಕ್ ಶಿಲೆಗಳ ಮೇಲೆ ಸಂಚಿತವಾಗಿದೆ. ಪಶ್ಚಿಮದತ್ತ ಬೆಳಗಾವಿಯಿಂದ ಹಿಡಿದು ಪೂರ್ವಕ್ಕೆ ಅಮೀನ್‌ಗಡದ ವರೆಗೆ ಸುಮಾರು

(120) ಮೈಲಿ ಉದ್ದಕ್ಕೂ ಈ ಶ್ರೇಣಿ ಹಬ್ಬಿದೆ. ಇದರ ಅಗಲ 38–70 ಕಿಮೀ. ಇದಲ್ಲದೆ ಇದಕ್ಕಿಂತ ಕಿರಿಯದೆನಿಸಿದ ದಖ್ಖನ್ ಲಾವಾಸ್ತರಗಳ ನಡುವೆಯೂ ಈ ಶ್ರೇಣಿಯ ಸಣ್ಣಪುಟ್ಟ ಅಂತಶ್ಶಾಯಿಗಳನ್ನು (ಇನ್‌ಲೈಯರ್ಸ್) ನೋಡಬಹುದು. ನಮ್ಮ ರಾಜ್ಯದಲ್ಲೇ ಅಲ್ಲದೇ ನೆರೆಯ ಮಹಾರಾಷ್ಟ್ರದ ರತ್ನಗಿರಿ ಮತ್ತು ಸಾವಂತವಾಡಿಗಳಲ್ಲೂ ಈ ಬಗೆಯ ಪ್ರಸ್ತರಗಳಿವೆ. ನಮ್ಮ ರಾಜ್ಯದ ಅಂತಶ್ಶಾಯಿಗಳಲ್ಲಿ ಜಮಖಂಡಿ ಮತ್ತು ಮುಧೋಳ್ ಸಮೀಪದವು ಅತ್ಯಂತ ವಿಶಾಲವಾದವು. ಅದರಲ್ಲೂ ಜಮಖಂಡಿಯ ಒಳಚಾಚು ಬಹು ದೊಡ್ಡದು. ಅಲ್ಲದೆ ಗೋಕಾಕ್, ಸವದತ್ತಿ ಮತ್ತು ಇತರ ಕೆಲವೆಡೆಗಳಲ್ಲಿ ಈ ಶ್ರೇಣಿಯ ಪ್ರಮುಖ

ಚಿತ್ರ 1

ಬಹಿಶ್ಶಾಯಿಗಳೂ (ಔಟ್‌ಲೈಯರ್ಸ್) ಇವೆ. ಇಲ್ಲಿ ಶಿಲಾಸ್ತರಗಳು ಅನನುರೂಪ್ಯವಾಗಿ ಆರ್ಕೇಯನ್ ಗೀರು ಮತ್ತು ಪದರು ಶಿಲೆಗಳ ಮೇಲೆ ಸಂಚಿತವಾಗಿವೆ.

ಕಲಾದಗಿ ಬಳಿ ಶ್ರೇಣಿ ಅತ್ಯಂತ ಮಂದವಾಗಿದ್ದು (3352–4572 ಮೀ) ಕೆಳ ಮತ್ತು ಮೇಲಿನ ಶ್ರೇಣಿಗಳೆಂದು ವಿಭಜಿತವಾಗಿದೆ.

*ಮೇಲಿನ ಶ್ರೇಣಿ*

(6) ಜೇಡುಶಿಲೆ, ಸುಣ್ಣಶಿಲೆ ಮತ್ತು ಹಿಮಟೈಟ್ ಪದರುಶಿಲೆ – (608 ಮೀ) ಮಂದ

(5) ಬೆಣಚುಶಿಲೆ, ಪೆಂಟಶಿಲೆ ಮತ್ತು ಬ್ರೆಕ್ಷಾ – (365–548 ಮೀ) ಮಂದ

ಕೆಳಶ್ರೇಣಿ

(4) ಸುಣ್ಣಶಿಲೆ, ಜೇಡು ಮತ್ತು ಜೇಡುಶಿಲೆ}

(3) ಮರಳುಶಿಲೆ ಮತ್ತು ಜೇಡುಶಿಲೆ} – (4572–5486 ಮೀ) ಮಂದ

(2) ಸಿಲಿಕಾಂಶಯುಕ್ತ ಸುಣ್ಣಶಿಲೆ ಮತ್ತು ಚೆರ್ಟ್ ಬ್ರೆಕ್ಷಾ}

(1) ಬೆಣಚುಶಿಲೆ, ಪೆಂಟಶಿಲೆ ಮತ್ತು ಮರಳುಶಿಲೆ}– (914–1523 ಮೀ) ಮಂದ

**ಕೆಳಶ್ರೇಣಿ :** ಶ್ರೇಣಿಯ ಕೆಳವಿಭಾಗದಲ್ಲಿ ಅಡಿಯ ಪೆಂಟಶಿಲೆ, ಬೆಣಚುಶಿಲೆ ಮತ್ತು ಮರಳುಶಿಲೆಗಳಿವೆ. ಕಲಾದಗಿ ಇಳಕಲು (ಬೇಸಿನ್) ಪ್ರದೇಶದ ವಾಯುವ್ಯ ಭಾಗದಲ್ಲಿನ ಅಂಡಮುರ್ನಾಳಿನ ಬಳಿ (5.50 ಮೀ)ಗಳಿಗಿಂತಲೂ ಹೆಚ್ಚು ಮಂದವಾಗಿರುವ ಪೆಂಟಶಿಲೆಯ ಸ್ತರಗಳಿವೆ. ಹೆರಕಲ್ ಸಮೀಪ ಜಾಸ್ಪರ್‌ಯುಕ್ತ ಹಿಮಟೈಟಿನ ಪೆಂಟಿಗಳು ಕಬ್ಬಿಣಾಂಶದಿಂದ ಕೂಡಿದ ಮಾತೃಕೆಯಲ್ಲಿ ಹುದುಗಿರುವುದನ್ನು ನೋಡಬಹುದು. ಬಾಗಲಕೋಟೆ ಬಳಿಯ ಸಾಲಗುಂದಿ, ಮಲ್ಲಾಪುರ ಮತ್ತು ಅನಗವಾಡಿ ಬಳಿ ಕಂಡುಬರುವ ಮರಳುಶಿಲೆ ಮತ್ತು ಬೆಣಚುಶಿಲೆಗಳಲ್ಲಿ ಪ್ರವಾಹಸ್ತರಗಳು, ಬಿಸಿಲ ಬಿರಿತಗಳು ಮತ್ತು ಅಲೆಯ ಗುರುತುಗಳಿವೆ. ಶ್ರೇಣಿಗೆ ಸೇರಿದ ಅತ್ಯುತ್ತಮ ಬೆಣಚುಶಿಲಾಸ್ತರಗಳನ್ನು ಗೋಕಾಕ್ ಹತ್ತಿರ ನೋಡಬಹುದು. ಇವು (54 ಮೀ) ಎತ್ತರದ ಕಡಿದಾದ ಬಂಡೆಯೋಪಾದಿಯಲ್ಲಿದ್ದು ಅಲ್ಲಿ ಘಟಪ್ರಭಾನದಿಯ ಗೋಕಾಕ್ ಜಲಪಾತವಿದೆ. ಮಲಪ್ರಭಾನದಿಯ ನವಿಲುತೀರ್ಥ ಎಂಬ ಕಂದರ ಸಹ ಈ ಶಿಲಾಪ್ರಸ್ತರಗಳಲ್ಲಿದೆ. ಬಾದಾಮಿಯ ಬಳಿ ಇರುವ ಬೆಣಚುಶಿಲೆಗಳಲ್ಲಿ ಅತ್ಯುತ್ತಮ ಪ್ರವಾಹಸ್ತರಗಳನ್ನು ಗುರುತಿಸಬಹುದು. ಶಿಲೆಗಳನ್ನು ಕೊರೆದು ಇತಿಹಾಸಪ್ರಸಿದ್ಧವಾದ ಗುಹಾಂತರ್ದೇವಾಲಯಗಳನ್ನು ಪುರಾತನರು ನಿರ್ಮಿಸಿದ್ದಾರೆ. ಅಲ್ಲದೆ ಭೂಸವೆತದಿಂದ ಕೆಲವೆಡೆ ಶಿಲೆಗಳನ್ನು ಚಿತ್ರವಿಚಿತ್ರವಾದ ವಿವಿಧ ಆಕೃತಿಗಳನ್ನು ತಳೆದುನಿಂತಿವೆ.

ಕಲಾದಗಿ ಇಳುಕಲಿನ ಪೂರ್ವ ಮತ್ತು ದಕ್ಷಿಣ ಪಾರ್ಶ್ವಗಳಲ್ಲಿ ಅಧಿಕ ಸಿಲಿಕಾಂಶದಿಂದ ಕೂಡಿದ ಸುಣ್ಣಶಿಲೆಗಳಿವೆ. ಅಲ್ಲಲ್ಲೇ ಸಿಲಿಕಾಂಶ ಅಧಿಕಗೊಂಡ ಕಾರಣ ಇವು ಹಾರ್ನ್‌ಸ್ಟೋನ್ (ಕೊಂಬುಶಿಲೆ) ಅಥವಾ ಚೆರ್ಟ್‌ಬ್ರೆಕ್ಷಾಗಳಾಗಿ ಮಾರ್ಪಟ್ಟಿರುವುದೂ ಉಂಟು. ಮಹಾಕೂಟ ಬೆಟ್ಟದ ಸಾಲಿನಲ್ಲಿ ಈ ಶಿಲೆಗಳು ಅತ್ಯುತ್ತಮ ರೀತಿಯಲ್ಲಿ ಕಂಡುಬಂದಿವೆ. ಸವದತ್ತಿ ಮತ್ತು ಪಾರಸ್‌ಗಡಗಳ ಬಳಿ ವಿಸ್ತಾರವಾದ ಅಡಿಯ ಬೆಣಚು ಶಿಲಾಸ್ತರಗಳು ಧಾರವಾಡ ಪದರುಶಿಲೆಗಳು ಮತ್ತು ಗ್ರ್ಯಾನಿಟಿಕ್ ನೈಸ್ ಶಿಲೆಗಳ ಮೇಲೆ ಹರಡಿವೆ. ಸವದತ್ತಿಯ ಉತ್ತರಕ್ಕೆ ಇದಕ್ಕೆ ಸಂಬಂಧಿಸಿದ ಸ್ತರಭಂಗ ರೇಖೆಯನ್ನೂ ಗುರುತಿಸಲು ಸಾಧ್ಯ.

ಕಲಾದಗಿಯ ಸುತ್ತಮುತ್ತ ಬಹುಮಟ್ಟಿಗೆ ಸುಣ್ಣಶಿಲೆ ಮತ್ತು ಜೇಡುಶಿಲಾ ಸ್ತರಗಳಿಂದ ಕೂಡಿದ ನಾಲ್ಕನೆಯ ಹಂತವಿದೆ. ಲೋಕಾಪುರದ ಬಳಿ ಅತ್ಯಂತ ಮಂದವಾದ ಸುಣ್ಣಶಿಲಾಸ್ತರಗಳಿವೆ. ಇವುಗಳ ಜಾಡು ಸುಮಾರು 12–16 ಕಿಮೀ ಉದ್ದವಾಗಿಯೂ 8–9.66 ಕಿಮೀ ಅಗಲವಾಗಿಯೂ ಮತ್ತು 4572–5486 ಮೀ ಮಂದವಾಗಿಯೂ ಇದೆ. ಇಲ್ಲಿ ಉತ್ತಮ ದರ್ಜೆಯ ಸುಣ್ಣಶಿಲೆ, ಡಾಲೊಮೈಟ್ ಮತ್ತು ಜೇಡುಶಿಲಾಸ್ತರಗಳಿವೆ. ಚಿಕ್ಕ ಶಿಳ್ಳಕೇರಿ, ಕಲಾದಗಿ, ಲೋಕಾಪುರ, ಖಜ್ಜಿದೋಣಿ, ಗದ್ದನಕೇರಿ, ಯಾದವಾಡ ಮತ್ತು ಔರ್‌ವಾಡಗಳ ಬಳಿ ಸಿಮೆಂಟ್ ತಯಾರಿಕೆಗೆ ಅತ್ಯಂತ ಉಪಯುಕ್ತವೆನಿಸಿದ ಸುಣ್ಣಶಿಲಾನಿಕ್ಷೇಪಗಳಿವೆ. ಅಧಿಕ ಕ್ಯಾಲ್ಸಿಯಂ ಅಂಶದಿಂದ ಕೂಡಿದ ಸುಣ್ಣಶಿಲಾನಿಕ್ಷೇಪಗಳು ಲೋಕಾಪುರ, ಖಜ್ಜಿದೋಣಿ, ಗದ್ದನಕೇರಿ, ಚಿಕ್ಕಶಿಳ್ಳಕೇರಿ ಮತ್ತು ಯಾದವಾಡಗಳ ಬಳಿ ಇದ್ದು ಇವನ್ನು ಹೊಸಪೇಟೆಯಲ್ಲಿ ಸ್ಥಾಪಿತವಾಗಿರುವ ಉಕ್ಕು ತಯಾರಿಕಾ ಕಾರ್ಖಾನೆಯಲ್ಲಿ ಬಳಸಲಾಗುತ್ತಿದೆ. ಖಜ್ಜಿದೋಣಿ, ಲೋಕಾಪುರ, ಚಿಕ್ಕಶಿಳ್ಳಕೇರಿ, ದೊಡ್ಡಶಿಳ್ಳಕೇರಿ–ಇವುಗಳ ಸುತ್ತಮುತ್ತ ಉತ್ತಮ ಸ್ಲೇಟುಶಿಲೆಯ ಅರೆಗಳನ್ನು ನೋಡಬಹುದು. ವಿಗ್ರಹಗಳ ಕೆತ್ತನೆಗೆ ಯೋಗ್ಯವಾದ ಶಿಲೆ ಚಿಕ್ಕಶಿಳ್ಳಕೇರಿಯ ಬಳಿ ಸಿಗುತ್ತದೆ. ಕೆಲವೆಡೆ ಅಲಂಕಾರ ಶಿಲೆಗಳಾಗಲು ಯೋಗ್ಯವೆನಿಸಿದ ವಿವಿಧ ಛಾಯೆಯ ಸುಣ್ಣ ಶಿಲಾಸ್ತರಗಳು ಇವೆ.

ನಾಲ್ಕನೆಯ ಹಂತದ ಸುಣ್ಣಶಿಲಾಸ್ತರಗಳೂ ಭೂ ಚಟುವಟಿಕೆಗಳಿಗೊಳಗಾಗಿ ಹಲವಾರು ರೀತಿಯಲ್ಲಿ ಮಡಿಕೆ ಬಿದ್ದಿರುವುದನ್ನು ಅಲ್ಲಲ್ಲೇ ಗುರುತಿಸಬಹುದು (ಚಿತ್ರ 1). ಈ ಮಡಿಕೆಗಳಲ್ಲಿ ಸಮುಖಾವನತ (ಸಿನ್‌ಕ್ಲೈನ್ಸ್) ಮಡಿಕೆಗಳೇ ಹೆಚ್ಚು. ಇದು ತನಕ ಪ್ರೀಕೇಂಬ್ರಿಯನ್ ಯುಗದ ಈ ಶಿಲಾಸ್ತರಗಳಲ್ಲಿ ಜೀವ್ಯವಶೇಷಗಳ ಕುರುಹೇ ಇಲ್ಲವೆಂಬ ಅಭಿಪ್ರಾಯವಿತ್ತು.

ಚಿತ್ರ 2

ಆದರೆ ಈಚಿನ ಸಂಶೋಧನೆಗಳಿಂದ ಲೋಕಾಪುರ, ಆಲಗುಂದಿ, ಚಿತ್ರಭಾನುಕೋಟೆ ಮುಂತಾದೆಡೆ ಇರುವ ಡಾಲೊಮೈಟ್ ಮತ್ತು ಸುಣ್ಣಶಿಲಾಸ್ತರಗಳಲ್ಲಿ ಸ್ಟ್ರೋಮ್ಯಾಟೊಲೈಟ್ ವರ್ಗದ ಜೀವ್ಯವಶೇಷಗಳನ್ನು ಗುರುತಿಸಲಾಗಿದೆ (ಚಿತ್ರ 2).

**ಮೇಲಿನ ಶ್ರೇಣಿ :** ಈ ವಿಭಾಗದಲ್ಲಿ ಬೆಣಚುಶಿಲೆ, ಪೆಂಟಶಿಲೆ, ಸುಣ್ಣಶಿಲೆ ಮತ್ತು ಹಿಮಟೈಟ್ ಪದರುಶಿಲೆಗಳಿವೆ. ಶ್ರೇಣಿಯ ಮಂದ ಸು. 1371 ಮೀ. ಇವು ವಯಸ್ಸಿನಲ್ಲಿ ಹಿರಿಯದಾದ ಕೆಳವಿಭಾಗದ ಶಿಲಾಸ್ತರಗಳ ಮೇಲೆ ಅನುರೂಪ್ಯವಾಗಿ ಸಂಚಿತವಾಗಿವೆ. ಈ ಮೇಲಿನ ಶ್ರೇಣಿಯ ಸ್ತರಗಳನ್ನು ಬಹುಮಟ್ಟಿಗೆ ಇಳುಕಲಿನ ಈಶಾನ್ಯ ಭಾಗದಲ್ಲಿ ನೋಡಬಹುದು. ಅಲ್ಲಿಯೂ ಇವು ಅಷ್ಟು ವಿಸ್ತಾರವಾಗಿ ಹರಡಿಲ್ಲ. ಅಲ್ಲದೆ ಇವುಗಳ ಹರವು ಸಾಮಾನ್ಯವಾಗಿ ಸಮುಖಾವನತ ಮಡಿಕೆಗಳಿಗೆ ಸೀಮಿತವಾಗಿದೆ. ಈ ಶ್ರೇಣಿಯ ಹಲವೆಡೆ ದೊರೆಯುವ ಹಿಮಟೈಟ್ ಪದರುಶಿಲೆಗಳು ಕಬ್ಬಿಣದ ಉತ್ತಮ ಅದಿರೆನಿಸಿವೆ.

ಕಲಾದಗಿ ಶ್ರೇಣಿಯ ಶಿಲಾಸ್ತರಗಳು ಹಲವಾರು ಸಣ್ಣಪುಟ್ಟ ಇಳುಕಲುಗಳಿಂದಾದ ಮಹಾ ಇಳುಕಲೊಂದರಲ್ಲಿ ರೂಪುಗೊಂಡವೆಂದು ಭಾವಿಸಲಾಗಿದೆ. ಇವುಗಳಲ್ಲಿ ಮುಖ್ಯವಾದವು ಅರಕೇರಿ, ಸೀಖಕೇರಿ ಮತ್ತು ಲೋಕಾಪುರ ಇಳುಕಲುಗಳು. ಅರಕೇರಿ ಇಳುಕಲು ಸುಮಾರು (24) ಮೈಲಿ ಉದ್ದವಿದ್ದು ಅತ್ಯಂತ ದೊಡ್ಡದೆನಿಸಿದೆ. ಲೋಕಾಪುರ ಇಳುಕಲಿನಲ್ಲಿ (6) ಡಾಲರೈಟ್ ಶಿಲಾ ಒಡ್ಡುಗಳನ್ನು ಗುರುತಿಸಲಾಗಿದೆ.

ಅನೇಕ ಕಡೆ ಕಲಾದಗಿ ಶಿಲಾಸ್ತರಗಳು ಡೆಕ್ಕನ್ ಲಾವಾ ಪ್ರವಾಹದಿಂದ ಆವೃತವಾಗಿವೆ. ಮುಧೋಳ್, ಮಹಾಲಿಂಗಪುರ, ಬಿಮೂಡ್, ಸೋಪಡ್ಲೆ, ಸಾಲಹಳ್ಳಿ ಮತ್ತು ಚಂದರ್ಗಿ– ಇವುಗಳ ಬಳಿ ಲಾವಾಸ್ತರಗಳ ಮಂದ (50–100').

ಶ್ರೇಣಿಯ ಸ್ತರಗಳನ್ನು ಅವುಗಳ ಶಿಲಾಸಂಯೋಜನೆ ಮತ್ತು ಇತರ ಲಕ್ಷಣಗಳ ಆಧಾರದ ಮೇಲೆ ಭಾರತದ ಪ್ರೀಕೇಂಬ್ರಿಯನ್ ವರ್ಗದ ಮೇಲಿನ ಕಡಪ ಹಂತದೊಡನೆ ಸರಿದೂಗಿಸಲಾಗಿದೆ. ಇಲ್ಲಿ ದೊರೆಯುವ ಮರಳುಶಿಲೆ ಮತ್ತು ಸ್ಲೇಟುಶಿಲೆಗಳನ್ನು ಸುತ್ತಮುತ್ತಲ ಪ್ರದೇಶಗಳಲ್ಲಿ ಕಟ್ಟಡನಿರ್ಮಾಣದಲ್ಲಿ ಬಳಸುತ್ತಾರೆ. ಕೆಲವು ಸುಣ್ಣಶಿಲೆಗಳು ಉತ್ತಮ ಅಲಂಕಾರ ಶಿಲೆಗಳೆನಿಸಿವೆ. ಸುಣ್ಣಶಿಲಾನಿಕ್ಷೇಪಗಳು ಸಿಮೆಂಟಿನ ತಯಾರಿಕೆಗೆ ಅಗತ್ಯ ಅಲ್ಲದೇ ಉತ್ತಮ ದರ್ಜೆಯವು. ಉಕ್ಕು ತಯಾರಿಕೆಗೆ ಬೇಕೇ ಬೇಕು. (ಎಂ.ಎಸ್.ಎಸ್.)

**ಕಲಾಬತು :** ನಾರು, ಹತ್ತಿ, ಉಣ್ಣೆ, ರೇಷ್ಮೆ, ಲೋಹ ಮೊದಲಾದವುಗಳಿಂದ ಮಾಡಿದ ದಾರದಿಂದ ಹೆಣೆದು ಬಟ್ಟೆಗಳ ಮೇಲೆ ಅಲಂಕಾರಕ್ಕಾಗಿ ಉಪಯೋಗಿಸುವ ಪಟ್ಟಿ. ಜರತಾರಿಯ ಪಟ್ಟಿಯನ್ನು ಕಲಾಪತ್ತೆಂದು ಕರೆಯುವುದೂ ಉಂಟು. ಆದರೆ ಇಲ್ಲಿ ಇಂಗ್ಲಿಷಿನ ಲೇಸ್ ಎಂಬ ಶಬ್ದಕ್ಕೆ ಸಮಾನಾರ್ಥಕವಾಗಿ ಕಲಾಬತು ಎಂಬ ಪದವನ್ನು ಬಳಸಲಾಗಿದೆ. ಲೇಸ್ ಎಂಬ ಶಬ್ದವೂ ಕನ್ನಡದಲ್ಲಿ ರೂಢಿಗೆ ಬಂದಿರುವುದರಿಂದ ಅದನ್ನೂ ಈ ಲೇಖನದಲ್ಲಿ ಪರ್ಯಾಯವಾಗಿ ಬಳಸಲಾಗಿದೆ.

ಕಸೂತಿ ಮತ್ತು ಕಲಾಬತುಗಳ ನಡುವೆ ವ್ಯತ್ಯಾಸ ಕಂಡುಹಿಡಿಯುವುದು ಬಲು ಕಷ್ಟ. ಒಂದು ದೃಷ್ಟಿಯಲ್ಲಿ ಕಲಾಬತನ್ನು ಕಸೂತಿಯ ಒಂದು ಬಗೆಯೆಂದೇ ಪರಿಗಣಿಸಬಹುದು. ಅಂಚುಕಟ್ಟುವುದನ್ನು, ವಂಕಿಯಾಕಾರದಲ್ಲಿ ಒಂದಕ್ಕೊಂದು ಹೊಸೆದುಕೊಂಡಂತೆಯೇ ಹೆಣೆದುಕೊಂಡಂತೆಯೋ ದಾರ ಹಾಕಿ ಸೇರಿಸುವುದನ್ನು, ಅಥವಾ ವಸ್ತ್ರ ನೇಯುವಾಗಲೇ ಜರಿಯೇ ಮುಂತಾದವುಗಳ ಸಿಂಗಾರಪಟ್ಟಿಕೆಗಳನ್ನು ಅಳವಡಿಸುವುದನ್ನು ಕಲಾಬತು ಕೆಲಸವೆನ್ನಬಹುದು. ಹೊಲಿದ ಅಥವಾ ತಯಾರಿಸಿದ ಬಟ್ಟೆಯ ಮೇಲೆ ಅಲಂಕಾರಕ್ಕಾಗಿ ಮಾಡುವ ದಾರದ ಚಿತ್ರಕೆಲಸವನ್ನು ಕಸೂತಿಯೆನ್ನುತ್ತಾರೆ. **(ನೋಡಿ–ಕಸೂತಿ)** ಆದರೆ ಇವೆರಡರ ನಡುವಣ ರೇಖೆ ಅನೇಕ ವೇಳೆ ಬಲು ಸೂಕ್ಷ್ಮ.

ಕಲಾಬತಿನ ಇತಿಹಾಸ ಬಲು ಹಳೆಯದು. ಕೊಕ್ಕೆ ಸೂಜಿ ಅಥವಾ ಕ್ರೋಷೆಯಿಂದ ಹಿಡಿದು ಯಂತ್ರಗಳ ವರೆಗೆ ವಿವಿಧ ನಮೂನೆಗಳ ಕಲಾಬತು ಅಥವಾ ಲೇಸುಗಳು ಬೆಳಕಿಗೆ ಬಂದಿವೆ. ಅಂದವಾಗಿ ಹೆಣೆದ ಕಸೂತಿ ಬಟ್ಟೆಗೆ ಸುತ್ತಲೂ ಕೈಯಿಂದ ತಯಾರಿಸಿದ ಲೇಸುಗಳನ್ನು ಹಾಕಿ ಬಟ್ಟೆಯನ್ನು ಇನ್ನೂ ಆಕರ್ಷಕವಾಗಿ ಮಾಡುತ್ತಾರೆ. ಕೈಯಿಂದ ಹೆಣೆದ ಲೇಸುಗಳು ಬಹಳ ಕಾಲ ಬಾಳುತ್ತವೆ. ಇಂದು ಲೇಸುಗಳಿಗಾಗಿ ಉಪಯೋಗಿಸುವ ಎಳೆಗಳಲ್ಲಿ ಸಾಕಷ್ಟು ವೈವಿಧ್ಯವುಂಟು. 1800ಕ್ಕೂ ಮೊದಲು ಲಿನೆನ್ ಸಾಮಾನ್ಯವಾಗಿದ್ದು ತದನಂತರ ಹತ್ತಿಯ ಲೇಸು ಸರ್ವಸಾಮಾನ್ಯವಾಯಿತು. ಕಾಲಕ್ರಮೇಣ ರೇಷ್ಮೆ ಮತ್ತು ಲೋಹದೆಳೆಗಳೂ ಉಣ್ಣೆ ಮತ್ತು ಲೋಳಸರದ ಜಾತಿಯ ವನಸ್ಪತಿಗಳ ಎಳೆಗಳೂ ಉಪಯೋಗಕ್ಕೆ ಬಂದವು. ಕೈಕಸೂತಿಯಂತೆಯೇ ಕಲಾಬತನ್ನು ಬಹಳ ಕಾಲದ ವರೆಗೆ ಕೈಯಿಂದಲೇ ತಯಾರಿಸಲಾಗುತ್ತಿತ್ತು. 18ನೆಯ ಶತಮಾನದ ಉತ್ತರಾರ್ಧದಲ್ಲಿ ಕಲಾಬತನ್ನು ತಯಾರಿಸುವ ಯಂತ್ರಗಳು ಬಂದು 19ನೆಯ ಶತಮಾನದ ಹೊತ್ತಿಗೆ ಸಾಮಾನ್ಯವಾದುವು.

**ಕೈ ಕಲಾಬತನ್ನು ತಯಾರಿಸುವ ವಿಧಾನಗಳು:** ಕಲಾಬತುಗಳ ತಯಾರಿಕೆಯಲ್ಲಿ ಪೂರ್ವದೇಶಗಳು ಸಾಕಷ್ಟು ಪರಿಣತಿಹೊಂದಿದ್ದರೂ ಇದರಲ್ಲಿ ಪಾಶ್ಚಾತ್ಯರ ಕೊಡುಗೆ ಅವಮೂಲ್ಯವಾದುದು. ಪೂರ್ವದಲ್ಲಿಯ ಕಲಾಬತಿನ ವಿಧಾನಗಳು ಸಾಮಾನ್ಯವಾಗಿದ್ದುವು. ಆಕರ್ಷಕ ಹಾಗೂ ಅದ್ದೂರಿಯ ಕಲಾಬತುಗಳ ಸೃಷ್ಟಿ ಪಾಶ್ಚಾತ್ಯರ ಕೊಡುಗೆಯಾಯಿತು.

ಕ್ರೋಷೆ ಕೆಲಸದ ವಿಧಾನವನ್ನು ಅರಿತರೆ, ಅದರಲ್ಲಿಯೇ ವಿವಿಧ ನಮೂನೆಗಳನ್ನು ಕಲ್ಪಿಸಿಕೊಂಡು ಬೇಕಾದ ಆಕಾರದಲ್ಲಿ ಕಲಾಬತನ್ನು ಹಾಕಬಹುದು. ಲೇಸನ್ನು ಸಾಮಾನ್ಯವಾಗಿ ಎರಡು ವಿಧಾನಗಳಿಂದ ತಯಾರಿಸುತ್ತಾರೆ. 1 ಸೂಜಿಮೊನೆಯ ಲೇಸು, (2) ಉರುಳೆ ಲೇಸು ಅಥವಾ ಬಾಬಿನ್ ಲೇಸು. ಸೂಜಿಮೊನೆಯ ಲೇಸನ್ನು ತಯಾರಿಸಲು ಬಟ್ಟೆಯ ಮೇಲೆ ದಪ್ಪ ಕಾಗದವೊಂದನ್ನಿಟ್ಟು, ಬೇಕಾದ ಆಕೃತಿಯನ್ನು ಸೀಸದ ಕಡ್ಡಿಯಿಂದ ಅದರ ಮೇಲೆ ಮೂಡಿಸಿ ಹೊರಗಿನ ಒಂದು ಹೊಲಿಗೆಯನ್ನು ಆಕೃತಿಯ ಸುತ್ತಲೂ ಹಾಕಬೇಕು. ಅನಂತರ ಸೂಜಿದಾರಗಳಿಂದ ಒಂದಾದಮೇಲೊಂದರಂತೆ ಗುಂಡಿಮೊನೆಯ ಹೊಲಿಗೆಗಳನ್ನು ಬೇಕಾದೆಡೆಯಲ್ಲಿ ಬಿಗಿಯಾಗಿ ಅಥವಾ ಸಡಿಲವಾಗಿರುವಂತೆ ಹಾಕುತ್ತ ಹೋಗಬೇಕು. ಇಲ್ಲಿ ಸೂಜಿ ಏನೇ ಆದರೂ ಹಿಂಬದಿಯಿಂದ ಬರಬಾರದೆಂದು ಗಮನಿಸತಕ್ಕದ್ದು. ಕೆಲಸ ಮುಗಿದ ಅನಂತರ ಕತ್ತರಿಯ ಸಹಾಯದಿಂದ ಹೊರಗಿನ ಸಾಲನ್ನು ಕತ್ತರಿಸಿ ಕಲಾಬತನ್ನು ಹೊರತೆಗೆಯಬೇಕು.

ಉರುಳೆ ಲೇಸನ್ನು (ಬಾಬಿನ್ ಲೇಸ್) ಹಾಕಬೇಕಾದರೆ ಅನುಸರಿಸಬೇಕಾದ ವಿಧಾನವಿದು. ಕೈಯಲ್ಲಿ ಹಿಡಿದುಕೊಳ್ಳಲನುವಾಗುವಂಥ ಒಂದು ಉರುಳೆಗೆ ದಾರಗಳ ಎಳೆಗಳನ್ನು ಹೊಗಿಸಲಾಗುತ್ತದೆ. ದಪ್ಪ ಕಾಗದವೊಂದರ ಮೇಲೆ ಬೇಕಾದ ಆಕೃತಿಯನ್ನು ಬರೆದು ಅತ್ಯಂತ ಹೊರಗಿನ ವಲಯದಲ್ಲಿ ಗುಂಡುಸೂಜಿಗಳನ್ನು ಚುಚ್ಚಿ ಒಂದೊಂದು ಕೈಯಲ್ಲೂ ಒಂದೊಂದು ಉರುಳೆ ಚಾಲಿಸುತ್ತ ಲೇಸನ್ನು ಹಾಕಬೇಕು. ಉರುಳೆ ಲೇಸಿನಲ್ಲೂ ಎರಡು ಬಗೆಗಳಿವೆ. ಉದ್ದವಾದ ಉರುಳೆ ಲೇಸಿನಲ್ಲಿ ಅಲ್ಲಾಡದ ಹಿನ್ನಲೆಯ ಮೇಲೆ ಒಂದೇ ದಿಕ್ಕಿನಲ್ಲಿ ಲೇಸನ್ನು ಹಾಕುತ್ತಾರೆ. ಅನೇಕ ವೇಳೆ, ಒಂದಕ್ಕಿಂತ ಹೆಚ್ಚು ಉರುಳೆಗಳನ್ನು ಉಪಯೋಗಿಸಿ ಉದ್ದವಾದ ಒಂದು ಲೇಸನ್ನು ತಯಾರಿಸುತ್ತಾರೆ. ಹಿನ್ನಲೆ ಸಾಮಾನ್ಯವಾಗಿ ಬಹಳ ಉದ್ದವಾಗಿರದ ಕಾರಣ, ಚಿಕ್ಕ ಚಿಕ್ಕ ಲೇಸುಗಳನ್ನು ಸೇರಿಸಿ ಉದ್ದವಾಗಿ ಮಾಡುವುದೂ ಉಂಟು. ಎರಡನೆಯದೆಂದರೆ ಮುಕ್ತ ಲೇಸು (ಫ್ರೀ ಲೇಸ್). ಇದರಲ್ಲಿ ಹಿನ್ನಲೆಯನ್ನು ಹಿಂದೆ ಮಾಡಿ ಜರುಗಿಸುವುದು ಸಾಧ್ಯ. ಹೀಗೆ ಜರುಗಿಸಿ ಡೊಂಕುಡೊಂಕಾದ ಲೇಸಿನ ನಮೂನೆ ಪಡೆಯಬಹುದು. ನಮೂನೆಯ ಬಿಡಿಬಿಡಿಭಾಗಗಳು ಹೊರಬಂದಮೇಲೆ, ಅವನ್ನು ನಯವಾದ ಸೂತ್ರಜಾಲವೊಂದರಿಂದ ಒಟ್ಟಾಗಿ ಸೇರಿಸಬಹುದು. ಕೆಲವು ನಮೂನೆಯ ಉರುಳೆ ಲೇಸುಗಳನ್ನು ಹಿಂದುಮುಂದಾಗಿಯೂ ಉಪಯೋಗಿಸಬಹುದು. ಸೂಜಿಮೊನೆಯ ಲೇಸನ್ನು ಹಾಕುವುದು ಬಹಳ ಕಷ್ಟವಾದ ವಿಧಾನವಾದುದರಿಂದ, ಇದು ಸುರುಳಿ ಲೇಸಿನಷ್ಟು ಜನಪ್ರಿಯವಾಗಲಿಲ್ಲ. ಕಲಾಬತಿನ ಪ್ರಾರಂಭದ ನಮೂನೆಗಳಲ್ಲೂ ಕೆಲವಾರು ಜನಪದ ಕಲಾಕೃತಿಗಳಲ್ಲೂ ಸೂಜಿಮೊನೆಯ ಲೇಸನ್ನು ಕಾಣಬಹುದು. ಸುಲಭವಿಧಾನಗಳಿಂದೊಡಗೂಡಿದ ಸುರುಳಿ ಲೇಸು ಅತ್ಯಂತ ಜನಪ್ರಿಯವಾಗಿ ಅಸಂಖ್ಯಾತ ಕಲಾಭಿಮಾನಿಗಳ ಹವ್ಯಾಸವಾಗಿದೆ. ಇದರ ಜನಪ್ರಿಯತೆ ಎಷ್ಟು ಅಗಾಧವಾಗಿತ್ತೆಂದರೆ 19 ನೆಯ ಶತಮಾನದಲ್ಲಿ ಆರು ಏಳು ವರ್ಷಗಳ ವಯಸ್ಸಿನಲ್ಲೇ ಬೆಲ್ಜಿಯಂ ಬಾಲಕಿಯರು ಲೇಸುಗಳನ್ನು ತಯಾರಿಸುವ ಶಾಲೆಗಳಲ್ಲಿ ಅಭ್ಯರ್ಥಿಗಳಾಗಿರುತ್ತಿದ್ದರು.

ಕಲಾಬತನ್ನು ಹಾಕಲು ಇವೆರಡೇ ಅಲ್ಲದೆ ಇನ್ನೂ ಕೆಲವೂ ವಿಧಾನಗಳಿವೆ. ಎಳೆ ತೆಗೆದ ಲೇಸುಗಳಲ್ಲಿ ಮೂರು ಬಗೆಗಳುಂಟು. ಒಂದು ಬಗೆಯಲ್ಲಿ ಲಿನೆನಿನಂಥ ಬಟ್ಟೆಯ ಮೇಲೆ ಹಾಸುಹೊಕ್ಕಾಗಿ ಹಾಕಿದ ಲೇಸಿನ ಕೆಲವು ದಾರಗಳನ್ನು ಎಳೆದು ತೆಗೆಯಲಾಗುತ್ತದೆ. ಮಿಕ್ಕ ಎಳೆಗಳನ್ನು ಸೂಜಿ ಹೊಲಿಗೆಗಳಿಗಾಗಿ ಬಿಡಲಾಗುತ್ತದೆ. ಎರಡನೆಯ ಬಗೆಯಲ್ಲಿ ಹಾಸುಹೊಕ್ಕಾಗಿ ಮಾಡಿದ ಲೇಸನ್ನು ಬಟ್ಟೆಯ ಉದ್ದಕ್ಕೂ ಎಣಿಕೆಮಾಡಿ ಎಳೆತೆಗೆದು, ಉಳಿದ ಎಳೆಗಳ ಮೇಲೆ ನಿಬಿಡವಾದ ಸ್ಥಳವನ್ನುಂಟುಮಾಡಲಾಗುತ್ತದೆ. ಮೂರನೆಯ ವಿಧದಲ್ಲಿ ಹಿನ್ನಲೆಯ ಕೆಲವು ಹಾಸುಹೊಕ್ಕಾಗಿರುವ ಎಳೆಗಳನ್ನು ತೆಗೆದು, ಮಿಕ್ಕ ಭಾಗಗಳಲ್ಲಿ ಹಾಗೆಯೇ ಬಿಡಲಾಗುತ್ತದೆ. ಕತ್ತರಿಸಿದ ಕಲಾಬತಿನ ಒಂದು ರೀತಿಯಲ್ಲಿ, ನೇಯ್ದ ಬಟ್ಟೆಯ ಮೇಲೆ ಮಧ್ಯೆ ಮಧ್ಯೆ ನಾಜೂಕಾಗಿ ಕತ್ತರಿಸಿ, ಆ ಭಾಗಗಳಲ್ಲಿ ಲೇಸನ್ನು ಹಾಕಲಾಗುತ್ತದೆ. ನೋಡಲು ಇದು ಬಹಳ ಸುಂದರವಾಗಿ ಇರುತ್ತದೆ. ಮತ್ತೊಂದು ವಿಧಾನದಲ್ಲಿ ಹಿನ್ನಲೆಯನ್ನು ಛಿದ್ರಛಿದ್ರಮಾಡಿ, ನಮೂನೆಯ ಬಿಡಿಭಾಗಗಳಿಂದ ಹೆಣೆದು ಅಂಚು ಕಟ್ಟಲಾಗುತ್ತದೆ.

ಕಟ್ಟುಪಟ್ಟಿ (ಫಿಲೆಟ್) ಅಥವಾ ಬಲೆಗೆಲಸದಲ್ಲಿ (ನೆಟ್‌ವರ್ಕ್) ಬಲೆಯೊಂದರ ಮೇಲೆ ಕಲಾಬತನ್ನು ಹಾಕುತ್ತಾರೆ. ಬ್ಯೂರಟೊ ಅಥವಾ ನಿರಿಕಟ್ಟಿನ ಲೇಸಿನಲ್ಲಿ ತಳಭಾಗವನ್ನು ಅಲಂಕಾರಕ್ಕಾಗಿ ಜೋಲಾಡುವಂತೆ ಒಟ್ಟು ಮೇಲ್ಭಾಗದ ಅಂಚನ್ನು ನಿರಿಹಿಡಿದು ಬಟ್ಟೆಯ ಅಂಚಿಗೆ ಕಟ್ಟುತ್ತಾರೆ. ಇದನ್ನು ಜಾಲರಿಯಂತಿರುವ ಬಟ್ಟೆಗಳ ಮೇಲೆ ಹಾಕಿದರೆ ಬಹಳ ಅಂದವಾಗಿರುತ್ತದೆ. ವರ್ತುಲಾಕಾರದ ಕಲಾಬತಿನಲ್ಲಿ ಕಾರ್ಡ್‌ಬೋರ್ಡ್ ನಮೂನೆಯ ಮೇಲೆ ಉರುಳೆಯಿಂದ ಲೇಸನ್ನು ಹಾಕುತ್ತಾರೆ. ಗಂಟಿನ ಮಾದರಿಯ ಲೇಸಿನಲ್ಲಿ ಎಳೆಗಳಿಂದ ಗಂಟುಗಳನ್ನು ಹಾಕಿಯೇ ಲೇಸನ್ನು ತಯಾರಿಸಲಾಗುತ್ತದೆ. ನೇಯ್ದ ಜಮಖಾನಗಳ ಕೊನೆಯಲ್ಲಿ ಹಾಸು ಎಳೆಗಳಿಂದ ಹಾಕಿರುವ ಗಂಟುಗಳಲ್ಲಿ ಇದನ್ನು ಗಮನಿಸಬಹುದು. ಟೇಪ್ ಲೇಸಿನಲ್ಲಿ ಉರುಳೆ ಅಥವಾ ಯಾವುದೇ ಯಂತ್ರದಿಂದ ತಯಾರಿಸಿದ ಟೇಪಿನಿಂದ ಕಲ್ಪಿತ ಆಕೃತಿಯನ್ನು ಹೆಣೆಯಬಹುದು. ಇವೇ ಅಲ್ಲದೆ, ನೇಯ್ಗೆಯಲ್ಲಿ ಹಾಸು ಎಳೆಗಳ ನಡುವೆ ಹೊಕ್ಕು ಎಳೆಗಳನ್ನು ಹಾಯಿಸುವ ಲಾಳಿಯ ಸಹಾಯದಿಂದ ಗಂಟುಗಳನ್ನು ಹೆಣೆದು ಇನ್ನೊಂದು ಬಗೆಯ ಕುಣಿಕೆ ಲೇಸನ್ನು ತಯಾರಿಸುತ್ತಾರೆ.

ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಐರೋಪ್ಯ ದೇಶಗಳಲ್ಲಿ ಕಲಾಬತು ಎಷ್ಟು ಜನಪ್ರಿಯವಾಗಿತ್ತೆಂದರೆ ಯಾವೊಬ್ಬ ಸುಶಿಕ್ಷಿತ ಮಹಿಳೆಯೂ ಅಂದವಾದ ಲೇಸನ್ನು ಉಪಯೋಗಿಸದೆ ಪರಿಪೂರ್ಣಳಾಗುವುದಿಲ್ಲ–ಎಂದು ಹೇಳುತ್ತಿದ್ದರು. ಭಾರತದಲ್ಲಿ ಸ್ಯಾಟಿನ್ ಲೇಸು, ಜರಿಯ ಲೇಸು, ನೈಲಾನ್ ಲೇಸು ಮುಂತಾದವು ಬಳಕೆಯಲ್ಲಿವೆ. ಬಗೆಬಗೆಯ ಬಣ್ಣದ ರೇಷ್ಮೆಯ ಹಾಗೂ ಜರತಾರಿಯ ಕಲಾಬತುಗಳನ್ನು ಸೀರೆಗಳಿಗೆ ಜೋಡಿಸಿದಾಗ ಕಣ್ತಣಿಸುವಂತಿರುತ್ತದೆ. ಬನಾರಸಿನ ಸೀರೆಯನ್ನು ನೇಯುವಾಗಲೇ, ಸೀರೆಯ ಅಂಚಿನಲ್ಲಿ ಕಾಲು ಇಂಚಿನಿಂದ ಹಿಡಿದು ಐದು ಇಂಚುಗಳ ವರೆಗಿನ ಕಲಾಬತುಗಳು ತಯಾರಾಗುತ್ತವೆ. ಕಲಾಪ್ರಿಯರಾದ ಭಾರತೀಯ ಮಹಿಳೆಯರು ತಮ್ಮ ಉಡುಪುಗಳಲ್ಲಿಯೂ ಮನೆಯ ಅಲಂಕಾರದ ವಸ್ತ್ರಗಳಲ್ಲಿಯೂ ಕಲಾಬತುಗಳನ್ನು ಅಳವಡಿಸುತ್ತಾರೆ. ಬಾಗಿಲ ಪರದೆಯ ಅಂಚು, ಮೇಜುವಸ್ತ್ರ, ಮೊದಲಾದವು ಲೇಸುಗಳಿಂದ ಕಂಗೊಳಿಸುತ್ತವೆ.

ಕಸೂತಿ ಬಟ್ಟೆಗಳಂತೆ ಲೇಸುಗಳನ್ನು ಕಾಪಾಡುವುದೂ ಒಂದು ಕಲೆ. ಬಣ್ಣ ಮಾಸದಂತೆ ಲೇಸುಗಳನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸಬೇಕು. ಇವನ್ನು ಸಾಬೂನಿನಿಂದ ತೊಳೆಯಬಹುದಾದರೂ ಸೋಡವನ್ನು ಉಪಯೋಗಿಸಬಾರದು. ನೀರಿನಲ್ಲಿ ಸ್ವಲ್ಪ ನಿಂಬೆರಸವನ್ನು ಹಾಕಿ ಬಟ್ಟೆಯನ್ನು ಹಿಂಡಿದರೆ ಹೊಳಪೂ ನಯ ಹೆಚ್ಚುತ್ತವೆ.

**ಕಲಾಬತಿನ ಇತಿಹಾಸ :** ಇತಿಹಾಸಪೂರ್ವಕಾಲದಿಂದಲೂ ಕಲಾಬತಿನ ಬೆಳವಣಿಗೆಯನ್ನು ಕಾಣಬಹುದು. ಪುರಾತನ ಜನರ ಮೀನುಬಲೆಗಳು, ಹಕ್ಕಿಶಿಕಾರಿಯ ಬಲೆಗಳು ಮೊದಲಾದವು ಬಲೆಯ ಹೆಣಿಕೆಗಳನ್ನು ಕಲಾತ್ಮಕವಾಗಿ ರೂಪಿಸುವಂತೆ ಮಾನವನ ಕಲಾಭಿಜ್ಞತೆಯನ್ನು ಪ್ರಚೋದಿಸಿರಬಹುದು. ಪ್ರಾಚೀನ ಈಜಿಪ್ಟಿನ ಅನೇಕ ಸಮಾಧಿಗಳಲ್ಲಿ ಎಳೆತೆಗೆದ ಹೊಲಿಗೆಗಳೂ ಕತ್ತರಿಸಿದ ಕಲಾಬತಿನ ಹಾಗೂ ಕಸೂತಿಯ ನಮೂನೆಗಳೂ ದೊರಕಿವೆ. ಅರೇಬಿಯದಲ್ಲೂ ಕಲಾಬತು ಬಹಳ ಹಿಂದೆ ಜನಪ್ರಿಯವಾಗಿತ್ತೆಂಬುದಕ್ಕೆ ಸಾಕ್ಷ್ಯಗಳು ಸಿಕ್ಕುತ್ತವೆ. ಪೆರುವಿನ ಒಂದು ಪ್ರದೇಶದಲ್ಲಿ ಬಿಡಿಬಿಡಿ ವಂಕಿಗಳಿಂದ ಹೆಣೆದ ಎಳೆತೆಗೆದ ನಮೂನೆಗಳು ಕಾಣಬರುತ್ತವೆ.

12ನೆಯ ಹಾಗೂ 13 ನೆಯ ಶತಮಾನಗಳಿಂದೀಚೆಗೆ ಅನೇಕ ಕಲಾಬತಿನ ನಮೂನೆಗಳು ಯುರೋಪಿನ ಕೆಲವಾರು ಕಡೆಗಳಲ್ಲಿ ಇನ್ನೂ ಇವೆ. ಆಗ ರೇಷ್ಮೆ ಹಾಗೂ ಲಿನೆನ್ ಬಟ್ಟೆಗಳ ಮೇಲೆ ಎಳೆತೆಗೆದ ಹೊಲಿಗೆಗಳನ್ನೂ ಕತ್ತರಿಸಿ ಮಾಡಿದ ಕಲಾಬತುಗಳನ್ನೂ ತಯಾರಿಸುತ್ತಿದ್ದರು. ಫ್ರಾನ್ಸಿನಲ್ಲಿ ಸುಮಾರು (13)ನೆಯ ಶತಮಾನದಲ್ಲಿ ಚಿನ್ನಬೆಳ್ಳಿಗಳ ಎಳೆಗಳಿಂದ ಹೆಣೆದ ರೇಷ್ಮೆ ಅಂಚುಕಟ್ಟುಗಳು ವಾಣಿಜ್ಯವಸ್ತುಗಳಾಗಿದ್ದುವೆಂಬುದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಪುನರುಜ್ಜೀವನಕಾಲಕ್ಕೆ ಮೊದಲು ಕಲಾಬತಿನ ಕಲೆ ಗಮನಾರ್ಹವಾದಷ್ಟು ಬೆಳಕಿಗೆ ಬಂದಿರಲಿಲ್ಲವಾದರೂ ಆದಾಗಲೇ ನಿಚ್ಚಳವಾಗಿಯಂತೂ ರೂಪುಗೊಂಡಿತ್ತು.

ಸೂಜಿಮೊನೆಯ ಕಲಾಬತಿನ ಉಗಮವನ್ನು ಸುಮಾರು 15 ನೆಯ ಶತಮಾನದ ಉತ್ತರಾರ್ಧದಲ್ಲಿಯ ಇಟಲಿ ಮತ್ತು ಫ್ಲೆಮಿಷ್ ಚಿತ್ರಕಲೆಗಳಲ್ಲಿ ಗಮನಿಸಬಹುದು. ಈ ಕಲಾಕೃತಿಗಳಲ್ಲಿ ಕಲಾಬತಿನ ನಮೂನೆಯ ಅಂಚು ಸೇರಿಸಿ ಹೊಲಿದ ಹೊಲಿಗೆಗಳನ್ನು ಲಿನೆನ್ ವಸ್ತ್ರ ಹಾಗೂ ಮೆತ್ತೆಗಳ ಮೇಲೆ ಹೊಲಿದಿರುವುದನ್ನು ನೋಡಬಹುದು. ಹಿತ್ತಾಳೆಯ ಪಿನ್ನುಗಳು ಬೆಳಕಿಗೆ ಬಂದ ಅನಂತರ ಉರುಳೆ ಲೇಸುಗಳು ಬೆಳಕಿಗೆ ಬಂದವು. ಉರುಳೆ ಲೇಸಿನ ಮೊದಲ ಮಾದರಿಯ ಬಗ್ಗೆ ಮಾಹಿತಿಗಳಿಲ್ಲ. ಅದು 16ನೆಯ ಶತಮಾನದಿಂದೀಚಿನದೆಂದು ಸಂಶಯವಿಲ್ಲದೆ ಹೇಳಬಹುದು. ಹಿತ್ತಾಳೆಯ ಪಿನ್ನುಗಳನ್ನು ಉಪಯೋಗಿಸುವುದಕ್ಕೆ ಮೊದಲು ಮೀನುಮೂಳೆಗಳನ್ನು ಪಿನ್ನುಗಳಾಗಿ ಉಪಯೋಗಿಸುತ್ತಿದ್ದುದೂ ಉಂಟು. ಸುಮಾರು 16 ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ, ಸೂಜಿಮೊನೆಯ ಲೇಸು ಹಾಗೂ ಉರುಳೆ ಲೇಸುಗಳೇ ಅಲ್ಲದೆ ಲಿನೆನಿನ ಮೇಲೆ ಎಳೆತೆಗೆದ ಕತ್ತರಿಸಿದ ಲೇಸುಗಳೂ ಫಿಲೆಟ್ ಅಥವಾ ಉಬ್ಬು ಕಲಾಬತುಗಳೂ ಬಳಕೆಗೆ ಬಂದಿದ್ದುವು. ಮೊದಲಿಗೆ ಬಣ್ಣಗಳಿಗೆ ಹೆಚ್ಚು ಪ್ರಾಮುಖ್ಯ ಕೊಡುತ್ತಿರಲಿಲ್ಲ; ನಿರ್ದಿಷ್ಟವಾದ, ಸಮಮಿತವಾದ ಮಾದರಿಗಳಿಗೆ ಬಹಳ ಬೇಡಿಕೆಯಿತ್ತು. ತದನಂತರ ವಿವಿಧ ಹಿಂಬದಿಗಳನ್ನಿಟ್ಟು ಕಲಾಬತುಗಳನ್ನು ಮಾಡಲಾಗುತ್ತಿತ್ತು. ಕಲಾಬತನ್ನು ಪುನರುಜ್ಜೀವನಕಾಲದ ಅತ್ಯಂತ ನಿಜವಾದ ಮಗು ಎಂದು ಒಬ್ಬ ಕಲೇತಿಹಾಸಕಾರ ಹೇಳಿದ್ದಾನೆ. 1520 ರಿಂದೀಚೆಗೆ ಜರ್ಮನಿಯಲ್ಲಿ ಮುದ್ರಿತವಾದ ಕಲಾಬತಿನ ಮಾದರಿಗಳುಳ್ಳ ಪುಸ್ತಕಗಳು ಪ್ರಚಾರಕ್ಕೆ ಬಂದವು. ಅನಂತರ 1530ರಲ್ಲಿ ಪುನರುಜ್ಜೀವನ ಮಾದರಿಯ ವೆನಿಷಿಯನ್ ಅಥವಾ ಇಟಾಲಿಯನ್ ಪುಸ್ತಕಗಳು ಮುಂದಾದುವು. 1542ರಲ್ಲಿ ಕತ್ತರಿಸಿದ ಕಲಾಬತಿನ ಮಾದರಿಗಳುಳ್ಳ ಪುಸ್ತಕ ಬೆಳಕಿಗೆ ಬಂದಿತು. ಕೆಲವು ವರ್ಷಗಳ ಅನಂತರ ಎಲೆ ಮತ್ತು ಬಳ್ಳಿಗಳುಳ್ಳ ಕತ್ತರಿಸಿದ ಮಾದರಿಯ ಕಲಾಬತನ್ನು ಚತುರ್ಭುಜೀಯ ಹಿನ್ನೆಲೆಯ ಮೇಲೆ ಹಾಸುಹೊಕ್ಕಾಗಿ ಸೂಜಿಮೊನೆ ಹೊಲಿಗೆಯಿಂದ ಹಾಕತೊಡಗಿದರು. ಉರುಳೆ ಲೇಸು ಮಾದರಿಯುಳ್ಳ ಇಟಾಲಿಯನ್ ಪುಸ್ತಕವೊಂದು 1557ರಲ್ಲಿ ಪ್ರಕಟವಾಯಿತು. 16ನೆಯ ಶತಮಾನದ ಅಂತ್ಯದ ಹೊತ್ತಿಗೆ ಫ್ಲೆಮಿಷ್ ಕಲೆಗಾರರು ಕಲಾಬತನ್ನು ತಯಾರಿಸುವುದರಲ್ಲಿ ನಿಪುಣರಾದರು. ಆ ಶತಮಾನದ ಇನ್ನೊಂದು ಮುಖ್ಯ ನಮೂನೆಯೆಂದರೆ ರೆಟಿಸೆಲೊ ಕಲಾಬತು. ರೆಟಿಸೆಲೊದಲ್ಲಿ ವೃತ್ತವಾಗಿ ಅಥವಾ ಯಾವುದೇ ಜ್ಯಾಮಿತೀಯ ಆಕೃತಿಗಳನ್ನು ಹಾಕಲಾಗುತ್ತಿತ್ತು. ಕ್ಷಿಪ್ರವಾಗಿ ರೆಟಿಸೆಲೊ ಎಲ್ಲೆಲ್ಲೂ ಜನಪ್ರಿಯವಾಯಿತು. ಈ ಮಾದರಿಯಲ್ಲಿ ಕತ್ತರಿಸುವ ಕೆಲಸ ಬಹಳ. ಅನಂತರದ ಉರುಳೆ ಲೇಸಿನಲ್ಲೂ ಇದರ ಅನುಕರಣೆಯನ್ನು ಕಾಣಸಹುದು.

17ನೆಯ ಶತಮಾನದ ಹೊತ್ತಿಗೆ ಯುರೋಪಿನಲ್ಲಿ ಕಲಾಬತು ಒಂದು ವೈಭವಯುತವಾದ ವಾಣಿಜ್ಯವಸ್ತುವಾಗಿತ್ತು. ಸ್ತ್ರೀಯರೂ ಪುರುಷರೂ ವಿಧವಿಧವಾದ ಕಲಾಬತುಗಳನ್ನು ಬಳಸುತ್ತಿದ್ದರು. ಲೇಸುಗಳು ಎಷ್ಟು ಜನಪ್ರಿಯವಾಗಿದ್ದುವೆಂದರೆ, ಪ್ರತಿಯೊಂದು ದೇಶಕ್ಕೆ ಮಾತ್ರವಲ್ಲದೆ ಪ್ರತಿಯೊಂದು ನಗರಕ್ಕೂ ವಿಶಿಷ್ಟವಾದ ಶೈಲಿಯಿತ್ತು. ಸೂಜಿಮೊನೆಯ ಲೇಸುಗಳೇ ಅತ್ಯಂತ ಜನಪ್ರಿಯವಾದ ಮಾದರಿಗಳಾಗಿದ್ದುವು. ಆ ಶತಮಾನದ ಧರ್ಮಗುರುಗಳ ಉಡುಪುಗಳಲ್ಲಿ ಕಂಡುಬರುವ ನಿರಿಪಟ್ಟಿಗಳೇ ಮೊದಲಾದವನ್ನು ಇನ್ನೂ ಸುರಕ್ಷಿತವಾಗಿ ಇಡಲಾಗಿದೆ. ಶತಮಾನದ ಕೊನೆಯ ಹೊತ್ತಿಗೆ ಪುರುಷರು ಕಾಲರುಗಳ ಬದಲಾಗಿ ಕಲಾಬತುಗಳನ್ನು ಉಪಯೋಗಿಸತೊಡಗಿದರು. ಆ ಕಾಲದ್ದೆಂದು ಹೇಳಲಾಗಿರುವ ಹೂದಾನಿಗಳ ಮೇಲುವಸ್ತ್ರಗಳು, ಕೆಲವು ಉಡುಪುಗಳು ಮತ್ತು ಚರ್ಚುಗಳಲ್ಲಿ ಪೀಠಗಳ ಮೇಲೆ ಉಪಯೋಗಿಸುತ್ತಿದ್ದ ವಸ್ತ್ರಗಳು ಇಂದೂ ಸುರಕ್ಷಿತವಾಗಿವೆ. 17ನೆಯ ಶತಮಾನದಲ್ಲಿ ಇಟಲಿ ಫ್ರಾನ್ಸ್‌ಗಳಲ್ಲಿ ಕಲಾಬತಿನ ಉದ್ಯಮ ಬೆಳೆದಿತ್ತು. ಇಟಲಿಯಲ್ಲಿ ವೆನಿಸ್ ಮುಖ್ಯ ಕೇಂದ್ರ. 1650ರಲ್ಲಿ ಬೆಳಕಿಗೆ ಬಂದವೆನಿಸಿನ ನಮೂನೆಯೊಂದರಲ್ಲಿ ಶಿಲ್ಪಾಕೃತಿಯೊಂದರಲ್ಲಿ ಸೂಜಿಮೊನೆಯ ಹೆಣಿಕೆಯಿಂದ ಕಲಾಬತನ್ನು ಎತ್ತರಕ್ಕೆ ಉಬ್ಬಿಸಿ ಹೆಣೆಯಲಾಗಿದೆ. ಹೆಣಿಕೆಯಲ್ಲಿ ನಯವಾದ ಸೂತ್ರಜಾಲ ಮೊದಲು ಕಡಿಮೆಯಾಗಿದ್ದು, ಬರಬರುತ್ತಾ ಕ್ಲಿಷ್ಟ ಹಾಗೂ ಅಲಂಕಾರಮಯವಾದ ವಂಕಿಗಳಿಂದೊಡಗೂಡಿ ಅಧಿಕವಾಗಿ ಸಾಮಾನ್ಯವಾಯಿತು. ಇದೇ ರೀತಿಯಲ್ಲಿ ಉಬ್ಬಿಲ್ಲದ ಕೆಲವು ಕಲಾಬತುಗಳನ್ನೂ ಹಾಕುತ್ತಿದ್ದರು. 17ನೆಯ ಶತಮಾನದ ಫ್ಲೆಮಿಷ್ ಲೇಸು ಅಧಿಕವಾಗಿತ್ತು. ಶತಮಾನದ ಮಧ್ಯಭಾಗದ ಹೊತ್ತಿಗೆ, ನಯವಾದ ಸೂತ್ರಜಾಲವುಳ್ಳ ಅಸಮ ಆಕೃತಿಗಳನ್ನುಳ್ಳ ಲೇಸುಗಳು ಸೂಕ್ಷ್ಮದಾರಗಳುಳ್ಳ ರೆಟಿಸೆಲೊಲೇಸನ್ನು ಹಿಂದೂಡಿ ಪ್ರಮುಖವಾದುವು.

ಫ್ರಾನ್ಸಿನಲ್ಲಿ ಫಿಲೆಟ್ ಮತ್ತು ಕಟ್‌ವರ್ಕ್‌ಗಳ ಯಂತ್ರಗಳು ಬಳಕೆಗೆ ಬರುವವರೆಗೂ ಕಲಾಭಿಮಾನಿಗಳಿಗೆ ಇದು ಒಂದು ಉತ್ತಮ ಹವ್ಯಾಸವಾಗಿತ್ತು. 1665ರಲ್ಲಿ 14ನೆಯ ಲೂಯಿಯ ಖ್ಯಾತ ಮಂತ್ರಿ ಜೀನ್ ಕಾಲ್‌ಬಾರ್ ವೆನಿಸ್ ಮತ್ತು ಫ್ಲಾಂಡರ್ಸ್‌ಗಳಿಂದ ಕುಶಲ ಕಲಾಬತುಗಾರರನ್ನು ಕರೆಸಿ ಫ್ರಾನ್ಸಿನ ಏಳು ನಗರಗಳಲ್ಲಿ ಇದರ ಶಿಕ್ಷಣವನ್ನೇರ್ಪಡಿಸಿದ. ಹೀಗಾಗಿ ಕಲಾಬತುಗಳನ್ನು ಆಮದು ಮಾಡಿಕೊಳ್ಳುವುದು ಬಹಳ ಕಡಿಮೆಯಾಯಿತು. ಇಟಾಲಿಯನ್ ಮಾದರಿಗಳನ್ನು ಕೆಲಕಾಲ ಅನುಕರಿಸಿದ ಮೇಲೆ, ಫ್ರಾನ್ಸ್ ತನ್ನದೇ ಆದ ಶೈಲಿಯನ್ನು ರೂಢಿಸಿಕೊಂಡಿತು.

ಯುರೋಪಿನ ಇನ್ನಿತರ ದೇಶಗಳಲ್ಲೂ ಹದಿನೇಳನೆಯ ಶತಮಾನದಲ್ಲಿ ಕಲಾಬತುಗಳನ್ನು ಹಾಕುತ್ತಿದ್ದರು. ಆದರೆ ಅಲ್ಲಿ ಇದು ಇಟಲಿ, ಫ್ರಾನ್ಸ್ ಮತ್ತು ಫ್ಲಾಂಡರ್ಸ್‌ನಲ್ಲಿಯಷ್ಟು ಪ್ರಾಮುಖ್ಯಗಳಿಸಲಿಲ್ಲ. ಬಣ್ಣಬಣ್ಣದ ರೇಷ್ಮೆವಸ್ತ್ರಗಳ ಮೇಲೆ ಚಿನ್ನಬೆಳ್ಳಿಗಳ ಲೇಸುಗಳನ್ನು ಹಾಕುತ್ತಿದ್ದುದುಂಟು. ಸ್ಪಾನಿಷ್ ಮಾದರಿಯೊಂದರಲ್ಲಿ ಬಾಬಿನ್ ಮತ್ತು ಸೂಜಿಮೊನೆಯ ಲೇಸಿನಲ್ಲಿ ಅಂಚುಗಳಲ್ಲಿ ದಪ್ಪನೆಯ ಹೊಲಿಗೆಗಳನ್ನು ಹಾಕುತ್ತಿದ್ದರು. ಜರ್ಮನಿಯ, 17ನೆಯ ಶತಮಾನದ್ದೆಂದು ಹೇಳಲಾದ, ಉರುಳೆಲೇಸು ದೊರಕಿದೆ. ಆ ಶತಮಾನದ ಇಂಗ್ಲಿಷ್ ಸೂಜಿಮೊನೆಯ ಲೇಸು ಸಾಮಾನ್ಯವಾಗಿ ರೆಟಿಸೆಲೊ ಮಾದರಿಯದಾಗಿದ್ದು, ಅದರಲ್ಲಿ ಕೆಲವು ಕೃತಿಗಳ ಮೇಲೆ ಕಸೂತಿಗಳಿಗೆ ಹಾಕುವಂತೆ ಹೂ, ಗಿಡಬಳ್ಳಿಗಳು, ಮನುಷ್ಯ ಅಥವಾ ಪ್ರಾಣಿಗಳ ಆಕೃತಿಗಳನ್ನು ಹಾಕುತ್ತಿದ್ದರು. ಲೇಸುಗಳನ್ನು ಆಮದುಮಾಡಿಕೊಳ್ಳುವುದನ್ನು ಸರ್ಕಾರ ಬಹಿಷ್ಕರಿಸಿದ್ದೂ ಉಂಟು. ಫ್ಲಾಂಡರ್ಸಿನಿಂದ ವಲಸೆಬಂದ ಪ್ರಾಟೆಸ್ಟಂಟ್ ನಿರಾಶ್ರಿತರು ಉರುಳೆಲೇಸನ್ನು ಇಂಗ್ಲೆಂಡಿನಲ್ಲಿ ಪ್ರಚುರ ಪಡಿಸಿದರು. ಡಚ್ ಜನರಿಗಾಗಿಯೇ ಫ್ಲಾಂಡರ್ಸ್‌ನಲ್ಲಿ ಒಂದು ರೀತಿಯ ಜಪಾನ್ ಸೇವಂತಿಗೆಯ ಮಾದರಿಯ ಲೇಸುಗಳನ್ನು ತಯಾರಿಸುತ್ತಿದ್ದರು.

18ನೆಯ ಶತಮಾನದಲ್ಲಿ ಅಸಮಕೃತಿಗಳು ಮಾಯವಾಗಿ ಅತ್ಯಲಂಕಾರದ ನಮೂನೆಗಳು ಹೊರಬಂದಾಗ, ರೇಜ಼ೋಸೂತ್ರಜಾಲಗಳು ಎಲ್ಲೆಲ್ಲೂ ಕಂಡುಬರತೊಡಗಿದ್ದವು. ಲೇಸುಗಳು ಇನ್ನೂ ಹಗುರವಾಗಿ, ಒತ್ತಾಗಿಲ್ಲದೆ, ಬರತೊಡಗಿದುವು. ಈ ರೀತಿಯ, ಗಾಳಿತೂರುವಂಥ, ಒತ್ತಾಗಿಲ್ಲದ ಲೇಸುಗಳನ್ನು ತಯಾರಿಸಲು ಉರುಳೆ ವಿಧಾನ ಬಹಳಮಟ್ಟಿಗೆ ಸಾಧಕವಾಯಿತು. ಅಂಚುಕಟ್ಟುವುದು, ನಿರಿಪಟ್ಟಿಗಳನ್ನು ಅಳವಡಿಸುವುದು ಮೊದಲಾದವು ಬಳಕೆಯಲ್ಲಿದ್ದುವು. ಇವನ್ನು ಮೇಜು ಮೊದಲಾದ ಪೀಠೋಪಕರಣಗಳ ಮೇಲೂ ಉಡುಪುಗಳ ಮೇಲೂ ಸೇರಿಸುತ್ತಿದ್ದರು. ಕುಪ್ಪಸದ ತೋಳಿನ ಕೊನೆಗೂ ಉರುಳೆಲೇಸನ್ನು ಹಾಕುತ್ತಿದ್ದರು. ಧಾರ್ಮಿಕ ಸಂಸ್ಕಾರಗಳಿಗೂ ಪ್ರಾರ್ಥನೆಗಳಿಗೂ ಉಪಯೋಗಿಸುತ್ತಿದ್ದ ಕೆಲವು ವಿಶಿಷ್ಟ ಉಡುಪುಗಳು ಕಲಾಬತುಗಳಿಂದ ಅಲಂಕೃತವಾಗುತ್ತಿದ್ದವು. ಹದಿನೇಳನೆಯ ಶತಮಾನದಲ್ಲಿ ಪ್ರಮುಖವಾಗಿದ್ದ ಕಲಾಬತಿನ ಕೇಂದ್ರಗಳೇ ಆ ಶತಮಾನದಲ್ಲೂ ಬಹಳ ಖ್ಯಾತವಾಗಿದ್ದುವು. ಇಟಲಿಗಿಂತ ಫ್ರಾನ್ಸ್ ಈ ಕಲೆಯಲ್ಲಿ ಪ್ರಮುಖವಾಯಿತು. ಕಾಲ್‌ಬಾರನ ಅಭಿಲಾಷೆಯಂತೆ ಫ್ರಾನ್ಸಿನಲ್ಲಿ ಅಕ್ಕಪಕ್ಕದಲ್ಲಿದ್ದ ಎರಡು ನಗರಗಳಾದ ಅಲೆಂಕಾನ್ ಮತ್ತು ಅರ್ಜೆಂಟಾನ್‌ಗಳು ಸೂಜಿಮೊನೆಯ ಕಲಾಬತಿನ ತಯಾರಿಕೆಯಲ್ಲಿ ಬಹಳ ಪ್ರಸಿದ್ಧವಾಗಿದ್ದುವು. ಅಲೆಂಕಾನಿನಲ್ಲಿ ಇಪ್ಪತ್ತಕ್ಕೂ ಅಧಿಕವಾಗಿ ವಿವಿಧ ನಮೂನೆಗಳುಳ್ಳ, ಕಲಾಬತ್ತುಗಳು ಇದ್ದವೆಂದು ತಿಳಿದುಬರುತ್ತದೆ. ಷಟ್‌ಭುಜಾಕೃತಿಗಳುಳ್ಳ ಚಿಕ್ಕ ಚುಕ್ಕಿಯಂತ ಕಲಾಬತ್ತು ಸೇರಿಸಿದ ಅರ್ಜೆಂಟೆಲಾ ಮಾದರಿಯೂ ದಾರ ಅಥವಾ ಕೂದಲಿನಿಂದ ತಯಾರಿಸಿದ ಜಡೆಪಟ್ಟಿಯಾಗಿ ಉಪಯೋಗಿಸುತ್ತಿದ್ದ ಕಲಾಬತುಗಳೂ ಜನಪ್ರಿಯವಾಗಿದ್ದುವು.

18ನೆಯ ಶತಮಾನದಲ್ಲಿ ಬ್ರಸಲ್ಸ್‌ನಲ್ಲಿ ಸೂತ್ರಜಾಲದಂಥ ವಂಕಿಗಳುಳ್ಳ ವಿಶಿಷ್ಟ ರೀತಿಯ ಉರುಳೆಲೇಸುಗಳನ್ನು ಹಾಕಲಾಗುತ್ತಿತ್ತು. ಲಿನೆನ್ ಮತ್ತು ರೇಷ್ಮೆಮಿಶ್ರಿತ ಬಟ್ಟೆಯ ಮೇಲೆ ಉರುಳೆವಿಧಾನದಿಂದ ಉಬ್ಬಿದ ಹೊರ ಎಳೆಯನ್ನು ಹಾಕಲಾಗುತ್ತಿತ್ತು. ಇವುಗಳ ಮಧ್ಯದಲ್ಲಿ ಹಡಗು, ಭವನ, ಪಶುಪಕ್ಷಿ ಬೇಟೆ ಮೊದಲಾದುವನ್ನು ಹಾಕಿದಾಗ ಬಹಳ ಮನೋಹರವಾಗಿ ಕಂಡುಬರುತ್ತಿತ್ತು. ಈ ಶತಮಾನದ ಮೆಶ್ಲಿನ್ ಲೇಸಿನಲ್ಲಿ ಹೊಳೆಯುವ ದುಂಡಾದ ಆಕೃತಿಗಳುಳ್ಳ ಜಡೆಪಟ್ಟಿಗಳನ್ನು ಹಾಕುತ್ತಿದ್ದರು. ಇಟಲಿಯಲ್ಲಿ ವೆನಿಷಿಯನ್ ಸೂಜಿಮೊನೆಯ ಲೇಸು ಬಹಳ ಹಗುರವಾಗುತ್ತ ಬಂದು ಹದಿನೆಂಟನೆಯ ಶತಮಾನದ ಆದಿಯಲ್ಲಿ

ಗುಲಾಬಿಮೊನೆಯ ಅಥವಾ ರೊಸಲಿನಿನ ಆಕಾರ ತಳೆಯಿತು. ಕಲ್ಪನೆಯಲ್ಲಿ ಮೂಡಿದ ಅನೇಕ ಹೂಗಳ ಆಕೃತಿಗಳು ಉಬ್ಬಿದಂತೆ ಮೂಡುತಿದ್ದವು. ನವಿರಾದ ಸೂತ್ರಜಾಲದ ಮೇಲೆ ವಂಕಿಯಾಕಾರದಲ್ಲಿ ಚಿಕ್ಕ ಚಿಕ್ಕ ಹೂಗಳು ಮೂಡಿ ಬರುತಿದ್ದವು. ಕೆಲವು ಬಾರಿ ಹೂಗಳೇ ಅಲ್ಲದೆ ಸಿಂಹಗಳನ್ನೂ ಮತ್ಸ್ಯಕನ್ಯೆಯರನ್ನೂ ಮೂಡಿಸುತಿದ್ದದ್ದುಂಟು. ಇವೇ ಅಲ್ಲದೆ ಇಂಗ್ಲೆಂಡ್, ಜರ್ಮನಿ, ಡೆನ್ಮಾರ್ಕ್ ಮೊದಲಾದ ದೇಶಗಳಲ್ಲೂ ವಿವಿಧ ಮಾದರಿಯ ಲೇಸುಗಳು ಪ್ರಚಲಿತವಾದವು.

ಫ್ರಾನ್ಸಿನ ಕ್ರಾಂತಿ ಮತ್ತು ಕೈಗಾರಿಕಾ ಕ್ರಾಂತಿಗಳಿಂದ ಕಲಾಬತಿನ ಮೇಲೂ 19ನೆಯ ಶತಮಾನದಲ್ಲಿ ತೀವ್ರ ಪರಿಣಾಮವುಂಟಾಯಿತು. ಫ್ರೆಂಚ್ ಮತ್ತು ಫ್ಲೆಮಿಷ್ ಲೇಸಿನ ಕೈಗಾರಿಕೆ 1790ರ ಹೊತ್ತಿಗೆ ಅವನತಿ ಹೊಂದಿತು. ಕೆಲಕಾಲಾನಂತರ ಅದು ಮತ್ತೆ ತಲೆಯೆತ್ತಿದರೂ ಕಲಾಬತುಗಳು ಅನಂತರದ ಜನಾಂಗದಲ್ಲಿ ದಿನನಿತ್ಯದ ಅಲಂಕರಣ ವಸ್ತುಗಳಾಗದೆ, ಕೇವಲ ಧಾರ್ಮಿಕ ಸಂಪ್ರದಾಯಗಳ ಆಚರಣೆಯಲ್ಲಿ ಉಪಯೋಗಿಸುವ ವಸ್ತುಗಳಾದವು. ಈ ಅವನತಿ ಯಂತ್ರಗಳ ಉಪಜ್ಞೆಯಿಂದ ಕ್ಷಿಪ್ರಗೊಂಡಿತು. ಈ ಶತಮಾನದ ಆದಿಯಲ್ಲೇ ಯಂತ್ರಗಳಿಂದ ಬಹಳ ಪರಿಶ್ರಮವಿಲ್ಲದೆಯೇ ಪುರಾತನ ಕಾಲದ ಮಾದರಿಯ ಲೇಸುಗಳ ತಯಾರಿಕೆ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಸ್ತ್ರೀಯರು ಈ ಯಂತ್ರಗಳ ಲೇಸುಗಳಿಗೆ ಬಹಳವಾಗಿ ಮಾರುಹೋಗದಿದ್ದರೂ ಶತಮಾನದ ಮಧ್ಯಭಾಗದ ಹೊತ್ತಿಗೆ ಹೆಂಗಸರ ಫ್ಯಾಷನ್ನಿಗೆ ಇವು ಪೂರಕವಾದವು. ಲಿನೆನ್‌ಗಿಂತ ಹತ್ತಿ ಸುಲಭ ಲಭ್ಯವಾದ್ದರಿಂದ ಹತ್ತಿಯ ಬಳಕೆ ಅಧಿಕವಾಯಿತು. ಕೆಲವು ವಿಕ್ಟೋರಿಯನ್ ಮಾದರಿಯ ಲೇಸುಗಳು ನಯನ ಮನೋಹರವಾಗಿವೆ. ಬಣ್ಣಬಣ್ಣದ ರೇಷ್ಮೆ ವಸ್ತ್ರಗಳ ಮೇಲೆ ಹಾಕಿದ ಸೂಜಿಮೊನೆಯ ಕಲಾಬತಿನ ಶಾಲೊಂದರ ಮೇಲೆ ಇರುವ ಬಗೆಬಗೆಯ ಹೂಗಳು ಸಹಜವೆನಿಸುವಷ್ಟು ಸುಂದರವಾಗಿವೆ. ರಾಣಿಯೊಬ್ಬಳಿಗಾಗಿ ತಯಾರಿಸಿದ ಈ ಶಾಲನ್ನು ನ್ಯೂಯಾರ್ಕಿನ ಮೆಟ್ರೊಪಾಲಿಟನ್ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಕಲಾಭಿರುಚಿಯುಳ್ಳ ಮಹಿಳೆಯರಿಂದ ಹೊಸ ಹೊಸ ಲೇಸುಗಳನ್ನು ತಯಾರಿಸುವ ಸಂಸ್ಥೆಗಳು ಬೆಳಕಿಗೆ ಬಂದವು; ಹಳೆಯ ಸಂಸ್ಥೆಗಳ ಪುನರುತ್ಥಾನ ಮಾಡಲಾಯಿತು. ಹವ್ಯಾಸಿ ಕಲೆಗಾರರು ಸಹ ಲೇಸುಗಳನ್ನು ಹಾಕತೊಡಗಿದರು. ಆ ಕಾಲದ ವೈಶಿಷ್ಟ್ಯವೇನೆಂದರೆ, ದೊಡ್ಡ ದೊಡ್ಡ ಶಾಲುಗಳಿಗೆ ಬೇಬಿ ಲೇಸೆಂಬ ಚಿಕ್ಕ ಅಂಚುಳ್ಳ ವಿವಿಧ ಮಾದರಿಯ ಕಲಾಬತುಗಳನ್ನು ಹಾಕುತ್ತಿದ್ದದ್ದು.

ಯಂತ್ರಗಳು ಬಳಕೆಗೆ ಬಂದಿದ್ದರೂ ಒಂದನೆಯ ಮಹಾಯುದ್ಧದ ವರೆಗೂ ಕೈಯಿಂದ ಹಾಕಲಾಗುತ್ತಿದ್ದ ಕಲಾಬತುಗಳು ಬಳಕೆಯಲ್ಲಿದ್ದವು. ಚೀನದಲ್ಲಿ ತಯಾರಾದ ಉರುಳೇಲೇಸು, ಸೂಜಿಮೊನೆಯ ಲೇಸು ಮತ್ತು ಫಿಲೆಟ್ ಲೇಸುಗಳು ಯುರೋಪ್ ಮತ್ತು ಅಮೆರಿಕೆಗಳಿಗೆ ರಫ್ತಾಗತೊಡಗಿದವು. ಈ ಶತಮಾನದ ಮಧ್ಯಭಾಗದ ಹೊತ್ತಿಗೆ ಕಲಾಬತುಗಳ ತಯಾರಿಕೆ ಕಡಿಮೆಯಾಗಿ, ಅದನ್ನು ಸ್ತ್ರೀಯರು ಕೇವಲ ಹವ್ಯಾಸವಾಗಿ, ತಮ್ಮ ಕಲಾಭಿರುಚಿಯನ್ನು ವ್ಯಕ್ತಪಡಿಸಲು ಮಾತ್ರ ಹಾಕತೊಡಗಿದರು.

ಕೆಲವು ದೇಶಗಳಲ್ಲಿ ಕಲಾಬತನ್ನು ಶೇಖರಿಸುವುದೂ ಒಂದು ಮುಖ್ಯ ಹವ್ಯಾಸವಾಗಿದೆ. ಕೈಯಿಂದ ಹಾಕಲಾದ ನವಿರಾದ ಸೂಕ್ಷ್ಮ ಬಣ್ಣಬಣ್ಣಗಳ ಕಲಾಬತುಗಳಿಗೆ ಬೆಲೆಯೂ ಅಧಿಕ. ಕೆಲವು ಅಪೂರ್ವವಾದ ಲೇಸುಗಳು ತಲತಲಾಂತರವಾಗಿ ಬಂದವು. ಆದರೆ ಅವುಗಳ ಮೌಲ್ಯಗಳನ್ನು ಕಂಡುಹಿಡಿಯುವುದು ಕಷ್ಟ. ಈ ಅಭಿರುಚಿಯೂ ದಿನೇ ದಿನೇ ಕ್ಷೀಣಿಸುತ್ತಿರುವುದರಿಂದ, ವಸ್ತುಸಂಗ್ರಹಾಲಯಗಳೂ ಹಣ ತೆತ್ತು ಇವನ್ನು ಕೊಳ್ಳಲು ಮುಂದೆ ಬರುತ್ತಿಲ್ಲ. ಕೊಡುಗೆಯಾಗಿ ಕೊಟ್ಟಲ್ಲಿ ಸ್ವೀಕರಿಸಿ ಪ್ರದರ್ಶಿಸಲು ಅವು ಸಿದ್ಧವಿವೆ. (ಎಸ್.ಎಲ್.ಎ.)

ಆದಿನಾಥ ಮೂರ್ತಿ

**ಕಲಾಬಾವಿ:** ಬೆಳಗಾಂವಿ ಜಿಲ್ಲೆ ಸಂಪಗಾಂವ ತಾಲ್ಲೂಕಿನ ಒಂದು ಗ್ರಾಮ. ಬೈಲಹೊಂಗಲದಿಂದ 18ಕಿಮೀ ದೂರದಲ್ಲಿದೆ. ಇದು ಪ್ರಾಚೀನ ಕುಮ್ಮುದವಾಡ ಎಂದು ಫ್ಲೀಟರು ಗುರುತಿಸಿದ್ದಾರೆ. ಇಲ್ಲಿರುವ ಬಸದಿ ಆದಿನಾಥ ತೀರ್ಥಂಕರನದು. ಇದೊಂದು ಸಾಮಾನ್ಯ ಕಟ್ಟಡ. ಕಲ್ಯಾಣಿ ಚಾಳುಕ್ಯ ಶೈಲಿಯಲ್ಲಿರುವ ಆದಿನಾಥನ ಮೂರ್ತಿ ಕುಳಿತ ಭಂಗಿಯಲ್ಲಿದ್ದು ಎರಡು ಮೀಟರ್ ಎತ್ತರವಾಗಿದೆ. ಇಲ್ಲಿರುವ 814ರ ಗಂಗರ ಕಾಲದ ಶಾಸನವೊಂದು ಗಂಗರ ಶಿವಮಾರನುಒಂದನೆಯ ಅಮೋಘವರ್ಷನ ಕಾಲದಲ್ಲಿ ಕಾದರವಳ್ಳಿ–30ರಲ್ಲಿರುವ ಕುಮ್ಮುದವಾಡ ಜಿನಾಲಯಕ್ಕೆ ಕೊಟ್ಟ ದಾನ – ದತ್ತಿಯನ್ನು ಹೇಳುತ್ತದೆ.ರಾಮಲಿಂಗ, ಕಲ್ಮೇಶ್ವರ, ದ್ಯಾಮವ್ವ, ಮಾರುತಿ ಮತ್ತು ಇತ್ತೀಚೆಗೆ ನಿರ್ಮಿಸಿದ ವಿಠಲ ದೇವಾಲಯ ಇಲ್ಲಿನ ಇತರದೇವಾಲಯಗಳು. ರಾಮಲಿಂಗ ದೇವಾಲಯವನ್ನು ಜೀರ್ಣೋದ್ಧಾರ ಗೊಳಿಸಲಾಗಿದೆ. ಇಲ್ಲಿರುವ ಇನ್ನೊಂದು ಶಾಸನ 300 ಕಮ್ಮ ಭೂಮಿಯನ್ನು ಕುಮ್ಮುದವಾಡದ ದೇವಾಲಯಕ್ಕೆ ದಾನ ಕೊಟ್ಟ ವಿಚಾರವನ್ನು ದಾಖಲಿಸಿದೆ. ಕಲ್ಮೇಶ್ವರ ದೇವಾಲಯವೂ ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದ್ದು ಶಿವ–ಪಾರ್ವತಿಯರ ಮೂರ್ತಿಗಳನ್ನೊಳಗೊಂಡಿದೆ. ಇಲ್ಲಿರುವ ಮತ್ತೊಂದು ಶಾಸನ 12ನೆಯ ಶತಮಾನದ ಮತಿಮಾಳಪಂಡಿತ, ಅವನ ಶಿಷ್ಯ ತೇಜೋರಸಿ ಪಂಡಿತ, ನಾಗೇಶ್ವರ ದೇವರು ಮತ್ತು ಅಣ್ಣಿಗೇರಿಗಳ ಬಗ್ಗೆ ಮಾಹಿತಿ ಒದಗಿಸುವುದು. ಈ ದೇವಾಲಯದ ಎದುರು 4 ವೀರಗಲ್ಲುಗಳಿವೆ. (ಆರ್.ಐ.)

**ಕಲಾಭಿಮಾನಿ ದೇವತೆಗಳು :** ಮಾನವನಲ್ಲಿ ಕಾಣಬರುವ ಜ್ಞಾನ, ಸಾಹಿತ್ಯ ಮತ್ತು ಕಲೆಗಳಿಗೆ ಪ್ರೇರಕ ರೂಪರಾದ ಅಭಿಮಾನಿದೇವತೆಗಳ ಕಲ್ಪನೆ ಭಾರತ ಹಾಗೂ ಪುರಾತನ ಗ್ರೀಕ್ ಸಂಸ್ಕೃತಿಯಲ್ಲಿದೆ. ಗ್ರೀಕ್ ಅತಿ ಪ್ರಾಚೀನರಾದ ಹೋಮರ್ ಮತ್ತು ಹೆಸಿಯಡರ ಕಾವ್ಯಗಳಲ್ಲಿಯೇ ನಾವಿದನ್ನು ನೋಡಬಹುದು. ಹೆಲನಿಕ್ ಸಂಸ್ಕೃತಿಯಲ್ಲಿ ಈ ತತ್ತ್ವ ಗಣನೀಯವಾಗಿ ಉಳಿದು ಬಂದಿದೆ. ಈ ಕಲಾಭಿಮಾನಿದೇವತೆಗಳಲ್ಲಿ ಸ್ತ್ರೀಯರೇ ಹೆಚ್ಚು. ಗ್ರೀಕರ ಪುರಾತನ ಸಂಸ್ಕೃತಿಯಲ್ಲಿ ಕಾಣಬರುವ ಕಲಾಭಿಮಾನಿದೇವತೆಗಳಾರೆಂದರೆ, ಕ್ಲಿಯೋ, ಎಂಟರ್ಪಿ, ಜಲಿಯ, ಮೆಲ್ಪೊಮೆನಿ, ಜರ್ಪ್ಸಿಕೋರಿ ಎರಟೋ, ಪಾಲಿಮ್ನಿಯ, ಯುರೇನಿಯ, ಮತ್ತು ಕ್ಯಾಲಿಯೋಪಿ–ಎಂಬ ಒಂಬತ್ತು ಜನ. ಇವರೆಲ್ಲರೂ ಜ್ಯೂಸ್ ಮತ್ತು ಮೆಮೋಸ್ವೇನಳ (ಮೇಧೋಶಕ್ತಿ) ಮಕ್ಕಳಂತೆ. ಮೂಲತಃ ಇವರೆಲ್ಲರೂ ಸಂಗೀತದ ಅಧಿದೇವತೆಗಳು ಮತ್ತು ಇವರ ಗಾನಕ್ಕೆ ಮೇಳ ಹಾಕುವವನೇ ಅಪಾಲೋ. ಇವರು ಒಲಿಂಪಸ್ ಶಿಖರದಲ್ಲಿನ ತಮ್ಮ ನಿವಾಸದಲ್ಲಿದ್ದು ತಮ್ಮ ಹಾಡಿನಿಂದಲೇ ಸಮಸ್ತ ದೇವಗಣವನ್ನೆಲ್ಲ ತೃಪ್ತಿಪಡಿಸಿದರಂತೆ.

ಪುರಾತನ ಭಾರತೀಯ ಸಂಸ್ಕೃತಿಯೂ ಈ ಕಲ್ಪನೆಗೆ ಹೊರತಲ್ಲ. ಸರಸ್ವತಿಯನ್ನು ವಿದ್ಯಾಧಿದೇವತೆಯೆಂದೂ ಲಕ್ಷ್ಮಿಯನ್ನು ಐಶ್ವರ್ಯದ ಮೂಲದೇವತೆಯೆಂದೂ ವಿನಾಯಕನನ್ನು ವಿಘ್ನೇಶ್ವರನೆಂದೂ ಕಲ್ಪಿಸಲಾಗಿದೆ. ಗಂಧರ್ವರು, ಕಿನ್ನರರೇ ಮುಂತಾದ ದೇವಗಣಗಳು ಸಂಗೀತ ನೃತ್ಯ ಮತ್ತು ಸಾಹಿತ್ಯದಲ್ಲಿ ಪಾರಂಗತರಾಗಿದ್ದರೆಂಬ ಮಾತು ಭಾರತೀಯ ಪುರಾಣಗಳಲ್ಲಿ ಕಾಣಬರುತ್ತದೆ. ಇಂದ್ರನ ಸಭೆಯಲ್ಲಿ ನಡೆಯುತ್ತಿದ್ದ ಇವರ ಕಲಾಪ್ರದರ್ಶನ ದೇವತೆಗಳ ಕಣ್ಮನಗಳನ್ನು ತಣಿಸುತ್ತಿದ್ದಿತಂತೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ವಿದ್ಯಾಧಿದೇವತೆಯ ಸ್ಥಾನ ಹಯಗ್ರೀವನಿಗೆ ಸಲ್ಲುತ್ತದೆ. ತಮ್ಮ ಕಲೆಯ ಕೌಶಲ್ಯಕ್ಕೆ ಕುಮಾರಸ್ವಾಮಿಯೇ ಅಧಿದೇವತೆಯೆಂದು ಈಶ್ವರನ ಮಗನಾದ ಕುಮಾರಸ್ವಾಮಿಯನ್ನು ಆರಾಧಿಸುವ ಸಂಪ್ರದಾಯ ಶಿಲ್ಪಿಗಳಲ್ಲಿ ಕಾಣಬರುತ್ತದೆ. ಲಯಕರ್ತನೂ ನಟಭಯಂಕರನೂ ಆದ ನಟರಾಜ ನೃತ್ಯಕಲೆಯ ಮೂರ್ತಸ್ವರೂಪನೇ ಆಗಿದ್ದಾನೆ.

ಗ್ರೀಕರ ಭಾರತದ ಕಲಾಭಿಮಾನಿ ದೇವತೆಗಳು ತ್ರಿಕಾಲಜ್ಞರು. ವರ್ತಮಾನ, ಭೂತ ಮತ್ತು ಭವಿಷ್ಯದ ಅರಿವು ಇವರಿಗುಂಟು. ಮಾನವ ಲೋಕದ ಕವಿಗಳಲ್ಲಿ ಮೂಡುವ ಕಾವ್ಯ, ದಾರ್ಶನಿಕ ವಿಚಾರ, ಆಳುವವನ ಧಾರ್ಮಿಕ ಪ್ರಜ್ಞೆ–ಇವುಗಳೆಲ್ಲಕ್ಕೂ ಬೇಕಾದ ಪ್ರೇರಣೆ ಈ ದೇವತೆಗಳಿಂದಲೇ ಬರಬೇಕು. ಈ ದೇವತೆಗಳು ಹಾಡಿದ ಕಾವ್ಯವನ್ನು ಅವರು ನುಡಿಸಿದಂತೆ ನುಡಿಯುವವನೇ ಕವಿ.

ಈ ದೇವಕನ್ಯೆಯರು ಅವಿವಾಹಿತರು, ಶುದ್ಧಚಾರಿತ್ರರು. ಪ್ರತಿಭಾನ್ವಿತರಾದ ಕವಿಗಳು ಮತ್ತು ಸಂಗೀತಗಾರರನ್ನು ಇವರ ಔರಸಪುತ್ರರೆಂದು ಗಣಿಸುವುದುಂಟು. ಲೀನಸ್ ಯುರೇನಿಯಳ ಮಗನೆಂದೂ ಹೈಮೆನಿಯಸ್ ಕ್ಲಿಯೋಳ ಮಗನೆಂದೂ ತಮೈರಸಿಸ್ ಮೆಲ್ಪಮೆನಿಯ ಮಗನೆಂದೂ ಹೇಳಿದೆ. ಭಾರತೀಯ ಕವಿಗಳು ಮತ್ತು ಕಲೋಪಾಸಕರು ತಮ್ಮ ಕೃತಿಗೆ ಬೇಕಾದ ಸ್ಫೂರ್ತಿಪಡೆಯಲು ವಾಗ್ದೇವಿಯನ್ನು ಆರಾಧಿಸುವುದುಂಟು. ತಮ್ಮ ಗ್ರಂಥರಚನೆಗೆ ಮುನ್ನ ಶಾರದಾಸ್ತುತಿ, ವಿನಾಯಕಸ್ತುತಿ, ಇವರೆಲ್ಲರಲ್ಲಿಯೂ ಕಾಣಬರುವ ಸಾಮಾನ್ಯ ಗುಣ.

ಒಂಬತ್ತು ಜನ ದೇವತೆಗಳಲ್ಲದೆ ಥಿಯೋರಿಸ್, ಪ್ರಾಕ್ಸಿಸ್, ನೀಟೆ ಮೊದಲಾದ ಇನ್ನೂ ಅನೇಕ ಕಲಾಭಿಮಾನಿದೇವತೆಗಳ ಹೆಸರು ಗ್ರೀಕ್ ಸಾಹಿತ್ಯದ ಮುಂದಿನ ಬೆಳವಣಿಗೆಯಲ್ಲಿ ಕಾಣುತ್ತವೆ. ಮೂಲದಲ್ಲಿ ಇದ್ದ ಒಂಬತ್ತು ಜನ ಕಲಾಭಿಮಾನಿದೇವತೆಗಳಲ್ಲಿ ಮೊದಮೊದಲು ಯಾವ ವೃತ್ತಿವೈವಿಧ್ಯವೂ ಕಾಣಬರದಿದ್ದರೂ ರೋಮನ್ ಸಂಸ್ಕೃತಿಯ ವೇಳೆಗೆ ವೈವಿಧ್ಯ ತಲೆದೋರುತ್ತದೆ. ಉದಾಹರಣೆಗೆ–ಕ್ಲಿಯೋ ಇತಿಹಾಸದ ಅಧಿದೇವತೆಯೆಂದೂ ಎಂಟರ್ಪಿ ಕೊಳಲ ಗಾನದ ಮೂಲದೇವತೆಯೆಂದೂ ಯುರೇನಿಯ ಖಗೋಳ ಶಾಸ್ತ್ರದ ಅಭಿಮಾನಿದೇವತೆಯೆಂದೂ ಗಣಿಸಲಾಗಿದೆ. ಆದರೆ ಉಳಿದ ಆರು ದೇವತೆಗಳು ಕಾವ್ಯ, ಅಲಂಕಾರ, ದರ್ಶನ, ಬೇಸಾಯ ಮುಂತಾದ ಜ್ಞಾನದ ವಿವಿಧ ಪ್ರಕಾರಗಳನ್ನೂ ಜೊತೆಗೂಡಿಯೇ ಪ್ರತಿನಿಧಿಸುತ್ತಾರೆ. ಅಂದಮೇಲೆ ಕಲಾಭಿಮಾನಿ ದೇವತೆಗಳಲ್ಲಿ ಕಾಣಬರುವ ಈ ವೃತ್ತಿವೈವಿಧ್ಯ ಹೆಸರಿಸುವಷ್ಟು ಸುವ್ಯವಸ್ಥಿತವಾಗಿರುವಂತೆ ಕಾಣುವುದಿಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಕಾಣಬರುವ ಕಲಾಭಿಮಾನಿ ದೇವತೆಗಳ ಕಲ್ಪನೆ ಗ್ರೀಕರಲ್ಲಿರುವಷ್ಟು

ಸುವ್ಯವಸ್ಥಿತವಾಗಿರದಿದ್ದರೂ ಇಲ್ಲಿ ಕಾಣುವ ಕೆಲವೇ ಸಂಖ್ಯೆಯ ಕಲಾಭಿಮಾನಿದೇವತೆಗಳು ಭಾರತೀಯರ ಸಾಹಿತ್ಯ, ಕಲೆ ಮತ್ತು ಸೌಂದರ್ಯೋಪಾಸನೆಗೆ ಸೂಕ್ತವಾದ ಪ್ರೇರಕಶಕ್ತಿಗಳೆನಿಸಿದ್ದಾರೆ. (ಎ.ಎಲ್.ಎಸ್.)

**ಕಲಾಮಂದಿರಗಳು :** ಸಾರ್ವಜನಿಕರಿಗೆ ನಾಟಕ, ನೃತ್ಯ ಮತ್ತು ಕಲಾಕೃತಿಗಳನ್ನು ಪ್ರದರ್ಶಿಸುವ ರಂಗಮಂದಿರ ಮತ್ತು ಸಭಾಂಗಣಗಳನ್ನೊಳಗೊಂಡ ಮಂದಿರಗಳಿಗೆ ಕಲಾಮಂದಿರಗಳೆನ್ನುವರು. ವಿವಿಧ ರೀತಿಯ ಚಿತ್ರಕಲೆ, ಶಿಲ್ಪ, ದಂತ, ಕಂಚು ಮೊದಲಾದವುಗಳಲ್ಲಿ ಮಾಡಿದ ಕುಶಲಕಲೆಯ ವಸ್ತುಗಳೇ ಕಲಾಕೃತಿಗಳು. ಸಾಮಾನ್ಯವಾಗಿ ಕಲಾಮಂದಿರವೆಂದರೆ ಕೇವಲ ಚಿತ್ರಗಳನ್ನು ಪ್ರದರ್ಶಿಸುವ ಸ್ಥಳವೆಂದು ತಿಳಿಯುತ್ತಾರೆ. ಆದರೆ ಕಲಾಮಂದಿರದಲ್ಲಿ ವಿವಿಧ ಪ್ರಕಾರಗಳ ಕಲಾವಸ್ತುಗಳು ಪ್ರದರ್ಶಿತವಾಗಿರುತ್ತವೆ. ಮಂದಿರಗಳನ್ನು ಸ್ಥಾಪಿಸುವ ಪದ್ಧತಿ ಹಿಂದಿನಿಂದಲೂ ಬಂದಿದೆ. ಇತಿಹಾಸಪೂರ್ವಯುಗದ

ಮೈಸೂರಿನ ಕಲಾಮಂದಿರ

ಜನ ಸಹ ಕಲಾಕೃತಿಗಳಿಂದ ಮನೋರಂಜನೆ ಪಡೆಯುತ್ತಿದ್ದರೆಂಬುದು ಸ್ಪೇನ್ ದೇಶದ ಆಲ್ಟಮೀರ, ಫ್ರಾನ್ಸಿನ ಲೆ ಐಜೀಸ್, ಡಾರ್ಡಾನ್ ಮೊದಲಾದ ಸ್ಥಳಗಳಲ್ಲಿ ಕಾಣಬರುವ ಇತಿಹಾಸಪೂರ್ವ ಶಿಲಾಚಿತ್ರಗಳಿಂದ ವ್ಯಕ್ತವಾಗುತ್ತದೆ. ಮನುಷ್ಯ ನಾಗರಿಕನಾಗುತ್ತ ಬಂದಮೇಲೆ ಕಲಾಕೃತಿಗಳಿಂದ ರಾರಾಜಿಸುವ ಅರಮನೆಗಳನ್ನೂ ದೇವಾಲಯಗಳನ್ನೂ ನಿರ್ಮಿಸುವುದು ಪ್ರಾರಂಭವಾಗಿ ಅವು ಕಲಾಮಂದಿರಗಳಂತೆಯೇ ಕಲೋಪಾಸಕರಿಗೆ ಆನಂದವನ್ನುಂಟುಮಾಡುವ ಉದ್ದೇಶವನ್ನು ಸಾಧಿಸಿದುವು. ಪಶ್ಚಿಮ ಪಾಕಿಸ್ತಾನದ ಮೊಹೆಂಜೋದಾರೊ ಮತ್ತು ಹರಪ್ಪ; ಭಾರತದ ಅಜಂತ, ಎಲ್ಲೋರ, ಸಿತ್ತನ್ನವಾಸಲ್ ಮತ್ತು ಲೇಪಾಕ್ಷಿ; ಚೀನದ ತುನ್-ಹುಅನ್ ಗವಿಗಳು; ಈಜಿಪ್ಟಿನ ಕಾರ್ನಾಕ್ ದೇವಾಲಯ, ರೋಂ ನಗರದ ಅಗ್ರಿಪನ ಪ್ಯಾಂಥಿಯಾನ್ ದೇಗುಲ, ಇರಾನಿನ ಪರ್ಸೆಪೊಲಿಸ್ ಅರಮನೆಗಳು; ಅಥೆನ್ಸ್ ನಗರದ ಪಾರ್ಥೆನಾನ್ ದೇವಾಲಯ, ಜಪಾನಿನ ಹೊರ್ಯೂಜಿ ಗುಡಿ ಮೊದಲಾದವುಗಳ ಕಲಾವೈಭವ ಪ್ರಾಚೀನಕಾಲದ ಜನ ಹೇಗೆ ಕಲೆಯಲ್ಲಿ ಸತತ ಆಸಕ್ತಿ ವಹಿಸಿ ಜನರ ಸಂತೋಷಕ್ಕಾಗಿ ತಮ್ಮ ಕಲಾಕೃತಿಗಳನ್ನು ದೇವಾಲಯಗಳಂಥ ಪ್ರಮುಖ ಕಟ್ಟಡಗಳಲ್ಲಿ ಜೋಡಿಸುತ್ತಿದ್ದರೆಂಬುದನ್ನು ಸೂಚಿಸುತ್ತದೆ. ದೃಗ್ಗೋಚರವಾದ ಈ ಕಲೆಗಳನ್ನು ಹೇಗೋ ಹಾಗೆ ಶ್ರವಣಗೋಚರವಾದ ಸಂಗೀತವೇ ಮೊದಲಾದ ಕಲೆಗಳನ್ನೂ ಈ ದೇವಾಲಯಗಳು ಪೋಷಿಸಿಕೊಂಡು ಬಂದಿಲ್ಲ.

ಈ ಪ್ರಾಚೀನ ಕಲಾಕೃತಿಗಳ ವಾಸ್ತವಿಕ ಮಾದರಿಗಳಲ್ಲದೆ ಸಾಹಿತ್ಯದಲ್ಲೂ ಕಲಾಕೃತಿಗಳ ಹಾಗೂ ಚಿತ್ರಶಾಲೆಗಳ ಬಗ್ಗೆ ಉಲ್ಲೇಖಗಳಿವೆ. ಬಾಣಕವಿಯ ಕಾದಂಬರಿಯಲ್ಲಿ ವಿದಿಶಾ ನಗರವನ್ನು ವರ್ಣಿಸುವಾಗ ಸುರಾಸುರಸಿದ್ಧಗಂಧರ್ವವಿದ್ಯಾಧರೋರಗಾಧ್ಯಾ ಸಿತಾಭಿಃ ಚಿತ್ರಶಾಲಾಭಿರಲಂಕೃತಾ–ಎಂದು ಹೇಳಿ, ಆ ನಗರದಲ್ಲಿ ದೇವಗಂಧರ್ವರೇ ಮೊದಲಾದವರ ಚಿತ್ರಗಳನ್ನೂ ಹಾಗೂ ವಿಗ್ರಹಗಳನ್ನೂ ಹೊಂದಿದ ಅನೇಕ ಚಿತ್ರಶಾಲೆಗಳಿದ್ದುವೆಂದು ತಿಳಿಸುತ್ತಾನೆ. ಇದೇ ರೀತಿ ವಿಷ್ಣುಧರ್ಮೋತ್ತರ, ಮಾನಸೋಲ್ಲಾಸ, ಮತ್ತು ಶಿಲ್ಪರತ್ನ ಮೊದಲಾದ ಕೃತಿಗಳಲ್ಲಿ ಸಹ ನರರಿಗೂ ನರಪಾಲಕರಿಗೂ ಆನಂದವನ್ನುಂಟುಮಾಡಲು ಕಲಾಕೃತಿಗಳನ್ನು ಸೃಜಿಸುವ ವಿಧಾನವನ್ನು ಕೂಲಂಕಷವಾಗಿ ವಿವರಿಸಿದೆ.

ಪ್ರಾಚೀನ ಕಾಲದಲ್ಲಿ ಚಿತ್ರಶಾಲೆಗಳಿದ್ದುವೆಂಬುದಕ್ಕೆ ಸಾಹಿತ್ಯದಲ್ಲಿ ಉಲ್ಲೇಖಗಳಿದ್ದರೂ ವಿಶಿಷ್ಟ ಕಲಾಮಂದಿರಗಳನ್ನು ನಿರ್ಮಿಸುವ ಪದ್ಧತಿ ಯುರೋಪಿನಲ್ಲಿ ನಾನೂರು ವರ್ಷಗಳ ಹಿಂದೆ ಬೌದ್ಧಿಕ ಕ್ರಾಂತಿಯ ಕಾಲದಲ್ಲಿ ರೂಢಿಗೆ ಬಂದಂತೆ ಕಾಣುತ್ತದೆ. ಚಿತ್ರಕಲೆ, ಶಿಲ್ಪ ಮತ್ತು ವಾಸ್ತುಶಿಲ್ಪಗಳಲ್ಲಿ ಹಲವಾರು ನಿರ್ದಿಷ್ಟ ಪಂಥಗಳು ಹುಟ್ಟಿಕೊಂಡುದರಿಂದಲೂ ಈ ಪಂಥಗಳು ಸೃಜಿಸಿದ ಕಲಾಕೃತಿಗಳನ್ನು ಮತ್ತು ಅವುಗಳ ಶೈಲಿಗಳನ್ನು ರಕ್ಷಿಸಿ ಪ್ರದರ್ಶಿಸಬೇಕಾದ ಅನಿವಾರ್ಯತೆಯುಂಟಾದುದರಿಂದಲೂ ಈ ಕಲಾಪಂಥಗಳ ಆದರ್ಶಗಳನ್ನು ಪ್ರಚಾರ ಮಾಡುವ ಉದ್ದೇಶದಿಂದಲೂ ಇಂಥ ಕಲಾಮಂದಿರಗಳು ಅಸ್ತಿತ್ವಕ್ಕೆ ಬಂದವು. ಈ ಉದ್ದೇಶಕ್ಕಾಗಿ ಅನೇಕ ಕಲಾಸಂಘಗಳು ಏರ್ಪಟ್ಟು, ಅವು ತಮ್ಮದೇ ಆದ ಕಲಾಮಂದಿರಗಳನ್ನು ಹೊಂದಿದ್ದುವು. ಹೀಗೆ ಯುರೋಪಿನ ಅನೇಕ ಪ್ರಮುಖ ನಗರಗಳಲ್ಲಿ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ದೊಡ್ಡ ಕಲಾವಸ್ತುಶಾಲೆಗಳು ಸ್ಥಾಪಿತವಾದುವು. ಪ್ರಾರಂಭದ ಹಂತಗಳಲ್ಲಿ ಯುರೋಪಿನ ಕಲಾಮಂದಿರಗಳನ್ನು ಆಯಾ ದೇಶದ ಅರಸುಮನೆತನಗಳೇ ಪೋಷಿಸಿಕೊಂಡು ಬಂದುವು. ಅರಮನೆಗಳು ಸಹ ಅಮೋಘ ಕಲಾಕೃತಿಗಳ ಭಂಡಾರಗಳಾದುವು. ತರುವಾಯದ ದಿನಗಳಲ್ಲಿ ವಿಶ್ವವಿದ್ಯಾನಿಲಯಗಳು, ನಗರಸಭೆಗಳು, ಧಾರ್ಮಿಕ ಸಂಸ್ಥೆಗಳು ಹಾಗೂ ಶ್ರೀಮಂತರು ಕಲಾಮಂದಿರಗಳನ್ನು ಏರ್ಪಡಿಸುವ ಪದ್ಧತಿ ಪ್ರಾರಂಭವಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಂತೂ ಖಾಸಗಿ ದಾನಶೀಲರ ನೆರವಿನಿಂದ ಹಲವಾರು ಘನವಾದ ಕಲಾಮಂದಿರಗಳು ಸ್ಥಾಪಿತವಾಗಿವೆ. ಇತ್ತೀಚೆಗೆ, ವಿಶ್ವದ ನಾನಾ ರಾಷ್ಟ್ರಗಳ ಸರ್ಕಾರಗಳು ತಮ್ಮ ನೇತೃತ್ವದಲ್ಲಿ, ಸಾರ್ವಜನಿಕರಿಗೆ ಒದಗಿಸುವ ಸೌಕರ್ಯಗಳ ಅಂಗವಾಗಿ, ಇಂಥ ಕಲಾಮಂದಿರಗಳನ್ನು ಸ್ಥಾಪಿಸಿವೆ. ಸ್ವತಂತ್ರ ಭಾರತದಲ್ಲಿ ನವದೆಹಲಿಯಲ್ಲಿ ಕಲಾವಿಭಾಗಗಳೊಂದಿಗೆ ಒಂದು ರಾಷ್ಟ್ರೀಯ ವಸ್ತುಸಂಗ್ರಹಾಲಯವನ್ನೂ ಮದ್ರಾಸಿನಲ್ಲಿ ರಾಷ್ಟ್ರೀಯ ಕಲಾಮಂದಿರವನ್ನೂ ಸ್ಥಾಪಿಸಲಾಗಿದೆ.

ಕಲಾಮಂದಿರಗಳಲ್ಲಿ ಅನೇಕ ಬಗೆಗಳಿವೆ. ಕೆಲವು ಕಲಾಮಂದಿರಗಳು ಲಂಡನ್ ನಗರದ ಬ್ರಿಟಿಷ್ ಮ್ಯೂಸಿಯಂ ವಸ್ತುಸಂಗ್ರಹಾಲಯದ ಕಲಾವಿಭಾಗಗಳ ಮಾದರಿಯಲ್ಲಿ ಎಲ್ಲ ದೇಶಗಳ ಪ್ರಾಚೀನ ಕಲಾಕೃತಿಗಳಿಗೆ ಅವಕಾಶವಿತ್ತಿವೆ. ಕೆಲವು, ಪ್ರಾಚೀನ ನಾಗರಿಕತೆಗಳಿಗೆ ಸಂಬಂಧಪಟ್ಟ ಕಲೆಗಳಿಗೆ ಮಾತ್ರ ಮೀಸಲಾಗಿವೆ. ಅಂಥ ಕಲಾಮಂದಿರಗಳಲ್ಲಿ ಒಂದಾದ ಶಿಕಾಗೊ ನಗರದ ಓರಿಯಂಟಲ್ ಇನ್‌ಸ್ಟಿಟ್ಯೂಟಿನಲ್ಲಿ ಮೆಸಪೊಟೇಮಿಯ ಮತ್ತು ಈಜಿಪ್ಟ್‌ಗಳ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಕೆಲವು ಕಲಾಮಂದಿರಗಳಲ್ಲಿ ಮುಖ್ಯವಾಗಿ ಒಂದೇ ದೇಶದ ಎಲ್ಲ ಕಾಲಗಳಿಗೆ ಸಂಬಂಧಪಟ್ಟ ಕಲೆಯನ್ನು ಪ್ರದರ್ಶಿಸುತ್ತಾರೆ. ಚೆನ್ನೈ ರಾಷ್ಟ್ರೀಯ ಕಲಾಮಂದಿರ ಈ ಮಾದರಿಯದು. ಕೇವಲ ಚಿತ್ರಕಲೆಗೇ ಮೀಸಲಾದ ಕೆಲವು ಕಲಾಮಂದಿರಗಳಿವೆ. ಈ ತೆರನಾದ ಚಿತ್ರಶಾಲೆಯ ಗುಂಪಿಗೆ ಸೇರಿದವು ಆಮ್ಸ್ಟರ್ ಡ್ಯಾಂ ನಗರದ ರಿಜಕ್ಸ್ ಮ್ಯೂಸಿಯಂ ಭವನ ಮತ್ತು ವ್ಯಾಟಿಕನ್ ನಗರದ ಕಲಾಮಂದಿರ. ಮತ್ತೆ ಕೆಲವು ಕಲಾಮಂದಿರಗಳು ಶಿಲೆ ಅಥವಾ ಲೋಹಶಿಲ್ಪದ ಮಾದರಿಗಳನ್ನೇ ಪ್ರದರ್ಶಿಸುತ್ತವೆ. ಉದಾ: ತಂಜಾವೂರಿನ ಕಲಾಮಂದಿರಗಳಲ್ಲಿ ಚೋಳರ ಕಾಲದ ಕಂಚಿನ ಮೂರ್ತಿ ಶಿಲ್ಪದ ಅದ್ಭುತ ಮಾದರಿಗಳಿವೆ. ಹಲವು ಕಲಾಮಂದಿರಗಳು ಆಧುನಿಕ ಕಲಾವಸ್ತುಗಳನ್ನು ಸಂಗ್ರಹಿಸಿವೆ. ಹೀಗೆ ಇನ್ನೂ ಅನೇಕ ವಿಧಗಳಲ್ಲಿ ಕಲಾಮಂದಿರಗಳು ವರ್ಗೀಕೃತವಾಗಿವೆ.

ವಿಶ್ವದ ಪ್ರಸಿದ್ಧ ಕಲಾಮಂದಿರಗಳಲ್ಲಿ ಗಮನಾರ್ಹವಾದ ಕೆಲವನ್ನು ಮುಂದೆ ವಿವರಿಸಲಾಗಿದೆ.

**ಭಾರತ :** ಮುಂಬಯಿ, ಕೋಲ್ಕತ, ಚೆನ್ನೈ, ನವದೆಹಲಿ, ಅಲಹಾಬಾದ್, ಗ್ವಾಲಿಯರ್, ಜಯಪುರ, ಹೈದರಾಬಾದು, ಮೈಸೂರು, ತಿರುವನಂತಪುರ, ಲಕ್ನೊ, ವಾರಾಣಸಿ ಮೊದಲಾದ ಸ್ಥಳಗಳಲ್ಲಿರುವ ವಿವಿಧ ವಸ್ತುಸಂಗ್ರಹಾಲಯಗಳಲ್ಲಿ ಕಲಾಮಂದಿರಗಳು ಹಾಗೂ ಕಲಾವಿಭಾಗಗಳಿವೆ.

ಕೋಲ್ಕತ ನಗರದ ಇಂಡಿಯನ್ ಮ್ಯೂಸಿಯಂ ವಸ್ತುಸಂಗ್ರಹಾಲಯದ ಕಲಾವಿಭಾಗದಲ್ಲಿ ಬಾರ್ಹುತ್‌ನಿಂದ ಸಂಗ್ರಹವಾಗಿರುವ ಶುಂಗ ಕಾಲದ ಪ್ರಸಿದ್ಧ ಶಿಲ್ಪಗಳೂ ಗಾಂಧಾರ ಶಿಲ್ಪಗಳೂ ಪ್ರದರ್ಶಿತವಾಗಿವೆ. ಈ ನಗರದ ವಿಕ್ಟೋರಿಯ ಮೆಮೋರಿಯಲ್ ವಸ್ತುಸಂಗ್ರಹಾಲಯದಲ್ಲಿ ಉತ್ತರ ಭಾರತದ ಸೂಕ್ಷ್ಮವಾದ ವರ್ಣಚಿತ್ರಗಳೂ 19ನೆಯ ಶತಮಾನದ ಯುರೋಪಿನ ಚಿತ್ರಕಾರರ ತೈಲಚಿತ್ರಗಳೂ ಇವೆ. ಮುಂಬಯಿ ನಗರದ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮಿನ ಕಲಾವಿಭಾಗ ಪಶ್ಚಿಮ ಭಾರತದ ರಾಜಸ್ಥಾನದ ಸೂಕ್ಷ್ಮ ವರ್ಣಚಿತ್ರಗಳು ಮತ್ತು ಬಾದಾಮಿ ಚಳುಕ್ಯರ ರಾಷ್ಟ್ರಕೂಟರ ಹಾಗೂ ಇನ್ನಿತರ ರಾಜವಂಶಗಳ ಕಾಲದ ಶಿಲ್ಪಗಳ ಶ್ರೇಷ್ಠ ಕಲಾಕೃತಿಗಳಿಗೆ ಹೆಸರುವಾಸಿಯಾಗಿದೆ.

ಚೆನ್ನೈನ ಸರ್ಕಾರಿ ವಸ್ತುಸಂಗ್ರಹಾಲಯದ ಕಲಾವಿಭಾಗದಲ್ಲಿ ವಿಶ್ವಪ್ರಸಿದ್ಧವಾದ ಅಮರಾವತಿ ಶಿಲ್ಪ ಸಂಪ್ರದಾಯದ ವಿಗ್ರಹಗಳೇ ಅಲ್ಲದೆ ದಕ್ಷಿಣ ಭಾರತದ ಕಲ್ಲಿನ ಮತ್ತು ಕಂಚಿನ ವಿಗ್ರಹಗಳ ಅತ್ಯುತ್ತಮ ಮಾದರಿಗಳೂ ಸಂಗ್ರಹವಾಗಿವೆ. ಈ ವಸ್ತು ಸಂಗ್ರಹಾಲಯವಲ್ಲದೇ ಈ ನಗರದಲ್ಲಿ ನಿಜಕ್ಕೂ ಕಲಾದೇಗುಲವೆನಿಸಿರುವ ರಾಷ್ಟ್ರೀಯ ಕಲಾಮಂದಿರ ಇದೆ. ಅದರಲ್ಲಿ ಅತ್ಯುತ್ತಮ ಮಾದರಿಯ ಕಂಚಿನ ವಿಗ್ರಹಗಳು, ಪ್ರಾಚೀನ ಹಾಗೂ ಆಧುನಿಕ ಕಾಲಗಳ ಚಿತ್ರಗಳು, ಮರ, ದಂತ ಮತ್ತು ಲೋಹಗಳಲ್ಲಿ ತಯಾರಿಸಿದ ಕಲಾವಸ್ತುಗಳು ಶೇಖರವಾಗಿವೆ.

ನವದೆಹಲಿಯಲ್ಲಿ 1948ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಚಿತ್ರಕಲೆ, ಶಿಲ್ಪ ಮತ್ತು ಇತರ ಕಲೆಗಳಿಗೆ ಮೀಸಲಾದ ಹಲವು ಕಲಾಮಂದಿರಗಳಿವೆ. ಅವುಗಳಲ್ಲಿ ಸಂಗ್ರಹವಾಗಿರುವ ಮಧ್ಯ ಏಷ್ಯದ ಭಿತ್ತಿವರ್ಣಚಿತ್ರಗಳು; ರಜಪೂತ, ಕಾಂಗ್ರಾ, ಬಸ್ರೋಲಿ, ದಖನಿ ಮತ್ತು ಪಶ್ಚಿಮ ಭಾರತದ ಸೂಕ್ಷ್ಮವರ್ಣ ಚಿತ್ರಕಲೆಗೆ ಸಂಬಂಧಿಸಿದ ಹಲವಾರು ಕಲಾಸಂಪ್ರದಾಯಗಳ ಮಾದರಿಗಳು ಗಮನಾರ್ಹವಾಗಿವೆ. ನವದೆಹಲಿಯಲ್ಲಿ ಈ ರಾಷ್ಟ್ರೀಯ ವಸ್ತುಸಂಗ್ರಹಾಲಯದ ಜೊತೆಗೆ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಎಂಬ ಆಧುನಿಕ ಕಲೆಗಳ ಒಂದು ಕಲಾಮಂದಿರವಿದೆ. ಅದರಲ್ಲಿ ಮುಖ್ಯವಾಗಿ ಭಾರತದ ಆಧುನಿಕ ಕಲೆಗಾರರ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ.

ಹೈದರಾಬಾದಿನಲ್ಲಿ ಭಾರತ ಸರ್ಕಾರದ ಆಡಳಿತದಲ್ಲಿರುವ ಸಾಲಾರ್‌ಜಂಗ್ ವಸ್ತುಸಂಗ್ರಹಾಲಯದ ಸ್ಥಾಪನೆಗೆ ಸಾಲಾರ್‌ಜಂಗ್ ಸಂಗ್ರಹಿಸಿದ ಅಪೂರ್ವ ಕಲಾವಸ್ತುಗಳ ಸಂಗ್ರಹಗಳೇ ಮೂಲಾಧಾರ. ಅದರಲ್ಲಿ ಜೇಡುಶಿಲೆಯಿಂದ ತಯಾರಿಸಿದ ಕಲಾಕೃತಿಗಳ ಅದ್ಭುತ ಮಾದರಿಗಳೂ ದಖನಿ ಚಿತ್ರಕಲೆಯನ್ನು ಪ್ರತಿನಿಧಿಸುವ ಚಿತ್ರಸಮೂಹಗಳೂ ಇವೆ.

ತಿರುವನಂತಪುರದ ವಸ್ತುಸಂಗ್ರಹಾಲಯದಲ್ಲಿ ಶಿಲ್ಪ ಮತ್ತು ಮರದ ಕೆತ್ತನೆ ವಸ್ತುಗಳ ವಿಭಾಗಗಳಲ್ಲದೆ ಕೇರಳದ ದಾರುಶಿಲ್ಪದ ಕೆಲವು ಆಯ್ದ ಮಾದರಿಗಳ ಒಂದು ವಿಭಾಗವೂ ಇದೆ. ಇದೇ ನಗರದಲ್ಲಿ ಒಂದು ಚಿತ್ರಾಲಯ ಸಹ ಇದೆ.

ಸುಂದರ ಮೈಸೂರು ನಗರದಲ್ಲಿ ಕಿರಿದಾದರೂ ಚಿತ್ತಾಕರ್ಷಕವಾದ ಜಗನ್‌ಮೋಹನ ಅರಮನೆಯ ಕಲಾಮಂದಿರದಲ್ಲಿ ಸಂಗ್ರಹವಾಗಿರುವ ವಸ್ತುಗಳಲ್ಲಿ ಸೊಗಸಾದ ದಂತದ ಕೆಲಸದಿಂದ ಕೂಡಿದ ಪಲ್ಲಕ್ಕಿಗಳೂ ಸೂಕ್ಷ್ಮವಾಗಿ ಕೊರೆದ ಗಂಧದ ಕೆತ್ತನೆಯ ಸಂಪುಟಗಳೂ ತಿರುವಾಂಕೂರು ರಾಜಮನೆತನದ ಸುಪ್ರಸಿದ್ಧ ಕಲಾವಿದ ರಾಜಾರವಿವರ್ಮನ ಕೆಲವು ಮೂಲ ತೈಲಚಿತ್ರಗಳೂ ಬಹಳ ಮುಖ್ಯವಾದುವು.

**ಶ್ರೀಲಂಕ :** ಶ್ರೀಲಂಕ, ಮಯನ್ಮಾರ್, ಇಂಡೊನೇಷ್ಯ, ಮಲೇಷ್ಯ, ಥೈಲೆಂಡ್ ಮೊದಲಾದ ದೇಶಗಳಲ್ಲಿ ಸಹ ರಾಷ್ಟ್ರೀಯ ಮತ್ತು ಪ್ರಾಂತೀಯ ಕಲಾಮಂದಿರಗಳಿವೆ. ಶ್ರೀಲಂಕಾದ ಕೊಲೊಂಬೊ ಪಟ್ಟಣದಲ್ಲಿರುವ ಕೊಲೊಂಬೊ ವಸ್ತುಸಂಗ್ರಹಾಲಯದ ಕಲಾವಿಭಾಗದಲ್ಲಿ ಕ್ರಿಸ್ತಶಕೆಯ ಪ್ರಾರಂಭದ ಶತಮಾನಗಳ ಶಿಲಾವಿಗ್ರಹಗಳು, ಚೋಳರ ಪ್ರಾರಂಭಿಕ ಶೈಲಿಯ ಅತ್ಯುತ್ತಮ ಕಂಚಿನ ವಿಗ್ರಹಗಳು ಸಂಗ್ರಹವಾಗಿವೆ.

**ಬ್ರಿಟನ್ :** ಬ್ರಿಟನ್ ಭಾರತದಂಥ ಪ್ರಾಚೀನ ರಾಜ್ಯಗಳ ಮೇಲೆ ಪ್ರಭುತ್ವ ಹೊಂದಿದ್ದು ಅವುಗಳ ಉತ್ಕೃಷ್ಟ ಕಲಾಕೃತಿಗಳನ್ನು ಸಂಗ್ರಹಿಸಿದೆ. ಹೀಗೆ ಸಂಗ್ರಹವಾದ ಕಲಾವಸ್ತುಗಳು ಈ ದೇಶದ ವಿವಿಧ ವಸ್ತುಸಂಗ್ರಹಾಲಯಗಳಲ್ಲಿಯೂ ಕಲಾಮಂದಿರಗಳಲ್ಲಿಯೂ ಇವೆ. ಲಂಡನ್ ನಗರದ ಬ್ರಿಟಿಷ್ ಮ್ಯೂಸಿಯಂ ಕಲಾವಿಭಾಗದಲ್ಲಿ ಚೀನೀ ಚಿತ್ರಕಲೆಯ ಉತ್ತಮ ಮಾದರಿಗಳೂ ಅರ್ಲ್ ಆಫ್ ಎಲ್ಗಿನ್ ಸಂಗ್ರಹಿಸಿದ ಅಥೆನ್ಸ್ ನಗರದ ಪಾರ್ಥೆನಾನ್ ದೇವಾಲಯದ ಖ್ಯಾತಿವೆತ್ತ ಶಿಲಾವಿಗ್ರಹಗಳೂ ಈಜಿಪ್ಟ್ ಮತ್ತು ಮೆಸಪೊಟೇಮಿಯ ದೇಶಗಳ ಕಲೆಯ ಶ್ರೇಷ್ಠ ಮಾದರಿಗಳೂ ಇವೆ. ವಿಕ್ಟೋರಿಯ ಮತ್ತು ಅಲ್ಬರ್ಟ್ ವಸ್ತುಸಂಗ್ರಹಭವನ ಸಹ ಪ್ರಾಚ್ಯ ದೇಶಗಳ ಮತ್ತು ಮಧ್ಯ ಪ್ರಾಚ್ಯ ದೇಶಗಳ ಕಲಾಕೃತಿಗಳನ್ನು ಹೊಂದಿದೆ.

ಇಲ್ಲಿನ ಮತ್ತೊಂದು ಕಲಾಮಂದಿರವಾದ ರಾಷ್ಟ್ರೀಯ ಕಲಾಮಂದಿರದಲ್ಲಿರುವ ಯುರೋಪಿನ ತೈಲಚಿತ್ರಗಳ ಸಂಗ್ರಹ ಹೆಸರುವಾಸಿಯಾಗಿದೆ. ಈ ಚಿತ್ರಸಂಗ್ರಹದಲ್ಲಿ ಡಚ್, ಇಟಾಲಿಯನ್, ಫ್ಲೆಮಿಷ್ (ಬೆಲ್ಜಿಯಂ) ಮತ್ತು ಇತರ ಚಿತ್ರಕಲಾ ಸಂಪ್ರದಾಯಗಳಿಗೆ ಸೇರಿದ ಶ್ರೇಷ್ಠ ಕಲಾಕೃತಿಗಳಿವೆ. ಅವುಗಳಲ್ಲಿ ಕೆಲವು ಲಿಯೊನಾರ್ಡೊ-ಡ-ವಿಂಚಿ, ಮೈಕಲೇಂಜಲೋ, ರ‍್ಯಾಫೆಲ್, ರೆಂಬ್ರ್ಯಾಂಟ್, ರೇನಾಲ್ಡ್ಸ್ ಮತ್ತು ಟರ್ನರ್ ಮೊದಲಾದ ಪ್ರಖ್ಯಾತ ಚಿತ್ರಕಾರರ ತೈಲಚಿತ್ರಗಳಿವೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಅಷ್ಮೋಲಿಯಂ ಮತ್ತು ಕೇಂಬ್ರಿಜ್ಜಿನ ಫಿಟ್ಜ್ ವಿಲಿಯಂ ವಸ್ತುಸಂಗ್ರಹಾಲಯಗಳಲ್ಲಿ ಸಹ ಕಲಾವಸ್ತುಗಳ ಪ್ರದರ್ಶನಕ್ಕಾಗಿ ಪ್ರತ್ಯೇಕ ವಿಭಾಗಗಳಿವೆ. ಕಿರಿಯ ಪ್ರಮಾಣದ ಕಲಾಮಂದಿರಗಳು ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ರಾಜ್ಯಗಳಲ್ಲೂ ಇವೆ.

**ಫ್ರಾನ್ಸ್ :** ಪ್ಯಾರಿಸ್ ನಗರ ಇಡೀ ಫ್ರಾನ್ಸ್ ದೇಶದ ಪ್ರಮುಖ ಕಲಾಕೇಂದ್ರವಾಗಿದೆ. ಅಲ್ಲಿರುವ ಅನೇಕ ಕಲಾಮಂದಿರಗಳಲ್ಲಿ ಕೆಲವು ವಿಶ್ವವಿಖ್ಯಾತವಾಗಿವೆ. ಲೂವರ್ ಕಲಾಮಂದಿರ ಪ್ರಪಂಚದ ಅಮೂಲ್ಯ ಕಲಾಭಂಡಾರಗಳಲ್ಲಿ ಒಂದಾಗಿದೆ. ಅಲ್ಲಿರುವ ಚಿತ್ರಗಳಲ್ಲಿ 1 ನೆಯ ಫ್ರಾನ್ಸಿಸ್, 14ನೆಯ ಲೂಯಿ ಮತ್ತು ನೆಪೋಲಿಯನ್ ಸಂಗ್ರಹಿಸಿದ್ದ ಚಿತ್ರಗಳಿವೆ. ಕ್ಲೂನಿ ವಸ್ತುಸಂಗ್ರಹಾಲಯದಲ್ಲಿ ಲೂವರ್ ಕಲಾಮಂದಿರದ ಚಿತ್ರಗಳಿಗೆ ಪುರವಣಿಯಾಗಿ ಚಿತ್ರಗಳು ಶೇಖರಣೆಯಾಗಿವೆ.

**ಇಟಲಿ :** ಇಟಲಿಯ ಎಲ್ಲ ಪ್ರಮುಖ ನಗರಗಳಲ್ಲೂ ಒಂದೆರೆಡು ಕಲಾಮಂದಿರಗಳಿವೆ. ಉತ್ತಮ ಪ್ರದರ್ಶನ ವ್ಯವಸ್ಥೆ ಅವುಗಳ ವೈಶಿಷ್ಟ್ಯ.

ಇಟಲಿಯ ಎಲ್ಲ ನಗರಗಳಿಗಿಂತಲೂ ನೇಪಲ್ಸ್ ನಲ್ಲಿ ರೋಮನ್ ಕಲಾಪರಂಪರೆಯ ಅತ್ಯುತ್ತಮ ಕಲಾಕೃತಿಗಳನ್ನು ಸಂಗ್ರಹಿಸಿ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ (ಮ್ಯುಸಿಯೊ ನ್ಯಾಷನಲ್) ಇಡಲಾಗಿದೆ.

ಫ್ಲಾರೆನ್ಸ್ ನಗರ ಇಟಲಿಯ ಕಲಾರಾಜಧಾನಿ. ಇಲ್ಲಿಯ ಉಫಿಟ್ಜಿ ಕಲಾಮಂದಿರದಲ್ಲಿ 14ನೆಯ ಶತಮಾನದಿಂದ ಹಿಡಿದು 16ನೆಯ ಶತಮಾನದ ವರೆಗಿನ ಇಟಲಿಯ ವಿವಿಧ ಕಲಾ ಸಂಪ್ರದಾಯಗಳ ಚಿತ್ರಕಲೆಯನ್ನು ಪ್ರತಿನಿಧಿಸುವ ಅತ್ಯಂತ ಹೆಚ್ಚು ಪ್ರಮಾಣದ, ಜಾಗರೂಕವಾಗಿ ಆಯ್ಕೆಯಾದ ಚಿತ್ರಗಳಿವೆ. ಈ ನಗರದಲ್ಲಿ ಲೋಕ ಪ್ರಸಿದ್ಧವಾದ ಬರ್ಗಿಲ್ಲೊ ಎಂಬ ಶಿಲ್ಪ ಸಂಗ್ರಹಾಲಯವಿದೆ.

ಇಟಲಿಯ ರಾಜಧಾನಿ ರೋಂ ಪಟ್ಟಣದಲ್ಲಿ ಹಲವು ಕಲಾಮಂದಿರಗಳಿವೆ. ಅವುಗಳಲ್ಲಿ ಮುಖ್ಯವಾದವು ಪೋಪ್ ಧರ್ಮ ಗುರುವಿನ ವ್ಯಾಟಿಕನ್ ನಗರಕ್ಕೆ ಸೇರಿವೆ.

**ಜರ್ಮನಿ :** ಜರ್ಮನಿಯ ಕಲಾಮಂದಿರಗಳ ಪೈಕಿ ಮ್ಯುನಿಚ್ ನಗರದಲ್ಲಿರುವ ಬವೇರಿಯನ್ ಸ್ಟೇಟ್ ಆರ್ಟ್ ಗ್ಯಾಲರಿ ಮತ್ತು ಕೊಲೋನ್, ಡಸ್ಸೆಲ್ ಡ್ರಾರ್ಫ್ ಮತ್ತು ಬಾನ್ ನಗರಗಳ ಕಲಾಮಂದಿರಗಳು ಪ್ರಸಿದ್ಧವಾದವು.

**ಸ್ಪೇನ್ :** ಈ ದೇಶದಲ್ಲಿ ಕಲೆಗೆ ಮೀಸಲಾದ ಪ್ರಮುಖ ರಾಷ್ಟ್ರೀಯ ಸಂಸ್ಥೆ ಮ್ಯಾಡ್ರಿಡ್ ನಗರದಲ್ಲಿರುವ ಮ್ಯೂಸಿಯೊ ಡೆಲ್ ಪ್ರಾಡೊ ವಸ್ತುಸಂಗ್ರಹಾಲಯ. ಅಲ್ಲಿ ಯುರೋಪಿನ ಪ್ರಖ್ಯಾತ ಕಲೆಗಾರರ ಅಮೂಲ್ಯ ಚಿತ್ರಗಳು ಸಂಗ್ರಹವಾಗಿವೆ.

**ಗ್ರೀಸ್ :** ಗ್ರೀಸ್ ದೇಶದಲ್ಲಿ ಸ್ವಾಭಾವಿಕವಾಗಿಯೆ ಅಥೆನ್ಸ್ ಪಟ್ಟಣ ಎಲ್ಲ ಕಲೆಗಳ ಬೀಡಾಗಿದೆ. ಅಲ್ಲಿ ಪ್ರಾಚೀನ ಗ್ರೀಕ್ ಕಲೆಗೆ ಮೀಸಲಾದ ಕೆಲವು ಕಲಾಮಂದಿರಗಳಿವೆ.

**ಬೆಲ್ಜಿಯಂ :** ಬೆಲ್ಜಿಯಂ ದೇಶದಲ್ಲಿ ಕಲೆಯ ಬಹುಮುಖ್ಯವಾದ ಕೇಂದ್ರಗಳು ಬ್ರಸ್ಸೆಲ್ಸ್, ಘೆಂಟ್ ಮತ್ತು ಆಂಟ್ವರ್ಪ್. ಆಂಟ್ವರ್ಪ್ ಪಟ್ಟಣದ ಎರಡು ಕಲಾಮಂದಿರಗಳ ಪೈಕಿ ಒಂದು ಪ್ರಾಚೀನ ಕಲಾಪ್ರದರ್ಶನಕ್ಕೂ ಮತ್ತೊಂದು 19ನೆಯ ಶತಮಾನದಿಂದ ಇತ್ತೀಚಿನ ಕಲಾಕೃತಿಗಳ ಪ್ರದರ್ಶನಕ್ಕೂ ಮೀಸಲಾಗಿವೆ.

**ಹಾಲೆಂಡ್ :** ಆಮ್‌ಸ್ಟರ್‌ಡ್ಯಾಮ್ ನಗರದ ರೈಕ್ಸ್ ಮ್ಯೂಸಿಯಮಿನಲ್ಲಿ ಡಚ್ ಕಲಾಸಂಪ್ರದಾಯದ ಖ್ಯಾತಿವೆತ್ತ ಕಲೆಗಾರರ ಮನೋಹರವಾದ ಮೂಲಚಿತ್ರಗಳು ಪ್ರದರ್ಶಿತವಾಗಿ ಡಚ್ ಕಲೆಯ ಪೂರ್ಣ ಇತಿಹಾಸವನ್ನು ತಿಳಿಯಲು ಸಹಾಯಕವಾಗಿವೆ.

**ಡೆನ್‌ಮಾರ್ಕ್ :** ಕೋಪನ್ ಹೇಗನ್ ನಗರದ ರಾಷ್ಟ್ರೀಯ ವಸ್ತುಸಂಗ್ರಹಾಲಯ ವಿಶ್ವದ ಪ್ರಸಿದ್ಧ ಕಲಾಮಂದಿರಗಳಲ್ಲೊಂದು. ಅಲ್ಲಿಯ ಚಿತ್ರಸಂಗ್ರಹ 18ನೆಯ ಶತಮಾನದಿಂದ ಪ್ರಾರಂಭವಾದಂತೆ ಡೇನಿಷ್ ಕಲಾಸಂಪ್ರದಾಯದ ಪೂರ್ಣ ದಾಖಲೆಗಳನ್ನು ಹೊಂದಿದೆ.

ನಾರ್ವೆ, ಸ್ವೀಡನ್, ಆಸ್ಟ್ರಿಯ, ಹಂಗರಿ, ಯೂಗೊಸ್ಲಾವಿಯ, ಪೋಲೆಂಡ್ ಮತ್ತು ಚೆಕೊಸ್ಲೊವಾಕಿಯ ರಾಜ್ಯಗಳಂಥ ಯುರೋಪಿನ ಇತರ ರಾಜ್ಯಗಳಲ್ಲಿ ಸಹ ಅವುಗಳದೇ ಆದ ವಿಶಿಷ್ಟ ಕಲಾಮಂದಿರಗಳಿವೆ.

**ರಷ್ಯ:** ಲೆನಿನ್ ಗ್ರಾಡ್ ನಗರದ ಹರ್ಮಿಟೇಜ್ ಎಂಬ ಪ್ರಸಿದ್ಧ ಕಲಾಮಂದಿರದಲ್ಲಿ ಪ್ರಾಚೀನ ಚಿತ್ರಕಲೆಯ ಅದ್ಭುತ ಸಂಗ್ರಹಗಳಿವೆ.

ಮಾಸ್ಕೊ ನಗರದಲ್ಲಿ ಸ್ಟೇಟ್ ಟ್ರೆಟ್ಯಾಕೋವಾ ಕಲಾಮಂದಿರವಿದೆ. ರಷ್ಯ ದೇಶದ ಕಲೆಯ ವಿವಿಧ ಸಂಪ್ರದಾಯಗಳನ್ನು ಪ್ರತಿನಿಧಿಸುವ ಕಲಾಕೃತಿಗಳು ಅಲ್ಲಿ ಸಂಗ್ರಹವಾಗಿವೆ. ಸ್ಟೇಟ್ ಪುಷ್ಕಿನ್ ಮ್ಯೂಸಿಯಂ ಆಫ್ ಆರ್ಟ್ಸ್ ಎಂಬ ಮತ್ತೊಂದು ಕಲಾಮಂದಿರದಲ್ಲಿ ವಾನ್ ಗೋ, ಜ್ಞೆನ್ನೆ, ಮ್ಯಾಟೀಸ್ ಮೊದಲಾದ ಖ್ಯಾತ ಕಲಾವಿದರ ಅಮೂಲ್ಯ ಚಿತ್ರಗಳಿವೆ.

**ಈಜಿಪ್ಟ್ :** ಈಜಿಪ್ಟಿನ ರಾಜಧಾನಿ ಕೈರೊ ನಗರದ ವಸ್ತುಸಂಗ್ರಹಾಲಯಗಳಲ್ಲಿ ಹಾಗೂ ಕಲಾಮಂದಿರಗಳಲ್ಲಿ ಈಜಿಪ್ಟ್, ತುರ್ಕಿ ಮತ್ತು ಕಾಪ್ಟಿಕ್ ಶ್ರೀಮಂತರ ಕಲೆಯನ್ನು ಪ್ರತಿನಿಧಿಸುವ ಕಲಾಕೃತಿಗಳಿವೆ.

ಇರಾನ್, ಇರಾಕ್, ತುರ್ಕಿ ಮೊದಲಾದ ಮಧ್ಯಪ್ರಾಚ್ಯದ ದೇಶಗಳಲ್ಲಿ ಸಹ ಅವುಗಳ ಕಲಾಸಂಪ್ರದಾಯಗಳಿಗೆ ಸಂಬಂಧಪಟ್ಟಂತೆ ಕಲಾಮಂದಿರಗಳು ಏರ್ಪಟ್ಟಿವೆ.

**ಅಮೆರಿಕ ಸಂಯುಕ್ತ ಸಂಸ್ಥಾನಗಳು :** ನ್ಯೂಯಾರ್ಕ್ ಮಹಾನಗರದಲ್ಲಿ ಹಲವಾರು ಅಮೋಘವಾದ ಕಲಾಮಂದಿರಗಳೂ ಕಲಾವಸ್ತುಸಂಗ್ರಹಾಲಯಗಳೂ ಇವೆ. ಅವುಗಳಲ್ಲಿ ಒಂದಾದ ಮೆಟ್ರೊಪೋಲಿಟನ್ ಮ್ಯೂಸಿಯಂ ಆಫ್ ಆರ್ಟ್ ಕಲಾಮಂದಿರದಲ್ಲಿ ಈಜಿಪ್ಷಿಯನ್, ಗ್ರೀಕ್, ಲ್ಯಾಟಿನ್ ಸಂಪ್ರದಾಯದ ಅಭಿಜಾತ ಶೈಲಿಯ ಪ್ರಾಚೀನ ಕಲಾವಶೇಷಗಳು, ಚಿತ್ರಕಲೆ ಮತ್ತು ಶಿಲ್ಪವಸ್ತುಗಳೂ ಸೇರಿದ ಹಾಗೆ ಅಪಾರ ವಸ್ತುಗಳು ಸಂಗ್ರಹವಾಗಿವೆ. ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಎಂಬ ಮತ್ತೊಂದು ಸುಂದರವಾದ ಕಲಾಮಂದಿರದಲ್ಲಿ ಪಿಕಾಸೊ, ವಾನ್ ಗೋ ಮತ್ತು ಇತರ ಶ್ರೇಷ್ಠ ಕಲಾವಿದರ ಅತ್ಯುತ್ತಮ ಕಲಾಕೃತಿಗಳಿವೆ. ರೋಡಿನ್ ವಸ್ತುಸಂಗ್ರಹಾಲಯದಲ್ಲಿ ಫ್ರೆಂಚ್ ಶಿಲ್ಪ ಅಗಸ್ಟ ರೋಡಿನ್ ಎಂಬಾತನ ಶಿಲ್ಪಕಲೆಗೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಿದೆ.

ಖಾಸಗಿ ಕೊಡುಗೆಯಿಂದಲೇ ಸ್ಥಾಪಿತವಾಗಿ ಖಾಸಗಿ ದತ್ತಿಗಳಿಂದಲೇ ನಡೆದುಕೊಂಡು ಬರುತ್ತಿರುವುದು ಬಾಸ್ಟನ್ ನಗರದ ಲಲಿತಕಲಾ ಮಂದಿರದ ವೈಶಿಷ್ಟ್ಯ. ಅದರ

ಕೃತಿಶೇಖರಣೆಯಲ್ಲಿ ಈಜಿಪ್ಟ್, ಗ್ರೀಸ್, ರೋಂ, ಪ್ರಾಚ್ಯ ದೇಶಗಳು, ಆಧುನಿಕ ಯುರೋಪ್ ಮತ್ತು ಅಮೆರಿಕದ ಕಲಾಮಾದರಿಗಳಿವೆ. ಚೀನಿ, ಜಪಾನಿ, ಈಸ್ಟ್ ಇಂಡಿಯನ್, ಈಜಿಪ್ಷಿಯನ್ ಕಲಾಕೃತಿಗಳ ಮಾದರಿಗಳು ಅಲ್ಲಿನ ಪ್ರಮುಖ ಶೇಖರಣೆಯೆನಿಸಿವೆ. ಈ ಸಂಸ್ಥೆಯಲ್ಲಿ ಸಂಗ್ರಹವಾಗಿರುವ ಅಚ್ಚುಕಲೆಯ ವಸ್ತುಗಳು ಅಮೆರಿಕದಲ್ಲೆಲ್ಲ ಪ್ರಥಮ ಸ್ಥಾನಗಳಿಸಿವೆ.

ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರಸಿದ್ಧ ಫಾಗ್ ಆರ್ಟ್ ವಸ್ತುಸಂಗ್ರಹಾಲಯದಲ್ಲಿ ಗಮನಾರ್ಹವಾದ ಅಚ್ಚು ಕಲೆಗಾರಿಕೆಯ ವಸ್ತುಗಳು, ಹೆಸರಾಂತ ಚಿತ್ರಕಾರರ ಚಿತ್ರಗಳು, ರೇಖಾಚಿತ್ರಗಳು ಮತ್ತು ಇಟಲಿ ಕಲಾಸಂಪ್ರದಾಯದ ಚಿತ್ರಗಳು ಇವೆ.

ವಾಷಿಂಗ್‌ಟನ್ (ಡಿ.ಸಿ.) ಮಹಾನಗರದಲ್ಲಿ ಕೆಲವು ಮುಖ್ಯ ಕಲಾಮಂದಿರಗಳಿವೆ. ಅವುಗಳಲ್ಲಿ ನ್ಯಾಷನಲ್ ಗ್ಯಾಲರಿ ಆಫ್ ಆರ್ಟ್ ಕಲಾಮಂದಿರವೂ ಒಂದು. ಈ ಕಲಾ ಶಾಲೆಯಲ್ಲಿ ಅಮೆರಿಕದ ಪ್ರಸಿದ್ಧ ಬ್ಯಾಂಕ್ ಮಾಲಿಕನೂ ಪ್ರಜಾಹಿತೈಷಿಯೂ ಆದ ಮೆಲನ್ ಸಂಗ್ರಹಿಸಿದ್ದ ಚಿತ್ರಗಳಿವೆ. ಈ ಚಿತ್ರಗಳಲ್ಲಿ ಮುಖ್ಯವಾಗಿ ಇಟಾಲಿಯನ್ ಫ್ಲೆಮಿಷ್, ಡಚ್, ಇಂಗ್ಲಿಷ್ ಮತ್ತು ಅಮೆರಿಕನ್ ಕಲಾಶೈಲಿಯ ಚಿತ್ರಗಳೇ ಹೆಚ್ಚು. ವಾಷಿಂಗ್‌ಟನ್ನಿನ ಮತ್ತೊಂದು ಪ್ರಮುಖ ಕಲಾಮಂದಿರ ಫ್ರೀರ್ ಗ್ಯಾಲರಿ ಆಫ್ ಆರ್ಟ್. ಇದು ಸ್ಮಿತ್ ಸನ್ ಎಂಬ ಆಂಗ್ಲನ ಅಂತಿಮ ಇಷ್ಟಪತ್ರದಂತೆ ಸ್ಥಾಪಿತವಾದ ಸ್ಮಿತ್ ಸೋನಿಯನ್ ಸಂಸ್ಥೆಯ ಅಂಗವಾಗಿದೆ. ಇದರಲ್ಲಿ ಮುಖ್ಯವಾಗಿ ಏಷ್ಯಖಂಡದ ಅತ್ಯುತ್ತಮ ಕಲಾವಸ್ತುಗಳಿವೆ. ಪಾರಸಿ, ಮಹಮದೀಯ ಮತ್ತು ಬಿಜಾಂಟಿನ್ ಕಲೆಯನ್ನು ಪ್ರತಿನಿಧಿಸುವ ಕೃತಿಗಳೇ ಅಲ್ಲಿ ಹೆಚ್ಚು.

ಫಿಲಡೆಲ್ಫಿಯ ನಗರದ ಪೆನ್ಸಿಲ್‌ವೇನಿಯ ಮ್ಯೂಸಿಯಂ ಕಲಾಭವನದಲ್ಲಿ ಇಡೀ ಯುರೋಪ್, ಅಮೆರಿಕ ಮತ್ತು ಪ್ರಾಚ್ಯ ದೇಶಗಳ ಕಲಾವಸ್ತುಗಳಿವೆ.

ಕ್ಲೀವ್‌ಲೆಂಡ್ ನಗರದ ಕ್ಲೀವ್‌ಲೆಂಡ್ ಮ್ಯೂಸಿಯಂ ಆಫ್ ಆರ್ಟ್ಸ್ ಕಲಾಮಂದಿರ ಅಮೆರಿಕದಲ್ಲೆಲ್ಲ ಪ್ರಸಿದ್ಧವಾದ ಕಲಾವಸ್ತು ಸಂಗ್ರಹ ಸಂಸ್ಥೆಯಾಗಿದೆ. ಅದರ ಸ್ಥಿರ ಸಂಗ್ರಹದಲ್ಲಿ ಈಜಿಪ್ಟಿನ ಕಲೆಗೂ ಪಾಶ್ಚಾತ್ಯ ದೇಶಗಳ, ಗ್ರೀಕ್ ಮತ್ತು ಲ್ಯಾಟಿನ್ ಸಂಪ್ರದಾಯದ, ಮಧ್ಯಯುಗದ ಶೈಲಿ ಮತ್ತು ಆಧುನಿಕ ಶೈಲಿಯ ಕಲೆಗೂ ಸಂಬಂಧ ಪಟ್ಟ ಕಲಾಕೃತಿಗಳಿವೆ.

ಶಿಕಾಗೊ ನಗರದ ಆರ್ಟ್ಸ್ ಇನ್‌ಸ್ಟಿಟ್ಯೂಟ್ ಕಲಾಮಂದಿರ ಲೋಕಪ್ರಸಿದ್ಧವಾದುದು. ಅದರಲ್ಲಿ ಸಂಗ್ರಹವಾಗಿರುವ ಕಲಾವಸ್ತುಗಳಲ್ಲಿ ಜಪಾನಿ ಅಚ್ಚುಕಲೆಯ ವಸ್ತುಗಳು, ಪ್ರಾಚ್ಯ, ಗ್ರೀಕ್ ಮತ್ತು ಲ್ಯಾಟಿನ್ ಸಂಪ್ರದಾಯದ ಕಲಾಕೃತಿಗಳು ಸೇರಿವೆ.

**ಕೆನಡ:** ಒಟ್ಟಾವ ನಗರದ ನ್ಯಾಷನಲ್ ಗ್ಯಾಲರಿ ಆಫ್ ಆರ್ಟ್ಸ್ ಕಲಾಮಂದಿರ ಅಲ್ಲಿನ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಸೇರಿದೆ. ಅಲ್ಲಿ ಸಂಗ್ರಹವಾಗಿರುವ ಕಲಾಕೃತಿಗಳಲ್ಲಿ ಐರೋಪ್ಯ ಕಲೆಯ ಎಲ್ಲ ಕಾಲಗಳಿಗೂ ಸಂಬಂಧಿಸಿದ ಶಿಲ್ಪರಚನೆಗಳೂ, ಚಿತ್ರಗಳು ಹಾಗೂ ರೇಖಾಚಿತ್ರಗಳಿರುವುವಲ್ಲದೆ ಕೆನಡ ರಾಷ್ಟ್ರದ ಸಮಕಾಲೀನ ಪ್ರಸಿದ್ಧ ಕಲೆಗಾರರ ಕಲಾಕೃತಿಗಳ ಮಾದರಿಗಳೂ ಇವೆ.

**ಜಪಾನ್:** ಟೋಕಿಯೊ ನಗರದಲ್ಲಿ ಸಾರ್ವಭೌಮರ ಅರಮನೆಗೆ ಸೇರಿದ್ದ ಹಿಂದಿನ ವಸ್ತುಸಂಗ್ರಹಾಲಯಕ್ಕೆ ಬದಲಾಗಿ ಈಗ ಟೋಕಿಯೊ ರಾಷ್ಟ್ರೀಯ ವಸ್ತುಸಂಗ್ರಹಾಲಯವಿದೆ. ಅದರಲ್ಲಿ ಚಿತ್ರಕಲೆ, ಶಿಲ್ಪ, ಅರಗಿನ ಮೆರುಗು ಕೆಲಸ ಮೊದಲಾದ ಕಲೆಗಳೂ ಸೇರಿದ ಹಾಗೆ ಜಪಾನಿನ ಕಲೆಯನ್ನು ಪ್ರತಿನಿಧಿಸುವ ಅತ್ಯುತ್ತಮ ವಸ್ತುಗಳಿವೆ.

ಕ್ಯೋಟೊ ನಗರಾಡಳಿತ ಸಂಸ್ಥೆಯ ವಸ್ತುಸಂಗ್ರಹಶಾಲೆಯಲ್ಲಿ ಜಪಾನಿನ ಪ್ರಾಚೀನ ಕಲೆಗೆ ಸಂಬಂಧಿಸಿದ ವಸ್ತುಗಳಿವೆ.

ನಾರಾ ನಗರದ ರಾಷ್ಟ್ರೀಯ ವಸ್ತುಸಂಗ್ರಹಮಂದಿರದಲ್ಲಿ ಜಪಾನಿನ ಪ್ರಾಚೀನ ಕಲೆಗೆ ಸಂಬಂಧಪಟ್ಟ ಅತ್ಯಮೂಲ್ಯ ವಸ್ತುಗಳಿವೆ. ಈ ನಗರದ ಹೊರ್ಯೂಜಿ ದೇವಾಲಯ ಅದರ ಮನೋಹರವಾದ ಕಲಾಕೃತಿಗಳಿಗೆ, ಅದರಲ್ಲೂ ಚಿತ್ರಕಲೆಗೆ ಪ್ರಸಿದ್ಧವಾಗಿದೆ. ಷೋಸೋಇನ್ ಐಶ್ವರ್ಯದ ಗಣಿ ಎಂಬ ಕಲಾಮಂದಿರದಲ್ಲಿ ಜಪಾನಿನ ಪ್ರಾಚೀನ ಕಲೆಗೆ ಸಂಬಂಧಿಸಿದ ಕಲಾವಸ್ತುಗಳಿವೆ.

ಮೇಲ್ಕಂಡ ರಾಷ್ಟ್ರಗಳಲ್ಲದೆ ಚೀನ, ಆಸ್ಟ್ರೇಲಿಯ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕ ಹಾಗೂ ದಕ್ಷಿಣ ಅಮೆರಿಕದ ಬ್ರೆಜಿಲ್ ಮತ್ತು ಅರ್ಜೆಂಟೈನ ರಾಜ್ಯಗಳು ಸಹ ತಮ್ಮದೇ ಆದ ಕಲಾಮಂದಿರಗಳನ್ನು ಹೊಂದಿವೆ.

**ಕಲಾಮಂದಿರಗಳ ಆಡಳಿತ:** ಕಲಾಮಂದಿರಗಳನ್ನು ಒಬ್ಬ ಮೇಲ್ವಿಚಾರಕ ನೋಡಿಕೊಳ್ಳುತ್ತಾನೆ. ಸಾಮಾನ್ಯವಾಗಿ ಆತ ಕಲಾಮಂದಿರಕ್ಕೆ ಸಂಬಂಧಪಟ್ಟ ಹಲವು ವಿಷಯಗಳ ಬಗ್ಗೆ ತಜ್ಞನಾಗಿರುತ್ತಾನೆ. ಅವನಿಗೆ ನೆರವಾಗಿ ಆವಶ್ಯಕವಾದಷ್ಟು ಮಂದಿ ತಂತ್ರಜ್ಞರು ಹಾಗೂ ಕಾರಕೂನರು ಇರುತ್ತಾರೆ. ವಿಶ್ವದ ಅನೇಕ ಕಲಾಮಂದಿರಗಳನ್ನು ಆಯಾ ದೇಶದ ಸರ್ಕಾರಗಳೇ ನಡೆಸಿಕೊಂಡು ಬರುತ್ತಿವೆ. ಕೆಲವು ಕಲಾಮಂದಿರಗಳು ಖಾಸಗಿ ಸಂಸ್ಥೆಗಳ ಮೇಲ್ವಿಚಾರಣೆಗೆ ಒಳಪಟ್ಟಿರುತ್ತವೆ ಇಲ್ಲವೆ ನ್ಯಾಸಮಂಡಲಿಗಳ ಆಡಳಿತದಲ್ಲಿ ನಡೆಯುತ್ತವೆ. ಉದಾ: ಕೋಲ್ಕತದ ಇಂಡಿಯನ್ ಮ್ಯೂಸಿಯಂ, ಹಾಗೂ ಬಾಸ್ಟನ್ ಮ್ಯೂಸಿಯಂ ಆಫ್ ಫೈನ್ ಆರ್ಟ್ಸ್. ದೊರಕುವ ಕಲಾವಸ್ತುಗಳನ್ನು ಶೇಖರಿಸಿಕೊಳ್ಳುವುದೇ ಕಲಾಮಂದಿರಗಳ ಪ್ರಮುಖ ಚಟುವಟಿಕೆ. ಕೆಲವು ಕಲಾಮಂದಿರಗಳಲ್ಲಿ, ಅದರಲ್ಲೂ ವಿಶೇಷವಾಗಿ ಪಾಶ್ಚಾತ್ಯ ದೇಶಗಳ ಕಲಾಮಂದಿರಗಳಲ್ಲಿ ಖಾಸಗಿ ಜನರ ಕೊಡುಗೆ ವಸ್ತುಸಂಗ್ರಹವನ್ನು ಹೆಚ್ಚಿಸಿದೆ. ಕೆಲವು ಸಂದರ್ಭಗಳಲ್ಲಿ ವಿಶೇಷವಾಗಿ ಸರ್ಕಾರದ ನಿಯಂತ್ರಣಕ್ಕೊಳಪಟ್ಟು ಸರ್ಕಾರದಿಂದ ಧನಸಹಾಯ ಪಡೆವ ಕಲಾಮಂದಿರಗಳಲ್ಲಿ, ಕಲಾತ್ಮಕ ವಸ್ತುಗಳನ್ನು ನಿಯತ ಕಾಲಗಳಲ್ಲಿ ಜಾಹೀರಾತಿನ ಮೂಲಕ ಇಲ್ಲವೆ ಕಲಾಸಂಘಗಳ ಮೂಲಕ ಆಹ್ವಾನಿಸಿ, ಪರೀಕ್ಷಿಸಿ ಆರಿಸಿಕೊಳ್ಳಲು ಸಮಿತಿಗಳು ನೇಮಕವಾಗಿವೆ. ನವದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯಕ್ಕೆ ಕಲಾಕೃತಿಗಳನ್ನು ಪಡೆದುಕೊಳ್ಳಲು ಕೇಂದ್ರ ಸರ್ಕಾರದಲ್ಲಿ ಕಲಾವಸ್ತುಗಳನ್ನು ಕೊಳ್ಳುವ ರಾಷ್ಟ್ರೀಯ ಸಮಿತಿಯೊಂದು ಏರ್ಪಟ್ಟಿದೆ. ಇದೇ ರೀತಿ ಚೆನ್ನೈನಲ್ಲಿರುವ ನ್ಯಾಷನಲ್ ಆರ್ಟ್ ಗ್ಯಾಲರಿ ಕಲಾಮಂದಿರಕ್ಕೆ ಕಲಾಕೃತಿಗಳನ್ನು ಪಡೆದುಕೊಳ್ಳಲು ಮದ್ರಾಸಿನಲ್ಲಿ ಕಲಾಮಂದಿರದ ಸಮಿತಿಯೊಂದಿದೆ. ಕಲಾಮಂದಿರಗಳ ನಿಧಿಯನ್ನು ಹೆಚ್ಚಿಸಿಕೊಳ್ಳಲು ಹಾಗೂ ವೀಕ್ಷಕರ ಭೇಟಿಯನ್ನು ಕ್ರಮಗೊಳಿಸಲು ಅನೇಕ ರಾಷ್ಟ್ರಗಳಲ್ಲಿ, ವಿಶೇಷವಾಗಿ ಪಾಶ್ಚಾತ್ಯ ದೇಶಗಳಲ್ಲಿ, ಪ್ರವೇಶಧನವನ್ನು ವಿಧಿಸುವ ಪದ್ಧತಿ ಇದೆ. (ಪಿ.ಆರ್.ಎಸ್.)

**ಕಲಾಕ್ಷೇತ್ರ :** ಚೆನ್ನೈನಲ್ಲಿರುವ ಸಂಗೀತ, ನಾಟ್ಯ ಬೋಧನಾ ಸಂಸ್ಥೆ. ರುಕ್ಮಿಣಿದೇವಿ ಅರುಂಡೇಲ್ ಅವರಿಂದ ಜನವರಿ 1936ರಲ್ಲಿ ಸ್ಥಾಪಿಸಲ್ಪಟ್ಟಿತು. ಭರತನಾಟ್ಯ, ಸಂಗೀತ ಇವುಗಳ ಬೋಧನೆಗೆ ಮೀಸಲಾದ ಸಂಸ್ಥೆ. ಈ ಸಂಸ್ಥೆಗೆ ದೇಶ ವಿದೇಶಗಳಲ್ಲಿ ಮನ್ನಣೆ ದೊರಕಿ ಪ್ರಸಿದ್ಧಿ ಪಡೆಯಿತು. ರುಕ್ಮಿಣಿದೇವಿಯವರು 1952, ಮತ್ತು 1956ರಲ್ಲಿ ಭಾರತದ ರಾಜ್ಯಸಭಾ ಸದಸ್ಯೆಯಾಗಿ ಹಾಗೂ ಭಾರತದ ಸಾಂಸ್ಕೃತಿಕ ರಾಯಭಾರಿಯಂತೆ ವಿದೇಶಗಳಲ್ಲಿ ಸಂಚರಿಸಿ ತಮ್ಮ ಸೇವೆ ಸಲ್ಲಿಸಿದ್ದಾರೆ. ಇವರ ನಿಧನಾನಂತರ ಭಾರತ ಸರ್ಕಾರ 'ಕಲಾಕ್ಷೇತ್ರ ಫೌಂಡೇಷನ್ ಆ್ಯಕ್ಟ್ ನಂ.6/1994' ಅನ್ನು ಹೊರಡಿಸಿತು. ಚೆನ್ನೈ ಸರ್ಕಾರ 29 ಸೆಪ್ಟಂಬರ್ 2003ರಲ್ಲಿ ಸಂಸ್ಥೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ. ಈಗ 4 ಮತ್ತು 5 ವರ್ಷಗಳ– ಗಾಯನ, ವಾದ್ಯಗಳ ನುಡಿಸುವಿಕೆ ಮತ್ತು ನಾಟ್ಯ ಇವುಗಳ ತರಬೇತಿ ತರಗತಿಗಳು ನಡೆಯುತ್ತಿವೆ. ಈ ಸಂಸ್ಥೆಯಲ್ಲಿ ಟೈಗರ್ ವರದಾಚಾರ್, ಮೈಸೂರು ವಾಸುದೇವಾಚಾರ್, ಪಾಪನಾಶಂ ಶಿವನ್, ಮೀನಾಕ್ಷಿ ಸುಂದರಂ ಪಿಳ್ಳೆ ಮೊದಲಾದ ಪ್ರಸಿದ್ಧ ವಿದ್ವಾಂಸರು ಬೋಧಕರಾಗಿ, ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದಾರೆ. (ಆರ್.ಎನ್.ಎಸ್.)

**ಕಲಾವತಿ :** ಕಾಶಿರಾಜನ ಮಗಳು. ಚಂದ್ರವಂಶದ ದಾಶಾರ್ಹರಾಜನನ್ನು ಮದುವೆಯಾದಳು. ತವರುಮನೆಯಲ್ಲಿ ದೂರ್ವಾಸಮುನಿಯ ಸೇವೆಮಾಡಿ ಮಂತ್ರೋಪದೇಶವನ್ನು ಪಡೆದಿದ್ದಳು. ಇವಳ ಶರೀರವನ್ನು ಮೊದಲ ಸಲ ಸಂಪರ್ಕ ಮಾಡಿದ ಕೂಡಲೇ ದಾಶಾರ್ಹನ ಮೈಯಲ್ಲಿ ಬೊಕ್ಕೆಗಳೆದ್ದುವು. ಆಗ ಇವಳು ಇದು ಅಭಕ್ಷ್ಯ ಭಕ್ಷಣದ ಫಲ–ಎಂದಳು. ಇವಳ ಸೂಚನೆಯಂತೆ ಗರ್ಗಮುನಿಯಿಂದ ಪಂಚಾಕ್ಷರಿ ಮಂತ್ರೋಪದೇಶವನ್ನು ಪಡೆದು ಆತ ಶುದ್ಧನಾದ ಮತ್ತು ಅವನ ದೇಹ ಚಂದನಶೀತಲವಾಯಿತು.

ಕಲಾವತಿ ಎಂಬ ಹೆಸರಿನ ಇನ್ನೊಬ್ಬಳು ಪಾರಮುನಿ ಮತ್ತು ಪೂಜಿಕಸ್ಥಲೆಯರ (ಅಪ್ಸರಸೆ) ಮಗಳು. ಹುಟ್ಟಿದೊಡನೆಯೇ ತಾಯಿ ದೇವಲೋಕಕ್ಕೆ ಹೋದದ್ದರಿಂದ ಚಂದ್ರಕಲೆಯಿಂದ ಬೆಳೆದ ಇವಳು ಕಲಾವತಿಯೆನಿಸಿದಳು. ಒಂದು ದಿನ ಪಾರಮುನಿಯನ್ನು ರಾಕ್ಷಸನೊಬ್ಬ ನುಂಗಿದ. ಆಗ ಕಲಾವತಿ ದುಃಖದಿಂದ ಸಾಯಲು ಸಿದ್ಧಳಾದಳು. ಅಷ್ಟರಲ್ಲಿ ಪಾರ್ವತಿ ಪ್ರತ್ಯಕ್ಷಳಾಗಿ ಸಾಯಬಾರದೆಂದೂ ಸ್ವಾರೋಚಿಷಮನು ಮದುವೆಯಾಗುವನೆಂದೂ ಹೇಳಿ ಅಂತರ್ಧಾನಳಾದಳು. ಆಮೇಲೆ ಇಂದೀವರಾಕ್ಷನೆಂಬ ಗಂಧರ್ವನ ಮಗಳಾದ ಮನೋರಮೆ ಇವಳ ಗೆಳತಿಯಾಗಿ ತನ್ನ ಮೊದಲಿನ ಗೆಳತಿಯಾಗಿದ್ದ ವಿಭಾವರಿಯನ್ನೂ ಕೂಡಿಕೊಂಡು ವಿಹರಿಸುತ್ತಿದ್ದಾಗ ಹಿಮಾಲಯದ ವೃದ್ಧತಾಪಸನೊಬ್ಬನನ್ನು ಗೇಲಿಮಾಡಿದ್ದರಿಂದ ಆತ ಮನೋರಮೆಗೆ ರಾಕ್ಷಸಪೀಡೆಗಳಾಗಲೆಂದು ಶಾಪಕೊಟ್ಟ. ಹಾಗೆ ಸಿಟ್ಟುಮಾಡಿದ್ದು ತಪ್ಪೆಂದು ಮನೋರಮೆಯ ಗೆಳತಿಯರು ಹೇಳಿದಾಗ ಕುಷ್ಠ, ಕ್ಷಯಬಾಧೆಗೊಳಗಾಗಿರೆಂದು ಅವರಿಬ್ಬರಿಗೂ ತಾಪಸ ಶಾಪಕೊಟ್ಟ. ಅಷ್ಟರಲ್ಲಿ ಸ್ವಾರೋಚಿಷಮನು ರಾಕ್ಷಸಬಾಧೆಯಿಂದ ಮನೋರಮೆಯನ್ನು ಬಿಡಿಸಿ ಮದುವೆಯಾಗಿ ಅವಳ ಮೂಲಕ ಅವಳ ಗೆಳತಿಯರ ವೃತ್ತಾಂತವನ್ನು ತಿಳಿದು ಆಯುರ್ವೇದ ಚಿಕಿತ್ಸೆಯಿಂದ ಅವರಿಬ್ಬರ ರೋಗಗಳನ್ನೂ ಗುಣಪಡಿಸಿ ಕಲಾವತಿಯಿಂದ ಪದ್ಮಿನೀವಿದ್ಯೆಯನ್ನೂ ವಿಭಾವರಿಯಿಂದ ಪ್ರಾಣಿಭಾಷೆಯನ್ನೂ ಕಲಿತು ಅವರನ್ನೂ ಮದುವೆಯಾದ. (ಬಿ.ಎಚ್.ಎಸ್.)

**ಕಲಾವಸ್ತು ವಿರಚನೆ :** ಚಿತ್ರ, ವಿಗ್ರಹ, ದೇವಾಲಯ, ಸಂಗೀತಕೃತಿ ಅಥವಾ ಪದ್ಯಕಾವ್ಯ ಮೊದಲಾದವನ್ನು ಕಲಾವಸ್ತುಗಳೆನ್ನುತ್ತೇವೆ. ಇಂಥ ಕಲಾವಸ್ತುವಿನ ರಚನೆ ತನ್ನದೇ ಆದ ವೈಶಿಷ್ಟ್ಯವನ್ನೂ ಜವಾಬ್ದಾರಿಯನ್ನೂ ಹೊತ್ತು ಇತರ ಬಗೆಯ ವಸ್ತುಗಳ ರಚನೆಯಿಂದ ಬೇರೆಯಾಗಿದೆ. ಮೇಜು, ಪಾತ್ರೆ, ಉಡುಪು, ಒಡವೆ ಮುಂತಾದ ಉಪಯುಕ್ತ ಪದಾರ್ಥಗಳನ್ನು ಜನರಿಗೆ ಒದಗಿಸಿಕೊಡುವ ಕೆಲಸಗಾರರ ದೃಷ್ಟಿಯಿಂದ ಕಲೆಗಾರರ ಕೃಷಿ ವಿಭಿನ್ನ. ಅದು ತಯಾರಿಕೆ, ಇದು ನಿರ್ಮಾಣ. ಎರಡೂ ನಾಗರಿಕ ಮನುಷ್ಯನಿಗೆ ಅಗತ್ಯವಾಗಿ ಬೇಕಾದವು. ಆದರೆ ಒಂದು ನೆಮ್ಮದಿಯಾದ ಬಾಳಿಗೆ ಸಲ್ಲುವ ಸೌಕರ್ಯವಾದರೆ ಇನ್ನೊಂದು

ಹೃದಯ ಮನಸ್ಸುಗಳನ್ನು ತಣಿಸುವ ಸಾಧನ. ಅದು ಹೆಚ್ಚೋ ಇದು ಹೆಚ್ಚೋ ಎಂಬ ಚರ್ಚೆ ಭಿನ್ನಾಭಿಪ್ರಾಯಗಳಿಗೆ ಎಡೆಗೊಡುತ್ತದೆ. ಅಲ್ಲದೆ ಅದು ತರ್ಕಸಮ್ಮತವಲ್ಲ. ವ್ಯತ್ಯಾಸವಿದೆಯೆಂಬ ಮಾತಿನ ಅರ್ಥ ಯಥಾರ್ಥ ಸಂಗತಿಯೆಂದಷ್ಟೆ. ಕಲಾವಸ್ತುವಿನ ನಿರ್ಮಾಣ ಹಲವು ಅಂಶಗಳುಳ್ಳ ಸಂಕೀರ್ಣ ವ್ಯವಸಾಯ. ಉಪಯುಕ್ತ ಪದಾರ್ಥದ ತಯಾರಿಕೆ ಸರಿಸುಮಾರಾಗಿ ನೆರವಾದ ಕಾರ್ಯ.

ಕಲಾವಸ್ತುವನ್ನು ಕಲೆಗಾರ ನಿರ್ಮಿಸುತ್ತಾನೆ ಅಥವಾ ರಚಿಸುತ್ತಾನೆ_ಎಂದು ನುಡಿಯುವುದೇ ವಾಡಿಕೆ. ಅದು ಸರಿಯಾದ ಮಾತು. ಏತಕ್ಕೆಂದರೆ ಆ ಉದ್ಯಮ ಹಲವು ಮುಖಗಳಿಂದ ಕೂಡಿ ದೊಡ್ಡ ಹೊಣೆಗಾರಿಕೆ ಎನ್ನಿಸುವ ಜಟಿಲೋದ್ಯಮ. ಅದರಲ್ಲಿ ಬರೀ ಸಾಮಗ್ರಿ, ಉಪಕರಣ, ಕೆಲಸಗಳನ್ನೇ ಅಲ್ಲದೆ ಕಲೆಗಾರ, ಅವನ ಉದ್ದೇಶ, ಶಕ್ತಿ, ಸಾಮರ್ಥ್ಯ, ಜ್ಞಾನ, ಅನುಭವ, ಭಾವನೆ, ಸ್ಫೂರ್ತಿ– ಇತ್ಯಾದಿ ವಿಚಾರಗಳನ್ನೂ ಪರಿಗಣಿಸಲೇಬೇಕು. ಬಡಗಿಯೊಬ್ಬ ಮಾಡಿದ ಸುಖಾಸನಕ್ಕೆ ಜೋಡಿಯಾದದ್ದನ್ನು ಇನ್ನೊಬ್ಬ ಬಡಗಿ ಮಾಡಬಹುದು. ಎರಡರಿಂದಲೂ ಉಂಟಾಗುವ ಸೌಖ್ಯ ಒಂದೇ ತರಹ. ಒಬ್ಬ ಗಾಯಕ ಹಾಡಿದಂತೆ ಇನ್ನೊಬ್ಬ ಹಾಡುವುದು ಅಸಾಧ್ಯ. ಒಬ್ಬ ಚಿತ್ರಕಾರನ ಸೂರ್ಯೋದಯ ವರ್ಣನೆಯಂತೆ ಇನ್ನೊಬ್ಬ ಚಿತ್ರಕಾರ ವರ್ಣಿಸಲಾರ. ಒಬ್ಬೊಬ್ಬ ಕಲೆಗಾರನೂ ಭಿನ್ನ ಭಿನ್ನ ವ್ಯಕ್ತಿತ್ವದಿಂದ ಕೂಡಿದ ಭಾವಜೀವಿ ಮತ್ತು ದಾರ್ಶನಿಕ. ಹೀಗಾಗಿ ಶಿಲ್ಪಿಯ ಕಟ್ಟಡವೇ ಆಗಲಿ, ಕವಿಯ ರೂಪಕವೇ ಆಗಲಿ ತನ್ನಷ್ಟಕ್ಕೆ ತಾನೇ ಅಸದೃಶವಾದದ್ದು. ಅದರ ಪ್ರತಿಯನ್ನು ಯಾರಾದರೂ ಮಾಡಿಕೊಡಬಹುದು. ಆದರೆ ಅದು ಜೀವವಿಲ್ಲದ ನಕಲು. ಕಲೆಗಾರ ತನ್ನನ್ನೇ ಪೂರ್ತಿಯಾಗಿ ಮುಡಿಪಾಗಿಟ್ಟು ವಿಶೇಷ ಶ್ರದ್ಧೆಯಿಂದ ಒಂದು ಕಲಾಕೃತಿಯನ್ನು ಹೊರತರುತ್ತಾನೆ.

ಕಲೆಗಾರನನ್ನು ಕುರಿತು ಮೊದಲಲ್ಲೂ ಮಧ್ಯದಲ್ಲೂ ಕೊನೆಯಲ್ಲೂ ಆಲೋಚಿಸತಕ್ಕದ್ದು. ಕಲೆಗಾರನಂತೆ ಕಲಾವಸ್ತು, ಕಲೆಗಾರನೇ ಕಲಾವಸ್ತು. ಸುಮ್ಮನೆ ಆಸೆಪಟ್ಟು ಆರಾಮವಾಗಿ ಕುಳಿತುಕೊಂಡರೆ ಲಲಿತಕಲೆ, ಕೈಗೆ ಎಟುಕುವುದಿಲ್ಲ. ಕಲೆಗಾರನಾಗಲು ಕಷ್ಟಪಡಬೇಕು. ನಿದ್ರೆ, ಆಹಾರ ವಿನೋದ, ವಿಹಾರ ಮುಂತಾದವಕ್ಕೆ ಹೆಚ್ಚು ಗಮನಕೊಡಬಾರದು. ನಾನಾ ವಿಧದ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಲೋಕಾನುಭವ, ಮನುಷ್ಯರ ಸ್ವಭಾವ ವರ್ತನೆಗಳ ಪರಿಚಯ, ಗ್ರಂಥಾವಲೋಕನ ಮುಂತಾದವುಗಳಿಂದ ಮನಸ್ಸನ್ನು ವಿಶಾಲಗೊಳಿಸಿಕೊಳ್ಳುತ್ತಲೇ ಇರಬೇಕು. ಸಾಹಿತಿಯಾದರೆ ಹಿಂದಿನವರ ಮತ್ತು ಇಂದಿನವರ ಸಾಹಿತ್ಯವನ್ನು ಪಠಿಸಿ ಅಮೂಲ್ಯವಾದದ್ದನ್ನು ಸುಂದರವಾದದ್ದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಚಿತ್ರಕಾರನಾದರೆ ಅದೇ ರೀತಿ ನಾನಾ ಚಿತ್ರಕಾರರ ಕೃತಿಗಳನ್ನು ನೆಟ್ಟ ದೃಷ್ಟಿಯಿಂದ ನೋಡಿ ಕಲಾಸೂಕ್ಷ್ಮತೆಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ಯಾವೊಬ್ಬ ಕಲೆಗಾರನೂ ಇತರರನ್ನು ದಾಸನಂತೆ ಹಿಂಬಾಲಿಸಬೇಕಾದ್ದಿಲ್ಲ. ಅವರ ಬಗೆಬಗೆಯ ಕಲಾಕೌಶಲವನ್ನು ಮೆಚ್ಚಿ ಉತ್ತೇಜನ ಪಡೆದು. ತನ್ನಲ್ಲೇ ಹೊಮ್ಮಿದ ಸ್ವಂತಿಕೆಯನ್ನು ರೂಢಿಸಿಕೊಂಡು ತನ್ನದೇ ಆದ ಸ್ಥಾನಮಾನಕ್ಕೆ ಯೋಗ್ಯನಾಗಬೇಕು. ವ್ಯಕ್ತಿತೇಜಸ್ಸು, ಸ್ವಂತಿಕೆ ಎಂಬ ಶಬ್ದಗಳಿಗೆ ಇದೇ ತಾತ್ಪರ್ಯ.

ಕಲಾವಸ್ತು ರಚನೆಗೆ ಕೈಹಾಕುವ ಮುನ್ನ ಕಲೆಗಾರ ತನ್ನ ಮನಸ್ಸನ್ನೂ ಹೃದಯವನ್ನೂ ಚೊಕ್ಕಟಗೊಳಿಸಿಕೊಂಡು ನಿರ್ಮಲವೂ ಉದಾತ್ತವೂ ಆದ ಉದ್ದೇಶ ತನ್ನನ್ನು ನಡೆಸಿಕೊಳ್ಳುವಂತೆ ಅತ್ಯಂತ ಜಾಗ್ರತನಾಗಬೇಕು. ಯಾರೋ ಒಬ್ಬರ ಅಪ್ಪಣೆಯನ್ನು ಶಿರಸಾವಹಿಸಿಯೋ ಹಣ ಸಂಪಾದನೆಗೋಸ್ಕರವೋ ಬೇರೊಬ್ಬ ಕಲೆಗಾರನ ಮೇಲಣ ಹುರುಡಿನ ಪೈಪೋಟಿಯಿಂದಲೋ, ಕೀರ್ತಿಕಾಮನೆಯ ಒತ್ತಾಯಕ್ಕೆ ಸಿಕ್ಕಿಯೋ ಕಾವ್ಯ, ಶಿಲ್ಪ ಅಥವಾ ಚಿತ್ರಕ್ಕೆ ಆತುರಗೊಂಡರೆ ಪರಿಣಾಮ ಸೊಗಸಾಗದು. ಹಾಗಾದರೆ ಕಲೆಯ ಕಾರ್ಯ ತೀರ ಉದ್ದೇಶರಹಿತವೇ? ಸ್ಪಷ್ಟವಾಗಿ ಉದ್ದೇಶವೆಂದು ಕರೆಯಲಾಗದ ಸಂಕಲ್ಪ ಒಂದಿದೆ; ಅದೇ ಕಲೆಗಾರನಿಗೆ ಚಾಲಕಶಕ್ತಿ. ಅವನಿಗೆ ಆದ ಭಾವಾವೇಶ, ಅವನ ದೃಷ್ಟಿಗೆ ಗೋಚರಿಸಿದ ದರ್ಶನ_ಇವು ಕಲೆಗಾರನ ಅಂತರ್ಯದಲ್ಲಿ ಕೂಡಿಕೊಂಡು ಅವನ ಎದೆಯ ಮೇಲೆ ಯಾವುದೋ ಭಾರವನ್ನಿಟ್ಟಂತೆ, ಕಷ್ಟಕರವಾಗುತ್ತದೆ. ಆ ಹೊರೆಯನ್ನು ಇಳಿಸಿಕೊಳ್ಳದಿದ್ದರೆ ಅವನಿಗೆ ಆತಂಕ, ಕಳವಳ, ಕಷ್ಟಗಳಿಂದ ವಿಮೋಚನೆಯಿಲ್ಲ. ಒಂದು ಕಲಾಕೃತಿಯನ್ನು ಏಕಾಗ್ರತೆಯಿಂದ ಶಕ್ತಿಯುಕ್ತಿ ಎಲ್ಲವನ್ನೂ ಉಪಯೋಗಿಸಿಕೊಂಡು ನಿರ್ಮಾಣ ಮಾಡಿದ ಕೂಡಲೇ ಅವನಿಗೆ ನೆಮ್ಮದಿ. ಆದ್ದರಿಂದ ಅವನಿಗೆ ದ್ರವ್ಯ ಯಶಸ್ಸು ಇತ್ಯಾದಿ ಲೌಕಿಕ ಪ್ರಯೋಜನ ಲಭಿಸಬಹುದು. ಅದೆಲ್ಲ ಅವನ ಕಲಾಸಂಕಲ್ಪಕ್ಕೆ ಹೊರತಾದ ಗೌಣ ವಿಚಾರ.

ಪ್ರತಿಯೊಂದು ಲಲಿತಕಲೆಗೂ ಅದರವೇ ಆದ ಸಾಮಾನು ಸಲಕರಣೆ ಸಾಧನಗಳು ಗೊತ್ತಾಗಿವೆ. ಸಂಗೀತಗಾರನಿಗೆ ಸ್ವರ ಅಥವಾ ವಾದ್ಯದ ಮೂಲಕವೂ ಶಿಲ್ಪಿಗೆ ಶಿಲೆ, ಮರ, ಚಾಣ, ಕೊಡತಿ ಮುಂತಾದವುಗಳ ಮೂಲಕವೂ ಕವಿಗೆ ಭಾವ, ಭಾವನೆ, ಪದಜಾಲಗಳ ಮೂಲಕವೂ, ವ್ಯವಹಾರ. ಅವೇ ಕಲೆಗಾರನ ಒಳಗಿರುವುದನ್ನು ಹೊರತಂದು ರಸಿಕರಿಗೆ ರಸದೌತಣವೀಯುವ ವಾಹಕ ಅಥವಾ ಮಾಧ್ಯಮ. ಅವನ್ನು ಯುಕ್ತರೀತಿಯಲ್ಲಿ ಬಳಸುವುದಕ್ಕೆ ಕಲೆಗಾರನಿಗೆ ಒಳ್ಳೆಯ ಶಿಕ್ಷಣವೂ ಸಂತತ ಅಭ್ಯಾಸವೂ ಅತ್ಯಾವಶ್ಯಕ. ಯಾವ ಬಣ್ಣವನ್ನು ಎಂಥ ಕುಂಚದಿಂದ ಹೇಗೆ ಬಳಿಯಬೇಕು, ನೆರಳು–ಬೆಳಕನ್ನು ಎಷ್ಟರಮಟ್ಟಿಗೆ ವಿಂಗಡಿಸಬೇಕು_ಮುಂತಾದ ವಿವೇಚನೆ ಚಿತ್ರಗಾರನಿಗೆ ಚೆನ್ನಾಗಿ ಕಲಿತಲ್ಲದೆ ಬರುವುದಿಲ್ಲ. ಒಂದು ಅಂಕಕ್ಕೆ ಎಷ್ಟು ವಿಷಯ ಬರಬೇಕು, ಯಾವ ಪಾತ್ರ ಯಾವ ಕಾರ್ಯ ಮಾಡಬೇಕು, ಏನು ಮಾತು ಆಡಬೇಕು ಮುಂತಾದ ವಿವೇಚನೆ ನಾಟಕಕಾರನಿಗೆ ಚೆನ್ನಾಗಿ ಕಲಿತಲ್ಲದೆ ಬರುವುದಿಲ್ಲ. ಶಬ್ದಗಳನ್ನು ಅಸಮರ್ಪಕವಾಗಿ ಉಪಯೋಗಿಸಿದರೆ ಅಂಥ ಕವಿಯಿಂದ ಆಗುವುದು ಬರೀ ವ್ಯಾಕರಣದ ತಪ್ಪಲ್ಲ, ಕಲಾಧರ್ಮದ ಭಂಗ ಎಂದು ಪ್ಲೇಟೋ ಬಲು ಹಿಂದೆಯೇ ಸಾರಿದ. ಮೊದಮೊದಲು ಕಲೆಗಾರ ಸಹಿಸಬೇಕಾದ ಶ್ರಮ ಅಷ್ಟಿಷ್ಟಲ್ಲ. ಬರಬರುತ್ತ ಅವನ ಕೈ ಪಳಗಿ ಕೌಶಲ ಹೆಚ್ಚಿ ಆ ಕಷ್ಟ ಕಡಿಮೆಯಾಗುತ್ತದೆ. ಹೆಸರಾಂತ ಕಲೆಗಾರರು ಹೆಚ್ಚು ಕಡಿಮೆ ಒಮ್ಮತದಿಂದ ಒಪ್ಪಿಕೊಂಡಿರುವಂತೆ ಕಲಾಕೃತಿ ಸೃಷ್ಟಿಸುವ ಕೆಲಸದಿಂದ ಉತ್ಪನ್ನವಾಗುವ ಶ್ರಮ ದುಃಖ ಕಾರಕವಲ್ಲ, ಸುಖಕಾರಕ. ಅದು ನಲಿವು ಕೊಡುವ ನೋವು_ಎಂಬ ಹೇಳಿಕೆ ಅಂಗೀಕೃತ ತಥ್ಯವಾಗಿದೆ. ಉದಾತ್ತ ಸಂಕಲ್ಪದ ಸಾಧನೆ ಆನಂದಕ್ಕೆ ಮಾರ್ಗ.

ಕಲಾವಸ್ತುವಿನ ಸಂಪರ್ಕದಿಂದ ಜನರಿಗೆ ಏನು ಉಪಕಾರ? ಜನರನ್ನು ಸಾಮಾನ್ಯರು, ರಸಿಕರು, ವಿಮರ್ಶಕರು ಎಂದು ಮೂರು ಗುಂಪಾಗಿ ವಿಭಾಗಿಸಬಹುದು. ಉತ್ತಮ ಕಲಾವಸ್ತು ಎಲ್ಲರಿಗೂ ಚಿತ್ತಾಹ್ಲಾದ, ಮನೋವೈಶಾಲ್ಯ, ಆತ್ಮಸಂಸ್ಕಾರ–ಈ ಮೂರನ್ನೂ ಒದಗಿಸಬಲ್ಲದು. ಎಂದರೆ ಅವುಗಳ ಪರಿಮಾಣ ಸರಿಸುಮಾರಾಗಿ ಒಂದೇ ಆದರೂ ತಮ್ಮತಮ್ಮಲ್ಲಿ ಉಂಟಾದ ಕಲಾನುಭವವನ್ನು ಅರಗಿಸಿಕೊಳ್ಳುವ ಕಾರ್ಯದಲ್ಲಿ ಸಾಮಾನ್ಯರಿಗಿಂತ ರಸಿಕರು ಹೆಚ್ಚು ನಿಪುಣರು, ರಸಿಕರಿಗಿಂತ ವಿಮರ್ಶಕರು ಹೆಚ್ಚು ನಿಪುಣರು. ಕಲೆಯ ಸ್ವಾರಸ್ಯವನ್ನು ಗ್ರಹಿಸುವುದಕ್ಕೆ ಅಭಿರುಚಿಯೊಂದೇ ಸಾಲದು. ಆ ಕಲೆಗೆ ಸಂಬಂಧಿಸಿದ ಹಲವು ಮಟ್ಟದ ಪರಿಜ್ಞಾನವೂ ಬೇಕೇಬೇಕು. ಅದೂ ಅಲ್ಲದೆ ಒಂದು ವಿಗ್ರಹವನ್ನೊ ಚಿತ್ರವನ್ನೊ ಮತ್ತೆ ಮತ್ತೆ ವೀಕ್ಷಿಸಿದರೆ ಅದರ ಅಂದದ ಸ್ವರೂಪ ಹೆಚ್ಚುಹೆಚ್ಚಾಗಿ ಅರಿವಾಗುತ್ತದೆ. ಷೇಕ್ಸ್‌ಪಿಯರನ ನಾಟಕವನ್ನು ನಲವತ್ತರ ಮೊದಲು ಓದಿದರೆ ಪ್ರಯೋಜನ ಕಡಿಮೆ ಎಂಬ ನುಡಿಯಿದೆ. ಅದರಿಂದ ಕಲಾವಸ್ತು ಯಾವಾಗಲೂ ಆಮುಷ್ಮಿಕ ಫಲವನ್ನು ಒದಗಿಸುವ ಕಲ್ಪತರು. (ಎಸ್.ವಿ.ಆರ್.)

**ಕಲಿಕೆ :** ಒಂದು ಜೀವಿ ಪಡೆದುಕೊಳ್ಳುವ ಎಲ್ಲ ಬಗೆಯ ತಿಳಿವು, ನೈಪುಣ್ಯ ಅಥವಾ ವರ್ತನೆಯ ರೀತಿಯ ಸಂಪಾದನೆ (ಲರ್ನಿಂಗ್). ಜೀವಿ ಹುಟ್ಟಿದಾಗಲೇ ಜೀವ ಕಣಕ್ಕೆ ಅವಶ್ಯವಾದ ಎಲ್ಲ ಸಾಮರ್ಥ್ಯಗಳೂ ಸಾಮಾನ್ಯವಾಗಿ ಬೆಳೆದಿರುವುದಿಲ್ಲ. ಕಾಲಕ್ರಮೇಣ ಕೆಲವು ತಾವಾಗಿ ಪ್ರಕಾಶಕ್ಕೆ ಬರುತ್ತವೆ. ಮತ್ತೆ ಕೆಲವನ್ನು ಜೀವಿ ಸ್ವಪ್ರಯತ್ನದಿಂದಲೊ ಇತರರನ್ನು ಅನುಕರಿಸುವುದರಿಂದಲೊ ಇತರರಿಂದ ಹೇಳಿಸಿಕೊಂಡೊ ತನ್ನ ಸ್ವಂತ ಅನುಭವಗಳ ಮೂಲಕವೊ ಕಲಿತುಕೊಳ್ಳುತ್ತದೆ. ಸ್ವಪರಿವರ್ತನೆಯ ಸಾಮರ್ಥ್ಯ ಇತರ ಜೀವಿಗಳಿಗಿಂತ ಮಾನವನಿಗೆ ಹೆಚ್ಚು. ಇದಕ್ಕೆ ಅವನ ಮಿದುಳಿನ ವಿಶೇಷ ಬೆಳವಣಿಗೆಯೇ ಕಾರಣವೆಂಬುದು ಜೀವಶಾಸ್ತ್ರಜ್ಞರ ಅಭಿಪ್ರಾಯ.

ಮಾನವೇತರ ಜೀವಿಗಳಿಗೆ ಕಲಿಕೆಯ ಆವಶ್ಯಕತೆ ಮಾನವನಿಗಿಂತ ಕಡಿಮೆ. ಅವು ಹುಟ್ಟುವಾಗಲೇ ತಮ್ಮ ಜೀವನಕ್ಕೆ ಆವಶ್ಯಕವಾದ ವರ್ತನವಿಧಾನಗಳನ್ನು ಪಡೆದುಕೊಂಡು ಬಂದಿರುತ್ತವೆ. ಕಲಿಯುವ ಆವಶ್ಯಕತೆ ಇಲ್ಲದೆಯೇ ಅನೇಕ ಜೀವಿಗಳಿಗೆ ಅವುಗಳ ಆಹಾರ, ಅದನ್ನು ತಿನ್ನುವ ವಿಧಾನ, ಅದು ಸಿಗುವ ಜಾಗ ಎಲ್ಲವೂ ತಿಳಿದಿರುತ್ತದೆ. ನೀರಿನಲ್ಲಿ ವಾಸಿಸುವ ಮೀನು, ಆಮೆ ಮೊದಲಾದ ಜೀವಿಗಳಿಗೆ ಈಜನ್ನು ಯಾರೂ ಕಲಿಸಬೇಕಾಗಿಲ್ಲ. ಕೆಲವು ಕೀಟಗಳು ಮತ್ತು ಪಕ್ಷಿಗಳು ತಮ್ಮ ಜಾತಿಗನು ಗುಣವಾದ ಗೂಡುಗಳನ್ನು ಇತರರ ಸಹಾಯವಿಲ್ಲದೆಯೇ, ಇತರರು ಕಟ್ಟುವುದನ್ನು ನೋಡದೆಯೇ, ಕಟ್ಟಬಲ್ಲವು. ಇಂಥ ಪ್ರಕೃತಿಸಿದ್ಧವಾದ ಪ್ರವರ್ತನ ವಿಶೇಷಗಳು, ಸಿದ್ಧವರ್ತನೆಗಳು, ಸ್ವಾಭಾವಿಕ ವೃತ್ತಿಗಳು ಅಥವಾ ಮೂಲಪ್ರವೃತ್ತಿಗಳು (ಇನ್ಸ್ಟಿಂಕ್ಟ್ಸ್) ಎನಿಸಿಕೊಳ್ಳುತ್ತವೆ. ಇವು ಮನುಷ್ಯರಲ್ಲೂ ಕಂಡುಬಂದರೂ ಅವರ ವರ್ತನೆಯಲ್ಲಿ ಕಲಿಕೆಯ ಅಂಶವೇ ಬಹಳ ಹೆಚ್ಚು. ಜೀವವಿಕಾಸ ವೃಕ್ಷದಲ್ಲಿ ಉನ್ನತ ಮಟ್ಟವನ್ನು ಏರಿದಂತೆಲ್ಲಾ ಜೀವಿಗಳು ಕಲಿಯಬೇಕಾದ ಅಂಶ ಹೆಚ್ಚಾಗುತ್ತ ಹೋಗುತ್ತದೆ; ನೈಜವಾದ ಅಂಶಗಳು ಕಡಿಮೆಯಾಗುತ್ತವೆ.

ಹುಟ್ಟಿದ ಒಡನೆಯೇ ಮಗುವಿನಲ್ಲಿ ಕಂಡುಬರುವ ಗುಣಗಳು ಮಾತ್ರವೇ ನೈಜವಾದವೆಂದೂ ಮಿಕ್ಕವೆಲ್ಲಾ ಕಲಿತುಕೊಂಡವೆಂದೂ ತಿಳಿಯಬಾರದು. ಅನೇಕ ಗುಣಗಳು ಕಲಿಯುವ ಆವಶ್ಯಕತೆ ಇಲ್ಲದೆಯೇ ತಾವಾಗಿಯೇ ಸಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಹುಟ್ಟಿದಾಗ ನಿಲ್ಲುವುದಕ್ಕಾಗಲಿ, ನಡೆಯುವುದಕ್ಕಾಗಲಿ ಆಗದ ಮಗು, ದೇಹದ ಮಾಂಸಖಂಡಗಳೂ ನರಗಳೂ ಮೂಳೆಗಳೂ ಬಲಿತು ಹತ್ತು ಹನ್ನೆರಡು ತಿಂಗಳಾದ ಕೂಡಲೆ ನಿಂತು ನಡೆಯಲು ಪ್ರಾರಂಭಿಸುತ್ತದೆ. ಹೀಗೆ ಬೆಳವಣಿಗೆಯಿಂದ ದೈಹಿಕ ಶಕ್ತಿಗಳಂತೆ ಮಾನಸಿಕ ಶಕ್ತಿಗಳೂ ಪಕ್ವತೆ ಪಡೆಯುತ್ತವೆ. ಕೆಲವು ಶಕ್ತಿಗಳು ಪಕ್ವವಾಗಲು ಬೆಳವಣಿಗೆ ಮಾತ್ರವೇ ಸಾಕು. ಇನ್ನು ಕೆಲವಕ್ಕೆ ಕಲಿಕೆ ಸಹಾಯ ಮಾಡುತ್ತದೆ.

ಎಲ್ಲ ಜೀವಿಗಳೂ ಕಲಿಯಬಲ್ಲುವು. ಒಂದು ಪ್ರಾಣಿ ಏನನ್ನು, ಎಷ್ಟು ವೇಗವಾಗಿ ಕಲಿಯಬಲ್ಲುದು ಎಂಬುದು ಆ ಪ್ರಾಣಿಯ ಸಾಮರ್ಥ್ಯವನ್ನಲ್ಲದೆ ಅದು ಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನೂ ಅವಲಂಬಿಸಿರುತ್ತದೆ. ಅಮೀಬದಂಥ ಸೂಕ್ಷ್ಮ ಜೀವಿಗಳು, ತಮ್ಮ ದೇಹಕ್ಕೆ ಹೊಂದಿಕೊಳ್ಳದ ಪರಿಸ್ಥಿತಿಗಳಿಂದ ಅಥವಾ ಅಪಾಯಕಾರಿ ಪದಾರ್ಥಗಳಿಂದ ತಪ್ಪಿಸಿಕೊಳ್ಳುವುದನ್ನು ಕಲಿಯುತ್ತವೆ. ಸಂಕೀರ್ಣ ಸಮಾಜದಲ್ಲಿ ಬಾಳಬೇಕಾದ ಮನುಷ್ಯ ಭಾಷೆ, ಗಣಿತ, ಒಳ್ಳೆಯ ನಡತೆ ಮೊದಲಾದವನ್ನು ಕಲಿಯುತ್ತಾನೆ.

ಕಲಿಕೆ ನಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಗಳನ್ನು ಅಭಿವೃದ್ಧಿಪಡಿಸುತ್ತದೆ. ಆದರೆ ಸರ್ವದಾ ಈ ಮಾತು ಸಮ್ಮತರ್ಹವಾಗಿಲ್ಲದಿರಬಹುದು. ಅರ್ಥವಿಲ್ಲದ ಹೆದರಿಕೆಗಳನ್ನು ಕುರುಡು ನಂಬಿಕೆಗಳನ್ನೂ ಅನೇಕ ದುರ್ವ್ಯಸನಗಳನ್ನೂ ಮಾನವರು ಕಲಿಯುತ್ತಾರೆ. ಇವುಗಳಿಂದ ಮಾನವನ ಜ್ಞಾನಪ್ರಜ್ಞೆಗಳ ಅಭಿವೃದ್ಧಿಗೆ ಬದಲು, ವ್ಯಕ್ತಿಗಳಿಗೂ ಸಮಾಜಕ್ಕೂ ಹಾನಿಯುಂಟಾಗಬಹುದು.

**ಮಾನವೇತರ ಜೀವಿಗಳ ಕಲಿಕೆ:** ಜೀವವಿಕಾಸವಾದವನ್ನು ಡಾರ್ವಿನ್ ಬಲಪಡಿಸಿದ ಅನಂತರ ವಿಜ್ಞಾನಿಗಳಿಗೆ ಮಾನವೇತರ ಜೀವಿಗಳ ವರ್ತನೆಗಳಲ್ಲಿ ಹೆಚ್ಚು ಆಸಕ್ತಿ ಮೂಡಿತೆಂದು ಹೇಳಬಹುದು. ಜಾರ್ಜ್ ರೋಮಾನೆ ಲಾಯ್ಡ್ ಮಾರ್ಗನ್ ಮೊದಲಾದವರು ನಾಯಿ, ಇಲಿ, ಕೋತಿ ಮೊದಲಾದ ಜೀವಿಗಳ ವರ್ತನೆಗಳನ್ನು ಪರಿಶೀಲಿಸಿದರು. ಜೀವಿಗಳ ಕಲಿಕೆಯನ್ನು ಪ್ರಯೋಗಗಳ ಮೂಲಕ ಪರಿಶೋಧನೆ ಮಾಡಿದವರಲ್ಲಿ ಎಡ್ವರ್ಡ್ ಥಾರ್ನ್‌ಡೈಕ್ ಮೊದಲನೆಯವ. ಆತ 1898ರಲ್ಲಿ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರಯೋಗಶಾಲೆ ಸ್ಥಾಪಿಸಿ, ಕೋಳಿ ಬೆಕ್ಕು, ನಾಯಿ ಮತ್ತು ಕೋತಿಗಳ ಮೇಲೆ ಅನೇಕ ಪ್ರಯೋಗಗಳನ್ನು ನಡೆಸಿದ.

ಥಾರ್ನ್‌ಡೈಕ್ ಹಸಿದ ಬೆಕ್ಕನ್ನು ಒಗಟು ಪೆಟ್ಟಿಗೆಯೊಂದರಲ್ಲಿ (ಪಜಲ್ ಬಾಕ್ಸ್) ಕೂಡಿಹಾಕಿ, ಪೆಟ್ಟಿಗೆಯ ಬಾಗಿಲನ್ನು ತೆರೆದುಕೊಂಡು ಹೊರಗೆ ಬರಬೇಕು. ಬಾಗಿಲನ್ನು ತೆರೆಯಲು ಒಂದು ದಾರ ಎಳೆಯಬೇಕು, ಇಲ್ಲವೆ ಒಂದು ಗುಂಡಿ ಒತ್ತಬೇಕು. ಇದನ್ನು ಬೆಕ್ಕು ಕಲಿಯಬಲ್ಲುದೆ? ಹೇಗೆ ಕಲಿಯುತ್ತದೆ? ಇವೇ ಮೊದಲಾದ, ಕಲಿಕೆಗೆ ಸಂಬಂಧಿಸಿದ, ಅಂಶಗಳನ್ನು ಆತ ಪರಿಶೀಲಿಸಿದ. ಬೆಂಕಿ ಪೆಟ್ಟಿಗೆಯಿಂದ ಹೊರಗೆ ಬರಲು ಅನೇಕ ಪ್ರಯತ್ನಗಳನ್ನು ಮಾಡುತ್ತದೆ. ಕಂಬಿಗಳನ್ನು ಕಡಿಯುತ್ತದೆ. ಉಗುರುಗಳಿಂದ ಕೆರೆಯುತ್ತದೆ, ಕಂಬಿಗಳ ಮಧ್ಯದಿಂದ ತೂರಿಕೊಂಡು ಬರಲು ಪ್ರಯತ್ನ ಮಾಡುತ್ತದೆ. ಒಂದು ಪ್ರಯತ್ನ ಸಫಲವಾಗದಿದ್ದಲ್ಲಿ ಇನ್ನೊಂದು ಪ್ರಯತ್ನ ಮಾಡುತ್ತದೆ. ಈ ವಿಧವಾದ ಅಡ್ಡಾದಿಡ್ಡಿ ಪ್ರವರ್ತನೆಗೆ ತಿದ್ದಿಕೊಂಡು ಕಲಿಯುವ ಅಥವಾ ತಪ್ಪು ಸರಿ ನೋಡುವ (ಟ್ರಯಲ್ ಅಂಡ್ ಎರರ್) ಕ್ರಮ ಎನ್ನುತ್ತಾರೆ. ತಪ್ಪುಗಳನ್ನು ತಿದ್ದಿಕೊಳ್ಳುವ ಈ ಸತತ ಪ್ರಯತ್ನ ಗಳಲ್ಲಿ ಯಾವುದು ಸಫಲವಾಗುತ್ತದೆಂದು ತಿಳಿಯದ ಕಾರಣ ಜೀವಿ ಅದಕ್ಕೆ ಆ ನಿಮಿಷದಲ್ಲಿ ತೋಚಿದ ಪ್ರಯತ್ನ ಮಾಡುತ್ತದೆ. ಆದ್ದರಿಂದ ಇವುಗಳನ್ನು ಯಾದೃಚ್ಛಿಕ ದೋಷನಿವಾರಣಾ ಪ್ರಯತ್ನಗಳೆಂದು ಕರೆಯಬಹುದು. ಇಂಥ ಪ್ರಯತ್ನಗಳು ನಡೆಯುತ್ತಿರುವಾಗ ಅಕಸ್ಮಾತ್ತಾಗಿ ಬೆಕ್ಕು ಗುಂಡಿಯನ್ನು ಒತ್ತಿ ಬಾಗಿಲನ್ನು ತೆರೆದುಕೊಂಡು ಹೊರಗೆ ಬರುತ್ತದೆ. ಈ ಪ್ರಯೋಗದಲ್ಲಿ ಬೆಕ್ಕು ಹಸಿದಿತ್ತೆಂಬುದನ್ನು ಗಮನಿಸಬೇಕು. ಹೊಟ್ಟೆ ತುಂಬ ಉಂಡ ಬೆಕ್ಕನ್ನು ಪೆಟ್ಟಿಗೆಯೊಳಗಿಟ್ಟು ಹೊರಗಡೆ ಆಹಾರ ಇಟ್ಟರೆ ಅದು ಬೆಚ್ಚಗೆ ಮುದುರಿಕೊಂಡು ನಿದ್ದೆಹೋಗುತ್ತದೆಯೇ ಹೊರತು ಕಲಿಯುವ ಪ್ರಯತ್ನ ಮಾಡುವುದಿಲ್ಲ.

ಥಾರ್ನ್‌ಡೈಕ್ ತಾನು ನಡೆಸಿದ ಪ್ರಯೋಗಗಳ ಆಧಾರದ ಮೇಲೆ ಕೈಕೊಂಡ ತೀರ್ಮಾನಗಳಿವು: 1. ಹಸಿವು, ನೀರಡಿಕೆ ಅಥವಾ ಇನ್ನಾವುದಾದರೂ ಹೇತುವಿನಿಂದ ಪ್ರಚೋದಿತವಾದ ಜೀವಿ ತನ್ನ ಅಪೇಕ್ಷೆಯನ್ನು ಈಡೇರಿಸಿಕೊಳ್ಳಲು ಅನೇಕ ಯಾದೃಚ್ಛಿಕ ಪ್ರಯತ್ನಗಳನ್ನು ಮಾಡುತ್ತದೆ. 2. ಈ ಯತ್ನಗಳಲ್ಲಿ ಆಕಸ್ಮಿಕವಾಗಿ ಯಾವುದೋ ಒಂದು ಕ್ರಿಯೆಯಿಂದ ಅದರ ಆಕಾಂಕ್ಷೆ ಈಡೇರುತ್ತದೆ. 3. ಮತ್ತೆ ಅಂಥದೇ ಪರಿಸ್ಥಿತಿಯನ್ನು ಎದುರಿಸಬೇಕಾದಾಗ ಜೀವಿ ಮತ್ತೆಮತ್ತೆ ಯಾದೃಚ್ಛಿಕವಾಗಿಯೇ ಪ್ರಯತ್ನಿಸಿದರೂ ಕ್ರಮೇಣ ವಿಫಲಕ್ರಿಯೆಗಳು ಕಡಿಮೆಯಾಗಿ ಸಫಲ (ಆಕಾಂಕ್ಷೆಗೆ ತೃಪ್ತಿಯನ್ನುಂಟುಮಾಡಿದ) ಕ್ರಿಯೆ ಸ್ಥಿರವಾಗಿ ನಿಲ್ಲುತ್ತದೆ. ಹೀಗೆ ವಿಫಲ ಕ್ರಿಯೆಗಳನ್ನು ದೂರ ಮಾಡಿ ಸಫಲಕ್ರಿಯೆಗಳನ್ನು ಬಲಪಡಿಸುವುದರಿಂದಲೇ ಕಲಿಕೆ ಸಿದ್ಧಸುತ್ತದೆ. 4. ಕಲಿಯಬೇಕಾದ ಕ್ರಿಯೆಗೂ ತನ್ನ ಪ್ರಯತ್ನಗಳಿಗೂ ಇರುವ ಕಾರ್ಯಕಾರಣ ಸಂಬಂಧದ ಅರಿವು ಕಲಿಕೆಗೆ ಅನಾವಶ್ಯಕವಾದ್ದರಿಂದ ಕಲಿಕೆ ಸಾಮಾನ್ಯವಾಗಿ ಯಾಂತ್ರಿಕ ವ್ಯಾಪಾರವಾಗಿರುತ್ತದೆ. ಸಫಲಕ್ರಿಯೆಗಳನ್ನು ಯಾಂತ್ರಿಕವಾಗಿ ದೃಢಪಡಿಸಿಕೊಳ್ಳುವುದೇ ಕಲಿಕೆ ಎಂದು ಥಾರ್ನ್‌ಡೈಕ್ ಅನುಮೋದಿಸಿದ.

ಕಲಿಕೆಯ ಪ್ರಯೋಗಗಳಲ್ಲಿ ಬಳಸುವ ಮತ್ತೊಂದು ಉಪಯುಕ್ತ ಪ್ರಾಣಿ ಬಿಳಿ ಇಲಿ. ಇದರ ಮೇಲೆ ಮೊಟ್ಟಮೊದಲು ಪ್ರಯೋಗಗಳನ್ನು ಕ್ಲಾರ್ಕ್ ವಿಶ್ವವಿದ್ಯಾನಿಲಯದ ವಿಲಾರ್ಡ್ ಸ್ಮಾಲ್ ನಡೆಸಿದ. ಅದಕ್ಕಾಗಿ ಆತ ಕಲಸುಮೆಲಸು (ಮೇಜ಼್) ಎಂಬ ಸಾಧನ ಉಪಯೋಗಿಸಿದ. ಇದು ಒಂದು ಗೊಂದಲವಿನ್ಯಾಸ. ಇದರಲ್ಲಿ ಪ್ರವೇಶಸ್ಥಾನದಿಂದ ಆಹಾರವನ್ನು ಇಟ್ಟಿರುವ ಅಂತಿಮಸ್ಥಾನಕ್ಕೆ ಅನೇಕ ದಾರಿಗಳು ಕಾಣುತ್ತವೆ. ಇವುಗಳಲ್ಲಿ ಒಂದು ಮಾತ್ರ ಸರಿಯಾದ ಮಾರ್ಗ, ಮಿಕ್ಕವು ಸ್ವಲ್ಪ ದೂರ ಹೋದ ಮೇಲೆ ನಿಂತುಹೋಗುತ್ತವೆ. ಇಂಥವನ್ನು ಕುರುಡು (ಬ್ಲೈಂಡ್ ಆಲಿ) ಎನ್ನುತ್ತಾರೆ. ಪ್ರವೇಶ ಸ್ಥಾನದಲ್ಲಿ ಬಿಟ್ಟಾಗ ಇಲಿ ತನ್ನ ಹಸಿವನ್ನು ತೀರಿಸಿಕೊಳ್ಳಲು ಅಂಧಮಾರ್ಗವನ್ನು ಬಿಟ್ಟು ಸರಿಯಾದ ಮಾರ್ಗ ಹಿಡಿದು ಅಂತಿಮ ಸ್ಥಾನ ಸೇರಿ ಅಲ್ಲಿ ಇಟ್ಟಿರುವ ಆಹಾರ ತಿನ್ನಬೇಕು. ಕಲಸುಮೆಲಸುಗಳನ್ನು ಉಪಯೋಗಿಸಿ ಬಿಳಿಯ ಇಲಿಗಳ ಮೇಲೆ ಮಾಡಿದ ಪ್ರಯೋಗಗಳು ಒಟ್ಟಿನಲ್ಲಿ ಒಗಟು ಪೆಟ್ಟಿಗೆಯಿಂದ ಥಾರ್ನ್‌ಡೈಕ್ ಕಂಡುಹಿಡಿದ ಅಂಶಗಳನ್ನೇ ಬಲಪಡಿಸಿವೆ.

ಅನುಬಂಧಿತ ಪ್ರತಿವರ್ತನೆಗಳು (ಕಂಡಿಷನ್ಡ್ ರೆಸ್ಪಾನ್ಸಸ್) : ಕಲಿಕೆಗೆ ಸಂಬಂಧಿಸಿದ ಪ್ರಯೋಗಗಳು, ಸೂತ್ರಗಳು ಮತ್ತು ವಾದಗಳು ಈಚೆಗೆ ರಷ್ಯದ ಶರೀರವಿಜ್ಞಾನಿ ಐವಾನ್ ಪ್ಯಾವ್ ಲಾಫ್ 1901ನೆಯ ಇಸವಿಯಲ್ಲಿ ಕಂಡುಹಿಡಿದ ಅನುಬಂಧಿತ ಪ್ರತಿವರ್ತನೆಯ ತತ್ತ್ವಗಳಿಂದ ಬಹಳವಾಗಿ ಪ್ರಭಾವಿತವಾಗಿವೆ. ಕೆಲವರು, ಮುಖ್ಯವಾಗಿ ಅಮೆರಿಕದ ಮನೋವಿಜ್ಞಾನಿಗಳು, ಈ ಅನುಬಂಧನ ಕಾರ್ಯ ಎಲ್ಲ ಕಲಿಕೆಗೂ ಮೂಲ ಸೂತ್ರಗಳನ್ನು ತಿಳಿಸುತ್ತದೆಂದು ವಾದಿಸಿದ್ದಾರೆ.

ಐವಾನ್ ಪ್ಯಾವ್ ಲಾಫ್ ನಾಯಿಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಯೋಗಗಳನ್ನು ನಡೆಸುತ್ತಿದ್ದ. ಆ ಸಮಯದಲ್ಲಿ ಆತ ಪರಿಶೀಲಿಸಿದ ನಾಯಿಯ ಮೂಲವರ್ತನೆಯನ್ನು ಆಧಾರವಾಗಿಟ್ಟುಕೊಂಡು ಅನೇಕ ಹೊಸ ಪ್ರಯೋಗಗಳನ್ನು ಮಾಡಿದ.

ಸಾಮಾನ್ಯವಾಗಿ ಒಂದು ಪ್ರಾಣಿಯ ಬಾಯಿಯಲ್ಲಿ ಆಹಾರವನ್ನು ಹಾಕಿದರೆ, ತತ್‌ಕ್ಷಣವೇ ಜೊಲ್ಲು ಉದ್ಭವಿಸುತ್ತದೆ. ಜೊಲ್ಲಿನ ಉತ್ಪಾದನೆ ಬಾಯಿಯಲ್ಲಿಡಲಾದ ಆಹಾರಕ್ಕೆ ಸ್ವಾಭಾವಿಕ (ಮೂಲ) ಪ್ರತಿಕ್ರಿಯೆ. ಈ ಕ್ರಿಯೆಗೆ ಆಹಾರ ಸ್ವಾಭಾವಿಕ ಪ್ರಚೋದಕ. ಜೊಲ್ಲು ಸುರಿಸುವುದಕ್ಕೆ ಗಂಟೆಯ ಶಬ್ದ ಸ್ವಾಭಾವಿಕ ಪ್ರಚೋದಕವಲ್ಲ. ಆದ್ದರಿಂದ ಗಂಟೆ ಬಾರಿಸಿದರೆ ನಾಯಿಯ ಬಾಯಲ್ಲಿ ಜೊಲ್ಲು ಉತ್ಪಾದನೆ ಯಾಗುವುದಿಲ್ಲ. ಆದರೆ ಆಹಾರವನ್ನು ಬಾಯಿಯಲ್ಲಿ ಹಾಕುವುದಕ್ಕೆ ಒಂದು ಕ್ಷಣ ಮುಂಚೆ ಗಂಟೆ ಬಾರಿಸಿ ಆಮೇಲೆ ಆಹಾರ ಕೊಡುತ್ತಿದ್ದು ಕೆಲವು ಕಾಲ ಇದೇ ರೀತಿ ಪ್ರಯೋಗ ಮಾಡುತ್ತಿದ್ದರೆ, ಒಂದು ಘಟ್ಟದಲ್ಲಿ ಗಂಟೆ ಹೊಡೆದ ಕೂಡಲೆ ನಾಯಿಯ ಬಾಯಲ್ಲಿ ಜೊಲ್ಲು ಸುರಿಯುತ್ತದೆ; ಆಹಾರ ಕೊಡದೆ ಇದ್ದರೂ ಹೀಗಾಗುತ್ತದೆ. ಇದರಿಂದ ಗಂಟೆಯ ಶಬ್ದವೆಂಬ ಅನುಬಂಧಿತ ಪ್ರಚೋದಕಕ್ಕೂ (ಕಂಡಿಷನ್‌ಡ್ ಸ್ಟಿಮ್ಯುಲಸ್) ಆಹಾರ ಕೊಟ್ಟಾಗ ಸ್ವಾಭಾವಿಕವಾಗಿ ಉಂಟಾಗುತ್ತಿದ್ದ ಜೊಲ್ಲು ಸುರಿಸುವ ಪ್ರತಿಕ್ರಿಯೆಗೂ ಒಂದು ಹೊಸ ಸಂಬಂಧವುಂಟಾಗುತ್ತದೆ. ಅನುಬಂಧಿತ ಪ್ರಚೋದಕಗಳಿಂದ ಉಂಟಾದ ಪ್ರತಿಕ್ರಿಯೆಯನ್ನು ಅನುಕೂಲಿತ ವರ್ತನೆ ಅಥವಾ ಅನುಬಂಧಿತ ಪ್ರತಿಕ್ರಿಯೆ ಎನ್ನುತ್ತಾರೆ. ಈ ಕ್ರಿಯೆಯನ್ನುಂಟುಮಾಡಿದ ಸ್ವಾಭಾವಿಕ ಪ್ರಚೋದಕದೊಡನೆ ಜೋಡಿಸಲಾದ ಅಸ್ವಾಭಾವಿಕ ಪ್ರಚೋದಕವನ್ನು (ಗಂಟೆಯ ಶಬ್ದ) ಅನುಬಂಧಿತ ಪ್ರಚೋದಕ ಎನ್ನುತ್ತಾರೆ. ಹೀಗೆ ಉತ್ಪಾದಿತವಾದ ಜೊಲ್ಲನ್ನು ಪ್ಯಾವ್ ಲಾಫ್ ಮಾನಸಿಕ ಸ್ರವಣ (ಸೈಕಿಕ್ ಸಿಕ್ರೀಷನ್) ಎಂದು ಕರೆದಿದ್ದಾನೆ. ಇದರಲ್ಲಿ ಒಂದು ಪ್ರಚೋದಕಕ್ಕೂ ಒಂದು ಪ್ರತಿಕ್ರಿಯೆಗೂ ಹೊಸ ಸಂಬಂಧವನ್ನು ನಾಯಿ ಬೆಳೆಸಿಕೊಂಡಿರುವುದರಿಂದ ಇದು ಒಂದು ಸರಳರೀತಿಯ ಕಲಿಕೆ.

ಅನುಬಂಧಿತ ಪ್ರತಿವರ್ತನೆಗಳಿಗೆ ಸಂಬಂಧಿಸಿದ ಇನ್ನೂ ಅನೇಕ ವಿಷಯಗಳನ್ನು ಪ್ರಯೋಗಗಳಿಂದ ಪ್ಯಾವಲಾಫ್ ಕಂಡುಹಿಡಿದಿದ್ದಾನೆ. ಅನುಬಂಧಿತ ಪ್ರಚೋದಕ ಯಾವಾಗಲೂ ಮೊದಲು ಬಂದು ಅನಂತರ ಸ್ವಾಭಾವಿಕ ಪ್ರಚೋದಕ ಬರಬೇಕು.

ಮನೋವಿಜ್ಞಾನಿಗಳು ತಮ್ಮ ಪ್ರಯೋಗಗಳಲ್ಲಿ ಅನುಬಂಧಿತ ಪ್ರತಿವರ್ತನೆಗಳನ್ನು ಎರಡು ವಿಧವಾಗಿ ವಿಂಗಡಿಸಿದ್ದಾರೆ. ಪ್ಯಾವ್ ಲಾಫ್ ಉಪಯೋಗಿಸಿದ ಪದ್ಧತಿಯನ್ನು ಅಭಿಜಾತ ಅನುಬಂಧನ ಅಥವಾ ಆದ್ಯ ಅನುಬಂಧನ (ಕ್ಲಾಸಿಕಲ್ ಕಂಡಿಷನಿಂಗ್) ಎಂದೂ ಇದಕ್ಕಿಂತ ಸ್ವಲ್ಪ ಭಿನ್ನವಾದ ಪದ್ಧತಿಯೊಂದನ್ನು ಉಪಕರಣ ಅನುಬಂಧನ (ಇನ್ಸ್ಟ್ರುಮೆಂಟಲ್ ಕಂಡಿಷನಿಂಗ್) ಎಂದೂ ಕರೆಯುತ್ತಾರೆ. ಅಭಿಜಾತ ವಿಧಾನದಲ್ಲಿ ಸುಲಭತರವಾದ ಪ್ರಚೋದಕ ಪ್ರತಿಕ್ರಿಯೆಗಳ ಜೋಡಣೆ ಮಾತ್ರ ಕಾಣುತ್ತದೆ. ಅಲ್ಲದೆ ಅನುಬಂಧಿತ ಪ್ರಚೋದಕಕ್ಕೆ ಪ್ರಾಣಿ ಯಾವ ಪ್ರತಿಕ್ರಿಯೆ ತೋರಿಸಿತು ಎಂಬುದನ್ನು ಲೆಕ್ಕಿಸದೆ–ಅದು ಏನೇ ಮಾಡಲಿ–ಆ ಪ್ರಾಣಿಗೆ ಆಹಾರ ಕೊಡಲಾಯಿತು. ಉಪಕರಣ ಅನುಬಂಧನದಲ್ಲಿ ಹೀಗಾಗುವುದಿಲ್ಲ. ಅನುಬಂಧಿತ ಪ್ರಚೋದಕಕ್ಕೆ ಪ್ರಾಣಿ ಒಂದು ನಿರ್ದಿಷ್ಟವಾದ ಪ್ರತಿಕ್ರಿಯೆ ಮಾಡಿದರೆ ಮಾತ್ರ ಆಹಾರ ಕೊಡಲಾಗುವುದು. ಉದಾಹರಣೆಗೆ, ಗಂಟೆಯ ಶಬ್ದವಾದ ಕೂಡಲೆ ಆ ಪ್ರಾಣಿ ಒಂದು ಗುಂಡಿಯನ್ನು ಒತ್ತಿದರೆ ಮಾತ್ರ ಆಹಾರವನ್ನು ಕೊಡಲಾಗುವುದು. ಕೆಲವು ಅನುಭವಗಳ ಅನಂತರ ಪ್ರಾಣಿ ಗುಂಡಿಯನ್ನು ಒತ್ತಿ ಆಹಾರ ಸಂಪಾದಿಸಿಕೊಳ್ಳುತ್ತದೆ. ಈ ಪ್ರಯೋಗಗಳಲ್ಲಿ ಪ್ರಾಣಿಯ ಒಂದು ಪ್ರಚೋದಕಕ್ಕೆ ಒಂದು ಪ್ರತಿಕ್ರಿಯೆಯನ್ನು ಜೋಡಿಸುವುದಲ್ಲದೆ, ಪ್ರಚೋದಕಕ್ಕೆ ಮಾಡಬಹುದಾದ ಅನೇಕ ಪ್ರತಿಕ್ರಿಯೆಗಳಲ್ಲಿ ಒಂದನ್ನು, ಅಂದರೆ ಆಹಾರವನ್ನು ಅಥವಾ ಇನ್ನಾವುದಾದರೂ ಫಲವನ್ನು ಸಂಪಾದಿಸಿ ಕೊಡುವಂಥದನ್ನು

ಮಾತ್ರ ಆರಿಸಿಕೊಳ್ಳಲು ಕಲಿಯಬೇಕು. ಈ ಕ್ರಿಯೆ ಆ ಫಲದ ಸಂಪಾದನೆಗೆ ಉಪಕರಣವಾಗುತ್ತದೆ. ಥಾರ್ನ್ ಡೈಕ್ ಉಪಯೋಗಿಸಿದ ಒಗಟು ಪೆಟ್ಟಿಗೆ ಪ್ರಯೋಗಗಳಿಗೂ ಉಪಕರಣ ಅನುಬಂಧನ ಕ್ರಿಯೆಗಳ ಪ್ರಯೋಗಗಳಿಗೂ ಇರುವ ಸಾಮ್ಯವನ್ನು ಗಮನಿಸಬಹುದು.

ಯಾದೃಚ್ಛಿಕ ಪ್ರಯತ್ನಗಳಿಂದ ಯಾಂತ್ರಿಕವಾಗಿ ಕಲಿಕೆ ಸಿದ್ಧಿಸುವುದೆಂಬ ಥಾರ್ನ್‌ಡೈಕನ ವಾದವನ್ನು ಗೆಸ್ಟಾಲ್ಟ್ ಪಂಥಕ್ಕೆ ಸೇರಿದ ಜರ್ಮನ್ ಮನೋವಿಜ್ಞಾನಿಗಳು ನಿರಾಕರಿಸಿದ್ದಾರೆ. ಕಲಿಯಬೇಕಾದ ವಿದ್ಯೆ, ಕೆಲಸ ಅಥವಾ ಕ್ರಿಯೆಯ ಸ್ವಭಾವವನ್ನು ಅರಿತು ಅದರ ಅನೇಕ ಭಾಗಗಳನ್ನೂ ಅವುಗಳಿಗಿರುವ ಪರಸ್ಪರ ಸಂಬಂಧವನ್ನೂ ಅರ್ಥ ಮಾಡಿಕೊಂಡ ಹೊರತು ನಿಜವಾದ ಕಲಿಕೆ ಉಂಟಾಗುವುದಿಲ್ಲ; ಕಲಿಕೆಯಲ್ಲಿ ಇಂಥ ಒಳನೋಟ ಮುಖ್ಯವಾದ ಗುಣ; ಅದಿಲ್ಲದಿದ್ದರೆ ಕಲಿಕೆ ಸಾಧ್ಯವಿಲ್ಲ ಎಂದು ಅವರು ವಾದಿಸಿದ್ದಾರೆ. ಥಾರ್ನ್‌ಡೈಕ್ ಉಪಯೋಗಿಸಿದ ಒಗಟು ಪೆಟ್ಟಿಗೆ ಬೆಕ್ಕಿನ ಕಲಿಯುವ ಶಕ್ತಿಗೆ ಮೀರಿದ ಸಾಧನವಾದ್ದರಿಂದ, ಅದನ್ನು ಅಡ್ಡೇಟು ಗುಡ್ಡೇಟನಿಂದಲ್ಲದೆ ಇನ್ನಾವ ಮಾರ್ಗದಿಂದಲೂ ಕಲಿಯಲು ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ.

ತಮ್ಮ ವಾದವನ್ನು ಸಮರ್ಥಿಸಲು ಗೆಸ್ಟಾಲ್ಟ್ ಪಂಥದವರು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ವುಲ್ಫ್ ಹಾಂಗ್ ಕೊಯ್ಲರ್ ಚಿಂಪಾನ್ಜಿಗಳ ಮೇಲೆ ಮಾಡಿದ ಪ್ರಯೋಗಗಳು ಮುಖ್ಯವಾದವು.

ಒಂದು ಚಿಂಪಾನ್ಜಿಯನ್ನು ಬೋನಿನಲ್ಲಿಟ್ಟು ಕೂಡಿಹಾಕಿದೆ. ಅದಕ್ಕೆ ಹಸಿವಾಗಿದೆ. ಬೋನಿನ ಹೊರಗಡೆ ಸ್ವಲ್ಪ ದೂರದಲ್ಲಿ ಅದಕ್ಕೆ ಕಾಣುವಂತೆ ಒಂದು ಬಾಳೆಹಣ್ಣು ಇಟ್ಟಿದೆ; ಅದು ಚಿಂಪಾನ್ಜಿ ಬೋನಿನ ಕಂಬಿಗಳ ಮೂಲಕ ಕೈಚಾಚಿದರೆ ಸಿಗದಷ್ಟು ದೂರದಲ್ಲಿದೆ. ಬೋನಿನ ಒಂದು ಮೂಲೆಯಲ್ಲಿ ಒಂದು ಕೋಲು ಬಿದ್ದಿದೆ. ಚಿಂಪಾನ್ಜಿ ಮೊದಲು ಥಾರ್ನ್‌ಡೈಕನ ಬೆಕ್ಕಿನಂತೆ ಅನೇಕ ಅಡ್ಡೇಟುಗಡ್ಡೇಟು (ಯಾದೃಚ್ಛಿಕ) ಪ್ರಯತ್ನಗಳನ್ನು ಮಾಡುತ್ತದೆ. ಹಾಗೆಯೇ, ಆಕಸ್ಮಿಕವಾಗಿ ಕೋಲನ್ನು ಉಪಯೋಗಿಸಿ ಹಣ್ಣನ್ನು ಬೋನಿನೊಳಕ್ಕೆ ಎಳೆದುಕೊಳ್ಳುತ್ತದೆ. ಆದರೆ ಒಂದು ಮುಖ್ಯವಾದ ವ್ಯತ್ಯಾಸವೇನೆಂದರೆ, ಒಂದು ಸಲ ಹೀಗೆ ಆಕಸ್ಮಿಕವಾಗಿ ಹಣ್ಣನ್ನು ಎಳೆದುಕೊಂಡ ಮೇಲೆ, ಯಾದೃಚ್ಛಿಕ ಪ್ರಯತ್ನಗಳೆಲ್ಲಾ ನಿಂತು ಹೋಗುತ್ತವೆ. ಇನ್ನೊಂದು ಸಲ ಇದೇ ಪರಿಸ್ಥಿತಿಯನ್ನು ಎದುರಿಸುವಾಗ ಚಿಂಪಾನ್ಜಿ ನೇರವಾಗಿ ಕೋಲನ್ನು ತೆಗೆದುಕೊಂಡು ಹಣ್ಣನ್ನು ತನ್ನೆಡೆಗೆ ಎಳೆದುಕೊಳ್ಳುತ್ತದೆ. ಇದರಿಂದ ಚಿಂಪಾನ್ಜಿಗೆ ಕಲಿಯಬೇಕಾದ ಕ್ರಿಯೆಯಲ್ಲಿ ಅಥವಾ ಸಮಸ್ಯೆಯಲ್ಲಿ ಅಂತರ್ದೃಷ್ಟಿ ಉಂಟಾಗಿದೆಯೆಂದು ತಿಳಿಯುತ್ತದೆ.

ಇದೇ ತರಹದ ಇನ್ನೊಂದು ಪ್ರಯೋಗದಲ್ಲಿ ಹಣ್ಣನ್ನು ಇನ್ನೂ ಸ್ವಲ್ಪ ದೂರದಲ್ಲಿಟ್ಟು (ಒಂದೇ ಕೋಲಿಗೆ ಎಟುಕದಂತೆ) ಎರಡು ಕೋಲುಗಳನ್ನು ಬೋನಿನಲ್ಲಿಡಲಾಗಿತ್ತು. ಈ ಎರಡನ್ನು ಸೇರಿಸಿ ಉದ್ದನೆಯ ಕೋಲನ್ನಾಗಿ ಮಾಡಿಕೊಂಡು ಚಿಂಪಾನ್ಜಿ ಹಣ್ಣನ್ನು ತನ್ನೆಡೆಗೆ ಎಳೆದುಕೊಳ್ಳಬಲ್ಲದೇ ಎನ್ನುವುದನ್ನು ಪರೀಕ್ಷೆ ಮಾಡಲಾಯಿತು. ಚಿಂಪಾನ್ಜಿ ತನ್ನ ಅಂತರ್ ದೃಷ್ಟಿಯನ್ನು ಉಪಯೋಗಿಸಿ ಇಂಥ ಸಮಸ್ಯೆಗಳನ್ನು ಬುದ್ಧಿವಂತಿಕೆಯಿಂದ ಕಲಿಯಬಲ್ಲದೆಂಬುದನ್ನು ಕೊಯ್ಲರನ ಪ್ರಯೋಗಗಳು ತೋರಿಸಿವೆ.

**ಮಾನವರಲ್ಲಿ ಕಲಿಕೆ:** ಮಾನವೇತರ ಜೀವಿಗಳ ಮೇಲೆ ನಡೆಸಿದಂತೆಯೇ ಮನೋವಿಜ್ಞಾನಿಗಳು ಮಾನವರ ಕಲಿಕೆಯನ್ನು ಪರಿಶೀಲಿಸಲು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಪರಭಾಷೆಗಳ ಶಬ್ದಗಳ ಅರ್ಥಗಳ ಕಲಿಕೆ, ಅಂಕಿಗಳ ಮತ್ತು ಪದಗಳ ಜೋಡಿಕೆ, ಬೆರಳಚ್ಚು (ಟೈಪ್ ರೈಟಿಂಗ್) ಕಲಿಕೆ, ಟೆಲಿಗ್ರಾಫ್ ಸಂಕೇತಗಳ ಕಲಿಕೆ ಮುಂತಾದವನ್ನು ಪ್ರಾಯೋಗಿಕವಾಗಿ ಪರಿಶೀಲಿಸಲಾಗಿದೆ. ಮಾನವರಲ್ಲಿ ಅನುಬಂಧಿತ ಪ್ರತಿವರ್ತನೆಗಳು ಉಂಟಾಗುವುದನ್ನೂ ಪರಿಶೀಲಿಸಿದ್ದಾರೆ. ಕಲಿಕೆಯ ಮೇಲೆ ಪ್ರಭಾವ ಬೀರುವ ಅನೇಕ ವಿಷಯಗಳನ್ನೂ ಅವುಗಳ ಪ್ರಭಾವವೇನೆಂಬುದನ್ನೂ ಪ್ರಾಯೋಗಿಕವಾಗಿ ನಿರ್ಧರಿಸಿದ್ದಾರೆ. ಮಾನವರಿಗೂ ಇತರ ಜೀವಿಗಳಿಗೂ ಕಲಿಯುವ ಶಕ್ತಿಯಲ್ಲಿ ವ್ಯತ್ಯಾಸಗಳುಂಟು. ಆದರೆ ಕಲಿಕೆಯ ಮೂಲತತ್ತ್ವ ಎಲ್ಲರಿಗೂ ಒಂದೇ ಎಂದು ತಿಳಿದು ಬಂದಿದೆ.

ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಇವು: ಕಲಿಕೆ ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಅಭ್ಯಾಸ ಅವುಗಳಲ್ಲಿ ಒಂದು. ಕಲಿಯಬೇಕಾದ ಅನೇಕ ಕಾರ್ಯಗಳು ಮತ್ತು ವಿದ್ಯೆಗಳು ಅಭ್ಯಾಸಬಲದಿಂದ ಸಿದ್ಧಿಸುತ್ತವೆ; ಅವನ್ನು ಗ್ರಹಣಶಕ್ತಿಯಿಂದ ಮಾತ್ರವೇ (ಅಂತರ್ ದೃಷ್ಟಿ) ಕಲಿಯಲಾಗುವುದಿಲ್ಲ. ಅಭ್ಯಾಸದಿಂದ ಕಲಿಕೆಯ ಮೇಲಾಗುವ ಪರಿಣಾಮವನ್ನು ಕಲಿಕೆಯ ರೇಖೆಯ (ಲರ್ನಿಂಗ್ ಕರ್ವ್) ಮೂಲಕ ತೋರಿಸಬಹುದು. ಸಾಮಾನ್ಯವಾಗಿ ಕಲಿಯಲು ನಡೆಸಬೇಕಾಗುವ ಪ್ರಯತ್ನ, ಅದಕ್ಕೆ ಹಿಡಿಸುವ ಕಾಲ, ಕಲಿಯುವಾಗ ಉಂಟಾಗುವ ತಪ್ಪುಗಳು ಇವುಗಳಿಂದ ಕಲಿಕೆಯ ಫಲವೆಷ್ಟೆಂಬುದನ್ನು ಅರಿತುಕೊಳ್ಳಬಹುದು. ಕಲಿಕೆಗೆ ಪ್ರಮಾಣಗಳು ಅಥವಾ ಗುರುತುಗಳು ಎರಡು: ಕಲಿಯುವ ವೇಗ ಮತ್ತು ನಿಷ್ಕೃಷ್ಟತೆ. ಒಂದು ಪ್ರಯತ್ನದಿಂದ ಇನ್ನೊಂದಕ್ಕೆ ವೇಗ ಮತ್ತು ನಿಷ್ಕೃಷ್ಟತೆಗಳಲ್ಲಿ ಉಂಟಾಗುವ ಮಾರ್ಪಾಟನ್ನು ಕಲಿಕೆಯ ರೇಖೆ ತೋರಿಸುತ್ತದೆ. ಕಲಿಕೆ ಮುಂದುವರಿದಂತೆಲ್ಲ ತಪ್ಪುಗಳು ಕಡಿಮೆಯಾಗುತ್ತ, ಕಾಲವೂ ಕಡಿಮೆಯಾಗುತ್ತ, ನಿಷ್ಕೃಷ್ಟತೆ ಹೆಚ್ಚಾಗುತ್ತ ಹೋಗುವುದನ್ನು ರೇಖೆಯಲ್ಲಿ ಕಾಣಬಹುದು.

ಸಾಮಾನ್ಯವಾಗಿ ಯಾವುದಾದರೂ ಒಂದು ಕುಶಲವಿದ್ಯೆಯನ್ನು ಕುರಿತ ಕಲಿಕೆಯ ರೇಖೆಯಿಂದ ಗೊತ್ತಾಗುವ ಅಂಶವಿದು: ಆ ವಿದ್ಯೆಯಲ್ಲಿ ಕ್ರಮವಾಗಿ ಸ್ವಲ್ಪ ಸ್ವಲ್ಪವಾಗಿ ಪ್ರಗತಿಯಾಗುತ್ತದೆ. ಕಲಿಯಲು ಹಿಡಿಯುವ ಕಾಲವೂ ತಪ್ಪುಗಳೂ ಕಾಲದ ಅವಧಿಯೂ ಕ್ರಮೇಣ ಕಡಿಮೆಯಾಗುತ್ತವೆ. ಒಂದೊಂದು ಸಲ ಕಲಿಕೆಯ ರೇಖೆ ನಡುನಡುವೆ ಏರಿಳಿತಗಳಿಲ್ಲದೆ ನೇರವಾಗಿರುತ್ತದೆ. ಆ ಸಮಯದಲ್ಲಿ ಕಲಿಕೆ ವೃದ್ಧಿಯಾಗಿರಲಿಲ್ಲವೆಂಬುದನ್ನು ಅದು ಸೂಚಿಸುತ್ತದೆ. ಇಂಥ ಸ್ಥಳಗಳನ್ನು ಕಲಿಕೆಯ ಉತ್ಥಲಿ (ಲರ್ನಿಂಗ್ ಪ್ಲೇಟೊ) ಎಂದು ಕರೆಯುತ್ತಾರೆ. ಕಲಿಯುವವನು ಕಲಿಕೆಯಲ್ಲಿ ಅಶ್ರದ್ಧೆ ವಹಿಸಿದರೆ ಅಥವಾ ಆಸಕ್ತಿ ಕಳೆದುಕೊಂಡರೆ ಉತ್ಥಲಿಗಳು ಉಂಟಾಗುತ್ತವೆ. ಅಭ್ಯಾಸ ಮಾಡುವವನು ಇಂಥ ಸಮಯಗಳಲ್ಲಿ ಪ್ರಗತಿ ಇಲ್ಲದಿರುವುದನ್ನು ಕಂಡು ಹತಾಶನಾಗಿ ಕಲಿಕೆಯನ್ನು ಬಿಟ್ಟುಬಿಡುವುದುಂಟು. ನಿರಾಸಕ್ತಿಯಿಂದ ಕಲಿಕೆ ವೃದ್ಧಿಯಾಗದಿರುವುದೂ ವೃದ್ಧಿ ಕಾಣದ್ದರಿಂದ ನಿರಾಸಕ್ತಿಯೂ ಉಂಟಾಗುತ್ತವೆ. ಎರಡರಿಂದಲೂ ಉತ್ಥಲಿಗಳುಂಟಾಗುತ್ತವೆ. ಕಲಿಕೆಯ ಉತ್ಥಲಿಗಳು ಉಂಟಾದ ಮಾತ್ರಕ್ಕೆ ಪ್ರಗತಿ ನಿಂತು ಹೋಗಿದೆಯೆಂದೂ ಇನ್ನು ಮುಂದೆ ಪ್ರಗತಿ ಅಸಾಧ್ಯವೆಂದೂ ತಿಳಿಯಬಾರದು. ಪ್ರಗತಿಯನ್ನು ವೇಗ ಮತ್ತು ನಿಷ್ಕೃಷ್ಟತೆಗಳಲ್ಲಿ ಮಾತ್ರವೇ ಅಲ್ಲದೆ ಕೆಲಸವನ್ನು ಮಾಡುವ ಸೌಲಭ್ಯದಲ್ಲೂ ಇನ್ನೂ ಇತರ ಗುಣಗಳಲ್ಲೂ ಕಾಣಬಹುದು. ಉದಾಹರಣೆಗೆ ಒಂದು ಸಂಗೀತ ವಾದ್ಯವನ್ನು ಅಭ್ಯಾಸ ಮಾಡಿ ಸಾಧಿಸಿದವನ ಕಲಿಕೆಯಲ್ಲಿ ಪ್ರಗತಿಯನ್ನು ಕೀರ್ತನೆ ಅಥವಾ ಸ್ವರಾಲಾಪನೆ ಮಾಡುವ ವೇಗ ಮತ್ತು ನಿಷ್ಕೃಷ್ಟತೆಗಳಲ್ಲಿ ಮಾತ್ರವೇ ಅಲ್ಲದೆ, ಗೀತದ ಭಾವ ಪ್ರಕಟನೆಯಲ್ಲೂ ನುಡಿಸಿದ ಸ್ವರಗಳ ಗುಣದಲ್ಲೂ ವಾದ್ಯವನ್ನು ನುಡಿಸುವ ಸೌಲಭ್ಯದಲ್ಲೂ ಕಾಣಬಹುದು. ಈ ರೀತಿಯ ಪ್ರಗತಿಯನ್ನು ಕಲಿಕೆಯ ರೇಖೆಯಲ್ಲಿ ತೋರಿಸಲಾಗುವುದಿಲ್ಲ. ಕಷ್ಟತರವಾದ ವಿದ್ಯೆಯನ್ನು ಕಲಿಯುವಾಗ ಯಾರಿಗೇ ಆಗಲಿ ಉತ್ಥಲಿಗಳು ಆಗಾಗ ಉಂಟಾಗುತ್ತವೆ. ಇವುಗಳಿಂದ ಹತಾಶರಾಗದೆ ಅಭ್ಯಾಸವನ್ನು ಮುಂದುವರಿಸಿದರೆ ಆ ಘಟ್ಟ ಕಳೆದು ಪ್ರಗತಿಯುಂಟಾಗುತ್ತದೆ. ಉತ್ಥಲಿಗಳು ಕಲಿಕೆಯ ಕೊನೆಯನ್ನು ಸೂಚಿಸುವುದಿಲ್ಲ.

ಕಲಿಕೆಗೆ ಪ್ರಯತ್ನ ಮತ್ತು ಅಭ್ಯಾಸಗಳು ಮಾತ್ರವೇ ಸಾಲವು; ಕಲಿಯುವವನಿಗೆ ತಾನು ಎಷ್ಟರ ಮಟ್ಟಿಗೆ ಕಲಿಯುತ್ತಿದ್ದೇನೆ ಎಂಬ ಜ್ಞಾನ ಇರಬೇಕು. ಈ ಅಂಶವನ್ನು ಅನೇಕ ಪ್ರಯೋಗಗಳು ತೋರಿಸಿವೆ. ಒಂದು ಪ್ರಯೋಗದಲ್ಲಿ ಥಾರ್ನ್‌ಡೈಕ್ ಕೆಲವು ವಿದ್ಯಾರ್ಥಿಗಳ ಕಣ್ಣುಗಳಿಗೆ ಬಟ್ಟೆ ಕಟ್ಟಿ, ನಾಲ್ಕು ಅಂಗುಲದ ಗೆರೆಗಳನ್ನು ಎಳೆಯಲು ಅವರಿಗೆ ಹೇಳಿದ. ಪ್ರತಿಯೊಂದು ಸಲ ರೇಖೆ ಎಳೆದ ಮೇಲೂ ಅದರ ನಿಜವಾದ ಉದ್ದವನ್ನು ಅಳೆದುಕೊಂಡ. ಆದರೆ ಈ ವಿಷಯವನ್ನು ವಿದ್ಯಾರ್ಥಿಗಳಿಗೆ ತಿಳಿಸಲಿಲ್ಲ. ತಮ್ಮ ಸಾಧನೆಯ ಅರಿವೇ ಇಲ್ಲದೆ ವಿದ್ಯಾರ್ಥಿಗಳು ಸುಮಾರು ಎರಡು ಸಾವಿರ ಗೆರೆಗಳನ್ನು ಎಳೆದರೂ ಅವರ ಮೊದಲಿನ ಪ್ರಯತ್ನಗಳಿಗೂ ಕೊನೆಯ ಪ್ರಯತ್ನಗಳಿಗೂ ನಿಷ್ಕೃಷ್ಟತೆಯಲ್ಲಿ ಏನೂ ವ್ಯತ್ಯಾಸ ಕಾಣಲಿಲ್ಲ. ವಿದ್ಯಾರ್ಥಿಗಳ ಇನ್ನೊಂದು ಗುಂಪಿಗೆ, ಅವರು ರೇಖೆಗಳನ್ನು ಎಳೆದ ಕೂಡಲೇ ಅವುಗಳ ನಿಜವಾದ ಉದ್ದವನ್ನು ತಿಳಿಸಲಾಗಿತ್ತು. ಅಭ್ಯಾಸ ಹೆಚ್ಚಿದಂತೆಲ್ಲಾ ಅವರು ಆ ಕಲಿಕೆಯಲ್ಲಿ ಪ್ರಗತಿ ವ್ಯಕ್ತಪಡಿಸಿದರು.

ಕಲಿಕೆಯ ಪ್ರಯೋಗ ನಡೆಸಿದವರಿಗೆಲ್ಲ ವೇದ್ಯವಾಗಿರುವ ಒಂದು ಸಾಮಾನ್ಯ ಸಂಗತಿಯಿದು: ಯಾವ ಪ್ರಾಣಿಯೇ ಆಗಲಿ, ಕಲಿಕೆಯಿಂದ ಪ್ರಯೋಜನವಿದ್ದರೆ ಮಾತ್ರ ಕಲಿಯುವ ಪ್ರಯತ್ನ ಮಾಡುತ್ತದೆ. ಹೊಟ್ಟೆ ತುಂಬಿದ ಇಲಿಯನ್ನು ಅಥವಾ ಬೆಕ್ಕನ್ನು ಒಗಟು ಪೆಟ್ಟಿಗೆಯಲ್ಲಾಗಲಿ, ಕಲಸುಮೆಲಸಿನಲ್ಲಾಗಲಿ ಬಿಟ್ಟರೆ, ಅದು ಕಲಿಯುವ ಪ್ರಯತ್ನವನ್ನೇ ಮಾಡುವುದಿಲ್ಲ. ವಿದ್ಯಾರ್ಜನೆಯಲ್ಲಿ ಆಸಕ್ತಿಯೇ ಇಲ್ಲದ ವಿದ್ಯಾರ್ಥಿಗಳೂ ಅಷ್ಟೆ. ಪ್ರಾಣಿಗಳನ್ನು ಕಲಿಯುವಂತೆ ಮಾಡಲು, ಕಲಿಯಲು ಪ್ರಯತ್ನಿಸುವಂತೆ ಮಾಡಲು ಅಭಿಪ್ರೇರಣೆಗಳು (ಮೋಟೀವ್ಸ್) ಆವಶ್ಯಕ. ಪ್ರೇರಣೆಗಳನ್ನು ಮೂಡಿಸಲು ತೃಪ್ತಿಯನ್ನುಂಟುಮಾಡಬಲ್ಲ ಪದಾರ್ಥಗಳು ಅಥವಾ ಸ್ಥಿತಿಗಳು ಆವಶ್ಯಕ. ಅಭಿಪ್ರೇರಣೆಗಳನ್ನು ಹೊರಗೆಳೆದು ಅವಕ್ಕೆ ತೃಪ್ತಿಯನ್ನುಂಟು ಮಾಡಬಲ್ಲ ಪದಾರ್ಥ ಅಥವಾ ಸ್ಥಿತಿಗಳಿಗೆ ಉತ್ತೇಜಕಗಳೆಂದು (ಇನ್ಸೆಂಟಿವ್ಸ್) ಹೆಸರು. ಉತ್ತೇಜಕಗಳಿರದ ಅಭಿಪ್ರೇರಣೆಗಳಿಗೆ ಉಂಟಾಗುವ ತೃಪ್ತಿಯೇ ಕಲಿಕೆಯಿಂದ ಜೀವಿಗೆ ಉಂಟಾಗುವ ಪ್ರಯೋಜನ. ಮಾನವೇತರ ಪ್ರಾಣಿಗಳಲ್ಲಿರುವಂಥ ಹಸಿವು, ನೀರಡಿಕೆ ಮುಂತಾದ ಶಾರೀರಿಕ ಅವಶ್ಯಕತೆಗಳು ಮಾನವರಲ್ಲೂ ಬಲವಾಗಿದ್ದರೂ ಅವು ಯಾಂತ್ರಿಕವಾಗಿ ಈಡೇರುತ್ತಿರುವುದರಿಂದ ಮಾನವರ ಕಲಿಕೆಯಲ್ಲಿ ಅವು ಹೆಚ್ಚಿನ ಪ್ರಭಾವ ತೋರುವುದಿಲ್ಲ. ಗೌರವ, ಸ್ಥಾನ, ಬಿರುದು, ಬಹುಮಾನ, ಸ್ಪರ್ಧೆ, ಧನಾರ್ಜನೆ ಇತ್ಯಾದಿಗಳೇ ಅವರಿಗೆ ಬಹಳ ಮುಖ್ಯವಾದ ಅಭಿಪ್ರೇರಣೆ.

ಕಲಿಕೆಯ ಮೇಲೆ ಬಹುಮಾನ ಮತ್ತು ದಂಡನೆಗಳ (ರಿವಾರ್ಡ್ ಮತ್ತು ಪನಿಷ್‌ಮೆಂಟ್) ಪರಿಣಾಮವನ್ನು ತಿಳಿಯಲು ಅನೇಕ ಪ್ರಯೋಗಗಳು ನಡೆದಿವೆ. ಪ್ರಯೋಗ ಶಾಲೆಯಲ್ಲಿ ಉಪಯೋಗಿಸಿದ ದಂಡನೆಯಲ್ಲಿ ಧಿಕ್ಕಾರ (ರಿಪ್ರೂಫ್) ಮತ್ತು ಎಲೆಕ್ಟ್ರಿಕ್ ಷಾಕ್ ಮುಖ್ಯವಾದವು;

ಪ್ರಶಂಸೆ ಮತ್ತು ಹಣ – ಇವು ಮುಖ್ಯವಾದ ಬಹುಮಾನಗಳು. ಈ ಪ್ರಯೋಗಗಳಲ್ಲಿ ಜೀವಿಗಳು ತಪ್ಪು ಪ್ರತಿಕ್ರಿಯೆ ಮಾಡಿದಾಗ ಅವನ್ನು ದಂಡಿಸಿ, ಸರಿಯಾದ ಪ್ರತಿಕ್ರಿಯೆ ಮಾಡಿದಾಗ ಬಹುಮಾನ ಕೊಟ್ಟು, ಇವುಗಳ ಪ್ರಭಾವ ಮುಂದೆ ಆ ಜೀವಿಗಳು ಮಾಡುವ ಕಲಿಕೆಯ ಪ್ರಯತ್ನಗಳ ಮೇಲೆ ಹೇಗಿರುತ್ತದೆಯೆಂಬುದನ್ನು ಪರಿಶೀಲಿಸಿದ್ದಾರೆ. ಒಂದು ಪ್ರತಿಕ್ರಿಯೆಗೆ ಬಹುಮಾನ ದೊರೆತರೆ ಮುಂದೆ ಸಿಕ್ಕುವ ಅವಕಾಶಗಳಲ್ಲಿ ಆ ಪ್ರತಿಕ್ರಿಯೆಯ ಪುನರುಕ್ತಿಯಾಗುತ್ತದೆ; ಅದರಿಂದ ಅದು ದೃಢಗೊಳ್ಳುತ್ತದೆ. ಆದರೆ ಒಂದು ಪ್ರತಿಕ್ರಿಯೆಗೆ ದಂಡನೆ ಒದಗಿದರೆ ಮುಂದೆ ಮಾಡುವ ಕಲಿಕೆಯ ಪ್ರಯತ್ನಗಳಲ್ಲಿ ಉನ್ನತಿಯಾಗುತ್ತದೆಂದು ಹೇಳಲಾಗುವುದಿಲ್ಲ. ದಂಡನೆ ಮತ್ತು ಬಹುಮಾನಗಳು ಸಾಮಾನ್ಯವಾಗಿ ಪರಸ್ಪರ ವಿರುದ್ಧ ಪರಿಣಾಮಗಳನ್ನುಂಟು ಮಾಡುವುದಾದರೂ ಆ ಬಗ್ಗೆ ಪ್ರಯೋಗ ಸಿದ್ಧವಾದ ಆಧಾರ ಸಿಕ್ಕಿಲ್ಲ. ದಂಡನೆಯಿಂದ ದಶಗುಣಗಳು ಬರುವುದೆಂಬ ಜನರ ಸಾಮಾನ್ಯ ನಂಬಿಕೆ ಸರಿಯಲ್ಲ. ಇಷ್ಟೇ ಅಲ್ಲದೆ, ದಂಡನೆ ಬಹಳ ತೀವ್ರವಾಗಿ ದೈಹಿಕವಾಗಿ ನೋವನ್ನುಂಟು ಮಾಡುವುದಾಗಿದ್ದರೆ ಕಲಿಯುವವನಿಗೆ ಭೀತಿ ಹುಟ್ಟಿ ಸನ್ನಿವೇಶ ಗೊಂದಲಮಯವಾಗಿ ಕಲಿಕೆ ನಿಧಾನವಾಗುವುದಲ್ಲದೆ, ಮಾನಸಿಕ ಸಂಕ್ಷೋಭೆಯೂ ಉಂಟಾಗುತ್ತದೆ.

**ಕಲಿಕೆಯ ಮೂಲತತ್ತ್ವ :** ಕಲಿಕೆಯ ಮೂಲತತ್ತ್ವಗಳ ಬಗ್ಗೆ ಮತ್ತು ಅದು ಸಿದ್ಧಿಸುವ ರೀತಿಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆ ಬಗ್ಗೆ ಹೊರಬಂದಿರುವ ಸಿದ್ಧಾಂತಗಳನ್ನು ಸಾಹಚರ್ಯ ಸಿದ್ಧಾಂತಗಳು (ಅಸೋಸಿಯೇಷನ್ ಥಿಯೊರೀಸ್), ಗ್ರಹಣ ಸಿದ್ಧಾಂತಗಳು (ಪರ್ಸೆಪ್ಚುಯಲ್ ಥಿಯೊರೀಸ್) ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಥಾರ್ನ್‌ಡೈಕ್, ಕ್ಲಾರ್ಕ್, ಹಲ್ ಮೊದಲಾದವರು ಸಾಹಚರ್ಯ ಸಿದ್ಧಾಂತವಾದಿಗಳು. ಟಾಲ್ಮನ್, ಕೊಯ್ಲರ್ ಮೊದಲಾದವರು ಗ್ರಹಣ ಪಂಥಕ್ಕೆ ಸೇರಿದವರು. ಒಂದು ಹೊಸ ಪರಿಸ್ಥಿತಿಯನ್ನು ಎದುರಿಸಬೇಕಾದಾಗ ಜೀವಿಗಳು ತಮಗೆ ಪ್ರಕೃತಿದತ್ತವಾದ ಮತ್ತು ಗತ ಅನುಭವದಿಂದ ತಾವು ಸಂಪಾದಿಸಿದ ಪ್ರತಿಕ್ರಿಯೆಗಳಲ್ಲಿ ಯಾವುದಾದರೂ ಒಂದನ್ನು ತೋರ್ಪಡಿಸುತ್ತವೆಯೆಂದು ಸಾಹಚರ್ಯ ಸಿದ್ಧಾಂತ ಹೇಳುತ್ತದೆ. ಅದರಿಂದ ಫಲ ಉಂಟಾಗದಿದ್ದಲ್ಲಿ ಇನ್ನೊಂದನ್ನು ಹೊರಗೆಡಹುತ್ತವೆ. ಅದೂ ನಿಷ್ಫಲವಾದಲ್ಲಿ ಮತ್ತೊಂದನ್ನು ನಿರ್ವಹಿಸುತ್ತವೆ. ಹೀಗೆ ಸಮರ್ಪಕವಾದ ಪ್ರತಿಕ್ರಿಯೆ ಸಿಕ್ಕುವ ವರೆಗೆ ಸತತವಾಗಿ ಪ್ರಯತ್ನ ಮಾಡುತ್ತವೆ. ಕೊನೆಗೆ ಈ ಪ್ರತಿಕ್ರಿಯೆಗಳಲ್ಲಿ ಸಫಲವಾದವು ಸ್ಥಿರವಾಗಿ ನಿಲ್ಲುತ್ತವೆ; ವಿಫಲವಾದವು ಮರೆತು ಹೋಗುತ್ತವೆ. ಸಫಲವಾದ ಪ್ರತಿಕ್ರಿಯೆಗಳಿಗೂ ಆ ಹೊಸ ಪರಿಸ್ಥಿತಿಗೂ ಒಂದು ದೃಢವಾದ ಸಂಬಂಧ ಉಂಟಾಗುತ್ತದೆ. ಮುಂದೆ ಇದೇ ಪರಿಸ್ಥಿತಿಯುಂಟಾದಾಗ ಇದರೊಡನೆ ಬಂಧಿತವಾದ ಪ್ರತಿಕ್ರಿಯೆಗಳೇ ಹೊರಗೆ ಬರುತ್ತವೆ. ಜೀವಿಗಳು ಮಾಡುವ ಪ್ರತಿಕ್ರಿಯೆಗಳ ಪರಿಣಾಮವೇ ಮೇಲೆ ಹೇಳಿದ ಬಂಧನ ಅಥವಾ ಸಾಹಚರ್ಯಕ್ಕೆ ಕಾರಣ. ಈ ವಾದವನ್ನು ಥಾರ್ನ್‌ಡೈಕ್ ಕಲಿಕೆಯ ಎರಡು ಸೂತ್ರಗಳಲ್ಲಿ ಸಂಗ್ರಹಿಸಿದ್ದಾನೆ. ಈ ಎರಡು ಸೂತ್ರಗಳನ್ನು ಅಭ್ಯಾಸ ಸೂತ್ರ (ಲಾ ಆಫ್ ಎಕ್ಸರ್‌ಸೈಜ್) ಮತ್ತು ಪರಿಣಾಮ ಸೂತ್ರ (ಲಾ ಆಫ್ ಎಫೆಕ್ಟ್) ಎಂದು ಕರೆದಿದ್ದಾನೆ. ಅಭ್ಯಾಸದ ಬಲದಿಂದ ಕಲಿಕೆಯಲ್ಲಿ ಪ್ರಗತಿಯುಂಟಾಗುತ್ತದೆಂದು ಅಭ್ಯಾಸ ಸೂತ್ರ ತಿಳಿಸುತ್ತದೆ. ಅಭ್ಯಾಸ ಮಾತ್ರವೇ ಕಲಿಕೆಗೆ ಸಾಲದು; ಪ್ರಯತ್ನಗಳಿಂದ ದೊರಕುವ ಪರಿಣಾಮವನ್ನೂ ಅದು ಅವಲಂಬಿಸಿದೆ. – ಎಂದು ಪರಿಣಾಮ ಸೂತ್ರ ತಿಳಿಸುತ್ತದೆ. ತೃಪ್ತಿ, ಜಿಗುಪ್ಸೆಗಳು (ಸ್ಯಾಟಿಸ್‌ಫಾಕ್ಷನ್ ಅಂಡ್ ಅನಾಯೆನ್ಸ್) ಅಥವಾ ಬಹುಮಾನ ದಂಡನೆಗಳು ಸಮಾನಶಕ್ತಿಯುಳ್ಳವುಗಳೆಂದೂ ಬಹುಮಾನ ಅದರ ಹಿಂದೆ ಬಂದ ಪ್ರತಿಕ್ರಿಯೆಯನ್ನು ದೃಢಗೊಳಿಸುತ್ತದೆಂದೂ ದಂಡನೆ ಅದರ ಹಿಂದೆ ಬಂದ ಕ್ರಿಯೆಯನ್ನು ಶಿಥಿಲಗೊಳಿಸುತ್ತದೆಂದೂ ಪರಿಣಾಮ ಸೂತ್ರವನ್ನು ಮೊದಲು ರಚಿಸಿದಾಗ ಥಾರ್ನ್‌ಡೈಕ್ ನಂಬಿದ್ದ. ವಿಫಲವಾದ ಕ್ರಿಯೆಯನ್ನು ದೂರ ಮಾಡುವ ಶಕ್ತಿ ದಂಡನೆಗೆ ಇಲ್ಲವೆಂಬುದು ಅನಂತರದ ಪ್ರಯೋಗಗಳಿಂದ ತಿಳಿದುಬಂದಿದ್ದರಿಂದ, ದಂಡನೆಗೆ ಸಂಬಂಧಿಸಿದ ಭಾಗವನ್ನು ಪರಿಣಾಮ ಸೂತ್ರದಿಂದ ತೆಗೆದು ಹಾಕಿದ. ಥಾರ್ನ್‌ಡೈಕನ ವಾದವನ್ನು ಕ್ಲಾರ್ಕ್‌ಹಲ್ ಪೂರ್ತಿಯಾಗಿ ಒಪ್ಪದಿದ್ದರೂ ಅವರಿಬ್ಬರ ವಾದಗಳಲ್ಲಿ ಬಹಳ ಸಾಮ್ಯವುಂಟು. ಸಾಹಚರ್ಯ ಸಿದ್ಧಾಂತದ ಮುಖ್ಯಾಂಶಗಳಿವು: 1 ಜೀವಿಗಳು ಪರಿಸ್ಥಿತಿ–ಪ್ರತಿಕ್ರಿಯೆಗಳ ಜೋಡಣೆಯನ್ನು ಕಲಿಯುತ್ತವೆ. 2 ಈ ಜೋಡಣೆ ಪರಿಣಾಮವನ್ನೇ ಅವಲಂಬಿಸಿದೆ. 3 ಇದು ಯಾಂತ್ರಿಕವಾಗಿ ನಡೆಯುತ್ತದೆ. ಗ್ರಹಣವಾದಿಗಳು ಇವನ್ನು ಒಪ್ಪುವುದಿಲ್ಲ. ಕಲಿಯಬೇಕಾದ ವಿದ್ಯೆಯಲ್ಲಿ ಅಂತರ್‌ದೃಷ್ಟಿ ಇಲ್ಲದೆ ಕಲಿಕೆ ಉಂಟಾಗುವುದಿಲ್ಲ. ಆ ವಿದ್ಯೆಯ ಅಥವಾ ಕೆಲಸದ ಭಾಗಗಳನ್ನೂ ಅವುಗಳ ಮಧ್ಯೆ ಇರುವ ಪರಸ್ಪರ ಸಂಬಂಧಗಳನ್ನೂ ತಿಳಿಯದೆ ಯಾವ ವಿದ್ಯೆಯನ್ನೂ ಕಲಿಯಲಾಗುವುದಿಲ್ಲ ಎಂದು ಅವರು ವಾದಿಸಿದ್ದಾರೆ. ಈ ವಾದದ ಬಲವನ್ನು ತಿಳಿಯಲು ಕೊಯ್ಲರ್ ಚಿಂಪಾನ್ಸಿಗಳ ಮೇಲೆ ಮಾಡಿದ ಪ್ರಯೋಗಗಳನ್ನು ಹಿಂದೆಯೇ ವಿವರಿಸಿದೆ. ಸಾಹಚರ್ಯವಾದಿಗಳು ಉಪಯೋಗಿಸಿದ ಸಮಸ್ಯೆಗಳು ಅಥವಾ ಸಾಧನಗಳು ಇಲಿ, ಬೆಕ್ಕು ಮೊದಲಾದ ಜೀವಿಗಳ ಬುದ್ಧಿಯ ಮಟ್ಟವನ್ನು ಮೀರಿದವು; ಆದಕಾರಣ ಅವು ಗ್ರಹಣಶಕ್ತಿಯನ್ನು ತೋರ್ಪಡಿಸಲಾಗಲಿಲ್ಲ; ಅವು ಗ್ರಹಣಶಕ್ತಿಯನ್ನು ತೋರ್ಪಡಿಸಲು ಅವಕಾಶವೇ ಸಿಕ್ಕಲಿಲ್ಲ–ಎಂದು ಅವರು ಟೀಕೆ ಮಾಡಿದ್ದಾರೆ. **(ಆರ್.ಎ.ಎಫ್.)**

**ಕಲಿಕೆಯ ಅಳತೆ :** ಮಕ್ಕಳ ಸರ್ವತೋಮುಖವಾದ ವಿಕಾಸಕ್ಕೆ ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯ, ಅವರ ಶಿಕ್ಷಣದ ಸ್ವರೂಪ ಮತ್ತು ಬೋಧನೆಯ ಕ್ರಮ, ಅವರ ಮನೆಯ ಸಂಸ್ಕೃತಿಯ ಮಟ್ಟ, ಅವರ ಉದ್ಯೋಗಶೀಲತೆ, ಅವರಿಗೆ ದೊರೆಯುವ ಸಾಮಾಜಿಕ ಅನುಕೂಲಗಳು, ಅವರ ಭಾವಜೀವನದ ಸ್ವರೂಪ ಇವೆಲ್ಲ ಕಾರಣವಾದರೂ ಅವೆಲ್ಲಕ್ಕಿಂತ ಹೆಚ್ಚಿನ ಪ್ರಭಾವ ಬೀರುವುದು ಅವರ ಬುದ್ಧಿ. ಅಂದರೆ ಮಕ್ಕಳ ಬುದ್ಧಿಯ ಮಟ್ಟ ಅವರು ಯಾವ ವಿಷಯಗಳನ್ನು ಎಷ್ಟರಮಟ್ಟಿಗೆ ಕಲಿಯ ಬಲ್ಲರು ಎಂಬುದನ್ನು ಬಹುಮಟ್ಟಿಗೆ ನಿರ್ಧರಿಸುತ್ತದೆ. ಆದ್ದರಿಂದಲೇ ಬುದ್ಧಿಯನ್ನು ಕಲಿಯುವ ಶಕ್ತಿ ಎಂದೂ ಕರೆಯುತ್ತಾರೆ.

**ಬುದ್ಧಿಯ ಅಳತೆ:** ಬುದ್ಧಿಯನ್ನು ಅಳೆಯುವ ಸಾಧನವನ್ನು ಮೊಟ್ಟಮೊದಲು ಫ್ರಾನ್ಸಿನ ವಿಜ್ಞಾನಿ ಬೀನೆ ರೂಪಿಸಿದ. ಮಕ್ಕಳ ಬುದ್ಧಿ ಅವರ ದೈಹಿಕ ವಯಸ್ಸಿಗೆ (ಕ್ರಾನೊಲಾಜಿಕಲ್ ಏಜ್) ಅನುಗುಣವಾಗಿರುತ್ತದೆ; ಸಾಧಾರಣ ಬುದ್ಧಿಶಕ್ತಿಯಿರುವ ಒಂದೇ ವಯಸ್ಸಿನ ಮಕ್ಕಳು ಕೆಲವು ಶಿಷ್ಟೀಕೃತ (ಸ್ಟಾಂಡರ್ಡೈಸ್ಡ್) ಪ್ರಶ್ನೆಗಳನ್ನು ಉತ್ತರಿಸಬಲ್ಲರು–ಎಂಬುದನ್ನು ಬೀನೆ ಅನುಭವದಿಂದಲೂ ಪ್ರಯೋಗಗಳಿಂದಲೂ ಕಂಡುಹಿಡಿದು, ಆ ಮೂಲಕ ಮಕ್ಕಳ ಬುದ್ಧಿಶಕ್ತಿಯ ವಯಸ್ಸನ್ನು ನಿರ್ಧರಿಸಲು ಯತ್ನಿಸಿದ. ಒಬ್ಬ ಹುಡುಗನ ದೈಹಿಕ ವಯಸ್ಸು 10 ಇರಬಹುದು. ಆದರೆ ಆತ 12 ವರ್ಷ ವಯಸ್ಸಿನ ಸರಾಸರಿ ಮಟ್ಟದ ಮಕ್ಕಳಿಗಾಗಿ ನಿಯತವಾದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡಬಹುದು. ಹಾಗಾದರೆ ಅವನ ಮಾನಸಿಕ (ಮೆಂಟಲ್) ವಯಸ್ಸು 12 ಆಗುತ್ತದೆ. ಬುದ್ಧಿಯ ಮಟ್ಟ ನಿರ್ಧರಿಸಲು ಮಾನಸಿಕ ವಯಸ್ಸನ್ನು ದೈಹಿಕ ವಯಸ್ಸಿನಿಂದ ಭಾಗಿಸಿ, ನೂರರಿಂದ ಗುಣಿಸಬೇಕು (ದಶಮಾಂಶ ನಿವಾರಣೆಗಾಗಿ). ಇದೇ ಬುದ್ಧಿಲಬ್ಧ ಅಥವಾ ಬುದ್ಧಿಪ್ರಮಾಣ (ಐ.ಕ್ಯೂ.).

ಬುದ್ಧಿಲಬ್ಧ (ಐ.ಕ್ಯೂ.) = ಮಾನಸಿಕ ವಯಸ್ಸು (x) 100 / ದೈಹಿಕ ವಯಸ್ಸು

ಈ ಮಾನದ ಪ್ರಕಾರ 99–110ರ ವರೆಗೆ ಐ.ಕ್ಯೂ. ಉಳ್ಳವರು ಸಾಧಾರಣ ಬುದ್ಧಿವಂತರು. 110–130ರ ವರೆಗೆ ಐ.ಕ್ಯೂ. ಉಳ್ಳವರು ಉತ್ತಮ ಬುದ್ಧಿಯವರು. 130 ಕ್ಕಿಂತ ಹೆಚ್ಚು ಉಳ್ಳವರು ಪ್ರತಿಭಾವಂತರು. 70–90ರ ವರೆಗೆ ಐ.ಕ್ಯೂ. ಉಳ್ಳವರು ಕಡಿಮೆ ಬುದ್ಧಿಯವರು. ಇವರು ನಿಧಾನವಾಗಿ ಕಲಿಯುವರು. 50–70ರ ವರೆಗೆ ಐ.ಕ್ಯೂ. ಉಳ್ಳವರು ಮಂದ ಬುದ್ಧಿಯವರು. ಇವರು ಸಾಧಾರಣ ಶಿಕ್ಷಣವನ್ನೂ ಕೈಕೆಲಸವನ್ನೂ ಕಲಿಯಬಲ್ಲರು. 20–50ರ ವರೆಗೆ ಐ.ಕ್ಯೂ. ಇದ್ದವರು ತೀರ ಮಂಕು. ಇವರು ಬಹುಪ್ರಯಾಸದಿಂದ ಸಣ್ಣಪುಟ್ಟ ಕೆಲಸ ಕಲಿಯಬಲ್ಲರು; ವಿದ್ಯಾಭ್ಯಾಸ ಇವರಿಗೆ ಅಸಾಧ್ಯ. 20ಕ್ಕೂ ಕಡಿಮೆ ಐ.ಕ್ಯೂ. ಉಳ್ಳವರು ಪೆದ್ದರು. ಇವರು ಕಲಿಯುವುದು ಹಾಗಿರಲಿ, ತಮ್ಮ ಅಂಗರಕ್ಷಣೆಯನ್ನು ಸಹ ಮಾಡಿಕೊಳ್ಳಲಾರರು. ಇವರು ಯಾವಾಗಲೂ ಒಂದು ಸಂಸ್ಥೆಯ ರಕ್ಷಣೆಗೆ ಒಳಪಟ್ಟಿರಬೇಕು.

**ಶಿಕ್ಷಣಾಭಿವೃದ್ಧಿಯ ಅಳತೆ:** ವಿದ್ಯಾರ್ಥಿಗಳು ಶಿಕ್ಷಣದಿಂದ ಎಷ್ಟರ ಮಟ್ಟಿಗೆ ಪ್ರಯೋಜನ ಹೊಂದಿರುವರೆಂಬುದನ್ನು ಅವರು ಪರೀಕ್ಷೆಗಳಲ್ಲಿ ಗಳಿಸಿರುವ ಅಂಕಗಳಿಂದ ನಿರ್ಧರಿಸಬಹುದು. ಇತ್ತೀಚೆಗೆ ನಿಯತವಾದ ನೂತನ ಪರೀಕ್ಷೆಗಳಿಂದ ಶಿಕ್ಷಣಾಭಿವೃದ್ಧಿಯ ಮಟ್ಟವನ್ನು ಶಿಕ್ಷಣದ ವಯಸ್ಸಿನ ಮಾನದಲ್ಲಿ ಕಂಡುಹಿಡಿದು ಅದನ್ನು ದೈಹಿಕ ವಯಸ್ಸಿನಿಂದ ಭಾಗಿಸಿ ನೂರರಿಂದ ಗುಣಿಸುತ್ತಾರೆ. ಇದೇ ಶಿಕ್ಷಣಲಬ್ಧ (ಇ.ಕ್ಯೂ.)

ಶಿಕ್ಷಣಲಬ್ಧ (ಇ.ಕ್ಯೂ.) = ಶಿಕ್ಷಣ ವಯಸ್ಸು (x) 100 / ದೈಹಿಕ ವಯಸ್ಸು

ಇದರ ಪ್ರಕಾರ 90–110ರ ವರೆಗೆ ಐ.ಕ್ಯೂ. ಇದ್ದರೆ ಅವರ ಶಿಕ್ಷಣಾಭಿವೃದ್ಧಿ ಸಾಧಾರಣ ಎಂದೂ 110ಕ್ಕಿಂತ ಹೆಚ್ಚಾಗಿದ್ದರೆ ಅವರ ಶಿಕ್ಷಣ ಉತ್ತಮ ಎಂದೂ 90ಕ್ಕಿಂತ ಕಡಿಮೆ ಇದ್ದರೆ ಅದು ಕೆಳಗಿನ ಮಟ್ಟದ್ದು ಎಂದೂ ನಿರ್ಧರಿಸಬಹುದು.

**ಕಲಿಕೆಯ ಅಳತೆ:** ಮೇಲೆ ಹೇಳಿರುವಂತೆ ಮಕ್ಕಳ ಶಿಕ್ಷಣ ಮಟ್ಟ ಅವರ ಬುದ್ಧಿಯ ಮಟ್ಟವನ್ನು ಬಹಳಮಟ್ಟಿಗೆ ಅವಲಂಬಿಸಿರುತ್ತದೆ. ಮಕ್ಕಳು ಅವರ ಬುದ್ಧಿ ಶಕ್ತಿಗೆ ಅನುಗುಣವಾಗಿ ಶಿಕ್ಷಣಾಭಿವೃದ್ಧಿ ಹೊಂದುತ್ತಿದ್ದಾರೆಯೆ ಎಂಬುದನ್ನು ಕಂಡುಹಿಡಿಯಲು ಇದು ನೆರವಾಗುತ್ತದೆ. ಶಿಕ್ಷಣಲಬ್ಧವನ್ನು ಬುದ್ಧಿಲಬ್ಧದಿಂದ ಭಾಗಿಸಿ ಅದನ್ನು ನೂರದಿಂದ ಗುಣಿಸಿದರೆ ದೊರಕುವುದೇ ಸಾಧನಾಲಬ್ಧ (ಅಚೀವ್ ಮೆಂಟ್ ಕ್ವೋಷೆಂಟ್ (ಎ.ಕ್ಯೂ.)

ಸಾಧನಾಲಬ್ಧ (ಇ.ಕ್ಯೂ.) = ಶಿಕ್ಷಣಲಬ್ಧ (x) 100 / ಬುದ್ಧಿಲಬ್ಧ

ಅಥವಾ

ಶಿಕ್ಷಣ ವಯಸ್ಸು (x) 100 / ಮಾನಸಿಕ ವಯಸ್ಸು

ಒಬ್ಬ ವ್ಯಕ್ತಿಯ ಎ.ಕ್ಯೂ. 90 ರಿಂದ 110ರ ವರೆಗಿದ್ದರೆ ಆತ ತನ್ನ ಬುದ್ಧಿಗೆ ಅನುಗುಣವಾಗಿ ಶಿಕ್ಷಣಾಭಿವೃದ್ಧಿ ಹೊಂದುತ್ತಿದ್ದಾನೆ ಎಂದು ತಿಳಿಯಬೇಕು. ಅವನ ಇ.ಕ್ಯೂ.

110 ಕ್ಕಿಂತ ಹೆಚ್ಚಾಗಿದ್ದರೆ, ಆ ವ್ಯಕ್ತಿ ತನ್ನ ಬುದ್ಧಿಗೆ ಮೀರಿ ಶಿಕ್ಷಣಾಭಿವೃದ್ಧಿ ಹೊಂದುತ್ತಿದ್ದಾನೆಂದು ವ್ಯಕ್ತವಾಗುತ್ತದೆ. ಹೀಗೆ ಶಕ್ತಿಮೀರಿ ಕೆಲಸ ಮಾಡುವುದು ಕೆಲವು ವೇಳೆ ಆ ವ್ಯಕ್ತಿಯ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಕುಂದಾಗಬಹುದು. ಇಂಥ ಸಂದರ್ಭದಲ್ಲಿ ಉಪಾಧ್ಯಾಯರು ಸೂಕ್ತ ಮಾರ್ಗದರ್ಶನ ನೀಡಬೇಕು. ಎ.ಕ್ಯೂ. 90ಕ್ಕಿಂತ ಕಡಿಮೆಯಾಗಿದ್ದರೆ ಆ ವ್ಯಕ್ತಿ ತನ್ನ ಬುದ್ಧಿಗಿಂತ ಕಡಿಮೆ ಶಿಕ್ಷಣಾಭಿವೃದ್ಧಿ ಹೊಂದುತ್ತಿದ್ದಾನೆಂದು ಅರ್ಥ. ಅಂದರೆ ಆವ್ಯಕ್ತಿಗೆ ಕಲಿಯುವ ಶಕ್ತಿ ಇದೆ. ಆದರೆ ಆತ ಆ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು. ಶಿಕ್ಷಕರು ಕಾರಣಗಳನ್ನು ಕಂಡುಹಿಡಿದು ಈ ನ್ಯೂನತೆಯನ್ನು ಕಡಿಮೆ ಮಾಡಲು ಎಲ್ಲ ಪ್ರಯೋಗಗಳನ್ನೂ ಮಾಡಬೇಕು. (ಸಿ.ಆರ್.)

**ಕಲಿಯುಗ :** ವೈದಿಕವಾಙ್ಮಯದಲ್ಲಿ ಹೇಳಲ್ಪಟ್ಟ ನಾಲ್ಕು ಯುಗಗಳಲ್ಲಿ ಕಡೆಯದು. ಉಳಿದವು ಕೃತ, ತ್ರೇತ, ದ್ವಾಪರ. ಇದರ ಅವಧಿ 4,32,000 ವರ್ಷಗಳು. ಪ್ರಕೃತ ಇದರಲ್ಲಿ 5066 ವರ್ಷಗಳು ಪೂರ್ತಿಯಾಗಿ 5067ನೆಯ (ವಿಶ್ವಾವಸು) ಸಂವತ್ಸರ ನಡೆಯುತ್ತಿದೆ. ಈ ಯುಗದಲ್ಲಿ ಧರ್ಮ ಒಂದೇ ಕಾಲಿನಲ್ಲಿ ನಿಂತು ಕುಂಟುತ್ತಲೂ ಅಧರ್ಮ ನಾಲ್ಕು ಕಾಲುಗಳಿಂದ ನಲಿದಾಡುತ್ತಲೂ ಇರುವುದು. ಎಂದರೆ ಜನರಲ್ಲಿ ಧಾರ್ಮಿಕ ಪ್ರವೃತ್ತಿ, ಭಾವನೆಗಳು ಮಾಯವಾಗಿ ಅಧರ್ಮರುಚಿಯೂ ಸ್ವಾರ್ಥಭಾವನೆಯೂ ಹೆಚ್ಚುವುವು. ಇದರ ಫಲವಾಗಿ ಅವರಿಗೆ ಸುಖಸಂತೋಷಗಳು ದೊರೆಯದೆ ವ್ಯಾಧಿ, ದುರ್ಭಿಕ್ಷ, ಹಸಿವು, ಬಾಯಾರಿಕೆ, ಮಿತಿಯಿಲ್ಲದ ಪ್ರಜಾವೃದ್ಧಿ ಮುಂತಾದ ದುಃಖಗಳೇ ಹೆಚ್ಚುತ್ತ ಬರುವುವು. ಕಲಿ ಮಹಿಮೆ ಹೆಚ್ಚಿದಂತೆಲ್ಲ ಧರ್ಮ, ಸತ್ಯ, ಕ್ಷಮೆ, ದಯೆ, ಶೌಚ, ಸದಾಚಾರ ವ್ಯವಹಾರಗಳು, ಆಯುಃಪ್ರಮಾಣ, ದೈಹಿಕ ಶಕ್ತಿ, ಸ್ಮೃತಿಶಕ್ತಿ-ಇವು ನಶಿಸುವುವು. ಧರ್ಮ ಮತ್ತು ನ್ಯಾಯವ್ಯವಸ್ಥೆಯಲ್ಲಿ ಧನಬಲವೇ ಪ್ರಧಾನವಾಗುವುದು. ಹೀಗಿದ್ದರೂ ಇತರ ಯುಗಗಳಂತೆ ಕಠಿಣವಾದ ತಪಶ್ಶಕ್ತಿಯೇ ಮುಂತಾದುವುಗಳನ್ನನುಷ್ಠಿಸದೆ, ಭಗವನ್ನಾಮಸ್ಮರಣ ಮಾತ್ರದಿಂದಲೇ ಕಲಿಯುಗದ ಜನ ಮೋಕ್ಷಾದಿ ಶ್ರೇಷ್ಠ ಫಲಗಳನ್ನು ಹೊಂದಬಲ್ಲರು. ದಾನವೇ ಈ ಯುಗದ ಪ್ರಧಾನ ಧರ್ಮವಾಗುವುದು. ಆದುದರಿಂದಲೇ ಕೃತಾದಿ ಯುಗಗಳಲ್ಲಿ ಹುಟ್ಟಿದ ಜ್ಞಾನಿಗಳು ಕಲಿಯುಗದಲ್ಲಿ ಹುಟ್ಟಲು ಆಶಿಸಿ, ಅಂತೆಯೇ ಈಗ ಅನೇಕ ಭಗವದ್ಭಕ್ತರಾಗಿ ಅವತರಿಸುವರು. ಅಲ್ಲದೆ ಸಂಘಶಕ್ತಿಗಿರುವ ಪ್ರಾಶಸ್ತ್ಯ ಇಮ್ಮಡಿಸುವುದು. ಈ ಯುಗದ ಕಡೆಯಲ್ಲಿ ಭಗವಂತ ಕಲ್ಕಿಯ ಅವತಾರವನ್ನು ಎತ್ತಿ ಅಧರ್ಮಿಗಳನ್ನು ನಿಶ್ಶೇಷವಾಗಿ ಸಂಹರಿಸಿ, ಉಳಿದ ಸತ್ಪುರುಷರ ಮನಸ್ಸಿನಲ್ಲಿ ಒಳ್ಳೆಯ ಗುಣಗಳುಂಟಾಗುವಂತೆ ಪ್ರೇರಿಸುವನು. ಆಗ ಮತ್ತೆ ಕೃತಯುಗ ಹುಟ್ಟುವುದು (ನೋಡಿ-ಯುಗಗಳು). (ಎ.ಎಸ್.)

**ಕಲಿಲ :** ಎರಡು ವಸ್ತುಗಳ ನಿಕಟ ಮಿಶ್ರಣ; ಇಲ್ಲಿ ಸೂಕ್ಷ್ಮವಿಭಜಿತ ಸ್ಥಿತಿಯಲ್ಲಿರುವ ಒಂದು ವಸ್ತು ಎರಡನೆಯ ವಸ್ತುವಿನ ಮೂಲಕ ಏಕರೀತಿಯಲ್ಲಿ ವಿತರಣೆಗೊಂಡಿರುವುದು. ಮೊದಲನೆಯ ವಸ್ತುವಿನ ಹೆಸರು ಚೆದರಿದ ಅವಸ್ಥೆ (ಡಿಸ್ಪರ್ಸ್ಡ್ ಫೇಸ್) ಅಥವಾ ಕಲಿಲ (ಕಾಲಾಯ್ಡ್). ಎರಡನೆಯ ವಸ್ತುವಿನ ಹೆಸರು ವಿಲಂಬನ ಮಾಧ್ಯಮ (ಡಿಸ್ಪರ್ಷನ್ ಮೀಡಿಯಂ). ವಿಲಂಬನ ಮಾಧ್ಯಮ ಅನಿಲ, ದ್ರವ ಅಥವಾ ಘನ ಆಗಬಹುದು; ಚೆದರಿದ ಅವಸ್ಥೆ ಇವು ಯಾವುವೇ ಆಗಬಹುದಾದರೂ ಒಂದು ಅನಿಲದೊಡನೆ ಇನ್ನೊಂದು ಅನಿಲದ ಕಲಿಲ ವ್ಯವಸ್ಥೆಯನ್ನು ಪ್ರಸ್ತಾಪಿಸುವ ವಾಡಿಕೆ ಇಲ್ಲ. ಕಲಿಲ ಸ್ಥಿತಿಯನ್ನು ಇತ್ಯರ್ಥಮಾಡುವುದು ವಸ್ತುವಿನ ಕಣಗಾತ್ರಗಳಿಂದ; ಕಣ್ಣಿಗೆ ಕಾಣುವ ಜೋಲಾಡುತ್ತಿರುವ ಕಣಗಳಿಗೂ ಕಾಣದ ಅಣುಗಳಿಗೂ ಮಧ್ಯವರ್ತಿ ಗಾತ್ರಗಳಿವು, 10-10,000 (Å).

ದ್ರವ ವ್ಯಾಪಕತ್ವದ ಬಗ್ಗೆ ಸಂಶೋಧನೆಯಲ್ಲಿ ನಿರತನಾಗಿದ್ದ ಥಾಮಸ್ ಗ್ರಹಮನಿಗೆ ಒಂದು ವಿನೂತನ ಅನುಭವವಾಯಿತು (1861). ಕೆಲವು ವಿಲೀನ ವಸ್ತುಗಳು ಪ್ರಾಣಿ ಮತ್ತು ಸಸ್ಯ ಸಂಬಂಧವಾದ ಪೊರೆಗಳ ಮೂಲಕ ಸರಾಗವಾಗಿ ಪಸರಿಸುತ್ತಿದ್ದುವು. ಇನ್ನು ಕೆಲವು ವಸ್ತುಗಳು ಈ ತೆರನಾಗಿ ವರ್ತಿಸುತ್ತಿರಲಿಲ್ಲ. ಮೊದಲನೆಯ ವರ್ಗದ ಅನೇಕ ವಸ್ತುಗಳನ್ನು ಹರಳುರೂಪದಲ್ಲಿ ಪಡೆಯಬಹುದಾಗಿತ್ತು. ಆದ್ದರಿಂದ ಅವನ್ನು ಸ್ಫಟಿಕರೂಪಿಗಳು (ಕ್ರಿಸ್ಟಲಾಯ್ಡ್ಸ್) ಎಂದು ಆತ ಕರೆದ. ಪೊರೆಯ ಮೂಲಕ ಪಸರಿಸಲು ಅಶಕ್ತವಾಗಿದ್ದ ವಸ್ತುಗಳನ್ನು ಕಾಲಾಯ್ಡ್ಸ್ ಎಂದು ಹೆಸರಿಸಿದ. ಸಾಮಾನ್ಯ ಗೋಂದಿಗೆ ಈ ಗುಣವಿದ್ದುದರಿಂದ ಗ್ರೀಕ್ ಪದವಾದ ಕೊಲ್ಲಾ ಎಂದರೆ ಅಂಟು ಎಂಬುದನ್ನು ಆಧರಿಸಿ ಈ ಹೆಸರಿಡಲಾಯಿತು. ಕಾಲಾಯ್ಡ್ (ಕಲಿಲ) ವರ್ಗದ ವಸ್ತುಗಳಾದ ಪಿಷ್ಟ, ಜಿಲೆಟಿನ್, ಸಸಾರಜನಕಗಳು ಇತ್ಯಾದಿಗಳ ಅಣುತೂಕ ಅಗಾಧವಾಗಿರುವುದರಿಂದ ಆಸ್ಮಾಟಿಕ್ ಒತ್ತಡ ಕಡಿಮೆಯಾಗಿ ಅವು ವ್ಯಾಪಿಸಲು ಸಾಧ್ಯವಿಲ್ಲ. ಅಲ್ಲದೆ ಅವುಗಳ ಅಣು ಗಾತ್ರವೂ ಹೆಚ್ಚಾಗಿರುವುದರಿಂದ ಪಾರ್ಚ್‌ಮೆಂಟ್ ಮುಂತಾದ ಪೊರೆಗಳಲ್ಲಿರುವ ಸೂಕ್ಷ್ಮ ರಂಧ್ರಗಳ ಮೂಲಕ ಅವು ಪಸರಿಸಲಾರವು ಎಂಬುದು ಗ್ರಹಮನ ವಾದವಾಗಿತ್ತು.

ಸ್ಫಟಿಕರೂಪಿಗಳು ಮತ್ತು ಕಲಿಲಗಳು ಎಂದು ವಸ್ತುಗಳನ್ನು ವಿಂಗಡಿಸಲು ಬಾರದು ಎಂಬುದಾಗಿ ಅನಂತರ ನಡೆಸಲಾದ ಸಂಶೋಧನೆಗಳಿಂದ ವ್ಯಕ್ತವಾಯಿತು. ಕಲಿಲ ವಸ್ತುಗಳು ಎಂಬುದೇ ಇಲ್ಲ. ಯಾವ ವಸ್ತುವನ್ನಾದರೂ ಕಲಿಲ ಸ್ಥಿತಿಗೆ ತರಲು ಸಾಧ್ಯ ಎಂದು ಪ್ರಯೋಗಗಳಿಂದ ಸಿದ್ಧವಾಗಿದೆ. ಉಪ್ಪನ್ನು ನೀರಿಗೆ ಹಾಕಿದಾಗ ದ್ರಾವಣವಾಗುವುದು. ಆದರೆ ಬೆಂಜೀನ್ ದ್ರವದಲ್ಲಿ ಉಪ್ಪನ್ನು ಕಲಿಲ ಸ್ಥಿತಿಯಲ್ಲಿ ವಿಲಂಬಿಸಬಹುದು. ಸಾಬೂನನ್ನು ನೀರಿನಲ್ಲಿ ಕದಡಿದಾಗ ಬರುವುದು ಕಲಿಲದ್ರಾವಣ. ಅದೇ ಆಲ್ಕೊಹಾಲಿನಲ್ಲಿ ಅಣುಸ್ಥಿತಿಯಲ್ಲಿ ವಿಲೀನವಾಗಿ ನೈಜದ್ರಾವಣವೆನಿಸಿಕೊಳ್ಳುವುದು. ಅಲ್ಲದೆ ಅನೇಕ ಕಲಿಲ ವಸ್ತುಗಳನ್ನು ಹರಳು ರೂಪದಲ್ಲಿ ಪಡೆದಿರುವ ನಿದರ್ಶನಗಳಿವೆ. ಹೀಗಾಗಿ ಗ್ರಹಮನ ಮೂಲ ವರ್ಗೀಕರಣವನ್ನು ಇಂದು ಕೈಬಿಡಲಾಗಿದೆ.

ಉಪ್ಪನ್ನು ನೀರಿನಲ್ಲಿ ವಿಲೀನ ಮಾಡಿದಾಗ ಉಂಟಾಗುವ ದ್ರಾವಣ ಸಮಾಂಗಿಯಾಗಿ (ಹೊಮೊಜೀನಿಯಸ್) ತೋರುವುದು. ಅದರಲ್ಲಿರುವ ಕಣಗಳು ನಮಗೆ ಕಾಣಿಸದಷ್ಟು ಸಣ್ಣಗಿರುವುದೇ ಈ ಅನುಭವಕ್ಕೆ ಕಾರಣ. ವಿಲೀನ ವಸ್ತುವನ್ನು ಶೋಧಿಸಿ ನೀರಿನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಆದರೆ ಮರಳನ್ನು ನೀರಿನಲ್ಲಿ ಕದಡಿದಾಗ ಮಡ್ಡಿಯಂಥ ಮಿಶ್ರಣ ಏರ್ಪಡುವುದು. ಅದರಲ್ಲಿರುವ ಕಣಗಳನ್ನು ಬರಿಗಣ್ಣಿನಿಂದಾಗಲಿ ಸೂಕ್ಷ್ಮದರ್ಶಕದಿಂದಾಗಲಿ ನೋಡಬಹುದು. ಇಂಥ ಮಡ್ಡಿ ಮಿಶ್ರಣ ವಿಷಮಾಂಗಿಯಾಗಿ (ಹೆಟರೊಜೀನಿಯಸ್) ಕಾಣುವುದು ಸಹಜ. ಮರಳಿನಕಣಗಳು ದೊಡ್ಡವಾದ್ದರಿಂದ ಸ್ವಾಭಾವಿಕವಾಗಿಯೇ ಅವು ಕ್ರಮೇಣ ತಳವೂರುವುವು. ಇದರಲ್ಲಿರುವ ಚೆದರಿದ ವಸ್ತುವನ್ನು ಶೋಧಿಸಿ ಬೇರ್ಪಡಿಸಬಹುದು. ಇಂಥ ದೊಡ್ಡ ಕಣಗಳನ್ನು ವಿಭಜಿಸುತ್ತ ನಡೆದರೆ ಅಂತಿಮವಾಗಿ ಅವು ದ್ರಾವಣದಲ್ಲಿರುವ ಅಣುಗಳಾಗುತ್ತವೆ. ಈ ಪರಿವರ್ತನ ಕಾಲದ ಒಂದು ಹಂತದಲ್ಲಿ ದೊರೆಯುವ ನಡುವರ್ತಿ ಗಾತ್ರದ ಕಣಗಳಿಗೆ ದ್ರಾವಣ ಮತ್ತು ಮಡ್ಡಿಮಿಶ್ರಣದ ಕಣಗಳ ಗುಣಗಳೆರಡೂ ಪ್ರಾಪ್ತವಾಗಲೇಬೇಕು. ಈ ತ್ರಿಶಂಕು ಸ್ಥಿತಿಯಲ್ಲಿರುವ ವಸ್ತುವಿನ ಕಣಗಳು ಕಲಿಲಸ್ಥಿತಿಯಲ್ಲಿವೆ ಎನ್ನುವುದು ವಾಡಿಕೆ. ಕಣಗಾತ್ರಕ್ಕೆ ನಿಷ್ಕೃಷ್ಟ ಮಿತಿಗಳನ್ನು ಸೂಚಿಸುವುದು ಅಸಾಧು. ಸ್ಥೂಲವಾಗಿ ಕೆಳಕಂಡಂತೆ ವಿವರಿಸಬಹುದು :

| ಹೆಸರು | | ಕಣಗಾತ್ರ |
|---|---|---|
| ಒರಟು ಮಡ್ಡಿ | . . . | 50,000 ಮಿಲಿಮೈಕ್ರಾನುಗಳಿಗಿಂತ ಹೆಚ್ಚು |
| ನಯಮಡ್ಡಿ | . . . | 100-50,000 ಮಿಲಿಮೈಕ್ರಾನುಗಳು |
| ಕಲಿಲ ವಸ್ತುಸ್ಥಿತಿ | . . . | 1-100 ಮಿಲಿಮೈಕ್ರಾನುಗಳು |
| ನೈಜದ್ರಾವಣ | . . . | 1 ಮಿಲಿಮೈಕ್ರಾನಿಗಿಂತ ಕಡಿಮೆ |

(1 ಮಿಲಿಮೈಕ್ರಾನು = 10-7 ಸೆಂಮೀ)

ಬರಿಗಣ್ಣಿಗೆ ಕಲಿಲ ಕಣಗಳು ಕಾಣಿಸುವುದಿಲ್ಲ. ಆದ್ದರಿಂದ ಕಲಿಲ ದ್ರಾವಣ ಸಮಾಂಗಿಯಾಗಿ ತೋರುವುದು ಸ್ವಾಭಾವಿಕ. ಆದರೆ ಸಾಮಾನ್ಯ ಸೂಕ್ಷ್ಮದರ್ಶಿಯಿಂದ ವಿಶೇಷ ಭಂಗಿಯಲ್ಲಿ ವೀಕ್ಷಿಸಿದಾಗ ದ್ರಾವಣದ ಭಿನ್ನಗುಣ ವ್ಯಕ್ತವಾಗುವುದು. ಇಂಥ ಕಣಗಳು ತಳವೂರುವುದಿಲ್ಲ. ಅವನ್ನು ಶೋಧಿಸಿ ಬೇರ್ಪಡಿಸುವಂತಿಲ್ಲ. ಕೇಂದ್ರಾಪಗಮನ ಯಂತ್ರದಲ್ಲಿ ಹಾಕಿ ಕುಲುಕಿದಾಗ ಮಾತ್ರ ಅವು ತಳವೂರುವುವು. ಅತಿಸೂಕ್ಷ್ಮ ರಂಧ್ರಗಳಿರುವ ಸೋಸುಕಾಗದಗಳನ್ನು ಬಳಸಿ ಅವನ್ನು ಬೇರ್ಪಡಿಸಬಹುದು.

ಕಲಿಲ ವಸ್ತುಸ್ಥಿತಿಯ ಮತ್ತೊಂದು ವೈಶಿಷ್ಟ್ಯ ಆ ಸ್ಥಿತಿಯಲ್ಲಿರುವ ವಸ್ತುವಿನ ಅಪಾರ ಮೇಲ್ಮೈ ವಿಸ್ತೀರ್ಣ. 1 ಘ. ಸೆಂಮೀ. ವಸ್ತುವಿನ ಮೇಲ್ಮೈ ವಿಸ್ತೀರ್ಣ 6 ಚದರ ಸೆಂಮೀ. ಅದೇ ವಸ್ತುವನ್ನು ಒಂದು ಮಿಲಿಮೈಕ್ರಾನ್ ಉದ್ದದ ಬಾಹುಗಳುಳ್ಳ ಘನಾಕೃತಿಗಳಾಗಿ ವಿಭಾಗಿಸಿದರೆ ಲಭ್ಯ ವಸ್ತುವಿನ ಒಟ್ಟು ಮೇಲ್ಮೈ ವಿಸ್ತೀರ್ಣ 6,000 ಚದರ ಸೆಂಮೀ. ಅಂದರೆ ಸುಮಾರು ಒಂದೂವರೆ ಎಕರೆ ಪ್ರದೇಶದಷ್ಟು. ಇದರಿಂದ ಕಲಿಲ ವಸ್ತುಸ್ಥಿತಿಯ ಕಲ್ಪನೆ ಉಂಟಾದೀತು.

ಪ್ರತಿಯೊಂದು ಕಲಿಲದಲ್ಲೂ ಈ ಹಿಂದೆ ಹೇಳಿದಂತೆ ಎರಡು ಭಾಗಗಳಿವೆ. ಒಂದು ಚೆದರಿದ ವಸ್ತು ಮತ್ತೊಂದು ಚೆದರಿದ ಮಾಧ್ಯಮ. ಈ ಅಂಗಭಾಗಗಳು ಅನಿಲ, ದ್ರವ ಅಥವಾ ಘನರೂಪದಲ್ಲಿರಬಹುದು. ತತ್ಫಲವಾಗಿ ಕೆಳಕಂಡ ಎಂಟು ವಿಧವಾದ ಕಲಿಲಗಳಿರಲು ಸಾಧ್ಯ. ಎರಡು ಅನಿಲಗಳು ಸಂಪೂರ್ಣವಾಗಿ ಬೆರೆಯುವುದರಿಂದ ಆ ಮಿಶ್ರಣ ನೈಜದ್ರಾವಣವಾಗುವುದು. ಆದ್ದರಿಂದ ಎರಡು ಅನಿಲಗಳು ಕೂಡಿ ಕಲಿಲದ್ರಾವಣವನ್ನು ಕೊಡಲಾರವು.

| | ವಿಲಂಬಿತ ವಸ್ತುಸ್ಥಿತಿ | ಚೆದರಿದ ಮಾಧ್ಯಮ | ಕಲಿಲದ ಹೆಸರು | ಪರಿಚಿತ ಉದಾಹರಣೆ |
|---|---|---|---|---|
| 1 | ಘನ | ಘನ | ಘನ ಸಾಲ್ | ಖನಿಜಗಳು, ರತ್ನಗಳು |
| 2 | ಘನ | ದ್ರವ | ಸಾಲ್ | ಚಿನ್ನದ ಸಾಲ್, ಮಣ್ಣು ಗೂಡಿದ ನೀರು |
| 3 | ಘನ | ಅನಿಲ | ಏರೊಸಾಲ್ | ಹೊಗೆ (ಗಾಳಿಯಲ್ಲಿ ಚೆದರಿದ ಇಂಗಾಲ) |

| | | | | |
|---|---|---|---|---|
| 4 | ದ್ರವ | ಘನ | ಜಲ್ | ಮೊಸರು<br>ಕ್ಷೀರ ಸ್ಫಟಿಕ (ಓಪಲ್)<br>(ಸಿಲಿಕಾದಲ್ಲಿ<br>ಚೆದರಿದ ನೀರು) |
| 5 | ದ್ರವ | ದ್ರವ | ಎಮಲ್ಷನ್ | ಹಾಲು<br>(ನೀರಿನಲ್ಲಿ<br>ಚೆದರಿದ ಕೊಬ್ಬು) |
| 6 | ದ್ರವ | ಅನಿಲ | ಏರೊಸಾಲ್ | ಮೋಡ (ಗಾಳಿಯಲ್ಲಿ<br>ಚೆದರಿದ ನೀರು) |
| 7 | ಅನಿಲ | ಘನ | ಘನ ನೊರೆ | ಸಮುದ್ರದ ನೊರೆ<br>ಪ್ಯೂಮಿಸ್ ಶಿಲೆ<br>(ಸಿಲಿಕೇಟುಗಳಲ್ಲಿ<br>ಚೆದರಿದ ಗಾಳಿ) |
| 8 | ಅನಿಲ | ದ್ರವ | ನೊರೆ | ಬುರುಗು (ನೀರಿನಲ್ಲಿ<br>ಚೆದರಿದ ಗಾಳಿ) |

ಆಧುನಿಕ ವರ್ಗೀಕರಣ ಬೇರೆಯಾಗಿದೆ. ಅದರ ಪ್ರಕಾರ ಮೂರು ನಮೂನೆಯ ಕಲಿಲಗಳನ್ನು ಪಡೆಯಲು ಸಾಧ್ಯ.

**(a) ಚೆದರಿದ (ಡಿಸ್ಪರ್ಷನ್) ಕಲಿಲಗಳು :** ವಸ್ತುರಾಶಿಯನ್ನು ಸೂಕ್ತ ವಿಧಾನದಿಂದ ಒಡೆದು ಕಲಿಲ ಸ್ಥಿತಿಗೆ ತರಬಹುದು. ಆಗ ಪ್ರತಿಯೊಂದು ವಿಲಂಬಿತ ಕಣದಲ್ಲೂ ಸಹಸ್ರಾರು ಅಣುಗಳು ಗೊಂಚಲುಗೂಡಿರುತ್ತವೆ. ಬಹುಪಾಲು ಇನ್‌ಆರ್ಗ್ಯಾನಿಕ್ ಕಲಿಲಗಳು ಈ ಜಾತಿಯವು. ಉದಾಹರಣೆಗೆ ಚಿನ್ನ, ಫೆರಿಕ್ ಹೈಡ್ರಾಕ್ಸೈಡ್, ಸಿಲಿಸಿಕಾಮ್ಲ ಇತ್ಯಾದಿ.

**(b) ಸಂಘಟಿತ (ಅಸೋಸಿಯೇಟೆಡ್) ಕಲಿಲಗಳು :** ಕೆಲವು ವಸ್ತುಗಳನ್ನು ನೀರಿನಲ್ಲಿ ವಿಲೀನ ಮಾಡಿದಾಗ ಸಹಜವಾಗಿಯೇ ಅದರಲ್ಲಿರುವ ಅಣುಗಳು ಅಥವಾ ಅಯಾನುಗಳು ಕಲಿಲ ಕಣಗಳಾಗುವುವು. ಇವಕ್ಕೆ ಮಿಸೆಲ್ ಎಂದು ಹೆಸರು. ಮಾಧ್ಯಮದಲ್ಲಿರುವ ಇತರ ಒಂಟಿ ಅಯಾನುಗಳ ಅಥವಾ ಅಣುಗಳ ಮತ್ತು ಈ ಮಿಸೆಲುಗಳ ನಡುವೆ ನಿರಂತರ ವಿನಿಮಯ ನಡೆಯುತ್ತಿದ್ದು ಸಮಸ್ಥಿತಿ ಏರ್ಪಟ್ಟಿರುತ್ತದೆ. ಬಣ್ಣಗಳು, ಮಾರ್ಜಕಗಳು ಮತ್ತು ಸಾಬೂನು ಈ ಗುಂಪಿಗೆ ಸೇರಿದ ಕಲಿಲಗಳು.

**(c) ಅಣು ಕಲಿಲಗಳು (ಮಾಲಿಕ್ಯುಲರ್ ಕಾಲಾಯ್ಡ್ಸ್) :** ಈ ವಸ್ತುಗಳ ಅಣುಗಳೇ ಸ್ವಯಂ ಕಲಿಲ ಗಾತ್ರದವು. ಅವು ಮಾಧ್ಯಮದ ಸಂಪರ್ಕಕ್ಕೆ ಬಂದ ಕ್ಷಣ ಕಲಿಲಗಳಾಗಿಬಿಡುವುವು. ಆಲ್ಬುಮಿನ್, ಜಿಲೆಟಿನ್ ಮೊದಲಾದ ಸಸಾರಜನಕಗಳು, ಪಿಷ್ಟ ಮತ್ತು ಗೋಂದು ಇದಕ್ಕೆ ಉತ್ತಮ ಉದಾಹರಣೆಗಳು.

ಮಾಧ್ಯಮಕ್ಕೂ ಚೆದರಿದ ವಸ್ತುವಿಗೂ ಇರಬಹುದಾದ ಒಲವಿನ ಆಧಾರದ ಮೇಲೂ ಕಲಿಲಗಳನ್ನು ವಿಂಗಡಿಸುವ ಪರಿಪಾಠವಿದೆ. ಮಾಧ್ಯಮವನ್ನು ಪ್ರೀತಿಸುವ ಕಲಿಲಗಳನ್ನು ಲೀನಕಾರಿಅಭಿಮಾನಿಗಳೆಂದೂ (ಲಯೊಫಿಲಿಕ್) ಉಳಿದವನ್ನು ಲೀನಕಾರಿದ್ವೇಷಿಗಳೆಂದೂ ವಿಭಾಗಿಸುವರು. ಸಾಮಾನ್ಯವಾಗಿ ಮಾಧ್ಯಮ ನೀರಾಗಿರುವ ಸಂದರ್ಭಗಳೇ ಹೆಚ್ಚು. ಹೀಗಾಗಿ ಜಲಾಭಿಮಾನಿ ಮತ್ತು ಜಲದ್ವೇಷಿ ಕಲಿಲಗಳೆಂಬ ವರ್ಗನಾಮಗಳೂ ಬಳಕೆಯಲ್ಲಿವೆ. ಈ ಎರಡು ಜಾತಿಯ ಕಲಿಲಗಳ ಗುಣಲಕ್ಷಣಗಳನ್ನು ಮುಂದೆ ವಿವೇಚಿಸಲಾಗುವುದು.

**ಕಲಿಲ ದ್ರಾವಣಗಳನ್ನು ತಯಾರಿಸುವ ಬಗೆ :** ಅಣುಸ್ಥಿತಿಗೂ ದೃಗ್ಗೋಚರ ವಸ್ತುಸ್ಥಿತಿಗೂ ನಡುವರ್ತಿ ಸ್ಥಿತಿ ಕಲಿಲವಾದ್ದರಿಂದ ಅಣುಗಳನ್ನು ಕಲೆಹಾಕಿಯಾಗಲೀ ವಸ್ತುರಾಶಿಯನ್ನು ವಿಭಜಿಸಿಯಾಗಲೀ ಕಲಿಲ ಗಾತ್ರವನ್ನು ತಲುಪಬಹುದು. ಮೊದಲನೆಯದು ಸಂಘಟನ ವಿಧಾನವೆನಿಸಿಕೊಂಡರೆ ಎರಡನೆಯದನ್ನು ವಿಭಜನ ವಿಧಾನವೆನ್ನಬಹುದು. ಈ ಎರಡು ರೀತಿಯ ತಯಾರಿಕಾತಂತ್ರಗಳೂ ರೂಢಿಯಲ್ಲಿವೆ.

**ಸಂಘಟನ ವಿಧಾನಗಳು :** 1 ಪರಸ್ಪರ ಪಲ್ಲಟನೆ: ಆರ್ಸೆನಿಕ್ ಟ್ರೈಸಲ್ಫೈಡ್ ಸಾಲ್ ತಯಾರಿಸುವುದು ಹೀಗೆಯೇ. ಅರ್ಧ ಗ್ರಾಂನಷ್ಟು ನುಣ್ಣಗೆ ಪುಡಿ ಮಾಡಿದ ಆರ್ಸೆನಿಯಸ್ ಆಕ್ಸೈಡನ್ನು (As203) ಅರ್ಧ ಲೀಟರ್ ಬಟ್ಟಿ ಇಳಿಸಿದ ನೀರಿಗೆ ಸೇರಿಸಿ ಅದು ಲೀನವಾಗುವ ತನಕ ಕುದಿಸಬೇಕು. ಅನಂತರ ದ್ರಾವಣವನ್ನು ತಣಿಸಿ ಅದರ ಮೂಲಕ ಆಮ್ಲದ ತುಂತುರುಗಳಿಲ್ಲದ ಪರಿಶುದ್ಧವಾದ ಹೈಡ್ರೊಜನ್ ಸಲ್ಫೈಡನ್ನು ದಟ್ಟಹಳದಿ ಬಣ್ಣ ಉಂಟಾಗುವವರೆಗೂ ಹಾಯಿಸಬೇಕು. ಈಗ ಅರ್ಧ ತಾಸಿನವರೆಗೆ ಶುದ್ಧವಾದ ಹೈಡ್ರೊಜನ್ ಅಥವಾ ಇಂಗಾಲದ ಡೈಆಕ್ಸೈಡನ್ನು ಹಾಯಿಸಿದರೆ ದ್ರಾವಣದಲ್ಲಿ ಅಡಗಿರಬಹುದಾದ ಹೆಚ್ಚುವರಿ ಹೈಡ್ರೊಜನ್ ಸಲ್ಫೈಡ್ ಹೊರದೂಡಲ್ಪಡುತ್ತದೆ. ಇಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯನ್ನು ಮುಂದಿನ ಸಮೀಕರಣ ಸೂಚಿಸುತ್ತದೆ :

$$As_20_3\,3H_2S \rightarrow As_2S + 3H_20$$

ಆಮೇಲೆ ಶೋಧಿಸಿದರೆ ಬರುವ ಶೋಧಿತ ದ್ರವವೇ ಆರ್ಸೆನಿಕ್ ಟ್ರೈಸಲ್ಫೈಡ್ ಸಾಲ್. ಇದೇ ರೀತಿ ಪ್ರಷ್ಯನ್ ನೀಲಿ ಕಲಿಲ ದ್ರಾವಣವನ್ನು ಮಾಡಿಕೊಳ್ಳಬಹುದು. ಫೆರಿಕ್ ಕ್ಲೋರೈಡ್ ಮತ್ತು ಪೊಟಾಸಿಯಂ ಫೆರೊಸಯನೈಡುಗಳ ಬಲು ದುರ್ಬಲ ದ್ರಾವಣಗಳನ್ನು ಮಿಶ್ರಮಾಡುವುದರಿಂದ ಇದು ಲಭಿಸುತ್ತದೆ.

$$3K\ \ Fe(CN)_6 + 4FeCl_3 \rightarrow Fe_4(CN)_6]_3 + 12KCl$$

ಪ್ರಷ್ಯನ್ ನೀಲಿ

**2. ಜಲವಿಶ್ಲೇಷಣೆ :** 12 ಮಿಲಿಲೀಟರಿನಷ್ಟು ಶೇ.32 ಫೆರಿಕ್ ಕ್ಲೋರೈಡಿನ ದ್ರಾವಣವನ್ನು ಮುಕ್ಕಾಲು ಲೀಟರು ಕುದಿಯುವ ನೀರಿಗೆ ತೊಟ್ಟು ತೊಟ್ಟಾಗಿ ಸೇರಿಸಿದಾಗ ಸೊಗಸಾದ ಕೆಂಪುಬಣ್ಣದ ಫೆರಿಕ್ ಹೈಡ್ರಾಕ್ಸೈಡ್ ಸಾಲ್ ಬರುವುದು.

$$F_eCl_3 + 3H_20 \rightarrow Fe(OH)_3\,3HCl$$

ಸೋಡಿಯಂ ಸಿಲಿಕೇಟನ್ನು ಜಲವಿಶ್ಲೇಷಿಸಿ ಸಿಲಿಸಿಕಾಮ್ಲದ ಸಾಲ್ ತಯಾರಿಸಬಹುದು. ಮಾರುಕಟ್ಟೆಯಲ್ಲಿ ದೊರೆಯುವ ನೀರ್ಗಾಜಿಗೆ (ವಾಟರ್ ಗ್ಲಾಸ್) ನೀರು ಬೆರೆಸಿ 1.14 ಸಾಪೇಕ್ಷಸಾಂದ್ರತೆಯುಳ್ಳ ದ್ರವಮಾಡಿಕೊಳ್ಳಬೇಕು. ಇದಕ್ಕೆ 4(N)–ಪ್ರಬಲತೆಯ ಹೈಡ್ರೊಕ್ಲೋರಿಕ್ ಆಮ್ಲವನ್ನು ಸತತವೂ ಕಲಕುತ್ತ ಸೇರಿಸಬೇಕು. ಹೆಚ್ಚುವರಿ ಆಮ್ಲ ಉಳಿಯುವ ತನಕ ಹೀಗೆ ಮಾಡಿದರೆ ಸಿಲಿಸಿಕಾಮ್ಲದ ಸಾಲ್ ದೊರೆಯುವುದು.

$$Na_2\ SiO_3 + 2HCl \rightarrow sNaCl + H_2SiO_3$$

ಕಲಿಲವನ್ನು ಶುದ್ಧಿಮಾಡುವ ಮುನ್ನ ನೀರು ಸೇರಿಸಿ ದ್ರಾವಣದ ಗಾತ್ರವನ್ನು ಎರಡು ಪಟ್ಟು ಹೆಚ್ಚಿಸುವುದು ಉತ್ತಮ.

**3 ಅಪಕರ್ಷಣ :** ಚಿನ್ನ, ಬೆಳ್ಳಿ, ಪ್ಲ್ಯಾಟಿನಂ, ಸೀಸ ಮೊದಲಾದ ಲೋಹ ಲವಣಗಳ ದುರ್ಬಲ ದ್ರಾವಣಗಳನ್ನು ಫಾರ್ಮಾಲ್ಡಿಹೈಡ್, ಟ್ಯಾನಿಕ್ ಆಮ್ಲ ಇತ್ಯಾದಿ ಆರ್ಗ್ಯಾನಿಕ್ ವಸ್ತುಗಳಿಂದ ಅಪಕರ್ಷಿಸಿದಾಗ ಆಯಾ ಲೋಹದ ಸಾಲ್‌ಗಳು ದೊರೆಯುತ್ತವೆ. ಸಿಲ್ವರ್ ನೈಟ್ರೇಟಿನ ಅಮೋನಿಯಾ ದ್ರಾವಣವನ್ನು ಟ್ಯಾನಿಕ್ ಆಮ್ಲದಿಂದ ಅಪಕರ್ಷಿಸಿ ಬೆಳ್ಳಿಯ ಸಾಲ್ ಪಡೆಯಬಹುದು. ಚಿನ್ನದ ಕೆಂಪು ಕಲಿಲ ದ್ರಾವಣ ತಯಾರಿಸುವ ಜಿಗ್ಮಾಂಡಿ ವಿಧಾನ ಇಂತಿದೆ. 3 ಮಿಲಿಗ್ರಾಂ ಚಿನ್ನದ ಕ್ಲೋರೈಡ್ $(HAuCl_4\ 3H_2O)$ ಮತ್ತು 7.4 ಮಿಲಿಗ್ರಾಂ ಪೊಟಾಸಿಯಂ ಕಾರ್ಬೊನೇಟನ್ನು ಬಟ್ಟಿ ಇಳಿಸಿದ 25 ಮಿಲಿಲೀಟರ್ ನೀರಿನಲ್ಲಿ ವಿಲೀನಮಾಡಬೇಕು. ಬಿಳಿಯ ರಂಜಕವನ್ನು ಈಥರಿನಲ್ಲಿ ವಿಲೀನಗೊಳಿಸಿ ಅದರ ದುರ್ಬಲ ದ್ರಾವಣವನ್ನು ತೊಟ್ಟು ತೊಟ್ಟಾಗಿ ದಟ್ಟವಾದ ಕೆಂಪು ಬಣ್ಣ ಪ್ರಾಪ್ತವಾಗುವವರೆಗೂ ಸೇರಿಸುತ್ತ ಬರಬೇಕು. ಅದೇ ಚಿನ್ನದ ಕಲಿಲ. ಇದಕ್ಕೆ ಉಪ್ಪಿನ ದುರ್ಬಲ ದ್ರಾವಣವನ್ನು ತೊಟ್ಟುತೊಟ್ಟಾಗಿ ಸೇರಿಸುತ್ತ ಬಂದರೆ ನೀಲಿ ಕಲಿಲ ಆಗುವುದು. ಬಣ್ಣ ಬದಲಾವಣೆಗೆ ಕಣಗಳ ಗಾತ್ರವರ್ಧನೆಯೇ ಕಾರಣ.

**4. ಉತ್ಕರ್ಷಣ :** ಶುದ್ಧ ಹೈಡ್ರೊಜನ್ ಸಲ್ಫೈಡನ್ನು ಬ್ರೋಮಿನ್ ದ್ರಾವಣ, ನೈಟ್ರಿಕಾಮ್ಲ, ಸಲ್ಫ್ಯೂರಸಾಮ್ಲ ಮುಂತಾದ ಉತ್ಕರ್ಷಣಕಾರಿಗಳ ಮೂಲಕ ಹಾಯಿಸಿದರೆ ಗಂಧಕದ ಬಿಳಿಯ ಕಲಿಲ ಉಂಟಾಗುವುದು.

$$H_2S + Br_2 \rightarrow 2HBr + S$$

**5. ಲೀನಕಾರಿ ವಿನಿಮಯ :** ಗಂಧಕ ಮತ್ತು ರಂಜಕಗಳು ಆಲ್ಕೊಹಾಲಿನಲ್ಲಿ ದ್ರಾವ್ಯ. ಈ ವಸ್ತುಗಳ ಆಲ್ಕೊಹಾಲಿನ ದ್ರಾವಣವನ್ನು ನೀರಿಗೆ ಬೆರೆಸಿದಾಗ ಕೂಡಲೇ ಅವು ಕಲಿಲಸ್ಥಿತಿ ಮುಟ್ಟುವುವು.

**6. ಭೌತ ಸ್ಥಿತ್ಯಂತರ :** ಪಾದರಸ, ಗಂಧಕ ಇತ್ಯಾದಿ ಮೂಲ ವಸ್ತುಗಳ ಆವಿಯನ್ನು ಅಮೋನಿಯಂ ಲವಣ ಅಥವಾ ಒಂದು ಸಿಟ್ರೇಟ್ ಉಳ್ಳ ತಣ್ಣೀರಿನ ಮೂಲಕ ಹಾಯಿಸಿದರೆ ಕೂಡಲೇ ಆಯಾ ಮೂಲವಸ್ತುಗಳ ಕಲಿಲಗಳು ಉಂಟಾಗುತ್ತವೆ.



**ಚಿತ್ರ 1**

**ವಿಭಜನ ವಿಧಾನಗಳು.** 1 ಯಾಂತ್ರಿಕ ವಿಭಜನೆ: ಚೆದರಿಸಬೇಕಾದ ವಸ್ತುವನ್ನು ಸಾಧ್ಯವಾದಷ್ಟು ನಯವಾಗಿ ಹುಡಿಮಾಡಿ ಅಪೇಕ್ಷಿತ ದ್ರವಮಾಧ್ಯಮದೊಡನೆ ಕದಡಲಾಗುವುದು. ಆಗ ಒರಟು ಮುದ್ದಿಯುಂಟಾಗುವುದು. ಇದನ್ನು ಕಲಿಲ ಗಿರಣಿಯಲ್ಲಿ ಅರೆಯುವುದು ಮುಂದಿನ ಹಂತ. ಬಳಕೆಯಲ್ಲಿರುವ ಗಿರಣಿಗಳ ಪೈಕಿ ಸರಳ ರಚನೆಯದೆಂದರೆ ತಟ್ಟೆಗಿರಣಿ. ಅದನ್ನು ಚಿತ್ರ 1 ರಲ್ಲಿ ಕಾಣಬಹುದು. ಎರಡು ಉಕ್ಕಿನ ತಟ್ಟೆಗಳು ಪರಸ್ಪರ

ಹೊಂದಿಕೊಂಡಂತಿದ್ದು ಅವುಗಳ ನಡುವೆ ಕೊಂಚ ಅಂತರವಿರುವುದು. ಎರಡು ತಟ್ಟೆಗಳೂ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಬಹುವೇಗವಾಗಿ ಅಂದರೆ ಒಂದು ಮಿನಿಟಿಗೆ ಸುಮಾರು 7,000 ಸಾರಿ ಸುತ್ತುತ್ತಿರುವುವು. ಇವುಗಳ ನಡುವೆ ಸಿಕ್ಕಿಬಿದ್ದ ಒರಟು ಮಡ್ಡಿ ಚೆನ್ನಾಗಿ ಅರೆಯಲ್ಪಟ್ಟು ಕಲಿಲ ಗಾತ್ರ ತಲುಪಿ ಪಕ್ಕದಲ್ಲೇ ಹೊರ ಬೀಳುವುದು. ಅರ‍್ಯಾಬಿಕ್ ಗೋಂದನ್ನು ದೀಪದ ಮಸಿಯೊಡನೆ ನೀರಿನಲ್ಲಿ ಈ ರೀತಿ ಅರೆದು ಇಂಡಿಯನ್ ಶಾಯಿಯನ್ನು ತಯಾರಿಸುತ್ತಾರೆ. ಗ್ರಾಫೈಟನ್ನು ಟ್ಯಾನಿನ್ ಜೊತೆ ನೀರಿನಲ್ಲಿ ಹೀಗೆ ಅರೆದರೆ ಅಕ್ವಾಡ್ಯಾಗ್ ಎಂಬ ಕೀಲೆಣ್ಣೆಯುಂಟಾಗುವುದು.




ಚಿತ್ರ 2

**2 ವಿದ್ಯುದ್ವಿಭಜನೆ :** ಇದಕ್ಕೆ ಬ್ರೆಡಿಗ್ ವಿಧಾನವೆಂದು ಹೆಸರು. ಯಾವ ಲೋಹವನ್ನು ಕಲಿಲಸ್ಥಿತಿಗೆ ತರಬೇಕೋ ಅದನ್ನು ಎರಡು ಧ್ರುವಗಳಾಗಿ ಮಾಡಿ ಅವುಗಳ ನಡುವೆ ದ್ರವಮಾಧ್ಯಮದ ಅಡಿಯಲ್ಲಿ (ಸಾಮಾನ್ಯವಾಗಿ ನೀರು) ಪ್ರಬಲ ವಿದ್ಯುತ್ಕಿಡಿ ಹಾಯಿಸಲಾಗುವುದು. ಆಗ ಹುಟ್ಟುವ ಅಗಾಧ ಉಷ್ಣ ಲೋಹವನ್ನು ಆವಿಯಾಗಿಸುವುದು. ಸುತ್ತಲೂ ಇಟ್ಟಿರುವ ಮಂಜುಗೆಡ್ಡೆ ಇದನ್ನು ಕೂಡಲೇ ತಣಿಸಿ ಕಲಿಲಸ್ಥಿತಿಗೆ ಒಯ್ಯುವುದು.

ಮಾಧ್ಯಮಕ್ಕೆ ಕೊಂಚ ಪೊಟಾಸಿಯಂ ಹೈಡ್ರಾಕ್ಸೈಡ್ ಸೇರಿಸಿದರೆ ಕಲಿಲಕ್ಕೆ ರಕ್ಷಣೆ ಒದಗುವುದು. ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತು ತಾಮ್ರದ ಕಲಿಲಗಳನ್ನು ಹೀಗೆ ಪಡೆಯಬಹುದು. ವಿಲಂಬನ ಮಾಧ್ಯಮವೇನಾದರೂ ಆರ್ಗ್ಯಾನಿಕ್ ದ್ರವವಾಗಿದ್ದರೆ ವಿಪರೀತ ಮಸಿಗೂಡುವುದರಿಂದ ಈ ವಿಧಾನ ಅಸಮರ್ಪಕ. ಸುಧಾರಿತ ಸ್ವೆಡ್‍ಬರ್ಗ್ ವಿಧಾನದಲ್ಲಿ ಪರ್ಯಾಯ ವಿದ್ಯುತ್ತನ್ನು ಬಳಸುವುದರಿಂದ ಹೀಗಾಗುವುದಿಲ್ಲ. ತಾಮ್ರದ ಕಲಿಲವನ್ನು ತಯಾರಿಸಲು ಈ ವಿಧಾನ ಬಲು ಅನುಕೂಲ. ತಾತ್ತ್ವಿಕವಾಗಿ ಇದನ್ನು ಪರಮಾಣು ಸಂಘಟನೆಯೆನ್ನಬಹುದು. ಧ್ರುವಗಳಿಂದ ಆವಿಯಾದ ಲೋಹದ ಪರಮಾಣುಗಳು ಕಲೆತು ಕಲಿಲ ಕಣಗಳಾಗುವುದರಿಂದ ಇದೂ ಒಂದು ಸಂಘಟನ ವಿಧಾನವೇ. ಆದರೆ ನಾವು ವಸ್ತುರಾಶಿಯಿಂದ ಪ್ರಾರಂಭಿಸಿ ಕಲಿಲ ಮಾಡಿಕೊಂಡಿರುವುದರಿಂದ ವಿಭಜನೆಯಾದಂತೆ ಭಾವಿಸಬಹುದು.

**3. ಪೆಪ್ಟೈಸೇಷನ್ :** ಆಗ ತಾನೆ ಒತ್ತರಿಸಿದ ವಸ್ತುವನ್ನು, ಸೂಕ್ತ ಎಲೆಕ್ಟ್ರೊಲೈಟುಗಳನ್ನು ಸೇರಿಸುವುದರಿಂದ, ಪುನಃ ಕಲಿಲಸ್ಥಿತಿಗೆ ತರುವ ಕ್ರಮವಿದು. ಎಲೆಕ್ಟ್ರೊಲೈಟು ಒದಗಿಸಿದ ಅಯಾನುಗಳು, ಒತ್ತರಿಸಿದ ವಸ್ತುವಿನಲ್ಲಿರುವ ಸೂಕ್ಷ್ಮಕಣಗಳ ಮೇಲೆ, ಸಂಗ್ರಹಿಸುವುದರಿಂದ ಅವುಗಳ ಎಲ್ಲೆವಿಭವ (ಬೌಂಡರಿ ಪೊಟೆನ್ಷಿಯಲ್) ಹೆಚ್ಚಿ ಕಲಿಲಗಳಾಗುವುವು. ಉದಾಹರಣೆಗೆ ಚೆನ್ನಾಗಿ ತೊಳೆದ ಫೆರಿಕ್ ಹೈಡ್ರಾಕ್ಸೈಡ್ ಒತ್ತಡವನ್ನು ಫೆರಿಕ್ ಕ್ಲೋರೈಡ್ ದ್ರಾವಣದಲ್ಲಿರುವ ಫೆರಿಕ್ ಅಯಾನುಗಳು ಪೆಪ್ಟೈಸ್ ಮಾಡಬಲ್ಲವು.

$$Fe(OH)_3 + Fe^3 \rightarrow Fe(OH)_3 \cdot Fe^3 +$$

ಒತ್ತರ ಫೆರಿಕ್ ಕಲಿಲಕಣ

ಅಯಾನ್

ಪ್ರಷ್ಯನ್ ನೀಲಿ ಒತ್ತರಕ್ಕೆ ಆಕ್ಸಾಲಿಕ್ ಆಮ್ಲವನ್ನು ಸೇರಿಸಿ ಅದನ್ನು ಕಲಿಲಸ್ಥಿತಿಗೆ ತರಬಹುದು.




ಚಿತ್ರ 3

**ಕಲಿಲಗಳ ಶುದ್ಧೀಕರಣ :** ರಾಸಾಯನಿಕ ವಿಧಾನಗಳಿಂದ ತಯಾರಿಸಿದ ಕಲಿಲಗಳಲ್ಲಿ ಅಧಿಕಪ್ರಮಾಣದಲ್ಲಿ ಎಲೆಕ್ಟ್ರೋಲೈಟುಗಳು ಉಳಿದುಬಿಡುವುದು ಅನಿವಾರ್ಯವಾಗುತ್ತದೆ. ಕಲಿಲಸ್ಥಿತಿ ಮುಂದುವರಿಯಲು ಸ್ವಲ್ಪ ಎಲೆಕ್ಟ್ರೊಲೈಟ್ ಅಗತ್ಯವೆಂಬುದು ನಿಜ. ಆದರೆ ಹೆಚ್ಚುವರಿಯಾದ ಎಲೆಕ್ಟ್ರೊಲೈಟನ್ನು ಮಾಧ್ಯಮದಿಂದ ಹೊರಹಾಕದಿದ್ದರೆ ಕಲಿಲ ಒತ್ತರಿಸುವುದು ಖಂಡಿತ. ಆದ್ದರಿಂದ ಕಲಿಲ ದ್ರಾವಣದಲ್ಲಿರುವ ಎಲೆಕ್ಟ್ರೊಲೈಟಿನ ಪ್ರಾಬಲ್ಯವನ್ನು ಅಪೇಕ್ಷಿತ ಮಟ್ಟಕ್ಕೆ ಇಳಿಸಲು ಮೂರು ಮಾರ್ಗಗಳಿವೆ. ಮೊದಲನೆಯ ವಿಧಾನಕ್ಕೆ ಡಯಾಲಿಸಿಸ್ ಎಂದು ಹೆಸರು.

ಚಿತ್ರದಲ್ಲಿ ತೋರಿಸಿರುವಂತೆ ಅಶುದ್ಧ ಕಲಿಲ ದ್ರಾವಣವನ್ನು ಒಂದು ಪಾರ್ಚ್‍ಮೆಂಟ್ ಅಥವಾ ಸೆಲೊಫೇನ್ ಚೀಲದಲ್ಲಿ ಹಾಕಿ ನೀರು ಹರಿಯುತ್ತಿರುವ ತೊಟ್ಟಿಯೊಂದರಲ್ಲಿ ಇಡಲಾಗುವುದು. ಎಲೆಕ್ಟ್ರೊಲೈಟಿನ ಅಯಾನುಗಳೂ ಅಣುಗಳೂ ಅರೆಪಾರಗಮ್ಯ (ಸೆಮಿಪರ್ಮಿಯೆಬಲ್) ಪೊರೆಯ ರಂಧ್ರಗಳ ಮೂಲಕ ಹಾದು ಹೊರಬರುವುವು. ಬಂದೊಡನೆ ಅವು ನೀರಿನೊಡನೆ ಕೊಚ್ಚಿ ಹೋಗುವುವು. ದೊಡ್ಡದಾದ ಕಲಿಲ ಕಣಗಳು ಚೀಲದಲ್ಲೇ ಉಳಿಯುವುವು. ಬಿಸಿನೀರನ್ನು ಬಳಸಿ ಎಲೆಕ್ಟ್ರೊಲೈಟಿನ ನಿರ್ಗಮನವನ್ನು ತ್ವರೆಗೊಳಿಸಬಹುದು. ವಿದ್ಯುದ್ವಾಹಕ ಧ್ರುವಗಳನ್ನು ಹೊರ ಆವರಣದಲ್ಲಿರುವ ನೀರಿನಲ್ಲಿ ಇಡುವುದರಿಂದ ಈ ಶುದ್ಧೀಕರಣ ಇನ್ನೂ ಪೂರ್ಣ ಪ್ರಮಾಣದಲ್ಲಿ ನಡೆಯುತ್ತದೆ.

ಎರಡನೆಯ ವಿಧಾನವೇ ಅತಿಸೋಸಿಕೆ (ಅಲ್ಟ್ರಾಫಿಲ್ಟ್ರೇಷನ್). ಸಾಮಾನ್ಯ ದರ್ಜೆಯ ಸೋಸುಕಾಗದದಲ್ಲಿರುವ ರಂಧ್ರಗಳು ಕಲಿಲ ಕಣಗಳೂ ಹಾದು ಹೋಗಬಹುದಾದಷ್ಟು ದೊಡ್ಡವಾಗಿರುತ್ತವೆ. ಸೋಸುಕಾಗದಕ್ಕೆ ಸಿಡಿಹತ್ತಿಯ ದ್ರವವನ್ನು (ಕಾಟೊಡೈಯನ್) ಲೇಪಿಸಿದಾಗ ರಂಧ್ರಗಾತ್ರ ಕಡಿಮೆಯಾಗುವುದು. ಇಂಥ ವಿಶೇಷ ಸೋಸುಕಾಗದಗಳಿಗೆ ಅತಿಸೋಸಕಗಳು ಎಂದು ಹೆಸರು. ಇವುಗಳ ಮೂಲಕ ಅಶುದ್ಧ ಕಲಿಲದ್ರಾವಣವನ್ನು ಸೋಸಿದಾಗ ವಿಲಂಬಿತವಸ್ತು ಮಾತ್ರ ಕಾಗದದ ಮೇಲೆಯೇ ಉಳಿಯುವುದು. ಅದನ್ನು ಬೇರ್ಪಡಿಸಿ ಮತ್ತೆ ನೀರಿಗೆ ಹಾಕಿದರೆ ಸುಲಭವಾಗಿ ಕಲಿಲದ್ರಾವಣವಾಗುವುದು. ಅತಿಕೇಂದ್ರಾಪಗಮನ ವಿಧಿ (ಅಲ್ಟ್ರಾಸೆಂಟ್ರಿ ಫ್ಯೂಜಿಂಗ್) ಮೂರನೆಯದು. ಕಲಿಲ ದ್ರಾವಣದಲ್ಲಿರುವ ಕಣಗಳು ಸದಾ ಓಡಾಡುತ್ತಿರುವುವು ಎಂಬುದು ಮುಂದೆ ಗೊತ್ತಾಗುವುದು. ಅವು ತಳವೂರದಿರಲು ಇದೂ ಒಂದು ಕಾರಣ. ಒಂದು ಮಿನಿಟಿಗೆ ಸುಮಾರು 15,000 ಸಾರಿ ಸುತ್ತುವ ಕೇಂದ್ರಾಪಗಮನ ಯಂತ್ರದಲ್ಲಿ ಕಲಿಲವನ್ನಿಟ್ಟು ತಿರುಗಿಸಿದರೆ ವಿಲಂಬಿತ ಕಣಗಳು ಜಾಗ್ರತೆಯಾಗಿ ತಳಹಿಡಿಯುವುವು. ಇದರಿಂದ ದೊರೆತ ಲೋಳೆಯನ್ನು ನೀರಿನಲ್ಲಿ ಕದಡಿದ ಕೂಡಲೇ ಕಲಿಲದ್ರಾವಣ ಪುನರವತರಿಸುತ್ತದೆ.

**ಕಲಿಲ ದ್ರಾವಣಗಳ ಗುಣಲಕ್ಷಣಗಳು : ಸಾಮಾನ್ಯ ಲಕ್ಷಣಗಳು**

**1. ವಿಷಯಾಂಗಿತ್ವ (ಹೆಟರೋಜಿನೈಟಿ) :** ನೈಜದ್ರಾಣದಲ್ಲಿರುವ ಕಣಗಳು ಅಣುಗಾತ್ರದವು. ಆದ್ದರಿಂದ ಅವು ಸಮಾಂಗಿಗಳಾಗಿ ತೋರುವುದು ಸಹಜ. ಕಲಿಲ ಕಣಗಳು ದೊಡ್ಡವಾದ್ದರಿಂದ ವಿಷಮಾಂಗಿ ಮಿಶ್ರಣವನ್ನು ಕೊಡುವುವು. ನೀರಿನಲ್ಲಿ ವಿಲಂಬಿತ ಚಿನ್ನದ ಕಲಿಲ ಕಣಗಳಿಗೆ ಸ್ಫಟಿಕ ರಚನೆಯಿರುವುದು ಎಕ್ಸ್‌ಕಿರಣಗಳ ಪರೀಕ್ಷೆಯಿಂದ ಗೊತ್ತಾಗಿದೆ. ಹೀಗಿದ್ದರೂ ಕಲಿಲ ದ್ರಾವಣಗಳು ಸಮಾಂಗಿಗಳೇ ವಿಷಮಾಂಗಿಗಳೇ ಎಂದು ತತ್ ಕ್ಷಣ ಹೇಳಲು ಬರುವುದಿಲ್ಲ.

**2 ತಳವೂರದಿರುವಿಕೆ :** ಕಲಿಲ ಕಣಗಳು ಚೆದರಿದ ಸ್ಥಿತಿಯಲ್ಲಿ ಅನಿರ್ದಿಷ್ಟ ಕಾಲ ಇರಬಲ್ಲವು. ಆದ್ದರಿಂದ ಕಲಿಲ ದ್ರಾವಣಗಳು ಸ್ಥಿರಮಿಶ್ರಣಗಳು. ಉದಾಹರಣೆಗೆ 1857ರಲ್ಲಿ ಮೈಕೇಲ್ ಫ್ಯಾರಡೆ ತಯಾರಿಸಿದ ಚಿನ್ನದ ಕಲಿಲ ದ್ರಾವಣ ಸ್ಥಿರವಾಗಿರುವುದನ್ನು ಇಂದಿಗೂ ಲಂಡನ್ನಿನ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು.

**3 ಆಸ್ಮಾಟಿಕ್ ಒತ್ತಡ :** ನೈಜದ್ರಾವಣಗಳಂತೆ ಕಲಿಲದ್ರಾವಣಗಳಿಗೂ ಅಣುಸಂಖ್ಯಾ (ಕಾಲಿಗೇಟಿವ್) ಗುಣಗಳುಂಟು. ಸುಮಾರು ಸಾವಿರ ಅಣುಗಳ ಕೂಡಿ ಒಂದು ಕಲಿಲ ಕಣವಾಗುವುದೆಂದು ಲೆಕ್ಕ ಹಿಡಿಯಬಹುದು. ಅಂದರೆ ಕಲಿಲ ದ್ರಾವಣಗಳಲ್ಲಿರುವ ಕಣಗಳ ಸಂಖ್ಯೆ ಕಡಿಮೆ ಎಂದಾಯಿತು. ಆಸ್ಮಾಟಿಕ್ ಒತ್ತಡ ಸಂಖ್ಯಾಪ್ರಧಾನ ಗುಣವಾದ್ದರಿಂದ ಕಲಿಲ ದ್ರಾವಣಗಳ ಆಸ್ಮಾಟಿಕ್ ಒತ್ತಡ ಗಣನೀಯವಾಗಿರುವುದಿಲ್ಲ. ಅದನ್ನು ಅಳೆಯುವುದೂ ಸುಲಭ. ಇದರ ಆಧಾರದ ಮೇಲೆ ಒಂದು ದ್ರಾವಣದಲ್ಲಿರುವ ಕಲಿಲ ಕಣಗಳ ಸರಾಸರಿ ತೂಕವನ್ನು ಗಣಿಸಬಹುದು. ಪಿಷ್ಟದ ಕಲಿಲದ್ರಾವಣದಲ್ಲಿರುವ ಕಣಗಳ ಸರಾಸರಿ ತೂಕ 32,000 ಪರಮಾಣು ತೂಕಮಾನಗಳೆಂದು ನಿರ್ಣಯಿಸಿರುವುದು ಹೀಗೆಯೇ.

**4. ಸೋಸಿಕೆಯ ಸಾಧ್ಯತೆ (ಫಿಲ್ಟ್ರಬಿಲಿಟಿ) :** ಸಾಮಾನ್ಯ ದರ್ಜೆಯ ಸೋಸುಕಾಗದದ ಮೂಲಕ ಕಲಿಲ ಕಣಗಳು ಹಾದುಹೋಗುವುದರಿಂದ ಅತಿಸೋಸಿಕಗಳ ಆವಶ್ಯಕತೆ ಬೀಳುತ್ತದೆ. ಮೆರುಗುಕೊಡದ ಪಿಂಗಾಣಿ ಉತ್ತಮ ಅತಿಸೋಸಕ ಎನಿಸಿಕೊಂಡಿದೆ.

**ದರ್ಶನೀಯ ಲಕ್ಷಣಗಳು–ಟಿಂಡಾಲ್ ಪರಿಣಾಮ :** ಕತ್ತಲು ಕೋಣೆಯಲ್ಲಿ ಇಟ್ಟಿರುವ ನೈಜ ದ್ರಾವಣದ ಮೂಲಕ ಕಿರಣಜಾಲವನ್ನು ಹಾಯಿಸಿ ಅದೇ ದಿಕ್ಕಿನಲ್ಲಿ ವೀಕ್ಷಿಸಿದಾಗ ದ್ರಾವಣ ಸ್ವಚ್ಛವಾಗಿಯೂ ಸಮಕೋನದಿಕ್ಕಿನಲ್ಲಿ ನೋಡಿದಾಗ ಮಬ್ಬಾಗಿಯೂ ಕಾಣುವುದು. ಅದೇ ಕಲಿಲ ದ್ರಾವಣವಾದರೆ ಸಮಕೋನ ದಿಸೆಯಿಂದ ನೋಡಿದಾಗ ಕಿರಣಜಾಲದ ಹಾದಿ ನೀಲಿಯ ಶಂಕುವಿನಂತೆ ವ್ಯಕ್ತವಾಗುವುದು. ಕಲಿಲ ಕಣಗಳಿಗೆ ಬೆಳಕನ್ನು ಚದರಿಸುವ

ಗುಣವಿರುವುದೇ ಹೀಗಾಗಲು ಕಾರಣ ಚಿತ್ರದಲ್ಲಿ. ಈ ಪರಿಣಾಮವನ್ನು ಮೊದಲು ಗಮನಿಸಿದವನು ಫ್ಯಾರಡೆ. ಅನಂತರ ಕೂಲಂಕಷವಾಗಿ ಅಭ್ಯಸಿಸಿದವನು ಟಿಂಡಾಲ್. ಆದ್ದರಿಂದ ಇದಕ್ಕೆ ಟಿಂಡಾಲ್ ಪರಿಣಾಮ ಎಂದು ಹೆಸರಾಗಿದೆ. ನೈಜ ದ್ರಾವಣ ಟಿಂಡಾಲ್ ಪರಿಣಾಮವನ್ನು ಪ್ರದರ್ಶಿಸುವುದಿಲ್ಲ. ಅದು ಪ್ರಭಾಶೂನ್ಯವಾಗಿದೆ (ಆಪ್ಟಿಕಲಿ) ಎನ್ನುವರು. ಇದಕ್ಕೊಂದು ಸಾಮಾನ್ಯ ಉದಾಹರಣೆಯನ್ನು ನೀಡಬಹುದು.


ಚಿತ್ರ 4

ಚಲನಚಿತ್ರಮಂದಿರಗಳಲ್ಲಿರುವ ಗಾಳಿ ಪರಿಶುದ್ಧವಾಗಿರುವುದು ವಿರಳ. ಅದರಲ್ಲಿ ದೂಳು ಮತ್ತು ಹೊಗೆ ಸೇರಿಯೇ ಇರುತ್ತವೆ. ಅದರಲ್ಲಿರುವ ಕಲಿಲ ಕಣಗಳು ಚಿತ್ರ ಬೀರುವ ಕಿರಣಜಾಲವನ್ನು ನೀಲಿಯ ರಿಬ್ಬನ್ನಿನಂತೆ ಕಾಣುವ ಹಾಗೆ ಮಾಡುವುವು. ದೂಳಿಟ್ಟಿಸಿದ ಕೋಣೆಯೊಂದರ ಕಿಟಕಿಯಿಂದ ತೂರಿ ಬಂದ ಬಿಸಿಲುಕೋಲು ನೀಲಿಯ ಪಟ್ಟಿಯಂತೆ ಕಾಣಲೂ ಇದೇ ಕಾರಣ. ಟಿಂಡಾಲ್ ಪರಿಣಾಮ ಮೂಡಲು ಎರಡು ನಿಬಂಧನೆಗಳಿವೆ. (1) ವಿಲಂಬಿತ ಕಣಗಳ ವ್ಯಾಸಕ್ಕೂ ಉಪಯೋಗಿಸಿದ ಬೆಳಕಿನ ತರಂಗದೂರಕ್ಕೂ ಹೆಚ್ಚು ಅಂತರವಿರಬಾರದು. (2) ವಿಲಂಬಿತ ವಸ್ತು ಮತ್ತು ಮಾಧ್ಯಮಗಳ ವಕ್ರೀಭವನಾಂಕಗಳಲ್ಲಿ ಗಣನೀಯ ವ್ಯತ್ಯಾಸವಿರಬೇಕು. ಲೀನಕಾರಿದ್ವೇಷಿ ಕಲಿಲಗಳು ಈ ನಿಯಮವನ್ನು ಪಾಲಿಸುತ್ತವೆ.

ಟಿಂಡಾಲ್ ಪರಿಣಾಮಕ್ಕೆ ಕೈಗಾರಿಕೆಯಲ್ಲಿ ಮಹತ್ತ್ವವಿದೆ. ಸಂಪರ್ಕ ವಿಧಾನದಿಂದ ಸಲ್ಫ್ಯೂರಿಕ್ ಆಮ್ಲವನ್ನು ತಯಾರಿಸಬಹುದಷ್ಟೆ ಅಲ್ಲಿ ಉಪಯೋಗಿಸುವ ಸಲ್ಫರ್ ಡೈಆಕ್ಸೈಡ್ ಮತ್ತು ಗಾಳಿಯ ಮಿಶ್ರಣದಲ್ಲಿ ದೂಳು ಮತ್ತು ಆರ್ಸೆನಿಕ್ ಆಕ್ಸೈಡಿನ ಕಲಿಲ ಕಣಗಳಿರುತ್ತವೆ. ಇವನ್ನು ನಿವಾರಿಸಲು ಅನೇಕ ಕೋಶಗಳನ್ನು ಒಳಗೊಂಡ ಪ್ರತ್ಯೇಕ ಶುದ್ಧೀಕರಣ ವಿಭಾಗವಿರುವುದು. ಆದರೂ ಅಲ್ಪಸ್ವಲ್ಪ ಕಶ್ಮಲಗಳು ಉಳಿದುಬಿಡುವುವು. ಇವನ್ನು ತೊಡೆದುಹಾಕಿದ ಹೊರತು ವೇಗವರ್ಧಕವಿರುವ ಕೇಂದ್ರಕ್ರಿಯಾಕೋಶಕ್ಕೆ ಅನಿಲಮಿಶ್ರಣವನ್ನು ಬಿಡುವುದಿಲ್ಲ. ಏಕೆಂದರೆ ದೂಳು ಮತ್ತು ಆರ್ಸೆನಿಕ್ ಟ್ರೈಆಕ್ಸೈಡುಗಳು ವೇಗವರ್ಧಕ ವಿಷಗಳು. ಇವು ಪ್ಲಾಟಿನಂ ವೇಗವರ್ಧಕವನ್ನು ನಿಷ್ಕ್ರಿಯಗೊಳಿಸುತ್ತವೆ. ಹೀಗಾಗದಿರಲು ಅನಿಲ ಮಿಶ್ರಣ 100% ಭಾಗ ಪರಿಶುದ್ಧವಾಗಿರಲೇಬೇಕು. ಇದನ್ನು ಸಾಧಿಸಲು ಪೆಟ್ಟಿಗೆಯಂಥ ಕೋಶವೊಂದರ ಮೂಲಕ ಅನಿಲ ಮಿಶ್ರಣವನ್ನು ಹಾಯಿಸುವರು. ಪೆಟ್ಟಿಗೆಯ ಪಾರ್ಶ್ವಗಳಲ್ಲಿ ಗಾಜಿನ ಕಿಂಡಿಗಳಿರುತ್ತವೆ. ಅವುಗಳ ಮೂಲಕ ಪ್ರಬಲವಾದ ಕಿರಣಜಾಲವನ್ನು ಬೀರಿದರೆ ಲೇಶಮಾತ್ರ ದೂಳಿನ ಕಣಗಳಿದ್ದರೂ ಗೊತ್ತಾಗುವುದು. ಹಾಗಿದ್ದಲ್ಲಿ ಅನಿಲಮಿಶ್ರಣವನ್ನು ಪದೇ ಪದೇ ಶುದ್ಧೀಕರಣ ಘಟಕಕ್ಕೆ ಹಿಂತಿರುಗಿಸಲಾಗುವುದು.

**2. ಅತಿ ಸೂಕ್ಷ್ಮದರ್ಶಕ (ಅಲ್ಟ್ರಾಮೈಕ್ರೊಸ್ಕೋಪ್) :** ಕಲಿಲ ಕಣಗಳನ್ನು ವೀಕ್ಷಿಸಲು ಬಳಸುವ ವಿಶೇಷ ಸಾಧನವಿದು. ಅದರ ವಿವರಗಳು ಚಿತ್ರದಲ್ಲಿವೆ.

ಮೇಲೆ ವಿಧಿಸಿದ ವಿಶೇಷ ಭಂಗಿಯಲ್ಲಿ ನೋಡಿದಾಗ ಕಲಿಲ ಕಣಗಳು ಬೆಳಕಿನ ಚುಕ್ಕಿಗಳಂತೆ ತೋರುತ್ತವೆ. ಒಂದೊಂದು ಚುಕ್ಕಿಯಿರುವ ಎಡೆಯಲ್ಲೆಲ್ಲ ಒಂದೊಂದು ಕಲಿಲ ಕಣವಿದೆಯೆಂದು ಊಹಿಸಿಕೊಳ್ಳಬಹುದು. ಈ ಸಲಕರಣೆಯಿಂದ ಕಲಿಲ ಕಣಗಳ ರೂಪರೇಖೆಗಳ ಅರಿವು ನಮಗಾಗಿದೆ. ಉದಾಹರಣೆಗೆ ಆರ್ಸೆನಿಕ್ ಟ್ರೈಸಲ್ಫೈಡ್ ಸಾಲ್‌ನಲ್ಲಿರುವ ಕಣಗಳು ಗೋಳಾಕಾರವಾಗಿಯೂ


ಚಿತ್ರ 5

ಕೂಡಿಟ್ಟ ಫೆರಿಕ್ ಹೈಡ್ರಾಕ್ಸೈಡ್ ಸಾಲ್‌ನಲ್ಲಿರುವ ಕಣಗಳು ಚಪ್ಪಟೆಯಾಗಿಯೂ ವೆನೆಡಿಯಂ ಪೆಂಟಾಕ್ಸೈಡಿನ ಕಲಿಲ ಕಣಗಳು ಸಲಾಕೆಗಳಂತೆ ಉದ್ದುದ್ದವಾಗಿಯೂ ಇರುವುವು ಎಂದು ತಿಳಿದುಬಂದಿದೆ. ಅಲ್ಲದೆ ಅತಿಸೂಕ್ಷ್ಮದರ್ಶಕದ ಸಹಾಯದಿಂದ, ಗೊತ್ತಾದ ಗಾತ್ರದ ಕಲಿಲದ್ರಾವಣದಲ್ಲಿರುವ ಕಣಗಳನ್ನು ಎಣಿಸಬಹುದು. ಕಲಿಲ ದ್ರಾವಣ ವಾಸ್ತವವಾಗಿ ವಿಷಮಾಂಗಿ ಎಂದು ಮನದಟ್ಟಾಗುವುದು ಅತಿಸೂಕ್ಷ್ಮದರ್ಶಕದಿಂದ ನೋಡಿದಾಗಲೇ ಕಲಿಲಕಣಗಳು ನಿರಂತರ ಚಲನೆಯಲ್ಲಿರುವ ಸಂಗತಿ ಬಯಲಾದದ್ದು ಈ ದರ್ಶನಸಾಧನದಿಂದ. ಅತಿಸೂಕ್ಷ್ಮದರ್ಶಕವನ್ನು ನಿರ್ಮಿಸಿದ ಕೀರ್ತಿ ರಸಾಯನಶಾಸ್ತ್ರಜ್ಞನಾದ ಜ಼ಿಗ್ಮಾಂಡಿ (1865–1929) ಮತ್ತು ಭೌತ ವಿಜ್ಞಾನಿಯಾದ ಸೀಡೆನ್ ಟೊಪ್ಫ್ ಎಂಬ ಎಬ್ಬರು ಜರ್ಮನ್ ದೇಶೀಯರಿಗೆ ಸಲ್ಲುತ್ತದೆ.

**3. ಬ್ರೌನಿಯನ್ ಚಲನೆ :** ಇಂಗ್ಲಿಷ್ ಸಸ್ಯಶಾಸ್ತ್ರಜ್ಞನಾದ ರಾಬರ್ಟ್ ಬ್ರೌನ್ (1778–1858) ಪರಾಗದೂಳನ್ನು ನೀರಿನಲ್ಲಿ ಕದಡಿ ಅತಿಸೂಕ್ಷ್ಮದರ್ಶಕದಿಂದ ನೋಡಿದಾಗ (1827) ಪರಾಗಕಣಗಳು ನಿರಂತರ ಚಲನೆಯಲ್ಲಿರುವುದನ್ನು ಕಂಡ. ಈ ಗುಣಧರ್ಮ ಪರಾಗದೂಳಿನ ವೈಶಿಷ್ಟ್ಯವಾಗಿದ್ದರೆ ಕಲಿಲಸ್ಥಿತಿಯಲ್ಲಿರುವ ಸಮಸ್ತ ವಸ್ತುಗಳಿಗೂ ಅನಿವಾರ್ಯವಾಗಿ ಪ್ರಾಪ್ತವಾಗುವ ಗುಣವೆಂದು ವಿಶೇಷ ಅಧ್ಯಯನದಿಂದ ಮುಂದೆ ವೇದ್ಯವಾಯಿತು. ಮೊದಲು ಇದನ್ನು ಜಗತ್ತಿಗೆ ಸಾರಿದವರು ರಾಬರ್ಟ್ ಬ್ರೌನನಾದ್ದರಿಂದ ಕಲಿಲ ಕಣಗಳ ಅವ್ಯಾಹತ ಚಲನಗುಣಕ್ಕೆ ಬ್ರೌನಿಯನ್ ಚಲನೆ ಎಂದು ಹೆಸರಿಡಲಾಯಿತು.

ಮಾಧ್ಯಮದ ಅಣುಗಳಿಗೆ ಹೋಲಿಸಿದರೆ ಕಲಿಲ ಕಣಗಳು ಸಾಕಷ್ಟು ದೊಡ್ಡವು. ಇವೆರಡರ ನಡುವೆ ಡಿಕ್ಕಿಗಳು ಎಡೆಬಿಡದೆ ನಡೆದಿರುತ್ತವೆ. ಯಾವ ದಿಸೆಯಲ್ಲಿ ಹೆಚ್ಚಿನ ಅಣುಗಳು ಎಡತಾಕಿ ಕಲಿಲ ಕಣವನ್ನು ಗುದ್ದುವುವೋ ಆ ದಿಕ್ಕಿನಲ್ಲಿ ಅದು ದೂಡಲ್ಪಡುವುದು. ಪರಿಣಾಮವಾಗಿ ಕಲಿಲ ಕಣದ ಚಲನ ಪಥ ವಕ್ರಗತಿಯದಾಗಿದ್ದು ಚಿತ್ರದಲ್ಲಿ ತೋರಿಸಿರುವಂತೆ ಅಡ್ಡಾದಿಡ್ಡಿಯಾಗಿರುವುದು.


ಚಿತ್ರ 6

ಬಿರುಗಾಳಿಯ ನಡುವೆ ಸಮುದ್ರಮಧ್ಯದಲ್ಲಿ ಸಿಕ್ಕಿಕೊಂಡು ಅಲೆಗಳ ಹೊಡೆತದಿಂದ ಹಿಂದೆ ಮುಂದೆ ಮೇಲೆ ಕೆಳಗೆ ಓಲಾಡುತ್ತ ಸಾಗುವ ಅಸಹಾಯಕ ಅಂಬಿಗನ ದೋಣಿಯಂತೆ ಕಲಿಲ ಕಣವೂ ಕುಣಿದು ಕುಪ್ಪಳಿಸುತ್ತಿರುತ್ತದೆ. ಕತ್ತಲುಕೋಣೆಯನ್ನು ಬೆಳಗುವ ಬಿಸಿಲುಕೋಲಿನಲ್ಲಿರುವ ದೂಳಿನ ಕಣಗಳೂ ಹೀಗೆಯೇ ಪರದಾಡುತ್ತಿರುವುದನ್ನು ಕಾಣುತ್ತೇವೆ. ಬ್ರೌನಿಯನ್ ಚಲನೆಗೂ ವಸ್ತುವಿನ ಸ್ವಭಾವಕ್ಕೂ ಯಾವ ಸಂಬಂಧವೂ ಇಲ್ಲ. ಉಷ್ಣತೆ ಮತ್ತು ಕಣಗಾತ್ರಗಳನ್ನು ಮಾತ್ರ ಅದು ಅವಲಂಬಿಸಿದೆ. ಅನಿಲದಲ್ಲಿರುವ ಅಣುಗಳೂ ಹೀಗೆಯೇ ಓಡಾಡುತ್ತಿರುತ್ತವೆ ಎಂಬ ಸಿದ್ಧಾಂತಕ್ಕೆ ಬ್ರೌನಿಯನ್ ಚಲನೆ ಸಾಕ್ಷಿಯಾಗಿದೆ. ಇದನ್ನು ಅಳೆದು ಅವೊಗ್ಯಾಡ್ರೊ ಅಂಕವನ್ನು ಗಣಿಸಬಹುದು. ಐನ್‌ಸ್ಟೈನನ ಕೆಳಕಂಡ ಸಮೀಕರಣ ಇದಕ್ಕೆ ಸಹಾಯಕವಾಗಿದೆ :

$$\Delta^2 = \frac{RTt}{3N\pi\eta\gamma}$$

ಇಲ್ಲಿ $\Delta = t$ ಸೆಕೆಂಡುಗಳಲ್ಲಿ ಅಪೇಕ್ಷಿತ ಅಕ್ಷದಲ್ಲಿ ಕಲಿಲ ಗಮಿಸುವ ಸರಾಸರಿ ದೂರ; $R$ = ಅನಿಲ ನಿಯತಾಂಕ; $T$ = ನಿರಪೇಕ್ಷ ಮಾನದಲ್ಲಿ ಉಷ್ಣತೆ; $N$ = ಅವೊಗ್ಯಾಡ್ರೊ ಅಂಕ; = ಮಾಧ್ಯಮದ ಸ್ನಿಗ್ಧತೆಯ ಗುಣಾಂಕ; (ಚುನಾಯಿತ ಕಣದ ತ್ರಿಜ್ಯ. ಈ ನಿರಂತರ ಚಲನೆಯ ಫಲವಾಗಿ ಕಲಿಲ ಕಣಗಳು ಗುರುತ್ವಾಕರ್ಷಣೆಯನ್ನು ತಪ್ಪಿಸಿಕೊಂಡು ಒತ್ತರಿಸದೆ ಉಳಿಯಲು ಶಕ್ತವಾಗಿವೆ.

**4. ಬಣ್ಣ :** ಕಲಿಲ ದ್ರಾವಣದ ಬಣ್ಣ ಕೆಳಕಂಡ ಅಂಶಗಳಿಂದ ಪ್ರಭಾವಿತವಾಗಿರುತ್ತದೆ. (1) ಕಣದ ಗಾತ್ರ ಮತ್ತು ಆಕಾರ, (2) ವಸ್ತು ಮತ್ತು ಮಾಧ್ಯಮಗಳ ಬೆಳಕು ಗ್ರಹಣಶಕ್ತಿ, (3) ಅದರ ಮೇಲೆ ಬಿದ್ದ ಬೆಳಕಿನ ತರಂಗದೂರ, (4) ಆ ಬೆಳಕನ್ನು ನಾವು ವೀಕ್ಷಿಸುವ ಬಗೆ, ಅಂದರೆ ಪ್ರತಿಫಲನ ವಿಧಾನದಿಂದಲೇ ಅಥವಾ ಪಾರಗಮನ (ಟ್ರಾನ್ಸ್‌ಮಿಷನ್) ವಿಧಾನದಿಂದಲೇ ಎಂಬುದನ್ನು ಅನುಸರಿಸಿ. ಉದಾಹರಣೆಗೆ, ಚಿನ್ನದ ಕೆಂಪು ಕಲಿಲ ದ್ರಾವಣ ನೀಲಿಯಾಗುವಾಗ ಅದರಲ್ಲಿರುವ ಕಣಗಳು ದೊಡ್ಡದಾಗುತ್ತ ಹೋಗುವುವು ಮತ್ತು ಗೋಳಾಕಾರ ತ್ಯಜಿಸಿ ಚಪ್ಪಟೆರೂಪ ತಳೆಯುವುವು. ಪ್ರತಿಫಲಿತ ಬೆಳಕಿನಲ್ಲಿ ನೋಡಿದಾಗ ನೀಲಿಯಾಗಿಯೂ ರವಾನಿತ ಬೆಳಕಿನಲ್ಲಿ ನೋಡಿದಾಗ ಕೆಂಪಾಗಿಯೂ ಕಾಣುವುದು ಹಾಲು ಮತ್ತು ನೀರಿನ ಮಿಶ್ರಣದ ವೈಶಿಷ್ಟ್ಯ. ಸೋಡಿಯಂ ಥಯೊಸಲ್ಫೇಟಿನ ದ್ರಾವಣಕ್ಕೆ ದುರ್ಬಲ ಹೈಡ್ರೊಕ್ಲೋರಿಕ್ ಆಮ್ಲವನ್ನು ಸೇರಿಸಿದರೆ ಗಂಧಕದ ಕಲಿಲ ಆಗುವುದು. ಈ ಕಣಗಳು ಕ್ರಮೇಣ ದೊಡ್ಡದಾಗುತ್ತ ಹೋಗುವುದರಿಂದ ರವಾನಿತ ಬೆಳಕಿನಲ್ಲಿ ನೋಡಿದಾಗ ಸೂರ್ಯ ಮುಳುಗುವ ಹೊತ್ತಿನಲ್ಲಿ ಆಗುವ ಬಣ್ಣ ಬದಲಾವಣೆಯ ಸೊಬಗಿನ ದೃಶ್ಯ ಗೋಚರಿಸುತ್ತದೆ.

**ವಿದ್ಯುತ್ ಪ್ರಧಾನ ಲಕ್ಷಣಗಳು.** 1 ಎಲೆಕ್ಟ್ರೊಫಾರಿಸಿಸ್: ಬ್ರೌನಿಯನ್ ಚಲನೆಯ ಫಲವಾಗಿ ಕಲಿಲ ಕಣಗಳು ಪರಸ್ಪರ ಡಿಕ್ಕಿ ಹೊಡೆಯುವುದು ಅನಿವಾರ್ಯ. ಆಗ ಅವು ಅಂಟಿಕೊಂಡು ಗಾತ್ರವರ್ಧನೆಯಾಗಬೇಕು. ಉತ್ಪತ್ತಿಯಾದ ದೊಡ್ಡ ಕಣಗಳು ಗುರುತ್ವಾಕರ್ಷಣೆಯ ದೆಸೆಯಿಂದ ತಳವೂರಬೇಕು. ಆದರೆ ವಾಸ್ತವವಾಗಿ ಹೀಗಾಗುವುದಿಲ್ಲ. ಕಲಿಲಸ್ಥಿತಿಯಲ್ಲಿರುವ ವಸ್ತು ಬಹುಸ್ಥಿರವಾಗಿರುತ್ತದೆ. ಇದೊಂದು ವಿರೋಧಾಭಾಸ. ಇದನ್ನು ಸಮರ್ಥಿಸಲು ಒಂದು ಮಾಧ್ಯಮದಲ್ಲಿರುವ ಕಲಿಲ ಕಣಗಳೆಲ್ಲ ಒಂದೇ ತೆರನಾದ ವಿದ್ಯುದಂಶವನ್ನು ಧರಿಸಿರುತ್ತವೆ; ಇಂಥ ವಿದ್ಯುದ್ಭರಿತ ಕಣಗಳು ಪರಸ್ಪರ ಸಮೀಪಿಸಿದಾಗ ಪ್ರಬಲ ವಿಕರ್ಷಣೆಯುಂಟಾಗುವುದು ಸ್ವಾಭಾವಿಕ; ಇದರಿಂದ ಅವು ಒಟ್ಟುಗೂಡದೆ ಹಿಂಜರಿಯುತ್ತವೆ ಎಂದು ಪ್ರತಿಪಾದಿಸಲಾಗಿದೆ. ಕಲಿಲ ಕಣಗಳ ಮೇಲೆ ವಿದ್ಯುದಂಶವಿದೆಯೆಂಬುದನ್ನು ಕೆಳದಂಡ ಪ್ರಯೋಗ ಸಮರ್ಥಿಸುವುದು. U–ಆಕಾರದ ನಾಳದಲ್ಲಿ ಆರ್ಸೆನಿಕ್ ಟ್ರೈಸಲ್ಫೈಡಿನ ಕಲಿಲದ್ರಾವಣವನ್ನು ಇಡಲಾಗಿದೆ.



ಚಿತ್ರ 7

ದ್ರಾವಣದ ಮೇಲೆ ಬಟ್ಟಿ ಇಳಿಸಿದ ನೀರು ಅಥವಾ ದುರ್ಬಲ ಅಸಿಟಿಕ್ ಆಮ್ಲವಿರಬಹುದು. ಅದರಲ್ಲಿ ಎರಡು ಪ್ಲಾಟಿನಂ ಧ್ರುವಗಳನ್ನಿಟ್ಟು ವಿದ್ಯುತ್ಕೋಶಕ್ಕೆ ಲಗತ್ತಿಸಿರಲಾಗುವುದು. ಕಲಿಲದಲ್ಲಿ ಯೂರಿಯಾ ವಿಲೀನ ಮಾಡಿದರೆ ಮಿಶ್ರಣದ ಸಾಂದ್ರತೆ ಹೆಚ್ಚಿ ದ್ರಾವಣಗಳ ಸಂಧಿ ಸ್ಥಳ ಸ್ಪಷ್ಟವಾಗುವುದು. ಅವೆರಡರ ನಡುವೆ ತೊಗಲು ಕಾಗದವಿದ್ದರೆ ಇನ್ನೂ ಅನುಕೂಲ. ಉಪಕರಣವನ್ನು ಹೀಗೆ ಹೊಂದಿಸಿಕೊಂಡು ವಿದ್ಯುತ್ತನ್ನು ಹಾಯಿಸಿದರೆ ಕಲಿಲ ನಿರ್ದಿಷ್ಟ ಧ್ರುವದ ದಿಕ್ಕಿನಲ್ಲಿ ಸರಿಯುವುದು. ಒಂದು ಭಾಗದಲ್ಲಿ ಮಾತ್ರ ಕಲಿಲದ ಮಟ್ಟ ಏರುವುದು. ಧನ ವಿದ್ಯುದಂಶವಿರುವ ಕಲಿಲ ಋಣ ಧ್ರುವದೆಡೆಗೂ ಋಣ ವಿದ್ಯುದಂಶವಿರುವ ಕಲಿಲ ಧನ ಧ್ರುವದ ಕಡೆಗೂ ಸಾಗುವುವು. ಈ ಕ್ರಿಯಾವೈಶಿಷ್ಟ್ಯವನ್ನು ಕ್ರಮವಾಗಿ ಕೆಟಫಾರಿಸಿಸ್ ಮತ್ತು ಅನಫಾರಿಸಿಸ್ ಎನ್ನುವರು. ಎರಡನ್ನೂ ಒಟ್ಟಾರೆ ಎಲೆಕ್ಟ್ರೊಫಾರಿಸಿಸ್ ಎನ್ನುವುದು ವಾಡಿಕೆ. ಲೋಹದ ಆಕ್ಸೈಡ್ ಮತ್ತು ಹೈಡ್ರಾಕ್ಸೈಡ್ ಕಲಿಲಗಳು ಅನಫಾರಿಸಿಸ್ ಕ್ರಿಯೆಗೆ ನಿದರ್ಶನಗಳು. ಬಹುಪಾಲು ಕಲಿಲಗಳು ಹೀಗೆ ವರ್ತಿಸುತ್ತವೆ. ಆದೇಶಿತ ವಿದ್ಯುತ್ ಕ್ಷೇತ್ರದಲ್ಲಿ ಕಲಿಲದ ಚಲನವೇಗವನ್ನು ಗಮನಿಸಿ ಅದರ ಕಣಗಳು ಹೊತ್ತಿರುವ ವಿದ್ಯುದಂಶದ ಪ್ರಮಾಣವನ್ನೂ ಊಹಿಸಬಹುದು. ಆದರೆ ಆಲ್ಬುಮಿನ್ನಿನಂಥ ಕೆಲವು ಲೀನಕಾರಿ ಅಭಿಮಾನಿ ಕಲಿಲಗಳು ನಿರ್ದಿಷ್ಟ pH ಮೌಲ್ಯದಲ್ಲಿ ಯಾವ ಧ್ರುವದೆಡೆಗೂ ಸರಿಯದೆ ತಟಸ್ಥವಾಗಿರುವುವು. ಆ pH ಮೌಲ್ಯಕ್ಕೆ ಕಲಿಲದ ಸಮವಿದ್ಯುದ್ಬಿಂದು (ಐಸೊಎಲೆಕ್ಟ್ರಿಕ್ ಬಿಂದು) ಎಂದು ಹೆಸರು. ಈ ಸ್ಥಿತಿಯಲ್ಲಿ ಕಲಿಲ ಬಲು ಅಸ್ಥಿರವಾಗಿರುತ್ತದೆ.

ಆದೇಶಿತ ವಿದ್ಯುತ್ ಕ್ಷೇತ್ರದಲ್ಲಿ ಕಲಿಲ ಕಣಗಳು ಚಲಿಸದಂತೆ ತಡೆದರೆ. ಮಾಧ್ಯಮವೇ ವಿರುದ್ಧ ದಿಕ್ಕಿನಲ್ಲಿ ಸರಿಯುವ ವಿಚಿತ್ರ ಪರಿಸ್ಥಿತಿ ಉಂಟಾಗುತ್ತದೆ. ಇದಕ್ಕೆ ಎಲೆಕ್ಟ್ರೊ ಆಸ್ಮಾಸಿಸ್



ಚಿತ್ರ 8

ಎಂದು ಹೆಸರು. ಇದಕ್ಕಾಗಿ ಬಳಸುವ ಉಪಕರಣದ ವಿವರ ಚಿತ್ರದಲ್ಲಿದೆ. M ಮತ್ತು M' ಎರಡು ಅರ್ಧಪಾರಗಮ್ಯ ಪೊರೆಗಳು. ಇವುಗಳಿಂದ ಉಪಕರಣ ಮೂರು ಭಾಗಗಳಾಗಿದೆ. ಮಧ್ಯಭಾಗದಲ್ಲಿ ಕಲಿಲದ್ರಾವಣವಿದೆ. ಇಕ್ಕೆಲ್ಲಗಳಲ್ಲಿ ನೀರಿದೆ. T ಮತ್ತು T' ಎರಡು ನಳಿಗೆಗಳು. E ಮತ್ತು E' ಎರಡು ಧ್ರುವಗಳು. ಇವನ್ನು ವಿದ್ಯುತ್ ಕೋಶಕ್ಕೆ ಹಚ್ಚಿದರೆ ಒಂದು ಭಾಗದಲ್ಲಿ ನೀರಿನ ಮಟ್ಟ ಇಳಿದು ಮತ್ತೊಂದರಲ್ಲಿ ಏರುವುದು. ಪ್ರವಾಹದಿಸೆ ಕಣಗಳು ಹೊತ್ತಿರುವ ವಿದ್ಯುದಂಶಕ್ಕೆ ಅನುಗುಣವಾಗಿರುತ್ತದೆ. ಕಲಿಲ ಕಣಗಳಲ್ಲಿ ಧನವಿದ್ಯುದಂಶವಿದ್ದರೆ ಅವು ಋಣ ಧ್ರುವದ ಕಡೆ ಸರಿಯುವ ಬದಲು ಮಾಧ್ಯಮವೇ ಧನ ಧ್ರುವದತ್ತ ಅಂದರೆ B ಯಿಂದ A ಕಡೆಗೆ ಸಾಗುವುದು. ಋಣವಿದ್ಯುದ್ಭರಿತ ಕಲಿಲಗಳಾದರೆ ಪ್ರವಾಹದ ದಿಕ್ಕು A ಯಿಂದ B ಕಡೆಗಿರುವುದು. ಕಲಿಲ ಕಣಗಳು ವಿದ್ಯುದ್ಭರಿತವಾಗಲು ಕಾರಣವುಂಟು. ವಸ್ತುವನ್ನು ಕಲಿಲಸ್ಥಿತಿಗೆ ತಂದಾಗ ಅದರ ಮೇಲ್ಮೈವಿಸ್ತೀರ್ಣ ಅಪಾರವಾಗಿರುವುದಷ್ಟೆ. ಆಗ ಕಲಿಲವು ತನ್ನ ಅಂಗ ಅಯಾನುಗಳ ಪೈಕಿ ಯಾವುದೊಂದು ಮಾಧ್ಯಮದಲ್ಲಿದ್ದರೂ ಸರಿಯೇ ಅದನ್ನು ಆಕರ್ಷಿಸಿ ತನ್ನ ಮೈಮೇಲೆ ಕೂಡಿಸಿಕೊಳ್ಳುವುದು. ಹೀಗೆ ಅಯಾನಾವರಿತ ಕಲಿಲ ವಿದ್ಯುತ್‍ಪೂರಿತವಾಗುತ್ತದೆ.

**2. ಗರಣೆಗಟ್ಟುವಿಕೆ (ಕೊ ಆ್ಯಗ್ಯುಲೇಷನ್) :** ಕಲಿಲಕಣದ ಮೇಲಿರುವ ವಿದ್ಯುದಂಶ ಅದರ ಸ್ಥಿರತೆಗೆ ಕಾರಣವಾದರೆ ಅದನ್ನು ತೊಡೆದುಹಾಕಿದಾಗ ವಿದ್ಯುದ್ರಹಿತ ಕಣಗಳು ಒಂದುಗೂಡಿ ದೊಡ್ಡವಾಗಿ ಗುರುತ್ವಾಕರ್ಷಣೆಗೆ ಒಳಪಟ್ಟು ಒತ್ತರಿಸಲೇಬೇಕು. ಇದು ಪ್ರಯೋಗದಿಂದಲೂ ದೃಢಪಟ್ಟಿದೆ. ಕಲಿಲಕ್ಕೆ ಎಲೆಕ್ಟ್ರೊಲೈಟ್ ಸೇರಿಸಿದಾಗ ಅದರಲ್ಲಿರುವ ಅಯಾನುಗಳು ಈ ಕೆಲಸ ಮಾಡುತ್ತವೆ. ಧನ ಕಲಿಲವಾದರೆ ಋಣ ಅಯಾನುಗಳನ್ನು ತನ್ನೆಡೆಗೆ ಆಕರ್ಷಿಸಿಕೊಂಡು ವಿದ್ಯುದ್ರಹಿತವಾಗುತ್ತದೆ. ಈ ಕ್ರಿಯೆಗೆ ಗರಣೆಗಟ್ಟುವಿಕೆ ಎಂದು ಹೆಸರು. ಪರಸ್ಪರ ವಿರುದ್ಧ ವಿದ್ಯುದಂಶಗಳಿರುವ ಕಲಿಲಗಳನ್ನು ಕೂಡಿಸಿದಾಗಲೂ ಹೀಗಾಗುವುದು. ವಿದ್ಯುತ್ತನ್ನು ಹಾಯಿಸಿದಾಗ ವಿರುದ್ಧ ಧ್ರುವದತ್ತ ಸಾಗಿದ ಕಲಿಲ ಅಲ್ಲೇ ಒತ್ತರಿಸುವುದು. ಮಿತಿಮೀರಿ ಡಯಾಲಿಸಿಸ್ ಮಾಡಿದಾಗ ಕಲಿಲದ ಮೈಗೆ ಅಂಟಿರುವ ಅಯಾನುಗಳು ವಿಸರ್ಜನೆಗೊಂಡ ಕಲಿಲ ಹೆಪ್ಪುಗಟ್ಟುವುದು. ಆದ್ದರಿಂದ ಒತ್ತರಕ್ಕೆ ಅಗತ್ಯವಾದ ಅಣುವಿನ ಪ್ರಮಾಣ ಅದರ ವೇಲೆನ್ಸಿಯನ್ನು ಅವಲಂಬಿಸಿರುತ್ತದೆ. ಇದೇ ಹಾರ್ಡಿ–ಷುಲ್ಸ್ ನಿಯಮ. ಉದಾಹರಣೆಗೆ ಋಣ ಕಲಿಲವಾದ ಆರ್ಸೆನಿಕ್ ಟ್ರೈಸಲ್ಫೈಡನ್ನು ಒತ್ತರಿಸುವುದರಲ್ಲಿ ಏಕ ವೇಲೆನ್ಸೀಯ ಧನ ಅಯಾನುಗಳಿಗಿಂತ ದ್ವಿವೇಲೆನ್ಸೀಯ ಅಯಾನುಗಳು 70ರಷ್ಟೂ ಮತ್ತು ತ್ರಿವೇಲೆನ್ಸೀಯ ಅಯಾನುಗಳು ಸುಮಾರು 500ಪಟ್ಟೂ ಪರಿಣಾಮಕಾರಿಯಾಗಿರುವುದು ಕಂಡುಬಂದಿದೆ. ಒಂದು ಲೀಟರಿನಷ್ಟು ನಿರ್ದಿಷ್ಟ ಕಲಿಲವನ್ನು ಗರಣೆ ಗಟ್ಟಿಸಲು ಅಗತ್ಯವಾದ ಎಲೆಕ್ಟ್ರೊಲೈಟಿನ ಕನಿಷ್ಠ ಪ್ರಮಾಣಕ್ಕೆ ಅದರ ಒತ್ತರ ಮೌಲ್ಯ (ಫ್ಲೋಕ್ಯುಲೇಷನ್ ವೇಲ್ಯೂ) ಎಂದು ಹೆಸರು. ಇದನ್ನು ಮಿಲಿಮೋಲುಗಳಲ್ಲಿ ಸೂಚಿಸುವುದು ಪದ್ಧತಿ. ಆರ್ಸೆನಿಕ್ ಟ್ರೈಸಲ್ಫೈಡ್ ಮತ್ತು ಫೆರಿಕ್ ಹೈಡ್ರಾಕ್ಸೈಡ್ ಕಲಿಲ ದ್ರಾವಣಗಳನ್ನು ಒತ್ತರಿಸುವುದರಲ್ಲಿ ವಿವಿಧ ಎಲೆಕ್ಟ್ರೊಲೈಟುಗಳ ಪಾತ್ರವನ್ನು ಪುಟ 245ರ ಆರಂಭದಲ್ಲಿರುವ ಪಟ್ಟಿಯಲ್ಲಿ ಸೂಚಿಸಿರುವ ಆಯಾ ಒತ್ತರಮೌಲ್ಯಗಳು ತೋರುತ್ತವೆ.

**3 ರಕ್ಷಣೆ :** ಕೆಲ ಲೀನಕಾರಿ ಅಭಿಮಾನಿ ಕಲಿಲಗಳ ಸಂಪರ್ಕದಲ್ಲಿ ಲೀನಕಾರಿದ್ವೇಷಿ ಕಲಿಲಗಳು ಅಲ್ಪಪ್ರಮಾಣ ಎಲೆಕ್ಟ್ರೊಲೈಟನ್ನು ಸೇರಿಸಿದರೂ ಗರಣೆಗಟ್ಟುವುದಿಲ್ಲ. ಉದಾಹರಣೆಗೆ ಚಿನ್ನದ ಕೆಂಪು ಕಲಿಲದ್ರಾವಣ ಜೆಲೆಟಿನ್ನಿನ ಸಂಪರ್ಕದಲ್ಲಿ ಸ್ವಲ್ಪ ಉಪ್ಪನ್ನು ಕೂಡಿಸಿದರೂ ಗರಣೆಗಟ್ಟದೆ ಉಳಿಯುವುದು. ಆಗ ಚಿನ್ನದ ಕಲಿಲ ಜೆಲೆಟಿನ್ನಿನಿಂದ ರಕ್ಷಿಸಲ್ಪಟ್ಟಿದೆ ಎನ್ನುತ್ತೇವೆ. ಚಿನ್ನವನ್ನು ರಕ್ಷಿತ ಕಲಿಲವೆಂದೂ ಜೆಲೆಟಿನ್ನನ್ನು ರಕ್ಷಣಾಕಲಿಲವೆಂದೂ ಕರೆಯುವುದು ರೂಢಿ. ಚಿನ್ನದ ಕಲಿಲಕಣದ ಸುತ್ತ ಜೆಲೆಟಿನ್ನಿನ ರಕ್ಷಾಕವಚವೇರ್ಪಟ್ಟು ಎಲೆಕ್ಟ್ರೊಲೈಟಿನ ಸಂಪರ್ಕ ತಪ್ಪಿಹೋಗುವುದೇ ಇದಕ್ಕೆ ಕಾರಣವಿರಬೇಕೆಂದು ಭಾವಿಸಲಾಗಿದೆ. ವಿವಿಧ ರಕ್ಷಣಾ ಕಲಿಲಗಳ ಶಕ್ತಿಯನ್ನು ಅಳೆಯಲು ಝಿಗ್ಮಾಂಡಿ ಸುವರ್ಣಾಂಕ (ಗೋಲ್ಡ್ ನಂಬರ್) ಎಂಬ ಮಾನವನ್ನು ರೂಪಿಸಿದ್ದಾರೆ. ಅದರ ಪ್ರಕಾರ ಒಂದು ಮಿಲಿಲೀಟರಿನಷ್ಟು ಶೇ. 10 ಸೋಡಿಯಂ ಕ್ಲೋರೈಡಿನ ದ್ರಾವಣವನ್ನು ಕ್ಷಿಪ್ರವಾಗಿ ಸೇರಿಸಿದಾಗ 10 ಮಿಲಿಲೀಟರು ಚಿನ್ನದ ಕೆಂಪು ಕಲಿಲ ದ್ರಾವಣ ಗರಣೆಗಟ್ಟದಂತೆ (ನೀಲಿ ಬಣ್ಣಕ್ಕೆ ತಿರುಗದಂತೆ) ತಡೆಯಲು ಅಗತ್ಯವಾದ

| ಆರ್ಸೆನಿಕ್ ಟ್ರೈಸಲ್ಫೈಡ್ ಸಾಲ್ | | | ಫೇರಿಕ್ ಹೈಡ್ರಾಕ್ಸೈಡ್ ಸಾಲ್ | | |
|---|---|---|---|---|---|
| ಎಲೆಕ್ಟ್ರೊ ಲೈಟ್ | ಅಯಾನು | ಒತ್ತರ ಮೌಲ್ಯ | ಎಲೆಕ್ಟ್ರೊ ಲೈಟ್ | ಅಯಾನು | ಒತ್ತರ ಮೌಲ್ಯ |
| NaCl | $Na^+$ | 52,000 | KCl | $Cl^-$ | 102.000 |
| KCl | $K^+$ | 52,000 | KBr | $Br^-$ | 134.000 |
| $KNO_3$ | $K^+$ | 50,000 | $KNO_3$ | $NO_3$ | 132.000 |
| $MgSO_4$ | $Mg^{2+}$ | 0.820 | $KBrO_3$ | $BrO_3^-$ | 133.000 |
| $BaCl_2$ | $Ba^{2+}$ | 0.690 | $K_2CrO_4$ | $CrO_4^{2-}$ | 0.325 |
| $ZnCl_2$ | $Zn^{2+}$ | 0.680 | $K_2SO_4$ | $SO_4^{2-}$ | 0.210 |
| $AlCl_3$ | $Al^{3+}$ | 0.093 | $K_3[Fe(CN)_6]$ | $[Fe(CN)_6]^{3-}$ | 0.096 |

ರಕ್ಷಣಾ ಕಲಿಲದ ಮಿಲಿಗ್ರಾಂತೂಕಕ್ಕೆ ಅದರ ಸುವರ್ಣಾಂಕವೆಂದು ಹೆಸರು. ಕೆಲವು ಲೀನಕಾರಿ ಅಭಿಮಾನಿಗಳ ಕಲಿಲಗಳ ಸುವರ್ಣಾಂಕಗಳನ್ನು ಮುಂದೆ ಕೊಡಲಾಗಿದೆ.

| | | |
|---|---|---|
| ಜಿಲೆಟಿನ್ | . . . | 0.005_0.01 |
| ಹೀಮೊಗ್ಲೋಬಿನ್ | . . . | 0.03 |
| ಮೊಟ್ಟೆಯ ಆಲ್ಬುಮಿನ್ | . . . | 0.15_0.25 |
| ಸೋಡಿಯಂ ಓಲಿಯೇಟ್ | . . . | 0.4_1.0 |
| ಆಲೂಗೆಡ್ಡೆಯ ಪಿಷ್ಟ | . . . | 25 |

ನಮ್ಮ ರಕ್ತದಲ್ಲಿ ಕ್ಯಾಲ್ಸಿಯಂ ಫಾಸ್ಫೇಟಿನಂಥ ಅಲ್ಪದ್ರಾವ್ಯವಾದ ವಸ್ತುಗಳಿವೆ. ಅವು ಕಲಿಲಸ್ಥಿತಿಯಲ್ಲೇ ಉಳಿಯುವಂತೆ ರಕ್ತದಲ್ಲಿರುವ ಸಸಾರಜನಕಗಳು ನೋಡಿಕೊಳ್ಳುತ್ತವೆ. ಲೀನಕಾರಿಅಭಿಮಾನಿ ಮತ್ತು ಲೀನಕಾರಿದ್ವೇಷಿ ಕಲಿಲಗಳ ಗುಣಧರ್ಮಗಳಲ್ಲಿರುವ ಸೂಕ್ಷ್ಮ ವ್ಯತ್ಯಾಸಗಳನ್ನು ಮುಂದೆ ಪಟ್ಟಿಮಾಡಲಾಗಿದೆ.

| | ಲೀನಕಾರಿಅಭಿಮಾನಿ ಕಲಿಲಗಳು | ಲೀನಕಾರಿ ದ್ವೇಷಿ ಕಲಿಲಗಳು |
|---|---|---|
| 1. | ತಯಾರಿಸುವುದು ಸುಲಭ. ಸ್ವಯಂ ಸ್ಥಿರ ಕಲಿಲಗಳಿವು. ಸ್ಥಿರತೆಗೆ ಎಲೆಕ್ಟ್ರೊಲೈಟುಗಳ ಅಗತ್ಯವಿಲ್ಲ. | ತಯಾರಿಸುವುದು ಕಷ್ಟ. ಸ್ಥಿರವಾಗಿರಲು ಲೇಶ ಮಾತ್ರವಾದರೂ ಎಲೆಕ್ಟ್ರೊಲೈಟುಗಳಿರಬೇಕು. |
| 2. | ಅಲ್ಪ ಪ್ರಮಾಣ ಎಲೆಕ್ಟ್ರೊಲೈಟುಗಳ ಸಂಪರ್ಕದಲ್ಲಿ ಗರಣೆಗಟ್ಟುವುದಿಲ್ಲ. | ಕೊಂಚ ಎಲೆಕ್ಟ್ರೊಲೈಟೂ ಗರಣೆಗಟ್ಟಿಸಬಲ್ಲುದು. |
| 3. | ಕಣಗಳು ಅನೇಕ ಲೀನಕಾರಿಯ ಅಣುಗಳೊಡನೆ ಕೂಡಿರುತ್ತವೆ. | ಕಣಗಳೊಡನೆ ಕೂಡಿರುವ ಲೀನಕಾರಿಯ ಅಣುಗಳ ಸಂಖ್ಯೆ ಬಲು ಕಡಿಮೆ. |
| 4. | ವಿಪರ್ಯಯಸ್ಥ ವಸ್ತುಗಳು, ಅಂದರೆ ಮಾಧ್ಯಮದ ಸಂಪರ್ಕದಲ್ಲಿ ಕಲಿಲ ಹೊಂದುವುವು. ದ್ರಾವಣವನ್ನು ಹಿಂಗಿಸಿದರೆ ವಿಲಂಬಿತ ವಸ್ತು ಪ್ರಾಪ್ತ ಸ್ಥಿತಿ ವಾಗುವುದು. ಹೀಗೆ ಎಷ್ಟು ಸಾರಿಯಾದರೂ ಮುನರಾವರ್ತಿಸ ಬಹುದು. | ವಿಪರ್ಯಯಗೊಳಿಸಲಾಗದು, ಕಲಿಲ ದ್ರಾವಣವನ್ನು ಇಂಗಿಸಿದರೆ ವಿಲಂಬಿತ ವಸ್ತು ದ್ರಾವಣವನ್ನು ಇಂಗಿಸಿದರೆ ವಿಲಂಬಿತ ವಸ್ತು ಬೇರ್ಪಡುವುದು. ಆದರೆ ಮುನಃ ಮಾಧ್ಯಮಕ್ಕೆ ಸೇರಿಸಿದರೆ ಕಲಿಲ ಆಗುವುದಿಲ್ಲ. |
| 5. | ಮಾಧ್ಯಮಕ್ಕಿಂತ ಮೇಲ್ಮೈ ಒತ್ತಡ ಕಡಿಮೆಯಾಗಿಯೂ ಸ್ನಿಗ್ಧತೆ ಹೆಚ್ಚಾಗಿಯೂ ಇರುವುದು. | ಮೇಲ್ಮೈ ಒತ್ತಡ ಮತ್ತು ಸ್ನಿಗ್ಧತೆ ಮಾಧ್ಯಮದಷ್ಟೇ ಇರುತ್ತದೆ. |
| 6. | ಮಾಧ್ಯಮದ pHಮೌಲ್ಯಕ್ಕೆ ಅನುಗುಣವಾಗಿ ಕಣಗಳು ಧನ ಅಥವಾ ಋಣ ವಿದ್ಯುದಂಶ ಹೊಂದಿರಬಹುದು. ಅಥವಾ ವಿದ್ಯುದ್ರಹಿತವಾಗಿರಬಹುದು. | ಸಮ ವಿದ್ಯುತ್ ಬಿಂದು ಎಂಬುದಿಲ್ಲ. |
| 7. | ಎಲೆಕ್ಟ್ರೊಫಾರಿಸಿಸ್ ಪ್ರದರ್ಶಿಸಲೇಬೇಕೆಂಬ ನಿಯಮವಿಲ್ಲ. | ಎಲೆಕ್ಟ್ರೊಫಾರಿಸಿಸ್ ಪ್ರದರ್ಶಿಸುವುವು. |
| 8. | ದಟ್ಟದ್ರಾವಣಗಳನ್ನು ತಯಾರಿಸಲು ಸಾಧ್ಯ ಅಂದರೆ ಮಾಧ್ಯಮದಲ್ಲಿ ಅಧಿಕಪ್ರಮಾಣ ವಸ್ತುವನ್ನು ವಿಲಂಬಿಸಬಹುದು. | ಮಾಧ್ಯಮದಲ್ಲಿ ಕಲಿಲಸ್ಥಿತಿಯಲ್ಲಿ ವಿಲಂಬಿಸಬಹುದಾದ ವಸ್ತುವಿನ ಗರಿಷ್ಠ ಪ್ರಮಾಣ ಕಡಿಮೆ. |
| 9. | ಅತಿಸೂಕ್ಷ್ಮದರ್ಶಕದಿಂದ ನೋಡಿದಾಗ ಚೆದರಿದ ಕಣಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಮಾಧ್ಯಮ ಮತ್ತು ಚೆದರಿದ ವಸ್ತುಗಳ ಸಾಂದ್ರತೆ ಮತ್ತು ವಕ್ರೀಭವನಾಂಕಗಳಲ್ಲಿ ಅಲ್ಪ ಅಂತರವಿರುವುದರಿಂದ ಹೀಗಾಗುತ್ತದೆ. | ಅತಿಸೂಕ್ಷ್ಮದರ್ಶಕದ ಅಡಿಯಲ್ಲಿ ಕಲಿಲ ಕಣಗಳು ಎದ್ದು ಕಾಣುತ್ತವೆ. |

**ಕಲಿಲ ವಿಜ್ಞಾನದ ಪ್ರಯೋಜನ :** ನಿತ್ಯಜೀವನದಲ್ಲಿ, ಕೈಗಾರಿಕೆಯಲ್ಲಿ ಮತ್ತು ವೈದ್ಯವಿಜ್ಞಾನದಲ್ಲಿ ಕಲಿಲಗಳು ಮಹತ್ತರ ಸೇವೆ ಸಲ್ಲಿಸುತ್ತಿವೆ. ಔಷಧ, ಟಾನಿಕ್ಕು ಮೊದಲಾದವುಗಳೆಲ್ಲ ಸಾಮಾನ್ಯವಾಗಿ ಕಲಿಲಗಳು. ಈ ಸ್ಥಿತಿಯಲ್ಲಿ ಅವು ಬಹುಬೇಕ ದೇಹಗತವಾಗಿ ನಿಯೋಜಿತ ಗುಣ ನೀಡುವುವು. ಕ್ಷಯ, ಮಿದುಮೂಳೆ ರೋಗ ಮುಂತಾದವುಗಳು ಪ್ರಾಪ್ತವಾದಾಗ ದೇಹಶಕ್ತಿಯನ್ನು ಹೆಚ್ಚಿಸಲು ಚಿನ್ನ, ಮ್ಯಾಂಗನೀಸ್ ಮತ್ತು ಕ್ಯಾಲ್ಸಿಯಂ ಕಲಿಲಗಳ ಚುಚ್ಚುಮದ್ದನ್ನು ನೀಡುವುದು ಪದ್ಧತಿ. ಗಂಧಕದ ಕಲಿಲವನ್ನು ಕ್ರಿಮಿನಾಶಕವಾಗಿ, ಆಂಟಿಮೊನಿ ಕಲಿಲವನ್ನು ಕಾಳಜ್ವರದ ಚಿಕಿತ್ಸೆಗೆ ಮತ್ತು ಆರ್ಜಿರಾಲ್ ಎಂಬ ಬೆಳ್ಳಿಯ ಕಲಿಲವನ್ನು ಕಣ್ಣಿನ ಬೇನೆಯಲ್ಲಿ ಬಳಸುವುದನ್ನು ನೆನೆಯಬಹುದು.

ಗರಣೆಕಟ್ಟುವ ಕ್ರಿಯೆಗೇ ನಿರ್ದಿಷ್ಟ ಉಪಯೋಗಗಳುಂಟು. ಕುಡಿಯುವ ನೀರಿನಲ್ಲಿರುವ ವಿಲಂಬಿತ ಕಶ್ಮಲಗಳು ಕಲಿಲಗಳು. ಅದಕ್ಕೆ ಅಗತ್ಯ ಪ್ರಮಾಣದಲ್ಲಿ ಪಟಿಕವನ್ನು ಸೇರಿಸಿದರೆ ಅದರಲ್ಲಿರುವ ತ್ರಿವೇಲೆನ್ಸೀಯ ಅಲ್ಯೂಮಿನಿಯಂ ಅಯಾನು ($Al^{3+}$) ಪರಿಣಾಮಕಾರಿಯಾಗಿ ಕಶ್ಮಲಗಳನ್ನು ತಳವೂರಿಸುವುದು. ನಮ್ಮ ಮೈಮೇಲೆ ಗಾಯವಾದಾಗ ರಕ್ತಸ್ರಾವವಾಗುವುದಷ್ಟೆ. ಅದನ್ನು ತಡೆಗಟ್ಟಲು ಪಟಿಕ ಅಥವಾ ಫೆರಿಕ್ ಕ್ಲೋರೈಡಿನ ದ್ರಾವಣಗಳನ್ನು ಬಳಸುವುದು ವಾಡಿಕೆ. ಈ ರಕ್ತಸ್ರಾವವಿರೋಧಿಗಳಲ್ಲಿರುವ ಅಲ್ಯೂಮಿನಿಯಂ ($Al^{3+}$) ಮತ್ತು ಫೆರಿಕ್ ($Fl^{3+}$) ಅಯಾನುಗಳು ರಕ್ತದಲ್ಲಿರುವ ಕಲಿಲ ವಸ್ತುವನ್ನು ಹೆಪ್ಪುಗೊಳಿಸುವುವು. ಒತ್ತರಿಸಿದ ವಸ್ತು ಗಾಸಿಗೊಂಡ ರಕ್ತನಾಳದ ಬಿರುಕನ್ನು ಮುಚ್ಚಿ ರಕ್ತ ಹರಿಯುವುದನ್ನು ನಿಲ್ಲಿಸುತ್ತದೆ. ಕೃತಕಮಳೆಯನ್ನು ಬರಿಸುವುದು ಈ ತತ್ತ್ವವನ್ನು ಅನುಸರಿಸಿಯೇ. ಮೋಡಗಳಲ್ಲಿ ಕಲಿಲ ಸ್ಥಿತಿಯಲ್ಲಿರುವ ನೀರಿನ ಹನಿಗಳು ಇರುತ್ತವೆ. ವಿಮಾನದಲ್ಲಿ ಮೇಲೇರಿ ಮೋಡಗಳ ಮೇಲೆ ವಿದ್ಯುತ್ಪೂರಿತ ಮರಳನ್ನಾಗಲೀ ಅಥವಾ ಸಿಲ್ವರ್ ಅಯೊಡೈಡಿನ ಕಲಿಲವನ್ನಾಗಲೀ ಎರಚಿದರೆ ನೀರಿನ ಹನಿಗಳು ಒಟ್ಟುಗೂಡಿ ಗುರುತ್ವಾಕರ್ಷಣೆಗೆ ಒಳಪಟ್ಟು ಮಳೆಯಾಗಿ ಉದುರುವುವು. ಈ ತಂತ್ರ ಬಳಸಿ ಮರುಭೂಮಿಗಳನ್ನು ಫಲವತ್ತಾಗಿಸುವ ಯತ್ನಗಳು ನಡೆಯುತ್ತಿವೆ. ರಬ್ಬರ್ ಗಿಡಕ್ಕೆ ಕಚ್ಚುಮಾಡಿದಾಗ ಹಾಲಿನಂಥ ದ್ರವ ಹೊರ ಬೀಳುತ್ತದೆ. ಇದು ಕಲಿಲ. ಇದನ್ನು ಕುದಿಸಿ ಗರಣೆಗಟ್ಟಿಸಿದ ಹೊರತು ವಲ್ಕನೈಸ್ ಮಾಡಲು ಸಾಧ್ಯವಿಲ್ಲ. ಚರ್ಮವನ್ನು ಹದಗೊಳಿಸುವ ಉದ್ಯಮದಲ್ಲಿ ಹೆಪ್ಪುಗಟ್ಟಿಸುವ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಚರ್ಮದಲ್ಲಿ ಧನ ವಿದ್ಯುತ್ ಹೊತ್ತ ಸಸಾರಜನಕ ಕಲಿಲಗಳು ಜೆಲ್ ಸ್ಥಿತಿಯಲ್ಲಿರುತ್ತವೆ. ತೊಗಲನ್ನು ಟ್ಯಾನಿನ್ ದ್ರಾವಣದಲ್ಲಿ ನೆನೆಹಾಕಿದಾಗ ಅದು ಋಣ ಕಲಿಲವಾದ್ದರಿಂದ ಪರಸ್ಪರ ಗರಣೆಗಟ್ಟಿಸಿ ತೊಗಲು ಗಡುಸಾಗುವುದು. ಈ ಸ್ಥಿತಿಯಲ್ಲಿ ಚರ್ಮ ಕೊಳೆಯುವ ಸಂಭವ ಕಡಿಮೆ. ಇದಕ್ಕಾಗಿ ಕ್ರೋಮ್ ಆಲಂನಂಥ ಲವಣಗಳನ್ನೂ ಉಪಯೋಗಿಸುವುದುಂಟು.

ಎಲೆಕ್ಟ್ರೊಫಾರಿಸಿಸ್ ವಿಧಾನದ ಬಳಕೆಗೆ ಎರಡು ಮುಖ್ಯ ನಿದರ್ಶನಗಳಿವೆ. ನಗರ ಪ್ರದೇಶಗಳಲ್ಲಿರುವ ಅನೇಕ ಸವಲತ್ತುಗಳ ದೆಸೆಯಿಂದ ಕೈಗಾರಿಕೆಗಳು ಅಲ್ಲೇ ಕೇಂದ್ರೀಕೃತವಾಗುತ್ತಲಿವೆ. ಅವುಗಳಿಗೆ ಸಂಬಂಧಿಸಿದ ಕಾರ್ಖಾನೆಗಳು ವಿಸರ್ಜಿಸುವ ಅಗಾಧ ಪ್ರಮಾಣದ ಹೊಗೆ ನಗರದ ವಾತಾವರಣವನ್ನು ಕಲುಷಿತಗೊಳಿಸುತ್ತಿದೆ. ಹೊಗೆಯಲ್ಲಿರುವ ಇಂಗಾಲದ ಕಲಿಲ ಕಣಗಳು ಜನಸಾಮಾನ್ಯರ ಶ್ವಾಸಕೋಶಗಳನ್ನು ಹೊಕ್ಕು ಅಲ್ಲೇ ಉಳಿದು ಕ್ಷಯ, ಏಡಿಗಂತಿ ಇತ್ಯಾದಿ ರೋಗರುಜಿನಗಳನ್ನು ಉಂಟುಮಾಡುತ್ತವೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಇಂಥ ಧೂಮದಿಂದ ಕಲಿಲ ವಸ್ತುಗಳನ್ನು ನಿವಾರಿಸದೆ ವಿಧಿಯಿಲ್ಲ. ಇದರ ಸಲುವಾಗಿಯೇ ಆಧುನಿಕ ಕಾರ್ಖಾನೆಗಳ ಹೊಗೆಯ ಗೂಡುಗಳಲ್ಲಿ ಕಾಟ್ರೆಲ್ ಒತ್ತಾರಕಾರಕಗಳನ್ನು ಜೋಡಿಸಿರುತ್ತಾರೆ. ಅದರ ಕ್ರಿಯಾವಿಧಾನ ಚಿತ್ರದಿಂದ ಸ್ವಯಂವೇದ್ಯವಾಗುವುದು.

ಎರಡನೆಯದು ಗ್ರಾಮಸಾರನ ಎನಿಯೋಗದ ಸಮಸ್ಯೆ. ಅದರಲ್ಲಿ ಸಸಾರಜನಕ ಪದಾರ್ಥಗಳು ಹೇರಳವಾಗಿರುವುದರಿಂದ ಅದು ಗೊಬ್ಬರವಾಗಿ ಬಳಸಲು ಯೋಗ್ಯವಾಗಿದೆ. ಇದಕ್ಕಾಗಿ ಕಲಿಲ ವಸ್ತುಗಳಿಂದ ಕೂಡಿದ ಗ್ರಾಮಸಾರವನ್ನು ಬೃಹದಾಕಾರದ ತೊಟ್ಟಿಗಳಲ್ಲಿ ನಗರಕ್ಕೆ ಬಹು ದೂರದಲ್ಲಿ ಸಂಗ್ರಹಿಸಲಾಗುವುದು. ಅವುಗಳಲ್ಲಿ ಲೋಹದ ಧ್ರುವಗಳನ್ನಿಟ್ಟು ವಿದ್ಯುದ್ವಿಭಜನೆ ಮಾಡಿದಾಗ ಸಸಾರಜನಕ ಕಲಿಲಗಳು ವಿರುದ್ಧ ಧ್ರುವಗಳ ಬಳಿಸಾರಿ ಹೆಪ್ಪುಗಟ್ಟುವುವು. ಹೀಗೆ ಒತ್ತರಿಸಿದ ವಸ್ತುವನ್ನು ಗೊಬ್ಬರವಾಗಿಯೂ ಉಳಿದ ನೀರನ್ನು ವ್ಯಾಪಕ ವ್ಯವಸಾಯಕ್ಕೂ ಉಪಯೋಗಿಸುವರು. ರಕ್ಷಣಾ ಕಲಿಲಗಳಿಗೂ ಪ್ರಾಮುಖ್ಯವಿದೆ. ಸಸ್ಯರಕ್ಷಣೆಗೆ ಉಪಯೋಗಿಸುವ ಕೀಟನಾಶಕಗಳನ್ನು ಸಾಮಾನ್ಯವಾಗಿ ಕಲಿಲಸ್ಥಿತಿಯಲ್ಲೇ ಪ್ರಯೋಗಿಸುವುದು ವಾಡಿಕೆ. ಅವುಗಳೊಡನೆ ಸಾಬೂನು ಸೇರಿದರೆ ಮಾತ್ರ ಅವು ದೀರ್ಘಕಾಲ ವಿಲಂಬಿತ ಸ್ಥಿತಿಯಲ್ಲೇ ಉಳಿದು ಕೀಟಗಳಿಗೆ ಮಾರಕವಾಗಬಲ್ಲವು. ಐಸ್ ಕ್ರೀಂ ಸಹ ಒಂದು ಕಲಿಲ. ಇದಕ್ಕೆ ಜಿಲೆಟಿನ್ ಕೂಡಿಸಿ ರಕ್ಷಿಸಿಡಬೇಕು. ಇಲ್ಲದಿದ್ದರೆ ಲ್ಯಾಕ್ಟೋಸ್ ಸಕ್ಕರೆಯ ಮತ್ತು ಮಂಜಿನ ಹರಳುಗಳು ಉತ್ಪತ್ತಿಯಾಗಿ ಐಸ್ ಕ್ರೀಮನ್ನು ಜಗಿದು ತಿನ್ನಬೇಕಾಗುವ ಅಹಿತ ಪ್ರಸಂಗ ಉಂಟಾಗುತ್ತದೆ. ಎಲ್ಲ ಮಸಿಗಳೂ ಕಲಿಲಗಳು. ಉತ್ತಮದರ್ಜೆಯ ಶಾಯಿಗಳಿಗೆ ರಕ್ಷಣಾ ಕಲಿಲಗಳನ್ನು ಬೆರೆಸಿರುವುದರಿಂದ ಅವು ಹೆಪ್ಪುಗಟ್ಟದೆ ಫೌಂಟನ್ ಪೆನ್ನು ನಿರಾತಂಕವಾಗಿ ಬರೆಯಲು ಸಾಧ್ಯ. ಮಿದುಳು ಬಳ್ಳಿಯ ದ್ರವವೂ ಕಲಿಲವಸ್ತು. ಆರೋಗ್ಯವಂತರಾದವರಲ್ಲಿ ಅದಕ್ಕೆ ನಿರ್ದಿಷ್ಟ ಸುವರ್ಣಾಂಕವಿರುತ್ತದೆ. ಹುಚ್ಚು, ಹಿಸ್ಟೀರಿಯಾ, ಮೆನಿಂಜೈಟಿಸ್ (ಮಿದುಳುಬಳ್ಳಿಯ ಪೊರೆಗಳ ಉರಿಯೂತ) ಮುಂತಾದ ಮಿದುಳಿಗೆ ಸಂಬಂಧಿಸಿದ ರೋಗಗಳು ಸನ್ನಿಹಿತವಾದಾಗ ಮಿದುಳುಬಳ್ಳಿಯ ದ್ರವದ ಸುವರ್ಣಾಂಕ ಗಣನೀಯವಾಗಿ ವ್ಯತ್ಯಾಸವಾಗಿರುವುದು. ಇದನ್ನು ಗಮನಿಸಿ ಇಂಥ ರೋಗ ಇಂತಿಷ್ಟು ದಿನಗಳಲ್ಲಿ ಪ್ರಾಪ್ತವಾಗುವುದೆಂಬುದನ್ನು ಊಹಿಸಿ ಯೋಗ್ಯ ಔಷಧೋಪಚಾರವನ್ನು ಕೈಗೊಳ್ಳಬಹುದು.

ಫಲವತ್ತಾದ ಮಣ್ಣು ಕಲಿಲಸ್ಥಿತಿಯಲ್ಲಿರುತ್ತದೆ. ಪ್ರಾಣಿಗಳ ಮಲ ಕೊಳೆತು ಅದು ರಕ್ಷಣಾ ಕಲಿಲವಾಗಿ ವರ್ತಿಸುವುದು. ಈ ಸ್ಥಿತಿಯಲ್ಲಿ ಮಣ್ಣು ತೇವ ಮತ್ತು ಪೋಷಣಾಂಶಗಳನ್ನು

ಸರಾಗವಾಗಿ ಹೀರಿಕೊಳ್ಳಬಲ್ಲುದು. ಪೇಯಿಂಟುಗಳು, ಸಿಮೆಂಟ್, ಸಂಯೋಜಿತ ಪ್ಲಾಸ್ಟಿಕ್ಕುಗಳು, ಗ್ರಾಫೈಟಿನಿಂದಾದ ಕೀಲೆಣ್ಣೆಗಳು, ಬ್ರೆಡ್ಡು, ಬೆಣ್ಣೆ, ಮೊಸರು ಮೊದಲಾದವುಗಳೆಲ್ಲ ಕಲಿಲಗಳು. ಹೀಗೆ ವಿಶ್ವವ್ಯಾಪಿಯಾದ ಕಲಿಲಗಳ ಪ್ರಯೋಜನ ಇಷ್ಟುಮಾತ್ರವೆಂದು ಹೇಳಲು ಬಾರದು. (ಎಚ್.ಜಿ.ಎಸ್.)

**ಕಲಿಸ್ಟೊ :** ಗುರುಗ್ರಹದ 12 ಉಪಗ್ರಹಗಳ ಪೈಕಿ ಒಂದು. ಪ್ರಥಮ ಸಂಶೋಧಕ ಗೆಲಿಲಿಯೋ (1610). ಮುಂದಿನ ಯಾದಿ ಗುರು_ಕಲಿಸ್ಟೊ, ಭೂಮಿ_ಚಂದ್ರ ವ್ಯವಸ್ಥೆಗಳ ಕೆಲವು ವಿವರಗಳನ್ನು ತೋರಿಸುತ್ತದೆ.

ಗಾತ್ರದ ದೃಷ್ಟಿಯಿಂದ ಇದಕ್ಕೆ ಗುರೂಪಗ್ರಹಗಳ ಪಂಕ್ತಿಯಲ್ಲಿ ಮಾತ್ರವಲ್ಲ ಸೌರವ್ಯೂಹದ ಉಪಗ್ರಹಗಳ ಸಾಲಿನಲ್ಲೇ ಮೊದಲ ಮಣೆ. ಆದರೆ ಒಂದು ಉಪಗ್ರಹದ ವಿವರಗಳನ್ನು ಪರಿಶೀಲಿಸುವಾಗ ಮಾತೃಗ್ರಹದೊಡನೆ ಅದನ್ನು ತುಲನಿಸುವುದು ವಾಡಿಕೆ. ಕಲಿಸ್ಟೊ ಹಾಗೂ ಗುರು ವ್ಯಾಸಗಳ ಪ್ರಮಾಣ 0.04ಕ್ಕಿಂತಲೂ ಕಡಿಮೆ. ಚಂದ್ರನ ಹಾಗೂ ಭೂಮಿಯ ವ್ಯಾಸಗಳ ಪ್ರಮಾಣ 0.28. ಇದೇ ಪ್ರಕಾರ ಕಲಿಸ್ಟೊ ಹಾಗೂ ಗುರು ದ್ರವ್ಯರಾಶಿಗಳ ಪ್ರಮಾಣ 0.00005 ; ಚಂದ್ರ ಹಾಗೂ ಭೂಮಿಗಳ ವ್ಯಾಸ ಪ್ರಮಾಣ 0.01. ಇಂಥ ತುಲನೆಗಳ ಅಭ್ಯಾಸ ಆಯಾ ಗ್ರಹ ಹಾಗೂ ಅದರ ಉಪಗ್ರಹಗಳ ಅಸ್ತಿತ್ವವನ್ನು ಕುರಿತು ಅಮೂಲ್ಯ ಪುರಾವೆಗಳನ್ನು ಒದಗಿಸುತ್ತದೆ. ಸೌರವ್ಯೂಹದ ಎಲ್ಲ ಉಪಗ್ರಹಗಳಲ್ಲೂ ಚಂದ್ರನ ಸ್ಥಾನ ವಿಶಿಷ್ಟವಾದದ್ದು ಎಂದು ತಿಳಿದದ್ದು ಈ ಕಾರಣದಿಂದ.

| ವಿವರ | ಕಲಿಸ್ಟೊ | ಚಂದ್ರ |
|---|---|---|
| ಸರಾಸರಿ ಕಾಂತಿ ಪರಿಮಾಣ | 6.3 | ಹುಣ್ಣಿಮೆ_12.7 |
| ಸಪ್ತಮಿ | – | 10. |
| ವ್ಯಾಸ (ಕಿಮೀ) | 5,180 | 3,473 |
| ಮಾತೃಗ್ರಹದಿಂದ ದೂರ (ಗ್ರಹತ್ರಿಜ್ಯಗಳಲ್ಲಿ) | 26.36 | 60 |
| ನಾಕ್ಷತ್ರಿಕ ವರ್ಷ (ಮಾತೃ ಗ್ರಹವನ್ನು ಒಂದು ಸಲ ಪರಿಭ್ರಮಿಸಲು ಬೇಕಾಗುವ ಅವಧಿ | 16 ದಿ. 16 ಗಂ. 32 ಮಿ. 9 ಸೆ. | 27 ದಿ. 7 ಗಂ. 43 ಮಿ. 11.5 ಸೆ. |

**ಕಲೀಂ :** 1651–. ಪಾರ್ಸಿ ಭಾಷೆಯ ಪ್ರಸಿದ್ಧಕವಿ. ಅಬು ತಾಲಿಬ್ ಕಲೀಂ ಹಮದಾನಿ ಇವನ ಪೂರ್ಣ ಹೆಸರು. ಇರಾನಿನ ಪ್ರಮುಖ ಶಿಕ್ಷಣ ಕೇಂದ್ರವಾಗಿದ್ದ ಹಮದಾನಿನಲ್ಲಿ ಜನಿಸಿ, ಅಲ್ಲಿಯೇ ಶಿಕ್ಷಣ ಪಡೆದ. ಹೆಸರು ಅಬುತಾಲಿಬ್ ಆದರೂ ಕಲೀಂ ಎಂಬ ಕಾವ್ಯನಾಮದಿಂದ ಕವನಗಳನ್ನು ರಚಿಸಿದ. ಹೀಗಾಗಿ ಕಾವ್ಯನಾಮವೂ ಅವನ ಹೆಸರಿನೊಂದಿಗೆ ಸೇರಿಕೊಂಡಿತು. ಕಲೀಂ ಪ್ರತಿಭಾವಂತ ಮತ್ತು ಕನಸುಗಾರ, ಅವನ ಕಲ್ಪನಾಶಕ್ತಿಗೆ ಮತ್ತು ವಿಚಾರ ವೈಭವಕ್ಕೆ ಅನೇಕ ಕವನಗಳು ಸಾಕ್ಷಿಯಾಗಿವೆ.

ಭಾರತದಲ್ಲಿ ಮೊಗಲರು ದರ್ಬಾರು ಮಾಡುತ್ತಿದ್ದ ದಿನಗಳವು. ಮೊಗಲರ ದರ್ಬಾರಿನಿಂದ ಆಕರ್ಷಿತನಾದ ಕಲೀಂ ಭಾರತಕ್ಕೆ ಬಂದು ದೆಹಲಿಯಲ್ಲಿ ನೆಲೆಸಿದ. ಕ್ರಮೇಣ ದೊರೆ ಷಾಜಹಾನನ ಪ್ರೀತಿಗೂ ಪಾತ್ರನಾದ. ಆಸ್ಥಾನದಲ್ಲಿದ್ದ ಮಹಾಕವಿ ಕುದ್ಸಿಯ ಅನಂತರ ದೊರೆ ಕಲೀಮನಿಗೆ ಮಹಾಕವಿಪಟ್ಟ ಕಟ್ಟಿ ಗೌರವಿಸಿದ.

ಕಾಶ್ಮೀರ ಮತ್ತು ಇತರ ಪ್ರದೇಶಗಳ ಮೇಲೆ ದೊರೆ ದಾಳಿ ಮಾಡಿದಾಗ ಕಲೀಮನೂ ಜೊತೆಗಿದ್ದು ಷಾಜಹಾನ್‌ನಾಮಾ ಎಂಬ ಬೃಹತ್ ಕಾವ್ಯವನ್ನು ರಚಿಸಿದ. ಈ ಕಾವ್ಯದಲ್ಲಿ ಷಾಜಹಾನನ ರಾಜ್ಯಭಾರಕ್ರಮವೇ ಮೊದಲಾದ ವಿವರಗಳು ಬಂದಿವೆ.

ಷಾಜಹಾನ ಜಗತ್ ಪ್ರಸಿದ್ಧವಾದ ಮಯೂರ ಸಿಂಹಾಸನವನ್ನು ಮಾಡಿಸಿದಾಗ ಅದರ ಸೌಂದರ್ಯ ಮತ್ತು ವೈಭವಗಳಿಗೆ ಮಾರುಹೋದ ಕಲೀಂ ಅದರ ಮೇಲೆ ಸುಂದರವಾದ ಪದ್ಯ ಬರೆದು, ರಾಜಾಸ್ಥಾನದಲ್ಲಿ ಓದಿದ. ಇದರಿಂದ ಹರ್ಷಗೊಂಡ ದೊರೆ, ಕವಿಗೆ ತುಲಾಭಾರದ ಮಾರ್ಯಾದೆ ಮಾಡಿಸಿ, ಅಷ್ಟೂ ಹಣವನ್ನು ಅವನಿಗೇ ಕೊಟ್ಟುದಲ್ಲದೆ ಮಲಿಕುಶ್ಶುಅರಾ (ಕವಿಗಳ ಸಾಮ್ರಾಟ) ಎಂಬ ಬಿರುದನ್ನೂ ಕೊಟ್ಟು ಗೌರವಿಸಿದನಂತೆ.

ಕಲೀಮನ ಅನೇಕ ಕವನಗಳಲ್ಲಿ ಕಾಶ್ಮೀರ, ಆಗ್ರ ಮೊದಲಾದ ಕವನಗಳು ಪ್ರಸಿದ್ಧವಾಗಿವೆ. ಭಾರತ ಮತ್ತು ಇರಾನ್ ಈ ಎರಡು ದೇಶಗಳಲ್ಲೂ ಕಲೀಂ ಹೆಸರಾಗಿದ್ದಾನೆ.

ತುಂಬು ಸಂತೋಷ ಮತ್ತು ನೆಮ್ಮದಿಯಿಂದ ಜೀವನ ನಡೆಸಿದ ಕಲೀಂ ತನ್ನ ಕೊನೆಯ ದಿನಗಳನ್ನು ಕಾಶ್ಮೀರದಲ್ಲಿ ಕಳೆದ. ಶ್ರೀನಗರದ ಕವಿಗಳ ಸ್ಮಶಾನದಲ್ಲಿ ಇವನನ್ನು ಸಮಾಧಿ ಮಾಡಲಾಗಿದೆ. (ಎಂ.ಎಂ.ಎಚ್.)

**ಕಲೀನಿನ್‌ಗ್ರಾಡ್ :** ಸೋವಿಯತ್ ದೇಶದ ಮತ್ತು ಆಬ್ಲಾಸ್ಟಿನ ಆಡಳಿತಕೇಂದ್ರ. ಮುಖ್ಯ ಬಂದರು, ನೌಕಾ ನೆಲೆ, ಪುರಾತನ ನಗರ, ಇದರ ಹಿಂದಿನ ಹೆಸರು ಕೋನಿಕ್ಸ್‌ಬರ್ಗ್. ರಷ್ಯನ್ ಸೋವಿಯತ್ ಫೆಡರೇಟೆಡ್ ಸಮಾಜವಾದಿ ಗಣರಾಜ್ಯದಲ್ಲಿದೆ. ಜನಸಂಖ್ಯೆ 9,55,281 (2002). ಮೊದಲು ಪ್ರಷ್ಯದ, ಅನಂತರ ಜರ್ಮನಿಯ ಅಡಿಯಲ್ಲಿ ಇದು ಬಾಲ್ಟಿಕ್ ಸಮುದ್ರದ ಮುಖ್ಯ ನೌಕಾನೆಲೆಗಳಲ್ಲೊಂದಾಗಿತ್ತು. 1945ರಲ್ಲಿ ಪಾಟ್ಸ್‌ಡ್ಯಾಂ ಒಪ್ಪಂದದ ಪ್ರಕಾರ ಸೋವಿಯತ್ ದೇಶಕ್ಕೆ ಸೇರಿತು. ಪ್ರೇಗೋಲ್ಯ ನದಿಯ ದಡದಲ್ಲಿರುವ ಈ ನಗರ ಮಾಸ್ಕೋವಿಗೆ ಪಶ್ಚಿಮಕ್ಕೆ 1008 ಕಿಮೀ ದೂರದಲ್ಲಿದೆ. ಬರ್ಲಿನ್ ಇದಕ್ಕೆ ನೈಋತ್ಯದಲ್ಲಿ, 540 ಕಿಮೀ ದೂರದಲ್ಲಿದೆ.

ಕಲೀನಿನ್‌ಗ್ರಾಡ್ ಟ್ಯುಟಾನಿಕ್ ಸರ್ದಾರರಿಂದ 1255ರಲ್ಲಿ ಸ್ಥಾಪಿತವಾಗಿ 1286ರಲ್ಲಿ ಪಟ್ಟಣವಾಯಿತು. ಹ್ಯಾನ್ಸಿಯಾಟಿಕ್ ಕೂಟಕ್ಕೆ ಸೇರಿದ್ದ ಈ ಪಟ್ಟಣ ಟ್ಯುಟಾನಿಕರ ಕೇಂದ್ರವಾದ್ದು 15ನೆಯ ಶತಮಾನದಲ್ಲಿ. 16ನೆಯ ಶತಮಾನದಲ್ಲಿ ಇದು ಪ್ರಷ್ಯದ ಡ್ಯೂಕರ ಮುಖ್ಯಪಟ್ಟಣವಾಯಿತು. ಸುಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಇಮ್ಯಾನ್ಯುಯೆಲ್ ಕಾಂಟ್ ಇಲ್ಲಿ ಪ್ರಾಧ್ಯಾಪಕನಾಗಿದ್ದ. ಆತನ ಸ್ಮಾರಕವೊಂದು 1864ರಲ್ಲಿ ಸ್ಥಾಪಿತವಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಕಲೀನಿನ್‌ಗ್ರಾಡ್ ನಗರ ಅಪಾರ ಹಾನಿಗೆ ಗುರಿಯಾಯಿತು. ಇಲ್ಲಿಯ ಅನೇಕ ಪುರಾತನ ಕಟ್ಟಡಗಳು ನಾಶವಾದುವು. ಕೆಲವು ಮಾತ್ರ ಇಂದಿಗೂ ಉಳಿದಿವೆ.

ಕಲೀನಿನ್‌ಗ್ರಾಡಿನ ಬಳಿ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟುವುದಿಲ್ಲವಾದ್ದರಿಂದ ಇದು ಸೋವಿಯತ್ ದೇಶದ ಸರ್ವಋತು ಬಂದರು. ಕಲೀನಿನ್‌ಗ್ರಾಡಿನಲ್ಲಿ ಕಾಗದ, ರಸಾಯನವಸ್ತು ಮತ್ತು ಮೀನಿನ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳಿವೆ. ಮರದ ದಿಮ್ಮಿ, ಮೀನುಗಾರಿಕೆ ಎರಡು ಮುಖ್ಯ ಉದ್ಯೋಗಗಳು. ಸಾಗರ ಸಂಶೋಧನ ಇಲಾಖೆಗಳೂ ವಿಜ್ಞಾನ ಸಂಶೋಧನ ಕೇಂದ್ರಗಳೂ ನಗರದಲ್ಲುಂಟು. ಹಿನ್ನಾಡಿಗೆ ಹಲವು ರೈಲುಮಾರ್ಗಗಳಿವೆ. ಹೂಳೆತ್ತಿ ರಚಿಸಿದ ಕಡಲ್ಗಾಲುವೆಯ ಮೂಲಕ ಕಲೀನಿನ್‌ಗ್ರಾಡಿಗೆ ಅದರ ಹೊರರೇವಾದ ಬಾಲ್ಟಿಸ್ಕ್ ನೊಂದಿಗೆ ಸಂಬಂಧ ಕಲ್ಪಿಸಲಾಗಿದೆ. (ಆರ್.ಡಿ.ಆರ್.)

**ಕಲೀಫರು, ಅರೇಬಿಯದ :** ಪೈಗಂಬರ್ ಮಹಮ್ಮದರ ಧಾರ್ಮಿಕ ಉತ್ತರಾಧಿಕಾರಿಗಳು ಹಾಗೂ ಅರಬ್ ಮುಸ್ಲಿಂ ಸಾಮ್ರಾಜ್ಯ ಮುಖ್ಯರು. ಮಹಮ್ಮದರ ಅನಂತರ ಮದೀನದಲ್ಲಿ ಅನುಕ್ರಮವಾಗಿ ಆಳಿದ ಮೊದಲ ನಾಲ್ಕು ಮಂದಿ ಕಲೀಫರದು ಒಂದು ಮಾಲಿಕೆ. ಇವರು ಮದೀನದ ಕಲೀಫರೆಂದು ಪ್ರಸಿದ್ಧರಾಗಿದ್ದಾರೆ. ಆಮೇಲೆ ಬಂದವರು ದಮಾಸ್ಕಸಿನ ಉಮಾಯದ್ ಕಲೀಫರು. ಅನಂತರ ಅಬ್ಬಾಸಿದ್ ಕಲೀಫರು ಬಾಗ್ದಾದಿನಿಂದ ಆಳಿದರು. ಕಲೀಫ ಎಂಬುದು ಆರಂಭದಲ್ಲಿ ಒಂದು ಹುದ್ದೆಯಾಗಿದ್ದು ಅನಂತರ ಒಂದು ಬಿರುದಾಗಿ ಪರಿವರ್ತನೆಗೊಂಡಿತು. 632ರಲ್ಲಿ ಆರಂಭವಾದ ಕಲೀಫ್ ವ್ಯವಸ್ಥೆ 1924ರ ವರೆಗೆ ವಿವಿಧ ರೂಪಗಳಲ್ಲಿ ಮುಂದುವರಿಯಿತು. ಮೊದಲ ನಾಲ್ವರ ಕಾಲ 632–661. (ಎಸ್.ವಿ.ಡಿ.)

**ಮೊದಲ ನಾಲ್ವರು :** ಮುಸ್ಲಿಂ ಜನಾಂಗದ ಭಾವೀ ಆಡಳಿತದ ಬಗ್ಗೆ ಯಾವ ಸೂಚನೆಯನ್ನೂ ನೀಡದೆ 632 ಜೂನ್ 8ರಂದು ಮಹಮ್ಮದ್ ಪೈಗಂಬರ್ ತೀರಿಕೊಂಡಾಗ ಸ್ವಲ್ಪ ಗೊಂದಲವೇ ಉಂಟಾಗಿತ್ತು. ಮದೀನದಲ್ಲಿ ಹಲವಾರು ಪಂಗಡಗಳವರೂ ಮೆಕ್ಕದಲ್ಲಿದ್ದ ಮುಸ್ಲಿಮರೂ ಸಭೆ ಸೇರಿದರು. ದೀರ್ಘ ಚರ್ಚೆ ಆದ ಅನಂತರ ಅಬುಬಕರನನ್ನು ತಮ್ಮ ನಾಯಕನೆಂದು ಪರಿಗಣಿಸಬೇಕೆಂದು ತೀರ್ಮಾನವಾಯಿತು. ಖಲೀಫತ್ ರಸುಲ್_ಅಲ್ಲಾ (ದೇವರ ದೂತನ ಉತ್ತರಾಧಿಕಾರಿ) ಎಂಬ ಬಿರುದನ್ನು ಅಬುಬಕರ್ ತಳೆದ. ಕಲೀಫ್ ಎಂಬ ಪದ ಇದರಿಂದ ಬಂದದ್ದು (ಕಲೀಫ್ ಎಂದರೆ ಪ್ರತಿನಿಧಿ ಎಂಬ ಅರ್ಥವೂ ಉಂಟು). ಪೈಗಂಬರ್ ಬದುಕಿದ್ದಾಗ ಒಮ್ಮೆ ಅಸ್ವಸ್ಥರಾಗಿದ್ದ ಸಮಯದಲ್ಲಿ ತಮ್ಮ ಅನುಯಾಯಿ ಹಾಗೂ ಸೋದರ ಮಾವ ಅಬುಬಕರನನ್ನೇ ಪ್ರಾರ್ಥನೆಯ ನೇತೃತ್ವ ವಹಿಸಲು ನೇಮಿಸಿದ್ದರಂತೆ.

**ಅಬುಬಕರ್ :** ಸು. 573ರಲ್ಲಿ ಹುಟ್ಟಿದ ಈತ ಮಕ್ಕದ ಕುರೇಷ್ ಪಂಗಡದ ತಾಯಿಂ ಗುಂಪಿಗೆ ಸೇರಿದವ. ಈತ ಮೂಲತಃ ವ್ಯಾಪಾರಿ. ಪೈಗಂಬರರ ಮನೆತನದ ಜನರ ಅನಂತರ ಮತಾಂತರಗೊಂಡ ವ್ಯಕ್ತಿಗಳಲ್ಲಿ ಮೊದಲಿಗ. ಅಬುಬಕರನ ಮಗಳಾದ ಆಯೇಷಾಗೆ ಪೈಗಂಬರರೊಂದಿಗೆ ಮದುವೆಯಾಗಿತ್ತು. ಹೆಜಿರಾದ (ಪಲಾಯನ) ಕಾಲಕ್ಕೆ ಈತ ಪೈಗಂಬರರ ಜೊತೆಯಲ್ಲಿದ್ದ. 632ರಲ್ಲಿ ಕಲೀಫತ್ ರಸುಲ್_ಅಲ್ಲಾ ಆಗಿ ಈತ ಆಯ್ಕೆಯಾದಾಗ ಪೈಗಂಬರರ ಅಳಿಯ ಅಲಿ ಮತ್ತು ಚಿಕ್ಕಪ್ಪ ಅಬ್ಬಾಸ್ ವಿರೋಧಿಸಿದ್ದರು. ಆದರೆ ಮುಂದೆ ಅಲಿ ಬೆಂಬಲ ವ್ಯಕ್ತಪಡಿಸಿದ. ಆದರೂ ಈತ ಕಲೀಫ್ ಆದೊಡನೆ ಕೆಲವೊಂದು ಅರಬ್ ಮುಸ್ಲಿಂ ಪಂಗಡಗಳೇ ಈತನ ವಿರುದ್ಧ ದಂಗೆಯೆದ್ದುವು. 633ರಲ್ಲಿ ಬಂಡಾಯಗಾರರನ್ನು ಸೋಲಿಸಲಾಯಿತು. ಬಿಜ಼ಾಂಟಿಯಂ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದ ಸಿರಿಯದ ಅರಬರು ತಮ್ಮ ಸಮ್ರಾಟನ ವಿರುದ್ಧ ಇವನಲ್ಲಿ ನೆರವು ಯಾಚಿಸಿದಾಗ ಈತ ಬಿಜ಼ಾಂಟಿಯಂನ ವಿರುದ್ಧ ಅರಬರ ಭಾವನೆಗಳನ್ನು ಕೆರಳಿಸಿ ಅರೇಬೀಯದ ಐಕ್ಯ ಸಾಧಿಸಿದ. ಅವರ ಸೇನಾನಿಯಾದ ಖಲೀದ್ ಇಬ್ನ್ ಅಲ್–ವಲೀದ್ ಸಿರಿಯದ ಹಿರಾ ಪಟ್ಟಣವನ್ನು 633ರಲ್ಲಿ ಗೆದ್ದುಕೊಂಡ. 634ರಲ್ಲಿ ದಮಾಸ್ಕಸ್ ಬಳಿ ಬಿಜ಼ಾಂಟಿಯಂನ ಸೇನೆಯನ್ನು

ಸೋಲಿಸಿ ಇಡೀ ಸಿರಿಯವನ್ನು ವಶಪಡಿಸಿಕೊಂಡ. ಆದರೆ ಅದಕ್ಕೆ ಮೊದಲೇ ಅಬು ಬಕರ ತೀರಿಕೊಂಡಿದ್ದ. ಮದೀನದಲ್ಲಿ ಪೈಗಂಬರ್ ಮತ್ತು ಆಯೇಷಾರ ಸಮಾಧಿಯ ಬಳಿಯೇ ಈತನ ಸಮಾಧಿಯೂ ಇದೆ.

ತನ್ನ 59ನೆಯ ವಯಸ್ಸಿನಲ್ಲಿ ಕಲೀಫ್ ಪದವಿಗೇರಿದ ಅಬುಬಕರ್ ಸರಳಜೀವಿ; ಈತನಿಗೆ ಯಾವ ದುಶ್ಚಟಗಳೂ ಇರಲಿಲ್ಲ. ಕಲೀಫ್ ಹುದ್ದೆಗಾಗಿ ನೀಡುತ್ತಿದ್ದ ವೇತನವನ್ನು ಈತ ಆರಂಭದಲ್ಲಿ ಸ್ವೀಕರಿಸಲಿಲ್ಲ; ಮುಂದೆ ಸರ್ಕಾರಕ್ಕೇ ಮರಳಿಸಿದ.

ಮುಂದಣ ಮೂವರು ಕಲೀಫರೂ ಪೈಗಂಬರರ ಜಾಮಾತರು.

**ಉಮರ್:** 634–44. ಎರಡನೆಯ ಕಲೀಫ್ ಉಮರ್ ಅಬು ಹಫ್ಸಾ ಇಬ್ನ್ ಅಲ್–ಖತಾಬ್ ಪೈಗಂಬರರ ಮಗಳಾದ ಹಫಸಾಳನ್ನು ವರಿಸಿದ್ದ. 581 – 585ರ ನಡುವೆ ಹುಟ್ಟಿರಬಹುದಾದ ಈತ ಕುರೆಯ್ಶ್ ಪಂಗಡದ ಅಡಿಗುಂಪಿಗೆ ಸೇರಿದವ. ಅಬುಬಕರನ ಪ್ರಮುಖ ಸಲಹೆಗಾರನಾಗಿದ್ದ, ತನಗೆ ಕಲೀಫ್ ಪದವಿ ದೊರೆತೊಡನೆ ಅಲ್–ವಲೀದನನ್ನು ಸೇನಾಧಿಪತ್ಯದಿಂದ ತೆಗೆದು ಅಬು ಉಬೇದಾನನ್ನು ಆ ಸ್ಥಾನಕ್ಕೆ ನೇಮಿಸಿದ. ಅಲ್–ವಲೀದ 635ರಲ್ಲಿ ದಮಾಸ್ಕಸನ್ನೂ 636ರಲ್ಲಿ ಅಂಟಿಯಾಕನ್ನೂ 638ರಲ್ಲಿ ಜೆರುಸಲೆಮನ್ನೂ ವಶಪಡಿಸಿಕೊಂಡ. 640ರ ವೇಳೆಗೆ ಇಡೀ ಸಿರಿಯ ಅವನ ಅಧೀನವಾಯಿತು. 641ರಲ್ಲಿ ಪರ್ಷಿಯದ ಮೇಲೆ ದಂಡೆತ್ತಿ ಹೋಗಿ ಆ ದೇಶದ ಬಹುಭಾಗವನ್ನೂ ಗೆದ್ದುಕೊಂಡ. ಉಮರನ ಕಾಲದಲ್ಲೇ ಈಜಿಪ್ಟನ್ನೂ ಗೆಲ್ಲಲಾಯಿತು (641). ಉಮ್ಮಾಯಿದ್ ಗುಂಪಿನ ಅಬು ಸುಫಿಯಾನನ ಮಗ ಮುಆವಿಯನನ್ನು ಸಿರಿಯದ ಮಂಡಲಾಧಿಕಾರಿಯಾಗಿ ಉಮರ್ ನೇಮಿಸಿದ. 644 ನವೆಂಬರ್ ತಿಂಗಳಲ್ಲಿ ಪ್ರಾರ್ಥನೆ ನಡೆಸುವಾಗ ಪಾರಸಿಕ ಗುಲಾಮನೊಬ್ಬ ಅವನನ್ನು ಮರಣಾಂತಿಕವಾಗಿ ಘಾತಿಸಿದ. ತನ್ನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಆರು ಜನ ಪ್ರಮುಖರನ್ನು ಹೆಸರಿಸಿ ಉಮರ್ ತೀರಿಕೊಂಡ.

ಅಮೀರ್ ಅಲ್ ಮುಮಿನಿನ್ (ಆಸ್ತಿಕರ ನಾಯಕ) ಎಂಬ ಬಿರುದು ಧರಿಸಿದ್ದ ಉಮರ್ ಸರಳಜೀವಿ, ನೇಮನಿಷ್ಠಾವಂತ. ಒಂದು ಅಂಗಿ ಮತ್ತು ಒಂದು ಟೋಪಿ ಇವು ಮಾತ್ರ ಅವನಲ್ಲಿದ್ದ ಬಟ್ಟೆಗಳು. ಬಾರ್ಲಿಯ ರೊಟ್ಟಿ ಮತ್ತು ಖರ್ಜೂರ–ಇವೇ ಅವನ ಆಹಾರ. ಜೆರುಸಲೆಂನಲ್ಲಿರುವ ಕುಬ್ಬೆತ್ ಎಸ್ ಲಾಬ್ರಾ ಮಸೀದಿ ಅವನ ನಿರ್ಮಾಣವೆಂದು ನಂಬಲಾಗಿದೆ.

**ಉತ್ಮಾನ್ :** 644–56. ಉಮರನ ಅನಂತರ ಉತ್ಮಾನ್ ಇಬ್ನ್ ಅಫ್ಫಾನ್ ಕಲೀಫನಾದ. ಈತ ಪೈಗಂಬರರ ಇನ್ನೊಬ್ಬ ಜಾಮಾತ. ಉಮರ್ ನೇಮಿಸಿದ್ದ ಆರು ಮಂದಿ ಪ್ರಮುಖರು ಈತನನ್ನು ಕಲೀಫನೆಂದು ಆಯ್ಕೆ ಮಾಡಿದರು. ಸು. 574ರಲ್ಲಿ ಈತ ಹುಟ್ಟಿದ. ಇವನ ಕಾಲದಲ್ಲಿ ಇಸ್ಲಾಂ ಸಾಮ್ರಾಜ್ಯ ಹಿರಾತ್, ಕಾಬೂಲ್, ಬಾಲ್ಖ್, ಟಿಫ್ಲಿಸ್ ಗಳನ್ನು ಒಳಗೊಂಡಿತ್ತು. ಇವನ ಸೇನೆಗಳು ಕಪ್ಪು ಸಮುದ್ರದ ದಂಡೆಯವರೆಗೂ ಬಂದಿದ್ದುವು. ನೌಕಾಸೇನೆಯೊಂದನ್ನು ಸಂಘಟಿಸಿ ಸೈಪ್ರಸ್ ದ್ವೀಪವನ್ನು ಗೆಲ್ಲಲಾಯಿತು. ಕುರಾನ್‌ಗೆ ಈಗಿನ ರೂಪ ಕೊಡಲಾದ್ದು ಈತನ ಕಾಲದಲ್ಲೇ. ಈಜಿಪ್ಟಿನ ಕೆಲವು ಮುಸಲ್ಮಾನರು ಇವನ ವಿರುದ್ಧ ದಂಗೆಯೆದ್ದರು. ದಂಗೆಕೋರರು ಮದೀನಕ್ಕೆ ನುಸುಳಿ ಬಂದು 656ರಲ್ಲಿ ಇವನನ್ನು ಕೊಂದರು. ಕಲೀಫ್ ಅಬುಬಕರನ ಮಗ ಮಹಮ್ಮದನೇ ಇವನನ್ನು ಕೊಂದನೆಂದು ಹೇಳಲಾಗಿದೆ.

**ಅಲಿ:** 656–61. ಈತ ಮುಂದಿನ ಕಲೀಫ. ಇಸ್ಲಾಮನ್ನನುಸರಿಸಿದ ಮೊದಲಿಗರಲ್ಲೊಬ್ಬ. ಈತನ ತಂದೆ ಅಬೂ ಕಲೀಬ್–ಕುರೇಷ್ ಪಂಗಡದ ಹಕೀಂ ಗುಂಪಿನ ನಾಯಕ, ಪೈಗಂಬರನ ಕಕ್ಕ. ಬಾಲ್ಯದಲ್ಲೇ ಧೈರ್ಯಶಾಲಿಯೆಂಬ ಹೆಸರುಗಳಿಸಿದ್ದ. ಚಿಕ್ಕಂದಿನಿಂದಲೂ ಪೈಗಂಬರರ ಜೊತೆಯಲ್ಲೇ ಬೆಳೆದು ಪೈಗಂಬರರ ಮೊದಲ ಹೆಂಡತಿ ಖದೀಜಾಳ ಮಗಳನ್ನು ಮದುವೆಯಾಗಿದ್ದ.

ಅಲಿ ಕಲೀಫನಾದಗಲೂ ಪೈಗಂಬರರ ಅನೇಕ ಅನುಯಾಯಿಗಳು ಪೈಗಂಬರರ ಹೆಂಡತಿ ಆಯೇಷಾಳ ನೇತೃತ್ವದಲ್ಲಿ ದಂಗೆಯೆದ್ದರು. ದಕ್ಷಿಣ ಇರಾಕಿನ ಬಸ್ರಾ ಬಳಿ ನಡೆದ ಯುದ್ಧದಲ್ಲಿ ಒಂಟೆಯ ಮೇಲೆ ಕೂತು ಸೇನೆಗೆ ಮಾರ್ಗದರ್ಶನ ನೀಡುತ್ತಿದ್ದ ಆಯೇಷಾಳನ್ನು ಅಲಿ ಪೂರ್ತಿಯಾಗಿ ಸೋಲಿಸಿ ಆಕೆಯನ್ನು ಗೌರವಪೂರ್ವಕವಾಗಿ ಮದೀನಕ್ಕೆ ಮರಳಿಸಿದ. ಈ ಯುದ್ಧದಲ್ಲಿ ಇರಾಕಿನ ಕುಫಾ ಪಟ್ಟಣದ ಜನ ನೀಡಿದ ನೆರವಿಗಾಗಿ ಅಲಿ ತನ್ನ ರಾಜಧಾನಿಯನ್ನು ಅಲ್ಲಿಗೆ ವರ್ಗಾಯಿಸಿದ.

ಉಮಾಯದ್ ಗುಂಪಿಗೆ ಸೇರಿದ್ದು ಸಿರಿಯದಲ್ಲಿ ಮಂಡಲಾಧಿಕಾರಿಯೂ ಅಬು ಸುಫಿಯನನ ಮಗನೂ ಆಗಿದ್ದ ಮುಆವಿಯನ ವಿರೋಧವನ್ನು ಅಲಿ ಎದುರಿಸಬೇಕಾಯಿತು. ಯುಫ್ರೇಟಿಸ್ ನದಿಯ ಬಳಿ ಸಿಫಿನ್‌ನಲ್ಲಿ ಇಬ್ಬರಿಗೂ ಯುದ್ಧವಾಗಿ, ಕಲೀಫರು ಯಾರಾಗಬೇಕೆಂಬ ಬಗ್ಗೆ ಪಂಚಾಯತಿ ನಡೆಸಿ ನಿರ್ಣಯಾವಾಗಲೆಂಬ ಷರತ್ತಿನ ಮೇಲೆ 657ರಲ್ಲಿ ಯುದ್ಧ ನಿಂತಿತು. ಈ ನಡುವೆ ಅಲಿ ಕೊಲೆಗೆ ಈಡಾದ ಕುಫಾ ಬಳಿ ಅಲ್ ನಜಬ್ ಎಂಬ ಹೆಸರಿನ ಇವನ ಸಮಾಧಿಯುಂಟು. ಷಿಯಾಗಳಿಗೆ ಇದು ಪುಣ್ಯ ಸ್ಥಳ.

ಅಲಿಯ ಮಗ ಹಸನ್ ಮುಂದೆ ಕಲೀಫನಾಗಬೇಕೆಂಬುದು ಅಭಿಪ್ರಾಯವಾಗಿತ್ತು. ಆದರೆ ಮುಆವಿಯನ ಉಪಾಯದಿಂದ ಈ ಹುದ್ದೆ ಅವನ ಕೈ ತಪ್ಪಿತು. ಮುಆವಿಯನ ಮಾತಿನಂತೆ ಆ ಅಧಿಕಾರವನ್ನು ಆತ ತಾನಾಗಿಯೇ ಬಿಟ್ಟುಕೊಟ್ಟ. 669ರಲ್ಲಿ ಆತ ಮಕ್ಕಾದಲ್ಲಿ ವಿಷಪ್ರಾಶನದಿಂದ ತೀರಿಕೊಂಡ. ಮುಂದೆ ಆಳಿದವರು ಉಮಾಯದ್ ಕಲೀಫರು.

**ಉಮಾಯದ್ ಕಲೀಫರು:** ಆರಂಭದಲ್ಲಿ ಪೈಗಂಬರರ ವಿರೋಧಿಯಾಗಿದ್ದು ತಡವಾಗಿ ಮತಾಂತರ ಹೊಂದಿದ್ದ ಅಬು ಸುಫಿಯನನ ಮಗನಿಗೆ ಕಲೀಫ ಪದವಿ ದೊರೆತ ಬಗ್ಗೆ ಇಸ್ಲಾಮಿನ ಅನೇಕ ಅನುಯಾಯಿಗಳ ವಿರೋಧವಿದ್ದು ಅವರು ಅರೆಮನಸ್ಸಿನಿಂದಲೇ ಮುಆವಿಯಾಗೆ ನಿಷ್ಠೆ ತೋರುತ್ತಿದ್ದರು. ತನ್ನ ಮಗ ಯಾಜಿದ್‌ಗೆ ಪಟ್ಟವಾಗಬೇಕೆಂದು ತಿಳಿಸಿ 680ರಲ್ಲಿ ಮುಆವಿಯಾ ತೀರಿಕೊಂಡ. ಆಗ ಅಲಿಯ ಕಿರಿಯ ಮಗ ಹುಸೇನನ ಹಕ್ಕು ಮುಂದೆ ಬಂತು. ಉಮಾಯದರ ಸೇನೆ ಕುಫಾ ಬಳಿಯ ಕರ್ಜಿಲಾದಲ್ಲಿ ಹುಸೇನನನ್ನು ಕೊಂದಿತು. ಹೀಗಿದ್ದರೂ ಮಕ್ಕಾದಲ್ಲಿ ಬಂಡಾಯ ಮುಂದುವರಿಯಿತು. ಮಕ್ಕಾದಲ್ಲಿಯ ಪವಿತ್ರ ಕರಿಶಿಲೆ ಯುದ್ಧದ ಕಾಲದಲ್ಲಿ ಒಡೆದು, ಕಾಬ ಅಗ್ನಿಗೆ ಆಹುತಿಯಾಯಿತು. ಈ ನಡುವೆ ಯೆಜಿದ್ (680–82) ತೀರಿಕೊಳ್ಳಲು ಉಮಾಯದರ ಸೇನೆ ಮಕ್ಕಾ ಮುತ್ತಿಗೆಯಿಂದ ಹಿಂತೆಗೆಯಿತು. ಎರಡನೆಯ ಮುಆವಿಯನ (683) ಮತ್ತು ಮರ್ವಾನನ (684–685) ಅಲ್ಪಕಾಲದ ಆಳ್ವಿಕೆಯ ಅನಂತರ ಮುಆವಿಯನ ಸೋದರ ಸಂಬಂಧಿ ಅಬ್ದ್–ಅಲ್–ಮಲಿಕನ (685–705) ಕಾಲದಲ್ಲಿ ಉಮಾಯಿದರ ಆಳ್ವಿಕೆ ದೃಢವಾಯಿತು. ಮಕ್ಕಾದ ದಂಗೆ ಕೊನೆಗಂಡಿತು. ಅಲ್–ವಲೀದನ (705–15) ಕಾಲದಲ್ಲಿ ಬಾಲ್ಖ್, ಬೊಖಾರ, ಸ್ಪೇನ್, ಸಮರ್ ಕಂಡ್ ಗಳನ್ನು ಗೆದ್ದು ಇಸ್ಲಾಂ ಸಾಮ್ರಾಜ್ಯವನ್ನು ವಿಸ್ತರಿಸಲಾಯಿತು. ಅಲ್–ವಲೀದನ ತಮ್ಮ ಸುಲೇಮಾನ್ (715–17) ಕಾನ್‌ಸ್ಟಾಂಟಿನೋಪಲನ್ನು ಗೆಲ್ಲುವ ಯತ್ನದಲ್ಲಿ ವಿಫಲನಾದ. 2ನೆಯ ಉಮರ್ (717–20), ಎರಡನೆಯ ಯೆಜಿದ್ (720–24) ಹಿಷಾಂ (724–43) ಇವರ ಕಾಲದಲ್ಲಿ ಸಾಮ್ರಾಜ್ಯದ ಅವನತಿ ಆರಂಭವಾಯಿತು. 2ನೆಯ ಅಲ್–ವಲೀದನ (743–44) ಕಾಲದಿಂದ ಧರ್ಮದ ಬಗ್ಗೆ ಸಮಾಜದ ಶ್ರದ್ಧೆ ಕಡಿಮೆಯಾಗಿ ವಿಲಾಸವೆಚ್ಚಗಳು ಹೆಚ್ಚಾದುವು. ಮುಂದೆ ಯಾಜಿದ್ (744) ಹಾಗೂ ಮೆರ್ವಾನರ (744–50) ಆಳ್ವಿಕೆಯ ಸಮಯದಲ್ಲಿ ಒಳಜಗಳಗಳಿಂದ ಸಾಮ್ರಾಜ್ಯ ಅವನತಿಯ ಹಾದಿ ಹಿಡಿಯಿತು. ಪೈಗಂಬರರ ಚಿಕ್ಕಪ್ಪ ಅಬ್ಬಾಸನ ವಂಶದ ಅಬು 749ರಲ್ಲಿ ಮೆರ್ವಾನನನ್ನು ಕೊಂದು 750ರಲ್ಲಿ ದಮಾಸ್ಕಸನ್ನು ಗೆದ್ದುಕೊಂಡ.

ಉಮಾಯದರು ಇಸ್ಲಾಂ ಸಾಮ್ರಾಜ್ಯವನ್ನು ವಿಸ್ತರಿಸಿದರು. ಸ್ಪೇನಿನಿಂದ ಸಿಂಧ್ ವರೆಗೆ ಅರಬ್ ಸಾಮ್ರಾಜ್ಯವನ್ನು ವಿಸ್ತರಿಸಿದ ಕೀರ್ತಿ ಅವರದು. ಆದರೆ 8ನೆಯ ಶತಮಾನದಲ್ಲಿ ಪಟ್ಟಕ್ಕೆ ಬಂದ ಅಸಮರ್ಥ ಸುಖಲೋಲುಪ ಕಲೀಫರಿಂದಾಗಿ ಸಾಮ್ರಾಜ್ಯ ಕುಸಿಯಹತ್ತಿತ್ತು. ಸಿರಿಯದಿಂದ ನಡೆಯುತ್ತಿದ್ದ ಆಡಳಿತದ ಬಗ್ಗೆ ಈಜಿಪ್ಟ್, ಪರ್ಷಿಯ ಮತ್ತು ಅರೇಬಿಯಗಳಲ್ಲಿ ಅಸಮಾಧಾನವಿತ್ತು. ಆರಂಭದಲ್ಲಿ ಪೈಗಂಬರರ ಶತ್ರುವಾಗಿದ್ದು ತಡವಾಗಿ ಧರ್ಮಾಂತರಗೊಂಡ ಅಬು ಸುಫಿಯಾನನ ವಂಶದವರೆಂಬ ಕಾರಣಕ್ಕಾಗಿ ಪೈಗಂಬರರ ಸಂಬಂಧಿಗಳು ಈ ಶಾಖೆಯ ಬಗ್ಗೆ ದ್ವೇಷ ತಾಳಿದ್ದರು. ಹೀಗಾಗಿ ಉಮಾಯದರ ವಿರುದ್ಧ ನಡೆದ ಯುದ್ಧಕ್ಕೆ ಹೆಚ್ಚಿನ ಜನ ಬೆಂಬಲ ದೊರೆತು ಅವರ ಪತನವಾಯಿತು. ಸ್ಪೇನಿನಲ್ಲಿ ಆಳುತ್ತಿದ್ದ ಈ ವಂಶದ ಅಮೀರರು ಹತ್ತನೆಯ ಶತಮಾನದಲ್ಲಿ ತಮ್ಮನ್ನು ಕಲೀಫರೆಂದು ಕರೆದುಕೊಂಡರು. 1031ರಲ್ಲಿ ಆ ಶಾಖೆಯೂ ನಿರ್ನಾಮವಾಯಿತು.

**ಅಬ್ಬಾಸಿದರು :** ಪೈಗಂಬರ ಕಕ್ಕನಾದ ಅಬ್ಬಾಸನ ವಂಶಜರಾದ 37 ಕಲೀಫರು ಪರ್ಷಿಯದಿಂದ ಆಳಿದರು. 750ರಲ್ಲಿ ಆಳ್ವಿಕೆ ಆರಂಭಿಸಿದ ಇವರ ವಂಶ ನಿಜವಾಗಿ ಅಧಿಕಾರದಲ್ಲಿದ್ದುದು 945ರ ವರೆಗೆ ಮಾತ್ರ. ಮುಂದೆ ಸಮರ್ಥ ಸೇನಾನಿಗಳ ಕೈಗೊಂಬೆಗಳಾಗಿ, ಕೇವಲ ಧಾರ್ಮಿಕ ನಾಯಕರಾಗಿ 1258ರ ವರೆಗೆ ಮುಂದುರಿವಸಿದರು. ಮೊದಲ ಕಲೀಫ ಅಬು ಅಲ್ ಅಬ್ಬಾಸ್ (750–54) ಉತ್ತರದ ಅನ್ ಬರ್‌ನಿಂದ ಆಳುತ್ತಿದ್ದ. ಅಟ್ಲಾಂಟಿಕ್ ಸಾಗರದಿಂದ ಸಿಂಧ್ ವರೆಗಿನ ಹಾಗೂ ಈಜಿಪ್ಟಿನಿಂದ ಮೆಸಪೊಟೇಮಿಯದ ವರೆಗಿನ ವಿಶಾಲ ಸಾಮ್ರಾಜ್ಯದ ಸಮ್ರಾಟನಾಗಿದ್ದ. ಈ ಹೊಸ ಸಾಮ್ರಾಜ್ಯ ಪಾರಸಿಕ ಸಂಸ್ಕೃತಿಯದಾಗಿದ್ದು ಅದರ ಮಂತ್ರಿಗಳೂ ಸೇನಾನಿಗಳೂ ಪಾರಸಿಕರೇ ಆಗಿದ್ದರು. ಅಲ್ ಅಮೂನ್ (754–75) ಬಾಗ್ದಾದಿನಲ್ಲಿ ಹೊಸ ರಾಜಧಾನಿ ಕಟ್ಟಿಸಿದ. ಈತ ಸಮರ್ಥ ಆಡಳಿತಗಾರ; ಪಂಡಿತ ಜನಾಶ್ರಯ. ಅಲ್–ಮಹ್ದಿ (775–85) ಬಾಗ್ದಾದ್ ಹಾಗೂ ಸಾಮ್ರಾಜ್ಯದೊಳಗಿನ ಇತರ ನಗರಗಳನ್ನು ಸುಂದರಗೊಳಿಸಿದ. ಈತನ ಕಾಲದಲ್ಲಿ ಬಿಜಾಂಟಿಯಂ ಸಾಮಾಜ್ಯ ಇವನಿಗೆ ಕಪ್ಪ ಕೊಡಬೇಕಾಗಿ ಬಂತು. ಅಲ್–ಹಾದಿಯ (785–86) ಅನಂತರ ಆಳಿದ ಹರೂನ್ ಅಲ್–ರಷೀದ್ (786–809) ಪಂಡಿತ, ಕವಿ. ಕಲಾವಿದರಿಗೂ ಪಂಡಿತರಿಗೂ ವಿಜ್ಞಾನಿಗಳಿಗೂ ಆಶ್ರಯ ನೀಡಿದ. ರಮ್ಯಕತೆಗಳ ನಾಯಕ. ಅವನ ಮಕ್ಕಳಾದ ಅಲ್–ಅಮೀನ್ ಮತ್ತು ಅಲ್–ಮಮೂನರಲ್ಲಿ ಪಟ್ಟಕ್ಕಾಗಿ ಕಲಹವಾಗಿ ಅಲ್–ಮಮೂನ್ (813–33) ಅಂತಿಮವಾಗಿ ಗೆದ್ದ. ಹರೂನ್ ಸಮರ್ಥನೂ ಘನವಂತಿಕೆಯವನೂ ಆಗಿದ್ದ. ಈತ ಪರಧರ್ಮ ಸಹಿಷ್ಣು. ಮುಂದೆ ಎಂಟು ಮಂದಿ ಕಲೀಫರು ಬಾಗ್ದಾದ್ ತ್ಯಜಿಸಿ ಉತ್ತರದ ಪರ್ಷಿಯದಿಂದ ಆಳಿದರು. ಈ ಅವಧಿಯಲ್ಲಿ ಸುಖ ಲೋಲುಪತೆ ಕಾಮುಕತೆಗಳಿಂದ ಕಲೀಫರು

ದುರ್ಬಲರಾಗುತ್ತ ನಡೆದರು. ಸೇನೆಯಲ್ಲಿ ತುರ್ಕರ ಸಂಖ್ಯೆ ಹೆಚ್ಚಿತು. ಕಲೀಫರ ತುರ್ಕ ಅಂಗರಕ್ಷಕ ಪಡೆಯ ಪ್ರಾಬಲ್ಯ ಬೆಳೆಯಿತು. ಸ್ಪೇನ್, ಟ್ಯುನಿಸ್, ಮೊರಾಕೋ ಮತ್ತು ಈಜಿಪ್ಟ್‌ಗಳ ಮಂಡಲಾಧಿಕಾರಿಗಳು ಬಂಡೆದ್ದು ಸಾಮ್ರಾಜ್ಯ ಬಡವಾಯಿತು. ಕ್ಯಾಸ್ಪಿಯನ್ ಬಳಿಯ ಬೆಟ್ಟ ಪ್ರದೇಶದ ಬುವಾಯಿದರು 945ರಲ್ಲಿ ಬಾಗ್ದಾದನ್ನು ಗೆದ್ದು ರಾಜ್ಯಾಡಳಿತವನ್ನು ತಾವೇ ನಿರ್ವಹಿಸಲಾರಂಭಿಸಿದರು. ಕಲೀಫ ಹೆಸರಿಗೆ ಮಾತ್ರ ಉಳಿದ. 1055ರಲ್ಲಿ ಸೆಲ್ಜಿಕ್ ತುರ್ಕರು ಬುವಾಯಿದರನ್ನು ಓಡಿಸಿ ಸುಲ್ತಾನ್ ಎಂಬ ಬಿರುದು ಧರಿಸಿ ಬಾಗ್ದಾದಿನಿಂದ ಆಳಲಾರಂಭಿಸಿದರು. ಕಲೀಫ್ ಪದವಿ ಧಾರ್ಮಿಕ ಹುದ್ದೆಯಾಗಿಯಷ್ಟೇ ಉಳಿಯಿತು. ಈ ಶಾಖೆಯ ಕೊನೆಯ ಕಲೀಫ ಅಲ್–ವಲತಾಸಿಮನನ್ನು ಮಂಗೋಲ್ ಸಮ್ರಾಟ ಹುಲಗುಖಾನ್ ಪದಚ್ಯುತಗೊಳಿಸಿ ಬಾಗ್ದಾದಿನಿಂದ ಓಡಿಸಿದ. ಈ ರೀತಿ ಅರೇಬಿಯ ಮೂಲದ ಕಲೀಫ್ ಪದವಿ ಅಂತ್ಯವಾಯಿತು. ಈಜಿಪ್ಟಿಗೆ ಓಡಿಹೋದ ಈ ವಂಶದವರನ್ನು ಆಟೋಮನ್ ತುರ್ಕರು 1517ರಲ್ಲಿ ಸೋಲಿಸಿದರು.

ಅಬ್ಬಾಸಿದ್ ವಂಶದ ಒಂದು ಶಾಖೆ ಫಾತಿಮಿದ್ ಎಂಬ ಹೆಸರಿನಿಂದ ಈಜಿಪ್ಟಿನಲ್ಲಿ 909 – 1171ರ ವರೆಗೆ ಆಳಿತು. 1517 – 1924ರವರೆಗೆ ಆಟೋಮನ್ ತುರ್ಕರು ಕಲೀಫರೆಂದು ಕರೆದುಕೊಳ್ಳುತ್ತಿದ್ದು ಕಾನ್‌ಸ್ಟಾಂಟಿನೋಪಲಿನಿಂದ ಆಳುತ್ತಿದ್ದರು **(ನೋಡಿ– ಅಬ್ಬಾಸಿದ್ ಕಲೀಫರು; ಆಟೋಮನ್ ಚಕ್ರಾಧಿಪತ್ಯ).** (ಎಸ್.ಎನ್.ಕೆ.ಎ.)

**ಕಲೂಗಾ :** ಸೋವಿಯತ್ ದೇಶದ ರಷ್ಯನ್ ಸೋವಿಯತ್ ಫೆಡರೇಟೆಡ್ ಸಮಾಜವಾದಿ ಗಣರಾಜ್ಯದ ಒಂದು ಪಟ್ಟಣ ಮತ್ತು ಆಬ್ಲಾಸ್ಟ್ (ಪ್ರದೇಶ). ಮಾಸ್ಕೋದ ನೈಋತ್ಯಕ್ಕೆ 160 ಕಿಮೀ ದೂರದಲ್ಲಿ ಅಕ ನದಿ ಎಡದಂಡೆಯ ಮೇಲಿದೆ. ಜನಸಂಖ್ಯೆ 10,41,641 (2002). ವಾಜ್ಮ–ಟೂಲ ರೈಲುಮಾರ್ಗದಲ್ಲಿ, ಅದು ಮಾಸ್ಕೋ–ಕಿಯೆಫ್ ರೈಲುಮಾರ್ಗವನ್ನು ಸಂಧಿಸುವ ಸ್ಥಳಕ್ಕೆ ಹತ್ತಿರದಲ್ಲಿದೆ. ಯಂತ್ರೋಪಕರಣ, ಬೆಂಕಿಪೆಟ್ಟಿಗೆ, ಗಾಜು, ಪಾದರಕ್ಷೆ, ರಾಗಮಾಲಿಕೆ, ಬಟ್ಟೆ, ಪ್ಲಾಸ್ಟಿಕ್ ವಸ್ತುಗಳು, ಆಹಾರ ಪದಾರ್ಥಗಳು ಮುಂತಾದ ಅನೇಕ ಪದಾರ್ಥಗಳ ಕಾರ್ಖಾನೆಗಳಿವೆ. ಕಲೂಗಾದ ಸ್ಥಾಪನೆಯಾದದ್ದು 14ನೆಯ ಶತಮಾನದಲ್ಲಿ. ಮಸ್ಕೊವಿನ ದಕ್ಷಿಣ ಗಡಿಯಲ್ಲಿ ಟಾಟರುಗಳ ವಿರುದ್ಧವಾದ ಆಯಕಟ್ಟಿನ ಸ್ಥಳದಲ್ಲಿತ್ತು. 1607ರಲ್ಲಿ ಆಕ್ರಮಣಕ್ಕೊಳಗಾಗಿದ್ದು, ಅನಂತರ ಪ್ರಾಂತ್ಯಾಡಳಿತಕೇಂದ್ರವಾಗಿದ್ದ ಈ ಪಟ್ಟಣ ಕ್ರಾಂತಿಪೂರ್ವಕಾಲದ ಆಹಾರ ಧಾನ್ಯ ಮಾರಾಟ ಕೇಂದ್ರವೆನಿಸಿತ್ತು. ಇಲ್ಲಿಂದ ಮಾಸ್ಕೋಗೆ ಧಾನ್ಯ ಸಾಗುತ್ತಿತ್ತು. 1850ರ ದಶಕದಲ್ಲಿ ನಡೆದ ಕಾಕೇಷಿಯನ್ ದಂಗೆಯ ನಾಯಕನಾಗಿದ್ದ ಷಾಮಿಲ್ ದೇಶಭ್ರಷ್ಟನಾಗಿ ಸ್ವಲ್ಪಕಾಲ ಇಲ್ಲಿದ್ದ. 1914ರಲ್ಲಿ ಜರ್ಮನ್ ಸೈನಿಕರು ಮಾಸ್ಕೋ ಕಡೆಗೆ ಮುನ್ನುಗ್ಗುತ್ತಿದ್ದಾಗ ಕೆಲಕಾಲ ಈ ನಗರ ಅವರ ಆಕ್ರಮಣಕ್ಕೊಳಗಾಗಿತ್ತು. ಇಲ್ಲಿ 18 ಮತ್ತು 19ನೆಯ ಶತಮಾನಗಳ ಅನೇಕ ಅಪೂರ್ವ ಕಟ್ಟಡಗಳಿವೆ. 177ರಲ್ಲಿ ನಿರ್ಮಾಣವಾದ ರಂಗಮಂದಿರವೂ ವಸ್ತುಸಂಗ್ರಹಾಲಯವೂ ಮುಖ್ಯವಾದವು.

**ಕಲೂಗಾ ಆಬ್ಲಾಸ್ಟ್ :** ಮಾಸ್ಕೋದ ನೈಋತ್ಯಕ್ಕೆ ಸುಮಾರು 29,900 ಚ.ಕಿಮೀ ಪ್ರದೇಶವನ್ನು ಹೊಂದಿರುವ ಕಲೂಗಾ ಆಬ್ಲಾಸ್ಟ್ ಡ್ಯಸ್ನ ಮತ್ತು ಅಕ ನದಿಗಳ ನಡುವೆ ಇದೆ. ಇದರ ಮೂರನೆಯ ಒಂದು ಭಾಗ ಕಾಡುಗಳಿಂದ ಆವೃತ. ವಾಯವ್ಯ ಹಾಗೂ ದಕ್ಷಿಣದ ಭಾಗಗಳು ಜೇಡಿಮಣ್ಣಿನಿಂದ ಕೂಡಿವೆ. ಇವು ನಾರಿನ ಬೆಳೆಗಳಿಗೆ ಅನುಕೂಲಕರ. ಜೇನು ಮತ್ತು ಬಾತು ಕೋಳಿಯನ್ನು ಸಾಕುತ್ತಾರೆ. ಈ ಪ್ರದೇಶ ಕೃಷಿಯಲ್ಲಿ ಅಂಥ ಹೆಸರೇನೂಗಳಿಸಿಲ್ಲ. ಸುಮಾರು ಮೂರನೆಯ ಒಂದು ಭಾಗದಷ್ಟು ಹಳ್ಳಿಗರು ಹೊಸದಾಗಿ ನಿರ್ಮಿತವಾದ ನಗರಗಳಿಗೆ ವಲಸೆಹೋಗಿ ಅಲ್ಲಿಯೇ ನೆಲಸಿದ್ದಾರೆ. ಇವುಗಳ ಪೈಕಿ ಓಬ್‌ನಿನ್‌ಸ್ಕ್ ಪ್ರಮುಖವಾದದ್ದು. 1957ರಲ್ಲಿ ಈ ನಗರದಲ್ಲಿ ಪರಮಾಣುಶಕ್ತಿ ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಯಿತು.

ಈ ಪ್ರದೇಶದ ದೊಡ್ಡ ಕೈಗಾರಿಕೆಗಳು ಇದರ ರಾಜಧಾನಿಯಾದ ಕಲೂಗಾ ಮತ್ತು ಇತರ ದೊಡ್ಡ ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿವೆ. ಯಂತ್ರೋಪಕರಣ ಉಣ್ಣೆ ಹಾಗೂ ಹತ್ತಿಯಬಟ್ಟೆ, ಕಾಗದ, ಬೆಂಕಿಪೆಟ್ಟಿಗೆ, ಗಾಜು ಇವು ಮುಖ್ಯಕೈಗಾರಿಕೆಗಳು. ಸೋವಿಯತ್ ದೇಶದ ಅತ್ಯಂತ ಹಳೆಯ ಕೈಗಾರಿಕಾ ಘಟಕಗಳು ಇರುವುದು ಈ ಪ್ರದೇಶದಲ್ಲಿ. ಅವುಗಳಲ್ಲಿ 18ನೆಯ ಶತಮಾನದಲ್ಲೇ ಸ್ಥಾಪಿತವಾದವು. ಈ ಆಡಳಿತ ಪ್ರದೇಶದ ನಿರ್ಮಾಣವಾದದ್ದು 1944ರಲ್ಲಿ. (ಬಿ.ಎನ್.ಎ.ಜಿ.)

**ಕಲೆ :** ಕಲೆಯ ಸ್ವರೂಪ–ಸಿದ್ಧಾಂತ ಮತ್ತು ಅಭಿವ್ಯಕ್ತಿ–ತಂತ್ರಗಳೆಂಬ ಎರಡು ಉಪಶೀರ್ಷಿಕೆಗಳಡಿಯಲ್ಲಿ ಕಲೆಯ ವಿಷಯವನ್ನು ಪರಿಶೀಲಿಸಲಾಗಿದೆ. ಕಲೆಯ ಚಾರಿತ್ರಿಕ ಬೆಳವಣಿಗೆ, ವಿವಿಧ ಶೈಲಿಗಳ ವಿಶ್ಲೇಷಣೆ– ಇವನ್ನು ವಿವಿಧ ದೇಶಗಳ ಕಲಾವಿಭಾಗದ ಅಡಿ ಕೊಡಲಾಗಿದೆ.

**ಸ್ವರೂಪ–ಸಿದ್ಧಾಂತ :** ಕಲೆಯೆಂಬುದು ಸರ್ವಸಾಮಾನ್ಯವಾದ ಪ್ರವೃತ್ತಿ. ಎಲ್ಲ ಕಾಲಗಳಲ್ಲೂ ಅದು ಕಾಣಿಸಿಕೊಂಡಿದೆ. ಮನುಷ್ಯನ ಸ್ವಭಾವದಲ್ಲೇ ಅದಕ್ಕೊಂದು ವ್ಯವಧಾನವಿದೆ. ಭಾವನಾಶಕ್ತಿ, ಆಲೋಚನಾ ಸಾಮರ್ಥ್ಯ, ರಸ ನಿಷ್ಪತ್ತಿ ಮತ್ತು ರಸಾಸ್ವಾದಗಳ ಸೌಕರ್ಯ, ಸೃಷ್ಟಿಮಾಡುವ ಸೌಲಭ್ಯ–ಇವು ಮನುಷ್ಯನಿಗಿರುವಂತೆ ಉಳಿದ ಯಾವ ಜೀವಿಗೂ ಇರದು. ಮಾನವವರ್ಗಕ್ಕೆ ಇಷ್ಟು ಪರಿಚಿತವಾದದ್ದಾದರೂ ಕಲೆಯ ಸ್ವರೂಪ ಸುಲಭವಾಗಿ ಅರ್ಥವಾಗದ್ದು. ಕಲೆಯ ಪರಿಕರಗಳನ್ನು ವಿಶ್ಲೇಷಣ ಮಾಡಿನೋಡುವುದು ಸಂಪೂರ್ಣವಾಗಿ ಸಾಧ್ಯವಾಗದ ಕೆಲಸ. ಪ್ರಾಚೀನರು ಮನುಷ್ಯ ಗಮ್ಯವಾದ ವಿವರಗಳನ್ನೆಲ್ಲ ಕಲೆ, ವಿದ್ಯೆ ಎಂದು ಇಬ್ಭಾಗವಾಗಿ ವಿಭಜನೆ ಮಾಡಿದರು. ವಿದ್ಯೆಯೆಂದರೆ ಅಭ್ಯಾಸಪ್ರಧಾನವಾಗಿ ಶಾಸ್ತ್ರಗಳನ್ನು ಆಲೋಚನೆ ಮಾಡಿ ಪ್ರೌಢಿಮೆಯನ್ನು ಪಡೆಯುವ ವಿಧಾನ. ವಿದ್ಯೆಯಿಂದ ಕೌಶಲವೊದಗುತ್ತದೆ. ಆದರೆ ಕಲೆ ಎಂಬುದು ಪ್ರತಿಭಾತಂತ್ರವಾದದ್ದು; ಸ್ವೋಪಜ್ಞೆಯಿಂದ ಅದರಲ್ಲಿ ಸಾಮರ್ಥ್ಯ ಒದಗುತ್ತದೆ. ಭಾರತೀಯರಲ್ಲಿ ಮೊದಮೊದಲಿಗೆ ಈ ವಿಭಾಗ ಅಷ್ಟು ಸ್ಪಷ್ಟವಾಗಿಲ್ಲ. ಹಲವಾರು ಸಂದರ್ಭಗಳಲ್ಲಿ ಅವನ್ನು ಏಕದೇಶೀಯವಾಗಿ ಪ್ರಯೋಗ ಮಾಡುತ್ತಾರೆ. ಆದರೂ ವಿವೇಚನೆಯೇನೋ ಉಂಟು. ನಿದರ್ಶನಕ್ಕೆ–ಧನುರ್ವಿದ್ಯೆ, ನಕ್ಷತ್ರವಿದ್ಯೆ, ಬ್ರಹ್ಮವಿದ್ಯೆ, ಪಾಕಕಲೆ, ಶಿಲ್ಪಕಲೆ, ನೃತ್ಯಕಲೆ, ಇತ್ಯಾದಿ. ಕ್ರಮೇಣ ಕಲೆಯೆಂಬ ಪದದ ಪ್ರಯೋಗ ಕುಶಲಕಾರ್ಯಗಳಿಗೆ ಸೀಮಿತವಾಯಿತು. ಪಾಶ್ಚಾತ್ಯ ದೇಶಗಳಲ್ಲಿ ಈ ವಿವೇಕ ಸ್ಪಷ್ಟವಾಗಿದೆ.

ಕಲೆಯನ್ನು ಅವರು ಶಾಸ್ತ್ರದೃಷ್ಟಿಯಿಂದ ಪೃಥಕ್ಕರಿಸಿ ನಿಲ್ಲಿಸಿದರು. ಶಾಸ್ತ್ರವೆಂದರೆ ವಾಸ್ತವವಾದ ಸಂಗತಿಗಳ ಆಗುಹೋಗುಗಳನ್ನೂ ಕಾರಣ ಫಲಗಳನ್ನೂ ಯಥಾವತ್ತಾಗಿ, ಬುದ್ಧಿಶಕ್ತಿಯಿಂದ, ಪರಿಕರಗಳಿಂದ, ತಿಳಿಯುವುದು. ಅದರಲ್ಲಿ ಪ್ರಾಯೋಗಿಕವಾದ ಪ್ರಕಾರಕ್ಕೆ ಪ್ರಾಮುಖ್ಯ ಹೆಚ್ಚು. ಬಾಳಿನ ಸಂವಿಧಾನದಲ್ಲಿ ಅದನ್ನು ಅನ್ವಯಿಸಿಕೊಂಡರೂ ಜ್ಞಾನವೇ ಅದರ ಮುಖ್ಯ ಗುರಿ. ಆದರೆ ಕಲೆಯಲ್ಲಿ ಬದುಕಿನ ಬಗೆಗೆ ಪ್ರಾಶಸ್ತ್ಯ ಹೆಚ್ಚು. ಈ ದೃಷ್ಟಿಯಿಂದ ನೆಯ್ಗೆ, ಕಂಚುಗಾರಿಕೆ, ಪಾಕಕಲೆ, ನಗರ ನಿರ್ಮಾಣ ಕಲೆ ಮುಂತಾದ ಕಲೆಗಳು ಉಪಯುಕ್ತ ಕಲೆಗಳೆಂದೂ ಶಿಲ್ಪ, ಸಂಗೀತ, ಕವಿತೆ ಮುಂತಾದುವು ಲಲಿತ ಕಲೆಗಳೆಂದೂ ಹೇಳುತ್ತಾರೆ. ಪ್ರತಿಭೆಯನ್ನು ಮನುಷ್ಯ ಕಾರ್ಯ ಕೌಶಲಕ್ಕಾಗಿ ವಿನಿಯೋಗಿಸಿದರೆ ಅದು ಉಪಯುಕ್ತ ಕಲೆ. ಆನಂದವೊಂದಲ್ಲದೆ ಉಳಿದ ಯಾವ ನಿರ್ದಿಷ್ಟವಾದ ಪ್ರಯೋಜನವೂ ದೃಷ್ಟಿಯಲ್ಲಿರದೆ ಪ್ರತಿಭೆ ದುರ್ದಮ್ಯವಾಗಿ ಸೃಷ್ಟಿಯಲ್ಲಿ ಪರ್ಯವಸಾನವಾದರೆ ಅದು ಲಲಿತ ಕಲೆ.

ಪ್ರಕೃತಿಯಲ್ಲಿ ಸ್ವತಃ ರೂಪಿತವಾಗಿರದ ವಸ್ತುಗಳ ನಿರ್ಮಾಣವೇ ಕಲಾ ಸೃಷ್ಟಿ, ಪ್ರಕೃತಿಯೇ ಮಾಡಿದ ಪ್ರಸಂಗಗಳಾಗಲಿ, ವಸ್ತುಗಳಾಗಲಿ ಎಷ್ಟು ಸುಂದರವಾದರೂ ಕಲೆಯೆನಿಸಿಕೊಳ್ಳುವುದಿಲ್ಲ. ನಿದರ್ಶನಕ್ಕೆ ಹಿಮಾಲಯಪರ್ವತ, ಜೋಗದ ಜಲಪಾತ– ಇವನ್ನು ಕಲೆಯೆಂದು ಹೇಳಲಾಗುವುದಿಲ್ಲ. ಆದರೆ ಇವನ್ನೇ ಚಿತ್ರಣದ ಮೂಲಕ ಮಾತಿನ ಮೂಲಕ ಬಣ್ಣಿಸಿದಾಗ ಕಲೆಯೆನಿಸಿಕೊಳ್ಳುತ್ತವೆ. ಪ್ರಕೃತಿನಿಯಂತ್ರಿತ ಪ್ರವೃತ್ತಿಗಳಿಗೂ ಕಲೆಯೆನ್ನುವುದಿಲ್ಲ. ನಿದರ್ಶನಕ್ಕೆ ಅಶನ, ವಸನ, ಪಿಪಾಸೆ ಮುಂತಾದುವು. ಏಕೆಂದರೆ, ಅವುಗಳ ಆಕರ್ಷಣೆಯಲ್ಲಿ ರಮ್ಯತೆಯಲ್ಲಿ ಮನುಷ್ಯನ ಕೈವಾಡವಿರದು. ಪ್ರಕೃತಿಯಲ್ಲಿ ಇರದಿರುವುದನ್ನು ಮನುಷ್ಯ ತನ್ನ ಪ್ರತಿಭೆಯಿಂದ ಸೃಷ್ಟಿ ಮಾಡುವುದೇ ಕಲೆ ಎಂದು ಸ್ಯಾಮ್ಯುಯಲ್ ಜಾನ್ಸನನ ಅಭಿಪ್ರಾಯ. ಆದರೆ ಪ್ರಕೃತಿಯೆಂದರೇನು? ಪ್ರಕೃತಿಗೂ ಪ್ರತಿಭೆಗೂ ತಾರತಮ್ಯ ತೋರಿಸುವುದು ಹೇಗೆ? ಇದು ಜಿಜ್ಞಾಸೆಯ ವಿಷಯ. ಪ್ರತಿಭೆಯೂ ಪ್ರಕೃತಿಯ ಒಂದು ಪ್ರಕಾರವೆಂದು ವಾದಿಸುವವರಿದ್ದಾರೆ. ಕಲೆಯಲ್ಲಿ ಪ್ರಕೃತಿಯ ಪ್ರತಿಕೃತಿಯೇ ಮುಖ್ಯವಾದ ವಿಚಾರವೆಂದು ಅವರ ತರ್ಕ. ಕಲೆಯ ಆರಂಭವಾದದ್ದು ಪ್ರಕೃತಿಯ ಸ್ಫೂರ್ತಿಯಿಂದಲೇ ಎಂಬುದೂ ಒಪ್ಪತಕ್ಕ ವಿಚಾರ.

ಸಾಮಾನ್ಯ ನಿರೂಪಣೆಯಲ್ಲಿ ಕಲೆ ಸಂವಿಧಾನದಿಂದ ನಿರ್ದಿಷ್ಟವಾಗುತ್ತದೆ. ಯಾವ ವಿಚಾರವನ್ನಾಗಲಿ, ನಿಯಮಬದ್ಧವಾಗಿ ಅನ್ವೇಷಣೆ ಮಾಡಿ ಸಕ್ರಮವಾಗಿ ರೂಪಿಸಿದಾಗ ಅದು ಕಲೆಯಾಗುತ್ತದೆ. ವಸ್ತುವಿನ ವಿಚಾರ ಗೌಣವಾದದ್ದು, ಪಾಕಶಾಸ್ತ್ರವೂ ಇದೆ, ಪಾಕಕಲೆಯೂ ಇದೆ. ಸಂಗೀತಶಾಸ್ತ್ರವೂ ಇದೆ, ಸಂಗೀತ ಕಲೆಯೂ ಇದೆ. ಹಾಗೆಂದೇ ವಿವಿಧ ವಸ್ತುಗಳನ್ನು ಆಳವಡಿಸಿ ಮಧ್ಯಯುಗದಲ್ಲಿ ಏಳು ಉದಾರ ಕಲೆಗಳನ್ನು (ಲಿಬರಲ್ ಆರ್ಟ್ಸ್) ವಿದ್ಯಾಲಯಗಳಲ್ಲಿ, ಬೋಧಿಸುತ್ತಿದ್ದರು. ವ್ಯಾಕರಣ, ತರ್ಕ, ವಾಗ್ಮಿತೆ (ಇವು ಮೂರು ತ್ರಿವರ್ಗ), ಜ್ಯಾಮಿತಿ, ಜ್ಯೋತಿಷ, ಸಂಗೀತ, ಗಣಿತ (ಇವು ನಾಲ್ಕು ಚತುರ್ವರ್ಗ). ಇಲ್ಲಿ ಕಲೆಯೆಂದರೆ ಶಾಸ್ತ್ರಗಳನ್ನೂ ಅಡಗಿಸಿಕೊಂಡು ಸಿದ್ಧವಾದ ವಿದ್ಯೆ. ಯಾವ ವಿದ್ಯೆಯೇ ಆಗಲಿ ಅನುರಕ್ತಿಯೊಡಗೂಡಿದ ವಿಶೇಷ ಅನ್ವೇಷಣೆಗೆ ಎಡೆ ಮಾಡಿಕೊಟ್ಟರೆ ಕಲೆಯಾಗುತ್ತದೆ. ಮುಖ್ಯವಾದ ವಿಚಾರವೆಂದರೆ ತದೇಕಚಿತ್ತ. ಬಟ್ಟೆಹಾಕುವುದು, ಉಣ್ಣುವುದು–ಇವು ಸಹ ಕಲೆಯಾಗಿ ಇರಬಹುದಲ್ಲವೆ.

ಕಲೆಯೆಂದರೆ ಇಂದು ಲಲಿತ ಕಲೆಯೇ. ಈ ಪದದ ಅರ್ಥವ್ಯಾಪ್ತಿ ಸಂಕುಚಿತವಾಗಿದೆ. ವಾಸ್ತುಶಿಲ್ಪ, ವರ್ಣಚಿತ್ರ, ರೇಖಾಚಿತ್ರ, ಸಂಗೀತ, ಕವಿತೆ–ಇವು ಲಲಿತ ಕಲೆಗಳೆಂದು ಇಂದು ಪರಿಗಣಿತವಾಗಿವೆ. ಮೊದಲ ನಾಲ್ಕು ದೃಶ್ಯಕಲೆಗಳು. ಅವು ನೋಡಲು ಹಿತವೆನಿಸುತ್ತವೆ. ಸಾಧಾರಣವಾಗಿ ಕಲೆಯೆಂದೊಡನೆ ಈ ದೃಶ್ಯಕಲೆಗಳೆಂದೇ ಬೋಧವಾಗುತ್ತದೆ. ಕಲೆಗಾರನೆಂದರೆ ಚಿತ್ರಕಾರನೇ, ಕಲೆಯೆಂದರೆ ಚಿತ್ರ, ಶಿಲ್ಪಕೃತಿಗಳೇ. ಲಲಿತಕಲೆಗಳಿಗೆ ಮೂಲ ಪ್ರತಿಭೆ. ಈ ಪ್ರತಿಭೆಯಿಂದ ಸಾಮಾನ್ಯ ವಸ್ತುವೂ ನವೋನವವಾಗಿ ರಮ್ಯವಾಗಿ ಕಾಣುತ್ತದೆ.

*ದೃಷ್ಟಪೂರ್ವಾಽಪಿ ಹ್ಯರ್ಥಾಃ*
*ಕಾವ್ಯೇ ರಸಪರಿಗ್ರಹಾತ್*
*ಸರ್ವೇ ನವಾ ಇವಾ ಭಾಂತಿ*
*ಮಧುಮಾಸ ಇವ ದ್ರುಮಾಃ*

ಎಂದು ಕಾವ್ಯಕ್ಕೆ ಹೇಳಿದ ಮಾತನ್ನು ಎಲ್ಲ ಕಲೆಗಳಿಗೂ ಅನ್ವಯಿಸಬಹುದು. ರಮಣೀಯಾರ್ಥ ಪ್ರತಿಪಾದಕವಾದ ರೇಖಾವಿನ್ಯಾಸದಿಂದ. ವರ್ಣವಿನ್ಯಾಸದಿಂದ, ಶಬ್ದವಿನ್ಯಾಸದಿಂದ, ಸಹೃದಯನ ಹೃದಯವನ್ನು ಮಿಡಿಯುವ ಶಕ್ತಿ ಬರುವುದು ಈ ಪ್ರತಿಭೆಯಿಂದ. ಪ್ರತಿಭಾ ತಾರತಮ್ಯದಿಂದಲೇ ಕಲಾವಿದರ ಸ್ಥಾನಮಾನಗಳು ನಿರ್ದಿಷ್ಟವಾಗುವುದು. ಪ್ರತಿಭೆಯಿಲ್ಲದೆ ಅಭ್ಯಾಸ ಮಾತ್ರ ಇದ್ದರೆ ಕಲಾಸೃಷ್ಟಿ ಸಮರ್ಪಕವಾಗದು. ಕಲೆಗಾರನಿಗೆ ಕೈಚಳಕ ಮಾತ್ರ ಇದ್ದರೆ ಸಾಲದು; ನವನವೋನ್ಮೇಷಿಯಾದ ಪ್ರಜ್ಞೆಯೂ ಆವಶ್ಯಕ.

ಈ ಪ್ರತಿಭೆಯಿದ್ದರೆ ಸೃಷ್ಟಿಮಾಡುವ ಸ್ಫೂರ್ತಿಯೂ ಶಕ್ತಿಯೂ ತಾನಾಗಿ ಒದಗುತ್ತವೆ. ವಸ್ತುವಿನ ವಿವರಗಳನ್ನು ವಿಧವಿಧವಾಗಿ ವಿನ್ಯಾಸಮಾಡಿ ಸೌಂದರ್ಯನಿಷ್ಪತ್ತಿಯಿಂದ ತಾನೂ ಸುಖಪಟ್ಟು ಅದನ್ನು ಗ್ರಹಿಸುವ ಶಕ್ತಿಯಿರುವವರಿಗೂ ಸುಖಕ್ಕೆ ಎಡೆ ಮಾಡಿಕೊಡುವುದು ಕಲೆಗಾರನ ಕೆಲಸ. ಇದಕ್ಕೆ ಅಂಗವಾಗಿ ದರ್ಶನ ಮತ್ತು ವರ್ಣನಾ ಶಕ್ತಿಗಳು ಇರಬೇಕು. ವಸ್ತುವಿನ ಆಧ್ಯಾತ್ಮಿಕ ತಾತ್ಪರ್ಯವನ್ನು ಗ್ರಹಿಸುವ ಶಕ್ತಿಯೇ ದರ್ಶನ; ಅದನ್ನು ರಸಪುಷ್ಟಿಯಿಂದ ಹೇಳುವುದೇ ವರ್ಣನೆ. ದರ್ಶನಾದ್ವರ್ಣನಾಚ್ಚಾಥ ಲೋಕೇ ಕವಿಶ್ರುತಿಃ_ಎಂದು ಭಾರತೀಯ ಆಲಂಕಾರಿಕರು ಹೇಳುತ್ತಾರೆ. ಆದಿಕವಿಯಾದ ವಾಲ್ಮೀಕಿ ಋಷಿಯಾಗಿದ್ದುದರಿಂದ ದರ್ಶನವೇನೋ ಸ್ವಚ್ಛವಾಗಿತ್ತು; ಆದರೆ ಕ್ರೌಂಚ ಮಿಥುನದಲ್ಲಿ ಒಂದನ್ನು ಹೊಡೆದ ಬೇಡನಿಗೆ ಶ್ಲೋಕರೂಪವಾದ ಶಾಪವನ್ನು ಕೊಟ್ಟಾಗಲೇ ಲೋಕದಲ್ಲಿ ಕಲೆ ಉತ್ಪನ್ನವಾಯಿತು. (ನೋದಿತಾ ಕವಿತಾ ಲೋಕೇ ಯಾವಜ್ಜಾ ತಾ ನ ವರ್ಣನಾ). ದರ್ಶನ ಶಕ್ತಿಯನ್ನು ಕಲಿಯುವುದು ಸಾಧ್ಯವಿಲ್ಲ. ಪ್ರಕೃತಿಯಲ್ಲೇ ಮೂಲಭೂತವಾಗಿ_ಸ್ವರಸತ ಏವ_ಬಂದಿರಬೇಕು. ಆದರೆ ವರ್ಣನೆಯೆಂಬುದು ಭೌತರೂಪವನ್ನು ತಳೆಯುವುದರಿಂದ ಅದಕ್ಕೆ ವ್ಯಾಕರಣವುಂಟು. ಅದು ಉಪಾಧಿತಂತ್ರ. ಪ್ರತಿಯೊಂದು ಕಲೆಗೂ ಈ ವ್ಯಾಕರಣ ನಿರುಕ್ತಗಳು ಇದ್ದೇ ಇರುತ್ತವೆ. ಎಂಥ ಅಲೌಕಿಕವಾದ ದರ್ಶನವಿದ್ದರೂ ಪರಿಕರಗಳ ಸೌಲಭ್ಯವಿಲ್ಲದಿದ್ದರೆ, ಅಭ್ಯಾಸದ ಸಿದ್ಧಿಯಿಲ್ಲದಿದ್ದರೆ ಸೌಂದರ್ಯ ನಿಷ್ಪತ್ತಿ ಒದಗದು. ಎಲ್ಲ ಕಲೆಗಾರರಿಗೂ ಶಿಕ್ಷಣ ಮತ್ತು ವ್ಯವಸಾಯ_ಇವುಗಳು ಅನಿವಾರ್ಯವಾದ ಸಂಸ್ಕಾರಗಳು. ಕೆಲವು ವೇಳೆ ಈ ವ್ಯಾಕರಣವೇ ಭಾರವಾಗಿ ತಾತ್ಪರ್ಯವನ್ನು ಮರೆಯಿಸುವುದೂ ಉಂಟು. ಆದರೆ ಇದು ಸಲ್ಲದು. ಕೇವಲ ಉಪಾಧಿವಿಶಿಷ್ಟವಾದ ಕಲೆ ಕುಶಲತೆಯಾದರೂ ಲಲಿತಕಲೆಯಾಗದು.

ಕಲೆಯ ವಿಚಾರ ಪ್ರಸಾಪಿಸುವಾಗ ರುಚಿಯ ವಿಚಾರವೂ ಏಳುತ್ತದೆ. ಯುಗ ಧರ್ಮ, ಆಯಾ ಕಾಲದಲ್ಲಿ ಪ್ರಚಲಿತವಾದ ದೃಷ್ಟಿ, ಪಾರಿಶ್ರಮಿಕ ಸೌಲಭ್ಯ ನೆರೆನಾಡುಗಳ ಪ್ರಭಾವ, ಆರ್ಥಿಕ_ಔದ್ಯಮಿಕ ಪರಿಸ್ಥಿತಿ ಮುಂತಾದ ವಿವರಗಳನ್ನನುಸರಿಸಿ ಸಿದ್ಧವಾಗುವ ಈ ರುಚಿ ಜನಗಳ ಮನೋಧರ್ಮವನ್ನು ಅವಲಂಬಿಸಿರುತ್ತದೆ. ಈ ರುಚಿಗೆ ಸಮರ್ಪಕವಾಗಿ ಕಲೆಯ ರೀತಿ ಮೂಡುತ್ತದೆ. ಕೆಲವೊಮ್ಮೆ ಕಲಾವಿದರು ಯುಗ ಧರ್ಮವನ್ನು ಗ್ರಹಿಸಿ ಮುಂಬರಲಿರುವ ರುಚಿಯನ್ನು ನಿರೀಕ್ಷಿಸಿಯೇ ಕಲಾಸೃಷ್ಟಿ ಮಾಡುತ್ತಾರೆ. ಪ್ರಾಚೀನಯುಗದ ಗುಹಾ ಚಿತ್ರಗಳಲ್ಲಿ ಕಾಣಬರುವ ವಾಸ್ತವಿಕತೆ ಮತ್ತು ಪ್ರಸಂಗನಿರೂಪಣೆ, ಮಧ್ಯಯುಗದ ಮತಸಂಬಂಧವಾದ ವಾಸ್ತು ಮತ್ತು ಶಿಲ್ಪಗಳು, ಆಧುನಿಕ ಕಾಲದ ಘನಾಕೃತಿವಿಧಾನ (ಕ್ಯೂಬಿಸಂ), ಅತಿವಾಸ್ತವಿಕತೆ (ಸರ್ರಿಯಲಿಸಂ) ಪರಿಣಾಮ ವಿಧಾನ (ಇಂಪ್ರೆಷನಿಸಂ) ಮುಂತಾದ ಪ್ರಕಾರಗಳು ರುಚಿಯನ್ನೇ ಅವಲಂಬಿಸಿದ ಮಾರ್ಪಾಟುಗಳು. ರುಚಿ ತಲೆಮಾರುಗಳಲ್ಲಿ ಬೆಳೆಯದೆ ನಿಂತರೆ ಕಲೆಗೆ ಪ್ರಗತಿ ಒದಗದು. ರುಚಿಗೆ ಅಧೀನವಾಗಿ ರಸ ವ್ಯವಸ್ಥಿತವಾಗುತ್ತದೆ. ರಸ ನಿಷ್ಪತ್ತಿಮಾಡುವ ಕಲೆಗಾರನಿಗೂ ರಸಾಸ್ವಾದ ಮಾಡುವ ಸಹೃದಯನಿಗೂ ಸಂಬಂಧ ಏರ್ಪಡುವುದು ರುಚಿಯ ಆದಾರದ ಮೇಲೆ. ಇದಕ್ಕೆ ತಕ್ಕಂತೆ ವೀರಚಿತ್ರಗಳು, ಧಾರ್ಮಿಕ ಚಿತ್ರಗಳು, ಅಲಂಕರಣ, ಲಘುಗೀತ, ವೀರಕಾವ್ಯ ಮುಂತಾದುವು ಸೃಷ್ಟಿಯಾಗುತ್ತವೆ. ಸೌಂದರ್ಯ ಮೀಮಾಂಸೆಯಲ್ಲಿ ರುಚಿ ರಸಗಳಿರುವ ಅನ್ಯೋನ್ಯಾಶ್ರಯ ಜಿಜ್ಞಾಸೆಗೆ ಬರುತ್ತದೆ. ಈ ಅನ್ಯೋನ್ಯ ಸಂಬಂಧದಿಂದಾಗಿ ಕಲೆ ಸ್ವಕಲ್ಪಿತ ಸಂಕೇತ ಬದ್ಧವಾಗಿರುತ್ತದೆ. ಒಂದೊಂದು ಯುಗದಲ್ಲೂ ಸಂಕೇತಗಳ ಕಟ್ಟುಪಾಡು ಮಾರ್ಪಡುತ್ತ ಹೋಗುತ್ತದೆ.

ಲಲಿತಕಲೆಗೂ ಪ್ರಯೋಜನವಿಲ್ಲದೆ ಇಲ್ಲ. ಆದಿವಾಸಿಗಳು ಗುಹಾಂತರ್ಗತ ಚಿತ್ರಗಳಲ್ಲಿ ರೇಖಾವಿನ್ಯಾಸಳಿಂದ ಬೇಟೆಯ ಪ್ರಸಂಗಗಳನ್ನು ನಿರೂಪಿಸಿದ್ದಾರೆ. ರಸ_ರುಚಿಗಳಿದ್ದರೂ ಪ್ರಮುಖವಾಗಿ ಇವು ಐಂದ್ರಜಾಲಿಕ ವಿಧಾನಗಳೆಂದು ಭಾವಿಸಲಾಗಿದೆ. ಪ್ರಾಚೀನ ಕ್ರೈಸ್ತ ಮಂದಿರಗಳಲ್ಲಿ, ಸಮಾಧಿ ಭವನಗಳಲ್ಲಿ ಮಂತ್ರ, ತಂತ್ರ, ಪ್ರಾರ್ಥನೆಗಳಿಗೆ ಸಂಬಂಧಪಟ್ಟಂತೆ ವಾಸ್ತು, ಶಿಲ್ಪ, ಚಿತ್ರಗಳು ಮೂಡಿಬಂದಿವೆ. ದೇವತಾ ಮೂರ್ತಿಗಳಿಂದ ಪ್ರಯೋಜನವುಂಟೆಂದೂ ಇಲ್ಲವೆಂದೂ ಆ ಕಾಲದಲ್ಲೇ ಗೊಂದಲ ಎದ್ದಿತು. ಆ ಕಾಲದ ಕಲಾಕೃತಿಗಳೆಲ್ಲ ಧರ್ಮಕ್ಕೆ ಮೀಸಲಾಗಿದ್ದುವು. ಇಸ್ಲಾಮೀ ಧರ್ಮಗ್ರಂಥಗಳಲ್ಲಿ ಕಂಡುಬರುವ ಸೊಗಸಾದ ಲತಾ ವಿನ್ಯಾಸದ ಅಲಂಕರಣಗಳು, ಜೈನ ಕಲ್ಪಸೂತ್ರದ ತಾಳಪತ್ರ ಪ್ರತಿಗಳಲ್ಲಿರುವ ಚಿತ್ರಗಳು, ಅಜಂತ ಗುಹೆಯ ಭಿತ್ತಿ ಚಿತ್ರಗಳು, ಭಾರತೀಯ ದೇವಾಲಯಗಳ ಶಿಲ್ಪಗಳು– ಇವುಗಳನ್ನೂ ತೀರ ಶುದ್ಧಕಲೆಯೆನ್ನಲಾಗದು.

ಕಲೆಗಾರನಿಗೆ ಪ್ರೋತ್ಸಾಹ ಕೊಟ್ಟು ಅವನಿಗೆ ನೆರವಾಗಿ ಕಲಾಸೃಷ್ಟಿ ಮಾಡಿಸುವ ಶ್ರೀಮಂತರ ವಿಚಾರವನ್ನೂ ಈ ಸಂದರ್ಭದಲ್ಲಿ ಹೇಳಬೇಕು. ಅತಿ ಪ್ರಾಚೀನ ಕಲೆಯನ್ನು ಬಿಟ್ಟರೆ ಮಧ್ಯಯುಗದಲ್ಲೂ ಈಗಿನ ಯುಗದಲ್ಲೂ ಇಂಥ ಆಶ್ರಯದಾತರ ಅಗತ್ಯ ಕಲೆಗಾರನಿಗಿದ್ದೇ ಇತ್ತು. ಐರೋಪ್ಯ ಕಲೆಗಾರರಿಗೆ ಕ್ರೈಸ್ತ ಮಠಗಳು ತುಂಬ ಉತ್ತೇಜನವನ್ನಿತ್ತಿವೆ. ಪ್ರಾಚೀನ ಕ್ರೈಸ್ತ ಕಲೆಯ ಸಂಪ್ರದಾಯದಲ್ಲಿ, ಎಂದರೆ 313ರಲ್ಲಿ ಕಾನ್ ಸ್ಟೆಂಟೈನನ ಘೋಷಣೆಯಾದಾಗಿನಿಂದ 800ರಲ್ಲಿ ಷಾರ್ಲಮಾನ್ ರಾಜ್ಯವನ್ನು ಪುನಃ ಸ್ಥಾಪನೆ ಮಾಡುವವರೆಗೆ, ಅಲೆಗ್ಸಾಂಡ್ರಿಯ ಶಾಖೆ, ಈಜಿಪ್ಟಿನ ಕಾಪ್ಟಿಕ್ ಕಲೆ; ಸಿರಿಯ, ಏಷ್ಯಮೈನರ್, ಮೆಸೊಪೊಟೇಮಿಯದ ಹೆಲನಿಸ್ಟ್ ಕಲೆ, ಆರ್ಮಿನಿಯನ್ ಚರ್ಚುಗಳ ಕಲೆ, ರೋಮನ್ ಸಮಾಧಿಗಳಲ್ಲಿ ಕ್ರೈಸ್ತಪ್ರಸಂಗಗಳ ಚಿತ್ರಣ, ಕಪ್ಪಡೋಸಿಯದ ಏಕಶಿಲಾಕ್ರೈಸ್ತ ಮಂದಿರಗಳಲ್ಲಿರುವ ಭಿತ್ತಿಚಿತ್ರಗಳು, ಕೆಲ್ಟಿಕ್ ಮತ್ತು ಫ್ರಾಂಕಿಷ್ ಕಾಲದ ಚಿತ್ರದ ಹಸ್ತಪ್ರತಿಗಳು_ ಮುಂತಾದ ಕಲಾಕೃತಿಗಳಿಗೆಲ್ಲ ಕ್ರೈಸ್ತಮಠಾಧಿಪತಿಗಳೇ ಆಶ್ರಯದಾತರು. ಇಸ್ಲಾಮೀ ಮತ್ತು ಬಿಜ಼ಾಂಟಿನ್ ಕಲೆಗಳಿಗೆ ರಾಜರು, ಅಧಿಕಾರಿಗಳು, ಶ್ರೀಮಂತರು ಪ್ರೋತ್ಸಾಹವನ್ನಿತ್ತರು. 330ರಿಂದ 1453ರ ವರೆಗೆ ಪೌರಸ್ತ್ಯ ರೋಮನ್ ಸಮ್ರಾಜ್ಯದ ರಾಜಧಾನಿಯಗಿದ್ದ ಕಾನ್‌ಸ್ಟೆಂಟಿನೋಪಲ್ ಕಲೆಗೆ ತೌರೂರಾಗಿದ್ದುದು ಇದೇ ಕಾರಣದಿಂದ. ಹೀಗೆಯೇ 9ನೆಯ ಶತಮಾನದ ಮಧ್ಯಭಾಗದಲ್ಲಿ ಇಸ್ಲಾಮೀ ಕಲೆಯ ಸಮರ್‍ರಾ ಶೈಲಿ ಪ್ರವರ್ತಿತವಾದದ್ದು ಟ್ಯುಲ್ಯುನಿಡಿಸ್ ಎಂಬ ಸೇನಾನಿಯಿಂದ. ಇಸ್ಲಾಮೀ ಕಲೆಗೆ ಕೈರೋ ಮತ್ತು ಪರ್ಷಿಯಗಳು ಕೇಂದ್ರ ಸ್ಥಳಗಳಾಗಿದ್ದುದೂ ರಾಜರ ಆಶ್ರಯದಿಂದ. ಭಾರತದಲ್ಲಿ ಕೂಡ ಅಶೋಕ, ಕನಿಷ್ಕರ ಆಶ್ರಯದಲ್ಲಿ ಶಿಲ್ಪವೂ ಮುಂದೆ ಗುಪ್ತ, ಶುಂಗ, ಚೋಳ, ಪಾಂಡ್ಯ, ಹೊಯ್ಸಳ, ರಜಪೂತ ರಾಜರ ಆಶ್ರಯದಲ್ಲಿ ವಾಸ್ತು, ಶಿಲ್ಪ, ಚಿತ್ರಕಲೆಗಳೂ ಅಭ್ಯುದಯವನ್ನು ಪಡೆದುವು. ಕಲಾಭಿಮಾನಿಗಳಾದ ಶ್ರೀಮಂತ ಗೃಹಸ್ಥರು ಕಲಾಕೃತಿಗಳನ್ನು ತಮ್ಮ ಗೃಹಗಳ ಅಲಂಕರಣಕ್ಕಾಗಿ ಕೊಂಡು ಕಲಾವಿದರನ್ನು ಪ್ರೋತ್ಸಾಹಿಸುವ ಪದ್ಧತಿ ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ನಡೆದುಬಂದಿದೆ. ಶ್ರೀಮಂತರ ಪರಿವಾರದಲ್ಲಿ, ರಾಜಾಸ್ಥಾನಗಳಲ್ಲಿ ಕಲೆಗಾರರನ್ನು ನಿಯಮಿಸಿಕೊಳ್ಳುವ ಸಂಪ್ರದಾಯವೂ ವಿಸ್ತೃತವಾದದ್ದು. ಸರ್ಕಾರದವರು ಈ ಆಶ್ರಯದ ಅಗತ್ಯವನ್ನು ಮನಗಂಡು ಅಕೆಡಮಿಗಳನ್ನು ವ್ಯವಸ್ಥೆ ಮಾಡಿದ್ದಾರೆ. (ನೋಡಿ– ಅಕೆಡಮಿಗಳು). ಭಾರತ ಸರ್ಕಾರದವರು ಕೂಡ ಲಲಿತಕಲಾ ಅಕಾಡಮಿಯನ್ನು ಕೇಂದ್ರದಲ್ಲೂ ರಾಜ್ಯ ಸರ್ಕಾರಗಳು ರಾಜ್ಯಗಳಲ್ಲೂ ಏರ್ಪಡಿಸಿದ್ದಾರೆ. ಉತ್ತೇಜನ, ಆಲಂಬನಗಳಿಲ್ಲದೆ ಕಲೆ ಅರಳದು ಎಂಬ ಕಲ್ಪನೆ ಇದಕ್ಕೆ ಮೂಲ. ನಮ್ಮವರು ವಿನಾಶ್ರಯಂ ನ ಶೋಭಂತೇ ಎಂದು ಕವಿತೆಗೆ, ಲತೆಗೆ, ಪಂಡಿತರಿಗೆ ಹೇಳಿದ ಮಾತು ಎಲ್ಲ ಕಲೆಗಳಿಗೂ ಅನ್ವಯವಾಗುತ್ತದೆ.

ಹೀಗೆ ಕಲೆ ಜನಜೀವನದಲ್ಲಿ ಅಗತ್ಯವಾದ, ಉಪಯುಕ್ತವಾದ ಪಾತ್ರವನ್ನು ವಹಿಸಿ ಬೆಳೆದುಬಂದಿದೆ. ಸೌಂದರ್ಯಸೃಷ್ಟಿಯಿಂದ ಸಹೃದಯನಿಗೆ ಅವ್ಯಾಜವಾದ ಆನಂದವನ್ನು ಒದಗಿಸುವುದು ಕಲೆಯ ಜೀವಾಳವಾದರೂ ಈಚೆಗೆ ಉದ್ಯಮದಲ್ಲೂ ಈ ಅನುಭವದ ಆವೇಶವಿರಬೇಕೆಂಬ ನಿಲವು ಕಾಣುತ್ತದೆ. ಕಲೆಯಿಲ್ಲದ ಉದ್ಯಮ ಪಾಶವೀ ರೀತಿಯದು ಎಂಬ ದೃಷ್ಟಿಯಿಂದ ಕಲೆಯಲ್ಲಿ ಹೊಸ ಚೈತನ್ಯ ಮೂಡಿ ಬಂದಿದೆ. ಕಲೆಯ ಆಕರ ಭಾವೋದ್ರೇಕ, ಸಾಧನ ಸದ್ಯೋಬುದ್ಧಿ ಎಂದು ಒಪ್ಪಿದರೂ ಕಲೆಯಲ್ಲಿ ಸಂಸ್ಕೃತಿಗೆ ಸಹಕಾರಿಯಾಗಿ ನಿಲ್ಲುವ ಪ್ರಯೋಜನವಿದೆ ಎಂದು ಗ್ರಹಿಸಬೇಕು. **(ಎಸ್.ವಿ.ಆರ್.; ಎಸ್.ಕೆ.ಆರ್.)**

ಸಂಕ್ಷೇಪವಾಗಿ ಹೇಳುವುದಾದರೆ ಕಲೆ ಕಲೆಗಾರನ ಪ್ರತಿಭೆಯಿಂದ ಹೊರಬಿದ್ದ ಒಂದು ಕೃತಕ ಸೃಷ್ಟಿಯೆಂದೂ ತನ್ಮೂಲಕ ಪ್ರತಿಭೆಯ ಸಂಪರ್ಕವನ್ನು ಕಲಾವಿಲಾಸಿಗೆ ಒದಗಿಸಿ ಅವನಲ್ಲಿ ಪ್ರಜ್ಞೋತ್ಕರ್ಷ ಶಕ್ತಿಯ ಅಭಿವ್ಯಕ್ತಿ ಮತ್ತು ಉಪಯೋಗ ನಾನಾ ಸ್ಥರಗಳಲ್ಲಿ ಆಗಬಹುದು. ಇವು ಕಾಲ, ದೇಶ, ವ್ಯಕ್ತಿಗಳ ಬುದ್ಧಿಮತ್ತೆ ಮತ್ತು ಉದ್ದೇಶ ಮುಂತಾದ ಅಂಶಗಳನ್ನು ಅವಲಂಬಿಸಿರುತ್ತವೆ. ಅಪ್ರತಿಮ ಪ್ರತಿಭಾವಂತನ ಸೃಷ್ಟಿ ನವನವೋನ್ಮೇಷಶಾಲಿನಿಯಾಗಿರಬಲ್ಲುದಾದರೆ, ಅಲ್ಪ ಪ್ರತಿಭೆಯುಳ್ಳವನ ಸೃಷ್ಟಿ ಕೇವಲ ತಂತ್ರಚಾತುರ್ಯ ಪ್ರದರ್ಶನದಲ್ಲೋ ಅನುಕರಣದಲ್ಲೋ ಮುಗಿದುಹೋಗಬಹುದು. ಹಾಗೆಯೇ ಸಾಮಾನ್ಯತಃ ಎಲ್ಲ ಕಲಾಸೃಷ್ಟಿಗೂ ಲಕ್ಷ್ಯನಾದ ಸಹೃದಯ ಪ್ರತಿಭಾವಂತನಾದ ಕಲೆಗಾರನ ಮಟ್ಟಕ್ಕೇ ಏರಿ ಅವರ್ಣನೀಯ ರಸಾನಂದವನ್ನು ಅನುಭವಿಸಬಹುದು; ಇಲ್ಲವೇ ಕಲೆಯ ಪ್ರಜಾಪ್ರಬೋಧನ ಶಕ್ತಿಯನ್ನು ಧಾರ್ಮಿಕ_ಸಾಮಾಜಿಕ ರಂಗದ ಗುರಿಗಳಿಗೆ ಸಾಧನವಾಗಿ ಮಾಡಿಕೊಳ್ಳಬಹುದು. ಅಥವಾ ಅದಕ್ಕೂ ಕೆಳಮಟ್ಟದಲ್ಲಿ ಸಿರಿಯ ಅಥವಾ ಗರಿಮೆಯ ಸೂಚಕವಾಗಿಯೋ ಅಥವಾ ಆರ್ಥಿಕ ಲಾಭಕ್ಕಾಗಿಯೋ ಬಳಸಬಹುದು. ಕಲಾಭಿವ್ಯಕ್ತಿಯಲ್ಲಿ ರೂಪಣ, ಉದ್ಧೇಶ್ಯ, ಉದ್ದಿಷ್ಟ ವಸ್ತು–ಇವು ಮೂರು ಪರಸ್ಪರ ಪ್ರಭಾವಿಗಳೂ ಹೌದು.

**ಅಭಿವ್ಯಕ್ತಿ – ತಂತ್ರ** : ಕಲಾಸೃಷ್ಟಿಯಲ್ಲಿ ಪ್ರಭಾವ ಬೀರುವ ಇನ್ನೊಂದು ಮುಖ್ಯ ಅಂಶ ತಂತ್ರ. ಇದು ನಿರೂಪಣೆಗೆ ಉಪಯೋಗಿಸುವ ಮೂಲಸಾಮಗ್ರಿ ಮತ್ತು

ಕಲಾರೀತಿಯನ್ನು ಅವಲಂಬಿಸಿರುತ್ತದೆ. ಮೂಲಸಾಮಗ್ರಿಯ ಉಪಯೋಗ, ದೇಶ, ಕಾಲ, ಸಂಪ್ರದಾಯ ಇವುಗಳ ಹಿಡಿತದಲ್ಲಿರುತ್ತದೆ. ಉದಾಹರಣೆಗೆ ಅಮೃತಶಿಲೆ ದೊರೆಯದಿರುವ ದೇಶಗಳಲ್ಲಿ ಆ ಪದಾರ್ಥದ ಬಳಕೆಯನ್ನೂ ಅತಿಮಳೆಯಿರುವಲ್ಲಿ ಮಣ್ಣು ಅಥವಾ ಇಟ್ಟಿಗೆಯ ಕಟ್ಟಡಗಳನ್ನೂ ಕಾಣುವುದು ಅಪರೂಪ. ಲೋಹವನ್ನು ಕರಗಿಸುವ ತಂತ್ರವೇ ಬೆಳೆಯದಿದ್ದ ಕಾಲದಲ್ಲಿ ಲೋಹದ ಕಲಾಕೃತಿಗಳನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಹಾಗೆಯೇ ಸಾಂಪ್ರದಾಯಿಕ ಪರಿಸರದಲ್ಲೇ ಬೆಳೆದಿರುವ ಪ್ರಾಚೀನಭಾರತದ ಕಲೆಯಲ್ಲಿ ಸಂಪ್ರದಾಯಬಾಹಿರವಾದ ಕಬ್ಬಿಣ, ಗಾಜು ಮುಂತಾದ ವಸ್ತುಗಳ ಕಲಾಕೃತಿಗಳನ್ನು ಹೆಚ್ಚು ನಿರೀಕ್ಷಿಸುವುದೂ ಕಷ್ಟ.. ಆದರೆ ಕಾಲಕಾಲಕ್ಕೆ ಜನರ ಸಂಪತ್ತು, ಸಾಧನಗಳು ಮತ್ತು ಜ್ಞಾನ ಬೆಳೆದಂತೆ ಹೊಸ ಹೊಸ ರೀತಿಯ ಸಾಮಗ್ರಿಗಳು ಬಳಕೆಗೆ ಬರಬಹುದು. ಅಲ್ಯುಮಿನಿಯಂ, ತಂತಿ, ಕಾಂಕ್ರೀಟ್, ಮಾಸೋನೈಟ್, ಪೆಪಿಯರ್‌ಮೆಷೇ ಮುಂತಾದ ಇತ್ತೀಚಿನ ಕಲೆಗಾರನ ಹೊಸ ಸಾಮಗ್ರಿಗಳು ಇದಕ್ಕೆ ಉದಾಹರಣೆ. ತಂತ್ರದ ಆಳವಡಿಕೆಗೆ ಕಲಾರೀತಿ ಮತ್ತೂ ಮುಖ್ಯ. ವಾಸ್ತುಕಲೆಗೆ ಒಂದು ತಂತ್ರವಾದರೆ, ಶಿಲ್ಪಕ್ಕೆ ಬೇರೆ ತಂತ್ರ ಬೇಕಾಗುತ್ತದೆ. ಇದೇ ರೀತಿ ಚಿತ್ರಕಲೆ, ಸಂಗೀತ, ನೃತ್ಯ ಇವುಗಳಲ್ಲಿ ಉಪಯೋಗಿಸುವ ತಂತ್ರಗಳೂ ಭಿನ್ನವಾದುವು. ಆದ್ದರಿಂದ ತಂತ್ರಗಳನ್ನು ಕಲಾರೀತಿಗೆ ಅನುಸಾರವಾಗಿ ಬೇರೆ ಬೇರೆಯಾಗಿಯೇ ಗಮನಿಸಬೇಕಾಗುತ್ತದೆ.

**ವಾಸ್ತು ಕಲೆ :** ಅನುಕೂಲಕರವಾದ ಆವರಣ ಮತ್ತು ಆಕರ್ಷಕ ವಿನ್ಯಾಸವಿದ್ದು ಭದ್ರವಾಗಿರುವ ಕಟ್ಟಡವೇ ಉತ್ತಮ ವಾಸ್ತುರಚನೆ. ಮೊದಲಾಗಿ ವಿಶಾಲ ಪ್ರದೇಶದಲ್ಲಿ ವೃತ್ತ, ಆಯ ಅಥವಾ ಚೌಕಾದಿ ಸೀಮಿತ ಆಕಾರವನ್ನು ಗುರುತಿಸುವಾಗ ವಾಸ್ತು ಶಿಲ್ಪಿಯ ಕೆಲಸ ಆರಂಭವಾಗುತ್ತದೆ. ಕಟ್ಟಡವನ್ನು ಎತ್ತರಿಸುವಾಗ ಪುನಃ ವಿಶಾಲ ತೆರಪಿನಲ್ಲಿ ಗೋಡೆ, ಕಮಾನು, ಗೋಪುರ ಮುಂತಾಗಿ ಒಂದು ಸೀಮಿತ ಘನಾಕೃತಿ ನಿರ್ಮಿಸುವುದರಿಂದ, ಆಕೃತಿ ಆಕಾಶದ ವೈಶಾಲ್ಯದಲ್ಲಿ ಲೀನವಾಗದೆ ಸತ್ವವನ್ನು ಉಳಿಸಿಕೊಳ್ಳುವಂತೆ ಗಮನಿಸಬೇಕಲ್ಲದೆ, ಉದ್ದ, ಅಗಲ, ಎತ್ತರಗಳ ಹಿತ ಪ್ರಮಾಣವನ್ನೂ ಸಾಧಿಸಬೇಕು. ಮತ್ತೆ ದೂರದಿಂದ ನೋಡುವವರಿಗೆ ಆಕರ್ಷಕವಾಗಿರುವಂತೆ ಹೊರಮೈ ವಿನ್ಯಾಸವನ್ನೂ ಹತ್ತಿರದಿಂದಲೂ ಸುಂದರವಾಗಿರುವಂತೆ ಘನ (ಮಾಸ್) ಮತ್ತು ತೆರಪುಗಳ (ವ್ಯಾಕ್ಯೂಂ) ಸಮತೋಲವನ್ನೂ ಕಾಪಾಡಬೇಕು. ಅನುಕೂಲದ ದೃಷ್ಟಿಯಿಂದ ಕಟ್ಟಡದ ವಿವಿಧ ಭಾಗಗಳ ಸಾಮೀಪ್ಯ_ದೂರವನ್ನು ಗಾಳಿ, ಬೆಳಕು, ನೀರಿಗೆ ತಡೆ_ಅವಕಾಶವನ್ನೂ ಯೋಜಿಸಬೇಕು. ಭದ್ರತೆಯ ದೃಷ್ಟಿಯಿಂದ, ನೆಲ, ಸಾಮಗ್ರಿಗಳ ಶಕ್ತಿ_ಸ್ವಭಾವ, ರಚನಾವಿನ್ಯಾಸದಿಂದಾಗುವ ಭಾರದ ವಿತರಣೆ_ವೈಪರೀತ್ಯ ಮುಂತಾದ ಅಂಶಗಳನ್ನು ಗಮನಿಸಬೇಕು. ಸೌಂದರ್ಯ, ಅನುಕೂಲ, ಭದ್ರತೆ_ಈ ಮೂರು ಅಂಶಗಳನ್ನೂ ತೃಪ್ತಿಕರವಾಗಿ ಸಾಧಿಸುವುದೇ ವಾಸ್ತು ತಂತ್ರದ ಮೂಲಸೂತ್ರ. ಈ ಸಾಧನೆಗೆ ಮಾರ್ಗಗಳನ್ನು ಹಲವೆಡೆ ಹಲವು ರೀತಿಯಲ್ಲಿ ವಾಸ್ತುಶಿಲ್ಪಿಗಳು ಕಂಡುಹಿಡಿದಿದ್ದಾರೆ. ಆದರೆ ಕಾಲಕಾಲಕ್ಕೆ ಜನಜೀವನದ ರೀತಿ_ನೀತಿ, ಬೇಕು_ಬೇಡಗಳು ವ್ಯತ್ಯಾಸವಾದಂತೆಲ್ಲ ತಂತ್ರಗಳೂ ಬದಲಾಯಿಸಬೇಕಾಗುತ್ತದೆ. ಹೊಸ ಹೊಸ ಸಂದರ್ಭಗಳಿಗೆ ಸಾಮಗ್ರಿಗಳ ಆಯ್ಕೆ ಮತ್ತು ವಿನ್ಯಾಸದ ಮಾರ್ಪಾಡುಗಳಿಂದ ಪರಿಹಾರವನ್ನು ಯೋಜಿಸಬೇಕಾಗುತ್ತದೆ. ವಾಸ್ತು ಸಾಮಗ್ರಿಗಳು ಪುರಾತನ ಕಾಲದ ಎಲೆ, ಕಡ್ಡಿ, ಗರಿ, ಮರದಿಂದ ಹಿಡಿದು ಮಣ್ಣು, ಇಟ್ಟಿಗೆ, ಕಲ್ಲಿನ ಮೂಲಕ ಈಚೆಗೆ ಕಬ್ಬಿಣ, ಕಾಂಕ್ರೀಟಿನವರೆಗೆ ಬದಲಾಗುತ್ತ ಬಂದಿವೆ. ಹಾಗೆಯೇ ರಚನಾವಿನ್ಯಾಸದಲ್ಲಿ ಪ್ರಾಗೈತಿಹಾಸಿಕ ಕಾಲದಲ್ಲಿ ಮೊದಮೊದಲು ಗರಿ, ಚರ್ಮ ಅಥವಾ ಎಲೆಗಳ ಒಪ್ಪಾರು, ಇಪ್ಪಾರು ಇದ್ದರೆ ಅನಂತರ ಗೋಡೆ, ತೊಲೆ ಕಂಬಗಳು ರೂಢಿಗೆ ಬಂದುವು. ರೋಮನ್ನರ ಕಾಲದಲ್ಲಿ ಕಮಾನು, ಗುಮ್ಮಟ, ಕಮಾನಿನ ಚಾವಣಿ (ವಾಲ್ಟ್) ಬಹುವಾಗಿ ಉಪಯೋಗವಾಯಿತು. ಅನಂತರ ಚೂಪು ಕಮಾನು ಮುಂತಾದ ಹೊಸ ಆವಿಷ್ಕರಣಗಳಾದುವು. 19ನೆಯ ಶತಮಾನದ ವರೆಗೂ ಈ ರಚನಾ ತಂತ್ರಗಳು ರೂಢಿಯಲ್ಲಿದ್ದುವು. ಈಚೆಗೆ ಕಬ್ಬಿಣ ಮತ್ತು ಕಾಂಕ್ರೀಟ್ ಬಳಕೆಗೆ ಬಂದಮೇಲೆ ಚಾಚುತೊಲೆ (ಕ್ಯಾಂಟಿಲಿವರ್) ತೂಗುಕಮಾನು (ಸಸ್ಪೆನ್‌ಷನ್ ಆರ್ಚ್) ಮುಂತಾದ ಹೊಸ ರಚನಾವಿಧಾನಗಳು ಹರಡುತ್ತಿವೆ.

ಭಾರತದಲ್ಲಿಯೂ ಇದೇ ರೀತಿಯ ತಾಂತ್ರಿಕ ಬೆಳವಣಿಗೆ ಕಾಣಬರುತ್ತೆ. ಶಿಲಾಯುಗದಲ್ಲಿ ಜೋಪಡಿ, ತಡಿಕೆಗೋಡೆ, ಹಾರು–ಇವು ಮಾತ್ರ ಬಳಕೆಯಲ್ಲಿದ್ದುವು. ಹರಪ್ಪ ನಾಗರಿಕತೆಯ ಕಾಲದಲ್ಲಿ ಹಸಿ ಮತ್ತು ಸುಟ್ಟ ಇಟ್ಟಿಗೆಯ ಕಟ್ಟಡಗಳು ವಿಶೇಷವಾದುವು. ಆ ಕಾಲದ ಬಂಧನಸಾಮಗ್ರಿ (ಸಿಮೆಂಟಿಂಗ್ ಮೆಟೀರಿಯಲ್) ಮಣ್ಣು ಮಾತ್ರ. ಅಲ್ಲದೆ ಆ ಕಾಲದಲ್ಲಿ ತೊಲೆಗಳಿದ್ದರೂ ಕಂಬ ಅಪರೂಪವಾಗಿತ್ತು. ಅನಂತರ ಇಟ್ಟಿಗೆಯ ಉಪಯೋಗ ಕಡಿಮೆಯಾಗಿ ಪ್ರ.ಶ.ಪೂ. (6–5) ಶತಮಾನದಲ್ಲಿ ಪುನಃ ಬಳಕೆಗೆ ಬಂತು. ದಕ್ಷಿಣದ ಭಾರತದಲ್ಲಿ ಇಟ್ಟಿಗೆಯ ಮೊದಲ ಉಪಯೋಗದ ಬಗ್ಗೆ ಮಾಹಿತಿಯಿರುವುದು ಪ್ರ.ಶ. ಪೂರ್ವದ ಅಂತ್ಯಕಾಲದಲ್ಲಿ ಮಾತ್ರ. ರಚನಾಸಾಮಗ್ರಿಯಾಗಿ ಕಲ್ಲನ್ನು ವಿಶೇಷವಾಗಿ ಬಳಸಿದ್ದು ಪ್ರ.ಶ.ಪೂ. (4–3)ನೆಯ ಶತಮಾನದಿಂದ. ಈ ಹಿಂದೆ ಮರದ ಕಟ್ಟಡಗಳು ಹೆಚ್ಚಾಗಿದ್ದು ಅನಂತರ ಸಾಮಗ್ರಿಯ ಬದಲಾವಣೆಯಾದರೂ ಮೊದಲು ಕಲ್ಲು ಕಟ್ಟಡಗಳು, ಹಳೆಯ ಮರದ ಕಟ್ಟಡಗಳ ಮಾದರಿಯಲ್ಲೇ ಇರುತ್ತಿದ್ದುವು. ಭಾರತದ ಕಲ್ಲು ಕಟ್ಟಡಗಳ ರಚನಾತಂತ್ರ ಗೋಡೆ, ಅಡ್ಡತೊಲೆ ಮತ್ತು ಕಂಬಗಳಿಂದ ಆವರಣಗಳನ್ನು ನಿರ್ಮಿಸುವುದಕ್ಕಷ್ಟೇ ಸೀಮಿತವಾಗಿತ್ತು. ಹಳೆಯ ಕಲ್ಲು ಕಟ್ಟಡಗಳಲ್ಲಿ ಬಂಧಕಸಾಮಗ್ರಿಯೇನೂ ಇರುವುದಿಲ್ಲ. ಕ್ರಿ.ಶ. (6–7)ನೆಯ ಶತಮಾನದ ಕಾಶ್ಮೀರದ ಕಟ್ಟಡಗಳಲ್ಲಿ ಸಿರಿಯಾ–ರೋಮನ್ ವಾಸ್ತುತಂತ್ರದಿಂದ ಎರವಲಾಗಿ ಪಡೆದ ಬೆಣೆ ಗಾರೆ ಮುಂತಾದ ಬಂಧಕಗಳು ಪ್ರಯೋಗಿತವಾಗಿದ್ದರೂ ಈ ತಂತ್ರ ಇತರೆಡೆಗಳಿಗೆ ಅಷ್ಟಾಗಿ ಹರಡಲಿಲ್ಲ. ಮುಸ್ಲಿಂ ವಾಸ್ತುಕಲೆಯ ಪ್ರವೇಶದ ಅನಂತರ ಗುಮ್ಮಟ, ಕಮಾನು ಮುಂತಾದ ರಚನಾವಿಧಾನಗಳೂ ಬಂಧಕ ಸಾಮಗ್ರಿಯಾಗಿ ಗಾರೆಯೂ ವಿಶೇಷವಾಗಿ ಪ್ರಚಲಿತವಾಯಿತು. ಈಚೆಗೆ ಕಬ್ಬಿಣ–ಕಾಂಕ್ರೀಟ್‌ಳ ಜೊತೆಗೆ ಹೊಸ ರಚನಾತಂತ್ರಗಳೂ ಹರಡಿವೆ. ಆದರೆ ಇವೆಲ್ಲ ವಿದೇಶಗಳಲ್ಲಿ ಬೆಳೆಸಿದ ತಂತ್ರಗಳ ಅನುಕರಣ ಮಾತ್ರವಾಗಿವೆ.

**ಶಿಲ್ಪಕಲೆ :** ವಾಸ್ತುರಚನೆಯಂತೆ ಶಿಲ್ಪ ಸಹ ತ್ರೀ–ಪರಿಮಾಣವನ್ನು (ತ್ರೀ ಡೈಮೆನ್‌ಷನ್) ಆಕರ್ಷಕರೀತಿಯಲ್ಲಿ ರೂಪಿಸುವುದೇ ಆಗಿದೆ. ಆದರೆ ವಾಸ್ತುರಚನೆಯಲ್ಲಿ ಒಂದು ಉಪಯೋಗಿ ಆವರಣದ ಸೃಷ್ಟಿಯ ಉದ್ದಿಶ್ಯವಿದ್ದರೆ, ಶಿಲ್ಪದಲ್ಲಿ ಮಾನವ, ಪ್ರಾಣಿ, ಮರ, ಲತೆ ಮುಂತಾದ ವಸ್ತುಗಳ ರಚನೆಯ ಉದ್ದೇಶವಿದೆ. ಶಿಲ್ಪದಲ್ಲಿ ಪೂರ್ಣಶಿಲ್ಪ ಮತ್ತು ಉಬ್ಬುಶಿಲ್ಪ ಎಂದು ಎರಡು ವಿಧ. ಪೂರ್ಣಶಿಲ್ಪ ಎಲ್ಲ ಪರಿಮಾಣಗಳನ್ನೂ ರೂಪಿಸಿರುವ ಕೃತಿ. ಒಂದು ರೂಪು ಹಿನ್ನಲೆಯಿಂದ ಸ್ವಲ್ಪಮಾತ್ರ ಮುಂದೆ ಎದ್ದಿರುವಂತೆ ಮಾಡುವುದು ಉಬ್ಬುಶಿಲ್ಪದ ತಂತ್ರ. ಅಂದರೆ ಇದರಲ್ಲಿ ಹಿಂಭಾಗದ ಕೆತ್ತನೆಯಿರುವುದಿಲ್ಲ. ಶಿಲ್ಪತಂತ್ರ ಸಾಮಗ್ರಿಯನ್ನು ಅವಲಂಬಿಸಿರುತ್ತದೆ. ರೂಪಿಸಲು ಸಾಧ್ಯವಾಗಿ, ಆ ರೂಪವನ್ನು ಬಹುಕಾಲ ಉಳಿಸಿಕೊಳ್ಳಬಲ್ಲ ಗುಣವುಳ್ಳ ಯಾವ ವಸ್ತುವಾದರೂ ಶಿಲ್ಪಕ್ಕೆ ಸಾಮಗ್ರಿಯಾಗಬಹುದು. ಮರ, ಮಣ್ಣು, ಕಲ್ಲು ಮತ್ತು ಲೋಹ ಬಹು ಹಿಂದಿನಿಂದಲೂ ಬಳಕೆಯಲ್ಲಿರುವ ವಸ್ತುಗಳು. ಶಿಲ್ಪದಲ್ಲಿ ರೂಪಣೆ (ಮಾಡೆಲ್ಲಿಂಗ್) ಮತ್ತು ಒಪ್ಪಗೆಲಸ (ಫಿನಿಷಿಂಗ್) ಇವೆರಡೂ ಮುಖ್ಯ ಘಟ್ಟಗಳು. ಮರ ಮತ್ತು ಕಲ್ಲಿನ ರೂಪಣಾತಂತ್ರ ಬಹುಮಟ್ಟಿಗೆ ಒಂದೇ ರೀತಿಯದು. ಉಳಿ ಅಥವಾ ಬಾಚಿಯಿಂದ ಮೊದಲು ಉದ್ದಿಷ್ಟ ರೂಪನ್ನು ಒರಟಾಗಿ ನಿರ್ಮಿಸಿಕೊಂಡು, ಅನಂತರ ಉಳಿಯಿಂದಲೋ ಚಿಕ್ಕ ಕೊರೆಯುವ ಸಾಧನದಿಂದಲೋ ವಿವರಗಳನ್ನು ಬಿಡಿಸುವುದು ರೂಢಿ. ಅನಂತರ ನಯ ಮಾಡುವುದು. ಕೆಲವು ಸಲ ಬಣ್ಣ ಹಾಕುವುದೂ ಉಂಟು. ಈ ತಂತ್ರಗಳು ಶಿಲಾ ಯುಗದಾರಭ್ಯ ಇಂದಿನ ವರೆಗೂ ಹೆಚ್ಚು ಬದಲಾವಣೆಯಿಲ್ಲದೆ ನಡೆದುಬಂದಿವೆ. ಸುಲಭವಾಗಿ ರೂಪಾಂತರಿಸಬಲ್ಲ ಹನಿಜೇಡಿಯಲ್ಲಿ ಪ್ರತಿಮೆಯನ್ನು ಕೈಯಿಂದ ನಿರ್ಮಿಸಿ, ಅನಂತರ ಸುಟ್ಟು ಗಟ್ಟಿ ಮಾಡುವುದು ಶಿಲಾಯುಗದಿಂದಲೂ ಬಳಸುತ್ತಿರುವ ಮಣ್ಣುಶಿಲ್ಪದ ತಂತ್ರ. ರೂಪಣೆಗೆ ಕೆಲವೊಮ್ಮೆ ಕಲ್ಲಿನ, ಮರದ ಅಥವಾ ಸುಟ್ಟ ಮಣ್ಣಿನ ಅಚ್ಚನ್ನು ಬಳಸಿ ಏಕರೀತಿಯ ಅನೇಕ ಬೊಂಬೆಗಳನ್ನು ಮಾಡಬಹುದು. ಈ ವಿಧಾನ ಸುಮಾರು (2,000) ವರ್ಷಗಳಿದಲೂ ಬಳಕೆಯಲ್ಲಿದೆ. ಇದೇ ರೀತಿಯಲ್ಲಿ ಗಾರೆಯಲ್ಲೂ ಶಿಲ್ಪಗಳನ್ನು ಮಾಡಬಹುದು. ಆದರೆ ಇಲ್ಲಿ ಸುಟ್ಟು ಗಟ್ಟಿಮಾಡುವ ಆವಶ್ಯಕತೆಯಿಲ್ಲ. ರೂಪಣೆಯ ಅನಂತರ ಮೆರಗು ಅಥವಾ ವರ್ಣಲೇಪನದಿಂದ ಪರಿಷ್ಕರಿಸಬಹುದು. ಪ್ರ.ಶ.ಪೂ. 3,000ದ ಸುಮಾರಿನಲ್ಲಿ ಲೋಹದ ಬಳಕೆ ಪ್ರಾರಂಭವಾದಂದಿನಿಂದ, ಶಿಲ್ಪ ರೂಪಣೆಯಲ್ಲೂ ಆ ವಸ್ತು ಉಪಯೋಗವಾಯಿತು. ಇದರಲ್ಲಿ ಒಪ್ಪಗೆಲಸ ಚಿಕ್ಕ ಉಳಿ ಅಥವಾ ಹೆರೆಯುವ ಸಾಧನದಿಂದಾಗುತ್ತದೆ. ರೂಪಣೆ ಎರಕವಿಧಾನದಿಂದ. ಇದರಲ್ಲಿ ಎರಡು ವಿಧ, ಮೊದಲು ಮೇಣದಲ್ಲಿ ಸುಟ್ಟಾಗ ಮೇಲಿನ ಮಣ್ಣಿನ ಕವಚ ಗಟ್ಟಿಯಾಗಿ ಒಳಗಿನ ಮೇಣ ಕರಗಿ ಅದಕ್ಕಾಗಿ ಕವಚದಲ್ಲಿ ಮಾಡಿರುವ ಸಣ್ಣ ರಂಧ್ರಗಳಿಂದ ಹೊರಗೆ ಹರಿದು ಒಳಗೆ ಡೊಳ್ಳಾಗುತ್ತದೆ. ಈ ಡೊಳ್ಳಿಗೆ ಕರಗಿಸಿದ ಲೋಹವನ್ನು ಸುರಿದು ಅದು ಗಟ್ಟಿಯಾದ ಮೇಲೆ, ಮಣ್ಣಿನ ಕವಚವನ್ನು ಒಡೆದಾಗ ಲೋಹದ ಬಿಂಬ ಮೊದಲ ಮೇಣದ ಆಕೃತಿಯಲ್ಲೇ ಇರುತ್ತದೆ. ಈಚೆಗೆ ಮೇಲುಕವಚಕ್ಕೆ ಮಣ್ಣಿನ ಬದಲು ಸಿಮೆಂಟನ್ನು ಅಚ್ಚುಗಳಂತೆ ಮಾಡಿ ಉಪಯೋಗಿಸುವುದೂ ಉಂಟು. ಈ ವಿಧಾನದಿಂದ ಪೂರ್ಣಲೋಹದ ಗಟ್ಟಿಮೂರ್ತಿಗಳು ತಯಾರಾಗುತ್ತವೆ. ಈ ವಿಧಾನವನ್ನೇ ಸ್ವಲ್ಪ ನವೀಕರಿಸಿ, ಮೊದಲು ಮಣ್ಣಿನಲ್ಲಿ ಒಂದು ಒರಟು ರೂಪವನ್ನು ನಿರ್ಮಿಸಿ ಅದರ ಮೇಲೆ ಮೇಣವನ್ನು ಮೆತ್ತಿ ಮುಖ್ಯ ಉದ್ದಿಷ್ಟ ವಿವರಗಳನ್ನೆಲ್ಲ ಬಿಡಿಸಲಾಗುತ್ತದೆ. ಅದರ ಮೇಲೆ ಪುನಃ ಮಣ್ಣು ಮೆತ್ತಿ ಆ ಮಾದರಿಯನ್ನು ಸುಡುವುದರಿಂದ ಮೇಲಿನ ಮತ್ತು ಒಳಗಿನ ಮಣ್ಣು ಗಟ್ಟಿಯಾಗುವುದಲ್ಲದೆ ಎರಡು ಮಣ್ಣಿನ ಸ್ತರಗಳ ಮಧ್ಯದ ಮೇಣ ಕರಗಿ ಹೊರಬೀಳುತ್ತದೆ. ಆ ಡೊಳ್ಳಿಗೆ ಕರಗಿದ ಲೋಹವನ್ನು ಹುಯ್ದು, ಆರಿದ ಮೇಲೆ ಮೇಲಿನ ಮೃತ್ಕವಚವನ್ನು ಒಡೆದಾಗ ಲೋಹದಲ್ಲಿ ಉದ್ದಿಷ್ಟ ರೂಪು ಸಿದ್ಧವಾಗಿರುತ್ತದೆ. ಅನಂತರ ಮೆರಗು ಮತ್ತು ಒಪ್ಪಗೆಲಸ.ಇಲ್ಲಿಯೂ ಮಣ್ಣಿನ ಬದಲು ಇತರ ಪದಾರ್ಥಗಳನ್ನು ಬಳಸುವುದುಂಟು. ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹಗಳ ತೆಳುಪಟ್ಟಿಗಳ ಹಿಂಭಾಗದಲ್ಲಿ ಗಟ್ಟಿಯಾದ ಅಚ್ಚನ್ನು ಒತ್ತಿ ಅಥವಾ ಚಾಣದಿಂದ ಬಡಿದು, ಮುಂಭಾಗದಲ್ಲಿ ನಿರ್ದಿಷ್ಟರೂಪು ಎದ್ದುಕಾಣುವಂತೆ ಮಾಡುವ ಒಂದು ಶಿಲ್ಪತಂತ್ರವೂ ರೂಢಿಯಲ್ಲಿದೆ. ವಿಧಾನ ಯಾವುದೇ

ಆದರೂ ವಿಶಾಲ ತೆರಪನ್ನು (ವೇಕೆಂಟ್ ಸ್ಪೇಸ್) ಒಂದು ಘನರೂಪಿನಿಂದ (ಮಾಸ್) ಛೇದಿಸುವುದೇ ಶಿಲ್ಪದ ಮುಖ್ಯತಂತ್ರ.. ಲೋಹದ ಅಥವಾ ಪ್ಲಾಸ್ಟಿಕ್ಕಿನ ಪಟ್ಟಿಕೆಗಳನ್ನು ನಿಶ್ಚಿತರೂಪಕ್ಕೆ ಬಗ್ಗಿಸಿ, ಬೆಸೆದು ಇದೇ ಉದ್ದೇಶವನ್ನು ಸಾಧಿಸುವ ಹೊಸತಂತ್ರ ಈಚೆಗೆ ಪ್ರಚಾರಕ್ಕೆ ಬರುತ್ತಿದೆ. ಶಿಲ್ಪದ ಪರಿಣಾಮವನ್ನು ಹೆಚ್ಚಿಸಲು, ರೂಪಿಸುವ ವಸ್ತುವಿಗೆ ಒಪ್ಪುವ ರಚನೆ ಮತ್ತು ಬಣ್ಣವಿರುವ ಪದಾರ್ಥದ ಆಯ್ಕೆ, ಬೆಳಕು–ನೆರಳಿನ ಸಂಯೋಜನೆ, ಮೆರಗು, ಬಣ್ಣ ಅಥವಾ ಇತರ ಪದಾರ್ಥಗಳನ್ನು ಶಿಲ್ಪದ ಹೊರಮೈನಲ್ಲಿ ಅವಶ್ಯಭಾಗಗಳಲ್ಲಿ ಹುದುಗಿಸುವುದು ಮುಂತಾದ ವಿಧಾನಗಳು ಬಳಕೆಯಲ್ಲಿವೆ.

ಶಿಲ್ಪತಂತ್ರ ವಿಶ್ವದಲ್ಲೆಲ್ಲ ಸುಮಾರು ಏಕರೀತಿಯದು. ಆದರೆ ಶಿಲ್ಪ ನಿರೂಪಣೆಗೆ ಮೊದಲು ಒಂದು ಮಾದರಿಯನ್ನು ಜೇಡಿ, ಮೇಣ, ಅಥವಾ ಇತರ ಸುಲಭವಾಗಿ ರೂಪಾಂತರಿಸಬಲ್ಲ ವಸ್ತುವಿನಲ್ಲಿ ನಿರ್ಮಿಸಿಕೊಂಡು ಅನಂತರ ಅದನ್ನು ಬೇರೆ ಗಟ್ಟಿ ಪದಾರ್ಥಗಳಲ್ಲಿ ಅನುಕರಿಸುವುದು ಪಾಶ್ಚಾತ್ಯದೇಶಗಳಲ್ಲಿರುವ ಪದ್ಧತಿ. ಭಾರತ ಮತ್ತು ಇತರ ಪೌರಸ್ತ್ಯದೇಶಗಳಲ್ಲಿ, ಮನಸ್ಸಿನಲ್ಲೇ ಉದ್ದಿಷ್ಟ ಪ್ರತಿಮೆಯ ರೂಪನ್ನು ಚಿತ್ರಿಸಿಕೊಂಡು ನೇರವಾಗಿ ಕೆತ್ತನೆಯನ್ನು ಮಾಡುವ ರೂಢಿಯಿದೆ. ವಿವಿಧ ಭಾಗಗಳ ಪರಸ್ಪರ ಪ್ರಮಾಣವನ್ನು ನಿಖರವಾಗಿರಿಸಲು ಮಾತ್ರ, ರೂಪಿಸುವ ವಸ್ತುವಿನ ಮೇಲೆ ಕೆಲವು ರೇಖೆಗಳನ್ನು ಚಿತ್ರಿಸಿಕೊಳ್ಳುವುದುಂಟು. ಈ ವಿಧಾನಗಳಿಗೆ ಅಪವಾದಗಳೂ ಅಪೂರ್ವವಾಗಿ ಕಾಣಬರುತ್ತವೆ.

**ಚಿತ್ರಕಲೆ :** ಚಿತ್ರ ಪ್ರಕೃತಿಯಲ್ಲಿ ಅಸಾಮಾನ್ಯವಾದ, ಆದರೆ ಅದನ್ನೇ ಪೂರ್ಣವಾಗಿ ಅನುಕರಿಸಿದೆಯೆಂಬ ಭ್ರಮೆ ಮೂಡಿಸುವ ಒಂದು ಚತುರ ಕೃತಿ. ಪ್ರಕೃತಿಯಲ್ಲಿ ಪದಾರ್ಥಗಳಿಗೆ ತ್ರಿಪರಿಮಾಣಗಳಿವೆ. ಆದರೆ ಉದ್ದ, ಅಗಲ ಎರಡೇ ಪರಿಮಾಣಗಳಲ್ಲಿ ತ್ರಿಪರಿಮಾಣವನ್ನೂ ಸೂಚಿಸುವುದು ಚಿತ್ರಕಲೆಯ ಮುಖ್ಯ ಸೂತ್ರ. ಅಂದರೆ ಚಿತ್ರದಲ್ಲಿ ಘನರೂಪವಿಲ್ಲ, ಆದರೆ ಘನರೂಪದ ಭಾವನೆ ಇದೆ. ಈ ಭಾವನೆಯನ್ನು ನಿರೂಪಿಸಲು ಮೂರು ತಂತ್ರಗಳು ಹಿಂದಿನಿಂದಲೂ ಬಳಕೆಯಲ್ಲಿವೆ. ಅವು ಯಥಾದೃಷ್ಟಿರೂಪಣ ನೆರಳು–ಬೆಳಕಿನ ಸಂಯೋಜನೆ ಮತ್ತು ವರ್ಣವಿನ್ಯಾಸ. ವಸ್ತುಗಳು ದೂರದಲ್ಲಿದ್ದಾಗ ಚಿಕ್ಕದಾಗಿ ಕಾಣುವುದಲ್ಲದೆ ಅಸ್ಪಷ್ಟವೂ ಆಗುತ್ತವಷ್ಟೆ. ಇದನ್ನು ಒಂದೇ ಸಮತಲದಲ್ಲಿ ಕಾಣುವಂತೆ ರೂಪಿಸಿದರೆ, ದೂರ–ಹತ್ತಿರದ ಭ್ರಮೆಯನ್ನೂ ಮೂಡಿಸಬಹುದು. ಇದೇ ಯಥಾ ದೃಷ್ಟಿರೂಪಣ (ಪರ್ಸ್ಪೆಕ್ಟಿವ್). ಹಾಗೆಯೇ ತ್ರಿಪರಿಮಾಣವಿರುವ ಒಂದು ವಸ್ತುವನ್ನು ನೋಡಿದಾಗ, ಕೆಲವೆಡೆ ಹೆಚ್ಚು ಬೆಳಕಿದ್ದರೆ, ಕೆಲವು ಕಡೆ ಕಡಿಮೆ ಬೆಳಕೋ, ನೆರಳೋ ಇರುತ್ತದೆ. ಈ ಪರಿಣಾಮವನ್ನು ಸಮತಲದಲ್ಲಿ ರೂಪಿಸಿದರೆ, ಚಿತ್ರ ದ್ವಿಪರಿಮಾಣಾತ್ಮಕವಾದರೂ ತ್ರಿಪರಿಮಾಣದ ದೃಶ್ಯ ಗುಣವನ್ನು ತೋರುತ್ತದೆ. ಇದು ನೆರಳು–ಬೆಳಕಿನ ಸಂಯೋಜನಾತಂತ್ರ,. ಮೂರನೆಯದು ಬಣ್ಣಗಳ ಗುಣಗಳನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಕೆಂಪು, ಹಳದಿ ಮುಂತಾದ ಬಣ್ಣಗಳು ಹತ್ತಿರದಿಂದ ಕಣ್ಣಿಗೆ ಬಡಿದಂತೆ ಎದ್ದುಕಾಣುತ್ತವೆ. ಆದರೆ ನೀಲಿ, ಹಸಿರು ಮುಂತಾದವು ಕಣ್ಣಿಗೆ ಹಿತವಾಗಿ ಬಹಳ ದೂರವಿದ್ದಂತೆ ಭಾಸವಾಗುತ್ತವೆ. ಈ ಗುಣಗಳನ್ನು ಚಿತ್ರೀಕರಣದಲ್ಲಿ ಅಳವಡಿಸಿಕೊಂಡು ತ್ರಿ–ಪರಿಮಾಣದ ಪರಿಣಾಮವನ್ನು ಸಾಧಿಸುವುದು ವರ್ಣ ಸಂಯೋಜನಾತಂತ್ರ.

ಚಿತ್ರ ಕಲೆಯಲ್ಲಿ ಎರಡು ವಿಧ–ವರ್ಣಚಿತ್ರ ಮತ್ತು ರೇಖಾಚಿತ್ರ ಎಂದು. ವರ್ಣಚಿತ್ರದ ತಂತ್ರ ನಿರೂಪಣೆಗೆ ಉಪಯೋಗಿಸುವ ಆಧಾರತಲ (ಗ್ರೌಂಡ್) ಬಣ್ಣ ಮತ್ತು ಉಪಕರಣಗಳಿಗೆ ಅನುಸಾರವಾಗಿರುತ್ತದೆ. ಆಧಾರತಲವಾಗಿ ಗೋಡೆ, ಹಲಗೆ, ಕಾಗದ ಅಥವಾ ಬಟ್ಟೆ ಹಿಂದಿನಿಂದಲೂ ಬಳಕೆಯಲ್ಲಿವೆ. ನಶಿಸದೆ ಉಳಿಯಬಹುದಾದ ಯಾವ ಘನಪದಾರ್ಥವನ್ನಾದರೂ ಉಪಯೋಗಿಸುವ ಹವ್ಯಾಸ ಈಚೆಗೆ ಬೆಳೆಯುತ್ತಿದೆ. ಬಣ್ಣಗಳಲ್ಲಿ ಹಿಂದೆ ಪ್ರಾಕೃತಿಕ ಖನಿಜ ಅಥವಾ ಸಸ್ಯಮೂಲ ಬಣ್ಣಗಳಷ್ಟೇ ಉಪಯೋಗದಲ್ಲಿದ್ದುವು. ಈಗ ಅನೇಕರೀತಿಯ ರಾಸಾಯನಿಕ ಬಣ್ಣಗಳು ಹೆಚ್ಚು ಬಳಕೆಯಲ್ಲಿವೆ. ಬಣ್ಣವನ್ನು ಬಂಧಿಸಲು ಒಂದು ಅಂಟೂ ಬೇಕು. ಕೋಳಿ ಮೊಟ್ಟೆಯ ರಸ ಇಂಥ ಬಂಧಕವಸ್ತುವನ್ನು ಪಾಶ್ಚಾತ್ಯದೇಶಗಳಲ್ಲಿ ಉಪಯೋಗದಲ್ಲಿತ್ತು. ಭಾರತದಲ್ಲಿ ಸಸ್ಯಮೂಲದ ಗೋಂದನ್ನು ಇದಕ್ಕಾಗಿ ಉಪಯೋಗಿಸುತ್ತಿದ್ದಿರಬಹುದು. ಈಗ ಅನೇಕ ಕೃತಕ ರಾಸಾಯನಿಕ ಬಂಧಕ ವಸ್ತುಗಳು ಸಿಗುತ್ತವೆ. ಬಂಧಕ ವಸ್ತುವನ್ನು ಬಣ್ಣದೊಡನೆಯೇ ಬೆರೆಸಿರುವುದೂ ಉಂಟು. ಚಿತ್ರಣಕ್ಕೆ ಬಣ್ಣವನ್ನು ರಾಡಿಯಾಗಿ ಲೇಪಿಸಬಹುದು ಅಥವ ತುಂತುರುತುಂತುರಾಗಿ ಸಿಂಪಡಿಸಬಹುದು. ಮೊದಲನೆಯ ರೀತಿಗೆ ಕುಂಚ ಮುಖ್ಯ ಉಪಕರಣ. ಈ ಕುಂಚಗಳು ಉದ್ದಿಷ್ಟ ಸಂದರ್ಭಕ್ಕೆ ಉಪಯುಕ್ತವಾಗಿರುವಂತೆ ಉದ್ದ, ಗಾತ್ರದಲ್ಲೂ ಕೇಶದ ಮೃದುತ್ವ ಬಿಗಿತಗಳಲ್ಲಿಯೂ ವಿವಿಧರೀತಿಯವಿರುತ್ತವೆ. ತುಂತುರು ಲೇಪನಕ್ಕೆ ಹಿಂದೆ ಸಣ್ಣ ಕೊಳವೆಗಳಲ್ಲಿ ಬಣ್ಣವನ್ನು ತುಂಬಿ ಬಾಯಿಂದ ಊದಲಾಗುತ್ತಿತ್ತು. ಈಗ ಅನೇಕ ಯಾಂತ್ರಿಕ ಸಾಧನಗಳಿವೆ.

ತಂತ್ರದ ವಿಧಾನದ ಮೇಲೆ ವರ್ಗೀಕರಿಸಬಹುದಾದ ಅನೇಕ ಚಿತ್ರಣ ರೀತಿಗಳಿವೆ. ಇವು ವಿವಿಧ ದೇಶ, ಕಾಲಗಳಲ್ಲಿ ಬಂದವು. ಈಗ ಉಳಿದಿರುವ ಕೃತಿಗಳಿಂದ ಹೇಳುವುದಾದರೆ, ಶಿಲಾಯುಗದಲ್ಲಿ ವರ್ಣಚಿತ್ರಣಕ್ಕೆ ಪರ್ವತಗುಹೆಗಳ ಗೋಡೆ ಅಥವಾ ಕಲ್ಲುಬಂಡೆಗಳು ಆಧಾರತಲವಾಗಿದ್ದವು. ಅವುಗಳ ಮೇಲೆ ನೇರವಾಗಿ ಬಣ್ಣದ ರಾಡಿಯನ್ನು ತುದಿ ಜಜ್ಜಿದ ಕಡ್ಡಿ ಅಥವಾ ಕೇಶಕುಂಚದಿಂದ ಲೇಪಿಸಲಾಗುತ್ತಿತ್ತು. ಬಣ್ಣವನ್ನು ಬಾಯಲ್ಲಿ ತುಂಬಿಯೋ ಕೊಳವೆಯ ಮೂಲಕವೋ ಸಿಂಪಡಿಸುವ ವಿಧಾನವೂ ಇತ್ತು. ಈಜಿಪ್ಟ್ ಮುಂತಾದ ಪ್ರಾಚೀನ ನಾಗರೀಕತೆಗಳಲ್ಲೂ ಈ ವಿಧಾನಗಳು ಹೆಚ್ಚು ಬಳಕೆಯಲ್ಲಿ ಪರಿಷ್ಕೃತವಾಗಿರುತ್ತಿತ್ತು. ಯುರೋಪ್ ಮುಂತಾದೆಡೆಗಳಲ್ಲಿ ಉಪಯೋಗಿಸುತ್ತಿರುವ ಟೆಂಪೆರಾ ಎಂಬ ವಿಧಾನ ವಿಶಿಷ್ಟ ರೀತಿಯದು. ಪರಿಷ್ಕರಿಸಿದ ಆಧಾರತಲದಮೇಲೆ, ನೀರಿನಲ್ಲಿ ಬೆರೆಯುವ ವಸ್ತುವಿನಲ್ಲಿ ಅರೆದ ಬಣ್ಣವನ್ನು ವರಸೆಯಾಗಿ ಪದರದ ಮೇಲೆ ಪದರದಂತೆ ಲೇಪಿಸುವ ಪದ್ಧತಿಯೇ ಟೆಂಪೆರಾ. ಇದರಲ್ಲಿ ಬಣ್ಣದ ತೆಳುಪದರಗಳು ಅರೆಪಾರದರ್ಶಕವಾಗಿರುವುದರಿಂದ ತಳ ಮತ್ತು ಮೇಲಿನ ಪದರದ ಬಣ್ಣಗಳು ಹಿತವಾಗಿ ಕೂಡಿ ನೋಡುವವರಿಗೆ ಉದ್ದಿಷ್ಟಪರಿಣಾಮವನ್ನು ಸುಲಭವಾಗಿ ಮೂಡಿಸಬಹುದು. ಟೆಂಪೆರಾ ಯುರೋಪಿಯನ್ ಭಾಷೆಗಳಲ್ಲಿರುವ ಟೆಂಪರ್ (ಗಟ್ಟಿಮಾಡು) ಎಂಬ ಮೂಲದಿಂದ ಹುಟ್ಟಿದುದು. ಈ ವಿಧಾನದಲ್ಲಿ ಕೋಳಿಮೊಟ್ಟೆಯ ರಸದಿಂದ ಬಣ್ಣವನ್ನು ಸ್ಥಿರೀಕರಿಸುತ್ತಿದ್ದುದರಿಂದ ಟೆಂಪೆರಾ ಎಂಬ ಹೆಸರು ರೂಢಿಗೆ ಬಂದಿದೆ. ಪ್ರಾಯಶಃ ಬಿಜ಼ಾಂಟಿನ್ ಯುಗದಲ್ಲಿ ಆರಂಭವಾದ ಈ ಪದ್ಧತಿ ಇಂದಿಗೂ ಮುಂದುವರಿಯುತ್ತಿದೆ. ಆದರೆ ಈಚೆಗೆ ವಿಧಾನ ಸ್ವಲ್ಪ ವ್ಯತ್ಯಾಸವಾಗಿದ್ದು ಸ್ಥಿರೀಕರಣಕ್ಕೆ ಕೃತಕರಾಸಾಯನಿಕಗಳು ಬಳಕೆಯಲ್ಲಿವೆ. ಗೋಡೆಯ ಮೇಲೆ ಸುಣ್ಣ ಬಳಿದು ಅದು ಹಸಿಯಾಗಿರುವಾಗಲೇ ನೀರಿನಲ್ಲಿ ಕಲಸಿದ ಬಣ್ಣವನ್ನು ಲೇಪಿಸಿ ಚಿತ್ರಿಸುವುದಕ್ಕೆ ಫ್ರೆಸ್ಕೊ ಎಂದು ಹೆಸರು. ಈ ವಿಧಾನ ಮಿನೋವನ್, ಗ್ರೀಕ್, ರೋಮನ್ ಯುಗಗಳಲ್ಲಿ ಆಯಾ ದೇಶಗಳಲ್ಲಿ ಬಳಕೆಯಲ್ಲಿದ್ದುದಾದರೂ 13–17ನೆಯ ಶತಮಾನಗಳಲ್ಲಿ ಯುರೋಪಿನಲ್ಲಿ ಇದರ ಬಾಹುಳ್ಯ ಕಂಡುಬರುತ್ತದೆ. ಈ ರೀತಿಯ ಚಿತ್ರಣದಲ್ಲಿ ಬಣ್ಣ ಗೋಡೆಯ ಸುಣ್ಣದೊಡನೆ ರಾಸಾಯನಿಕವಾಗಿ ಬೆರೆತು ಗೋಡೆಯ ಭಾಗವಾಗಿಯೇ ಸ್ಥಿರವಾಗುತ್ತದೆ.

ಬಣ್ಣದ ಕಣಕದ ಕಡ್ಡಿಗಳಿಂದ ಕಾಗದದ ಮೇಲೆ ನೇರವಾಗಿ ಚಿತ್ರಿಸುವುದು ಪ್ಯಾಸ್ಟೆಲ್ ವಿಧಾನ. ಇದರಲ್ಲಿ ಬಂಧಕವಸ್ತು ಬಣ್ಣದೊಡನೆಯೇ ಬೆರೆತಿರುವುದರಿಂದ ಚಿತ್ರಕಾರನಿಗೆ ಹೆಚ್ಚು ಗೋಜಿರುವುದಿಲ್ಲ. ಇದಕ್ಕೆ ವಿಶೇಷ ರೀತಿಯ ನಯ ಅಥವ ಒರಟು ಕಾಗದಗಳೂ ದೊರಕುತ್ತವೆ. ಇದರಲ್ಲಿ ವರ್ಣಮಿಶ್ರಣ ಮಾಡಬೇಕಾದರೆ ಕಾಗದದ ಮೇಲೆ ಬಣ್ಣಗಳನ್ನು ಮುಂಬೆರಳಿನಿಂದ ಉಜ್ಜುತ್ತಾರೆ. ಬಣ್ಣ ಹೆಚ್ಚು ಸ್ಥಿರವಾಗಿರಲು ಕೆಲವು ಸಲ ಚಿತ್ರದ ಮೇಲೆ ಅಂಟು ಸವರಲಾಗುತ್ತದೆ. ನೀರಿನಲ್ಲಿ ಕರಗಿಸಿದ ಬಣ್ಣಗಳನ್ನು ಕುಂಚದಿಂದ ಬಳಿದು ಚಿತ್ರಿಸುವುದು ಜಲವರ್ಣ ಚಿತ್ರಣವಿಧಾನ (ವಾಟರ್ ಕಲರ್ ಪೆಯಿಂಟಿಂಗ್). ಇದರಲ್ಲಿ ನೀರಿನ ಬೆರಕೆಯ ಪ್ರಮಾಣದಿಂದ ಬಣ್ಣವನ್ನು ತೆಳುವಾಗಿಯೋ ದಪ್ಪವಾಗಿಯೋ ಮಾಡಿಕೊಂಡು ಚಿತ್ರಣದಲ್ಲಿ ವಿವಿಧ ಪರಿಣಾಮಗಳನ್ನು ಮೂಡಿಸಬಹುದು. ಈ ವಿಧಾನದಲ್ಲಿ ಆಧಾರತಲ ವಿಶೇಷತಃ ಕಾಗದ ಅಥವಾ ರೇಷ್ಮೆ. ತೈಲವರ್ಣ ಚಿತ್ರಣವಿಧಾನದಲ್ಲಿ (ಆಯಿಲ್ ಪೆಯಿಂಟಿಂಗ್) ಉಪಯೋಗಿಸುವ ಬಣ್ಣ ತೈಲಮಿಶ್ರಣವಾಗಿರುತ್ತದೆ. ಇದರಲ್ಲಿಯೂ ಮುಖ್ಯ ಸಲಕರಣೆ ಕುಂಚ ಮತ್ತು ಆಧಾರತಲ ಬಹುಮಟ್ಟಿಗೆ ಕಾಗದ. ಈ ತೈಲವರ್ಣಗಳು ನಿಧಾನವಾಗಿ ಒಣಗುವುದರಿಂದ ಚಿತ್ರಕಾರನಿಗೆ ಉದ್ದಿಷ್ಟರೂಪಕ್ಕೆ ಬರುವ ವರೆಗೆ ಆಗಾಗ್ಗೆ ಅವನ್ನು ಸರಿಪಡಿಸುವ ಅವಕಾಶ ಇರುತ್ತದೆ. ಈ ಬಣ್ಣಗಳ ಬಾಳಿಕೆಯೂ ಹೆಚ್ಚು. ಅಲ್ಲದೆ ಈ ಬಣ್ಣಗಳು ಅರೆಪಾರದರ್ಶಕವಾಗಿದ್ದು ಬೆಳಕಿನ ವಕ್ರೀಕರಣ ಗುಣವನ್ನು ಹೊಂದಿರುವುದರಿಂದ ಹೆಚ್ಚು ಹೊಳಪು ಹೊರ ಹೊಮ್ಮುವಂತೆಯೂ ಅಲ್ಲಲ್ಲಿ ಥಳಥಳಿಸುವಂತೆಯೂ ಸಂಯೋಜಿಸುವ ಸೌಲಭ್ಯವಿರುತ್ತದೆ.

ಇತ್ತೀಚಿನ ಚಿತ್ರಕಾರರು ಹಲವು ಹೊಸ ವಿಧಾನಗಳನ್ನು ಅಳವಡಿಸುತ್ತಿದ್ದಾರೆ. ಉಪಯೋಗಿಸುವ ಕುಂಚದ ತರಹದ ಮೇಲೆ ಲೇಪನದ ರಚನೆಯನ್ನು ಮಾರ್ಪಡಿಸುವ ವಿಧಾನ ಹಿಂದಿನಿಂದಲೂ ತಿಳಿದಿತ್ತು. ಇದನ್ನೇ ಮುಂದುವರಿಸಿ ಕುಂಚಕ್ಕೆ ಬದಲು ಚಾಕು, ಬಣ್ಣ ಕಲಸುವ ಚಮಚ, ಕುಂಚದ ಹಿಡಿ ಅಥವಾ ಬೆರಳಿನಿಂದ ವರ್ಣಗುಣವನ್ನು ವ್ಯತ್ಯಾಸಮಾಡುವುದು, ಬಣ್ಣವನ್ನೆಲ್ಲ ಒಟ್ಟಾರೆ ಮೇಲೆ ಸುರಿದು ಬೇಕು ಬೇಕಾದಷ್ಟನ್ನು ವಿವಿಧೆಡೆಗೆ ಎಳೆಯುವುದು, ಗಾಳಿಯ ಒತ್ತಡದಿಂದ ಚಲಿಸುವ ಕುಂಚವನ್ನು ಉಪಯೋಗಿಸುವುದು, ಬಣ್ಣವನ್ನು ಯಂತ್ರಮುಖೇನ ಸಿಂಪಡಿಸುವುದು–ಮುಂತಾದ ರೀತಿಗಳನ್ನು ಈ ಗುಂಪಿಗೆ ಸೇರಿಸಬಹುದು. ಅಲ್ಲದೆ ಚಿತ್ರಣದಲ್ಲಿ ತ್ರಿಪರಿಮಾಣದ ಪರಿಣಾಮವನ್ನು ಮೂಡಿಸಲು ಆಧಾರತಲವನ್ನೇ ಮಾರ್ಪಡಿಸುವುದು, ಅಥವಾ ಬಣ್ಣವನ್ನು ಮುದ್ದೆಮುದ್ದೆಯಾಗಿ ದಪ್ಪಗೆ ಬಳಿಯುವುದು (ಇಂಪ್ಯಾಸ್ಟೊ), ಮೃದುಬಣ್ಣವನ್ನು ಗಾಢಬಣ್ಣದ ಮೇಲೆ ಬಳಿದು ವರ್ಣರಚನೆಯ ಪರಿಣಾಮವನ್ನು ಬದಲಾಯಿಸುವುದು (ಸ್ಕಂಬ್ಲಿಂಗ್) ಮುಂತಾದವೂ ಹುಟ್ಟಿಕೊಂಡಿವೆ. ಇದೇ ಉದ್ದೇಶಕ್ಕೆ ಮರಳು ಅಥವಾ ಕಲ್ಲು ಚೂರುಗಳನ್ನು ಬಣ್ಣಕ್ಕೆ ಬೆರೆಸಿ ಚಿತ್ರಿಸುವುದೂ ಒಂದು ವಿಧಾನ. ಹಾಗೆಯೆ ವಿಜ್ಞಾನದ ಹೊಸ ಆವಿಷ್ಕಾರಗಳನ್ನು ನಾನಾರೀತಿಯಲ್ಲಿ ಹೊಸಚಿತ್ರಣ ತಂತ್ರಗಳಿಗಾಗಿ ಉಪಯೋಗಿಸಲಾಗುತ್ತದೆ.

ಭಾರತದಲ್ಲಿ ಈಚೆಗೆ ಉಪಯೋಗದಲ್ಲಿರುವ ವರ್ಣಚಿತ್ರ ವಿಧಾನಗಳು ಹೊರಗಿನವುಗಳಂತೆಯೇ ಇವೆ. ಆದರೆ ಪ್ರಾಚೀನಭಾರತದಲ್ಲಿದ್ದ ವಿಧಾನ ಸ್ವಲ್ಪ ವ್ಯತ್ಯಸ್ತ.

ಅಜಂತ, ಬಾದಾಮಿ, ಸಿತ್ತನ್ನವಾಸಲ್ ಮುಂತಾದೆಡೆಗಳಲ್ಲಿರುವ ಭಿತ್ತಿಚಿತ್ರಗಳಿಗೆ ಹೊಟ್ಟುಮಿಶ್ರಿತ ಮಣ್ಣಿನ ಗಾರೆಯನ್ನು ಗೋಡೆಗೆ ಬಳಿದು, ನಯಮಾಡಿ ಅದರ ಮೇಲೆ ಬಣ್ಣಗಳನ್ನು ಕುಂಚದಿಂದ ಲೇಪಿಸುವ ಪದ್ಧತಿ ಇತ್ತು. ಇಲ್ಲಿ ಖನಿಜ ಅಥವಾ ಸಸ್ಯಜನ್ಯ ಬಣ್ಣಗಳನ್ನೂ ಇದ್ದಿಲನ್ನೂ ಮುಖ್ಯವಾಗಿ ಬಳಸಿದೆ. ಬಂಧಕಸಾಮಗ್ರಿ ಸಾಮಾನ್ಯವಾಗಿ ಸಸ್ಯಜನ್ಯ ಗೋಂದಾಗಿದ್ದಿರಬಹುದು. ಮುಘಲ್ ಮುಂತಾದ ಕಲಾರೀತಿಗಳಲ್ಲೂ ವರ್ಣ ಚಿತ್ರಕ್ಕಾಗಿ ಇದೇ ರೀತಿಯ ವಿಧಾನ ಬಳಕೆಯಲ್ಲಿತ್ತು. ಆದರೆ ಇಲ್ಲಿ ಆಧಾರತಲ ಹೆಚ್ಚು ಮಟ್ಟಿಗೆ ಕಾಗದ. ಕೆಲವೆಡೆ ತಾಳೆಯ ಗರಿಗಳ ಮೇಲೂ ಚಿತ್ರಣವಿರುವುದುಂಟು. ಪಶ್ಚಿಮ ಮತ್ತು ದಕ್ಷಿಣ ಭಾರತದ ಕೆಲವೆಡೆ ಬಣ್ಣಗಳ ಜೊತೆಗೆ ಚಿನ್ನ ಅಥವಾ ಬೆಳ್ಳಿಯ ಪುಡಿಯನ್ನು ಮೆತ್ತಿ ಚಿತ್ರಗಳನ್ನು ಆಕರ್ಷಕವಾಗಿ ಮಾಡುವ ಒಂದು ವಿಧಾನವೂ ರೂಢಿಯಲ್ಲಿತ್ತು.

ವರ್ಣಚಿತ್ರಗಳಿಗೆ ಹೋಲಿಸಿದರೆ ರೇಖಾಚಿತ್ರಣದಲ್ಲಿ ತಂತ್ರ ಬಹು ಸುಲಭವಾದುದು. ಆದರೆ ಇದು ಎಲ್ಲ ವಿಧಾನಗಳಿಗೂ ಮೂಲಭೂತವಾದುದು. ರೇಖಾಚಿತ್ರಣದಲ್ಲಿ ಮುಖ್ಯವಾಗಿ ಎರಡು ವಿಧ, ಬರಹ (ಡ್ರಾಯಿಂಗ್) ಮತ್ತು ಕೊರೆತ (ಎನ್‌ಗ್ರೇವಿಂಗ್). ಯಾವುದೇ ಗಟ್ಟಿ ಪದಾರ್ಥದ ಆಧಾರತಲದ ಮೇಲೆ ಅದಕ್ಕಿಂತ ಹಗುರವಾದ ಪದಾರ್ಥದಿಂದ ಆಧಾರತಲ ಬಾಧಿತವಾಗದಂತೆ ರೂಪಿಸುವುದೇ ಬರಹವಿಧಾನ. ಆಧಾರತಲವಾಗಿ ಕಲ್ಲು, ಮಣ್ಣು, ಮರದ ಫಲಕಗಳನ್ನಾಗಲೀ, ಕಾಗದ, ಬಟ್ಟೆಗಳನ್ನಾಗಲೀ ಉಪಯೋಗಿಸಬಹುದು. ಬರಹಕ್ಕೆ ಸೀಸದ ಕಡ್ಡಿ, ಲೇಖನಿ, ಸೀಮೆಸುಣ್ಣ, ಇದ್ದಲು ಅಥವಾ ಬಣ್ಣವನ್ನು ಉಪಯೋಗಿಸಬಹುದು. ಕೊರೆತ ವಿಧಾನದಲ್ಲಿ ಆಧಾರತಲಕ್ಕಿಂತ ಗಟ್ಟಿಯಾದ ಉಪಕರಣದಿಂದ ಆಧಾರತಲವನ್ನೇ ಕೊರೆದು ಗೆರೆಗಳನ್ನು ಮೂಡಿಸಲಾಗುತ್ತದೆ. ಪ್ರಾಚೀನ ಶಿಲಾಯುಗದಲ್ಲಿ ಕಲ್ಲುಗೋಡೆಗಳ ಸಮತಲದ ಮೇಲೆ ಗಟ್ಟಿಕಲ್ಲಿನ ಕೊರೆಯುವ ಉಳಿಗಳಿಂದ (ಬ್ಯೂರಿನ್) ರೂಪಿಸಿದ ಚಿತ್ರಗಳಿವೆ. ಗಟ್ಟಿ ಮೊಳೆಯಿಂದ ಅಥವಾ ಸಣ್ಣ ಚಾಣದಿಂದ ಲೋಹಗಳ ಮೇಲೂ ರೇಖೆಗಳನ್ನು ಮೂಡಿಸಬಹುದು. ವಿಜ್ಞಾನದ ಪ್ರಗತಿಯಿಂದಾಗಿ ರೇಖಾಚಿತ್ರ ವಿಧಾನಗಳಲ್ಲಿ ಬೆಳ್ಳಿ–ಕಡ್ಡಿ ಚಿತ್ರಣ ಮುಂತಾದ ಹೊಸ ತಂತ್ರಗಳು ಬಳಕೆಗೆ ಬರುತ್ತಿವೆ. ಕಂಪ್ಯೂಟರ್ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಕಲಾ ವಿನ್ಯಾಸಗಳಲ್ಲಿ ಅದ್ಭುತ ಬದಲಾವಣೆಗಳಾಗಿವೆ. ತಂತ್ರಾಂಶ ಕಲೆಯು ತನ್ನದೇ ಸ್ಥಾನ ಪಡೆದುಕೊಂಡಿದೆ. ಇದರಿಂದ ಹೆಚ್ಚು ಪರಿಣಾಮಕಾರಿ ಚಿತ್ರಗಳನ್ನು ರೂಪಿಸಲು, ಛಾಪಿಸಲು ಸಾಧ್ಯವಾಗಿದೆ. (ಎಸ್.ಎನ್.)

**ಕಲೆಗಾಗಿ ಕಲೆ :** ಕಲಾಕೃತಿ ತನ್ನಷ್ಟಕ್ಕೆ ತಾನೆ ಹುಟ್ಟಿಬರುತ್ತದೆ. ತನಗೋಸ್ಕರವೇ ಇರುತ್ತದೆ. ಅದರ ಉತ್ಪತ್ತಿಗೆ ಮತ್ತಾವ ನಿಮಿತ್ತವೂ ಇಲ್ಲ, ಮತ್ತಾವ ಉದ್ದೇಶವೂ ಅದರಿಂದ ಸಫಲವಾಗುವುದಿಲ್ಲ. ಹೀಗೆಂಬುದು ಕಲೆಗಾಗಿ ಕಲೆಯೆಂಬ ಸೂತ್ರದ ಸಾರ. ಬಹು ಗಲಭೆಯನ್ನೆಬ್ಬಿಸಿರುವ ಈ ವಾದ 19 ನೆಯ ಶತಮಾನದಲ್ಲಿ ಮೊದಲು ಫ್ರಾನ್ಸಿನಲ್ಲಿ ತಲೆದೋರಿ ಕ್ರಮೇಣ ವೃದ್ಧಿ ಹೊಂದಿತು. ಸಂಗೀತದ ವಿಚಾರವಾಗಿ ಈ ತತ್ತ್ವಕ್ಕೆ ಸರ್ವರ ಸಮ್ಮತಿ ಹಿಂದಿನಿಂದಲೂ ಇತ್ತು. ಆದರೆ 1830–1840ರ ದಶಕಗಳಲ್ಲಿ ಫ್ರಾನ್ಸಿನ ಚಿತ್ರಕಾರರ ಒಂದು ಕೂಟದವರು (ದಿ ಬಾರ್ಬಿಸ್ಜನ್ ಸ್ಕೂಲ್) ತಮ್ಮ ಕಲೆಗೂ ಅಂಥ ಸ್ವತಂತ್ರ ಸ್ಥಾನವನ್ನು ಗಳಿಸಿ ಕೊಡಲು ಹಾತೊರೆದರು. ದೃಶ್ಯವೊಂದರ ವರ್ಣಚಿತ್ರವನ್ನು ನೋಡುವಾಗ ಅದು ಹೇಗೆ ಸ್ವಾರಸ್ಯವತ್ತಾಗಿ ರಚಿತವಾಗಿದೆ ಎಂಬುದನ್ನು ಲಕ್ಷಿಸಬೇಕು, ತೃಪ್ತಿತಾಳಬೇಕು. ಆ ಚಿತ್ರ ಯಾವ ಸಂದೇಶವನ್ನು ನೀಡುತ್ತದೆ ಎಂದು ಪ್ರಶ್ನಿಸಬಾರದು. ಈ ಬಗೆಯ ಗಟ್ಟಿ ಕೂಗಿನಿಂದ ಜನತೆಯಲ್ಲಿ ಆಂದೋಳನ ಉಂಟಾಯಿತು. ಸಾಹಿತ್ಯ ಲೋಕಕ್ಕು ಅದರ ಪ್ರಭಾವ ಬೀರಿತು. ಥಿಯೊಫೈಲ್ ಗೌತಿಯರ್ (1811–72) ಕಲೆಗಾಗಿ ಕಲೆ ಎಂಬ ಧ್ಯೇಯ ಮಂತ್ರವನ್ನು 1852ರಲ್ಲಿ ಸಾರಿದ. ನುರಿತ ಅಕ್ಕಸಾಲೆ ನಾಜೂಕು ನಗವನ್ನು ತಯಾರಿಸುವ ಚಾಕಚಕ್ಯತೆಯನ್ನು ಮೆರೆಸುವಂತೆ ತನ್ನ ಕವಿತೆಯನ್ನು ತಾನು ರಚನೆಗೈಯುವುದಾಗಿ ಆತ ಹೇಳುತ್ತಿದ್ದ. ಅವನಿಗಿಂತ ಕೊಂಚ ಚಿಕ್ಕವನಾದ ಚಾರಲ್ಸ್ ಬೋದಿಲೇರ್ 1821–1867ರಲ್ಲಿ ಆ ಮಂತ್ರಕ್ಕೆ ದೃಢವಾದ ಬೆಂಬಲವನ್ನು ಕೊಟ್ಟ. ಅವನ ಲೆ ಫ್ಲೂರ್ ದು ಮಾಲ್ (1857) ಶಬ್ದ ಸಂಯೋಜನೆಯ ದೃಷ್ಟಿಯಿಂದ, ರಮ್ಯ ಕಲೆಯ ದೃಷ್ಟಿಯಿಂದ ಅತ್ಯುತ್ಕೃಷ್ಟ ಕವನಸಂಗ್ರಹ.

ಹಲಕೆಲವು ರೀತಿನೀತಿಗಳಲ್ಲಿ ಫ್ರಾನ್ಸಿನ ಮೇಲ್ಪಂಕ್ತಿಯನ್ನು ಅನುಸರಿಸುವುದು ಯುರೋಪಿನ ಇತರ ದೇಶಗಳಿಗೂ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೂ ಒದಗಿಬಂದ ವಾಡಿಕೆ. ಇಂಗ್ಲೆಂಡಿನಲ್ಲಿ ಸ್ವಿನ್‌ಬರ್ನ್ (ಸು.1866), ಪೇಡರ್ ಮುಂತಾದ ಕವಿಗಳೂ ವ್ವಿಸ್ಲರ್ (ಸು.1885) ಮುಂತಾದ ಚಿತ್ರಕಾರರು ತೀವ್ರವಾದ ಹೇಳಿಕೆಗಳನ್ನೂ ಪ್ರಯೋಗಗಳನ್ನೂ ಮಾಡಲಾರಂಭಿಸಿದರು. ಅವರಿಗೆ ಪ್ರಬಲ ವಿಮರ್ಶಕನಾದ ಮ್ಯಾಥ್ಯೂಅರ್ನಾಲ್ಡ್‌ನ ಮೇಲೆ ಹೆಚ್ಚು ಗಮನ. ಏತಕ್ಕೆಂದರೆ ಆತ ಕಾವ್ಯವಸ್ತು, ಅದರ ಗಾಂಭೀರ್ಯ, ಭವ್ಯತೆ, ಅದು ಬೋಧಿಸುವ ಶೀಲ ಧರ್ಮ ಇತ್ಯಾದಿ ಅಂಶಗಳನ್ನು ಪುನಃ ಪುನಃ ಒತ್ತಿ ಹೇಳುತ್ತಿದ್ದ. ಅದರಿಂದಾಗಿ ಸಾಹಿತ್ಯ ಲೋಕದಲ್ಲಿ ವಿಪುಲವಾದ ಚರ್ಚೆಗೆ ಅವಕಾಶ ಲಭಿಸಿತು.

ದುರದೃಷ್ಟದಿಂದ ಇಳಿಗತಿ (ಡೆಕಡೆನ್ಸ್) ಎಂಬ ಇನ್ನೊಂದು ಅಭಿಪ್ರಾಯ ಅದೇ ಸಮಯದಲ್ಲಿ ಎದ್ದು ಬಂದು, ಕಲೆಗಾಗಿ ಕಲೆ ಎಂಬುದರೊಡನೆ ನಂಟು ಪಡೆಯಿತು. ಈ ಎರಡೂ ದೂಷ್ಯವಾದುವು. ಏಕಾಗ್ರ ಚಿತ್ತದಿಂದ ಕಲೆಗಾರ ತನ್ನ ಕೃತಿಯನ್ನು ಸೃಜಿಸ ಹೊರಟರೆ ಅದೆಂದಿಗೂ ತಪ್ಪಲ್ಲ. ಆದರೆ ಅವನ ಕಲೆಗಾರಿಕೆ ಬರಿಯ ಕಾಮವಿಕಾರ, ಅತಿಚರ್ಯೆ, ಸ್ವೇಚ್ಛೆಯಾದ ದುಷ್ಟತನ–ಇತ್ಯಾದಿಗಳಿಗೇ ಸೊಗಸನ್ನು ಅಂಟಿಸುವ ಪ್ರಯತ್ನಕ್ಕೆ ಮೀಸಲಾದರೆ ಕಷ್ಟ. ಬೋದಿಲೇರಿನ ಕೆಡುಕಿನ ಹೂಗಳು ಸ್ವಿನ್‌ಬರ್ನನ ಆಳ್ವಿಕೆಯಲ್ಲಿ ದುರಾಚಾರದ ಗುಲಾಬಿಗಳೂ ಸಮ್ಮೋದಾವೇಶಗಳೂ (ದಿ ರೋಸಸ್ ಅಂಡ್ ರ್‍ಯಾಪ್ಚರ್ಸ್ ಆಫ್ ವೈಸ್) ಆದದ್ದು ಸಾಹಿತ್ಯದ ಹೀನ ಭಾಗ್ಯ.

ನೀತಿಬೋಧೆಗಾಗಿ, ಧರ್ಮಪ್ರಚಾರಕ್ಕಾಗಿ, ಪ್ರಭು ಪ್ರಶಂಸೆಗಾಗಿ, ಅಥವಾ ಕಲೆಗಾರನ ಸ್ವಂತ ಪ್ರಯೋಜನಕ್ಕಾಗಿ, ಪ್ರಶಸ್ತಿಗಾಗಿ ಹಿಂದೆ ಸಾಹಿತ್ಯಾದಿ ಲಲಿತಕಲೆಗಳು ಅವಶ್ಯಕವಾಗಿದ್ದುವು– ಯಾವುದೋ ಒಂದು ಸಾಮಾಜಿಕ ಧ್ಯೇಯ ಕಲೆಯನ್ನು ನಡೆಸದಿದ್ದರೆ ಅದು ವೃಥಾ ಅರಣ್ಯರೋದನವಾದೀತು ಎಂಬುದು ಮಂದಿಯ ನಂಬಿಕೆಯಾಗಿತ್ತು. ಈಗ ಸರ್ವಾಧಿಕಾರಕ್ಕೆ ಅಥವಾ ಸಮತಾವಾದಕ್ಕೆ ಒಳಗಾದ ರಾಷ್ಟ್ರಗಳ ಹೊರತು ಮಿಕ್ಕೆಲ್ಲ ರಾಷ್ಟ್ರಗಳಲ್ಲೂ ಆ ನಂಬಿಕೆ ಸಡಿಲಹೋಗಿದೆ.

ಕಲಾ ಪ್ರಪಂಚದಲ್ಲಿ ಈ ವಿಧದ ಸ್ವಾತಂತ್ರ್ಯದಾಹ ಉಲ್ಬಣವಾದುದಕ್ಕೆ ಕಾರಣಗಳು ಹಲವಾರು. ಕಲಾಕೃತಿಯ ಅಪೇಕ್ಷೆ ಜನ ಸಂದೋಹದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆದಿದ್ದರಿಂದ ಕಲೆಗಾರನಿಗೆ ಆಶ್ರಯದಾತನ ಹಂಗು ಕಡಿಮೆಯಾಯಿತು. ಸಾವಿರಾರು ಮಂದಿ ದುಡ್ಡು ಕೊಟ್ಟು ಸಂಗೀತವನ್ನು ಆಲಿಸುತ್ತಾರೆ. ಚಿತ್ರಗಳನ್ನು ವೀಕ್ಷಿಸುತ್ತಾರೆ, ಪುಸ್ತಕವನ್ನು ಕೊಂಡು ಓದುತ್ತಾರೆ. ಕಲೆಗಾರ ಶುದ್ಧ ಸೋಮಾರಿ, ಒಂದು ಕಡ್ಡಿಯನ್ನು ಆ ಕಡೆಯಿಂದ ಈ ಕಡೆಗೆ ಎತ್ತಿಡಲಾರದ ಪರಾವಲಂಬಿ, ಸಮಾಜಕ್ಕೆ ಹೊರೆ–ಎಂಬ ಅಭಿಶಾಪ ಬಹುಮಟ್ಟಿಗೆ ಕಣ್ಮರೆಯಾಗಿದೆ. ಪ್ರಜಾಪ್ರಭುತ್ವ ಅನೇಕ ಪ್ರದೇಶಗಳಲ್ಲಿ ಏರ್ಪಟ್ಟಿರುವುದರಿಂದ ಕಲೆಗಾರನಿಗೂ ಹಕ್ಕುಗಳು ಸಂದು ಬಂದಿವೆ. ಕೇವಲ ಸಾಂಪ್ರದಾಯಿಕವಾದರೆ, ಚರ್ವಿತಚರ್ವಣವಾದರೆ, ಕಲೆಗೆ ಪ್ರಗತಿಯಿಲ್ಲ, ಶ್ರೇಯಸ್ಸುಬಾರದು–ಎಂಬ ಸತ್ಯಾಂಶ ನೈಜ ಕಲೆಗಾರರಿಗೆ ಮಂದಟ್ಟಾಗಿದೆ. ಅದಕ್ಕೋಸ್ಕರ ಹಳೆಯದನ್ನು ಬಿಡದೆ ಹೊಸದನ್ನು ನಿರ್ಮಿಸುವ ಹುರುಪು ಅವರಲ್ಲಿ ಬೆಳೆದಿದೆ.

ಹೀಗೆಂದ ಪಕ್ಷಕ್ಕೆ ಈ ವಿಷಯವಾಗಿ ಇದಮಿತ್ಥಂ ಎಂದು ತೀರ್ಮಾನ ನುಡಿಯಬಹುದು ಎಂದು ಯಾರೂ ಊಹಿಸಬಾರದು. ವಿಷಯ ದಿಟವಾಗಿ ಜಟಿಲವಾದದ್ದು. ಕವಿಗೆ ಸಮಾಜ ಬೇಕು, ಓದುಗರೂ ಬೇಕು. ಎಂದಮೇಲೆ ಸಮಾಜವನ್ನೂ ಓದುಗರನ್ನೂ ಮನವೊಪ್ಪಿಸುವ ಹೊಣೆಗಾರಿಕೆ ಅವನ ಮೇಲಿದೆ ಎಂದಂತಾಯಿತು. ಕವಿಗೆ ಯಾವ ಬಗೆಯ ಸ್ವಾತಂತ್ರ್ಯ, ಎಷ್ಟರಮಟ್ಟಿಗೆ–ಇತ್ಯಾದಿ ಸಮಸ್ಯೆಗಳಿಂದ ಈ ವಿಚಾರ ಗಹನವಾಗಿದೆ. ಆಯಾ ತಲೆಮಾರು, ಆಯಾ ದೇಶ, ಸೂಕ್ತವಾಗಿ ಸಮಸ್ಯೆಗಳನ್ನು ಬಿಡಿಸಿಕೊಳ್ಳಬೇಕು. ಈಗ ಕಟು ಆಕ್ಷೇಪಣೆಯಾಗಲಿ ಕಹಿ ವಾಗ್ವಾದವಾಗಲಿ ಕಾಣಬರುತ್ತಿಲ್ಲ.

ಒಟ್ಟಿನಲ್ಲಿ, ಕಲೆಗಾಗಿ ಕಲೆ ಎಂಬ ಘೋಷಣೆಯಿಂದ ಒಂದೆರಡು ಸತ್ಫಲಗಳೇ ದೊರೆತಿವೆ. ತನ್ನ ವೃತ್ತಿಯನ್ನು ಕುರಿತು ಕಲೆಗಾರನಿಗೆ ಜವಾಬ್ದಾರಿ. ರಸಿಕವರ್ಗಕ್ಕೆ ಕಲೆಗಾರರನ್ನು ಕಂಡು ಗೌರವ ಇರಬೇಕಾದ್ದು ನಿರ್ವಿವಾದ. ಕಾವ್ಯಕೃತಿಯ ವಸ್ತುವಾದ ಭಾವ ಭಾವನೆಗಳ ಸಮುದಾಯ ಎಷ್ಟೇ ಪ್ರಮುಖವಾದರೂ ಅವುಗಳ ಸಂಯೋಜನೆ ನಿರೂಪಣೆಯ ವಿಧಾನ, ಶಬ್ದ ಸಂಪತ್ತು, ಶೈಲಿ ಮುಂತಾದ ಕಾವ್ಯಾಂಗಗಳನ್ನೂ ಕಾವ್ಯದ ಘನೋದ್ದೇಶವನ್ನೂ ಅಲಕ್ಷಿಸುವಂತಿಲ್ಲ. ಇದು ಗೃಹೀತ ತತ್ತ್ವವಾಗಿದೆ. (ಎಸ್.ವಿ.ಆರ್.)

**ಕಲೆ ಮತ್ತು ಜೀವನ :** ಪ್ರಾಚೀನ ಗ್ರೀಕರಿಗೂ ರೋಮನರಿಗೂ ಜೀವನವೆಂದರೆ ಮನುಷ್ಯಜೀವನವೆಂದೇ ಅರ್ಥ. ಪಶು, ಪಕ್ಷಿ ಮುಂತಾದ ಮಾನವೇತರ ಜೀವಿಗಳ ಪ್ರಪಂಚವನ್ನಾಗಲಿ ಭೌತಪ್ರಕೃತಿಯ ಪ್ರಪಂಚವನ್ನಾಗಲಿ ಅವರು ಲಕ್ಷ್ಯಕ್ಕೆ ಅಷ್ಟಾಗಿ ತೆಗೆದುಕೊಳ್ಳಲಿಲ್ಲ. ಈಗ ಅವಕ್ಕೂ ಚೈತನ್ಯ ಅಸ್ತಿತ್ವ, ಗುಣಲಕ್ಷಣ, ಇರುವುವೆಂದು ನಂಬಿಕೆ. ಜೀವನವೆಂಬ ತತ್ತ್ವ ವಿಶಾಲ ವ್ಯಾಪ್ತಿಯುಳ್ಳದ್ದು. ಕಲಾವಿದರು ಈ ಮೂರರಲ್ಲಿ ಯಾವುದರಿಂದ ಬೇಕಾದರೂ ವಿಷಯ ಸಾಮಗ್ರಿಯನ್ನು ಪಡೆಯಬಹುದು. ಹೀಗಿದ್ದರೂ ಮನುಷ್ಯ ಜೀವನಕ್ಕೆ ಮುಖ್ಯ ಸ್ಥಾನವನ್ನು ಕೊಟ್ಟು ಮಿಕ್ಕ ಎರಡನ್ನು ಹಿನ್ನಲೆಯಾಗಿಯೋ ಸಹಾಯಕವಾಗಿಯೋ ಬಳಸಿಕೊಳ್ಳುವುದೇ ಹೆಚ್ಚು.

ಕಲೆಯ ಚಟುವಟಿಕೆ ಬೇರೆ, ಜೀವನದ ವ್ಯಾಪಾರ ಬೇರೆ; ಎರಡಕ್ಕೂ ಮಧ್ಯೆ ದಾಟಲಾಗದ ಭಾರಿ ಕಮರಿ ಉಂಟು ಎಂಬ ಭಾವನೆ ಕೆಲವರಲ್ಲಾದರೂ ಮನೆಮಾಡಿದೆ. ಉದ್ದೇಶ, ಕಾರ್ಯ, ಫಲ ಎಲ್ಲದರಲ್ಲೂ ಅವೆರಡಕ್ಕೆ ತುಂಬ ವ್ಯತ್ಯಾಸವಿದೆಯಾದ್ದರಿಂದ ಅವುಗಳ ಪರಸ್ಪರ ಸಂಬಂಧವನ್ನು ಚರ್ಚಿಸಿ ಪ್ರಯೋಜನವಿಲ್ಲವೆಂಬ ಅನುಮತಿ ಈ ಭಾವನೆಯಿಂದ ಉತ್ಪನ್ನವಾಗುತ್ತದೆ. ತೀರ ವಿರುದ್ಧ ಪದಾರ್ಥಗಳನ್ನು ಒಂದರ ಜೊತೆ ಇನ್ನೊಂದನ್ನು ಇಡಲು ಆಗದು. ಇಂಥ ವಿಪರೀತ ಅಭಿಪ್ರಾಯಕ್ಕೆ ಪ್ರತಿಯಾಗಿ ಕಲೆಗೂ ಜೀವನಕ್ಕೂ ನಿಕಟ ಬಾಂಧ್ಯವ್ಯ ಉಂಟೆಂಬ ಅಭಿಪ್ರಾಯ ಉಳ್ಳವರೇ ಹೆಚ್ಚು. ಆ ಅಭಿಪ್ರಾಯದಲ್ಲೇ ಅಧಿಕ ಸತ್ಯಾಂಶವಿರುವಂತಿದೆ. ಜೀವನದಿಂದ ದೂರಹೋಗಿ ಜೀವನವನ್ನು ಮರೆತು

ಮತ್ತೇನನ್ನು ಮನುಷ್ಯ ಧ್ಯಾನಿಸಬಹುದು, ಆಲೋಚಿಸಬಹುದು, ಚಿತ್ರಿಸಬಹುದು? ಜೀವನದಿಂದ ಆಚೆ ಶೂನ್ಯ. ಶೂನ್ಯವೆಂದರೆ ಏನೂ ಇಲ್ಲದಿರುವಿಕೆ.

ಜೀವನದ ಎಣಿಸಲಾಗದ ಅಂಶಗಳಲ್ಲಿ ತಮ್ಮ ತಮ್ಮ ಮನಸ್ಸಿಗೆ ಹಿಡಿಸಿದುದನ್ನು ಕಲಾವಿದರು ಆರಿಸಿಕೊಂಡು ಅದಕ್ಕೆ ತಮ್ಮ ತಮ್ಮ ವಾಹಕಗಳ ಮೂಲಕ ರೂಪು ಕೊಡುತ್ತಾರೆ. ಹಾಗೆ ಮಾಡುವಾಗ ಅವರು ಅನುಸರಿಸಬಹುದಾದ ಕ್ರಮಗಳು ಸ್ಥೂಲವಾಗಿ ಮೂರು. ಇದ್ದುದನ್ನು ಹೆಚ್ಚಿಸದೆ ಕಡಿಮೆ ಮಾಡದೆ ಇದ್ದ ಹಾಗೆಯೆ ನಿರೂಪಿಸುವ ವಿಧಾನ ಮೊದಲನೆಯದು. ಆದರೆ ಕಲೆಯ ಇತಿಹಾಸದಲ್ಲಿ ಆ ಮಾರ್ಗ ಸೂಕ್ತವೂ ಅನುಷ್ಠಾನಯೋಗ್ಯವೂ ಮೇಲ್ಮಟ್ಟಕ್ಕೆ ಏರಬಲ್ಲದ್ದೂ ಆಗಿದೆ ಎಂದು ಕಂಡುಬಂದದ್ದು ಈಚೀಚೆಗೆ. ವಾಸ್ತವಿಕತೆ ಕಲೆಯ ಸರಹದ್ದಿನೊಳಕ್ಕೆ ಜೋರಾಗಿ ಪ್ರವೇಶಮಾಡಿದ್ದು 19ನೆಯ ಶತಮಾನದಲ್ಲಿ.

ಎರಡನೆಯ ಕ್ರಮವೆಂದರೆ ಹಿಂದಿನಿಂದಲೂ ರೂಢಿಗೆ ಬಂದಿದ್ದ ಕ್ರಮ ಜೀವನವನ್ನು ಕಲಾವಿದ ಒಂದಲ್ಲ ಒಂದು ಬಗೆಯಲ್ಲಿ ಅಷ್ಟೋ ಇಷ್ಟೋ ಪ್ರಮಾಣದಲ್ಲಿ ಅತಿಶಯಿಸುವಿಕೆ. ಅದಕ್ಕೆ ಜೀವನವನ್ನು ಕುರಿತ ಒಂದು ತಾತ್ತ್ವಿಕ ನಂಬಿಕೆ ಆಧಾರ. ವ್ಯಕ್ತಿಯ ಬಹಿರಂಗ ಚಲನವಲನಕ್ಕಿಂತ ಅವನ ಅಂತರಂಗ ಜೀವನ ಅವನ ನೈಜ ವ್ಯಕ್ತಿತ್ವವನ್ನು ಹೊರಗೆಡಹುತ್ತದೆ. ವ್ಯಕ್ತಿಯ ಒಳಗಡೆ ಅವನ ಪ್ರಕೃತಿ ಸ್ವಭಾವ ನಡೆಯುತ್ತಿರುತ್ತದೆ. ಅದರಲ್ಲಿ ವ್ಯಕ್ತಿಯ ಸಾಮಾನ್ಯ ಲಕ್ಷಣದಂತೆ ವಿಶಿಷ್ಟ ಲಕ್ಷಣವೂ ಉಂಟು. ಕಲಾವಿದ ತನ್ನ ಒಳದೃಷ್ಟಿಯನ್ನು ಹರಿಸಿ ವ್ಯಕ್ತಿಯ ವ್ಯಕ್ತಿತ್ವವನ್ನು ಚೆನ್ನಾಗಿ ಗ್ರಹಿಸಿ ಕಲ್ಪನೆಯನ್ನು ಭಾವಿಸಿಕೊಂಡು ಅದನ್ನು ಹೊರತರುತ್ತಾನೆ. ಇದೇ ಅತಿಶಯಗೊಳಿಸಿಕೆ ಅಥವಾ ಆದರ್ಶೀಕರಣ. ವ್ಯಕ್ತಿಯಲ್ಲಿ ಇದ್ದೇ ಇರುವ ಕೊರೆ ಕೋಚು ಎಲ್ಲವನ್ನೂ ಅಳಿಸಿಬಿಟ್ಟು ಲೋಪದೋಷಗಳನ್ನು ಮರೆಮಾಡಿ ಗುಣಗಳನ್ನು ಹೆಚ್ಚಿಸಿ ಅವನ ಚಾರಿತ್ರ್ಯವನ್ನು ಉಲ್ಲೇಖಿಸಿರುವುದೂ ಉಂಟು. ಪಟ್ಟಣಗಳನ್ನು ಸುಟ್ಟು ಸಾಮ್ರಾಜ್ಯಗಳನ್ನೇ ಧ್ವಂಸಮಾಡಿದ ಜಗಜ್ಜೇತರಾದ ಶೂರರು ನಿಜಕ್ಕೂ ಉಂಟು. ಹೋಮರನ ಅಕಿಲೀಸ್, ಏಜಾಕ್ಸ್, ಹೆಕ್ಟರ್–ಮೊದಲಾದ ಪೌರಾಣಿಕ ಮಹಾಪುರುಷರು ಬದುಕಿಬಾಳಿದ ಆ ವೀರಾಗ್ರಣಿಗಳಿಗಿಂತ ಅಧಿಕ ತೇಜಸ್ವಿನವರು. ಮಾನವ ಸಾಹಸ ಎಷ್ಟು ದೂರ ಹೋಗಬಹುದೋ ಅಷ್ಟು ದೂರ ಹೋಗಿರುವುದನ್ನು ಕವಿಗಳು ನಿರೂಪಿಸುತ್ತಾರೆ, ಶಿಲ್ಪಿಗಳು ಕೆತ್ತಿ ತೋರಿಸುತ್ತಾರೆ, ಚಿತ್ರಕಾರರು ಚಿತ್ರಿಸುತ್ತಾರೆ. ಅಕಿಲೀಸನಂಥ ವೀರಮಾನವ ಯಥಾರ್ಥವಾಗಿ ಇರಲಾರ. ಆದರೂ ಇರಬಹುದು. ಇದೇ ಜೀವನದ ವಾಸ್ತವ ಸತ್ಯಕ್ಕೂ ಕಲೆಯ ವಿಭಾವನಾ ಸತ್ಯಕ್ಕೂ ಇರುವ ಸಾಮ್ಯ, ವೈಷಮ್ಯ.

ಮೂರನೆಯ ಕ್ರಮವೆಂದರೆ ಜೀವನವನ್ನು ಇದಕ್ಕಿಂತ ಕೀಳಾಗಿಸಿ ಹೀನಾಯಿಸಿ ತೋರುವುದು. ವಾಸ್ತವತೆ, ಸ್ವಭಾವತೆ ಎಂಬ ತತ್ತ್ವಗಳ ಹೆಸರಿನಲ್ಲಿ ಈ ವಿಧದ ಅಸಹ್ಯಾತಿರೇಕ ಆಗಬಹುದು, ಆಗಿದೆ. ಕಲಾಕೃತಿ ಅಚ್ಚುಕಟ್ಟಾಗಿ ಅಂದಚೆಂದದಿಂದ ಸಂತಸಗೊಳಿಸಬೇಕು ಎಂಬ ವಿಧಿಯನ್ನು ನೇಮವಾಗಿಟ್ಟುಕೊಂಡರೆ ಅಸಹ್ಯಾತಿರೇಕ ಕುರೂಪವಾಗುತ್ತದೆ. ಆದರೂ ಕುರೂಪದ ವಿಷಯವಾಗಿ ಒಂದು ವಿಚಿತ್ರ ಸಂಗತಿಯುಂಟು. ಲಾವಣ್ಯವನ್ನು ವಾಸ್ತವತೆಗಿಂತ ಅತಿಶಯಗೊಳಿಸುವಂತೆ ಕುರೂಪವನ್ನೂ ಅತಿಶಯಗೊಳಿಸಬಹುದು. ಹಾಗೆ ಮಾಡಿದಾಗ ಕಲಾವಿದನ ಮಾಂತ್ರಿಕತೆಯಿಂದಲೋ ಏನೋ ಅದೇ ಒಂದು ಬಗೆಯ ಸುರೂಪವಾಗುತ್ತದೆ. ಕನಕದಾಸ ಕರ್ಕೋಟಕ ಕಚ್ಚಿದ ನಳನನ್ನು ಬಣ್ಣಿಸಿರುವ ರೀತಿ, ವಿಕ್ಟರ್ ಹ್ಯೂಗೋ ಒಂದು ಭವ್ಯ ಚರ್ಚಿನ ಸೇವಕ ಪ್ರಸಿದ್ಧ ಗೂನನನ್ನು ಚಿತ್ರಿಸಿರುವ ರೀತಿ ಇದಕ್ಕೆ ಉದಾಹರಣೆ. ಎರಡರಿಂದಲೂ ನಮಗೆ ದೊರಕುವ ಕಾವ್ಯಾಹ್ಲಾದ ಮಿಗಿಲು. ಕಲೆಯ ಸ್ವರೂಪ, ಸ್ವಧರ್ಮ, ಸ್ವಭಾವಗಳನ್ನು ವಿಚಾರಿಸುವಾಗ ಸೌಂದರ್ಯವೆಂಬ ಶಬ್ದವನ್ನು ಎಷ್ಟು ಕಡಿಮೆಯಾಗಿ ಬಳಸಿಕೊಂಡರೆ ಅಷ್ಟು ಕ್ಷೇಮ. ಏತಕ್ಕೆಂದರೆ ಆ ಶಬ್ದಕ್ಕೆ ಮನವೊಪ್ಪಿಸುವ ರೀತಿಯಲ್ಲಿ ಖಚಿತಾರ್ಥವನ್ನು ಯಾರೂ ಕೊಟ್ಟಿಲ್ಲ, ಪ್ರಾಯಶಃ ಕೊಡಲಾರರು.

ಕಲೆ ಪದಾರ್ಥತಿಷ್ಠವೋ ಭಾವ ಭಾವನಾತಿಷ್ಠವೋ ಎಂಬ ಜಿಜ್ಞಾಸೆ ಬಹುವಾಗಿ ನಡೆದಿದೆ. ಜೀವನ ಕಲೆಗಾರನ ಪ್ರಚೋದನೆಗಾಗಿ ಮುಂದಿಡುವ ಪದಾರ್ಥವೂ ಬೇಕು; ಕಲೆಗಾರನ ಪ್ರತಿಕ್ರಿಯೆಯಾದ ಭಾವ, ಭಾವನೆ ಮುಂತಾದುವೂ ಬೇಕು. ಒಂದು ಇದ್ದು ಇನ್ನೊಂದು ಇಲ್ಲದಿದ್ದರೆ ಕಲಾಕೃತಿ ಜನಿಸುವುದು ಅಶಕ್ಯ. ಬಾಹ್ಯ ವಸ್ತುಗಳು, ಜೀವನದ ಅಂಶಗಳು–ಎರಡೂ ಅಗತ್ಯ. ಕಲೆಗಾರನೆಂಬ ವ್ಯಕ್ತಿಯೂ ಅವನ ಆಂತರ್ಯದ ತುಡಿತ ಮಿಡಿತಗಳೂ ಜೀವನದ ಅಂಶಗಳು. ಆದ್ದರಿಂದ ಜೀವನವನ್ನು ಬಿಟ್ಟು ಕಲೆ ಎಂಬುದಿಲ್ಲ.

ಚರಿತ್ರೆ, ತತ್ತ್ವಶಾಸ್ತ್ರ, ವಿಜ್ಞಾನ, ಲಲಿತಕಲೆ ಎಲ್ಲವೂ ಜೀವನಕ್ಕೆ ಬಲು ಹತ್ತಿರದ ಸಂಬಂಧವನ್ನು ಉಳ್ಳವು. ಜೀವನದ ಪ್ರಸಂಗಗಳ ನಿಜವರದಿಯೇ ಚರಿತ್ರೆ. ಜೀವನದ ಆಕಾಂಕ್ಷೆ, ಅರ್ಥ, ಸಾರ್ಥಕ್ಯಗಳನ್ನು ಪರಿಶೀಲಿಸಿ ಸಿದ್ಧಾಂತಗಳನ್ನು ಹೇಳುವುದೇ ತತ್ತ್ವಶಾಸ್ತ್ರ. ವಸ್ತುಗಳು ಹೇಗೆ ರಚಿತವಾಗಿವೆ, ಹೇಗೆ ಆಕೃತಿವಿಕಾರ ಹೊಂದುತ್ತವೆ–ಮುಂತಾದ ವಿಚಾರಗಳನ್ನು ಯಂತ್ರಗಳ ಮೂಲಕವೂ ಗಾಢ ಚಿಂತನೆಯ ಮೂಲಕವೂ ಪರೀಕ್ಷಿಸಿ ನಿರ್ಣಯಗಳನ್ನು ತಿಳಿಯಹೇಳುವುದೇ ವಿಜ್ಞಾನ. ಇವು ಮೂರಕ್ಕೂ ಬುದ್ಧಿ ಶಕ್ತಿಯೇ ಪ್ರಮಾಣ, ಬುದ್ಧಿಶಕ್ತಿಗೇ ಇವುಗಳ ಸಂಬೋಧನೆ, ಕಲೆಯಾದರೋ ಮನುಷ್ಯನ ಮನಸ್ಸು, ಚಿತ್ತ, ಹೃದಯ, ಆತ್ಮ ಎಲ್ಲವನ್ನೂ ಒಳಗೊಂಡು ಪೂರ್ತಿ ಮಾನವತೆಯ ನಡೆವಳಿಕೆಯ ಅನುಭವವನ್ನು ತಂದುಕೊಡುತ್ತದೆ. ಜೀವನದ ಸಮಗ್ರ ಪರಿಚಯ ನಮಗೆ ದೊರಕುವುದು ಕಲೆಯಲ್ಲೇ. (ಎಸ್.ವಿ.ಆರ್.)

**ಕಲೆ ಮತ್ತು ನೀತಿ :** ಈ ವಿಷಯವನ್ನು ಚರ್ಚಿಸುವಾಗ ಎರಡು ಮುಖ್ಯ ಪ್ರಶ್ನೆಗಳು ನಮ್ಮೆದುರಿಗೆ ನಿಲ್ಲುತ್ತವೆ. ಒಂದು ಕಲಾವಿದನಿಗೆ ಸಂಬಂಧಿಸಿದ್ದು; ಇನ್ನೊಂದು ಕಲಾಸ್ವಾದಿ ವರ್ಗಕ್ಕೆ ಸಂಬಂಧಿಸಿದ್ದು.

ಕಲೆಗಾರ ಸೌಶೀಲ್ಯವಂತನಾಗಿರಲೇಬೇಕೇ? ಸ್ವಭಾವದಲ್ಲೂ ನಡತೆಯಲ್ಲೂ ಅಶುಚಿಯಾದವನು ಉತ್ತಮ ಕಲಾಕೃತಿಯನ್ನು ನಿರ್ಮಿಸಲಾರನೆ? ಕಲಾವಿದನಿಗೂ ಅವನ ನಿರ್ಮಿತವಾದ ಕಲಾವಸ್ತುವಿಗೂ ಈ ಬಗೆಯ ಕಾರ್ಯಕಾರಣತ್ವವನ್ನು ಅನ್ವಯಿಸುವುದು ಸರಿ, ನ್ಯಾಯ, ತರ್ಕಸಮ್ಮತ ಎಂದು ಭಾಸವಾಗಬಹುದು. ಆದರೆ ಕಲೆಯ ಇತಿಹಾಸದಲ್ಲಿ ನಿಶ್ಚಯವಾಗಿ ಆಗಿರುವ ವಿದ್ಯಾಮಾನಗಳನ್ನು ಕೊಂಚಮಟ್ಟಿಗೆ ಪರಿಶೀಲಿಸಿದರೂ ಸಾಕು ; ಅಂಥ ನಿರ್ಧಾರಕ್ಕೆ ಸಾಕ್ಷ್ಯ ದೊರಕುವುದಿಲ್ಲ. ಸಾವಿರಾರು ಕಲೆಗಾರರಲ್ಲಿ ಎಷ್ಟೋ ಮಂದಿ ತಮ್ಮ ಗುಣದಲ್ಲೂ ಶೀಲದಲ್ಲೂ ಕಲುಷಿತರು ಎಂಬುದನ್ನು ಮರೆಮಾಚುವಂತಿಲ್ಲ. ಮುಂಗೋಪ, ಅಹಂಕಾರ ಲೋಭ, ಹೊಟ್ಟೆಕಿಚ್ಚು ಮೊದಲಾದ ಸಾಮಾನ್ಯ ದೋಷಗಳೇ ಅಲ್ಲದೆ ವಂಚನೆ, ವಿಷಯಲಾಂಪಟ್ಯ, ದ್ರೋಹ, ಮುಂತಾದ ಕಲಂಕಗಳು ಅವರಲ್ಲಿ ಕಂಡುಬರುತ್ತವೆ. ಅವರ ಕಲಾನಿರ್ಮಿತಿಗಳಾದರೋ ಹೆಚ್ಚು ಕಡಿಮೆ, ನಿರ್ದಿಷ್ಟ, ಸೊಗಸು, ಮಹೋತ್ಕೃಷ್ಟ. ಕೆಲವು ನಗರಗಳಲ್ಲಿ ಕಲಾವಿದರ ಕೇರಿ ಎಂಬ ಪ್ರತ್ಯೇಕ ಭಾಗ ಉಂಟು. ಅಲ್ಲಿ ಸಭ್ಯ ಸಮಾಜದ ಭಾಗವಾದ ರೀತಿನೀತಿಗೆ ಅವಕಾಶ ತೀರ ಕಡಿಮೆ. ಅಲ್ಲಿ ಕಷ್ಟಕಾರ್ಪಣ್ಯಗಳಿಂದ ಮೊದಲು ತೊಳಲುತ್ತ ಕಲಾದೇವಿಯ ಅನುಗ್ರಹಕ್ಕೆ ಹೇಗೋ ಪಾತ್ರರಾಗಿ ಅತ್ಯುತ್ತಮ ಕೃತಿಗಳನ್ನು ರಚಿಸಿ ಯಥೇಷ್ಟ ಹಣವನ್ನೂ ಕೀರ್ತಿಯನ್ನೂ ಗಳಿಸಿಕೊಂಡು ಸಭ್ಯಸಮಾಜದಲ್ಲಿ ಗಣ್ಯರಾಗಿ ಬಾಳಿದವರುಂಟು. ಅಷ್ಟೇಕೆ, ಭಾರತದ ಹಿಂದಣ ತಲೆಮಾರುಗಳಲ್ಲಿ ನರ್ತನ, ಸಂಗೀತ ಕಲೆಗಳಲ್ಲಿ ಬಹಳ ಪ್ರಸಿದ್ಧರೆಂದು ಹೆಸರಾದವರಲ್ಲಿ ಎಷ್ಟೋ ಮಂದಿ ವೇಶ್ಯೆಯರಿದ್ದರು.

ಕಲಾವಿದನ ಗುಣಶೀಲ ಮತ್ತು ಜೀವನಕ್ರಮ ಅವನಿಗೆ ವೈಯಕ್ತಿಕವಾಗಿ ಹೊಂದಿಕೊಂಡ ವಿಚಾರ. ಅವು ಅವನ ಕಲೋದ್ದೇಶದ ಮೇಲಾಗಲಿ, ಕಲಾವಿಧಾನದ ಮೇಲಾಗಲಿ, ಕಲಾ ನೈಪುಣ್ಯದ ಮೇಲಾಗಲಿ ಬೀರುವ ಪ್ರಭಾವ ಹೆಚ್ಚಿನದು ಎಂದು ಭಾವಿಸುವುದು ತಪ್ಪಾದೀತು. ಒಂದು ದೃಷ್ಟಿಯಿಂದ ನೋಡಿದರೆ ಕಲಾವಿದ ಯಮಳ ಬದುಕಿನ ಜೀವಿ! ಅವನ ಸ್ವಂತ ಬದುಕು ಒಂದು, ಕಲೆಗಾರನಾಗಿ ಬದುಕು ಇನ್ನೊಂದು. ಎರಡಕ್ಕೂ ಬಾಂಧವ್ಯ ಇದ್ದರೂ ಇರಬಹುದು, ಇಲ್ಲದಿದ್ದರೂ ಆಗುತ್ತದೆ. ಕಲಾವಿದ ಮನುಷ್ಯ ಮಾತ್ರನಾದ್ದರಿಂದ ಕೆಲವು ಕಾಲ ಭೂಮಿಯ ಮೇಲೆ ಇದ್ದು ಆಯುಷ್ಯ ತೀರಿದೊಡನೆ ಅದೃಶ್ಯನಾಗುತ್ತಾನೆ. ಅವನ ಕೃತಿಗಳಾದರೋ ಅನೇಕ ಶತಮಾನ ಹೊಸ ಹೊಸ ತಲೆಮಾರುಗಳಿಗೆ ವಿಶೇಷ ಬಗೆಯ ತಣಿವನ್ನು ನೀಡುತ್ತ ಇರುತ್ತವೆ. ಒಂದು ದೃಷ್ಟಿಯಲ್ಲಿ ಕಲಾವಿದ ಅಲ್ಪಾಯು, ಕಲೆ ಚಿರಾಯು. ಹೊಯ್ಸಳ ದೇವಾಲಯದ ಮದನಿಕೆ ಪ್ರತಿಮೆಗಳನ್ನು ಕೆತ್ತಿ ನಿಲ್ಲಿಸಿದವರಾರು, ಅವನ ಬಾಳು ಹೇಗಿತ್ತು–ಇತ್ಯಾದಿ ಪ್ರಶ್ನೆಗೆ ಉತ್ತರವೇ ಇಲ್ಲ. ಆ ಪ್ರತಿಮೆಗಳಾದರೋ ಪರಮಾಹ್ಲಾದದ ಬುಗ್ಗೆಗಳು. ಚಿತ್ರಕಾರ ಟಿಷಿಯನ್ ಅಸೂಯಾಪರ; ವಾಗ್ಗೇಯಕಾರರಾದ ಬಾಕ್, ಬೇತೋವನರೂ ಹಾಗೆಯೇ. ರಾಸಿನಿಗೆ ಅತ್ಯಂತ ಜಂಬ. ಇದನ್ನೆಲ್ಲ ಈಗ ಯಾರೂ ಬಗೆಯರು. ಎಲ್ಲರೂ ಅವರ ಉಚ್ಚ ಕೃತಿಗಳ ಅಪೂರ್ವ ಸವಿಯನ್ನು ತಿರುತಿರುಗಿ ಅನುಭವಿಸಲು ಹಾತೊರೆಯುತ್ತಾರೆ.

ಇನ್ನು, ಕಲೆ ಜನರಲ್ಲಿ ಉಂಟುಮಾಡುವ ಪರಿಣಾಮವನ್ನು ಕುರಿತು ಎರಡು ಮಾತು. ಸಾಮಾನ್ಯರಾಗಲಿ, ರಸಜ್ಞರಾಗಲಿ, ವಿಮರ್ಶಕರಾಗಲಿ, ಕಲೆಯಿಂದ ತಮಗೆ ಏನು ಆಗಬೇಕೆಂಬ ಅಪೇಕ್ಷೆಯನ್ನು ಮುಂದಿಟ್ಟುಕೊಂಡೇ ಕಲಾನುಭವಕ್ಕೆ ಕೈ ಹಾಕುತ್ತಾರೆಯೇ? ಚಿತ್ರವನ್ನು ವೀಕ್ಷಿಸುವುದೊ ಸಂಗೀತವನ್ನು ಆಲಿಸುವುದೊ ನಾಟಕವನ್ನು ನೋಡುವುದೊ ಕಾದಂಬರಿಯನ್ನು ಓದುವುದೋ ಯಾವುದೇ ಉದ್ಯಮವಾಗಲಿ ಅದು ಕೇವಲ ಲೌಕಿಕ ಜೀವನದಿಂದ ವ್ಯತ್ಯಸ್ತವಾದ ವ್ಯಾಪಾರ. ಕಲಾಕೃತಿಯಿಂದ ತಮಗೆ ನೀತಿಬೋಧೆ ಒದಗಿ ಅದರಿಂದ ತಮ್ಮ ಜೀವನ ಹೆಚ್ಚು ನೆಟ್ಟಗಾಗಬೇಕೆಂಬುದು ಅವರ ಅಭಿಲಾಷೆಯೆ? ಅಂಥವರು ಇಲ್ಲವೆಂದೇ ಹೇಳಲು ಬಾರದು ; ಆದರೂ ಅವರ ಸಂಖ್ಯೆ ಬಲು ಕಡಿಮೆ. ಅಲ್ಲದೆ ನೀತಿಬೋಧೆ, ಶುಷ್ಕವೂ ಬೇಸರ ತರುವಂಥಾದ್ದೂ ಅಹುದು. ನೀತಿಸೂತ್ರಗಳ ಹೊರೆ ಹೆಚ್ಚಾದಷ್ಟೂ ನೀತಿಭಂಗ ಹೆಚ್ಚು. ಕಲಾವಿದರು ಉಪಾಧ್ಯಾಯರಲ್ಲ, ಧರ್ಮಬೋಧಕರಲ್ಲ; ಅಂದಚೆಂದದ ಕೃತಿಗಳನ್ನು ಹೊರತರುವವರು ಮಾತ್ರ. ಉತ್ತಮ ಕಲಾಕೃತಿಯಿಂದ ಕಲಾಸ್ವಾದಿಗಳಿಗೆ ದೊರಕುವ ಲಾಭ ಇದೇ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಕೆಲವು ಮಾತುಗಳನ್ನು ವಿವರಿಸಿ ಆ ಲಾಭದ ಲಕ್ಷಣವನ್ನು ಪರಿಚಯ ಮಾಡಿಕೊಡಬಹುದು. ಮೊಟ್ಟಮೊದಲ ಮಾತು ಹರ್ಷ; ಕಾವ್ಯವನ್ನು ಓದಿಯೋ ವಿಗ್ರಹವನ್ನು ನೋಡಿಯೋ ಸಂಗೀತವನ್ನು ಕೇಳಿಯೋ ನಾವು ಸಂತೋಷ ಪಡುತ್ತೇವೆ. ಪ್ರತಿಯೊಂದು ಕಲೆಯೂ

ತನ್ನ ತನ್ನ ವಿಧದಲ್ಲಿ ಸಂತೋಷವನ್ನುಂಟುಮಾಡುತ್ತವೆ. ಇಲ್ಲಿ ಒಂದು ವಿಚಾರ ಅಗತ್ಯ. ಸಂತೋಷವೆಂದರೇನು? ಅದರಲ್ಲಿ ದರ್ಜೆಗಳಿಲ್ಲವೆ? ಪರ ಹಿಂಸೆಯಿಂದ, ದೌರ್ಜನ್ಯವೀಕ್ಷಣೆಯಿಂದ ವಿಕೃತ ಕಾಮನೆಗಳಿಂದ ಸಂತೋಷ ಉಂಟಾಗುವುದಿಲ್ಲವೆ? ಇಲ್ಲಿ ಸಂತೋಷವೆಂದರೆ ಶುದ್ಧ ಸಂತೋಷವೆಂದು ಭಾವ. ಸತ್ ಆನಂದ, ಸತ್ ಸಂತೋಷ ಕೊಡುವುದು ಕಲೆಯ ಕೆಲಸ. ಕಲೆ ಒಳ್ಳೆಯದೇ ಕೆಟ್ಟದೇ ಎಂದು ನಿರ್ಧರಿಸುವ ಅಂಶ ಅದರ ಪರಿಣಾಮವಾದ ಆನಂದವನ್ನು ಅವಲಂಬಿಸಿದೆ. ಅದು ಸತ್‌ಪರಿಣಾಮಕಾರಿಯಾದರೆ ಕಲೆಯೂ ಸತ್‌ಕಲೆಯಾಗುತ್ತದೆ. ಮನೋವೈಶಾಲ್ಯ ಎಂಬುದು ಎರಡನೆಯ ಮಾತು. ಕಲಾಕೃತಿಯ ಸಂಪರ್ಕದಿಂದ ನಮ್ಮ ಮನಸ್ಸು ವಿಶಾಲವಾದಂತೆ ಅನಿಸುತ್ತದೆ. ನಮ್ಮ ಸ್ವಂತ ಜೀವನದಲ್ಲಿ ನಮಗೆ ದಕ್ಕದ, ಬಹುಶಃ ದಕ್ಕಲಾರದ, ಅಪೂರ್ವಾನುಭವ ನಮಗೆ ದೊರೆಯುತ್ತದೆ. ಹೃದಯ ಉಲ್ಲಾಸದಿಂದ ಎದ್ದು ಕುಣಿಯುತ್ತದೆ. ಮನಸ್ಸು ಘನ ಅಭಿಪ್ರಾಯಗಳನ್ನು ತಳೆದು ದೊಡ್ಡದಾಗುತ್ತದೆ. ಮೇಲಾಗಿ ಯಾವುದೋ ಬಗೆಯಲ್ಲಿ ನಮ್ಮ ಆತ್ಮ ಬೆಳೆದು ಎತ್ತರವಾದಂತೆ ತೋರುತ್ತದೆ. ನಮ್ಮ ವ್ಯಕ್ತಿತ್ವದ ಗ್ರಹಿಕೆಗೂ ವಿಕಾಸಕ್ಕೂ ಹೀಗೆ ಕಲೆ ನೆರವಾಗುತ್ತದೆ. ಇವೆಲ್ಲವೂ ಇರುವಾಗ ಬರಿಯ ನೀತಿಮಾಲೆಯನ್ನು ಕಲೆಯಿಂದ ನಿರೀಕ್ಷಿಸಿದರೆ ಅದಕ್ಕೆ ಅನ್ಯಾಯ ಮಾಡಿದಂತೆ. ನೀತಿಯೆಂಬುದನ್ನು ಉದಾರಾರ್ಥದಲ್ಲಿ ತೆಗೆದುಕೊಡರೆ ಮಾತ್ರ ಕಲೆಯೊಳಕ್ಕೆ ಅದನ್ನು ಸೇರಿಸಬಹುದು. (ಎಸ್.ವಿ.ಆರ್.)

**ಕಲೆ ಮತ್ತು ಪ್ರಕೃತಿ :** ಕಲೆ ಮತ್ತು ಪ್ರಕೃತಿಗೆ ನಿಕಟ ಸಂಬಂಧವಿದೆಯಾದರೂ ಅದು ಅನ್ಯೋನ್ಯವಲ್ಲ. ಎಂದರೆ, ಪ್ರಕೃತಿಯಿಂದ ಸ್ಫೂರ್ತಿಗೊಂಡ ಭಾವನೆ ಅಥವಾ ಕೃತಿ ಕಲೆ ಎನಿಸಿಕೊಂಡರೂ ಕಲೆಯಿಂದ ಪ್ರಕೃತಿಗೆ ಆಗಬೇಕಾದ್ದೇನೂ ಇಲ್ಲ. ನಮ್ಮ ಭಾವನೆ ಅಥವಾ ದೃಷ್ಟಿ ಪ್ರಕೃತಿಯನ್ನು ಸುಂದರ ಎನ್ನಿಸುವಂತೆ ಮಾಡುತ್ತದೆ, ಆದರೆ ಪ್ರಕೃತಿಯನ್ನು ಸೃಷ್ಟಿಸುವುದಿಲ್ಲ. ಕಲೆಗೂ ಪ್ರಕೃತಿಗೂ ಇರುವ ವ್ಯತ್ಯಾಸ ಇಲ್ಲಿ ಕಂಡುಬರುತ್ತದೆ. ಕಲೆ ಮಾನವ ನಿರ್ಮಿತ, ಪ್ರಕೃತಿ ಸಹಜ. ಪ್ರಕೃತಿಯಲ್ಲಿ ಸಿಗುವ ಅಥವಾ ಸಂಭವಿಸಬಹುದಾದ ವಸ್ತುಗಳನ್ನೇ ಮಾಧ್ಯಮವಾಗಿ ಬಳಸಿಕೊಂಡು ದಕ್ಷನಾದವ ಸೃಷ್ಟಿಸುವ ಕೃತಿ ಕಲೆ. ಹೀಗೆ ಮಾಡುವಲ್ಲಿ ಆತ ಪ್ರಕೃತಿಯ ಅಂಶಗಳನ್ನು ಸಂಪಾದಿಸುತ್ತಾನೆ. ಎಂದರೆ ಕತ್ತರಿ ಪ್ರಯೋಗ ಮಾಡುತ್ತಾನೆ. ತೇಪೆ ಹಾಕುತ್ತಾನೆ, ಜೋಡಿಸುತ್ತಾನೆ, ಅದಕ್ಕೊಂದು ಚೌಕಟ್ಟು ನೀಡುತ್ತಾನೆ. ಪ್ರಕೃತಿಯನ್ನು ಚೌಕಟ್ಟಿನೊಳಗಿಡುವ ತಂತ್ರದಿಂದ ಅದನ್ನು ಪುನರ್ ಸೃಷ್ಟಿ ಮಾಡುತ್ತಾನೆ. ಈ ಕಾರಣದಿಂದ ಅದರ ಚೆಂದ ಅಥವಾ ಸೊಬಗು ಹೆಚ್ಚುತ್ತದೆ. ಎಂದರೆ ಚೌಕಟ್ಟಿನಲ್ಲಿರುವ ದೃಶ್ಯ ಪ್ರಕೃತಿಯೂ ಆಗಿರಬಹುದು, ಸಂಪಾದಿಸಿದ ನವೀನ ರಚನೆಯೂ ಆಗಿರಬಹುದು. ಕಲಾವಿದನ ಹಿರಿಮೆ ಎರಡನೆಯದರಲ್ಲಿ ಕಾಣುವಂತೆ ಮೊದಲನೆಯದರಲ್ಲಿ ಕಂಡುಬರುವುದಿಲ್ಲ. ಕ್ರಿಯಾತ್ಮಕವಾಗಿ, ಭಾವ ಪ್ರಚೋದಕ ಮತ್ತು ಪ್ರಬೋಧಕವಾಗಿ ಸೌಂದರ್ಯಾನುಭವವನ್ನು ನೀಡಿವ ಕೃತಿ ಕಲೆ ಎನಿಸಿಕೊಳ್ಳುತ್ತದೆ. ಎಂದರೆ ಮಾನವ ಮಾಡಿದ್ದೆಲ್ಲ ಕಲೆ ಆಗುವುದಿಲ್ಲ. ಅದರ ವಿಶಿಷ್ಟಗುಣ ಲೋಕ ವ್ಯವಹಾರದಲ್ಲಿ ಪಾಲುಗೊಳ್ಳದಿರುವುದು, ವ್ಯಾವಹಾರಿಕ ಅಥವಾ ಭೌತಿಕ ಮೌಲ್ಯವನ್ನು ನೀಡದಿರುವುದು. ಈ ಕಾರಣದಿಂದ ಅದು ಅಲೌಕಿಕ ಎನಿಸುತ್ತದೆ; ನಾಲಗೆಗೆ ಸಿಗುವ ರುಚಿಗಿಂತ ಹೆಚ್ಚಾಗಿ ವಿಭಿನ್ನವಾಗಿ ಅದು ಆತ್ಮ ಸಂತೃಪ್ತಿಯನ್ನುಂಟುಮಾಡುತ್ತದೆ. ಆದ್ದರಿಂದ ಕಲೆ ನಮ್ಮನ್ನು ನಿರ್ಲಿಪ್ತಗೊಳಿಸುವ ಸುಲಭಸಾಧನ ಎಂದೆನ್ನುತ್ತಾರೆ. ಪ್ರಕೃತಿಯ ಭೌತಿಕ ಅಂಶವಾದ ನಾವು ಪ್ರಕೃತಿಯಿಂದ ಈ ನಿರ್ಲಿಪ್ತತೆಯನ್ನು ಸಾಧಿಸುವುದು ಬಹಳ ಅಪರೂಪ. ಪ್ರಕೃತಿ ನಮಗೆ ಬಾಹ್ಯವಾಗಿಯೇ ಎಂದರೆ ವಾಸ್ತವವಾಗಿಯೇ ಯಾವಾಗಲೂ ನಿಲ್ಲಬಹುದಾಗಿದ್ದರೆ, ನಮ್ಮ ಸಂತಸ ಹೆಚ್ಚಿರುತ್ತಿತ್ತು. ಈ ತೆರನಾದ ಬಾಹ್ಯತೆ, ನಿರ್ಲಿಪ್ತತೆಗಳನ್ನು ಸಂಪಾದಿಸಿದ ಕವಿಗಳೂ ಕಲಾವಿದರೂ ಇತರ ಸಾಮಾನ್ಯರಿಗಿಂತ ಭಿನ್ನರಾಗಿರುವುದು ಈ ಕಾರಣದಿಂದಲೇ. ನಮಗೂ ಪ್ರಕೃತಿಗೂ ಮಧ್ಯೆ ಒಂದು ಸಂಖ್ಯೆಯನ್ನೋ ವಿಗ್ರಹ ರೇಖೆಯನ್ನೋ ಎಳೆದುಕೊಂಡೆವಾದರೆ, ಅದರ ಬಂಧನದಿಂದ ಕಳಚಿಕೊಂಡು ನಾವು ಆತ್ಮಾರಾಮರಾಗುತ್ತೇವೆ ಎಂದು ಸಾಂಖ್ಯರ ಮತ. ಇದು ಸೌಂದರ್ಯ ದೃಷ್ಟಿಯೂ ಹೌದು. ಎಂದರೆ ಆ ರೇಖೆ ಪ್ರಕೃತಿಗೆ ಒಂದು ಚೌಕಟ್ಟನ್ನು ಒದಗಿಸುತ್ತದೆ. ಕಲೆ ಅದನ್ನು ಸಾಧಿಸಬಹುದೆಂದೇ ಅದರ ಮಹಿಮೆ. ಎಲ್ಲ ಸೌಂದರ್ಯನುಭಾವಗಳಲ್ಲೂ ಈ ತೆರನಾದ ಸಂಧಿ ಅಥವಾ ವಿಗ್ರಹರೇಖೆ ಏರ್ಪಟ್ಟೊ ನಮ್ಮ ಲಿಪ್ತತೆ ದೂರವಾಗುವುದಕ್ಕೆ ಎಡ್ವರ್ಡ್ ಬುಲ್ಲೋ ಎಂಬಾತ ಸೈಕಿಕಲ್ ಡಿಸ್ಟೆನ್ಸ್ ಎಂದು ಕರೆದಿದ್ದಾನೆ. ಎಂದರೆ ಇಲ್ಲಿ ಆಗುವುದು ವಸ್ತುವಿನ ಅಥವಾ ಪ್ರಕೃತಿಯಿಂದ ದೂರೀಕರಣವಲ್ಲ. ಅದರ ದೃಷ್ಟಿಸತ್ಯದೊಂದಿಗೆ ದೂರೀಕರಣ ಮತ್ತು ಸಾರ್ವತ್ರಿಕವಾಗಿ ಸಾಮಾನ್ಯವಾದ ಅಂತಃ ಸತ್ಯದೊಂದಿಗೆ ನಮ್ಮ ಭಾವೈಕ್ಯ. ಈ ಅಂಶವನ್ನು ಥಿಯೋಡರ್ ಲಿಪ್ಸ್ ಎಂಬಾತ ಭಾವೈಕ್ಯತೆ ಎಂದು ಕರೆದಿದ್ದಾನೆ. ಒಂದೇ ಸೌಂದರ್ಯಾನುಭವದಲ್ಲೇ ಮಾನಸಿಕ ದೂರೀಕರಣ ಮತ್ತು ಭಾವೈಕ್ಯವಾಗುವ ಈ ತಂತ್ರ ಬಹು ಸೋಜಿಗದ್ದು. ಸೌಂದರ್ಯ ಮೀಮಾಂಸಕರು ಅಥವಾ ವಿಮರ್ಶಕರು ಈ ವಿರುದ್ಧ ತತ್ತ್ವಗಳು ಒಂದೇ ಅನುಭವದಲ್ಲಿ ಹೇಗೆ ಪರ್ಯವಸಾನವಾಗಬಲ್ಲವು ಎನ್ನುವುದನ್ನು ಎಂದರೆ ವಿರುದ್ಧವಾಗಿ ಕೆಲಸ ಮಾಡಿ ಹೇಗೆ ಒಂದೇ ಅನುಭವವನ್ನುಂಟುಮಾಡಬಲ್ಲವು ಎಂಬುದನ್ನು ವಿವರಿಸಿಲ್ಲ. ಆದರೆ ಅದರ ಸೂಕ್ಷ್ಮ ಇಲ್ಲಿದೆ. ನಮಗೂ ಪ್ರಕೃತಿಗೂ ಮಧ್ಯೆ ನಾವು ಎಳೆದುಕೊಂಡ ರೇಖೆ ಸಂಧಿರೇಖೆಯಾದರೆ ಅದು ಭಾವೈಕ್ಯತೆಯಲ್ಲೂ ಅದೇ ರೇಖೆ ವಿಗ್ರಹರೇಖೆಯಾದಲ್ಲಿ ದೂರೀಕರಣದಲ್ಲೂ ಮುಕ್ತಾಯಗೊಳ್ಳುತ್ತದೆ.

ನಿರ್ಲಿಪ್ತತಾಸಾಧಕವಾದ ಚೌಕಟ್ಟನ್ನು ಒದಗಿಸುವಾತ ಕಲಾವಿದ. ಆತ ಸೃಷ್ಟಿಸಿದ ಪ್ರತಿಭಾನ್ವಿತ ಕೃತಿ ಸ್ವತಂತ್ರ ವಸ್ತುವಾಗಿ ಪ್ರಕೃತಿಯಿಂದ ಬೇರೆ ನಿಂತು, ಪ್ರಕೃತಿ ತೋರಿಸಿದರೂ ಸಾಮಾನ್ಯನಿಗೆ ಕಾಣದ ಚೈತನ್ಯವನ್ನು ಘನೀರೂಪಗೊಳಿಸಿ ಸುಲಭವಾಗಿ ಆತ ಆಸ್ವಾದಿಸುವಂತೆ ಮಾಡುತ್ತದೆ. ಎಂದರೆ ಆನಂದಾನುಭವಕ್ಕೆ ಅಗತ್ಯವಾಗುವ ಈ ಮಾನಸಿಕ ಬಾಹ್ಯತೆಯನ್ನು ಕಲಾಕೃತಿಯಲ್ಲಿ ಸಿದ್ಧರೂಪದಲ್ಲಿ ನಮಗೆ ಸಿಗುವಂತೆ ಮಾಡುವವನೇ ಕಲಾವಿದ. ಕಲಾವಿದನ ಕೃತಿ ಎನ್ನುವುದು ಅಶಿಕ್ಷಿತನಾದ ಸಾಮಾನ್ಯನಿಗೆ ಕಡಿದು, ಮೆರುಗುಕೊಟ್ಟು, ತಯಾರಿಸಿಟ್ಟ ವಜ್ರದಂತೆ. ಸಾಮಾನ್ಯನಿಗೆ ಕಾಣದ ಬಣ್ಣ, ರೇಖೆ, ಸಂಯೋಜನೆ ಕಲಾವಿದನ ದೃಷ್ಟಿಯ ಮೂಲಕ ಹಾದು ನಮಗೆ ಕೃತಿಯಾಗಿ ಬಂದಿರುತ್ತವೆ. ರವಿ ಕಾಣದ್ದನ್ನು ಕವಿ ಕಂಡಿದ್ದರೆ, ಅದರ ಅರಿವು ನಮಗಾಗುವುದು ಈ ಕೃತಿಗಳಿಂದ. ಜೀವನದಲ್ಲೂ ಕೃತಿಯಲ್ಲೂ ನಿರ್ಲಿಪ್ತತೆಯನ್ನು ಸಾಧಿಸಿದ ಕಲಾವಿದರು ಸಾಮಾನ್ಯರಿಗಿಂತ ಉತ್ಕೃಷ್ಟರೆಂಬ ವಿಷಯದಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

ಪ್ರಾಕೃತಿಕವಾದ ನಮ್ಮ ಜೀವನದಲ್ಲಿ ಸ್ವಾಭಾವಿಕವಾಗಿ ನಾವು ಪ್ರಕೃತಿಯೊಡನೆ ಬೇರೆಯಲ್ಲವೆಂಬಂತೆ ಅಭಿನ್ನ ಜೀವನವನ್ನು ಜರುಗಿಸುತ್ತಿದ್ದೇವೆ. ಆದ್ದರಿಂದಲೇ ಎಲ್ಲವನ್ನೂ ವ್ಯಾವಹಾರಿಕ ದೃಷ್ಟಿಯಿಂದ ಕಂಡು ಯಾವುದು ಉಪಯುಕ್ತ ಯಾವುದು ಭೌತಿಕವಾಗಿ ಸುಖಕರ ಎಂಬುದನ್ನೇ ಹುಡುಕುವ ನಾವು ಅವುಗಳಿಗೆ ಸಾಪೇಕ್ಷವಾದ, ಆದರೆ ನಮಗೆ ಅನಪೇಕ್ಷವಾದ ಕಷ್ಟ, ದುಃಖಗಳನ್ನು ಅನುಭವಿಸುತ್ತೇವೆ. ಇದೊಂದು ಸ್ವಾಭಾವಿಕ ಬಂಧನ, ಇದರಿಂದಲೇ ಪ್ರಕೃತಿಯಲ್ಲಿನ ಸೌಂದರ್ಯವನ್ನು ಆಸ್ವಾದಿಸಲು ಅನೇಕರಿಗೆ ಆಗಿದಿರುವುದು. ಕಲಾಕೃತಿ ವಿಶಿಷ್ಟವಾದ ರೀತಿಯಲ್ಲಿ ನಮ್ಮನ್ನು ವ್ಯಾವಹಾರಿಕ ತನ್ಮಯತೆ, ವ್ಯಾಹಾರಿಕ ಉಪಯುಕ್ತತೆ ಎನ್ನುವ ಕಾರ್ಪಣ್ಯಗಳಿಂದ ತಪ್ಪಿಸಿ ಭಾವಶುದ್ಧಿಯ ಮೂಲಕ ಪ್ರಕೃತಿ ನೀಡಬಹುದಾದ ಎಲ್ಲ ಅನುಭವಗಳನ್ನೂ ನೀಡುತ್ತದೆ; ಆದರೆ ಇಲ್ಲಿ ಅನುಭವ ಉದಾತ್ತವಾಗಿರುತ್ತದೆ ; ವ್ಯಕ್ತಿ–ಪರಿಮಿತಿಗಳಿಂದ ನಮ್ಮನ್ನು ಮುಕ್ತಿಗೊಳಿಸಿ ಸಾಧಾರಣ ಅಥವಾ ಸಾರ್ವತ್ರಿಕ ವೈಶಾಲ್ಯದ ಅನುಭವದಲ್ಲದು ಲೀನಗೊಳಿಸುತ್ತದೆ. ಎಂದರೆ ಸದ್ಯದಲ್ಲೇ ಪರನಿರ್ವೃತಿಯನ್ನು ಸಾಧಿಸಿ ಆತ್ಮ ಸಂವಾದದಲ್ಲಿ ತೊಡಗಿಸುವಂತೆ ಮಾಡುವ ಸಾಧನೆಯಾಗುತ್ತದೆ. ಕಲಾಕೃತಿ ಅವ್ಯಾವಹಾರಿಕ ಮತ್ತು ಅಲೌಕಿಕ ಎಂದರೆ ಇದೇ ಅರ್ಥ, ಭಾರತೀಯ ಸೌಂದರ್ಯಮೀಮಾಂಸಕನಾದ ಮಮ್ಮಟನ ದೃಷ್ಟಿಯಲ್ಲಿ ಕಲಾಕೃತಿ ಪ್ರಕೃತಿಗಿಂತ ಭಿನ್ನವಾದುದಕ್ಕೆ ಗುರುತು ಇದು : ಕಲೆ ನಿಯತಿಕೃತ ನಿಯಮ ರಹಿತ, ಹ್ಲಾದೈಕಮಯ, ಅನನ್ಯ ಪರಿತಂತ್ರ, ನವರಸರುಚಿರ. ಈ ನಿಯತಿಕೃತ ನಿಯಮಗಳನ್ನು ಮೀರುವ ಶಕ್ತಿ ಮಾನವನ ಭಾವನೆಗೆ ಇಲ್ಲದಿದ್ದರೆ ಆತ ಕೇವಲ ಭೌತಿಕ ಅಥವಾ ವಾಸ್ತವಿಕ ಘಟಕವಾಗಿಯೇ ಇರುತ್ತಿದ್ದ. ಭಾವನೆಗೆ ಒಂದು ಸೃಷ್ಟಿಶಕ್ತಯಿದೆ ಎಂದು ತೋರಿಸಿಕೊಡುವುದೆಂದರೆ ಅದು ಕಲೆ. ಇತ್ತೀಚೆಗೆ ತಾರ್ಕಿಕ ನಿಯಮಗಳನ್ನೂ ಮೀರುವ ಸರ್‍ರಿಯಲಿಸಂ (ಅತಿವಾಸ್ತವಿಕತೆ) ಎನ್ನುವ ಶೈಲಿಗೆ ಸೇರಿದ ಕಲಾಕೃತಿಗಳು ಮಾನವನ ಭಾವನಾ ಸ್ವಾತಂತ್ರ್ಯವನ್ನೂ ನಿರ್ಮಾಣಶಕ್ತಿಯನ್ನೂ ಸೂಚಿಸುತ್ತವೆ. ಸುಪ್ತಚೇತನದ ಮಟ್ಟದಲ್ಲಿ ಅಡಗಿರುವ ಅನೇಕ ಗುಹ್ಯ ಅನುಭವಗಳನ್ನು ಅಭಿವ್ಯಕ್ತಿಗೊಳಿಸುವ ಈ ತೆರನಾದ ಅರ್ಥಕೃತಿಗಳು ಪ್ರಕೃತಿಯ ದೃಶ್ಯಗಳಲ್ಲಿ, ಸೃಷ್ಟಿಯಲ್ಲಿ ಕಾಣಬರುವುದಿಲ್ಲ. ಪ್ರಕೃತಿಯ ಸ್ವಾಭಾವಿಕ ಅಥವಾ ಭೌತಿಕ ನಿಯಮಾವಳಿಗಿಂತ ವಿಶಿಷ್ಟವಾದ ರೀತಿಯ ನಿಯಮಗಳಿಂದ ಸೃಷ್ಟಿ ಜರುಗಬಹುದೆಂದು ತೋರಿಸಿಕೊಡುವ ಧೀಮಂತ ನಿದರ್ಶನ ಕಲೆಯಲ್ಲಿ ಕಂಡುಬರುತ್ತದೆ. ಪ್ರಕೃತಿಯಿಂದ ಮೇಲೆದ್ದ, ಪ್ರಕೃತಿಗಿಂತ ಮಿಗಿಲಾದ, ಹೊಸತಾದ ಮಾನವ ಚೈತನ್ಯದ ಹೆಗ್ಗುರುತು ಕಲೆ. ನವೀನತೆಯ ಅಳತೆ ಮಾನವನಲ್ಲಿ ಸಿಗುತ್ತದೆ. ಇದೇ ಮಾನವ ಎನ್ನುವ ಪದದ ಅರ್ಥ. ಮಾ+ನವ ಸೃಷ್ಟಿಯಲ್ಲಿ ನವೀನತೆಯ ಮಾಪನವೇ ಮಾನವ. ಮಾನವತೆಯ ಅಭಿವ್ಯಕ್ತಿಕಲೆ. ಇಲ್ಲಿ ಮಾನವತನ್ನೊಡನೆಯೇ ಸಹಚಿಂತನೆ ಮಾಡಲೆಳೆಸುವ ಪ್ರಯತ್ನ ಕಾಣುತ್ತದೆ.

ಈ ಚೈತನ್ಯದ ಅಭಿವ್ಯಕ್ತಿ ವಾಸ್ತವಿಕ ಚಿತ್ರಕೃತಿಗಳಿಗಿಂತ ಅನುಕರಣಾತ್ಮಕ ಕೃತಿಗಳಿಗಿಂತ ಹೆಚ್ಚಿಗೆ ಸಂಜ್ಞಾತ್ಮಕ ಅಥವಾ ಭಾವಪ್ರಧಾನ ಚಿತ್ರಕೃತಿಗಳಲ್ಲಿ ಕಾಣಸಿಗುತ್ತದೆ. ಪ್ರಕೃತಿಯ ಗರ್ಭದಲ್ಲಿ ಅಡಗಿಕೊಂಡಿರುವ ಸರಳರೇಖೆಗಳನ್ನು ಮೂಲ ಆಧಾರಸ್ತಂಭ ಅಥವಾ ಅಸ್ಥಿಪಂಜರವನ್ನು ವಾಸ್ತವಿಕ ಹಾಗೂ ಅನುಕರಣಾತ್ಮಕ ಚಿತ್ರಗಳು ತೋರಿಸಲು ಅಸಮರ್ಥವಾದಾಗ ಸಂಜ್ಞಾತ್ಮಕ ಅಥವಾ ಸಾಂಕೇತಿಕ (ಸಿಂಬಾಲಿಕ್) ಮತ್ತು ಭಾವಪ್ರಧಾನ ಅಥವಾ ಅಭಿವ್ಯಕ್ತಿ ಪ್ರಧಾನ (ಎಕ್ಸ್‌ಪ್ರೆಷನಿಸ್ಟಿಕ್) ಕೃತಿಗಳು ಯಶಸ್ವಿಯಾಗುತ್ತವೆ. ಕಲೆ ಪ್ರಕೃತಿಯ ಪ್ರತಿಬಿಂಬವಾಗಿಯೇ ಉಳಿಯದೆ ಅದರ ವ್ಯಾಖ್ಯಾನವಾಗುವುದರಲ್ಲಿ ಮೌಲ್ಯವನ್ನು ನಾವು ಕಾಣಬಯಸುವುದಾದರೆ ಮಾನವ ಜೀವನದಲ್ಲಿ ಪ್ರಕೃತಿಗೆ ಇದ್ದಂತೆಯೇ ಕಲೆಗೂ ಸ್ಥಾನವಿರುವುದನ್ನೂ ಒಪ್ಪಬೇಕಾಗುತ್ತದೆ. ಅಷ್ಟೇಅಲ್ಲದೆ, ಅನೇಕ ಸಲ ಪ್ರಕೃತಿಯನ್ನೇ ಮೀರಿಸಿ

ನಮ್ಮ ಸಂಸ್ಕೃತಿ ಅಥವಾ ಬೆಳವಣಿಗೆಯನ್ನು ತೋರಿಸುವ ಮಾಪಕ ಈ ಕಲೆ. ಮಾನವನ ಅಂತರ್ಗತ ಶಕ್ತಿಯ ವೈಫಲ್ಯವೇ ಕಲೆಯಾಗಿ ಕಾಣುತ್ತದೆಂದು ಭಾವಿಸುವುದಾದರೆ ಕಲೆಯ ಅರ್ಥ ನಮಗಾದಂತೆಯೇ. (ಕೆ.ಬಿ.ಆರ್.)

**ಕಲೆ ಮತ್ತು ಸತ್ಯ :** ಕಲೆ ಭಾವನಾಕ್ಷೇತ್ರಕ್ಕೆ ಸೇರಿದ ವಸ್ತು. ಭಾವನೆಗಳ ಅಭಿವ್ಯಕ್ತಿ ಕಲೆಯ ನಾನಾರೂಪಗಳಲ್ಲಿ ಪ್ರಕಟಗೊಳ್ಳುತ್ತದೆ–ಕವನ, ಗಾನ, ನೃತ್ಯ, ಚಿತ್ರ–ಹೀಗೆ. ಎಂದ ಮೇಲೆ ತರ್ಕದ ಕ್ಷೇತ್ರಕ್ಕೆ ಸೇರಿದ ಸತ್ಯ ಎನ್ನುವುದರೊಂದಿಗೆ ಕಲೆಯ ಸಂಬಂಧವೇನು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ತಜ್ಞರಲ್ಲಿ ಈ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ. ಹಲವರು ತರ್ಕಸತ್ಯವನ್ನು ಪ್ರತಿಪಾದಿಸುವಂತೆಯೇ ಕಲೆಯೂ ಸತ್ಯದ ನಿರೂಪಣೆಗೆ ಒಳ್ಳೆಯ ಮಾಧ್ಯಮವೆನ್ನುತ್ತಾರೆ. ಮತ್ತಿತರರು ತರ್ಕದ ಸತ್ಯಕ್ಕೂ ಕಲೆ ನಿರೂಪಿಸುವ ಸತ್ಯಕ್ಕೂ ಸ್ವಭಾವತಃ ವ್ಯತ್ಯಾಸವಿದೆ ಎನ್ನುತ್ತಾರೆ. ಕಲೆ ಸತ್ಯವನ್ನು ನಿರೂಪಿಸಬಹುದು. ಆದರೆ ಆ ಸತ್ಯ ತರ್ಕಾತೀತವಾದದ್ದು ಅಥವಾ ಬುದ್ಧ್ಯಾರೂಢವಾದದ್ದು ಎನ್ನುತ್ತಾರೆ. ಹೀಗೆ ಕಲೆ ಮತ್ತು ಸತ್ಯದ ಸಂಬಂಧದ ವಿವೇಚನೆಯಲ್ಲಿ ಬಹುಮುಖ ಉತ್ತರಗಳು ಸಿಗುತ್ತವೆ.

ಒಂದು ಮಾತ್ರ ಖಚಿತ. ತರ್ಕ ಹುಡುಕುವ ವಿಚಾರಗಳ ಅನ್ಯೋನ್ಯ ಸಾಂಗತ್ಯ (ಕನ್ಸಿಸ್ಟೆನ್ಸಿ), ವಿಚಾರಗಳಿಗೂ ಬಾಹ್ಯವಸ್ತುಗಳಿಗೂ ಇರುವ ಹೊಂದಿಕೆ (ಕರೆಸ್ಪಾಂಡೆನ್ಸ್) ಕಲಾಕ್ಷೇತ್ರದಲ್ಲಿ ಅನ್ವಯವಾಗುವುದಿಲ್ಲ. ಈ ಎರಡನೆಯದನ್ನು ಸಾಧಿಸಲು ಹೊರಟ ಕಲೆ ಅನುಕರಣಾತ್ಮಕ ಮತ್ತು ವಾಸ್ತವಿಕ (ಇಮಿಟೇಟಿವ್, ರಿಯಲಿಸ್ಟಿಕ್) ಎನಿಸಿ ತನ್ನ ಮೌಲಿಕ ನಿಲವನ್ನೇ ಕಳೆದುಕೊಳ್ಳುತ್ತದೆ. ಛಾಯಾಗ್ರಹಣವೇ ಕಲೆಯ ಉದ್ದೇಶವಾದಲ್ಲಿ ಅದನ್ನು ಕ್ಯಾಮರಾ ಮತ್ತು ಟೇಪ್ ರಿಕಾರ್ಡರ್ ಕಲೆಗಿಂತ ಯಶಸ್ವಿಯಾಗಿ ಸಾಧಿಸಬಲ್ಲವು. ಆದರೆ ಕಲೆ ಸಾಧಿಸುವ ಸತ್ಯ ಎಂಥದು? ಚಿತ್ರಕಲೆಗಿಂತ ವಿಶಿಷ್ಟವಾಗಿ ಸಾಹಿತ್ಯ, ನೃತ್ಯ, ಸಂಗೀತಗಳು ಈ ವಿಚಾರದಲ್ಲಿ ಬೆಳಕನ್ನು ನೀಡಲು ಸಮರ್ಥವಾಗಿವೆಯೆನ್ನಬಹುದು. ಪದಗಳು, ಭಂಗಿಗಳು, ನಾದಗಳು ಪ್ರಕೃತಿಯಲ್ಲಿ ಯಥಾರೂಪದಲ್ಲಿ ಇರುವುದಿಲ್ಲ. ನಾವು ಬಳಸುವ ಪದ ಭೌತಿಕವಾಗಿ ಶಬ್ದವಾಗಿದ್ದರೂ ಸ್ವರಯುಕ್ತವಾಗಿದ್ದರೂ ಮಾನವನಲ್ಲಿ ವಿಶೇಷ ರೀತಿಯಿಂದ ಸಂಯೋಜನೆಗೊಳ್ಳುತ್ತದೆ; ಅರ್ಥಗಳಿಸುತ್ತದೆ. ಈ ಸಂಯೋಜನೆ ಮತ್ತು ಅರ್ಥಗಳು ಮಾನವನ ಸೃಷ್ಟಿ. ಈ ಅರ್ಥ ನೇರವಾಗಿರಬಹುದು, ವ್ಯಂಗ್ಯವಾಗಿರಬಹುದು. ಆದರೆ ಮನಸ್ಸಿನ ಮೇಲೆ ಪರಿಣಾಮ ಬೀರುವಲ್ಲಿ ಇದು ವಿಶಿಷ್ಟಶಕ್ತಿಯನ್ನು ಪಡೆದಿರುತ್ತದೆ. ಅರ್ಥ ಬುದ್ಧಿಗ್ರಾಹ್ಯವಾದಂತೆಯೇ ಭಾವನಾಗ್ರಾಹ್ಯವೂ ಆಗುತ್ತದೆ; ತರ್ಕದ ವಾದಸರಣಿ ಮತ್ತು ಸಿದ್ಧಾಂತ ಬುದ್ಧಿಗೆ ಸಂಗತವಾಗಿ ಕಾಣಲ್ಪಟ್ಟು ಆ ಅನುಭವದಲ್ಲೇ ಪರಿಸಮಾಪ್ತಗೊಳ್ಳುತ್ತದೆ; ಕೆಲವೊಮ್ಮೆ ತರ್ಕಾತೀತವಾದ ಆನಂದಾನುಭವದಲ್ಲೂ ನಮ್ಮನ್ನು ಮುಳುಗಿಸಬಹುದು. ಉದಾಹರಣೆಗೆ ಸೊನ್ನೆಯಲ್ಲಿ ಸೊನ್ನೆಯನ್ನು ತೆಗೆದರೆ ಉಳಿದದ್ದು ಸೊನ್ನೆ ಎಂದರೆ ಗಣಿತದಲ್ಲಿ ಸಮಂಜಸವೆನಿಸಿ ಬೌದ್ಧಿಕವಾಗಿ ನಮಗೆ ತೃಪ್ತಿ ದೊರಕುತ್ತದೆ. ಆದರೆ ಸೊನ್ನೆ ಎನ್ನುವ ಪದ ಪೂರ್ಣ, ಪರಿಪೂರ್ಣ ಎಂಬರ್ಥದಲ್ಲಿ ಸ್ಫೋಟಗೊಂಡಲ್ಲಿ (ಈಶಾವಾಸ್ಯ ಉಪನಿಷತ್ತಿನ ಶಾಂತಿಮಂತ್ರದ ಹಾಗೆ) ಯಾವುದೋ ಅಲೌಕಿಕದರ್ಶನ ನಮಗಾದಂತೆ ಅನಿಸಿ ಆನಂದವಾಗುತ್ತದೆ. ಐ.ಎ.ರಿಚರ್ಡ್ಸ್ ಎನ್ನುವ ವಿಮರ್ಶಕ ಭಾಷೆಗೆ ಸಾಂಕೇತಿಕ (ಸಿಂಬಾಲಿಕ್) ಮತ್ತು ಭಾವ ಪ್ರಚೋದಕ (ಇಮೋಟಿವ್) ಕಾರ್ಯಲಕ್ಷಣಗಳಿವೆ ಎನ್ನುತ್ತಾನೆ. ಕಲೆಗೆ ಹೆಚ್ಚಾಗಿ ಸಂಬಂಧಿಸಿದ್ದು ಎರಡನೆಯದು. ಕವಿತೆ ಪದಗಳಿಂದ ಕೂಡಿದ್ದರೂ ನಮ್ಮನ್ನು ಭಾವನೆಯಲ್ಲಿ ಮುಳುಗಿಸುವುದು ಭಾವಮೂಲವಾದ ಅದರ ಭಾಷೆಯಿಂದ. ನಮ್ಮ ಸಮಗ್ರ ವ್ಯಕ್ತಿತ್ವದ ಮೇಲೆ ಅದು ತೀವ್ರ ಪರಿಣಾಮವನ್ನುಂಟುಮಾಡುತ್ತದೆ. ಅನುಭವವೆಂಬ ಬಹು ವಿಶಾಲ ನಕ್ಷೆಯಲ್ಲಿ ಒಂದು ಪದ ಅಥವಾ ವಾಕ್ಯ ಲೆಕ್ಕಕ್ರಮದಿಂದ ನಮ್ಮಿಂದ ಗುಣಿಸಲು ಸಾಧ್ಯವಾಗದ ರೀತಿಯಲ್ಲಿ ವಿಶಿಷ್ಟ ಸತ್ಯವನ್ನು ತೋರಿಸಿತು ಎಂದು ಭಾವಾವಿಷ್ಟರಾಗಿ ಹೇಳುತ್ತೇವೆ. ಹಾಗೆಯೇ ನೃತ್ಯದ ಭಂಗಿಗಳು. ಅವು ಪ್ರಕೃತಿಯಲ್ಲಿ ಯಥಾರೂಪದಲ್ಲಿರದ ವಿನ್ಯಾಸಗಳು. ನಾದಮಯವಾದ ಸಂಗೀತವೂ ಹಾಗೆಯೇ. ಆದರೆ ಚಿತ್ರದ ಒಂದು ವಿಚಾರವಾಗಿ ಈ ಸೂತ್ರವನ್ನು ಎಚ್ಚರಿಕೆಯಿಂದ ಬಳಸಬೇಕಾಗುತ್ತದೆ. ಚಿತ್ರ ಬಹು ಬೇಗ, ಬಹು ಸುಲಭವಾಗಿ ಪ್ರಕೃತಿಯ ಪ್ರತಿಕೃತಿಯಾಗಬಹುದು. ಬಣ್ಣಕ್ಕೆ ಬಣ್ಣ, ಬೆಳಕಿಗೆ ಬೆಳಕು, ಕತ್ತಲೆಗೆ ಕತ್ತಲು ಪ್ರತಿಕೃತಿಯಾಗಬಹುದು. ಎರಡು ಮತ್ತು ಎರಡು ಸೇರಿ ನಾಲ್ಕು ಆಗುವಂತೆಯೇ ಪ್ರಕೃತಿಯನ್ನು ಚಿತ್ರ ಪ್ರತಿಬಿಂಬಿಸಬಹುದು. ಇದು ತಾರ್ಕಿಕವಾದ ಸಾಂಗತ್ಯ. ಕಲೆಯ ಮೌಲ್ಯ ಅಂಥ ಕೃತಿಗಳಲ್ಲಿರುವುದಿಲ್ಲ. ಸಾಹಿತ್ಯದಲ್ಲಿ ವಾಸ್ತವಿಕವಿವರಣೆ ನಮಗೆ ಹಿತವೆನಿಸದ ಹಾಗೆಯೇ ಚಿತ್ರ ವಾಸ್ತವೀಕರಣದಿಂದ ತನ್ನ ಬಣ್ಣವನ್ನು ಕಳೆದುಕೊಳ್ಳುತ್ತದೆ. ಕಲಾವಿದನಾದವ ಚಿತ್ರದ ಚೌಕಟ್ಟಿನಲ್ಲಿ ಸಾಧಿಸುವುದು 2+2=4 ಅಲ್ಲ. ಆತ ತನ್ನ ವಸ್ತುವಿನ್ಯಾಸದಲ್ಲಿ ಅನೇಕ ಕಡೆ ಕತ್ತರಿಯನ್ನು ಉಪಯೋಗಿಸುತ್ತಾನೆ. ಕಲಾರಚನೆ (ಕಾಂಪೊಸಿಷನ್), ರೂಪ (ಫಾರಂ), ಆಲೇಖ್ಯ (ಡಿಸೈನ್), ಸಮತೂಕ (ಬ್ಯಾಲೆನ್ಸ್)– ಇವು ವಾಸ್ತವಿಕದೃಷ್ಟಿಯಿಂದ ಭಿನ್ನವಾಗಿದ್ದರೆ ಕುತೂಹಲವನ್ನಷ್ಟೇ ಹುಟ್ಟಿಸದೆ ನಮ್ಮನ್ನು ನೂತನ ಅನುಭವದಲ್ಲೂ ತೊಡಗಿಸಬಹುದು. ಉದಾಹರಣೆಗೆ ಸಲ್ವಿಡಾರ್ ಡಾಲಿ ರಚಿಸಿರುವ ಪರ್ಸಿಸ್ಟೆನ್ಸ್ ಆಫ್ ಮೆಮೊರಿ ಎನ್ನುವ ಚಿತ್ರ. ಬರೀ ಕಣ್ಣಿಗೆ ಹಿತವಾಗುವುದೊಂದೇ ಅಲ್ಲದೆ ಸಾಂಕೇತಿಕ ಅರ್ಥವನ್ನು ಹೊಂದಿದ್ದು ನಮ್ಮ ಭಾವನೆ ಅಥವಾ ಅಂತರಂಗವನ್ನು ಇದು ಮಿಡಿಯುತ್ತದೆ. ಚೆನ್ನಾಗಿ ಪರಿಭಾವಿಸುವವರಿಗೆ ಇದರ ಅವಲೋಕನದಿಂದ ಕರುಳು ಕಿವುಚಿದಂತಾದೀತು, ಕತ್ತು ತುಂಬಿ ಬಂದೀತು. ಇನ್ನೂ ತೀವ್ರ ಸಂವೇದನೆಯುಳ್ಳವರಲ್ಲಿ ಇದು ಸುಪ್ತ ಚೇತನದೊಂದಿಗೆ ಸಂಪರ್ಕ ಬೆಳೆಸಿ ಆನಂದಾನುಭೂತಿಯನ್ನುಂಟು ಮಾಡಬಹುದು.

ಅಭಿವ್ಯಕ್ತಿ ಪಂಥ (ಎಕ್ಸ್‌ಪ್ರೆಷನಿಸಂ), ಘನಾಕೃತಿ ವಿಧಾನ (ಕ್ಯೂಬಿಸಂ), ಸ್ವೇಚ್ಛಾ ಸಂಕೇತವಾದ (ಫ್ಯೂಚರಿಸಂ), ಅತಿವಾಸ್ತವಿಕ ವಿಧಾನ (ಸರ‍್ರಿಯಲಿಸಂ) ಮುಂತಾದ ಆಧುನಿಕ ಕಲಾವಿಧಾನಗಳಲ್ಲಿ ಬಣ್ಣ, ರೇಖೆ, ಸಂಯೋಜನೆಗಳು ಹೊಸ ಹೊಸರೀತಿಯಲ್ಲಿ ಬೆಳೆಯುತ್ತ ಬಂದಿರುವಾಗ ಅನೇಕ ಕೃತಿಗಳು ಪ್ರಥಮ ಬಾರಿಗೆ ನಮಗೆ ಯಾವ ಅರ್ಥವನ್ನೂ ನೀಡದೆ ಇರುವಂತೆ ಕಾಣಬಹುದು. ಅನೇಕವು ಕೇವಲ ವಿಕಾರಗಳೆಂದೇ ಅನಿಸಬಹುದು. ಹೀಗಿರುವಲ್ಲಿ ಕಲೆಯಲ್ಲಿ ನಾವು ನಿರೀಕ್ಷಿಸುವ ಸತ್ಯ ಎಂಥದು? ಕಣ್ಣಿಗೆ ಹಿತ ಎನಿಸುವುದೇ? ಲಾಲಸೆಯನ್ನುಂಟುಮಾಡುವುದೇ? ಮನಸ್ಸನ್ನು ವಿಕ್ಷುಬ್ಧಗೊಳಿಸುವುದೇ? ಇದೆಲ್ಲವೂ ಅಲ್ಲದೆ ಹೋಗಬಹುದು. ಸಾಮಾನ್ಯವಾಗಿ ಸಾರ್ವತ್ರಿಕವಾಗಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂಥದೇ? ಹೀಗಾದಲ್ಲಿ ಸಾರ್ವಜನಿಕರು ಮತ (ಓಟು) ನೀಡಿ ನಿರ್ಧರಿಸುವಂಥ ಸಾರ್ವತ್ರಿಕ ಅರ್ಥವನ್ನು ಹೊಂದಿ ಗೆಲ್ಲುವ ಚಿತ್ರ ಸತ್ಯವನ್ನು ಸಾರುವಂಥದಲ್ಲ. ಕಲೆಯ ಆಸ್ವಾದನೆ ಸ್ವಾಭಾವಿಕವಾದರೂ ನಿಜವಾದ ಅಭಿರುಚಿ ಹುಟ್ಟಬೇಕಾದರೆ ಶಿಕ್ಷಣದ ಅಗತ್ಯ ಇದ್ದೇ ಇರುತ್ತದೆ. ಮೌಲ್ಯ ನಿರ್ಧಾರಕ್ಕೂ ಶಿಕ್ಷಣ ಬೇಕೇ ಬೇಕು. ಈ ದೃಷ್ಟಿಯಿಂದ ಸುಲಭ ಕಲೆ ಮತ್ತು ಕಷ್ಟಕರ ಕಲೆ ಎನ್ನುವ ಎರಡು ರೀತಿಯ ಕಲೆಗಳೂ ಇವೆ. ಮೊದಲನೆಯದು ಸ್ವಾಭಾವಿಕವಾದ ಪ್ರತಿಕ್ರಿಯೆಯನ್ನು ಗಳಿಸುವಂತೆಯೇ ಎರಡನೆಯದೂ ಶಿಕ್ಷಣ ಪಡೆದಾತನ, ಅಭಿರುಚಿ ಇರುವವನ, ಹೃದಯ ಸಂಸ್ಕಾರವಿರುವವನ ಸ್ವಾಭಾವಿಕ ಪ್ರತಿಕ್ರಿಯೆಯನ್ನು ಗಳಿಸುತ್ತದೆ. ಎರಡರಲ್ಲೂ ಪ್ರತಿಕ್ರಿಯೆ ಅಥವಾ ಅನುಭವದ ಮೂಲ ವ್ಯಕ್ತಿಯ ಸಮಗ್ರ ಜೀವನದ ಸಂಸ್ಕಾರವನ್ನು ಹೊಂದಿ ಕೊಂಡಿರುತ್ತದೆ. ಕಲೆಯಲ್ಲಿ ನಿತ್ಯಸತ್ಯವನ್ನು ಕಾಣುವ ಹಂಬಲವುಳ್ಳವರೂ ಇರುತ್ತಾರೆ. ಆದರೆ ನಿರೀಕ್ಷಿಸಬೇಕಾದ ಈ ಸತ್ಯ ಯಾವುದು? ಎಲ್ಲ ಪ್ರೇಕ್ಷಕರ ದೃಷ್ಟಿಯಿಂದಲೂ ಸಮಾನ ಅಥವಾ ಸಾಮಾನ್ಯವಾದುದೇ? ರೂಪದಲ್ಲೂ ರುಚಿಯಲ್ಲೂ ವೈವಿಧ್ಯವಿಲ್ಲದಿರುವುದೇ? ಜೀವನದ ಅನುಭವ ಬದಲಾಗುತ್ತಿದ್ದರೂ ಅದನ್ನು ಲೆಕ್ಕಿಸದೆ ಜಡ್ಡುಹಿಡಿದ ಯಾವುದೋ ಒಂದೇ ಮುಖ ಒಂದೇ ರಚನೆ ಒಂದೇ ಗೀತೆ ಹಾಡುತ್ತಿರುವುದೇ? ಇಂಥದನ್ನೆಲ್ಲ ಪಡಿಯಚ್ಚು ಮಾದರಿಯದು (ಸ್ಟೀರಿಯೊಟೈಪ್) ಎಂದು ಕರೆಯಬಹುದು. ಇಂಥ ಕಲೆಯಲ್ಲಿ ಯಾವ ನಿತ್ಯ ಚೈತನ್ಯವೂ ಇರುವುದಿಲ್ಲ. ಈ ನಿತ್ಯತೆಯನ್ನು ಕಾಣಬೇಕಾದರೆ ಕಲಾ–ಚೈತನ್ಯ, ಅನುಭವ ಹೆಚ್ಚಿದಂತೆಲ್ಲ ಚಿರನೂತನವಾಗಿ ವಿವಿಧ ರೂಪಗಳಲ್ಲಿ, ರಚನೆಯಲ್ಲಿ, ತನಗೆ ತಾನೇ ರೂಪಿಸಿಕೊಳ್ಳುವುದರಲ್ಲೂ ನೂತನ ಪ್ರಭಾವಗಳನ್ನು ಬೀರುವುದರಲ್ಲೂ ಕಾಣಬೇಕಾಗುತ್ತದೆ. ಭೌತಿಕ ಅಥವಾ ದೈಹಿಕವಾಗಿ ಪ್ರಾಣ ಚೈತನ್ಯ ಹೇಗೆ ಜೀವನವನ್ನು ಮುಂದುವರಿಸುತ್ತದೊ ಹಾಗೆಯೇ ಕಲೆಯಲ್ಲಿನ ಈ ಸೃಷ್ಟಿ ಚೈತನ್ಯ ಜೀವನ ಸಂಸ್ಕೃತಿಯನ್ನೂ ಮುಂದುವರಿಸುತ್ತದೆ. ಅಂಥದರಲ್ಲಿ ನಾವು ನಿತ್ಯ–ಸತ್ಯವನ್ನು ಅಪೇಕ್ಷಿಸಬೇಕು. (ಕೆ.ಬಿ.ಆರ್.)

**ಕಲೆ ಮತ್ತು ಸಮಾಜ :** ಮಾನವ ಸಮಾಜಜೀವಿ. ಅವನ ಹುಟ್ಟಿಗೆ ತಂದೆತಾಯಿ ಕಾರಣರು. ಅವನು ಬೆಳೆಯುವುದು ಒಂದು ಬಳಗದ ಮಧ್ಯೆ. ಆತ ಬಾಳುವ ಸಾಮಾಜಿಕ ಸನ್ನಿವೇಶ ಒಂದು ಕುಟುಂಬದಂತೆ ಸಣ್ಣ ಸಂಸ್ಥೆಯಾಗಿರಬಹುದು. ಒಂದು ರಾಷ್ಟ್ರದಂತೆ ದೊಡ್ಡ ಸಂಸ್ಥೆಯಾಗಿರಬಹುದು. ಸಣ್ಣದಾಗಲಿ ದೊಡ್ಡದಾಗಲಿ ಆ ಸಾಮಾಜಿಕ ಸನ್ನಿವೇಶವನ್ನು ಬಿಟ್ಟು ಅದರ ಹೊರಗೆ ಬಾಳಲು ಪ್ರಯತ್ನಿಸಿದರೆ ಅವನ ಜೀವನ ಕುಂಠಿತವಾಗುತ್ತದೆ. ಹುಟ್ಟಿದ ಒಂದು ಮಗುವನ್ನು ಅಡವಿಯಲ್ಲಿ ಬಿಟ್ಟರೆ ಅದು ಮೃಗಗಳ ಮಧ್ಯೆ ಬೆಳೆಯುವುದರಿಂದ ಅದರಲ್ಲಿ ಮಾನವ ವ್ಯಕ್ತಿತ್ವ ಬೆಳೆಯುವುದಿಲ್ಲ; ಮಾನವನ ವ್ಯಕ್ತಿತ್ವಕ್ಕೆ ವಿಶಿಷ್ಟವಾದ ಸಂಸ್ಕೃತಿ ಬೆಳೆಯುವುದು ತಂದೆ ತಾಯಿ ಸೋದರರು ಸಂಗಡಿಗರು ಮತ್ತು ಉಪಾಧ್ಯಾಯರ ಸಹಕಾರದಿಂದ; ಮತ್ತು ಭಾವನೆಗಳು ಬೆಳೆಯುವುದು ಒಂದು ದೇವಾಲಯ, ಒಂದು ಚರ್ಚ್ ಅಥವಾ ಮಸೀದಿಯ ಮೂಲಕ; ಹಕ್ಕು ಬಾಧ್ಯತೆಗಳ ತಿಳಿವು ಬೆಳೆದಿರುವುದು ಒಂದು ರಾಷ್ಟ್ರ ವ್ಯವಸ್ಥೆಯ ಮೂಲಕ.

**ಧರ್ಮ, ವಿಜ್ಞಾನ, ಕಲೆ :** ಮಾನವನ ಸಂಸ್ಕೃತಿಯಲ್ಲಿ ಮುಖ್ಯವಾದವು ಮೂರು : ಧರ್ಮ, ವಿಜ್ಞಾನ ಮತ್ತು ಕಲೆ. ಇವು ಯಾವಾಗ ಮಾನವನಲ್ಲಿ ಹುಟ್ಟಿದುವೆಂದು ಹೇಳಲು ಸಾಧ್ಯವಿಲ್ಲ. ಪ್ರ.ಶ.ಪೂ. 20000ಕ್ಕೆ ಆಗಲೇ ಅವನು ಕೆತ್ತಿದ ಅಥವಾ ಕೊರೆದ ಚಿತ್ರಗಳು ಗುಹೆಗಳಲ್ಲಿ ದೊರೆಯುತ್ತವೆ. ಅದಕ್ಕಿಂತಲೂ ಹಿಂದಿನ ಕಾಲದಲ್ಲಿ ಅವನು ಉಪಯೋಗಿಸಿದ ಕಲ್ಲಿನ ಆಯುಧಗಳ ಮತ್ತು ಮಣ್ಣಿನ ಮಡಕೆಗಳ ಅವಶೇಷಗಳು ದೊರೆತಿವೆ. ಮೊಟ್ಟಮೊದಲಿಗೆ ಬೆಂಕಿಯನ್ನು ಮಾಡುವ ರಹಸ್ಯವನ್ನು ಕಲಿತ ಮಾನವ ಒಬ್ಬ ದೊಡ್ಡ ವಿಜ್ಞಾನಿ. ತನಗೆ ಮಂಗಳವನ್ನುಂಟುಮಾಡುವ ಅಥವಾ ಕೇಡುಕನ್ನುಂಟುಮಾಡುವ ಶಕ್ತಿಗಳನ್ನು ಭಾವಿಸಿ ಅವುಗಳನ್ನು ಒಲಿಸಿಕೊಳ್ಳಲು ಸಣ್ಣಪುಟ್ಟ ಸಂಸ್ಕಾರಗಳನ್ನು ರಚಿಸಿದವನಲ್ಲಿ ಮತಭಾವನೆ

ಇದೆ. ಕಲೆ, ವಿಜ್ಞಾನ, ಮತ ಇವು ಈಚಿನ ಕಾಲದಲ್ಲಿರುವಂತೆ ಹಿಂದಿನ ಕಾಲದಲ್ಲಿ ಬೇರೆ ಬೇರೆಯಾಗಿರದೆ ಒಂದರೊಡನೆ ಒಂದು ಹೆಣೆದುಕೊಂಡಿದ್ದವು. ಬೆಂಕಿಯನ್ನು ಮಾಡುವುದು ಒಂದು ಅಪ್ಪಟ ವೈಜ್ಞಾನಿಕ ಪ್ರಯೋಗವಾಗಿರಲಿಲ್ಲ. ಅದು ಧರ್ಮಭಾವನೆಯೊಡನೆ ಬೆರೆತಿತ್ತು. ಕೆಲವು ಕಾಡುಜನ ಬೆಂಕಿಯನ್ನು ಮಾಡುವ ಸಲಕರಣೆಗೆ ಒಂದು ಸುಂದರ ರೂಪವನ್ನು ಕೊಟ್ಟಿರುತ್ತಾರೆ. ಪ್ರಾಕ್ತನರ ಹಾಡುಗಳು, ಕುಣಿತ ಮುಂತಾದವು ಅವರ ಮತ ಸಂಸ್ಕಾರಗಳ ಅಂಗಗಳಾಗಿದ್ದುವು. ಆ ಜನರಲ್ಲಿ ಲಲಿತಕಲೆ ಮತ್ತು ಉಪಯುಕ್ತ ಕಲೆ ಎಂಬ ಭೇದ ಕಾಣಿಸುವುದಿಲ್ಲ. ಕಲೆಗಾಗಿ ಕಲೆ ಎಂಬ ಭಾವನೆ ಮೇಲ್ಮಟ್ಟದ ಸಂಸ್ಕೃತಿಯನ್ನು ಮುಟ್ಟಿದ ಪ್ರಾಚೀನ ಗ್ರೀಕರಲ್ಲೂ ಭಾರತೀಯರಲ್ಲೂ ಇದ್ದಂತೆ ತೋರುವುದಿಲ್ಲ. ಗ್ರೀಕರಲ್ಲಿ ನಾಟಕ ಹುಟ್ಟಿ ಬೆಳೆದದ್ದು ಧರ್ಮಸಂಸ್ಕಾರಗಳ ಸಂದರ್ಭಗಳಲ್ಲಿ. ಅವರ ವಾಸ್ತುಶಿಲ್ಪ ಮತ್ತು ವಿಗ್ರಹಗಳ ಶಿಲ್ಪ ಅವರ ಮತಭಾವನೆಗಳನ್ನು ಪ್ರತಿಬಿಂಬಿಸುತ್ತವೆ. ಪ್ರಾಚೀನ ಭಾರತದಲ್ಲೂ ಗಾನ, ಶಿಲ್ಪ, ನೃತ್ಯ ಮುಂತಾದವು ಅದರ ನಿವಾಸಿಗಳ ಮತಭಾವನೆಗಳಿಗೆ ಪೋಷಕವಾಗಿ ಹುಟ್ಟಿ ಬೆಳೆದುವು. ಈ ಜನಾಂಗಗಳ ಕಾವ್ಯ ನಾಟಕಗಳ ಉದ್ದೇಶ ಇತ್ತೀಚಿನವರೆಗೆ ಮತಭಾವನೆಯನ್ನೂ ನೀತಿ ಧರ್ಮಗಳನ್ನೂ ಪುಷ್ಟಿಗೊಳಿಸುವುದಾಗಿತ್ತು. ಯುರೋಪಿನ ಇತಿಹಾಸದ ಮಧ್ಯಯುಗದಲ್ಲಿ ಕಲೆ ಧರ್ಮದ ಅಧೀನಕ್ಕೆ ಒಳಪಟ್ಟಿತ್ತು. ಕಲೆಗಾಗಿ ಕಲೆ ಎಂಬುದು ಯುರೋಪಿನಲ್ಲಿ ತುಂಬ ಈಚೆಗೆ ಹುಟ್ಟಿದ ಭಾವನೆ. ಕಲೆಗಾಗಿ ಕಲೆ ಎಂಬ ವಾದಕ್ಕೆ ಸೋವಿಯತ್ ಸಮಾಜವಾದಿ ಗಣರಾಜ್ಯದಲ್ಲಿ ಪುರಸ್ಕಾರವಿಲ್ಲ. ಸೋವಿಯತ್ ದೇಶದಲ್ಲಿ ಕಲೆ ಧರ್ಮದ ದಾಸ್ಯದಿಂದ ಬಿಡುಗಡೆ ಹೊಂದಿತಾದರೂ ರಾಜಕೀಯದಿಂದ ಬಿಡುಗಡೆ ಹೊಂದಿಲ್ಲವೆಂದು ಒಂದು ವಾದವಿದೆ. ಸಮಾಜದ ಉತ್ಕರ್ಷಕ್ಕೆ ಸಾಹಿತ್ಯ ನೆರವಾಗಬೇಕೆಂಬುದು ಅಲ್ಲಿಯ ಭಾವನೆ.

ಸಮಾಜಕ್ಕೂ ಕಲೆ, ವಿಜ್ಞಾನ ಮತ್ತು ಧರ್ಮಗಳಿಗೂ ಇರುವ ಸಂಬಂಧದ ವಿಚಾರದಲ್ಲೂ ಭಿನ್ನಾಭಿಪ್ರಾಯಗಳಿವೆ. ಈ ಅಭಿಪ್ರಾಯಗಳಿಗೆ ಸಂವಾದಿಯಾಗಿ ಸಮಾಜಶಾಸ್ತ್ರದಲ್ಲೂ ಇವುಗಳ ವಿಚಾರವಾಗಿ ಅನೇಕ ಸಮಸ್ಯೆಗಳು ಹುಟ್ಟಿವೆ. ಇಂದಿನ ಕಲೆಗಾರರೂ ವಿಜ್ಞಾನಿಗಳೂ ಕಲೆ ಮತ್ತು ವಿಜ್ಞಾನಗಳ ವೈಶಿಷ್ಟ್ಯವನ್ನೂ ಸ್ವಾತಂತ್ರ್ಯವನ್ನೂ ಎತ್ತಿಹಿಡಿಯುವ ಉದ್ದೇಶದಿಂದ ಕಲೆಗಾಗಿ ಕಲೆ, ವಿಜ್ಞಾನಕ್ಕಾಗಿ ವಿಜ್ಞಾನ ಎಂಬ ತತ್ತ್ವವನ್ನು ಪ್ರತಿಪಾದಿಸುತ್ತಿದ್ದಾರೆ. ಕಲೆಗೆ ಮತ್ತು ವಿಜ್ಞಾನಕ್ಕೆ ವಿಶಿಷ್ಟವಾದ ಸ್ವಭಾವಗಳಿವೆ. ಒಂದೊಂದೂ ತಮ್ಮವೇ ಆದ ವಿಶೇಷ ದೃಷ್ಟಿಗಳನ್ನೂ ತದನುಗುಣವಾದ ವಿಧಾನಗಳನ್ನೂ ಪಡೆದಿರುತ್ತವಾದ್ದರಿಂದ ಆ ವೈಶಿಷ್ಟ್ಯವನ್ನು ಬೆಳೆಸಲು ಕಲೆಗಾರರಿಗೆ ಮತ್ತು ವಿಜ್ಞಾನಿಗಳಿಗೆ ಸ್ವಾತಂತ್ರ್ಯವಿರಬೇಕೆಂದು ಇವರ ವಾದ.

ಮಾನವನ ಹೃದಯದ ಭಾವನೆಗಳನ್ನು ಕಾವ್ಯ, ಗೀತ, ನೃತ್ಯ, ಶಿಲ್ಪ ಮುಂತಾದ ಮಾಧ್ಯಮಗಳ ಮೂಲಕ ಸಾಕ್ಷಾತ್ಕಾರ ಮಾಡಿಕೊಡುವುದು ಕಲೆಯ ಉದ್ದೇಶ. ಪ್ರಕೃತಿಯ ವಿವಿಧ ವಸ್ತುಗಳನ್ನು ಸ್ಪಷ್ಟವಾಗಿ ಪ್ರಾಮಾಣಿಕವಾಗಿ ವಿವರಿಸಿ ಅವುಗಳ ನಿಕಟ ಸಂಬಂಧಗಳನ್ನು ಸೂತ್ರಗಳ ರೂಪದಲ್ಲಿ ನಿರೂಪಿಸುವುದು ವಿಜ್ಞಾನದ ವಿಶಿಷ್ಟ ಉದ್ದೇಶ. ನಮ್ಮ ಪವಿತ್ರ ಭಾವನೆಗಳ ಸ್ವರೂಪವನ್ನೂ ಧರ್ಮಾಧರ್ಮಗಳ ಸ್ವರೂಪವನ್ನೂ ತಿಳಿಸುವುದು ಮತದ ಉದ್ದೇಶ. ಕಲೆ, ವಿಜ್ಞಾನ ಮತ್ತು ಮತಗಳಲ್ಲಿ ಪ್ರತಿಯೊಂದಕ್ಕೂ ತನ್ನ ವಿಶಿಷ್ಟ ಉದ್ದೇಶವನ್ನು ಈಡೇರಿಸಲು ಸ್ವಾತಂತ್ರ್ಯವಿರಬೇಕು ಎಂಬುದು ನ್ಯಾಯಸಮ್ಮತವಾದದ್ದು. ಒಂದು ಇನ್ನೊಂದು ಮಾಡುವ ಕೆಲಸವನ್ನು ನಿರ್ವಹಿಸಲಾರದು. ಪ್ರಕೃತಿಯ ಕಾರ್ಯಕಾರಣ ಸಂಬಂಧವನ್ನು ಕಲೆ ತಿಳಿಸಲಾರದು. ಮಾನವ ಹೃದಯದ ಭಾವಗಳನ್ನು ವಿಜ್ಞಾನ ಸಾಕ್ಷಾತ್ಕಾರ ಮಾಡಿಕೊಡಲಾರದು. ಕಲೆ ಮತ್ತು ವಿಜ್ಞಾನಗಳು ಪೂಜ್ಯಭಾವನೆಗಳ, ಧರ್ಮಾಧರ್ಮಗಳ, ಸ್ವರೂಪವನ್ನು ಮತದಂತೆ ತಿಳಿಸಲಾರವು. ಹಾಗೆಯೇ ಮತವೂ ವಿಜ್ಞಾನ ತಿಳಿಸುವಂತೆ ಕಾರ್ಯ ಕಾರಣಸಂಬಂಧವನ್ನು ಪ್ರಾಮಾಣಿಕವಾಗಿ ತಿಳಿಸಲಾರದೆ. ಹಾಗೆ ಒಂದು ಇನ್ನೊಂದರ ಉದ್ದೇಶವನ್ನು ಈಡೇರಿಸಲು ಪ್ರಯತ್ನಪಟ್ಟಾಗ ಅದು ತನ್ನ ಉದ್ದೇಶವನ್ನೂ ಈಡೇರಿಸದೆ ಇನ್ನೊಂದರ ಉದ್ದೇಶಕ್ಕೂ ಭಂಗ ತರಬಹುದು.

ಕಲೆ, ವಿಜ್ಞಾನ ಮತ್ತು ಮತ–ಈ ಮೂರೂ ಮಾನವನ ಜೀವನಕ್ಕೆ ಅಗತ್ಯವಾದವು. ಆದ್ದರಿಂದ ಮಾನವ ತುಂಬ ಹಿಂದಿನ ಕಾಲದಿಂದ ಇವುಗಳಲ್ಲಿ ಆಸಕ್ತಿ ಹೊಂದಿರುವುದು ಸ್ವಾಭಾವಿಕ. ಇವು ಮಾನವ ಜೀವನದಲ್ಲಿ ಹಾಸುಹೊಕ್ಕಾಗಿವೆ. ಸಂಗೀತ, ಸಾಹಿತ್ಯ, ಚಿತ್ರ ಮತ್ತು ಶಿಲ್ಪಗಳಲ್ಲಿ ಜನರಿಗೆ ಆಸಕ್ತಿ ಇರುವಂತೆಯೇ ಭೌತ ವಿಜ್ಞಾನ, ಜೀವವಿಜ್ಞಾನಗಳಲ್ಲೂ ಮತಧರ್ಮಗಳಲ್ಲೂ ಆಸಕ್ತಿ ಇದೆ. ತುಂಬ ಹಿಂದಿನ ಕಾಲದಿಂದ ಮಾನವ ಈ ಆಸಕ್ತಿಗಳನ್ನು ಜೊತೆಜೊತೆಯಲ್ಲಿ ಈಡೇರಿಸಲು ಪ್ರಯತ್ನಪಟ್ಟಿರುತ್ತಾನೆ. ಆದರೆ ಕಾಲಕ್ರಮದಲ್ಲಿ ಒಂದೊಂದರ ವೈಶಿಷ್ಟ್ಯವನ್ನೂ ಬೆಳೆಸಲು ಒಂದೊಂದನ್ನು ಪ್ರತ್ಯೇಕಿಸಿ ಅದನ್ನೇ ತನ್ನ ಮುಖ್ಯವೃತ್ತಿಯಾಗಿ ಮಾಡಿಕೊಂಡು ಒಂದೊಂದಕ್ಕೂ ಹೆಚ್ಚು ಕಾಲವನ್ನೂ ಶ್ರಮವನ್ನೂ ವಿನಿಯೋಗಿಸಲಾರಂಭಿಸಿದ. ಕಲೆಗಾಗಿಯೇ ವಿಜ್ಞಾನಕ್ಕಾಗಿಯೇ ಅಥವಾ ಮತಕ್ಕಾಗಿಯೇ ಅವರು ಹೆಚ್ಚು ಸಮಯವನ್ನೂ ವ್ಯವಸಾಯವನ್ನೂ ಮುಡುಪಾಗಿ ಇಟ್ಟುಕೊಂಡರೂ ಪ್ರತಿಯೊಬ್ಬನೂ ಅನ್ನ, ಬಟ್ಟೆ, ವಸತಿ ಮುಂತಾದ ಜೀವನದ ಅಗತ್ಯಗಳಿಗೆ ಗಮನ ಕೊಡಲೇಬೇಕು. ಇತರರೊಡನೆ ವ್ಯವಹರಿಸುವಾಗ ನೀತಿಧರ್ಮಗಳನ್ನು ಪರಿಪಾಲಿಸಬೇಕು. ಪ್ರಕೃತಿಯ ನಿಯಮದ ವಿಚಾರವಾಗಿ ಸ್ವಲ್ಪ ಮಟ್ಟಿಗಾದರೂ ಜ್ಞಾನಾರ್ಜನೆ ಮಾಡಬೇಕು. ಆದ್ದರಿಂದ ಕಲೆಗಾಗಿಯೇ, ವಿಜ್ಞಾನಕ್ಕಾಗಿಯೇ, ಮತಕ್ಕಾಗಿಯೇ ಸಂಪೂರ್ಣವಾಗಿ ಬಾಳುತ್ತೇನೆಂಬುದು ಅಸಾಧ್ಯ. ಕಲೆಗಾರನೂ ವಿಜ್ಞಾನಿಯೂ ಪಾದ್ರಿಯೂ ಪುರೋಹಿತನೂ ತಾವು ಅವಲಂಬಿಸಿದ ಮುಖ್ಯವೃತ್ತಿಯ ಮೂಲಕ ಜೀವನ ನಡೆಸಲು, ಅಗತ್ಯವಾದಷ್ಟನ್ನಾದರೂ ಪಡೆಯಲು ಪ್ರಯತ್ನಿಸಲೇ ಬೇಕು. ಕಾವ್ಯಾಭ್ಯಾಸ, ವಿಜ್ಞಾನ ಸಂಶೋಧನೆ, ಮತಬೋಧೆ ಇವುಗಳ ಮುಖ್ಯ ಉದ್ದೇಶ ಹಣಸಂಪಾದನೆ ಮತ್ತು ಕೀರ್ತಿಸಂಪಾದನೆಯಾಗದಿದ್ದರೂ ಇವು ಉದ್ದೇಶಗಳಾಗಿ ಇದ್ದೇ ಇರುತ್ತವೆ. ಕಲೆಗಾಗಿ ಕಲೆ, ವಿಜ್ಞಾನಕ್ಕಾಗಿ ವಿಜ್ಞಾನ ಎಂದು ವಾದಿಸುವವರು ಯಾರೂ ತಮಗೆ ಲೇಶಮಾತ್ರವೂ ಈ ಉದ್ದೇಶಗಳಿಲ್ಲವೆಂದು ಹೇಳಲಾರರು. ಕಲೆಗಾಗಿ ಕಲೆ, ವಿಜ್ಞಾನಕ್ಕಾಗಿ ವಿಜ್ಞಾನ ಎಂದು ವಾದಿಸುವವರು ಕಲೆಯ ಅಂಶಕ್ಕೆ, ವಿಜ್ಞಾನದ ಅಂಶಕ್ಕೆ ಹೆಚ್ಚು ಬೆಲೆಕೊಡುತ್ತಾರೆ. ಕೀರ್ತಿ, ಹಣಸಂಪಾದನೆ ಮುಂತಾದವನ್ನು ಗೌಣವಾಗಿ ಎಣಿಸುತ್ತಾರೆ. ಹೀಗೆ ಇತರ ಮೌಲ್ಯಗಳನ್ನು ಗೌಣವಾಗಿ ಎಣಿಸಿ ಕಲೆಯ ಮೌಲ್ಯವೇ ಪ್ರಧಾನವೆಂದೆನಿಸುವುದು ಒಪ್ಪಬೇಕಾದ್ದೇ. ಆದರೆ ಗೌಣವಾಗಿಯಾದರೂ ಇಲ್ಲವೇ ಇಲ್ಲವೆಂದು ವಾದಿಸುವುದು ಹಠವಾಗುತ್ತದೆ.

ಕಲೆಯನ್ನು ಆರಾಧಿಸುವುದು ತಮ್ಮ ಸ್ವಂತ ಸಂತೋಷಕ್ಕಾಗಿ, ಇತರರು ಅದನ್ನು ಮೆಚ್ಚಲಿ ಬಿಡಲಿ ಅದನ್ನು ತಾವು ಲಕ್ಷಿಸುವುದಿಲ್ಲ ಎಂದು ಕೆಲವು ಕಲೆಗಾರರು ಹೇಳುವುದುಂಟು. ಇಂಥ ಕಲೆಗಾರರನ್ನು ಸ್ವಾರ್ಥಪರ (ಎಗೋಯಿಸ್ಟ್) ಕಲೆಗಾರರೆಂದು ಕರೆಯುವುದು ವಾಡಿಕೆ. ಇವರು ಕೆಲವು ವೇಳೆ ಅರಸಿಕರನ್ನು ಕುರಿತು ಅಹಂಕಾರದಿಂದ ಕಟುವಾಗಿ ಮಾತನಾಡುವುದುಂಟು. ನಿಜವಾಗಿಯೂ ಇವರ ಬಿರಿನುಡಿಗೆ ಕಾರಣವಾದ್ದು ತಮ್ಮ ಕಲೆಯನ್ನು ಜನ ಮೆಚ್ಚಲಿಲ್ಲವೆಂಬ ಅಂತರಂಗದ ಸಂಕಟ. ಅವರು ಒಂದು ಪದ್ಯವನ್ನೋ ಚಿತ್ರವನ್ನೋ ಹಾಡನ್ನೋ ರಚಿಸುವುದು ಜನರ ಮೆಚ್ಚಿಗೆಗಾಗಿ. ಅವರ ಅಂತರಂಗದ ಉದ್ದೇಶ ತಮ್ಮ ಕೃತಿ ಜನರಿಗೆ ಮೆಚ್ಚಿಗೆಯಾಗಲೆಂದೇ, ತಮ್ಮ ಸ್ವಂತ ಸಂತೋಷಕ್ಕಾಗಿ ಮಾತ್ರ ಅದನ್ನು ರಚಿಸಿದುದಾದರೆ ಅದನ್ನು ಪ್ರಕಟಿಸದೆ ತಮ್ಮ ಅಂತರಂಗದಲ್ಲೆ ಬಚ್ಚಿಟ್ಟುಕೊಳ್ಳಬೇಕಾಗಿತ್ತು. ಹಾಗೆ ಬಚ್ಚಿಟ್ಟುಕೊಳ್ಳದೆ ಕಲೆಗಾರರು ಅವನ್ನು ಪ್ರಕಟಿಸುತ್ತಾರೆ. ಹಾಗೆ ಪ್ರಕಟಿಸುವುದರ ಒಳ ಉದ್ದೇಶ, ಕಲೆ ಸಾಮಾಜಿಕ ಮೆಚ್ಚಿಕೆ ಪಡೆಯಲೆಂಬುದೇ, ಈ ಒಳ ಉದ್ದೇಶಕ್ಕೂ ಅವರು ಆಡುವ ಮಾತಿಗೂ ಅಸಾಂಗತ್ಯವಿದೆಯೆಂಬುದನ್ನು ಅವರು ಮನಗಂಡಿರುವುದಿಲ್ಲ. ತನಗಾಗಿಯೇ ತನ್ನ ಕಲೆಯೆಂಬಾತ ಕೇವಲ ಹೃದಯ ಕವಿಯಾಗಿರಬೇಕಾಗಿತ್ತು. ತನ್ನ ಮನಸ್ಸಿನಲ್ಲೇ ತನ್ನ ಭಾವವನ್ನು ಕಂಡು ಸಂತುಷ್ಟನಾಗಬೇಕಾಗಿತ್ತು. ಯಾವ ಕಲೆಗಾರನೂ ಅಷ್ಟಕ್ಕೇ ತೃಪ್ತನಾಗುವುದಿಲ್ಲ. ತನ್ನ ಮನಸ್ಸಿಗೆ ಹೊಳೆದ ಒಂದು ಸುಂದರ ಭಾವವನ್ನು ಪದ್ಯರೂಪದಲ್ಲೋ ಚಿತ್ರರೂಪದಲ್ಲೋ ವಿಗ್ರಹರೂಪದಲ್ಲೋ ವಿಷಯೀಕರಿಸಿ ಪ್ರಕಟಿಸುತ್ತಾನೆ. ಹೀಗೆ ಮನಸ್ಸಿನಲ್ಲಿದ್ದದ್ದನ್ನು ಮಾತಿನ ಮೂಲಕ ಅಥವಾ ವರ್ಣರೇಖೆಗಳ ಮೂಲಕ ಹೊರಹಾಕುವುದರ ಉದ್ದೇಶವೆಂದರೆ ಅವನ ಮನಸ್ಸಿನ ಭಾವನೆ ಆ ಮಾಧ್ಯಮದ ಮೂಲಕ ಇತರರ ಮನಸ್ಸಿಗೆ ಹಾಯಬೇಕೆಂಬುದೇ. ಈ ಸಾಮಾಜಿಕ ಆಸಕ್ತಿ ಇಲ್ಲದಿದ್ದರೆ ಯಾವುದೊಂದು ಕಲಾಕೃತಿಯೂ ಹುಟ್ಟುವ ಅಗತ್ಯವೇ ಇರುವುದಿಲ್ಲ. ಕವಿ–ಸಹೃದಯ ಸಂಬಂಧ ಕಲೆಯ ಸೀಮೆಯಲ್ಲಿ ಅವಿಭಾಜ್ಯ ಮತ್ತು ಅಗತ್ಯ ಸಂಬಂಧ. ಕವಿತೆಯನ್ನು ಸವಿಯುವ ಸಹೃದಯರಿಲ್ಲದಿದ್ದರೆ ಕವಿತೆಯ ಚಿಲುಮೆ ಬತ್ತಿ ಹೋಗುತ್ತದೆ. ರಚಿಸಿದ ಕೃತಿಗೆ ಸಹೃದಯರ ಪ್ರೋತ್ಸಾಹ ದೊರಕಬೇಕೆಂದೂ ಅರಸಿಕರಿಗೆ ಕವಿತೆಯನ್ನು ಹೇಳುವ ದುರದೃಷ್ಟ ತಮಗೆ ಬಾರದಿರಲೆಂದೂ ರಸಿಕರಾದ ಜನ ದೊರಕುವುದು ತಮ್ಮ ಪೂರ್ವಜನ್ಮದ ಸುಯೋಗವೆಂದೂ ಅನೇಕ ಕವಿಗಳು ಭಾವಿಸುತ್ತಿದ್ದರೆಂಬುದಕ್ಕೆ ಪೂರ್ವ ಕವಿಕೃತಿಗಳಿಂದ ಮಾತುಗಳನ್ನು ಧಾರಾಳವಾಗಿ ಉದ್ಧರಿಸಬಹುದು.

ಸಾಮಾಜಿಕರೂ ಕಲೆಗಾರರ ಕೊಡುಗೆಯನ್ನು ಮೆಚ್ಚಿ ಅವರಿಗೆ ಕೃತಜ್ಞತೆ ಸಲ್ಲಿಸಿರುತ್ತಾರೆ. ಕವಿ ಕೃತಿಯನ್ನು ಆನೆ ಅಂಬಾರಿಯ ಮೇಲೆ ಮೆರವಣಿಗೆ ಮಾಡಿದ ಸಂದರ್ಭಗಳುಂಟು. ಚಿತ್ರಗಳಿಗೆ ಲಕ್ಷಗಟ್ಟಲೆ ಹಣ ಕೊಟ್ಟು ಅವನ್ನು ಕಲಾಸಂಗ್ರಹಾಲಯಗಳಲ್ಲಿಟ್ಟು ಕಲೆಯಲ್ಲಿ ತಮಗಿರುವ ಪ್ರೀತಿ ಗೌರವಗಳನ್ನು ತೋರಿಸಿರುವವರುಂಟು. ಸಂಗೀತಗಾರರನ್ನು, ಶಿಲ್ಪಿಗಳನ್ನು ಸಮಾಜ ಸನ್ಮಾನಿಸುತ್ತಿರುವುದು ಕಲೆಗೂ ಸಮಾಜಕ್ಕೂ ಇರುವ ನಿಕಟ ಸಂಬಂಧವನ್ನು ಎತ್ತಿ ತೋರಿಸುತ್ತದೆ.

ಕಲೆ ಸಮಾಜವನ್ನು ಸಂಸ್ಕೃತಗೊಳಿಸುವ ಒಂದು ಉತ್ತಮ ಶಕ್ತಿ. ಆದ್ದರಿಂದ ಕಲೆಯನ್ನು ಬೋಧಿಸುವುದಕ್ಕಾಗಿ ಸಮಾಜ ಶಿಕ್ಷಣ ಸಂಸ್ಥೆಗಳನ್ನು ಏರ್ಪಡಿಸಿದೆ. ಕಲಾಕ್ಷೇತ್ರಗಳಿಗೆ ನೆರವು ನೀಡಿದೆ. ಸಮಾಜದ ಮೇಲೆ ಕಲೆಯ ಪ್ರಭಾವ ಅತಿಶಯವಾಗಿರುವುದರಿಂದ ಒಳ್ಳೆಯ ಕಲೆಯನ್ನು ಪ್ರೋತ್ಸಾಹಿಸಿದಂತೆಯೇ ಸಮಾಜಕ್ಕೆ ಕೇಡುಂಟು ಮಾಡುವ ಅಶ್ಲೀಲ ಕಲೆಯನ್ನೂ, ನೀತಿಗೆಟ್ಟ ಕಲೆಯನ್ನೂ ತಡೆಗಟ್ಟಲೂ ಹದ್ದಿನಲ್ಲಿಡಲೂ ಸಮಾಜ ಪ್ರಯತ್ನಪಟ್ಟಿರುತ್ತದೆ. ಕಲೆಗೂ ಸಮಾಜಕ್ಕೂ ಅಗತ್ಯ ಸಂಬಂಧವಿರುವುದರಿಂದ ಕಲೆಯನ್ನು ಯಾವ ರೀತಿಯಲ್ಲಿ ಪೋಷಿಸಬೇಕು, ಯಾವ ರೀತಿಯಲ್ಲಿ ಅದನ್ನು ಸಮಾಜದ ಹತೋಟಿಗೆ ಒಳಪಡಿಸಬೇಕು ಎಂಬುದು ಸಮಾಜಶಾಸ್ತ್ರದ ಒಂದು ಮುಖ್ಯ ಸಮಸ್ಯೆಯೆಂದು ಪರಿಗಣಿಸಲಾಗಿದೆ.

ಕಲೆಗೂ ಸಮಾಜಕ್ಕೂ ಇರುವ ನಿಕಟಸಂಬಂಧವನ್ನು ಇನ್ನೊಂದು ರೀತಿಯಲ್ಲಿ ಸ್ಪಷ್ಟಪಡಿಸಬಹುದು. ಒಂದೊಂದು ಕಾಲದ ಕಲೆಯೂ ಆಯಾ ಕಾಲದ ಸಮಾಜವನ್ನು ಪ್ರತಿಬಿಂಬಿಸುತ್ತದೆ. ಆದಿವಾಸಿಗಳ ಸಾಮಾಜಿಕ ಜೀವನ ಅವರ ಕಲೆಯಲ್ಲಿ ಪ್ರತಿಫಲಿಸಿರುತ್ತದೆ. ಹಳ್ಳಿಯ ಜನರ ಕಲೆಗಳೂ ಪ್ರಾಚೀನ ಸಮಾಜದ ಕಲೆಗಳೂ ಆಧುನಿಕ ಸಮಾಜದ ಕಲೆಗಳೂ ಬೇರೆಬೇರೆಯಾಗಿರುವುದಕ್ಕೆ ಆಯಾ ಸಮಾಜಗಳ ಜೀವನದ ವೈವಿಧ್ಯ ಕಾರಣ.

**ಆದಿವಾಸಿ ಸಮಾಜದ ಕಲೆಗಳು :** ಆದಿವಾಸಿಗಳ ಕಲೆ ಮುಖ್ಯವಾಗಿ ಚಿತ್ರರೂಪವಾದ ಸಂಕೇತಗಳಾಗಿವೆ. ಆ ಸಂಕೇತಗಳು ಅಲಂಕಾರಗಳು ಮಾತ್ರವಲ್ಲ, ಕೇಡು ಮತ್ತು ಕಾಯಿಲೆಗಳನ್ನು ನಿವಾರಿಸುವ ರಕ್ಷೆಗಳಾಗಿಯೂ ಇವೆ. ಅವರ ಚಿತ್ರಗಳು ಅವರ ಜೀವನದಲ್ಲಿ ಪರಿಣಾಮಕಾರಿಗಳಾದ ಬೇಟೆ ಮತ್ತು ಯುದ್ಧಗಳನ್ನು ಪ್ರತಿಬಿಂಬಿಸುತ್ತವೆ. ಅವರ ಶಿಲ್ಪ ವೀರಪ್ರಶಸ್ತಿಗಾಗಿ ಹುಟ್ಟಿದ್ದು. ಅವರು ಚಿತ್ರಗಳನ್ನು ಮಾಟಕ್ಕಾಗಿಯೂ ಉಪಯೋಗಿಸುತ್ತಾರೆ. ಮಾಟಕ್ಕಾಗಿ ಅವರು ಉಪಯೋಗಿಸುವ ಸಂಕೇತಗಳು ಹಲವು ಬಗೆಯವು. ದೋಣಿಗಳ ಮೇಲೆ ಕೆತ್ತಿದ ಮೀನಿನ ಸಂಕೇತದ ಉದ್ದೇಶ ಮಾಟ. ಪ್ರಾಚೀನ ಈಜಿಪ್ಟರ ಕಮಲ ಬಹು ಮುಖ್ಯ ಸಂಕೇತ. ಅವರ ಮುಖ್ಯ ದೇವತೆಯಾದ ಸೂರ್ಯನ ಸಂಕೇತವದು. ಅದರ ಬಳಕೆ ಈಜಿಪ್ಟರಿಂದ ಗ್ರೀಸಿಗೂ ರೋಮಿಗೂ ಬ್ರಿಟನ್ನಿಗೂ ಹಬ್ಬಿತು. ಪ್ರಾಕ್ತನರು ಕಲೆಯ ಸಂಕೇತಗಳನ್ನು ತಮ್ಮ ಕುಲದೇವತೆಯ ಲಾಂಛನಗಳಾಗಿ ಬಳಸಿರುವುದೂ ಉಂಟು. ಅವನ್ನು ಕೋಲುಗಳ ಮೇಲೆ ಪ್ರದರ್ಶಿಸುತ್ತಾರೆ. ಈ ಲಾಂಛನಗಳು ಪ್ರಾಣಿರೂಪವಾಗಿರಬಹುದು ಅಥವಾ ಸಸ್ಯರೂಪವಾಗಿರಬಹುದು. ಪ್ರಾಕ್ತನರು ವೀರರ ರೂಪಗಳನ್ನು, ದೇವತೆಗಳ ರೂಪಗಳನ್ನು ಉತ್ಸವಗಳ ಕಾಲದಲ್ಲಿ ಮುಖವಾಡಗಳಾಗಿ ಧರಿಸುತ್ತಿದ್ದರು.

**ಹಳ್ಳಿಗರ ಕಲೆ :** ಹಳ್ಳಿಗರ ಕಲೆಯಲ್ಲಿ ಪ್ರಾಕ್ತನರ ಕಲೆಯ ಅಂಶಗಳು ಹೆಚ್ಚಾಗಿ ಉಳಿದುಕೊಂಡಿವೆ. ಇವನ್ನು ಭಾರತದ ಹಳ್ಳಿಗಳ ಕಲೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಹಳ್ಳಿಗಳಲ್ಲಿ ವಿಶೇಷವಾಗಿ ಪೂಜಿಸುವ ದೇವತೆಗಳೆಂದರೆ ಮಾತೃದೇವತೆ ಮತ್ತು ಭೂತಪ್ಪ. ಈ ಗುಡಿಗಳಲ್ಲಿ ಇವುಗಳ ಮುಖವಾಡಗಳನ್ನು ಇಟ್ಟಿರುತ್ತಾರೆ. ಉತ್ಸವಕಾಲದಲ್ಲಿ ಆ ಮುಖವಾಡಗಳನ್ನು ಧರಿಸಿ ನರ್ತನ ಮಾಡುತ್ತಾರೆ. ಹಳ್ಳಿಗಳಲ್ಲಿ ಕಲೆ ಮತಕ್ಕೆ ಮಾತ್ರ ಮೀಸಲಾಗಿಲ್ಲ. ಮದುವೆ ಮುಂತಾದ ಲೌಕಿಕ ಸಂದರ್ಭಗಳಲ್ಲೂ ಸುಗ್ಗಿಯ ಕಾಲದಲ್ಲೂ ಹಾಡು ಮತ್ತು ನರ್ತನಗಳ ಮೂಲಕ ಅದು ಹೊಮ್ಮುತ್ತದೆ. ಹಳ್ಳಿಗಳಲ್ಲಿ ಹೆಂಗಸರು ತಾವು ಕಟ್ಟಿದ ಹಾಡುಗಳನ್ನು ರಾಗಿ ಬೀಸುವ ಕಾಲದಲ್ಲಿ ಹಾಡುತ್ತಾರೆ. ಗಂಡಸರ ಹಾಡುಗಳು ವಿಶೇಷವಾಗಿ ಲಾವಣಿಗಳ ರೂಪದಲ್ಲಿರುತ್ತವೆ. ಹಳ್ಳಿಯ ಜನ ತಮ್ಮ ಗುಡಿಗಳ, ಗೋಡೆಗಳ ಮೇಲೆ ಚಿತ್ರಗಳನ್ನು ಬರೆಯುತ್ತಾರೆ. ಗರುಡಿಮನೆಯ ಮುಂದಿನ ಗೋಡೆಗಳ ಮೇಲೆ ವೀರರ ಮತ್ತು ಹುಲಿಯ ಚಿತ್ರವನ್ನು ಬರೆಯುತ್ತಾರೆ. ಮನೆಯ ಮುಂದೆ ರಂಗೋಲಿಯಲ್ಲಿ ವಿವಿಧ ರೂಪಗಳನ್ನು ಎಳೆಯುವುದೂ ರೂಢಿಯಲ್ಲಿರುವ ಕಲೆ. ವೀರಗಲ್ಲುಗಳಲ್ಲೂ ಗಣೇಶ ಮುಂತಾದ ದೇವತೆಗಳ ಮಣ್ಣಿನ ವಿಗ್ರಹಗಳಲ್ಲೂ ಇವರ ಶಿಲ್ಪ ಪ್ರಕಟವಾಗಿದೆ. ಪೌರಾಣಿಕ ಕಥೆಗಳ ಆಧಾರದ ಮೇಲೆ ಕಟ್ಟಿದ ಇತರ ನಾಟಕಗಳು ಬಯಲು ನಾಟಕಗಳೆಂದು ಪ್ರಸಿದ್ಧವಾಗಿವೆ. ಸುಗ್ಗಿಯ ಕಾಲವಾದ ಮೇಲೆ ವರ್ಷಕ್ಕೊಮ್ಮೆ ಹಳ್ಳಿಗಳಲ್ಲಿ ಈ ಬಯಲು ನಾಟಕಗಳನ್ನು ಏರ್ಪಡಿಸುತ್ತಾರೆ. ಹಳ್ಳಿಯವರ ಕಲೆಗಳನ್ನು ಒಟ್ಟಾಗಿ ಸೇರಿಸಿ ಅವುಗಳನ್ನು ನಾಡ ಜನರ ಕಲೆಯೆಂದು ಕರೆಯುವುದು ವಾಡಿಕೆಯಾಗಿದೆ.

**ಲಲಿತ ಕಲೆಗಳು:** ಲಲಿತಕಲೆಗಳು ಮತ್ತು ಉಪಯುಕ್ತ ಕಲೆಗಳು ಎಂಬ ವಿಂಗಡನೆ ಹುಟ್ಟಿದ್ದು ಆಧುನಿಕ ಸಮಾಜದಲ್ಲಿ. ಹಿಂದಿನ ಕಾಲದಲ್ಲಿ ಈ ವಿಂಗಡನೆ ಇರಲಿಲ್ಲ. ಕಾಮಸೂತ್ರ ಇತ್ಯಾದಿ ಪ್ರಾಚೀನ ಗ್ರಂಥಗಳಲ್ಲಿ ಈ ಭೇದ ಕಾಣುವುದಿಲ್ಲ. ಈ ಗ್ರಂಥಗಳು ಹೆಸರಿಸಿರುವ ಅರವತ್ತು ನಾಲ್ಕು ಕಲೆಗಳಲ್ಲಿ ಶಿಲ್ಪ, ಚಿತ್ರ, ವಾಸ್ತುಶಿಲ್ಪ ಮುಂತಾದ ಲಲಿತಕಲೆಗಳೊಡನೆ ಉಪಯುಕ್ತ ಕಲೆಗಳೂ ಸೇರಿವೆ. ತದನಂತರ ವಿಷ್ಣು ಧರ್ಮೋತ್ತರ, ಮಾನಸೋಲ್ಲಾಸ ಮುಂತಾದ ಗ್ರಂಥಗಳಲ್ಲಿ ಚಿತ್ರ, ಶಿಲ್ಪ ಮುಂತಾದ ಕಲೆಗಳಿಗೆ ವಿಶಿಷ್ಟ ಸ್ಥಾನ ಕೊಟ್ಟಿದೆ. ಅದರಿಂದಾಚೆ, ಒಂದೊಂದು ಲಲಿತಕಲೆಯನ್ನೂ ಅದಕ್ಕೆ ಮೀಸಲಾದ ಗ್ರಂಥಗಳಲ್ಲಿ ಪಾರಿಭಾಷಿಕವಾಗಿ ನಿರೂಪಿಸಲಾಗಿದೆ. ಗ್ರೀಕರಲ್ಲಿ ಅರಿಸ್ಟಾಟಲ್ 'ಪೊಯೆಟಿಕ್ಸ್' ಎಂಬ ತನ್ನ ಗ್ರಂಥದಲ್ಲಿ ಲಲಿತಕಲೆಗಳಿಗೆ ವಿಶಿಷ್ಟ ಸ್ಥಾನ ಕೊಟ್ಟಿದ್ದಾನೆ. ಪಾಶ್ಚಾತ್ಯ ದೇಶಗಳಲ್ಲಿ 16ನೆಯ ಶತಮಾನದಿಂದ ಆಚೆ ಚಿತ್ರ, ಶಿಲ್ಪ ಮತ್ತು ವಾಸ್ತುಶಿಲ್ಪಗಳಿಗೆ ಸಂಬಂಧಪಟ್ಟ ಗ್ರಂಥಗಳು ಹುಟ್ಟಿಕೊಂಡವು. ಮಧ್ಯಯುಗದಲ್ಲಿ ಇವು ಮತಭಾವನೆಗಳಿಗೆ ವಿಧೇಯವಾಗಿದ್ದುವು. ವಾಸ್ತುಶಿಲ್ಪ ವಿಶೇಷವಾಗಿ, ಕ್ರೈಸ್ತ ದೇವಮಂದಿರಗಳ ನಿರ್ಮಾಣದಲ್ಲಿ ಪ್ರಕಾಶಗೊಂಡಿತ್ತು. ಅಲ್ಲಿಂದೀಚೆಗೆ ಇವು ಮತೀಯ ಭಾವನೆಗಳಿಂದ ಬಿಡುಗಡೆ ಹೊಂದಿ ಲೌಕಿಕವಾದುವು (ಸೆಕ್ಯುಲರ್). ಭಾರತದಲ್ಲೂ ಶಿಲ್ಪ, ಚಿತ್ರ ಮುಂತಾದವು ಮೊದಲಲ್ಲಿ ಬೌದ್ಧ ಧರ್ಮಕ್ಕೂ ಅನಂತರದಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳಿಗೂ ಇಸ್ಲಾಂಮತಕ್ಕೂ ಅಧೀನವಾಗಿದ್ದುವು. ಈ ಕಲೆಗಳ ಮೇಲೆ ಬೌದ್ಧ, ಶೈವ ಮತ್ತು ವೈಷ್ಣವ ಧರ್ಮಗಳ ಪ್ರಭಾವ ಅಜಂತ, ಎಲ್ಲೋರ, ಮುಂತಾದ ಗುಹಾಂತರ ದೇವಾಲಯಗಳಲ್ಲಿ ಕ್ರಮವಾಗಿ ಕಂಡುಬರುತ್ತದೆ. ಈಚಿನ ಕಾಲದಲ್ಲಿ ಈ ಕಲೆಗಳು ಸ್ವಲ್ಪಮಟ್ಟಿಗೆ ಲೌಕಿಕವಾಗಿವೆ. ಕಾಂಗ್ರ ಚಿತ್ರಕಲೆ ಸಾಮಾನ್ಯ ಜನರ ಲೌಕಿಕಜೀವನವನ್ನು ಪ್ರತಿಬಿಂಬಿಸುತ್ತದೆ. ರಜಪೂತ ಮತ್ತು ಮುಸ್ಲಿಂ ಚಿತ್ರಕಲೆಗಳು ಪ್ರಣಯ, ವೀರ ಮುಂತಾದ ಭಾವನೆಗಳ ಪ್ರತಿಬಿಂಬಗಳಾಗಿವೆ. ಈಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರಕ್ಕೆ ಬಂದಿರುವುದು ಹೊಸ ಬಗೆ. ಹಿಂದಿನವುಗಳಲ್ಲಿ ವ್ಯಕ್ತಿಗಳ, ಗಿಡಗಳ, ಪ್ರಾಣಿಗಳ ರೂಪ ಚಿತ್ರಿತವಾಗಿತ್ತು. ಅಮೂರ್ತ ವಿಧಾನದ ಚಿತ್ರಗಳಲ್ಲಿ ಕೇವಲ ರೇಖಾವಿನ್ಯಾಸವಿದೆ ಅಥವಾ ಬಣ್ಣಗಳ ವಿನ್ಯಾಸವಿದೆ. ಈ ಬಗೆಯ ಚಿತ್ರಗಳು ಸಾಮಾನ್ಯ ಜನಕ್ಕೆ ಅರ್ಥವಾಗುವುದು ಕಷ್ಟ. ಇದು ಭಾರತೀಯ ಕಲಾ ಕ್ಷೇತ್ರದಲ್ಲೂ ಬಳಕೆಗೆ ಬರುತ್ತಿದೆ.

**ಸಾಹಿತ್ಯ :** ಸಾಹಿತ್ಯಕ್ಕೆ ಸಮಾಜದಲ್ಲಿ ಸಾರ್ವತ್ರಿಕ ಪುರಸ್ಕಾರವುಂಟು. ಪಾಶ್ಚಾತ್ಯರಿಗೆ ಹೋಮರನ ಮಹಾಕಾವ್ಯಗಳಾದ ಒಡಿಸ್ಸಿ ಮತ್ತು ಇಲಿಯಡ್ ಮತ್ತು ವರ್ಜಿಲ್ಲನ ಮಹಾಕಾವ್ಯವಾದ ಈನಿಯಡ್ ಮತ್ತು ಡಾಂಟೆಯ ಇನ್‌ಫರ್ನೋ ಮೆಚ್ಚಿನ ಮಹಾಕಾವ್ಯಗಳಾಗಿರುವಂತೆ ಭಾರತೀಯರಿಗೆ ಪ್ರಾಚೀನ ಮಹಾಕೃತಿಗಳಾದ ವಾಲ್ಮೀಕಿ ರಾಮಾಯಣ ಮತ್ತು ವ್ಯಾಸ ಮಹಾಭಾರತ ಮೆಚ್ಚಿನ ಕಾವ್ಯಗಳು. ಭಾರತದ ಎಲ್ಲ ಭಾಷೆಗಳಲ್ಲೂ ಇಂದಿಗೂ ಹೊಸ ಹೊಸ ರಾಮಾಯಣಗಳು, ಮಹಾಭಾರತಗಳು ಬರುತ್ತಿವೆ.

ಸಮಾಜದ ಮೇಲೆ ತುಂಬ ಪ್ರಭಾವಬೀರಿದ ಕಲೆಯೆಂದರೆ ನಾಟಕ. ಕಾಳಿದಾಸ ಹೇಳಿರುವಂತೆ ಇದು ಭಿನ್ನ ರುಚಿಗಳುಳ್ಳ ಸಾಮಾಜಿಕರೆಲ್ಲರಿಗೂ ಒಂದೇ ಸಮನಾಗಿ ಮೆಚ್ಚಿಗೆಯಾದ ಏಕಮಾತ್ರ ಕಲೆ. ಇದನ್ನು ಭಾರತದಲ್ಲಿ ಸ್ಥಾಪಿಸಿದವನು ಭರತಮುನಿಯೆಂದು ಪ್ರತೀತಿ. ಭಾರತದ ನಾಟಕದಲ್ಲಿ ವೃತ್ತ, ನೃತ್ಯ, ಗಾನ ಮುಂತಾದ ಎಲ್ಲ ಕಲೆಗಳಿಗೂ ಅವಕಾಶವಿದೆ. ಆತ ಇದರ ಹತ್ತು ರೂಪಗಳನ್ನು ವಿವರಿಸಿದ್ದಾನೆ. ಆದರೂ ಪ್ರಾಚೀನ ಪಾಶ್ಚಾತ್ಯರಂತೆ ಭಾರತೀಯರು ಹರ್ಷಾಂತ ಮತ್ತು ವಿಷಾದಂತ ನಾಟಕಗಳೆಂಬ ಭೇದವನ್ನು ಕಲ್ಪಿಸಿರುವುದಿಲ್ಲ. ಚಲನಚಿತ್ರವೆಂಬ ಹೊಸ ಕಲೆ ಹುಟ್ಟಿಕೊಂಡು ನಾಟಕವನ್ನು ಈಗ ಹಿಂದೆ ಹಾಕಿದೆ.

ಹಿಂದಿನ ಕಾಲದಿಂದಲೂ ಹುಡುಗರು, ವೃದ್ಧರು, ಹೆಂಗಸರು, ಗಂಡಸರು ಕಿರುಗಥೆಗಳಲ್ಲಿ ವಿಶೇಷ ಆಸಕ್ತಿ ಹೊಂದಿರುತ್ತಾರೆ. ಈಗಿನ ಜನಮೆಚ್ಚಿನ ಕಥಾರೂಪ ಕಾದಂಬರಿ. ಈ ಕಲೆಯ ಮೂಲಕ ಸಮಾಜದ ಸಮಸ್ಯೆಗಳನ್ನು ವಿಸ್ತಾರವಾಗಿ ನಿರೂಪಿಸಲು ಸಾಧ್ಯವಾಗಿದೆ. ಸಾವಿರಾರು ಪುಟಗಳಷ್ಟು ಉದ್ದವಾದ ಸಾಮಾಜಿಕ ಕಾದಂಬರಿಗಳು ಹೇರಳವಾಗಿವೆ. ಎಲ್ಲ ದೇಶಗಳಲ್ಲೂ ಕಾದಂಬರಿಗಳನ್ನು ಓದುವವರ ಸಂಖ್ಯೆ ದಿನದಿನಕ್ಕೂ ಈಗ ಏರುತ್ತಿದೆ. ಕೆಲವು ಕಾದಂಬರಿಗಳ ಲಕ್ಷಗಟ್ಟಳೆ ಪ್ರತಿಗಳು ಮುದ್ರಿತವಾಗುತ್ತಿವೆ.

ಪದ್ಯ ಕಾವ್ಯ ರೂಪಗಳಲ್ಲಿ ಇಂದು ವಿಶೇಷವಾಗಿ ಪ್ರಚಾರದಲ್ಲಿರುವುದು ಭಾವಗೀತೆ. ಈ ಹೊಸ ಪದ್ಯರೂಪ ಭಾರತದಲ್ಲಿ ಬೆಳೆಯುವುದಕ್ಕೆ ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ಕವಿಗಳು ಕಾರಣರು. ಭಾರತದ ಇತರ ಪ್ರಾಂತ್ಯಗಳಂತೆ ಕನ್ನಡನಾಡಿನಲ್ಲೂ ತುಂಬ ಪ್ರಸಿದ್ಧಿಗೆ ಬಂದಿರುವ ಕವಿಗಳು ಭಾವಗೀತೆಯ ಕರ್ತೃಗಳು. ಈ ಹೊಸ ಸಾಹಿತ್ಯರೂಪದ ಮೂಲಕ ಒಂದೇ ಭಾವದ ಸಹಸ್ರ ಮುಖಗಳನ್ನು ಪ್ರಕಾಶಪಡಿಸಲು ಸಾಧ್ಯವಾಗಿದೆ.

**ಸಂಗೀತ :** ಸಂಗೀತ ಮಾನವನ ಹೃದಯದ ಭಾವಗಳನ್ನು ನೇರವಾಗಿ ಪ್ರತಿಬಿಂಬಿಸುವ ಕಲೆ. ಇದು ನೇರವಾಗಿ ಮಾನವನ ಹೃದಯವನ್ನು ಮಿಡಿಸುತ್ತದೆ. ಶಿಶುಗಳನ್ನೂ, ಪಶುಗಳನ್ನೂ, ಹಾವುಗಳನ್ನೂ ಗಾನ ಆಕರ್ಷಿಸುತ್ತದೆ ಎಂದು ಹೇಳುವುದುಂಟು. ಮತಂಗಮುನಿ ಹೇಳುವಂತೆ ಮಾನವನ ಹೃದಯದ ಭಾವಸಾಕ್ಷಾತ್ಕಾರಕ್ಕೆ ಇದು ಉತ್ತಮಸಾಧನ. ಸಾಹಿತ್ಯ, ಚಿತ್ರ, ಶಿಲ್ಪ ಮುಂತಾದ ಕಲೆಗಳು ಪ್ರಕಾಶಪಡಿಸಬಲ್ಲದು. ಸಂಗೀತ ಮಾನವಜೀವನದಲ್ಲಿ ತುಂಬ ವ್ಯಾಪಕವಾದದ್ದು ; ಜೀವನದ ಎಲ್ಲ ಘಟ್ಟಗಳಲ್ಲೂ ಅದು ಬಳಕೆಗೆ ಬಂದಿದೆ. ಭಾರತದಲ್ಲಿ ಒಂದು ಉತ್ಸವವಾಗಲಿ, ಮೆರವಣಿಗೆಯಾಗಲಿ ನಡೆಯಬೇಕಾದರೆ ವಾಲಗವಿದ್ದೇ ಇರಬೇಕು. ಸಾರ್ವಜನಿಕ ಸಭೆಗಳು ಪ್ರಾರ್ಥನಾ ಗೀತೆಯಿಂದ ಪ್ರಾರಂಭವಾಗುತ್ತವೆ, ರಾಷ್ಟ್ರಗೀತೆಯಿಂದ ಮುಕ್ತಾಯಗೊಳ್ಳುತ್ತವೆ.

**ಉಪಯುಕ್ತ ಕಲೆಗಳು :** ಲಲಿತಕಲೆಗಳ ಉದ್ದೇಶ ಮನರಂಜನೆಯ ಜೊತೆಗೆ ಜೀವನ ಸೌಕರ್ಯಗಳನ್ನೂ ಈಡೇರಿಸುವುದು. ಇವುಗಳ ಸಂಖ್ಯೆ ಅಪಾರ. ಏಕೆಂದರೆ ಉಪಯುಕ್ತವಾದ ಎಲ್ಲ ವಸ್ತುಗಳೂ ಒಂದು ಸುಂದರ ರೂಪತಾಳಬಹುದು. ಪಾತ್ರೆಗಳು, ಪೀಠಗಳು, ಬಟ್ಟೆಗಳು ಮುಂತಾದ ಯಾವ ಬಳಕೆಯ ವಸ್ತುವಾಗಲಿ, ಯಾವ ಉಪಯುಕ್ತ ವ್ಯವಹಾರವಾಗಲಿ, ಆಟವಾಗಲಿ, ಭಾಷಣವಾಗಲಿ ಅದನ್ನು ಮಾಡುವ ರೀತಿ ಎರಡು. ಅದು ಅಸಂಸ್ಕೃತವಾಗಿರಬಹುದು ಅಥವಾ ಸುಸಂಸ್ಕೃತವಾಗಿರಬಹುದು. ಆತ್ಮಸಂತೋಷಕ್ಕಾಗಿ ಒಪ್ಪವಾಗಿ ಮಾಡಿದ ಎಲ್ಲವೂ ಕಲೆಯಾಗಿ ಪರಿಣಮಿಸುತ್ತದೆ. ಅದು ಸುಸಂಸ್ಕೃತ ಜೀವನದ ಹೆಗ್ಗುರುತು.

**ಮುದ್ರಣಕಲೆ :** ಈಚೆಗೆ ಹುಟ್ಟಿದ ಉಪಯುಕ್ತ ಕಲೆಯಲ್ಲಿ ಮುದ್ರಣಕಲೆ ಆಧುನಿಕ ಜೀವನದಲ್ಲಿ ತುಂಬ ವ್ಯಾಪಕವಾದದ್ದು. ವಿಜ್ಞಾನ ಮತ್ತು ಯಂತ್ರ ವಿದ್ಯೆ ಅಗಾಧವಾಗಿ ಬೆಳೆದಿರುವುದರಿಂದ ಮುದ್ರಣಕಲೆ ವಿವಿಧ ರೂಪಗಳನ್ನು ತಾಳಿದೆಯಲ್ಲದೆ ಮುದ್ರಣದ

ವೇಗವೂ ಹೆಚ್ಚಿದೆ. ವೃತ್ತಪತ್ರಿಕೆಗಳ ಜನಪ್ರಿಯ ಪ್ರಸಾರಕ್ಕೆ ಮುದ್ರಣಕಲೆಯೇ ಕಾರಣ. ನಾನಾ ಆಕೃತಿಗಳನ್ನು ಅನೇಕ ಬಣ್ಣಗಳಲ್ಲಿ ಕಾಗದದ ಮೇಲೂ ಬಟ್ಟೆಗಳ ಮೇಲೂ ಮುದ್ರಿಸಲು ಸಾಧ್ಯವಾಗಿದೆ. ಕಟ್ಟಡಗಳ, ನಕಾಶೆಗಳ, ಭೂಪಟಗಳ, ಸಂಗೀತ ಭಾಷಣಗಳ ಧ್ವನಿಮುದ್ರಿಸಿಕೊಳ್ಳುವುದು ಇಂದು ಸಾಧ್ಯ. ಹೀಗೆ ವಿಜ್ಞಾನ ಮತ್ತು ಯಂತ್ರ ವಿದ್ಯೆಯ ಸಹಾಯದಿಂದ ವಿದ್ಯೆ ಮತ್ತು ಕಲೆಯ ಪ್ರಚಾರ ವಿಸ್ತರಿಸಿದೆ. ಮಾನವ ನಿರ್ಮಿತ ಕಂಪ್ಯೂಟರ್ ಈಗ ಎಲ್ಲ ಕ್ಷೇತ್ರಗಳಲ್ಲಿ ತನ್ನ ಪ್ರಭಾವ ಬೀರಿ ಹೊಸ ಆವಿಷ್ಕಾರಗಳತ್ತ ಮುನ್ನಡೆಯುತ್ತಿದೆ. ಹಾಗೂ ಮುದ್ರಣ ಕಲೆಯೂ ಇದರ ಉಪಯೋಗ ಪಡೆದಿದೆ. (ಜಿ.ಎಚ್.)

ಒಟ್ಟಿನಲ್ಲಿ ಇಷ್ಟು ಹೇಳಬಹುದು. ಕಲೆ ಎಂಬ ಪದಕ್ಕೆ ಸ್ಪಷ್ಟವೂ ಪರಿಮಿತವೂ ಖಚಿತವೂ ಆದ ಅರ್ಥ ಇರುವಂತೆ ಸಮಾಜ ಎಂಬುದಕ್ಕೆ ಈ ಬಗೆಯಲ್ಲಿ ಸ್ಪಷ್ಟವಾಗಿ ಕಾಣುವುದಿಲ್ಲ. ಜನರು, ಅವರ ನಡೆವಳಿಕೆಯ ರೀತಿ, ಅವರನ್ನು ಸುತ್ತಿರುವ ಯುಗಧರ್ಮ, ಅವರ ಆಶೋತ್ತರಗಳು, ಏರ್ಪಟ್ಟಿರುವ ಸಂಘ ಸಂಸ್ಥೆಗಳು, ಒಟ್ಟಿನ ವ್ಯವಸ್ಥೆ ಎಲ್ಲವೂ ಸಮಾಜ ಎಂಬುದರ ಪ್ರತ್ಯೇಕಿಸಲಾಗದ ಅಂಶಗಳಾಗಿವೆ. ಯಾವುದೇ ಸಮಾಜವಾಗಲಿ ಅದಕ್ಕೆ ತಾತ್ಕಾಲಿಕವಾಗಿದ್ದು ಮರೆಯಾಗುವ ಬಾಹ್ಯ ಲಕ್ಷಣವೂ ಉಂಟು, ಅದರ ಆಳದಲ್ಲಿದ್ದುಕೊಂಡು ಹಲವು ಕಾಲ ಇರುವ ಗುಣಲಕ್ಷಣವೂ ಉಂಟು. ಕಲೆಗೂ ಸಮಾಜಕ್ಕೂ ಇರುವ ಸಂಬಂಧವನ್ನು ಚಿಂತಿಸುವಾಗ ಈ ಎರಡನ್ನೂ ಲಕ್ಷ್ಯಕ್ಕೆ ತಂದುಕೊಳ್ಳಬೇಕು.

ಮತಧರ್ಮಕ್ಕೆ ಸೇರಿದ ಸಾಮಾಜಿಕ ವ್ಯವಸ್ಥೆ ಸಾಧಾರಣವಾಗಿ ಹೆಚ್ಚು ಕಾಲ ಏಕಬಗೆಯಲ್ಲಿ ಇರುತ್ತದೆ; ದೊಡ್ಡ ಧಾರ್ಮಿಕ ವಿಪ್ಲವ ಉಂಟಾದಾಗ ಮಾತ್ರ ಆ ವ್ಯವಸ್ಥೆ ಅಷ್ಟಿಷ್ಟು ಮಾರ್ಪಾಟು ಹೊಂದುತ್ತದೆ. ಪುರಾತನ ಈಜಿಪ್ಟ್, ಪ್ರಾಚೀನ ಗ್ರೀಸ್, ಪ್ರಾಚೀನ ರೋಮನ್ ಚಕ್ರಾಧಿಪತ್ಯ, ಮತ್ತು ಮಧ್ಯಯುಗೀನ ಯುರೋಪಿನಲ್ಲಿ ನಿರ್ಮಿತವಾದ ದೇವಾಲಯಗಳೂ ವಿಗ್ರಹಗಳೂ ಚಿತ್ರಗಳೂ ರೂಪುಗೊಂಡ ಸಂಗೀತ ಪದ್ಧತಿಗಳೂ ನೂರಾರು ವರ್ಷ ತಮ್ಮತಮ್ಮ ಸಂಪ್ರದಾಯವನ್ನು ತಪ್ಪದೆ ಅನುಸರಿಸುತ್ತಿದ್ದುವು. ಆಧುನಿಕಯುಗ ಪ್ರಾರಂಭವಾದ ಮೇಲೆ ಅವುಗಳಲ್ಲಿ ಬದಲಾವಣೆ ಉಂಟಾಯಿತು. ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳು ಬೇಗಬೇಗ ವ್ಯತ್ಯಸ್ತವಾಗುತ್ತ ಹೋಗುವುದು ಸಾಧ್ಯ. ಅಷ್ಟೇ ಬೇಗಬೇಗ ಕಲೆಯ ರೀತಿ ವ್ಯತ್ಯಾಸ ಹೊಂದುವುದಲ್ಲ. ಕಲೆ ಸಾಧಾರಣವಾಗಿ ಸಂಪ್ರದಾಯಾನುವರ್ತಿ; ವಾಡಿಕೆಯಾದ ವಿಧಾನ ಮತ್ತು ತಂತ್ರವನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಪ್ರತಿಯೊಂದು ಅವಧಿಯಲ್ಲೂ ಈಗಿನ ಸಮಾಜಕ್ಕೆ ತಕ್ಕ ಕಲೆ ರೂಪಿತವಾಗಬೇಕು ಎಂಬ ಕೂಗು ಕೆಲವು ಪ್ರಗತಿಶೀಲರಿಂದ ಕೇಳಿಬರುತ್ತದೆ. ಆದರೆ ಕಲೆ ಬೇರ್ಪಡುವುದಕ್ಕೆ ಪ್ರಾರಂಭಿಸುವ ಮುನ್ನವೇ ಮುಂದಣ ಅವಧಿ ಬಂದೇ ಬಿಡುತ್ತದೆ. ಮತ್ತೆ ಅದೇ ತೆರನಾದ ಕೂಗು. ಅಲ್ಲೊಂದು ಇಲ್ಲೊಂದು ಸಣ್ಣ ಸಣ್ಣ ಗುಂಪುಗಳು ತಮ್ಮವೇ ಆದ ಕಲಾಕ್ರಮಗಳನ್ನು ಹೊರತರುತ್ತವೆ. ಆದರೆ ಅದು ಕೇವಲ ವೈಯಕ್ತಿಕ, ಕ್ಷಣಿಕ.

ಕಾಲ, ಪರಿಸ್ಥಿತಿ, ವಾತಾವರಣ–ಇವು ಕಲೆಗಾರನಿಗೆ ಹಿನ್ನೆಲೆಯೆಂಬುದು ನಿರ್ವಿವಾದ. ಆದರೆ ಅವುಗಳ ಪ್ರಭಾವದ ಪ್ರಮಾಣವೆಷ್ಟು, ಕಲೆಗಾರನ ಸ್ವಂತ ವ್ಯಕ್ತಿತ್ವದ ಪ್ರಮಾಣವೇನು ಎಂಬ ವಿಚಾರವಾಗಿ ಒಪ್ಪತಕ್ಕ ನಿರ್ಧಾರವನ್ನು ಹೇಳುವುದು ಬಹಳ ಕಷ್ಟ. ಹಿನ್ನೆಲೆಯ ಪ್ರಭಾವ ಕಲೆಗಾರನ ಮೇಲೆ ಸ್ಫುಟ ಮುದ್ರೆಯನ್ನು ಒತ್ತುವುದಿಲ್ಲ; ಅವು ಅವನೊಳಗೆ ಸೇರಿಕೊಂಡು ಅರಿವಿಲ್ಲದೆಯೇ ಪ್ರಭಾವ ಬೀರುತ್ತವೆ. ಇತರ ಕಲೆಗಳಿಗಿಂತಲೂ ಹೆಚ್ಚಾಗಿ ಸಾಹಿತ್ಯ ಸಮಾಜದೊಂದಿಗೆ ಮಿಳಿತವಾಗಿದೆ. (ಎಸ್.ವಿ.ಆರ್.)

**ಕಲೇಡಿಯಮ್ :** ಬಹು ಅಂದವಾದ, ವರ್ಣರಂಜಿತವಾದ ಎಲೆಗಳುಳ್ಳ ಒಂದು ಲಶುನ ಸಸ್ಯ. ಏರೇಸೀ ಕುಟುಂಬಕ್ಕೆ ಸೇರಿದೆ. ದಕ್ಷಿಣ ಅಮೆರಿಕ ಇದರ ತೌರು. ಸುಂದರವಾದ ಎಲೆಗಳಿಗೋಸ್ಕರ ಅಲಂಕಾರಸಸ್ಯವಾಗಿ ಇದನ್ನು ಬೆಳೆಸುತ್ತಾರೆ. ಕುಂಡಗಳಲ್ಲಿ ಬೆಳೆಸಿ ಮನೆಯ ವರಾಂಡ, ವಾಸದ ಕೋಣೆಗಳು, ಮೊಗಸಾಲೆ ಮುಂತಾದುವನ್ನು ಅಲಂಕರಿಸಲು ಉಪಯೋಗಿಸುವುದು ವಾಡಿಕೆ. ಎಲೆಗಳು ಬಹಳ ಅಗಲವಾಗಿದ್ದು ವರ್ಣವೈವಿಧ್ಯವನ್ನು ತೋರುತ್ತವೆ. ಅವುಗಳ ಆಕಾರ ಬಾಣದ ಮೊನೆಯಂತೆ. ಕಲೇಡಿಯಮ್‌ನಲ್ಲಿ ಹಲವಾರು ಬಗೆಗಳಿವೆ. ಒಂದೊಂದು ಬಗೆಯಲ್ಲೂ ಎಲೆಗಳು ತಮ್ಮ ಗಾತ್ರ ಮತ್ತು ಬಣ್ಣಗಳಲ್ಲಿ ವೈವಿಧ್ಯವನ್ನು ಪ್ರದರ್ಶಿಸುತ್ತವೆ. ಹಸಿರು ಹಿನ್ನೆಲೆಯಲ್ಲಿ ಬಿಳಿಯ ಚುಕ್ಕಿಗಳು, ಬಿಳಿ ಬಣ್ಣವಿದ್ದು ಹಸಿರು ಅಂಚು ಮತ್ತು ಅಲ್ಲಲ್ಲೆ ಹಸಿರು ಕೆಂಪು ಚುಕ್ಕಿಗಳು, ಅಪ್ಪಟ ಕೆಂಪು ಬಣ್ಣದ ಮೇಲೆ ಹಸಿರು ಅಂಚು ಮುಂತಾದ ನಾನಾ ಬಗೆಯ ಕಣ್ಣು ಕೋರೈಸುವಂಥ ಬಣ್ಣಗಳು ಎಲೆಗಳಿವೆ. ಇದರಿಂದ ಗಿಡ ಬಹಳ ಮನಮೋಹಕವಾಗಿ ಕಾಣುತ್ತದೆ.

ಎತ್ತರ ಪ್ರದೇಶಗಳಿಗಿಂತ ಮೈದಾನಪ್ರದೇಶಗಳಲ್ಲಿ ಕಲೇಡಿಯಮ್ ಚೆನ್ನಾಗಿ ಬೆಳೆಯುತ್ತದೆ. ಇದನ್ನು ನೆರಳಿನಲ್ಲಿ, ಆದರೆ ಚೆನ್ನಾಗಿ ಬೆಳಕು ಬರುವಂಥ, ಸ್ಥಳಗಳಲ್ಲಿ ಬೆಳೆಸಬೇಕು. ಹಗುರ ಮತ್ತು ಸಾರವತ್ತಾದ ಮಣ್ಣುಳ್ಳ ಭೂಮಿ ಇದಕ್ಕೆ ಒಳ್ಳೆಯದು. ಕುಂಡಗಳಲ್ಲಿ ಬೆಳೆಸುವುದಾದರೆ ಕೆಂಪುಮಣ್ಣು, ಮರಳು, ಎಲೆಗೊಬ್ಬರ ಮತ್ತು ದನದ ಗೊಬ್ಬರಗಳ ಸಮಭಾಗ ಮಿಶ್ರಣದ ಕಾಂಪೋಸ್ಟನ್ನು ಉಪಯೋಗಿಸಬೇಕು. ಇದರ ಜೊತೆಗೆ ಸ್ವಲ್ಪ ಇದ್ದಿಲುಚೂರುಗಳನ್ನು ಸೇರಿಸುವುದರಿಂದ ಸಾಧಾರಣವಾಗಿ ಕಾಂಪೋಸ್ಟ್ ಹುಳಿಯಾಗಿ ಪರಿವರ್ತನೆ ಹೊಂದುವುದನ್ನು ತಡೆಯಬಹುದು. ಸಾಧಾರಣವಾಗಿ ಎಲ್ಲ ಬಗೆಯ ಕಲೇಡಿಯಮ್‌ಗಳು ಡೆಸಿಡ್ಯುಯಸ್ (ಚಳಿಗಾಲದಲ್ಲಿ ಎಲೆ ಉದುರಿ ಹೋಗುವಂಥ) ಸಸ್ಯಗಳು. ಏಪ್ರಿಲ್–ಮೇ ತಿಂಗಳಿನಲ್ಲಿ ಗೆಡ್ಡೆಗಳಲ್ಲಿ ಹೊಸ ಮೊಳಕೆಗಳು ಹೊರಡುತ್ತವೆಯಾದ್ದರಿಂದ ಆ ಕಾಲದಲ್ಲಿ ನೆಡುವುದೊಳ್ಳೆಯದು. ಅಕ್ಟೋಬರ್–ನವೆಂಬರ್ ತಿಂಗಳ ಹೊತ್ತಿಗೆ ಗೆಡ್ಡೆಗಳು ಪೂರ್ಣ ಬೆಳೆಯುತ್ತವೆ. ಎಲೆಗಳು ಮಾತ್ರ ಒಣಗಿ ಹೋಗುತ್ತವೆ. ಆ ಸಂದರ್ಭದಲ್ಲಿ ನೀರು ಕೊಡುವುದನ್ನು ನಿಲ್ಲಿಸಿ, ಮಣ್ಣು ಒಣಗಿದ ಮೇಲೆ ಗೆಡ್ಡೆಗಳನ್ನು ಭೂಮಿಯಿಂದ ಹೊರ ತೆಗೆದು ನೀರು ಬೀಳದ ಸ್ಥಳದಲ್ಲಿ ಮುಂದೆ ನೆಡುವವರೆಗೂ ಶೇಖರಿಸಿಡಬೇಕು ಅಥವಾ ಮರಳಿನಲ್ಲಿ ಹೂತಿಟ್ಟಿರಬೇಕು. ಹೀಗೆ ಹೂತಿಟ್ಟು ಸುಪ್ತಾವಸ್ಥೆಯಲ್ಲಿರುವ ಗೆಡ್ಡೆಗಳ ಮೇಲೆ ನೆಡುವುದಕ್ಕೆ ಒಂದು ವಾರ ಮುಂಚಿತವಾಗಿ, ಸ್ವಲ್ಪ ನೀರು ಹಾಕಿದರೆ ಮೊಳಕೆಯೊಡೆಯುತ್ತದೆ. ಮೊಳಕೆ ಬಂದ ಗೆಡ್ಡೆಗಳನ್ನು ಕುಂಡಗಳಲ್ಲಿ ಅಥವಾ ಬೆಳೆಯುವ ಮಡಿಗಳಲ್ಲಿ ಮೊಳಕೆಯ ಭಾಗ ಹೊರ ಕಾಣುವಂತೆ ನೆಡಬೇಕು. ಗೆಡ್ಡೆ ಬಹಳ ಸಣ್ಣವಾದರೆ 2–3 ಗೆಡ್ಡೆಗಳನ್ನು ಅಥವಾ ದಪ್ಪ ಗಾತ್ರದಾದ್ದರೆ ಒಂದೇ ಒಂದನ್ನು ಕುಂಡದಲ್ಲಿ ನೆಡಬಹುದು. ಹದವರಿತು ನೀರ್ವಕೊಡಬೇಕು. ಗಿಡ ಬೆಳೆಯುತ್ತಿರುವಾಗ ವಾರಕ್ಕೊಂದು ಸಾರಿ ಬಹು ತೆಳುವಾದ ಹಸುವಿನ ಸೆಗಣಿಯ ನೀರನ್ನು ಹಾಕಿದರೆ ಒಳ್ಳೆಯದು. ಗೆಡ್ಡೆಗಳನ್ನು ನೆಟ್ಟ ಅನಂತರ ಎಲೆಗಳು ಪೂರ್ಣವಾಗಿ ಬೆಳೆಯುವ ಮೊದಲೇ ಹೂಗೊಂಚಲುಗಳು ಹೊರಡುತ್ತವೆ. ಇವನ್ನು ತೆಗೆದುಹಾಕಬೇಕು. ಹೀಗೆ ಮಾಡುವುದರಿಂದ ಎಲೆಗಳು ಚೆನ್ನಾಗಿ ಬೆಳೆಯುತ್ತವೆ.

ಕಲೇಡಿಯಮ್ ಬೈಕಲರ್

ಕಲೇಡಿಯಮಿನಲ್ಲಿ ಸುಮಾರು 50ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಕ. ಅರ್ಜಿರೈಟಿಸ್, ಕ. ಬೈಕಲರ್, ಕ. ಮಾರ್ಮೊರೇಟಂ, ಕ. ಪಿಕ್ಚರೇಟಮ್, ಕ. ಹಂಬೋಲ್ಟಿಯೈ–ಮುಖ್ಯವಾದವು. (ಕೆ)

**ಕಲೈಡೊಸ್ಕೋಪ್ :** ವಿಧವಿಧವಾದ ನಯನಮನೋಹರ ರೂಪಾಕೃತಿಗಳನ್ನು ನೀಡುವ ಒಂದು ದೃಗುಪಕರಣ, ವಿವಿಧ ಚಿತ್ರದರ್ಶಕ. ಬಹುರೂಪದರ್ಶಕವೆಂದೂ ಕರೆಯುವುದುಂಟು. ಸರ್ ಡೇವಿಡ್ ಬ್ರ್ಯೂಸ್ಟರ್ ಎಂಬಾತ ಇದನ್ನು ರೂಪಿಸಿ ಅದರ ಮೇಲಿನ ಏಕಸ್ವವನ್ನು (1817) ಪಡೆದ. ಉಪಕರಣದ ತತ್ತ್ವವಿಷ್ಟು: ಇದರ ತಳಭಾಗದ ಅರೆಯಲ್ಲಿಟ್ಟಿರುವ ಬಣ್ಣಬಣ್ಣದ ಗಾಜಿನ ಚೂರುಗಳು ಒಳಪಕ್ಕದಲ್ಲಿ ಅಳವಡಿಸಿರುವ ಕನ್ನಡಿಗಳ ಮೂಲಕ ಪ್ರತಿಫಲನ ಹೊಂದಿ ಸಮಾಂಗಾಕೃತಿಗಳು (ಸಿಮೆಟ್ರಿಕಲ್ ಫಿಗರ್ಸ್) ಕಾಣುತ್ತವೆ. ಕೊಳವೆಯಾಕಾರದಲ್ಲಿರುವ ಈ ಉಪಕರಣವನ್ನು ಅದರ ಲಂಬಾಕ್ಷದ ಸುತ್ತ ತಿರುಗಿಸಿದಂತೆಲ್ಲ ಬಗೆಬಗೆಯ ಆಕೃತಿಗಳು ಕಾಣಬರುತ್ತವೆ. ಮೊದಮೊದಲು ಒಂದು ಜೊತೆ ಸಮತಲ ಕನ್ನಡಿಗಳನ್ನು ಅವು ಒಂದಕ್ಕೊಂದು ನಿರ್ದಿಷ್ಟ ಕೋನದಲ್ಲಿರುವಂತೆ (360°ಯ ಅಪವರ್ತನಗಳು) ಓರೆಯಾಗಿಟ್ಟು, ಬಣ್ಣಬಣ್ಣದ ಗಾಜಿನ ಚೂರುಗಳನ್ನು ಉಪಯೋಗಿಸಿ ವಿಚಿತ್ರಾಕೃತಿಗಳನ್ನು ತರಿಸುವುದಿತ್ತು. ಕಿರ್ಚರ್, ಹ್ಯಾರಿಸ್, ವುಡ್, ಬ್ರ್ಯಾಡ್ಲಿ ಮತ್ತಿತರರು ರೂಪಿಸಿದ ಬಹುದರ್ಪಣ ಪ್ರತಿಫಲನದ ತತ್ತ್ವವೇ ಈ ಕಲೈಡೊಸ್ಕೋಪಿನ ತತ್ತ್ವವೆಂದು ಬಗೆದು ಈ ಉಪಕರಣವನ್ನು ಅಲ್ಲಗಳೆಯಲಾಯಿತಾದರೂ ಇದರಲ್ಲಿ ಉಂಟಾಗುವ




ಚಿತ್ರ A ಕಲೈಡೊಸ್ಕೋಪಿನ ಪಾರ್ಶ್ವಕೋಟಿ 1. ಅಪಾರದರ್ಶಕ ಗಾಜುಬಿಲ್ಲೆ 2. ಚಿಕ್ಕ ಚಿಕ್ಕ ಗಾಯ ಚೂರುಗಳು 3. ಪಾರದರ್ಶಕ ಗಾಜು ಬಿಲ್ಲೆ 4 ಹೊಸ ಕೊಳವೆ 5 ರಂಧ್ರವಿರುವ ಪಾರದರ್ಶಕ ಗಾಜು ಬಿಲ್ಲೆ ಚಿತ್ರ B ಕಲೈಡೊಸ್ಕೋಪಿನಲ್ಲಿ ಕಾಣುವ ಚಿತ್ರ ವಿನ್ಯಾಸ

ಬಲು ಸುಂದರವಾದ ಸಮಾಂಗಾಕೃತಿಗಳಿಗೆ ಕಾರಣವೇನು ಎಂಬುದರ ಬಗ್ಗೆ ಯಾರೂ ಒಂದು ನಿರ್ದಿಷ್ಟ ಕಾರಣ ಕೊಡಲಿಲ್ಲ. ಪ್ರತಿಬಿಂಬಗಳು ಮತ್ತಷ್ಟೂ ಸುಂದರವಾಗಿ ಕಾಣಬರಲು ಮೂರು ಸಮತಲ ಕನ್ನಡಿಗಳನ್ನು ಬಳಸಿ ಈ ಉಪಕರಣವನ್ನು ತಯಾರಿಸುವುದು ರೂಢಿ. ಬಹು ಪಾರ್ಶ್ವೀಯ ಪ್ರತಿಫಲನದಿಂದಾಗಿ ವಿವಿಧ ವಿಚಿತ್ರ ಹಾಗೂ ಸುಂದರ ಆಕೃತಿಗಳು ಮೂಡುತ್ತವೆ.

**ಉಪಕರಣದ ವಿವರಗಳಿವು :** ಒಂದೇ ಗಾತ್ರವಿಳ್ಳ, ಆಯಾಕಾರದ ಮೂರು ಸಮತಲ ಕನ್ನಡಿಗಳನ್ನು ಒಂದಕ್ಕೊಂದು 60° ಕೋನದಷ್ಟು ಓರೆಯಾಗಿರುವಂತೆ (ತ್ರಿಕೋನಾಕಾರ) ಅಳವಡಿಸಿರುತ್ತಾರೆ.

ಒಂದೊಂದು ಕನ್ನಡಿಯ ಎರಡೂ ಅಂಚುಗಳು ಮತ್ತೊಂದರ ಆಯಾ ಕಡೆಯ ಅಂಚುಗಳಿಗೆ ಹೊಂದಿಕೊಂಡು ಸೇರಿಕೊಂಡಿರುತ್ತವೆ. ಈ ರಚನೆಯ ಒಂದುಪಕ್ಕದಲ್ಲಿ ಒಂದು ದುಂಡನೆಯ ಮತ್ತು ಮಧ್ಯೆ ರಂಧ್ರವಿರುವ ಪಾರಕ ಗಾಜಿನ ಬಿಲ್ಲೆ ಇರುತ್ತದೆ. ಮತ್ತೊಂದು ಪಕ್ಕದಲ್ಲಿ ಎರಡು ದುಂಡನೆಯ ಗಾಜಿನ ಬಿಲ್ಲೆಗಳಿದ್ದು–ಒಂದು ಪಾರಕ, ಮತ್ತೊಂದು ಅಪಾರಕ–ಇವುಗಳ ನಡುವೆ ಇರುವ ಜಾಗದಲ್ಲಿ ಚಿಕ್ಕಚಿಕ್ಕ ಗಾಜಿನ ಚೂರುಗಳಿರುತ್ತವೆ. ಇವಿಷ್ಟನ್ನೂ ಒಂದು ದುಂಡನೆಯ ರಟ್ಟಿನ ಅಥವಾ ಲೋಹದ ಕೊಳವೆಯಲ್ಲಿ ಅಳವಡಿಸಲಾಗುವುದು. ಕೆಲವು ತಯಾರಕರು ಲೋಹದಿಂದ ಮಾಡಿದ ಮೂರು ಕನ್ನಡಿಗಳನ್ನು 60° ಕೋನದಲ್ಲಿಟ್ಟು ಉಪಕರಣವನ್ನು ರಚಿಸುತ್ತಾರೆ. ಕೇವಲ ಪಾರದರ್ಶಕ ಗಾಜಿನ ಬಿಲ್ಲೆಯಿರುವ ಕಡೆಯಿಂದ ಕಣ್ಣಿನಿಂದ ನೋಡುವುದು ಸಾಧ್ಯ. ಕೊಳವೆಯನ್ನು ಅದರ ಲಂಬಾಕ್ಷದ ಸುತ್ತ ತಿರುಗಿಸಿದರೆ ಸಮಾಂಗಾಕೃತಿಗಳ ಸುಂದರ ನೋಟ ಕಾಣಸಿಗುತ್ತದೆ. ಇವು ಮೂಡಿಬರುವುದು ಹೀಗೆ: ಕಣ್ಣಿನ ಎದುರು ಇರುವ ಕನ್ನಡಿಗಳ ಅಂಚುಗಳಿಂದಾಗಿ ಗೋಚರವಲಯ ಸೀಮಿತಗೊಳ್ಳುತ್ತದೆ. ಕೊಳವೆಯ ಒಂದು ತುದಿಯಿಂದ ಸ್ವಲ್ಪ ದೂರದಲ್ಲಿ ವಸ್ತುವಿದ್ದು ಕನ್ನಡಿಯ ಸಮತಲದ ನೇರಕ್ಕೆ ಸರಿಯಾಗಿ ಕಣ್ಣು ಇರದಿದ್ದ ಪಕ್ಷಕ್ಕೆ ವಸ್ತು ಮತ್ತು ಅದರ ಪ್ರತಿಬಿಂಬ ಕನ್ನಡಿಯ ಅಂಚುಗಳಿಂದಾದ ಬೇರೆ ಬೇರೆ ಗೆರೆಗಳಿಂದ ಮುಚ್ಚಿದಂತೆ ಕಾಣುತ್ತದೆ. ಇದರಿಂದಾಗಿ ಪ್ರತಿಬಿಂಬ ಪೂರ್ಣ ಸಮಾಂಗವಾಗಿರದು. ಕನ್ನಡಿಯ ಹೊರ ಅಂಚಿನ ಬಳಿ ಒಂದು ರೇಖಾಚಿತ್ರವನ್ನು ಅಥವಾ ಕನ್ನಡಿಗಳು ಕೂಡುವ ಕೋನಸ್ಥಾನದಲ್ಲಿ ಒಂದು ಘನಾಕೃತಿಯನ್ನು ಇಟ್ಟು ಮತ್ತೊಂದು ತುದಿಯಿಂದ ಯಾವ ನೇರದಲ್ಲಿ ನೋಡಿದರೂ ಸಮಾಂಗ ನಮೂನೆ ಕಾಣುತ್ತದೆ. ಒಂದು ವೇಳೆ ಕನ್ನಡಿಗಳು ಛೇದಿಸುವ ರೇಖೆಯ ನೇರದಲ್ಲಿ ದೃಷ್ಟಿ ಇದ್ದು, ವಸ್ತು ಕನ್ನಡಿಗಳ ಅಂಚಿನ ಹೊರಗಿದ್ದರೂ ಸಮಾಂಗ ನಮೂನೆ ದೊರೆಯುತ್ತದೆ. ಸಾಮಾನ್ಯವಾಗಿ ಕನ್ನಡಿಗಳು ಅಳವಡಿಕೆಯಾಗಿರುವ ತ್ರಿಕೋನಾಕಾರದ ರಚನೆಯ ಒಂದು ತುದಿಯ ಕೇಂದ್ರ ಭಾಗದಲ್ಲಿ ಕಣ್ಣು ಇರುವಂತೆ ಮತ್ತು ಮತ್ತೊಂದು ತುದಿಗೆ ಹತ್ತಿರವಿರುವಂತೆ ವಸ್ತುಗಳನ್ನು ವ್ಯವಸ್ಥೆಗೊಳಿಸಲಾಗುತ್ತದೆ. ಕಾಣಬರುವ ನಮೂನೆಗಳು ನಿರ್ದಿಷ್ಟವಾಗಿರದಿದ್ದರೂ ನೋಡುವವನಿಗೆ ತೃಪ್ತಿಯಾಗುವಷ್ಟರ ಮಟ್ಟಿಗೆ ಸಮಾಂಗವಾಗಿರುತ್ತವೆ. ಬ್ರ್ಯೂಸ್ಟರ್ ತನ್ನ ಕಲೈಡೊಸ್ಕೋಪಿನಲ್ಲಿ ಕಡಿಮೆ ಸಂಗಮದೂರದ ಉಬ್ಬು ಮಸೂರವೊಂದನ್ನು ಜಾರುಮಾದರಿಯ ಹೊರಕೊಳವೆಗೆ ಅಳವಡಿಸಿ ವಸ್ತುವಿನ ಪ್ರತಿಬಿಂಬ ಕನ್ನಡಿಯ ತಳದ ಮೇಲೆ ಬೀಳುವಂತೆ ವ್ಯವಸ್ಥೆ ಮಾಡಿದ್ದ. *

**ಕಲೋಡಿಯನ್ :** ಮದ್ಯಸಾರ, ಈಥರುಗಳಲ್ಲಿ (1 : 7) ನೈಟ್ರೊಸೆಲ್ಲುಲೋಸನ್ನು ಕರಗಿಸಿದ ದ್ರಾವಣ. ಮದ್ಯಸಾರ, ಈಥರುಗಳು ಆರಿಹೋದಾಗ, ಚರ್ಮಕ್ಕೆ ಹಚ್ಚಿದ್ದು ತೆಳು ಪದರವಾಗಿ ಉಳಿಯುತ್ತವೆ. ಚರ್ಮಕ್ಕೆ ಹಚ್ಚಿದ ಕಡೆ ಧೂಳು, ಗಾಳಿ ಸೋಕದಂತೆ ಮುಚ್ಚಿರುವುದು. ಚರ್ಮದ ಮೇಲಿನ ಪ್ರಭಾವಕ್ಕಾಗಿ ಇದರಲ್ಲೇ ಹಲವು ಮದ್ದುಗಳನ್ನು ಹಾಕುವುದುಂಟು. ಆದರೆ ಅವು ಈ ಪದರದೊಳಗೇ ಇದ್ದು ಚರ್ಮಕ್ಕೆ ತಾಕದಿರುವುದರಿಂದ ಕೆಲಸಕ್ಕೆ ಬಾರದಾಗುತ್ತವೆ. **(ಡಿ.ಎಸ್.ಎಸ್.)**

**ಕಲ್ಕಟ್ಟಣೆ :** ಕೆರೆಗಳ ಏರಿಯ ಕೆಳಭಾಗದಲ್ಲಿ ಸಾಮಾನ್ಯವಾಗಿ ನಿರ್ಮಿಸಲಾಗುವ ಒಂದು ಬಗೆಯ ತಡೆಗೋಡೆ (ರಿವೆಟ್‌ಮೆಂಟ್). ಕೆಲವೆಡೆ ನದಿಯ ಅಕ್ಕಪಕ್ಕಗಳಲ್ಲೂ (ದಂಡೆ–ಕಡೆಯಲ್ಲಿ) ಇಂಥ ತಡೆಗೋಡೆಯನ್ನು ಹಾಕುತ್ತಾರೆ. ಕೆರೆ ಅಥವಾ ನದಿ ದಂಡೆಯ ಸವೆತವನ್ನು ತಡೆಗಟ್ಟುವುದೇ ಇದರ ಉದ್ದೇಶ. ಪ್ರವಾಹದ ಅಥವಾ ಅಲೆಗಳ ಹೊಡೆತವನ್ನು ಎದುರಿಸಿ ನಿಲ್ಲಬಲ್ಲಂಥ ಕಾಡುಗಲ್ಲುಗಳಿಂದ ಇಂಥ ರಚನೆ ಸಾಧ್ಯ. ಕಲ್ಕಟ್ಟಣೆಯ ಓಟ ನೀರಿನ ಕಡೆಗೆ ಇದ್ದು ಭಯಾನಕ ಪ್ರವಾಹಗಳನ್ನು ಅಥವಾ ಅಲೆಗಳನ್ನು ಮತ್ತೆ ಕೆರೆಯೊಳಕ್ಕೆ ನಿರ್ದೇಶಿಸುವಂತಿರುತ್ತದೆ. ಇದರ ದಪ್ಪ ಮತ್ತು ಉದ್ದವನ್ನು ನಿರ್ಮಾಣ ಸ್ಥಳದ ಮಣ್ಣಿನ ಗುಣವನ್ನು ಅರಿತು ನಿರ್ಧರಿಸುತ್ತಾರೆ. ಸಾಮಾನ್ಯವಾಗಿ ಏರಿಯ ಮುಂದುಗಡೆ 1½' ದಪ್ಪದ ಕಾಡುಗಲ್ಲಿನ ಕಲ್ಕಟ್ಟಣೆಯನ್ನು ಕಟ್ಟಿ ಅದರ ಹಿಂದೆ 6" ದಪ್ಪದ ಒಡೆದ ಕಲ್ಲು ಮತ್ತು ಗರಸನ್ನು (ಗ್ರಾವೆಲ್) ತುಂಬುವುದು ಕಲ್ಕಟ್ಟಣೆಯನ್ನು ನಿರ್ಮಿಸುವಲ್ಲಿ ಅನುಸರಿಸುವ ಕ್ರಮ. ಸಣ್ಣ ಕೆರೆಗಳ ಏರಿಯ ಮೇಲೆ ನೀರಿನ ಹೊಡೆತ ಹೆಚ್ಚಾಗಿಲ್ಲದ ಕಡೆಗಳಲ್ಲಿ ಇದರ ದಪ್ಪ 1' ಇದ್ದರೆ ನೀರಿನ ಹೊಡೆತ ಹೆಚ್ಚಾಗಿರುವೆಡೆ 2'ಗಿಂತಲೂ ಹೆಚ್ಚು ದಪ್ಪವಿರುತ್ತದೆ. ಕಲ್ಕಟಣೆಯ ಹಿಂದೆ ತುಂಬುವ ಮಣ್ಣು ಕೆರೆಯಲ್ಲಿ ನೀರು ತುಂಬಿದ್ದರಿಂದ ಮೆತುವಾಗದಂತಿರಬೇಕಾಗುತ್ತದೆ. ಅಲ್ಲದೆ ಚಿಕ್ಕ ಪ್ರಾಣಿಗಳು ಬಿಲಗಳನ್ನು ತೋಡಿಕೊಳ್ಳಲು ಅವಕಾಶವಿರದಂತಿರಬೇಕು. ಮಣ್ಣಿನ ಬದಲಿಗೆ ಕಲ್ಲಿನ ಜಲ್ಲಿ, ಕ್ವಾರಿಯಲ್ಲಿ ಸಿಕ್ಕುವ ಚಕ್ಕೆಗಳು, ಒಡೆದ ಜಮ್ಮಿಟ್ಟಿಗೆ (ಲ್ಯಾಟರೈಟ್) ಮತ್ತು ಗರಸನ್ನು ಕಲ್ಕಟ್ಟಣೆಯ ಹಿಂದೆ ತುಂಬುವುದು ನವೀನ ಕ್ರಮ. ಕಲ್ಕಟ್ಟಣೆಯ ತಳಭಾಗ ನೀರಿನ ಕನಿಷ್ಠ ಮಟ್ಟಕ್ಕೆ 2'–3' ಕೆಳಗಿದ್ದು ಮೇಲ್ಮಟ್ಟ ನೀರಿನ ಗರಿಷ್ಠಮಟ್ಟಕ್ಕೆ ಮೇಲಕ್ಕಿರುತ್ತದೆ. ಕಲ್ಕಟ್ಟಣೆಯ ನಿರ್ಮಾಣದಲ್ಲಿ ಏಕರೀತಿ ಮಂದವಿರುವ ಕಲ್ಲುಗಳನ್ನು ಬಳಸುವುದು ರೂಢಿ.

ಕಲ್ಕಟ್ಟಣೆಯ ನಿರ್ಮಾಣದಲ್ಲಿ ಕೆರೆಯ ದಂಡೆಯಲ್ಲಿ ಮರದ ದಿಮ್ಮಿಗಳನ್ನು ನೆಟ್ಟು ಅವುಗಳ ಮಧ್ಯೆ ಒಡೆದ ಕಲ್ಲುಗಳನ್ನು ಹಾಕುವುದು ಮತ್ತೊಂದು ಕ್ರಮ. ಇದರಲ್ಲಿ ನೀರಿನ ಹೊಡೆತ ಹಿಂದೆ ಸರಿಯುವುದಲ್ಲದೆ ದಂಡೆಯ ಮೇಲೆ ಮಣ್ಣು, ಮರಳು ಇತ್ಯಾದಿಗಳು ಸೇರಿ ದಂಡೆಯ ಬೆಳವಣಿಗೆಗೆ ಅವಕಾಶವಾಗುತ್ತದೆ. **(ಎಚ್.ಸಿ.ಕೆ.)**

**ಕಲ್ಕತ್ತ ಜರ್ನಲ್ :** 1818ರ ಅಕ್ಟೋಬರ್ 2ರಂದು ಕಲ್ಕತ್ತದಲ್ಲಿ ಪ್ರಕಟಣೆ ಆರಂಭವಾಗಿ ಶೀಘ್ರಕಾಲದಲ್ಲೇ ಅತ್ಯಂತ ಪ್ರಸಿದ್ಧಿ ಪಡೆದು ಸಾಹಸ ಮೆರೆದು ನಾಗರಿಕರ ಹಿತರಕ್ಷಣೆಗಾಗಿ ಹೋರಾಡಿದ ದ್ವಿವಾರಪತ್ರಿಕೆ. ಆರಂಭದಲ್ಲಿ 8 ಪುಟಗಳನ್ನೊಳಗೊಂಡಿತ್ತು. ಪ್ರತಿಯ ಬೆಲೆ 1 ರೂ. ಯಾರೇ ತಪ್ಪುಮಾಡಲಿ, ಅದನ್ನು ಖಂಡಿಸುವುದೂ ಕರ್ತವ್ಯಪಾಲನೆಯ ಬಗ್ಗೆ ಸೂಕ್ತ ಎಚ್ಚರಿಕೆ ನೀಡುವುದೂ ಸತ್ಯೈಕ ಪಕ್ಷಪಾತದಿಂದ ಸುದ್ದಿಗಳನ್ನು ಪ್ರಕಟಿಸುವುದೂ ಇದರ ಕೆಲವು ಮುಖ್ಯೋದ್ದೇಶಗಳು. ಜೇಮ್ಸ್ ಸಿಲ್ಕ್ ಬಂಕಿಗ್‌ಹ್ಯಾಂ ಇದರ ಪ್ರಥಮ ಸಂಪಾದಕ. ಈತ ಬ್ರಿಟಿಷ್ ಪ್ರಜೆ, ಸಾಹಸಿ, ಪ್ರಗತಿಪರದೃಷ್ಟಿ ತಳೆದಿದ್ದಾತ. ಸಂಪಾದಕನಾಗುವ ಮೊದಲು ಈತ ಹುಮಾಯೂನ್ ಷಹ ಎಂಬ ನೌಕೆಯ ಕಪ್ತಾನನಾಗಿದ್ದ. ಮಸ್ಕಾಟಿನ ಇಮಾಮರ ಆಜ್ಞೆಯಂತೆ ಹಡಗಿನಲ್ಲಿ ಗುಲಾಮರನ್ನು ಮಡಗಾಸ್ಕರ್ ತೀರಕ್ಕೆ ಕೊಂಡೊಯ್ಯಲು ನಿರಾಕರಿಸಿ ತನ್ನ ಹುದ್ದೆಗೆ ರಾಜೀನಾಮೆಯಿತ್ತ. ಇದರಿಂದಾಗಿ ಗವರ್ನರ್–ಜನರಲ್ ಮತ್ತು ಲಾರ್ಡ್ ಬಿಷಪ್ ಮೊದಲಾದವರ ಪ್ರಶಂಸೆ ಗಳಿಸಿದ. ಕಲ್ಕತ್ತ ಜರ್ನಲ್ ಪ್ರಾರಂಭವಾದ ಅಲ್ಪಕಾಲದಲ್ಲೇ ಅದು ಅತ್ಯಂತ ದಕ್ಷತೆಯಿಂದ ನಿರ್ವಹಿಸಲಾದ ಸ್ವತಂತ್ರವೂ ಚುರುಕೂ ಆದ ಪತ್ರಿಕೆಯೆಂದು ಹೆಸರು ಗಳಿಸಿತು. ಅದರಲ್ಲಿ ಎಲ್ಲ ರೀತಿಯ ಸುದ್ದಿಗಳಿಗೂ ಪ್ರಾತಿನಿಧ್ಯವಿತ್ತು. ಪೋಲೀಸರ ಅದಕ್ಷತೆ, ಐರೋಪ್ಯ ಉಡುಪು ತೊಟ್ಟ ಕೆಲವರು ಕೋಲ್ಕತದ ಬೀದಿಗಳಲ್ಲಿ ತೋರಿಸುತ್ತಿದ್ದ ಅಸಭ್ಯ ನಡೆವಳಿಕೆ ಮುಂತಾದವುಗಳ ಬಗ್ಗೆ ಗಮನ ಸೆಳೆಯುವ ಲೇಖನಗಳಿರುತ್ತಿದ್ದುವು. ಸಾಹಿತ್ಯದ ಅಭಿರುಚಿಯನ್ನು ಪ್ರೋತ್ಸಾಹಿಸುವ ಪ್ರಯತ್ನವನ್ನು ಈ ಪತ್ರಿಕೆಯೇ ಆರಂಭ ಮಾಡಿತೆನ್ನಬಹುದು. ಆಂಗ್ಲಕವಿ ಬೈರನ್ನನ 'ಡಾನ್ ವಾನ್' ಮತ್ತು ಸರ್ ವಾಲ್ಟರ್ ಸ್ಕಾಟನ 'ಇವಾನ್ ಹೋ' ಮುಂತಾದ ಕೃತಿಗಳನ್ನು ಈ ಪತ್ರಿಕೆ ಪರಿಚಯ ಮಾಡಿಸಿಕೊಟ್ಟಿತು. 207 ಚಂದಾದಾರರಿಂದ ಆರಂಭವಾದ ಪತ್ರಿಕೆ ಕೇವಲ ಒಂದು ವರ್ಷದಲ್ಲಿ ತನ್ನ ಪ್ರಸಾರಸಂಖ್ಯೆಯನ್ನು ದ್ವಿಗುಣಗೊಳಿಸಿತು. 1822ರ ಹೊತ್ತಿಗೆ ಬಹಳ ಪ್ರಸಾರವುಳ್ಳ ಭಾರತೀಯ ಪತ್ರಿಕೆಯೆನಿಸಿಕೊಂಡಿತು. ಆಧುನಿಕ ಭಾರತದ ಪ್ರತಿಕೋದ್ಯಮದ ಇತಿಹಾಸದಲ್ಲಿ ಕಲ್ಕತ್ತ ಜರ್ನಲ್ ಪತ್ರಿಕೆ ಅತಿ ಹೆಚ್ಚು ಚಂದಾದಾರರನ್ನುಳ್ಳ, ಅತಿ ಜನಪ್ರಿಯವಾದ ಮತ್ತು ಹೆಚ್ಚು ಲಾಭ ಗಳಿಸುವ ಶಕ್ತಿಯುಳ್ಳ ಪತ್ರಿಕೆಯೆಂದೇ ಪ್ರಸಿದ್ಧಿಗಳಿಸಿದ್ದು ಗಮನಾರ್ಹವಾದ ಸಂಗತಿ.

ಬಕಿಂಗ್‌ಹ್ಯಾಮನ ಧಾರಾವಾಹಿ ಬರೆಹಗಳಿಂದ ಕಲ್ಕತ್ತ ಜರ್ನಲ್ ಜನಪ್ರಿಯತೆಯನ್ನೂ ಜನಸಂಪರ್ಕವನ್ನೂ ಹೆಚ್ಚಿಸಿಕೊಂಡಿತು. ಆತ ತನ್ನ ಅಗಾಧವಾದ ಅನುಭವದ ಆಧಾರದ ಮೇಲೆ ಸಮುದ್ರಯಾನಕ್ಕೆ ಹೊಸ ಮಾರ್ಗಗಳನ್ನು, ಹೊಸ ಸಂಪರ್ಕಸಾಧನಗಳನ್ನು ಮತ್ತು ಮುಂಬಯಿಯಿಂದ ಲಂಡನ್ನಿಗೆ ಸ್ಥಳೀಯ ಸೌಲಭ್ಯಗಳ ಸಹಾಯದಿಂದ ಸಾಧ್ಯವಾಗುವ ವಾಯುಮಾರ್ಗವನ್ನು ಕೂಡ ಸೂಚಿಸಿದ. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಹೆಚ್ಚಾಗಿ ಸಂಚರಿಸಿದ್ದನಲ್ಲದೆ ಪೌರಸ್ತ್ಯ ಜನತೆಯ ಸಂಪ್ರದಾಯ ಮತ್ತು ಸ್ವಭಾವಗಳನ್ನು ಬಕಿಂಗ್‌ಹ್ಯಾಂ ಬಹಳ ಚೆನ್ನಾಗಿ ಅರಿತುಕೊಂಡಿದ್ದ. ಸಾಹಿತ್ಯದಲ್ಲಿ ಆಳವಾದ ಆಸಕ್ತಿಯನ್ನಿಟ್ಟುಕೊಂಡಿದ್ದ ಆತನಿಗೆ ಮಾನವಶಾಸ್ತ್ರದಲ್ಲಿ ಕೂಡ ವಿಶೇಷವಾದ ಅಭಿರುಚಿಯಿತ್ತು.

ಈಸ್ಟ್ ಇಂಡಿಯ ಕಂಪನಿಯ ಏಕಸ್ವಾಮ್ಯವನ್ನು ಬಹಿರಂಗವಾಗಿ ವಿರೋಧಿಸಿದ್ದು ಕಲ್ಕತ್ತ ಜರ್ನಲ್ ಪತ್ರಿಕೆಯೇ. ಇಡೀ ಏಷ್ಯ ಖಂಡವನ್ನೇ ಸ್ವತಂತ್ರ ಮಾರುಕಟ್ಟೆಯನ್ನಾಗಿಸ ಬೇಕೆಂದು ಈ ಪತ್ರಿಕೆ ಬಹಳ ಶ್ರದ್ಧೆಯಿಂದ ಹೋರಾಡಿತು. ಸೂಕ್ತಶಾಸಕಾಂಗವಿಲ್ಲದ ಸರ್ಕಾರದ ಬೇಜವಾಬ್ದಾರಿ ನಡವಳಿಕೆಯನ್ನು ಇದರ ಸಂಪಾದಕೀಯಗಳು ತುಂಬಾ ಕಟುವಾಗಿ ಟೀಕಿಸುತ್ತಿದ್ದುವು.

ಅಂದು ಭಾರತದಲ್ಲಿ ಪ್ರಚಲಿತವಿದ್ದ ಸತಿ ಪದ್ಧತಿಯನ್ನು ಖಂಡಿಸಿ ಅನೇಕ ಅಗ್ರಲೇಖನಗಳು ಇದರಲ್ಲಿ ಪ್ರಕಟವಾದುವು. ಅದನ್ನು ಕೊನೆಗೊಳಿಸುವ ಬಗ್ಗೆ ಸರ್ಕಾರದ ನಿರ್ಲಕ್ಷ್ಯವನ್ನು ಅವು ಎತ್ತಿ ತೋರಿಸಿದುವು. ಭಯ ಪಕ್ಷಪಾತಗಳಿಲ್ಲದ ಬರೆಹವೇ ಬಕಿಂಗ್‌ಹ್ಯಾಮನ ಗುರಿಯಾಗಿತ್ತು. ಸಾರ್ವಜನಿಕರ ಕುಂದುಕೊರತೆಗಳ ಸಾರ್ವಜನಿಕ ಸಮಸ್ಯೆಗಳ ಚರ್ಚೆಗೆ ಪತ್ರಿಕೆಯಲ್ಲಿ ಯಾವಾಗಲೂ ಸ್ವಾಗತವಿತ್ತು. ಪತ್ರಿಕೆಯ ನಿರ್ದಾಕ್ಷಿಣ್ಯನೀತಿಯಿಂದಾಗಿ ಬಕಿಂಗ್‌ಹ್ಯಾಂ ಅಧಿಕಾರಿಗಳ ವಿರೋಧ ಗಳಿಸಿಕೊಂಡ. ಆದರೂ

ಅದಕ್ಕೆ ಜನಮೆಚ್ಚುಗೆಯಿತ್ತು. ಅದು ತನ್ನ ವಿರೋಧಿ ಪತ್ರಿಕೆಗಳನ್ನು ಸೋಲಿಸಿ ಮುಂದುವರಿಯಿತು. ಅಧಿಕಾರಿಗಳಿಗೆ ಅದರ ವ್ಯಂಗ್ಯ ಬರೆಹಗಳನ್ನು ಕಂಡರೆ ಆಗುತ್ತಿರಲಿಲ್ಲ. ಅವರು ಯಾವುದೋ ಕಾನೂನಿನ ಜಗಳದಲ್ಲಿ ಬಕಿಂಗ್‌ಹ್ಯಾಮನನ್ನು ತೊಡಗಿಸಿ, ಆತನ ಅನುಮತಿಪತ್ರವನ್ನು ಹಿಂತೆಗೆದುಕೊಂಡರಲ್ಲದೆ, 1823ರಲ್ಲಿ ಅವನನ್ನು ಗಡಿಪಾರು ಮಾಡಿದರು. ಮುಂದೆ ಕಲ್ಕತ್ತ ಜರ್ನಲ್ ಸ್ಯಾಂಡಿಸನ ಸಂಪಾದಕತ್ವದಲ್ಲಿ ಮುಂದುವರಿಯಿತಾದರೂ ಭಾರತಸರ್ಕಾರದ ಕಿರುಕುಳವನ್ನೆದುರಿಸಲಾರದೆ ನಿಂತಿತು.

ಭಾರತೀಯ ಪತ್ರಿಕೋದ್ಯಮಕ್ಕೆ ಸ್ಫೂರ್ತಿ ನೀಡಿದ ಬಕಿಂಗ್‌ಹ್ಯಾಮನ ಹೆಸರು ಚಿರಸ್ಥಾಯಿಯಾಗಿರುತ್ತದೆ. ಸಾರ್ವಜನಿಕ ಸಮಸ್ಯೆಗಳನ್ನು ಚರ್ಚಿಸುವ ಮತ್ತು ಅಧಿಕಾರಿಗಳ ನಡವಳಿಕೆಯನ್ನು ಗಮನಿಸುವ ಪದ್ಧತಿ ಆರಂಭವಾದದ್ದು ಅವನ ಪತ್ರಿಕೆಯಿಂದ.

ಭಾರತೀಯ ಪತ್ರಿಕೋದ್ಯಮಕ್ಕೆ ಕಲ್ಕತ್ತ ಜರ್ನಲ್‌ನ ಕೊಡುಗೆಗಳು ಮೂರು: 1 ಅದು ಪತ್ರಿಕೆಯನ್ನು ಜನತೆಯ ಕನ್ನಡಿಯನ್ನಾಗಿಸಿತು; 2 ನಿಷ್ಪಕ್ಷಪಾತ ಹಾಗೂ ಸತ್ಯದಿಂದ ಕೂಡಿದ ಚರ್ಚೆಯ ಯುಗವನ್ನಾರಂಭಿಸಿತು; ಮತ್ತು 3 ಪತ್ರಿಕೋದ್ಯಮಕ್ಕೆ ಜನತೆಯ ಮುಂಚೂಣಿಯ ಸ್ಥಾನ ದೊರಕಿಸಿಕೊಟ್ಟಿತು. (ಎಸ್.ಐ.ಕೆ.)

**ಕಲ್ಕತ್ತ ರಿವ್ಯೂ :** ಕಲ್ಕತ್ತ ವಿಶ್ವವಿದ್ಯಾಲಯದ ಒಂದು ಮಾಸಪತ್ರಿಕೆ. 1844ರಲ್ಲಿ ತ್ರೈಮಾಸಿಕವಾಗಿ ಕಲ್ಕತ್ತ ನಗರದಲ್ಲಿ ಪ್ರಾರಂಭವಾಯಿತು. ಭಾರತೀಯ ವಿಷಯಗಳನ್ನು ಚರ್ಚಿಸುವುದೇ ಇದರ ಮುಖ್ಯ ಗುರಿಯಾಗಿತ್ತು. ಇದರ ಮೊದಲ ಸಂಪಾದಕ ಜಾನ್ ಕೇ. ಇವನ ಅನಂತರ ಅಲೆಕ್ಸಾಂಡರ್ ಡಫ್, ಥಾಮಸ್ ಸ್ಮಿತ್ ಮೊದಲಾದವರು ಸಂಪಾದಕರಾಗಿ ಕೆಲಸ ಮಾಡಿದ್ದರು. 19134ರಲ್ಲಿ ಈ ಪತ್ರಿಕೆಯ ಹೊಸ ಸರಣಿ




ಪ್ರಾರಂಭವಾಗಿ ತ್ರೈಮಾಸಿಕವಾಗಿಯೇ ಮುಂದುವರಿಯಿತು. ಅನಂತರ, 1921ರಲ್ಲಿ ಮಾಸಿಕವಾಗಿ, ಮಾರ್ಪಟ್ಟು, ಕಲ್ಕತ್ತ ವಿಶ್ವವಿದ್ಯಾಲಯದಿಂದ ಪ್ರಕಟವಾಗತೊಡಗಿತು. ಭಾರತದ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಸಾರ್ವಜನಿಕ ಗ್ರಂಥಾಲಯಗಳು, ಸಾಂಸ್ಕೃತಿಕ, ಸಾಹಿತ್ಯಕ ಮತ್ತು ವೈಜ್ಞಾನಿಕ ಸಂಸ್ಥೆಗಳು, ವಿದ್ವಾಂಸರು ಮುಂತಾದದವರೇ ಅಧಿಕ ಸಂಖ್ಯೆಯಲ್ಲಿ ಚಂದಾದಾರರಿರುವ ಈ ಪತ್ರಿಕೆಯಲ್ಲಿ ಸಂಸ್ಕೃತಿ, ಸಾಹಿತ್ಯ, ಶಿಕ್ಷಣ, ರಾಜಕಾರಣ, ಅರ್ಥಶಾಸ್ತ್ರ, ವಾಣಿಜ್ಯ ಮುಂತಾದ ನಾನಾ ವಿಚಾರಗಳನ್ನು ಕುರಿತ ಲೇಖನಗಳು ಪ್ರಕಟವಾಗಿವೆ. ಭಾರತದ ಅತ್ಯಂತ ಹಳೆಯ ಸಾಂಸ್ಕೃತಿಕ ಪತ್ರಿಕೆಯಾದ ಕಲ್ಕತ್ತರಿವ್ಯೂ ಇತಿಹಾಸ ಸಂಶೋಧಕರಿಗೆ ಉಪಯುಕ್ತ. ಈಗ ಈ ಪತ್ರಿಕೆ ಅರ್ಧವಾರ್ಷಿಕವಾಗಿ ಕಲ್ಕತ್ತ ವಿ.ವಿ. ಪ್ರೆಸ್‌ನಿಂದ ಪ್ರಕಟವಾಗುತ್ತಿದೆ. (ಎಸ್.ಬಿ.ಎಸ್.)

**ಕಲ್ಕತ್ತ ವಿಶ್ವವಿದ್ಯಾಲಯ :** ಆಧುನಿಕ ಭಾರತದ ಅತ್ಯಂತ ಹಳೆಯ ವಿಶ್ವವಿದ್ಯಾಲಯ. 1857ರಲ್ಲಿ ಕಲ್ಕತ್ತದಲ್ಲಿ ಸ್ಥಾಪಿತವಾಯಿತು. ಪಶ್ಚಿಮ ಬಂಗಾಲದ ರಾಜ್ಯಪಾಲರು ಇದರ ಕುಲಾಧಿಪತಿ (ಛಾನ್ಸಲರ್). ವಿಶ್ವವಿದ್ಯಾಲಯದ ವ್ಯಾಸಂಗ ಮತ್ತು ಆಡಳಿತ ವಿಚಾರಗಳಲ್ಲಿ ಕುಲಪತಿಗೆ (ವೈಸ್_ಛಾನ್ಸಲರ್) ನೆರವು ನೀಡಲು ಇಬ್ಬರು ಸಮಕುಲಪತಿಗಳು (ಪ್ರೊ_ವೈಸ್–ಛಾನ್ಸೆಲರ್ಸ್) ಮತ್ತು ರಿಜಿಸ್ಟ್ರಾರ್ ಇದ್ದಾರೆ. ಆಗ ಅಫಿಲಿಯೇಟ್ ಆದ ಕಾಲೇಜುಗಳ ಸಂಖ್ಯೆ 153 (2012); ವಿಶ್ವವಿದ್ಯಾಲಯದ ಕಾಲೇಜುಗಳು 6. ಸ್ನಾತಕಪೂರ್ವ ವಿದ್ಯಾರ್ಥಿಗಳು 100,000, ಸ್ನಾತಕೋತ್ತರ 1,000 ವಿಶ್ವವಿದ್ಯಾಲಯದಲ್ಲಿ 18 ಸಂಶೋಧನ ಕೇಂದ್ರಗಳು, 710 ಉಪಾಧ್ಯಾಯರು, 3000 ಅಧ್ಯಾಪಕೇತರ ನೌಕರರು ಇದ್ದಾರೆ. 2001ರಲ್ಲಿ ಈ ವಿಶ್ವವಿದ್ಯಾಲಯಕ್ಕೆ 'ಪಂಚತಾರಾ' ದರ್ಜೆ ದೊರಕಿದೆ. *

ಭರತಖಂಡದ ಇತಿಹಾಸದಲ್ಲಿ ಕಲ್ಕತ್ತಕ್ಕೆ ಎಷ್ಟು ಮಹತ್ತ್ವಪೂರ್ಣಸ್ಥಾನವಿದೆಯೋ ಅಷ್ಟೇ ಮಹತ್ತ್ವದ ಸ್ಥಾನ ಶೈಕ್ಷಣಿಕ ಇತಿಹಾಸದಲ್ಲೂ ಅದಕ್ಕೆ ದೊರೆತಿದೆ. ಭರತಖಂಡದಲ್ಲಿ ಉಚ್ಚ ಶಿಕ್ಷಣಕ್ಕೆ ನಾಂದಿಯನ್ನು ಹಾಡಿದ ಮೂರು ಮಹಾನಗರಗಳಲ್ಲಿ ಮೊದಲನೆಯದೂ ಅಗ್ರಮಾನ್ಯವೂ ಆದದ್ದು ಕಲ್ಕತ್ತ; ಜಗತ್ತಿನ ಯಾವ ಮೂಲೆಯಿಂದಲೇ ಬಂದಿರಲಿ, ಹೊಸ ಬೆಳಕನ್ನು ಮುಕ್ತ–ಹೃದಯದಿಂದ ಸ್ವಾಗತಿಸುವ ಉದಾತ್ತಚೇತನದ ಪ್ರತೀಕವಾಗಿ, ಪ್ರೇರಣೆಯ ಸೆಲೆಯಾಗಿ ನಿಂತ ಬಂಗಾಳಿಗಳ ತವರು ಇದು. ಪಾಶ್ಚಾತ್ಯ ಪ್ರಪಂಚದಲ್ಲಿ ಫ್ರಾನ್ಸ್ ವೈಚಾರಿಕ ಕ್ರಾಂತಿಯ ಆಗರವಾಗಿದ್ದಂತೆ, ಭಾರತದಲ್ಲಿ ಕ್ರಾಂತಿಯ ಕೇಂದ್ರಬಿಂದುವಾಗಿ ಪರಿಣಮಿಸಿದ ಕೀರ್ತಿಯೂ ಈ ಮಹಾನಗರಕ್ಕೆ ಲಭ್ಯವಾಗಿದೆ. ಭಾರತದ ಅತ್ಯಂತ ಜನನಿಬಿಡ ಮಹಾನಗರಗಳಲ್ಲಿ ಪ್ರಥಮಸ್ಥಾನ ಗಳಿಸಿರುವ ಈ ನಗರದಲ್ಲಿ ಭಾರತದ ಮೊಟ್ಟಮೊದಲನೆಯ ವಿಶ್ವವಿದ್ಯಾನಿಲಯವೂ ಸ್ಥಾಪನೆಗೊಂಡಿತೆಂಬ ಸಂಗತಿ ಈ ವೈಚಾರಿಕ ಹಿನ್ನೆಲೆಯಲ್ಲಿ ಆಶ್ಚರ್ಯದ ಸಂಗತಿಯಾಗಿ ಉಳಿಯುವ ಸಂಭವವಿಲ್ಲ. ಕ್ರಾಂತಿಯ ಅಧ್ವರ್ಯುವಾಗಿ, ಪ್ರತಿಭೆ ಪಾಂಡಿತ್ಯಗಳ ತವರಾಗಿ, ರಾಜಕೀಯ ಆರ್ಥಿಕ ಸಾಮಾಜಿಕ ಸಾಹಿತ್ಯಿಕ ಸಮಸ್ಯೆಗಳ ಬೀಡಾಗಿದ್ದೂ ಪರಿಹಾರಗಳನ್ನು ಕಂಡುಕೊಂಡ ಚೈತನ್ಯದ ನಾಡಾದ ಬಂಗಾಲದ ಈ ನಗರದಲ್ಲಿ ವಿಶ್ವವಿದ್ಯಾನಿಲಯದ ಸ್ಥಾಪನೆಯಾದದ್ದೂ ಅಸ್ತಿತ್ವವನ್ನೇ ತಲ್ಲಣಗೊಳಿಸುವ ಪರಿಸ್ಥಿತಿಗಳ ಎದುರಿನಲ್ಲೂ ಸ್ಥಾಯಿಯಾಗಿ, ಶಕ್ತಿಯ ನೆಲೆಯಾಗಿ ಉಳಿದುಕೊಂಡಿದ್ದೂ

ಸೆನೆಟ್ ಭವನದ ಒಂದು ನೋಟ

ಮಹತ್ತ್ವದ ಸಂಗತಿ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಅವಧಿಗಳಲ್ಲಿ ಅನೇಕ ಬಗೆಯ ಅನಿರೀಕ್ಷಿತ ಆಘಾತಗಳಿಗೆ, ಪರೀಕ್ಷೆಗಳಿಗೆ ಗುರಿಯಾದರೂ ತನ್ನ ಸತ್ತ್ವವನ್ನು ಉಳಿಸಿ ಬೆಳೆಸಿಕೊಂಡ ಅಪೂರ್ವ ಇತಿಹಾಸವನ್ನುಳ್ಳ ವಿಶ್ವವಿದ್ಯಾನಿಲಯವಿದು. ಇದು ಅನೇಕ ವಿಕ್ರಮಗಳಿಗೆ ಉದಾಹರಣೆಯಾಗಿದೆ. ಹೀಗಾಗಿ, ಇದರ ಹಿನ್ನೆಲೆ, ಸ್ಥಾಪನೆಯ ಸಾಹಸ, ಸಂಘಟನೆಯ ಸಂಘರ್ಷ, ಸಾಧನೆಯ ಹಿರಿಮೆ–ಒಂದೊಂದೂ ಮಹತ್ತ್ವಪೂರ್ಣ ಸಂಗತಿಗಳಾಗಿವೆ.

ಕಲ್ಕತ್ತ ವಿಶ್ವವಿದ್ಯಾಲಯದ ಸ್ಥಾಪನೆಯ ಇತಿಹಾಸ 1845ರಿಂದಲೇ ಪ್ರಾರಂಭವಾಗುತ್ತದೆ. ಕಲ್ಕತ್ತ ಸಾಧಿಸಿರುವ ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ಅಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಅಗತ್ಯವೂ ಯೋಗ್ಯವೂ ಮಾತ್ರವೇ ಅಲ್ಲ ಅದು ನ್ಯಾಯೋಚಿತ ಬೇಡಿಕೆ ಮತ್ತು ಅನಿವಾರ್ಯ ಸಂಗತಿ ಎಂಬುದಾಗಿ ಎಫ್. ಮಿಲ್ಲೆಟ್, ಜೇಮ್ಸ್ ಅಲೆಕ್ಸಾಂಡರ್, ಸಿ. ಸಿ. ಎಜರ್ ಟನ್, ರಸಮಯ ದತ್, ಪ್ರಸನ್ನ ಕುಮಾರ ಠಾಕೂರ್, ಎಫ್.ಜಿ. ಮೊವಾತ್ ಅವರನ್ನು ಒಳಗೊಂಡಿದ್ದ ಶಿಕ್ಷಣ ಸಮಿತಿ ಒತ್ತಿ ಹೇಳಿತು. ಲಂಡನ್ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಕಲ್ಕತ್ತದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದ ಕರಡು ಯೋಜನೆಯನ್ನೂ ಅದು ಮುಂದಿರಿಸಿತು. ಕುಲಾಧಿಪತಿ, ಕುಲಪತಿ ಮತ್ತು ಗೌರವಾನ್ವಿತ ಸದಸ್ಯರ ಮಂಡಳಿಯನ್ನೊಳಗೊಂಡ ಈ ವಿಶ್ವವಿದ್ಯಾನಿಲಯದಲ್ಲಿ ಮಾನವಿಕ, ನ್ಯಾಯಶಾಸ್ತ್ರ, ವಿಜ್ಞಾನ ಮತ್ತು ಸಿವಿಲ್ ಎಂಜಿನಿಯರಿಂಗ್ ಹಾಗೂ ವೈದ್ಯ ಮತ್ತು ಶಸ್ತ್ರಚಿಕಿತ್ಸಾ ನಿಕಾಯಗಳಿರಬೇಕೆಂದೂ ಸೂಚಿಸಿತು. ವರ್ಷಕ್ಕೆ ಒಮ್ಮೆಯಾದರೂ ಪರೀಕ್ಷೆ ನಡೆಸಬೇಕೆಂದೂ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ಪಡೆದ ಕಾಲೇಜುಗಳ ಅಭ್ಯರ್ಥಿಗಳು ಈ ವಿಭಾಗಗಳಲ್ಲಿನ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದೆಂದೂ ಮಾನವಿಕ, ನ್ಯಾಯಶಾಸ್ತ್ರ ಮತ್ತು ವಿಜ್ಞಾನಗಳಲ್ಲಿ ಬ್ಯಾಚೆಲರ್ ಮತ್ತು ಮಾಸ್ಟರ್ ಪದವಿಗಳಿರಬೇಕೆಂದೂ ಆನರ್ಸ್ ಪದವಿಗಾಗಿ ವಿಶೇಷ ಪರೀಕ್ಷೆ ಇರಬೇಕೆಂದೂ ವೈದ್ಯಶಾಸ್ತ್ರ ಮತ್ತು ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಒಂದು ಪದವಿ ಪರೀಕ್ಷೆ (ವೈದ್ಯಶಾಸ್ತ್ರ), ಒಂದು ಡಿಪ್ಲೊಮಾ ಪರೀಕ್ಷೆ (ಶಸ್ತ್ರಚಿಕಿತ್ಸೆ) ಮತ್ತು ಆನರ್ಸ್ ಪದವಿಗಾಗಿ ವಿಶೇಷ ಪರೀಕ್ಷೆ ಇರಬೇಕೆಂದೂ ಎಂಜಿನಿಯರಿಂಗ್‌ನಲ್ಲಿ ಒಂದು ಪದವಿ ಪರೀಕ್ಷೆ ಇರಬೇಕೆಂದೂ ಸೂಚಿಸಲಾಗಿತ್ತು. ಹೀಗೆ ಮಾಡಿದಲ್ಲಿ, ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಅತ್ಯಂತ ಮಹತ್ತ್ವಪೂರ್ಣಶಕೆಯನ್ನು ತೆರೆದಂತಾಗುತ್ತದೆಂದೂ ಸಮಿತಿ

ಅಭಿಪ್ರಾಯಪಟ್ಟಿತು. ಆದರೆ, ಈ ಯೋಜನೆಗೆ ಆಳರಸರ ರಾಜಧಾನಿಯಲ್ಲಿ ಉತ್ಸಾಹಪೂರ್ಣ ಸ್ವಾಗತ ದೊರೆಯಲಿಲ್ಲ. ಸದ್ಯಕ್ಕೆ ಕಲ್ಕತ್ತದಲ್ಲಿ ವಿಶ್ವವಿದ್ಯಾನಿಲಯವನ್ನು ತೆರೆಯುವುದು ಸಾಧ್ಯವಾಗುವುದಿಲ್ಲ ಎಂಬ ಅವರ ಉತ್ತರ ವಿಶ್ವವಿದ್ಯಾನಿಲಯ ಸ್ಥಾಪನೆಯ ಪ್ರಯತ್ನಕ್ಕೆ ತಣ್ಣೀರೆರಚಿತು. ಹೀಗೆ ಈ ಯೋಜನೆ ಹಿಂದೇಟು ಹೊಡೆಯಿತಾದರೂ ನಿಶ್ಚೇಷ್ಟಿತವಾಗಲಿಲ್ಲ. ಕೆಲವು ವರ್ಷಗಳ ಅನಂತರ ಕಂಪನಿಯ ಸನದನ್ನು ಪುನರ್ನವೀಕರಿಸುವ ಸಂದರ್ಭದಲ್ಲಿ ಈ ಯೋಜನೆಯನ್ನು ಪುನರುಚ್ಚರಿಸಲಾಯಿತು. 1852ರಲ್ಲಿ ಆಗ ಶಿಕ್ಷಣ ಸಮಿತಿಯ ಅಧ್ಯಕ್ಷನಾಗಿದ್ದ ಸಿ. ಎಚ್. ಕ್ಯಾಮೆರಾನ್ ಲಾರ್ಡ್ಸ್ ಸಭೆಯ ಮುಂದೆ ಈ ಯೋಜನೆಯನ್ನು ಮತ್ತೆ ಮಂಡಿಸಿದ. 1853ರ ಏಪ್ರಿಲಿನಲ್ಲಿ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ ಮತ್ತು ಬಂಗಾಳ ಪ್ರಾಂತ್ಯ ನಿವಾಸಿಗಳ ಪರವಾಗಿ ರಾಜಾ ರಾಧಾಕಾಂತ ದೇವ್ ಮತ್ತಿತರ ಗಣ್ಯರು ಸಹಿಮಾಡಿದ ಮನವಿಪತ್ರವನ್ನು ಸಲ್ಲಿಸಲಾಯಿತು. ಲಾರ್ಡ್ಸ್ ಸಭೆಯ ಸೆಲೆಕ್ಟ್ ಸಮಿತಿಯ ಮುಂದೆ 1853ರಲ್ಲಿ ನೀಡಿದ ಸಾಕ್ಷ್ಯದಲ್ಲೂ ಈ ವಿಚಾರವನ್ನು ಪ್ರಬಲವಾಗಿ ಪ್ರತಿಪಾದಿಸಲಾಯಿತು. ಹೀಗೆ ಪ್ರತಿಪಾದಿಸಿದವರಲ್ಲಿ ಮುಖ್ಯರು ರೆವೆರೆಂಡ್ ಅಲೆಕ್ಸಾಂಡರ್ ಡಫ್, ಜಾನ್ ಕ್ಲರ್ಕ್ ಮಾರ್ಷ್‌ಮನ್ ಮತ್ತು ಸಿ. ಎಚ್. ಕ್ಯಾಮರಾನ್, ಬಹುಮಟ್ಟಿಗೆ ಲಂಡನ್ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ, ಸಾಕಷ್ಟು ಶಿಕ್ಷಣ ನಿರ್ಣಾಯಕಗಳನ್ನೊಳಗೊಂಡಂತೆ, ಸರ್ಕಾರಕ್ಕೆ ಅಷ್ಟೇನೂ ಹೆಚ್ಚಿನ ವೆಚ್ಚ ತಗುಲದಂತೆ ಕನಿಷ್ಠ ಪಕ್ಷ ಕೊಲ್ಕತೆಯಲ್ಲಿಯಾದರೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬಹುದು ಎಂದು ರೆವೆರೆಂಡ್ ಡಫ್ ವಾದಿಸಿದ. ಲಂಡನ್ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ನಾಲ್ಕು ಪ್ರಾಂತ್ಯಗಳಲ್ಲಿಯೂ ಕನಿಷ್ಠ ಪಕ್ಷ ಒಂದರಂತೆ, ಆಗ್ರ, ಕಲ್ಕತ್ತ, ಮದರಾಸು ಮತ್ತು ಬೊಂಬಾಯಿ ನಗರಗಳಲ್ಲಿ ಒಂದೊಂದು ವಿಶ್ವವಿದ್ಯಾನಿಲಯ ಇರಬೇಕು ಎಂದು ಮಾರ್ಷ್‌ಮನ್ ಒತ್ತಾಯಪಡಿಸಿದ.

ಭಾರತದ ಜನ ವಿಶ್ವವಿದ್ಯಾನಿಲಯವನ್ನು ಪಡೆಯುವ ವಿಚಾರದಲ್ಲಿ ತುಂಬ ಆಸಕ್ತರಾಗಿದ್ದಾರೆಂದೂ ಅಗತ್ಯಕ್ಕೆ ತಕ್ಕಂತೆ ಅರ್ಹತೆ ಗಳಿಸಿಕೊಂಡಿದ್ದಾರೆಂದೂ ಭಾರತದ ನಾಲ್ಕು ಪ್ರಮುಖ ನಗರಗಳಲ್ಲಿ – ಅಂದರೆ ಬಂಗಾಳಿಯ ಕೇಂದ್ರವಾಗಿರುವ ಕಲ್ಕತ್ತ, ತಮಿಳಿನ ಕೇಂದ್ರವಾಗಿರುವ ಮದರಾಸು, ಮರಾಠಿಯ ಕೇಂದ್ರವಾಗಿರುವ ಬೊಂಬಾಯಿ ಮತ್ತು ಹಿಂದಿಯ ಕೇಂದ್ರವಾಗಿರುವ ಆಗ್ರ ನಗರಗಳಲ್ಲಿ – ಒಂದೊಂದು ವಿಶ್ವವಿದ್ಯಾನಿಲಯ ಇರಲೇಬೇಕೆಂದೂ ವಾದಿಸಿದ. 1853ರಲ್ಲಿ ಪಾರ್ಲಿಮೆಂಟಿಗೆ ಸಲ್ಲಿಸಿದ ವರದಿಯಲ್ಲಿ, ಪ್ರವರ್ಧಮಾನಕ್ಕೆ ತರಲು ಯೋಗ್ಯವಾದ ಎಷ್ಟು ಭಾಷೆಗಳು ಭಾರತದಲ್ಲಿವೆಯೋ ಅಷ್ಟು ಸಂಖ್ಯೆಯಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು ಗ್ರೇಟ್ ಬ್ರಿಟನ್ ಭಾರತಕ್ಕೆ ಸಲ್ಲಿಸಬೇಕಾಗಿರುವ ಸ್ಪಷ್ಟಕರ ಕರ್ತವ್ಯವೆಂದು ತನಗೆ ತೋರುತ್ತದೆ ಎಂದು ಉದ್ಘೋಷಿಸಿದ್ದು ಮಾತ್ರವಲ್ಲ, ಕಲ್ಕತ್ತ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತೊಂದು ಮಹತ್ತರವಾದ ಯೋಜನೆಯ ನಾಂದಿ ಮಾತ್ರವೆಂದೂ ಆಗ್ರ, ಚೆನ್ನೈ, ಮುಂಬಯಿ ಮತ್ತು ಕೊಲಂಬೋಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಯೊಂದಿಗೆ ಈ ಯೋಜನೆ ಪೂರ್ಣರೂಪ ಪಡೆಯಬೇಕೆಂದೂ ಭವಿಷ್ಯ ನುಡಿದ. ವೂಡ್ಸನ 1854ರ ಶೈಕ್ಷಣಿಕ ವರದಿಯಲ್ಲಿ ಡಫನ ಕೈವಾಡವೂ ಇತ್ತು. ಭಾರತದಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಗಾಗಿ ಆತ ತುಂಬ ಹೆಣಗಿದ. ಡಾಲ್‌ಹೌಸಿ ತನ್ನ ನಿರ್ದೇಶಕ ಮಂಡಲಿಯ ವರದಿಯನ್ನು ವಿಶ್ಲೇಷಿಸಿ ಶೈಕ್ಷಣಿಕ ಪ್ರಗತಿಯ ಸರ್ವೇಕ್ಷಣೆಯನ್ನೂ ಶೈಕ್ಷಣಿಕ ಸಂಸ್ಥೆಗಳಿಗೆ ಸಹಾಯಧನ ನೀಡಿಕೆಯ ಬಗ್ಗೆ ತನ್ನ ಅಭಿಪ್ರಾಯವನ್ನೂ ತಿಳಿಸಿದುದರ ಜೊತೆಗೆ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ವಿಚಾರವನ್ನೂ ಒತ್ತಿ ಹೇಳಿದ. ಪ್ರೆಸಿಡೆನ್ಸಿ ಕಾಲೇಜಿನ ಅಭಿವೃದ್ಧಿಯ ಬಗ್ಗೆ ಡಾಲ್‌ಹೌಸಿ ಕೈಗೊಂಡಿದ್ದ ಕ್ರಮಗಳು ವಿಶ್ವವಿದ್ಯಾನಿಲಯದ ಯೋಜನೆಗೆ ಪೂರಕವಾಗಿದ್ದುದನ್ನು ಕಂಡು ಅದಕ್ಕಾಗಿ ವೂಡ್ಸ್ ಡಾಲ್‌ಹೌಸಿಯನ್ನು ಅಭಿನಂದಿಸಿದ್ದೂ ಉಂಟು. ಆದರೆ ಕೆಳಮಟ್ಟದ ಪದವಿಯನ್ನು ನೀಡುವುದರಿಂದ ಯಾವ ಪುರುಷಾರ್ಥವೂ ಸಾಧಿಸುವುದಿಲ್ಲವೆಂದು ಡಾಲ್‌ಹೌಸಿ ಸೂಚಿಸಿದ್ದ; ಯುರೋಪಿನ ಪದವಿಗಳನ್ನು ಆಮದು ಮಾಡಿಕೊಳ್ಳುವುದೂ ಆತನಿಗೆ ಹಿಡಿಸಿರಲಿಲ್ಲ. ಭಾರತ ಸರ್ಕಾರ ವಿಶ್ವವಿದ್ಯಾನಿಲಯದ ಕಾಯಿದೆಗನುಗುಣವಾಗಿ ಮುಂದುವರಿಯದೆ, ಹೆಚ್ಚಿನ ಸೂಚನೆಗಳಿಗೆ ಕಾಯಲು ನಿರ್ಧರಿಸಿತು. ಈ ಮಧ್ಯೆ ಶೈಕ್ಷಣಿಕ ವರದಿಯ ಸಲಹೆಗನುಗುಣವಾಗಿ ಯೋಜನೆಯ ರೂಪರೇಷೆಗಳನ್ನು ಸಿದ್ಧಪಡಿಸಲು ಸರ್ ಜೇಮ್ಸ್ ಕೋಲ್‌ವಿಲ್ಲನ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಕ ಮಾಡಿತು. ಶಾಸನ ಸಭೆಯಲ್ಲಿ ಕಾಯಿದೆಗಳು ಮಂಜೂರಾದ ತರುಣದಲ್ಲಿಯೇ ಸೆನೆಟ್ ಸಭೆ ವಿವರಗಳನ್ನು ಚರ್ಚಿಸುವಂತಿರಬೇಕೆಂಬ ದೃಷ್ಟಿಯಿಂದ ಹೀಗೆ ಮಾಡಲಾಯಿತು. ಚೆನ್ನೈ ಮತ್ತು ಮುಂಬಯಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದ ಕಾರ್ಯವನ್ನೂ ಕೊಲ್ಕತದ ಸಮಿತಿಗೇ ವಹಿಸಲಾಯಿತು. ಮುಖ್ಯಾಂಶಗಳಲ್ಲಿ ಈ ಮೂರೂ ವಿಶ್ವವಿದ್ಯಾನಿಲಯಗಳ ಸ್ವರೂಪ ಒಂದೇ ರೀತಿಯದಾಗಿರಬೇಕೆಂಬ ಉದ್ದೇಶದಿಂದ ಹೀಗೆ ಮಾಡಲಾಯಿತು. ಈ ಸಮಿತಿಯನ್ನು ಮೂರು ಉಪಸಮಿತಿಗಳಾಗಿ ವಿಭಾಗಿಸಲಾಯಿತು. ಒಂದು ಉಪಸಮಿತಿ ವಿಶ್ವವಿದ್ಯಾನಿಲಯ ಕರಡು ಮಸೂದೆಯನ್ನೂ ಎರಡನೆಯದು ಮಾನವಿಕಗಳಲ್ಲಿ ಪರೀಕ್ಷೆ ಹಾಗೂ ಪದವಿ ನೀಡಿಕೆಗಳಿಗೆ ಸಂಬಂಧಿಸಿದ ನಿಯಮಾವಳಿಗಳನ್ನೂ ಉಳಿದದ್ದು ವೈದ್ಯಶಾಸ್ತ್ರ, ನ್ಯಾಯಶಾಸ್ತ್ರ ಮತ್ತು ಸಿವಿಲ್ ಎಂಜಿನಿಯರಿಂಗ್ ವಿಭಾಗಗಳಿಗೆ ಸಂಬಂಧಿಸಿದ ಇದೇ ಬಗೆಯ ಕಾರ್ಯವನ್ನೂ ನಿರ್ವಹಿಸಿದುವು. ಈ ಉಪಸಮಿತಿಗಳಲ್ಲಿ ಮಾನವಿಕ ಉಪಸಮಿತಿ ಮಾಡಿದ ಕೆಲವು ಶಿಫಾರಸುಗಳು ಗಮನಾರ್ಹವಾಗಿವೆ. ಮೆಟ್ರಿಕ್ಯುಲೇಶನ್ ಶಬ್ದ ಅಷ್ಟು ಚೆನ್ನಾಗಿಲ್ಲದಿದ್ದುದರಿಂದ ಎಂಟ್ರೆನ್ಸ್ (ಪ್ರವೇಶ) ಪರೀಕ್ಷೆಯೆಂಬ ಶಬ್ದವನ್ನು ಬಳಸಬಹುದೆಂದೂ ಪದವಿಗಳಿಗೆ ದೇಶೀಯ ಸಮಾನಾರ್ಥಕ ಶಬ್ದಗಳನ್ನು ರೂಢಿಸುವುದಕ್ಕೆ ಬದಲಾಗಿ ಸಾರ್ವತ್ರಿಕ ಮಾನ್ಯತೆ ಮತ್ತು ಚಲಾವಣೆಗಳನ್ನು ಪಡೆದಿದ್ದ ಬಿ.ಎ., ಎಂ.ಎ., ಮುಂತಾದವನ್ನು ಹಾಗೆಯೇ ಇರಿಸಿಕೊಳ್ಳಬೇಕೆಂದೂ ಅಂಗಸಂಸ್ಥೆಯಾಗುವ ಅರ್ಹತೆಗಳನ್ನು ಪೂರೈಸುವಂಥ ಸಂಸ್ಥೆಗಳನ್ನು ಮಾನ್ಯ ಮಾಡಿ ಸ್ನಾತಕ ಹಂತದವರೆಗಿನ ಶಿಕ್ಷಣವನ್ನು ನೀಡಲು ಅವಕಾಶ ಮಾಡಿಕೊಡಬಹುದೆಂದೂ ಶಿಫಾರಸು ಮಾಡಿತು. 1856ರ ಆಗಸ್ಟ್ ತಿಂಗಳಿನಲ್ಲಿ ಈ ಸಮಿತಿ ತನ್ನ ಪೂರ್ವಭಾವಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಕಲ್ಕತ್ತ ವಿಶ್ವವಿದ್ಯಾನಿಲಯದ ಸೂಕ್ತ ತಿದ್ದುಪಡಿಗಳೊಂದಿಗೆ ಬೊಂಬಾಯಿ ಮತ್ತು ಮದರಾಸು ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ಅವಕಾಶ ಮಾಡಿಕೊಡುವ ಕರಡು ಮಸೂದೆ ಗವರ್ನರ್–ಜನರಲನ ಅಧ್ಯಕ್ಷತೆಯಲ್ಲಿದ್ದ ಸಮಿತಿಯ ಅನುಮೋದನೆ ಪಡೆದುಕೊಂಡಿತು. ಶಾಸನಸಭೆಯಲ್ಲಿ ಮಸೂದೆಯ ಅನುಮೋದನೆಯನ್ನು ಕಾಯ್ದು, ಭಾರತದ ಗವರ್ನರ್–ಜನರಲ್ ವಿಶ್ವವಿದ್ಯಾನಿಲಯದ ಕುಲಾಧಿಪತಿಯಾಗಿರುತ್ತಾನೆಂದು ಘೋಷಿಸಲಾಯಿತು. ಸರ್ ಜೇಮ್ಸ್ ವಿಲಿಯಂ ಕೋಲ್‌ವಿಲ್ಲನನ್ನು ಮೊಟ್ಟಮೊದಲ ಕುಲಪತಿಯಾಗಿ ನೇಮಿಸಲಾಯಿತು. 1857ರ ವಿಶ್ವವಿದ್ಯಾನಿಲಯದ ಮಸೂದೆಗೆ ಶಾಸನ ಸಭೆಯ ಒಪ್ಪಿಗೆ ಪಡೆಯಲಾಯಿತು. 1857ರ ಜನವರಿ 24ರಂದು ಅದಕ್ಕೆ ಗವರ್ನರ್–ಜನರಲರ ಒಪ್ಪಿಗೆಯೂ ಸಿಕ್ಕಿತು.

ಈ ಮೊದಲೇ ಹೇಳಿದಂತೆ, ವಿಶ್ವವಿದ್ಯಾನಿಲಯ ಕಾಯಿದೆ ಅನುಮೋದಿತವಾಗುವುದಕ್ಕಿಂತ ಮುಂಚಿತವಾಗಿಯೇ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿತ್ತು. ಮೊದಲ ಸೆನೆಟ್

ವಿಶ್ವವಿದ್ಯಾಲಯಕ್ಕೆ ಸೇರಿದ ಅಶುತೋಷ ವಸ್ತುಸಂಗ್ರಹಾಲಯ

ಸಭೆ ನಡೆದದ್ದು 1857ರ ಜನವರಿ 3ರಂದು. ಕರ್ನಲ್ ಡಬ್ಲ್ಯು. ಗ್ರಾಪೆಲನನ್ನು ರಿಜಿಸ್ಟ್ರಾರ್ ಆಗಿ ಎರಡು ವರ್ಷಗಳ ಅವಧಿಯವರೆಗೆ ಸೆನೆಟ್ ನೇಮಕ ಮಾಡಿತು. ಸೆನೆಟನ್ನು ಮಾನವಿಕ, ನ್ಯಾಯಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಸಿವಿಲ್ ಎಂಜಿನಿಯರಿಂಗ್ – ಎಂದು ನಾಲ್ಕು ಶಿಕ್ಷಣ ನಿಕಾಯಗಳಾಗಿ ವಿಭಾಗಿಸಲಾಯಿತು. 1858ಕ್ಕೆ ಮೊದಲು ಸಿಂಡಿಕೇಟ್ ಸಭೆ ರೂಪುಗೊಳ್ಳಲಿಲ್ಲ. ಅಲ್ಲಿಯವರೆಗೆ ತಾತ್ಕಾಲಿಕ ಸಮಿತಿಯೊಂದು ಅದರ ಕಾರ್ಯಗಳನ್ನು ನಿರ್ವಹಿಸಿದಂತೆ ಕಾಣುತ್ತದೆ. 1857ರಲ್ಲಿ ಈ ಸಮಿತಿ ಹನ್ನೆರಡು ಬಾರಿ ಸಭೆ ಸೇರಿ ಈ ಮೊದಲು ಉಪಸಮಿತಿಗಳು ರೂಪಿಸಿದ್ದ ನಿಯಮಾವಳಿಯನ್ನು ಪರಿಶೀಲಿಸಿತು.

ವಿಶ್ವವಿದ್ಯಾಲಯದ ಸ್ಥಾಪನೆ ಅನುಮೋದಿತವಾದ ಕೂಡಲೇ ಮಾನ್ಯತೆಗಾಗಿ ಕಾಲೇಜುಗಳು ಅರ್ಜಿಗಳನ್ನು ಸಲ್ಲಿಸತೊಡಗಿದವು. ಶಿಕ್ಷಣೇತರ ಕಾರ್ಯಚಟುವಟಿಕೆಯಲ್ಲಿ

ತೊಡಗಿದ್ದ ಲಕ್ನೋದ ವೀಕ್ಷಣಾಲಯವೂ ಮಾನ್ಯತೆಗಾಗಿ ಅರ್ಜಿ ಸಲ್ಲಿಸಿತೆಂಬ ಸಂಗತಿ ಕುತೂಹಲಕಾರಿಯಾಗಿದೆ. ಆದರೆ ನಿಯಮಾವಳಿಯಲ್ಲಿ ಅವಕಾಶವಿಲ್ಲದೆ ಇದ್ದುದರಿಂದ ಅದಕ್ಕೆ ಮಾನ್ಯತೆ ನೀಡಲು ಸಾಧ್ಯವಾಗದೆ ಹೋದುದಕ್ಕಾಗಿ ವಿಶ್ವವಿದ್ಯಾನಿಲಯ ವಿಷಾದ ವ್ಯಕ್ತಪಡಿಸಿತು.

ವಿಶ್ವವಿದ್ಯಾನಿಲಯ ಸ್ಥಾಪನೆಯೇನೋ ಆಗಿದ್ದರೂ ಅದಕ್ಕೆ ತನ್ನದೇ ಆದ ನೆಲೆಯಿರಲಿಲ್ಲ. ಆಡಳಿತ ಕಾರ್ಯಾಲಯವಾಗಲಿ ಪರೀಕ್ಷೆಗಳನ್ನು ಮತ್ತು ಘಟಿಕೋತ್ಸವಗಳನ್ನು ಏರ್ಪಡಿಸಲು ಅಗತ್ಯವಾದ ಸಭಾಭವನವಾಗಲೀ ಇರಲಿಲ್ಲ. ತಾತ್ಕಾಲಿಕವಾಗಿ ನಿರ್ಮಿಸಿದ ಡೇರೆಗಳಲ್ಲಿ, ನಗರದ ಬೇರೆ ಬೇರೆ ಮೂಲೆಗಳಲ್ಲಿ ಚದುರಿದ್ದ ಚಿಕ್ಕಪುಟ್ಟ ಭವನಗಳಲ್ಲಿ ಪರೀಕ್ಷೆಗಳನ್ನು ನಡೆಸುವಂಥ ಸ್ಥಿತಿ ಏರ್ಪಟ್ಟಿತು. ಸ್ಥಳದ ಈ ತೊಂದರೆಯ ಜೊತೆಗೆ ಸೇರಿಕೊಂಡ ಇತರ ಸಮಸ್ಯೆಗಳೆಂದರೆ ಧಾರ್ಮಿಕ ಶಿಕ್ಷಣ ಮತ್ತು ಶಿಕ್ಷಣ ಮಾಧ್ಯಮ. ಶಿಕ್ಷಣ ಕ್ರಮದಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಅವಕಾಶ ಕೊಡದೆ ಇದ್ದುದು ಹಲವು ಧರ್ಮೀಯರ ಅದರಲ್ಲೂ ಕ್ರೈಸ್ತರ ಅಸಹನೆಗೆ ಕಾರಣವಾಯಿತು. ಶಿಕ್ಷಣ ಮಾಧ್ಯಮವನ್ನು ಕುರಿತು ತೀವ್ರ ಹೋರಾಟವೇ ನಡೆದು ಇಂಗ್ಲೀಷ್ ಮಾಧ್ಯಮದ ಪರವಾಗಿಯೇ ಬಹುಮತ ಬಿದ್ದಿತಾದರೂ ಮಾತೃಭಾಷಾಮಾಧ್ಯಮಕ್ಕೆ ಸಾಧ್ಯವಾದಷ್ಟು ಬೇಗ ಅವಕಾಶಗಳನ್ನೊದಗಿಸಿಕೊಡಬೇಕೆಂಬ ಸಂಗತಿ ವಿವೇಕಿಗಳಾದ, ಸುದೂರದೃಷ್ಟಿಯನ್ನುಳ್ಳ ಕೆಲವಾದರೂ ಶಿಕ್ಷಣತಜ್ಞರ ಮನಸ್ಸಿಗೆ ಮುಟ್ಟಿತು. ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ ಆರು ತಿಂಗಳು ಕಳೆಯುವುದರ ಒಳಗಾಗಿಯೇ ಭಾರತದ, ಅದರಲ್ಲಿಯೂ ಉತ್ತರ ಭಾರತದ ಬಹುಭಾಗವನ್ನು ಅಲ್ಲೋಲಕಲ್ಲೋಲಗೊಳಿಸಿದ ಬಂಡಾಯ ನಡೆಯಿತು. ಬಂಡಾಯದ ಕೇಂದ್ರಗಳಿಂದ ಕಲ್ಕತ್ತ ಭೌಗೋಳಿಕವಾಗಿ ದೂರವಿದ್ದಿತೆಂಬುದು ನಿಜವಾದರೂ ಅದರ ಪರೋಕ್ಷ ಪರಿಣಾಮ ಇಲ್ಲಿಯೂ ಕಂಡುಬಂತು. ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆಗೆ ಇರುವ ನಿಮ್ಮ ಜನರಿಗೆ ಶಿಕ್ಷಣ ಕೊಡಿ. 1857ರ ದಂಗೆ ಮತ್ತೆಂದೂ ತಲೆಯೆತ್ತಲಾರದು ಎಂದು ವಿಶ್ವವಿದ್ಯಾಲಯ ಕುಲಪತಿ 1860ರ ಘಟಿಕೋತ್ಸವದಲ್ಲಿ ಘೋಷಿಸಿದ್ದು ಈ ಬಗೆಯ ಪರೋಕ್ಷ ಪರಿಣಾಮಕ್ಕೆ ಉದಾಹರಣೆಯಾಗಿದೆ. ಮುಂದೆ ಬಂದ ಕುಲಾಧಿಪತಿಗಳೂ ಕುಲಪತಿಗಳೂ ಇದೇ ಧಾಟಿಯನ್ನು ಮುಂದುವರಿಸಿದರು. ಆದರೆ, ಈ ಶಿಕ್ಷಣ ಪಡೆದ ಒಂದೆರಡು ತಲೆಮಾರುಗಳ ಯುವಜನಾಂಗವೇ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಗೋರಿಯನ್ನು ತೋಡುವ ಕಾರ್ಯಕ್ಕೆ ಮೊದಲಿಟ್ಟಿತು ಎಂಬುದು ಅವರ ಅರಿವಿಗೆ ಆಗ ಗೋಚರಿಸಲಿಲ್ಲ.

ವಿಶ್ವವಿದ್ಯಾಲಯದ ಮೊಟ್ಟಮೊದಲ ಘಟಿಕೋತ್ಸವ ನಡೆದದ್ದು 1858ರ ಡಿಸೆಂಬರ್ 11ರಂದು. ಆಯಾ ಕಾಲೇಜುಗಳ ಅಧಿಕೃತ ಅಧಿಕಾರಿಗಳು ಅಭ್ಯರ್ಥಿಗಳನ್ನು ಒಪ್ಪಿಸಿಕೊಟ್ಟ ಬಳಿಕ ಅವರನ್ನು ಪದವಿಗಳಿಗಾಗಿ ಸ್ವೀಕರಿಸಲಾಗುತ್ತಿತ್ತು. ಈ ಸ್ವೀಕರಣಾನಂತರ, ಈ ಉದ್ದೇಶಕ್ಕಾಗಿಯೇ ಮೀಸಲಾಗಿ ಇಡಲಾಗಿದ್ದ ರಿಜಿಸ್ಟರಿನಲ್ಲಿ ಅಭ್ಯರ್ಥಿಯ ಹಸ್ತಾಕ್ಷರವನ್ನು ತೆಗೆದುಕೊಳ್ಳಲಾಗುತ್ತಿತ್ತು. ಈ ಸಮಾರಂಭದ ಕಾರ್ಯಕಲಾಪಗಳೆಲ್ಲ ಇಂಗ್ಲಿಷಿನಲ್ಲಿಯೇ ನಡೆಯುತ್ತಿದ್ದವು. ಮುಂದೆ ಘಟಿಕೋತ್ಸವದ ಅನುಷ್ಠಾನ ವಿಧಿಗಳಲ್ಲಿ, ಶಬ್ದಗಳ ಬಳಕೆಯಲ್ಲಿ ಅನೇಕ ಪರಿವರ್ತನೆಗಳಾದವು. ಘಟಿಕೋತ್ಸವದಲ್ಲಿ ವಿವಿಧ ಪದವಿಗಳ ಅಭ್ಯರ್ಥಿಗಳು ಧರಿಸಬೇಕಾದ ಮೇಲುಡುಪು (ಗೌನ್) ಮತ್ತು ಲಾಂಛನ ವಸ್ತು (ಹುಡ್) ಹಾಗೂ ಶಿರೋಷ್ಟಗಳಲ್ಲಿಯೂ ಸಾಕಷ್ಟು ಬದಲಾವಣೆಗಳನ್ನು ತರಲಾಯಿತು. ಇಷ್ಟಾದರೂ, ಗೌರವ ಪದವಿಗಳನ್ನು ನೀಡುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ದೊರೆತಿರಲಿಲ್ಲ. ಈ ದಿಕ್ಕಿನಲ್ಲಿ ಹಲವಾರು ಸಲಹೆಗಳು ಬಂದಿದ್ದರೂ ಅವು ಕಾರ್ಯಗತವಾಗಿರಲಿಲ್ಲ. 1875–76ರಲ್ಲಿ ವೇಲ್ಸಿನ ರಾಜಕುಮಾರ ಆಲ್ಬರ್ಟ್ ಎಡ್ವರ್ಡ್ ಭಾರತಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅವನಿಗೆ ಗೌರವ ಪದವಿ ಕೊಡಬೇಕೆಂದು ಸರ್ಕಾರ ಸೂಚಿಸಿದಾಗ ತರಾತುರಿಯಲ್ಲಿ ಸಿದ್ಧತೆಗಳು ನಡೆದುವು. ಗೌರವ ಪದವಿಗಳನ್ನು ನೀಡುವ ಅಧಿಕಾರಕ್ಕೆ ಸಂಬಂಧಿಸಿದ ಮಸೂದೆಯೊಂದನ್ನು ವಿಧಾನ ಮಂಡಲದಲ್ಲಿ ಅಂಗೀಕರಿಸಲಾಯಿತು. ಗವರ್ನರ್–ಜನರಲನ ಒಪ್ಪಿಗೆಯೂ ದೊರೆಯಿತು. 1876ರ ಜನವರಿ 3ರಂದು ನಡೆದ ವಿಶೇಷ ಘಟಿಕೋತ್ಸವದಲ್ಲಿ ಮೊದಲ ಗೌರವ ಪದವಿಯನ್ನು – ಡಾಕ್ಟರ್ ಆಫ್ ಲಾಸ್ – ವೇಲ್ಸ್‌ನ ರಾಜಕುಮಾರನಿಗೆ ನೀಡಲಾಯಿತು. ವಿಶ್ವವಿದ್ಯಾಲಯದ ಗೌರವ ಪದವಿಗಳ ಖಾತೆ ತೆರೆದದ್ದು ಹೀಗೆ.

1883ರಿಂದ 1904ರ ವರೆಗಿನದು ಸಂಘಟನೆಯ ಅವಧಿ. ದಿನೇದಿನೇ ಹೆಚ್ಚುತ್ತಿದ್ದ ಉಚ್ಚ ಶಿಕ್ಷಣದ ಬೇಡಿಕೆಯನ್ನು ಈಡೇರಿಸಲು ಪ್ರಯತ್ನ ನಡೆದದ್ದು ಈ ಕಾಲದಲ್ಲಿ. ಮಾತೃಭಾಷೆಗೆ ಸೂಕ್ತ ಪ್ರಾಧಾನ್ಯ ನೀಡಲೂ ಪ್ರಯತ್ನ ನಡೆಯಿತು. 1891ರ ಘಟಿಕೋತ್ಸವವನ್ನು ಉದ್ದೇಶಿಸಿ ಮಾತನಾಡಿದ ಮೊಟ್ಟಮೊದಲ ಭಾರತೀಯ ಕುಲಪತಿ ಗುರುದಾಸ ಬ್ಯಾನರ್ಜಿಯ ಈ ಮಾತುಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ: ಸಾಹಿತ್ಯ ಸಮೃದ್ಧವಾಗಿರುವ ಭಾರತೀಯ ಭಾಷೆಗಳ ಅಧ್ಯಯನಕ್ಕೆ ಪ್ರೋತ್ಸಾಹ ನೀಡಬೇಕಾದದ್ದು ಅಪೇಕ್ಷಣೀಯ ಮಾತ್ರವಲ್ಲ, ಅಗತ್ಯವೂ ಹೌದು. ಅವನ್ನು ಸಾಕಿ ಬೆಳೆಸಿರುವ ಪ್ರಾಚೀನ ಭಾಷೆಗಳ ಜೊತೆಗೆ ಅವನ್ನೂ ಪರೀಕ್ಷೆಯ ಕಡ್ಡಾಯ ವಿಷಯವಾಗಿಸಬೇಕು. ಕೇವಲ ಅಂಧ ಅಭಿಮಾನದಿಂದ, ಭಾಷಾವ್ಯಾಮೋಹದಿಂದ ಆತ ಈ ಮಾತನ್ನಾಡಲಿಲ್ಲವೆಂಬುದಕ್ಕೆ ಆತನ ಮುಂದಿನ ಮಾತುಗಳೇ ಸಾಕ್ಷಿಯಾಗಿವೆ:

ದೇಶಭಾಷೆಗಳ ಮೂಲಕ ಜ್ಞಾನ ಪ್ರಸಾರವಾದ ಹೊರತು ರಾಷ್ಟ್ರದ ರೂಪದಲ್ಲಿ ನಾವು ಯಾವುದೇ ಪರಿಪೂರ್ಣವಾದ, ವ್ಯಾಪಕವಾದ ಸಂಸ್ಕೃತಿಯನ್ನು ಪಡೆಯಲಾರೆವು ಎಂದು ನಾನು ದೃಢವಾಗಿ ನಂಬಿದ್ದೇನೆ. ಹಿಂದಿನ ಪಾಠವನ್ನು ಗಮನಿಸಿ ಅಸಂಖ್ಯಾತ ಆಧುನಿಕ ಭಾಷೆಗಳ ಮಾಧ್ಯಮದ ಮೂಲಕ ಜ್ಞಾನದ ಬೆಳಕು ಹರಿದು ಬರುವವರೆಗೆ ಮಧ್ಯಯುಗದ ಯುರೋಪನ್ನು ಕವಿದುಕೊಂಡಿದ್ದ ಕತ್ತಲೆ ಸಂಪೂರ್ಣವಾಗಿ ದೂರವಾಗಲಿಲ್ಲ. ಭಾರತದಲ್ಲಿಯೂ ಅಷ್ಟೆ. ಉಪಲಬ್ಧ ಸ್ಪಷ್ಟತರ ಮಾಧ್ಯಮಗಳಲ್ಲೊಂದರ ಮೂಲಕ ನಮ್ಮ ಸಮಾಜದ ಉಚ್ಚಸ್ತರದ ಮೇಲೆ ಜ್ಞಾನದ ಕೃಪಾದೃಷ್ಟಿ ಬಿದ್ದಿದೆಯಾದರೂ ಜ್ಞಾನದ ಬೆಳಕು ದೇಶಭಾಷೆಗಳ ಮೂಲಕ ಜನಸಾಮಾನ್ಯರನ್ನು ತಲುಪುವವರೆಗೆ ಸುತ್ತಲೂ ಕವಿದಿರುವ ಅಜ್ಞಾನದ ಮುಸುಕು ತೊಲಗಿ ಬೆಳಗಲಾರದು.

ಇಷ್ಟಾದರೂ ಜನತೆ ಎಚ್ಚೆತ್ತುಕೊಳ್ಳಲು ಸಾಕಷ್ಟು ಕಾಲವೇ ಹಿಡಿಯಿತು. 1940ರಲ್ಲಿ ಮೆಟ್ರಿಕ್ಯುಲೇಶನ್ ಹಂತದಲ್ಲಿ ಬಂಗಾಳಿ ಮಾಧ್ಯಮವನ್ನು ಜಾರಿಗೆ ತಂದುದರ ಫಲವಾಗಿ ಭಾಷಾ ಪಠ್ಯಪುಸ್ತಕಗಳ ಬೇಡಿಕೆ ಹೆಚ್ಚಿತು. ಪರಿಭಾಷಾಸಮಿತಿ ಹಲವು ಪಾರಿಭಾಷಿಕ ಶಬ್ದಕೋಶಗಳನ್ನು ಹೊರತಂದಿತು. ಸಮಿತಿ ಪರಿಷ್ಕರಿಸಿದ ಬಂಗಾಳಿ ಕಾಗುಣಿತ ವ್ಯವಸ್ಥೆಯನ್ನು ರವೀಂದ್ರರೂ, ಶರಶ್ಚಂದ್ರರೂ ಒಪ್ಪಿಕೊಂಡರು. ಶ್ಯಾಮಪ್ರಸಾದ ಮುಖರ್ಜಿಯವರು ಬಂಗಾಳಿ ಪಠ್ಯಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಜಾರಿಗೆ ಕೊಟ್ಟರು. ಖ್ಯಾತ ವಿದ್ವಾಂಸರು ಮಾನವಿಕ ಮತ್ತು ವಿಜ್ಞಾನಗಳನ್ನು ಕುರಿತು ಸಮರ್ಥ ರೀತಿಯಲ್ಲಿ ಗ್ರಂಥಗಳನ್ನು ಬರೆದುಕೊಟ್ಟರು. ಓದುಗರ ಪ್ರತಿಕ್ರಿಯೆಯೂ ಉತ್ತಮವಾಗಿಯೇ ಇತ್ತು. ಬಂಗಾಳಿಯನ್ನು ಶಾಲೆಯ ಆವರಣದ ಹೊರಕ್ಕೂ ತರುವ ಪ್ರಯತ್ನ ನಡೆಯಿತಾದರೂ ಪ್ರಗತಿ ಗಮನಾರ್ಹವಾಗಿರಲಿಲ್ಲ. ಒಂದು ದಶಕದ ಅನಂತರ, 1947ರಲ್ಲಿ, ಈ ವಿಶ್ವವಿದ್ಯಾನಿಲಯದ ಮೊಟ್ಟಮೊದಲನೆಯ ಭಾರತೀಯ ಕುಲಾಧಿಪತಿಯಾದ ಸಿ. ರಾಜಗೋಪಾಲಚಾರಿ ಅವರು ಘಟಿಕೋತ್ಸವ ಭಾಷಣದಲ್ಲಿ ದೇಶಭಾಷೆಗಳನ್ನು ಉನ್ನತ ಶಿಕ್ಷಣದ ಮಾಧ್ಯಮವನ್ನಾಗಿಸುವ ಅಗತ್ಯವನ್ನು ಒತ್ತಿ ಹೇಳಿದರು.1948ರಲ್ಲಿ ಕುಲಪತಿಯಾಗಿ ನೇಮಕಗೊಂಡ ಪ್ರಮಥನಾಥ ಬ್ಯಾನರ್ಜಿಯವರು, ಬಿ.ಎ., ಬಿ.ಎಸ್.ಸಿ., ಬಿ.ಕಾಂ. ಪರೀಕ್ಷೆಗಳಲ್ಲಿಯೇ ಉತ್ತರಿಸುವ ಸೌಲಭ್ಯವನ್ನು ಒದಗಿಸಿಕೊಟ್ಟರು. ಬಂಗಾಳಿ ಭಾಷೆಯಲ್ಲಿ ಬರೆದ ಪ್ರಬಂಧಕ್ಕೆ ಪಿಎಚ್.ಡಿ. ಪ್ರಶಸ್ತಿಯನ್ನು ನೀಡುವುದರ ಮೂಲಕ ಬಂಗಾಳಿ ಭಾಷೆಗೆ ವಿಶ್ವವಿದ್ಯಾಲಯ ಅತ್ಯುತ್ಕೃಷ್ಟ ಸ್ಥಾನ ಒದಗಿಸಿತು. ರವೀಂದ್ರರು ಬಂಗಾಳಿಯಲ್ಲೇ ಘಟಿಕೋತ್ಸವ ಭಾಷಣ ಮಾಡಿ ಮತ್ತೊಂದು ಹೊಸ ಹೆಜ್ಜೆಯನ್ನಿಟ್ಟರು.

ವಿಶ್ವವಿದ್ಯಾಲಯ ಸ್ಥಾಪನೆಯ ಕಾಯಿದೆಯಲ್ಲಿ ಮಹಿಳೆಯರಿಗೆ ಶಿಕ್ಷಣ ಕೊಡಲು ಅವಕಾಶವಿರಲಿಲ್ಲ. 1875ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಈ ವಿಷಯದ ಬಗ್ಗೆ ಪತ್ರ ಬರೆದಾಗ ಅದನ್ನು ದಾಖಲು ಮಾಡಿಕೊಳ್ಳಲಾಯಿತೇ ಹೊರತು, ಅದಕ್ಕೆ ಉತ್ತರ ಕೊಡಲಿಲ್ಲ. ಆದರೆ, ಕೆಲವೇ ತಿಂಗಳುಗಳ ಅನಂತರ ಚಂದ್ರಮುಖಿ ಬಸು ಎಂಬ ವಿದ್ಯಾರ್ಥಿನಿ ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ಕೋರಿ ಅಭ್ಯರ್ಥನ ಪತ್ರವನ್ನು ಸಲ್ಲಿಸಿದಾಗ ವಿಶ್ವವಿದ್ಯಾಲಯ ಈ ಸಮಸ್ಯೆಯನ್ನು ನೇರವಾಗಿ ಎದುರಿಸಬೇಕಾಗಿ ಬಂತು. ಅಂದು ಮಹಿಳೆಯರಿಗೆ ಕಾಲೇಜ್ ಶಿಕ್ಷಣ ಸೌಲಭ್ಯವನ್ನು ಒದಗಿಸುವುದು ಸಮಾಜದಲ್ಲಿ ಕ್ರಾಂತಿಕಾರಕವಾದ, ಅತ್ಯಂತ ಸೂಕ್ಷ್ಮ ಪ್ರಶ್ನೆಯಾಗಿತ್ತು. ಆದರೆ ಕುಲಪತಿಯ ದೂರದೃಷ್ಟಿ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿತು. ಸೂಕ್ತ ತಿದ್ದುಪಡಿಗಳೊಡನೆ ಮಹಿಳೆಯರ ಶಿಕ್ಷಣಕ್ಕೂ ಮಹಿಳಾಮೇಲ್ವಿಚಾರಕರ ನೇತೃತ್ವದಲ್ಲಿ ಪರೀಕ್ಷೆಗಳನ್ನು ನಡೆಸುವುದಕ್ಕೂ ಅವಕಾಶ ಮಾಡಿಕೊಡಲಾಯಿತು. ಆ ವರ್ಷ ಚಂದ್ರಮುಖಿಗೆ ಪ್ರವೇಶ ಪರೀಕ್ಷೆಗೆ ಅವಕಾಶ ಕೊಟ್ಟಿದ್ದು ಮಾತ್ರವಲ್ಲದೆ 1879ರಲ್ಲಿ ಎಫ್.ಎ. ಪರೀಕ್ಷೆಗೆ ಕೂಡಲೂ ಅನುಮತಿ ನೀಡಲಾಯಿತು. 1882ರ ಘಟಿಕೋತ್ಸವ ಈ ದೃಷ್ಟಿಯಿಂದ ಗಮನಾರ್ಹವಾದುದು. ಚಂದ್ರಮುಖಿ ಬಸು ಮತ್ತು ಕಾದಂಬಿನಿ ಗಂಗೂಲಿ ಎಂಬ ವಿದ್ಯಾರ್ಥಿನಿಯರು ಆ ವರ್ಷದ ಘಟಿಕೋತ್ಸವದಲ್ಲಿ ಪದವಿಗಳನ್ನು ಪಡೆದರು. ಕುಲಪತಿಗಳ ಘಟಿಕೋತ್ಸವ ಭಾಷಣ ಮಹಿಳೆಯರ ಹಕ್ಕು ಮತ್ತು ಪುರುಷರ ಕರ್ತವ್ಯದ ಉಲ್ಲೇಖವನ್ನು ಒಳಗೊಂಡಿದ್ದುದು ಸಹಜವಾಗಿಯೇ ಇತ್ತು.

ವಿಶ್ವವಿದ್ಯಾಲಯ ಸ್ಥಾಪನೆಯ 1857ರ ಕಾಯಿದೆಯನ್ನು ಪರಿಷ್ಕರಿಸುವ ವಿಚಾರ 1890ರಲ್ಲಿಯೇ ಬಂದಿತ್ತು. ಆದರೆ, ಅಂಥ ಅಗತ್ಯವೇನೂ ಇಲ್ಲವೆಂಬ ನೆಪವನ್ನೊಡ್ಡಿ ಸರ್ಕಾರ ತಿದ್ದುಪಡಿಯ ಸಲಹೆಗಳನ್ನು ತಳ್ಳಿಹಾಕಿತ್ತು. 1899ರಲ್ಲಿ ಸರ್ಕಾರ ಈ ಉದ್ದೇಶಕ್ಕಾಗಿ ಮಸೂದೆಯೊಂದನ್ನು ಅಂಗೀಕರಿಸಿತು. ಎರಡು ವರ್ಷಗಳ ಅನಂತರ ಅಂದರೆ 1901ರಲ್ಲಿ, ಸಿಮ್ಲಾದಲ್ಲಿ ಶಿಕ್ಷಣತಜ್ಞರ ಸಮ್ಮೇಳನವೊಂದನ್ನು ಕರೆಯಲಾಯಿತು. ಆದರೆ ಇವರೆಲ್ಲ ಐರೋಪ್ಯರೇ ಆಗಿದ್ದುದರಿಂದ ಈ ಸಮ್ಮೇಳನ ತಪ್ಪುಕಲ್ಪನೆಗೂ ಹತಾಶೆಗೂ ಪೂರ್ವಾಗ್ರಹಕ್ಕೂ ಎಡೆಮಾಡಿಕೊಟ್ಟಿತು. ಇದರ ಬೆನ್ನ ಹಿಂದೆಯೇ 1902ರಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಆಯೋಗವನ್ನು ಸ್ಥಾಪಿಸಲಾಯಿತು. ಅಲ್ಲಿಯೂ ಭಾರತೀಯರಿಗೆ ಪ್ರಾತಿನಿಧ್ಯವಿಲ್ಲವೆಂಬ

ಕೂಗೆದ್ದಾಗ ಗುರುದಾಸ ಬ್ಯಾನರ್ಜಿಯನ್ನು ಆಯೋಗಕ್ಕೆ ಕಡೆಯ ಘಳಿಗೆಯಲ್ಲಿ ಸೇರಿಸಿಕೊಳ್ಳಲಾಯಿತು. ಈ ಆಯೋಗ ಮಾಡಿದ ಅತ್ಯಂತ ಗಮನಾರ್ಹವಾದ ಶಿಫಾರಸೆಂದರೆ, ವಿಶ್ವವಿದ್ಯಾನಿಲಯ ಕೇವಲ ಪರೀಕ್ಷಾಮಂಡಳಿಯಾಗಿ ಉಳಿಯಬಾರದು ಎಂಬುದು. ಇದು ಮುಂದಿನ ಅನೇಕ ಸುಧಾರಣೆಗಳಿಗೆ ನಾಂದಿಯಾಯಿತು.

1904ರ ವಿಶ್ವವಿದ್ಯಾನಿಲಯಗಳ ಕಾಯಿದೆಗನುಗುಣವಾಗಿ ಕಲ್ಕತ್ತ ವಿಶ್ವವಿದ್ಯಾಲಯದ ಭೌಗೋಳಿಕ ವ್ಯಾಪ್ತಿ ಸಂಕುಚಿತವಾಯಿತು. ಈ ಮೊದಲು ಬೊಂಬಾಯಿ ಮತ್ತು ಮದರಾಸು (ಇಂದಿನ ತಮಿಳುನಾಡು) ಪ್ರಾಂತ್ಯಗಳನ್ನುಳಿದು, ಭಾರತಾದ್ಯಂತ, ಮಯನ್ಮಾರ್ ಮತ್ತು ಶ್ರೀಲಂಕಾದಲ್ಲಿದ್ದ ಕಾಲೇಜುಗಳೂ ಶಾಲೆಗಳೂ ಕಲ್ಕತ್ತ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದುವು. 1904ರ ವರೆಗೆ ಅದು ಬಹುಮಟ್ಟಿಗೆ ಪರೀಕ್ಷಾ ಮಂಡಲಿಯಾಗಿ ಮಾತ್ರ ಕಾರ್ಯನಿರ್ವಹಿಸಿತು. 1904ರ ಅನಂತರ ಶಿಕ್ಷಣದ ಹೊಣೆಯೂ ಇದಕ್ಕೆ ಸೇರಿತು. 1917ರ ಕಲ್ಕತ್ತ ವಿಶ್ವವಿದ್ಯಾಲಯ ಆಯೋಗ ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆಗಳ ಸುಧಾರಣೆಯತ್ತ ಗಮನ ಕೊಟ್ಟಿತು. ಒತ್ತಡವನ್ನು ತಪ್ಪಿಸುವ ಸಲುವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಸುಧಾರಣೆಯನ್ನು ಜಾರಿಗೆ ತರಲು ಮತ್ತಷ್ಟು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಬೇಕೆಂದು ಶಿಫಾರಸು ಮಾಡಲಾಯಿತು. ಈ ಅವಧಿಯಲ್ಲಿ ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಯ ಕನಸನ್ನು ನನಸಾಗಿಸಿದ ಶ್ರೇಯಸ್ಸು ಅಶುತೋಷ್ ಮುಖರ್ಜಿಯದು.

ವಿಶ್ವವಿದ್ಯಾಲಯ ಎದುರಿಸಬೇಕಾಗಿ ಬಂದ ಸಮಸ್ಯೆಗಳಲ್ಲಿ ಎರಡನೆಯ ಮಹಾ ಯುದ್ಧವೂ ಒಂದು. ಇದರ ಪರಿಣಾಮವಾಗಿ ಸುಮಾರು ಒಂದು ದಶಕದ ಕಾಲ ಪ್ರಗತಿ ಕುಂಠಿತವಾಯಿತು. ಬಂಗಾಳದ ಭೀಕರಕ್ಷಾಮ ಇದು ಎದುರಿಸಿದ ಎರಡನೆಯ ಸಮಸ್ಯೆ.



**ವಿಶ್ವವಿದ್ಯಾಲಯದ ಜೈವಿಕ ಭೌತವಿಜ್ಞಾನ ವಿಭಾಗದಲ್ಲಿ ಎಲೆಕ್ಟ್ರಾನ್ ಮೈಕ್ರಾಸ್ಕೋಪಿನೊಡನೆ ವಿಜ್ಞಾನಿಗಳು**

ಸ್ವಾತಂತ್ರ್ಯ ಸಂಗ್ರಾಮದ ಅಂಗವಾಗಿ ನಡೆದ ತೀವ್ರ ಚಳವಳಿಗಳ ಅವಧಿಯಲ್ಲಿ ಇತರ ವಿಶ್ವವಿದ್ಯಾನಿಲಯಗಳಂತೆ ಕಲ್ಕತ್ತ ವಿಶ್ವವಿದ್ಯಾಲಯವೂ ಅಸಂಖ್ಯಾತ ಎಡರುತೊಡರುಗಳನ್ನು ಅನುಭವಿಸಬೇಕಾಗಿ ಬಂತು. ದೇಶವಿಭಜನೆಯ ಅಭಿಶಾಪದೊಂದಿಗೆ ಎರಗಿದ ಮತೀಯ ಕ್ರೌರ್ಯ ಮತ್ತು ಹಿಂಸಾಚಾರಗಳ ಹೊಡೆತವೂ ತಟ್ಟಿತು. ಪಾಕಿಸ್ತಾನದಿಂದ ಕಾಲ್ತೆಗೆದು ಬಂದ ನಿರಾಶ್ರಿತರ ತಂಡೋಪತಂಡಗಳು ವಿಶ್ವವಿದ್ಯಾಲಯ ಮತ್ತು ಅದರ ಅಂಗಸಂಸ್ಥೆಗಳ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರಿದುವು. ಶೈಕ್ಷಣಿಕ ವ್ಯವಸ್ಥೆಯೇ ತಲೆಕೆಳಗಾಗುವಂಥ ಪರಿಸ್ಥಿತಿ ಏರ್ಪಟ್ಟಿತು. ಬೆಳಕು ಹರಿಯುವುದರ ಒಳಗಾಗಿ ಮೂರನೆಯ ಎರಡರಷ್ಟು ಶಾಲಾ ಕಾಲೇಜುಗಳನ್ನು ಅದು ಕಳೆದುಕೊಂಡಿತು. ಅಂದರೆ ಅವೆಲ್ಲ ಪಾಕಿಸ್ತಾನಕ್ಕೆ ಸೇರಿಹೋಗಿದ್ದುವು. ಈ ಎಲ್ಲ ಆಘಾತಗಳನ್ನೂ ಸಹಿಸಿಕೊಳ್ಳುವ ಹೊತ್ತಿಗೆ 1951ರ ದ್ವಿತೀಯಕ ಶಿಕ್ಷಣ ಕಾಯಿದೆ (ಸೆಕೆಂಡರಿ ಎಜುಕೇಶನ್ ಆಕ್ಟ್) ಜಾರಿಗೆ ಬಂದದ್ದರಿಂದ ಆ ಶಿಕ್ಷಣ ವ್ಯವಸ್ಥೆಯ ಮೇಲಿದ್ದ ಹತೋಟಿಯನ್ನೂ ಬಿಟ್ಟು ಕೊಡಬೇಕಾಗಿ ಬಂತು. ಅಸ್ಸಾಮಿನಲ್ಲಿ ಗುಹಾವಟಿ ವಿಶ್ವವಿದ್ಯಾಲಯ ಪ್ರಾರಂಭವಾದ್ದರಿಂದ ಆ ಪ್ರಾಂತ್ಯದಲ್ಲಿದ್ದ ಶಾಲಾಕಾಲೇಜುಗಳ ಮೇಲಿನ ಹತೋಟಿ ತಪ್ಪಿತು. ಇತರ ಪ್ರಾಂತ್ಯಗಳಲ್ಲೂ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಗತೊಡಗಿದ್ದರಿಂದ ಆರ್ಥಿಕ ಮತ್ತು ಆಡಳಿತ ಪುನರ್ವ್ಯವಸ್ಥೆ ಅತ್ಯಂತ ಅನಿವಾರ್ಯವಾಯಿತು. ಈ ದೃಷ್ಟಿಯಿಂದ ರಚಿಸಲಾದ 1950ರ ಕಲ್ಕತ್ತ ವಿಶ್ವವಿದ್ಯಾಲಯ ಮಸೂದೆಯನ್ನು ಶಾಸನಸಭೆ ಅನುಮೋದಿಸಿತು. 1954ರಿಂದ ಇದು ಜಾರಿಗೆ ಬಂತು. ಡೋಲಾಯಮಾನವಾಗಿದ್ದ ಪರಿಸ್ಥಿತಿ ಶಾಂತವಾಗಿ ಮತ್ತೆ ಸುವ್ಯವಸ್ಥೆಯತ್ತ ಅದು ಹೆಜ್ಜೆ ಹಾಕತೊಡಗಿತು.

ವಿಶ್ವವಿದ್ಯಾಲಯಕ್ಕೆ ತನ್ನದೇ ಆದ ಕಟ್ಟಡ 'ಸೆನೆಟ್ ಭವನ' ದೊರೆತದ್ದು ಅದು ಪ್ರಾರಂಭವಾದ ಹದಿನಾರು ವರ್ಷಗಳ ಅನಂತರ (1873). ಅಷ್ಟೇ ಅಲ್ಲ, ಪೂರ್ಣ ಕಾಲದ ಉದ್ಯೋಗಿಯಾಗಿ ರಿಜಿಸ್ಟ್ರಾರ್ ಒಬ್ಬರು ನೇಮಕಗೊಂಡದ್ದು 1903ರಿಂದ ಈಚೆಗೆ. ಈ ಕಾರಣದಿಂದಾಗಿಯೂ ಆರ್ಥಿಕ ಅಡಚಣೆಗಳಿಂದಾಗಿಯೂ ಸುವ್ಯವಸ್ಥಿತ ರೀತಿಯಲ್ಲಿ ವಿಶ್ವವಿದ್ಯಾಲಯದ ಗ್ರಂಥ ಭಂಡಾರವನ್ನು ಬೆಳಸಲು ಸಾಧ್ಯವಾಗಲಿಲ್ಲ. 1869–70ರಲ್ಲಿ ಜಯಕಿಶನ್ ಮುಖರ್ಜಿ ಗ್ರಂಥಭಂಡಾರಕ್ಕೆಂದೇ 5,000 ರೂ.ಗಳನ್ನು ದಾನವಾಗಿ ಕೊಟ್ಟ ಬಳಿಕ ಈ ಕಾರ್ಯಕ್ಕೆ ಚಾಲನೆ ದೊರೆಯಿತು. ಆದರೂ 1873–74ರಲ್ಲಿ ವಿಶ್ವವಿದ್ಯಾಲಯ ತನ್ನ ಹೆಚ್ಚುವರಿ ಆಯವ್ಯಯದಿಂದ ಮತ್ತಷ್ಟು ಹಣವನ್ನು ನೀಡುವವರೆಗೆ ಈ ಕಾರ್ಯ ಮುಂದುವರಿಯಲಿಲ್ಲ. ಮುಂದೆ ದಾನ ರೂಪದಲ್ಲಿಯೂ ಗ್ರಂಥಗಳು ದೊರತುವು. ಇಂದು ಇದು ಕೇಂದ್ರ ಗ್ರಂಥ ಭಂಡಾರ ಮತ್ತು ಇತರ ವಿಭಾಗ ಗ್ರಂಥ ಭಂಡಾರಗಳನ್ನೊಳಗೊಂಡ ಸಮೃದ್ಧಸ್ಥಿತಿ ತಲಪಿದೆ.

1863ರ ಘಟಿಕೋತ್ಸವದಲ್ಲಿ ಕುಲಪತಿ ಮಾಡಿಕೊಂಡ ಮನವಿಯ ಮೇರೆಗೆ ದತ್ತಿಗಳ ಹೊಳೆ ಹರಿಯತೊಡಗಿತು. ಮುಂಬಯಿಯ ಪಾರ್ಸಿ ಶ್ರೀಮಂತ ಪ್ರೇಮಚಂದ ರಾಯಚಂದ ಯಾವುದೇ ನಿರ್ಬಂಧ ವಿಧಿಸದೆ ಎರಡು ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟರು. 1869ರಲ್ಲಿ ಠಾಕೂರ್ ನ್ಯಾಯಶಾಸ್ತ್ರ ಪೀಠದ ಸ್ಥಾಪನೆಗಾಗಿ ಪ್ರಸನ್ನ ಕುಮಾರ ಠಾಕೂರ್ ಮಾಹೆಯಾನ ಒಂದು ಸಾವಿರ ರೂಪಾಯಿಗಳ ನಿರಂತರ ಕೊಡುಗೆಯ ವ್ಯವಸ್ಥೆಯನ್ನುಳ್ಳ ಉಯಿಲನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದರು. ಮುಂದೆ ವಿಜಯನಗರಂ ಮಹಾರಾಜ, ಈಶ್ವರ ಚಂದ್ರ ಬೋಸ್, ಅಲೆಕ್ಸಾಂಡರ್ ಡಫ್ ಸ್ಮಾರಕನಿಧಿ, ಹರಿಶ್ಚಂದ್ರ ಚೌಧುರಿ, ಮಹಾರಾಜ ನೀಲ ಮಣಿಸಿಂಗದೇವ ಬಹಾದುರ್ ಮತ್ತಿತರ ವ್ಯಕ್ತಿಗಳು, ಸಂಸ್ಥೆಗಳು ನೀಡಿದ ಕೊಡುಗೆಗಳು ವಿದ್ಯಾರ್ಥಿವೇತನಗಳನ್ನು, ಬಹುಮಾನಗಳನ್ನು, ಪದಕಗಳನ್ನು, ಪ್ರಾಧ್ಯಾಪಕ ಪೀಠಗಳನ್ನು ಸ್ಥಾಪಿಸಲು ನೆರವಾದುವು. ಇಂಥ ಅಸಂಖ್ಯಾತ ಉದಾರ ಕೊಡುಗೆಗಳಿಂದಾಗಿ ಇಂದು ಕಲ್ಕತ್ತ ವಿಶ್ವವಿದ್ಯಾಲಯ ಭಾರತದಲ್ಲಿಯೇ ಅತ್ಯಂತ ಸಮೃದ್ಧ ದತ್ತಿನಿಧಿಯನ್ನುಳ್ಳ ವಿಶ್ವವಿದ್ಯಾನಿಲಯವಾಗಿದೆ.

ಕಲ್ಕತ್ತ ವಿಶ್ವವಿದ್ಯಾಲಯ ಇಂದು ಬಹುಪಾಲು ಎಲ್ಲ ವಿಜ್ಞಾನ ಶಾಖೆಗಳಲ್ಲೂ ಅಧ್ಯಯನ ಸೌಲಭ್ಯ ಕಲ್ಪಿಸಿದೆ. ಸೈನಿಕ ವಿಜ್ಞಾನಕ್ಕೂ ಪದವಿಶಿಕ್ಷಣದ ಹಂತದಲ್ಲಿ ಸ್ಥಾನ ದೊರೆಯಿತು. ಆನ್ವಯಿಕ ವಿಜ್ಞಾನ ಶಾಖೆಗಳ ಆಶ್ರಯದಲ್ಲಿ ಸೋಪ್ ಟೆಕ್ನಾಲಜಿಯಂಥ ವಿಭಾಗಗಳನ್ನು ಸ್ಥಾಪಿಸಲಾಯಿತು. ಗ್ರಂಥಾಲಯ ಶಾಸ್ತ್ರ, ಪತ್ರಿಕೋದ್ಯಮ, ನಗರ ಯೋಜನೆ, ಪ್ರಾದೇಶಿಕ ಯೋಜನೆ, ಪಥ್ಯಶಾಸ್ತ್ರದಂಥ ವಿಷಯಗಳಲ್ಲೂ ಡಿಪ್ಲೊಮಾ ತರಗತಿಗಳನ್ನು ತೆರೆಯಲಾಯಿತು. ಸಂಸ್ಕೃತ, ಪಾಳಿ, ಅಸ್ಸಾಮಿ, ಒರಿಯಾ, ಹಿಂದೀ, ಉರ್ದೂ, ಬಂಗಾಳಿ, ಅರಾಬಿಕ್, ಪರ್ಷಿಯನ್, ಇಂಗ್ಲಿಷ್, ಫ್ರೆಂಚ್, ಜರ್ಮನ್, ಗ್ರೀಕ್, ಲ್ಯಾಟಿನ್, ಹಿಬ್ರೂ, ಸಿರಿಯಾಕ್, ತೌಲನಿಕ ಭಾಷಾವಿಜ್ಞಾನ, ತತ್ತ್ವಶಾಸ್ತ್ರ, ಇತಿಹಾಸ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ, ಇಸ್ಲಾಮಿನ ಇತಿಹಾಸ ಮತ್ತು ಚರಿತ್ರೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣಶಾಸ್ತ್ರ, ವಾಣಿಜ್ಯಶಾಸ್ತ್ರ–ಇವೇ ಮೊದಲಾದ ವಿಷಯಗಳಲ್ಲಿ ಸ್ನಾತಕೋತ್ತರ ಅಧ್ಯಯನ ಸೌಲಭ್ಯವಿದೆ. ಶುದ್ಧ ಮತ್ತು ಆನ್ವಯಿಕ ವಿಜ್ಞಾನ ವಿಭಾಗಗಳು ವಿಜ್ಞಾನಗಳಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುತ್ತವೆ. ರೇಡಿಯೋ–ಫಿಸಿಕ್ಸ್, ಎಲೆಕ್ಟ್ರಾನಿಕ್ಸ್‌ನಂಥ ವಿಜ್ಞಾನಶಾಖೆಗಳು ಸ್ವತಂತ್ರ ವಿಭಾಗಗಳಾಗಿ ಕಾರ್ಯೋನ್ಮುಖವಾಗುವ ಹಂತ ತಲಪುತ್ತಿವೆ. ಈ ವಿಶ್ವವಿದ್ಯಾನಿಲಯ ಹೇಗೆ ಪ್ರಗತಿಪಥದಲ್ಲಿ ಮುನ್ನುಗ್ಗುತ್ತಿದೆ ಎಂಬುದಕ್ಕೆ ಇವೆಲ್ಲ ದಿಕ್ಸೂಚಿಗಳಾಗಿವೆ.

ಈ ವಿಶ್ವವಿದ್ಯಾನಿಲಯದ ಇತಿಹಾಸ ಕುತೂಹಲಕರವಾಗಿದೆ, ಸಾಹಸಯಾತ್ರೆ ಪ್ರಶಂಸನೀಯವಾಗಿದೆ ಎಂದೆನಿಸದೆ ಇರದು. ಬಂಗಾಳದ ಇತಿಹಾಸದ ಪುಟಗಳನ್ನು ಅಲಂಕರಿಸಿರುವ ಬಂಕಿಮಚಂದ್ರ ಚಟರ್ಜಿ, ಹೇಮಚಂದ್ರ ಬಂದ್ಯೋಪಾಧ್ಯಾಯ, ಗುರುದಾಸ ಬ್ಯಾನರ್ಜಿ, ಚಂದರ್ ಕುಮಾರ್ ಡೇ, ಸುರೇಂದ್ರನಾಥ ಬ್ಯಾನರ್ಜಿ, ಆನಂದಮೋಹನ ಬೋಸ್, ಕಾಲೀಚರಣ ಬ್ಯಾನರ್ಜಿ–ಮುಂತಾದವರು ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಎಂಬುದು ಅದಕ್ಕೆ ಹೆಮ್ಮೆಯ ವಿಷಯ. ಇವರಲ್ಲಿ ಕೆಲವರಾದರೂ ಭಾರತೀಯ ಇತಿಹಾಸ ಮತ್ತು ಸಾಹಿತ್ಯೇತಿಹಾಸಗಳಲ್ಲಿ ಸ್ಥಾನ ಪಡೆದಿದ್ದಾರೆ. ಪ್ರಾಚ್ಯ ಮತ್ತು ಪಾಶ್ಚಾತ್ಯ ಶಿಕ್ಷಣಗಳ ಸಂಗಮವೆಂದು ವಿಮರ್ಶಕರು ಈ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಿರಿಮೆಯನ್ನು ಹೊಗಳಿದ್ದಾರೆ. ಕರ್ಜ಼ನನ ಕ್ರಮಗಳಿಗೆ ಜನತೆ ತೋರಿದ ವಿರೋಧವಂತೂ ವಿಶ್ವವಿದ್ಯಾಲಯದ

ವಿಚಾರದಲ್ಲಿ ಜನತೆ ಹೇಗೆ ಆಸಕ್ತಿ ತಳೆಯತೊಡಗಿತು ಎಂಬುದಕ್ಕೆ ಉದಾಹರಣೆಯಾಗಿದೆ. ಈ ಪ್ರಸಂಗದಲ್ಲಿ, ವಿಶ್ವವಿದ್ಯಾಲಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅದರ ಭವಿಷ್ಯ ರಾಷ್ಟ್ರೀಯ ಮಹತ್ತ್ವದ ಪ್ರಶ್ನೆಯಾಗಿ ಪರಿಣಮಿಸಿತು. ಉಚ್ಚ ಶಿಕ್ಷಣವನ್ನು ಶ್ರೀ ಸಾಮಾನ್ಯನ ಮನೆಯ ಬಾಗಿಲ ಬಳಿಗೆ ತಂದು ಕೊಡುವ, ಅದನ್ನು ರಾಷ್ಟ್ರೀಯ ಸಂಸ್ಕೃತಿಯ ಜೀವಂತ ಮಾಧ್ಯಮವಾಗಿಸುವ ಮಹಾಪ್ರಯತ್ನದಲ್ಲಿ ಅಶುತೋಷ್ ಮುಖರ್ಜಿ ಬಹುಮಟ್ಟಿಗೆ ಯಶಸ್ವಿಯಾದದ್ದೂ ವಿಶ್ವವಿದ್ಯಾಲಯದ ಸಾಫಲ್ಯಕ್ಕೆ ಸಾಕ್ಷಿಯಾಗಿದೆ.

ಇತರ ವಿಶ್ವವಿದ್ಯಾನಿಲಯಗಳ ಮೇಲೆ ಆಗಿರುವಂತೆ ಕಲ್ಕತ್ತ ವಿಶ್ವವಿದ್ಯಾಲಯದ ಮೇಲೂ ಈಚಿನ ಶಿಕ್ಷಣ ಆಯೋಗಗಳ ಸಲಹೆ_ಸೂಚನೆಗಳ, ಕೇಂದ್ರಸರ್ಕಾರ ಜಾರಿಗೆ ತಂದ ಶಿಕ್ಷಣ ಸುಧಾರಣೆಗಳ ಪರಿಣಾಮ ಆಗಿದೆ. ಸ್ನಾತಕೋತ್ತರ ಅಧ್ಯಯನ ಮತ್ತು ಸಂಸೋಧನೆಗಳಲ್ಲಿ ಅದರ ಪ್ರಗತಿ ಗಮನಾರ್ಹವಾಗಿದೆ. ರಾಷ್ಟೀಯ ಪ್ರಾಧ್ಯಾಪಕರಾಗಿ ಹೆಸರಿಸಲಾಗಿರುವ ಅನೇಕ ಮಹನೀಯರು ಈ ವಿಶ್ವವಿದ್ಯಾನಿಲಯಕ್ಕೆ ಸೇರಿದವರು ಎಂಬುದು ಇದಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಸಾಮಾಜಿಕ ಕ್ಷೇತ್ರವನ್ನು ವ್ಯಾಪಿಸಿರುವ ಕೆಲವು ಪಿಡುಗುಗಳು ಶೈಕ್ಷಣಿಕ ಕ್ಷೇತ್ರವನ್ನೂ ಪ್ರವೇಶಿಸಿರುವುದರಿಂದ ಈಚೆಗೆ ಇಲ್ಲಿಯ ಶಿಕ್ಷಣಕ್ಷೇತ್ರದ ನೈತಿಕ ಅಡಿಪಾಯ ಕಂಪಿಸತೊಡಗಿದೆ; ಅಭದ್ರತೆಯ ಭಾವನೆ ಬೆಳೆಯತೊಡಗಿದೆ. ಈಚಿನ ಕೆಲವು ಬೆಳೆವಣಿಗೆಗಳು ವಿಶ್ವವಿದ್ಯಾಲಯದ ಕೀರ್ತಿಗೆ ಎರವಾಗತೊಡಗಿವೆ. ಇದು ಸಮಾಜ ವಿಜ್ಞಾನಿಗಳನ್ನೂ ಶಿಕ್ಷಣತಜ್ಞರನ್ನೂ ಕಳವಳಕ್ಕೀಡು ಮಾಡಿರುವ ಸಂಗತಿ. ಇಷ್ಟಾದರೂ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಅಗ್ರಮಾನ್ಯವಾಗಿಯೇ ಉಳಿದುಕೊಂಡುಬರುತ್ತಿರುವುದು ಇದರ ಅಂತಃಸತ್ವದ, ಚೈತನ್ಯದ ದ್ಯೋತಕವಾಗಿದೆ. (ಪಿ.ಜಿ.ಡಿ.)

**ಕಲ್ಲರಸ:** ಸು.1450. ಜನವಶ್ಯ ಎಂಬ ಕಾಮಶಾಸ್ತ್ರಗ್ರಂಥದ ಕರ್ತೃ. ಇವನ ಸ್ಥಳ ಹಂಪೆ. ಕ್ರಿಯಾಶಕ್ತಿಮುನಿ ಇವನ ಕುಲಗುರು. ಹೇಮಕೂಟಗಿರಿ ನಿವಾಸಿ ಮಲ್ಲಿಕಾರ್ಜುನ ಆರಾಧ್ಯದೈವ. ಪೂರ್ವಕವಿಗಳಲ್ಲಿ ಭೋಜನನ್ನು ಸ್ಮರಿಸಿದ್ದಾನೆ.

ಜನವಶ್ಯಕ್ಕೆ ಮದನತಿಲಕ, ಮಲ್ಲಿಕಾರ್ಜುನವಿಜಯ ಎಂಬ ಹೆಸರುಗಳೂ ಇವೆ. 13 ಸಂಧಿ, 685 ಶರ, ಕುಸುಮ, ಭೋಗ ಷಟ್ಪದಿಗಳನ್ನೊಳಗೊಂಡಿರುವ ಈ ಕೃತಿ ರತಿರಹಸ್ಯದ ನೇರವಾದ ಅನುವಾದ. ಕಕೋಕ ಸಂಸ್ಕೃತದಲ್ಲಿ ಸೂತ್ರಬದ್ಧವಾಗಿ ಹೇಳುವುದನ್ನು ಅಷ್ಟೇ ಸೂತ್ರಬದ್ಧವಾಗಿ ಸಮರ್ಥವಾಗಿ ಕಲ್ಲರಸ ಕನ್ನಡದಲ್ಲಿ ಅನುವಾದ ಮಾಡಿದ್ದಾನೆ. ಆದರೆ ತನ್ನ ಕೃತಿಗೆ ಆಕರವನ್ನು ಹೇಳುವಾಗ ಇಂದುಶೇಖರ ಕೃಷ್ಣ ನಂದೀಶ ಗೋಣಿಕಾನಂದನಂ ಮೊದಲಾದವರ್ ಪೇಳಿದ ಕಂದರ್ಪಶಾಸ್ತ್ರಮಂ ಮಂದಸ್ಮಿತಾಸ್ಯೆ ನಿನಗಂದಮೊದವಿರ್ದ ಕನ್ನಡದಿನೊರೆದೆ ಎಂದು ಹೇಳಿ ಕಕೋಕನ ಹೆಸರನ್ನು ಗ್ರಂಥದಲ್ಲಿ ಎಲ್ಲಿಯೂ ಹೇಳುವುದಿಲ್ಲ. ಹಾಗೆಯೇ ಮಲ್ಲಿಕಾರ್ಜುನ ನೃಪಾಲ ತನ್ನ ಹೆಂಡತಿಗೆ ಹೇಳಿದ ಜನವಶ್ಯವನ್ನು ತಾನು ಕನ್ನಡದಲ್ಲಿ ವಿಸ್ತರಿಸಿ ಹೇಳುತ್ತಿರುವುದಾಗಿ, ಮಲ್ಲಿಕಾರ್ಜುನ ಧರಾವಲ್ಲಭನೊಸೆದು ತನ್ನ ನಲ್ಲಳಚೆವಂತೊರೆದ ಜನವಶ್ಯಮಂ ಸಲ್ಲಲಿತವಾಣಿ ಕವಿ ಕಲ್ಲರಸನಜುವವರ ಮೆಲ್ಲೆರ್ದೆಯನಿಂಬುಗೊಳ್ವಂತೆ ಬರೆದು ಎಂಬ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಮೇಲಿನ ಪದ್ಯದಲ್ಲಿ ಉಲ್ಲೇಖಿತನಾಗಿರುವ ಮಲ್ಲಿಕಾರ್ಜುನ 1446 ರಿಂದ 1465ರವರೆಗೆ ಆಳಿದ ವಿಜಯನಗರದ ದೊರೆಯೆಂದು ತಿಳಿದುಬರುತ್ತದೆ.

ಜನವಶ್ಯದ ರಚನೆಯಲ್ಲಿ ಕಂಡುಬರುವ ಕಲ್ಲರಸನ ಕವಿತಾಶಕ್ತಿ ಮತ್ತು ಪ್ರತಿಭೆ ಮೆಚ್ಚುವಂತಹುದು. ಕಾಮಶಾಸ್ತ್ರದ ನಿರೂಪಣೆಗೆ ಬೇಕಾದ ಲಲಿತಶೈಲಿಯನ್ನು ಈತ ಸಾಧಿಸಿಕೊಂಡಿದ್ದಾನೆ. ಈತನೇ ಹೇಳುವ ಅಜೆಯದರ್ಗುಪದೇಶವಜೆದರ್ಗೆ ಜೀವಕಳೆಯಜೆದಜೆಯದವರಿಗಜೆವೆನಿಸಿರ್ಪುದು ಮಜೆಯಿಲ್ಲದೆಲ್ಲರ್ಗೆ ನೆಜೆವೆಜೆಯವೊಲ್ ಕಲೆಯನುಜೆಬೀರ್ಪುದೆನ್ನಕೃತಿ ಸತತಮಬಲೆ –ಎಂಬ ಮಾತು ಉತ್ಪ್ರೇಕ್ಷೆಯಲ್ಲ. ಸತಿಪತಿಯರ ಸರಸ ಸಂಭಾಷಣೆಯ ಚೌಕಟ್ಟಿನಲ್ಲಿ ಸಾಗುವ ಈ ಕೃತಿ ಓದುಗನ ಮನಮುಟ್ಟುವಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಂಡಿದೆ.

ಕನ್ನಡದಲ್ಲಿ ಕಾಮಶಾಸ್ತ್ರವನ್ನು ಕುರಿತು ಮೋಹಾನುಭವಮುಕುರ, ಮದನ ತಿಲಕ, ಮನ್ಮಥವಿಜಯ ಮೊದಲಾದ ಕೃತಿಗಳು ಬಂದಿದ್ದು, ಜನವಶ್ಯ ಅವುಗಳಲ್ಲೆಲ್ಲ ಸಮಗ್ರವೂ ಸಮರ್ಪಕವೂ ಆದ ಕೃತಿಯಾಗಿದೆ ಎಂದು ಹೇಳಬಹುದು. (ಜಿ.ಜಿ.ಎಂ.)

**ಕಲ್ಕಿ** [1] **:** ತಮಿಳಿನ ಒಂದು ಪತ್ರಿಕೆ. ಪ್ರಸಿದ್ಧ ತಮಿಳು ಲೇಖಕ ಆರ್. ಕೃಷ್ಣಮೂರ್ತಿ ಇದರ ಸ್ಥಾಪಕ ಮತ್ತು ಪ್ರಥಮ ಸಂಪಾದಕ.

ಕೃಷ್ಣಮೂರ್ತಿಯವರ ಕಾವ್ಯನಾಮ ಕಲ್ಕಿ. ಸೇಲಂ ಜಿಲ್ಲೆಯ ತಿರುಚೆಂಗೋಡಿನ ಗಾಂಧಿ ಆಶ್ರಮದಲ್ಲಿದ್ದಾಗ ಅವರು ಬಿಡುವಿನ ವೇಳೆಯಲ್ಲಿ ಕಲ್ಕಿ ಎಂಬ ಕಾವ್ಯನಾಮದಿಂದ ಆನಂದ ವಿಕಟನ್ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಗಾಂಧಿ ಆಶ್ರಮವನ್ನು ನಡೆಸುವಲ್ಲಿ ಅವರು ರಾಜಾಜಿಯವರಿಗೆ ನೆರವಾಗುತ್ತಿದ್ದರು. ಆನಂದ ವಿಕಟನ್ ಪತ್ರಿಕೆಯ ಸಂಪಾದಕರಾಗಿದ್ದ ವಾಸನ್ ಕಲ್ಕಿಯವರ ಲೇಖನಗಳಿಂದ ತುಂಬ ಪ್ರಭಾವಿತರಾದರು. ಅಷ್ಟೇ ಅಲ್ಲ, ತಮ್ಮ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಳ್ಳಬೇಕೆಂದೂ ಅವರನ್ನು ಕೇಳಿಕೊಂಡರು. ಅವರು ಆ ಹುದ್ದೆಯನ್ನು ಒಪ್ಪಿಕೊಂಡುದೇ ಅಲ್ಲದೆ, ಅತ್ಯಲ್ಪಕಾಲದಲ್ಲಿಯೇ ಪತ್ರಿಕೆಯ ಹಿರಿಮೆ ಹಲವು ಮಡಿ ಹೆಚ್ಚುವಂತೆ ಮಾಡಿದರು.

1941ರಲ್ಲಿ ಟಿ. ಸದಾಶಿವಂ ಅವರ ಸಕ್ರಿಯ ಸಹಕಾರ ಪಡೆದುಕೊಂಡು ಇವರು ಕಲ್ಕಿ ಪತ್ರಿಕೆಯನ್ನು ಪ್ರಾರಂಭಿಸಿದರು. ಸದಾಶಿವಂ ಇಂದು ಈ ಪತ್ರಿಕೆಯ ವ್ಯವಸ್ಥಾಪಕ–ಸಂಪಾದಕರಾಗಿದ್ದಾರೆ.

ಕಲ್ಕಿಯ ರಾಜನೈತಿಕ ವಿಚಾರಧಾರೆಗೆ ರಾಜಗೋಪಾಲಾಚಾರಿಯವರು ಮಾರ್ಗದರ್ಶಕರು. ಕಲ್ಕಿ ತನ್ನ ಓದುಗರಿಗೆ ರಾಜಕೀಯ ವಿಚಾರಗಳ ಜೊತೆಗೆ ನಿಯತಲೇಖನಗಳನ್ನು (ಪ್ರವಾಸ ಕಥನಗಳು, ಜೀವನ ಚರಿತ್ರೆಗಳು, ಸಂದರ್ಶನಗಳು ಇತ್ಯಾದಿ). ಧಾರಾವಾಹಿ ಕಾದಂಬರಿಗಳನ್ನು, ಸಣ್ಣ ಕಥೆಗಳನ್ನು, ಲಘುಬರೆಹಗಳನ್ನು ಮತ್ತು ವಿಡಂಬನ ಚಿತ್ರಗಳನ್ನು ನೀಡುತ್ತದೆ. ಇದು ಹಿರಿಯರೂ ಕಿರಿಯರೂ ಆಸ್ಥೆಯಿಂದ ಓದುವ ಕೌಟುಂಬಿಕ ಪತ್ರಿಕೆ.

ಕಲ್ಕಿ ಜವಾಬ್ದಾರಿಯುತವಾದ ಪತ್ರಿಕೋದ್ಯಮದ ಫಲ. ವ್ಯಕ್ತಿಗಳನ್ನು ಮತ್ತು ಸಂಗತಿಗಳನ್ನು ವಿಮರ್ಶಿಸುವಲ್ಲಿ ಇದು ಪೂರ್ವಾಗ್ರಹವನ್ನಾಗಲಿ, ಭಯವನ್ನಾಗಲಿ ತೋರದ ಬಿಚ್ಚುಮಾತಿನ ಪತ್ರಿಕೆಯಾಗಿದೆ. ಮುಕ್ತ ಉದ್ಯಮ ಸಿದ್ಧಾಂತದಲ್ಲಿ ದೃಢವಾದ ನಂಬಿಕೆ ಹೊಂದಿರುವ ಈ ಪತ್ರಿಕೆ ಆ ವಿಚಾರಗಳನ್ನು ಪ್ರತಿಪಾದಿಸಿದರೂ ಉಚ್ಚಮಟ್ಟದ ಪತ್ರಿಕೋದ್ಯಮದ ನೀತಿ_ಸಂಹಿತೆಯನ್ನು ಪಾಲಿಸಿಕೊಂಡು ಬರುತ್ತಿದೆ. ಪ್ರಸಾರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಹೊಂದಾಣಿಕೆ ಮಾಡಿಕೊಳ್ಳುವ ಅಥವಾ ಕೆಳಮಟ್ಟಕ್ಕಿಳಿಯುವ ಪ್ರವೃತ್ತಿಯನ್ನು ಎಂದೂ ತೋರಿಲ್ಲ. ಧೂಮಪಾನಕ್ಕೆ ವಿರುದ್ಧವಾಗಿ ಇದು ಸಕ್ರಿಯ ಪ್ರಚಾರವನ್ನೇ ನಡೆಸಿತು. ಬರಲಿರುವ ಆದಾಯದಲ್ಲಿ ಖೋತ ಬೀಳುವುದನ್ನೂ ಲೆಕ್ಕಿಸದೆ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಂತೆ ಇದೂ ಸಿಗರೇಟುಗಳ ಜಾಹಿರಾತನ್ನು ಪ್ರಕಟಣೆಗೆ ಸ್ವೀಕರಿಸಲಿಲ್ಲ.

ಸಾಹಿತ್ಯ ಕ್ಷೇತ್ರದಲ್ಲಿಯೂ ಕಲ್ಕಿಯ ಸಾಧನೆ ಅಷ್ಟೇ ಹಿರಿದಾದ್ದು. ಕಲ್ಕಿಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಕೃತಿಗಳು ಸಾಹಿತ್ಯ ಅಕೆಡಮಿಯ ಪ್ರಶಸ್ತಿಗಳಿಸಿವೆ. (ಕೆ.ವಿ.ಎ.)

**ಕಲ್ಕಿ** [2] **:** ವಿಷ್ಣುವಿನ ಹತ್ತನೆಯ ಹಾಗೂ ಕೊನೆಯ ಅವತಾರ. ಕಲಿಯುಗದ ಕೊನೆಯಲ್ಲಿ ಆಗಲಿದೆ. ಕಲಿಮಹಾಪುರುಷನ ಪ್ರಭಾವದಿಂದ ಜನರಲ್ಲಿ ಧರ್ಮ, ದಯೆ ಮೊದಲಾದ ಗುಣಗಳು ಅಳಿದು ಅಧರ್ಮ ಅತಿ ಹೆಚ್ಚಿದಾಗ ವಿಷ್ಣು ಕಲ್ಕಿಯಾಗಿ ಅವತರಿಸಿ ಅಶ್ವಾರೂಢನಾಗಿ, ಖಡ್ಗ ಹಿಡಿದು ಹೊರಟು ಮ್ಲೇಚ್ಛ ಸಮೂಹವನ್ನು ಸಂಹರಿಸಿ, ಜಗತ್ತಿನಲ್ಲಿ ಧರ್ಮಸಂರಕ್ಷಣೆ ಮಾಡಿ ಶಾಂತಿಸೌಖ್ಯಗಳನ್ನು ನೆಲೆಗೊಳಿಸುತ್ತಾನೆಂದು ನಂಬಿಕೆ.

ಕಲ್ಕಿಯ ಕಲ್ಪನೆ ಹಿಂದೆ ಹರಿದಾಸರಿಗೂ ಈಚೆಗೆ ಅನೇಕ ಲೇಖಕರಿಗೂ ಕಾವ್ಯ ಸಾಮಗ್ರಿಯನ್ನೊದಗಿಸಿದೆ. (ಟಿ.ಎನ್.ಎನ್.ಆರ್.)

**ಕಲ್ಗಿ – ತುರಾಯಿ :** ಉತ್ತರ ಕರ್ನಾಟಕದಲ್ಲಿ ಗುರುತಿಸಲಾದ ಒಂದು ಪ್ರಸಿದ್ಧ ಲಾವಣಿ ಸಂಪ್ರದಾಯ. ದಕ್ಷಿಣ ಕರ್ನಾಟಕದಲ್ಲಿಯೂ ಈ ಸಂಪ್ರದಾಯದ ಹಾಡುಗಳಿದ್ದವು ಎಂಬುದಕ್ಕೆ ಅಲ್ಲಲ್ಲಿ ನಿದರ್ಶನಗಳು ಲಭ್ಯವಾದರೂ ಇತ್ತೀಚೆಗೆ ಸಂಪೂರ್ಣವಾಗಿ ಅವು ಕಣ್ಮರೆಯಾಗಿ ಹೋಗಿವೆ. ಮೈಸೂರು ಮತ್ತು ಕಡೂರುಗಳಲ್ಲಿ ಕಲ್ಗಿ_ತುರಾಯಿ ಲಾವಣಿಗಳನ್ನು ಹಾಡುವವರು ಕಾಣಬರುತ್ತಿದ್ದರು.

ಕಲ್ಗಿ ಮತ್ತು ತುರಾಯಿಗಳು ಲಾವಣಿಕಾರರ ಎರಡು ವರ್ಗಗಳು. ನಾಗೇಸಿ ಮತ್ತು ಹರದೇಸಿ ಎಂದೂ ಇವರನ್ನು ಕರೆವುದಿದೆ. ಈ ಎರಡು ವರ್ಗದ ಲಾವಣಿಕಾರರೂ ಇದಿರುಬದಿರಾಗಿ ಸ್ಪರ್ಧೆಯಿಂದ ಹಾಡುತ್ತಾರೆ. ಹರದೇಸಿಯವರು ಗಂಡಿನ ಪಕ್ಷವನ್ನೂ ನಾಗೇಸಿಯವರು ಹೆಣ್ಣಿನ ಪಕ್ಷವನ್ನೂ ವಹಿಸಿ ಅಪೂರ್ವ ಲಾವಣಿಗಳನ್ನು ಹೇಳುತ್ತಾರೆ. ತಮ್ಮ ತಮ್ಮ ಪಕ್ಷಗಳನ್ನು ಎತ್ತಿ ಹಿಡಿದು ಹಾಡುವುದು ಇಲ್ಲಿಯ ಸಂಪ್ರದಾಯ. ಒಂದು ಇನ್ನೊಂದಕ್ಕಿಂತ ಮೇಲು ಎಂದು ಸ್ಥಾಪಿಸುವ ಭರದಲ್ಲಿ ಲಾವಣಿಯ ಲಾವಣ್ಯಕ್ಕೆ ಭಂಗವನ್ನುಂಟುಮಾಡುವ ಸಂದರ್ಭಗಳೂ ಉಂಟು.

ಲಾವಣಿಗಳಲ್ಲಿ ವಿಸ್ತಾರವಾದ ಲಾವಣಿಗಳೂ ಉಪಲಾವಣಿಗಳೂ ಉಂಟು. ಪೌರಾಣಿಕ, ಸಾಮಾಜಿಕ, ಐತಿಹಾಸಿಕ ವಿಷಯಗಳು ಸಾಮಾನ್ಯವಾಗಿ ಈ ಲಾವಣಿಯ ಮುಖ್ಯ ವಸ್ತುಗಳಾಗಿ ಕಂಡುಬರುತ್ತವೆ. ಶೃಂಗಾರ ಹಾಗೂ ಹಾಸ್ಯ ಪ್ರಧಾನ ಲಾವಣಿಗಳ ಪ್ರಾಚುರ್ಯ ಹೆಚ್ಚು. ಹಳೆಯ ಸಂಪ್ರದಾಯದ ಲಾವಣಿಗಳು, ಹೊಸ ಸಂಪ್ರಾದಯದ ಲಾವಣಿಗಳು ಎಂದು ಇವುಗಳ ಬಗೆಗಳನ್ನು ವಿಭಜಿಸಲಾಗಿದೆ. ಹಳೆಯ ಲಾವಣಿಗಳು ರಚನಾ ದೃಷ್ಟಿಯಿಂದ, ಕಲ್ಪನಾರಮ್ಯತೆಯ ದೃಷ್ಟಿಯಿಂದ ವಿಶಿಷ್ಟ ಸ್ಥಾನಕ್ಕೆ ಅರ್ಹವಾದವು.

ಸಾಮಾನ್ಯವಾಗಿ ಲಾವಣಿಕಾರರು ಪ್ರತಿ ಲಾವಣಿಯನ್ನು ಹಾಡುವಾಗಲೂ ಮೊದಲಿಗೊಂದು ಉಪೋದ್ಘಾತ ಸ್ವರೂಪದ ಚಿಕ್ಕ ಹಾಡನ್ನೂ ಕೊನೆಗೊಂದು ಉಪಸಂಹಾರ ಸ್ವರೂಪದ ಹಾಡನ್ನೂ ಹೇಳುವುದು ವಾಡಿಕೆ. ಸೂಚನ ಪಲ್ಲವಿಯನ್ನು ಸಖಿ ಎಂದೂ ಕೊನೆಯದನ್ನು ಖ್ಯಾಲಿ ಎಂದೂ ಹೆಸರಿಸುತ್ತಾರೆ. ಪ್ರತಿಲಾವಣಿಯಲ್ಲೂ ಚೌಕ ಎಂಬ ವಿಭಾಗವನ್ನು ಕಲ್ಪಿಸಿ, ಅದರಲ್ಲಿ ಕೆಲವು ನುಡಿಗಳು, ಒಂದು ಚಾಲ ಸೇರಿರಬೇಕೆಂದು

ಇಟ್ಟುಕೊಂಡಿದ್ದಾರೆ. ಅಂಥ ನಾಲ್ಕೋ ಆರೋ ಚೌಕ ಸೇರಿದರೆ ಒಂದು ಇಡಿಯ ಲಾವಣಿ ಅಗುತ್ತದೆ.

ಲಾವಣಿ ಹಾಡುವಾಗ ಸಾಮಾನ್ಯವಾಗಿ ಇಬ್ಬರು ಜೊತೆಯಾಗುತ್ತಾರೆ. ಅವರು ಎಡಗೈಯಲ್ಲಿ ಕೈತಾಳ, ಬಲಗೈಯಲ್ಲಿ ದಪ್ಪ ಹಿಡಿದು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಹಾಡಲು ಸಿದ್ಧವಾಗುತ್ತಾರೆ. ಅವರ ಹಿಂದೆ ತಿಂತಿಣಿ ಎಂಬ ವಾದ್ಯವನ್ನು ಹಿಡಿದ ಸೂರಿನವ ನಿಂತಿರುತ್ತಾನೆ.

ಲಾವಣಿಕಾರ ಲಾವಣಿಯ ಕೊನೆಯಲ್ಲಿ ತನ್ನ ಊರು, ಅಧಿದೈವ, ಗುರುಪರಂಪರೆ, ಹಾಡುವ ಜೊತೆಗಾರರು ಮುಂತಾದ ವಿಷಯಗಳನ್ನೂ ತನ್ನ ಹಾಡು ಎಂಥ ಪ್ರಭಾವಶಾಲಿಯಾದುದು, ಪ್ರತಿಪಕ್ಷದವರನ್ನು ಹೇಗೆ ಆಕರ್ಷಿಸಬಲ್ಲುದು ಎಂಬ ಅಂಶವನ್ನೂ ಸೂಚಿಸುತ್ತಾನೆ.

*ಮನ ಸಂತೋಷಾಯ್ತು ಬೆಳದಿಂಗಳ ಮಳಿಕುಟ್ಟಿ / ಮಳಿಕುಟ್ಟಿ /*
*ಸುತ್ತ ರಾಜ್ಯದಾಗ ಹಲಸಂಗಿ ಊರ ಕರಿಕೋಟಿ / ಕರಿಕೋಟಿ /*
*ಗಂಡು ಬಾಳು ವಸ್ತಾದರ ಆ ಕಡಿ ನಡಗಟ್ಟಿ / ನಡಗಟ್ಟಿ*
*ಕರನಾಟಕ ಹಲಸಂಗಿ ಊರ / ಮೆರಿಯತಾವ ತೂರ /*
*ಮಲಿಕ ಮೈತರ / ಹಚ್ಚಿ ವರಗಿ /*
*ಖಾಜ್ಯಾನ ಕವೀ ಸವಿ ಸಕ್ಕರಿ ಎಲ್ಲರಿಗಿ /*
*ಖಂಡೂನ ಸೂರ ಕೇಳಿ ಕಲ್ಲ ಮನಸು ಕರಗಿ /*

ಕಲ್ಗಿ–ತುರಾಯಿ ಸಂಪ್ರದಾಯ ಹಾಗೂ ಆ ಸಂಬಂಧವಾದ ಲಾವಣಿಗಳು ಕರ್ನಾಟಕ ಜಾನಪದದ ಒಂದು ಪ್ರಮುಖ ಅಂಗ. ಅತ್ಯುತ್ಕೃಷ್ಟ ಲಾವಣಿಗಳು ಈ ಪರಂಪರೆಯಲ್ಲಿ ಲಭ್ಯವಾಗಿ ಕನ್ನಡ ಜನಪದ ಕಾವ್ಯಸಂಪತ್ತಿನ ಹಿರಿಮೆಯನ್ನು ಸಾರುತ್ತಿವೆ. (ಎಸ್.ಎಲ್.)

**ಕಲ್ನಾರು :** ಎಳೆ ಎಳೆಯಾಗಿ ದೊರೆಯುವ, ಕಲ್ಲುಗಳ ರೂಪ ತಳೆಯಬಲ್ಲ ಅತ್ಯುಪಯುಕ್ತ ಖನಿಜಗಳ ಸಾಮಾನ್ಯನಾಮ (ಆ್ಯಸ್ ಬೆಸ್ಟಸ್). ವಿವಿಧ ದರ್ಜೆಯ ಖನಿಜದ ಎಳೆಗಳಿಂದ ತಯಾರಿಸಲಾದ ವಸ್ತುಗಳ ಉಷ್ಣನಿರೋಧಕ ಗುಣದಿಂದ ಕಲ್ನಾರಿಗೆ ಪ್ರಾಮುಖ್ಯ ಬಂದಿದೆ. ಈ ಖನಿಜವನ್ನು ನಾರಿನಂತೆ ಎಳೆ ಎಳೆಯಾಗಿ ಬಿಡಿಸಬಹುದು. ಎಳೆಗಳು ರೇಷ್ಮೆಯಂತೆ ನಯವಾಗಿವೆ. ಇದರ ಬಣ್ಣ ಬಿಳುಪು; ಕಾಠಿಣ್ಯ 3.5–4.1; ಸಾಪೇಕ್ಷ ಸಾಂದ್ರತೆ 2.5–2.&. ಇದರಲ್ಲಿ ಆಂಫಿಬೋಲ್ ಕಲ್ನಾರು ಮತ್ತು ಕ್ರೈಸೊಲೈಟ್ ಕಲ್ನಾರು ಎಂಬೆರಡು ಜಾತಿಗಳಿವೆ. ಮೊದಲನೆಯದು ಶುದ್ಧವಾದುದು. ಎರಡನೆಯದು ವ್ಯಾಪಾರದ ಬಹುಭಾಗವನ್ನು ಪೂರೈಸುತ್ತದೆ. ಎರಡೂ ನಮ್ಮ ದೇಶದಲ್ಲಿವೆ. ಮೊದಲನೆಯದು ಮೈಸೂರು ಜಿಲ್ಲೆಯಲ್ಲಿರುವ ಮಾವಿನಹಳ್ಳಿ ಮತ್ತು ಗೋಪಾಲಪುರದ ಬಳಿ. ಹಾಸನ ಜಿಲ್ಲೆಯಲ್ಲಿ ಹೊಳೇನರಸೀಪುರದ ಹತ್ತಿರ ಇಡೆಗೊಂಡನಹಳ್ಳಿ ಮತ್ತು ಕಬ್ಬೂರಿನ ಬಳಿ ಸಿಕ್ಕುತ್ತದೆ. ತಮಿಳುನಾಡಿನ ಸೇಲಂ ಜಿಲ್ಲೆಯಲ್ಲೂ ಬಿಹಾರ್, ರಾಜಸ್ತಾನಗಳಲ್ಲಿಯೂ ಸಿಕ್ಕುತ್ತದೆ. ಈ ಕಲ್ನಾರಿನ ನೂಲಿನ ಎಳೆಯ ಶಕ್ತಿ ಅಲ್ಪವಾದ್ದರಿಂದ ಇದು ಬಟ್ಟೆ ತಯಾರಿಕೆಗೆ ಅರ್ಹವಲ್ಲ. ಅಗ್ನಿನಿರೋಧಕ ಕಾಗದ, ಹಲಗೆ ಮೊದಲಾದವನ್ನು ಇದರಿಂದ ತಯಾರಿಸಬಹುದು. ಅಕ್ವಿನೊಲೈಟ್ ಪತ್ರಶಿಲೆ ಇದರ ಮುಖ್ಯ ಆಕರ; ಇದು ಕ್ಯಾಲ್ಸಿಯಂ–ಮೆಗ್ನೀಸಿಯಂ–ಐರನ್–ಸಿಲಿಕೇಟ್. ಅಮೊಸೈಟ್ ಮೆಗ್ನೀಸಿಯಂ–ಐರನ್ ಸಿಲಿಕೇಟ್. ಇದು ನೀಳವಾದ ನೂಲುಗಳಿರುವ ಶುದ್ಧವಾದ ಕಲ್ನಾರು. ಅಗ್ನಿಸ್ಪರ್ಶದಿಂದಲೇ ಇದರ ಬಟ್ಟೆ ಶುದ್ಧವಾಗುತ್ತದೆ. ಕ್ರಾಸಿಡೋಲೈಟ್ ನೀಲವರ್ಣದ ಸೋಡಿಯಂ–ಐರನ್–ಸಿಲಿಕೇಟ್; ಇದು ಮಾರ್ಪಟ್ಟು ಹೊಂಬಣ್ಣದ ಛಾಯೆಯ ಕೆಂಪು ಬಣ್ಣವನ್ನು ಹೊಂದುವುದುಂಟು; ಆಗ ಇದರಲ್ಲಿ ಸಿಲಿಕ ನಿಕ್ಷೇಪವಾದರೆ ಬಲು ಅಂದವಾಗಿ ಕಾಣುತ್ತದೆ. ಇದೊಂದು ಅಲಂಕಾರಶಿಲೆ (ಆರ್ನಮೆಂಟಲ್ ಸ್ಟೋನ್). ವೈಡೂರ್ಯ, ಆಮೊಸೈಟ್, ಕ್ರಾಸಿಡೊಲೈಟುಗಳು ಆಮ್ಲಗಳಿಗೆ ಜಗ್ಗುವುದಿಲ್ಲ. ಕ್ರೈಸೊಲೈಟ್ ಕಲ್ನಾರು ಆಮ್ಲಗಳಿಂದ ರಾಸಾಯನಿಕ ಪರಿವರ್ತನೆ ಹೊಂದುತ್ತದೆ. ಎರಡನೆಯ ಜಾತಿಯ ಈ ಕಲ್ನಾರು ಸರ್ಪೆಂಟೀನ್, ಹೈಡ್ರಸ್ ಮೆಗ್ನೀಸಿಯಂ–ಸಿಲಿಕೇಟ್ [$Mg_6Si_4O_{10}$ $(OH)_s$] ಶಿಲಾರಾಶಿಗಳಲ್ಲಿರುವ ಅಸಂಖ್ಯಾತ ಸಿರಗಳಲ್ಲಿ ಸಿಕ್ಕುತ್ತದೆ. ಸಿಲಿಕಾ ($SiO_2$) ಅಲ್ಪವಾಗಿರುವ ಅಗ್ನಿಶಿಲೆಗಳಲ್ಲಿರುವ ಆಲಿವೀನ್ ($Mg_2SiO_4$) ಖನಿಜ ಬಹುಬೇಗ ನೀರನ್ನು ಹೀರಿ ಸರ್ಪೆಂಟೀನ್ ಆಗುತ್ತದೆ. ಈ ಖನಿಜದ ತೆಳುವಾದ ಸಿರಗಳಲ್ಲಿರುವ ರೇಷ್ಮೆಯ ಎಳೆಗಳಂತಿರುವ ವಸ್ತುವಿಗೆ ಕಲ್ನಾರಿನ ಗುಣಗಳಿವೆ. ಇದರಿಂದ ಕಲ್ನಾರಿನ ಹೆಂಚು, ಹಾಳೆ ಮೊದಲಾದ ಅಗ್ನಿನಿರೋಧಕ ವಸ್ತು ನಿರ್ಮಾಣವಾಗುತ್ತದೆ. ಶುದ್ಧವಾದ ಕಲ್ನಾರನ್ನು ಔಷಧಕ್ಕೂ ಬಳಸುತ್ತಾರೆ. ಇದರೊಡನೆ ಮ್ಯಾಗ್ನೆಸೈಟ್ ಮತ್ತು ಕ್ರೋಮೈಟ್ ಎಂಬ ಉಪಯುಕ್ತ ಖನಿಜಗಳು ಸಿಕ್ಕುವುದುಂಟು. ಉದಾಹರಣೆಗೆ ನಂಜನಗೂಡಿನ ಬಳಿ ಕಡಕೊಳದ ಗಣಿಗಳು, ಸೇಲಂ ಜಾಕ್ ಬೆಟ್ಟಗಳು ಇವೆರಡೂ ಆದಿಯುಗದವು (ಆರ್ಕೇಯನ್).

**ಅದಿರುಗಳು:** ನಾನಾಬಗೆಯ ಕಲ್ನಾರುಗಳಲ್ಲಿ ಕ್ರೈಸೊಲೈಟ್ ಬಗೆ ಬಹು ಮುಖ್ಯವಾದುದು. ಮೆಗ್ನೀಸಿಯಂ ಸಿಲಿಕೇಟ್ ಮತ್ತು ಮ್ಯಾಂಗನೀಸ್ ಹೈಡ್ರೊ ಸಿಲಿಕೇಟುಗಳು ಇದರಲ್ಲಿವೆ. ಇದರ ಒಂದು ದಾರವನ್ನು ಪರಿಶೀಲಿಸಿದಾಗ ಅದು ಬಿಳುಪಾಗಿ ಕಂಡರೂ ಅದರ ಒಳಗಡೆ ಇರುವ ಕಣಗಳು ಹಸುರು ಮಿಶ್ರಿತ ಹಳದಿ ಬಣ್ಣವನ್ನು ಪ್ರದರ್ಶಿಸುತ್ತವೆ. ಈ ದಾರ ಅರ್ಧ ನೂಲಿನಿಂದ ಒಂದೂವರೆ ನೂಲಿನಷ್ಟು ದಪ್ಪವಾಗಿಯೂ ಹನ್ನೆರಡು ಅಂಗುಲಗಳಷ್ಟು ಉದ್ದವಾಗಿಯೂ ಇರುತ್ತದೆ. ಕಲ್ನಾರಿನ ಅದುರು ಕ್ವೆಬೆಕಿನಲ್ಲಿ ಬಹಳ ಹೆಚ್ಚಾಗಿ ಸಿಗುತ್ತದೆ. ಕ್ರೆಸೊಲೈಟ್ ಸುಣ್ಣಕಲ್ಲಿನ ಪ್ರದೇಶದಲ್ಲೂ ಸಿಗುತ್ತದೆ.

ಇನ್ನೊಂದು ಬಗೆಯ ಕಲ್ನಾರನ್ನು ಆಂಥೋಫಿಲೈಟ್ ಅದಿರಿನಿಂದ ಪಡೆಯುತ್ತಾರೆ. ಇದು ಮೆಗ್ನೀಸಿಯಂ ಕಬ್ಬಿಣದ ಸಿಲಿಕೇಟನ್ನು ಒಳಗೊಂಡಿರುತ್ತದೆ. ಇದರ ಎಳೆ ಬಹಳ ಒರಟು. ನಮ್ಯತೆ ಬಲು ಕಡಿಮೆ. ಇನ್ನೊಂದು ಬಗೆಯಲ್ಲಿ ಕಬ್ಬಿಣದ ಕಣಗಳು ಹೆಚ್ಚಿಗೆ ಇದ್ದು ಅದರ ಎಳೆಗಳು ಬಹಳ ಅಗಲ ಮತ್ತು ಉದ್ದವಾಗಿರುತ್ತವೆ. ಇವುಗಳ ಬಣ್ಣ ಕಂದು ಮತ್ತು ಹಳದಿ ಮಿಶ್ರಿತ ಹಸುರು. ಈ ಬಗೆಯ ಕಲ್ನಾರು ಬಹಳ ಬೇಗನೆ ಪುಡಿಯಾಗುತ್ತದೆ. ಆದರೆ ರಾಸಾಯನಿಕ ಆಮ್ಲಗಳು ಬಿದ್ದಾಗ ಯಾವ ಪ್ರತಿಕ್ರಿಯೆಯನ್ನೂ ತೋರುವುದಿಲ್ಲ.

ಸೋಡಾಕಬ್ಬಿಣ ಮಿಶ್ರವಾಗಿರುವ ಇನ್ನೊಂದು ಬಗೆಯ ಅದಿರನ್ನೂ ಕಲ್ನಾರು ಎನ್ನುತ್ತಾರೆ. ಇದು ಪ್ರಕೃತಿಯಲ್ಲಿ 3" ಅಗಲದ ವರೆಗೂ ದೊರೆಯುತ್ತದೆ. ಇದಕ್ಕೆ ಅಧಿಕ ನಮ್ಯತೆ ಇದೆ. ಇದು ಹೆಚ್ಚಿಗೆ ಉಷ್ಣವನ್ನು ತಡೆದುಕೊಳ್ಳಲಾರದೆ ಕೆಲವು ಸಂದರ್ಭಗಳಲ್ಲಿ ಕರಗಿಹೋಗುತ್ತದೆ. ಅತ್ಯುತ್ತಮವಾದ ಕಲ್ನಾರು ಎಂದರೆ ಟ್ರೈಮೋಲೈಟ್ ಕಲ್ನಾರು. ಇದು ಬಹಳ ನುಣುಪಾಗಿಯೂ ಸಣ್ಣಸಣ್ಣ ಎಳೆಯಾಗಿಯೂ ದೊರೆಯಬಲ್ಲುದು. ಇದು ಕ್ಯಾಲ್ಸಿಯಂ, ಮೆಗ್ನೀಸಿಯಂ, ಹೈಡ್ರಾಕ್ಸೈಡುಗಳಿಂದ ಕೂಡಿರುತ್ತದೆ. ಇದರ ಬಣ್ಣ ಬಹಳ ಬಿಳುಪಾಗಿಯೂ ಕೆಲವು ಸಂದರ್ಭಗಳಲ್ಲಿ ಕಂದು ಮಿಶ್ರಿತ ಬಿಳುಪಾಗಿಯೂ ಇರುತ್ತದೆ. ಇದರ ಘನಸಾಂದ್ರತೆ ಒಂದಕ್ಕಿಂತ ಕಡಿಮೆ.

**ಉಪಯೋಗಗಳು:** ಕಲ್ನಾರು ಅಗ್ನಿನಿರೋಧಕವಾಗಿರುವುದರಿಂದಲೂ ಸುಲಭವಾಗಿ ದಾರದ ಎಳೆಯಿಂದ ಮಾಡಿರುವುದರಿಂದಲೂ ಇದನ್ನು ಹೆಚ್ಚಾಗಿ ಕೈಗಾರಿಕಾ ವಸ್ತುವನ್ನಾಗಿ ಉಪಯೋಗಿಸುತ್ತಾರೆ. ಕಲ್ನಾರಿನ ಎಳೆ ಕೆಲವು ಸಾರಿ ಮೆರುಗು ಕೊಟ್ಟ ತಂತಿಯನ್ನು ಹೋಲುತ್ತದೆ. ಉದ್ದವಾದ ಎಳೆಗಳನ್ನು ದಾರಗಳನ್ನಾಗಿ ಮಾಡಬಹುದು.ಹತ್ತಿ, ತಾಮ್ರ, ಹಿತ್ತಾಳೆ ಎಳೆಗಳನ್ನು ಸೇರಿಸಿ ಕಲ್ನಾರಿನ ದಾರಗಳನ್ನು ಮಾಡಬಹುದು. ಕಲ್ನಾರನ್ನು ಆವಿಯ ಕೊಳವೆಯ ಸುತ್ತಲೂ ಸುತ್ತುವುದಕ್ಕೇ ಗೋಡೆಗಳ ಮೇಲೆ ಹಲಗೆಗಳಂತೆ ಹಾಸಲಿಕ್ಕೆ ಮಾತ್ರವಲ್ಲದೆ ಚಿತ್ರ ಮತ್ತು ನಾಟಕಮಂದಿರಗಳಲ್ಲಿ ಅಲಂಕರಣ ಹಾಗೂ ರಕ್ಷಣಾಸಾಮಗ್ರಿಯಾಗಿಯೂ ಉಪಯೋಗಿಸುತ್ತಾರೆ. ಸಣ್ಣ ತಂತಿಗಳನ್ನು ಕಲ್ನಾರಿನ ಪುಡಿಗಳಲ್ಲಿ ಮಿಶ್ರಮಾಡಿ ವಾಹನಗಳ ವೇಗವನ್ನು ಹಿಡಿಯುವ ಸಾಧನವನ್ನಾಗಿ ಮಾಡುತ್ತಾರೆ. ಅದುರಿನ ಜೊತೆಯಲ್ಲಿ ರಬ್ಬರನ್ನು ಮಿಶ್ರಮಾಡಿ ಉಷ್ಣವನ್ನು ತಡೆಯುವ ಸಾಧನವನ್ನಾಗಿ ಉಪಯೋಗಿಸುತ್ತಾರೆ. ಕಲ್ನಾರಿನ ಅದುರನ್ನು ಗ್ರಾಫೈಟ್ ಮತ್ತು ಗ್ರೀಸ್ ಮಿಶ್ರಣದ ಜೊತೆಯಲ್ಲಿ ಉಗಿಬಂಡಿಗಳಲ್ಲಿ ಉಪಯೋಗಿಸುತ್ತಾರೆ. ಈ ಮಿಶ್ರಣದಿಂದ ಹಗ್ಗ, ದಾರಗಳನ್ನು ಸಹ ಮಾಡುತ್ತಾರೆ. ಹೆಚ್ಚಿಗೆ ಬೆಂಕಿ ಇರುವ ಸ್ಥಳಗಳಲ್ಲಿ ಕೆಲಸ ಮಾಡುವವರು ಕಲ್ನಾರಿನಿಂದ ತಯಾರಿಸಿದ ಕವಚಗಳು ಮತ್ತು ಕೈಚೀಲಗಳನ್ನು ಉಪಯೋಗಿಸುತ್ತಾರೆ. ಇದು ವಿದ್ಯುಚ್ಛಕ್ತಿ ನಿರೋಧಕ. ಸಿಮೆಂಟ್ ಮತ್ತು ಜಿಪ್ಸಂಗಳನ್ನು ಕಲ್ನಾರಿನ ಅದಿರಿನಲ್ಲಿ ಮಿಶ್ರಮಾಡಿ ನಾನಾ ರೀತಿಯ ಕಲ್ನಾರುಗಳನ್ನು ಹಲಗೆಗಳ ರೂಪದಲ್ಲಿ ತಯಾರಿಸುತ್ತಾರೆ. ಹೆಂಚುಗಳನ್ನೂ ಕಾಗದವನ್ನೂ ಕಲ್ನಾರಿನಿಂದ ತಯಾರಿಸುತ್ತಾರೆ. ಅದಿರಿನ ಸಣ್ಣ ಕಣಗಳಿಗೆ ಬಣ್ಣದ ತಯಾರಿಕೆಯಲ್ಲಿ ಉಪಯೋಗವುಂಟು. ಇದರಿಂದ ತಯಾರಿಸಿದ ಹಲಗೆಗಳನ್ನು ಮೇಲ್ಹಾವಣಿಗೆ ಉಪಯೋಗಿಸುತ್ತಾರೆ. ಇದರ ಕೊಳವೆಗಳನ್ನು ಹೊಗೆ ಮತ್ತು ನೀರು ಸಾಗಿಸಲು ಬಳಸುತ್ತಾರೆ. ಕೊಳವೆಗಳು ನೀರಾವರಿ ಕೆಲಸಗಳಲ್ಲಿ ಬಹಳ ಉಪಯೋಗವಾಗುತ್ತವೆ. ಆದರೆ ಹೆಚ್ಚಿಗೆ ತೂಕಬಿದ್ದಾಗ ಇವು ಒಡೆದುಹೋಗುತ್ತವೆ. (ಎ.ಎನ್.ಎಸ್.ಐ.; ಜಿ.ಟಿ.ಜಿ.)

**ಕಲ್ಪ :** ಭೂ ವಿಜ್ಞಾನದಲ್ಲಿ ಕಾಲವನ್ನು ಅಳೆಯುವ ಒಂದು ಮಾನಕ (ಇಪಕ್). ಭೂಮಿಯ ಗತಕಾಲವನ್ನು ಭೂ ವೈಜ್ಞಾನಿಕ ಕಾಲಮಾನದಲ್ಲಿ ಆಯಾ ಕಾಲದ ಭಿನ್ನ ಲಕ್ಷಣಗಳನ್ನು ಆಧರಿಸಿ ಐದು ಪ್ರಧಾನ ಕಲ್ಪಗಳಾಗಿ ವಿಂಗಡಿಸಿದ್ದಾರೆ. ಪ್ರೊಟಿರೋಜೋಯಿಕ್, ಪೇಲಿಯೋಜೋಯಿಕ್, ಮೀಸೋಜೋಯಿಕ್, ಟರ್ಷಿಯರಿ, ಕ್ವಾಟರ್ನರಿ. ಈ ಒಂದೊಂದು ಕಲ್ಪವನ್ನೂ ಹಲವಾರು ಕಲ್ಪಗಳಾಗಿ ವಿಭಾಗಿಸಿದ್ದಾರೆ. ಉದಾಹರಣೆಗೆ ಪೇಲಿಯೋಜೋಯಿಕ್ ಕಲ್ಪದ ವ್ಯಾಪ್ತಿ 600 ದಶಲಕ್ಷ ವರ್ಷ ಪ್ರಾಚೀನದಿಂದ 225 ದಶಲಕ್ಷ ವರ್ಷ ಪ್ರಾಚೀನದವರೆಗೆ ಇದೆ. ಇದರಲ್ಲಿನ ಯುಗಗಳ ವಿಂಗಡಣೆ ಹೀಗಿದೆ:

| | | | | |
|---|---|---|---|---|
| 600–500 | ದಶಲಕ್ಷ | ವರ್ಷ | ಪ್ರಾಚೀನ | ಕೇಂಬ್ರಿಯನ್ |
| 500–440 | “ | “ | “ | ಆರ್ಡೊವಿಶಿಯನ್ |
| 440–400 | “ | “ | “ | ಸೈಲೂರಿಯನ್ |
| 400–350 | “ | “ | “ | ಡಿವೋನಿಯನ್ |
| 350–280 | “ | “ | “ | ಕಾರ್ಬಾನಿಫೆರಸ್ |
| 280–225 | “ | “ | “ | ಪರ್ಮಿಯನ್ |

ಭೂಮಿಯ ಸಮಸ್ತ ಲಕ್ಷಣಗಳ (ಜೀವಿಗಳ ವಿಕಾಸ, ಅಜೀವ ವಸ್ತುಗಳಲ್ಲಿ ಉಂಟಾಗಿರುವ ಬದಲಾವಣೆಗಳು ಮತ್ತು ಪರಿವರ್ತನೆಗಳು ಮುಂತಾದುವು) ಅಭ್ಯಾಸದಿಂದ ಮೇಲೆ ಹೇಳಿರುವ ನಿರ್ದಿಷ್ಟ ವರ್ಗೀಕರಣ ಮಾಡಿದ್ದಾರೆ. *

**ಕಲ್ಪಗಳು :** ಬ್ರಹ್ಮನ ಒಂದು ದಿನ ಪ್ರಮಾಣಕ್ಕೆ ಕಲ್ಪವೆಂದು ಹೆಸರು. ಮನುಷ್ಯಮಾನದಿಂದ ಒಂದು ತಿಂಗಳಾಗುವ ಕಾಲ ಪಿತೃದೇವತೆಗಳ ಮಾನದಲ್ಲಿ ಒಂದು ದಿನ. ಮನುಷ್ಯಮಾನದ 1000 ಚತುರ್ಯುಗಗಳು ಅಥವಾ ದೇವಮಾನದ 1000 ಯುಗಗಳು ಚತುರ್ಮುಖ ಬ್ರಹ್ಮನಿಗೆ ಒಂದು ಹಗಲು. ಚೈತ್ರ ಶುಕ್ಲ ಪಾಡ್ಯ ಭಾನುವಾರ ಪ್ರಥಮ ಕಲ್ಪ ಪ್ರಾರಂಭವಾದ ದಿನ. ಅಂದಿನಿಂದ ಬ್ರಹ್ಮ ಸೃಷ್ಟಿಗೆ ಪ್ರಾರಂಭಿಸಿದ.

8,64,00,00,000 ಸೌರವರ್ಷಗಳು ಕಳೆದರೆ ಬ್ರಹ್ಮನ ಒಂದು ದಿನವಾಗುತ್ತದೆ. ಬ್ರಹ್ಮನ ಒಂದೊಂದು ದಿನಕ್ಕೆ ಒಂದೊಂದು ಹೆಸರಿದೆ. ಅವುಗಳೆಂದರೆ (1) ಶ್ವೇತವರಾಹ (2) ನೀಲಲೋಹಿತ (3) ವಾಸುದೇವ (4) ರಥಂತರ (5) ರೌರವ (6) ಪ್ರಾಣ (7) ಬೃಹತ್ (8) ಕಂದರ್ಪ (9) ಸದ್ಯ ( 10) ಈಶಾನ (11) ವ್ಯಾನ (12) ಸಾರಸ್ವತ (13) ಉದಾನ (14) ಗಾರುಡ (15) ಕೌರ್ಮ (16) ನಾರಸಿಂಹ (17) ಸಮಾನ (18) ಆಗ್ನೇಯ (19) ಸೋಮ (20) ಮಾನವ (21) ತತ್ಪುರುಷ (22) ವೈಕುಂಠ (23) ಲಕ್ಷ್ಮಿ (24) ಸಾವಿತ್ರಿ (25) ಘೋರ (26) ವಾರಾಹ (27) ವೈರಾಜ (28) ಗೌರಿ (29) ಮಾಹೇಶ್ವರ (30) ಪಿತೃ.

ಇವುಗಳಲ್ಲಿ ಮೊದಲ ಹದಿನೈದು ಕಲ್ಪಗಳಿಗೆ ಶುಕ್ಲ ಪಕ್ಷವೆಂದು, ಉಳಿದ ಹದಿನೈದು ಕಲ್ಪಗಳಿಗೆ ಕೃಷ್ಣಪಕ್ಷವೆಂದು ಹೆಸರು. ಈ ಒಟ್ಟು ಮೂವತ್ತು ಕಲ್ಪಗಳು ಕಳೆದರೆ ಬ್ರಹ್ಮನಿಗೆ ಒಂದು ತಿಂಗಳು. ಈ ವಿಧವಾದ ಹನ್ನೆರಡು ತಿಂಗಳು ಕಳೆದರೆ ಒಂದು ವರ್ಷ. ಬ್ರಹ್ಮನಿಗೆ ಈ ಪ್ರಮಾಣದ ನೂರು ವರ್ಷಗಳು ಆಯಸ್ಸು.

ಪ್ರಕೃತ ನಡೆಯುತ್ತಿರುವುದು ಬ್ರಹ್ಮನ ಐವತ್ತೊಂದನೆಯ ವರ್ಷದ (ದ್ವಿತೀಯ ಪರಾರ್ಧದ) ಪ್ರಾರಂಭದಲ್ಲಿ ಮೊದಲನೆಯದಾದ ಶ್ವೇತವರಾಹ ಕಲ್ಪ. (ಎ.ಎಸ್.)

**ಕಲ್ಪನಾ:** –1979. ಕನ್ನಡ ಚಲನಚಿತ್ರ ಅಭಿನೇತ್ರಿ. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಲ್ಲಿ ಜನಿಸಿದರು. ಕಾನ್ವೆಂಟಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಅಭಿನಯದ ಕಲೆಯನ್ನೂ ರೂಢಿಸಿಕೊಂಡು ಬಂದ ಕಲಾವಿದೆ. ಹದಿನಾರರ ಹರೆಯದಲ್ಲಿ ವಿದ್ಯಾಭ್ಯಾಸ ನಿಲ್ಲಿಸಿ ರಂಗಭೂಮಿಯತ್ತ ನಡೆದರು. ಒಮ್ಮೆ ದಾವಣಗೆರೆಯಲ್ಲಿ ಹವ್ಯಾಸಿ ರಂಗಭೂಮಿಯ ನಾಟಕಗಳಲ್ಲಿ ಅಭಿನಯಿಸುತ್ತಿದ್ದಾಗ ಕನ್ನಡ ಚಿತ್ರರಂಗದ ನರಸಿಂಹರಾಜು ಅವರ ಪರಿಚಯವಾಯಿತು. ಇಲ್ಲಿಂದ ಮದರಾಸಿಗೆ ಪ್ರಯಾಣ. ಎಂ.ವಿ. ರಾಜಮ್ಮ ನವರ 'ಸಾಕುಮಗಳು' ಚಿತ್ರದ ಮೂಲಕ ಕಲ್ಪನಾ ರಜತರಂಗ ಪ್ರವೇಶಿಸಿ, ಪದ್ಮಿನಿ ಚಿತ್ರ ಸಂಸ್ಥೆಯ ಖಾಯಂನಟಿಯಾಗಿ ನಾಲ್ಕಾರು ಚಿತ್ರಗಳಲ್ಲಿ ಅಭಿನಯಿಸಿದರು. ಮುಂದೆ ತ್ರಿವೇಣಿಯವರ ಕಾದಂಬರಿ ಬೆಳ್ಳಿಮೋಡ ಚಿತ್ರ, ಅನಂತರ ನಾಂದಿ ಚಿತ್ರದಲ್ಲಿ ಅಭಿನಯ. ಬಂಗಾರದ ಹೂವಿನಲ್ಲಿ ಕುಷ್ಠರೋಗಿಯಾಗಿ, ಗೆಜ್ಜೆಪೂಜೆಯಲ್ಲಿ ವೇಶ್ಯೆಯ ಪುತ್ರಿ ಚಂದ್ರಳಾಗಿ, ಶರಪಂಜರದ ಬುದ್ಧಿಭ್ರಮಣೆಯ ಕಾವೇರಿಯಾಗಿ, ಉಯ್ಯಾಲೆಯ ರಾಧ, ಸರ್ವಮಂಗಳದ ಮಂಗಳೆ, ಕಪ್ಪು ಬಿಳುಪುನ ವತ್ಸಲಾ, ಚಂದ್ರ (ದ್ವಿಪಾತ್ರ)– ಹೀಗೆ ಒಂದೊಂದು ಚಿತ್ರವೂ ಕಲ್ಪನಾರ ಅಭಿನಯಕ್ಷೇತ್ರದ ಮೈಲಿಗಲ್ಲುಗಳಾಗಿ ಇವರಿಗೆ ಶ್ರೇಷ್ಠ ನಟಿಯ ಬಿರುದು ಗಳಿಸಿಕೊಟ್ಟಿವೆ. ತ್ರಿವೇಣಿಯವರ ಮತ್ತೊಂದು ಕೃತಿ ಹಣ್ಣೆಲೆ ಚಿಗುರಿದಾಗ ಚಿತ್ರದ ವಿಧವೆಯ ಪಾತ್ರದಲ್ಲಿ ಕಲ್ಪನಾ ನೀಡಿದ ಪ್ರೌಢಾಭಿನಯ ಆ ಪಾತ್ರವನ್ನೇ ಸಜೀವಗೊಳಿಸಿತು. ಇದಲ್ಲದೆ ಶರಪಂಜರ, ನಾ ಮೆಚ್ಚಿದ ಹುಡುಗಿ, ಗಂಧದ ಗುಡಿ, ಬಯಲುದಾರಿ, ನಾರಿ ಮುನಿದರೆ ಮಾರಿ, ಒಂದೇ ಕುಲ ಒಂದೇ ದೈವ, ಕರುಳಿನ ಕರೆ, ಮುಕ್ತಿ, ಪ್ರೇಮಕ್ಕೂ ಪರ್ಮಿಟ್ಟೇ ಚಿತ್ರಗಳಲ್ಲೂ ವೈವಿಧ್ಯಮಯ ಅಭಿನಯ ನೀಡಿದರು. ಎರಡು ಕನಸು ಚಿತ್ರದ ಅಭಿನಯ ಪ್ರೇಕ್ಷಕರ ಮೆಚ್ಚುಗೆಗಳಿಸಿತು. ಅಪಾರಶ್ರದ್ಧೆ ವಹಿಸಿ ಪಾತ್ರದೊಡನೆಯೇ ಏಕೀಕೃತವಾಗಿರುವಂತೆ ಅಭಿನಯಿಸುವುದು ಇವರ ವೈಶಿಷ್ಟ್ಯ.

ಇವರು ಉತ್ತಮ ವಾಗ್ಮಿಗಳೂ ಸಾಹಿತ್ಯಪ್ರಿಯರೂ ಆಗಿದ್ದರು. ಪ್ರಕೃತಿ ಸೌಂದರ್ಯ, ಕಲೆ–ಸಂಗೀತಗಳ ಬಗ್ಗೆ ಆಸಕ್ತರು. ಇವರ ಮಾತೃ ಭಾಷೆ ತುಳುವಾದರೂ ಕನ್ನಡದ ಬಗ್ಗೆ ಹೆಚ್ಚಿನ ಆಸಕ್ತಿ. ತುಳು, ಕನ್ನಡ, ಮಲೆಯಾಳಂ, ತೆಲುಗು ಹಾಗೂ ತಮಿಳು ಚಿತ್ರಗಳೂ ಸೇರಿದಂತೆ ಸುಮಾರು 73ಚಿತ್ರಗಳ ನಾಯಕಿಯಾಗಿ ಅಭಿನಯಿಸಿದರು. ತಮ್ಮ ಉತ್ತಮ ಅಭಿನಯಕ್ಕಾಗಿ ಕರ್ನಾಟಕ ಸರ್ಕಾರದಿಂದ ಪ್ರಶಸ್ತಿ ಗಳಿಸಿದರು. ಮಾಸ್ಕೋದಲ್ಲಿ ನಡೆದ ಚಿತ್ರೋತ್ಸವಕ್ಕೆ ಆಹ್ವಾನಿತರಾಗಿ ಹೋಗಿದ್ದ ಕಲ್ಪನಾ ಅಲ್ಲಿನ ಕಲಾವಿದರಲ್ಲಿ ಮತ್ತು ಚಿತ್ರರಸಿಕರಲ್ಲಿ ಕನ್ನಡ ಚಿತ್ರದ ಬಗ್ಗೆ ಆಸಕ್ತಿ ಮೂಡಿಸಿ ಬಂದುದು ಒಂದು ವಿಶೇಷ ಸಂಗತಿ. ದುರಂತ ಪಾತ್ರಗಳಲ್ಲಿ ನಟಿಸುತ್ತಿದ್ದ ಕಲ್ಪನಾರ ಜೀವನವೂ ದುರಂತಮಯವಾಗಿ ಕೊನೆಗೊಂಡಿತು. ಆತ್ಮಹತ್ಯೆ ಮಾಡಿಕೊಂಡು ತಮ್ಮ ಜೀವನ ಕೊನೆಗೊಳಿಸಿದರು (1979). (ಬಿ.ಎಸ್.ಎಸ್.ಆರ್)

**ಕಲ್ಪನೆ :** ಈ ಪದಕ್ಕೆ ಅನೇಕ ಅರ್ಥಗಳುಂಟು. ದಿನನಿತ್ಯದ ಬಳಕೆಯಲ್ಲಿ ಕಲ್ಪನೆ ಹಾಸ್ಯಭರಿತ, ಅಸ್ವಾಭಾವಿಕ ಅಥವಾ ಅನ್ಯೆಜ ವಿಚಾರಗಳನ್ನು ಸೂಚಿಸುತ್ತದೆ. ಸಾಧಾರಣವಾಗಿ ನಾವು ಏನಾದರೊಂದು ನಂಬಲಸಾಧ್ಯವಾದ ಸುದ್ದಿಯನ್ನು ಕೇಳಿದಾಗ ಅದು ಕಲ್ಪನಾಪ್ರೇರಿತವಾದ ಸುದ್ದಿ ಎಂದು ತಳ್ಳಿಹಾಕುವುದು ವಾಡಿಕೆ. ಆದರೆ ಕಲ್ಪನೆಗೆ ಮನಶ್ಶಾಸ್ತ್ರದಲ್ಲಿ ವಿಶಿಷ್ಟವಾದ ಅರ್ಥವಿದೆ. ಮೊದಲು ಸ್ಮೃತಿಗೂ ಕಲ್ಪನೆಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಸ್ಮೃತಿ ಹಾಗೂ ಕಲ್ಪನೆಗಳು ಮಾನಸಿಕ ವ್ಯಾಪಾರದ ಎರಡು ವಿಭಿನ್ನ ರೂಪಗಳು: ಹಿಂದಿನ ಅನುಭವಗಳ ಪುನರುತ್ಪಾದನೆ ಸ್ಮೃತಿಯಾದರೆ, ಹಿಂದಿನ ಅನುಭವಗಳ ಆಧಾರದ ಮೇಲೆ ರೂಪುಗೊಳ್ಳುವ ಹೊಸ ವಿಚಾರಗಳ ಸೃಷ್ಟಿಯೇ ಕಲ್ಪನೆ. ಸ್ಮೃತಿ ವಾಸ್ತವಿಕ ಘಟನೆಗಳ ಕಟ್ಟಿಗೆ ಒಳಪಟ್ಟಿದ್ದರೆ ಕಲ್ಪನೆ ಅಂಥ ಕಟ್ಟುಗಳಿಂದ ಹೊರತಾಗಿದೆ. ಹೀಗೆಂದ ಮಾತ್ರಕ್ಕೆ ಹಿಂದಿನ ಅನುಭವಗಳಿಗೂ ಕಲ್ಪನೆಗೂ ಯಾವ ಸಂಬಂಧವೂ ಇಲ್ಲವೇ ಇಲ್ಲ ಎಂದಲ್ಲ. ವಾಸ್ತವವಾಗಿ ಕಲ್ಪನೆ ತನ್ನ ಸೃಷ್ಟಿಕಾರ್ಯದಲ್ಲಿ ಹಳೆಯ ಅನುಭವಗಳನ್ನು ಕಚ್ಚಾ ಸಾಮಗ್ರಿಯನ್ನಾಗಿ ಉಪಯೋಗಿಸಿಕೊಳ್ಳುತ್ತದೆ. ಅಂದರೆ ಕಲ್ಪನೆಯ ಮೂಲವಸ್ತು ಹಿಂದಿನ ಅನುಭವಗಳು ಬಿಟ್ಟು ಹೋಗಿರುವ ಮನೋಬಿಂಬಗಳು (ಇಮೇಜಸ್). ಇವನ್ನು ಹೊಸ ರೀತಿಯಲ್ಲಿ ಜೋಡಿಸಿ, ತನಗೆ ಬೇಕಾದ ಹಾಗೆ ಮಾರ್ಪಡಿಸಿಕೊಂಡು, ಹಿಂದೆಂದೂ ಕಾಣದ ಒಂದು ಹೊಸ ಅನುಭವವನ್ನುಂಟುಮಾಡುವುದೇ ಕಲ್ಪನೆ. ಹಿಂದೆ ಬೇರೆ ಬೇರೆ ಸಂದರ್ಭಗಳಲ್ಲಿ ಅನುಭವಿಸಿದ ಅಥವಾ ಕಂಡು ಕೇಳಿದ ವಿಚಾರಗಳ ಭಾಗಗಳನ್ನು ಕಲೆಹಾಕಿ, ಅವುಗಳ ನಡುವೆ ಯಾವುದೋ ಒಂದು ಹೊಸ ಸಂಬಂಧವನ್ನು ಕಾಣುವುದೇ ಕಲ್ಪನೆಯ ವ್ಯಾಪಾರ ವಿಶೇಷ. ಸಂಕ್ಷೇಪವಾಗಿ ಹೇಳುವುದಾದರೆ, ಹಳೆಯ ಅನುಭವಗಳಿಗೆ, ವಿಚಾರಗಳಿಗೆ, ಹೊಸ ರೂಪು ಕೊಟ್ಟು ಹೊಸ ಸಂಬಂಧ ಕಲ್ಪಿಸುವುದೇ ಕಲ್ಪನೆ.

ನಮ್ಮ ಆಕಾಂಕ್ಷೆ ಮತ್ತು ಉದ್ವೇಗಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಕಲ್ಪನೆಯ ಉದ್ದೇಶ. ಯಾವುದೋ ಒಂದು ವಸ್ತುವಿನ ಬಗ್ಗೆ ನಮಗಿರುವ ಆಸೆ, ಭೀತಿ ಅಥವಾ ಕುತೂಹಲ ನಾವು ಆ ವಸ್ತುವನ್ನು ಕಲ್ಪಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ವಾಸ್ತವ ಜೀವನದಲ್ಲಿ ಸಾಧಿಸಲಾಗದ ಅಥವಾ ಪಡೆಯಲಾಗದ ಗುರಿಗಳನ್ನು ಸಾಧಿಸಲು ಅಥವಾ ಪಡೆಯಲು ಕಲ್ಪನೆ ಒಂದು ಮಾರ್ಗ. ಆದ್ದರಿಂದ ಕಲ್ಪನೆ ನಮ್ಮ ಪ್ರೇರಣೆಗಳನ್ನು ಪ್ರತಿಬಿಂಬಿಸುತ್ತದೆ. ಯಾವ ಪ್ರೇರಣೆಯೂ ಇರದಿದ್ದರೆ ಕಲ್ಪನೆ ಅಸಾಧ್ಯ. ಆದ್ದರಿಂದಲೇ ಒಬ್ಬ ವ್ಯಕ್ತಿಯ_ಉದಾಹರಣೆಗೆ ಒಬ್ಬ ಕಲೆಗಾರನ ಅಥವಾ ಸಾಹಿತಿಯ_ಕಲ್ಪನೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಆ ಕಲ್ಪನೆಗಳಿಗೆ ಆಧಾರಭೂತವಾಗಿರುವ ಪ್ರೇರಣೆಗಳನ್ನು ಅವಶ್ಯವಾಗಿ ಅಭ್ಯಾಸ ಮಾಡಬೇಕಾಗುತ್ತದೆ.

ಕಲ್ಪನೆಯಲ್ಲಿ ಅನೇಕ ಪ್ರಭೇದಗಳನ್ನು ಗುರುತಿಸಬಹುದು. ಮನೋವಿಲಾಸ (ರೆವರೀ), ಹಗಲುಗನಸು (ಡೇ ಡ್ರೀಂ), ಕನಸು (ಡ್ರೀಂ)_ಇವು ಕಲ್ಪನೆಯ ವಿವಿಧ ಪ್ರಕಾರಗಳು. ಮನೋವಿಲಾಸದಲ್ಲಿ ಆಲೋಚನೆಗಳು ಸ್ವತಂತ್ರವಾಗಿ ಹರಿಯುತ್ತವೆ; ಹಿಂದಿನ ಅನುಭವಗಳು ಸ್ಮೃತಿಪಟಲದ ಮೇಲೆ ಸ್ವೇಚ್ಛೆಯಾಗಿ ಹಾದುಹೋಗುತ್ತವೆ. ಹಗಲು ಗನಸಿನಲ್ಲಿ ಮುಂದೆ ಅನುಭವಿಸಲಿರುವ, ಒದಗಲಿರುವ ಸುಖಸಂತೋಷಗಳ ಗಾಳಿ ಗೋಪುರವೇ ನಿರ್ಮಾಣವಾಗುತ್ತದೆ. ಈ ಕಲ್ಪನಾಪ್ರಕಾರಗಳಲ್ಲಿ ಮನೋವ್ಯಾಪಾರ ವಾಸ್ತವ ಪ್ರಪಂಚದಿಂದ ದೂರವಾಗಿರುವುದಲ್ಲದೆ, ವ್ಯಕ್ತಿ ತನ್ನ ಆಕಾಂಕ್ಷೆ ಚಿಂತೆಗಳಿಗೆ ಮಿತವಾದ ಪರಿಹಾರಗಳನ್ನು ಕಂಡುಕೊಳ್ಳುತ್ತಾನೆ. ಒಂದು ಪಕ್ಷ ಈ ಕಲ್ಪನಾ ಪ್ರಪಂಚದಲ್ಲೇ ಆತ ಮುಳುಗಿಹೋದರೆ ಅತೃಪ್ತಿ, ನಿರಾಶೆ, ಉದ್ವೇಗಗಳು ಉಂಟಾಗುತ್ತವೆ. ಆದ್ದರಿಂದ ಮನೋವಿಲಾಸ, ಹಗಲುಗನಸು, ಮುಂತಾದ ಕಲ್ಪನಾಪ್ರಕಾರಗಳನ್ನು ಮಿತಿ ಮೀರಿ ಬಳಸಿದಾಗ ವ್ಯಕ್ತಿಯ ಮಾನಸಿಕ ಆರೋಗ್ಯಕ್ಕೆ ಧಕ್ಕೆಯುಂಟಾಗುತ್ತದೆ.

ಮೇಲೆ ಹೇಳಿದ ಕಲ್ಪನಾಪ್ರಕಾರಗಳಿಗೂ ಸೃಜನಾತ್ಮಕ ಕಲ್ಪನೆಗೂ ವ್ಯತ್ಯಾಸವಿದೆ. ಸೃಜನಾತ್ಮಕ ಕಲ್ಪನೆ ಹಳೆಯ ಅನುಭವಗಳ ಸಮೂಹಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ, ಅವುಗಳಿಗೆ ಹೊಸ ಹೊಸ ರೂಪ ಕೊಡುವ ನಿರಂತರ ಉದ್ದೇಶ ಹೊಂದಿರುತ್ತದೆ. ಇದು ಯಾಂತ್ರಿಕವಾಗಿ ನಡೆಯುವ ವ್ಯಾಪಾರವಲ್ಲ. ನಿರ್ದಿಷ್ಟವಾದ ಉದ್ದೇಶ ಹಾಗೂ ನಿರಂತರವಾದ ಶ್ರಮಗಳು ಈ ತರಹೆಯ ಕಲ್ಪನೆಯಲ್ಲಿ ಅಡಕವಾಗಿವೆ. ಸೃಜನಾತ್ಮಕ ಕಲ್ಪನೆಗೆ ದೂರದರ್ಶಿತ್ವ, ಮುಂದಾಲೋಚನೆ, ಪ್ರಗತಿಶೀಲ ಮನೋಭಾವ, ಸಮಸ್ಯೆಗಳಿಗೆ ಸೂಕ್ತಪರಿಹಾರ ಕಾಣುವುದು, ಅಪೂರ್ಣವನ್ನು ಪೂರ್ಣಗೊಳಿಸುವುದು_ ಮುಂತಾದ ವಿಶಿಷ್ಟ ಲಕ್ಷಣಗಳಿವೆ. ಈ ತರದ ಕಲ್ಪನೆಯೇ ವ್ಯಕ್ತಿಯ ಬುದ್ಧಿವಿಕಾಸಕ್ಕೆ ಪೋಷಕ. ಇದು ವೈಜ್ಞಾನಿಕ ಸಂಶೋಧನೆಯಲ್ಲಿ, ಸಾಹಿತ್ಯ ಮತ್ತು ಕಲೆಗಳ

ಅಭಿವೃದ್ಧಿಯಲ್ಲಿ ಸಹಕಾರಿ. ಸೃಜನಾತ್ಮಕ ಕಲ್ಪನೆ ಬುದ್ಧಿವಂತಿಕೆಯ ಲಕ್ಷಣವೂ ಆಗಿರುವುದರಿಂದಲೇ ಬುದ್ಧಿವಂತಿಕೆಯ ಪರೀಕ್ಷೆಗಳು ಕಲ್ಪನಾಸಾಮರ್ಥ್ಯ ವೀಕ್ಷಣೆಯನ್ನೂ ಒಳಗೊಂಡಿರುತ್ತವೆ.

ಕಲ್ಪನೆಗೆ ಸಂಬಂಧಪಟ್ಟಂತೆ ಮುಖ್ಯವಾಗಿ ಎರಡು ಅಂಶಗಳನ್ನು ಕುರಿತು ಹೆಚ್ಚು ಸಂಶೋಧನೆ ನಡೆದಿದೆ. ಅದು ಕಲ್ಪನಾಸಂಪತ್ತು ಮತ್ತು ಸಾಮರ್ಥ್ಯಗಳ ನಿರ್ಧಾರದ ಬಗ್ಗೆ ನಡೆಸಿದ ಅಧ್ಯಯನ. ಈ ನಿಟ್ಟಿನಲ್ಲಿ ಹಲವು ಸಂಶೋಧನೆಗಳನ್ನು ನಡೆಸಿದ್ದಾರೆ. ಮಸಿ_ಮಚ್ಚೆ (ಇಂಕ್_ಬ್ಲಾಟ್) ಪ್ರಯೋಗಗಳ ನೆರವಿನಿಂದ ಕಲ್ಪನಾಸಂಪತ್ತಿನ ಬಗ್ಗೆ ನಡೆಸಲಾಗಿರುವ ಅಧ್ಯಯನ ಗಮನಾರ್ಹ. ಈ ಪ್ರಯೋಗವನ್ನು ಮೊದಲು 1895ರಲ್ಲಿ ಮನಶ್ಶಾಸ್ತ್ರಜ್ಞರಾದ ಬಿನೆ ಮತ್ತು ಹೆನ್ರಿ ನಡೆಸಿದರು. ಅನಂತರ ವಿಪ್ಪಲ್ ಎಂಬಾತ ಇಪ್ಪತ್ತು ಮಸಿಮಚ್ಚೆಗಳನ್ನು ಸಿದ್ಧಪಡಿಸಿದ. ಈ ಪ್ರಯೋಗದಲ್ಲಿ ಮಸಿ ಮಚ್ಚೆಗಳನ್ನು ಒಂದೊಂದಾಗಿ ಕೈಗೆತ್ತಿಕೊಂಡು ತನಗೆ ಅದರಲ್ಲಿ ಕಾಣುವ ಅಥವಾ ತಾನು ಅದರಲ್ಲಿ ಕಲ್ಪಿಸಿಕೊಳ್ಳುವ ಎಲ್ಲ ವಸ್ತುಗಳ ಪಟ್ಟಿ ಮಾಡುತ್ತ ಹೋಗಬೇಕು. ಒಬ್ಬ ವ್ಯಕ್ತಿ ಒಟ್ಟು ವಸ್ತುಗಳ ಸಂಖ್ಯೆ ಅಥವಾ ಒಂದು ವಸ್ತುವನ್ನು ಕಲ್ಪಿಸಿಕೊಳ್ಳಲು ಕಲ್ಪಿಸಿಕೊಳ್ಳುವ ಅವನು ತೆಗೆದುಕೊಳ್ಳುವ ಸರಾಸರಿ ಸಮಯ ಆ ವ್ಯಕ್ತಿಯ ಕಲ್ಪನಾಸಂಪತ್ತಿನ ಸೂಚಕವಾಗಿರುತ್ತದೆ.

1920ರ ಸುಮಾರಿಗೆ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ನಡೆಸಿದ ಹಲವು ಮಸಿ_ಮಚ್ಚೆ ಪ್ರಯೋಗಗಳಿಂದ ಈ ಕೆಳಗಿನ ಮುಖ್ಯಾಂಶಗಳು ಹೊರಬಿದ್ದಿವೆ. ಒಂದು ವಸ್ತುವನ್ನು ಕಲ್ಪಿಸಿಕೊಳ್ಳಲು ವಯಸ್ಕರು ಸರಾಸರಿ ಸುಮಾರು ಹತ್ತು ಸೆಕೆಂಡುಗಳ ಕಾಲವನ್ನು ತೆಗೆದುಕೊಳ್ಳುತ್ತಾರೆ. ಒಂದು ಎರಡು ಮೂರನೆಯ ತರಗತಿಯಲ್ಲಿ ಓದುವ ಮಕ್ಕಳು ನಾಲ್ಕು ಐದು ಆರನೆಯ ತರಗತಿಯ ಮಕ್ಕಳಿಗಿಂತ ಹೆಚ್ಚಿನ ಕಲ್ಪನಾ ಸಂಪತ್ತನ್ನು ಪ್ರದರ್ಶಿಸುತ್ತಾರೆ. ಇದಕ್ಕೆ ಕಾರಣ ಮೊದಲ ಮೂರು ವರ್ಗದ ಮಕ್ಕಳಲ್ಲಿ ಇನ್ನೂ ಸಾಕಷ್ಟು ವಿಮರ್ಶನ ಪ್ರಜ್ಞೆ ಬೆಳೆದಿರುವುದಿಲ್ಲ. ಹಾಗಾಗಿ ಅವರು ಸರಿತಪ್ಪುಗಳ ಗೋಜಿಗೆ ಹೋಗದೆ ಮನಸ್ಸಿಗೆ ತೋಚಿದ್ದನ್ನೆಲ್ಲಾ ವರದಿ ಮಾಡುತ್ತ ಹೋಗುತ್ತಾರೆ. ಆದರೆ ಮೇಲ್ತರಗತಿಗಳಲ್ಲಿರುವ ಮಕ್ಕಳಲ್ಲಿ ವಿಮರ್ಶನ ಪ್ರಜ್ಞೆ ತಕ್ಕಮಟ್ಟಿಗೆ ಬೆಳೆದಿರುವುದರಿಂದ ಅವರು ಮನೋಬಿಂಬಗಳನ್ನು ಕಲ್ಪಿಸಿ ವರದಿ ಮಾಡುವಾಗ ಹೆಚ್ಚಿನ ಜಾಗರೂಕತೆ ವಹಿಸುತ್ತಾರೆ; ಕಲ್ಪನೆಗೆ ಕಡಿವಾಣ ಹಾಕಿಕೊಳ್ಳುತ್ತಾರೆ. ಹಾಗಾಗಿ ಅವರು ಕಡಿಮೆ ಕಲ್ಪನಾಸಂಪತ್ತನ್ನು ಪ್ರದರ್ಶಿಸುತ್ತಾರೆ. ವ್ಯಕ್ತಿಯ ವಯಸ್ಸು ಮತ್ತು ಲಿಂಗ ಭೇದಗಳಿಗಿಂತ ಹೆಚ್ಚಾಗಿ, ಆ ವ್ಯಕ್ತಿಯ ವೃತ್ತಿ, ಜೀವನ ವಿಧಾನ ಅಥವಾ ಇನ್ನಿತರ ಪರಿಸ್ಥಿತಿಗಳನ್ನೆ ಆತನ ಕಲ್ಪನಾಸಂಪತ್ತು ಅವಲಂಬಿಸಿರುತ್ತದೆ. ಅಷ್ಟೇ ಅಲ್ಲದೆ ಕಲ್ಪನಾ ಸಂಪತ್ತಿನಲ್ಲಿ ವ್ಯಕ್ತಿಗತ ವ್ಯತ್ಯಾಸಗಳು ಅಪಾರ.

ಈ ಮೊದಲೇ ಹೇಳಿರುವಂತೆ, ಸಂಶೋಧನೆಗೆ ಒಳಗಾಗಿರುವ ಕಲ್ಪನೆಯ ಇನ್ನೊಂದಂಶ ಕಲ್ಪನಾಸಾಮರ್ಥ್ಯವನ್ನು ಕುರಿತದ್ದು. ಇದನ್ನು ಅಧ್ಯಯನ ಮಾಡಲು ಹಲವು ವಿಧಾನಗಳನ್ನು ಅನುಸರಿಸಿದ್ದಾರೆ. ಹೆಚ್ಚು ಬಳಕೆಯಲ್ಲಿರುವ ವಿಧಾನವೆಂದರೆ ಮ್ಯಾಸಲಾನ್ ಮೊದಲು ಬಳಸಿದ, ಆತನ ಹೆಸರಿನಿಂದಲೇ ಪ್ರಸಿದ್ಧವಾಗಿರುವ ಮ್ಯಾಸಲಾನ್ ವಿಧಾನ. ಈ ವಿಧಾನದಲ್ಲಿ ಮೂರು ಶಬ್ದಗಳನ್ನು (ನಾಮಪದ ಮತ್ತು ಕ್ರಿಯಾಪದಗಳು) ಕೊಟ್ಟು, ಅವನ್ನು ಬಳಸಿಕೊಂಡು ನಿರ್ದಿಷ್ಟ ಅವಧಿಯಲ್ಲಿ ಎಷ್ಟು ವಾಕ್ಯ ರಚಿಸಲು ಸಾಧ್ಯವೋ ಅಷ್ಟು ವಾಕ್ಯಗಳನ್ನು ನಿರ್ಮಿಸುವಂತೆ ಹೇಳಲಾಗುತ್ತದೆ. ವಾಕ್ಯಗಳನ್ನು ಪೂರ್ಣಗೊಳಿಸುವ ವಿಧಾನವನ್ನು ಕೂಡ ಕಲ್ಪನಾಸಾಮರ್ಥ್ಯದ ಅಭ್ಯಾಸದಲ್ಲಿ ಉಪಯೋಗಿಸಲಾಗಿದೆ. ಈ ವಿಧಾನದಲ್ಲಿ ವಾಕ್ಯದ ಮೊದಲ ಭಾಗವನ್ನು ಕೊಟ್ಟು, ಆ ವಾಕ್ಯವನ್ನು ಪೂರ್ಣಗೊಳಿಸುವಂತೆ ಹೇಳಲಾಗುತ್ತದೆ. ಬಿನೇ ಈ ವಿಧಾನವನ್ನು ತನ್ನ ಇಬ್ಬರು ಹೆಣ್ಣುಮಕ್ಕಳ ಮೇಲೆ ಪ್ರಯೋಗಿಸಿ, ಅವರ ಕಲ್ಪನಾಸಾಮರ್ಥ್ಯದಲ್ಲಿದ್ದ ಗಮನಾರ್ಹ ವ್ಯತ್ಯಾಸಗಳನ್ನು ಕಂಡುಕೊಂಡ. ಆ ಮಕ್ಕಳು ವಾಕ್ಯಗಳನ್ನು ಪೂರ್ಣಗೊಳಿಸಿದ ವೇಗದಲ್ಲಿ ಮಾತ್ರವಲ್ಲದೆ, ವಾಕ್ಯ ಪೂರ್ಣಗೊಳಿಸಿದ ವಿಧಾನದಲ್ಲಿ ಕೂಡ ವ್ಯತ್ಯಾಸಗಳಿದ್ದುವು.

ಎಬಿಂಗ್ ಹೌಸನ ಪೂರ್ಣತಾ ವಿಧಾನ ಕಲ್ಪನಾಸಾಮರ್ಥ್ಯದ ಮತ್ತೊಂದು ಮಾಪಕ. ಈ ವಿಧಾನದಲ್ಲಿ ಮಧ್ಯೆ ಮಧ್ಯೆ ಬಿಟ್ಟು ಹೋಗಿರುವ ಶಬ್ದಗಳಿಂದ ಅಥವಾ ಶಬ್ದ ಸಮುಚ್ಚಯದಿಂದ ಕೂಡಿರುವ ಒಂದು ಭಾಗವನ್ನು ಕೊಟ್ಟು ಅದರಲ್ಲಿ ಬಿಟ್ಟು ಹೋಗಿರುವ ಭಾಗಗಳನ್ನು ಭರ್ತಿ ಮಾಡುವಂತೆ ಹೇಳಲಾಗುತ್ತದೆ. ಇದಕ್ಕೆ ವ್ಯತಿರಿಕ್ತವಾದ ಇನ್ನೊಂದು ವಿಧಾನವೆಂದರೆ, ಕೊಟ್ಟಿರುವ ಕೆಲವು ಶಬ್ದಗಳನ್ನು ಬಳಸಿಕೊಂಡು ಒಂದು ಕಥೆಯನ್ನು ಕಟ್ಟುವಂತೆ ಹೇಳುವುದು. ಕಲ್ಪನಾಸಾಮರ್ಥ್ಯದ ಅಧ್ಯಯನದಲ್ಲಿ ಉಪಯೋಗಿಸಿರುವ ಮತ್ತೊಂದು ವಿಧಾನವೆಂದರೆ ಪದ ನಿರ್ಮಾಣ ಪರೀಕ್ಷೆ. ಈ ವಿಧಾನದಲ್ಲಿ ಕೊಟ್ಟಿರುವ ಅಕ್ಷರಗಳ ಸಮೂಹವನ್ನು ಬಳಸಿಕೊಂಡು, ನಿರ್ದಿಷ್ಟ ವೇಳೆಯಲ್ಲಿ ಎಷ್ಟು ಶಬ್ದಗಳನ್ನು ರಚಿಸಲು ಸಾಧ್ಯವೋ ಅಷ್ಟನ್ನು ರಚಿಸುವಂತೆ ಹೇಳುವುದು.

ಮೇಲೆ ಹೇಳಿದ ಕಲ್ಪನಾಸಾಮರ್ಥ್ಯದ ಅಧ್ಯಯನದ ವಿಧಾನಗಳೆಲ್ಲ ಭಾಷೆಯ ಬಳಕೆಗೆ ಸಂಬಂಧಿಸಿದಂತಿರುವುದರಿಂದ ಕಲ್ಪನಾ ಸಾಮರ್ಥ್ಯಕ್ಕೆ ಸಂಬಂಧಪಟ್ಟ ಅಧ್ಯಯನ ಕೂಡ ಬಹುಪಾಲು ಭಾಷಾ ಸೃಷ್ಟಿಯನ್ನೊಳಗೊಂಡ ಕಲ್ಪನೆಗೇ ಸೀಮಿತವಾಗಿದೆ. ಆದ್ದರಿಂದ ಈ ವಿಧಾನಗಳನ್ನು ಉಪಯೋಗಿಸಿಕೊಂಡು ಕಂಡುಹಿಡಿದ ವಿಚಾರಗಳು ಸಾಮಾನ್ಯವಾಗಿ ಆಯಾ ಭಾಷೆಗಳಲ್ಲಿನ ವ್ಯಕ್ತಿಗತ ವ್ಯತ್ಯಾಸಗಳಿಂದ ಕಲುಷಿತವಾಗಿರುತ್ತವೆ. ಒಟ್ಟಿನಲ್ಲಿ ಈ ಪ್ರಯೋಗಗಳಿಂದ ಹೊರಬಿದ್ದ ಫಲಿತಾಂಶಗಳ ವ್ಯಾಪ್ತಿ ತೀರ ಸಂಕುಚಿತವಾದದ್ದು ಎಂಬುದನ್ನು ಮನಗಾಣಬೇಕು.

ಇತ್ತೀಚಿನ ಮನಶ್ಶಾಸ್ತ್ರಸಾಹಿತ್ಯದಲ್ಲಿ ಕಲ್ಪನೆಗೆ ಹೆಚ್ಚಿನ ಮಾನ್ಯತೆ ಕಂಡುಬರುತ್ತಿಲ್ಲ. ಬದಲಾಗಿ ಮನೋವಿಜ್ಞಾನಿಗಳು ಭ್ರಮೆ (ಫ್ಯಾಂಟಸಿ), ಸೃಜನಾತ್ಮಕತೆ (ಕ್ರಿಯೆಟಿವಿಟಿ) ಮುಂತಾದ ಪದಗಳನ್ನು ಹೆಚ್ಚುಹೆಚ್ಚಾಗಿ ಬಳಸುತ್ತಿದ್ದಾರೆ. ಹೀಗೆಂದ ಮಾತ್ರಕ್ಕೆ ಮನಷ್ಯನ ಮಾನಸಿಕ ವ್ಯಾಪಾರದಲ್ಲಿ ಕಲ್ಪನೆಯ ಸ್ಥಾನವೇ ಏನೋ ಹೆಚ್ಚುಕಡಿಮೆ ಆಗಿಬಿಟ್ಟಿದೆ ಎಂದೇನಲ್ಲ; ಈಚಿನ ಮನೋವಿಜ್ಞಾನಿಗಳಿಗೆ ಕಲ್ಪನೆಯ ಬಗ್ಗೆ ಆಸಕ್ತಿ ಕಡಿಮೆಯಾಗಿದೆ, ಅಷ್ಟೆ. (ಎಚ್.ಎಸ್.ಐ.)

**ಕಲ್ಪಸೂತ್ರಗಳು :** ಯಜ್ಞವಿಧಿಗಳೇ ಮುಂತಾದ ಪ್ರಕ್ರಿಯೆಗಳನ್ನು ಸಮಗ್ರವಾಗಿಯೂ ಸಾಧಾರವಾಗಿಯೂ ನಿರೂಪಿಸುವ ವೈದಿಕಶಾಸ್ತ್ರಗ್ರಂಥಗಳು. ಬ್ರಾಹ್ಮಣ ಮತ್ತು ಉಪನಿಷತ್ತುಗಳ ಕಾಲಕ್ಕೇ ಶಿಕ್ಷಾ, ವ್ಯಾಕರಣ, ಕಲ್ಪ ಮುಂತಾದ ಅಧ್ಯಯನ ವಿಷಯಗಳು ವೈದಿಕರ ಶಾಖೆಗಳಲ್ಲಿ ಪ್ರಚಲಿತವಾಗಿದ್ದ ಉಲ್ಲೇಖಗಳಿವೆ. ಆದರೆ ವೇದಾಂಗಗಳೆಂದು ಮುಂದೆ ಹೆಸರಾಂತ ಪ್ರತ್ಯೇಕ ಗ್ರಂಥಗಳು ಒಂದೊಂದು ವಿಷಯದಲ್ಲಿಯೂ ಉಪನಿಷತ್ತಿನ ಅನಂತರದ ಕಾಲದಲ್ಲಿ ರಚಿತವಾದುವು. ಇವು ಪ್ರತ್ಯೇಕ ವೈದಿಕ ಶಾಖೆಗಳಿಗೆ ಸೇರಿದ ಋಷಿಗಳಿಂದ ರಚಿತವಾದ ಕಾರಣ ಪೌರುಷೇಯ ಸ್ಮೃತಿಗಳಲ್ಲಿ ಬರುವುವೇ ಹೊರತು ಅಪೌರುಷೇಯವಾದ ಶ್ರುತಿಗಳಲ್ಲಲ್ಲ. ವೈದಿಕ ಧರ್ಮದ ಆಚರಣೆಗೆ ಅಗತ್ಯಬೀಳುವ ಸಕಲ ವಿಷಯಗಳೂ ಕಲ್ಪಸೂತ್ರಗಳ ವ್ಯಾಪ್ತಿಯಲ್ಲಿ ಬರುತ್ತವೆ. ಆದುದರಿಂದ ವೈದಿಕರಾದ ಪುರೋಹಿತವರ್ಗದವರಿಗೆ ಕಲ್ಪಸೂತ್ರಗಳೇ ಪರಮಪೂಜ್ಯ ಆಧಾರಗ್ರಂಥಗಳಾಗಿವೆಯೆನ್ನಬಹುದು.

ಸೂತ್ರವೆಂದರೆ ದಾರವೆಂಬರ್ಥವಿರುವಂತೆ ಕಿರಿದರಲ್ಲಿ ಹಿರಿದಾದ ಅರ್ಥವನ್ನೊಳಗೊಳ್ಳುವ ವಿಧಿವಾಕ್ಯವೆಂಬ ಅರ್ಥವೂ ಇದೆ. ಇಂಥ ಹಲವು ವಿಧಿವಾಕ್ಯಗಳ ಸರಮಾಲೆಯಂತಿರುವ ಇಡಿಯ ಗ್ರಂಥಕ್ಕೂ ಸೂತ್ರವೆಂಬ ಶಬ್ದವೇ ಅನ್ವಯಿಸುತ್ತದೆ. ಸಂಗ್ರಹವಾಗಿಯೂ ಸಾರವತ್ತಾಗಿಯೂ ಇರುವ ಕಾರಣ ಅಧ್ಯಯನ ಮಾಡಿ ನೆನಪಿಡಲು ಈ ಸೂತ್ರ ಗ್ರಂಥಗಳು ಬಹಳ ಉಪಯುಕ್ತವಾಗಿವೆ. ಕಲ್ಪದಂತೆ ಮಿಕ್ಕ ಎಲ್ಲ ವೇದಾಂತಗಳೂ ಷಡ್ದರ್ಶನಗಳೂ ಸೂತ್ರಗ್ರಂಥಗಳಿಂದಲೇ ಪ್ರಾರಂಭವಾಗಿರುವುದು ಸಂಸ್ಕೃತ ಸಾಹಿತ್ಯದ ಒಂದು ವೈಶಿಷ್ಟ್ಯ. ಇಂಥ ಸೂತ್ರಶೈಲಿಯ ರಚನೆಗಳು ಮತ್ತಾವ ಪ್ರಾಚೀನ ಸಾಹಿತ್ಯದ ಇತಿಹಾಸದಲ್ಲಿಯೂ ಕಾಣಬರುವುದಿಲ್ಲ.

ಮ್ಯಾಕ್ಸ್ ಮುಲರ್, ಬ್ಯೂಲರ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು ಸೂತ್ರ ಸಾಹಿತ್ಯದ ಕಾಲವನ್ನು ಸುಮಾರು ಪ್ರಶ.ಪೂ. 700 ರಿಂದ ಪ್ರಶ.ಪೂ. 200ರ ವರೆಗೆ ಇರಬಹುದೆಂದು ಊಹಿಸಿದ್ದಾರೆ. ಅನಂತರದ ಕಾಲದಲ್ಲಿ ಸೂತ್ರಗ್ರಂಥಗಳಿಗೆ ಭಾಷ್ಯ ಮತ್ತು ಟೀಕೆಗಳು ರಚಿತವಾಗುತ್ತ ನಡೆದುದನ್ನು ನೋಡುತ್ತೇವೆ.

ಯಜ್ಞ, ಹೋಮ ಮುಂತಾದುವುಗಳ ಪ್ರಕ್ರಿಯಾನಿರೂಪಣೆ ಬ್ರಾಹ್ಮಣಗ್ರಂಥಗಳಲ್ಲಿಯೇ (ಬ್ರಾಹ್ಮಣಗಳು ಸೂತ್ರಗಳಿಗಿಂತ ಹಿಂದಿನ ಶ್ರುತಿಗಳು) ಬರುವುದು ನಿಜ. ಆದರೆ ಇಲ್ಲಿ ವಿಧಿನಿಯಮಗಳ ವ್ಯವಸ್ಥೆಯನ್ನು ನಿರ್ಣಯಿಸುವ ವಿವಕ್ಷೆಯಿಲ್ಲ. ನೂರಾರು ಸಂಗತಿಗಳನ್ನು ಪ್ರಸಕ್ತಾನುಪ್ರಸಕ್ತಿಯಿಂದ ಅಲ್ಲಿ ಕಲೆ ಹಾಕಿದಂತಿದೆ. ಅವನ್ನೆಲ್ಲ ಯಾಜಕನ ನಿತ್ಯವ್ಯವಹಾರದಲ್ಲಿ ಉಪಯುಕ್ತತೆಯ ದೃಷ್ಟಿಯಿಂದ ವಿಂಗಡಿಸಿ, ಪುನರ್ವ್ಯವಸ್ಥೆಗೆ ಒಳಪಡಿಸಿ, ಸಂಶಯಕ್ಕೆಡೆಯಿಲ್ಲದಂತೆ ನಿಯಮಗಳನ್ನು ಪ್ರತಿಪಾದಿಸುವ ಉದ್ದೇಶ ಕಲ್ಪಸೂತ್ರಕಾರರದಾಗಿತ್ತು. ಶ್ರುತಿಯಲ್ಲಿ ಎಂದರೆ ಬ್ರಾಹ್ಮಣ ಗ್ರಂಥಗಳಲ್ಲಿ ಉಕ್ತವಾದ ಯಜ್ಞವಿಧಿಗಳನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸುವ ಕಲ್ಪಸೂತ್ರಗಳಿಗೆ ಶ್ರೌತ ಸೂತ್ರಗಳೆಂಬ ಹೆಸರು ಪ್ರಸಿದ್ಧವಾಗಿದೆ. ಅದರಂತೆ ಗೃಹಸ್ಥಾಶ್ರಮದಲ್ಲಿ ವೈದಿಕ ಕರ್ಮಾಚರಣೆಗೆ ಅಂಗವಾದ ಎಲ್ಲ ಸಂಸ್ಕಾರಗಳ ಹಾಗು ಪೂಜಾವಿಧಿಗಳ ನಿರೂಪಣೆಗೆ ಮೀಸಲಾದ ಸೂತ್ರಗಳಿಗೆ ಗೃಹ್ಯಸೂತ್ರಗಳೆಂದು ಪ್ರಸಿದ್ಧಿಯಿದೆ.

ಅಗ್ನಿಹೋತ್ರಕ್ಕೆ ಅಗತ್ಯವಾದ ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಮುಂತಾದ ಯಾಗಾಗ್ನಿಗಳ ವಿಧಿ, ದರ್ಶಪೂರ್ಣಮಾಸ ಯಜ್ಞಗಳು, ಅಗ್ನಿಷ್ಟೋಮ ಯಾಗ, ಋತುಗಳ ಅನುಕ್ರಮದಲ್ಲಿ ಮಾಡುವ ಯಾಗಗಳು, ಯಜ್ಞಪಶುಗಳು ಬೇಕಾಗುವ ಸೋಮಯಾಗ ಪ್ರಕಾರಗಳು ಇತ್ಯಾದಿಗಳನ್ನು ಕುರಿತ ಸಮಗ್ರ ವಿವರಗಳು ಶ್ರೌತಸೂತ್ರಗಳಲ್ಲಿ ಬರುತ್ತವೆ. ಭಾರತೀಯರ ಯಜ್ಞಪ್ರಕ್ರಿಯೆಯನ್ನು ಅರಿಯಲು, ವೈದಿಕ ಧರ್ಮದ ಒಳನೋಟವನ್ನು ಪಡೆಯಲು, ವಿಶ್ವದಲ್ಲಿ ಮತಧರ್ಮಗಳ ಪ್ರಗತಿವಿಕಾಸದ ಪರಂಪರೆಯನ್ನು ಅರ್ಥ ಮಾಡಿಕೊಳ್ಳಲು ಶ್ರೌತಸೂತ್ರಗಳ ಅಧ್ಯಯನ ಇಂದಿಗೂ ತುಂಬ ಮಹತ್ತ್ವದ್ದಾಗಿದೆ.

ಗೃಹ್ಯಸೂತ್ರಗಳಲ್ಲಿ ಬರುವ ವಿಷಯಗಳು ಇನ್ನೂ ಬಹುಮುಖವಾಗಿರುವಂತೆ ಕುತೂಹಲಕಾರಿಗಳೂ ಆಗಿವೆ. ಗರ್ಭಾದಾನದಿಂದ ಹಿಡಿದು ಅಪರಕರ್ಮದ ವರೆಗೆ ಮಾನವನನ್ನು ಪಾವನಗೊಳಿಸುವ ನಾನಾ ರೀತಿಯ ಗೃಹ್ಯಸಂಸ್ಕಾರಗಳೇ ಇಲ್ಲಿಯ ಮುಖ್ಯ ವಿಷಯಗಳು. ಶಾಂತಿಹೋಮಗಳು, ಹವನಗಳು, ಪ್ರೇತಕರ್ಮದ ಪರಿಗಳು_ಎಲ್ಲಕ್ಕೂ ಇಲ್ಲಿ ಪ್ರವೇಶವಿದೆ. ಇಂದಿಗೂ ಭಾರತೀಯರ ಧರ್ಮಾಚರಣೆಯಲ್ಲಿ

ಉಳಿದು ಬಂದಿರುವ ಎಷ್ಟೋ ವಿಧಿಗಳು_ಸೀಮಂತೋನ್ನಯನ, ಗರ್ಭಾಧಾನ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೂಡಾಕರ್ಮ, ಉಪನಯನ, ಬ್ರಹ್ಮಚಾರಿ ವ್ರತ, ಸ್ನಾತಕವಿಧಿ, ಕನ್ಯಾವರಣ, ವಿವಾಹ ಇತ್ಯಾದಿ_ಅತ್ಯಂತ ಹೆಚ್ಚಿನ ವಿವರಗಳೊಂದಿಗೆ ಈ ಗೃಹ್ಯಸೂತ್ರಗಳಲ್ಲಿ ಪ್ರತಿಪಾದಿತವಾಗಿವೆ. ಇದರಂತೆ ಪಂಚಮಹಾಯಜ್ಞಗಳ ವಿಷಯವನ್ನೂ ಬ್ರಾಹ್ಮಣಗ್ರಂಥಗಳಿಗಿಂತ ಹೆಚ್ಚು ವಿಸ್ತಾರವಾಗಿ ಇಲ್ಲಿ ನಿರೂಪಿಸಿದೆ. ದೇವತಾರ್ಚನೆ, ಪಿತೃತರ್ಪಣ, ಅತಿಥಿಪೂಜೆ_ಇವೇ ಸರಳರೂಪದ ವಿಧಿಗಳಾದರೂ ಅತ್ಯಂತ ಮಹತ್ತ್ವವನ್ನು ಪಡೆದು ಹೇಗೆ ಮಹಾಯಜ್ಞಗಳೆನಿಸುವವೆಂಬುದನ್ನು ಇಲ್ಲಿ ಮಾರ್ಮಿಕವಾಗಿ ಕಾಣುತ್ತೇವೆ. ವೇದಾಧ್ಯಯನದ ಪ್ರಶಸ್ತಿಗೂ ಇಲ್ಲಿಯೇ ಸ್ಥಾನ ಸಿಕ್ಕುತ್ತದೆ. ಇದರಂತೆ ಶ್ರೌತಯಜ್ಞಗಳಾದ ಅಗ್ನಿಹೋತ್ರ, ದರ್ಶಪೂರ್ಣಮಾಸ, ಚಾತುರ್ಮಾಸ್ಯ ಮುಂತಾದವಕ್ಕೆ ಉಗಮವೆನಿಸಿರಬಹುದಾದ ಸರಳ ಯಜ್ಞವಿಧಿಗಳೂ ಇಲ್ಲಿ ವರ್ಣಿತವಾಗಿವೆ. ಇವುಗಳಲ್ಲಿ ಪ್ರಾತಸ್ಸವನ, ಸಾಯಂಸವನ, ದರ್ಶಪೂರ್ಣಮಾಸ ವಿಧಿಗಳು, ಯಜ್ಞಾಂಗವಾದ ವಾರ್ಷಿಕ ಉತ್ಸವಗಳು_ಮುಂತಾದವನ್ನು ಹೆಸರಿಸಬಹುದು. ಅದೂ ಅಲ್ಲದೆ ನಿತ್ಯಜೀವನದಲ್ಲಿ ಉಪಯುಕ್ತವಾದ ಗೃಹನಿರ್ಮಾಣ, ಪಶುಪಾಲನ, ಭೂಕರ್ಮ ಮುಂತಾದುವನ್ನು ಕುರಿತ ವಿಧಿಗಳೂ ರೋಗ ಮತ್ತು ಅಶುಭ ನಿವಾರಣೆಗೆ ಹೇಳಿರುವ ಶಾಂತಿಕರ್ಮಗಳೂ ರಕ್ಷೋಘ್ನ ಮುಂತಾದ ಮಂತ್ರವಿಚಾರಗಳೂ ಗೃಹ್ಯಸೂತ್ರಗಳಲ್ಲಿ ಬರುತ್ತವೆ.

ಎಲ್ಲಕ್ಕಿಂತ ಹೆಚ್ಚಾಗಿ, ಅಪರಕರ್ಮ ಮತ್ತು ಶ್ರಾದ್ಧವಿಚಾರ ಕೂಡ ಗೃಹ್ಯಸೂತ್ರಗಳ ಮುಖ್ಯ ಅಂಗವಾಗಿವೆ. ಅನಂತರ ಸ್ವಲ್ಪವೇ ಕಾಲಾವಧಿಯಲ್ಲಿ ಶ್ರಾದ್ಧಕಲ್ಪಕ್ಕೆಂದೇ ಮೀಸಲಾದ ಹತ್ತಾರು ಗ್ರಂಥಗಳು ರಚಿತವಾದುದನ್ನು ಇಲ್ಲಿ ಉಲ್ಲೇಖಿಸಬೇಕು.

ಹೀಗೆ, ಸಾಹಿತ್ಯದೃಷ್ಟಿಯಿಂದ ಹೆಚ್ಚೇನೂ ಮಹತ್ತ್ವದವಲ್ಲದಿದ್ದರೂ ಪ್ರಾಚೀನ ಭಾರತದ ಜನಜೀವನವನ್ನು ಅರಿಯಬೇಕೆಂಬ ಕೂತೂಹಲವುಳ್ಳವರಿಗೆ ಇಂದೂ ಗೃಹ್ಯ ಸೂತ್ರಗಳು ನಿಧಿಯಂತಿವೆ. ಪ್ರಾಚೀನ ಮಾನವರ ನಿತ್ಯಜೀವನವನ್ನರಿಯಲು ಇತರ ದೇಶಗಳಲ್ಲಿ ಸಂಶೋಧಕರು ಹತ್ತಾರು ದಿಕ್ಕಿನಿಂದ ಒಂದೊಂದೇ ತುಣುಕನ್ನು ಕಲೆ ಹಾಕುತ್ತ ಒದ್ದಾಡಬೇಕಾಗುತ್ತದೆ. ಆದರೆ ಜನತೆಯ ದಿನಚರಿಯನ್ನು, ಒಂದು ವಿವರವನ್ನೂ ಬಿಡದೆ, ಒಂದೆಡೆ ಹೀಗೆ ಸಂಗ್ರಹಿಸಿಟ್ಟಿರುವ ದಾಖಲೆ ಮತ್ತೆಲ್ಲಿಯೂ ಕಾಣಸಿಗದು. ಗೃಹ್ಯಸೂತ್ರಗಳನ್ನು ವಿಂಟರ್‌ನಿಟ್ಸ್ ಜನತೆಯ ದಿನಚರಿಗಳೆಂದಿದ್ದಾನೆ. ಅವು ಕೇವಲ ಧಾರ್ಮಿಕ ದಿನಚರಿಯನ್ನು ಮಾತ್ರ ಒಳಗೊಳ್ಳುತ್ತವೆಂದು ಮೇಲ್ನೋಟಕ್ಕೆ ತೋರಿದರೂ ವಸ್ತುತಃ ಪ್ರಾಚೀನ ಭಾರತೀಯರ ಜೀವನವನ್ನೆಲ್ಲ ಹಾಸುಹೊಕ್ಕಾಗಿ ಧರ್ಮವೇ ವ್ಯಾಪಿಸಿದ್ದುದನ್ನು ನೆನೆದರೆ, ಇಲ್ಲಿಯ ಜೀವನಚಿತ್ರಗಳು ಉಪಾದೇಯ ವೆನಿಸುವುದರಲ್ಲಿ ಸಂದೇಹವಿಲ್ಲ. ಇಂಡೋ–ಯುರೋಪಿಯನ್ ಜನವರ್ಗಗಳ ಜೀವನ ಕ್ರಮದ ಬಗೆಗೆ ಇತರತ್ರ ಸಿದ್ಧವಾಗಿರುವ ಅಂಶಗಳೊಡನೆ ಗೃಹ್ಯಸೂತ್ರಗಳಲ್ಲಿ ಬರುವ ಅಂಶಗಳನ್ನು ಹೋಲಿಸಿ ನೋಡಿದಾಗಲಂತೂ ಇವುಗಳಲ್ಲಿ ಕಾಣಬರುವ ಭಾವೈಕ್ಯ ಮತ್ತಷ್ಟು ಹೃದಯಸ್ಪರ್ಶಿಯಾಗುತ್ತದೆ. ಬೇರೆಡೆ ಭಾಷೆಯ ಅವಶೇಷಗಳಲ್ಲಿ ಮಾತ್ರ ಉಳಿದುಬಂದಿರುವ ಸಾಮ್ಯ ಆಚರಣೆಯ ಅಂಗಗಳಿಗೂ ವ್ಯಾಪಿಸಿದ್ದಿತೆಂಬುದನ್ನು ಗೃಹ್ಯಸೂತ್ರಗಳು ಎತ್ತಿ ತೋರಿಸುತ್ತವೆ.

ಶ್ರೌತಸೂತ್ರ ಮತ್ತು ಗೃಹ್ಯಸೂತ್ರಗಳಿಗಿಂತ ಮತ್ತೂ ಹೆಚ್ಚಿನ ಪ್ರಾಶಸ್ತ್ಯಕ್ಕೆ ಯೋಗ್ಯವಾದ ಮೂರನೆಯ ಸೂತ್ರಜಾತಿಯೊಂದಿದೆ. ಅದೇ ಧರ್ಮಸೂತ್ರ. ಧರ್ಮವನ್ನು ಕುರಿತ ನಿರ್ಣಾಯಕ ಶಾಸ್ತ್ರಗಳೇ ಧರ್ಮಸೂತ್ರಗಳು. ಧರ್ಮವೆಂದರೆ ಒಂದು ಕಡೆಗೆ ಕರ್ತವ್ಯಕರ್ಮ, ಯುಕ್ತವರ್ತನೆ, ಕಾನೂನು ಇತ್ಯಾದಿ ಅರ್ಥವಿರುವಂತೆ ಇನ್ನೊಂದು ಕಡೆಗೆ ಮತಧರ್ಮಾಚರಣೆ, ಸಾಂಪ್ರದಾಯಿಕ ಆಚಾರ, ನಡೆವಳಿಕೆ ಇತ್ಯಾದಿ ಅರ್ಥಗಳೂ ಇವೆ. ಆದುದರಿಂದ ಧರ್ಮಸೂತ್ರಗಳಲ್ಲಿ ವೈದಿಕ ಮತೀಯವಾದ ವಿಚಾರಗಳು ಮಾತ್ರವೇ ಇರದೆ ಮತೀಯವಲ್ಲದ ವಿಚಾರಗಳೂ ಬಹಳವಾಗಿ ಅಡಕವಾಗಿವೆ. ಪ್ರಾಚೀನ ಭಾರತದ ಕಾಯಿದೆಶಾಸ್ತ್ರವನ್ನು ಈ ಧರ್ಮಸೂತ್ರಕಾರರು ಸರ್ವಾಂಗೀಣ ನೈಪುಣ್ಯದಿಂದ ನಿರ್ವಚನಮಾಡಿದ್ದಾರೆ. ವಸ್ತುತಃ ಧರ್ಮಸೂತ್ರಗಳು ಸ್ವತಂತ್ರ ಕಾಯಿದೆ ಕಟ್ಟಳೆಗಳ ನಿರ್ಣಯಕ್ಕೆ ಆಧಾರಗಳೇ ಹೊರತು ಯಜ್ಞಕಲ್ಪದಲ್ಲಿ ಅವುಗಳ ಸ್ಥಾನ ಮುಖ್ಯವಲ್ಲ. ಆದರೆ ಶ್ರೌತ ಗೃಹ್ಯಸೂತ್ರಗಳಂತೆ ಧರ್ಮಶಾಸ್ತ್ರಗಳು ಕೂಡ ಒಂದೊಂದೇ ವಿಶಿಷ್ಟ ಶಾಖೆಯವರಿಂದ ರಚಿತವಾಗಿರುವ ಕಾರಣ ಅವಕ್ಕೂ ಕಲ್ಪ ಸೂತ್ರಗಳಲ್ಲಿ ಗಣನೆಯುಂಟಾಗುತ್ತದೆ.

ಕಡೆಯದಾಗಿ, ಇವಲ್ಲದೆ ಶ್ರೌತಸೂತ್ರಗಳಿಗೆ ಅನುಬಂಧಗಳಂತಿರುವ ಶುಲ್ವಸೂತ್ರಗಳನ್ನೂ ಕುರಿತು ಇಲ್ಲಿ ಒಂದು ಮಾತು ಹೇಳಬೇಕು. ಶುಲ್ವವೆಂದರೆ ಅಳೆಯುವದಾರ. ಯಜ್ಞವೇದಿಕೆಯನ್ನು ಹೇಗೆ ನಿರ್ಮಿಸಬೇಕು. ಅದರ ಉದ್ದಗಲಗಳ ಪ್ರಮಾಣವೆಷ್ಟಿರಬೇಕು, ಉಪಯೋಗಿಸಬೇಕಾದ ಇಟ್ಟಿಗೆಗಳ ಸಂಖ್ಯೆ ಎಷ್ಟು_ಮುಂತಾದ ವಿವರಗಳು ಶುಲ್ವಸೂತ್ರಗಳಲ್ಲಿ ಬರುತ್ತವೆ. ಪ್ರಾಚೀನ ಭಾರತದಲ್ಲಿ ಭೂಮಿತಿಶಾಸ್ತ್ರದ ಉಗಮವನ್ನು ಈ ಶುಲ್ವಸೂತ್ರಗಳಲ್ಲಿ ಕಾಣುತ್ತೇವೆ.

ವೇದಗಳ ಅರ್ಥನಿರ್ಣಯಕ್ಕೂ ಶ್ರೌತ ಮತ್ತು ಗೃಹ್ಯಸೂತ್ರಗಳಿಂದ ಎಷ್ಟೋ ಉಪಕಾರವಾಗಿದೆ. ಈ ಸೂತ್ರಗಳು ಕೇವಲ ಯಜ್ಞಪ್ರಕ್ರಿಯೆಯನ್ನು ಕುರಿತ ನಿಯಮಗಳನ್ನು ಮಾತ್ರ ಹೇಳಿ ಅಲ್ಲಿಗೆ ನಿಲ್ಲುವುದಿಲ್ಲ. ಯಾವ ವೇದಮಂತ್ರಗಳನ್ನು ಯಾವ ಕಾಲದಲ್ಲಿ ಉಚ್ಚರಿಸಬೇಕೆಂಬ ಬಗೆಗೆ ವಿನಿಯೋಗವನ್ನು ತಿಳಿಸುತ್ತವೆ. ಪ್ರಾಯಿಕವಾಗಿ ಇಲ್ಲಿ ಉದ್ಧೃತವಾದ ಮಂತ್ರಭಾಗಗಳು ಯಜುರ್ವೇದದ ವಿಧಿಗಳು. ಒಮ್ಮೊಮ್ಮೆ ಉಚ್ಚರಿಸುವ ಮಂತ್ರಕ್ಕೂ ಆಚರಿಸುವ ವಿಧಿಕಲಾಪಕ್ಕೂ ವೈಷಮ್ಯವಿದ್ದಂತೆ ಕಾಣಬಹುದಾದರೂ ಪ್ರಾಯಃ ಕಲಾಪದ ಪರಿಜ್ಞಾನದಿಂದ ವೇದಮಂತ್ರದ ಸ್ಪಷ್ಟಾರ್ಥದ ಕಲ್ಪನೆಗೂ ಎಷ್ಟೋ ಅವಕಾಶ ದೊರೆತಂತಾಗುತ್ತದೆ.

ಈ ಮಂತ್ರಭಾಗಗಳ ಪರಿಶೀಲನೆಯಿಂದ ಸೂತ್ರರಚನೆಗಳನ್ನು ವಿಭಿನ್ನ ವೈದಿಕ ಶಾಖೆಯವರು ಯಾವ ರೀತಿ ಕೈಗೊಂಡರೆಂಬುದರ ಪರಿಜ್ಞಾನವುಂಟಾಗುತ್ತದೆ. ಉದಾಹರಣೆಗೆ, ಕೃಷ್ಣಯಜುಶ್ಶಾಖೆಯವರ ಶ್ರೌತ ಮತ್ತು ಗೃಹ್ಯಸೂತ್ರಗಳಲ್ಲಿ ಕೃಷ್ಣಯಜುಸ್ಸಂಹಿತೆಯ ಮಂತ್ರಗಳು ಮಾತ್ರ ಅವುಗಳ ಮೊದಲ ಪ್ರತೀಕಗಳ ಉಚ್ಚಾರಣೆಯ ಮೂಲಕ ಉದಾಹೃತವಾಗಿವೆ. ಪೂರ್ಣಮಂತ್ರಗಳನ್ನು ಅಲ್ಲಿ ಎತ್ತಿ ಬರೆಯುವುದೇ ಇಲ್ಲ. ಆದರೆ ಋಕ್ಸಂಹಿತೆ ಅಥವಾ ಅಥರ್ವಸಂಹಿತೆಗಳಿಂದ ಉದಾಹರಿಸುವಾಗ ಇಡಿಯ ಮಂತ್ರವನ್ನೇ ಪೂರ್ಣವಾಗಿ ಉದಾಹರಿಸುತ್ತಾರೆ. ಈಗ ಉಪಲಬ್ಧವಿರುವ ವೇದಸಂಹಿತೆಗಳಲ್ಲಿ ಕಾಣಸಿಗದಂಥ ಕೆಲವು ವೇದಮಂತ್ರಗಳು ಕೂಡ ಈ ಕಲ್ಪಸೂತ್ರಗಳಲ್ಲಿ ಉದಾಹೃತವಾಗಿರುವುದನ್ನು ನೋಡುತ್ತೇವೆ. ವೇದಮಂತ್ರಗಳ ವಿಸ್ತಾರವನ್ನರಿಯಲು ಇದು ಸಹಾಯಕವಾಗುತ್ತದೆ. ಕೆಲವೊಮ್ಮೆ ಕಲ್ಪಸೂತ್ರಗಳಲ್ಲಿ ಎತ್ತಿಕೊಂಡ ಮಂತ್ರಪಾಠಗಳನ್ನೆಲ್ಲ ಒಂದು ಸೂಚಿಯಾಗಿ ಮಾಡಿ ಪ್ರತ್ಯೇಕ ಸೂತ್ರಗ್ರಂಥವೆನ್ನುವುದೂ ಉಂಟು. ಉದಾಹರಣೆಗೆ, ಆಪಸ್ತಂಬೀಯ ಗೃಹ್ಯಸೂತ್ರಕ್ಕೆ ಸೇರಿದ ಮಂತ್ರಪಾಠವನ್ನು ಇಲ್ಲಿ ಹೆಸರಿಸಬಹುದು.

ಕೃಷ್ಣಯಜುರ್ವೇದಕ್ಕೆ ಸೇರಿದ ಬೌಧಾಯನ ಮತ್ತು ಆಪಸ್ತಂಬ ಎಂಬೆರಡು ಶಾಖೆಗಳಲ್ಲಿ ಮಾತ್ರ ಉಕ್ತವಾದ ನಾಲ್ಕೂ ಬಗೆಯ ಕಲ್ಪಸೂತ್ರಗಳು ಸಿಕ್ಕುತ್ತವೆ. ಶ್ರೌತ, ಗೃಹ್ಯ, ಧರ್ಮ ಮತ್ತು ಶುಲ್ವ ಎಂಬ ನಾಲ್ಕೂ ಬಗೆಯ ಕಲ್ಪಸೂತ್ರಗಳು ಈ ಶಾಖೆಗಳಲ್ಲಿ ಎಷ್ಟೊಂದು ಅನ್ಯೋನ್ಯ ಸಂಬುಧವನ್ನು ಹೊಂದಿವೆಯೆಂದರೆ ಇವೆಲ್ಲ ಒಂದೇ ಬೃಹದ್ಗ್ರಂಥದ ಬಿಡಿಭಾಗಗಳೆಂದರೂ ಸಲ್ಲುತ್ತದೆ. ಪ್ರಾಯಶಃ ಬೌಧಾಯನ ಮತ್ತು ಅಪಸ್ತಂಬರೇ ಸ್ವತಃ ಈ ಕೃತಿಗಳನ್ನೆಲ್ಲ ರಚಿಸಿರಬೇಕೆನಿಸುತ್ತದೆ.

ಈ ಕೃಷ್ಣಯಜುಶ್ಶಾಖೆಗಳಲ್ಲದೆ ತೈತ್ತಿರೀಯ ಸಂಹಿತೆಗೆ ಸೇರಿದ ಭಾರದ್ವಾಜ ಮತ್ತು ಸತ್ಯಾಷಾಢ ಹಿರಣ್ಯಕೇಶಿ ಶಾಖೆಗಳಲ್ಲಿಯೂ ಕಲ್ಪಸೂತ್ರಗಳು ಸಿಕ್ಕುತ್ತವೆ. ವಾಧೂಲ ಮತ್ತು ವೈಖಾನಸ ಶಾಖೆಗಳೂ ಇದ್ದುವೆಂದು ತಿಳಿದುಬರುತ್ತದೆ.

ಮೈತ್ರಾಯಣೀ ಸಂಹಿತೆಯ ವೈದಿಕ ಶಾಖೆಗೆ ಸೇರಿದಂತೆ ಮಾನವಶ್ರೌತಸೂತ್ರ, ಮಾನವಗೃಹ್ಯಸೂತ್ರ, ಮಾನವಶುಲ್ವಸೂತ್ರಗಳು ಪ್ರಸಿದ್ಧವಾಗಿವೆ.

ಆದರೆ ಕೃಷ್ಣಯಜುರ್ವೇದಶಾಖೆಗಳನ್ನು ಬಿಟ್ಟರೆ ಮಿಕ್ಕ ಶುಕ್ಲಯಜರ್ವೇದ, ಋಗ್ವೇದ, ಸಾಮವೇದಗಳ ಶಾಖೆಗಳಲ್ಲಿ ನಾಲ್ಕೂ ಬಗೆಯ ಕಲ್ಪಸೂತ್ರಗಳು ಉಪಲಬ್ಧವಿಲ್ಲ. ಸಿಕ್ಕುವುದೆಲ್ಲ ಇಲ್ಲೊಂದು ಶ್ರೌತಸೂತ್ರ, ಅಲ್ಲೊಂದು ಗ್ರಹ್ಯಸೂತ್ರ_ಹೀಗಿರುತ್ತದೆ. ಕಾತ್ಯಾಯನ ಶ್ರೌತಸೂತ್ರವೂ ಪಾರಸ್ಕರ ಗೃಹ್ಯಸೂತ್ರವೂ ಶುಕ್ಲಯಜುರ್ವೇದದ ಶಾಖೆಯ ರಚನೆಗಳು. ಆಶ್ವಲಾಯನರ ಶ್ರೌತ ಹಾಗು ಗೃಹ್ಯ ಸೂತ್ರಗಳೂ ಶಾಂಖಾಯನರ ಶ್ರೌತ ಹಾಗು ಗೃಹ್ಯಸೂತ್ರಗಳೂ ಋಕ್ ಶಾಖೆಯವು; ಲಾಟ್ಯಾಯನರ ಮತ್ತು ದ್ರಾಹ್ಯಾಯಣರ ಶ್ರೌತಸೂತ್ರಗಳು, ಜೈಮಿನೀಯ ಶ್ರೌತ ಮತ್ತು ಗೃಹ್ಯಸೂತ್ರಗಳು, ಗೋಭಿಲ ಮತ್ತು ಖಾದಿರ ಗೃಹ್ಯಸೂತ್ರಗಳು_ಇವೆಲ್ಲ ಸಾಮವೇದ ಶಾಖೆಯವು. ವೈತಾನಶ್ರೌತಸೂತ್ರವೆಂಬುದು ಅಥರ್ವಶಾಖೆಗೆ ಸೇರಿದೆ ಕೌಶಿಕಸೂತ್ರವೆಂಬುದೂ ಹಾಗೆಯೇ. ಇದರಲ್ಲಿ ಗೃಹ್ಯಸೂತ್ರದ ವಿಷಯಗಳ ಜೊತೆಗೆ ಆಥರ್ವಣ ಶಾಂತಿಕ ಪೌಷ್ಟಿಕ ಆಭಿಚಾರಿಕ ಕರ್ಮಗಳ ವಿಚಾರವೂ ಸೇರಿದೆ. ಕಾಲದೃಷ್ಟಿಯಿಂದ ನೋಡಿದರೆ ಕೃಷ್ಣಯಜುಶ್ಶಾಖೆಯ ಬೌಧಾಯನ ಕಲ್ಪಸೂತ್ರವನ್ನು ಎಲ್ಲಕ್ಕಿಂತ ಪ್ರಾಚೀನವೆಂದೂ ಅಥರ್ವಶಾಖೆಯ ವೈತಾನಸೂತ್ರವನ್ನು ಎಲ್ಲಕ್ಕಿಂತ ಅರ್ವಾಚೀನವೆಂದೂ ವಿಧ್ವಾಂಸರು ಭಾವಿಸುತ್ತಾರೆ.

ವೈದಿಕ ಧರ್ಮದ ಆಧಾರಗ್ರಂಥಗಳಾದ ಈ ಕಲ್ಪಸೂತ್ರಗಳನ್ನೆಲ್ಲ ಹಸ್ತಪ್ರತಿಗಳಿಂದ ಪರಿಶೋಧಿಸಿ, ಪಾಠನಿರ್ಣಯ ಮಾಡಿ, ಶಾಸ್ತ್ರೀಯವಾಗಿ ಪರಿಷ್ಕೃತ ಮುದ್ರಣಗಳನ್ನು ಏರ್ಪಡಿಸಿದ್ದಲ್ಲದೆ ಕೂಲಂಕಷ ವಿವೇಚನೆಯನ್ನೂ ಮಾಡಿದ ಕೀರ್ತಿ ಹೆಚ್ಚಾಗಿ ಐರೋಪ್ಯ ಪಂಡಿತರಿಗೆ, ಅದರಲ್ಲೂ ಜರ್ಮನಿಯ ವಿದ್ವಾಂಸರಿಗೆ, ಸಲ್ಲುತ್ತದೆ. ಅತ್ಯಂತ ಪ್ರಾಚೀನವಾದ ಬೌಧಾಯನ ಶ್ರೌತಸೂತ್ರವನ್ನು ಪರಿಷ್ಕರಿಸಿ ಮುದ್ರಿಸಿದ್ದಲ್ಲದೆ ಅದರ ವಿಮರ್ಶಾತ್ಮಕ ವಿವರಣೆಯನ್ನು ಬರೆದಾತ ಕ್ಯಾಲಂಡ್. ಆಪಸ್ತಂಬೀಯ ಶ್ರೌತಸೂತ್ರವನ್ನು ಸಂಪಾದಿಸಿದಾತ ಗಾರ್ಬೆ. ಆಪಸ್ತಂಬೀಯ ಗೃಹ್ಯಸೂತ್ರವನ್ನು ಪ್ರಕಟಗೊಳಿಸಿದವ ವಿಂಟರ್ನಿಟ್ಸ್. ಹಿರಣ್ಯಕೇಶಿ ಗೃಹ್ಯಸೂತ್ರವನ್ನೂ ಭಾಷಾಂತರಿಸಿದವ ಓಲ್ಡೆನ್‌ಬರ್ಗ್. ವೈಖಾನಸ ಸೂತ್ರಗಳ ಮೇಲೆ ಆಧಾರಗ್ರಂಥ ಬರೆದವ ಬ್ಲಾಕ್. ಮಾನವಸೂತ್ರಗಳ ಸಂಪಾದಕ ಕ್ನಾಯೆಕ್. ಶಾಂಖಾಯನ ಶ್ರೌತಸೂತ್ರದ ಸಂಪಾದಕ ಹಿಲ್ಲೆಬ್ರಾಂಟ್. ಇವಲ್ಲದೆ ಪ್ರಾಯಃ ಎಲ್ಲ ಕಲ್ಪಸೂತ್ರಗಳನ್ನೂ ವಿಮರ್ಶಿಸಿ ಪೂರ್ಣ ವಿವರಗಳನ್ನು ಈ ಒಂದೂವರೆ ಶತಮಾನಗಳ ಅವಧಿಯಲ್ಲಿ

ಪಾಶ್ಚಾತ್ಯ ಸಂಶೋಧಕರು ಒದಗಿಸಿದ್ದಾರೆ. ಭಾರತೀಯ ಪರಿಷ್ಕರಣಗಳಿಗಿಂತಲೂ ಪಾಶ್ಚಾತ್ಯರವು ಅಧ್ಯಯನಕ್ಕೆ ಅತ್ಯಂತ ಉಪಯುಕ್ತವಾಗಿವೆ.

ಹೀಗೆ ವೈದಿಕ ಧರ್ಮದ ಸೂಕ್ಷ್ಮ ಪರಿಶೀಲನೆಗೆ, ವೈದಿಕ ಜೀವನಕ್ರಮದ ಸಪ್ರಮಾಣ ಪರಿಜ್ಞಾನಕ್ಕೆ, ವೈದಿಕ ಮಂತ್ರಾರ್ಥವಿವೇಚನೆಗೆ, ವಿಶ್ವದ ಧರ್ಮಗಳ ಇತಿಹಾಸದಲ್ಲಿ ವೈದಿಕ ಧರ್ಮದ ತುಲನಾತ್ಮಕ ಪರೀಕ್ಷಣಕ್ಕೆ, ವೈದಿಕ ಸಂಸ್ಕಾರಗಳ ಸ್ವರೂಪ ನಿರೂಪಣೆಗೆ ಕಲ್ಪಸೂತ್ರಗಳೇ ನಮಗಿರುವ ಅಕ್ಷಯನಿಧಿ. ಇವುಗಳ ಆಳವಾದ ಅಧ್ಯಯನದಿಂದಲೇ ಪಾಶ್ಚಾತ್ಯ ವಿದ್ವಾಂಸರು ವೈದಿಕ ಸಂಸ್ಕೃತಿಯನ್ನು ಅರಿತು ಸಮರ್ಥವಾಗಿ ಅರುಹಲು ಶಕ್ತರಾದರು. ಇನ್ನೂ ಈ ಆಚಾರಗಳನ್ನು ಶ್ರದ್ಧೆಯಿಂದ ಪಾಲಿಸುತ್ತಿರುವ ಭಾರತೀಯರಿಗೆ ಇವುಗಳ ಮಹತ್ತ್ವವನ್ನು ಪ್ರತ್ಯೇಕವಾಗಿ ತಿಳಿಯ ಹೇಳುವ ಅಗತ್ಯ ಕಾಣದು. (ಕೆ.ಕೆ.)

**ಕಲ್ಲಂಗಡಿ :** ಕುಕುರ್ಬಿಟೇಸೀ ಕುಟುಂಬಕ್ಕೆ ಸೇರಿದ ಸಿಟ್ರಲಸ್ ವಲ್ಗ್ಯಾರಿಸ್ ಎಂಬ ವೈಜ್ಞಾನಿಕ ಹೆಸರಿನ ಜನಪ್ರಿಯವಾದ ಹಾಗೂ ಹೆಸರುವಾಸಿಯಾದ ಬೇಸಗೆ ಹಣ್ಣಿನ ಸಸ್ಯ (ವಾಟರ್ ಮೆಲನ್). ಇದರ ಉಗಮಸ್ಥಾನ ಆಫ್ರಿಕ ಖಂಡವೆಂದು ಒಂದು ಅಭಿಪ್ರಾಯವೂ ಏಷ್ಯ-ಮುಖ್ಯವಾಗಿ ಭಾರತ-ಎಂದು ಇನ್ನೊಂದು ಅಭಿಪ್ರಾಯವೂ ಇದೆ. ತವರು ಯಾವುದೇ ಇರಲಿ ಕಲ್ಲಂಗಡಿಯನ್ನು ಇದರ ರುಚಿಯಾದ ಹಣ್ಣುಗಳಿಗಾಗಿ ಪ್ರಾಚೀನ ಕಾಲದಿಂದಲೂ ಪ್ರಪಂಚದ ಉಷ್ಣಪ್ರದೇಶಗಳಲ್ಲಿ ಬೆಳೆಸುತ್ತಿದ್ದಾರೆ. ಈಜಿಪ್ಟಿನ ಪಿರಮಿಡ್ಡುಗಳಲ್ಲಿನ ವರ್ಣಚಿತ್ರಗಳಲ್ಲೂ ಈ ಹಣ್ಣಿನ ಬಗ್ಗೆ ಉಲ್ಲೇಖವಿದೆ.

ಭಾರತ, ಈಜಿಪ್ಟ್, ದಕ್ಷಿಣ ಆಫ್ರಿಕ, ಅಮೆರಿಕದ ಸಂಯುಕ್ತಸಂಸ್ಥಾನಗಳ ದಕ್ಷಿಣ ಭಾಗ, ದಕ್ಷಿಣ ಫ್ರಾನ್ಸ್ ಹಾಗೂ ದಕ್ಷಿಣ ರಷ್ಯಗಳಲ್ಲಿ ಕಲ್ಲಂಗಡಿಯನ್ನು ಹೆಚ್ಚಾಗಿ ಬೆಳೆಸುತ್ತಾರೆ.

**ಸಸ್ಯವಿವರಣೆ:** ನೆಲದ ಮೇಲೆ ಅಗಲವಾಗಿ ಹರಡಿಕೊಂಡು ಬೆಳೆಯುವ ಬಳ್ಳಿ ಇದು. ಬಹುವಾಗಿ ಕವಲೊಡೆಯುತ್ತದೆ. ಕಾಂಡದ ಮೇಲೆಲ್ಲ ಸಣ್ಣ ರೋಮಗಳಿವೆ. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ; ಇವು ಅಗಲ ಮತ್ತು ಹಸ್ತಾಕಾರವಾಗಿರುವುವಲ್ಲದೆ ಹಲವಾರು ಹಾಲೆಗಳಾಗಿ ಸೀಳುಗೊಂಡಿವೆ. ಎಲೆತೊಟ್ಟುಗಳು ಚಿಕ್ಕವು. ಎಲೆಗಳ ಕಂಕುಳಲ್ಲಿ ಹಳದಿಬಣ್ಣದ ಚಿಕ್ಕ ಹೂಗಳು ಒಂಟೊಂಟಿಯಾಗಿ ಅರಳುತ್ತವೆ. ಹೂಗಳು ಏಕಲಿಂಗಿಗಳು.

ಕಲ್ಲಂಗಡಿ ಹಣ್ಣುಗಳ ರಾಶಿ

ಗಂಡು ಹೂವಿನಲ್ಲಿ ಐದು ಪುಷ್ಪಪತ್ರಗಳಿಂದ ಕೂಡಿದ ಗಂಟೆಯಾಕಾರದ ಪುಷ್ಪಪಾತ್ರೆಯೂ ಐದು ದಳಗಳಿಂದಾದ ಸಂಯುಕ್ತ ಮಾದರಿಯ ಪುಷ್ಪದಳ ಸಮೂಹವೂ ಮೂರು ಕೇಸರಗಳೂ ಇವೆ. ಹೆಣ್ಣು ಹೂವಿನಲ್ಲಿ ಗಂಡು ಹೂವಿನಲ್ಲಿರುವಷ್ಟೇ ಸಂಖ್ಯೆಯ ಪುಷ್ಪಪತ್ರಗಳೂ ದಳಗಳೂ ಮೂರು ಕಾರ್ಪೆಲುಗಳಿಂದಾದ ಒಂದು ನೀಚಸ್ಥಾನದ ಅಂಡಾಶಯವೂ ಇವೆ. ಅಂಡಾಶಯದಲ್ಲಿ ಹಲವಾರು ಅಂಡಕಗಳಿವೆ. ಫಲ ಒಡೆಯದ ಬೆರಿ ಮಾದರಿಯದು. ಗುಂಡಾಗಿಯೊ ಉದ್ದುದ್ದವಾಗಿಯೊ ಇದೆ. ಪೂರ್ಣ ಬೆಳವಣಿಗೆ ಆದಾಗ ಸುಮಾರು 25-50 ಪೌಂ. ತೂಗುತ್ತದೆ. ಹಣ್ಣಿನ ಮೇಲ್ಮೈ ನಯ ಹಾಗೂ ತಿಳಿಹಸಿರು ಅಥವಾ ಕಡುಹಸುರು ಬಣ್ಣದ್ದಾಗಿದೆ. ಕೆಲವು ತಳಿಗಳಲ್ಲಿ ಬಿಳಿಯ ಪಟ್ಟೆಗಳಿರುವುದೂ ಉಂಟು. ತಿರುಳು ರಸಭರಿತ ಹಾಗೂ ಕೆಂಪು ಬಣ್ಣದ್ದು. ಕಪ್ಪು, ಬಿಳಿಯ ಅಥವಾ ಕಂದು ಬಣ್ಣದ ಬೀಜಗಳನ್ನು ಒಳಗೊಂಡಿದೆ. ಜಪಾನಿನಲ್ಲಿ ಬೆಳೆಯಲಾಗುವ ಕಲ್ಲಂಗಡಿ ತಳಿಯೊಂದರಲ್ಲಿ ಬೀಜಗಳೇ ಇರುವುದಿಲ್ಲ.

ಕಲ್ಲಂಗಡಿಯಲ್ಲಿ ಹಲವಾರು ತಳಿಗಳಿವೆ. ಇವುಗಳ ಹಣ್ಣಿನ ಆಕಾರ, ಗಾತ್ರ, ಬಣ್ಣ, ತಿರುಳಿನ ರುಚಿ ಹಾಗೂ ಬಣ್ಣ, ಬೀಜಗಳ ಬಣ್ಣ ಹಾಗೂ ಕಾಯಿಗಳು ಪಕ್ವವಾಗುವ ಕಾಲ-ಇವುಗಳಲ್ಲೆಲ್ಲ ವೈವಿಧ್ಯ ಇದೆ. ಇವುಗಳಲ್ಲಿ ಮುಖ್ಯವಾಗಿ ಷಹಜಾನ್ ಪುರಿ, ಜಾನ್ ಪುರಿ ರೆಡ್, ಫರೂಕಬಾದಿ, ಅಲಹಬಾದಿ ಇತ್ಯಾದಿ ಉತ್ತರ ಭಾರತದ ಸ್ಥಳೀಯ ತಳಿಗಳು ಮತ್ತು ಮೈಸೂರು ರಾಜ್ಯದಲ್ಲಿ ಗೌಡ, ಸೆಲೆಕ್ಷನ್ ನಂ. 1 ಮತ್ತು ಸೆಲೆಕ್ಷನ್ ನಂ. 2 ಮುಂತಾದವು ಹೆಚ್ಚಿನ ಬೇಸಾಯದಲ್ಲಿವೆ. ಹೆಚ್ಚು ಇಳುವರಿ ಕೊಡುವ ಸುಧಾರಿಸಿದ ತಳಿಗಳನ್ನು ಹೊರ ದೇಶಗಳಿಂದ ತರಿಸಲಾಗಿದೆ. ಅವುಗಳ ಪೈಕಿ ಅಷಿಯ ಮಟೊ, ಶುಗರ್ ಬೇಬಿ, ನ್ಯೂ ಹೆಮಿಸ್ಫಿಯರ್ ಮಿಡ್ ಗಟ್ ಮುಂತಾದವು ಮುಖ್ಯವಾದುವು.

ಅಷಿಯಮಟೊ: ಈ ತಳಿಯನ್ನು ಜಪಾನ್ ದೇಶದಿಂದ ತರಿಸಲಾಗಿದೆ. ಇದರ ಹಣ್ಣುಗಳು 6 ರಿಂದ 7 ಕೆ.ಜಿ. ತೂಗುತ್ತವೆ. ಸಿಪ್ಪೆ ತಿಳಿ ಹಸುರು. ಮೇಲು ಭಾಗದಲ್ಲಿ ನಸು ಬಿಳುಪು ಪಟ್ಟೆಗಳಿವೆ. ಒಳತಿರುಳು ಸಿಹಿ ಮತ್ತು ಕೆಂಪು ಬಣ್ಣದ್ದು. ಇದರ ಬೀಜಗಳು ಸಣ್ಣವು.

**ಶುಗರ್ ಬೇಬಿ:** ಈ ತಳಿಯನ್ನು ಉತ್ತರ ಅಮೆರಿಕದಿಂದ ತರಿಸಲಾಗಿದೆ. ಇದರ ಹಣ್ಣಿನ ತೂಕ 4 ರಿಂದ 6 ಕೆ.ಜಿ. ಸಿಪ್ಪೆ ಗಾಜಿನ ಹಸುರು ಬಣ್ಣದ್ದು. ಒಳತಿರುಳು ಕೆಂಪು ಬಣ್ಣದ್ದು, ಸಿಹಿಯಾಗಿದೆ ಮತ್ತು ಬೀಜಗಳು ಸಣ್ಣ.

ನ್ಯೂ ಹೆಮಿಸ್ಫಿಯರ್ ಮಿಡ್ ಗಟ್: ಇದರ ಹಣ್ಣು 1 ರಿಂದ 2 ಕೆ.ಜಿ. ತೂಗುತ್ತವೆ. ಮೇಲ್ಮೈ ಕಡುಹಸುರು ಬಣ್ಣದ್ದು, ತಿರುಳು ಕೆಂಪು ಮತ್ತು ರುಚಿಕರ. ಈ ತಳಿ ವಿಶಾಲವಾಗಿ ಬೆಳೆಯದೆ ಇರುವುದರಿಂದ ಮನೆ ಕೈತೋಟಗಳಲ್ಲಿ ಬೆಳೆಯುವುದಕ್ಕೆ ಯೋಗ್ಯವಾಗಿದೆ.

ಕಲ್ಲಂಗಡಿ ಶುದ್ಧವಾದ ಬೇಸಗೆ ಬೆಳೆ. ಇದರ ಬೇಸಾಯಕ್ಕೆ ಹೆಚ್ಚು ಉಷ್ಣತೆ ಮತ್ತು ಒಣ ಹವಾಗುಣ ಅಗತ್ಯ. ತಂಪಾದ ಹವಾಗುಣದಲ್ಲಿ ಬಿತ್ತಿದ ಬೀಜಗಳ ಮೊಳೆಯುವ ಸಂಖ್ಯೆ ಕಡಿಮೆಯಾಗುತ್ತದೆಯಲ್ಲದೆ ಸಸ್ಯದಲ್ಲಿ ಎಲೆಗಳ ಸಂಖ್ಯೆ ಕಡಿಮೆಯಾಗುವುದರಿಂದ ಇಳುವರಿಯೂ ಕಡಿಮೆ; ಮತ್ತು ರೋಗಗಳಿಗೆ ತುತ್ತಾಗುವ ಸಂಭವವೂ ಹೆಚ್ಚು. ರಭಸವಾದ ಗಾಳಿ ಬೀಸುವಾಗ ಪರಾಗ ವಿತರಣೆಯಾಗದೆ ಫಲ ತೀರ ಕಡಿಮೆಯಾಗುತ್ತದೆ. ಒಣ ಹವಾಗುಣದಲ್ಲಿ ಬೆಳೆದ ಹಣ್ಣು ತಂಪಾದ ಹವಾಗುಣದಲ್ಲಿ ಬೆಳೆದ ಹಣ್ಣಿಗಿಂತ ಸಿಹಿಯಾಗಿರುತ್ತದೆ. ಕಲ್ಲಂಗಡಿಯನ್ನು ಅನೇಕ ವಿಧವಾದ ಮಣ್ಣುಗಳಲ್ಲಿ ಬೆಳೆಸ ಬಹುದಾದರೂ ಮರಳುಗೋಡು ಮತ್ತು ಜೇಡಿಗೋಡು ಮಣ್ಣು ಶ್ರೇಷ್ಠವಾದವು. ಬೇಸಗೆ ಕಾಲದಲ್ಲಿ ಕೆರೆ ಅಂಗಳ ಮತ್ತು ನದಿಯ ದಂಡೆಗಳಲ್ಲಿ ಕಲ್ಲಂಗಡಿ ಬೇಸಾಯ ಮಾಡುವುದು ಸಾಮಾನ್ಯವಾದ ರೂಢಿ. ಈ ರೀತಿ ಬೇಸಾಯ ಮಾಡುವಾಗ ಭೂಮಿಯಲ್ಲಿನ ಜಲಮಟ್ಟವನ್ನು ತಿಳಿಯಬೇಕು. ಜಲಮಟ್ಟ ಮೇಲಿರುವ ಭೂಮಿಯಲ್ಲಿ ಕಲ್ಲಂಗಡಿ ಬೇಸಾಯ ಮಾಡುವಾಗ ಮಣ್ಣನ್ನು ಬೇಕಾದ ಅಂತರದಲ್ಲಿ ಏರು ಹಾಕಿ ಅವುಗಳ ಮೇಲೆ ಕಲ್ಲಂಗಡಿ ಬೇಸಾಯ ಮಾಡಬೇಕು. ಜಲಮಟ್ಟ ಕೆಳಗಿರುವ ಕೆರೆ ಅಂಗಳ ಅಥವಾ ನದಿಯ ದಂಡೆಯಲ್ಲಿ ಕಲ್ಲಂಗಡಿ ಬೇಸಾಯ ಮಾಡುವಾಗ ಸುಮಾರು 1 ಮೀ ಆಳದ ಕಾಲುವೆಗಳನ್ನು ತೆಗೆದು ಬೀಜ ಬಿತ್ತಬೇಕು. ಕಲ್ಲಂಗಡಿಯನ್ನು 5.8ರಿಂದ 8.0 pH ಇರುವ ಮಣ್ಣಿನಲ್ಲಿ ಬೆಳೆಸಬಹುದು. ಆದರೆ 7.2-8.0 pH ಇರುವ ಮಣ್ಣು ಇದರ ಬೇಸಾಯಕ್ಕೆ ಸಮತೂಕವಾದ್ದು. ಇದು ಸ್ವಲ್ಪ ಮಟ್ಟಿಗೆ ಆಮ್ಲತೆಯನ್ನು ಸಹಿಸಬಲ್ಲುದು. ಹೆಚ್ಚು ಆಮ್ಲತೆಯಿರುವ ಮಣ್ಣಿನಲ್ಲಿ ಇದರ ಬೇಸಾಯ ಮಾಡುವಾಗ ಬೀಜ ಬಿತ್ತುವುದಕ್ಕೆ ಆರು ವಾರಗಳ ಮೊದಲು ಸುಣ್ಣವನ್ನು ಹಾಕಬೇಕು.

ಸಾಮಾನ್ಯವಾಗಿ ಕಲ್ಲಂಗಡಿ ಶುದ್ಧ ಬೆಳೆ (ಪ್ಯೂರ್ ಕ್ರಾಪ್). ಆದರೆ ತೋಟಗಳಲ್ಲಿ ಇದರ ಬೇಸಾಯ ಮಾಡುವಾಗ ಬದುಗಳ ಮೇಲೆ ಈರುಳ್ಳಿ ಕೊತ್ತುಂಬರಿ ಮುಂತಾದವುಗಳನ್ನು ಬೆಳೆಸುವುದು ಕೆಲವು ಪ್ರದೇಶಗಳಲ್ಲಿ ರೂಢಿಯಲ್ಲಿದೆ. ನಾನಾ ಪ್ರದೇಶಗಳಲ್ಲಿ ಬತ್ತದೊಂದಿಗೊ ಕಬ್ಬಿನೊಂದಿಗೊ ಕಲ್ಲಂಗಡಿಯನ್ನು ಮಿಶ್ರಬೆಳೆಯಾಗಿ ಬೆಳೆಸುವ ರೂಢಿ ಉಂಟು. ಕಲ್ಲಂಗಡಿ ಬೀಜ ನಾಟಿ ಮಾಡುವಾಗ ಸೊಪ್ಪು ಬೀಜವನ್ನು ಉಪ ಬೆಳೆಯಾಗಿ ಬಿತ್ತಿ ಒಂದು ತಿಂಗಳ ಅನಂತರ ಎಕರೆಗೆ 32 ಕೆಜಿ ಸಾರ ಜನಕ, 20 ಕೆಜಿ ರಂಜಕ ಮತ್ತು 20 ಕೆಜಿ ಪೊಟ್ಯಾಷ್, ಹಾಕಿದರೆ ಉತ್ತಮ.

ಬೀಜ ಬಿತ್ತದ ಸುಮಾರು 1 ತಿಂಗಳಿಗೆ ಹಂಬು ಹರಿಯಲು ಪ್ರಾರಂಭಿಸುತ್ತದೆ. ಆಗ ಮೊದಲ ಸಾರಿ ಕಳೆ ತೆಗೆದು ಸಸ್ಯದ ಬುಡಗಳ ಸುತ್ತಲೂ ಬೇಸಾಯ ಮಾಡಿ, ಮಣ್ಣನ್ನು ಬುಡಕ್ಕೆ ಏರು ಹಾಕಬೇಕು. ಮೊದಲು ಬಿಟ್ಟ ಕಾಯಿಗಳನ್ನು ಸಾಮಾನ್ಯವಾಗಿ ತೆಗೆದುಹಾಕುತ್ತಾರೆ. ಇದರಿಂದ ಅನಂತರ ಬಿಡುವ ಕಾಯಿಗಳು ದಪ್ಪವಾಗುತ್ತವೆ.

ಕಲ್ಲಂಗಡಿ ಬೀಜ ಬಿತ್ತಿದ ಒಂದು ವಾರದಲ್ಲಿ ಮೊಳೆತು ಸುಮಾರು 2 ತಿಂಗಳಿಗೆ ಹೂ ಬಿಟ್ಟು $2^1/_2$ ತಿಂಗಳಿಗೆ ಫಲವನ್ನು ಕೊಡುತ್ತದೆ. ಬಲಿತ ಕಾಯಿಗಳನ್ನು ಕೈಯಿಂದ ಮೃದುವಾಗಿ ತಟ್ಟಿದಾಗ ಒಡೆದ ಮಡಕೆ ಶಬ್ದ ಬರುತ್ತದೆ. ಆಗ ಅವುಗಳ ತೊಟ್ಟನ್ನು ಚಾಕುವಿನಿಂದ ಕೊಯ್ದು ಹಂಬಿಗೆ ನೋವು ತಗಲದಂತೆ ಎಚ್ಚರಿಕೆಯಿಂದ ಪ್ರತ್ಯೇಕಿಸಬೇಕು. ಹಣ್ಣಾದ ಮೇಲೆ, ಬೆರಳಿನಿಂದ ಲಘುವಾಗಿ ಒತ್ತಿದರೆ ಸಿಪ್ಪೆ ಸ್ವಲ್ಪ ತಗ್ಗುತ್ತದೆ ಮತ್ತು ಸಿಪ್ಪೆಯ ಬಣ್ಣ ಬದಲಾಯಿಸುತ್ತದೆ.

ಕಲ್ಲಂಗಡಿಯ ಇಳುವರಿ ತಳಿ ಮತ್ತು ಬೇಸಾಯ ಕ್ರಮವನ್ನು ಅನುಸರಿಸುತ್ತದೆ. ಎಕರೆಗೆ ಸುಮಾರು 4,000 ದಿಂದ 6,000 ಕೆಜಿ ಹಣ್ಣು ಸಿಕ್ಕುತ್ತದೆ. ಬೇಸಾಯದ ಕ್ರಮ ಸರಿಯಾಗಿದ್ದಲ್ಲಿ ಒಂದೊಂದು ಹಂಬಿನಿಂದಲೂ ಸುಮಾರು 25-40 ಕಾಯಿಗಳನ್ನು ಪಡೆಯಬಹುದು.

ಪ್ರಮುಖವಾಗಿ ಇದು ಅತ್ಯಂತ ರುಚಿಯಾದ ಬೇಸಗೆ ಹಣ್ಣೆಂದು ಪ್ರಸಿದ್ಧವಾಗಿದೆ. ಇದರ ರಸ ಬಹಳ ತಂಪುಗೊಳಿಸುವ ಹಾಗೂ ಚೇತೋಹಾರಿಯಾದ ಪಾನೀಯವೆಂದು ಹೆಸರಾಗಿದೆ. ರಾಜಸ್ತಾನದ ಕೆಲವೆಡೆಗಳಲ್ಲಿ ಇದರ ಕಾಯಿಗಳನ್ನು ತರಕಾರಿಯಾಗಿಯೂ ಉಪಯೋಗಿಸುವುದುಂಟು. ಕೆಲವು ಪ್ರದೇಶಗಳಲ್ಲಿ ಸಹಿತಿಂಡಿ ಮಾಡಲೂ ಉಪ್ಪಿನ

ಇಡಿ ಹಾಗೂ ಕೊಯ್ದ ಕಲ್ಲಂಗಡಿ ಹಣ್ಣು

ಕಾಯಿಯಾಗಿಯೂ ಇದನ್ನು ಬಳಸುವ ರೂಢಿಯಿದೆ. ಕಿರ್ಬತ್ ಎಂದು ಕರೆಯಲಾಗುವ ಒಂದು ಸ್ವಾಭಾವಿಕ ತಳಿಯ ಕಲ್ಲಂಗಡಿ ಹಣ್ಣು ಕಹಿರುಚಿಯುಳ್ಳದ್ದು. ಅದು ವಿರೇಚಕ ಗುಣವುಳ್ಳದ್ದು. ಅಮೆರಿಕದಲ್ಲಿ ಬೆಳೆಸುವ ಗಟ್ಟಿತಿರುಳಿನ ಸಿಟ್ರನ್ ಎಂಬ ತಳಿಯ ಹಣ್ಣಿನಿಂದ ಜಾಮ್, ಜೆಲಿ ಮುಂತಾದುವನ್ನು ಮಾಡುತ್ತಾರೆ. ಕಲ್ಲಂಗಡಿಯ ಬೀಜಕ್ಕೆ ತಂಪುಗೊಳಿಸುವ ಮತ್ತು ಮೂತ್ರೋತ್ತೇಜಕ ಗುಣಗಳಿವೆ. ಹಣ್ಣಿನ ರಾಸಾಯನಿಕ ಸಂಯೋಜನೆ ಹೀಗಿದೆ: ತೇವಾಂಶ ಶೇ. 95.7; ಪ್ರೋಟೀನು ಶೇ. 0.2; ಕೊಬ್ಬು ಶೇ.0.2; ಕಾರ್ಬೊಹೈಡ್ರೇಟುಗಳು ಶೇ. 3.3; ಲವಣಾಂಶ ಶೇ. 0.3; ಹಾಗೂ ಪ್ರತಿ 100 ಗ್ರಾಂ ಹಣ್ಣಿಗೆ 11 ಮಿ.ಗ್ರಾಂ ಕ್ಯಾಲಿಯಂ, 12 ಮಿ.ಗ್ರಾಂ. ರಂಜಕ, 7.9 ಮಿ.ಗ್ರಾಂ. ಕಬ್ಬಿಣ. 42 ಮಿ.ಗ್ರಾಂ ಗಂಧಕ ಇತ್ಯಾದಿ ಮತ್ತು 0.16 ಮಿ.ಗ್ರಾಂ ವಿಟಮಿನ್ ಬಿ ಹಾಗೂ 1 ಮಿ.ಗ್ರಾಂ ವಿಟಮಿನ್ ಸಿ.

ಕಲ್ಲಂಗಡಿಗೆ ಫ್ಯೂಸೇರಿಯಮ್ ಆಕ್ಸಿಸ್ಪೋರಮ್ ಎಂಬ ಬೂಷ್ಟು ತಗುಲಿ ಸೊರಗು ರೋಗವನ್ನು (ವಿಲ್ಟ್) ಉಂಟುಮಾಡುತ್ತದೆ. ಹಂಬಿನ ತುದಿಗಳು ಬಾಡಿ ಕಾಂಡ ಕಂದುಬಣ್ಣಕ್ಕೆ ತಿರುಗುವುದು ಈ ರೋಗದ ಮುಖ್ಯಲಕ್ಷಣ. ಇದರಿಂದಾಗಿ ಇಳುವರಿ ಕಡಿಮೆಯಾಗುತ್ತದೆ. ರೋಗನಿರೋಧಕ ತಳಿಗಳನ್ನು ಬೆಳೆಸುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ಇದಲ್ಲದೆ ಹಲವಾರು ಬಗೆಯ ಜೀರುಂಡೆಗಳು, ಕತ್ತರಿ ಹುಳುಗಳು, ತಿಗಣೆಗಳು ಮತ್ತು ಉಣ್ಣಿಗಳೂ ಕಲ್ಲಂಗಡಿಗೆ ತಗುಲಿ ನಷ್ಟವನ್ನುಂಟುಮಾಡಬಲ್ಲವು. (ಡಿ.ಎಂ.; ಎಸ್.ಕೆ.ಟಿ.; ಟಿ.ಎನ್.ಎಸ್.)

**ಕಲ್ಲಟ ಭಟ್ಟ :** 9ನೆಯ ಶತಮಾನದ ಆದಿಭಾಗದಲ್ಲಿದ್ದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ. ಈತ ಕಾಶ್ಮೀರರಾಜ ಅವಂತಿವರ್ಮನ (855–883) ಕಾಲದಲ್ಲಿದ್ದನೆಂದು ರಾಜತರಂಗಿಣಿ ಗ್ರಂಥದಿಂದ ತಿಳಿದುಬರುತ್ತದೆ. ಅಲ್ಲಿ ಈತನನ್ನು ಸಿದ್ಧನೆಂದು ಕರೆಯಲಾಗಿದೆ. ಶೈವಕ್ಕೆ ಮೂಲವಾದ ಶಿವಸೂತ್ರಗಳನ್ನು ಉದ್ಧರಿಸಿ ಶೈವಮತವನ್ನು ಕಾಶ್ಮೀರದಲ್ಲಿ ಪುನರುತ್ಥಾನಗೊಳಿಸಿದ ವಸುಗುಪ್ತನಿಗೆ ಮುಖ್ಯ ಶಿಷ್ಯನಾದ ಈತ ಶಿವಸೂತ್ರಗಳಲ್ಲಿರುವ ಗುಪ್ತ ತತ್ತ್ವಗಳನ್ನು ವಿವರಿಸಿ 51 ಶ್ಲೋಕಗಳಲ್ಲಿ ಸ್ಪಂದಕಾರಿಕೆ ಎಂಬ ಗ್ರಂಥವನ್ನು ಬರೆದು ಸೂತ್ರಾರ್ಥಗಳನ್ನು ಪ್ರಚಾರಮಾಡಿದ್ದಲ್ಲದೆ ಸ್ಪಂದಕಾರಿಕೆಗೆ ಸ್ಪಂದಸರ್ವಸ್ವ ಎಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಈತನ ಸ್ಪಂದವೃತ್ತಿಗಳನ್ನು ಸ್ಪಂದಾಮೃತದ ನಿಷ್ಯಂದ (ಪ್ರವಾಹ) ಗಳೆಂದು ಹೊಗಳಿದ್ದಾರೆ. ಇಷ್ಟೇ ಅಲ್ಲದೆ ಶಿವಸೂತ್ರಗಳನ್ನು ವಿವರಿಸಿ ತತ್ತ್ವಾರ್ಥಚಿಂತಾಮಣಿ ಮತ್ತು ಮಧುವಾಹಿನಿ ಎಂಬ ಗ್ರಂಥಗಳನ್ನು ಈತ ರಚಿಸಿದ್ದಾನೆ. (ಜೆ.ಆರ್.)

**ಕಲ್ಲನ್ನು ತೆಗೆಯುವುದು :** ಭೂಗರ್ಭದಿಂದ ಕಲ್ಲನ್ನು ತೆಗೆಯುವ ಕಲೆ (ಸ್ಟೋನ್ ಕ್ವಾರಿಯಿಂಗ್). ಹಿಂದೆ ಕಲ್ಲನ್ನು ತೆಗೆಯುತ್ತಿದ್ದ ಒರಟಾದ ಕ್ರಮಗಳು ಹೋಗಿ ಈಗ ದಕ್ಷವಾದ ಯಾಂತ್ರಿಕ ವಿಧಾನಗಳು ಬಂದಿವೆ. ವ್ಯಾಪಾರಕ್ಕಾಗಿ ತೆಗೆಯುವ ಕಲ್ಲುಗಳು: 1 ಅಗ್ನಿಜನ್ಯ, 2 ಜಲಜ, 3 ಪರಿವರ್ತಿತ–ಈ ವರ್ಗಗಳಿಗೆ ಸೇರಿವೆ. ಮೊದಲನೆಯ ವರ್ಗದಲ್ಲಿ ಗ್ರಾನೈಟ್ ಮುಖ್ಯವಾದದ್ದು. ಎರಡನೆಯ ವರ್ಗದಲ್ಲಿ ಸುಣ್ಣಕಲ್ಲುಗಳು, ಮರಳುಕಲ್ಲುಗಳು, ಷೇಲುಗಳು ಸೇರಿವೆ. ಇವು ಪದರ ಪದರವಾಗಿರುತ್ತವೆ. ಮೂರನೆಯ ವರ್ಗದಲ್ಲಿ ಮೊದಲ ಎರಡು ವರ್ಗಗಳ ಕಲ್ಲುಗಳು ಪರ್ವತಗಳ ಸೃಷ್ಟಿಯಲ್ಲಿ ಪ್ರಚಂಡವಾದ ಒತ್ತಡಕ್ಕೆ ಸಿಕ್ಕಿ ಮಾರ್ಪಾಡಾಗಿರುತ್ತವೆ.

ಕಲ್ಲಿನ ಕೈಗಾರಿಕೆಯಲ್ಲಿ ಮುಖ್ಯವಾಗಿ ತೆಗೆಯುವ ಕಲ್ಲುಗಳು: 1 ಕಮಾನಿನ ಕಲ್ಲುಗಳು, 2 ಕಟ್ಟಡದ ಕಲ್ಲುಗಳು, 3 ಕಲ್ಲಿನ ಜಲ್ಲಿ. ನೆಲದ ಮೇಲಿರುವ ಗಟ್ಟಿಯಾದ ಗ್ರಾನೈಟಿನ ಬಂಡೆಗಳನ್ನು ಅವುಗಳಿಂದ ಅಲ್ಲಲ್ಲಿ ಸಣ್ಣ ಕುಳಿಗಳನ್ನು ಮಾಡಿ ಸುತ್ತಿಗೆಗಳಿಂದ ಹೊಡೆದು ಸೀಳಿ ದಿಮ್ಮಿಗಳನ್ನು ತೆಗೆಯುತ್ತಾರೆ. ದಿಮ್ಮಿಗಳನ್ನು ಕಮಾನಿನ ಕಲ್ಲಿನ ಅಳತೆಗಿಂತ ಕೊಂಚ ದೊಡ್ಡದಾಗಿ ಸೀಳಿ ಬೇಕಾದ ಆಕಾರಕ್ಕೆ ಮತ್ತು ಅಳತೆಗೆ ಉಳಿಗಳಿಂದ ನಯವಾಗಿ ಮಾಡುತ್ತಾರೆ.

ಕಟ್ಟಡಗಳನ್ನು ಕಟ್ಟುವ ಅಳತೆಗಲ್ಲುಗಳನ್ನು ಈಗಲೂ ಅಂದವಾದ ಹೊರಮುಖವುಳ್ಳ ದೊಡ್ಡ ಮನೆಗಳನ್ನು, ಕಚೇರಿಗಳನ್ನು ನಿರ್ಮಿಸಲು (ಒಳ್ಳೆಯ ಕಲ್ಲು ಸಿಕ್ಕುವ ಕಡೆಗಳಲ್ಲಿ) ಬಳಸುತ್ತಿದ್ದಾರೆ. ಎಲ್ಲ ಬಂಡೆಗಳಿಂದಲೂ ಲಕ್ಷಣವಾದ ಅಳತೆಗಳನ್ನು ತೆಗೆಯಲಾಗುವುದಿಲ್ಲ. ಬಣ್ಣದಲ್ಲಿಯೂ ಕಣಗಳ ಗಾತ್ರದಲ್ಲಿಯೂ ಕಲ್ಲು ಏಕರೀತಿಯದಾಗಿರಬೇಕು. ಎಲ್ಲ ಕಲ್ಲುಗಳಲ್ಲಿಯೂ ಸಂಧಿಗಳಿರುತ್ತವೆ (ಜಾಯಿಂಟ್ಸ್). ಇವು ತೀರ ಹತ್ತಿರವಾಗಿದ್ದರೆ ದೊಡ್ಡ ಕಲ್ಲುಗಳನ್ನು ಸೀಳುವುದಕ್ಕಾಗುವುದಿಲ್ಲ.

ಕಲ್ಲನ್ನು ಸೀಳಲು ಅನುಕೂಲವಾದ ಬಂಡೆ ದೊರೆತಮೇಲೆ ಮೇಲಿನ ಮಣ್ಣನ್ನು ತೊಡಿ ತೆಗೆದು ಕಲ್ಲು ಹೊರಕ್ಕೆ ಕಾಣುವ ಹಾಗೆ ಮಾಡಬೇಕು. ಈ ಕೆಲಸದಲ್ಲಿ ಡೈನಮೇಟಿನಂಥ ಸ್ಫೋಟಕಗಳಿಂದ ಪ್ರಯೋಜನವಿಲ್ಲ. ಅವಶ್ಯವಾದ ಕಡೆ ಕರಿಯ ಮದ್ದನ್ನು ಉಪಯೋಗಿಸಿ ದಿಂಡುಗಳನ್ನು ಒಡೆದು ಅವನ್ನು ಸೀಳಿ ಅಳತೆಗಲ್ಲುಗಳನ್ನು ತೆಗೆಯಬೇಕು. ಸಾಮಾನ್ಯವಾಗಿ ಕರಿಯ ಮದ್ದನ್ನೂ ಬಳಸದೆ ಬಂಡೆಯ ಒಂದು ಮುಖವನ್ನು 3'–4' ಆಳದ ವರೆಗೂ ಅಂಚಿನಿಂದ ಸುಮಾರು 3' ದೂರದಲ್ಲಿ ಹತ್ತಿರ ಹತ್ತಿರವಾಗಿ ಕುಳಿಗಳನ್ನು ಹಾಕಿ ಮಧ್ಯದ ದಿಂಡನ್ನು ಅವುಗಳಿಂದ ಸೀಳುತ್ತಾರೆ. ಆಮೇಲೆ ಬೇಕಾದ ಅಳತೆಗೆ ಕಲ್ಲುಗಳನ್ನು ತೆಗೆಯುತ್ತಾರೆ.

ಕೈಯಿಂದ ಕೆಲಸಮಾಡುವಾಗ ದಿಮ್ಮಿಗಳು ಚಿಕ್ಕದಾಗಿರುತ್ತವೆ. ಯಂತ್ರಗಳನ್ನು ಉಪಯೋಗಿಸಿದಾಗ ದೊಡ್ಡ ಆಳತೆಯ ದಿಮ್ಮಿಗಳನ್ನು ತೆಗೆದು ಆಮೇಲೆ ಒತ್ತಡದ ಗಾಳಿಯಿಂದ ಕುಳಿಗಳನ್ನು ತೋಡಿ ಬೇಕಾದ ಅಳತೆಗೆ ಅವುಗಳಿಂದ ಗುರುತುಮಾಡಿ ಸೀಳಿಕೊಳ್ಳುತ್ತಾರೆ. ದಿಂಡುಗಳನ್ನು ಲಾರಿಗಳ ಮೇಲೆ ಕೆಲಸದ ಹತ್ತಿರಕ್ಕೆ ಸಾಗಿಸಿ ಇಷ್ಟವಾದ ಅಳತೆಯಲ್ಲಿ, ರೀತಿಯಲ್ಲಿ, ನಯವಾಗಿ ಮಾಡುತ್ತಾರೆ. ಗುಂಡಾದ ಕಂಬಗಳನ್ನು ಚರಿಕೆಯ ಯಂತ್ರದಿಂದ ತಯಾರಿಸಬಹುದು. ಚಪ್ಪಡಿಗಳನ್ನು ಉಜ್ಜಿ ಯಾವ ನಯಕ್ಕೆ ಬೇಕಾದರೂ ಇಳಿಸಿಕೊಳ್ಳಬಹುದು.

ಹಿಂದೆ ಕಡಪದ ಕಲ್ಲುಗಳನ್ನು ಮಾಡು, ನೆಲ, ಮಹಡಿಯ ಮೆಟ್ಟಿಲು–ಇವುಗಳಿಗೆ ಧಾರಾಳವಾಗಿ ಬಳಸುತ್ತಿದ್ದರು. ಭದ್ರಕಾಂಕ್ರೀಟು ಬಂದಮೇಲೆ ಇವನ್ನು ಮಾಡಿಗೆ ಬಳಸುವುದು ನಿಂತುಹೋಗಿದೆ. ನೆಲಕ್ಕೆ ಸಿಮೆಂಟ್ ಕಾಂಕ್ರೀಟನ್ನೂ ಅನೇಕ ಮಾದರಿಗಳ ನೆಲದ ಹಂಚುಗಳನ್ನೂ ಉಪಯೋಗಿಸುತ್ತಾರೆ. ಗಾಳಿ ಮಳೆಗಳಿಗೆ ಒಡ್ಡಿದಾಗ ಕಲ್ಲು ಶಿಥಿಲವಾಗುತ್ತದೆ. ಇಲ್ಲವೆ ಬಣ್ಣ ಕೆಡುತ್ತದೆ. ಆದರೆ ಕಲ್ಲಿನ ಗುಣ ಶ್ರೇಷ್ಠವಾಗಿದ್ದರೆ ಅದು ಮಾಸುವುದಿಲ್ಲ. ಹಿಂದೆ ಭಾರತದಲ್ಲಿ ಗ್ರಾನೈಟ್ ಕಲ್ಲಿನಿಂದಲೂ ಬಳಪದ ಕಲ್ಲಿನಿಂದಲೂ ದೇವಾಲಯಗಳಲ್ಲಿ ಕೊರೆದಿರುವ ವಿಗ್ರಹಗಳೂ ಕಂಬಗಳೂ ಸಾವಿರಾರು ವರ್ಷಗಳ ಮೇಲೂ ಕೆಡದೆ ಇರುವುದನ್ನು ಈಗಲೂ ನಾವು ನೋಡುತ್ತಿದ್ದೇವೆ.

ಕಟ್ಟಡದ ಕಲ್ಲು ಕೆಡಲು ಮುಖ್ಯವಾದ ಕಾರಣಗಳು ಇವು: 1 ನೀರು ಗಡ್ಡೆಕಟ್ಟುವಷ್ಟು ಶೈತ್ಯ, ಇಲ್ಲವೆ ಘನೀಭವಿಸಿದ ಮಂಜು. ಈ ಸ್ಥಿತಿಯಲ್ಲಿ ಕಲ್ಲಿನ ಸಂದುಗಳಲ್ಲಿ ಸಿಕ್ಕಿಕೊಂಡ ನೀರು ಗಡ್ಡೆಕಟ್ಟಿದಾಗ ವಿಸ್ತಾರವಾಗಿ ಕಲ್ಲಿನ ಕಣಗಳನ್ನು ಸಡಲಿಸುತ್ತದೆ. 2 ಮರಳುಗಲ್ಲಿನಲ್ಲಿ ಗಟ್ಟಿಯಾದ ಸಿಲಿಕದ ಕಣಗಳನ್ನು ಬಿಗಿದಿರುವ ಅಂಟಿನ ಸಾಮಗ್ರಿ ಬಲಿಷ್ಠವಾಗಿಲ್ಲದೆ ಇರುವಾಗ ಕಲ್ಲಿನ ರಚನೆಯೇ ಶಿಥಿಲವಾಗಬಹುದು. 3 ಮಳೆಯಲ್ಲಿಯೂ ಗಾಳಿಯಲ್ಲಿರುವ ತೇವದಲ್ಲಿಯೂ ಗಂಧಕದ ಆಮ್ಲಗಳು ಕೊಂಚ ಇರುತ್ತವೆ. ಅವು ಸುಣ್ಣಕಲ್ಲಿನಲ್ಲಿರುವ ಕ್ಯಾಲ್ಸಿಯಂ ಕಾರ್ಬೊನೇಟನ್ನು ಬಹಳ ನಿಧಾನವಾಗಿ ಕೊರೆಯುತ್ತವೆ. 4 ದೂಳು ಮತ್ತು ಮರಳನ್ನು ಹೊತ್ತುತರುವ ಗಾಳಿಯೂ ಒಂದು ಕಾರಣ. ಮರಳು ಗಾಳಿ ಹೆಚ್ಚಾದ ಈಜಿಪ್ಟಿನಲ್ಲಿರುವ ಸ್ಫಿಂಕ್ಸ್ ವಿಗ್ರಹ ಈ ರೀತಿಯಲ್ಲಿ ಸ್ವಲ್ಪ ಸವೆದು ಹೋಗಿದೆ. 5 ಭಾರತದ ಹಳೆಯ ದೇವಸ್ಥಾನಗಳಲ್ಲಿ, ಕಲ್ಲಿನ ಗೋಪುರದ ಸಂದುಗಳಲ್ಲಿ ಹಕ್ಕಿಗಳು ಬೀಳಿಸಿದ ಬೀಜಗಳಿಂದ ಮಳೆಗಾಲದಲ್ಲಿ ಹುಟ್ಟುವ ಗಿಡಗಳಿಂದಲೂ ಪಾಚಿಯಿಂದಲೂ ಕಲ್ಲುಹೂವಿನಿಂದಲೂ ಹೆಚ್ಚಿನ ಘಾಸಿ ಉಂಟಾಗುತ್ತದೆ. ಕಟ್ಟಡಗಳನ್ನು ನೋಡಿಕೊಳ್ಳುವ ಸಿಬ್ಬಂದಿಯಿರುವ ಕಡೆ ಇವನ್ನು ತೆಗೆಯಬಹುದು. ಆದರೆ ಮೂಲೆಯಲ್ಲಿರುವ ಕಲಾಕೃತಿಗಳೆಷ್ಟೋ ಈ ಕಾರಣದಿಂದ ಉರುಳಿಹೋಗಿವೆ.

ಒಂದೇ ಸಮವಾಗಿ ಶತಮಾನಗಳಿಂದ ಬಿಸಿಲನ್ನೂ ಗಾಳಿಯನ್ನೂ ಎದುರಿಸಿ ನಿಂತಿರುವ ಶ್ರವಣಬೆಳಗೊಳದ ಗೋಮಟೇಶ್ವರ ವಿಗ್ರಹದಲ್ಲಿ ಕೆಲವು ಕಡೆ ಬಹಳ ತೆಳುವಾದ ಪದರಗಳು ಹೊರಬರುತ್ತಿವೆ. ಅದಕ್ಕೆ ಬಣ್ಣವನ್ನು ಬಳಿಯುವ ಹಾಗಿಲ್ಲ. ಸೋಡಿಯಮ್ ಸಿಲಿಕೇಟ್ ಇರುವ ರಾಸಾಯನಿಕಗಳನ್ನು ಬಳಿದಾಗ ಅದು ಸುಣ್ಣದೊಂದಿಗೆ ಸೇರಿ ನೀರಿನಲ್ಲಿ ಕರಗದೆ ಇರುವ ಕ್ಯಾಲ್ಸಿಯಂ ಸಿಲಿಕೇಟ್ ಆಗಿ ಸಣ್ಣ ರಂಧ್ರಗಳನ್ನೂ ಪದರಗಳನ್ನೂ ತುಂಬುತ್ತದೆ.

ಬಂಡೆಯಿಂದ ಹೊಸದಾಗಿ ತೆಗೆದ ಮರಳುಕಲ್ಲಿನ ಒಳಗಡೆ ಕೊಂಚ ತೇವವಿರುತ್ತದೆ. ಅದಕ್ಕಾಗಿ ಎರಡು ಬೇಸಗೆಗಳಲ್ಲಿ ಕಲ್ಲನ್ನು ಮಾಗುವುದಕ್ಕೆ ಬಿಟ್ಟು ಅನಂತರ ನಯವಾದ ಕೆಲಸಗಳಿಗೆ ಉಪಯೋಗಿಸಬೇಕು.

**ಕಲ್ಲಿನ ಜಲ್ಲಿ:** ಹಿಂದೆ ಕಲ್ಲಿನ ಜಲ್ಲಿಯನ್ನು ಮ್ಯಾಕಡಮ್ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೂ ತಳಪಾಯದಲ್ಲಿ ಸುಣ್ಣದ ಗಾರೆಯೊಂದಿಗೆ ಬೆರೆಸಿ ಸುಣ್ಣದ ಕಾಂಕ್ರೀಟನ್ನು ತಯಾರಿಸುವುದಕ್ಕೂ ಉಪಯೋಗಿಸುತ್ತಿದ್ದರು. ಈಗ ಕಟ್ಟಡಗಳ ನಿರ್ಮಾಣದಲ್ಲಿಯೂ ಭದ್ರಕಾಂಕ್ರೀಟಿನ ತೊಲೆ, ಮಾಡು ಮುಂತಾದುವುಗಳಲ್ಲಿಯೂ ಆಧುನಿಕ ಜಲಾಶಯ ಕಟ್ಟೆಗಳಲ್ಲಿಯೂ ಜಲ್ಲಿಯ ಉಪಯೋಗ ವಿಶೇಷವಾಗಿದೆ. ಅದನ್ನು ಒಡೆಯುವುದಕ್ಕಾಗಿ ವಿಶಿಷ್ಟವಾದ ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆ.

ಭಾರತದಲ್ಲಿ ರಾಷ್ಟ್ರೀಯ ಹೆದ್ದಾರಿಗಳಿಗೂ ಇತರ ಮುಖ್ಯವಾದ ರಸ್ತೆಗಳಿಗೂ ನಗರಗಳೊಳಗಿನ ಕೆಲವು ರಸ್ತೆಗಳಿಗೂ ಸಿಮೆಂಟ್ ಕಾಂಕ್ರೀಟನ್ನು ಉಪಯೋಗಿಸುತ್ತಿದ್ದಾರೆ. ಇದಕ್ಕಾಗಿ ಸಣ್ಣಜಲ್ಲಿಯ ಬಳಕೆ ಹೆಚ್ಚಾಗುತ್ತಿದೆ. ಟಾರ್, ಮ್ಯಾಕಡಮ್ ರಸ್ತೆಗಳಿಗೆ ಎರಡು ಅಳತೆಯ ಜಲ್ಲಿ ಬೇಕಾಗುತ್ತದೆ.

ಪೂರ್ವದಲ್ಲಿ ಕೃಷ್ಣರಾಜಸಾಗರ, ಮೆಟ್ಟೂರು ಜಲಾಶಯ, ತುಂಗಭದ್ರಾ ಜಲಾಶಯ ಮೊದಲಾದ ನೀರಾವರಿಯ ಕಟ್ಟೆಗಳನ್ನು ಕಲ್ಲುಗಾರೆಯಿಂದ ಕಟ್ಟಿದ್ದಾರೆ. ಮಹಾನದಿಯ ಮೇಲಿನ ಹೀರಾಕೂಡ್ ಕಟ್ಟೆಯಲ್ಲಿ ಮಣ್ಣಿನ ಏರಿ ಕಲ್ಲುಗಾರೆಯ ಕಟ್ಟೆ, ಇವುಗಳ ಜೊತೆಗೆ ಮೇಲೆ ನೀರು ಹರಿಯುವ ಕೋಡಿಯನ್ನು ಸಿಮೆಂಟ್ ಕಾಂಕ್ರೀಟಿನಿಂದ ಕಟ್ಟಿದ್ದಾರೆ. ಈ ಕಟ್ಟೆಗಳಲ್ಲೆಲ್ಲ ಕಲ್ಲು ದೊಡ್ಡ ಪ್ರಮಾಣದಲ್ಲಿ ಬಳಕೆಯಾಗಿದೆ.

ಸಂಪೂರ್ಣವಾಗಿ ಸಿಮೆಂಟ್ ಕಾಂಕ್ರೀಟಿನಿಂದ ಕಟ್ಟುವ ಕಟ್ಟೆಗಳಲ್ಲಿ ಉಪಯೋಗಿಸುವ ಕಾಂಕ್ರೀಟಿಗೆ ಒಂದೇ ಆಳತೆಯ ಜಲ್ಲಿಯನ್ನು ಬಳಸಿದರೆ ಕಾಂಕ್ರೀಟ್ ಮಂದವಾಗುವುದಿಲ್ಲವೆಂದು ಪ್ರಯೋಗಗಳಿಂದ ಗೊತ್ತಾಗಿದೆ. ಅದರ ಒತ್ತಡದ ಬಲವೂ ಸಾಕಷ್ಟು ಹೆಚ್ಚಾಗುವುದಿಲ್ಲ. ಬಿಹಾರಿನಲ್ಲಿ ಶೋಣಾನದಿಯ ಉಪನದಿಯಾದ ರೈಹ್ಯಾಂಡ್ ನದಿಗೆ ಅಡ್ಡಲಾಗಿ ವಿದ್ಯುದುತ್ಪಾದನೆಗಾಗಿ ಕಟ್ಟಿದ ಕಟ್ಟೆಯಲ್ಲಿ 6 ಅಳತೆಗಳಲ್ಲಿ ಜಲ್ಲಿಯನ್ನು ಒಡೆದು ಮರಳು ಮತ್ತು ಸಿಮೆಂಟನೊಂದಿಗೆ ಬೆರೆಸಿ ಕಾಂಕ್ರೀಟನ್ನು ತಯಾರಿಸಿದ್ದಾರೆ.1. 6"–3", 2. 3"–1 1/2", 3. 1 1/2"–3/4", 4. 3/4"–3/8", 5. 3/8"–3/16", 6. 3/16" ಕ್ಕಿಂತ ಸಣ್ಣದು–ಈಮಿಶ್ರ ಜಲ್ಲಿಯಿಂದ ತಯಾರಿಸಿದ ಕಾಂಕ್ರೀಟಿನ ಬಲ ಒತ್ತಡದಲ್ಲಿ ಚದರ ಅಂಗುಲಕ್ಕೆ 2,500 ಪೌಂಡುಗಳು.

ಪೂರ್ವ ಪಂಜಾಬಿನಲ್ಲಿ ಶತದ್ರುನದಿಗೆ ಅಡ್ಡಲಾಗಿರುವ 760' ಎತ್ತರದ ಭಾಕ್ರ ಕಟ್ಟೆಯಲ್ಲಿ ಜಲ್ಲಿಯನ್ನು 4 ಅಳತೆಗಳಲ್ಲಿ ಒಡೆದಿದ್ದಾರೆ. 1. 7"–3", ಶೇ. 25, 2. 3"–1 1/2", ಶೇ. 19, 3. 1 1/2"–3/4", ಶೇ. 17, 4.3/4", ಶೇ. 14, ಉಳಿದ ಶೇ. 25 ಮರಳು.

ಹೀಗೆ ಈ ಕಾಲದಲ್ಲಿ ಕಲ್ಲಿನ ಉಪಯೋಗ ನಿರ್ಮಾಣ ಕಾಮಗಾರಿಯಲ್ಲಿ ಶಿಲ್ಪದಲ್ಲಿ ಅನೇಕ ರೂಪಗಳನ್ನು ತಾಳಿದೆ. (ಎಚ್.ಸಿ.ಕೆ.)

**ಕಲ್ಲರ್, ಜಾನ್ :** 1793–1852. ಸ್ಲೊವಾಕ್ ಕವಿ. ಮತಶಾಸ್ತ್ರವನ್ನು ಅಭ್ಯಾಸ ಮಾಡಿದ. ಜೀನ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದುದರಿಂದ (1817–19) ಜರ್ಮನಿಯ ರಾಷ್ಟ್ರೀಯ ಐಕ್ಯತೆಯ ಚಳವಳಿ ಮತ್ತು ಜರ್ಮನಿಯ ಆದರ್ಶ ವಿಚಾರಸರಣಿ ಇವನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದುವು. 1819ರಲ್ಲಿ ಜರ್ಮನಿಯನ್ನು ಬಿಟ್ಟ. ತಾನು ಪ್ರೇಮಿಸಿದ ಜರ್ಮನ್ ಹುಡುಗಿಯೊಬ್ಬಳನ್ನು ಮದುವೆಯಾಗಲು ಸಾಧ್ಯವಾಗಲಿಲ್ಲ. ಆಕೆ ಜರ್ಮನಿಯಲ್ಲೇ ಉಳಿದಳು. ಆಕೆಯನ್ನು ಕಲ್ಲರ್ ತನ್ನ ಸುನೀತಗಳಲ್ಲಿ ಮೀನ ಎಂದು ಹೆಸರಿಟ್ಟು ವರ್ಣಿಸಿ ಹೊಗಳಿದ್ದಾನೆ. ಕೆಲಕಾಲ ಅರ್ಚಕನಾಗಿ ಕಲ್ಲರ್ ಧಾರ್ಮಿಕ ಸೇವೆ ಮಾಡಿದ. 1835ರಲ್ಲಿ ಮೀನಳನ್ನು ಮದುವೆಯಾದ. ಅನಂತರ (1849) ವಿಯನ್ನಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ದುಡಿದ.

ಇವನ ಮುಖ್ಯಕೃತಿ ಸ್ಲಾವದ ಕುವರಿ. ಚೆಕ್ ಭಾಷೆಯಲ್ಲಿರುವ ಈ ಸಂಕಲನ ಮೊದಲು ಪ್ರಕಟವಾದಾಗ ಒಂದುನೂರ ಐವತ್ತೊಂದು ಸುನೀತಗಳನ್ನೂ ಎಲಿಜೆಯಿಕ್ಸ್ ನಲ್ಲಿನ ಪ್ರವೇಶಭಾಗವನ್ನೂ ಒಳಗೊಂಡಿತ್ತು. ಕಲ್ಲರನ ಕಾಲದಲ್ಲಾಗಲಿ ಹಿಂದಾಗಲಿ ಸ್ಲಾವರಿಗೆ ಸೇರಿದ ನಾಡುಗಳ ಯಾತ್ರೆಯ ವರ್ಣನೆಯಿದು. ಕವಿಗೆ ಮೀನಳಲ್ಲಿರುವ ಪ್ರೇಮ, ಸ್ಲಾವ್ ಜನಾಂಗದಲ್ಲಿರುವ ಅಭಿಮಾನ–ಎರಡೂ ಸಂಗಮವಾಗಿ ಈ ಕೃತಿಯಲ್ಲಿ ಸುಂದರ ಅಭಿವ್ಯಕ್ತಿ ಪಡೆದಿವೆ. ಸ್ಲಾವ್ ಜನಾಂಗದ ಗತವೈಭವ, ಕರುಣಾಜನಕ ವರ್ತಮಾನಗಳನ್ನು ಕವಿ ಹೃದಯಸ್ಪರ್ಶಿಯಾಗಿ ಚಿತ್ರಿಸುತ್ತಾನೆ; ಉಜ್ಜ್ವಲ ಭವಿಷ್ಯವನ್ನು ನಿರ್ಮಿಸಲು ಸ್ಫೂರ್ತಿ ನೀಡುತ್ತಾನೆ. ಅನಂತರದ ಆವೃತ್ತಿಗಳಲ್ಲಿ ನೀತಿ ಬೋಧಕ ಸುನೀತಗಳನ್ನೂ ಡಾಂಟೆಯ ಮಹಾಕಾವ್ಯದಲ್ಲಿರುವಂತೆ ಸ್ವರ್ಗನರಕಗಳನ್ನು ವರ್ಣಿಸುವ ಎರಡು ಭಾಗಗಳನ್ನೂ ಕವಿ ಸೇರಿಸಿದ್ದಾನೆ. (ಎಲ್.ಎಸ್.ಎಸ್.)

**ಕಲ್ಬಾಗಿ :** ಲೆಗ್ಯುಮಿನೋಸೀ ಕುಟುಂಬದ ಮಿಮೋಸೀ ಉಪಕುಟುಂಬಕ್ಕೆ ಸೇರಿದ ಆಲ್ಬಿಜಿಯ ಚೈನೆನ್ಸಿಸ್ ಎಂಬ ಹೆಸರಿನ ಕಾಲಕಾಲಕ್ಕೆ ಉದುರಿ ಹೋಗುವ ಎಲೆಗಳನ್ನು ಪಡೆದ ಅಗಲವಾಗಿ ಹರಡುವ ತುದಿಯುಳ್ಳ ದೊಡ್ಡ ಮರ. ಹೊಟ್ಟೆ ಬಾಗೆ ಪರ್ಯಾಯನಾಮ. ಸಾಧಾರಣವಾಗಿ 30" ಎತ್ತರ ಹಾಗೂ 8" ವ್ಯಾಸವುಳ್ಳ ಸ್ತಂಭಾಕಾರದ ಕಾಂಡವಿದೆ. ಈ ಮರ ಹಿಮಾಲಯದ ತಪ್ಪಲಿನ ಪ್ರದೇಶಗಳಲ್ಲಿ 4,000" ಎತ್ತರದವರೆಗೂ ಕಂಡುಬರುತ್ತದೆ. ಹಾಗೆಯೇ ಬಂಗಾಳ, ಅಸ್ಸಾಂ, ದಕ್ಷಿಣ ಭಾರತದ, ಅಂಡಮಾನ್, ನಿಕೋಬಾರ್ ದ್ವೀಪಗಳು, ಮಯನ್ಮಾರ್, ಶ್ರೀಲಂಕಗಳಲ್ಲೂ ಸಾಮಾನ್ಯವಾಗಿದೆ. ಕಾಫಿ ಮತ್ತು ಟೀ ತೋಟಗಳಲ್ಲಿ ಇದನ್ನು ಒಂದು ಅತ್ಯುತ್ತಮ ನೆರಳಿನ ಮರವಾಗಿ ಬೆಳೆಸುತ್ತಾರೆ. ಬಹುಶಃ ಇದರ ಒಣ ಎಲೆಗಳು ಟೀ ಗಿಡಗಳಿಗೆ ಬಹಳ ಉತ್ತಮ ಗೊಬ್ಬರವೂ ಹೌದು.

ಇದರ ಚೌಬೀನೆ ಇತರ ಆಲ್ಬಿಜಿಯಗಳಂತೆಯೆ ಇದ್ದರೂ ಬಣ್ಣದಲ್ಲಿ ಹೆಚ್ಚು ಗಾಢವಾದುದೂ ಒಳ್ಳೆಯ ಹೊಳಪಿನಿಂದ ಕೂಡಿದುದೂ ಮೃದುವಾದುದೂ ಆಗಿದೆ. ಇದರ ಒಣಭಾರ ಘನ ಅಡಿಗೆ ಸು. 22–46 ಪೌಂ. ಆದರೆ ಇದು ಬೇಗನೆ ಕೀಟಗಳ ಆಕ್ರಮಣಕ್ಕೆ ಗುರಿಯಾಗುತ್ತದೆ. ಆದರೂ ಪೆಟ್ಟಿಗೆ, ಹಲಗೆ, ತೋಡು ದೋಣಿ, ಬಾವಿಯ ಚೌಕಟ್ಟುಗಳು, ಪೀಠೋಪಕರಣಗಳು, ಗಾಡಿಚಕ್ರ, ಮರದ ಗಂಟೆಗಳ ತಯಾರಿಕೆಯಲ್ಲಿ ಉಪಯೋಗವಾಗುತ್ತದೆ. ಬಂಗಾಳದಲ್ಲಿ ಚಹಪೆಟ್ಟಿಗೆಗಳನ್ನು ಮಾಡುವುದಕ್ಕೂ ಇದ್ದಲಿನ ತಯಾರಿಕೆಯಲ್ಲೂ ಬಳಸುತ್ತಾರೆ. ಕೆಲವೆಡೆ ಸೌದೆಯಾಗಿಯೂ ಉಪಯೋಗದಲ್ಲಿದೆ. ಕಲ್ಬಾಗಿಯ ಕಾಂಡದಿಂದ ಪಡೆಯಲಾಗುವ ಒಂದು ತರದ ಅಂಟನ್ನು ನೇಪಾಳಿಗಳು ಡ್ಯಾಫ್ನೆ ಎಂಬ ಕಾಗದಕ್ಕೆ ಹೊಳಪು ಕೊಡಲು ಉಪಯೋಗಿಸುತ್ತಾರೆ. ಇದರ ತರಗೆಲೆಗಳು, ರೆಂಬೆಗಳು ದನಕರುಗಳಿಗೆ ಆಹಾರ. ತೊಗಟೆಯ ಕಷಾಯ ಕಜ್ಜಿ ಮೊದಲಾದ ಚರ್ಮರೋಗಗಳಿಗೆ ಔಷಧಿ. (ಪಿ.ಕೆ.ಆರ್.ಜಿ.)

**ಕಲ್ಬಾಸು :** ಲೇಬಿಯೊ ಜಾತಿಯ ಮೀನು. *ಕಾಟ್ಲ, ರೋಹು, ಮೃಗಾಲ್* ಮುಂತಾದ ಪ್ರಮುಖ ಬಗೆಯ ಮೀನುಗಳ ಗುಂಪಿಗೆ ಸೇರಿದೆ. ಕಮ್ಮಚ್ಚಲು, ಕೆಮ್ಮೀನು, ಕದ್ದೊಳ್ಳು ಪರ್ಯಾಯ ನಾಮಗಳು. ಭಾರತದ ಎಲ್ಲ ಕಡೆಯೂ ಸಾಮಾನ್ಯವಾಗಿ ಕಾಣಬರುವ ಮೀನಿದು. ಮೈಸೂರಿನ ಕಾವೇರಿ ಮತ್ತು ಶಿಂಷಾ ನದಿಗಳಲ್ಲಿ ಇದೆ. ಇದು ಸುಮಾರು 4" ಉದ್ದ ಬೆಳೆಯುವುದು. ದೇಹದ ಬಣ್ಣ ಕಪ್ಪು. ಕಪ್ಪನೆಯ ಈಜುರೆಕ್ಕೆಗಳು, ಮೊನಚಾದ ತಲೆ, ದೇಹದ ಮುಂತುದಿಯಲ್ಲಿ ಕೊಂಚ ಕೆಳಕ್ಕಿರುವ ಬಾಯಿ, ದೃಢವಾದ ತುಟಿಗಳು, ಚೆನ್ನಾಗಿ ಎದ್ದುಕಾಣುವ ಎರಡು ಜೊತೆ ಕಪ್ಪುಮೀಸೆಗಳು, ಪಾರ್ಶ್ವದ ರೇಖೆಯ ಮೇಲೆ ಹರಡಿಕೊಂಡಂತಿರುವ 40–44 ಹುರುಪೆಗಳು–ಇವು ಈ ಮೀನಿನ ಪ್ರಧಾನ ಲಕ್ಷಣಗಳು. ನೀರಿನಲ್ಲಿ ವಾಸಿಸುವ ಬಸವನ ಹುಳು, ಇತರ ಹುಳುಗಳು ಹಾಗೂ ಪಾಚಿ ಮುಂತಾದ ಸಸ್ಯಗಳು ಇದರ ಮುಖ್ಯ ಆಹಾರ.

*ಕಾಟ್ಲ* ಮುಂತಾದ ಮೀನುಗಳಂತೆಯೆ ಕಲ್ಬಾಸು ಕೂಡ ಮುಂಗಾರು ಮಳೆಯ ಕಾಲದಲ್ಲಿ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಡುವ ವಿಧಾನ, ಮೊಟ್ಟೆಗಳ ಗೊಂಚಲಿಗೆ ಸಂಗ್ರಹಣೆ ಎಲ್ಲ ಕಾಟ್ಲಗಳಲ್ಲಿದ್ದಂತೆಯೆ. ಇದರ ಮರಿಗಳು ತಮ್ಮ ಶೀಘ್ರ ಬೆಳೆವಣಿಗೆಗೆ ಹೆಸರಾಗಿವೆ. ಒಂದು ವರ್ಷದಲ್ಲಿ ಸುಮಾರು 10"–12" ಉದ್ದ ಬೆಳೆಯುತ್ತವೆ. ಎರಡು ವರ್ಷಕ್ಕೆ ಮರಿಗಳು ಪ್ರಬುದ್ಧಾವಸ್ಥೆಗೆ ಬರುತ್ತವೆ.

ಈ ಮೀನು ಕೆರೆಗಳಲ್ಲೂ ಚೆನ್ನಾಗಿ ಬೆಳೆಯುವುದರಿಂದ ಹೆಸರಘಟ್ಟ, ಬೇತಮಂಗಲ, ರಾಮನಗರ ಕೆರೆಗಳಲ್ಲಿ ಇದನ್ನು ಬೆಳೆಸಿ ಸಾಕುತ್ತಿದ್ದಾರೆ. (ಬಿ.ಎನ್.)

**ಕಲ್ಮಾಷಪಾದ :** ಸೂರ್ಯವಂಶದ ದೊರೆ ಋತುಪರ್ಣನ ಮೊಮ್ಮಗ. ಸುದಾಸನ ಮಗ. ಮಿತ್ರಸಹ, ಸೌದಾಸ ಇವನ ಇತರ ಹೆಸರುಗಳು. ಮದಯಂತಿ ಇವನ ಹೆಂಡತಿ. ಇವನ ವೃತ್ತಾಂತ ರಾಮಾಯಣ, ವಿಷ್ಣುಪುರಾಣಾದಿಗಳಲ್ಲಿ ಬಂದಿದೆ. ಬೇಟೆಯ ಕಾಲದಲ್ಲಿ ಕಲ್ಮಾಷಪಾದ ತನ್ನನ್ನೆದುರಿಸಿದ ಇಬ್ಬರು ರಾಕ್ಷಸರಲ್ಲಿ ಒಬ್ಬನನ್ನು ಕೊಂದ. ಮತ್ತೊಬ್ಬ ಓಡಿಹೋಗಿ ಸೇಡುತೀರಿಸಿಕೊಳ್ಳಲು ಹೊಂಚುಹಾಕುತ್ತಿದ್ದ. ಒಮ್ಮೆ ಕಲ್ಮಾಷಪಾದ ತನ್ನ ಕುಲಗುರು ವಸಿಷ್ಠನ ಪೌರೋಹಿತ್ಯದಲ್ಲಿ ಯಜ್ಞ ಮಾಡುತ್ತಿದ್ದ. ವಸಿಷ್ಠ ಮೀಯಲು ಹೋದ ಸಮಯವನ್ನು ಸಾಧಿಸಿ ಅವನ ರೂಪತಾಳಿ ಆ ರಾಕ್ಷಸ ತನಗೆ ಮಾಂಸಭೋಜನ ಮಾಡಿಸಲು ಹೇಳಿದ. ರಾಜ ಹಾಗೇ ಮಾಡಿಸಿದ. ಅದನ್ನುಂಡ ಆ ರಾಕ್ಷಸ ಅದರ ಸ್ಥಳದಲ್ಲಿ ನರಮಾಂಸವನ್ನಿಟ್ಟು ಹೋದ. ಸ್ನಾನಮಾಡಿ ಬಂದ ವಸಿಷ್ಠನಿಗೆ ಆ ನರಮಾಂಸವನ್ನು ಬಡಿಸಿದಾಗ ಅವನು ರೇಗಿ 12 ವರ್ಷ ಕಾಲ ನರಭಕ್ಷಕ ರಾಕ್ಷಸನಾಗಿ ಬಾಳುವಂತೆ ಕಲ್ಮಾಷಪಾದನಿಗೆ ಶಾಪ ಕೊಟ್ಟ.. ವಸಿಷ್ಠನಿಗೆ ಪ್ರತಿಶಾಪ ಕೊಡಲು ರಾಜ ಕೈಯಲ್ಲಿ ನೀರು ತೆಗೆದುಕೊಂಡಾಗ ಮದಯಂತಿ ಅವನನ್ನು ತಡೆದಳು. ಆಗ ರಾಜ ಆ ನೀರನ್ನು ತನ್ನ ಕಾಲ ಮೇಲೆ ಸುರಿದುಕೊಂಡ. ಅದರಿಂದ ಅವನ ಕಾಲು ಕಪ್ಪಾಗಿ ಅಂದಿನಿಂದ ಅವನಿಗೆ ಕಲ್ಮಾಷಪಾದನೆಂಬ ಹೆಸರು ಬಂತು. ವಸಿಷ್ಠದ್ವೇಷಿಯಾದ ವಿಶ್ವಾಮಿತ್ರಮುನಿ ಕಿಂಕರ ಎಂಬ ಇನ್ನೊಬ್ಬ ರಾಕ್ಷಸನನ್ನು ರಾಕ್ಷಸಭಾವದಲ್ಲಿನ ಕಲ್ಮಾಷಪಾದನಲ್ಲಿ ಆವೇಶಗೊಳಿಸಿ ಅವನ ಮೂಲಕ ವಸಿಷ್ಠನ ನೂರು ಮಕ್ಕಳನ್ನೂ ಕೊಲ್ಲಿಸಿದ. ಇನ್ನೊಂದು ಸಲ ಕಾಡಿನಲ್ಲಿ

ಬ್ರಾಹ್ಮಣ ದಂಪತಿಗಳು ಕ್ರೀಡಾಸಕ್ತರಾಗಿದ್ದಾಗ ಅವರಲ್ಲಿ ಗಂಡನನ್ನು ತಿಂದದ್ದರಿಂದ ಅವನ ಹೆಂಡತಿ 'ಸ್ತ್ರೀಸಂಪರ್ಕದಿಂದ ನಿನಗೆ ಸಾವು ಬರಲಿ' ಎಂದು ಕಲ್ಮಾಷಪಾದನಿಗೆ ಶಾಪಕೊಟ್ಟಳು. ಶಾಪದ 12 ವರ್ಷಗಳು ಕಳೆದ ಬಳಿಕ ಕಲ್ಮಾಷಪಾದರಾಯ ತನ್ನ ಪೂರ್ವ ರೂಪವನ್ನು ಹೊಂದಿ ವಸಿಷ್ಠನ ಅನುಗ್ರಹದಿಂದ ಅಶ್ಮಕನೆಂಬ ಮಗನನ್ನು ಪಡೆದ. ಗೌತಮಶಿಷ್ಯನಾದ ಉದಂಕ ಕಲ್ಮಾಷಪಾದನ ಹೆಂಡತಿಯಾದ ಮದಯಂತಿಯಿಂದ ಗುರುದಕ್ಷಿಣಾರೂಪದಲ್ಲಿ ಕುಂಡಲಗಳನ್ನು ಬೇಡಿಪಡೆದುಕೊಂಡ. (ಬಿ.ಎಚ್.ಎಸ್.)

**ಕಲ್ಯಾ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿ ಕಸಬೆಯಿಂದ ವಾಯವ್ಯಕ್ಕೆ 5ಕಿಮೀ ದೂರದಲ್ಲಿರುವ ಗ್ರಾಮ. ಐತಿಹಾಸಿಕ ಸ್ಥಳ. ಶಾಸನ ಹಾಗೂ ಕಾವ್ಯಗಳಲ್ಲಿ ಇದನ್ನು ಕಲ್ಯ, ಕಲ್ಲೆಹ ಎಂದು ಕರೆಯಲಾಗಿದೆ. ಇದು ಜೈನ ಹಾಗೂ ವೀರಶೈವರ ಪವಿತ್ರ ಸ್ಥಳವಾಗಿತ್ತು. ಬಸದಿಯ ಮತ್ತು ಇತರ ಜೈನ ಅವಶೇಷಗಳೂ ಅನೇಕ ಶಿಲಾಶಾಸನಗಳೂ ಇಲ್ಲಿವೆ. 1368ರ ಒಂದು ಶಾಸನದಲ್ಲಿ 1ನೆಯ ಬುಕ್ಕರಾಯ ಜೈನರು ಮತ್ತು ವೈಷ್ಣವರಲ್ಲಿ ರಾಜಿ ಮಾಡಿಸಿದ ಪ್ರಸ್ತಾಪವಿದೆ. ಗ್ರಾಮದ ಪಶ್ಚಿಮಕ್ಕಿರುವ ಸಣ್ಣ ಬೆಟ್ಟದ ಮೇಲೆ ವೀರಶೈವರ ಒಂದು ಮಠವೂ ಕಲ್ಲೇಶ್ವರ ದೇವಸ್ಥಾನವೂ ಇವೆ. ಮಠ ವಿಶಾಲವಾದ ಪ್ರಾಂಗಣ ಮತ್ತು ಒಂದು ಗುಹಾ ಕೋಣೆ ಇರುವ ಕಟ್ಟಡ. ಮಠದ ಹೊರಗೆ ಗದ್ದುಗೆಗಳಿರುವ ಮೂರು ನಾಲ್ಕು ಮಂಟಪಗಳಿವೆ. ಒಂದರ ಮೇಲೆ ಬಸವನ ಪ್ರತಿಮೆಯಿದೆ. ಆ ಗದ್ದುಗೆ ಪಾಲ್ಕುರಿಕೆ ಸೋಮನಾಥನದೆಂದು ಪ್ರಸಿದ್ಧವಾಗಿದೆ. ಚೆನ್ನಬಸವಪುರಾಣದ ಪ್ರಕಾರ ಸೋಮನಾಥ ಸತ್ತದ್ದು ಇಲ್ಲೇ. ವೀರಶೈವರು ವರ್ಷಕ್ಕೊಮ್ಮೆ ಇಲ್ಲಿ ಸೋಮನಾಥನ ಪರ್ವವನ್ನು ಆಚರಿಸುತ್ತಾರೆ. 13ನೆಯ ಶತಮಾನದ ಕಡೆಯಲ್ಲಿ ಸರ್ವಶೀಲೆ ಚನ್ನಮ್ಮ ಎಂಬ ಶರಣೆ ಇಲ್ಲಿ ಆಗಿಹೋಗಿದ್ದಳೆಂದು ಪಾಲ್ಕುರಿಕೆ ಸೋಮೇಶ್ವರ ಪುರಾಣದಿಂದಲೂ 12ನೆಯ ಶತಮಾನದಲ್ಲಿದ್ದ ಜ್ಞಾನಿ ಚೆನ್ನಬಸವಣ್ಣ ಇಲ್ಲಿ ಸಾಯುಜ್ಯ ಹೊಂದಿದನೆಂದು ಚೆನ್ನಬಸವಪುರಾಣದಿಂದಲೂ ತಿಳಿದುಬರುತ್ತವೆ. ಇಲ್ಲಿರುವ ಕಲ್ಲೇಶ್ವರ ಗುಡಿ ಒಂದು ಗುಹಾದೇವಾಲಯ. ಕಲ್ಯದಲ್ಲಿ ಶ್ರೀವೈಷ್ಣವರ ದೇವಾಲಯಗಳೂ ಇದ್ದ ಬಗ್ಗೆ ಕೆಲವು ಸುಳಿವುಗಳಿವೆ. ಹಿಂದೆ ಇಲ್ಲಿ ಒಂದು ವರದರಾಜ ದೇವಾಲಯವಿತ್ತು. ಈಗ ಅದರ ಮುಂದಿನ ಗರುಡಗಂಬ ಮಾತ್ರ ನಿಂತಿದೆ. ಆಂಜನೇಯ ದೇವಾಲಯದಲ್ಲಿ ಕೆಲವು ಆಳ್ವಾರರುಗಳ ವಿಗ್ರಹಗಳಿವೆ.

ಕಲ್ಲೇಶ್ವರ ಗುಡಿಯ ಬಳಿಯ ಒಂದು ಕಂಬದ ಮೇಲೆ ಕುಂಬಳಕಾಯಜ್ಜಿಯದು ಎನ್ನುವ ಸ್ತ್ರೀಯ ತಲೆಯೊಂದನ್ನು ಕೆತ್ತಿರುವ ಶಿಲ್ಪವಿದೆ. ಹಿಂದೆ ಈ ಊರು ಕಲಾವತಿ ಎಂಬ ಪಟ್ಟಣವಾಗಿತ್ತು. ಈಕೆ ಒಮ್ಮೆ ಕುಂಬಳಕಾಯಿಗಳನ್ನು ಮಾರಲು ತಂದಾಗ ಅದನ್ನು ಕೊಳ್ಳುವ ವಿಷಯದಲ್ಲಿ ಜೈನರು ಮತ್ತು ಇತರರಲ್ಲಿ ವಿರಸ ಉಂಟಾಗಿ ಕೊನೆಗೆ ಈ ಊರು ಹಾಳಾಯಿತೆಂದು ಪ್ರತೀತಿ. 1533ರ ಒಂದು ಶಾಸನದಲ್ಲಿ ಕಲಾವತಿ ಎಂಬ ಒಂದು ಪಟ್ಟಣದಲ್ಲಿ ಬೌದ್ಧಧರ್ಮೀಯರು ವಾಸವಾಗಿದ್ದ ಪ್ರಸ್ತಾಪವಿದೆ. ಈ ಕಲಾವತಿಯೇ ಕಲ್ಯ ಎಂಬ ಅಭಿಪ್ರಾಯವಿದೆ. *

**ಕಲ್ಯಾಡಿ:** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಕಸಬೆಯ ನೈರುತ್ಯಕ್ಕೆ 17ಕಿಮೀ ದೂರದಲ್ಲಿ ತಾಮ್ರದ ಗಣಿಗಳಿರುವ ಗ್ರಾಮ. ಇಲ್ಲಿ ಪ್ರಾಚೀನ ಮೂಸೆಗಳ ಹಾಗೂ ಕುಲುಮೆಗಳ ಅವಶೇಷಗಳು ಹೇರಳವಾಗಿ ದೊರಕಿವೆ. ಬಹಳ ಹಿಂದಿನಿಂದಲೂ ತಾಮ್ರದ ಗಣಿ ಉದ್ಯಮ ಈ ಗ್ರಾಮದಲ್ಲಿತ್ತು ಎಂಬುದಕ್ಕೆ ಇದು ಕುರುಹಾಗಿದೆ. ಹಳೆಯ ಮೈಸೂರು ಸರ್ಕಾರದ ಭೂವೈಜ್ಞಾನಿಕ ವಿಭಾಗದ ಪ್ರಥಮ ಭಾರತೀಯ ನಿರ್ದೇಶಕರಾದ ಜಯರಾಂ (1917) ಕಲ್ಯಾಡಿಯ ಭೂವೈಜ್ಞಾನಿಕ ಸಮೀಕ್ಷೆಯನ್ನು ನಡೆಸಿದರು. 1937ರಲ್ಲಿ ಡಾ.ರಾಧಾಕೃಷ್ಣ ಅವರು ತಾಮ್ರನಿಕ್ಷೇಪದ ಮಾಹಿತಿ ನೀಡಿದರು. ಎನ್.ಜಿ.ಕೆ.ಮೂರ್ತಿ 1964ರಲ್ಲಿ ಈ ಪ್ರದೇಶದ ವಿವರವಾದ ಭೂ ವೈಜ್ಞಾನಿಕ ಸಮೀಕ್ಷೆ ನಡೆಸಿ ತಾಮ್ರ ನಿಕ್ಷೇಪದ ಆಕೃತಿ, ಉದ್ದ, ಅಗಲ, ಆಳಗಳ ಪರಿಮಿತಿಯ ವಿವರವಾದ ಮಾಹಿತಿಯನ್ನು ಪ್ರಕಟಪಡಿಸಿದರು. ಅನಂತರ ಮೈಸೂರು ಸರ್ಕಾರದ ಭೂವೈಜ್ಞಾನಿಕ ವಿಭಾಗ ಅನೇಕ ಕೊರೆಗಳನ್ನು ಹಾಕುವುದರ ಮೂಲಕ ಪರೀಕ್ಷಾರ್ಥ ಪರಿಶೋಧನೆಗಳನ್ನು ನಡೆಸಿತು.

ನೀಣಿಕಲ್ಲು, ಕಣಶಿಲೆ, ಪದರಶಿಲೆ ರೂಪಾಂತರ ಹೊಂದಿದ ಮರಳು ಶಿಲೆ, ಅಂಫಿ ಬೋಲೈಟ್ ಇವು ಕಲ್ಯಾಡಿಯ ಸುತ್ತುಮುತ್ತು ಇರುವ ಪ್ರಮುಖ ಶಿಲೆಗಳು. ಅನೇಕ ಮಡಿಕೆಗಳಾಗಿ ಮಾರ್ಪಟ್ಟಿರುವ ಮರಳುಶಿಲೆಗಳಿಗೆ ತಾಮ್ರಯುಕ್ತ ಖನಿಜಗಳು ಸೀಮಿತವಾಗಿವೆ. ತಾಮ್ರದ ನಿಕ್ಷೇಪಗಳನ್ನು ಹೊಂದಿದ ಮರಳುಶಿಲೆ 1000ಮೀಟರ್ ಉದ್ದ, 8 ರಿಂದ 50ಮೀಟರ್ ಅಗಲವಿದ್ದು, 100 ರಿಂದ 280ಮೀಟರ್ ಆಳದವರೆಗೆ ದೊರೆಯುತ್ತದೆ. ಇದರಲ್ಲಿ ತಾಮ್ರದ ಅಂಶ ಶೇ.7; ತಾಮ್ರನಿಕ್ಷೇಪದ ಮೊತ್ತ 1ಕೋಟಿ ಟನ್‌ಗಳೆಂದು ಅಂದಾಜು ಮಾಡಲಾಗಿದೆ. ಈಗ ಕಲ್ಯಾಡಿ ತಾಮ್ರದ ಗಣಿಗಳು ಕರ್ನಾಟಕ ತಾಮ್ರ ಕಾರ್ಪೊರೇಷನ್‌ನ ನಿರ್ವಹಣೆಯಲ್ಲಿವೆ. (ಟಿ.ಆರ್.ಎಸ್.)

**ಕಲ್ಯಾಣ್ :** ಮಹಾರಾಷ್ಟ್ರದ ಠಾಣ ಜಿಲ್ಲೆಯ ಒಂದು ಪಟ್ಟಣ. ಮುಂಬಯಿಯ ಈಶಾನ್ಯಕ್ಕೆ 52 ಕಿಮೀಗಳ ದೂರದಲ್ಲಿ ಉಲ್ಹಾಸ್ ನದಿಯ ದಡದಲ್ಲಿದೆ. ಮಧ್ಯ ರೈಲ್ವೆಯ ಪ್ರಮುಖ ಕೂಡುನಿಲ್ದಾಣ. ಇಲ್ಲಿಂದ ಈಶಾನ್ಯಕ್ಕೊಂದು, ಆಗ್ನೇಯಕ್ಕೊಂದು ಮುಖ್ಯ ರೈಲುಮಾರ್ಗಗಳಿವೆ. ಮುಂಬಯಿಗೆ ಸಮೀಪದಲ್ಲಿರುವುದರಿಂದ ಇಲ್ಲೂ ಕೈಗಾರಿಕೆ ಬಹುಬೇಗ ಹಬ್ಬಿತು. ತತ್ಪರಿಣಾಮವಾಗಿ ಜನಸಂಖ್ಯೆ ತ್ರೀವ್ರಗತಿಯಿಂದ ಹೆಚ್ಚಿತು; ರೇಷ್ಮೆ ನೈಲಾನುಗಳ ನೆಯ್ಗೆಗೆ ಈ ಪಟ್ಟಣ ಬಲು ಪ್ರಸಿದ್ಧ. ಬತ್ತದಿಂದ ಅಕ್ಕಿ ತಯಾರಿಕೆ, ಇಟ್ಟಿಗೆ ಮತ್ತು ಹೆಂಚುಗಳ ಕೈಗಾರಿಕೆ ಮುಖ್ಯವಾದವು. ಸುತ್ತಣ ಪ್ರದೇಶದ ಗಣಿಗಳಲ್ಲಿ ಒಳ್ಳೆಯ ಕಲ್ಲು ದೊರಕುತ್ತದೆ. ಕಲ್ಯಾಣದಿಂದ ಸುಮಾರು 2 ಕಿಮೀ ದೂರದಲ್ಲಿ ನಿರಾಶ್ರಿತರಿಗಾಗಿ ಉಲ್ಹಾಸ್ ನಗರವನ್ನು ಸ್ಥಾಪಿಸಲಾಗಿದೆ.

ಪ್ರಸಕ್ತಶಕದ ಆರಂಭಕಾಲದಲ್ಲಿ ಕಲ್ಯಾಣ್ ಒಂದು ರಾಜ್ಯದ ರಾಜಧಾನಿಯಾಗಿದ್ದು ಸಮುದ್ರವ್ಯಾಪಾರಕೇಂದ್ರವಾಗಿತ್ತು. ಇಲ್ಲಿ ದೊರಕಿದ 1–2ನೆಯ ಶತಮಾನಕ್ಕೆ ಸೇರಿದ ಶಾಸನಗಳಿಂದ ಈ ಅಂಶ ವ್ಯಕ್ತವಾಗುತ್ತದೆ. 14ನೆಯ ಶತಮಾನದಲ್ಲಿ ಈ ಪಟ್ಟಣ ಮುಸಲ್ಮಾನರ ಕೈಗೆ ಸೇರಿತ್ತು. 1536ರಲ್ಲಿ ಇದನ್ನು ಪೋರ್ಚುಗೀಸರು ವಶಪಡಿಸಿಕೊಂಡರು. ಮುಂದೆ ಇದು 1662ರಲ್ಲಿ ಮರಾಠರಿಗೂ 1780ರಲ್ಲಿ ಇಂಗ್ಲಿಷರಿಗೂ ಸೇರಿತ್ತು. (ಎಂ.ಎ.ಎಚ್.)

**ಕಲ್ಯಾಣ[1] :** ನೋಡಿ ಬಸವಕಲ್ಯಾಣ

**ಕಲ್ಯಾಣ[2] :** ಬಿಜಾಪುರದಿಂದ ಪ್ರಕಟವಾಗುತ್ತಿದ್ದ ಕನ್ನಡ ಮಾಸಿಕ, ಸಾರಸಂಗ್ರಹ (ಡೈಜೆಸ್ಟ್). ಆರ್. ಬಿ. ಕುಲಕರ್ಣಿ ವ್ಯವಸ್ಥಾಪಕ ಸಂಪಾದಕ; ಸತ್ಯಕಾಮ ಮತ್ತು ಗುರುರಾಜ ಸಂಪಾದಕರು. 1960ರ ಅಕ್ಟೋಬರಿನಲ್ಲಿ ಪ್ರಾರಂಭವಾಗಿ ಎರಡು ವರ್ಷ ನಡೆದು ನಿಂತಿತು. ಬಿಡಿ ಸಂಚಿಕೆಯ ಬೆಲೆ 40 ಪೈ. ವಾರ್ಷಿಕ ಚಂದಾ ರೂ 4–50 ಇದ್ದಿತು. ಎರಡು ವರ್ಷಗಳ ಅವಧಿಯಲ್ಲಿ ಇದರ ಪ್ರಸಾರ ಸುಮಾರು 6,000ವನ್ನು ಮುಟ್ಟಿತ್ತು.

ಕಥೆ, ಪ್ರಬಂಧ, ರಾವಬಹಾದ್ದೂರರ (ಆರ್.ಬಿ.ಕುಲಕರ್ಣಿ) ಗುರುಪಾದಪ್ಪನ ಹರಟೆ ಇವುಗಳೊಂದಿಗೆ ವಿಜ್ಞಾನ, ಆರೋಗ್ಯ, ಅಧ್ಯಾತ್ಮ, ಕ್ರೀಡಾರಂಗ, ಚಿತ್ರವಿಚಿತ್ರ ಘಟನೆಗಳು, ಐತಿಹಾಸಿಕ ಪ್ರಸಂಗಗಳು, ಸೋಜಿಗಗಳು–ಹೀಗೆ ವಿವಿಧ ವಿಷಯಗಳನ್ನೂ ಕಾಣಬಹುದು. ಕೊನೆಯಲ್ಲಿದ್ದ ಪುಸ್ತಕಸಂಗ್ರಹ ವಿಭಾಗದಲ್ಲಿ ವಿವಿಧ ಭಾಷೆಗಳ ಉತ್ತಮವಾದ ಮತ್ತು ಜನಪ್ರಿಯ ಗ್ರಂಥಗಳನ್ನು ಸಂಗ್ರಹಿಸಿ ಕೊಡಲಾಗುತ್ತಿತ್ತು. ಕಿರಿದಾದ ಮತ್ತು ರಂಜಕ ಲೇಖನಗಳೇ ಈ ಪತ್ರಿಕೆಯಲ್ಲಿ ಅಧಿಕವಾಗಿದ್ದುವು. (ಎಸ್.ವಿ.ಪಿ.ಎ.)

**ಕಲ್ಯಾಣಕೀರ್ತಿ:** ಸು.1439 ಜೈನಕವಿ. ಜ್ಞಾನಚಂದ್ರಾಭ್ಯುದಯ, ನಾಗಕುಮಾರಚರಿತೆ, ಕಾಮನಕಥೆ, ಚಿನ್ಮಯಚಿಂತಾಮಣಿ, ಅನುಪ್ರೇಕ್ಷೆ, ಜಿನಸ್ತುತಿ ತತ್ತ್ವಭೇದಾಷ್ಟಕ ಎಂಬ ಕನ್ನಡ ಕೃತಿಗಳ ಹಾಗೂ ಜಿನಯಜ್ಞಫಲೋದಯ, ಯಶೋಧರಚರಿತೆ ಎಂಬ ಸಂಸ್ಕೃತ ಗ್ರಂಥಗಳ ಕರ್ತೃ. ಸಿದ್ಧರಾಶಿ ಎಂಬ ಗ್ರಂಥವನ್ನೂ ಈತ ಬರೆದಿರುವಂತೆ ತೋರುತ್ತದೆ ಎಂದು ಕವಿಚರಿತೆಕಾರರು ಹೇಳಿದ್ದಾರೆ. ಆದರೆ ಇದು ಬೇರೊಂದು ಗ್ರಂಥವಾಗಿರದೆ ಮೇಲೆ ಹೇಳಿದ ಅನುಪ್ರೇಕ್ಷೆಗೆ ಇರುವ ಮತ್ತೊಂದು ಹೆಸರಾಗಿದೆ. ಈತ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದ ಮಠಾಧೀಶರಾಗಿದ್ದ ಲಲಿತಕೀರ್ತಿಗಳ ಶಿಷ್ಯನೆಂದು ತಿಳಿದುಬರುತ್ತದೆ.

ಜ್ಞಾನಚಂದ್ರಾಭ್ಯುದಯಕ್ಕೆ ಜ್ಞಾನಚಂದ್ರೋದಯ ಎಂಬ ಹೆಸರೂ ಕಂಡುಬರುತ್ತದೆ. ಇದನ್ನು ಶಕನೃಪದ ರತಿಲೋಕ (1362) ಸಂಖ್ಯೆಯಿಂ ವಿಧಿತ ಸಿದ್ಧಾರ್ಥಿ ವರ್ಷದಲ್ಲಿ ಎಂದರೆ 1439ರಲ್ಲಿ ಬರೆದಂತೆ ತಿಳಿಯುತ್ತದೆ. ವಿವಿಧ ಷಟ್ಪದಿಗಳನ್ನೊಳಗೊಂಡ, 908 ಪದ್ಯಗಳನ್ನುಳ್ಳ ಈ ಕಾವ್ಯ ಜ್ಞಾನಚಂದ್ರನೆಂಬ ರಾಜ ತಪಸ್ಸು ಮಾಡಿ ಮುಕ್ತಿಯನ್ನು ಪಡೆದ ಕಥೆಯಿಂದ ಕೂಡಿದೆ.

ನಾಗಕುಮಾರ ಚರಿತೆ ಮುಖ್ಯವಾಗಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ (1442), ಜೊತೆಗೆ ಕಂದವೃತ್ತಗಳೂ ಬಳಕೆಯಾಗಿವೆ. ಇದಕ್ಕೆ ಫಣಿಕುಮಾರಚರಿತೆಯೆಂದೂ ಹೆಸರಿದೆ. ಇದು 5 ಸಂಧಿಗಳನ್ನೂ 5 ಪದ್ಯಗಳನ್ನೂ ಒಳಗೊಂಡಿದೆ.

ಕಾಮನಕಥೆ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 4 ಸಂಧಿಗಳೂ 331 ಪದ್ಯಗಳೂ ಇವೆ. ಅಲ್ಲಲ್ಲಿ ಕಂದ, ಷಟ್ಪದಿ, ವಚನಗಳೂ ಬರುವುದುಂಟು. ಇದನ್ನು ಲಲಿತಕೀರ್ತಿಯ ಶಿಷ್ಯನಾದ ತುಳುವ ದೇಶದ ದೊರೆ ಭೈರವಸುತ ಪಾಂಡರಾಯನ ಇಷ್ಟಾನುಸಾರವಾಗಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಕೃತಿ ಜೈನಮತಾನುಸಾರವಾಗಿ ಮನ್ಮಥಕಥಾ ನಿರೂಪಣೆಯನ್ನೊಳಗೊಂಡಿದೆ.

ಚಿನ್ಮಯಚಿಂತಾಮಣಿ ಮಾತ್ರಾವಿನ್ಯಾಸದ ಛಂದಸ್ಸಿನಿಂದ ಕೂಡಿದ್ದು ಒಟ್ಟು 105 ಪದ್ಯಗಳನ್ನೊಳಗೊಂಡಿದೆ. ಇದರಲ್ಲಿ ತತ್ತ್ವನಿರೂಪಣೆ ಅಡಕವಾಗಿದೆ. ಗ್ರಂಥದ ಕೊನೆಯಲ್ಲಿ ಪ್ರಣಿಹಿತ ಚಿನ್ಮಯಚಿಂತಾಮಣಿಯಿದು ಕಲ್ಯಾಣಕೀರ್ತಿ ಸೌಖ್ಯಾಸ್ಪದಮಂ ಮಣಿಯದೆ ಜಯಿಸಲಿ ಜಗದೊಳು ಗುಣಿಜನಗಳಿಗಿತ್ತು ಚಾರುಮುಕ್ತಿ ಶ್ರೀಯಂ ಎಂಬ ಒಂದು ಕಂದಪದ್ಯವಿದೆ.

ಅನುಪ್ರೇಕ್ಷೆ ಅಥವಾ ಸಿದ್ಧರಾಶಿಯಲ್ಲಿ 74 ಪದ್ಯಗಳಿವೆ. ಇದರಲ್ಲಿ ಕೊಂಡಕುಂದಾಚಾರ್ಯರ ಗಾಹೆಯ ಅರ್ಥವನ್ನು ವರ್ಣಿಸುವುದಾಗಿಯೂ ಪನ್ನೆರಡುನುಪ್ರೇಕ್ಷೆ ಚೆನ್ನಕನ್ನಡದಿಂದವೆ ಬಾಲಕರಿಗೆ ತಿಳಿಯುವಂತೆ ಹೇಳುವುದಾಗಿಯೂ ಕವಿ ಹೇಳಿಕೊಂಡಿದ್ದಾನೆ.

ಜಿನಸ್ತುತಿ 27 ಕಂದ ಪದ್ಯಗಳನ್ನುಳ್ಳ ಚಿಕ್ಕ ಕೃತಿ. ಜಿನ ಮಹಿಮೆಯ ವರ್ಣನೆಯಿಂದ ಕೂಡಿದೆ.

ತತ್ತ್ವಭೇದಾಷ್ಟಕ 9 ಮಲ್ಲಿಕಾಮಾಲಾವೃತ್ತಗಳಲ್ಲಿ ಜೈನತತ್ತ್ವವನ್ನು ನಿರೂಪಿಸುವ ಒಂದು ಅಷ್ಟಕ ಗ್ರಂಥ. (ಎಸ್.ಬಿ.ಎಸ್.)

**ಕಲ್ಯಾಣಕುಮಾರ್:** 1936–99. ಕನ್ನಡ ಜನಪ್ರಿಯ ಚಲನಚಿತ್ರ ನಟ, ನಿರ್ಮಾಪಕ, ನಿರ್ದೇಶಕ, ರಂಗಭೂಮಿ ಕಲಾವಿದ. 1936 ಜೂನ್ 7ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ರಾಘವಾಚಾರ್ಯ, ತಾಯಿ ಕಲ್ಯಾಣಮ್ಮ. ಈ ದಂಪತಿಗಳಿಗೆ ಇವರು ಹನ್ನೊಂದನೆಯ ಮಗು. ವೆಂಕಟರಂಗನ್ ಇವರ ಹುಟ್ಟು ಹೆಸರು. ಎಲ್ಲರೂ ಕರೆಯುತ್ತಿದ್ದ ಹೆಸರು ಚೊಕ್ಕಣ್ಣ. ಚಿತ್ರರಂಗಕ್ಕೆ ಪ್ರವೇಶಿಸಿದಾಗ ತಾಯಿಯ ಮೇಲಿನ ಪ್ರೀತಿಯಿಂದ ತಮ್ಮ ಹೆಸರನ್ನು ಕಲ್ಯಾಣಕುಮಾರ್ ಎಂದು ಬದಲಾಯಿಸಿಕೊಂಡರು. ನ್ಯಾಷನಲ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ಅಭ್ಯಾಸ ಮಾಡಿದರು. ಅನಂತರ ಎಸ್.ಜೆ.ಎಂ. ಪಾಲಿಟೆಕ್ನಿಕ್ ಸೇರಿದ ರಾದರೂ ಓದನ್ನು ಮುಂದು ವರಿಸಲಿಲ್ಲ. ತಂದೆ ಬಯಸಿದ್ದು ಮಗ ವೈದ್ಯ ಆಗಬೇಕೆಂದು, ಆದರೆ ಕಲ್ಯಾಣಕುಮಾರ್ ಆಯ್ಕೆ ಮಾಡಿಕೊಂಡದ್ದು ಸಿನಿಮಾರಂಗ.

ಬಾಲ್ಯದಿಂದಲೂ ಇವರಿಗೆ ಸಂಗೀತ, ನೃತ್ಯ, ಅಭಿನಯಗಳ ಕಡೆ ಆಸಕ್ತಿ. ಮೂರನೆಯ ವಯಸ್ಸಿನಲ್ಲಿಯೇ ಇವರು ರಂಗಪ್ರವೇಶಿಸಿದರು. ಅಣ್ಣಂದಿರೆಲ್ಲರೂ ವಿದ್ಯಾವಂತರಾಗಿ ಒಳ್ಳೆಯ ಕೆಲಸದಲ್ಲಿದ್ದರೂ ಕಲ್ಯಾಣ ಕುಮಾರ್ ಬೆಂಗಳೂರಿನಿಂದ ಮುಂಬಯಿಗೆ ರೈಲು ಹತ್ತಿ ತಮ್ಮ ಭವಿಷ್ಯವನ್ನು ಅರಸುತ್ತ ಹೊರಟರು. ಅಲ್ಲಿ ಏನೊಂದೂ ಪ್ರಯೋಜನ ವಾಗದಿದ್ದಾಗ ಮದರಾಸಿಗೆ ತೆರಳಿದರು (1953). ನಿರ್ದೇಶಕ ಸಿ.ವಿ.ರಾಜು ಇವರ ಪ್ರತಿಭೆಯನ್ನು ಗುರುತಿಸಿ ನಟಶೇಖರ ಚಿತ್ರದ ನಾಯಕ ನಟನನ್ನಾಗಿಸುವ ಮೂಲಕ ಚಿತ್ರರಂಗಕ್ಕೆ ತಂದರು (1954). ರಾಜಕುಮಾರ್ ಅವರೊಂದಿಗೆ ಅಭಿನಯಿಸಿದ ಮೊದಲ ಚಿತ್ರ ಓಹಿಲೇಶ್ವರ (1956). ಅನಂತರ ರಾಯರ ಸೊಸೆ, ದೇವಸುಂದರಿ, ಭೂಕೈಲಾಸ, ಅನ್ನಪೂರ್ಣ, ಗಾಳಿಗೋಪುರ, ಭೂದಾನ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದರು. ಸದಾರಮೆ ಚಿತ್ರದ ಕಳ್ಳನ ಪಾತ್ರ ಇವರಿಗೆ ಜನಪ್ರಿಯತೆ ತಂದುಕೊಟ್ಟಿತು. ಕನ್ನಡದ ಮೊದಲ ವರ್ಣಚಿತ್ರ ಅಮರಶಿಲ್ಪಿ ಜಕಣಾಚಾರಿಯಲ್ಲಿ ಇವರು ನಾಯಕಪಾತ್ರ ವಹಿಸಿದರು. ಇವರು ಕೆಲವು ಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿದರು. ಎಂದೂ ನಿನ್ನವನೇ (1964), ಕಲ್ಲುಸಕ್ಕರೆ (1966) ಚಿತ್ರ ತಯಾರಿಸಿದರು. ಆ ಕಾಲದಲ್ಲಿ ಸ್ಟುಡಿಯೋ ಇಲ್ಲದೆ ತಯಾರಿಸಿದ ಚಿತ್ರ ಪ್ರವಾಸಿ ಮಂದಿರ (1967). ಇವರು 1975–76ರಲ್ಲಿ ಮನೆಮಡದಿಮಕ್ಕಳು ಚಿತ್ರ ತಯಾರಿಸಿದರು. ಇವರು ಅಭಿನಯಿಸಿದ ಮುತ್ತೈದೆ ಭಾಗ್ಯ, ಪ್ರೇಮದ ಪುತ್ರಿ, ವಿಜಯನಗರದ ವೀರಪುತ್ರ, ಅತಿಥಿ, ತಾಯಿಕರಳು, ಲಾಯರ ಮಗಳು, ಬಂಗಾರಿ –ಇವು ತುಂಬ ಯಶಸ್ಸು ಕಂಡ ಚಿತ್ರಗಳು. ದೈವಲೀಲೆ ಚಿತ್ರದಲ್ಲಿ ದ್ವಿಪಾತ್ರದಲ್ಲಿ ಅಭಿನಯಿಸಿದರು; ಪಾಪಪುಣ್ಯ (1971) ಚಿತ್ರದ ಬಳಿಕ ಕೆಲ ಕಾಲ ಚಿತ್ರರಂಗದಿಂದ ದೂರವಾಗಿದ್ದರು. ಪುಟ್ಟಣ್ಣ ಕಣಗಾಲ್ ಅವರ ಕಥಾಸಂಗಮ, ಕಾಲೇಜುರಂಗ; ರವಿ ಅವರ ತುಳಸಿ ಚಿತ್ರಗಳ ಮೂಲಕ ಮತ್ತೆ ಚಿತ್ರರಂಗಕ್ಕೆ ಹಿಂದಿರುಗಿದರು. ಲವ್ ಇನ್ ಬೆಂಗಳೂರು ಚಿತ್ರದ ಮೂಲಕ ನಾಯಕಿ ನಟಿ ಭಾರತಿಯವರನ್ನು ಚಿತ್ರರಂಗಕ್ಕೆ (1966) ಪರಿಚಯಿಸಿದರು. ಗಾಳಿಗೋಪುರ, ಮನೆ ಅಳಿಯ, ಮಾವನ ಮಗಳು, ಚಿನ್ನದ ಗೊಂಬೆ, ಬೆಳ್ಳಿಮೋಡ, ಬೆರೆತ ಜೀವ –ಇವು ಇವರ ಅಭಿನಯದ ಯಶಸ್ವಿ ಚಿತ್ರಗಳು. ಜಯಲಲಿತ, ಬಿ.ಸರೋಜಾದೇವಿ, ಕಲ್ಪನಾ –ಇವರೊಡನೆ ಅಭಿನಯಿಸಿದ ಜನಪ್ರಿಯ ಯಶಸ್ವಿ ನಾಯಕಿಯರು. ಇವರು ತಮಿಳು,ತೆಲುಗು, ಮಲೆಯಾಳಂ ಚಿತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಇವರು ಅಭಿನಯಿಸಿದ ತಮಿಳು ಚಿತ್ರ ನೆಂಜಿಲ್ ಓರು ಆಲಯಂ ಅಪಾರ ಜನಮನ್ನಣೆ ಗಳಿಸಿತು. ಸರ್ಕಾರದಿಂದ ಪ್ರಶಸ್ತಿಯನ್ನೂ ಗಳಿಸಿತು. ಇವರು ಅಭಿನಯಿಸಿದ ಒಟ್ಟು ಚಿತ್ರಗಳು 150ಕ್ಕೂ ಹೆಚ್ಚು.

ತಮ್ಮದೇ ಆದ ಕಲ್ಯಾಣ್ ಥಿಯೇಟರ್ಸ್ ಎಂಬ ನಾಟಕ ಸಂಸ್ಥೆ ಕಟ್ಟಿಕೊಂಡು ಇಡೀ ಕರ್ನಾಟಕದಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಿದರು. ಸದಾರಮೆ, ಚಿಕ್ಕಮ್ಮ, ಚನ್ನ ನನ್ನ ಅಣ್ಣ, ರಾಮು ನನ್ನ ತಮ್ಮ, ರಾಮ್ ರಹೀಂ, ಮಂಗಳೂರು ಮಾವ– ಮುಂತಾದವು ಕೆಲವು ಉಲ್ಲೇಖನೀಯ ನಾಟಕಗಳು. ಇವಲ್ಲದೆ ಕೆಲವು ವೃತ್ತಿ ನಾಟಕ ಕಂಪನಿಗಳಿಂದ ಆಹ್ವಾನ ಬಂದಾಗ ಹೋಗಿ ಅಭಿನಯಿಸಿದ್ದೂ ಉಂಟು. ಕೆಲವು ಕಿರುತೆರೆ ಧಾರವಾಹಿಗಳನ್ನು ನಿರ್ಮಿಸಿ, ನಿರ್ದೇಶಿಸಿದರು ಹಾಗೂ ಅವುಗಳಲ್ಲಿ ನಟಿಸಿದರು. ಚಿತ್ರ ಕಲಾವಿದರ ಬದುಕಿಗೆ ನೆರವಾಗಬೇಕೆಂಬ ಉದ್ದೇಶದಿಂದ ಅಶಕ್ತ ಕಲಾವಿದರ ಕಲ್ಯಾಣ ಸಮಿತಿ ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಮೂರುವರ್ಷ ಕಾಲ ದುಡಿದರು (1967–70).

ಇವರಿಗೆ ಹಲವಾರು ಪ್ರಶಸ್ತಿಗಳು, ಗೌರವಗಳು ದೊರಕಿವೆ. ಅರುಣೋದಯ ಚಿತ್ರಕ್ಕೆ ಮದರಾಸು ಫಿಲಂಫ್ಯಾನ್ ಪ್ರಶಸ್ತಿ ಲಭಿಸಿದೆ. ಮನೆ ಅಳಿಯ ಮತ್ತು ತಮಿಳಿನ ನೆಂಜಲ್ ಓರು ಆಲಯಂ ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿ ದೊರೆತಿದೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, (1992–93), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳೂ ಇವರಿಗೆ ಬಂದಿವೆ. ಲಾವಣ್ಯ ಚಲನಚಿತ್ರ ಪತ್ರಿಕೆಯವರ ಲಾವಣ್ಯ ಪ್ರಶಸ್ತಿ ಲಭಿಸಿದೆ (1976). ಬೆಂಗಳೂರಿನ ಚಿತ್ರರಸಿಕರ ಸಂಘ ಪ್ರಶಸ್ತಿ ನೀಡಿ ಗೌರವಿಸಿದೆ. ವಿಜಯ ಕಲಾ ಮಂದಿರದವರು ಕಲಾರತ್ನ ಎಂಬ ಬಿರುದು ನೀಡಿ ಇವರನ್ನು ಗೌರವಿಸಿದ್ದಾರೆ. (1963–64). ಇವರಿಗೆ ಆರ್.ಎನ್.ಜಯಗೋಪಾಲ್ ಸಂಸ್ಥೆ 'ಕಲಾಪ್ರಪೂರ್ಣ' (1965), ಉದಯ ಟಿ.ವಿ. 'ಕಲಾಭೀಷ್ಮ' (1998) ಎಂಬ ಬಿರುದು ನೀಡಿವೆ.

ಇವರು ಅಂದಿನ ಪ್ರಸಿದ್ಧ ತಾರೆ ರೇವತಿಯವರನ್ನು ಪ್ರೇಮಿಸಿ ವಿವಾಹವಾಗಿದ್ದರು. ಇವರಿಗೆ ಇಬ್ಬರು ಗಂಡುಮಕ್ಕಳು. ಇವರು 1999 ಆಗಸ್ಟ್ 1ರಂದು ನಿಧನರಾದರು. (ಎಸ್.ಜಿ.ಪಿ.)

**ಕಲ್ಯಾಣಮ್ಮ, ಆರ್ :** (1894–1965) ಸ್ತ್ರೀಸಮಾಜದ ಮತ್ತು ಮಕ್ಕಳ ಏಳಿಗೆಗಾಗಿ ಅವಿರತವಾಗಿ ದುಡಿದ ಮಹಿಳೆ. ಹುಟ್ಟಿದ್ದು ಬೆಂಗಳೂರಿನಲ್ಲಿ. 1906ರಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಮುಗಿಸಿದರು. ಕೇವಲ ಹತ್ತು ವರ್ಷ ವಯಸ್ಸಿನಲ್ಲಿಯೇ ವಿವಾಹವಾಯಿತು. ಮೂರೇ ತಿಂಗಳಿನಲ್ಲಿ ವಿಧವೆಯಾದರು. ದುರ್ದೈವಕ್ಕೆ ಅಂಜದೆ ಧೈರ್ಯದಿಂದ ಕನ್ನಡ ನಾಡಿನ ಸೇವೆಗೆ ಮುಂದಡಿಯಿಟ್ಟರು.

ಮೂರು ದಶಕಗಳವರೆಗೆ ಸರಸ್ವತಿ ಮಾಸಪತ್ರಿಕೆಯ ಮೂಲಕ ಸಾಹಿತ್ಯ ಸೇವೆಯನ್ನೂ ಶಾರದಾ ಸ್ತ್ರೀಸಮಾಜವನ್ನು ಸ್ಥಾಪಿಸಿ (1913) ಮಹಿಳಾಸೇವೆಯನ್ನೂ ಅಖಿಲ ಕರ್ನಾಟಕ ಮಕ್ಕಳ ಕೂಟವನ್ನು ಸ್ಥಾಪಿಸಿ (1938) ಮಕ್ಕಳ ಸೇವೆಯನ್ನೂ ನಗರ ಸಭೆಗೆ ಪ್ರಪ್ರಥಮ ಬಾರಿಗೆ ಮಹಿಳಾ ಸದಸ್ಯೆಯಾಗಿದ್ದು ನಗರ ಸಭೆಯ ಉಪಾಧ್ಯಕ್ಷಿಣಿಯಾಗಿದ್ದು, ಅಸೆಂಬ್ಲಿ ಮತ್ತು ಸೆನೆಟ್ಟಿನಲ್ಲಿ ಸದಸ್ಯೆಯಾಗಿದ್ದುಕೊಂಡು ಸಮಾಜ ಸೇವೆಯನ್ನೂ ಮಾಡಿ ಈಕೆ ಹೆಸರು ಗಳಿಸಿದರು.

1949ರಲ್ಲಿ ಸರಸ್ವತಿ ಪತ್ರಿಕೆಯ ರಜತೋತ್ಸವದ ಸಂದರ್ಭದಲ್ಲಿ ಸಾರ್ವಜನಿಕರ ಪರವಾಗಿ ಇವರಿಗೆ ಒಂದು ನಿಧಿಯನ್ನು ಅರ್ಪಿಸಲಾಯಿತು. ಇವರು ಸೃಷ್ಟಿಸಿದ ಸಾಹಿತ್ಯರಾಶಿ ಸಣ್ಣದೇನಲ್ಲ. ಕಥೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ ಇತ್ಯಾದಿ ಪ್ರಕಾರಗಳಲ್ಲೆಲ್ಲ ವಿಪುಲವಾಗಿ ಬರೆದಿದ್ದಾರೆ. ಅಲ್ಲೆಲ್ಲ ಸ್ತ್ರೀಯರ, ಅಬಲೆಯರ, ಕಷ್ಟ ಸುಖಗಳನ್ನೂ ಸಮಾಜದ ಸಮಸ್ಯೆಗಳನ್ನೂ ಚಿತ್ರಿಸಿದ್ದಾರೆ. ಮಕ್ಕಳು ನವಸಮಾಜದ ನಿರ್ಮಾಪಕರೆಂದು ತಿಳಿದ ಇವರು ಅವರ ಮನಸ್ಸನ್ನು ರೂಪಿಸಲು ತಕ್ಕ ಕೃತಿಗಳನ್ನು ರಚಿಸಿದ್ದಾರೆ.

ಇವರ ಸಾರಸ್ವತ ಸೇವೆ ಹೀಗಿದೆ: ಪ್ರಿಯಂವದ, ಸುಖಲತಾ, ಭಕ್ತಮೀರಾ ಮಾಧವಿ, ನಿರ್ಮಲಾ, ನೀರದಾ, ರಣಕೇಸರಿ, ಷಹಜಹಾನ್ ಮೊದಲಾದ ಕಾದಂಬರಿಗಳು, ವರದಕ್ಷಿಣೆ, ಯದುರಾಯ, ದರಿದ್ರನಾರಾಯಣ ಮೊದಲಾದ ನಾಟಕಗಳು, ಪಂಚಕಜ್ಜಾಯ, ಪುಟಾಣಿ ಕಥೆಗಳು, ವಿಕಟಕವಿ, ಕನ್ನಡಿ, ನಮ್ಮ ಹಿಂದೂಸ್ಥಾನ ಮೊದಲಾದ ಮಕ್ಕಳ ಕಥೆ ಮತ್ತು ಕವಿತೆಗಳು.

ಹೀಗೆ ನಾಡು ನುಡಿಗಳ ಅಭಿಮಾನಿಯಾಗಿ ಸೇವೆ ಮಾಡುತ್ತಿದ್ದ ಕಲ್ಯಾಣಮ್ಮನವರಿಗೆ ಶ್ರೀಮನ್ಮಹಾರಾಜರವರು ಪ್ರಪ್ರಥಮವಾಗಿ ಸಾರ್ವಜನಿಕ ಪ್ರಶಸ್ತಿಯನ್ನಾಗಿ ಸುವರ್ಣ ಪದಕವನ್ನಿತ್ತು ಗೌರವಿಸಿದರು. ವಂಗ ಸಾಹಿತ್ಯ ಸಂಘದವರು ಇವರಿಗೆ ವಿದ್ಯಾವಿನೋದಿನಿ ಎಂಬ ಬಿರುದನ್ನಿತ್ತರು. ಇವರ ಕಾರ್ಯಚಟುವಟಿಕೆಗಳನ್ನು ಕಂಡು ಮೆಚ್ಚಿದ ಅಮೆರಿಕದಿಂದಲೂ ಇವರಿಗೆ ಆಹ್ವಾನ ಬಂದಿತ್ತು.

ಕಲ್ಯಾಣಮ್ಮನವರ ಜ್ಞಾಪಕಾರ್ಥವಾಗಿ ಅಖಿಲ ಕರ್ನಾಟಕ ಮಕ್ಕಳ ಕೂಟ ಸ್ಮಾರಕನಿಧಿಯೊಂದನ್ನು ಸ್ಥಾಪಿಸಿದೆ. (ಕೆ.ಟಿ.ಬಿ.)

**ಕಲ್ಯಾಣಸ್ವಾಮಿ:** 1837ರಲ್ಲಿ ಕೊಡಗಿನ ಸಿಂಹಾಸನಕ್ಕೆ ಉತ್ತರಾಧಿಕಾರಿ ಗಳೆಂದು ಸಾರಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿದ ಕಲ್ಯಾಣಪ್ಪ ಅಥವಾ ಕಲ್ಯಾಣಸ್ವಾಮಿ ಎಂಬ ಹೆಸರಿನ, ಒಬ್ಬರ ಅನಂತರ ಇನ್ನೊಬ್ಬರಂತೆ ಬಂದ ಇಬ್ಬರು ವ್ಯಕ್ತಿಗಳು. ಇವರು ಕಲ್ಯಾಣಬಸವ ಮತ್ತು ಪುಟ್ಟಬಸವ ಎಂಬಿಬ್ಬರು ಜಂಗಮರು. ಇಬ್ಬರೂ 1835ರಲ್ಲಿ ಮೊದಲು ತಾನು ಕೊಡಗು ಸಿಂಹಾಸನಕ್ಕೆ ಹಕ್ಕುದಾರನೆಂದು ಘೋಷಿಸಿ ಕೊನೆಗೆ ಬ್ರಿಟಿಷರಿಗೆ ಸೆರೆಯಾಳಾದ ಅಪರಂಪಾರನ ಆಪ್ತ ಅನುಯಾಯಿಗಳು. ಅಪರಂಪಾರ ಬ್ರಿಟಿಷರಿಂದ ತಪ್ಪಿಸಿಕೊಂಡು ಕಡಬದಿಂದ ಮಂಜರಾಬಾದಿಗೆ ಹೊರಟಾಗ ಇವರಿಬ್ಬರೂ ವೇಷ ಮರೆಸಿಕೊಂಡು ಕೊಡ್ಲಿಪೇಟೆಗೆ ಹೋದರು.

1835ರ ಅಂತ್ಯದಲ್ಲಿ ಕೊಡಗು ರಾಜ್ಯದಲ್ಲಿದ್ದ ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳು ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರನ ಅಧಿಕಾರಕ್ಕೆ ವರ್ಗಾಯಿಸಲ್ಪಟ್ಟಾಗ ಅಲ್ಲಿನ ಜನರಲ್ಲಿ ಬೆಳೆದ ಅತೃಪ್ತಿಯನ್ನು ಬಂಡವಾಳ ಮಾಡಿಕೊಂಡು ಕಲ್ಯಾಣಬಸವ ತಾನು ಕೊಡಗಿನ ಪದಚ್ಯುತ ರಾಜ ಚಿಕ್ಕವೀರರಾಜೇಂದ್ರನ ದೊಡ್ಡತಂದೆ ಅಪ್ಪಾಜಿರಾಜನ ಎರಡನೆಯ ಮಗ ನಂಜುಂಡರಸನೆಂದು ಹೇಳಿಕೊಂಡ. ಆಗ ಇವನ ಅನುಯಾಯಿಗಳು ಇವನನ್ನು ಕಲ್ಯಾಣಸ್ವಾಮಿಯೆಂದು ಕರೆದರು. 1836ನೆಯ ಡಿಸೆಂಬರಿನಲ್ಲಿ ಕಲ್ಯಾಣಸ್ವಾಮಿ ಸೋಮವಾರಪೇಟೆ ತಾಲ್ಲೂಕಿನ ಗಡಿನಾಡು ಉಮ್ಮತ್ತು ನಾಡುಗಳಿಗೆ ಬಂದ. ಆದರೂ ಕೊಡಗಿನ ಇತರ ಭಾಗಗಳಲ್ಲಿ ತನಗೆ ಸಹಾಯ ಸಿಗಲಾರದೆಂದು ತಿಳಿದು ಅಲ್ಲಿಂದ ದಕ್ಷಿಣಕನ್ನಡ ಜಿಲ್ಲೆಗೆ ಹೋಗಲುದ್ಯುಕ್ತನಾದ. ಇವನು ನೆಟ್ಟಗೆ ಅಲ್ಲಿಗೆ ಹೋದರೆ ಬ್ರಿಟಿಷ್ ಸೈನಿಕರ ಕೈಗೆ ಬೀಳಬಹುದೆಂಬ ಹೆದರಿಕೆಯಿಂದ ಗಡಿನಾಡು ಉಮ್ಮತ್ತುನಾಡಿನ ಜನರು ಇವನನ್ನು ಗುಟ್ಟಾಗಿ ಮಲಬಾರಿನ ವೈನಾಡಿಗೆ ತಲಪಿಸಿದರು. ಆದರೆ ಅಷ್ಟರಲ್ಲಿ ಕ್ಯಾಪ್ಟನ್ ಲೀ ಹಾರ್ಡಿಗೆ ತಿಳಿದು ಇವನನ್ನು ಸೆರೆಹಿಡಿಯಲು ತನ್ನ ಸೈನಿಕರನ್ನು ಕಳುಹಿಸಿದ. ಈ ಮಧ್ಯೆ ವೈನಾಡಿಗೆ ಹೋಗಿದ್ದ ಕಲ್ಯಾಣ ಸ್ವಾಮಿ ವೇಷ ಬದಲಾಯಿಸಿ ಉತ್ತರ ಮಲಬಾರಿನ ಬೈತೂರನ್ನು ತಲಪಿದ್ದ. ಲೀ ಹಾರ್ಡಿಯ ಸೈನಿಕರು 1837ನೆಯ ಜನವರಿ ಆದಿಭಾಗದಲ್ಲಿ ಇವನನ್ನು ಸೆರೆಹಿಡಿದರು. ಮೈಸೂರಿನಲ್ಲಿ ವಿಚಾರಣೆಯಾಯಿತು. ಕಲ್ಯಾಣಸ್ವಾಮಿಗೆ ಯಾವ ಶಿಕ್ಷೆ ವಿಧಿಸಲ್ಪಟ್ಟಿತು ಎಂದು ತಿಳಿದಿಲ್ಲ. ಮೊದಲನೆಯ ಕಲ್ಯಾಣಸ್ವಾಮಿಯ ಕಥೆ ಇಲ್ಲಿಗೆ ಮುಗಿಯಿತು.

ಈ ಕಲ್ಯಾಣಸ್ವಾಮಿ ಸೆರೆಹಿಡಿಯಲ್ಪಟ್ಟರೂ ದಕ್ಷಿಣ ಕನ್ನಡದ ಅಮರಸುಳ್ಯ ಮಾಗಣೆಗಳ ಜನರು ಬ್ರಿಟಿಷರ ವಿರೋಧವಾದ ಯುದ್ಧದ ಯೋಜನೆಯನ್ನು ಬಿಡಲಿಲ್ಲ. ಇವನು ಸೆರೆಯಾದ ವಿಷಯ ಹೆಚ್ಚಿನ ಜನರಿಗೆ ಗೊತ್ತಿರಲಿಲ್ಲ. ಆದುದರಿಂದ ಕಲ್ಯಾಣಸ್ವಾಮಿಯ ಅನುಯಾಯಿಗಳು ಕೊಡಗಿನ ಸಿಂಹಾಸನಕ್ಕೆ ಅಪ್ಪಾಜಿ ಅರಸನ ಎರಡನೆಯ ಮಗನ ಹಕ್ಕನ್ನು ಬಹಿರಂಗವಾಗಿ ಸ್ಥಾಪಿಸುವುದಕ್ಕೆ ಕೊಡಗಿನಲ್ಲಿ 1837ರ ಮಾರ್ಚ್ 5ನೆಯ ತಾರೀಖು ಶಿವರಾತ್ರಿಯ ದಿವಸದಲ್ಲೂ ಅಮರಸುಳ್ಯದ ಸೀಮೆಗಳಲ್ಲಿ ಏಪ್ರಿಲ್ 6ನೆಯ ತಾರೀಖು ಯುಗಾದಿ ದಿವಸದಲ್ಲೂ ದಂಗೆಯೇಳುವುದೆಂದು ನಿಶ್ಚಯಿಸಿದರು. ಇದಕ್ಕೆ ಕಲ್ಯಾಣಸ್ವಾಮಿಯ ಬದಲು ಇನ್ನೊಬ್ಬ ವ್ಯಕ್ತಿಯನ್ನು ಅಪ್ಪಾಜಿ ಅರಸನ ಮಗನೆಂದು ಜನರ ಮುಂದಿಡಬೇಕಾಗಿದ್ದಿತು.

ಅಮರಸುಳ್ಯ ಸೀಮೆಗಳಲ್ಲಿ ಬ್ರಿಟಿಷರ ವಿರೋಧ ಚಳವಳಿಯಲ್ಲಿ ಮುಖ್ಯಸ್ಥನಾಗಿದ್ದ ಕೆದಂಪಾಡಿ ರಾಮೇಗೌಡನೆಂಬವನು ಮೊದಲು ಕಲ್ಯಾಣಸ್ವಾಮಿಯ ಜತೆಯಲ್ಲಿದ್ದ ಕೊಡಗಿನ ಏಳುಸಾವಿರ ಸೀಮೆಯ ಪುಟ್ಟಬಸವನೆಂಬವನನ್ನು ಇದಕ್ಕೆ ಆರಿಸಿ ಬೆಳ್ಳಾರೆ ಕೋಟೆಗೆ ಕರೆದುಕೊಂಡು ಹೋಗಿ ಅಲ್ಲಿ ಹಾಕಿದ್ದ ಚಪ್ಪರದ ಅಡಿಯಲ್ಲಿ ಸಿಂಹಾಸನದ ಮೇಲೆ ಕುಳ್ಳಿರಿಸಿದ. ಇವನೇ ಕಲ್ಯಾಣಸ್ವಾಮಿ ಅಥವಾ ನಂಜುಂಡರಸ, ಕೊಡಗು ಅಮರಸುಳ್ಯಗಳ ರಾಜ ಎಂದು ಸೀಮೆಯವರಿಗೆಲ್ಲ ತಿಳುಹಿಸಿದ. ಎರಡು ಮೂರು ಸಾವಿರ ಸಶಸ್ತ್ರಜನ ಇವನನ್ನು ಕೂಡಿಕೊಂಡರು. ಮರುದಿವಸ ಕಲ್ಯಾಣಸ್ವಾಮಿಯ ಹೆಸರಿನಲ್ಲಿ ನಿರೂಪಗಳನ್ನು ಬರೆಯಿಸಿ ಅವುಗಳ ಪ್ರತಿಗಳನ್ನು ಚೆಂಬು ಪೆರಾಜೆಗಳ ಪಾರ್ಪತಿಗಾರರಿಗೂ ಮಂಜರಾಬಾದು ಸೀಮೆಯ ಪಟೇಲರಿಗೂ ತಾವುನಾಡು, ಟೇಂಗುನಾಡು, ಗಡಿನಾಡುಗಳ ಪಾರ್ಪತಿಗಾರರಿಗೂ ದಿವಾನ್ ಪೊನ್ನಪ್ಪನಿಗೂ ಕಳುಹಿಸಿದರು. 1837ನೆಯ ಮಾರ್ಚ್ 31ರಲ್ಲಿ ಈ ನಿರೂಪದ ಒಂದು ಪ್ರತಿ ಕೊಡಗಿನ ಸೂಪರಿಂಟೆಂಡೆಂಟನಿಗೂ ತಲಪಿ ಅವನಿಗೆ ಬಂಡಾಯದ ಸುಳುಹು ಸಿಕ್ಕಿತು.

ಒಂದೆರಡು ದಿನಗಳಲ್ಲೆ ಕೆದಂಪಾಡಿ ರಾಮೇಗೌಡ ಅಲ್ಲಿದ್ದ ಇತರ ಮುಖಂಡರನ್ನು ಸುಬೇದಾರರನ್ನಾಗಿ ನೇಮಿಸಿ ಅವರನ್ನು ಕೆಲವು ಜನರೊಡನೆ ಆ ಸೀಮೆಯ ಬೇರೆ ಬೇರೆ ಸ್ಥಳಗಳಿಗೆ ಕಳುಹಿಸಿದ. ತಾನು ಕಲ್ಯಾಣಸ್ವಾಮಿಯನ್ನೂ ಸೈನಿಕರನ್ನೂ ಕರೆದುಕೊಂಡು ಪುತ್ತೂರಿಗೆ ಹೊರಟ. ದಾರಿಯಲ್ಲಿ ಇವನ ಸಂಗಡಿಗರು ಒಬ್ಬ ಬ್ರಿಟಿಷ್ ಅಧಿಕಾರಿಗೆ ಸೇರಿದ್ದ ಏಳೆಂಟು ಕುದುರೆಗಳನ್ನು ಹಿಡಿದರು. ಧರ್ಮಸ್ಥಳದ ಮಂಜಯ್ಯಹೆಗ್ಗಡೆ ತನ್ನಲ್ಲಿದ್ದ ಎರಡು ಫಿರಂಗಿಗಳನ್ನು ಕೊಟ್ಟರು. ಇತರ ಅನೇಕರು ವಿವಿಧ ರೀತಿಯಲ್ಲಿ ಸಹಾಯ ನೀಡಿದರು.

ಕಲ್ಯಾಣಸ್ವಾಮಿ ಮತ್ತು ಸಂಗಡಿಗರು ಪುತ್ತೂರನ್ನು ತಲಪಿದಾಗ ಸಣ್ಣ ತುಕಡಿಯೊಡನೆ ಅಲ್ಲಿಗೆ ಬಂದಿದ್ದ ಮಂಗಳೂರಿನ ಕಲೆಕ್ಟರ್ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರು. ಆದರೆ ಸುದ್ದಿ ತಿಳಿದ ಕಲೆಕ್ಟರ್ ಓಡಿಹೋದ.

ಕಲ್ಯಾಣಸ್ವಾಮಿ ಪುತ್ತೂರನ್ನು ಸುಲಿಗೆ ಮಾಡಿ ಪಾಣೆಮಂಗಳೂರಿಗೆ ಹೋದ. ಅಲ್ಲಿ ನಂದಾವರದ ಲಕ್ಕಪ್ಪ ಬಂಗರಸ ಇವನ ಜೊತೆ ಸೇರಿಕೊಂಡ. ಆ ಹೊತ್ತಿಗೆ ದೊಡ್ಡದಾಗಿ ಬೆಳೆದಿದ್ದ ಸಮೂಹದೊಡನೆ ಕಲ್ಯಾಣಸ್ವಾಮಿ ಬಂಟ್ವಾಳಕ್ಕೆ ತೆರಳಿ ಪೇಟೆಯನ್ನು ಸುಲಿಗೆ ಮಾಡಿ ಮಂಗಳೂರಿಗೆ ಹೋದ. ಇವನು ಮಂಗಳೂರನ್ನು ತಲಪುವಷ್ಟರಲ್ಲಿ ಅಲ್ಲಿದ್ದ ಇಂಗ್ಲಿಷ್ ಅಧಿಕಾರಿಗಳು ಕಣ್ಣಾನೂರಿಗೆ ಓಡಿಹೋಗುವುದಕ್ಕೆ ಹಡಗನ್ನು ಕಾಯುತ್ತಿದ್ದರು. ಕಲ್ಯಾಣಸ್ವಾಮಿ ಅಲ್ಲಿ ಸೆರೆಮನೆಯ ಖೈದಿಗಳನ್ನು ಬಿಡಿಸಿ ತಾಲ್ಲೂಕು ಖಜಾನೆಯನ್ನು ಒಡೆದು ಹಣವನ್ನು ದೋಚಿದ. ಅಲ್ಲಿದ್ದ ಇಂಗ್ಲಿಷ್ ಉದ್ಯೋಗಸ್ಥರ ಮನೆಗಳಿಗೆ ಬೆಂಕಿ ಕೊಡಿಸಿದ. ಮಂಗಳೂರಿನಲ್ಲಿ ತನ್ನ ಬಾವುಟವನ್ನೇರಿಸಿ ಹದಿಮೂರು ದಿವಸಗಳಿದ್ದ. ಆದರೆ ಅಷ್ಟರಲ್ಲಿ ತಲಚೇರಿ, ಕಣ್ಣಾನೂರುಗಳಿಂದ ಇಂಗ್ಲಿಷರ ಸೈನ್ಯಗಳು ಮಂಗಳೂರನ್ನು ತಲಪಿದವು. ಸರಿಯಾದ ಆಯುಧಗಳಿಲ್ಲದ ಕಲ್ಯಾಣಸ್ವಾಮಿಯ ಜನ ಹೆದರಿ ಓಡಿ ಹೋದರು. ಕಲ್ಯಾಣಸ್ವಾಮಿಯೂ ಸುಳ್ಯಕ್ಕೆ ಓಡಿಬಂದ.

ಕಲ್ಯಾಣಸ್ವಾಮಿ ಮಂಗಳೂರಿಗೆ ಹೋದಾಗ ಇವನ ಸಂಗಡಿಗರು ಕೊಡಗನ್ನು ಹಿಡಿಯಬೇಕೆಂದು ಸನ್ನಾಹಮಾಡಿದ್ದರೂ ಕೊಡಗಿನಲ್ಲಿ ದಿವಾನರುಗಳಾಗಿದ್ದ ಚಪ್ಪುದಿರ ಪೊನ್ನಪ್ಪ ಮತ್ತು ಅಪ್ಪಾರಂಡ ಬೋಪು ಬ್ರಿಟಿಷರ ಆಳಿಕೆಗೆ ಬೆಂಬಲ ಕೊಟ್ಟಿದ್ದರಿಂದ ಸಾಧ್ಯವಾಗಲಿಲ್ಲ. ಪ್ರತಿಯಾಗಿ ಅವರು ಈ ದಂಗೆಯನ್ನು ಅಡಗಿಸಲು ಅಮರಸುಳ್ಯ ಸೀಮೆಗಳಿಗೆ ಬಂದು ಸುಳ್ಯದ ಕೋಟೆಪೇಟೆಗಳನ್ನು ಹಿಡಿದುಕೊಂಡು ಕಲ್ಯಾಣಸ್ವಾಮಿ ಬೆಳ್ಳಾರೆಯಲ್ಲಿರುವನೆಂಬ ವರ್ತಮಾನವನ್ನು ಕೇಳಿ ಬೆಳ್ಳಾರೆಗೆ ಹೋದರು. ಅಷ್ಟರಲ್ಲಿ ಕಲ್ಯಾಣಸ್ವಾಮಿ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಲಪಿದ್ದ. ಅಲ್ಲಿದ್ದ ಇಂಗ್ಲಿಷ್ ಸೈನ್ಯದ ಕಣ್ಣು ತಪ್ಪಿಸಿ ಮರೆಯಾದ. ಈ ವರ್ತಮಾನವನ್ನು ತಿಳಿದು ಈಸ್ಟ್ ಇಂಡಿಯ ಕಂಪನಿ ಸರ್ಕಾರ ಕಲ್ಯಾಣಸ್ವಾಮಿಯನ್ನು ಹಿಡಿದುಕೊಟ್ಟವರಿಗೆ ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು, ಇವನ ಸಂಗಡಿಗರನ್ನು ಹಿಡಿದುಕೊಟ್ಟವರಿಗೆ ಐದು ಸಾವಿರ ರೂಪಾಯಿಗಳ ಬಹುಮಾನಗಳನ್ನು ಕೊಡುವುದಾಗಿ ಪ್ರಕಟಿಸಿತು. ಕಲ್ಯಾಣಸ್ವಾಮಿ ವೇಷ ಮರೆಸಿಕೊಂಡು ತನ್ನ ಊರನ್ನು ತಲುಪಿದ್ದ. ಇದನ್ನು ಅರಿತ ಅಲ್ಲಿನ ಕೆಲವು ಜನ ಹಣದ ಆಸೆಗಾಗಿ ಬ್ರಿಟಿಷರಿಗೆ ಸುದ್ದಿ ನೀಡಿದರು. ಕಲ್ಯಾಣಸ್ವಾಮಿ ಸೆರೆಸಿಕ್ಕಿದ.

ಆಗ ಕಲ್ಯಾಣಸ್ವಾಮಿ ತಾನು ಶನಿವಾರಸಂತೆಯ ಹತ್ತಿರದ ಹೆಮ್ಮನಿ ಗ್ರಾಮದ ಬೇಸಾಯಗಾರ, ಅಲ್ಲಿಗೆ ಕೆದಂಪಾಡಿ ರಾಮೇಗೌಡನ ಜನ ಬಂದು ತನ್ನನ್ನು ಅಮರಸುಳ್ಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತನ್ನನ್ನು ಕೊಡಗಿನ ದೊರೆಯೆಂದು ಇತರರಿಗೆ ಹೇಳಿ ದಂಗೆಯೆಬ್ಬಿಸಿದರು, ತನ್ನ ಹುಟ್ಟು ಹೆಸರು ಬಸಪ್ಪ, ದೊಡ್ಡವನಾದಮೇಲೆ ತನ್ನನ್ನು ಪುಟ್ಟಬಸವ ಅಥವಾ ಮರಿಬಸವ ಎಂದು ಊರಿನವರು ಕರೆಯುತ್ತಿದ್ದರು ಎಂದು ಹೇಳಿಕೆ ನೀಡಿದನೆಂದು ಬ್ರಿಟಿಷ್ ದಾಖಲೆಗಳು ತಿಳಿಸುತ್ತವೆ.

ಮಂಗಳೂರಿನಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಗಳು ವಿಚಾರಣೆ ನಡೆಸಿ ಮರಣದಂಡನೆ ವಿಧಿಸಿದರು. ಕಲ್ಯಾಣಸ್ವಾಮಿ, ಲಕ್ಕಪ್ಪ ಬಂಗರಸು ಮತ್ತು ಇನ್ನು ಕೆಲವು ಮುಖಂಡರೊಡನೆ ಮಂಗಳೂರಿನ ಬಿಕ್ರಾನಕಟ್ಟೆ ಪದವಿನ ಹತ್ತಿರ ಗಲ್ಲಿಗೇರಿಸಲ್ಪಟ್ಟ. (ಡಿ.ಎನ್.ಕೆ.)

**ಕಲ್ಲಿದ್ದಲಿನ ರಸಾಯನ ವೃತ್ತಾಂತ :** ಕಲ್ಲಿದ್ದಲ್ಲಿನ ರಾಸಾಯನಿಕ ಗುಣ ಲಕ್ಷಣಗಳನ್ನು ಮಾತ್ರ ಈ ಲೇಖನದಲ್ಲಿ ವಿವರಿಸಿದೆ (ಕೆಮಿಸ್ಟ್ರಿ ಆಫ್ ಕೋಲ್). ಕಲ್ಲಿದ್ದಲಿನ ಇತರ ವಿವರಗಳಿಗೆ. (ನೋಡಿ– ಕಲ್ಲಿದ್ದಲು)

ಕಲ್ಲಿದ್ದಲು ಒಂದು ಒತ್ತಾದ ಪದರವುಳ್ಳ ಇಂಗಾಲದ ವಸ್ತು. ಸಸ್ಯಪದಾರ್ಥಗಳು ಸಹಸ್ರಾರು ವರ್ಷ ಭೂಗರ್ಭದಲ್ಲಿ ಹೂತುಹೋಗಿ, ಕೊಳೆತು, ಅನೇಕ ಭೌತ, ಜೀವರಾಸಾಯನಿಕ ಬದಲಾವಣೆಗಳನ್ನು ಹೊಂದಿ ಇದು ಉತ್ಪತ್ತಿಯಾಗುವುದು. ಈ ಬದಲಾವಣೆಗಳಲ್ಲಿ ಮೊದಲಿಗೆ ಉತ್ಪತ್ತಿಯಾದ ಪೀಟ್ ಎಂಬುದು ಕ್ರಮೇಣವಾಗಿ ಲಿಗ್ನೈಟ್, ಬಿಟೂಮಿನಸ್ ಮತ್ತು ಆಂಥ್ರಸೈಟ್ಸ್ ಎಂಬಂತೆ ಹೆಚ್ಚಿನಮಟ್ಟಿಗೆ ರೂಪ ಬದಲಾವಣೆ ಪಡೆದಿರುತ್ತದೆ. ಇವನ್ನು ಬದಲಾವಣೆಗಳ ವರ್ಗಗಳೆಂದು ವಿಜ್ಞಾನಿಗಳು ಕರೆಯುತ್ತಾರೆ. ಈ ರೀತಿಯ ವರ್ಗೀಕರಣಗಳಲ್ಲಿ ಲಿಗ್ನೈಟ್ ಕನಿಷ್ಠ ಬದಲಾವಣೆ ಪಡೆದ ವರ್ಗ; ಆಂಥ್ರಸೈಟ್ ಹೆಚ್ಚಿನ ಬದಲಾವಣೆ ಪಡೆದ ವರ್ಗ.

ಕಲ್ಲಿದ್ದಲಿನಲ್ಲಿ ಮುಖ್ಯವಾಗಿ ಸಾವಯವ (ಆರ್ಗ್ಯಾನಿಕ್) ಪದಾರ್ಥವಿದ್ದು ಭಿನ್ನ ಅಂಶಗಳಲ್ಲಿ ಖನಿಜ ನಿರವಯವ (ಇನಾರ್ಗ್ಯಾನಿಕ್) ಕಲ್ಮಷ ವಸ್ತುಗಳು ಮತ್ತು ನೀರು ಇರುತ್ತವೆ. ಕಾರ್ಬನಿಕ ಪದಾರ್ಥಗಳ ಅಂಶ ಇಂಗಾಲ, ಜಲಜನಕ, ಆಮ್ಲಜನಕ ಮತ್ತು ಸಣ್ಣಪರಿಮಾಣದಲ್ಲಿ ಸಸಾರಜನಕ ಮತ್ತು ಗಂಧಕಗಳಿಂದ ಕೂಡಿದೆ. ಕಲ್ಲಿದ್ದಲಿನ ಯೋಗ್ಯತೆಯ ಪ್ರಮಾಣ ಅದರ ಆಸನ್ನ ವಿಶ್ಲೇಷಣೆಯನ್ನು (ಪ್ರಾಕ್ಸಿಮೇಟ್ ಅನಾಲಿಸಿಸ್) ಅವಲಂಬಿಸಿದೆ. ಅದು ಈ ಕೆಳಗಿನ ಸೂತ್ರವನ್ನು ಅನುಸರಿಸುತ್ತದೆ.

ಕಲ್ಲಿದ್ದಲು=ತೇವ (ಸೆಂ.ನಲ್ಲಿ) + ಬಾಷ್ಪಶೀಲ ವಸ್ತು (ಸೆಂ.ನಲ್ಲಿ) ಬೂದಿ+ಸ್ಥಾಪಿತ ಇಂಗಾಲ ಹಾಗೂ ಕೆಲೊರಿ ಮೌಲ್ಯ.

ಕಲ್ಲಿದ್ದಲುಗಳನ್ನು ಬಗೆಬಗೆಯ ರೀತಿಗಳಲ್ಲಿ ವರ್ಗೀಕರಿಸುತ್ತಾರೆ: ಆಸನ್ನ ವಿಶ್ಲೇಷಣೆ, ರಾಸಾಯನಿಕ ಸಂಘಟನೆಯ ಆಧಾರ, ಕಲ್ಲಿದ್ದಲಿನ ಅಂತ್ಯ ಉಪಯುಕ್ತತೆಯ ಆಧಾರ. ಇವುಗಳ ಪೈಕಿ ಆಸನ್ನ ವಿಶ್ಲೇಷಣೆ ಸಾಮಾನ್ಯವಾಗಿ ಬಳಕೆಯಲ್ಲಿರುವ ವರ್ಗೀಕರಣ ವಿಧಾನ. ಅದನ್ನು ಮುಂದೆ ವಿವರಿಸಿದೆ.

**ಪೀಟ್:** ಇದು ಸ್ವಲ್ಪಮಟ್ಟಿಗೆ ವಿಭಜಿತವಾದ ಸಸ್ಯಪದಾರ್ಥಗಳ ಸಂಚಯನ. ಭೂಮಿಯಿಂದ ಮೊದಲು ಹೊರತೆಗೆದಾಗ ಇದು ಮಣ್ಣಿನ ಹೆಂಟೆಗಳನ್ನು ಹೋಲುತ್ತದೆ. ಒಣಗಿಸಿದ ಪೀಟನ್ನು ಮನೆಗಳಲ್ಲಿ ಉರುವಲಾಗಿಯೂ ಮಣ್ಣಿನ ಸಂಘಟನೆಯಲ್ಲಿಯೂ ಗೊಬ್ಬರದ ಉಪಕರಣ ಕಾರ್ಯದಲ್ಲಿಯೂ ಉಪಯೋಗಿಸುತ್ತಾರೆ.

**ಲಿಗ್ನೈಟ್ ಅಥವಾ ಕಂದು ಕಲ್ಲಿದ್ದಲು:** ಇದು ಕನಿಷ್ಠ ದರ್ಜೆಯ ಕಲ್ಲಿದ್ದಲು. ಇದು ಅಡಕವಾಗಿರುತ್ತದೆ. ಇದರ ಬಣ್ಣ ಕಂದು ಅಥವಾ ಕಂದುಮಿಶ್ರಿತ ಕಪ್ಪು. ಲಿಗ್ನೈಟ್ ಮೊದಲಿಗೆ ಅನುಪಯೋಗಿ ವಸ್ತುವಾಗಿತ್ತು. ಈಗ ಇದರಿಂದ ಕೃತಕ ಗೊಬ್ಬರಗಳನ್ನು, ರಾಸಾಯನಿಕ ವಸ್ತುಗಳನ್ನು ಮತ್ತು ಕೃತಕ ಎಣ್ಣೆಗಳನ್ನು ತಯಾರಿಸುವ ವಿಧಾನಗಳನ್ನು ಕಂಡುಹಿಡಿದಿದ್ದಾರೆ.

**ಉಪಬಿಟುಮಿನಸ್ ಕಲ್ಲಿದ್ದಲು:** ಇದಕ್ಕೆ ಹೊಳಪುಳ್ಳ ಕಪ್ಪುಬಣ್ಣ ಉಂಟು. ಇದನ್ನು ಬಿಟುಮಿನಸ್ ಕಲ್ಲಿದ್ದಲಿನಿಂದ ಗುರುತಿಸುವ ಬಗೆ ಸುಲಭ. ಉಪಬಿಟುಮಿನಸ್ ಕಲ್ಲಿದ್ದಲನ್ನು ಗಾಳಿಯಲ್ಲಿಟ್ಟಾಗ ತೇವವನ್ನು ಕಳೆದುಕೊಂಡು ಅದು ಪುಡಿಯಾಗುವುದು. ಬಣ್ಣ ಒಂದರ ವಿನಾ ಇದು ಸಾಧಾರಣವಾಗಿ ಲಿಗ್ನೈಟನ್ನು ಹೋಲುತ್ತದೆ.

**ಬಿಟುಮಿನಸ್ ಕಲ್ಲಿದ್ದಲು:** ಈ ವರ್ಗದ ಕಲ್ಲಿದ್ದಲನ್ನು ಕೆಳಕಂಡಂತೆ ಇನ್ನೂ ಕೆಲವು ಉಪಪಂಗಡಗಳಾಗಿ ವಿಂಗಡಿಸಲಾಗಿದೆ. (1) ಕೆಳದರ್ಜೆಯ ಬಾಷ್ಪಶೀಲ (ವಾಲಟೈಲ್) ಬಿಟುಮಿನಸ್ ಕಲ್ಲಿದ್ದಲು, (2) ಮಧ್ಯಮ ದರ್ಜೆಯ ಬಿಟುಮಿನಸ್ ಕಲ್ಲಿದ್ದಲು, (3) ಶ್ರೇಷ್ಠ ದರ್ಜೆಯ ಬಿಟುಮಿನಸ್ ಕಲ್ಲಿದ್ದಲು. ಇವುಗಳಲ್ಲಿ ಕೆಳದರ್ಜೆಯ ಮತ್ತು ಮಧ್ಯಮ ದರ್ಜೆಯ ಕಲ್ಲಿದ್ದಲುಗಳಿಗೆ ಹೆಚ್ಚಿನ ಉಷ್ಣತಾಮೌಲ್ಯಗಳಿವೆ. ಬಿಟುಮಿನಸ್ ಕಲ್ಲಿದ್ದಲಿನಲ್ಲಿ ಕೋಕ್ ಆಗುವ ಮತ್ತು ಕೋಕ್ ಆಗದ ಎರಡು ಜಾತಿಯ ಕಲ್ಲಿದ್ದಲುಗಳಿವೆ. ಅವುಗಳ ಉಪಯೋಗ ಬಹಳವಾಗಿ ಅವುಗಳ ಗುಣವನ್ನು ಅವಲಂಬಿಸಿದೆ. ಬಿಟುಮಿನಸ್ ಕಲ್ಲಿದ್ದಲಿನ ಮುಖ್ಯ ಉಪಯೋಗ ಉಗಿಯ ಉತ್ಪಾದನೆಯಲ್ಲೂ ಕೋಕ್ ಮತ್ತು ಕಲ್ಲಿದ್ದಲಿನ ಅನಿಲಗಳ ತಯಾರಿಕೆಗಳಲ್ಲಿಯೂ ಇದೆ.

**ಮಧ್ಯಮ ಆಂಥ್ರಸೈಟ್ ಕಲ್ಲಿದ್ದಲು:** ಇವುಗಳಲ್ಲಿ ಬಾಷ್ಪಶೀಲ ವಸ್ತುಗಳು ಶೇ. 8–14 ರವರೆಗಿದೆ. ಈ ಕಲ್ಲಿದ್ದಲು ಆಂಥ್ರಸೈಟ್ ಕಲ್ಲಿದ್ದಲಿಗಿಂತ ಸುಲಭವಾಗಿ ಹೊತ್ತಿಕೊಳ್ಳುತ್ತದೆ. ಇದು ಹಳದಿ ಬಣ್ಣದ ಸಣ್ಣ ಜ್ವಾಲೆಯಿಂದ ಉರಿಯುವುದು. ಉರಿಸುವ ಜಾಲರಿಯ ಮೇಲೆ ಈ ವರ್ಗದ ಕಲ್ಲಿದ್ದಲು ಬಹು ಬೇಗ ಉರಿದು ಒಡನೆಯೇ ಪುಡಿಯಾಗುತ್ತದೆ.

**ಆಂಥ್ರಸೈಟ್ ಕಲ್ಲಿದ್ದಲು:** ಗಡಸುತನ ಮತ್ತು ಸಾಮರ್ಥ್ಯ ಇರುವ ಈ ಕಲ್ಲಿದ್ದಲಿಗೆ ಗಡಸು ಕಲ್ಲಿದ್ದಲು ಎಂದೇ ಹೆಸರು. ಇದು ನಿಧಾನವಾಗಿ ಹೊತ್ತಿಕೊಂಡು ಹೊಗೆಯಿಲ್ಲದ ಜ್ವಾಲೆಯೊಂದಿಗೆ ಉರಿಯುತ್ತದೆ. ಬಿಟುಮಿನಸ್ ಕಲ್ಲಿದ್ದಲು ಕೈಗೆ ಅಂಟಿಕೊಂಡು ಕಲೆ ಮಾಡುತ್ತದೆ; ಆದರೆ ಆಂಥ್ರಸೈಟ್ ಕಲೆ ಮಾಡುವುದಿಲ್ಲ. ಈ ಕಲ್ಲಿದ್ದಲು ದೂಳು ಮತ್ತು ಹೊಗೆಯಿಲ್ಲದೆ ಬಹಳ ಸಮಯ ಉರಿಯುವುದರಿಂದ ಬೇರೆ ದರ್ಜೆಯ ಕಲ್ಲಿದ್ದಲಿಗಿಂತ ಹೆಚ್ಚಾಗಿ ಇದನ್ನು ಮನೆಗಳಲ್ಲಿ ಉರುವಲಾಗಿ ಉಪಯೋಗಿಸುತ್ತಾರೆ.

**ಗಾಳಿಯ ಸಂಪರ್ಕವಿಲ್ಲದ ರೀತಿಯಲ್ಲಿ ಕಲ್ಲಿದ್ದಲಿನ ಬಟ್ಟಿಯಿಳಿಸುವಿಕೆ (ಭಂಜಕ ಆಸವನ – ಡಿಸ್ಟ್ರಕ್ಟಿವ್ ಡಿಸ್ಟಿಲೇಷನ್):** ಕಲ್ಲಿದ್ದಲನ್ನು ಗಾಳಿಯಿಲ್ಲದೆ ಹೆಚ್ಚಿನ ಉಷ್ಣತೆಯವರೆಗೆ ಕಾಸಿದಾಗ ಅದರಿಂದ ಬಾಷ್ಪಶೀಲ ವಸ್ತುಗಳು ವಿಭಜಿಸಲ್ಪಟ್ಟು ಬಿಡುಗಡೆ ಹೊಂದುವುವು ಮತ್ತು ತಳದಲ್ಲಿ ಪ್ರಧಾನವಾಗಿ ಇಂಗಾಲದಿಂದ ಕೂಡಿದ ವಸ್ತು ಉಳಿಯುವುದು. ಇದಕ್ಕೆ ಕೋಕ್ ಅಥವಾ ಚಾರ್ ಎಂದು ಹೆಸರು. ಮೇಲ್ಕಂಡ ರೀತಿಯಲ್ಲಿ ಒಂದು ಟನ್ ಕಲ್ಲಿದ್ದಲನ್ನು 900° ಸೆಂ. ಗೆ ಮೇಲ್ಪಟ್ಟ ಉಷ್ಣತೆಯಲ್ಲಿ ಬಟ್ಟಿಯಿಳಿಸಿದಾಗ 60–75 ಲೀಟರುಗಳಷ್ಟು ಟಾರು ಮತ್ತು ಕಚ್ಚಾ ಬೆಂಝೋಲುಗಳೂ 2–4 ಕೆಜಿಗಳಷ್ಟು ಅಮೋನಿಯ ಅನಿಲವೂ 2,50,000 ದಿಂದ 3,50,000 ಲೀಟರುಗಳಷ್ಟು ಕಲ್ಲಿದ್ದಲಿನ ಅನಿಲವೂ ಉತ್ಪತ್ತಿ ಆಗುತ್ತವೆ. ಕಡಿಮೆ ಉಷ್ಣತೆಯ ಕಾರ್ಬನೈಸೇಷನ್ನಿನಲ್ಲಿ (ಲೋ ಟೆಂಪರೇಚರ್ ಕಾರ್ಬನೈಸೇಷನ್–ಉಷ್ಣತೆ 400°-700°ಸೆಂ.ವರೆಗೆ) ಪ್ರತಿ ಟನ್ ಕಲ್ಲಿದ್ದಲಿಗೆ ಹೆಚ್ಚಿನ ಉಷ್ಣತೆಯ ಕಾರ್ಬನೈಸೇಷನ್ನಿನಲ್ಲಿ ದೊರೆಯವ ಟಾರಿನ ಎರಡು ಪಟ್ಟು ಟಾರು ಸರಿಸುಮಾರಾಗಿ ದೊರೆಯುತ್ತದೆ. ಆದರೆ ಕಲ್ಲಿದ್ದಲಿನ ಅನಿಲದ ಭಾಗ ಕಡಿಮೆ– 85,000 ದಿಂದ 1,10,000 ಲೀಟರುಗಳಷ್ಟು ಮಾತ್ರ. ಅಮೋನಿಯ ಅನಿಲದ ಉತ್ಪನ್ನ ಇಲ್ಲವೆಂದೇ ಹೇಳಬಹುದು. ವಿಶಿಷ್ಟವಾಗಿ ಕಟ್ಟಿದ ಒಲೆಗಳನ್ನು ಈ ಕಾರ್ಬನೈಸೇಷನ್ ಕಾರ್ಯಕ್ಕೆ ಉಪಯೋಗಿಸುತ್ತಾರೆ. ಹೆಚ್ಚಿನ ಉಷ್ಣತೆಯ ಕಾರ್ಬನೈಸೇಷನ್ನಿನಲ್ಲಿ ಉತ್ಪತ್ತಿಯಾದ ಕೋಕನ್ನು ಒಲೆಗಳಿಂದ ಹೊರಕ್ಕೆ ತೆಗೆದಾಗ ಅದು ಅವ್ಯವಸ್ಥಿತ ರೀತಿಯ ಆಕಾರ ಮತ್ತು ಅಳತೆಗಳುಳ್ಳ ಘನವಸ್ತುವಾಗಿರುತ್ತದೆ. ಹೆಚ್ಚಿನ ಉಷ್ಣತೆಯ ಕಾರ್ಬನೀಕರಣದಲ್ಲಿ ದೊರೆಯುವ ಕೋಕನ್ನು ಮುಖ್ಯವಾಗಿ ಲೋಹತಂತ್ರಜ್ಞಾನದಲ್ಲಿ (ಮೆಟಲರ್ಜಿಕಲ್) ಕೋಕ್ ಆಗಿ ಉಪಯೋಗಿಸುತ್ತಾರೆ. ಕೋಕನ್ನು ನೀರಿನ ಅನಿಲ ಮತ್ತು ಪ್ರೊಡ್ಯೂಸರ್ ಅನಿಲಗಳ ತಯಾರಿಕೆಗೂ ಬಳಸುತ್ತಾರೆ. ಈ ಅನಿಲಗಳನ್ನು ಕೃತಕ ಗೊಬ್ಬರ ಮತ್ತು ಕೃತಕ ಇಂಧನದ ತಯಾರಿಕೆಗಳಿಗೆ ಬಳಸುತ್ತಾರೆ. ಕಡಿಮೆ ಉಷ್ಣತೆಯ ಕಾರ್ಬನೀಕರಣದಿಂದ ಉತ್ಪತ್ತಿಯಾದ ಕೋಕನ್ನು ಮನೆಗಳಲ್ಲಿ ಒಲೆಗಳನ್ನು ಉರಿಸಲು ಉಪಯೋಗಿಸುತ್ತಾರೆ. ಕಲ್ಲಿದ್ದಲಿನ ಬಟ್ಟಿಯಿಳಿಸುವಿಕೆ ಕಲ್ಲಿದ್ದಲ ಅನಿಲದ ತಯಾರಿಕೆಗೆ ಉಪಯುಕ್ತವಾಗಿದೆ.

1 ಕಲ್ಲಿದ್ದಲಿನ ಟಾರು ಬಣ್ಣದಲ್ಲಿ ಕಂದುಗಪ್ಪು, ಸಾಧಾರಣ ಉಷ್ಣತೆಯಲ್ಲಿ ಇದು ಸ್ನಿಗ್ಧವಾಗಿರುವ ಮತ್ತು ನೀರಿಗಿಂತ ಹೆಚ್ಚು ಸಾಂದ್ರತೆಯುಳ್ಳ ದ್ರವವಸ್ತು. ಟಾರಿನಲ್ಲಿ ಸಾವಯವ ವಸ್ತುಗಳು ಅತ್ಯಂತ ತೊಡಕಾದ ರೀತಿಯಲ್ಲಿವೆ. ಟಾರಿನ ಪ್ರಕೃತಿ ಅದು ತಯಾರಾದ ಉಷ್ಣತೆಯನ್ನು ಅವಲಂಬಿಸಿದೆ. ಅಲ್ಲದೆ ಸ್ವಲ್ಪಮಟ್ಟಿಗೆ ಕಾರ್ಬನೀಕರಣಕ್ಕೂ ಉಪಯೋಗಿಸಲ್ಪಟ್ಟ ಕಲ್ಲಿದ್ದಲಿನ ಜಾತಿಯನ್ನು ಸಹ ಅವಲಂಬಿಸಿದೆ. ಹೆಚ್ಚಿನ ಉಷ್ಣತೆಯ ಕಾರ್ಬನೀಕರಣದಿಂದ ದೊರೆತ ಟಾರಿನಲ್ಲಿ ಹೆಚ್ಚು ಭಾಗ ಆರೋಮ್ಯಾಟಿಕ್ ಸಂಯುಕ್ತ ವಸ್ತುಗಳಾದ ಬೆಂಝೀನ್ ಮತ್ತು ಅದರ ಅನುರೂಪಿ ವಸ್ತುಗಳೂ ನ್ಯಾಫ್ಥಲೀನ್, ಆಂಥ್ರಸೀನ್, ಫೀನಾಲಿನ ಘಟಕ ವಸ್ತುಗಳೂ ಇತರ ಸಂಬಂಧೀ ವಸ್ತುಗಳೂ ಇವೆ. ಕಡಿಮೆ ಉಷ್ಣತೆಯ ಕಾರ್ಬನೀಕರಣದಲ್ಲಿ ದೊರೆತ ಟಾರಿನಲ್ಲಿ ಮುಖ್ಯವಾಗಿ ಪ್ಯಾರಫಿನ್ ವಸ್ತುಗಳಿದ್ದು, ಫೀನಾಲಿನ ಸಂಯುಕ್ತವಸ್ತುಗಳೂ ನ್ಯಾಫ್ಥಲೀನ್ ಸಂಬಂಧಿತ ವಸ್ತುಗಳೂ ಇರುತ್ತವೆ.

ಟಾರನ್ನು ಬಟ್ಟಿಯಿಳಿಸುವಾಗ ಸಾಧಾರಣವಾಗಿ ಈ ಕೆಳಕಂಡ ಪದಾರ್ಥಗಳು ದೊರೆಯತ್ತವೆ:

1 ಹಗುರವಾದ ಎಣ್ಣೆ (ಲೈಟ್ ಆಯಿಲ್. 200°ಸೆಂ.ಗಿಂತ ಕಡಿಮೆ ಉಷ್ಣತೆ): ಇದರಲ್ಲಿ ಮುಖ್ಯವಾಗಿ ಬೆನ್ಜೀನ್ ಮತ್ತು ಅದರ ಅನುರೂಪಿ ವಸ್ತುಗಳಿರುತ್ತವೆ.

2 ಮಧ್ಯಮ ಎಣ್ಣೆ (ಮಿಡ್ಲ್ ಆಯಿಲ್, 200°-250°ಸೆಂ. ವರೆಗೆ): ಈ ಭಾಗದಲ್ಲಿ ಮುಖ್ಯವಾಗಿ ಫೀನಾಲುಗಳು ಕ್ರಿಯಸೋಲುಗಳು ಮತ್ತು ನ್ಯಾಫ್ಥಲೀನ್ ಇರುತ್ತವೆ.

3 ಭಾರ ಎಣ್ಣೆ (ಹೆವಿ ಆಯಿಲ್. 250°-300°ಸೆಂ. ವರೆಗೆ): ಇದರಲ್ಲಿ ನ್ಯಾಫ್ಥಲೀನಿನ ಸಂಬಂಧಿಕ ವಸ್ತುಗಳು ಅಥವಾ ಕ್ರಿಯಸೋಟ್ ಇರುತ್ತವೆ.

4 ಆಂಥ್ರಸೀನ್ ಎಣ್ಣೆ (300°-350°ಸೆಂ. ವರೆಗೆ): ಈ ಭಾಗದಲ್ಲಿ ಮುಖ್ಯವಾಗಿ ಫೀನಾಂಥ್ರೀನ್ ಮತ್ತು ಆಂಥ್ರಸೀನುಗಳು ಇರುತ್ತವೆ

5 ಪಿಚ್: ಇದು ಅಂತ್ಯದಲ್ಲಿ ಉಳಿಯುವ ಶೇಷವಸ್ತು.

ಈ ಮೇಲ್ಕಂಡ ಭಿನ್ನ ಭಾಗಗಳಿಂದ ದೊರಕುವ ಮುಖ್ಯವಸ್ತುಗಳನ್ನು ಬೇರೆ ಬೇರೆಯಾಗಿ ವಿಂಗಡಿಸಲು ಪ್ರತ್ಯೇಕ ವಿಧಾನಗಳನ್ನು ಅವಲಂಬಿಸಬೇಕು.

**ಪಿಚ್:** ಕಲ್ಲಿದ್ದಲಿನ ಟಾರಿನ ಉತ್ಪನ್ನಗಳಲ್ಲಿ ಅಧಿಕ ಭಾಗವಿದು. ಇದು ನೀರು ಮತ್ತು ಗಾಳಿಯ ನಿರೋಧಕ ವಸ್ತುವಾಗಿರುವುದರಿಂದ ಇದರ ಉಪಯೋಗ ನೀರಿನ ನಿರೋಧಕವಾಗಿ ಉಂಟು. ಪಿಚ್ ನಿಂದ ರಸ್ತೆಗಳಿಗೆ ಡಾಂಬರು ಮಾಡುತ್ತಾರೆ. ಇದನ್ನು ಮನೆಗಳ ಮೇಲ್ಛಾವಣಿಗಳ ಮೇಲೆ ಬಳಿಯಲು ಉಪಯೋಗಿಸುತ್ತಾರೆ. ಗಾಳಿಯ ಸಂಪರ್ಕವಿಲ್ಲದ ರೀತಿಯಲ್ಲಿ ಪಿಚ್ಚನ್ನು ಬಟ್ಟಿಯಿಳಿಸಿದಾಗ ಪಿಚ್ ಕೋಕ್ ಶೇಷವಸ್ತುವಾಗಿ ದೊರೆಯುತ್ತದೆ. ಇದರಲ್ಲಿ ಶೇಕಡ 98ರಷ್ಟು ಭಾಗ ಸ್ಥಿರ ಇಂಗಾಲ ಇರುವುದು. ಈ ಕಾರಣದಿಂದ ಪಿಚ್ ಕೋಕನ್ನು ಮುಖ್ಯವಾಗಿ ವಿದ್ಯುತ್ ಧ್ರುವಗಳ ತಯಾರಿಕೆಗೂ ಶ್ರೇಷ್ಠದರ್ಜೆಯ ಎರಕಗಳ ಕೆಲಸಗಳಲ್ಲಿ ಅಚ್ಚುಗಳ ತಯಾರಿಕೆಗೂ ಉಪಯೋಗಿಸುತ್ತಾರೆ.

**ಬಿಟುಮಿನ್‌ಗಳು ಮತ್ತು ಬಿಟುಮಿನಸ್ ವಸ್ತುಗಳು:** ಇವನ್ನು ಸಾಮಾನ್ಯವಾಗಿ ಕಪ್ಪು ರಾಳಗಳೆಂಬ ಗುಂಪಿಗೆ ಸೇರಿಸುವುದು ವಾಡಿಕೆ. ಸಮುದ್ರದಲ್ಲಿನ ಕಾರ್ಬನಿಕ ವಸ್ತುಗಳು ಜೀರ್ಣವಾಗಿ ಮೂಲಸ್ವರೂಪದ ಬದಲಾವಣೆಗಳ ಪರಿಣಾಮದಿಂದ ಲೋಹಗಳ ನಿಧಿಗಳಂತೆ ರೂಪ ತಳೆದು ಪ್ರಾಕೃತಿಕ ಬಿಟುಮಿನಸ್ ವಸ್ತುಗಳು ದೊರೆಯುತ್ತವೆ. ಆದರೆ ಇವು ಕಲ್ಲಿದ್ದಲಿನಂತೆ ನಿರ್ಮಾಣವಾದ ಸ್ಥಾನದಲ್ಲಿ ಇರದೆ ದೂರ ಒಯ್ಯಲ್ಪಟ್ಟು ಬೇರೆ ಸ್ಥಳಗಳಲ್ಲಿ ಅನಿಲರೂಪದಲ್ಲಿಯೋ ದ್ರವರೂಪದಲ್ಲಿಯೋ ಮೆದುರೂಪದಲ್ಲಿಯೋ ಕಂಡುಬರುತ್ತವೆ. ತಯಾರಿಸಲ್ಪಟ್ಟ ಬಿಟುಮಿನ್ ಮತ್ತು ಕಪ್ಪುರಾಳಗಳು ಮುಖ್ಯವಾಗಿ, ಕೆಲವು ಕಚ್ಚಾ ಪೆಟ್ರೋಲಿಯಂ ಎಣ್ಣೆಗಳನ್ನು ಬಟ್ಟಿಯಿಳಿಸಿದಾಗ ಅಂತ್ಯದಲ್ಲಿ ಉಳಿಯುವ ಶೇಷವಸ್ತುಗಳಿಂದ ದೊರೆಯುತ್ತವೆ. ಆದ್ದರಿಂದ ಈ ವಸ್ತುಗಳು ಕಲ್ಲಿದ್ದಲ ಟಾರಿನಿಂದ ದೊರೆಯುವ ಪಿಚ್‌ನ ಸರೂಪಿಯಾಗಿವೆ. ಎಂಜಿನಿಯರಿಂಗಿನಲ್ಲಿ ಇವನ್ನು ಮನೆಗಳ ಮೇಲ್ಛಾವಣಿಗಳ ಮೇಲೆ ಮತ್ತು ರಸ್ತೆಗಳ ಮೇಲೆ ಹಚ್ಚುವುದಕ್ಕೂ ನೀರಿನ ಭಂಡಾರಗಳ ಮತ್ತು ಕಾಲುವೆಗಳ ಒಳಭಾಗಕ್ಕೆ ಬಳಿಯುವುದಕ್ಕೂ ಕಾಲುವೆಗಳ ಒಡ್ಡುಗಳನ್ನು ಭದ್ರಪಡಿಸಲಿಕ್ಕೂ ಉಪಯೋಗಿಸುತ್ತಾರೆ. ಕೈಗಾರಿಕೆಗಳಲ್ಲಿ ಬಿಟುಮಿನಸ್ ಪದಾರ್ಥಗಳನ್ನು ಇತರ ಪದಾರ್ಥಗಳೊಂದಿಗೆ ಮಿಶ್ರಮಾಡಿ ನಾನಾ ಬಗೆಯಲ್ಲಿ ಉಪಯೋಗಿಸುತ್ತಾರೆ. ಕಪ್ಪುರಾಳಗಳ ಹೆಂಚುಗಳನ್ನು ತಯಾರಿಸುವುದು, ಕೈಹಿಡಿಗಳ ಹೊದಿಕೆ ಮಾಡುವುದು, ಕೇಬಲ್ ತಂತಿಗಳಿಗೆ ಹೊರ ಕವಚ ಒದಗಿಸುವುದು, ಜಲಾಭೇದ್ಯವಸ್ತುವಾಗಿ ಉಪಯೋಗಿಸುವುದು, ಒಣಮರಗಳ

ಮೇಲೆ ರಕ್ಷಣೆಗೆಂದು ಬಳಿಯುವುದು ಇವೇ ಮೊದಲಾದುವು ಇದರ ಕೆಲವು ಮುಖ್ಯ ಉಪಯೋಗಗಳು. (ಎಂ.ಯು.ಪಿ.)

**ಕಲ್ಲಿದ್ದಲು :** ಸಸ್ಯಪದಾರ್ಥಗಳು ಸಹಸ್ರಾರು ವರ್ಷ ಭೂಗರ್ಭದಲ್ಲಿ ಹೂತುಹೋಗಿ, ಕೊಳೆತು, ಅನೇಕ ಭೌತ ಜೈವ ರಾಸಾಯನಿಕ ಪರಿವರ್ತನೆಗಳನ್ನು ಹೊಂದಿ ಉತ್ಪನ್ನವಾಗುವ, ಒತ್ತಾದ ಪದರವಿರುವ ಇಂಗಾಲದ ವಸ್ತು (ಕೋಲ್). ಮುಖ್ಯವಾದ ಖನಿಜೇಂಧನಗಳಲ್ಲಿ ಇದು ಒಂದು. ಉಷ್ಣಶಕ್ತಿಗೆ ಒಂದು ಪ್ರಧಾನ ಮೂಲ. ಪ್ರಪಂಚದಲ್ಲಿನ ಶಕ್ತಿಯ ಉತ್ಪನ್ನದಲ್ಲಿ ಸುಮಾರು ಅರ್ಧದಷ್ಟು ಕಲ್ಲಿದ್ದಲಿನಿಂದಲೇ ಆಗುವುದು. ಆದ್ದರಿಂದ ಇದನ್ನು ಕೈಗಾರಿಕೆಯ ಬೆನ್ನುಮೂಳೆ ಎನ್ನುವುದುಂಟು. ಕೋಕ್ ಕುಲುಮೆಯಂತ್ರಗಳಲ್ಲಿಯೂ ಅನಿಲ ಕಾರ್ಖಾನೆಗಳಲ್ಲಿಯೂ ಕಲ್ಲಿದ್ದಲೇ ಮೂಲ ಕಚ್ಚಾ ಸಾಮಗ್ರಿ.

**ಉಂಟಾಗುವ ಬಗೆ:** ನಿಸರ್ಗದಲ್ಲಿ ಕಲ್ಲಿದ್ದಲು ಉಂಟಾಗುವ ಬಗೆಯಲ್ಲಿ ಎರಡು ಸ್ಪಷ್ಟ ಹಂತಗಳನ್ನು ಗುರುತಿಸಲಾಗಿದೆ. ಮೊದಲಿನದು ಜೀವರಾಸಾಯನಿಕ ಪ್ರಕ್ರಿಯೆ (ಹ್ಯೂಮಿಫಿಕೇಶನ್ ಪ್ರೋಸೆಸ್). ಪ್ರಾಚೀನ ಕಾಲದಲ್ಲಿ ಸರೋವರಗಳ ಸುತ್ತಮುತ್ತ, ಜೌಗುಪ್ರದೇಶಗಳಲ್ಲಿ, ಕಣಿವೆಗಳಲ್ಲಿ ವಿಪುಲವಾಗಿ ಬೆಳೆದಿದ್ದ ಮರಗಳು ಬಿದ್ದು ಕೊಳೆತು ಏಕಾಣುಜೀವಿಗಳ ನಿರಂತರ ಕ್ರಿಯೆಯಿಂದ ಶಿಥಿಲವಾಗಿ ವಿಘಟನಗೊಂಡುವು. ಇದರ ಪರಿಣಾಮ ಸಸ್ಯಗಳಲ್ಲಿದ್ದ ಪ್ರೋಟೀನುಗಳು, ಕೊಬ್ಬುಗಳು, ಕಾರ್ಬೊಹೈಡ್ರೇಟುಗಳು ಮುಂತಾದ ರಾಸಾಯನಿಕ ವಸ್ತುಗಳು ರಾಸಾಯನಿಕ ಕ್ರಿಯೆಗಳಿಗೆ ಒಳಗಾಗಿ ಸಾರಜನಕದಿಂದ ತುಂಬಿರುವ ಕೆಲವು ಕಪ್ಪು ಬಣ್ಣದ ಹ್ಯೂಮಿನ ವಸ್ತುಗಳಾಗಿ ಪರಿವರ್ತನೆಗೊಂಡುವು. ಇವು ಸೂಕ್ಷ್ಮತಂತುಗಳಿಂದ ಕೂಡಿದ ಪುಡಿಮಾಡಬಹುದಾದ ಕಪ್ಪು ಬಣ್ಣದ ಸರಂಧ್ರಕ ವಸ್ತುಗಳು, ಪೀಟ್ ಅಥವಾ ಸಸ್ಯಾಂಗಾರ ಎಂದು ಇವುಗಳ ಹೆಸರು. ಸಸ್ಯಗಳ ಮೂಲ ರಚನೆಯನ್ನು ಸಸ್ಯಾಂಗಾರದ ಮೇಲೆ ಚೆನ್ನಾಗಿ ಗುರುತಿಸಬಹುದು.

**ಎರಡನೆಯದು ಕಲ್ಲಿದ್ದಲು ಪರಿವರ್ತನಕ್ರಿಯೆ (ಕೋಲಿಫಿಕೇಷನ್ ಪ್ರೋಸೆಸ್):** ಸಸ್ಯಾಂಗಾರ ವಸ್ತುಗಳು ಪದರ ಪದರವಾಗಿ ಶೇಖರಣೆಗೊಂಡಂತೆ ಅವುಗಳ ಭಾರದಿಂದ ತಳದ ನೆಲ ಕುಸಿಯಿತು; ಬದಿಯ ಬರೆಗಳು ಕುಸಿದು ಈ ರಾಶಿಯ ಮೇಲೆ ಕೆಡೆದುವು. ಹೀಗೆ ಸಸ್ಯಾಂಗಾರ ಆಳ ಆಳಕ್ಕೆ ಸಾಗಿದಂತೆ ಅದರ ಮೇಲೆ ಹೇರಳವಾದ ಒತ್ತಡ ಮತ್ತು ಅದರಿಂದ ಜನಿಸಿದ ತೀವ್ರ ಉಷ್ಣ ಇವುಗಳ ಪ್ರಭಾವದಿಂದ ಎರಡನೆಯ ಪ್ರಕ್ರಿಯೆ ಆರಂಭವಾಯಿತು. ಇದರಿಂದ ಸಸ್ಯಾಂಗಾರ ದಟ್ಟೈಸಿ ಕ್ರಮೇಣ ಕಲ್ಲಿದ್ದಲಾಗಿ ಪರಿವರ್ತನೆಗೊಂಡಿತು. ಈ ಪರಿವರ್ತನದ ಪ್ರಮಾಣವನ್ನು ಅನುಸರಿಸಿ ಲಿಗ್ನೈಟ್ ಬಿಟುಮಿನಸ್ ಕೋಲ್ ಮತ್ತು ಆಂಥ್ರಸೈಟ್ ಮುಂತಾದ ಬಗೆಬಗೆಯ ನಮೂನೆಗಳನ್ನು ವಿಂಗಡಿಸುತ್ತಾರೆ. ಸಸ್ಯಾಂಗಾರ ಕಲ್ಲಿದ್ದಲಾಗಿ ಪರಿಣಮಿಸುವಾಗ ಪ್ರಥಮ ನಿರ್ದಿಷ್ಟ ಘಟ್ಟ ಲಿಗ್ನೈಟ್ ಅಥವಾ ಕಂದುಬಣ್ಣದ ಕಲ್ಲಿದ್ದಲು. ಇದು ಮರದ ರಚನೆಯನ್ನು ತೋರಿಸುತ್ತದೆ. ಇದು ಬಲು ಮೃದುವಾಗಿದ್ದು ಹಿಸುಕಿದರೆ ದೂಳಾಗುವಂತಿರುವುದು. ಇದರೊಳಗೆ ಸ್ಥಿರ ಪ್ರಮಾಣದಲ್ಲಿ ಇಂಗಾಲ ಶೇ. 23 ಭಾಗದವರೆಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಮುಂದಿನ ಘಟ್ಟ ಬಿಟ್ಯುಮಿನಸ್ ಕಲ್ಲಿದ್ದಲು. ಇದು ಹೆಚ್ಚು ಬಳಕೆಯ ಅತ್ಯುಪಯುಕ್ತ ಕಲ್ಲಿದ್ದಲು. ಬಲು ಕಠಿಣವಾಗಿರುವ ವಸ್ತು. ಇದರಲ್ಲಿ ಸ್ಥಿರವಾಗಿರುವ ಇಂಗಾಲಾಂಶ ಶೇ. 50–60 ವರೆಗಿರುತ್ತದೆ. ಆಂಥ್ರಸೈಟ್ ಎಂಬುದು ಗಟ್ಟಿಯಾಗಿಯೂ ಸಾಂದ್ರವಾಗಿಯೂ ಕಡುಕಪ್ಪಾಗಿಯೂ ಇದೆ ಮತ್ತು ಇದು ಕಲ್ಲಿದ್ದಲಿನ ಅತ್ಯಂತ ಶುದ್ಧರೂಪ. ಇದರ ಸ್ಥಿರ ಇಂಗಾಲದ ಪ್ರಮಾಣ ಸುಮಾರು ಶೇ.90. ಕಲ್ಲಿದ್ದಲಿನ ಸಾಪೇಕ್ಷ ಗುರುತ್ವ ಮತ್ತು ಉಷ್ಣೋತ್ಪಾದನ ಮೌಲ್ಯ ಲಿಗ್ನೈಟಿನಿಂದ ಆಂಥ್ರಸೈಟಿನವರೆಗೆ ಏರುತ್ತ ಹೋಗುತ್ತದೆ.

ರಾಸಾಯನಿಕವಾಗಿ ಕಲ್ಲಿದ್ದಲು ಸಂಕೀರ್ಣ ಇಂಗಾಲ (ಕಾರ್ಬನ್) ಸಂಯುಕ್ತಗಳನ್ನೂ ಜೊತೆಗೆ ಸ್ವಲ್ಪ ಇಂಗಾಲೇತರ ದ್ರವ್ಯವನ್ನೂ ನೀರನ್ನು ಒಳಗೊಂಡಿದೆ. ಕಲ್ಲಿದಲಿನ ಮೂಲ ಧಾತುಗಳು ತುಂಬ ಸರಳ–ಕಾರ್ಬನ್, ಹೈಡ್ರೊಜಿನ್ ಮತ್ತು ಆಕ್ಸಿಜನ್ ಇವು ಪ್ರಧಾನ ಘಟಕಗಳು. ನೈಟ್ರೋಜನ್ ಹಾಗೂ ಸಲ್ಫರ್ ಅಂಶಗಳೂ ಇವೆ. ಕಲ್ಲಿದ್ದಲಿನ ಪರಿವರ್ತನ ಪ್ರಕ್ರಿಯೆ ಮುಂದುವರಿದಂತೆಲ್ಲ ಇಂಗಾಲದ ಪ್ರಮಾಣ ಸಮತೂಕವಾಗಿ ಹೆಚ್ಚುತ್ತದೆ. ಆದರೆ ಆಕ್ಸಿಜನ್ ಮತ್ತು ಹೈಡ್ರೊಜನ್ನುಗಳ ಪ್ರಮಾಣಗಳು ಸಮತೂಕವಾಗಿ ಕಡಿಮೆ ಹಾಗುತ್ತ ಹೋಗುತ್ತವೆ.

**ಕಲ್ಲಿದ್ದಲಿನ ವಿಶ್ಲೇಷಣೆ:** ಕಲ್ಲಿದ್ದಲಿನ ಜಲಾಂಶ. ಬಾಷ್ಪಶೀಲದ್ರವ್ಯಾಂಶ ಬೂದಿಯ ಶತಾಂಶ, ಸ್ಥಿರ, ಇಂಗಾಲ ಮತ್ತು ಉಷ್ಣಜನಕ ಕೆಲೊರಿ ಮೌಲ್ಯಗಳನ್ನು ನಿರ್ಣಯಿಸಿ ಈ ಅಂಶಗಳ ಮೇಲೆ ಕಲ್ಲಿದ್ದಲಿನ ದರ್ಜೆಯನ್ನು ಸಾಮಾನ್ಯವಾಗಿ ಗೊತ್ತು ಮಾಡಲಾಗುತ್ತದೆ. ಲೋಹ ತಯಾರಿಕೆಯ ಕಾರ್ಯಗಳಲ್ಲಿ ಉಪಯೋಗಿಸಲು ಅರ್ಹವಾದ ಕಲ್ಲಿದ್ದಲಿನ ಮತ್ತೊಂದು ಮುಖ್ಯ ಲಕ್ಷಣ ಅದರ ಕೋಕಿಂಗ್ ಗುಣ. ಹೆಚ್ಚು ಉಷ್ಣತೆಗೆ ಕಲ್ಲಿದ್ದಲನ್ನು ಕೋಕ್ ಒಲೆಗಳಲ್ಲಿ ಕಾಯಿಸಿದ ಮೇಲೆ, ಎಂದರೆ ಅದರೊಳಗಿನ ಬಾಷ್ಪಶೀಲ ದ್ರವ್ಯಗಳನ್ನು ಕರಗಿಸಿ ಹೊರಗೆ ಹಾಕಿದ ಮೇಲೆ, ಉಳಿದುಕೊಳ್ಳುವ ಅಂಶವೇ ಕೋಕ್. ಕಲ್ಲಿದ್ದಲುಗಳಿಂದ ಪಡೆದ ಕೋಕ್ ದುರ್ಬಲ ಸರಂಧ್ರಕ ಮತ್ತು ಪುಡಿಯಾಗುವಂಥದು ಆಗಿರಬಹುದು ಅಥವಾ ಒಡೆಯದ ಹಾಗೆ ಗಟ್ಟಿಯಾಗಿರಬಹುದು. ಲೋಹ ತಯಾರಿಕೆಯಲ್ಲಿ ಗಟ್ಟಿ ಕೋಕನ್ನು ಉತ್ಪತ್ತಿಮಾಡುವ ಕಲ್ಲಿದ್ದಲನ್ನು ಮಾತ್ರ ಅದುರನ್ನು ಕರಗಿಸಲು ಉಪಯೋಗಿಸಬೇಕು.

ಅವಸಾದೀ ಶಿಲೆಗಳ (ಸೆಡಿಮೆಂಟರಿ ರಾಕ್) ತಳಗಳಲ್ಲಿ ಅಥವಾ ಪದರಗಳಲ್ಲಿನ ಕಲ್ಲಿದ್ದಲಿರುತ್ತದೆ. ಪ್ರತಿಯೊಂದು ತಳಕ್ಕೂ ಒಂದು ಸೀಮ್ ಅಥವಾ ನಾಳ ಎಂದು ಹೆಸರು. ಇಂಥ ಕಲ್ಲಿದ್ದಲಿನ ಶ್ರೇಣಿಗಳು ಒಂದರ ಮೇಲೊಂದು ಒಂದು ನಿಯತ ಕ್ರಮದಲ್ಲಿರುತ್ತವೆ. ಪದರದ ನಡುವೆ ಶೇಲುಗಳ ಮತ್ತು ಮರಳುಗಲ್ಲುಗಳ ದಪ್ಪ ಪದರಗಳಿವೆ. ಒಂದು ನಾಳ ಕೆಲವು ಅಡಿಗಳಷ್ಟು ದಪ್ಪವಾಗಿರಬಹುದು ಅಥವಾ ನೂರಾರು ಅಡಿಗಳಷ್ಟೂ ಇರಬಹುದು. ಕಲ್ಲಿದ್ದಲು ಒಂದಾದ ಮೇಲೊಂದು ಬರುವ ಮಂಕಾದ ಮತ್ತು ಹೊಳಪಾದ ಪದರಗಳಿಂದ ಕೂಡಿದೆ. ಹೊಳಪುಳ್ಳ ದ್ರವ್ಯಗಳನ್ನು ವಿಟ್ರೇನ್ ಮತ್ತು ಕ್ಲಾರೇನ್ ಎಂದು ಕರೆಯುತ್ತಾರೆ. ಮಂಕಾಗಿರುವ ಅಂಶಕ್ಕೆ ಡುರೇನ್ ಎಂದು ಹೆಸರು. ಮರದ ಇದ್ದಲಿನಂತಿರುವ ಮತ್ತೊಂದು ಅಂಶವೂ ಕಲ್ಲಿದ್ದಲಿನಲ್ಲಿ ಸೇರಿದೆ; ಇದಕ್ಕೆ ಫ್ಯೂಸೇನ್ ಎಂದು ಹೆಸರು.

ಭೂಮಿಯ ಚರಿತ್ರೆಯನ್ನು ನೋಡಿದ್ದೇ ಆದರೆ ಎರಡು ಅವಧಿಗಳಲ್ಲಿ, ಕಾರ್ಬಾನಿಫರಸ್–ಪರ್ಮಿಯನ್ (ಸುಮಾರು 275–200 ದಶಲಕ್ಷ ವರ್ಷಗಳ ಕೆಳಗೆ), ಮತ್ತು ಟರ್ಷಿಯರಿ ಅವಧಿ (40–60 ದಶಲಕ್ಷ ವರ್ಷಗಳ ಕೆಳಗೆ) ಗಳಲ್ಲಿ, ವಿಸ್ತಾರವಾದ ಕ್ಷೇತ್ರಗಳಲ್ಲಿ ಕಲ್ಲಿದ್ದಲಿನ ರಚನಾಪ್ರಕ್ರಿಯೆಗಳು ಜರುಗುತ್ತಿದ್ದುದಾಗಿ ಕಂಡುಬರುತ್ತದೆ. ಜಗತ್ತಿನಲ್ಲಿರುವ ಕಲ್ಲಿದ್ದಲುಗಳೆಲ್ಲ ಇವೆರಡರ ಪೈಕಿ ಒಂದು ಅವಧಿಯಲ್ಲಿ ರೂಪುಗೊಂಡವು. ಕಾರ್ಬಾನಿಫರಸ್–ಪರ್ಮಿಯನ್ ಕಾಲದ ಕಲ್ಲಿದ್ದಲುಗಳು ಹೆಚ್ಚು ಭೂಭಾಗವನ್ನು ಆಕ್ರಮಿಸಿಕೊಂಡಿವೆ. ಇವುಗಳ ಗುಣ ಶ್ರೇಷ್ಠತರವಾಗಿದೆ. ಪ್ರಪಂಚದ ಅತ್ಯುತ್ತಮ ಕಲ್ಲಿದ್ದಲುಗಳು ಈ ಅವಧಿಯವು. ಆದರೆ ಟರ್ಷಿಯರಿ ಅವಧಿಯ ಕಲ್ಲಿದ್ದಲುಗಳು ಸಾಮಾನ್ಯವಾಗಿ ಲಿಗ್ನೈಟುಗಳು.

ಭಾರತದಲ್ಲಿ ಕಲ್ಲಿದ್ದಲಿನ ವಲಯಗಳು: ಪರ್ಮಿಯನ್ ಮತ್ತು ಟರ್ಷಿಯರಿ ಅವಧಿಗಳ ಎರಡು ತಳಗಳಲ್ಲೂ ಇವು ದೊರೆಯುತ್ತವೆ. ಆದರೆ ಮೊದಲನೆಯದು ಹೆಚ್ಚು ವಿಸ್ತಾರವೂ ಮುಖ್ಯವೂ ಆಗಿದೆ. ಈ ಕಲ್ಲಿದ್ದಲುಗಳು ಆ ಕಾಲದಲ್ಲಿ ಭಾರತದ ಪರ್ಯಾಯದ್ವೀಪ ಭಾಗದಲ್ಲಿದ್ದ ಅನೇಕ ಸಿಹಿನೀರಿನ ಸರಹದ್ದುಗಳ ತಳದಲ್ಲಿನ ಅವಸಾದೀ ಶಿಲೆಗಳ ಗುಂಪಿನಲ್ಲಿ ದೊರೆಯುತ್ತವೆ. ಆಗಿನ ನದಿಗಳು ಬೇಕಾದಷ್ಟು ಸಸ್ಯ ಪದಾರ್ಥಗಳನ್ನು ಈ ಸರೋವರ ಪಾತ್ರಗಳಿಗೆ ತಂದುಹಾಕಿದುವು. ಈಗ ಅವು ಕಲ್ಲಿದ್ದಲಿನ ಸ್ತರಗಳಾಗಿ ಗೋಚರಿಸುತ್ತವೆ. ಆ ಕಾಲದಲ್ಲಿ ಸಿಹಿನೀರಿನ ಸರಸ್ಸುಗಳ ತಳಗಳಲ್ಲಿ ಸ್ಥಾಪಿತವಾದ ಅವಸಾದೀ ಶಿಲೆಗಳನ್ನು ಭಾರತದಲ್ಲಿ ಗೊಂಡವಾನ ಸಮುದಾಯವೆಂದು ಕರೆಯುತ್ತಾರೆ. ಇಂಥ ಕಲ್ಲಿದ್ದಲಿರುವ ಕ್ಷೇತ್ರಗಳು ಈಗ ಬಿಹಾರ, ಬಂಗಾಳ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ಆಂಧ್ರಪ್ರದೇಶ ಮತ್ತು ಆಸ್ಸಾಮುಗಳಲ್ಲಿವೆ. ಕಲ್ಲಿದ್ದಲಿನ ಕ್ಷೇತ್ರಗಳನ್ನು ಪರಿಶೀಲಿಸಿದರೆ ಅವು ಮುಖ್ಯವಾಗಿ ಮೂರು ನದೀಕಣಿವೆಗಳಲ್ಲಿ ಸ್ಥಾಪಿತವಾಗಿರುವುದು ಕಾಣುತ್ತದೆ. ಅವು ಶೋಣ–ದಾಮೋದರ. ಕಣಿವೆ, ಮಹಾನದೀ ಕಣಿವೆ ಮತ್ತು ವಾರ್ಧಾ–ಗೋದಾವರೀ ಕಣಿವೆ. ಇವು ಬಿಟುಮಿನಸ್ ಮಾದರಿಯವಾಗಿದ್ದು ಮತ್ತು ಒಳ್ಳೆ ಕೋಕ್‌ನ ಕಲ್ಲಿದ್ದಲುಗಳನ್ನು ಒಳಗೊಂಡಿವೆ. ಕಲ್ಲಿದ್ದಲಿನ ಪ್ರಧಾನ ಕ್ಷೇತ್ರ ಬಂಗಾಳ ಮತ್ತು ಬಿಹಾರದ ದಾಮೋದರ ಕಣಿವೆ. ಅದರಲ್ಲಿ ರಾಣಿಗಂಜ್, ಝರಿಯಾ ಕಲ್ಲಿದ್ದಲಿನ ಕ್ಷೇತ್ರಗಳು ಬಹು ಮುಖ್ಯವಾದವು. ಮೊದಲನೆಯದರ ಹರವು 1035.6 ಚ.ಕಿಮೀ ಎರಡನೆಯದರದು 453.2 ಚ.ಕಿಮೀ ಇವೆರಡರಿಂದ ಭಾರತದ ಒಟ್ಟು ಉತ್ಪನ್ನದ ಮೂರರಲ್ಲಿ ಎರಡು ಭಾಗದಷ್ಟು ಕಲ್ಲಿದ್ದಲು ಸಿಕ್ಕುತ್ತದೆ. ಲೋಹ ತಯಾರಿಕೆಗೆ ಬೇಕಾದ ಶ್ರೇಷ್ಠ ಕಲ್ಲಿದ್ದಲು ಸಿಕ್ಕುವ ಸ್ಥಳ ವಸ್ತುತಃ ಝರಿಯಾ ಕ್ಷೇತ್ರವೊಂದೇ, ಮಧ್ಯಪ್ರದೇಶದಲ್ಲಿ ಸಾತ್ಪುರ ಛತ್ತೀಸ್ ಘರ್ ಮತ್ತು ರೇವಾ ಕ್ಷೇತ್ರಗಳಲ್ಲಿ ಕಲ್ಲಿದ್ದಲು ದೊರೆಯುತ್ತದೆ. ಈಚಿನ ವರ್ಷಗಳಲ್ಲಿ ಈ ಕ್ಷೇತ್ರಗಳನ್ನು ಕಲ್ಲಿದ್ದಲಿನ ಉತ್ಪಾದನೆಗಾಗಿ ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಆಂಧ್ರಪ್ರದೇಶ ಮತ್ತು ಒರಿಸ್ಸಗಳಲ್ಲಿ ಕಲ್ಲಿದ್ದಲಿನ ಮುಖ್ಯ ಕ್ಷೇತ್ರಗಳು ಸಿಂಗರಾಣಿ ಮತ್ತು ತಾಳಚೇರುಗಳಲ್ಲಿವೆ. ಮಹಾರಾಷ್ಟ್ರ ಮತ್ತು ಒರಿಸ್ಸಗಳಲ್ಲಿ ಅಲ್ಪಪ್ರಮಾಣದಲ್ಲಿ ಗೊಂಡವಾನ ಕಲ್ಲಿದ್ದಲುಗಳನ್ನು ತೆಗೆಯಲಾಗುತ್ತಿದೆ. ಟರ್ಷಿಯರಿ ಕಾಲದ ಕಲ್ಲಿದ್ದಲುಗಳು ಅಸ್ಸಾಂ, ಕಾಶ್ಮೀರ, ರಾಜಸ್ಥಾನ, ತಮಿಳುನಾಡು ಮತ್ತು ಕಚ್ ರಾಜ್ಯಗಳಲ್ಲಿ ದೊರೆಯುತ್ತವೆ. ಲಿಗ್ನೈಟುಗಳನ್ನು ಕಾಶ್ಮೀರದ ಕಣಿವೆಯಲ್ಲಿ, ರಾಜಸ್ಥಾನದ ಬಿಕನೀರಿನ ಪ್ರದೇಶದಲ್ಲಿ ಮತ್ತು ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ನೈವೇಲಿಯಲ್ಲಿ ತೋಡಿ ಹೊರತೆಗೆಯುತ್ತಾರೆ. ಇವುಗಳಲ್ಲಿ ಈಗ ತಾನೆ ಬೆಳವಣಿಗೆಗೆ ಬಂದಿರುವ ನೈವೇಲಿ ಲಿಗ್ನೈಟ್ ಕ್ಷೇತ್ರ ಅತ್ಯಂತ ಮುಖ್ಯವಾದದ್ದು.

ಅನೇಕ ಕಲ್ಲಿದ್ದಲಿನ ಸ್ತರಗಳು ಭೂಮಿಯ ಕೆಳಗೆ ದೊರೆಯುತ್ತವೆ. ನೆಲದಲ್ಲಿ ಗಣಿ ತೋಡಿ ಇವನ್ನು ಹೊರಕ್ಕೆ ತೆಗೆಯಬೇಕಾಗುತ್ತದೆ. ಭಾರತದಲ್ಲಿ 4" ಗಿಂತ ಹೆಚ್ಚು ದಪ್ಪವಾಗಿರುವ ಕಲ್ಲಿದ್ದಲಿನ ಸ್ತರಗಳನ್ನು ನಷ್ಟಕ್ಕೊಳಗಾಗದೆ ತೋಡಿ ತೆಗೆಯ ಬಹುದಾದಿದೆ. ಬಿಹಾರದ ಬೋಕಾರೋ ಕಲ್ಲಿದ್ದಲಿನ ಹರವಿನಲ್ಲಿ 157"ಗಳಷ್ಟು ದಪ್ಪಗಿರುವ ಕಾರ್‌ನಾಲೀ ಕಲ್ಲಿದ್ದಲಿನ ಪದರವೂ ಮಧ್ಯಪ್ರದೇಶದ ಕೋರಬ ಕಲ್ಲಿದ್ದಲಿನ ಹರವಿನಲ್ಲಿ 150"ಗಳಷ್ಟು ದಪ್ಪಗಿರುವ ಕಲ್ಲಿದ್ದಲಿನ ಪದರವೂ ಸಿಕ್ಕಿವೆ. ಇವು ಭಾರತದ ಅತ್ಯಂತ ದಪ್ಪಗಿರುವ ಕಲ್ಲಿದ್ದಲಿನ ಪದರಗಳ

ಶ್ರೇಣಿಗೆ ಸೇರುತ್ತವೆ. ಇತ್ತೀಚೆಗೆ ಮಧ್ಯಪ್ರದೇಶದ ಸಿಂಗ್ರೌಲಿ ಕಲ್ಲಿದ್ದಲು ಕ್ಷೇತ್ರದಲ್ಲಿ 250'ಗಳಷ್ಟು ದಪ್ಪಗಿರುವ ಮತ್ತೊಂದು ಕಲ್ಲಿದ್ದಲಿನ ಸ್ತರ ಸಿಕ್ಕಿರುವುದಾಗಿ ವರದಿಯಾಗಿದೆ. ಭಾರತದ ದೇಶದಲ್ಲಿ ಕಲ್ಲಿದ್ದಲಿನ ಗಣಿ ಕೆಲಸ ನಾಲ್ಕು ಲಕ್ಷಕ್ಕಿಂತಲೂ ಹೆಚ್ಚಿನ ಜನಕ್ಕೆ ಉದ್ಯೋಗವನ್ನು ಕಲ್ಪಿಸಿಕೊಡುತ್ತಿರುವ ಪ್ರಧಾನೋದ್ಯಮವಾಗಿದೆ. ಈಗ ಉತ್ಪನ್ನವಾಗುತ್ತಿರುವ ಕಲ್ಲಿದ್ದಲಿನ ಪರಿಮಾಣ 62 ದಶಲಕ್ಷ ಮೆಟ್ರಿಕ್ ಟನ್ನುಗಳಿಗಿಂತ ಹೆಚ್ಚಾಗಿದೆ. ಇದರ ಬೆಲೆ 150 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು. ಇದು ಭಾರತದಲ್ಲಿ ಉತ್ಪನವಾಗಿರುವ ಖನಿಜಗಳ ಒಟ್ಟು ಬೆಲೆಯ ಶೇ. 70 ಆಗುತ್ತದೆ. ಕಲ್ಲಿದ್ದಲನ್ನು ಅತಿ ಹೆಚ್ಚಾಗಿ ಬಳಸಿಕೊಳ್ಳುವ ಪ್ರಧಾನೋದ್ಯಮಗಳು ಎರಡು–ರೈಲ್ವೆಗಳು ಮತ್ತು ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಗಳು. ಇವೆರಡೂ ಸೇರಿ ಕಲ್ಲಿದ್ದಲಿನ ಒಟ್ಟು ಉತ್ಪತ್ತಿಯ ಅರ್ಧಭಾಗದಷ್ಟನ್ನು ಉಪಯೋಗಿಸಿಕೊಳ್ಳುತ್ತವೆ. (ಕೆ.ಎಸ್.ವಿ.ಆರ್.)

**ಕಲ್ಲಿದ್ದಲಿನ ನಿಕ್ಷೇಪಗಳು (ಭಾರತದ) :** ಭೂ ಇತಿಹಾಸದ ಎರಡು ಸ್ಪಷ್ಟ ಅವಧಿಗಳಿಗೆ ಸೀಮಿತವಾದ ಕಲ್ಲಿದ್ದಲಿನ ನಿಕ್ಷೇಪಗಳನ್ನು ಭಾರತದಲ್ಲಿ ಕಾಣಬಹುದು– ಪರ್ಮಿಯನ್ ಯುಗದವು (ಸು. 275–200 ದಶಲಕ್ಷ ವರ್ಷ ಪ್ರಾಚೀನ ಕಾಲದವು); ಇಯೊಸೀನ್ ಮತ್ತು ಮಿಯೊಸೀನ್ ಯುಗದವು (ಸು. 60–25 ದಶಲಕ್ಷ ವರ್ಷ ಪ್ರಾಚೀನ ಕಾಲದವು). ಮೊದಲಿನವು ಗೊಂಡ್ವಾನಾ ಸಮುದಾಯದಲ್ಲಿವೆ. ಎರಡನೆಯವು ಟರ್ಷಿಯರಿ ಸಮುದಾಯದಲ್ಲಿವೆ. ಆದ್ದರಿಂದ ಇವುಗಳಿಗೆ ಅನುಕ್ರಮವಾಗಿ ಗೊಂಡ್ವಾನಾ ಕಲ್ಲಿದ್ದಲು, ಟರ್ಷಿಯರಿ ಕಲ್ಲಿದ್ದಲು ಎಂಬ ಹೆಸರುಗಳು ಬಂದಿವೆ. ಇವೆರಡರ ಪೈಕಿ ಗೊಂಡ್ವಾನಾ ಕಲ್ಲಿದ್ದಲು ಉತ್ತಮ ದರ್ಜೆಗೆ ಸೇರಿದೆ. ಅದು ಯಥೇಚ್ಛವಾಗಿ ದೊರಕುವುದೂ ಅಲ್ಲದೆ ಹೆಚ್ಚು ಭೂ ಭಾಗವನ್ನು ಸಹ ಆವರಿಸಿಕೊಂಡಿದೆ. ಟರ್ಷಿಯರಿ ಕಲ್ಲಿದ್ದಲು ಹೇರಳವಾಗಿಲ್ಲದಿದ್ದರೂ ಗಣಿ ಉದ್ಯೋಗಕ್ಕೆ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಗೊಂಡ್ವಾನಾ ಕಲ್ಲಿದ್ದಲು ಬಿಟುಮಿನಸ್ ವರ್ಗದ್ದು. ಇದು ಅತ್ಯಂತ ಸಾಮಾನ್ಯವಾದದ್ದು ಮತ್ತು ದಿನವಹಿ ಕಾರ್ಖಾನೆಗಳಲ್ಲೂ ರೈಲ್ವೆಯಲ್ಲೂ ಮನೆಗಳಲ್ಲೂ ಉಪಯೋಗಕ್ಕೆ ಬರುತ್ತಿರುವಂಥದು. ಗೊಂಡ್ವಾನಾ ಕಲ್ಲಿದ್ದಲಿನ ಪ್ರದೇಶಗಳ ಹರವನ್ನು ನೋಡಿದ್ದೇ ಆದರೆ ಅವು ಮುಖ್ಯವಾಗಿ ಈ ಮೂರು ನದಿ ಕಣಿವೆಗಳಲ್ಲಿ ಕಂಡುಬರುವುವು: ಶೋಣ–ದಾಮೋದರ ಕಣಿವೆ, ಮಹಾನದಿ ಕಣಿವೆ, ವಾರ್ಧಾ–ಗೋದಾವರಿ ಕಣಿವೆ. ಈ ಕಾರಣದಿಂದ ಕಲ್ಲಿದ್ದಲಿನ ಸ್ತರಗಳು ಮುಖ್ಯವಾಗಿ ಪಶ್ಚಿಮ ಬಂಗಾಳ, ಬಿಹಾರ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಒರಿಸ್ಸ ರಾಜ್ಯಗಳಲ್ಲಿ ಕಾಣುವುವು. ಇವಲ್ಲದೆ ಕೆಲವು ಸಣ್ಣ ನಿಕ್ಷೇಪಗಳ ಅಸ್ಸಾಂ ಮತ್ತು ಸಿಕ್ಕಿಂ ಪ್ರದೇಶಗಳಲ್ಲೂ ಇವೆ. ಟರ್ಷಿಯರಿ ಕಲ್ಲಿದ್ದಲು ಕೀಳು ದರ್ಜೆಗೆ ಸೇರಿದ ಲಿಗ್ನೈಟ್ ನಮೂನೆಯದು. ಉತ್ಪಾದನೆ ದೃಷ್ಟಿಯಿಂದ ಇದು ಅಷ್ಟು ಪ್ರಧಾನವಾದುದಲ್ಲವಾದರೂ ಇದಕ್ಕೆ ಆರ್ಥಿಕ ಮಹತ್ತ್ವ ಉಂಟು. ಈ ದರ್ಜೆಯ ಕಲ್ಲಿದ್ದಲು ಅಸ್ಸಾಂ, ಕಾಶ್ಮೀರ, ತಮಿಳುನಾಡು, ರಾಜಸ್ತಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಸಿಕ್ಕುತ್ತದೆ. ಭಾರತದ ಕಲ್ಲಿದ್ದಲು ಕ್ಷೇತ್ರಗಳನ್ನೂ ಅವುಗಳ ಹರವನ್ನೂ ಕೆಳಗೆ ಸೂಚಿಸಲಾಗಿದೆ.

**ಗೊಂಡ್ವಾನಾ ಕಲ್ಲಿದ್ದಲು ಕ್ಷೇತ್ರಗಳು**

| ರಾಜ್ಯಗಳು | | ಕಲ್ಲಿದ್ದಲು ಕ್ಷೇತ್ರಗಳು |
|---|---|---|
| ಪಶ್ಚಿಮ ಬಂಗಾಳ: | | |
| 1 | ದಾಮೋದರ ಕಣಿವೆ | ರಾಣಿಗಂಜ್ (ಬರಾಕರ್ ಪೂರ್ವಭಾಗ), ಬಂಕೂರ. |
| 2 | ಡಾರ್ಜಿಲಿಂಗ್ ಜಿಲ್ಲೆ | ಬಾಗ್ರ ಕೋಡೆ ಟಿನ್‌ಧೇರಿಯ. |
| ಬಿಹಾರ: | | |
| 1 | ದಾಮೋದರ ಕಣಿವೆ | ರಾಣಿಗಂಜ್ (ಬರಾಕರ್ ಪಶ್ಚಿಮ ಭಾಗ), ಝರಿಯಾ, ಚಂದ್ರಪುರ, ಬೊಕಾರೊ, ರಾಮಗಡ್,ದಕ್ಷಿಣ ಕರಣಪುರ, ಉತ್ತರ ಕರಣಪುರ. |
| 2 | ರಾಜಮಹಲ್ ಪ್ರದೇಶ | ಹುರಾ, ಗಿಲ್ ಹುರಿಯ, ಚುಪರ್ ಭಿಟ, ಪಚ್ವಾರ, ಬ್ರಾಹ್ಮಣಿ. |
| 3 | ದೇವಗಡ್ ಪ್ರದೇಶ | ಕುಂಡಿಟ್–ಕುರೈಯಾ, ಸಹಜೂರಿ, ಜೈನ್ತಿ. |
| 4 | ಹಜಾರಿಬಾಗ್ ಜಿಲ | ಗಿರಿಧಿ ಜೋಪೆ ಇಟ್‌ಖೊವಿ |
| 5 | ಪಲಾಮು ಪ್ರದೇಶ | ಔರಂಗ ಹುಟಾರ್ ಡಾಲ್ಟನ್‌ಗಂಜ್ |
| ಮಧ್ಯಪ್ರದೇಶ: | | |
| 1 | ದಕ್ಷಿಣ ರೇವಾ ಪ್ರದೇಶ | ಸಿಂಗ್ರೌಲಿ, ಉಮೇರಿಯಾ, ಜೋಹಿಲ್ಲಾ ನದಿಸೊಹಾಗ್ ಪುರ. |
| 2 | ಉತ್ತರ ಛತ್ತೀಸ್ ಗಡ್ ಪ್ರದೇಶ | ತಾತಾಪಾನಿ–ರಾಮಕೋಲ, ಝಿಲ್ ಮಿಲಿ, ಸನಹಟ್, ಜಾಗ್ರಖಾಂಡ್, ಚೆರಿಮಿರಿ, ಕುರೇಸಿಯಾ, ಕೊರಿಯಾಗಡ್, ಬಿಸ್ರಾಮಪುರ, ಬನ್ ಸಾರ್, ಲಖನ್‌ಪುರ, ಪಾಂಚ್‌ಭಾಯಿನಿ, ದಂಹಾಮುಂಡ, ಸೆಂದೂರ್ ಗಡ್. |
| 3 | ದಕ್ಷಿಣ ಛತ್ತೀಸ್ ಗಡ್ ಪ್ರದೇಶ | ಹಸ್ ಡೊ–ರಾಮಪುರ, ಕೊರ್ಬಾ, ರಾಯಗಡ್, ಮಾಂಡ್ ನದಿ, ಕಂಕಣಿ |
| 4 | ಸಾತ್ಪುರ ಪ್ರದೇಶ | ಮೊಹಪಾನಿ, ಸೊನಾಡಾ, ಷಾಹಪುರ್, ದುಲೇ ಹಾರಾ, ಪಥಾಕೆರ, ಬಂಹನ್ವಾರಾ, ಟವಾ ಕಣಿವೆ, ಪೆಂಚ್ ಕಣಿವೆ,ಕನ್ ಹನ್ ಕಣಿವೆ |
| ಮಹಾರಾಷ್ಟ್ರ: | | |
| 1 | ನಾಗಪುರ ಪ್ರದೇಶ | ಕಾಮ್ತಿ, ಬೊಕಾರೊ, ಉಮ್ರೇರ್. |
| 2 | ವಾರ್ಧಾ ಕಣಿವೆ | ಬಂದರ್, ವರೋರಾ, ರಾಜುರ್, ಚಂದಾ, ಘುಗಸ್–ತೆಲ್ ವಾಸಾ, ಬಲ್ಲಾರ್ ಪುರ, ವಾಮನ ಪಲ್ಲಿ, ಅಂತರ್ ಗಾವ್–ಅಕ್ಸಾಪುರ್, ಸಸ್ತಿ–ರಾಜೂರ |
| ಒರಿಸ್ಸಾ: | | |
| 1 | ಮಹಾನದಿ ಕಣಿವೆ | ತಾಲ್ ಚಿರ್, ರಾಂಪುರ್–ಹಿಂಗಿರ್. |
| ಆಂಧ್ರಪ್ರದೇಶ: | | |
| 1 | ಗೋದಾವರಿ ಕಣಿವೆ | ತಂದೂರ್–ಕನಾಲಾ, ಗೋದಾವರಿ, ಜನಗಾಂ,ಸೇಂದ್ರಪಲ್ಲಿ, ಕಾಮಾವರಂ, ಒಡಲ–ಅಲ್ಲಪಲ್ಲಿ, ಸಿಂಗರೇಣಿ (ಎಲ್ಲಂಡು), ಬಕೊತ್ತಗುಡಿಯಂ, ದಮಾರ್ಚೆಲರಾ, ಕನ್ನೇಗಿರಿ |

**ಟರ್ಷಿಯರಿ ಕಲ್ಲಿದ್ದಲು ಕ್ಷೇತ್ರಗಳು**

| ರಾಜ್ಯಗಳು | | ರಾಜ್ಯಗಳು |
|---|---|---|
| ಅಸ್ಸಾಂ: | | |
| 1 | ಅಸ್ಸಾಮಿನ ಮೇಲ್ಭಾಗ | ಡಯಾಂಗ್ ಕಣಿವೆ, ಡಿಸೈ ಕಣಿವೆ, ಜಂಜಿ, ನಾಜಿರ, ಜೈಪುರ್, ಮಾಕುಂ, ನಾಮ್ ಚಿಕ್ ಸಫ್ರೈ ಕಣಿವೆ. |
| 2 | ಮಿಕಿರ್ ಬೆಟ್ಟ ಪ್ರದೇಶ | ಕೊಯಿಲಾಜಾನ್, ಡಿಸೊಬೈ, ಲಾಂಗಲೈ. |
| 3 | ಖಾಸಿ ಮತ್ತು ಜೈನ್ ಷಿಯಾ ಬೆಟ್ಟಪ್ರದೇಶ | ಉಮ್ ರಿಲೆಂಗ್, ಮಾಬೆಹಲಾರ್ಕರ್, ಬಾಪಂಗ್,ವಾಲಾಂಗ್, ಚಿರಾಪುಂಜಿ, ಲಕಾಡಂಗ್. |
| 4 | ಗಾರೊ ಬೆಟ್ಟಪ್ರದೇಶ | ಟ್ಯೂರಾ, ರೋಂಗ್ರಗಿರಿ, ಡರಂಗಿರಿ, ಸಿಜು, ಲಗ್ರಿನ್. |
| | ಕಾಶ್ಮೀರ | ಕಲಾಕೋಟ್, ಮೆಟ್ ಕಾ, ಮಹೋಗಲ, ಚಕರ್, ಧನ್ ಸ್ವಾಲ್–ಸವಾಲ್ ಕೋಟ್, ಲಡ್ಡ, ಚಿಂಕಾ ಕಾಶ್ಮೀರ ಕಣಿವೆ ಲಿಗ್ನೈಟುಗಳು |
| | ತಮಿಳುನಾಡು | ನೈವೇಲಿ, ಕಡಲೂರು–ಪಾಂಡಿಚೇರಿ ಪ್ರದೇಶ. |
| | ರಾಜಸ್ತಾನ್ | ಪಲಾನ |
| | ಗುಜರಾತ್ | ಉಮರ್ ಸರ್ |
| | ಕೇರಳ | ವರ್ಕಲ, ಕ್ವಿಲಾನ್ |

**ಗೊಂಡ್ವಾನಾ ಕಲ್ಲಿದ್ದಲು:** ಹಿಂದೆಯೇ ತಿಳಿಸಿರುವಂತೆ ಈ ಕಲ್ಲಿದ್ದಲು ಗೊಂಡ್ವಾನಾ ಸಮುದಾಯದ ಸ್ತರಗಳಲ್ಲಿ ಸೇರಿರುವುದರಿಂದ ಈ ಹೆಸರು ಬಂದಿದೆ. ಭಾರತ ಪರ್ಯಾಯ ದ್ವೀಪದ ಹಲವೆಡೆಗಳಲ್ಲಿ ಕಾರ್ಬಾನಿಫೆರಸ್ ಯುಗದ (ಸುಮಾರು 275 ದಶಲಕ್ಷ ವರ್ಷಗಳ ಹಿಂದೆ) ಅಂತ್ಯದಲ್ಲಿ ಸಿಹಿನೀರಿನ ಸರೋವರಗಳಿದ್ದು ಅವುಗಳಲ್ಲಿ 15,000'–20,000'ಗೂ ಮೀರಿ ಶೇಖರವಾದ ಶಿಲಾಸ್ತರಗಳಿಗೆ ಗೊಂಡ್ವಾನಾ ಸಮುದಾಯವೆಂದು ಕರೆಯಲಾಗಿದೆ. ಇಷ್ಟು ಗಾತ್ರದ ಶಿಲಾಸಮುದಾಯವನ್ನು ಕೆಳಭಾಗ ಮತ್ತು ಮೇಲ್ಭಾಗವೆಂದು ವಿಂಗಡಿಸಬಹುದು. ಕೆಳಭಾಗ 10,000'ಗಳಿಗಿಂತ ಹೆಚ್ಚಾಗಿ ಮಂದವಾಗಿದ್ದು ಎಲ್ಲ ಕಲ್ಲಿದ್ದಲನ್ನೂ ಒಳಗೊಂಡಿದೆ. ಈ ಭಾಗವನ್ನು ಕೆಳಕಂಡಂತೆ ವಿಭಾಗಿಸಲಾಗಿದೆ.

| | | | |
|---|---|---|---|
| | ಪಂಚೆಟ್ ಸಮೂಹ | | 2,000’ |
| ಕೆಳ ಗೊಂಡ್ವಾನಾ | ದಾಮೂದಾ ಸಮೂಹ | ರಾಣಿಗಂಜ್ ಶ್ರೇಣಿ | 3,000’ |
| | | ಕಲ್ಲಿದ್ದಲಿಲ್ಲದ ಶ್ರೇಣಿ | 2,000’ |
| | | ಬರಾಕರ್ ಶ್ರೇಣಿ | 2,500’ |
| | ತಾಲ್ ಚೀರ್ ಸಮೂಹ | | 1,000’ |

ಉತ್ಪಾದನೆಗೆ ಯೋಗ್ಯವಾದ ಕಲ್ಲಿದ್ದಲಿನ ಸ್ತರಗಳು ದಾಮೂದಾ ಸಮೂಹದಲ್ಲಿ ಮಾತ್ರ ಇರುವುವು. ಮತ್ತು ಎರಡು ಸಮಮಟ್ಟದಲ್ಲಿ ದೊರಕುವುವು. ಒಂದು, ತಳಭಾಗದ ಬರಾಕರ್ ಶ್ರೇಣಿಯಲ್ಲಿ; ಎರಡನೆಯದು, ಮೇಲಿನ ಭಾಗದ ರಾಣಿಗಂಜ್ ಶ್ರೇಣಿಯಲ್ಲಿ. ಇವೆರಡು ಕಲ್ಲಿದ್ದಲಿರುವ ಶ್ರೇಣಿಗಳ ಮಧ್ಯೆ ಕಲ್ಲಿದ್ದಲು ಇಲ್ಲದ ಶ್ರೇಣಿ ಇದೆ. ಬರಾಕರ್ ಶ್ರೇಣಿಯ ಶಿಲೆಗಳು ಕಾಣಬರುವ ಪ್ರದೇಶಗಳಲ್ಲೆಲ್ಲ ಉತ್ಪಾದನೆಗೆ ಯೋಗ್ಯವಾದ ಕಲ್ಲಿದ್ದಲಿನ ಸ್ತರಗಳು ಇವೆ. ಆದರೆ ರಾಣಿಗಂಜ್ ಶ್ರೇಣಿಯ ಕಲ್ಲಿದ್ದಲು ಪ್ರಧಾನವಾಗಿ ಅದೇ ಕಲ್ಲಿದ್ದಲು ಕ್ಷೇತ್ರದಲ್ಲೂ ಸ್ವಲ್ಪ ಮಟ್ಟಿಗೆ ಝರಿಯಾ ಮತ್ತು ಕರಣಪುರ ಕಲ್ಲಿದ್ದಲು ಕ್ಷೇತ್ರಗಳಲ್ಲೂ ಕಾಣುತ್ತವೆ.

ಸಾಮಾನ್ಯವಾಗಿ ಗೊಂಡ್ವಾನಾ ಕಲ್ಲಿದ್ದಲು ಬಿಟುಮಿನಸ್ ವರ್ಗದ್ದು. ಬರಾಕರ್ ಕಲ್ಲಿದ್ದಲು ರಾಣಿಗಂಜ್ ಕಲ್ಲಿದ್ದಲಿಗಿಂತ ಶ್ರೇಷ್ಠ ತರಗತಿಯದು. ಎರಡು ಬಗೆಯ ಕಲ್ಲಿದ್ದಲುಗಳಲ್ಲೂ ಗಂಧಕದ ಮತ್ತು ರಂಜಕದ ಅಂಶಗಳು ಅತ್ಯಲ್ಪ ಪ್ರಮಾಣದಲ್ಲಿವೆ. ಬರಾಕರ್ ಕಲ್ಲಿದ್ದಲು ಸಣ್ಣ ಜ್ವಾಲೆಯೊಡನೆ ಉರಿಯುವ. ಶ್ರೇಷ್ಠ ವರ್ಗದ ಗಟ್ಟಿ ಕೋಕನ್ನೂ ಉತ್ಪತ್ತಿಮಾಡಬಲುದು. ರಾಣಿಗಂಜ್ ಕಲ್ಲಿದ್ದಲು ನೀಳಜ್ವಾಲೆಯೊಡನೆ ಉರಿಯುವ ದುರ್ಬಲವಾದ ಕೋಕನ್ನು ಉತ್ಪತ್ತಿಮಾಡಬಲ್ಲುದು. ಲೋಹ ಕರಗಿಸುವ ಕುಲುಮೆಗಳಲ್ಲಿ ಉಪಯೋಗಿಸಲು ಬರಾಕರ್ ಕಲ್ಲಿದ್ದಲೂ ಹಬೆ ಯಂತ್ರಗಳು ಮತ್ತು ಅನಿಲ ಕಾರ್ಖಾನೆಗಳಲ್ಲಿ ಉಪಯೋಗಿಸಲು ರಾಣಿಗಂಜ್ ಕಲ್ಲಿದ್ದಲೂ ಅತ್ಯುತ್ತಮವೂ ಯೋಗ್ಯವೂ ಆಗಿವೆ.

**ಗೊಂಡ್ವಾನಾ ಕಲ್ಲಿದ್ದಲು ಕ್ಷೇತ್ರಗಳು:** ಭಾರತದ ವಿವಿಧ ಕಲ್ಲಿದ್ದಲು ಕ್ಷೇತ್ರಗಳನ್ನು ರಾಜ್ಯಗಳ ಪ್ರಕಾರ ವಿಂಗಡಿಸಿ ಈ ಮೊದಲೇ ನಮೂದಿಸಲಾಗಿದೆ. ಇವುಗಳ ಪೈಕಿ ದಾಮೋದರ್ ಕಣಿವೆಯಲ್ಲಿರುವ ಮತ್ತು ಪಶ್ಚಿಮ ಬಂಗಾಳ, ಬಿಹಾರಿನಲ್ಲಿ ಸ್ಥಾಪಿತವಾಗಿರುವ ಕ್ಷೇತ್ರಗಳು ಎಲ್ಲಕ್ಕಿಂತಲೂ ಮುಖ್ಯವಾದುವು. ಏಕೆಂದರೆ ಇಲ್ಲಿ ಭಾರತದ ಅತ್ಯುತ್ತಮ ಕಲ್ಲಿದ್ದಲು ಇರುವುದಲ್ಲದೆ ಇದರ ಉತ್ಪಾದನೆ ಬಹು ಹೆಚ್ಚಾಗಿದೆ. ಪ್ರತಿವರ್ಷವೂ, ಭಾರತದ ಒಟ್ಟು ಕಲ್ಲಿದ್ದಲ ಉತ್ಪತ್ತಿಯಲ್ಲಿ ಮುಕ್ಕಾಲು ಭಾಗದಷ್ಟು ಈ ಪ್ರದೇಶದಿಂದ ಉತ್ಪಾದನೆಯಾಗುತ್ತಿದೆ. ಈ ಕಣಿವೆಯಲ್ಲಿ ಭಾರತದ ಪ್ರಧಾನ ಕಲ್ಲಿದ್ದಲು ಕ್ಷೇತ್ರಗಳಿವೆ. ಅವು ರಾಣಿಗಂಜ್, ಝರಿಯಾ, ಬೊಕಾರೊ ಮತ್ತು ಕರಣಪುರ ಕ್ಷೇತ್ರಗಳು. ಇವುಗಳ ಸಂಕ್ಷೇಪ ವಿವರಣೆಯನ್ನು ಈ ಕೆಳಗೆ ಕೊಡಲಾಗಿದೆ.

**ರಾಣಿಗಂಜ್ ಕಲ್ಲಿದ್ದಲು ಕ್ಷೇತ್ರ :** ಹೆಚ್ಚು ಭಾಗ ಪಶ್ಚಿಮ ಬಂಗಾಳದಲ್ಲೂ ಪಶ್ಚಿಮದ ಸ್ವಲ್ಪ ಭಾಗ ಬಿಹಾರ್ ರಾಜ್ಯದಲ್ಲೂ ಇವೆ. ಇದು ದಾಮೋದರ್ ಕಣಿವೆ ಪ್ರದೇಶದ ಅತ್ಯಂತ ಹಳೆಯ ಕಲ್ಲಿದ್ದಲು ಕ್ಷೇತ್ರ ; ಕಲ್ಕತ್ತೆಗೆ ವಾಯುವ್ಯ ದಿಕ್ಕಿನಲ್ಲಿ 115 ಮೈಲಿ ದೂರದಲ್ಲಿದೆ ಮತ್ತು ಮುಖ್ಯ ರೈಲ್ವೆ ನಿಲ್ದಾಣವಾದ ಅಸನ್‌ಸಾಲ್ ಈ ಕ್ಷೇತ್ರದ ಮಧ್ಯದಲ್ಲಿದೆ. ಆಗ್ನೇಯ ದಿಕ್ಕಿನಲ್ಲಿರುವ ರಾಣಿಗಂಜ್ ಪಟ್ಟಣ ಕಲ್ಲಿದ್ದಲು ಗಣಿಗಳ ಮುಖ್ಯ ಕೇಂದ್ರವಾಗಿರುವುದರಿಂದ ಈ ಕ್ಷೇತ್ರಕ್ಕೆ ಈ ಹೆಸರು ಬಂದಿದೆ. ಇಲ್ಲಿಂದ ಇದುವರೆಗೆ ಸುಮಾರು 750 ದಶಲಕ್ಷ ಟನ್‌ಗಳಷ್ಟು ಕಲ್ಲಿದ್ದಲನ್ನು ಅಗೆದು ತೆಗೆಯಲಾಗಿದೆ. ಮತ್ತು ಇನ್ನೂ ಭೂಮಿಯೊಳಗೆ 1,000" ಆಳದ ವರೆಗೆ ಸುಮಾರು 6,700" ದಶಲಕ್ಷ ಟನ್‌ಗಳಷ್ಟು, 2,000" ಆಳದ ವರೆಗೆ ಸುಮಾರು 19,000 ದಶಲಕ್ಷ ಟನ್‌ಗಳಷ್ಟು ಕಲ್ಲಿದ್ದಲು ಇರುವುದಾಗಿ ಅಂದಾಜು ಮಾಡಲಾಗಿದೆ.

**ಝರಿಯಾ ಕಲ್ಲಿದ್ದಲು ಕ್ಷೇತ್ರ :** ಇದು ಬಿಹಾರಿನ ಧನ್‌ಬಾದ್ ಜಿಲ್ಲೆಯಲ್ಲಿ ಕಲ್ಕತ್ತೆಗೆ 256 ಕಿಮೀ ವಾಯುವ್ಯ ದಿಕ್ಕಿನಲ್ಲಿ ರಾಣಿಗಂಜ್ ಕ್ಷೇತ್ರದ ಪಶ್ಚಿಮದಲ್ಲಿ ಸ್ಥಾಪಿತವಾಗಿದೆ. ಇದು ಅರ್ಧಚಂದ್ರಾಕಾರವಾಗಿದೆ. ಇದರ ವಿಸ್ತಾರ ಸುಮಾರು 175 ಚ. ಮೈಲಿಗಳಷ್ಟು, ಧನ್‌ಬಾದ್ ನಗರ ಈ ಕ್ಷೇತ್ರಕ್ಕೆ ಈಶಾನ್ಯ ದಿಕ್ಕಿನ ಸರಹದ್ದಿನ ಮೇಲಿದೆ. ಗಣಿಗಳ ಮುಖ್ಯ ಕೇಂದ್ರವಾದ ಝರಿಯಾ ಈ ಕ್ಷೇತ್ರದ ಪೂರ್ವಭಾಗದಲ್ಲಿದೆ.

ಕಲ್ಲಿದ್ದಲನ್ನು ಒಳಗೊಂಡ ಬರಾಕರ್ ಮತ್ತು ರಾಣಿಗಂಜ್ ಶ್ರೇಣಿಯ ಶಿಲೆಗಳು ಇಲ್ಲಿ ಉತ್ತಮ ರೀತಿಯಲ್ಲಿ ಕಂಡುಬಂದಿವೆ. ಮತ್ತು ಕ್ರಮಶಃ 2,500" ಮತ್ತು 1,800" ದಪ್ಪವಾಗಿವೆ. ಇವೆರಡರಲ್ಲೂ ಕಲ್ಲಿದ್ದಲು ಹೇರಳವಾಗಿದೆ. ಬರಾಕರ್ ಶ್ರೇಣಿಯಲ್ಲಿರುವ ಕಲ್ಲಿದ್ದಲು ಅತಿಮುಖ್ಯವಾದುದು ಮತ್ತು ಇದರಲ್ಲಿ 4" ರಿಂದ 60" ದಪ್ಪವಿರುವ 24 ಕಲ್ಲಿದ್ದಲು ಸ್ತರಗಳು ಇವೆ. ಇವುಗಳ ಪೈಕಿ 18 ಸ್ತರಗಳು ಪ್ರಧಾನವಾಗಿದ್ದು ಅವು ಕ್ಷೇತ್ರದ ಎಲ್ಲ ಕಡೆಗಳಲ್ಲೂ ವ್ಯಾಪಿಸಿವೆ. ಇವುಗಳಿಗೆ 1 ರಿಂದ 18ರ ವರೆಗೆ ಸಂಖ್ಯೆಗಳ ನಾಮಕರಣ ಮಾಡಲಾಗಿದೆ. 1ನೆಯದು ಎಲ್ಲಕ್ಕಿಂತ ತಳದ್ದು ಅಥವಾ ಪುರಾತನವಾದದ್ದು ಮತ್ತು 18 ನೆಯದು ಎಲ್ಲಕ್ಕಿಂತ ಮೇಲಿನದು ಅಥವಾ ಆಧುನಿಕವಾದದ್ದು. ಸಾಮಾನ್ಯವಾಗಿ 1 ರಿಂದ 9ನೇ ಸ್ತರಗಳು ಕೀಳುದರ್ಜೆಯ ಕಲ್ಲಿದ್ದಲನ್ನು ಒಳಗೊಂಡಿವೆ. 10 ರಿಂದ 18ನೇ ಸ್ತರಗಳಲ್ಲಿ ಶ್ರೇಷ್ಠ ದರ್ಜೆಯ ಕಲ್ಲಿದ್ದಲು ಇದೆ. ಇದಕ್ಕೆ ಒಳ್ಳೆಯ ಕೋಕ್‌ನ ಗುಣ ಉಂಟು. ಅಲ್ಪಭಸ್ಮಾಂಶ ಗುಣವೂ ಇದೆ. ಈ ಸ್ತರಗಳು ಭಾರತದ ಅತ್ಯುತ್ತಮ ಕಲ್ಲಿದ್ದಲಿನ ಭಂಡಾರಗಳು. ರಾಣಿಗಂಜ್ ಶ್ರೇಣಿಯಲ್ಲಿ ಏಳು ಕಲ್ಲಿದ್ದಲು ಸ್ತರಗಳಿವೆ. ಇವುಗಳಲ್ಲಿ ಕೆಲವನ್ನು ಉತ್ಪಾದನೆಗಾಗಿ ಉಪಯೋಗಿಸಲಾಗುತ್ತಿದೆ. ಈ ಕ್ಷೇತ್ರವನ್ನು ಕಳೆದ 70 ವರ್ಷಗಳಿಂದಲೂ ಕಲ್ಲಿದ್ದಲು ಉತ್ಪಾದನೆಗಾಗಿ ವಿಶೇಷವಾಗಿ ಅಭಿವೃದ್ಧಿಗೊಳಿಸಲಾಗಿದೆ. ಈಗ ಇದು ಭಾರತದ ಅತಿಪ್ರಧಾನ ಕ್ಷೇತ್ರ. ಈ ಕ್ಷೇತ್ರ ಕಬ್ಬಿಣ ಮತ್ತು ಉಕ್ಕಿನ ಉದ್ಯೋಗಕ್ಕೆ ಯೋಗ್ಯವಾದ ಕಲ್ಲಿದ್ದಲಿನ ಮುಖ್ಯ ಆಧಾರ. ಭಾರತದ ಒಟ್ಟು ಉತ್ಪತ್ತಿಯ ಮೂರರಲ್ಲೊಂದು ಭಾಗವನ್ನು ಈ ಕ್ಷೇತ್ರದಿಂದ ಪ್ರತಿವರ್ಷವೂ ತೆಗೆಯಲಾಗುತ್ತಿದೆ. ಇದುವರೆಗೆ ಇಲ್ಲಿಂದ ಒಟ್ಟು 850 ದಶಲಕ್ಷ ಟನ್ನುಗಳಿಗಿಂತ ಅಧಿಕವಾಗಿ ಉತ್ಪಾದನೆ ಮಾಡಲಾಗಿದೆ ಮತ್ತು ಇನ್ನೂ ಭೂಮಿಯಲ್ಲಿ 1,000’ ಆಳದ ವರೆಗೆ 7,000’ ದಶಲಕ್ಷ ಟನ್ನುಗಳಷ್ಟು 2,000' ಆಳದವರೆಗೆ 12,000 ದಶಲಕ್ಷ ಟನ್ನುಗಳಷ್ಟು ಕಲ್ಲಿದ್ದಲು ಇರುವುದಾಗಿ ಅಂದಾಜು ಮಾಡಲಾಗಿದೆ.

**ಬೊಕಾರೊ ಕಲ್ಲಿದ್ದಲು ಕ್ಷೇತ್ರ :** ಇದು ಝರಿಯಾ ಕ್ಷೇತ್ರದ ಪಶ್ಚಿಮಕ್ಕೆ ಹಜಾರಿಬಾಗ್ ಜಿಲ್ಲೆಯಲ್ಲಿ 164 ಕಿಮೀ ಉದ್ದ ಮತ್ತು ಸುಮಾರು 11 ಕಿಮೀಗಳ ಅಗಲದ ಪ್ರದೇಶವನ್ನು ವ್ಯಾಪಿಸಿಕೊಂಡಿದೆ. ಈ ಪ್ರದೇಶದಲ್ಲಿ ಭಾರತದ ಮಂದವಾದ ಕಲ್ಲಿದ್ದಲು ಸ್ತರಗಳು ಇರುವುದರಿಂದಲೂ ಮತ್ತು ಇವು ನೆಲಕ್ಕೆ ಸಮೀಪದಲ್ಲಿದ್ದು ಅಗೆದು ತೆಗೆಯಲು ಸಾಧ್ಯವಿರುವುದರಿಂದಲೂ ಕಲ್ಲಿದ್ದಲು ಉತ್ಪಾದನೆಗೆ ಬಹುಮುಖ್ಯ ಕ್ಷೇತ್ರವಾಗಿದೆ. ಇಲ್ಲಿನ ಕಲ್ಲಿದ್ದಲು ಪದರಗಳು ಕಾರೋ ಶ್ರೇಣಿ 70"–100" ದಪ್ಪ, ಬರ್ಮಾ ಶ್ರೇಣಿ 40"–46" ದಪ್ಪ ಮತ್ತು ಕರ್ಗಲಿ ಶ್ರೇಣಿ 40"–147" ದಪ್ಪ. ಈ ಶ್ರೇಣಿಗಳ ಕಲ್ಲಿದ್ದಲು ಉತ್ತಮ ದರ್ಜೆಯವೂ ಮತ್ತು ಕೋಕ್‌ನ ಗುಣ ಉಳ್ಳವೂ ಆಗಿರುವುದರಿಂದ ಲೋಹವಿದ್ಯೆಯಲ್ಲಿ (ಮೆಟಲರ್ಜಿ) ಉಪಯೋಗಿಸಲು ಅರ್ಹವಾಗಿದೆ. ಆದರೆ ಭಸ್ಮಾಂಶ ಸ್ವಲ್ಪ ಹೆಚ್ಚಿಗೆ ಇರುವುದರಿಂದ ಮೊದಲು ಕಲ್ಲಿದ್ದಲನ್ನು ತೊಳೆದು ಆ ಮೂಲಕ ಈ ಅಂಶವನ್ನು ತಗ್ಗಿಸಿ ಅನಂತರ ಕೋಕನ್ನು ಮಾಡಲಾಗುತ್ತಿದೆ. ಈಚೆಗೆ ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಾಪಿಸಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಈ ಕಲ್ಲಿದ್ದಲನ್ನು ಹೇರಳವಾಗಿ ಉಪಯೋಗಿಸಲಾಗುತ್ತಿದೆ.

**ಕರಣಪುರ ಕಲ್ಲಿದ್ದಲು ಕ್ಷೇತ್ರ :** ಬೊಕಾರೊ ಕ್ಷೇತ್ರದ ಪಶ್ಚಿಮಕ್ಕಿದೆ. ಇದರ ಹರವು ಸುಮಾರು 1424.4 ಚ.ಕಿಮೀ. ಇದನ್ನು ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ವಿಂಗಡಿಸಲಾಗಿದೆ. ದಕ್ಷಿಣ ಕ್ಷೇತ್ರದಲ್ಲಿ ಹನ್ನೆರಡು ಕಲ್ಲಿದ್ದಲು ಪದರಗಳು ಉತ್ಪನ್ನಕ್ಕೆ ಯೋಗ್ಯವಾಗಿವೆ. ಇವುಗಳಲ್ಲಿ ಅರ್ಗಾಡಾ ಮತ್ತು ಸಿರ್ಕ ಶ್ರೇಣಿಗಳು ಪ್ರಧಾನವಾದವು. ಇವುಗಳ ದಪ್ಪ 85" ಮತ್ತು 40". ಇಲ್ಲಿನ ಕಲ್ಲಿದ್ದಲು ಶ್ರೇಷ್ಠ ತರಗತಿಯದು. ಉತ್ತರ ಕರಣಪುರ ಕ್ಷೇತ್ರದಲ್ಲೂ ಹಲವಾರು ಶ್ರೇಣಿಗಳು ಇವೆ. ಇವುಗಳ ಪೈಕಿ ನಾಲ್ಕು ಶ್ರೇಣಿಗಳು 55"–65" ದಪ್ಪ ಇವೆ. ಈಚಿನ ವರ್ಷಗಳಲ್ಲಿ ಈ ಕ್ಷೇತ್ರವನ್ನು ಹೆಚ್ಚು ಅಭಿವೃದ್ಧಿಗೊಳಿಸಲಾಗಿದೆ.

ಬಂಗಾಳ ಮತ್ತು ಬಿಹಾರ ಕ್ಷೇತ್ರಗಳಲ್ಲಿ ಭಾರತದ ಒಟ್ಟು ಉತ್ಪತ್ತಿಯ ಶೇ.77 ಭಾಗದಷ್ಟು ಉತ್ಪಾದನೆಯಾಗುತ್ತಿದೆ. ಬಿಹಾರ್ ಮತ್ತು ಬಂಗಾಳದ ಹೊರಗೆ ಮಧ್ಯಪ್ರದೇಶದಲ್ಲಿ ಅನೇಕ ಕಲ್ಲಿದ್ದಲು ಕ್ಷೇತ್ರಗಳು ರೇವಾ, ಸಾತ್ಪುರ ಮತ್ತು ಛತ್ತೀಸ್‌ಗಢ್ ಪ್ರದೇಶಗಳಲ್ಲಿವೆ. ಇವುಗಳ ಪೈಕಿ ಪೆಂಚ್ ಕಣಿವೆ, ಕೊರಿಯಾ, ಕೊರ್ಬಾ, ಸಿಂಗ್ರೌಲಿ, ಚಿರಿಮಿರಿ ಮತ್ತು ಕುರೇಸಿಯಾ ಕಲ್ಲಿದ್ದಲು ಕ್ಷೇತ್ರಗಳು ಮುಖ್ಯವಾದವು. ಈಚೆಗೆ ಈ ಪೈಕಿ ಹಲವಾರು ಕ್ಷೇತ್ರಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಕೊರ್ಬಾ ಕ್ಷೇತ್ರದಲ್ಲಿ 150" ಮಂದವಾದ ಶ್ರೇಷ್ಠ ಕಲ್ಲಿದ್ದಲಿನ ಪದರಗಳಿವೆ. ಭಾರತದ ಅತ್ಯಂತ ಮಂದವಾದ 300"ಗಿಂತಲೂ ಹೆಚ್ಚು ಕಲ್ಲಿದ್ದಲಿನ ಶ್ರೇಣಿ ಸಿಂಗ್ರೌಲಿ ಕ್ಷೇತ್ರದಲ್ಲಿ ಇರುವುದಾಗಿ ವರದಿಯಾಗಿದೆ. ಮಧ್ಯ ಪ್ರದೇಶದ ಕಲ್ಲಿದ್ದಲು ಕ್ಷೇತ್ರಗಳಿಂದ ನಮ್ಮ ದೇಶದ ಒಟ್ಟು ಉತ್ಪತ್ತಿಯ ಶೇ. 12ರಷ್ಟು ಉತ್ಪಾದನೆಯಾಗುತ್ತದೆ.

ಮಹಾರಾಷ್ಟ್ರದ ಕಲ್ಲಿದ್ದಲು ಕ್ಷೇತ್ರಗಳ ಪೈಕಿ ವಾರ್ಧಾ ಕಣಿವೆಯಲ್ಲಿರುವ ಚಂದಾ, ಶಿಸ್ತಿ ಕ್ಷೇತ್ರಗಳೂ ನಾಗಪುರ ಪ್ರದೇಶದಲ್ಲಿರುವ ಕಾಮತಿ, ಉಮ್ರೆರ್ ಕ್ಷೇತ್ರಗಳೂ ಮುಖ್ಯವಾದವು. ಈ ರಾಜ್ಯದ ಕ್ಷೇತ್ರಗಳಿಂದ ಭಾರತದ ಒಟ್ಟು ಉತ್ಪತ್ತಿಯ ಶೇ.2 ರಷ್ಟು ಭಾಗ ಕಲ್ಲಿದ್ದಲನ್ನು ತೆಗೆಯಲಾಗುತ್ತಿದೆ.

ಒರಿಸ್ಸದಲ್ಲಿ ಮುಖ್ಯವಾದ ಕ್ಷೇತ್ರಗಳು ಎರಡೇ. ಅವು ಮಹಾನದಿ ಕಣಿವೆಯಲ್ಲಿರುವ ತಾಲ್‌ಚಿರ್ ಮತ್ತು ಹಿಂಗಿರ್–ರಾಮ್‌ಪುರ್ ಕ್ಷೇತ್ರಗಳು. ಇವುಗಳಿಂದ ಉತ್ಪಾದನೆ ಭಾರತದ ಒಟ್ಟು ಉತ್ಪಾದನೆಯ ಶೇ. 1.5 ಭಾಗ.

ಆಂಧ್ರಪ್ರದೇಶದಲ್ಲಿ ಗೋದಾವರಿ ಕಣಿವೆಯಲ್ಲಿ ಅನೇಕ ಕಲ್ಲಿದ್ದಲು ಕ್ಷೇತ್ರಗಳಿವೆ. ಇವುಗಳಲ್ಲಿ ಸಿಂಗರಾಣಿ ಮತ್ತು ಕೊತ್ತಗುಡಿಯಂ ಕ್ಷೇತ್ರಗಳು ಪ್ರಧಾನವಾದವು. ಈ ಪ್ರದೇಶದ ಉತ್ಪಾದನೆ ಭಾರತದ ಒಟ್ಟು ಉತ್ಪತ್ತಿಯಲ್ಲಿ ಶೇ. 6 ಭಾಗದಷ್ಟು.

**ಟರ್ಷಿಯರಿ ಕಲ್ಲಿದ್ದಲು :** ಉತ್ಪಾದನೆಯ ದೃಷ್ಟಿಯಿಂದ ಇದು ಭಾರತದ ಒಟ್ಟು ಉತ್ಪತ್ತಿಯಲ್ಲಿ ಶೇ.2ಕ್ಕಿಂತ ಕಮ್ಮಿ ಆಗಿದ್ದರೂ ಈ ಕಲ್ಲಿದ್ದಲು ದೊರೆಯುವ ಪ್ರದೇಶಗಳಲ್ಲಿ ಗೊಂಡ್ವಾನ ಕಲ್ಲಿದ್ದಲು ಇಲ್ಲದಿರುವುದರಿಂದ ಇವು ಆಯಾ ಪ್ರದೇಶಗಳ ಆರ್ಥಿಕ ದೃಷ್ಟಿಯಲ್ಲಿ

ಮಹತ್ವ ಪೂರ್ಣವಾದವು. ಸಾಮಾನ್ಯವಾಗಿ ಈ ಸಮುದಾಯದ ಕಲ್ಲಿದ್ದಲು ಅಸ್ಸಾಂ ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಇಯೋಸೀನ್ ಅಥವಾ ಆಲಿಗೋಸಿನ್ (ಸುಮಾರು 60–40 ದಶಲಕ್ಷ ವರ್ಷಗಳ ಕೆಳಗೆ) ಅವಧಿಯ ಶಿಲೆಗಳಲ್ಲಿ ಇರುತ್ತವೆ. ತಮಿಳುನಾಡಿನಲ್ಲಿ ಮಿಯೋಸಿನ್ ಯುಗದ ಶಿಲೆಗಳಲ್ಲಿ ಮಂದವಾದ ಲಿಗ್ನೈಟ್ ಸ್ತರಗಳು ಸಿಕ್ಕುತ್ತವೆ. ಕಾಶ್ಮೀರ ಕಣಿವೆಯಲ್ಲಿ ಪ್ಲೀಸ್ಟೊಸೀನ್ ಯುಗದ (ಸುಮಾರು 1 ದಶಲಕ್ಷ ವರ್ಷಗಳ ಕೆಳಗೆ) ಶಿಲೆಗಳಲ್ಲೂ ಲಿಗ್ನೈಟ್ ಪದರಗಳು ಇವೆ. ಟರ್ಷಿಯರಿ ಕಲ್ಲಿದ್ದಲು ಸಿಕ್ಕುವ ಮತ್ತು ಉತ್ಪಾದನೆಯಾಗುತ್ತಿರುವ ಮುಖ್ಯ ಪ್ರದೇಶಗಳು ಅಸ್ಸಾಂ, ಮದರಾಸು, ಕಾಶ್ಮೀರ ಮತ್ತು ರಾಜಸ್ಥಾನ. ಇದಲ್ಲದೇ ಗುಜರಾತ್ ಮತ್ತು ಕೇರಳ ರಾಜ್ಯಗಳಲ್ಲಿ ಲಿಗ್ನೈಟ್ ನಿಕ್ಷೇಪಗಳು ಇರುವುದಾಗಿ ವರದಿಯಾಗಿದೆ. ಈ ಕೇಂದ್ರಗಳಲ್ಲೆಲ್ಲ ಅಸ್ಸಾಂ ಪ್ರದೇಶ ಪ್ರಧಾನವಾದುದು. ಏಕೆಂದರೆ ಟರ್ಷಿಯರಿ ಕಲ್ಲಿದ್ದಲ ಉತ್ಪತ್ತಿಯಲ್ಲಿ ಇದಕ್ಕೆ ಪ್ರಥಮ ಸ್ಥಾನವಿದೆ. ಅದಲ್ಲದೆ ಇಲ್ಲಿನ ಕಲ್ಲಿದ್ದಲು ಉತ್ತಮವಾದುದು. ಅಸ್ಸಾಂ ಆದಮೇಲೆ ತಮಿಳುನಾಡು ಪ್ರಧಾನವಾದದ್ದು. ಇಲ್ಲಿ ಅಧಿಕವಾಗಿ ಲಿಗ್ನೈಟ್ ಉತ್ಪಾದನೆಯಾಗುತ್ತಿದೆ.

ಟರ್ಷಿಯರಿ ಕಲ್ಲಿದ್ದಲು ಭೂ ಚರಿತ್ರೆಯ ಈಚಿನ ಕಾಲದ ಉತ್ಪನ್ನ. ಇದು ಕಲ್ಲಿದ್ದಲಿನ ವರೆಗಿನ ಪೂರ್ಣ ಪ್ರಕ್ರಿಯೆ ಪಡೆದಿರದೆ ಸಾಮಾನ್ಯವಾಗಿ ಲಿಗ್ನೈಟ್ ಹಂತದಲ್ಲೇ ಇರುತ್ತದೆ. ಆದರೆ ಅಸ್ಸಾಂ ಮತ್ತು ಕಾಶ್ಮೀರ ಪ್ರದೇಶದಲ್ಲಿನ ಹಿಮಾಲಯ ಪರ್ವತದ ತಳಬೆಟ್ಟಗಳಲ್ಲಿರುವ ಲಿಗ್ನೈಟ್ ಸ್ತರಗಳು ಈ ಪರ್ವತದ ಉದ್ಭವಕ್ಕೆ ಕಾರಣವಾದ ಭೂ ಚಲನೆ ಮತ್ತು ಒತ್ತಡಗಳಿಗೆ ಸಿಕ್ಕಿ ಮಡಿಸಿಹೋಗಿ ಪುಡಿಯಾಗಿ, ಬಿಟುಮಿನಸ್ ಕಲ್ಲಿದ್ದಲು ಅಥವಾ ಆಂಥ್ರಸೈಟ್ ಆಗಿ ಪರಿವರ್ತನೆಯಾಗಿರುವುದು ಕಂಡುಬರುತ್ತದೆ. ಟರ್ಷಿಯರಿ ಕಲ್ಲಿದ್ದಿಲಿನ ಗುಣವೆಂದರೆ ಹೆಚ್ಚಿನ ಗಂಧಕದ ಅಂಶ ಶೇ. 3–8 ಮತ್ತು ಸಾಮಾನ್ಯ ಕೋಕಿಂಗ್ ಗುಣ. ಗಂಧಕದ ಅಂಶ ಹೆಚ್ಚಿರುವುದರಿಂದ ಇದು ಲೋಹವಿದ್ಯಾಕಾರ್ಯಗಳಲ್ಲಿ ಉಪಯೋಗಿಸಲು ಯೋಗ್ಯವಾಗಿಲ್ಲ.

**ಟರ್ಷಿಯರಿ ಕಲ್ಲಿದ್ದಲು ಕ್ಷೇತ್ರಗಳು. ಅಸ್ಸಾಂ :** ಟರ್ಷಿಯರಿ ಕಲ್ಲಿದ್ದಲಿನ ಉತ್ಪಾದನೆಗೆ ಇದು ಪ್ರಮುಖ ಕೇಂದ್ರ. ಕಲ್ಲಿದ್ದಲು ಸ್ತರಗಳು ಜೈನ್‌ಷಿಯ ಶ್ರೇಣಿ ಎಂಬ ಇಯೊಸೀನ್ ಕಾಲದ ಶಿಲೆಗಳಲ್ಲಿ ಪಶ್ಚಿಮ ಅಸ್ಸಾಂನಲ್ಲಿಯೂ ಬರೈಲ್ ಶ್ರೇಣಿ ಎಂಬ ಆಲಿಗೋಸೀನ್ ಯುಗದ ಶಿಲೆಗಳಲ್ಲಿ ಅಸ್ಸಾಮಿನ ಮೇಲ್ಭಾಗದಲ್ಲೂ ಇರುತ್ತವೆ. ಇವೆರಡರ ಪೈಕಿ ಬರೈಲ್ ಶ್ರೇಣಿಯಲ್ಲಿರುವ ಕಲ್ಲಿದ್ದಲು ಮುಖ್ಯವಾದದ್ದು. ಉತ್ಪಾದನೆಗೆ ಯೋಗ್ಯವಾದ ಎಲ್ಲ ಸ್ತರಗಳೂ ಇದರಲ್ಲಿವೆ. ಅಸ್ಸಾಮಿನ ಕಲ್ಲಿದ್ದಲು ಪ್ರದೇಶಗಳು ಮೂರು: (1) ಅಸ್ಸಾಮಿನ ಮೇಲ್ಭಾಗದಲ್ಲಿ ಮತ್ತು ದಿಬ್ರುಗಡದ ಪೂರ್ವದಲ್ಲಿ ಈಶಾನ್ಯಕ್ಕಿರುವ ಅತ್ಯಂತ ಕೊನೆಯ ಭಾಗ. (2) ಷಿಲಾಂಗ್ ಪ್ರಸ್ಥಭೂಮಿಗೆ ಈಶಾನ್ಯದಲ್ಲಿರುವ ಮಿಕಿರ್ ಬೆಟ್ಟಗಳು. (3) ಷಿಲಾಂಗ್ ಪ್ರಸ್ಥಭೂಮಿಯ ದಕ್ಷಿಣ ಮತ್ತು ನೈರುತ್ಯ ದಿಕ್ಕಿನ ತುದಿಯಲ್ಲಿರುವ ಜೈನ್‌ಷಿಯ, ಖಾಸಿ ಮತ್ತು ಗಾರೊ ಬೆಟ್ಟಗಳು. ಇವುಗಳ ಪೈಕಿ ಉತ್ಪಾದನೆಗೆ ಯೋಗ್ಯವಾದ ಕ್ಷೇತ್ರಗಳು ಅಸ್ಸಾಮಿನ ಮೇಲ್ಭಾಗದಲ್ಲಿರುವ ಪಟ್‌ಕೈ ಬೆಟ್ಟಗಳ ಪ್ರದೇಶದಲ್ಲಿವೆ. ನಾಜಿರ, ಜೈಪುರ್, ಮಾಕುಂ ಕ್ಷೇತ್ರಗಳು ಮುಖ್ಯವಾದವು. ಅಸ್ಸಾಂ ಪ್ರದೇಶದಿಂದ ಭಾರತದ ಒಟ್ಟು ಉತ್ಪತ್ತಿಯ ಸುಮಾರು ಶೇ. 1.5 ಭಾಗದಷ್ಟು ಕಲ್ಲಿದ್ದಲನ್ನು ತೆಗೆಯಲಾಗುತ್ತಿದೆ.

**ಕಾಶ್ಮೀರ :** ಇಯೊಸೀನ್ ಕಾಲದ ಕಲ್ಲಿದ್ದಲು ಸ್ತರಗಳು ಕಾಶ್ಮೀರದ ಸರಹದ್ದಿನಲ್ಲಿ ಹಿಮಾಲಯ ಪರ್ವತಪ್ರದೇಶದ ತಪ್ಪಲಿನ ಬೆಟ್ಟಗಳಲ್ಲಿ ಅನೇಕ ಕಡೆ ಕಾಣಬರುತ್ತವೆ. ಇವು ತಕ್ಕಮಟ್ಟಿಗೆ ಮಂದವಾಗಿಯೂ ಉತ್ತಮ ದರ್ಜೆಯವೂ ಆಗಿವೆ. ಇವುಗಳಿರುವ ಮುಖ್ಯ ಸ್ಥಳಗಳು ನಾಲ್ಕು : (1) ರಿಯಾಸಿ ಜಿಲ್ಲೆ : ಇಲ್ಲಿಯ ಮುಖ್ಯ ಕ್ಷೇತ್ರಗಳು ಚಕಾರ್, ಮಹೋಗಲಾ, ಮೆಟ್‌ಕಾ ಮತ್ತು ಕಲಾಕೋಟ್. (2) ಧನಸ್‌ವಾಲ್ : ಸವಾಲ್‌ಕೋಟ್ ಕ್ಷೇತ್ರಗಳು. (3) ದಂಡ್ಲಿ ಪ್ರದೇಶ : ಪೂಂಚ್ ನದಿ ಸಮೀಪದಲ್ಲಿರುವ ದಂಡ್ಲಿ ಕ್ಷೇತ್ರ. (4) ಚೀನಾಬ್ ನದಿಯ ಪೂರ್ವಪ್ರದೇಶ : ಇಲ್ಲಿ ನೆಲೆಗೊಂಡಿರುವ ಲಡ್ಡಾ–ಜಾಂಗ್ಲಗಲಿ ಕ್ಷೇತ್ರ.

ಈ ಪ್ರದೇಶಗಳ ಕಲ್ಲಿದ್ದಲು ಒತ್ತಡಕ್ಕೆ ಸಿಕ್ಕಿ ಅದುಮಿ ಪುಡಿಯಾಗಿರುವುದು. ಕೆಲವು ಕಡೆ ಆಂಥ್ರಸೈಟ್ ಗುಣಗಳನ್ನು ಪಡೆದಿರುತ್ತದೆ. ಈ ಪ್ರದೇಶಗಳಿಂದ ವರ್ಷಕ್ಕೆ ಸುಮಾರು 20 ಸಾವಿರ ಟನ್ನುಗಳಷ್ಟು ಕಲ್ಲಿದ್ದಲು ಉತ್ಪಾದನೆ ಆಗುತ್ತಿದೆ. ಕಾಶ್ಮೀರ ಕಣಿವೆಯಲ್ಲಿ ಕರೇವಾ ಸಮೂಹವೆಂಬ ಪ್ಲಿಸ್ಟೊಸೀನ್ ಕಾಲದ ಸರೋವರಗಳಲ್ಲಿ ಉತ್ಪನ್ನವಾದ ಅವಸಾದನ ಶಿಲೆಗಳಲ್ಲಿ ಕೆಲವು ಲಿಗ್ನೈಟ್ ಪದರಗಳು ಕಂಡುಬರುತ್ತವೆ. ಇವು ಪ್ರಧಾನವಾಗಿ ಶಾಲಿಗಂಗಾ ಮತ್ತು ಹಂಡ್ವಾರಾ ಪ್ರದೇಶಗಳಲ್ಲಿವೆ. ಇಲ್ಲಿರುವ ರೈಥಾನ್ ಮತ್ತು ನಿಕೋಮಾ ಲಿಗ್ನೈಟ್ ಕ್ಷೇತ್ರಗಳನ್ನು ಈಚೆಗೆ ಅಭಿವೃದ್ಧಿ ಮಾಡಲಾಗುತ್ತಿದೆ.

**ತಮಿಳುನಾಡು :** ಈ ರಾಜ್ಯದ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಲಿಗ್ನೈಟ್ ಪದರಗಳು ಇರುವುದು ಅನೇಕ ವರ್ಷಗಳಿಂದ ತಿಳಿದಿದ್ದರೂ ಈಚೆಗೆ ಈ ಪ್ರದೇಶವನ್ನು ಪೂರ್ಣವಾಗಿ ಸಂಶೋಧಿಸಲಾಯಿತು. ಇದರ ಪ್ರಕಾರ ಈ ಜಿಲ್ಲೆಯ ಕಡಲೂರು–ವೃದ್ಧಾಚಲಂ ಪ್ರದೇಶದಲ್ಲಿ ಮಿಯೊಸೀನ್ ಕಾಲದ ಶಿಲೆಗಳಲ್ಲಿ ಐದು ಲಿಗ್ನೈಟ್ ಪದರಗಳು 258.9 ಚ.ಕಿಮೀಗಳ ಹರವಿನಲ್ಲಿ ವ್ಯಾಪಿಸಿರುವುದಾಗಿಯೂ 2,000 ದಶಲಕ್ಷ ಟನ್ನುಗಳಷ್ಟು ಲಿಗ್ನೈಟ್ ಭೂಮಿಯಲ್ಲಿರುವುದಾಗಿಯೂ ಕಂಡುಬಂದಿತು.

**ನೈವೇಲಿ ಲಿಗ್ನೈಟ್ ಕ್ಷೇತ್ರ :** ಇದು ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ವೃದ್ಧಾಚಲಂನಿಂದ 17.6 ಕಿಮೀ ದೂರದಲ್ಲಿರುವ ನೈವೇಲಿ ಗ್ರಾಮದ ಸುತ್ತ ಆವರಿಸಿದೆ. ಇದರ ವ್ಯಾಪ್ತಿ ಸುಮಾರು 133.8 ಚ.ಕಿಮೀಗಳಷ್ಟು. ಇಲ್ಲಿ ಉತ್ಪಾದನೆಗೆ ಅಗೆದು ತೆಗೆಯುತ್ತಿರುವ ಲಿಗ್ನೈಟ್ ಪದರ ಸುಮಾರು 60" ದಪ್ಪವಾಗಿದ್ದು ನೆಲಮಟ್ಟದಿಂದ 180"–200" ಗಳಷ್ಟು ಆಳದಲ್ಲಿದೆ. ಮೇಲಿನ 180" ಮಣ್ಣುಕಲ್ಲನ್ನು ತೆಗೆದುಹಾಕಿ ಲಿಗ್ನೈಟ್ ಪದರ ಕಾಣುವಂತೆ ಮಾಡಿದ ಅನಂತರ ಅದನ್ನು ಅಗೆದು ತೆಗೆಯಲಾಗುತ್ತಿದೆ. ಲಿಗ್ನೈಟ್ ಶ್ರೇಣಿಯ ಕೆಳಗಿರುವ ಶಿಲೆಗಳಲ್ಲಿ ಯಥೇಚ್ಛವಾಗಿ ನೀರು ಆರ್ಟೀಸಿಯನ್ ಪರಿಸ್ಥಿತಿಯಲ್ಲಿ ಇರುವುದರಿಂದ ಇದನ್ನು ಹೊರಗೆ ತೆಗೆದು ಹಾಕುತ್ತಿರುವುದು ಅನಿವಾರ್ಯವಾಗಿ ಕಂಡುಬಂದಿತು. ಇಲ್ಲದಿದ್ದರೆ ಗಣಿಯಲ್ಲಿ ನೀರು ತುಂಬಿಕೊಂಡು ಉತ್ಪಾದನೆ ಅಸಾಧ್ಯವಾಗುವುದು. ಇದಕ್ಕೋಸ್ಕರ ಈ ಕ್ಷೇತ್ರದ ಸುತ್ತ ಬಾವಿಗಳನ್ನು ತೋಡಿ 200" ಗಳ ದೂರದಲ್ಲೊಂದರಂತೆ 45 ಅಧಿಕಸಾಮರ್ಥ್ಯ ಪಂಪುಗಳನ್ನು ಇಟ್ಟು ಇವುಗಳಿಂದ ಮಿನಿಟಿಗೆ 42,000 ಗ್ಯಾಲನ್ ನೀರನ್ನು ಹೊರಹಾಕಲಾಗುತ್ತಿದೆ. ಈ ಪಂಪುಗಳು ದಿನದ 24 ಗಂಟೆಗಳೂ ಕೆಲಸಮಾಡುತ್ತಿರುತ್ತವೆ.

**ರಾಜಸ್ಥಾನ :** ಇಲ್ಲಿನ ಬಿಕನೀರ್ ಪ್ರದೇಶದಲ್ಲಿ ಖಾರಿ, ಗಂಗಾ ಸರೋವರ, ಚನೇರಿ, ಮಢ್ ಮತ್ತು ಪಲಾನ ಮುಂತಾದ ಸ್ಥಳಗಳಲ್ಲಿ ಲಿಗ್ನೈಟ್ ಇರುವುದು ವರದಿಯಾಗಿದೆ. ಇವುಗಳ ಪೈಕಿ ಪಲಾನ ಕ್ಷೇತ್ರ ಮುಖ್ಯವಾದುದು.

ಪಲಾನ ಲಿಗ್ನೈಟ್ ಕ್ಷೇತ್ರ : ಇದು ಬಿಕನೀರಿಗೆ 20.8ಕಿಮೀ ದೂರದಲ್ಲಿದೆ ಮತ್ತು ಇದರ ಹರವು 4.38 ಚ.ಕಿಮೀಗಳು. ಇಲ್ಲಿ ಲಿಗ್ನೈಟ್ ಪದರ 12' ದಪ್ಪವಾಗಿದ್ದು ಬಹಳ ಮೃದುವಾಗಿಯೂ ಪುಡಿಯಾಗಿಯೂ ಇದೆ. ಇಲ್ಲಿ ಕಳೆದ 68 ವರ್ಷಗಳಿಂದಲೂ ಲಿಗ್ನೈಟ್ ಉತ್ಪಾದನೆ ಮಾಡಲಾಗುತ್ತಿದೆ.

**ಗುಜರಾತ್ :** ಇಲ್ಲಿ ಕಚ್ ಪ್ರದೇಶದಲ್ಲಿ ಉಮರ್‌ಸರ್ ಎಂಬ ಸ್ಥಳದಲ್ಲಿ ಮುಖ್ಯ ಲಿಗ್ನೈಟ್ ನಿಕ್ಷೇಪಗಳು ಇರುವುದಾಗಿ ವರದಿಯಾಗಿದೆ. ಈ ಕ್ಷೇತ್ರ ಇನ್ನೂ ಅಭಿವೃದ್ಧಿಗೆ ಬಂದಿಲ್ಲ.

**ಕೇರಳ :** ಇಲ್ಲಿ ಅನೇಕ ಸ್ಥಳಗಳಲ್ಲಿ ಲಿಗ್ನೈಟ್ ನಿಕ್ಷೇಪಗಳು ಇರುವುದಾಗಿ ವರದಿಯಾಗಿದೆ. ಅವುಗಳ ಪೈಕಿ ವರ್ಕಲ್ಲೈ, ಕ್ವಿಲಾನ್, ಕಣ್ಣಾನೂರು ಮತ್ತು ಕಾಸರಗೋಡು ಮುಖ್ಯವಾದವು. ಉತ್ಪಾದನೆ ಕಾರ್ಯ ಎಲ್ಲೂ ಆರಂಭವಾಗಿಲ್ಲ.

ಭಾರತದಲ್ಲಿ 50,000 ದಶಲಕ್ಷ ಟನ್ನುಗಳಷ್ಟು ಗೊಂಡ್ವಾನಾ ಕಲ್ಲಿದ್ದಲೂ 4,000 ದಶಲಕ್ಷ ಟನ್ನುಗಳಷ್ಟು ಟರ್ಷಿಯರಿ ಕಲ್ಲಿದ್ದಲೂ ಸಿಗುವುದಾಗಿ ಅಂದಾಜು ಮಾಡಲಾಗಿದೆ. ಭಾರತದಲ್ಲಿ ಕಲ್ಲಿದ್ದಲಿನ ಗಣಿ ಕೆಲಸ ಒಂದು ವಿಶಿಷ್ಟ ಉದ್ಯಮ. ಸುಮಾರು 800 ಕಲ್ಲಿದ್ದಲ ಗಣಿಗಳಿದ್ದು ನಾಲ್ಕು ಲಕ್ಷಕ್ಕಿಂತಲೂ ಮೇಲ್ಪಟ್ಟು ಕೆಲಸಗಾರರು ಈ ಉದ್ಯೋಗದಲ್ಲಿ ನಿರತರಾಗಿದ್ದಾರೆ. ಪಂಚವಾರ್ಷಿಕ ಯೋಜನೆಯ ಅನಂತರ ಕಲ್ಲಿದ್ದಲಿನ ಉತ್ಪಾದನೆ ಬಹುಮಟ್ಟಿಗೆ ಹೆಚ್ಚಾಗಿದೆ. 1955ನೆಯ ಇಸವಿಯಲ್ಲಿ ಒಟ್ಟು ಉತ್ಪಾದನೆ ಸುಮಾರು 39 ದಶಲಕ್ಷ ಟನ್ನುಗಳಿದ್ದು 1965ನೆಯ ಇಸವಿಯಲ್ಲಿ 70 ದಶಲಕ್ಷ ಟನ್ನುಗಳನ್ನು ಮೀರಿತು. ಈಗ ಉತ್ಪನ್ನವಾಗುತ್ತಿರುವ ಪರಿಮಾಣ ಸುಮಾರು 80 ದಶಲಕ್ಷ ಟನ್ನುಗಳು. ಇದರ ಬೆಲೆ 175 ಕೋಟಿ ರೂಪಾಯಿಗಳಿಗಿಂತ ಅಧಿಕವಾಗುತ್ತದೆ. ಇದು ಭಾರತದಲ್ಲಿ ಉತ್ಪನ್ನವಾಗುವ ಖನಿಜಗಳ ಒಟ್ಟು ಬೆಲೆಯ 70 ಭಾಗದಷ್ಟಾಗುತ್ತದೆ. ಕಲ್ಲಿದ್ದಲನ್ನು ಅತಿ ಹೆಚ್ಚಾಗಿ ಬಳಸಿಕೊಳ್ಳುವ ಪ್ರಧಾನೋದ್ಯಮಗಳು ಎರಡು–ರೈಲ್ವೆಗಳು; ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು. ಇವೆರಡೂ ಕಲ್ಲಿದ್ದಲಿನ ಒಟ್ಟು ಉತ್ಪತ್ತಿಯ ಅರ್ಧಭಾಗವನ್ನು ಉಪಯೋಗಿಸಿಕೊಳ್ಳುತ್ತಿವೆ. ಸ್ವಲ್ಪ ಪ್ರಮಾಣದಲ್ಲಿ ಕಲ್ಲಿದ್ದಲನ್ನು ಪಾಕಿಸ್ತಾನ, ಸಿಂಹಳದ್ವೀಪ, ಮಲಯ ಮತ್ತು ಬರ್ಮ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. (ಕೆ.ಎಸ್.ವಿ.ಆರ್.)

**ಕಲ್ಲಿನ ಆಯುಧಗಳು :** ಪ್ರಾಣಿ ಚತುಷ್ಪಾದಿಯಾಗಿದ್ದ ದೆಶೆಯಿಂದ ದ್ವಿಪಾದಿಯಾದ ಹಂತದಲ್ಲಿ ಮಾನವನ ಉಗಮವಾಯಿತೆಂದು ಜೀವಶಾಸ್ತ್ರಜ್ಞರೂ ಭೂಶಾಸ್ತ್ರಜ್ಞರೂ ಅಭಿಪ್ರಾಯಪಟ್ಟಿದ್ದರೂ ಬಹು ನಿಧಾನವಾಗಿ ಸಂಭವಿಸಿದ ಈ ರೀತಿಯ ಬದಲಾವಣೆಗಳಲ್ಲಿ ಮಾನವನ ಉಗಮವನ್ನು ಯಾವುದೇ ಒಂದು ನಿರ್ದಿಷ್ಟ ಹಂತಕ್ಕೆ ಅನ್ವಯಿಸಲು ಸಾಕಷ್ಟು ಆಧಾರಗಳು ದೊರಕಿಲ್ಲ. ಮಾನವ ಆಯುಧ (ಶಿಲೋಪಕರಣ) ನಿರ್ಮಾಣ ಮಾಡತೊಡಗಿದ ಕಾಲಕ್ಕೆ ಅವನ ಉಗಮವನ್ನು ಪ್ರಾಕ್ತನಶಾಸ್ತ್ರಜ್ಞರು ನಿರ್ದೇಶಿಸುತ್ತಾರಲ್ಲದೆ ಅವನನ್ನು ಆಯುಧ ನಿರ್ಮಾತೃ ಮಾನವನೆಂದು ಕರೆದಿದ್ದಾರೆ. ಈಗ ದೊರಕಿರುವ ಅತ್ಯಂತ ಪುರಾತನ ಮಾನವ ನಿರ್ಮಿತ ಆಯುಧಗಳ ಕಾಲದಲ್ಲಿ ಮಾನವನ ಉಗಮವಾಗಿರಬೇಕು. ಕಲ್ಲಿನ ಆಯುಧಗಳಿಗೂ ಮುಂಚೆ, ಕಲ್ಲಿಗಿಂತಲೂ ಮೃದುವಾದ ಮತ್ತು ಸುಲಭವಾಗಿ ರೂಪಿಸ ಬಹುದಾದ ಮೂಳೆ ಮತ್ತು ಮರಗಳ ಆಯುಧಗಳನ್ನು


ಉಂಡೆಕಲ್ಲಿನ ಮಚ್ಚು

ಮಾನವ ನಿರ್ಮಿಸಿ ಉಪಯೋಗಿಸಿದ್ದಿರಬಹುದಾದರೂ ಪ್ರಕೃತಿಯಲ್ಲಿ ಬೇಗ ನಾಶಹೊಂದುವ ಮೂಳೆ ಮರಗಳ ಆಯುಧೋಪಕರಣಗಳು ದೊರಕಿಲ್ಲ. ನಮಗೆ ದೊರಕಿರುವ ಅತ್ಯಂತ ಪ್ರಾಚೀನವಾದವು ಕಲ್ಲಿನ ಆಯುಧಗಳು. ಆದುದರಿಂದ ಮಾನವನ ಉಗಮ ಮತ್ತು ವಿಕಾಸಗಳ ಅಧ್ಯಯನಕ್ಕೆ ಕಲ್ಲಿನ ಆಯುಧಗಳು ಮುಖ್ಯ ಆಧಾರಗಳಾಗಿವೆ.

ಅಬೆವಿಲಿಯನ್ ಕೈಗೊಡಲಿ

ಕತ್ತರಿಸುವ ಮತ್ತು ಚೂಪಾದ ಆಯುಧಗಳನ್ನು ನಿರ್ಮಿಸುವ ಮೊದಲು ಮಾನವ ದೀರ್ಘಕಾಲದವರೆಗೂ ವಿವಿಧ ಹಣ್ಣು, ಗೆಡ್ಡೆಗೆಣಸು, ಬೇರು ಮತ್ತು ಎಲೆಗಳನ್ನೂ ಸಣ್ಣಪ್ರಾಣಿಗಳು, ಕೀಟಗಳು ಮತ್ತು ಜಲಚರಗಳನ್ನೂ ತಿನ್ನುತ್ತಿದ್ದಿರಬೇಕು. ದೊಡ್ಡ ಪ್ರಾಣಿಗಳನ್ನು ಬೇಟೆಯಾಡಿ ಕೊಲ್ಲಲೂ ಹಾಗೆ ಕೊಂದ ಪ್ರಾಣಿಗಳ ಚರ್ಮ ಸುಲಿದು ಮಾಂಸವನ್ನು ಬೇರ್ಪಡಿಸಿ, ಸಣ್ಣ ತುಂಡುಗಳಾಗಿ ಕತ್ತರಿಸಿ ತಿನ್ನಲೂ ಬೇಕಾದ (ಇತರ ಪ್ರಾಣಿಗಳಿಗಿರುವಂಥ) ಬಲವಾದ ಹಲ್ಲು, ಉಗುರುಗಳೂ ಇವನಿಗಿರಲಿಲ್ಲ. ಆದುದರಿಂದ ಈತ ಆಯುಧ ನಿರ್ಮಾಣದ ಅನಂತರವೇ ಮಾಂಸವನ್ನು ಮುಖ್ಯ ಆಹಾರವನ್ನಾಗಿ ಮಾಡಿಕೊಳ್ಳಲು ಸಾಧ್ಯವಾಯಿತು. ಅತ್ಯಂತ ಪುರಾತನವಾದ ಕಲ್ಲಿನ ಆಯುಧಗಳನ್ನು ಉಂಡೆಕಲ್ಲಿನ ಆಯುಧಗಳೆಂದು ಕರೆಯಲಾಗಿದೆ. ಸರಳ ರೀತಿಯ ಈ ಆಯುಧಗಳನ್ನು ಪ್ಲಿಸ್ಟೋಸೀನ್ ಏಷ್ಯ ಖಂಡಗಳಲ್ಲಿ ಬಳಸುತ್ತಿದ್ದರು. ನದೀಕಣಿವೆಗಳಲ್ಲಿ ದೊರಕುವ ಉಂಡೆಕಲ್ಲುಗಳ ಒಂದು ಮುಖದಿಂದ 3–4 ಚಕ್ಕೆಗಳನ್ನು ತೆಗೆದು ಡೊಂಕಾದ ಅಂಚುಳ್ಳ ಕಲ್ಲುಮಚ್ಚು ಮುಂತಾದ ಭಾರವಾದ ಆಯುಧಗಳನ್ನು ನಿರ್ಮಿಸುತ್ತಿದ್ದರು. ಪ್ರಾರಂಭದೆಶೆಯ ಈ ಉಂಡೆ ಕಲ್ಲಿನ ಆಯುಧಗಳನ್ನು ಪ್ರಾಕೃತಿಕವಾಗಿ ಒಡೆದ ಮುರುಕು ಕಲ್ಲುಗಳಿಂದ ಪ್ರತ್ಯೇಕಿಸುವುದು ಕಷ್ಟಸಾಧ್ಯವಾದರೂ ಕ್ರಮೇಣ ಮಾನವನಿರ್ಮಿತ ಆಯುಧಗಳು ವಿಶಿಷ್ಟ ರೂಪರೇಷೆಗಳನ್ನು ಪಡೆದುಕೊಂಡುವು; ಅಲ್ಲದೆ ಇವು ಹೆಚ್ಚು ಸಂಖ್ಯೆಯಲ್ಲಿ ದೊರಕುತ್ತಯಾದುದರಿಂದ ಇವನ್ನು ಸುಲಭವಾಗಿ ಗುರುತಿಸುವುದು ಸಾಧ್ಯವಾಯಿತು.


ಪ್ರಾರಂಭದೆಶೆಯ ಕೈಗೊಡಲಿ

ಅನಂತರ ಕಾಲದಲ್ಲಿ ಈ ಸರಳ ರೀತಿಯ ಉಂಡೆಕಲ್ಲಿನ ಡೊಂಕು ಅಂಚಿನ ಆಯುಧಗಳಿಂದ ಕೌಶಲ್ಯಪೂರ್ಣವೂ ನೇರ ಮತ್ತು ನಿರ್ದಿಷ್ಟ ಆಕಾರದವೂ ಆದ ಕೈಗೊಡಲಿ ರೂಪಿತವಾಗಿ, ಪೂರ್ವಶಿಲಾಯುಗದಲ್ಲಿ ಅತ್ಯಂತ ಪ್ರಮುಖವಾಗಿದ್ದ ಕೈಗೊಡಲಿ ಸಂಸ್ಕೃತಿ ಹುಟ್ಟಿಕೊಂಡಿತು. ಬಹುಕಾಲದವರೆಗೂ ಉಂಡೆಕಲ್ಲಿನ ಮಚ್ಚುಕತ್ತಿಗಳು ಉಳಿದುಬಂದರೂ ಕ್ರಮೇಣ ಹೆಚ್ಚು ಸಂಖ್ಯೆಯಲ್ಲಿ ಉತ್ಪಾದಿತವಾಗುತ್ತಿದ್ದ ಕೈಕೊಡಲಿಗಳು ಸಾಧಾರಣವಾಗಿ ಚೂಪಾದ ಮೊನೆ ಹೊಂದಿದ್ದು, ತ್ರಿಕೋನಾಕಾರ ಅಥವಾ ಅಂಡಾಕಾರವಾಗಿರುತ್ತಿದ್ದುವು. ಕೆಲಕಾಲಾನಂತರ ಅಗಲವಾದ ಮತ್ತು ಹರಿತವಾದ ಅಂಚುಗಳಿದ್ದ ಕ್ಲೀವರ್ ಕೊಡಲಿಗಳೂ ಬಳಕೆಗೆ ಬಂದುವು. ಇವಲ್ಲದೆ ಆ ಕಾಲದ ಜನರು ಬೋಲಾಸ್ ಎಂಬ ಗುಂಡುಕಲ್ಲುಗಳನ್ನು ಚರ್ಮದ ಚೀಲಗಳಲ್ಲಿ ಸುತ್ತಿ ಚರ್ಮದ ದಾರದ ತುದಿಗೆ ಕಟ್ಟಿ ಓಡುತ್ತಿದ್ದ ಬೇಟೆಪ್ರಾಣಿಗಳ ಕಾಲುಗಳಿಗೆ ಸುತ್ತಿಕೊಳ್ಳವಂತೆ ಎಸೆಯುತ್ತಿದ್ದರು. ಈಗಲೂ ಕೆಲ ಹಿಂದುಳಿದ ಜನರಲ್ಲಿ ಈ ರೀತಿಯ ಬೇಟೆಯ ಪದ್ಧತಿ ಉಳಿದುಬಂದಿದೆ. ಮತ್ತೆ ಆಯುಧನಿರ್ಮಾಣದಿಂದ ಬಂದ ಚಕ್ಕೆಕಲ್ಲುಗಳಿಂದ ಮಾಡಿದ ಇತರ ಆಯುಧಗಳನ್ನೂ ಇವರು ಬಳಸುತ್ತಿದ್ದುದಕ್ಕೆ ಹಲವಾರು ಮಾಹಿತಿಗಳು ಕಂಡುಬಂದಿವೆ. ಪ್ರಾರಂಭದೆಶೆಯ ಚಕ್ಕೆಕಲ್ಲಿನಾಯುಧಗಳಿಗೆ ನಿರ್ದಿಷ್ಟ ಆಕಾರಗಳಿಲ್ಲದಿದ್ದುದರಿಂದ ಸಂಶೋಧಕರು ಅವುಗಳಿಗೆ ಹೆಚ್ಚು ಗಮನ ಕೊಡುತ್ತಿರಲಿಲ್ಲ. ಕೆಲಕಾಲಾನಂತರ ಚಕ್ಕೆಕಲ್ಲಿನಾಯುಧಗಳೇ ಮುಖ್ಯವಾಗಿದ್ದ ಸಂಸ್ಕೃತಿಗಳು ಹುಟ್ಟಿಕೊಂಡುದರಿಂದ ಅವುಗಳ ಪ್ರಾಮುಖ್ಯತೆ ಬೆಳಕಿಗೆ ಬಂದಿತು.

ಕೈಕೊಡಲಿಗಳನ್ನು ಕಲ್ಲಿನ ಮಧ್ಯಭಾಗ ಅಥವಾ ತಿರುಳಿನಿಂದ ಮಾಡುತ್ತಿದ್ದುದರಿಂದ ಅವನ್ನು ತಿರುಳ್ಗಲ್ಲಿನ ಆಯುಧಗಳೆಂದೂ (ಕೋರ್ ಟೂಲ್ಸ್), ಕ್ಲಾಕ್ಟೋನಿಯನ್, ಲೆವಾಲ್ವಾಸಿಯನ್ ಮೌಸ್ಟೀರಿಯನ್ ಮುಂತಾದ ಸಂಸ್ಕೃತಿಗಳನ್ನು ಚಕ್ಕೆಕಲ್ಲಿನ ಆಯುಧ ಸಂಸ್ಕೃತಿಗಳೆಂದೂ ಕರೆಯುತ್ತಾರೆ. ಆದರೆ ಕೈಕೊಡಲಿ ಸಂಸ್ಕೃತಿಯೊಂದಿಗೆ ಚಕ್ಕೆಕಲ್ಲಿನ ಆಯುಧಗಳೂ ಚಕ್ಕೆಕಲ್ಲಿನ ಆಯುಧಗಳ ಸಂಸ್ಕೃತಿಗಳೊಂದಿಗೆ ತಿರುಳ್ಗಲ್ಲಿನ ಆಯುಧಗಳೂ ಉಪಯೋಗದಲ್ಲಿದ್ದ ಅಂಶವನ್ನು ಗಮನಿಸಿದಾಗ ಈ ರೀತಿಯ ಪ್ರತ್ಯೇಕತೆ ಸರಿಯಾಗಲಾರದು. ಈ ಎರಡು ಗುಂಪಿನ ಸಂಸ್ಕೃತಿಗಳು ಯುರೋಪಿನಲ್ಲಿ ಬಹುಮಟ್ಟಿಗೆ ಸಮಕಾಲೀನವಾಗಿದ್ದು ಪರಸ್ಪರವಾಗಿ ಪ್ರಭಾವಗೊಂಡಿದ್ದುವು. ಅಷ್ಯೂಲಿಯನ್ ಸಂಸ್ಕೃತಿಯ ಅಂತ್ಯಕಾಲದ ಲೆವಾಲ್ವಾಸಿಯನ್ ಸಂಸ್ಕೃತಿಗೆ ಸೇರಿದ ಹೆರೆಯುವ ಆಯುಧಗಳೂ ಲೆವಾಲ್ವಾಸಿಯನ್ ಸಂಸ್ಕೃತಿಯಲ್ಲಿ ಸಣ್ಣಗಾತ್ರದ ಕೈ ಗೊಡಲಿಗಳೂ ನಿರ್ಮಿತವಾಗುತ್ತಿದ್ದುವು. ಕ್ಲಾಕ್ಟೋನಿಯನ್ ಸಂಸ್ಕೃತಿಯಿಂದ ಹುಟ್ಟಿಕೊಂಡ ಮೌಸ್ಟೀರಿಯನ್ ಸಂಸ್ಕೃತಿಯಲ್ಲಿ ಹೃದಯಾಕಾರದ ಸಣ್ಣ ಕೈಕೊಡಲಿಗಳು ಸಾಕಷ್ಟು ಸಂಖ್ಯೆಯಲ್ಲಿ ನಿರ್ಮಾಣವಾಗುತ್ತಿದ್ದುವು.


ಅಷೂಲಿಯನ್ ಕೊಡಲಿ

ಪೂರ್ವಶಿಲಾಯುಗದ ಕೊನೆಯ ಭಾಗದಲ್ಲಿ ಆಯುಧ ತಯಾರಿಕೆ ಕೌಶಲ್ಯಪೂರ್ಣವಾಯಿತು. ಹಲವಾರು ರೀತಿಯ ವಿಶಿಷ್ಟವಾದ ಆಯುಧಗಳು ನಿರ್ಮಿತವಾದುವು. ಚಾಕು, ಚರ್ಮವನ್ನು ಹೆರೆಯುವ ಆಯುಧ, ಕೊರೆಯುವ ಆಯುಧ, ಉಳಿ, ಭಲ್ಲೆಯ ಮೊನೆ, ಬಾಣದ ಮೊನೆ ಮುಂತಾದ ವೈಶಿಷ್ಟ್ಯಪೂರ್ಣ ಆಯುಧಗಳು ಇತರ ಸಾಧಾರಣ ರೀತಿಯ ಆಯುಧಗಳೊಂದಿಗೆ ತಯಾರಾಗುತ್ತಿದ್ದವು. ಬ್ಯೂರಿನ್ ಎಂಬ ವಿಶೇಷವಾದ ಆಯುಧವನ್ನು ಈ ಕಾಲದಲ್ಲಿ ಕಂಡುಹಿಡಿದು, ಅದರ ಸಹಾಯದಿಂದ ಮರ, ದಂತ, ಮೂಳೆ ಮತ್ತು ಕೊಂಬುಗಳಿಂದ ಉತ್ತಮ ರೀತಿಯ ಆಯುಧೋಪಕರಣಗಳನ್ನು ತಯಾರಿಸಲು ಸಾಧ್ಯವಾಯಿತು. ಅಲ್ಲದೆ ಕೆತ್ತನೆಯ ಕಲೆಯೂ ಬೆಳೆಯುವಂತಾಯಿತು. ಈ ಕಾಲದ ಆಯುಧಗಳು ಸಾಧಾರಣವಾಗಿ ಸಣ್ಣವಾಗಿದ್ದು ಅವನ್ನು ಸುಲಭವಾಗಿ ಸ್ಥಳದಿಂದ ಸ್ಥಳಕ್ಕೆ ಹೊತ್ತುಕೊಂಡು ಹೋಗಬಹುದಾಗಿತ್ತು. ಅನಂತರದ ಕಾಲದಲ್ಲಿ 1 ರಿಂದ 3–4 ಅಂಗುಲಗಳ ಉದ್ದ, 2 ರಿಂದ 4 ಅಂಗುಲ ಅಗಲವಿರುತ್ತಿದ್ದ ಸೂಕ್ಷ್ಮ ಶಿಲಾಯುಧಗಳು ರೂಢಿಗೆ ಬಂದವು. ಆ ಕಾಲದ ಮಾನವ ಆಯುಧ ನಿರ್ಮಾಣ ಕಲೆಯಲ್ಲಿ ಪರಿಶ್ರಮಪಡೆದಿದ್ದನೆಂಬುದನ್ನೂ ಇವು ಸೂಚಿಸುತ್ತವೆ. ಮರ ಮೂಳೆಗಳ ಹೊರ ಕಟ್ಟಿನಲ್ಲಿ ಕಲ್ಲಿನ ಕೂರಲಗುಫಲಕ ಮೊನೆಗಳನ್ನು ಜೋಡಿಸಿ ಪರಿಣಾಮಕಾರಿಯಾದ ಆಯುಧಗಳನ್ನು ತಯಾರಿಸಿ ಕುಯ್ಯಲು, ಕತ್ತರಿಸಲು, ಹೆರೆಯಲು ಮತ್ತು ಇನ್ನೂ ಹಲವಿಧ ಕಾರ್ಯಗಳಿಗೆ ಅವನ್ನು ಮಧ್ಯಶಿಲಾಯುಗ ಕಾಲದಲ್ಲಿ ಉಪಯೋಗಿಸುತ್ತಿದ್ದರು. ನವಶಿಲಾಯುಗದ ಕಾಲದಲ್ಲಿ ಆಯುಧಗಳು ಪುನಃ ದೊಡ್ಡ ಆಕಾರ ತಳೆದು ಅವುಗಳ ಅಂಚನ್ನು ಅಥವಾ ಆಯುಧವನ್ನು ಉಜ್ಜಿ ನಯಗೊಳಿಸಲಾಗುತ್ತಿತ್ತು. ಹೀಗೆ ನಯಗೊಳಿಸಿದ ಆಯುಧಗಳು ಹೆಚ್ಚು ಪರಿಣಾಮಕಾರಿಯಾಗುತ್ತಿದ್ದವು. ಇಂಥ ಮರಗಳನ್ನು ಕತ್ತರಿಸಿ ವ್ಯವಸಾಯಕ್ಕೆ ಭೂಮಿಯನ್ನು ಸಿದ್ಧಗೊಳಿಸುವುದಲ್ಲದೆ, ಮರದ ದಿಮ್ಮಿಗಳಿಂದ ಗುಡಿಸಲುಗಳನ್ನು ನಿರ್ಮಿಸಲು ಸಾಧ್ಯವಾಯಿತು. ಇದರಿಂದ ಮಾನವ ಪ್ರಾಕೃತಿಕ ವಸತಿಗಳಾದ ಪರ್ವತಗುಹೆ, ಗುಹಾಮುಖ ಅಥವಾ ತಾನು ನಿರ್ಮಿಸಿದ ಚರ್ಮದ ಗುಡಾರಗಳನ್ನು ತ್ಯಜಿಸಿ, ತನಗೆ ಅನುಕೂಲಕರವಾದ ಸ್ಥಳಗಳಲ್ಲಿ ಸುಭದ್ರವಾದ ವಸತಿಗಳನ್ನು ಸ್ಥಾಪಿಸಿಕೊಂಡು ನೆಲೆನಿಂತು ಜೀವನ ನಡೆಸಲು ಮತ್ತು ಇದರಿಂದ ವ್ಯವಸಾಯ ಪದ್ಧತಿ, ಪಶುಪಾಲನೆ, ಅವಶ್ಯವಾದ ಗೃಹೋಪಕರಣಗಳ ನಿರ್ಮಾಣ ಮುಂತಾದ ಉಪಯುಕ್ತ ಕಲೆಗಳನ್ನು ಬೆಳೆಸಿಕೊಂಡು ತನ್ನ ಅಲೆಮಾರಿಜೀವನ ಕೊನೆಗಾಣಿಸಲು ಸಾಧ್ಯವಾಯಿತು.

**ತಯಾರಿಕೆಯ ವಿಧಾನಗಳು :** ಹಲವಾರು ಲಕ್ಷ ವರ್ಷಗಳಿಂದ 3–4 ಸಾವಿರ ವರ್ಷಗಳ ಹಿಂದಿನ ವರೆಗೂ ರೂಢಿಯಲ್ಲಿದ್ದ ಈ ಶಿಲೋಪಕರಣಗಳನ್ನು ಮಾಡುತ್ತಿದ್ದ ವಿಧಾನಗಳನ್ನು ಪ್ರತ್ಯಕ್ಷ ಪ್ರಮಾಣಗಳಿಂದ ಶ್ರುತಪಡಿಸುವುದು ಅಸಾಧ್ಯ. ಆದರೂ ಆಯುಧಗಳ ತಯಾರಿಕೆಗೆ ಬಳಸಲಾದ ವಸ್ತುಗಳು, ಆಯುಧಗಳ ಆಕಾರ, ಅವುಗಳ ಮೇಲೆ ಕಂಡುಬರುವ ಕೈಚಳಕ ಮುಂತಾದ ಅಂಶಗಳನ್ನು ಪುರಾತತ್ವಜ್ಞರು ಪರಿಶೀಲಿಸಿದ್ದಾರಲ್ಲದೆ ಈಗಲೂ ಪ್ರಪಂಚದ ಹಲಮೂಲೆಗಳಲ್ಲಿ ಶಿಲಾಯುಗ ಸಂಸ್ಕೃತಿ ಮಟ್ಟದಲ್ಲಿ ವಾಸಿಸುತ್ತಿರುವ ಆದಿಮ ಜನಾಂಗಗಳು ಆಯುಧ ತಯಾರಿಸುವ ರೀತಿಗಳನ್ನು ಅಭ್ಯಾಸ ಮಾಡಿದ್ದಾರೆ. ಇವುಗಳ

ತಯಾರಿಕೆಯಲ್ಲಿ ಪ್ರಾಚೀನ ಮಾನವರು ಬಳಸಿರಬಹುದಾದ ಹಲವಾರು ವಿಧಾನಗಳನ್ನು ಪುರಾತತ್ವಜ್ಞರು ಗುರುತಿಸಿದ್ದಾರೆ. ಈ ವಿಧಾನಗಳನ್ನು ಬಳಸಿಕೊಂಡು ಆ ರೀತಿಯ ಆಯುಧೋಪಕರಣಗಳನ್ನು ನಿರ್ಮಿಸಲು ಸಾಧ್ಯವೇ ಎಂದು ಆನಂತರ ಪ್ರಯೋಗ ನಡೆಸಿ ಖಚಿತಗೊಳಿಸಿಕೊಂಡಿದ್ದಾರೆ. ಆದುದರಿಂದ ಶಿಲಾಯುಗ ಮಾನವ ಬಳಸಿದ ವಿಧಾನಗಳಿಗೂ ಈ ವಿಧಾನಗಳಿಗೂ ಹೆಚ್ಚು ವ್ಯತ್ಯಾಸವಿರಲಾರದೆಂದು ಭಾವಿಸಬೇಕಾಗುತ್ತದೆ.

ಸದಾ ಆಹಾರಸಂಪಾದನೆಯಲ್ಲೇ ನಿರತನಾಗಿರಬೇಕಾಗಿದ್ದ ಆದಿಮಾನವ ತನ್ನ ಕಾರ್ಯಸಾಧನೆಗೆ ಬೇಕಾದ ಆಯುಧಗಳ ನಿರ್ಮಾಣಕ್ಕೆ ಅತ್ಯಾವಶ್ಯಕವಾದ ಕನಿಷ್ಠ ಪ್ರಮಾಣದ ಪ್ರಯತ್ನ ಮತ್ತು ಕಾಲವನ್ನು ವಿನಿಯೋಗಿಸಿರಬಹುದಷ್ಟೆ. ಪೂರ್ವ ಶಿಲಾಯುಗದ ಪ್ರಾರಂಭ ಹಂತದ ಆಯುಧೋಪಕರಣಗಳು ಇದಕ್ಕೆ ನಿದರ್ಶನ. ಇವು ಪ್ರಾಕೃತಿಕವಾಗಿ ಒಡೆದ ಕಲ್ಲುಗಳನ್ನೇ ಹೋಲುತ್ತವೆ. ಪ್ರಾಣಿಗಳ ಚರ್ಮವನ್ನು ಕತ್ತರಿಸಿ ಮಾಂಸವನ್ನು ಕುಯ್ದು ಸಣ್ಣ ತುಂಡುಗಳಾಗಿ ಮಾಡಲು ಮತ್ತು ಭೂಮಿಯನ್ನು ಅಗೆದು ಗೆಡ್ಡೆಗೆಣಸುಗಳನ್ನು ಹೊರತೆಗೆಯಲು ಚೂಪಾದ ಮತ್ತು ಮೊನಚಾದ ಯಾವುದೇ ಕಲ್ಲನ್ನು ಉಪಯೋಗಿಸುತ್ತಿದ್ದಿರಬಹುದು. ಆ ರೀತಿಯ ಚೂಪಾದ, ಮೊನಚಾದ ಕಲ್ಲುಗಳು ದೊರಕದಿದ್ದಾಗ ಮಾನವ ತನ್ನ ಪರಿಸರದಲ್ಲಿ ದೊರಕುವ ಕಲ್ಲುಗಳನ್ನು ಮತ್ತೊಂದು ಕಲ್ಲಿನಿಂದ ಒಡೆದು ಆ ರೀತಿಯ ಅಂಚುಗಳನ್ನು ನಿರ್ಮಿಸುತ್ತಿದ್ದಿರಬಹುದು. ಇದನ್ನು ಶಿಲಾ ವಿಧಾನವೆಂದು ಕರೆಯಲಾಗಿದೆ. ಶಿಲಾವಿಧಾನದಲ್ಲಿ ಎರಡು ಉಪವಿಧಾನಗಳನ್ನು ಗುರುತಿಸಲಾಗಿದೆ. ಆಯುಧನಿರ್ಮಾಣಕ್ಕೆ ಉಪಯೋಗಿಸುವ ಉಂಡೆಕಲ್ಲಿನ ಚಪ್ಪಟೆಯಾದ ಪಾರ್ಶ್ವದ ಮೇಲೆ ಸುತ್ತಿಗೆ ಕಲ್ಲಿನಿಂದ ಬಲವಾಗಿ ಹೊಡೆದು ಚಕ್ಕೆಗಳನ್ನು ತೆಗೆಯುವುದು ಮತ್ತು ಭೂಮಿಯಲ್ಲಿ ಬಲವಾಗಿ ನೆಟ್ಟಿರುವ ಬಂಡೆಕಲ್ಲಿನ ಮೇಲೆ ಉಂಡೆಕಲ್ಲನ್ನು ಹೊಡೆದು ಚಕ್ಕೆಗಳನ್ನು ತೆಗೆಯುವುದು. ಡೊಂಕಾಗಿದ್ದ ಹೊರಮೈ ಹಳ್ಳತಿಟ್ಟುಗಳಿಂದ ಕೂಡಿದ್ದರೂ ಚೂಪಾದ ಅಂಚುಗಳಿದ್ದ ಅಬೆವಿಲಿಯನ್ ರೀತಿಯ ಕೈಗೊಡಲಿಗಳನ್ನು ಈ ವಿಧಾನಗಳಿಂದ ಕಾಲಕ್ರಮೇಣ ತಯಾರಿಸತೊಡಗಿದರು. ತಯಾರಿಸಲು ಮೊದಲು ಶಿಲಾವಿಧಾನದಿಂದ ತಯಾರಾದ ಒರಟಾದ ಆಯುಧಗಳ ಅಂಚುಗಳಿಂದಲೂ ವರ್ತುಲ ಸ್ತಂಭಾಕೃತಿಯ (ಸಿಲಿಂಡ್ರಿಕಲ್) ಮೃದುವಾದ ಮರದ ಅಥವಾ ಮೂಳೆಯ ಸುತ್ತಿಗೆಯಿಂದಲೂ ಸಣ್ಣ, ತೆಳ್ಳನೆಯ ಚಕ್ಕೆಗಳನ್ನು ತೆಗೆದು, ಅಂಚುಗಳನ್ನು ನೇರವಾಗಿಸಿ, ನೋಡಲು ಅಂದವೂ ಹೆಚ್ಚು ಪರಿಣಾಮಕಾರಿಯೂ ಆದ ಕೊಡಲಿಗಳನ್ನು ತಯಾರಿಸುತ್ತಿದ್ದರು. ಅಷ್ಯೂಲಿಯನ್ ಹಂತದ ಕೈಗೊಡಲಿಗಳನ್ನು ತಯಾರಿಸಲು ಮೊದಲು ಇವು ತಯಾರಾದುವು. ಹಾಗೆಯೇ ಆಯುಧಗಳನ್ನು ಮಾಡಲು ಸಾಧ್ಯವಾಯಿತು. ಇದೇ ಸುಮಾರಿನಲ್ಲಿ ಬಳಕೆಗೆ ಬಂದ ಮತ್ತೊಂದು ವಿಧಾನವೆಂದರೆ ಮೆಟ್ಟಿಲು ಮೆಟ್ಟಿಲಾಗಿ ಚಕ್ಕೆಗಳನ್ನು ತೆಗೆಯುವ ವಿಧಾನ (ಸ್ಟೆಪ್-ಫ್ಲೇಕಿಂಗ್). ಈ ವಿಧಾನದಲ್ಲಿ ಮೊಂಡಾದ ಆಯುಧಗಳ ಅಂಚಿನಿಂದ ಸಣ್ಣ ಚಕ್ಕೆಗಳನ್ನು ತೆಗೆದು ಚೂಪುಗೊಳಿಸುತ್ತಿದ್ದರು. ಆದರೆ ಹೊಡೆತದ ಶಕ್ತಿ ಮಿತವಾಗಿದ್ದು ಸ್ವಲ್ಪ ಒಳಭಾಗಕ್ಕೆ ಹೋಗುವ ವೇಳೆಗೆ ಸತ್ವಹೀನವಾಗಿ, ಚಕ್ಕೆ ಮುರಿದು ಮೆಟ್ಟಿಲಿನಂತೆ ಕಾಣುವ ಉಬ್ಬು ಪ್ರದೇಶ ನಿರ್ಮಾಣವಾಗುತ್ತಿತ್ತು. ಈ ರೀತಿಯ ಮೆಟ್ಟಿಲುಗಳನ್ನು ಅನೇಕ ಅಷ್ಯೂಲಿಯನ್ ಕೈಗೊಡಲಿಗಳ ಮೇಲೆ ಕಾಣಬಹುದು. ಮಧ್ಯ ಮತ್ತು ಅಂತ್ಯಭಾಗದ ಅಷ್ಯೂಲಿಯನ್ ಆಯುಧಗಳ ಮೊನೆಗಳನ್ನು ಚೂಪುಗೊಳಿಸಲು ಮತ್ತೊಂದು ವಿಧಾನ ಬಳಕೆಗೆ ಬಂತು. ಚೂಪಾದ ಸುತ್ತಿಗೆಕಲ್ಲಿನ ಮೊನೆಯನ್ನು ಆಯುಧದಂಚಿನಲ್ಲಿ ನಿಲ್ಲಿಸಿ ದೈಹಿಕ ಶಕ್ತಿಯಿಂದ ಬಲವಾಗಿ ಒತ್ತಡ ಕೊಟ್ಟು (ಪ್ರಷರ್ ಫ್ಲೇಕಿಂಗ್) ಸಣ್ಣ ತೆಳು ಚಕ್ಕೆಗಳನ್ನು ತೆಗೆದು ಅಂಚುಗಳನ್ನು ಚೂಪುಗೊಳಿಸುತ್ತಿದ್ದರು.

**ಕ್ಲೀವರ್ ಕೊಡಲಿ**

**ಹೃದಯಾಕಾರದ ಕೈಕೊಡಲಿ**

ಪೂರ್ವಶಿಲಾಯುಗದ ಅಂತ್ಯಕಾಲದಲ್ಲಿ ಬಳಕೆಗೆ ಬಂದ ತೆಳುವಾದ ಮತ್ತು ಕಲ್ಲು ಪಟ್ಟಿಕೆಗಳನ್ನು ತೆಗೆಯಲು ಪ್ರಮುಖವಾಗಿ ಉಪಯೋಗಿಸಲಾಗುತ್ತಿದ್ದ ಮತ್ತೊಂದು ವಿಧಾನವನ್ನು ನಿಯಂತ್ರಿತ ಚಕ್ಕೆ ತೆಗೆಯುವ ವಿಧಾನ (ಕಂಟ್ರೋಲ್ಡ್ ಫ್ಲೇಕಿಂಗ್) ಎಂದು ಕರೆಯಲಾಗಿದೆ. ಇದರಲ್ಲಿ ಕೆಲವು ಉಪವಿಧಾನಗಳೂ ಬಳಕೆಯಲ್ಲಿದ್ದುವು. ಇದರ ಮುಖ್ಯ


**ಹೆರೆಯುವ ಆಯುಧ**

ಅಂಶವೆಂದರೆ ಚೂಪಾದ ಮೊನೆಯುಳ್ಳ ಸುತ್ತಿಗೆಕಲ್ಲಿನಿಂದ ಚಕ್ಕೆಗಳನ್ನು ತೆಗೆಯಬೇಕಾದ ಕಲ್ಲಿನ ಅಂಚಿನ ಮೇಲೆ ಹೊಡೆಯುವುದು ; ಆ ಹೊಡೆತದ ಶಕ್ತಿಯನ್ನು ನಿರ್ದಿಷ್ಟ ದಿಕ್ಕಿನಲ್ಲಿ ಹೋಗುವಂತೆ ನಿಯಂತ್ರಿಸುವುದು. ಚಕ್ಕೆ ತೆಗೆಯಬೇಕಾದ ಕಲ್ಲನ್ನು ಮೊಣಕಾಲಿನ ಮೇಲಾಗಲಿ ಮರದ ತುಂಡಿನ ಮೇಲಾಗಲಿ ನೆಲದಲ್ಲಿ ಮಾಡಿದ ಹಳ್ಳದಲ್ಲಾಗಲಿ ಭದ್ರವಾಗಿ ಅಲುಗಾಡದಂತೆ ಸಿಕ್ಕಿಸಿ ಚೂಪಾದ ಸುತ್ತಿಗೆ ಮೊನೆಯಿಂದ ಹೊಡೆಯುವುದರಿಂದ ಹೊರಬರುವ ಚಕ್ಕೆಯ ಗಾತ್ರ ಮತ್ತು ಕೋನವನ್ನು ಹತೋಟಿಯೊಳಗಿಡಬಹುದಾಗಿತ್ತು. ಪೂರ್ವಶಿಲಾಯುಗದ ಅಂತ್ಯ ಮತ್ತು ಅನಂತರ ಕಾಲಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದ ಈ ವಿಧಾನವನ್ನು ಸಣ್ಣದಾದ ಸುತ್ತಿಗೆಯಿಂದ ಮೆದುವಾದ ಏಟುಗಳನ್ನು ಕೊಟ್ಟು ಚಕ್ಕೆಗಳನ್ನು ತೆಗೆದು ಚೂಪುಗೊಳಿಸಲು ಮಾತ್ರ ಉಪಯೋಗಿಸುತ್ತಿದ್ದಿರಬೇಕು.

ಇಂಗ್ಲೆಂಡು ಮತ್ತು ಯುರೋಪಿನ ಹಲವಾರು ಭಾಗಗಳಲ್ಲಿ ಹಳೆಯ ಶಿಲಾಯುಗದಲ್ಲಿ ಉಂಡೆ ಮತ್ತು ತಿರುಳ್ಗಲ್ಲಿನ ಆಯುಧ ಸಂಸ್ಕೃತಿಗಳ ಸಮಕಾಲೀನವಾದ ಮತ್ತು ಸ್ವತಂತ್ರವಾದ ಚಕ್ಕೆ ಕಲ್ಲಿನಾಯುಧಗಳ ಸಂಸ್ಕೃತಿಗಳೂ ನೆಲೆಸಿದ್ದುವು. ಪ್ರಪಂಚದ ಇತರ ಭಾಗಗಳಲ್ಲಿ ಈ ಚಕ್ಕೆ ಕಲ್ಲಿನಾಯುಧಗಳ ಸಂಸ್ಕೃತಿಗಳು ಇತರ ಸಂಸ್ಕೃತಿಗಳ ಅವಿಭಾಜ್ಯ ಅಂಗಗಳಾಗಿರುತ್ತಿದ್ದುವು. ಇವುಗಳಲ್ಲಿ ಅತ್ಯಂತ ಪುರಾತನವಾದವೆಂದು ಹೇಳಲಾದ ಕ್ಲಾಕ್ಟೋನಿಯನ್ (ಇಂಗ್ಲೆಂಡಿನ ಕ್ಲಾಕ್ಟನ್-ಆನ್-ಸೀ ಎಂಬಲ್ಲಿ ಮೊದಲ ಬಾರಿಗೆ ಗುರುತಿಸಿದುದರಿಂದ ಆ ಹೆಸರು ಕೊಡಲಾಗಿದೆ) ವಿಧಾನದಲ್ಲಿ, ಪ್ರಾಕೃತಿಕವಾಗಿ ದೊರಕುವ-ಸ್ವಲ್ಪಮಟ್ಟಿಗೆ ಸಮತಟ್ಟಾದ ಪ್ರದೇಶಗಳಲ್ಲಿರುವ-ಕಲ್ಲಿನ ಮೇಲೆ ಕಲ್ಲು ಸುತ್ತಿಗೆಯಿಂದ ಹೊಡೆದು ಚಕ್ಕೆಗಳನ್ನು ತೆಗೆಯುತ್ತಿದ್ದರು. ಚಕ್ಕೆಯ ತಳಬದಿಯಲ್ಲಿ ಏಟುಬಿದ್ದ ಸ್ಥಳದಲ್ಲಿ ಬುಗರಿಯಾಕಾರದ ಉಬ್ಬುಪ್ರದೇಶವೂ ಅಲ್ಲಿಂದ ಮುಂದೆ ಅಲೆಅಲೆಯಾದ ಸುರುಳಿಗಳೂ ಕಂಡುಬರುತ್ತವೆ. ಚಕ್ಕೆ ಶಂಕುವಿನಾಕಾರದಲ್ಲಿದ್ದು ಬುಡದಲ್ಲಿ ದಪ್ಪನಾಗಿಯೂ ತುದಿಗಳಲ್ಲಿ ತೆಳ್ಳಗೂ ಇರುತ್ತದೆ. ಮತ್ತುಹೊಡೆಯುವ ಸಮತಟ್ಟಾದ ಪ್ರದೇಶದಿಂದ ಚಕ್ಕೆಯ ತಳಬದಿಯ ಕೋನ 90° ಗಳಿಂದ 120° ಗಳಷ್ಟಿರುತ್ತದೆ. ಅನಂತರ ಈ ಚಕ್ಕೆಗಳ ಅಂಚುಗಳನ್ನು ಚೂಪು ಮಾಡಿಯೋ ಬೇರೆ ವಿಧಾನಗಳಿಂದಲೋ ತಮಗೆ ಬೇಕಾದ ಹೆರೆಯುವ ಅಥವಾ ಕೊರೆಯುವ ಆಯುಧ, ಮೊನೆ ಮುಂತಾದ ಉಪಕರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು.


**ಭಲ್ಲೆಯ ಮೊನೆ**

ಪೂರ್ವಶಿಲಾಯುಗದ ಮಧ್ಯಕಾಲದಲ್ಲಿ ಬಳಕೆಗೆ ಬಂದ ಲೆವಾಲ್ವಾಸಿಯನ್ ವಿಧಾನದಲ್ಲಿ (ಪ್ಯಾರಿಸ್ ಬಳಿಯ ಲೆವಾಲ್ವಾ ಪೆರ‍್ರೆ ಎಂಬಲ್ಲಿ ಮೊದಲು ಗುರುತಿಸಿದುದರಿಂದ ಈ ಹೆಸರು) ಏರುಪೇರಾದ ಮೇಲ್ಮೈಯುಳ್ಳ ಉಂಡೆಕಲ್ಲಿನ ಹೊರವಲಯಗಳಿಂದ ಸಣ್ಣ

ಚಕ್ಕೆಗಳನ್ನು ತೆಗೆದು ಸಮತಟ್ಟಾದ ತಿರುಳ್ಗಲ್ಲನ್ನು ಮಾಡಿಕೊಳ್ಳುತ್ತಿದ್ದರು. ಅನಂತರ ಒಂದು ತುದಿಯಲ್ಲಿ ಎಲ್ಲ ದಿಕ್ಕಿನಿಂದಲೂ ಸಣ್ಣ ಚಕ್ಕೆಗಳನ್ನು ತೆಗೆದು ಸಮವಾದಜಗತಿಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಅವಶ್ಯವಾದ ಆಯುಧದ ಆಕಾರವನ್ನು ಉಂಡೆಕಲ್ಲಿನ ಆ ಪಾರ್ಶ್ವದ



ಸೂಕ್ಷ್ಮ ಶಿಲಾಯುಧಗಳು

ಮೇಲೆ ರೂಪಿಸಿಕೊಂಡು ಅನಂತರ ನೇರ ಹೊಡೆತದಿಂದಲೋ ಮೊನೆಯಾದ ಸುತ್ತಿಗೆಯನ್ನು ಮಧ್ಯವರ್ತಿಯಾಗಿಟ್ಟುಕೊಂಡೋ ಒಂದೇ ಹೊಡೆತದಿಂದ ಚಕ್ಕೆಯನ್ನು ಬೇರ್ಪಡಿಸುತ್ತಿದ್ದರು. ಇಂಥ ಚಕ್ಕೆಕಲ್ಲಿನಾಯುಧದ ತಳಭಾಗ ಒಂದೇ ಸಮವಾಗಿದ್ದು, ಮೇಲ್ಬದಿಯಲ್ಲಿ ಮಾತ್ರ ತಯಾರಿಕೆಯ ಕಾಲದಲ್ಲುಂಟಾದ ಗುರುತುಗಳು ಕಂಡುಬರುತ್ತವೆ. ಇಂಥ ಚಕ್ಕೆಗಳು ಸಾಧಾರಣವಾಗಿ ತೆಳುವಾಗಿಯೂ ತ್ರಿಕೋನ ಅಥವಾ ದೀರ್ಘವೃತ್ತಾಕಾರವಾಗಿಯೂ ಇರುತ್ತಿದ್ದವು. ಚಕ್ಕೆಯ ತಳಬದಿಯ ಕೋನ 80 –90 ಇರುತ್ತಿತ್ತು. ಮೌಸ್ಟೀರಿಯನ್ ಸಂಸ್ಕೃತಿಕಾಲದಲ್ಲಿ ಮತ್ತೊಂದು ವಿಧಾನ ಬೆಳಕಿಗೆ ಬಂತು. ಈ ವಿಧಾನದಲ್ಲಿ ಸಮವಾದ ಒಂದು ಪಾರ್ಶ್ವವಿದ್ದ ದೊಡ್ಡದಾದ ಒಂದು ಚಕ್ಕೆಕಲ್ಲನ್ನೋ ಅದೇ ರೀತಿಯ ಬೇರೆ ಕಲ್ಲನ್ನೋ ತೆಗೆದುಕೊಂಡು, ಆ ಸಮಪ್ರದೇಶದ ಮೇಲೆ ಹೊಡೆತ ಕೊಟ್ಟು ಸಣ್ಣದಾದ ಚಕ್ಕೆಗಳನ್ನು ಬೇರ್ಪಡಿಸುತ್ತಿದ್ದರು. ಈ ವಿಧಾನದಲ್ಲಿ ಒಂದು ಕಲ್ಲಿನಿಂದ ಅನೇಕ ಚಕ್ಕೆಗಳನ್ನು ತೆಗೆಯಲು ಸಾಧ್ಯವಾಗುತ್ತಿತ್ತು. ಸಾಧ್ಯವಾದಷ್ಟು ಹೆಚ್ಚು ಚಕ್ಕೆಗಳನ್ನು ತೆಗೆದ ಅನಂತರ ಉಳಿದ ತಿರುಳಿನ ಮಧ್ಯಭಾಗ ಚಪ್ಪಟೆಯಾಗಿದ್ದು, ಸುತ್ತಂಚುಗಳು ಚೂಪಾಗಿರುತ್ತಿದ್ದವು. ಇದನ್ನು ಚಕ್ರಾಕಾರದ ತಿರುಳ್ಗಲ್ಲು (ಡಿಸ್ಕಾಯಿಡ್ ಕೋರ್) ಎನ್ನುತ್ತಾರೆ.

ಅನಂತರದ ಮಧ್ಯಶಿಲಾಯುಗ ಕಾಲದಲ್ಲಿ ಮೇಲಿನ ಎಲ್ಲ ವಿಧಾನಗಳೂ ಬಳಕೆಯಲ್ಲಿದ್ದುವಲ್ಲದೆ. ಕೂರಲಗು ಫಲಕ (ಬ್ಲೇಡ್) ವಿಧಾನವೂ ರೂಢಿಗೆ ಬಂತು.



ನಯಗೊಳಿಸಿದ ಕಲ್ಲಿನ ಕೊಡಲಿ ಮತ್ತು ಉಳಿ

ಕೂರಲಗು ಫಲಕ ತೆಳ್ಳಗೂ ಸೂಕ್ಷ್ಮವಾಗಿಯೂ ಇರುತ್ತದೆ. ಇದನ್ನು ದೀರ್ಘವೃತ್ತಾಕಾರದ ಹಲಮುಖಗಳುಳ್ಳ ತಿರುಳ್ಗಲ್ಲಿನಿಂದ ತೆಗೆಯುತ್ತಿದ್ದುದರಿಂದ ಇದು ಉದ್ದವಾಗಿ, ಕಡಿಮೆ ಅಗಲವುಳ್ಳದ್ದಾಗಿ ಇರುತ್ತದೆ. ಮೇಲ್ತುದಿಯಲ್ಲಿ ಸಣ್ಣ ಸಣ್ಣ ಚಕ್ಕೆಗಳನ್ನು ತೆಗೆದ ಚಿಹ್ನೆಗಳು ಕಂಡುಬರುತ್ತದೆ. ಈ ವಿಧಾನದಲ್ಲಿ ಹೊಡೆತವನ್ನು ನೇರವಾಗಿ ಕೊಡದೆ ಮರ ಅಥವಾ ಮೂಳೆಯ ಚೂಪಾದ ಆಯುಧವನ್ನು ಮಧ್ಯವರ್ತಿಯಾಗಿ ಉಪಯೋಗಿಸಿ ಒತ್ತಡವನ್ನು ಕೊಟ್ಟು ಫಲಕಗಳನ್ನು ಬೇರ್ಪಡಿಸುತ್ತಿದ್ದರು. ಈ ವಿಧಾನ ನವಶಿಲಾಯುಗ ಮತ್ತು ತಾಮ್ರಶಿಲಾಯುಗ ಕಾಲಗಳಲ್ಲೂ ಬಳಕೆಯಲ್ಲಿ ಮುಂದುವರಿಯಿತು. ಈ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಫಲಕಗಳನ್ನು ತಯಾರಿಸಲು ಒಂದು ಹೊಸ ರೀತಿಯ ನೇರ ಹೊಡೆತದ ವಿಧಾನವನ್ನು ಬಳಸುತ್ತಿದ್ದರು. ತಿರುಳ್ಗಲ್ಲನ್ನು ಮೊದಲು ಸಿದ್ಧಪಡಿಸಿಕೊಳ್ಳುತ್ತಿದ್ದರು. ನುಣುಪಾದ ಮೇಲ್ಪದರದ ಶಿಲೆಗಳನ್ನು ಉದ್ದಿಶ್ಯಪೂರ್ವಕವಾಗಿ ಒರಟಾಗಿಸುತ್ತಿದ್ದರು. ಅನಂತರ ತಿರುಳ್ಗಲ್ಲಿನ ತುದಿಗಳಲ್ಲಿ ಸಮನಾದ ಪ್ರದೇಶಗಳನ್ನು ನಿರ್ಮಿಸುತ್ತಿದ್ದರು. ಈ ಜಗತಿಗಳು ಸರಳವಾಗಿಯೋ ಬಹುಮುಖವಾಗಿಯೋ ಇರಬಹುದಾಗಿತ್ತು. ಇಂಥ ತಿರುಳ್ಗಲ್ಲಿಗೆ ಪಟ್ಟಿಗಳುಳ್ಳ ತಿರುಳ್ಗಲ್ಲೆಂದು (ಫೇಸೆಟೆಡ್ ಕೋರ್) ಕರೆಯಲಾಗುತ್ತದೆ. ಅನಂತರ ಅದರ ಒಂದು ಪಾರ್ಶ್ವದುದ್ದಕ್ಕೂ ಎರಡು ವಿರುದ್ಧ ದಿಕ್ಕುಗಳಿಂದ ಸಣ್ಣ ಸಣ್ಣ ಚಕ್ಕೆಗಳನ್ನು ತೆಗೆದು ಏಣುಳ್ಳ ಗೆರೆಯೊಂದನ್ನು ನಿರ್ಮಿಸುತ್ತಿದ್ದರು. ಅನಂತರ ಚೂಪಾದ ಉಪಕರಣವೊಂದರ ಮೊನೆಯನ್ನು ಫಲಕ ತೆಗೆಯಬೇಕಾದ ಸ್ಥಳದಲ್ಲಿ ಊರಿ ಮರದ ಸುತ್ತಿಗೆಯಿಂದ ಆ ಉಪಕರಣದ ಇನ್ನೊಂದು ತುದಿಯ ಮೇಲೆ ಹೊಡೆದರೆ ತೆಳುವಾದ ಉದ್ದವಾದ ಪಟ್ಟಿಕೆಯೊಂದು ಏಳುತ್ತಿತ್ತು. ಮತ್ತು ತಿರುಳ್ಗಲ್ಲಿನ ಮೇಲೆ ಹೊರಬಿದ್ದ ಪಟ್ಟಿಕೆಯ ಎರಡೂ ಅಂಚುಗಳಿಗೆ ಸೇರಿದಂತೆ ಎರಡು ಏಣುಳ್ಳ ಗೆರೆಗಳು ರೂಪುಗೊಳ್ಳುತ್ತಿದ್ದವು. ಮತ್ತೆ ಅವುಗಳನ್ನನುಸರಿಸಿ ಮತ್ತೆರಡು ಪಟ್ಟಿಕೆಗಳನ್ನು ತೆಗೆದರೆ ನಾಲ್ಕು ಏಣುಳ್ಳ ಗೆರೆಗಳು ಏರ್ಪಡುತ್ತಿದ್ದವು. ಈ ವಿಧಾನ ಈಗಲೂ ಹಲವಾರು ಹಿಂದುಳಿದ ಪಂಗಡಗಳಲ್ಲಿ ಬಳಕೆಯಲ್ಲಿದೆ ; ಮತ್ತು ಗುಜರಾತ್ ರಾಜ್ಯದ ಕ್ಯಾಂಬೆಯಲ್ಲಿ ಕಲ್ಲಿನ ಮಣಿಗಳನ್ನು ತಯಾರಿಸಲು ಅನುಸರಿಸುವ ವಿಧಾನ ಇದೇ.

ಕೂರಲಗು ಪಟ್ಟಿಕೆಗಳನ್ನು ತಯಾರಿಸುವಾಗ ಮೇಲಿನ ವಿಧಾನದಲ್ಲಿ ನೇರ ಹೊಡೆತವನ್ನು ಉಪಯೋಗಿಸುವ ಬದಲು, ಮೊನೆಯಾದ ಉಪಕರಣದ ಮೇಲೆ ತಯಾರಿಸುವವನ ದೇಹದ ಒತ್ತಡವನ್ನು ಉಪಯೋಗಿಸುವ ಮೂಲಕ ಪಟ್ಟಿಕೆಗಳನ್ನು ತೆಗೆಯುತ್ತಿದ್ದರು. ಒಂದು ಬಲವಾದ ಕೋಲಿನ ತುದಿಗೆ ಚೂಪಾದ ಮೂಳೆ ಅಥವಾ ಕೊಂಬಿನ ಆಯುಧವೊಂದನ್ನು ಸಿಕ್ಕಿಸಿ ಚರ್ಮದ ಹುರಿಗಳಿಂದ ಅದನ್ನು ಭದ್ರಪಡಿಸುತ್ತಿದ್ದರು. ಅದರ ಇನ್ನೊಂದು ತುದಿಗೆ ಅಡ್ಡಪಟ್ಟಿಯೊಂದನ್ನು ಸಿಕ್ಕಿಸಿ, ಆ ಅಡ್ಡಪಟ್ಟಿಯ ಮೇಲೆ ಎದೆಯಿಂದ ಒತ್ತಡ ಕೊಡುತ್ತಿದ್ದರು. ಎರಡು ಕೈಗಳಿಂದ ಕೋಲನ್ನು ಕದಲದಂತೆ ಹಿಡಿಯಬೇಕಾಗುತ್ತಿತ್ತು ; ಮತ್ತು ಎರಡೂ ಪಾದಗಳಿಂದ ತಿರುಳ್ಗಲ್ಲನ್ನು ಸರಿಯಾದ ಸ್ಥಾನದಲ್ಲಿ ಹಿಡಿದಿರಬೇಕಾಗುತ್ತಿತ್ತು. ಈ ವಿಧಾನ ಈಗಲೂ ಅಮೆರಿಕದ ಇಂಡಿಯನರಲ್ಲಿ ಬಳಕೆಯಲ್ಲಿದೆ.



ಭುಜಗಳುಳ್ಳ ಕೊಡಲಿ

ಕಲ್ಲಿನ ಆಯುಧಗಳ ಅಂಚುಗಳನ್ನು ಹೆಚ್ಚು ಪ್ರಯೋಜನಕಾರಿಯಾಗಿ ಮಾಡಲು ಕೆಲವು ಬಾರಿ ಆ ಅಂಚುಗಳಿಂದ ಸಣ್ಣ ಸಣ್ಣ ಚೂರುಗಳನ್ನು ತೆಗೆದು ಅವುಗಳನ್ನುಚೂಪಾಗಿಯೋ ಬಲಯುತವಾಗಿಯೋ ಮಾಡುತ್ತಿದ್ದುದುಂಟು. ಭದ್ರವಾಗಿ ನಿಂತಿರುವ ಮತ್ತೊಂದು ಕಲ್ಲಿನ ಅಥವಾ ಮರದ ತುಂಡಿನ ಮೇಲೆ ನಿಧಾನವಾಗಿ ಆಯುಧದ ಕಲ್ಲನ್ನು ಹೊಡೆದು ಅಥವಾ ಮೃದುವಾದ ಸಣ್ಣ ಮರ ಅಥವಾ ಮೂಳೆಯ ಸುತ್ತಿಗೆಯಿಂದ ಅದಕ್ಕೆ ಹೊಡೆದು ಚೂರುಗಳನ್ನು ಹಾರಿಸಿ ಇದನ್ನು ತಯಾರಿಸುತ್ತಿದ್ದರು. ಪೂರ್ವಶಿಲಾಯುಗದ ಮಧ್ಯಕಾಲದಿಂದ ಸೂಕ್ಷ್ಮ ಶಿಲಾಯುಗದ ವರೆಗೂ ಈ ಪದ್ಧತಿ ಬಳಕೆಯಲ್ಲಿದ್ದು ಪೂರ್ವಶಿಲಾಯುಗದ ಅಂತ್ಯಕಾಲದಲ್ಲಿ ಬಹಳ ಪ್ರಬಲವಾಗಿತ್ತು. ಅನಂತರ ಕ್ರಮೇಣ ತಾಮ್ರಶಿಲಾಯುಗದ ಕಾಲದಲ್ಲಿ ಕ್ಷೀಣಿಸಿತು.

ನವಶಿಲಾಯುಗ ಕಾಲದಲ್ಲಿ ದೊಡ್ಡ ಗಾತ್ರದ ನುಣುಪಾದ ಮತ್ತು ಫಲಕಾರಿಯಾದ ಆಯುಧಗಳು ಬಳಕೆಗೆ ಬಂದವು. ಆ ವರೆಗಿನ ಆಯುಧೋಪಕರಣಗಳು ಒರಟಾದ ಮೇಲ್ಮೈ ಹೊಂದಿರುತ್ತಿದ್ದವು. ಆದರೆ ಆ ಕಾಲದಲ್ಲಿ ಆಯುಧಗಳನ್ನು ನಯಗೊಳಿಸಿ ಉಪಯೋಗಿಸುತ್ತಿದ್ದರು. ತಯಾರಿಸಬೇಕಾದ ಆಯುಧದ ಆಕಾರಕ್ಕೆ ಹೆಚ್ಚು ಸಾಮೀಪ್ಯ ಹೊಂದಿರುವ ಕಲ್ಲುಗಳನ್ನು ಆಯ್ದುಕೊಂಡು ಕಡಿಮೆ ಶ್ರಮದಿಂದ ಆಯುಧಗಳನ್ನು ತಯಾರಿಸುತ್ತಿದ್ದರು. ಆಯುಧ ತಯಾರಿಸುವ ಶಿಲೆ ಮರಳ್ಗಲ್ಲಿನಂಥ ಮೃದು ಶಿಲೆಯಾಗಿದ್ದರೆ ಮತ್ತು ಅದು ತಯಾರಿಸಬೇಕಾದ ಆಯುಧವನ್ನು ಹೋಲುತ್ತಿದ್ದರೆ, ಅದರ ಅಂಚನ್ನು ಎಚ್ಚರಿಕೆಯಿಂದ ಕಠಿಣವಾದ ಮತ್ತೊಂದು ಕಲ್ಲಿನ ಮೇಲೆ ಉಜ್ಜಿ ಚೂಪಾದ ಅಂಚನ್ನು ನಿರ್ಮಿಸುತ್ತಿದ್ದರು. ಹಾಗಿಲ್ಲದಿದ್ದಾಗ ಮೂರು ಅಥವಾ ನಾಲ್ಕು ಹಂತಗಳ ಈ ಕೆಳಗಿನ ವಿಧಾನವನ್ನು ಬಳಸುತ್ತಿದ್ದರು : ಒಂದು ಉಂಡೆ ಅಥವಾ ಚಕ್ಕೆಕಲ್ಲಿನಿಂದ ಶಿಲಾವಿಧಾನದ ರೀತ್ಯಾ ತಯಾರಿಸಬೇಕಾದ ಆಯುಧದ ಕಚ್ಚಾರೂಪವನ್ನು ಸಿದ್ಧಪಡಿಸುತ್ತಿದ್ದರು. ಅನಂತರ ಚೂಪಾದ ಮೊನೆಯುಳ್ಳ ಸುತ್ತಿಗೆಯಂಥ ಆಯುಧದಿಂದ ಮೆದುವಾದ ಪೆಟ್ಟುಗಳನ್ನು ಕೊಟ್ಟು ಆಯುಧದ ಮೇಲಿನ ಉಬ್ಬುತಗ್ಗುಗಳನ್ನು ತೆಗೆದು ಸಮನಾಗಿಸುತ್ತಿದ್ದರು. ಈ ಕ್ರಿಯೆಯನ್ನು ಕೆತ್ತುವುದು (ಪೆಕ್ಕಿಂಗ್) ಎಂದು ವರ್ಣಿಸಬಹುದು. ಮೂರನೆಯ ಹಂತದಲ್ಲಿ ಸ್ವಲ್ಪ ತಗ್ಗುಳ್ಳ ಬಂಡೆಯ ಮೇಲೆ ಮರಳು ಮತ್ತು ಸ್ವಲ್ಪ ನೀರನ್ನುಪಯೋಗಿಸಿ ಆಯುಧವನ್ನು ತೀಡಲಾಗುತ್ತಿತ್ತು. ಮೊದಲಿಗೆ ಕೇವಲ ಅಂಚುಗಳನ್ನು ಮಾತ್ರ ಈ ರೀತಿ ತೀಡಿ

ನಯಗೊಳಿಸಲಾಗುತ್ತಿತ್ತು. ಕಾಲಕ್ರಮೇಣ ಇಡೀ ಆಯುಧವನ್ನು ಈ ರೀತಿ ನಯಗೊಳಿಸಲಾರಂಭಿಸಿದರು. ಆಯುಧತಯಾರಿಕೆಯ ಕಾರ್ಯ ಇಲ್ಲಿಗೆ ಮುಗಿದಂತೆ ಎಂಬುದು ಅನೇಕ ಪ್ರಾಕ್ತನಶಾಸ್ತ್ರಜ್ಞರ ಮತ. ಆದರೆ ಈ ಉಪಕರಣಗಳು ಹೊಳೆಯುವಂತೆ ಇವಕ್ಕೆ ಮೆರಗು ಕೊಡುವುದೂ ಕೆಲಸಂದರ್ಭಗಳಲ್ಲಿ ರೂಢಿಯಲ್ಲಿತ್ತೆಂಬುದು ಇನ್ನು ಕೆಲವರ ಅಭಿಪ್ರಾಯ. (ಬಿ.ಕೆ.ಜಿ.)

**ಕಲ್ಲಿನ ಶವಪೆಟ್ಟಿಗೆ :** ಯುರೋಪಿನ ನವಶಿಲಾ ಮತ್ತು ತಾಮ್ರ ಶಿಲಾಯುಗಗಳಲ್ಲೂ ಭಾರತದಲ್ಲಿ ಕಬ್ಬಿಣ ಯುಗದಲ್ಲೂ ತಳ ಮತ್ತು ನಾಲ್ಕು ಪಕ್ಕಗಳನ್ನು ಒಂದೊಂದು ಕಲ್ಲುಚಪ್ಪಡಿಯಿಂದ ನಿರ್ಮಿಸಿ ಸತ್ತವರ ಶವವನ್ನೂ ಶವಸಂಸ್ಕಾರಕ್ಕೆ ಸಂಬಂಧಿಸಿದ ಇತರ ವಸ್ತುಗಳನ್ನು ಇಟ್ಟು ಮತ್ತೊಂದು ಚಪ್ಪಡಿಯಿಂದ ಮುಚ್ಚಿ ಹೂಳಲು ಉಪಯೋಗಿಸುತ್ತಿದ್ದ ಸಂಪುಟ. ಬ್ರಿಟನ್ ಭಾರತ ಮುಂತಾದೆಡೆಗಳಲ್ಲಿ ಕೆಲವು ಸಲ ಚಪ್ಪಡಿಗಳ ಬದಲು ಒರಟಾದ ಕಲ್ಲುಬಂಡೆಗಳಿಂದಲೂ ಶವಪೆಟ್ಟಿಗೆಗಳನ್ನು ರಚಿಸುತ್ತಿದ್ದರು. ದಕ್ಷಿಣಭಾರತದ ಕಬ್ಬಿಣಯುಗದಲ್ಲಿ ಬೃಹತ್‌ಶಿಲಾ ಸಮಾಧಿ ಸಂಸ್ಕೃತಿಯ ಶವಸಂಸ್ಕಾರ ವಿಧಾನಗಳಲ್ಲಿ ಇದೊಂದು ರೀತಿ. ಈ ಶವಪೆಟ್ಟಿಗೆಗಳನ್ನು ಸಾಮಾನ್ಯವಾಗಿ ಭೂಮಿಯಲ್ಲಿ ಗುಂಡಿ ತೋಡಿ ಹುಗಿಯುತ್ತಿದ್ದರು (ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಮುಂತಾದೆಡೆಗಳಲ್ಲಿ). ಇನ್ನು ಹಲವೆಡೆಗಳಲ್ಲಿ ಶವಪೆಟ್ಟಿಗೆಯನ್ನು ಅರ್ಧ ಹೂಳಿ ಅಥವಾ ಇಡೀ ಪೆಟ್ಟಿಗೆಯನ್ನು ನೆಲದ ಮೇಲೇ ಇಟ್ಟು, ಅದನ್ನು ಜಲ್ಲಿಕಲ್ಲಿನ ರಾಶಿಯಿಂದ ಮುಚ್ಚುತ್ತಿದ್ದುದ್ದೂ ಉಂಟು. ಚೆಂಗಲ್ಪಟ್ ಜಿಲ್ಲೆಯ ಹಲವೆಡೆಗಳಲ್ಲಿ, ಪುದುಕೋಟೆ ಪ್ರಾಂತ್ಯ ಮುಂತಾದ ಕಡೆಗಳಲ್ಲಿ ಈ ಪದ್ಧತಿ ರೂಢಿಯಲ್ಲಿತ್ತು. (ಬಿ.ಕೆ.ಜಿ.)

**ಕಲ್ಲು :** ಕಟ್ಟಡಗಳನ್ನು ನಿರ್ಮಿಸಲು ಯೋಗ್ಯ ಗುಣಗಳಿರುವ ಹಾಗೂ ನಿಸರ್ಗದಲ್ಲಿ ವಿಪುಲವಾಗಿ ದೊರೆಯುವ ಬಂಡೆಗಳಿಗೆ ಕಟ್ಟಡದ ಕಲ್ಲು ಅಥವಾ ಸರಳವಾಗಿ ಕಲ್ಲು ಎಂದು ಹೆಸರು. ಪ್ರಸಕ್ತ ಲೇಖನದಲ್ಲಿ ಎಂಜಿನಿಯರಿಂಗ್ ದೃಷ್ಟಿಕೋನದಿಂದ ಕಲ್ಲಿನ ಗುಣಗಳನ್ನು ಪರಿಶೀಲಿಸಿದೆ. ಕಲ್ಲಿನ ಭೂವೈಜ್ಞಾನಿಕ ಗುಣಗಳನ್ನು ತಿಳಿಯಲು (ನೋಡಿ– ಶಿಲೆ). ಭೂಗರ್ಭದ ರಚನೆ, ರಾಸಾಯನಿಕ ಸಂಯೋಜನೆಗಳ ದೃಷ್ಟಿಯಿಂದ ಕಲ್ಲನ್ನು ಎರಡು ವಿಧವಾಗಿ ವರ್ಗೀಕರಿಸಬಹುದು.

**ಭೂಗರ್ಭರಚನೆ :** ಕಲ್ಲಿನಲ್ಲಿ ಮೂರು ಬಗೆಯ ಭೂಗರ್ಭದ ರಚನೆಯನ್ನು ಕಾಣಬಹುದು : (1) ಅಗ್ನಿಜನ್ಯ ಶಿಲೆ (2) ಜಲಜ ಶಿಲೆ (3) ಪರಿವರ್ತಿತ ಶಿಲೆ

ಅಗ್ನಿಜನ್ಯ ಶಿಲೆ ಜಲಜ ಶಿಲೆಗಿಂತ ಬಲಿಷ್ಠವಾಗಿರುತ್ತದೆ. ಸಿಲಿಕೇಟುಗಳು ಹೆಚ್ಚಾಗಿರುವ ಕಲ್ಲು ಸುಣ್ಣ ವಿಶಿಷ್ಟವಾಗಿರುವವುಗಳಿಗಿಂತ ಮಳೆ ಬಿಸಿಲುಗಳನ್ನು ಚೆನ್ನಾಗಿ ತಡೆಯುತ್ತದೆ. ಸ್ಫಟಿಕಾಕೃತಿಯ (ಕ್ರಿಸ್ಟಲೈನ್) ಕಲ್ಲುಗಳು ಇತರ ಬಗೆಗಳಿಗಿಂತ ಗಟ್ಟಿಯಾಗಿರುತ್ತವೆ. ಹೊಸದಾಗಿ ಸೀಳಿದ ಕಲ್ಲಿನ ಮುಖ ಸ್ಫುಟವಾಗಿ ಚೊಕ್ಕಟವಾಗಿರಬೇಕು. ಕಲ್ಲನ್ನು ನಯಮಾಡಬೇಕಾದರೆ ಅದು ಸಣ್ಣ ಕಣಗಳಿಂದ ಕೂಡಿ ಬಾಳಿಕೆ ಬರುವ ಹಾಗಿರಬೇಕು. ಅದರ ಸಾಪೇಕ್ಷ ಸಾಂದ್ರತೆ (2.7)ಕ್ಕಿಂತ ಕಡಿಮೆಯಾಗಿರಬಾರದು.

**ರಾಸಾಯನಿಕ ಸಂಯೋಜನೆ :** ಇಲ್ಲಿಯೂ ಮೂರು ಬಗೆಯ ರಚನೆಗಳಿವೆ : 1 ಸಿಲಿಕಾನ್ ಡೈ ಆಕ್ಸೈಡ್ ಹೆಚ್ಚಾಗಿರುವವು. ಉದಾಹರಣೆಗೆ ಗ್ರಾನೈಟ್, ಮರಳು ಕಲ್ಲು ; 2 ಕ್ಯಾಲ್ಸಿಯಂ ಕಾರ್ಬೊನೇಟ್ (ಸುಣ್ಣ) ಹೆಚ್ಚಾಗಿರುವವು, ಉದಾಹರಣೆಗೆ ಸುಣ್ಣಕಲ್ಲು, ಅಮೃತಶಿಲೆ ; 3 ಮಣ್ಣು ಹೆಚ್ಚಾಗಿರುವವು, ಉದಾಹರಣೆಗೆ ಸ್ಲೇಟ್, ಲ್ಯಾಟರೈಟ್.

ಒಳ್ಳೆಯ ಕಟ್ಟಡದ ಕಲ್ಲಿನಲ್ಲಿ ಕೆಳಕಂಡ ಗುಣಗಳಿರಬೇಕು.

**1. ಖನಿಜದ ಶುದ್ಧತೆ :** ಇದರಲ್ಲಿ ಇರುವ ಖನಿಜಗಳು ಸಾಮಾನ್ಯವಾದ ಪರಿಸ್ಥಿತಿಯಲ್ಲಿ ವಿಭಜನೆಯಾಗಬಾರದು. ಬೆಣಚುಕಲ್ಲು ತುಂಬ ಗಟ್ಟಿಯಾಗಿದೆ. ಫೆಲ್ಸ್ಪಾರುಗಳು ಕೆಲವು ಸಂದರ್ಭಗಳಲ್ಲಿ ವ್ಯತ್ಯಾಸವನ್ನು ಹೊಂದಬಹುದು.

**2. ಅದುಮುವ ಬಲ :** ಕಟ್ಟಡದ ಮೇಲೆ ಹೊರೆ ಬಂದಾಗ ಈ ಗುಣ ಮುಖ್ಯ. ಕಲ್ಲಿನ ಚಚ್ಚೌಕದ ಮೇಲೆ ತೂಕ ಹೇರಿ ಪ್ರಯೋಗಶಾಲೆಯಲ್ಲಿ ಈ ಗುಣವನ್ನು ಅಳೆಯುತ್ತಾರೆ. ಸುಮಾರಾಗಿ ಚದರ ಅಂಗುಲಕ್ಕೆ ಒಡೆಯುವ ತೂಕ (20,000) ಪೌಂಡುಗಳಿದ್ದರೆ ಉತ್ಕೃಷ್ಟ. (15,000) ದಿಂದ (20,000)ದ ವರೆಗೆ ಎಲ್ಲ ಕೆಲಸಗಳಿಗೂ ಉಪಯೋಗಿಸಬಹುದು. (10,000) ದಿಂದ (15,000) ವರೆಗೆ ಚಿಂತೆ ಇಲ್ಲ. (5,000) ದಿಂದ (10,000)ದ ವರೆಗೆ ಎಲ್ಲ ಕಡೆಗಳಲ್ಲಿಯೂ ಉಪಯೋಗಿಸುವ ಹಾಗಿಲ್ಲ. ಅದಕ್ಕಿಂತ ಕಡಿಮೆಯಾದರೆ ಉಪಯೋಗವಿಲ್ಲ.

**3. ನೀರನ್ನು ಹೀರುವಿಕೆ :** ನೀರನ್ನು ಹೆಚ್ಚಾಗಿ ಹೀರಿದರೆ ಮಳೆಗಾಲದಲ್ಲಿ ಕಲ್ಲು ಸವೆದು ಹೋಗಬಹುದು. ತನ್ನ ತೂಕದಲ್ಲಿ ಎಷ್ಟು ಭಾಗ ನೀರನ್ನು ಕಲ್ಲು ಹೀರುತ್ತದೆ ಎಂದು ಅಳತೆ ಮಾಡುತ್ತಾರೆ. ಗಟ್ಟಿ ಕಲ್ಲು 1,000 ಕ್ಕೆ 1 ಭಾಗ ನೀರನ್ನೂ ಹೀರುವುದಿಲ್ಲ. 100 ಕ್ಕೆ 1 ಭಾಗವನ್ನು ಹೀರಿದರೆ ಚಿಂತೆಯಿಲ್ಲ. 2½ ಪಾಲಿಗಿಂತ ಹೆಚ್ಚಾಗಿ ಹೀರಬಾರದು.

**4. ತೂಕ :** ಇದು ಕಲ್ಲಿನ ಮುಖ್ಯ ಗುಣ. ಕಗ್ಗಲ್ಲು ಘನ ಅಡಿಗೆ 160 ರಿಂದ 170 ಪೌಂಡು ತೂಗುತ್ತದೆ. ಬೆಸಾಲ್ಟ್ ಇನ್ನೂ ಭಾರ. ಸುಣ್ಣಕಲ್ಲಿನ ತೂಕ 135 ರಿಂದ 150 ಪೌಂಡು. ಘನ ಅಡಿಗೆ ಸುಮಾರು 120 ಪೌಂಡು ತೂಕದ ಕಲ್ಲು ಸಾಮಾನ್ಯ.

**5. ಗಾಳಿ, ಮಳೆಗೆ ನಿರೋಧ :** ಇದು ಕಲ್ಲಿನ ರಚನೆಯ ಮೇಲೆ ಹೋಗುತ್ತದೆ. ಗಟ್ಟಿಯಾದ ಕಲ್ಲಿನಲ್ಲಿ ಮೆತುವಾದ ಪೊರೆಗಳಿದ್ದರೆ ಪೊರೆಗಳು ನೀರಿನಲ್ಲಿ ಕರಗಿ ಹೋಗುತ್ತವೆ. ಬಿರುಕುಗಳು, ಮೆತುವಾದ ಖನಿಜಗಳು, ದೊಗರುಗಳು ಇದ್ದರೆ ಒಳಕ್ಕೆ ನೀರು ನುಗ್ಗುವ ಅಪಾಯ ಹೆಚ್ಚು.

ಕೈಗಾರಿಕಾ ಕ್ಷೇತ್ರಗಳಲ್ಲಿ ಗಂಧಕದ ಅನಿಲಗಳಿಂದ ಕಲ್ಲು ವಿಭಜನೆಯಾಗುವ ಸಂಭವವಿದೆ. ನೀರಿನಲ್ಲಿ ವಿಲೀನವಾಗುವ ಲವಣಗಳು ಕಲ್ಲಿನಲ್ಲಿ ಇರಬಾರದು. ಕಟ್ಟಡದ ಮೇಲೆ ಸಸ್ಯಗಳು ಬೆಳೆದರೆ ಅಪಾಯ.

ಕೆಲವು ಕಲ್ಲುಗಳು ಒಂದೇ ದಿಕ್ಕಿನಲ್ಲಿ ಸೀಳುತ್ತವೆ. ಕೆಲವು ಎರಡು ಮೂರು ದಿಕ್ಕುಗಳಲ್ಲಿ ಸೀಳುವುದೂ ಉಂಟು. ಒರೆಗಳಿರುವ ಕಲ್ಲುಗಳು ಸುಲಭವಾಗಿ ಸೀಳುತ್ತವೆ. ಬಂಡೆಯಿಂದ ಕಲ್ಲನ್ನು ಸೀಳಿ ತೆಗೆಯುವಾಗ ಎಲ್ಲಿ ದೌರ್ಬಲ್ಯವಿದೆಯೆಂದು ನೋಡಬೇಕು. ಒಂದೊಂದು ಬಗೆಯ ಕಲ್ಲಿನಲ್ಲಿ ಕೆಲಸ ಮಾಡುವುದರಲ್ಲಿಯೂ ಕೆಲವು ವೈಲಕ್ಷಣ್ಯಗಳಿವೆ. ಇವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಕೆಲವು ಮಾದರಿಗಳು ಹೊರಗೆ ನೋಡುವುದಕ್ಕೆ ಅಲಂಕಾರವಾಗಿರುತ್ತವೆ. ಇವುಗಳಲ್ಲಿ ಬಣ್ಣವೇ ಮುಖ್ಯ. ಅಮೃತಶಿಲೆಯಲ್ಲಂತೂ ಅನೇಕ ನಮೂನೆಗಳಿವೆ. ಕೊರೆದು ನಯಮಾಡಿದಾಗ ಇವುಗಳ ಸೊಬಗು ಎದ್ದು ಕಾಣುತ್ತದೆ.

ಕೆಲವು ಬಗೆಯ ಕಲ್ಲುಗಳನ್ನು ಉಜ್ಜಿದಾಗ ಮೇಲ್ಮೈಗೆ ಹೊಳಪು ಬರುತ್ತದೆ. ಇಂಥ ಕಲ್ಲುಗಳನ್ನು ದೇವಾಲಯಗಳಲ್ಲಿಯೂ ಅರಮನೆಗಳಲ್ಲಿಯೂ ಉಪಯೋಗಿಸುತ್ತಾರೆ. ಇವುಗಳಲ್ಲಿ ಕೆಲವನ್ನು ಸೂಚಿಸಿದೆ : 1 ಬೆಂಗಳೂರಿನ ಹತ್ತಿರ ಸಾರಕ್ಕಿ ಬಂಡೆಯ ಬೂದು ಬಣ್ಣದ ಗ್ರಾನೈಟ್, 2 ಚಿತ್ರದುರ್ಗ, ಚಾಮುಂಡಿ ಮತ್ತು ಶಿವಗಂಗೆಯ ಬೆಟ್ಟಗಳಲ್ಲಿ ಸಿಕ್ಕುವ ಗುಲಾಬಿ ಬಣ್ಣದ ಪಾರ್ಫಿರಿಟಿಕ್ ಗ್ರಾನೈಟ್, 3 ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಿಕ್ಕುವ ಹಸಿರು ಬಣ್ಣದ ಕಲ್ಲುಗಳು, 4 ತುರುವೇಕೆರೆ, ಬಾಣಸಂದ್ರ, ಮೈಸೂರು–ಈ ಪ್ರದೇಶಗಳಲ್ಲಿ ದೊರೆಯುವ ಅಚ್ಚ ಕಪ್ಪಾದ ಕಲ್ಲು, 5 ಅಲ್ಲಲ್ಲಿ ದೊರೆಯುವ ಅಮೃತಶಿಲೆ, ಈಚೆಗೆ ಅಲಂಕಾರದ ಕಲ್ಲುಗಳನ್ನು ಕೃತಕವಾಗಿ ತಯಾರಿಸುತ್ತಿದ್ದಾರೆ.

ಕಟ್ಟಡಗಳನ್ನು ಕಟ್ಟಲು ಗ್ರಾನೈಟ್, ಟ್ರ್ಯಾಪ್, ಬೆಸಾಲ್ಟ್, ಕ್ವಾರ್ಟ್ಜ್ ಕ್ವಾರ್ಟ್ಜೈಟುಗಳು, ಲ್ಯಾಟರೈಟುಗಳು, ಷಿಸ್ಟುಗಳು, ಸಣ್ಣಕಲ್ಲುಗಳು, ಮರಳು ಕಲ್ಲುಗಳು, ಬಳಪದ ಕಲ್ಲುಗಳು, ಸ್ಲೇಟುಗಳು–ಇವನ್ನು ಉಪಯೋಗಿಸುತ್ತಾರೆ.

ಗ್ರಾನೈಟ್ ಶ್ರೇಷ್ಠವಾದ ಕಲ್ಲು. ಈ ಸ್ಫಟಿಕ ರೂಪದ ಕಲ್ಲಿನಲ್ಲಿ ಕ್ವಾರ್ಟ್ಜ್, ಫೆಲ್‌ಸ್ಪಾರ್, ಅಭ್ರಕ–ಈ ಖನಿಜಗಳು ಕಣ್ಣಿಗೆ ಕಾಣುವಷ್ಟು ದೊಡ್ಡದಾಗಿರುತ್ತವೆ. ಇದು ಅಗ್ನಿಜನ್ಯ ಶಿಲೆ. ಇದರಲ್ಲಿರುವ ಫೆಲ್‌ಸ್ಪಾರುಗಳ ಬಣ್ಣವನ್ನು ಅನುಸರಿಸಿ ಇದು ಕೆಂಪು ಅಥವಾ ಬೂದು ಬಣ್ಣವಾಗಿರುತ್ತದೆ. ಇದರಲ್ಲಿನ ಕಣಗಳ ಗಾತ್ರಗಳು ತುಂಬ ವ್ಯತ್ಯಾಸವಾಗುತ್ತವೆ. ಈ ಸಾಪೇಕ್ಷ ಸಾಂದ್ರತೆ 2.67. ಸಾಮಾನ್ಯವಾದ ಗ್ರಾನೈಟ್ನಲ್ಲಿ ಖನಿಜಗಳು ಈ ಪ್ರಮಾಣದಲ್ಲಿರುತ್ತವೆ: ಕ್ವಾರ್ಟ್ಜ್ ಶೇ. 32.6; ಆರ್ಥೋಕ್ಲೇಸ್ ಫೆಲ್‌ಸ್ಪಾರ್ ಶೇ. 34.5; ಪ್ಲೇಜಿಯೋಕ್ಲೇಸ್ ಶೇ. 19.2; ಮಸ್ಕೊವೈಟ್ ಶೇ. 4.5. ಆದರೆ ಕೆಲವು ಮಾದರಿಗಳಲ್ಲಿ ಮೈಕ್ರೋಕ್ಲೀನ್ ಫೆಲ್‌ಸ್ಪಾರ್, ಹಾರ್ನ್‌ಬ್ಲೆಂಡ್ ಇಲ್ಲವೆ ಆಗೈಟ್ ಸೇರಿರುತ್ತವೆ. ಪ್ಲೇಜಿಯೋಕ್ಲೇಸ್ ಹೆಚ್ಚಾಗಿರುವ ಕಲ್ಲನ್ನು ಗ್ರಾನೊಡಯೊರೈಟ್ ಎನ್ನುತ್ತಾರೆ. ಕೆಲವು ವೇಳೆ ಫೆಲ್‌ಸ್ಪಾರ್ ಮತ್ತು ಅಭ್ರಕಕ್ಕೆ ಬದಲಾಗಿ ಟೂರ್ಮಲೀನ್ ಇರುವುದೂ ಉಂಟು. ಚಿಲ್ಲರೆ ಖನಿಜಗಳಲ್ಲಿ ಮ್ಯಾಗ್ನಟೈಟ್, ಅಪಟೈಟ್, ಗಾರ್ನೆಟ್, ಎಪಿಡೋಟ್, ಸಿರ್ಕಾನ್–ಇವು ಮುಖ್ಯವಾದವು.

ಪರಿವರ್ತಿತ ಕಲ್ಲುಗಳಲ್ಲಿ ನೀಸ್ ಮುಖ್ಯವಾದದ್ದು. ಸ್ಫಟಿಕಾಕೃತಿಯಾದ ಮೇಲೆ ಈ ಕಲ್ಲು ಪದರ ಪದರವಾಗುತ್ತದೆ. ಟ್ರ್ಯಾಪ್ ಮತ್ತು ಬೆಸಾಲ್ಟ್ ಸಣ್ಣ ಕಣಗಳುಳ್ಳ ಸ್ಫಟಿಕಾಕೃತಿಯ ಕಲ್ಲುಗಳು. ಮರಳು ಕಲ್ಲಿನ ಪರಿವರ್ತನೆಯಿಂದ ಕ್ವಾರ್ಟ್ಜೈಟುಗಳು ಉತ್ಪತ್ತಿಯಾಗುತ್ತಿವೆ. ಮಲೆನಾಡಿನಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ವಿಶೇಷವಾಗಿ ದೊರೆಯುವ ಜಮ್ಮಿಟ್ಟಿಗೆಯಲ್ಲಿ ಮಣ್ಣು ಕಬ್ಬಿಣವೂ ಹೆಚ್ಚಾಗಿ ಬೆರೆತಿರುತ್ತವೆ.; ಇದನ್ನು ಇಟ್ಟಿಗೆಗಳಿಗೆ ಬದಲಾಗಿ ಕಟ್ಟಡದ ಗೋಡೆಗಳಲ್ಲಿಯೂ ತಳಪಾಯದಲ್ಲಿಯೂ ಬಳಸುತ್ತಾರೆ.

ಹಾರ್ನ್‌ಬ್ಲೆಂಡ್, ಕ್ಲೋರೈಟ್, ಕ್ಯಾಲ್ಸೈಟ್ ಮತ್ತು ಅಭ್ರಕ ಇವುಗಳ ಷಿಸ್ಟುಗಳು ಪದರ ಪದರವಾಗಿ ನಯವಾದ ಪರಿವರ್ತನೆಯಾದ ಕಲ್ಲುಗಳು. ಇವು ಅಗ್ನಿಜನ್ಯವಾಗಿದ್ದರೂ ಇರಬಹುದು. ಜಲಜನ್ಯಗಳಾಗಿದ್ದರೂ ಇರಬಹುದು. ಕ್ಯಾಲ್ಸಿಯಂ ಕಾರ್ಬೊನೇಟ್ ಇರುವ ಕಲ್ಲುಗಳು ಸುಣ್ಣಕಲ್ಲುಗಳು. ಹಾಗೆಯೇ ಸಿಲಿಕ ವಿಶೇಷವಾಗಿರುವವು ಮರಳು ಕಲ್ಲುಗಳು. ಸ್ಲೇಟುಗಳಲ್ಲಿ ನಯವಾದ ಪದರಗಳಿರುತ್ತವೆ.

ಕಟ್ಟಡಗಳಲ್ಲಿ ಉಪಯೋಗಿಸುವ ಕಲ್ಲುಗಳನ್ನು ಬಂಡೆಗಳಿಂದ ಕೆಳಗೆ ಕಂಡ ಕ್ರಮಗಳಲ್ಲಿ ತೆಗೆಯುತ್ತಾರೆ.

1. ಬಂಡೆಯ ಮೇಲೆ ಬೆಂಕಿಯನ್ನು ಹಾಕಿ ಸುಡುವುದು. 2. ಕರಿಯ ಮದ್ದು, ಡೈನಮೈಟ್, ಮೊದಲಾದ ಸ್ಫೋಟಕಗಳನ್ನು ಬಳಸುವುದು. 3. ಉಳಿಗಳಿಂದಲೂ ಸೀಳಬಹುದು.

ಬಂಡೆಯಿಂದ ತೆಗೆದ ಕಲ್ಲುಗಳನ್ನು ಉಪಯೋಗಕ್ಕೆ ತಕ್ಕಹಾಗೆ ನಯವಾಗಿ ಮಾಡಬೇಕು. ಕಟ್ಟಡಗಳಲ್ಲಿ ಬಳಸುವ ಕಲ್ಲುಗಳ ತಳ ಮಟ್ಟವಾಗಿಯೂ ಪಕ್ಕಗಳು

ಲಂಬವಾಗಿಯೂ ಇರುವಂತೆ ಉಳಿಗಳಿಂದ ನಯವಾಗಿ ಮಾಡಬೇಕು. ಈ ಕಲ್ಲುಗಳಲ್ಲಿ ಉಬ್ಬುಗಳು 1/8 ಅಂಗುಲದಷ್ಟಿದ್ದರೆ ಒಂದು ನೂಲಿನ ನಯವೆಂದೂ 1/16 ಅಂಗುಲವಿದ್ದರೆ ಎರಡು ನೂಲಿನ ನಯವೆಂದೂ 1/24 ಅಂಗುಲವಿದ್ದರೆ ಮೂರು ನೂಲಿನ ನಯವೆಂದೂ ವಾಡಿಕೆಯಾಗಿ ಹೇಳುತ್ತಾರೆ.

ನಯವಾದ ಕಂಬಗಳ ಪೀಠಗಳು, ಕಂಬಗಳು, ತಲೆಗಲ್ಲುಗಳು ಕಟ್ಟಡಗಳ ಮೂಲೆಕಲ್ಲುಗಳು, ಕಮಾನಿನ ಕಲ್ಲುಗಳು–ಇವನ್ನು ಹೆಚ್ಚಿನ ಶ್ರಮದಿಂದ ನುರಿತ ಕೆಲಸಗಾರರು ತಯಾರಿಸುತ್ತಾರೆ.

ಕಟ್ಟಡಗಳ ಹೊರಭಾಗಗಳಲ್ಲಿ ಉಪಯೋಗಿಸಿರುವ ಕಲ್ಲುಗಳು ಬಿಸಿಲು, ಮಳೆ, ಗಾಳಿಗಳ ಹೊಡೆತದಿಂದ ಕಾಲಾನುಕ್ರಮದಲ್ಲಿ ಕ್ಷೀಣವಾಗುತ್ತವೆ. ಹಳೆಯ ದೇವಸ್ಥಾನಗಳಲ್ಲಿ ಕಲ್ಲುಗಳ ಸಂದುಗಳಲ್ಲಿ ಗಿಡಗಳು ಹುಟ್ಟಿ ಬೆಳೆದು ಅನಾಹುತಗಳನ್ನು ಮಾಡುತ್ತವೆ. ಹೀಗಾಗಿ ಎಷ್ಟೋ ದೇವಾಲಯಗಳು ಬಿದ್ದುಹೋಗಿವೆ. ಇಲ್ಲೆಲ್ಲ ಸೂಕ್ತ ರಕ್ಷಣೋಪಾಯಗಳು ಅಗತ್ಯ. (ಎಚ್.ಸಿ.ಕೆ.)

**ಕಲ್ಲುಂಡೆಗಳು :** ಜಲಜ ಶಿಲೆಗಳು (ಸೆಡಿಮೆಂಟರಿ ರಾಕ್ಸ್) ಸಂಚಿತವಾದ ಮೇಲೆ ಅವುಗಳಲ್ಲಿ ಭೌತ, ರಾಸಾಯನಿಕ ಮತ್ತು ಜೈವಿಕ ವ್ಯತ್ಯಾಸಗಳಾಗಿ ಅವು ಗಟ್ಟಿಯಾಗುವಾಗ ಕೆಲವು ಖನಿಜಗಳು ಕರಗಿ ಮತ್ತೆ ಹರಳಿನ ರೂಪವನ್ನು ತಾಳುತ್ತವೆ. ಇವೇ ಕಲ್ಲುಂಡೆಗಳು (ಕಾಂಕ್ರಿಷನ್ಸ್; ಮಿನರಲ್ ನಾಡ್ಯೂಲ್ಸ್). ಈ ಕ್ರಿಯೆ ನಡೆಯುವಾಗ ಕಲ್ಲಿದ್ದಲು, ಕಲ್ಲೆಣ್ಣೆ ಮೊದಲಾದ ವಸ್ತುಗಳು ಸಹ ಉಂಟಾಗುತ್ತವೆ. ಕಲ್ಲುಂಡೆಗಳು ಸಾಮಾನ್ಯವಾಗಿ ಒಂದು ಖನಿಜ ಕಣದ ಅಥವಾ ಚಿಪ್ಪಿನ ಚೂರಿನ ಸುತ್ತಲೂ ಕೇಂದ್ರದಿಂದ ಅಂಚಿನವರೆಗೆ ಪದರಗಳ ರೂಪದಲ್ಲಿ (ಈರುಳ್ಳಿ ಸಿಪ್ಪೆಯಂತೆ) ಒಂದರ ಮೇಲೊಂದು ಶೇಖರವಾಗಿರುವ ಖನಿಜತಿಂತಿಣಿಗಳು. ಆಕಾರದಲ್ಲಿ ಇವು ಗುಂಡಾಗಿ ಮೊಟ್ಟೆಯಂತೆ, ದ್ರಾಕ್ಷಿ ಹಣ್ಣುಗಳ ಗೊಂಚಲಿನಂತೆ ಅಥವಾ ಮರದಂತೆ ಇರಬಹುದು. ಕಲ್ನಾರಿನ ಹಾಗೆ ರೇಷ್ಮೆಯಂತೆ ನೀಳವಾಗಿರುವ ಖನಿಜರಾಶಿಗಳೂ ಕಲ್ಲುಂಡೆಗಳಲ್ಲಿ ಸೇರಿವೆ. ಮಣ್ಣಿನಿಂದ ನಿರ್ಮಿತವಾದ ಶಿಲೆಗಳಲ್ಲಿ ಸಾಮಾನ್ಯವಾಗಿ ಸುಣ್ಣಕಲ್ಲಿನ ಉಂಡೆಗಳು (ಕ್ಯಾಲ್ಸೇನಿಯಸ್ ನಾಡ್ಯೂಲ್ಸ್) ಸಿಕ್ಕುತ್ತವೆ. ಕೆಲವು ವಿಶೇಷ ಕಾರಣಗಳಿಂದ ಕಬ್ಬಿಣದ ಅದುರು, ಕ್ಯಾಲ್ಸಿಯಂ ಫಾಸ್ಫೇಟ್ ಎಂಬ ರಂಜಕದ ಖನಿಜ ಮೊದಲಾದುವು ಕಲ್ಲುಂಡೆಗಳಲ್ಲಿ ತುಂಬಿರಬಹುದು. ಈ ಎರಡನೆ ವರ್ಗದ ಕಲ್ಲುಂಡೆಗಳು (ಫಾಸ್ಫ್ಯಾಟಿಕ್ ನಾಡ್ಯೂಲ್ಸ್) ರಾಸಾಯನಿಕ ಕೈಗಾರಿಕೆಯಲ್ಲಿ ವಿಶೇಷವಾಗಿ ಕೃತಕ ಗೊಬ್ಬರದ ಕೈಗಾರಿಕೆಯಲ್ಲಿ (ಉದಾಹರಣೆಗೆ ಸೂಪರ್ ಫಾಸ್ಫೇಟ್) ಅತ್ಯಮೂಲ್ಯ ಮೂಲವಸ್ತುಗಳು. ಕಲ್ಲುಂಡೆಗಳ ಬಿರುಕುಗಳಲ್ಲಿ ಆಗಾಗ ಕ್ಯಾಲ್ಸೈಟ್, ಸಿಕತ, ಪಿರೈಟಿಸ್ ಮೊದಲಾದ ಹರಳುಗಳು ತುಂಬಿರುವುದುಂಟು. ಆಗ ಅವನ್ನು ಜಿಯೋಡುಗಳೆಂದು ಕರೆಯುತ್ತಾರೆ. ಅಸಂಖ್ಯಾತ ಅಂಡಾಕಾರದ ಸಣ್ಣ ಸಣ್ಣ ಸುಣ್ಣಕಲ್ಲಿನ ಅಥವಾ ಕಬ್ಬಿಣದ ಅದುರಿನ ರಾಶಿಗಳಿಂದ ನಿರ್ಮಿತವಾದ ಊಲಿಟಿಕ್ ಸುಣ್ಣಕಲ್ಲು ಮತ್ತು ಕಬ್ಬಿಣಕಲ್ಲಿನ ನಿಕ್ಷೇಪಗಳು ಕೆಲವು ಯುಗಗಳಲ್ಲಿ ಸಂಚಿತವಾಗಿವೆ. (ಎ.ಎಸ್.ಎಸ್.ಐ.)

**ಕಲ್ಲುಗಣಿ :** ಉಪಲೋಗಾರ್ಹ ಕಲ್ಲುಗಳನ್ನು ಹೊರತೆಗೆಯಬಹುದಾದ ಕಲ್ಲಿನ ನಿಕ್ಷೇಪ (ಕ್ವಾರಿ). ಒಂದು ಗಣಿಯಲ್ಲಿ ದೊರೆಯುವ ಕಲ್ಲಿನ ದರ್ಜೆಯನ್ನು ಅನುಸರಿಸಿ ಆ ಕಲ್ಲು ಎಂಥ ಕೆಲಸಕ್ಕೆ ಉಪಯೋಗವಾಗುತ್ತದೆ ಎಂಬ ಅಂಶ ಇತ್ಯಾರ್ಥವಾಗುತ್ತದೆ. ವಿವಿಧ ನಮೂನೆಯ ಕಲ್ಲಿನ ಗಣಿಗಳು ಸಾಕಷ್ಟು ಸಂಖ್ಯೆಯಲ್ಲಿ ಇರಬಹುದಾದರೂ ಒಂದು ಗಣಿಯ ಉಪಯುಕ್ತತೆಯನ್ನು ನಿರ್ಧರಿಸುವ ಪ್ರಧಾನಾಂಶ ಅದರ ವಾಣಿಜ್ಯ ಮೌಲ್ಯ. ಎಂದರೆ, ಆ ಗಣಿಯಿಂದ ದೊರೆಯುವ ಕಲ್ಲುಗಳ ಉಪಯೋಗ ಮನುಷ್ಯನಿಗಿರಬೇಕು. ಅವು ಅಧಿಕ ಪರಿಮಾಣದಲ್ಲಿ ಲಭ್ಯವಿರಬೇಕು ಮತ್ತು ಗಣಿಯಿಂದ ಹೊರಸಾಗಣೆಯ ಸೌಲಭ್ಯ ಚೆನ್ನಾಗಿರಬೇಕು.

ಕ್ವಾರಿ ಪದದಿಂದ ಕ್ವಾರಿಯಿಂಗ್ ಎಂಬುದು ವ್ಯುತ್ಪತ್ತಿಯಾಗಿದೆ. ಕಲ್ಲಿನ ನೈಸರ್ಗಿಕ ತಾಣಗಳಿಂದ ವಾಣಿಜ್ಯೋಪಯೋಗಕ್ಕೋಸ್ಕರ ಕಲ್ಲನ್ನು ಹೊರತೆಗೆಯುವುದು ಎಂದು ಇದರ ಅರ್ಥ. ಇಂದು ಕ್ವಾರಿಯಿಂಗ್ ಒಂದು ದೊಡ್ಡ ಕೈಗಾರಿಕೆಯಾಗಿ (ಇಂಡಸ್ಟ್ರಿ) ಬೆಳೆದಿದೆ. ಇದರಲ್ಲಿ ಎರಡು ಪ್ರಮುಖ ಶಾಖೆಗಳಿವೆ : ಅಳತೆ ಕಲ್ಲುಗಳ ತಯಾರಿಕೆ, ತುಂಡು ಮತ್ತು ಪುಡಿ ಕಲ್ಲುಗಳ ತಯಾರಿಕೆ.

**ಅಳತೆ ಕಲ್ಲು :** ಕಟ್ಟಡದ ನಿರ್ಮಾಣದಲ್ಲಿ ಕೆತ್ತನೆಯ ಕೆಲಸಗಳಲ್ಲಿ, ಸುಂದರ ವಿಗ್ರಹಗಳ ಕಂಡರಣೆಯಲ್ಲಿ, ಸ್ಲೇಟ್ (ಬರೆಯುವ, ನೆಲಕ್ಕೆ ಚಪ್ಪಡಿ ಹಾಸುವ ಇತ್ಯಾದಿ) ಕಲ್ಲಿನ ಹಾಳೆಗಳ ಕೊಯ್ಯೆಗೆತದಲ್ಲಿ ಅಳತೆಕಲ್ಲಿಗೆ ಪ್ರಾಶಸ್ತ್ಯವಿದೆ. ಕಲ್ಲಿನ ಗಣಿಗಳು ಯಥೇಚ್ಛವಾಗಿ ಇರಬಹುದಾದರೂ ಅಳತೆ ಕಲ್ಲುಗಳು ಕೇವಲ ಕೆಲವೇ ಗಣಿಗಳಿಂದ ದೊರೆಯುತ್ತವೆ. ಒಂದು ಗಣಿಯಲ್ಲಿನ ಕಲ್ಲು ಅಳತೆಗಲ್ಲುಗಳಾಗಿ ದೊರೆಯಬಲ್ಲುದೇ ಇಲ್ಲವೇ ಎಂಬ ಅಂಶ ಪ್ರಧಾನವಾಗಿ ಆ ಕಲ್ಲಿನ ರಚನೆಯನ್ನು ಅನುಸರಿಸಿ ನಿರ್ಧರಿತವಾಗುವುದು. ಆದ್ದರಿಂದ ಅಳತೆಗಲ್ಲುಗಳ ಕೈಗಾರಿಕೆಯಲ್ಲಿ ಒಂದು ಯೋಗ್ಯ ನಿಕ್ಷೇಪವನ್ನು ಆರಿಸುವುದು ಮೊದಲ ಹೊಣೆ. ತರುವಾಯ ಅಂಥ ಗಣಿಯಲ್ಲಿನ ಕಲ್ಲಿನ ರಚನೆಯನ್ನು (ಎಂದರೆ ಅದು ಯಾವ ವರ್ಗಕ್ಕೆ ಸೇರಿದೆ, ಅದರ ಮೇಲೆ ಧಾರೆಗಳು ಹೇಗೆ ಹಬ್ಬಿವೆ ಮುಂತಾದ ಅಂಶಗಳು) ಅನುಸರಿಸಿ ಅಳತೆಗಲ್ಲುಗಳನ್ನು ಕೊಯ್ದೆಗೆ ಯುವ ವಿಧಾನಗಳನ್ನು ರೂಪಿಸಿಕೊಳ್ಳಬೇಕು. ಸಿಡಿಮದ್ದು ಸ್ಫೋಟನೆ, ಹಾರೆಪಿಕ್ಕಾಸುಗಳಿಂದ ಅಗೆತ ಈ ಕೈಗಾರಿಕೆಯಲ್ಲಿ ಮಾರಕವೇ ಆಗಬಹುದು. ಮುಂದುವರಿದ ಯಂತ್ರವಿಧಾನದ ಕೊರೆತಗಳು ಇಂದು ಬಳಕೆಯಲ್ಲಿವೆ. ಯಂತ್ರಚಾಲಿತ ಗರಗಸಗಳು ಸೂಕ್ಷ್ಮವಾಗಿ ಕಲ್ಲಿನ ಚಪ್ಪಡಿಗಳನ್ನು ಕೊಯ್ಯುತ್ತವೆ; ಅವನ್ನು ಸಾಗುಪಟ್ಟಿಗಳ ಮೂಲಕ ಮುಂದಕ್ಕೆ ಸಾಗಿಸುತ್ತಾರೆ. ಇಂಥ ಸೂಕ್ಷ್ಮಕ್ರಿಯೆ ಆವಶ್ಯಕವಿಲ್ಲದ ನಿಕ್ಷೇಪಗಳಲ್ಲಿ (ಉದಾಹರಣೆಗೆ ಕಟ್ಟಡ ಕಟ್ಟಲು ಬೇಕಾಗುವ ಅಳತೆಗಲ್ಲುಗಳು, ನೆಲದ ಮೇಲೆ ಹಾಸಲು ಬಳಸುವ ಚಪ್ಪಡಿಗಳು, ಮೆಟ್ಟಿಲುಕಲ್ಲುಗಳು, ಇತ್ಯಾದಿ) ಯುಕ್ತಪ್ರಮಾಣದ ಸಿಡಿಮದ್ದು, ಬಾಣ, ಕೊಡತಿ ಮುಂತಾದುವು ಸಾಕು.

**ತುಂಡು ಮತ್ತು ಪುಡಿಗಲ್ಲುಗಳು :** ಹೆಸರೇ ಸೂಚಿಸುವಂತೆ ಇವುಗಳಲ್ಲಿ ಅಳತೆ ಮುಖ್ಯವಲ್ಲ; ಯಾವ ವಿಧವಾದ ನವುರು ನಾಜೂಕು ಇಲ್ಲಿ ಅಗತ್ಯವಿಲ್ಲ. ಆದರೆ ಉದ್ದೇಶದ ಪೂರೈಕೆಗೋಸ್ಕರ ಒಂದು ನಿಯಮಿತ ಗಾತ್ರ ಬೇಕಾಗುವುದು. ಆದ್ದರಿಂದ ಈ ಕಲ್ಲುಗಳನ್ನು ಕೊಡುವ ಗಣಿಗಳಲ್ಲಿ ಸಿಡಿಮದ್ದು, ಹಾರೆ, ಪಿಕ್ಕಾಸು, ಗುದ್ದಲಿಗಳ ಉಪಯುಕ್ತತೆ ಹೆಚ್ಚು. ಬಂಡೆಗಳ ಮೇಲೆ ಆಳವಾಗಿ ಗುಣಿಗಳನ್ನು ತೋಡಿ ಸಾಕಷ್ಟು ಸಿಡಿಮದ್ದನ್ನು ಅಳವಡಿಸಿ ಭಾರೀ ಸ್ಫೋಟನೆಯಿಂದ ಕಲ್ಲಿನ ಚಿಪ್ಪುಗಳನ್ನು ಬಂಡೆಯಿಂದ ಎಳಕಿಸಲಾಗುವುದು. ಮುಂದೆ ಈ ತುಂಡುಗಳನ್ನು ಹೊಡೆದೋ ಬಡಿದೋ ಅವಶ್ಯವಾದಲ್ಲಿ ಪುನಃ ಸಿಡಿಮದ್ದನ್ನೇ ಉಪಯೋಗಿಸಿಯೋ ಒಡೆಯುತ್ತಾರೆ. ಪುಡಿಗಲ್ಲುಗಳು, ಕಲ್ಲಿನ ಕಣಗಳು ಬೇಕಾಗುವಲ್ಲಿ ಯಂತ್ರಗಳಿಗೆ ತುಂಡುಗಲ್ಲುಗಳನ್ನು ಪೂರೈಕೆ ಮಾಡಿ ಅಲ್ಲಿ ಅವನ್ನು ಪುಡಿಮಾಡಿ ಯೋಗ್ಯಗಾತ್ರದ ಒಂದರಿಯಲ್ಲಿ ಜಲ್ಲಡಿಸಲಾಗುವುದು. ಈಗ ಬೇಕಾದ ಗಾತ್ರದ ತುಂಡುಗಳೋ ಕಣಗಳೋ ಸಿದ್ಧವಾದಂತಾಯಿತು. (ಎಚ್.ಎಸ್.ಆರ್.)

**ಕಲ್ಲುಗಳು, ವೈದ್ಯದಲ್ಲಿ :** ರಾಸಾಯನ ಕ್ರಿಯೆಯ ವೈಪರೀತ್ಯಗಳಿಂದಾಗಿ ದೇಹದ ಅನೇಕ ಭಾಗಗಳಲ್ಲಿ ಕಲ್ಲುಗಳಂತೆ ಗಟ್ಟಿಯಾಗಿ ಪ್ರಕಟವಾಗುವ ಲವಣ ಶೇಖರಣೆಗಳು (ಕ್ಯಾಲ್ಕುಲಸ್). ಕಲ್ಲುಗಳು ಮೂತ್ರಜನಕಾಂಗ, ಪಿತ್ತಕೋಶ, ಮೇದೋಜೀರಕ ಗ್ರಂಥಿಯಲ್ಲಿ ಕಾಣಿಸಿಕೊಳ್ಳಬಹುದು. ಅದೇ ತೆರನಾಗಿ ಜೊಲ್ಲುಗ್ರಂಥಿ, ಶುಕ್ಲಗ್ರಂಥಿ ಮತ್ತು ಶ್ವಾಸನಾಳಗಳಲ್ಲಿ ಉಂಟಾಗಬಹುದು.

**ಮೂತ್ರ ಕಲ್ಲು :** ಮೂತ್ರಜನಕಾಂಗ, ಮೂತ್ರನಾಳ, ಮೂತ್ರಕೋಶ ಇಲ್ಲವೇ ಮೂತ್ರ ವಿಸರ್ಜನಾ ನಾಳದಲ್ಲಿ ಇದು ತಲೆದೋರಬಹುದು, ಇಲ್ಲವೇ ಮೂತ್ರಜನಕಾಂಗದಲ್ಲಿ ಉಂಟಾದ ಕಲ್ಲುಗಳು ಉಳಿದೆಲ್ಲ ಭಾಗಗಳಿಗೆ ಹರಿದು ಬರಬಹುದು. ಅದೇ ಸಾಮಾನ್ಯವಾಗಿ ಕಂಡುಬರುವ ರೀತಿ.

**ಮೂತ್ರಜನಕಾಂಗದಲ್ಲಿ ಕಲ್ಲು :** ಆಹಾರದಲ್ಲಿ ವಿಟಮಿನ್ A ಯ ಅಭಾವದಿಂದಾಗಿ ಮೂತ್ರಜನಕಾಂಗದ ಒಳಮೈಯ ಮೇಲ್ಪದರ ಹಾನಿಯಾಗಿ ಕಲ್ಲು ತಲೆದೋರಲು ಬುನಾದಿಯನ್ನು ಒದಗಿಸುತ್ತದೆ. ಮೂತ್ರದಲ್ಲಿ ಸಿಟ್ರೇಟಿನ ಅಂಶದ ಇಳುವರಿ, ಸ್ಟ್ರೆಪ್ಟೊಕಾಕಸ್, ಸ್ಟೆಫೈಲೋಕಾಕಸ್, ಪ್ರೋಟಿಯಸ್ ಮತ್ತು ಇ. ಕೋಲೈ ಜೀವಾಣುಗಳ ಬೆಳವಣಿಗೆ, ಮೂತ್ರದ ಚಲನೆಗೆ ಉಂಟಾಗುವ ಅಡ್ಡಿ, ದೀರ್ಘಕಾಲ ಹಾಸಿಗೆ ಹಿಡಿದು ಮಲಗಿದಾಗ ಮೂಳೆಗಳಲ್ಲಿ ಕ್ಯಾಲ್ಸಿಯಮಿನ ಮಟ್ಟ ಕಡಿಮೆಯಾಗಿ ಮೂತ್ರದಲ್ಲಿ ಅದರ ಅಂಶದ ಏರಿಕೆ ಮತ್ತು ಥೈರಾಯ್ಡ್ ಗ್ರಂಥಿಯ ಕಾರ್ಯದಲ್ಲಿ ಹೆಚ್ಚಳ–ಇವು ಕಲ್ಲಿನ ಬೆಳವಣಿಗೆಗೆ ಚಾಲನೆಯನ್ನು ಕೊಡುತ್ತವೆ. ಇಲ್ಲಿನ ಕಲ್ಲುಗಳಲ್ಲಿ ಆಕ್ಸಲೇಟ್, ಫಾಸ್ಫೇಟ್, ಯೂರಿಕ್ ಆಮ್ಲ ಮತ್ತು ಸಿಸ್ಟಿನ್ ಕಲ್ಲುಗಳು ಮುಖ್ಯವಾದವು.

ಕ್ಯಾಲ್ಸಿಯಂ ಆಕ್ಸಲೇಟ್ ಕಲ್ಲುಗಳು ಒರಟಾಗಿ, ಮೊನಚಾದ ಮೇಲ್ಮೈಯನ್ನು ಹೊಂದಿ ಉಪ್ಪುನೇರಳೆಯಂತೆ ತೋರಿಬರುತ್ತವೆ. ಅದರಿಂದಾಗಿ ರಕ್ತನಾಳಗಳಿಗೆ ಧಕ್ಕೆಯುಂಟಾಗಿ ಸಾಮಾನ್ಯವಾಗಿ ರಕ್ತೋದ್ರೇಕ ಉಂಟಾಗುವುದು. ರಕ್ತದ ಅಂಶಗಳು ಕಲ್ಲಿನ ಮೇಲೆ ಸೇರ್ಪಡೆಯಾಗುತ್ತವೆ. ಎಕ್ಸ್‌ಕಿರಣ ಚಿತ್ರದಲ್ಲಿ ಅದರ ನೆರಳು ಕಾಣಿಸುವುದು. ಈ ಕಲ್ಲು ಗಟ್ಟಿಯಾಗಿದ್ದು ಕತ್ತರಿಸಿದಾಗ ಪದರಗಳನ್ನು ತೋರಿಸುವುದು.

ಫಾಸ್ಫೇಟ್ ಕಲ್ಲುಗಳು ಹೆಚ್ಚಾಗಿ ಕ್ಯಾಲ್ಸಿಯಂ ಫಾಸ್ಫೇಟಿನಿಂದ ಉಂಟಾಗಿರುತ್ತವೆ. ಅಮೋನಿಯಂ–ಮ್ಯಾಗ್ನೀಸಿಯಂ ಫಾಸ್ಫೇಟ್ ಕೆಲವು ಬಾರಿ ಸೇರಿರುತ್ತದೆ. ಇದರ ಹೊರಮೈ ಮೃದು, ಬಣ್ಣ ಬಿಳಿಯ ಮಾಸಲು, ಮೂತ್ರ ಕ್ಷಾರಗೊಂಡಾಗ ಅದರ ಬೆಳವಣಿಗೆ ತೀವ್ರವಾಗುವುದಲ್ಲದೆ ಸಾರಂಗದ ಕೊಂಬಿನ ರೂಪವನ್ನು ತಳೆಯುವುದು. ಈ ಕಲ್ಲು ಯಾವುದೇ ಲಕ್ಷಣಗಳನ್ನು ಪ್ರಕಟಿಸದೆ ದೀರ್ಘಕಾಲ ಇರಬಹುದು. ಎಕ್ಸ್‌ಕಿರಣ ಚಿತ್ರದಲ್ಲಿ ಇದನ್ನು ಗುರುತಿಸಬಹುದು. ಯೂರಿಕ್ ಆಮ್ಲದಿಂದ ಸಿದ್ಧವಾಗುವ ಕಲ್ಲು ಯೂರೇಟ್ ಕಲ್ಲು. ಈ ಕಲ್ಲುಗಳ ಸಂಖ್ಯೆ ವಿಪುಲ. ಆಕೃತಿ ರತ್ನದ ಮೈಯಂತೆ. ಬಲು ಗಟ್ಟಿ. ಬಣ್ಣ ಹಳದಿ ಇಲ್ಲವೆ ಕಂದು. ಇವುಗಳಲ್ಲಿ ಕ್ಯಾಲ್ಸಿಯಂ ಸೇರಿಕೊಂಡಾಗ ಅದನ್ನು ಎಕ್ಸ್‌ಕಿರಣ ಚಿತ್ರದಲ್ಲಿ ಗುರುತಿಸಬಹುದು; ಅದು ಸೇರದಿರುವಾಗ ಗುರುತಿಸುವುದು ಕಷ್ಟ. ಮೂತ್ರ ಜನಕಾಂಗದಲ್ಲಿನ ಕೊಳವೆಯಲ್ಲಿ ಸಿಸ್ಟಿನ್ ಮರಳಿ ಹೀರಲ್ಪಡದಾದಾಗ ಅದು ಕಲ್ಲಿನ ರೂಪದಲ್ಲಿ

ಉಳಿಯುತ್ತದೆ. ಅದಕ್ಕೆ ಷಟ್ಕೋಣಾಕೃತಿ ಇರುವುದು. ಅದು ದರ್ಶಕ. ಆಮ್ಲ ಮೂತ್ರದಲ್ಲಿ ಈ ಕಲ್ಲಿನ ಬೆಳೆವಣಿಗೆ ವಿಶೇಷ. ಸಂಖ್ಯೆ ಹೆಚ್ಚು. ಈ ಕಲ್ಲುಗಳು ಹೆಣ್ಣುಮಕ್ಕಳಲ್ಲಿ ಹೆಚ್ಚಾಗಿ ಇರುವುವು.

**ಲಕ್ಷಣಗಳು :** ಮೂತ್ರ ಕಲ್ಲುಗಳು (30–50) ವರ್ಷ ವಯಸ್ಸಿನವರಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹೆಂಗಸರಿಗಿಂತ ಗಂಡಸರಲ್ಲಿ ಇವು ಉಂಟಾಗುವುದು ಹೆಚ್ಚು. ಇವುಗಳ ಲಕ್ಷಣಗಳು ಒಂದೇ ನಿಯಮಕ್ಕೆ ಒಳಪಡುವುದಿಲ್ಲ. ಅನೇಕ ಬಾರಿ ಕಲ್ಲುಗಳ ಇರುವಿಕೆ ಎಕ್ಸ್‌ಕಿರಣದಲ್ಲಿ ಮಾತ್ರ ತೋರಿಬರಬಹುದು. ಫಾಸ್ಫೇಟ್ ಕಲ್ಲುಗಳು ಅನೇಕ ವರ್ಷಗಳ ಪರ್ಯಂತ ಗೋಪ್ಯವಾಗಿ ಬೆಳೆಯುತ್ತ ಮೂತ್ರಜನಕಾಂಗದ ಅಂಗಭಾಗಗಳನ್ನು ಧ್ವಂಸಗೊಳಿಸಿ ಮೂತ್ರಜನಕಾಂಗದ ಸೋಲುವಿಕೆಯ ಲಕ್ಷಣಗಳನ್ನು ಪ್ರಕಟಿಸಬಹುದು. ಅಲ್ಲಿ ಜೀವಾಣುಗಳ ಬೆಳವಣಿಗೆಗೆ ವಿಶೇಷ ಅವಕಾಶವನ್ನು ಒದಗಿಸಬಲ್ಲವು.

ಹೆಚ್ಚು ಜನರಲ್ಲಿ ತೋರಿಬರುವ ಪ್ರಮುಖ ಲಕ್ಷಣ ನೋವು. ಬೆನ್ನ ಮೇಲೆ ಮೂತ್ರಜನಕಾಂಗದ ಮೂಲೆಯಲ್ಲಿ ಅದು ಪ್ರಾರಂಭವಾಗುವುದು. ಹೊಟ್ಟೆಯ ಮೇಲೆ ಎದೆಯ ಪಂಜರದ ಕೆಳಗೆ ಸಹ ಅದು ಪ್ರಕಟವಾಗುವುದು. ನಡೆದಾಡಿದರೆ ನೋವು ಹೆಚ್ಚು.. ಈ ನೋವು ತೀವ್ರತರನಾದ ಶೂಲೆಯಂತೆ ಪ್ರಾಣಸಂಕಟವನ್ನು ಉಂಟುಮಾಡಬಹುದು. ನೋವು ಟೊಂಕದಿಂದ ತೊಡೆ ಸಂದಿನವರೆಗೂ ಹರಡಿ ರೋಗಿ ಮಂಡಿಯನ್ನು ಮೇಲಕ್ಕೆಳೆದುಕೊಂಡು ಉರುಳಾಡುವನು. ನಾಡಿಯ ಬಡಿತ ತೀವ್ರವಾಗುವುದು. ದೈಹಿಕ ಉಷ್ಣತೆ ಕಡಿಮೆಯಾಗುವುದು. ಅನೇಕಬಾರಿ ವಾಂತಿ, ವಿಪರೀತ ಬೆವರು, ಕೆಲವೊಂದು ತೊಟ್ಟು ರಕ್ತಮಿಶ್ರಿತ ಮೂತ್ರ ವಿಸರ್ಜನೆ ಆಗುತ್ತದೆ. ನೋವು ಪದೇ ಪದೇ ಮರುಕಳಿಸುತ್ತದೆ. ಅದು 24 ಗಂಟೆಗಳ ಪರ್ಯಂತವೂ ಇರಬಹುದು. ಕಲ್ಲು ಮೂತ್ರನಾಳದೊಳಕ್ಕೆ ಇಳಿಯುವಾಗ ಮತ್ತು ಮೂತ್ರಜನಕಾಂಗನಾಳದ ಸಂಪರ್ಕ ಸ್ಥಳದಲ್ಲಿ ಅಡ್ಡಿಯುಂಟಾದಾಗ ನೋವು ತಲೆದೋರುತ್ತದೆ. ಆಗ ಪರೀಕ್ಷೆ ಮಾಡಿದರೆ ಹೊಟ್ಟೆಯ ಪಕ್ಕದ ಸ್ನಾಯುಗಳು ಬಿರುಸಾಗಿ ತೋರುತ್ತವೆ. ನೋವು ಮಾಯವಾದ ಮೇಲೆ ಯಾವ ವೈಪರೀತ್ಯವೂ ತೋರಬಾರದು. ಮೂತ್ರಜನಕಾಂಗದ ಕೊನೆಯಲ್ಲಿ ಒತ್ತಿದಾಗ ವೇದನೆಯುಂಟಾಗಬಹುದು. ಕಲ್ಲು ಮೂತ್ರನಾಳದಲ್ಲಿಯೇ ಉಳಿದು ಮೂತ್ರದ ಸಂಚಾರಕ್ಕೆ ಅಡ್ಡಿಯನ್ನುಂಟುಮಾಡಿದಾಗ ಮೂತ್ರಜನಕಾಂಗದಲ್ಲಿ ನೀರು ಅಥವಾ ಕೀವು ಸಂಗ್ರಹಗೊಂಡು ಉಬ್ಬಿ ಸ್ಪರ್ಶ ಸಾಧ್ಯವಾಗುವುದು. ಕೆಲವುಬಾರಿ ಹೆಚ್ಚು ರಕ್ತ ಮೂತ್ರದಲ್ಲಿ ವಿಸರ್ಜನೆಯಾಗಿ ಕಲ್ಲಿನ ಇರುವಿಕೆಯನ್ನು ತೋರ್ಪಡಿಸಬಹುದು. ಎಕ್ಸ್‌ಕಿರಣದಿಂದ ಕಲ್ಲಿನ ಇರುವಿಕೆಯ ಛಾಯೆಯನ್ನು ತಿಳಿಯಬಹುದು. ಪಾರದರ್ಶಕವಲ್ಲದ ವಸ್ತುವನ್ನು ದೇಹದೊಳಸೇರಿಸಿ ಎಕ್ಸ್‌ಕಿರಣದ ನೆರವಿನಿಂದ ಕಲ್ಲಿನ ಇರುವಿಕೆಯನ್ನು ದೃಢಪಡಿಸಿಕೊಳ್ಳಬಹುದು. ಅಲ್ಲದೇ ಆ ಚಿತ್ರ ಇನ್ನೊಂದು ಮೂತ್ರಜನಕಾಂಗ ಚೆನ್ನಾಗಿ ಕೆಲಸಮಾಡುವುದರ ಬಗ್ಗೆಯೂ ತಿಳಿಸುವುದು. ಉದರದ ಅಲ್ಟ್ರಾಸಾಂಡ್ ಪರೀಕ್ಷೆ ಕಲ್ಲಿನ ಇರುವಿಕೆಯನ್ನು ಸೂಚಿಸುವುದು.

ಶಸ್ತ್ರಚಿಕಿತ್ಸೆಯಿಂದ ಮೂತ್ರದ ಕಲ್ಲುಗಳನ್ನು ತೆಗೆಯಬೇಕು. ರೋಗಾಣುಗಳ ಬೆಳವಣಿಗೆಯಿದ್ದಾಗ ಜೀವಾಣುರೋಧಕಗಳನ್ನು ಕೊಡಬೇಕು. ಬೆನ್ನಮೂಲಕ ನಡೆಯುವ ಶಸ್ತ್ರಕ್ರಿಯೆಯಲ್ಲಿ ಕಲ್ಲನ್ನು, ಕಲ್ಲಿನ ಸಮೇತ ಮೂತ್ರಜನಕಾಂಗದ ಸ್ವಲ್ಪ ಭಾಗವನ್ನು ಇಲ್ಲವೇ ಇಡೀ ಮೂತ್ರಜನಕಾಂಗವನ್ನು ಅದು ಕೆಟ್ಟಿದ್ದರೆ ತೆಗೆಯಬೇಕು. ಕಲ್ಲುಗಳನ್ನು ಕರಗಿಸುವುದು ಸಾಮಾನ್ಯವಾಗಿ ಅಸಾಧ್ಯ. ಹೆಚ್ಚು ನೀರನ್ನು ಸೇವಿಸುವುದರಿಂದ, ಮೂತ್ರವನ್ನು ಕ್ಷಾರಗೊಳಿಸುವುದರಿಂದ ಮತ್ತು ಸೋಡಿಯಂ ಸಿಟ್ರೇಟ್ ಮಿಶ್ರಣದ ಸೇವನೆಯಿಂದ ಕೆಲವುಬಾರಿ ಇವನ್ನು ಕರಗಿಸಬಹುದು.

**ಮೂತ್ರನಾಳದಲ್ಲಿ ಕಲ್ಲು :** ಈ ಕಲ್ಲುಗಳು ಮೂತ್ರಜನಕಾಂಗದಲ್ಲಿ ಉಂಟಾಗಿರುತ್ತವೆ. ಅವುಗಳ ಆಕೃತಿ ದುಂಡಗೆ ಇಲ್ಲವೇ ದೀರ್ಘಕಾಲ ಅಲ್ಲಿಯೇ ಉಳಿದಾಗ ಅವುಗಳ ಬೆಳವಣಿಗೆ ಹೆಚ್ಚಾಗಿ ಅವು ಉತ್ತುತ್ತೆಯ ರೂಪವನ್ನು ತಳೆಯಬಹುದು. ಅವು ಮೂತ್ರನಾಳದಲ್ಲಿ ಇಳಿಯುತ್ತಿರುವಾಗ ನೋವು ತೋರಿಬರುವುದು. ಈ ನಾಳದಲ್ಲಿ ಅನೇಕ ಕಡೆ ತಡೆಯಿದೆ. ಆಗ ತೋರಿಬರುವ ನೋವು ಸೊಂಟದಿಂದ ಜನನೇಂದ್ರಿಯ ಮತ್ತು ತೊಡೆಯ ಮೇಲ್ಭಾಗದ ವರೆಗೂ ಪಸರಿಸುವುದು. ಅದು ಕೆಳಕ್ಕಿಳಿದು ಒಂದೇ ಕಡೆ ವಿಚಲಿತವಾಗದೆ ನಿಂತರೆ ತೀವ್ರತರನಲ್ಲದ ನೋವು ಸದಾಕಾಲ ಕೆಳಹೊಟ್ಟೆಯಲ್ಲಿ ತೋರಿಬರುವುದು. ಶ್ರಮದ ಅನಂತರ ನೋವು ಹೆಚ್ಚು. ವಿಶ್ರಾಂತಿಯಿಂದ ಅದು ಕಡಿಮೆಯಾಗುವುದು. ಕಲ್ಲುಗಳ ಇರುವಿಕೆಯನ್ನು ಎಕ್ಸ್–ಕಿರಣ ಚಿತ್ರ ಮತ್ತು ರಕ್ತನಾಳಾಂತರ ಮೂತ್ರಜನಕಾಂಗದ ಚಿತ್ರಣದಿಂದ ತಿಳಿಯಬೇಕು. ಮೂತ್ರಕೋಶದರ್ಶಕದಿಂದ ನೋಡಿದಾಗ ಈ ನಾಳದ ಬಾಯ್ದೆರೆಯುವ ಪ್ರದೇಶ ಉಬ್ಬಿರುವುದು ಗೋಚರಿಸುತ್ತದೆ. ಇದು ಮೂತ್ರದ ಚಲನೆಗೆ ಅಡ್ಡಿಪಡಿಸಿ ತನ್ಮೂಲಕ ಮೂತ್ರಜನಕಾಂಗದ ಕಾರ್ಯಚಟುವಟಿಕೆಗೆ ವ್ಯತ್ಯಯವನ್ನುಂಟುಮಾಡಬಲ್ಲದು. ಅನೇಕ ಕಲ್ಲುಗಳು ಯಾವ ತೊಂದರೆಯೂ ಇಲ್ಲದೆ ಕೆಳಕ್ಕಿಳಿಯುತ್ತವೆ. ನೀರನ್ನು ಜಾಸ್ತಿ ಕುಡಿಯಬೇಕು. ಸೆಡೆತರೋಧಕಗಳು ನೋವಿನ ಶಮನವನ್ನುಂಟು ಮಾಡುತ್ತವೆ. ಮುಂದೆ ಚಲಿಸದೆ ಉಳಿಯುವ ಕಲ್ಲುಗಳನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯಬೇಕಾಗುವುದು. ಈ ಮುಂಚೆ ಮೂತ್ರನಾಳ ಕಲ್ಲುಗಳನ್ನು ಹಿಂಬದಿಯಿಂದ ಅದರೇಳಕ್ಕೆ ಬುಟ್ಟಿಯೊಂದನ್ನು ತೂರಿಸಿ ಅದರ ಮೂಲಕ ಕಲ್ಲು ತೆಗೆಯಲಾಗುತ್ತಿದ್ದಿತು. ಇಂದು ಮೂತ್ರಪಿಂಡ, ಮೂತ್ರನಾಳದಲ್ಲಿರುವ ಕಲ್ಲುಗಳನ್ನು ದೇಹದ ಹೊರಗಿನಿಂದ ನೀಡುವ ಆಘಾತದಿಂದ ಭಗ್ನಗೊಳಿಸಬಹುದು. ನಂತರ ಅದರ ಪುಡಿ ಮೂತ್ರದ ಮೂಲಕ ಹೊರಬರುವುದು. ಅದರ ಬದಲು ಮೂತ್ರಪಿಂಡದ ನಾಭಿಯಲ್ಲಿ ಉಳಿದಿರುವ ಕಲ್ಲನ್ನು ಮೂತ್ರದ ದರ್ಶಕವನ್ನು ಹೋಲುವ ಉಪಕರಣವನ್ನು ಬೆನ್ನಕಡೆಯಿಂದ ಒಳಸೇರಿಸಿ ಹೊರತೆಗೆಯಬೇಕಾಗುವುದು.

**ಮೂತ್ರಕೋಶದಲ್ಲಿ ಕಲ್ಲು :** ಮೂತ್ರಜನಕಾಂಗದಿಂದ ಕೆಳಕ್ಕಿಳಿಯುವ ಕಲ್ಲು ಮೂತ್ರಕೋಶದಲ್ಲಿ ಉಳಿಯಬಹುದು ಅಥವಾ ಅದು ಅಲ್ಲಿಯೇ ಬೆಳೆಯಬಹುದು. ಈ ಕಲ್ಲುಗಳು ಅನೇಕ ವಸ್ತುಗಳ ಸಮ್ಮಿಲನದಿಂದ ಉಂಟಾಗಿರುತ್ತವೆ. ಹೆಚ್ಚಾಗಿ ಆಕ್ಸಲೇಟಿನಿಂದ ಬೆಳೆಯುತ್ತವೆ. ಇವುಗಳ ಬಣ್ಣ ಕಂದು ಅಥವಾ ಕಪ್ಪು. ಬೆಳವಣಿಗೆ ನಿಧಾನ. ಅವುಗಳ ಹೊರಮೈ ನುಣುಪಾಗಿರುವುದಿಲ್ಲ. ಯೂರಿಕ್ ಆಮ್ಲದ ಕಲ್ಲುಗಳು ಎಕ್ಸ್‌ಕಿರಣಕ್ಕೆ ಗೋಚರಿಸುವುದಿಲ್ಲ. ಅವು ದುಂಡಗೆ, ನಯವಾಗಿರುತ್ತವೆ. ರೋಗಾಣುಗಳ ಬೆಳವಣಿಗೆಯಿದ್ದಾಗ, ಅವನ್ನು ಕೇಂದ್ರ ಬಿಂದುವಾಗಿ ಪಡೆದು ಕ್ಯಾಲ್ಸಿಯಂ, ಮ್ಯಾಗ್ನೀಸಿಯಂ, ಅಮೋನಿಯಂ ಫಾಸ್ಫೇಟ್ ಲವಣಗಳು ಕಲ್ಲಿನ ಬೆಳವಣಿಗೆಯನ್ನು ತೋರ್ಪಡಿಸುತ್ತವೆ. ಅವುಗಳ ಬಣ್ಣ ಮಾಸಲು ಬಿಳುಪು. ಅವು ತೀವ್ರವಾಗಿ ಬೆಳೆದು ದೊಡ್ಡ ಆಕೃತಿಯನ್ನು ಪಡೆಯುತ್ತವೆ, ಮೂತ್ರಕೋಶದ ಕಲ್ಲುಗಳು ಅತ್ತಿಂದಿತ್ತ ಚಲಿಸುತ್ತವೆ. ಅವು ಕೆಳಭಾಗದಲ್ಲಿ ಹೆಚ್ಚು. ಅನೇಕಬಾರಿ ಈ ಕಲ್ಲುಗಳು ಯಾವ ತೊಂದರೆಯನ್ನೂ ತೋರ್ಪಡಿಸುವುದಿಲ್ಲ. ರೋಗಿ ಪದೇ ಪದೇ ಮೂತ್ರ ವಿಸರ್ಜನೆ ಮಾಡುತ್ತಾನೆ. ರಾತ್ರಿಕಾಲದಲ್ಲಿ ಆ ತೆರನಾದ ಮೂತ್ರವಿಸರ್ಜನೆಯಿರುವುದಿಲ್ಲ. ಮೂತ್ರವಿಸರ್ಜನೆಯಾದ ಮೇಲೂ ವ್ಯಕ್ತಿಯ ಮೂತ್ರಕೋಶ ಖಾಲಿಯಾದಂತೆ ತೋರಿಬರುವುದಿಲ್ಲ. ಆಗ ನೋವು ತೋರಿಬರುವುದು. ಶ್ರಮದ ಅನಂತರ ನೋವು ಹೆಚ್ಚು. ವಾಹನ ಸಂಚಾರಕಾಲದಲ್ಲಿ ಅದು ಜಾಸ್ತಿ. ಮಲಗಿದ್ದಾಗ ನೋವು ಕಡಿಮೆಯಾಗುತ್ತದೆ. ಆಗ ಸ್ಪರ್ಶಶಕ್ತಿಯಿಲ್ಲದಿರುವ ಮೂತ್ರಕೋಶದಲ್ಲಿನ ಭಾಗದತ್ತ ಕಲ್ಲು ಹಿಂದೆ ಸರಿಯುವುದರಿಂದ ನೋವು ತೋರಿಬರದು. ಆಗಾಗ್ಗೆ ರಕ್ತಮಿಶ್ರಿತ ಮೂತ್ರ ವಿಸರ್ಜನೆಯಾಗುತ್ತದೆ. ಮೂತ್ರಪ್ರವಾಹ ಏಕಾಏಕಿಯಾಗಿ ನಿಲುಗಡೆಯಾಗಬಹುದು.

ಈ ರೀತಿಯ ಕಲ್ಲುಗಳ ಇರುವಿಕೆಯನ್ನು ಗುದದ್ವಾರದೊಳಕ್ಕೆ ಬೆರಳನ್ನಿಟ್ಟುಕೊಂಡು ತಿಳಿದುಕೊಳ್ಳಬಹುದು. ಎಕ್ಸ್‌ಕಿರಣ ಚಿತ್ರ ಮತ್ತು ಮೂತ್ರಕೋಶದರ್ಶಕದ ಮೂಲಕ ಅವನ್ನು ಖಚಿತಪಡಿಸಿಕೊಳ್ಳಬಹುದು. ಕಲ್ಲನ್ನು ಕತ್ತರಿಸುವ ಸಾಧನದ ಮೂಲಕ ಇವುಗಳ ಗಾತ್ರವನ್ನು ಕಿರಿದುಗೊಳಿಸಿ ಅದರ ವಿಸರ್ಜನೆಗೆ ಸಹಾಯಮಾಡಬಹುದು, ಇಲ್ಲವೆ ಕಲ್ಲುಗಳನ್ನು ಶಸ್ತ್ರಚಿಕಿತ್ಸೆಯಿಂದ ಹೊರತೆಗೆಯಬಹುದು.

ಮೂತ್ರವಿಸರ್ಜನೆ ನಾಳದಲ್ಲಿ ಕಲ್ಲು ಉಳಿದು ಮೂತ್ರದ ಪ್ರವಾಹಕ್ಕೆ ಅಡ್ಡಿಯನ್ನುಂಟುಮಾಡಬಲ್ಲದು. ಅದನ್ನು ಚಿಮುಟದ ಸಹಾಯದಿಂದ ತೆಗೆಯಬೇಕು.

**ಪಿತ್ತಕಲ್ಲು :** ಪಿತ್ತಕೋಶದಲ್ಲಿ ಕಂಡುಬರುವ ಕಲ್ಲುಗಳ ರಚನೆ ವಿವಿಧ ತೆರನಾದುದು. ಅದು ಬರಿಯ ಕೊಲೆಸ್ಟಿರಾಲ್ ಅಥವಾ ಕ್ಯಾಲ್ಸಿಯಂ ಬಿಲಿರುಬಿನೇಟ್‌ನಿಂದಾಗಿರಬಹುದು. ಹೆಚ್ಚಾಗಿ ಇವೆರಡೂ ಅಂಶಗಳು ಒಂದರ ಅನಂತರ ಮತ್ತೊಂದು ಪದರಿನಲ್ಲಿ ಸೇರ್ಪಡೆಗೊಂಡಿರುವ ಕಲ್ಲುಗಳ ರಚನೆಯೇ ಸಾಮಾನ್ಯ. ಇವುಗಳಲ್ಲದೆ ಕೊಲೆಸ್ಟಿರಾಲ್, ಕ್ಯಾಲ್ಸಿಯಂ ಕಾರ್ಬೋನೇಟ್ ಮತ್ತು ಫಾಸ್ಫೇಟಿನಿಂದ ಕಲ್ಲುಗಳ ರಚನೆಯೂ ಆಗಿರುತ್ತದೆ.

ಈ ರೀತಿಯ ಕಲ್ಲುಗಳ ರಚನೆ ಪಿತ್ತಲವಣದಲ್ಲಿ ಕೊಲೆಸ್ಟಿರಾಲ್ ಕರಗುವಿಕೆಯ ಪ್ರಮಾಣವನ್ನವಲಂಬಿಸಿದೆ. ಸಾಮಾನ್ಯವಾಗಿ ಪಿತ್ತಲವಣ ಮತ್ತು ಕೊಲೆಸ್ಟಿರಾಲಿನ ಪ್ರಮಾಣ 25:1 ರಷ್ಟು. ಇದರಲ್ಲಿ ಪಿತ್ತಲವಣದ ಅಂಶ ಅರ್ಧದಷ್ಟು ಕಡಿಮೆಯಾದರೆ ಕೊಲೆಸ್ಟರಾಲ್ ಗಟ್ಟಿಯಾಗಿ ಶಿಲೆಯಾಗುತ್ತದೆ. ಆಹಾರದಲ್ಲಿ ಹೆಚ್ಚು ಸಕ್ಕರೆ ಸೇವನೆ, ವಿಟಮಿನ್ 'A' ಅಭಾವ, ಜೀವಾಣುಗಳ ಬೆಳವಣಿಗೆ ಮತ್ತು ಪಿತ್ತದ ಮುಂಚಲನೆಗೆ ತಡೆ–ಇವು ಕಲ್ಲಿನ ಬೆಳವಣಿಗೆಗೆ ಪೂರಕವಾಗಬಲ್ಲವು. ರಕ್ತನಾಳಾಂತರವಾಗಿ ಮತ್ತು ಹಾಲುರಸನಾಳದ ಮೂಲಕ ಜೀವಾಣುಗಳು ಪಿತ್ತಕೋಶವನ್ನು ಸೇರಿ ಅಲ್ಲಿನ ಲೋಳೆಪೊರೆಯನ್ನು ನಾಶಗೊಳಿಸಿ ಅಲ್ಲಿ ಕಲ್ಲು ಉಂಟಾಗುವಂತೆ ಮಾಡುವುದು. ಸತ್ತ ಜೀವಾಣುಗಳ ಸ್ಮಾರಕವಾಗಿ ನಿರ್ಮಿಸಿದ ಸಮಾಧಿ ಕಲ್ಲುಗಳು ಇವೆಂಬ ನುಡಿ ಪ್ರಚಲಿತವಿದೆ.

ಪಿತ್ತಕಲ್ಲುಗಳನ್ನು ಕೊಲೆಸ್ಟರಾಲ್ ಕಲ್ಲು, ರಂಗಿನ ಕಲ್ಲು ಮತ್ತು ಮಿಶ್ರ ಕಲ್ಲುಗಳೆಂದು ವಿಂಗಡಿಸಲಾಗಿದೆ. ಕೊಲೆಸ್ಟರಾಲ್ ಕಲ್ಲು ದುಂಡಗಿದ್ದು, ಹಗುರಾಗಿ, ತಿಳಿಹಳದಿ ವರ್ಣವನ್ನು ಪಡೆದಿರುತ್ತವೆ. ಪಿತ್ತವರ್ಣ ಅದರ ಮೇಲೆ ಸೇರ್ಪಡೆಯಾಗಿ ಅದರ ಹೊರಮೈಯ ಮೃದುತ್ವ ಕಳೆದುಹೋಗುತ್ತದೆ. ಕ್ಯಾಲ್ಸಿಯಂ ಬಿಲಿರುಬಿನೇಟಿನಿಂದ ಆಗುವ ಕಲ್ಲುಗಳು ರಂಗಿನ ಕಲ್ಲುಗಳು. ಇವುಗಳ ಬಣ್ಣ ಸಾಮಾನ್ಯವಾಗಿ ಕಪ್ಪು. ಇವುಗಳ ಗಾತ್ರ ಮತ್ತು ಆಕೃತಿ ವಿವಿಧ ತೆರನಾದುದು. ಇವು ಪಿತ್ತ ಸಾಗುನಾಳದಲ್ಲಿ ಇರುತ್ತವೆ.

ಸಾಮಾನ್ಯವಾಗಿ ಮಿಶ್ರಕಲ್ಲುಗಳೇ ಹೆಚ್ಚು. ಅವುಗಳ ಸಂಖ್ಯೆ ನೂರಾರು ಬೇಕಾದರೂ ಇರಬಹುದು. ಅವುಗಳ ಹೊರಮೈ ಹಳ್ಳ ತಿಟ್ಟಿನಿಂದ ಕೂಡಿರುತ್ತದೆ. ಈ ಕಲ್ಲುಗಳ

ಕೇಂದ್ರಬಿಂದು ಜೀವಾಣು ಮತ್ತು ಜೀವಕಣಗಳ ಕೊಳೆ. ಅನಂತರ ಅದರ ಮೇಲೆ ಕೊಲೆಸ್ಟರಾಲ್, ಕ್ಯಾಲ್ಸಿಯಂ ಬಿಲಿರುಬಿನೇಟ್ ಅಥವಾ ಕ್ಯಾಲ್ಸಿಯಂ ಕಾರ್ಬೊನೇಟ್ ಪದರು ಪದರಾಗಿ ಸೇರ್ಪಡೆಗೊಳ್ಳುತ್ತದೆ.

ಬೊಜ್ಜು ದೇಹವುಳ್ಳ, ಪದೇ ಪದೇ ಗರ್ಭ ತಳೆಯುವ (50) ವರ್ಷ ವಯಸ್ಸಿನ ಹೆಂಗಸರು ಸಾಮಾನ್ಯವಾಗಿ ಪಿತ್ತಕಲ್ಲಿನ ರೋಗಕ್ಕೆ ಈಡಾಗಬಲ್ಲರು. ಈ ಕಲ್ಲುಗಳು ಪಿತ್ತಕೋಶದಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಕೆಲಮಟ್ಟಿಗೆ ಅವು ಪಿತ್ತನಾಳದಲ್ಲಿರುತ್ತವೆ. ಅಷ್ಟೆಲ್ಲ ಕಲ್ಲುಗಳಿದ್ದರೂ ಅವುಗಳಲ್ಲಿ ಒಂದು ಕಲ್ಲು ಮಾತ್ರ ರೋಗದ ಗುಣಲಕ್ಷಣಗಳಿಗೆ ಕಾರಣೀಭೂತವಾಗುತ್ತದೆ. ಸಾಮಾನ್ಯವಾಗಿ ಕಲ್ಲುಗಳು ಯಾವ ತೊಂದರೆಯನ್ನೂ ಉಂಟುಮಾಡದೆ ಇರಬಲ್ಲವು. ಆಹಾರದ ಅಪಚನ, ನೋವು, ತೀವ್ರತರನಾದ ವೇದನೆಗೆ ಅವು ಕಾರಣೀಭೂತವಾಗಿ ಪಿತ್ತಕೋಶದ ಉರಿಗೆ ಆಸ್ಪದವೀಯಬಲ್ಲವು. ಪಿತ್ತನಾಳದಲ್ಲಿ ತಡೆಯನ್ನುಂಟುಮಾಡಿ ಕಾಮಾಲೆ ಮತ್ತು ಕಲಿಜದ ಸೋಲುವಿಕೆಯ ಲಕ್ಷಣಗಳನ್ನು ತೋರಿಸಬಲ್ಲದು.

ಅಪಚನ, ಅಜೀರ್ಣ, ಊಟದ ಅನಂತರ ಹೊಟ್ಟೆ ತುಂಬಿದ ಭಾವನೆ, ತೇಗು, ಎದೆಯ ಉರಿಯನ್ನು ಕಲ್ಲುಗಳು ಉಂಟುಮಾಡಬಲ್ಲವು. ನೋವು ಏಕಾ ಏಕಿಯಾಗಿ ತೀವ್ರತರನಾದ ಹೊಟ್ಟೆಯ ಬಲಪಾರ್ಶ್ವದಲ್ಲಿ ಮತ್ತು ಹೊಟ್ಟೆಯ ಗುಂಡಿಯಲ್ಲಿ ಕಂಡುಬರುತ್ತದೆ. ನೋವು ಬಲಗಡೆ ಬೆನ್ನು ಮತ್ತು ಭುಜದವರೆಗೆ ಹಬ್ಬಬಹುದು. ಈ ನೋವಿನಿಂದ ಗಂಟೆಗಟ್ಟಲೆ ವೇದನೆ ಪಟ್ಟುಕೊಂಡು ರೋಗಿ ಉರುಳಾಡುತ್ತಾನೆ. ನೋವು ರಾತ್ರಿಯ ವೇಳೆಯಲ್ಲಿ ಹೆಚ್ಚಾಗಿ ಬರುವುದು. ವಾಂತಿಯೂ ಆಗಬಹುದು. ಒಂಬತ್ತನೆಯ ಬಲಮೃದ್ವಸ್ಥಿಯ ತುದಿಯ ಪ್ರದೇಶದಲ್ಲಿ ಒತ್ತಿದರೆ ನೋವು ತೋರಿಬರುವುದು. ಅದು ಮರ್ಫಿಯ ಚಿಹ್ನೆ. ನೇರ ಎಕ್ಸ್‌ಕಿರಣ ಚಿತ್ರದಲ್ಲಿ ಕೆಲಬಾರಿ ಈ ಕಲ್ಲುಗಳು ಕಾಣಿಸಬಹುದು. ಉಳಿದವನ್ನು ಅಪಾರದರ್ಶಕ ರಾಸಾಯನಿಕವನ್ನಿತ್ತು ಪಿತ್ತಕೋಶ ಚಿತ್ರತೆಗೆದು ಗುರುತಿಸಬಹುದು. ನೋವು ತೀವ್ರ ಎದ್ದಾಗ 100 ಮಿಗ್ರಾಂ. ಫೆಥಿಡೀನ್ ಕೊಡಬೇಕು. ರಕ್ತನಾಳಾಂತರವಾಗಿ 60 ಮಿಗ್ರಾಂ. ಕೋಡೀನ್ ಫಾಸ್ಫೇಟ್ ಕೊಟ್ಟರೆ ನೋವಿನ ಶಮನವಾಗುವುದು. ರೋಗದ ಲಕ್ಷಣಗಳು ಮತ್ತೆ ಮತ್ತೆ ಕಂಡುಬರುತ್ತಿದ್ದರೆ ಪಿತ್ತಕೋಶವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದು ಹಾಕಬೇಕು. ಸಾಕಷ್ಟು ಕ್ಯಾಲ್ಸಿಯಂ ಇರುವ ಪಿತ್ತಕಲ್ಲಿನ ಇರುವಿಕೆಯನ್ನು ಉದರದ ಎಕ್ಸ್ ಕಿರಣ ಚಿತ್ರ ತೋರಿಸಬಲ್ಲದು. ಪಿತ್ತಕೋಶದ ಸೋನೋಗ್ರಾಫಿಯಿಂದ ಅಲ್ಲಿರುವ ಚಿಕ್ಕ ಚಿಕ್ಕ ಕಲ್ಲುಗಳನ್ನು ಗುರುತಿಸಬಹುದು. ಯಾವ ಲಕ್ಷಣಗಳನ್ನು ತೋರಿಸದೇ ಇರುವ ಪಿತ್ತಕಲ್ಲುಗಳನ್ನು ಹಾಗೆಯೇ ಬಿಟ್ಟಿರುವುದು ಉಚಿತ.

ಪಿತ್ತನಾಳದಲ್ಲಿ ಸ್ನಾಯುವಿಲ್ಲದಿರುವುದರಿಂದ ಈ ಕಲ್ಲುಗಳ ವಿಸರ್ಜನೆ ಕಷ್ಟ. ಅಲ್ಲಿ ಅವುಗಳ ತಡೆಯುಂಟಾಗಿ ಲಕ್ಷಣಗಳು ತೋರಬಹುದು. ಆ ಸ್ಥಳದಲ್ಲಿ ದೀರ್ಘಾವಧಿಕಾಲ ಕಲ್ಲುಗಳು ಉಳಿದು ನೋವು, ಕಾಮಾಲೆಯನ್ನು ಉಂಟುಮಾಡುತ್ತವೆ. ಆಗಾಗ್ಗೆ ಕಾಮಾಲೆ, ಪದೇ ಪದೇ ನೋವು ಮತ್ತು ಜ್ವರ ಪ್ರಮುಖ ಲಕ್ಷಣಗಳು. ಶಸ್ತ್ರಚಿಕಿತ್ಸೆಯಿಂದ ಈ ನಾಳದಲ್ಲಿನ ಕಲ್ಲುಗಳನ್ನು ಹೊರಕ್ಕೆ ತೆಗೆಯಬೇಕು. ಈ ಬಗೆಯ ಶಸ್ತ್ರಕ್ರಿಯೆಯನ್ನು ಕಲ್ಲು 3ಸೆಂ.ಮೀಗೂ ಹೆಚ್ಚು ದೊಡ್ಡದಿದ್ದಾಗ ಮಾಡಬೇಕಾಗುವುದು. ಉಳಿದ ಕಲ್ಲುಗಳಲ್ಲಿ ಲೆಪರೋಸ್ಕೋಪನ್ನು ಬಳಸಿ, ಕಲ್ಲು ಸಮೇತ ಪಿತ್ತಕೋಶವನ್ನು ಹೊರತೆಗೆಯಲಾಗುತ್ತದೆ. ಕೆಲವೊಮ್ಮೆ ಪಿತ್ತಕಲ್ಲುಗಳನ್ನು ದೇಹದ ಹೊರಗಿನಿಂದ (ಎಕ್ಸ್ಟ್ರಾಕಾರ್ಪೊರಿಯಲ್) ಕೊಡುವ ಆಘಾತ ಅಲೆಗಳಿಂದ ಭಗ್ನಗೊಳಿಸಬಹುದು.

**ಮೇದೋಜೀರಕ ಕಲ್ಲು :** ಪದೇ ಪದೇ ಮರುಕಳಿಸುವ ಮೇದೋಜೀರಕ ಗ್ರಂಥಿಯ ಉರಿಗೆ ಅಲ್ಲಿನ ನಾಳದಲ್ಲಿನ ಕಲ್ಲುಗಳೇ ಕಾರಣ. ಈ ರೋಗ ಕೇರಳ ರಾಜ್ಯದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಚಿಕ್ಕವಯಸ್ಸಿನಲ್ಲಿಯೇ ರೋಗ ತೋರಿ ಬಂದು ಸಿಹಿಮೂತ್ರರೋಗವನ್ನುಂಟುಮಾಡುತ್ತದೆ. ಮೇದೋಜೀರಕ ನಾಳದಲ್ಲಿನ ಅಡ್ಡಿ ಗ್ರಂಥಿಯ ಉರಿಗೆ ಕಾರಣ.

ತೀವ್ರತರನಾದ ನೋವು, ವಾಂತಿ, ಆಹಾರ ಸೇವನೆಯ ಅನಂತರ ವೇದನೆ ಪ್ರಮುಖ ಲಕ್ಷಣಗಳು. ಇಲ್ಲಿನ ನಾಳಗಳು ಅಗಲಗೊಂಡು ರಸವೆಲ್ಲ ಶಿಲೆಯಾಗಿ ಕ್ಯಾಲ್ಸಿಯಂ ಮಿಶ್ರಣದಿಂದ ಮುಂಚಲಿಸದೆ ಉಳಿಯುತ್ತವೆ. ಎಕ್ಸ್‌ಕಿರಣಚಿತ್ರದಿಂದ ಅವನ್ನು ಗುರುತಿಸಬಹುದು. ಮೂತ್ರದಲ್ಲಿ ಸಕ್ಕರೆಯ ವಿಸರ್ಜನೆಯಾಗುತ್ತದೆ.

**ಜೊಲ್ಲು ಕಲ್ಲು :** ಜೊಲ್ಲು ಕಲ್ಲುಗಳ ತಯಾರಿಕೆ ಕೆಳದವಡೆಯ ಗ್ರಂಥಿಗಳಲ್ಲಿ ಹೆಚ್ಚು. ಅವು ಅದರ ನಾಳದಲ್ಲಿ ತಡೆಯನ್ನುಂಟುಮಾಡುತ್ತವೆ. ಊಟದ ವೇಳೆಯಲ್ಲಿ ಗ್ರಂಥಿಯ ಸ್ಥಳದಲ್ಲಿ ಬಾವು ಮತ್ತು ನೋವು ಕಂಡುಬರುತ್ತವೆ. ಬಾಯಲ್ಲಿ ಜೊಲ್ಲುನಾಳ ಬಾಯ್ದೆರೆಯುವ ಕಡೆ ಜೊಲ್ಲು ಹೊರಬರುವುದಿಲ್ಲ.

ಕಲ್ಲಿನ ಇರುವಿಕೆಯನ್ನು ಬೆರಳಿನಿಂದ ಒತ್ತಿ ತಿಳಿಯಬಹುದು. ಇದರ ಗಾತ್ರ ಜೋಳದ ಕಾಳಿನಷ್ಟು. ಕ್ಯಾಲ್ಸಿಯಂ, ಮೆಗ್ನೀಸಿಯಂ ಫಾಸ್ಫೇಟಿನಿಂದ ಉಂಟಾಗಿರುತ್ತವೆ. ಗ್ರಂಥಿಯ ಮೂಲಕ ಶಸ್ತ್ರಕ್ರಿಯೆಮಾಡಿ ಕಲ್ಲುಗಳನ್ನು ಹೊರತೆಗೆಯಬೇಕು. (ಪಿ.ಎಸ್.ಎಸ್.)

**ಕಲ್ಲುಗಾರೆಯ ಕೆಲಸ :** ಪ್ರಧಾನವಾಗಿ, ಕಲ್ಲಿನ ಕಟ್ಟಡಗಳಲ್ಲಿ ಗಾರೆಯಿಂದ ಕಲ್ಲುಗಳನ್ನು ಬಂಧಿಸುವ ತಂತ್ರ. ಕಟ್ಟಡದ ಸಾಮಗ್ರಿಗಳಲ್ಲೆಲ್ಲ ಕಲ್ಲು ಉತ್ಕೃಷ್ಟವಾದದ್ದು. ಅದನ್ನು ಅಳತೆಗೆ ಸರಿಯಾಗಿ ಕತ್ತರಿಸಬಹುದು. ಅದರ ಮೇಲ್ಮೈಯನ್ನು ನಯವಾಗಿ ಮಾಡಬಹುದು. ಅದರ ಬಾಳ್ವಿಕೆ ಬಹುಕಾಲ. ಮಳೆಯಲ್ಲಾಗಲಿ ಬಿಸಿಲಿನಲ್ಲಾಗಲಿ ಕೆಡುವುದಿಲ್ಲ. ಬಹಳ ಗಟ್ಟಿಯಾದ ಗ್ರಾನೈಟಿನಿಂದ ಹಿಡಿದು ನಯವಾದ ಅಮೃತಶಿಲೆ ಮತ್ತು ಮೆತುವಾದ ಸೀಮೆಸುಣ್ಣದ ಕಲ್ಲಿನವರೆಗೆ ಅದರ ಗಡಸಿನಲ್ಲಿ (ಹಾರ್ಡ್‌ನೆಸ್) ಅಪಾರವಾದ ವ್ಯತ್ಯಾಸವಿದೆ.

ಈಚೆಗೆ ದೊಡ್ಡ ಕಟ್ಟಡಗಳಲ್ಲಿ ಉಕ್ಕನ್ನೂ ಕಾಂಕ್ರೀಟನ್ನೂ ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಈ ಸಾಮಗ್ರಿಗಳ ಬಲ ಹೆಚ್ಚಾಗಿರುವುದರಿಂದ ಗೋಡೆಗಳನ್ನು ತೆಳುವಾಗಿ ಮಾಡಬಹುದು. ಬಾಗಿಲುಗಳನ್ನೂ ಕಿಟಕಿಗಳನ್ನೂ ಅಗಲವಾಗಿ ಇಡಬಹುದು. ಈ ಚೌಕಟ್ಟಿನ ಕಟ್ಟಡಗಳಿಗೂ ನಯವಾದ ಮೇಲ್ಮೈಯನ್ನು ಕೊಡುವುದಕ್ಕಾಗಿ ಕಲ್ಲನ್ನು ಜೋಡಿಸುತ್ತಾರೆ.

ಗ್ರಾನೈಟ್, ಅಮೃತಶಿಲೆ, ಮರಳುಕಲ್ಲು, ಸುಣ್ಣದ ಕಲ್ಲು–ಇವು ಕಲ್ಲಿನ ಮುಖ್ಯ ಪ್ರಭೇದಗಳು. ಗ್ರಾನೈಟ್ ಬಹಳ ಗಟ್ಟಿಯಾದ ಕಲ್ಲು. ಅದು ಸಿಕ್ಕುವ ಕಡೆ ಸರ್ವತ್ರ ಬಳಕೆಯಲ್ಲಿದೆ. ಅದರಲ್ಲಿ ಉಳಿಯ ಕೆಲಸ ಕಷ್ಟ. ಆದರೆ ಅದರ ಮೇಲ್ಮೈಯನ್ನು ಉಜ್ಜಿ ನಯವಾಗಿ ಮಾಡಬಹುದು.

**ಕಲ್ಲುಕಟ್ಟಡಗಳ ನಮೂನೆಗಳು :** ಕಟ್ಟಡದಲ್ಲಿ ಬಳಸುವ ಕಲ್ಲನ್ನು ಸುತ್ತಿಗೆಯಿಂದ ಒರಟಾಗಿ ತುಂಡು ಮಾಡಿರಬಹುದು. ಇಲ್ಲವೆ ಉಳಿಯಿಂದ ನಯ ಮಾಡಿರಬಹುದು. ಈಚೆಗೆ ಈ ಕೆಲಸವನ್ನು ಯಂತ್ರಗಳಿಂದ ನಾಜೂಕಾಗಿ ಮಾಡುತ್ತಾರೆ. ಬೆಲೆಬಾಳುವ ಕಟ್ಟಡಗಳಲ್ಲಿ ಕೆತ್ತಿ ನಯ ಮಾಡಿದ ಕಲ್ಲುಗಳಿಂದಲೇ ಕಟ್ಟುತ್ತಾರೆ. ಇತರ ಕಡೆಗಳಲ್ಲಿ ಒಳಗಡೆ ಒರಟಾದ ಕಲ್ಲುಗಳನ್ನು ತುಂಬಿ ಮೂಲೆಗಳಲ್ಲೂ ಬಾಗಿಲು, ಕಿಟಕಿಗಳ ಪಕ್ಕದಲ್ಲಿಯೂ ಕೆತ್ತಿ ನಯಮಾಡಿದ ಕಲ್ಲುಗಳನ್ನು ಉಪಯೋಗಿಸುತ್ತಾರೆ.

ಕಲ್ಲಿನ ಗೋಡೆಯನ್ನು ಸುಣ್ಣದ ಗಾರೆ ಇಲ್ಲವೆ ಸಿಮೆಂಟ್ ಗಾರೆಯಿಂದ ಕಟ್ಟಬಹುದು. ಕಟ್ಟಡದ ಗಾರೆಯಲ್ಲಿ (1) ಭಾಗ ಸುಣ್ಣಕ್ಕೆ (3) ಭಾಗ ಮರಳನ್ನು ಸಾಮಾನ್ಯವಾಗಿ ಸೇರಿಸಿರುತ್ತಾರೆ. ಪ್ರಾಚೀನ ಗ್ರೀಕರು ಗಾರೆಗೆ ಬದಲಾಗಿ ಕಬ್ಬಿಣದ ಪಟ್ಟಿಗಳಿಂದ ಅಮೃತಶಿಲೆಯ ಎಳೆಗಳನ್ನು ಜೋಡಿಸುತ್ತಿದ್ದರು. ಆದರೆ ರೋಮನ್ನರು ಒಂದು ವಿಧವಾದ ಸಿಮೆಂಟನ್ನು ಉಪಯೋಗಿಸುತ್ತಿದ್ದರು. ಇವರ ಕಾಲದಲ್ಲಿ ಕಲ್ಲಿನ ಕಮಾನುಗಳು ಮೇಲುಗಾಲುವೆಗಳಲ್ಲಿಯೂ (ಆಕ್ವಿಡಕ್ಸ್) ಕಟ್ಟಡಗಳಲ್ಲಿಯೂ ಹೆಚ್ಚಾಗಿ ಬಳಕೆಗೆ ಬಂದವು. ಪುರಾತನ ಈಜಿಪ್ಟ್ ಮತ್ತು ಪೆರು ದೇಶಗಳಲ್ಲಿ ದೊಡ್ಡ ಕಲ್ಲುಗಳನ್ನು ಕರಾರುವಕ್ಕಾಗಿ ಕತ್ತರಿಸಿ ಗಾರೆಯೇ ಇಲ್ಲದೆ ಒಂದಕ್ಕೊಂದು ಹೊಂದಿಕೊಳ್ಳುವಂತೆ ನಾಜೂಕಾಗಿ ಕಟ್ಟುತ್ತಿದ್ದರು.

ಭಾರತದ ದೇವಸ್ಥಾನಗಳಲ್ಲಿ ಕೆತ್ತಿ ನಯಮಾಡಿದ ಕಲ್ಲುಗಳನ್ನು ಗಾರೆಯೇ ಇಲ್ಲದೆ ಕೂಡಿಸುತ್ತಿದ್ದರು. ಗಾರೆಯನ್ನು ಉಪಯೋಗಿಸುವುದು ಅವರ ಹಸ್ತ ಕೌಶಲ್ಯಕ್ಕೆ ಅವಮಾನವೆಂಬ ಭಾವನೆಯಿತ್ತು. ಅಲ್ಲಲ್ಲಿ ಕಬ್ಬಿಣದ ಪಟ್ಟಿಗಳನ್ನು ಎಸೆಗಳಲ್ಲಿ ಇಡುತ್ತಿದ್ದರು. ಬೇಲೂರಿನ ಸುತ್ತಮುತ್ತಲಿನ ದೇವಸ್ಥಾನಗಳಲ್ಲಿ ಮೆತುವಾದ ಬಳಪದ ಕಲ್ಲುಗಳಿಂದ ಸುಂದರವಾದ ವಿಗ್ರಹಗಳನ್ನು ಕೊರೆದಿದ್ದಾರೆ.

**ಕಟ್ಟಡದ ಕ್ರಮಗಳು :** ಕಲ್ಲುಕುಟಿಗ ಬಳಸುವ ಹತ್ಯಾರುಗಳಲ್ಲಿ ಪುರಾತನ ಕಾಲದಿಂದಲೂ ಹೆಚ್ಚಿನ ಬದಲಾವಣೆಯಾಗಿಲ್ಲ. ಮರದ ಕೊಡತಿಯಿಂದ ಇಲ್ಲವೆ ಕಬ್ಬಿಣದ ಸುತ್ತಿಗೆಯಿಂದ ಕಲ್ಲಿನ ಮೇಲೆ ಇಟ್ಟ ಉಕ್ಕಿನ ಉಳಿಯನ್ನು ಹೊಡೆದು ಕಲ್ಲನ್ನು ನಯವಾಗಿ ಮಾಡುತ್ತಾರೆ. ಉಳಿಗಳ ಅಂಚು ಅಗಲವಾಗಿರಬಹುದು ಇಲ್ಲವೆ ಚೂಪಾಗಿರಬಹುದು. ಗಟ್ಟಿ ಕಲ್ಲನ್ನು ಕೆತ್ತುವಾಗ ಕೊಡತಿಗಳು ಭಾರವಾಗಿರುತ್ತವೆ. ಉಳಿಯ ಬಾಯನ್ನು ಹದಮಾಡಿರುತ್ತಾರೆ. ಈಚೆಗೆ ಒತ್ತಡದ ಗಾಳಿಯಿಂದ ಚಲಿಸುವ ಹತ್ಯಾರುಗಳನ್ನು ಗಟ್ಟಿಕಲ್ಲನ್ನು ಕೆತ್ತುವಾಗ ಉಪಯೋಗಿಸುತ್ತಿದ್ದಾರೆ. ಕಲ್ಲನ್ನು ನಯಮಾಡುವುದಕ್ಕೂ ಈಗ ಯಂತ್ರಗಳು ಬಂದಿವೆ. ಇವು ಗರಗಸದಿಂದ ಮರವನ್ನು ಕೊಯ್ಯುವ ಹಾಗೆ ಕಲ್ಲನ್ನು ಹಲಗೆ ಹಲಗೆಯಾಗಿ ಸೀಳುತ್ತವೆ. ಈ ಚಪ್ಪಡಿಗಳನ್ನು ಗುಂಡಾದ ಯಂತ್ರದ ಗರಗಸಗಳಿಂದ ಸಣ್ಣದಾಗಿ ಕತ್ತರಿಸುತ್ತಾರೆ. ಮರವನ್ನು ಉಜ್ಜುಗೊರಡು ಹೊಡೆದು ನಯಮಾಡಿದ ಹಾಗೆ ಕಲ್ಲನ್ನು ನಯಮಾಡುತ್ತಾರೆ.

ಬೇಲೂರು ಮತ್ತು ಹಳೇಬೀಡು ಮೊದಲಾದ ಹೊಯ್ಸಳಶೈಲಿಯ ನಯವಾದ ಗುಂಡಾದ ಕಂಬಗಳನ್ನು ಮಾಡುವುದಕ್ಕೆ ಒಂದು ವಿಧವಾದ ಚರಿಕೆಯ ಯಂತ್ರವನ್ನು (ಲೇತ್) ಉಪಯೋಗಿಸುತ್ತಿದ್ದರು. ಈಗ ವಿದ್ಯುತ್ತಿನ ಯಂತ್ರಗಳಿಂದ ತಿರುಗುವ ಚರಿಕೆಯ ಯಂತ್ರಗಳು ಬಂದಿವೆ. ಕಲ್ಲಿನಲ್ಲಿ ನಯಗೆಲಸವನ್ನು ಮಾಡುವುದಕ್ಕೆ ಈ ಯಂತ್ರಗಳನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದಾರೆ.

ಕಲ್ಲಿನ ಕಮಾನುಗಳನ್ನು ಆಕಾರಕ್ಕೆ ಸರಿಯಾಗಿ ಮಾಡಿದ ಮರದ ಚೌಕಟ್ಟಿನ (ಸೆಂಟರಿಂಗ್) ಮೇಲೆ ಕಟ್ಟುತ್ತಾರೆ. ಕಮಾನಿನ ನಡುಗಲ್ಲನ್ನು ಕೂಡಿಸಿದ ಮೇಲೆ ಈ ಚೌಕಟ್ಟನ್ನು ತೆಗೆಯುತ್ತಾರೆ.

**ಕಟ್ಟೆಯ ಕಲ್ಲುಗಾರೆಯ ಕೆಲಸ :** ಕರ್ನಾಟಕದಲ್ಲಿ ಕೃಷ್ಣರಾಜಸಾಗರ, ತಿಪ್ಪಗೊಂಡನಹಳ್ಳಿ, ಹಿರೇಭಾಸ್ಕರ ಮೊದಲಾದ ಕಡೆ ತಮ್ಮ ಭಾರದ ಬಲದಿಂದಲೇ ನಿಂತಿರುವ ಕಟ್ಟೆಗಳನ್ನು ಹೊರಮುಖದಲ್ಲಿ ಮಾವಾಳಿ ಅಥವಾ ಮುಖದ ಕಲ್ಲುಗಳಿಂದಲೂ ಒಳಗಡೆ ಭರ್ತಿಕಲ್ಲಿನಿಂದಲೂ ಸುರ್ಕಿಗಾರೆಯಲ್ಲಿ ಕಟ್ಟಿದ್ದಾರೆ. ತಮಿಳುನಾಡಿನ ಮೆಟ್ಟೂರು ಕಟ್ಟೆಯಲ್ಲಿ ಸಿಮೆಂಟ್ ಗಾರೆಯನ್ನು ಉಪಯೋಗಿಸಿದ್ದಾರೆ.

ಕಲ್ಲುಗಾರೆಯ ಕಟ್ಟೆಯ ಅಗಲ ಮನೆಯ ಗೋಡೆಯ ಹಾಗೆ ಕೆಳಗಿನಿಂದ ಮೇಲಿನವರೆಗೂ ಒಂದೇ ಸಮನಾಗಿರುವುದಿಲ್ಲ. ಕಟ್ಟೆಯ ತಳದಲ್ಲಿ ಆಳವಾದ ನೀರಿನ ಒತ್ತಡ ಹೆಚ್ಚಾಗಿರುವುದರಿಂದ ಅದನ್ನು ತಡೆಯಲು ಅಗಲವೂ ಹೆಚ್ಚಾಗಿರುತ್ತದೆ. ಮೇಲಕ್ಕೆ ಹೋದಹಾಗೆ ನೀರಿನ ಆಳ ಕಡಿಮೆಯಾಗುತ್ತದೆ. ಅದಕ್ಕೆ ತಕ್ಕಂತೆ ಕಟ್ಟೆಯ ಅಗಲವೂ ಕಡಿಮೆಯಾಗಿ ಮೇಲುಗಡೆ ಒಂದು ರಸ್ತೆ ಹೋಗುವಷ್ಟಕ್ಕೆ ಇಳಿಯುತ್ತದೆ. ಕೆಲಸವನ್ನು ಪ್ರಾರಂಭಿಸುವ ಮೊದಲು ಅಡಿಪಾಯದಿಂದ ಮೇಲಿನ ವರೆಗೂ ಕಟ್ಟೆಯ ನೆತ್ತಿಯ ಮಧ್ಯ ರೇಖೆಯಿಂದ ಎಡಕ್ಕೂ ಬಲಕ್ಕೂ ಸಂವಿಧಾನದ ಪ್ರಕಾರ ಅಗಲವನ್ನು ಗುರುತು ಮಾಡಿರುವ ನಕ್ಷೆಯನ್ನು ತಯಾರಿಸಿ ಈ ನಕ್ಷೆಯಂತೆ ಒಂದು ಅಡಿಯ ಪ್ರತಿ ವರಸೆಗೂ ಮಧ್ಯರೇಖೆಯಿಂದ ಅಗಲವನ್ನು ಲೆಕ್ಕ ಹಾಕಿ ಬರೆದಿಡಬೇಕು.

ಯಾವ ದೊಡ್ಡ ಕಟ್ಟೆಯಲ್ಲಾದರೂ ಹೊಳೆಯ ಎರಡು ದಡಗಳಲ್ಲಿಯೂ ಕಟ್ಟೆಯ ಅಡಿಪಾಯ ಮೊದಲು ಸಿದ್ಧವಾಗುತ್ತದೆ. ಅಲ್ಲಿ ಕಲ್ಲುಗಾರೆಯ ಕಟ್ಟಡವನ್ನು ಪ್ರಾರಂಭಿಸುವಾಗ ನಡುಹೊಳೆಯಲ್ಲಿ ನೀರು ಹರಿಯುತ್ತಿರುತ್ತದೆ. ಕಟ್ಟೆ ಮೇಲಕ್ಕೆ ಬಂದ ಹಾಗೆ ಸ್ಥಳದ ವಿನ್ಯಾಸಕ್ಕೆ ಅನುಸಾರವಾಗಿ ಕಟ್ಟೆಯ ಒಂದು ಭಾಗದಲ್ಲಿ ಹೊಳೆಯ ನೀರನ್ನು ತಿರುಗಿಸಿ ನಡುಹೊಳೆಯಲ್ಲಿ ಕಲ್ಲನ್ನು ಸೀಳಿ ತಳಪಾಯವನ್ನು ಸಿದ್ಧಪಡಿಸಿ ಅದರ ಮೇಲೆ ಕಾಂಕ್ರೀಟನ್ನು ಸೂಕ್ತವಾದ ಅಗಲಕ್ಕೆ ತುಂಬುತ್ತಾರೆ. ಏತನ್ಮಧ್ಯೆ ದಡಗಳಲ್ಲಿ ಕಲ್ಲುಗಾರೆಯ ಕೆಲಸ ಮುಂದುವರೆಸುತ್ತಾರೆ.

ಥಿಯೊಡೊಲೈಟಿನ ಸಹಾಯದಿಂದ ಎರಡು ದಡಗಳಲ್ಲಿಯೂ ಕಾಂಕ್ರೀಟಿನ ಅಡಿಪಾಯದ ಮೇಲೂ ಏರುತ್ತಿರುವ ಕಲ್ಲುಗಾರೆಯ ಮೇಲೂ ಕಟ್ಟೆಯ ನೆತ್ತಿಯ ಮಧ್ಯ ರೇಖೆ ಮತ್ತು ಮುಂದಿನ (ಜಲಾಶಯದ ಕಡೆ) ಮತ್ತು ಹಿಂದಿನ ಮುಖಗಳು ಇವನ್ನು ಆಯಾ ಮಟ್ಟಕ್ಕೆ ಸರಿಯಾಗಿ ಗುರುತು ಮಾಡಿ ಕಟ್ಟೆಯ ಕೆಲಸವನ್ನು ಪ್ರಾರಂಭಿಸುತ್ತಾರೆ. ಎರಡು ಮುಖಗಳಲ್ಲಿಯೂ ಮಾವಾಳಿಗಳನ್ನು (ಫೇಸ್ ಸ್ಟೋನ್ಸ್) ಸುರ್ಕಿಗಾರೆಯ ಗಾದಿಯ ಮೇಲೆ ಕೂರಿಸಿ ಇವುಗಳ ನಡುವೆ ಸಣ್ಣಕಲ್ಲುಗಳೊಂದಿಗೆ ಗಾರೆಯನ್ನು ತುಂಬುತ್ತಾರೆ. ಮೊದಲು ಎರಡು ಕೊನೆಗಳಲ್ಲಿಯೂ ಐದೋ ಆರೋ ವರಸೆಗಳನ್ನು ಮೇಲಕ್ಕೆ ಎತ್ತಿಕೊಂಡಿದ್ದರೆ ಆಮೇಲೆ ಮಧ್ಯದಲ್ಲಿ ಕೆಲಸವನ್ನು ಮುಂದುವರಿಸುವುದು ಸುಲಭವಾಗುತ್ತದೆ. ಮುಖದ ವರಸೆಯ ಹಿಂದೆ ಗಾರೆಯ ಗಾದಿಯ ಮೇಲೆ ಭರ್ತಿಕಲ್ಲುಗಳನ್ನು ಕೂರಿಸಿ ನಡುವೆ ಚಕ್ಕೆಗಳನ್ನು ಸುತ್ತಿಗೆಯಿಂದ ಹೊಡೆದು ಕೂರಿಸಿ ಆ ವರಸೆಯನ್ನು ಪೂರೈಸುತ್ತಾರೆ. ಆಮೇಲೆ ಮಧ್ಯರೇಖೆಯಿಂದ ಎರಡು ಕಡೆಗೂ ಅಗಲವನ್ನು ಆ ಮಟ್ಟಕ್ಕೆ ಸರಿಯಾಗಿ ಗುರುತುಮಾಡಿ ಮೇಲಿನ ವರಸೆಯ ಮಾವಾಳಿಗಳನ್ನಿಟ್ಟು ನಡುವೆ ಭರ್ತಿಕಲ್ಲುಗಳನ್ನೂ ಚಕ್ಕೆಗಳನ್ನೂ ಗಾರೆಯೊಂದಿಗೆ ತುಂಬುತ್ತಾರೆ. ಒಳಗಿನ ಭರ್ತಿಯಲ್ಲಿ ವರಸೆಗಳೇ ಇಲ್ಲದೆ ಕಲ್ಲುಗಳು ಅಡ್ಡಾದಿಡ್ಡಿಯಾಗಿರುವುದರಿಂದ ಕಟ್ಟೆಯ ನೀರು ಇದರೊಳಗೆ ನುಸುಳಿ ಆಚೆಗೆ ಹೋಗುವುದು ಸಾಧ್ಯವಾಗುವುದಿಲ್ಲ. ಇದನ್ನು ಸಂಧಿಗಳೇ ಇಲ್ಲದ (ಜಾಯಿಂಟ್‌ಲೆಸ್) ಕಲ್ಲುಗಾರೆಯೆನ್ನುತ್ತಾರೆ. ನೀರಿನಲ್ಲಿ ಇದ್ದಷ್ಟೂ ಕಲ್ಲಾಗುವ ಸುರ್ಕಿಗಾರೆಯನ್ನು ಉಪಯೋಗಿಸುವುದರಿಂದ ಕಟ್ಟೆ ತುಂಬಿದಾಗಲೂ ಇದರಲ್ಲಿ ನೀರು ಜಿನುಗುವುದಿಲ್ಲ. ಇದು ಇಲ್ಲಿಯೇ ಹೇರಳವಾಗಿ ದೊರೆಯುವ ಕಲ್ಲು, ಇಟ್ಟಿಗೆ, ಸುಣ್ಣ–ಇವುಗಳಿಂದ ನಮ್ಮ ಜನರೇ ಕಟ್ಟುವ ಅಗ್ಗವಾದ ಉತ್ಕೃಷ್ಟವಾದ ಸಂವಿಧಾನ. (ಎಚ್.ಸಿ.ಕೆ.)

**ಕಲ್ಲುಗುಡ್ಡೆ ಸಮಾಧಿಗಳು :** ಸತ್ತವರ ಸಮಾಧಿಗಳ ಮೇಲೆ ಕಲ್ಲುಚೂರುಗಳ ಗುಡ್ಡೆಯನ್ನು (ಕೇರ್ನ್ಸ್) ಏರಿಸುವುದು ಬಹು ಪ್ರಾಚೀನ ಕಾಲದಿಂದಲೂ ಬಂದ ಒಂದು ಸಂಪ್ರದಾಯ. ಇಂಥ ಸಮಾಧಿಗಳಲ್ಲಿ ಹೆಣವನ್ನು ಆಳವಾದ ಹಳ್ಳದಲ್ಲಿ ಹುಗಿದು ನೆಲಮಟ್ಟದ ವರೆಗೆ ಮಣ್ಣು ಮುಚ್ಚಿ, ಮೇಲೆ ಹಳ್ಳದ ಸುತ್ತಲೂ ದೊಡ್ಡ ಗುಂಡುಗಳನ್ನು ವರ್ತುಲಾಕಾರವಾಗಿ ಇಟ್ಟು, ಮಧ್ಯದ ಜಾಗದಲ್ಲಿ ಕಲ್ಲು ಚೂರುಗಳನ್ನು ಗೋಪುರಾಕಾರವಾಗಿ ತುಂಬುತ್ತಿದ್ದರು. ಇಂಥ ಸಮಾಧಿಗಳು ಬ್ರಿಟನಿನಿಂದ ಹಿಡಿದು ದಕ್ಷಿಣ ಭಾರತದ ವರೆಗೆ ಯುರೋಪ್ ಮತ್ತು ಏಷ್ಯದ ಹೆಚ್ಚಿನ ದೇಶಗಳಲ್ಲಿ ಬೆಳಕಿಗೆ ಬಂದಿವೆ. ಯುರೋಪ್ ಮತ್ತು ಏಷ್ಯದ ಈ ರೀತಿಯ ಬಹುತೇಕ ಸಮಾಧಿಗಳು ನವಶಿಲಾ ಮತ್ತು ಕಂಚಿನ ಯುಗಗಳಿಗೆ ಸೇರಿದವುಗಳಾದರೆ ಭಾರತದಲ್ಲಿ ಕಬ್ಬಿಣಯುಗಕ್ಕೆ ಸೇರಿದವು.

ಈ ಕಲ್ಲುಗುಡ್ಡೆ ಸಮಾಧಿಗಳ ವ್ಯಾಪ್ತಿಯ ಪ್ರದೇಶ ಮತ್ತು ಕಾಲ ಬಹು ವಿಸ್ತಾರವಾಗಿರುವುದರಿಂದ ಪ್ರದೇಶಪ್ರದೇಶಕ್ಕೂ ಕಾಲಕಾಲಕ್ಕೂ ಇವುಗಳ ರೀತಿಯಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಯುರೋಪ್ ಮತ್ತು ಉತ್ತರ ಏಷ್ಯದ ಸಮಾಧಿಗಳೆಲ್ಲ ಒಬ್ಬೊಬ್ಬ ವ್ಯಕ್ತಿಗೇ ಮೀಸಲಾದವುಗಳಾಗಿದ್ದು, ಅವುಗಳಲ್ಲಿ ಹೆಣದ ಜೊತೆಗೆ ಅನೇಕ ಪಾತ್ರ, ಪದಾರ್ಥಗಳು, ಕೆಲವೊಮ್ಮೆ ಅವನು ಉಪಯೋಗಿಸುತ್ತಿದ್ದ ಆಯುಧಗಳು, ರಥ ಮುಂತಾದ ಸಲಕರಣೆಗಳನ್ನೂ ಹುಗಿದಿರುವುದು ಕಂಡುಬರುತ್ತದೆ. ಕೆಲವು ವೇಳೆ ಹೆಣವನ್ನು ಮರದ ಪೆಟ್ಟಿಗೆಗಳಲ್ಲಿ ಹಾಕಿ, ಹಳ್ಳದಲ್ಲಿಟ್ಟಿದ್ದುದೂ ಉಂಟು. ಆದರೆ ಭಾರತದ ಕಲ್ಲುಗುಡ್ಡೆ ಸಮಾಧಿಗಳಲ್ಲಿ ಸತ್ತ ವ್ಯಕ್ತಿಯ ದೇಹ ಪೂರ್ಣವಾಗಿ ಇರುವುದೇ ಅಪರೂಪ. ಇದುವರೆಗೆ ಪರೀಕ್ಷಿಸಿರುವ ಪುರಾತನ ಸಮಾಧಿಗಳಲ್ಲಿ ಸಾಮಾನ್ಯವಾಗಿ ಹೆಣವನ್ನು ಬೇರೆಲ್ಲಿಯೋ ಇಟ್ಟಿದ್ದು ಕೆಲವು ದಿನಗಳ ಅನಂತರ ಅದರಲ್ಲುಳಿದ ಕೆಲವು ಎಲುಬುಗಳನ್ನಷ್ಟೇ ತಂದು ಈ ಸಮಾಧಿಗಳಲ್ಲಿ ಹೂತಿಟ್ಟಂತೆ ಕಾಣುತ್ತದೆ. ಕೆಲವೊಮ್ಮೆ ಒಂದೇ ಸಮಾಧಿಯಲ್ಲಿ ಅನೇಕ ವ್ಯಕ್ತಿಗಳ ಎಲುಬುಗಳು ಇರುವುದೂ ಉಂಟು.

ಭಾರತದ ಕಲ್ಲುಗುಡ್ಡೆ ಸಮಾಧಿಗಳಲ್ಲಿ ಹೆಚ್ಚಿನವು ದಕ್ಷಿಣ ಭಾರತದಲ್ಲಿ ಕಂಡುಬಂದಿವೆ. ಇಲ್ಲಿಯ ಕಲ್ಲುಗುಡ್ಡೆ ಸಮಾಧಿಗಳಲ್ಲಿ ವ್ಯಕ್ತಿಯ ಅವಶೇಷಗಳನ್ನು ಬರಿಯ ಹಳ್ಳದಲ್ಲೋ ಕೆಲವು ಸಲ ಶಿಲಾತೊಟ್ಟಿಗಳಲ್ಲೋ ಒಮ್ಮೊಮ್ಮೆ ಮಣ್ಣಿನ ಜಾಡಿಗಳಲ್ಲೋ ಇಟ್ಟಿರುವುದುಂಟು. ಮೇಲ್ಭಾಗದಲ್ಲಿ ಕಲ್ಲುಗುಡ್ಡೆಯನ್ನು ಸುತ್ತುವರಿದ ಶಿಲಾವರ್ತುಲ ಸಾಮಾನ್ಯವಾಗಿ ಕಂಡುಬಂದರೂ ಕೆಲವು ಸಂದರ್ಭದಲ್ಲಿ ವರ್ತುಲವಿಲ್ಲದೆ ಬರಿಯ ಕಲ್ಲುಗುಡ್ಡೆಯಷ್ಟೇ ಇರುವುದೂ ಉಂಟು.

ಈಗಲೂ ಕೆಲವು ಪಂಗಡಗಳವರು ಸಮಾಧಿಗಳ ಮೇಲೆ ಚಿಕ್ಕ ಕಲ್ಲುಗಳನ್ನು ಪೇರಿಡುವ ರೂಢಿ ಈ ಪ್ರಾಚೀನ ಸಂಪ್ರದಾಯದ ಅವಶೇಷವಿದ್ದಂತೆ ಕಾಣುತ್ತದೆ. (ಎಸ್.ಎನ್.)

**ಕಲ್ಲುಗೌಜಲು ಹಕ್ಕಿ :** ಕೊಲಂಬಿಫಾರ್ಮೀಸ್ ಉಪಗಣದ ಟೀರೊಕ್ಲಿಡೀ ಕುಟುಂಬಕ್ಕೆ ಸೇರಿದ ವಿವಿಧ ಪ್ರಭೇದಗಳ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು (ಸ್ಯಾಂಡ್ ಗ್ರೌಸ್). ಕೆಲವು ಲಕ್ಷಣಗಳಲ್ಲಿ ಇದು ಗೌಜಲು ಹಕ್ಕಿಗಳನ್ನು (ಗ್ರೌಸ್) ಹೋಲುವುದರಿಂದಲೂ ಹೆಚ್ಚಾಗಿ ಮರುಭೂಮಿಗಳಲ್ಲಿ ವಾಸಿಸುವುದರಿಂದಲೂ ಇದಕ್ಕೆ ಈ ಹೆಸರು. ಆದರೆ ವಾಸ್ತವವಾಗಿ ಇದು ಪಾರಿವಾಳದ ಹತ್ತಿರ ಸಂಬಂಧಿ.



ಕಲ್ಲುಗೌಜಲು ಹಕ್ಕಿ (ಸಿರಾಪ್‌ಟೇಸ್ ಪ್ಯಾರಡಾಕ್ಸಸ್)

ಇದರಲ್ಲಿ ಸುಮಾರು 16 ಪ್ರಭೇದಗಳಿವೆ. ಇವು ಆಫ್ರಿಕ ಹಾಗೂ ಮಡಗಾಸ್ಕರ್, ದಕ್ಷಿಣ ಯುರೋಪ್, ದಕ್ಷಿಣ ಹಾಗೂ ಮಧ್ಯ ಏಷ್ಯದ ಮರಳುಗಾಡುಗಳಲ್ಲಿ ಕಾಣಬರುತ್ತವೆ. ಇವುಗಳಲ್ಲಿ ಮುಖ್ಯವಾದವು ಮಧ್ಯ ಏಷ್ಯದ ನಿವಾಸಿಯಾದ ಸಿರಾಪ್ಟಿಸ್ ಪ್ಯಾರಡಾಕ್ಸಸ್; ಸ್ಪೇನ್, ಉತ್ತರ ಆಫ್ರಿಕ ಮತ್ತು ಏಷ್ಯ ಮೈನರ್‌ಗಳ ನಿವಾಸಿಯಾದ ಟೀರೊಕ್ಲಿಸ್ ಆಲ್ಹಾಟ; ಭಾರತದಲ್ಲಿ ಕಾಣಬರುವ ಟೀರೊಕ್ಲಿಸ್ ಎಕ್ಸಸ್ಟಸ್ ಮತ್ತು ಟೀರೊಕ್ಲಿಸ್ ಇಂಡಿಕಸ್ ಎಂಬವು.

ಸಾಧಾರಣವಾಗಿ 9"_16" ಉದ್ದಕ್ಕೆ ಬೆಳೆಯುತ್ತದೆ. ಇದಕ್ಕೆ ಪುಷ್ಟವಾದ ದೇಹವಿದೆ. ದೇಹದ ಬಣ್ಣ ಬೂದು ಅಥವಾ ಕಂದು. ಅಲ್ಲಲ್ಲಿ ಕಿತ್ತಳೆ, ಕೆಂಗಂದು, ಕಪ್ಪು ಅಥವಾ ಬಿಳಿಯ ಬಣ್ಣದ ಮಚ್ಚೆಗಳಿವೆ. ಇದರಿಂದಾಗಿ ಹಕ್ಕಿಯ ಬಣ್ಣ ಪರಿಸರದ ಬಣ್ಣದೊಂದಿಗೆ ಮಿಳಿತವಾಗಿ ಹಕ್ಕಿಯನ್ನು ಗುರುತಿಸುವುದು ಕಷ್ಟವಾಗುತ್ತದೆ. ಪಾರಿವಾಳಕ್ಕಿರುವಂಥ ಕತ್ತು ಮತ್ತು ತಲೆ, ಮೋಟಾದ ಕಾಲುಗಳು, ಚಿಕ್ಕದಾದ ಚೂಪಾದ ಕೊಕ್ಕು, ಉದ್ದನೆಯ ಹಾಗೂ ಚೂಪಾದ ರೆಕ್ಕೆ ಮತ್ತು ಬಾಲ_ಇವು ಕಲ್ಲುಗೌಜಲು ಹಕ್ಕಿಯ ಪ್ರಮುಖ ಲಕ್ಷಣಗಳು. ಈ ಹಕ್ಕಿಗಳು ಸಾಮಾನ್ಯವಾಗಿ ಗುಂಪುಗಳಲ್ಲಿಯೇ ಇರುತ್ತವೆ. ಹಾರುವುದು ಕಡಿಮೆ, ನೆಲದ ಮೇಲೆ ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತ ಓಡಾಡುತ್ತವೆ. ಆದರೆ ಮಾನವ ಹಾಗೂ ಇತರ ಶತ್ರುಗಳ ಸುಳಿವು ತಿಳಿದೊಡನೆಯೇ ವೇಗವಾಗಿ ಹಾರಿಹೋಗುತ್ತವೆ. ಇವು ಬಹಳ ಪುಕ್ಕಲು ಸ್ವಭಾವದ ಅಲ್ಲದೆ ಬಹು ಎಚ್ಚರಿಕೆಯ ಹಕ್ಕಿಗಳೆಂದು ಹೆಸರಾಗಿವೆ. ಸಣ್ಣ ಕಾಯಿಗಳು, ಕಾಳುಗಳು, ಮೊಗ್ಗುಗಳು ಹಾಗೂ ಸಣ್ಣಪುಟ್ಟ ಕೀಟಗಳು ಇವುಗಳ ಆಹಾರ.

ಕಲ್ಲುಗೌಜಲು ಹಕ್ಕಿಗಳು ಸಾಮಾನ್ಯವಾಗಿ ಬಂಜರುಪ್ರದೇಶಗಳಲ್ಲಿ ವಾಸಿಸಿದರೂ ದಿನಕ್ಕೆರಡು ಬಾರಿ ನೀರು ಕುಡಿಯಲು ಹತ್ತಿರದ ಯಾವುದಾದರೂ ಕೊಳ, ತೊರೆಗಳಿಗೆ ಭೇಟಿಕೊಡುತ್ತವೆ. ಈ ಭೇಟಿಯ ಉಪಯೋಗವನ್ನು ಬೇಟೆಗಾರರು ಪಡೆದುಕೊಳ್ಳಲು ಯತ್ನಿಸುತ್ತಾರೆ. ಆದರೆ ಹಕ್ಕಿಗಳು ಬಲು ಸೂಕ್ಷ್ಮಮತಿಗಳು. ನೀರಿಗೆ ಬಾಯಿಕ್ಕುವ ಮುನ್ನ ಇವು ಕೊಳದಿಂದ ನೂರಾರು ಗಜಗಳ ದೂರದಲ್ಲೇ ಇಳಿದು 5_10 ಮಿನಿಟು ಯಾರಾದರೂ ಶತ್ರುಗಳಿದ್ದಾರೋ ಏನೋ ಎಂದು ಕಾಯುತ್ತವೆ. ಯಾರೂ ಇಲ್ಲ ಎಂದು ಮನವರಿಕೆಯಾದ ಮೇಲೆ ನೀರು ಕುಡಿಯಲು ಧಾವಿಸುತ್ತವೆ. ನೀರಿನಲ್ಲಿ ಎದೆಯಾಳದ ವರೆಗೂ ಇಳಿದು

ನೀರನ್ನು ಹೀರಿ ಕುಡಿಯುತ್ತವೆ. ಅಲ್ಲಿಂದ ಗೂಡಿಗೆ ವಾಪಸಾದ ಮೇಲೆ ತಮ್ಮ ಒದ್ದೆಯಾದ ಎದೆಯನ್ನು ಮರಿಗಳಿಗೆ ಚೀಪಲು ಕೊಟ್ಟು ಅವಕ್ಕೆ ನೀರುಣಿಸುತ್ತವೆ.

ಈ ಹಕ್ಕಿಗಳು ನೆಲದ ಮೇಲೆ ಗೂಡುಕಟ್ಟಿ 2–4 ಮೊಟ್ಟೆಗಳನ್ನಿಡುತ್ತವೆ. ಗಂಡು ಹೆಣ್ಣುಗಳೆರಡೂ ಸರದಿಯ ಪ್ರಕಾರ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿ ಮಾಡುತ್ತವೆ. ಮರಿಗಳಿಗೆ ಎರಡೂ ಗುಟುಕು ಕೊಟ್ಟು ಸಲಹುತ್ತವೆ.

ಕೆಲವು ಬಗೆಯ ಕಲ್ಲುಗೌಜಲು ಹಕ್ಕಿಗಳಲ್ಲಿ ವಲಸೆಹೋಗುವ ಕ್ರಮವೂ ಇದೆ. ಉದಾಹರಣೆಗೆ ಮಧ್ಯ ಏಷ್ಯದ ನಿವಾಸಿಯಾದ ಸಿರಾಪ್ಟಿಸ್ ಪ್ಯಾರಡಾಕ್ಸಸ್ ಎಂಬ ಹಕ್ಕಿ ಪಶ್ಚಿಮ ಯುರೋಪಿಗೆ ಚಳಿಗಾಲದಲ್ಲಿ ವಲಸೆ ಹೋಗುತ್ತದೆ.

ಎಲ್ಲ ಬಗೆಯ ಕಲ್ಲು ಗೌಜಲುಗಳೂ ಮೃಗಯಾಪಕ್ಷಿಗಳೆಂದು (ಗೇಮ್ ಬರ್ಡ್ಸ್) ಹೆಸರಾಗಿವೆ. (ಎಚ್.ಬಿ.ಡಿ.)

**ಕಲ್ಲುಪ್ಪು :** ನೈಸರ್ಗಿಕವಾಗಿ ದೊರೆಯುವ ಸೋಡಿಯಂ ಕ್ಲೋರೈಡ್ ($NaCl$), (ಅಡುಗೆ ಉಪ್ಪು). ರಾಕ್‌ಸಾಲ್ಟ್ ರೂಢಿಯ ಹೆಸರು, ಹ್ಯಾಲೈಟ್ ಶಾಸ್ತ್ರೀಯ ನಾಮ. ಇದಕ್ಕೆ ಖನಿಜಗಳಲ್ಲೆಲ್ಲ ಹೆಚ್ಚು ವ್ಯಾಪ್ತಿ ಇದೆ. ಇದು ಐಸೊಮೆಟ್ರಿಕ್ ಹರಳು ಗುಂಡಿನಲ್ಲಿ, ಅದರಲ್ಲಿಯೂ ಘನಾಕೃತಿಯಲ್ಲಿ, ಸ್ಫಟಿಕೀಕರಿಸುತ್ತದೆ. ಹರಳುಗಳಲ್ಲಿ ಉತ್ಕೃಷ್ಟ ಸೀಳುಗಳಿವೆ. ಇದರ ಕಾಠಿಣ್ಯ 2.5, ಸಾಪೇಕ್ಷ ಸಾಂದ್ರತೆ 2.16. ಬಣ್ಣದಲ್ಲಿ ನಿರ್ವರ್ಣ ಅಥವಾ ಬಿಳುಪು. ಕಲ್ಮಷಗಳಿಂದ ಕೂಡಿದಾಗ ಹಳದಿ, ಕೆಂಪು, ನೀಲಿ ಅಥವಾ ಊದಾ ಛಾಯೆಯನ್ನು ತೋರುವುದುಂಟು.

ಕಲ್ಲುಪ್ಪು ಪ್ರಪಂಚದ ನಾನಾ ಕಡೆ ಕೇಂಬ್ರಿಯನ್ ಕಾಲದಿಂದ ಇತ್ತೀಚಿನ ಕಾಲದವರೆಗಿನ ಎಲ್ಲ ಜಲಜಶಿಲೆಗಳಲ್ಲಿಯೂ ವಿಶಾಲವಾಗಿ ಹರಡಿದೆ. ಸಾಮಾನ್ಯವಾಗಿ ಇದು ಜಿಪ್ಸಮ್, ಅನ್‌ಹಿಡ್ರೈಟ್, ಜೇಡಿಮಣ್ಣು, ಸಿಲ್‌ವೈಟ್, ಕಾರ್ನಲೈಟ್ ಮತ್ತು ವಿಲೀನವಾಗದ ವಿವಿಧ ಉಪ್ಪುಗಳೊಡನೆ ಬೆರೆತಿರುತ್ತದೆ. ಜಲಜ ಶಿಲಾಸ್ತೋಮಗಳಲ್ಲಿ ಕಲ್ಲುಪ್ಪಿನ ಸ್ತರಗಳು ಕೆಲವು ಅಡಿಗಳಿಂದ ಹಿಡಿದು ಸಾವಿರ ಅಡಿಗಳವರೆಗೆ ಮಂದವಾಗಿರುತ್ತವೆ. ಆಳದಲ್ಲಿರುವ ಸ್ತರಸಂಚಯನೆಗಳು ಭೂಚಲನೆಗೊಳಗಾದಾಗ ವಿರೂಪ ಹೊಂದಿ ಅಲ್ಲಲ್ಲೆ ತಮ್ಮ ಮೇಲಿರುವ ಸ್ತರಗಳನ್ನು ಮೇಲೆತ್ತಿ ಬಾಗಿಸುತ್ತವೆ. ಆಕಾರದಲ್ಲಿ ಗೋಳ, ನಳಿಕೆ ಅಥವಾ ನಾಯಿಕೊಡೆಯಂತಿರುತ್ತವೆ. ಇವೇ ಲವಣ ಗುಮ್ಮಟಗಳು. ನಿಸರ್ಗದಲ್ಲಿ ಕಲ್ಲೆಣ್ಣೆಯ ಸಂಗ್ರಹಕ್ಕೆ ಇವು ಉತ್ತಮ ಅಡಚುಗಳು (ಆಯಿಲ್ ಟ್ರ್ಯಾಪ್ಸ್). ಸಾಗರ ಅಥವಾ ಸಮುದ್ರ ನೀರಿನಲ್ಲಿ ಸೋಡಿಯಂ ಕ್ಲೋರೈಡ್ ಸಾಕಷ್ಟು ಪ್ರಮಾಣದಲ್ಲಿರುತ್ತದೆ. ಈ ನೀರಿನ ಸತತ ಇಂಗುವಿಕೆಯಿಂದ ಕ್ರಮೇಣ ಕಲ್ಲುಪ್ಪಿನ ಸ್ತರಗಳಾಗುವುವು. ಮೂಲಸಾಗರದ ಸಂಪರ್ಕ ಕಳೆದುಕೊಂಡ ಭಾಗಗಳಲ್ಲಿ ಈ ತೆರನಾದ ಇಂಗುವಿಕೆ ಉಷ್ಣ ಮತ್ತು ಶುಷ್ಕ ವಾತಾವರಣದಿಂದ ತೀವ್ರಗತಿಯಲ್ಲಿ ನಡೆಯುವುದು.

ವಿಶಾಲವಾದ ಕಲ್ಲುಪ್ಪಿನ ನಿಕ್ಷೇಪಗಳು ಪ್ರಪಂಚದ ಹಲವಾರು ದೇಶಗಳಲ್ಲಿವೆ. ಇವುಗಳಲ್ಲಿ ಮುಖ್ಯವಾದವು ಆಸ್ಟ್ರಿಯ, ಪೋಲೆಂಡ್, ಚೆಕೋಸ್ಲೊವಾಕಿಯ, ಜರ್ಮನಿ, ಸ್ಪೇನ್, ಬ್ರಿಟನ್ ಮತ್ತು ಭಾರತದಲ್ಲಿವೆ. ಉತ್ತರ ಅಮೆರಿಕದ ಸಂಯುಕ್ತಸಂಸ್ಥಾನದಲ್ಲಿ ಕಾನ್‌ಸಾಸ್ ಮಿಚಿಗನ್, ನ್ಯೂಯಾರ್ಕ್ ಒಹಾಯೊ, ಓಕ್ಲಹೋಮ, ಪೆನ್ಸಿಲ್‌ವೇನಿಯ ಮತ್ತು ಟೆಕ್ಸಾಸ್ ಪ್ರದೇಶಗಳಲ್ಲಿ ವಿಶಾಲವಾದ ಉಪ್ಪಿನ ಸ್ತರಗಳಿವೆ.

ಭಾರತದಲ್ಲಿ ಪಂಜಾಬಿನ ಸಾಲ್ಟ್‌ರೇಂಜ್ ಮತ್ತು ದರ ವಾಯವ್ಯಕ್ಕಿರುವ ಕೋಹಟ್ ಪ್ರದೇಶಗಳಲ್ಲಿ ಕಲ್ಲುಪ್ಪು ನಿಕ್ಷೇಪಗಳಿವೆ. ಇವುಗಳಿಗೆ ಲವಣ ಶಿಲಾಶ್ರೇಣಿ ಎಂದು ಹೆಸರು. ಸಾಲ್ಟ್ ರೇಂಜ್ ಪ್ರದೇಶದ ಕಲ್ಲುಪ್ಪು ಮುದ್ದೆಯಂತಿದೆ. ಅದರ ಬಣ್ಣ ಊದಾದಿಂದ ಬಿಳುಪಿನವರೆಗೆ ವಿವಿಧ ಛಾಯೆಗಳಿಂದ ಕೂಡಿದೆ. ಅದರ ಮೇಲೆ ಬೂದು ಮಚ್ಚೆಗಳು ಇವೆ. ಪ್ರತಿಯೊಂದು ಸ್ತರದ ಮಂದ 30 ರಿಂದ 60 ಮೀಟರ್. ಪ್ರಸ್ತರೀಕರಣ ಅವ್ಯವಸ್ಥಿತವಾಗಿದ್ದು ಹರಿವು ರಚನೆ, ತಿರುಚು ಮತ್ತು ಪದರು ರಚನೆಗಳನ್ನು ಗುರುತಿಸಬಹುದು. ಕೆಲವೆಡೆ ಮಸೂರದಾಕಾರದಲ್ಲಿದ್ದು ಹಲವಾರು ಮೀಟರುಗಳಷ್ಟು ಉದ್ದವಾಗಿರುತ್ತವೆ. ಕೋಹಟ್ ಪ್ರದೇಶದ ಉಪ್ಪು ಸಾಧಾರಣವಾಗಿ ಬೂದಿ ಬಣ್ಣದಿಂದಿದ್ದು ಇದರಲ್ಲಿ ವಿಲೀನವಾಗದ ವಸ್ತುಗಳ ಪ್ರಮಾಣ ಸಾಲ್ಟ್‌ರೇಂಜ್ ಉಪ್ಪಿನಲ್ಲಿರುವುದಕ್ಕಿಂತ ಹೆಚ್ಚಾಗಿರುತ್ತದೆ. ಉಪ್ಪಿನ ಗಣಿಗಳು ಸಾಲ್ಟ್‌ರೇಂಜ್ ಪ್ರದೇಶದ ಕರೆವಾ, ವಾರ್ಚ ಮತ್ತು ಕಲಬಾಗ್ ಮುಂತಾದ ಅನೇಕ ಸ್ಥಳಗಳಲ್ಲಿವೆ. ಲವಣಶ್ರೇಣಿಯ ಉತ್ಪತ್ತಿಯ ಬಗ್ಗೆ ವಿವಿಧ ಅಭಿಪ್ರಾಯಗಳಿದ್ದರೂ ಇದು ಸಾಧಾರಣವಾಗಿ ಜಲಜನಿತವಾದುದೆಂದು ಭಾವಿಸಲಾಗಿದೆ.

ಅನಾದಿಕಾಲದಿಂದಲೂ ಉಪ್ಪು ಬಳಕೆಯಲ್ಲಿದೆ. ಇದರ ಮೊದಲ ಉಪಯೋಗ ಆಹಾರದಲ್ಲಿ. ಪ್ರತಿವ್ಯಕ್ತಿಯೂ ವರ್ಷಕ್ಕೆ 54.5 ಕೆ.ಜಿ.ಯಷ್ಟು ಉಪ್ಪನ್ನು ಸೇವಿಸುತ್ತಾನೆ. ಪುರಾತನ ಕಾಲದಿಂದಲೂ ಉಪ್ಪು ವ್ಯಾಪಾರದ ಪ್ರಧಾನವಸ್ತು. ಇಂದು ಇದನ್ನು ರಾಸಾಯನಿಕ ಕಾರ್ಖಾನೆಗಳಲ್ಲಿ ನೂರಾರು ವಸ್ತುಗಳ ತಯಾರಿಕೆಗೆ ಬಳಸಲಾಗುತ್ತಿದೆ. ಜಾನುವಾರುಗಳ ಆಹಾರ, ಕೃತಕಗೊಬ್ಬರ, ಕೀಟನಾಶಕ, ಕಳೆನಾಶಕ, ಮಣ್ಣು ಸಾರವಸ್ತುಗಳು, ಔಷಧಗಳು, ಬಾಹ್ಯ ಮತ್ತು ಆಂತರಿಕ ನಿರ್ಮಲೀಕರಣಗಳು ಇತ್ಯಾದಿಗಳ ತಯಾರಿಕೆಯಲ್ಲಿ ಉಪ್ಪಿನ ಉಪಯೋಗ ಹೇರಳವಾಗಿದೆ.

ಪ್ರತಿ ವರ್ಷ 77 ರಾಷ್ಟ್ರಗಳು ಸುಮಾರು 35,560,000 ಮೆಟ್ರಿಕ್ ಟನ್ನುಗಳಷ್ಟು ಉಪ್ಪನ್ನು ಉತ್ಪಾದಿಸುತ್ತವೆ. ಅಮೆರಿಕದ ಸಂಯುಕ್ತಸಂಸ್ಥಾನ, ಬ್ರಿಟನ್, ಚೀನ, ಜರ್ಮನಿ, ಫ್ರಾನ್ಸ್ ಮತ್ತು ಭಾರತ ದೇಶಗಳು 1,016,000,000 ಮೆಟ್ರಿಕ್ ಟನ್ನುಗಳಿಗೂ ಹೆಚ್ಚು ಉಪ್ಪನ್ನು ಉತ್ಪಾದಿಸುತ್ತವೆ. ಕಲ್ಲುಪ್ಪಿನ ಗಣಿಗಳಲ್ಲಿ ಸುರಂಗ ತೋಡಿ ಉಪ್ಪನ್ನು ಹೊರತೆಗೆಯುತ್ತಾರೆ. ಕೆಲವು ವೇಳೆ ಲವಣಸ್ತರಗಳಿಗೆ ನೀರನ್ನು ಹಾಯಿಸಿ ಉಪ್ಪು ಕರಗಿದ ನೀರನ್ನು (ಬ್ರೈನ್) ಭೂಮಿಯ ಮೇಲಕ್ಕೆ ಪಂಪಿನ ಸಹಾಯದಿಂದ ಹೊರತೆಗೆದು ಸಣ್ಣ ಮಡಿಗಳಲ್ಲಿ ಬಿಟ್ಟು ಇಂಗಿಸಿ ಉಪ್ಪನ್ನು ತಯಾರಿಸುವುದೂ ಉಂಟು. (ಎಂ.ಎನ್.ಎಂ.)

**ಕಲ್ಲುಮಚ್ಚು :** ಪೂರ್ವಶಿಲಾಯುಗದ ಪ್ರಾರಂಭಕಾಲದಲ್ಲಿ ಆದಿಮಾನವರು ಉಪಯೋಗಿಸುತ್ತಿದ್ದ, ಉಂಡೆಕಲ್ಲುಗಳ ಒಂದು ಪಕ್ಕವನ್ನು ಕೆತ್ತಿ ಮಾಡಿದ ಚೂಪಾದ ಅಂಚುಳ್ಳ ಉಪಕರಣ (ಚಾಪರ್). ಮೊತ್ತಮೊದಲಿಗೆ ಪ್ಲಿಸ್ಟೊಸೀನ್ ಯುಗದ ಆದಿಯಲ್ಲಿ ಕಲ್ಲುಮಚ್ಚು ಆಫ್ರಿಕದ ಪೂರ್ವಮಧ್ಯಭಾಗಗಳಲ್ಲಿ ಬಳಕೆಯಲ್ಲಿತ್ತು. ಇದು ಓಲ್ಡೋವನ್ ಸಂಸ್ಕೃತಿಗೆ ಸೇರುತ್ತದೆ. ಅನಂತರ ಮಧ್ಯ ಪ್ಲಿಸ್ಟೊಸೀನ್ ಕಾಲದಲ್ಲಿ ವಾಯವ್ಯಭಾರತದ ಸೋಹನ್ ನದೀಕಣಿವೆಯಲ್ಲಿದ್ದ ಸೋಹನ್ ಸಂಸ್ಕೃತಿ, ಮಯನ್ಮಾರ್ ಇರವಾಡಿ ನದೀಕಣಿವೆಯ ಅನ್ಯಾಥಿಯನ್ ಸಂಸ್ಕೃತಿ, ಚೀನದ ಪೀಕಿಂಗ್ ಬಳಿಯ ಚೌಕೂಟಿಯನ್ ಗುಹೆಗಳಲ್ಲಿಯ ಸಂಸ್ಕೃತಿ ಮತ್ತು ಜಾವದ ಪಜ್ಜಿಟೀನಿಯನ್ ಸಂಸ್ಕೃತಿ_ಇವುಗಳಲ್ಲಿ ಕಲ್ಲುಮಚ್ಚು ಪ್ರಮುಖ ಆಯುಧವಾಗಿತ್ತು. ಈ ಸಂಸ್ಕೃತಿಗಳನ್ನು ಉಂಡೆಕಲ್ಲಿನ ಉಪಕರಣಗಳ ಸಂಸ್ಕೃತಿಗಳೆಂದು ಕರೆಯಲಾಗಿದೆ. ಪೂರ್ವಮಧ್ಯ ಆಫ್ರಿಕಗಳಲ್ಲಿ ಸ್ವಲ್ಪ ಕಾಲಾನಂತರ ಉಪಕರಣ ತಯಾರಿಕೆಯ ರೀತಿ ಸುಧಾರಿತವಾಗಿ ಕಲ್ಲು ಮಚ್ಚು ಕ್ರಮೇಣ ಕೈಗೊಡಲಿಯಾಗಿ ಮಾರ್ಪಾಟಾಯಿತು. ಆದರೆ ಏಷ್ಯದಲ್ಲಿ ಈ ಸಂಸ್ಕೃತಿಗಳು ದೀರ್ಘಕಾಲ ಅದೇ ಅವಸ್ಥೆಯಲ್ಲುಳಿದಿದ್ದು, ಪ್ಲಿಸ್ಟೊಸೀನ್ ಯುಗದ ಅಂತ್ಯದ ವರೆಗೂ ಬಳಕೆಯಲ್ಲಿದ್ದುವು. ಈ ಸಂಸ್ಕೃತಿಗಳಲ್ಲಿ ಬಳಕೆಯಲ್ಲಿದ್ದ ಚಕ್ಕೆಕಲ್ಲಿನ ಉಪಕರಣಗಳು ಕ್ರಮೇಣ ಪ್ರಾಬಲ್ಯ ಹೊಂದಿ ಉಂಡೆಕಲ್ಲಿನ ಉಪಕರಣಗಳ ಸಂಸ್ಕೃತಿಗಳನ್ನು ಅಂತ್ಯಗೊಳಿಸಿದುವು. (ಬಿ.ಕೆ.ಜಿ.)

**ಕಲ್ಲುಮಠದ ಪ್ರಭುದೇವರು :** ಸು. 1430. ವಿಜಯನಗರದ ಪ್ರೌಢ ದೇವರಾಯನ ಆಳ್ವಿಕೆಯ ಕಾಲದಲ್ಲಿ ಆಗಿಹೋದ ನೂರೊಂದು ಜನ ವೀರಶೈವ ವಿರಕ್ತರಲ್ಲಿ ಒಬ್ಬ. ಅದೃಶ್ಯಕವಿ (ಸು. 1580) ತನ್ನ ಪ್ರೌಢರಾಯನ ಕಾವ್ಯದಲ್ಲಿ, ಸಿದ್ಧ ನಂಜೇಶ (ಸು. 1600) ತನ್ನ ರಾಘವಾಂಕ ಚರಿತೆಯಲ್ಲಿ, ಶಾಂತಲಿಂಗ ದೇಶಿಕ (1672) ತನ್ನ ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರದಲ್ಲಿ ಈತನನ್ನು ಹೆಸರಿಸಿದ್ದಾರೆ. ಕವಿ ಚರಿತೆಕಾರರು ಈತನ ಕಾಲ ಸು. 1430 ಎಂದು ತಿಳಿಸಿದ್ದಾರೆ. ಈತ 15ನೆಯ ಶತಮಾನದ ಪೂರ್ವಾರ್ಧದಲ್ಲಿ ಪ್ರೌಢದೇವರಾಯನ ವಿಜಯನಗರದ ಆಳ್ವಿಕೆಯಲ್ಲಿ ಬಾಳಿ ಬದುಕಿದ್ದನೆಂಬುದು ಖಚಿತ. ಹನ್ನೆರಡನೆಯ ಶತಮಾನದಲ್ಲಿ ತುಂಬು ಹೊಳೆಯಾಗಿ ಹರಿದು ಬಂದ ವಚನಗಳ ಪ್ರವಾಹ ಒಮ್ಮಿಂದೊಮ್ಮೆಲೆ ಒಡೆದು ಹತ್ತೂ ಕಡೆಗೆ ಹರಿದು ತಡಸಲಾಗಿ ಬೀಳತೊಡಗಿತ್ತು; ರೂಪುಗೊಂಡಿದ್ದ ಸಂಘಟನೆ ಸಡಿಲವಾಗುತ್ತಿತ್ತು. ತೇಜೋಗರ್ಭವಾದ ಈ ಜಲವನ್ನು ಸಂಗ್ರಹಿಸಿ ತೇಜಸ್ಸನ್ನು ಹೊರಗೆಡಹುವ ಕಾರ್ಯ ವಿಜಯನಗರ ಕಾಲದ ಶಿವಶರಣರಿಗೆ ಮೀಸಲಾಗಿತ್ತು. ಅವರಲ್ಲಿ ಮಹಲಿಂಗದೇವ. ಜಕ್ಕಣಾಚಾರ್ಯ, ಗೂಳೂರು ಸಿದ್ಧವೀರಣಾಚಾರ್ಯ ಮುಂತಾದ ಪ್ರಮುಖರಲ್ಲಿ ವಿದ್ಯಾನಗರ ಅಥವಾ ವಿಜಯನಗರದ ಕಲ್ಲುಮಠದ ಪ್ರಭುದೇವನೂ ಒಬ್ಬ. ಈತ ಲಿಂಗಲೀಲಾ ವಿಲಾಸ ಚಾರಿತ್ರ, ಪ್ರಭುದೇವರ ಮಂತ್ರಗೋಪ್ಯದ ಟೀಕೆ ಎಂಬೆರಡು ಕೃತಿಗಳನ್ನು ರಚಿಸಿದ್ದಾನೆ. ಲಿಂಗಲೀಲಾ ವಿಲಾಸ ಚಾರಿತ್ರದಲ್ಲಿ 16 ಸ್ಥಲ ಕಟ್ಟುಗಳಿವೆ. ಸುಮಾರು ಮೂವತ್ತಾರು ವಚನಕಾರರಿಂದ ಆಯ್ದುಕೊಂಡ 729 ವಚನಗಳಿವೆ, 135 ಸಂಸ್ಕೃತ ಶ್ಲೋಕಗಳಿವೆ. ಪ್ರಭುದೇವ ಸ್ಥಲಾನುಗುಣವಾಗಿ ಬಸವ, ಚೆನ್ನಬಸವ, ಮಹಾದೇವಿಯಕ್ಕ ಮುಂತಾದ ಪುರಾತನರ ವಚನಗಳನ್ನು ಆಯ್ದುಕೊಂಡು ಷೊಡಶ ಸ್ಥಲ ಪರಿಕ್ರಮದಿಂದ ಅವನ್ನು ಸೇರಿಸಿ ವ್ಯಾಖ್ಯಾನ ಮಾಡಿದ್ದಾನೆ. ಭಕ್ತಿ ಕಾಂಡವೆ ಷಟ್‌ಸ್ಥಲಮಾರ್ಗ, ಈ ಮಾರ್ಗವೇ ಲಿಂಗಲೀಲಾ ವಿಲಾಸ ಚಾರಿತ್ರ ಎಂದು ಕವಿ ಗ್ರಂಥಾರಂಭದಲ್ಲಿ ಹೇಳಿದ್ದಾನೆ. ಅಂದರೆ ಇದು ಷಟ್‌ಸ್ಥಲವನ್ನು ಬೋಧಿಸುವ ವಚನ ಗ್ರಂಥ. ಮಂತ್ರಗೋಪ್ಯದ ಟೀಕೆಯಲ್ಲಿ ಸೀಸ ಪದ್ಯದಂತಿರುವ 27 ಪದ್ಯಗಳಿವೆ. ಒಂದೊಂದು ಪದ್ಯಕ್ಕೂ ವಿಸ್ತಾರವಾದ ಟೀಕೆ ಇದೆ. ಈ ಗ್ರಂಥಗಳಿಂದ ಪುರಾತನರ ವಚನಗಳಲ್ಲಿ ಹುದುಗಿರಬಹುದಾದ ಗೂಢಾರ್ಥವನ್ನು ತಿಳಿಯುವುದು ಸುಲಭವಾಗುತ್ತದೆ.

ಲಿಂಗಲೀಲಾವಿಲಾಸ ಚಾರಿತ್ರ ಸಂ. ಶಿ. ಭೂಸನೂರಮಠರ ಸಂಪಾದನೆಯಲ್ಲಿ ಪ್ರಕಟವಾಗಿದೆ (1956). (ಜೆ.ಎಸ್.ಪಿ.ಎಂ.)

**ಕಲ್ಲುಸಬ್ಬಸಿಗೆ :** ರೂಬಿಯೇಸಿ ಕುಟುಂಬಕ್ಕೆ ಸೇರಿದ ಓಲ್ಡನ್‌ಲ್ಯಾಂಡಿಯ ಕೊರಿಂಬೋಸ ಎಂಬ ವೈಜ್ಞಾನಿಕ ಹೆಸರಿನ, ನೆಲದ ಮೇಲೆ ಹರಡಿಕೊಂಡು ಬೆಳೆಯುವ

ಏಕವಾರ್ಷಿಕ ಸಣ್ಣ ಕಳೆ ಸಸ್ಯ. ಕ್ಷೇತ್ರ ಪರಪಟ ಎಂಬುದು ಸಂಸ್ಕೃತದಲ್ಲಿ ಇದರ ಹೆಸರು. ಇದು ಭಾರತದ ಆದ್ಯಂತ ಹೊಲ ಗದ್ದೆ ಬಯಲುಗಳಲ್ಲಿ ಮಳೆಗಾಲದಲ್ಲಿ ಕಾಣಿಸಿಕೊಳ್ಳುತ್ತದೆ. ಕಿರಿದಾಗಿರುವ ನೀಳಾಕಾರದ ಇದರ ಎಲೆಗಳು ಅಭಿಮುಖವಾಗಿ ಜೋಡಿಸಿಕೊಂಡಿವೆ. ಎರಡು ಎಲೆ ತೊಟ್ಟುಗಳ ಪಕ್ಕದಲ್ಲಿ ಅಭಿಮುಖವಾಗಿ ಎರಡು ವೃಂತಪತ್ರಗಳಿವೆ. ತುದಿಯಲ್ಲಿ ಮತ್ತು ಕಂಕುಳಲ್ಲಿರುವ ಮಧ್ಯಾರಂಭಿ ಹೂ ಗೊಂಚಲುಗಳಲ್ಲಿ 1ರಿಂದ 4 ತೊಟ್ಟಿರುವ ಹೂಗಳಿವೆ. ಅದರಲ್ಲಿ 4 ಪುಷ್ಪಪತ್ರಗಳೂ 4 ಕೂಡು ಹೂ ದಳಗಳೂ ಹೂದಳಗಳ ಮೇಲೆ ಅಂಟಿರುವ ನಾಲ್ಕು ಕೇಸರಗಳೂ ಇವೆ. ಎರಡು ಕೋಶದ ಅಂಡಾಶಯವೂ ಪ್ರತಿ ಕೋಶದಲ್ಲಿ ಅನೇಕ ಅಂಡಗಳೂ ಇವೆ. ಅಂಡಾಶಯ ನೀಚಸ್ಥಾನದ್ದು (ಇನ್‌ಫೀರಿಯರ್ ಓವರಿ). ಹಣ್ಣು ಚಿಕ್ಕದು ಮತ್ತು ಕೋನಗಳಿಂದ ಕೂಡಿರುವ ಬಹು ಬೀಜವಿರುವ ಸಂಪುಟ ಮಾದರಿಯದು.

ಈ ಸಸ್ಯ ಶರೀರಕ್ಕೆ ತಂಪುಕಾರಿ. ಇದನ್ನು ಉಷ್ಣದ ಅತೀರೇಕದಿಂದ ನರಳುವವರು ತರಕಾರಿಗಾಗಿ ಬಳಸುವರು. ಇದರ ಕಷಾಯವನ್ನು ವಾಯಿದೆಯಾಗಿ ಬರುವ ಜ್ವರಕ್ಕೆ ಔಷಧಿಯಾಗಿ ಕೊಡುವರು. ಜಠರದ ನವೆ, ನರಗಳ ನಿರ್ವೀರ್ಯತೆ, ಪಿತ್ತವಿಕಾರ, ಅರಿಸಿನಕಾಮಾಲೆ ಇತ್ಯಾದಿ ರೋಗಗಳಲ್ಲೂ ಬಳಸುವುದುಂಟು. ಜ್ವರದ ಉರಿಯನ್ನು ಶಮನ ಮಾಡಲು ಇದರ ಎಲೆಯನ್ನು ಅರೆದು ಅಂಗೈ ಅಂಗಾಲುಗಳಿಗೆ ಹಚ್ಚುವರು. ಜಂತುಹುಳುಗಳ ನಿವಾರಣೆಯಲ್ಲೂ ಇದರ ಸೊಪ್ಪನ್ನು ಸೇವಿಸುವರು; ಬಾಯಿಮುಕ್ಕಳಿಸಿ ಸ್ವಚ್ಛಗೊಳಿಸಲೂ ಈ ಸೊಪ್ಪಿನ ರಸವನ್ನು ಬಳಸುವರು. ಇದರಲ್ಲಿ ಶೇ. 13.76 ರಷ್ಟು ಭಾಗ ನಿರವಯವ (ಇನಾರ್ಗ್ಯಾನಿಕ್) ಲವಣಗಳಿವೆ. (ಎನ್.ಆರ್.ಆರ್.)

**ಕಲ್ಲು ಹುಯ್ಯಿಸುವುದು :** ದೆವ್ವ ಬಿಡಿಸುವ ಹಲವು ವಿಧಾನಗಳಲ್ಲಿ ಒಂದು. ಈ ಕಲೆಯಲ್ಲಿ ನುರಿತ ವೈದ್ಯ ದೆವ್ವ ಬಿಡಿಸಲು ಮನೆಯಲ್ಲೇ ಮಂತ್ರ ತಂತ್ರಗಳಿಂದ ಪೂಜೆ ಸಲ್ಲಿಸಿ ಯಂತ್ರವನ್ನು ಅಥವಾ ಪಂಚಲೋಹದಿಂದ ಮಾಡಿದ ತೋಳ್‌ಬಳೆಯನ್ನು ಹಾಕುವುದು; ಮೆಣಸಿನಕಾಯಿ ಹೊಗೆ ಕೊಡುವುದು (ದೆವ್ವಕ್ಕೆ ಧೂಪ ತೋರಿಸಿದ ಹಾಗೆ ಎಂಬ ಗಾದೆಯೇ ಇದೆ; ಅಂದರೆ ಆಗ ಅದು ಸಿಕ್ಕಾಪಟ್ಟೆ ಕೆರಳುತ್ತದೆ. ಪಂಪ ಭಾರತದಲ್ಲಿ ಬಂದಿರುವ ಮರುಳ್ಗೆ ಧೂಪಮಂ ತೋರಿದ ಮಾಳ್ಕೆ – ಎಂಬುದೂ ಇಂಥ ಪ್ರಸಂಗದ ಅನುಭವದಿಂದಲೇ ಮಾಡಿದ ಗಾದೆ ಮಾತು ಎಂದು ತೋರುತ್ತದೆ); ಹುಣಿಸೆ ಬರಲಿನಿಂದ ಹೊಡೆಯುವುದು; ದೇವಸ್ಥಾನದಲ್ಲಿರುವ ಜಡೆಯಾಕಾರದ ಚಾವುಟಿಯಿಂದ ಹೊಡೆಸುವುದು – ಇತ್ಯಾದಿ ವಿಧಾನಗಳನ್ನು ಬಳಸುತ್ತಾನೆ. ಇದಾವುದಕ್ಕೂ ಜಗ್ಗದಿದ್ದರೆ ದೇವರ ಸಮ್ಮುಖದಲ್ಲಿ ಕಲ್ಲು ಹುಯ್ಯಿಸುವ ಕಟ್ಟಕಡೆಯ ವಿಧಾನಕ್ಕೆ ಕೈಹಾಕುತ್ತಾನೆ.

ಒಂದು ಮನುಷ್ಯಾಕೃತಿಯನ್ನು ಕಲ್ಲಿನ ಮೇಲೆ ಬಿಡಿಸಿ ಹಿಡಿದಿರುವ ದೆವ್ವದ ಹೆಸರಿನ ಮೊದಲನೆಯ ಅಕ್ಷರವನ್ನು ಶಿಲಾಕೃತಿಯ ಮೈಮೇಲೆ ಕೆತ್ತಿ ಮೇಲೆ ಹೆಂಡ, ತೋಕಳಿನೀರು (ಕೆರ ಹೊಲಿಯುವವನು ಚರ್ಮ ಅದ್ದುವ ನೀರು) ಇತ್ಯಾದಿಗಳನ್ನು ಹಾಕಿ, ಜೊತೆಗೆ ಬಾಯಲ್ಲಿರುವ ತಂಬುಲವನ್ನು ಅದರ ಮೇಲೆ ಉಗಿಯುತ್ತಾನೆ. ತನ್ಮೂಲಕ ದೆವ್ವವನ್ನು ಹೊಡೆದಟ್ಟುವ ಪ್ರಯತ್ನ ಮಾಡುತ್ತಾನೆ. ಆ ದೆವ್ವ ವ್ಯಕ್ತಿಯ ಮೇಲೆ ಮತ್ತೆ ಬರದ ಹಾಗೆ ಶಿಲಾಗತ ಮಾಡುವುದೇ ಕಲ್ಲು ಹುಯ್ಯಿಸುವುದರ ಉದ್ದೇಶ. ಕೆಲವು ಕಡೆ ಒಂದು ಸಣ್ಣ ಚಪ್ಪಡಿಗಲ್ಲಿನ ಮೇಲೆ ಆಕೃತಿಯನ್ನು ಹುಯ್ಯಿಸಿ ಅದನ್ನು ತಿರುಗಾಡುವ ಜಾಗದಲ್ಲಿ ಅಥವಾ ಎಲ್ಲರೂ ಉಗುಳುವ ಜಾಗದಲ್ಲಿ ಮಕಾಡೆ ಹಾಕುತ್ತಾರೆ. ಇನ್ನೂ ಕೆಲವು ಕಡೆ ಎಲ್ಲರೂ ಪ್ರತಿನಿತ್ಯ ಹತ್ತಿ ಇಳಿಯುವ ದೇವಸ್ಥಾನದ ಮೆಟ್ಟಿಲುಗಳ ಮೇಲೆ ಕಲ್ಲು ಹುಯ್ಯಿಸುವುದುಂಟು. ಇದರ ಉದ್ದೇಶ ಎಲ್ಲರ ಕಾಲ್‌ತುಳಿತಕ್ಕೆ ಸಿಕ್ಕಿ ಈ ಕಾಟ ಕೊಡುವ ದೆವ್ವ ನಾಶವಾಗಲಿ ಎಂಬುದೇ ಆಗಿದೆ.

ಸಂಬಂಧಪಟ್ಟ ಬಂಧುಬಳಗ ಸಮೇತ ದೆವ್ವ ಹಿಡಿದವರನ್ನು ತಮ್ಮ ಮನೆದೇವರ ಗುಡಿಯಲ್ಲಿಗೋ ಅಥವಾ ಮೊರೆಬಿದ್ದ ದೇವರ ಗುಡಿಯಲ್ಲಿಗೋ ಅಥವಾ ದೆವ್ವ ಬಿಡಿಸುವಲ್ಲಿ ಗಟ್ಟಿಗ ದೇವರೆಂದು ಪ್ರಖ್ಯಾತಗೊಂಡ ದೇವರಲ್ಲಿಗೋ ಅದು ಎಷ್ಟೇ ದೂರವಿರಲಿ ಗಾಡಿ ಕಟ್ಟಿಕೊಂಡು ಕರೆದೊಯ್ಯುತ್ತಾರೆ. ಜೊತೆಯಲ್ಲಿ ಒಬ್ಬ ವೈದ್ಯ ಅಥವಾ ದೇವರ ಪೂಜಾರಿ, ಕಲ್ಲುಕುಟಿಗ ಹಾಗೂ ಒಬ್ಬ ಹೊಲೆಯ ಇರುವುದುಂಟು. ವೈದ್ಯ ಅಥವಾ ಪೂಜಾರಿಯದು ಪೂಜೆಯ ವಿಧಿವಿಧಾನಗಳನ್ನು ನಿರ್ವಹಿಸುವ ಕೆಲಸ. ಕಲ್ಲುಕುಟಿಗನದು ಕಲ್ಲಿನ ಮೇಲೆ ಕೆತ್ತುವ ಕೆಲಸ. ಹೊಲೆಯನದು ಹೆಂಡ ತಂದು ಆ ಕಲ್ಲಿನ ಮೇಲೆ ಹಾಕುವ ಕೆಲಸ. ಉಳಿದವರು ಅಡಿಗೆಯ ಕೆಲಸದಲ್ಲಿ ನಿರತರಾಗುತ್ತಾರೆ.

ದೆವ್ವ ಹಿಡಿದವನ ಮೇಲೆ ನೂರೊಂದು ಮೊಗೆ ನೀರು ಹುಯ್ದು, ನೂರೊಂದು ಹೂವನ್ನು ಹಾಕಿ, ಗುಡಿಯ ಸುತ್ತ ನೂರೊಂದು ಪ್ರದಕ್ಷಿಣೆ ಹಾಕಿಸುತ್ತಾರೆ. ದೇವಸ್ಥಾನದ ಮೆಟ್ಟಿಲ ಮೇಲೆ ದೆವ್ವ ಹಿಡಿದವನನ್ನು ನಿಲ್ಲಿಸಿ, ಅವನ ನೆರಳಿನಲ್ಲಿ ನೆರಳು ಮೈಮೇಲಿರುವ ದೆವ್ವದ ಸಂಕೇತ, ಅದು ಶಿಲಾಗತವಾಗಲಿ ಎಂದಿರಬೇಕು ಕಲ್ಲುಕುಟಿಗನಿಂದ ಮನುಷ್ಯಾಕೃತಿಯ ಚಿತ್ರವನ್ನೂ ದೆವ್ವದ ಹೆಸರಿನ ಮೊದಲ ಅಕ್ಷರವನ್ನೂ ಕೆತ್ತಿಸುತ್ತಾರೆ. ವ್ಯಕ್ತಿಯ ಮೈಮೇಲೆ ಎಷ್ಟು ದೆವ್ವಗಳಿರುತ್ತವೋ ಅಷ್ಟೂ ಮನುಷ್ಯಾಕೃತಿಗಳ ಚಿತ್ರಗಳನ್ನೂ ಹೆಸರ ಮೊದಲ ಅಕ್ಷರಗಳನ್ನೂ ಕೆತ್ತಬೇಕಾಗುತ್ತದೆ. ಬಲಿಗೆ ಎರಡು ಕಾಲಿನ ಕೋಳಿ ಆಗುವುದಿಲ್ಲ. ನಾಲ್ಕು ಕಾಲಿನವಾದರೂ ಹೆಣ್ಣು ಕುರಿಯಾಗಲೀ, ಮೇಕೆಯಾಗಲೀ ಆಗುವುದಿಲ್ಲ. ಕುರಿಯಾದರೆ ಟಗರೇ ಬೇಕು. ಮೇಕೆಯಾದರೆ ಹೋತವೇ ಬೇಕು. ಎಲ್ಲ ಪೂಜೆಯ ವಿಧಿವಿಧಾನಗಳೂ ಮುಗಿದ ಮೇಲೆ ಪೂಜಾರಿ ದೆವ್ವವನ್ನು ಸಂಬೋಧಿಸಿ 'ಇನ್ನು ಬರ್ತಿಯಾ?' ಎಂದು ಕೇಳುತ್ತಾನೆ. ಅದು ಇಲ್ಲವೆಂದು ಹೇಳಿ, ಸಾಕ್ಷಿಗಾಗಿ ಹಿಡಿ ತಲೆಗೂದಲನ್ನು ಕಿತ್ತುಕೊಡುತ್ತದೆ. ಆ ಕೂದಲನ್ನು ದೇವರ ಪಾದದಲ್ಲಿ ಗಿಡಿಯುತ್ತಾರೆ. ಒಂದು ಪಕ್ಷ ಆ ವೇಳೆಯಲ್ಲಿ ಮೈಮೇಲೆ ದೆವ್ವ ಇಲ್ಲದಿದ್ದರೆ ಕಲ್ಲು ಹುಯ್ಯಿಸಲು ಮತ್ತೆ ಬರಬೇಕಾಗುತ್ತದೆ. ಕಲ್ಲು ಹುಯ್ಯಿಸಿದ ದಿವಸ ಮನೆಗೆ ಬರದೆ ಆ ರಾತ್ರಿ ಗುಡಿಯಲ್ಲೇ ತಂಗುತ್ತಾರೆ. ಅಂದು ಮನೆಯಲ್ಲಿ ಒಂದು ಅನ್ನದ ಅಗಳಾಗಲೀ ಒಂದು ನೀರಿನ ತೊಟ್ಟಾಗಲೀ ಇರದ ಹಾಗೆ, ಎಲ್ಲ ಪಾತ್ರೆ ಪಗಡೆಗಳನ್ನು ಖಾಲಿ ಮಾಡಿ ದಬ್ಬಾಕಿರುತ್ತಾರೆ. ಕಾರಣ, ಅನ್ನ ನೀರಿನ ಆಸೆಗಾಗಿ ದೆವ್ವ ಮತ್ತೆ ಮನೆಯಲ್ಲಿ ಉಳಿಯುತ್ತದೆ ಎಂದು.

ಒಮ್ಮೆ ಕಲ್ಲು ಹುಯ್ಸಿದ ಮೇಲೆ ದೆವ್ವ ಮತ್ತೆ ಹಿಡಿಯುವುದಿಲ್ಲ ಎಂದು ನಂಬಿಕೆ. ಆದರೆ ಕೆಲವು ಚಂಡಿಬಿದ್ದ ಮೊಂಡು ದೆವ್ವಗಳು ಮತ್ತೆ ಹಿಡಿಯುವುದುಂಟು. ಎರಡನೆಯ ಸಾರಿ ಕಲ್ಲು ಹುಯ್ಸಿದ ಮೇಲಂತೂ ಅವು ಮತ್ತೆ ಬರುವುದಿಲ್ಲವೆಂದೇ ಜನರ ದೃಢ ನಂಬಿಕೆ.

ದೆವ್ವವನ್ನು ಗಾಳಿ, ಶಂಕೆ, ಸೋಕು (ಸೋಂಕು) ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ದೆವ್ವದ ಅಸ್ತಿತ್ವದ ಬಗ್ಗೆ ನಂಬಿಕೆ ಇಲ್ಲದವರು ಇದನ್ನು ಅದುಮಿಟ್ಟ, ಅತೃಪ್ತ ಭಾವನೆಗಳಿಂದ ಮೂಡಿದ, ಮಾನಸಿಕ ವೈಪರೀತ್ಯ ಎಂದು ಹೇಳುವುದುಂಟು. ಆದರೆ ಎದೆ ಸೀಳಿದರೂ ಒಂದು ಉರ್ದು ಅಕ್ಷರ ಬರದ ವ್ಯಕ್ತಿ, ಸಾಬರ ದೆವ್ವ ಹಿಡಿದಾಗ ಸೊಗಸಾಗಿ ಉರ್ದುವನ್ನು ಹುರುಳಿಕಾಳು ಹುರಿದಂತೆ ಚಟಪಟ ಮಾತಾಡುವುದನ್ನು ಕಂಡಾಗ ಆ ಅಭೇದ್ಯ ರಹಸ್ಯಕ್ಕೆ ವೈಜ್ಞಾನಿಕ ಮತಿ ಅವಾಕ್ಕಾಗುತ್ತದೆ; ಇಂಥ ಸಾಂಪ್ರದಾಯಿಕ ಪದ್ಧತಿಗಳಿಗೆ ಮೂಕವಾಗಿ ಒಪ್ಪಿಗೆ ನೀಡುತ್ತದೆ. ಮಕ್ಕಳ ಹಟ ಬಿಡಿಸಲು ಪೊರಕೆ ಸುಟ್ಟು ದೃಷ್ಟಿ ತೆಗೆದ ಹಾಗೆ, ಕಾಯಿಲೆ ಉಪಶಮನಗೊಳಿಸಲು ದಾಟು ಹಾಕಿದ ಹಾಗೆ ದೆವ್ವ ಬಿಡಿಸಲು ಕಲ್ಲು ಹುಯ್ಯಿಸುವುದು ಪೀಡಿತನಿಗೊಂದು ಮಾನಸಿಕ ನೆಮ್ಮದಿಯನ್ನು ಕೊಡಬಲ್ಲಂಥ ಒಂದು ಜಾನಪದ ಚಿಕಿತ್ಸೆಯೆಂದು ತೋರುತ್ತದೆ. (ಎಸ್.ಯು.)

**ಕಲ್ಲು ಹೂ :** ಆಲ್ಗೆ (ಪಾಚಿ) ಮತ್ತು ಶಿಲೀಂಧ್ರ (ಫಂಗಸ್) ಎಂಬ ಎರಡು ವಿಭಿನ್ನ ವರ್ಗಗಳಿಗೆ ಸೇರಿದ ಸಸ್ಯಗಳು ಒಂದುಗೂಡಿ ಒಂದು ಪ್ರತ್ಯೇಕ ಪ್ರಭೇದದಂತೆ ತೋರುವ ಒಂದು ಮಿಶ್ರಸಸ್ಯ (ಲೈಕನ್ಸ್). ಇವಕ್ಕೆ ಶಿಲಾವಲ್ಕಗಳೆಂಬ ಹೆಸರೂ ಉಂಟು. ಈ ಎರಡು ಭಿನ್ನವರ್ಗದ ಸಸ್ಯಗಳು ನಡೆಸುವ ಸಹಜೀವನವನ್ನು ಸಿಂಬಿಯೋಸಿಸ್ ಅಥವಾ ಕೂಡುಜೀವನ ಎಂದು ಕರೆಯುವರು. ಈ ಮಿಶ್ರಸಸ್ಯವನ್ನು ಸಾಮಾನ್ಯವಾಗಿ ಪಾಚಿ ಅಥವಾ ಹಾವಸೆ (ಮಾಸೆಸ್) ಸಸ್ಯವರ್ಗದೊಳಗೆ ಪರಿಗಣಿಸುವುದಾದರೂ ಇವೆರಡಕ್ಕೂ ಯಾವ ಸಂಬಂಧವೂ ಇಲ್ಲ. ಕಲ್ಲು ಹೂಗಳು ಸರ್ವೇಸಾಮಾನ್ಯವಾಗಿ ಪ್ರಪಂಚದ ಎಲ್ಲ ಕಡೆಯೂ ಬೆಳೆಯುವುವಾದರೂ ಆಲ್ಪೈನ್ ಮತ್ತು ತಂಡ ಪ್ರದೇಶದಲ್ಲಿ ಇವು ಪ್ರಧಾನ ಸಸ್ಯವರ್ಗವೆನಿಸಿವೆ. ಅತಿ ಎತ್ತರದ ಮತ್ತು ಮೇರು ಪ್ರದೇಶಗಳ ಶೈತ್ಯದ ವೈಪರೀತ್ಯವನ್ನು ಇವು ತಡೆಯಬಲ್ಲುವು. ಈ ಸಸ್ಯಗಳಲ್ಲಿ ಸುಮಾರು (400) ಜಾತಿಗಳೂ (15,000) ಪ್ರಭೇದಗಳೂ ಇವೆ. ಇವುಗಳಲ್ಲಿ ಶಿಲೀಂಧ್ರ ಭಾಗವೇ ಹೆಚ್ಚಾಗಿದ್ದು ಪಾಚಿಯ ಭಾಗ ಅತ್ಯಲ್ಪವೆಂದೇ ಹೇಳಬಹುದು. ಹೀಗೆ ಎರಡು ಭಿನ್ನ ಬಗೆಯ ಸಸ್ಯಗಳ ಮಿಶ್ರಣ ಅಥವಾ ಸಂಯುಕ್ತ ಸಸ್ಯಗಳನ್ನೊಳಗೊಂಡ ಒಂದು ವಿಶಿಷ್ಟ ಗುಂಪಿಗೆ ಮೈಕೊಫೈಕೊಪ್ಹೈಟ ಎಂಬ ಹೆಸರು ಕೊಡಲಾಗಿದೆ. ಇವು ಬಹು ವ್ಯಾಪಕವಾಗಿ ಸರ್ವತ್ರ ಹರಡಿರುವುದಕ್ಕೆ ಇವುಗಳಲ್ಲಿರುವ ಯಶಸ್ವೀ ಪ್ರಸಾರ ಸಾಧನ ಮುಖ್ಯ ಕಾರಣವೆನಿಸಿದೆ. ಇವು ಅತಿ ಭಿನ್ನ ಸನ್ನಿವೇಶಗಳಲ್ಲಿಯೂ ಊರ್ಜಿತವಾಗಬಲ್ಲವು. ಇವು ಸಾಕಷ್ಟು ತಂಪು ಮತ್ತು ನೆರಳು ಇರುವ ಜಾಗಗಳಲ್ಲಿ ಅಂದರೆ–ಮರದ ಕಾಂಡ, ಶಾಖೆ, ತೊಗಟೆ, ಕಂಬ, ದಿಮ್ಮಿ, ಇತ್ಯಾದಿಗಳ ಮೇಲೂ ಕಲ್ಲುಬಂಡೆಗಳ ಮೇಲೂ ಬೆಳೆಯುತ್ತವೆ. ದಟ್ಟ ಅರಣ್ಯಗಳಲ್ಲಿ ಮರದಿಂದ ಮರಕ್ಕೆ ಶಾಖೆಯಿಂದ ಶಾಖೆಗೆ, ತೋರಣದಂತೆ ಹರಡಿಕೊಳ್ಳುವುದೂ ಉಂಟು. ಆದರೆ ಸಮುದ್ರದಲ್ಲಿ ಇಲ್ಲವೆ ಸಿಹಿನೀರಿನಲ್ಲಿ ವಾಸಿಸುವುದು ವಿರಳ.

ಇವನ್ನು ಮೊಟ್ಟಮೊದಲಿಗೆ ತಲ್ಸೇನ್ ಎಂಬುವನು ಶೋಧಿಸಿದನು. ಕೆಲವು ವರ್ಷಗಳ ಅನಂತರ ಅವುಗಳಲ್ಲಿರುವ ಎರಡು ಬಗೆಯ ಸಸ್ಯಗಳ ವಿವರಗಳನ್ನು ಡಿ ಬಾರಿ ಎಂಬಾತ ಗುರುತಿಸಿದ. ವಿವಿಧ ಬಗೆಯ ಪಾಚಿ ಮತ್ತು ಶಿಲೀಂಧ್ರಗಳ ಸಂಯುಕ್ತದಿಂದ ಒಂದೊಂದು ನಿರ್ದಿಷ್ಟ ಜಾತಿ ಅಥವಾ ಪ್ರಭೇದದ ಶಿಲಾವಲ್ಕ ರೂಪುಗೊಳ್ಳುತ್ತದೆ. ಇವು ಸಾಮಾನ್ಯವಾಗಿ ಬೂದು, ಹಸಿರು ಅಥವಾ ಇತರ ಬಣ್ಣಗಳ ಬಿಲ್ಲೆ ಅಥವಾ ಪಟ್ಟಿಯಂಥ ಸಸ್ಯಗಳಾಗಿರುತ್ತವೆ. ಒಂದರಿಂದ ಹಲವಾರು ಸೆಂಮೀ.ಗಳವರೆಗೆ ಹರಡಿಕೊಂಡಿರುತ್ತವೆ. ಕೆಲವು ಕಲ್ಲುಹೂಗಳು ಬಿಳಿ, ಹಳದಿ, ಕೆಂಪು, ಕಿತ್ತಳೆ ಅಥವಾ ಕಪ್ಪು ಬಣ್ಣವುಳ್ಳದ್ದಾಗಿ ಇರುವುದುಂಟು. ಅನೇಕ ಕಲ್ಲುಹೂಗಳು ಅತ್ಯಂತ ವೈಪರೀತ್ಯದ ಉಷ್ಣತೆ ಮತ್ತು ಶೈತ್ಯ, ಇಲ್ಲವೆ ಶುಷ್ಕ ಮತ್ತು

ಆರ್ದ್ರ ಹವೆ ಇರುವ ಸನ್ನಿವೇಶಗಳಲ್ಲಿಯೂ ಬೆಳೆಯಬಲ್ಲುವು. ಮೇಲಾಗಿ ಅತಿ ದೀರ್ಘಕಾಲದ ಶುಷ್ಕ ಪರಿಸ್ಥಿತಿಯನ್ನೂ ತಾಳಿಕೊಳ್ಳಬಲ್ಲುವು. ಪರಿಸರದಿಂದ ನೀರು ಮತ್ತು ಖನಿಜಾಂಶಗಳನ್ನು ಶಿಲೀಂಧ್ರ ಹೀರಿಕೊಂಡು ಪಾಚಿಗಳಿಗೆ ಒದಗಿಸುತ್ತದೆ. ಪಾಚಿಗಳಾದರೋ ತಮ್ಮ ಸರದಿಯಲ್ಲಿ ತಮ್ಮ ಹಸಿರು ವರ್ಣದ್ರವ್ಯದಿಂದ (ಕ್ಲೋರೋಫಿಲ್) ಆಹಾರತಯಾರಿಸಿ ಶಿಲೀಂಧ್ರಗಳಿಗೆ ಒದಗಿಸುತ್ತವೆ. ಈ ಮೂಲಕ ಶಿಲಾವಲ್ಕಗಳಲ್ಲಿ ಕೂಡುಜೀವನದ ಒಂದು ಆದರ್ಶ ನಿದರ್ಶನವನ್ನು ನಾವು ಕಾಣಬಹುದು. ಅದರಲ್ಲಿರುವ ಪಾಚಿ ಮತ್ತು ಶಿಲೀಂಧ್ರಗಳನ್ನು ಬೇರ್ಪಡಿಸಿದ್ದಾದರೆ ಅವು ಅನಿಶ್ಚಿತ ಅಥವಾ ಅತ್ಯಂತ ಕಷ್ಟದಿಂದ ಜೀವನ ನಿರ್ವಹಿಸಬೇಕಾಗುತ್ತದೆ. ಅದರಲ್ಲಿಯೂ ಈ ಮಾತು ಶಿಲೀಂಧ್ರಕ್ಕೆ ಹೆಚ್ಚು ಅನ್ವಯಿಸುತ್ತದೆ.

ಭಾರತದಲ್ಲಿ ಕಲ್ಲುಹೂಗಳು ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಅದರಲ್ಲೂ ಪೂರ್ವಭಾಗಗಳಲ್ಲಿ ಹೆಚ್ಚಾಗಿ ಬೆಳೆಯುವುದು ಕಂಡುಬರುತ್ತದೆ.

**ವರ್ಗೀಕರಣ:** ಕಲ್ಲು ಹೂಗಳನ್ನು, ಅವು ಬೆಳೆಯುವ ಪರಿಸರಗಳಿಗೆ ಅನುಗುಣವಾಗಿ, ಹೀಗೆ ವರ್ಗೀಕರಿಸಲಾಗುತ್ತದೆ. 1 ಸ್ಯಾಕ್ಸಿಕೋಲ್ಸ್: ಇವು ಕಲ್ಲುಬಂಡೆಗಳ ಮೇಲೆಯೇ ಹೆಚ್ಚಾಗಿ ಬೆಳೆಯುವ ಕಲ್ಲುಹೂಗಳು. ಅವುಗಳಿಗೆ, ಲಿಥೊಫೈಟ್ಸ್ ಎಂದೂ ಹೇಳುವುದುಂಟು. ಅವು ಭೂಸವಕಳಿಗೂ (ಸಾಯ್ಲ್ ಎರೋಷನ್) ಕಾರಣವಾಗುವುದುಂಟು. 2 ಕಾರ್ಟಿಕೋಲ್ಸ್: ಇವು ಅಪ್ಪು ಗಿಡಗಳಾಗಿ (ಎಪಿಫೈಟ್ಸ್) ವಿಶೇಷವಾಗಿ ಮರದ ಕಾಂಡ, ಶಾಖೆ ಮತ್ತು ತೊಗಟೆಯ ಮೇಲೆ ಬೆಳೆಯುವ ಕಲ್ಲು ಹೂಗಳು. ಶಿಲಾವಲ್ಕಗಳ ಆಕಾರ, ರಚನೆಗಳಿಗೆ ಅನುಗುಣವಾಗಿಯೂ ಅವನ್ನು ಮೂರು ಪ್ರಮುಖ ಗುಂಪುಗಳಾಗಿ ಇನ್ನೊಂದು ರೀತಿ ವರ್ಗೀಕರಿಸುವುದುಂಟು. 1 ಬಿಲ್ಲೆಯಾಕಾರದ ಕಲ್ಲು ಹೂಗಳು (ಕ್ರಸ್ಟೋಸ್ ಲೈಕೆನ್ಸ್): ಇವು ಬಿರುಸು ಕಣಗಳಿಂದಾಗ ಬಿಲ್ಲೆಗಳಂತಿದ್ದು, ಕಲ್ಲುಬಂಡೆಗಳು, ಮರದ ಕಾಂಡ ಮತ್ತು ಶಾಖೆಗಳು, ಕೆಲವು ವಿಶಿಷ್ಟ ಬಗೆಯ ಭೂಸನ್ನಿವೇಶಗಳು ಇತ್ಯಾದಿಗಳಿಗೆ ಅತ್ಯಂತ ನಿಕಟವಾಗಿಯೂ ಸುಲಭವಾಗಿ ಬೇರ್ಪಡಿಸಲಾಗದಂತೆಯೂ ಅಂಟಿಕೊಂಡಿರುತ್ತವೆ. ಅವುಗಳಲ್ಲಿ ಮೇಲ್ಭಾಗ ಮತ್ತು ಕೆಳಭಾಗವೆಂಬ ವ್ಯತ್ಯಾಸ ಅಷ್ಟಾಗಿ ಇರುವುದಿಲ್ಲ. ಉದಾ: ಗ್ರಾಫಿಸ್, ಲಿಕಾನೋರ ಇತ್ಯಾದಿ. 2 ಎಲೆಯಾಕಾರದ ಕಲ್ಲುಹೂಗಳು (ಫೋಲಿಯೋಸ್ ಲೈಕೆನ್ಸ್): ಇವು ನಿರ್ದಿಷ್ಟ ಆಕಾರ, ಹಾಗೂ ಚಪ್ಪಟೆಯಾದ ಎಲೆಗಳಂತಿರುವ ಸಸ್ಯಗಳಾಗಿದ್ದು, ಅಂಚು ಸ್ವಲ್ಪ ಮೇಲ್ಮುಖವಾಗಿಯೂ ವಕ್ರವಕ್ರವಾಗಿಯೂ ಇರುವುದುಂಟು. ಅವು ಗೋಡೆ, ಮರದ ತೊಗಟೆ ಮತ್ತು ವಿಶಿಷ್ಟ ಭೂಸನ್ನಿವೇಶಗಳಿಗೆ ಅಂಟಿಕೊಂಡು ಬೆಳೆಯುತ್ತವೆ. ಅವುಗಳ ಕೆಳಭಾಗದಲ್ಲಿ ರೈಸಿನ್ಸ್ ಎಂದು ಕರೆಯುವ ಅತ್ಯಂತ ಸೂಕ್ಷ್ಮವಾದ ಮತ್ತು ಕೆಳಭಾಗಗಳು ನಿರ್ದಿಷ್ಟವಾಗಿರುವುದು ಕಂಡುಬರುತ್ತದೆ. ಉದಾ: ಪಾರ್ಮೀಲಿಯ, ಫಿಸ್ಸಿಯ, ಗೈರೊಫೊರ, ಪೆಲ್ಟಿಜೆರ ಇತ್ಯಾದಿ. 3 ಫಲಭರಿತ ಕಲ್ಲುಹೂಗಳು (ಫ್ರೂಟಿಕೋಸ್ ಲೈಕೆನ್ಸ್): ಇವು ಕಂಟಿ ಅಥವಾ ಪೊದರಿನಂತೆ ಅನೇಕ ಶಾಖೋಪಶಾಖೆಗಳಾಗಿ ಕವಲೊಡೆದು ಬೆಳೆಯುವ ಕಲ್ಲುಹೂಗಳು. ಇವು ಯಾವುದಾದರೂ ಒಂದು ವಸ್ತುವಿಗೆ–ಮರದ ಶಾಖೆ, ತೊಗಟೆ ಇತ್ಯಾದಿ–ನೀಳ ಹಾಗೂ ತೆಳುವಾದ ಕಿರುಶಾಖೆಯೊಂದರ ಸಹಾಯದಿಂದ ಅಂಟಿಕೊಂಡಿರುತ್ತವೆ. ತುದಿಯ ಶಾಖೆಗಳು ಚಪ್ಪಟೆಯಾದ ಉದ್ದನೆಯ ಪಟ್ಟಿಯಂತಿರಬಹುದು. ಇಲ್ಲವೆ ದುಂಡಾದ ಸೂಕ್ಷ್ಮ ಎಳೆಯಬಹುದು. ಈ ಬಗೆಯ ಕಲ್ಲುಹೂಗಳು ನೇರ ಹಾಗೂ ಎತ್ತರವಾಗಿ ಬೆಳೆಯಬಹುದು. ಉದಾ: ಕ್ಲಾಡೊನಿಯ. ಕೆಲವು ಕಲ್ಲುಹೂಗಳು ಮರದ ಶಾಖೆಗಳಿಂದ ಕೆಳಮುಖವಾಗಿ ಜೋತುಬೀಳಬಹುದು. ಅಂಥವು ನೀಳವಾದ ಗಡ್ಡದಂತೆ ಕಾಣಬಹುದು. ಉದಾ: ಉಸ್ನಿಯ, ರಮಾಲಿನ, ಇತ್ಯಾದಿ. ಕಲ್ಲುಹೂಗಳಲ್ಲಿರುವ ಶಿಲೀಂಧ್ರ ಸೇರಿರುವ ಗುಂಪುಗಳಿಗೆ ಅನುಗುಣವಾಗಿ ಇವನ್ನು ಇನ್ನೊಂದು ರೀತಿಯಲ್ಲಿಯೂ ವರ್ಗೀಕರಿಸುವುದುಂಟು.

1 **ಆಸ್ಕೊಲೈಕೆನ್ಸ್ :** ಇಲ್ಲಿ ಶಿಲೀಂಧ್ರ ಆಸ್ಕೊಮೈಸಿಟ್ ಎಂಬ ಗುಂಪಿಗೆ ಸೇರಿದುದಾಗಿರುತ್ತದೆ. ಉದಾ: ಪಾರ್ಮೀಲಿಯ, ಫಿಸ್ಸಿಯ, ಉಸ್ನಿಯ, ಕ್ಲಾಡೋನಿಯ, ಗ್ರಾಫಿಸ್, ವೆರುಕೇರಿಯ, ಇತ್ಯಾದಿ. 2 ಬೆಸಿಡಿಯೊಲೈಕೆನ್ಸ್: ಇಲ್ಲಿ ಶಿಲೀಂಧ್ರ ಬೆಸಿಡಿಯೊಮೈಸೀಟ್ ಎಂಬ ಗುಂಪಿಗೆ ಸೇರಿದುದಾಗಿರುತ್ತದೆ. ಉದಾ: ಕೋರ, ರೈಫಿಡೋನಿಮ ಇತ್ಯಾದಿ. ಈ ಆಸ್ಕೊಲೈಕೆನ್ಸ್ ಎಂಬ ಕಲ್ಲುಹೂಗಳನ್ನು ಅವು ಭರಿಸುವ ಪ್ರತ್ಯುತ್ಪತ್ತಿ ಕೋಶ ಅಥವಾ ಫಲೋತ್ಪಾದನೆಗೆ ಅನುಗುಣವಾಗಿ ಮತ್ತೆ ವಿಭಾಗಿಸಲಾಗುತ್ತದೆ. ಆ ಉಪವಿಭಾಗಗಳು–(1) ಪೈರಿನೊಕಾರ್ಪಿ (ಪೆರಿತೀಸಿಯಗಳನ್ನು ಒಳಗೊಂಡಂಥವು); (2) ಜಿಮ್ನೊಕಾರ್ಪಿ (ಅಪೊತೀಸಿಯಗಳನ್ನು ಒಳಗೊಂಡಂಥವು).

**ಪೋಷಣೆ (ನ್ಯೂಟ್ರಿಷನ್) :** ಕಲ್ಲುಹೂಗಳ ಬೆಳೆವಣಿಗೆ ಬಲುನಿಧಾನ. ಅದರಿಂದ ಇವುಗಳ ಆವಶ್ಯಕತೆಗಳೂ ಅತ್ಯಲ್ಪ. ಸಾಮಾನ್ಯವಾಗಿ ಇವು ಸುತ್ತಲಿನ ನೀರು ಮತ್ತು ಖನಿಜಾಂಶಗಳನ್ನು ಬೇರಿನಂತಿರುವ ರೈಸಿನ್ಸ್ ಎಂಬ ಅತ್ಯಂತ ಸೂಕ್ಷ್ಮ ಎಳೆಗಳ ಮೂಲಕ ಹೀರಿಕೊಳ್ಳುತ್ತವೆ. ಕೊಳೆತಿನಿ ಅಥವಾ ಮೃತೋಪಜೀವಿಗಳಾದ ಶಿಲೀಂಧ್ರಗಳು ಸಾವಯವ ರೂಪದ ಆಹಾರವನ್ನು ಹೀರಿಕೊಳ್ಳುತ್ತವೆ. ಜೊತೆಗೆ ಸ್ವತಂತ್ರವಾಗಿ ಆಹಾರ ತಯಾರಿಸಿಕೊಳ್ಳಬಲ್ಲ ಪಾಚಿಗಳು ಕೆಲಮಟ್ಟಿಗೆ ಶಿಲೀಂಧ್ರಗಳಿಗೆ ಸಿದ್ಧ ಆಹಾರವನ್ನು ಒದಗಿಸುತ್ತವೆ. ಕಲ್ಲುಹೂಗಳಲ್ಲಿರುವ ಶಿಲೀಂಧ್ರ ಕೆಲವು ಬಗೆಯ ಕಿಣ್ವಗಳನ್ನು ಉತ್ಪಾದಿಸುತ್ತದೆ. ಇದರಿಂದ ಪಾಚಿ ತನ್ನ ಆಹಾರವನ್ನು ಸುಲಭವಾಗಿ ಶಿಲೀಂಧ್ರದ ಕಡೆಗೆ ಹರಿಯಿಸಲು (ಸಾಗಿಹಾಕಲು) ಅನುಕೂಲವಾಗುತ್ತದೆ. ಪ್ರಮುಖ ಪ್ರತ್ಯುತ್ಪತ್ತಿಕಾರಕಗಳೆನಿಸಿದ ಅಪೋತೀಸಿಯ ಇಲ್ಲವೆ ಪೆರಿತೀಸಿಯ ಎಂಬುವನ್ನು ಶಿಲೀಂಧ್ರವೇ ಉತ್ಪಾದಿಸುತ್ತದೆ. ಇದರಿಂದ ಪಾಚಿ ಮತ್ತು ಶಿಲೀಂಧ್ರಗಳ ನಡುವೆ ಪರಸ್ಪರಾವಲಂಬನಕ್ಕಿಂತ ಶಿಲೀಂಧ್ರವೇ ಪಾಚಿಯ ಮೇಲೆ ಕೆಲಮಟ್ಟಿಗೆ ಜೀವಿಯಾಗಿ ಬಾಳುವುದೆಂದು ಕೆಲವರು ಭಾವಿಸುವುದುಂಟು.

ವಂಶಾಭಿವೃದ್ಧಿ ಕ್ರಮ: ಶಿಲಾವಲ್ಕಗಳಲ್ಲಿ ವಂಶಾಭಿವೃದ್ಧಿ ಅಲಿಂಗರೀತಿಯಲ್ಲೂ (ವೆಜಿಟೇಟಿವ್ ಪ್ರೊಪೊಗೇಷನ್) ನಿರ್ಲಿಂಗ ರೀತಿಯಲ್ಲೂ (ಏಸೆಕ್ಷುಯಲ್) ಲಿಂಗರೀತಿಯಲ್ಲೂ (ಸೆಕ್ಷುಯಲ್) ನಡೆಯುತ್ತದೆ.

**1 ಅಲಿಂಗ ರೀತಿಯ ವಂಶಾಭಿವೃದ್ಧಿ:** (ಎ) ಸೋರೀಡಿಯ : ಇವು ಅತ್ಯಂತ ಸೂಕ್ಷ್ಮ ಗಾತ್ರದ ಹಾಗೂ ಗೋಳಾಕಾರದ, ಬೂದು ಬಣ್ಣದ ದೂಳಿನ ಕಣಗಳಂತೆ ಇರುತ್ತವೆ. ಆ ಕಣಗಳ ಪಾಚಿ ಮತ್ತು ಶಿಲೀಂಧ್ರಗಳ ತುಣುಕುಗಳು ಇರುತ್ತವೆ. ಅವು ಸಸ್ಯದ ಮೇಲಿಂದ ಹುಡಿಹುಡಿಯಾಗಿ ಎದ್ದು, ಗಾಳಿಯಲ್ಲಿ ತೂರಿ, ಪ್ರಸಾರವಾಗಿ ಮುಂದೆ ಹೊಸ ಸಸ್ಯಗಳಾಗಿ ರೂಪುಗೊಳ್ಳುತ್ತವೆ. (ಬಿ) ಇಸಿಡಿಯ : ಇವು ಸಸ್ಯದ ಮೇಲೆ ಅತಿ ಸೂಕ್ಷ್ಮ ಗಾತ್ರದ ಉಬ್ಬುಗಳಂತೆ ಬೆಳೆದು, ಕ್ರಮೇಣ ಬೇರ್ಪಟ್ಟು, ಹೊಸ ಸಸ್ಯಗಳಾಗಿ ಬೆಳೆಯಬಲ್ಲವು. (ಸಿ) ಸಿಫೆಲೋಡಿಯ : ಇವು ಸಸ್ಯದ ಮೇಲ್ಭಾಗದಲ್ಲಿ ಅಲ್ಲಲ್ಲೇ ಕಪ್ಪು ಬಣ್ಣದ ಹಾಗೂ ದೊಡ್ಡ ಗಾತ್ರದ ಉಬ್ಬುಗಳಂತೆ ಬೆಳೆದು ಕ್ರಮೇಣ ಬೇರ್ಪಟ್ಟು ಹೊಸ ಸಸ್ಯಗಳಾಗುತ್ತವೆ. (ಡಿ) ಸೈಫೆಲ್ಲೇ: ಇವು ಸಸ್ಯದ ಕೆಳಭಾಗದಲ್ಲಿ ಗೋಳಾಕಾರದ ತಗ್ಗುಗಳಂತಿರುತ್ತವೆ. ಪ್ರಾಯಶಃ ಇವು ಅನಿಲ ವಿನಿಮಯ ಕ್ರಿಯೆಗೆ ಪೋಷಕವಾಗುವುವು.

**2. ನಿರ್ಲಿಂಗರೀತಿ ವಂಶಾಭಿವೃದ್ಧಿ:** ಇಲ್ಲಿ ಅಸಂಖ್ಯ ಕಪ್ಪು ಬಣ್ಣದ ಸೂಕ್ಷ್ಮ ಬೀಜಕಣಗಳು (ಸ್ಪೋರುಗಳು) ಫ್ಲಾಸ್ಕಿನ ಆಕಾರದ ಪಿಕ್ನಿಡಿಯ ಎಂಬ ಕೋಶಗಳಲ್ಲಿ ಉತ್ಪಾದನೆಗೊಳ್ಳುತ್ತದೆ. ಈ ಕಣಗಳು ಶಿಲೀಂಧ್ರಗಳ ಪ್ರತಿನಿಧಿರೂಪಗಳೇ ಆಗಿದ್ದು, ಮುಂದೆ ಹೊರ ಬಿದ್ದಾಗ ಉದ್ದುದ್ದನೆಯ ಕವಲೊಡೆದ ಎಳೆಗಳಂತೆ ಬೆಳೆಯಲಾರಂಭಿಸುತ್ತವೆ. ಈ ಎಳೆಗಳು ಪಾಚಿಗಳ ಸಂಪರ್ಕ ಹೊಂದಿದಾಗಲೇ ಅವೆರಡೂ ಕೂಡಿಕೊಂಡು ಶಿಲಾವಲ್ಕವಾಗಿ ರೂಪುಗೊಳ್ಳುವುದು.

**3. ಲೈಂಗಿಕ ರೀತಿ:** ಇವನ್ನು ಆಸ್ಕೊಲೈಕೆನ್ಸ್ ಎಂಬುದರಲ್ಲಿ ವಿಶೇಷವಾಗಿ ನೋಡಬಹುದು. ಇಲ್ಲಿ ಶಿಲೀಂಧ್ರವೊಂದೇ ಲೈಂಗಿಕ ಪುನರುತ್ಪತ್ತಿಯಲ್ಲಿ ಭಾಗವಹಿಸುವುದು. ಕಡೆಗೆ ಪ್ರತ್ಯುತ್ಪತ್ತಿಕಾರಕಗಳು ಅಪೊತೀಸಿಯ ಇಲ್ಲವೆ ಪೆರಿತೀಸಿಯಗಳಾಗಿ ರೂಪಗೊಳ್ಳುತ್ತವೆ.

**ಕಲ್ಲು ಹೂಗಳ ಉಪಯುಕ್ತತೆ:** ಆರ್ಥಿಕ ದೃಷ್ಟಿಯಿಂದ ಕಲ್ಲು ಹೂಗಳಿಗೆ ವಿವಿಧ ರೀತಿಯಲ್ಲಿ ಪ್ರಾಮುಖ್ಯವಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಿದೆ.

**1. ಮಣ್ಣಿನ ಕಣಗಳ ನಿರ್ಮಾಣ (ಸಾಯ್ಲ್ ಬಿಲ್ಡರ್):** ಕಲ್ಲುಹೂಗಳು ಕಲ್ಲುಬಂಡೆಗಳ ಮೇಲೆ ಬೆಳೆಯಲಾರಂಭಿಸಿದ ಪ್ರಪ್ರಥಮ ಸಸ್ಯಗಳು. ಇವು ಕ್ರಮೇಣ ಕಲ್ಲುಬಂಡೆಗಳನ್ನು ಛಿದ್ರಗೊಳಿಸಿ, ಕಾಲಕ್ರಮದಲ್ಲಿ ಅಲ್ಲಿ ಇತರ ಸೂಕ್ಷ್ಮ ಸಸ್ಯಗಳು ಬೆಳೆಯಲು ಅನುಕೂಲವಾಗುವಂಥ ಮಣ್ಣಿನ ಕಣಗಳನ್ನು ರೂಪಿಸುತ್ತವೆ. ಅದರಿಂದ ಕಲ್ಲುಹೂಗಳನ್ನು ಮಣ್ಣಿನ ನಿರ್ಮಾಪಕರೆಂತಲೂ ಕರೆಯುವುದುಂಟು. ಮುಂದೆ ಕಲ್ಲುಹೂಗಳು ನಶಿಸಿ ಕೊಳೆತ ಮೇಲೆ, ಅಲ್ಲಿ ಸ್ವಲ್ಪ ಮಣ್ಣು ಮತ್ತು ಗೊಬ್ಬರ ಸೇರಿ ಆ ಜಾಗವನ್ನು ಹದಗೊಳಿಸಿದಂತಾಗುತ್ತದೆ. ಅನಂತರ ಅಲ್ಲಿ ಶೈವಲಗಳು, ಜರೀಗಿಡಗಳು (ಫರ್ನ್ಸ್) ಇತ್ಯಾದಿ ಸಸ್ಯಗಳು ಹಂತಹಂತವಾಗಿ ಬೆಳೆಯಲು ಅನುಕೂಲವಾಗುತ್ತದೆ.

**2. ಆಹಾರರೂಪದ ಮಹತ್ತ್ವ:** ಕಲ್ಲು ಹೂವಿನಲ್ಲಿರುವ ಲೈಕೆನಿನ್ ಎಂಬ ಘಟಕ ಪಿಷ್ಟರೂಪದ ಸ್ಟಾರ್ಚ್‌ನಂತೆಯೇ ಇರುತ್ತದೆ. ಆದರೆ ಕಲ್ಲು ಹೂವಿನಲ್ಲಿ ನಿಜವಾದ ಅಥವಾ ಗಣನೀಯವಾದ ಸ್ಟಾರ್ಚ್ ಅಥವಾ ಸೆಲ್ಯುಲೋಸ್ ಇರುವುದಿಲ್ಲ. ಹಲವಾರು ಬಗೆಯ ಕಲ್ಲು ಹೂಗಳು ಕೆಲವು ಬಗೆಯ ಕೀಟ ಮತ್ತು ಅವುಗಳ ಮರಿಗಳಿಗೆ ಉತ್ತಮ ಆಹಾರ. ಧ್ರುವ ಪ್ರದೇಶಗಳಲ್ಲಿ ಬೆಳೆಯುವ ಕ್ಲಾಡೋನಿಯ ರಾಂಜಿಫೆರದಂಥ ಕೆಲವು ಕಲ್ಲುಹೂಗಳನ್ನು ಅಲ್ಲಿ ವಾಸಿಸುವ ಹಿಮಸಾರಂಗಗಳು ಮುಖ್ಯ ಆಹಾರವಾಗಿ ಬಳಸಿಕೊಳ್ಳುತ್ತವೆ. ಅದರಿಂದ ಇಂಥ ಕಲ್ಲುಹೂಗಳಿಗೆ ಹಿಮಸಾರಂಗದ ಹುಲ್ಲು ಎಂದು ಹೇಳುವುದುಂಟು. ಐಸ್‌ಲೆಂಡ್ ಪ್ರದೇಶದಲ್ಲಿ ವಾಸಿಸುವ ಜನರು ಸಿಟ್ರೇರಿಯ ಐಸ್ಲಾಂಡಿಕ ಎಂಬ ಕಲ್ಲುಹೂವನ್ನು ಆಹಾರವಾಗಿ ಬಳಸುತ್ತಾರೆ. ಅದೇ ರೀತಿ ಅಂಬಿಲಿಕೇರಿಯ, ಲೆಕಾನೋರ ಇತ್ಯಾದಿಗಳು ಆಹಾರ ರೂಪದಲ್ಲಿ ಬಳಸಲ್ಪಡುತ್ತವೆ. ಜಪಾನಿನಲ್ಲಿ ಎಂಡೊಕಾರ್ಪಾನ್ ಎಂಬ ಕಲ್ಲು ಹೂವನ್ನು ತರಕಾರಿಗಳಂತೆಯೇ ಸೇವಿಸುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಪಾರ್ಮೀಲಿಯ ಎಂಬ ಕಲ್ಲು ಹೂವನ್ನು ಮಸಾಲೆ ವಸ್ತುಗಳ ರೂಪದಲ್ಲಿ ವಿಶೇಷವಾಗಿ ಬಳಸುವರು.

**3 ವೈದ್ಯಕೀಯ ಮಹತ್ತ್ವ:** ಹಲವಾರು ಬಗೆಯ ಕಲ್ಲು ಹೂಗಳನ್ನು ಕೆಲವು ಶಿಷ್ಟ ರೋಗಗಳಿಗೆ ಪ್ರಾಚೀನ ಕಾಲದಿಂದಲೂ ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ. ಇವುಗಳಲ್ಲಿ ಮುಖ್ಯವಾಗಿ ಲೈಕೆಸಿನ್ ಎಂಬ ರಾಸಾಯನಿಕ ಘಟಕಗಳಿರುತ್ತದೆ. ಜೊತೆಗೆ ಕೆಲವು ಕಹಿ

ವಸ್ತುಗಳ ಘಟಕಗಳೂ ಇರುತ್ತವೆ. ಪೆಲ್ಟಿಜೆರಕ್ಯಾನೈನ ಎಂಬುದನ್ನು ಹುಚ್ಚುನಾಯಿರೋಗಕ್ಕೂ ಲೊಬೇರಿಯ ಪಲ್ಮನೇರಿಯ ಎಂಬುದನ್ನು ಶ್ವಾಸಕೋಶ ಸಂಬಂಧದ ರೋಗಗಳಿಗೂ ಕ್ಲಾಡೋನಿಯ ಮತ್ತು ಸಿಟ್ರೇರಿಯ ಎಂಬುವನ್ನು ಕೆಲವು ಬಗೆಯ ಜ್ವರಗಳಿಗೂ ಎವರ್ನಿಯ ಮತ್ತು ಪಾರ್ಮೀಲಿಯ ಎಂಬುವನ್ನು ಮಲರೋಗಕ್ಕೂ ರಕ್ತಸ್ರಾವಕ್ಕೂ ಕ್ಲೆಡೋಯ ಎಂಬುದನ್ನು ನಾಯಿಕೆಮ್ಮಿಗೂ ಬಳಸಲಾಗುತ್ತದೆ. ಕಾಮಾಲೆ, ಅತಿಸಾರ, ಜ್ವರ, ಧನುರ್ವಾತ, ಚರ್ಮರೋಗ ಇತ್ಯಾದಿಗಳಿಗೂ ಇವನ್ನು ಔಷಧರೂಪದಲ್ಲಿ ಬಳಸುವುದುಂಟು.

ಕಲ್ಲು ಹೂವಿನಲ್ಲಿರುವ ಘಟಕಗಳನ್ನು ಪ್ರಯೋಗ ಮಂದಿರಗಳಲ್ಲಿ ಬ್ಯಾಕ್ಟೀರಿಯಗಳ ಬೆಳೆವಣಿಗೆಗೆ ಬಳಸುವುದುಂಟು. ಲಿಟೇರಿಯ ಎಂಬುದನ್ನು ವಿಶೇಷ ಸನ್ನಿವೇಶಗಳಲ್ಲಿ ವಿಷಯುಕ್ತ ಮೂಲಿಕೆಯಾಗಿ ಬಳಸಲಾಗುತ್ತದೆ. ಉಸ್ನಿಯ ಎಂಬ ಕಲ್ಲುಹೂವಿನಲ್ಲಿರುವ ಉಸ್ನಿಕ್ ಆಮ್ಲಗಳಿಗೆ ಬ್ಯಾಕ್ಟೀರಿಯಗಳನ್ನು ನಿರೋಧಿಸುವ ಶಕ್ತಿ ಇರುತ್ತದೆ. ಅದು ಪಾಚಿ ಮೂಲದಿಂದ ಬಂದುದೋ ಶಿಲೀಂಧ್ರದಿಂದ ಬಂದುದೋ ಗೊತ್ತಾಗಿಲ್ಲ. ಉಸ್ನಿಕ್ ಆಮ್ಲ ಮತ್ತು ಸ್ಟ್ರೆಪ್ಟೊಮೈಸಿನ್ ಇವೆರಡೂ ಗಿನಿಹಂದಿಗಳ ಕ್ಷಯರೋಗಕ್ಕೆ ಪರಿಣಾಮಕಾರಿಯಾಗಿರುವುದು ಕಂಡುಬಂದಿದೆ. ಒಂದೊಂದನ್ನೇ ಪ್ರತ್ಯೇಕವಾಗಿ ಬಳಸಿದರೆ ಮಾತ್ರ ಪ್ರಯೋಜನವಿಲ್ಲ.

**4 ಸುಗಂಧ ದ್ರವ್ಯಗಳಲ್ಲಿ ಬಳಕೆ:** ಲೊಬೇರಿಯ ಪಲ್ಮನೇರಿಯ ಮುಂತಾದ ಕೆಲವು ಕಲ್ಲು ಹೂಗಳನ್ನು ಕೆಲವುಬಗೆಯ ಸುಗಂಧದ್ರವ್ಯಗಳ ತಯಾರಿಕೆಗೂ ಸೈಬೀರಿಯದಲ್ಲಿ ಕೆಲವು ಕಡೆ ಮದ್ಯಸಾರವನ್ನು ತಯಾರಿಸುವುದಕ್ಕೂ ಬಳಸುವುದುಂಟು. ಎವೆರಿನ ಎಂಬುದರಿಂದ ಫ್ರೆಂಚರು ಶ್ರೇಷ್ಠ ಸುಗಂಧ ದ್ರವ್ಯಗಳನ್ನು ತಯಾರಿಸುತ್ತಾರೆ. ಉಸ್ನಿಯ ಎಂಬುದನ್ನು ಸೌಂದರ್ಯವರ್ಧಕ ವಸ್ತುಗಳ ನಿರ್ಮಾಣಕ್ಕೆ ಬಳಸಿಕೊಳ್ಳುವುದುಂಟು. ಫ್ರಾನ್ಸಿನಲ್ಲಿ ಕೆಲವು ಕಲ್ಲುಹೂಗಳಿಂದ ಸುಗಂಧ ತೈಲಗಳನ್ನು ಉತ್ಪಾದಿಸಿ ಸಾಬೂನಿನ ತಯಾರಿಕೆಗೆ ಬಳಸುತ್ತಾರೆ.

**5 ಖನಿಜಾಂಶಗಳ ಉಪಯುಕ್ತತೆ:** ಲೆಕಾನೋರ ಎಸ್ಕ್ಯುಲೆಂಟ ಎಂಬ ಕಲ್ಲು ಹೂ ಸುಣ್ಣಕಲ್ಲಿರುವ ಶುಷ್ಕ ಭೂಮಿಗಳಲ್ಲಿ ಬೆಳೆಯುತ್ತದೆ. ಅದರಿಂದ ಇವು ಹೆಚ್ಚು ಪ್ರಮಾಣದ ಕ್ಯಾಲ್ಸಿಯಂ ಆಕ್ಸಲೇಟುಗಳನ್ನು ಉತ್ಪಾದಿಸುತ್ತವೆ.

**6 ಇತರ ಉಪಯೋಗಗಳು:** ರೋಸೆಲ್ಲ ಮತ್ತು ಲೆಕಾನೋರ ಎಂಬ ಕಲ್ಲು ಹೂಗಳಿಂದ ಉಣ್ಣೆ ಮತ್ತು ಇತರ ಬಟ್ಟೆಗಳಿಗೆ ರಂಗು (ಬಣ್ಣ) ಹಾಕಲು ಕೆಲವು ವಿಶಿಷ್ಟ ಬಣ್ಣಗಳು ದೊರೆಯುತ್ತವೆ. ರೋಸೆಲ್ಲ ಎಂಬುದನ್ನು ಸೂಕ್ಷ್ಮದರ್ಶಕದ ಕೆಳಗೆ ಪರಿಶೀಲಿಸಬೇಕಾಗುವ ಸೂಕ್ಷ್ಮವಸ್ತುಗಳನ್ನು ರಂಗುಗೊಳಿಸಲು ಬಳಸುವ ವರ್ಣವಸ್ತುವನ್ನು ತಯಾರಿಸಲು ಉಪಯೋಗಿಸಲಾಗುತ್ತದೆ. ಅದರಲ್ಲಿ ಅರ್ಕಿಲ್ ಎಂಬ ನೀಲಿವರ್ಣದ ರಂಗನ್ನು ಒದಗಿಸುವ ಘಟಕವಿರುತ್ತದೆ. ಇದೇ ಜೀವಕೋಶಗಳ ಪರಿಶೀಲನೆಯಲ್ಲಿ ಬಳಸುವ ಬಣ್ಣ. ರೋಸೆಲ್ಲ ಎಂಬುದರಿಂದ ಲಿಟ್‌ಮಸ್ ಎಂಬ ಬಣ್ಣವೂ ದೊರೆಯುತ್ತದೆ. ಇದರಿಂದ ಲಿಟ್‌ಮಸ್ ಹಾಳೆಗಳನ್ನು ತಯಾರಿಸಿ ರಾಸಾಯನಿಕ ಪರಿಶೀಲನೆಗಳಲ್ಲಿ ವಿಶೇಷವಾಗಿ ಬಳಸಲಾಗುತ್ತದೆ.

ಉಸ್ನಿಯ ಶೀಘ್ರವಾಗಿ ದಹಿಸುವುದರಿಂದ ಬೇಗನೇ ಬೆಂಕಿ ಹೊತ್ತಿಕೊಳ್ಳುತ್ತದೆ. ಅರಣ್ಯಗಳಲ್ಲಿ ಕಿಡಿ ಹಾರಿದಾಗ ಅದು ಫ್ಯೂಸಿನಂತೆ ವರ್ತಿಸಿ, ಅರಣ್ಯನಾಶಕ್ಕೆ ಕಾರಣವಾಗುತ್ತದೆ. ಕೆಲವು ಕಲ್ಲುಹೂಗಳಲ್ಲಿ ಟ್ಯಾನಿನ್ ಎಂಬ ವಸ್ತುವಿದೆ. ಅದನ್ನು ಫ್ರಾನ್ಸ್ ಮತ್ತಿತರ ದೇಶಗಳಲ್ಲಿ ಪ್ರಾಣಿಗಳ ತೊಗಲನ್ನು ಹದಗೊಳಿಸಲು ಬಳಸುತ್ತಾರೆ.

ಸಿಟ್ರೇರಿಯ ಐಸ್ಲಾಂಡಿಕ ಮತ್ತು ಲೊಬೇರಿಯ ಪಲ್ಮನೇರಿಯ ಎಂಬ ಕಲ್ಲುಹೂಗಳಲ್ಲಿರುವ ಒಂದು ಬಗೆಯ ಕಹಿವಸ್ತುವನ್ನು (ಅಸ್ಟ್ರಿಂಜೆಂಟ್) ಚರ್ಮ ಹದಗೊಳಿಸುವುದಕ್ಕೆ ಬಳಸಲಾಗುತ್ತದೆ. ಕ್ಲಾಡೋನಿಯ ರಾಂಜಿಫೆರ, ಉಸ್ನಿಯ, ರಮಾಲಿನ ಫ್ರಾಕ್ಸಿನಿಯ ಇತ್ಯಾದಿಗಳನ್ನು ಆಲ್ಕೊಹಾಲ್ ತಯಾರಿಕೆಯಲ್ಲಿ ಬಳಸುವರು.

**ಹಾನಿಕಾರಕ ಕಲ್ಲು ಹೂಗಳು :** 1 ಕಲ್ಲು ಹೂಗಳು ಅನೇಕ ವೇಳೆ ಹಳೆಯ ಮನೆಗಳ ಕಿಟಕಿ ಬಾಗಿಲುಗಳ ಗಾಜಿಗೆ ಅಂಟಿಕೊಂಡು ಬೆಳೆಯುತ್ತವೆ. ಅಲ್ಲಿ ಅವು ಕೆಲವು ಆಮ್ಲಗಳನ್ನು ಸ್ರವಿಸಿ ಗಾಜು ಕಚ್ಚುಕಚ್ಚಾಗುವಂತೆ ಮಾಡಿ ವಿಕಾರಗೊಳಿಸುತ್ತವೆ, ಇಲ್ಲವೆ ದುರ್ಬಲಗೊಳಿಸುತ್ತವೆ. 2 ಕ್ಲಾಡೋನಿಯ ಮತ್ತು ಆಂಫಿಲೋಮ ಎಂಬ ಕೆಲವು ಜಾತಿಯ ಕಲ್ಲು ಹೂಗಳು ಶೈವಲಗಳೆಂಬ ಸಸ್ಯಗಳ ಮಡಿಗಳಲ್ಲಿ  ನೇರವಾಗಿ ಪರತಂತ್ರ ಜೀವಿಗಳಾಗಿ ದಾಳಿ ಮಾಡಿ, ಅವುಗಳ ಸಾಮೂಹಿಕ ನಾಶಕ್ಕೆ ಕಾರಣವಾಗುತ್ತವೆ. (ಪಿ.ಎಸ್.ಸಿ.)

**ಕಲ್ಲೂರು :** ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ ರಾಯಚೂರು ಮಾನ್ವಿ ಗ್ರಾಮದಲ್ಲಿ ರಾಯಚೂರಿನಿಂದ 20 ಕಿಮೀ ದೂರದಲ್ಲಿರುವ ಗ್ರಾಮ. ಅನೇಕ ಐತಿಹಾಸಿಕ ಮತ್ತು ಪ್ರಾಗ್ಯೆತಿಹಾಸಿಕ ಅವಶೇಷಗಳು ಇಲ್ಲಿವೆ. ಸುತ್ತಲೂ ಕಲ್ಲುಗುಡ್ಡಗಳಿರುವುದರಿಂದ  ಈ ಊರಿಗೆ ಈ ಹೆಸರು ಬಂದಿರಬೇಕು.

ಈಗಿನ ಹಳ್ಳಿಯ ಸುತ್ತ ಸು. 13–14ನೆಯ ಶತಮಾನಗಳಲ್ಲಿ ಕಟ್ಟಿರಬಹುದಾದ ಕೋಟೆ ಇದೆ. ಕೋಟೆಗೆ ಮಾನ್ವಿ ದರ್ವಾಜಾ, ಕಲ್ಮಲ ದರ್ವಾಜಾ, ರಾಯಚೂರು ದರ್ವಾಜಾ ಮುಂತಾದ ಐದು ದ್ವಾರಗಳಿವೆ. ಇವು ಮುಸಲ್ಮಾನರ ಆಳ್ವಿಕೆಯ ಕಾಲದವು. ರಾಯಚೂರು ದರ್ವಾಜಾದಲ್ಲಿ ಮರದ ತೊಲೆಯ ಮೇಲಿದ್ದ ಕನ್ನಡ ಶಾಸನವೊಂದು ಆದಿಲ್‌ಶಾಹೀ ಕಾಲದ ಪ್ರಮುಖನೊಬ್ಬನಾದ ಆಘಾಖುಸ್ರು ಇದನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಈ ಊರಿನಲ್ಲಿ ಮತ್ತು ಪರಿಸರದಲ್ಲಿ 6 ದೇವಾಲಯಗಳಿವೆ. ಅವುಗಳಲ್ಲಿ ಮಾರ್ಕಂಡೇಶ್ವರನ ದೇವಾಲಯ ಬಹು ಹಳೆಯದು. ಕಲ್ಯಾಣದ ಚಾಳುಕ್ಯ ಶೈಲಿಯ ಕಂಬಗಳು ಈ ದೇವಾಲಯದಲ್ಲಿವೆ. ಗ್ರಾಮದಲ್ಲಿ ಹಲವು ಕಲ್ಯಾಣ ಚಾಳುಕ್ಯ ಶಾಸನಗಳೂ ದೊರಕಿವೆ. ಇಲ್ಲಿರುವ ಮಾರುತೀಶ್ವರ ದೇವಾಲಯವೂ ಪುರಾತನವಾದದ್ದೇ. ದೇವಾಲಯದ ಗರುಡಗಂಬವನ್ನು ಸಿಂಘಣವೆಂಬ ನಿಲ್ಲಿಸಿದನೆಂದೂ ಈ ಗ್ರಾಮ ಹಿಂದೆ ಒಂದು ಅಗ್ರಹಾರವಾಗಿತ್ತೆಂದೂ ಇಲ್ಲಿಯ ಒಂದು ಶಾಸನದಿಂದ ತಿಳಿದುಬರುತ್ತದೆ.

ಕಲ್ಲೂರಿನ ಸಮೀಪದ ಬೆಟ್ಟ ಪ್ರದೇಶಗಳಲ್ಲಿ ಮತ್ತು ಕಣಿವೆಗಳಲ್ಲಿ ನವಶಿಲಾಯುಗ ಮತ್ತು ಶಿಲಾ–ತಾಮ್ರಯುಗ ಕಾಲಗಳಿಗೆ ಸೇರಿದ ಶಿಲೋಪಕರಣಗಳು, ಮಡಕೆ ಚೂರುಗಳು, ಕಲ್ಲಿನ ಕೂರಲಗು ಫಲಕಗಳು (ಬ್ಲೇಡ್ಸ್) ದೊರಕುತ್ತವೆ. ಇಲ್ಲಿನ ಎಮ್ಮಿಗುಡ್ಡ ಎಂಬ ಚಿಕ್ಕ ಬೆಟ್ಟವೊಂದರ ಗುಹೆಯಲ್ಲಿ ಹಿಂದಿನ ಹೈದರಾಬಾದು ಸರ್ಕಾರದವರು ಉತ್ಖನನ ನಡೆಸಿದಾಗ ಅನೇಕ ತಾಮ್ರದ ವಸ್ತುಗಳು ದೊರಕಿದುವು. ಅಲ್ಲದೆ ತಾಮ್ರವನ್ನು ಕರಗಿಸಿ, ಎರಕ ಹುಯ್ಯುವ ಉದ್ಯಮ ಇಲ್ಲಿತ್ತೆಂದು ಸೂಚಿಸುವ ತಾಮ್ರವನ್ನು ಕರಗಿಸಿ, ಎರಕ ಹುಯ್ಯುವ ಉದ್ಯಮ ಇಲ್ಲಿತ್ತೆಂದು ಸೂಚಿಸುವ ಮೂಸೆಗಳು, ಒಲೆಗಳು ಸಹ ಬೆಳಕಿಗೆ ಬಂದುವು. ಇದೇ ಪ್ರದೇಶದಲ್ಲಿ ಹಿಂದೆ ಕತ್ತಿ ಮೊದಲಾದ ತಾಮ್ರದ ವಸ್ತುಗಳು ಸಹ ದೊರಕಿದ್ದುವು. ಇವುಗಳನ್ನು ಅಧ್ಯಯನ ಮಾಡಿರುವ ಪ್ರಾಗಿತಿಹಾಸಜ್ಞರು ಈ ವಸ್ತುಗಳು ಉತ್ತರ ಭಾರತದಲ್ಲಿ ದೊರೆಯುವ ತಾಮ್ರಯುಗದ ವಸ್ತುಗಳ ವರ್ಗದವೇ ಎಂದು ಊಹಿಸಿದ್ದಾರೆ. ಶಿಲಾ–ತಾಮ್ರಯುಗದ ಕಾಲದಲ್ಲಿ ಈ ಊರು ತಾಮ್ರ ಕೈಗಾರಿಕಾ ಕೇಂದ್ರವಾಗಿರಬಹುದು. ಎಮ್ಮಿಗುಡ್ಡದಲ್ಲಿ ಎಮ್ಮೆ ಮತ್ತು ದನದ ಚಿತ್ರಗಳನ್ನು ಬಂಡೆಗಳಲ್ಲಿ ಕೊರೆದಿರುವುದೂ ಬೆಳಕಿಗೆ ಬಂದಿದೆ. ಇವೂ ಪ್ರಾಗಿತಿಹಾಸ ಕಾಲದವೇ. ಇವು ಪ್ರಾಯಶಃ ಕರ್ನಾಟಕದ ಕಲೆಯ ಬಹು ಪ್ರಾಚೀನ ಉದಾಹರಣೆಗಳು. (ಎಸ್.ಎನ್.)

**ಕಲ್ಲೇರಿ :** ಕಲ್ಲು ಬಂಡೆಗಳಿಂದ ಕೂಡಿರುವಂಥ ಸ್ಥಳಗಳಲ್ಲಿ ಅಥವಾ ಬೇಕೆಂದೇ ಕಲ್ಲುಗಳನ್ನಿಟ್ಟು ಅವುಗಳ ಮಧ್ಯೆ ಇವಕ್ಕೆ ಹೊಂದಿಕೊಳ್ಳುವಂಥ ಕೆಲವು ಜಾತಿಯ ಸಸ್ಯಗಳನ್ನು ಬೆಳೆಸುವ ಒಂದು ವಿಶಿಷ್ಟ ಕ್ರಮ (ರಾಕರಿ). ತೋಟಗಾರಿಕೆಯ ಹಲವು ವಿಧಾನಗಳಲ್ಲೊಂದಾದ ಇದನ್ನು ಆಲ್ಪೈನ್ ಗಾರ್ಡನ್ ಅಥವಾ ರಾಕ್‌ಗಾರ್ಡನ್ ಎಂದೂ ಕರೆಯಲಾಗುತ್ತದೆ. ಉದ್ಯಾನವನದಲ್ಲಿ ಹಳ್ಳ, ದಿಣ್ಣೆ ಮತ್ತು ಕಲ್ಲುಬಂಡೆಗಳಿರುತ್ತವೆ. ಅನೇಕ ವೇಳೆ ಅವನ್ನು ಮಟ್ಟಸಮಾಡಿ ಹೂಗಿಡ, ಬಳ್ಳಿ ಮುಂತಾದವನ್ನು ಬೆಳೆಸುವುದು ಬಹಳ ಕಷ್ಟವಾದ ಕೆಲಸ. ಇಂಥಲ್ಲೆಲ್ಲ ಹಳ್ಳ, ದಿಣ್ಣೆ ಮತ್ತು ಕಲ್ಲುಬಂಡೆಗಳನ್ನು ಮಟ್ಟಸಮಾಡಿ ಒಂದೇ ರೀತಿಯ ತೋಟವನ್ನು ನಿರ್ಮಿಸುವ ಬದಲು, ಹೆಚ್ಚು ಶ್ರಮವಿಲ್ಲದೆ ಸುಂದರವಾಗಿ ಕಾಣುವ ವಿವಿಧ ರೀತಿಯ ಕಲ್ಲೇರಿಗಳನ್ನು ರೂಪಿಸುವುದು ಜಾಣ್ಮೆ. ಉದ್ಯಾನವನಗಳು ಒಂದೇ ರೀತಿ ಇದ್ದರೆ ಅಷ್ಟು ಚೆನ್ನಾಗಿ ಕಾಣದಿರಬಹುದು. ಆದ್ದರಿಂದ ಇಂಥಲ್ಲಿ ಸ್ವಾಭಾವಿಕ ಮತ್ತು ಸರಳವಾಗಿರುವ ಕಲ್ಲೇರಿಗಳು ಅಂದವನ್ನು ದ್ವಿಗುಣಗೊಳಿಸುತ್ತವೆ. ದೊಡ್ಡ ಮರಗಳ ಪಕ್ಕದಲ್ಲಿ ಖಾಲಿ ಸ್ಥಳವಿದ್ದರೆ ಅಲ್ಲಿ ಕಲ್ಲೇರಿಗಳನ್ನು ಬೆಳೆಸುವುದರಿಂದ ಅಲಂಕಾರಕ್ಕೆ ಮೆರುಗು ಕೊಟ್ಟಂತಾಗುವುದು. ಯಾವ ಅಲಂಕಾರ ಸಸ್ಯವನ್ನೂ ಬೆಳೆಸಲು ಸಾಧ್ಯವಾಗದೆ ಇರುವ ಕಡೆಗಳಲ್ಲಿಯೂ ಕಲ್ಲೇರಿ ಸಸ್ಯಗಳನ್ನು ಸುಲಭವಾಗಿ ಬೆಳೆಸಬಹುದು. ಕಲ್ಲೇರಿಗಳು ಬಿಸಿಲಿನ ಝಳ, ನೀರಿನ ಕೊರತೆ ಮುಂತಾದವನ್ನು ಸಹಿಸುವ ಸಾಮರ್ಥ್ಯವುಳ್ಳವು. ಉದ್ಯಾನವನದಲ್ಲಿ ಬೇರೆ ಸಾಧಾರಣ ಬಗೆಯ ಸಸ್ಯಗಳನ್ನು ಬೆಳೆಸಲಾಗದ ಸ್ವಲ್ಪವೇ ಮಣ್ಣು ಇರುವ ದೊಡ್ಡ ಬಂಡೆಗಳ ಮೇಲೆ ಮತ್ತು ಬಂಡೆಗಳ ಬಿರುಕುಗಳನ್ನು ಕಲ್ಲೇರಿ ಸಸ್ಯಗಳಿಂದ ಅಲಂಕರಿಸಬಹುದು. ಕಲ್ಲೇರಿ ಸಸ್ಯಗಳು ದೀರ್ಘಕಾಲವಿರುವುದರಿಂದ ವಾರ್ಷಿಕ ಹೂಗಿಡಗಳಂತೆ ಪ್ರತಿವರ್ಷವೂ ಬೇಸಾಯ ಮಾಡುವ ತೊಂದರೆ ಇರುವುದಿಲ್ಲ. ಮಣ್ಣು ಕೊಚ್ಚಿಹೋಗಿ ಭೂಮಿ ನಿಸ್ಸಾರವಾಗುವುದನ್ನು ಹಲವು ಕಲ್ಲೇರಿ ಸಸ್ಯಗಳು ದಷ್ಟಪುಷ್ಟವಾಗಿ ಬೇರು ಬಿಟ್ಟು ತಪ್ಪಿಸಬಲ್ಲವು. ಈ ಸಸ್ಯಗಳು ವಿವಿಧ ಬಣ್ಣಗಳಲ್ಲಿ ಸದಾ ಹಸುರಾಗಿರುವ ಮತ್ತು ಹೂ ಬಿಡುವ ಗುಣವುಳ್ಳವು. ಇವುಗಳ ಬೇರು, ಎಲೆ, ಕಾಂಡ ಮುಂತಾದವುಗಳು ಭೂಮಿಯ ಫಲವತ್ತನ್ನು ಕಾಪಾಡಲು ಸಹಾಯವಾಗುತ್ತವೆ. ಮರದ ಬುಡದಲ್ಲಿ ನಿರ್ಮಿಸಿದ ಕಲ್ಲೇರಿಗಳು ಮರದ ಬೇರುಗಳನ್ನು ಮಣ್ಣಿನ ಸವೆತದಿಂದ ತೇಲಿಹೋಗದಂತೆ ಕಾಪಾಡಿ ತಂಪನ್ನು ಕೊಡುತ್ತವೆ.

**ಕಲ್ಲೇರಿಗಳಿಗೆ ಸ್ಥಳ ಆರಿಸುವಿಕೆ:** ಕಲ್ಲೇರಿಗಳಿಗೆ ಅಡಚಣೆ ಇಲ್ಲದ ಶುದ್ಧವಾದ ಗಾಳಿ, ಒಣಹವೆ ಮತ್ತು ಬಿಸಿಲು ಬೇಕಾದ ಮುಖ್ಯ ಅಂಶಗಳು. ಕಲ್ಲೇರಿಗಳನ್ನು ನಿರ್ಮಿಸಲು ಆರಿಸುವ ಭೂಮಿ ಸುಲಭವಾಗಿ ನೀರು ಬಸಿದು ಹೋಗುವಂತಿಬೇಕು. ಇತರ ಅಲಂಕಾರಸಸ್ಯಗಳು ಕಲ್ಲೇರಿಗಳ ಅತಿ ಸಮೀಪದಲ್ಲಿದ್ದರೆ ಇವು ಅವುಗಳ ಆಹಾರಾಂಶಗಳನ್ನು ಲೂಟಿ ಮಾಡುವ ಅವಕಾಶವಿರುವುದರಿಂದ ಇವನ್ನು ಹತ್ತಿರ ಹತ್ತಿರ ಬೆಳೆಸಬಾರದು.

**ಕಲ್ಲೇರಿಯನ್ನು ನಿರ್ಮಿಸಲು ಬೇಕಾಗುವ ಸಾಮಗ್ರಿಗಳು :** ಕಲ್ಲೇರಿಗಳು ಯಶಸ್ವಿಯಾಗಬೇಕಾದರೆ ಯಾವುದೆ ಕೃತಕ ವಸ್ತುಗಳನ್ನು ಬಳಸಬಾರದು. ಮುಖ್ಯವಾಗಿ

ಬೇಕಾಗುವ ವಸ್ತುವೆಂದರೆ ಕಲ್ಲುಗಳು. ಕಲ್ಲುಗಳು ಯಾವ ಆಕಾರದಲ್ಲಿದ್ದರೆ ಅದೇ ಆಕಾರದಲ್ಲಿ ಜೋಡಿಸಬೇಕು. ಜೋಡಿಸಿದ ಕಲ್ಲುಗಳು ಜರುಗದಂತೆ ಭದ್ರವಾಗಿರಲು ಸಿಮೆಂಟ್ ಹಾಕುವುದು ಅಗತ್ಯ. ಕಲ್ಲುಗಳ ಮಧ್ಯದಲ್ಲಿ ಮಣ್ಣು ಹಾಕುವುದು ಕಲ್ಲೇರಿಗಳನ್ನು ನೆಡಲು ಸಹಾಯವಾಗುತ್ತದೆ.

**ಕಲ್ಲೇರಿಗಳನ್ನು ನಿರ್ಮಿಸುವ ವಿಧಾನ :** ಕಲ್ಲೇರಿಗಳನ್ನು ನಿರ್ಮಿಸುವಾಗ ಈ ಕೆಳಗೆ ಕಾಣಿಸಿರುವ ಅಂಶಗಳನ್ನು ಗಮನಿಸಬೇಕು–

1 ಅತಿ ಹೆಚ್ಚು ಕಲ್ಲುಗಳನ್ನು ಹಾಕಬಾರದು.

2 ಕಲ್ಲುಗಳನ್ನು ಅವ್ಯವಸ್ಥಿತವಾಗಿ ಜೋಡಿಸಬಾರದು.

3 ನೀರು ಸರಾಗವಾಗಿ ಬಸಿದು ಹೋಗಲು ಆರಿಸಿದ ಭೂಮಿಯ ಮೇಲು ಮಣ್ಣನ್ನು ತೆಗೆದು ತಳಭಾಗಕ್ಕೆ ಮರಳು ಮತ್ತು ಸುಣ್ಣದ ಕಲ್ಲುಗಳನ್ನು ಹಾಕುವುದು ಉತ್ತಮ. ಮೇಲು ಭಾಗವನ್ನು ಕಲ್ಲುಗಳಿಂದ ಬೆಟ್ಟದ ಆಕಾರದಲ್ಲಿ ಜೋಡಿಸಿ ಸಿಮೆಂಟಿನಿಂದ ಕಟ್ಟಿಸಬೇಕು. ಸರಿಯಾಗಿ ಹೊಂದದೆ ಇರುವ ಕಲ್ಲುಗಳಿಗೆ ಹೊಂದಿಕೊಳ್ಳುವಂತೆ ಸಣ್ಣ ಸಣ್ಣ ಕಲ್ಲುಗಳನ್ನು ಉಪಯೋಗಿಸುವುದು ಉತ್ತಮ. ಕಲ್ಲುಗಳನ್ನು ಜೋಡಿಸುವುದು ಒಂದು ಕಲೆ.

**ಕಲ್ಲೇರಿಗೆ ಮಣ್ಣು:** ಕಲ್ಲೇರಿಗೆ ಉಪಯೋಗಿಸುವ ಮಣ್ಣಿನಲ್ಲಿ ನೀರು ಸುಲಭವಾಗಿ ಬಸಿದು ಹೋಗುವ ಗುಣವಿರಬೇಕು, ದಪ್ಪ ಮರಳು, ಕೊಳೆತ ಎಲೆಯ ಗೊಬ್ಬರ ಶ್ರೇಷ್ಠವಾದದ್ದು. ವರ್ಷಕ್ಕೊಂದು ಸಾರಿ ಕಲ್ಲೇರಿ ಸಸ್ಯಗಳ ಸುತ್ತಲೂ ಇರುವ ಮಣ್ಣನ್ನು ತೋಡಿ ತೆಗೆದು ಹೊಸ ಮಣ್ಣಿನ ಮಿಶ್ರಣವನ್ನು ಕೊಡುವುದು ಅಗತ್ಯ. ವರ್ಷಕ್ಕೆ ಒಂದು ಬಾರಿ ಮಣ್ಣನ್ನು ಬದಲಾಯಿಸಿ ಹಾಕುವುದರಿಂದ ಭೂಮಿಯ ತೇವಾಂಶವನ್ನು ಕಾಪಾಡಲು ಅನುಕೂಲವಾಗುತ್ತದೆ.

**ಕಲ್ಲೇರಿಗಳ ಮಧ್ಯೆ ದಾರಿ:** ಕಲ್ಲೇರಿಗಳ ಮಧ್ಯೆ ಹಾದುಹೋಗುವುದಕ್ಕೆ ದಾರಿಗಳು ಸ್ವಾಭಾವಿಕವಾಗಿರಬೇಕು. ದಾರಿಗಳಿಗೆ ಚಪ್ಪಟೆಯಾಗಿರುವ ಸಣ್ಣ ಸಣ್ಣ ಕಲ್ಲುಗಳನ್ನು ಹಾಸುವುದು ವಾಡಿಕೆ. ದಾರಿಯ ಎರಡು ತುದಿಗಳಲ್ಲಿ ಕುಳ್ಳಾಗಿ ಬೆಳೆಯುವ ಚಿಕ್ಕ ಕಲ್ಲೇರಿ ಸಸ್ಯಗಳನ್ನು ಬೆಳೆಸುವುದು ಉತ್ತಮ. ನೆಲ ಕಾಣದಂತೆ ಕಲ್ಲೇರಿ ಸಸ್ಯಗಳನ್ನು ಬೆಳೆಸುವುದು ಕಲ್ಲೇರಿ ತೋಟದ ಮುಖ್ಯಲಕ್ಷಣ.

**ಕಲ್ಲೇರಿ ಸಸ್ಯಗಳ ವೃದ್ಧಿ:** ಕಲ್ಲೇರಿ ಸಸ್ಯಗಳನ್ನು ಬೀಜ, ಎಲೆ, ಕಾಂಡ, ಬೇರುಗಳ ತುಂಡು ಮತ್ತು ಗೂಟ ಕಟ್ಟುವುದು ಮುಂತಾದ ವಿಧಾನಗಳಿಂದ ವೃದ್ಧಿ ಮಾಡಬಹುದು.

**ಕಲ್ಲೇರಿ ಸಸ್ಯಗಳ ಆರಿಸುವಿಕೆ :** ಕಲ್ಲೇರಿ ತೋಟ ತೋಟಗಾರಿಕೆಯ ಒಂದು ಭಾಗ. ಆದ್ದರಿಂದ ಕಲ್ಲೇರಿಗಳಿಗೆ ಸಸ್ಯಗಳನ್ನು ಆರಿಸುವುದು ಸುಲಭ ಕೆಲಸವಲ್ಲ. ದೀರ್ಘಾವಧಿಯ ಸಸ್ಯಗಳನ್ನು ಆರಿಸುವುದು ಉತ್ತಮ. ದೀರ್ಘಾವಧಿಯ ಸಸ್ಯಗಳು ಕೂಡ ವರ್ಷದಲ್ಲಿ ಹೆಚ್ಚು ಕಾಲ ಪುಷ್ಪಭರಿತವಾಗಿದ್ದರೆ ಒಳ್ಳೆಯದು. ಕೆಲವು ಕಲ್ಲೇರಿಗಳು ಹೂ ಬಿಡದೆ ಇದ್ದರೂ ಅವುಗಳ ಎಲೆಗಳು ಬಣ್ಣಬಣ್ಣಗಳಿಂದ ಕೂಡಿದ್ದು ನೋಡುವವರಿಗೆ ಆಕರ್ಷಕವಾಗಿರುವುದರಿಂದ ಅಂಥ ಸಸ್ಯಗಳನ್ನು ಆರಿಸುವುದು ಉತ್ತಮ. ಹಲವು ಲಶುನಗಳು ಗಾತ್ರದಲ್ಲಿ ಸಣ್ಣದಾಗಿರುವುದರಿಂದ ಕಲ್ಲೇರಿಗೆ ಆರಿಸಬಹುದು. ಒಂದೇ ಜಾತಿಯ ಸಸ್ಯದಿಂದ ಕಲ್ಲೇರಿಯನ್ನು ತುಂಬಿಸುವುದು ಸೂಕ್ತವಲ್ಲ.

**ಕಲ್ಲೇರಿಗಳನ್ನು ನೆಡುವಿಕೆ:** ಕೆಲವು ಕಲ್ಲೇರಿ ಸಸ್ಯಗಳು ಲಶುನಗಳಿಂದ, ಮತ್ತೆ ಕೆಲವು ಗುಪ್ತ ಕಾಂಡುಗಳಿಂದ ವೃದ್ಧಿಯಾಗುತ್ತವೆ. ಹಲವು ತಂಪಾದ ಹವಾಗುಣಕ್ಕೆ ಹೊಂದಿಕೊಳ್ಳುತ್ತವೆ. ಇನ್ನು ಕೆಲವು ಒಣಹವಾಗುಣದಲ್ಲಿ ಸಮೃದ್ಧಿಯಾಗಿ ಬೆಳೆಯುತ್ತವೆ. ಆದ್ದರಿಂದ ಕಲ್ಲೇರಿಸಸ್ಯಗಳನ್ನು ನೆಡುವುದು ಸಸ್ಯಗಳ ಗುಣಗಳನ್ನು ಅವಲಂಬಿಸಿದೆ. ಅತಿ ಶೀಘ್ರವಾಗಿ ಬೆಳೆದು ಹರಡುವ ಕಲ್ಲೇರಿ ಸಸ್ಯಗಳನ್ನು ಇತರ ಸಸ್ಯಗಳಿಂದ ಸ್ವಲ್ಪ ದೂರ ಮತ್ತು ಕಡಿಮೆ ಸಂಖ್ಯೆಯಲ್ಲಿ ನೆಡುವುದನ್ನು ಮರೆಯಬಾರದು. ಕಲ್ಲೇರಿ ಸಸ್ಯಗಳನ್ನು ಚಳಿಗಾಲದ ಕೊನೆಯಲ್ಲಿ ಅಥವಾ ಬೇಸಿಗೆಯಲ್ಲಿ ನೆಡುವುದು ಯೋಗ್ಯ. ಕಲ್ಲೇರಿಗಳನ್ನು ನೆಡುವಾಗ, ಬೇರುಗಳನ್ನು ಪೂರ್ತಿಯಾಗಿ, ಭದ್ರವಾಗಿ ಮುಚ್ಚುವುದು ಅಗತ್ಯ. ಕುಂಡಗಳಲ್ಲಿ ಕಲ್ಲೇರಿಗಳನ್ನು ಮಳೆ, ಚಳಿ ಮತ್ತು ಬೇಸಗೆ ಕಾಲಗಳಲ್ಲಿ ನೆಡಬಹುದು. ಇವುಗಳನ್ನು ನೆಟ್ಟಮೇಲೆ ಸರಿಯಾಗಿ ಬೇರು ಬಿಟ್ಟು ಚಿಗುರುವವರೆಗೂ ಕಾಲಕ್ಕೆ ಸರಿಯಾಗಿ ನೀರು ಕೊಟ್ಟು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಕೆಲವು ಕಲ್ಲೇರಿಗಳನ್ನು ನೆಟ್ಟ ಅನಂತರ ಬುಡದ ಸುತ್ತಲೂ ಸಣ್ಣ ಸಣ್ಣ ಕಲ್ಲುಗಳನ್ನು ಹಾಕುವುದರಿಂದ ಭೂಮಿಯ ತೇವಾಂಶ ಹೆಚ್ಚು ಕಾಲ ಇರುವಂತೆ ಮಾಡುತ್ತದೆ. ಬಂಡೆಗಳ ಇರುಕು ಮತ್ತು ಸಂದಿಗಳಲ್ಲಿ ಕಲ್ಲೇರಿಗಳನ್ನು ನೆಡುವಾಗ ಸಂದಿಗಳ ಕೆಳಭಾಗಕ್ಕೆ ಜಲ್ಲಿ ಮತ್ತು ಇತರ ಕಲ್ಲುಗಳನ್ನು ಹಾಕುವುದು ಬಹುಮುಖ್ಯ.

ಕಲ್ಲೇರಿಗಳಲ್ಲಿ ಸಾಮಾನ್ಯವಾಗಿ ದೀರ್ಘಾವಧಿಯ ಕಳೆಗಳು ಕಾಣಿಸಿಕೊಂಡು ಅಲಂಕಾರವನ್ನು ಕೆಡಿಸುತ್ತವೆ. ಆದ್ದರಿಂದ ಕಲ್ಲೇರಿಗಳಲ್ಲಿ ಬೆಳೆಯುವ ಕಳೆಯನ್ನು ತೆಗೆದು ಭೂಮಿಯನ್ನು ಚೊಕ್ಕಟವಾಗಿಟ್ಟಿರಬೇಕು. (ಎಂ.ಎಚ್.ಎಂ.)

**ಕಲ್ಲೋಳಿ:** ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಒಂದು ಗ್ರಾಮ. ಗೋಕಾಕದಿಂದ 11ಕಿಮೀ ದೂರದಲ್ಲಿದೆ. ಸೌಂದತ್ತಿ ರಟ್ಟರ ಶಾಸನದಲ್ಲಿ ಇದನ್ನು ಸಿಂಧನಕಲ್ಲೋಳೆ ಎಂದು ಕರೆಯಲಾಗಿದೆ. ಇಲ್ಲಿ ಮುಖ್ಯವಾಗಿ ವಡ್ಡಸಮಾಜಕ್ಕೆ ಸೇರಿದ ಕಲ್ಲೋಳಪ್ಪನ ಗುಡಿ ಸುಪ್ರಸಿದ್ಧವಾಗಿದೆ. ಈ ಗ್ರಾಮದಲ್ಲಿ ರಾಮಲಿಂಗೇಶ್ವರ, ಕಲ್ಮೇಶ್ವರ, ಮಲ್ಲಮ್ಮ, ದ್ಯಾಮವ್ವ, ದುರ್ಗವ್ವ, ಬೀರಪ್ಪ ಸಿದ್ಧಾರೂಢ ಮತ್ತು ಸದಾಶಿವ ದೇವಾಲಯಗಳಿವೆ. ಕಲ್ಲೋಳಪ್ಪನ ಭವ್ಯ ಗುಡಿ ವಿಶೇಷವಾಗಿದೆ. ಈ ದೇವಾಲಯದ ಎದುರಿಗಿನ ಆವರಣದಲ್ಲಿ ಎರಡು ಕೈ ಜೋಡಿಸಿ ನಿಂತ ಕಾಟಮುತ್ತಪ್ಪನ ಮೂರ್ತಿಗಳಿವೆ. ಇಲ್ಲಿನ ಪಾರ್ಶ್ವನಾಥ ಜಿನಾಲಯವನ್ನು ಸು.1200ರಲ್ಲಿ ಹಗರ್ತಗೆ ನಾಡಿನ ರಟ್ಟ ಅರಸರ ಸಂಬಂಧಿ ಕಟ್ಟಿಸಿದ ಬಗ್ಗೆ ಶಾಸನವಿದೆ.

ರಾಮಲಿಂಗೇಶ್ವರ ದೇವಾಲಯ ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಮೇಲೆ ಕದಂಬನಾಗರ ಶೈಲಿಯ ಶಿಖರವಿದ್ದು, ಇದನ್ನು ಭಾಗಶಃ ಜೀರ್ಣೋದ್ಧಾರ ಮಾಡಲಾಗಿದೆ. ನವರಂಗದಲ್ಲಿಯ ಕಂಬಗಳ ಕೆತ್ತನೆಯಲ್ಲಿ ನಯಗಾರಿಕೆಯಿದೆ. ಸುಖನಾಸಿಯನ್ನು ಜೀರ್ಣೋದ್ಧಾರದ ಕಾಲಕ್ಕೆ ಮೇಲ್ಚಾವಣಿಯಲ್ಲಿ ಇರಿಸಲಾಗಿದೆ. ಅದರ ಮೇಲೆ ಕುಳಿತ ಭಂಗಿಯಲ್ಲಿರುವ ಶಿವನ ಮೂರ್ತಿಯನ್ನು ಕೆತ್ತಲಾಗಿದೆ. ಮುಖ್ಯ ಮಂಟಪ ವಿಸ್ತಾರವಾದ ಪ್ರಾಂಗಣವನ್ನು ಹೊಂದಿದೆ. ಅದರ ಸುತ್ತ ಕಕ್ಷಾಸನವಿದೆ. ವಿಜಯನಗರ ಶೈಲಿಯಲ್ಲಿರುವ ಕಲ್ಮೇಶ್ವರ ದೇವಾಲಯದಲ್ಲಿ ಗರ್ಭಗೃಹ ಮತ್ತು ನವರಂಗಗಳಿವೆ. ನವರಂಗದ ಛಾವಣಿ ಭಾಗಶಃ ಬಿದ್ದುಹೋಗಿದೆ. ಹೊಸ್ತಿಲು ಹುಣ್ಣಿಮೆಯಲ್ಲಿ ಮಾರುತಿಯ (ಕಲ್ಲೋಳಪ್ಪನ) ಜಾತ್ರೆ ಎರಡು ವಾರಗಳವರೆಗೆ ನಡೆಯುತ್ತದೆ.

ತ್ರಿಕೂಟಾಚಲ ಇಲ್ಲಿನ ಇನ್ನೊಂದು ಸ್ಮಾರಕ. ಮಧ್ಯದ ಗರ್ಭಗೃಹದಲ್ಲಿ ಶಾಂತಿನಾಥನ ಮೂರ್ತಿ, ಎಡಗಡೆಯ ಗರ್ಭಗೃಹದಲ್ಲಿ ಚಂದ್ರನಾಥ ಮತ್ತು ಬಲಗಡೆಯ ಗರ್ಭಗೃಹದಲ್ಲಿ ಸುಪಾರ್ಶ್ವನಾಥನ ಮೂರ್ತಿಗಳಿವೆ. ಈ ಮೂರೂ ಗರ್ಭಗೃಹಗಳು ನಕ್ಷತ್ರಾಕಾರದ ಜಗಲಿ ಹೊಂದಿದ್ದು ಮಧ್ಯದ ಗರ್ಭಗೃಹದ ಮೇಲಿನ ಶಿಖರವು ಕದಂಬ ನಾಗರ ಶೈಲಿಯನ್ನು ಹೊಂದಿದೆ. ನವರಂಗದ ಕಂಬಗಳು ನುಣುಪಾದ ಕೆತ್ತನೆಯಿಂದ ಕೂಡಿದೆ. ನವರಂಗದ ಛಾವಣಿಯಲ್ಲಿ ಕೆಳಮುಖ ಮಾಡಿದ ಕಮಲವು ಲೋಲಕದಂತಿದ್ದು ಅದರಲ್ಲಿ ಹಲವಾರು ಸಸ್ಯ ನಕ್ಷೆಗಳನ್ನು ಕೆತ್ತಲಾಗಿದೆ. ಇಲ್ಲಿ ಜೈನ ಸರಸ್ವತಿಮೂರ್ತಿ ಮತ್ತು ನೇಮಿನಾಥನ ಮೂರ್ತಿಗಳಿವೆ. ಮುಖಮಂಟಪ ಕಕ್ಷಾಸನವನ್ನು ಹೊಂದಿದ್ದು, ಹೊರಬದಿಯ ಗೋಡೆಯ ಮೇಲೆ ಸಸ್ಯಾಲಂಕಾರ ಮತ್ತು ಹೊರಬದಿಗೆ ಭೂಮಿತಿ ನಕ್ಷೆಗಳನ್ನು ಕೆತ್ತಲಾಗಿದೆ. ಮುಖಮಂಟಪದ ಗೋಡೆಯ ಮೇಲಿರುವ ಶಿಲಾಶಾಸನದಲ್ಲಿ ಈ ಗ್ರಾಮವು ಕೂರುಂಬೆಟ್ಟ ಕಂಪಣದಲ್ಲಿರುವ ಸಿಂಧನ ಕಲ್ಲೋಳೆ ಎಂದೂ ಪಾರ್ಶ್ವಜಿನಾಲಯವನ್ನು ಕಟ್ಟಿಸಿದವನು ಹಗರಟಿಗೆ ನಾಡಿನ ಚಂದ್ರಿಕಾದೇವಿಯ ಸೋದರನ ಮಗನೆಂದೂ ಹೇಳಿದೆ. ಈ ಚಂದ್ರಿಕಾದೇವಿ ರಟ್ಟದೊರೆ ಲಕ್ಷ್ಮೀದೇವನ ಹೆಂಡತಿ, 4ನೆಯ ಕಾರ್ತವೀರ್ಯನ ತಾಯಿ. ಕಾರ್ತವೀರ್ಯ 1204ರಲ್ಲಿ 2000 ಕಮ್ಮ ಭೂಮಿಯನ್ನು ಈ ದೇವಾಲಯಕ್ಕೆ ದಾನ ನೀಡಿದ. ಈ ಪ್ರದೇಶ ವಾಣಿಜ್ಯ ಕೇಂದ್ರವಾಗಿತ್ತೆಂದು ಶಾಸನದಲ್ಲಿ ಹೇಳಿದೆ. ಪಾರ್ಶ್ವನಾಥ ಪುರಾಣವನ್ನು ಬರೆದ ಕವಿ ಪಾರ್ಶ್ವಪಂಡಿತ ಈ ಶಾಸನದ ಕರ್ತೃ. (ಆರ್.ಐ.)

**ಕಲ್ಹಣ :** ಪ್ರಾಚೀನ ಭಾರತೀಯರಿಗೆ ಐತಿಹಾಸಿಕ ದೃಷ್ಟಿ ಇರಲಿಲ್ಲವೆಂಬ ಆಕ್ಷೇಪಣೆಗೆ ಅಪವಾದಪ್ರಾಯವಾದ ಸಂಸ್ಕೃತ ಲೇಖಕ. ಕಾಶ್ಮೀರದ ಪಂಡಿತ ಕವಿ. ರಾಜತರಂಗಿಣಿ ಈತನ ಪ್ರಸಿದ್ಧ ಕೃತಿ. ಇವನ ತಂದೆ ಚಂಪಕ, ಕಾಶ್ಮೀರದ ಹರ್ಷರಾಜನ (1089–1101) ಅಮಾತ್ಯನಾಗಿದ್ದ. ರಾಜಕಾರಣಿಯ ಮಗನಾಗಿದ್ದುದರಿಂದ ಕಲ್ಹಣನಿಗೆ ಇತಿಹಾಸ ರಚನೆಗೆ ಅಗತ್ಯವಾದ ಶಿಕ್ಷಣ ದೊರೆತಂತೆ ಕಾಣುತ್ತದೆ. 1148ರಲ್ಲಿ ರಾಜಾಶ್ರಯ ತಪ್ಪಿ ನಿರಾಶನಾಗಿದ್ದ ಕಲ್ಹಣ ಒಂದು ವರ್ಷದ ಅವಧಿಯಲ್ಲಿ ಕಾಶ್ಮೀರದ ಬೃಹತ್ ಇತಿಹಾಸ ಗ್ರಂಥವಾದ ರಾಜತರಂಗಿಣಿಯನ್ನು ಕಾವ್ಯರೂಪದಲ್ಲಿ ಬರೆದ. ಐತಿಹಾಸಿಕ ವಿಷಯಗಳ ಆಗರವಾಗಿರುವುದಲ್ಲದೆ ಈ ಕಾವ್ಯ ಐಸಿರಿಯ ನಶ್ವರತೆ, ರಾಜವೈಭವದ ಹಿಂದಿರುವ ಹೊಲಸುಗಳು, ಜೀವನದಲ್ಲಿ ವಿರಕ್ತಿ ಶಾಂತಿಗಳ ಆವಶ್ಯಕತೆ – ಇವನ್ನು ವಿವರಿಸುತ್ತದೆ. ಕಾಲಾನಂತರದಲ್ಲಿ ಕಲ್ಹಣನಿಗೆ ರಾಜ ಜಯಸಿಂಹನ ಸನ್ಮಾನ ಲಭ್ಯವಾಯಿತು. ಆಗ ಈತ ಜಯಸಿಂಹಾಭ್ಯುದಯವೆಂಬ ಕಾವ್ಯ ರಚಿಸಿದ.

ಕಲ್ಹಣ ರಾಜತರಂಗಿಣಿಯನ್ನು ರಚಿಸುವ ಮುನ್ನ ಮಹಾಕಾವ್ಯ, ಹರ್ಷಚರಿತಾದಿ ಗದ್ಯಕೃತಿಗಳು, ಬಿಲ್ಹಣ ಮುಂತಾದವರ ರಚನೆಗಳು, ಜ್ಯೋತಿಷಶಾಸ್ತ್ರ ಇವನ್ನು ಅಭ್ಯಾಸ ಮಾಡಿದುದಾಗಿ ತಾನೇ ಹೇಳಿಕೊಂಡಿದ್ದಾನೆ. ಕಾಶ್ಮೀರದಲ್ಲಿ ಮೂಲೆಮೂಲೆಗಳಲ್ಲಿದ್ದ ಉತ್ಕೀರ್ಣ ಶಿಲಾಶಾಸನಗಳು, ತಾಮ್ರಪಟಗಳು, ದಾನಪತ್ರಗಳು, ತಾಳೆಯೋಲೆಗಳು ಮುಂತಾದವನ್ನು ಈತ ಬಹು ಶ್ರಮದಿಂದ ಶೇಖರಿಸಿದ. ಪ್ರಾಚೀನ ರಾಜಾವಳೀಕಥೆಗಳು, ಪುರಾಣೇತಿಹಾಸಗಳು ಮುಂತಾದವನ್ನು ಸಂಗ್ರಹಿಸಿದ್ದ ನೀಲಮತ, ಸುವ್ರತ, ಕ್ಷೇಮೇಂದ್ರ, ಹೇಲರಾಜ, ಪದ್ಮಮಿಹಿರ, ಮುಂತಾದವರ ಕೃತಿಗಳನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿದ. ಅನಂತರ ಪೂರ್ವಾಗ್ರಹದೋಷ ಬಾರದಂತೆ ನಿಷ್ಪಕ್ಷಪಾತದೃಷ್ಟಿಯಿಂದ ರಾಜರ ವ್ಯಕ್ತಿತ್ವ ಹಾಗೂ

ಕೃತಿಗಳನ್ನು ತೂಗಿ ನೋಡಿದುದಾಗಿ ನಿಸ್ಸಂದಿಗ್ಧವಾಗಿ ಹೇಳಿದ್ದಾನೆ. ಜನಜೀವನದಲ್ಲಾಗುತ್ತಿದ್ದ ಏರುಪೇರುಗಳನ್ನು ಕೂಲಂಕಷವಾಗಿ ಚಿತ್ರಿಸಲು ಯತ್ನಿಸಿದ್ದಾನೆ.

ಪುರಾಣಕಾಲದಿಂದ ತನ್ನ ಜೀವಿತಕಾಲದ ವರೆಗಿನ ಕಾಶ್ಮೀರದ ಸಮಗ್ರ ಇತಿಹಾಸವನ್ನು ಬರೆಯುವುದು ಕಲ್ಹಣನ ಗುರಿ; ಮೊದಲ ಭಾಗದಲ್ಲಿ ಗೋನಂದ, ಕರ್ಕೋಟ, ಉತ್ಪಲ, ಲೋಹರ, ಮುಂತಾದ ರಾಜವಂಶಗಳ ಚರಿತ್ರೆ ಬರುತ್ತದೆ. ಈ ಭಾಗದಲ್ಲಿ ಪೌರಾಣಿಕಾಂಶಗಳೇ ಹೆಚ್ಚು; ಖಚಿತವಾದ ಕಾಲದೇಶಾದಿ ವಿವರಗಳು ಕಡಿಮೆ. ಆದರೆ ತನ್ನ ಕಾಲದ ಹತ್ತಿರ ಹತ್ತಿರಕ್ಕೆ ಬಂದಂತೆಲ್ಲ ಕಲ್ಹಣನ ನಿರೂಪಣೆ ಐತಿಹಾಸಿಕ ದೃಷ್ಟಿಯಿಂದ ಹೆಚ್ಚು ಖಚಿತಗೊಳ್ಳುತ್ತದೆ.

ರಾಜತರಂಗಿಣಿ ಕೇವಲ ರಾಜರ ಪಟ್ಟಿಯಲ್ಲ; ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳ ಆಕರ. ರಾಜಾಸ್ಥಾನದವರ ದೃಷ್ಟಿಕೋನದಿಂದ ಬರೆದ ರಚನೆಯಾದರೂ ಮಧ್ಯಯುಗದಲ್ಲಿ ಭಾರತ ಜನತೆಯ ಜೀವನಸ್ವರೂಪವನ್ನು ಅರಿಯಲು ಇದು ಹೆಚ್ಚು ಸಹಾಯಕವಾಗಿದೆ. ಅರಮನೆಯ ಆವರಣದವರ, ಅಂತಃಪುರದವರ ಸೋಗುಗಳ ಹಿಂದಿನ ನಿಜಾಂಶವನ್ನೂ ಕಲ್ಹಣ ಹೊರಗೆಡಹುತ್ತಾನೆ. ಆರ್ಯಸಂಸ್ಕೃತಿಯ ಸಾರವಾದ ಧರ್ಮದ ಹೆಸರಿನಲ್ಲಿ ಕಡೆಕಡೆಗೆ ನಡೆಯತೊಡಗಿದ ಅತ್ಯಾಚಾರವನ್ನು ಕನ್ನಡಿ ಹಿಡಿದು ತೋರಿಸುತ್ತಾನೆ. ಪ್ರಜಾಕ್ಷೇಮಕ್ಕಾಗಿ ಜೀವನವನ್ನೇ ಮುಡಿಪಾಗಿಡುತಿದ್ದ ರಾಜರ್ಷಿಗಳದೇ ಅಲ್ಲದೆ ನೀಚರೂ ಧೂರ್ತರೂ ಆದವರ ಸ್ಪಷ್ಟ ಚಿತ್ರಗಳೂ, ಪ್ರಜಾಕ್ಷೇಮಕ್ಕಾಗಿ ಕೆರೆಬಾವಿಗಳನ್ನು ದೇವಾಗಾರಗಳನ್ನೂ ಕಟ್ಟಿಸಿದ ದಾನಿಗಳ ವರ್ಣನೆಯೂ ಇಲ್ಲಿ ಬರುತ್ತವೆ. ಭಾರತೀಯ ದೃಷ್ಟಿಯಿಂದ ಭಾರತದ ಇತಿಹಾಸ ರಚನೆಯ ಈ ಪ್ರಪ್ರಥಮ ಪ್ರಯತ್ನ ಭಾರತೀಯ ಹಾಗೂ ವಿದೇಶೀ ವಿದ್ವಾಂಸರ ಪ್ರಶಂಸೆ ಗಳಿಸಿದೆ.

1835ರಲ್ಲಿ ರಾಜತರಂಗಿಣಿಯ ಕೆಲವು ಭಾಗಗಳ ಮುದ್ರಣವನ್ನು ಇಂಗ್ಲಿಷ್ ವಿದ್ವಾಂಸರು ಕೈಗೊಂಡರು; ಅನಂತರ ಫ್ರಾನ್ಸಿನಲ್ಲೂ ಇದರ ಪ್ರಕಟಣೆ ಮತ್ತು ಭಾಷಾಂತರಗಳು ಆದವು. 1892ರಲ್ಲಿ ಸ್ಟೇಯ್ನ್ ಇಡೀ ಗ್ರಂಥವನ್ನು (ಇದರಲ್ಲಿ 2,449 ಪದ್ಯಗಳಿವೆ) ಪರಿಷ್ಕರಿಸಿ ಅಚ್ಚುಮಾಡಿಸಿದ. ಅನಂತರ 1935ರಲ್ಲಿ ದಿವಂಗತ ಆರ್.ಎಸ್. ಪಂಡಿತ್ (ಜವಾಹರಲಾಲ ನೆಹರೂ ಅವರ ಭಾವ) ಜೈಲಿನಲ್ಲಿ ಇದನ್ನು ಇಂಗ್ಲಿಷಿಗೆ ಭಾಷಾಂತರಿಸಿದರು. ಇದು ನೆಹರೂ ಅವರ ಮುನ್ನುಡಿಯೊಂದಿಗೆ ಅಚ್ಚಾಗಿದೆ.

ರಾಜತರಂಗಿಣಿ ಕಾವ್ಯ ದೃಷ್ಟಿಯಿಂದಲೂ ಅತ್ಯಂತ ಹೃದಯಂಗಮವಾದದ್ದು. ಇಲ್ಲಿಯ ಪದ್ಯಗಳಲ್ಲಿ ಮಾಧುರ್ಯಕಾಂತಿಗುಣಗಳು ಮನೆ ಮಾಡಿಕೊಂಡಿರುವಂತೆ ಉತ್ಪ್ರೇಕ್ಷಾದಿ ಅಲಂಕಾರಗಳು ಸಾಲ್ಗೊಂಡು ಸಂದಣಿಸುತ್ತವೆ. ಶಾಂತರಸವಂತೂ ಉಕ್ಕಿಹರಿಯುತ್ತದೆ. ಹೀಗೆ ಕಾವ್ಯ–ಇತಿಹಾಸ ಎರಡನ್ನೂ ಏಕಕಾಲದಲ್ಲಿ ಸವ್ಯಸಾಚಿಯಂತೆ ಸಾಧಿಸಿದ ಕಲ್ಹಣನ ಸಿದ್ಧಿ ಅದ್ಭುತ.

ಕಲ್ಹಣನ ಜೀವಿತ ಕಾಲದಲ್ಲಿದ್ದ ಕಾಶ್ಮೀರದ ಸ್ಥಿತಿ ಹೃದಯವಿದ್ರಾವಕವಾಗಿ ವರ್ಣಿತವಾಗಿದೆ. ಸೈನಿಕರಲ್ಲಾಗಲಿ, ಅಧಿಕಾರಿಗಳಲ್ಲಾಗಲೀ ಶಿಸ್ತು ಶೂನ್ಯವಾಗಿತ್ತು. ಸ್ವಾರ್ಥಿಗಳಾದ ಮಂತ್ರಿಗಳು, ದ್ರೋಹಿಗಳಾದ ಅಧಿಕಾರಿಗಳು, ಕಪಟಿ ಪುರೋಹಿತರು, ಸುಖಲೋಲುಪ ಜನತೆ ಇವರಿಂದ ದೇಶ ತುಂಬಿತ್ತು, ಅದರ ಪರಿಣಾಮವಾಗಿ ಮೋಸ, ಪಿತೂರಿ, ಕೊಲೆ, ಜಗಳ, ಸುಲಿಗೆಗಳು ದೇಶದಲ್ಲೆಲ್ಲ ಹಾಹಾಕಾರವನ್ನೆಬ್ಬಿಸಿದ್ದುವು. ತತ್ಕಾಲದಲ್ಲಿ ಇದು ಸ್ವಲ್ಪ ಮಟ್ಟಿಗೆ ಕಡಿಮೆಯಾದರೂ ಮುಂದಿನ 200 ವರ್ಷಗಳೊಳಗೆ ಇಡಿಯ ದೇಶವೇ ಮುಸಲ್ಮಾನರ ಕೈವಶವಾಗಲು ಕಾರಣವಾದುದನ್ನು ಇತಿಹಾಸ ಹೇಳುತ್ತದೆ. ಕಲ್ಹಣನ ಚರಿತ್ರೆಯನ್ನು ಮುಂದುವರಿಸಿರುವ ಕಾಶ್ಮೀರದ ಲೇಖಕರೆಂದರೆ ಜೋನರಾಜ, ಶ್ರೀವರ, ಪ್ರಾಜ್ಯಭಟ್ಟ ಮತ್ತು ಶುಕ. (ಕೆ.ಕೆ.)

**ಕವಚ :** ಯುದ್ಧ ಪ್ರಸಂಗಗಳಲ್ಲಿ ಶತೃವಿನ ಹೊಡೆತದಿಂದ ದೇಹಕ್ಕೆ ರಕ್ಷಣೆ ಒದಗಿಸಲು ಯೋಧ ಧರಿಸುವ ವಿಶಿಷ್ಟ ರಚನೆ (ಆರ್ಮರ್). ಪೂರ್ವ ಕಾಲದಲ್ಲಿ ಯುದ್ಧಗಳೆಂದರೆ ವ್ಯಕ್ತಿಗಳು ಪರಸ್ಪರವಾಗಿ ಭರ್ಜಿ ಕತ್ತಿ ಕೊಡಲಿ ಮುಂತಾದ ಆಯುಧಗಳನ್ನು ಹಿಡಿದು ಹೋರಾಡುತ್ತಿದ್ದ ಪ್ರಸಂಗಗಳಾಗಿದ್ದುವು. ಆದ್ದರಿಂದ ಪ್ರತಿಯೊಬ್ಬ ಯೋಧನೂ ಪ್ರತಿಸ್ಪರ್ಧಿಯ ಏಟುಗಳನ್ನು ತಡೆಯಲು ಸಹಾಯಕವಾಗುವಂತೆ ತನ್ನ ತಲೆ, ಕತ್ತು, ಎದೆ ಇತ್ಯಾದಿ ಅಂಗಗಳನ್ನು ಇನ್ನೂ ಸ್ವಲ್ಪ ಕಾಲಾನಂತರ ತನ್ನ ಸಮಸ್ತಾಂಗಗಳನ್ನೂ ತಕ್ಕ ಹೊದಿಕೆಗಳಿಂದ ಮರೆ ಮಾಡಿಕೊಳ್ಳುತ್ತಿದ್ದ. ರಾಜರು ಮತ್ತು ರಣಶೂರರೇ ಮೊದಲಾದ ಜನನಾಯಕರಿಗಂತೂ ಇದು ಬಹಳ ಮುಖ್ಯವಾಗಿತ್ತು. ಏಕೆಂದರೆ ಇಡೀ ಸೈನ್ಯದ ಶರಣಾಗತಿಯಾಗಲೀ, ಸೋಲಾಗಲಿ ಅವರ ಉಳಿವು ಅಳಿವುಗಳನ್ನು ಅವಲಂಬಿಸಿತ್ತು. ತೊಡಲೂ ಏಟುಗಳನ್ನು ತಡೆಯಲೂ ಅನುಕೂಲವಾದ ರಕ್ಷಾಕವಚಗಳನ್ನು ಗ್ರೀಕರು ಮತ್ತು ರೋಮನ್ನರು ನಿರ್ಮಿಸಿಕೊಂಡಿದ್ದರು.

ನಾರ್ಮನ್ನರು ಯುರೋಪನ್ನು ಜಯಿಸಿದ ತರುವಾಯ ರೋಮನ್ ಕವಚಗಳಿಗೆ ಬದಲಾಗಿ ಒಳಗೆ ಮೆತ್ತೆಯನ್ನು ಒತ್ತುಗೊಟ್ಟಿರುವ ಚರ್ಮದಿಂದ ಮಾಡಿದ ಕವಚಗಳು ರೂಢಿಗೆ ಬಂದವು. ಶ್ರೀಮಂತರ ಕವಚಗಳ ಒಳಗೆ ಉಕ್ಕಿನ ಸಣ್ಣ ಸರಪಳಿಗಳನ್ನೂ ಅಳವಡಿಸುತ್ತಿದ್ದರು. ಗುರಾಣಿಯನ್ನು ಚರ್ಮದಿಂದಾಗಲಿ ಗಟ್ಟಿಮರದ ಹಲಗೆಗಳಿಂದಾಗಲಿ ಮಾಡುತ್ತಿದ್ದರು. ನಾರ್ಮನರು ತಲೆ, ಕತ್ತು ಮತ್ತು ಮೂಗನ್ನು ಮುಚ್ಚುವಂತೆ ಕೋನಾಕೃತಿಯ ಶಿರಸ್ತ್ರಾಣವನ್ನು ಧರಿಸುತ್ತಿದ್ದರು. ಇದು ತೊಡಲು ಅಚ್ಚುಕಟ್ಟಾಗಿತ್ತಲ್ಲದೆ ಒಳ್ಳೆ ರಕ್ಷೆಯೂ ಆಗಿತ್ತು. ಆಮೇಲೆ ಹದಿಮೂರನೆಯ ಶತಮಾನದ ವೇಳೆಗೆ ಈ ಶಿರಸ್ತ್ರಾಣ ಮೇಲೆ



ರಜಪೂತರ ಯುದ್ಧ ಕವಚಗಳು

ಚಪ್ಪಟೆಯಾಗಿ ಒಳಗೆ ಮೆತ್ತೆ ತುಂಬಿರುವ ಡ್ರಮ್ಮಿನಾಕಾರದ ಶಿರಸ್ತ್ರಾಣಕ್ಕೆ ದಾರಿ ಕೊಟ್ಟಿತು. ರಜಾಯಿಯ ರಕ್ಷಾಕವಚಗಳು, ಆಯುಧಗಳು ಅಷ್ಟು ನಾಜೂಕಾಗಿಲ್ಲದಿರುವ ತನಕ ಈ ಮೆತ್ತೆ ಉಪಯುಕ್ತವಾಗಿದ್ದವು. ಆದರೆ ಚರ್ಮವನ್ನಾಗಲೀ, ಮೆತ್ತೆಯನ್ನಾಗಲಿ ಚುಚ್ಚಿಕೊಂಡು ಒಳಕ್ಕೆ ತೂರುವ ಮೊನಚಿನ ಶಸ್ತ್ರಗಳು ತಯಾರಾದ ಬಳಿಕ, ಸಣ್ಣ ಸಣ್ಣ ಲೋಹದ ಫಲಕಗಳನ್ನು ಕವಚದೊಳಗೆ ಸೇರಿಸಲು ಪ್ರಾರಂಭಿಸಿದರು. ಇದು ಎಷ್ಟರ ಮಟ್ಟಿಗಾಯಿತೆಂದರೆ ಪ್ರ.ಶ. ಸುಮಾರು 1400ರ ವೇಳೆಗೆ ತನಗೆ ಸಾಧ್ಯವಾದ ಪಕ್ಷದಲ್ಲಿ ಒಬ್ಬ ಯೋಧ ಕೀಲುಗಳುಳ್ಳ ಲೋಹದ ಹಾಳೆಗಳನ್ನು ದೇಹದ ಸುತ್ತ ಪಂಜರದಂತೆ ಕವಿಚಿಕೊಳ್ಳುತ್ತಿದ್ದನು. ಲೋಹ ಫಲಕ ಕವಚಗಳು ಸುಸ್ವರೂಪವನ್ನು ಪಡೆಯಲು ಬಹಳ ಕಾಲ ತೆಗೆದುಕೊಂಡಿರಬೇಕು. ಏಕೆಂದರೆ ತೊಡಲು ಅನುಕೂಲವಾಗಿಯೂ ಯೋಧ ತನ್ನ ಆಯುಧವನ್ನು ಪ್ರಯೋಗಿಸಲು ನಿರಾಂತರವಾಗಿರುವಂತೆಯೂ ಇವನ್ನು ಜೋಡಿಸಲು ಕಮ್ಮಾರನಿಗೆ ಅಸಾಧಾರಣ ಕೌಶಲ ಬೇಕಾಗುತ್ತದೆ. ಹಾಗಿದ್ದರೂ ಕ್ರೂಸೇಡಿನ ವೀರ ಯೋಧರು ಪೂರ್ವ ದೇಶದ ಉರಿ ಬಿಸಿಲಿನಲ್ಲಿ ಇಷ್ಟು ದಪ್ಪವಾಗಿರುವ ಲೋಹಕವಚವನ್ನು ಹೇಗೆ ಧರಿಸುತ್ತಿದ್ದರೆಂಬುದೂ ಅಲ್ಲದೆ ಅದನ್ನು ದಿನಗಟ್ಟಲೆ ಬಿಚ್ಚದೆ ಹಾಕಿಕೊಂಡೇ ಇರುತ್ತಿದ್ದರೆಂಬುದೂ ಬೆರಗನ್ನು ತರುವ ವಿಷಯ. ಈ ಲೋಹ ಕವಚದ ಕೆಳಗೆ ಚರ್ಮದ ಮೆತ್ತೆಯಂಗಿಯನ್ನು ಮತ್ತು ಇವುಗಳ ಮೇಲೆ ಫರ್ ಎಂಬ ಚರ್ಮದ ನಿಲುವಂಗಿಯನ್ನು ಅವರು ಧರಿಸಿಕೊಳ್ಳುತ್ತಿದ್ದರೆಂದರೆ ಅವರ ಸಹನಾಶಕ್ತಿ ಎಷ್ಟರಮಟ್ಟಿನದೆಂಬುದನ್ನು ಊಹಿಸಿಕೊಳ್ಳಬಹುದು.

ಇನ್ನು ಸ್ವಲ್ಪ ಕಾಲಾನಂತರ, ಹೊಲಿಗೆ ಒಂದು ಕಲೆಯ ದರ್ಜೆಗೇರಿದ ಮೇಲೆ, ಕಮ್ಮಾರ ದರ್ಜಿಯನ್ನು ಅನುಸರಿಸಿ ಅವನು ಮಾಡಿದ ಅಂಗಿಯ ಮೇಲೆ ತನ್ನ ಲೋಹ ಫಲಕಗಳನ್ನು ಅಳವಡಿಸಿದುದಲ್ಲದೆ ಷರಾಯಿಯಂಥ ಉಕ್ಕಿನ ತ್ರಾಣಗಳಿಂದ ಕಾಲುಗಳನ್ನು ಮುಚ್ಚುವಂತೆ ಸಹ ಮಾಡಿಕೊಡುತ್ತಿದ್ದ. ವರ್ಷಗಳು ಕಳೆದ ಅನಂತರ ಈ ಕವಚಗಳ ನಿರ್ಮಾಣ ತುಂಬ ನಾಜೂಕಾಯಿತೆಂಬುದನ್ನು ಬ್ರಿಟಿಷ್ ಮ್ಯೂಸಿಯಮ್ ಕೋಟೆಯ ಶಸ್ತ್ರಾಗಾರದಲ್ಲಿ ಇಟ್ಟಿರುವ ಕವಚಗಳು ನಮಗೆ ತೋರಿಕೊಡುತ್ತವೆ.

ಮನುಷ್ಯನಿಗೆ ಹೇಗೆಯೋ ಹಾಗೆ ಅವನ ಕುದುರೆಗೂ ಕೂಡ ಮೊದಮೊದಲು ಅದರ ತಲೆ ಕೊರಳು ಮತ್ತು ಮುಖಗಳನ್ನು ಮುಚ್ಚುವಂತೆ ಉಕ್ಕಿನ ಹಲಗೆಗಳನ್ನು ತೊಡಿಸುತ್ತಿದ್ದರು. ಮಿಕ್ಕ ಮರ್ಮಾಂಗಗಳಿಗೆ ಯಾವ ರಕ್ಷಣೆಯೂ ಇರುತ್ತಿರಲಿಲ್ಲ. ಉದಾಹರಣೆಗೆ ಯಾವ ಕಾಲಾಳಾಗಲಿ ಕುದುರೆಯ ಕಾಲುಗಳನ್ನು ಸುಲಭವಾಗಿ ಕೊಚ್ಚಿ ಹಾಕಬಹುದಾಗಿತ್ತು. ಮುಂದೆ ಕತ್ತಿನ ಜುಲ್ಪಿಯವರೆಗೂ ದಪ್ಪ ಕೊರಲು ಪಟ್ಟಿಯನ್ನು ಕುದುರೆಗೆ ಹಾಕುತ್ತಿದ್ದರು. ಪ್ರ.ಶ.1237ರಲ್ಲಿ ನಡೆದ ನೆವಗ್ರೋಚೆಯ ಯುದ್ಧವೊಂದರಲ್ಲಿ

ದಪ್ಪ ಕವಚಗಳಿಂದ ಸಜ್ಜಾದ ಆರು ಸಾವಿರ ಕುದುರೆಗಳಿದ್ದುದು ಕಂಡುಬಂದಿತು. ಪ್ರ.ಶ. ಹದಿನಾರನೆಯ ಶತಮಾನದ ವೇಳೆಗೆ ಕುದುರೆ ಮನುಷ್ಯನಂತೆ ಆಕ್ರಮಣಕ್ಕಾಗಲಿ ಆತ್ಮರಕ್ಷಣೆಗಾಗಲಿ ತನ್ನ ಅಂಗಗಳನ್ನು ಆಡಿಸಲು ಅನುಕೂಲವಾಗಿಯೂ ಒಳ್ಳೆ ರಕ್ಷೆಯನ್ನು ಕೊಡಲು ಅರ್ಹವಾಗಿಯೂ ಇದ್ದ ಲೋಹಕವಚ ಸಿದ್ಧವಾಯಿತು. ಆ ಕವಚ ಸರಳವಾಗಿರುವ ಬದಲು ಅಂಚುಗಳು, ಉಬ್ಬುತಗ್ಗುಗಳು ಕೆತ್ತನೆಯ ಕೆಲಸಗಳು, ಕೊರೆದು ಮಾಡಿರುವ ಚಿತ್ರಗಳು ಹೀಗೆ ಎಲ್ಲ ವಿಧದಲ್ಲೂ ಅಕ್ಷರಶಃ ಹೊಲಿಗೆ ಬಟ್ಟೆಗಳನ್ನೇ ಹೋಲುತ್ತಿತ್ತು.

ಆದರೆ ಹದಿನೇಳನೆಯ ಶತಮಾನದಲ್ಲಿ ಮದ್ದಿನ ಶಸ್ತ್ರಗಳು ಬಳಕೆಗೆ ಬಂದಾಗ, ಅದರಿಂದ ರಕ್ಷೆ ಪಡೆಯುವ ಸಾಧನವನ್ನೊದಗಿಸಲು ಕಮ್ಮಾರ ನಿರತನಾಗಬೇಕಾಯಿತು. ಆದ ಪ್ರಯುಕ್ತ ಈ ಶೃಂಗಾರಗಳನ್ನೆಲ್ಲ ತೊರೆದು ದಪ್ಪನಾಗಿರುವ ಲೋಹಫಲಕಗಳನ್ನು ನಿರ್ಮಿಸಬೇಕಾಯಿತು. ಈ ಪ್ರಕಾರ ಬಂದೂಕದವನಿಗೂ ಕಮ್ಮಾರನಿಗೂ ಒಂದು ಸ್ಪರ್ಧೆಯೇ ಏರ್ಪಟ್ಟಿತೆನ್ನಬಹುದು. ಈ ಸ್ಪರ್ಧೆ ಜಗದ್ಯುದ್ಧದಲ್ಲಿ ಬ್ರಿಟಿಷರೂ ಜರ್ಮನರೂ ಗುಂಡು ತೂರದ ಕವಚವನ್ನು ಕಂಡು ಹಿಡಿಯುವವರೆಗೂ ನಡೆಯಿತು.

**ಕವಚರಕ್ಷಿತ ರಥ (ಆರ್ಮರ್ಡ್ ಕಾರ್) :** ದ್ವಂದ್ವ ಯುದ್ಧಗಳ ಕಾಲ ಮುಗಿದು ರಥಗಳು ಬಳಕೆಗೆ ಬಂದ ಮೇಲೆ ಅವುಗಳ ರಕ್ಷಣೆಗೆ ಲೋಹದ ಕವಚಗಳು ಬೇಕಾದುವು. ಈ ಪ್ರಕಾರವಾಗಿ ಭಾರವಾದ ಲೋಹಗಳ ಫಲಕಗಳಿಂದ ಸಜ್ಜುಗೊಳಿಸಿದ ರಥಗಳೂ ಹಡಗುಗಳೂ ತಯಾರಾದುವು. ಕರ್ನಲ್ ಡೇವಿಡ್‌ಸನ್ ಎಂಬಾತ 1896ರಲ್ಲಿ ಅದನ್ನು ಪೆಟ್ರೋಲಿನಿಂದೋಡುವ ಮೂರು ಸಿಲಿಂಡರುಗಳ ಕಾರಿನ ಮೇಲೆ ಕಟ್ಟಿ ಅದಕ್ಕೆ ಕೋಲ್ಟ್ ಮೆಷೀನ್ ಗನ್ನನ್ನು ಅಳವಡಿಸಿದಾಗ (ಅಮೆರಿಕದಲ್ಲಿ) ಈ ರಥ ಮೊದಲ ಬಾರಿಗೆ

ಶಸ್ತ್ರಸಜ್ಜಿತ ಕವಚಧಾರಿ ರಾಣಾಪ್ರತಾಪ (ಕಲೆ 18ನೆಯ ಶತಮಾನ)

ನಿರ್ಮಿತವಾಯಿತು. ಮೇಲಿನ ಅಧಿಕಾರಿಗಳು ಇದರಿಂದ ಎಷ್ಟು ಪ್ರೀತರಾದರೆಂದರೆ ತತ್‌ಕ್ಷಣ ಅಮೆರಿಕನ್ ರಾಹುತ ಸೈನ್ಯದ ಐದು ರೆಜಿಮೆಂಟುಗಳಿಗೆ ಇವನ್ನು ಒದಗಿಸಿಕೊಡಬೇಕೆಂದು ಆಜ್ಞೆಯನ್ನಿತ್ತರು. ಮತ್ತು ಈ ಹೊಸ ಸಲಕರಣೆಯನ್ನು ಸ್ಥಳ ಶೋಧನೆ ಮತ್ತು ಇತರ ಕರ್ತವ್ಯಗಳಿಗೆ ಹೇಗೆ ಬಳಸಬೇಕೆಂಬುದಕ್ಕೆ ನಿಯಮಗಳನ್ನು ರಚಿಸಿದರು. ತದನಂತರ ಇಂಗ್ಲೆಂಡ್ ದೇಶ ಸಹ ಬೇಗನೆ ತನ್ನ ಪ್ರಥಮ ಕವಚರಕ್ಷಿತ ರಥವನ್ನು ನಿರ್ಮಿಸಿತು. ಇದರ ಮಾದರಿಗಳು ಹೆಚ್ಚು ಹೆಚ್ಚು ನಾಜೂಕಾದವು. ಇದು ಗುಪ್ತ ಶಸ್ತ್ರವಾಗಿರುವ ಘಟ್ಟವನ್ನು ಮೀರಿ ಯುದ್ಧದ ಸನ್ನಾಹದಲ್ಲಿದ್ದ ಎಲ್ಲ ರಾಷ್ಟ್ರಗಳೂ ನಿರ್ಮಿಸುವ ಹಂತ ತಲುಪಿತು. ಒಂದನೆಯ ಮಹಾಯುದ್ಧದಲ್ಲಿ ಇಟಲಿ ದೇಶದಲ್ಲಿ ಮೂರಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಘನತರವಾದ ಕವಚರಕ್ಷಿತ ರಥಗಳಿದ್ದುವು. ಇಂದಿನ ಕವಚರಕ್ಷಿತ ರಥ ನಾಲ್ಕು ಚಕ್ರಗಳ ಮೇಲುರುಳುತ್ತದೆ ಮತ್ತು ಅದರಲ್ಲಿ ಎರಡು ಭಿನ್ನ ಒಳವ್ಯಾಸಗಳ (ಕ್ಯಾಲಿಬರ್) ಎರಡು ಮೆಷೀನ್‌ಗನ್ನುಗಳಿವೆ. ಮೊದಲು ಉದ್ದೇಶಪಟ್ಟಿದ್ದಂತೆ, ಇದನ್ನು ಈಗಲೂ ಸ್ಥಳ ಸಮೀಕ್ಷೆಗೆ ಉಪಯೋಗಿಸುತ್ತಾರೆ. ಆದರೆ ಸಣ್ಣ ಸಣ್ಣ ಶತ್ರುಸೈನ್ಯವನ್ನು ಎದುರಿಸಲೂ ಇದನ್ನು ಬಳಸಬಹುದು.

ಸೈನಿಕರನ್ನು ಮತ್ತು ನಾವಿಕರನ್ನು ಒಯ್ಯುವುದಕ್ಕೂ ಇತರ ಕೆಲಸಗಳಿಗೂ ಫಲಕಗಳಿಂದ ಸಜ್ಜುಗೊಳಿಸಿದ ಟ್ರಕ್ಕುಗಳು ಇವೆ. ಇದೇ ಪರಿಯಲ್ಲಿ, ಪ್ರಯಾಣಿಕರ ಬಂಡಿಗಳನ್ನು ದಾರಿಹೋಕರ ಕಾಟದಿಂದ ತಪ್ಪಿಸಿಕೊಳ್ಳುವುದಕ್ಕಾಗಿ, ಸಜ್ಜುಗೊಳಿಸುತ್ತಾರೆ. ದಾರಿಗಳ್ಳರ ಮತ್ತು ಪುಂಡರ ಗುಂಪುಗಳ ಹಾವಳಿ ಈವರೆಗೆ ಅಮೆರಿಕದಲ್ಲಿ ಸರ್ವೇಸಾಧಾರಣವಾಗಿತ್ತು. ಇದೇ ಲೋಹ ಫಲಕಗಳಿಂದ ರಕ್ಷಿತವಾಗಿ ರೈಲ್ವೆ ಟ್ರೇನುಗಳೂ ಇವೆ. ತುಪಾಕಿ ಗುಂಡುಗಳು ಮತ್ತು ಷಾರ್ಪ್‌ನೆಲ್ಲುಗಳ ಹೊಡೆತವನ್ನು ತಡೆಯಲು ತಕ್ಕವಾಗಿರುವ ಹಗುರವಾಗಿ ಲೋಹ ಫಲಕಗಳನ್ನು ಇವಕ್ಕೆ ಜೋಡಿಸಿರುತ್ತಾರೆ. ಮತ್ತು ಸಮಯ ಬಂದಾಗ ಶತ್ರುಗಳನ್ನು ಹೊಡೆಯುವುದಕ್ಕೆ ಅನುಕೂಲವಾಗಿರುವಂತೆ ಗನ್ನುಗಳನ್ನು ತಕ್ಕ ತಕ್ಕ ಎಡೆಗಳಲ್ಲಿ ಜೋಡಿಸಿರುತ್ತಾರೆ.

**ಕವಚಫಲಕಗಳು (ಆರ್ಮರ್ಡ್ ಪ್ಲೇಟ್ಸ್) :** ಷಾರ್ಕ್ ಜಲಚರಗಳಿಂದಾಗಲಿ ಇರಿತವೇ ಮುಂತಾದ ಶತ್ರುವಿನ ಹೊಡೆತಗಳಿಂದಾಗಲಿ ಶಸ್ತ್ರ ಪ್ರಯೋಗದಿಂದಾಗಲಿ ಒಡೆದುಹೋಗದಂತೆ ಹಡಗುಗಳ ಹೊರಮೈಗೆ ತಕ್ಕ ರಕ್ಷಣೆಗಳನ್ನು ಒದಗಿಸುವ ವಿಧಾನ ಪೂರ್ವಕಾಲದವರಿಗೂ ಗೊತ್ತಿತ್ತು. ಪ್ರ.ಶ.ಪೂ. 250ರಷ್ಟು ಹಿಂದೆ ಸಹ ಚಾಪೆಗಳನ್ನು ಮತ್ತು ದಪ್ಪ ಹಗ್ಗಗಳನ್ನು ಹಡಗಿನ ಸುತ್ತ ಇಳಿಯಬಿಡುತ್ತಿದ್ದರು. ಆ ಬಳಿಕ ಕಂಚಿನ ಸರಪಣಿಗಳನ್ನು ತೂಗುಬಿಡುತ್ತಿದ್ದರು. ಇನ್ನೂ ಸ್ವಲ್ಪ ಕಾಲದ ಮೇಲೆ ಚರ್ಮವನ್ನು ಹೊದೆಸುತ್ತಿದ್ದರು. ನೆಪೋಲಿಯನ್ನನ ಯುದ್ಧಗಳ ಕಾಲಕ್ಕೆ ಬುಲೆಟ್ಟುಗಳೂ ಷೆಲ್ಲೂಗಳೂ ಹಡಗಿನ ಗೋಡೆಗಳನ್ನು ಕೊರೆದು ಒಳಕ್ಕೆ ತೂರದ ಹಾಗೆ ಮಾಡಲು ಸಮರ ನೌಕೆಗಳಿಗೆ ಎರಡು ಅಡಿಗಳ ದಪ್ಪದ ಓಕ್ ಹಲಗೆಗಳನ್ನು ಜೋಡಿಸುತಿದ್ದರು. ಉತ್ತಮವಾದ ಫಿರಂಗಿಗಳು ಉಪಯೋಗಕ್ಕೆ ಬಂದ ತರುವಾಯ ಲೋಹ ಫಲಕಗಳು ಬೇಕಾದವು. 1859ರ ಹೊತ್ತಿಗೆ ಲೋಹ ಫಲಕಗಳನ್ನು ಹೆಚ್ಚು ಅಭೇದ್ಯವಾಗುವಂತೆ ಮಾಡಲು ಪ್ರಯೋಗಗಳು ನಡೆದವು. ಉತ್ತಮಗೊಳಿಸಿದ ಫಿರಂಗಿಗಳ ಗುಂಡು ಮತ್ತು ಷೆಲ್ಲುಗಳ ಹೊಡೆತವನ್ನು ತಡೆಯಲು ಮೆತು ಕಬ್ಬಿಣದ ಅಥವಾ ಉಕ್ಕಿನ ಹಲಗೆಗಳು ಸಾಕಾಗದೆ ಹೋದವು. ಬಡಿದ ಹಲಗೆಗಳಿಗಿಂತ ಮೆತ್ತಗಿದ್ದು ಗಟ್ಟಿಯಾಗಿರುವ ಸುತ್ತಿದ ಹಲಗೆಗಳು ಹೆಚ್ಚು ಉಪಯುಕ್ತವಾಗಿ ಕಂಡವು. ಗ್ಲೋಯರೇ ಎಂಬ ಫ್ರೆಂಚ್ ಹಡಗನ್ನು ಮೊದಲನೆಯದರಿಂದ ಮಾಡಿದ್ದರು. ಅದಕ್ಕೆ 4 3/4" ದಪ್ಪದ ಕಬ್ಬಿಣದ ಪಕ್ಕಗಳಿದ್ದವು. ಸಮುದ್ರದಲ್ಲಿ ಮೊದಲು ತೇಲಿದ ಕವಚರಕ್ಷಿತ ನೌಕೆಯಿದು. 1861ರಲ್ಲಿ ಕಾರ್ಯರಂಗಕ್ಕಿಳಿದ ವಾರಿಯರ್ ಎಂಬ ಬ್ರಿಟಿಷ್ ಹಡಗು ಎರಡನೆಯದು; ಇವುಗಳ ಅನಂತರ ದೊಡ್ಡ ಒಳವ್ಯಾಸವುಳ್ಳ ಫಿರಂಗಿಗಳನ್ನು ಅಳವಡಿಸಿದ ಕವಚರಕ್ಷಿತ ನೌಕೆಗಳು ರೂಪಗೊಂಡವು.

(ಎ.ಎನ್.ಎಸ್.ಎಂ.)

**ಕವಚ (ಭಾರತದಲ್ಲಿ) :** ಕವಚ ಧಾರಣೆ ಭಾರತದಲ್ಲಿ ಇತಿಹಾಸಪೂರ್ವ ಕಲ್ಪದಲ್ಲೂ ವಾಡಿಕೆಯಲ್ಲಿತ್ತೆಂಬುದು ಋಗ್ವೇದದಲ್ಲಿ (1–25–13) ವರುಣನನ್ನು ಹಿರಣ್ಯಯದ್ರಾಪಿ ಅಂದರೆ ಬಂಗಾರದ ಕವಚವನ್ನು ತೊಟ್ಟವನೆಂದು ವರ್ಣಿಸಿರುವುದರಿಂದ ವಿಶದವಾಗುತ್ತದೆ. ನಮ್ಮ ಪುರಾಣಗಳಲ್ಲಿ ಹಾಗೂ ಮಹಾಕಾವ್ಯಗಳಲ್ಲಿ ಕವಚದ ಸಮಾನವಾಚಕಗಳಾದ ವರೂಥ, ಚರ್ಮ, ವರ್ಮ, ತ್ರಾಣ, ಇತ್ಯಾದಿ ಶಬ್ದಗಳು ಮೇಲಿಂದ ಮೇಲೆ ಉಕ್ತವಾಗಿವೆಯಷ್ಟೇ ಅಲ್ಲದೆ ಆ ಕಾಲದ ಭಾರತೀಯರು ಅಯಸ್, ಪಾರಸವ, ಕಾಂಚನ, ವಜ್ರ, ಚರ್ಮ ಇತ್ಯಾದಿಗಳಿಂದಾದ ದೃಢ ಅಥವಾ ಮೃದುವಾದ ಕವಚಗಳನ್ನು ಧರಿಸುತ್ತಿದ್ದರೆಂದು ಅದೇ ಮೂಲಗಳಿಂದ ತಿಳಿದುಬರುತ್ತದೆ.

ಇತಿಹಾಸ ಕಲ್ಪದ ಬೇರೆ ಬೇರೆ ಯುಗಗಳಲ್ಲಿ ಭಾರತದಲ್ಲಿ ಬಳಸಲಾಗುತ್ತಿದ್ದ ವಿವಿಧ ಕವಚಗಳನ್ನು ಕುರಿತು ತಿಳಿದುಕೊಳ್ಳುವಲ್ಲಿ ಸಾಹಿತ್ಯ ಕೃತಿಗಳು ಹಾಗೂ ಪ್ರಾಚೀನ ನಾಣ್ಯಗಳು ಸ್ವಲ್ಪ ಮಟ್ಟಿಗೆ ಸಹಾಯ ನೀಡುತ್ತವೆ. ಆಯುಧಾಗಾರದ ಅಧ್ಯಕ್ಷರು ಆವರಣಗಳನ್ನು (ಅಂದರೆ ಕವಚ) ಶಸ್ತ್ರಕಲಾನಿಪುಣರಿಂದ ತಯಾರಿಸಿಡಬೇಕೆಂದು ಸೂಚನೆ ನೀಡುವ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಕ್ಷಿಸುವಂಥ ಕಬ್ಬಿಣವೇ ಮೊದಲಾದ ಲೋಹಗಳಿಂದ ಇಡಿಯ ದೇಹವನ್ನೂ ರಕ್ಷಿಸುವಂಥ ಪಟ್ಟ; ತಲೆ, ಎದೆ, ಬೆನ್ನು ಮತ್ತು ಕೈಗಳ ಬಿಡಿ ಬಿಡಿ ಭಾಗಗಳಿಂದ ಕೂಡಿದ ಕವಚ; ಸೊಂಟ ಮತ್ತು ಬೆನ್ನನ್ನು ಮಾತ್ರ ಮರೆ ಮಾಡುವಂಥ: ಸೂತ್ರಕ, ಶಿರಸ್ತ್ರಾಣ, ಕಂಠತ್ರಾಣ; ಎದೆ, ಬೆನ್ನನ್ನುಗಳಿಗೆ ಕವಚವಾದ ಕೂರ್ಪಾಸ; ಮೊಳಕಾಲಿನ ವರೆಗಿನ ಕಂಚುಕ; ಹಿಂಗಾಲ ಹಿಮ್ಮಡಿ ವರೆಗಿನ ವಾರವಾಣ; ಕೈಗಳ ರಕ್ಷಣೆಗಾದ; ನಾಗೋದಾರಿಕಾ ಎಂಬೀ ನಾನಾ ಬಗೆಯ ಕವಚಗಳ ಪ್ರಸ್ತಾಪದೊಂದಿಗೆ ಕಬ್ಬಿಣವೇ ಮೊದಲಾದ ಲೋಹಗಳಿಂದಾದ, ಕೋಷ್ಠವಲ್ಲಿ ಇತ್ಯಾದಿ ಬಳ್ಳಿಗಳಿಂದಾದ, ಚರ್ಮ, ಮರ, ಕೊಂಬುಗಳಿಂದಾದ ಇನ್ನೂ ಹಲವು ಬಗೆಯ ಕವಚಗಳ ಪ್ರಸ್ತಾಪವೂ ಕಂಡುಬರುತ್ತದೆ. ಯುದ್ಧಾಶ್ವಗಳಿಗೂ ಆನೆಗಳಿಗೂ ಚರ್ಮದಿಂದಾದ ಕವಚಗಳನ್ನು ತೊಡಿಸಲಾಗುತ್ತಿತ್ತೆಂದು ಶುಕ್ರನೀತಿಯಿಂದ ತಿಳಿದುಬರುತ್ತದೆ.

ಪ್ರ.ಶ. 1126ರಿಂದ 1138ರ ವರೆಗೆ ಕರ್ನಾಟಕದ ಚಕ್ರವರ್ತಿಯಾಗಿ ಮೆರೆದ ಭೂಲೋಕಮಲ್ಲ 3ನೆಯ ಸೋಮೇಶ್ವರ ತನ್ನ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥ ಚಿಂತಾಮಣಿ ಎಂಬ ಬೃಹದ್ಗ್ರಂಥದಲ್ಲಿ ಸೈನಿಕರ ಪಕ್ಷರಕ್ಷೆ, ತನುತ್ರಾಣ, ಅಂಗರಕ್ಷೆ, ಕೃತ್ತಿಕಾಚರ್ಮ ಎಂಬ ಕವಚಗಳನ್ನಷ್ಟೇ ಅಲ್ಲದೆ, ಆನೆಗಳ, ಅಶ್ವಗಳ ತನ್ನು (ಅಥವಾ ಗಾತ್ರ) ತ್ರಾಣಗಳನ್ನೂ ಪ್ರಸ್ತಾಪಿಸಿರುತ್ತಾನೆ.

ಸಾಹಿತ್ಯ ಕೃತಿಗಳಿಂದ ಕವಚಗಳ ಬಗ್ಗೆ ಇಷ್ಟೆಲ್ಲ ವಿಷಯಗಳು ತಿಳಿದುಬರುತ್ತವೆಯಾದರೂ ಆಗಿಂದಾಗ್ಗೆ ನಡೆದು ಹೋದ ಕಾಳಗಗಳಿಗೆ ನೇರ ಸಂಬಂಧವಿರುವ ವೀರಗಲ್ಲುಗಳ ಮೇಲೆ ಚಿತ್ರಣಗಳು ಈ ಅಂಶಕ್ಕೆ ಪೋಷಕವಾಗಿಲ್ಲವೆಂದೇ ಹೇಳಬಹುದು. ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ ಚಿತ್ರಿತವಾಗಿರುವ ಯೋಧರು ತುಂಡು ದಟ್ಟಿಯನ್ನಷ್ಟೇ ಧರಿಸಿರುತ್ತಾರೆ. ಇದರಿಂದಾಗಿ ಸಾಹಿತ್ಯ ಕೃತಿಗಳಲ್ಲಿ ಪ್ರಸ್ತಾಪಿಸಲಾಗಿರುವ ಕವಚಗಳನ್ನು ಕೇವಲ ಅರಸುಗಳೂ ಇತರ ಸೇನಾಮುಖಂಡರೂ ಮಾತ್ರ ಧರಿಸುತ್ತಿದ್ದರೆಂದು ಊಹಿಸಲು ಆಸ್ಪದವಿದೆ. ಭಾರತದ ಕೆಲವು ಪ್ರಾಚೀನ ನಾಣ್ಯಗಳಲ್ಲಿ ಕಂಡುಬರುವ ಅರಸುಗಳ ಚಿತ್ರಣ ಮೇಲಿನ ಊಹೆಯನ್ನು ಸಮರ್ಥಿಸುತ್ತದೆ. ಉದಾಹರಣೆಗೆ 2ನೆಯ ಶತಮಾನದಲ್ಲಿ ಹೊರಡಿಸಲಾದ ಕುಷಾಣ ಮನೆತನದ ವಾಸುದೇವನ ನಾಣ್ಯಗಳಲ್ಲಿ ಶಿರಸ್ತ್ರಾಣ ಮತ್ತು ಉಕ್ಕಿನ ಉಂಗುರಗಳಿಂದ ಹೆಣೆದ ಮೈಜೋಡನ್ನು ಧರಿಸಿರುವ ರಾಜನ ಚಿತ್ರಣವಿದೆ.

ಮುಸ್ಲಿಮರು ಭಾರತದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ ಮೇಲೆ ಬಳಸಲಾಗುತ್ತಿದ್ದ ಕವಚಗಳನ್ನು ಕುರಿತು ನಮಗೆ ಹೆಚ್ಚಿನ ವಿಷಯಗಳು ಲಭ್ಯವಾಗಿವೆ. ಅಂದಿನಿಂದ ಭಾರತದಲ್ಲಿ ಹಲವು ಹೊಸ ಬಗೆಯ ಶಿರಸ್ತ್ರಾಣಗಳಷ್ಟೇ ಅಲ್ಲದೆ ಚಹರ್ ಐನಾಹ್‍ಜಿ, ರಿಹ್, ಜೈಬಾಹ್, ಜೋಷನ್, ಅಂಗ್ರಖಾ (ಅಂಗರಕ್ಷೆ), ಜಮಾ-ಇ-ಪತಹಿ, ಭಂಜು, ಕೋಠಿ, ಕಮಲ್, ಕಂಠಶೋಭಾ ಮುಂತಾದ ಸಾಮಾನ್ಯವಾಗಿ ಬಖ್ತರ್ ಅಥವಾ ಬಕ್ತರ್ ಎಂದು ಹೆಸರಿಸಲಾಗುವ ಮೈಕವಚಗಳೂ ಲೋಹದಿಂದಾದ ದಸ್ತಾನಾಹ್ ಎಂಬ ಕರತ್ರಾಣಗಳೂ ಮೊಜಾಹ್-ಇ-ಅಚನಿ ಎಂಬ ಪಾದರಕ್ಷೆಗಳೂ ಬಳಕೆಗೆ ಬಂದವು. ಬೆನ್ನಿನ ಕವಚಗಳು ಚೂಪಾದ ಕಬ್ಬಿಣದ ಮೊಳೆಗಳಿಂದಕೂಡಿದ್ದವು.

ಮೊಗಲ್ ಯುಗಕ್ಕೆ ಸೇರಿದ ಹಲವು ವರ್ಣಚಿತ್ರಗಳಲ್ಲಿ ಕಾಜಿಂ, ಗರ್ದನಿ, ಪಟ್ಟಾ, ಇನಾಂ, ಜೇರ್ಬಂದ್, ದುಮ್ಚಿ, ಖೋಗಿ, ಉಸ್ತಕ್, ಬಲತಂಗ್, ಮೊಹ್ರಾ, ಅಂಧಿ, ಆರಿ, ಪಖರಾ ಇತ್ಯಾದಿ ಕವಚಗಳಿಂದ ಕೂಡಿದ ಕುದುರೆಗಳ ಚಿತ್ರಣಗಳಿವೆ. ಲೋಹದ ಅನೇಕ ಪಟ್ಟಿಗಳನ್ನು ಜಮಖಾನದ ಮೇಲೆ ಹೊಲೆದು ಅದನ್ನು ಆನೆಗಳ ತನುತ್ರಾಣಗಳನ್ನಾಗಿ ಉಪಯೋಗಿಸುವುದೂ ವಾಡಿಕೆಯಲ್ಲಿತ್ತು. ಆನೆಗಳ ಪೃಷ್ಠಭಾಗವನ್ನು ರಕ್ಷಿಸಲು ಸರಪಳಿಗಳಿಂದಾದ ಕವಚಗಳಿದ್ದವು. (ಕೆ.ವಿ.ಆರ್.)

**ಕವಡೆಗಳು** : ಉದರಪಾದಿಗಳಲ್ಲಿ (ಗ್ಯಾಸ್ಟ್ರೋಪೋಡ) ಒಂದಾದ ಸೈಪ್ರಿಡೀ ಕುಟುಂಬಕ್ಕೆ ಸೇರಿದ ಮನೋಹರವಾದ ಮೃದ್ವಂಗಿಗಳು. ಇವು ಉಷ್ಣವಲಯದ ಕಡಲವಾಸಿಗಳೆಂದು ಪ್ರಖ್ಯಾತಿಯಾಗಿದ್ದರೂ ಕೆಲವು ಅಪೂರ್ವ ಜಾತಿಯ ಕವಡೆಗಳು ಸಮಶೀತೋಷ್ಣವಲಯ ಹಾಗೂ ಶೀತವಲಯಗಳಲ್ಲೂ ಕಂಡುಬರುತ್ತವೆ. ಇವು ಶಾಂತಸಾಗರ ಮತ್ತು ಹಿಂದೂ ಮಹಾಸಾಗರಗಳಲ್ಲಿರುವ ಹವಳದ ದ್ವೀಪಗಳ ಆಳವಿಲ್ಲದ ನೀರಿನಲ್ಲಿ ವಿಪುಲವಾಗಿ ದೊರೆಯುತ್ತವೆ. ಆಸ್ಟ್ರೇಲಿಯದ ಗ್ರೇಟ್ ಬ್ಯಾರಿಯರ್ ರೀಫ್ ದೇಶ ಕವಡೆಗಳ ಅಚ್ಚುಮೆಚ್ಚಿನ ಬೀಡು. ಇವು ಸಾಮಾನ್ಯವಾಗಿ ಹವಳದ ದಿಣ್ಣೆಯಲ್ಲಿರುವ ಸ್ಥಳಗಳಲ್ಲಿ ಹೇರಳವಾಗಿಯೂ ಕಲ್ಲುಬಂಡೆಗಳುಳ್ಳ ಸಮುದ್ರ ತಳದಲ್ಲಿ ವಿರಳವಾಗಿಯೂ ವಾಸಿಸುತ್ತವೆ.

ಕವಡೆಗಳಷ್ಟು ಲೋಕಪ್ರಸಿದ್ಧವಾದ ಮನಮೋಹಕ ಕಠಿಣ ಚಿಪ್ಪುಗಳು (ಷೆಲ್ಸ್) ಮತ್ತಾವುವೂ ಇಲ್ಲವೆಂದು ಹೇಳಬಹುದು. ತಮ್ಮ ವೈವಿಧ್ಯಮಯ ವರ್ಣವಿನ್ಯಾಸ, ರಮಣೀಯ ಸೌಂದರ್ಯ ಮತ್ತು ಮಿರುಗುವ ನಯವಾದ ಮೈರಚನೆಗಳಿಂದ ಕವಡೆಗಳ ಚಿಪ್ಪುಗಳು ರಸಿಕರಿಗೊಂದು ರಸದೌತಣವಾಗಿವೆ. ಜೀವಂತ ಕವಡೆಪ್ರಾಣಿಗಳಂತೂ ತಮ್ಮ ಆಕರ್ಷಣೀಯ ವರ್ಣವೈಖರಿ, ರೂಪರೇಖೆಗಳು ಮತ್ತು ದಂತಪಂಕ್ತಿಗಳಿಂದ ಕಲಾಪ್ರಿಯರ ಕಣ್ಮನಗಳನ್ನು ತಣಿಸುತ್ತವೆ. ಆದ್ದರಿಂದಲೇ ಕವಡೆಗಳ ಚಿಪ್ಪುಗಳನ್ನು ಕೂಡಿಡುವ ಕಾರ್ಯ ಜನಪ್ರಿಯವಾಯಿತು. ಅವುಗಳ ಶೇಖರಣೆಯ ವಿನ್ಯಾಸ ನಾಣ್ಯ ಮತ್ತು ಸ್ಟಾಂಪುಗಳ ಸಂಗ್ರಹಣೆಗಳಷ್ಟೇ ಆಕರ್ಷಕವಾಗಿದೆ. 18-19ನೆಯ ಶತಮಾನಗಳಲ್ಲಿ ಈ ಶೇಖರಣ ಕಾರ್ಯ ಇಂಗ್ಲೆಂಡಿನಲ್ಲಿ ವಿಪುಲವಾಗಿತ್ತಲ್ಲದೆ ಮೋಜುಗಾರರ ಹಾಗೂ ಸಿರಿವಂತರ ಹವ್ಯಾಸಗಳಲ್ಲಿ ಅಗ್ರಸ್ಥಾನ ಪಡೆದಿತ್ತು. ಹೊಸ ಹೊಸ ದ್ವೀಪಗಳ ಅನ್ವೇಷಣೆಯಾದಂತೆಲ್ಲ ಅಪೂರ್ವ ಹಾಗೂ ಆಕರ್ಷಣೀಯ ಕವಡೆಗಳು ಬೆಳಕಿಗೆ ಬಂದುವು. ಅವುಗಳಿಗೆ ಹೆಚ್ಚಿನ ಬೆಲೆಯೂ ದೊರೆಯುತ್ತಿತ್ತು. ಆದರೆ ಕಾಲಕ್ರಮೇಣ ಈ ಲಾಭದಾಯಕ ವೃತ್ತಿಯಲ್ಲಿ ಬಹು ಜನರು ನಿರತರಾದ್ದರಿಂದ ಕವಡೆಗಳ ಮೌಲ್ಯ ಕುಗ್ಗುತ್ತ ಬಂದು 19ನೆಯ ಶತಮಾನದ ಅಂತ್ಯದಲ್ಲಿ ಅವುಗಳ ಶೇಖರಣ ಕಾರ್ಯ ಹಿಂದೆ ಬೀಳುವಂತಾಯಿತು. ಆದಿಯಲ್ಲಿ 30 ಪೌಂ. ಬೆಲೆ ಬಾಳುತ್ತಿದ್ದ ಆಸ್ಟ್ರೇಲಿಯದ ಅದ್ಭುತ ಕವಡೆ (*ಅಂಬಿಲಿಯಾ ಹೆಸಿಟೇಟ*) ಹೆಚ್ಚು ದೊರೆಯುವಂತಾದ ಮೇಲೆ ಅದರ ಬೆಲೆ ಇಳಿಮುಖವಾಗುತ್ತ ಬಂದು ಈಗ ಅದಕ್ಕೆ 1 ಪೌಂಡಿಗಿಂತ ಕಡಿಮೆ ಹಣಕ್ಕೂ ಗಿರಾಕಿಗಳಿಲ್ಲದಂತಾಗಿದೆ. ಆದರೆ ಕೌಮಾರ ಕವಡೆ (*ಸೈಪ್ರಿಯ ವ್ಯಾಲೆಂಬಿಯ*) ಈಗಲೂ ವಿರಳವಾದ್ದರಿಂದ ಅದು ತನ್ನ ಜನಪ್ರಿಯತೆಯನ್ನು ಇನ್ನೂ ಕಾಪಾಡಿಕೊಂಡು ಬಂದಿದೆ.

ಸಾಮಾನ್ಯವಾಗಿ ಜೀವಂತ ಕವಡೆಗಳಲ್ಲಿ ವೈಭವದ ನೈಜಸ್ವರೂಪ ಅಷ್ಟಾಗಿ ಗೋಚರ ಆಗುವುದಿಲ್ಲ. ಇವುಗಳ ದೇಹ ರಚನೆಯೇ ಇದಕ್ಕೆ ಮುಖ್ಯ ಕಾರಣ. ಊರ್ಧ್ವಮುಖವಾಗಿ ಉಬ್ಬಿದ ಕಠಿಣ ಚಿಪ್ಪು ಕವಡೆಯ ಮೆತು ದೇಹವನ್ನು ರಕ್ಷಿಸುತ್ತದೆ. ಈ ರಕ್ಷಾಕವಚಕ್ಕೆ ಅಂಟಿದಂತಿರುವ ಒಳಭಾಗದ ಆಚ್ಛಾದನ (ಮ್ಯಾಂಟಲ್) ಅಥವಾ ಕವಚ ನಯವಾದ ಶರೀರವನ್ನು ಆವರಿಸಿದೆ. ಆಚ್ಛಾದನದ ಬಹಿರ್ಜೀವ ಕಣಗಳು ಚಿಪ್ಪಿನ ಉತ್ಪಾದನೆಯನ್ನು ನಿರ್ವಹಿಸುತ್ತವೆ. ಕವಡೆಯ ಮೂತಿಯ ಸನಿಹದಲ್ಲಿ ಎರಡು ಟೆಂಟಕಲ್ಸ್‍ಗಳು ಮತ್ತು ಒಂದು ನೀರ್ನಾಳವೂ (ಸೈಫನ್) ಇವೆ. ಈ ಟೆಂಟಕಲ್ಸ್‍ಗಳು ಸ್ಪರ್ಶೇಂದ್ರಿಯಗಳಂತೆ ಕಾರ್ಯ ನಿರ್ವಹಿಸಿದರೆ, ನೀರ್ನಾಳ ಜಲಾಭಿಸರಣೆಯಲ್ಲಿ ಪಾತ್ರ ವಹಿಸುತ್ತದೆ. ಆಚ್ಛಾದನದ ಅಂಚಿನಲ್ಲಿರುವ ಉಪಾಂಗಗಳೇ ಅಲ್ಲದೆ ವಿಶಾಲವಾಗಿ ಪ್ರಸರಿಸಬಲ್ಲ ಚಪ್ಪಟೆಯಾದ ಪಾದ ಕವಡೆಗಳ ಅಂಗರಚನೆಯ ವೈಶಿಷ್ಟ್ಯ. ಇಬ್ಭಾಗವಾಗಿರುವ ಆಚ್ಛಾದನ ಕವಡೆಯ ಚಿಪ್ಪನ್ನು ಸಂಪೂರ್ಣವಾಗಿ ಮುಚ್ಚಬಲ್ಲುದು. ಆದ್ದರಿಂದಲೇ ಜೀವಂತ ಕವಡೆಯ ನಿಜಸ್ವರೂಪ ಸ್ಪಷ್ಟವಾಗಿ ಕಾಣುವುದಿಲ್ಲ. ಚಿಪ್ಪಿನ ಅಧೋಭಾಗದ ನೀಳದ್ವಾರದ ಮೂಲಕ ಹೊರಚಾಚಿದ ಇಡೀ ಶರೀರವನ್ನು ಒಳಕ್ಕೆಳೆದುಕೊಳ್ಳಬಹುದು. ಆಚ್ಛಾದನದ ಎರಡೂ ಪಟಲಗಳು ಚಿಪ್ಪಿನ ಮೇಲ್ಮೈಯಲ್ಲಿ ಸಂಧಿಸುವ ಸ್ಥಳದಲ್ಲಿ ಒಂದು ನೀಳವಾದ ವರ್ಣರೇಖೆ ಇದೆ. ಇದು ಕೆಲವು ಕವಡೆಗಳಲ್ಲಿ ಚಿರಕಾಲ ಉಳಿಯಬಹುದು. ಕವಡೆ ಪ್ರಾಣಿ ಅತಿ ಪುಕ್ಕಲು ಜೀವಿ. ಅಕ್ಕಪಕ್ಕದಲ್ಲಿ ಅಲ್ಪ ಬದಲಾವಣೆಯಾದರೂ ತನ್ನ ಮೃದುವಾದ ಶರೀರವನ್ನು ಕೂಡಲೆ ರಕ್ಷಣಾಕವಚದೊಳಕ್ಕೆ ಎಳೆದುಕೊಳ್ಳುತ್ತದೆ; ಇರುಳಲ್ಲಿ ಚುರುಕಾಗಿದ್ದು ಆಹಾರಾನ್ವೇಷಣೆಯಲ್ಲಿ ತೊಡಗುತ್ತದೆ. ಸಾಮಾನ್ಯವಾಗಿ ಹೆಡ್ರ ಮುಂತಾದ ಸಮುದ್ರವಾಸಿಗಳೇ ಕವಡೆಗಳ ಮುಖ್ಯ ಆಹಾರ.

ಈ ಪ್ರಾಣಿಗಳ ಚಿಪ್ಪಿನ ಬೆಳೆವಣಿಗೆ ಇಡೀ ಮೃದ್ವಂಗಿಗಳಲ್ಲೇ ವಿಶಿಷ್ಟರೀತಿಯದೆನಿಸಿದೆ. ಎಳೆಯ ಕವಡೆ ಪ್ರೌಢ ಕವಡೆಯಂತಿರುವುದಿಲ್ಲ. ಬೆಳೆವಣಿಗೆಯ ಅನೇಕ ಘಟ್ಟ ಗಳಲ್ಲಿ ವಿಶಿಷ್ಟ ಬದಲಾವಣೆಗಳು ಕಂಡುಬರುತ್ತವೆ. ಮರಿಕವಡೆಯ ರಕ್ಷಾಕವಚ ಒಂದು ನೀಳವಾದ ಅಕ್ಷದ ಸುತ್ತಲೂ ವಕ್ರವಾಗಿ ಸುರುಳಿ ಸುತ್ತಿರುತ್ತದೆ. ಚಿಪ್ಪಿನ ದ್ವಾರ ಗುಂಡಗೂ ಬಹು ಅಗಲವಾಗಿಯೂ ಇದೆ. ಕೇಂದ್ರದಲ್ಲಿನ ಅಕ್ಷವೂ ದ್ವಾರದ ಅಂಚಿನಲ್ಲಿರುವ ತುಟಿಯೂ ಸ್ಥೂಲವಾದಂತೆಲ್ಲ ಚಿಪ್ಪು ಒಳಮುಖವಾಗಿ ಬೆಳೆಯಲುಪಕ್ರಮಿಸುತ್ತದೆ. ಆದ್ದರಿಂದ ಹಳ್ಳದಿಣ್ಣೆಗಳಿಂದ ಕೂಡಿದ್ದ ಚಿಪ್ಪಿನ ಹೊರಮೈ ನುಣುಪಾಗಿ ಮಾರ್ಪಾಟಾಗುವುದಲ್ಲದೆ ಗುಂಡಗಿದ್ದ ದ್ವಾರ ನೀಳವಾಗುತ್ತದೆ. ಕಾಲಕ್ರಮೇಣ ಚಿಪ್ಪಿನ ಸುರುಳಿಗಳು ಮಾಯವಾಗಿ, ವರ್ಣರಂಜಿತ ರೇಖೆಗಳನ್ನೂ ಚುಕ್ಕೆಗಳಿಂದ ಕೂಡಿದ ವಜ್ರಾಗಾರೆಯಂತೆ ಹೊಳೆಯುವ ಕಠಿಣ ಚಿಪ್ಪನ್ನೂ ಉಳ್ಳ ಆಕರ್ಷಣೀಯ ಪ್ರೌಢ ಕವಡೆ ಉದ್ಭವಿಸುತ್ತದೆ. ಈ ಮಧ್ಯೆ ಚಿಪ್ಪಿನ ಅಂತಃಪಟಲಗಳು ಕಣ್ಮರೆಯಾಗುತ್ತಿದ್ದಂತೆ, ನೀಳದ್ವಾರದ ಇಕ್ಕೆಡೆಗಳೂ ದಂತಪಂಕ್ತಿಗಳು ಗೋಚರಿಸುತ್ತವೆ.

ಕವಡೆಗಳು ತಮ್ಮ ಬೆಳೆವಣಿಗೆಯ ಕಾಲದಲ್ಲಿ ಸಮುದ್ರ ಶಿಲೆ ಮುಂತಾದ ಕಠಿಣ ಪದಾರ್ಥಗಳನ್ನು ಕರಗಿಸಿ, ಅತ್ಯಲ್ಪ ಕಾಲದಲ್ಲೇ ಸೂಕ್ತವಸ್ತುಗಳಿಂದ ಒಪ್ಪ ಮಾಡಿಕೊಳ್ಳಬಲ್ಲವೆಂದು ಪ್ರತೀತಿ. ಇವುಗಳ ಈ ವಿಶಿಷ್ಟ ವರ್ತನೆಯಿಂದಲೇ ಪರಿಶುದ್ಧವಾದ ಅರಗು (ಷೆಲ್ಲಾಕ್) ಉತ್ಪತ್ತಿಯಾಗುತ್ತದೆಂದು ಹಲವರ ಅಭಿಮತ.

ಪದಾರ್ಥಗಳನ್ನು ಶೇಖರಿಸುವ ಹವ್ಯಾಸಗಳಲ್ಲೆಲ್ಲ ಕವಡೆಗಳ ಶೇಖರಣೆ ಅಗ್ರಸ್ಥಾನ ಪಡೆಯಲು ಈ ಕೆಳಕಂಡ ಅಂಶಗಳೇ ಕಾರಣವೆನಿಸಿವೆ;

1. ಖನಿಜಗಳಂತೆ ಇವು ಭಾರವಾಗಿಲ್ಲ. ಆದ್ದರಿಂದ ಇವನ್ನು ಸ್ಥಳದಿಂದ ಸ್ಥಳಕ್ಕೆ ಬಹು ಸುಲಭವಾಗಿ ಒಯ್ಯಬಹುದು.

2. ಉಗ್ರಾಣಗಳಲ್ಲಿ ಶೇಖರಿಸಲು ಅಷ್ಟಾಗಿ ಮುನ್ನೆಚ್ಚರಿಕೆ ವಹಿಸಬೇಕಾದ್ದಿಲ್ಲ.

3. ಕವಡೆಗಳು ಕ್ರಿಮಿಕೀಟಗಳಿಂದ ಒದಗಬಹುದಾದ ಬಾಧೆಗಳಿಂದ ವಿಮುಕ್ತವಾಗಿರುವುವಲ್ಲದೆ ಯಾವ ಶಿಲೀಂಧ್ರ ರೋಗಕ್ಕೂ (ಫಂಗಲ್ ಇನ್‍ಫೆಕ್ಷನ್) ತುತ್ತಾಗುವುದಿಲ್ಲ.

4. ಕವಡೆಗಳ ಮೇಲೆ ಕೆತ್ತಿದ ನಕ್ಷೆ ಮುಂತಾದ ಇಚ್ಛಾಚಿತ್ರಗಳು ಪ್ರಕೃತಿಯ ಪ್ರಕೋಪಕ್ಕೆ ಮಣಿಯದೆ ಚಿರಕಾಲ ನಿಲ್ಲಬಲ್ಲವು.

5. ವರ್ಗೀಕರಣ ಹಾಗೂ ವಿಕಾಸವಾದದ ಅಭ್ಯಾಸದಲ್ಲಿ ನಿರತರಾಗಿರುವ ಸಂಶೋಧಕರಿಗೆ ಕವಡೆಗಳ ಅಧ್ಯಯನ ಇಡೀ ಶಂಖಶಾಸ್ತ್ರದ (ಕಾಂಕಾಲಜಿ) ಯಥಾರ್ಥದರ್ಶನಕ್ಕೆ ನೆರವಾಗುತ್ತದೆ.

6. ಮನರಂಜನೆಗೆ ಯೋಗ್ಯವಾದ ಆಕರ್ಷಣೀಯ ಕವಡೆಗಳನ್ನು ಸಂಗ್ರಹಿಸಲು ಅನುಸರಿಸುವ ಅತಿ ಖರ್ಚಿಲ್ಲದ ಸರಳ ವಿಧಾನ ಜನಪ್ರಿಯವಾಗಿದೆ. ಬಾಗ್ದಾದಿನ ಚರಿತ್ರಕಾರ ಮಸೂದಿ ಉಲ್ಲೇಖಿಸಿರುವಂತೆ ನಮ್ಮ ಪೂರ್ವಜರು ತೆಂಗಿನ ಗರಿಗಳನ್ನು ನೀರಿನ ಮೇಲೆ ನಿರ್ದಿಷ್ಟವಾದ

ಜಾಗಗಳಲ್ಲಿ ಹರಡಿ, ಗರಿಗಳಿಗೆ ಅಂಟಿದ ಕವಡೆಗಳಲ್ಲಿ ಬೇಕಾದುದನ್ನು ಹೆಕ್ಕುತ್ತಿದ್ದರು. ಈಗಲೂ ಶೇಖರಣ ಕಾರ್ಯದಲ್ಲಿ ಕೇವಲ ಬುಟ್ಟಿ, ಚೀಲ, ಸಣ್ಣ ಪೆಟ್ಟಿಗೆ, ಸುತ್ತಿಗೆ, ಉಳಿ, ಜರಡಿ ಮುಂತಾದ ಅಲ್ಪ ಬೆಲೆ ಬಾಳುವ ಉಪಕರಣಗಳನ್ನು ಉಪಯೋಗಿಸುತ್ತಾರೆ.

7. ಲೋಹ ನಾಣ್ಯಗಳ ಬಳಕೆಗೆ ಮುನ್ನ ಕವಡೆಗಳನ್ನೇ ನಾಣ್ಯರೂಪದಲ್ಲಿ ಬಳಸುತ್ತಿದ್ದರು. 19ನೆಯ ಶತಮಾನದ ಮಧ್ಯಭಾಗದ ವರೆಗೂ ಅಮೆರಿಕ, ಏಷ್ಯ ಮತ್ತು ಆಫ್ರಿಕ ಖಂಡಗಳ ಅನೇಕ ಕಡೆಗಳಲ್ಲಿ ಪದಾರ್ಥಗಳನ್ನು ಕೊಳ್ಳುವುದಕ್ಕಾಗಿ ಕವಡೆಗಳನ್ನು ಉಪಯೋಗಿಸುತ್ತಿದ್ದರು. ದೆಹಲಿ, ಕಾಶಿ ಮೊದಲಾದ ನಗರಗಳಲ್ಲೂ ಇವು ನಾಣ್ಯರೂಪದಲ್ಲಿ ಚಲಾವಣೆಯಲ್ಲಿದ್ದುವು. ವಿಶ್ವದ ನಾನಾ ಭಾಗಗಳಲ್ಲಿ ಬಿಡಿಬಿಡಿಯಾಗಿ ಬಳಸಿದರೂ ಆಫ್ರಿಕದ ಗುಡ್ಡಗಾಡು ಜನರು ಕವಡೆಗಳನ್ನು 5, 10, 15, 20, 50 ಮತ್ತು 100ರ ಸರಗಳ ರೂಪದಲ್ಲಿ ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಅದರ ಮೌಲ್ಯ ದೇಶದಿಂದ ದೇಶಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ ಮತ್ತು ಜನಾಂಗದಿಂದ ಜನಾಂಗಕ್ಕೆ ಬೇರೆಬೇರೆಯಾಗಿತ್ತಲ್ಲದೆ ಅನೇಕ ಬಾರಿ ಅಪಮೌಲ್ಯದ ಅಪಕೀರ್ತಿಗೂ ತುತ್ತಾಗಿತ್ತೆಂದು ಕಂಡುಬರುತ್ತದೆ. ಉಗಾಂಡದಲ್ಲಿ ಕವಡೆ ನಾಣ್ಯರೂಪದಲ್ಲಿ ಚಲಾವಣೆಗೆ ಬಂದಾಗ, ಎರಡು ಕವಡೆಗಳಿಗೆ ಒಬ್ಬ ಗುಲಾಮ ದೊರೆಯುತ್ತಿದ್ದನಂತೆ! ಆದರೆ ಒಂದು ಶತಮಾನದ ಅನಂತರ ಅವನ ಬೆಲೆ 2,000 ದಿಂದ 3,000ಕ್ಕೂ ಎರಡು ಶತಮಾನಗಳ ಅನಂತರ 10,000 ಕವಡೆಗಳಿಗೂ ಏರಿತ್ತೆಂದು ಪ್ರತೀತಿ. ಆಫ್ರಿಕದಲ್ಲಿ ಗುಲಾಮರನ್ನು ಕೊಳ್ಳಲು ಕವಡೆಗಳನ್ನು ಬಳಸುತ್ತಿದ್ದುದರಿಂದ ಕವಡೆ ವ್ಯಾಪಾರ ಬಹು ಲಾಭದಾಯಕವಾಗಿತ್ತು. ಮಾಲ್ಡೀವ್ ಮಫಿಯಾ ದ್ವೀಪಗಳು ಕವಡೆಗಳನ್ನು ಕಲೆ ಹಾಕುವ ಭಂಡಾರಗಳಾಗಿದ್ದುವು. ಅರಬ್ಬೀಯರು, ಆಂಗ್ಲೇಯರು, ಫ್ರೆಂಚರು ಮತ್ತು ಡಚ್ಚರು ವಿಶ್ವದ ಅತಿ ದೊಡ್ಡ ಕವಡೆ ವಣಿಕರಾಗಿದ್ದರು.

ಸಹಸ್ರಾರು ವರ್ಷಗಳ ಕಾಲ ನಾಣ್ಯರೂಪದಲ್ಲಿ ಮೆರೆದ ಕವಡೆಗಳನ್ನು ಬಂಗಾಳೀಯರು ದೀಪಾವಳಿಯಂದು ಧನಲಕ್ಷ್ಮಿಯ ಸಂಕೇತವಾಗಿ ಈಗಲೂ ಪೂಜಿಸುತ್ತಾರೆ. ಆಂಧ್ರದ ಏರುಕಾಲ ಗುಡ್ಡಗಾಡು ಪಂಗಡದವರಲ್ಲಿ ವರನ ಮನೆಯವರು ವಧುವಿಗೆ ಕವಡೆಗಳ ರೂಪದಲ್ಲಿ ತೆರಕೊಡುವ ಸಂಪ್ರದಾಯ ಇಂದಿಗೂ ಸಾಂಕೇತಿಕವಾಗಿ ಉಳಿದುಕೊಂಡಿರುವುದು ಕಂಡುಬರುತ್ತದೆ. ಒರಿಸ್ಸ ಮತ್ತು ಆಂಧ್ರ ಜನಾಂಗಗಳಲ್ಲಿ ಕವಡೆ ಮತ್ತು ನಿತ್ಯೋಪಯೋಗಿ ಸಾಮಾನುಗಳುಳ್ಳ ಕವಡೆಪೆಟ್ಟಿಗೆಯನ್ನು ವಧುವಿಗೆ ಕೊಡುವುದು ವಾಡಿಕೆ. ಬಂಗಾಳದ ಕೆಲವು ಬುಡಕಟ್ಟಿನವರು ಮಕ್ಕಳಿಗೆ ಕವಡೆ ಸಂಖ್ಯೆಯ ಹೆಸರನ್ನಿಟ್ಟರೆ ಶುಭಪ್ರದವೆಂದು ನಂಬಿ ಎಕ್ಕುಡಿ (ಒಂದು ಕವಡೆ), ದೊಕ್ಕುಡಿ (ಎರಡು ಕವಡೆ), ಪಾಂಚಕುಡಿ (ಐದು ಕವಡೆ), ಸಾತ್ಕುಡಿ (ಏಳು ಕವಡೆ) ಎಂದು ಮುಂತಾಗಿ ನಾಮಕರಣ ಮಾಡುವುದುಂಟು.

ಒರಿಸ್ಸದಲ್ಲಿ ಅರ್ಥ ಮಂತ್ರಿಯನ್ನು ಕವಡೆ ಸಚಿವರೆಂಬ ಅಡ್ಡ ಹೆಸರಿನಿಂದ ಕರೆಯುವುದು ವಾಡಿಕೆಯಲ್ಲಿತ್ತು. ಆಫ್ರಿಕದ ಆದಿ ಜನಾಂಗ ದೇಹಾಲಂಕಾರಕ್ಕಾಗಿ ಆಭರಣಗಳ ರೂಪದಲ್ಲಿ ಕವಡೆಗಳನ್ನು ಬಳಸುತ್ತಿತ್ತೆಂದು ಅನೇಕ ಪ್ರಾಚೀನ ಗ್ರಂಥಗಳು ಉಲ್ಲೇಖಿಸಿವೆ. ಲಂಬಾಣಿ ಜನರು ಈಗಲೂ ಕವಡೆಗಳನ್ನು ಆಭರಣವಾಗಿ ಧರಿಸುವುದನ್ನು ನೋಡಬಹುದು. ಬಂಗಾರ ಕವಡೆಯನ್ನು (*ಸೈಪ್ರಿಯ ಆರಾನ್ ಷಿಯ*) ಕೊರಳಲ್ಲಿ ಧರಿಸಿದರೆ ಅಗ್ರನಾಯಕನ ಹೆಗ್ಗುರುತೆಂದು ಫಿಜಿ ಮತ್ತು ಟೊಂಗಾ ಬುಡಕಟ್ಟಿನವರ ಅಭಿಪ್ರಾಯ. ಮಂತ್ರಿಸಲ್ಪಟ್ಟ ಕೆಲವು ಬಗೆಯ ಕವಡೆಗಳನ್ನು ತಾಯಿತದ ರೂಪದಲ್ಲಿ ಕೊರಳಲ್ಲಾಗಲಿ ನಡುವಿನಲ್ಲಾಗಲೀ ಕಟ್ಟಿಕೊಂಡರೆ ಬಾಲಾರಿಷ್ಟ, ಬಂಜೆತನ ಮುಂತಾದ ಅನಿಷ್ಟಗಳು ಕಣ್ಮರೆಯಾಗುವುವೆಂದು ಆದಿ ಜನಾಂಗದವರ ಅಭಿಮತ. ಶಕುನಗಳ ಫಲಾಫಲಗಳನ್ನು ನಿರ್ಧರಿಸಲು ಭಾರತೀಯ ಜ್ಯೋತಿಷಿಗಳು ಬಹುವಾಗಿ ಕವಡೆ ಶಾಸ್ತ್ರಕ್ಕೆ ಮಾರುಹೋಗುತ್ತಾರೆ.

ಸುಮಾರು 165ಕ್ಕೂ ಮಿಗಿಲಾದ ಪ್ರಭೇದಗಳುಳ್ಳ ಕವಡೆಗಳ ಬಳಗವನ್ನು ಅವುಗಳ ಆಕೃತಿ ಮತ್ತು ವರ್ಣದೃಷ್ಟಿಯಿಂದ ವರ್ಗೀಕರಿಸುತ್ತಾರೆ. ಹಣಪ್ರಪಂಚದಲ್ಲಿ ನಾಣ್ಯ ಕವಡೆ (ಮಾನೆಟೇರಿಯ ಮೊನೇಟ), ಉಂಗುರ ಕವಡೆ (ಸೈಪ್ರಿಯ ಆನ್ಯುಲಸ್) ಮತ್ತು ಕಿತ್ತಳೆ ಕವಡೆ (ಸೈ. ಆರ್ಕ್ಯಾಷಿಯ) ಈ ಪ್ರಭೇದಗಳು ಚಲಾವಣೆಯಲ್ಲಿದ್ದುವು. ಸುಮಾರು ಕಿತ್ತಳೆ ಕವಡೆ (ಸೈ. ಆರ್ಕ್ಯಾಷಿಯ) ಈ ಪ್ರಭೇದಗಳು ಚಲಾವಣೆಯಲ್ಲಿದ್ದುವು. ಸುಮಾರು ಒಂದಂಗುಲ ಉದ್ದದ ನಾಣ್ಯಕವಡೆಯನ್ನು ಪ್ರಪಂಚದ ಎಲ್ಲ ಭಾಗಗಳಲ್ಲೂ ನಾಣ್ಯರೂಪದಲ್ಲಿ ಬಳಸುತ್ತಿದ್ದರು. ಉಂಗುರ ಕವಡೆ ಗಾಜಿನಂತೆ ಹೊಳೆಯುತ್ತದೆ. ಇದು ನ್ಯೂಗಿನಿ ಮೊದಲಾದ ಕಡೆ ಹೆಚ್ಚಿಗೆ ಚಲಾವಣೆಯಲ್ಲಿತ್ತು. ಕಿತ್ತಳೆ ಕವಡೆಗಳು ಅರುಣ ವರ್ಣದಿಂದ ಕೂಡಿರುವುದರಿಂದ ಇವನ್ನು ಬಂಗಾರದ ಕವಡೆ ಎಂದೂ ಕರೆಯುತ್ತಾರೆ. ಇವನ್ನು ಆಫ್ರಿಕದ ಗುಡ್ಡಗಾಡು ಜನರು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಇಷ್ಟೇ ಅಲ್ಲದೆ ಮನರಂಜನೆಗೂ ಆಭರಣಗಳಿಗೂ ನಾನಾ ಬಗೆಯ ಕವಡೆಯನ್ನು ಉಪಯೋಗಿಸುತ್ತಿದ್ದರು. ಈ ಕ್ಷೇತ್ರಗಳಲ್ಲಿ ಬಳಕೆಯಲ್ಲಿದ್ದ ಕವಡೆಗಳಲ್ಲಿ ಕೇಸರಿ ಕವಡೆ (ಸೈ. ಟೈಗ್ರಿಸ್), ಕುಬ್ಜ ಕವಡೆ (ಸೈ. ಡೆಸಿಪಿಯನ್ಸ್), ಅದ್ಭುತ ಕವಡೆ (ಅಂಬಿಲಿಯ ಹೆಸಿಟೇಟ), ಕೂರ್ಮ ಕವಡೆ (ಸೈ. ಟೆಸ್ಟೂಡಿನೇರಿಯ), ನಕ್ಷೆಕವಡೆ (ಸೈ. ಮ್ಯಾಪ್ಪಾ), ಅಕ್ಷಿ ಕವಡೆ (ಸೈ. ಆರ್ಗಸ್), ಬೂದು ಕವಡೆ (ಸೈ. ಇಸಾಬೆಲ), ವಕ್ರ ಕವಡೆ (ಸೈ. ಜಿಗ್‌ಬಾಗ್), ವಿದೂಷಕ ಕವಡೆ (ಸೈ. ಸ್ಕುದ್ರಾ)–ಇವು ಮುಖ್ಯವಾದವು. (ಎಸ್.ಎಚ್.ಒ.)

**ಕವಣೆ :** ಕಲ್ಲು, ಕೂರಂಬು ಮುಂತಾದ ಆಯುಧಗಳನ್ನು ಗುರಿಯೆಡೆಗೆ ಬಲಸಹಿತ ಹೊಡೆಯಲು ಉಪಯೋಗಿಸುವ ಸಾಧನ (ಕ್ಯಾಟಪುಲ್ಟ್). ಭಾರವಾದ ಒಂದು ಮರದ




**ವಿವಿಧ ಬಗೆಯ ಕವಣೆಯಂತ್ರಗಳು**
**1. ಪ್ರಾಚೀನ ಕಾಲದ ಯುದ್ಧಗಳಲ್ಲಿ ಬಳಸುತ್ತಿದ್ದ ಬಲಿಷ್ಟ ಅಥವಾ ಮ್ಯಾಂಗೊನೆಲ್ ಕವಣೆ ಯಂತ್ರ 2. ಹಿಂದಿನ ಕಾಲದ ಸಮರಗಳಲ್ಲಿ ಉಪಯೋಗದಲ್ಲಿದ್ದ ಕವಣೆಯಂತ್ರ 3. ಮಧ್ಯಯುಗದ ಟ್ರೆಬ್ಯೂಷೆಟ್ ಕವಣೆಯಂತ್ರ; 4. ಈಗ ಬಳಕೆಯಲ್ಲಿರುವ ಸಾಮಾನ್ಯ ಕವಣೆಯಂತ್ರ .**

ಚೌಕಟ್ಟು, ಅದರೊಳಗೆ ಹಾಯ್ದಾಡುವಂಥ ಹಲಗೆ, ಆ ಹಲಗೆಯ ನಡುವೆ ಶಸ್ತ್ರವನ್ನು ಚಿಮ್ಮಿಸುವಂತೆ ಮಾಡುವ ಯಂತ್ರ ಸಜ್ಜಿಕೆ, ಅದರ ನಡುವೆ ಬಿಲ್ಲಿನ ಹೆದೆಯಂತಿರುವ ದಾರ–ಇವಿಷ್ಟು ಯಂತ್ರದ ಸ್ಥೂಲ ವಿವರಣೆ. ಪ್ರಯೋಗ ಕಾಲದಲ್ಲಿ, ಬೇಕಾಗಿರುವ ದಿಕ್ಕಿಗೆ ಬೇಕಾದಷ್ಟು ಎತ್ತರಕ್ಕೆ ಈ ಮರದ ಚೌಕಟ್ಟನ್ನು ಇರಿಸುತ್ತಿದ್ದರು.

ಬಂಡೆಗಳನ್ನು ಎಸೆಯುವ ಯಂತ್ರ ದೊಡ್ಡದಾಗಿತ್ತು. ಎಸೆತದ ದೂರ ಮಿಕ್ಕುದರಂತೆ ಇದರಲ್ಲೂ ಸುಮಾರು 400 ಗಜಗಳಷ್ಟು; ಎಸೆವ ವಸ್ತು ಮಾತ್ರ ಹೆಚ್ಚು ತೂಕವುಳ್ಳದ್ದು. ಬಿರುಸಾಗಿ ಎಸೆಯುವ ಕವಣೆಯಂತ್ರ ಅಥವಾ ಬಹಳ ಉದ್ದವಾದ ಯಂತ್ರ ಸಾಗಣೆಯ ದೃಷ್ಟಿಯಿಂದ ತುಂಬ ತೊಂದರೆಯದಾಗಿತ್ತು. ಇಂದು ಎರಡು ವಿಧದ ಚಿಕ್ಕ ಕವಣೆಗಳು ಪ್ರಚಾರದಲ್ಲಿವೆ. ಮೊದಲನೆಯದರಲ್ಲಿ ಒಂದು ಕವಲು ಕೋಲು ಇದೆ. ಅದರ ಎರಡು ಕೊನೆಗಳಿಗೆ ಒಂದು ಹಿಗ್ಗುದಾರವನ್ನು ಬಿಗಿದು ಕಟ್ಟಿರುತ್ತಾರೆ. ಇದರ ನಡುವೆ ಒಂದು ಸಣ್ಣ ಕಲ್ಲನ್ನಿಟ್ಟು ಅದನ್ನು ಹಿಂದಕ್ಕೆ ಜಗ್ಗಿ ಕೈಬಿಡುತ್ತಾರೆ. ಎರಡನೆಯದು ಒಂದು ಬಿಲ್ಲು. ಅದರ ಸಿಂಜಿನಿಯನ್ನು ಸಾಮಾನ್ಯವಾಗಿ ಎರಡು ದಾರಗಳಿಂದ ಮಾಡಿರುತ್ತಾರೆ. ಸಿಂಜಿನಿಯ ನಡುವಿನಲ್ಲಿ ಅವೆರಡನ್ನೂ ಜೋಡಿಸಿ ಹಿಡಿದಿರುವ ಒಂದು ತೆಳುಪಟ್ಟಿ ಇದೆ. ಇಲ್ಲಿ ಕಲ್ಲನಿಟ್ಟು ಬಿಲ್ಲನ್ನು ಹೂಡಿ ಗುರಿಯೆಡೆಗೆ ಎಸೆಯುತ್ತಾರೆ. ಕವಣೆಯಿಂದ ಎಸೆದ ಕಲ್ಲಿಗೆ ಕವಣೆಕಲ್ಲು ಎಂದು ಹೆಸರು. (ಎ.ಎನ್.ಎಸ್.ಎಂ.)

**ಕವನಮುನಿ :** ಶಾಕ್ಯಮುನಿಬುದ್ಧನೂ ಸೇರಿ ಏರ್ಪಡುವ ಇಪ್ಪತ್ತನಾಲ್ಕು ಮಂದಿ ಬುದ್ಧರಲ್ಲಿ ಇಪ್ಪತ್ತಮೂರನೆಯವ. ಪಾಳಿಯಲ್ಲಿ ಇವನಿಗೆ ಕೋಣಾಗಮನೆಂಬ ಹೆಸರಿದೆ. ಅಶೋಕ ಕನಕಮುನಿಯ ಸ್ತೂಪವನ್ನು ಸಂದರ್ಶಿಸಿ ಶಿಥಿಸಿ ಶಿಥಿಲವಾಗಿದ್ದ ಆ ಸ್ತೂಪವನ್ನು ಮಾಡಿಸಿದನೆಂದು ಶಿಲಾಶಾಸನವೊಂದು ಹೇಳುತ್ತದೆ. ಎಂದಮೇಲೆ ಕನಕಮುನಿ ಐತಿಹಾಸಿಕ ವ್ಯಕ್ತಿಯಾಗಿದ್ದನೆಂದು ತಿಳಿಯಬಹುದು. ಬುದ್ಧವಂಶದಲ್ಲಿ ಉಲ್ಲೇಖಿತವಾಗಿರುವ ಇಪ್ಪತ್ತನಾಲ್ಕು ಬುದ್ಧರಲ್ಲಿ ಬಹುಶಃ ಬಹುಮಂದಿ ಚಾರಿತ್ರಿಕ ವ್ಯಕ್ತಿಗಳಿಲ್ಲ. (ಎಸ್.ಕೆ.ಆರ್.)

**ಕವಲಾಹಾರ :** ಕವಲ (ಕವಳ) ಎಂದರೆ ತುತ್ತು. ಆಹಾರವನ್ನು ತೆಗೆದುಕೊಳ್ಳವಾಗ ಒಂದು ಊಟದಲ್ಲಿ ಎಷ್ಟು ಕವಲಗಳಿರಬೇಕೆಂಬುದನ್ನು ಧಾರ್ಮಿಕವಾಗಿ ಇಲ್ಲಿ ಪರಿಶೀಲಿಸಿದೆ. ಕವಾಲಾಹಾರದಲ್ಲಿ ಎರಡು ಬಗೆಯುಂಟು_ಆಧಿಹರ ಮತ್ತು ವ್ಯಾಧಿಹರ ಎಂಬುದಾಗಿ.

ಮನಸ್ಸು, ಬುದ್ಧಿ, ಜೀವಗಳಿಗೆ ಸಂಬಂಧವಾದ ನೋವುಗಳನ್ನು ತೆಗೆದು ಅವುಗಳ ಮೂಲಕ ಸುಖಹೇತುವಾದುದು ಆಧಿಹರ. ದೇಹ, ಇಂದ್ರಿಯಗಳಲ್ಲಿ ಒದಗುವ ನೋವನ್ನು ತೆಗೆದು ಆ ಮೂಲಕ ಸುಖಕಾರಿಯಾಗುವುದು ವ್ಯಾಧಿಹರ. ಒಬ್ಬ ಜೀವಿ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಜೀವಗಳ ಸಮಷ್ಟಿಯಾಗಿಯೇ ಬಾಳಬೇಕಾದುದರಿಂದ ಎರಡೂ ಬಗೆಯ ಕವಲಾಹಾರ ಅವನಿಗೆ ಬೇಕಾಗುವುದು. ಆ+ಹ್ರಿಯತೆ ಇತಿ ಆಹಾರಃ ; ಅಂದರೆ ಮನಸ್ಸು, ಬುದ್ಧಿ, ಇಂದ್ರಿಯ ಮತ್ತು ದೇಹಗಳಿಂದ ತನ್ನೆಡೆಗೆ ಯಾವುದನ್ನು ವ್ಯಕ್ತಿ ಸೆಳೆದುಕೊಳ್ಳುವನೋ ಅದು. ಇದು ಹಿತಕರವೂ ಕೇವಲ ಪ್ರಿಯಕರವೂ ಆಗಬಹುದು. ಹಿತಕರವನ್ನು ಮಾತ್ರ ಇಲ್ಲಿ ಹೇಳಿದೆ. ಇದು ಶ್ರುತಿ, ಸ್ಮೃತಿ, ಸಂಪ್ರದಾಯಗಳಂತೆಯೂ ಬೇರೆ ಸಂಪ್ರದಾಯಗಳಂತೆಯೂ ಎರಡೂ ಬಗೆಯಾಗಿ ಕಾಣಬರುತ್ತದೆ. ಸಾಧಾರಣವಾಗಿ ಮುನಿಯಾಗಿ ಅಂದರೆ ಮನನಶೀಲನಾಗಿ ಬಾಳುವವನಿಗೆ ಅವನ ನಿಸರ್ಗದ ತಾತ್ತ್ವಕವಾದ ಒಳಗುಟ್ಟನ್ನು ಚಿಂತಿಸಲು ಸಪ್ತಧಾತುಮಯ ಮತ್ತು ತ್ರಿದೋಷಮಯ ತ್ರಿನಾಡೀಮಯವಾದ ಈ ದೇಹ ಯಾವ ಬಗೆಯಲ್ಲಿದ್ದರೆ ಮಾತ್ರ ತನ್ನ ಮುಖ್ಯ ಲಕ್ಷ್ಯವಾದ ಮನನಕಾರ್ಯ ಸಾಗೀತು ಎಂಬುದನ್ನು ಆಳವಾಗಿ ಅಧ್ಯಯನ ಮಾಡಿ ಅದಕ್ಕೆ ಹೊಂದಿಕೊಳ್ಳುವ ತೆರದಲ್ಲಿ ಯಥೋಚಿತವಾದ ಕ್ಲುಪ್ತಾಹಾರ, ವಿಹಾರಗಳು ಅನಿವಾರ್ಯವಾಗುವುದು.

ಅಲ್ಲಿ ಸಾಮಾನ್ಯವಾಗಿ ಅಷ್ಟಾ ಗ್ರಾಸಾಃ ಮುನೇಃ ಭಕ್ಷ್ಯಾಃ-ಅಂದರೆ ಎಂಟು ಕವಲುಗಳು ಮಾತ್ರ ಮುನ್ಯಾಹಾರವಾಗುವುದು. ಅಲ್ಲದೇ ವಿಶೇಷವಾಗಿ ಚಾಂದ್ರಾಯಣ ಎಂಬ ವ್ರತಕ್ಕೆ ಸಂಬಂಧಪಟ್ಟಂತೆ ಮುನಿಯ ಕವಲಾಹಾರ ಕೃಷ್ಣಪಕ್ಷ ಪ್ರಥಮಾ ತಿಥಿಯಂದು 15 ಕವಲದಿಂದ ಪ್ರಾರಂಭವಾಗಿ ಪ್ರತಿದಿನ ಒಂದೊಂದು ತುತ್ತು ಕಡಿಮೆಯಾಗುತ್ತ ಅಮಾವಾಸ್ಯೆಯಂದು ಅನಾಹಾರವಾಗಿದ್ದು ಮತ್ತೆ ಶುಕ್ಲಪಕ್ಷ ಪ್ರಥಮಾ ತಿಥಿಯಂದು ಒಂದು ಕವಲದಂತೆ ಪ್ರಾರಂಭಾಗಿ ಪ್ರತಿದಿನ ಒಂದೊಂದು ತುತ್ತು ಹೆಚ್ಚುತ್ತ ಪೂರ್ಣಿಮೆಯಂದು 15 ಕವಲವಾಗಿ ಮೂವತ್ತು ದಿನಗಳಲ್ಲಿ ಈ ವ್ರತ ಸಮಾಪ್ತಿಯಾಗುವುದು. ಇದು ಪಿಪೀಲಿಕಾಮಧ್ಯ ಚಾಂದ್ರಾಯಣ. ಅಂದರೆ ಇರುವೆಯ ದೇಹಾಕೃತಿಯಂತೆ ಮಧ್ಯೆ ಕ್ಷೀಣವಾಗಿರುವುದು. ಅಂತೆಯೇ ಶುಕ್ಲಪಕ್ಷ ಪ್ರಥಮೆಯಂದು ಒಂದು ಕವಲದಿಂದ ಪ್ರಾರಂಭಿಸಿ ದಿನವೂ ಒಂದೊಂದು ಕವಲ ಹೆಚ್ಚುತ್ತ ಪೂರ್ಣಿಮೆಯಂದು 15 ಕವಲ ಪೂರ್ತಿ ಸ್ವೀಕರಿಸಿ ಮತ್ತೆ ಒಂದೊಂದು ಕವಲವಾಗಿ ಕ್ಷೀಣವಾಗುತ್ತ ಅಮಾವಾಸ್ಯೆಯಂದು ನಿರಾಹಾರವಾಗಿರುವುದು. ಇದು ಯವಮಧ್ಯಚಾಂದ್ರಾಯಣ. ಅಂದರೆ ಯವದಂತೆ (ಗೋದಿ) ಮಧ್ಯಭಾಗ ಸ್ಥೂಲವಾಗುವುದು.

**ಮಾಸಸ್ಯ ಕೃಷ್ಣಪಕ್ಷಾದೌ ಗ್ರಾಸಾನದ್ಯಾಚ್ಚತುರ್ದಶ ।**
**ಗ್ರಾಸಾಪಚಯಭೋಜೀ ಸ್ಯಾತ್ ಪಕ್ಷಶೇಷಂ ಸಮಾಪಯೇತ್ ॥**
**ಏವಂ ಹಿ ಶುಕ್ಲಪಕ್ಷಾದೌ ಗ್ರಾಸಮೇಕಂ ತು ಭಕ್ಷಯೇತ್ ।**
**ಗ್ರಾಸೋಪಚಯಭೋಜೀ ಸ್ಯಾತ್ ಪಕ್ಷಶೇಷಂ ಸಮಾಪಯೇತ್ ॥ (ವಸಿಷ್ಠಸ್ಮೃತಿ)**

ಅಂತೆಯೇ ಜೈನ ಸಂಪ್ರದಾಯದ ಪ್ರಕಾರ ಆಹಾರವನ್ನು ಹೀಗೆ ಆರು ಬಗೆಯಾಗಿ ವಿಂಗಡಿಸಲಾಗಿದೆ: ನೋಕರ್ಮಾಹಾರ, ಕರ್ಮಾಹಾರ, ಓಜಾಹಾರ, ಮಾನಸಾಹಾರ, ಲೇಪ್ಯಾಹಾರ ಮತ್ತು ಕಬಲಾಹಾರ. ಶರೀರಗಳನ್ನು ಮೂರು ಬಗೆಯಾಗಿ ವಿಂಗಡಿಸಲಾಗಿದೆ– ಔದರಿಕ, ಕಾರ್ಮಣ, ತೈಜಸ ಎಂದು. ಆಯಾ ಶರೀರಗಳಿಗೆ ಯೋಗ್ಯವಾದ ಪುದ್ಗಲ ಪಿಂಡವನ್ನು ಗ್ರಹಿಸುವುದೇ ಆಹಾರ. ಸಮಸ್ತ ಜೀವರಾಶಿಗಳಿಗೂ ಮೊದಲ ಎರಡು ಆಹಾರ ಬೇಕಾಗುತ್ತದೆ. ಏಕೇಂದ್ರಿಯ ಮಾತ್ರದಿಂದ ಬಾಳುವ ಜೀವಿಗಳಿಗೆ ಲೇಪ್ಯಾಹಾರ ಗ್ರಾಹ್ಯ. ಅಂಡಾವಸ್ಥೆಯಲ್ಲಿ ಬೆಳೆಯುವ ಜೀವಿಗಳಿಗೆ ಓಜಾಹಾರ ಅವಶ್ಯ. ದೇವತೆಗಳಿಗೆಲ್ಲ ಮಾನಸಾಹಾರ ಗ್ರಾಹ್ಯ. ಸಿದ್ಧರೆಲ್ಲ ನಿರಾಹಾರಿಗಳು. ಅವರಿಗೆ ಆಹಾರ ನಿವೃತ್ತಿಯಾಗುವುದು. ಇನ್ನು ನಾರಕಿಗಳು, ತಿರ್ಯಕ್ಕುಗಳು, ಮನುಷ್ಯರು ಇವರಿಗೆಲ್ಲ ಕವಲಾಹಾರ ಬೇಕಾಗುತ್ತದೆ. ಅವರಲ್ಲಿ ಮುಕ್ತಿಗಾಗಿ ಸಮ್ಯಜ್ಞಾನ, ಸಮ್ಯಗ್ದರ್ಶನ, ಸಮ್ಯಕ್ಚಾರಿತ್ರಗಳಲ್ಲಿ ತೊಡಗಿದ ವ್ರತಿಮುನಿಗಳಿಗೆ ಕವಲಾಹಾರದ ನಿಯಮ ಅವರ್ಜ್ಯವಾಗುತ್ತದೆ. ಇಲ್ಲಿ ಕವಲಾಹಾರ ಮತ್ತು ಮುನ್ಯಾಹಾರಗಳು ಪರ್ಯಾಯ ಪದಗಳು. ಈ ಬಗ್ಗೆ ಭಗವತೀ ಸೂತ್ರವೆಂಬ ಜೈನಾಗಮ ಗ್ರಂಥದಲ್ಲಿ ಹೀಗೆ ಹೇಳಿದೆ; ಮುನಿಯಾದವನಿಗೆ ಅತ್ಯಧಿಕವಾದ ಆಹಾರವೆಂದರೆ ಮೂವತ್ತೆರಡು ಕವಲಗಳು. ಅದೇ ಸಾಧ್ವಿಯಾದವಳಿಗೆ (ಆರ್ಯಿಕಾ) ಇಪ್ಪತ್ತೆಂಟು ಕವಲಗಳು. ಒಂದೊಂದು ಕವಲದಲ್ಲಿ 50 ಅಗುಳುಗಳು ಮಾತ್ರ ಇರತಕ್ಕುದು. ಶ್ವೇತಾಂಬರ ಮತ್ತು ದಿಗಂಬರ ಜೈನ ಸಂಪ್ರದಾಯಗಳಲ್ಲಿನ ಮೂರು ಭೇದಗಳಲ್ಲಿ ಇದು ಒಂದಾಗಿದೆ.

ಇನ್ನು ವ್ಯಾಧಿಹರ ಕವಲಾಹಾರದ ವಿಷಯ. ಆಯುರ್ವೇದದಲ್ಲಿ ವಾತ, ಪಿತ್ತ ಮತ್ತು ಕಫಗಳ ಪ್ರಕೋಪದಿಂದ ಒದಗುವ ದೋಷಗಳನ್ನೂ ನಿವಾರಿಸಲು ಈ ಆಹಾರವನ್ನು ಚಿಕಿತ್ಸೆಯಾಗಿ ಹೇಳಿದೆ. ಅದಕ್ಕೆ ಯೋಗ್ಯವಾದ ದ್ರವ್ಯಗಳನ್ನು ಬಾಯಲ್ಲಿಟ್ಟುಕೊಂಡು ಚೆನ್ನಾಗಿ ಅಗಿದು ಅನಂತರ ಉಗಿಯಬೇಕು. ಈ ಕ್ರಿಯೆ ನಾಲಗೆಯ ಅರೋಚಕತ್ವವನ್ನು ಕಳೆದು ಒಳ್ಳೆಯ ಹಸಿವು ಬಾಯಾರಿಕೆಗಳನ್ನುಂಟು ಮಾಡಿ, ಮುಖ ಶುದ್ಧಿಯನ್ನು ದೊರಕಿಸಿ, ಹಲ್ಲುಗಳಲ್ಲಿ ದಾರ್ಢ್ಯವನ್ನು ಕೊಡುತ್ತದೆಯೆಂದು ಹೇಳಿದೆ.

**ವಾತಪಿತ್ತಕಫಘ್ನಸ್ಯ ದ್ರವ್ಯಸ್ಯ ಕವಲಂ ಮುಖೇ ।**
**ಅರ್ಧಂ ನಿಕ್ಷಿಪ್ಯ ಸಂಡರ್ವ್ಯ ನಿಷ್ಠೀವೇತ್ ಕವಲೇ ವಿಧಿಃ ॥**
**ಕವಲಃ ಕುರುತೇ ಕಾಂಕ್ಷಾಂ ಭಕ್ಷ್ಯೇಷು, ಹರತೇ ಕಫಂ ।**
**ತೃಷ್ಣಾಂ ಶೌಚಂ ಚ ವೈರಸ್ಯಂ ದಂತಚಾಲಂ ಚ ನಾಶಯೇತ್ ॥**

ಅತಿಕೃಚ್ಛ್ರಾದಿ ಕೆಲವು ಕಠಿಣ ವ್ರತಗಳಲ್ಲೂ ನಿಯಮಿತ ಆಹಾರದ ಕಟ್ಟಲೆ ಇದೆ. **(ನೋಡಿ– ಕಠಿಣ ವ್ರತಗಳು)** (ಎನ್.ಎಸ್.ಆರ್.ಬಿ.)

**ಕವಲುತೋಕೆ ಹಕ್ಕಿ :** ಪ್ಯಾಸೆರಿಫಾರ್ಮಿಸ್ ಗಣದ ಹಿರಂಡನಿಡೀ ಕುಟುಂಬಕ್ಕೆ ಸೇರಿದ ಒಂದು ಕೀಟಾಹಾರಿ ಹಕ್ಕಿ (ಸ್ವಾಲೊ). ಹಾಡುಹಕ್ಕಿಗಳಲ್ಲೆಲ್ಲ ಅತ್ಯಂತ ಚೆಲುವಾದ



ಹಕ್ಕಿಯೆಂದು ಹೆಸರಾಗಿದೆ. ಹಾರುವಿಕೆಯ ವೇಗಕ್ಕೂ ಸೊಬಗಿಗೂ ಇದು ಬಹಳ ಪ್ರಸಿದ್ಧವಾಗಿದೆ. ವೈಜ್ಞಾನಿಕವಾಗಿ ಹಿರಂಡೊ ಎಂಬ ಜಾತಿಗೆ ಸೇರಿದೆ. ಇದೇ ಕುಟುಂಬಕ್ಕೆ ಸೇರಿದ ಪೆಟ್ರೊಕೆಲಿಡಾನ್, ಇರಿಡೊಪ್ರಾಕ್ನಿ ಮುಂತಾದ ಜಾತಿಯ ಹಕ್ಕಿಗಳನ್ನು ಸಾವಾನ್ಯವಾಗಿ ಸ್ವಾಲೊಗಳೆಂದು ಕರೆಯುವುದುಂಟು. ಧ್ರುವ ಪ್ರದೇಶಗಳು ಮತ್ತು ಕೆಲವು ದ್ವೀಪಗಳನ್ನು ಬಿಟ್ಟರೆ ಪ್ರಪಂಚದ ಉಳಿದೆಲ್ಲ ಕಡೆಗಳಲ್ಲೂ ಇವುಗಳ ವ್ಯಾಪ್ತಿಯಿದೆ.

ಆಕಾರ ಮತ್ತು ಜೀವನಕ್ರಮದಲ್ಲಿ ಅಂಬಕ್ಕಿಗಳೊಡನೆ (ಸ್ವಿಫ್ಟ್) ಹೋಲಿಕೆಯಿದ್ದರೂ ಇವು ಅಂಬಕ್ಕಿಗಳಿಗಿಂತ ಭಿನ್ನ ರೀತಿಯವು.

ಕವಲುತೋಕೆ ಹಕ್ಕಿಗಳು ಸಾಧಾರಣವಾಗಿ ಗುಬ್ಬಚ್ಚಿಯಷ್ಟೇ ಗಾತ್ರದವು. ದೇಹದ ಬಣ್ಣ ಗಾಢನೀಲಿ, ಕಂದು ಮುಂತಾದ ವಿವಿಧ ರೀತಿಯದು. ಹೊಟ್ಟೆ ಬಿಳಿಯ ಬಣ್ಣದ್ದಾಗಿಯೂ ಕತ್ತು ಹಾಗೂ ತಲೆ ಕೆಂಪು ಬಣ್ಣದವಾಗಿಯೂ ಇವೆ. ಕಾಲು ಮತ್ತು ಉಗುರುಗಳು ಬಲವಾಗಿದ್ದರೂ ಬೆರಳುಗಳು ಮಾತ್ರ ದುರ್ಬಲವಾಗಿವೆ. ಬೆರಳುಗಳು ನೆಲದ ಮೇಲೆ ನಡೆದಾಡಲು ಅನುಕೂಲವಾಗಿಲ್ಲ. ರೆಂಬೆಗಳ ಮೇಲೊ ಕಡಿದಾದ ಬಂಡೆಗಳ ಮೇಲೊ ಕುಳಿತುಕೊಳ್ಳುವುದಕ್ಕೆ ಮಾತ್ರ ಸಹಾಯಕವಾಗಿವೆ. ಗೂಡುಕಟ್ಟಲು ಬೇಕಾಗುವ ಸಾಮಗ್ರಿಯ ಸಂಗ್ರಹಣೆಗೆ ಮಾತ್ರ ಇವು ನೆಲದ ಮೇಲೆ ಓಡಾಡುತ್ತವೆ. ಹಾರುವುದರಲ್ಲಿ ಈ ಹಕ್ಕಿಗಳು ನೈಪುಣ್ಯವನ್ನು ತೋರುತ್ತವೆ. ಹಾರುತ್ತಲೇ ಕೀಟಗಳನ್ನು ಕ್ಷಣಾರ್ಧದಲ್ಲಿ ಹಿಡಿದು ನುಂಗಬಲ್ಲುವು. ಹೀಗೆ ಆಹಾರವನ್ನು ಹಿಡಿಯಲೆಂದೇ ಕೊಕ್ಕು ಕೂಡ ಚಿಕ್ಕದೂ ಅಗಲವಾದುದೂ ಆಗಿದೆ. ಇವುಗಳ ಬಾಲ ಉದ್ದವಾಗಿದ್ದು 12 ಗರಿಗಳಿಂದ ಕೂಡಿದೆ. ಅಲ್ಲದೆ ಎರಡು ಕವಲುಗಳಾಗಿ ಭಾಗವಾಗಿದೆ. ಇದರಿಂದಲೇ ಇವಕ್ಕೆ ಕವಲುತೋಕೆ ಹಕ್ಕಿಗಳೆಂದು ಹೆಸರು. ಇವು ಸಣ್ಣ ಸಣ್ಣ ಗುಂಪುಗಳಲ್ಲೊ ಜೋಡಿಯಾಗಿಯೊ ವಾಸಿಸುತ್ತವೆ. ಉಪದ್ರವಕಾರಿ ಕೀಟಗಳನ್ನು ಹಿಡಿದು ತಿನ್ನುವುದರಿಂದ ಮನುಷ್ಯನಿಗೆ ಪ್ರಿಯವೆನಿಸಿದ ಹಕ್ಕಿಗಳಿವು; ಮನುಷ್ಯನೊಡನೆ ಸ್ನೇಹಪರವಾದವೂ ಹೌದು. ಚೆನ್ನಾಗಿ ಹಾಡಲು ಬರದಿದ್ದರೂ ಇವುಗಳ ಚಿಲಿಪಿಲಿನಾದ ಇಂಪಾಗಿರುತ್ತದೆ.

ಇವುಗಳ ಸಂತಾನೋತ್ಪತ್ತಿಯ ಕಾಲ ಮಾರ್ಚ್‌ನಿಂದ ಸೆಪ್ಟೆಂಬರ್ ವರೆಗಿನ ತಿಂಗಳುಗಳು. ಮನೆಗಳ ಮೇಲ್ಛಾವಣಿಗಳಿಗೆ ಅಥವಾ ಬೆಟ್ಟಗುಡ್ಡಗಳಲ್ಲಿ ಹೊರಚಾಚಿದಂಥ ಬಂಡೆಗಳ ತಳಭಾಗಗಳಿಗೆ ಅಂಟಿಕೊಂಡಂತೆ ತಟ್ಟೆಯಾಕಾರದ ಗೂಡುಗಳನ್ನು ಕಟ್ಟುತ್ತವೆ. ಗೂಡು ಕಟ್ಟುವುದಕ್ಕೆ ಮಣ್ಣು ಮತ್ತು ಹುಲ್ಲು ಎರಡನ್ನೂ ಉಪಯೋಗಿಸುತ್ತವೆ. ಕೆಲವು ಹಕ್ಕಿಗಳು ನೆಲದಲ್ಲಿರುವ ಅಥವಾ ಮರಗಳಲ್ಲಿರುವ ಪೊಟರೆಗಳನ್ನು ಗೂಡುಗಳಾಗಿ ಉಪಯೋಗಿಸುವುದುಂಟು. ಸಾಧಾರಣವಾಗಿ ಪ್ರತಿವರ್ಷ ಒಂದೇ ಪ್ರದೇಶದಲ್ಲಿ ಗೂಡು ಕಟ್ಟುವುದು ಈ ಹಕ್ಕಿಗಳ ವಿಶಿಷ್ಟ ಲಕ್ಷಣ. ಹೆಣ್ಣು ಒಂದು ಸಲಕ್ಕೆ 3–6 ಮೊಟ್ಟೆಗಳನ್ನಿಡುತ್ತದೆ. ವರ್ಷಕ್ಕೆ ಒಂದು ಸಲ ಮೊಟ್ಟೆಯಿಡುವುದಾದರೂ ಹಲವು ಬಾರಿ ಎರಡನೆಯ ಸಲ, ಅಪೂರ್ವವಾಗಿ ಮೂರನೆಯ ಸಲ ಮೊಟ್ಟೆಯಿಡುವುದೂ ಉಂಟು. ಹೆಣ್ಣುಹಕ್ಕಿಯೊಂದೇ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುತ್ತದೆ. ಮರಿಗಳು 20–24 ದಿವಸಗಳಲ್ಲಿ ಬೆಳೆದು ದೊಡ್ಡವಾಗಿ ಹಾರಲು ಶಕ್ತವಾಗುತ್ತವೆ. ಕೌಟುಂಬಿಕ ನಡೆವಳಿಕೆ, ಸಂತಾನ ಪ್ರೇಮ ಇವುಗಳಲ್ಲಿ ಉನ್ನತ ಮಟ್ಟದಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಮೊದಲ ಸಂತತಿಯ ಮರಿಗಳು ಗೂಡುಗಳ ಬಳಿಯೇ ಇದ್ದು ಅನಂತರದ ಸಂತತಿಯ ಮರಿಗಳ ಪಾಲನೆಯಲ್ಲಿ ಸಹಕರಿಸುತ್ತವೆ.

ಇವು ಬಹುದೂರ ವಲಸೆ ಹೋಗುವ ಹಕ್ಕಿಗಳೆಂದು ಹೆಸರಾಗಿವೆ. ಉದಾಹರಣೆಗೆ ಯುರೋಪು ಹಾಗೂ ಉತ್ತರ ಅಮೆರಿಕಗಳ ನಿವಾಸಿಯಾದ ಹಿರಂಡೊ ರಸ್ಟಿಕ ಎನ್ನುವ ಕವಲುತೋಕೆ ಹಕ್ಕಿ ಚಳಿಗಾಲದಲ್ಲಿ ಭಾರತಕ್ಕೂ ವಲಸೆ ಬರುತ್ತದೆ. ವಸಂತಋತುವಿನ ಆಗಮನದೊಂದಿಗೆ ಸ್ವಸ್ಥಳಕ್ಕೆ ಹಿಂತಿರುಗುತ್ತದೆ. ವಸಂತಕಾಲದ ಆರಂಭಕ್ಕೂ ಅದರ ಆಗಮನಕ್ಕೂ ಅತ್ಯಂತ ನಿಕಟವಾದ ಸಂಬಂಧವಿರುವುದರಿಂದ ಕವಲುತೋಕೆ ಹಕ್ಕಿಯನ್ನು

ಒಳ್ಳೆಯ ಋತುವಿನ ಆಗಮನದ ಸುದ್ದಿ ತರುವ ದೂತ ಎನ್ನುವುದುಂಟು. ಇವುಗಳ ವಲಸೆಯ ಕ್ರಮ ಏನೇ ಇರಲಿ, ಕವಲುತೋಕೆಗಳು ಮಾನವನೊಂದಿಗೆ ಬಹಳ ನಿಕಟ ಸಂಬಂಧ ಕಲ್ಪಿಸಿಕೊಂಡಿವೆ. ಮಾನವನ ನೆಲೆಯ ಸಮೀಪದಲ್ಲಿಯೇ ಗೂಡು ಕಟ್ಟಿ ವಾಸಿಸುವ ಇವುಗಳ ಬಗ್ಗೆ ಗ್ರೀಕ್ ಇತಿಹಾಸದಲ್ಲೂ ಉಲ್ಲೇಖವಿದೆ. ಕೊರಿಯ ಮತ್ತು ಜಪಾನುಗಳಲ್ಲಿ ಇವು ಮನೆಗಳಲ್ಲಿ ಗೂಡುಕಟ್ಟುವುದು ಶುಭದ ಚಿಹ್ನೆಯೆಂಬ ಭಾವನೆಯಿದೆ. ಸಾಹಿತ್ಯದಲ್ಲಿ ಇವನ್ನು ಶ್ರದ್ಧೆ ಹಾಗೂ ಹಾರೈಕೆಗಳ ಸಂಕೇತವಾಗಿ ಬಳಸುವುದುಂಟು. ಕ್ರಿಶ್ಚಿಯನ್ ಧರ್ಮದಲ್ಲಿ ಕವಲುತೋಕೆಗಳು ದೇವನಲ್ಲಿ ಭಕ್ತನ ಮೊರೆಯ ಸಂಕೇತಗಳು.

ಭಾರತದಲ್ಲಿ ಕಾಣಬರುವ ಮುಖ್ಯವಾದ ಕವಲುತೋಕೆ ಹಕ್ಕಿಗಳಿವು:

1. *ಹಿರಂಡೊ ರಸ್ಟಿಕ*– ಯುರೋಪಿನಿಂದ ಚಳಿಗಾಲದಲ್ಲಿ ವಲಸೆ ಬರುವ ಹಕ್ಕಿ. ಏಪ್ರಿಲ್–ಮೇ ತಿಂಗಳುಗಳಲ್ಲಿ ಹಿಂತಿರುಗುತ್ತದೆ. ಕಡುನೀಲಿ ಬಣ್ಣದ್ದು. ಹಿಮಾಲಯದಲ್ಲಿ 4,000'–7,000' ಎತ್ತರದ ಪ್ರದೇಶಗಳಲ್ಲಿ ಗೂಡುಕಟ್ಟುತ್ತದೆ.

2. *ಹಿರಂಡೊ ಡೌರಿಕ* (ಕೆಂಪುಪೃಷ್ಠದ ಕವಲುತೋಕೆ)– ದೇಹ ಕಡುನೀಲಿ ಬಣ್ಣದ್ದು. ಅಲ್ಲಲ್ಲಿ ಕಗ್ಗಂದು ಬಣ್ಣದ ಪಟ್ಟೆಗಳಿವೆ. ಹಿಮಾಲಯದಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ.

3. *ಹಿರಂಡೊ ಸ್ಮಿತಿಯೈ* (ತಂತಿಬಾಲದ ಕವಲುತೋಕೆ)– ಉಳಿದವುಗಳಂತೆಯೆ ಕಡು ನೀಲಿ ಬಣ್ಣದ ದೇಹದ್ದು. ಆದರೆ ತಲೆ ಕೆಂಗಂದು ಬಣ್ಣದ್ದಾಗಿದೆ. ತಂತಿಯನ್ನು ಹೋಲುವ ಎರಡು ಬಾಲಗಳಿರುವುದು ಇದರ ವೈಚಿತ್ರ್ಯ.

4. *ಹಿರಂಡೊ ಫ್ಲೂಮಿಕೋಲ*– (ಗೆರೆ ಕವಲುತೋಕೆ) ಕೆಂಗಂದು ಬಣ್ಣದ ನೆತ್ತಿಯ ಸಣ್ಣ ಕವಲುತೋಕೆ, ಹೊಟ್ಟೆಯ ಭಾಗದಲ್ಲಿ ಉದ್ದಗೆರೆಗಳಿರುತ್ತವೆ. ಸಣ್ಣ ಕವಲು ಬಾಲ ಇದರ ವೈಶಿಷ್ಟ್ಯ. ಗುಬ್ಬಚ್ಚಿಗಳು ಇವುಗಳ ಗೂಡನ್ನು ಬಳಸಿಕೊಳ್ಳುವುದುಂಟು. ಕೆಲವೊಮ್ಮೆ ಈ ಕವಲುತೋಕೆಯನ್ನು ಓಡಿಸಿರುವ ಪ್ರಸಂಗಗಳೂ ಇವೆ.

5. *ಹಿರಂಡೊ ತಹಿಟಿಕ* (ಸಾಮಾನ್ಯ ಅಥವಾ ಪೆಸಿಫಿಕ್ ಕವಲುತೋಕೆ)– ಕೆಂಗೆಂದು ಬಣ್ಣದ ತಲೆ, ಬಲವು ಆಳವಾಗಿ ಕವಲಾಗಿರುತ್ತದೆ. ಚಳಿಗಾಲದ ಅತಿಥಿ. (ಎಚ್.ಬಿ.ಡಿ.)

**ಕವಲೆದುರ್ಗ :** ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಮುದ್ರ ಮಟ್ಟದಿಂದ 927 ಮೀ ಎತ್ತರದಲ್ಲಿರುವ ದುರ್ಗಮವಾದ ಗುಡ್ಡ. ಇದರ ಮೇಲೆ ಕೋಟೆಯಿದೆ. ಪುರಾಣಕಾಲದಲ್ಲಿ ಕಾಮ್ಯಕವನವೆಂದು ಹೆಸರಿದ್ದ ಈ ಸ್ಥಳದಲ್ಲಿ ಪಾಂಡವರು ವನವಾಸಕಾಲದಲ್ಲಿ ತಂಗಿದ್ದರೆಂದೂ ನೀರಿಗಾಗಿ ಭೀಮ ಇಲ್ಲಿ ಒಂದು ಕಟ್ಟೆ ನಿರ್ಮಿಸಿ ತುಂಗಭದ್ರೆಯನ್ನು ಅಲ್ಲಿಗೆ ತಿರುಗಿಸಿದುದಾಗಿಯೂ ಅನಂತರ ಋಷಿಗಳ ಪ್ರಾರ್ಥನೆಯಂತೆ ಧರ್ಮರಾಯ ಕಟ್ಟೆಯಿಂದ ನೀರು ಬಿಡಿಸಿದುದಾಗಿಯೂ ಐತಿಹ್ಯವಿದೆ. ಈ ಕಟ್ಟೆಗೆ ಭೀಮನಕಟ್ಟೆ ಎಂದು ಹೆಸರು. ಚಾರಿತ್ರಿಕವಾಗಿ ನೋಡುವುದಾದರೆ, ಇದು ಬಿದನೂರು ಪಾಳೆಯಗಾರರ ಕೇಂದ್ರವಾಗಿತ್ತು. ಆಗ ಇದಕ್ಕೆ ಭುವನಗಿರಿಯೆಂಬ ಹೆಸರಿತ್ತು. ಆ ಕಾಲದ ಅರಮನೆಯ ಅವಶೇಷಗಳು ಉಳಿದು ಬಂದಿವೆ. ಇವುಗಳ ಪೈಕಿ 2.4 ಮೀ. ಉದ್ದ 2.1 ಮೀ ಅಗಲ ಇರುವ ಕಲ್ಲಿನ ಮಂಚವೂ ಒಂದು. ಅದು ರಾಣಿಯ ಮಂಚವೆಂದು ಹೆಸರಾಗಿದೆ. ಅದನ್ನು 1694ರಲ್ಲಿ ನಿರ್ಮಿಸಲಾಯಿತೆಂದು ಅದರ ಮೇಲಿರುವ ಶಾಸನದಿಂದ ಗೊತ್ತಾಗುತ್ತದೆ. ಉತ್ತಮ ರೇಖಾಚಿತ್ರಗಳಿಂದ ಕೂಡಿ ಮಂಚ ಬಲು ಆಕರ್ಷಕವಾಗಿದೆ. ಈಗ ಅದು ಮೈಸೂರಿನಲ್ಲಿದೆ. ಹೈದರ್ ಅಲಿ, ಕವಲೆದುರ್ಗದ ಕೋಟೆಯನ್ನು ವಶಮಾಡಿಕೊಂಡ ಅನಂತರ ಇದಕ್ಕೆ ಆಗಿನ ಭುವನಗಿರಿ ಎಂಬ ಹೆಸರು ಹೋಗಿ ಕವಲೆದುರ್ಗ (ಕಾವಲುದುರ್ಗ) ಎಂಬ ಹೆಸರು ಬಂತು. ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲಾದ ಸುಂದರವಾದ ಅನೇಕ ಸುಂದರ ಕೊಳಗಳು ಕೋಟೆಯ ಒಳಗೆ ಇವೆ. ಇವುಗಳಲ್ಲಿ ಸಂತೆಗಂಗೆ ಮುಖ್ಯವಾದದ್ದು. ಕೆಳದಿ ದೊರೆಗಳ ಕಾಲದ ಲಿಂಗಾಯತರ ಮಠವೂ ಇದೆ. ಬೆಟ್ಟದ ಮೇಲೆ ಇರುವುದು ಶ್ರೀಕಂಠೇಶ್ವರನ ದೇವಾಲಯ. ಇದೂ ಪಾಳೆಯಗಾರರ ಕಾಲದಲ್ಲಿ ನಿರ್ಮಿತವಾದದ್ದು. ಸುತ್ತಮುತ್ತಲೂ ಕಾಡು ಬೆಳೆದುಕೊಂಡಿದ್ದರೂ ಇದೊಂದು ರಮ್ಯಸ್ಥಳ. (ಎ.ವಿ.ಎನ್.; ಕೆ.ಆರ್.ಆರ್.)

**ಕವಳೆಗವಿಗಳು:** ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ಹಳಿಯಾಳದಿಂದ 30ಕಿಮೀ ದೂರದಲ್ಲಿ ಅಂಬಿಕಾನಗರದ ಬಳಿ ಇರುವ ನಾಗಝರಿ ವಿದ್ಯುದುತ್ಪಾದನಾ ಕೇಂದ್ರದ ಎದುರಿಗಿನ ಗವಿಗಳನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಎತ್ತರದ ಬೆಟ್ಟದ ಏಣಿನಲ್ಲಿರುವ ಈ ಗುಹೆಗಳು ಪ್ರಕೃತಿರಮ್ಯ ದೃಶ್ಯಗಳ ನಡುವೆ ಅಡಗಿವೆ. ಇಲ್ಲಿಗೆ ತಲುಪಲು ಎರಡು ಮಾರ್ಗಗಳಿವೆ. ಒಂದು, ನಾಗಝರಿ ತೊರೆಹಾಯ್ದು ಮೆಟ್ಟಿಲುಗಳನ್ನು ಹತ್ತಿ ಬರುವ ಮಾರ್ಗ. ಇನ್ನೊಂದು, ಪಣಸೊಳ್ಳಿ ಮಾರ್ಗದಲ್ಲಿ ದಾಂಡೇಲಿ ಮೃಗಧಾಮವನ್ನು ದಾಟಿ ಬರುವ ಮಾರ್ಗ. ಈ ಮಾರ್ಗದಲ್ಲಿ ಬಂದರೆ 12ಕಿಮೀ ದೂರ ಕ್ರಮಿಸಬೇಕು ಹಾಗೂ ಮೆಟ್ಟಿಲುಗಳನ್ನು ಹತ್ತಬೇಕು. ಕಡಿದಾದ ಬಂಡೆಯ ಮಧ್ಯದಲ್ಲಿ ಸುಂದರ ಗವಿಗಳ ಸಮೂಹ ಗೋಚರಿಸುತ್ತದೆ. ಇದರ ಪ್ರವೇಶದ್ವಾರ 4ಮೀ ಎತ್ತರ ಮತ್ತು ಅಷ್ಟೇ ಸುತ್ತಳತೆ ಹೊಂದಿದೆ. ಆದರೆ ನಿಜವಾದ ಕಿಂಡಿ ಕೇವಲ 90ಸೆಂಮೀನಷ್ಟು ಎತ್ತರದ್ದಾಗಿದ್ದು, ಇದರ ಮೂಲಕ ಎಚ್ಚರಿಕೆಯಿಂದ ಸು.9ಮೀನಷ್ಟು ತೆವಳಿಕೊಂಡು ಕ್ರಮಿಸಿದರೆ ಒಂದು ಹಜಾರದಂತಹ ಜಾಗಕ್ಕೆ ತಲುಪಬಹುದು. ಅಲ್ಲಿ ಮಧ್ಯದಲ್ಲಿ ಒಂದು ದೊಡ್ಡ ಶಿವಲಿಂಗವಿದೆ. ಇದು ಸುಮಾರು ಒಂದು ಮೀಟರ್‌ನಷ್ಟು ಎತ್ತರವಾಗಿದೆ. ಇದನ್ನು ಸ್ಥಳೀಯರು ಕವಳೆಲಿಂಗ ಎಂದು ಕರೆಯುತ್ತಾರೆ. ಇದಕ್ಕೆ ನಿತ್ಯ ಪೂಜೆ ನಡೆಯುತ್ತದೆ. ಶಿವಲಿಂಗದ ಹಿಂಭಾಗದಲ್ಲಿ ಒಂದು ಪ್ರತ್ಯೇಕ ಗವಿಯಿದ್ದು ಇಲ್ಲಿಂದ ಹೊರಗೆ ಹೋಗಬಹುದು. ಈಗ ಗವಿಯೊಳಗೆ ಬೆಳಕಿನ ವ್ಯವಸ್ಥೆ ಮಾಡಲಾಗಿದೆ.

ಈ ಸ್ಥಳಕ್ಕೆ ಪುರಾಣ, ಐತಿಹ್ಯಗಳೂ ಇವೆ. ಒಮ್ಮೆ ಶಿವ ಶನಿಯಿಂದ ಪೀಡಿಸಲ್ಪಟ್ಟಾಗ ಇಲ್ಲಿಗೆ ಬಂದು ಅಡಗಿದ್ದನಂತೆ. ಪಾಂಡವರು ವನವಾಸದ ಸಂದರ್ಭದಲ್ಲಿ ಇಲ್ಲಿಗೆ ಬಂದಿದ್ದು ಈ ಶಿವಲಿಂಗವನ್ನು ಪೂಜೆ ಸಿದ್ದರೆಂದು ಐತಿಹ್ಯ. ಇತ್ತೀಚೆಗೆ ಗವಿಯ ಹೊರಗಡೆ ಗಣಪತಿ ಹಾಗೂ ಕಾರ್ತಿಕೇಯನ ಮೂರ್ತಿಗಳನ್ನು ಸ್ಥಾಪಿಸಿದ್ದಾರೆ. ಶಿವರಾತ್ರಿಯ ಸಂದರ್ಭದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. (ಎಸ್.ಎಚ್.ಇ.)

**ಕವಾಟ :** ಪ್ರವಾಹ (ಫ್ಲೋ) ನಿಯಂತ್ರಣ ಸಾಧನ (ವಾಲ್ವ್). ಯಾವುದೇ ನಾಳದ ಮುಖಾಂತರ ಹರಿಯುವ ದ್ರವವನ್ನು ಒಂದು ದಿಕ್ಕಿನಲ್ಲಿ ಮಾತ್ರ ಹರಿಯುವಂತೆ ಮಾಡುವ ಸಾಧನ. ತರಲಗಳು (ಫ್ಲೋಯಿಡ್ಸ್), ದ್ರವಗಳು, ಅನಿಲಗಳು ಎಲ್ಲವೂ ಪ್ರವಾಹಿಗಳೇ. ಆದ್ದರಿಂದ ಚಾಲ್ತಿಯಲ್ಲಿರುವ ಎಲ್ಲ ವಿಧದ ಯಂತ್ರೋಪಕರಣಗಳಲ್ಲಿಯೂ ಕವಾಟಗಳು ಅವಿಭಾಜ್ಯ ಅಂಗಗಳು. ಬಾಗಿಲು ಎಂಬ ಪದವನ್ನು ಇದಕ್ಕೆ ಸಮಾನಾರ್ಥವಾಗಿ ಬಳಸುವುದಿದೆ.

ನೀರಾವರಿ ಕಾರ್ಯಗಳಲ್ಲಿ ನಾಲೆಗಳಲ್ಲಿ ನೀರಿನ ಪ್ರವಾಹವನ್ನು ನಿಯಂತ್ರಿಸಲು ಬಾಗಿಲುಗಳ ಉಪಯೋಗ ತೀರ ಅವಶ್ಯ. ಈ ಬಾಗಿಲುಗಳ ರಚನೆ, ವಿನ್ಯಾಸ ಮೊದಲಾದ ವಿವರಗಳು ಆಯಾ ಸಂದರ್ಭದ ಪರಿಸ್ಥಿತಿಗಳನ್ನು ಅನುಸರಿಸಿ ಇವೆ. ಉದಾಹರಣೆಗೆ ಒಂದು ದೊಡ್ಡ ಕಟ್ಟೆಯ ಜಲಾಶಯದಲ್ಲಿ ಸಂಗ್ರಹವಾದ ನೀರಿನ ಮೊತ್ತ ಸಾಕಷ್ಟು ಇರುವಾಗ ಅದರ ಒತ್ತಡ ಅಧಿಕವಾಗಿರುತ್ತದೆ. ಇಂಥಲ್ಲಿ ಬಾಗಿಲುಗಳು ಸುಭದ್ರವಾಗಿರಬೇಕು; ಮತ್ತು ಅವುಗಳ ಕಾರ್ಯಚರಣೆ ಸಲೀಸಾಗಿ ಆಗುವಂತಿರಬೇಕು. ಇಲ್ಲಿ ಲೋಹರಚಿತ ಬಾಗಿಲುಗಳನ್ನು ಬಳಸುತ್ತಾರೆ; ಅವುಗಳ ಚಲನೆಯನ್ನು ಯಾಂತ್ರಿಕವಾಗಿ ನಿಯಂತ್ರಿಸುತ್ತಾರೆ. (ಬಿ.ಜಿ.ಆರ್.)

**ಕವಾಟ ಯಂತ್ರ :** ಯಂತ್ರದ ಕವಾಟಗಳ ಚಲನೆಯನ್ನು ನಿಯಂತ್ರಿಸುವ ಸಾಧನ (ವಾಲ್ವ್ ಗಿಯರ್). ನಾಲ್ಕು ಘಾತಗಳ ಒಂದು ಎಂಜಿನ್ (ಫೋರ್ ಸ್ಟ್ರೋಕ್ ಎಂಜಿನ್) ಕ್ರಿಯೆ ಎಸಗುತ್ತಿದೆ ಎಂದು ಭಾವಿಸೋಣ. ಪ್ರತಿಯೊಂದು ಆವರ್ತದಲ್ಲೂ (ಸೈಕಲ್) ಅದು ಅನುಕ್ರಮವಾಗಿ ನಡೆಸುವ ಕ್ರಿಯೆಗಳು ನಾಲ್ಕು–ಚೂಷನ (ಸಕ್ಷನ್), ಸಂಪೀಡನ (ಕಂಪ್ರೆಶನ್), ವಿಕಸನ (ಎಕ್ಸ್ ಪಾನ್ಷನ್), ನಿಷ್ಕಾಸ (ಎಗ್‌ಸ್ಟಾಸ್ಟ್). ಇವು ಅನೂಚಾನಾಗಿ ನಡೆಯಲು ಒಂದೊಂದು ಹಂತದಲ್ಲೂ ಇಂಧನ ಮತ್ತು ಅದರ ರೂಪಾಂತರಗಳನ್ನು ಯುಕ್ತವಾಗಿ ನಿಯಂತ್ರಿಸುವ ಕವಾಟಗಳು ಅತ್ಯಾವಶ್ಯಕ.



ಚಿತ್ರ. 1

ಇವೆಲ್ಲ ಕವಾಟಗಳ ಕಾರ್ಯವನ್ನು ನಿಯಂತ್ರಿಸುವ ಯಂತ್ರವಿನ್ಯಾಸವೇ (ಮೆಕಾನಿಸಂ) ಕವಾಟಯಂತ್ರ. ನಡೆಸಬೇಕಾಗಿರುವ ಕಾರ್ಯವನ್ನು ಹೊಂದಿ ಯಂತ್ರವಿದೆ (ರೈಲು ಬಂಡಿ, ಲಾರಿ, ಉಳುಮೆಯಂತ್ರ, ಮಗ್ಗ, ವಿಮಾನ ಇತ್ಯಾದಿ). ಇದನ್ನು ಅನುಸರಿಸಿ ಕವಾಟಗಳನ್ನು, ಅವನ್ನು ಹೊಂದಿ ಯುಕ್ತ ಕವಾಟ ಯಂತ್ರಗಳನ್ನು ತಯಾರಿಸುತ್ತಾರೆ.

ಅಂತರ್ದಹನ ಯಂತ್ರದಲ್ಲಿ ಉಪಯೋಗಿಸುವ ಕವಾಟಯಂತ್ರ: ಚಿತ್ರ 1 ರಲ್ಲಿ ವಕ್ರತಟ್ಟೆ (ಕ್ಯಾಮ್) ತಿರುಗಿದಾಗ ಅಗ್ರ (ನೋಸ್) ಅನುಯಾಯಿಯನ್ನು (ಫಾಲೋವರ್) ತಾಕಿ ಅವನ್ನು ಮೇಲಕ್ಕೆ ಎತ್ತುತ್ತದೆ. ಇದರಿಂದ ಕವಾಟ ದಂಡವೂ (ವಾಲ್ವ್ ರಾಡ್) ಎತ್ತಲ್ಪಟ್ಟು ಕವಾಟ ತೆರೆಯುತ್ತದೆ. ಇಚ್ಛಿತಕಾಲದಲ್ಲಿ ಕವಾಟ ಚಲಿಸುವಂತೆ ವಕ್ರತಟ್ಟೆಯ ಆಕಾರ ಮತ್ತು ವೇಗಗಳನ್ನು ಮುಂಚೆಯೇ ನಿಯೋಜಿಸಿರಬೇಕು.

ಎಂಜಿನ್ನಿನ ಸಿಲಿಂಡರಿನೊಳಗೆ ಜಾರು ಸಂಪರ್ಕದಲ್ಲಿರುವ ಹಾಗೂ ದ್ವಾರಗಳುಳ್ಳ ಜಾರುಭ್ರಮಣ ಕವಾಟವೆಂಬ (ಸ್ಲೀವ್ ವಾಲ್ವ್) ಸಾಧನ ಸಹ ಉಪಯೋಗದಲ್ಲಿದೆ. ಸಿಲಿಂಡರಿನ ದ್ವಾರ ಮತ್ತು ಈ ಸಾಧನದ ದ್ವಾರಗಳು ಒಟ್ಟಿಗೆ ಸೇರಿದಾಗ ಚೂಷಣ ಅಥವಾ ನಿಷ್ಕಾಸ ಆಗುತ್ತದೆ. ಈ ರೀತಿ ದ್ವಾರಗಳೆರಡು ಒಟ್ಟಿಗೆ ಸೇರಲು ಕವಾಟ ಪ್ರತ್ಯಾಗಾಮಿ (ರೆಸಿಪ್ರೊಕೇಟಿಂಗ್) ಚಲನೆ ಮತ್ತು ಭಾಗಶಃ ಪರಿಭ್ರಮಣ ಚಲನೆಯನ್ನು (ದೀರ್ಘವೃತ್ತೀಯ–

ಎಲಿಪ್ಟಿಕಲ್) ಮಾಡಬೇಕು. ಈ ಚಲನೆಯನ್ನು ಕವಾಟದ ಚಾಚಿನಲ್ಲಿರುವ ಗೋಳಾಕೃತಿಯ ಜಾರುವ ಬ್ಯಾರಿಂಗಿನಿಂದ ಪಡೆಯಬಹುದು.

ಪರಿಭ್ರಮಣ ಕವಾಟವೆಂಬ ಇನ್ನೊಂದು ರೀತಿಯಲ್ಲಿ ಒಂದೊಂದು ಕವಾಟಕ್ಕೂ ರಂಧ್ರವುಳ್ಳ ಚಕ್ರಗಳನ್ನು ಜೋಡಿಸಿರುತ್ತಾರೆ. ಇವು ತಿರುಗಿ ರಂಧ್ರ ಮತ್ತು ಸಿಲಿಂಡರಿನ ದ್ವಾರಗಳು ಕೂಡಿದಾಗ ಚೂಷಣ ಅಥವಾ ನಿಷ್ಕಾಸ ಆಗುತ್ತದೆ.



ಚಿತ್ರ 2

ಆವಿ ಎಂಜಿನ್ನುಗಳ ಕವಾಟ ಯಂತ್ರ: ಇದರಲ್ಲಿ ಮೂರು ವಿಧಗಳಿವೆ_ (1) ವಿಕಸನ ಕವಾಟ ಯಂತ್ರ, (2) ಕೊಂಡಿಚಲನೆ (ಲಿಂಕ್ ಮೋಷನ್), (3) ಅರೆ ಕವಾಟಯಂತ್ರ (ರೇಡಿಯಲ್ ವಾಲ್ವ್ ಗಿಯರ್).

ಎಂಜಿನ್ನಿನ ದಕ್ಷತೆಯನ್ನು ಹೆಚ್ಚಿಸಲು ಅಥವಾ ವೇಗವನ್ನು ತಗ್ಗಿಸಲು ಆವಿಯ ಪೂರೈಕೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಬಹುದು. ಇದು ಛೇದನ (ಕಟ್ ಆಫ್). ವಿಕಸನ ಕವಾಟ ಯಂತ್ರವು ಕವಾಟಕ್ಕೆ ಛೇದನವನ್ನು ನಿಯಂತ್ರಿಸುವ ಚಲನೆಯನ್ನು ನೀಡುತ್ತದೆ. ಈ ವ್ಯವಸ್ಥೆಯಲ್ಲಿ ಸಿಲಿಂಡರನ್ನು ಆವಿ ಪ್ರವೇಶಿಸಬೇಕಾದರೆ C ಅಡ್ಡವಾಗಿರದಾಗ A ಮತ್ತು B ದ್ವಾರಗಳು ಒಟ್ಟಿಗೆ ಇರಬೇಕು(ಚಿತ್ರ 3). D ಚಕ್ರವನ್ನು ತಿರುಗಿಸಿ Cಯ ಸ್ಥಾನವನ್ನು ಬದಲಾಯಿಸಬಹುದು.

ಈ ಚಲನೆಗಳನ್ನು ನಿಯಂತ್ರಿಸಲು ಚಿತ್ರದಲ್ಲಿರುವಂತೆ ಜೋಡಣೆಯಿದೆ. ಉತ್ಕೇಂದ್ರಕ (ಎಕ್ಸೆಂಟ್ರಿಕ್) ವಕ್ರಕಾಂಡದ ಪರಿಭ್ರಮಣವನ್ನು ಪ್ರತ್ಯಾಗಾಮಿ ಚಲನೆಯನ್ನಾಗಿ ಮಾರ್ಪಡಿಸಿ ಪಟ್ಟಿ ಉತ್ಕೇಂದ್ರ ದಂಡ ಮುಂತಾದುವುಗಳ ಮೂಲಕ ಚಲನೆಯನ್ನು ಕವಾಟಕ್ಕೆ ರವಾನಿಸುತ್ತದೆ. ಕೊಂಡಿ ಚಲನೆಯಿಂದ ಎಂಜಿನ್ನಿನ ಚಲನೆಯ ದಿಕ್ಕನ್ನು ಬದಲಾಯಿಸಬಹುದು. ಆದರೆ ಸಾಮಾನ್ಯವಾಗಿ ರೈಲುಗಾಡಿಯಲ್ಲಿ ಚಲನೆಯ ದಿಕ್ಕನ್ನು ಬದಲಾಯಿಸಲು ಅರೆ ಕವಾಟ ಯಂತ್ರವನ್ನು ಬಳಸುತ್ತಾರೆ. ಕೊಂತದ ಚಲನೆಯ ಪ್ರಾರಂಭದಲ್ಲಿ ಕೊಂತದ ಬಲಗಡೆಯಿಂದ ಆವಿ ಪ್ರವೇಶಿಸುವ ಬದಲು ಎಡಗಡೆಯಿಂದ ಪ್ರವೇಶಿಸಿದರೆ ಕೊಂತ ವಿರುದ್ಧ ದಿಕ್ಕಿನಲ್ಲಿ ಚಲಿಸಿ ಚಕ್ರಗಳನ್ನು ವಿರುದ್ಧ ದಿಕ್ಕಿನಲ್ಲಿ ತಿರುಗಿಸುತ್ತದೆ. ಚಿತ್ರ 4 ರಲ್ಲಿ ತೋರಿಸಿರುವ ಕೊಂಡಿಗಳ ಜೋಡಣೆಯಿಂದ ಆವಿ ಪ್ರವೇಶಿಸುವ ದಿಕ್ಕನ್ನು ಬದಲಾಯಿಸಬಹುದು. ಈಗ J ಸನ್ನೆಕೋಲನ್ನು ಮೀಟಿದರೆ ಈ ಯಂತ್ರವಿನ್ಯಾಸದ ಎಲ್ಲ ಕೊಂಡಿಗಳ ಸ್ಥಾನಪಲ್ಲಟವಾಗಿ ಕವಾಟ ಚಲಿಸುತ್ತದೆ. ಇದರಿಂದ J ಸನ್ನೆಕೋಲನ್ನು ಮೀಟಿ ಆವಿಯನ್ನು ಬೇಕಾದಾಗ ಯಾವುದೇ ಕವಾಟದ್ವಾರದಿಂದಲಾದರೂ ಸಿಲಿಂಡರನ್ನು ಪ್ರವೇಶಿಸುವಂತೆ ಮಾಡಬಹುದು. ಹೀಗೆ ಬದಲಾಯಿಸಿದರೆ ಎಂಜಿನ್ನು ಚಲಿಸುವ ದಿಕ್ಕು ಬದಲಾಗುತ್ತದೆ.



ಚಿತ್ರ 3

**ಪಂಪಿನ ಕವಾಟಯಂತ್ರ :** ಇದರಲ್ಲಿ (ಚಿತ್ರ 5) ಪರಿಭ್ರಮಣ ಚಲನೆಯಿಲ್ಲದಿರುವುದರಿಂದ ಉತ್ಕೇಂದ್ರಕವನ್ನು ಉಪಯೋಗಿಸುವಂತಿಲ್ಲ. ಈಗ 0 ಎಂಬ ಕೊಳವೆಯಿಂದ ಆವಿ B ದ್ವಾರದ ಮೂಲಕ ಸಿಲಿಂಡರನ್ನು ಪ್ರವೇಶಿಸಿ ಕೊಂತವನ್ನು ಎಡಗಡೆಗೆ ದಬ್ಬುತ್ತದೆ. ಕೊಂತದಂಡ ಎಡಗಡೆಗೆ ಚಲಿಸಿ C ಗುಚ್ಛಕ್ಕೆ ಜೋಡಿಸಿರುವ D ಸನ್ನೆಕೋಲನ್ನು E ಸನ್ನೆಯ ಮೇಲೆ ಆಂದೋಳನವನ್ನು ನಡೆಸುವಂತೆ ಮಾಡುತ್ತದೆ. ಇದರಿಂದ ಸನ್ನೆ ಕೋಲಿನೊಂದಿಗೆ F ಮೂಲಕ ಸಂಪರ್ಕದಲ್ಲಿರುವ G ಅಡ್ಡಗುಚ್ಛ ಬಲಗಡೆಗೆ ಚಲಿಸಿ ಕವಾಟ Aಯನ್ನು ನೂಕುತ್ತದೆ.

ಇದರಿಂದ J ದ್ವಾರ ಮುಕ್ತವಾಗಿ ಅದರ ಮೂಲಕ ಪ್ರವೇಶಿಸುವ ಆವಿ ಈಗಾಗಲೆ ತನ್ನ ಘಾತದ ಕೊನೆಯಲ್ಲಿ ಕೊಂತವನ್ನು ಮತ್ತೆ ಬಲಗಡೆಗೆ ದಬ್ಬುತ್ತದೆ. ಈ ರೀತಿ ಕವಾಟಯಂತ್ರ ಕೆಲಸವನ್ನು ಮುಂದುವರಿಸುವುದು.



ಚಿತ್ರ 4 ವಾಲ್ಶಾಟನ ತ್ರಿಜ್ಯಕವಾಟ ಯಂತ್ರ

ಯಂತ್ರಾಯುಧಗಳಲ್ಲಿ (ಮಷೀನ್ ಟೂಲ್ಸ್) ಉಪಯೋಗಿಸುವ ಕವಾಟಯಂತ್ರ: ಇದನ್ನು (ಚಿತ್ರ 6) ಯಂತ್ರಾಯುಧಗಳಲ್ಲಿ ಪ್ರತ್ಯಾಗಾಮಿ ಚಲನೆಯನ್ನು ಪಡೆಯಲು ಉಪಯೋಗಿಸುತ್ತಾರೆ. ತೈಲ A ಕೊಳವೆಯ ಮೂಲಕ E ವಿಭಾಗವನ್ನು ಪ್ರವೇಶಿಸುತ್ತದೆ.



ಚಿತ್ರ 5

ಆದರೆ D ಕವಾಟವು ದ್ವಾರಕ್ಕೆ ಅಡ್ಡವಾಗಿರುವುದರಿಂದ ತೈಲ ಕೆಲಸದ ಸಿಲಿಂಡರನ್ನು ನೇರವಾಗಿ ಪ್ರವೇಶಿಸಲಾರದು. Aಯಲ್ಲಿರುವ ತೈಲ B ಮತ್ತು ಉಪರೋಧಕ ಕವಾಟ (ಥ್ರಾಟ್ಲಿಂಗ್ ವಾಲ್ವ್) Cಯ ಮೂಲಕ D ಕೊಂತದ ಎಡಭಾಗವನ್ನು ಪ್ರವೇಶಿಸಿ ಅದನ್ನು ದಬ್ಬುತ್ತದೆ. ಇದರಿಂದ D ಚಲಿಸಿ P ದ್ವಾರವನ್ನು ತೆರೆಯುತ್ತದೆ.



ಚಿತ್ರ 6

ಈಗ ತೈಲ P ಮೂಲಕ ಕೆಲಸದ ಸಿಲಿಂಡರಿನ ಎಡಭಾಗವನ್ನು ಪ್ರವೇಶಿಸಿ ಕೊಂತವನ್ನು ಚಲಿಸುತ್ತದೆ. ಕೊಂತದಂಡಕ್ಕೆ ಸೂಕ್ತರೀತಿಯಲ್ಲಿ ಜೋಡಿಸಿರುವ ಯಂತ್ರದ ತಳ (ಬೆಡ್) ಪ್ರತ್ಯಾಗಾಮಿ ಚಲನೆಯನ್ನು ಮಾಡುತ್ತದೆ. ಕೊಂತ ಬಲಗಡೆಗೆ ಚಲಿಸುವಾಗ ಸಂಕ್ಷೇಪಿಸಿದ ಒತ್ತಡದ ತೈಲ ಸ್ಪ್ರಿಂಗಿನ ಹೊರೆಯಿಂದಿರುವ ಕವಾಟವನ್ನು ತಳ್ಳಿ J ದ್ವಾರ ಮತ್ತು Lಗಳ ಮೂಲಕ Mಕೊಳವೆಯನ್ನು ತಲುಪುತ್ತದೆ. ಕೊಂತ ಬಲತುದಿಗೆ ಬಂದಾಗ N ತನ್ನ ಸ್ಥಾನಬದಲಾವಣೆಯಿಂದ ತೈಲ A ಕಡೆಯಿಂದ M ಕಡೆಗೆ ಹರಿಯಲು ಅನುಮಾಡಿಕೊಡುತ್ತದೆ. ಈಗ ಮೇಲೆ ಹೇಳಿದ ಎಲ್ಲ ಕ್ರಿಯೆಗಳೂ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತವೆ. (ಕೆ.ಆರ್.ಎಂ.ಬಿ.)

**ಕವಾಯತು :** ಶಾಂತಿ ಮತ್ತು ಯುದ್ಧಕಾಲಗಳಲ್ಲಿ ಯೋಧರು ಸಾಮೂಹಿಕವಾಗಿಯೂ ವೈಯಕ್ತಿಕವಾಗಿಯೂ ನಿರ್ವಹಿಸಬೇಕಾದ ಹೊಣೆಗಾರಿಕೆಗಳ ವಿಧಿಬದ್ಧ ಅಭ್ಯಾಸ (ಮಿಲಿಟರಿ ಡ್ರಿಲ್). ಆಜ್ಞಾಪದಗಳಿಗೆ ಅನುಸಾರವಾಗಿ ಅಂಗ ಅಥವಾ ಆಯುಧಚಲನೆ ಮಾಡುವುದು ತನ್ಮೂಲಕ ಗುರಿ ಸಾಧಿಸುವುದು ಇಲ್ಲಿನ ಉದ್ದೇಶ. ಪರಿಸ್ಥಿತಿ ಯಾವುದೇ ಇರಲಿ, ಕವಾಯತಿಯಲ್ಲಿ ಒಂದು ಆಜ್ಞೆಗೆ ಒಂದು ಕ್ರಿಯೆ ಅಪ್ರಯತ್ನಿತವಾಗಿ ನಡೆಯಬೇಕು. ಕವಾಯತಿಯ ಉಪಯೋಗಗಳಿಷ್ಟು _ ಯೋಧರಿಗೆ ತಮ್ಮ ಹಾಗೂ ತಮ್ಮ ದಳದ ವಿಚಾರದಲ್ಲಿ ಅಭಿಮಾನ ಮೂಡುತ್ತದೆ; ತಮ್ಮ ಆಯುಧಗಳ ಗಾಢ ಪರಿಚಯ

ಬೆಳೆಯುತ್ತದೆ; ಸ್ವನಿಯಂತ್ರಣ ಗುಣ ಪೋಷಿತವಾಗುತ್ತದೆ; ಧೃತಿವರ್ಧನೆ ಆಗುತ್ತದೆ; ವರಿಷ್ಠ ಅಧಿಕಾರಿಗಳನ್ನು ಯುಕ್ತವಾಗಿ ಗೌರವಿಸುವ ಶಿಸ್ತು ಬೆಳೆಯುತ್ತದೆ; ಧುರೀಣತ್ವದ ಪ್ರದರ್ಶನಕ್ಕೆ ಯೋಗ್ಯಾವಕಾಶ ಒದಗುತ್ತದೆ.

ಕವಾಯತಿಯ ನಿರ್ವಹಣೆಯ ಸ್ಥೂಲ ವಿಧಿಗಳಿವು. ಒಬ್ಬ ನಾಯಕ ಒಂದು ದಳವನ್ನು ನಿಯಂತ್ರಿಸುತ್ತಾನೆ. ಅವನ ಆಜ್ಞಾನುಸಾರ ಆ ದಳದ ಯೋಧರು ವರ್ತಿಸುತ್ತಾರೆ.

ಪಥ ಸಂಚಲನ

ಇಲ್ಲಿ ಅವರ ಪೂರ್ಣ ಮನಸ್ಸಿನ ಒಪ್ಪಿಗೆ ಇರಲೇಬೇಕು–ಅನಾವಶ್ಯಕ ಪ್ರಶ್ನೆಗಳಿಗಾಗಲೀ ಧರ್ಮಾರ್ಥ ಸೂಚನೆಗಳಿಗಾಗಲೀ ಎಡೆ ಇರುವುದಿಲ್ಲ. ಈ ವಿಧದಲ್ಲಿ ಶಿಸ್ತಿನಿಂದ ಸಾಮೂಹಿಕವಾಗಿ ಯೋಧರು ಕ್ರಿಯೆ ಎಸಗುವಾಗ ಅವರಲ್ಲಿನ ಸುಪ್ತ ಧುರೀಣತ್ವಗುಣ ಪ್ರಕಾಶಕ್ಕೆ ಬರಲು ಯೋಗ್ಯ ಸನ್ನಿವೇಶ ತಲೆದೋರುತ್ತದೆ. ಸಮರ್ಥನಾದವ ಧುರೀಣನಾಗುತ್ತಾನೆ; ಮುಂದೆ ಈ ಪರಂಪರೆ ಹೀಗೆಯೇ ಬೆಳೆಯುತ್ತದೆ. ಆದ್ದರಿಂದಲೇ ಬಂದಿದೆ ಈ ಜನಪ್ರಿಯ ಹೇಳಿಕೆ–ಆಜ್ಞೆಯನ್ನು ಪಾಲಿಸಲು ಕಲಿಯದ ವಿನಾ ಆಜ್ಞೆಯನ್ನು ನೀಡಲುಬಾರದು.

ಬೆರಳೆಣಿಕೆಯ ಪೊಲೀಸರ ಲಾಠಿಪ್ರಹಾರದ ಎದುರು ಭಾರೀ ಜನಸ್ತೋಮ ದಿಕ್ಕಾಪಾಲಾಗಿ ಚದರಿಹೋಗುವ ದೃಶ್ಯವನ್ನು ಸ್ಮರಿಸಿಕೊಂಡರೆ ಕವಾಯತಿಯ ತಿರುಳು ತಿಳಿಯುತ್ತದೆ. ವ್ಯವಸ್ಥಿತ ಹಾಗೂ ಉದ್ದೇಶಿತ ಬಲವನ್ನು ಪೊಲೀಸರು ಪ್ರಯುಕ್ತಿಸುತ್ತಾರೆ–ಇದರಿಂದ ಶಕ್ತಿಯ ಅಪವ್ಯಯವಿಲ್ಲ; ಅದು ಪೂರ್ಣವಾಗಿ ಉದ್ದೇಶ ಸಾಧನೆಯ ಎಡೆಗೆ ಬಳಕೆ ಆಗುತ್ತದೆ. ಪೊಲೀಸರ ಎದುರು ನಿಂತಿರುವ ಜನಸ್ತೋಮದಲ್ಲಿ ಇಂಥ ವ್ಯವಸ್ಥಿತ ವಿಧಾನವಿಲ್ಲದಿರುವುದರಿಂದ, ಒಟ್ಟಾಗಿ ಆ ಸ್ತೋಮದ ಬಲ ಪೊಲೀಸರ ಒಟ್ಟು ಬಲಕ್ಕಿಂತ ಅದೆಷ್ಟೋ ಪಟ್ಟು ಅಧಿಕವಾಗಿದ್ದರೂ ಶಕ್ತಿ ಹ್ರಾಸವಾಗಿ ಜನ ಕಾಲಿಗೆ ಬುದ್ಧಿ ಹೇಳಬೇಕಾಗುತ್ತದೆ.

ರಕ್ಷಣಬಲಗಳ ಕ್ಷಿಪ್ರ ಚಲನೆಗಳಲ್ಲಿ, ಯುದ್ಧರಂಗಗಳಲ್ಲಿನ ತೀವ್ರ ಹೋರಾಟಗಳಲ್ಲಿ ಯೋಚನೆಗೆ ಸಮಯ ಇರುವುದಿಲ್ಲ. ಆಗ ಎಲ್ಲ ದಳಗಳೂ ವಿಧಿವತ್ತಾಗಿ ಶಿಸ್ತಿನಿಂದ ವರ್ತಿಸಿದರೆ ಮಾತ್ರ ಗಂಡಾಂತರ ತಪ್ಪುತ್ತದೆ. ಇಂಥ ವರ್ತನೆ ನಿರಂತರ ಕವಾಯತಿಯ ಫಲವೇ ಹೊರತು ಆ ಸನ್ನಿವೇಶದಲ್ಲಿ ಸಹಜವಾಗಿ ಮಾಡುವ ಪ್ರತಿಕ್ರಿಯೆಯಲ್ಲ.

ಜನಾಂಗಗಳ ಚರಿತ್ರೆ ಎಂದರೆ ಯುದ್ಧಗಳ ಚರಿತ್ರೆ ಎಂಬ ರೂಢಿಯ ಮಾತು ಇದೆ. ಇದಕ್ಕೆ ಅನುಮತಿಯಾಗಿ ಯುದ್ಧಗಳ ಚರಿತ್ರೆ ಎಂದರೆ ಕವಾಯತಿಯ ಚರಿತ್ರೆ ಎಂದು ಹೇಳಬಹುದು. ವಾಲ್ಮೀಕಿ ವ್ಯಾಸರ ಕಾಲಗಳಲ್ಲೇ ಸೈನ್ಯಗಳ ವ್ಯವಸ್ಥಿತ ವಿನ್ಯಾಸಗಳ ಉಲ್ಲೇಖವಿದೆ. ರಾಜಕುಮಾರರಿಗೆ ಬಿಲ್ಲುವಿದ್ಯೆ ಕಲಿಸುತ್ತಿದ್ದ ಕ್ರಮವೂ ಒಂದು ಕವಾಯತಿಯೇ. ಆದ್ದರಿಂದ ಭಾರತ ದೇಶದಲ್ಲಿ ಕವಾಯತಿಯ ಉಗಮ ಇತಿಹಾಸದ ಅಸ್ಪಷ್ಟ ಗರ್ಭದಲ್ಲಿ ಹುದುಗಿದೆ. ಇಂದು ಕವಾಯತು ಎಂದಾಗ ನಮಗೆ ಮೂಡುವ ಅರ್ಥದ ಕವಾಯತನ್ನು ಆರಂಭಿಸಿದವರು ಪ್ರಾಚೀನ ಗ್ರೀಕರು. ಮುಂದೆ ಹೊಸ ಹೊಸ ಅಸ್ತ್ರಗಳು ವಾಹನಗಳು ಆವಿಷ್ಕರಣಗೊಂಡಂತೆ ಕವಾಯತಿಯ ವಿಧಾನವೂ ಬದಲಾಗಿ ಇಂದಿನ ಬಲು ಸಂಕೀರ್ಣ ವಿಧಾನಗಳು ತಲೆದೋರಿವೆ. ಹಾಗಿದ್ದರೂ ಕವಾಯತಿಯ ಮೂಲಸೂತ್ರ ಬದಲಾಗಿಲ್ಲ. (ಎ.ಎನ್.ಎಸ್.ಎಂ.)

**ಕವಿಕಾಮ :** ಸು. 1200. ಕನ್ನಡದಲ್ಲಿ ಮೊದಲ ಬಾರಿಗೆ ರಸದ ವಿಷಯವಾಗಿ ವಿಸ್ತಾರವಾಗಿ ಗ್ರಂಥರಚನೆ ಮಾಡಿದ ಖ್ಯಾತಿಗೆ ಸಂದ ಕವಿ. ಈತನನ್ನು ಪಾರ್ಶ್ವಕವಿ (ಸು. 1205) ಮತ್ತು ಸಾಳ್ವರು (16ನೆಯ ಶತಮಾನ) ಸ್ತುತಿಸಿದ್ದಾರೆ.

ಈತ ಸ್ಮಾರ್ತಬ್ರಾಹ್ಮಣನೆಂಬ ವಿಷಯ ಈತನ ಗ್ರಂಥದ ಆಶ್ವಾಸಾಂತ್ಯ ಗದ್ಯದಿಂದ ತಿಳಿದುಬರುತ್ತದೆ. ಈತನಿಗೆ ಶೃಂಗಾರರತ್ನಾಕರ, ಕವಿಮುಖಮುಕುರ ಮೊದಲಾದ ಬಿರುದುಗಳಿದ್ದಂತೆ ತೋರುತ್ತದೆ. ತನ್ನ ಗ್ರಂಥದಲ್ಲಿ ಅಮರಸಿಂಹ, ಚಂದ್ರದತ್ತ ಮೊದಲಾದ ಸಂಸ್ಕೃತ ಕವಿಗಳನ್ನು ಈತ ಸ್ಮರಿಸಿದ್ದಾನೆ.

ಶೃಂಗಾರರತ್ನಾಕರ ಇವನ ಗ್ರಂಥ. ಇದಕ್ಕೆ ರಸವಿವೇಕವೆಂಬ ಇನ್ನೊಂದು ಹೆಸರೂ ಉಂಟು. ಈ ಗ್ರಂಥದಲ್ಲಿ ನಾಲ್ಕು ಪರಿಚ್ಛೇದಗಳಿವೆ. ಅವುಗಳು ಕ್ರಮವಾಗಿ ಹೀಗಿವೆ: 1 ನವರಸವ್ಯಾವರ್ಣನ 2 ಭಾವಭೇದ ನಿರ್ಣಯ 3 ನಾಯಕ ನಾಯಿಕಾ ವಿಕಲ್ಪವಿಸ್ತರ 4 ಸಖಸಖೀ ಸಂಭೋಗ ವಿಪ್ರಲಂಭ ಪ್ರಮಾದಾವಸ್ಥಾದಿ ವಿಸ್ತರ. ಮೊದಲ ಅಧ್ಯಾಯದಲ್ಲಿ ಶೃಂಗಾರರಸೋತ್ಪತ್ತಿಕ್ರಮ, ಶೃಂಗಾರರಸಗಳ ವರ್ಣಗಳು, ಶೃಂಗಾರಾದಿ ನವರಸಗಳಿಗೆ ಅಧಿದೇವತೆಗಳು, ಶೃಂಗಾರರಸಭೇದ, ಅದರ ಲಕ್ಷಣಗಳು, ಹಾಸ್ಯ, ರೌದ್ರ, ಕರುಣ, ವೀರ, ಅದ್ಭುತ, ಬೀಭತ್ಸ, ಭಯಾನಕ ಮತ್ತು ಶಾಂತಿರಸಭೇದಗಳು ಮತ್ತು ಅವುಗಳ ಲಕ್ಷಣಗಳು ಮೂಡಿಬಂದಿವೆ. ಎರಡನೆಯ ಅಧ್ಯಾಯದಲ್ಲಿ 49 ಬಗೆಬಗೆಯ ಭಾವಭೇದಗಳು, ಎಂಟು ಬಗೆಯ ಸ್ಥಾಯಿಭಾವಗಳು ವಿವರಿಸಲ್ಪಟ್ಟಿವೆ. ಮೂರನೆಯ ಅಧ್ಯಾಯದಲ್ಲಿ ನಾಯಿಕಾ ಭೇದ ಮತ್ತು ನಾಯಿಕಾ ಪ್ರಭೇದಗಳ ವಿವರಣೆ ಇದೆ. ಕೊನೆಯ ಅಧ್ಯಾಯದಲ್ಲಿ ಸಖ, ಸಖೀ ಸಂಭೋಗ, ವಿಪ್ರಲಂಭ–ಇವೇ ಮೊದಲಾದ ಅವಸ್ಥೆಗಳ ವರ್ಣನೆ ನಿರೂಪಿತವಾಗಿದೆ. ಕನ್ನಡದಲ್ಲಿ ರಸಪ್ರಕರಣವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥಗಳಲ್ಲಿ ಇದೇ ಮೊದಲನೆಯದು. 'ರಸಮೇ ಮೊದಲ್ ಕವಿತೆಗೆ' ಎಂದೀತ ಹೇಳಿದ್ದಾನೆ. ಸಂಸ್ಕೃತದ ಆಲಂಕಾರಿಕರು ರಸದ ಬಗ್ಗೆ ಹೇಳಿರುವುದಕ್ಕಿಂತ ಭಿನ್ನವಾದ ಒಂದೆರಡು ಅಂಶಗಳು ಇವನಲ್ಲುಂಟು. ಇವನಿಗೆ ಅದ್ಭುತವಾದ ಅವಧಾನ ಶಕ್ತಿಯಿತ್ತೆಂದು ಒಂದು ಪದ್ಯದಿಂದ ಊಹಿಸಬಹುದು:

**ಎಸಕಂಬೆತ್ತ ಮತಿಪ್ರಕಾಶಮದನಿನ್ನೇನೆಂದಪೆಂ ಚೇಟಿ ನಾ ।**
**ಲ್ದೆಸೆಯೊಳ್ ನಾಲ್ವರ ಕಂಠದೊಳ್ ಬರೆಯೆ ಕಬ್ಬಂ ಬೇಟ್ಟಸೊಲ್ಲದ್ದತಲಾ ।**
**ಡಿಸುವಂ ನೆತ್ತಮನಿತ್ತಲೋದಿದೊಡೆ ತಪ್ಪಂ ಪೇಟ್ದುದಂ ತಿರ್ದಿಯಾ ।**
**ಲಿಸುವಂ ಗೀತಮನೆನ್ನುಮಂ ನಗಿಸುವಂ ಶೃಂಗಾರರತ್ನಾಕರಂ ॥**

ಕವಿಕಾಮನ ಗ್ರಂಥದಿಂದ ಸಾಳ್ವ ತನ್ನ ರಸರತ್ನಾಕರದಲ್ಲಿಯೂ ತಿಪ್ಪರಸ ತನ್ನ ನವರಸಾಲಂಕಾರದಲ್ಲಿಯೂ ಅನೇಕ ಲಕ್ಷಣಪದ್ಯಗಳನ್ನು ಉದ್ಧರಿಸಿದ್ದಾರೆ. ಮಲ್ಲಿಕಾರ್ಜುನ ಕವಿ ಈತನ ಗ್ರಂಥದಿಂದ ಹಲವಾರು ಪದ್ಯಗಳನ್ನು ತನ್ನ ಸೂಕ್ತಿಸುಧಾರ್ಣವದಲ್ಲಿ ಉದಾಹರಿಸಿದ್ದಾನೆ. ಪಾರ್ಶ್ವಕವಿ ತನ್ನ ಗ್ರಂಥದಲ್ಲಿ:

**ಕಾಮನ ಬಾಣಕ್ಕಂ ಕವಿ**
**ಕಾಮನ ಬಾಣಕ್ಕಮಿಲ್ಲ ಭೇದಂ ಸುಮನೋ**
**ರಾಮತೆಯಿಂದ ಸ್ತನಶತಕೋ**
**ದ್ದಾಮತೆಯಿಂ ಭುವನಮಂ ವಶಂ ಮಾಟ್ಪುದಱಿ**

ಎಂದು ಹೇಳಿರುವುದರಿಂದ ಕವಿಕಾಮ ಸ್ತನಶತಕವೆಂಬ ಶತಕಗ್ರಂಥವನ್ನೂ ಬರೆದಿರಬಹುದೆಂದು ಊಹಿಸುವವರಿದ್ದಾರೆ. ಆದರೆ ಈ ಗ್ರಂಥ ಸಿಕ್ಕಿಲ್ಲ. ಇದಲ್ಲದೆ ಈತ ಇನ್ನೂ ಅನೇಕ ಗ್ರಂಥಗಳನ್ನು ರಚಿಸಿರಬಹುದೆಂದು ಕವಿಚರಿತೆಕಾರರು ಊಹಿಸಿದ್ದಾರೆ. (ಎಚ್.ಎಸ್.ಎಚ್.)

**ಕವಿಗಾಯಕರು :** 11 ರಿಂದ 13ನೆಯ ಶತಕದ ವರೆಗಿನ ಕಾಲದಲ್ಲಿ ದಕ್ಷಿಣ ಫ್ರಾನ್ಸಿನಲ್ಲಿ ದೇಶೀಯ (ಲ್ಯಾಂಗ್ ಡಿ ಓಕ್) ಭಾಷೆಯಲ್ಲಿ ಹೊಸ ಬಗೆಯ ಹಾಡುಗಬ್ಬಗಳನ್ನು ರಚಿಸಿದ ಕವಿಗಾಯಕರಿಗೆ ಟ್ರೂಬೆಡೂರರು ಎಂದು ಹೆಸರು. ಉತ್ತರ ಫ್ರಾನ್ಸಿನಲ್ಲೂ (ಈ ಸ್ಫೂರ್ತಿಯಿಂದ) ಇದೇ ಮಾದರಿಯ ಹಾಡುಗಬ್ಬಗಳನ್ನು (ಲ್ಯಾಂಗ್ ಡಿ ಯೀಲ್) ಭಾಷೆಯಲ್ಲಿ ರಚಿಸಿದ ಕವಿಗಾಯಕರಿಗೆ ಟ್ರೂವೇರರು ಎಂದು ಹೆಸರು. ಉತ್ತರ ಇಟಲಿ ಮತ್ತು ಉತ್ತರ ಸ್ಪೇನಿನಲ್ಲೂ ಈ ಕಾವ್ಯಗಾಯನ ಪದ್ಧತಿ, ಸುಮಾರು ಇದೇ ಕಾಲಾವಧಿಯಲ್ಲಿ ಪ್ರಚಲಿತವಾಗಿತ್ತು.

**ಟ್ರೂಬೆಡೂರರು :** ಟ್ರೂಬೆಡೂರ್ ಎಂಬ ಶಬ್ದ ಸೃಜಿಸು, ಕಂಡುಹಿಡಿ ಎಂಬ ಅರ್ಥ ಬರುವ ಟ್ರೊಬಾರ್–ಟ್ರೊಬೇರ್–ಟ್ರೂವೇರ್ ಎಂಬ ಪದದಿಂದ ನಿಷ್ಪನ್ನವಾದುದು. ಹೊಸ ಬಗೆಯ ಹಾಡನ್ನು ರಚಿಸುವವನು, ಕವಿಗಾಯಕ ಎಂಬ ಅರ್ಥ ಈ ಪದಕ್ಕೆ ಅಳವಟ್ಟಿತು. ಜನತೆಯ ಮೇಲೆ ಈ ಗೀತೆಗಳಿಂದಾದ ಪ್ರಭಾವ ಮಧ್ಯಯುಗದ ಕಾವ್ಯ ಚರಿತ್ರೆಯಲ್ಲೇ ಅಭೂತಪೂರ್ವವಾದುದು. ರಿಚರ್ಡ್ ಕ್ಯೂರ್ ಡಿಲಯನನಂಥ ರಾಜಕುವರನಿಂದ ಹಿಡಿದು ಯಾವ ಸ್ಥಾನಮಾನವೂ ಇಲ್ಲದ ಸಾಹಸಿ ಚಾರಣರ ವರೆಗೂ ಈ ಪಂಥದ ಕವಿಗಾಯಕರು ಆಗಿಹೋದರು. ಕೆಲವರು ತಾವೇ ಹಾಡಬಲ್ಲವರಾಗಿದ್ದರು. ಇನ್ನು ಕೆಲವರು ತಮ್ಮ ಕಬ್ಬಗಳನ್ನು ಸಂಗೀತಕ್ಕೆ ಅಳವಡಿಸಿ ಹಾಡಬಲ್ಲ ಜೋಗ್ಲಾರ್ ಎಂಬ ಗಾಯಕರನ್ನು ಜೊತೆಯಲ್ಲಿ ಇಟ್ಟುಕೊಳ್ಳುತ್ತಿದ್ದರು. ಎರಡು ಶತಕಗಳ ಅವಧಿಯಲ್ಲಿ ಹಾಡುಗಬ್ಬಗಳನ್ನು ರಚಿಸಿದ ಕವಿಗಾಯಕರ ಸಂಖ್ಯೆ ನಾಲ್ಕುನೂರು ಎಂದು ತಿಳಿದುಬಂದಿದೆ. 13ನೆಯ ಶತಕದ ವೇಳೆಗೆ ಈ ಹಾಡುಗಳ ಪ್ರಾಶಸ್ತ್ಯ ಕಡಿಮೆಯಾಗ ತೊಡಗಿತು. ಕ್ರೈಸ್ತ ವಿರೋಧಿಗಳಾಗಿದ್ದ ಆಲ್ಬಿಜೆನ್ಸಿಯಾದವರ ಮೇಲೆ ಕ್ರೈಸ್ತ ಮತಾವಲಂಬಿಗಳಾಗಿದ್ದ ರೋಮನರು ನಡೆಸಿದ ಕ್ರೂಸೇಡ್ (ಧರ್ಮ ಯುದ್ಧ)ಗಳಲ್ಲಿ ಆಲ್ಬಿಜೆನ್ಸೀಸರು ಪರಾಜಿತರಾದುದೇ ಈ ಕಾವ್ಯದ ಅವನತಿಗೆ ಮುಖ್ಯ ಕಾರಣ. ಕವಿಗಾಯಕರಿಗೆ ಆಶ್ರಯ ಕೊಟ್ಟಿದ್ದ ಪಾಳೆಯಪಟ್ಟುಗಳೆಲ್ಲ

ಆಲ್ಬಿಜೆನ್ಸೀಸರ ಬೆಂಬಲಿಗರಾಗಿದ್ದರು. ರೋಮಿನ ವಿಜಯವೂ ಇವರ ಅವನತಿಗೆ ಕಾರಣವಾಯಿತು. ಯುರೋಪಿನ ಹೊಸ ಭಾವಗೀತೆಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಈ ಕಾವ್ಯ ಪ್ರವಾಹ ಎಷ್ಟು ಆಕಸ್ಮಿಕವಾಗಿ ಉಕ್ಕಿಬಂದಿತೊ ಹಾಗೆಯೇ ತಗ್ಗಿ ಮರೆಯಾಯಿತು. ಚಾನ್ಸನಿಯರ್ಸ್ (ಹಾಡುಗಳ ಪುಸ್ತಕ) ಎನ್ನುವ ಹಸ್ತಪ್ರತಿಗಳಲ್ಲಿ ಈ ಹಾಡುಗಬ್ಬಗಳ ಹಲವಾರು ಮಾದರಿಗಳಿವೆ. ಕಾನ್ ಝೊ ಎಂಬುದು ಐದೊ ಆರೊ ಚರಣಗಳ ಒಂದು ಹಾಡು. ಅದಕ್ಕೊಂದು ಒಪ್ಪವಾದ ಮುಕ್ತಾಯವೂ ಉಂಟು. ಇದರ ವಸ್ತು ಸಾಮಾನ್ಯವಾಗಿ ಪ್ರಣಯ. ಹೆಚ್ಚು ಬಳಕೆಯಲ್ಲಿದ್ದ ಮಾದರಿಯೆಂದರೆ ಇದೇ. ಕವಿತೆಯ ವಸ್ತು ರಾಜಕೀಯ ವಿಚಾರವೊ ವಿಡಂಬನೆಯೊ ಆಗಿದ್ದರೆ ಸರ್ವೆಂಟಿಸ್ ಎಂಬ ಮತ್ತೊಂದು ಮಾದರಿ ಆಗುತ್ತದೆ. ಬ್ಯಾಲೆಡ ಅಥವಾ ಡಾನ್ಸಾ ಎಂಬುದು ನೃತ್ಯ ಗೀತೆ. ಮುಗ್ಧ ಕುರುಬ ಕನ್ಯೆಯಲ್ಲಿ ವೀರಯೋಧನೊಬ್ಬನ ಪ್ರೇಮಯಾಚನೆ ಹಾಡಿನ ವಸ್ತುವಾದರೆ ಪ್ಯಾಸ್ಟೊರೆಲಾ ಎನಿಸಿಕೊಳ್ಳುತ್ತದೆ. ಆಲ್ಬಾ (ಬೆಳಗಿನ ಹಾಡು) ಎಲ್ಲಕ್ಕಿಂತ ಮನೋಹರವಾದ ಮಾದರಿ. ಕಾಪಿನವರು ಬೆಳಗಾಯಿತೆಂದು ಪ್ರಣಯಿಗಳನ್ನು ಎಚ್ಚರಿಸುವ ಗೀತೆ. ಧಾರ್ಮಿಕ ಭಾವನೆಯ ಉದಯಗೀತೆಗಳೂ ಇವೆ. ಆಲ್ಬಾಕ್ಕೆ ಪ್ರತಿಯಾಗಿ ಸೆರಿನಾ (ಸಂಧ್ಯಾಗೀತೆ) ಎಂಬ ಇನ್ನೊಂದು ಬಗೆ ಆಮೇಲೆ ಹುಟ್ಟಿಕೊಂಡಿತು.

ಟೆನ್ಸನ್ ಮತ್ತು ಪಾರ್ಟಿಮನ್ (ಯೋಕ್ ಪಾರ್ಲಿಟ್) ಎಂಬ ಗೀತೆಗಳು ತುಂಬ ಸ್ವಾರಸ್ಯವಾಗಿರುತ್ತವೆ. ಅವುಗಳಲ್ಲಿ ಇಬ್ಬರು ಮೂವರು ಕೂತು ಪ್ರಣಯದ ಪ್ರಕರಣವೊ ಧಾರ್ಮಿಕ ವಿಚಾರವೊ ವೇದಾಂತವೊ ಕಡೆಗೆ ಲೌಕಿಕ ವಿಡಂಬನೆಯೊ–ಇಂಥ ಯಾವುದಾದರೊಂದು ವಿಚಾರದ ಬಗ್ಗೆ ನಡೆಸುವ ಸ್ವಾರಸ್ಯವಾದ ಚರ್ಚೆ, ಸಂಭಾಷಣೆ ಭಾವ ಗೀತಾತ್ಮಕವಾಗಿ ಹರಿಯುತ್ತದೆ.

ಭಾವಗೀತಾತ್ಮಕತೆಯೇ ಈ ಎಲ್ಲ ಮಾದರಿಯ ಹಾಡುಗಬ್ಬಗಳ ಜೀವನಾಡಿ. ನಾಲ್ಕುನೂರು ಕವಿಗಾಯಕರಲ್ಲಿ ಕೇವಲ ನೂರಹನ್ನೊಂದು ಜನರ ಜೀವನ ಚರಿತ್ರೆಗಳು ಹಸ್ತಪ್ರತಿಯಲ್ಲಿ ದೊರಕಿವೆ. 16ನೆಯ ಶತಕದಲ್ಲಿ ಈ ಚರಿತ್ರೆಗಳ ಸಂಗ್ರಹ ಕಾರ್ಯ ನಡೆಯಿತು. ಈ ಕವಿಜೀವನಕಥೆಗಳಲ್ಲಿ ತಥ್ಯ ಎಷ್ಟು ಮಿಥ್ಯ ಎಷ್ಟು ಎಂದು ನಿರ್ಣಯಿಸುವುದೇ 19 ಮತ್ತು 20ನೆಯ ಶತಮಾನಗಳ ಮುಖ್ಯ ಸಂಶೋಧನಾಕಾರ್ಯವಾಗಿದೆ. ಕೇವಲ ಇಪ್ಪತ್ತು ಪ್ರಮುಖ ಕವಿಗಳ ಸಂಕ್ಷಿಪ್ತ ಪರಿಚಯವನ್ನು ಬ್ರಿಟಾನಿಕ ವಿಶ್ವಕೋಶ ಮಾಡಿಕೊಡುತ್ತದೆ.

1071–1127ರಲ್ಲಿ ಬಾಳಿದ ಏಳನೆಯ ಗಿಲ್ಹೆಮ್, ಅಕ್ವಿಟೇನಿನ ಡ್ಯೂಕ್ 9ನೆಯ ವಿಲಿಯಂ ಕವಿಗಾಯಕರ ಆಶ್ರಯದಾತನೂ ಸ್ವತಃ ಪ್ರಥಮ ಕವಿಗಾಯಕನೂ ಆಗಿದ್ದ. ಮೇರೆ ಮೀರಿದ ಶೃಂಗಾರ ಇವನ ಹಾಡುಗಳ ಲಕ್ಷಣ.

ಗ್ಯಾಸ್ಕೋನ್ ಮಾರ್ಕಾಬ್ರನ್ ಈ ಕಾವ್ಯಪದ್ಧತಿಯಲ್ಲಿ ಹೊಸ ಪ್ರಯೋಗಗಳನ್ನೂ ಅನೇಕ ಸುಧಾರಣೆಗಳನ್ನೂ ಮಾಡಿದ. ಈತನ ಹಾಡುಗಳಲ್ಲಿ ಒರಟು ಸೌಂದರ್ಯವಿದೆ. ತುಂಬ ಕಟ್ಟುನಿಟ್ಟಾದ ಸಾಂಪ್ರದಾಯಿಕ ಗೀತೆಗಳ ಪರಂಪರೆಯ ಪ್ರವರ್ತಕ ಈತ.

ಮೊದಲು ಫ್ರಾನ್ಸಿನ ರಾಣಿಯಾಗಿದ್ದು ಅನಂತರ ಇಂಗ್ಲೆಂಡಿನ ರಾಣಿಯಾದ ಅಕ್ವಿಟೇನಿನ ಎಲಿಯನೋರ್ ಕವಿಗಾಯಕರಿಗೆ ಉದಾರವಾದ ಆಶ್ರಯವಿತ್ತು ಪ್ರೋತ್ಸಾಹಿಸಿದಳು. ಕೀರ್ತಿಶಿಖರಕ್ಕೇರಿದ ಬೆರ್ನಾಟ್ ಡಿ ಮೆಂಟಾಡೊರ್ ರಾಣಿಯ ಆಸ್ಥಾನ ಕವಿಯಾಗಿದ್ದ.

12–13ನೆಯ ಶತಕದಲ್ಲಿ ಆರ್ನಾಟ್ ಡಿ ಮಾರ್ಯೂಯಿಲ್ ಹಾಡುಗಬ್ಬಗಳಲ್ಲಿ ಸಾಲ್ಯುಟ್ ಎಂಬ ಪ್ರೇಮಪತ್ರದ ಮಾದರಿಯನ್ನೂ ಎನ್ಸೆನ್ ಹಾಮೆನ್ ಎಂಬ ಧರ್ಮಬೋಧನ ಮಾದರಿಯನ್ನೂ ರೂಢಿಗೆ ತಂದ.

ರೇಮ್ ಬಾಟ್ ಡಿ ವಾಕ್ವೇರಸ್ ಪ್ರೊವೆನ್ಸಿನ ಮಾಂಟ್ ಫೆರಟ್ ಆಸ್ಥಾನದಲ್ಲಿ ವರಿಷ್ಠ ಕವಿಗಾಯಕನೆನಿಸಿದ್ದ. ಮಾರ್ಕ್ವಿಸ್ ಬಾನಿಫೇಸನ ಸೋದರಿ ಬೀಟ್ರೈಸ್ ಈ ಕವಿಗೆ ಸ್ಫೂರ್ತಿದಾಯಿನಿ. ಈಕೆಯ ಮರಣದಿಂದ ದುಃಖಿತನಾಗಿ ಕವಿ ರಚಿಸಿದ ಶೋಕ ಗೀತೆ ಹೃದಯವಿದ್ರಾವಕವಾಗಿದೆ. ವಾರ್ ಆಫ್ ದಿ ಲೇಡೀಸ್ ಎಂಬ ಹರ್ಷ ಉಕ್ಕುವ ಗೀತೆ ಲೋಕಪ್ರಸಿದ್ಧವಾಗಿದೆ.

ಟುಲೌಸ್ ನ ಹೆಸರಾಂತ ಕವಿಗಾಯಕ ಪಿಯರೆ ವಿಡಲ್. ಯಾರಿಗೂ ಹೆದರದ, ಯಾರನ್ನೂ ಲಕ್ಷಿಸದ ಕವಿ ಎಂದೂ ಪ್ರಪಂಚದಲ್ಲಿ ಇವನಷ್ಟು ಹುಚ್ಚರು ಬೇರಿಲ್ಲ ಎಂದೂ ಹೆಸರಾಗಿದ್ದ. ಇವನ ಪ್ರಣಯದ ಹುಚ್ಚಾಟದ ಕಥೆಗಳು ಜನಜನಿತವಾಗಿದ್ದುವು.

ಪಿಯರೆ ಕಾರ್ಡಿನಲ್ ಅಗ್ರಪಂಕ್ತಿಯ ಕವಿ. ಲೆ ಪೈ ಪ್ರಾಂತ್ಯದವ. ನೀತಿಬೋಧಕ ಸರ್ವೆಂಟಿಸ್ ಹಾಡುಗಳ ಜನಕ. ಧರ್ಮಬೋಧಕರನ್ನು ವಿಡಂಬಿಸುವ ಈತನ ಹಾಡುಗಳಂತೂ ಬಿಚ್ಚು ಮಾತಿನ ವಿಶಿಷ್ಟ ಮಾದರಿಗಳಾಗಿವೆ.

ಬೆರ್ಟ್ರಾನ್ ಡಿ ಬೋರ್ನ್, ಆರ್ನಾಟ್ ಡೇನಿಯಲ್, ಗಿರಾಟ್ ಡಿ ಬೋರ್ನೆಲ್ಹ್ ಮತ್ತು ಸೊರ್ಡೆಲ್ಲೊ–ಈ ಪ್ರಸಿದ್ಧ ಕವಿಗಾಯಕರ ಹೆಸರುಗಳನ್ನು ಡಾಂಟೆ ತನ್ನ ಮಹಾಕಾವ್ಯದಲ್ಲಿ ಪ್ರಸ್ತಾಪಿಸಿದ್ದಾನೆ. ಇವರೆಲ್ಲರನ್ನೂ ಮೃತ್ಯುಲೋಕದಲ್ಲಿ ತಾನು ಸಂಧಿಸಿದ ಹಾಗೆ ಚಿತ್ರಿಸಿದ್ದಾನೆ.

ಗಿಲ್ಹೆಮ್ ಫಿಗ್ಯೂಯಿರಾ 13ನೆಯ ಶತಕದ ಮಧ್ಯಭಾಗದಲ್ಲಿ ಹೆಸರಾದ ಕವಿಗಾಯಕ. ಧರ್ಮವಿರೋಧಿಯಾದ ಈತ ಕೆಥೊಲಿಕ್ ಮಠಗಳ ಮೇಲೆ ಪ್ರಚಂಡ ಟೀಕೆಯ ಮಳೆಗರೆದ. ಹಾಡುಗಬ್ಬಗಳ ಉತ್ಕರ್ಷ ಈತನ ಸಾವಿನೊಂದಿಗೆ ಮುಗಿಯಿತು. ದಕ್ಷಿಣದ ಆಶ್ರಯಸ್ಥಾನಗಳೆಲ್ಲ ಖಿಲವಾದುವು.

ಗಿರಾಟ್ ರಿಕ್ವಿಯರ್ (1230–94) ಕವಿಗಾಯಕರಲ್ಲಿ ಕೊನೆಯವ. ಕ್ಯಾಸ್ಟೈಲಿನ ಪ್ರಾಜ್ಞ ಆಲ್ಫಾನ್ಸೋನ ಆಶ್ರಯ ಈತನಗೆ ದೊರಕಿತ್ತು. ಈತ ರಚಿಸಿದ ಸರ್ವೆಂಟಿಸ್ ಒಂದರಲ್ಲಿ ಹಾಡುಗಬ್ಬಗಳ ಲೋಕವನ್ನಾಗಲೇ ಆವರಿಸುತ್ತಿದ್ದ ಕತ್ತಲೆಯ ಅರಿವು ವ್ಯಕ್ತವಾಗುತ್ತದೆ. ಕವಿಗಾಯಕನಾಗಿರುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ; ಯಾವ ಮನ್ನಣೆಯೂ ಇಲ್ಲ–ಎಂಬುದನ್ನು ಈತ ಗ್ರಹಿಸಿದ್ದ. 'ಹಾಡು ನಲಿವನ್ನುಕ್ಕಿಸಬೇಕು. ಆದರೆ ನೋವು ನನ್ನ ಹೃದಯವನ್ನು ಹಿಂಡುತ್ತಿದೆ. ನಾನು ತೀರ ತಡವಾಗಿ ಹುಟ್ಟಿದೆ'–ಎಂದು ತನ್ನ ದಾರುಣವಾದ ವ್ಯಥೆಯನ್ನು ಒಂದು ಹಾಡಿನಲ್ಲಿ ತೋಡಿಕೊಳ್ಳುತ್ತ ಹಾಡುಗಬ್ಬಗಳ ಬಹು ದೊಡ್ಡ ಪರಂಪರೆಗೆ ಮಂಗಳ ಹಾಡಿ ಕಣ್ಮರೆಯಾದ, ಈ ಕವಿ. ಲೋಕ ಮತ್ತೆ ಈ ಪಂಥದ ಕವಿಗಾಯಕರನ್ನು ನೋಡಲಿಲ್ಲ.

**ಟ್ರೂವೇರರು** : ದಕ್ಷಿಣದ ಟ್ರೂಬೆಡೂರರ ಪ್ರಭಾವ ಮತ್ತು ಸ್ಫೂರ್ತಿಯಿಂದ ಫ್ರಾನ್ಸಿನ ಮಧ್ಯಪ್ರಾಂತ್ಯ, ಉತ್ತರ ಪ್ರಾಂತ್ಯಗಳಲ್ಲಿ ಬೆಳೆದ ಹಾಡುಗಬ್ಬಗಳ ಕವಿಗಳಿವರು. ಇವರ ಹಾಡುಗಳ ಭಾಷೆ ಲ್ಯಾಂಗ್ ಡಿ ಯೀಲ್, ವಸ್ತು ನಾಗರಿಕ ಪ್ರಣಯ. ಟ್ರೂವೆರ್ಸ್ ಕಾವ್ಯ ಪಂಥ 1137ರಿಂದ ಈಚಿನದು. 12–13ನೆಯ ಶತಕಗಳಲ್ಲಿದ್ದು ಉಚ್ಛ್ರಾಯ ಸ್ಥಿತಿಯಲ್ಲಿತ್ತು.

ಖ್ಯಾತನಾದ ಟ್ರೂಬೆಡೂರನೊಬ್ಬನ ಮೊಮ್ಮಗಳಾದ ಅಕ್ವಿಟೇನಿನ ಎಲಿಯನೋರ್ ಏಳನೆಯ ಲೂಯಿಯ ಪಟ್ಟದ ರಾಣಿಯಾಗಿ ಫ್ರಾನ್ಸಿಗೆ ಬಂದಾಗ ದಕ್ಷಿಣದ ಕವಿಗಾಯಕರ ಪ್ರಭಾವವನ್ನೂ ಜೊತೆಗೆ ತಂದಳು. ಆಕೆ ಫ್ರಾನ್ಸಿನ ರಾಣಿಯಾಗಿದ್ದ 15ವರ್ಷ ಕಾಲ ಟ್ರೂವೇರರ ಹಾಡುಗಬ್ಬಗಳಿಗೆ ಎಣೆಯಿಲ್ಲದ ಪ್ರೋತ್ಸಾಹ, ಪೋಷಣೆ ಸಿಕ್ಕವು. ದಕ್ಷಿಣದವರ ಹಾಡುಗಳಿಂದ ಸ್ಫೂರ್ತಿತರಾದರೂ ಟ್ರೂವೇರರು ಅನುಕರಣೆಗೆ ಹೋಗದೆ ತಮ್ಮ ಪ್ರತಿಭೆಯಿಂದ ಹೊಸ ಗೀತೆಗಳನ್ನು ರಚಿಸಿ ಹಾಡಿದರು. ಆದರೆ ಟ್ರೂಬೆಡೂರರ ಹಾಡುಗಳ ಸೊಗಸು, ನಯನಾಜೂಕು ಇವರ ಹಾಡುಗಳಿಗೆ ಬರಲಿಲ್ಲ. ನವೀನತೆಯಲ್ಲಿ ವೈವಿಧ್ಯದಲ್ಲಿ ಟ್ರೂಬೆಡೂರ್ ಕವಿಗಳ ಸಾಧನೆ ಇವರಿಗಿಂತ ಬಹಳ ಹೆಚ್ಚು.

ಕೊನೊನ್ ಡಿ ಬೆಥ್ಯೂನ್, ಹ್ಯೂಗ್ಯೂ ಡಿಬೆರ್ಜ್ ಮೊಟ್ಟಮೊದಲ ಟ್ರೂವೇರ್ ಕವಿಗಾಯಕರು. ಅವರ ಪ್ರಣಯಗೀತೆಗಳಲ್ಲಿ ದಕ್ಷಿಣದ ಪ್ರಭಾವ ವಿಪುಲವಾಗಿದೆ.

ಔತ್ತರೇಯ ಹಾಡುಗಬ್ಬಗಳಲ್ಲಿ ಮುಖ್ಯವಾದ ಮಾದರಿಗಳು ಮೂರು: 1. ರೋಟ್ರುಯೆಂಜ್: ಪಲ್ಲವಿಯಿರುವ ಹಾಡು. 2. ಸರ್ವೆಂಟೋಯ್: ದಕ್ಷಿಣದ ಸರ್ವೆಂಟಿಸ್‍ಗೂ ಇದಕ್ಕೂ ತುಂಬ ವ್ಯತ್ಯಾಸ. ಈ ಹಾಡಿನ ವಸ್ತುವೂ ಪ್ರಣಯವೇ ಆದರೂ ಇದರ ರೀತಿ ಹೆಚ್ಚು ಅಶ್ಲೀಲ. 3. ಎಸ್ಟ್ರಾಬೊಟ್: ಇಟಲಿಯ ಸ್ಟ್ರ್ಯಾಂಬೊಟ್ಟೊಗೂ ಇದಕ್ಕೂ ನಿಕಟ ಸಂಬಂಧ.

ಷಾಂಪೆನ ರಾಜರಕ್ಷಕಿ ಮೇರಿ, ಆಕೆಯ ಸೋದರಿ ಏಲಿಸ್, ಏಳನೆಯ ಲೂಯಿಯ ಎರಡನೆಯ ರಾಣಿ ಏಲಿಸ್ ಇವರ ಅತಿಶಯವಾದ ಪ್ರೋತ್ಸಾಹದಿಂದ ಟ್ರೂವೇರರ ಕಾವ್ಯಕ್ಕೆ ಸಮೃದ್ಧವಾದ ಬೆಳೆವಣಿಗೆ, ವೈಭವ ಲಭಿಸಿದುವು. ಶ್ರೇಷ್ಠ ಕವಿಗಳಾದ ಗೌಟಿಯರ್ ಡಿ ಅರಾಸ್, ಲೆ ಚಾಟ್ಲೇನ್ ಡಿ ಕಾನ್ಸಿ, ಕೊನೋನ್ ಡಿ ಬೆಥ್ಯೂನ್–ಇವರು ಬ್ಲಾಯಿಸ್ ಮತ್ತು ಪ್ಯಾರಿಸ್ ನಗರಗಳಲ್ಲಿ ಆಸ್ಥಾನಕವಿಗಳಾಗಿದ್ದರು. ಗೈಡಿ ಪೋಂಥ್ಯೂ, ಫಿಲಿಪ್ ಫ್ಲಾಂಡರ್ಸ್ ಆಸ್ಥಾನದ ಕವಿಗಾಯಕರಾಗಿದ್ದುದಲ್ಲದೆ ತಮ್ಮ ಪೋಷಕರಿಗೆ ಪಾಠ ಹೇಳುವ ಗುರುಗಳೂ ಆಗಿದ್ದರು.

ಮೂರನೆಯ ಕ್ರೂಸೇಡ್ ಕಾಲದಲ್ಲಿ ಆರಂಭವಾದ ಟ್ರೂವೇರರ ಕಾವ್ಯಪರಂಪರೆ ನಾಲ್ಕನೆಯ ಕ್ರೂಸೇಡ್ ಸಮಯಕ್ಕೆ ಜನಪ್ರಿಯತೆಯ ಶಿಖರವನ್ನೇರಿತು. ಅಂದರೆ 13ನೆಯ ಶತಕದ ಮೊದಲ 40 ವರ್ಷ ಈ ಪರಂಪರೆಯ ಸುವರ್ಣಕಾಲ. ಕೇವಲ ಶ್ರೀಮಂತರ ಹವ್ಯಾಸವಾಗಿದ್ದ ಹಾಡುಗಬ್ಬಗಳ ರಚನೆ ಕ್ರಮೇಣ ಯುವ ಸಾಮಾನ್ಯರ ಶ್ರದ್ಧಾಸಕ್ತಿಯನ್ನೂ ಸೆಳೆಯಿತು. ನವರ್‍ರೆಯ ನಾಲ್ಕನೆಯ ಥಿಬಾಟ್, ಬ್ಲಾಯಿಸ್ ನ ಲೂಯಿ, ಜೆರುಸಲೆಮಿನ ಜಾನ್ ಕಿಂಗ್ ಮೊದಲಾದ ಟ್ರೂವೇರರು ರಾಜ ಮನೆತನದವರಾಗಿದ್ದರು. 1230ರ ವೇಳೆಗೆ ಕೆಲವು ಶ್ರೀಮಂತರೂ ಕವಿಗಾಯಕರಾದರು. ಪ್ಯಾರಿಸ್ ಮತ್ತು ಬ್ಲಾಯಿಸ್‍ನ ರಾಜಾಶ್ರಯ ತಪ್ಪಿದ ಕೂಡಲೆ ಈ ಕಾವ್ಯಪದ್ಧತಿ ಅಳಿಯಿತು.

ಟ್ರೂವೇರ್ ಕಾವ್ಯಸೃಷ್ಟಿಗೆ ಆರ್‍ರಾಸ್ ಕೇಂದ್ರವಾಗಿತ್ತು. ಜಾಕ್ವೆಸ್ ಬ್ರಾಟೆಲ್, ಆಡಮ್ ಡಿ. ಲಾ. ಹಾಲ್ಲೆ ಚತುರ ಕವಿಗಳಾಗಿದ್ದರು. 1280ರಲ್ಲಿ ಈ ಕಾವ್ಯಪರಂಪರೆ ಹಠಾತ್ತನೆ ಅದೃಶ್ಯವಾಯಿತು. ಅದೊಂದು ಶಾಸ್ತ್ರ, ಅದೊಂದು ಧರ್ಮ ಎಂಬ ಹಾಗೆ ಪ್ರೇಮಾರಾಧನೆಯನ್ನೇ ಅನುಲ್ಲಂಘನೀಯ ವಿಧಿನಿಯಮಗಳಿಂದ ನಡೆಸಬೇಕಾದ ಒಂದು ಸಂಪ್ರದಾಯವನ್ನಾಗಿ ಸ್ಥಾಪಿಸಿದ ಪ್ರಣಯ–ಕವಿಗಳ ಈ ಕಾವ್ಯಕ್ಕೆ ಅಭಿನ್ನವಾದ ಅಂಗ ಎಂಬಷ್ಟು ಅನ್ಯೋನ್ಯ ಸಹಚರಿಯಾಯಿತು, ಸಂಗೀತ. ಈ ಹಾಡುಗಬ್ಬಗಳ ಸಂಗೀತ ಮಾಧುರ್ಯ ಪ್ರಾಚೀನ ಫ್ರೆಂಚ್ ಸಂಗೀತದಿಂದ ಉಗಮವಾದುದೆಂದು ಹೇಳುತ್ತಾರೆ.

ಮಾಂಟ್ ಪೆಲಿಯರ್‌ನ ವೈದ್ಯ ವಿದ್ಯಾಪೀಠದಲ್ಲಿ ಸುಮಾರು 345 ಟ್ರೂವೆರ್ ಹಾಡುಗಬ್ಬಗಳ ಹಸ್ತಪ್ರತಿಗಳನ್ನು ರಕ್ಷಿಸಿ ಇಟ್ಟಿದ್ದಾರೆ. (ಕೆ.ಬಿ.ಪಿ.)

**ಕವಿತಾಲಂಕೇಶ್:** 1964–. ಹೊಸತಲೆಮಾರಿನ ಚಲನಚಿತ್ರ ನಿರ್ದೇಶಕಿ ಮತ್ತು ನಿರ್ಮಾಪಕಿ. ಇವರ ತಂದೆ ಕನ್ನಡದ ಹೆಸರಾಂತ ಲೇಖಕ ಪಿ.ಲಂಕೇಶ್, ತಾಯಿ ಇಂದಿರಾ. 1964 ಡಿಸೆಂಬರ್ 13ರಂದು ಜನಿಸಿದ ಕವಿತಾ ಅವರು ಜಾಹೀರಾತು ವಿಷಯದಲ್ಲಿ ಡಿಪ್ಲೊಮಾ, ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದಾರೆ. ಸಿನಿಮಾ ಕಲೆಯ ಬಗ್ಗೆ ಇವರಿಗೆ ವಿಶೇಷ ಆಸಕ್ತಿ. ಇವರು ಆಪ್ಲಾಜ್ ಫಿಲ್ಮ್ಸ್ ಪ್ರಾರಂಭಿಸಿ ಅದರ ಮೂಲಕ 30ಕ್ಕೂ ಹೆಚ್ಚು ಕಾರ್ಪೊರೇಟ್ ಸಂಸ್ಥೆಗಳಿಗಾಗಿ ಹಾಗೂ ಕರ್ನಾಟಕ ಸರ್ಕಾರದ ಹಲವು ಇಲಾಖೆಗಳಿಗಾಗಿ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಯಕ್ಷಗಾನ ಕುರಿತಂತೆ 'ದಿ ಸಾಂಗ್ಸ್ ಆಫ್ ಏಂಜಲ್ಸ್' ಎಂಬುದು ಅವುಗಳಲ್ಲೊಂದು. ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಕುರಿತಂತೆ ಇವರು ನಿರ್ದೇಶಿಸಿದ ಸಾಕ್ಷ್ಯ ಚಿತ್ರಗಳು ಇವರನ್ನು ಪ್ರಯೋಗಶೀಲ ನಿರ್ದೇಶಕಿ ಎಂಬುದನ್ನು ಋಜುವಾತುಪಡಿಸಿವೆ. ಮೊಟ್ಟ ಮೊದಲಬಾರಿಗೆ ಪಿ.ಲಂಕೇಶರ ಅಕ್ಕ ಕಾದಂಬರಿ ಆಧರಿಸಿ ಇವರು ನಿರ್ದೇಶಿಸಿದ ದೇವೀರಿ ಎಳೆಯ ವಯಸ್ಸಿನ ಹುಡುಗನೊಬ್ಬನ ಭಾವನೆಗಳನ್ನು ಹಿಡಿದಿಟ್ಟಿರುವ ಚಿತ್ರ. ಇದು ಅತಿ ಹೆಚ್ಚು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಭಾಗವಹಿಸಿದ ಕನ್ನಡ ಚಲನಚಿತ್ರವೆನಿಸಿದೆ. ಪ್ರಥಮ ಅತ್ಯುತ್ತಮ ಚಿತ್ರವೆಂದು ಇದು ಕರ್ನಾಟಕ ಸರ್ಕಾರದಿಂದ ಪ್ರಶಸ್ತಿ ಗಳಿಸಿತು (1999–2000).

ಈ ಚಲನಚಿತ್ರಕ್ಕೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ಅರವಿಂದನ್ ಪುರಸ್ಕಾರದ ರಾಷ್ಟ್ರೀಯ ಉತ್ತಮ ನಿರ್ದೇಶನ ಪ್ರಶಸ್ತಿ (1999), ವಿಶೇಷ ರಾಷ್ಟ್ರೀಯ ಪ್ರಶಸ್ತಿ (1999), ಶ್ರೇಷ್ಠ ಬಾಲಾಭಿನಯ ಪ್ರಶಸ್ತಿ (2000), ಸುಪ್ರಭಾತ ಟೆಲಿವಿಷನ್‌ನ ಶ್ರೇಷ್ಠ ನಿರ್ದೇಶನ ಪ್ರಶಸ್ತಿ (2001), ಕಾವೇರಿ ಏಷ್ಯಾನೆಟ್ ಟೆಲಿವಿಷನ್‌ನ ಉತ್ತಮ ಕಥಾ ಪ್ರಶಸ್ತಿ (2001). ಈ ಚಿತ್ರ ಭಾರತದ ಪ್ರಮುಖ ನಗರಗಳಲ್ಲಷ್ಟೇ ಅಲ್ಲದೆ ಲಂಡನ್, ದರ್ಬಾನ್, ಬ್ಯಾಂಕಾಕ್, ಸಿಡ್ನಿ ಮುಂತಾದೆಡೆಗಳಲ್ಲಿ ನಡೆದ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ವಿದೇಶೀಯರ ಗಮನವನ್ನು ಸೆಳೆಯಿತು.

ಇವರು ಅಲೆಮಾರಿ, ಬಿಂಬ ಎಂಬ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಪ್ರೀತಿ ಪ್ರೇಮ ಪ್ರಣಯ ಇವರು ನಿರ್ದೇಶಿಸಿದಚಿತ್ರ(2003). ತಾವೊಬ್ಬ ಸಮರ್ಥ ನಿರ್ದೇಶಕಿ ಎಂಬುದನ್ನು ಇವರು ತೋರಿಸಿ ಕೊಟ್ಟಿದ್ದಾರೆ. ಪರಿಸರತಜ್ಞೆ ತುಳಸಿಯವರ ಬಗ್ಗೆ ಇವರು ತಯಾರಿಸಿದ ಕಿರುಚಿತ್ರ ಗಂಭೀರ ಪ್ರಯತ್ನದಲ್ಲಿ ಮೂಡಿ ಬಂದಿದೆ. ಸಾಮಾಜಿಕ ಕಳಕಳಿಯನ್ನೊಳಗೊಂಡ ಚಿತ್ರವೆಂದು ಇದಕ್ಕೆ ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಲಭಿಸಿದೆ. ಕರ್ನಾಟಕದ ಸಿದ್ದಿಜನಾಂಗದ ಸ್ಥಿತಿಗತಿಗಳ ಬಗ್ಗೆ ತಯಾರಿಸಿರುವ ಇನ್ನೊಂದು ಸಾಕ್ಷ್ಯಚಿತ್ರ ಗಮನಾರ್ಹವಾದದ್ದು. **'ಹಸೆಕಲೆ'** ಅವನತಿ ಹೊಂದುತ್ತಿರುವ ಒಂದು ಗ್ರಾಮೀಣ ಕಲೆ. ಈ ಕಲೆ ಕುರಿತಂತೆ ಕೂಡ ಇವರು ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ. ರಂಗಭೂಮಿ ಕಲಾವಿದೆ ಬಿ.ಜಯಶ್ರೀ, ಚಿತ್ರಕಲಾವಿದೆ ಪುಷ್ಪಮಾಲ, ನಿರ್ದೇಶಕಿ ಪ್ರೇಮಾಕಾರಂತ, ಚಿತ್ರನಟಿ ಜಯಂತಿ, ಬರೆಹಗಾರ್ತಿ ವೈದೇಹಿ ಹಾಗೂ ಸಮಕಾಲೀನ ನೃತ್ಯಗಾರ್ತಿ ತ್ರಿಪುರಾ ಕಶ್ಯಪ್ ಮುಂತಾದವರ ಬಗೆಗಿನ ಸಾಕ್ಷ್ಯಚಿತ್ರಗಳು ರಾಜ್ಯದೆಲ್ಲೆಡೆ ಪ್ರದರ್ಶಿತಗೊಂಡು ಪ್ರಶಂಸೆ ಗಳಿಸಿವೆ.

ಯುವ ನಿರ್ದೇಶಕ ಹಾಗೂ ಲೇಖಕ ಪಿ.ಎಲ್.ಇಂದ್ರಜಿತ್ ಇವರ ಸೋದರ, ಲಂಕೇಶ್ ಪತ್ರಿಕೆ (ಈಗ ಲಂಕೇಶ್) ಸಂಪಾದಕಿ ಗೌರಿಲಂಕೇಶ್ ಇವರ ಸೋದರಿ. (ಜಿ.ಎಸ್.ಎಲ್.)

**ಕವಿತಾಳ:** ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ ರಾಯಚೂರು ಲಿಂಗಸುಗೂರು ರಸ್ತೆಯಲ್ಲಿ ಲಿಂಗಸುಗೂರಿನಿಂದ 28ಕಿಮೀ ದೂರದಲ್ಲಿರುವ ಒಂದು ಗ್ರಾಮ. ಇದರ ಪುರಾತತ್ತ್ವ ಪ್ರಾಗೈತಿಹಾಸಿಕ ಕಾಲದಷ್ಟು. ಊರಿನಿಂದ ಆಗ್ನೇಯದಲ್ಲಿರುವ ಗುಡ್ಡದಲ್ಲಿ ಅನೇಕ ನೈಸರ್ಗಿಕ ಗುಹೆಗಳಿದ್ದು ಅಲ್ಲಿ ಪುರಾತನ ಶಿಲಾಯುಗ ಕಾಲದಿಂದ ಆಗಾಗ ಜನವಸತಿ ಇದ್ದಿತೆಂದು ತಿಳಿದುಬರುತ್ತದೆ. ಬೆಟ್ಟದ ತಪ್ಪಲಲ್ಲಿ ಕಬ್ಬಿಣದ ಕಿಟ್ಟಗಳೂ ಮಣ್ಣಿನ ಪಾತ್ರೆಗಳೂ ಕುಶಲವಸ್ತುಗಳೂ ದೊರಕಿವೆ. ಊರಿನ ಪಶ್ಚಿಮದಲ್ಲಿ ಒಂದು ಬೂದಿತಿಟ್ಟು ಸಹ ಇದೆ. ಈ ಊರ ಬಳಿಯಲ್ಲಿನ ತುಪ್ಪಲ ದೊಡ್ಡಿಯ ಬಳಿಯಲ್ಲಿ ಪುರಾತನ ಅವಶೇಷಗಳ ಜೊತೆಗೆ ಬಂಗಾರದ ಗಣಿಯೂ ಇದ್ದು ಅದನ್ನು ಪುರಾತನಕಾಲದಲ್ಲಿ ಶೋಧಿಸಿದುದರ ಕುರುಹುಗಳೂ ದೊರೆತಿವೆ.

ಈ ಊರಿನ ತ್ರ್ಯಂಬಕೇಶ್ವರ ದೇವಸ್ಥಾನ ಬಹು ಪ್ರಸಿದ್ಧವಾದುದು. ಇದನ್ನು ದ್ರಾವಿಡ ಶೈಲಿಯಲ್ಲಿ ಕಟ್ಟಿದೆ. ದೇವಸ್ಥಾನದಲ್ಲಿ ಮೂರು ಗರ್ಭಗೃಹಗಳಿದ್ದು ಮಧ್ಯದಲ್ಲಿ ನವರಂಗವಿದೆ. ಮೂರೂ ಗರ್ಭಗೃಹಗಳಿಗೂ ನವರಂಗಕ್ಕೂ ಮಧ್ಯೆ ಸುಕನಾಸಿಗಳಿವೆ. ಪ್ರಾಕಾರ ಸರಳವಾಗಿದ್ದರೂ ಕಂಬಗಳು ಒಳ್ಳೆಯ ಪ್ರಭಾವಯುತವಾಗಿವೆ. ದೇವಸ್ಥಾನದ ಶಿಖರಗಳು ಸುಂದರವಾಗಿವೆ. ಇವುಗಳಲ್ಲಿ $^2/_3$ ಭಾಗ ಕಲ್ಲಿನಲ್ಲಿಯೂ ಮಿಕ್ಕ ಭಾಗವನ್ನು ಇಟ್ಟಿಗೆ ಹಾಗೂ ಗಾರೆಯಲ್ಲಿಯೂ ಕಟ್ಟಲಾಗಿದೆ. ಇಲ್ಲಿನ ಮೂರು ಭಿತ್ತಿಮಂಟಪಗಳಲ್ಲಿ ಒಂದೊಮ್ಮೆ (ಮೂರರಲ್ಲೂ) ಪ್ರಾಯಃ ಲಿಂಗಗಳೂ ಇದ್ದುವೆಂದು ತೋರುತ್ತದೆ. ಈಗ ಎರಡರಲ್ಲಿ ಇವೆ. ಇಲ್ಲಿನ ಒಂದು ಮಹಿಷಾಸುರ ಮರ್ದಿನಿಯ ಮೂರ್ತಿ ಕೂಡ ತುಂಬ ಸೊಗಸಾಗಿದೆ. ಈ ದೇವಸ್ಥಾನದಲ್ಲಿನ ಗೋಡೆಗಳನ್ನು ದೊಡ್ಡ ದೊಡ್ಡ ನಸುಗೆಂಪಿನ ಕಗ್ಗಲ್ಲುಗಳಲ್ಲಿ (ಖೊಕಾಸನ್ ಕಲ್ಲುಗಳು) ಕಟ್ಟಿದೆ; ಅಲ್ಲಲ್ಲಿ ಯಾಳಿಗಳನ್ನೂ ಬಿಡಿಸಲಾಗಿದೆ. ಇಲ್ಲಿ ಕೆಲವೆಡೆ ಗಜಯುದ್ಧ ಇತ್ಯಾದಿಗಳನ್ನು ಕೆತ್ತಲಾಗಿದೆ. ಈ ದೇವಸ್ಥಾನದಲ್ಲಿ ಸೇವುಣ ಸಿಂಘಣನ ಮಾಂಡಲಿಕನಾದ ಮಲ್ಲಿದೇವರಸ ಬರೆಯಿಸಿದ ಎರಡು ಕನ್ನಡ ಶಾಸನಗಳಿವೆ. (ಎಸ್.ಜಿ.ಎ.)

**ಕವಿಪರಮೇಷ್ಠಿ :** ಒಬ್ಬ ಜೈನಕವಿ. ಹೆಸರಾಂತ ಕನ್ನಡ ಕವಿಗಳನೇಕರು ಇವನನ್ನು ತಮ್ಮ ಗ್ರಂಥಾದಿಯಲ್ಲಿ ಸ್ಮರಿಸುತ್ತಾರೆ. ಹೀಗೆ ಬೇರೆ ಬೇರೆ ಕವಿಗಳ ಉಲ್ಲೇಖಗಳನ್ನು ಬಿಟ್ಟರೆ ಈತ ರಚಿಸಿದ ಗ್ರಂಥಗಳಾಗಲೀ ಜೀವನವಿಚಾರವಾಗಲೀ ನಮಗೆ ದೊರೆಯುವುದಿಲ್ಲ. ಹುಮ್ಮಚದ ಶಾಸನವೊಂದರಲ್ಲಿ ಜೈನಮುನಿಗಳ ಜೊತೆಯಲ್ಲಿ ಇವನ ಹೆಸರೂ ಇರುವುದರಿಂದ, ಈತನೊಬ್ಬ ಯತಿಯೋ ಧಾರ್ಮಿಕ ಪೂಜ್ಯವ್ಯಕ್ತಿಯೋ ಆಗಿದ್ದಿರಬೇಕೆಂದು ಊಹಿಸಲು ಅವಕಾಶವಿದೆ. ಈತ ಕನ್ನಡದಲ್ಲಿ ಗ್ರಂಥರಚನೆ ಮಾಡಿರುವ ಬಗ್ಗೆ ಯಾವ ಆಧಾರಗಳೂ ದೊರೆಯುವುದಿಲ್ಲ.

ಉದ್ದಾಮ ಕವಿಗಳಾದ ಪಂಪ, ಅಭಿನವ ಪಂಪ, ನಯಸೇನ, ಅಗ್ಗಳ, ಕಮಲಭವ ಮೊದಲಾದ ಕವಿಗಳು ತಮ್ಮ ಗ್ರಂಥಗಳಲ್ಲಿ ಕವಿಪರಮೇಷ್ಠಿಯನ್ನು ತಾರ್ಕಿಕ ಕವಿಯಾದ ಸಮಂತಭದ್ರ ಮತ್ತು ವೈಯಾಕರಣಿಯಾದ ಪೂಜ್ಯಪಾದನೊಡನೆ ಗೌರವ ಭಾವದಿಂದ ಉಲ್ಲೇಖಿಸಿದ್ದಾರೆ. ವಿಶೇಷ ಸಂಗತಿಯೆಂದರೆ ಕನ್ನಡದ ಆದಿಕವಿಯಾದ ಪಂಪ ಕವಿಪರಮೇಷ್ಠಿಯನ್ನು ಜಗತ್ಪ್ರಸಿದ್ಧನೆಂದಿದ್ದಾನೆ.

ಎರಡನೆಯ ಗುಣವರ್ಮ (ಸು. 1235) ಪುಷ್ಪದಂತ ಪುರಾಣದಲ್ಲಿ ಕವಿಪರಮೇಷ್ಠಿಯ ಕೆಲವು ವೈಯಕ್ತಿಕ ವಿಚಾರಗಳನ್ನು ಹೇಳುತ್ತಾನೆ. ಈತನ ಮುಖ ಅನ್ಯಾದೃಶವಾದ ವಾಕ್ಚಾತುರ್ಯದಿಂದ ಸುಂದರವಾಗಿತ್ತು. ಈತ ಪಂಡಿತರೆಲ್ಲರ ಸ್ತುತಿಗೆ ಪಾತ್ರನಾಗಿದ್ದ; ಆ ಒಬ್ಬ ಪುರಾಣಪುರುಷನಾಗಿದ್ದನಲ್ಲದೆ ಸಾಕ್ಷಾತ್ ಬ್ರಹ್ಮನಾಗಿದ್ದ–ಎಂಬುದು ಅವನ ಬಗ್ಗೆ ಇರುವ ಪದ್ಯಗಳ ಸಾರ. ಪಾರ್ಶ್ವಪಂಡಿತ ತನ್ನ ಪಾರ್ಶ್ವ ಪುರಾಣದಲ್ಲಿ (ಪ್ರ.ಶ. 1205) ಈತನನ್ನು ಗುಣಜ್ಯೇಷ್ಠ ಅಥವಾ ಸದ್ಗುಣಗಳಲ್ಲಿ ಅಗ್ರಗಣ್ಯ ಎಂದು ಹೇಳಿದ್ದಾನೆ.

ಕವಿಪರಮೇಷ್ಠಿಯ ಬಗ್ಗೆ ಹೆಚ್ಚು ನಿಖರವಾದ ವಿವರಗಳು ದೊರೆಯುವುದು ಚಾವುಂಡರಾಯನ (ಪ್ರ.ಶ. 978) ಚಾವುಂಡರಾಯ ಪುರಾಣದಲ್ಲಿ. ಕವಿಪರಮೇಷ್ಠಿ ತ್ರಿಷಷ್ಟಿಶಲಾಕಾ ಪುರುಷರ ಪುರಾಣವನ್ನು ಬರೆದನೆಂದು ಈತ ಸ್ಪಷ್ಟವಾಗಿ ಹೇಳಿದ್ದಾನೆ. ತನ್ನ ಪುರಾಣವನ್ನು ಕವಿಪರಮೇಶ್ವರ, ಜಿನಸೇನ, ಗುಣಭದ್ರ ಇವರ ಕೃತಿಗಳನ್ನು ಅನುಸರಿಸಿ ಬರೆದುದಾಗಿ ಚಾವುಂಡರಾಯ ಹೇಳಿಕೊಂಡಿದ್ದಾನೆ. ಕವಿಪರಮೇಷ್ಠಿಯ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿದ್ದಾನೆ. ನೇಮಿಚಂದ್ರ (ಸು. 1170) ತನ್ನ ನೇಮಿನಾಥಪುರಾಣದಲ್ಲಿ ಕವಿಪರಮೇಶ್ವರ ಇಪ್ಪತ್ತುನಾಲ್ಕು ತೀರ್ಥಂಕರರ ಚರಿತ್ರೆಯನ್ನು ಪುರಾಣವಾಗಿ ಬರೆದನೆಂದು ಹೇಳಿದ್ದಾನೆ. ಗುಣಭದ್ರ ತನ್ನ ಉತ್ತರಪುರಾಣದ (9ನೆಯ ಶತಮಾನದ ಮಧ್ಯಭಾಗ) ಉಪಸಂಹಾರದ ಭಾಗದಲ್ಲಿ ತನ್ನ ಗುರುವಾದ ಜಿನಸೇನನಿಂದ ರಚಿತವಾದ ಆದಿಪುರಾಣ ಕವಿಪರಮೇಷ್ಠಿಯ ಗದ್ಯಕಥಾವನ್ನು ಅನುಸರಿಸಿ ಬರೆದದ್ದೆಂದು ಹೇಳಿದ್ದಾನೆ. ಜಿನಸೇನನೂ ಕವಿಪರಮೇಷ್ಠಿ ಪೂರ್ವಪುರಾಣದ ಸಂಗ್ರಹಕಾರನೆಂದು ಹೇಳಿ, ಬಹುಶಃ ವಾಗರ್ಥಸಂಗ್ರಹ ಎಂಬ ಹೆಸರಿನಿಂದ ರಚಿಸಿರಬಹುದಾದ ಆ ಕೃತಿಯನ್ನು ಬಹು ಗೌರವಭಾವದಿಂದ ಉಲ್ಲೇಖಿಸಿದ್ದಾನೆ.

ಹೀಗೆ ಒಂಬತ್ತನೆಯ ಶತಮಾನದ ಆದಿಭಾಗದಿಂದ ಹದಿಮೂರನೆಯ ಶತಮಾನದವರೆವಿಗೂ ಅನೇಕ ಕವಿಗಳು, ಕವಿಪರಮೇಷ್ಠಿಯನ್ನು ಗೌರವದಿಂದ ಸ್ಮರಿಸಿರುವುದು ಕಂಡುಬರುತ್ತದೆ. ಈತ ಹೀಗೆ ಸುಪ್ರಸಿದ್ಧನೂ ಭಾಷೆಯ ಮೇಲೆ ಅಪಾರ ಹಿಡಿತವುಳ್ಳವನೂ ಅರವತ್ತು ಮೂರು ಶಲಾಕಾಪುರುಷರನ್ನು ಕುರಿತು ಪುರಾಣವೊಂದನ್ನು ಬರೆದ ಕವಿಯೂ ಎನಿಸಿ ಪ್ರಸಿದ್ಧನಾಗಿದ್ದಾನೆ.

ಈತನ ಕಾಲ ಯಾವುದೆಂದು ಸ್ಪಷ್ಟವಾಗಿ ತಿಳಿಯದು. ಉತ್ತರಪುರಾಣವನ್ನು ಬರೆದ ಗುಣಭದ್ರನೂ ಕವಿಪರಮೇಶ್ವರನ ಗದ್ಯಗ್ರಂಥದ ಆಧಾರದಿಂದ ಆದಿಪುರಾಣ ಬರೆಯಲ್ಪಟ್ಟಿದೆ ಎಂದು ಹೇಳಿದ್ದಾನೆ. ಆದಿಪಂಪ ಇವನನ್ನು ಸ್ತುತಿಸಿರುವುದರಿಂದ ಕವಿಪರಮೇಷ್ಠಿ ಪಂಪನಿಗಿಂತ ಹಿಂದಿನವರು ಎಂಬುದು ಸ್ಪಷ್ಟವಾಗುತ್ತದೆ. ಈ ಕವಿ ಪರಮೇಶ್ವರನ

ತ್ರಿಷಷ್ಟಿಶಲಾಕಾಪುರುಷಪುರಾಣದ ಆಧಾರದಿಂದ ಜಿನಸೇನ (783) ಆದಿಪುರಾಣವನ್ನು ಬರೆದಿರುವುದಾಗಿ ಚಾವುಂಡರಾಯ ಹೇಳುವುದರಿಂದ ಇವನು ಜಿನಸೇನನಿಗಿಂತ ಪೂರ್ವದವನಾಗುತ್ತಾನೆ. ಈತನ ಹೆಸರು ಜೈನ ಗ್ರಂಥಗಳಲ್ಲಿ ಪ್ರಾಯಶಃ ಸಮಂತಭದ್ರನಿಗಿಂತ ಮುಂದೆಯೂ ಪೂಜ್ಯಪಾದನಿಗಿಂತ ಹಿಂದೆಯೂ ಬರುವುದರಿಂದ ಸಮಂತಭದ್ರ (ಸು. 600) ಮತ್ತು ಪೂಜ್ಯಪಾದರ ಮಧ್ಯಕಾಲದಲ್ಲಿ ಅಂದರೆ ಸು. 550ರಲ್ಲಿ ಈತ ಇದ್ದಿರಬಹುದೆಂದು ಕವಿಚರಿತ್ರಕಾರರು ಊಹಿಸುತ್ತಾರೆ. ಪ್ರ.ಶ. 837ರಲ್ಲಿ ಜಯಧವಳವನ್ನು ರಚಿಸಿದ ಜಿನಸೇನನಿಗಿಂತ ಮೊದಲನೆಯವನೆಂದು ನಿರ್ಧಾರವಾಗಿ ಹೇಳಬಹುದು_ ಎಂಬುದು ಆ. ನೆ. ಉಪಾಧ್ಯೆ ಅವರ ಅಭಿಮತ.

ಸಮಂತಭದ್ರ ಮತ್ತು ಪೂಜ್ಯಪಾದರ ಕೃತಿಗಳು ನಮಗೆ ದೊರೆತಿವೆ. ಕವಿಪರಮೇಷ್ಠಿ ಇವರಿಗೆ ಸರಿಸಮಾನನಾಗಿ, ಅವರ ಪಂಕ್ತಿಯಲ್ಲಿ ಸೇರಿದುದು ಇವನ ಪಾಂಡಿತ್ಯ ಮತ್ತು ಪ್ರತಿಭೆಗೆ ಒಂದು ಸಾಕ್ಷಿ ಎಂದು ಹೇಳಬಹುದು. ಇವನ ವ್ಯಕ್ತಿತ್ವದ ವಿಚಾರವಾಗಿ ಬೇರೆ ಬೇರೆ ಕವಿಗಳ ಆಕಸ್ಮಿಕ ಉಲ್ಲೇಖಗಳಿಂದ, ಅವರಲ್ಲಿ ಕೆಲವರಾದರೂ ಇವನ ಗ್ರಂಥವನ್ನು ಪ್ರತ್ಯಕ್ಷವಾಗಿ ನೋಡಿ ಬಳಸಿಕೊಂಡಿರಬಹುದು.

ಕನ್ನಡದ ಕವಿಗಳಿಗೆ ಇಷ್ಟೊಂದು ಪೂಜ್ಯನೂ ಪ್ರಿಯನೂ ಆದ ಕವಿಪರಮೇಷ್ಠಿ ಕನ್ನಡದಲ್ಲಿ ಏಕೆ ಕೃತಿರಚನೆ ಮಾಡಲಿಲ್ಲವೆಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರ ದೊರೆಯುವುದಿಲ್ಲ. ಚಾವುಂಡರಾಯ ತನ್ನ ಪುರಾಣದಲ್ಲಿ ಕವಿಪರಮೇಶ್ವರನವು ಎಂದು, ಅವನ ಹೆಸರು ಹೇಳಿ ಉಲ್ಲೇಖಿಸಿರುವ, ಉದಾಹರಣೆಗಳನ್ನು ಬಿಟ್ಟರೆ ಅವನ ಸಂಸ್ಕೃತ ಗ್ರಂಥವೂ ಉಪಲಬ್ಧವಿಲ್ಲ. ಚಾವುಂಡರಾಯ ತಾನು ಕವಿಪರಮೇಷ್ಠಿಯ ಗ್ರಂಥವನ್ನು ಉಪಯೋಗಿಸಿಕೊಂಡಿದ್ದೇನೆಂದು ಹೇಳಿಕೊಂಡಿದ್ದಾನೆ. ಕವಿಯ ಹೆಸರನ್ನು ಹೇಳಿ, ಅವನ ಪದ್ಯಗಳನ್ನು ಉದಾಹರಿಸಿ ಚಾವುಂಡರಾಯ ಸಾಹಿತ್ಯ ಪ್ರಪಂಚಕ್ಕೆ ಮಹದುಪಕಾರ ಮಾಡಿದ್ದಾನೆ. ಎಂದಾದರೊಂದು ದಿನ ಕವಿಪರಮೇಷ್ಠಿಯ ಪೂರ್ಣಗ್ರಂಥ ದೊರೆತರೆ ಭಾರತೀಯ ಸಾಹಿತ್ಯಭಂಡಾರ ಇನ್ನೂ ಐಶ್ವರ್ಯಯುತವಾಗುತ್ತದೆ. (ಎಚ್.ಕೆ.ಆರ್.ಜಿ.)

**ಕವಿಯ ದರ್ಶನ :** ಬಲ್ಲವರನ್ನು ತಾತ್ತ್ವಿಕ, ವಿಜ್ಞಾನಿ, ಇತಿಹಾಸ ಲೇಖಕ, ಕವಿ_ಎಂದು ವಿಂಗಡಿಸುವ ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿದೆ. ಭೌತ ಪ್ರಪಂಚದ ಮತ್ತು ಮಾನವ ಪ್ರಪಂಚದ ನಾನಾ ಚೋದನೆಗಳಿಗೆ ಅವರಲ್ಲಿ ಒಬ್ಬೊಬ್ಬರಿಗೂ ತಮ್ಮತಮ್ಮದೇ ಆದ ಪ್ರತಿಕ್ರಿಯೆಯೂ ದೃಷ್ಟಿಕೋನವೂ ಇರುವುದು ಸಹಜವೇ ಸರಿ. ಮೊದಲ ಮೂವರಲ್ಲಿ ಬುದ್ಧಿಯ ಚಟುವಟಿಕೆಗೇ ಪ್ರಾಧಾನ್ಯ. ಕವಿಯಲ್ಲಾದರೂ ಬುದ್ಧಿಯ ಜೊತೆಗೆ ರಾಗಾವೇಶವೂ ವಿಭಾವನೆಯೂ ಸ್ಫೂರ್ತಿಯೂ ಕೂಡಿಕೊಂಡಿರುತ್ತವೆ. ಹೀಗಾಗಿ ಕವಿಯ ನೋಟ ಒಂದು ರೀತಿಯ ಪರಿಪೂರ್ಣ ನೋಟ, ಮನುಷ್ಯನ ಎಲ್ಲ ಮುಖಗಳನ್ನೂ ಒಟ್ಟಿಗೆ ನೋಡುವ ನೋಟ. ಅವನು ಈಕ್ಷಿಸುತ್ತಾನೆ, ಪರಮ ಸೌಂದರ್ಯವನ್ನು ಶಾಶ್ವತ ಸತ್ಯವನ್ನು ವಚನಿಸುತ್ತಾನೆ. ಆದ್ದರಿಂದ ಕವಿಯ ನುಡಿಗಟ್ಟು ನೇರವಾಗಿ ಹೃದಯಕ್ಕೆ ನುಗ್ಗಿ ಬೇರೂರಿ ನಿಲ್ಲುತ್ತದೆ. ಈ ಬಗೆಯ ನಂಬಿಕೆ ಬಹುಕಾಲದಿಂದ ನಿರ್ವಿವಾದವಾಗಿತ್ತು. ಅದರ ಪರಿಣಾಮವಾಗಿ ಕವಿಗಳ ಆಂತರ್ಯದಲ್ಲೂ ತಾವೇ ಶ್ರೇಷ್ಠರು, ಶಿಖರಪ್ರಾಯರು ಎಂಬ ಅಹಂಕಾರ ಮನೆಮಾಡಿತ್ತು. 'ಕವಿಯ ಜನನಕ್ಕೂ ಬಾಳುವೆಗೂ ಬಂಗಾರದ ಆವರಣವಿದೆ. ಅಮೃತವೇ ಅವನ ಆಹಾರ. ಅವನೆದುರು ಸ್ವರ್ಗ ಯಾವಾಗಲೂ ತೆರೆದು ನಿಂತಿರುತ್ತದೆ. ಅಪೂರ್ವ ಸೊಬಗಿನಿಂದಲೂ ಅಗಾಧ ಶಕ್ತಿಯಿಂದಲೂ ಕೂಡಿದ ಅವನ ವಾಣಿ ಅಮರ ವಾಣಿ'. _ ಈ ಧೋರಣೆಯ ವಾಕ್ಯಗಳನ್ನು 19ನೆಯ ಶತಮಾನದ ಎರಡನೆಯ ಭಾಗದ ಮುಖ್ಯ ಕವಿಗಳು ಆಡುತ್ತಿದ್ದರು.

ನಾಗರಿಕತೆ ಅಷ್ಟೇನೂ ಬೆಳೆಯದ ಪ್ರಾಚೀನ ತಲೆಮಾರುಗಳಲ್ಲಿ ರಂಜಕವಾಗಿ ಮಾತನಾಡುವ ಚಾತುರ್ಯ ಒಂದೊಂದು ಬುಡಕಟ್ಟಿನಲ್ಲಿ ಒಬ್ಬನಿಗೂ ಇಬ್ಬರಿಗೂ ಇರುತ್ತಿತ್ತು. ಅವರ ಮಾತುಗಳಿಂದ ಮುಗ್ಧರಾದ ಮಂದಿ ಅವರನ್ನು ಕವಿ (ಸ್ಕಾಪ್, ಬಾರ್ಡ್) ಎಂದು ಹೊಗಳುತ್ತ, ಅವರ ಬಗ್ಗೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಆ ಕಾಲ ಹೋಗಿ ಎಷ್ಟೋ ದಿವಸಗಳಾದುವು. ಈಗ 'ಇತರ ಮನುಜರಂತೆ ಕವಿಯೂ ಒಬ್ಬ ಮನುಷ್ಯ; ಅವನ ಧಮನಿಗಳಲ್ಲಿ ಹರಿಯುವುದೂ ರಕ್ತವೇ; ಶಬ್ದ ಸಾಮಗ್ರಿಯಲ್ಲಿ, ಅದನ್ನು ಉಪಯೋಗಿಸುವುದರಲ್ಲಿ, ಕವಿಯ ಅಳವು ಇತರರಿಗಿಂತ ಅಧಿಕ ಅಷ್ಟೆ'_ಎಂಬ ಅಭಿಮತ ವೃದ್ಧಿಗೊಂಡು ರೂಢಮೂಲವಾಗಿದೆ. ಅಲ್ಲದೆ, ಪ್ರತಿಯೊಬ್ಬನಲ್ಲೂ ಕವಿಯ ಅಂಶ ಕೊಂಚವಾದರೂ ಇದ್ದೇ ಇದೆ ಎಂಬ ಭಾವನೆಗೂ ಸ್ವಾಗತವುಂಟು. ಭಾವಾವೇಶ, ವಿಭಾವನೆಗಳನ್ನು ಕುರಿತು ಸಂಶೋಧನೆ ಹೇರಳವಾಗಿ ಆಗಿ ಬಂದಿರುವುದರಿಂದ 'ಅವು ಕವಿಯ ಸ್ವತ್ತಲ್ಲ; ವಿಜ್ಞಾನಿ, ಚರಿತ್ರಕಾರ, ತತ್ತ್ವಜ್ಞರಲ್ಲೂ ಅವು ಕೆಲಸಮಾಡುತ್ತವೆ_ಆದರೆ ಪ್ರತ್ಯೇಕ ವಿಧದಲ್ಲಿ; ಸತ್ಯಕ್ಕೆ ಹಲವು ಮುಖಗಳಿರುವುದರಿಂದ ಯಾವೊಬ್ಬ ಅನ್ವೇಷಿಯೂ ಪೂರ್ಣಸತ್ಯವನ್ನು ಅವಲೋಕಿಸಲಾರ.' ಇಂಥ ಭಾವನೆಗಳ ಪ್ರಸಾರದಿಂದ ಕವಿಯ ಅಂತಸ್ತು ಕೆಳಕ್ಕಿಳಿದಿದೆ.

ಕವಿಯ ದರ್ಶನ ಎನ್ನುವುದನ್ನು ಕವಿಯ ಕನಸು ಎನ್ನುತ್ತ ಪರಿಹಾಸಗೈಯುವವರೂ ಇದ್ದಾರೆ. ಜಗತ್ತಿನ ಕಷ್ಟನಿಷ್ಠುರಗಳ ಎದುರಾಗಿ ನಿಲ್ಲಲಾರದೆ ಕವಿ ಹೇಡಿಯಂತೆ ಸ್ವಪ್ನರಾಜ್ಯಕ್ಕೆ ಪಲಾಯನ ಮಾಡುತ್ತಾನೆ ಎಂಬುದೇ ಅವರ ಆಕ್ಷೇಪಣೆ.

ಇನ್ನೊಂದು ವಿಚಾರ ಕವಿಯ ದರ್ಶನ ಎಂಬ ಹೇಳಿಕೆಯಲ್ಲಿ, ಎಲ್ಲ ಕವಿಗಳಿಗೂ ಸಮನಾದ ಒಂದು ದರ್ಶನವಿದೆ ಎಂಬ ತಾತ್ಪರ್ಯವಿದೆ. ಪ್ರಾಯಶಃ ವಿಜ್ಞಾನಿಗಳಲ್ಲಿ ಕೆಲವು ಸಂಗತಿಗಳನ್ನು ಕುರಿತು ಒಮ್ಮತವಿದೆ; ಚರಿತ್ರಕಾರರೆಲ್ಲರೂ ಹಲಕೆಲವು ಘಟನೆಗಳು ಜರುಗಿವೆಯೆಂದು ಸಮ್ಮತಿಸಿಯಾರು. ತತ್ತ್ವಜ್ಞರು ಎಷ್ಟು ಜನರಿದ್ದಾರೊ ಅಷ್ಟು ತೀರ್ಮಾನಗಳಿವೆ. ಕವಿಗಳಲ್ಲೂ ಹಾಗೆಯೇ.

ಕವಿಯ ದರ್ಶನ ಎಂಬುದನ್ನು ಬಿಟ್ಟುಕೊಟ್ಟು, ಆಯಾ ಕವಿಯ ದರ್ಶನ ಎಂದರೆ ನಿಜಾಂಶಕ್ಕೆ ಹತ್ತಿರವಾದೀತು. (ಎಸ್.ವಿ.ಆರ್.)

**ಕವಿರಾಜಮಾರ್ಗ :** ಸದ್ಯಕ್ಕೆ ಕನ್ನಡದಲ್ಲಿ ಉಪಲಬ್ಧವಾಗಿರುವ ಮೊಟ್ಟ ಮೊದಲ ಗ್ರಂಥ. ಇದು ರಚಿತವಾದ ಕಾಲಾವಧಿ ಪ್ರ.ಶ. 815–77. ಇದರ ಕರ್ತೃ ರಾಷ್ಟ್ರಕೂಟ ಅರಸು ನೃಪತುಂಗನೆಂದು ಹೇಳುವುದು ವಾಡಿಕೆಯಾಗಿದೆ. ಆದರೆ ಈ ವಿಷಯದ ಬಗ್ಗೆ ವಿದ್ವಾಂಸರ ನಡುವೆ ಪ್ರಬಲವಾದ ವಾದವಿವಾದಗಳು ನಡೆದಿವೆ. ಅವರಲ್ಲಿ ಮೂರು ಪಕ್ಷಗಳಿವೆ. ಮೊದಲನೆಯ ಪಕ್ಷದವರು ನೃಪತುಂಗನೇ ಈ ಗ್ರಂಥವನ್ನು ರಚಿಸಿದನೆಂದು ಹೇಳುತ್ತಾರೆ. ಎರಡನೆಯ ಪಕ್ಷದವರು ಆತನ ಆಸ್ಥಾನದಲ್ಲಿದ್ದ ಕವೀಶ್ವರನೆಂಬಾತ ಇದರ ಕರ್ತೃವೆಂದು ಅಭಿಪ್ರಾಯಪಡುತ್ತಾರೆ. ನೃಪತುಂಗನ ಸಭಾಸದನಾದ ಶ್ರೀವಿಜಯನೆಂಬುವನು ಈ ಗ್ರಂಥವನ್ನು ಬರೆದನೆಂಬುದು ಮೂರನೆಯ ಪಕ್ಷದವರ ವಾದ. ಇವರಲ್ಲಿ ಮೂರನೆಯ ಪಕ್ಷದವರ ವಾದ ಪ್ರಬಲವಾದ ಸಾಕ್ಷ್ಯಗಳನ್ನು ಹೊಂದಿರುವುದಲ್ಲದೆ ಅದೇ ಸತ್ಯಾಂಶವಾಗಿಯೂ ನಿಲ್ಲಬಹುದೆಂದು ತೋರುತ್ತದೆ.

ಕವಿರಾಜಮಾರ್ಗ ಕನ್ನಡದ ಆದ್ಯ ಉಪಲಬ್ಧ ಗ್ರಂಥವಾಗಿರುವುದಲ್ಲದೆ ಆದ್ಯ ಲಕ್ಷಣ ಗ್ರಂಥವೂ ಆಗಿದೆ. ಕನ್ನಡದಲ್ಲಿ ಕಾವ್ಯರಚನೆ ಮಾಡಬೇಕೆನ್ನುವ ಕವಿಗಳಿಗೆ ಬರೆದ ಕೈಪಿಡಿಯಿದು. ಇದರಲ್ಲಿ ಮೂರು ಪರಿಚ್ಛೇದಗಳಿವೆ: (1) ದೋಷಾದೋಷಾನುವರ್ಣನ (2) ಶಬ್ದಾಲಂಕಾರವರ್ಣನಿರ್ಣಯ (3) ಅರ್ಥಾಲಂಕಾರಪ್ರಕರಣ. ಗ್ರಂಥದ ಆದಿಯಲ್ಲಿ ಮಂಗಳಪದ್ಯಗಳು, ಸರಸ್ವತೀ ಪ್ರಾರ್ಥನೆ, ಕವೀಶ್ವರರ ಪ್ರಾರ್ಥನೆ, ನೃಪತುಂಗನ ಸಭಾಸದರ ವಿಚಾರ ಹಾಗೂ ಸ್ವವಿಚಾರಗಳಿವೆ. ಅನಂತರ ಕವಿ–ಕಾವ್ಯ, ಗದ್ಯ–ಪದ್ಯ ಮತ್ತು ಚತ್ತಾಣ–ಬೆದಂಡೆಗಳನ್ನು ಕುರಿತು ವಿಚಾರಗಳಿವೆ. ಕನ್ನಡನಾಡು ನುಡಿಗಳ ಬಗೆಗಿನ ಮಾತುಗಳಿವೆ. ಸಮಸಂಸ್ಕೃತ, ಯತಿ, ಕಾರಕ ಮುಂತಾದವುಗಳಿಗೆ ಸಂಬಂಧಿಸಿದ ದೋಷಗಳ ವಿವರಣೆಯಿದೆ. ಹೀಗೆ ಮೊದಲ ಪರಿಚ್ಛೇದದ ವಿಷಯಗಳು ವಿವಿಧವಾಗಿವೆ. ಎರಡನೆಯ ಪರಿಚ್ಛೇದದಲ್ಲಿ ಶಬ್ದಾಲಂಕಾರಗಳ ನಿರೂಪಣೆ ಮತ್ತು ದಕ್ಷಿಣೋತ್ತರ ಮಾರ್ಗಗಳ ಪ್ರಸ್ತಾಪವಿದೆ. ಮೂರನೆಯ ಪರಿಚ್ಛೇದ ಅರ್ಥಾಲಂಕಾರಗಳಿಗೆ ಸಂಬಂಧಿಸಿದೆ. ಇಡೀ ಗ್ರಂಥ ಕಂದಪದ್ಯಗಳಿಂದ ರಚಿತವಾಗಿದ್ದರೂ ಹಲಕೆಲವು ಗೀತಿಕೆಗಳು, ಶ್ಲೋಕಗಳು ಹಾಗೂ ವೃತ್ತಗಳು ನಡುನಡುವೆ ಬರುತ್ತವೆ.

ಇದು ಸಂಪೂರ್ಣವಾದ ಸ್ವತಂತ್ರ ರಚನೆಯಲ್ಲ. ಸಂಸ್ಕೃತ ಆಲಂಕಾರಿಕರಲ್ಲಿ ಬಹುಮಟ್ಟಿಗೆ ದಂಡಿಯ ಕಾವ್ಯಾದರ್ಶವನ್ನೂ ಕೆಲವು ವಿಚಾರಗಳಲ್ಲಿ ಭಾಮಹನನ್ನೂ ಅನುಸರಿಸಿರುವುದು ಇಲ್ಲಿ ಕಂಡುಬರುತ್ತದೆ. ಕಾವ್ಯಕ್ಕೆ ಸೊಗಸನ್ನುಂಟುಮಾಡುವುದೆಲ್ಲವೂ ಅಲಂಕಾರವೆಂದು ದಂಡಿಯಂತೆಯೇ ಕವಿರಾಜಮಾರ್ಗಕಾರನೂ ಭಾವಿಸುತ್ತಾನೆ. ಅಲ್ಲದೆ, ದಂಡಿಗೆ ಪರಮಪ್ರಿಯವಾದ ದಶಗುಣಗಳನ್ನು ಹೇಳಿ, ಅವನು ಹೇಳಿರುವ ವೈದರ್ಭ, ಗೌಡಮಾರ್ಗಗಳಿಗೆ ಸಂವಾದಿಯಾಗಿ ದಕ್ಷಿಣೋತ್ತರ ಮಾರ್ಗಗಳನ್ನು ನಿರೂಪಿಸುತ್ತಾನೆ. ಅಲಂಕಾರಗಳ ನಿರೂಪಣೆಯಲ್ಲಿ ಬಹುಮಟ್ಟಿಗೆ ಕಾವ್ಯಾದರ್ಶದ ಅನುಸರಣೆ ಕಂಡು ಬರುತ್ತದೆ.

ಇಷ್ಟರಮಟ್ಟಿಗೆ ಕವಿರಾಜಮಾರ್ಗ ಸಂಸ್ಕೃತಕ್ಕೆ ಋಣಿಯಾಗಿದ್ದರೂ ಹಲವು ವಿಚಾರಗಳಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದೆ. ಸಂಸ್ಕೃತಕಾವ್ಯಲಕ್ಷಣಗಳನ್ನು ಕನ್ನಡಕ್ಕೆ ಹೊಂದಿಕೊಳ್ಳುವಂತೆ ಹೇಳುವಲ್ಲಿ ಸ್ವತಂತದೃಷ್ಟಿ ಕಂಡುಬರುತ್ತದೆ. ಕನ್ನಡಕ್ಕೆ ಸಂಬಂಧಪಟ್ಟಂತೆ ಸಮಸಂಸ್ಕೃತ ಪದಗಳನ್ನು ಕನ್ನಡದೊಂದಿಗೆ ಬೆರೆಸುವ ವಿಚಾರ, ಯತಿಭಂಗವನ್ನು ಸಮರ್ಥಿಸಿ ಕನ್ನಡಕ್ಕೆ ಅತಿಶಯವಾದ ಖಂಡಪ್ರಾಸವನ್ನು ಎತ್ತಿ ಹಿಡಿದಿರುವುದು, ಕನ್ನಡದಲ್ಲಿ ಜಾತ್ಯೇಕವಚನದ ವೈಶಿಷ್ಟ್ಯವನ್ನು ಗುರುತಿಸುವುದು, ಶ್ರುತಿ ದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿಕಷ್ಟ_ಈ ದೋಷಗಳನ್ನು ತಕ್ಕ ಕನ್ನಡ ಉದಾಹರಣೆಗಳಿಂದ ವಿಶದಪಡಿಸಿರುವುದು ಮತ್ತು ಈ ದೋಷಗಳಿಗೆ ಪಗರಣದಲ್ಲಿ ಅವಕಾಶವಿತ್ತಿರುವುದು, ಕನ್ನಡದಲ್ಲಿ ಕಾರಕದೋಷ ಹೇಗೆ ಸಂಭವಿಸುತ್ತದೆಂಬುದನ್ನು ತಕ್ಕ ನಿದರ್ಶನಗಳಿಂದ ಸ್ಪಷ್ಟಪಡಿಸಿರುವುದು–ಇವೇ ಮುಂತಾದುವು ಸ್ವತಂತ್ರ ಪ್ರಜ್ಞೆಗೆ ನಿದರ್ಶನಗಳಾಗಿವೆ.

ದಂಡಿ ಹೇಳಿರುವಂತೆ ರಸವನ್ನು ರಸವದಲಂಕಾರದಲ್ಲಿ ಅಳವಡಿಸಿ ಅಲ್ಲಿ ಉಕ್ತವಾಗಿರುವ ಎಂಟು ರಸಗಳ ಜೊತೆಗೆ ಒಂಬತ್ತನೆಯದಾಗಿ ಶಾಂತರಸವನ್ನು ಇಲ್ಲಿ ಸೇರಿಸಲಾಗಿದೆ. ರಸದ ಚರಿತ್ರೆಯಲ್ಲಿ ಇದು ಗಮನಾರ್ಹವಾದ ಅಂಶ. ಕನ್ನಡ ಕಾವ್ಯ ಮೀಮಾಂಸೆಯಲ್ಲಿ ಮೊಟ್ಟಮೊದಲಿಗೆ ಧ್ವನಿಯ ಪ್ರಸ್ತಾಪ ಬರುವುದು ಇಲ್ಲೇ. ದಂಡಿ ಹೇಳಿರುವ ಮೂವತ್ತೈದು ಅಲಂಕಾರಗಳ ಮಾಲೆಗೆ ಧ್ವನ್ಯಾಲಂಕಾರವನ್ನು ಸೇರಿಸಲಾಗಿದೆ.

ಹೀಗಾಗಿ ಕನ್ನಡ ಕಾವ್ಯಮೀಮಾಂಸೆಯ ಬೆಳವಣಿಗೆಯಲ್ಲಿ ಕವಿರಾಜಮಾರ್ಗಕ್ಕೊಂದು ವಿಶಿಷ್ಟವಾದ ಸ್ಥಾನವಿದೆ.

ಕವಿಕಾವ್ಯಗಳ ಬಗ್ಗೆ ಇಲ್ಲಿ ಹೇಳಿರುವ ಮಾತುಗಳು ತುಂಬ ಸುಂದರವೂ ಉಚಿತವೂ ಆಗಿವೆ. ಕವಿಗಳಲ್ಲಿರುವ ತಾರತಮ್ಯಗಳನ್ನು ನಿರೂಪಿಸುವಲ್ಲಿ ಸ್ವತಂತ್ರ ವಿಚಾರಶಕ್ತಿ ವ್ಯಕ್ತವಾಗಿದೆ. ಆ ಪದ್ಯಗಳನ್ನು ನೋಡಬಹುದು :

ಕುಱಿತಂತು ಪೆಱರ ಬಗೆಯಂ
ತ್ತೆಱೆದಿರೆ ಪೆಱರ್ಗಱಿಪಲಾರ್ಪವಂ ಮಾತಱಿವಂ
ಕಿಱಿದಱೊಳೆ ಪಿರಿದುಮರ್ಥಮ
ನಱಿಪಲ್ ನೆಱೆವಾತನಾತನಿಂದಂ ನಿಪುಣಂ
ನುಡಿಯಂ ಛಂದದೊಳೊಂದಿರೆ
ತೊಡರ್ಚಲಱಿವಾತನಾತನಿಂದಂ ಜಾಣಂ
ತಡೆಯದೆ ಮಹಾದ್ವಕೃತಿಗಳ
ನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ

ಸಾಹಿತ್ಯಚರಿತ್ರೆಯ ಅಜ್ಞಾತಯುಗದ ಮೇಲೆ ಕವಿರಾಜಮಾರ್ಗ ವಿಶೇಷವಾಗಿ ಬೆಳಕು ಬೀರುತ್ತದೆ. ಕನ್ನಡ ಕಾವ್ಯಗಳಲ್ಲಿ ಗದ್ಯಪದ್ಯಸಂಮಿಶ್ರಿತವಾದ, ಗದ್ಯ ಪ್ರಾಚುರ್ಯ ಹೆಚ್ಚಾದ, ಗದ್ಯಕಥಾಪ್ರಕಾರವೊಂದಿದ್ದಿತು (1–27), ಚತ್ತಾಣ–ಬೆದಂಡೆ ಎಂಬ ದೇಸಿಗಬ್ಬಪ್ರಕಾರಗಳು ಪ್ರಚುರವಾಗಿದ್ದುವು (1–33), ವಿಮಳೋದಯ ನಾಗಾರ್ಜುನಾದಿಗಳು ಗದ್ಯಾಶ್ರಮಗುರುತಾಪ್ರತೀತಿಯನ್ನು ಕೈಗೊಂಡಿದ್ದರು (1–29), ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲಾದಿಗಳ ವಸ್ತು ವಿಸ್ತರರಚನೆ 'ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ' ಎನ್ನಿಸಿಕೊಂಡಿದ್ದುವು (1–32), ನೆಲೆಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಂ (1–48), ಆಗಿನ ಕಾಲಕ್ಕೇ ಕನ್ನಡ ಕಾವ್ಯ ಪರಂಪರೆಯೊಂದು ರೂಢಮೂಲವಾಗಿದ್ದಿತು, ಪೂರ್ವದ ಹಳಗನ್ನಡವೊಂದಿದ್ದಿತು–ಇವೇ ಮುಂತಾದ ಅಂಶಗಳಲ್ಲದೆ ಅಲ್ಲಲ್ಲಿ ಬರುವ ಪುರಾಣಕವಿಗಳ್, ಪರಮಕವಿಪ್ರಧಾನರಾಕಾವ್ಯಂಗಳ್, ಪೂರ್ವಕಾವ್ಯರಚನೆಗಳೂ–ಇತ್ಯಾದಿ ಪ್ರಯೋಗಗಳು ಕವಿರಾಜಮಾರ್ಗಕ್ಕಿಂತ ಹಿಂದಿನ ಕಾವ್ಯನಿರ್ಮಾಣೋದ್ಯೋಗದ ಜಾಡಿನ ಹೆಜ್ಜೆಗುರುತುಗಳಾಗಿವೆ.

ಕವಿರಾಜಮಾರ್ಗ ಆ ಕಾಲದ ಕನ್ನಡನಾಡು, ನುಡಿ ಮತ್ತು ಜನರ ಬಗೆಗೆ ತಿಳಿವಳಿಕೆ ನೀಡಿರುವುದು ಅದರ ವಿಶೇಷತೆಯನ್ನು ಹೆಚ್ಚಿಸಿದೆ. ಆ ಕಾಲಕ್ಕೆ ಕನ್ನಡನಾಡಿನ ಸೀಮೆ ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು (1–36). ಕಿಸುವೊಳಲು, ಕೊಪಣ, ಪುಲಿಗೆಱೆ, ಒಂಕುಂದಗಳು ತಿರುಳ್ಗನ್ನಡದ ಪ್ರದೇಶಗಳೆಂದು ಖ್ಯಾತವಾಗಿದ್ದುವು (1–37). ಕನ್ನಡದಲ್ಲಿ ಅನೇಕ ಉಪಭಾಷೆಗಳು ರೂಢಿಯಲ್ಲಿದ್ದುವು (1–46) ನಾಡವರ ನುಡಿಬಲ್ಮೆ ಹಾಗೆ ಅಸದಳವಾಗಿತ್ತು. ಅವರು 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳಾಗಿದ್ದರು (1–38).

ಕವಿರಾಜಮಾರ್ಗ ಶಾಸ್ತ್ರಗ್ರಂಥವಾದರೂ ಅಲ್ಲಲ್ಲಿ ಕವಿತ್ವದ ಸೊಗಸು ಮಿನುಗಿದೆ; ಅಲ್ಲಲ್ಲಿ ಕಂಡುಬರುವ ಉಪಮೆ, ನಾಣ್ಣುಡಿಗಳು ಮನಸೆಳೆಯುವಂತಿವೆ. ಕಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ, ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ, ಒತ್ತುಂಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೊಲ್, ಮಱುಗುವ ಪಾಲ್ಗಳೆಯ ಪನಿಗಳಂ ಬೆರೆಸಿದವೊಲ್, ಕೇಡಡಸಿದಂದು ಬಗೆಯುಂ ಕೂಡದು, ಕೂಸಿನ ತಲೆಯೊಳ್ ಬಿಣ್ಪೊಱೆಯನಿಟ್ಟವೋಲ್ ಈ ಮೊದಲಾದವು ಮನೋಹರವಾದ ವರ್ಣನಾಭಾಗಗಳು. ಇದರ ಶೈಲಿ ಲಲಿತವಾಗಿದೆ, ಉಚಿತವಾಗಿದೆ. ಇದರಲ್ಲಿ ನಾಣ್ಣುಡಿಯ ಬೆಡಗಿದೆ. ಉದ್ದಕ್ಕೂ ಸ್ವತಂತ್ರವಿಚಾರಮಾರ್ಗವಿದೆ. (ಜಿ.ಎಸ್.ಪಿ.)

**ಕವಿಶಿಕ್ಷೆ :** ಪ್ರತಿಭೆಯೊಂದೇ ಕಾವ್ಯಬೀಜವಾದರೂ ಅದರ ಅಭಿವ್ಯಕ್ತಿಗೆ ಫಲವತ್ತಾದ ಭೂಮಿಕೆಯೊಂದಿರಬೇಕು. ಇಂಥ ಭೂಮಿಕೆಯನ್ನು ಸಂಸ್ಕಾರಗೊಳಿಸಿ ಸಿದ್ಧಪಡಿಸುವ ಮಾರ್ಗವೇ ಕವಿಶಿಕ್ಷೆ_ಕವಿಗೆ ಕೊಡಬೇಕಾದ ಶಿಕ್ಷಣ, ತರಬೇತು.

ವ್ಯುತ್ಪತ್ತಿ, ನಿಪುಣತೆ, ಶ್ರುತಿ, ಅಮಂದಾಭಿಯೋಗ (ಅಭ್ಯಾಸ) ಮುಂತಾಗಿ ಆಲಂಕಾರಿಕರು ಹೇಳುವ ಉಪಕಾರಣಗಳು ಕವಿಯಲ್ಲಿ ನೈಸರ್ಗಿಕವಾಗಿ ಇರುವ ಪ್ರತಿಭೆಯನ್ನು ನಿಶಿತಗೊಳಿಸುತ್ತವೆ; ಕೆಲವರಲ್ಲಿ ಯತ್ಕಿಂಚಿತ್ತಾದರೂ ಪ್ರತಿಭೆಯಿದ್ದರೆ ಅದನ್ನು ಹೊಮ್ಮಿಸುತ್ತವೆ. ಆದುದರಿಂದ ಇವನ್ನು ಹದಗೊಳಿಸಲು ಆಲಂಕಾರಿಕರು ಕವಿಯಶಃಪ್ರಾರ್ಥಿಗಳಾದವರಿಗೆ ಕೆಲವು ಮಾರ್ಗದರ್ಶನ ನೀಡಿದ್ದಾರೆ. ಇದೇ ಕವಿಶಿಕ್ಷೆ.

ಕವಿಯಾಗಬೇಕಾದವ ಶಬ್ದಾಭಿದೇಯಜ್ಞರ ಉಪಾಸನೆಮಾಡಿ ಶಬ್ದಾರ್ಥಗಳನ್ನು ತಿಳಿದುಕೊಳ್ಳಬೇಕು; ಲೋಕದ ನಡವಳಿಕೆ, ವೇದ ಮತ್ತು ಶಾಸ್ತ್ರಾದಿಗಳ ಪರಿಚಯ ಮಾಡಿಕೊಳ್ಳಬೇಕು; ಕಾವ್ಯಜ್ಞರಿಂದ ಉಪದೇಶ ಪಡೆದುಕೊಳ್ಳಬೇಕು; ಇದಕ್ಕಾಗಿ ಸತತವಾದ ಅಭ್ಯಾಸ (ಅಮಂದಾಭಿಯೋಗ) ಮಾಡಬೇಕು– ಎಂದು ಮೊದಲಿಗರಾದ ಭಾಮಹ, ದಂಡಿ ಮುಂತಾದವರು ಹೇಳುತ್ತಾರೆ. ಇದನ್ನೇ ಸಂಕ್ಷೇಪವಾಗಿ ಕನ್ನಡ ಆಲಂಕಾರಿಕರು ವೃದ್ಧಸೇವಾನುರಾಗ, ಕಾವ್ಯವಿದ್ಯಾಪ್ರಚಯಪರಿಚಯ ಮತ್ತು ಸತತಾಭ್ಯಾಸ ಪ್ರಯತ್ನ– ಇವು ಕವಿಯಾಗಬೇಕಾದವನಿಗೆ ಆವಶ್ಯಕವೆನ್ನುತ್ತಾರೆ.

ಈ ವಿಷಯವಾಗಿ ಮುಂದೆ ಪ್ರತ್ಯೇಕ ಗ್ರಂಥಗಳೇ ಸೃಷ್ಟಿಯಾದುವು. ಕ್ಷೇಮೇಂದ್ರನ ಕವಿಕಂಠಾಭರಣ ಈ ಗುಂಪಿಗೆ ಸೇರಿದೆ. ರಾಜಶೇಖರನ ಕಾವ್ಯಮೀಮಾಂಸೆಯ 'ಕವಿಚರ್ಯಾ' ಎಂಬ ದಶಮಭಾಗವೂ ಕವಿಶಿಕ್ಷಣಕ್ಕೆಂದೇ ಹೊರಟದ್ದು. ಅವನು ಕವಿಗೆ ಹೇಳುವ ಸೌಲಭ್ಯಗಳು ಕವಿರಾಜನಾದ ಅವನಂಥವನಿಗೆ ಮಾತ್ರ ದೊರಕುವಂಥವು. ಅಮರಚಂದ್ರನ 'ಕಾವ್ಯಕಲ್ಪಲತಾ' ಮುಂತಾದವು ಕೂಡ ಕವಿಶಿಕ್ಷೆಗೆ ಮೀಸಲಾದವೇ.

ಅಂತು, ಕವಿಯಾಗಬೇಕಾದವನು ಸಕಲ ಕಲೆಗಳಲ್ಲೂ ವಿದ್ಯೆಗಳಲ್ಲೂ ಪರಿಶ್ರಮ ಪಡೆಯಬೇಕೆಂಬುದೇ ಕವಿಶಿಕ್ಷೆಯ ಉದ್ದೇಶ. (ಸಿ.ಜಿ.ಪಿ.)

**ಕವಿಸಮಯ :** ಕವಿಗಳು ತಮ್ಮ ಕಲ್ಪನಾ ವಿಲಾಸವನ್ನು ಪ್ರದರ್ಶಿಸುವುದಕ್ಕಾಗಿ ಲೋಕಪ್ರಸಿದ್ಧವೂ ಶಾಸ್ತ್ರಸಂಗತವೂ ಅಲ್ಲದ ಕೆಲವು ವಿಷಯಗಳನ್ನು ಊಹಿಸಿಕೊಂಡು ಪಾರಂಪರ್ಯವಾಗಿ ಪ್ರಯೋಗಿಸುತ್ತ ಬಂದಿದ್ದಾರೆ. ಇದನ್ನೇ ಕವಿಸಮಯ, ಕವಿ ಸಂಪ್ರದಾಯ, ಕವಿಗಳ ಮಾಮೂಲು ಪದ್ಧತಿ ಎನ್ನುವರು.

ಅಮೂರ್ತ ಭಾವನೆಗಳಿಗೆ ಮೂರ್ತಸ್ವರೂಪ ಕೊಡುವುದು ಒಂದು ಬಗೆಯ ಕವಿಸಮಯ. ಉದಾಹರಣೆಗೆ_ಮಹಾಪುರುಷರ ಕೀರ್ತಿ ಧವಳವಾಗಿದೆ ಎನ್ನುವುದು. ಅದು ಅವರ ಸುತ್ತ ಪ್ರಭಾವಲಯವೊಂದನ್ನು ಸೃಷ್ಟಿಸಿಕೊಳ್ಳುತ್ತದೆಂದು ವರ್ಣಿಸುವುದು. ಕೋಪ ಕ್ರೋಧಾರುಣ ಜಲ, ಕಗ್ಗತ್ತಲೆ ಸೂಚೀ ಭೇದ್ಯ ತಮಿಸ್ರ, ಸೂಜಿಯಿಂದ ಚುಚ್ಚುವಷ್ಟು ದಟ್ಟ ಎಂದು ಬಣ್ಣಿಸುವುದು.

ಸದಸದ್ವಿವೇಕ, ವಿರಹಿಗಳ ಶೃಂಗಾರ ಮುಂತಾದ ವರ್ಣನೆಗಳಿಗೆ ಜನರ ನಂಬಿಕೆಯ ಆಧಾರದ ಮೇಲೆ ಕೆಲವೊಂದು ಉಪಮೆಗಳನ್ನು ಕವಿಗಳು ಕಾವ್ಯಜಗತ್ತಿನಲ್ಲಿ ಸೃಷ್ಟಿಸಿಕೊಂಡಿದ್ದಾರೆ: ನೀರಕ್ಷೀರ ವಿಭಜನ ಶಕ್ತಿ ಹಂಸಕ್ಕಿದೆಯೆಂಬ ಭಾವನೆ, ಚಕ್ರವಾಕ ಪಕ್ಷಿಮಿಥುನ ಹಗಲೆಲ್ಲ ವಿಹರಿಸುತ್ತಿದ್ದು ರಾತ್ರಿ ವಿರಹದಿಂದ ಗೋಳಿಡುತ್ತದೆಂಬ ವಿಚಾರ ಈ ಬಗೆಯ ಕವಿಸಂಕೇತಗಳು.

ಪ್ರಕೃತಿ ವರ್ಣನೆ ಕುರಿತಾದ ಮತ್ತೊಂದು ಬಗೆಯ ಕವಿಸಮಯವುಂಟು. ನದಿಗಳಲ್ಲಿ ಹಂಸಗಳು, ತಾವರೆ, ಕನ್ನೈದಿಲೆ ಹೂಗಳು ಮುಂತಾದವು ಇವೆಯೆಂದು ವರ್ಣಿಸುವುದು. ಬೆಟ್ಟಗಳಲ್ಲಿ ನಾನಾಬಗೆಯ ರತ್ನಗಳಿವೆ ಎಂಬ ಕಲ್ಪನೆ, ಆನೆಯ ಕುಂಭಸ್ಥಳ, ಸರ್ಪಗಳ ಹೆಡೆಗಳು ಮತ್ತು ಸಮುದ್ರಗಳಲ್ಲಿ ಮುತ್ತು ರತ್ನಗಳಿವೆ ಎಂಬ ವರ್ಣನೆ_ಮುಂತಾದುವು ಪ್ರಕೃತಿವರ್ಣನೆಗೆ ಅಲೌಕಿಕ ಸೌಂದರ್ಯವನ್ನು ಚೆಲುವನ್ನು ಕೊಡತಕ್ಕಂಥವು.

ಇದೇ ರೀತಿ ವರ್ಣನಾಸೌಕರ್ಯಕ್ಕಾಗಿ ಮಲಯಪರ್ವತದಲ್ಲಿ ಮಾತ್ರ ಶ್ರೀಗಂಧವಿರುವುದೆಂದೂ ಶುಕ್ಲಪಕ್ಷದ ರಾತ್ರಿಯೆಂದ ಕೂಡಲೇ ತಿಥಿ ಯಾವುದಾದರೂ ಸರಿಯೆ ಅಮಲಜ್ಯೋತ್ಸ್ನಾ ಸಂಕ್ರಾಂತ ರಜನಿಯೆಂದೂ ಕನ್ನೈದಿಲೆ ರಾತ್ರಿ ಮಾತ್ರ ಅರಳುವುದೆಂದೂ ಕೋಗಿಲೆ ವಸಂತದಲ್ಲಿ ಮಾತ್ರ ಕೂಗುವುದೆಂದೂ ಚಕೋರಪಕ್ಷಿ ಚಂದ್ರನ ಬೆಳದಿಂಗಳನ್ನೇ ಕುಡಿಯುವುದೆಂದೂ ಮುತ್ತು ತಾಮ್ರಪರ್ಣಿ ನದಿಯಲ್ಲಿ ಮಾತ್ರ ದೊರೆಯುವುದೆಂದೂ ಚಾತಕ ಮಳೆನೀರನ್ನು ಮಾತ್ರ ಕುಡಿಯುವುದೆಂದೂ ಮಾಡಿಕೊಂಡಿರುವ ಕವಿಸಂಪ್ರದಾಯಗಳು ಮತ್ತೊಂದು ಗುಂಪಿನವು.

ಈ ಎಲ್ಲ ಬಗೆಯ ಕವಿಸಮಯಗಳೂ ಕವಿಕಲ್ಪನೆಯ ಮೂಸೆಯಲ್ಲಿ ಪುಟಗೊಂಡು ನೂರಾರು ಅಲಂಕಾರಗಳಿಗೆ ಆಶ್ರಯವಾಗಿ ಕಾವ್ಯದಲ್ಲಿ ಸೌಂದರ್ಯದಾಯಕವಾಗುತ್ತವೆ. ಕವಿಯಾದವ ಪೂರ್ವಕವಿ ಪ್ರಯುಕ್ತವಾದ ಈ ಬಗೆಯ ಕವಿ ಸಮಯಗಳನ್ನು ಪರಿಚಯ ಮಾಡಿಕೊಳ್ಳಬೇಕೆಂಬುದೂ ಕವಿಶಿಕ್ಷೆಯ ವಿಷಯಗಳಲ್ಲೊಂದು.

ಕವಿಸಮಯಗಳ ಸೂಚನೆ ವಾಮನನ ಗ್ರಂಥದಲ್ಲಿ ಬಂದರೂ ಇದನ್ನು ವಿವರವಾಗಿ ನಿರೂಪಿಸಿದ ಕೀರ್ತಿ ರಾಜಶೇಖರನದು. ಆತನ ಕಾವ್ಯಮೀಮಾಂಸೆಯನ್ನು ಅನುಸರಿಸಿಯೇ ಸಂಸ್ಕೃತದಲ್ಲಿ ಹೇಮಚಂದ್ರ, ಕನ್ನಡದಲ್ಲಿ ನಾಗವರ್ಮ ಮುಂತಾದವರು ತಂತಮ್ಮ ಗ್ರಂಥಗಳಲ್ಲಿ ಕವಿಸಮಯದ ಬಗ್ಗೆ ಬರೆದಿದ್ದಾರೆ. ಆದರೆ ವಾಲ್ಮೀಕಿಯಲ್ಲೇ ಎಷ್ಟೋ ಕವಿ ಸಮಯಗಳನ್ನು ಕಾಣಬಹುದಾಗಿದೆ. (ಸಿ.ಜಿ.ಪಿ.)

**ಕವಿಸ್ವಾತಂತ್ರ್ಯ :** ವ್ಯಾಕರಣ ಸೂತ್ರವನ್ನೊ ಛಂದಸ್ಸಿನ ಕ್ರಮವನ್ನೊ ಕವಿ ಅಲ್ಲಿ ಇಲ್ಲಿ ಅಲಕ್ಷ್ಯಗೈದರೆ ಅವನನ್ನು ಕ್ಷಮಿಸಬೇಕು. ಈ ಔದಾರ್ಯವೇ ಕವಿಗೆ ಸಲ್ಲತಕ್ಕ ಪರವಾನೆ. ಅಷ್ಟರಮಟ್ಟಿಗೆ ಅವನು ಸ್ವತಂತ್ರನೂ ಹೌದು. ರೋಮನರ ಲಾಕ್ಷಣಿಕ ಕ್ವಿಂಟಿಲಿಯನ್ ಹೀಗೆ ವಿಧಿಸಿದ: ಕವಿಗಳು ಛಂದಸ್ಸಿನ ಅಡಿಯಾಳುಗಳು; ಆದ್ದರಿಂದ ಅವರೆಸಗುವ ದೋಷಗಳಿಗೆ ಮನ್ನಣೆಯುಂಟು. ಆ ದೋಷಗಳಿಗೆ ಬೇರೆ ಹೆಸರನ್ನಿಟ್ಟು, ಕವಿ ಗತ್ಯಂತರವಿಲ್ಲದೆ ಮಾಡಿದ್ದನ್ನು ಗುಣವನ್ನಾಗಿ ಭಾವಿಸಿ ಹೊಗಳುತ್ತೇವೆ. ಕರ್ತೃಪದವನ್ನು ಕ್ರಿಯಾಪದದ ಮುಂದೆ ಇಟ್ಟರೆ, ಬಹುವಚನ ಇರಬೇಕಾದ ಕಡೆ ಏಕವಚನ ಬಂದರೆ, ಅವ್ಯಯಕ್ಕೆ ವಾಕ್ಯಸ್ಥಾನದಲ್ಲಿ ಪಲ್ಲಟ ಒದಗಿದರೆ, ವ್ಯಾಕರಣ ನಿಯಮ ತಪ್ಪಿತು, ದಿಟ. ಹಾಗೆ ಆಗಿರುವುದರಿಂದಲೇ ಕಾವ್ಯಭಾಗದ ಸೊಬಗು ಹೆಗ್ಗಳವಾದಲ್ಲಿ ಅವೆಲ್ಲ ಅಲಂಕಾರಗಳೇ

ಆಗಿಬಿಡುತ್ತವೆ. ಛಂದಸ್ಸಿನ ವಿಚಾರದಲ್ಲೂ ಇದೇ ಮಾತು ಸತ್ಯ. ಕವಿಗಳು ಆಗಾಗ ಪಾದಪೂರಣಕ್ಕಾಗಿ ಅನಗತ್ಯವಾದ ಅಕ್ಷರಗಳನ್ನು ಇಡುತ್ತಾರೆ, ಹ್ರಸ್ವದ ಬದಲು ದೀರ್ಘವನ್ನೊ ದೀರ್ಘದ ಬದಲು ಹ್ರಸ್ವವನ್ನೊ ತರುತ್ತಾರೆ. ಆದರೆ ಕವಿತೆ ಒಟ್ಟಿನಲ್ಲಿ ಅರ್ಥವತ್ತಾಗಿ ರಸಮಯವಾಗಿ ಕಿವಿಗಿಂಪಾಗಿದ್ದರೆ ಕವಿ ಗೆದ್ದಂತೆ.

ನಿಯಮೋಲ್ಲಂಘನೆಗೆ ಅನುಮತಿಯುಂಟು ಕವಿಗೆ, ಕವಿ ಇರುವುದು ನಿಯಮಕ್ಕಲ್ಲ; ನಿಯಮವಿರುವುದು ಕವಿಗಾಗಿ. ಆದರೂ ನಿಯಮಗಳನ್ನು ತಳಕುಹಾಕುವುದಕ್ಕೋಸ್ಕರವೇ ಕವಿ ತವಕಿಸಬಾರದು; ನಿಯಮ ಭಂಗವನ್ನು ವಿಪರೀತವಾಗಿಯೂ ಮಾಡಬಾರದು. ಜಾಗರೂಕತೆಯನ್ನು ಕೈಬಿಟ್ಟು, ಶ್ರಮವಹಿಸುವುದಕ್ಕೆ ಹಿಂಜರಿದು, ಆಲಸ್ಯ ಪ್ರಮಾದಗಳಿಗೆ ಪಕ್ಕಾಗಿ, ಮನಬಂದಂತೆ ಬರೆಯುತ್ತ ಹೋಗುವ ಲೇಖಕರಿಗೆ 'ಕವಿಗೆ ಸ್ವಾತಂತ್ರ್ಯ ಉಸಿರು' ಎಂಬ ನಾಣ್ಣುಡಿ ಒಪ್ಪದು. ಯಾವುದು ನಿಯಮ, ಅದರಲ್ಲಿ ಯಾವುದು ಗಂಭೀರ, ಯಾವುದು ಲಘು, ನಿಯಮ ಕೆಟ್ಟಿತೆಂಬುದರ ಅರ್ಥವೇನು–ಇತ್ಯಾದಿ ಪ್ರಶ್ನೆಗಳಿಗೆ ಕಾಲ ದೇಶ ಸಂಪ್ರದಾಯಗಳಿಗೆ ಅನುಗುಣವಾಗಿ ಉತ್ತರವನ್ನು ಕಂಡುಕೊಳ್ಳಬೇಕು. ಒಂದು ಯುಗದ ಅಥವಾ ಒಂದು ನಾಡಿನ ಮರ್ಯಾದೆಯನ್ನು ಇನ್ನೊಂದು ಯುಗಕ್ಕೂ ಇನ್ನೊಂದು ನಾಡಿಗೂ ಹೊರಿಸುವಾಗ, ಮನುಷ್ಯ ಸಾಮಾನ್ಯವಾದದ್ದು, ತಾತ್ಕಾಲಿಕವೂ ಪ್ರಾದೇಶಿಕವೂ ಆದದ್ದು ಎಂಬ ತಾರತಮ್ಯವಿವೇಕ ಹರಿತವಾಗಿರಬೇಕು. ಇಲ್ಲದಿದ್ದರೆ ಅನರ್ಥ, ಮಿಗಿಲಾಗಿ, ಆಪಾದನೆ ಹೊತ್ತು ನ್ಯಾಯಾಸ್ಥಾನದಲ್ಲಿ ನಿಂದಿರುವ ಅಪರಾಧಿಯಲ್ಲ, ಕವಿ, ಆತ ನಮ್ಮ ಬುದ್ಧಿವಂತ ಸ್ನೇಹಿತ–ಎಂಬ ನಿಜಾಂಶವನ್ನು ಎಂದಿಗೂ ಬದಿಗೊತ್ತಬಾರದು. (ಎಸ್.ವಿ.ಆರ್.)

**ಕವ್ರಾಲ್, ಪೇಡ್ರೊ ಆಲ್ವಾರೆಸ್ :** 1467/8–1520. ಪೋರ್ಚುಗೀಸ್ ನಾವಿಕ, ಸಾಹಸಿ. ದಕ್ಷಿಣ ಅಮೆರಿಕದಲ್ಲಿ ಈಗ ಬ್ರಜಿಲ್ ಇರುವ ಪ್ರದೇಶವನ್ನು ತಲಪಿದ ಮೊಟ್ಟ ಮೊದಲಿನ ಐರೋಪ್ಯ. ಪೂರ್ವದೇಶಗಳಿಗೆಂದು ಹೊರಟ ಇವನ ಹಡಗುತಂಡ ಬಿರುಗಾಳಿಗಳ ಹೊಡೆತಕ್ಕೆ ಸಿಕ್ಕಿ ಅಮೆರಿಕದ ತೀರ ಸೇರಿತು. ಅಲ್ಲಿಂದ ಈತ ಹಿಂದಿರುಗಿ, 1500ರಲ್ಲಿ ಅಂಜೆದಿವದಲ್ಲಿ ಬಂದಿಳಿದ. ಇವನಿಗೂ ಮೊದಲು ವಾಸ್ಕೋಡ ಗಾಮ ಭಾರತಕ್ಕೆ ಬಂದಿದ್ದು, 1499ರಲ್ಲಿ ಲಿಸ್ಬನ್ನಿಗೆ ಹಿಂದಿರುಗಿದ್ದ. ಕವ್ರಾಲ್ ಕೋಳಿಕೋಡಿನಲ್ಲಿ ಒಂದು ವ್ಯಾಪಾರಕೇಂದ್ರ ಸ್ಥಾಪಿಸಿದ. ಈತನ ಜೊತೆಯಲ್ಲಿ ಭಾರತಕ್ಕೆ ಬಂದು ಕಡಲ ಕರೆಯಲ್ಲಿಳಿದ ಏಳು ಜನ ಫ್ರಾನ್ಸಿಸ್ಕನ್ ಪಾದ್ರಿಗಳು ಅಲ್ಲಿ 23 ಜನರನ್ನು ಕ್ರೈಸ್ತರಾಗಿ ಮತಾಂತರಿಸಿದರು.

ಕವ್ರಾಲ್ ಪೋರ್ಚುಗಲ್ಲಿಗೆ ಮರಳಿದ ಮೇಲೆ ಮತ್ತೆ ಪ್ರವಾಸದಲ್ಲಿ ತೊಡಗಲಿಲ್ಲ. ವಿಶ್ರಾಂತ ಜೀವನ ನಡೆಸಿ 1520ರಲ್ಲಿ ತೀರಿಕೊಂಡ. ಇವನ ಸಮಾಧಿ ಪೋರ್ಚುಗಲ್ಲಿನ ಸಾಂಟಾರೆಂನಲ್ಲಿದೆ. (ಎಸ್.ಎಸ್.ಐ.)

**ಕಶಾಂಗ :** ಕೆಲವು ಜೀವಕೋಶಗಳ ಜೀವರಸದಿಂದ ಹೊರಗೆ ಬಂದು ಚಾವಟಿಯಂತೆ ಚಾಚಿರುವ ಅಂಗ (ಫ್ಲಾಜೆಲಮ್). ಇದಕ್ಕೂ ಲೋಮಾಂಗಕ್ಕೂ (ಸಿಲಿಯಮ್) ಅಂಥ ವ್ಯತ್ಯಾಸವಿಲ್ಲ. ಕಡಿಮೆಸಂಖ್ಯೆಯಲ್ಲಿಯೊ ಒಂಟಿಯಾಗಿಯೊ ಇದ್ದು ಉದ್ದವಾಗಿದ್ದರೆ ಕಶಾಂಗವೆಂದೂ ಬಹಳ ಸಂಖ್ಯೆಯಲ್ಲಿದ್ದು ಮೊಟಕಾಗಿದ್ದರೆ ಲೋಮಾಂಗವೆಂದೂ ಹೆಸರು. ಕಶಾಂಗವನ್ನು ಹಲವಾರು ಬಗೆಯ ಪ್ರಾಣಿಗಳಲ್ಲಿ ಕಾಣಬಹುದು. ಪ್ರೋಟೋಜ಼ೋವ ವಿಭಾಗದ ಫ್ಲಾಜೆಲೇಟ ವರ್ಗದ ಪ್ರಾಣಿಗಳಲ್ಲಿ ವಿಶೇಷವಾಗಿದೆ. ಚಲನಶಕ್ತಿಯಿರುವ ಬಹುಪಾಲು ಲೈಂಗಿಕ ಕಣಗಳಲ್ಲೂ ಜ಼ೂವೋ ಸ್ಪೋರುಗಳಲ್ಲೂ ಹೈಡ್ರ ಮುಂತಾದ ಪ್ರಾಣಿಗಳ ಎಂಡೊಡರ್ಮ್ ಪದರದ ಜೀವ ಕೋಶಗಳಲ್ಲೂ ಇದೆ. ಸಾಮಾನ್ಯವಾಗಿ ಒಂದು ಜೀವಕೋಶದಲ್ಲಿ ಒಂದೇ ಕಶಾಂಗವಿರುವುದಾದರೂ ಕೆಲವೊಮ್ಮೆ ಬಹು ಸಂಖ್ಯೆಯಲ್ಲಿಯೂ ಇರಬಹುದು.

ಕಶಾಂಗಗಳು ಯೂಗ್ಲಿನ ಮುಂತಾದ ಪ್ರಾಣಿಗಳ ಮತ್ತು ಲೈಂಗಿಕ ಕಣಗಳ ಚಲನೆಗೂ ಸ್ಪಂಜು ಮತ್ತು ಹೈಡ್ರ ಇತ್ಯಾದಿ ಪ್ರಾಣಿಗಳಲ್ಲಿ ಆಹಾರವನ್ನು ತೆಗೆದುಕೊಳುವುದಕ್ಕೂ ಸಹಕಾರಿಗಳಾಗಿವೆ. ಕೆಲವು ಬಾರಿ ಅವು ಸ್ಪರ್ಶೇಂದ್ರಿಯಗಳಾಗಿಯೂ ಆಸರೆಗಳನ್ನು ಹಿಡಿದುಕೊಳ್ಳಲು ಸಹಾಯಕವಾಗುವ ಸಾಧನಗಳಾಗಿಯೂ ಉಪಯೋಗವಾಗುವುದುಂಟು.

ಸಾಮಾನ್ಯವಾಗಿ ಕಶಾಂಗ ಜೀವಕೋಶದ ಒಳಗಿರುವ ಒಂದು ಮೂಲಕಣದಿಂದ (ಬೇಸಲ್ ಗ್ರಾನ್ಯೂಲ್) ಉದ್ಭವಿಸುತ್ತದೆ. ಮೊದಲು ಎರಡು ಎಳೆಗಳಂತೆ ಹೊರಟು ಅನಂತರ ಒಂದುಗೂಡಿ ಒಂದೇ ಕಶಾಂಗವಾಗುತ್ತದೆ. ಅನೇಕ ವೇಳೆ ಮೂಲಕಣಕ್ಕೂ ಕೋಶಭಿತ್ತಿಗೂ ಸಂಬಂಧವುಂಟುಮಾಡುವ ಸೂಕ್ಷ್ಮದಾರಗಳಂಥ ರಚನೆಗಳಿವೆ. ಇವಕ್ಕೆ ರೈಜ಼ೋಪ್ಲಾಸ್ಟುಗಳೆಂದು ಹೆಸರು. ಇತ್ತೀಚೆಗೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಬಳಕೆಯಿಂದ ಕಶಾಂಗದ ಸೂಕ್ಷ್ಮರಚನೆಯ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬಂದಿವೆ. ಮೂಲ ಕಣಗಳು ಕೋಶವಿಭಜನೆಯಲ್ಲಿ ಪಾಲುಗೊಳ್ಳುವ ಸೆಂಟ್ರಿಯೋಲುಗಳಂತೆಯೇ ಇವೆ. ಇವು 3000–20,000 (Å) ಉದ್ದದ ನಳಿಗೆಗಳಂತಿವೆ ಇವುಗಳ ವ್ಯಾಸ 1200–1500 (Å). ಪ್ರತಿಯೊಂದು ಮೂಲಕಣದ ಹೊರಪರಿಧಿಯಲ್ಲಿ 9 ಸೂಕ್ಷ್ಮ ನಳಿಗೆ (ಟ್ಯೂಬ್ಯೂಲ್ಸ್) ಗುಂಪುಗಳಿವೆ. ಪ್ರತಿ ಗುಂಪಿನಲ್ಲಿ 3 ಸೂಕ್ಷ್ಮ ನಳಿಗೆಗಳಿವೆ. ಮೂಲಕಣ ಕಶಾಂಗದೊಡನೆ ಸೇರುವಲ್ಲಿ ಒಂದು ತಟ್ಟೆಯಿದೆ (ಟರ್ಮಿನಲ್ ಪ್ಲೇಟ್). ಕೆಲವು ಜೀವಕೋಶಗಳಲ್ಲಿ ಮೂಲಕಣದ ಬುಡದಿಂದ ಹಲವಾರು ಕಶಾಂಗೀ ಅಥವಾ ಲೋಮಾಂಗೀ ಸೂಕ್ಷ್ಮಬೇರುಗಳೆಂಬ (ಸಿಲಿಯರಿ ರೂಟ್ಲೆಟ್ಸ್) ಅತಿಸೂಕ್ಷ್ಮವಾದ ಎಳೆಗಳು ಹೊರಡುತ್ತವೆ. ಇವೆಲ್ಲ ಶಂಕುವಿನ ಆಕಾರದಲ್ಲಿ ಗುಂಪುಗೂಡಿಕೊಂಡು ನ್ಯೂಕ್ಲಿಯಸಿನೊಡನೆ ಸಂಬಂಧ ಕಲ್ಪಿಸುತ್ತವೆ. ಕಶಾಂಗವೂ ಕೂಡ 2000 (Å) ವ್ಯಾಸವುಳ್ಳ ಒಂದು ನಳಿಗೆಯಂತಿದೆ. ಇದರ ಅಡ್ಡಸೀಳಿಕೆಯನ್ನು ಎಲೆಕ್ಟ್ರಾನ್ ಸೂಕ್ಷ್ಮ ದರ್ಶಕದಲ್ಲಿ ಪರಿಶೀಲಿಸಿದಾಗ ಮಧ್ಯಭಾಗದಲ್ಲಿ ತುಂಬಿಕೊಂಡಿರುವ ಲೋಮಾಂಗೀ ಮಾತೃಕೆಯೂ (ಸಿಲಿಯರಿ ಮ್ಯಾಟ್ರಿಕ್ಸ್) ಅದನ್ನು ಸುತ್ತುವರಿದಂತೆ ಒಂದು ತೆಳುವಾದ ಹೊರಪೊರೆಯೂ ಇವೆ. ಹೊರಪೊರೆ ಜೀವಕೋಶದ ಪ್ಲಾಸ್ಮ ಪೊರೆಯೊಂದಿಗೆ ಕೂಡಿಕೊಂಡಿದೆ. ಮಾತೃಕೆಯ ಕೇಂದ್ರ ಭಾಗದಲ್ಲಿ ಎರಡು, ಅವುಗಳ ಸುತ್ತ ಒಂಬತ್ತು ಜೊತೆ ನಳಿಗೆಗಳಂಥ ಸೂಕ್ಷ್ಮ ತಂತುಗಳು (ಫೈಬ್ರಿಲ್ಸ್) ಇವೆ. ಒಂದೊಂದು ಸೂಕ್ಷ್ಮ ತಂತುವಿನ ವ್ಯಾಸ 180–250 (Å). ಇವು ಕಶಾಂಗದ ಉದ್ದಕ್ಕೂ ಸಮಾನಾಂತರವಾಗಿ ವ್ಯಾಪಿಸಿರುತ್ತವೆ. ಕೇಂದ್ರ ಭಾಗದ ಎರಡು ಸೂಕ್ಷ್ಮ ತಂತುಗಳನ್ನು ಆವರಿಸಿರುವ ಒಂದು ತೆಳು ಕವಚವೂ ಮಧ್ಯತಂತುಗಳಿಗೆ ಹೊರ ವರ್ತುಲದಲ್ಲಿನ 9 ಸೂಕ್ಷ್ಮತಂತುಗಳಿಗೂ ಸಂಬಂಧ ಕಲ್ಪಿಸುವ 9 ಆರೆಗಳಂಥ ರಚನೆಗಳೂ ಇರುವುದು ಕೂಡ ಕಂಡು ಬಂದಿದೆ. ಇಷ್ಟಲ್ಲದೆ ವಿಶಿಷ್ಟ ರೀತಿಯ ಬಣ್ಣಗಳ ಬಳಕೆಯಿಂದ ಇನ್ನೂ ಹೆಚ್ಚಿನ ವಿವರಗಳೂ ತಿಳಿದು ಬಂದಿವೆ. ಕಶಾಂಗದ ರಾಸಾಯನಿಕ ಸಂಯೋಜನೆ ಹೀಗಿದೆ: ಸೇ. 70–84 ಪ್ರೋಟೀನು; ಸೇ. 13–23 ಕೊಬ್ಬು; ಸೇ. 1–6 ಕಾರ್ಬೊಹೈಡ್ರೇಟ್ ಮತ್ತು ಸೇ. 0.2–0.4 ನ್ಯೂಕ್ಲಿಯೊಟೈಡುಗಳು. (ಪಿ.ಎಸ್.ಆರ್.)

**ಕಶಾಂಗಿಗಳು :** ಪ್ರೋಟೋಜ಼ೋವ ವಿಭಾಗದ ಒಂದು ಪ್ರಮುಖ ವರ್ಗ (ಫ್ಲಾಜೆಲೇಟ). ಮ್ಯಾಸ್ಟಿಗೋಫೋರ ಪರ್ಯಾಯ ನಾಮ. ಈ ವರ್ಗದ ಪ್ರಾಣಿಗಳು ಜಲವಾಸಿಗಳು; ಸಮುದ್ರಗಳಲ್ಲೊ ಸಿಹಿನೀರಿನ ಕೊಳಗಳಲ್ಲೊ ವಾಸಿಸುತ್ತವೆ. ಈ ವರ್ಗದ ಪ್ರಾಣಿಗಳಲ್ಲಿ ಚಾಟಿಯಂತಿರುವ ಕಶಾಂಗಗಳೇ ಚಲನಾಂಗಗಳು. ದೇಹಕ್ಕೆ ನಿರ್ದಿಷ್ಟವಾದ ಆಕಾರವಿದ್ದು, ಸ್ಪಷ್ಟವಾದ ಮುಂಭಾಗವಿದೆ. ಕೋಶ ದ್ರವ್ಯವನ್ನು ಎಕ್ಟೋಪ್ಲಾಸಂ ಮತ್ತು ಎಂಡೊಪ್ಲಾಸಂ ಎಂದು ವಿಂಗಡಿಸುವುದು ಕಷ್ಟ. ಮುಂಭಾಗದಲ್ಲಿ ಗಂಟಲು ಎನ್ನುವ ತಗ್ಗಾದ ಪ್ರದೇಶವಿದೆ. ಇದು ಆಹಾರಸೇವನೆಗಾಗಿ ಇರದೆ, ಕಶಾಂಗವನ್ನು ಹೊಂದಿರುವ ಸ್ಥಳವಾಗಿದೆ. ದೇಹದಲ್ಲಿ ಎದ್ದುಕಾಣುವ ವಸ್ತುಗಳೆಂದರೆ ಹಸಿರು, ಕೆಂಪು, ಹಳದಿ ಹಾಗೂ ಕಂದು ಬಣ್ಣದ ಕ್ರೋಮೋಪ್ಲಾಸ್ಟ್‌ಗಳು. ಇವುಗಳ ಜೊತೆಗೆ ಬಹುತರವಾಗಿ ಪೈರನಾಯಿಡ್‌ಗಳು ಇರುವುವು. ಮುಂಭಾಗದಲ್ಲಿ ಪ್ರಕಾಶವನ್ನು ತಿಳಿಯಬಲ್ಲ ಕೆಂಪು ನೇತ್ರಬಿಂದು ಹಲವು ಕಶಾಂಗಿಗಳಲ್ಲಿ ಇದೆ. ನ್ಯೂಕ್ಲಿಯಸ್ ಒಂದೇ ಇದ್ದು, ಸಿಹಿನೀರು ವಾಸಿಗಳಲ್ಲಿ ಸಂಕೋಚನಾವಕಾಶಗಳು ಸಾಮಾನ್ಯವಾಗಿವೆ. ಹರಿತ್ತನ್ನು ಹೊಂದಿರುವ ಕಶಾಂಗಿಗಳಲ್ಲಿ ಪೋಷಣೆ ಪೂರ್ತಿಸಸ್ಯ ಮಾದರಿಯದು; ಉಳಿದೆಲ್ಲವುಗಳಲ್ಲಿ ಸ್ಯಾಪ್ರೊಜ಼ೋಯಿಕ್ ಇಲ್ಲವೆ ಪೂರ್ತಿಪ್ರಾಣಿ ಮಾದರಿಯದು. ಈ ವರ್ಗವನ್ನು ಕೆಳಗೆ ಕಾಣಿಸಿದಂತೆ 9 ಗಣಗಳಾಗಿ ವಿಭಾಗಿಸಿದ್ದಾರೆ.

1 ಕ್ರೈಸೊಮಾನಡೈನ–ಉದಾ: ಕ್ರೈಸಮೀಬ
2 ಕ್ರಿಪ್ಟೊಮಾನಡೈನ–ಉದಾ: ಕ್ರಿಪ್ಟೊಮೊನಾಸ್
3 ಡೈನೊಫ್ಲಾಜೆಲೇಟ–ಉದಾ: ಸಿರೆಶಿಯಮ್, ನಾಕ್ಟಿಲ್ಯೂಕ
4 ಯೂಗ್ಲಿನಾಯ್ಡೈನ–ಉದಾ: ಯೂಗ್ಲಿನ
5 ಫೈಟೊಮಾನಡೈನ–ಉದಾ: ವಾಲ್ವಾಕ್ಸ್, ಪಾಂಡೊರೈನ
6 ಪ್ರೋಟೊಮಾನಡೈನ–ಉದಾ: ಟ್ರಿಪ್ಯಾನೊಸೋಮ, ಲೀಶ್ ಮಾನಿಯ
7 ಪಾಲಿಮ್ಯಾಸ್ಟಿಗೈನ–ಉದಾ: ಟ್ರೈಕೊಮೊನಾಸ್, ಜಿಯಾರ್ಡಿಯ
8 ಹೈಪರ್ ಮ್ಯಾಸ್ಟಿಗೈನ–ಉದಾ: ಲೋಫೋಮೊನಾಸ್
9 ರೈಜ಼ೊಮ್ಯಾಸ್ಟಿಗೈನ–ಉದಾ: ಮ್ಯಾಸ್ಟಿಗಮೀಬ. (ಎಸ್.ಬಿ.ಎಂ.)

**ಕಶಾಪ್ರಹಾರ :** ಚಾವಟಿಯಿಂದ ಹೊಡೆಯುವುದಕ್ಕೆ, ಅಥವಾ ತನ್ನನ್ನೇ ತಾನು ಹೊಡೆದುಕೊಳ್ಳುವುದಕ್ಕೆ ಈ ಹೆಸರಿದೆ. ಈ ಸಂಪ್ರದಾಯ ಎಲ್ಲ ಬಗೆಯ ಮಾನವ ಗುಂಪುಗಳಲ್ಲೂ ಬಳಕೆಯಲ್ಲಿದ್ದುದಾಗಿ ಗೊತ್ತಾಗಿದೆ. ಒಬ್ಬನನ್ನು ಅವನು ಮಾಡಿದ ಅಪರಾಧಕ್ಕಾಗಿ ಚಾವಟಿಯಿಂದ ಬಾರಿಸಿ ಶಿಕ್ಷಿಸುವುದು ಈಗಲೂ ಎಲ್ಲ ಸಮಾಜಗಳಲ್ಲೂ ರೂಢಿಯಲ್ಲಿದೆ. ಪ್ರಾಯಶ್ಚಿತ್ತಮಾಡಿಕೊಳ್ಳಲು ಒಬ್ಬ ತನ್ನನ್ನು ತಾನೇ ಚಾವಟಿಯಿಂದ ಹೊಡೆದುಕೊಳ್ಳುವ ರೂಢಿ ಈಚೆಗೆ ಕಡಿಮೆಯಾಗುತ್ತಿದೆ. ಇಲ್ಲಿ ಈ ಎರಡನೆಯ ಬಗೆಯ ಕಶಾಪ್ರಹಾರವನ್ನು ಮಾತ್ರ ವಿವೇಚಿಸಲಾಗಿದೆ. ಮನೆಗಳ ಮುಂದೆ ಮಾರಮ್ಮನ ಪೆಟ್ಟಿಗೆಯನ್ನು ತಲೆಯ ಮೇಲೆ ಹೊತ್ತು ತರುವ ಭಕ್ತರು ಚಾವಟಿಯಿಂದ ತಮ್ಮನ್ನು ತಾವೇ ಹೊಡೆದುಕೊಳ್ಳುವುದನ್ನು ಎಲ್ಲರೂ ಕಂಡಿದ್ದಾರೆ. ಎಷ್ಟೆಷ್ಟು ಆವೇಶದಿಂದ ತೀವ್ರವಾಗಿ ಹೊಡೆದುಕೊಂಡರೆ ಅವರ ಭಕ್ತಿ ಅಷ್ಟೂ ಅಷ್ಟು ಮೇಲಾದದ್ದು ಎಂಬ ಭಾವನೆ ಇವರಲ್ಲಿರುವಂತಿದೆ. ಕೆಲವರು ಮೈಯಿಂದ ರಕ್ತ ಚಿಮ್ಮುವಷ್ಟು ಬಲವಾಗಿ ಹೊಡೆದುಕೊಳ್ಳುತ್ತಾರೆ.

ಯುರೋಪಿನಲ್ಲಿ ಹತ್ತು ಮತ್ತು ಹನ್ನೊಂದನೆಯ ಶತಮಾನಗಳಲ್ಲಿ ದೇಹದಂಡನೆಗಾಗಿ ಮತ್ತು ಪಾಪವಿಮೋಚನೆಗಾಗಿ ಕಶಾಪ್ರಹಾರ ಮಾಡಿಕೊಳ್ಳುವುದು ಕ್ರೈಸ್ತರ ಒಂದು ಮಹಾವ್ರತವಾಯಿತು. ಈ ವ್ರತದ ಆಚರಣೆಗೆ ಡಾಮಿನಿಕಸ್ ಲೋರಿಕಾಟಸ್ (ಪ್ರ.ಶ. 1160) ಪೀಟರ್ ಡಾಮಿಯನ್ (ಪ್ರ. ಶ. 1072) ಎಂಬ ಸಂನ್ಯಾಸಿಗಳ ನೇತೃತ್ವದಲ್ಲಿ ಪ್ರಾರಂಭವಾಯಿತು. ಸಂತ ಡಾಮಿನಿಕನ (ಪ್ರ.ಶ. 1170–1221) ಕಾಲದಲ್ಲಿ ಕಶಾಪ್ರಹಾರ ಮಾಡಿಕೊಳ್ಳುವ ಈ ಚಳವಳಿ ಕ್ರಾಂತಿರೂಪತಾಳಿತಲ್ಲದೆ ಹದಿನಾಲ್ಕನೆಯ ಶತಮಾನದಲ್ಲಿ ಸಾರ್ವಜನಿಕ ಸಂಪ್ರದಾಯವಾಯಿತು. ಕಾಲಕ್ರಮದಲ್ಲಿ ಇದು ಒಂದು ಸಾಂಕ್ರಾಮಿಕ ಜಾಡ್ಯದಂತೆ ಜರ್ಮನಿಯಿಂದ ಹಂಗರಿಗೆ ಬಂದು ಅಲ್ಲಿಂದ ಯುರೋಪಿನ ಆದ್ಯಂತ ಹಬ್ಬಿತು. ಮೂವತ್ತೊಂದೂವರೆ ದಿವಸಗಳ ಪರ್ಯಂತ ದಿವಸಕ್ಕೆ ಎರಡು ಸಾರಿ ಕಶಾಪ್ರಹಾರ ಮಾಡಿಕೊಂಡವ ಸಕಲಪಾಪ ವಿಮುಕ್ತನಾಗುವನೆಂದು ನಂಬಿ ಇದನ್ನೊಂದು ಮಹಾವ್ರತವಾಗಿ ಜನ ಆಚರಿಸುತ್ತಿದ್ದರು. ಇದು ದುಷ್ಟಪದ್ಧತಿಯೆಂದು ಜನರಿಗೆ ತಿಳಿಯಲು ಹೆಚ್ಚು ಕಾಲ ಹಿಡಿಯಲಿಲ್ಲ. ಪೋಪ್ ನಾಲ್ವಡಿ ಕ್ಲೆಮೆಂಟ್ ಮತ್ತು ಚಕ್ರವರ್ತಿ ನಾಲ್ವಡಿ ಚಾರಲ್ಸ್ ಈ ಪದ್ಧತಿಯನ್ನು ಬಲವಾಗಿ ನಿಷೇಧಿಸಿದರು. ಹದಿನೈದನೆಯ ಶತಮಾನದ ಕೊನೆಯಲ್ಲಿ ಈ ಚಳವಳಿ ನಿಂತುಹೋಯಿತು. (ಜಿ.ಎಚ್.)

**ಕಶೇರುಕ :** ಕಾರ್ಡೇಟ ವಿಭಾಗದ ಒಂದು ಉಪವಿಭಾಗ (ವರ್ಟಿಬ್ರೇಟ್). ಬೆನ್ನೆಲುಬಿರುವ ಎಲ್ಲ ಪ್ರಾಣಿಗಳನ್ನೂ ಇದರಲ್ಲಿ ಸೇರಿಸಲಾಗಿದೆ. ಕಶೇರುಕಗಳಲ್ಲಿ ಆದಿಕಾರ್ಡೇಟುಗಳ (ಎಂದರೆ ಕೆಳದರ್ಜೆಯ ಕಾರ್ಡೇಟುಗಳ) ಗುಣಗಳ ಜೊತೆಗೆ ಕೆಲವು



ಮೀನೊಂದರ ಕೆಳಭಾಗಕ್ಕೆ ಕಶೇರುಕಗಳ ಆದಿಜೀವಿಯಾದ ಲ್ಯಾಂಪ್ರ ಅಂಟಿರವುದು

ವಿಶಿಷ್ಟ ಗುಣಗಳೂ ಸೇರಿವೆ. ಕಾರ್ಡೇಟುಗಳ ಮೂರು ಪ್ರಮುಖ ಗುಣಗಳು ಹೀಗಿವೆ_ನೋಟೊಕಾರ್ಡ್ ಅಥವಾ ಮೂಲ ಕಶೇರುಸ್ತಂಭ, ಗಂಟಲು ಕುಹರದಿಂದಾದ



ಶಾರ್ಕ್ ಗುಂಪಿಗೆ ಸೇರಿದ ಸ್ಕೇಟ್ ಮೀನು

ಜೋಡಿ ಕಿವಿರು ರಂಧ್ರಗಳು, ಬೆನ್ನಿನಕಡೆ ನಳಿಕೆಯಂತಿರುವ ನರಹುರಿ. ಕಶೇರುಕ ಉಪವಿಭಾಗದಲ್ಲಿ ಇರುವ ನಾನಾ ಜಾತಿಯ ಜೀವಿಗಳು ಆಂತರಿಕವಾಗಿಯೂ ಬಾಹ್ಯವಾಗಿಯೂ ಭಿನ್ನ ರಚನಾ ವೈವಿಧ್ಯಗಳಿಂದ ಕೂಡಿದ್ದರೂ (ಸೈಕ್ಲೊಸ್ಟೊಮ್ಯಾಟ ವರ್ಗದಿಂದ ಹಿಡಿದು ಸ್ತನಿಗಳವರೆಗೆ ಈ ಜೀವಿಗಳಲ್ಲಿ ರಚನಾವೈವಿಧ್ಯವನ್ನು ನೋಡಬಹುದು). ಅವೆಲ್ಲವುಗಳಿಗೂ ಸಾಮಾನ್ಯವಾದ ಕೆಲವು ಮೂಲಭೂತ ಲಕ್ಷಣಗಳು ಇವೆ. ಈ ಆಧಾರದ ಮೇಲೆ ಕಶೇರುಕಗಳನ್ನು ವರ್ಗೀಕರಿಸಲಾಗಿದೆ. ಕಶೇರುಕಗಳ ಪ್ರಮುಖ ಲಕ್ಷಣಗಳು ಹೀಗಿವೆ:

1 ಒಳ ಹಾಗೂ ಹೊರ ಅಸ್ಥಿರಚನೆ, 2 ಕಶೇರುಸ್ತಂಭ, 3 ಮಸ್ತಕ, 4 ಸೆಫಲೈಸೇಷನ್, 5 ಮೇಲು ಮತ್ತು ತಳಭಾಗದ ನರಮೂಲಗಳು, 6 ಅನುವೇದನ ನರಮಂಡಲ, 7 ಪಿಟ್ಯೂಟರಿ ಮತ್ತು ಪೀನಿಯಲ್ ಅಂಗಗಳು, 8 ಎದೆಯ ಭಾಗದಲ್ಲಿನ ಕೋಣೆಗಳಿಂದಾದ ಹೃದಯ, 9 ಹೆಪ್ಯಾಟಿಕ್ ಪೋರ್ಟಲ್ ರಕ್ತ ಪರಿಚಲನೆ, 10 ಕೆಂಪುರಕ್ತ ಕೋಶಗಳು, 11 ಚಲನಾಂಗಗಳು, 12 ಗುದದ್ವಾರದಿಂದ ಹಿಂದಿರುವ ಬಾಲ, 13 ನಿರ್ನಾಳ ಗ್ರಂಥಿಗಳು.



ಮತ್ಸ್ಯವರ್ಗದ ಒಂದು ಅಸ್ಥಿಮೀನು

**ಅಸ್ಥಿರಚನೆ:** ಇದು ಮೃದ್ವಸ್ಥಿಯಿಂದಾಗಿರಬಹುದು ಅಥವಾ ಮೂಳೆಯಿಂದಾಗಿರಬಹುದು. ಇವೆರಡೂ ಸೇರಿಯೂ ಆಗಿರಬಹುದು. ಕಶೇರುಕಗಳ ಬೆಳೆವಣಿಗೆಯ ಪ್ರಥಮಾವಸ್ಥೆಯಲ್ಲಿ ಕಶೇರುಸ್ತಂಭ ನೋಟೊಕಾರ್ಡ್ ಅವಸ್ಥೆಯಿಂದಲೇ ಪ್ರಾರಂಭವಾಗುತ್ತದೆ. ಜೀವಿ ಬೆಳೆದಂತೆ ಮೃದ್ವಸ್ಥಿಯಿಂದಾದ ಅಥವಾ ಮೂಳೆಯಿಂದಾದ ಕಶೇರುಸ್ತಂಭದ ಬೆಳೆವಣಿಗೆಯಾಗುತ್ತದೆ. ಹೀಗೆ ಕಶೇರುಸ್ತಂಭ ಬೆಳೆದಾಗ ನೋಟೊಕಾರ್ಡ್ ಕರಗಿಹೋಗುತ್ತದೆ. ಕಶೇರುಕಗಳಿಗೆ ಶರೀರದ ಮೇಲೆ ಶಲ್ಕಗಳು ಅಥವಾ ಚರ್ಮದಿಂದಲೇ ಉದ್ಭವಗೊಂಡ ತಟ್ಟೆಗಳಂಥ ರಚನೆಗಳು ಇರುತ್ತವೆ. ಈ ರೀತಿಯ ಹೊದಿಕೆ ಆದಿಕಶೇರುಕಗಳಲ್ಲಿ ಇತ್ತೆಂಬುದನ್ನು



ದ್ವಿಚರಿವರ್ಗದ ಸ್ಯಾಲಮಾಂಡರ್

ಆಸ್ಟ್ರಕೋಡರ್ಮಿ ಎಂಬ ಪಳೆಯುಳಿಕೆಗಳು ಸ್ಪಷ್ಟಪಡಿಸಿವೆ. ಈ ಮೀನುಗಳ ಮೈಮೇಲೆ ಮೂಳೆಯಿಂದಾದ ತಟ್ಟೆಗಳಂಥ ಹೊದಿಕೆ ಇತ್ತು. ಇದು ಶರೀರದ ಮುಂದಿನ ಭಾಗದಲ್ಲಿ ಹೆಚ್ಚಾಗಿತ್ತು. ಅಸ್ಥಿ ಫಲಕಗಳು ಒಂದರೊಡನೊಂದು ಬೆಸೆದುಕೊಂಡಂತೆ ಜೋಡಿಸಿಕೊಂಡಿದ್ದುವು. ಹಿಂದಿದ್ದ ಕಶೇರುಕಗಳಲ್ಲಿ ಒಳ ಅಸ್ಥಿ ಹಾಗೂ ಹೊರ ಅಸ್ಥಿರಚನೆಗಳ ಬೆಳೆವಣಿಗೆ ಸಮನಾಗಿರುವುದು ಕಂಡುಬರುತ್ತದೆ. ಆದರೆ ಉಚ್ಚಮಟ್ಟದ ಇಂದಿನ ಕಶೇರುಕಗಳಲ್ಲಿ ಹೊರ ಅಸ್ಥಿ ಚರ್ಮದಿಂದ ಶರೀರದೊಳಕ್ಕೆ ಹೂತುಹೋಗಿ ಒಳ ಅಸ್ಥಿಯೊಡನೆ ಬೆರೆತುಹೋಯಿತೆಂದು ತಿಳಿದುಬರುತ್ತದೆ. ಇದರಿಂದಾಗಿ ಉಚ್ಚಮಟ್ಟದ ಕಶೇರುಕಗಳಲ್ಲಿ ಹೊರ ಅಸ್ಥಿರಚನೆಗಳಿಲ್ಲ.

**ಕಶೇರುಸ್ತಂಭ:** ಕಶೇರುಕಗಳ ಮೂಲ ಲಕ್ಷಣ ಕಶೇರುಸ್ತಂಭ. ಇದರಿಂದಾಗಿಯೇ ಕಶೇರುಕ ಎಂಬ ಹೆಸರು ಬಂದಿದೆ. ಅಕಶೇರುಕಗಳಲ್ಲಿ ಕಶೇರುಸ್ತಂಭ ಇಲ್ಲ. ಕೆಳ ದರ್ಜೆಯ ಕಾರ್ಡೇಟಗಳಲ್ಲಿಯೂ ಕಶೇರುಸ್ತಂಭವಿಲ್ಲ. ಇದಕ್ಕೆ ಬದಲಾಗಿ ಸೂಕ್ಷ್ಮ ಸರಳಿನಂಥ ನೋಟೊಕಾರ್ಡ್ ಇವುಗಳಲ್ಲಿದೆ. ನಿಮ್ನವರ್ಗದ ಕಶೇರುಕಗಳಾದ ಸೈಕ್ಲೊಸ್ಟೊಮ್ಯಾಟಗಳಲ್ಲಿ ಕಶೇರುಸ್ತಂಭದ ಜೊತೆಯಲ್ಲಿಯೇ ನಶಿಸಿಹೋಗಿರುವ ನೋಟೊಕಾರ್ಡನ್ನು ಕಾಣಬಹುದು. ಕಶೇರುಸ್ತಂಭ ತನ್ನ ಬೆಳೆವಣಿಗೆಯ ಪ್ರಥಮ ಹಂತದಲ್ಲಿ ಮಣಿಗಳಂಥ ಮೃದ್ವಸ್ಥಿ ಅಥವಾ ಮೂಳೆಗಳ ರಚನೆಯಂತೆ ಕಂಡುಬರುತ್ತದೆ. ಈ ಮಣಿಗಳು ಆ ಜೀವಿಯ ಖಂಡಗಳಿಗೆ ಅನುಗುಣವಾಗಿ ಒಂದರ ಹಿಂದೆ ಒಂದರಂತೆ ಜೋಡಿಕೊಂಡಿರುತ್ತವೆ. ಹೀಗೆ ಬೆಳೆಯುವ ಕಶೇರುಮಣಿಗಳು ಕೊನೆಗೆ ನೋಟೋಕಾರ್ಡಿನ ಬದಲಿನ ರಚನೆಯಾಗುತ್ತದೆ. ಅಂದರೆ ನೋಟೋಕಾರ್ಡ್‌ನ ಅಂಗಾಂಶ ಕಶೇರುಮಣಿಯ ರಚನೆಯೊಳಕ್ಕೆ ಸೇರಿಹೋಗುತ್ತದೆ. ಪ್ರತಿ ಕಶೇರುಮಣಿಯಲ್ಲಿಯೂ ಮೇಲುಗಡೆ ನರಹುರಿಯನ್ನು ರಕ್ಷಿಸುವ ಕಮಾನು ಮತ್ತು ಕೆಳಗಡೆ ರಕ್ತನಾಳದ ಪ್ರವಾಹಕ್ಕೆ ಬೇಕಾದ ಕಮಾನುಗಳು ಬೆಳೆಯುತ್ತವೆ. ಉನ್ನತಮಟ್ಟದ

ಕಶೇರುಕಗಳಲ್ಲಿ ಕಮಾನುಗಳು ಕಶೇರುಮಣಿಯ ಮೂಲ ರಚನೆಯೊಡನೆ ಸೇರಿಹೋಗಿ ಕಶೇರುಮಣಿ ಗಟ್ಟಿಯಾದ ಘನವಸ್ತುವಿನಂತಾಗಲು ಸಹಾಯಮಾಡುತ್ತವೆ. ಕಶೇರುಮಣಿಗಳು ಒಂದರೊಡನೊಂದು ಕೀಲಿಸಿಕೊಂಡು ಕಶೇರುಸ್ತಂಭವಾಗುತ್ತದೆ. ಕಶೇರುಮಣಿಗಳ ಕೀಲುಗಳು ಕಶೇರುವಿನ ಚಲನೆಗೆ ಅನುಕೂಲ ಮಾಡಿಕೊಟ್ಟಿವೆ. ಕಶೇರುಕಗಳ ವಿವಿಧ ವರ್ಗ ಹಾಗೂ ಗಣಗಳಲ್ಲಿ ಕಶೇರುಮಣಿಗಳ ಆಕಾರದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸಗಳಿವೆ.

**ಮಸ್ತಕ:** ಕಶೇರುಕಗಳಲ್ಲಿರುವ ಮಸ್ತಕ ದೇಹರಚನಾಶಾಸ್ತ್ರದ ದೃಷ್ಟಿಯಿಂದ ಮುಖ್ಯವಾದ ಭಾಗ. ಮಸ್ತಕವಿಲ್ಲದಿರುವ ಕಾರ್ಡೇಟಗಳೂ ಇವೆ. ಉದಾಹರಣೆಗೆ ಆಂಫಿಯಾಕ್ಸಸ್ ಜೀವಿಗೆ ನಿರ್ದಿಷ್ಟವಾಗಿ ಗುರುತಿಸಬಹುದಾದ ಮಸ್ತಕವಿಲ್ಲ. ಬೆಳವಣಿಗೆಯ ಹಂತದಲ್ಲಿ ಮಸ್ತಕ ಮಿದುಳಿನ ಮೇಲುಭಾಗದಲ್ಲಿಯೂ ಅಕ್ಕಪಕ್ಕಗಳಲ್ಲಿಯೂ ಮೃದ್ವಸ್ಥಿ ತಟ್ಟೆಗಳ ಮೂಲಕ ರೂಪುಗೊಳ್ಳುತ್ತದೆ. ತಟ್ಟೆಗಳು ಬೆಳೆದು ದೊಡ್ಡವುಗಳಾಗಿ ಒಂದರೊಡನೊಂದು ಬೆಸೆದುಕೊಳ್ಳುತ್ತವೆ. ಇದರಿಂದಾಗಿ ಜೀವಿಯ ಮುಖ್ಯ ಅಂಗವಾದ ಮಿದುಳಿಗೆ ರಕ್ಷಣೆ ದೊರಕುತ್ತದೆ. ಅಸ್ಥಿರಚನೆಗಳುಳ್ಳ ಕಶೇರುಕಗಳಲ್ಲಿ ತಲೆಯ ಮೇಲಿರುವ ಅಸ್ಥಿತಟ್ಟೆಗಳು ಒಳಪ್ರವೇಶಿಸಿ ಮೃದ್ವಸ್ಥಿ ತಟ್ಟೆಗಳೊಡನೆ ಸೇರಿಹೋಗಿ ಒಂದು ರೀತಿಯ ಸಂಕೀರ್ಣವಾದ ತಲೆಬುರುಡೆಯ ರಚನೆಗೆ ಕಾರಣವಾಗುತ್ತವೆ. ಉಚ್ಚಮಟ್ಟದ ಕಶೇರುಕಗಳಲ್ಲಿ ಮೃದ್ವಸ್ಥಿ ಮುಂದೆ ಬೆಳೆಯುವ ಅಸ್ಥಿರಚನೆಗಳಿಂದಾಗಿ ಮಾಯವಾಗುತ್ತದೆ. ಇಂಥ ತಲೆಬುರುಡೆಯ ರಚನೆ ಈ ಉಪವಿಭಾಗವನ್ನು ಬಿಟ್ಟರೆ ಇನ್ನಿತರ ಯಾವ ವಿಭಾಗದ ಪ್ರಾಣಿಗಳಲ್ಲಿಯೂ ಕಂಡುಬರುವುದಿಲ್ಲ.

**ಸೆಫಲೈಸೇಶನ್:** ಎಲ್ಲ ಕಶೇರುಕಗಳಲ್ಲಿಯೂ ಉನ್ನತವಾಗಿ ಬೆಳೆದಿರುವ ಶಿರ ಭಾಗವಿದೆ. ಇಲ್ಲಿ ಮುಖ್ಯ ಅಂಗವಾದ ಮಿದುಳಿದೆ. ಇದರ ಜೊತೆಗೆ ಸಂಕೀರ್ಣತರ ಜ್ಞಾನೇಂದ್ರಿಯಗಳೂ ಶಿರದಲ್ಲಿವೆ. ಇಂಥ ಸಂಕೀರ್ಣಾಂಗಗಳು ಕೆಳ ದರ್ಜೆಯ ಕಾರ್ಡೇಟಗಳಲ್ಲಿಲ್ಲ. ಕೆಳದರ್ಜೆಯ ಕಶೇರುಕಗಳಲ್ಲಿ ಶಿರದ ಭಾಗ ಸರಿಯಾಗಿ ರೂಪುಗೊಳ್ಳದಿರುವುದು ಕಂಡುಬರುವುದುಂಟು. ಆದರೆ ಮುಂದುವರಿದ ಕಶೇರುಕಗಳಲ್ಲಿ ಇದು ಪೂರ್ಣವಾಗಿ ರೂಪುಗೊಂಡಿರುವುದು ಕಂಡುಬರುತ್ತದೆ. ಸೈಕ್ಲೊಸ್ಟೊಮ್ಯಾಟ ವರ್ಗದಿಂದ ಸಸ್ತನಿವರ್ಗದವರೆಗೆ ಶಿರದ ಬೆಳವಣಿಗೆಯನ್ನು ಪರಿಶೀಲಿಸಿದರೆ ಈ ಅಂಗ ಹೇಗೆ ವಿಕಾಸಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಇದರ ಗಾತ್ರ ಪ್ರತಿವರ್ಗದಲ್ಲಿಯೂ ಹೆಚ್ಚುತ್ತಾ ಹೋಗಿರುವುದನ್ನು ಇಲ್ಲಿ ನಾವು ಗಮನಿಸಬಹುದು. ಗಾತ್ರದ ಜೊತೆಗೆ ಇದರ ಸಂಕೀರ್ಣತೆಯೂ ಹೆಚ್ಚುತ್ತದೆ. ನರಮಂಡಲಕ್ಕೆ ಸಂಬಂಧಿಸಿದಂತೆ ಈ ಸಂಕೀರ್ಣತೆ ಇನ್ನೂ ಹೆಚ್ಚಿದೆ. ಇದರಿಂದಾಗಿ ಶಿರಕ್ಕೆ ಶರೀರದ ಇತರ ಭಾಗಗಳೆಲ್ಲಕ್ಕಿಂತಲೂ ಪ್ರಾಮುಖ್ಯ ಹೆಚ್ಚಿದೆ. ಆದ್ದರಿಂದ ಇದು ಶರೀರದ ಇತರ ಭಾಗಗಳ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸುತ್ತದೆ. ಶಿರ ತನ್ನ ಪ್ರಾಬಲ್ಯ ಹಾಗೂ ಸಂಕೀರ್ಣತೆಯಿಂದಾಗಿ ಇತರ ಅಂಗಗಳ ಮೇಲೆ ಹಿಡಿತ ಸ್ಥಾಪಿಸುವ ಈ ಕ್ರಿಯೆಗೆ ಸೆಫಲೈಸೇಶನ್ ಎಂದು ಹೆಸರು. ಕಶೇರುಕಗಳ ಶಿರದ ಬೆಳವಣಿಗೆ ಎಷ್ಟು ಖಂಡಗಳ ಮಿಲನದಿಂದಾಗುತ್ತದೆಂಬುದು ಇನ್ನೂ ಇತ್ಯರ್ಥವಾಗದ ವಿಷಯ. ಇದು ಎರಡು ಭಾಗಗಳಿಂದ ಬೆಳೆಯುತ್ತದೆ ಎಂದು ಡೆಬೀರ್ ಎಂಬ ವಿಜ್ಞಾನಿ ಅಭಿಪ್ರಾಯಪಡುತ್ತಾನೆ. ಈತನ ಪ್ರಕಾರ ಶಿರ ಎರಡು ಉಪಶಿರಗಳ ಒಟ್ಟುಗೂಡುವಿಕೆಯಿಂದಾಗಿದೆ. ಇವುಗಳಿಗೆ ನ್ಯೂರಲ್ ಶಿರ ಮತ್ತು ವಿಸರಲ್ ಶಿರಗಳೆಂದು ಹೆಸರು. ನ್ಯೂರಲ್ ಭಾಗ ಶಿರದ ಮೇಲು ಭಾಗವಾಗಿಯೂ ವಿಸರಲ್ ಭಾಗ ಶಿರದ ತಳಭಾಗವಾಗಿಯೂ ಬೆಳೆಯುತ್ತವೆ. ಇವುಗಳ ವಿಕಾಸವನ್ನು ಹಂತ ಹಂತವಾಗಿ ಪರಿಶೀಲಿಸಿದರೆ ನ್ಯೂರಲ್ ಶಿರಭಾಗ ಹಂತ ಹಂತವಾಗಿ ದೊಡ್ಡದಾಗುತ್ತ ಹೋಗಿದೆ; ಆದರೆ ವಿಸರಲ್ ಶಿರಭಾಗ ಹಂತಹಂತವಾಗಿ ನಶಿಸುತ್ತ ಬಂದಿದೆ ಎಂದು ತಿಳಿಯುವುದು. ಉಚ್ಚಮಟ್ಟದ ಕಶೇರುಗಳಲ್ಲಿ ನ್ಯೂರಲ್ ಶಿರವೇ ಶಿರದ ಪ್ರಮುಖ ಭಾಗ. ಕೆಳದರ್ಜೆಯ ಕಶೇರುಕಗಳಲ್ಲಿ ಇದು ನಾಲ್ಕು ಖಂಡಗಳಿಂದಾಗಿದೆ. ಶಾರ್ಕ್ ಮೀನಿನಲ್ಲಿ ಇದರಲ್ಲಿ ಏಳು ಸ್ತನಿಗಳಲ್ಲಿ ಈ ಶಿರಭಾಗ ಎಂಟು ಖಂಡಗಳಿಂದಾಗಿದೆ. ವಿಸರಲ್ ಶಿರದ ಖಂಡಗಳು ಸೈಕ್ಲೊಸ್ಟೊಮ್ಯಾಟದಲ್ಲಿ ಅತಿ ಹೆಚ್ಚಾಗಿವೆ. ಆದರೆ ಮುಂದಿನ ವರ್ಗಗಳಲ್ಲಿ ಈ ಖಂಡಗಳು ಕಡಿಮೆಯಾಗುತ್ತ ಹೋಗುತ್ತವೆ. ನೆಲವಾಸಿ–ಕಶೇರುಕಗಳಲ್ಲಿ ಕೊನೆಯ ಒಂದು ಖಂಡಮಾತ್ರ ಉಳಿಯುತ್ತದೆ.



**ಉರಗವರ್ಗದ ನಾಗರಹಾವು**

**ಮೇಲು ಹಾಗೂ ತಳಭಾಗದ ನರಮೂಲಗಳು:** ಅಕಶೇರುಕ ಪ್ರಾಣಿಗಳಲ್ಲಿ ಪ್ರತಿಖಂಡದಲ್ಲಿಯೂ ಒಂದೊಂದು ಜೊತೆ ನರಗಳು ಮಿದುಳು ಬಳ್ಳಿಯಿಂದ ಹೊರಬರುತ್ತವೆ. ಆದರೆ ಕಶೇರುಕ ಮತ್ತು ಆಂಫಿಯಾಕ್ಸಸ್ ಜೀವಿಗಳಲ್ಲಿ ಪ್ರತಿಖಂಡದಲ್ಲಿಯೂ ಎರಡು ಜೊತೆ ನರಗಳು ಮಿದುಳುಬಳ್ಳಿಯಿಂದ ಹೊರಬರುತ್ತವೆ. ಈ ತಂಡಗಳು ನರ ಬಳ್ಳಿಯ ಮೇಲುಭಾಗದಿಂದ ಮತ್ತು ತಳಭಾಗದಿಂದ ಉದ್ಭವಿಸುತ್ತವೆ. ತಳಭಾಗದ ತಂಡ ಕೇವಲ ಪ್ರೇರಕ (ಮೋಟಾರ್) ನರಗಳಾಗಿ ಕೆಲಸಮಾಡುತ್ತವೆ. ಅಂದರೆ ಇವು ಮಿದುಳಿನಿಂದ ನರಪ್ರಚೋದನೆಗಳನ್ನು ಶರೀರದ ಇತರ ಭಾಗಗಳಾದ ಮಾಂಸಖಂಡಗಳು ಮತ್ತು ಗ್ರಂಥಿಗಳಿಗೆ ತಲುಪಿಸುತ್ತವೆ. ಮೇಲುಭಾಗದ ತಂಡ ಜ್ಞಾನವಾಹಿನಿ ಹಾಗೂ ಪ್ರೇರಕ ಕೆಲಸಗಳೆರಡನ್ನೂ ಮಾಡುತ್ತವೆ. ಆದ್ದರಿಂದ ಇವು ಮಿಶ್ರನರಗಳು. ಇವುಗಳ ಮೂಲದಲ್ಲಿ ನರಕೋಶಗಳು ಗುಂಪುಗೂಡಿದ್ದು ಗಂಟಿನಂತೆ ಕಾಣುತ್ತವೆ. ಈ ರಚನೆಗಳಿಗೆ ಗ್ಯಾಂಗ್ಲಿಯಗಳೆಂದು ಹೆಸರು. ಮೇಲುಭಾಗದ ಹಾಗೂ ತಳಭಾಗದ ಈ ನರಗಳು ಮೂಲಭಾಗದಲ್ಲಿ ಬೇರೆ ಬೇರೆ ಇದ್ದರೂ ಇವುಗಳಿಂದಾದ ಕವಲುಗಳು ಶರೀರದೊಳಗೆ ಒಂದರೊಡನೊಂದು ಮಿಲನಗೊಳ್ಳುವುದೂ ಉಂಟು. ಇದರಿಂದಾಗಿ ಇವು ಮಿಶ್ರನರಗಳಾಗುತ್ತವೆ. ಆದರೆ ಕೆಳದರ್ಜೆಯ ಕಶೇರುಕಗಳಾದ ಸೈಕ್ಲೊಸ್ಟೊಮ್ಯಾಟಗಳಲ್ಲಿ ಈ ರೀತಿಯ ನರಗಳ ಮಿಲನ ಕಂಡುಬರುವುದಿಲ್ಲ.



**ಪಕ್ಷಿವರ್ಗದ ಆಲ್ಬಟ್ರಾಸ್**



**ಪ್ರೈಮೇಟುಗಣದ ಚಿಂಪಾಂಜಿ**

**ಅನುವೇದನ (ಸಿಂಪತೆಟಿಕ್) ನರಮಂಡಲ:** ಕಶೇರುಕಗಳ ಶರೀರದೊಳಗೆ ಈ ಬಗೆಯ ನರಮಂಡಲವೂ ಇದೆ. ಇದು ಅಕಶೇರುಕಗಳಲ್ಲಿಲ್ಲ. ಮಿದುಳುಬಳ್ಳಿಗೆ ಸಮಾನಾಂತರವಾಗಿ ಶರೀರದೊಳಗೆ ಎರಡು ಸಾಲುಗಳ ಗ್ಯಾಂಗ್ಲಿಯಗಳು (ನರಗಂಟು) ಮತ್ತು ಅವಕ್ಕೆ ಸಂಬಂಧಿಸಿದಂತೆ ನರಗಳೂ ಇವೆ. ಇವು ಶರೀರದ ಒಳಗಿರುವ ಅಂಗಗಳ ಮೇಲೆ ಹಿಡಿತ ಇಟ್ಟುಕೊಂಡಿವೆ. ಇವಕ್ಕೆ ವಿಸರಲ್ ನರಮಂಡಲವೆಂದೂ ಹೆಸರಿದೆ. ಇದರ ಗ್ಯಾಂಗ್ಲಿಯಗಳು ಮತ್ತು ನರಗಳು ಕೇಂದ್ರನರಮಂಡಲದ ನರಗಳೊಡನೆ ಅದರಲ್ಲಿಯ ಮೆಡ್ಯುಲಾ ಆಬ್ಲಾಂಗೇಟದೊಡನೆ ಸೇರಿಕೊಂಡು ಕೇಂದ್ರ ನರಮಂಡಲದೊಡನೆ ಸಂಪರ್ಕ ಕಲ್ಪಿಸಿಕೊಂಡಿದೆ.

**ಪಿಟ್ಯೂಟರಿ ಮತ್ತು ಪೀನಿಯಲ್ ಅಂಗಗಳು:** ಇವು ಮಿದುಳಿನಿಂದ ಬೆಳೆದಿರುವ ಬಾಹ್ಯ ಬೆಳವಣಿಗೆಗಳಂತೆ ಅಥವಾ ಚಾಚುಗಳಂತಿವೆ. ಪಿಟ್ಯೂಟರಿಗ್ರಂಥಿ ಮುಂದಿನ ಮಿದುಳಿನ ತಳಭಾಗದಲ್ಲಿದೆ. ಇದು ಹೊರಚರ್ಮ ಮತ್ತು ನರಮಂಡಲದ ಅಂಗಾಂಶಗಳೆರಡೂ ಸೇರಿ ಆಗಿರುವ ಒಂದು ಗ್ರಂಥಿ. ಸೈಕ್ಲೊಸ್ಟೋಮ್‌ಗಳನ್ನು ಬಿಟ್ಟರೆ ಹೊರಚರ್ಮ ಮತ್ತು ನರಮಂಡಲದ ಅಂಗಾಂಶಗಳೆರಡೂ ಒಂದುಗೂಡಿರುವ ಈ ಅಂಗ ಅಂತಃಸ್ರಾವಕಗಳನ್ನು ಉತ್ಪತ್ತಿಮಾಡುವ ಒಂದು ಅತಿ ಕ್ಲಿಷ್ಟವಾದ ಗ್ರಂಥಿ. ಸೈಕ್ಲೊಸ್ಟೋಮ್‌ಗಳಲ್ಲಿ ಈ ಎರಡು ಭಾಗಗಳು ಬೇರೆಬೇರೆಯೇ ಇವೆ. ಇದರಿಂದ ಉತ್ಪತ್ತಿಯಾಗುವ ಹಾರ್ಮೋನುಗಳು ಶರೀರದ ವಿವಿಧ ಕ್ರಿಯೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುವು.

ನಿಮ್ನವರ್ಗದ ಕಶೇರುಕಗಳಲ್ಲಿ ಪೀನಿಯಲ್ ಅಂಗ ಮಿದುಳಿನ ಡಯನ್‌ಸೆಫೆಲಾನ್ ಭಾಗದಿಂದ ಹೊರಚಾಚಿಕೊಂಡಿರುವ ಒಂದು ಅಂಗ. ಇದು ಆ ಪ್ರಾಣಿಗಳ ಮೂರನೆಯ

ಕಣ್ಣು. ಆದರೆ ಮೇಲುದರ್ಜೆಯ ಕಶೇರುಕಗಳಲ್ಲಿ ಇದು ನಶಿಸಿಹೋಗಿದೆ. ಕೆಲವು ಸರೀಸೃಪಗಳಲ್ಲಿ ಈ ಅಂಗದೊಳಗೆ ಅಕ್ಷಿಪಟಲ ಮತ್ತು ಮಸೂರಗಳ ಬೆಳೆವಣಿಗೆಯಾಗಿರುವುದನ್ನು ಕಾಣಬಹುದು.

**ಹೃದಯ:** ಆಂಫಿಯಾಕ್ಸಸ್ ಜೀವಿಗೆ ನಿರ್ದಿಷ್ಟವಾದ ಹೃದಯವಿಲ್ಲ. ಆದರೆ ಇನ್ನುಳಿದ ಎಲ್ಲ ಕಾರ್ಡೇಟಗಳಲ್ಲಿಯೂ ಹೃದಯ ಪೂರ್ಣವಾಗಿ ರೂಪುಗೊಂಡಿದೆ. ಕಶೇರುಕಗಳಲ್ಲಿ ಜೀರ್ಣಾಂಗಗಳ ತಳಭಾಗದಲ್ಲಿ ಹೃದಯವಿದೆ. ಆದರೆ ಅಕಶೇರುಕಗಳಲ್ಲಿ ಈ ಅಂಗದ ಸ್ಥಾನ ಜೀರ್ಣಾಂಗಗಳ ಮೇಲುಗಡೆ. ಹೃದಯ ಸಹ ಕೆಳದರ್ಜೆಯ ಕಶೇರುಕಗಳಿಂದ ಮೇಲಿನ ದರ್ಜೆಯ ಕಶೇರುಕಗಳ ವರೆಗೆ ವಿಕಾಸಗೊಂಡಿರುವುದನ್ನು ಕಾಣಬಹುದು.

**ಹೆಪ್ಯಾಟಿಕ್ ಪೋರ್ಟಲ್ ರಕ್ತ ಪರಿಚಲನೆ:** ಇದು ಕಶೇರುಕಗಳಲ್ಲಿ ಮಾತ್ರ ಕಂಡುಬರುವ ಒಂದು ವಿಶಿಷ್ಟ ಗುಣ. ಇಲ್ಲಿ ಮಲಿನ ರಕ್ತನಾಳಗಳು ಯಕೃತ್ತಿನೊಳಕ್ಕೆ ಬಂದು ಲೋಮನಾಳಗಳಾಗಿ ಒಡೆಯುತ್ತವೆ. ಮತ್ತೆ ಇವೆಲ್ಲವೂ ಒಂದುಗೂಡಿ ರಕ್ತವನ್ನು ಹೃದಯಕ್ಕೆ ಕೊಂಡೊಯ್ಯುತ್ತವೆ. ಜೀರ್ಣಾಂಗಗಳಿಂದ ಬರುವ ಆಹಾರಮಿಶ್ರಿತ ರಕ್ತ ಪಿತ್ತಕೋಶದೊಳಕ್ಕೆ ಪ್ರವೇಶಿಸಿ ಅಲ್ಲಿ ಶೋಧನೆಗೊಂಡ ಅನಂತರ ಹೃದಯಕ್ಕೆ ಬರುತ್ತದೆ. ಇದು ಈ ಪರಿಚಲನೆಯ ಮುಖ್ಯ ಉದ್ದೇಶ. ಇಂಥ ರಕ್ತಪರಿಚಲನೆ ಅಕಶೇರುಕಗಳಲ್ಲಿಲ್ಲ.

**ಕೆಂಪು ರಕ್ತಕೋಶಗಳು:** ಅಕಶೇರುಕಗಳಲ್ಲಿ ಕೆಂಪು ರಕ್ತಕೋಶಗಳಿರುವುದಿಲ್ಲ. ಆದರೆ ಆ ಜೀವಿಗಳಲ್ಲಿ, ಹೀಮೋಗ್ಲೋಬಿನ್ ಪ್ಲಾಸ್ಮದಲ್ಲಿ ಕರಗಿರುತ್ತದೆ. ಕಶೇರುಕಗಳಲ್ಲಿ ಹೀಮೋಗ್ಲೋಬಿನ್ ಪ್ಲಾಸ್ಮ ದ್ರವದೊಳಗಿರದೆ ಪ್ರತ್ಯೇಕವಾದ ಕೋಶಗಳೊಳಗಿದೆ. ಈ ಜೀವ ಕೋಶಗಳಿಗೆ ಕೆಂಪು ರಕ್ತಕೋಶಗಳೆಂದು ಹೆಸರು. ಇವು ಮೂಳೆಗಳೊಳಗೆ ಉತ್ಪತ್ತಿಯಾಗುತ್ತವೆ. ಕೆಂಪುರಕ್ತಕೋಶಗಳು ಆಮ್ಲಜನಕವನ್ನು ತೆಗೆದುಕೊಂಡು ರಕ್ತಪರಿಚಲನೆಯ ಮೂಲಕ ಶರೀರದ ಅಂಗಾಂಶಗಳಿಗೆ ಅದನ್ನು ತಲಪಿಸುತ್ತವೆ.

**ಚಲನಾಂಗಗಳು:** ಇಂದು ಬದುಕಿರುವ ಯಾವ ಕಶೇರುಕಗಳಲ್ಲಿಯೂ ಎರಡು ಜೊತೆಗಿಂತ ಹೆಚ್ಚಾಗಿ ಚಲನಾಂಗಗಳಿಲ್ಲ. ಆದರೆ ಅಕಶೇರುಕಗಳಲ್ಲಿ ಚಲನಾಂಗಗಳ ಸಂಖ್ಯೆಗೆ ಮಿತಿಯಿಲ್ಲದಿರುವುದು ಕಂಡುಬರುತ್ತದೆ. ಶರೀರದ ಪ್ರತಿ ಖಂಡದಿಂದಲೂ ಒಂದೊಂದು ಜೊತೆ ಕಾಲುಗಳು ಆ ಜೀವಿಗಳಲ್ಲಿ ಹುಟ್ಟಿಕೊಳ್ಳುತ್ತವೆ. ಚಲನಾಂಗಗಳಾದ ಕಾಲುಗಳೇ ಕಶೇರುಕಗಳ ಮುಖ್ಯ ಗುಣವೆಂದಲ್ಲ. ಏಕೆಂದರೆ ಕೆಳದರ್ಜೆಯ ಕಶೇರುಕಗಳಾದ ಸೈಕ್ಲೊಸ್ಟೊಮ್ಯಾಟದಲ್ಲಿ ಚಲನಾಂಗಗಳೇ ಇಲ್ಲ.

**ಬಾಲ:** ಸಾಮಾನ್ಯವಾಗಿ ಕಶೇರುಕಗಳಲ್ಲಿ ಶರೀರದ ಹಿಂಭಾಗದಲ್ಲಿ ಬಾಲವಿರುತ್ತದೆ. ಆದರೆ ಇದರೊಳಗೆ ದೇಹಾಂತರ ಅವಕಾಶವಿಲ್ಲ. ಅಲ್ಲದೆ ಉದರಭಾಗದೊಳಗಿರುವ ಯಾವ ಅಂಗವೂ ಬಾಲದೊಳಕ್ಕೆ ಪ್ರವೇಶಿಸುವುದಿಲ್ಲ. ಕೆಲವು ಉಭಯಚರಿಗಳಿಗೆ ಬಾಲವಿಲ್ಲ. ಆದರೆ ಡಿಂಬದ ಸ್ಥಿತಿಯಲ್ಲಿದ್ದಾಗ ಅವಕ್ಕೆ ಬಾಲವಿದ್ದೇ ಇರುತ್ತದೆ. ಕೆಳದರ್ಜೆಯ ಕಶೇರುಕಗಳಲ್ಲಿ ಬಾಲ ಚಲನಾಂಗವಾಗಿ ಕೆಲಸಮಾಡುತ್ತದೆ. ನೀರಿನಲ್ಲಿ ಚಲಿಸುವ ಪ್ರಾಣಿಗಳಿಗೆ ಬಾಲದ ಅಗತ್ಯವಿದ್ದೇ ಇದೆ. ಆದ್ದರಿಂದ ಇದು ಆದಿಕಶೇರುಕಗಳ ಉಗಮವಾದಾಗಲೇ ಹುಟ್ಟಿಕೊಂಡಿದೆ. ಮೇಲುದರ್ಜೆಯ ಕಶೇರುಕವಾದ ಮನುಷ್ಯನಲ್ಲಿ ಬಾಹ್ಯವಾಗಿ ಬಾಲವಿಲ್ಲ. ಆದರೂ ಬಾಲವಿದ್ದ ಪ್ರಾಣಿಗಳಿಂದ ಈತ ಹುಟ್ಟಿಬಂದಿದ್ದಾನೆಂಬುದಕ್ಕೆ ಕುರುಹುಗಳು ಈತನ ಶರೀರದಲ್ಲಿವೆ.

**ನಿರ್ನಾಳಗ್ರಂಥಿಗಳು:** ಇವು ಎಲ್ಲ ಕಶೇರುಕಗಳಲ್ಲಿಯೂ ಇವೆ. ಜೀವಿಗಳ ಶರೀರದೊಳಗೆ ನಡೆಯುವ ಚಯಾಪಚಯ ಕ್ರಿಯೆಗಳನ್ನು ಇವು ತಮ್ಮ ಹಿಡಿತದಲ್ಲಿಟ್ಟುಕೊಂಡಿವೆ. ಇವುಗಳಿಂದ ಉತ್ಪತ್ತಿಯಾಗುವ ವಸ್ತುಗಳಿಗೆ ಹಾರ್ಮೋನುಗಳೆಂದು ಹೆಸರು. ಕಶೇರುಕಗಳಲ್ಲಿ ಮೇಲೆ ಹೇಳಿದ ಗುಣಗಳು ಮಾತ್ರ ಇವೆಯೆಂದಲ್ಲ. ಈ ಗುಣಗಳ ಜೊತೆಗೆ ಆಯಾ ವರ್ಗದಲ್ಲಿಯೂ ಪ್ರತ್ಯೇಕವಾದ ಗುಣಗಳಿವೆ. 1. ಸೈಕ್ಲೊಸ್ಟೊಮ್ಯಾಟ, 2. ಆಸ್ಟ್ರಕೋಡರ್ಮಿ, 3. ಪಿಸೀಸ್, 4. ಆಂಫಿಬಿಯ, 5. ಸರೀಸೃಪಗಳು, 6. ಏವೀಸ್, 7. ಸ್ತನಿಗಳು ಎಂದು ಕಶೇರುಕಗಳನ್ನು ಏಳು ಭಾಗಗಳಾಗಿ ವರ್ಗೀಕರಣ ಮಾಡಲಾಗಿದೆ. (ಎಲ್.ಎಸ್.ಜಿ.)

**ಕಶೇರುಕ ಭ್ರೂಣವಿಜ್ಞಾನ :** ಪ್ರಾಣಿಗಳೆಲ್ಲಕ್ಕೂ ಸಂಬಂಧಿಸಿದಂತೆ ಭ್ರೂಣಶಾಸ್ತ್ರದ ಅಭ್ಯಾಸ ಸೂತ್ರಗಳು ಒಂದೇ. ಅಂಡಾಣು ಮತ್ತು ಪುರುಷಾಣುಗಳು ಕೂಡಿ ನಿಶೇಚನ ನಡೆದು ರೂಪುಗೊಳ್ಳುವ ಸಂಯುಕ್ತವೇ ಬೀಜಾಣು. ಇದು ಎಲ್ಲ ಲಕ್ಷಣಗಳಲ್ಲಿಯೂ ಒಂದು ಜೀವಕೋಶ. ಇರಬಹುದಾದ ವ್ಯತ್ಯಾಸವೆಂದರೆ ಬೆಳೆವಣಿಗೆಯ ಕಾಲದಲ್ಲಿ ಅವಶ್ಯಕವಾದ ಆಹಾರವನ್ನೊದಗಿಸಲು ತಾಯಿ ಪ್ರಾಣಿ ಈ ಮೊಟ್ಟೆಗಳಲ್ಲಿ ಬಂಡಾರ, ಆಲ್ಬ್ಯುಮೆನ್ ಮುಂತಾದ ಮೀಸಲು ಆಹಾರ ಪದಾರ್ಥಗಳನ್ನು ಕೂಡಿಟ್ಟಿರುವುದರಲ್ಲಿ. ಹೀಗೆ ಬೀಜಾಣು ಏಕಕೋಶರೂಪಿಯಾಗಿ ತನ್ನ ಬೆಳೆವಣಿಗೆಯನ್ನು ಆರಂಭಿಸಿ ಅನೇಕ ಬದಲಾವಣೆಗಳ ಅನಂತರ ಪ್ರೌಢಾವಸ್ಥೆ ತಲುಪುತ್ತದೆ. ಈ ಬದಲಾವಣೆಗಳ ಅಭ್ಯಾಸವೇ ಭ್ರೂಣಶಾಸ್ತ್ರದ ಮೂಲ ಉದ್ದೇಶ. ಬೆಳೆವಣಿಗೆಯ ಕಾಲದಲ್ಲಿ ಬೀಜಾಣು ಮೊದಲು ಬಹುಕೋಶರೂಪಿಯಾಗಿ ಅನಂತರ ಅಂಗಾಂಶಗಳನ್ನೂ ಅಂಗ ಸಮೂಹಗಳನ್ನೂ ಬೆಳೆಸಿಕೊಳ್ಳುತ್ತದೆ. ಈ ಕಾಲದಲ್ಲಿ ಮೈಟಾಸಿಸ್ ವಿಭಜನೆಗಳು ನಡೆದು ಒಂದಾಗಿದ್ದ ಸಂಯುಕ್ತಬೀಜಾಣು ಎರಡಾಗಿ, ಎರಡು ನಾಲ್ಕಾಗಿ, ಎಂಟಾಗಿ, ಹೀಗೆ ಕ್ರಮವಾದ ರೀತಿಯಲ್ಲಿ ವಿಭಜನೆಗಳು ನಡೆಯುತ್ತವೆ. ಈ ಅವಸ್ಥೆಗೆ ವಿದಳನ (ಕ್ಲೀವೇಜ್) ಎಂದು ಹೆಸರು. ಇದರ ಪರಿಣಾಮವಾಗಿ ಟೊಳ್ಳಾದ ಚೆಂಡಿನಂತಿರುವ ಒಂದು ರಚನೆ ರೂಪುಗೊಳ್ಳುತ್ತದೆ. ಇದಕ್ಕೆ ಬ್ಲಾಸ್ಟ್ಯುಲ ಎಂದು ಹೆಸರು. ಇದರ ಒಳಗಿರುವ ಅವಕಾಶಕ್ಕೆ ಬ್ಲಾಸ್ಟೊಸೀಲ್ ಎಂದು ಹೆಸರು. ಇದರ ಸುತ್ತಲೂ ಒಂದು ಜೀವಕೋಶ ಪದರವಿರುತ್ತದೆ. ಬೆಳೆವಣಿಗೆ ಮುಂದುವರಿದು ಒಂದು ಪದರದ ರಚನೆ ಬಹುಪದರ ರಚನೆಯಾಗಿ ಬದಲಾಗುತ್ತದೆ. ಈ ಕಾಲದಲ್ಲಿ ಮೂಲ ಪದರಗಳು ಕಾಣಿಸಿಕೊಳ್ಳುತ್ತವೆ. ಈ ರಚನೆಗೆ ಗ್ಯಾಸ್ಟ್ರುಲ ಎಂದು ಹೆಸರು. ಇದು ರೂಪಗೊಳ್ಳುವ ಕ್ರಿಯಾವಿಶೇಷಕ್ಕೆ ಗ್ಯಾಸ್ಟ್ರಲೀಕರಣ ಎಂದು ಹೆಸರು. ಈ ಕ್ರಿಯಾ ವಿಶೇಷದ ಕಾಲದಲ್ಲಿ ಬ್ಲಾಸ್ಟುಲದಲ್ಲಿರುವ ವಿವಿಧ ಜೀವಕೋಶಗಳು ಸ್ಥಾನಪಲ್ಲಟವಾಗಿ ಬ್ಲಾಸ್ಟೊಸೀಲ್ ಅವಕಾಶದ ಮೂಲಕ ತಮ್ಮ ಭವಿಷ್ಯದ ನಿರ್ದಿಷ್ಟ ಸ್ಥಾನಗಳಿಗೆ ಚಲಿಸಿ, ಭ್ರೂಣದ ಮುಂದಿನ ಬೆಳೆವಣಿಗೆಯಲ್ಲಿ ತಾವು ನಿರ್ವಹಿಸಬೇಕಾದ ಪಾತ್ರಕ್ಕೆ ಸಿದ್ಧವಾಗುತ್ತವೆ. ಈ ಅವಸ್ಥೆಯಲ್ಲಿ ಹೊರದರ್ಮ, ಒಳದರ್ಮ ಮತ್ತು ನಡುದರ್ಮಗಳೆಂಬ ಮೂರು ಮೂಲ ಪದರಗಳು ಕಾಣಿಸಿಕೊಳ್ಳುತ್ತವೆ. ಇದು ಎರಡು ಭಿತ್ತಿಯ ಬಟ್ಟಲಿನಾಕಾರದಲ್ಲಿರಬಹುದು ಅಥವಾ ಬಹು ಪದರದ ಕುಹರವನ್ನೊಳಗೊಂಡ ಸಂಕೀರ್ಣರಚನೆಯಾಗಿರಬಹುದು. ಒಳಗಿನ ಈ ಕುಹರಕ್ಕೆ ಆರ್ಕೆಂಟರಾನ್ ಎಂದು ಹೆಸರು. ಇದು ಬ್ಲಾಸ್ಟೊಫೋರ್ ಎಂಬ ತೆರಪಿನ ಮೂಲಕ ಹೊರಕ್ಕೆ ತೆರೆಯುತ್ತದೆ. ಇದರ ಸುತ್ತಲೂ ಮೇಲಿನ (ಡಾರ್ಸಲ್), ಕೆಳಗಿನ (ವೆಂಟ್ರಲ್) ಮತ್ತು ಪಾರ್ಶ್ವದ ತುಟಿಗಳು ಎಂಬ ರಚನೆಗಳನ್ನು ಗುರುತಿಸಬಹುದು. ಆರ್ಕೆಂಟರಾನ್ ಕುಹರವೇ ಮುಂದೆ ಪ್ರೌಢಜೀವಿಯ ಅನ್ನನಾಳವಾಗಿ ರೂಪಗೊಳ್ಳುತ್ತದೆ. ಅನಂತರ ಹೊರದರ್ಮದ ಒಂದು ಭಾಗ ಒಳಕ್ಕೆ ಚಾಚಿಕೊಂಡು ಇತರ ಜೀವಕೋಶಗಳಿಂದ ಬೇರ್ಪಟ್ಟು ಒಂದು ನಳಿಕೆಯ ರೂಪತಾಳುತ್ತದೆ. ಇದೇ ನರನಳಿಕೆ ಅಥವಾ ಮೆದ್ಯುಲರಿ ನಳಿಕೆ. ಈ ಅವಸ್ಥೆಗೆ ನ್ಯೂರುಲ ಎಂದು ಹೆಸರು. ಈ ಕ್ರಿಯಾವಿಶೇಷಕ್ಕೆ ನ್ಯೂರುಲೇಷನ್ ಎಂದು ಕರೆಯುತ್ತಾರೆ. ಮುಂದೆ ಉಳಿದ ಅಂಗಸಮೂಹಗಳು ಭ್ರೂಣದ ಲಂಬ ಅಕ್ಷದಲ್ಲಿ ವ್ಯವಸ್ಥಿತವಾದ ನಾಳಗಳಂತೆ ಕಾಣಿಸಿಕೊಳ್ಳುತ್ತವೆ. ಇದಕ್ಕೆ ನಳಿಕೀಕರಣ ಎಂದು ಹೆಸರು. ಅನಂತರ ಈ ನಳಿಕೆಗಳ ವಿವಿಧ ಭಾಗಗಳು ಕ್ರಮವಾದ ಅಂಗಾಂಗಗಳಾಗಿ ರೂಪಗೊಳ್ಳುತ್ತವೆ. ಇದನ್ನು ಅಂಗೋತ್ಪತ್ತಿ (ಆರ್ಗನೋಜೆನಿಸಿಸ್) ಎಂದು ಕರೆಯುತ್ತಾರೆ. ಅಂಗಸಮೂಹಗಳ ಬೆಳೆವಣಿಗೆ ಪೂರ್ಣವಾದಮೇಲೆ ಪ್ರಬುದ್ಧಾವಸ್ಥೆಯ ರೂಪಪರಚನೆಯ ಕ್ರಿಯೆ ನಡೆಯುತ್ತದೆ. ಇದೇ ರೂಪೋದ್ಭವ ಅಥವಾ ಮಾರ್ಫೋಜೆನಿಸಿಸ್.

ಇದು ಸ್ಥೂಲವಾಗಿ ತಿಳಿಸಬಹುದಾದ ಕಶೇರುಕಗಳ ಮಾದರಿ ಬೆಳೆವಣಿಗೆಯ ವಿಧಾನ. ವಿವಿಧ ಗುಂಪುಗಳಲ್ಲಿ, ಅವುಗಳ ಸಂತಾನೋತ್ಪತ್ತಿಯ ಕ್ರಮವನ್ನನುಸರಿಸಿ ವ್ಯತ್ಯಾಸಗಳಿವೆ. ಉದಾಹರಣೆಗೆ, ಸ್ತನಿಗಳ ವಿನಾ ಮಿಕ್ಕೆಲ್ಲ ಪ್ರಾಣಿಗಳಲ್ಲಿ ಬೆಳೆವಣಿಗೆ ತಾಯಿ ದೇಹದ ಹೊರಗೆ ನಡೆಯುತ್ತದೆ. ಆದ್ದರಿಂದ ಇಲ್ಲಿ ವಿಶಿಷ್ಟ ವ್ಯತ್ಯಾಸಗಳಿವೆ. ಕಪ್ಪೆಗಳಿಗೂ ಪಕ್ಷಿಗಳಿಗೂ ಇನ್ನೊಂದು ರೀತಿಯ ವ್ಯತ್ಯಾಸ ಕಾಣಬರುತ್ತದೆ. ಕಪ್ಪೆಯ ಮೊಟ್ಟೆಗಳು ನೀರಿನಲ್ಲಿ ಬೆಳೆಯುತ್ತವೆ. ಆದ್ದರಿಂದ ಅವು ಬೆಳೆವಣಿಗೆಯ ಕಾಲದಲ್ಲಿ ತಮಗೆ ಆವಶ್ಯಕವಾಗುವ ನೀರು, ಲವಣಗಳು ಮತ್ತು ಆಹಾರದ ಸ್ವಲ್ಪ ಭಾಗವನ್ನು ನೀರಿನಿಂದಲೇ ಪಡೆಯಬಹುದು. ಇದರಿಂದಾಗಿ ತಾಯಿ ಮೊಟ್ಟೆಗಳನ್ನಿಡುವಾಗ ಇವೆಲ್ಲವನ್ನೂ ಒದಗಿಸುವ ಶ್ರಮವಹಿಸುವುದಿಲ್ಲ. ಸ್ವಲ್ಪ ಮಾತ್ರ ಮೀಸಲು ಆಹಾರವನ್ನು ಬಂಡಾರದ ರೂಪದಲ್ಲಿ ಸಂಗ್ರಹಿಸಿರುತ್ತದೆ. ಆದರೆ ಪಕ್ಷಿಗಳ ಮತ್ತು ಸರೀಸೃಪಗಳ ಮೊಟ್ಟೆಗಳು ನೆಲದ ಮೇಲೆ ಬೆಳೆಯುತ್ತವೆ. ಆಮ್ಲಜನಕವೊಂದರ ವಿನಾ ಇನ್ನೇನನ್ನೂ ಈ ಭ್ರೂಣಗಳು ಸುತ್ತಲ ಪರಿಸರದಿಂದ ಪಡೆಯಲಾರವು. ಆದ್ದರಿಂದ ತಾಯಿ ಈ ಮೊಟ್ಟೆಗಳ ಪೂರ್ಣ ಬೆಳೆವಣಿಗೆಗೆ ಆವಶ್ಯಕವಾದ ವಸ್ತುಗಳನ್ನು ಮೊಟ್ಟೆಯಲ್ಲಿ ಶೇಖರಿಸಿಡುತ್ತದೆ. ಇದರಿಂದಾಗಿ ಮೊಟ್ಟೆಗಳು ಗಾತ್ರದಲ್ಲಿ ದೊಡ್ಡವಾಗುತ್ತವೆ. ಕಪ್ಪೆಗಳಲ್ಲಿಯಾದರೋ ಬೆಳೆವಣಿಗೆ ಬೇಗ ಮುಗಿದು ಡಿಂಭಾವಸ್ಥೆಯಲ್ಲಿ ತನ್ನ ಆಹಾರವನ್ನು ತಾನೇ ಗಳಿಸಿಕೊಂಡು ರೂಪಪರಿವರ್ತನೆ ಹೊಂದಬಹುದು. ಇದು ಪಕ್ಷಿಗಳಲ್ಲಿ ಸಾಧ್ಯವಿಲ್ಲ. ಆದ್ದರಿಂದ ಸಂಪೂರ್ಣ ಬೆಳೆವಣಿಗೆ ಮೊಟ್ಟೆಯೊಳಗೇ ನಡೆಯುತ್ತದೆ. ಸ್ತನಿಗಳಲ್ಲಿ ಬೆಳೆವಣಿಗೆ ತಾಯಿಯ ದೇಹದ ಒಳಗೆ, ಅಂದರೆ ಗರ್ಭಕೋಶದಲ್ಲಿ ನಡೆಯುತ್ತದೆ. ಈ ಕಾಲದಲ್ಲಿ ಭ್ರೂಣ ಕೆಲವು ವಿಶೇಷ ರಚನೆಗಳ ಮೂಲಕ ಗರ್ಭಕೋಶದ ಭಿತ್ತಿಯೊಡನೆ ಸಂಬಂಧ ಬೆಳೆಸಿ ತಾಯಿಯಿಂದ ಪೋಷಕ ವಸ್ತುಗಳನ್ನು ಮತ್ತು ಆಮ್ಲಜನಕವನ್ನು ಪಡೆಯುತ್ತದೆ. ಅದೇ ರಚನೆಯ ಮೂಲಕ ಮಲಿನ ವಸ್ತುಗಳನ್ನು ಮತ್ತು ಇಂಗಾಲದ ಡೈಆಕ್ಸೈಡನ್ನು ವಿಸರ್ಜಿಸುತ್ತದೆ. ಈ ರಚನೆಗೆ ಗರ್ಭವೇಷ್ಟಿ ಅಥವಾ ಪ್ಲಾಸೆಂಟ ಎಂದು ಹೆಸರು. ತಾಯಿ ಬೆಳೆಯುತ್ತಿರುವ ಭ್ರೂಣದ ಆವಶ್ಯಕತೆಗಳನ್ನೆಲ್ಲ ಹೀಗೆ ಪೂರೈಸುವುದರಿಂದ ತತ್ತಿಗಳಲ್ಲಿ ಯಾವ ರೀತಿಯ ಮೀಸಲು ಪೋಷಕವಸ್ತುಗಳನ್ನೂ ಸಂಗ್ರಹಿಸುವುದಿಲ್ಲ. ಆದ್ದರಿಂದ ಇವುಗಳ ಬೆಳೆವಣಿಗೆಯ ಜಾಡೇ ಭಿನ್ನವಾದುದು.

ನಿಶೇಚನೆಯ ಮೂಲಕ ಪುರುಷಾಣು ತತ್ತಿಯ ಬೆಳೆವಣಿಗೆಯನ್ನು ಆರಂಭಿಸಲು ಪ್ರಚೋದನೆಯನ್ನು ಒದಗಿಸುತ್ತದೆ. ವಿಭಜನೆಗಳ ಮೂಲಕ ತತ್ತಿ ಸಂಖ್ಯೆಯಲ್ಲಿ ವೃದ್ಧಿಯಾಗುತ್ತದೆ.

ಈ ಕ್ರಿಯೆಗೆ ವಿದಳನ ಎಂದು ಹೆಸರು. ಹೀಗೆ ಉತ್ಪತ್ತಿಯಾಗುವ ಜೀವಕೋಶಗಳಿಗೆ ಬ್ಲಾಸ್ಟೋಮಿಯರ್‌ಗಳೆಂದು ಹೆಸರು. ವಿದಳನ ಪೂರ್ಣವಾಗಿರಬಹುದು ಅಥವಾ ಅಪೂರ್ಣವಾಗಿರಬಹುದು. ಪೂರ್ಣವಿದಳನದಲ್ಲಿ ಸಂಪೂರ್ಣ ತತ್ತಿ ವಿಭಾಗವಾಗುತ್ತದೆ. ಕಪ್ಪೆಗಳ ಮೊಟ್ಟೆಗಳು ಇದಕ್ಕೆ ಉದಾಹರಣೆ. ಕೆಲವು ಸಾರಿ ವಿದಳನ ಅಪೂರ್ಣವಾಗಿ ತತ್ತಿಯ ಸ್ವಲ್ಪಭಾಗ ಮಾತ್ರ ವಿಭಾಗವಾಗಬಹುದು ಮತ್ತು ಉಳಿದ ಭಾಗ ವಿಭಾಗವಾಗದೇ ಉಳಿಯಬಹುದು. ಪಕ್ಷಿಗಳ ಮೊಟ್ಟೆಗಳ ವಿದಳನೆಯಲ್ಲಿ ಈ ರೀತಿಯನ್ನು ಕಾಣಬಹುದು. ಹೇರಳವಾಗಿರುವ ಬಂಡಾರ ಸಂಪೂರ್ಣ ವಿದಳನಕ್ಕೆ ಅಡ್ಡಿಯಾಗುತ್ತದೆ. ಆದ್ದರಿಂದ ಕೋಶದ್ರವ್ಯ ಇರುವ ಭಾಗ ಮಾತ್ರ ವಿದಳನದಲ್ಲಿ ಭಾಗವಹಿಸುತ್ತದೆ. ಬಂಡಾರ ಇನ್ನೂ ಅಧಿಕವಾಗಿರುವ ಟೆಲಿಯಾಸ್ಟಿಯೈ ಗುಂಪುಗಳ ಮೀನುಗಳಲ್ಲಿ ವಿದಳನ ತತ್ತಿಯಲ್ಲಿ ಮೇಲೆ ಸ್ವಲ್ಪಭಾಗಕ್ಕೆ ಮಾತ್ರ ಮೀಸಲಾಗಿರುತ್ತದೆ. ಇದಕ್ಕೆ ಮೇಲ್ಮೈವಿದಳನ ಎಂದು ಹೆಸರು. ಸಂಪೂರ್ಣ ವಿದಳನವನ್ನು ಹೋಲೊಬ್ಲಾಸ್ಟಿಕ್ ಎಂದೂ ಪಾರ್ಶ್ವಕ ವಿದಳನವನ್ನು ಮೀರೊಬ್ಲಾಸ್ಟಿಕ್ ಎಂದೂ ಕರೆಯುತ್ತಾರೆ.

ವಿದಳನ ಕಾಲದಲ್ಲಿ ತತ್ತಿ ವಿಭಾಗವಾಗುವ ಮತ್ತು ವಿಭಜನೆಯ ರೇಖೆ ಕಾಣಿಸಿಕೊಳ್ಳುವ ರೀತಿಯಲ್ಲಿ ಅನೇಕ ವ್ಯತ್ಯಾಸಗಳಿವೆ:

**1 ರೇಖಾಂಶಿಕ (ಮೆರಿಡಿಯೋನಲ್) ವಿದಳನ :** ಇದರಲ್ಲಿ ವಿಭಜರೇಖೆ ತತ್ತಿಯ ಎರಡೂ ದ್ರುವ ಭಾಗಗಳನ್ನು ಸಂಧಿಸುತ್ತದೆ ಮತ್ತು ಅದರ ಕೇಂದ್ರದ ಮೂಲಕ ಅಥವಾ ಮಧ್ಯ ಅಕ್ಷದ ಮೂಲಕ ಹಾದುಹೋಗುತ್ತದೆ. ಕಪ್ಪೆಗಳಲ್ಲಿ ನಡೆಯುವ ಮೊದಲೆರಡು ವಿದಳನಗಳು ಈ ರೀತಿಯವು.

**2 ನೇರವಾದ ವಿದಳನ :** ಇದು ರೇಖಾಂಶಿಕದಂತೆಯೇ ನಡೆದರೂ ವಿಭಜನ ರೇಖೆ ಪ್ರಾಣಿಧ್ರುವದಿಂದ ವೆಜಿಟಲ್ ಧೃವದ ಕಡೆಗೆ ವಿಸ್ತರಿಸುತ್ತದೆ. ಇದು ತತ್ತಿಯ ಮಧ್ಯ ಅಕ್ಷದ ಮೂಲಕ ಹಾದು ಹೋಗದೆ ಅದರ ಪಕ್ಕದಲ್ಲಿ ಹಾದು ಹೋಗುತ್ತದೆ. ಈ ರೀತಿಯ ವಿದಳನ ಕೆಲವು ಮೂಳೆ ಮೀನುಗಳಲ್ಲಿ ನಡೆಯುತ್ತದೆ (ಏಮಿಯಾ ಮತ್ತು ಲೆಫಿಸೋಸ್ಪಿಯಸ್).

**3 ಸಮಭಾಜಕ ವಿದಳನ:** ಇದು ಮಧ್ಯ ಅಕ್ಷದ ಸಮಕೋನದಲ್ಲಿ ತತ್ತಿಯನ್ನು ಎರಡು ಭಾಗಗಳಾಗಿ ವಿಭಾಗಿಸುತ್ತದೆ. ಆಂಬ್ಲಿಸ್ಟೋಮ ತತ್ತಿಯಲ್ಲಿ ಐದನೆಯ ವಿದಳನ ಈ ರೀತಿಯನ್ನು ಅನುಸರಿಸುತ್ತದೆ.

**4 ಅಕ್ಷಾಂಶಿಕ ವಿದಳನ:** ಇದು ಸಮಭಾಜಕ ವಿದಳನದಂತೆಯೇ ಇದ್ದರೂ ಸಮಭಾಜಕಕ್ಷೇತ್ರದ ಅಕ್ಕಪಕ್ಕಗಳಲ್ಲಿ ಹಾದು ಹೋಗುತ್ತದೆ. ಕಪ್ಪೆಯ ತತ್ತಿಯ ಮೂರನೆಯ ವಿದಳನ ಈ ರೀತಿಯನ್ನು ಅನುಸರಿಸುತ್ತದೆ. ಇದರ ಫಲವಾಗಿ ಅಸಮವಾದ ಬ್ಲಾಸ್ಟೋಮಿಯರ್‌ಗಳು ಉತ್ಪತ್ತಿಯಾಗುತ್ತವೆ. ಇದರಿಂದ ಕೆಲವು ಕೋಶಗಳು ಸಣ್ಣವೂ ಮತ್ತು ಕೆಲವು ದೊಡ್ಡವಾಗಿಯೂ ಇರುತ್ತವೆ. ಇವನ್ನು ಕ್ರಮವಾಗಿ ಮೈಕ್ರೊಮಿಯರ್ ಮತ್ತು ಮ್ಯಾಕ್ರೊಮಿಯರ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಮೈಕ್ರೊಮಿಯರ್‌ಗಳು ಪ್ರಾಣಿಧ್ರುವದ ಕಡೆಗೂ ಮ್ಯಾಕ್ರೊಮಿಯರ್‌ಗಳು ವೆಜಿಟಲ್‌ಧೃವದ ಕಡೆಗೂ ಇರುತ್ತವೆ.

ಕೆಲವು ಅಂಶಗಳು ವಿದಳನದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ. ಇವು ಹೊರ ಅಂಶಗಳಾಗಿರಬಹುದು ಅಥವಾ ತತ್ತಿಯ ಒಳಗಿರುವ ಅಂಶಗಳೇ ಆಗಿರಬಹುದು.

ಸುತ್ತಲ ಪರಿಸರದ ಉಷ್ಣತೆ ತತ್ತಿಗಳ ವಿದಳನದ ವೇಗದ ಮೇಲೆ ಪ್ರಭಾವ ಬೀರುತ್ತದೆ. ಸಾಮಾನ್ಯವಾಗಿ ಕಪ್ಪೆಯ ತತ್ತಿಯಲ್ಲಿ 90 ಮಿನಿಟುಗಳ ಅಂತರದಲ್ಲಿ ವಿದಳನಗಳು ನಡೆಯುತ್ತವೆ. ಉಷ್ಣತೆಯನ್ನು ಹೆಚ್ಚಿಸಿದಾಗ ವಿದಳನ ವೇಗವಾಗಿಯೂ ಕಡಿಮೆಮಾಡಿದಾಗ ನಿಧಾನವಾಗಿಯೂ ನಡೆಯುತ್ತದೆ.

ವಿದಳನದ ಮೇಲೆ ಪ್ರಭಾವ ಬೀರುವ ಪ್ರಧಾನ ಆಂತರಿಕ ಅಂಶ ತತ್ತಿಯ ಒಳಗಿರುವ ಬಂಡಾರ. ಇದು ಸಜೀವ ವಸ್ತುವಲ್ಲ. ಇದು ಜಡ ಪದಾರ್ಥ. ವಿದಳನ ಕಾಲದಲ್ಲಿ ಇದು ಅಡ್ಡಬಂದು ಅದನ್ನು ಕುಂಠಿತಗೊಳಿಸುತ್ತದೆ. ಇದರಿಂದಾಗಿಯೇ ಕಪ್ಪೆಯ ಮ್ಯಾಕ್ರೊಮಿಯರ್ ಜೀವಕೋಶಗಳು ನಿಧಾನವಾಗಿ ವಿದಳನವಾಗುತ್ತವೆ; ಮತ್ತು ಪಕ್ಷಿಗಳ ತತ್ತಿಯಲ್ಲಿ ಬಂಡಾರವಿರುವ ಭಾಗದಲ್ಲಿ ವಿದಳನವೇ ನಡೆಯುವುದಿಲ್ಲ. ಬಂಡಾರವು ವಿದಳನವನ್ನು ಕುಂಠಿತಗೊಳಿಸುವುದೇ ಅಲ್ಲದೆ ವಿದಳನವಿಧಾನವನ್ನು ಸಹ ಬದಲಾಯಿಸುತ್ತದೆ.

ತತ್ತಿಯ ರಚನಾವಿನ್ಯಾಸವೂ ಒಂದು ಆಂತರಿಕ ಅಂಶವಾಗಿ ವಿದಳನವನ್ನು ಮಾರ್ಪಡಿಸುತ್ತದೆ. ವಿದಳನ ರೀತಿ ತಾಯಿಯಿಂದ ಬಂದ ಆನುವಂಶಿಕ ಲಕ್ಷಣ. ಇದು ಓವಂನಲ್ಲಿರುವ ಕೋಶಿದ್ರವ್ಯದ ಮೂಲಕ ಬರುವ ಕೊಡುಗೆ.

**ವಿದಳನ ನಿಯಮಗಳು:** ವಿದಳನ ರೀತಿಗಳನ್ನು ಅವುಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ವಿಭಜನೆಯ ಕಾಲದಲ್ಲಿ ಜೀವಕೋಶಗಳ ವರ್ತನೆಯ ಬಗೆಗೆ ಕೆಲವು ನಿಯಮಗಳನ್ನು ಪ್ರತಿಪಾದಿಸಿದ್ದಾರೆ. ಇವು ಕೇವಲ ಪ್ರವೃತ್ತಿಯನ್ನು ಪ್ರತಿನಿಧಿಸುವುದೇ ಹೊರತು ವಾಸ್ತವ ಅಂಶಗಳನ್ನು ಪ್ರತಿಪಾದಿಸುವುದಿಲ್ಲ.

**1 ಸಾಕೆಯ ನಿಬಂಧನೆಗಳು:** (ಅ) ಜೀವಕೋಶಗಳು ಸಮವಾದ ಮರಿ ಜೀವಕೋಶಗಳಾಗಿ ವಿಭಾಗವಾಗುವ ಪ್ರವೃತ್ತಿಯನ್ನು ತೋರಿಸುತ್ತವೆ. (ಆ) ಪ್ರತಿ ಹೊಸ ವಿದಳನದ ಜಾಡು ಹಿಂದಿನದನ್ನು ಸಮಕೋನದಲ್ಲಿ ವಿಭಜನೆಗೊಳ್ಳುವ ಪ್ರವೃತ್ತಿಯನ್ನು ತೋರುತ್ತದೆ.

**2 ಹರ್ಟ್‌ವಿಗ್‌ನ ನಿಯಮಗಳು:** (ಅ) ಸಾಮಾನ್ಯವಾಗಿ ಒಂದು ನ್ಯೂಕ್ಲಿಯಸ್ ತನ್ನ ಸ್ವಸ್ಥಾನದಲ್ಲಿ ತನ್ನ ಪ್ರಭಾವವನ್ನು ಬೀರುವ ಜೀವರಸ ರಾಶಿಯ ಕೇಂದ್ರದಲ್ಲಿರುವ ಪ್ರವೃತ್ತಿಯನ್ನು ತೋರುತ್ತದೆ. (ಆ) ವಿಭಜನೆಯ ಕಾಲದಲ್ಲಿ ಕಾಣಿಸಿಕೊಳ್ಳುವ ಮೈಟೊಟಿಕ್ ಕದಿರಿನ ಲಂಬಾಕ್ಷ ಜೀವರಸರಾಶಿಯ ಲಂಬಾಕ್ಷಕ್ಕೆ ಅನುವಾಗಿರುತ್ತದೆ. ಆದ್ದರಿಂದ ವಿಭಜನೆಯಲ್ಲಿ ಜೀವರಸರಾಶಿಯ ಲಂಬಾಕ್ಷವನ್ನು ಅಡ್ಡಸೀಳುವ ಪ್ರವೃತಿಯನ್ನು ತೋರುತ್ತದೆ.

ವಿದಳನದ ಫಲವಾಗಿ ಬ್ಲಾಸ್ಟ್ಯುಲ ರಚನೆ ರೂಪಗೊಳ್ಳುತ್ತದೆ. ಇದು ವಿವಿಧ ಕಶೇರುಕಗಳಲ್ಲಿ ಬಂಡಾರದ ಪ್ರಮಾಣಕ್ಕನುಗುಣವಾಗಿ ರಚನಾ ವ್ಯತ್ಯಾಸ ತೋರುತ್ತದೆ. ಕಪ್ಪೆಗಳಲ್ಲಿ ಟೊಳ್ಳಾದ ಚೆಂಡಿನಂತಿರುವ ರಚನೆ ರೂಪುಗೊಳ್ಳುತ್ತದೆ. ಒಳಗಿರುವ ಅವಕಾಶ ಕೇಂದ್ರಭಾಗದಲ್ಲಿರದೆ ಸ್ವಲ್ಪ ಪ್ರಾಣಿದ್ರುವಭಾಗದ ಕಡೆಗಿರುತ್ತದೆ. ಇದರ ಮೇಲ್ಚಾವಣಿಯಲ್ಲಿ ಮೈಕ್ರೊಮಿಯರ್‌ಗಳೂ ತಳಭಾಗದಲ್ಲಿ ಮ್ಯಾಕ್ರೊಮಿಯರ್‌ಗಳೂ ಇವೆ. ಪಕ್ಷಿಗಳಲ್ಲಿ ಪೂರ್ತಿ ವಿದಳನ ಕ್ರಿಯೆಯಲ್ಲಿ ತತ್ತಿ ಭಾಗವಹಿಸುವುದಿಲ್ಲ. ಮೇಲ್ಭಾಗದಲ್ಲಿ ಸ್ವಲ್ಪ ಭಾಗ ಮಾತ್ರ ವಿದಳನದಲ್ಲಿ ಭಾಗವಹಿಸಿ ಜೀವಕೋಶಗಳ ತಟ್ಟೆಯಾಕಾರದ ರಚನೆ ರೂಪುಗೊಳ್ಳುತ್ತದೆ. ಇದಕ್ಕೆ ಬ್ಲಾಸ್ಟೋಡಿಸ್ಕ್ ಎಂದು ಹೆಸರು. ಇದರಲ್ಲಿ ಬ್ಲಾಸ್ಟೊಸೀಲ್ ಅವಕಾಶ ಇರುವುದರ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಸ್ತನಿಗಳಲ್ಲಿ ಬ್ಲಾಸ್ಟ್ಯುಲ ಒಂದು ಸಂಚಿಯ ರೂಪದಲ್ಲಿ ಇರುವುದು. ಇದಕ್ಕೆ ಬ್ಲಾಸ್ಟೊಸಿಸ್ಟ್ ಎಂದು ಹೆಸರು. ಎಂಟು ಜೀವಕೋಶಗಳ ಅವಸ್ಥೆಯಲ್ಲಿಯೇ ನಾಲ್ಕು ಜೀವಕೋಶಗಳ ಒಡಗೂಡಿ ಗಂಟಿನ ರೀತಿಯ ರಚನೆ ರೂಪುಗೊಳ್ಳುತ್ತದೆ. ಇದರಿಂದ ಮುಂದೆ ಬೆಳೆಯುವ ಭ್ರೂಣದ ರಚನೆಯಾಗುತ್ತದೆ. ಉಳಿದ ನಾಲ್ಕು ಜೀವಕೋಶಗಳು ವಿಸ್ತರಿಸಿ ಮೇಲೆ ತಿಳಿಸಿದ ಜೀವ ಕೋಶಗಳಗಂಟನ್ನು ಆವರಿಸಿಕೊಂಡು ಸಂಚಿಯ ರೂಪತಾಳುತ್ತವೆ. ಇವೇ ಮುಂದೆ ಟ್ರೋಪೊಬ್ಲಾಸ್ಟ್ ಆಗಿ ಪರಿವರ್ತನೆಗೊಂಡು ಪ್ಲಾಸೆಂಟ ರೂಪುಗೊಳ್ಳುತ್ತದೆ.

**ಗ್ಯಾಸ್ಟ್ರುಲೀಕರಣ:** ಒಂಟಿ ಪದರದ ಬ್ಲಾಸ್ಟ್ಯುಲದಿಂದ ಬಹುಪದರದ ರಚನೆ ರೂಪುಗೊಳ್ಳುವುದಕ್ಕೆ ಗ್ಯಾಸ್ಟ್ರುಲೀಕರಣ ಎಂದು ಹೆಸರು. ಬ್ಲಾಸ್ಟ್ಯುಲಾದ ಊಹಾ ಅಂಗರಚನ ಪ್ರದೇಶಗಳ ಪುನರ್ ವ್ಯವಸ್ಥೆ ಮತ್ತು ಪುನರ್‌ರಚನಾವಿನ್ಯಾಸಗಳು ನಡೆದು ಆಯಾ ಪ್ರಭೇದದ ದೇಹವಾದರಿಗೆ ತಕ್ಕಂತೆ ಪರಿವರ್ತನೆಯಾಗಲು ಸಿದ್ಧಗೊಳಿಸುತ್ತದೆ. ಈ ಚಾಲಕಕ್ರಿಯಾವಿಶೇಷದ ಕ್ರಿಯೆಯೇ ಗ್ಯಾಸ್ಟ್ರುಲೀಕರಣವೆಂದು ನೆಲ್ಸನ್ ವಿವರಿಸುತ್ತಾನೆ (1953). ಈ ಹಂತದಲ್ಲಿ ಮೂರು ಮೂಲಪದರಗಳು ಉತ್ಪತ್ತಿಯಾಗುತ್ತವೆ. ಹಾಗೂ ಮುಂದಿನ ಬೆಳವಣಿಗೆಯ ಅಕ್ಷರೇಖೆಯ ರೂಪರೇಶೆಗಳು ಕಾಣಿಸಿಕೊಳ್ಳುತ್ತವೆ. ವಿವಿಧ ಸ್ಥಾನಗಳಲ್ಲಿದ್ದ ಜೀವಕೋಶಗಳು ಈ ಕಾಲದಲ್ಲಿ ತಮ್ಮ ಮುಂದಿನ ಸ್ಥಾನಗಳಿಗೆ ಹೊರಳಿ ವಿಭೇದೀಕರಣಕ್ಕೆ ಸಿದ್ಧವಾಗುತ್ತವೆ. ಹೀಗೆ ನಡೆಯುವ ಪಯಣದಲ್ಲಿ ಕೋಶಗಳ ಸ್ಥಳಾಂತರ ಬ್ಲಾಸ್ಟ್ಯುಲದ ಬ್ಲಾಸ್ಟೊಸೀಲ್ ಅವಕಾಶ ಪ್ರಧಾನ ಪಾತ್ರವಹಿಸುತ್ತದೆ. ಅಂದರೆ ಗ್ಯಾಸ್ಟ್ರುಲೀಕರಣ ಕಾಲದಲ್ಲಿ ವಿಂಗಡಣೆ ಮತ್ತು ವಿಭೇದೀಕರಣಕ್ಕೆ ಬೇಕಾಗುವ ಜೀವಕೋಶ ಸಾಮಗ್ರಿಗಳನ್ನು ವಿದಳನದಿಂದ ಒಡೆದು ಬ್ಲಾಸ್ಟ್ಯುಲಾದ ಕೋಶಗಳು ಒದಗಿಸುತ್ತವೆ.

ಗ್ಯಾಸ್ಟ್ರುಲೀಕರಣ ಕ್ರಿಯೆ ಮುಖ್ಯವಾಗಿ ಎರಡು ರೀತಿಯ ಜೀವಕೋಶ ಚಲನೆಗಳಿಂದ ನಡೆಯುತ್ತದೆ: 1 ಎಂಬೊಲಿ, 2 ಎಪಿಬೊಲಿ, ಇವೆರಡೂ ಚಲನೆಗಳು ಅನೇಕ ರೀತಿಯ ಚಲನ ವೈವಿಧ್ಯದಿಂದ ನಡೆಯುತ್ತವೆ. ಎಂಬೊಲಿಯಲ್ಲಿ ಕೆಲವು ರೀತಿಯ ಚಲನೆಗಳು ನಡೆಯುವುದನ್ನು ಕೆಳಗೆ ತಿಳಿಸಿದೆ.

**(ಅ) ಅಂತರ್‌ವಲನ (ಇನ್‌ವೊಲ್ಯೂಷನ್):** ಬಾಸ್ಟೋಪೋರ್ ತುಟಿಯ ಬಳಿಗೆ ಚಲಿಸಿಬಂದ ಜೀವಕೋಶಗಳು ಹೊರ ಅಂಚಿನಿಂದ ಒಳ ಅಂಚಿಗೆ ಜಾರುವುದನ್ನು ಅಂತರ್ವಲನ ಎನ್ನುತ್ತಾರೆ.

**(ಆ) ಒಳಹೊರಳು (ಇನ್ ವ್ಯಾಜಿನೇಷನ್):** ಜೀವಕೋಶಗಳ ಪದರವೊಂದು ಒಳಗೆ ಮಡಿಚಿಕೊಂಡು ಅಥವಾ ಒಳಕ್ಕೆ ಹೊರಳಿ ಅವಕಾಶವನ್ನು ಆವರಿಸಿಕೊಂಡ ಪದರ ರಚನೆಯಾಗುತ್ತದೆ. ಆಂಫಿಯಾಕ್ಸಸ್ ನಲ್ಲಿ ಬ್ಲಾಸ್ಟ್ಯುಲದ ಒಂದು ಭಾಗ ಒಳಕ್ಕೆ ಮಡಿಸಿಕೊಂಡು ಎರಡು ಭಿತ್ತಿಗಳಿರುವ ರಚನೆ ರೂಪುಗೊಳ್ಳುವುದನ್ನು ಉದಾಹರಣೆಯಾಗಿ ಹೇಳಬಹುದು.

**(ಇ) ಜೀವಕೋಶಾಭಿವೃದ್ಧಿ:** ಗ್ಯಾಸ್ಟ್ರುಲೀಕರಣಕಾಲದಲ್ಲಿ ವಿವಿಧ ಜೀವಕೋಶ ಚಲನೆಗಳ ಜೊತೆಯಲ್ಲಿ ಸಂಖ್ಯೆಯೂ ಹೆಚ್ಚುತ್ತದೆ.

**(ಈ) ಪ್ರವೇಶನ (ಇನ್‌ಗ್ರೆಶನ್):** ಒಂದು ಅಥವಾ ಒಂದು ಚಿಕ್ಕ ಜೀವಕೋಶ ಗುಂಪು ಒಳಗಿನ ಅವಕಾಶದೊಳಕ್ಕೆ ಅಥವಾ ಬೆಳವಣಿಗೆಯ ಕಾಲದಲ್ಲಿ ಮೂಡುವ ಕುಹರಗಳಿಗೆ ನುಗ್ಗುವುದನ್ನು ಪ್ರವೇಶನ ಎನ್ನುತ್ತಾರೆ. ಸ್ತನಿಗಳ, ಪಕ್ಷಿಗಳ ಮತ್ತು ಸರೀಸೃಪಗಳ ಬೆಳವಣಿಗೆಯಲ್ಲಿ ರೂಪುಗೊಳ್ಳುವ ಪ್ರಾಗ್ ರೇಖೆಯಿಂದ (ಪ್ರಿಮಿಟಿವ್ ಸ್ಟ್ರೀಕ್) ನಡುಪದರದ

ಜೀವಕೋಶಗಳು ಬೇರ್ಪಟ್ಟು ಮೇಲು ಮತ್ತು ಕೆಳಗಿನ ಪದರಗಳ ನಡುವೆ ಇರುವ ಜಾಗದಲ್ಲಿ ತೂರುವುದನ್ನು ಉದಾಹರಣೆಯಾಗಿ ವಿವರಿಸಬಹುದು.

**(ಉ) ಪದರ ವಿಚ್ಛೇದನ (ಡಿಲ್ಯಾಮಿನೇಷನ್):** ಒಂದು ಜೀವಕೋಶ ಗುಂಪಿನಿಂದ ಇನ್ನೊಂದು ಜೀವಕೋಶ ಗುಂಪು ಪ್ರತ್ಯೇಕಗೊಳ್ಳುವುದಕ್ಕೆ ಪದರ ವಿಚ್ಛೇದನ ಎಂದು ಹೆಸರು. ಕಪ್ಪೆಯ ಬೆಳವಣಿಗೆಯಲ್ಲಿ ಆರ್ಕೆಂಟರಾನ್ ಅವಕಾಶದ ಮೇಲ್ಛಾವಣಿಯಲ್ಲಿರುವ ಜೀವಕೋಶಗಳ ಗುಂಪು ಪದರ ವಿಚ್ಛೇದನಗೊಂಡು ನೋಟೊಕಾರ್ಡ್ ಮತ್ತು ಸ್ನಾಯು ಫಲಕಗಳು ರೂಪುಗೊಳ್ಳುವುವು.

**(ಊ) ಪರಿಚ್ಛಿನ್ನತೆ:** ಜೀವಕೋಶಗಳು ವಿವಿಧ ಭಾಗಗಳಿಂದ ಒಂದು ಭಾಗದ ಕಡೆಗೆ ಚಲಿಸುವುದೇ ಪರಿಚ್ಛಿನ್ನತೆ. ಕಪ್ಪೆಯ ಬೆಳವಣಿಗೆಯಲ್ಲಿ ಅದರ ಮೇಲ್ಮೈಯಿಂದ ಡಾರ್ಸಲ್ ತುಟಿಯ ಕಡೆಗೆ ಜೀವಕೋಶಗಳು ಪರಿಚ್ಛನ್ನವಾಗುತ್ತವೆ.

**(ಋ) ಅಪಸರಣ (ಡೈವರ್ಜೆನ್ಸ್):** ಪರಿಚ್ಛಿನ್ನತೆಯ ಕಾಲದಲ್ಲಿ ಡಾರ್ಸಲ್ ತುಟಿಯ ಬಳಿ ಕೇಂದ್ರೀಕೃತವಾದ ಜೀವಕೋಶಗಳು ಅಂತರ್ವಲನಗೊಂಡು ಗ್ಯಾಸ್ಟ್ರುಲಾದ ಒಳಭಾಗದಲ್ಲಿ ವಿವಿಧ ದಿಕ್ಕಿನಲ್ಲಿ ಹರಡುವುದೇ ಅಪಸರಣ.

**(ೠ) ವಿಸ್ತರಣ (ಎಕ್ಸ್‌ಟೆನ್ಷನ್):** ಊಹಾ ನರಪ್ರದೇಶಗಳು ಹೊರಭಾಗದಲ್ಲಿ ವಿಸ್ತಾರವಾಗುವುದು ಹಾಗೂ ನೋಟೊಕಾರ್ಡ್ ನಡುಪದರ ಮತ್ತು ಒಳಪದರ ಅಂಶಗಳು ಒಳ ಪ್ರವೇಶಿಸಿದ ಮೇಲೆ ವಿಸ್ತಾರಗೊಳ್ಳುತ್ತವೆ.

ಎಪಿಬೊಲಿಯಲ್ಲಿ ಕೇವಲ ಎರಡು ರೀತಿಯ ಚಲನೆಗಳು ನಡೆಯುತ್ತವೆ_1 ಆಂಟಿರೊಪೋಸ್ಟೀರಿಯರ್ ಅಕ್ಷದಲ್ಲಿ ವಿಸ್ತರಣೆ, 2 ಅಂಚಿನ ವಿಸ್ತರಣೆ ಅಥವಾ ಅಪಸರಣ.

ಒಂದೊಂದು ಕಶೇರುಕದಲ್ಲಿಯೂ ಒಂದೊಂದು ರೀತಿಯ ಜೀವಕೋಶ ಚಲನೆಗಳು ನಡೆದು ಗ್ಯಾಸ್ಟ್ರುಲೀಕರಣ ಮುಗಿಯುತ್ತದೆ. ಈ ಕಾಲದಲ್ಲಿ ಪ್ರಧಾನವಾಗಿ ಕಾಣಬರುವ ಮತ್ತೊಂದು ಅಂಶವೆಂದರೆ ಸಂಘಟಕಗಳು ರೂಪುಗೊಳ್ಳುವುದು. ಈ ಸಂಘಟಕಗಳು ಬೆಳವಣಿಗೆಯ ಮುಂದಿನ ಘಟ್ಟದ ಪ್ರಮುಖ ಘಟನೆಯಾದ ವಿಭೇದೀಕರಣವನ್ನು ನಡೆಸಿಕೊಡುತ್ತವೆ. ಮೊಟ್ಟಮೊದಲನೆಯದಾಗಿ ವಿಭೇದೀಕರಣ ನಡೆದು ರೂಪುಗೊಳ್ಳುವ ರಚನೆ ಎಂದರೆ ನರಫಲಕ. ಇದು ಸಾಮಾನ್ಯವಾಗಿ ನೋಟೊಕಾರ್ಡಿನ ಮೇಲಿರುತ್ತದೆ. ನೋಟೊಕಾರ್ಡ್ ಸಂಘಟಕವಾಗಿ ವರ್ತಿಸಿ ನರಫಲಕ ರೂಪುಗೊಳ್ಳಲು ಪ್ರಚೋದನೆಯನ್ನು ಒದಗಿಸುತ್ತದೆ. ಅನಂತರ ಫಲಕ ಮಡಿಸಿಕೊಂಡು ನರನಳಿಕೆಯುಂಟಾಗುತ್ತದೆ. ಇದರಿಂದ ಮಿದುಳು ಮತ್ತು ನರಮಂಡಲದ ಇತರ ಭಾಗಗಳು ರೂಪುಗೊಳ್ಳುತ್ತವೆ.

ಸರೀಸೃಪ, ಪಕ್ಷಿ ಮತ್ತು ಸ್ತನಿಗಳ ಬೆಳವಣಿಗೆಯಲ್ಲಿ ಕೆಲವು ರೀತಿಯ ಪಟಲಗಳು ಭ್ರೂಣದಿಂದ ಹೊರಕ್ಕೆ ಬೆಳೆದು ಕೆಲವು ನಿರ್ದಿಷ್ಟ ಕ್ರಿಯೆಗಳನ್ನು ನಡೆಸಿ ಕೊಟ್ಟು ಸಹಕರಿಸುತ್ತವೆ. ಇವಕ್ಕೆ ಭ್ರೂಣಪಟಲಗಳು ಅಥವಾ ಫೀಟಲ್ ಪಟಲಗಳು ಅಥವಾ ಭ್ರೂಣಬಹಿರ್ ಪಟಲಗಳು ಎಂದು ಹೆಸರು. ಇವು ನಾಲ್ಕು ವಿಧ.

**1 ಆಮ್ನಿಯನ್:** ಭ್ರೂಣದ ಮುಂದಿನ ತುದಿ, ಹಿಂದಿನ ತುದಿ ಮತ್ತು ಪಾರ್ಶ್ವಭಾಗಗಳಲ್ಲಿ ನಾಲ್ಕು ಪದರ ಮಡಿಕೆಗಳು ಹುಟ್ಟುತ್ತವೆ. ಇವು ಮೊದಲಿಗೆ ಹೊರಪದರದ ಚಾಚಿಕೆಗಳಾಗಿ ಹೊರಹೊಮ್ಮುತ್ತವೆ. ಅನಂತರ ಈ ಚಾಚಿಕೆಗಳೊಳಕ್ಕೆ ನಡುಪದರವೂ ಬೆಳೆಯುತ್ತದೆ. ಈ ಮಡಿಕೆಗಳು ಕ್ರಮೇಣ ಬೆಳೆದು ಭ್ರೂಣವನ್ನು ಆವರಿಸಿಕೊಂಡು ಭ್ರೂಣದ ಮೇಲೆ ಸಂಧಿಸುತ್ತವೆ. ಹೀಗೆ ಮಡಿಕೆಗಳು ಸಂಧಿಸಿ ಕೂಡಿಕೊಂಡಾಗ ಎರಡು ರೀತಿಯ ಪಟಲಗಳು ಉಂಟಾಗುತ್ತವೆ. ಇವುಗಳಲ್ಲಿ ಒಳಗಿನ ಪಟಲವೇ ಆಮ್ನಿಯನ್. ಇದರಲ್ಲಿ ಹೊರಗಡೆಗೆ ಮಧ್ಯದರ್ಮ ಪದರವೂ ಒಳಗಡೆಗೆ ಹೊರದರ್ಮ ಪದರವೂ ಇವೆ. ಇವು ಭ್ರೂಣವನ್ನು ಸುತ್ತಲೂ ಆವರಿಸುತ್ತವೆ. ಇವುಗಳ ಒಳಗಿರುವ ಅವಕಾಶದಲ್ಲಿ ದ್ರವವೊಂದು ತುಂಬಿದೆ. ಇದಕ್ಕೆ ಆಮ್ನಿಯಾಟಿಕ್ ದ್ರವ ಎಂದು ಹೆಸರು. ಇದು ಭ್ರೂಣದ ಸುತ್ತಲೂ ದ್ರವಾವರಣವನ್ನು ಸೃಷ್ಟಿಸುತ್ತದೆ. ಈ ದ್ರವ ಹೊರಗಿನ ಆಘಾತಗಳಿಂದ ಭ್ರೂಣವನ್ನು ರಕ್ಷಿಸುತ್ತದೆ. ಭ್ರೂಣ ಇದರಲ್ಲೆ ಮುಳುಗಿರುವಂತೆ ಕಾಣ ಬರುತ್ತದೆ. ಆದ್ದರಿಂದ ಇದನ್ನು ಭ್ರೂಣದ ಸ್ವಂತ ಈಜುಕೊಳ ಎಂದು ಕರೆಯುವ ವಾಡಿಕೆಯುಂಟು. ಸರೀಸೃಪ, ಪಕ್ಷಿಗಳು ಮತ್ತು ಸ್ತನಿಗಳಲ್ಲಿ ಆಮ್ನಿಯನ್ ಬೆಳೆಯುವುದು ಸಾಮಾನ್ಯ ಲಕ್ಷಣವಾದುದರಿಂದ ಈ ಮೂರು ಪ್ರಾಣಿ ಗುಂಪುಗಳನ್ನು ಒಟ್ಟಾಗಿ ಆಮ್ನಿಯೋಟ ಎಂಬ ಗುಂಪಿಗೆ ಸೇರಿಸುತ್ತಾರೆ. ಉಳಿದ ಕಶೇರುಕಗಳನ್ನು ಅನಾಮ್ನಿಯೋಟ ಎಂದು ಕರೆಯುತ್ತಾರೆ.

**2 ಅಲಂಟೊಯಿಸ್:** ಇದು ಭ್ರೂಣದ ಅನ್ನನಾಳದ ಹಿಂತುದಿಯಿಂದ ಪ್ರವರ್ಧದ ರೀತಿಯಲ್ಲಿ ಬೆಳೆಯುತ್ತದೆ. ಇದರಲ್ಲಿ ಒಳಗೆ ಒಳಪದರವೂ ಹೊರಗಡೆ ನಡುಪದರವೂ ಇವೆ. ಇದು ಕ್ರಮೇಣ ಬೆಳೆದು ದೊಡ್ಡದಾಗುತ್ತದೆ. ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ ಉಸಿರಾಟ ಮತ್ತುವಿಸರ್ಜನೆಗೆ ಸಹಾಯಕ. ಸ್ತನಿಗಳಲ್ಲಿ ಗರ್ಭವೇಷ್ಟಿಯ ರಚನೆಗೆ ಸಹಾಯಕಾರಿ.

**3 ಬಂಡಾರ ಸಂಚಿ (ಯೋಕ್‌ಸ್ಯಾಕ್):** ಇದು ಭ್ರೂಣದ ಅನ್ನನಾಳದ ಮಧ್ಯಭಾಗದಿಂದ ಪ್ರವರ್ಧರೀತಿಯಲ್ಲಿ ಹುಟ್ಟುತ್ತದೆ. ಇದರಲ್ಲಿಯೂ ಒಳಪದರ ಮತ್ತು ನಡುಪದರಗಳು ಇವೆ. ಇದು ಕ್ರಮೇಣ ಬೆಳೆದು ಮೊಟ್ಟೆಯ ಒಳಗಿರುವ ಬಂಡಾರವನ್ನು ಆವರಿಸುತ್ತದೆ. ಆದ್ದರಿಂದಲೇ ಬಂಡಾರಸಂಚಿ ಎಂಬ ಹೆಸರು ಬಂದಿರುವುದು. ಇದು ಬಂಡಾರದಲ್ಲಿರುವ ಸಂಕೀರ್ಣ ಆಹಾರ ಪದಾರ್ಥಗಳನ್ನು ಅರ್ಧ ಜೀರ್ಣಿಸಿ ಸುಲಭವಾಗಿ ರಕ್ತಗತವಾಗುವ ಸರಳರೀತಿಯಲ್ಲಿ ಭ್ರೂಣಕ್ಕೆ ಒದಗಿಸುತ್ತದೆ. ಆದ್ದರಿಂದ ಇದನ್ನು ಭ್ರೂಣದ ಜಠರ ಎಂದು ಕರೆಯಬಹುದು. ಸ್ತನಿಗಳ ಬೆಳವಣಿಗೆಯಲ್ಲಿ ಇದು ಕಾಣಿಸಿಕೊಂಡರೂ ಯಾವ ಪ್ರಧಾನ ಪಾತ್ರವನ್ನೂ ವಹಿಸುವುದಿಲ್ಲ. ಕೆಲವು ಸಂಚಿ ಸ್ತನಿಗಳಲ್ಲಿ ಇದು ಗರ್ಭವೇಷ್ಟಿಯ ಬೆಳವಣಿಗೆಯಲ್ಲಿ ಭಾಗವಹಿಸುತ್ತದೆ. ಗರ್ಭವೇಷ್ಟಿಯನ್ನು ಬಂಡಾರಸಂಚಿ ಗರ್ಭವೇಷ್ಟಿ (ಯೋಕ್ ಸ್ಯಾಕ್ ಪ್ಲಾಸೆಂಟ) ಎಂದು ಕರೆಯುತ್ತಾರೆ. ಇದು ತೊಟ್ಟಿನ ರಚನೆಯ ಮೂಲಕ ಭ್ರೂಣಕ್ಕೆ ಅಂಟಿಕೊಂಡಿರುತ್ತದೆ. ತೊಟ್ಟಿನ ಮೂಲಕ ವೈಟಿಲಿನ್ ಅಪಧಮನಿ ಮತ್ತು ಅಭಿಧಮನಿಗಳು ಹಾದು ಭ್ರೂಣವನ್ನು ಸೇರುತ್ತವೆ. ಸಸ್ತನಿಗಳಲ್ಲಿ ಈ ತೊಟ್ಟು ಹೊಕ್ಕುಳಾಗಿ ಪರಿವರ್ತನೆಗೊಳ್ಳುತ್ತದೆ.

**4 ಕೋರಿಯಾನ್:** ಆಮ್ನಿಯನ್ ರಚನೆಯಾಗುವ ಮಡಿಕೆಗಳಿಂದಲೇ ಕೋರಿಯಾನ್ ಕೂಡ ಉಂಟಾಗುತ್ತದೆ. ಮಡಿಕೆಗಳು ಕೂಡಿಕೊಂಡಾಗ ಹೊರಗೆ ಉಳಿಯುವ ಪದರ ಪಟಲವೇ ಕೋರಿಯಾನ್. ಇದರಲ್ಲಿಯೂ ಆಮ್ನಿಯನಿನಲ್ಲಿರುವಂತೆಯೇ ಹೊರ ಮತ್ತು ನಡುಪದರಗಳಿವೆ. ಆದರೆ ಅವುಗಳ ಸ್ಥಾನ ಮಾತ್ರ ಬದಲಾಗಿದೆ. ಇದರಲ್ಲಿ ಹೊರದರ್ಮ ಹೊರಗೂ ಮಧ್ಯದರ್ಮ ಒಳಗೂ ಇವೆ. ಇದು ಮಿಕ್ಕೆಲ್ಲ ಪಟಲಗಳನ್ನೂ ಆವರಿಸಿಕೊಂಡು ಚಿಪ್ಪಿನ ಒಳಗೆ ಅನುಲೇಪಕವಾಗಿ ಬೆಳೆಯುತ್ತದೆ. ಇದು ಮುಖ್ಯವಾಗಿ ಭ್ರೂಣಕ್ಕೂ ಮತ್ತು ಇತರ ಪಟಲಗಳಿಗೂ ರಕ್ಷಣೆಯನ್ನು ಒದಗಿಸುತ್ತದೆ. ಪಕ್ಷಿಗಳಲ್ಲಿ ಅಲಂಟೊಯಿಸ್ ಮತ್ತು ಕೋರಿಯಾನ್‌ಗಳು ಒಡಗೂಡಿ ಉಸಿರಾಟದಲ್ಲಿ ಭಾಗವಹಿಸುತ್ತವೆ.

**ಗರ್ಭವೇಷ್ಟಿ (ಪ್ಲಾಸೆಂಟ):** ಸ್ತನಿಗಳು ಸ್ವಾಭಾವಿಕವಾಗಿ ಜರಾಯುಜಗಳು. ಇವು ಮೊಟ್ಟೆಗಳನ್ನಿಡುವುದಿಲ್ಲ. ಇವುಗಳ ತತ್ತಿಗಳು ತಾಯಿಯ ದೇಹದ ಒಳಗೆಯೇ ಉಳಿದು ಬೆಳೆಯುತ್ತವೆ. ಈ ಕೆಲಸವನ್ನು ನಿರ್ವಹಿಸುವ ರಚನೆಯೇ ಗರ್ಭವೇಷ್ಟಿ. ಭ್ರೂಣದ ಕೆಲವು ಅಂಗಾಂಶಗಳು ಮತ್ತು ತಾಯಿಯ ಗರ್ಭಕೋಶದ ಅಂಗಾಂಶಗಳು ಸೇರಿ ಈ ರಚನೆ ರೂಪುಗೊಳ್ಳುತ್ತದೆ. ಇದರ ಮೂಲಕ ಭ್ರೂಣತಾಯಿಯ ರಕ್ತದಿಂದ ಆಹಾರ ಮತ್ತು ಆಮ್ಲಜನಕಗಳನ್ನು ಪಡೆಯುತ್ತದೆ. ಅದರ ಮೂಲಕವೇ ವಿಸರ್ಜನಾ ವಸ್ತುಗಳನ್ನು ಮತ್ತು ಇಂಗಾಲದ ಡೈಆಕ್ಸೈಡನ್ನು ಹೊರಹಾಕುತ್ತದೆ. ಇದೊಂದು ಕೇವಲ ಜಡ ಪ್ರತಿಬಂಧಕ ಮಾತ್ರವೇ ಅಲ್ಲ. ಭ್ರೂಣಕ್ಕೆ ಆವಶ್ಯಕವಾದ ಕೆಲವು ವಸ್ತುಗಳ ಸಂಶ್ಲೇಷಣೆಯನ್ನೂ ಇದು ಚಟುವಟಿಕೆಯಿಂದ ನಡೆಸಿ ಒದಗಿಸುತ್ತದೆ. ಇದು ಭ್ರೂಣದ ಬೆಳವಣಿಗೆಗೆ ಮುಖ್ಯವಾಗಿ ಬೇಕಾದ ಕೆಲವು ಹಾರ್ಮೋನುಗಳನ್ನೂ ಉತ್ಪತ್ತಿ ಮಾಡುತ್ತದೆ.

ವಿವಿಧ ಸ್ತನಿಗಳಲ್ಲಿ ಪ್ಲಾಸೆಂಟ ರೂಪುಗೊಳ್ಳುವ ವಿಧಾನದಲ್ಲಿ ಮತ್ತು ಅದರ ರಚನೆಯಲ್ಲಿ ಭಿನ್ನತೆಯನ್ನು ತೋರುತ್ತದೆ. ಹಂದಿ, ಕಾಡುಪಾಪ ಮುಂತಾದವುಗಳಲ್ಲಿ ಬಹಳ ಸರಳವಾದ ರಚನೆಯನ್ನು ಕಾಣಬಹುದು. ಇಲ್ಲಿ ಭ್ರೂಣಭಾಗದಲ್ಲಿಯಾಗಲೀ ತಾಯಿಭಾಗದಲ್ಲಿಯಾಗಲೀ ಯಾವ ಅಂಗಾಂಶಗಳೂ ನಾಶವಾಗದೆ ಸಮಗ್ರವಾಗಿ ಉಳಿದಿರುತ್ತವೆ. ಗರ್ಭವೇಷ್ಟಿಯ ಬೆಳವಣಿಗೆಯಲ್ಲಿ ಭ್ರೂಣಭಾಗದಿಂದ ಪ್ರಧಾನ ಪಾತ್ರ ವಹಿಸುವ ಪದರವೆಂದರೆ ಕೋರಿಯಾನ್. ಇದು ಗರ್ಭಕೋಶದ ಭಿತ್ತಿಗೆ ಅಂಟಿಕೊಳ್ಳುವ ಭಾಗದಲ್ಲಿ ಬೆರಳುಗಳ ರೀತಿಯ ವಿಲ್ಲೈಗಳೆಂಬ ರಚನೆಗಳನ್ನು ಉತ್ಪತ್ತಿ ಮಾಡುತ್ತದೆ. ಇವು ಗರ್ಭಕೋಶದ ಅವಕಾಶದಲ್ಲಿರುವ ಸಂದುಗಳಿಗೆ ಚಾಚಿಕೊಂಡು ಅಂಟಿಕೊಳ್ಳುತ್ತವೆ. ಕೈಗೌಸಿನ ಒಳಗಡೆಗೆ ಹಸ್ತ ಮತ್ತು ಬೆರಳುಗಳು ಜೋಡಿಸಿಕೊಳ್ಳುವಂತೆ ಈ ಕ್ರಿಯೆ ನಡೆಯುತ್ತದೆ. ಗರ್ಭಕೋಶದ ಭಿತ್ತಿಯಲ್ಲಿರುವ ಗ್ರಂಥಿಗಳು ಉತ್ಪತ್ತಿ ಮಾಡುವ ಗರ್ಭಕ್ಷೀರ (ಯುಟೆರೈನ್ ಮಿಲ್ಕ್) ಎಂಬ ಪದಾರ್ಥವನ್ನು ಹೀರಿಕೊಳ್ಳುತ್ತವೆ. ಜನನಕಾಲದಲ್ಲಿ ಈ ಬೆರಳಿನ ರಚನೆಗಳು ಹಾಗೆಯೇ ಬಿಡಿಸಿಕೊಂಡು ಹೊರ ಬರುವುದರಿಂದ ರಕ್ತಸ್ರಾವವಾಗಲೀ ತಾಯಿಯ ಅಂಗಾಂಶ ಸ್ರಾವವಾಗಲೀ ನಡೆಯುವುದಿಲ್ಲ. ಇದನ್ನು ಕಳಚಿಕೊಳ್ಳದ (ನಾನ್ ಡೆಸಿಡ್ಯೂಯೇಟ್) ಮಾದರಿ ಎನ್ನುತ್ತಾರೆ. ಮಾನವನಲ್ಲಿ ಈ ಬೆರಳಿನಾಕಾರದ ರಚನೆಗಳು ಒಂದು ಭಾಗದಲ್ಲಿ ಕೇಂದ್ರೀಕೃತವಾಗಿ ಗರ್ಭವೇಷ್ಟಿ ತಟ್ಟೆಯಂತಿರುತ್ತದೆ. ಇಲ್ಲಿ ಸಂಬಂಧ ನಿಕಟವಾಗಿದ್ದು ಜನನ ಕಾಲದಲ್ಲಿ ಗರ್ಭಕೋಶದ ಭಿತ್ತಿಯನ್ನು ಕಿತ್ತುಕೊಂಡು ಬರುವುದರಿಂದ ರಕ್ತಸ್ರಾವ ಆಗುತ್ತದೆ. ಇದನ್ನು ಕಳಚಿಕೊಳ್ಳುವ (ಡೆಸಿಡ್ಯುಯೇಟ್) ಮಾದರಿ ಎನ್ನುತ್ತಾರೆ. ವಿಲ್ಲೈಗಳು ಹರಡುವ ರೀತಿಯನ್ನನುಸರಿಸಿ ನಾಲ್ಕು ರೀತಿಯ ಗರ್ಭವೇಷ್ಟಿಗಳನ್ನು ಗುರುತಿಸಬಹುದು. ಮೇಲೆ ತಿಳಿಸಿದ ಹಂದಿಯ ಮಾದರಿ ವ್ಯಾಪಕವಾದದ್ದು. ಮಾನವನದು ಫಲಕ ಮಾದರಿ. ದನಗಳಲ್ಲಿ ವಿಲ್ಲೈಗಳು ಅಲ್ಲಲ್ಲಿ ಸಂಗ್ರಹಿಸಿ ಗುಂಡಿಯ ರೀತಿಯ ರಚನೆಯನ್ನು ಉಂಟು ಮಾಡುತ್ತವೆ. ಇದಕ್ಕೆ ಗುಬುಟು (ಕಾಟಲೀಡನರಿ) ಮಾದರಿ ಎಂದು ಹೆಸರು. ಮಾಂಸಾಹಾರಿ ಸಸ್ತನಿಗಳಲ್ಲಿ ಯಾವುದೋ ಒಂದು ವಲಯಕ್ಕೆ ಮೀಸಲಾಗಿರುವುದರಿಂದ ಇವನ್ನು ಮಂಡಲ (ಜೋನರಿ) ಮಾದರಿ ಎಂದು ಕರೆಯುತ್ತಾರೆ.

ಇದೇ ಅಲ್ಲದೆ ಅಂಗಾಂಶ ರಚನೆಯನ್ನನುಸರಿಸಿ ಗರ್ಭವೇಷ್ಟಿಯನ್ನು ವರ್ಗೀಕರಿಸುವ ಇನ್ನೊಂದು ಕ್ರಮವೂ ಉಂಟು. ಗರ್ಭಕೋಶದ ಭಿತ್ತಿಯಲ್ಲಿ ಮೂರು ಪದರಗಳು ಈ

ದೃಷ್ಟಿಯಿಂದ ಮುಖ್ಯ. ಗರ್ಭಕೋಶದ ಅನುಲೇಪಕ, ಸಂಯೋಜಕ ಅಂಗಾಂಶ ಪದರ ಮತ್ತು ರಕ್ತನಾಳದ ಎಂಡೋತೀಲಿಯಲ್ ಪದರ. ಹೀಗೆಯೇ ಭ್ರೂಣದ ಭಾಗದಲ್ಲಿ ಕೋರಿಯಾನ್, ಸಂಯೋಜಕ ಅಂಗಾಂಶಪದರ ಮತ್ತು ಭ್ರೂಣೀಯ ರಕ್ತನಾಳದ ಎಂಡೋತೀಲಿಯಮ್ ಪದರ ಎಂಬ ಮೂರು ಪದರಗಳಿವೆ. ಭ್ರೂಣಕ್ಕೂ ತಾಯಿಗೂ ನಡುವೆ ವಸ್ತುಗಳ ವಿನಿಮಯ ನಡೆಯುವಾಗ ಆ ವಸ್ತುಗಳು ಈ ಆರು ಪ್ರತಿ ಬಂಧಕಗಳನ್ನು ಹಾದು ಸಾಗಬೇಕು. ಹಂದಿಯಲ್ಲಿ ಇವು ಆರೂ ಪದರಗಳು ಸಮಗ್ರವಾಗಿ ಉಳಿದಿರುತ್ತವೆ. ಅಲ್ಲಿ ಕೋರಿಯಾನ್ ಪದರ ಎಪಿತೀಲಿಯಮ್ ಪದರಕ್ಕೆ ತಾಗಿಕೊಂಡಿರುವುದರಿಂದ ಇದಕ್ಕೆ ಎಪಿತೀಲಿಯೊ ಕೋರಿಯಲ್ ಮಾದರಿ ಎಂದು ಹೆಸರು. ದನಗಳಲ್ಲಿ ಗುಂಡಿಗಳು ಗರ್ಭಕೋಶದ ಭಿತ್ತಿಗೆ ತಾಗಿದ ಭಾಗದಲ್ಲಿ ಎಪಿತೀಲಿಯಲ್ ಪದರ ನಾಶವಾಗಿರುತ್ತದೆ. ಮಿಕ್ಕೆಡೆಗಳಲ್ಲಿ ಸಮಗ್ರವಾಗಿರುತ್ತದೆ. ಇದಕ್ಕೆ ಸಿನ್‌ಡೆಸ್ಮೊಕೋರಿಯಲ್ ಎಂದು ಹೆಸರು. ನಾಯಿ, ಬೆಕ್ಕು ಮುಂತಾದ ಸ್ತನಿಗಳಲ್ಲಿ ಎಪಿತೀಲಿಯಲ್ ಪದರ ಮತ್ತು ಸಂಯೋಜಕ ಅಂಗಾಂಶಗಳು ನಾಶವಾಗಿ ಕೊರಿಯಾನ್ ವಿಲ್ಲೈ ತಾಯಿಯ ರಕ್ತನಾಳಕ್ಕೆ ತಾಗಿಕೊಂಡಿರುತ್ತವೆ. ಇದಕ್ಕೆ ಎಂಡೋತೀಲಿಯೊಕೋರಿಯಲ್ ಎಂದು ಹೆಸರು. ಮಾನವನಲ್ಲಿ ಇದು ಇನ್ನೂ ಮುಂದುವರಿದು ತಾಯಿಯ ರಕ್ತನಾಳದ ಎಂಡೋತೀಲಿಯಲ್ ಪದರವೂ ಹಾಳಾಗಿರುತ್ತದೆ. ಭ್ರೂಣದ ಕೋರಿಯಾನ್ ವಿಲ್ಲೈಗಳು ತಾಯಿಯ ರಕ್ತದಲ್ಲಿ ಮುಳುಗಿರುತ್ತವೆ. ಇದಕ್ಕೆ ಹೀಮೋಕೋರಿಯಲ್ ಮಾದರಿ ಎಂದು ಹೆಸರು. ಮೊಲ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅತ್ಯಂತ ಹೆಚ್ಚಿನ ನಿಕಟ ಸಂಪರ್ಕವನ್ನು ಬೆಳೆಸಿದೆ. ತಾಯಿಯ ಭಾಗದ ಮೂರು ಪದರಗಳೂ ನಾಶವಾಗಿರುವುದೇ ಅಲ್ಲದೆ ಭ್ರೂಣೀಯ ಭಾಗದಲ್ಲಿ ಕೋರಿಯಾನ್ ಮತ್ತು ಸಂಯೋಜಕ ಅಂಗಾಂಶಗಳು ನಾಶವಾಗಿವೆ. ಇದರಿಂದಾಗಿ ಭ್ರೂಣದ ರಕ್ತನಾಳಗಳು ತಾಯಿಯ ರಕ್ತದಲ್ಲಿ ಮುಳುಗಿವೆ. ಇದಕ್ಕೆ ಹೀಮೋತೀಲಿಯಲ್ ಮಾದರಿ ಎಂದು ಹೆಸರು. ಮೊಲದ ಗರ್ಭವೇಷ್ಠಿಯ ಬೆಳವಣಿಗೆಯ ಇನ್ನೊಂದು ವೈಶಿಷ್ಟ್ಯವೆಂದರೆ ಇದು ಉಳಿದ ನಾಲ್ಕೂ ಮಾದರಿಯ ಹಂತಗಳ ಮೂಲಕ ಹಾದು ರೂಪಗೊಳ್ಳುತ್ತದೆ. ಇದು ಸಮರ್ಥ ರೀತಿಯಲ್ಲಿ ಭ್ರೂಣಗಳನ್ನು ರಕ್ಷಿಸಿ ಪೋಷಿಸಲು ನಡೆಸಿರುವ ಪ್ರಯತ್ನಕ್ಕೆ ಪ್ರತ್ಯಕ್ಷ ಸಾಕ್ಷಿಯನ್ನು ಒದಗಿಸುತ್ತದೆ.

ಕಶೇರುಕಗಳಲ್ಲಿ ಮೀನು, ಕಪ್ಪೆಗಳು, ಸರೀಸೃಪಗಳು ಮತ್ತು ಪಕ್ಷಿಗಳು ಮೊಟ್ಟೆಯಿಡುತ್ತವೆ. ಇವನ್ನು ಅಂಡಜಗಳು (ಓವಿಪರಸ್) ಎಂದು ಕರೆಯುತ್ತಾರೆ. ಕೆಲವು ಅಪವಾದಗಳ ವಿನಾ ಸ್ತನಿಗಳು ಈಯುವ ಪ್ರಾಣಿಗಳು. ಇವಕ್ಕೆ ಜರಾಯುಜಗಳೆಂದು (ವೈವಿಪರಸ್) ಹೆಸರು. ಶಾರ್ಕ್‌ಮೀನು, ಮಂಡಲದ ಹಾವು ಮುಂತಾದ ಕೆಲವು ಅಂಡಜಗಳು ತಮ್ಮ ಮೊಟ್ಟೆಗಳನ್ನು ದೇಹದಲ್ಲಿಯೇ ಉಳಿಸಿಕೊಂಡು ರಕ್ಷಿಸಿ ಬೆಳೆಸುತ್ತವೆ. ತಾಯಿಯ ದೇಹದ ಹೊರಗೆ ಬೆಳೆದು ಹೊರಬೀಳಬೇಕಾದ ಮರಿಗಳು ಇಲ್ಲಿ ತಾಯಿಯ ದೇಹದ ಒಳಗೆಯೇ ಬೆಳೆದು ಹೊರಬರುತ್ತವೆ. ಇವಕ್ಕೆ ಅಂಡಜರಾಯುಜಗಳು (ಓವೊ ವೈವಿಪರಸ್) ಎಂದು ಹೆಸರು. ಕಡಲಕುದುರೆ, ಸೂಲಗಿತ್ತಿ ಕಪ್ಪೆ ಮುಂತಾದ ಅಂಡಜಗಳು ತಮ್ಮ ಮೊಟ್ಟೆಗಳನ್ನು ರಕ್ಷಿಸಿ ಮರಿಗಳನ್ನು ಪೋಷಿಸುತ್ತವೆ. ಇದರಲ್ಲಿ ಅನೇಕ ರೀತಿಯ ವೈವಿಧ್ಯ ಉಂಟು. ಇದಕ್ಕೆ ಸಂತಾನ ರಕ್ಷಣೆ (ಪೇರೆಂಟಲ್ ಕೇರ್) ಎಂದು ಹೆಸರು.

ಕಶೇರುಕಗಳ ಭ್ರೂಣಶಾಸ್ತ್ರದ ಪರಿಶೀಲನೆ ಅವುಗಳಲ್ಲಿ ನಡೆದಿರಬಹುದಾದ ವಿಕಾಸದ ಸೂಚನೆಯನ್ನೇ ಕೊಡುತ್ತದೆ. (ಎಚ್.ಎಚ್.ಎಸ್.)

**ಕಶ್ಯಪ :** ಸಪ್ತರ್ಷಿಗಳಲ್ಲಿ ಒಬ್ಬ. ಮರೀಚಿ ಮಹರ್ಷಿಯ ಮಗ. ಅತ್ಯಂತ ಪ್ರಾಚೀನನೆಂದು ಶ್ರುತಿಗಳು ಹೇಳುತ್ತವೆ. ವೇದಮಂತ್ರ ದ್ರಷ್ಟಾರನಾದ ಈತನ ವ್ಯಕ್ತಿತ್ವ ಬಹುಮುಖಶಕ್ತಿಯ ಪ್ರತೀಕವಾಗಿ ತೋರುತ್ತದೆ. ಈತನಿಗೆ ದಿತಿ ಅದಿತಿ ಮೊದಲಾದ ಹದಿಮೂರು ಮಂದಿ ಹೆಂಡತಿಯರು. ಅದಿತಿಯ ಮಕ್ಕಳೇ ಆದಿತ್ಯರು. ದಿತಿಯ ಮಕ್ಕಳು ದೈತ್ಯರು. ಉಳಿದ ಪತ್ನಿಯರಲ್ಲಿ ನಾಗರು, ಉರಗರು ಮೊದಲಾದವರ ಉತ್ಪತ್ತಿಯಾಯಿತು. ದಿವಸ್ವಂತನಿಗೂ ಗರುಡನಿಗೂ ಕಶ್ಯಪನೇ ತಂದೆ. ಈತ ಒಬ್ಬ ಪ್ರಜಾಪತಿಯೂ ಆಗಿದ್ದ. ವಾಮನಾವತಾರದಲ್ಲಿ ವಿಷ್ಣುವಿಗೆ ಈತ ಪಿತ, ಪರಶುರಾಮನಿಗೂ ದಾಶರಥಿ ರಾಮನಿಗೂ ಪುರೋಹಿತ. (ಸಿ.ಜಿ.ಪಿ.)

**ಕಷಿಂಗ್, ಹಾರ್ವೆ :** 1869–1939. ಮಿದುಳು, ನರಗಳ ಶಸ್ತ್ರವೈದ್ಯವನ್ನು ಇಂದಿನ ಮಟ್ಟಕ್ಕೇರಿಸಿ ಹೆಸರಾದವ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಕ್ಲೀವ್‌ಲ್ಯಾಂಡಲ್ಲಿ ಹುಟ್ಟಿ ಯೇಲ್ ವಿಶ್ವವಿದ್ಯಾಲಯ (1891) ಮತ್ತು ಹಾರ್ವರ್ಡ್ ವೈದ್ಯ ಶಾಲೆ (1895) ಎರಡರಲ್ಲೂ ಪದವೀಧರನಾದ. ಜಾನ್ ಹಾಪ್ಕಿನ್ಸ್ ಆಸ್ಪತ್ರೆಯಲ್ಲಿ ನಾಲ್ಕು ವರ್ಷಗಳಿದ್ದ. ಜರ್ಮನಿಯ ಬರ್ನ್‌ನಲ್ಲಿ ಕಾಕರ್‌ನೊಡನೆಯೂ ಇಂಗ್ಲೆಂಡಿನ ಲಿವರ್‌ಪೂಲಿನಲ್ಲಿ ಷೆರಿಂಗ್‌ಟನ್‌ನೊಡನೆಯೂ ಅಭ್ಯಾಸ ಮಾಡಿದ. ಬಾಲ್ಟಿಮೋರಿನ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಶಸ್ತ್ರವೈದ್ಯದ ಹಲವಾರು ಶಾಖೆಗಳಲ್ಲಿ ಮುಖ್ಯವಾಗಿ ಮಿದುಳಿನ ಮೇಲೆ ಹೆಚ್ಚು ಕೆಲಸಮಾಡಿ ರೋಗಿಯ ಎಚ್ಚರ ತಪ್ಪಿಸದೆಯೇ ಕಪಾಲದಲ್ಲಿ ಮಾತ್ರ ಅರಿವಳಿಕೆಯನ್ನು ಅಳವಡಿಸಿ, ಮಿದುಳಿನ ಮೇಲೆ ಶಸ್ತ್ರಕ್ರಿಯೆ ನಡೆಸುವ ವಿಧಾನಗಳನ್ನು ಮೊತ್ತಮೊದಲು ಕ್ರಮಗೊಳಿಸಿ ಹಲವು ಏಕವಿಷಯಕಪ್ರಬಂಧಗಳನ್ನು (ಮಾನೊಗ್ರಾಫ್ಸ್) ಬರೆದು ಪ್ರಕಟಿಸಿದ. ತಲೆಯೊಳಗಡೆ ಮಿದುಳಿನ ತಳದಲ್ಲಿರುವ ಗ್ಯಾಸರನ ನರಗಂಟನ್ನು ಕೊಯ್ದು ತೆಗೆವ ಶಸ್ತ್ರಕ್ರಿಯೆ (1900) ವಿಧಾನಗಳನ್ನು ಕಂಡು ಹಿಡಿದ. ಹಸುಗೂಸಿನ ಕಪಾಲದೊಳಗೆ ರಕ್ತಸುರಿತವನ್ನು ನಿಲ್ಲಿಸುವ ಉಪಾಯವನ್ನೂ ರೂಢಿಸಿದ (1905). ಲಕ್ವ ಹೊಡೆದ ಮೊಗವನ್ನು ಸರಿಪಡಿಸುವ ನರ ನಾಟಿ ಹಾಕುವುದನ್ನು ಜಾರಿಗೆ ತಂದ. ತೆಮಡಿಕ (ಪಿಟ್ಯೂಟರಿ) ಗ್ರಂಥಿಯ ಮೇಲಿನ ತನ್ನ ಶೋಧನೆಯಿಂದ ಪ್ರಪಂಚಕ್ಕೇ ಹೆಸರಾದ (1912). ಈಗ ಎರಡು ಬಗೆಗಳ ಕಷಿಂಗ್ ರೋಗಗಳು ಹೆಸರಾಗಿವೆ: ತೆಮಡಿಕ ಗ್ರಂಥಿಯ ಗಂತಿಯದೊಂದು, ಅಡ್ರಿನಲ್ ಗ್ರಂಥಿಯ ಚುರುಕಿನದೊಂದು. ಮಿದುಳಿನ ಗಂತಿಗಳ ವಿಂಗಡಣೆ, ಶಸ್ತ್ರವೈದ್ಯದಲ್ಲಿ ರಕ್ತ ಒತ್ತಡಗಳನ್ನು ಸಹ ಚೆನ್ನಾಗಿ ಅಭ್ಯಸಿಸಿದ. ಕಪಾಲದೊಳಗೆ ಯಾವ ಕಾರಣದಿಂದಲಾದರೂ ಒತ್ತಡವೇರಿದರೆ, ಮಿದುಳಿಗೆ ಸಾಕಷ್ಟು ರಕ್ತ ಒಗಿಸಲು ಅದರೊಳಗಿನ ರಕ್ತ ಒತ್ತಡ ಇದಕ್ಕೂ ಮೀರಿ ಏರುವುದಕ್ಕೆ ಕಷಿಂಗನ ನಿಯಮವೆಂದು ಈಗಲೂ ಹೆಸರಾಗಿದೆ. ಹಾರ್ವರ್ಡ್ ವೈದ್ಯ ಶಾಲೆಯಲ್ಲಿ ಕಷಿಂಗ್ 20 ವರ್ಷ ಪ್ರಾಧ್ಯಾಪಕನಾಗಿದ್ದ (1912–1932). ಒಂದನೆಯ ಮಹಾಯುದ್ಧದಲ್ಲಿ ಫ್ರಾನ್ಸ್‌ನಲ್ಲಿ ಕಾರ್ಯಾಚರಣೆಯಲ್ಲಿದ್ದು, ಅಮೆರಿಕದ ಸೇನೆಗೆ ಮಿದುಳಿನ ವಿಚಾರಗಳಲ್ಲಿ ಮುಖ್ಯ ಸಲಹೆಗಾರ ಆಗಿದ್ದ. ಅವನು ಬರೆದ ಸರ್ ವಿಲಿಯಂ ಆಸ್ಲರನ ವಿವರವಾದ ಜೀವನ ಚರಿತ್ರೆಗೆ ಪುಲಿಟ್ಜರ್ ಬಹುಮಾನ ದೊರಕಿತು (1925). ಅವನು ಬರೆದ ವೈದ್ಯಚರಿತ್ರೆಯ ಬರೆಹಗಳಲ್ಲಿ ಆಂಡ್ರಿಯಾಸ್ ವೆಸೇಲಿಯಸ್‌ನ ಮೇಲೂ ಒಂದಿತ್ತು. ಮುಗಿಯದೆ ಹಾಗೆ ಉಳಿದಿದ್ದ ಈ ಪುಸ್ತಕವನ್ನು ಅವನ ನಿಕಟ ಗೆಳೆಯ ಫುಲ್ಟನ್ ಎಂಬಾತ ಕಷಿಂಗ್ ಸತ್ತಮೇಲೆ ಪ್ರಕಟಿಸಿದ. ಯೇಲ್ ವಿಶ್ವವಿದ್ಯಾಲಯದ ನ್ಯೂಹೇವನ್‌ನಲ್ಲಿ ಕೊನೆಯತನಕ ನರಶಾಸ್ತ್ರದ ಸ್ಟರ್ಲಿಂಗ್ ಪ್ರಾಧ್ಯಾಪಕನಾಗಿದ್ದ. ಶೈಲಿಯಲ್ಲಿ ಸೊಗಸಾಗಿದ್ದ ಅವನ ಅನೇಕ ಬರೆಹಗಳು ಒಟ್ಟಾಗಿ ಪ್ರಕಟವಾಗಿವೆ (1928). ಆತ ವೈದ್ಯದಲ್ಲಿನ ಮಹತ್ತರ ಕೊಡುಗೆಗಳ ತನ್ನ ಸಂಗ್ರಹಗಳನ್ನು ಯೇಲ್ ವಿಶ್ವವಿದ್ಯಾಲಯಕ್ಕೆ ದಾನವಾಗಿತ್ತ. (ಡಿ.ಎಸ್.ಎಸ್.)

**ಕಸ :** ಹೆರಿಗೆಯಲ್ಲಿ ಶಿಶು ಜನನದ ಅನಂತರ ಗರ್ಭಕೋಶದಲ್ಲಿ ಉಳಿದ ಮಾಸು, (ಸತ್ತೆ) ಗರ್ಭಪೊರೆ. ಅಳಿದುಳಿದ ಗರ್ಭಜಲ ತಾನಾಗಿ ಹೊರಬೀಳುತ್ತದೆ, ಎಲ್ಲವನ್ನು ಒಟ್ಟಾಗಿ ಕಸ (ಆಫ್ಟರ್ ಬರ್ತ್) ಎಂದು ಕರೆಯುತ್ತಾರೆ. ಆದರೆ ಕಸ ಎಂಬುದು ಮಾಸು ಎನ್ನುವುದಕ್ಕೆ ಪರ್ಯಾಯವಾಗಿ ಬಳಕೆಯಲ್ಲಿದೆ.

ಮಾಸು ತಾಯಿ ಮಗುವಿನ ನಡುವಿನ ಕೊಂಡಿ. ಅತಿ ಜತನದಿಂದ ಪ್ರಕೃತಿ ರೂಪಿಸಿದ ವಿಶೇಷ ಅಂಗಾಂಶ. ಗರ್ಭಧರಿಸಿದ ಸುಮಾರು ಮೂರು ತಿಂಗಳಿಗೆ (12 ರಿಂದ 14 ವಾರ) ಸಂಪೂರ್ಣ ಕಾರ್ಯ ನಿರ್ವಹಿಸುವ ಶಕ್ತಿ ಪಡೆಯುತ್ತದೆ. ಅದರ ಕಾರ್ಯ ವೈವಿಧ್ಯ ಹಲವು: ದೊಡ್ಡವರಲ್ಲಿ ಶ್ವಾಸಕೋಶ (ಲಂಗ್ಸ್), ಪಿತ್ತಜನಕಾಂಗ (ಲಿವರ್), ಮೂತ್ರಪಿಂಡ (ಕಿಡ್ನಿ), ಕರುಳು ನಿರ್ವಹಿಸುವ ಎಲ್ಲ ಕೆಲಸಗಳನ್ನು ಗರ್ಭದಲ್ಲಿರುವ ಶಿಶುವಿಗಾಗಿ ಮಾಸು ನಿರ್ವಹಿಸುತ್ತದೆ.

1.ಶಿಶುವಿಗೆ ಶರ್ಕರ, ಪಿಷ್ಟ, ತೈಲಾಂಶಗಳನ್ನು ಸಂಗ್ರಹಿಸುವುದು (ಕರುಳಿನ ಕೆಲಸ)

2. ಆಮ್ಲಜನಕ ಪೂರೈಸುವುದು, ಇಂಗಾಲದ ಡೈಯಾಕ್ಸೈಡ್ ಹೊರಕಳಿಸುವುದು (ಶ್ವಾಸಕೋಶದ ಕೆಲಸ)

3.ಹೆಚ್ಚುವರಿ ನೀರು, ಲ್ಯಾಕ್ಟಿಕ್ ಆಮ್ಲ, ಲವಣ ಇತ್ಯಾದಿಗಳನ್ನು ತಾಯ ರಕ್ತ ಸಂಚಲನಾ ವ್ಯವಸ್ಥೆಗೆ ತಲುಪಿಸುವುದು (ಮೂತ್ರಪಿಂಡದ ಕೆಲಸ)

4.ಮಗುವಿನ ಬೆಳವಣಿಗೆ ಪೂರ್ಣ ಹಂತ ತಲುಪುವಾಗ ವಿಶೇಷ ಚೋದನಿಗಳನ್ನು ಉತ್ಪಾದಿಸುವುದು (ಕಣ್ವ ಚೋದನಿಗಳನ್ನು ಉತ್ಪಾದಿಸುವುದು)

5. ಮಗುವಿಗೆ ಅಪಾಯವಾಗಬಲ್ಲ ಸೂಕ್ಷ್ಮ ಜೀವಿಗಳನ್ನು ಹೊರಕವಚದಲ್ಲೇ ತಡೆಯುವುದು. ಆದರೆ ವೈರಾಣುಗಳನ್ನು ಸೋಸಲು ಸಾಧ್ಯವಿಲ್ಲ (ರಕ್ಷಣಾ ಕವಚ)

6. ತಾಯ ಶರೀರದಲ್ಲಿ ಉತ್ಪತ್ತಿಯಾಗುವ ಪ್ರತಿಕಾಯಗಳನ್ನು ಸೋಸುವುದು (ಐ. ಜಿ ಮ್ ಗುಂಪಿನ ಪ್ರತಿಕಾಯಗಳು ಮಾಸನ್ನು ದಾಟಲು ಅಸಮರ್ಥ)

ಮಾಸು ಸುಮಾರು 3–4 ಸೆಂಮೀ ದಪ್ಪವಾಗಿರುತ್ತದೆ. 15–18 ಸೆಂಮೀ ವ್ಯಾಸದ ವೃತ್ತಕಾರದಲ್ಲಿ ಮೆತು ಸ್ಪಂಜಿನಂತಿರುತ್ತದೆ. 300 ರಿಂದ 550 ಗ್ರಾಂ ತೂಗುತ್ತದೆ. ಸಾಮಾನ್ಯವಾಗಿ ಗರ್ಭಕೋಶದ ಒಳಗೆ ಮೇಲ್ಭಾಗದಲ್ಲಿ ಅಂಟಿ ಕೊಂಡಿರುತ್ತದೆ. ಇದರ ಅಂಚಿನಿಂದ ಪ್ರಾರಂಭವಾದ ಗರ್ಭಚೀಲ, ಉಲ್ಬಚೀಲ, ಅಮ್ನಿಯಾಟಿಕ್ ಮೆಮ್‌ಬ್ರೇನ್ ಮಗುವನ್ನು ಸುತ್ತಲೂ ಆವರಿಸಿರುತ್ತದೆ. ಹೊಕ್ಕಳ ಬಳ್ಳಿಯ ಸಾಧಾರಣವಾಗಿ ಮಾಸುವಿನ ಮಧ್ಯದಿಂದ ಹಿಡಿದು ಮಗುವಿನ ಹೊಕ್ಕಳಲ್ಲಿ ಕೊನೆಯಾಗುತ್ತದೆ. ಅದರಲ್ಲಿ ಎರಡು ಸಿರೆಗಳೂ (ಅಪಧಮನಿ) ಒಂದು ಅಭಿಧಮನಿಯೂ ಇರುತ್ತದೆ. ಈ ಮೂರು ನಾಳಗಳು ಸುತ್ತಿಕೊಂಡು ಹೆಣೆದ ಹಗ್ಗದಂತೆ ಕಾಣುತ್ತದೆ, ಜನನದ ವೇಳೆಗೆ 600–750 ಮಿಲೀ ಗರ್ಭಜಲವಿರುತ್ತದೆ.

**ವ್ಯತ್ಯಸ್ಥ ಸ್ಥಿತಿಗಳು :** ಸಹಜವಾಗಿ ಗರ್ಭಕೋಶದ ಒಳಗೆ ಮೇಲುಭಾಗದಲ್ಲಿ ಮಾಸು ಅಂಟಿಕೊಂಡಿರುತ್ತದೆ.

**1. ಪ್ರಿವಿಯಾ:** ಗರ್ಭಕೊರಳಿಗೆ, ಮಗುವಿನ ಕೆಳಗೆ ಅಂಟಿಕೊಂಡಿರುವ ಮಾಸು, ಗರ್ಭದ್ವಾರಕ್ಕೆ ಪೂರ್ಣ ಅಡ್ಡವಾಗಿ ಅಂಟಿಕೊಂಡಿದ್ದರೆ ಅದು ಅಪಾಯಕರ. ಪದೇ ಪದೇ ಆಗುವ ರಕ್ತಸ್ರಾವ ತಾಯಿಯನ್ನು ಮಗುವನ್ನು ಅಪಾಯದ ಅಂಚಿಗೆ ದೂಡುತ್ತವೆ. ಸಹಜ ಹೆರಿಗೆ ಈ ಪರಿಸ್ಥಿತಿಯಲ್ಲಿ ಅಸಾಧ್ಯ ಸ್ಕ್ಯಾನಿಂಗ್ ಪರೀಕ್ಷೆಯಿಂದ ಈ ಪರಿಸ್ಥಿತಿಯನ್ನು ಬಹುಬೇಗ ಗುರುತಿಸಬಹುದು (14–20 ವಾರ). ಗರ್ಭಿಣಿಸ್ತ್ರೀಯು ಪೂರ್ಣ ವಿಶ್ರಾಂತಿಯೊಡನೆ ಕೆಲವು ಔಷಧಿಗಳನ್ನು ಸೇವಿಸಬೇಕಾಗಬಹುದು. ಕೆಲವೊಮ್ಮೆ ಗರ್ಭದ್ವಾರ ಅಗಲವಾಗದೇ ಇರಲು ಹೊಲಿಗೆ ಹಾಕುವ ಅಗತ್ಯ ಇರುತ್ತದೆ. ಮಗುವಿನ ಬೆಳವಣಿಗೆಗೆ 35–36–37 ವಾರಗಳ ಕಾಲ ಮುಗಿದರೆ ಅನುಕೂಲ ಸ್ಥಿತಿಯಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಶಿಶುವನ್ನು ಹೊರತೆರೆಯಬೇಕು. ರಕ್ತಪೂರೈಕೆಯೂ ಅವಶ್ಯಕವಾಗುತ್ತದೆ.

ಅತಿ ತೆಳುವಾಗಿರುವಿಕೆ / ಅತಿ ದಪ್ಪವಾಗಿರುವಿಕೆ :– ಸಾಧಾರಣವಾಗಿ 3–4 ಸೆಂ ಮೀ ದಪ್ಪದ ಮಾಸು ಸಹಜವಾದದ್ದು.

1. ತಾಯಿಗೆ ಮಧುಮೇಹ ಕಾಯಿಲೆ ಇದ್ದರೆ

2. ತಾಯಿ– ಮಗುವಿನ ರಕ್ತವಿಲೋಮತೆ

3. ಆಂತರಿಕವಾಗಿ ನಂಜಾಗಿದ್ದರೆ

3. ಗರ್ಭಕೋಶದ ರಕ್ತಪರಿಚಲನೆಗೆ ಏನಾದರೂ ಅಡೆತಡೆ ಇದ್ದರೆ

ಮಾಸು ತೆಳುವಾಗಿ ಹರಡಿಕೊಳ್ಳಬಹುದು/ ಅತಿ ದಪ್ಪವಾಗಿರಬಹುದು.

**"ಅಕ್ರೀಟಾ"** ಗರ್ಭಕೋಶದ ಒಳಪದರಕ್ಕೆ ಅತಿ ಹತ್ತಿರವಾದಾಗ ಅಂಟಿಕೊಂಡಿರುವ ಮಾಸು. ಈ ಪರಿಸ್ಥಿತಿಯಲ್ಲಿ ಮಾಸು ಸಹಜವಾಗಿ ಕಳಚಿಬರುವುದಿಲ್ಲ. ಹೆರಿಗೆಯಾದ ಮೇಲೆ ಅರ್ಧ ಗಂಟೆಯೊಳಗೆ ಬರಬೇಕಾದ ಮಾಸು ಹೊರಬರದೇ ತಾಯಿ ದೇಹದಿಂದ ಅತಿ ರಕ್ತಸ್ರಾವ ಆಗಬಹುದು, ತಕ್ಷಣವೇ ಹಿರಿಯ ತಜ್ಞರ ನೆರವಿನಿಂದ ಮಾಸನ್ನು ಬಿಡಿಸಿ ಹೊರತರಬೇಕಾಗುತ್ತದೆ. ಸಾಧ್ಯವಾಗದಿದ್ದರೆ ಗರ್ಭಕೋಶಕ್ಕೆ ರಕ್ತ ಪೂರೈಸುವ ನಾಳಗಳನ್ನು ಕಟ್ಟಿ ರಕ್ತ ಹರಿವನ್ನು ನಿಲ್ಲಿಸಬೇಕಾಗುತ್ತದೆ.

ಮಾಸು ಹೊರಬಂದಿಲ್ಲ ಎಂದು ಹೊಕ್ಕಳ ಬಳ್ಳಿ ಹಿಡಿದು ಜೋರಾಗಿ ಎಳೆದರೆ ಗರ್ಭಕೋಶವೇ ಹೊರಬೀಳುವ ಪ್ರಸಂಗ ಬರಬಹುದು. ಇದೂ ಕೂಡ ತಾಯ ಜೀವಕ್ಕೆ ಅತಿ ಅಪಾಯಕಾರಿ.

ತಾಯಿ ಮಗುವಿನ ನಡುವಿನ ಭದ್ರಸೇತು ಒಂದಿನಿತು ಹೆಚ್ಚು ಕಡಿಮೆಯಾದರೂ ತಾಯಿಗೆ/ ಮಗುವಿಗೆ ತೊಂದರೆ ತಪ್ಪಿದ್ದಲ್ಲ.

ಬಸುರಿ ನಂಜು – ಗರ್ಭಿಣಿಯರಿಗೆ ಕಾಡುವ ಶಾಪ. ಹೆಚ್ಚಿನ ಬಿ.ಪಿ, ಕಾಲುಬಾವು, ಅತಿಕಡಿಮೆ ಮೂತ್ರ ವಿಸರ್ಜನೆ ಕೆಲವೊಮ್ಮೆ ಅದಿರುವಾಯು ಎಲ್ಲ ಲಕ್ಷಣಗಳ ಸಮೂಹ. ಇದಕ್ಕೆ ಇದಮಿತ್ಥಂ ಎಂಬ ಕಾರಣ ತಜ್ಞರಿಗೆ ಇನ್ನೂ ಸಿಕ್ಕಿಲ್ಲ. ಆದರೆ ಮಾಸುವಿನಲ್ಲಿಯ ರಕ್ತ ಪೂರಣದ ವ್ಯತ್ಯಾಸವನ್ನು ಎಲ್ಲ ಪ್ರಸಂಗಗಳಲ್ಲಿಯೂ ಗುರುತಿಸಿ ದೃಢಪಡಿಸಲಾಗಿದೆ. ಈ ಅವ್ಯವಸ್ಥಿತ ಮಾಸು ತಾಯ ಬಸಿರು ನಂಜಿಗೆ ಕಾರಣ. ರಕ್ತಪೂರಣದಲ್ಲೇಕೆ ಏರುಪೇರಾಗುತ್ತದೆ, ಯಾರಲ್ಲಿ ಆಗುತ್ತದೆ ಎಂದು ಮೊದಲೇ ಕಂಡುಹಿಡಿಯುವ ವಿಧಾನ ತಿಳಿದರೆ ಎಷ್ಟೋ ಹೆಣ್ಣುಮಕ್ಕಳ ಪ್ರಾಣ ಉಳಿಯುತ್ತದೆ. ಶಿಶುಗಳು ಆರೋಗ್ಯವಾಗಿ ನಳನಳಿಸುತ್ತವೆ. (ಡಿ.ಎಸ್.ಎಸ್.)

**ಕಸದ ವಿಲೇವಾರಿ :** ಮನೆ, ಶಾಲೆ, ಕಾರ್ಖಾನೆ, ರಸ್ತೆಗಳಲ್ಲಿ ಬೀಳುವ, ಬೇಸಾಯ ಕೈಗಾರಿಕೆಗಳಿಂದ ಹೊರಬೀಳುವ, ಕೆಲಸಕ್ಕೆ ಬಾರದ ವಸ್ತುವೇ ಕಸ. ಧೂಳು, ಬೂದಿ, ಕಡ್ಡಿ, ಸಿಪ್ಪೆ, ಸೊಪ್ಪು ಸದೆ, ಕೊಳೆವ ವಸ್ತು, ಕಾಗದ, ರಟ್ಟು, ಬಟ್ಟೆಚಿಂದಿಗಳು, ಜಿಡ್ಡು ಮತ್ತಿತರ ಹೊತ್ತಿಕೊಂಡು ಉರಿವ ಇಲ್ಲವೇ ಉರಿಯದ ಉಳಿಕೆಗಳೂ ಇದರಲ್ಲಿರುತ್ತವೆ. ಎಲ್ಲೇ ಆಗಲಿ ಕಸ ರಾಸಿ ಬಿದ್ದರೆ ಕೊಳಕು, ಅನಾರೋಗ್ಯಕರ. ಇದರಲ್ಲಿ ಪ್ರಾಣಿ, ಗಿಡ ಮರ ಸಂಬಂಧ ವಸ್ತುಗಳು ಕೊಳೆತು ನೊಣಗಳಿಗೆ ಆಸರೆಯಾಗಬಹುದು. ಕಸದಲ್ಲಿನ ಕಾಳುಕಡ್ಡಿ ತಿನ್ನಲು ಇಲಿ, ಹೆಗ್ಗಣಗಳೂ ಬರುತ್ತವೆ. ಧೂಳು, ಹುಳ, ಹುಪ್ಪಟೆ, ನೊಣಗಳಿಂದ ರೋಗಾಣುಗಳು ಜನರಿಗೆ ಹರಡುವವು. ಕಸಕಡ್ಡಿ ರಾಶಿಯಾಗಿ ಬಿದ್ದರೆ ಕೊಳಕಾಗಿ ಅಸಹ್ಯವಾಗಿ ಕಾಣುತ್ತದೆ. ಆದ್ದರಿಂದ ಕಸ ಎಲ್ಲಿ ಬಿದ್ದರೂ ಕೂಡಿಹಾಕಿ, ಸಾಗಿಸಿ, ಆರೋಗ್ಯಕ್ಕೆ ಕುಂದುಬರದಂತೆ ವಿಲೇವಾರಿ ಆಗಬೇಕು. ಪರಿಸರವನ್ನು ಆರೋಗ್ಯಕರವಾಗಿ ಇರಿಸಲು ಕಸದ ಸಾಗಣೆ ಮುಖ್ಯ. ಜನಾರೋಗ್ಯ ಮಟ್ಟವನ್ನು ಈ ಸೇವೆಯಿಂದ ಅಳೆಯಬಹುದು.

ಒಂದು ಊರಿನ ಜನರ ಜೀವನ ಮಟ್ಟಕ್ಕೆ ತಕ್ಕಹಾಗೆ ಅಲ್ಲಿ ಬೀಳುವ ಕಸವೂ ಅದರ ಪ್ರಮಾಣವೂ ಇರುತ್ತದೆ. ಉನ್ನತವರ್ಗದ ಜನರ ಮನೆಗಳಲ್ಲಿ ಬೀಳುವ ಕಸದ ಪ್ರಮಾಣ ಹೆಚ್ಚಾಗಿರುವುದು. ಬಹುಮಟ್ಟಿಗೆ ಕಾಗದ, ಪೊಟ್ಟಣಗಳು, ರಟ್ಟುಗಳು ಪ್ಲಾಸ್ಟಿಕ್ ಸಾಮಾನುಗಳು, ಖಾಲಿ ಸೀಸೆ, ಡಬ್ಬಗಳು, ಪಿಂಗಾಣಿ, ಗಾಜಿನ ವಸ್ತುಗಳೂ ಹೇರಳವಾಗಿರುತ್ತವೆ. ಮಲ ಮೂತ್ರಗಳನ್ನು ಕಸವೆಂದು ಎಣಿಸುವುದಿಲ್ಲವಾದರೂ ನಮ್ಮ ರಾಜ್ಯಗಳಲ್ಲಿ ರಸ್ತೆಗಳ ಕಸದಲ್ಲಿ ಅವೂ ಸೇರಿರುತ್ತವೆ. ಆಯಾ ಋತುಗಳು, ನಗರದ ವಿಸ್ತರಣಗಳಿಗೆ ತಕ್ಕಹಾಗೆ ಕಸವೂ ಬೇರೆ ಬೇರೆ ತೆರನಾಗಿರುವುದು.

ಜಾಡಮಾಲಿಗಳು ಗುಡಿಸಿ ಒಂದೆಡೆ ಗುಡ್ಡೆಹಾಕಿದ್ದು ರಸ್ತೆ ಕಸ. ತೆರೆದ ಬಚ್ಚಲು, ಚರಂಡಿಗಳ ರೊಚ್ಚನ್ನು ಜಾಡಮಾಲಿಗಳು ಕಸದೊಂದಿಗೇ ಸೇರಿಸುವುದುಂಟು. ಇದರಲ್ಲಿ ಎಲೆಗಳು, ಹುಲ್ಲುಕಡ್ಡಿಗಳು, ಕಾಗದ, ಲದ್ದಿ, ಸಗಣಿ, ಹಿಕ್ಕೆ, ಗಂಜಲಗಳೇ ಮುಂತಾದವೂ ಇರುತ್ತದೆ. ಮಾರುಕಟ್ಟೆಯಿಂದ ಬಂದ ಕಸದಲ್ಲಿ ಕೊಳೆತ ಹಣ್ಣು, ಹಂಪಲು, ತರಕಾರಿ, ಹೊಟ್ಟು, ಸಿಪ್ಪೆ, ಗಿಡಮರ ಇಲ್ಲವೇ ಪ್ರಾಣಿ ಸಂಬಂಧದ ವಸ್ತುಗಳು ಸೇರಿರುತ್ತವೆ. ಲಾಯ, ದೊಡ್ಡಿ, ರೊಪ್ಪಗಳ ಕಸದಲ್ಲಿ ಪ್ರಾಣಿಗಳ ಮಲ ಗಂಜಲ, ಉಳಿದ ಮೇವು ಕಾಳುಕಡ್ಡಿಗಳೂ ಇರುವವು. ಕಾರ್ಖಾನೆಗಳಿಂದ ಬರುವ ಕಸದಲ್ಲಿ ಸೀಮೆಸುಣ್ಣದಂಥ ನಿರಪಾಯಕರದಿಂದ ಹಿಡಿದು ತೀರ ವಿಷಕಾರಿ, ಉರಿದು ಸಿಡಿವ ವಸ್ತುಗಳ ತನಕ ಏನಾದರೂ ಇರಬಹುದು. ಮನೆ ಕಸದಲ್ಲಿ ಬೂದಿ, ಇದ್ದಿಲು, ಕಾಗದ ರಟ್ಟು, ಬಟ್ಟೆ ಚೂರುಗಳು, ಕಡ್ಡಿ, ಪುಕ್ಕ, ಲೋಹಚೂರುಗಳು, ಗಾಜು, ದೂಳು, ಕೊಳಚೆ, ಅಡುಗೆ ಮನೆ ಗಲೀಜಿನ ರೊಚ್ಚೂ ಇರುವುವು. ಅಡುಗೆಮನೆ ಗಲೀಜನ್ನು ಆಗಾಗ್ಗೆ ಬೇಗನೆ ತೆಗೆಯದಿದ್ದರೆ ಕೊಳೆತು ನಾರುತ್ತದೆ.

ಕಸವನ್ನು ಹೊರಸಾಗಿಸುವ ಮುಂಚೆ ಅದನ್ನು ಒಂದೆಡೆ ಗುಡ್ಡೆ ಹಾಕುವುದು ಮುಖ್ಯ. ಸರಿಯಾಗಿ ಮುಚ್ಚುವ ಮುಚ್ಚಳವಿರುವ ತಗಡಿನ ಡಬ್ಬ ಅನುಕೂಲಕರ. ಭಾರತದಲ್ಲಿ ದಿನವೂ ಒಬ್ಬನಿಂದ ಆಗುವ ಕಸದ ಪ್ರಮಾಣ 0.05–0.10 ಘನ ಅಡಿಯಷ್ಟೆಂದು ಲೆಕ್ಕವಿದೆ. 5 ಮಂದಿ ಇರುವ ಮನೆಗೆ ಅರ್ಧ ಘನ ಅಡಿಯ ಡಬ್ಬ ಸಾಕು. 3 ದಿನಕ್ಕೊಮ್ಮೆ ಕಸ ಎತ್ತುವುದಾದರೆ 2 ಘನ ಅಡಿಗಳ ಡಬ್ಬ ಬೇಕಾಗುವುದು. ಜಾತ್ರೆ, ಉತ್ಸವ, ಹಬ್ಬ, ವಾರಗಳು, ಮದುವೆ ಮುಂತಾದ ಕಾಲಗಳಲ್ಲಿ ಇದು ಹೆಚ್ಚುತ್ತದೆ. ಮುಂದುವರಿದ ನಾಡುಗಳಲ್ಲೀಗ ಹಾಗೇ ಸಾಗಿಸಬಹುದಾದ ಕಾಗದದ ಚೀಲಗಳು ಬಳಕೆಯಲ್ಲಿವೆ. ಬೀದಿಯಲ್ಲಿ ಅಲ್ಲಲ್ಲಿ ಕಸದ ಗುಂಡಿಗಳನ್ನು ತೋಡಿದರೆ ಕೊಳಕಿನ ಗಲೀಜು ಗಾಳಿಗೆ ಹಾರಿ, ಮಳೆ ಬಂದಾಗ ಕೊಚ್ಚಿ ಹರಡುವುದು. ಸಾರ್ವಜನಿಕ ಕಸದ ತೊಟ್ಟಿಗಳಿಗೆ ಭಾರತದಲ್ಲಿ ಮುಚ್ಚಳಗಳಿರವು. ಮಳೆ ನೀರು ಒಳನುಗ್ಗದಂತಿರಿಸಲು ಕಲ್ಲುಹಾಸಿನ ಮೇಲೆ ತಳವಿಲ್ಲದ, ಹಿಡಿಗಳಿರುವ, ಗುಂಡಗಿರುವ ತೊಟ್ಟಿಗಳು ಬಳಕೆಯಲ್ಲಿವೆ. ಹಾಗೆ, ನಾಯಿಗಳು ಇವನ್ನು ಕೆದಕಿ ಬೆದಕಿ ಕಸವನ್ನು ಹೊರಚಲ್ಲುತ್ತವೆ. ಮುಚ್ಚಳ ಹಾಕಿದ್ದರೆ ಅವನ್ನು ಮುಟ್ಟಿ ತೆಗೆಯಲು, ಹೇಸಿ ಜನರು ಹೊರಗೆ ಸುತ್ತಲೂ ಎಲ್ಲೆಂದರಲ್ಲಿ ಎಸೆದು ಇನ್ನಷ್ಟು ಗಲೀಜು ಮಾಡುತ್ತಾರೆ. ಆಗಿಂದಾಗ್ಗೆ ಪುರಸಭೆಯ ಲಾರಿಗಳೋ ಗಾಡಿಗಳೋ ಇದರಲ್ಲಿನ ಕಸವನ್ನು ಎತ್ತಿ ತುಂಬಿಕೊಂಡು ದೂರ ಸಾಗಿಸುತ್ತವೆ.

ಕಸವನ್ನು ಎತ್ತುವ ಏರ್ಪಾಡು ಹಣಕಾಸಿಗೆ ತಕ್ಕ ಹಾಗಿರುತ್ತದೆ. ಒಂದೊಂದು ಮನೆಯಿಂದಲೂ ಕಸ ಎತ್ತುವುದೇ ಎಲ್ಲಕ್ಕೂ ಒಳ್ಳೆಯ ವಿಧಾನ. ಆದರೆ, ನಮ್ಮಲ್ಲಿ ಹತ್ತಿರದಲ್ಲಿ ಹೊರಗಡೆ ಇಟ್ಟಿರುವ ತೊಟ್ಟಿಯಲ್ಲಿ ಮನೆಗಳವರು ಕಸ ತಂದು ಹಾಕಬೇಕು. ಬಹಳ ಮಂದಿ ಹೀಗೆ ಹಾಕದ್ದರಿಂದ, ಎಲ್ಲೆಂದರಲ್ಲಿ ಕಸದ ಗಲೀಜು ಮನೆಯಿಂದ ಹೊರಗೆ ಬಿದ್ದಿರುತ್ತದೆ. ಆಗ ತೊಟ್ಟಿಗಳಿಂದ ಕಸ ಎತ್ತುವ ಸಿಬ್ಬಂದಿಯ ಜೊತೆಗೆ ಬರೀ ಬೀದಿ ಕಸಗುಡಿಸುವವರ ಸೈನ್ಯವೇ ಬೇಕಾಗುವುದು. ಕಸವನ್ನೆಲ್ಲ ಗುಡಿಸಿ ಒಂದೆಡೆ ರಾಸಿ ಹಾಕಲು ತಲೆ ಮೇಲೆ ಹೊರುವ ಪುಟ್ಟಿ, ಮಂಕರಿಗಳಿಗಿಂತಲೂ ಮುಚ್ಚಿದ ಡಬ್ಬವಿರುವ ಒಂಟಿಚಕ್ರದ ಕೈಗಾಡಿ ಉತ್ತಮ, ಹೀಗೆ ರಾಸಿಹಾಕಿದ ಕಸ ಎತ್ತಿನಗಾಡಿ, ಲಾರಿಗಳಲ್ಲಿ ದೂರ ಸಾಗುತ್ತದೆ. ಸತ್ತ ಪ್ರಾಣಿಗಳನ್ನು ನೇರವಾಗಿ ವಿಲೇವಾರಿಯಾಗುವ ಜಾಗಕ್ಕೆ ಸಾಗಿಸುವರು.

ಜನಾರೋಗ್ಯ ಸುಧಾರಿಸಬೇಕಾದರೆ ನಮ್ಮಲ್ಲಿನ ಇಂದಿನ ಕಸ ಎತ್ತಿ ಸಾಗಿಸುವ ವಿಧಾನಗಳು ಇನ್ನೂ ಹೆಚ್ಚಿನ ಮಟ್ಟದವಾಗಬೇಕು. ಪುರಸಭೆ, ನಗರ ಸಮಿತಿಗಳವರು ಸಾರ್ವಜನಿಕ ತೊಟ್ಟಿಗಳಿಂದಲೇ ಅಲ್ಲದೆ ಮನೆಮನೆಯಿಂದಲೂ ಕಸವನ್ನು ಡಬ್ಬಗಳಲ್ಲಿ ಎತ್ತಿಸಾಗಿಸಬೇಕೆಂದು ಪರಿಸರದ ಆರೋಗ್ಯ ಸಮಿತಿ (1949) ಸೂಚಿಸಿದೆ. ಮನೆಗಳಿಂದ ದಿನ ಬಿಟ್ಟು ದಿನವಾದರೂ ಕಸ ಎತ್ತಿಸಾಗಿಸುವುದಾದರೆ ಹೊರಗಡೆ ಅಷ್ಟೊಂದು ತೊಟ್ಟಿಗಳನ್ನು ಇಡಬೇಕಾಗಿಲ್ಲ. ಕಸದ ಗಾಡಿಗಳು ಧೂಳು ಹಾರುವಂತೆ ತೆರೆದಿರದೆ ಮುಚ್ಚಿರಬೇಕು. ಕೈಗಾಡಿ, ಎತ್ತಿನಗಾಡಿಗಳಿಗಿಂತ ಲಾರಿಗಳೇ ಒಳ್ಳೆಯವು. ಖರ್ಚು ಕಡಿಮೆ, ಹಿಂಭಾಗವನ್ನು ಮೊಗುಚಿಹಾಕುವ ಲಾರಿಗಳು ಮಹಾನಗರಗಳಲ್ಲಿ ಬಳಕೆಯಲ್ಲಿವೆ. ಇವುಗಳ ಗಲೀಜು, ವಾಸನೆ ಜನರ ಗಮನಕ್ಕೆ ಅಷ್ಟಾಗಿ ಬಾರದ ಹಾಗೆ ಬೆಳಗಿನ ಜಾವದಲ್ಲೇ ಸಾಗಹಾಕಬೇಕು. ಕಸ ಬಿದ್ದ ಮೇಲೆ ಎಷ್ಟು ಬೇಗನೆ ಎಷ್ಟು ಚೆನ್ನಾಗಿ ಎತ್ತಿಹಾಕಿ ಸಾಗಿಸಿದರೆ ಅಷ್ಟೂ ಒಳ್ಳೆಯದು. ಆರೋಗ್ಯಾಧಿಕಾರಿಗಳು ಈ ಜವಾಬ್ದಾರಿ ಹೊತ್ತಿರುವರು.

**ವಿಲೇವಾರಿ ವಿಧಾನಗಳು:** ಎಲ್ಲ ಕಡೆಗಳಲ್ಲೂ ಅನುಕೂಲವಾಗುವಂಥ ಒಂದೇ ಒಂದು ವಿಧಾನ ಇದೆಂದು ಯಾವುದನ್ನೂ ತೋರಿಸುವಂತಿಲ್ಲ. ಅದಕ್ಕೆ ತಗಲುವ ವೆಚ್ಚ, ಇರುವ ಜಾಗ, ಕೂಲಿ ಸಿಬ್ಬಂದಿ ಮುಂತಾದವಕ್ಕೆ ತಕ್ಕ ವಿಧಾನವನ್ನು ಆರಿಸಿಕೊಳ್ಳಬೇಕು. ನಮ್ಮಲ್ಲಿ ಕಸವನ್ನು ವಿಂಗಡಿಸುವುದು ಅಪೂರ್ಣ. ವಿಲೇವಾರಿಗಾಗಿ 6 ವಿಧಾನಗಳಿವೆ.

**1 ಗುಡ್ಡೆಹಾಕುವುದು:** ಊರಿನಲ್ಲಿ ಹಳ್ಳ ಕೊಳ್ಳ, ಕಂದಕಗಳನ್ನು ತುಂಬಲೂ ಒಣಕಸವನ್ನು ಸುಲಭವಾಗಿ ವಿಲೇವಾರಿ ಮಾಡಲೂ ಈ ವಿಧಾನ ಅನುಕೂಲಕರ. ಕಸದಲ್ಲಿರುವ ಜೀವಾಣುಗಳ ಕೆಲಸದಿಂದ ಕಸದ ಗಾತ್ರವೂ ಕುಗ್ಗಿ ಬರುಬರುತ್ತ ಒಣ ಗೊಬ್ಬರವಾಗುತ್ತದೆ.

ಕೋಲ್ಕತದಲ್ಲಿ, ನಗರದ ಕಸವನ್ನೆಲ್ಲ ಗುಡ್ಡೆ ಹಾಕಿ ಆಮೇಲೆ ಅದನ್ನು ಬೇಸಾಯಕ್ಕೆ ಬಿಟ್ಟುಕೊಡುವರು. ನೊಣ ಇಲಿಗಳು ಸೇರಿಕೊಂಡು ಕೆಟ್ಟವಾಸನೆ ಹರಡಿ, ಗಾಳಿಗೆ ಕಸ ಹಾರುವುದು ಇದರ ಮುಖ್ಯ ಕೆಡುಕು. ವಾಸದ ಮನೆಗಳಿಂದ ಆದಷ್ಟೂ ದೂರದಲ್ಲಿ ಕಸವನ್ನು ಗುಡ್ಡೆಹಾಕಬೇಕು. ಜನಾರೋಗ್ಯ ಕೆಡಿಸಿ, ಗಲೀಜಾಗಿ, ಪರಿಸರವನ್ನೆಲ್ಲ ಬಹಳ ಹೊಲಗೆಡಿಸುವುದರಿಂದ ಎಂದಿಗೂ ಕಸವನ್ನು ಗುಡ್ಡೆ ಹಾಕಲೇಕೂಡದೆಂದು ವಿಶ್ವ ಆರೋಗ್ಯಸಂಸ್ಥೆಯ ಪರಿಣಿತರ ಸಮಿತಿಯೊಂದು (1967) ಎಚ್ಚರಿಸಿದೆ.

**2 ಹಳ್ಳತುಂಬಿಕೆ:** ಊರಿನಲ್ಲಿ ಸಾಕಷ್ಟು ಹಳ್ಳ, ಕೊಳ್ಳಗಳಿದ್ದರೆ, ಕ್ರಮವಾಗಿ ಅವನ್ನು ಕಸದಿಂದ ತುಂಬಿ ಮುಚ್ಚಿಹಾಕುವ ಉಪಾಯವಿದು. ಕಸವನ್ನು ಪದರ ಪದರವಾಗಿ 8 ಅಡಿಗಳ ಆಳಕ್ಕೆ ಹಾಕಿದಮೇಲೂ ಒಂದು ಅಡಿ ಮಂದಕ್ಕಾದರೂ ಮಣ್ಣನ್ನು ಹರವಬೇಕು. ಆಗ ನೊಣ, ಇಲಿಗಳ ಕಾಟ ತಪ್ಪಿ, ಕೆಟ್ಟವಾಸನೆ ಏಳದೆ ದೂಳಿಲ್ಲದಂತಿರುವುದು. ಕಸ ಜೈವಿಕವಾಗಿ ಚೆನ್ನಾಗಿ ಕೊಳೆತು, ವಾರದೊಳಗಾಗಿ ಒಳಗಿನ ಕಾವು 60’ ಸೆಂ. ಮಟ್ಟಕ್ಕೆ ಏರುವುದರಿಂದ ರೋಗಾಣುಗಳು ಸತ್ತು ಬೇಗನೆ ಗೊಬ್ಬರವಾಗುತ್ತದೆ. ಆಮೇಲೆ 2–3 ವಾರಗಳಲ್ಲಿ ಕಾವಿಳಿಯುತ್ತದೆ. ಸಾಮಾನ್ಯವಾಗಿ, ಪೂರಾ ಕೊಳೆತು ಒಣಗಿ ನಿರಪಾಯಕರ ಆಗಬೇಕಾದರೆ ಸುಮಾರು 4–6 ತಿಂಗಳು ಹಿಡಿಯುತ್ತವೆ. 10,000 ಜನರಿರುವ ಪಟ್ಟಣಕ್ಕೆ ಈ ವಿಧಾನಕ್ಕೆ 1–1.5 ಎಕರೆಗಳಷ್ಟು ಜಾಗ ಬೇಕಾಗುತ್ತದೆ. ಇತ್ತೀಚೆಗೆ ಈ ಕೆಲಸಕ್ಕಾಗಿ ಬುಲ್‌ಡೋಜರುಗಳನ್ನು ಬಳಸುತ್ತಿದ್ದಾರೆ.

**3 ಸುಟ್ಟುಬೂದಿಗೊಳಿಸುವಿಕೆ:** ಕಸಕ್ಕೆ ಉರಿಯಿಕ್ಕಿ ಬೂದಿಗೊಳಿಸುವುದು (ಇನ್‌ಸಿನರೇಷನ್) ಎಲ್ಲಕ್ಕಿಂತಲೂ ಬಲು ಒಳ್ಳೆಯ ಆರೋಗ್ಯಕರ ವಿಧಾನ. ಕಸ ಹಾಕಲು ಎಲ್ಲೂ ಜಾಗವಿಲ್ಲದಾಗ ಹೀಗೆ ಮಾಡಬಹುದು. ಆಸ್ಪತ್ರೆಯಲ್ಲಿ ರಾಶಿಬೀಳುವ ಕಸವಂತೂ ತೀರ ಹಾನಿಕರವಾದ್ದರಿಂದ ಇದು ಬಲು ಚೆನ್ನಾದ ಕ್ರಮ. ಎಷ್ಟೋ ಸೇನಾಶಿಬಿರಗಳಲ್ಲೂ ದೊಡ್ಡ ನಗರಗಳಲ್ಲೂ ಇದು ಜಾರಿಯಲ್ಲಿದೆ. ಸಾಕಷ್ಟು ನುಣ್ಣನೆಯ ಕಸ, ಧೂಳು ಇರುವುದರಿಂದ ಬೂದಿಗೊಳಿಸುವ ವಿಧಾನ ನಮ್ಮಲ್ಲಿ ಜನಪ್ರಿಯವಾಗಿಲ್ಲ. ಧೂಳನ್ನು ಮೊದಲು ಜರಡಿ ಹಿಡಿದರೆ ಮಾತ್ರ ಆಗಬಹುದು. ಹಾಗೆ ಮಾಡಲು ಖರ್ಚು ಸಿಬ್ಬಂದಿ ಹೆಚ್ಚುವುದಲ್ಲದೆ ಉರಿವ ಒಲೆಯಲ್ಲೂ ತಿರುವುತ್ತಿರಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಬೇಸಾಯಕ್ಕೆ ಗೊಬ್ಬರ ಇಲ್ಲವಾಗುತ್ತದೆ. ಆದ್ದರಿಂದ ಬರೀ ಖರ್ಚಿನ ಈ ವಿಧಾನ ನಮ್ಮಲ್ಲಿ ಅಷ್ಟಾಗಿ ಚಾಲ್ತಿಯಲ್ಲಿಲ್ಲ. ಸುಟ್ಟುಬೂದಿಗೊಳಿಸಿದಾಗ ಕಸದ ತೂಕ ಮೊದಲಿನ ಕಾಲು ಭಾಗಕ್ಕೆ ಇಳಿಯುತ್ತದೆ. ಕೊನೆಗುಳಿದ ಕಿಟ್ಟವನ್ನು ರಸ್ತೆ ಕಾಮಗಾರಿಗೆ ಬಳಸಬಹುದು. ಪುಡಿಮಾಡಿ ಸುಣ್ಣದೊಂದಿಗೆ ಸೇರಿಸಿ ಕಲ್ಲುಗಾರೆ ಮಾಡಬಹುದು.

ಸುಟ್ಟುಬೂದಿಗೊಳಿಸುವ ದೊಡ್ಡ ಒಲೆಗಳಲ್ಲಿ ಹಲವು ಬಗೆಗಳಿವೆ. ಅವುಗಳಲ್ಲಿ ಉರಿ ಇಟ್ಟಿಗೆಗಳಿಂದ ಕಟ್ಟಿರುವ ಒಲೆ, ಪಕ್ಕದಿಂದ ಕಸವನ್ನು ಒಳಕ್ಕೆ ಸುರಿವ ಕಂಡಿಗಳು, ಹೊಗೆ ಹೋಗಲು ನೇರವಾದ ಎತ್ತರದ ಕೊಳವೆ, ಬೂದಿ ಕೆಳಕ್ಕೆ ಬೀಳುವಂತೆ ಜಾಲರಿ, ಕೆಳಗೆ ಬಿದ್ದ ಬೂದಿಯನ್ನು ಹೊರಗೆಳೆವ ಕಂಡಿ ಇರುತ್ತವೆ. ಮುಖ್ಯವಾಗಿ, ಸರಾಗವಾಗಿ ಒಳಕ್ಕೆ ಗಾಳಿತೂರಿ ಹೊಗೆಯೇಳದಂತೆ ಎಲ್ಲವೂ ಉರಿದುಹೋಗುವಂತಿರಬೇಕು. ಒಳಗಿನ ಉರಿಯ ಕಾವು 675’ ಸೆಂ. ಗಿಂತಲೂ ಹೆಚ್ಚಿದ್ದರೆ ಮಾತ್ರ ಹಾಗಾಗುತ್ತದೆ.

**4 ಕಾಂಪೋಸ್ಟ್ ಗೊಬ್ಬರ:** ಬರಿಯ ಕಸವನ್ನೋ, ಮಲಮೂತ್ರ ಇಲ್ಲವೇ ರೊಚ್ಚನ್ನು ಕೂಡಿಸಿಯೋ ವಿಲೇವಾರಿ ಮಾಡುವ ಜೈವಿಕ ವಿಧಾನವಿದು. ಏಕಾಣು ಜೀವಿಗಳ ಚಟುವಟಿಕೆಯಿಂದ ಜೈವಿಕ ವಸ್ತುಗಳು ಒಡೆಯುವುದರಿಂದ ನೆಲಕ್ಕೆ ಸಾರ ವತ್ತಾದ, ಹಾನಿಕರವಲ್ಲದ, ವಾಸನೆಯಿಲ್ಲದ ಗೊಬ್ಬರ ಒದಗುತ್ತದೆ. ಕಾಂಪೋಸ್ಟ್ ಗೊಬ್ಬರ ತಯಾರಿಸಲು 3 ವಿಧಾನಗಳಿವೆ.

ನೊಣದ ಹಾವಳಿ, ತಿರುವಿಹಾಕಿದಾಗ ಕಾವಿನ ಇಳಿತ, ಸಿಬ್ಬಂದಿಯ ದುಬಾರಿ ವೆಚ್ಚ ಹೆಚ್ಚುವುದರಿಂದ ಹಳೆಯ ಇಂದೋರಿನ ವಿಧಾನ ಈಗ ಎಲ್ಲೂ ಜಾರಿಯಲ್ಲಿಲ್ಲ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಭಾರತೀಯ ಬೇಸಾಯದ ಸಂಶೋಧನ ಸಂಸ್ಥೆಯ ವತಿಯಿಂದ ನಡೆಸಿದ ಶೋಧನೆಗಳಿಂದ ಗಾಳಿಗೊಡ್ಡಿಯೋ ಗಾಳಿಗೊಡ್ಡದೆಯೋ ಕಾಂಪೋಸ್ಟ್ ಗೊಬ್ಬರ ತಯಾರಿಸುವ ಬೆಂಗಳೂರು ವಿಧಾನ ಪಟ್ಟಣಗಳ ಕಸ, ಮಲಮೂತ್ರಗಳ ವಿಲೇವಾರಿಗೆ ಒಳ್ಳೆಯದು. ಇದು ಚೆನ್ನಾಗಿ ಆಗಬೇಕಾದರೆ, ಕಸದಲ್ಲಿ ಸಾಕಷ್ಟು ಸಾರಜನಕ, ರಂಜಕಲವಣಗಳು ಇರಲೇಬೇಕು. ಚೆನ್ನಾಗಿ ಕಾಂಪೋಸ್ಟ್ ಗೊಬ್ಬರ ಆಗುವಂತೆ ಸಗಣಿ ಗಂಜಳಗಳನ್ನು ಹಾಕಬೇಕು. ಇದಕ್ಕೆ ಬಿಸಿ ಹುದುಗೇಳಿಸುವ ಕ್ರಿಯಾಗತಿ ಎಂದು ಹೆಸರಿದೆ. ಕಸದ ಪ್ರಮಾಣಕ್ಕೆ ತಕ್ಕಂತೆ. 3’ ಆಳ, 5’–8’ ಅಗಲ, 15’–30’ ಉದ್ದದ ಗುಂಡಿಗಳನ್ನು ತೊಡಬೇಕು. ಕೊಳೆಯುವುದು ತಡವಾಗುವುದರಿಂದ, 3’ಗೂ ಆಳ ಮೀರಿ ಅಗೆಯಬಾರದು. ಗುಂಡಿಗಳು ಊರಿಗೆ ಅರೆ ಮೇಲಿ ಆಚೆಯಾದರೂ ಇರಬೇಕು. ಅಗಳಿನ ತಳದಲ್ಲಿ ಅರ್ಧ ಅಡಿ ದಪ್ಪಕ್ಕೆ ಕಸವನ್ನು ಮೊದಲು ಹರಡಬೇಕು. ಇದರ ಮೇಲೆ, ಸುಮಾರು 2" ದಪ್ಪಕ್ಕೆ ಮಲವನ್ನೂ ಹಾಕಬೇಕು. ಆಮೇಲೆ, ಹೀಗೇ ಕಸ, ಮಲಗಳ ಅಷ್ಟೇ ಮಂದದ ಪದರಗಳನ್ನು, ನೆಲದ ಮಟ್ಟದ ಮೇಲುಗಡೆ ಅಡಿ ಎತ್ತರಕ್ಕೆ ಬರುವ ತನಕ ಹಾಕುತ್ತ ಹೋಗಬೇಕು. ಕೊನೆಯ 9" ದಪ್ಪದ ಪದರ ಕಸದ್ದಾಗಿರಬೇಕು. ಅಗೆದು ರಾಸಿ ಬಿದ್ದಿರುವ ಮಣ್ಣನ್ನು ಇದರಮೇಲೆ ಹಾಕಿ ಮುಚ್ಚಬೇಕು. ಇಷ್ಟೆಲ್ಲ ಸರಿಯಾಗಿ ಮಾಡಿದರೆ, ಇದರಮೇಲೆ ಯಾರಾದರೂ ಓಡಾಡಿದರೆ ಕಾಲುಗಳು ಹೂತುಹೋಗವು. ವಾರದೊಳಗಾಗಿ ಏಕಾಣುಜೀವಿಗಳ ಚಟುವಟಿಕೆಯಿಂದ ಈ ಕಾಂಪೋಸ್ಟ್ ಗೊಬ್ಬರದ ಒಳಗಿನ ಕಾವು 60’ ಸೆಂ.ಗೆ ಏರಿ 2–3 ವಾರಗಳೂ ಹಾಗೇ ಇರುವುದರಿಂದ ಕಸವೂ ಮಲವೂ ಕೊಳೆತು ಎಲ್ಲ ರೋಗಾಣುಗಳೂ ಪರಪಿಂಡಿ ಜೀವಿಗಳೂ ಸಾಯುತ್ತವೆ. ನಾಲ್ಕಾರು ತಿಂಗಳಲ್ಲಿ ಪೂರಾ ಕೊಳೆತು ನೇರವಾಗಿ ಜಮೀನಿಗೆ ಹಾಕಲು ಬರುವ ವಾಸನೆಯಿಲ್ಲದ ಹಾನಿಕರವಲ್ಲದ ಒಳ್ಳೆಯ ಗೊಬ್ಬರದ ಪುಡಿಯಾಗಿರುವುದು. ಲಕ್ಷ ಜನರಿಗೂ ಹೆಚ್ಚಾಗಿರುವ ನಗರಗಳಿಗೆ ಈ ವಿಧಾನ ತರವಲ್ಲ. ದೊಡ್ಡ ಪುರಸಭೆಗಳು ಮಾತ್ರ ಮಲ ಮೂತ್ರಾದಿಗಳನ್ನು ಹೊರಸಾಗಿಸಲು ಒಳಚರಂಡಿ ಏರ್ಪಾಡು ಮಾಡುವುದೇ ಸರಿ.

ಯಂತ್ರದ ನೆರವಿನಿಂದ ಕಾಂಪೋಸ್ಟ್ ಗೊಬ್ಬರವನ್ನು ಬೇಗನೆ ತಯಾರಿಸುವ ವಿಧಾನ ಹೆಚ್ಚಾಗಿ ಜಾರಿಗೆ ಬರುತ್ತಿದೆ. ದೊಡ್ಡ ಪ್ರಮಾಣಗಳಲ್ಲಿ ಕಚ್ಚಾವಸ್ತುಗಳನ್ನು ಪುಡಿ ಮಾಡಿ ವಿಂಗಡಿಸಿ ಉತ್ಪನ್ನವನ್ನು ತಯಾರಿಸಿ ಪಡೆವ ವಿಧಾನವಿದು. ಅರೆದು ಪುಡಿ ಮಾಡುವಾಗ ಅಡ್ಡಿ ಬರುವ ಚಿಂದಿಬಟ್ಟೆ, ಮೂಳೆ, ಲೋಹ, ಗಾಜು ಮುಂತಾದವನ್ನು ಮೊದಲು ಕಸದಿಂದ ಬೇರ್ಪಡಿಸಬೇಕು. ಉಳಿದುದನ್ನು 2" ಮೀರದ ದಪ್ಪದ ಚೂರುಗಳಾಗಿ ಯಂತ್ರ ಪುಡಿಮಾಡುತ್ತದೆ. ಕಚರ, ರೊಚ್ಚು, ರಾಡಿ ಇಲ್ಲವೇ ಮಲಮೂತ್ರಗಳೊಂದಿಗೆ ತಿರುಗುವ ಯಂತ್ರದಲ್ಲಿ ಪುಡಿಮಾಡಿದ್ದನ್ನು ಬೆರೆಸಿ ಕಾವಿನಲ್ಲಿಡಬೇಕು. ಇಲ್ಲಿ ಇಂಗಾಲದ ಪ್ರಮಾಣ, ಕಾವು, ತೇವ, ಕ್ಷಾರಾಮ್ಲಾಂಕ ($P^H$), ಗಾಳಿಗೊಡ್ಡಿಕೆ ಇವನ್ನು ಚೆನ್ನಾಗಿ ಗಮನವಿಟ್ಟು ಹತೋಟಿಯಲ್ಲಿರಿಸಬೇಕು. ನಾಲ್ಕಾರು ವಾರಗಳಲ್ಲೇ ಕಾಂಪೋಸ್ಟ್ ಗೊಬ್ಬರ ತಯಾರಾಗಿರುತ್ತದೆ. ಹಾಲೆಂಡು, ಜರ್ಮನಿ, ಇಸ್ರೇಲ್ ಮುಂತಾದ ಮುಂದುವರಿದ ಕೆಲವು ದೇಶಗಳಲ್ಲಿ ಈ ವಿಧಾನ ಜಾರಿಯಲ್ಲಿದೆ. ಭಾರತದಲ್ಲೂ 5 ಲಕ್ಷಕ್ಕಿಂತ ಹೆಚ್ಚು ಜನರಿರುವ ಕೆಲವು ನಗರಗಳಲ್ಲಿ ಇದನ್ನು ಜಾರಿಗೆ ತರುವ ಯೋಜನೆಯಿದೆ.

**5 ಗೊಬ್ಬರದ ಗುಂಡಿಗಳು:** ಭಾರತದ ಹಳ್ಳಿಗಳಲ್ಲಿ ಕಸವನ್ನು ಎತ್ತಿ ಸಾಗಿಸಿ ವಿಲೇವಾರಿ ಮಾಡುವ ಬೇರೆ ಏರ್ಪಾಡುಗಳಿಲ್ಲ. ಮನೆಗಳ ಸುತ್ತಮುತ್ತಲೂ ಎಲ್ಲೆಂದರಲ್ಲಿ ಕಸವನ್ನು ಚೆಲ್ಲುವುದರಿಂದ ಜಮೀನೂ ಬಹಳ ಕೆಡುತ್ತದೆ. ಒಂದೊಂದು ಮನೆಯವರೂ ಗೊಬ್ಬರದ ಗುಂಡಿಯಗಳನ್ನು ತೋಡಿ ಕಸಹಾಕುವುದರಿಂದ ಹಳ್ಳಿಗಳ ಈ ಕೆಡುಕಿನ ಗಲೀಜನ್ನು ತಪ್ಪಿಸಬಹುದು. ಕಲಗಚ್ಚು, ಅಡುಗೆಮನೆರೊಚ್ಚು, ಗಲೀಜು, ಸಗಣಿ, ಹುಲ್ಲು, ಸೊಪ್ಪುಸದೆ, ಕಡ್ಡಿಗಳನ್ನು ಗುಂಡಿಗಳೊಳಕ್ಕೆ ಹಾಕಿದ ಮೇಲೆ ದಿನವೂ ಮಣ್ಣಿನಿಂದ ಮುಚ್ಚಬೇಕು. ಒಂದನ್ನು ಹಾಗೆ ಮುಚ್ಚಿಹಾಕಿರುವಾಗ ಇನ್ನೊಂದನ್ನು ಬಳಸುವಂತೆ, ಎರಡು ಗುಂಡಿಗಳಿದ್ದರೆ ಅನುಕೂಲ. ಐದಾರು ತಿಂಗಳಲ್ಲಿ ಒಳ್ಳೆಯ ಗೊಬ್ಬರ ತಯಾರಾಗಿರುತ್ತದೆ. ಹಳ್ಳಿಗಳಲ್ಲಿ ಈ ವಿಧಾನ ಪರಿಣಾಮಕಾರಿ, ಅಲ್ಲದೆ ಸರಳ ಎನ್ನಬಹುದು. ಸಗಣಿಯನ್ನು ಒಂದು ಮುಚ್ಚು ಗುಂಡಿಯಲ್ಲಿ ಮುಚ್ಚಿಟ್ಟು ಕೊಳೆಯಿಸುವುದರಿಂದ ಏಳುವ ಅನಿಲದಿಂದ (ಗೋಬರ್ ಗ್ಯಾಸ್) ಮನೆಯ ದೀಪ, ಒಲೆಗಳನ್ನು ಉರಿಸಬರುವುದೇ ಅಲ್ಲದೆ ಕೊನೆಗೆ ಹಸನಾದ ಗೊಬ್ಬರವೂ ದೊರೆಯುತ್ತದೆ.

**6 ನೀರಿನಲ್ಲಿ ಸುರಿತ:** ಕೆರೆ, ಕುಂಟೆ, ಕೊಳಗಳಲ್ಲಾಗಲೀ ಸಣ್ಣ ಹೊಳೆ, ನದಿಗಳಲ್ಲಾಗಲೀ ಊರಿನ ಕಸವನ್ನು ಸುರಿಯಲೇಬಾರದು. ಅದು ಕೊಳೆತು ನಾರುತ್ತ ಗಲೀಜಿಗೆ ಕಾರಣವಾಗುವುದು. ಬೇಗನೆ ದೂರ ಸಾಗುವಂತಿದ್ದು ಅದರಿಂದ ಕೆಟ್ಟ ವಾಸನೆ ನಗರದೊಳಕ್ಕೆ ಬಾರದಿದ್ದಲ್ಲಿ ಮಾತ್ರ ಸಮುದ್ರ, ದೊಡ್ಡ ನದಿಗಳ ದಡದಲ್ಲಿರುವ ನಗರಗಳ ಕಸವನ್ನು ಹರಿದ ನೀರಿಗೆ ಸುರಿದು ಚೆಲ್ಲಬಹುದು.

ಕಸದ ಸಾಗಣೆ ಚೆನ್ನಾಗಿರಬೇಕಾದರೆ ಜನರ ತಿಳಿವಳಿಕೆಯೂ ಚೆನ್ನಾಗಿರಬೇಕು. ತಮ್ಮ ಮನೆಗಳ ಹೊರತಾಗಿ ಆಚಿನ ಪರಿಸರದ ಚೊಕ್ಕತನಕ್ಕೆ ಗಮನ ಹರಿಸುವುದರಲ್ಲಿ ಯಾರಿಗೂ ಆಸಕ್ತಿ ಇರದು. ಅಲ್ಲದೆ, ನಗರ ಸಭೆಗಳೂ ಕಡಿಮೆ ಖರ್ಚಿನಲ್ಲಿ ಕಸ ಸಾಗಣೆ ಉಪಾಯಗಳನ್ನೇ ಹಿಡಿದಿರುವುದರಿಂದ, ಆರೋಗ್ಯ ಕಾಪಾಡಿಕೊಳ್ಳುವ ವಿಚಾರದಲ್ಲಿ ಜನರ ತಿಳಿವಳಿಕೆಗಾಗಿ ಎಡೆಬಿಡದ ಪ್ರಚಾರ ನಡೆಯುತ್ತಿರಬೇಕು. **(ಡಿ.ಎಸ್.ಎಸ್.)**

**ಕಸಾಯಿ ಖಾನೆ :** ಮಾಂಸಾಹಾರ ಒದಗಿಸಲು ಪ್ರಾಣಿಗಳನ್ನು ವಧೆ ಮಾಡುವ ಮನೆ (ಸ್ಲಾಟರ್ ಹೌಸ್). ಇದು ಸಾಮಾನ್ಯವಾಗಿ ಊರ ಹೊರಗೆ ಇರುತ್ತದೆ. ಇಂಥ ಮನೆಗೆ ಆಬಾಟ್ರೆ ಅಥವಾ ಹೊಡೆದು ಹಾಕು ಎಂಬ ಪದದಿಂದ ಅಸ್ತಿತ್ವಕ್ಕೆ ಬಂದ ಅಬಾಟ್ವಾರ್ ಎಂಬ ಹೆಸರು ರೂಢಿಯಲ್ಲಿದೆ. ಇಂದಿನ ಕಸಾಯಿ ಖಾನೆಯಲ್ಲಿ ಪ್ರಾಣಿಗಳ ವಧೆಗೆ ಬೇಕಾದ ಆಧುನಿಕ ಉಪಕರಣಗಳನ್ನು ಜೋಡಿಸಿರುತ್ತಾರೆ. ಮಧ್ಯದ ಹಜಾರಿನಲ್ಲಿ ಪ್ರಾಣಿಗಳ ಮುಂಡವನ್ನು ತೂಗುಹಾಕಿ ಅದರಿಂದ ಮಾಂಸವನ್ನು ಬೇರ್ಪಡಿಸುವ ಉಪಕರಣಗಳನ್ನು ಸಜ್ಜು ಮಾಡಿರುತ್ತಾರೆ. ಅದರ ಎದುರು ಭಾಗದಲ್ಲಿ ಶೀತಳ ಗೂಡುಗಳಿರುತ್ತವೆ. ಇವುಗಳಲ್ಲಿ ಮಾಂಸವನ್ನು ದಾಸ್ತಾನು ಮಾಡಿ ಹದ ಮಾಡುತ್ತಾರೆ. ಈ ಹಜಾರದಲ್ಲಿ ಒಂದು ಬಾಗಿಲು ಮಾರುಕಟ್ಟೆಯಿಂದ ತಂದ ದನಗಳ ದೊಡ್ಡಿಗೆ ಹೋಗುತ್ತದೆ. ಕಸಾಯಿ ಖಾನೆಯ ನೆಲ ಎಲ್ಲೆಡೆಯಲ್ಲೂ ನೀರು ಇಂಗದಂತೆ ಹಸನಾಗಿರಬೇಕು. ಅಚ್ಚು

ಕಟ್ಟಾದ ಚರಂಡಿಗಳಿದ್ದಲ್ಲಿ ನೀರು ನಿಲ್ಲದೆ ಹರಿದು ಒಟ್ಟು ವಾತಾವರಣದ ನೈರ್ಮಲ್ಯಕ್ಕೆ ಸಹಾಯಕವಾಗಿರುತ್ತದೆ. ಎಲ್ಲ ಆಧುನಿಕ ಕಸಾಯಿ ಖಾನೆಗಳಲ್ಲೂ ಒಂದು ಸಣ್ಣ ಪ್ರಯೋಗ ಶಾಲೆ ಇರುತ್ತದೆ. ಇಲ್ಲಿ ಮಾಂಸವನ್ನು ರೋಗೋತ್ಪತ್ತಿ ಜೀವಾಣುಗಳ, ಮತ್ತಿತರ ಗುಣಗಳ ಪರೀಕ್ಷೆ ಮಾಡುವುದು ಸಾಧ್ಯ. ತಿನ್ನುವುದಕ್ಕೆ ಯೋಗ್ಯವಲ್ಲದ ಮಾಂಸವನ್ನು ಉತ್ತಮವಾದ ಮಾಂಸದಾಸ್ತಾನು ಮಾಡಿರುವ ಹಜಾರದಿಂದ ದೂರವಾಗಿ ಬೇರೆ ಸ್ಥಳದಲ್ಲಿ ಶೇಖರಿಸಿರುತ್ತಾರೆ. ಸಾಮಾನ್ಯವಾಗಿ ಕಸಾಯಿ ಖಾನೆಗಳು ಊರಿನ ಹೊರಗೆ ಸಾಗಾಣಿಕೆಗೆ ಅನುಕೂಲವಾಗಿ ರೈಲ್ವೆ ನಿಲ್ದಾಣ ಮತ್ತು ಮಾಂಸದ ಮಾರುಕಟ್ಟೆಗಳಿಗೆ ಹಾಗೂ ಅಂಗಡಿಗಳಿಗೆ ಸಮೀಪವಾಗಿರುತ್ತವೆ. ಇದಲ್ಲದೆ ಪ್ರಾಣಿಗಳನ್ನು ವಧೆ ಮಾಡುವ ಮೊದಲು ಅವುಗಳಲ್ಲಿ ಮನುಷ್ಯನಿಗೆ ಹಾನಿಕರವಾದ ರೋಗಗಳಿವೆಯೇ ಎಂಬುದನ್ನು ಪರೀಕ್ಷಿಸಲು ಬೇಕಾದ ಸಲಕರಣೆಗಳು ಮತ್ತು ಸಿಬ್ಬಂದಿ, ಆಧುನಿಕ ಕಸಾಯಿ ಖಾನೆಗಳಲ್ಲಿ ಅನಿವಾರ್ಯ. ನೈರ್ಮಲ್ಯದ ದೃಷ್ಟಿಯಿಂದ ಕೊಂದ ಪ್ರಾಣಿಗಳಿಂದ ಒದಗುವ ಮಾಂಸ, ಹಾಗೂ ಉಪ ಉತ್ಪನ್ನಗಳಾದ ಚರ್ಮ, ಕೊಂಬು, ಗೊರಸು, ರಕ್ತ, ಗೊಬ್ಬರವಾಗಬಲ್ಲ ಮಾಂಸದ ಕಸ ಇವುಗಳ ವ್ಯವಸ್ಥೆಯ ಕಾರ್ಯ ಶೀಘ್ರವಾಗಿ ಮಾಡುವ ಅನುಕೂಲ ಕಸಾಯಿ ಖಾನೆಗಳಲ್ಲಿ ಅಗತ್ಯ. ಕಸಾಯಿ ಖಾನೆಯ ಕೇಂದ್ರ ಕಟಪ್ಪಡದ ಮಾದರಿ ಎರಡು ತೆರನಾದ್ದು: 1 ಯಾವುದೇ ಅಡ್ಡ ಗೋಡೆಗಳಿಲ್ಲದ ಒಂದು ದೊಡ್ಡ ಹಜಾರ; ಇದರಲ್ಲಿ ಪ್ರಾಣಿಗಳನ್ನು ವಧೆ ಮಾಡುವ ಹಾಗೂ ಮುಂಡದಿಂದ ಮಾಂಸ ಬೇರ್ಪಡಿಸುವ ಉಪಕರಣಗಳನ್ನು ಜೋಡಿಸಿರುತ್ತಾರೆ. 2 ದೊಡ್ಡ ಹಜಾರವನ್ನು ಅರ್ಧ ಎತ್ತರದ ಅಡ್ಡ ಗೋಡೆಗಳಿಂದ ವಿಂಗಡಿಸಿದ 5 ಮಳಿಗೆಯಂಥ ವಿಭಾಗಗಳು. ಪ್ರತಿಯೊಂದರಲ್ಲೂ 4–5 ಕುರಿ ಅಥವಾ ಇತರ ಪ್ರಾಣಿಗಳನ್ನು ಕೊಂದ ಮಾಂಸವನ್ನು ಬೇರ್ಪಡಿಸುವ ಏರ್ಪಾಡಿರುತ್ತದೆ. ಇಂಗ್ಲೆಂಡ್ ದೇಶದಲ್ಲಿ ಇಂಥ ಕಸಾಯಿ ಮಳಿಗೆಗಳು ಸಾಮಾನ್ಯ. ಈ ರೀತಿಯ ವ್ಯವಸ್ಥೆಯಿಂದ ಒಂದು ಪ್ರಾಣಿಯ ವಧೆಯನ್ನು ಇನ್ನೊಂದು ಪ್ರಾಣಿ ನೋಡುವುದು ತಪ್ಪುತ್ತದೆ. ಖಾಸಗೀ ಕಟುಕರು ಒಂದೆರಡು ಮಳಿಗೆಗಳನ್ನು ಬಾಡಿಗೆಗೆ ತೆಗೆದುಕೊಂಡು ಅವರು ತಂದ ಪ್ರಾಣಿಗಳನ್ನು ಇತರರಿಂದ ಅಡಚಣೆಗಳಿಲ್ಲದೆ ಕೊಂದು ಮಾಂಸವನ್ನು ಒಪ್ಪ ಮಾಡಿ ತೆಗೆದುಕೊಂಡು ಹೋಗಬಹುದು. ಒಂದೇ ರೀತಿಯ ಕಸಾಯಿಖಾನೆ ಇರುವ ಸಂದರ್ಭದಲ್ಲಿ ಕೇಂದ್ರ ಕಟ್ಟಡದಲ್ಲಿ, ದನ, ಕರು, ಕುರಿಗಳ ವಧೆಗೆ ಕೇಂದ್ರ ಕಟ್ಟಡವನ್ನು ಬಳಸುತ್ತಾರೆ. ಹಂದಿ ಮಾಂಸ ಬೇರ್ಪಡೆಗೆ ಕೂರೆ ಮುಳ್ಳುಗಳನ್ನು ತೆಗೆಯಬೇಕಾಗಿರುವುದರಿಂದ ಅದಕ್ಕೋಸ್ಕರ ಬೇರೆ ಕಟ್ಟಡದ ಏರ್ಪಾಡಿರುತ್ತದೆ.

ಭಾರತದಲ್ಲಿ ಕುರಿ, ಆಡು, ಜಾನುವಾರು, ಹಂದಿ ಮುಂತಾದ ಬೇರೆ ಬೇರೆ ಜಾತಿಯ ಪ್ರಾಣಿಗಳಿಗೆ ಪ್ರತ್ಯೇಕ ಕಸಾಯಿ ಖಾನೆಗಳಿರುತ್ತವೆ. ಗೋಮಾಂಸ ತಿನ್ನದ ಜನಕ್ಕೋಸ್ಕರ ಕೇವಲ ಆಡು ಕುರಿಗಳನ್ನು ಕೊಂದು ಅವುಗಳ ಮಾಂಸವನ್ನೊದಗಿಸಲು ಕಸಾಯಿ ಖಾನೆಗಳಿವೆ. ಹಾಗೆಯೇ ಹಂದಿ ಮಾಂಸವನ್ನು ತಿನ್ನದ ಜನಗಳ ಅನುಕೂಲಕ್ಕೋಸ್ಕರ ಪ್ರತ್ಯೇಕವಾದ ಹಂದಿಗಳ ಕಸಾಯಿ ಖಾನೆಗಳ ವ್ಯವಸ್ಥೆ ಇದೆ.

ಆಧುನಿಕ ಕಸಾಯಿ ಖಾನೆಗಳಲ್ಲಿ ಪ್ರಾಣಿಗಳ ಮುಂಡವನ್ನು ನೆತ್ತಿಯ ಮೇಲ್ಗಡೆ ಹಾಕಿದ ಕಂಬಿಗಳ ಸಹಾಯದಿಂದ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವ ಏರ್ಪಾಟಿರುತ್ತದೆ. ಹಾಗೆಯೇ ಉಪ ಉತ್ಪನ್ನಗಳನ್ನು ತಂತಿ ಬುಟ್ಟಿಗಳು ಇಲ್ಲವೆ ಕಡಾಯಿಗಳ ಮೂಲಕ ಸಾಗಿಸುತ್ತಾರೆ. ಇವುಗಳಲ್ಲದೆ ಬೇಸಗೆಯಲ್ಲಿ ಉಪಯೋಗಕ್ಕೋಸ್ಕರ ಶೀತಾಗಾರದ ವ್ಯವಸ್ಥೆ ಇರುತ್ತದೆ. ಚರ್ಮ ಸುಲಿದ ಮುಂಡಗಳನ್ನು ಒಂದು ಸ್ಥಳದಿಂದ ಇನ್ನೊಂದು ಊರಿಗೆ ಸಾಗಿಸುವುದಕ್ಕೂ ಶೀತಳ ವ್ಯವಸ್ಥೆ ಅಗತ್ಯ.

**ಉಪೋತ್ಪನ್ನಗಳು:** ಆಹಾರಯೋಗ್ಯ ಮಾಂಸ ಕಸಾಯಿ ಖಾನೆಯ ಪ್ರಧಾನ ಉತ್ಪನ್ನ. ಉಪೋತ್ಪನ್ನಗಳಲ್ಲಿ ಮುಖ್ಯವಾದವು ತೊಗಲು ಮತ್ತು ಕೊಬ್ಬು, ಪ್ರಾಣಿ ರಕ್ತ, ಗ್ರಂಥಿಗಳು, ಕರುಳು, ಮೂಳೆ ಇವೆಲ್ಲವುಗಳಿಗೆ ವಿಶಿಷ್ಟವಾದ ಉಪಯೋಗಗಳಿವೆ. (ಎಸ್.ಎಂ.ಬಿ.)

**ಕಸಾವ ಪಿಷ್ಟ :** ಮ್ಯಾನಿಹಾಟ್ ಎಸ್ಕುಲೆಂಟಾ, ಮ್ಯಾನಿಹಾಟ್ ಯೂಟಿಲಿಸಿಮಾ, ಮ್ಯಾನಿಹಾಟ್ ಡಲ್ಸಿಸ್ ಎಂಬ ಯುಫೋರ್ಬಿಯೇಸೀ ಜಾತಿಯ ಗಿಡಗಳ ಗೆಡ್ಡೆಯಿಂದ ತಯಾರಿಸಿದ ಪಿಷ್ಟ. ಲ್ಯಾಟಿನ್ ಅಮೆರಿಕ, ಆಫ್ರಿಕ, ಭಾರತ ಮತ್ತು ಇಂಡೋನೇಷ್ಯಗಳಲ್ಲಿ ಗೆಡ್ಡೆಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಮತ್ತು ಅಧಿಕ ಪ್ರಮಾಣದಲ್ಲಿ ಬೆಳೆಸುತ್ತಾರೆ. ಗೆಡ್ಡೆಗಳು ಎರಡು ಬಗೆ. ಒಂದು ಕಹಿ, ಮತ್ತೊಂದು ಕಹಿ ಇರುವುದಿಲ್ಲ. ಕಹಿಗೆಡ್ಡೆಯಲ್ಲಿ ಪಿಷ್ಟಪ್ರಮಾಣ ಜಾಸ್ತಿ ಇರುವುದರಿಂದ ಪಿಷ್ಟದ ತಯಾರಿಕೆಗೆ ಅದನ್ನೇ ಉಪಯೋಗಿಸುತ್ತಾರೆ. ತಯಾರಿಸುವ ವಿಧಾನ: ಗಿಡಗಳು 10–12 ತಿಂಗಳು ಬೆಳೆದ ಅನಂತರ, ಗೆಡ್ಡೆಗಳನ್ನು ಕೊಯ್ಲುಮಾಡಿ, ಮಣ್ಣು ಇತ್ಯಾದಿ ಕಲ್ಮಷಗಳನ್ನು ಹೋಗಲಾಡಿಸಲು ನೀರಿನಲ್ಲಿ ಚೆನ್ನಾಗಿ ತೊಳೆದು, ಹಾಲಿನಂಥ ದ್ರಾವಣ ಬರುವವರೆಗೆ ನೀರಿನೊಂದಿಗೆ ಜಜ್ಜಿ, ಬಟ್ಟೆ ಅಥವಾ ಜರಡಿಗಳಲ್ಲಿ ಶೋಧಿಸಿ ಬಂದ ದ್ರಾವಣವನ್ನು ತೊಟ್ಟಿಗಳಲ್ಲಿ ಕೂಡಿಡುತ್ತಾರೆ. ಕೆಲವು ಗಂಟೆಗಳ ಅನಂತರ ಪಿಷ್ಟವೆಲ್ಲ ಕೆಳಗೆ ಶೇಖರಿಸುತ್ತದೆ. ಮೇಲಿನ ತಿಳಿನೀರು ಉಪಯುಕ್ತವಲ್ಲ. ಪಿಷ್ಟವನ್ನು ಕ್ಲೋರಿನ್ ಅಥವಾ ಗಂಧಕದ ಡೈಆಕ್ಸೈಡಿನಿಂದ ಚೆಲುವಿಸಿ ನೀರಿನಿಂದ ಮನಃ ಮನಃ ತೊಳೆದು ಒಣಗಿಸಿ ಪುಡಿಮಾಡಿ ಜರಡಿಯಾಡಿದ (140+ಮೆಹ್) ಅನಂತರ ಶುದ್ಧವಾದ ಪಿಷ್ಟ ದೊರಕುತ್ತದೆ. ಪಿಷ್ಟದ ಹಳಕುಗಳು 5 ರಿಂದ 35 (ಸರಾಸರಿ 15) ಗಾತ್ರವಿರುತ್ತವೆ.

**ಉಪಯೋಗ:** ಆಹಾರಕ್ಕೋಸ್ಕರ ಹೆಚ್ಚಾಗಿ ಗೆಡ್ಡೆಗಳನ್ನು ಉಪಯೋಗಿಸುತ್ತಾರೆ. ಕಸಾವಪಿಷ್ಟವನ್ನು ನೀರಿನಲ್ಲಿ ಕದರಿ ಕುದಿಸಿದರೆ ಸಮರೂಪ ದ್ರಾವಣ ಉಂಟಾಗುತ್ತದೆ. ಇದನ್ನು ಲಾಂಡ್ರಿಗಳಲ್ಲೂ, ಅಧಿಕವಾಗಿ ಬಟ್ಟೆ ಕಾಗದ ಗೋಂದುಗಳ ತಯಾರಿಕೆಯಲ್ಲಿಯೂ ಉಪಯೋಗಿಸುತ್ತಾರೆ. ಭಾರತದಲ್ಲಿ ತಯಾರಿಸಿದ ಬಹು ಪ್ರಮಾಣವನ್ನು ಬಟ್ಟೆ ಕೈಗಾರಿಕೆಯಲ್ಲಿ ಉಪಯೋಗಿಸುತ್ತಾರೆ. (ಎಂ.ಆರ್.ಆರ್.)

**ಕಸಿಮಾಡುವಿಕೆ (ಪ್ರಾಣಿಗಳಲ್ಲಿ) :** ಅಂಗಾಂಶದ ಮತ್ತು ಅಂಗದ ಕಸಿ ಮಾಡುವಿಕೆ ಅಥವಾ ನಾಟಿ ಹಾಕುವಿಕೆಯಂತೆಯೇ (ಗ್ರಾಫ್ಟಿಂಗ್, ಟ್ರಾನ್ಸ್‌ಪ್ಲಾಂಟೇಷನ್) ಕಪ್ಪೆ, ಇಲಿ ಮುಂತಾದವುಗಳಲ್ಲೂ ಒಂದು ಪ್ರಾಣಿಯ ದೇಹದ ಒಂದು ಭಾಗದಿಂದ ಇನ್ನೊಂದಕ್ಕೆ ಅಥವಾ ಒಂದು ಪ್ರಾಣಿಯಿಂದ ಇನ್ನೊಂದು ಪ್ರಾಣಿಗೆ ಅಂಗಾಂಶಗಳನ್ನೊ (ಊತಕ) ಅಂಗಗಳನ್ನೊ ತೆಗೆದು ನಾಟಿ ಹಾಕಬಹುದು. ಈ ವಿಧಾನವನ್ನನುಸರಿಸಿ ಮತ್ತೊಂದಕ್ಕೆ ಯಶಸ್ವಿಯಾಗಿ ವಿನಿಮಯ ಮಾಡಲಾಗಿದೆ. ಪ್ರಾಣಿಗಳ ಬೆಳವಣಿಗೆಯಲ್ಲಿ ನ್ಯೂಕ್ಲಿಯಸ್ ಯಾವ ಪಾತ್ರ ವಹಿಸುವುದೆನ್ನುವುದರ ಬಗ್ಗೆ ಅರಿಯಲು ಈ ಪ್ರಯೋಗ ಸಹಕಾರಿಯಾಗಿದೆ. ಇದರಂತೆಯೇ ಇಲಿಗಳಲ್ಲಿ ಚರ್ಮದ ಕಸಿ ಮಾಡುವಿಕೆಯ ಬಗ್ಗೆ ಅನೇಕ ಪ್ರಯೋಗಗಳು ನಡೆದಿವೆ. ಕಸಿಮಾಡುವಿಕೆಯಲ್ಲಿ ನಾನಾಬಗೆಯ ತೊಂದರೆಗಳು ಹುಟ್ಟುತ್ತವೆ. ಈ ತೊಂದರೆಗಳಲ್ಲಿ ಮುಖ್ಯವಾದುವು ಇವು: 1 ನಾಟಿ ಹಾಕಿದ ಭಾಗ ರಕ್ತನಾಳಗಳನ್ನು ಬೆಳೆಸಿಕೊಂಡು ತನಗೆ ಬೇಕಾದ ಪೋಷಕವಸ್ತು ಹಾಗೂ ಆಮ್ಲಜನಕವನ್ನು ಪಡೆಯಬೇಕಾಗುವುದು. 2 ನಾಟಿ ಹಾಕಿದ ಕೆಲವು ದಿನಗಳಲ್ಲೇ ವಿರೋಧಕ್ರಿಯೆಯೊಂದು ಆರಂಭವಾಗಿ ದಾನ ಪಡೆದ ದೇಹ ಈ ಕಸಿಯನ್ನು ವಿಸರ್ಜಿಸುತ್ತದೆ. ಇದಕ್ಕೆ ಮುಖ್ಯ ಕಾರಣ ದಾನ ಪಡೆದ ಪ್ರಾಣಿಯ ರೋಗರಕ್ಷಣಾಕ್ರಮ: ದೇಹಕ್ಕೆ ಸೇರುವ ಬ್ಯಾಕ್ಟೀರಿಯ ಮುಂತಾದುವುಗಳ ಆಕ್ರಮಣವನ್ನು ಎದುರಿಸಲು ದೇಹ ಪ್ರತಿಕಾಯಗಳನ್ನು (ಆಂಟಿ ಬಾಡೀಸ್) ಉತ್ಪತ್ತಿ ಮಾಡುವಂತೆಯೇ ನಾಟಿ ಹಾಕಿದ ಭಾಗದ ವಿರುದ್ಧವಾಗಿಯೂ ದಾನಪಡೆದ ಪ್ರಾಣಿಯ ದೇಹ ಪ್ರತಿಕಾಯಗಳನ್ನು ಉತ್ಪತ್ತಿ ಮಾಡುವುದು. ಈಗೀಗ ಬೆಳವಣಿಗೆ ಮತ್ತು ಜೀವಕೋಶ ವಿಭಜನೆಯನ್ನು ನಿರೋಧಿಸುವ ಔಷಧಿಗಳಾದ ಇಮ್ಯೂರಾನ್, ಆಕ್ಟಿನೋಮೈಸಿನ್–ಸಿ ಮತ್ತು ಸಂಯೋಜಿಸಲಾದ ಅಂಗವನ್ನು ತ್ಯಜಿಸುವ ಪ್ರತಿಕ್ರಿಯೆಯನ್ನು ನಿರೋಧಿಸುವ ವಸ್ತುವಾದ ಆಡ್ರಿನಲ್ ಗ್ರಂಥಿಯ ಕಾರ್ಟಿಕೋಸ್ಟೀರಾಯಿಡ್ ಹಾರ್ಮೋನುಗಳನ್ನೂ ಹಾಗೂ ಪ್ರತಿಪಾದಾರ್ಥ ಉತ್ಪತ್ತಿಯಲ್ಲಿ ಮುಖ್ಯ ಪಾತ್ರ ವಹಿಸುವ ಅಂಗಗಳಾದ ಥೈಮಸ್, ಗುಲ್ಮ ಮತ್ತು ಪಕ್ಷಿಗಳಲ್ಲಿನ ಬರ್ಸ ಫ್ಯಾಬ್ರಿಕಸ್ ಮುಂತಾದುವುಗಳನ್ನು ತೆಗೆದು ಸಂಯೋಜಿಸುವುದರಿಂದ ಈ ವಿರೋಧ ಕ್ರಿಯೆಯನ್ನು ಯಶಸ್ವಿಯಾಗಿ ಎದುರಿಸಲಾಗಿದೆ. ಕಾರ್ಟಿಕೋಸ್ಟೀರಾಯ್ಡ್ ಹಾರ್ಮೋನುಗಳನ್ನು ಉಪಯೋಗಿಸುವ ವಿಧಾನವನ್ನು ಸಿ. ಝುಕೋವಸ್ಕಿ ಮತ್ತು ಸಿ.ಎಂ. ಕ್ಯಾಲೊವೆ ಅವರು ಪ್ರಾಣಿಗಳಲ್ಲಿಯೂ ಟಿ. ಸ್ಟಾರ್ಸಲ್ ಮತ್ತು ಅವರ ಸಂಗಡಿಗರು ಮನುಷ್ಯನಲ್ಲಿಯೂ ಅನುಸರಿಸಿದ್ದಾರೆ. ಅಲ್ಲದೆ ದಾನ ಪಡೆದ ಪ್ರಾಣಿಯ ದೇಹದ ಮೇಲೆ ಅಥವಾ ನಾಟಿ ಹಾಕುವ ಅಂಗಾಂಶದ ಮೇಲೆ ಮಾರಕವಲ್ಲದ ಪ್ರಮಾಣದಲ್ಲಿ ಎಕ್ಸ್–ಕಿರಣಗಳನ್ನು ಹಾಯಿಸಿ ಪ್ರತಿಕ್ರಿಯೆ ಪ್ರಚೋದಕ ವಸ್ತುಗಳನ್ನು (ಅಂಟಿಜೆನ್ಸ್) ನಾಶ ಮಾಡಬಹುದು. ಇದರಿಂದ ದಾನಪಡೆವ ಪ್ರಾಣಿಯಲ್ಲಿ ಪ್ರತಿ ಕಾಯಗಳ ತಯಾರಿ ನಿಂತುಹೋಗುತ್ತದೆ. ಆದರೆ ದಾನಪಡೆದ ಪ್ರಾಣಿ ತನ್ನೆಲ್ಲ ರೋಗನಿರೋಧಕ ಶಕ್ತಿಯನ್ನು ಕಳೆದುಕೊಳ್ಳುವುದೇ ಇದರಲ್ಲಿನ ಒಂದು ದೊಡ್ಡ ನ್ಯೂನತೆ. ಸ್ಟಾರ್ಸಲ್ ಅವರು ವಿವಿಧ ರಕ್ತಗುಂಪುಗಳ ನಡುವೆ ಪ್ರಯೋಗಗಳನ್ನು ನಡೆಸಿ O ಮತ್ತು Rh+ಗುಂಪಿನ ಮನುಷ್ಯರಿಂದ ಬೇರೆ ಯಾವ ಗುಂಪಿನ ಮನುಷ್ಯರಿಗೂ ಹಾಗೆಯೆ ಯಾರಿಂದ ಬೇಕಾದರೂ AB ಗುಂಪಿಗೂ ಕಸಿಮಾಡಬಹುದೆಂದೂ ತಿಳಿಸಿದ್ದಾರೆ. ಇದೇ ದೆಸೆಯಲ್ಲಿ ಕಳೆದ ಮೂರು ದಶಕಗಳಿಂದ ಹೆಚ್ಚಾಗಿ ಪ್ರಯೋಗಗಳನ್ನು ನಡೆಸಿದ ಬ್ರಿಟನ್ನಿನ ಜೀವಶಾಸ್ತ್ರಜ್ಞ ಪಿ.ಬಿ. ಮೆಡಾವರ್ ಎಂಬುವರಿಗೆ 1960ರಲ್ಲಿ ನೋಬೆಲ್ ಪಾರಿತೋಷಕ ಸಿಕ್ಕಿದೆ. **(ನೋಡಿ– ಕಸಿಮಾಡುವಿಕೆ,–ಅಂಗಾಂಶದ–ಮತ್ತು–ಅಂಗದ)** (ಎಚ್.ಬಿ.ಡಿ.)

**ಕಸಿಮಾಡುವಿಕೆ (ಸಸ್ಯಗಳಲ್ಲಿ) :** ಎರಡು ಬೇರೆ ಬೇರೆ ಸಸ್ಯಗಳ ಭಾಗಗಳನ್ನು ಒಗ್ಗೂಡಿಸಿ ಒಂದಾಗಿ ಬೆಳೆಸುವ ಒಂದು ಕ್ರಮ (ಗ್ರಾಫ್ಟಿಂಗ್). ಅಬೀಜೋತ್ಪಾದನೆಯಂತೆಯೇ ಈ ವಿಧಾನದಿಂದಲೂ ಸಸ್ಯಗಳನ್ನು ವೃದ್ಧಿ ಮಾಡಬಹುದಾದರೂ ಇವೆರಡು ಕ್ರಮಗಳಲ್ಲೂ ಅನೇಕ ವ್ಯತ್ಯಾಸಗಳುಂಟು. (ನೋಡಿ– ಅಬೀಜೋತ್ಪಾದನೆ) ಒಂದು ಸಸ್ಯದ ಭಾಗ ಬೇರು ಬಿಟ್ಟು ಸ್ವಂತವಾಗಿ ಬೆಳೆಯುತ್ತಿರುವ ಸಸ್ಯದ ಕಾಂಡ, ಬೊಡ್ಡೆ ಅಥವಾ ತಾಳು. ಇದನ್ನು ಕಸಿತಾಳು (ಸ್ಟಾಕ್) ಎನ್ನುತ್ತಾರೆ. ಇದರ ಮೇಲೆ ಕೂರಿಸಿ ಸೇರಿಸುವ ಭಾಗ ಸ್ವಂತವಾಗಿ ಬೆಳೆಯುತ್ತಿರುವ ಉತ್ತಮ ಗುಣಗಳುಳ್ಳ ಮತ್ತೊಂದು ಸಸ್ಯದ್ದು. ಈ ಭಾಗ ಕೊಂಬೆ, ಕುಡಿ, ಕೊನೆ, ಕಣ್ಣು ಅಥವಾ ಅಂಟಾಗಿರಬಹುದು. ಈ ಭಾಗವನ್ನು ಕಸಿ ಕೊಂಬೆ (ಸೈಯನ್) ಎನ್ನುತ್ತಾರೆ. ತಾಳು ಮತ್ತು ಕಸಿಕೊಂಬೆ ಸರಿಕೂಡಿದರೆ, ಕಸಿ ಕೊಂಬೆಯಿಂದ ಹೊರಡುವ

ರೆಂಬೆ, ಎಲೆ, ಹೂ ಇತ್ಯಾದಿ ಅದರ ತಳಿಯನ್ನೇ ಹೋಲುತ್ತವೆ. ತಾಳಿನ ಕೆಲಸ ಬೇರುಗಳಿಂದ ನೀರು ಹಾಗೂ ಲವಣಗಳನ್ನು ಕಸಿಕೊಂಬೆಗೆ ಒದಗಿಸುವುದು ಮತ್ತು ಅದಕ್ಕೆ ಆಸರೆಯಾಗಿರುವುದು ಅಷ್ಟೆ. ತಾಳು ಮತ್ತು ಕಸಿಕೊಂಬೆ ಪರಸ್ಪರ ವಿರೋಧವಾಗಿರಬಾರದು ಅಂದರೆ ಬೇರೆ ಬೇರೆ ಜಾತಿಯವಾಗಿರಬಾರದು. ಆದರೆ, ಅಪೂರ್ವವಾಗಿ ಒಂದೇ ಕುಟುಂಬದ ಎರಡು ಜಾತಿಗಳನ್ನು ಕೂಡಿಸುವುದೂ ಉಂಟು.

**ಕಸಿ ಕಟ್ಟುವ ಉದ್ದೇಶ ಮತ್ತು ಉಪಯೋಗಗಳು:** 1 ಇಷ್ಟಪಟ್ಟ ಲಕ್ಷಣಗಳುಳ್ಳ ಸಸ್ಯಗಳ ಪ್ರಭೇದಗಳನ್ನು ಉಳಿಸಿಡುವುದು ಮತ್ತು ಹೆಚ್ಚಿಸುವುದು. 2 ತುಂಡು ಹಾಕಿಯೋ ಇತರ ಬಗೆಯ ಅಬೀಜೋತ್ಪಾದನ ಕ್ರಮದಿಂದಲೋ ಸಸ್ಯಗಳನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗದಿದ್ದರೆ ಕಸಿಕಟ್ಟಿ ಹಾಗೆ ಮಾಡಿಕೊಳ್ಳಬಹುದು. 3 ಒಂದು ಪ್ರದೇಶದ ಹವೆ ಮತ್ತು ಮಣ್ಣು ಪ್ರತಿಕೂಲವಾಗಿ ಸಸ್ಯದ ತಳಿಗಳು ಚೆನ್ನಾಗಿ ಬೆಳೆಯದಿದ್ದರೆ, ಆ ಪ್ರತಿಕೂಲಗಳನ್ನು ಎದುರಿಸಿ ರೋಗರುಜಿನಗಳಿಗೆ ಈಡಾಗದಂಥ ಸ್ಥಳೀಯ ಬುಡಗಳ ಮೇಲೆ ಈ ತಳಿಗಳನ್ನು ಕಸಿ ಕಟ್ಟಿ ಬೆಳೆಸಿಕೊಳ್ಳಬಹುದು. ಉದಾಹರಣೆಗೆ ಕಿತ್ತಳೆ (ಕೊಡಗು ಅಥವಾ ನಾಗಪುರಿ ಕಿತ್ತಳೆ) ಗಿಡವನ್ನು ಅದರ ಸ್ವಂತ ಬೇರಿನ ತಾಳಿನ ಮೇಲೆಯೇ ಬೆಳೆಯಲು ಬಿಟ್ಟಲ್ಲಿ ಅದು ಡೈ ಬ್ಯಾಕ್ ಎಂಬ ರೋಗಕ್ಕೆ ತುತ್ತಾಗುತ್ತದೆ. ಅದರ ಬದಲು ಗಜನಿಂಬೆ ತಾಳಿನ ಮೇಲೆ ಕಸಿ ಕಟ್ಟಿದಲ್ಲಿ ಪ್ರವರ್ಧಮಾನಕ್ಕೆ ಬರುತ್ತದೆ. ನಿರ್ಬಲ ತಳಿ ಅಥವಾ ವಂಶಗಳನ್ನು ಬಲವಾದ ತಾಳಿನ ಮೇಲೆ ಕಸಿ ಹಾಕಿದರೆ ಇವು ಕೂಡ ಬಲಗೊಳ್ಳುತ್ತವೆ. 4 ಶೀಘ್ರವಾಗಿ ಫಲ ದೊರಕಿಸಿಕೊಳ್ಳಲು ಕಸಿ ಹಾಕುತ್ತಾರೆ. ಉದಾಹರಣೆಗೆ ಸಪೋಟ; ಇದನ್ನು ಬೀಜದಿಂದಲೇ ಬೆಳೆಸಿದರೆ ಫಲಕ್ಕಾಗಿ ಸುಮಾರು 8–10 ವರ್ಷ ಕಾಯಬೇಕು. ಅದೇ ಕಸಿ ಕಟ್ಟಿದ ಸಪೋಟ 2–3 ವರ್ಷಗಳಲ್ಲಿ ಫಲ ಕೊಡುತ್ತದೆ. 5 ಸಾಮಾನ್ಯವಾಗಿ ತಾಳಿನ ಗುಣ ಕಸಿಕೊಂಬೆಗೂ ಕಸಿಕೊಂಬೆಯ ಗುಣ ತಾಳಿಗೂ ವರ್ಗವಾಗುವುದಿಲ್ಲ. ಎರಡೂ ಒಟ್ಟಿಗೆ ಬೆಳೆದರೂ ತಮ್ಮ ಪ್ರತ್ಯೇಕ ಗುಣಗಳನ್ನೇ ಉಳಿಸಿಕೊಳ್ಳುತ್ತವೆ. ಆದರೆ ಕೆಲವು ಸಸ್ಯಗಳಲ್ಲಿ ತಾಳಿನ ಪ್ರಭಾವ ಕಸಿಕೊಂಬೆಯ ಮೇಲೆ ಕಾಣಬರುವುದುಂಟು. ಉದಾಹರಣೆಗೆ ಗುಜ್ಜು, ಚಿಲಕ ಒಡೆಯುವುದು (ಪ್ರೊಲಿಫೆರೇಶನ್) ಮುಂತಾದುವು. 6 ಕೆಲವು ವೇಳೆ ಗಾಯದಿಂದ ಎರಡಾಗಿರುವ ಸಸ್ಯಭಾಗಗಳನ್ನು ಕಸಿ ಕಟ್ಟಿ ಒಗ್ಗೂಡಿಸಬಹುದು. ಇದನ್ನು ಸೇತುವೆ ಕಸಿ (ಬ್ರಿಜ್ ಗ್ರಾಫ್ಟಿಂಗ್) ಎನ್ನುತ್ತಾರೆ.

ಕಸಿ ಕಟ್ಟುವ ಕ್ರಮಗಳನ್ನು ಸ್ಥೂಲವಾಗಿ ಎರಡು ವಿಧಗಳಾಗಿ ವರ್ಗಮಾಡುತ್ತಾರೆ. ಕಸಿಕೊಂಬೆಯ ಕಸಿ (ಗ್ರಾಫ್ಟಿಂಗ್), ಕಣ್ಣು ಕಸಿ (ಬಡಿಂಗ್). *

**ಕಸಿಮಾಡುವಿಕೆ (ಅಂಗಾಂಶದ ಮತ್ತು ಅಂಗದ) :** ಮೈಯಲ್ಲಿ ಎಲ್ಲಾದರೂ ಕೊರೆಯಾಗಿರುವ, ಕೆಲಸಗೆಟ್ಟಿರುವ, ಹಾಳಾಗಿರುವ ಊತಕ ಇಲ್ಲವೇ ಅಂಗದ ಬದಲಾಗಿ ಒಂದು ಜೀವಿಯ ಬೇರೆಡೆಯಿಂದಲೋ ಅದೇ ಜಾತಿಯ ಬೇರೆ ಜೀವಿಯಿಂದಲೋ ಬೇರೆ ಜಾತಿಯ ಪ್ರಾಣಿಯಿಂದಲೋ ಊತಕ ಇಲ್ಲವೇ ಅಂಗವನ್ನು ನಾಟಿ ಹಾಕುವಿಕೆ (ಗ್ರಾಫ್ಟಿಂಗ್, ಟ್ರಾನ್ಸ್‌ಪ್ಲಾಂಟೇಷನ್). ನಾಟಿ ಕೆಲಸ ಪ್ರಪಂಚದಲ್ಲಿ ಎಲ್ಲೆಲ್ಲೂ ಎಡೆ ಬಿಡದೆ ನಡೆದೇ ಇರುತ್ತದೆ. ಹೂಗಳಲ್ಲಿ ಪರಾಗದಾನವು ಪ್ರಾಣಿಗಳಲ್ಲಿ ಅಂಡಾಣು ರೇತುಕಣಗಳು ಕೂಡಿ ಫಲವಂತವಾಗುವುದೂ ಜೀವಿರಸದ (ಪ್ರೋಟೊಪ್ಲಾಸ್ಮ) ನಾಟಿಗೆ ಉದಾಹರಣೆಗಳು.

ಒಂದು ಜೀವಿಯ ದೇಹದ ಒಂದು ಭಾಗವನ್ನು ತೆಗೆದು ಅದೇ ಜೀವಿಗೆ ನಾಟಿ ಹಾಕಿದಲ್ಲಿ ಅದನ್ನು ತನ್ನ ನಾಟಿ (ಆಟೊಗ್ರಾಫ್ಟ್, ಆಟೊಟ್ರಾನ್ಸ್‌ಪ್ಲಾಂಟ್) ಎನುತ್ತೇವೆ. ರಕ್ತ ಪೂರೈಕೆ, ಪುಷ್ಟಿ ಸಾಕಷ್ಟು ಸಿಗುತ್ತಿರುವ ತನಕ ಇದು ಬದುಕಿರುತ್ತದೆ. ಇಡೀ ಚರ್ಮ ಇಲ್ಲವೇ ಚರ್ಮದ ತೆಳುಪದರಗಳ ಚೂರುಗಳನ್ನು ಕೊಯ್ದು ತೆಗೆದು ಚರ್ಮ ಕಿತ್ತು ಹೋಗಿರುವ ಕಡೆ ಎಲ್ಲಾದರೂ ಸರಿಯೆ ನಾಟಿ ಹಾಕಬಹುದು. ಬೇಗನೆ ಹೊಸ ರಕ್ತನಾಳಗಳು ಅದರಲ್ಲಿ ಹುಟ್ಟಿಕೊಳ್ಳುತ್ತವೆ. ಪೂರಾ ಚರ್ಮ, ಚರ್ಮದಡಿಯ ಊತಕಗಳನ್ನು ಮೈಯಲ್ಲಿ ಬೇರೆಡೆ ನಾಟಿ ಹಾಕಿದಾಗ, ಅಲ್ಲಿ ಹೊಸ ರಕ್ತನಾಳಗಳು ಬೆಳೆದುಕೊಳ್ಳುವ ತನಕವಾದರೂ ಮೂಲ ಜಾಗದ ರಕ್ತನಾಳಗಳ ಸಂಬಂಧ ಕಡಿಯದಂತೆ ನೋಡಿಕೊಳ್ಳಬೇಕು. ಅಂಗಗಳನ್ನು ನಾಟಿ ಹಾಕಬೇಕಾದರೂ ಅಷ್ಟೇ. ಇಲ್ಲವಾದರೆ, ಹೊಸ ಜಾಗದಲ್ಲಿನ ರಕ್ತನಾಳಗಳ ಧಮನಿ, ಸಿರಗಳನ್ನು ಅಂಗದಲ್ಲಿ ಇರುವವಕ್ಕೆ ನೋಡಿ ಹೊಲಿಯಬೇಕಾಗುತ್ತದೆ. ಎಂದಿನಂತೆ ಕೆಲಸ ನಡೆಸುತ್ತಿರಲು ನರಗಳನ್ನೂ ಕೂಡಿಸಿರಬೇಕು.

ಬದಲಿ ಅಂಗಗಳ ನಾಟಿಯಲ್ಲಿ ಮೂತ್ರಪಿಂಡದ ಬಳಕೆಯಿಂದ ಎಷ್ಟೋ ಮಂದಿಗೆ ಪ್ರಾಣದಾನವಾಗಿದೆ. ಪ್ರಪಂಚದಲ್ಲಿ ಲಕ್ಷಾಂತರ ಮೂತ್ರಪಿಂಡಗಳನ್ನು ನಾಟಿ ಹಾಕಿದ್ದಾಗಿದೆ. ಕೊನೆಯ ಪಕ್ಷ ಇವುಗಳಲ್ಲಿ ಅರೆಪಾಲಿನಷ್ಟಾದರೂ ಬದುಕುಳಿದಿವೆ. ಇತ್ತೀಚೆಗೆ, ಮುಖ್ಯವಾಗಿ ಮೈಯಲ್ಲಿ ಒಂಟಿ ಅಂಗಗಳಾಗಿರುವ ಗುಂಡಿಗೆ, ಈಲಿ, ಮಾಂಸಲಿಗಳಲ್ಲದೆ ಸಣ್ಣ ಕರುಳುಗಳನ್ನೂ ಪುಪ್ಪುಸಗಳನ್ನೂ ನಾಟಿ ಹಾಕುವ ಯತ್ನಗಳಾಗಿವೆ. ಇವನ್ನು ನಾಟಿ ಹಾಕುವುದು ಕೈಗೂಡಿದ್ದರೂ ಹಾಕಿದವನ್ನು ಎಂದಿನಂತೆ ಉಳಿಯಬಿಡದೆ ದಾನಪಡೆದ ಮೈ ತಳ್ಳಿಹಾಕುತ್ತದೆ. ತನ್ನದಲ್ಲದ ಹೆರ ವಸ್ತುವಿಗೆ ಹೊಂದಿಕೊಳ್ಳದ ಗುಣವಾದ ಮರೆವಣೆಯೇ (ಇಮ್ಯೂನಿಟಿ) ಇದರ ಕಾರಣ. ಮರೆವಣೆಯನ್ನು ಅಣಗಿಸಿಡುವ ಇಂದಿನ ಮದ್ದುಗಳಿಂದ ಅಂಗನಾಟಿಗಳನ್ನು ಉಳಿಸಿಕೊಳ್ಳುವುದು ಕಳೆದ ಸುಮಾರು 60 ವರ್ಷಗಳಿಂದ ಸಾಧ್ಯವಾಗಿದೆ. ರೋಗದಿಂದ ಹಾಳುಗೆಟ್ಟಿರುವ ಗುಂಡಿಗೆ, ಈಲಿ, ಪುಪ್ಪುಸ, ಮೂತ್ರಪಿಂಡ ಮುಂತಾದ ಅಂಗಗಳ ಬದಲಾಗಿ ನಾಟಿ ಹಾಕುವ ಕಾಲ ಬರುತ್ತಿದೆ. ಇದರಿಂದ ಬಹಳ ಮಂದಿ ಬದುಕಿದ್ದಾರೆ. ಮರೆವಣೆ ಅಣಗಿಸುವುದರ ತೊಡಕುಗಳು, ಸೋಂಕು, ತಾಂತ್ರಿಕ ತಪ್ಪುಗಳು–ಇವು ಕೈಗೂಡದ್ದರ ಕಾರಣಗಳಲ್ಲಿ ಕೆಲವು.

ಒಂದೇ ಜಾತಿಗೆ ಸೇರಿರುವ ಇನ್ನೊಂದು ಜೀವಿಯಿಂದ ಪಡೆದ ನಾಟಿಗೆ ಸರಿಜಾತಿ ನಾಟಿ (ಹೋಮೊಟ್ರಾನ್ಸ್‌ಪ್ಲಾಂಟ್, ಹೋಮೊಗ್ರಾಫ್ಟ್) ಎಂದು ಹೆಸರು. ದಾನವಾಗಿ ಪಡೆದ ಸರಿಜಾತಿ ನಾಟಿಗಳು, ಸಾಧಾರಣವಾಗಿ ಪಡೆದವರಲ್ಲಿ ಮರೆವಣೆಯನ್ನು ಚೋದಿಸುವುದರಿಂದ ಕೆಲವೇ ದಿನಗಳಲ್ಲೋ ವಾರಗಳಲ್ಲೋ ಸಾಯುತ್ತವೆ. ರಕ್ತ ನಾಳಗಳ ಒಳಪೊರೆ (ಎಂಡೊಥೀಲಿಯಂ) ಹಾಳಾಗಿ ರಕ್ತ ಪೂರೈಕೆಗೆ ಅಡ್ಡಿಯಾಗುವುದೇ ಮುಖ್ಯ ಕಾರಣ. ಆ ದಾನಿಯಿಂದಲೇ ಪಡೆದ ಇನ್ನೊಂದು ನಾಟಿಯನ್ನು ಹಾಕಿದಾಗ ಮೊದಲಿನದಕ್ಕಿಂತ ಬೇಗನೆ ಹಾಳಾಗುವುದರಿಂದ ಇದು ಮರೆವಣೆಯ ವರ್ತನೆ ಎನ್ನುವುದು ಖಚಿತವಾಯಿತು. ಅಲ್ಲದೆ, ನಾಟಿ ಮೊದಲಿದ್ದ ಜಾಗದ ಹಾಲುರಸ (ಲಿಂಫ್) ಹರಿಯುತ್ತಿದ್ದ ಹಾಲುರಸ ಗಂಟುಗಳಿಂದ (ನೋಡ್ಸ್) ತೆಗೆದಜೀವಕಣಗಳನ್ನು ನಾಟಿ ಪಡೆವ ಪ್ರಾಣಿಗೆ ಹಾಕಿ, ಈ ಗುಣವನ್ನು ಇನ್ನೊಂದು ಜೀವಿಗೆ ಸಾಗಿಸಬಹುದಾದ್ದರಿಂದ ಇದಿನ್ನೂ ಖಚಿತವಾಯಿತು. ಈ ಪ್ರತಿಕ್ರಿಯೆಗೆ ಸಂಬಂಧಿಸಿದ ರೋಧಜನಕಗಳು (ಆ್ಯಂಟಿಜೆನ್ಸ್) ಜೀವಕಣಗಳ ನಡುಬೀಜಗಳಲ್ಲಿ (ನ್ಯೂಕ್ಲಿಯೈ) ಇರುತ್ತವೆ. ಈ ರೋಧಜನಕಗಳು ಸಂಮಿಶ್ರ ಲೋಳೆಪಾಲಿಸ್ಯಾಕರೈಡುಗಳು. ನಡುಬೀಜವಿರುವ ಎಲ್ಲ ಜೀವಕಣಗಳಲ್ಲೂ ಇರುವ ಇವಕ್ಕೆ ಜೀನುಗಳ ಸಂಬಂಧವಿದೆ. ನಾಟಿ ಪಡೆವ ಪ್ರಾಣಿಯ ರಸಿಕೆಯಲ್ಲಿ (ಸೀರಂ) ಕೆಲವೇಳೆ ರೋಧಜನಕಗಳಿರುತ್ತವೆ. ಆದರೆ ಸರಿ ಜಾತಿ ನಾಟಿಗಳನ್ನು ಹಾಳುಗೆಡಿಸುವವು ಮಾತ್ರ ಚುರುಕಾಗೀಡಾಗುವ ಹಾಲುರಸಕಣಗಳ (ಲಿಂಫೊಸೈಟ್ಸ್) ಮೂಲಕ ಸಾಗುತ್ತವೆ. ಕಾರ್ಟಿಸೋನ್ ಮದ್ದುಗಳಿಂದ ಸರಿಜಾತಿ ನಾಟಿಗಳು ಕೂಡಲೇ ಸಾಯದ ಹಾಗೆ ಇರಿಸಬಹುದು.

ಸರಿಜಾತಿನಾಟಿಗಳಿಗೆ ಯಾವ ತೊಡಕೂ ಇಲ್ಲದೆ ನಾಟಿ ಹಾಕಿದೆಡೆ ಬದುಕುಳಿವ ಸಂದರ್ಭಗಳಿವು: ಪಡೆವವನೂ ದಾನಿಯೂ ಅವಳಿ ಇಲ್ಲವೇ ಒಂದೇ ಕುಟುಂಬದ ರಕ್ತಸಂಬಂಧಿಯಾಗಿರಬೇಕು; ಕೋಡುಪೊರೆ (ಕಾರ್ನಿಯ), ಮೆಲ್ಲೆಲುಬುಗಳ ಹಾಗೆ ರಕ್ತನಾಳಗಳೇ ಇಲ್ಲದ ಊತಕಗಳಾಗಿರಬೇಕು; ಸ್ಟಿರಾಯ್ಡ್ ಮದ್ದುಗಳನ್ನು ಹೆಚ್ಚೆಚ್ಚಾಗಿ ಕೊಡುತ್ತಿರಬೇಕು; ಮುಂದೆ ನಾಟಿಯ ದಾನಿಯಾಗುವವನ ಬದುಕಿರುವ ಜೀವಕಣಗಳನ್ನು ನಾಟಿಯನ್ನು ಪಡೆವ ಪ್ರಾಣಿಗೆ ಅದು ಗರ್ಭದಲ್ಲೇ ಇರುವಾಗಲೋ ಹುಟ್ಟಿದ ಕೂಡಲೆಯೋ ಚುಚ್ಚಿದ್ದರಿಂದ ಅದರ ಊತಕಗಳಿಗೆ ಹೊಂದಿಕೊಂಡಿರಬೇಕು; ನಾಟಿಯನ್ನು ಪಡೆವ ಪ್ರಾಣಿಯ ಇಡೀ ಮೈಯನ್ನು ವಿಕಿರಣತೆಗೆ ಒಡ್ಡಿರಬೇಕು; ಬೇರೆಡೆ ಹಾಕಿರುವ ನಾಟಿಯಿಂದ ರಸಗಳೂ ಪುಷ್ಟಿ ವಸ್ತುಗಳೂ ತೂರಿಹರಿವಂತೆ ಬಿಟ್ಟು ಅದರ ಜೀವಕಣಗಳನ್ನು ಮಾತ್ರ ತಡೆವಂತೆ ತೂತುಪದರ ಪೊರೆ ಅಡ್ಡವಾಗಿರಬೇಕು. ಬೇರೆ ಬೇರೆ ಲಿಂಗದ ಅವಳಿಗಳಲ್ಲಿ ಒಬ್ಬನಿಂದೊಬ್ಬನಿಗೆ ತೆಗೆದು ಬದಲಿಸಿದ ನಾಟಿ ಕೆಲಗಾಲ ಮಾತ್ರ ಬದುಕಿರುತ್ತದೆ. ದನಗಳಲ್ಲೂ ಅಪೂರ್ವವಾಗಿ ಮಾನವನಲ್ಲೂ ಗರ್ಭದಲ್ಲಿದ್ದಾಗ ಬೇರೆ ಬೇರೆ ಲಿಂಗಗಳ ಅವಳಿಗಳ ರಕ್ತ ಒಂದಕ್ಕೊಂದು ಬೆರೆಯಬಹುದು. ಹಾಗಾದಾಗ ಒಂದೊಂದರಲ್ಲೂ ಎರಡೂ ವರ್ಗಗಳ ಕೆಂಪು ರಕ್ತಕಣಗಳು ಇರುವುದರಿಂದ, ಅಂಥ ಅವಳಿಗಳಲ್ಲಿ ಒಂದಕ್ಕೊಂದು ಬದಲಿನಾಟಿ ಹಾಕಿದರೂ ಸಾಯದೆ ಉಳಿದಿರುತ್ತವೆ.

ವಯಸ್ಕರ ರಕ್ತ ಹುಟ್ಟಿಸುವ ಮೂಳೆ ಮಜ್ಜೆಯಂಥ ಊತಕವನ್ನು ಸರಿಜಾತಿನಾಟಿಯಾಗಿ ಎಳೆಯ ಪ್ರಾಣಿಗೆ ಹಾಕಿದರೆ ಗುಜ್ಜಾರಿ ಆಗುತ್ತದೆ. ಬೆಳವಣಿಗೆ ಕುಗ್ಗಿ ಉಚ್ಚಾಟವಾಗಿ ಕೆಲವೇಳೆ ಸಾಯಬಹುದು. ವಿಕಿರಣತೆಗೀಡಾದ ಬೆಳೆದಿರುವ ಪ್ರಾಣಿಗೆ ನಾಟಿ ಹಾಕಿದರೂ ಅದೇ ತೆರನ ದ್ವಿತೀಯಕದ (ಸೆಕಂಡರಿ) ರೋಗ ತಲೆದೋರಬಹುದು. ನಾಟಿಯನ್ನು ಪಡೆವ ಪ್ರಾಣಿಯ ಎದುರಾಗಿ ನಾಟಿಹಾಕಿದ ಕೆಲವು ಜೀವಕಣಗಳ ಮರೆವಣೆಯ ಪರಿಣಾಮವಿದೆಂದು ತೋರುತ್ತದೆ.

ತನ್ನದಲ್ಲದ ಬೇರೆ ಜಾತಿಯಿಂದ ತಂದ ಊತಕ ಇಲ್ಲವೇ ಅಂಗಕ್ಕೆ ಹೆರಜಾತಿನಾಟಿ (ಅಲ್ಲೋಗ್ರಾಫ್ಟ್, ಹೆಟಿರೋಟ್ರಾನ್ಸ್‌ಪ್ಲಾಂಟ್) ಎಂದು ಹೆಸರಿದೆ. ಈ ನಾಟಿಯನ್ನು ಹಾಕಿದ ಮೇಲೆ ಸಾಮಾನ್ಯವಾಗಿ ಉಳಿಯದೆ ಸಾಯುವುದು. ಇದೂ ಮರೆವಣೆಯನ್ನು ಕೆರಳಿಸುತ್ತದೆ. ಜೀವಕಣಗಳಿಗೆ ಸಾಧಾರಣವಾಗಿ ವಿಷಕರವಾಗುವ ರೋಧವಸ್ತುಗಳು (ಆಂಟಿಬಾಡೀಸ್) ನಾಟಿ ಪಡೆವವನ ರಸಿಕೆಯಲ್ಲಿ ಇರುವುದನ್ನು ತೋರಿಸಬಹುದು. ಇಷ್ಟಾದರೂ ಕೆಲವು ಗೊತ್ತಾದ ಅಂಗಗಳಲ್ಲಿ ಗಂತಿಯ (ಟ್ಯೂಮರ್) ಹೆರಜಾತಿನಾಟಿಗಳು ಬದುಕಿ ಉಳಿಯಬಹುದು.

ಚರ್ಮ, ಎಲುಬು, ಮೆಲ್ಲೆಲುಬುಗಳ ಬಿಡಿ ತನ್ನ ನಾಟಿಗಳನ್ನು ಮುಖ್ಯವಾಗಿ ಸುರೂಪಿಕ ಶಸ್ತ್ರವೈದ್ಯ (ಪ್ಲಾಸ್ಟಿಕ್ ಸರ್ಜನ್) ಅಡ್ಡಿ ಆತಂಕಗಳಿಲ್ಲದೆ ಧಾರಾಳವಾಗಿ ಹಾಕುವುದುಂಟು.

ಆಳವಾಗಿ ಸುಟ್ಟಿದ್ದರಿಂದ ಆಗುವ ಗಾಯಗಳ ಚಿಕಿತ್ಸೆಯಲ್ಲಿ ಚರ್ಮದ ನಾಟಿಗಳ ಬಳಕೆ ಹೆಚ್ಚು ಚಾಲ್ತಿಯಲ್ಲಿದೆ. ಚರ್ಮದ ಒಂದು ತೆಳುಪದರವನ್ನು ಮಾತ್ರ ಎತ್ತಿಕೊಳ್ಳುವುದರಿಂದ ದಾನಿಯ ಚರ್ಮಕ್ಕೆ ಹಾನಿ ತಟ್ಟದೆ ವಾಸಿಯಾಗುತ್ತದೆ. ಅರಿವಿನ ಇಡೀ ಸಣ್ಣ ನರಗಳ ತಿರಿಗಳನ್ನು ತೆಗೆದು ಹುರಿಗಟ್ಟಿ ಕೆಲವೇಳೆ ನಾಟಿ ಹಾಕುವುದುಂಟು. ಏಡಿಗಂತಿ ಎದ್ದಿರುವ ರೋಗಿಗಳಿಗೆ ವಿಕಿರಣರೋಗಚಿಕಿತ್ಸೆ (ರೇಡಿಯೊತೆರಪಿ) ಹಲವೇಳೆ ಮಿತಿಮೀರಿ ಕೊಡಬೇಕಾಗಿರುವ ಮುಂಚೆ, ಅವನ ಮೂಳೆಯ ಮಜ್ಜೆಯನ್ನು ತೆಗೆದು ಇರಿಸಿಕೊಂಡಿದ್ದು ಅದೇ ರೋಗಿಗೆ ಅದನ್ನು ಅವನ ತನ್ನ ನಾಟಿಯಾಗಿ ಕೊಡುವುದುಂಟು. ಏಡಿಗಂತಿ ಎದ್ದಿರುವುದಕ್ಕಾಗಿ ಕಟ್ಟಿರುವ ಭಾಗವನ್ನು ಕೊಯ್ದುಹಾಕಿದಮೇಲೆ ಉಳಿದ ಜಠರ, ಕರುಳುಗಳ ತೊಟ್ಟುಗಾಲು (ಪೆಡಿಕಲ್) ಇರುವ ತನ್ನನಾಟಿಗಳನ್ನು ಜೀರ್ಣನಾಳ, ಎಂದಿನಂತಾಗುವಂತೆ ಸರಿಪಡಿಸಲು ಹೊಲೆದು ಕೂಡಿಸುವುದುಂಟು. ಹಲವೇಳೆ ಮೂತ್ರಮಂಡಲದಲ್ಲಿ ಕೆಲವು ಭಾಗಗಳನ್ನು ತುಂಡರಿಸಿ ತೆಗೆದುಹಾಕಿದಮೇಲೆ ಅದರ ಸಾಗುನಾಳವನ್ನು ಮತ್ತೆ ಎಂದಿನಂತೆ ರೂಪಿಸಲು ಕರುಳುಗಳ ತೊಟ್ಟುಗಾಲುಗಳಿರುವ ತನ್ನನಾಟಿಗಳನ್ನು ಸರಿಸಿ ಹೊಲಿವುದುಂಟು.

ಕಣ್ಣುಗಳಲ್ಲಿ ಬಿಳಿಯ ಮಚ್ಚೆಗಳು, ಹೂಗಳು, ಶಂಕುವಿನಂತೆ ಚೂಪಾಗಿರುವ ಕಣ್ಗುಡ್ಡೆ ಇವುಗಳ ರೋಗಿಗಳಿಗೆ ಮತ್ತೆ ಕಣ್ಣು ಕಾಣುವಂತೆ ಮಾಡಲು (ನೇತ್ರದಾನ) ಕೊಡುಪೊರೆಯ ಸರಿಜಾತಿನಾಟಿಗಳನ್ನು ತಂದಿಟ್ಟು ಹೊಲೆದಾಗ, ಅವು ಮಂದವಾಗೇ ಇರಲಿ ತೆಳುವಾಗೇ ಇರಲ್ಲಿ, ಅವುಗಳೊಳಕ್ಕೆ ರಕ್ತನಾಳಗಳು ಬೆಳೆಯದಿದ್ದಲ್ಲಿ ಮಾತ್ರ ಗಾಜಿನಂತೆ ಪಾರದರ್ಶಕವಾಗಿ (ಟ್ರಾನ್ಸ್‌ಪರೆಂಟ್) ತಿಳಿಯಾಗಿರುತ್ತದೆ. ಚರ್ಮದ ಸರಿ ಜಾತಿನಾಟಿಗಳು ಕೆಲವೇ ವಾರಗಳು ಬದುಕಿರುವುವಾದರೂ ಮೈಯೆಲ್ಲ ಬೆಂದುಹೋಗಿರುವ ರೋಗಿಗಳಿಗಂತೂ ಅವು ಪ್ರಾಣದಾಯಕ. ರೋಗಿ ಕೊಂಚ ಚೇತರಿಸಿಕೊಂಡಮೇಲೆ ಅವುಗಳ ಬದಲಾಗಿ ತನ್ನ ನಾಟಿಗಳನ್ನು ಹಾಕಬಹುದು. ಎಲುನೇರ್ಪಿಕ (ಆರ್ತೊಪಿಡಿಕ್) ಶಸ್ತ್ರವೈದ್ಯದಲ್ಲಿ ಎಲುಬಿನ ಸರಿಜಾತಿನಾಟಿಗಳು ಬಳಕೆಗೆ ಬರುವುವು. ಹಲವೇಳೆ ಇವುಗಳಲ್ಲಿ ಜೀವವಿರದು. ಬದುಕಿದ್ದರೂ ಹೆಚ್ಚು ಕಾಲ ಉಳಿಯವು. ಆದರೆ ನಾಟಿ ಪಡೆವವನ ಊತಕವೇ ಬೆಳೆಯಲು ಇವು ದಾರಿ ತೋರಿ ನೆರವಾಗುವ ಅಟ್ಟಣಿಗೆ ಆಗಿರುತ್ತವೆ. ಧಮನಿಗಳಂಥ ರಕ್ತನಾಳಗಳ ಸರಿಜಾತಿನಾಟಿಗಳನ್ನು ಹಾಕಿದಾಗ ಕೂಡ, ಒಳಗಿಂದಲೇ ಬೆಳೆದು ಬರುವ ಊತಕಕ್ಕೆ ಅಟ್ಟಣಿಗೆ ಮಾತ್ರ ಆಗಿರುವುವು. ಇತ್ತೀಚೆಗೆ ಜೀವಂತ ಧಮನಿಗಳ ಬದಲಾಗಿ ಕೃತಕ ಹೆಣಿಗೆ ಬಲೆಯ ಕೊಳವೆಗಳೇ ಚಾಲ್ತಿಗೆ ಬರುತ್ತಿವೆ. ದಾನಿ ಒಂದೇ ಲಿಂಗದ ಅವಳಿಯಾಗಿದ್ದರೆ ಮಾತ್ರ ಇಡೀ ಮೂತ್ರಪಿಂಡವನ್ನು ಸರಿಜಾತಿನಾಟಿಯಾಗಿ ಹಾಕಬಹುದು. ಹಾಗಿಲ್ಲವಾದರೆ, ನಾಟಿ ಹಾಕಿದ್ದು ಕೆಲವು ವಾರಗಳಿಗಿಂತ ಹೆಚ್ಚು ಕಾಲ ಬದುಕುಳಿದು ಕೆಲಸ ಮಾಡದು. ಅಷ್ಟು ದಿನಗಳು ಮಾತ್ರ ಕೃತಕ ಮೂತ್ರಪಿಂಡಯಂತ್ರವನ್ನೇ ರೋಗಿಗೆ ತಗುಲಿಸಿಡುವುದು ಇನ್ನೂ ಸರಳ; ಕಡಿಮೆ ಖರ್ಚಿನದು. ಬಿಳ್ಣಕತೆಯ (ಲ್ಯೂಕೀಮಿಯ), ಏಡಿಗಂತಿಯ ರೋಗಿಗಳಿಗೆ ವಿಕಿರಣರೋಗ ಚಿಕಿತ್ಸೆಯೊಂದಿಗೆ ರಕ್ತವಿಕಾಸಕ ಊತಕವನ್ನು (ಮೂಳೆಯ ಮಜ್ಜೆ) ಸರಿಜಾತಿನಾಟಿಯಾಗಿ ನೀಡುವುದು ಪ್ರಯೋಗದ ಪ್ರಾಣಿಗಳಲ್ಲಿ ಮಾತ್ರ ಇಲ್ಲಿನ ತನಕ ಸಾಧ್ಯವಾಗಿದೆ.

ಜೀವ ಇರಬೇಕಿಲ್ಲದ ರಕ್ತ, ಎಲುಬು, ಕೋಡುಪೊರೆ, ರಕ್ತನಾಳಗಳ ನಾಟಿಗಳನ್ನು ದಾಸ್ತಾನಾಗಿ ಇಟ್ಟಿರಲು ನೀರ್ಗಲ್ಲಾಗಿಸಿ, ನೀರ್ಗಲ್ಲಲ್ಲಿ ಒಣಗಿಸಿ, ಇಲ್ಲವೇ ನಂಜುರೋಧಕಗಳಲ್ಲಿ (ಆಂಟಿಸೆಪ್ಟಿಕ್ಸ್) ಇರಿಸಬೇಕು. 4 ಸೆಂ. ಶೈತ್ಯದಲ್ಲಿ ಚರ್ಮದ ನಾಟಿಗಳು ಕೆಲವು ವಾರಗಳೂ, ಗ್ಲಿಸರಾಲಲ್ಲಿ ಅದ್ದಿ–79 ಸೆಂ. ಶೈತ್ಯಕ್ಕೆ ಇಳಿಸಿದರೆ ಕೆಲವು ತಿಂಗಳೂ ಉಳಿದಿರುತ್ತವೆ. ಏರಿದೊತ್ತಡದ (ಹೈಪರ್‌ಬೇರಿಕ್) ಆಮ್ಲಜನಕದಲ್ಲಿ ಇರಿಸಿದ್ದರೂ ಅನುಕೂಲಕರ. ರಕ್ತನಿಧಿ ಇರುವ ಹಾಗೇ ಪ್ರಾಣ ಉಳಿಸಲು ಬೇಕೆಂದವರಿಗೆ ನೀಡಲು ಬದುಕಿರುವ ಅಂಗನಿಧಿಯನ್ನು ಏರ್ಪಡಿಸುವ ಕಾಲವೂ ಬರಬಹುದು. ಆದರೆ ಇಡೀ ಅಂಗಗಳನ್ನು ನೀರ್ಗಲ್ಲಾಗಿಸಿಯೋ ಅವುಗಳ ಮೂಲಕ ಎಡೆಬಿಡದೆ ರಕ್ತ ಹರಿಸಿಯೋ ಬಹಳ ಕಾಲ ಕೆಡದಂತಿರಿಸುವುದು ಇನ್ನೂ ಕೈಗೂಡಿಲ್ಲ.

ಅಂಗಗಳ ಬದಲಿ ನಾಟಿಯ ಮುನ್ನಡೆ ಮುಖ್ಯವಾಗಿ ಶಸ್ತ್ರಕ್ರಿಯೆಯ ತಂತ್ರದಲ್ಲಿ ಆಗುತ್ತಿದೆ. ಮರೆವಣೆಯನ್ನು ಅಣಗಿಸುವ, ಬದುಕಿರುವ ಅಂಗ ಕೆಡದಂತಿರಿಸುವ ವಿಧಾನಗಳು ಇನ್ನೂ ಚೆನ್ನಾಗಬೇಕು. ಬದಲಿ ಅಂಗ ನಾಟಿ ಹಾಕುವುದು ವಿಪರೀತ ಖರ್ಚಿನ ವಿಷಯ. ಹಾಗೆ ಮಾಡುವಾಗ ಬದುಕಿರುವುದರಿಂದ ಅಂಗವನ್ನು ಎತ್ತಿಕೊಳ್ಳುವಾಗ ಮಾನವತೆ, ನೀತಿ, ಧರ್ಮಗಳೂ ಇತರ ಪ್ರಶ್ನೆಗಳೂ ಎದುರಾಗುವುವು. ಒಬ್ಬನಿಂದ ಜೀವಾಳದ ಅಂಗವನ್ನು ಕಿತ್ತುಕೊಳ್ಳುವುದಾದರೆ, ಸಾವು ಎಂದರೇನು, ಯಾವ ಅಂಗ ಸತ್ತರೆ ಸಾವು, ಇವೆಲ್ಲ ಚರ್ಚಾಸ್ಪದ. (ಡಿ.ಎಸ್.ಎಸ್.)

**ಕಸೀದಾ :** ಅರಬ್ಬೀ, ಪಾರಸೀ ಮತ್ತು ಉರ್ದುಕಾವ್ಯಗಳ ಪ್ರಮುಖ ಪ್ರಕಾರ. ಇದು ಮೂಲತಃ ಅರಬ್ಬಿಯದು. ಇದರ ಉದ್ದೇಶ ಕಾವ್ಯ ಅಥವಾ ಸ್ತುತಿಕಾವ್ಯ ಇಲ್ಲವೆ ಪ್ರಾರ್ಥಗಳ ರಚನೆ. ಇದರ ಕನಿಷ್ಠ ಮಿತಿ ಹದಿನೈದು ಪದ್ಯಗಳಾದರೆ ಗರಿಷ್ಠಮಿತಿ ನೂರಾರು ಪದ್ಯಗಳಾಗಬಹುದು. ಸಾಮಾನ್ಯವಾಗಿ ರಾಜ, ಆಶ್ರಯದಾತ, ಪೈಗಂಬರ್ ಅಥವಾ ಸಂತನ ಸ್ತುತಿಗಳೂ ವ್ಯಂಗ್ಯೋಕ್ತಿಗಳೂ ಕಸೀದಾಶೈಲಿಯ ವಸ್ತು. ಕೆಲವೊಮ್ಮೆ ಪ್ರೇಮ, ಋಣವರ್ಣನೆ, ನೀತಿಬೋಧೆ, ಕಾಲಜ್ಞಾನ ಮೊದಲಾದವೂ ಇವುಗಳ ಜೊತೆಗೆ ಸೇರಬಹುದು. ಕಸೀದಾಕ್ಕೆ ತನ್ನದೇ ಆದ ಶೈಲಿ, ಶಬ್ದವಿನ್ಯಾಸಗಳಿರುತ್ತವೆ. ಶಬ್ದಾಡಂಬರ ಮತ್ತು ನಿರರ್ಗಳ ಓಟ ಇದರ ಪ್ರಥಮ ಅಗತ್ಯವೆನ್ನಬಹುದು. ಅಲಂಕಾರಗಳು ಯಥೇಚ್ಛವಾಗಿರುತ್ತವೆ. ವಸ್ತು ಗಂಭೀರ ಹಾಗೂ ತಾತ್ತ್ವಿಕ ಚಿಂತನೆಯಿಂದ ಕೂಡಿರುತ್ತದೆ. ಕಸೀದಾವನ್ನು ಈ ರೀತಿಯಾಗಿ ವಿಂಗಡಿಸಬಹುದು : 1 ತಂಹೀದ್ ಅಥವಾ ತಶ್ಬೀಬ್–ಪೂರ್ವರಾಗ ಅಥವಾ ಪ್ರಣಯದ ಭೂಮಿಕೆ. 2 ಗುರೇಜ಼್ ಅಥವಾ ತಖ್ಲೀಸ್– ವಿಷಯಾಂತರ . 3 ಮಧ್–ಪ್ರಶಂಸೆ. 4 ಮಕ್ಸದ್–ಉದ್ದೇಶ. ಇಲ್ಲಿ ಕವಿ ತನಗೆ ಬೇಕಾದುದನ್ನು ಬೇಡುತ್ತಾನೆ. ಪೀಠಿಕೆಯಿಂದ ಆರಂಭವಾಗುವುದು ತಂಹಿದಿಯಾ ಅದಿಲ್ಲದಿರುವುದೇ ಕಿತಾಬಿಯಾ ಅಥವಾ ಪ್ರತ್ಯಕ್ಷ. 5 ದುಆ–ಆಶೀರ್ವಾದ. ಶ್ಲೋಕದ ಪ್ರಥಮ ಮತ್ತು ದ್ವಿತೀಯ ಚರಣಾರ್ಧದಲ್ಲಿ ಪ್ರಾಸವಿರುತ್ತದೆ. ಮೊದಲಿಗೆ ಕಸೀದಾ ಒಂದೇ ಅರಬ್ಬಿಯ ಸರ್ವಸಾಧಾರಣ ಕಾವ್ಯ ಪ್ರಕಾರವಾಗಿತ್ತು. ಪಾರಸೀಗಳು ಇದರ ಭೂಮಿಕೆಗಳನ್ನು ಗಜ಼ಲ್ ಇಲ್ಲವೆ ಭಾವಗೀತೆಗಳನ್ನಾಗಿ ಮಾರ್ಪಡಿಸಿದರು. ಇತರ ಭಾಗಗಳನ್ನು ಕಿಟಾ–ಖಂಡಗಳನ್ನಾಗಿ ಪರಿವರ್ತಿಸಿದರು. ಮತ್ನವಿ–ದ್ವಿಪದಿ, ರುಬಾಯಿ–ಚೌಪದಿ ಮತ್ತು ಇತರ ಛಂದೋಭೇದಗಳು ಪಾರಸಿಯಲ್ಲಿ ರೂಪುಗೊಂಡವು. ಇವೆಲ್ಲವನ್ನೂ ಉರ್ದು ಬಳಸಿಕೊಂಡಿತು. ಕಸೀದಾಕ್ಕೆ ಮುಖ್ಯವಾಗಿ ರಾಜಾಸ್ಥಾನಗಳಲ್ಲಿ ಪ್ರೋತ್ಸಾಹ ಸಿಕ್ಕಿತು. ಅರಸರು ಉದಾರವಾಗಿ ಕಸೀದಾಕವಿಗಳನ್ನು ಪುರಸ್ಕರಿಸಿದರು. ಅನ್ವರಿ ಮತ್ತು ಜ಼ಹೀರ್ ಇ ಫಾರ್ಯಾಬಿ ಪಾರಸಿಯಲ್ಲಿ, ಸೌದಾ ಮತ್ತು ಜ಼ೌಕ್ ಉರ್ದುವಿನಲ್ಲಿ ವಿಖ್ಯಾತ ಕಸೀದಾ ಕವಿಗಳು. ರಾಜಾಶ್ರಯದ ಅಭಾವದಿಂದಾಗಿ ಕಸೀದಾ ಉರ್ದುವಿನಲ್ಲಿ ಅಷ್ಟಾಗಿ ಬೆಳೆಯಲಿಲ್ಲ. (ಎಂ.ಎಂ.ಎಚ್.)

**ಕಸುಪಟ್ಟಿ ಉರಿತ :** ಮೂಳೆಗೆ ಸ್ನಾಯುವನ್ನು ಬಿಗಿದಂಟಿಸುವ ಕಂಡರದ (ಟೆಂಡನ್) ಸುತ್ತಲೂ ಚೀಲದಂತಿರುವ ಒರೆಕವಚದ (ಷೀತ್) ಉರಿತ (ಟೆಂಡಿನೈಟಿಸ್). ಬೆರಳಿಗೆ ಉಗುರುಸುತ್ತಾಗಿ ತೀರ ಆಳಕ್ಕೆ ಕೀವು ಸೇರಿದಾಗ ಹೀಗಾಗುವುದು ಸಾಮಾನ್ಯ. ತೆಳುಪೊರೆಯಿಂದಾಗಿರುವ ಈ ಒರೆಕವಚದ ಮೂಲಕ ಕೀವು ಮಣಿಕಟ್ಟಿಗೂ ಹರಡಿಕೊಳ್ಳುವ ಅಪಾಯವಿರುತ್ತದೆ. ಒರೆಕವಚದಲ್ಲಿ ಉರಿತವೆದ್ದು ಕೀವುಗೂಡಿದಾಗ ಬೆರಳುಗಳನ್ನು ಇನ್ನು ಮುಂದೆ ಸರಾಗವಾಗಿ ಆಡಿಸದಂತಾಗುವುದು. ಎಲುಬುಗಳ ನಡುವಣ ಕೀಲುಗಳು ಸರಾಗವಾಗಿ ಆಡಿಸಲಿರುವ ಹಾಗೇ ಇಲ್ಲೂ ರಚನೆಯಾಗಿರುವುದು. ಕಂಡರದ ಅಸಹಜ ಬಳಕೆಯಿಂದ ಕೆರಳಿದಾಗ ಉರಿತವೇಳುತ್ತದೆ. ವಿರಳವಾಗಿ, ಏಕಾಣುಜೀವಿಗಳ ದಾಳಿಯಿಂದ ಸೋಂಕು ಹತ್ತಬಹುದು. ಬೆರಳಚ್ಚುಗಾರರಲ್ಲಿ ಮಣಿಕಟ್ಟಿನಲ್ಲೂ ಕಲ್ಲುಕುಟಿಗರು, ಗಣಿಕೆಲಸಗಾರರಲ್ಲಿ ಹೆಬ್ಬೆಟ್ಟಲ್ಲೂ ಕೂಲಿಗಾರರಲ್ಲಿ ಹೆಗಲಿನಲ್ಲೂ ಆಗುವಂತೆ, ಕೆಲವು ಕಸುಬುಗಳಲ್ಲಿ ಕಸುಪಟ್ಟಿಯುರಿತ ಸಾಮಾನ್ಯ. ಹೀಗಾದೆಡೆಯಲ್ಲಿ ಊದಿಕೊಂಡು ಕೆಂಪೇರಿ ಆ ಭಾಗವನ್ನು ಆಡಿಸಿದರೆ ಬಲು ನೋವಿಡುವುದು. ಅಲ್ಲದೆ ಒರೆಕವಚದಲ್ಲಿ ಕೀವು ತುಂಬಿದರೆ ಆ ಭಾಗ ಅಲುಗಾಡದೆ ಹಿಡಿದಂತಾಗಿರುತ್ತದೆ. ಆಡುವಾಗ ಕರಗಟ್ಟುವುದನ್ನು ಮುಟ್ಟಿ ತಿಳಿಯಬಹುದು. ಶಸ್ತ್ರಚಿಕಿತ್ಸೆಯಿಂದ ಕೀವನ್ನು ಹೊರಡಿಸಿ ವಾಸಿಮಾಡಿದರೂ ಎಂದಿನಂತೆ ಸರಾಗವಾಗಿ ಆಡುವುದು ಕಷ್ಟ. ಉರಿತವಾದ ಕಂಡರ, ಅದರ ಒರೆಕವಚಗಳಿಗೆ ಬಿಡುವು ಕೊಡುವುದೇ ಚಿಕಿತ್ಸೆ. ಇದಕ್ಕೆ ಆ ಭಾಗಕ್ಕೆ ಕಟುಪಟ್ಟಿಗಳು, ದಬ್ಬೆಕಟ್ಟುಗಳನ್ನು ಅಲುಗಾಡದ ಹಾಗೆ ಕಟ್ಟಬಹುದು. ಉರಿತ ಇಳಿದು ಹೋಗಿ ಬರಬರುತ್ತ ಆಡುವುದೂ ಸರಾಗವಾಗಬಹುದು. ಕೆಲವೇಳೆ, ಹೈಡ್ರೊಕಾರ್ಟಿಸೋನ್ ಮದ್ದು ಚುಚ್ಚಿದರೆ ಬೇಗನೆ ಗುಣಕಾರಿಯಾಗುವುದು. ಮತ್ತೆ ಮರುಕಳಿಸುವುದೂ ಸಾಮಾನ್ಯ. ಮತ್ತೆ ಮತ್ತೆ ಹೀಗಾದರೆ, ಅದು ಮಂದವಾಗಿ ಗಡುಸಾಗಿ ಕಂಡರದ ಚಲನೆಗೇ ಅಡ್ಡಿಯಾಗಬಹುದು. ಕೈಯಲ್ಲೋ ಪಾದದಲ್ಲೋ ಕಂಡುಬರುವ ಬೇರೂರಿದ ಕಸುಪಟ್ಟಿಯುರಿತಕ್ಕೆ ಸಾಮಾನ್ಯ ಕಾರಣ ಕ್ಷಯ. (ಡಿ.ಎಸ್.ಎಸ್.)

**ಕಸೂತಿ :** ಸಾಮಾನ್ಯವಾಗಿ ಬಟ್ಟೆಯ ಮೇಲೆ, ವಿರಳವಾಗಿ ಚರ್ಮ ಅಥವಾ ಇಂಥ ಇತರ ವಸ್ತುಗಳ ಮೇಲೆ, ಸೂಜಿ ದಾರಗಳಿಂದಲೊ ಅಪರೂಪವಾಗಿ ತಂತಿಯಿಂದಲೊ ಮಾಡಿದ ಅಲಂಕಾರ (ಎಂಬ್ರಾಯ್ಡರಿ). ದಾರ ಅಥವಾ ಮೃದುವಾದ ತಂತಿಗಳಿಂದ ಮಾಡುವ ಇತರ ಕಲೆಗಳಂತೆ ಕಸೂತಿಯೂ ನಾಗರಿಕತೆಯ ಹಾದಿಯಲ್ಲಿ ಪ್ರಗತಿ ಪರವಾಗಿ ನಡೆದು ಬರುತ್ತಿರುವ ಮಾನವನ ಕಲಾಭಿರುಚಿ ಮತ್ತು ಸೌಂದರ್ಯ ಜಿಜ್ಞಾಸೆಯ ದ್ಯೋತಕಗಳಲ್ಲಿ ಒಂದಾಗಿದೆ. ವಿಭಿನ್ನ ನಾಗರಿಕತೆಗಳ ಜನ ತಮ್ಮ ಸೌಂದರ್ಯಾಭಿರುಚಿಯನ್ನು ತಂತಮ್ಮ ಕಾಲಗಳಿಗನುಗುಣವಾಗಿ ಕಸೂತಿ ಕಲೆಯ ಮೂಲಕ ಅಭಿವ್ಯಕ್ತಪಡಿಸಿದ್ದಾರೆ.

ಮೊಟ್ಟಮೊದಲಿಗೆ ಮನುಷ್ಯನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಇತರ ಎಲ್ಲ ಕಲೆಗಳಂತೆ ಈ ಕಲೆಯ ಉಗಮವೂ ಆಗಿರಬಹುದು. ಎರಡು ದಾರಗಳ ತುದಿಗಳನ್ನು ಹೇಗೆ ಸೇರಿಸಬಹುದು, ಬಟ್ಟೆ ಹೊಲಿಯಲು ಸೂಜಿಯನ್ನು ಹೇಗೆ ಉಪಯೋಗಿಸಬಹುದು ಇತ್ಯಾದಿ ಪ್ರಯೋಗಗಳಿಂದ ಮನುಷ್ಯನ ಕಲಾಭಿರುಚಿ ಕ್ರಮೇಣ ಹೊಮ್ಮಿರಬಹುದು.

ವಿವಿಧ ಜನಾಂಗಗಳಲ್ಲಿ ಕಸೂತಿ ಕೆಲಸ ವಿವಿಧ ರೀತಿಗಳಲ್ಲಿ ಪ್ರಾರಂಭವಾದುವು. ಉತ್ತರ ಅಮೆರಿಕದ ಇಂಡಿಯನರು ಗರಿಯಿಂದ ಕುಶಲಕಲೆಗಾರಿಕೆ ಮಾಡುತ್ತಿದ್ದರು. ಆ ಪ್ರಕಾರ ಮೂಲನಿವಾಸಿಗಳು ನಾರುಬಟ್ಟೆಗಳ ಮೇಲೆ ಬಗೆಬಗೆಯಾದ ಚಿತ್ರಗಳನ್ನು ಹೆಣೆಯುತ್ತಿದ್ದರು. ಪ್ರಪಂಚದ ಬೇರೆಬೇರೆ ಭಾಗಗಳಲ್ಲಿ ಆಯಾ ಸಂಸ್ಕೃತಿ ಮತ್ತು ಅಗತ್ಯವಸ್ತುಗಳ ಸೌಲಭ್ಯಗಳನ್ನಾಧರಿಸಿ ಕಸೂತಿ ಕಲೆಯ ವಿವಿಧ ನಮೂನೆಗಳನ್ನು ಕಾಣಬಹುದು.

**ಭಾರತದಲ್ಲಿ :** ಭಾರತದಲ್ಲಿ ಈ ಕಲೆಗೆ ಸಂಬಂಧಿಸಿದ ದೀರ್ಘವಾದ ಇತಿಹಾಸವನ್ನೇ ಕಾಣಬಹುದು. ಮೊಹೆಂಜೊದಾರೊದಲ್ಲಿ ಪ್ರ.ಶ.ಪೂ. 3000 ದ್ದೆನ್ನಲಾದ ಕಂಚಿನ



ಕಸೂತಿಯ ಒಂದು ನಮೂನೆ

ಸೂಜಿಗಳನ್ನು ಬಹುಶಃ ಕಸೂತಿಗಾಗಿಯೇ ಉಪಯೋಗಿಸುತ್ತಿದ್ದಿರಬಹುದು. ಸಿಂಧೂನದಿಯ ನಾಗರಿಕತೆ ಹಾಗೂ ತತ್ಕಾಲೀನ ನಾಗರಿಕತೆಗಳ ಶೋಧನೆಯಲ್ಲಿ ಸಿಕ್ಕಿರುವ ಅನೇಕ ಉಡುಪುಗಳಲ್ಲಿ ಉತ್ಕೃಷ್ಟವಾದ ಕಸೂತಿಯ ನಮೂನೆಗಳಿವೆ. ಪ್ರಾಚೀನ ಭಾರತದ ಹಳ್ಳಿಹಳ್ಳಿಯಲ್ಲೂ ಈ ಕಲೆ ಪ್ರಚಲಿತವಾಗಿತ್ತು. ವಿವಿಧ ಪ್ರಾಂತ್ಯಗಳ ಜನ ವಿವಿಧ ರೀತಿಯ ಕಸೂತಿ ಮಾದರಿಗಳಿಗೆ ಮನಸೋತಿದ್ದರು. ಚಿಕ್ಕಚಿಕ್ಕ ಕನ್ನಡಿಗಳನ್ನು ಅಳವಡಿಸಿ ತಂತಿಯಾಕಾರದ ವಸ್ತುಗಳಿಂದ ಕಸೂತಿ ಮಾಡುತ್ತಿದ್ದ ಕಚ್ ಮತ್ತು ಕಾಠಿಯಾವಾಡಗಳಲ್ಲಿ ದೊರಕಿರುವ ಮಾದರಿಗಳು ಕಣ್ಣು ಸೆಳೆಯುವಂಥವಾಗಿದ್ದುವು. ಹದಿನಾರನೆಯ ಶತಮಾನದಿಂದೀಚೆಗೆ ಪರ್ಷಿಯನ್ನರ ಪ್ರಭಾವ ಭಾರತದ ಕಲೆ ಮತ್ತು ಜನಜೀವನದ ಮೇಲೆ ಬಿದ್ದಿತು. ಕಸೂತಿ ಕಲೆಯೂ ಈ ಪ್ರಭಾವಕ್ಕೆಹೊರತಾದುದೇನಾಗಿರಲಿಲ್ಲ. ಕಚ್ ಮತ್ತು ಕಾಠಿಯಾವಾಡದ ಕಸೂತಿಗಳಲ್ಲೂ ಇದು ಎದ್ದುಕಾಣುತ್ತದೆ.

ಋಗ್ವೇದದಲ್ಲಿ ಬರುವ ಹಿರಣ್ಯಪೇಶಸ್ ಎಂಬ ಶಬ್ದವನ್ನಾಧರಿಸಿ, ಆ ಕಾಲದಲ್ಲೂ ಭಾರತದಲ್ಲಿ ಚಿನ್ನದ ಕಸೂತಿಯಿತ್ತೆಂಬ ನಿರ್ಣಯಕ್ಕೆ ಬರಬಹುದು. ಪ್ರ.ಶ.ಪೂ. 6ನೆಯ ಶತಮಾನದಲ್ಲಿಯ ಭಾರತದ ವಾಣಿಜ್ಯವಸ್ತುಗಳ ಪೈಕಿ ಕಸೂತಿ ಮಾಡಿದ ವಸ್ತ್ರಗಳೂ ಇತರ ಪದಾರ್ಥಗಳೂ ವಿದೇಶದಲ್ಲಿ ಬಹಳವಾಗಿ ಜನಪ್ರಿಯವಾಗಿದ್ದುವೆಂಬ ಅಂಶ ವಿದಿತವಾಗುತ್ತದೆ. ಪ್ರ.ಶ.ಪೂ. 320ರ ಸುಮಾರಿನಲ್ಲಿ ಭಾರತಕ್ಕೆ ಭೇಟಿಕೊಟ್ಟ ಮೆಗಾಸ್ತನೀಸ್ ಭಾರತದಲ್ಲಿಯ ಕಸೂತಿಯಲ್ಲಿ ಅನೇಕ ರೀತಿಯ ಚಿನ್ನದ ಎಳೆಗಳನ್ನೂ ರತ್ನಗಳನ್ನೂ ಉಪಯೋಗಿಸುತ್ತಿದ್ದರು ಎಂದು ಹೇಳಿದ್ದಾನೆ. ಗುಪ್ತರ ಕಾಲ ಭಾರತದ ಸುವರ್ಣಯುಗವೆಂದೆನಿಸಿಕೊಂಡಿದೆಯಲ್ಲದೆ, ಆ ಕಾಲದಲ್ಲಿದ್ದ ಅಪ್ರತಿಮ ಕಸೂತಿಕಲೆಯ ಬಣ್ಣನೆ ಕಾಳಿದಾಸನ ಕಾವ್ಯಗಳಲ್ಲಿ ಅಲ್ಲಲ್ಲಿ ಮೂಡಿಬರುತ್ತದೆ. ಬಾಣಭಟ್ಟನ ರಚನೆಗಳಲ್ಲೂ ಭಾರತದ ಗತಕಲಾವೈಭವವನ್ನು ಹಾಡಿ ಹೊಗಳಲಾಗಿದೆ. ಮೊಗಲರ ಕಾಲದಲ್ಲೂ ಕಸೂತಿಕಲೆಗೆ ಸಾಕಷ್ಟು ಪ್ರೋತ್ಸಾಹವಿತ್ತು. 17 ನೆಯ ಮತ್ತು 18 ನೆಯ ಶತಮಾನಗಳಲ್ಲಿ ಕಸೂತಿ ಮಾಡಿದ ಉತ್ತಮ ವಸ್ತ್ರಗಳು ಭಾರತದಿಂದ ವಿದೇಶಗಳಿಗೆ ಭಾರಿ ಪ್ರಮಾಣದಲ್ಲಿ ಹೋಗುತ್ತಿದ್ದುವು. ಯುರೋಪ್ ಮತ್ತು ಪಶ್ಚಿಮ ಏಷ್ಯಗಳಲ್ಲಿ ಭಾರತದ ವಸ್ತುಗಳಿಗೆ ಬಹಳವಾಗಿ ಬೇಡಿಕೆಯಿತ್ತು.

ಭಾರತದ ಹಳ್ಳಿಗಳಲ್ಲೂ ಈ ಕಲೆ ವಿಶೇಷವಾಗಿತ್ತು. ಪಂಜಾಬಿನ ಹೂ ಕಸೂತಿಯೂ ಸಿಂಧುದೇಶ, ಕಚ್ ಮತ್ತು ಕಾಠಿಯಾವಾಡಗಳ ಸರಪಳಿಯ ಮತ್ತು ಗಾಜಿನ ಕಸೂತಿಯೂ ಬಂಗಾಳದ ಕಾಂಥೆ ಮಾದರಿಯೂ ಭಾರತದ ಜಾನಪದ ಕೊಡುಗೆಗಳು. ಲಖನೌವಿನ ಚಿಕನ್‌ಕಾರಿ ಮಾದರಿ ಮತ್ತು ದೆಹಲಿ, ಕಾಶಿ, ಆಗ್ರ, ಸೂರತ್ ಮತ್ತು ಹೈದರಾಬಾದ್‌ಗಳಲ್ಲಿಯ ಕಾರ್‌ಚೋಟಿ ಕಸೂತಿ ಶ್ರೀಮಂತರ ಕಲಾಭಿರುಚಿಯ ನಿದರ್ಶನಗಳಾಗಿದ್ದುವು. ಇವುಗಳಲ್ಲಿ ದಕ್ಷತೆ ಮತ್ತು ನೈಪುಣ್ಯ ಬಹಳವಾಗಿದ್ದು ಹಳ್ಳಿಗರ ಹಾಗೂ ವನವಾಸಿಗಳ ಕಸೂತಿಯಲ್ಲಿ ಸೌಂದರ್ಯಾಭಿವ್ಯಕ್ತಿ ಬಹಳ ಸರಳವಾಗಿತ್ತು.

ಭಾರತದ ಕಸೂತಿಯ ಮೇಲೆ ವಿದೇಶೀಯರ ಪ್ರಭಾವವೂ ಅಲ್ಪವಲ್ಲ. ಕಾಶ್ಮೀರದ ಕಸೂತಿ ಟಿಬೆಟಿನ ಮೂಲಕ ಚೀನದ ಕಸೂತಿಯಿಂದ ಪ್ರಭಾವಿತವಾಯಿತು. ಇದೇ ರೀತಿಯಲ್ಲಿ ಪಂಜಾಬಿನ ಹೂ ಕಸೂತಿ ಬಲೂಚಿಸ್ತಾನದಿಂದ ಪ್ರಭಾವಿತವಾದುದಾಗಿಯೂ ಸಿಂಧೂದೇಶ ಕಚ್ ಕಾಠಿಯಾವಾಡಗಳ ಶೈಲಿಗಳು ಸ್ಪೇನ್ ಜರ್ಮನಿಗಳಿಂದ ಪ್ರಭಾವಗೊಂಡಿರುವುದಾಗಿಯೂ ತೋರುತ್ತದೆ. ಕರ್ಣಾಟಕ ಮತ್ತು ಬಿಹಾರಗಳ ಕಸೂತಿಯ ಮೇಲೆ ಸ್ಲಾವ್ ದೇಶಗಳ ಕಸೂತಿಯ ಪ್ರಭಾವವಿರುವುದಾಗಿ ಕಂಡುಬರುತ್ತದೆ. ಮೊಗಲರ ಕಾಲದಿಂದ ಮೊದಲುಗೊಂಡು ಇರಾನಿನ ಪ್ರಭಾವ ಭಾರತದ ಕಸೂತಿಕಲೆಯ ಮೇಲೆ ಬೀಳುತ್ತಲೇ ಇದೆ. ಆದರೆ, ಈ ಎಲ್ಲ ಶೈಲಿಗಳನ್ನೂ ಒಟ್ಟಾಗಿ ಮೈಗೂಡಿಸಿಕೊಂಡು ಭಾರತ ತನ್ನದೇ ಆದ ವಿಶಿಷ್ಟ ರೀತಿಯ ಶೈಲಿಗಳನ್ನು ರೂಪಿಸಿಕೊಂಡಿರುವುದನ್ನು ಗಮನಿಸಬೇಕು.

ಕಾಲ, ದೇಶ ಹಾಗೂ ಪ್ರಭಾವಗಳಿಗನುಗುಣವಾಗಿ ಭಾರತದಲ್ಲಿಯ ವಿವಿಧ ಪ್ರಾಂತ್ಯಗಳಲ್ಲಿ ಕಸೂತಿಯ ವಿವಿಧ ನಮೂನೆಗಳಿವೆ. ಕಾಶ್ಮೀರದ ಕಸೂತಿಯಲ್ಲಿ ಸೋಜನಕಾರಿ, ಗಬ್ಬಾ ಮತ್ತು ಸರಪಳಿ ಕಸೂತಿಗಳು ಮುಖ್ಯವಾದವು. ಕಾಶ್ಮೀರದ ಶಾಲುಗಳ ಮೇಲೆ ಕಂಡುಬರುವ ಹೂಬಳ್ಳಿಗಳು, ಪಕ್ಷಿಗಳು ಮತ್ತು ಮನುಷ್ಯಾಕೃತಿಗಳು ಬಹು ಸೂಕ್ಷ್ಮವಾಗಿ ಮಾಡಿದ ಸೋಜನಕಾರಿ ಮಾದರಿಗಳು. ಬಣ್ಣಬಣ್ಣದ ಪರದೆಗಳು, ಪೀಠೋಪಕರಣಗಳು ಮತ್ತು ಹಾಸಿಗೆ ಬಟ್ಟೆಗಳ ಮೇಲೆ ಗಬ್ಬಾ ಮಾದರಿಯ ಕಸೂತಿಯನ್ನು ಬಳಸಲಾಗುತ್ತದೆ. ಪಂಜಾಬಿನ ಹೂ ಕಸೂತಿಯಲ್ಲಿ ಹತ್ತಿಯ ಬಟ್ಟೆಗಳು ಮತ್ತು ಹೊದಿಕೆಗಳ ಮೇಲೆ ಹೂವಿರುವ ಬಳ್ಳಿಗಳನ್ನು ಹೊಲಿಯುತ್ತಾರೆ. ಈ ಕೆಲಸವನ್ನು ಜಾಟರು ವಿಶೇಷವಾಗಿ ಮಾಡುತ್ತಾರೆ. ಇವುಗಳಲ್ಲೂ ಮೂರು ವಿಧಾನಗಳಿವೆ: ಫುಲ್‌ಕಾರಿ ಮಾದರಿಯಲ್ಲಿ ಬಳ್ಳಿಗಳು ದೂರದೂರವಾಗಿರುತ್ತವೆ ; ಬಾಗ್ ಮಾದರಿಯಲ್ಲಿ ಎಲ್ಲ ಸ್ಥಳವನ್ನೂ ಜ್ಯಾಮಿತಿಯ ಆಕಾರಗಳಿಂದ ತುಂಬಲಾಗುತ್ತದೆ ; ಚೋಪ್ ಮಾದರಿಯಲ್ಲಿ ಅಂಚಿನಲ್ಲೇ ಕೆಲಸ ಮಾಡಲಾಗುತ್ತದೆ. ಪಂಜಾಬಿನಲ್ಲಿ ಫುಲ್‌ಕಾರಿ ಕಸೂತಿ ಕಲೆ ತಾಯಿಯಿಂದ ಮಗಳಿಗೆ ಪರಂಪರೆಯಾಗಿ ಮುಂದುವರಿಯುತ್ತದೆ. ಕಚ್ ಮತ್ತು ಕಾಠಿಯಾವಾಡಗಳ ಶೈಲಿಗಳಲ್ಲಿ ವ್ಯತ್ಯಾಸ ಕಂಡುಹಿಡಿಯುವುದು ಸ್ವಲ್ಪ ಕಷ್ಟ. ಹಳ್ಳಿಗಳಲ್ಲಿ ಸಾಮಾನ್ಯವಾಗಿರುವ ಈ ಕಲೆಯನ್ನು ಕನಬಿ ಅಥವಾ ಭರತ್ ಎಂದು ಕರೆಯಲಾಗುತ್ತದೆ. ಸಾಟಿನ್, ರೇಷ್ಮೆ ಮತ್ತು ಹತ್ತಿ ಬಟ್ಟೆಗಳ ಮೇಲೆ ಈ ಕಸೂತಿಯನ್ನು ಮಾಡಿ ಕನ್ನಡಿಯ ಚೂರುಗಳನ್ನು ತುಂಬುತ್ತಾರೆ. ಬಿಳಿ, ಕೇಸರಿ, ಕಪ್ಪು ಅಥವಾ ಕೆಂಪು ಹಿನ್ನಲೆಗಳಲ್ಲಿ ಇವು ನಯನಮನೋಹರವಾಗಿ ಕಾಣುತ್ತವೆ. ಕಾಠಿಯಾವಾಡದ ಶೈಲಿ ಕಚ್ಚಿನ ಶೈಲಿಗಿಂತ ಅಧಿಕ ಸ್ಥೂಲವಾದುದು. ಉತ್ತರಪ್ರದೇಶದಲ್ಲಿ ಚಿಕನ್‌ಕಾರಿ ಎಂದು ಕರೆಯುವ ಕಸೂತಿ ಕಲೆ ಲಖನೌ, ರಾಮಪುರ ಮತ್ತು ಬನಾರಸ್‌ಗಳಲ್ಲಿ ಅಧಿಕವಾಗಿದೆ. ಇಲ್ಲಿ ಅಂಗಿ, ಟೋಪಿ, ಲಂಗ, ಸೀರೆಗಳೇ ಮೊದಲಾದವುಗಳ ಮೇಲೆ ಬಹಳವಾಗಿ ಬಿಳಿಯ ದಾರದಿಂದ ಕಸೂತಿ ಮಾಡುತ್ತಾರೆ. ಮಣಿಪುರದ ಸ್ತ್ರೀಯರು ಮಾಡುವ ರೇಷ್ಮೆ ಕಸೂತಿ ತುಂಬ ಆಕರ್ಷಕವಾಗಿರುತ್ತದೆ.

ಶಾಮಿಯಾನ, ಕುದುರೆ ಆನೆಗಳ ಮೇಲಿನ ವಸ್ತ್ರಗಳು, ಉಡುಪು, ಪಾದರಕ್ಷೆ ಮೊದಲಾದ ವಸ್ತುಗಳ ಮೇಲೆ ಕಾರ್‌ಚೋಟಿ ಶೈಲಿಯಲ್ಲಿ ಕಲಾಬತು, ಸಲ್ಮಾ, ಬಾದ್‌ಲಾ ಮೊದಲಾದವುಗಳ ಕಸೂತಿ ಮಾಡುತ್ತಾರೆ. ಕಾರ್‌ಚೋಟ ಕೆಲಸ ಮುಖ್ಯವಾಗಿ ದೆಹಲಿ, ಲಖನೌ, ಹೈದರಾಬಾದ್, ಬನಾರಸ್ (ವಾರಾಣಸಿ), ಪಾಟಲೀಪುತ್ರ, ಮತ್ತು ಸೂರತ್‌ಗಳಲ್ಲಿ ಪ್ರಚುರವಾಗಿದೆ.

ಇವೇ ಅಲ್ಲದೆ ಬಂಗಾಲದ ಕಾಂಥಾ, ಬಿಹಾರದ ದೋಮುಹಾ ಮುಂತಾದ ಶೈಲಿಗಳು ಮತ್ತು ಬಿಹಾರ, ಒರಿಸ್ಸ ಮುಂತಾದ ರಾಜ್ಯಗಳಲ್ಲಿಯ ಜಾಳಿಗೆ ಕಸೂತಿ (ಅಪ್ಲಿಕೇ) ಮಹತ್ವಪೂರ್ಣವಾದವು.

ಪಂಜಾಬಿನ ಸ್ತ್ರೀಯರು ಸಾಮಾನ್ಯವಾಗಿ ಧರಿಸುತ್ತಿದ್ದ ಫುಲ್‌ಕಾರಿ ಕಸೂತಿಗಳಲ್ಲಿ ಮೊಗಲರ ಪ್ರಭಾವ ಬೀಳುವ ಮೊದಲು ಈ ಕಲೆಯ ಮಾದರಿ ಹೇಗಿತ್ತೆಂಬುದನ್ನು ಕಾಣಬಹುದು. ಇವುಗಳಿಗೆ ವಿಶಿಷ್ಟ ಜ್ಯಾಮಿತಿಯ ಆಕಾರಗಳಿರುತ್ತಿದ್ದವು. ಫುಲ್‌ಕಾರಿ

ಕಸೂತಿಯನ್ನು ಎಳೆತುಂಬುವ ಹೊಲಿಗೆಗಳಿಗಾಗಿ ಉಪಯೋಗಿಸುತ್ತಿದ್ದರು. ಇವುಗಳಲ್ಲಿ ಹೊಲಿಗೆಗಳು ಬಹಳ ಚಿಕ್ಕವಾಗಿದ್ದು, ಹತ್ತಿರಹತ್ತಿರವಿರುತ್ತಿದ್ದುವು ; ಹೊಲಿಗೆಯ ಮನೆಗಳನ್ನೋ ಸಾಲುಗಳನ್ನೋ ಎಣಿಕೆ ಮಾಡಿ ಅವುಗಳ ನಿರ್ದುಷ್ಟತೆಯನ್ನು ಪರೀಕ್ಷಿಸಲಾಗುತ್ತಿತ್ತು. ಅಮೆರಿಕನ್ ಮತ್ತು ಐರೋಪ್ಯ ಮಾದರಿಗಳನ್ನು ಅನುಸರಿಸಿ ಒಂದು ರೀತಿಯ ಕತ್ತರಿ ಹೊಲಿಗೆ ಕೂಡ ಪ್ರಚಲಿತವಾಗಿತ್ತು. ಇವುಗಳಲ್ಲಿ ಜಮದಾನಿ, ಚಿಕನ್ ಮತ್ತು ಕಸೀದಾ ಮಾದರಿಗಳು ಪ್ರಮುಖವಾಗಿದ್ದವು. ಕಸೀದಾ ಮಾದರಿಯಲ್ಲಿ ಚಿನ್ನದ ಬಣ್ಣದ ರೇಷ್ಮೆಯನ್ನು ಎಳೆತುಂಬಲೂ ಸಾಟಿನ್ ಹೊಲಿಗೆಗಳಿಗಾಗಿಯೂ ಉಪಯೋಗಿಸುತ್ತಿದ್ದರು. ಸಾಂಪ್ರದಾಯಿಕ ಸಮಾರಂಭಗಳಲ್ಲಿ ಚಿನ್ನಬೆಳ್ಳಿಗಳಿಂದ ಕಸೂತಿ ಮಾಡಲಾದ ವಸ್ತ್ರಗಳನ್ನು ಬಹುತೇಕ ಉಪಯೋಗಿಸುತ್ತಿದ್ದರು. ಜೊತೆಗೆ ಮಖಮಲ್ಲು ಮೊದಲಾದ ವಸ್ತ್ರಗಳನ್ನು ಉಪಯೋಗಿಸಿದಾಗ ಅವುಗಳ ಸೌಂದರ್ಯ ಇನ್ನೂ ಹೆಚ್ಚುತ್ತಿತ್ತು.

**ಕರ್ನಾಟಕದಲ್ಲಿ:** ಮೈಸೂರೊಡೆಯರ ಆಶ್ರಯದಲ್ಲಿ 17ನೆಯ ಶತಮಾನದಲ್ಲಿದ್ದ ಸಂಚಿಯ ಹೊನ್ನಮ್ಮ ಆಗ ಅರವತ್ತನಾಲ್ಕು ಕಲೆಗಳನ್ನು ತಿಳಿದಿದ್ದ ಮಹಿಳೆಯರೂ ಇದ್ದರೆಂದು ಹೇಳಿದ್ದಾಳೆ. ಪುರುಷ ಕಲಾವಿದರು ಕಲ್ಲಿನ ಮೂರ್ತಿಗಳನ್ನು ಪ್ರಮಾಣ ಬದ್ಧವಾಗಿ ಕಡೆಯಲೆತ್ನಿಸುತ್ತಿದ್ದಾಗ, ಸ್ತ್ರೀಯರು ತಮ್ಮ ಕಲಾಕೌಶಲವನ್ನು ಬಟ್ಟೆಯ ಮೇಲೆ ಸೂಜಿದಾರಗಳಿಂದ ತೋರಿಸುತ್ತಿದ್ದರು. ನಿರ್ದಿಷ್ಟ ಸಾಹಿತ್ಯದ ಅಭಾವದಿಂದಾಗಿ ಈ ವಿದ್ಯೆ ಕೈಯಿಂದ ಕೈಗೆ ಸಾಗುತ್ತಿತ್ತು. ನಾಡಿನ ಪ್ರತಿಯೊಬ್ಬ ಹೆಣ್ಣು ಮಗಳೂ ತನ್ನ ಸೀರೆ ಕುಪ್ಪಸಗಳನ್ನು ಮಕ್ಕಳ ಬಟ್ಟೆಗಳನ್ನು ಕಸೂತಿಯಿಂದ ಅಲಂಕರಿಸುತಿದ್ದಳು. ನೆಲ ಉಳುವ ಬಸವಣ್ಣನೂ ಕಸೂತಿ ವಸ್ತ್ರದಿಂದ ವಂಚಿತನಾಗುತ್ತಿರಲಿಲ್ಲ. ಕರ್ನಾಟಕದಲ್ಲಿ ಕಸೂತಿಯಿಂದ ಜೀವನ ಸಾಗಿಸುತ್ತಿದ್ದ ನಿದರ್ಶಗಳಿದ್ದುವು.

ದೇವಾಲಯಗಳಲ್ಲಿ ಅನೇಕ ಗೋಪುರ, ಕಲಶ, ತುಳಸಿಕಟ್ಟೆ ಇತ್ಯಾದಿ ಆಕೃತಿಗಳು ಕಸೂತಿಯಲ್ಲೂ ಮೂಡಿಬಂದುವು. ತಾಯಿ ತನ್ನ ಮಗುವಿಗೆ ಪ್ರಿಯವಾದ ಹೂಬಳ್ಳಿಗಳನ್ನೂ ಗಿಳಿ, ಆನೆ, ತೊಟ್ಟಿಲು, ಹಸು ಮುಂತಾದವನ್ನೂ ಕಸೂತಿಯಲ್ಲಿ ರೂಪಿಸುತ್ತಿದ್ದಳು. ಕನ್ನಡ ನಾಡಿನ ಕಸೂತಿಯಲ್ಲಿ ಬಿಳಿ, ಕೆಂಪು, ಹಳದಿ ಮತ್ತು ಹಸುರು ಬಣ್ಣಗಳು ಮುಖ್ಯವಾದವು. ಮೊದಲಿಗೆ ಕಲ್ಕತ್ತದಿಂದ ಕರ್ನಾಟಕಕ್ಕೆ ರೇಷ್ಮೆ ಬರುತ್ತಿತ್ತು. ಬಿಜಾಪುರದಲ್ಲಿ ಅದನ್ನು ತೊಳೆದು ಒಣಗಿಸುತ್ತಿದ್ದರಂತೆ. ಆದರೆ, ಈಚೆಗೆ ಮೈಸೂರಿನ ರೇಷ್ಮೆ ಕಸೂತಿಗೆ ಉತ್ತಮವಾಗಿವೆ. ರೇಷ್ಮೆಯಲ್ಲಿ ಹಾಕಿದರೆ ಕಸೂತಿ ಬಹಳ ಎತ್ತರವಾಗಿರದೆ, ಅಂದವಾಗಿರುತ್ತದೆ. ಕನ್ನಡ ನಾಡಿನಲ್ಲಿ ಸಾಮಾನ್ಯವಾಗಿ ತಯಾರಿಸುತ್ತಿದ್ದ ಕರಿಯ ಚಂದ್ರಕಾಳಿ ಸೀರೆಯ ಮೇಲೆ ಕನ್ನಡ ಕಸೂತಿಯ ಎಲ್ಲ ನಮೂನೆಗಳನ್ನು ನೋಡಬಹುದಾಗಿತ್ತು. ಎರಡೂವರೆ ಮೊಳ ಸೆರಗಿರುವ, ಹದಿನೆಂಟು ಮೊಳ ಸೀರೆಯ ಮೇಲೆ, ಬಿಳಿ ಮತ್ತು ಕೆಂಪು ರೇಷ್ಮೆ ಎಳೆಗಳಿಂದ ಕೂಡಿದ ಸೆರಗಿನ ಮೇಲಂಚಿಗೆ ಹೂವಿನ ಸಾಲು, ಗೋಡಂಬಿಯ ಪಟ್ಟೆ, ಗೋಪುರಗಳು, ಗಿಳಿಗಳು ಮೊದಲಾದವನ್ನು ಹಾಕುತ್ತಿದ್ದರು. ಸೀರೆಯ ಉದ್ದಕ್ಕೂ ನೀಲಗಗನದಲ್ಲಿಯ ನಕ್ಷತ್ರಗಳಂತೆ ಬಿಳಿಯ ಚಿಕ್ಕೆಗಳು ಹರಡಿದ್ದು, ಮಧ್ಯೆ ಮಧ್ಯೆ ದೊಡ್ಡ ದೊಡ್ಡ ನಮೂನೆಗಳು (ಡಿಸೈನ್) ಇರುತ್ತಿದ್ದುವು. ಬನಾರಸಿನ ಬಂಗಾರದ ಕಡ್ಡಿಯ ನಮೂನೆಗಳು ರೇಷ್ಮೆ ಸೀರೆ ಮತ್ತು ಖಣಗಳಲ್ಲಿ ಮೂಡಿ ಮನ ತಣಿಸುತ್ತಿದ್ದುವು.

ಕನ್ನಡ ನಾಡಿನಲ್ಲಿ ಮೆಂಥೆ, ನೇಗಿ, ಗಾಂವಟಿ ಮತ್ತು ಮುರಿಗೆ ಎಂಬ ನಾಲ್ಕು ಮಾದರಿಗಳು ಖ್ಯಾತವಾಗಿವೆ. ಮೆಂಥೆ ಕಸೂತಿ ಮೆಂತ್ಯದ ಕಾಳಿನ ಸಾಲೆಂಬಂತೆ ಕಂಡು ಬರುವುದು. ಸ್ವಲ್ಪ ಸ್ಥೂಲವಾದ ಈ ಕಸೂತಿಯನ್ನು ಹಿನ್ನೆಲೆಯನ್ನು ತುಂಬಲು ಬಳಸುತ್ತಾರೆ. ಎಳೆಗಳನ್ನೆಣಿಸಿಯೇ ಇದನ್ನು ಹಾಕುವುದರಿಂದ, ನೂಲಿನ ಬಟ್ಟೆಯೇ ಮೆಂಥೆಯ ಮಾದರಿಗೆ ಉತ್ತಮವಾದುದು. ರೇಷ್ಮೆಯನ್ನೂ ಇದಕ್ಕೆ ಉಪಯೋಗಿಸುವುದುಂಟು. ನೇಗಿ ಕಸೂತಿಯನ್ನು ಬಟ್ಟೆಯ ಅಡ್ಡ ಎಳೆಗಳೊಡನೆ ನೇಯ್ದಂತೆಯೇ ಹಾಸುತ್ತಾರೆ. ಆದ್ದರಿಂದ ಮೇಲೆ ಹಾಕಿದ ಆಕೃತಿ ಕೆಳಗೂ ಮೂಡುವುದು. ಆದರೆ ಎಳೆಗಳು ಮೇಲೆ ಉದ್ದವಾಗಿ, ಕೆಳಗೆ ಸಣ್ಣವಾಗಿರುವುವು. ಗಾಂವಟಿ ಹಳ್ಳಿಗಳಲ್ಲಿ ಹಾಕುವ ಕಸೂತಿ. ನಾಡಿನಲ್ಲಿಯೇ ಅತ್ಯಂತ ಸುಂದರವಾದ ಕಸೂತಿಯೆಂದರೆ ಇದೇ. ಗಾಂವಟಿಯನ್ನು ಹಾಕಿದ ಬಟ್ಟೆಯ ಮೇಲೆ ಎಲ್ಲಿ ಪ್ರಾರಂಭಿಸಿದರು ಮತ್ತು ಎಲ್ಲಿ ಮುಗಿಸಿದರು ಎಂಬುದು ಹೊರನೋಟಕ್ಕೆ ತಿಳಿಯುವುದಿಲ್ಲ. ಅಲ್ಲದೆ, ಕೆಳಗೆ ಮತ್ತು ಮೇಲೆ ಈ ಕಸೂತಿ ಒಂದೇ ರೀತಿಯಲ್ಲಿ ಬರುವುದು. ಇದರಲ್ಲಿ ಪದ್ಮ, ಕಲಶ ಮೊದಲಾದವನ್ನು ಅತ್ಯುತ್ತಮವಾಗಿ ಮೂಡಿಸಬಹುದು. ಮುರಿಗೆಮುರಿಗೆಯಾಗಿರುವುದರಿಂದ ಮುರಿಗೆ ಕಸೂತಿಯನ್ನು ಕಂಬಳಿಗಳ ಮೇಲೆ ಸಾಮಾನ್ಯವಾಗಿ ಹಾಕುವರು. ಆನೆ ಅಂಬಾರಿ ಈ ಕಸೂತಿಯಲ್ಲಿ ಬಹಳ ಚೆನ್ನಾಗಿ ಕಾಣುತ್ತದೆ. ಕಂಬಳಿಗಳಿಗಾಗಿ ನೇಗಿ ಕಸೂತಿಯನ್ನೂ ಉಪಯೋಗಿಸುವುದುಂಟು. ಗುಡಿಗೋಪುರ, ಬಸವಣ್ಣ, ಲಿಂಗ, ಎಳ್ಳು, ಹೂವು, ತೆನೆ, ತೊಟ್ಟಿಲು ಮಂಟಪ– ಮುಂತಾದ ಚಿತ್ರಗಳನ್ನೊಳಗೊಂಡ ಸೀರೆಗಳು ಕರ್ನಾಟಕದ ವೈಶಿಷ್ಟ್ಯ.

ಕನ್ನಡ ನಾಡಿನ ಕೆಳವರ್ಗದ ಸ್ತ್ರೀಯರಲ್ಲಿ ಬಗೆಬಗೆಯ ಕಸೂತಿಗಳನ್ನು ಕಾಣಬಹುದು. ಲಂಬಾಣಿ ಸ್ತ್ರೀಯರು ಸಣ್ಣ ಸಣ್ಣ ಕನ್ನಡಿಯ ತುಂಡುಗಳನ್ನು ಸೇರಿಸಿ ಸರಪಳಿ ಹೊಲಿಗೆ ಹಾಕುತ್ತಾರೆ. ಇದು ವಂಶಪಾರಂಪರ್ಯವಾಗಿ ಹರಿದು ಬಂದಿರುವ ಕಲೆ. ಕರ್ನಾಟಕದಲ್ಲಿ ಜಾತಿಕುಲ ಭೇದಗಳಿಲ್ಲದೆ ಎಲ್ಲ ಹೆಣ್ಣುಮಕ್ಕಳೂ ಕಸೂತಿ ಕಲೆಯ ಅಭಿಮಾನಿಗಳಾಗಿದ್ದಾರೆ.

**ಪುರಾತನ ನಾಗರಿಕತೆಗಳಲ್ಲಿ:** ಪ್ರಪಂಚದ ಅನೇಕ ಪುರಾತನ ನಾಗರಿಕತೆಗಳಲ್ಲಿ ಕಸೂತಿ ಕಲೆಯ ಉತ್ಕೃಷ್ಟ ನಮೂನೆಗಳು ದೊರೆಯುತ್ತವೆ. ಈಜಿಪ್ಟಿನಲ್ಲಿ ಬಟ್ಟೆಗಳು, ರಥಗಳ ಮೇಲಿನ ಹೊದಿಕೆಗಳು, ಗುಡಾರಗಳು ಇತ್ಯಾದಿಗಳೆಲ್ಲದರ ಮೇಲೂ ಕಸೂತಿಯ ಚಿತ್ರಗಳನ್ನು ಬಿಡಿಸಲಾಗುತ್ತಿತ್ತೆಂಬುದು ಸಮಾಧಿಗಳ ಮೇಲಿರುವ ಚಿತ್ರಗಳಿಂದ ತಿಳಿದು ಬರುತ್ತದೆ. ವಿದೇಶಿಯರ ಆಕೃತಿಗಳ ಉಡುಗೆತೊಡುಗೆಗಳ ಮೇಲೂ ಚಿತ್ರಗಳಿರುವುದರಿಂದ ಕಸೂತಿ ಕಲೆ ತತ್ಕಾಲೀನ ನಾಗರಿಕತೆಗಳಲ್ಲಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ದೋಣಿಗಳ ಮತ್ತು ಹಡಗುಗಳ ಹಾಯಿಗಳ ಮೇಲೂ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಹಳೆಯ ಒಡಂಬಡಿಕೆಯ ಎಕ್ಸೋಡಸ್ ಮತ್ತು ಎಜ಼ೀಕಿಯೆಲ್‌ಗಳ ಪ್ರಕಾರ ಹೀಬ್ರುಗಳ ಸಹ ಸಂಪ್ರದಾಯಿಕ ಪೂಜೆಗಾಗಿ ಉಪಯೋಗಿಸುತ್ತಿದ್ದ ವಸ್ತ್ರಗಳ ಮೇಲೆ ಚಿನ್ನ ಹಾಗೂ ಬೆಳ್ಳಿಯ ಎಳೆಗಳಿಂದ ಚಿತ್ರ ಬಿಡಿಸುತ್ತಿದ್ದರಂತೆ. ಪ್ರ.ಶ.ಪೂ.ಸು. 1000ದ ಹೊತ್ತಿಗೆ ಚೀನದಲ್ಲಿ ಕಸೂತಿ ಕಲೆಯುದ್ದುದರ ಕುರುಹುಗಳು ದೊರೆಯುತ್ತವೆ. ಚೀನಾಂಬರ ಭಾರತವೇ ಮುಂತಾದ ದೇಶಗಳಲ್ಲೂ ಖ್ಯಾತಿವೆತ್ತಿದುದಾಗಿತ್ತು. ಪ್ರ.ಶ.ಪೂ.ಸು. 6ನೆಯ ಶತಮಾನದ ಷುಚಿಂಗ್ ಗ್ರಂಥದಲ್ಲಿರುವ ಅನೇಕ ಸಾಂಪ್ರದಾಯಿಕ ವಸ್ತುಗಳ ವರ್ಣನೆಯಲ್ಲಿ ಕಸೂತಿಯ ಬಗ್ಗೆ ಕೆಲವು ವಿವರಗಳು ದೊರಕುತ್ತವೆ.

ಅಲ್ಟಾಯ್ ಪರ್ವತ ಪ್ರದೇಶದಲ್ಲಿಯ ಶೋಧನೆಗಳಲ್ಲಿ ಮಂಗೋಲಿಯನರು ಉಪಯೋಗಿಸುತ್ತಿದ್ದ ಸ್ಕೈಥಿಯನ್ ಮಾದರಿಯ ಉಣ್ಣೆಯ ನಿಲುವಂಗಿಗಳೇ ಮೊದಲಾದ ಉಡುಪುಗಳು ದೊರೆತಿವೆ. ಸ್ತ್ರೀಯರ ಉಡುಪುಗಳು, ಪಟ್ಟೆಗಳು, ಚೀಲಗಳು, ಜೀನುಗಳು ಇತ್ಯಾದಿಗಳ ಮೇಲೂ ಸುಂದರವಾಗಿ ಕಸೂತಿ ಮಾಡಲಾಗಿದೆ. ಸುಮಾರು 6ನೆಯ ಶತಮಾನದಲ್ಲಿ ಅನೇಕ ಕ್ರೈಸ್ತ ಚಿಹ್ನೆಗಳನ್ನು ನಿಲುವಂಗಿಗಳ ಮೇಲೆ ಚಿತ್ರಿಸಲಾರಂಭಿಸಿದರು. ಇವಕ್ಕೆ ಸಾಮಾನ್ಯವಾಗಿ ಬಣ್ಣ ಹಾಕಲಾಗುತ್ತಿತ್ತು, 4–5ನೆಯ ಶತಮಾನಗಳ ಹೊತ್ತಿಗೆ ಈ ಕಲೆ ಇನ್ನೂ ಅಭಿವೃದ್ಧಿಗೊಂಡು ನಸುಗೆಂಪು, ಹಳದಿ ಮತ್ತು ಹಸಿರು ಬಣ್ಣಗಳು ಮೇಲೆ ಮೆರಗು ಕೊಡುವಂತೆ ಮಾಡಲು ಉಪಯೋಗಕ್ಕೆ ಬಂದುವು.

**ಪಾಶ್ಚಾತ್ಯ ರಾಷ್ಟ್ರಗಳಲ್ಲಿ:** ಪುರಾತನ ಗ್ರೀಸಿನ ಕಸೂತಿ ವಸ್ತುಗಳು ಯಾವುವೂ ಉಳಿದಿಲ್ಲ. ಅದರ ಉಗಮ ಎಂದಾಯಿತೆಂಬುದನ್ನು ಖಚಿತವಾಗಿ ಹೇಳುವಂತಿಲ್ಲ. 20ನೆಯ ಶತಮಾನದ ಮಧ್ಯಭಾಗದ ಅನಂತರ ಇಲ್ಲಿ ಈ ಕಲೆ ಸಾಂಪ್ರದಾಯಿಕವೆಂಬ ದೃಷ್ಟಿಯಲ್ಲಿ ಅಳಿಸಿಹೋಯಿತು. 12–15ನೆಯ ಶತಮಾನಗಳ ನಡುವೆ ಇವುಗಳ ಉಗಮವಾಗಿದ್ದರಬಹುದು. ಇವರು ಹೊಸೆಯದ ರೇಷ್ಮೆಯ ಎಳೆಗಳಿಂದ ಲಿನೆನ್ ಬಟ್ಟೆಗಳ ಮೇಲೆ ಕಸೂತಿ ಹಾಕುತ್ತಿದ್ದರು. ಇವರ ಕಸೂತಿಗಳು ಸಾಮಾನ್ಯವಾಗಿ ಹಸುರು ಮತ್ತು ತಿಳಿನೀಲಿ ಬಣ್ಣಗಳವು. ಇವು 20 ಇಂಚುಗಳಿಗಿಂತ ಅಗಲವಾಗಿರುತ್ತಿರಲಿಲ್ಲ. ನೆಪೋಲಿಯಾನಿಕ್ ಯುದ್ಧಗಳ ಕಾಲದಲ್ಲಿ ಉಪ್ಪುನೇರಳೆ ಗಿಡಗಳನ್ನು ಕಡಿದು ಹಾಕಿ ಆಮೇಲೆ ಅವುಗಳ ಸ್ಥಳದಲ್ಲಿ ಆಲಿವ್ ಗಿಡಗಳನ್ನು ನೆಟ್ಟುದುದರಿಂದ ಒಂದು ರೀತಿಯಲ್ಲಿ ಗ್ರೀಕ್ ಕಸೂತಿ ಕಲೆಗೆ ಕೊಡೆಲಿಯೇಟು ಬಿದ್ದಿತೆನ್ನಬಹುದು. ಅಯೋನಿಯನ್ ದ್ವೀಪಸಮೂಹ ವ್ಯಾಪಾರ ಮಾರ್ಗದಲ್ಲಿದ್ದುದರಿಂದ, ವ್ಯಾಪಾರ ಸಂಪರ್ಕದಿಂದ ಪರ್ಷಿಯನರ ಮತ್ತು ಇಟಾಲಿಯನರ ಪ್ರಭಾವ ಗ್ರೀಕರ ಕಸೂತಿ ಕಲೆಯ ಮೇಲೆಯೂ ಬಿತ್ತು. ವಸ್ತ್ರಗಳ ಮೇಲೆ ಅಗಲವಾದ ನಮೂನೆಗಳನ್ನೂ ತೆರೆ ಮತ್ತು ಪೀಠೋಪಕರಣಗಳಿಗೆ ಉಪಯೋಗಿಸಲಾಗುತ್ತಿದ್ದ ಡಮಾಸ್ಕ್ ಬಟ್ಟೆಯ ಮೇಲೆ ಹೂ ಕುಂಡಗಳ ಚಿತ್ರಗಳನ್ನೂ ಬಿಡಿಸುತ್ತಿದ್ದರು. ಇವರಲ್ಲಿ ಅನೇಕ ಮಾದರಿಯ ಹೊಲಿಗೆಗಳಿದ್ದವು. ಕ್ರಿಟಾನ್ ಮಾದರಿಯ ಹೊಲಿಗೆಯಲ್ಲಿ ಗಾಢ ಹಳದಿ ಮತ್ತು ಕಪ್ಪು ಬಣ್ಣಗಳನ್ನು ಕೂಡಿಸಲಾಗುತ್ತಿತ್ತು. ಸೈಕ್ಲೇಡಿನಲ್ಲಿಯ ಸಮ್ರಾಟ್ ಮಾದರಿಯ ಕಸೂತಿಗಳಲ್ಲಿ ಷಟ್ಕೋಣಾಕೃತಿ ಪ್ರಧಾನ. ಇವೇ ಅಲ್ಲದೆ ರಾಣಿ ಮಾದರಿ, ನಕ್ಷತ್ರ ಮಾದರಿ ಇತ್ಯಾದಿಗಳು ಪ್ರಚಲಿತವಾಗಿದ್ದುವು. ರೋಡ್ಸ್ ಕಸೂತಿಯ ಕಲೆಯ ಮೇಲೆ ಐರೋಪ್ಯರ ಪ್ರಭಾವದಿಂದಾಗಿ ಮಂಚದ ತೆರೆಗಳಿಗೆ ಬಾಗಿಲನ್ನು ಇಡಲಾಗಿದೆಯೆಂದು ತೋರುವಂತೆ ಗುಡಾರಗಳ ಬಾಗಿಲಿನ ರೀತಿಯ ಆಕೃತಿಗಳನ್ನು ಹೊಲಿಯುತ್ತಿದ್ದರು; ದಿಂಬುಗಳಿಗೆ ಅಂಚುಗಳನ್ನು ಹೊಲಿಯಲಾಗುತ್ತಿತ್ತು. ಸ್ಕೈರೋಸ್ ಕಲೆಯ ಮೇಲೆ ತುರ್ಕರ ಪ್ರಭಾವದಿಂದಾಗಿ ಅರ್ಧ ಪೂರ್ವದ ಮತ್ತು ಅರ್ಧ ಪಶ್ಚಿಮದ ರೀತಿಯ ಕಲೆಗಳ ಸಂಯೋಗವಾಗಿತ್ತು. ಸ್ಕೈರೋಸರು ಹೂ ಬಿಡುತ್ತಿರುವ ಗಿಡಗಳು, ಚಿಲಿಪಿಲಿಗುಟ್ಟುತ್ತಿರುವ ಪಕ್ಷಿಗಳು, ಹಾಯಿತೆರೆದು ಹೊರಡಲೆತ್ನಿಸುತ್ತಿರುವ ಹಡಗುಗಳು ಮುಂತಾದವನ್ನೇ ಹೆಚ್ಚಾಗಿ ಕಸೂತಿ ಹಾಕುತ್ತಿದ್ದರು. ತುರ್ಕಿಯ ಕಸೂತಿಯ ಉತ್ಕೃಷ್ಟತೆ ಇರುವುದು ಅವುಗಳ ಶ್ರೀಮಂತಿಕೆಯಲ್ಲಿ. ಬಣ್ಣಬಣ್ಣದ ರೇಷ್ಮೆ ಬಟ್ಟೆಗಳ ಮೇಲೆ ಚಿನ್ನ ಮತ್ತು ಬೆಳ್ಳಿಯ ದಾರಗಳಿಂದ ಈ ಜನ ಕಸೂತಿ ಮಾಡುತ್ತಿದ್ದರು. ಹಬ್ಬಹರಿದಿನಗಳಲ್ಲಿ ಉಪಯೋಗಿಸಲಾಗುತ್ತಿದ್ದ ಸ್ತ್ರೀಯರ ಕುಪ್ಪಸಗಳಿಗೆ ಉದ್ದುದ್ದವಾಗಿ ಬಿಡಿಬಿಡಿಯಾದ ಹೂಗಳ ಮತ್ತು ಎಲೆಗಳ ಚಿತ್ರಗಳನ್ನು ಚಿನ್ನದ ಎಳೆಯಿಂದ ಮಾಡುತ್ತಿದ್ದರು. ಕೆಂಪು ಮತ್ತು ಊದಾ ಬಣ್ಣಗಳ ಬಟ್ಟೆಗಳನ್ನು ಇದೇ ರೀತಿಯಾಗಿ ಸಜ್ಜುಗೊಳಿಸುತ್ತಿದ್ದರು.

ಪುರುಷರ ನಿಲುವಂಗಿಗಳ ಮೇಲೆ ಚಿನ್ನದ ಎಳೆಗಳಿಂದ ಆಕೃತಿಗಳನ್ನು ಹೊಗಿಸಲಾಗುತ್ತಿತ್ತು; ಚಿನ್ನದ ಪುಡಿಯಿಂದ ನಕ್ಕಿ ಹಾಕಲಾಗುತ್ತಿತ್ತು. 15ನೆಯ ಶತಮಾನದಲ್ಲಿ ಬೆಳಕಿಗೆ ಬಂದ ಈ ಕಲೆ ತುರ್ಕಿಯಲ್ಲಿ 17 ಮತ್ತು 18ನೆಯ ಶತಮಾನಗಳ ಹೊತ್ತಿಗೆ ಶಿಖರ ಮುಟ್ಟಿತು. ಈ ಕಾಲದಲ್ಲಿ ಕುದುರೆ ಜೀನು ಮತ್ತು ಲಗಾಮುಗಳನ್ನು ಚಿನ್ನಬೆಳ್ಳಿಯ ಕಸೂತಿಗಳಿಂದ ಅಲಂಕರಿಸತೊಡಗಿದ್ದರು. ಸಾಮಾನ್ಯವಾಗಿ ಮನೆಯಲ್ಲಿ ಉಪಯೋಗಿಸುತ್ತಿದ್ದ ಲಿನನ್ ಟವಲುಗಳ ಮೇಲೂ ರೇಷ್ಮೆ ಮತ್ತು ಲೋಹಗಳ ಎಳೆಗಳಿಂದ ಕಸೂತಿ ಮಾಡುತ್ತಿದ್ದರು. ಈ ಕಲೆ ತುರ್ಕಿಯಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಸ್ವಲ್ಪ ಇಳಿಮುಖವಾದರೂ 1930ರ ಅನಂತರ ಪುನಃ ಉತ್ಕೃಷ್ಟವಾಗಿ ತಲೆದೋರುತ್ತಿದೆ.

ಮೂರ್ ಜನರ ಪ್ರಭಾವದಿಂದಾಗಿ ಸ್ಪೇನಿನಲ್ಲೂ ಪೌರಸ್ತ್ಯ ಮಾದರಿಯ ಕಲೆ ಪ್ರಚಲಿತವಾಗಿತ್ತು. ದೊರಕಿರುವ ಮಾದರಿಗಳಲ್ಲಿ ಹದಿನೇಳನೆಯ ಶತಮಾನದ್ದೇ ಬಹಳ ಹಳೆಯದೆನ್ನಬಹುದಾದರೂ ವಿಕಾಸಕ್ರಮ ಈ ನಾಡಿನಲ್ಲಿ ಅಲ್ಪತರವಾಗಿದ್ದುದರಿಂದ, ಇನ್ನೂ ಹಳೆಯ ಶೈಲಿಯನ್ನೇ ಇದು ಪ್ರತಿನಿಧಿಸುತ್ತದೆಂದರೂ ತಪ್ಪಾಗಲಾರದು. ಹಾಸಿಗೆ, ದಿಂಬು ಇತ್ಯಾದಿಗಳೆಲ್ಲದರ ಮೇಲಿನ ಲಿನನ್ ಬಟ್ಟೆಯ ಮೇಲೆ ಇವರು ಚಿತ್ರಗಳನ್ನು ಬಿಡಿಸುತ್ತಿದ್ದರು. ಇಂಗ್ಲೆಂಡಿನ ಎಲಿಜಬೆತ್ ಪ್ರಭಾವದಿಂದಾಗಿ ಬಿಳಿಯ ಬಟ್ಟೆಯ ಮೇಲೆ ಕಪ್ಪು ಹೊಲಿಗೆ ಹಾಕುವುದು ಇವರಿಗೆ ಅತ್ಯಂತ ಪ್ರಿಯವಾಗಿತ್ತು. ಪೋರ್ಚುಗೀಸರ ಕಲೆಯ ಮೇಲೂ ಪೂರ್ವದ ಪ್ರಭಾವ ಗಮನಾರ್ಹವಾಗಿ ಬಿದ್ದಿತ್ತು. ಹದಿನೈದನೆಯ ಶತಮಾನದ ಹೊತ್ತಿಗೆ ಆಮದು ಮಾಡಿಕೊಂಡ ಪೌರಸ್ತ್ಯ ವಸ್ತ್ರಗಳಿಂದ ತಮ್ಮದೇ ಆದ ಕಸೂತಿ ಮಾದರಿಯನ್ನು ಇವರು ಬೆಳಸಿಕೊಂಡರು. ಹಾಸಿಗೆಯ ಮೇಲಿನ ವೈವಿಧ್ಯಮಯ ಚಿತ್ರಗಳುಳ್ಳ ಹೊದಿಕೆಗಳು ಈಗಲೂ ಪೋರ್ಚುಗಲಿನ ಅಮೂಲ್ಯ ಸಂಪತ್ತಾಗಿದೆ. ವಿವಾಹಸಂದರ್ಭದ ಶಯನೋಪಕರಣಗಳಿಗೆ ಅಲೆಂಟೇಜೂ ಪ್ರಖ್ಯಾತವಾಗಿದೆ. ಅರಾಯೋಲಾಸ್‌ನಲ್ಲಿ ಜಮಖಾನಗಳ ಮೇಲೆ 18ನೆಯ ಶತಮಾನದ ವರೆಗೂ ಪರ್ಷಿಯನ್ ರೀತಿಯಲ್ಲಿ ಕತ್ತರಿ ಕಸೂತಿ ಹಾಕಲಾಗುತ್ತಿದ್ದು ತದನಂತರ ಒಂದು ಸರ್ವಮಾನ್ಯ ರಾಷ್ಟ್ರೀಯ ಮಾದರಿಯಲ್ಲಿ ನೀಲಿ ಮತ್ತು ಹಳದಿ ಬಣ್ಣಗಳನ್ನೇ ಉಪಯೋಗಿಸಲಾಗುತ್ತಿದೆ. ಗ್ರಾಮ ಪ್ರದೇಶಗಳಲ್ಲಿ ಇನ್ನೂ ಒಳ್ಳೆಯ ಮತ್ತು ಮೌಲಿಕ ನಮೂನೆಗಳನ್ನು ಕಾಣಬಹುದು. ಮದುವೆಯ ಬಟ್ಟೆಬರೆಗಳಿಗೆ ಕಪ್ಪುಬಣ್ಣದ ಮೇಲೆ ಮಣಿಗಳನ್ನು ಪೋಣಿಸುತ್ತಾರೆ. ವಿಧವಿಧವಾದ ಅಂಚುಗಳನ್ನು ಕಾಣಬಹುದು. ಅಜ್ಹೋರ್ಸ್ ದ್ವೀಪಸ್ತೋಮದಲ್ಲಿ ಚೀನಿ ಮಾದರಿಯ ತಿಳಿನೀಲಿ ಮತ್ತು ಗಾಢನೀಲಿಗಳನ್ನೂ ಬಳಸುತ್ತಾರೆ. ಮದೀರಾದಲ್ಲಿ ಬ್ರಾಡೆರಿ ಆಂಗ್ಲೇಸ್ ಎಂಬ ಬಿಳಿಯ ಮಾದರಿಯ ಕಸೂತಿಯ ವ್ಯಾಪರ ಅತ್ಯಂತ ಲಾಭದಾಯಕವಾಗಿದೆ.

ಆಲ್ಜೀರಿಯನರ ಕಸೂತಿಗಳಲ್ಲಿ ನಮಗೆ ಮುಖ್ಯವಾಗಿ ದೊರೆತಿರುವ ನಮೂನೆಗಳು 16 ರಿಂದ 19ನೆಯ ಶತಮಾನಗಳ ಮಧ್ಯಭಾಗಕ್ಕೆ ಸೇರಿದವು. ಇದು ತುರ್ಕರಿಂದ ಬಹಳವಾಗಿ ಪ್ರಭಾವಗೊಂಡಿದೆ. ತುರ್ಕರ ದಾಳಿಂಬೆ ಹಣ್ಣಿನಾಕಾರದ ಆಕೃತಿಗಳನ್ನು ಇವರು ನವುರಾಗಿ ನೇಯ್ದು ಮಧ್ಯೆ ರೇಷ್ಮೆಯ ಮೇಲೆ ಊದಾ ಅಥವಾ ಒಂದು ರೀತಿಯ ಬೂದಿಬಣ್ಣ ಕೊಟ್ಟು ಹೊಲಿಯುತ್ತಿದ್ದರು. ಬಟ್ಟೆಯ ಹಿಂಬದಿಯ ಹೊಲಿಗೆಗಳ ಮನೆಗಳನ್ನು ಎಣಿಕೆಮಾಡಿ ಇವರು ನಿರ್ದಿಷ್ಟವಾಗಿ ಹೊಲಿಯುತ್ತಿದ್ದರು. 19ನೆಯ ಶತಮಾನದ ಹೊತ್ತಿಗೆ ಹೆರಿಂಗ್ ಮೀನಿನಾಕಾರದ ಹೊಲಿಗೆಯೂ ಇವರಲ್ಲಿ ಬಳಕೆಗೆ ಬಂತು. ಬಾಗಿಲ ಪರದೆಗಳನ್ನು ಮೂರು ಬೇರೆಬೇರೆ ಲಿನೆನ್ ಬಟ್ಟೆಗಳಲ್ಲಿ ಹೊಲಿದು ಅವುಗಳ ಮೇಲೆ ಕಸೂತಿ ಮಾಡಿ, ಅವುಗಳನ್ನು ಬೆಸಸಂಖ್ಯೆಯ ಫ್ರೆಂಚ್ ರಿಬ್ಬನ್ನುಗಳಿಂದ ಒಂದಕ್ಕೊಂದು ಸೇರಿಸುತ್ತಿದ್ದರು. ತಲೆಯ ಮೇಲೆ ಹಾಕಿಕೊಳ್ಳುತ್ತಿದ್ದ ಟೋಪಿಯಾಕಾರದ ಉಡುಪುಗಳನ್ನು ಲಿನೆನ್‌ನಿಂದ ತಯಾರಿಸಿ ಮಡಿಕೆಯ ಎರಡು ಕಡೆಯೂ ತೆಳುವಾದ ಅಂಚನ್ನೂ ಕೊನೆಯಲ್ಲಿ ಅಗಲವಾದ ಅಂಚನ್ನೂ ಕೊಟ್ಟು ಹೊಲಿಯುತ್ತಿದ್ದರು.

ಇಟಲಿಯ ಗ್ರಾಮಪ್ರದೇಶಗಳಲ್ಲಿ ವಿವಿಧ ನಮೂನೆಗಳ ಕಸೂತಿ ಕೆಲಸಗಳು ಕಾಣಬರುತ್ತವೆ. ಇಟಲಿ ಪ್ರಜೆಗಳ ಧಾರ್ಮಿಕ ಉಡುಪುಗಳನ್ನು ಕಸೂತಿಕಲೆ ವಿಶೇಷವಾಗಿ ಎದ್ದು ಕಾಣುತ್ತದೆ. ಇಟಾಲಿಯನರಿಗೆ ತಮ್ಮದೇ ಆದ ವಿಶಿಷ್ಟ ಮಾದರಿಯಿದೆ; ಚಿನ್ನದ ಎಳೆಗಳನ್ನು ಬಣ್ಣಬಣ್ಣದ ರೇಷ್ಮೆವಸ್ತ್ರಗಳ್ಲಿ ಹೊಗಿಸಿ ಬಣ್ಣಗಳು ಮನೋಹರವಾಗಿರುವಂತೆ ಮಧ್ಯೆ ಮಧ್ಯೆ ಜಾಗ ಬಿಟ್ಟು ರೇಷ್ಮೆ ಹೊಲಿಗೆಯನ್ನು ಹಾಕುವುದರಲ್ಲಿ ಅವರ ಕೈಚಳಕ ಅದ್ಭುತವಾದುದು. 15ನೆಯ ಶತಮಾನದಲ್ಲಿ ಅಂಟೋನಿಯೋ ಪಲಾನಿಯೋ ಚಿಕ್ಕ ಚಿಕ್ಕ ಚತುರ್ಭುಜಾಕಾರದ ಮನೆಗಳಲ್ಲಿ ಬ್ಯಾಪ್ಟಿಸ್ಟ್ ಜಾನನ ಜೀವನ ಚರಿತ್ರೆಯ ಕೆಲವು ಚಿತ್ರಗಳನ್ನು ಉಡುಪುಗಳ ಮೇಲೆ ಚಿತ್ರಿಸಲಾರಂಭಿಸಿದ. ಈ ನಮೂನೆ ಈಗಲೂ ಫ್ಲಾರೆನ್ಸಿನ ವಸ್ತುಸಂಗ್ರಹಾಲಯವೊಂದರಲ್ಲಿದೆ. ಹಳ್ಳಿಯ ಜನತೆಯ ವಿವಿಧ ಬಣ್ಣಗಳ ಕಸೂತಿಯೇ ಅಲ್ಲದೆ ಬಿಳಿಯ ದಾರದ ಕಸೂತಿ ಮತ್ತು ನವಿರು ರೇಷ್ಮೆಯ ಮೇಲಿನ ಹೊಲಿಗೆಗಳೂ ಪ್ರಮುಖವಾಗಿದ್ದುವು. ಪಕ್ಷಿಗಳ ಮತ್ತು ಎಲೆಗಳ ಆಕಾರಗಳು ಸರ್ವಸಾಮಾನ್ಯವಾಗಿದ್ದುವು. 15 ಮತ್ತು 16ನೆಯ ಶತಮಾನಗಳ ಹೊತ್ತಿಗೆ ಸೂಕ್ಷ್ಮದಾರಗಳಿಂದ ಮಾಡುತ್ತಿದ್ದ ರೆಟಿಸಲಾ ಕಲಾಬತು ಪ್ರಖ್ಯಾತವಾಗಿ ಬೆಡಗಿನ ಮೂಲವಾಯಿತು. ಮೂಲನೇಯ್ಗೆಯ ಒಂದು ರೀತಿಯ ಫ್ಲಾರೆಂಟೈನ್ ರೇಷ್ಮೆ ಬಟ್ಟೆ ಬಳಕೆಗೆ ಬಂತು. ಇಪ್ಪತ್ತನೆಯ ಶತಮಾನದಲ್ಲಿ ಗ್ರಾಮೀಣ ಮಾದರಿಗಳು ಬಹಳವಾಗಿ ಅಳಿಸಿಹೋಗಿವೆಯಾದರೂ ಕಲಾಭಿರುಚಿಯ ಅಭಿವ್ಯಕ್ತಿಮಾಧ್ಯಮವಾಗಿ ಇಲ್ಲವೇ ಜೀವನೋಪಾಯದ ಉದ್ಯಮವಾಗಿ ಉತ್ಕೃಷ್ಟವಾದರಿಯ ಕಸೂತಿ ಕಲೆ ಇಂದು ಇಟಲಿಯಲ್ಲಿದೆ.

ಫ್ರಾನ್ಸಿನಲ್ಲಿ ಕ್ರುಸೇಡುಗಳ ಅನಂತರ ಈ ಕಲೆ ಬೆಳಕಿಗೆ ಬಂತು. ಫ್ರಾನ್ಸಿನ ದೊರೆಗಳಾದ 11ನೆಯ ಲೂಯಿ ಮತುತ 8ನೆಯ ಚಾರ್ಲ್ಸ್‌ಗಳಿಗೆ ಇದರಲ್ಲಿ ಬಹಳ ಅಭಿರುಚಿಯಿತ್ತು. ಅವರು ಇಟಲಿಯಿಂದ ಕುಶಲಕಲೆಗಾರರನ್ನು ಕರೆಸಿಕೊಂಡರು. ಹೀಗಾಗಿ ಇಟಲಿ ಕಸೂತಿಯ ಪ್ರಭಾವ ಫ್ರಾನ್ಸಿನ ಮೇಲೆ ಅಮಿತವಾಗಿ ಬಿತ್ತು. ಆಶ್ರಮಗಳಲ್ಲೂ ಸಂನ್ಯಾಸಿನೀ ಮಠಗಳಲ್ಲೂ (ಕಾನ್‌ವೆಂಟ್) ಕಸೂತಿ ಕೆಲಸ ನಡೆಯುತ್ತಿದ್ದುದೇ ಅಲ್ಲದೆ ಕ್ರೈಸ್ತಧರ್ಮ ಸಂಸ್ಥೆಗಳ ಆಶ್ರಯದಲ್ಲಿ ಶ್ರೀಮಂತ ಮಹಿಳೆಯರೂ ಕಸೂತಿ ಕೆಲಸ ಮಾಡುತ್ತಿದ್ದರು. ಕಸೂತಿ ಕೆಲಸಗಾರರ ಅನೇಕ ಸಂಸ್ಥೆಗಳೂ ಇದ್ದುವು. ಫ್ರಾನ್ಸಿನಲ್ಲಿ ಪುನರುತ್ಥಾನದ ಅನಂತರ ಧಾರ್ಮಿಕತೆಯ ಮುಸುಕಿನಲ್ಲಿ ಕಸೂತಿ ಕಲೆ ಲೌಕಿಕತೆಯನ್ನರಸತೊಡಗಿತು. ಉಡುಪುಗಳ ಮೇಲೆ ಸುರುಳಿ ಚಿತ್ರಗಳು, ಹಕ್ಕಿ, ಗಿಡಗಳು, ಹೂಗಳು ಮುಂತಾದವು ಮೂಡತೊಡಗಿದವು. ಹದಿನೇಳನೆಯ ಶತಮಾನದ ಹೊತ್ತಿಗೆ ಕಲೆಯಲ್ಲಿ ಧಾರ್ಮಿಕ ಅಂಶ ಮಾಯವಾಗಿ, ಪವಿತ್ರ ಲಾಂಛನಗಳ ಮೇಲೂ ಸುತ್ತಲೂ ಪಕ್ಷಿಗಳನ್ನೂ ಸುರುಳಿ ಚಿತ್ರಗಳನ್ನೂ ಬಿಡಿಸಲಾಗುತ್ತಿತ್ತು. ಹದಿನಾರನೆಯ ಶತಮಾನದ ಫ್ರೆಂಚರ ಸೂಜಿಗಾರಿಕೆಯ ಕಲೆ ಇಂಗ್ಲೆಂಡಿಯನಲ್ಲಿಯೇ ಇತ್ತು. ಕೆತ್ತಿದ ಕಸೂತಿ ಮುಂತಾದ ಮಾದರಿಗಳು ಬಳಕೆಗೆ ಬರಲಾರಂಭಿಸಿದುವು. ಕಸೂತಿ ಮಾದರಿಯ ಪುಸ್ತಕಗಳು ಫ್ರಾನ್ಸಿನಲ್ಲಿ ತಯಾರಾಗಿ ಯೂರೋಪಿನಲ್ಲೆಲ್ಲ ಮಾರಾಟವಾಗುತ್ತಿದ್ದುವು. ಫ್ರೆಂಚ್ ಕಸೂತಿ ಕಲೆಯ ಅತ್ಯುತ್ತಮ ನಿದರ್ಶನಗಳಗಳಲ್ಲೊಂದನ್ನು ಈಗಲೂ ಕ್ಲೂನಿ ಮ್ಯೂಸಿಯಂನಲ್ಲಿ ಕಾಣಬಹುದು. ಹೀಬ್ರುಗಳು ಚಿನ್ನದ ಕರುವನ್ನು ಆರಾಧಿಸುತ್ತಿರುವಂತೆ ಇರುವ ಈ ಚಿತ್ರವನ್ನು ಅಂಡಾಕಾರದ ಯೆಲ್‌ಲಾಂಛನವೊಂದರ ಮೇಲೆ ಮೊದಲನೆಯ ಫ್ರಾನ್ಸಿಸನ ಪ್ರಾರ್ಥನೆಯ ಮೇರೆಗೆ ರಾಫೆಯೆಲ್ ಬಿಡಿಸಿದ್ದ. 8ನೆಯ ಹೆನ್ರಿ ಮತ್ತು 1ನೆಯ ಫ್ರಾನ್ಸಿಸನ ಚರಿತ್ರಾರ್ಹ ಭೇಟಿಯನ್ನೆ (1520) ವಸ್ತುವಾಗಿ ಉಳ್ಳ ಬಗೆಬಗೆಯ ಕಸೂತಿಗಳು ಬಂದುವು. ಉಡುಪು, ಗುಡಾರ, ಕುದುರೆಯೇ ಮುಂತಾದ ಪ್ರಾಣಿಗಳ ತೊಡವುಗಳು — ಮೊದಲಾದವುಗಳ ಮೇಲೆ ಅದ್ಭುತವಾಗಿ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. 1ನೆಯ ಫ್ರಾನ್ಸಿಸನ ವಸ್ತ್ರಗಳನ್ನು ಚಿನ್ನಬೆಳ್ಳಿಯ ಡಮಾಸ್ಕ್ ಕಸೂತಿಯೊಂದಿಗೆ ಬಣ್ಣದ ರೇಷ್ಮೆಯಿಂದ ತಯಾರಿಸಲಾಗುತ್ತಿತ್ತು. ಆತನ ಕುದುರೆಯ ಮೇಲೆ ನೀಲಿ ಮತ್ತು ಚಿನ್ನದ ಬಣ್ಣದ ಎಳೆಗಳಿಂದ ಕೂಡಿದ ಹೊದಿಕೆಯಿರುತ್ತಿತ್ತು.

ಅಮೂಲ್ಯವಾದ ಕಸೂತಿಯಿಂದೊಡಗೂಡಿದ ವಸ್ತ್ರಗಳು ಮೊದಲಿಗೆ ಕೇವಲ ಕೆಲವಾರು ಶ್ರೀಮಂತರ ಭೋಗಸಾಧನಗಳಾಗಿದ್ದುವು. ಕಲೆಗಾರರ ಹೋಲ್‌ಬೀನ್ ಮತ್ತು ಬ್ರೋನ್‌ಸಿನೋ ಯುರೋಪಿನ ರಾಜರ ಚಿತ್ರಗಳನ್ನು ಬಿಡಿಸುವಾಗ ಹೊಳಪು ಬಟ್ಟೆಗಳು, ಜರತಾರಿ ಅಂಚುಗಲು, ಗುನ್ನಾಂಪಟ್ಟಿ ಮೊದಲಾದವನ್ನು ಒಟ್ಟಿಗೇ ಸೇರಿಸಿ ಅಂದವಾಗಿ ಕಾಣುವಂತೆ ಬಿಡಿಸಿದ್ದಾರೆ. 13ನೆಯ ಲೂಯಿಯ ಕಾಲದಲ್ಲಿ ಕಸೂತಿ ಮಾಡಿದ ಪುರುಷರ ಹಾಗೂ ಸ್ತ್ರೀಯರ ಬಟ್ಟೆಗಳು ಎಷ್ಟು ಉಚ್ಛೃಂಖಲವಾದುವೆಂದರೆ 1629ರಲ್ಲಿ ಸಮ್ರಾಟ ಅದನ್ನು ಬಹಿಷ್ಕರಿಸಿ ಶಾಸನ ಮಾಡಿದ. ಅನಂತರ ಕ್ರಮೇಣ ಬಿಳಿ ಹೊಲಿಗೆ ಮತ್ತು ಕಲಾಬತುಗಳು ಬಹಳವಾಗಿ ಪ್ರಚಲಿತವಾಗತೊಡಗಿದವು. 14ನೆಯ ಲೂಯಿ ತನ್ನ ಪೂರ್ವಜನಂತಲ್ಲದೆ ಎಲ್ಲ ಕಲೆಗಳಿಗೂ ಉತ್ತೇಜನ ನೀಡಿದ. ಸುಮಾರು 1700ರ ಕಲಾಕೃತಿಗಳನ್ನು ಮೆಟ್ರೊಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್ಸ್‌ನಲ್ಲಿ ನೋಡಬಹುದು. ದಟ್ಟ ಅರಣ್ಯಗಳ ಮಧ್ಯೆ ಇರುವಂತೆ ಹಣೆಯಲಾಗಿರುವ ಪಶುಪಕ್ಷಿಗಳಿ ಈಸೋಪನ ಮತ್ತು ಲಾ ಫಾಂಟೇನನ ಕಥೆಗಳನ್ನು ಜ್ಞಾಪಕಕ್ಕೆ ತರುತ್ತವೆ. ಇಲ್ಲಿಯ ಆಕೃತಿ ಎಲ್ಲ ಕಡೆಗಳಿಂದಲೂ ಸಮರೂಪವಾಗಿದ್ದರೂ ಬಣ್ಣಗಳು ಸಮುಮಿತವಾಗಿಲ್ಲ. ಅನೇಕ ಕೃತಿಗಳು ಚೀನದ ಮಾದರಿಯವು.

15ನೆಯ ಕಾಲದಲ್ಲಿ ಸಾದೃಶ್ಯ ಮತ್ತು ಸಮರೂಪತೆ ದೂರವಾದವು. ಈ ವಿಕೃತಿಯಲ್ಲೂ ಒಂದು ರೀತಿಯ ಸುಂದರ ಅವ್ಯವಸ್ಥೆಯನ್ನು ಕಂಡು ತೃಪ್ತಿಗೊಳ್ಳುವುದು ಆಗಿನ ವೈಶಿಷ್ಟ್ಯ. ರಾಜನ ಮರಣಾನಂತರ ಮದಾಂ ದ ಮೈಂತೆನನ್ ಬಾಲಕಿಯರಿಗಾಗಿ ಒಂದು ಶಾಲೆ ಸ್ಥಾಪಿಸಿ ಅದರಲ್ಲಿ ಹೊಲಿಗೆಯ ಶಿಕ್ಷಣ ನೀಡಲಾರಂಭಿಸಿದಳು. ಇವರ ಅನುಪಮ ಕಲಾಕೃತಿಗಳು ಈಗಲೂ ವರ್ಸೇಲ್ಲಿನ ಅರಮನೆಯಲ್ಲಿವೆ. 17ನೆಯ ಶತಮಾನದ ಅನೇಕ ಕಲಾಕೃತಿಗಳನ್ನು ಅರಮನೆಗಳಲ್ಲೂ ಚರ್ಚುಗಳಲ್ಲೂ ರಕ್ಷಿಸಿಡಲಾಗಿತ್ತು. ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಅವು ನಾಶ ಹೊಂದಿದವು. ಕಲಾಕೃತಿಗಳಲ್ಲಿದ್ದ ಚಿನ್ನಬೆಳ್ಳಿ ಎಳೆಗಳನ್ನು ಹೊರಗೆ ತೆಗೆಯಲು ಕಲೆಗಾರರಿಗೆ ಆಜ್ಞಾಪಿಸಲಾಯಿತು.

18ನೆಯ ಶತಮಾನದ ಕಸೂತಿ ಶೈಲಿಯ ಮೇಲೂ ಚೀನದ ಪ್ರಭಾವ ಸಾಕಷ್ಟಿತ್ತು. ಮದಾಂ ದ ಪಾಂಪೊದರ್ ಕಸೂತಿಯ ಕಟ್ಟನ್ನು ಬಳಕೆಗೆ ತಂದಳು. ಫ್ರೆಂಚ್ ಕಸೂತಿ ಅತ್ಯಂತ ಪ್ರಸಿದ್ಧವಾಗಿದ್ದ ಕಾರಣ ಇದಕ್ಕೆ ಯುರೋಪಿನಲ್ಲೆಲ್ಲ ವಿಪುಲವಾದ ಮಾರು

ಕಟ್ಟೆಯಿತ್ತು. ಕ್ರಾಂತಿಯ ಅನಂತರ ಪುರುಷರ ಉಡುಪುಗಳ ಮೇಲೆ ಚಿತ್ರಗಳನ್ನು ಬಿಡಿಸುವುದು ಕಡಿಮೆಯಾದರೂ ಸ್ತ್ರೀಯರ ತೆಳುವಾದ ಪಾರದರ್ಶಕ ಉಡುಪುಗಳ ಮೇಲೆ ಬಿಡಿಬಿಡಿಯಾದ ಹೂಗಳನ್ನು ಬಿಡಿಸುತ್ತಿದ್ದರು. ತದನಂತರ ಅಂಚುಗಳನ್ನು ಕಟ್ಟುವುದು ಬಳಕೆಗೆ ಬಂತು. 19ನೆಯ ಶತಮಾನದಿಂದೀಚೆಗೆ, ಢಾಕಾದ ಕಸೀದಾ ಮಾದರಿಯ ಕಸೂತಿ ಫ್ರಾನ್ಸಿನಲ್ಲೂ ಯುರೋಪಿನ ಇತರ ದೇಶಗಳಲ್ಲೂ ಸಾಮಾನ್ಯವಾಗಿ ತೊಡಗಿದುವು.

10–11ನೆಯ ಶತಮಾನಗಳಲ್ಲಿ ಜರ್ಮನಿಯ ಕಸೂತಿ ಕಲೆ ಬಿಜ಼ಾಂಟಿನ್ ಪ್ರಭಾವಕ್ಕೆ ಒಳಗಾಗಿತ್ತು. ಆಗ ಅದನ್ನು ಕೇವಲ ಧಾರ್ಮಿಕ ಕಾರ್ಯಗಳಿಗೆ ಬಳಸಲಾಗುತ್ತಿತ್ತು. ವಸ್ತ್ರಗಳ ಮೇಲೆ ವಜ್ರಾಕೃತಿಗಳನ್ನು ಬಿಡಿಸುವುದು ಜರ್ಮನರ ವೈಶಿಷ್ಟ್ಯ. ಕ್ರಾಂತಿಯಿಂದೀಚೆಗಿನ ಕಲೆಯಲ್ಲಿ ಧಾರ್ಮಿಕತೆಯ ಹಿನ್ನಲೆ ಕಡಿಮೆಯಾಗಿ ಸಾರ್ವಜನಿಕರು ಕಲಾಭಿರುಚಿಯಿಂದ ಅದನ್ನು ಬಳಸಲಾರಂಭಿಸಿದರು. ಅನಂತರದಲ್ಲಿ, ದೊಡ್ಡ ದೊಡ್ಡ ಹೂವಿನ ಆಕಾರಗಳು ಮತ್ತು ಅವುಗಳ ಮಧ್ಯೆ ವಂಶಲಾಂಛನಗಳನ್ನು ಧರಿಸುವ ಪದ್ಧತಿ ಬಂತು. ಉಣ್ಣೆಯ ಕಲೆಗಾರಿಕೆ ಹಾಗೂ ವಿಶಿಷ್ಟ ರೀತಿಯ ಕಸೂತಿದಾರಗಳ ಬಳಕೆಗಾಗಿ ಇಂಗ್ಲೆಂಡ್ ಜರ್ಮನಿಗೆ ಋಣಿಯಾಗಿರಬೇಕು. ಹದಿನೆಂಟನೆಯ ಶತಮಾನದಲ್ಲಿ ಬಿಳಿಯ ಕಸೂತಿ ಕೆಲಸಕ್ಕೆ ಸ್ಯಾಕ್ಸನಿ ಬಹಳ ಪ್ರಸಿದ್ಧವಾಯಿತು. ಸೂಕ್ಷ್ಮವಾದ ಮಸ್ಲಿನ್, ಕೇಂಬ್ರಿಕ್ ಮತ್ತು ಲಿನೆನ್‌ಗಳ ಮೇಲೆ ಬಿಳಿಯ ಹತ್ತಿಯಲ್ಲಿ ಕಸೂತಿಮಾಡಲಾಗುತ್ತಿದ್ದು ಇದನ್ನು ಕಾಲರ್, ಕಫ್, ಸ್ಕಾರ್ಫ್ ಮತ್ತು ಕರವಸ್ತ್ರಗಳಂತೆ ಉಪಯೋಗಿಸುತ್ತಿದ್ದರು. ವಿಕ್ಟೋರಿಯ ಕಾಲದಲ್ಲಿ ಬರ್ಲಿನಿನ ಉಣ್ಣೆಯ ಕೆಲಸ ಖ್ಯಾತಿವೆತ್ತಿದ್ದು ಕ್ಯಾನ್‌ವಾಸ್‌ಗಳ ಮೇಲೂ ಹೊಲಿಗೆ ಕೆಲಸಗಳನ್ನು ಮಾಡಲಾಗುತ್ತಿತ್ತು. ಅನಂತರ 1856ರಿಂದೀಚೆಗೆ, ಜೇಡಿಮಣ್ಣಿನ ಪಾತ್ರೆಗಳ ಮೇಲೆ ಚಿತ್ರಗಳನ್ನು ಬಿಡಿಸುತ್ತಿದ್ದರು. ಅವುಗಳ ಮೇಲೆ ನಾಯಿ, ಸಿಂಹ, ಗಿಳಿಗಳು, ಜಿಂಕೆ ಮೊದಲಾದವನ್ನೂ ಚಿಕ್ಕಿಯ ಚಿತ್ರಗಳನ್ನೂ ಹೂವಿನ ಕುಂಡಗಳನ್ನೂ ಬಿಡಿಸುತ್ತಿದ್ದರು. ಈ ಕಲೆ ಯುರೋಪಿನಿಂದ ಅಮೆರಿಕದವರೆಗೆ ಪ್ರಸರಿಸಿತು.

ನಾರ್ವೆಯ ಕಸೂತಿ ಚಿತ್ರಗಳು ರೋಮನೆಸ್ಕ್ ಕಾಲದಿಂದಲೂ ಪ್ರಸಿದ್ಧವಾಗಿವೆ. ಲಿನೆನ್ ಮತ್ತು ಇತರ ವಸ್ತ್ರಗಳ ಮೇಲೆ ಆಭರಣಗಳಿಂದ ಕಸೂತಿ ಮಾಡುವುದು ಅನೇಕ ವರ್ಷಗಳ ಪರ್ಯಂತ ಈ ಜನತೆಯ ಒಂದು ವೈಶಿಷ್ಟ್ಯವಾಗಿತ್ತು. ಪುನರುತ್ಥಾನದ ಅನಂತರ ಟೆಲ್ಲೆಸೋಂ ಎಂಬ ಜ್ಯಾಮಿತೀಯ ಆಕೃತಿಗಳುಳ್ಳ ಕಸೂತಿಗೆ ಮನ್ನಣೆ ದೊರೆಯಿತು. ಗ್ರಾಮಪ್ರದೇಶಗಳಲ್ಲಿ ಕಸೂತಿಯೇ ಮುಖ್ಯವಾಗಿದ್ದರೂ ಕೆಲವಾರು ಬಾರಿ ರೇಷ್ಮೆಯನ್ನು ಉಪಯೋಗಿಸುತ್ತಿದ್ದರು. ಸಾಂಪ್ರದಾಯಿಕ ಕಸೂತಿ ಮಾದರಿ ಉಚ್ಛೃಂಖಲವಾಗಿ ಕೆಲವಾರು ಪ್ರದೇಶಗಳಲ್ಲಿ ತಲೆದೋರಿತ್ತು. ಕೆಂಪು ಮತ್ತು ನೀಲಿ ಬಣ್ಣಗಳನ್ನು ಆಮದು ಮಾಡಿಕೊಳ್ಳುತ್ತಿದ್ದರಾದರೂ ಮಿಕ್ಕೆಲ್ಲ ಬಣ್ಣಗಳನ್ನೂ ಸ್ವತಃ ತಯಾರಿಸುತ್ತಿದ್ದರು. ಅಲ್ಪವಿರಾಮ ಚಿಹ್ನೆಯನ್ನು (ಕಾಮ) ಹೋಲುವ ಕೃತಿಯಲ್ಲಿ ಮಣಿಗಳನ್ನು ಪೋಣಿಸಿ ಹೊಲಿಯಲಾಗುತ್ತಿತ್ತು.

ಡೇನಿಷ್ ಹೆಬೆಡೊ ಮಾದರಿಯ ಕಸೂತಿ ಡೆನ್ಮಾರ್ಕಿನಲ್ಲಿ ಪ್ರಮುಖವಾಗಿತ್ತು. ಇದನ್ನು ಪುರುಷರ ಉಡುಪುಗಳು, ಸ್ತ್ರೀಯರ ಒಳುಡುಪುಗಳು ಹಾಗೂ ಗೃಹಾಲಂಕಾರಗಳಿಗಾಗಿ ಲಿನೆನ್ ಬಟ್ಟೆಯ ಮೇಲೆ ಹಾಕಲಾಗುತ್ತಿತ್ತು. ಪುನರುತ್ಥಾನದ ಪೀಠೋಪಕರಣಗಳಿಂದ ಕೆಲವು ಮಾದರಿಗಳನ್ನು ಆಯ್ದು ಹೊಲಿಯುತ್ತಿದ್ದ ಈ ಕಸೂತಿಯಲ್ಲಿ ಹಳೆಯ ಗ್ರಂಥಗಳಲ್ಲಿ ಹೇಳಲಾದ ಸುರುಳಿ ಚಿತ್ರಗಳನ್ನು ಬಳಸುತ್ತಿದ್ದರು. ಹತ್ತೊಂಬತ್ತನೆಯ ಶತಮಾನದಲ್ಲಿ ಕೆಲವಾರು ಬದಲಾವಣೆಗಳುಂಟಾಗಿ, ಮಧ್ಯೆ ಮಧ್ಯೆ ಜಾಗ ಬಿಟ್ಟು ಉದ್ದಕ್ಕೂ ಅಗಲಕ್ಕೂ ಚೌಕಾಕೃತಿ ಮೂಡುವಂತೆ ಅನೇಕ ದಾರಗಳಲ್ಲಿ ಹೊಲಿಯುವ ಪದ್ಧತಿ ಬಳಕೆಗೆ ಬಂತು. ಮಧ್ಯದ ಸ್ಥಳಗಳಲ್ಲಿ ಎಳೆ ತುಂಬುತ್ತಿದ್ದರು. ಆ ಶತಮಾನದ ಮಧ್ಯಭಾಗದಲ್ಲಿ ಈ ಕಸೂತಿ ಕೆಲಸಗಾರರು ಸಾಂಪ್ರದಾಯಿಕ ಮಾದರಿಗಳನ್ನು ಬಿಟ್ಟು ಹೊಸ ಧಾಟಿ ಹಿಡಿದರು. ಎಲೆ, ಹೂವು, ನಕ್ಷತ್ರಗಳೇ ಮೊದಲಾದವು ಕಸೂತಿಯಲ್ಲಿ ಮೂಡಲಾರಂಭಿಸಿದುವು; ಕಲೆಯಾಗಿದ್ದ ಕಸೂತಿಗಾರಿಕೆ ಶತಮಾನದ ಕೊನೆಯ ಹೊತ್ತಿಗೆ ಒಂದು ಕಸಬಾಗಿ ಸೌಂದರ್ಯ ಮತ್ತು ಮೌಲಿಕತೆಗಳನ್ನು ಕಳೆದುಕೊಂಡಿತು.

14 ಮತ್ತು 15ನೆಯ ಶತಮಾನಗಳಲ್ಲಿ ಉತ್ತರ ಯುರೋಪಿನ ಬ್ರೂಗ್ಸಿನಲ್ಲಿ ಕಸೂತಿಯೇ ಮುಂತಾದ ಕೆಲಸಗಳಿಗೆ ರಾಜ ಶ್ರೀಮಂತರಿಂದ ವಿಶೇಷ ಪ್ರೋತ್ಸಾಹ ಲಭಿಸಿತು. ಅದು ಧಾರ್ಮಿಕತೆಯ ಮುಸುಕನ್ನು ಕಿತ್ತೊಗೆದು ಸೌಂದರ್ಯ ಹಾಗೂ ಕಲಾಭಿರುಚಿಯ ಸಾಧನವಾಯಿತು. ಪವಿತ್ರ ಕುರಿಮರಿಯ ಆರಾಧನೆ ಎಂಬುದು ಹರ್ಬರ್ಟ್ ವ್ಯಾನ್ ಐಕನ ಅಮೂಲ್ಯ ಕೃತಿಗಳಲ್ಲೊಂದಾಗಿತ್ತು. ಇದರಲ್ಲಿಯ ಕನ್ಯೆ ಚಿನ್ನ, ಮುತ್ತು, ರತ್ನ ಮತ್ತು ಬೆಲೆ ಬಾಳುವ ಆಭರಣಗಳನ್ನು ಧರಿಸಿರುವಂತೆ ಅವನ್ನು ಪೋಣಿಸಿ ಹೊಲಿಯಲಾಗಿದೆ. 16ನೆಯ ಶತಮಾನದ ಫ್ಲೆಮಿಷ್ ಮಾದರಿಯೊಂದರಲ್ಲಿ ಕ್ರಿಸ್ತನ ಬಾಲ್ಯದ ದೃಶ್ಯಗಳಿವೆ. ಇವನ್ನು ಲಿನೆನ್ ಮೇಲೆ, ಚಿನ್ನದ ಎಳೆಗಳಿಂದ, ಪಾರದರ್ಶಕವಾಗಿ ಕಾಣುವಂತೆ ಕತ್ತರಿ ಕಸೂತಿ ಮಾಡಿದೆ. ಅನಂತರದ ಶತಮಾನದ ಇನ್ನೊಂದು ಉತ್ಕೃಷ್ಟ ಉದಾಹರಣೆಯೆಂದರೆ ಸೇಂಟ್ ಮಾರ್ಗರೆಟ್ ಚಿತ್ರ. ಇದರ ಮೇಲೆ ಗಾಥಿಕ್ ಮಾದರಿಯಲ್ಲಿ ಚಿನ್ನದ ಹೊಲಿಗೆಗಳಿಂದ ಮೇಲ್ಕಟ್ಟುಗಳನ್ನು ಹೊಲಿಯಲಾಗಿದೆ. 16ನೆಯ ಶತಮಾನದಲ್ಲೆಲ್ಲ ಫ್ಲೆಮಿಷ್ ಮಾದರಿಯ ಕಸೂತಿಯೇ ಬಹಳವಾಗಿ ಪ್ರಚಲಿತವಾಗಿತ್ತು.

ಮಧ್ಯ ಮತ್ತು ಪೂರ್ವ ಯುರೋಪುಗಳಲ್ಲಿ ಕಸೂತಿ ಮೂಲತಃ ಒಂದು ಗ್ರಾಮೀಣ ಕಲೆ. ಮನೆಗಳಲ್ಲಿಯ ದಿಂಬು ಆವರಣ,ಪರದೆ, ಕರವಸ್ತ್ರ, ಅಣಿಕಟ್ಟು ಮೊದಲಾಲ ವಸ್ತುಗಳ ಮೇಲೆ ಜ್ಯಾಮಿತೀಯ ಆಕಾರದ ಮತ್ತು ಹೂವುಗಳ ಚಿತ್ರಗಳನ್ನು ಬಿಡಿಸುತ್ತಿದ್ದರು. ಪೋಲೆಂಡಿನಲ್ಲಿ ಉಣ್ಣೆಬಟ್ಟೆಗಳ ಮೇಲೆ ಅಂಚು ಸೇರಿಸಿದೆಡೆಯಲ್ಲಿ ಬಣ್ಣಬಣ್ಣದ ದಾರಗಳಿಂದ ಆಲಂಕಾರಿಕವಾಗಿ ಹೊಲಿಗೆ ಕೆಲಸ ಮಾಡುತ್ತಿದ್ದರು. ಬಿಳಿಯ ಕುಪ್ಪಸಗಳಿಗೆ ತೋಳಿನ ತುದಿ ಮತ್ತು ಕುತ್ತಿಗೆಗಳ ಹತ್ತಿರ ಕಸೂತಿ ಮಾಡುತ್ತಿದ್ದರು. ಹಂಗರಿಯ ರಾಷ್ಟ್ರೀಯ ಉಡುಗೆಗಳಿಗೆ ಅವುಗಳದೇ ವೈಶಿಷ್ಟ್ಯವಿತ್ತು. ಬಿಳುಪು ಪ್ರಮುಖ ಬಣ್ಣ. ಫೆಲ್ಟ್ ಕೋಟಿನ ಮೇಲೆ ಹತ್ತಿ ಮತ್ತು ರೇಷ್ಮೆ ಕಸೂತಿ ಮಾಡುತ್ತಿದ್ದರು. ರೂಮೇನಿಯದಲ್ಲಿ ಹಬ್ಬದ ದಿನಗಳಲ್ಲಿ ಜ್ಯಾಮಿತೀಯ ಆಕಾರಗಳಲ್ಲಿ ಮಣಿಗಳನ್ನು ಸೇರಿಸಿ ಅಡ್ಡಹೊಲಿಗೆಯನ್ನು ಹೊಲಿದು ಕಸೂತಿಮಾಡಿದ ಬಟ್ಟೆಗಳನ್ನು ಧರಿಸುತ್ತಾರೆ. ಬಲ್ಗೇರಿಯದಲ್ಲೂ ಹಂಗರಿಯಂತೆ ಬಿಳಿಹೊಲಿಗೆ ಪ್ರಮುಖ. ಬಣ್ಣದ ಹೊಲಿಗೆಗಳಲ್ಲಿ ಬಲ್ಗೇರಿಯನರಿಗೆ ಕೆಂಪು ಬಹಳ ಮೆಚ್ಚಿಕೆಯಾದುದು. ಪುರುಷರ ಷರಾಯಿ, ಷರ್ಟು ಮತ್ತು ಕೋಟು, ಸ್ತ್ರೀಯರ ಕುಪ್ಪಸಗಳು ಮತ್ತು ಇತರ ಉಡುಪುಗಳ ಮೇಲೆ ಮುಖ್ಯವಾಗಿ ಕೆಂಪು, ಹಳದಿ ಮತ್ತು ಕರಿಯ ಬಣ್ಣಗಳಲ್ಲಿ ಕಸೂತಿ ಮಾಡುತ್ತಾರೆ. ಚೆಕೊಸ್ಲೊವಾಕಿಯದಲ್ಲಿ 19 ಮತ್ತು 20ನೆಯ ಶತಮಾನಗಳಲ್ಲಿ ಕಸೂತಿ ಕಲೆ ಮರೆಯಾದರೂ ಜಾನಪದ ಕಲೆಯನ್ನು ಉತ್ತೇಜಿಸುವುದಕ್ಕೋಸ್ಕರ ಎಲ್ಲ ಪ್ರಾಂತ್ಯಗಳಲ್ಲೂ ಜಾನಪದ ರೀತಿಯ ಕಸೂತಿಯನ್ನು ಹಾಕಲಾಗುತ್ತಿದೆ. ನೃತ್ಯ ಮುಂತಾದ ಲಲಿತಕಲೆಗಳಿಗಾಗಿ ವಿಧವಿಧವಾಗಿ ಕಸೂತಿ ಮಾಡಿದ ಬಟ್ಟೆಗಳನ್ನು ಉಪಯೋಗಿಸುವುದುಂಟು.

ಯೂಗೊಸ್ಲಾವಿಯದಲ್ಲಿ ದಕ್ಷಿಣ ಸ್ಲಾವ್ ಜನರ ರಾಷ್ಟ್ರೀಯ ಉಡುಪುಗಳು ಬಹಳ ಪುರಾತನವಾದವು. ಸಾಮಾನ್ಯವಾಗಿ ಜ್ಯಾಮಿತೀಯ ಆಕಾರಗಳು, ಹೂವು, ಪ್ರಾಣಿ ಮುಂತಾದವುಗಳ ಚಿತ್ರಗಳನ್ನು ಹೊಲಿದು ಅವುಗಳ ಮೇಲೆ ಮಧ್ಯದಲ್ಲಿ ಪುರಾತನ ಚಿಹ್ನೆಗಳಾದ ಶಿಲುಬೆನ್ನೋ ಅರ್ಧಚಂದರಾಕೃತಿಯನ್ನೋ ಸೇರಿಸುತ್ತಿದ್ದರು. ವನಸ್ಪತಿಯಿಮದ ತಯಾರಿಸಿದ ಹಳದಿ, ಕಂದು ಮತ್ತು ನೀಲಿಬಣ್ಣಗಳನ್ನು ಉಪಯೋಗಿಸಲಾಗುತ್ತಿತ್ತು. ಕರಿಬಣ್ಣದ ಕುರಿಯ ಉಣ್ಣೆಯಿಂದ ಕರಿಯ ಬಣ್ಣದ ಕಸೂತಿ ಕೆಲಸವನ್ನು ಬಹಳ ಚಾಕಚಕ್ಯತೆಯಿಂದ ಯುಗೊಸ್ಲಾವಿಯನರು ಮಾಡುತ್ತಿದ್ದರು.

ರಷ್ಯನರ ಜೀವನ ಮತ್ತು ಕಲೆಗಳಲ್ಲಿ ಬಿಜ಼ಾಂಟಿನ್ ಸಂಸ್ಕೃತಿ ಹಾಸುಹೊಕ್ಕಾಗಿದ್ದುದರಿಂದ, ಅವರ ನಿಲುವಂಗಿಗಳು ಮತ್ತು ಧಾರ್ಮಿಕ ಉಡುಗೆತೊಡುಗೆಗಳಿಗೆ ಮುತ್ತು ರತ್ನಗಳನ್ನು ಸೇರಿಸಿ ಕಸೂತಿ ಮಾಡುತ್ತಿದ್ದರು. ತಲೆಯ ಮೇಲೆ ಧರಿಸುತ್ತಿದ್ದ ಧಾರ್ಮಿಕ ಶಿರವಸ್ತ್ರಗಳಿಗೆ ಮುತ್ತು ಮಾಣಿಕ್ಯಗಳನ್ನೂ ಬೆಲೆಬಾಳುವ ಕಲ್ಲುಗಳನ್ನೂ ಸೇರಿಸಿ ಹೊಲಿಯುತ್ತಿದ್ದರು. 18ನೆಯ ಮತ್ತು 19ನೆಯ ಶತಮಾನಗಳ ಧರ್ಮಸಂಬಂಧವಾದ ಉಡುಪುಗಳಿಂದ ಬಿಜ಼ಾಂಟಿನ್ ಕಲೆಯ ಪ್ರಭಾವ ಎಷ್ಟಿತ್ತೆಂಬುದು ಚೆನ್ನಾಗಿ ವಿದಿತವಾಗುತ್ತದೆ. ಉಕ್ರೇನಿನಲ್ಲಿ ವಿವಿಧ ವರ್ಣರಂಜಿತವಾದ ನಾಜೂಕಿನ ಹೂಗಿಡಗಳನ್ನು ಬಿಡಿಸುವ ಕಲೆ ಮುಂದುವರಿಯಿತು. ಟಾಟರರ ಪ್ರದೇಶಗಳಲ್ಲಿ ಬಣ್ಣಗಳಿಗೆ ಬಹಳ ಮಹತ್ತ್ವ ಕೊಡಲಾಗಿತ್ತು. ಕೈಚೀಲ, ಥೈಲಿ (ಪರ್ಸ್), ಮಖಮಲ್ ಟೋಪಿಗಳು ಮೊದಲಾದವುಗಳ ಮೇಲೆ ಚಿನ್ನದ ಎಳೆಗಳಿಂದ ಕಸೂತಿ ಹಾಕುತ್ತಿದ್ದರು. ಆರ್ಮೇನಿಯ ಮತ್ತು ಕ್ರಿಮಿಯಗಳಲ್ಲಿ ಕಲೆ ಇನ್ನೂ ಲಲಿತವಾಗಿದ್ದು, ಮಾದರಿಗಳು ಪೌರಸ್ತ್ಯ ರೀತಿಯವಾಗಿದ್ದುವು. ಬಿಳಿಯ ಬಟ್ಟೆಯ ಮೇಲೆ ರೇಷ್ಮೆಯಿಂದ ಕಸೂತಿ ಹಾಕಿ ನಡುನಡುವೆ ಚಿನ್ನಬೆಳ್ಳಿ ಎಳೆಗಳನ್ನು ಸೇರಿಸುತ್ತಿದ್ದರು.

ಬ್ರಿಟಿಷ್ ದ್ವೀಪಗಳಲ್ಲಿ ದೊರೆಯುವ ಕಸೂತಿಯ ಅತ್ಯಂತ ಪುರಾತನ ನಮೂನೆಯೆಂದರೆ ಸು. 903ರ ಸ್ಟೋಲ್ ಎಂಬ ಕಂಠವಸ್ತ್ರ ಮತ್ತು ಮ್ಯಾನಿಪಲ್ ಎಂಬ ಉಡುಪುಗಳು. ಇವು ಡೇರ್ಹಮ್‌ನಲ್ಲಿ ಸೇಂಟ್ ಕತ್‌ಬರ್ಟ್ ಸಮಾಧಿಯಲ್ಲಿ ದೊರಕಿವೆ. ಕಸೂತಿಮಾಡಿದ ಬೂಯೆರ್ಸ್ ಜವನಿಕೆಯೊಂದು ಆ ಕಾಲದ್ದೆಂದು ಹೇಳಬಹುದಾದ ಮತ್ತೊಂದು ನಮೂನೆ. ಇಂಗ್ಲಿಷರ ಕಸೂತಿ ಕಲೆಯ ಚರಿತ್ರೆಯಲ್ಲಿ 13ನೆಯ ಶತಮಾನ ಬಹಳ ಗಮನಾರ್ಹವಾದದ್ದು. ಹೆಣೆದ ನಿಲುವಂಗಿಗಳ ಮತ್ತು ಚರ್ಚಿನ ಇತರ ವಸ್ತುಗಳ ಮೇಲೆ ಮೇಲಿನ ದಾರವನ್ನು ಹಿಂದಕ್ಕೆ ಎಳೆದು ಬಿಗಿಮಾಡಿ ಸಾಟಿನ್ ಹೊಲಿಗೆಯ ಹಾಗೆ ಮಾಡುತ್ತಿದ್ದರು. ಮನುಷ್ಯರ ಆಕೃತಿಗಳನ್ನು ಹೊಲಿಯಬೇಕಾದಾಗ ಕೂದಲು ಮೊದಲಾದವನ್ನು ತುಂಡು ಹೊಲಿಗೆಯಿಂದಲೂ ಮುಖವನ್ನು ಸುರುಳಿಹೊಲಿಗೆಯಿಂದಲೂ ಅಲಂಕರಿಸಿ ಹೊಲಿಯುತ್ತಿದ್ದರು. ವಸ್ತ್ರಗಳಿಗೆ ಮುತ್ತು ರತ್ನಗಳನ್ನೂ ಆಭರಣಗಳನ್ನೂ ಜೋಡಿಸುತ್ತಿದ್ದರು. ಇಂಗ್ಲೆಂಡಿನಲ್ಲಿ 14ನೆಯ ಶತಮಾನದಲ್ಲಿ ಕಸೂತಿಯನ್ನು ಧಾರ್ಮಿಕ ಕಾರ್ಯಗಳಿಗಾಗಿಯೆ ಉಪಯೋಗಿಸುತ್ತಿದ್ದರಾದರೂ ಕೆಲಮಟ್ಟಿಗೆ ಅವನ್ನು ಸೌಂದರ್ಯಾಭಿವ್ಯಕ್ತಿಯ ಸಾಧನವಾಗಿ ಐಹಿಕೋದ್ದೇಶಗಳಿಗೂ ಉಪಯೋಗಿಸುತ್ತಿದ್ದರು. 15ನೆಯ ಶತಮಾನದಲ್ಲಿ ಯುರೋಪಿನ ಇತರ ದೇಶಗಳಿಂದ ಬಂದ ಮಖಮಲ್ ಮತ್ತು ಡಮಾಸ್ಕ್ ಬಟ್ಟೆಗಳ ಮೇಲೆ ಕಸೂತಿ

ಹಾಕುವುದು ಪ್ರಾರಂಭವಾಯಿತು. 16ನೆಯ ಶತಮಾನದ ಧಾರ್ಮಿಕ ಆಂದೋಲನದಲ್ಲಿ ಚರ್ಚಿನ ಅಮೂಲ್ಯ ಕಲಾಸಂಪತ್ತೆಲ್ಲ ನಾಶಗೊಂಡಿತು. ಕಸೂತಿಯ ಬಟ್ಟೆಗಳನ್ನೆಲ್ಲ ದಿನಬಳಕೆಯ ವಸ್ತುಗಳಾಗಿ ಉಪಯೋಗಿಸತೊಡಗಿದರು; ಮುತ್ತುರತ್ನಗಳನ್ನು ಕದ್ದೊಯ್ದರು. ಮೊದಲನೆಯ ಎಲಿಜಬೆತ್ ಕಾಲದಲ್ಲಿ ಕಸೂತಿ ಕಲೆ ಒಂದು ರೀತಿಯಲ್ಲಿ ತನ್ನ ಗತವೈಭವವನ್ನೇ ಮತ್ತೆ ಪಡೆಯಿತು. 18ನೆಯ ಶತಮಾನದಿಂದೀಚೆಗೆ ಯಂತ್ರಗಳ ಪ್ರಭಾವದಿಂದಾಗಿ ನಮೂನೆಗಳು ಇನ್ನೂ ಸೂಕ್ಷ್ಮವಾದುವು.

ಹವ್ಯಾಸಿ ಕಸೂತಿಕಲೆ ಇಂಗ್ಲೆಂಡಿನಲ್ಲಿ 19ನೆಯ ಶತಮಾನದಿಂದ ಪ್ರಾರಂಭವಾಯಿತು. ಜರ್ಮನಿಯಿಂದ ತರಿಸಲಾದ ಕೈಕುಂಚದಿಂದ ತಯಾರಿಸಿದ ಮಾದರಿಗಳನ್ನು ನೋಡಿ ಮೃದುವಾದ ಉಣ್ಣೆಯ ಮೇಲೆ ಕತ್ತರಿ ಕಸೂತಿ ಹಾಕುವ ವಿಧಾನ ಬಂತು. ಬರ್ಲಿನ್ ಉಣ್ಣೆಗಾರಿಕೆಯೆಂದು ಕರೆಯಲಾದ ಈ ಚಿತ್ರಗಳಲ್ಲಿ ಸುಮಾರು 14,000ಕ್ಕೂ ಹೆಚ್ಚು ಕಸೂತಿ ಮಾದರಿಗಳಿದ್ದವು. ಮುಂದಿನ ಅರ್ಧ ಶತಮಾನದಲ್ಲಿ ಚರ್ಚ್ ಕಸೂತಿ ಪುನಃ ಪ್ರಚಲಿತವಾಯಿತು. 1861ರಲ್ಲಿ ಪ್ರಾರಂಭವಾದ ವಿಲಿಯಂ ಮಾರಿಸನ ಅಂಗಡಿಯಲ್ಲಿ ಕಸೂತಿ ಪದಾರ್ಥಗಳು ವಿವಿಧ ನಮೂನೆಗಳಲ್ಲಿ ದೊರೆಯುತ್ತಿದ್ದುವು. ಕಸೂತಿ ಕಲೆಯನ್ನು ಕಲಿಸುವ ಅನೇಕ ಶಾಲೆಗಳು 1872ರ ಹೊತ್ತಿಗೆ ಪ್ರಾರಂಭವಾಗಿದ್ದುವು.

1782ರಲ್ಲಿ ಎಡಿನ್‌ಬರೊಗೆ ಬಂದಿದ್ದ ಇಟಲಿಯ ಕಸೂತಿ ಕೆಲಸಗಾರನೊಬ್ಬನಿಂದ ಒಂದು ರೀತಿಯ ಐರ್‌ಷೈರ್ ಬಿಳಿಕಸೂತಿ ಸ್ಕಾಟ್‌ಲೆಂಡಿನಲ್ಲಿ ಪ್ರಾರಂಭವಾಯಿತು. ಕಲಾಬತು ಕಲೆ ಬಹಳವಾಗಿ ಮುಂದುವರಿಯಿತು. ಅಲ್ಲಿಯವರು ಯುರೋಪಿನ ಬೇರೆ ದೇಶಗಳಿಂದ ಬಹಳವಾಗಿ ತಏರಿಗೆ ಮತ್ತು ಕಲಾಬತುಗಳನ್ನು ಆಮದುಮಾಡಿಕೊಳ್ಳುತ್ತಿದ್ದರು. ಆ ಇಟಾಲಿಯನ್ ಕಲೆಗಾರನಿಗೆ ವಾರ್ಷಿಕ ಅನುದಾನವನ್ನು ನೀಡಿ ಮಸ್ಲಿನ್ ಕಸೂತಿಯಲ್ಲಿ ಸ್ಕಾಟ್ ಜನರಿಗೆ ತರಬೇತಿ ನೀಡುವಂತೆ ನೇಮಿಸಲಾಯಿತು. ಹೀಗಾಗಿ 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ 5,00,000 ಜನ ಈ ಕಲೆಯಲ್ಲಿ ನಿಪುಣರಾಗಿ, ಈ ಉದ್ಯಮದ ಮತ್ತೊಂದು ಶಾಖೆ ಬೆಲ್‌ಫಾಸ್ಟಿನಲ್ಲೂ ಪ್ರಾರಂಭವಾಯಿತು. ಬಿಳಿ ಕಸೂತಿಯಲ್ಲಿ, ಸಾಟಿನ್ ಮೇಲೆ ಹೂವುಗಳನ್ನು ಬಿಡಿಸುತ್ತಿದ್ದರು. ಸ್ಕಾಟ್ ಕಸೂತಿ ವಿಧಾನಗಳು ಬಹುತೇಕ ಇಂಗ್ಲೆಂಡಿನ ಮಾದರಿಯನ್ನೇ ಹೋಲುತ್ತವೆ.

ಐರ್ಲೆಂಡಿನಲ್ಲಿ ಮೊದಲಿಗೆ ಕಸೂತಿ ಕಲೆ ಡ್ರೂನೆಕ್ ಎಂಬ ಹೆಸರಿನಿಂದ ಅಲ್ಲಿಯ ಹೆಂಗಸರು ನಡೆಸುತ್ತಿದ್ದ ಒಂದು ಚಿಕ್ಕ ವ್ಯಾಪಾರೋದ್ಯಮವಾಗಿತ್ತು. ನಮೂನೆಗಳನ್ನು ಚರ್ಮದ ಮೇಲೆ ಬರೆದು ಅವನ್ನು ಪ್ರತಿಮಾಡಲಾಗುತ್ತಿತ್ತು. ಮೊದಲಿಗೆ ಕಸೂತಿಕಲೆಗೆ ಬಹಳ ಮನ್ನಣೆಯಿತ್ತು. ಅನಂತರ ಐರಿಷ್ ಬಿಳಿ ಕಸೂತಿಯನ್ನು ಸ್ಯಾಕ್ಸನಿಯ ಕಸೂತಿಯಂತೆಯೇ ಉತ್ತಮವಾದ ಕೇಂಬ್ರಿಕ್, ಲಿನೆನ್ ಮತ್ತು ಮಸ್ಲಿನ್ ಬಟ್ಟೆಗಳ ಮೇಲೆ ಹಾಕಲಾಗುತ್ತಿತ್ತು. ಮೆಟ್ರೊಪಾಲಿಟನ್ ಕಲಾ ಸಂಗ್ರಹಾಲಯದಲ್ಲಿರುವ ಇದರ 19ನೆಯ ಶತಮಾನದ ಒಂದು ನಮೂನೆಯಲ್ಲಿ ದಪ್ಪ ಅಂಚಿನ ಹೂವುಗಳಿಂದೊಡಗೂಡಿದ ಕರವಸ್ತ್ರವೊಂದಿದೆ.

ಅಮೆರಿಕದಲ್ಲಿ ಮುಂಚಿನ ವಲಸೆಗಾರರು ತಮ್ಮ ತಾಯ್ನಾಡಿನಿಂದಲೇ ಕಸೂತಿ ಕಲೆಯನ್ನು ಕಲಿತುಬಂದಿದ್ದರೂ ಮೊದಮೊದಲಿಗೆ ವಸ್ತುಗಳ ಅಭಾವದಿಮದಾಗಿ ಕಸೂತಿ ಕಲೆ ಸುಗಮವಾಗಿ ಸಾಗಲಿಲ್ಲ. ಪ್ರತಿಯೊಂದು ವಸ್ತುವನ್ನೂ ಕೈಗಳಿಂದಲೇ ತಯಾರಿಸಬೇಕಿತ್ತು. ಅವರು ಉಣ್ಣೆಯ ಕಸೂತಿ ದಾರಗಳಿಂದ ಲಡಿಗಳನ್ನು ತಯಾರಿಸಿ, ಅವಕ್ಕೆ ಬಣ್ಣಹಾಕುತ್ತಿದ್ದರು. ನೀಲಿ ಬಣ್ಣ ಮುಖ್ಯವಾಗಿದ್ದು, ಅದಕ್ಕೇ ಕೆಲವು ಬೇರೆ ಬೇರೆ ಛಾಯೆಗಳನ್ನು ನೀಡುತ್ತಿದ್ದರು. ನೂಲುಯಂತ್ರದ ಬಳಕೆಗೆ ಮೊದಲು ಲಿನೆನನ್ನೆ ಉಪಯೋಗಿಸುತ್ತಿದ್ದರು. ಇಂಗ್ಲೆಂಡಿನಲ್ಲಿ 17ನೆಯ ಶತಮಾನದಲ್ಲಿ ಬಹಳ ಪ್ರಚಲಿತವಾಗಿದ್ದ ಉಣ್ಣೆಯ ಕಸೂತಿ ದಾರವನ್ನೇ ಅಮೆರಿಕದ ಸ್ತ್ರೀಯರು ಬಳಸುತ್ತಿದ್ದರು. ಅನಂತರ ತುರ್ಕಿ ಕಸೂತಿಯ ಪ್ರಭಾವವೂ ಇವರ ಮೇಲೆ ಬಿದ್ದು ಮೆತ್ತೆಗಳೇ ಮೊದಲಾದವನ್ನು ಕಸೂತಿಯಿಂದ ಸಜ್ಜುಗೊಳಿಸುತ್ತಿದ್ದರು. ಇಂಗ್ಲೆಂಡಿನ ಕಲೆಗಿಂತಲೂ ಅಮೆರಿಕನರ ಕಲೆ ಹೆಚ್ಚು ಸರಳವಾಗಿತ್ತು.

ಇಂಗ್ಲೆಂಡ್ ಫ್ರಾನ್ಸ್‌ಗಳಂತೆ ಅಮೆರಿಕದಲ್ಲೂ ಮತ್ತೆ ಕಸೂತಿ ಕೆಲಸ ಉತ್ತಮಗೊಂಡಿತು. ಬಣ್ಣಬಣ್ಣದ ಬಟ್ಟೆಗಳ ಮೇಲೆ ಜಾಳಿಗೆಯ ಬಗೆಬಗೆಯ ಕಸೂತಿ ಹಾಕುತ್ತಿದ್ದರು. 19ನೆಯ ಶತಮಾನದ ಮತ್ತೊಂದು ವಿಶಿಷ್ಟ ನಮೂನೆಯೆಂದರೆ ಅಸಮಾಕಾರಗಳ ರೇಷ್ಮೆಯ ವಸ್ತ್ರದ ತುಂಡುಗಳನ್ನು ಅಂಚುಸೇರಿಸಿ ಹೊಲಿದು ಅವುಗಳ ಮೇಲೆ ಕಸೂತಿ ಮಾಡುವುದು. ಅಮೆರಿಕದ ವಸ್ತ್ರ ತಯಾರಕರು ಮಾರುತ್ತಿದ್ದ ಕಚ್ಚಾ ಪದಾರ್ಥಗಳೊಡನೆ ನಾನಾತೆರದ ನಮೂನೆಗಳೂ ಕಸೂತಿ ವಿಧಾನಗಳೂ ಕೂಡಿರುತ್ತಿದ್ದುವು. ಇಂಗ್ಲೆಂಡಿನಂತೆ ಅಮೆರಿಕದಲ್ಲಿ ಶಾಲಾಬಾಲಕಿಯರು ತಮ್ಮ ಅಭ್ಯಾಸ ಕ್ರಮದಲ್ಲಿ ಕಸೂತಿಯನ್ನು ಕಲಿಯುತ್ತಿದ್ದರು. ಬಟ್ಟೆಗಳ ಮೇಲೆ ಬೇರೆ ಬೇರೆ ನಮೂನೆಯ ಹೊಲಿಗೆಗಳು, ಅಕ್ಷರಗಳು, ಬೈಬಲಿನ ಪದ್ಯಗಳೇ ಮೊದಲಾದವನ್ನು ಹೊಲಿಯಲಾಗುತ್ತಿತ್ತು. ಉಣ್ಣೆ, ರೇಷ್ಮೆ ಹಾಗೂ ಕ್ಯಾನ್‌ವಾಸ್‌ಗಳ ಮೇಲೆ ಕತ್ತರಿ ಹೊಲಿಗೆಯಲ್ಲಿ ನಿಸರ್ಗ ದೃಶ್ಯಗಳನ್ನೋ ಕಾವ್ಯಗಳು, ಬೈಬಲ್ ಮೊದಲಾದವುಗಳಲ್ಲಿ ಬರುವ ಸನ್ನಿವೇಶಗಳ ದೃಶ್ಯಗಳನ್ನೋ ಮಾದರಿಯಾಗಿಟ್ಟುಕೊಳ್ಳುತ್ತಿದ್ದರು. ಪೆನ್‌ಸಿಲ್ವೇನಿಯದಲ್ಲಿ ನೆಲೆಸಿದ ಜರ್ಮನರಿಂದ ಅಮೆರಿಕದ ಕಲೆಯ ಮೇಲೆ ಬಿದ್ದ ಜರ್ಮನಿಯ ಪರಂಪರಾಗತ ಕಸೂತಿ ಕಲೆಯ ಪ್ರಭಾವ ವಿಶೇಷವಾದದ್ದು.

ಕಸೂತಿ ಕಲೆ ಜನಪ್ರಿಯವಾಗುತ್ತಿದ್ದ ಹಾಗೆಯೇ ಉಡುಪುಗಳ ಮೇಲೂ ಕಲೆಗಾರಿಕೆಯ ಕೆಲಸ ಪ್ರಾರಂಭವಾಯಿತು. ಪ್ರತಿಯೊಂದು ಮಾದರಿಯ ಬಿಳಿಯ ಮಸ್ಲಿನ್ ಬಟ್ಟೆಯ ಮೇಲೂ ಹತ್ತಿ ಅಥವಾ ರೇಷ್ಮೆಯ ಎಳೆಗಳಿಂದ ಕಸೂತಿ ಮಾಡಲಾಗುತ್ತಿತ್ತು. ಸ್ತ್ರೀಯರಿಗೆ ಮೀಸಲಾದ ಪತ್ರಿಕೆಗಳಲ್ಲೂ ನಮೂನೆಗಳನ್ನು ಮತ್ತು ಕಸೂತಿ ವಿಧಾನಗಳನ್ನು ಪ್ರಕಟಿಸಲಾಗುತ್ತಿತ್ತು. 19ನೆಯ ಶತಮಾನದ ಅಂತ್ಯದ ಹೊತ್ತಿಗೆ ವಿಲಿಯಂ ಮಾರಿಸನ ಪ್ರಭಾವದಿಂದಾಗಿ ಎಲ್ಲ ಕೈಕೆಲಸದ ಪದಾರ್ಥಗಳ ಮೇಲೂ ಕಲೆಗಾರಿಕೆ ಪ್ರಾರಂಭವಾಯಿತು. ಅನಂತರದಲ್ಲಿ ಯುರೋಪಿನಲ್ಲಿ ಸಂದುಹೋದ ನಾನಾ ಯುಗಗಳಲ್ಲಿ ಪ್ರಚಲಿತವಿದ್ದ ಶೈಲಿಗಳಲ್ಲಿ ಕಸೂತಿಕೆಲಸ ಪ್ರಾರಂಭವಾಯಿತು. 20ನೆಯ ಶತಮಾನದ ಪ್ರಾರಂಭದಲ್ಲಿ ಕಂಡುಬಂದ ಪ್ರವೃತ್ತಿಯೆಂದರೆ ನಿಸರ್ಗ ದೃಶ್ಯಗಳ ಚಿತ್ರಣ. ಹೂಗೊಂಚಲು, ಹಾರುವ ಹಕ್ಕಿ, ಬೆಟ್ಟಗಳೇ ಮೊದಲಾದವು ರೇಷ್ಮೆಯ ಬಟ್ಟೆಗಳ ಮೇಲೆ ಸಾಟಿನ್ ಹೊಲಿಗೆಯಿಂದ ಸೂಕ್ತವಾದ ಹಿಂಬದಿಯ ಛಾಯೆಯಲ್ಲಿ ಮೂಡಿಬರುತ್ತಿದ್ದವು. ಮೂಲವೇ, ತದ್ವತ್ ಎಂಬಷ್ಟು ಇವು ಚೆನ್ನಾಗಿದ್ದುವು. ಅನಂತರದಲ್ಲಿ ಅನೇಕ ಕುಶಲ ಕಲೆಗಾರರ ಸಂಘಗಳ ಸ್ಥಾಪನೆಯಾಗಿ ಕಸೂತಿ ಒಂದು ರೀತಿಯ ಅಲಂಕರಣ ಹಾಗೂ ಮನರಂಜನೆಯ ಕಲೆಯಾಗಿ ಜನಪ್ರಿಯವಾಗಿ ಉಳಿದುಬಂದಿದೆ.

**ಏಷ್ಯದಲ್ಲಿ:** ಪುರಾತನ ಇರನಿನ ಕುಶಲಕಲೆಗಾರಿಕೆಯಲ್ಲಿ ನಿಸರ್ಗಾನುಕರಣೆಯೇ ಪ್ರಧಾನ ಲಕ್ಷಣ. ಆಮಖಾನ, ಉಡುಪು, ಪರದೆ, ಹಾಸುವ ವಸ್ತ್ರಗಳು, ಮೆತ್ತೆಗಳೇ ಮೊದಲಾಗಿ ಎಲ್ಲ ವಸ್ತುಗಳ ಮೇಲೆ ಕಸೂತಿ ಮಾಡಲಾಗುತ್ತಿತ್ತು. ಇಸ್ಲಾಂ ಕಲೆಯಲ್ಲಿ ಮನುಷ್ಯರ ಹಾಗೂ ಅವರ ನಿತ್ಯಚಟುವಟಿಕೆಗಳಾದ ಬೇಟೆಗಾರಿಕೆ, ಭೋಜನಕೂಟ ಮೊದಲಾದವುಗಳ ಚಿತ್ರಣವಿದೆ. ಪ್ರಕೃತಿಪ್ರಿಯರಾದ ಮುಸ್ಲಿಮರ ಕಲೆಯಲ್ಲಿ ಗಿಡ ಬಳ್ಳಿಗಳು ಮತ್ತು ಹೂವು ಹಣ್ಣುಗಳು ಎಲ್ಲೆಲ್ಲೂ ಎದ್ದುಕಾಣುತ್ತವೆ. ಪರ್ಷಿಯನ್ ಕಸೂತಿಗಾರಿಕೆ 16ನೆಯ ಶತಮಾನಕ್ಕಿಂತಲೂ ಹಳೆಯದೆಂದು ಹೇಳಲಾಗುವುದಿಲ್ಲ. ಮಾರ್ಕೊಪೋಲೊ ತನ್ನ ಪ್ರವಾಸ ಕಾಲದಲ್ಲಿ ಅಲ್ಲಿಗೆ ಭೇಟಿ ನೀಡಿದಾಗ ಕಸೂತಿ ಕಲೆಗಾರರನ್ನು ನೋಡಿದ್ದುದಾಗಿ ಹೇಳಿದ್ದಾನೆ. ಮೊದಲಿಗೆ ಪರ್ಷಿಯದಲ್ಲಿ ಕೇವಲ ಕಸೂತಿಯಿಂದಲೇ ವಸ್ತ್ರಗಳನ್ನು ತುಂಬಿಸಲಾಗುತ್ತಿದ್ದು ಅನಂತರ ಬಣ್ಣಗಳ ಸೂಕ್ತ ಸಂಯೋಜನೆಯೂ ಬಂತು. 17ನೆಯ ಮತ್ತು 18ನೆಯ ಶತಮಾನಗಳ ಹೊತ್ತಿಗೆ ವಿವಿಧ ನಮೂನೆಗಳು ಬಳಕೆಗೆ ಬಂದುವು. ಪರ್ಷಿಯನರು ಅನುಸರಿಸುತ್ತಿದ್ದ ಸರಪಳಿ ಹೊಲಿಗೆ ಭಾರತಕ್ಕೂ ಬಂದು ಇಲ್ಲಿಂದ ಇಂಗ್ಲೆಂಡ್ ಮೊದಲಾದ ದೇಶಗಳಿಗೂ ಹೋಯಿತು. ಇರನಿನಲ್ಲಿ ಈಗ ಕಸೂತಿ ಕಲೆಗೆ ಹೆಚ್ಚಿನ ಪ್ರಾಮುಖ್ಯವೇನೂ ಇಲ್ಲ.

ಚೀನದೊಂದಿಗೆ ವಾಣಿಜ್ಯ ಸಂಬಂಧ ಬೆಳೆಸಿದ ಎಲ್ಲ ದೇಶಗಳ ಪ್ರಭಾವವೂ ಅಲ್ಲಿಯ ಕಸೂತಿ ಕಲೆಯ ಮೇಲೆ ಬಿದ್ದಿದೆ. ಪರ್ಷಿಯದ ಪ್ರಭಾವವಂತೂ ಗಣನೀಯವಾದದ್ದು, ರೇಷ್ಮೆ ಕೈಗಾರಿಕೆ ಚೀನದಲ್ಲಿ ಬೆಳೆದುಬಂದದ್ದು ಹೀಗೆಯೇ. ಕಸೂತಿಯ ಅತ್ಯಂತ ಪುರಾತನ ಮಾದರಿಯೆಂದರೆ ಪೂರ್ವ ತುರ್ಕಿಸ್ತಾನದಲ್ಲಿ ದೊರೆಯುವ ಕೆಲವು ಕೃತಿಗಳು. ಇವು ತು ಅಂಗ್ ಸಾಮ್ರಾಜ್ಯದಲ್ಲಿ ತಯಾರಾದವೆಂದೂ ಸುಮಾರು 6ನೆಯ ಅಥವಾ 7ನೆಯ ಶತಮಾನದ್ದೆಂದೂ ಹೇಳಬಹುದು. ಚೀನದ ಜನರ ಅತಿಸಾಂಪ್ರದಾಯಿಕತೆ ಹಾಗೂ ಸಂಕೀರ್ಣ ಹೃದಯಗಳಿಂದಾಗಿ ಮೊದಲಿನ ಕಲೆಯ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಕಷ್ಟವಾಗುತ್ತದೆ. ಆದರೂ 18ನೆಯ ಶತಮಾನದಿಂದೀಚೆಗೆ ಅನೇಕ ನಿದರ್ಶನಗಳು ದೊರಕುತ್ತವೆ. ಚೀನೀಯರಿಗೆ ಅಲಂಕರಣವೇ ಕಸೂತಿಯ ಮುಖ್ಯ ಉದ್ದೇಶ. ಹನ್ನೆರಡು ವಿಧವಾದ ಆಭರಣಗಳನ್ನು ಸಮ್ರಾಟ ತನ್ನ ಪೋಷಾಕಿನಲ್ಲಿ ಧರಿಸುತ್ತಿದ್ದ. ಸೂರ್ಯ, ಮೂರು ಕಾಲುಗಳುಳ್ಳ ಪಕ್ಷಿ, ಮೊಲವನ್ನೊಳಗೊಂಡ ಚಂದ್ರ, ನಕ್ಷತ್ರಗಳು, ಬೆಟ್ಟಗುಡ್ಡಗಳು ಮೊದಲಾದವು ಈ ಆಭರಣಗಳು. ನಾಗರಿಕ ಹಾಗೂ ಮಿಲಿಟರಿ ಅಧಿಕಾರಿಗಳು ಬೇರೆ ಬೇರೆ ವೈಯಕ್ತಿಕ ಲಾಂಛನಗಳನ್ನು ಧರಿಸುತ್ತಿದ್ದರು. ಇವರ ಕಸೂತಿ ಕಲೆ ನಿರ್ದಿಷ್ಟವಾಗಿಯೂ ನಿಖರವಾಗಿಯೂ ಇತ್ತು. ಪೀಕಿಂಗಿನಲ್ಲಿ ಚೀನೀಯರ ಕಸೂತಿಯ ವಿಶೇಷ ಶೈಲಿಯೊಂದಿತ್ತು. ಮಾಸದ ಚಿನ್ನ ಬೆಳ್ಳಿ ಎಳೆಗಳನ್ನು ಕಸೂತಿಯಲ್ಲಿ ಉಪಯೋಗಿಸಲಾಗುತ್ತಿತ್ತು. ಹೂ ಗಿಡ, ಋತುಮಾನಗಳು, ಪೀಠೋಪಕರಣ, ಪರದೆ, ಉಡುಪು ಮೊದಲಾದ ಪದಾರ್ಥಗಳ ಮೇಲೆ ಸ್ಪಷ್ಟವಾಗಿ ಮೂಡುತ್ತಿದ್ದುವು.

ಜಪಾನೀಯರ ಕಸೂತಿ ಕಲೆ ಅನೇಕ ವಿಧಗಳಲ್ಲಿ ಚೀನದ್ದನ್ನೇ ಅನುಸರಿಸಿದರೂ ಅದಕ್ಕಿಮತ ಮಿಗಿಲಾಗಿ ಚಿತ್ರಾತ್ಮಕವಾಗಿಯೂ ಮನೋರಂಜಕವಾಗಿಯೂ ಇದೆ. 17–18ನೆಯ ಶತಮಾನಗಳ ಜಪಾನಿ ಕಸೂತಿ ಮಾದರಿಗಳು ಪರಂಪರೆಯ ಚಿತ್ರಗಳು. ಆದರೆ ಆ ಶತಮಾನದ ಕೊನೆಯಲ್ಲಿ ಹೂಗಿಡ, ದೋಣಿ, ಜಲಪಾತ, ತೊರೆ ಮೊದಲಾದವು ಉತ್ತಮವಾಗಿ ಕಸೂತಿಯಲ್ಲಿ ಮೂಡಿಬಂದುವು. ಇಲ್ಲಿಯ ಕಿರಿಯೋಸ ಒಂದು ಒಳ್ಳೆಯ ಮಾದರಿ. ಬಣ್ಣದ ರೇಷ್ಮೆಬಟ್ಟೆಗಳ ಮೇಲೆ ಚಿನ್ನದ ಎಳೆಗಳಿಂದ ಸೂಕ್ಷ್ಮ ಎಳೆಗಳನ್ನು ವಿಶಿಷ್ಟ

ವಿಧಾನದಲ್ಲಿ ಹಾಕುತ್ತಿದ್ದರು. ಎಲೆ ಮತ್ತು ಹೂವುಗಳ ಮೇಲೆ ಹಿಂಬದಿಯ ಹೊಲಿಗೆಯಿಂದ ಅವುಗಳ ನಾಳಗಳನ್ನು, ದಳಗಳನ್ನು ತೋರಿಸಲಾಗುತ್ತಿತ್ತು. ಮೊದಲು ಆಕೃತಿಯನ್ನು ಮಸಿಯಲ್ಲಿ ಬರೆದು ಅದರ ಮೇಲೆ ಎಳೆ ತುಂಬುತ್ತಿದ್ದರು. ಶತಮಾನದ ಕೊನೆಯಲ್ಲಿ

ಬಲೆ ವಸ್ತ್ರದ ಮೇಲೆ ಕಸೂತಿ ಕೆಲಸ

ನಮೂನೆಗಳ ಬಳಕೆ ಕಡಿಮೆಯಾಯಿತು. ಪಶುಪಕ್ಷಿ, ಹಿಮಪ್ರಪಾತ, ಹೂಗಿಡ ಇವನ್ನು ಅತ್ಯಂತ ಸರಳವಾಗಿ ಚಿತ್ರಿಸಲಾರಂಭಿಸಿದ್ದು ಆಗ. 19ನೆಯ ಶತಮಾನದಿಂದೀಚೆಗೆ ಜಪಾನೀಯರ ಕಸೂತಿ ಕಲೆ ಗಹನವಾದ ಗಗನಕುಸುಮವಾಗಿರದೆ ನೈಜವಾಗಿ ವಿಕಾಸ ಹೊಂದುತ್ತಿದೆ.

**ಆಧುನಿಕ ಪ್ರವೃತ್ತಿಗಳು:** ಆಧುನಿಕ ಯುಗದಲ್ಲಿ ದೈನಂದಿನ ಜೀವನ ಸಂಕೀರ್ಣವಾಗುತ್ತ ಬಂದು ಯಾಂತ್ರಿಕತೆ ಎಲ್ಲೆಲ್ಲೂ ಮನೆ ಮಾಡಿರುವುದರಿಂದ ಹಿಂದಿನ ಮಾದರಿಗಳೂ ಕಸೂತಿಯ ವೈವಿಧ್ಯಗಳೂ ಮರೆಯಾಗುತ್ತಿವೆ. ಅಲ್ಲದೆ ನೇಯ್ಗೆಯ ಕೆಲಸ, ಅಂಚು ಕಟ್ಟುವುದು, ಕಸೂತಿ ಮೊದಲಾದವುಗಳಿಗಾಗಿ ಯಂತ್ರಗಳನ್ನು ಉಪಯೋಗಿಸುತ್ತಿರುವುದರಿಂದ ನಮೂನೆಗಳ ಸಂಖ್ಯೆ ಅಪರಿಮಿತವಾಗಿ ಬೆಳೆಯುತ್ತಿದ್ದರೂ ಅಲಂಕರಣ ಪ್ರವೃತ್ತಿ ಮತ್ತು ಕಲಾಜಿಜ್ಞಾಸೆಗಳು ಕುಂಠಿತವಾಗುತ್ತಿವೆ. 20ನೆಯ ಶತಮಾನದ ಕಸೂತಿ ಮಾದರಿಗಳು ಅತ್ಯಂತ ಸರಳ. ಕೃತಕ ವಸ್ತ್ರಗಳ ತಯಾರಿಕೆಯ ಫಲವಾಗಿಹೊಸ ತಾಂತ್ರಿಕ ವಿಧಾನಗಳನ್ನು ರೂಪಿಸಲು ಸಾಧ್ಯವಾಗುತ್ತಿದೆ. ಒಟ್ಟಿನಲ್ಲಿ ಮನುಷ್ಯನ ಕಲಾಭಿರುಚಿ ಹಾಗೂ ಕಲ್ಪನಾವೈವಿಧ್ಯಗಳ ಸಂಕೇತವಾದ ಕಸೂತಿ ಕಲೆ ನೀರಸವಾಗಿ ಯಾಂತ್ರಿಕವಾಗದೆ ಸೌಂದರ್ಯಸಮೀಕ್ಷಣ ಶಕ್ತಿಯನ್ನು ಮೂಡಿಸಲು ಅವಕಾಶವಿತ್ತರೆ ಅದು ಸಾರ್ಥಕವಾಗುತ್ತದೆ.

**ಕಸೂತಿ ವಿಧಾನಗಳು:** ಈಚೆಗೆ ಯಂತ್ರಕಸೂತಿಯೇ ಸಾಮಾನ್ಯವಾಗಿದೆ. ಹೊಲಿಗೆಯಂತ್ರಕ್ಕೆ ಅದಕ್ಕೆಂದೇ ನಿರ್ಮಿಸಲಾದ ಬಿಲ್ಲೆಯಂಥ ಫ್ಲೇಟನ್ನು ರೂಪಸಿಬೇಕಾಗುತ್ತದೆ. ಆದರೆ ಈ ಫ್ಲೇಟನ್ನು ಕೂಡಿಸುವಾಗ ಪ್ರೆಸ್‌ವೆಬರ್ ಮತ್ತು ತಿರುಪು ಮೊಳೆಯನ್ನು ತೆಗೆಯಬೇಕು. ಸೂಕ್ತವಾದ ನಂಬರುಗಳ ಸೂಜಿ ಮತ್ತು ದಾರಗಳನ್ನು ಉಪಯೋಗಿಸಬೇಕು. ಕೈಕಸೂತಿಗೆ ಬೇಕಾದ ಮುಖ್ಯಸಾಧನಗಳೆಂದರೆ ಮರದಿಂದ ಮಾಡಿದ ದುಂಡನೆಯ ಅಥವಾ ಚೌಕದ ಕಟ್ಟು, ಕೈಸೂಜಿ, ಅಂಗುಸ್ಥಾನ, ಕತ್ತರಿ, ಡಿ.ಎಂ.ಸಿ. ಅಥವಾ ಇನ್ನಾವುದೇ ರೀತಿಯ ಸುಮಾರು 25ನೆಯ ನಂಬರಿನ ರೇಷ್ಮೆದಾರ.

**ವಿವಿಧ ಮಾದರಿಯ ಹೊಲಿಗೆಗಳು:** ಹೊಲಿಗೆಗಳಲ್ಲಿ ಸಾಮಾನ್ಯವಾಗಿ ಓಟ ಹೊಲಿಗೆ (ರನಿಂಗ್ ಸ್ಟಿಚ್), ನೀಳ ಹೊಲಿಗೆ (ಲಾಂಗ್ ಸ್ಟಿಚ್), ದಾರ ಹೊಲಿಗೆ (ಕಾರ್ಡಿಂಗ್) ಮೊದಲಾದವು ಮುಖ್ಯವಾದವು. ಯಂತ್ರಕಸೂತಿಯಲ್ಲಿ ನೇಯ್ಗೆ ಹೊಲಿಗೆ (ವೀವಿಂಗ್) ಮತ್ತು ದುಮಡು ಹೊಲಿಗೆ (ರೌಂಡ್ ಸ್ಟಿಚ್) ಮುಖ್ಯವಾದವು.

**ಕೆಲವು ವಿಶಿಷ್ಟ ಕಸೂತಿ ಕೆಲಸಗಳು:** ಕಸೂತಿ ಕಲೆಗಾರರು ತಮ್ಮ ಕಲಾಭಿರುಚಿಯನ್ನು ವಿಶಿಷ್ಟ ಬಗೆಗಳ ಕಸೂತಿಗಳಲ್ಲಿ ಹೊರಗೆಡವಿದ್ದಾರೆ. ಇವುಗಳಲ್ಲಿ ಮುಖ್ಯವಾದವು ಇವು: ಜಾಳಿಗೆಯ ಕಸೂತಿ (ಆಪ್ಲಿಕೇ ವರ್ಕ್): ಬಟ್ಟೆಯ ತುಂಡುಗಳ ಆಕೃತಿಯ ಮೇಲೆ, ತುಂಬಬೇಕಾದ ಚಿತ್ರಕ್ಕೆ ಹೊಂದಿಕೊಳ್ಳುವಂತೆ ಕಸೂತಿಯನ್ನು ಕೂಡಿಸುವ ವಿಧಾನವಿದು. ಈ ಕಸೂತಿಯಲ್ಲಿ ಬೇರೆ ಬಗೆಯ ಬಟ್ಟೆಯ ತುಂಡನ್ನು ಉಪಯೋಗಿಸುವುದಕ್ಕಿಂತ ಬಹುತರವಾಗಿ ಜಾಳಿಗೆಯ ಬಟ್ಟೆಯನ್ನೇ ಉಪಯೋಗಿಸುವುದಾದ್ದರಿಂದ ಇದಕ್ಕೆ ಜಾಳಿಗೆ ಕಸೂತಿಯೆಂದು ಹೆಸರಾಗಿದೆ. ವಿವಿಧ ಬಣ್ಣಗಳ ಮೆರುಗಿನ ರೇಷ್ಮೆಯಿಂದ ತುಂಬಿದ ಪಕ್ಷಿ, ಹೂ ಮತ್ತು ಎಲೆಗಳು ಈ ಜಾಳಿಗೆಯ ಬಟ್ಟೆಯ ಹಿನ್ನೆಲೆಯಲ್ಲಿ ಸುಂದರವಾಗಿ ಕಾಣುತ್ತವೆ.

**ಕತ್ತರಿ ಕೆಲಸ (ಕಟ್ ವರ್ಕ್):** ವಿವಿಧ ಆಕಾರಗಳಲ್ಲಿ ಚಿತ್ರವಿಚಿತ್ರವಾಗಿ ಕತ್ತರಿಸಿ ಸೌಂದರ್ಯವನ್ನು ಸೃಷ್ಟಿಸುವ ವಿಧಾನವಿದು. ಕಸೂತಿ ಹಾಕುವ ಬಟ್ಟೆಯ ಮೇಲೆ ಮೊದಲು



ಕುರ್ಚಿಯ ಬೆನ್ನಿನ ಕಸೂತಿ

ಚಿತ್ರವನ್ನು ಮೂಡಿಸಿಕೊಂಡು ಕಟ್ಟಿನ ಮಧ್ಯದಲ್ಲಿ ಬರುವಂತೆ ಅದನ್ನು ಸರಿಯಾಗಿ ಕೂಡಿಸಿ, ಹೊರಗಿನ ರೇಷೆಗಳನ್ನೆಲ್ಲ ಎರಡೆರಡು ಸಾಲುಗಳಂತೆ ಓಡುವ ಟಿಬ್ಬಿಗಳಿಂದ ತುಂಬಿಕೊಳ್ಳಬೇಕು. ಬಾಹ್ಯರೇಷೆಯಲ್ಲಿ ಹೂವಿನ ಮಧ್ಯಭಾಗ, ಎಲೆಯ ದೇಟು ಮುಂತಾದವನ್ನು ಬಿಟ್ಟು ರೇಷೆಗೆ ಹೊಂದಿದಂತೆ ಕತ್ತರಿಸಿ ಸುತ್ತಲೂ ಆಯಾ ಬಣ್ಣಗಳಿಂದ ನೇಯ್ಗೆ ಅಥವಾ ಹೊಲಿಗೆಯನ್ನು ಭದ್ರವಾಗಿ ಗುಂಜಾಗದಂತೆ ಮಾಡಬೇಕು. ಇದನ್ನು ಸಾಮಾನ್ಯವಾಗಿ ಮಸ್ಲಿನ್ ಬಟ್ಟೆಯ ಮೇಲೆ ಮಾಡುವುದು ಒಳಿತು.

**ರೆಚಿಲೊ ಕಸೂತಿ:** ಕಸೂತಿಯ ಚಿತ್ರದ ಸುತ್ತಲೂ ಚತುರ್ಭುಜಾಕಾರದಲ್ಲಿ ಬಿಗಿಯಾಗಿ ಓಟ ಟಿಬ್ಬಿ ಹಾಕಿ, ಚಿತ್ರದ ಭಾಗವನ್ನು ಬಿಟ್ಟು ಉಳಿದ ಭಾಗವನ್ನು ಕತ್ತರಿಸಿದರೆ, ಅದನ್ನು ರೆಚೆಲೊ ಕಸೂತಿಯೆನ್ನುತ್ತಾರೆ. ರೆಚೆಲೊ ಕಸೂತಿಯನ್ನು ಪಾಪ್ಲಿನ್ (ಅಥವಾ ಇನ್ನಾವುದಾದರೂ) ಬಟ್ಟೆಯ ಮೆಲೆ 3ನೆಯ ನಂಬರಿನ ಸೂಜಿಯಿಂದ ಸ್ವಲ್ಪ ಸಡಿಲವಾದ ರೀತಿಯಲ್ಲಿ ಹಾಕುತ್ತಾರೆ.

ಪಿನ್ ಕೆಲಸದಲ್ಲಿ (ಪಿನ್ ವರ್ಕ್) ಸ್ವಲ್ಪ ಬಿಡಿಬಿಡಿಯಾದ ಸಣ್ಣಸಣ್ಣ ಭಾಗಗಳಿಂದ ಕೂಡಿದ ಮಾದರಿಯೇ ಉತ್ತಮವಾದುದು. ಪಿನ್ ಕೆಲಸದಲ್ಲಿ ಸ್ವಲ್ಪ ದೊಡ್ಡ ಪ್ರಮಾಣದ್ದೆಂದರೆ ಮಖಮಲ್ ಕೆಲಸ. ರೇಷ್ಮೆ ಎಳೆಗಳನ್ನು ಒಂದೇ ಪಾತಳಿಯಲ್ಲಿ ಕತ್ತರಿಸುವುದರಿಂದ, ಕಸೂತಿ ಮಖಮಲ್ಲಿನಂತೆಯೇ ನಯವಾಗಿ ಎದ್ದುಕಾಣುವುದು. ಪ್ಯಾಚ್‌ವರ್ಕ್ ಅಥವಾ ಜೋಡಣೆಯ ಕಸೂತಿಯಲ್ಲಿ ಬೇರೆಬೇರೆ ಬಣ್ಣಗಳ ಹೊಳೆಯುವ ಬಟ್ಟೆಯ ತುಂಡುಗಳನ್ನು ರೇಷ್ಮೆಯಿಂದ ತುಂಬಿದ ಚಿತ್ರದ ಮೇಲೆ ವಿವಿಧ ಆಕಾರಗಳಲ್ಲಿ ಜೋಡಿಸಿ ಹೆಣೆದ ಕಸೂತಿಯಂತೆ

ಸುಂದರವಾಗಿ ಮಾಡಬಹುದು. ಜೋಡಣೆಯ ಕಸೂತಿಯಿಂದ ನಾಯಿ, ಆನೆ, ಕುದುರೆ, ಪಕ್ಷಿ ಹಾಗೂ ಮನುಷ್ಯಾಕೃತಿಗಳನ್ನು ಅಂದವಾಗಿ ತುಂಬಬಹುದು. ಮಣಿ ಕಸೂತಿಯಲ್ಲಿ (ಬೀಡ್ ವರ್ಕ್) ಕಸೂತಿಗೆ ಬೇರೆ ಬೇರೆ ಬಣ್ಣದ ರೇಷ್ಮೆಯನ್ನು ಉಪಯೋಗಿಸುವಂತೆ ಬೇರೆ ಬೇರೆ ಬಣ್ಣದ ಮಣಿಗಳನ್ನು ಉಪಯೋಗಿಸುತ್ತಾರೆ. ಬಣ್ಣಬಣ್ಣದ ಮಣಿಗಳಿಂದ ಪ್ರಮಾಣಬದ್ಧವಾದ ಕಸೂತಿಗಳನ್ನು ತುಂಬಿದರೆ ರಂಗವಲ್ಲಿಯಂತೆ ಕಾಣುತ್ತದೆ. ಮಣಿಗಳಿಂದಲೇ ಮಲ್ಲಿಗೆಯ ಮಂಟಪ ಮತ್ತು ತಟ್ಟೆಗಳನ್ನು ಮಾಡುತ್ತಿದ್ದರು. ಬಟ್ಟೆಯ ಅಂಚುಗಳಿಗೂ ಹೆಣ್ಣು ಮಕ್ಕಳ ಕೈಚೀಲ ಬುಟ್ಟಿಗಳಿಗೂ ಮಣಿ ಕಸೂತಿಯನ್ನು ಉಪಯೋಗಿಸುತ್ತಾರೆ.

ಚರ್ಮದ ಮೇಲೂ ಕಸೂತಿ ಮಾಡಬಹುದು. ಇದಕ್ಕಾಗಿ ಛಾಯಾಪ್ರಧಾನ ಕಸೂತಿಯ ಹಿನ್ನೆಲೆಯನ್ನು ಮೊದಲು ತಿಳಿದುಕೊಂಡಿರಬೇಕಲ್ಲದೆ, ಬಣ್ಣಗಳ ಬೆರಿಕೆಯಲ್ಲಿ ಹಾಗೂ ಹೊಲಿಗೆ ಹಾಕುವುದರಲ್ಲಿ ಜಾಗರೂಕರಾಗಿರಬೇಕು. ಹದಮಾಡಿದ ಚರ್ಮದ ಹಿಂಬದಿಗೆ ಅರ್ಗಂಡಿ ಅಥವಾ ಇನ್ನಾವುದೇ ಗಟ್ಟಿನೇಯ್ಗೆಯ ಟಿಬಿಯನ್ನು ಹಾಕಿ, ಕಟ್ಟಿನಲ್ಲಿ ಕೂಡಿಸಿ, ಯಂತರದ ಸೂಜಿಯ ಕೆಳಗೆ ಸರಿಸಿ, ಹೊರರೇಷ್ಮೆಯನ್ನು ಓಡುವ ಟಿಬ್ಬಿಗಳಿಂದ ತುಂಬಬೇಕು. ಕೆಲವು ವೇಳೆ ಚಿತ್ರವನ್ನು ಉಳಿಯಿಂದ ಒತ್ತಿ ಮೂಡಿಸಬೇಕಾಗುತ್ತದೆ. ಅನಂತರ ಯಂತ್ರದಿಂದಲೇ ದಾರವನ್ನೆಳೆದು, ಮತ್ತೊಂದು ಬಾರಿ ಟಿಬ್ಬಿ ಹಾಕಬೇಕು. ಆಮೇಲೆ ಸ್ವಲ್ಪ ಎತ್ತರವಾಗಿ ಸುಂದರವಾಗಿ ಕಾಣುವಂತೆ ಛಾಯಾಪ್ರಧಾನ ರೇಷ್ಮೆಯಿಂದ ಉಳಿದೆಲ್ಲ ಭಾಗವನ್ನೂ ತುಂಬಬೇಕು.

ಜೀಗಿನ ಕಸೂತಿಯನ್ನು ಕೈಯಲ್ಲೂ ಅಲ್ಲದೆ ಯಂತ್ರದಲ್ಲೂ ಮಾಡಬಹುದು. ಇದು ಬಂಗಾರದ ಕಡ್ಡಿಯಲಿ ಮಾಡಿದ ಬನಾರಸಿನ ಕಸೂತಿಯಂತೆ ಸುಂದರವಾಗಿ ಕಂಡುಬರುತ್ತದೆ. ಉಣ್ಣೆಯ ಮೇಲೆ ಕಸೂತಿ ಹಾಕಬೇಕಾದರೆ, ಬೇಕಾದ ಬಣ್ಣದ ಉಣ್ಣೆಯನ್ನು ಆರಿಸಿ, ತುಂಡುಮಾಡಿ ಉದ್ದುದ್ದವಾಗಿಟ್ಟು, ಅದೇ ಬಣ್ಣದ ರೇಷ್ಮೆಯಿಂದ ಉಣ್ಣೆಯನ್ನು ಗಟ್ಟಿಯಾಗಿರಿಸಲು ಯಂತ್ರದಲ್ಲಿ ಎಳೆಗಳನ್ನು ಹಾಕಬೇಕು. ತೊಗಲಿನ ಮೇಲೆ ರೇಷ್ಮೆಯಿಂದಾದ ಕಸೂತಿಯನ್ನು ಕೈಚೀಲ, ಪಾದರಕ್ಷೆಗಳಿಗಾಗಿ ಉಪಯೋಗಿಸುವುದುಂಟು. ಇದೇ ರೀತಿಯಲ್ಲಿ ಮರದ ಮೇಲೂ ಕಸೂತಿಯನ್ನು ಹಾಕುವುದುಂಟು. ಸೀನೆಲ್ ರೇಷ್ಮೆಯಿಂದ ಗುಂಜುಗುಂಜಾದ ಕಸೂತಿ ಹಾಕುತ್ತಾರೆ.

ಎಳೆ ಹೊಲಿಗೆ, ಟಿಬ್ಬಿ ಹೊಲಿಗೆ, ಕತ್ತರಿ ಹೊಲಿಗೆ, ಬುಗಡಿ ಹೊಲಿಗೆ (ಹೆರಿಂಗ್ ಬೋನ್ ಸ್ಟಿಚ್), ಕಾಶ್ಮೀರ ಹೊಲಿಗೆ ಮುಂತಾದವು ಕೈಹೊಲಿಗೆಯ ವಿವಿಧ ಪ್ರಕಾರಗಳು. ಇವೇ ಅಲ್ಲದೆ ಕಂಬಳಿ ಹೊಲಿಗೆ (ಬ್ಲಾಂಕೆಟ್ ಸ್ಟಿಚ್), ಸರಪಳಿ ಹೊಲಿಗೆ (ಚೇನ್ ಸ್ಟಿಚ್), ಜಾದೂ ಸರಪಳಿ (ಮ್ಯಾಜಿಕ್ ಚೇನ್), ರೆಕ್ಕೆಹೊಲಿಗೆ, ದೇಟಿನ ಹೊಲಿಗೆ (ಸ್ಟೆಂ ಸ್ಟಿಚ್), ಅಂಚಿನ ಹೊಲಿಗೆ (ಬ್ಯಾಕ್ ಸ್ಟಿಚ್), ಗುಂಡಿಮನೆ ಹೊಲಿಗೆ (ಬಟನ್‌ಹೋಲ್ ಸ್ಟಿಚ್), ಎಳೆತೆಗೆದ ಅಥವಾ ಗಂಟುಹಾಕುವ ಹೊಲಿಗೆ, ಗಂಟಿನ ಹೊಲಿಗೆ (ಫ್ರೆಂಚ್ ನಾಟ್), ಎಲೆಹೊಲಿಗೆ, ಹೂವಿನ ಹೊಲಿಗೆ, ಸಾಟಿನ್ ಹೊಲಿಗೆ, ಸ್ಮೋಕಿಂಗ್ ಮತ್ತು ಜೇನುಹುಟ್ಟಿನ (ಹನಿಕೋಂ) ಹೊಲಿಗೆ, ರೋಪ್ ಹೊಲಿಗೆ, ಸುತ್ತಿದ (ಓವರ್‌ಕ್ರಾಸ್) ಹೊಲಿಗೆ, ಸ್ಟ್ರೋಕ್ ಹೊಲಿಗೆ, ಬೀಜದ ಹೊಲಿಗೆ, ನಕ್ಷತ್ರ ಹೊಲಿಗೆ, ಸೂರ್ಯನ ಹೊಲಿಗೆ, Y ಹೊಲಿಗೆ, V ಹೊಲಿಗೆ ಮುಂತಾದವೂ ಬಳಕೆಯಲ್ಲಿವೆ.

ಕತ್ತರಿಸಿದ ಕಸೂತಿಯಲ್ಲಿ ರೆನೇಸನ್ಸ್ ಕಟ್‌ವರ್ಕ್, ಎಳೆಸರಿಸಿದ ಕಸೂತಿ (ಡ್ರಾನ್ ಫ್ಯಾಬ್ರಿಕ ವರ್ಕ್), ಐಲೆಟ್ ಕಸೂತಿ, ಷ್ಯಾಡೊ ಐಲೆಟ್ ಕಸೂತಿ ಮುಖ್ಯವಾದವು. ಕತ್ತರಿಸಿದ ಕಸೂತಿಯ ಇತ್ತೀಚಿನ ಮಾದರಿಗಳೆಂದರೆ ರೆಚಿಲೊ ಕಸೂತಿ, ಷ್ಯಾಡೋ ಕಸೂತಿ, ಜಾಳಿಗೆಯ ಕಸೂತಿ, ಜೋಡಣೆಯ ಕಸೂತಿ, ಎಳೆತೆಗೆದ ಕಸೂತಿ (ಡ್ರಾನ್ ತ್ರೆಡ್ ವರ್ಕ್), ಟಾಂಬೂರ್ ಕಸೂತಿ (ಕ್ರೋಷೆಯ ಕೊಕ್ಕೆ ಸೂಜಿಯಿಂದ ಮಾಡಿದ ಕಸೂತಿ) ಇವು ಪ್ರಮುಖವಾದವು. (ಎಸ್.ಎಲ್.ಎ.;ಎಲ್.ಆರ್.ಪಿ.)

**ಕಸೂರ್ :** ಪಶ್ಚಿಮ ಪಾಕಿಸ್ತಾನದ ಲಾಹೋರ್ ಜಿಲ್ಲೆಯ ಪಟ್ಟಣ. ಬೀಯಾಸ್ ನದಿಯ ಹಳೆಯ ದಡದ ಮೇಲೆ ಲಾಹೋರಿಗೆ ದಕ್ಷಿಣಾಗ್ನೇಯದಲ್ಲಿ 54.4 ಕಿಮೀ ದೂರದಲ್ಲಿದೆ. ಭಾರತದ ಅಮೃತಸರ ಮತ್ತು ಫಿರೋಜ್‌ಪುರಗಳ ಮೇಲಿರುವ ಖೆಮ್ ಕರನ್ ಮತ್ತು ಹುಸೇನಿವಾಲ ಇದರ ಎದುರಿಗೆ ಗಡಿಯಾಚೆ ಇರುವ ಪಟ್ಟಣಗಳು. ಕಸೂರಿನ ಜನಸಂಖ್ಯೆ 155,523 (2001). ಕೋಟೆಗಳಿಂದ ಕೂಡಿದ (26) ಗ್ರಾಮಗಳನ್ನು ಇದು ಒಳಗೊಂಡಿದೆ. ಇವು ಹಬ್ಬಿರುವ ಸ್ಥಳದ ವಿಸ್ತೀರ್ಣ 10.3 ಚ.ಕಿಮೀ.

ಕಸೂರ್ ಉಣ್ಣೆಯ ವ್ಯಾಪಾರ ಕೇಂದ್ರ. ಚರ್ಮ ಹದಗಾರಿಕೆ, ಚರ್ಮದ ವಸ್ತುಗಳ ತಯಾರಿಕೆ, ಎಣ್ಣೆ ತೆಗೆಯುವುದು, ಹತ್ತಿ ನೂಲ್ತೆ ನೇಯ್ಗೆ–ಈ ಕೈಗಾರಿಕೆಗಳಿವೆ. ಲಾಹೋರ್–ಕರಾಚಿ ಮುಖ್ಯ ರೈಲುಮಾರ್ಗದೊಂದಿಗೆ ಕಸೂರ್‌ಗೆ ಸಂಪರ್ಕವುಂಟು.

ಶ್ರೀರಾಮನ ಮಕ್ಕಳಾದ ಲವಕುಶರ ಪೈಕಿ ಕುಶನಿಂದ ಕಸೂರು ಲವನಿಂದ ಲಾಹೋರು ಸ್ಥಾಪಿತವಾದುದೆಂದು ಒಂದು ಐತಿಹ್ಯವುಂಟು. 7 ನೆಯ ಶತಮಾನದಲ್ಲಿ ಚೀನೀ ಯಾತ್ರಿಕ ಯುವಾನ್ ಚಾಂಗ್ ಭೇಟಿ ಕೊಟ್ಟಿದ್ದ ಸ್ಥಳಗಳಲ್ಲಿ ಕಸೂರ್ ಒಂದೆಂದು ಇತಿಹಾಸಕಾರ ಜೆ.ಡಿ. ಕನಿಂಗ್‌ಹ್ಯಾಮನ ಅಭಿಪ್ರಾಯ. ಈಗಿನ ಕಸೂರಿನ ನಿವೇಶನದಲ್ಲಿ ಮುಸ್ಲಿಂ ಆಕ್ರಮಣಕ್ಕೂ ಹಿಂದಿನ ಕಾಲದಲ್ಲಿ, ರಜಪೂತರಿಗೆ ಸೇರಿದ್ದ ಒಂದು ಪಟ್ಟಣವಿತ್ತೆಂದು ಕಾಣುತ್ತದೆ. ಆದರೆ ಮುಸ್ಲಿಮರ ಆಳ್ವಿಕೆಯಾರಂಭವಾದ ಬಹಳ ಕಾಲದವರೆಗೂ ಕಸೂರಿನ ಹೆಸರು ಚರಿತ್ರೆಯಲ್ಲಿ ಎಲ್ಲೂ ಬರುವುದಿಲ್ಲ. ಮೊಗಲ್ ಚಕ್ರವರ್ತಿ ಬಾಬರನ ಕಾಲದಲ್ಲೋ ಅವನ ಮೊಮ್ಮಗ ಅಕ್ಬರನ ಕಾಲದಲ್ಲೋ ಸಿಂಧೂನದಿಯ ಪೂರ್ವದ ಕಡೆಯಿಂದ ಪಠಾಣರು ಇಲ್ಲಿ ಬಂದು ನೆಲೆಸಿದ್ದಿರಬೇಕೆಂದು ಕಾಣುತ್ತದೆ. ಆಗಲೇ ಇದರ ಹೆಸರು ಇತಿಹಾಸದಲ್ಲಿ ಕಂಡುಬಂದದ್ದು. ಸಿಖ್ಖರು ಪ್ರಬಲರಾದ ಮೇಲೆ ಇದು ರಣಜಿತಸಿಂಗನಿಗೆ ಅಧೀನವಾಯಿತು. (ಬಿ.ಎಸ್.ಎಚ್.)

**ಕಸೆನ್ಸ್, ಹೆನ್ರಿ :** 1854–1933. ಭಾರತದ ಪುರಾತತ್ತ್ವ ಶೋಧನೆಯಲ್ಲಿ ನಿರತರಾಗಿದ್ದ ಆಂಗ್ಲ ಪ್ರಾಕ್ತನಶಾಸ್ತ್ರಜ್ಞ. 1891 ರಿಂದ 1910ರ ವರೆಗೆ ಭಾರತದ ಪ್ರಾಚ್ಯವಸ್ತು ಸರ್ವೇಕ್ಷಣ ಇಲಾಖೆಯ ಪಶ್ಚಿಮ ವಿಭಾಗದ ಮುಖ್ಯಾಧಿಕಾರಿಯಾಗಿದ್ದ. ಅಹಮದಾಬಾದ್, ಚಂಪಾನೆರ್, ಬಿಜಾಪುರ ಮುಂತಾದೆಡೆಗಳ ಪ್ರಸಿದ್ಧ ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವುದರಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದನಲ್ಲದೆ, ಈಗ ಪಶ್ಚಿಮ ಪಾಕಿಸ್ತಾನದಲ್ಲಿರುವ ಸಿಂಧ್ ಪ್ರದೇಶದ ಬ್ರಾಹ್ಮನಾಬಾದ್, ಮೀರ್‌ಪುರ್‌ಖಾಸ್ ಮತ್ತು ಇತರ ಕೆಲವು ಐತಿಹಾಸಿಕ ಸ್ಥಳಗಳಲ್ಲಿ ಈತ ಉತ್ಖನನಗಳನ್ನು ನಡೆಸಿದ. ಸಿಂಧ್, ಗುಜರಾತ್ ಮತ್ತು ದಖನ್ನಿನ ವಾಸ್ತುಶಿಲ್ಪದ ಬಗ್ಗೆ ಅನೇಕ ಉದ್ಗ್ರಂಥಗಳನ್ನೂ ಲೇಖನಗಳನ್ನೂ ಬರೆದಿದ್ದಾನೆ. ಕಸೆನ್ಸ್ ಸ್ವತಃ ಉತ್ತಮ ಚಿತ್ರಕಾರ, ಛಾಯಾಚಿತ್ರಗ್ರಾಹಕ. ಸ್ವತಃ ತಯಾರಿಸಿದ ಅನೇಕ ಚಿತ್ರಗಳನ್ನೊಳಗೊಂಡ ಇವನ ಹೊತ್ತಿಗೆಗಳು ಇಂದಿಗೂ ಭಾರತೀಯ ಕಲಾಭ್ಯಾಸಿಗಳಿಗೆ ಅಮೂಲ್ಯ ಆಕರಗಳಾಗಿವೆ. ಇವುಗಳಲ್ಲಿ ಬಿಜಾಪುರ ಮತ್ತು ಅದರ ವಾಸ್ತುಶಿಲ್ಪ ಅವಶೇಷಗಳು (1916), ಕನ್ನಡ ಜಿಲ್ಲೆಗಳ ಚಾಳುಕ್ಯ ವಾಸ್ತುಕಲೆ (1926), ಪಶ್ಚಿಮ ಭಾರತದ ವಾಸ್ತುಶಿಲ್ಪ ಅವಶೇಷಗಳು (1926), ದಖನ್ನಿನ ಮಧ್ಯಯುಗೀನ ದೇವಾಲಯಗಳು (1931), ಕಾಠಿಯಾವಾಡದಲ್ಲಿರುವ ಸೋಮನಾಥ ಮತ್ತು ಇತರ ಮಧ್ಯಯುಗೀನ ದೇವಾಲಯಗಳು (1931) ಮುಖ್ಯವಾದವು. (ಎಸ್.ಎನ್.)

**ಕಸ್ತೂರ ಬಾ :** 1869–1944. ಮಹಾತ್ಮ ಗಾಂಧಿಯವರ ಧರ್ಮಪತ್ನಿ. ತಂದೆ ಗೋಕುಲದಾಸ ಮಾಕಂಜಿ ಮತ್ತು ತಾಯಿ ವೆರಾಜ್‌ಕುಂವರ್‌ಬಾ ಅವರಿಗೆ ಕಸ್ತೂರ ಬಾ

ಗಾಂಧಿ, ಕಸ್ತೂರ ಬಾ (1915)

ಹಿರಿಯ ಮಗಳು. 1869 ರಲ್ಲಿ ಪೋರ್‌ಬಂದರಿನಲ್ಲಿ ಇವರ ಜನನ. ಮಾಕಂಜಿಯವರಿಗೂ ಗಾಂಧೀಜಿಯ ತಂದೆ ಕಬಾ ಗಾಂಧಿಯವರಿಗೂ ತುಂಬ ಸ್ನೇಹ. ಇದು ಬಾಂಧವ್ಯದ ಬೆಸುಗೆಯಿಂದ ವರ್ಧಿಸಲೆಂಬುದು ಹಿರಿಯರಿಬ್ಬರ ಆಶೆಯೂ ಆಗಿತ್ತು. ಅದರಂತೆ ಕಸ್ತೂರ

ಬಾ ಮತ್ತು ಗಾಂಧೀಜಿಯವರ ವಿವಾಹ ನೆರವೇರಿತು. ಆಗ ಇವರಿಬ್ಬರಿಗೂ ಹನ್ನೆರಡು ವರ್ಷ ವಯಸ್ಸು.

ಸಂಪ್ರದಾಯವಂತ ಧನಿಕ ಮನೆತನದಲ್ಲಿ ಬೆಳೆದ ಕಸ್ತೂರ ಬಾ ಗೆ ಓದುಬರೆಹ ಬರುತ್ತಿರಲಿಲ್ಲ. ಗಾಂಧೀಜಿ ಆಕೆಯನ್ನು ವಿದ್ಯಾವಂತಳನ್ನಾಗಿ ಮಾಡಲು ತುಂಬ ಪ್ರಯತ್ನಪಟ್ಟರು. ಆದರೆ ಅದು ಫಲಿಸಲಿಲ್ಲ. ಕಸ್ತೂರ ಬಾಗೆ ಆಗ ಕಲಿಯುವ ಅಗತ್ಯ ಕಾಣಿಸಲಿಲ್ಲ. ಆದರೆ ಮುಂದೆ ಅದಕ್ಕಾಗಿ ಅವರು ಪಶ್ಚಾತ್ತಾಪಪಟ್ಟದ್ದುಂಟು. ಅಲ್ಪಸ್ವಲ್ಪ ಗುಜರಾಥಿಯನ್ನು ಮಾತ್ರ ಅವರು ಅಭ್ಯಾಸ ಮಾಡಿದ್ದರು.

ಗಾಂಧೀಜಿಗೆ ತಮ್ಮ ಹೆಂಡತಿ ಆದರ್ಶ ಸತಿಯಾಗಬೇಕೆಂಬ ಹೆಬ್ಬಯಕೆಯಿತ್ತು. ಇದಕ್ಕಾಗಿ ಅವರು ಕಸ್ತೂರ ಬಾರ ಚಲನವಲನಗಳ ಮೇಲೆ ನಿರ್ಬಂಧ ಹೇರಿದರು. ಆಕೆ ತಮಗೆ ಸದಾ ವಿಧೇಯಳಾಗಿರಬೇಕೆಂದಾಶಿಸಿದರು. ಕಸ್ತೂರ ಬಾ ಎಂದೂ ಪತಿಗೆ ಅವಿಧೇಯರಾಗಿ ನಡೆಯದಿದ್ದರೂ ಪತಿಯ ಈ ಕಟ್ಟುಕಟ್ಟಳೆಗಳು ಅವರಿಗೆ ಸಹನವಾಗುತ್ತಿರಲಿಲ್ಲ. ಕೆಲವು ವೇಳೆ ಗಾಂಧೀಜಿಯ ಅಪ್ಪಣೆಯಿಲ್ಲದೆ ದೇವಸ್ಥಾನಕ್ಕೋ ಗೆಳತಿಯರ ಮನೆಗೋ ಹೋಗುತ್ತಿದ್ದರು. ಇದು ಗಾಂಧೀಜಿಗೆ ಅಪರಾಧವಾಗಿ ತೋರಿ ಅದು ಮುನಿಸಿನಲ್ಲಿ ಪರ್ಯವಸಾನವಾಗುತ್ತಿತ್ತು. ಕೋಪದಲ್ಲಿ ಒಮ್ಮೆ ಹೆಂಡತಿಯನ್ನು ತೌರುಮನೆಗೆ ಕಳುಹಿಸಿಬಿಟ್ಟಿದ್ದೂ ಉಂಟು. ಕಸ್ತೂರ ಬಾ ತುಟಿ ಎರಡು ಮಾಡದೆ ಇದೆಲ್ಲವನ್ನು ಸಹಿಸಿದರು. ತಮ್ಮ ಈ ವರ್ತನೆಗಾಗಿ ಗಾಂಧೀಜಿ ಮುಂದೆ ಜಿಗುಪ್ಸೆ ಪಟ್ಟುಕೊಂಡರು.

ಇಂಗ್ಲೆಂಡಿನಲ್ಲಿ ಬಾರ್-ಅಟ್-ಲಾ ವ್ಯಾಸಂಗವನ್ನು ಮುಗಿಸಿ ಮರಳಿದ ಗಾಂಧೀಜಿ ವಕೀಲಿ ವೃತ್ತಿ ಕೈಗೊಂಡರು. ಆದರೆ ಅದರಲ್ಲಿ ಯಶಸ್ಸು ಸಿಗಲಿಲ್ಲ. ಅಷ್ಟರಲ್ಲಿ ದಕ್ಷಿಣ ಆಫ್ರಿಕದಿಂದ ಅವರಿಗೆ ಕರೆ ಬಂತು. ಮೊಕದ್ದಮೆಯೊಂದನ್ನು ನಡೆಸಿಕೊಡಲು ಹೋದ ಗಾಂಧೀಜಿ ಮೂರು ವರ್ಷ ಅಲ್ಲಿಯೇ ನಿಂತರು. ವಿದೇಶೀಯರ ದಬ್ಬಾಳಿಕೆಯಿಂದ ನರಳುತ್ತಿದ್ದ ಭಾರತೀಯರ ಉದ್ಧಾರಕ್ಕೆ ಕಂಕಣತೊಟ್ಟರು. ಮೂರು ವರ್ಷಗಳ ಅನಂತರ ಭಾರತಕ್ಕೆ ಮರಳಿ, ಕಸ್ತೂರ ಬಾ ಮತ್ತು ಎರಡು ಮಕ್ಕಳೊಂದಿಗೆ ಮತ್ತೆ ಆಫ್ರಿಕಕ್ಕೆ ಹೊರಟರು.

ವಿದೇಶದಲ್ಲಿ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಸಂಸಾರ ಆರಂಭವಾಯಿತು. ಉನ್ನತಾದರ್ಶಧ್ಯೇಯ ಸಾಧನೆಗಾಗಿ ಅನವರತ ಶ್ರಮಿಸುತ್ತಿದ್ದ ಗಾಂಧೀಜಿಯವರೊಡನೆ ಬಾಳು ನಡೆಸುವಾಗ ಕಸ್ತೂರ ಬಾ ಅನೇಕ ಅಗ್ನಿಪರೀಕ್ಷೆಗಳನ್ನೆದುರಿಸಬೇಕಾಯಿತು. ಒಮ್ಮೆ ಅವರ ಮನೆಗೆ ಬಂದಿದ್ದ ಹರಿಜನರೊಬ್ಬರ ಕಲ್ಮಶಪಾತ್ರೆಯನ್ನು ತೊಳೆಯಲು ಬಾ ನಿರಾಕರಿಸಿದರು. ಕೋಪಗೊಂಡ ಗಾಂಧೀಜಿ ಅವರನ್ನು ಮನೆಯಿಂದಾಚೆ ತಳ್ಳಲು ಹೊರಟರು. ಬಾ ಅಳುತ್ತಾ, ಅಯ್ಯೋ ಇದೇನು ನಿಮಗೆ ಸ್ವಲ್ಪವೂ ನಾಚಿಕೆಯಿಲ್ಲವೇ, ಈ ವಿದೇಶದಲ್ಲಿ ನಾನೆಲ್ಲಿಗೆ ಹೋಗಲಿ ? ಇಲ್ಲಿ ನನಗೆ ಯಾರಿದ್ದಾರೆ ? ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಾನು ಈ ಎಲ್ಲ ಅವಮಾನಗಳನ್ನೂ ಸಹಿಸಿಕೊಂಡಿರಬೇಕೆ ? ನಿಮ್ಮ ದಮ್ಮಯ್ಯ, ದಯವಿಟ್ಟು ಬಾಗಿಲು ಮುಚ್ಚಿ. ನೋಡಿದವರೇನಂದಾರು ? ಎಂದು ದೈನ್ಯವಾಣಿಯಿಂದ ನಿವೇದಿಸಿಕೊಂಡರು. ಈ ಮಾತುಗಳನ್ನು ಕೇಳಿ ಗಾಂಧೀಜಿಗೆ ನಾಚಿಕೆಯಾಯಿತು. ತಮ್ಮ ಹೆಂಡತಿ ತಮ್ಮನ್ನು ಬಿಟ್ಟಿರಲು ಅಸಾಧ್ಯವಾದರೆ ಆಕೆಯನ್ನು ಬಿಟ್ಟಿರುವುದಕ್ಕೆ ತಮಗೂ ಸಾಧ್ಯವಿಲ್ಲ ಎಂದು ಬಗೆದರು.

ಮತ್ತೊಮ್ಮೆ ಇಂಥದ್ದೇ ಪ್ರಸಂಗವೊಂದು ನಡೆಯಿತು. ಗಾಂಧೀಜಿ ವಿದೇಶದಿಂದ ಭಾರತಕ್ಕೆ ಮರಳುವಾಗ ಅಲ್ಲಿಯ ಭಾರತೀಯರೆಲ್ಲ ಅವರಿಗೆ ಅನೇಕ ಕಾಣಿಕೆಗಳನ್ನು ಕೊಟ್ಟರು. ಗಾಂಧೀಜಿಗೆ ಅವುಗಳನ್ನು ತೆಗೆದುಕೊಂಡು ಹೋಗಲಿಷ್ಟವಿರಲಿಲ್ಲ. ಆದರೆ ಇದಕ್ಕೆ ಬಾ ರವರನ್ನೊಪ್ಪಿಸುವುದು ತುಂಬಾ ಕಷ್ಟವಾಯಿತು. ಬಾ ಎಷ್ಟೆಷ್ಟೋ ವಾದಿಸಿದರೂ ಗಾಂಧೀಜಿಯ ನಿರ್ಧಾರ ಬದಲಾಗಲಿಲ್ಲ. ಕೊನೆಗೆ ಆ ಒಡವೆ ವಸ್ತುಗಳನ್ನೆಲ್ಲ ಅಲ್ಲಿಯೇ ಬಿಟ್ಟುಬರಲೊಪ್ಪಿದರು. ಹೀಗೆ ಅವರ ಆರಂಭದ ಸಂಸಾರ ಜೀವನದಲ್ಲಿ ಹಲವು ವಿರಸಗಳು ಬರುತ್ತಿದ್ದರೂ ಅವು ಶಾಂತಿಯಲ್ಲಿ ಮುಕ್ತಾಯವಾಗುತ್ತಿದ್ದವು. ಕಸ್ತೂರ ಬಾರವರ ಸಹನೆಯೇ ಕೊನೆಗೆ ಗೆಲ್ಲುತ್ತಿತ್ತು.

ಕಸ್ತೂರ ಬಾ ಎಂತಹ ಸಂಕಷ್ಟ ಬಂದರೂ ಸಂಪ್ರದಾಯ ನಿಷ್ಠೆಯನ್ನು ಬಿಟ್ಟವರಲ್ಲ. ಆಚಾರ ವ್ಯವಹಾರಗಳನ್ನು ಮೀರಿ ನಡೆದವರಲ್ಲ. ಮೊದಲಿನಿಂದಲೂ ಅವರು ಬೆಳೆದ ವಾತಾವರಣ ಅಂಥದಾಗಿತ್ತು. ಒಮ್ಮೆ ಆಫ್ರಿಕದಲ್ಲಿದ್ದಾಗ ಅವರು ತೀವ್ರ ಕಾಯಿಲೆಗೊಳಗಾದರು. ಅದು ವಾಸಿಯಾದ ಮೇಲೆ ಶಕ್ತಿಗೊಡಲು ಮಾಂಸದ ಕಷಾಯವನ್ನು ಕುಡಿಯುವಂತೆ ವೈದ್ಯರು ಸೂಚಿಸಿದರು. ಆದರೆ ಆಕೆ ತಮ್ಮ ಪ್ರಾಣ ಹೋದರೂ ಮಾಂಸದ ಕಷಾಯವನ್ನು ಮುಟ್ಟುವುದಿಲ್ಲವೆಂದರು. ಗಾಂಧೀಜಿಯವರಿಗೂ ಅವರ ನಿರ್ಧಾರ ಸಂತೋಷವನ್ನೇ ತಂದಿತು.

ಬಾ ಮತ್ತು ಬಾಪೂರವರ ಬಾಳಿನಲ್ಲಿ 1906 ಮಹತ್ವದ ವರ್ಷ. ಆಗ ಗಾಂಧೀಜಿ ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿದರು. ಕಸ್ತೂರ ಬಾ ಸಂತೋಷದಿಂದ ಅದಕ್ಕೆ ಸಮ್ಮತಿಯಿತ್ತರು. ಅವರ ಚಿತ್ತಸ್ಥೈರ್ಯ ಮತ್ತು ಅಪೂರ್ವ ಸಂಯಮಗಳನ್ನು ಕಂಡು ಗಾಂಧೀಜಿಯವರೇ ಬೆರಗಾದರು. ಅಂದಿನಿಂದ ಅವರ ದಾಂಪತ್ಯಜೀವನ ಪವಿತ್ರವಾಯಿತು ; ಋಷಿಸದೃಶವಾಯಿತು.

ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ಆರಂಭಿಸಿದ ಸತ್ಯಾಗ್ರಹ ಚಳವಳಿಯಲ್ಲಿ ಕಸ್ತೂರ ಬಾ ಸ್ವಸಂತೋಷದಿಂದ ಭಾಗವಹಿಸಿದರು; ಆರು ವರ್ಷಗಳ ಕಾಲ ನಡೆದ ದೀರ್ಘ ಚಳವಳಿಯಲ್ಲಿ ಅನೇಕ ಬಾರಿ ಸೆರೆಗೆ ಹೋದರು. ಅವರ ಶ್ರದ್ಧೆ ಸಾಹಸಗಳನ್ನು ಕಂಡು ಎಲ್ಲರಿಗೂ ಬೆರಗಾಯಿತು. ಕಟ್ಟಕಡೆಗೆ ಜಯಗಳಿಸಿದ ಗಾಂಧೀಜಿಯವರನ್ನು ಕಂಡು ಬಾ ಕೃತಾರ್ಥರಾದರು. ಕೇವಲ ತಮ್ಮ ಸಂಸಾರದ ಜೀವನೋಪಾಯವನ್ನು ಗಳಿಸುವುದಕ್ಕೆ ದೇಶ ಬಿಟ್ಟು ಹೊರಟ ದಂಪತಿಗಳು ನೂರಾರು ಸಂಸಾರಗಳಿಗೆ ಜೀವನೋಪಾಯವನ್ನು ತೋರಿಸಿಕೊಟ್ಟು ಸ್ವದೇಶಕ್ಕೆ ಹಿಂದಿರುಗಿದರು.

ಗಾಂಧೀಜಿ ಸಬರಮತಿಯಲ್ಲಿ ಸ್ಥಾಪಿಸಿದ ಆಶ್ರಮದಲ್ಲಿ ಕಸ್ತೂರ ಬಾ ರವರೇ ಮೊಟ್ಟಮೊದಲ ಶಿಷ್ಯೆ. ಇಡೀ ಆಶ್ರಮವೇ ಆಕೆಯ ಸಂಸಾರವಾಯಿತು. ಆಶ್ರಮದ ಎಲ್ಲ ಜವಾಬ್ದಾರಿಗಳನ್ನೂ ದಕ್ಷತೆಯಿಂದ ನಿರ್ವಹಿಸುತ್ತ ಅಲ್ಲಿಯ ಪ್ರತಿಯೊಬ್ಬ ನಿವಾಸಿಗೂ ಅವರು ತಾಯಿಯಂತಿದ್ದರು. ಅಲ್ಲಿಯೂ ಆಕೆ ಗಾಂಧೀಜಿಯ ಕಠಿಣ ಪರೀಕ್ಷೆಗಳಿಗೊಳಗಾಗಬೇಕಾಯಿತು. ಆಶ್ರಮದಲ್ಲಿ ಅಸ್ಪೃಶ್ಯ ಸಂಸಾರವೊಂದು ನೆಲೆಸಿದಾಗ ಆಶ್ರಮದ ಇತರರಂತೆ ಬಾ ರವರಿಗೂ ಅಸಮಾಧಾನವಾಯಿತು. ಇದರಿಂದ ನೊಂದ ಗಾಂಧೀಜಿಯವರು ಉಪವಾಸ ಕೈಗೊಂಡರು. ಕೊನೆಗೆ ಬಾ ಸಂಪೂರ್ಣವಾಗಿ ಪತಿಗೆ ಶರಣಾದರು. ಅಂದಿನಿಂದ ಅಸ್ಪೃಶ್ಯತೆಯೆಂಬುದು ಅವರ ಮನಸ್ಸಿನಲ್ಲಿ ಇಣುಕಲಿಲ್ಲ. ಗಾಂಧೀಜಿ ಹರಿಜನರ ಮೇಲ್ಮೆಗಾಗಿ ಕೈಗೊಂಡ ಪ್ರತಿಯೊಂದು ಕಾರ್ಯದಲ್ಲೂ ನೆರವಾಗಿ ನಿಂತು ಹೃತ್ಪೂರ್ವಕವಾಗಿ ಸೇವೆ ಸಲ್ಲಿಸಿದರು. ಇಷ್ಟೇ ಅಲ್ಲ, ಲಕ್ಷ್ಮಿ ಎಂಬ ಅನಾಥ ಹರಿಜನ ಕನ್ಯೆಯೊಬ್ಬಳನ್ನು ಅವರು ಸಾಕಿ ಸಲಹಿದರು. 1936ರಲ್ಲಿ ಅಮೃತಸರದಲ್ಲಿ ಏರ್ಪಡಿಸಿದ್ದ ಹರಿಜನರ ಮಹಾಸಭೆಗೆ ಬಾ ರವರೇ ಅಧ್ಯಕ್ಷೆ. ಅಂದು ಅವರು ಮಾಡಿದ ಸರಳ ಭಾಷಣದಲ್ಲಿ ಹರಿಜನರ ಬಗೆಗಿನ ಅನುಕಂಪ ಸಹಾನುಭೂತಿಗಳು ಸುವ್ಯಕ್ತವಾಗಿವೆ.

ದ್ರವ್ಯ ಸಂಚಯಮಾಡುವುದು ಗಾಂಧೀಜಿಯವರ ಆದರ್ಶಕ್ಕೆ ವಿರೋಧವಾಗಿದ್ದಿತು. ಬಾ ತಮ್ಮ ಬಳಿಯಲ್ಲಿಟ್ಟುಕೊಂಡಿದ್ದ ಒಂದೆರಡು ರೂಪಾಯಿಗಳ ಸಮಾಚಾರ ಗಾಂಧೀಜಿಯವರಿಗೆ ಹೇಗೋ ತಿಳಿದು ಆಶ್ರಮದ ನಿವಾಸಿಗಳೆಲ್ಲರೆದುರಿಗೆ ಅದನ್ನು ಬಹಿರಂಗಪಡಿಸಿದರು. ಮತ್ತೊಮ್ಮೆ ಆಶ್ರಮದ ನಿವಾಸಿಯೊಬ್ಬರು ಅಸ್ವಸ್ಥರಾದಾಗ ಅವರಿಗೆ ತಕ್ಕ ಶುಶ್ರೂಷೆ ಮಾಡಲಿಲ್ಲವೆಂದು ತಿಳಿದು ಗಾಂಧೀಜಿ ಬಾ ರನ್ನು ಎಲ್ಲರೆದುರಿಗೂ ಆಕ್ಷೇಪಣೆ ಮಾಡಿದರು. ಮರುಮಾತನಾಡದೆ ಬಾ ಈ ನೋವು ಅವಮಾನಗಳನ್ನು ನುಂಗಿದರು.

1917ರಲ್ಲಿ ರೈತರ ಉದ್ಧಾರಕ್ಕಾಗಿ ಗಾಂಧೀಜಿ ಚಂಪಾರಣ್ಯದಲ್ಲಿ ಚಳವಳಿ ಪ್ರಾರಂಭಿಸಿದಾಗ ಕಸ್ತೂರ ಬಾ ಎಂದಿನಂತೆ ಪತಿಯ ದಾರಿಯಲ್ಲಿ ಅತ್ಯಾನಂದದಿಂದ ನಡೆದರು. ಹಳ್ಳಿ ಹಳ್ಳಿಗೂ ಹೋಗಿ ಅಲ್ಲಿಯ ಜನರಿಗೆ ಶಿಸ್ತು, ಶುಚಿ, ಸದಾಚಾರ, ಸದ್ವರ್ತನೆಗಳನ್ನು ಹೇಳಿಕೊಟ್ಟರು. ಮುಂದೆ ಪತಿಯೊಡನೆ ಅವರು ಕೈಗೊಂಡ ರಾಷ್ಟ್ರಸೇವೆಗೆ ಈ ಚಳವಳಿಯೇ ನಾಂದಿಯಾಯಿತು. ಅನಂತರ ಗಾಂಧೀಜಿ ಕೈಗೊಂಡ ಪ್ರತಿಯೊಂದು ಚಳವಳಿಯಲ್ಲೂ ಬಾ ಭಾಗವಹಿಸಿ ನಿರ್ಭಯದಿಂದ ತಮ್ಮ ಶಕ್ತಿಮೀರಿ ದೇಶಸೇವೆ ಮಾಡಿದರು. 1922ರ ಅಸಹಕಾರ ಚಳವಳಿಯ ಕಾಲದಲ್ಲಿ ಗಾಂಧೀಜಿಯವರು ಬಂಧನಕ್ಕೊಳಗಾದಾಗ ಅವರ ಸ್ಥಾನದಲ್ಲಿ ನಿಂತು ದಿಕ್ಕುಗೆಟ್ಟ ಜನತೆಗೆ ಮಾರ್ಗದರ್ಶನ ನೀಡಿ, ರಚನಾತ್ಮಕ ಹೋರಾಟಕ್ಕೆ ಕರೆಯಿತ್ತವರು ಕಸ್ತೂರ ಬಾ.

1930 ರಲ್ಲಿ ಕಾನೂನುಭಂಗ ಚಳವಳಿಯ ಬಿಸಿ ದೇಶದೆಲ್ಲೆಡೆ ವ್ಯಾಪಿಸಿತು. ಆಗ ಕಸ್ತೂರ ಬಾ ವಿಶ್ರಾಂತಿಯಿಲ್ಲದೆ ಹಗಲಿರುಳು ಒಂದೇ ಸಮನಾಗಿ ದುಡಿದರು. ಜನತೆಯ ಕರೆ ಬಂದೆಡೆ ಅವರು ಪ್ರತ್ಯಕ್ಷರಾಗುತ್ತಿದ್ದರು. ಸ್ಥಳೀಯ ಮುಖಂಡರನ್ನು ಕಾಣುತ್ತ, ಆಯಾ ಪ್ರದೇಶಗಳ ವಿದ್ಯಮಾನಗಳನ್ನು ಪರಿಶೀಲಿಸುತ್ತ, ಅಗತ್ಯಬಿದ್ದಾಗ ಹೇಳಿಕೆಗಳನ್ನು ಕೊಡುತ್ತ, ಆಗಾಗ್ಗೆ ಆಸ್ಪತ್ರೆಗಳಿಗೆ ಹೋಗಿ ಸತ್ಯಾಗ್ರಹಿಗಳ ಯೋಗಕ್ಷೇಮವನ್ನು ವಿಚಾರಿಸುತ್ತ, ಜನತೆಯಲ್ಲಿ ಧೈರ್ಯವನ್ನು ತುಂಬುತ್ತ ಅವರು ಅವಿರತವಾಗಿ ಶ್ರಮಿಸುತ್ತಿದ್ದರು. ಪತಿಯ ಪ್ರತಿನಿಧಿಯಾಗಿ ಜನತೆಯ ಮಧ್ಯೆ ನಿಂತು ಕಾಂಗ್ರೆಸಿನ ಸೂತ್ರವನ್ನು ಹಿಡಿದು ಕಾರ್ಯಭಾರ ನಿರ್ವಹಿಸಿದ ರೀತಿ ಅತ್ಯಾಶ್ಚರ್ಯಕರವಾದುದು. ಅವರ ದೇಹದ ದುರ್ಬಲತೆಯನ್ನು ಗಮನಿಸಿ ವೈದ್ಯರು ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದಾಗ, ಬಾಪೂವಿನ ಸ್ಥಾನದಲ್ಲಿ ನಿಂತು, ಅವರ ಹಾಗೆ ಕೆಲಸ ಮಾಡುವ ಇಂಥ ಸಮಯಗಳು ನನ್ನ ಬಾಳಿನಲ್ಲಿ ಅಪೂರ್ವ. ಆದ್ದರಿಂದ ನನಗೀಗ ವಿಶ್ರಾಂತಿಯ ಯೋಚನೆಯೇ ಇಲ್ಲ-ಎಂದು ಉತ್ತರಿಸಿದರು.

ಅವರು ಮಾತೃವಾತ್ಸಲ್ಯದಿಂದ ಆಡುತ್ತಿದ್ದ ಮಾತುಗಳು ಜನತೆಯ ಹೃದಯವನ್ನು ನೇರವಾಗಿ ಮುಟ್ಟುತ್ತಿದ್ದುವು. ನೊಂದವರು ಸೋತವರು ಕುಗ್ಗಿದವರು ಆಕೆಯ ಆಶ್ರಯ ಬಯಸುತ್ತಿದ್ದರು. ಅವರಿಗೆ ಅಲ್ಲಿ ಅಪೂರ್ವವಾದ ಸಾಂತ್ವನ ದೊರೆಯುತ್ತಿತ್ತು. ಹೆಂಡತಿ ಮತ್ತು ಮಗಳನ್ನು ಕಳೆದುಕೊಂಡ ರೈತನೊಬ್ಬ ಮೂರು ತಿಂಗಳ ಕೂಸಿನೊಡನೆ ಬಾ ರ ಬಳಿಗೆ ದೀನನಾಗಿ ಬಂದಾಗ ಬಾ ಅವನಿಗೆ ಆಶ್ರಯ ನೀಡಿದರು. ತನ್ನ ಒಬ್ಬನೇ ಮಗ ಬಾ

ರವರೊಂದಿಗೆ ಹಳ್ಳಿಹಳ್ಳಿಗಳನ್ನು ಸುತ್ತುತ್ತಿದ್ದುದನ್ನು ಕಂಡು ನೊಂದ ತಾಯಿಯೊಬ್ಬಳಿಗೆ ಬಾ ಹೇಳಿದರು : ನಿನಗೆ ಒಬ್ಬನೇ ಮಗನ ಯೋಚನೆ. ನನಗಾದರೋ ಮೂರು

ಕಸ್ತೂರ ಬಾ ಹಣ್ಣು ವಯಸ್ಸಿನಲ್ಲಿ (1942) – ಪತಿಯೊಂದಿಗೆ

ಮಕ್ಕಳಿದ್ದಾರೆ. ಆದರೆ ಎಲ್ಲರೂ ದೂರವಿದ್ದಾರೆ. ಅವರು ದೇಶಕ್ಕಾಗಿ ದುಡಿಯುತ್ತಿದ್ದಾರೆಂಬುದೇ ನನಗೆ ತೃಪ್ತಿ. ಮರೆಹೊಕ್ಕವರನ್ನು ಮೃದುವಾದ ಮಾತುಗಳಿಂದ ಸಂತೈಸುವ ಜಾಣ್ಮೆ ಆಕೆಯಲ್ಲಿತ್ತು. ಆಕೆಯ ಮಾತುಗಳು ಜನತೆಗೆ ಅಮೃತಸೇಚನ ಮಾಡುತ್ತಿದ್ದವು. ದೇಹಾರೋಗ್ಯವಿಲ್ಲದಿದ್ದರೂ ಬಾ ದುರ್ಗಮವಾದ ದಾರಿಗಳಲ್ಲಿ ನಡೆದು, ಹಳ್ಳಿಹಳ್ಳಿಗೆ ಹೋಗಿ, ಜನರಲ್ಲಿ ಉತ್ಸಾಹ ಚೈತನ್ಯಗಳನ್ನು ತುಂಬುತ್ತಿದ್ದರು ; ಅವರಿಗೆ ಅಗತ್ಯವಾದ ಸೇವೆ ಸಲ್ಲಿಸುತ್ತಿದ್ದರು. ಅವರಲ್ಲಿದ್ದ ದೃಢನಿರ್ಧಾರ, ಆತ್ಮಸಂಯಮಗಳು ದೇಹ ದೌರ್ಬಲ್ಯವನ್ನು ಮೆಟ್ಟಿ ನಿಂತವು. ಈ ಅವಿರತವಾದ ದೇಶಪರ್ಯಟನೆಯಲ್ಲಿ ಅವರು ತಮ್ಮ ನಿತ್ಯನಿಯಮಗಳನ್ನೆಂದು ಮೀರಿ ನಡೆದವರಲ್ಲ. ಆಶ್ರಮದಲ್ಲಿದ್ದಾಗ ನಡೆಯುತ್ತಿದ್ದಂತೆಯೇ ಪ್ರಾತಃಕಾಲ ನಾಲ್ಕು ಗಂಟೆಗೇ ಎದ್ದು ದೇವರ ಪ್ರಾರ್ಥನೆ ಮಾಡಿ, ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಅವರ ಆಹಾರ ಜೋಳದ ರೊಟ್ಟಿ ಮತ್ತು ಉಪ್ಪಿಲ್ಲದ ಒಂದಿಷ್ಟು ತರಕಾರಿ. ಸರಳತೆ ಅವರ ಬದುಕಿನ ಜೀವಾಳ. ಅಬ್ಬರ ಆಡಂಬರಗಳಿಗೂ ಅವರಿಗೂ ಬಹುದೂರ. ದಿಕ್ಕುಗೆಟ್ಟ ಜನರನ್ನು ಹುರಿದುಂಬಿಸಿ ಒಟ್ಟುಗೂಡಿಸುವ ಶಕ್ತಿ, ಹಿಡಿದ ಕಾರ್ಯದಲ್ಲಿ ಶ್ರದ್ಧೆಭಕ್ತಿಗಳನ್ನಿಟ್ಟು ಅದನ್ನು ನಿರ್ವಹಿಸುವ ಸಾಮರ್ಥ್ಯ, ಸರಸವಾಗಿ ಮಾತಾಡಿ ಜನರನ್ನು ಗೆಲ್ಲುವ ಬಲ್ಮೆ, ನಿರಾಶೆಯಲ್ಲಿ ಮಂಕು ಕವಿದು ಕಾರ್ಯಭಂಗವಾಗದಂತೆ ಮುಂದುವರಿಯುವ ಮೇಲ್ಮೆ, ಗುರಿಯನ್ನಾಗಲಿ ಗಂಡ ಹಾಕಿಕೊಟ್ಟ ಮೇಲ್ಪಂಕ್ತಿಯನ್ನಾಗಲಿ ಮರೆಯದಂತೆ ತಪ್ಪದೆ ನೆರವೇರಿಸುವ ನಿಷ್ಠೆ–ಈ ಎಲ್ಲ ಗುಣಗಳು ಅವರ ರಾಷ್ಟ್ರಸೇವಾಕಾರ್ಯದಲ್ಲಿ ಬೆಳಕಿಗೆ ಬಂದುವು.

ಈ ಎಲ್ಲ ಚಟುವಟಿಕೆಗಳಲ್ಲಿ ತೊಡಗಿದ್ದಾಗ 1932 ರಲ್ಲಿ ಕಸ್ತೂರ ಬಾ ಸೆರೆಮನೆಗೆ ಹೋಗಬೇಕಾಯಿತು. ಬಾರ್ದೋಲಿಯ ಸೆರೆಮನೆಯಲ್ಲಿ ಆರು ತಿಂಗಳ ಕಠಿಣ ಕಾರಾಗೃಹ ವಾಸವನ್ನೂ ಧೈರ್ಯದಿಂದ ಎದುರಿಸಿದರು.

1935ರ ಅನಂತರ ಗಾಂಧೀಜಿ ಚಳವಳಿ ನಿಲ್ಲಿಸಿ ವರ್ಧಾ ಬಳಿ ಸೇವಾಗ್ರಾಮದಲ್ಲಿ ತಮ್ಮ ಹೊಸ ಆಶ್ರಮ ಸ್ಥಾಪಿಸಿದರು. ಕಸ್ತೂರ ಬಾ ಅವರೇ ಆಶ್ರಮದ ಮೇಲ್ವಿಚಾರಣೆಯ ಹೊಣೆ ಹೊತ್ತರು. ಆ ವೇಳೆಗೆ ವಯಸ್ಸು ಮಾರ್ಪಾಡುಗಳನ್ನುಂಟುಮಾಡಿದ್ದರೂ ಮನಸ್ಸು ಮಾತ್ರ ಚಿರತಾರುಣ್ಯದ ಚಿಲುಮೆಯಾಗಿತ್ತು. ಅನಾರೋಗ್ಯದಿಂದ ದೇಹದಾರ್ಢ್ಯ ಕುಗ್ಗಿದ್ದರೂ ಉತ್ಸಾಹ ತಗ್ಗಿರಲಿಲ್ಲ. ಆಶ್ರಮದ ನಿತ್ಯಕಾರ್ಯಗಳಲ್ಲಿ ಮಗ್ನರಾಗಿರುತ್ತಿದ್ದ ಅವರನ್ನು ನೋಡಿದರೆ ಆಕೆ ಒಬ್ಬ ಆದರ್ಶ ಗೃಹಿಣಿಯಂತೆ ಕಂಡುಬರುತ್ತಿದ್ದರೇ ಹೊರತು ದೇಶಕ್ಕಾಗಿ ಜೀವವನ್ನೇ ಮುಡುಪಿಟ್ಟು ಸಹಸ್ರಾರು ಸಂಕಷ್ಟಗಳನ್ನನುಭವಿಸಿದ ನಾಯಕಿಯಂತೆ ಕಂಡುಬರುತ್ತಿರಲಿಲ್ಲ.

ಇಷ್ಟರಲ್ಲಿ ಕಸ್ತೂರ ಬಾ ಮಾತೃ ಹೃದಯಕ್ಕೆ ದೊಡ್ಡ ಆಘಾತವನ್ನುಂಟುಮಾಡಿದ ಒಂದು ಸನ್ನಿವೇಶ ಒದಗಿತು. ಅದು ಆಕೆಯ ಮಗ ಹೀರಾಲಾಲ್ ಚಾರಿತ್ರ್ಯ ಹೀನನಾಗಿ ಮುಸಲ್ಮಾನ್ ಮತಕ್ಕೆ ಸೇರಿದ್ದು. ಆ ಸಮಯದಲ್ಲಿ ಆಕೆ ಮಗನಿಗೆ ಬರೆದ ದೀರ್ಘಪತ್ರದಲ್ಲಿ ಮಾತೃಹೃದಯದ ವೇದನೆ ವ್ಯಕ್ತವಾಗುತ್ತದೆ. ಆಕೆಯ ಮಮತೆ ಕುರುಡಾಗಿರಲಿಲ್ಲ. ಅವರು ಬಿಚ್ಚುಹೃದಯದಿಂದ ಮಗನ ವರ್ತನೆಯನ್ನು ಅದರಲ್ಲಿ ಖಂಡಿಸಿದ್ದಾರೆ. ಅದರಲ್ಲಿ ಕೋಪದ ಬಿಸಿಯಿಲ್ಲ, ಪಶ್ಚಾತ್ತಾಪದ ಕಣ್ಣೀರಿದೆ. ಬಾ ಅಪೂರ್ವ ಸಹನೆಯಿಂದ ಸಂಕಟವನ್ನು ನುಂಗಿದರು ; ದೇಶಕ್ಷೇಮದಲ್ಲಿ ಮೈಮರೆತರು.

1939ರಲ್ಲಿ ರಾಜಕೋಟೆಯಲ್ಲಿ ಮತ್ತೆ ಆಂದೋಲನ ನಡೆದಾಗ ಕಸ್ತೂರ ಬಾರ ದೇಹ ದುರ್ಬಲವಾಗಿದ್ದರೂ ಅವರು ಚಳವಳಿಯಲ್ಲಿ ಭಾಗವಹಿಸಿ ಮತ್ತೆ ಸೆರೆಸೇರಿದರು. ಆ ಕಾಲದಲ್ಲೇ ಗಾಂಧೀಜಿ ಆಮರಣಾಂತ ಉಪವಾಸ ಕೈಗೊಂಡಿದ್ದು. ಇದರಿಂದ ಮೊದಲಿಗೆ ಬಾ ತಳಮಳಗೊಂಡರೂ ಅನಂತರ ಪತಿಯ ಕ್ಷೇಮಕ್ಕಾಗಿ ಭಗವಂತನಲ್ಲಿ ಸಂಪೂರ್ಣ ಶರಣಾದರು. ಗಾಂಧೀಜಿ ಉಪವಾಸ ಕೈಗೊಂಡಾಗಲೆಲ್ಲ ಅವರು ಭಗವಂತನಲ್ಲಿ ಮೊರೆ ಹೋಗುತ್ತಿದ್ದರು. ಭಗವಂತನಲ್ಲಿದ್ದ ಅವರ ಈ ಅಚಲವಾದ ಶ್ರದ್ಧಾಭಕ್ತಿಗಳು ಗಾಂಧೀಜಿಗೆ ವಜ್ರಕವಚದಂತಿದ್ದುವು. ರಾಜಕೋಟೆಯ ಪ್ರಕರಣ ಮುಗಿದ ಮೇಲೆ ಗಾಂಧೀದಂಪತಿಗಳು ಮತ್ತೆ ಸೇವಾಗ್ರಾಮವನ್ನು ಸೇರಿದರು.

1942ರಲ್ಲಿ ಸ್ವಾತಂತ್ರ್ಯ ಚಳವಳಿಯ ಜ್ವಾಲೆ ಮತ್ತೊಮ್ಮೆ ದೇಶವನ್ನೆಲ್ಲ ವ್ಯಾಪಿಸಿತು. ಆಗಸ್ಟ್ 9ರಂದು ಗಾಂಧೀಜಿಯಾದಿಯಾಗಿ ದೇಶದ ನಾಯಕರೆಲ್ಲ ಸೆರೆ ಸೇರಿದರು. ಅದೇ ಸಂಜೆ ಗಾಂಧೀಜಿ ಬೊಂಬಾಯಿಯ ಶಿವಾಜಿ ಪಾರ್ಕಿನಲ್ಲಿ ಉಪನ್ಯಾಸ ಮಾಡಬೇಕಾಗಿತ್ತು. ಪತಿಯ ಪ್ರತಿನಿಧಿಯಾಗಿ ಕಸ್ತೂರ ಬಾ ಆ ಕೆಲಸವನ್ನು ನಿರ್ವಹಿಸಲು ನಿರ್ಧರಿಸಿದರು. ಆದರೆ ಅಷ್ಟರಲ್ಲಿಯೇ ಪೋಲೀಸರು ಆಕೆಯನ್ನು ಬಂಧಿಸಿ ಆಗಾಖಾನ್ ಅರಮನೆಗೆ ಒಯ್ದರು. ಅಲ್ಲಿಂದ ಅವರಿಗೆ ಮತ್ತೆ ಬಿಡುಗಡೆಯಾಗಲಿಲ್ಲ. ಮೃತ್ಯು ಅವರನ್ನು ಈ ಪ್ರಪಂಚದಿಂದಲೇ ಶಾಶ್ವತವಾಗಿ ಬಿಡುಗಡೆ ಮಾಡಿತು. 1943ರ ಮಾರ್ಚ್ 12 ರಂದು ಕಸ್ತೂರ ಬಾ ಎರಡು ಬಾರಿ ಹೃದಯವೇದನೆಗೊಳಗಾದರು. ಅಲ್ಲಿಂದಾಚೆಗೆ ಅವರ ಆರೋಗ್ಯ ಕ್ಷೀಣಿಸುತ್ತ ಬಂತು. 1944ರ ಫೆಬ್ರವರಿ 22ರ ಮಹಾಶಿವರಾತ್ರಿಯಂದು ಪತಿಯ ತೊಡೆಯ ಮೇಲೊರಗಿದ್ದಂತೆಯೇ ಬಾರ ಆತ್ಮ ಅನಂತದಲ್ಲಿ ಲೀನವಾಗಿ ಯೋಯಿತು. ಆ ಮಹಾಸತಿಯ ಪಾರ್ಥಿವಶರೀರ ಕಣ್ಮರೆಯಾದರೂ ಆಕೆಯ ಕೀರ್ತಿ ಅಜರಾಮರವಾಯಿತು.

ಕಸ್ತೂರ ಬಾ ಆದರ್ಶ ಹಿಂದೂ ನಾರಿಯ ಪ್ರತೀಕವಾಗಿದ್ದಾರೆ. ಸಹನೆ ಸಂಯಮ ಔದಾರ್ಯಗಳು ಆಕೆಯಲ್ಲಿ ಮುಪ್ಪುರಿಗೊಂಡಿದ್ದುವು. ಎಲ್ಲಕ್ಕೂ ಮಿಗಿಲಾಗಿ ಪತಿಭಕ್ತಿಯೇ ಆಕೆಗೆ ಮುಕ್ತಿಸಾಧನವಾಯಿತು. ಯಾವ ಮಹತ್ವಾಕಾಂಕ್ಷೆಯಾಗಲೀ, ಕೀರ್ತಿಕಾಮನೆಯಾಗಲಿ ಅವರಲ್ಲಿರಲಿಲ್ಲ. ಗಂಡನ ಧ್ಯೇಯಸಾಧನೆಯೇ ತಮ್ಮ ಪವಿತ್ರ ಕರ್ತವ್ಯವೆಂದು ಬಗೆದು ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಚಾಚೂ ತಪ್ಪದಂತೆ ಅನುಸರಿಸುತ್ತ ಅದರಲ್ಲೇ ತಮ್ಮ ಪ್ರಾಣವನ್ನು ತೆತ್ತ ಮಹಾಸಾಧ್ವಿಯವರು. ಮಾನವ ಸಹಜವಾದ ದೌರ್ಬಲ್ಯಗಳು ಅವರಲ್ಲಿರಲಿಲ್ಲವೆಂದಲ್ಲ. ಆದರೆ ಅವನ್ನು ಗೆದ್ದು ಎಲ್ಲರಿಗಾಗಿ ಬಾಳಿದ್ದು ಅವರ ದೊಡ್ಡತನ. ಸ್ತ್ರೀಸಹಜವಾದ ಸಂಕುಚಿತ ಸಂಸಾರದ ಅನುರಾಗ ಅಭಿಮಾನಗಳನ್ನು ತೊರೆದು ವಿಶ್ವಕುಟುಂಬದ ಹೊಣೆ ಹೊತ್ತು ದೇಶಸೇವೆಗಾಗಿ ಗಂಡ ಮತ್ತು ಮಕ್ಕಳನ್ನು ಬಿಟ್ಟುಕೊಟ್ಟು ಅನನ್ಯತ್ಯಾಗವನ್ನು ಮೆರೆದರು. ಮಹಾತ್ಮನ ಪತ್ನಿಯಾಗುವುದೇನೂ ಸುಲಭವಲ್ಲ. ಅವರು ಹೆಜ್ಜೆಹೆಜ್ಜೆಗೂ ಪತಿಯೊಡ್ಡಿದ ಪರೀಕ್ಷೆಗಳ ಅಗ್ನಿಕುಂಡದಿಂದ ಪಾರಾಗಿ ಬಂದು ಥಳಥಳಿಸುವ ಹೊನ್ನಾಗಿ ಬೆಳಗಿದರು. ಆ ಹೊನ್ನು ಭಾರತಮಾತೆಯ ಮುಡಿಗೆ ಶೃಂಗಾರವಾಯಿತು.

ಗಾಂಧೀಜಿಯವರು ಬಾ ಅವರನ್ನು ಕುರಿತು ಆಡಿರುವ ಮಾತುಗಳು ಆಕೆಯ ವ್ಯಕ್ತಿತ್ವದ ಪ್ರೋಜ್ವಲತೆಗೆ ಸಾಕ್ಷಿಯಾಗಿವೆ : ಕಸ್ತೂರ ಬಾ ಉದ್ದಕ್ಕೂ ನನ್ನ ಪೋಷಕಳಾಗಿದ್ದಳು. ಆಕೆಯಿಲ್ಲದಿದ್ದರೆ ನಾನು ಅನಾಥನಾಗುತ್ತಿದ್ದೆ. ಜಗತ್ತಿನಲ್ಲಿ ಮತ್ತಾವ ಹೆಣ್ಣೂ ನನ್ನನ್ನು ಹಾಗೆ ಮಿಡಿಯಲಾರಳು. ಆಕೆಯ ಸಹನೆ ಅದ್ವಿತೀಯ. ಆ ಸಹನೆಯೇ ನನಗೆ ಅಹಿಂಸೆಯ ಪಾಠವನ್ನು ಕಲಿಸಿತು. ಅದೇ ನನ್ನ ತಾರಕ ಮಂತ್ರವಾಯಿತು. ತನ್ನ ಸಹನೆಯ ಬೆಲೆ ಆಕೆಗೇ ಗೊತ್ತಿರಲಿಲ್ಲ. ನಾನು ಅದರ ಅಮಿತವಾದ ಬೆಲೆಯನ್ನರಿತು ಅನುಸರಣೆಗೆ ತಂದೆ. ಆದ್ದರಿಂದ ಈ ವಿಚಾರದಲ್ಲಿ ಆಕೆ ನನಗೆ ಎಂದೆಂದಿಗೂ ಗುರುಸಮಾನಳು. (ಜಿ.ಎಸ್.ಸಿ.)

**ಕಸ್ತೂರಿ[1] :** ಹುಬ್ಬಳ್ಳಿಯಿಂದ ಪ್ರಕಟವಾಗುವ ಕನ್ನಡ ಮಾಸ ಪತ್ರಿಕೆ; ಸಾರಸಂಗ್ರಹ. ಸಂಕ್ಷೇಪಿತ ಲೇಖನಗಳನ್ನೊಳಗೊಂಡ ಈ ಬಗೆಯ ಪತ್ರಿಕೆಗಳದು 20ನೆಯ ಶತಮಾನದ ಪತ್ರಿಕಾ ವ್ಯವಸಾಯದಲ್ಲಿ ಒಂದು ಹೊಸ ಪ್ರಕಾರ. ಇಂಥ ಮಾಸ ಪತ್ರಿಕೆಗಳು ಒಂದನೆಯ ಮಹಾಯುದ್ಧದ ಅನಂತರದ ಕಾಲದಿಂದ ತಕ್ಕಮಟ್ಟಿಗೆ ಯಶಸ್ವಿಯಾಗಿ ನಡೆದು ಬಂದಿವೆ. ಇಂಗ್ಲಿಷಿನ ಅತ್ಯಂತ ಯಶಸ್ವಿ ಪತ್ರಿಕೆಯಾದ ರೀಡರ್ಸ್ ಡೈಜೆಸ್ಟ್ ಮಾದರಿಯನ್ನನುಸರಿಸಿ ಕನ್ನಡದ ನೆಲನೀರುಗಳಿಗೆ ಅಗತ್ಯವಾದ ಕೆಲವು ಬದಲಾವಣೆಗಳೊಂದಿಗೆ ಪ್ರಪ್ರಥಮ ಮಾಸಿಕ ಸಾರಸಂಗ್ರಹವಾಗಿ 1956ರ ಸೆಪ್ಟೆಂಬರಿನಲ್ಲಿ ಈ ಪತ್ರಿಕೆಯ ಪ್ರಕಟಣೆ ಆರಂಭವಾಯಿತು. 1958 ರ ಆಗಸ್ಟ್‌ವರೆಗೆ ಮೊಹರೆ ಹಣಮಂತರಾಯರು ಇದರ ಸಂಪಾದಕರಾಗಿದ್ದರು. ಅನಂತರ ಸಂಯುಕ್ತ ಕರ್ನಾಟಕ ಮತ್ತು ಕರ್ಮವೀರ ಪತ್ರಿಕೆಗಳ ಪ್ರಧಾನ ಸಂಪಾದಕರಾದ ರಂಗನಾಥ ದಿವಾಕರರೇ ಇದರ ಪ್ರಧಾನ ಸಂಪಾದಕರೂ ಆದರು. ಲೋಕ ಶಿಕ್ಷಣ ಟ್ರಸ್ಟಿನ ಪ್ರಕಟಣೆಯಿದು.

ಪತ್ರಿಕೆ 7½" × 5" ಆಕಾರದ 152 ಪುಟಗಳನ್ನೊಳಗೊಂಡಿರುತ್ತದೆ. ಮುಖಚಿತ್ರ ವರ್ಣರಂಜಿತವಾದದ್ದು. ಪತ್ರಿಕೆಯ ಬಿಡಿ ಪ್ರತಿಯ ಬೆಲೆ ಮೊದಲು 75 ಪೈಸೆಯಿತ್ತು. ಪ್ರತಿ ಸಂಚಿಕೆಯಲ್ಲೂ 25–30 ವಿಷಯಗಳಿರುತ್ತವೆ. ಇವುಗಳಲ್ಲಿ 3–4 ಮಾತ್ರ ಕಥೆಗಳು;

ಉಳಿದವೆಲ್ಲ ಗಂಭೀರ ವಿಷಯಗಳು. ಕೊನೆಯ ಸುಮಾರು 20 ಪುಟಗಳಲ್ಲಿ ಯಾವುದಾದರೊಂದು ಪ್ರಸಿದ್ಧ ಪುಸ್ತಕದ ಸಂಗ್ರಹ ಇರುತ್ತದೆ. ಒಟ್ಟಿನ ಮೇಲೆ ಶೇ. 65 ರಿಂದ 75 ರ ವರೆಗೆ ಕಥೇತರ ವಿಷಯಗಳನ್ನೊಳಗೊಂಡ ಈ ಮಾಸಪತ್ರಿಕೆ ತುಂಬ ಜನಪ್ರಿಯವಾಗಿದೆ.

ಕಸ್ತೂರಿ ತೀರ ಗಹನವೂ ಅಲ್ಲದೆ ತೀರ ಸಾಮಾನ್ಯ ಮನರಂಜನೆಗೂ ಮೀಸಲಾಗಿಲ್ಲದೆ, ಸುಶಿಕ್ಷಿತ ವರ್ಗದ ಓದುಗರನ್ನು ಗುರಿಯಾಗಿಟ್ಟುಕೊಂಡು ಲೇಖನಗಳನ್ನು ಆರಿಸುತ್ತದೆ.

ಅದು ಭಾರತೀಯ ಅಥವಾ ವಿದೇಶಿ ಇಂಗ್ಲಿಷ್ ಪುಸ್ತಕ ಪತ್ರಿಕೆಗಳಿಂದಲ್ಲದೆ ಎಲ್ಲ ಪ್ರೌಢ ಭಾರತೀಯ ಭಾಷೆಗಳಿಂದಲೂ ಕಥೆ ಮತ್ತು ಲೇಖನಗಳನ್ನು ಆಯ್ದುಕೊಳ್ಳುತ್ತದೆ. ಇವಲ್ಲದೆ ಸ್ವತಂತ್ರ ಲೇಖನ ಮತ್ತು ಕಥೆಗಳನ್ನು ಸಾಕಷ್ಟು ಒಳಗೊಂಡಿರುತ್ತದೆ. ಒಂದು ಮಾದರಿ ಸಂಚಿಕೆಯಲ್ಲಿ ಇಂಗ್ಲಿಷ್, ಹಿಂದಿ, ಮರಾಠಿ, ಬಂಗಾಲಿ, ತೆಲುಗು, ತಮಿಳು, ಮಲಯಾಳಿ ಲೇಖನ ಅಥವಾ ಕಥೆಗಳು ಇರಬಹುದು. ಪ್ರತಿಸಲವೂ ಜೀವನಚರಿತ್ರೆ ಮತ್ತು ವ್ಯಕ್ತಿಚಿತ್ರಗಳೂ ವಿಜ್ಞಾನ, ವೈದ್ಯಕೀಯ, ರಾಜಕೀಯ, ಸಾಮಾಜಿಕ, ಭೌಗೋಳಿಕ ವಿಷಯಗಳೂ ಇರುತ್ತವೆ. ರಾಜಕೀಯದಲ್ಲಿ ಪಕ್ಷಪಂಥಗಳ ಪ್ರತಿಪಾದನೆಗಿಂತಲೂ ವಿಷಯಗಳ ನೇರವಾದ ನಿರ್ವಿಕಾರವಾದ ವಿವರಣೆಗೆ ಪ್ರಾಧಾನ್ಯ ಕೊಡಲಾಗುತ್ತದೆ. ವಿಜ್ಞಾನದಲ್ಲಿ ಅತ್ಯಾಧುನಿಕ ಸಂಶೋಧನೆಗಳ ಗಮನಾರ್ಹ ಅಂಶಗಳನ್ನು ಪರಿಚಯ ಮಾಡಿಕೊಡಲಾಗುತ್ತದೆ. ಹೆಚ್ಚಿನ ವಿಷಯಗಳು ಸಚಿತ್ರವಾಗಿರುತ್ತವೆ. ಸಂಪಾದನ ಕಾರ್ಯದಲ್ಲಿ ಬಹಳ ಎಚ್ಚರಿಕೆ ವಹಿಸಲಾಗುತ್ತದೆ. ಸುಶಿಕ್ಷಿತ ಆದರೆ ಸಾಮಾನ್ಯಮಟ್ಟದ ಓದುಗರಿಗೆ ಅರ್ಥವಾಗುವ ಸರಳ ಶೈಲಿಯನ್ನು ಉಪಯೋಗಿಸಲಾಗುತ್ತದೆ. ಪ್ರಾಚೀನ ಸಂಸ್ಕೃತಿಯನ್ನು ನಿರಾಕರಿಸದೆ ಆಧುನಿಕ ಜಗತ್ತಿನ ಆಗುಹೋಗುಗಳ ಪರಿಜ್ಞಾನವನ್ನು ಅದು ಒದಗಿಸುತ್ತದೆ.

ಪಾವೆಂ ಎಂದೇ ಹೆಸರಾದ ಪಾಡಿಗಾರು ವೆಂಕಟರಮಣಾಚಾರ್ಯ ದೀರ್ಘಕಾಲ ಇದರ ಸಂಪಾದಕರಾಗಿ ಅಚ್ಚುಕಟ್ಟಾಗಿ ಹೊಣೆ ನಿರ್ವಹಿಸಿದರು. ಡೈಜೆಸ್ಟ್‌ಗಳಿಗೆ ಸೂಕ್ತವಾದ ವಿಶಿಷ್ಟ ವಿಷಯ ಸಂಗ್ರಹ. ಬರೆವಣಿಗೆಯಲ್ಲಿ ಹೊಸ ಲೇಖಕರಿಗೆ ಮಾರ್ಗದರ್ಶನ ನೀಡಿದರು. 2005ರಲ್ಲಿ ಕಸ್ತೂರಿ 50ನೆಯ ವರ್ಷಕ್ಕೆ ಪದಾರ್ಪಣೆ ಮಾಡಿತು. ಆಗಿನ ಸಂಪಾದಕ ಅರುಣ್ ನಾರಾಯಣ್. (ಪಿ.ವಿ.ಎ.)

**ಕಸ್ತೂರಿ²** : ಗಂಡು ಕಸ್ತೂರಿಮೃಗದ ಹೊಟ್ಟೆಯ ಚರ್ಮದೊಳಗಿರುವ ಗ್ರಂಥಿಯೊಂದರಿಂದ ಒಸರುವ ಸುಗಂಧ ವಸ್ತು (ಮಸ್ಕ್). ಅಂಗಡಿಯಲ್ಲಿ ಮಾರುವ ಕಸ್ತೂರಿ ಎಂಬ ವಸ್ತು ಈ ಪ್ರಾಣಿಯಿಂದಲೇ ಬಂದದ್ದು. ಆದರೆ ಇತರ ಕೆಲವು ಬಗೆಯ ಪ್ರಾಣಿಗಳೂ ಇದೇ ವಾಸನೆಯನ್ನು ಹೊರಸೂಸುತ್ತವೆ. ಉದಾಹರಣೆಗೆ ಕಸ್ತೂರಿ ದನ, ಕಸ್ತೂರಿ ಇಲಿ, ಕಸ್ತೂರಿ ಬಾತು, ಕಸ್ತೂರಿ ಮೂಗಿಲಿ ಇತ್ಯಾದಿ. ಅಲ್ಲದೆ ಕೆಲವು ಸಸ್ಯಗಳಲ್ಲೂ ಈ ಬಗೆಯ ವಾಸನೆ ಸೂಸುವ ಗ್ರಂಥಿಗಳಿವೆ. ಆ ಸಸ್ಯಗಳನ್ನು ಕಸ್ತೂರಿ ಗಿಡಗಳೆಂದು ಕರೆಯಲಾಗುತ್ತದೆ.

ಕಸ್ತೂರಿ ಮೃಗವನ್ನು ಕೊಂದು ಅದರ ಹೊಟ್ಟೆಯಲ್ಲಿನ ಕಸ್ತೂರಿ ಗ್ರಂಥಿಯನ್ನು ಹೊರತೆಗೆದು ಬಿಸಿಲಿನಲ್ಲೋ, ಬಿಸಿ ಎಣ್ಣೆಯಲ್ಲಿ ಅದ್ದಿಯೋ, ಒಣಗಿಸುತ್ತಾರೆ. ಕೆಲವು ಸಾರಿ ಕಸ್ತೂರಿ ಗ್ರಂಥಿಯಿಂದ ಕಸ್ತೂರಿಯನ್ನು ಹೊರತೆಗೆದು ಶುದ್ಧೀಕರಿಸಿ ಮಾರುವುದೂ ಉಂಟು. ಕಸ್ತೂರಿಯಲ್ಲಿ ಮೂರು ಬಗೆಗಳುಂಟು : 1 ಟಾಂಕಿಂಗ್ ಅಥವಾ ಚೀನೀ ಕಸ್ತೂರಿ, 2 ಅಸ್ಸಾಮ್ ಅಥವಾ ನೇಪಾಳದ ಕಸ್ತೂರಿ, (3) ಕಬಾರ್ಡಿನ್ ಅಥವಾ ರಷ್ಯದ ಕಸ್ತೂರಿ. ಟಾಂಕಿಂಗ್ ಕಸ್ತೂರಿಯೇ ಇವುಗಳಲ್ಲೆಲ್ಲ ಶ್ರೇಷ್ಠವಾದುದು, ಹಾಗೂ ಹೆಚ್ಚಿನ ಬೆಲೆಯದು.

ಕಸ್ತೂರಿ ಹೊಚ್ಚ ಹೊಸದಾಗಿರುವಾಗ ಮೃದುವಾಗಿಯೂ ಜಿಡ್ಡುಜಿಡ್ಡಾಗಿಯೂ ಇರುತ್ತದೆ. ಅದರ ಬಣ್ಣ ಕೆನ್ನೀಲಿ. ವಾಸನೆ ಸಹಿಸಲಾಗದಷ್ಟು ಕಟು, ರುಚಿ ಕಹಿ. ಕುದಿಯುವ ನೀರಿನಲ್ಲಿ ಸ್ವಲ್ಪ ಕರಗುತ್ತದೆ. ಇದು ಸುಗಂಧ ದ್ರವ್ಯಗಳನ್ನು ತಯಾರಿಸಲು ಉಪಯೋಗಿಸುವ ಶ್ರೇಷ್ಠತಮ ಮೂಲದ್ರವ್ಯವೆಂದು ಹೆಸರಾಗಿದೆ. ಕಸ್ತೂರಿಗೆ ಔಷಧೀಯ ಗುಣಗಳೂ ಉಂಟು. ಇದನ್ನು ಉತ್ತೇಜಕ, ಕಾಮೋದ್ದೀಪಕ, ಕಫಹಾರಕ, ಸ್ವೇದಕಾರಿಯಾಗಿ ಉಪಯೋಗಿಸುತ್ತಾರೆ.

ಕಸ್ತೂರಿಯ ವೈಶಿಷ್ಟ್ಯಪೂರ್ಣ ಸುಗಂಧಕ್ಕೆ ಕಾರಣ ಅದರಲ್ಲಿನ ಮಸ್ಕೋನ್‌ಎಂಬ ವಸ್ತು. ವಾಲ್ಬಾಮ್ ಎಂಬಾತ 1906ರಲ್ಲಿ ಮೊದಲ ಬಾರಿಗೆ ಇದನ್ನು ಕಸ್ತೂರಿಯಿಂದ ಬೇರ್ಪಡಿಸಿ ಶುದ್ಧೀಕರಿಸಿದ. ರಾಸಾಯನಿಕವಾಗಿ ಇದು 3–ಮೀಥೈಲ್–ಸೈಕ್ಲೊಪೆಂಟ ಡಿಕಾನೋನ್ ಎಂದು ತಿಳಿದುಬಂದಿದೆ.

ಸ್ವಾಭಾವಿಕ ಕಸ್ತೂರಿಯಂಥ ವಾಸನೆಯಿರುವ ಹಲವಾರು ಬಗೆಯ ಸಂಯುಕ್ತಗಳನ್ನು ಕೃತಕವಾಗಿ ಸಂಶ್ಲೇಷಿಸಬಹುದಾಗಿದೆ. 1888ರಲ್ಲಿ ಬಾರ್ ಎಂಬಾತ ಅಲ್ಯೂಮಿನಿಯಮ್ ಕ್ಲೋರೈಡಿನೊಡನೆ ಟಾಲೀನ್ ಮತ್ತು ಐಸೊಬ್ಯೂಟೈಲ್ ಬ್ರೋಮೈಡುಗಳನ್ನು ಸಂಘನನ (ಕಂಡೆನ್ಸೇಷನ್) ಕ್ರಿಯೆಗೊಳಪಡಿಸಿ ಅದರಿಂದ ಬಂದ ವಸ್ತುವನ್ನು ನೈಟ್ರೀಕರಣ ಮಾಡಿ ಕೃತಕ ಕಸ್ತೂರಿಯನ್ನು ತಯಾರಿಸಿದ. ಇದಕ್ಕೆ ಬಾರ್‌ಮಸ್ಕ್ ಎಂದು ಹೆಸರು. ಇದಲ್ಲದೆ ಕಸ್ತೂರಿಯನ್ನು ಹೋಲುವ ಜೈಲೀನ್ ಮಸ್ಕ್, ಮಸ್ಕೆಟೋನ್, ಮಾಸ್ಕೀನ್, ಫ್ಯಾಂಟೋಲಿಡ್ ಎಂಬ ಸಂಯುಕ್ತಗಳನ್ನು ಕೃತಕವಾಗಿ ತಯಾರಿಸಬಹುದಾಗಿದೆ. ಇವೆಲ್ಲವನ್ನು ಸಾಬೂನು ಇತ್ಯಾದಿ ವಸ್ತುಗಳಿಗೆ ಸುವಾಸನೆ ಕೊಡಲು ಬಳಸುತ್ತಾರೆ. (ಎ.)

**ಕಸ್ತೂರಿ ಇಲಿ** : ಕ್ರಿಸೆಟಿಡೀ ಕುಟುಂಬಕ್ಕೆ ಸೇರಿದ, ಇಲಿಯಂತೆಯೇ ಕಾಣುವ ಅರೆಜಲಚರ ದಂಶಕ (ಮಸ್ಕ್ ರ್‍ಯಾಟ್). ಈ ಇಲಿಯ ಆಸನದ್ವಾರದ ಬಳಿಯಿರುವ

ಒಂದು ಜೊತೆ ಗ್ರಂಥಿಗಳಿಂದ ಉಂಟಾಗುವ ಸುಗಂಧಯುಕ್ತ ವಾಸನೆಯ ಸ್ರಾವದಿಂದಾಗಿ ಇದಕ್ಕೆ ಈ ಹೆಸರು. ಮೈಕ್ರೊಟಿನೀ ಇಂಥ ಇಲಿಗಳ ಉಪಕುಟುಂಬದ ಹೆಸರು. ನೀರಿಲಿಗಳು, ಹೊಲದ ಇಲಿಗಳು ಮತ್ತು ಲೆಮಿಂಗುಗಳು ಈ ಉಪಕುಟುಂಬಕ್ಕೆ ಸೇರುತ್ತವೆ. ಮರ ಬೆಳೆಯದ ತಂಡ್ರ ಪ್ರದೇಶಗಳನ್ನುಳಿದು ಉತ್ತರ ಅಮೆರಿಕದ ಎಲ್ಲ ಕಡೆಗಳಲ್ಲೂ ಕಸ್ತೂರಿ ಇಲಿಗಳು ಕಾಣಸಿಗುತ್ತವೆ. ಯುರೋಪಿನಲ್ಲೂ ಇವು ವ್ಯಾಪಿಸಿಕೊಂಡಿವೆ. ಕಸ್ತೂರಿ ಇಲಿಯ ಉದ್ದ ಸುಮಾರು (12"). ಪಾರ್ಶ್ವಗಳು ಅದುಮಿದಂತಿವೆ. ಚಕ್ಕೆಚಕ್ಕೆಯಾಗಿರುವ ಇದರ ಬಾಲದಲ್ಲಿ ಕೂದಲುಗಳಿಲ್ಲ. ದೇಹ ಅಡಕವೂ ತೂಕವುಳ್ಳದ್ದೂ ಆಗಿದೆ. ದೇಹಕ್ಕೆ ಹೋಲಿಸುವಾಗ ಬಾಲ ಚಿಕ್ಕದು. ಕಿವಿಗಳು ದುಂಡಗೆ ಇದ್ದು ಮೈಗೂದಲಿಂದಾಚೆಗೆ ಚಾಚಿರುತ್ತವೆ. ಹಿಂಗಾಲಿನಲ್ಲಿ ಐದು ಬೆರಳುಗಳು ; ಬೆರಳುಗಳ ನಡುವೆ ಇರುವ ಅರೆಜಾಲಗಳು ಬಿರುಗೂದಲುಗಳಿಂದ ಹೆಣೆದುಕೊಂಡಿರುತ್ತವೆ.

ಇಲಿಗೆ ನೀರಿನಲ್ಲಿ ಈಜಲು ಅರೆಜಾಲಗಳು ಸಹಾಯಕಾರಿ. ಇಲಿಯ ದೇಹದ ಬಣ್ಣ ಕಪ್ಪು ಮಿಶ್ರಿತ ಕಂದು. ಕಾಲುಗಳು ಕಪ್ಪು ಬಣ್ಣದವು. ಮೈಮೇಲೆಲ್ಲ ದಟ್ಟವಾದ, ಹೊಳೆಯುವ, ಮೃದುವಾಗಿರುವ ಉದ್ದನೆಯ ಕೂದಲುಗಳಿವೆ. ತುಪ್ಪಳ ಹೊದಿಕೆಯನ್ನು ಮಾಡುವ ಉದ್ಯಮದಲ್ಲಿ ಕಸ್ತೂರಿ ಇಲಿಯ ಚರ್ಮವೇ ಕಚ್ಚಾವಸ್ತು. ಆದ್ದರಿಂದ ಅದಕ್ಕೆ ಅಧಿಕ ಬೇಡಿಕೆ ಇದೆ. ಉತ್ತರ ಅಮೆರಿಕದಲ್ಲಿ ಉತ್ಪತ್ತಿಯಾಗುವ ಇತರ ಯಾವುದೇ ತುಪ್ಪಳಕ್ಕಿಂತ ಕಸ್ತೂರಿ ಇಲಿಯ ತುಪ್ಪಳ ಅಧಿಕ ವರಮಾನ ನೀಡುತ್ತಿದೆ. ಕುಂಟೆ, ಕೆರೆ, ತೊರೆ ಮುಂತಾದೆಡೆಗಳ ದಡದ ಮೇಲೆ ಬಿಲ ಮಾಡಿಕೊಂಡು ಅದರೊಳಗೆ ವಾಸಿಸುತ್ತದೆ. ಜವುಗು ಸಸ್ಯ, ಜಲಸಸ್ಯಗಳ ಬೇರುಗಳು, ಕೆಲವು ವೇಳೆ ಹಲವು ಜಾತಿಯ ಇಚ್ಚಿಪ್ಪಿನ ಪ್ರಾಣಿಗಳು, ಮುಳ್ಳುನಳ್ಳಿಗಳು, ಬೆಂಕಿ ಮೊಸಳೆಗಳು (ಸ್ಯಾಲಮ್ಯಾಂಡರ್ಸ್) ಮತ್ತು ಚಿಕ್ಕ ಚಿಕ್ಕ ಮೀನುಗಳು–ಇವೇ ಈ ಇಲಿಯ ಆಹಾರ. ಚಪ್ಪಟೆಯಾದ ಬಂಡೆಯ ಮೇಲೋ ಅಥವಾ ಕಡಿದು ಹಾಕಿರುವ ಜವುಗು ಸಸ್ಯದ ಮೇಲೋ ವರ್ಷಕ್ಕೆ ಒಂದು ಅಥವಾ ಎರಡು ಸೂಲಿನಂತೆ ಇವು ಮರಿಗಳನ್ನು ಹಾಕುತ್ತವೆ. ಮರಿಗಳ ಸಂಖ್ಯೆ ಒಂದೊಂದು ಸೂಲಿಗೂ ಒಂದರಿಂದ ಹನ್ನೊಂದು. *

**ಕಸ್ತೂರಿ ಜಾಲಿ :** ಸುಗಂಧಯುಕ್ತ ಹೂಗಳಿಗಾಗಿ ಪ್ರಸಿದ್ಧವಾಗಿರುವ ಒಂದು ಜಾತಿಯ ಪೊದೆ ಸಸ್ಯ ಅಥವಾ ಮರ (ಕ್ಯಾಸಿ ಫ್ಲವರ್). ಲೆಗ್ಯುಮಿನೋಸೀ ಕುಟುಂಬದ ಮೈಮೋಸೀ ಉಪಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ನಾಮ ಅಕೇಸಿಯ ಫಾರ್ನೇಸಿಯಾನ. ಮೂಲತಃ ದಕ್ಷಿಣ ಅಮೆರಿಕದ ನಿವಾಸಿಯಾದ ಇದು ಈಗ ಭಾರತ, ಶ್ರೀಲಂಕ ಮತ್ತು ಬರ್ಮ ದೇಶಗಳಲ್ಲೆಲ್ಲ ಬೆಳೆಯುತ್ತಿದೆ. ನದಿದಂಡೆಯ ಮರಳಿನಲ್ಲಿ, ಪಂಜಾಬಿನ ಒಣಹವೆಯ ಮೈದಾನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಕೆಲವೆಡೆ ಇದನ್ನು ಉದ್ಯಾನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುವುದೂ ಉಂಟು. ಸುಮಾರು ಹದಿನೈದು ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಮುಳ್ಳು ಮರ ಇದು. ಎಲೆಗಳು ಸಂಯುಕ್ತ ಮಾದರಿಯವು. ಒಂದೊಂದರಲ್ಲೂ ಒಂದು ಪತ್ರಕಾಂಡವೂ (ರೇಕಿಸ್) ಅದರ ಎರಡೂ ಕಡೆ ಮೂರರಿಂದ ಎಂಟು ಜೊತೆ ಉಪವರ್ಣಗಳೂ ಈ ಉಪವರ್ಣಗಳಲ್ಲಿ ಒಂದೊಂದರಲ್ಲೂ ಹತ್ತರಿಂದ ಇಪ್ಪತ್ತೈದು ಜೊತೆ ಕಿರುಎಲೆಗಳೂ ಇವೆ. ಎಲೆಗಳ ಬುಡದಲ್ಲಿ ಮುಳ್ಳುಗಳಾಗಿ ಮಾರ್ಪಾಡಾದ ವೃಂತಪರ್ಣಗಳಿವೆ (ಸ್ಟಿಪ್ಯೂಲುಗಳು). ಹೂಗಳು ಚಂಡುಮಂಜರಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲುಗಳು ಎಲೆಗಳ ಕಕ್ಷಗಳಲ್ಲಿ (ಆಕ್ಸಿಲ್) ಒಂಟೊಂಟಿಯಾಗಿ ಮೂಡುತ್ತವೆ. ಒಮ್ಮೊಮ್ಮೆ ಎರಡು ಅಥವಾ ಮೂರು ಹೂಗೊಂಚಲುಗಳು ಒಂದೇ ಕಕ್ಷದಲ್ಲಿ ಹುಟ್ಟುವುದೂ ಉಂಟು. ಹೂಗಳು ಬಹಳ ಸುವಾಸನೆಯುಳ್ಳವಾಗಿವೆ; ಇವುಗಳ ಬಣ್ಣ ಹಳದಿ. ಮರಕ್ಕೆ ಮೂರು ವರ್ಷ ವಯಸ್ಸಾದ ಅನಂತರ ಹೂಗಳು ಅರಳಲಾರಂಭಿಸುತ್ತವೆ. ಹೂ ಬಿಡುವ ಕಾಲ ನವೆಂಬರಿನಿಂದ ಮಾರ್ಚ್.

ಕಸ್ತೂರಿ ಜಾಲಿಯ ಹೂಗಳಿಂದ ಕ್ಯಾಸಿ ಎನ್ನುವ ಸುಗಂಧವನ್ನು ತಯಾರಿಸುತ್ತಾರೆ. ಹೂಗಳನ್ನು ನೀರಿನಲ್ಲಿ ನೆನೆಸಿ ಮೆತುಮಾಡಿ ಕರಗಿಸಿದ ಕೋಕೋ ಬೆಣ್ಣೆಯಲ್ಲೋ ಕೊಬ್ಬರಿ ಎಣ್ಣೆಯಲ್ಲೋ ಹಲವಾರು ಗಂಟೆಗಳ ಕಾಲ ನೆನೆಹಾಕುತ್ತಾರೆ. ಇದರಿಂದ ಹೂವಿನಲ್ಲಿರುವ ಸುಗಂಧ ಬೇರ್ಪಟ್ಟು ಕೊಬ್ಬಿನಲ್ಲಿ ಕರಗುತ್ತದೆ. ಈ ರೀತಿ ಹಲವಾರು ಬಾರಿ ಮಾಡಿದ ಮೇಲೆ ಬರುವ ಸುಗಂಧಪೂರಿತ ಕೊಬ್ಬನ್ನು ಕರಗಿಸಿ, ಸೋಸಿ, ತಂಪುಗೊಳಿಸುತ್ತಾರೆ. ಹೀಗೆ ಪಡೆಯಲಾಗುವ ವಸ್ತುವೇ ಸುಗಂಧಾಂಜನ (ಪೊಮೇಡ್). ಕ್ಯಾಸಿ ಸುಗಂಧವನ್ನು ಶುದ್ಧರೂಪದಲ್ಲಿ ಪಡೆಯುವುದಕ್ಕೆಂದು, ಸುಗಂಧಾಂಜನವನ್ನು ಆಲ್ಕೊಹಾಲಿನಲ್ಲಿ ಬೆರೆಸಿ (3–4) ವಾರಗಳ ವರೆಗೂ (25°) ಸೆಂ. ಉಷ್ಣತೆಯಲ್ಲಿ ಇಡುತ್ತಾರೆ. ಆಗ ಸುಗಂಧವೆಲ್ಲ ಆಲ್ಕೊಹಾಲಿಗೆ ವರ್ಗಾಯಿಸಲ್ಪಡುತ್ತದೆ. ಅನಂತರ ಆಲ್ಕೊಹಾಲನ್ನು ಬಟ್ಟಿಯಿಳಿಸಿ ಬೇರ್ಪಡಿಸುತ್ತಾರೆ. ಆಗ ಶುದ್ಧವಾದ ಆಲಿವ್ ಹಸಿರು ಬಣ್ಣದ ಸುಗಂಧ ದೊರೆಯುತ್ತದೆ. ಗಾಳಿ ಬೆಳಕುಗಳಿಗೆ ತೆರೆದಿಟ್ಟರೆ ಇದು ಬೇಗ ಹಾಳಾಗುವುದರಿಂದ ಅವಕ್ಕೆ ಸೋಂಕದಂತೆ ಇದನ್ನು ಶೇಖರಿಸಿಡಬೇಕು. ಬಹಳ ಮಧುರ ವಾಸನೆಯುಳ್ಳ ಈ ಸುಗಂಧದ್ರವ್ಯವನ್ನು ಸುಗಂಧಾಂಜನ, ಉಡುಪುಗಳೊಂದಿಗೆ ಇಡಲಾಗುವ ಸುಗಂಧ ಚೀಲ (ಸ್ಯಾಚೆಟ್) ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದಲ್ಲದೆ ಕಸ್ತೂರಿಜಾಲಿಯ ತೊಗಟೆ, ಎಲೆ, ಕಾಯಿಗಳಲ್ಲಿ ಔಷಧೀಯ ಗುಣಗಳಿವೆ. ಇವನ್ನು ಪ್ರತಿಬಂಧಕವಾಗಿಯೂ ಕೆಲವು ಬಗೆಯ ಮೇಹರೋಗ ನಿವಾರಣೆಗೂ ಉಪಯೋಗಿಸುತ್ತಾರೆ. ತೊಗಟೆಯಲ್ಲಿ ಟ್ಯಾನಿನ್ ಎಂಬ ವಸ್ತುವಿದೆ. ಆದ್ದರಿಂದ ತೊಗಟೆಯನ್ನು ಚರ್ಮ ಹದಮಾಡಲೂ ಬಳಸುವುದುಂಟು. ಮರದಿಂದ ದೊರೆಯುವ ಅಂಟನ್ನು ಸಿಹಿತಿಂಡಿ ತಯಾರಿಕೆಯಲ್ಲಿ ಬಳಸುತ್ತಾರೆ. (ಎ.ಕೆ.ಕೆ.)

**ಕಸ್ತೂರಿ ದನ :** ದನವನ್ನು ಹೋಲುವ ಒಂದು ಅಪೂರ್ವಜಾತಿಯ ಮೆಲುಕು ಹಾಕುವ ಪ್ರಾಣಿ (ಮಸ್ಕ್ ಆಕ್ಸ್). ದನಗಳಿಗೂ ಕುರಿ ಆಡುಗಳಿಗೂ ಹತ್ತಿರದ ಸಂಬಂಧಿಯಾದ ಇದು ಆರ್ಟಿಯೊಡಾಕ್ಟೈಲ ಗಣ, ಬೋವಿಡೀ ಕುಟುಂಬ ಮತ್ತು ಕ್ಯಾಪ್ರಿನೀ ಉಪಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ನಾಮ ಓವಿಬಾಸ್ ಮಾಸ್ಕೆಟಸ್. ಇದರ ದೇಹದಿಂದ ಕಸ್ತೂರಿಯಂಥ ವಾಸನೆ ಹೊರಸೂಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ.

ಸುಮಾರು ಒಂದು ಮಿಲಿಯ ವರ್ಷಗಳ ಹಿಂದೆ ಸೈಬೀರಿಯ, ಜರ್ಮನಿ, ಫ್ರಾನ್ಸ್ ಹಾಗೂ ಇಂಗ್ಲೆಂಡುಗಳಲ್ಲಿ ಹೇರಳವಾಗಿತ್ತೆಂದು ಹೇಳಿಕೆ. ಈಗ ಕೆನಡದ ಟಂಡ್ರ ಪ್ರದೇಶ, ಉತ್ತರ ಶೀತವಲಯದ ಕೆಲವು ದ್ವೀಪಗಳು, ಗ್ರೀನ್‌ಲೆಂಡಿನ ಉತ್ತರ ತೀರಪ್ರದೇಶ ಮುಂತಾದ ಸ್ಥಳಗಳಿಗೆ ಮಾತ್ರ ಸೀಮಿತಗೊಂಡಿದೆ.

ಕಸ್ತೂರಿದನ ತನ್ನ ಲಕ್ಷಣಗಳಲ್ಲಿ ದನಗಳನ್ನು ಕುರಿ ಆಡುಗಳನ್ನು ಹೋಲುತ್ತದೆ. ನೋಡಲು ಕೊಂಚಮಟ್ಟಿಗೆ ಅಮೆರಿಕದ ಕಾಡುಕೋಣದಂತಿದೆ. ಗಂಡು ಕಸ್ತೂರಿದನ ಸುಮಾರು (5') ಎತ್ತರವಿದ್ದು ಸು. 250 ರಿಂದ 350 ಕಿ.ಗ್ರಾಂ ತೂಗುತ್ತದೆ. ಹೆಣ್ಣು ಸ್ವಲ್ಪ ಚಿಕ್ಕ ಗಾತ್ರದ್ದು. ಮೈಮೇಲೆ ಬಲು ಉದ್ದವಾದ, ಒರಟೊರಟಾಗಿ ಜಡೆಗಟ್ಟಿದ ಕಂದು ಬಣ್ಣದ ಕೂದಲಿವೆ. ಇವು ಆಗಾಗ ಗಚ್ಚುಗಚ್ಚಾಗಿ ಉದುರಿ ಹೋಗುವುದುಂಟು. ಈ ಉದ್ದವಾದ ಕೂದಲುಗಳ ಹೊರಹೊದಿಕೆಯ ಒಳಗೆ ದಟ್ಟವಾದ ಉಣ್ಣೆಯಿದೆ. ಇದೂ ಕೂಡ ಪ್ರತಿ ಬೇಸಗೆಯಲ್ಲಿ ಉದುರಿಹೋಗುತ್ತದೆ. ಇಂಥ ಎರಡು ಪದರಗಳ ಹೊದಿಕೆಯಿಂದಾಗಿ ಈ ಪ್ರಾಣಿ ಎಂಥ ಶೀತವನ್ನಾದರೂ ತಡೆದುಕೊಳ್ಳಬಲ್ಲದು. ಕಸ್ತೂರಿದನಕ್ಕೆ ಬಲು ಚಿಕ್ಕವಾದ ಮತ್ತು ದೃಢವಾದ ಕಾಲುಗಳಿವೆ. ಕುತ್ತಿಗೆ ಬಹಳ ಚಿಕ್ಕದು. ಕಿವಿಗಳೂ ಸಣ್ಣವು. ಕೊಂಬುಗಳು ಮಾತ್ರ ಅಗಲವಾಗಿಯೂ ಮೊನಚಾಗಿಯೂ ಇವೆ. ತಲೆಯಲ್ಲಿ ಪ್ರಮುಖವಾಗಿ ಕಾಣುವ ಇವು ತಲೆಯ ಎರಡು ಪಕ್ಕಗಳಲ್ಲಿ ಕೆಳಮುಖನಾಗಿ ಬಾಗಿ ಮತ್ತೆ ತುದಿಯಲ್ಲಿ ಹಿಮ್ಮುಖನಾಗಿ ಬಾಗಿವೆ.



ಕಸ್ತೂರಿದನಗಳು ಹಿಂಡುಗಳಲ್ಲಿ ವಾಸಿಸುತ್ತವೆ. ಒಂದು ಗುಂಪಿನಲ್ಲಿ ಒಂದು ಗಂಡು, ಹಲವಾರು ಹೆಣ್ಣುದನಗಳು ಹಾಗೂ ಕರುಗಳು ಇರುತ್ತವೆ. ಕೆಲವು ಸಲ ಅನೇಕ ಗಂಡುಗಳು ತಮ್ಮ ತಮ್ಮ ಪರಿವಾರ ಸಮೇತ ಒಂದೇ ಗುಂಪಿನಲ್ಲಿರಬಹುದು. ಆಹಾರಕ್ಕಾಗಿ ಹಿಂಡುಹಿಂಡಾಗಿಯೇ ಸಂಚರಿಸುತ್ತವೆ. ಹುಲ್ಲು, ಕಲ್ಲುಹೂ, ಪಾಚಿ, ವಿಲೋ ಮುಂತಾದ ಕುರುಚಲು ಗಿಡಗಳು ಇವುಗಳ ಆಹಾರ.

ಕಸ್ತೂರಿದನ ಮರಿಹಾಕುವ ಕಾಲ ಮೇ ಅಥವಾ ಜೂನ್ ತಿಂಗಳು. ಹೆಣ್ಣುದನ ಸುಮಾರು 9 ತಿಂಗಳ ಗರ್ಭಧಾರಣೆಯ ಅವಧಿಯ ಅನಂತರ ಒಂದು ಸಲಕ್ಕೆ ಒಂದು ಮರಿಯನ್ನು ಈಯುತ್ತದೆ.

ಮನುಷ್ಯ ಮತ್ತು ತೋಳಗಳು ಕಸ್ತೂರಿದನದ ಪ್ರಮುಖ ಶತ್ರುಗಳು. ಶತ್ರುವಿನಿಂದ ಆವೃತವಾದಾಗ ಮಂಡಲಾಕಾರದ ಗುಂಪುಗಳಲ್ಲಿ ನಿಂತು ಶತ್ರುಗಳನ್ನೆದುರಿಸುತ್ತವೆ. ಗುಂಪಿನ ಮಧ್ಯೆ ಕರುಗಳನ್ನು ಸೇರಿಸಿಕೊಂಡು ಸುತ್ತಲೂ ಗಂಡುಗಳು ತಮ್ಮ ಹರಿತವಾದ ಕೊಂಬುಗಳನ್ನು ತೋರಿಸುತ್ತ ಹಗೆಯೊಂದಿಗೆ ಸೆಣಸಲು ಅನುವಾಗುತ್ತವೆ. ತೋಳಗಳನ್ನು ಯಶಸ್ವಿಯಾಗಿ ಎದುರಿಸಬಲ್ಲವಾದರೂ ಶಸ್ತ್ರಸಜ್ಜಿತ ಮಾನವಶಕ್ತಿಗೆ ಸುಲಭವಾಗಿ ಮಣಿಯುತ್ತವೆ. ಹೀಗಾಗಿ ಇಂದು ಇವುಗಳ ಸಂಖ್ಯೆ ಬಹಳ ಇಳಿದು ಹೋಗಿದೆ. ಮಾಂಸ ಮತ್ತು ಬೆಲೆಬಾಳುವ ಉಣ್ಣೆಗಾಗಿ ಇವುಗಳ ಬೇಟೆ ನಡೆದೇ ಇದೆ. ಇವು ಚೆನ್ನಾಗಿ ಹಾಲುಕೊಡಬಲ್ಲವಾದುದರಿಂದ ಕೆಲವೆಡೆ ಇವನ್ನು ಸಾಕುವ ಪ್ರಯತ್ನಗಳೂ ನಡೆದಿವೆ. (ಎ.)

**ಕಸ್ತೂರಿ, ನಾ:** 1897–1987. ಕನ್ನಡದ ಹಾಸ್ಯಸಾಹಿತಿ, ನಾಟಕಕಾರ, ವಾಗ್ಮಿ, ಅಧ್ಯಾಪಕ, ಸಮಾಜಸೇವಾಸಕ್ತ. ಇವರ ಪೂರ್ತಿ ಹೆಸರು ಕಸ್ತೂರಿ ನಾರಾಯಣ ರಂಗನಾಥ ಶರ್ಮ. ನಾ. ಕಸ್ತೂರಿ ಎಂಬ ಹೆಸರಿನಲ್ಲೇ ಪ್ರಸಿದ್ಧರು. ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಸೃಷ್ಟಿಗಾಗಿಯೇ ತಮ್ಮ ಜೀವನದ ಬಹುಭಾಗವನ್ನು ಮುಡಿಪಾಗಿಟ್ಟವರು. ಕೇರಳ ರಾಜ್ಯದ ತ್ರಿಪುನಿತ್ತೂರ್ ಗ್ರಾಮದಲ್ಲಿ 1887 ಡಿಸೆಂಬರ್ 25ರಂದು ಜನಿಸಿದರು. ಎರ್ನಾಕುಲಂ, ತಿರುವನಂತಪುರಂಗಳಲ್ಲಿ ವಿದ್ಯಾಭ್ಯಾಸಮಾಡಿ ಬಿ.ಎ. (ಆನರ್ಸ್) ಇತಿಹಾಸ ಮತ್ತು ಬಿ.ಎಲ್.ಪದವಿ ಗಳಿಸುವುದರೊಂದಿಗೆ ತಿರುವನಂತಪುರ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಎಂ.ಎ.ಯನ್ನೂ ಮುಗಿಸಿದರು.

ಉತ್ತಮ ಭವಿಷ್ಯವನ್ನರಸುತ್ತ ಮೈಸೂರಿಗೆ ಬಂದರು. ಮೈಸೂರಿನ ಬನುಮಯ್ಯ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾದರು. ಇವರ ಮನೆಮಾತು ತಮಿಳು, ಕೇರಳದಲ್ಲಿದ್ದುದರಿಂದ ಮಲಯಾಳಂ ಅಭ್ಯಾಸ ಮಾಡಿದ್ದರು. ಮೈಸೂರಿಗೆ ಬಂದಾಗ ಇವರಿಗೆ ಕನ್ನಡ ಕಲಿಯುವುದು ಅನಿವಾರ್ಯವಾಯಿತು. ಇಲ್ಲಿಯ ಜನಜೀವನದಲ್ಲಿ ಬೆರೆತರು. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಅಧ್ಯಾಪಕರ ಹುದ್ದೆ ದೊರಕಿತು.

ಅಲ್ಲಿಯ ಇಂಟರ್‌ಮೀಡಿಯಟ್ ಮತ್ತು ಮಹಾರಾಜ ಕಾಲೇಜುಗಳಲ್ಲಿ ಹಲವು ವರ್ಷ ಅಧ್ಯಾಪಕರಾಗಿದ್ದರು. ಅನಂತರ ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲೂ ದಾವಣಗೆರೆಯಲ್ಲೂ ಉದ್ಯೋಗನಿರತರಾಗಿದ್ದರು. ದಾವಣಗೆರೆ ಕಾಲೇಜಿನ ಸೂಪರಿಂಟೆಂಡೆಂಟರಾಗಿದ್ದರು. ನಿವೃತ್ತಿಯ ವೇಳೆಗೆ ಇವರಿಗೆ ಉಪಪ್ರಾಧ್ಯಾಪಕರಾಗಿ ಬಡ್ತಿ ದೊರಕಿತ್ತು. ಅನಂತರ ಕೆಲಕಾಲ ಮೈಸೂರು ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿಯೂ ಬೆಂಗಳೂರು ಆಕಾಶವಾಣಿಯಲ್ಲಿ ಗ್ರಾಮಸ್ಥರ ಕಾರ್ಯಕ್ರಮವೇ ಮುಂತಾದ ವಿಭಾಗಗಳ ಕಾರ್ಯಕ್ರಮನಿರ್ವಾಹಕರಾಗಿಯೂ ಸೇವೆಸಲ್ಲಿಸಿದರು.

ಕನ್ನಡದ ಗಂಧವೇ ಇರದಿದ್ದ ಕಸ್ತೂರಿಯವರು ಕನ್ನಡವನ್ನು ಚೆನ್ನಾಗಿ ಕಲಿತು, ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿ, ಕನ್ನಡದ ಸತ್ತ್ವವನ್ನರಿತುಕೊಂಡು ಕನ್ನಡ ಭಾಷೆಯ ಮರ್ಜಿಯನ್ನು ಹಿಡಿದರು. ಕನ್ನಡದ ಆಡುಭಾಷೆಯ ಬನಿಯನ್ನು ಸಂಪೂರ್ಣ ಸಾಕ್ಷಾತ್ಕರಿಸಿಕೊಂಡರು. ಅತ್ಯಂತ ಜೀವಂತ ಎನಿಸುವ ಶೈಲಿಯಲ್ಲಿ ಹಾಸ್ಯಕೃತಿಗಳನ್ನೂ ಇತರ ಪ್ರಕಾರಗಳ ಸಾಹಿತ್ಯವನ್ನೂ ಇವರು ರಚಿಸಿದ್ದು ಆಶ್ಚರ್ಯಕರ ಸಂಗತಿ. ಹರಟೆ, ಪ್ರಬಂಧ, ಪ್ರಹಸನ, ನಾಟಕ, ಕಾದಂಬರಿ, ಇತಿಹಾಸ, ಮಕ್ಕಳ ಸಾಹಿತ್ಯ, ಕಾವ್ಯ, ಅನುವಾದ – ಹೀಗೆ ನಾನಾ ಕ್ಷೇತ್ರಗಳಲ್ಲಿ ಇವರು ಕೈಯಾಡಿಸಿ ಅನನ್ಯ ಎನಿಸುವಂಥ ಶ್ರೇಷ್ಠಕೃತಿಗಳನ್ನು ರಚಿಸಿದರು. ಕನ್ನಡದ ಕಸ್ತೂರಿ ಎಂದರೆ ಇವರೇ ಎನಿಸುವಂಥ ಸಾಧನೆಗೈದರು.

ಇವರ ಮೊತ್ತಮೊದಲ ಪ್ರಕಟಿತ ಕೃತಿ ಪಾತಾಳದಲ್ಲಿ ಪಾಪಚ್ಚಿ (1943). ಇಂಗ್ಲಿಷಿನಲ್ಲಿ ಚಾರ್ಲ್ಸ್ ಲುಡ್ವಿಗ್ ರಚಿಸಿದ ಆಲಿಸ್ ಇನ್ ವಂಡರ್‌ಲ್ಯಾಂಡ್ ಎಂಬ ಕೃತಿಯ ರೂಪಾಂತರ. ಈ ಕೃತಿ ಸ್ವತಂತ್ರ ಎಂಬಷ್ಟು ಮನೋಜ್ಞವಾಗಿದೆ. ಇದು ಮಕ್ಕಳ ಸಾಹಿತ್ಯ ಎನಿಸಿಕೊಂಡರೂ ಎಲ್ಲ ವಯಸ್ಸಿನವರನ್ನೂ ರಂಜಿಸುವಂಥದು. ಇದಕ್ಕೆ ಒಂದು ವರ್ಷ ಮುಂಚೆ ಇವರು ಮೈಸೂರು ವಿಶ್ವವಿದ್ಯಾನಿಲಯ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದ 'ಕಾಡಾನೆ' ಪಿ.ಜಿ.ವುಡ್‌ಹೌಸ್‌ನ ಇಂಗ್ಲಿಷ್ ಕೃತಿಯಿಂದ ಪ್ರೇರಿತವಾದ ಪ್ರಹಸನ. ಷಹಜಹಾನ್ ಎಂಬುದು ಮಲಯಾಳಂ ಭಾಷೆಯ ನಾಟಕ. ಇವರು ಕೇರಳದಲ್ಲಿ ಅಧ್ಯಾಪಕರಾಗಿದ್ದಾಗ ಬರೆದು ಆಡಿಸಿದ್ದ ಹೆಡ್‌ಮಾಸ್ಟರ್ಸ್ ಡಾಟರ್ ಎಂಬುದು ಇಂಗ್ಲಿಷ್ ನಾಟಕ. ಕನ್ನಡದಲ್ಲಿ ಇವರ ಪ್ರಸಿದ್ಧ ನಾಟಕಗಳಿವು: ಗಗ್ಗಯ್ಯನ ಗಡಿಬಿಡಿ, ವರಪರೀಕ್ಷೆ, ತಾಪತ್ರಯ ತಪ್ಪಿತು, ಬ್ಯಾಂಕಿನ ದಿವಾಳಿ, ರಾಮಕೃಷ್ಣಯ್ಯನ ದರ್ಬಾರು ಮತ್ತು ಚಿತ್ರವಿಚಿತ್ರ. ಗಗ್ಗಯ್ಯನ ಗಡಿಬಿಡಿ ಅತ್ಯಂತ ಹೆಚ್ಚಿನ ಜನಪ್ರಿಯತೆ ಗಳಿಸಿದ ನಾಟಕ.

ಕಸ್ತೂರಿಯವರ ಹರಟೆಗಳೂ ಪ್ರಬಂಧಗಳೂ ಇತರ ಬಗೆಯ ನಗೆರಬಹಗಳೂ ಲೆಕ್ಕವಿಲ್ಲದಷ್ಟು. ಯದ್ವಾತದ್ವಾ, ಅಲ್ಲೋಲ್ಲ ಕಲ್ಲೋಲ, ಉಪಾಯವೇದಾಂತ, ಡೊಂಕುಬಾಲ, ಕೆಂಪ ಮೈಸೂರಿಗೆ ಹೋದದ್ದು – ಇವು ಸಂಕಲನಗಳು. ಇವುಗಳಲ್ಲಿ ಕೊನೆಯದು ನವಸಾಕ್ಷರರಿಗಾಗಿ ಹಾಗೂ ಮಕ್ಕಳಿಗಾಗಿ ರಚಿಸಿದ್ದು.

ಕಾದಂಬರಿ ಹಾಗೂ ಜೀವನಚರಿತ್ರೆಗಳ ಕ್ಷೇತ್ರಗಳಲ್ಲೂ ಇವರು ಹಲವು ಪುಸ್ತಕಗಳನ್ನು ರಚಿಸಿದ್ದಾರೆ. ಗಾಳಿಗೋಪುರ, ಶಂಖವಾದ್ಯ, ಗೃಹದಾರಣ್ಯಕ, ರಂಗನಾಯಕಿ, ಚೆಂಗೂಲಿ ಚೆಲುವೆ, ಚಕ್ರದೃಷ್ಟಿ–ಇವು ಕಾದಂಬರಿಗಳು. ದಿ ಲಿವಿಂಗ್ ಗಾಡ್ ಎಂಬುದು ಇಂಗ್ಲಿಷಿನಲ್ಲಿ ರಚಿಸಿದ ಜೀವನಚರಿತ್ರೆ. ಇದರಲ್ಲಿ ಸತ್ಯಸಾಯಿಬಾಬಾ ಅವರ ಹಾಗೂ ಮುಪ್ಪಿನಲ್ಲಿ ಬಾಬಾ ಅವರ ಆಶ್ರಮದಲ್ಲಿ ನೆಮ್ಮದಿಯನ್ನು ಕಂಡುಕೊಳ್ಳಲು ಯತ್ನಿಸಿದ ಕಸ್ತೂರಿ ಅವರ ಜೀವನದ ಎಳೆಗಳಿವೆ. ಇದು ಕನ್ನಡಕ್ಕೂ ಅನುವಾದಗೊಂಡಿದೆ. ಕೇರಳ ಇನ್ ಕರ್ನಾಟಕ ಎಂಬುದು ಇವರು ಇಂಗ್ಲಿಷಿನಲ್ಲಿ ರಚಿಸಿದ ಸಂಶೋಧನ ಪ್ರಬಂಧ. ದಿ ಲಾಸ್ಟ್ ರಾಜಾಸ್ ಆಫ್ ಕೂರ್ಗ್ ಇನ್ನೊಂದು ಸಂಶೋಧನಾತ್ಮಕ ಕೃತಿ. ಅಶೋಕ ಎಂಬುದು ಅಶೋಕ ಚಕ್ರವರ್ತಿಯ ಜೀವನಚರಿತ್ರೆ. ಅಣಕುಮಿಣುಕು ಇವರ ಕವನ ಸಂಕಲನ. ಅನರ್ಥಕೋಶ ಎಂಬುದರಲ್ಲಿ ಕನ್ನಡದ ಹಲವು ಶಬ್ದಗಳಿಗೆ ಇವರು ತಿರುಚಿದ ಅರ್ಥ ನೀಡಿ ನಗೆಯ ಹೊಗೆಯಾಡಿಸಿದ್ದಾರೆ. ಹಾಸ್ಯರಸವನ್ನು ಹಿಂಡಿದ್ದಾರೆ. ವ್ಯಂಗ್ಯ, ಕಟಕಿ, ಹಾಸ್ಯಗಳನ್ನು ಎರಚಾಡಿದ್ದಾರೆ, ನುಡಿಯ ಲಾಸ್ಯವನ್ನು ಮಿಂಚಿಸಿದ್ದಾರೆ. ಈ ಅನರ್ಥಕೋಶ ಪ್ರಕಾರವನ್ನು ಫಿಕ್ಷನರಿ ಎಂದು ಕರೆದಿದ್ದಾರೆ. ಗಂಭೀರವಾದ ಡಿಕ್ಷನರಿಗೆ (ನಿಘಂಟು) ಇದಿರಾಗಿ ಇವರು ರಚಿಸಿದ ಕಲ್ಪನಾ ಲಹರಿಯಿದು. ಲಗುಬಗೆಯ ಬಗೆಬಗೆಯ ನಗೆಯ ಗುಂಫನವಿದು.

ಕಸ್ತೂರಿಯವರು ಕನ್ನಡಕ್ಕೆ ಅನುವಾದ ಮಾಡಿದ ಅಥವಾ ರೂಪಾಂತರಿಸಿದ ಕೃತಿಗಳೂ ಹಲವಾರಿವೆ. ದಿಲ್ಲೀಶ್ವರನ ದಿನಚರಿ, ಬಾಬರನ ದಿನಚರಿ, ಚೇರ್‍ನ್ ಪೆರುಮಾಳ್ (ಕಾದಂಬರಿ), ಕೃಷ್ಣ ಮೆನನ್, ಚೈನಾ ಜಪಾನ್ ಕಥೆಗಳು, ನೊಂದಜೀವಿ (ವಿಕ್ಟರ್ ಹ್ಯೂಗೋನ ಲೇ ಮಿಸರಬೆಲ್ ಕಾದಂಬರಿ) ಮತ್ತು ಕೋಹಂ ಸೋದರಿ– ಈ ಕೆಲವನ್ನು ಹೆಸರಿಸಬಹುದು. ಇವರು ರಾ.ಶಿ.ಯವರ ಕೊರವಂಜಿ ಎಂಬ ಹಾಸ್ಯ ಪ್ರಧಾನ ಮಾಸಪತ್ರಿಕೆಗಾಗಿಯೂ ಹಲವು ವರ್ಷಗಳ ಕಾಲ ಬೇರೆ ಬೇರೆ ಹೆಸರುಗಳಲ್ಲಿ ನಗೆಬರೆಹಗಳನ್ನು ಬರೆದರು.

ಇವರ ಕೃತಿಗಳ ಪ್ರಧಾನ ಲಕ್ಷಣವೆಂದರೆ ನಗೆ. ಅದು ಬಹುತೇಕ ಪರಿಶುದ್ಧವಾದದ್ದು, ಇವರ ಹಾಸ್ಯದಲ್ಲಿ ನಂಜು ಸುಳಿವಿಲ್ಲ. ಹಗುರವಾದ ವಿಡಂಬನೆಯ ಛಾಯೆ ಕಂಡುಬಂದರೂ ಅದು ಅನುಕಂಪದಿಂದ ಕೂಡಿರುತ್ತದೆ. ಇವರಂತೆ ಹಾಸ್ಯದಲ್ಲಿ ಸಿದ್ಧಿ ಪಡೆದ ಲೇಖಕರು ಬಲು ವಿರಳ. ಇವರು ಹಲವಾರು ಪ್ರಯೋಗಗಳನ್ನೂ ಮಾಡಿದರು. ಚಕ್ರದೃಷ್ಟಿ ಕಾದಂಬರಿಯ ತಂತ್ರ ವಿಶಿಷ್ಟವಾದ್ದು. ಕಾದಂಬರಿಯ ನಾಯಕನ ವ್ಯಕ್ತಿತ್ವವನ್ನು ಬೇರೆ ಬೇರೆ ಪಾತ್ರಗಳ ದೃಷ್ಟಿಯಿಂದ ಕಾಣಿಸಲು ಇಲ್ಲಿ ಇವರು ಯತ್ನಿಸಿದ್ದಾರೆ. ಹಳೆಯ ಸಂಪ್ರದಾಯವನ್ನು ಲೇವಡಿ ಮಾಡುವ, ಮೂರ್ಖತನವನ್ನು ಬಯಲಿಗೆಳೆಯುವ ಪ್ರಯತ್ನ ಅಲ್ಲಲ್ಲಿ ಕಂಡುಬಂದರೂ, ಯಾರ ಮನಸ್ಸನ್ನೂ ನೋಯಿಸದ ರೀತಿಯಲ್ಲಿ ಪರಿಸ್ಥಿತಿಯನ್ನೋ ವ್ಯಕ್ತಿಯನ್ನೋ ಟೀಕೆಗೆ ಒಳಪಡಿಸುವ ಇವರ ಬರೆಹದಲ್ಲಿ ಬಾಣದ ತೀಕ್ಷ್ಣತೆಯ ಜೊತೆಗೆ ಡೊಂಕನ್ನು ತಿದ್ದುವ ನಯಗಾರಿಕೆಯೂ ಸಮ್ಮೋಹಕ ಗುಣವೂ ಇರುವುದರಿಂದ ಎಲ್ಲರಿಗೂ ಇದು ಆಪ್ಯಾಯಮಾನವಾಗಿರುತ್ತದೆ.

ಇವರು ಸಮಾಜಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೈಸೂರಿನಲ್ಲಿ ವಯಸ್ಕರಿಗೆ ರಾತ್ರಿ ಶಾಲೆ ನಡೆಸಿದರು. ವಿದ್ಯಾರ್ಥಿಗಳೊಂದಿಗೂ ಸಹೋದ್ಯೋಗಿಗಳೊಂದಿಗೂ ಹತ್ತಿರದ ಗ್ರಾಮಗಳಿಗೆ ಹೋಗಿ ಅಲ್ಲಿಯ ಜನಕ್ಕೆ ಶುಚಿತ್ವ ಹಾಗೂ ಉತ್ತಮ ಜೀವನದ ಬಗ್ಗೆ ತಿಳಿವಳಿಕೆ ನೀಡಿದರು. ಜೊತೆಯವರೊಂದಿಗೆ ಗ್ರಾಮಸೇವೆಯಲ್ಲಿ ತೊಡಗಿದರು. ಇವರೊಬ್ಬ ಶ್ರೇಷ್ಠ ವಾಗ್ಮಿಗಳಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಹಲವಾರು ಸ್ಥಳಗಳಲ್ಲಿ ವಿವಿಧ ಜ್ಞಾನ ಕ್ಷೇತ್ರಗಳ ವಿಷಯಗಳನ್ನು ಕುರಿತಂತೆ ಪ್ರಚಾರೋಪನ್ಯಾಸಗಳನ್ನು ನೀಡಿದರು. ಹರಿಜನರ ಶ್ರೇಯಸ್ಸಿಗಾಗಿ ದುಡಿದರು. ಮೈಸೂರಿನಲ್ಲಿ ಶ್ರೀರಾಮಕೃಷ್ಣಾಶ್ರಮದ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದರು. ರೋವರ್ಸ್ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು.

ಇವರು ಜೀವನದಲ್ಲಿ ಹಲವಾರು ಕಷ್ಟಗಳನ್ನು ಎದುರಿಸಿದವರು. ಆರು ವರ್ಷದವರಾಗಿದ್ದಾಗ ತಂದೆ ತೀರಿಕೊಂಡರು. ಇವರು ಜನಿಸಿದಾಗ ಕೈಕಾಲುಗಳಲ್ಲಿ ತಲಾ ಆರು ಬೆರಳುಗಳಿದ್ದುವಂತೆ. ನಾಲ್ಕು ಹೆಚ್ಚಿನ ಬೆರಳುಗಳು ಅನಿಷ್ಟಕಾರಕ ಎನಿಸಿ ಅವರ ಅಜ್ಜಿ ಆ ಬೆರಳುಗಳನ್ನು ಕತ್ತರಿಸಿ ಹಾಕಿದರಂತೆ. ಇದರಿಂದ ಇವರು ತೊಂದರೆ ಅನುಭವಿಸಬೇಕಾಗಿ ಬಂತು. ಕೊನೆಗೂ ಪ್ರಾಣಾಪಾಯದಿಂದ ಪಾರಾದರು. 1947ರಲ್ಲಿ ಇವರ ಒಬ್ಬ ಪುತ್ರ ತೀರಿಕೊಂಡ. ಆ ವೇಳೆಗೆ ಕಸ್ತೂರಿಯವರ ಮನಸ್ಸು ಆಧ್ಯಾತ್ಮಿಕದ ಕಡೆಗೆ ಒಲಿಯತೊಡಗಿತ್ತು. 1948ರಲ್ಲಿ ಇವರು ಪುಟ್ಟಪರ್ತಿಯಲ್ಲಿ ಸಾಯಿಬಾಬಾ ಆಶ್ರಮ ಸೇರಿ ತಮ್ಮ ಜೀವನದ ಕೊನೆಯವರೆಗೂ ಅಲ್ಲೇ ಇದ್ದರು. ಬಾಬಾ ಅವರ ಉಪನ್ಯಾಸಗಳನ್ನೂ ಪ್ರವಚನಗಳನ್ನೂ ಸಂಗ್ರಹಿಸಿ, ಇಂಗ್ಲಿಷಿಗೂ ಕನ್ನಡಕ್ಕೂ ಅನುವಾದಿಸಿದರು. ಇವರು 1987 ಆಗಸ್ಟ್ 14ರಂದು ನಿಧನರಾದರು. (ಎಚ್.ಎಸ್.ಕೆ.)

**ಕಸ್ತೂರಿಮೃಗ :** ಸರ್ವಿಡೀ ಕುಟುಂಬದ ಮಾಸ್ಕೈನೀ ಉಪಕುಟುಂಬಕ್ಕೆ ಸೇರಿದ ಒಂದು ಪರ್ವತವಾಸಿ ಪ್ರಾಣಿ (ಮಸ್ಕ್ ಡೀರ್). ಜಿಂಕೆಗಳಿಗೆ ಹತ್ತಿರದ ಸಂಬಂಧಿ. ಇದರ ವೈಜ್ಞಾನಿಕ ಹೆಸರು ಮಾಸ್ಕಸ್ ಮಾಸ್ಕಿಫೆರಸ್. ಇದರಿಂದ ಪಡೆಯಲಾಗುವ ಕಸ್ತೂರಿಗಾಗಿ ಇದು ಪ್ರಸಿದ್ಧಿಯಾಗಿದೆ. ಮಧ್ಯ ಏಷ್ಯದ ಪರ್ವತ ಪ್ರದೇಶಗಳ ಮೂಲವಾಸಿ ಇದು. ಹಿಮಾಲಯದ ಗಿಲ್ಗಿಟ್‌ನಿಂದ ಹಿಡಿದು ಟಿಬೆಟ್, ವಾಯುವ್ಯ ಚೀನಗಳ ಮುಖಾಂತರ ಸೈಬೀರಿಯದವರೆಗೂ ಇದರ ವ್ಯಾಪ್ತಿಯಿದೆ. ಇದು ಸಾಧಾರಣವಾಗಿ ಭೂರ್ಜಸಸ್ಯಗಳ ಕಾಡಿನಲ್ಲಿಯೇ ವಾಸಿಸುತ್ತದೆ. ಇದು ಜಿಂಕೆಗಳಿಗೂ ಸಾರಂಗಗಳಿಗೂ ನಡುವಣ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಇದರ ಮೈಮಾಟ ಅಷ್ಟು ಚೆಲುವಾಗಿಲ್ಲ. ಸುಮಾರು (20"–24") ಎತ್ತರ ಬೆಳೆಯುತ್ತದೆ. ತೂಕ ಸುಮಾರು (20) ಪೌಂ. ಮೈಬಣ್ಣ ಕಂದು ಮತ್ತು ಬೂದು ಬಣ್ಣಗಳ ಮಿಶ್ರಣ. ಮೈಮೇಲೆಲ್ಲ ಬಿರುಸಾದ



ಕೂದಲುಗಳಿವೆ. ಕಾಲುಗಳು ನಿಡಿದಾಗಿವೆ. ಹಿಂಗಾಲುಗಳು ಮುಂದಿನವಕ್ಕಿಂತ ಹೆಚ್ಚು ಉದ್ದ. ಕೊಂಬುಗಳಿಲ್ಲ, ಕಿವಿಗಳು ದೊಡ್ಡವು, ಬಾಲ ಬಹಳ ಮೊಟಕಾದುದು. ಗಂಡಿನಲ್ಲಿ ಮೇಲ್ದವಡೆಯ ಕೋರೆಹಲ್ಲುಗಳು ಬಾಯಿಯಿಂದ ಹೊರಚಾಚಿ ದಾಡೆಗಳಂತಿವೆ. ಮೃಗ ಇವನ್ನು ತನ್ನ ರಕ್ಷಣೆಗಾಗಿ ಬಳಸಿಕೊಳ್ಳುತ್ತದೆ.

ಕಸ್ತೂರಿಮೃಗ ಸಾಮಾನ್ಯವಾಗಿ ಒಂಟಿಯಾಗಿರುವುದೇ ಹೆಚ್ಚು. ಒಮ್ಮೊಮ್ಮೆ ಗಂಡುಹೆಣ್ಣುಗಳು ಜೋಡಿಯಾಗಿ ಓಡಾಡುತ್ತವೆ. ಪುಕ್ಕಲು ಸ್ವಭಾವದ ಪ್ರಾಣಿಯಿದು. ಹಗಲೆಲ್ಲ ದಟ್ಟಪೊದೆಗಳಲ್ಲಿ ಅಡಗಿದ್ದು ಸಂಜೆಯಾದ ಅನಂತರ ಆಹಾರಕ್ಕಾಗಿ ಹೊರಬರುತ್ತದೆ.

ಹುಲ್ಲು, ಎಲೆ, ಕಲ್ಲುಹೂ ಮುಂತಾದವು ಇದರ ಆಹಾರ. ಹಿಮಾಲಯದಲ್ಲಿನ ಕಸ್ತೂರಿಮೃಗ ವಿಶ್ರಮಿಸುವುದಕ್ಕೆಂದು ಮೊಲಗಳಂತೆ ಹಕ್ಕೆಗಳನ್ನು ನಿರ್ಮಿಸಿಕೊಳ್ಳುತ್ತದೆ.

ಗಂಡುಹೆಣ್ಣುಗಳ ಸಂಭೋಗ ಕಾಲ ಜನವರಿ ತಿಂಗಳು, ಸುಮಾರು 6 ತಿಂಗಳ ಅನಂತರ ಮರಿಗಳು ಹುಟ್ಟುತ್ತವೆ. ಒಂದು ಸೂಲಿಗೆ ಪ್ರಾಯಶಃ ಒಂದೇ ಮರಿ ಹುಟ್ಟುತ್ತದೆ.

ಗಂಡು ಕಸ್ತೂರಿಮೃಗದಲ್ಲಿ ಹೊಟ್ಟೆಯ ಭಾಗದಲ್ಲಿ ಚರ್ಮದೊಳಗೆ ಸುಮಾರು ಒಂದು ನಿಂಬೆಯ ಹಣ್ಣಿನ ಗಾತ್ರದ ಕೋಶದಂತಿರುವ ಗ್ರಂಥಿಯೊಂದುಂಟು. ಇದಕ್ಕೆ ಜನನೇಂದ್ರಿಯದ ಬಳಿ ಹೊರದೆರೆಯುವಂಥ ದ್ವಾರವಿದೆ. ಕಸ್ತೂರಿಯಿರುವುದು ಇದರಲ್ಲಿಯೇ. ಹೆಣ್ಣುಗಳನ್ನು ಆಕರ್ಷಿಸಲು ಇರುವ ಪ್ರಮುಖ ಸಾಧನ ಕಸ್ತೂರಿ. ಸಾಮಾನ್ಯವಾಗಿ ಪೂರ್ಣ ಬೆಳೆದ ಗಂಡಿನಿಂದ ಸುಮಾರು 1½-2 ಔನ್ಸ್ ಕಸ್ತೂರಿ ದೊರೆಯುತ್ತದೆ. ಸಂತಾನವೃದ್ಧಿಯ ಕಾಲದಲ್ಲಿ ಕಸ್ತೂರಿಯ ಪ್ರಮಾಣ ಗಣನೀಯವಾಗಿರುತ್ತದೆ. ಕಸ್ತೂರಿಗಾಗಿ ಈ ಮೃಗವನ್ನು ಬಹಳ ಕಾಲದಿಂದಲೂ ಬೇಟೆಯಾಡುತ್ತ ಬಂದಿರುವುದರಿಂದ ಇವುಗಳ ಸಂಖ್ಯೆ ಕ್ಷೀಣವಾಗಿದೆ (**ನೋಡಿ– ಕಸ್ತೂರಿ–2**). (ಎ.)

**ಕಸ್ತೂರಿರಂಗ ಐಯ್ಯಂಗಾರ್ :** 1859–1923. ಭಾರತೀಯ ಪತ್ರಿಕೋದ್ಯಮಿ, ವಕೀಲ, ರಾಜಕಾರಣಿ. ತಂಜಾವೂರಿನ ಅರಸರ ಖಾಸಾಸೇವೆಯಲ್ಲಿದ್ದ ಶೇಷ ಐಯಂಗಾರ್ಯರ ಮೂರನೆಯ ಮಗ. ಜನನ: 1859ರ ಡಿಸೆಂಬರ್ 15. ಪ್ರಾಥಮಿಕ ವಿದ್ಯಾಭ್ಯಾಸ ಇಣಂಬೂರು ಮತ್ತು ಕಪಿಸ್ಥಳಂ ಗ್ರಾಮಗಳಲ್ಲಿ. ಕುಂಭಕೋಣಂ ಪ್ರಾಂತೀಯ ಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಮಾಡಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು ಸೇರಿ 1879 ರಲ್ಲಿ ಬಿ.ಎ. ಪದವೀಧರರಾದರು. 1881 ರಲ್ಲಿ ಸಬ್–ರಿಜಿಸ್ಟ್ರಾರ್ ಕೆಲಸಕ್ಕೆ ಸೇರಿ ಅಲ್ಲಿದ್ದುಕೊಂಡೇ ಬಿ.ಎಲ್. ಪರೀಕ್ಷೆ ಮಾಡಿದರು. ತರುವಾಯ ಕೆಲಸಕ್ಕೆ ರಾಜಿನಾಮೆ ಕೊಟ್ಟು, ಪ್ರಸಿದ್ಧ ವಕೀಲರಾಗಿದ್ದ ವಿ. ಭಾಷ್ಯಂ ಐಯಂಗಾರ್ಯರಲ್ಲಿ ವಕೀಲಿ ತರಬೇತಿ ಪಡೆಯಲು ಮದ್ರಾಸಿನಲ್ಲಿ ನಿಂತರು. ಅಲ್ಲಿದ್ದ ಕಾಲದಲ್ಲಿ ಅವರಿಗೆ ರಾಜಕೀಯದಲ್ಲಿ ಅಭಿರುಚಿ ಹುಟ್ಟಿತು. 1884ರಲ್ಲಿ ಸ್ಥಾಪನೆಯಾದ ಮದ್ರಾಸು ಮಹಾಜನ ಸಭೆಯ ನಿರ್ಮಾಪಕರಲ್ಲಿ ಅವರೂ ಒಬ್ಬರು. ವೈಸ್‌ರಾಯ್ ರಿಪನ್ ಕಾಲದಲ್ಲಿ ಈ ಸಂಸ್ಥೆ ಜನಾಭಿಪ್ರಾಯವನ್ನು ವ್ಯಕ್ತಪಡಿಸುವುದರಲ್ಲಿ ಬಲಯುತವಾಗಿತ್ತು.

ಕಸ್ತೂರಿ ರಂಗ ಐಯಂಗಾರ್ಯರು ವಕೀಲವೃತ್ತಿ ನಡೆಸಲು ಕೊಯಮತ್ತೂರಿನಲ್ಲಿ ನೆಲಸಿದರು. ಹಿಂದೂ ಯುವಕನೊಬ್ಬನನ್ನು ಮತಾಂತರಗೊಳಿಸಿದ ಸಂಬಂಧವಾದ ಪಾದ್ರಿ ಮೊಕದ್ದಮೆಯಲ್ಲಿ ಅವರು ಆಪಾದಿತರನ್ನು ಬಯಲಿಗೆಳೆದು ತಮ್ಮ ವೃತ್ತಿಯಲ್ಲಿ ಖ್ಯಾತಿ ಗಳಿಸಿದರು. ಒಂಬತ್ತು ವರ್ಷ ಕೊಯಮತ್ತೂರಿನಲ್ಲಿದ್ದು, ಹೈಕೋರ್ಟಿನಲ್ಲಿ ವೃತ್ತಿ ಮುಂದುವರಿಸಲು 1894ರಲ್ಲಿ ಮದ್ರಾಸಿಗೆ ತೆರಳಿದರು; ಅಲ್ಲಿ ರಾಜಕೀಯದಲ್ಲಿ ಸಿಲುಕಿದ್ದರಿಂದ ಅವರಿಗೆ ವೃತ್ತಿಯನ್ನು ವೃದ್ಧಿಗೊಳಿಸಲಾಗಲಿಲ್ಲ. ತಮ್ಮ ಅಣ್ಣ ದಿವಾನ್ ಬಹದ್ದೂರ್ ಶ್ರೀನಿವಾಸರಾಘವರನ್ನು ಬರೋಡ ಮಹಾರಾಜರು ದಿವಾನರನ್ನಾಗಿ ನೇಮಿಸಿಕೊಂಡ ಎರಡು ಸಂದರ್ಭಗಳಲ್ಲೂ ಕಸ್ತೂರಿ ರಂಗ ಐಯಂಗಾರ್ಯರು ಅಣ್ಣನ ಪರವಾಗಿ ಮಾತುಕತೆ ನಡೆಸಲು ಬರೋಡಕ್ಕೆ ಹೋಗಿಬಂದರು.

ಕಸ್ತೂರಿ ರಂಗ ಐಯಂಗಾರ್ಯರು 1895ರಿಂದ ಹಿಂದೂ ಪತ್ರಿಕೆಯ (ನೋಡಿ– ಹಿಂದೂ) ನ್ಯಾಯ ವಿಷಯ ಸಲಹೆಗಾರರಾಗಿದ್ದು ಆಗಾಗ್ಗೆ ಪತ್ರಿಕೆಗೆ ಲೇಖನಗಳನ್ನೂ ಬರೆಯುತ್ತಿದ್ದರು. 1905ರಲ್ಲಿ ಪತ್ರಿಕೆ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿದ್ದ ಕಾಲದಲ್ಲಿ ಅದನ್ನು ತಾವೇ ಕೊಂಡು, ತಮ್ಮ ನೆರವಿಗಾಗಿ ನಂಟ ಎ. ರಂಗಸ್ವಾಮಿ ಐಯಂಗಾರ್ಯರನ್ನು ಸಹ ಸಂಪಾದಕರನ್ನಾಗಿ ನೇಮಿಸಿಕೊಂಡರು. ಅಂದಿನಿಂದ ಹಿಂದೂ ಪತ್ರಿಕೆಯೊಂದಿಗೆ ಅವರ ಜೀವನ ಹಾಸುಹೊಕ್ಕಾಗಿ, ದೇಶಸೇವೆ ಅವರ ಏಕೈಕ ಗುರಿಯಾಯಿತು.

ಕಸ್ತೂರಿ ರಂಗ ಐಯಂಗಾರ್ಯರು ರಾಯಿಟರ್ ವಾರ್ತಾ ಸಂಸ್ಥೆಯ ಚಂದಾದಾರರಾಗಿ ವಿಶ್ವವಾರ್ತೆಯನ್ನು ತಮ್ಮ ಪತ್ರಿಕೆಯನ್ನು ಪ್ರಕಟಿಸುತ್ತಿದ್ದುದಲ್ಲದೆ, ದೇಶದ ನಾನಾ ಕಡೆ ಸಂಭವಿಸುತ್ತಿದ್ದ ಘಟನೆಗಳ ಪ್ರಕಟಣೆಗೆ ವಿಶೇಷ ಗಮನಕೊಟ್ಟರು. ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಪಾರ್ಲಿಮೆಂಟಿನಲ್ಲಿ ಭಾರತ ಎಂಬ ವಿಭಾಗದಲ್ಲಿ ಪ್ರಕಟಿಸುತ್ತಿದ್ದರು. ಬ್ರಿಟಿಷರ ದಬ್ಬಾಳಿಕೆಯನ್ನು ಅವರು ನಿರ್ಭೀತಿಯಿಂದ ಪ್ರಕಟಿಸುತ್ತಿದ್ದರು. 1906ರಲ್ಲಿ ಬ್ರಿಟಿಷರ ಮಾಲೀಕತ್ವದಲ್ಲಿದ್ದ ಆರ್ಬತ್‌ನಾಟ್ ಸಂಸ್ಥೆ ಕುಸಿದು ಸಾವಿರಾರು ಜನ ನಷ್ಟಕ್ಕೊಳಗಾದಾಗ, ಬ್ರಿಟಿಷ್ ಸರ್ಕಾರ ಅವರಿಗೆ ಪರಿಹಾರ ನೀಡದೆ ಆಪಾದಿತರನ್ನು ರಕ್ಷಿಸಲು ಮಾಡಿದ ಪ್ರಯತ್ನಗಳನ್ನು ಅವರು ಕಟುವಾಗಿ ಟೀಕಿಸಿದರು.

1857ರ ಕ್ರಾಂತಿಯ ತರುವಾಯ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆ ಬಲವಾಗಿ ಬೇರೂರಿತು. ಬಂಗಾಳ ವಿಭಜನೆಯ ಬಗ್ಗೆ ಕಸ್ತೂರಿ ರಂಗ ಐಯಂಗಾರ್ಯರು ತಮ್ಮ ಪತ್ರಿಕೆಯನ್ನು ಬರೆದು, ಬಂಗಾಳ ವಿಭಜನೆ ಭಾರತದ ಏಕತೆಗೆ ತಳಪಾಯ ಹಾಕಿರುವುದಲ್ಲದೆ, ಜನರ ಆಕಾಂಕ್ಷೆಗಳನ್ನು ಮುರಿಯಲು ಲಾರ್ಡ್ ಕರ್ಜನ್ ಮಾಡಿರುವ ಪ್ರಯತ್ನ ಭಾರತೀಯರ ಸ್ವಾತಂತ್ರ್ಯಕ್ಕೆ ಅವಕಾಶ ಕಲ್ಪಿಸಿದೆ ಎಂದು ಘೋಷಿಸಿದರು. ಬ್ರಿಟಿಷರ ನೌಕಾ ವ್ಯಾಪಾರದ ವಿರುದ್ಧ ಭಾರತೀಯರು ನಡೆಸಿದ ಪೈಪೋಟಿಯಿಂದ ತಿರುನಲ್ವೇಲಿಯಲ್ಲಿ ಉಂಟಾದ ಭಾರಿ ಗಲಭೆಗೆ ಬ್ರಿಟಿಷರ ಅಸೂಯೆಯೇ ಕಾರಣವೆಂದು ತಿಳಿಸಿ, ಸರ್ಕಾರ ಮದ್ರಾಸಿನ ಹಲವಾರು ಪತ್ರಿಕೆಗಳ ಸಂಪಾದಕರನ್ನು ಬಂಧಿಸಿದಾಗ ಪತ್ರಿಕೆಗಳ ದಮನ ಕಾರ್ಯದಲ್ಲಿ ಹೊಸ ಯುಗ ಪ್ರಾರಂಭವಾಗಿದೆ ಎಂದು ಅವರು ಲೇಖಿಸಿದರು. ಬ್ರಿಟಿಷರ ದಬ್ಬಾಳಿಕೆ ಚಂಗಲ್‌ಪೇಟೆ ಸಲಾಂ ಘಟನೆಯಲ್ಲಿ ಮತ್ತೆ ವ್ಯಕ್ತವಾಯಿತು. ತನಗೆ ಅಸಭ್ಯರೀತಿಯಲ್ಲಿ ಸಲಾಂ ಹಾಕಿದನೆಂದು ಹುಡುಗನೊಬ್ಬನ ಬಗ್ಗೆ ಚಂಗಲ್‌ಪೇಟೆಯ ಮ್ಯಾಜಿಸ್ಟ್ರೇಟ್ ತಮ್ಮ ಅಧಿಕಾರಗಳನ್ನು ದುರುಪಯೋಗಿಸಿ ಜುಲ್ಮಾನೆ ವಿಧಿಸಿದಾಗ ಕಸ್ತೂರಿ ರಂಗ ಐಯಂಗಾರ್ಯರು ಮ್ಯಾಜಿಸ್ಟ್ರೇಟರ ವರ್ತನೆಯನ್ನು ಖಂಡಿಸಿದರು. ರೆವಿನ್ಯೂ ಮಂಡಲಿಯ ನಿಯಮಗಳನ್ನು ಮದ್ರಾಸು ಸರ್ಕಾರ ಹೊರಡಿಸಿದಾಗ, ಆ ನಿಯಮಗಳು ಅನುಸರಣೆಗಿಂತ ಉಲ್ಲಂಘನೆಯಲ್ಲಿಯೇ ಅಸ್ತಿತ್ವದಲ್ಲಿವೆ ಎಂದು ಹೇಳಿ ರೆವಿನ್ಯೂ ಅಧಿಕಾರಿಗಳ ಭ್ರಷ್ಟಾಚರಣೆಯನ್ನು ಸಾಕ್ಷ್ಯಗಳ ಸಮೇತ ಬಹಿರಂಗಪಡಿಸಿದರು.

ರಾಜಕೀಯದಲ್ಲಿ ತಿಲಕರ ಉಗ್ರಗಾಮಿ ಗುಂಪಿಗೆ ಸೇರಿದ ಕಸ್ತೂರಿ ರಂಗ ಐಯಂಗಾರ್ಯರು ಲಾಲಾ ಲಜಪತರಾಯ್ ಅವರ ಗಡೀಪಾರು, ಪತ್ರಿಕಾಸಂಪಾದಕರ ಮತ್ತು ವಿದ್ಯಾರ್ಥಿಗಳ ಮೇಲೆ ಕಾನೂನು ಕ್ರಮ, ಸಭೆಗಳನ್ನು ನಿಷೇಧಿಸಲು ತಂದ ಕಾನೂನುಗಳು–ಇವೆಲ್ಲ ಸರ್ಕಾರದ ದಬ್ಬಾಳಿಕೆಯ ಫಲವೆಂದು ತಿಳಿಸಿ, ಸ್ವದೇಶೀ ಚಳವಳಿಗೆ ಬೆಂಬಲವಿತ್ತರು. ತಿಲಕರನ್ನು ಬಂಧಿಸಿ ದೂರದ ಮಾಂಡಲೆಗೆ ಗಡಿಪಾರು ಮಾಡಿದಾಗ, ರಾಜಕೀಯ ಪ್ರಗತಿಯನ್ನೂ ಉತ್ತಮ ಸರ್ಕಾರವನ್ನೂ ಬಯಸುವ ಪ್ರತಿಯೊಬ್ಬರೂ ತಿಲಕರ ಬಂಧನದಿಂದ ವಿಸ್ಮಿತರಾಗಲೇಬೇಕು ಎಂದು ಹಿಂದೂ ಪತ್ರಿಕೆ ಅಭಿಪ್ರಾಯಪಟ್ಟಿತು. ಮಾರ್ಲೆ–ಮಿಂಟೊ ಸುಧಾರಣೆಗಳು ಜಾರಿಗೆ ಬಂದಾಗ ಅವನ್ನು ಕಸ್ತೂರಿ ರಂಗ ಐಯಂಗಾರ್ಯರು ಸ್ವಾಗತಿಸಿದರೂ ಬ್ರಿಟಿಷ್ ಸರ್ಕಾರ ಕೊಟ್ಟದ್ದನ್ನು ದೇಶದ ಪ್ರಾಂತೀಯ ಸರ್ಕಾರಗಳು ಕಸಿದುಕೊಳ್ಳಬಹುದೆಂದು ಶಂಕೆ ವ್ಯಕ್ತಪಡಿಸಿದರು. 1911 ರಲ್ಲಿ ನಡೆಯಲಿದ್ದ ದೆಹಲಿ ದರ್ಬಾರಿನಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಪತ್ರಿಕೋದ್ಯಮಿಗಳ ಬಗ್ಗೆ ತಾರತಮ್ಯ ತೋರಿಸಲಾಗುವುದಿಲ್ಲವೆಂಬ ಭರವಸೆಯ ಮೇಲೆಯೇ ಅವರು ತಮ್ಮ ಪತ್ರಿಕೆಯನ್ನು ಪ್ರತಿನಿಧಿಸಲು ದೆಹಲಿಗೆ ಹೋದದ್ದು.

1912ರಲ್ಲಿ ತಿಯಾಸೊಫಿಕ್ ಸೊಸೈಟಿಯ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ ವಿಷಯದ ಸಂಬಂಧದಲ್ಲಿ ಕಸ್ತೂರಿ ರಂಗ ಐಯಂಗಾರ್ಯರು ಸಂಬಂಧಪಟ್ಟವರಿಗೆ ಮಾನನಷ್ಟಕ್ಕಾಗಿ ಪರಿಹಾರ ಕೊಡಬೇಕಾದ ಪ್ರಸಂಗ ಬಂತು. ಈ ವ್ಯವಹಾರದಿಂದ ಅವರಿಗೂ ಶ್ರೀಮತಿ ಬೆಸೆಂಟರಿಗೂ ವೈಮನಸ್ಯವುಂಟಾದರೂ ಮುಂದಿನ ದಿನಗಳಲ್ಲಿ ಬೆಸೆಂಟರ ಸ್ನೇಹ ಅವರಿಗೆ ಲಭಿಸಿತು. 1913ರಲ್ಲಿ ಇಸ್ಲಿಂಗ್‌ಟನ್ ಆಯೋಗ ಸರ್ಕಾರಿ ಸೇವೆಗಳ ಸುಧಾರಣೆಯ ಬಗ್ಗೆ ಅಭಿಪ್ರಾಯಸಂಗ್ರಹಣೆಗೆ ಬಂದಾಗ ಅವರು ಐ.ಸಿ.ಎಸ್. ಪರೀಕ್ಷೆಯನ್ನು ಏಕಕಾಲದಲ್ಲಿ ಇಂಗ್ಲೆಂಡ್ ಮತ್ತು ಭಾರತಗಳಲ್ಲಿ ಏರ್ಪಡಿಸಬೇಕೆಂದೂ ಆಡಳಿತಾಂಗ ಮತ್ತು ಶಾಸಕಾಂಗಗಳನ್ನು ಪ್ರತ್ಯೇಕಿಸಿ ನ್ಯಾಯ ಇಲಾಖೆಯ ಉನ್ನತ ಹುದ್ದೆಗಳಿಗೆ ಭಾರತೀಯರನ್ನು ಸಹ ನೇಮಿಸಿಕೊಳ್ಳಬೇಕೆಂದೂ ಆಯೋಗಕ್ಕೆ ತಿಳಿಸಿದರು.

1914ರಲ್ಲಿ ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ ಕಸ್ತೂರಿರಂಗ ಐಯಂಗಾರ್ಯರು ಯುದ್ಧದ ಬಗ್ಗೆ ಹಿಂದೂ ಪತ್ರಿಕೆಯಲ್ಲಿ ಕೊಡುತ್ತಿದ್ದ ವಾರದ ಪಕ್ಷಿನೋಟವನ್ನು ಜನ ಕುತೂಹಲದಿಂದ ಓದುತ್ತಿದ್ದರು. ಆವರೆಗೆ ತಮ್ಮ ಪತ್ರಿಕೆಯಲ್ಲಿ ಕೆಲಸಮಾಡುತ್ತಿದ್ದ ಎ. ರಂಗಸ್ವಾಮಿ ಐಯಂಗಾರ್ಯರು ಸ್ವದೇಶ ಮಿತ್ರನ್ ಪತ್ರಿಕೆಯ ಸಂಪಾದಕರಾಗಲು 1915ರಲ್ಲಿ ಹೊರಟಾಗ, ತಮ್ಮ ಮಗ ಕೆ. ಶ್ರೀನಿವಾಸನ್ ಅವರನ್ನು ಪತ್ರಿಕೆಯ ಮೇಲ್ವಿಚಾರಣೆಗೆ ನೇಮಿಸಿದರು. ಟಿಲಕರು ಸೆರೆವಾಸದಿಂದ ಹಿಂತಿರುಗಿದ ಮೇಲೆ ಬೆಸೆಂಟರ ಸಲಹೆಯಂತೆ ಸ್ವರಾಜ್ಯ ಚಳವಳಿಗಾಗಿ 'ಹೋಂ ರೂಲ್ ಲೀಗ್' ಸ್ಥಾಪಿಸಿದಾಗ ಕಸ್ತೂರಿರಂಗ ಐಯಂಗಾರ್ಯರು ಈ ಸಂಘಕ್ಕೆ ಪೂರ್ಣ ಬೆಂಬಲವಿತ್ತರು. ಪ್ರಬಲವಾಗುತ್ತಿದ್ದ ಸ್ವರಾಜ್ಯ ಚಳವಳಿಯ ಬಗ್ಗೆ ಮದ್ರಾಸು ಗವರ್ನರ್ ವಿಧಾನ ಪರಿಷತ್ತಿನಲ್ಲಿ ಮಾಡಿದ ಭಾಷಣವನ್ನು ಟೀಕಿಸಿ ಗವರ್ನರರ ಭಾಷಣ ಸರ್ಕಾರದ ಭೀತಿಯನ್ನು ಸೂಚಿಸುತ್ತದೆ ಎಂದು ಐಯಂಗಾರ್ಯರು ತಿಳಿಸಿದರು. 1916ರಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಒಟ್ಟುಗೂಡಿ, ಆಡಳಿತಾಂಗ ಶಾಸಕಾಂಗದ ಅಧೀನವಾಗಿರಬೇಕೆಂದು ತಂದ ನಿರ್ಣಯದಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ಸ್ವರಾಜ್ಯ ಚಳವಳಿಯಲ್ಲಿ ಶ್ರೀಮತಿ ಬೆಸೆಂಟರು ಬಂಧಿತರಾಗಲು ದಕ್ಷಿಣ ಭಾರತಕ್ಕೆ ನಾಯಕರಿಲ್ಲದಂತಾಯಿತು. ಇಂಥ ವಿಹ್ವಲ ವೇಳೆಯಲ್ಲಿ ಕಸ್ತೂರಿರಂಗ ಐಯಂಗಾರ್ಯರು ತಮ್ಮ ಪತ್ರಿಕೆಯ ಕೆಲಸದೊಂದಿಗೆ ಪ್ರಾಂತೀಯ ಕಾಂಗ್ರೆಸಿನಲ್ಲಿ ಅಲ್ಲದೆ ಅಖಿಲ ಭಾರತ ಹಂತದಲ್ಲೂ ಸೇವೆ ಸಲ್ಲಿಸಲಾರಂಭಿಸಿದರು. ಬೆಸೆಂಟರನ್ನು ಬಂಧನದಿಂದ ಬಿಡಿಸಲು ಸತ್ಯಾಗ್ರಹವೇ ಬಲವಾದ ರಾಜಕೀಯ ಆಯುಧವೆಂದು ಅವರು ನಂಬಿದ್ದರು.

ಯುದ್ಧಕಾಲದಲ್ಲಿ ಜನರ ಮೇಲೆ ಪ್ರತಿಬಂಧಕಗಳನ್ನು ತರುವ ಕಾರ್ಯನೀತಿ ಹೊಂದಿದ್ದ ಬ್ರಿಟಿಷರು, ರಾಜದ್ರೋಹ ಚಳವಳಿಗಳ ಬಗ್ಗೆ ಸಾಕ್ಷ್ಯ ಸಂಗ್ರಹಿಸಲು ಜಸ್ಟಿಸ್ ರೌಲತನ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿದಾಗ ಕಸ್ತೂರಿರಂಗ ಐಯಂಗಾರ್ಯರು

ರೌಲತ್ ಸಮಿತಿಯ ವಿರುದ್ಧ ಪ್ರಚಾರಮಾಡಲು ಭಾರತೀಯ ಪೌರ ಹಕ್ಕು ಸಮಿತಿಯನ್ನು (ಇಂಡಿಯನ್ ಸಿವಿಲ್ ರೈಟ್ಸ್ ಕಮಿಟಿ) ಏರ್ಪಡಿಸಿದರು. ಯುದ್ಧಪರಿಸ್ಥಿತಿಯನ್ನು ವೀಕ್ಷಿಸಲು ಇಂಗ್ಲೆಂಡ್ ಸರ್ಕಾರ ಆಹ್ವಾನಿಸಿದ ಪತ್ರಿಕೋದ್ಯಮಿಗಳಲ್ಲಿ ಕಸ್ತೂರಿರಂಗ ಐಯಂಗಾರ್ಯರೂ ಒಬ್ಬರು. ಲಂಡನಿನಲ್ಲಿದ್ದಾಗ ಅವರು ಬ್ರಿಟಿಷ್ ರಾಜದಂಪತಿಗಳನ್ನು ಕಂಡರು. ಪತ್ರಿಕೋದ್ಯಮಿಗಳ ಸಂಘದಲ್ಲಿ ಮಾತನಾಡಿ, ಇಂಗ್ಲಿಷ್ ಜನ ಭಾರತದ ಪತ್ರಿಕೆಗೆ ಅಭಿಪ್ರಾಯಗಳಿಗೆ ಗಮನ ಕೊಡುತ್ತಿಲ್ಲವೆಂದು ವಿಷಾದಿಸಿದರು. ಆಗ ಹಿಂದೂ ಪತ್ರಿಕೆಗೆ ಇಂಗ್ಲೆಂಡಿನಲ್ಲಿ ಪ್ರವೇಶವಿಲ್ಲದಿದ್ದುದನ್ನು ಕುರಿತು 'ಮರಾಠ' ಪತ್ರಿಕೆ ಬರೆಯುತ್ತ, ಇಂಗ್ಲೆಂಡ್ ಸರ್ಕಾರ ಕಸ್ತೂರಿರಂಗ ಐಯಂಗಾರ್ಯರ ಲೇಖನಗಳನ್ನು ಬಹಿಷ್ಕರಿಸಿದರೂ ಅವರ ಭಾಷಣಗಳನ್ನು ತಿರಸ್ಕರಿಸಲಿಲ್ಲ ಎಂದಿತು.

ರೌಲತ್ ಸಮಿತಿಯ ವರದಿಯ ಮೇರೆಗೆ ರಚಿಸಿದ ಕಾನೂನುಗಳು ಲಷ್ಕರಿ ಮಾದರಿಯ ಸರ್ಕಾರಕ್ಕೆ ಎಡೆಕೊಡುತ್ತವೆ ಎಂದು ಹಿಂದೂ ಪತ್ರಿಕೆ ಬರೆಯಿತು. ಗಾಂಧೀಜಿ ಸತ್ಯಾಗ್ರಹ ಹೂಡಲು ನಿರ್ಧರಿಸಿದಾಗ ಅವರ ನಿಲುವನ್ನು ಜನತೆಗೆ ಪರಿಚಯ ಮಾಡಿಸಲು ಕಸ್ತೂರಿರಂಗ ಐಯ್ಯಂಗಾರ್ಯರು ಅವರನ್ನು ಮದರಾಸಿಗೆ ಆಹ್ವಾನಿಸಿದರು. 1919ರ ಏಪ್ರಿಲ್ 6 ರಂದು ದೇಶದಾದ್ಯಂತ ಹರತಾಳ ನಡೆಯಿತು. ಅದೇ ತಿಂಗಳು 14 ರಂದು ಜನರಲ್ ಡೈಯರನ ಕ್ರೌರ್ಯದಿಂದ ನೂರಾರು ಜನ ಜಲಿಯನ್ ವಾಲಾಬಾಗ್ ಪ್ರಕರಣದಲ್ಲಿ ಗುಂಡಿನೇಟಿಗೆ ತುತ್ತಾದರು. ಅಮೃತಸರದ ಈ ದುರಂತದ ಬಗ್ಗೆ ವಿಚಾರಣೆ ನಡೆಯಬೇಕೆಂದು ಹಿಂದೂ ಪತ್ರಿಕೆ ಒತ್ತಾಯಮಾಡಿತು. ಮದ್ರಾಸು ಸರ್ಕಾರ ಪತ್ರಿಕೆಯ ಮೇಲೆ ಕ್ರಮ ಜರುಗಿಸಿ ಜಾಮೀನು ಕೇಳಲು, ಪತ್ರಿಕೆಗಳ ಮೇಲೆ ಪ್ರತಿಬಂಧಕ ಹಾಕಿದರೆ ಸತ್ಯವಾದಿ ಪತ್ರಿಕೆಗಳೇ ನಾಶವಾಗುವುವು ಎಂದು ಕಸ್ತೂರಿರಂಗ ಐಯಂಗಾರ್ಯರು ಉತ್ತರಿಸಿದರು.

1920ರಲ್ಲಿ ಕಸ್ತೂರಿರಂಗ ಐಯಂಗಾರ್ಯರಿಗೆ ಅರವತ್ತು ವರ್ಷ ತುಂಬಿತು. ತಿಲಕರು ಇದೇ ವರ್ಷ ನಿಧನರಾಗಲು ದೇಶದ ನಾಯಕತ್ವ ಗಾಂಧೀಜಿಯವರ ಮೇಲೆ ಬಿದ್ದಿತು. ಅಸಹಕಾರ ಚಳವಳಿಯಲ್ಲಿ ಕಸ್ತೂರಿರಂಗ ಐಯಂಗಾರ್ಯರು ಗಾಂಧೀಜಿಯವರಿಗೆ ಬೆಂಬಲವಿತ್ತರೂ ಮಕ್ಕಳನ್ನು ಶಾಲೆಯಿಂದ ನಿಲ್ಲಿಸುವ ಮತ್ತು ವಕೀಲರು ತಮ್ಮ ವೃತ್ತಿಯನ್ನು ಬಿಡುವ ಬಗ್ಗೆ ಗಾಂಧೀಜಿಯವರ ಸಲಹೆಯನ್ನು ಒಪ್ಪಲಿಲ್ಲ. ತಮ್ಮ ಆಪ್ತಮಿತ್ರ ಸಿ. ಶಂಕರನಾಯರ್ ಅಭಿಪ್ರಾಯಭೇದದಿಂದ ಕಾಂಗ್ರೆಸ್ಸಿಗೆ ರಾಜಿನಾಮೆ ಕೊಟ್ಟಾಗ ಅವರು ಸ್ನೇಹ ಮತ್ತು ಕರ್ತವ್ಯಗಳ ನಡುವೆ ಶಿಕ್ಕಾಟಕ್ಕೊಳಗಾದರೂ ನಾಯರ್ ಅವರ ವರ್ತನೆಯನ್ನು ನಿಷ್ಪಕ್ಷಪಾತವಾಗಿ ಟೀಕಿಸಿದರು.

ಯುವ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಪತ್ರಿಕೋದ್ಯಮದಲ್ಲಿ ಯೋಗ್ಯ ಮಾರ್ಗದರ್ಶನ ನೀಡುತ್ತಿದ್ದು ಕಸ್ತೂರಿರಂಗ ಅಯ್ಯಂಗಾರ್ಯರ ಒಂದು ವಿಶೇಷ ಗುಣ.

ಮೈಸೂರಿನಲ್ಲಿ ದಿವಾನ್ ವಿ.ಪಿ. ಮಾಧವರಾಯರು 1908ರಲ್ಲಿ ಜಾರಿಗೆ ತಂದ ಪತ್ರಿಕಾ ನಿರ್ಬಂಧದ ಕಾನೂನನ್ನು ಪ್ರತಿಭಟಿಸಿ ಬೆಂಗಳೂರು ಮತ್ತು ಮೈಸೂರಿನ ಪತ್ರಿಕೆಗಳು ಪ್ರಕಟಣೆ ನಿಲ್ಲಿಸಿದವು. ಯುವ ಪತ್ರಕರ್ತ ಡಿ.ವಿ.ಗುಂಡಪ್ಪನವರು ಸ್ಟ್ಯಾಂಡರ್ಡ್ ಪತ್ರಿಕೆಯ ಸಂಪಾದಕರಾದ ಎಂ. ಶ್ರೀನಿವಾಸ ಅಯ್ಯಂಗಾರ್ಯರರ ಜೊತೆಯಲ್ಲಿ ಮದರಾಸಿಗೆ ಹೋಗಿ 'ಪ್ರೆಸ್ ಇನ್ ಮೈಸೂರು'. ಮೈಸೂರಿನಲ್ಲಿ ಪತ್ರಿಕೆಗಳು ಎಂಬ ಪುಸ್ತಕವನ್ನು ಅಚ್ಚು ಮಾಡಿಸಿದರು. ಆ ಸಂದರ್ಭದಲ್ಲಿ ಕಸ್ತೂರಿರಂಗ ಅಯ್ಯಂಗಾರ್ಯರನ್ನೂ ಭೇಟಿಯಾಗಿ ಅವರು ನೀಡಿದ ಮಾರ್ಗದರ್ಶನವನ್ನು ತಮ್ಮ 'ವೃತ್ತಪತ್ರಿಕೆ' ಯಲ್ಲಿ ವಿವರಿಸಿದ್ದಾರೆ.

'ನಾನು ಮದರಾಸಿನಲ್ಲಿದ್ದಾಗ ಇಟ್ಟುಕೊಂಡಿದ್ದ ಇನ್ನೊಂದು ಉಪವೃತ್ತಿ "ಹಿಂದೂ" ಪತ್ರಿಕೆಗೂ "ಇಂಡಿಯನ್ ಪೇಟ್ರಿಯಟ್" ಪತ್ರಿಕೆಗೂ ಪುಡಿ ಬರೆವಣಿಗೆಗಳನ್ನು ಬರೆಯುತ್ತಿದ್ದುದು.

"ಹಿಂದೂ" ಪತ್ರಿಕೆಯ ಸಂಪಾದಕರು ಕಸ್ತೂರಿರಂಗಯ್ಯಂಗಾರ್ಯರು. ಅವರು ಮಿತಭಾಷಿಗಳು, ಗಂಭೀರ ಸ್ವಭಾವದವರು. ಹೊರಗಡೆಗೆ ಬೆಣಚುಕಲ್ಲು, ಒಳಗಡೆ ಬೆಣ್ಣೆ. ನಾನು ಹೋದಾಗ ಒಂದು ದೊಡ್ಡ ರಿಪೋರ್ಟ್‌ನ್ನು ಮುಂದಿಟ್ಟು "ಇದನ್ನು ಸಂಗ್ರಹ ಮಾಡಿ ತಾ" "ಈ ಎರಡು ಪುಟಗಳ ಲೇಖನವನ್ನು ಅರ್ಧ ಪುಟಕ್ಕೆ ಇಳಿಸು"–ಎನ್ನುವರು. ನಾನು ಬರೆದ ಲೇಖನದಲ್ಲಿ ಮಾತುಗಳನ್ನು ನೀಲಿ ಸೀಸದ ಕಡ್ಡಿಯಿಂದ ಹೊಡೆದುಹಾಕಿ "ಈಗ ನೋಡು" ಎನ್ನುವರು. ಹೀಗೆ ತಿದ್ದಿದವರು ಅವರು.

"ಇಂಡಿಯನ್ ಪೇಟ್ರಿಯಟ್" ನಡಸುತ್ತಿದವರು ಕರುಣಾಕರ ಮೆನನ್. ಇವರು ಒಳ್ಳೆಯ ವಾಗ್ಮಿ, ಜನಾನುರಾಗಿ ಇವರಲ್ಲಿ ನಾನು ಬರೆದ ಲೇಖನ ಹೆಚ್ಚು ಬದಲಾವಣೆಯಿಲ್ಲದೆ ಅಂಗೀಕೃತವಾಗುತ್ತಿತ್ತು.

ನಾನು ಬರೆಯುತ್ತಿದ್ದದ್ದು ವಿಶೇಷವಾಗಿ ಮೈಸೂರಿನ ರಾಜಕೀಯವನ್ನು ಕುರಿತು. ಕೊಂಚ ಒರಟೊರಟಾಗಿಯೇ, ಹಸಿಹಸಿಯಾಗಿಯೇ ಬರೆಯುತ್ತಿದ್ದೆನೆಂದು ತೋರುತ್ತದೆ. ಆದದ್ದರಿಂದಲೇ ಕಸ್ತೂರಿರಂಗಯ್ಯಂಗಾರ್ಯರು ಅಂಕುಶವಿಡುತ್ತಿದ್ದರಬೇಕು. ಕರುಣಾಕರ ಮೇನನ್ ರವರು " ಅದೂ ಒಂದು ದೃಷ್ಟಿಯ ಜನಾಭಿಪ್ರಾಯ" ಎನ್ನುತ್ತಿದ್ದರು. ಕಸ್ತೂರಿರಂಗಯ್ಯಂಗಾರ್ಯರದು ತಿದ್ದಿ ಸಂಸ್ಕಾರಪಡಿಸುವ ಉದ್ದೇಶ. ಕರುಣಾಕರ ಮೇನನ್‌ರವರದು ಪ್ರೋತ್ಸಾಹಪಡಿಸುವ ಉದ್ದೇಶ. 18–20ರ ವಯಸ್ಸಿನಲ್ಲಿರುವವನಿಗೆ ಪ್ರೋತ್ಸಾಹ, ತಿದ್ದಾವಣೆ ಎರಡೂ ಅವಶ್ಯವಾದವೇ ತಾನೇ?"

ಸತ್ಯಾಗ್ರಹ ಪ್ರಚಾರಕಾರ್ಯದಲ್ಲಿ ಕಸ್ತೂರಿರಂಗ ಐಯಂಗಾರ್ಯರು ದೇಶದ ನಾನಾ ಭಾಗಗಳಲ್ಲಿ ಸಂಚಾರ ಮಾಡಿ ಬಂದರು. ಆ ಹೊತ್ತಿಗೆ ಅವರ ಆರೋಗ್ಯ ಕೆಟ್ಟಿತ್ತು. 1923ರಲ್ಲಿ ಹಿಂದೂ ದಿನಪತ್ರಿಕೆಯ ಪ್ರಸಾರ 17,000 ಕ್ಕೆ ಏರಿತ್ತು. ಮದ್ರಾಸಿನಲ್ಲಿ ಪ್ರಪ್ರಥಮ ರೋಟರಿ ಮುದ್ರಣ ಯಂತ್ರವನ್ನು ಸ್ಥಾಪಿಸಿದ್ದು ಹಿಂದೂ ಪತ್ರಿಕೆಯ ಮುದ್ರಣಕ್ಕಾಗಿ. ಐಯಂಗಾರ್ಯರ ದೇಹಸ್ಥಿತಿ ಸುಧಾರಿಸುವಂತಿರಲಿಲ್ಲವಾದರೂ ಅವರು ರೋಗಶಯ್ಯೆಯಿಂದಲೇ ಕಾಂಗ್ರೆಸ್ ಮತ್ತು ಹಿಂದೂ ಪತ್ರಿಕೆಯ ಕೆಲಸಗಳ ಬಗ್ಗೆ ಸಲಹೆಗಳನ್ನು ನೀಡುತ್ತಿದ್ದರು. 1923ರ ಡಿಸೆಂಬರ್ 12 ರಂದು ಬೆಳಗ್ಗೆ 5–45ರ ಸಮಯದಲ್ಲಿ ಅವರು ನಿಧನರಾದರು. 'ಟೈಂಸ್' ಪತ್ರಿಕೆ ಅವರನ್ನು ಪ್ರಭಾವಶಾಲಿ ಹಾಗೂ ಕ್ರಾಂತಿಕಾರ ಪತ್ರಿಕೋದ್ಯಮಿಗಳಲ್ಲಿ ಒಬ್ಬರು ಎಂದು ಶ್ಲಾಘಿಸಿತು. ಪತ್ರಿಕೋದ್ಯಮದಲ್ಲಿ ಏನೇನು ಶ್ರೇಷ್ಠವೂ ಅವನ್ನೆಲ್ಲ ಕಸ್ತೂರಿರಂಗ ಐಯಂಗಾರ್ಯರು ಹಿಂದೂ ಪತ್ರಿಕೆಗೆ ದೊರಕಿಸಿ ಅದನ್ನು ಅಂದಗೊಳಿಸಿದರು; ಶ್ರೇಷ್ಠಮಟ್ಟದ ಪತ್ರಿಕೆಯಾಗಿ ಮಾಡಿದರು. (ವಿ.ಜಿ.ಕೆ.)

**ಕಸ್ಸಪ :** (907–917). ಶ್ರೀಲಂಕಾ ಅಥವಾ ಈಗಿನ ಸಿಂಹಳ ದೇಶದ ಇತಿಹಾಸದಲ್ಲಿ ಪ್ರಸಿದ್ಧ ರಾಜ. 5ನೆಯ ಕಸ್ಸಪ ಅಭಯಶಿಲಾಮೇಘವರ್ಣ. ಆ ದೇಶದ ಪುರಾತನ ಗ್ರಂಥವಾದ ಮಹಾವಂಶದಲ್ಲಿ ಇವನ ಬಗ್ಗೆ ಕೆಲವು ವಿವರಗಳು ದೊರೆಯುತ್ತವೆ. ಈತ ಧರ್ಮಿಷ್ಠನೂ ನ್ಯಾಯಪರನೂ ಆಗಿ ರಾಜ್ಯಭಾರ ಮಾಡುತ್ತಿದ್ದನೆಂದು ಮಹಾವಂಶ ತಿಳಿಸುತ್ತದೆ. ಭಾರತದ ಇತಿಹಾಸದಲ್ಲೂ ಕಸ್ಸಪನ ಹೆಸರು ಬರುತ್ತದೆ. 10ನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಚೋಳರು ಪ್ರಬಲರಾಗಿ ತಮ್ಮ ನೆರೆಯವರಾದ ಪಾಂಡ್ಯರ ಮೇಲೆ ಆಗಾಗ್ಗೆ ದಾಳಿ ನಡೆಸುತ್ತಿದ್ದರು. 910 ರಲ್ಲಿ ಚೋಳ 1 ನೆಯ ಪರಾಂತಕ ಪಾಂಡ್ಯರ ರಾಜಧಾನಿ ಮಧುರೆಯನ್ನು ಗೆದ್ದು, ಮಧುರೈಕೊಂಡ ಎಂಬ ಬಿರುದನ್ನು ಪಡೆದ. ಆ ಸಂದರ್ಭದಲ್ಲಿ ಪಾಂಡ್ಯರಾಜ 2 ನೆಯ ಮಾರವರ್ಮನ್ ರಾಜಸಿಂಹ ಇವನ ಸಹಾಯವನ್ನು ಬೇಡಿದಾಗ ಕಸ್ಸಪ, ತನ್ನ ಮಂತ್ರಿ ಹಾಗೂ ಅಧಿಕಾರಿಗಳ ಸಲಹೆಯಂತೆ ಮಾರವರ್ಮನ್ ರಾಜಸಿಂಹನ ಸಹಾಯಕ್ಕೆ ಸೈನ್ಯವನ್ನು ಕಳುಹಿಸಿಕೊಟ್ಟ. ಕಸ್ಸಪನ ಸೇನೆಗೂ ಚೋಳರ ಸೇನೆಗೂ ವೆಳ್ಳೂರಿನಲ್ಲಿ ಭೀಕರ ಹೋರಾಟ ನಡೆದು ಚೋಳರ ಕೈ ಮೇಲಾಯಿತು. ಈ ಸಂದರ್ಭದಲ್ಲಿ ದಂಡಿನಲ್ಲಿ ಪ್ಲೇಗು ರೋಗ ತಲೆದೋರಿದುದರಿಂದ ಕಸ್ಸಪ ತನ್ನ ಸೈನ್ಯವನ್ನು ಹಿಂತಿರುಗಿಸಿಕೊಂಡನೆಂದು ಮಹಾವಂಶ ತಿಳಿಸುತ್ತದೆ.

ಈ ವಂಶಕ್ಕೆ ಸೇರಿದ ಮತ್ತೊಬ್ಬ ಕಸ್ಸಪ ದೊರೆ 11 ನೆಯ ಶತಮಾನದಲ್ಲಿ ದಕ್ಷಿಣ ಭಾರತದ ಚೋಳರೊಡನೆ ಯುದ್ಧ ನಡೆಸಿ ಸೋತನೆಂದು ಇತಿಹಾಸ ತಿಳಿಸುತ್ತದೆ. ಚೋಳರಿಂದ ಪರಾಜಿತನಾದ ಕಸ್ಸಪ ಸಿಂಹಳದ ಉತ್ತರಭಾಗವನ್ನು ಚೋಳರಿಗೆ ಬಿಟ್ಟುಕೊಟ್ಟು ದಕ್ಷಿಣದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದ. (ಎಸ್.ಕೆ.ಎಸ್.)

**ಕಳಚುರಿಗಳು :** 3 ನೆಯ ಶತಮಾನದಿಂದ ಸು. 1,200 ವರ್ಷಕಾಲ ಭಾರತದ ಚರಿತ್ರೆಯಲ್ಲಿ ಪಾತ್ರವಹಿಸಿದ ಮನೆತನದ ಅರಸರು. ಇವರು ಬೇರೆ ಬೇರೆ ರಾಜಧಾನಿಗಳಿಂದ ಆಳಿದರು. ಈ ವಂಶದ ಅತ್ಯಂತ ಪ್ರಾಚೀನ ಶಾಖೆ ಮಾಳ್ವ, ಗುಜರಾತ್ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ 6ನೆಯ ಶತಮಾನದಲ್ಲಿ ಅಧಿಕಾರದಲ್ಲಿತ್ತು. ಇವರಿಗೆ ಹೈಹಯರೆಂದು ಹೆಸರಿತ್ತು. ಇವರ ರಾಜಧಾನಿ ಯಾವುದೆಂದು ತಿಳಿದಿಲ್ಲವಾದರೂ ಶಾಸನಗಳನ್ನು ಉಜ್ಜಯಿನಿ, ವಿದಿಶ, ಆನಂದಪುರ (ಗುಜರಾತ್) ಮೊದಲಾದ ಸ್ಕಂಧಾವಾರಗಳಿಂದ ಹೊರಡಿಸಲಾಗಿತ್ತು. ನಿರ್ದಿಷ್ಟವಾಗಿ ತಿಳಿದು ಬಂದಿರುವ ರೀತ್ಯಾ ಕಳಚುರಿ ವಂಶಗಳಲ್ಲಿ ಮಾಹಿಷ್ಮತೀ, ತ್ರಿಪುರಿ, ಸರಯುಪಾರ, ರತ್ನಪುರ ಮತ್ತು ಕಲ್ಯಾಣಗಳಲ್ಲಿ ಆಳಿದ ರಾಜರು ಪ್ರಮುಖರು. ಕಳಚುರಿ ಎಂಬ ಶಬ್ದ ಕಟಚ್ಚುರಿ, ಕಲತ್ಸೂರಿ, ಕಳಚೂರ್ಯ, ಕಲಚ್ಚುಟಿ ಮುಂತಾದ ವಿವಿಧ ರೂಪಗಳಲ್ಲಿ ಕಾಣಬರುತ್ತದೆ.

**ಮಾಹಿಷ್ಮತೀ ಕಳಚುರಿಗಳು :** ಇವರು ಪ್ರಬಲರಾದದ್ದು 6ನೆಯ ಶತಮಾನದ ಉತ್ತರಾರ್ಧದಲ್ಲಿ. ಇವರ ರಾಜ್ಯ ಆಗ ಉತ್ತರ ಮಹಾರಾಷ್ಟ್ರ, ಗುಜರಾತ್ ಮತ್ತು ಮಾಳ್ವದ ಕೆಲವು ಭಾಗಗಳನ್ನೊಳಗೊಂಡಿತ್ತು. ಕೃಷ್ಣರಾಜ (550–75), ಅವನ ಮಗ ಶಂಕರಗಣ, ಮೊಮ್ಮಗ ಬುದ್ಧರಾಜ–ಈ ಮೂವರು ಕಳಚುರಿ ರಾಜರು ಈ ಕಾಲದಲ್ಲಿ ಆಳಿದವರೆಂದು

ಶಾಸನಗಳಿಂದ ತಿಳಿಯುತ್ತದೆ. ಪರಮ ಮಾಹೇಶ್ವರ ಕೃಷ್ಣರಾಜ ಎಂಬ ಶಾಸನವುಳ್ಳ ಮತ್ತು ನಂದಿಯ ಚಿತ್ರವುಳ್ಳ ಬೆಳ್ಳಿಯ ನಾಣ್ಯಗಳು ಗುಜರಾತ್, ಕೊಂಕಣ, ರಾಜಸ್ಥಾನ, ಮಾಳ್ವ, ವಿದರ್ಭ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿರುವುದರಿಂದ ಇವನ ರಾಜ್ಯ ಎಷ್ಟು ವಿಸ್ತಾರವಾಗಿತ್ತೆಂಬುದು ಗೊತ್ತಾಗುತ್ತದೆ. ಕೃಷ್ಣರಾಜನ ಮಗ ಶಂಕರಗಣ ಶಕ್ತನಾದ ದೊರೆ. ಇವನ ಕಾಲ (575–600). ಮಂಡಸರದ ಔಲಿಕವಂಶದ ಅರಸರನ್ನು ಶಂಕರಗಣ ಸೋಲಿಸಿದ. ನಾಸಿಕ ಜಿಲ್ಲೆಗೆ ಸೀಮಿತವಾಗಿದ್ದ ಕಳಚುರಿ ಪ್ರಭಾವವನ್ನು ಗುಜರಾತ್ ಮತ್ತು ಕಾಠಿಯಾವಾಡಗಳಿಗೆ ಹರಡಿದ ಕೀರ್ತಿ ಇವನಿಗೆ ಸೇರುತ್ತದೆ. ಸಮುದ್ರಗುಪ್ತನ ಅಲಹಾಬಾದ್ ಶಾಸನದ ಅನೇಕ ಭಾಗಗಳು ಇವನ ಶಾಸನಗಳಲ್ಲಿ ಕಾಣುವುದರಿಂದ, ಶಂಕರಗಣ ಗುಪ್ತ ರಾಜರ ಅಧೀನದಲ್ಲಿದ್ದ ಉತ್ತರ ಭಾರತದ ಭಾಗಗಳನ್ನು ಗೆದ್ದುಕೊಂಡಿರಬಹುದು. 597 ರ ಉಜ್ಜಯಿನಿ ಶಾಸನ ಇವನನ್ನು ಪೂರ್ವಾಪರ ಸಮುದ್ರಾಂತಾದಿ ದೇಶ ಸ್ವಾಮಿ–ಎಂದು ಕರೆದಿದೆ. ಸು. 600ರಲ್ಲಿ ಶಂಕರಗಣನ ಮಗ ಬುದ್ಧರಾಜ ದೊರೆಯಾದ. 608ರ ವಡ್ನೇರ್ ಶಾಸನದಿಂದ ಬುದ್ಧರಾಜ ದೇವಗುಪ್ತನೆಂಬ ರಾಜನಿಂದ ಪೂರ್ವ ಮಾಳ್ವವನ್ನು ಗೆದ್ದುಕೊಂಡನೆಂದು ತಿಳಿಯುತ್ತದೆ. ಬಾದಾಮಿ ಚಾಳುಕ್ಯ ದೊರೆ ಮಂಗಳೇಶನಿಂದ ಬುದ್ಧರಾಜ 602 ರಲ್ಲಿ ಬಹುಶಃ ಸಂಪೂರ್ಣವಾಗಿ ಸೋತು ಹೋದ. ಇದರಿಂದ ಕಳಚುರಿಗಳ ಪ್ರಭಾವ ಕಡಿಮೆಯಾಗಿ, ಚಾಳುಕ್ಯರು ಉತ್ತರದಲ್ಲಿ ತಮ್ಮ ಪ್ರಭಾವ ಬೆಳೆಸಿಕೊಳ್ಳಲು ಅನೂಕೂಲವಾಯಿತು. ಬುದ್ಧರಾಜನ ಮರಣದೊಡನೆ (620) ಮಾಹಿಷ್ಮತೀ ನಗರದ ಕಳಚುರಿಗಳ ಅವನತಿ ಪ್ರಾರಂಭವಾಯಿತು. ಚಾಳುಕ್ಯ ವಿನಯಾದಿತ್ಯ ತನ್ನ ಶಾಸನದಲ್ಲಿ ಹೈಹಯರನ್ನು ಸೋಲಿಸಿದುದಾಗಿ ಹೇಳಿರುವುದರಿಂದ, ಬುದ್ಧರಾಜನ ಅನಂತರವೂ ಹಲವರು ಆಳುತ್ತಿದ್ದಿರಬೇಕು. ಈ ವಂಶದ ರಾಜಕುಮಾರಿಯರಾದ ಲೋಕ ಮಹಾದೇವಿಯನ್ನೂ ಅವಳ ತಂಗಿ ತ್ರೈಲೋಕ್ಯ ಮಹಾದೇವಿಯನ್ನೂ 2 ನೆಯ ವಿಕ್ರಮಾದಿತ್ಯ ವಿವಾಹವಾಗಿದ್ದ.

**ತ್ರಿಪುರಿಯ ಕಳಚುರಿಗಳು :** ಕಳಚುರಿ ಶಾಖೆಗಳಲ್ಲೆಲ್ಲ ಅತ್ಯಂತ ಪ್ರಬಲರಾಗಿದ್ದವರು ಇವರು. ತ್ರಿಪುರಿ ಈಗಿನ ಜಬ್ಬಲ್‌ಪುರದ ಸಮೀಪದಲ್ಲಿದೆ. ಈ ಕಳಚುರಿಗಳು 675 ರಿಂದಲೇ ಆಳಲು ಪ್ರಾರಂಭಿಸಿದರೆಂದು ಕೆಲವರ ಮತ. ಆದರೆ 1 ನೆಯ ಕೊಕ್ಕಲ್ಲ (850–90) ಈ ಶಾಖೆಯ ಮುಖ್ಯನಾದ ಮೊದಲ ರಾಜ. ಪ್ರತೀಹಾರ ದೊರೆ ಒಂದನೆಯ ಭೋಜನ ಮೇಲೆ ಕೊಕ್ಕಲ್ಲ ದಂಡೆತ್ತಿಹೋದ. ಭೋಜನ ಸಾಮಂತರಾಗಿದ್ದ ಸರಯುಪಾರದ ಶಂಕರಗಣ, ಗುಹಿಲ ಹರ್ಷರಾಜ, ಜಾಹಮಾನಗೂವಕ–ಇವರೆಲ್ಲರನ್ನು ಈತ ಸೋಲಿಸಿದ. ಪೂರ್ವದಲ್ಲಿ ಬಂಗಾಳದವರೆಗೂ ದಂಡಯಾತ್ರೆ ನಡೆಸಿದ. ಅನಂತರ ಕೊಂಕಣದಲ್ಲಿ ಆಳುತ್ತಿದ್ದ ಶಿಲಾಹಾರ ಕಪರ್ದಿಯನ್ನು ಸೋಲಿಸಿ, ರಾಷ್ಟ್ರಕೂಟ 2ನೆಯ ಕೃಷ್ಣನ ಮೇಲೂ ದಂಡೆತ್ತಿಹೋದ. ಈ ಯುದ್ಧದಲ್ಲೂ ಕೊಕ್ಕಲ್ಲ ಜಯಶಾಲಿಯಾದ. ರಾಷ್ಟ್ರಕೂಟ 2 ನೆಯ ಕೃಷ್ಣ ಅನಂತರ ಕೊಕ್ಕಲ್ಲನೊಡನೆ ಸ್ನೇಹ ಬೆಳೆಸಿ ಅವನ ಮಗಳನ್ನು ವಿವಾಹವಾದ. ಈ ಎಲ್ಲ ವಿಜಯಗಳಿಂದ ಕಳಚುರಿಗಳ ರಾಜ್ಯ ವಿಸ್ತರಣೆಯಾಗಲಿಲ್ಲವಾದರೂ ಅವರ ಪ್ರಾಬಲ್ಯ ಹೆಚ್ಚಿತು. ಕೊಕ್ಕಲ್ಲನ ಮರಣಾನಂತರ ಅವನ ಮಗ ಶಂಕರಗಣ ರಾಜನಾದ. ಈತ ಕೋಸಲದಲ್ಲಿ ಆಳುತ್ತಿದ್ದ ಸೋಮವಂಶೀ ರಾಜನನ್ನು ಸೋಲಿಸಿದ. ಅಷ್ಟರಲ್ಲಿ ರಾಷ್ಟ್ರಕೂಟ 2 ನೆಯ ಕೃಷ್ಣ ಪೂರ್ವ ಚಾಳುಕ್ಯರಾಜ ವಿಜಯಾದಿತ್ಯನ ಮೇಲೆ ಯುದ್ಧ ಮಾಡಲು ಶಂಕರಗಣನ ಸಹಾಯ ಕೋರಿದ. ಆದರೆ ರಾಷ್ಟ್ರಕೂಟ ಮತ್ತು ಕಳಚುರಿಗಳನ್ನು ವಿಜಯಾದಿತ್ಯ ಸೋಲಿಸಿದ. 2 ನೆಯ ಕೃಷ್ಣನ ಮಗ ಜಗತ್ತುಂಗ ಶಂಕರಗಣನ ಮಗಳಾದ ಲಕ್ಷ್ಮಿಯನ್ನು ವಿವಾಹವಾದ. ಶಂಕರಗಣನ ಮರಣಾಂತರ ಅವನ ಮಗನಾದ ಯುವರಾಜ (915–945) ರಾಜನಾದ.

ಪಾಲರಾಜನನ್ನು ಯುವರಾಜ ಸೋಲಿಸಿ ಕಳಿಂಗದ ಮೇಲೆ ದಂಡಯಾತ್ರೆ ನಡೆಸಿದ. ರಾಷ್ಟ್ರಕೂಟರು ಯುವರಾಜನನ್ನು ಸಂಪೂರ್ಣವಾಗಿ ಸೋಲಿಸಿದರು. ಯುವರಾಜ ತನ್ನ ಮಗಳು ಕುಂದದೇವಿಯನ್ನು 3 ನೆಯ ಅಮೋಘವರ್ಷನಿಗೆ ವಿವಾಹ ಮಾಡಿಕೊಟ್ಟ. 3 ನೆಯ ಕೃಷ್ಣ ಈಕೆಯ ಮಗನಾದರೂ ತನ್ನ ಸೋದರಮಾವ ಯುವರಾಜನ ಮೇಲೆ ಯುದ್ಧ ಮಾಡಿ ಅವನನ್ನು ಸಂಪೂರ್ಣವಾಗಿ ಸೋಲಿಸಿದ. ಕಳಚುರಿರಾಜ್ಯ ರಾಷ್ಟ್ರಕೂಟ ರಾಜ್ಯದಲ್ಲಿ ಲೀನವಾಗಿ ಹೋಗುವ ಪರಿಸ್ಥಿತಿ ಬಂದೊದಗಿತು. ಅಷ್ಟರಲ್ಲಿ ಯುವರಾಜ ಸೈನ್ಯವನ್ನು ಸಿದ್ಧಪಡಿಸಿಕೊಂಡು ರಾಷ್ಟ್ರಕೂಟರನ್ನು ಡಾಹಲ ದೇಶದಿಂದ ಓಡಿಸಿ, ತನ್ನ ರಾಜ್ಯವನ್ನು ಬಲಪಡಿಸಿಕೊಂಡ. ಯುವರಾಜ ಧಾರ್ಮಿಕ ವಿಷಯಗಳಲ್ಲೂ ವಿಶೇಷ ಆಸಕ್ತಿ ವಹಿಸಿದ್ದ. ಗೋಲಕಿ ಮಠಕ್ಕೆ ಆಶ್ರಯದಾತನಾಗಿದ್ದುದಲ್ಲದೆ, ಅನೇಕ ಶೈವ ದೇವಾಲಯಗಳನ್ನು ನಿರ್ಮಿಸಿದ. ಯುವರಾಜನ ಅನಂತರ ಅವನ ಮಗ ಲಕ್ಷ್ಮಣರಾಜ (945–70) ರಾಜನಾದ. ಈತ ಪೂರ್ವದಲ್ಲಿ ವಂಗರಾಜ್ಯದಲ್ಲಿ ಆಳುತ್ತಿದ್ದ ಚಂದ್ರವಂಶದ ರಾಜನನ್ನೂ ಓಡ್ರ ರಾಜನನ್ನೂ ಕೋಸಲದ ಮಹಾಭವಗುಪ್ತನನ್ನೂ ಸೋಲಿಸಿದ. ಪಶ್ಚಿಮದಲ್ಲಿ ಲಾಟರಾಜ, ಚಾಳುಕ್ಯ ಮೂಲರಾಜ, ಅಭೀರರಾಜ ಗೃಹರಿಪು ಮುಂತಾದವರನ್ನು ಸೋಲಿಸಿದ. ಲಕ್ಷ್ಮಣರಾಜ ತನ್ನ ಮಗಳು ಬೊಂತಾದೇವಿಯನ್ನು ಚಾಳುಕ್ಯ 4 ನೆಯ ವಿಕ್ರಮಾದಿತ್ಯನಿಗೆ ವಿವಾಹ ಮಾಡಿಕೊಟ್ಟ. ಇವಳ ಮಗನೇ ಚಾಳುಕ್ಯ ಎರಡನೆಯ ತೈಲಪ. ಲಕ್ಷ್ಮಣ ರಾಜನ ಮಗ ಶಂಕರಗಣ ಸ್ವಲ್ಪ ಕಾಲ ಆಳಿದಮೇಲೆ ಅವನ ತಮ್ಮ 2 ನೆಯ ಯುವರಾಜ (980–90) ರಾಜನಾದ. ಈತ ಅಸಮರ್ಥ ದೊರೆ. ತನ್ನ ಸೋದರಮಾವ ಯುವರಾಜನ ಮೇಲೆ ತೈಲಪನೂ ಯುದ್ಧ ಮಾಡಿದ. ಪರಮಾರ ಮುಂಜ ಯುವರಾಜನನ್ನು ಪೂರ್ಣವಾಗಿ ಸೋಲಿಸಿದ. ಯುವರಾಜ ಸೋತು ಓಡಿಹೋದ. ಹೀಗಾಗಿ ಕಳಚುರಿಗಳ ಪ್ರಾಬಲ್ಯ ಅಧೋಮುಖವಾಯಿತು. ಆದರೆ ಇವನ ಮಗ 2 ನೆಯ ಕೊಕ್ಕಲ್ಲನ (990–1015) ಶಕ್ತಿಸಾಮರ್ಥ್ಯಗಳಿಂದ ಕಳಚುರಿಗಳ ಪ್ರಾಬಲ್ಯ ವೃದ್ಧಿಗೊಂಡಿತು. ಈತ ಗೂರ್ಜರರ ಮೇಲೆ ದಂಡೆತ್ತಿಹೋಗಿ ಮೂಲರಾಜನನ್ನು ಅಥವಾ ಅವನ ಮಗ ಚಾಮುಂಡರಾಜನನ್ನು ಸೋಲಿಸಿದ. ತನ್ನ ತಂದೆಯನ್ನು ಸೋಲಿಸಿದ್ದ ಚಾಳುಕ್ಯ ತೈಲಪನನ್ನೂ ಈತ ಪರಾಜಯಗೊಳಿಸಿದ. ಪಾಲರಾಜ ಒಂದನೆಯ ಮಹೀಪಾಲನೂ ಇವನಿಂದ ಸೋತ. ಈ ಎಲ್ಲ ವಿಜಯಗಳಿಂದ ಕಳಚುರಿ ಸಾಮ್ರಾಜ್ಯ ಪುನಃ ವರ್ಧಿಸಿತು.

ಎರಡನೆಯ ಕೊಕ್ಕಲ್ಲನ ಮಗ ಗಾಂಗೇಯದೇವ (1015–41) ಶಕ್ತನಾದ ದೊರೆಯಾಗಿದ್ದ. ಇವನ ಕಾಲದಲ್ಲಿ ಕಳಚುರಿಗಳ ಪ್ರಾಬಲ್ಯ ಹೆಚ್ಚಿತು. ಈತ ರಾಜೇಂದ್ರ ಚೋಳ ಮತ್ತು ಪರಮಾರ ಭೋಜರೊಡಗೂಡಿ ಚಾಳುಕ್ಯ ಎರಡನೆಯ ಜಯಸಿಂಹನ ಮೇಲೆ ಯುದ್ಧ ಮಾಡಿದ. ಆದರೆ ಇದರಿಂದ ಏನೂ ಉಪಯೋಗವಾಗಲಿಲ್ಲ. ಅನಂತರ ಗಾಂಗೇಯದೇವ ಕೋಸಲಕ್ಕೆ ಹೋಗಿ ಮಹಾ ಶಿವಗುಪ್ತನನ್ನು ಸೋಲಿಸಿದ. ರತ್ನಪುರಿಯ ಕಳಚುರಿ ದೊರೆ ಕಮಲರಾಜನ ಸಹಾಯದಿಂದ ಉತ್ಕಲ ರಾಜ್ಯವನ್ನು ಗೆದ್ದು ತ್ರಿಕಲಿಂಗಾಧಿಪತಿ ಎಂಬ ಬಿರುದನ್ನು ಧರಿಸಿದ. ಚಂಡೆಲ್ಲ ಧಂಗರಾಜ ಇಲ್ಲವೇ ಮಹೀಪಾಲನನ್ನು ಸೋಲಿಸಿ ಕಾಶಿ ಮತ್ತು ಪ್ರಯಾಗಗಳನ್ನು ತನ್ನ ವಶಮಾಡಿಕೊಂಡ. ಪೂರ್ವದಲ್ಲಿ ಅಂಗರಾಜ್ಯದ ಮೇಲೆ ದಂಡಯಾತ್ರೆಯನ್ನು ನಡೆಸಿದ. ಪಂಜಾಬಿನ ಕಾಂಗ್ರಾ ಕಣಿವೆಯಿಂದ ಮಹಮ್ಮದೀಯರನ್ನು ಹೊಡೆದಟ್ಟಿದ. ಆದರೆ ಅವರು ಕಾಶಿಯನ್ನು ಲೂಟಿಮಾಡಿ ಸಂಪತ್ತನ್ನು ದೋಚಿಕೊಂಡು ಓಡಿಹೋದರು. ಪ್ರಯಾಗ ಇವನ ಉಪರಾಜಧಾನಿಯಾಗಿತ್ತು. ಈತ ಚಿನ್ನ, ಬೆಳ್ಳಿ ಮತ್ತು ತಾಮ್ರಗಳ ನಾಣ್ಯಗಳನ್ನು ಚಲಾವಣೆಗೆ ತಂದಿದ್ದ. ಗಾಂಗೇಯದೇವನ ಅನಂತರ ಅವನ ಮಗ ಕರ್ಣ(1041–73) ದೊರೆಯಾದ. ಇವನೂ ಒಬ್ಬ ಶಕ್ತ ದೊರೆ. ಈತ ಪ್ರತೀಹಾರ ಯಶಃಪಾಲನಿಂದ ಅಲಹಾಬಾದನ್ನು ಗೆದ್ದುಕೊಂಡ. ತೀರಪ್ರದೇಶದಲ್ಲಿ ಮುಸ್ಲಿಮರ ಮೇಲೆ ಜಯಗಳಿಸಿದ. ಪಾಲರ ಮೇಲೆ ದಂಡೆತ್ತಿಹೋದರೂ ಅದರಿಂದ ಪ್ರಯೋಜನವಾಗಲಿಲ್ಲ. ಜಾತವರ್ಮನನ್ನು ಸೋಲಿಸಿ ಅಂಗರಾಜ್ಯವನ್ನು ಗೆದ್ದುಕೊಂಡ. ಗಂಗವಂಶದ ವಜ್ರಹಸ್ತನನ್ನೂ ಸೋಲಿಸಿದ. ಚೋಳ ರಾಜಾಧಿರಾಜನನ್ನು ಸೋಲಿಸಿ ಕಾಂಡಿಯವರೆಗೂ ದಂಡಯಾತ್ರೆ ನಡೆಸಿದ. ಕರ್ಣನಿಂದ ಪರಾಜಿತನಾದ ಪಂತಲದ ದೊರೆ ಚಾಳುಕ್ಯ 1 ನೆಯ ಸೋಮೇಶ್ವರನಿರಬೇಕು. ಕರ್ಣ ಅನಂತರ ಚಂಡೆಲ್ಲ ಕೀರ್ತಿವರ್ಮನನ್ನು ಸೋಲಿಸಿ ಸ್ವಲ್ಪಕಾಲ ಬುಂದೇಲ್‌ಖಂಡಕ್ಕೂ ಒಡೆಯನಾಗಿದ್ದ. ಚಾಳುಕ್ಯ ಭೀಮನ ಸಹಾಯದಿಂದ ಮಾಳ್ವದ ಮೇಲೆ ಯುದ್ಧ ಮಾಡಿದ. ಆದರೆ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಸಹಾಯದಿಂದ ಪರಮಾರರು ಜಯಶಾಲಿಗಳಾದರು. ಕರ್ಣ ಹಿಂದಿರುಗಬೇಕಾಯಿತು. ಈತ ಹೂಣಕುಲದ ಆವಲ್ಲದೇವಿಯನ್ನು ಮದುವೆಯಾಗಿದ್ದ. ಪಂಡಿತರಿಗೂ ಕವಿಗಳಿಗೂ ಆಶ್ರಯದಾತನಾಗಿದ್ದು ಆರನೆಯ ವಿಕ್ರಮಾದಿತ್ಯನ ಆಸ್ಥಾನ ಕವಿ ಬಿಲ್ಹಣನಿಗೆ ವಿಶೇಷ ಗೌರವ ನೀಡಿದ್ದ. ಇವನು ಕಾಶಿಯ ಕರ್ಣ ಮೇರು ದೇವಾಲಯ ಸ್ಥಾಪಿಸಿ, ಆ ನಗರವನ್ನು ತನ್ನ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ.

ಕರ್ಣ ಮುಪ್ಪಿನಲ್ಲಿ ತನ್ನ ಮಗ ಯಶಃಕರ್ಣನಿಗೆ ರಾಜತ್ವ ವಹಿಸಿದ. ಈತ ಚಂಪಾರಣ್ಯ ಮತ್ತು ಆಂಧ್ರದ ಮೇಲೂ ದಾಳಿ ಮಾಡಿದ. ಚಾಳುಕ್ಯ ಜಯಸಿಂಹ ಇವನನ್ನು ಎದುರಿಸಿದ. ಚಂದ್ರದೇವ ಯಶಃಕರ್ಣನಿಂದ ಅಲಹಾಬಾದ್ ಮತ್ತು ಕಾಶಿರಾಜ್ಯಗಳನ್ನು ಕಿತ್ತುಕೊಂಡ. ಪರಮಾರ ಲಕ್ಷ್ಮದೇವನಿಂದ ತ್ರಿಪುರಿ ಲೂಟಿಯಾಯಿತು. ಈ ಘಟನೆಗಳು ಕಳಚುರಿಗಳ ಪತನಕ್ಕೆ ಕಾರಣವಾದುವು. ಯಶಃಕರ್ಣನ ಮರಣಾಂತರ ಗಯಾಕರ್ಣ (1123–53) ರಾಜ್ಯವಾಳಿದ. ಈತನನ್ನು ಚಂಡೆಲ್ಲ ಮದನವರ್ಮ ಸೋಲಿಸಿದ. ಗಯಾಕರ್ಣನ ಅನಂತರ ಅವನ ಮಕ್ಕಳು ನರಸಿಂಹ ಮತ್ತು ಜಯಸಿಂಹ (1163–88) ಕ್ರಮವಾಗಿ ಆಳಿದರು. ಚಾಳುಕ್ಯ ಕುಮಾರಪಾಲನ ಮತ್ತು ಮುಸ್ಲಿಮರ ಮೇಲೂ ಜಯಸಿಂಹ ವಿಜಯಗಳಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಜಯಸಿಂಹನ ಅನಂತರ ಅವನ ಮಗ ವಿಜಯಸಿಂಹ (1188–1210) ದೊರೆಯಾದ. ಸು. 1211ರ ಸಮಯಕ್ಕೆ ಚಂಡೆಲ್ಲ ತ್ರೈಲೋಕ್ಯವರ್ಮ ಕಳಚುರಿಗಳ ರಾಜ್ಯವಾದ ಡಾಹಲ ಮಂಡಲವನ್ನು ಸ್ವಾಧೀನಪಡಿಸಿಕೊಂಡ. ವಿಜಯಸಿಂಹನಿಗೆ ಅಜಯಸಿಂಹನೆಂಬ ಮಗನಿದ್ದ. ಅವನ ವಿಷಯವೇನೂ ತಿಳಿಯದು. ಒಟ್ಟಿನಲ್ಲಿ 13 ನೆಯ ಶತಮಾನದ ಆದಿಭಾಗದಲ್ಲಿ ತ್ರಿಪುರಿಯ ಕಳಚುರಿಗಳ ಆಳ್ವಿಕೆ ಕೊನೆಗೊಂಡಿತು. ಇವರ ಕಾಲದಲ್ಲಿ ಮತ್ತಮಯೂರಾನ್ವಯದ ಶೈವಾಚಾರ್ಯರು ಕೆಲಕಾಲ ರಾಜಗುರುಗಳಾಗಿದ್ದು ಡಾಹಲದಲ್ಲಿ (ತ್ರಿಪುರಿ) ಗೋಲಕೀ ಮಠವನ್ನು ಸ್ಥಾಪಿಸಿ, ಆ ಮತಪ್ರಚಾರಕಾರ್ಯದಲ್ಲಿ

ಆಸಕ್ತಿ ತೋರಿಸಿದರು. ಆಂಧ್ರ ಮತ್ತು ತಮಿಳು ದೇಶಗಳಲ್ಲಿ ಅದರ ಶಾಖೆಗಳು ಸ್ಥಾಪಿತವಾಗಿದ್ದುವು.

**ಸರಯೂಪಾರದ ಕಳಚುರಿಗಳು :** ಇವರ ಮತ್ತೊಂದು ಶಾಖೆ 8 ನೆಯ ಶತಮಾನದ ಕೊನೆಯ ಭಾಗದಿಂದ ಹನ್ನೊಂದನೆಯ ಶತಮಾನದವರೆಗೆ ಸರಯೂನದೀ ಪ್ರದೇಶದಲ್ಲಿ (ಈಗಿನ ಗೋಗ್ರಾ) ಆಳುತ್ತಿತ್ತು. ಈ ರಾಜ್ಯವನ್ನು ಸರಯೂಪಾರ ಎಂದು ಶಾಸನಗಳು ಕರೆಯುತ್ತವೆ. ಆದ್ದರಿಂದ ಇವರಿಗೆ ಸರಯೂಪಾರದ ಕಳಚುರಿಗಳೆಂದು ಹೆಸರು ಬಂದಿದೆ.

ಏಳನೆಯ ಶತಮಾನದ ಆದಿಭಾಗದಲ್ಲಿದ್ದ ಶಂಕರಗಣ ಈ ವಂಶದ ಮೊದಲ ದೊರೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. 8 ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ರಾಜಪುತ್ರ ಈ ವಂಶದ ಮೊದಲ ದೊರೆ ಎಂದು ಮತ್ತೆ ಕೆಲವರ ಮತ. ಇವನು ತುರಗಪತಿ ವಾಹಲಿ ಮತ್ತು ಕಿರೀಟನ್ ಮೊದಲಾದ ರಾಜರನ್ನು ಸೋಲಿಸಿದ. ಪಾಲವಂಶದ ದೊರೆಯಾದ ಧರ್ಮಪಾಲ, ರಾಜಪುತ್ರನ ಮೇಲೆ ದಂಡೆತ್ತಿ ಹೋದ. ರಾಜಪುತ್ರ ಧೈರ್ಯದಿಂದ ಕಾದಾಡಿ ಧರ್ಮಪಾಲನನ್ನು ಹೊಡೆದೋಡಿಸಿದ. ಈ ವಿಜಯಗಳಿಂದ ರಾಜಪುತ್ರ ಕಳಚುರಿಗಳ ಪ್ರಾಬಲ್ಯವನ್ನು ಹೆಚ್ಚಿಸಿದ. ಇವನ ಅನಂತರ ಆಳಿದ ಶಿವರಾಜನ ವಿಷಯವೇನೂ ತಿಳಿಯದು. ಅನಂತರ ಆಳಿದ ಇವನ ಮಗ ಶಂಕರಗಣನನ್ನು ತ್ರಿಪುರಿಯ ಕಳಚುರಿ ವಂಶದ ಕೋಕಲ್ಲರಾಜ ಸೋಲಿಸಿದ. ಶಂಕರಗಣನ ಮಗ ಒಂದನೆಯ ಗುಣಸಾಗರ ಒಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ಆಳಿದ. ಈತ ಮಾಡಿದ ಮುಖ್ಯ ಕಾರ್ಯವೆಂದರೆ ಗೌಡದೇಶದ ಮೇಲೆ ಗಳಿಸಿದ ವಿಜಯ. ಪ್ರತೀಹಾರ ಭೋಜನಿಗೆ ಯುದ್ಧಗಳಲ್ಲಿ ಸಹಾಯ ಮಾಡಿದುದರಿಂದ ಸಂತೋಷಗೊಂಡ ಭೋಜನಿಂದ ಇವನಿಗೆ ಬಳುವಳಿಯಾಗಿ ಕೆಲವು ಜಿಲ್ಲೆಗಳು ಬಂದುವು. ಇದರಿಂದ ಸರಯೂಪಾರದ ಕಳಚುರಿಗಳ ರಾಜ್ಯ ಗೋರಖಪುರದವರೆಗೂ ವಿಸ್ತಾರವಾಯಿತು.

ಗುಣಸಾಗರನ ಮರಣಾನಂತರ ಅವನ ಮಕ್ಕಳಾದ ಉಲ್ಲಭ ಮತ್ತು ಭಾಮಾನದೇವ ರಾಜ್ಯವಾಳಿದರು. ಭಾಮಾನದೇವ ಪ್ರತೀಹಾರ ಮಹೀಪಾಲನ ಯುದ್ಧಗಳಲ್ಲಿ ಸಹಾಯಕನಾಗಿದ್ದ. ಭಾಮಾನದೇವನ ಅನಂತರ ಶಂಕರಗಣ, ಮುಗ್ಧತುಂಗ, ಗುಣಸಾಗರ, ಶಿವರಾಜ, ಭಾಮಾನ, ಶಂಕರಗಣ ಎಂಬ ರಾಜರು ಕ್ರಮವಾಗಿ ಆಳಿದರು. ಅನಂತರ, ಅಂದರೆ ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ, ಆಳಿದವನೇ ಭೀಮ. ಯಾದವೀ ಕಲಹಗಳ ಫಲವಾಗಿ ಈತ ಪದಚ್ಯುತನಾದ. 1055 ರಿಂದ 1080 ರ ವರೆಗೆ ಶೋಢದೇವನೆಂಬವ ರಾಜನಾದ. ಮಹಾರಾಜಾಧಿರಾಜ ಬಿರುದಾಂಕಿತನಾದ ಇವನ ರಾಜ್ಯ ಗೋಗ್ರಾ ಮತ್ತು ಗಂಡಕೀ ನದಿಗಳ ಮಧ್ಯ ಪ್ರದೇಶವನ್ನು ಒಳಗೊಂಡಿತ್ತು. ಈಗ ತಿಳಿದಿರುವಂತೆ ಶೋಢದೇವನೇ (1055–80) ಸರಯೂಪಾರದ ಕಳಚುರಿಗಳ ಕೊನೆಯ ರಾಜ.

**ರತ್ನಪುರದ ಕಳಚುರಿಗಳು :** ತ್ರಿಪುರಿಯಲ್ಲಿ ಆಳಿದ ಕಳಚುರಿ ಅರಸ ಒಂದನೆಯ ಕೋಕಲ್ಲನ ವಂಶಜನಾದ ಕಲಿಂಗರಾಜ ಸು. 1000ದಲ್ಲಿ ದಕ್ಷಿಣ ಕೋಸಲವನ್ನು ಗೆದ್ದುಕೊಂಡು ತುಮ್ಮಾಣದಲ್ಲಿ (ಮಧ್ಯಪ್ರದೇಶದ ಬಿಲಾಸ್‍ಪುರ ಜಿಲ್ಲೆ) ತ್ರಿಪುರಿ ಕಳಚುರಿಗಳ ಸಾಮಂತನಾಗಿ ಆಳಲು ಪ್ರಾರಂಭಿಸಿದ. ಸು. 1020ರಲ್ಲಿ ಇವನ ಮಗ ಕಮಲರಾಜ ಪಟ್ಟಕ್ಕೆ ಬಂದ. ಇವನೂ ಸಾಮಂತನಾಗಿದ್ದು ತ್ರಿಪುರಿಯ ಕಳಚುರಿ ರಾಜ ಗಂಗೇಯ ದೇವನ ಯುದ್ಧಗಳಲ್ಲಿ ಸಹಾಯಕನಾಗಿದ್ದ. ಇವನ ಮಗನೇ ರತ್ನರಾಜ. ಈತ ರತ್ನಪುರಿ ನಗರವನ್ನು (ಈಗಿನ ರತನ್‍ಪುರ ; ಬಿಲಾಸ್‍ಪುರಕ್ಕೆ 25 ಕಿಮೀ ದೂರ) ಸ್ಥಾಪಿಸಿದ. ರತ್ನರಾಜನ ಮರಣಾಂತರ ಅವನ ಮಗ ಪೃಥ್ವೀದೇವ ರಾಜ್ಯವಾಳಿದ. ಇವನ ಕಾಲದಲ್ಲಿ ರತ್ನಪುರಿ ರಾಜಧಾನಿಯಾದುದರಿಂದ ಇವರನ್ನು ರತ್ನಪುರಿಯ ಕಳಚುರಿಗಳೆಂದು ಕರೆಯಲಾಗಿದೆ. ಪೃಥ್ವೀದೇವನ ಮಗ ಒಂದನೆಯ ಜಾಜಲ್ಲದೇವ ಅತ್ಯಂತ ಪ್ರಖ್ಯಾತನಾದ ದೊರೆ. ಇದೇ ಸಮಯದಲ್ಲಿ ತ್ರಿಪುರಿಯ ಕಳಚುರಿಗಳ ಪ್ರಾಬಲ್ಯ ಕಡಿಮೆಯಾಗುತ್ತಿತ್ತು. ಇದನ್ನು ಗಮನಿಸಿದ 1ನೆಯ ಜಾಜಲ್ಲ (1090–1120) ತ್ರಿಪುರಿಯ ರಾಜ ಯಶಃಕರ್ಣನಿಂದ ಸ್ವತಂತ್ರನಾದ. ದಕ್ಷಿಣ ಕೋಸಲದ ಭಾಗಗಳು ಚಕ್ರಕೋಟೆಯಲ್ಲಿ ಆಳುತ್ತಿದ್ದ ನಾಗವಂಶದ ಸೋಮೇಶ್ವರನ ಆಕ್ರಮಣಕ್ಕೆ ಒಳಗಾಗಿದ್ದುವು. ಜಾಜಲ್ಲ ಅವನನ್ನು ಸೋಲಿಸಿ ಸೆರೆಹಿಡಿದ. ಈತ ಒರಿಸ್ಸದ ಮೇಲೆ ದಂಡೆತ್ತಿಹೋಗಿ ಸುವರ್ಣಪುರದ ಭುಜವಲ ಎಂಬ ರಾಜನನ್ನು ಸೋಲಿಸಿದ. ಇವನ ಪರಾಕ್ರಮವನ್ನು ಗಮನಿಸಿದ ಗಾಹಡವಾಲ ಗೋವಿಂದ ಚಂದ್ರ ಮತ್ತು ಛಂಡೆಲ್ಲ ಸಲ್ಲಕ್ಷಣವರ್ಮರು ಇವನೊಡನೆ ಸ್ನೇಹ ಬೆಳೆಸಿದ್ದರು. ಈ ರೀತಿ ಜಾಜಲ್ಲದೇವ ರತ್ನಪುರಿಯ ಕಳಚುರಿಗಳ ಪ್ರಾಬಲ್ಯ ಹೆಚ್ಚಿಸಿದ.

ಜಾಜಲ್ಲದೇವನ ಮಗ 2ನೆಯ ರತ್ನದೇವ ದೊರೆಯಾದದ್ದು 1120 ರಲ್ಲಿ. ಪೂರ್ವಗಂಗರ ರಾಜ ಅನಂತವರ್ಮ ಚೋಡಗಂಗ ತನ್ನ ರಾಜ್ಯವನ್ನು ವಿಸ್ತರಿಸುವ ಆಸೆಯಿಂದ ಕಳಚುರಿ ರತ್ನದೇವನ ಮೇಲೆ ಯುದ್ಧ ಮಾಡಿದ. ರತ್ನದೇವ ಈ ಯುದ್ಧದಲ್ಲಿ ಜಯಶಾಲಿಯಾದ. ಇವನ ಮರಣಾನಂತರ ದೊರೆಯಾದವ ಇವನ ಮಗ 2ನೆಯ ಪೃಥ್ವೀದೇವ. ಈತ ಜಟೇಶ್ವರನೆಂಬ ರಾಜನನ್ನು ಸೋಲಿಸಿದ. ಪೃಥ್ವೀದೇವನ ಮಗ 2ನೆಯ ಜಾಜಲ್ಲ ರಾಜ್ಯವಾಳಿದ್ದು 1165 ರಿಂದ 1170 ರ ವರೆಗೆ. ಇವನ ಅನಂತರ ಇವನ ಸಹೋದರ ಜಗದ್ದೇವನೂ ಅನಂತರ ಮೂರನೆಯ ರತ್ನದೇವನೂ 3ನೆಯ ಪೃಥ್ವೀದೇವ ಮತ್ತು ಪ್ರತಾಪಮಲ್ಲರೂ ಕ್ರಮವಾಗಿ ರಾಜ್ಯವಾಳಿದರು. ಪ್ರತಾಪ ಮಲ್ಲನ ಕಾಲದಲ್ಲಿ ಪೂರ್ವಗಂಗ ಅನಂಗಭೀಮ ಕಳಚುರಿಗಳ ಮೇಲೆ ದಂಡಯಾತ್ರೆ ನಡೆಸಿದ.

ಪ್ರತಾಪಮಲ್ಲನ ಅನಂತರ ಯಾರು ಆಳಿದರು ಎಂಬುದು ತಿಳಿದಿಲ್ಲ. ಇದೇ ವಂಶದ ವಾಹರ ಎಂಬ ರಾಜ (1480–1525) ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದು ಬಂದಿದೆ. ಇವನಿಗಿಂತ ಮೊದಲ ರಾಜರ ಹೆಸರುಗಳೂ ಈ ಶಾಸನಗಳಿಂದ ತಿಳಿದುಬರುತ್ತವೆ. ಹದಿನಾಲ್ಕನೆಯ ಶತಮಾನದ ಕೊನೆಯಲ್ಲಿ ರತ್ನಪುರಿಯ ಕಳಚುರಿಗಳಲ್ಲಿ ಎರಡು ಭಾಗಗಳಾದುವು. ಒಂದು ಭಾಗ ರತ್ನಪುರಿಯಲ್ಲಿ ಮುಂದುವರಿದರೆ, ಇನ್ನೊಂದು ಶಾಖೆ ರಾಯಪುರದಿಂದ ಆಳಲು ಪ್ರಾರಂಭಿಸಿತು. ರಾಯಪುರದಲ್ಲಿ ರಾಮಚಂದ್ರ ಮತ್ತು ಬ್ರಹ್ಮದೇವ (1402–1415) ಎಂಬ ರಾಜರು ಆಳಿದರೆಂದು ತಿಳಿದುಬಂದಿವೆ. ಇಲ್ಲಿಗೆ ಈ ಶಾಖೆ ಕೊನೆಗೊಂಡಿತು. ವಾಹರನೊಂದಿಗೆ ರತ್ನಪುರಿಯ ಕಳಚುರಿಗಳ ಪತನವೂ ಆಯಿತು.

**ಕಲ್ಯಾಣದ ಕಳಚುರಿಗಳು :** ಕರ್ನಾಟಕದಲ್ಲಿಯೂ ಒಂದು ಕಳಚುರಿ ಮನೆತನ ಕಲ್ಯಾಣದ ರಾಜಧಾನಿಯಿಂದ ರಾಜ್ಯಭಾರಮಾಡುತ್ತಿತ್ತು. ಈ ಮನೆತನದ ಹೆಸರು ಕಳಚುರ್ಯಕುಲವೆಂದು ಇವರ ಶಾಸನಗಳಿಂದ ಗೊತ್ತಾಗುತ್ತದೆ. ಇವರು ಕಾಲಂಜರಪುರವರಾಧೀಶ್ವರರೆಂದು ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಕಾಲಂಜರಪುರ ಈಗಿನ ಬುಂದೇಲ್ ಖಂಡದ ಕಾಲಂಜರ್. ಇವರು ಅಲ್ಲಿಂದ ದಕ್ಷಿಣಕ್ಕೆ ಯಾವಾಗ ಹೇಗೆ ಬಂದರೆಂಬುದು ಖಚಿತವಾಗಿ ತಿಳಿದಿಲ್ಲವಾದರೂ 1156–57 ರಲ್ಲಿ ಚಾಳುಕ್ಯ ರಾಜ್ಯವನ್ನು ಆಕ್ರಮಿಸಿದ ಬಿಜ್ಜಳನಿಗಿಂತ ಮೊದಲು ಏಳೆಂಟು ತಲೆಮಾರುಗಳ ಅರಸರ ಹೆಸರುಗಳು ಶಾಸನಗಳಲ್ಲಿ ಕಂಡುಬಂದಿರುವುದರಿಂದ ಸು. 10ನೆಯ ಶತಮಾನದಲ್ಲಿ ಇವರು ಕರ್ನಾಟಕಕ್ಕೆ ಬಂದಿದ್ದಿರಬಹುದು. ಇವರಲ್ಲಿ ಪ್ರಬಲನಾದ ಉಚಿತನೇ ಮೊದಲ ನಾಯಕ. ಇವರು ತಲಕಾಡುನಾಡಿನಲ್ಲಿ ನೆಲೆಸಿ ಮಂಗಳವೇಢೆಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದರು. ಈ ವಂಶದ ಜೋಗಮ ತನ್ನ ಪುತ್ರಿ ಸಾವಲದೇವಿಯನ್ನು 6 ನೆಯ ವಿಕ್ರಮಾದಿತ್ಯನಿಗೆ ವಿವಾಹ ಮಾಡಿಕೊಟ್ಟಿದ್ದ. ಇವನ ಮಗ ಪೆರ್ಮಾಡಿ 3ನೆಯ ಸೋಮೇಶ್ವರನ ಸೋದರಿಯನ್ನು ವಿವಾಹವಾಗಿದ್ದ. ಇವರ ಮಗ 2 ನೆಯ ಬಿಜ್ಜಳ 3ನೆಯ ಸೋಮೇಶ್ವರನ ಸೋದರಳಿಯ. ಪೆರ್ಮಾಡಿ 1128 ರಲ್ಲಿ ಚಾಳುಕ್ಯ 3 ನೆಯ ಸೋಮೇಶ್ವರನ ಸಾಮಂತನಾಗಿ ತರ್ದವಾಡಿ (ಬಿಜಾಪುರ ಜಿಲ್ಲೆ) ಪ್ರಾಂತ್ಯವನ್ನು ಆಳುತ್ತಿದ್ದ. ಚಾಳುಕ್ಯ 2 ನೆಯ ಜಗದೇಕಮಲ್ಲ, 3 ನೆಯ ತೈಲ–ಇವರ ಅಧೀನನಾಗಿ 2 ನೆಯ ಬಿಜ್ಜಳ ಅನೇಕ ಪ್ರಾಂತ್ಯಗಳಿಗೆ ಅಧಿಪತಿಯಾಗಿದ್ದ. ಕ್ರಮೇಣ ಪ್ರಬಲನಾಗುತ್ತಿದ್ದ ಬಿಜ್ಜಳ 1142 ರಲ್ಲಿ ಕರಹಾಡ ಪ್ರಾಂತ್ಯವನ್ನು ವಶಪಡಿಸಿಕೊಂಡ. ಐದು ವರ್ಷಗಳ ಅನಂತರ ತರ್ದವಾಡಿ ಇವನ ವಶವಾಯಿತು. 3ನೆಯ ತೈಲನ ಕಾಲದಲ್ಲಿ ಚಾಳುಕ್ಯರು ದುರ್ಬಲರಾದ ಸಮಯವನ್ನು ಸಾಧಿಸಿ ಈತ 1153ರ ವೇಳೆಗೆ ಸ್ವತಂತ್ರ ಮನೋಭಾವ ಪ್ರದರ್ಶಿಸಲಾರಂಭಿಸಿದ. ಐದು ವರ್ಷಗಳೊಳಗೆ ಈತ ರಾಜ್ಯವನ್ನು ಪೂರ್ಣವಾಗಿ ಆಕ್ರಮಿಸಿ ಕಳಚುರ್ಯಚಕ್ರವರ್ತಿ, ಭುಜಬಲ ಚಕ್ರವರ್ತಿ ಮೊದಲಾದ ಬಿರುದುಗಳ ಸಹಿತ ಕಲ್ಯಾಣದಿಂದ ರಾಜ್ಯಭಾರ ಮಾಡತೊಡಗಿದ. 1162 ರ ಕೊನೆಯಲ್ಲಿ 3 ನೆಯ ತೈಲನ ಮರಣಾನಂತರ ಕಳಚುರಿಗಳು ಇಡೀ ಚಾಳುಕ್ಯ ಸಾಮ್ರಾಜ್ಯದ ಅಧಿಕೃತ ಅರಸರೆಂದು ಘೋಷಿಸಿಕೊಂಡರು. ಮರಣಕ್ಕೆ ಮೊದಲು ತೈಲ ತನ್ನ ಮಗ 4 ನೆಯ ಸೋಮೇಶ್ವರನನ್ನು ಉತ್ತರಾಧಿಕಾರಿಯಾಗಿ ಘೋಷಿಸಿದ್ದ. ಈತ ತನ್ನ ತಮ್ಮಂದಿರೊಡಗೂಡಿ, ಬಳ್ಳಾರಿ ಪ್ರಾಂತ್ಯದಲ್ಲಿ ಆಳುತ್ತಿದ್ದಂತೆ ಕೆಲವು ಶಾಸನಗಳು ತಿಳಿಸುತ್ತವೆ. ವೀರಶೈವ ಮತೋದ್ಧಾರಕ ಬಸವಣ್ಣ ಇವನ ಪ್ರಧಾನನಾಗಿದ್ದನೆಂದು ರಾಜಾಸ್ಥಾನದಲ್ಲಿ ಪ್ರಬಲನಾಗಿದ್ದ ಆತನಿಗೂ ಸೋದರಳಿಯ ಚನ್ನಬಸವನಿಗೂ ತಮ್ಮ ಮತದ ಪ್ರಚಾರಕ್ಕಾಗಿ ವಿಫುಲ ಅವಕಾಶವಾಯಿತೆಂದೂ ಹೇಳಲಾಗಿದೆ. ಈ ಕಾಲದಲ್ಲಿ ನಡೆದ ಧಾರ್ಮಿಕ ಮತ್ತು ವೈಚಾರಿಕ ಆಂದೋಲನ ಬಹು ಶಾಶ್ವತ ಪರಿಣಾಮಗಳನ್ನು ಬೀರಿತು. 1167 ರಲ್ಲಿ ಬಿಜ್ಜಳ ರಾಜ್ಯಸೂತ್ರಗಳನ್ನು ತನ್ನ ಹಿರಿಯ ಮಗ ಸೋವಿದೇವನಿಗೆ (ಸೋಮೇಶ್ವರನಿಗೆ) ಒಪ್ಪಿಸಿದ. ಈ ರೀತಿಯ ರಾಜ್ಯತ್ಯಾಗಕ್ಕೆ ಕಾರಣವೇನೆಂದು ತಿಳಿದಿಲ್ಲ. ಬಹುಶಃ ಪ್ರಬಲನಾಗಿದ್ದ ಬಸವಣ್ಣ ಮತ್ತು ಬಿಜ್ಜಳರ ನಡುವೆ ಮತಭೇದವುಂಟಾಗಿರಬೇಕು. 1168 ರಲ್ಲಿ ಬಿಜ್ಜಳ ಅಸುನೀಗಿದ. ಸೋವಿದೇವ ಅಷ್ಟು ಸಮರ್ಥ ದೊರೆಯಾಗಿರಲಿಲ್ಲ. ಆಗ ಬಿಜ್ಜಳನ ತಮ್ಮ ಮೈಲುಗಿ ಮತ್ತು ಮೊಮ್ಮಗ ಕರ್ಣದೇವ ರಾಜ್ಯವನ್ನು ಆಕ್ರಮಿಸಿ ಸ್ವಲ್ಪಕಾಲ ರಾಜ್ಯಭಾರ ಮಾಡಿದರು. ಆದರೆ ಸ್ವಾಮಿಭಕ್ತ ಮಾಧವದಂಡನಾಥ ಕರ್ಣನನ್ನು ಕೊಂದು ಪುನಃ (1168) ಸೋವಿದೇವನನ್ನು ಸಿಂಹಾಸನಕ್ಕೇರಿಸಿದ. ಸೋವಿದೇವ ಸಾರ್ವಭೌಮತ್ವದ ದ್ಯೋತಕವಾಗಿ ತನ್ನ ನಾಣ್ಯಗಳನ್ನು ಅಚ್ಚು ಹಾಕಿಸಿದ. ಇವನಿಗೆ ಕಳಚುರ್ಯ ಚಕ್ರವರ್ತಿ, ರಾಯಮುರಾರಿ ಮೊದಲಾದ ಬಿರುದುಗಳಿದ್ದವು. ಇವನಿಗೆ ಮಲ್ಲುಗಿ, ಸಂಕಮ, ಆಹವಮಲ್ಲ, ಸಿಂಘಣ ಎಂಬ ನಾಲ್ಕು ಜನ ಸೋದರರಿದ್ದರು. 1175 ರಲ್ಲಿ ಮಲ್ಲುಗಿ ದಂಗೆಯೆದ್ದು ಭೀಮಾನದಿಯ ದಡದಲ್ಲಿರುವ ಮಾಸನೂರಿನಿಂದ ಸ್ವತಂತ್ರನಾಗಿ ಆಳಲಾರಂಭಿಸಿದ. ಅದೇ ವರ್ಷ ಸಂಕಮನೂ ದಂಗೆಯೆದ್ದು

ಬಿಜಾಪುರ ಪ್ರದೇಶದಲ್ಲಿ ಸ್ವತಂತ್ರನಾದ. ಸೋವಿದೇವನ ವಿಚಾರ 1176 ರ ಅನಂತರ ಏನೂ ತಿಳಿದುಬರುವುದಿಲ್ಲ. ಬಹುಶಃ ಆತ ಆ ವರ್ಷದಲ್ಲಿ ಸತ್ತಿರಬಹುದು. ಅನಂತರ ಮಲ್ಲುಗಿಯ ಹೆಸರೂ ಮರೆಯಾಗುತ್ತದೆ. ಸಂಕಮನೂ ಅವನ ತಮ್ಮಂದಿರಾದ ಆಹವಮಲ್ಲ ಮತ್ತು ಸಿಂಘಣರೂ 1184ರ ವರೆಗೂ ಅನುಕ್ರಮವಾಗಿ ರಾಜ್ಯವಾಳುತ್ತಿದ್ದರು. 1184 ರಲ್ಲಿ ಚಾಳುಕ್ಯ 4 ನೆಯ ಸೋಮೇಶ್ವರನ ದಂಡನಾಯಕ ಬಮ್ಮರಸ ಕಳಚುರ್ಯರನ್ನು ಓಡಿಸಿ ಸೋಮೇಶ್ವರನನ್ನು ಪುನಃ ಸಿಂಹಾಸನಕ್ಕೇರಿಸಿ ಚಾಳುಕ್ಯ ರಾಜ್ಯದ ಪುನರುದ್ಧಾರ ಮಾಡಿ ಚಾಳುಕ್ಯರಾಜ್ಯಪ್ರತಿಷ್ಠಾಪಕನೆಂಬ ಬಿರುದು ಪಡೆದ. ಈ ರೀತಿ ಕಲ್ಯಾಣದ ಕಳಚುರ್ಯರ ಅಲ್ಪಾವಧಿಯ ಆಕ್ರಮಣ ಕೊನೆಗೊಂಡಿತು. (ಎ.ವಿ.ಎನ್.; ಎಲ್.ಎಸ್.ಆರ್.)

**ಕಳಚುರಿ ನಾಣ್ಯಗಳು :** ಕಳಚುರಿ ವಂಶದ ಎಲ್ಲ ಶಾಖೆಗಳ ಎಲ್ಲ ರಾಜರ ನಾಣ್ಯಗಳೂ ದೊರಕದಿರುವುದರಿಂದ ಅವರ ನಾಣ್ಯಗಳ ವಿಷಯದಲ್ಲಿ ಸಮಗ್ರವಾದ ಅಭಿಪ್ರಾಯ ಕೊಡುವುದು ಸಾಧ್ಯವಿಲ್ಲ.

ಮಾಹಿಷ್ಮತೀ ಕಳಚುರಿ ಕೃಷ್ಣರಾಜನ ನಾಣ್ಯಗಳು ನಾಸಿಕ್ ಜಿಲ್ಲೆಯ ದೇವಲಾನಾದಲ್ಲಿ ದೊರೆತಿವೆ. ಈ ನಾಣ್ಯಗಳ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆದ ಅನಂತರ ಇವು ಕಳಚುರಿ ಕೃಷ್ಣರಾಜನವೆಂದು ತೀರ್ಮಾನಿಸಲಾಗಿದೆ. ಇವು ಕ್ಷತ್ರಪ, ಗುಪ್ತ ಮತ್ತು ತ್ರೈಕೂಟರ ನಾಣ್ಯಗಳನ್ನು ಹೋಲುತ್ತವೆ. ಬೆಳ್ಳಿಯ ನಾಣ್ಯಗಳಲ್ಲಿ ಒಂದು ಕಡೆ ರಾಜನ ಚಿತ್ರವೂ ಹಿಂಭಾಗದಲ್ಲಿ ಪರಮಮಾಹೇಶ್ವರ ಮಾತಾಪಿತೃಪಾದಾನುದ್ಯಾತ ಶ್ರೀಕೃಷ್ಣರಾಜ ಎಂಬ ಬರಹವೂ ಉಂಟು. ಪರಮಮಾಹೇಶ್ವರ ಎಂದು ಹೇಳಿಕೊಂಡಿರುವುದು ಗಮನಾರ್ಹ.

ತ್ರಿಪುರಿಯ ಕಳಚುರಿ ನಾಣ್ಯಗಳಲ್ಲಿ ಗಾಂಗೇಯದೇವನ ನಾಣ್ಯಗಳು ಮುಖ್ಯವಾದವು. ಇವು ಚಿನ್ನ, ಬೆಳ್ಳಿ ಮತ್ತು ತಾಮ್ರಗಳವು. ಚಿನ್ನದ ನಾಣ್ಯಗಳಲ್ಲಿ ಅರ್ಧ ಟಂಕ, ಕಾಲು ಮತ್ತು ಒಂದನೆಯ ಎಂಟು ಟಂಕದ ಮೌಲ್ಯಗಳ ನಾಣ್ಯಗಳು ದೊರಕಿವೆ. ಗುಂಡಗೆ, ಅರ್ಧ ಅಂಗುಲ ವ್ಯಾಸವುಳ್ಳ ಈ ನಾಣ್ಯಗಳಲ್ಲಿ ಒಂದು ಕಡೆ ನಾಗರೀ ಲಿಪಿಯಲ್ಲಿ ಇವನ ಹೆಸರೂ ಮತ್ತೊಂದು ಕಡೆ ಒಂದು ವೃತ್ತದೊಳಗೆ ಪದ್ಮಾಸನಸ್ಥಳಾದ ಲಕ್ಷ್ಮಿಯ ಚಿತ್ರವೂ ಉಂಟು. ಲಕ್ಷ್ಮಿಯ ಮೇಲಿನ ಕೈಗಳಲ್ಲಿ ಕಮಲಗಳಿವೆ. ಈ ರೀತಿಯ ನಾಣ್ಯಗಳು ಇವನ ಅನಂತರ ಉತ್ತರಭಾರತದಲ್ಲಿ ಬಹಳ ಚಲಾವಣೆಗೆ ಬಂದುವು. ಅನೇಕ ರಾಜರು ಇದನ್ನೇ ಅನುಕರಿಸಿದರು.

ರತ್ನಪುರದ ಕಳಚುರಿ ನಾಣ್ಯಗಳಲ್ಲಿ ಜಾಜಲ್ಲದೇವ, ರತ್ನದೇವ ಮತ್ತು ಪೃಥ್ವೀದೇವರ ನಾಣ್ಯಗಳು ದೊರಕಿವೆ. ಈ ವಂಶದಲ್ಲಿ ಆ ಹೆಸರುಗಳ ರಾಜರು ಅನೇಕರಿದ್ದುದರಿಂದ ಈ ನಾಣ್ಯಗಳನ್ನು ಅಚ್ಚುಹಾಕಿಸಿದವರು ಯಾರು ಎಂದು ಖಚಿತವಾಗಿ ತಿಳಿಯುವುದು ಸಾಧ್ಯವಾಗಿಲ್ಲ. ಆದರೆ ಈ ನಾಣ್ಯಗಳನ್ನು ಅಚ್ಚು ಹಾಕಿಸಿದವರು 1ನೆಯ ಜಾಜಲ್ಲದೇವ (1090–1120), 2ನೆಯ ರತ್ನದೇವ (1120–35) ಮತ್ತು 2 ನೆಯ ಪೃಥ್ವೀದೇವ (1135–65) ಎಂದು ಖ್ಯಾತ ವಿದ್ವಾಂಸ ಮಿರಾಷಿ ಅನೇಕ ಚಾರಿತ್ರಿಕ ಆಧಾರಗಳ ಮೇಲೆ ತೀರ್ಮಾನಿಸಿದ್ದಾರೆ.

ಜಾಜಲ್ಲದೇವನ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ದೊರಕಿವೆ. ಅವುಗಳಲ್ಲಿ ಒಂದು ಕಡೆ 'ಶ್ರೀಮಜ್ಜಾಜಲ್ಲದೇವ' ಎಂಬ ನಾಗರೀ ಲಿಪಿಯ ಬರೆವಣಿಗೆಯಿದೆ. ಕೆಲವು ನಾಣ್ಯಗಳ ಹಿಂಭಾಗದಲ್ಲಿ ಎರಡು ಭುಜಗಳ ಹನುಮಂತ ರಾಕ್ಷಸನನ್ನು ಕೊಲ್ಲುತ್ತಿರುವ ಚಿತ್ರವೂ ಮತ್ತೆ ಕೆಲವದರಲ್ಲಿ ಸಿಂಹವೊಂದು ಆನೆಯನ್ನು ತುಳಿಯುತ್ತಿರುವ ಚಿತ್ರವೂ ಉಂಟು. ರತ್ನದೇವನವಾಗಿ ಈವರೆವಿಗೆ ದೊರಕಿರುವ ಚಿನ್ನ ಮತ್ತು ತಾಮ್ರ ನಾಣ್ಯಗಳಲ್ಲಿ ಒಂದು ಕಡೆ ಶ್ರೀಮದ್ರತ್ನದೇವ ಎಂಬ ನಾಗರೀಲಿಪಿಯ ಶಾಸನ ಮತ್ತೊಂದು ಕಡೆ ಮೇಲೆ ಹೇಳಿದ ಸಿಂಹ ಇಲ್ಲವೇ ಖಡ್ಗದ ಚಿತ್ರ ಇವೆ. ಪೃಥ್ವೀದೇವನ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳಲ್ಲಿ ಶ್ರೀಮತ್ ಪೃಥ್ವೀದೇವ ಎಂಬ ಶಾಸನವೂ, ಕೆಲವಲ್ಲಿ ಸಿಂಹದ ಚಿತ್ರವೂ ಮತ್ತೆ ಕೆಲವಲ್ಲಿ ನಾಲ್ಕು ಭುಜದ ಹನುಮಾನ್ ಚಿತ್ರವೂ ಉಂಟು. ಈ ವಂಶದ ಪ್ರತಾಪಮಲ್ಲನ ತಾಮ್ರದ ನಾಣ್ಯಗಳಲ್ಲಿ ಅವನ ಹೆಸರು ಮತ್ತು ಸಿಂಹದ ಚಿತ್ರ ಇವೆ. ಸರಯೂಪಾರದ ಮತ್ತು ರಾಯಪುರದ ಕಳಚುರಿಗಳ ನಾಣ್ಯಗಳು ದೊರಕಿಲ್ಲ. ಇವಲ್ಲದೆ, ಅವರ ಶಾಸನಗಳಲ್ಲಿ ಟಂಕ, ದ್ರಮ್ಮ, ಅಸು, ಪೌರ, ಕಾಕಿಣೀ, ಪಣ, ಕಪರ್ದ ಮುಂತಾದ ನಾಣ್ಯಗಳ ಉಲ್ಲೇಖಗಳುಂಟು. ಆದರೆ ಇವುಗಳ ಸ್ವರೂಪವೇನೆಂಬುದು ತಿಳಿಯದು.

ಕಲ್ಯಾಣದ ಕಳಚುರಿಗಳ ನಾಣ್ಯಗಳು ಅಷ್ಟಾಗಿ ಬೆಳಕಿಗೆ ಬಂದಿಲ್ಲ. ರಾಯಮುರಾರಿ ಸೋವಿದೇವನ ಶಾಸನವುಳ್ಳ ಚಿನ್ನ ಮತ್ತು ತಾಮ್ರದ ನಾಣ್ಯಗಳು ಮಾತ್ರ ದೊರಕಿವೆ. ಇವುಗಳಲ್ಲಿ ವೃಷಭವೂ ಹಿಂಭಾಗದಲ್ಲಿ ಲತೆಗಳೂ ಕಾಣುತ್ತವೆ. (ಎ.ವಿ.ಎನ್.)

**ಕಳಚುರಿ ಶಾಸನಗಳು :** ಕಳಚುರಿಗಳ ಶಿಲಾ ಮತ್ತು ತಾಮ್ರಶಾಸನಗಳು ಇಂದಿನ ಮಧ್ಯಪ್ರದೇಶ, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳ ಅನೇಕ ಕಡೆಗಳಲ್ಲೂ ಗುಜರಾತ್ ಮತ್ತು ಉತ್ತರಪ್ರದೇಶಗಳ ಕೆಲವೆಡೆಗಳಲ್ಲೂ ಸಿಕ್ಕಿವೆ. ಇವುಗಳಲ್ಲಿ ಶಿಲಾಶಾಸನಗಳೇ ಅಧಿಕ.

ಕಲ್ಯಾಣದ ಕಳಚುರಿಗಳನ್ನುಳಿದು ಇತರ ಕಳಚುರಿಗಳ ಹೆಚ್ಚಿನ ಶಾಸನಗಳು ಅವರದೇ ಆದ ಕಳಚುರಿ–ಚೇದಿಸಂವತ್ ಶಕೆಯನ್ನನುಸರಿಸುತ್ತವೆ. ಇದು ಆಭೀರ, ತ್ರೈಕೂಟಕ, ಗೂರ್ಜರ ಮತ್ತು ಸೇಂದ್ರಕ ಅರಸರ ಶಾಸನಗಳಲ್ಲೂ ಉಂಟು. ಆಭೀರವಂಶದ ಈಶ್ವರಸೇನ 248–249ರಲ್ಲಿ ಈ ಶಕೆಯನ್ನಾರಂಭಿಸಿದನೆಂದು ವಿದ್ವಾಂಸರ ಅಭಿಪ್ರಾಯ. ಇದು ಕಳಚುರಿಗಳ ಶಾಸನಗಳಲ್ಲಿ ಅಧಿಕವಾಗಿ ಕಂಡುಬರುವುದರಿಂದಲೂ ಇವರ ರಾಜ್ಯ ಚೇದಿಮಂಡಲದಲ್ಲಿ (ಮಧ್ಯಭಾರತ) ಬಹುಕಾಲದವರೆಗೆ ಹಬ್ಬಿದ್ದುದರಿಂದಲೂ ಕಳಚುರಿ ಚೇದಿ ಸಂವತ್ತೆಂದೇ ಪ್ರಸಿದ್ಧವಾಗಿದೆ.

ಕಳಚುರಿಗಳ ಶಾಸನಗಳು ಆರಂಭದಲ್ಲಿ ದಕ್ಷಿಣಭಾರತದ ಪಶ್ಚಿಮ ಭಾಗದಲ್ಲಿ ಆ ಕಾಲಕ್ಕೆ ಪ್ರಚಲಿತವಿದ್ದ ಬ್ರಾಹ್ಮೀ ಅಕ್ಷರಗಳಲ್ಲಿ, ಅನಂತರ ಸಿದ್ಧಮಾತೃಕಾ (ಇದಕ್ಕೆ ಪ್ರಾಗ್–ನಾಗರೀ; ಪ್ರೋಟೋ–ನಾಗರೀ ಎಂಬ ಅನ್ವರ್ಥನಾಮವೂ ಇದೆ) ಹಾಗೂ ನಾಗರೀ ಲಿಪಿಗಳಲ್ಲಿ ಇರುತ್ತವೆ. ಅವುಗಳ ಭಾಷೆ ಸಂಸ್ಕೃತ. ಇದು ಒಮ್ಮೊಮ್ಮೆ ಪ್ರಾಕೃತ ಅಥವಾ ಪ್ರಾದೇಶಿಕ ಭಾಷೆಗಳಿಂದ ಪ್ರಭಾವಿತವಾಗಿದ್ದುದುಂಟು. ಶಾಸನಗಳು ಗದ್ಯ, ಪದ್ಯ ಅಥವಾ ಚಂಪೂರೂಪದಲ್ಲಿವೆ. ಶಾಸನಗಳ ಭಾಷೆ ಮೊದಲು ಸರಳವಾಗಿದ್ದು, ಕ್ರಮೇಣ ಪ್ರೌಢವೂ ಆಲಂಕಾರಿಕವೂ ಆಗಿದೆ. ಅನಂತರದ ಹೆಚ್ಚಿನ ಶಾಸನಗಳು ಕನ್ನಡ ಲಿಪಿಯಲ್ಲಿದ್ದು, ಅವುಗಳ ಭಾಷೆ ಕನ್ನಡ, ಸಂಸ್ಕೃತ ಅಥವಾ ಅವೆರಡರ ಮಿಶ್ರಣವಾಗಿದೆ. ಕೆಲ ಶಾಸನಗಳು ಉತ್ತಮ ಕಾವ್ಯಕ್ಕೆ ಉದಾಹರಣೆಗಳಂತಿವೆ.

ಶಾಸನಗಳು ಸಿದ್ಧಂ, ಸ್ವಸ್ತಿ ಮೊದಲಾದ ಮಂಗಳವಾಚಕ ಶಬ್ದಗಳಿಂದ, ದೇವತಾಸ್ತುತಿಗಳಿಂದ ಪ್ರಾರಂಭವಾಗಿ, ಅರಸರ ಮತ್ತು ಸಾಮಂತರ ಪ್ರಶಸ್ತಿ, ವಂಶಾವಳಿ ಮೊದಲಾದವುಗಳನ್ನಿತ್ತು, ತಮ್ಮ ಮುಖ್ಯ ಉದ್ದೇಶವನ್ನು ತಿಳಿಸುತ್ತವೆ. ಹೆಚ್ಚಿನವು ದಾನಶಾಸನಗಳು. ಕೆಲವಲ್ಲಿ ಅಂದಿನ ಸಮಾಜದ ರಾಜಕೀಯ ಪರಿಸ್ಥಿತಿಯ, ಧಾರ್ಮಿಕ ಆಗುಹೋಗುಗಳ ಮತ್ತು ವೀರರ ಬಗ್ಗೆ ವಿಶಿಷ್ಟ ರೀತಿಯ ಪ್ರಸ್ತಾಪವಿದೆ. ಕೊನೆಯಲ್ಲಿ ಶಾಸನದಲ್ಲಿ ನಮೂದಿಸಿದ ದಾನದ ರಕ್ಷಣೆಯ ಬಗ್ಗೆ ಉಪದೇಶಯುಕ್ತ ನುಡಿಗಳೂ ವ್ಯಾಸಪ್ರಣೀತ ಶ್ಲೋಕಗಳೂ ಇವೆ.

ಹೆಚ್ಚಿನ ಶಾಸನಗಳ ತೇದಿಗಳು ಕಳಚುರಿ–ಚೇದಿ ಸಂವತ್ತಿನಲ್ಲಿದ್ದರೂ ಕೆಲವು ಗುಪ್ತ ಮತ್ತು ವಿಕ್ರಮ ಸಂವತ್ಸರಗಳಲ್ಲಿಯೂ ಇವೆ. ಕಳಚುರಿ–ಚೇದಿ ಹಾಗೂ ಗುಪ್ತ ಸಂವತ್ಸರಗಳನ್ನನುಸರಿಸುವ ಶಾಸನಗಳು, ಅನುಕ್ರಮವಾಗಿ, ಸಂವತ್ತಿನ ವರ್ಷ, ತಿಂಗಳು, ತಿಥಿ ಇವುಗಳನ್ನೀಯುತ್ತವೆ; ವಿಕ್ರಮ ಸಂವತ್ಸರವನ್ನನುಸರಿಸುವವು, ಅನುಕ್ರಮವಾಗಿ, ವಿಕ್ರಮಸಂವತ್ತಿನ ವರ್ಷ, ತಿಂಗಳು, ತಿಥಿ ಮತ್ತು ವಾರ ಈ ವಿವರಗಳನ್ನು ಕೊಡುತ್ತವೆ. ಇವುಗಳಲ್ಲಿ ಮಂಡಲಾಧಿಪತಿಗಳಿಗೆ ದಂಡನಾಯಕ, ಸಾಮಂತ ಮುಂತಾದ ಬಿರುದುಗಳನ್ನೂ ಸಾರ್ವಭೌಮರಿಗೆ ಚಕ್ರವರ್ತಿ, ಪರಮಭಟ್ಟಾರಕ, ಮಹಾರಾಜಾಧಿರಾಜ, ಪರಮೇಶ್ವರ ಮೊದಲಾದ ಬಿರುದುಗಳನ್ನೂ ಕೊಡಲಾಗಿರುತ್ತದೆ. ಕೆಲ ಅರಸರಿಗೆ ಮಾತಾಪಿತೃಪಾದಾನುಧ್ಯಾತ, ತ್ರಿಕಲಿಂಗಾಧಿಪತಿ, ನಿಜಭುಜೋಪಾರ್ಜಿತ–ಅಶ್ವಪತಿ–ಗಜಪತಿ–ನರಪತಿ–ರಾಜತ್ರಯಾಧಿಪತಿ ಮೊದಲಾದ ವಿಶಿಷ್ಟ ರೀತಿಯ ಬಿರುದುಗಳಿದ್ದದ್ದು ಕಂಡುಬರುತ್ತದೆ.

ಕಲ್ಯಾಣದ ಕಳಚುರಿಗಳು ಪ್ರಾರಂಭದಲ್ಲಿ ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದು, ತರುವಾಯ ಸಾರ್ವಭೌಮರಾಗಿ ರಾಜ್ಯವಾಳಿದರು. ಚಾಳುಕ್ಯರ ಸಾಮಂತರಾಗಿದ್ದಾಗ ಮಂಡಳೇಶ್ವರ, ಮಹಾಮಂಡಳೇಶ್ವರರೆಂದೂ ಸಾರ್ವಭೌಮರಾಗಿದ್ದಾಗ ಭುಜಬಳ ಚಕ್ರವರ್ತಿ ಸಮಸ್ತಭುವನಾಶ್ರಯ, ಶ್ರೀಪೃಥ್ವೀವಲ್ಲಭ, ಮಹಾರಾಜಾಧಿರಾಜ, ಕಳಚುರ್ಯ ಚಕ್ರವರ್ತಿಗಳೆಂದೂ ಇವರಿಗೆ ಬಿರುದುಗಳಿದ್ದುವು. ಕಾಳಾಂಜರ ಪುರವರೇಶ್ವರ ಎಂಬ ವಿಶಿಷ್ಟ ಬಿರುದು ಇವರ ಹಾಗೂ ಮಧ್ಯ ಭಾರತದ ಕಳಚುರಿಗಳ ಮನೆತನಗಳ ಸಂಬಂಧವನ್ನು ಸೂಚಿಸುತ್ತದೆ. (ಎಂ.ಎಸ್.ಕೆ.)

**ಕಳಭ್ರರು :** ದಕ್ಷಿಣ ಭಾರತದ ಖ್ಯಾತ ಮನೆತನಗಳಾದ ಚೋಳ, ಚೇರ, ಪಾಂಡ್ಯ ಮತ್ತು ಪಲ್ಲವರನ್ನು ಬದಿಗೊತ್ತಿ 5–6ನೆಯ ಶತಮಾನಗಳಲ್ಲಿ ರಾಜ್ಯವಾಳಿದ ದೊರೆಗಳು, ಇವರ ಉಲ್ಲೇಖ ಇಲ್ಲಿನ ಶಾಸನಗಳಲ್ಲಿ ಮತ್ತು ಸಾಹಿತ್ಯಗ್ರಂಥಗಳಲ್ಲಿ ಕಾಣಬರುತ್ತದೆ. ಆದರೆ ಈ ಮಾಹಿತಿಗಳು ಇವರ ವಿಚಾರದಲ್ಲಿ ವಿಶೇಷವಾಗಿ ಏನನ್ನೂ ತಿಳಿಸುವುದಿಲ್ಲ. ಕಳಭ್ರರು ಯಾರು ಎಂಬ ವಿಷಯದಲ್ಲಿ ಚರಿತ್ರಕಾರರಲ್ಲಿ ಒಮ್ಮತವಿಲ್ಲ. ಅವರು ಕೊಡಂಬಾಲೂರಿನ ಮುತ್ತರೈಯರ್ ವಂಶಜರೆಂದು ಕೆಲವರ ಮತ. ತೊಂಡೈಮಂಡಲದ ಉತ್ತರಭಾಗಗಳಲ್ಲಿ ಆಳುತ್ತಿದ್ದ ಕಳವರ್ ಎಂಬ ಈ ಗುಡ್ಡನಾಡಿನ ಜನ ಈಗಿನ ತಿರುಪತಿಯ ಸಮೀಪದಲ್ಲಿ ವಾಸವಾಗಿದ್ದು ಕಳ್ಳತನ ದರೋಡೆಗಳನ್ನು ಮಾಡುತ್ತಿದ್ದರೆಂದೂ ಸುಮಾರು ನಾಲ್ಕನೆಯ ಶತಮಾನದ ಹೊತ್ತಿಗೆ ಸಾತವಾಹನರ ಪ್ರಾಬಲ್ಯ ಕುಂಠಿತವಾಗಿ ಪಲ್ಲವರು ಪ್ರಬಲವಾದುದರಿಂದ ಮತ್ತು ಸಮುದ್ರಗುಪ್ತ ದಕ್ಷಿಣಾಪಥದ ಮೇಲೆ ದಂಡೆತ್ತಿ ಹೋಗಿ ವಿಜಯವನ್ನು ಸಂಪಾದಿಸಿದುದರಿಂದ ಉಂಟಾದ ರಾಜಕೀಯ ಕ್ಷೋಭೆಯ ಸಮಯದಲ್ಲಿ ಇವರು ತಿರುಪತಿಯಿಂದ ಹೊರಟು ತೊಂಡೈಮಂಡಲದಲ್ಲಿ ನೆಲೆಸಿದರೆಂದೂ ಅವರ ತರ್ಕ. ತಮಿಳು ಶಾಸನಗಳಲ್ಲಿ ಮತ್ತು ಸಾಹಿತ್ಯದಲ್ಲಿ ವೆಲ್ಲಾಳ ಕುಲಕ್ಕೆ ಸೇರಿದ ಕಳಪ್ಪಾಳರ್ ಎಂಬ ಜನಗಳ ಉಲ್ಲೇಖ ಕಾಣಬರುತ್ತದೆ. ಈ ಕಳಪ್ಪಾಳರೇ ಕಳಭ್ರರೆಂದೂ ಆದ್ದರಿಂದ ಇವರು ವೆಲ್ಲಾಳಕುಲದವರೆಂದೂ ಮತ್ತೆ ಕೆಲವು ಇತಿಹಾಸಕಾರರು ವಾದಿಸಿದ್ದಾರೆ. ಕಳಭ್ರರು ಕರ್ನಾಟಕದವರೆಂದೂ ಇನ್ನು ಕೆಲವು ಇತಿಹಾಸಕಾರರು ತರ್ಕಿಸಿದ್ದಾರೆ.

ಶ್ರವಣಬೆಳಗೊಳದ ಚಿಕ್ಕಬೆಟ್ಟವನ್ನು ಪ್ರಾಚೀನ ಶಾಸನಗಳಲ್ಲಿ ಕಳಬಪ್ಪು ಎಂದು ಕರೆದಿರುವುದು ಗಮನಾರ್ಹ. ಈ ಪ್ರದೇಶಕ್ಕೆ ಕಳಬಪ್ಪುನಾಡು ಎನ್ನುವ ಹೆಸರೂ ಇತ್ತು. ಅದೇ ರೀತಿ ಕಳವರನಾಡು ಎಂಬುದು ಪ್ರಾಚೀನ ಕರ್ನಾಟಕದಲ್ಲಿ ಬೆಂಗಳೂರು–ಕೋಲಾರ ಪ್ರಾಂತ್ಯದ ಹೆಸರಾಗಿದ್ದಿತು. ಹಲ್ಮಿಡಿ ಶಾಸನದಲ್ಲಿ ಕಾಕುತ್ಸ್ಥವರ್ಮನಿಗೆ ಕಳಭೋರ ಎಂಬ ಶತ್ರುಗಳು ಇದ್ದರೆಂದು ಹೇಳಿದೆ. ಇವರು ಕಳಭ್ರರೇ ಇರಬೇಕೆಂದು ಊಹಿಸಲಾಗಿದೆ. ಅಂದರೆ ಶ್ರವಣಬೆಳಗೊಳದ ಪ್ರದೇಶದಲ್ಲಿ ಮೊದಲಿಗೆ ನೆಲೆಸಿದ್ದ ಇವರು ಕದಂಬ ಮತ್ತು ಗಂಗ ದೊರೆಗಳ ಪ್ರಾಬಲ್ಯದಿಂದ ಪೂರ್ವಕ್ಕೆ ಹೋಗಿ ಕೋಲಾರ ಜಿಲ್ಲೆಯ ನಂದಿಯಲ್ಲಿ ನೆಲೆಸಿದರೆಂದೂ ಸು. 5ನೆಯ ಶತಮಾನದ ಪ್ರಾರಂಭದಲ್ಲಿ ತಮಿಳುನಾಡಿನ ಕಡೆಗೆ ಹೋದರೆಂದೂ ಹೇಳಬಹುದು.

ಕಳಭ್ರರ ಉಗಮದ ಬಗೆಗೆ ಇರುವ ಅಸ್ಪಷ್ಟತೆಯೇ ಅವರ ಇತಿಹಾಸದ ವಿಷಯದಲ್ಲೂ ಕಾಣಬರುತ್ತದೆ. ಪ್ರಸಿದ್ಧವಾದ ವೆಳ್ವಿಕ್ಕುಡಿ ಶಾಸನದಲ್ಲಿ ಕಳಭ್ರವಂಶದ ರಾಜನೊಬ್ಬ (ಕಲಿಯರಸನ್) ಅನೇಕಾನೇಕ ಅಧಿರಾಜರನ್ನು ಸೋಲಿಸಿ ಭೂಮಿಯನ್ನು ತನ್ನ ವಶಮಾಡಿಕೊಂಡು ಬ್ರಹ್ಮದೇಯ ಭೂಮಿಗಳನ್ನು ಕಿತ್ತುಕೊಂಡನೆಂದೂ ಅನಂತರ ಪಾಂಡ್ಯರಾಜ ಕಡುಂಗೋನ್ ಕಳಭ್ರರನ್ನು ಸೋಲಿಸಿ ರಾಜ್ಯವನ್ನು ತನ್ನ ವಶ ಮಾಡಿಕೊಂಡನೆಂದೂ ಹೇಳಿದೆ. ಈ ಕಳಭ್ರರಾಜ ಯಾರು ಎಂಬುದಾಗಿ ಮಾತ್ರ ಇಲ್ಲಿ ಹೇಳಿಲ್ಲ. ಆದರೆ ಪ್ರಸಿದ್ಧ ಬೌದ್ಧ ಲೇಖಕ ಬುದ್ಧದತ್ತನ ಬರೆವಣಿಗೆಯಿಂದ ಅಚ್ಯುತವಿಕ್ರಾಂತ ಎಂಬ ಕಳಭ್ರರಾಜ ಚೋಳರಾಜ್ಯದಲ್ಲಿ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈ ಅಚ್ಯುತವಿಕ್ರಾಂತನೇ ಪಾಂಡ್ಯ, ಚೇರ, ಚೋಳ ಮತ್ತು ಪಲ್ಲವ ರಾಜರುಗಳನ್ನು ಸೋಲಿಸಿ ತಮಿಳುನಾಡನ್ನು ಕಳಭ್ರರ ವಶಕ್ಕೆ ಸೇರಿಸಲು ಕಾರಣನಾದವನೆಂದು ಊಹಿಸಬಹುದು. ಅಚ್ಯುತವಿಕ್ರಾಂತ ಕಳಭ್ರರಾಜರಲ್ಲಿ ಶಕ್ತನೆಂದು ಹೇಳಲು ಅನೇಕ ಸಾಹಿತ್ಯ ಗ್ರಂಥಗಳಲ್ಲಿ ಕಾಣಬರುವ ಉಲ್ಲೇಖವೇ ಸಾಕ್ಷಿ. ಅಚ್ಯುತ ವಿಕ್ರಾಂತ ಬೌದ್ಧಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟನೆಂದೂ ಅವನ ಕಾಲದಲ್ಲಿ ಅನೇಕ ಬೌದ್ಧವಿಹಾರಗಳು ಚೋಳ ರಾಜ್ಯದಲ್ಲಿದ್ದುವೆಂದೂ ಬುದ್ಧದತ್ತನ ಬರೆವಣಿಗೆಯಿಂದ ತಿಳಿಯುತ್ತದೆ. ತಮಿಳು ವ್ಯಾಕರಣ ಗ್ರಂಥಕರ್ತೃ ಅಮಿತಸಾಗರ (10ನೆಯ ಶತಮಾನ) ಅಚ್ಯುತ ವಿಕ್ರಾಂತನ ವಿಷಯದಲ್ಲಿ ಕೆಲವು ಪದ್ಯಗಳನ್ನು ಉದಾಹರಿಸುತ್ತಾನೆ. ಬಹುಶಃ ಕಳಭ್ರರು ಬೌದ್ಧರೆಂದೂ ತಮಿಳುನಾಡಿನಲ್ಲಿ ಅವರು ನಡೆಸಿದ ಕ್ರಾಂತಿಗೆ ಮತೀಯ ಕಾರಣಗಳೇ ಪ್ರಧಾನವಾದವೆಂದೂ ನೀಲಕಂಠಶಾಸ್ತ್ರಿಯವರು ಊಹಿಸುತ್ತಾರೆ. ವೆಳ್ವಿಕ್ಕುಡಿ ಶಾಸನವನ್ನೇ ಪ್ರಧಾನವಾಗಿಟ್ಟುಕೊಂಡು ಎಲ್ಲ ವಿದ್ವಾಂಸರೂ ಕಳಭ್ರರು ದುಷ್ಟ ದೊರೆಗಳು (ಕಲಿಯರಸನ್), ಸಂಸ್ಕೃತಿ ನಾಶಕರು ಎಂದು ಹೇಳಿದ್ದಾರೆ. ಕಳಭ್ರರ ಪ್ರಾಬಲ್ಯವನ್ನು ಮುರಿದು ಅವರ ನಾಶಕ್ಕೆ ಕಾರಣರಾದವರು ಪಾಂಡ್ಯರಾಜ ಕಡುಂಗೋನ್ ಮತ್ತು ಪಲ್ಲವ ಸಿಂಹವಿಷ್ಣು. ಪಲ್ಲವ 1ನೆಯ ನರಸಿಂಹವರ್ಮ, ಚಾಳುಕ್ಯ 1ನೆಯ ಮತ್ತು 2ನೆಯ ವಿಕ್ರಮಾದಿತ್ಯ – ಇವರೂ ಕಳಭ್ರರನ್ನು ಸೋಲಿಸಿದರೆಂದು ಅವರ ಶಾಸನಗಳಲ್ಲಿ ಹೇಳಿದೆ. ದಕ್ಷಿಣಭಾರತದಲ್ಲಿ ಸುಮಾರು ಎರಡು ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದ ಕಳಭ್ರರ ಚರಿತ್ರೆ ಹೆಚ್ಚಿನ ಸಂಶೋಧನೆಗಳು ನಡೆಯುವವರೆಗೂ ಸಮಸ್ಯೆಯಾಗಿಯೇ ಉಳಿಯುತ್ತದೆ. (ಎ.ವಿ.ಎನ್.)

**ಕಳಲೆ :** ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ನಂಜನಗೂಡಿನಿಂದ 5 ಕಿಮೀಗಳ ದೂರದಲ್ಲಿ ಮೈಸೂರು–ನೀಲಗಿರಿ ರಸ್ತೆಯ ಪಕ್ಕದಲ್ಲಿರುವ ಗ್ರಾಮ. ಇದು ಕಳಲೆ ಒಡೆಯರ ಕೇಂದ್ರಸ್ಥಾನವಾಗಿತ್ತು. ಊರಿನ ಮಧ್ಯದಲ್ಲಿಯ ಪಟ್ಟದ ಚಾವಡಿಯೆಂಬ ಪುರಾತನ ಕಟ್ಟಡ ಅವರ ಪಟ್ಟಾಭಿಷೇಕ ನಡೆಯುತ್ತಿದ್ದ ಸ್ಥಳವೆಂದೂ ಅದರ ಪಕ್ಕದ ಸ್ಥಳದಲ್ಲಿ ಅವರ ಅರಮನೆಯಿತ್ತೆಂದೂ ಐತಿಹ್ಯ ಹೇಳುತ್ತದೆ.

ಇಲ್ಲಿರುವ ಲಕ್ಷ್ಮೀಕಾಂತ ದೇವಾಲಯ ದ್ರಾವಿಡಶೈಲಿಗೆ ಸೇರಿದ್ದು. ಚಾವಣಿಯ ಮೇಲಿರುವ ಗೂಡುಗಳಲ್ಲಿ ಉತ್ತಮವಾದ ಗಾರೆಯ ಪ್ರತಿಮೆಗಳಿವೆ. ನಂಬಿನಾರಾಯಣ ರೂಪದಲ್ಲಿರುವ ವಿಗ್ರಹ 1.1 ಮೀ ಎತ್ತರದ ಸುಂದರ ಶಿಲ್ಪ. ದಳವಾಯಿ ದೇವರಾಜಯ್ಯನ ಮನೆದೇವರಾದ ರಾಮವಿಗ್ರಹವನ್ನು ಅವನ ಮರಣಾನಂತರ ದೇವಾಲಯಕ್ಕೆ ಕೊಡಲಾಯಿತು. ಈ ಸುಂದರ ವಿಗ್ರಹದ ಪ್ರಭಾವಳಿಯ ಮೇಲೆ ದಶಾವತಾರಗಳ ಚಿತ್ರಗಳಿವೆ. ದೇವಸ್ಥಾನದ ಪ್ರಾಕಾರದಲ್ಲಿ ಪರವಾಸುದೇವನ, ನಮ್ಮಾಳ್ವಾರ್ ಮತ್ತು ಇತರ ಆಳ್ವಾರುಗಳ ಮತ್ತು ಲಕ್ಷ್ಮೀದೇವಿಯ ಗುಡಿಗಳಿವೆ. ಮೈಸೂರು ರಾಜಮನೆತನದ ಚಿಹ್ನೆಗಳಾದ ಶಂಖ, ಚಕ್ರ, ಮತ್ಸ್ಯ ಮತ್ತು ಯಾಳಿಗಳ ಶಿಲ್ಪಗಳು ಇಲ್ಲಿರುವುದು ಗಮನಾರ್ಹ. ಕಳಲೆಯ ನಂಜರಾಜ ಇವನ್ನು ಕೊಟ್ಟುದಾಗಿ ಇವುಗಳ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ. ಬೆಳ್ಳಿಯ ಪಾತ್ರೆಗಳನ್ನು ದಳವಾಯಿ ನಂಜರಾಜ, ಲಕ್ಷ್ಮಮ್ಮಣ್ಣಿ, ಚೆಲುವೇ ಅರಸು ಮತ್ತು ಟಿಪ್ಪು ಸುಲ್ತಾನ್ – ಇವರು ಮಂದಿರಕ್ಕೆ ಕೊಟ್ಟರೆಂದು ಅವುಗಳ ಮೇಲಿನ ಶಾಸನಗಳಿಂದ ಗೊತ್ತಾಗುತ್ತದೆ. ದೇವಾಲಯದ ಹೊರವಲಯದಲ್ಲಿ ಎತ್ತರವೂ ಮನೋಹರವೂ ಆದ ಮಂಟಪವೊಂದುಂಟು. ಪಟ್ಟದ ಚಾವಡಿಯ ಮುಂಭಾಗದಲ್ಲಿ ಕಳಲೆಯ ಒಡೆಯ ಲಕ್ಷ್ಮೀಕಾಂತ ಒಡೆಯರ್ ಮತ್ತು ಆತನ ಪತ್ನಿಯ ಶಿಲ್ಪಗಳಿರುವ ಸತೀ ಕಲ್ಲೊಂದನ್ನು ಕಾಣಬಹುದು. ಶತೃಗಳಿಂದ ಲಕ್ಷ್ಮೀಕಾಂತ ಸಾವಿಗೆ ಈಡಾದಾಗ ಸಹಗಮನ ಮಾಡಿದ ಪತ್ನಿ ತನ್ನ ಪತಿಯನ್ನು ಆಲಿಂಗಿಸಿಕೊಂಡು ಮುದ್ದಿಸುತ್ತಿರುವಂತೆ ಮತ್ತು ಸ್ವರ್ಗದಲ್ಲಿ ಇವರ ಸಮಾಗಮವಾದಂತೆ ಶಿಲ್ಪಗಳು ತೋರಿಸುತ್ತವೆ.

ಕಳಲೆ ಮತ್ತು ಮೈಸೂರು ಮನೆತನಗಳ ನಡುವೆ ಆಗಾಗ್ಗೆ ವಿವಾಹ ಸಂದರ್ಭಗಳೇರ್ಪಡುತ್ತಿದ್ದು, ಅನಂತರ ಅವೆರಡು ಮನೆತನಗಳ ಸಮ್ಮಿಲನವಾದ ಸಂಗತಿ 1758ರ ಇಮ್ಮಡಿ ಕೃಷ್ಣರಾಜ ಒಡೆಯರ ಭಾಷಾಪತ್ರದಿಂದ ಶ್ರುತಪಡುತ್ತದೆ. ಉಮ್ಮತ್ತೂರಿನ ಪಾಳೆಯಗಾರರು ಕಳಲೆ ಮನೆತನದ ವೈರಿಗಳಾಗಿದ್ದರು. ಒಮ್ಮೆ ಅವರು ಕಳಲೆ ಮನೆತನದವರನ್ನು ಮೋಸದಿಂದ ಕೊಲ್ಲಿಸಿದಾಗ ಅವರ ಪೈಕಿ ಒಬ್ಬ ಮಾತ್ರ ತಪ್ಪಿಸಿಕೊಂಡು ತನ್ನ ಮನೆತನದ ಗೌರವವನ್ನು ಪುನಃ ಸ್ಥಾಪಿಸಿದ. ಅನಂತರ ಕಾಲದಲ್ಲಿ ಈ ವಂಶದ ದೇವರಾಜ ಮೈಸೂರು ಸೈನ್ಯದ ದಂಡಾಧಿನಾಯಕನೂ ಅವನ ತಮ್ಮ ನಂಜರಾಜ ಅರಮನೆಯ ಸರ್ವಾಧಿಕಾರಿಯೂ ಆಗಿ ರಾಜ್ಯದಲ್ಲಿ ಬಹಳ ಪ್ರಬಲರಾಗಿದ್ದರು. ಇವರ ಪ್ರಾಬಲ್ಯವನ್ನುಪಯೋಗಿಸಿಕೊಂಡು ಮುಂದೆ ಬಂದ ಹೈದರ್ ಅಲಿ ಈ ಸಹೋದರರನ್ನು ನಿವೃತ್ತಿಗೊಳಿಸಿ, ತಾನು ಅವರ ಸ್ಥಾನವನ್ನು ಆಕ್ರಮಿಸಿಕೊಂಡ. ಪ್ರಾರಂಭದಲ್ಲಿ ದೈವಭಕ್ತಿಪರನಾಗಿದ್ದ ನಂಜರಾಜ 1741ರಲ್ಲಿ ಕನ್ನಂಬಾಡಿಯ ಬಳಿ ನಂಜರಾಜ ಅಗ್ರಹಾರವನ್ನು ನಿರ್ಮಿಸಿದುದಲ್ಲದೆ ಹಲವು ದೇವಾಲಯಗಳಿಗೆ ದತ್ತಿಗಳನ್ನು ನೀಡಿದ. ಇವನ ತಂದೆ ಕಳಲೆಯ ವೀರರಾಜ ಸ್ವತಃ ಕವಿ; ಕವಿಗಳಿಗೂ ಪಂಡಿತರಿಗೂ ಆಶ್ರಯದಾತ. ದೇವರಾಜ ಮತ್ತು ನಂಜರಾಜರೂ ಕವಿಜನ ಪೋಷಕರಾಗಿದ್ದರು. (ಡಿ.ಎಸ್‍ಜ)

**ಕಳವು :** ಸ್ವತ್ತುಗಳ ಮೇಲಿನ ಅಪರಾಧಗಳಲ್ಲೊಂದು (ತೆಫ್ಟ್). ಸುಲಿಗೆ (ಎಕ್ಸ್‍ಟಾರ್ಷನ್), ದರೋಡೆ (ರಾಬರಿ), ಡಕಾಯಿತಿ (ಡಕಾಯ್ಟಿ), ಸ್ವತ್ತಿನ ದುರುಪಯೋಗದ ಅಪರಾಧ (ಕ್ರಿಮಿನಲ್ ಮಿಸ್ ಅಪ್ರೋಪ್ರಿಯೇಷನ್ ಆಫ್ ಪ್ರಾಪರ್ಟಿ), ನಂಬಿಕೆ ದ್ರೋಹ (ಕ್ರಿಮಿನಲ್ ಬ್ರೀಚ್ ಆಫ್ ಟ್ರಸ್ಟ್), ಕಳುವಾದ ಸ್ವತ್ತಿನ ಸ್ವೀಕಾರ, ಮೋಸ (ಚೀಟಿಂಗ್), ವಂಚನೆಯ ಕೃತ್ಯಗಳು (ಫ್ರಾಡ್ಯುಲೆಂಟ್ ಡೀಡ್ಸ್), ಕೇಡು (ಮಿಸ್ಚಿಫ್), ತಕ್ಸೀರಾಗುವಂಥ ಅತಿಕ್ರಮಣ (ಕ್ರಿಮಿನಲ್ ಟ್ರೆಸ್‍ಪಾಸ್) – ಇವು ಭಾರತೀಯ ದಂಡಸಂಹಿತೆಯ 17ನೆಯ ಪರಿಚ್ಛೇದದಲ್ಲಿ ನಮೂದಿಸಿರುವ ಇತರ ಅಪರಾಧಗಳು.

ಯಾವುದಾದರೂ ಚರಸ್ವತ್ತನ್ನು ಯಾವ ವ್ಯಕ್ತಿಯ ಸ್ವಾಧೀನದಿಂದಲಾದರೂ ಆ ವ್ಯಕ್ತಿಯ ಸಮ್ಮತಿಯಿಲ್ಲದೆ ಅಪ್ರಾಮಾಣಿಕತೆಯಿಂದ ತೆಗೆದುಕೊಳ್ಳುವ ಆಶಯ ಹೊಂದಿ ಆ ರೀತಿ ತೆಗೆದುಕೊಳ್ಳಲು ಆ ಸ್ವತ್ತನ್ನು ಯಾರಾದರೂ ಚಾಲಿಸಿದರೆ ಆ ವ್ಯಕ್ತಿ ಕಳವು ಮಾಡಿದನೆಂದು ಹೇಳಲಾಗುವುದು – ಎಂಬುದು ಭಾರತೀಯ ದಂಡಸಂಹಿತೆಯ 378ನೆಯ ಕಲಂ ಹೇಳುತ್ತದೆ. ಒಂದು ವಸ್ತು ನೆಲಕ್ಕೆ ಸೇರಿಕೊಂಡಿರುವಾಗ ಚರ ಸ್ವತ್ತಲ್ಲವಾದ್ದರಿಂದ ಅದು ಕಳವಿಗೆ ಈಡಲ್ಲ. ಆದರೆ ಅದನ್ನು ನೆಲದಿಂದ ಬೇರ್ಪಡಿಸಿದ ಒಡನೆಯೇ ಕಳವಿಗೆ ಈಡಾಗುವಂತಾಗುತ್ತದೆ. ನೆಲದಿಂದ ಬೇರ್ಪಡಿಸುವ ಕೃತ್ಯವೇ ಕದಲಿಕೆಯನ್ನೂ ಆಗಮಾಡಿಸಿದರೆ ಅದು ಕಳವು. ಒಬ್ಬ ಒಂದು ಸ್ವತ್ತನ್ನ ಚಲಿಸಲು ಇರುವ ತೊಡಕನ್ನು ತೆಗೆದರೆ, ಅಥವಾ ಅದನ್ನು ಇನ್ನೊಂದರಿಂದ ಬೇರ್ಪಡಿಸಿದರೆ ಮತ್ತು ವಾಸ್ತವವಾಗಿ ಚಾಲಿಸಿದರೆ ಆ ಸ್ವತ್ತು ಚಲಿಸಲು ಆತ ಕಾರಣವೆಂದು ತಿಳಿಯಬೇಕು. ಒಂದು ಪ್ರಾಣಿ ಚಲಿಸಲು ಯಾವುದಾದರೂ ಕೃತ್ಯದಿಂದ ಕಾರಣನಾದಾತ ಆ ಪ್ರಾಣಿಯನ್ನು ಆ ಕೃತ್ಯದಿಂದ ಚಾಲಿಸಿದನೆಂದೇ ತಿಳಿಯತಕ್ಕದ್ದು, ಮತ್ತು ಆ ರೀತಿ ಚಲನೆಗೆ ಕಾರಣವಾದದ್ದರ ಫಲವಾಗಿ ಆ ಪ್ರಾಣಿ ಏನನ್ನು ಚಾಲಿಸುವುದೋ ಅದನ್ನೆಲ್ಲ ಆ ವ್ಯಕ್ತಿ ಚಾಲಿಸಿದನೆಂದೇ ಆಗುತ್ತದೆ. ಇವೆಲ್ಲ ವಿವರಣೆಗಳನ್ನೂ ಭಾರತೀಯ ದಂಡಸಂಹಿತೆಯಲ್ಲಿ ಕೊಡಲಾಗಿದೆ.

ಮೇಲೆ ಹೇಳಿದ ಕಳವಿನ ವ್ಯಾಖ್ಯೆಯಲ್ಲಿ ಐದು ಮುಖ್ಯ ಅಂಶಗಳು ಅಡಕವಾಗಿವೆ:

1. ಸ್ವತ್ತನ್ನು ವಂಚನೆಯಿಂದ ತೆಗೆದುಕೊಳ್ಳುವ ಇಚ್ಛೆ. ಇದು ಅಪರಾಧದ ತಿರುಳು. ಒಬ್ಬನಿಗೆ ದುರ್ಲಭ್ಯ ಮತ್ತು ಇನ್ನೊಬ್ಬನಿಗೆ ದುರ್ವ್ಯಯ ಮಾಡುವ ಇಚ್ಛೆಯಿಂದ ಒಂದು ಕಾರ್ಯವನ್ನು ಮಾಡಿದರೆ ವಂಚನೆಯಿಂದ ತೆಗೆದುಕೊಳ್ಳುವ ಇಚ್ಛೆ ಪ್ರಕಟವಾಗುತ್ತದೆ. ಒಬ್ಬ ಅಜಾಗರೂಕತೆಯಿಂದ ಅಥವಾ ಅನುದ್ದೇಶಪೂರ್ವಕವಾಗಿ ಇನ್ನೊಬ್ಬನ ವಸ್ತುವನ್ನು ಕೊಂಡುಹೋದರೆ ಅಲ್ಲಿ ವಂಚನೆಯ ಆಶಯ ಇಲ್ಲದುದರಿಂದ ಕಳವಿನ ತಪ್ಪು ಬರುವುದಿಲ್ಲ. ಸ್ವತ್ತನ್ನು ಚಾಲಿಸುವ ಸಮಯದಲ್ಲಿ ವಂಚನೆಯಿಂದ ತೆಗೆದುಕೊಳ್ಳುವ ಆಶಯ ಇದ್ದರೆ ಅದು ಕಳುವಾಗುತ್ತದೆ. ಅದನ್ನು ತೆಗೆದುಕೊಂಡವನಿಗೆ ತೆಗೆದುಕೊಂಡುದರಿಂದಾಗಿ ಲಾಭವಾಗಬೇಕಾದ ಪ್ರಮೇಯವಿಲ್ಲ. ಆ ವಸ್ತುವನ್ನು ಚಿರಕಾಲ ಇಟ್ಟುಕೊಳ್ಳಬೇಕೆಂಬ ಇಚ್ಛೆ ಇರಬೇಕೆಂದಿಲ್ಲ. ಹಕ್ಕುದಾರಿಕೆಯ ನ್ಯಾಯವಾದ ವ್ಯಾಜ್ಯದಿಂದ ವಿಚಾರಗಳ ಅಥವಾ ಕಾನೂನಿನ ತಪ್ಪು ತಿಳುವಳಿಕೆಯಿಂದ ಸ್ವತ್ತನ್ನು ಕೊಂಡುಹೋದರೂ ಕಳವಾಗಲಾರದು. ತನ್ನ ಸ್ವತ್ತಾದರೂ ಅದು ಇನ್ನೊಬ್ಬನ ಸ್ವಾಧೀನವಿದ್ದು ಅದನ್ನು ವಂಚನೆಯ ಆಶಯದಿಂದ ತೆಗೆದುಕೊಂಡರೆ ಆ ಕೃತ್ಯ ಕಳುವಾಗುತ್ತದೆ. ಯಜಮಾನನ ವಂಚನೆಯ ಇಚ್ಛೆಯ ಮನವರಿಕೆ ಇಲ್ಲದಿದ್ದು ಯಜಮಾನನ ಹೇಳಿಕೆಯ ಮೇಲೆ ನೌಕರ ಸ್ವತ್ತನ್ನು ತೆಗೆದುಕೊಂಡರೆ ಅವನ ಮೇಲೆ ತಪ್ಪು ಬರುವುದಿಲ್ಲ.

2. ಸ್ವತ್ತು ಚರವಾಗಿರಬೇಕು. ನೆಲಕ್ಕೆ ಸೇರಿಕೊಂಡಿದ್ದ ವಸ್ತುವನ್ನು ಕಿತ್ತೊಡನೆ ಅದು ಚರಸ್ವತ್ತಾಗಬಲ್ಲದು. ನೆಲದಿಂದ ಕೀಳದೆ ಮರವನ್ನು ಮಾರಿದಲ್ಲಿ ಕಳವಾಗದು. ಆದರೆ ಒಬ್ಬನಿಗೆ ಸೇರಿದ, ಬಿದ್ದ ಮರವನ್ನು ಇನ್ನೊಬ್ಬ ತೆಗೆದುಕೊಂಡು ಹೋದಲ್ಲಿ ಅದು ಕಳುವಾಗುತ್ತದೆ.

3. ಇನ್ನೊಬ್ಬನ ಸ್ವಾಧೀನವನ್ನು ತಪ್ಪಿಸಿರಬೇಕು. ಇನ್ನೊಬ್ಬನ ಸ್ವಾಧೀನವಿದ್ದ ಸ್ವತ್ತನ್ನು ತೆಗೆದುಕೊಂಡರೆ ಮಾತ್ರ ಕಳುವಾಗುವುದು. ಕಾಡುಪಕ್ಷಿಗಳು, ಮೃಗಗಳು ಮುಂತಾದವು ಕಳವಿನ ವಸ್ತುವಾಗವು. ಆದರೆ ಸಾಕುಪ್ರಾಣಿಗಳನ್ನು ಅಪಹರಿಸಿದರೆ ಅದು ಕಳುವಾಗುತ್ತದೆ. ಒಂದು ಸ್ವತ್ತಿನ ಮೇಲೆ ಅಧಿಕಾರ ಇರುವಂತೆ ತೋರುವಂತಿದ್ದು ಆ ಮನುಷ್ಯನ ಒಪ್ಪಿಗೆಯಿಲ್ಲದೆ ಸ್ವತ್ತನ್ನು ತೆಗೆದರೆ ಕಳವು ಸಿದ್ಧವಾಗುತ್ತದೆ. ಸ್ವಾಧೀನತೆಯ ವಿವರಣೆಯನ್ನು ಕೊಡುವುದು ಬಹಳ ಕಷ್ಟ. ಬೇರೆ ಯಾರೂ ಅಭ್ಯಂತರ ಮಾಡಲಾಗದ ರೀತಿಯಲ್ಲಿ ಒಂದು ಸ್ವತ್ತಿನ ಹಕ್ಕು ಒಬ್ಬನಿಗೆ ಇದ್ದರೆ ಸ್ವತ್ತು, ಆತನ ಸ್ವಾಧೀನವೆನ್ನಬಹುದು. ಇದು ಸ್ಟೀಫನನ ಡೈಜೆಸ್ಟ್ ಆಫ್ ಕ್ರಿಮಿನಲ್ ಲಾ ದಲ್ಲಿ ಸ್ವಾಧೀನ ಪದಕ್ಕೆ ಕೊಟ್ಟ ಅರ್ಥ ಬಹುಜನರ ಒಟ್ಟು ಸ್ವಾಧೀನತೆ ಇರುವುದನ್ನು ಇನ್ನೊಬ್ಬ ತನ್ನ ಸ್ವಂತ ಸ್ವಾಧೀನಕ್ಕೆ ತೆಗೆದುಕೊಂಡರೆ ಅವನಿಗೆ ಕಳವಿನ ತಪ್ಪು ಬರುತ್ತದೆ.

4. ಸಮ್ಮತಿ: ಸಮ್ಮತಿಯಿಲ್ಲದೆ ಸ್ವತ್ತನ್ನು ಚಾಲಿಸಿರಬೇಕು. ಸಮ್ಮತಿ ವಾಚ್ಯವಾಗಿರಬಹುದು. ಸೂಚ್ಯವಾಗಿರಬಹುದು. ಸ್ವತ್ತಿನ ಸ್ವಾಧೀನ ಹೊಂದಿದವನೋ ಅವನಿಂದ ಅಧಿಕಾರ ಹೊಂದಿದವನೋ ಸಮ್ಮತಿ ನೀಡಿದ್ದರೆ ಆಗ ಕಳುವಾಗುವುದಿಲ್ಲ.

5. ಚಾಲನೆ: ವಂಚನೆಯ ಇರಾದೆಯಿಂದ ಸ್ವತ್ತನ್ನು ಸ್ವಲ್ಪ ಮಾತ್ರ ಚಲಿಸಿದರೂ ಸಾಕು, ಕಳವಿನ ತಪ್ಪು ಬರುತ್ತದೆ; ತೆಗೆದುಕೊಂಡೇ ಹೋಗಬೇಕೆಂಬುದಿಲ್ಲ.

ಇಂಗ್ಲಿಷ್ ಮತ್ತು ಭಾರತೀಯ ಕಾನೂನಿಗಳಿಗಿರುವ ವ್ಯತ್ಯಾಸ: ಇಂಗ್ಲಿಷ್ ನ್ಯಾಯದಲ್ಲಿ ಕಳವಿಗೆ ಲಾರ್ಸನಿ ಎಂಬ ಶಬ್ದವನ್ನು ಉಪಯೋಗಿಸಲಾಗುತ್ತದೆ. ಇನ್ನೊಬ್ಬನ ಸಮ್ಮತಿಯಿಲ್ಲದೆ, ಅವನಿಗೆ ಸೇರಿದ ಸ್ವತ್ತನ್ನು ಚಿರಕಾಲ ಅವನಿಗೆ ಇಲ್ಲದಂತೆ ಮಾಡಲು ಉದ್ದೇಶಪಟ್ಟು ಅನ್ಯಾಯವಾಗಿ ಕೊಂಡು ಹೋಗುವುದು ಲಾರ್ಸನಿ ಎನಿಸುತ್ತದೆ. ಅಲ್ಲಿ ಸ್ವತ್ತು ಯಾರಿಗಾದರೂ ಸೇರಿದ್ದಿರಬೇಕು. ಕಳವಿನಲ್ಲಿ ಅದು ಯಾರಾದರೊಬ್ಬರ ಸ್ವಾಧೀನತೆಯಲ್ಲಿರಬೇಕು. ಲಾರ್ಸನಿಯಲ್ಲಿ ಸ್ವತ್ತನ್ನು ತೆಗೆದುಕೊಳ್ಳುವಾಗ ಅದು ನೆಲಕ್ಕೆ ಸಂಬಂಧಿಸಿದ್ದರೆ ಅದು ತಪ್ಪಿಗೆ ಗುರಿಯಾಗಿರುವುದಿಲ್ಲ. ಕಳವಿನಲ್ಲಿ ಯಾವ ಚರಸ್ವತ್ತೂ, ಕಳವಿನ ಸ್ವತ್ತಾಗಬಹುದು. ಲಾರ್ಸನಿಯಲ್ಲಿ ತಾತ್ಕಾಲಿಕವಾಗಿ ತೆಗೆದುಕೊಳ್ಳುವ ಇಚ್ಛೆ ಆ ತಪ್ಪಿಗೆ ಆಸ್ಪದ ಕೊಡುವುದಿಲ್ಲ. ಕಳವಿನಲ್ಲಿ ತಾತ್ಕಾಲಿಕವಾಗಿ ಸ್ವತ್ತನ್ನು ತೆಗೆದುಕೊಂಡರೂ ಆ ತಪ್ಪಿಗೆ ಗುರಿ. ಲಾರ್ಸನಿಯಲ್ಲಿ ತೆಗೆದುಕೊಳ್ಳುವ ಕೆಲಸ ಒಡೆಯನ ಸಮ್ಮತಿಯಿಲ್ಲದೆ ಆಗಬೇಕು. ಕೆಲಸ ಅನ್ಯಾಯ ಮೋಸಗಳಿಂದ ಕೂಡಿರಬೇಕಲ್ಲದೆ ಯಾವುದೊಂದು ಹಕ್ಕಿನಿಂದ ವಿರಹಿತವಾಗಿರಬೇಕು. ಕಳವಿನಲ್ಲಿ ಹಾಗಲ್ಲ. ತೆಗೆದುಕೊಂಡು ಹೋಗುವುದು ಸಮ್ಮತಿಯಿಲ್ಲದ ಕೆಲಸವಾದರೆ ಸಾಕು. ಲಾರ್ಸನಿಯಲ್ಲಿ ಸ್ವತ್ತಿನ ಒಡೆಯನಿಗೆ ಯಾವುದಾದರೂ ಒಂದು ತೆರನಾದ ಒಡೆತನವಿರಬೇಕು. ಅದು ಒಡೆಯನ ಖಾಸಾ ಅಥವಾ ಪ್ರಲಕ್ಷಿತ (ಕನ್‌ಸ್ಟ್ರಕ್ಟಿವ್) ಸ್ವಾಧೀನತೆಯಲ್ಲಿ ಇರಬೇಕು. ಕಳವಿನಲ್ಲಿ ಸ್ವತ್ತನ್ನು ಯಾರಿಂದ ತೆಗೆದುಕೊಂಡಿದೆಯೋ ಅವನಿಗೆ ಹಕ್ಕಿರಬೇಕೆಂದಿಲ್ಲ. ಕಳವಿನ ಸ್ವತ್ತು ಕಳ್ಳನ ಅಧಿಕಾರಕ್ಕೊಳಪಟ್ಟಿತ್ತೆಂಬುದನ್ನು ರುಜುಪಡಿಸಬೇಕೆಂದಿಲ್ಲ. ಲಾರ್ಸನಿಯ ಸ್ವತ್ತನ್ನು ಚಲಿಸಿದವನು ಅಧಿಕಾರದಲ್ಲಿ ಇರದಿದ್ದಲ್ಲಿ ತಪ್ಪು ರುಜುವಾಗುವುದಿಲ್ಲ. ಭಾರತದಲ್ಲಿ ಗಂಡ ಮತ್ತು ಹೆಂಡತಿ ಬೇರೆ ಬೇರೆ ಎಂದು ತಿಳಿಯಲಾಗುವುದರಿಂದ ಒಬ್ಬರ ಸ್ವತ್ತನ್ನು ಇನ್ನೊಬ್ಬರು ಚಾಲಿಸಿದರೆ ಕಳ್ಳತನದ ತಪ್ಪಿಗೆ ಹೊಣೆಯಾಗುತ್ತಾರೆ. ಗಂಡ ಹೆಂಡತಿಯರಲ್ಲಿ ಒಬ್ಬರು ಇನ್ನೊಬ್ಬರ ಸ್ವತ್ತನ್ನು ಚಾಲಿಸಿದರೆ ಇಂಗ್ಲೀಷ್ ನ್ಯಾಯದಲ್ಲಿ ಲಾರ್ಸನಿ ತಪ್ಪಿಗೆ ಹೊಣೆಯಾಗಲಾರರು.

ಭಾರತೀಯ ದಂಡಸಹಿತೆಯಲ್ಲಿ ಕಳವಿನ ಬೇರೆಬೇರೆ ಪ್ರಕಾರಗಳಿಗೆ ಶಿಕ್ಷೆಗಳನ್ನು ಹೇಳಿದೆ. ಮನುಷ್ಯನ ವಾಸಕ್ಕೆ ಅಥವಾ ಸ್ವತ್ತನ್ನು ಶೇಖರಿಸಲು ಇರುವ ಕಟ್ಟಡ, ಡೇರೆ, ಹಡಗು ಇವುಗಳಲ್ಲಿ ಮಾಡಿದ ಕಳವು ಸಾಮಾನ್ಯವಾದದ್ದು. ಸ್ವತ್ತಿನ ಯಜಮಾನನ ಗುಮಾಸ್ತ ಅಥವಾ ನೌಕರ ಅಥವಾ ತದ್ರೀತಿಯಲ್ಲಿ ನೇಮಿಸಲ್ಪಟ್ಟವ ಯಜಮಾನನ ಅಥವಾ ತನ್ನನ್ನು ಕೆಲಸಕ್ಕೆ ಇಟ್ಟುಕೊಂಡವನ ಸ್ವತ್ತಿನ ಬಗ್ಗೆ ಮಾಡಿದ ಕಳವು; ಕಳವು ಮಾಡಲು ಅಥವಾ ಕಳವು ಮಾಡಿದ ಬಳಿಕ ತಪ್ಪಿಸಿಕೊಂಡು ಹೋಗಲು ಅಥವಾ ಕಳವು ಮಾಡಿದ ಸ್ವತ್ತುಗಳನ್ನು ಸ್ವಾಧೀನದಲ್ಲಿರಿಸಿಕೊಳ್ಳಲು ಕೊಲ್ಲುವ, ನೋವನ್ನುಂಟುಮಾಡುವ ಅಥವಾ ಬಂಧನಕ್ಕೊಳಪಡಿಸುವ ಅಥವಾ ಅವುಗಳನ್ನು ಮಾಡಲು ಹೆದರಿಕೆ ಮಾಡಿದ ಕಳವು– ಇವು ಕಳವಿನ ಇತರ ಬಗೆಗಳು. *

**ಕಳ್ಳ ಸ್ವತ್ತಿನ ಸ್ವೀಕಾರ :** ಕಳ್ಳತನ, ಸುಲಿಗೆ, ದರೋಡೆ ಮತ್ತು ಸ್ವತ್ತಿನ ದುರುಪಯೋಗ ಅಥವಾ ನಂಬಿಕೆ ದ್ರೋಹದಿಂದ ಹಸ್ತಾಂತರದ ಅಕ್ರಮ ಭಾರತದ ಒಳಗೆ ಅಥವಾ ಹೊರಗೆ ನಡೆದರೂ ಅದು ಕಳ್ಳಸ್ವತ್ತೇ. ಆದರೆ ಆ ಸ್ವತ್ತು ತನ್ನ ಸ್ವಾಧೀನದಲ್ಲಿರಲು ಕಾನೂನು ಪ್ರಕಾರ ಅರ್ಹನಾದವನ ವಶಕ್ಕೆ ಬಂದಲ್ಲಿ ಆಮೇಲೆ ಅದು ಕಳ್ಳ ಸ್ವತ್ತು ಆಗುವುದಿಲ್ಲ. ಕಳ್ಳ ಸ್ವತ್ತು ಎಂದು ತಿಳಿದು ಅಥವಾ ಕಳ್ಳತನಕ್ಕೆ ಸೇರಿದ್ದೆಂದು ತಿಳಿಸಲು ಸಕಾರಣವಾಗಿ ಸಾಧ್ಯವಿದ್ದು ಒಬ್ಬ ಆ ಸ್ವತ್ತನ್ನು ಸ್ವೀಕರಿಸಿದಲ್ಲಿ ಆತ ಶಿಕ್ಷಾರ್ಹನಾಗುತ್ತಾನೆ. ಅದು ಡಕಾಯಿತಿಯಿಂದ ಪಡೆದ ಸ್ವತ್ತಾಗಿದ್ದರೆ ಹಾಗೆ ಸ್ವೀಕರಿಸಿದವ ಇನ್ನೂ ಹೆಚ್ಚಿನ ಶಿಕ್ಷೆಗೆ ಬಾಧ್ಯನಾಗುತ್ತಾನೆ. ಕಳ್ಳ ಸ್ವತ್ತೆಂದು ತಿಳಿದೂ ಅಥವಾ ತಿಳಿಯಲು ಆಸ್ಪದವಿದ್ದೂ ಒಬ್ಬ ಅದನ್ನು ಅಡಗಿಸಲು, ಹಸ್ತಾಂತರ ಮಾಡಲು ಅಥವಾ ತೆಗೆದುಕೊಂಡು ಹೋಗಲು ಸಹಾಯ ಮಾಡಿದರೆ ಅವನೂ ದಂಡಾರ್ಹ. (ಕೆ.ಜಿ.ಬಿ.)

**ಕಳಸ :** ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿರುವ ಒಂದು ಧಾರ್ಮಿಕ ಕೇಂದ್ರ. ಭದ್ರಾವತಿಯ ಬಲದಂಡೆಯ ಬಳಿ ಸಹ್ಯಾದ್ರಿಯ ಉತ್ತುಂಗ ಶ್ರೇಣಿಗಳ ನಡುವಣ ಕಣಿವೆಯಲ್ಲಿದೆ. ಮೂಡಿಗೆರೆಗೂ ಇಲ್ಲಿಗೂ 53 ಕಿಮೀ ದೂರ. ಕಾರ್ಕಳದ ಭೈರರಸರ ಆಳ್ವಿಕೆಯಲ್ಲಿ ಮುಖ್ಯ ಸ್ಥಳಗಳಲ್ಲೊಂದಾಗಿದ್ದ ಕಳಸದಲ್ಲಿ ಆ ಕಾಲಕ್ಕೆ ಸೇರಿದ ದೊಡ್ಡ ಕಳಸೇಶ್ವರ ದೇವಾಲಯವಿದೆ. ಉತ್ತರ ದೇಶದಿಂದ ಬಂದ ಶ್ರುತಬಿಂದುವೆಂಬ ರಾಜನಿಂದ ಈ ದೇವಾಲಯ ನಿರ್ಮಿತವಾಯಿತೆಂಬ ಐತಿಹ್ಯವಿರುವುದರಿಂದ ಮೊದಲಿಗೆ ಇದು ಜೈನಮಂದಿರವಾಗಿದ್ದಿರಬಹುದೆಂದು ಊಹಿಸಲಾಗಿದೆ. ಮೊದಲಿಗೆ ಹುಂಚದವರ, ಅನಂತರ ಭೈರರಸರ, ಅನಂತರ ಐಗೂರು ನಾಯಕರ ಆಳ್ವಿಕೆಗೆ ಇದು ಒಳಪಟ್ಟಿತು. ನದೀ ದಂಡೆಯಲ್ಲಿರುವ ದೊಡ್ಡ ಕಲ್ಲುಬಂಡೆಯೊಂದರ ಮೇಲಿರುವ ಸಂಸ್ಕೃತ ಶಾಸನವೊಂದು ಅದನ್ನು ಶ್ರೀಮಧ್ವಾಚಾರ್ಯರು ಒಂದು ಕೈಯಲ್ಲಿ ಎತ್ತಿ ಅಲ್ಲಿ ತಂದಿಟ್ಟುದಾಗಿ ತಿಳಿಸುತ್ತದೆ.

ಇಲ್ಲಿಯ ಕಳಸೇಶ್ವರ ಅಥವಾ ಕಳಸನಾಥ ದೇವಾಲಯ ಈಗಿರುವ ಸ್ಥಿತಿಯಲ್ಲಿ ನಾಯಕರ ಕಾಲಕ್ಕೆ ನಿರ್ದೇಶಿತವಾಗಿದೆ. ಆದರೆ ದೇವಾಲಯದ ಅಕ್ಕಪಕ್ಕಗಳಲ್ಲಿ ದೊರಕುವ ವಾಸ್ತುಶಿಲ್ಪದ ಅವಶೇಷಗಳೂ ಇನ್ನು ಕೆಲವು ಶಿಲ್ಪಗಳೂ ನಿರ್ದಿಷ್ಟವಾಗಿ ಹೊಯ್ಸಳ ಶೈಲಿಗೆ ಸೇರತಕ್ಕವುಗಳಾದುದರಿಂದ ಇಲ್ಲಿ ಮೊದಲಿಗೆ ಹೊಯ್ಸಳ ದೇವಾಲಯವಿದ್ದು ಪಾಳುಬಿದ್ದ ಅನಂತರ ನಾಯಕರ ಕಾಲದಲ್ಲಿ ಈಗಿನ ಕಟ್ಟಡಗಳು ನಿರ್ಮಿತವಾಗಿರಬಹುದು. ಈ ದೇವಾಲಯದ ಗರ್ಭಗುಡಿಯಲ್ಲಿರುವ 22 ಸೆಂಮೀ ಎತ್ತರದ ಲಿಂಗ ಉತ್ತರಕ್ಕೆ ಬಾಗಿದೆ. ಗರ್ಭಗುಡಿಯ ಮೇಲಿನ ಶಿಖರಕ್ಕೆ ಲೋಹದ ಕಲಶವಿದೆ. 16 ಕಲ್ಲಿನ ಕಂಬಗಳಿರುವ ನವರಂಗಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದ್ವಾರಗಳಿವೆ. ಮುಖಮಂಟಪದ ಒಳಪಕ್ಕದಲ್ಲಿ ನಾಲ್ಕು ಕಂಬಗಳೂ ಮುಂಭಾಗದಲ್ಲಿ ದ್ರಾವಿಡ ಶೈಲಿಯ, ಅಡಿಯಲ್ಲಿ ಸಿಂಹಗಳಿರುವ ಎರಡು ಕಂಬಗಳೂ ಇವೆ.

ಪಕ್ಕದಲ್ಲಿರುವ ದೇವೀಮಂದಿರವೂ ನಾಯಕರ ಕಾಲಕ್ಕೆ ಸೇರಿದುದು. ಈ ಮಂದಿರದ ಮಹಾದ್ವಾರದ ಇಕ್ಕೆಲಗಳಲ್ಲಿ ಸಿಂಹವಾಹಿನಿಯರಾದ ಸ್ತ್ರೀದ್ವಾರಪಾಲಕರಿದ್ದಾರೆ. ಗಜಪತಿಯ, ತುಘಲಕ್‌ನ ಮತ್ತು ವಿಜಯನಗರದ ಕೆಲವು ನಾಣ್ಯಗಳು ಇಲ್ಲಿ ದೊರಕಿವೆ. ಕಳಸಕ್ಕೆ ಸಮೀಪದಲ್ಲೇ ಇನ್ನೊಂದು ಪ್ರಸಿದ್ಧ ಪುಣ್ಯಕ್ಷೇತ್ರ ಹೊರನಾಡಿದೆ. ಅತ್ತ ಕುದುರೆಮುಖದ ಪ್ರಕೃತಿ ವೈಭವದ ಪ್ರವಾಸಿತಾಣವಿದೆ. ಈ ಪರಿಸರದ ಗಿರಿಕಾನನಗಳು ನೋಡುಗರ ಮನಸ್ಸನ್ನು ಉಲ್ಲಾಸಗೊಳಿಸುವುದಲ್ಲದೆ ರೋಮಾಂಚನದ ಅನುಭವ ತರುತ್ತದೆ. (ಬಿ.ಕೆ.ಜಿ.)

**ಕಳಿಂಗ ನಗರ :** ಐದನೆಯ ಶತಮಾನದ ಅಂತ್ಯದಿಂದ ಪೂರ್ವೀ ಗಂಗರ ರಾಜಧಾನಿಯಾಗಿದ್ದ ನಗರ. ಇದಕ್ಕೆ ಕಳಿಂಗ ಪಟ್ಟಣವೆಂದೂ ಹೆಸರಿತ್ತು. ಈಗಿನ ಒರಿಸ್ಸದ ಗಂಜಾಂ ಜಿಲ್ಲೆಯಲ್ಲಿರುವ ಮುಖಲಿಂಗಂ ಪ್ರಾಚೀನ ಕಳಿಂಗನಗರವೆಂದು ಇತಿಹಾಸಕಾರರು ಒಪ್ಪಿದ್ದಾರೆ. ಪೂರ್ವೀಗಂಗರ ಮೂಲಪುರುಷ ಮಹಾರಾಜ 1ನೆಯ ಇಂದ್ರವರ್ಮ (496–535). ತ್ರಿಕಳಿಂಗಾಧಿಪತಿಯೆಂಬ ಬಿರುದಾಂಕಿತನಾಗಿ ಕಳಿಂಗನಗರದಿಂದ ರಾಜ್ಯಭಾರ ಮಾಡಿದ. ಪ್ರಾರಂಭ ಕಾಲದಲ್ಲಿ ಈ ರಾಜ್ಯ ಈಗಿನ ಶ್ರೀಕಾಕುಳಂ ಜಿಲ್ಲೆಗೆ ಸೀಮಿತವಾಗಿದ್ದರೂ ಕ್ರಮೇಣ ಪ್ರಾಬಲ್ಯ ಹೊಂದಿ ಈಶಾನ್ಯದಲ್ಲಿ ಭಾಗೀರಥೀ ತೀರದಿಂದ ಗೋದಾವರಿಯವರೆಗೂ ಹಬ್ಬಿತ್ತು. ಕಳಿಂಗ ನಗರ ರಾಜಧಾನಿಯಾಗಿದ್ದುದರಿಂದ ಅಲ್ಲಿ ಆಳುತ್ತಿದ್ದ ರಾಜವಂಶಕ್ಕೆ ಕಳಿಂಗದ ಗಂಗರೆಂದೇ ಹೆಸರಾಯಿತು. ತಾವು ಮೂಲತಃ ಕೋಲಾಹಲಪುರದವರೆಂದು ಇವರು ಹೇಳಿಕೊಳ್ಳುವುದರಿಂದ, ಇವರದು ಕೋಲಾರವೂ ಅನಂತರ ತಲಕಾಡೂ ರಾಜಧಾನಿಗಳಾಗಿದ್ದ ಪಶ್ಚಿಮ ಗಂಗರ ವಂಶದ ಶಾಖೆಯಾಗಿರಬಹುದೆಂದೂ ಒರಿಸ್ಸದಲ್ಲಿ ಆಳಿದ ಶ್ವೇತಕ ಗಂಗಮನೆತನದವರು ಈ ವಂಶದವರಾಗಿದ್ದು ಪ್ರಾರಂಭದಲ್ಲಿ ಇವರ ಅಧೀನರಾಗಿದ್ದರೆಂದೂ ಅಭಿಪ್ರಾಯಪಡಲಾಗಿದೆ. ಕಳಿಂಗ ನಗರ 5 ನೆಯ ಶತಮಾನದಿಂದ 11 ನೆಯ ಶತಮಾನದವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮುಖಲಿಂಗಂ ಬಳಿ ಸು.9ನೆಯ ಶತಮಾನದ್ದೆನ್ನಬಹುದಾದ, ನಾಗರ ವಾಸ್ತುಶೈಲಿಗೆ ಸೇರಿದ, ಕೆಲವು ದೇವಾಲಯಗಳಿವೆ. ಇವುಗಳಲ್ಲಿ ಮುಖಲಿಂಗೇಶ್ವರ ದೇವಾಲಯ ಮುಖ್ಯವಾದದ್ದು. ಇದರಲ್ಲಿ ಐದು ಗರ್ಭಗುಡಿಗಳಿವೆ. ಬಾದಾಮಿ ಚಳುಕ್ಯ ಮತ್ತು ಗುಪ್ತಶೈಲಿಯ ಪ್ರಭಾವಗಳನ್ನಿಲ್ಲಿ ಕಾಣಬಹುದು. (ಜಿ.ಆರ್.ಆರ್.)

**ಕಳಿಂಗ ಪಕ್ಷಿ :** ಪ್ಯಾಸ್‌ರಿಫಾರ್ಮೀಸ್ ಗಣದ ಲ್ಯಾನ್ಯೆಯಿಡೀ ಕುಟುಂಬಕ್ಕೆ ಸೇರಿದ ಒಂದು ಮಾಂಸಹಾರಿ ಹಕ್ಕಿ (ಶ್ರೈಕ್). ಇದನ್ನು ಬುಚರ್ ಬರ್ಡ್ (ಕಟುಕ ಹಕ್ಕಿ) ಎಂದೂ

ಕರೆಯುತ್ತಾರೆ. ತನ್ನ ಬೇಟೆಯನ್ನು ಮುಳ್ಳುಗಿಡಗಳ ಮುಳ್ಳಿಗೆ ಸಿಕ್ಕಿಸಿ ಕೊಂಚ ಕೊಂಚವಾಗಿ ಹರಿದು ತಿನ್ನುವುದರಿಂದ ಇದಕ್ಕೆ ಈ ಹೆಸರು. ಆದರೂ ಇದು ಕೇವಲ ಆಹಾರ ಸಂಗ್ರಹಣೆಯ ಪದ್ಧತಿ ಅಷ್ಟೆ. ಇದರಲ್ಲಿ ಸು. 29 ಪ್ರಭೇದಗಳಿದ್ದು ಎಲ್ಲವೂ ಲೇನಿಯಸ್ ಎಂಬ ಶಾಸ್ತ್ರೀಯ ಹೆಸರುಳ್ಳ ಜಾತಿಗೆ ಸೇರಿವೆ. ಇವುಗಳಲ್ಲಿ ಮುಖ್ಯವಾದ ಪ್ರಭೇದಗಳಿವು: ಯುರೋಪ್ ಹಾಗೂ ಮೆಡಿಟರೇನಿಯನ್ ಪ್ರದೇಶಗಳಲ್ಲಿ ಕಾಣಬರುವ ಕೆಂಪು ಬೆನ್ನಿನ ಕಳಿಂಗ (*ಲೇನಿಯಸ್ ಕೊಲ್ಲೊರಿಯೊ*), ಕೆನಡ ಹಾಗೂ ಅಲಾಸ್ಕಗಳಲ್ಲಿರುವ ಉತ್ತರದ ಕಳಿಂಗ (*ಲೇ.ಎಕ್ಸ್‌ಕ್ಯುಬಿಟರ್*), ಭಾರತದಲ್ಲಿನ ಕೆಂಪು ಬೆನ್ನಿನ ಕಳಿಂಗ (*ಲೇ.ಶಾಚ್*) ಹಾಗೂ *ಲೇ. ವಿಟೇಟಸ್*. *ಲೇ. ಎಕ್ಸ್‌ಕ್ಯುಬಿಟರ್* ಪ್ರಭೇದ ಭಾರತದಲ್ಲೂ ಇದೆ. ಸಾಮಾನ್ಯವಾಗಿ ಕುರುಚಲು ಕಾಡು, ಗೊಬ್ಬಳಿಮರಗಳ ತೋಪುಗಳಲ್ಲಿ ಇವುಗಳ ವಾಸ. ಸಣ್ಣ ಅಥವಾ ಮಧ್ಯಮಗಾತ್ರದ ಹಕ್ಕಿಗಳಿವು. (ಬಹುಪಾಲು ಹಕ್ಕಿಗಳ ಉದ್ದ ಸು. 7"–10"). ದೊಡ್ಡದಾದ ಮತ್ತು ಅಗಲವಾದ ತಲೆ, ತುದಿಯಲ್ಲಿ ಕೊಚ್ಚುಗಳಿರುವ ಹಾಗೂ ಬಾಗಿರುವ ಬಲವಾದ ಕೊಕ್ಕು, ಮೊನೆಯುಗುರುಗಳುಳ್ಳ ದೃಢವಾದ ಕಾಲುಗಳು ಮತ್ತು ಉದ್ದವಾದ ಬಾಲ–ಇವು ಈ ಹಕ್ಕಿಗಳ ಮುಖ್ಯ ಲಕ್ಷಣಗಳು. ದೇಹ ಬೂದು, ಬಿಳಿ, ಕರಿ, ಕಂದು, ಹಸುರು ಹಾಗೂ ಕೆಂಪು ಬಣ್ಣಗಳ ರೆಕ್ಕೆ ಪುಕ್ಕಗಳಿಂದ ಕೂಡಿದೆ. ಕೆಲವು ಪ್ರಭೇದಗಳನ್ನು ಬಿಟ್ಟು ಉಳಿದವುಗಳಲ್ಲಿ ಗಂಡು ಮತ್ತು ಹೆಣ್ಣು ಹಕ್ಕಿಗಳ ಬಣ್ಣದಲ್ಲಿ ವ್ಯತ್ಯಾಸವಿಲ್ಲ. ಹಾಡುಹಕ್ಕಿಗಳ ಕುಟುಂಬಕ್ಕೆ ಸೇರಿದ್ದರೂ ಇವುಗಳ ಧ್ವನಿ ಕಿವಿಗೆ ಹಿತಕರವಲ್ಲ. ಆದರೆ ಕೆಲವು ಬಗೆಯವು ಇತರ ಹಕ್ಕಿಗಳ ಕೂಗನ್ನು ಚೆನ್ನಾಗಿ ಅನುಕರಿಸಬಲ್ಲವು. ವಿವಿಧ ಬಗೆಯ ಕೀಟಗಳು, ಸಣ್ಣಗಾತ್ರದ ಓತಿ, ಹಲ್ಲಿ, ಇಲಿ ಮುಂತಾದ ಸಸ್ತನಿಗಳು ಮತ್ತು ಇತರ ಜಾತಿಯ ಹಕ್ಕಿಗಳು ಮುಂತಾದವು ಇವುಗಳ ಆಹಾರ. ಆಯಕಟ್ಟಿನ ಸ್ಥಳಗಳಲ್ಲಿ ಕೂತು ತಮ್ಮ ಬೇಟೆಗಾಗಿ ಇವು ಕಾಯುತ್ತವೆ. ಬೇಟೆ ಕಾಣಿಸಿದ ತಕ್ಷಣ ಹದ್ದು ಡೇಗೆಗಳಂತೆ ಅದರ ಮೇಲೆರಗಿ ತಮ್ಮ ಚೂಪಾದ ಕೊಕ್ಕಿನಿಂದ ಕೊಲ್ಲುತ್ತವೆ. ಕಾಲುಗಳು ದೊಡ್ಡ ಗಾತ್ರದ ಬೇಟೆಯನ್ನು ಹಿಡಿದುಕೊಳ್ಳಲು ಶಕ್ತವಾಗಿಲ್ಲವಾದ್ದರಿಂದ ಬೇಟೆಯನ್ನು ಯಾವುದಾದರೂ ಮರದ ಮುಳ್ಳಿಗೊ ತಂತಿಬೇಲಿಗೊ ಸಿಕ್ಕಿಸಿ ತೂಗು ಹಾಕಿ ಅದನ್ನು ನಿಧಾನವಾಗಿ ಹರಿದು ತಿನ್ನುತ್ತವೆ. ಕಳಿಂಗ ಪಕ್ಷಿಗಳಿರುವ ಪ್ರದೇಶಗಳಲ್ಲಿ ಹೀಗೆ ತೂಗುಹಾಕಿರುವ ಕೀಟಗಳು, ಇಲಿಗಳು ಸಾಮಾನ್ಯ ದೃಶ್ಯ. ಕೆಲವು ಬಾರಿ ಸಾಕಿದ ಹಕ್ಕಿಗಳನ್ನು ಹಿಡಿದು ತಿನ್ನುವುದುಂಟು. ಹೀಗಾಗಿ ಇವನ್ನು ಯಾರೂ ಇಷ್ಟಪಡುವುದಿಲ್ಲ. ಕಳಿಂಗಗಳು ತಮ್ಮ ಜೀವನವನ್ನು ಒಂಟಿಯಾಗಿಯೇ ಕಳೆಯುತ್ತವೆ. ಸಂತಾನೋತ್ಪತ್ತಿಯ ಕಾಲವಾದ ವಸಂತದಲ್ಲಿ ಮಾತ್ರ ಗಂಡು ಹೆಣ್ಣು ಹಕ್ಕಿಗಳು ಜೊತೆಗೂಡುತ್ತವೆ. ಪೊದೆಗಳಲ್ಲಿ ಮತ್ತು ಮರಗಳಲ್ಲಿ ಹುಲ್ಲು ಮತ್ತು ಕಡ್ಡಿಗಳಿಂದ ಒರಟಾದ ಗೂಡು ಕಟ್ಟುತ್ತವೆ. ಹೆಣ್ಣು ಮಾಸಲು ಬಿಳಿಯ ಬಣ್ಣದ, ಮೇಲೆಲ್ಲ ಕಂದು ಅಥವಾ ಬೂದು ಬಣ್ಣದ ಚುಕ್ಕೆಗಳಿರುವ 3–6 ಮೊಟ್ಟೆಗಳನ್ನಿಡುತ್ತದೆ. ಹೆಣ್ಣೇ ಮೊಟ್ಟೆಗಳಿಗೆ ಕಾವುಕೊಟ್ಟು ಮರಿ ಮಾಡುತ್ತದೆ. ಕಾವುಕೂರುವ ಕಾಲ ಸುಮಾರು (14–16) ದಿವಸಗಳು. ಗಂಡು ಕಾವುಕೂತ ಹೆಣ್ಣಿಗೆ ಆಹಾರ ತಂದುಕೊಡುವುದರಲ್ಲಿ ನಿರತವಾಗಿರುತ್ತದೆ. ಮರಿಗಳು ದೊಡ್ಡವಾಗುವ ಕಾಲಕ್ಕೆ ಗಂಡು ಹೆಣ್ಣುಗಳು ಬೇರೆಯಾಗಿ ಮತ್ತೆ ಒಂಟಿ ಜೀವನವನ್ನು ಮುಂದುವರಿಸುತ್ತವೆ.



ಕಳಿಂಗ ಪಕ್ಷಿಯ ಕೆಲವು ಪ್ರಭೇದಗಳು ಚಳಿಗಾಲದಲ್ಲಿ ದಕ್ಷಿಣದ ಕಡೆಗೆ ವಲಸೆ ಹೋಗುತ್ತವೆ (ಉದಾಹರಣೆಗೆ ಉತ್ತರದ ಕಳಿಂಗ). ಆದರೆ ಈ ವಲಸೆಹೋಗುವಿಕೆ ಬೇರೆ ಹಕ್ಕಿಗಳಲ್ಲಿರುವಂತೆ ಕ್ರಮಬದ್ಧವೂ ನಿಯತವೂ ಅಲ್ಲ. (ಎಚ್.ಬಿ.ಡಿ.)

**ಕಳಿಲೆ :** ಬಿದಿರಿನ ಮೊಳಕೆ. ಬಲು ಮೃದುವಾಗಿಯೂ ಕೋಮಲವಾಗಿಯೂ ಇದೆಯಾಗಿ ಮೇಲೋಗರಗಳನ್ನು ಮಾಡುತ್ತಾರಲ್ಲದೆ ಉಪ್ಪಿನಕಾಯಿ ಹಾಕಲೂ ಬಳಸುತ್ತಾರೆ. ವಿಷಪೂರಿತವಾದ ಒಂದು ಬಗೆಯ ಗ್ಲೂಕೊಸೈಡ್ ಇರುವುದರಿಂದ ಶುದ್ಧಿ ಮಾಡದೆ ನೇರವಾಗಿ ಹಾಗೆಯೇ ಇದನ್ನು ಬಳಸುವ ಪದ್ಧತಿ ಇಲ್ಲ. ಮೊದಲು ಇದನ್ನು ನೀರಿನಲ್ಲಿ ನೆನೆಸಿ, 3–4 ದಿವಸಗಳ ಕಾಲ ಬಿಟ್ಟು, ಆ ನೀರನ್ನೆಲ್ಲ ಚೆಲ್ಲಿ, ಬೇರೆ ಶುದ್ಧವಾದ ನೀರಿನಲ್ಲಿ ಕುದಿಸಿದಾಗ ಇದರಲ್ಲಿನ ವಿಷಯುಕ್ತ ಗ್ಲೂಕೊಸೈಡ್ ಜಲವಿಶ್ಲೇಷಿತವಾಗಿ (ಹೈಡ್ರಾಲಿಸಿಸ್) ಹೈಡ್ರೊಸಯನಿಕ್ ಆಮ್ಲ ಮತ್ತು ಬೆಂಜೋಯಿಕ್ ಆಮ್ಲಗಳಾಗಿ ಪರಿವರ್ತಿತವಾಗುತ್ತದೆ. ಇವೂ ವಿಷಪೂರಿತವಾದ್ದರಿಂದ ಕಳಿಲೆ ಕುದಿಸಿ ಉಳಿಯುವ ನೀರನ್ನು ಚೆಲ್ಲಿಬಿಡಬೇಕು. ಕಳಿಲೆ ಉಪ್ಪಿನಕಾಯಿ ಜೀರ್ಣಕಾರಿ; ಹಸಿವನ್ನುಂಟುಮಾಡುತ್ತದೆ. ಅಲ್ಲದೆ ಕಳಿಲೆ ಬೆಚ್ಚಾರ (ಪೋಲ್ಪೀಸು) ವ್ರಣಗಳಲ್ಲಿನ ಕ್ರಿಮಿನಾಶಕವೂ ಹೌದು. *

**ಕಟುಗುಮಲೈ :** ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯ ಕೋವಿಲ್‌ಪಟ್ಟಿ ತಾಲ್ಲೂಕಿನ ಒಂದು ಸ್ಥಳ. ಹಿಂದಿನ ಕಾಲದಲ್ಲಿ ನೆಚ್ಚುಬ ನಾಡಿನ ನೆಚ್ಚುಬಂ ಎಂದು ಖ್ಯಾತವಾಗಿತ್ತು. ಹಿಂದೂ ಮತ್ತು ಜೈನ ಸ್ಮಾರಕಗಳಿಗೆ ತುಂಬ ಪ್ರಸಿದ್ಧವಾಗಿದೆ. ಇಲ್ಲಿರುವ ವೆಟ್ಟುವಾನ್‌ಕೋಯಿಲ್ (ಒಬ್ಬ ಶಿಲ್ಪಿಯ ದೇವಸ್ಥಾನ) ಅಪೂರ್ಣವಾದರೂ ಅದ್ಭುತವಾದ ನಿರ್ಮಿತಿ. ಅದೊಂದು ಹಿಂದೂ ಸ್ಮಾರಕ. ಒಂದೇ ಬಂಡೆಯಲ್ಲಿ ಕೊರೆದ ಆ ಕಟ್ಟಡ ದೇವಾಲಯದ ಲಕ್ಷಣಗಳನ್ನು ಒಳಗೊಂಡಿದೆ. ಮೇಲು ತುದಿಯಿಂದ ಮೊದಲು ಮಾಡಿ ಕೆಳಗೆ ಗರ್ಭಗುಡಿಯ ಚಾವಣಿಯವರೆಗೂ ಶಿಲ್ಪಿ ಸ್ಥೂಲವಾಗಿ ಕೆಲಸಮಾಡಿದ್ದಾನೆ. ಈ ಭಾಗ ಒಂದು ಅಷ್ಟಕೋನಾಕೃತಿಯ ಶಿಖರದಿಂದ ಪ್ರಾರಂಭವಾಗುತ್ತದೆ. ಒಂದಾದ ಮೇಲೊಂದರಂತೆ ಸಿಂಹ ಮತ್ತು ಮೀನುಗಳ ತಲೆಗಳಿರುವ ಕೂಡುಗಳಿಂದ ಅದು ಅಲಂಕೃತವಾಗಿದೆ. ನಡುವೆ ಇರುವ ತೆರಪುಗಳಲ್ಲಿ ಹೂಗಳಿಂದ ತುಂಬಿದ ಅಂಚು ಇದೆ. ಅಂಚಿನ ತುದಿಗೆ ರಮಣೀಯವಾದ ಗೊಂಡೆಗಳಿದ್ದು, ಅದು ಮೇಲಕ್ಕೆ ಶಿಖರದ ತುದಿಯನ್ನು ಮುಟ್ಟುತ್ತದೆ. ಶಿಖರದ ಕೆಳಗಿನ ಗ್ರೀವದಲ್ಲಿ ಕೂಡುಗಳ ಕೆಳಗೆ ಮುಖ್ಯವಾದ ಆಧಾರ ಸ್ಥಾನಗಳಲ್ಲಿ ಪೂರ್ವಕ್ಕೆ ಉಮಾಸಹಿತನಾದ ಶಿವಮೂರ್ತಿ, ದಕ್ಷಿಣಕ್ಕೆ ದಕ್ಷಿಣಾಮೂರ್ತಿ, ಪಶ್ಚಿಮದಲ್ಲಿ ನರಸಿಂಹ ಮತ್ತು ಉತ್ತರದಲ್ಲಿ ಬ್ರಹ್ಮ ವಿಗ್ರಹಗಳು ಇವೆ. ವಿಗ್ರಹಗಳು ದೇಹದ ಮಾಟದಲ್ಲಿ, ಯಜ್ಞೋಪವೀತ ಬಂಧನದಲ್ಲಿ, ಜಟೆಯ ಬಂಧನದಲ್ಲಿ ಪಲ್ಲವರ ಕಾಲದ ಕೊನೆಯ ಹಾಗೂ ಪೂರ್ವ ಬಾದಾಮಿ ಕಲೆಯ ಕೊನೆಯ ಹಂತಗಳೊಂದಿಗೆ ನಿಕಟವಾದ ಸಂಬಂಧವನ್ನು ಸೂಚಿಸುತ್ತವೆ. ನಾಲ್ಕು ಮೂಲೆಗಳಲ್ಲೂ ನಂದಿಗಳಿವೆ. ವ್ಯಾಳ, ಸಿಂಹದ ಅಲಂಕಾರ ಪಟ್ಟಿಯೊಂದಿದೆ. ಅನಂತರ ಕೆಳಗಿನ ಭಾಗ ಕೂಡುಗಳೂ ಸೇರಿ ಇಳಿಜಾರಾಗಿದೆ. ಆಮೇಲೆ ಹಿಂದಕ್ಕೆ ವಾಲಿದ ಒಂದು ಪಟ್ಟಿಕೆಯಿದೆ. ಇದರ ಮೇಲೆ ಚಾವಣಿಗೆ ಆಧಾರವಾಗಿರುವ ಗಣಗಳು ಮತ್ತು ಕೂಡುಗಳ ಕೆಳಗೆ ಕಿಟಕಿಗಳಿಂದ ಇಣಕಿ ನೋಡುತ್ತಿರುವ, ಸೊಂಟದವರೆಗೆ ಮಾತ್ರ ಕೆತ್ತಲಾದ, ಯುವತಿಯರ ವಿಗ್ರಹಗಳಿವೆ. ಇವು ಪ್ರೇಮಿಗಳ ಕಣ್ಣುಮುಚ್ಚಾಲೆ ಆಟವನ್ನು ಸೂಚಿಸುವಂತಿವೆ. ಅಂಥದೇ ಮತ್ತೊಂದು ಪಟ್ಟಿಕೆ ಇನ್ನೂ ಕೆಳಗೆ ಮತ್ತೊಮ್ಮೆ ಬರುತ್ತದೆ. ಆದರೆ ಇದರಲ್ಲಿನ ವಿವರಗಳು ಬೇರೆ. ಇಲ್ಲಿಯ ಒಂದಾದ ಮೇಲೊಂದರಂತೆ ಬರುವ ಶಾಲಗಳು ಮತ್ತು ಕೂಡುಗಳು ತಮ್ಮ ನಡುವಣ ತೆರಪಿನಲ್ಲಿಯ ಅಲಂಕಾರಿಕವಾದ ಅಂಚುಗಳಿಂದ ಸುಂದರವಾಗಿವೆ. ಹಿಂಗಾಲ ಮೇಲೆ ನಿಂತ ಸಿಂಹಗಳು ಮತ್ತು, ಗಿಡ್ಡ ವ್ಯಕ್ತಿಗಳು ಚಾವಣಿಗೆ ಆಧಾರವಾಗಿವೆ. ಶಾಲಗಳಲ್ಲಿ ದಕ್ಷಿಣದಲ್ಲಿ ದಕ್ಷಿಣಾಮೂರ್ತಿ, ಪಶ್ಚಿಮದಲ್ಲಿ ವಿಷ್ಣು ಮತ್ತು ಉತ್ತರದಲ್ಲಿ ಶಿವ ಇವರ ಮೂರ್ತಿಗಳಿವೆ. ಮಧ್ಯದಲ್ಲಿರುವ ವಿಗ್ರಹದ ಎರಡೂ ಪಕ್ಕಗಳಲ್ಲಿ ಮತ್ತು ತೀರ ಅಂಚಿನಲ್ಲಿರುವ ಯುವತಿಯರ ವಿಗ್ರಹಗಳ ನಡುವೆ ಇಬ್ಬರು ದೇವತೆಗಳ ವಿಗ್ರಹಗಳು ದಕ್ಷಿಣದಲ್ಲೂ ಸೂರ್ಯ ಮತ್ತು ಚಂದ್ರರು ಪಶ್ಚಿಮದಲ್ಲೂ ಒಬ್ಬ ದೇವ ಮತ್ತು ಸ್ಕಂದ ವಿಗ್ರಹಗಳು ಉತ್ತರದಲ್ಲೂ ಇವೆ. ಈ ಪಟ್ಟಿಕೆಯ ಕೆಳಗೆ ದೈವೀ ಸಂಗೀತವನ್ನು ಹಾಡುತ್ತ, ವಾದ್ಯಗಳನ್ನು ನುಡಿಸುತ್ತ, ಅದನ್ನು ಸವಿಯುತ್ತ ಮನೋಹರವಾದ ಭಂಗಿಗಳಲ್ಲಿರುವ ಗಣಗಳ ಉದ್ದನೆಯ ಸಾಲೊಂದುಂಟು. ಇಲ್ಲಿಯ ಇಡೀ ಕೆತ್ತನೆ ಕೆಲಸ ಆಲಂಕಾರಿಕ ವಿನ್ಯಾಸಕ್ಕೂ ಮಾನವ ಹಾಗೂ ಪ್ರಾಣಿಗಳ ನಿರೂಪಣೆಗೂ ಹೆಸರುವಾಸಿಯಾಗಿದೆ. ಈ ಸ್ಮಾರಕಕ್ಕೆ ಸೇರಿದಂತೆ ಯಾವ ಶಾಸನವೂ ಇಲ್ಲ. ಆದ್ದರಿಂದ ಶೈಲಿಯ ಆಧಾರದ ಮೇಲೆ ಇದನ್ನು ಸು. 8ನೆಯ ಶತಮಾನದ್ದೆಂದು ಹೇಳಬಹುದು.

ಇನ್ನೊಂದು ಜೈನ ಸ್ಮಾರಕ. ಬಂಡೆಯ ಇನ್ನೊಂದು ಪಕ್ಕದಲ್ಲಿ ಜೈನ ತೀರ್ಥಂಕರರ ಶಿಲ್ಪಗಳ ಸಾಲುಗಳನ್ನು ಕೆತ್ತಿದೆ. ಈ ಶಿಲ್ಪಶ್ರೇಣಿಗಳ ಎರಡೂ ಪಕ್ಕಗಳಲ್ಲಿ ಕೆಲವು ಅಂಕಣಗಳಿದ್ದು ಅವುಗಳಲ್ಲಿಯೂ ಉಬ್ಬುಶಿಲ್ಪಗಳಿವೆ. ಇವೂ ತೀರ್ಥಂಕರರ ವಿಗ್ರಹಗಳೇ. ಅಲ್ಲಿರುವ ಮರ, ಯಕ್ಷ ಯಕ್ಷಿಣಿಯರಿಂದ ಅವರನ್ನು ಗುರುತಿಸಬಹುದು. ಇವುಗಳ ಹೊರತಾಗಿ, ಉಳಿದೆಲ್ಲ ಶಿಲ್ಪಗಳ ಕೆಳಗೆ ತಮಿಳಿನಲ್ಲಿ ವಟ್ಟೆಲುತ್ತು ಲಿಪಿಯಲ್ಲಿ ಶಾಸನಗಳನ್ನು ಕೆತ್ತಿದೆ. ಅವು ದಾನಿಗಳ, ಅವರ ಜನ್ಮಸ್ಥಳ ಮತ್ತು ಗುರುಗಳ ಹೆಸರುಗಳನ್ನು ತಿಳಿಸುತ್ತವೆ. ಎರಡು ಸಂದರ್ಭಗಳಲ್ಲಿ ಮಾತ್ರ ಅರೈಮಲೈಆಳ್ವಾರ್ ಎಂಬ ಜೈನ ದೇವತೆಯ ಉಲ್ಲೇಖವಿದೆ. ಹೆಚ್ಚಿನ ದಾನಿಗಳು ಸಂನ್ಯಾಸಿಗಳು. ಅವರನ್ನು ಕುರವಡಿಗಳ್ (ಸಂಸ್ಕೃತ: ಗುರುವಃ) ಮತ್ತು ಕುರಟ್ಟಿಗಳ್ ಎಂದು ವರ್ಣಿಸಿದೆ. ಇತರ ಪ್ರಸಿದ್ಧವಾದ ಜೈನ ಕೇಂದ್ರಗಳನ್ನೂ ಅವು ಹೆಸರಿಸುತ್ತವೆ. ಉದಾಹರಣೆ: ತಿರುಪ್ಪರುತ್ತಿ (ಕಾಂಚಿಯಲ್ಲಿಯ ತಿರುಪ್ಪರುತ್ತಿಕ್ಕುನ್ರಮ್) ತಿರುನಱುಂಗೊಂಡೈ, ಅರುಪ್ಪುಕ್ಕೋಟ್ಟೈ ಬಳಿಯ ಕುಱಂಡಿ, ತಿರುಕ್ಕೋಟ್ಟಾಱು (ನಾಗರ ಕೋಯಿಲ್) ಮತ್ತು ತಿರುಚ್ಚಾರಣಮ್ (ಕೇರಳದಲ್ಲಿಯ ಚಿತಾರಲ್). ನಿರ್ವಹಣೆಯಲ್ಲಿ ಎರಡೂ ಪಕ್ಕಗಳ ಅಂಕಣಗಳಲ್ಲಿಯ ಶಿಲ್ಪಗಳು ಹೆಚ್ಚು ಕಲಾತ್ಮಕವಾಗಿವೆ. ಅವು ಪಾರ್ಶ್ವನಾಥ, ಮಹಾವೀರ ಮತ್ತು ನೇಮಿನಾಥರನ್ನು ಪ್ರತಿನಿಧಿಸುತ್ತವೆ. ಈ ಎಲ್ಲ ಶಿಲ್ಪಗಳನ್ನೂ ತಿರುಮೇನಿ–ಪವಿತ್ರವಾದ ಮೂರ್ತಿ (ದೇಹ)–ಎಂದು ಕರೆದಿದೆ. ಯಕ್ಷ ಮತ್ತು ಯಕ್ಷಿಣಿಯರ ಶಿಲ್ಪಗಳ ಪ್ರಾಧಾನ್ಯ ಗಮನಾರ್ಹವಾದದ್ದು. ಈ ಶಿಲ್ಪಗಳಲ್ಲಿ ಹೆಚ್ಚಿನವು ಪೂಜೆಗೊಳ್ಳುತ್ತಿದ್ದುವು ಎಂದು ಶಾಸನಗಳಿಂದ

ತಿಳಿದುಬರುತ್ತದೆ. ಎರಡು ಬಿಡಿಯಾದ ಲೇಖಗಳಿವೆ. ಇವು ಬಹುಶಃ ತಿರುಮಲೈ ದೇವರ್ ಎಂಬ ಒಂದು ಪ್ರಮುಖ ಜೈನ ದೇವತೆಗೆ ಸಂಬಂಧಿಸಿರುವಂತೆ ಕಂಡರೂ ಖಚಿತವಾಗಿ ಗುರುತಿಸುವುದಕ್ಕೆ ಆಗುವುದಿಲ್ಲ. (ಜೈನ) ಸಿದ್ಧಾಂತದ ಪ್ರಸಾರಣಕ್ಕೆ ಮಾಡಿಕೊಟ್ಟ ಸೌಲಭ್ಯಗಳನ್ನು ಇವು ದಾಖಲಿಸುತ್ತವೆ. ಲಿಪಿಶಾಸ್ತ್ರದ ಆಧಾರದಿಂದ ಇವೆಲ್ಲವೂ ಹತ್ತನೆಯ ಶತಮಾನದ ಕೊನೆಗಾಲಕ್ಕೆ ಸೇರಿದವೆಂದು ಹೇಳಬಹುದು. ಒಂದು ಮಹಾ ಜೈನಕೇಂದ್ರವಾದ ಈ ಸ್ಥಳದ ಮಹತ್ತ್ವ ಸುಸ್ಪಷ್ಟ. ಕಟುಗುಮಲ್ಲೈ ಎಂಬ ಹೆಸರು ಜೈನ ಗೃಧ್ರಾಚಲದ ಕೀರ್ತಿಯ ಪರಿವೇಷವನ್ನು ಹೊಂದಿರುವಂತೆ ಕಾಣುತ್ತದೆ. ಆದರೆ ಅದಕ್ಕೆ ಶಾಸನಗಳ ಆಧಾರವಿಲ್ಲ.

ಬೆಟ್ಟದ ಮೇಲೊಂದು ಚಿಕ್ಕ ಗುಡಿಯುಂಟು. ಅಲ್ಲಿಯ ದೇವರನ್ನು ಈಗ ಅಯ್ಯನಾರ್ ಎಂದು ಕರೆಯುತ್ತಾರೆ. ಗುಡಿಯೊಳಗಿನ ಒಂದು ಬಂಡೆಯ ಮೇಲೆ ಇರುವ ಶಾಸನ ಒಂಬತ್ತನೆಯ ಶತಮಾನಕ್ಕೆ ಸೇರಿದುದೆಂದು ಹೇಳಬಹುದು. ದೇವರನ್ನು (ದೇವರ್) ಒಬ್ಬ ಬ್ರಾಹ್ಮಣ ಬ್ರಹ್ಮಚಾರಿ ಪ್ರತಿಷ್ಠೆಮಾಡಿದ ಮತ್ತು ಅದರ ಪೂಜೆಗೆ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟ ವಿಷಯ ಅದು ಹೇಳುತ್ತದೆ. ದತ್ತಿಯನ್ನು ತಿರುಮಲೈ ವೀರರ್ ಮತ್ತು ಪರಾಂತಕ ವೀರರ್ ಎಂಬ ಜನಕ್ಕೆ ವಹಿಸಿದೆ ಎಂದು ಹೇಳಿದೆ. ಆ ಸ್ಥಳದ, ಹಾಗೆಯೇ ಅಲ್ಲಿಯ ಜೈನ ಸಂಸ್ಥೆಗಳ ರಕ್ಷಣೆಗೆ ಆಯುಧಪಾಣಿಗಳಾದ ರಕ್ಷಕರನ್ನು ನೇಮಿಸಲಾಗುತ್ತಿತ್ತು ಎಂಬುದನ್ನು ಅದು ಸಮರ್ಥಿಸುತ್ತದೆ. ಅಲ್ಲಿಯೇ ಬೆಟ್ಟದ ಬುಡದಲ್ಲಿ ಬಂಡೆಯಿಂದ ಕೊರೆದ ಸುಬ್ರಹ್ಮಣ್ಯ ದೇವರ ಒಂದು ದೇವಾಲಯವೂ ಉಂಟು.

ಹಳ್ಳಿಯಲ್ಲಿ ವಟ್ಟೆಲುತ್ತು ಲಿಪಿಯಲ್ಲಿ ಬರೆದ ಒಂದು ತಮಿಳು ಶಾಸನ ಸಿಕ್ಕಿದೆ. ಅದು ಪೆರುನೆಚ್ಚುಳಿಂ ಎಂಬಲ್ಲಿಯ ಒಬ್ಬ ದೊಡ್ಡ ದಳಪತಿ ಎಟ್ಟಿಮಣ್ಣಾನ್ ಅಲಿಯಾಸ್ ಮಂಗಲ ಏನಾದಿಯ ಇಬ್ಬರು ಸೇವಕರು ಮಲೈನಾಡಿನ ಚಡೈಯನ್ ಕರುನಾಂಡಾನ್ ಎಂಬವನ ಎದುರಾಗಿ ಹೋರಾಡಿ ಸತ್ತುದರ ಸ್ಮರಣೆಯದು. ಇದು ನಡೆದದ್ದು ಒಂದನೆಯ ಪರಾಂತಕ ವರಗುಣನ (ಸು.768–815) ಆಳಿಕೆಯಲ್ಲಿ ಎಂಬುದು ಅದರಿಂದ ತಿಳಿದುಬರುವ ಸಂಗತಿ. ತಿರುನೆಚ್ಚುಳಿಮ್ ಎಂಬ ಹೆಸರಿನ ಸ್ಥಳ ತನ್ನ ಧಾರ್ಮಿಕ ಮಹತ್ತ್ವದಿಂದಾಗಿ ಪೆರುನೆಚ್ಚುಳಿಂ ಮತ್ತು ಇಟನೆಚ್ಚುಳಿಂ ಎಂಬ ಎರಡು ಭಾಗಗಳನ್ನು ಒಳಗೊಂಡಿತ್ತು. (ಕೆ.ಜಿ.ಕೆ.ಆರ್.)

**ಕಳೆ ಮತ್ತು ಕಳೆ ಹತೋಟಿ :** ಬೇಡದೆಡೆ ಬೆಳೆಯುವ ಸಸ್ಯಗಳನ್ನು ಕಳೆಯೆಂದು ಕರೆಯುತ್ತೇವೆ. ಸ್ಥಳ ಮತ್ತು ಸಂದರ್ಭಗಳ ಔಚಿತ್ಯದ ಮೇಲೆ ಕಳೆಯೇ ಅಥವಾ ಬೆಳೆಯೇ ಎಂಬ ಅಂಶ ನಿರ್ಧಾರವಾಗಬೇಕಾಗುತ್ತದೆ. ಉದಾಹರಣೆಗೆ, ಗಣ್ಣೆ (ಸ್ಯಾಂಡ್ ಪ್ಲಾಂಟ್). ಮುಖ್ಯವಾಗಿ ನಾವು ಬೆಳೆಸಬೇಕಾದ ಬೆಳೆಯನ್ನು ಗಮನದಲ್ಲಿಟ್ಟು ಅದಲ್ಲದ್ದನ್ನೂ ಮತ್ತು ಅದಕ್ಕೆ ಮಾರಕವಾಗಬಲ್ಲ ಸಸ್ಯವರ್ಗವನ್ನೂ ಕಳೆ ಎಂದು ಹೇಳಬಹುದು. ಕಳೆಸಸ್ಯಗಳು ಪೈರಿನೊಡನೆ ನೀರು, ಸ್ಥಳ, ಸೂರ್ಯರಶ್ಮಿ ಮತ್ತು ಪೋಷಕಗಳಿಗೆ ಸ್ಪರ್ಧಿಸಿ ಪೈರಿಗೆ ಹಾನಿ ಮಾಡುವುದರಿಂದ ಅವುಗಳ ನಿವಾರಣೆ ಅನಿವಾರ್ಯ. ಹಾಗೆಯೇ ಇವು ಸನ್ನಿವೇಶದ ಸೊಬಗನ್ನು ಕೆಡಿಸಬಹುದು. ಕುಡಿಯುವ ನೀರಿನಲ್ಲಿ ಬೆಳೆದು ಅದನ್ನು ಕಲುಷಿತವಾಗಿ ಮಾಡಬಹುದು.

ಬೇಸಾಯದ ಭೂಮಿಗಳಲ್ಲಿ, ಬಂಜರು ಜಾಗಗಳಲ್ಲಿ, ನೀರಿನಲ್ಲಿ, ನೀರಾವರಿ ಭೂಮಿಯಲ್ಲಿ, ಸಮುದ್ರ ಮಟ್ಟದಿಂದ ಎಲ್ಲ ಎತ್ತರಗಳಲ್ಲಿ, ಕಾಲಭೇದವಿಲ್ಲದೆ ಕಳೆಬೆಳೆಯುತ್ತದೆ. ಈ ಕಾರಣದಿಂದ ಇದರ ನಾಶ ಕಷ್ಟವಾದುದು. ಇದನ್ನು ಹತೋಟಿಯಲ್ಲಿಡಲು ಮತ್ತು ಸಾಧ್ಯವಿದ್ದಲ್ಲಿ ಇದರಿಂದ ಉಪಯೋಗ ಪಡೆಯಲು ಕಳೆಯ ವೈವಿಧ್ಯ, ವೈಶಿಷ್ಟ್ಯಗಳ ಪರಿಶೀಲನೆ ಅಗತ್ಯ. ಕಳೆಯೆದುರಿನ ಹೋರಾಟದಲ್ಲಿ ಅದರ ನಿರ್ಮೂಲನವೊಂದೇ ಅಲ್ಲದೆ ಅದು ಬೆಳೆಯದಂತೆ ತಡೆಯುವ ಕ್ರಮಗಳೂ ಮುಖ್ಯ. ಕಳೆಬೀಜಗಳಿಂದ ವಿಮುಕ್ತವಾಗಿರುವ ನೀರು, ಕಳೆ ಹತೋಟಿ ಕ್ರಮಗಳ ಕಟ್ಟುನಿಟ್ಟಾದ ಆಚರಣೆ, ಸ್ವಚ್ಛ ಬೀಜಗಳ ಬಳಕೆ ಮುಂತಾದವೆಲ್ಲವೂ ಕಳೆ ಹತೋಟಿ ಕಾರ್ಯಕ್ರಮದ ಅಂಗಗಳು. ಪೈರಿಗೆ ಹಿತ ಸನ್ನಿವೇಶ ಅಗತ್ಯ. ಆದರೆ, ಕಳೆಗೆ ಯಾವ ಸನ್ನಿವೇಶಕ್ಕೆ ಬೇಕಾದರೂ ಹೊಂದಿಕೊಳ್ಳುವ ಸಾಮರ್ಥ್ಯ ಇದೆ. ಅನೇಕ ಕಳೆಗಳು ಅದರಲ್ಲೂ ಬಹುವಾರ್ಷಿಕ ಬಗೆಯವು ಬೀಜದ ಅಗತ್ಯವಿಲ್ಲದೆ ಬೇರಿನ ಹರಡುವಿಕೆಯಿಂದಲೇ ಬೆಳೆಯುತ್ತವೆ. ಕೆಲವು ಕಳೆಗಳು ಕ್ಷೀಣವಾದ ಎಲೆಗಳು, ಮಾರ್ಪಾಡಾದ ಕಾಂಡ, ಇಲ್ಲವೇ ಬೇರು ಗೆಡ್ಡೆಗಳ ಸಹಾಯದಿಂದ ವಿಷಮ ಪರಿಸ್ಥಿತಿಯನ್ನು ಎದುರಿಸಿ ಪೈರಿನೊಡನೆ ಸ್ಪರ್ಧಿಸುತ್ತವೆ. ಈ ರೀತಿಯ ವ್ಯಾಪಕವಾದ ತಳಿವೃದ್ಧಿ ಸಾಮರ್ಥ್ಯವಿರುವುದರಿಂದ ಈ ಕಳೆಗಳ ಹಾವಳಿ ತಡೆಯಲಾರದಷ್ಟು ಹೆಚ್ಚಾಗುತ್ತದೆ. ಕಳೆ ಸಸ್ಯಗಳು ಅಸಂಖ್ಯಾತವಾಗಿ ಬೀಜಗಳನ್ನು ಉತ್ಪಾದಿಸುತ್ತವೆ. ಅಲ್ಲದೆ ಈ ಬೀಜಗಳು ತಮ್ಮ ಮೊಳಕೆಯೊಡೆಯುವ ಸಾಮರ್ಥ್ಯವನ್ನು ಹಲವಾರು ವರ್ಷಗಳವರೆಗೆ ಉಳಿಸಿಕೊಂಡಿರುತ್ತವೆ. ಕರಿಸಾಸುವೆ (ಬ್ರಾಸಿಕ ನೈಗ್ರ) ಮತ್ತು ಅಬ್ಯುಟಿಲಾನ್ ಎಂಬ ಕಳೆಗಳ ಬೀಜಗಳು 50–70 ವರ್ಷಗಳಾದ ಮೇಲೂ ಮೊಳಕೆಯೊಡೆಯುವುದು ಕಂಡುಬಂದಿದೆ.

ಕಳೆಗಳ ಇನ್ನೊಂದು ವಿಶೇಷ ಗುಣ, ಬೀಜ ಪ್ರಸಾರಕ್ಕೆ ಅವು ಹೊಂದಿರುವ ಸಾಧನಾನುಕೂಲ. ಕಂಪಾಸಿಟೀ ಕುಟುಂಬಕ್ಕೆ ಸೇರಿದ ಅನೇಕ ಕಳೆಗಳಲ್ಲಿ ಗಾಳಿಯ ಸಹಾಯದಿಂದ ಪ್ರಸಾರವಾಗಲು ಸಹಾಯಕವಾಗುವ ಬೀಜದ ತುಪ್ಪಳು (ಪ್ಯಾಪಸ್) ಇದೆ. ಕೆಲವು ಕಳೆ ಬೀಜಗಳಿಗೆ ಕೊಕ್ಕೆಯಂಥ ಸಾಧನ ಇದೆ. ಇದರಿಂದ ಇವು ದನಗಳ ಚರ್ಮಕ್ಕೆ ಇಲ್ಲವೇ ಜನರ ಬಟ್ಟೆಗೆ ಸಿಕ್ಕಿಕೊಂಡು ಹರಡುವುದು ಸಾಧ್ಯ. ಬಹುಪಾಲು ಕಳೆಗಳ ಬೀಜಗಳು ಪೈರಿನ ಬೀಜ ಬಲಿಯುವಾಗಲೇ ಬಲಿಯುತ್ತವೆ. ಕಳೆ ಮತ್ತು ಪೈರಿನ ಕಾಳುಗಳ ಗಾತ್ರ ಒಂದೇ ಆಗಿದ್ದಲ್ಲಿ ಪೈರಿನ ಬೀಜದೊಡನೆ ಬೆರೆತು ಮುಂದಿನ ಪೈರಿನಲ್ಲಿ ಬಿತ್ತನೆಯಾಗಿ ಬಿಡುವ ಸಂಭವವುಂಟು.

ಎಷ್ಟೋ ವೇಳೆ ಅಲಂಕಾರಕ್ಕೆಂದು ಬೆಳೆಸಿದ ಗಿಡಗಳು ಕಳೆಗಳಾಗಿ ಪರಿಣಮಿಸಿ ಹಾನಿಕಾರಕವಾಗುತ್ತವೆ. ಉದಾಹರಣೆಗೆ ಐಕ್ಹಾರ್ನಿಯ ಕ್ರಾಸಿಪೆಸ್ (ಅಂತರ ತಾವರೆ). ಕಳೆ ಬೀಜಗಳು ಗೊಬ್ಬರ ಮತ್ತು ಕೃಷಿ ಸಲಕರಣೆಗಳ ಮೂಲಕ ಸ್ಥಳಾಂತರವಾಗುತ್ತವೆ. ದಕ್ಷಿಣ ಭಾರತದಲ್ಲಿ ಬಹು ಸಾಮಾನ್ಯವಾಗಿರುವ ಆಲ್ಟರ್ನಾಂತೆರ ಎಕೈನೇಟ (ಮುಳ್ಳುಹೊನಗೊನೆ) ಮತ್ತು ಅಕ್ಯಾಂತೊಸ್ಪರ್ಮಮ್ ಹಿಸ್ಪಿಡಮ್ (ಕಡ್ಲೆಮುಳ್ಳು) ಮುಂತಾದುವು ಹಡಗು, ರೈಲುಗಳ ಮೂಲಕ ಅಮೆರಿಕದಿಂದ ಬಂದವು. ಮೊದಲು ಇವು ಕಾಣಿಸಿದ್ದು ರೈಲ್ವೆ ನಿಲ್ದಾಣದ ಹತ್ತಿರ.

**ಕಳೆಗಳಿಂದಾಗುವ ಹಾನಿ:** ಕಳೆಗಳಿಗೆ ಬೇಕಾದದ್ದು ಕೇವಲ ಸ್ಥಳ ಮತ್ತು ಬೆಳಕು ಮಾತ್ರವಾದರೆ ಪೈರಿಗೆ ಅಷ್ಟೇನೂ ತೊಂದರೆಯಾಗುವ ಸಂಭವವಿಲ್ಲ. ಆದರೆ ಪೈರಿಗೆಬೇಕಾದ ಇತರ ಎಲ್ಲ ವಸ್ತುಗಳು ಸಹ ಇವಕ್ಕೆ ಅಗತ್ಯ. ಆದ್ದರಿಂದ ಪೈರಿನೊಡನೆ ಸ್ಪರ್ಧಿಸುತ್ತವೆ. ಸ್ಪರ್ಧೆಯಲ್ಲಿ ಕಳೆಗಳ ಜಯವೇ ನಿಶ್ಚಯ. ಕಳೆಯೊಡನೆ ಪೈರಿನ ಹೋರಾಟ ಯಾವಾಗಲೂ ಇದ್ದದ್ದೇ. ಕಳೆಗಳಿಂದ ಕೂಡಿದ ಗೋದಿ ಹೊಲದಲ್ಲಿ ಕಳೆಗಳು ಒಂದು ಎಕರೆಗೆ 17 ಪೌಂಡ್ ಸಾರಜನಕವನ್ನು ನುಂಗಿಹಾಕಿಬಿಡುತ್ತವೆ. ಅಂದರೆ ಅಷ್ಟು ಗೋದಿ ಇಳುವರಿ ಹೋದ ಹಾಗಾಯಿತು. ಎರಡನೆಯದಾಗಿ ಕಳೆಗಳು ಭೂಮಿಯಲ್ಲಿನ ನೀರನ್ನು ತೀವ್ರಗತಿಯಲ್ಲಿ ಬಳಸುತ್ತವೆ. ಇದರ ಪರಿಣಾಮ, ಅದರಲ್ಲೂ ಮರಳು ಭೂಮಿಗಳಲ್ಲಿ, ಅಗಾಧ. ಕೆಲವು ಕಳೆಗಳು ಹೂವಾಗುವವರೆವಿಗೆ ಬಳಸುವ ನೀರಿನ ಪ್ರಮಾಣ ಎಕರೆಗೆ 813 ಟನ್ ಎಂದು ತಿಳಿದಿದೆ. ಉದಾಹರಣೆಗೆ ಗರಿಕೆ ಹುಲ್ಲು. ಅದೇ ಜೋಳ ಬಳಸುವ ನೀರಿನ ಪ್ರಮಾಣ ಕೇವಲ 430 ಟನ್. ಕಳೆಗಳಿಲ್ಲದಿದ್ದಲ್ಲಿ ಎಕರೆಗೆ 506 ಟನ್ನುಗಳಷ್ಟು ನೀರನ್ನು ಉಳಿಸುವುದು ಸಾಧ್ಯ. ಮೂರನೆಯದಾಗಿ, ಕಳೆಗಳಿದ್ದಲ್ಲಿ ಸಾಗುವಳಿ ಖರ್ಚು ಹೆಚ್ಚುವುದು. ಅಲ್ಲದೆ ಕಳೆಬೀಜ ಸೇರುವುದರಿಂದ ಉತ್ಪನ್ನದ ಗುಣ ಕೀಳುದರ್ಜೆಯದಾಗುತ್ತದೆ. ಕಳೆ ಹತೋಟಿಗೆ ಪೈರಿನ ಬೆಲೆಯ ಶೇ. 10–30 ಖರ್ಚು ಆಗುತ್ತದೆ. ನಾಲ್ಕನೆಯದಾಗಿ ಕಳೆಗಳಿಂದ ರೋಗ ಹರಡುತ್ತದೆ. ಬೆಳೆಗಳು ಅನೇಕ ಬೂಷ್ಟು ಮತ್ತು ಬ್ಯಾಕ್ಟೀರಿಯ ರೋಗಗಳಿಗೆ ತುತ್ತಾಗುತ್ತವೆ. ಕೀಟಪೀಡೆಗಳಿಗೆ ಕಳೆಗಳು ಆಶ್ರಯ ಕೊಡುತ್ತವೆ. ಉದಾಹರಣೆಗೆ, ಬತ್ತದ ಕಾಂಡ ಕೊರೆಯುವ ಹುಳು ಕಳೆಗಳಲ್ಲಿ ಆಶ್ರಯ ಪಡೆದು ಪೈರಿಗೆ ವರ್ಗಾವಣೆ ಹೊಂದುತ್ತದೆ. ಪರೋಪಜೀವಿಗಳಾದ ಕೆಲವು ಕಳೆಸಸ್ಯಗಳು ಬಹಳ ಉಪದ್ರವಕಾರಿಗಳು. ಆಶ್ರಯದಾತ ಸಸ್ಯಗಳನ್ನೇ ಕೊಲ್ಲುವುದರ ಮೂಲಕ ಗಣನೀಯ ಪ್ರಮಾಣದಲ್ಲಿ ಪೈರನ್ನು ನಷ್ಟಮಾಡಬಲ್ಲವು. ಉದಾಹರಣೆಗೆ ಲೊರ್ಯಾಂತಸ್, ವಿಸ್ಕಮ್, ಒರೊಬ್ಯಾಂಕಿ (ಬೆಂಕಿಗಿಡ), ಸ್ಟ್ರೈಗ ಮುಂತಾದುವು. ದತೂರ ಫ್ಯಾಸ್ಟುಯೋಸ (ಕರೀಉಮ್ಮತ್ತಿ) ಮತ್ತು ಸೊಲ್ಯಾನಮ್ ನೈಗ್ರಮ್‌ನಂಥ (ಕರಿಕಾಚಿಗಿಡ) ಅನೇಕ ಕಳೆಗಳನ್ನು ಜಾನುವಾರುಗಳು ಮತ್ತು ಮನುಷ್ಯರು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದಾಗ ವಿಷವಾಗಬಲ್ಲುವು. ಇದಲ್ಲದೆ ಕಾಲುವೆ, ಚರಂಡಿಗಳಲ್ಲಿ ಕಳೆಗಳು ಬೆಳೆದು ನೀರು ಹಾಯುವುದಕ್ಕೆ ಅಡಚಣೆ ಆಗುವುದುಂಟು. ಕುಡಿಯುವ ನೀರು ಸಹ ಜಲ ಕಳೆಗಳ ಬೆಳವಣಿಗೆಯಿಂದ ಕೆಟ್ಟುಹೋಗುತ್ತದೆ.

ಕಳೆ ಬೀಜಗಳು, ತಮಗಿರುವ ಕೊಕ್ಕೆ ಮತ್ತು ಮುಳ್ಳುಗಳ ಸಹಾಯದಿಂದ ಮೇಯಲು ಬಂದ ಕುರಿಗಳ ಉಣ್ಣೆಗೆ ಅಂಟಿಕೊಳ್ಳುತ್ತವೆ. ಅವನ್ನು ಬಿಡಿಸುವುದು ಸಾಧ್ಯವಾಗದೆ ಉಣ್ಣೆಯ ಗುಣಮಟ್ಟ ಇಳಿಯುತ್ತದೆ.

**ಕಳೆಗಳಿಂದ ಪ್ರಯೋಜನ:** ಕಳೆಗಳು ವಿನಾಶಕಾರಿಗಳೆಂದು ಕಡೆಗಾಣಿಸಲ್ಪಟ್ಟಿದ್ದರೂ ಅವುಗಳಿಂದ ಕೆಲವು ಪ್ರಯೋಜನಗಳಿವೆ. ಅವುಗಳಲ್ಲಿ ಎಲೆ, ಕಾಂಡ, ಬೀಜಗಳು ಜಾನುವಾರುಗಳಿಗೆ ಕಾಡುಮೃಗಗಳಿಗೆ ಮೇವಿಗೆ ಬರುತ್ತವೆ. ಪ್ಯಾನಿಕಮ್ ರಿಪೆನ್ಸ್ (ಶುಂಠಿ ಹುಲ್ಲು) ಎಂಬ ಜಾತಿಯ ಕಳೆ ಮಣ್ಣಿನ ಕಣಗಳನ್ನು ಬಂಧಿಸಿ ಮಣ್ಣಿನ ಸವಕಳಿಯನ್ನು ತಡೆಯಬಲ್ಲದು. ಸೈಪರೇಸೀ ಕುಟುಂಬಕ್ಕೆ ಸೇರಿದ ಹುಲ್ಲುಗಳಿಂದ ಚಾಪೆ ಮತ್ತು ತೆರೆಗಳನ್ನು ಮಾಡುತ್ತಾರೆ. ಅನೇಕ ಕಳೆಗಳನ್ನು ಅನೇಕ ರೋಗಗಳ ಮತ್ತು ಹಾವಿನ ವಿಷದ ಪರಿಹಾರಕ್ಕೆ ಬಳಸುತ್ತಾರೆ. ಹಾಗೆಯೇ ಕಳೆ ಸಸ್ಯಜಾತಿಯನ್ನು ಗುರುತಿಸಿ ಮಣ್ಣಿನ ಗುಣಾಂಶ, ಅಂದರೆ ಮಣ್ಣು ಉತ್ಕೃಷ್ಟವೇ ಅಲ್ಲವೇ ಎಂಬುದನ್ನು ಕಂಡುಹಿಡಿಯಬಹುದು. ಉದಾಹರಣೆಗೆ ಪ್ಯಾನಿಕಮ್ ಕಲೋನಮ್ (ಕರೀಕಡ್ಡಿ ಹುಲ್ಲು) ಬೆಳೆಯಬೇಕಾದರೆ ಮಣ್ಣು ಒಳ್ಳೆಯದೇ ಇರಬೇಕು. ಸಿಂಬೋಪೋಗಾನ್ ಸೀಸಿಯಸ್ (ಕಾಸಿ ಹುಲ್ಲು) ಮರಳು ಮಣ್ಣಿನಲ್ಲಿ ಬೆಳೆಯುತ್ತದೆ. ಸೆಜ್ಜಸ್ ಜೊಂಡು ಇದ್ದರೆ ಅಂಥ ಮಣ್ಣಿನಲ್ಲಿ ನೀರು ಸರಾಗವಾಗಿ ಹರಿದು ಹೋಗದು ಎಂದು ತಿಳಿಯಬಹುದು. ಅನೇಕ ಬಗೆಯ ಕಳೆಗಳನ್ನು ಕಾಂಪೋಸ್ಟ್ ತಯಾರಿಸುವುದಕ್ಕೆ ಬಳಸಬಹುದು. ಕ್ಯಾಲೋಟ್ರೋಪಿಸ್ ಜೈಗಾಂಶಿಯ (ಎಕ್ಕ) ಮತ್ತು

ಟೆಫ್ರೋಸಿಯ ಪರ್ಪ್ಯೂರಿಯಗಳನ್ನು (ಕೊಗ್ಗಿಲಿ) ಹಸುರೆಲೆ ಗೊಬ್ಬರವಾಗಿ ಉಪಯೋಗಿಸುವುದುಂಟು. ಒಪನ್ಷಿಯ (ಪಾಪಾಸುಕಳ್ಳಿ) ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಬಹಳ ಒಳ್ಳೆಯ ಕಚ್ಚಾವಸ್ತು. ಗದ್ದೆಗಳಲ್ಲಿ, ಸ್ಥಳದಲ್ಲೇ ಹಸುರು ಗೊಬ್ಬರ ಬೆಳೆಯದಿದ್ದೆಡೆ, ಕಳೆಗಳೇ ಆವರ್ತನ ಬೆಳೆಯಾಗಿ ನೈಟ್ರೇಟ್ ರೂಪದ ಸಾರಜನಕ ಪೋಲಾಗುವುದನ್ನು ತಪ್ಪಿಸುತ್ತವೆ.

ಕಳೆಗಳ ವರ್ಗೀಕರಣ. ಎಲ್ಲ ಬಗೆಯ ಕಳೆಸಸ್ಯಗಳು ಎಲ್ಲ ಕಡೆ ಸ್ವಲ್ಪ ಹೆಚ್ಚು ಕಡಿಮೆ ಬೆಳೆದರೂ ಅವನ್ನು ಕೆಳಕಂಡಂತೆ ವರ್ಗೀಕರಿಸಲು ಸಾಧ್ಯ: 1 ರಸ್ತೆ ಅಕ್ಕಪಕ್ಕದಲ್ಲಿ ಬೆಳೆಯುವ ಕಳೆಗಳು. 2 ಬಂಜರು ಭೂಮಿಗಳ ಕಳೆ. 3 ಬೇಸಾಯದ ಭೂಮಿಯಲ್ಲಿನ ಕಳೆ. 4 ಜಲಕಳೆ. 5 ಪರೋಪಜೀವಿ ಕಳೆಗಳು.

ಬೇಸಾಯದ ಭೂಮಿಯ ಕಳೆಗಳನ್ನು, ಕಳೆಗಳ ಜೊತೆಗೆ ಬೆಳೆಯುವ ಪೈರಿನ ಆಧಾರದ ಮೇಲೆ, ಯಾವ ಕಾಲದಲ್ಲಿ ಬೆಳೆಯುತ್ತವೆ ಎಂಬ ಆಧಾರದ ಮೇಲೆ ಮತ್ತು ಯಾವ ರೀತಿಯ ಮಣ್ಣಿನಲ್ಲಿ ಬೆಳೆಯುತ್ತವೆ ಎಂಬ ಅಂಶದ ಮೇಲೆ 3 ಉಪವರ್ಗಗಳಾಗಿ ವಿಂಗಡಿಸಬಹುದು. ಈ ವರ್ಗೀಕರಣ ಬಹಳ ಸಮರ್ಪಕವೇನಲ್ಲ. ಒಂದು ಬಗೆಯ ಕಳೆ ಇನ್ನೊಂದೆಡೆ ಬೆಳೆಯುವುದು ಸಾಮಾನ್ಯ.

**1 ರಸ್ತೆಯ ಅಕ್ಕಪಕ್ಕಗಳಲ್ಲಿ ಬೆಳೆಯುವ ಕಳೆ :** ಆಲ್ಟರ್ ನ್ಯಾಂತೆರ ಎಕೈನೇಟ (ಮುಳ್ಳು ಹೊನಗೊನೆ), ಗ್ರಾಂಫ್ರೀನ ಸಿಲೋಸಿಯಾಯ್ಡಿಸ್, ಯೂಫೋರ್ಬಿಯ ಪೈಲುಲಿಫೆರ (ಕೆಂಪುನನೆ ಅಕ್ಕೀ ಸೊಪ್ಪು) ಮತ್ತು ಸೈನೋಡಾನ್ ಡ್ಯಾಕ್ಟಿಲನ್ (ಗರಿಕೆ ಹುಲ್ಲು) ಮುಂತಾದ ಕಳೆಗಳು ಮುಖ್ಯವಾಗಿ ರಸ್ತೆಯ ಅಕ್ಕಪಕ್ಕದಲ್ಲಿರುತ್ತವೆ. ನೆಲದ ಮೇಲೆಯೇ ಹಬ್ಬಿ ಬೆಳೆಯುವುದರಿಂದ ಎದ್ದು ಕಾಣುವುದಿಲ್ಲ. ದನ, ಜನ ಮತ್ತು ವಾಹನಗಳ ಹಾವಳಿಯನ್ನು ಎದುರಿಸಿ ಬದುಕಬಲ್ಲ ಸಾಮರ್ಥ್ಯ ಇವಕ್ಕಿವೆ. ಈ ಕಾರಣದಿಂದ ಮತ್ತು ಇವು ಉತ್ಪನ್ನಮಾಡುವ ಹೆಚ್ಚು ಬೀಜಗಳ ದೆಸೆಯಿಂದ ಇವುಗಳ ಜಾತಿಹಾಳಾಗದೇ ಉಳಿದಿದೆ.

**2 ಬಂಜರು ಭೂಮಿ ಮತ್ತು ಬೇಲಿಗಳಲ್ಲಿನ ಕಳೆ :** ಪರಿಸರದ ಸೊಬಗನ್ನು ಈ ಕಳೆಗಳು ಹಾಳು ಮಾಡುತ್ತವೆ. ಈ ಗುಂಪಿನಲ್ಲಿ ಹಿಪ್ಟಿಸ್ ಸುಯೇವೆಲೆನ್ಸ್, ಲ್ಯೂಕಾಸ್ ಆಸ್ಪೆರ (ತುಂಬೆ), ಸ್ಟಾಕಿಟಾರ್ಫೆಟ ಇಂಡಿಕ (ಕಾಡು ಉತ್ತರಾಣಿ), ಅಕಿರಾಂತಸ್ ಆಸ್ಪೆರ (ಉತ್ತರಾಣಿ), ಕ್ಯಾಸಿಯ ಟೋರ (ಗಂಡು ತಗಚೆ), ಕ್ಯಾಲೋಟ್ರೋಪಿಸ್ ಜೈಗಾಂಶಿಯ (ಎಕ್ಕದ ಗಿಡ), ಆರ್ಜಿಮೋನ್ ಮೆಕ್ಸಿಕಾನ, (ದತ್ತೂರಿಗಿಡ), ಒಪನ್ಷಿಯ (ಪಾಪಾಸುಕಳ್ಳಿ), ಲಂಟಾನ ಕ್ಯಾಮೆರ (ಲಂಟವಾಣಿಗಿಡ), ಅಜಿರೇಟಂ (ಎರಾಳೆ ಗಿಡ) ಮತ್ತು ಮಿಮೋಸ ಪ್ಯೂಡಿಕ (ಮುಟ್ಟಿದರೆ ಮುನಿ)–ಇವನ್ನು ಹೆಸರಿಸಬಹುದು. ಇವು ಮೂಲಿಕೆ ಅಥವಾ ಪೊದೆ ಸಸ್ಯಗಳಾಗಿರಬಹುದು, ಇಲ್ಲವೇ ವಾರ್ಷಿಕ, ದ್ವೈವಾರ್ಷಿಕ ಅಥವಾ ಬಹುವಾರ್ಷಿಕ ಸಸ್ಯಗಳಾಗಿರಬಹುದು. ಇವುಗಳಲ್ಲಿ ಕೆಲವು ವಿಷಪೂರಿತವಾದವು. ದತ್ತೂರಿ ಗಿಡ ಮತ್ತು ಎಕ್ಕದ ಗಿಡ ಇಂಥವು ಔಷಧಿಯಾಗಿ ಬಳಕೆಗೆ ಬರುತ್ತವೆ. ಬೀಜದಿಂದಲೂ ಬಳ್ಳಿಯಿಂದಲೂ ಇವುಗಳ ವಂಶಾಭಿವೃದ್ಧಿಯಾಗುತ್ತದೆ. ಇವುಗಳ ನಾಶ ಕಷ್ಟ. ಹೂ ಬಿಡುವುದಕ್ಕೆ ಮುಂಚೆ, ಇವನ್ನು ಕಿತ್ತು ಸುಡುವುದು ಇವುಗಳ ಹತೋಟಿಗೆ ಸೂಕ್ತ ಮಾರ್ಗ.

**3 ಬೇಸಾಯದ ಭೂಮಿಯ ಕಳೆಗಳು :** ಸಿಲೋಶಿಯ ಅರ್ಜೆಂಸಿಯ (ಅಣ್ಣೆ ಸೊಪ್ಪು), ಸಾಂಕಸ್ (ಕಾಡುಸಣ್ಣ ಹೊಗೆಸೊಪ್ಪು), ಟ್ರೈಡಾಕ್ಸ್ ಪ್ರೊಕಂಬೆನ್ಸ್ (ಗಬ್ಬು ಸಣ್ಣಶಾವಂತಿ), ಸ್ಟ್ರೈಗ, ಓರೊಬ್ಯಾಂಕೆ (ಬೆಂಕಿಗಿಡ) ಮತ್ತು ಹುಲ್ಲು ಜಾತಿಯ ಕಳೆಗಳು ಕೃಷಿ ಭೂಮಿಯಲ್ಲಿ ಇದ್ದು ಬೆಳೆಗಳ ಜೊತೆ ಸ್ಪರ್ಧಿಸುತ್ತವೆ. ಇವುಗಳ ಹತೋಟಿಗೆ ಅನೇಕ ಪ್ರಯತ್ನಗಳನ್ನು ಮಾಡಿದರೂ ಇವುಗಳ ಮೂಲೋಚ್ಚಾಟನೆ ಆಗದೆ ಉಳಿಯುತ್ತವೆ. ಇವುಗಳ ಅಸಂಖ್ಯಾತ ಬೀಜಗಳು, ಬಳ್ಳಿಗಳಿಂದ ಹರಡಿ ಬೆಳೆಯುವ ಶಕ್ತಿ, ಪರಿಸ್ಥಿತಿಗೆ ಹೊಂದಿಕೊಳ್ಳುವ ಸಾಮರ್ಥ್ಯ ಮುಂತಾದುವುಗಳಿಂದ ಇವು ಮಾನವ ಶಕ್ತಿಗೆ ಮಣಿಯದೆ ನಿಂತಿವೆ. ಬೇಸಾಯದ ಭೂಮಿಯಲ್ಲಿನ ಕಳೆಗಳಲ್ಲಿ ಮುಖ್ಯವಾದವು ಇವು: ಬತ್ತದ ಗದ್ದೆಗಳಲ್ಲಿ ಬೆಳೆಯುವ ಅರ್ವ ಲ್ಯಾನೇಟ (ಬಿಳಿಹಿಂಡೀ ಸೊಪ್ಪು), ಎರಿಯೊಕಾಲಾನ್, ಸೈಪರಸ್ ರೊಟಂಡಸ್ (ಕೊನ್ನಾರಿಗೆಡ್ಡೆ), ಜೋಳದ ಪೈರಿನೊಂದಿಗೆ ಬೆಳೆಯುವ ಸ್ಟ್ರೈಗ, ಸೋರ್ಗಮ್ ಹ್ಯಾಲಿಪೆನ್ಸ್, ಗೋದಿ ಬೆಳೆಯೊಂದಿಗಿರುವ ಕೀನೋಪೋಡಿಯಮ್ ಆಲ್ಬಮ್ (ಕಾಡು ಓಮು) ಮತ್ತು ಉಮ್ಮತ್ತಿಗಿಡ. ಇವಲ್ಲದೆ ಓರೊಬ್ಯಾಂಕೆ (ಬೆಂಕಿಗಿಡ) ಡೈಜೆರ ಆರ್ವೆನ್ಸಿಸ್, ಜಸ್ಸಿಸಿಯ, ಅಮರ್‍ಯಾಂತಸ್ ಸ್ಪೈನೋಸಸ್ (ಮುಳ್ಳು ಕೀರೆಸೊಪ್ಪು), ಗರಿಕೆ ಹುಲ್ಲು, ಅಕ್ಯಾಂತೋಸ್ಪರ್ಮಮ್ ಹಿಸ್ಪಿಡಮ್, ಅಣ್ಣೆ ಸೊಪ್ಪು ಮೊದಲಾದವೂ ಮುಖ್ಯವಾದವು.

**4 ಜಲಕಳೆಗಳು :** ಇವು ನೀರಿನಲ್ಲಿ ಬೆಳೆಯುವ ಕಳೆಗಿಡಗಳು. ಕೊಳ, ಹಳ್ಳ ಮತ್ತು ಕಾಲುವೆಗಳಲ್ಲಿ ಇವು ಸಾಮಾನ್ಯ. ಇವು ಕಾಲುವೆಗಳಲ್ಲಿ ನೀರು ಹರಿಯುವುದಕ್ಕೆ ಅಡಚಣೆ ಮಾಡುತ್ತವೆ. ಇಲ್ಲವೇ, ದುರ್ಗಂಧ ಉಂಟುಮಾಡಿ ನೀರನ್ನು ಹೊಲಸು ಮಾಡುತ್ತವೆ. ಇವನ್ನು ಕೂಡಿಸಿ ಸುಟ್ಟು, ನಾಶ ಮಾಡಬಹುದು, ಇಲ್ಲವೇ ರಾಸಾಯನಿಕಗಳಿಂದ ನಿವಾರಿಸಬಹುದು. ಜಲಕಳೆಗಳಲ್ಲಿ ಮುಖ್ಯವಾದವು ಇವು: ಐಕ್ಹಾರ್ನಿಯ, ಪಿಸ್ಟಿಯ, ಹೈಡ್ರಿಲ ಮತ್ತು ವ್ಯಾಲಿಸ್‌ನೇರಿಯ.

**5 ಪರೋಪಜೀವಿ ಕಳೆಗಳು :** ತಮ್ಮ ಆಹಾರಕ್ಕೆ ಮತ್ತು ಆಸರೆಗೆ ಬೇರೆ ಸಸ್ಯಗಳನ್ನು ಅವಲಂಬಿಸಿ ಜೀವಿಸುವಂಥವು ಇವು. ಸ್ಟ್ರೈಗ, ಓರೊಬ್ಯಾಂಕೆ (ಬೆಂಕಿಗಿಡ), ಲೊರ್‍ಯಾಂತಸ್ ಮತ್ತು–ವಿಸ್ಕಮ್ ಇವು ಮುಖ್ಯ ಉದಾಹರಣೆಗಳು. ಇವು ಜೋಳ, ಬತ್ತ, ಹೊಗೆಸೊಪ್ಪು ಮುಂತಾದ ಬೆಳೆಗಳಿಗೆ ತಗುಲಿ ಅಪಾರ ನಷ್ಟವನ್ನುಂಟು ಮಾಡುತ್ತವೆ.

**ಕಳೆಗಳ ಹತೋಟಿ :** ಭೂಮಿಯನ್ನು ಮಾನವ ಕೃಷಿ ಮಾಡಿ ತನಗೆ ಬೇಕಾದ ಸಸ್ಯಗಳನ್ನು ಬೆಳೆಸಲು ಪ್ರಾರಂಭಿಸಿದಾಗಿನಿಂದ ಕಳೆ ಹತೋಟಿ ಸಮಸ್ಯೆ ಅವನ ಮುಂದೆ ಇದ್ದೇ ಇದೆ. ಕೃಷಿ ಉದ್ಯಮದಲ್ಲಿನ ಯಶಸ್ಸು ಕಳೆ ಮತ್ತಿತರ ಪೀಡೆಗಳೆದುರು ಸತತವಾದ ಹೋರಾಟದಿಂದಲೇ ಸಾಧ್ಯ. ವ್ಯವಸಾಯದ ಉಗಮದಿಂದ ಈಗ್ಗೆ ಒಂದು ದಶಕದ ಹಿಂದಿನವರೆಗೆ ಕಳೆಹತೋಟಿ ಕೈಯಿಂದ ಕೀಳುವುದು ಇಲ್ಲವೇ ಎತ್ತಿನಿಂದ ಎಳೆಯಲ್ಪಟ್ಟ ಕುಂಟೆ ಮುಂತಾದ ಸಾಧನೆಗಳಿಂದಷ್ಟೇ ಆಗುತ್ತಿತ್ತು. ಇತ್ತೀಚೆಗೆ ಕಂಡುಹಿಡಿಯಲ್ಪಟ್ಟ ಹಾರ್ಮೋನ್ ಕಳೆನಾಶಕಗಳ ಬಳಕೆಯಿಂದ ಕಳೆ ಹತೋಟಿಯಲ್ಲಿ ಒಂದು ಬಗೆಯ ಕ್ರಾಂತಿಯೇ ಆಗಿದೆ ಎನ್ನಬಹುದು. ಈ ಕಳೆನಾಶಕಗಳು ಸಲ್ಫ್ಯೂರಿಕ್ ಆಮ್ಲ, ಸೋಡಿಯಂ ಕ್ಲೋರೇಟ್ ಮುಂತಾದ ರಾಸಾಯನಿಕಗಳಿಗಿಂತ ಮೇಲು. ಇವನ್ನು ಅತಿ ಸ್ವಲ್ಪ ಪ್ರಮಾಣದಲ್ಲಿ ನಿಂತಿರುವ ಪೈರಿನ ಮಧ್ಯೆ ಕಳೆಗಳ ನಾಶಕ್ಕೆ ಬಳಸಬಹುದು. ಯಾಂತ್ರಿಕ ಬೇಸಾಯ ಬಳಕೆಯಲ್ಲಿರುವ ಪಾಶ್ಚಾತ್ಯ ದೇಶಗಳಲ್ಲಿ, ಇವುಗಳ ಪ್ರಯೋಗ ಸಾಮಾನ್ಯ. ಆದರೆ ಭಾರತದಲ್ಲಿ ಹಿಡುವಳಿ ಮಿತಿ, ರೈತರ ಅಜ್ಞಾನ, ಸ್ಪ್ರೇಯರ್ ಮುಂತಾದ ಸಲಕರಣೆಗಳ ಬಳಕೆ ಮತ್ತು ರಿಪೇರಿಗಿರುವ ತೊಂದರೆ ಈ ಕಾರಣಗಳಿಂದ ಕಳೆನಾಶಕಗಳ ಬಳಕೆ ಬೆಳೆದಿಲ್ಲ. ಭಾರತದಲ್ಲಿ ಅಗ್ಗವಾಗಿ ಕೂಲಿ ಸಿಕ್ಕುವುದರಿಂದ ಕೈಯಿಂದ ಕಳೆ ತೆಗೆಸುವುದು ಇತರ ಕ್ರಮಗಳಿಗಿಂತ ಹೆಚ್ಚು ರೂಢಿಯಲ್ಲಿದೆ. ಏಕವಾರ್ಷಿಕ ಮತ್ತು ದ್ವೈವಾರ್ಷಿಕ ಕಳೆಗಳನ್ನು ಸುಲಭವಾಗಿ ನಿವಾರಿಸಬಹುದಾದರೂ ಬಹುವಾರ್ಷಿಕ ಕಳೆಗಳ ನಿವಾರಣೆ ಕಷ್ಟ. ಏಕೆಂದರೆ ಇವು ಬೀಜಗಳಿಂದಲೂ ಬೇರು ಗೆಡ್ಡೆಗಳಿಂದಲೂ ವೃದ್ಧಿಸುತ್ತವೆ. ಇವುಗಳ ಹಾವಳಿಯನ್ನು ಉಳುಮೆ, ಬೆಳೆ ಪರಿವರ್ತನೆ ಮತ್ತು ರಾಸಾಯನಿಕಗಳಿಂದ ಸ್ವಲ್ಪ ಮಟ್ಟಿಗೆ ನಿವಾರಿಸಬಹುದು. ಇತ್ತೀಚೆಗೆ ಕಳೆ ನಿರ್ಮೂಲನೆಗೆ ವಿವಿಧ ಬಗೆಯ ಯಂತ್ರಗಳೂ ಬಂದಿವೆ. ಅವು ಕಳೆಯನ್ನು ಮತ್ತು ಹುಲ್ಲನ್ನು ನೆಲಮಟ್ಟಕ್ಕೆ ಕತ್ತರಿಸಬಲ್ಲವು.

ಕಳೆಗಳು ಬೆಳೆಯದಂತೆ ತಡೆಯುವುದು ಅವು ಬೆಳೆದ ಮೇಲೆ ಕೈಗೊಳ್ಳುವ ಹತೋಟಿ ಕ್ರಮಕ್ಕಿಂತ ಉತ್ತಮ. ಶುದ್ಧವಾದ ಬಿತ್ತನೆಗಳು, ಸ್ವಚ್ಛವಾದ ಸಾಗುವಳಿ, ಸಕಾಲದಲ್ಲಿ ಗೊಬ್ಬರ ಹಾಕುವುದು, ಬದು ಮತ್ತು ಮೂಲೆಗಳ ಒಪ್ಪ ಇವುಗಳಿಂದ ಕಳೆಗಳ ಹತೋಟಿ ಸಾಧ್ಯ. ಭಾರತದಲ್ಲಿ ಬೀಜ ಪರೀಕ್ಷಣದ ಅನುಕೂಲತೆ ಹೆಚ್ಚಾಗಿ ಇಲ್ಲದಿರುವುದರಿಂದ ರೈತರೇ ತಮ್ಮ ಬಿತ್ತನೆಯನ್ನು ಒಪ್ಪ ಮಾಡಿಕೊಳ್ಳುವುದು ಆವಶ್ಯಕ.

ಇಷ್ಟೆಲ್ಲ ಎಚ್ಚರಿಕೆ ವಹಿಸಿದ ಮೇಲೂ ಕಳೆ ಬಂದರೆ, ಕೆಲವು ಪರಿಹಾರ ಕ್ರಮಗಳ ಅನುಸರಣೆ ಅನಿವಾರ್ಯ, ಇವನ್ನು ಕಳೆಗಳ ಜಾತಿಗೆ ಅನುಗುಣವಾಗಿ ವ್ಯತ್ಯಾಸ ಮಾಡಬೇಕಾಗುತ್ತದೆ. ಸ್ಥೂಲವಾಗಿ ಯಾಂತ್ರಿಕ, ಜೈವಿಕ, ಸಾಗುವಳಿ ಮತ್ತು ರಾಸಾಯನಿಕ ಕ್ರಮಗಳು ಎಂದು ವರ್ಗೀಕರಿಸಬಹುದು.

**1. ಯಾಂತ್ರಿಕ ಕ್ರಮಗಳು :** ಕೈಯಿಂದ ಕಳೆ ಕೀಳುವುದು, ಕುಂಟೆ ಹೊಡಿಯುವುದು, ಮಧ್ಯಂತರ ಉಳುಮೆ, ಕಳೆ ತರಿಯುವುದು, ನೀರು ನಿಲ್ಲಿಸುವುದು, ಸುಡುವುದು, ನೆಲ ಹಸನು ಮಾಡುವುದು ಇವೆಲ್ಲ ಕ್ರಮಗಳನ್ನೂ ಇಲ್ಲಿ ಸೇರಿಸಬಹುದು.

**2. ಜೈವಿಕ ಕ್ರಮಗಳು :** ಮಾರಕ ಕೀಟ, ಇಲ್ಲವೇ ರೋಗಾಣುಗಳ ಪ್ರಯೋಗದಿಂದ ಕಳೆಗಳ ನಾಶ ಸಾಧ್ಯ ಎಂಬ ಅಂಶ ಇತ್ತೀಚೆಗೆ ಕಂಡುಬಂದಿದೆ. ಇವು ಕಳೆಗಳಿಗಲ್ಲದೆ ರೈತರಿಗೆ ಮಾರಕವಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಪಾಪಾಸ್ ಕಳ್ಳಿಯನ್ನು ಸಿಫಿನೀಶ್ ಕೀಟಗಳ ಪ್ರಯೋಗದಿಂದ ದಕ್ಷಿಣ ಭಾರತದಲ್ಲಿ ನಾಶಪಡಿಸಲಾಯಿತು. ಕೆಲವೆಡೆ ಬದನೆ, ಹೊಗೆಸೊಪ್ಪು ಗಿಡಗಳ ಪರೋಪಜೀವಿಯಾದ ಓರೊಬ್ಯಾಂಕೆಯನ್ನು ಕೆಲವು ಬಗೆಯ ರೋಗಾಣುಗಳು ಆಶ್ರಯದಾತ ಗಿಡಗಳಿಗೆ ತೊಂದರೆ ಮಾಡದೆ ನಾಶ ಮಾಡಿದ ನಿದರ್ಶನಗಳಿವೆ. ದ್ವಿದಳ ಜಾತಿಗೆ ಸೇರಿದ ಕ್ಯಾಲಪಗೋನಿಯಮ್ ಮ್ಯೂಕುನಾಯ್ಡಿಸ್ ಎಂಬ ಸಸ್ಯವನ್ನು ತೆಂಗಿನ ತೋಟಗಳಲ್ಲಿ ಬೆಳೆಸುವುದರಿಂದ ಉಳಿದ ಹುಲ್ಲು– ಕಳೆಗಳನ್ನು ತಡೆಯಬಹುದೆಂದು ಕಂಡುಬಂದಿದೆ.

**3. ಸಾಗುವಳಿ ಕ್ರಮಗಳು :** ಸೂಕ್ಷ್ಮ ಸಾಗುವಳಿ ಕ್ರಮಗಳು, ಪೈರು ಶೀಘ್ರವಾಗಿ ಬೆಳೆಯುವುದಕ್ಕೆ ಅನುಕೂಲ ಪರಿಸ್ಥಿತಿಯನ್ನು ಒದಗಿಸಿ ಕಳೆ ಸಸ್ಯದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಇವುಗಳಲ್ಲಿ ಮುಖ್ಯವಾಗಿ ಹುಲುಸಾಗಿ ಬೆಳೆಯಬಲ್ಲ ಬಿತ್ತನೆ, ಸಾಕಷ್ಟು ಬೀಜ, ಸಕಾಲಿಕ ಬಿತ್ತನೆ ಗೊಬ್ಬರ, ಬೆಳೆಯ ಆವರ್ತನೆ ಮುಂತಾದುವು ಸಹಾಯಕ.

**4. ರಾಸಾಯನಿಕ ಕಳೆ ನಿವಾರಣಾ ಕ್ರಮಗಳು :** ಭಾರತದಲ್ಲಿ ಈ ದಿಕ್ಕಿನಲ್ಲಿ ಪ್ರಪ್ರಥಮ ಪ್ರಯತ್ನ ನಡೆದದ್ದು 1937ರಲ್ಲಿ ಲೂಥ್ರ ಅವರಿಂದ. ಅವರು ಸೋಡಿಯಂ ಆರ್ಸೆನೈಟ್

ಪ್ರಯೋಗದಿಂದ ಕಳೆ ನಿವಾರಣೆಗೆ ಯತ್ನಿಸಿದರು. ಆದರೆ ಇದು ಪೈರಿಗೂ ಮಾರಕವಾದ್ದರಿಂದ ಇದರ ಬಳಕೆ ಜನಪ್ರಿಯವಾಗಲಿಲ್ಲ. ಸಲ್ಫ್ಯೂರಿಕ್ ಆಮ್ಲ, ಸೋಡಿಯಂ ಕ್ಲೋರೇಟ್, ಸೋಡಿಯಂ ಬೋರೇಟ್, ಸೋಡಿಯಂ ಆರ್ಸಿನೇಟ್ ಮುಂತಾದವು ಕಳೆನಾಶಕಗಳಾಗಿ ಬಹಳ ಕಾಲದಿಂದ ಬಳಕೆಯಲ್ಲಿವೆ. ಇವು ಕಳೆಗಳ ಜೊತೆಗೆ ಮಣ್ಣಿನ ಉಳಿದ ಸೂಕ್ಷ್ಮಜೀವಿಗಳನ್ನೂ ನಾಶಪಡಿಸುವುದರಿಂದ ಮಣ್ಣಿನಲ್ಲಿ ಇವುಗಳ ಪರಿಣಾಮ ಹೋಗುವವರೆಗೆ ಬೇರೆ ಯಾವ ಬೆಳೆಯೂ ಬೆಳೆಯುವುದಿಲ್ಲ. ಭೂಮಿ ಬಹಳ ಕಾಲ ಬಂಜರಾಗುತ್ತದೆ. ಖನಿಜ ತೈಲ, ಟಾರಿನಿಂದ ಪಡೆಯುವ ವಸ್ತುಗಳು ಮುಂತಾದುವನ್ನು ಕಳೆನಾಶ ಕಾರ್ಯಕ್ಕಾಗಿ ಬಳಸುತ್ತಾರೆ. ಇವೆಲ್ಲವುಗಳಿಗೂ ವಿಶಿಷ್ಟ ಮಾರಕ ಗುಣ ಇಲ್ಲದ್ದರಿಂದ ಮತ್ತು ಇವುಗಳಿಂದ ಪೈರಿಗೆ ಸಹ ತೊಂದರೆಯಾಗುವುದರಿಂದ ಇವು ಬಳಸಲರ್ಹವಲ್ಲ. ಹಾರ್ಮೋನ್ ಅಥವಾ ವಿಶಿಷ್ಟ ಮಾರಕ ಕಳೆ ನಾಶಕಗಳು ಜಾರಿಗೆ ಬಂದ ಮೇಲೆ ಉಳಿದ ಕಳೆನಾಶಕಗಳ ಬಳಕೆ ಕಡಿಮೆಯಾಗಿದೆ. ಅಲ್ಲದೆ ಅತ್ಯಲ್ಪ ಪ್ರಮಾಣದಲ್ಲಿ ಹಾರ್ಮೋನ್ ಕಳೆನಾಶಕಗಳನ್ನು ಬಳಸಿ ಕಳೆಗಳನ್ನು ನಿವಾರಿಸಬಹುದಾಗಿದೆ.

ಕಳೆಸಸ್ಯಗಳ ಮೇಲೆ ಹಾರ್ಮೋನ್ ಕಳೆನಾಶಕಗಳನ್ನು ಪ್ರಯೋಗ ಮಾಡಿದಾಗ ಕಳೆಗಳ ಬೆಳವಣಿಗೆ ಕುಂಠಿತವಾಗುತ್ತದೆ. ಅವು ಬಗ್ಗಿ ಹೋಗಿ ಒಡೆದು ಸತ್ತು ಹೋಗುತ್ತವೆ. ಹಾರ್ಮೋನ್ ಕಳೆನಾಶಕಗಳು ಕೆಲವು ಜಾತಿಯ ಸಸ್ಯಗಳಿಗೆ ಮಾತ್ರ ಮಾರಕ. ಉಳಿದವುಗಳಿಗೆ ತೊಂದರೆ ಮಾಡುವುದಿಲ್ಲ. ಈ ಕಾರಣದಿಂದ ಇವುಗಳ ಬಳಕೆ ಹೆಚ್ಚು ಜನಪ್ರಿಯವಾಗುತ್ತಿದೆ. ಇವನ್ನು ಪೈರು ಮೊಳಕೆ ಬರುವ ಮುಂಚೆ, ಇಲ್ಲವೇ ಅನಂತರ ಹಾಕಬಹುದು. ಬೆಳಗ್ಗೆ ಅಥವಾ ಸಂಜೆ, ಗಾಳಿ ಬಿರುಸಾಗಿಲ್ಲದ ಸಮಯದಲ್ಲಿ ಅವನ್ನು ಪ್ರಯೋಗಿಸುವುದು ಸೂಕ್ತ. ಕಳೆ ಇನ್ನೂ ಸಸಿಯಾಗಿದ್ದಾಗ ಅದರ ನಾಶ ಸುಲಭ.

ಹುಲ್ಲುಕಳೆಗಳ ನಾಶಕ್ಕೆ ಕಳೆನಾಶಕಗಳನ್ನು ಪೈರು ಮೊಳೆಯುವುದಕ್ಕೆ ಮೊದಲೇ ಪ್ರಯೋಗಿಸಿದರೆ ಅನುಕೂಲ. ಕಳೆನಾಶಕಗಳನ್ನು ಹಾಕಿದ ಮೇಲೆ ಸ್ವಲ್ಪ ಮಳೆ ಬಿದ್ದರೆ ಇಲ್ಲವೆ ಕೊಂಚ ನೀರು ಹಾಯಿಸಿದರೆ ಅವು ಕರಗಿ, ಮಣ್ಣಿನಲ್ಲಿರುವ ಕಳೆ ಬೀಜಕ್ಕೆ ಅವುಗಳ ಸಂಪರ್ಕವಾಗಿ ಫಲಿತಾಂಶ ಪರಿಣಾಮಕಾರಿಯಾಗಿರುತ್ತದೆ.

ಹಾರ್ಮೋನ್ ಕಳೆನಾಶಕಗಳ ಪ್ರಯೋಗಕ್ಕೆ ಸ್ಪ್ರೇಯರ್ ಅಥವಾ ಡಸ್ಟರ್ ಸಲಕರಣೆಗಳನ್ನು ಬಳಸಬಹುದು. ಎಕರೆಗೆ ಸಾಮಾನ್ಯವಾಗಿ 50ರಿಂದ 100 ಗ್ಯಾಲನ್ ದ್ರಾವಣ ಸಾಕು. ಹಲವಾರು ಬಗೆಯ ಕಳೆಗಳಿದ್ದರೆ ಎರಡು ಮೂರು ತರಹೇ ಕಳೆನಾಶಕಗಳು ಬೇಕಾಗಬಹುದು. ಬಹುವಾರ್ಷಿಕ ಕಳೆಗಳ ನಾಶಕ್ಕೆ ಹಲವಾರು ಬಾರಿ ಕಳೆನಾಶಕಗಳನ್ನು ಬಳಸಬೇಕು.

2.4–ಡಿ, ಎಂ.ಸಿ.ಪಿ.ಎ. ಟಿಸಿಎ. 2.4, 5–ಟಿ, ಎಂಇಪಿಎ, ಎಂಎಚ್., ಡಲಪಾನ್, ಡೈಕಾಟಾಕ್ಸ್, ಫೆರಾನಾಕ್ಸೇನ್, ಹೆಡನಾಲ್, ಎಸ್‌ಐಎಂ., ಅಗ್ರಾಕ್ಸೋನ್, ಅಟ್ರಾಸೀನ್, ರೆಂಡಾರ್, ಸೀಮಸೀನ್, ಟ್ರೆಪ್ಟಾಕ್ಸ್ – ಇವು ಬಳಕೆಯಲ್ಲಿರುವ ಮುಖ್ಯವಾದ ಕಳೆನಾಶಕಗಳು.

1. 2.4–ಡಿ (2, 4–ಡೈಕ್ಲೋರೋಫೀನಾಕ್ಸಿ ಅಸಿಟಿಕ್ ಆಸಿಡ್): ಇದು ಸೋಡಿಯಂ ಅಥವಾ ಅಮೋನಿಯಂ ಲವಣ ಇಲ್ಲವೇ ಸಾವಯವ ಲವಣದ ರೂಪದಲ್ಲಿ ದೊರೆಯುತ್ತದೆ. 2.4–ಡಿ ಸೋಡಿಯಂ ಲವಣ ಸಾವಯವ ಲವಣದಷ್ಟು ತೀವ್ರ ಪರಿಣಾಮಕಾರಿಯಲ್ಲ. 2.4–ಡಿ ಅಮೋನಿಯಂ ಲವಣ ಮಧ್ಯಸ್ಥ. ಅದು ಬೇಗ ಹಬೆಯಾಗುತ್ತದೆ. ಅದರ ಹಬೆಯಿಂದ ಕೆಲವು ಪೈರುಗಳಿಗೆ ತೊಂದರೆಯಾಗಬಹುದು. ಅಗಲವಾದ ಎಲೆಯುಳ್ಳ ಪೈರುಗಳಿಗೆ 2.4–ಡಿಯಿಂದ ತೊಂದರೆಯಾಗುವ ಸಂಭವ ಉಂಟು. ಆದರೆ, ಹುಲ್ಲು ಬೆಳೆಗಳಿಗೆ ಇದರಿಂದ ಹಾನಿಯೇ ಇಲ್ಲ. ಒಂದು ಎಕರೆಗೆ ½ದಿಂದ ಒಂದು ಪೌಂಡಿನಂತೆ 80ರಿಂದ 100 ಗ್ಯಾಲನ್ ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು.

2. ಎಂ.ಸಿ.ಪಿ.ಎ. (2–ಮೀಥೈಲ್–4–ಕ್ಲೋರೋಫೀನಾಕ್ಸಿ ಅಸಿಟಿಕ್ ಆಸಿಡ್): ಇದರ ಸೋಡಿಯಂ ಲವಣ ಬಳಕೆಯಲ್ಲಿವೆ. ಗುಣಗಳಲ್ಲಿ 2.4–ಡಿಯನ್ನು ಹೋಲುತ್ತದೆ.

3. ಟಿ.ಸಿ.ಎ. (ಟ್ರೈಕ್ಲೋರೋ ಅಸಿಟಿಕ್ ಆಸಿಡ್): ಇದು ಕೂಡಾ ಸೋಡಿಯಂ ಲವಣದ ರೂಪದಲ್ಲಿ ದೊರೆಯುತ್ತದೆ. ಹುಲ್ಲುಗಳನ್ನು ಅದರಲ್ಲೂ ಗರಿಕೆ ಹುಲ್ಲನ್ನು ನಾಶಪಡಿಸುತ್ತದೆ. ಇದನ್ನು ಹೆಚ್ಚು ಪ್ರಮಾಣದಲ್ಲಿ ಅಂದರೆ, ಎಕರೆಗೆ 50–100 ಪೌಂಡಿನಂತೆ ಪ್ರಯೋಗಿಸಬೇಕಾಗುತ್ತದೆ.

4. 2, 4.5–ಡಿ (2, 4, 5 ಟ್ರೈಕ್ಲೋರೋಫೀನಾಕ್ಸಿ ಅಸಿಟಿಕ್ ಆಸಿಡ್): ಅಮೋನಿಯಂ ಲವಣ ಮತ್ತು ಸಾವಯವ ಲವಣ ರೂಪದಲ್ಲಿ ಇದು ದೊರೆಯುತ್ತದೆ. ಅರಣ್ಯದ ಕಳೆಗಳಿಗೆ ಇದು ಪರಿಣಾಮಕಾರಿ. (ಎಂ.)

**ಕಳ್ಳಹಕ್ಕಿ :** ಕಾರ್ವಿಡೀ ಕುಟುಂಬಕ್ಕೆ ಸೇರಿದ ಒಂದು ಹಕ್ಕಿ (ಟ್ರೀ ಪೈ). ಬಿಳಿ ಕೋಗಿಲೆ ಇದರ ಪರ್ಯಾಯ ನಾಮ. ಡೆಂಡ್ರೊಸಿಟ ಎಂಬ ಶಾಸ್ತ್ರೀಯ ಹೆಸರಿನ ಜಾತಿಗೆ ಸೇರಿದೆ. ಸಾಮಾನ್ಯವಾಗಿ ಗುಡ್ಡಗಾಡುಗಳಲ್ಲಿ ವಾಸಿಸುತ್ತದೆ. ಸುಮಾರು 17–70 ಸೆಂಮೀ ವರೆಗೂ ಬೆಳೆಯುತ್ತದೆ. ಇದಕ್ಕೆ ಉದ್ದವಾದ ಬಾಲ ಇದೆ. ಪುಕ್ಕಗಳ ಬಣ್ಣ ಕಪ್ಪು, ಬಿಳಿ, ನೀಲಿ, ಹಸುರು, ಹಳದಿ, ಕಂದು, ಕೆಂಗಂದು ಇತ್ಯಾದಿ ಹಲವು ರೀತಿಯದು. ಕೆಲವು ಪ್ರಭೇಧಗಳಲ್ಲಿ ರೆಕ್ಕೆ ಹಾಗೂ ಬಾಲದ ಪುಕ್ಕಗಳ ಮೇಲೆ ಪಟ್ಟಿಗಳಿವೆ. ಇದು ಸಾಧಾರಣವಾಗಿ ಗುಂಪುಗಳಲ್ಲಿ ವಾಸಿಸುತ್ತದೆ. ಹಣ್ಣು, ಕೀಟಗಳು, ಹಲ್ಲಿಗಳು, ಕಪ್ಪೆಗಳು, ಇತರ ಹಕ್ಕಿಗಳ ಮೊಟ್ಟೆ ಮತ್ತು ಸಣ್ಣ ಪಟ್ಟ ಸ್ತನಿಗಳು ಮುಂತಾದವೆಲ್ಲ ಇವುಗಳ ಆಹಾರ. ಕೆಲವು ಪ್ರಭೇಧಗಳು ಚೆನ್ನಾಗಿ ಹಾಡಬಲ್ಲವು.

ಭಾರತದಲ್ಲಿ ಈ ಜಾತಿಯ ಐದು ಪ್ರಭೇದಗಳು ಕಾಣಬರುತ್ತವೆ:

1. ಡೆಂಡ್ರೊಸಿಟ್ಟ ವೆಗಬುಂಡ (ಭಾರತದ ಕಳ್ಳ ಹಕ್ಕಿ)
2. ಡೆಂಡ್ರೊಸಿಟ್ಟ ಫೆರ್ರೊಸೆ (ಬೂದು ಕಳ್ಳಹಕ್ಕಿ)
3. ಡೆಂಡ್ರೊಸಿಟ್ಟ ಲೊಕೊಗ್ಯಾಸ್ಟ್ರ (ಬಿಳಿ ಹೊಟ್ಟೆಯ ಕಳ್ಳಹಕ್ಕಿ)
4. ಡೆಂಡ್ರೊಸಿಟ್ಟ ಫ್ರಂಬಾಲಿಸ್ (ಕರಿಹುಟ್ಟಿನ ಕಳ್ಳಹಕ್ಕಿ)
5. ಡೆಂಡ್ರೊಸಿಟ್ಟ ಬೈಲೇಯಿ (ಅಂಡಮಾನಿನ ಕಳ್ಳಹಕ್ಕಿ) (ಎಸ್.ವಿ.ಎ.)

**ಕಳ್ಯಾ :** (ಕಲ್ಯಾ) ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ. ಶಾಸನ ಹಾಗೂ ಕಾವ್ಯಗಳಲ್ಲಿ ಇದನ್ನು ಕಳ್ಳೆಹ ಎಂದು ಕರೆಯಲಾಗಿದೆ. ಇದು ಜೈನ ಹಾಗೂ ವೀರಶೈವರ ಪವಿತ್ರ ಸ್ಥಳ. ಪಾಳುಬಿದ್ದ ಬಸದಿಯ ಅವಶೇಷಗಳನ್ನು ಇಲ್ಲಿ ಇಂದಿಗೂ ಕಾಣಬಹುದು. ಇಲ್ಲಿ ಅನೇಕ ಶಿಲಾಶಾಸನಗಳಿವೆ. ಗ್ರಾಮದ ಪಶ್ಚಿಮಕ್ಕಿರುವ ಸಣ್ಣ ಬೆಟ್ಟದ ಮೇಲೆ ವೀರಶೈವರ ಒಂದು ಮಠವೂ ಕಲ್ಲೇಶ್ವರ ದೇವಸ್ಥಾನವೂ ಇದೆ. ಈ ಮಠಕ್ಕೆ ವಿಶಾಲವಾದ ಪ್ರಾಂಗಣವಿದ್ದು ಮಠದ ಹೊರಗೆ ಬಸವನ ಪ್ರತಿಮೆಯಿರುವ ಶರಣರ ಮೂರು ಗದ್ದಿಗೆಗಳಿವೆ. ಇವುಗಳಲ್ಲಿ ಒಂದು ಆಂಧ್ರ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿ ಉದ್ದಾಮ ಕವಿಯೆನಿಸಿದ ಪಾಲ್ಕುರಿಕೆ ಸೋಮನಾಥನದು. ವೀರಶೈವರು ವರ್ಷಕ್ಕೊಮ್ಮೆ ಇಲ್ಲಿ ಸೋಮನಾಥನ ಪರ್ವವನ್ನು ಆಚರಿಸುತ್ತಾರೆ. 13ನೆಯ ಶತಮಾನದ ಕಡೆಯಲ್ಲಿ ಸರ್ವಶೀಲ ಚನ್ನಮ್ಮ ಎಂಬ ಶರಣೆ ಇಲ್ಲಿ ಆಗಿಹೋಗಿದ್ದಾಳೆಂದು ಪಾಲ್ಕುರಿಕೆ ಸೋಮೇಶ್ವರ ಪುರಾಣದಿಂದಲೂ 12ನೆಯ ಶತಮಾನದಲ್ಲಿದ್ದ ಜ್ಞಾನಿ ಚನ್ನಬಸವಣ್ಣ ಇಲ್ಲಿ ಸಾಯುಜ್ಯ ಹೊಂದಿದನೆಂದು ಚೆನ್ನಬಸವ ಪುರಾಣದಿಂದಲೂ ತಿಳಿದುಬರುತ್ತದೆ. (ಬಿ.ಎಸ್.)

**ಕಳ್ಳಿ :** ಸಾಮಾನ್ಯವಾಗಿ ಎಲೆಗಳಿಲ್ಲದ, ದಪ್ಪ ಹಾಗೂ ರಸವತ್ತಾದ ಕಾಂಡವುಳ್ಳ ಒಂದು ವಿಶೇಷ ಬಗೆಯ ಸಸ್ಯ (ಕ್ಯಾಕ್ಟಸ್). ಸಾಧಾರಣವಾಗಿ ಕ್ಯಾಕ್ಟೇಸೀ ಕುಟುಂಬಕ್ಕೆ



ಓರಿಯೋಸಿರಿಯಸ್ ಕಳ್ಳಿ

ಸೇರಿದ ಸಸ್ಯಗಳಿಗೇ ಈ ಹೆಸರು ಹೆಚ್ಚು ಅನ್ವಯವಾಗುವುದಾದರೂ ಬೇರೆ ಕುಟುಂಬಗಳಿಗೆ ಸೇರಿದ ಕೆಲವು ಸಸ್ಯ ಜಾತಿಗಳನ್ನೂ ಕಳ್ಳಿಗಳು ಎಂದು ಕರೆಯುವುದುಂಟು. ಉದಾಹರಣೆಗೆ ಯೂಫೋರ್ಬಿಯೇಸೀ, ಲಿಲಿಯೇಸೀ, ಅಮರಿಡೇಸೀ ಮತ್ತು ಕ್ರ್ಯಾಸುಲೇಸೀ ಕುಟುಂಬದ ಕೆಲವು ಸಸ್ಯಗಳು.

ಕ್ಯಾಕ್ಟೇಸೀ ಕುಟುಂಬಕ್ಕೆ ಸೇರಿದ ಕೆಲವು ಮುಖ್ಯ ಬಗೆಯ ಕಳ್ಳಿಗಳನ್ನು ಇಲ್ಲಿ ವಿವರಿಸಲಾಗಿದೆ. ಈ ಕುಟುಂಬದಲ್ಲಿ ಸುಮಾರು 400 ಜಾತಿಗಳು ಮತ್ತು 1,700 ಪ್ರಭೇದಗಳಿವೆ. ತಮ್ಮ ರೂಪದ ವೈವಿಧ್ಯಕ್ಕೂ ವೈಚಿತ್ರ್ಯಕ್ಕೂ ಹೂಗಳ ಸೌಂದರ್ಯಕ್ಕೂ



ಕೋಲು ಕಳ್ಳಿ

ಹೆಸರಾಗಿರುವ ಇವನ್ನು ಅಲಂಕಾರ ಸಸ್ಯಗಳಾಗಿ ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಮೂಲತಃ ಅಮೆರಿಕದ ಉಷ್ಣ ಮತ್ತು ಸಮಶೀತೋಷ್ಣವಲಯಗಳ ನಿವಾಸಿಗಳಿವು.

ಕಳ್ಳಿಗಳು ಸಾಮಾನ್ಯವಾಗಿ ಶುಷ್ಕವಾತಾವರಣವಿರುವ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಬೆಳೆಯುತ್ತವೆ. ಮರುಭೂಮಿಯಂಥ ವಾತಾವರಣಕ್ಕೆ ಹೊಂದಿಕೊಳ್ಳಲು ಸಹಾಯಕವಾದ ಹಲವಾರು ರೂಪ ವೈವಿಧ್ಯಗಳನ್ನಿವು ತೋರುತ್ತವೆ. ಇವುಗಳಲ್ಲಿ ಸಾಧಾರಣವಾಗಿ ಎಲೆಗಳಿರುವುದಿಲ್ಲ. ಇದ್ದರೂ ಬಲು ಚಿಕ್ಕದಾಗಿ ಪೊರೆಗಳಂತೆಯೊ ಮುಳ್ಳುಗಳಂತೆಯೊ ಇರುತ್ತವೆ. ಕಾಂಡ ದಪ್ಪ ಗಾತ್ರದ್ದಾಗಿ ರಸಭರಿತವಾಗಿರುತ್ತದೆ. ಅಲ್ಲದೆ ಅದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪತ್ರಹರಿತ್ತಿದ್ದು ಎಲೆಗಳಂತೆಯೇ ಕಾಂಡ ಸಹ ದ್ಯುತಿಸಂಶ್ಲೇಷಣೆ ಕಾರ್ಯವನ್ನು ನಿರ್ವಹಿಸುತ್ತದೆ. ಕಾಂಡದ ಮೇಲೆಲ್ಲ ಗಂಟುಗಳು, ಏಣುಗಳು ಇದ್ದು ಅಲ್ಲಲ್ಲಿ ಮುಳ್ಳುಗಳೂ ಒರಟು ಕೂದಲುಗಳು ಇವೆ. ಕಾಂಡಕ್ಕೂ ಬೇರೆ ಬೇರೆ ಬಗೆಯ ಆಕಾರ, ಗಾತ್ರ, ರೂಪ ಇವೆ. ಅದು ಕೆಲವು ಪ್ರಭೇದಗಳಲ್ಲಿ ಚಪ್ಪಟೆಯಾಗಿಯೂ ಕೆಲವದರಲ್ಲಿ ಕಡ್ಡಿಯಂತೆಯೂ ಇನ್ನು ಕೆಲವು ಬಗೆಗಳಲ್ಲಿ ಕೊಳವೆಗಳಂತೆಯೂ ಇರಬಹುದು. ಆಕಾರ ಯಾವುದೇ ಇರಲಿ ಎಲ್ಲ ಬಗೆಯ ಕಾಂಡಗಳಲ್ಲೂ ಒಳಗಡೆ ಮೃದುವಾದ ಅಂಗಾಂಶವಿದೆ. ಇದರಿಂದಾಗಿ ಕಾಂಡ ನೀರನ್ನು ಶೇಖರಿಸಿ ಇಡಬಲ್ಲದು. ಕೆಲವು ಪ್ರಭೇದಗಳಲ್ಲಿ ಎಷ್ಟು ಹೆಚ್ಚಿನ ಪ್ರಮಾಣದಲ್ಲಿ ನೀರು ಶೇಖರವಾಗಿರುತ್ತದೆಂದರೆ ಮರುಭೂಮಿಯಲ್ಲಿ ಪಯಣಿಸುವ ಜನ ವಿಷಮ ಸಂದರ್ಭಗಳಲ್ಲಿ ಈ ಗಿಡಗಳನ್ನು ಕತ್ತರಿಸಿ ಇವುಗಳಿಂದ ಒಸರುವ ನೀರನ್ನು ಕುಡಿದು ಪ್ರಾಣ ಕಾಪಾಡಿಕೊಂಡಿರುವುದೂ ಉಂಟು. ಕಳ್ಳಿಗಳು ನೀರಿಲ್ಲದ ಬಂಜರು ಭೂಮಿಗಳಲ್ಲಿ ಬೆಳೆಯುವುದರಿಂದ ಆವಿ ವಿಸರ್ಜನಾ ಕ್ರಿಯೆಯನ್ನು (ಟ್ರಾನ್ಸ್‌ಪಿರೇಷನ್) ತಡೆಯುವುದು ಇವಕ್ಕೆ ಅತ್ಯಾವಶ್ಯಕ. ಬೇರೆ ಗಿಡಗಳಲ್ಲಿ ನಡೆದಂತೆ ಇಲ್ಲೂ ಆ ಕ್ರಿಯೆ ನಡೆದರೆ ಈ ಗಿಡಗಳು ನೀರಿಲ್ಲದೆ ಸಾಯಬೇಕಾಗುತ್ತದೆ. ಇದರಿಂದಾಗಿ ಕಳ್ಳಿಗಳಲ್ಲಿ ಆವಿ ವಿಸರ್ಜನಾಕ್ರಿಯೆಯನ್ನು ತಡೆಗಟ್ಟಲು ಬೇಕಾದ ಅನೇಕ ಮಾರ್ಪಾಡುಗಳಿವೆ. ಕಾಂಡದ ಮೇಲೆ ಬಲುಮಂದವಾಗಿ ಕ್ಯೂಟಿನ್ ಎಂಬ ಮೇಣದಂಥ ವಸ್ತು ಹರಡಿರುತ್ತದೆ. ಆವಿ ವಿಸರ್ಜನೆಯ ಪ್ರಮುಖ ಅಂಗಗಳಾದ ಎಲೆಗಳು ಇಲ್ಲಿ ಮುಳ್ಳುಗಳಾಗಿಯೂ ಪೊರೆಗಳಾಗಿಯೊ ಮಾರ್ಪಾಡಾಗಿವೆ.

ಕಳ್ಳಿಗಳು ತಮ್ಮ ಹೂಗಳ ಸೌಂದರ್ಯಕ್ಕೆ ಪ್ರಸಿದ್ಧವಾಗಿವೆ. ಹೂಗಳು ಒಂಟೊಂಟಿಯಾಗಿಯೊ ಗೊಂಚಲುಗಳಲ್ಲಿಯೊ ಅರಳುತ್ತವೆ. ಇವು ದೊಡ್ಡ ಗಾತ್ರದವೂ ದ್ವಿಲಿಂಗಿಗಳೂ ಆಗಿವೆ. ದಳಗಳು ಬಿಡಿಯಾಗಿವೆ. ಕಾಯಿ ಹಲವಾರು ಬೀಜಗಳುಳ್ಳ ರಸಭರಿತವಾದ ಬೆರಿ ಮಾದರಿಯದು.

**ಕಳ್ಳಿಗಳ ಬೇಸಾಯ:** ಕಳ್ಳಿಗಳು ಅಲಂಕಾರ ಸಸ್ಯಗಳೆಂದು ಹೆಸರಾಗಿರುವುದರಿಂದ ಇವುಗಳ ಬೇಸಾಯಕ್ಕೆ ಉದ್ಯಾನಗಾರಿಕೆಯಲ್ಲಿ ಒಂದು ಮುಖ್ಯ ಸ್ಥಾನ ಉಂಟು. ಇವನ್ನು

ಎಸ್ಟೋಸ್ಟೋ ಕಳ್ಳಿ

ಬೀಜಗಳಿಂದ ವೃದ್ಧಿ ಮಾಡಬಹುದಾದರೂ ಕಾಂಡದ ತುಂಡುಗಳನ್ನು ನೆಟ್ಟು ಬೆಳೆಸುವುದೇ ಹೆಚ್ಚು ರೂಢಿಯಲ್ಲಿರುವ ಕ್ರಮ. ಕಳ್ಳಿಗಳು ಮುಖ್ಯವಾಗಿ ಉಷ್ಣವಲಯದ ಸಸ್ಯಗಳಾದುದರಿಂದ ಹೆಚ್ಚು ತೇವಾಂಶವನ್ನು ಸಹಿಸಲಾರವು. ಇವುಗಳ ಬೆಳವಣಿಗೆಗೆ $5^0$ '–$25^0$ ' ಸೆಂ. ಉಷ್ಣತೆ ಮತ್ತು ನೀರು ಸರಾಗವಾಗಿ ಇಂಗಿಹೋಗುವಂಥ ದಪ್ಪ ಮರಳುಮಿಶ್ರಿತ ಗೋಡುಮಣ್ಣು ಉತ್ತಮ. ಕುಂಡಗಳಲ್ಲಿ ಕಳ್ಳಿಗಳನ್ನು ಬೆಳೆಸುವಾಗ ಒಳ್ಳೆಯ ಕುಂಡಗಳನ್ನು ಆರಿಸಿ ಅವುಗಳ ತಳದಲ್ಲಿ ಒಂದು ಪದರ ಹಂಚಿನ ಚೂರುಗಳು, ಒಂದು ಪದರ ಕಲ್ಲು, ದಪ್ಪ ಮರಗಳನ್ನು ತುಂಬಿ ಮೇಲ್ಭಾಗದಲ್ಲಿ ಚೆನ್ನಾಗಿ ಕೊಳೆತ ದನದ ಗೊಬ್ಬರ ತುಂಬಬೇಕು. ಮಧ್ಯಭಾಗದಲ್ಲಿ ಕಳ್ಳಿಯ ಕಾಂಡದ ತುಂಡನ್ನು ನೆಟ್ಟು, ಚೆನ್ನಾಗಿ ನೀರು ಹಾಕಿ, ಕುಂಡವನ್ನು ನೆರಳಿನಲ್ಲಿ ಇಡಬೇಕು. ಕಳ್ಳಿಯ ತುಂಡು ಬೆಳೆಯುವ ತನಕ ಆಗಾಗ್ಗೆ ನೀರನ್ನು ಹಾಕುತ್ತಲೇ ಇರಬೇಕು. ಕಳ್ಳಿಗಳನ್ನು ಒಂದು ಕುಂಡದಲ್ಲಿ ನೆಟ್ಟ ಮೇಲೆ ಬಹು ದಿನಗಳ ವರೆಗೆ ಕುಂಡ ಬದಲಾಯಿಸದೆ ಹೋದರೆ ಸಸ್ಯದ ಬೆಳವಣಿಗೆ ಕುಂಠಿತವಾಗುವುದಲ್ಲದೆ ಅವಕ್ಕೆ ರೋಗ ಮತ್ತು ಕೀಟಗಳು ತಗಲುತ್ತವೆ. ಆದ್ದರಿಂದ ಕಳ್ಳಿಗಳನ್ನು ನೆಟ್ಟ ಒಂದು ವರ್ಷದ ಅನಂತರ ಬೇರೆ ಕುಂಡಕ್ಕೆ ಬದಲಾಯಿಸಬೇಕು. ಕುಂಡ ಬದಲಾಯಿಸಲು ಮಾರ್ಚ್–ಏಪ್ರಿಲ್ ತಿಂಗಳು ಉತ್ತಮವಾದ ಕಾಲ.

ಬಿಸಿಲು ಜಾಸ್ತಿಯಾದಾಗ ಕುಂಡಗಳು ಚೆನ್ನಾಗಿ ಕಾದುಬಿಡುತ್ತವೆ. ಆಗ ಕಳ್ಳಿಯ ಬೇರುಗಳು ಸುಟ್ಟುಹೋಗಿ ಕೊನೆಗೆ ಸಸ್ಯವೇ ಸತ್ತುಹೋಗುವ ಸಂಭವವುಂಟು. ಇದನ್ನು ತಡೆಗಟ್ಟಲು ಸಸ್ಯವಿರುವ ಕುಂಡಕ್ಕಿಂತ ದೊಡ್ಡ ಕುಂಡವನ್ನು ತೆಗೆದುಕೊಂಡು ಅದರೊಳಗೆ ಸಸ್ಯವಿರುವ ಕುಂಡದ ಯಾವ ಭಾಗವೂ ಹೊರಕುಂಡಕ್ಕೆ ತಗಲದಂತೆ ದಪ್ಪ ಹರಳಿನ ಮರಳನ್ನು ಹಾಕಿ ಇಡಬೇಕು.

ಕಳ್ಳಿಗಳಿಗೆ ಹಲವಾರು ಬಗೆಯ ಕೀಟಗಳೂ ಅಂಟಿ ಅವನ್ನು ಹಾಳು ಮಾಡುವುದುಂಟು. ಇವುಗಳಲ್ಲಿ ತಿಗಣೆ, ಬೇರಿನ ತಿಗಣೆ, ಶಲ್ಕಕೀಟ, ಇರುವೆ ಹಾಗೂ ಹೇನುಗಳು ಮುಖ್ಯವಾದವು. ನಿಕೊಟಿನ್, 5–ಬಿ.ಎಚ್.ಸಿ., ಡಿ.ಡಿ.ಟಿ. ಮುಂತಾದ ಕೀಟನಾಶಕಗಳನ್ನು ಸಿಂಪಡಿಸುವುದು, ಕೀಟಗಳ ಮೊಟ್ಟೆಗಳನ್ನು ತೆಗೆದು ಸುಡುವುದು, ಕೀಟಪೀಡಿತ ಸಸಿಗಳ ಬೇರುಗಳನ್ನು ತೆಗೆದು ಹಾಕುವುದು – ಇವು ಕೀಟಗಳನ್ನು ನಿವಾರಿಸುವ ಕೆಲವು ಮಾರ್ಗಗಳು.

ಉದ್ಯಾನಪ್ರಾಮುಖ್ಯ ಇರುವ ಕೆಲವು ಮುಖ್ಯ ಬಗೆಯ ಕಳ್ಳಿಗಳನ್ನು ಕೆಳಗೆ ಹೆಸರಿಸಲಾಗಿದೆ: 1. ಪೆರೆಸ್ಕಿಯ, 2. ಒಪನ್ಷಿಯ, 3. ಎಪಿಫಿಲಮ್, 4. ಫಿಲೊಕ್ಯಾಕ್ಟಸ್, 5. ಮ್ಯಾಮಿಲೇರಿಯ.

ಯುಫೋರ್ಬಿಯ ಕಳ್ಳಿ

6. ಎಕೈನೊಸಿರಸ್, 7. ಆಸ್ಟ್ರೊಫೈಟಮ್, 8. ಎನ್‌ಸಿಫಲೊಕಾರ್ಪಸ್, 9. ಎಕೈನೊಕ್ಯಾಕ್ಟಸ್, 10. ಎರಿಯೊಸಿರಿಯಸ್, 11. ಸಿರಿಯಸ್, 12. ಎಸ್ಪೋಸ್ಟೊ.



ವೆಬ್ರೊಸಿರಿಯಸ್ ಕಳ್ಳಿ

ಕೆಲವು ಬಗೆಯ ಕಳ್ಳಿಗಳಿಗೆ ಔಷಧೀಯ ಗುಣಗಳಿವೆ. ಉದಾಹರಣೆಗೆ ಸಿರಿಯಸ್ ಗ್ರಾಂಡಿಫ್ಲೋರಸ್ ಎಂಬ ಕಳ್ಳಿಯ ಎಳೆಯ ಕಂಡವನ್ನು ಹೃದಯಕ್ರಿಯೆಯನ್ನು ಉತ್ತೇಜನಗೊಳಿಸಲು ಬಳಸುತ್ತಾರೆ. ಇದರ ಕಷಾಯವನ್ನು ಜಲೋದರ (ಡ್ರಾಪ್ಸಿ) ರೋಗ ನಿವಾರಣೆಗೆ ಉಪಯೋಗಿಸುತ್ತಾರೆ. ಪಾಪಾಸು ಕಳ್ಳಿಯ (ಒಪನ್ಷಿಯ) ಹಣ್ಣುಗಳನ್ನು ಬೇಯಿಸಿ ನಾಯಿಕೆಮ್ಮನ್ನು ಗುಣಪಡಿಸಲು ಬಳಸುವುದುಂಟು.

ಮ್ಯಾಮಿಲೇರಿಯ ಕಳ್ಳಿ

ಮೇಲೆ ಹೇಳಿದ ಕ್ಯಾಕ್ಟೇಸೀ ಕುಟುಂಬದ ಸಸ್ಯಗಳೇ ಅಲ್ಲದೆ ಯೂಫೋರ್ಬಿಯೇಸೀ ಕುಟುಂಬದ ಯೂಫೋರ್ಬಿಯ ಮತ್ತು ಕ್ಯಾರಲೂಮ ಜಾತಿಯ ಸಸಿಗಳು ಅಮರಿಲ್ಲಿಡೇಸೀ ಕುಟುಂಬದ ಅಗೇವ್ ಹಾಗೂ ಫರ್‌ಕ್ರಿಯ ಎಂಬ ಜಾತಿಯ ಸಸ್ಯಗಳೂ ಲಿಲಿಯೇಸೀ ಕುಟುಂಬಕ್ಕೆ ಸೇರಿದ ಯಕ್ಕ, ಆಲೋಗಳೂ ಕಾಸುಲೇಸೀ ಕುಟುಂಬದ ಕ್ರಾಸುಲ, ಕ್ಯಾಲ್ಯಾಂಕೋಯಿ, ಬ್ರೈಯೋಫಿಲಮ್ ಮುಂತಾದವೂ ಸಾಮಾನ್ಯ ಭಾಷೆಯಲ್ಲಿ ಕಳ್ಳಿಗಳೆಂದೇ ಹೆಸರಾಗಿವೆ. (ಎಂ.ಎಚ್.ಎಂ.; ಎಂ.ಸಿ.ಆರ್.)

**ಕಳ್ಳಿಪೀರ :** ಸಮಶೀತೋಷ್ಣವಲಯ ಹಾಗೂ ಉಷ್ಣವಲಯಗಳಲ್ಲಿ ವಾಸಿಸುವ ಒಂದು ಜಾತಿಯ ಹಕ್ಕಿ (ಬೀ ಈಟರ್). ಬಲು ಸುಂದರವಾದ ಮತ್ತು ವರ್ಣವೈವಿಧ್ಯವುಳ್ಳ ಈ ಹಕ್ಕಿ ಮಿಂಚುಳ್ಳಿಗಳಿಗೆ (ಕಿಂಗ್ ಫಿಶರ್) ಹತ್ತಿರ ಸಂಬಂಧಿ. ಕೊರಾಸ್ಸೈಯಿಫಾರ್ಮೀಸ್ ಗಣದ ಮೆರಾಪಿಡೀ ಕುಟುಂಬಕ್ಕೆ ಸೇರಿದೆ. ಈ ಕುಟುಂಬದಲ್ಲಿ ಹಲವಾರು ಜಾತಿಗಳಿದ್ದು ಇವುಗಳಲ್ಲಿ ಮೆರಾಪ್ಸ್ ಜಾತಿಯವು ಮುಖ್ಯವಾದವು. ಪ್ರಭೇದಗಳು 24. ಎಲ್ಲಕ್ಕೂ ಬೀ ಈಟರ್ ಎಂಬ ಸಾಮಾನ್ಯ ಹೆಸರೇ ಇದೆ. ಆಫ್ರಿಕ, ಆಸ್ಟ್ರೇಲಿಯ, ಮಡಗಾಸ್ಕರ್ ಮತ್ತು ಭಾರತದಲ್ಲಿ ಇವು ಸಾಮಾನ್ಯ.

ಬಗೆಬಗೆಯ ಕೀಟಗಳು ಇದರ ಆಹಾರವಾದರೂ ಜೇನುನೊಣವೆಂದರೆ ಬಲು ಇಷ್ಟ. ಅದರಿಂದಲೇ ಇದಕ್ಕೆ ಬೀ ಈಟರ್ ಎಂಬ ಹೆಸರು ಬಂದಿರುವುದು. ಭಾರತದಲ್ಲಿ ಐದು ಪ್ರಭೇದಗಳಿಗೆ ಸೇರಿರುವ ಹಕ್ಕಿಗಳಿವೆ – ನೀಲಿ ಬಾಲದ ಕಳ್ಳಪೀರ (ಮೆರಾಪ್ಸ್ ಪೆರ್‌ಸಿಕಸ್) ಮತ್ತು ಹಸಿರು ಬಣ್ಣದ ಕಳ್ಳಿಪೀರ (ಮೆರಾಪ್ಸ್ ಓರಿಯಂಟ್ಯಾಲಿಸ್). ಮೆ. ಎಪಿಯಾಸ್ಟರ್, ಮೆ. ಲೆಶ್ನಿನಾಲ್ಟಿ, ಮೆ.ಫ಼ಿಲಿಪಿನಸ್

ಹಸುರು ಬಣ್ಣದ ಕಳ್ಳಿಪೀರ ಸಾಧಾರಣವಾಗಿ ಗುಬ್ಬಚ್ಚಿಯಷ್ಟಿದೆ. ಭಾರತದ ಹಿಮಾಲಯ ಪರ್ವತದ 5,000' ಎತ್ತರದಿಂದ ಹಿಡಿದು ಕನ್ಯಾಕುಮಾರಿಯ ತನಕ ಎಲ್ಲ ಕಡೆಗಳಲ್ಲಿಯೂ ಸಾಮಾನ್ಯವಾಗಿ ಕಾಣಬರುವ ಹಕ್ಕಿಯಿದು. ದೇಹ ತೆಳುವಾಗಿ ಸುಮಾರು 6" ಉದ್ದವಿದೆ. ದೇಹದ ಬಣ್ಣ ಕಾಂತಿಯುಕ್ತವಾದ ಹಸುರು. ತಲೆ ಮತ್ತು ಕತ್ತಿನಲ್ಲಿ ಕೆಂಪುಮಿಶ್ರಿತ ಕಂದುಬಣ್ಣದ ಛಾಯೆಗಳಿವೆ. ಕುತ್ತಿಗೆಯ ಹತ್ತಿರ ಸ್ಪಷ್ಟವಾದ ಕಪ್ಪು ಬಣ್ಣದ ಕಂಠಹಾರದಂತೆ ಕಾಣುವ ಗುರುತಿದೆ. ಗಂಡು ಮತ್ತು ಹೆಣ್ಣು ಹಕ್ಕಿಗಳ ಬಾಹ್ಯ ಲಕ್ಷಣಗಳಲ್ಲಿ ಯಾವ ರೀತಿಯ ವ್ಯತ್ಯಾಸವೂ ಇಲ್ಲ. ಈ ಹಕ್ಕಿ ಜೋಡಿಜೋಡಿಯಾಗಿಯೋ, ಗುಂಪಾಗಿಯೋ ದೂರವಾಣಿ ತಂತಿಗಳ ಮೇಲೆ ಕುಳಿತಿರುವುದನ್ನು ಸಾಮಾನ್ಯವಾಗಿ ಕಾಣಬಹುದು. ಇದರ ಕೊಕ್ಕು ನೀಳವಾಗಿ, ತೆಳುವಾಗಿ ಸ್ವಲ್ಪ ಬಾಗಿದೆ. ರೆಕ್ಕೆಗಳು ಸಣ್ಣವು; ದುಂಡಾಗಿವೆ. ಬಾಲದಲ್ಲಿ 12 ಗರಿಗಳಿವೆ. ಇವುಗಳಲ್ಲಿ ಮಧ್ಯದ ಗರಿಗಳು ಮೊಟಕಾದ ಸೂಜಿಗಳಂತಿವೆ. ಈ ಹಕ್ಕಿ ಬಹಳ ಚುರುಕಾಗಿ ಹಾರಾಡಬಲ್ಲುದು. ಹಾರುತ್ತಿರುವಾಗ ಇದರ ದೇಹದ ವಿವಿಧ ಬಣ್ಣಗಳು

ಬಹಳ ಚೆನ್ನಾಗಿ ಕಾಣುತ್ತವೆ. ಅಲ್ಲದೆ ತನ್ನ ಕೊಕ್ಕನ್ನು ಕಟಕಟನೆ ಕಡಿಯುತ್ತಿರುತ್ತದೆ. ಒಣಗಿದ ರೆಂಬೆಗಳು, ಉದ್ದವಾದ ಕಂಬಗಳ ಮೇಲೆ ಕುಳಿತಿದ್ದು ಅಂತರಿಕ್ಷದಲ್ಲಿ ಹಾರುತ್ತಿರುವ ಕೀಟಗಳನ್ನು ಫಕ್ಕನೆ ಹಾರಿ ಹಿಡಿದು ತನ್ನ ರೆಕ್ಕೆಗಳನ್ನು ಚಲಿಸದಂತೆ ಹರಡಿ ಹಾಗೆಯೇ ಹಿಂದಕ್ಕೆ ತಿರುಗಿಕೊಂಡು ತನ್ನ ಮೊದಲಿನ ಸ್ಥಾನಕ್ಕೆ ಬಂದು ಸೇರುತ್ತದೆ. ಅನಂತರ ಕೀಟವನ್ನು ಕೊಂಬೆಯ ಮೇಲಿಟ್ಟು ಕುಕ್ಕಿ ನುಂಗುತ್ತದೆ. ಈ ಶಿಕಾರಿಯ ಕ್ರಮ ನೋಡಲು ಬಹಳ ರಮ್ಯ. ದನಕರುಗಳ ಮೈಮೇಲಿನ ಕೀಟ ಮತ್ತು ಉಣ್ಣಿಗಳನ್ನು ತಿನ್ನುವುದೂ ಉಂಟು. ಮಧ್ಯಾಹ್ನದ ಹೊತ್ತಿನಲ್ಲಿ ಎಲೆಗಳ ಮರೆಯಲ್ಲಿ ವಿಶ್ರಮಿಸುತ್ತದೆ. ಕೆಲವು ಸಾರಿ ಮಣ್ಣಿನಲ್ಲಿ ಹೊರಳಾಡಿ ದೇಹವನ್ನು ಧೂಳಿನಿಂದ ತುಂಬಿಸಿಕೊಳ್ಳುತ್ತದೆ. ಮನುಷ್ಯನನ್ನು ಕಂಡರೆ ನಾಚಿಕೆಯಾಗಲಿ ಭಯವಾಗಲಿ ಇಲ್ಲ. ಸಾಧಾರಣವಾಗಿ ಸದ್ದು ಗದ್ದಲ ಮಾಡದ ಹಕ್ಕಿಯಾದರೂ ಕೆಲವೊಮ್ಮೆ ಇಂಪಾಗಿ ಟಿಟ್ ಟಿಟ್ ಎಂದು ಶಬ್ದ ಮಾಡುತ್ತದೆ. ರಾತ್ರಿಯನ್ನು ದೊಡ್ಡ ಮರಗಳ ರೆಂಬೆಯಲ್ಲಿ ಹುದುಗಿ ಮಲಗಿದ್ದು ಕಳೆಯುತ್ತದೆ. ಆಗಿಂದಾಗ್ಗೆ ಇಡಿ ಗುಂಪು ಗಾಬರಿಪಟ್ಟಂತೆ ಹೆಚ್ಚು ಉದ್ರೇಕಿತವಾದ ಟ್ರ ಟ್ರ ಎಂಬ ಶಬ್ದವನ್ನು ಮಾಡುತ್ತ ತಾವು ವಾಸವಾಗಿರುವ ಮರಗಳನ್ನು ಸುತ್ತಿ ಸುತ್ತಿ ಬಂದು ಅನಂತರ ನಿಧಾನವಾಗಿ ಅದೇ ಮರಗಳಲ್ಲಿ ನಿಶ್ಶಬ್ದವಾಗಿ ಅಡಗಿಕೊಳ್ಳುತ್ತವೆ.



ಈ ಹಕ್ಕಿಯ ಸಂತಾನೋತ್ಪತ್ತಿಯ ಕಾಲ ಫೆಬ್ರುವರಿಯಿಂದ ಮೇ ವರೆಗೆ. ಸಾಧಾರಣವಾಗಿ ಗುಂಪು ಗುಂಪಾಗಿ ಸೇರಿಕೊಂಡು ನದಿಯ ದಡಗಳಲ್ಲಿ ಗೂಡುಗಳನ್ನು ನಿರ್ಮಿಸುತ್ತವೆ. ಗೂಡು ಕಟ್ಟುವ ಕ್ರಮ ವೈಶಿಷ್ಟ್ಯಪೂರ್ಣವಾದುದು. ಮೊದಲು ತನ್ನ ಅರ್ಧ ತೆರೆದ ಕೊಕ್ಕಿನಿಂದ ಗೋಡೆಯ ಸುಮಾರು 25–30 ಸೆಂಮೀ ದೂರದಿಂದ ಅನೇಕ ಕೊಕ್ಕಿನಿಂದ ಕುಕ್ಕುವುದರಿಂದ ಗೋಡೆಯಲ್ಲಿ ರಂಧ್ರವುಂಟಾಗುತ್ತದೆ. ನಿಂತುಕೊಳ್ಳಲು ಸಾಧ್ಯವಾಗುವಷ್ಟು ದೊಡ್ಡದಾದ ರಂಧ್ರವಾದ ಮೇಲೆ ಕೊರೆಯುವ ಕೆಲಸ ಇನ್ನೂ ರಭಸವಾಗಿ ಸಾಗುತ್ತದೆ. ಬಿಲದ ಆಳ ಸುಮಾರು 10 ಸೆಂಮೀನಷ್ಟು ಆದಾಗ ಹಕ್ಕಿ ಬಿಲದೊಳಗಿನಿಂದ ಅಗೆಯಲು ಪ್ರಾರಂಭಿಸುತ್ತದೆ. ಅಗೆದ ಮಣ್ಣನ್ನು ತನ್ನ ಕಾಲುಗಳಿಂದ ಹೊರ ಹಾಕುತ್ತದೆ. ಈ ರೀತಿ ಸುಮಾರು 1½" ಅಗಲ ಮತ್ತು 1'–6' ಉದ್ದವಿರುವ ಬಿಲಗಳನ್ನು ಕೊರೆದು ಇಂಥ ಗೂಡಿನಲ್ಲಿ ಹೆಣ್ಣುಹಕ್ಕಿ ಗುಂಡಗಿರುವ ಅಚ್ಚ ಬಿಳಿಯ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಸಂಖ್ಯೆ 4–7. ಹೆಣ್ಣು ಮತ್ತು ಗಂಡು ಎರಡೂ ಜೊತೆಗೂಡಿ ಗೂಡನ್ನು ನಿರ್ಮಿಸುವುದಲ್ಲದೆ, ಮೊಟ್ಟೆಗಳಿಗೆ ಕಾವನ್ನು ಕೊಟ್ಟು ಮರಿ ಮಾಡಿ, ಮರಿಗಳಿಗೆ ಆಹಾರವನ್ನು ಸಹ ತಂದು ಒದಗಿಸುತ್ತವೆ. ಗರಿಗಳನ್ನು ಹೆಚ್ಚಾಗಿ ಅಲಂಕಾರ ವಸ್ತುವಾಗಿ ಉಪಯೋಗಿಸುತ್ತಾರೆ.

ನೀಲಿ ಬಣ್ಣದ ಕಳ್ಳಿಪೀರ ಸುಮಾರು 8" ಉದ್ದವಿದೆ. ಬಾಲ ಹಸುರು ನೀಲಿಯ ಬಣ್ಣದ್ದು. ಕಣ್ಣುಗಳ ಬಳಿ ಕಪ್ಪು ಗೆರೆಗಳನ್ನು ಕಾಣಬಹುದು. ಕತ್ತಿನ ಬಳಿ ಹಳದಿ ಬಣ್ಣದ ಗುರುತಿದೆ. ಇದು ಭಾರತ, ಬರ್ಮ, ಸಿಂಹಳ ದ್ವೀಪಗಳ ನಿವಾಸಿ. ಇದರ ಸಂತಾನೋತ್ಪತ್ತಿಯ ಕಾಲ ಮಾರ್ಚಿನಿಂದ ಜೂನ್ ವರೆಗೆ. ಗೂಡು ಕಟ್ಟುವ ಕ್ರಮ ಮುಂತಾದುವೆಲ್ಲ ಹಸುರು ಬಣ್ಣದ ಕಳ್ಳಿಪೀರದಂತೆಯೇ. (ಕೆ.ಪಿ.ಆರ್.)

**ಕಾಂಕ್ರೀಟ್** : ನೀರಿನ ಬಳಕೆಯಿಂದ ಬಂಧಸಾಮರ್ಥ್ಯ ಪಡೆಯುವ ಒಂದು ವಸ್ತು (ಸಿಮೆಂಟ್), ಜಲ್ಲಿ ಕಲ್ಲುಗಳು, ನೀರು, ನಿಯಂತ್ರಿತ ಪರಿಮಾಣದಲ್ಲಿ ಸೆರೆಹಿಡಿದಿಟ್ಟಿರುವ ಗಾಳಿ – ಇವುಗಳ ಯುಕ್ತ ಮಿಶ್ರಣದಿಂದ ದೊರೆಯುವ ಒಂದು ಎಂಜಿನಿಯರಿಂಗ್ ಸಾಮಗ್ರಿ. ಆರಂಭಸ್ಥಿತಿಯಲ್ಲಿ ಇದಕ್ಕೆ ಪ್ಲಾಸ್ಟಿಕ್ ಗುಣವಿರುವುದರಿಂದ ಕಾಂಕ್ರೀಟಿಗೆ ವಿವಿಧ ಬಗೆಯ ಆಕಾರಗಳನ್ನು ಕೊಡಬಹುದು. ಸಿಮೆಂಟ್ ಮತ್ತು ನೀರು ಇವುಗಳ ನಡುವಿನ ಜಲಸಂಯೋನೆಯಿಂದ (ಹೈಡ್ರೇಶನ್) ಕಾಂಕ್ರೀಟಿನಲ್ಲಿ ಸಾಮರ್ಥ್ಯ ಉತ್ಪನ್ನವಾಗುತ್ತದೆ. ಕ್ಯಾಲ್ಸಿಯಂ ಸಿಲಿಕೇಟುಗಳು, ಕ್ಯಾಲ್ಸಿಯಂ ಅಲೂಮಿನೇಟ್, ಕ್ಯಾಲ್ಸಿಯಂ ಹೈಡ್ರಾಕ್ಸೈಡ್ – ಇವು ಕಾಂಕ್ರೀಟಿನಲ್ಲಿರುವ ಅಂತಿಮ ಉತ್ಪನ್ನಗಳು. ಇವು ನೀರಿನಲ್ಲಿ ಕರಗುವುದಿಲ್ಲ. ಜಲ್ಲಿ ಕಲ್ಲುಗಳನ್ನು ಒಂದು ಗಡಸು ಮಾತೃಕೆಯಲ್ಲಿ ಇವು ಬಂಧಿಸಿರುತ್ತವೆ. ಅದುಮುವ ತ್ರಾಸವನ್ನು (ಕಂಪ್ರೆಸ್ಸಿವ್ ಸ್ಟ್ರೆಸ್) ಎದುರಿಸಿ ನಿಲ್ಲುವ ಸಾಮರ್ಥ್ಯ ಕಾಂಕ್ರೀಟಿಗಿದೆ. ಆದರೆ ಎಳೆತದ ತ್ರಾಸದ (ಟೆನ್ಸೈಲ್ ಸ್ಟ್ರೆಸ್) ವಿರುದ್ಧ ಕಾಂಕ್ರೀಟಿಗೆ ಇದೇ ಸಾಮರ್ಥ್ಯವಿದೆ ಎನ್ನುವಂತಿಲ್ಲ. ಉದಾಹರಣೆಗೆ ತೂಕದ ಕಟ್ಟಡಗಳನ್ನು ಕಾಂಕ್ರೀಟ್ ಗೋಡೆಗಳು ಹೊರಲಾರವು. ಅವು ಬಿರುಕು ಬಿಟ್ಟು ಒಡೆದೇ ಹೋಗುತ್ತವೆ. ಇಂಥಲ್ಲಿ ಭದ್ರಕಾಂಕ್ರೀಟನ್ನು (ರೀ ಇನ್‌ಫೋರ್ಸ್ಡ್ ಕಾಂಕ್ರೀಟ್–ಆರ್‌ಸಿಸಿ) ಬಳಸಬೇಕಾಗುತ್ತದೆ.

ಬಂಧವಸ್ತುವಾಗಿ ಸಿಮೆಂಟಿನ ಬಳಕೆಯನ್ನು ಕಂಡುಹಿಡಿಯುವ ಮೊದಲು ಜೇಡಿ ಮಣ್ಣನ್ನು ಇದಕ್ಕಾಗಿ ಬಳಸುತ್ತಿದ್ದರು. ಆದರೆ 1900ರಲ್ಲಿ ಪೋರ್ಟ್‌ಲ್ಯಾಂಡ್ ಸಿಮೆಂಟನ್ನು ಕಂಡುಹಿಡಿದ ಅನಂತರ ಕಾಂಕ್ರೀಟಿಗೆ ಇದನ್ನೇ ಬಳಸುವುದು ವಾಡಿಕೆಯಾಗಿದೆ.

ಸಾಮಾನ್ಯವಾಗಿ ಸಿಮೆಂಟ್ ಕಾಂಕ್ರೀಟಿನ ಸಾಂದ್ರತೆ 2–4 ಗ್ರಾಂ./ಮಿಲೀ ಇರುತ್ತದೆ. ಅಂದರೆ ಘನ ಅಡಿಗೆ ಸುಮಾರು 150 ಪೌಂಡಿನಷ್ಟಾಯಿತು. ಇದರ ಬಲ ಸುಮಾರು 1,000ದಿಂದ 10,000 ಪೌಂ./ಚ. ಇಂಚ್ ಇರಬಹುದು. ಕಾಂಕ್ರೀಟಿನ ಬಲ ಅದರಲ್ಲಿ ಜೋಡಿಸಿರುವ ಬಿಡಿಭಾಗಗಳ ಗುಣ, ತಯಾರಿಸಿದ ರೀತಿ ಮತ್ತು ಮಿಶ್ರಣದಲ್ಲಿ ನೀರಿನ ಅಂಶಗಳನ್ನು ಅವಲಂಬಿಸಿದೆ. ಒಂದು ಮಿತಿಯಲ್ಲಿ ನೀರಿನ ಅಂಶ ಕಡಿಮೆ ಇದ್ದಷ್ಟೂ ಕಾಂಕ್ರೀಟಿನ ಬಲ ಹೆಚ್ಚಾಗಿರುವುದು. (ಎಂ.ಎ.ಎಸ್.ಆರ್.)

**ಕಾಂಕ್ರೀಟಿನ ಸಂಸ್ಕರಣೆ:** ಕಾಂಕ್ರೀಟ್ ಅಥವಾ ಗಾರೆಯಲ್ಲಿರುವ ಸಿಮೆಂಟು ಸತತವಾದ ಜಲ ಸಂಯೋಜನೆಯನ್ನು ಹೊಂದಲು ಅನುಕೂಲವಾಗಿರುವಂತೆ ಶೈತ್ಯಾಂಶ ಸ್ಥಿತಿಯನ್ನು ಏರ್ಪಡಿಸುವ ವಿಧಾನ (ಕ್ಯೂರಿಂಗ್). ಇದು ಹವಾಮಾನ ಪರಿಸ್ಥಿತಿಯ ದುಷ್ಪರಿಣಾಮಗಳಿಂದುಂಟಾಗುವ ಸವೆತವನ್ನು ಕಡಿಮೆಮಾಡಿ ಕಾಂಕ್ರೀಟನ್ನು ಬಲಯುತವಾದುದನ್ನಾಗಿಯೂ ನಿರೋಧಶಕ್ತಿಯುಳ್ಳದ್ದನ್ನಾಗಿಯೂ ಮಾಡುತ್ತದೆ. ಶಾಸ್ತ್ರೀಯವಾದ ಸಂಸ್ಕರಣ ವಿಧಾನ ಸಿಮೆಂಟ್ ಕಾಂಕ್ರೀಟಿನಲ್ಲಿ ನೀರಿಳಿಯದಂತೆಯೂ ದೀರ್ಘಕಾಲ ಬಾಳಿಕೆ ಬರುವಂತೆಯೂ ಮಾಡುತ್ತದೆ.



ಚಿತ್ರ 1 ಗಟ್ಟಿಗೊಂಡ ಕಾಂಕ್ರೀಟಿನ ಅಡ್ಡಸೀಳಿಕೆಯ ನೋಟ : ಜಲ್ಲಿಯ ಪ್ರತಿಯೊಂದು ಕಣವನ್ನೂ ಸಿಮೆಂಟು ಸರಿ ಆವರಿಸಿದೆ.

ಸಿಮೆಂಟ್ ಕಾಂಕ್ರೀಟಿನ ಮಿಶ್ರಣದ ಕಾಲದಲ್ಲಿ ಉಪಯೋಗಿಸಲಾದ ನೀರಿನ ಅಂಶ ಸಂಸ್ಕರಣ ಸಮಯದಲ್ಲಿ ಕಡಿಮೆಯಾಗದಂತೆ ಇರಬೇಕಾದದ್ದೇ ಪ್ರಧಾನಾಂಶ. ಕಾಂಕ್ರೀಟಿನ ಮೇಲ್ಮೈ ತೇವದಿಂದ ಕೂಡಿರುವಂತೆ ಮಾಡಲು ಅನೇಕ ವಿಧಾನಗಳಿವೆ. ಶೈತ್ಯಾಂಶ ಆವಿಯಾಗದಂತೆ ತಡೆಗಟ್ಟುವ ಕ್ರಮ ಒಂದು; ಮೂರು ದಿವಸಗಳ ಕಾಲ ಒಣಗದ ರೀತಿಯಲ್ಲಿಟ್ಟರೆ ಅದರಿಂದ ಅತ್ಯಧಿಕ ಪ್ರಮಾಣದಲ್ಲಿ ಪ್ರಯೋಜನ ಹೊಂದಬಹುದು. ಹತ್ತರಿಂದ ಹದಿನಾಲ್ಕು ದಿವಸಗಳ ಕಾಲ ಸಂಸ್ಕರಿಸಿದಾಗ ಇನ್ನೂ ಹೆಚ್ಚು ಪ್ರಮಾಣದಲ್ಲಿ ಪ್ರಯೋಜನ ಪಡೆಯಲು ಸಾಧ್ಯ. ನಿರೀಕ್ಷಿಸಲಾದ ಸಾಮರ್ಥ್ಯ 14 ದಿವಸಗಳಲ್ಲಿ ಪೂರ್ಣವಾಗಿ ಬರದಿದ್ದರೂ ಅನಂತರವೂ ಕಾಂಕ್ರೀಟನ್ನು ತೇವವಾಗಿರಿಸುವುದನ್ನು ಎಂಜಿನಿಯರುಗಳು ಅಪ್ರಯೋಜಕವೆಂದು ಪರಿಗಣಿಸುತ್ತಾರೆ.

ಹತ್ತಿ ಅಥವಾ ಗೋಣಿ ತಾಟುಗಳಿಂದ ಮುಚ್ಚುವುದು, ಕಾಗದವನ್ನು ಅಂಟಿಸುವುದು, ಹಸಿಯ ಮಣ್ಣನ್ನು ಮೇಲೆ ಹರಡುವುದು, ಹುಲ್ಲನ್ನು ಹರಡುವುದು ಮತ್ತು ಅಭೇದ್ಯ ಪೊರೆಯನ್ನು ಉಪಯೋಗಿಸುವುದು – ಇವು ಸಾಮಾನ್ಯವಾಗಿ ಸಂಸ್ಕರಣೆಯಲ್ಲಿ ಅನುಸರಿಸಲಾಗುತ್ತಿರುವ ವಿಧಾನಗಳು. (ಕೆ.ಸಿ.ಆರ್.)

ಕಡಿಮೆ ಬೆಲೆ, ದೀರ್ಘ ಬಾಳಿಕೆ, ಉಕ್ಕಿನಿಂದ ಭದ್ರಗೊಳಿಸಿದಾಗ ಬಲ, ಗಾಳಿ, ಬಂಕಿ, ನೀರು, ಕೊರೆತ ಇವುಗಳಿಗೆ ಬಲು ಕಡಿಮೆ ಪ್ರತಿಕ್ರಿಯೆ – ಈ ಗುಣಗಳಿರುವುದರಿಂದ ಕಾಂಕ್ರೀಟನ್ನು ಸೇತುವೆ ಮತ್ತು ರಸ್ತೆ ತಳಪಾಯಕ್ಕೂ ಚೌಕಟ್ಟು, ದೊಡ್ಡ ಕಟ್ಟಡಗಳ ಮಾಡು ಮುಂತಾದ ಕೆಲಸಗಳಲ್ಲಿಯೂ ವಿಪುಲವಾಗಿ ಉಪಯೋಗಿಸುತ್ತಾರೆ. ಗಾಳಿಯಲ್ಲಿ ಉಕ್ಕಿಗೆ ತುಕ್ಕು ಹಿಡಿಯುತ್ತದೆ. ಅದಕ್ಕಾಗಿ ಉಕ್ಕಿಗೆ ಬಣ್ಣ ಬಳಿಯಬೇಕಾಗುತ್ತದೆ. ಆದರೆ ಕಾಂಕ್ರೀಟಿಗೆ ಈ ರಕ್ಷಣೆ ಬೇಕಿಲ್ಲ. ಕಾಂಕ್ರೀಟಿನ ಬಲ ಮರಳು ಮತ್ತು ಕಲ್ಲು ಚೂರುಗಳ ಸ್ವಭಾವ, ಸಿಮೆಂಟಿನ ಪ್ರಮಾಣ, ಸಿಮೆಂಟಿಗೂ ನೀರಿಗೂ ಇರುವ ಪ್ರಮಾಣ, ಕಾಂಕ್ರೀಟಿನ ವಯಸ್ಸು ಇವುಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ.



**ಚಿತ್ರ 2 : ಒರಟಾದ ಜಲ್ಲಿ ಕಣಗಳ ನಡುವಿನ ಜಾಗವನ್ನು ಕೊರೆ ಪ್ರಮಾಣದ ಸಿಮೆಂಟು, ಮರಳುಗಾರೆ ಆವರಿಸಿದೆ. ಈ ಮಿಶ್ರಣವನ್ನು ಆಡಿಸುವುದೂ ಹಾಕುವುದೂ ಕಷ್ಟ ; ಉಪಯೋಗಿಸಿದರೆ ಒರಟಾದ ಜೇನುಗೂಡಿನಾಕಾರದ ಮತ್ತು ರಂಧ್ರಗಳಿರುವ ಕಾಂಕ್ರೀಟಾಗುತ್ತದೆ**

ಕಾಂಕ್ರೀಟಿನಲ್ಲಿ ಉಪಯೋಗಿಸುವ ಕಲ್ಲಿನ ಚೂರುಗಳಲ್ಲಿ ಅಶುದ್ಧತೆಯಿರಬಾರದು. ಒಡೆದ ಗ್ರಾನೈಟ್, ಬೆಸಾಲ್ಟ್ ಇಂಥ ಗಟ್ಟಿ ಕಲ್ಲುಗಳನ್ನು ಉಪಯೋಗಿಸುವುದೇ ರೂಢಿ. ಜಲ್ಲಿಯ ಅಳತೆ ಕಾಲು ಅಂಗುಲದಿಂದ ಮುಕ್ಕಾಲು ಅಂಗುಲದವರೆಗೆ ವ್ಯತ್ಯಾಸವಾಗುತ್ತದೆ. ಕಲ್ಲಿನ ಚೂರುಗಳ ಮಧ್ಯದಲ್ಲಿರುವ ಜಾಗದಲ್ಲಿ ಮರಳು ತುಂಬಿರುತ್ತದೆ. ಈ ಖಾಲಿ ಜಾಗ ಕಲ್ಲಿನ ಅಳತೆಯ ಅರ್ಧದಷ್ಟಿರುವುದರಿಂದ ಎರಡು ಭಾಗ ಕಲ್ಲಿಗೆ ಒಂದು ಭಾಗ ಮರಳನ್ನು ಸೇರಿಸುತ್ತಾರೆ. ಕಲ್ಲು ಮತ್ತು ಮರಳಿನ ಮಿಶ್ರಣದಲ್ಲಿರುವ ಖಾಲಿ ಜಾಗದಲ್ಲಿ ನೀರಿನಲ್ಲಿ ಬಿಎರೆಸಿದ ಸಿಮೆಂಟ್ ಸೇರಿಕೊಂಡಿರುತ್ತದೆ. ಈ ಮಿಶ್ರಣದಲ್ಲಿ ಉಪಯೋಗಿಸುವ ಸಿಮೆಂಟಿನ ಭಾಗ ಯಾವ ಕೆಲಸಕ್ಕೆ ಕಾಂಕ್ರೀಟನ್ನು ಉಪಯೋಗಿಸುತ್ತಾರೆ ಎನ್ನುವುದರ ಮೇಲೆ ಹೋಗುತ್ತದೆ. ಬಲ ಮತ್ತು ಬಾಳಿಕೆ ಹೆಚ್ಚಾಗಿ ಬೇಕಾದಷ್ಟೂ ಹೆಚ್ಚು ಸಿಮೆಂಟನ್ನು ಉಪಯೋಗಿಸಬೇಕು. ಕಟ್ಟಡಗಳಿಗೆ ಸಾಮಾನ್ಯವಾಗಿ ಬಳಸುವ ಕಾಂಕ್ರೀಟಿನಲ್ಲಿ ಅಳತೆಯಲ್ಲಿ ಒಂದು ಭಾಗ ಸಿಮೆಂಟು, ಎರಡು ಭಾಗ ಮರಳು, ನಾಲ್ಕು ಭಾಗ ಜಲ್ಲಿ (1:2:4) ಬೆರೆತಿರುತ್ತವೆ. ತಳಪಾಯದಲ್ಲಿ ಹಾಕುವ ಕಾಂಕ್ರೀಟಿಗೆ 1:3:6 ಪ್ರಮಾಣ ಸಾಕು. ಬಲವಾದ ಕಂಬಗಳು ಮತ್ತು ದೊಡ್ಡ ಕಣ್ಣಿನ ಸೇತುವೆಗಳಲ್ಲಿ 1:1:2 ಬೇಕಾಗುತ್ತದೆ.

ಸಾಮಾನ್ಯವಾಗಿ ಮಿಶ್ರಣದಲ್ಲಿ ನೀರು ಎಷ್ಟು ಕಡಿಮೆಯಾದರೆ ಕಾಂಕ್ರೀಟಿನ ಬಲ ಅಷ್ಟು ಹೆಚ್ಚಾಗುತ್ತದೆ. ಆದರೆ ನೀರು ಬಹಳ ಕಡಿಮೆಯಾದರೆ ಮಿಶ್ರಣವನ್ನು ಬೆರೆಸುವುದೂ ಕಾಂಕ್ರೀಟನ್ನು ಸ್ಥಳದಲ್ಲಿ ಹೊಯ್ಯುವುದೂ ಕಷ್ಟವಾಗುತ್ತದೆ. ಸಿಮೆಂಟ್ ಗಟ್ಟಿಯಾಗುವುದು ತಡವಾಗುತ್ತದೆ. ಪ್ರತಿಯಾಗಿ ನೀರು ಹೆಚ್ಚಾದರೆ ಕಲ್ಲಿನ ಚೂರು ತಳಕ್ಕೆ ಇಳಿಯುತ್ತದೆ. ಸರಾಸರಿ ಒಂದು ಮೂಟೆ ಸಿಮೆಂಟಿಗೆ 6 ಗ್ಯಾಲನ್ ನೀರನ್ನು ಬೆರೆಸಬಹುದು. ಇಂಥ ಕಾಂಕ್ರೀಟನ್ನು ಮಿಶ್ರಣ ಮಾಡಿದ ನಾಲ್ಕು ವಾರಗಳ ಮೇಲೆ ಅದನ್ನು ಒಡೆಯುವುದಕ್ಕೆ ಚದರಂಗುಲಕ್ಕೆ 3,000 ಪೌಂಡ್ ಒತ್ತಡ ಬೇಕಾಗುತ್ತದೆ. ಎಳೆಯುವ ಒತ್ತಡ ಇದರ ಶೇ. 10ರಷ್ಟು ಇರುತ್ತದೆ.

**ಭದ್ರ ಕಾಂಕ್ರೀಟ್:** ಸಾದಾ ಕಾಂಕ್ರೀಟಿಗೆ ಎಳೆಯುವ ಬಲ ಕಡಿಮೆ. ಈ ಕಾಂಕ್ರೀಟಿನಲ್ಲಿ ಒಳಗಡೆ ಉಕ್ಕಿನ ಕಂಬಗಳನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ಹೂಳೀದರೆ ಅದರ ಎಳೆಯುವ ಬಲ (ಟೆನ್ಸೈಲ್ ಸ್ಟ್ರೆಂತ್) ಹೆಚ್ಚುತ್ತದೆ. ಒಂದು ತೊಲೆಯಲ್ಲಿ ಮೇಲಿನ ಅಂಚು



**ಚಿತ್ರ 3 ಅಧಿಕ ಪ್ರಮಾಣದ ಸಿಮೆಂಟು–ಮರಳು ಮಿಶ್ರಣಕ್ಕೆ ತ್ರಾಣ ಕಡಿಮೆ; ಮಿತವ್ಯಯಕಾರಿಯಲ್ಲ**

ಸಂಕುಚಿತವಾಗಿ ಕೆಳಗಿನ ಅಂಚು ಹಿಗ್ಗುತ್ತದೆಯಷ್ಟೆ. ಆಗ ಸಾದಾ ಕಾಂಕ್ರೀಟಿನ ತೊಲೆಯ ಮೇಲೆ ಹೆಚ್ಚಿನ ತೂಕ ಬಿದ್ದಾಗ ಕೆಳಗಡೆಯ ಅಂಚಿನಲ್ಲಿ ಬಿರುಕು ಬಿಟ್ಟು ಈ ಬಿರುಕುಗಳು ಕ್ರಮೇಣ ಮೇಲಿನವರೆಗೂ ಹರಡಿ ತೊಲೆಯೇ ಮುರಿದು ಬೀಳಬಹುದು. ತಳದ ಅಂಚಿನಲ್ಲಿ ಉಕ್ಕಿನ ಕಂಬಿಗಳನ್ನು ಹೂತಾಗ ಅವು ಎಳೆಯುವ ತ್ರಾಸವನ್ನು ಎದುರಿಸುತ್ತವೆ.

ಕಾಂಕ್ರೀಟ್, ಉಕ್ಕು ಎರಡನ್ನೂ ಕಾಯಿಸಿದರೆ ಹಿಗ್ಗುವ ಪ್ರಮಾಣ ಒಂದೇ ಆದ್ದರಿಂದ ಕಾಂಕ್ರೀಟಿನೊಳಗೆ ಉಕ್ಕನ್ನಿಟ್ಟಾಗ ಅವೆರಡೂ ಯಾವಾಗಲೂ ಬೇರೆಯಾಗುವುದಿಲ್ಲ. ಕಾಂಕ್ರೀಟಿಗೆ ಅದುಮುವ ತ್ರಾಸವನ್ನು ತಡೆಯುವ ಬಲ ಹೆಚ್ಚು. ಹಿಗ್ಗಿಸುವ ತ್ರಾಸವನ್ನದು ತಡೆಯುವುದಿಲ್ಲ. ಉಕ್ಕಿಗೆ ಎರಡು ಭಾಗಗಳಲ್ಲಿಯೂ ಬಲ ಹೆಚ್ಚು. ಒಂದು ತೊಲೆಯ ಮೇಲೆ ತೂಕ ಬಂದಾಗ ಅದುಮಿರುವ ಭಾಗದಲ್ಲಿ ಬರೀ ಕಾಂಕ್ರೀಟನ್ನೂ ಹಿಗ್ಗಿರುವಲ್ಲಿ ಜೊತೆಗೆ ಉಕ್ಕನ್ನೂ ಉಪಯೋಗಿಸುವುದರಿಂದ ಎರಡು ಪದಾರ್ಥಗಳ ಶಕ್ತಿಯನ್ನು ಸಂಪೂರ್ಣವಾಗಿ ಬಳಸಿಕೊಂಡ ಹಾಗಾಗುತ್ತದೆ. ಅಪರೂಪಣ (ಶೀಯರ್–ಜಾರುವುದು) ಒಂದು ಮಟ್ಟವನ್ನು ಮೀರಿದರೂ ಕಾಂಕ್ರೀಟ್ ತಡೆಯಲಾರದು. ಅಂಥ ಕಡೆಗಳಲ್ಲಿಯೂ ಜೊತೆಗೆ ಉಕ್ಕನ್ನು ಉಪಯೋಗಿಸಬೇಕಾಗುತ್ತದೆ. ಸ್ಥೂಲವಾಗಿ ಇದು ಭದ್ರಕಾಂಕ್ರೀಟು ಕೆಲಸ ಮಾಡುವ ರೀತಿ. ಇಷ್ಟು ಉಪಯುಕ್ತವಾದ ಸಾಮಗ್ರಿಯನ್ನು ಕಂಡುಹಿಡಿದ (1850) ಕೀರ್ತಿ ಫ್ರಾನ್ಸಿನ ಲ್ಯಾಂಬಟ್ ಎಂಬಾತನಿಗೆ ಸಲ್ಲಬೇಕು. ಆಮೇಲೆ ಅದೇ ದೇಶದ ಕಾಯಿನೆ, ಹೆನಿಬೆಕ್ ಮತ್ತು ಕನ್‌ಸಿಡೇರ್ ಎಂಬ ಮಹನೀಯರು ಈ ಸಾಮಗ್ರಿಯ ಸರ್ವತೋಮುಖವಾದ ಉಪಯೋಗವನ್ನು ಶಾಸ್ತ್ರೀಯ ರೀತಿಯಲ್ಲಿ ಸಮರ್ಥನೆ ಮಾಡಿದ್ದೇ ಅಲ್ಲದೆ ಅದರಿಂದ ಕಟ್ಟಡಗಳನ್ನು ಕಟ್ಟಿ ಪರೀಕ್ಷಿಸಿ ಅದರ ವೈಶಿಷ್ಟ್ಯವನ್ನು ಪ್ರಚಾರ ಮಾಡಿದರು.

ಈಗ ಭದ್ರ ಕಾಂಕ್ರೀಟ್ ಬಹು ಸಾಮಾನ್ಯವಾದ ಕಟ್ಟಡದ ಸಾಮಗ್ರಿಯಾಗಿದೆ. ಇದನ್ನು ದೊಡ್ಡ ಕಟ್ಟಡಗಳ ಚೌಕಟ್ಟುಗಳಿಗೂ ಮಾಡುಗಳಿಗೂ ಎಲ್ಲ ನಮೂನೆಗಳ ಸೇತುವೆಗಳಿಗೂ ವಿಶೇಷವಾಗಿ ಬಳಸುತ್ತಾರೆ. 2,000 ಟನ್ನಿನಷ್ಟು ಕಲ್ಲಿದ್ದಲು ಹಿಡಿಯುವ ಭಾರಿ ಉಗ್ರಾಣಗಳನ್ನು ಇದರಿಂದ ಕಟ್ಟುತ್ತಾರೆ. ವಿದ್ಯುದಾಗಾರಗಳಿಗೂ ಕಾರ್ಖಾನೆಗಳಿಗೂ 300' ಗಳಿಗಿಂತಲೂ ಎತ್ತರವಾದ ಹೊಗೆಗೂಡುಗಳನ್ನು ಕಟ್ಟುತ್ತಾರೆ. ಭದ್ರ ಕಾಂಕ್ರೀಟ್ ಉಕ್ಕಿಗಿಂತಲೂ ತೂಕವಾಗಿದೆ. ಸ್ವೀಡನ್ನಿನಲ್ಲಿ ಭದ್ರಕಾಂಕ್ರೀಟಿನಿಂದ ಕಟ್ಟಿದ ಸೇತುವೆಯ ಕಣ್ಣಿನ ಪರಮಾವಧಿ ಅಗಲ 866'. ಮನೆಗಳನ್ನು 500' ಎತ್ತರದವರೆಗೂ ಕಟ್ಟುತ್ತಾರೆ. ತೆಳುವಾದ ಚಪ್ಪಡಿಗಳನ್ನು ಗುಮ್ಮಟಗಳನ್ನು ಒಳಮಾಡುಗಳನ್ನು ಕಟ್ಟುವುದಕ್ಕೆ ಉಪಯೋಗಿಸುತ್ತಾರೆ. ಚಪ್ಪಡಿಗಳನ್ನು ಕಮಾನಿನ ಹಾಗೆ ಬಾಗಿಸುವುದರಿಂದ ದಪ್ಪ ಕಡಿಮೆಯಾಗಿ ಮಿತವ್ಯಯವಾಗುತ್ತದೆ.

**ಕಾಂಕ್ರೀಟಿನ ಕೆಲಸ:** ಒಂದು ಪಾಲು ಸಿಮೆಂಟ್, ಎರಡು ಮರಳು, ನಾಲ್ಕು ಕಲ್ಲಿನ ಜಲ್ಲಿ ಇವನ್ನು ಕಾಂಕ್ರೀಟ್ ಮಿಕ್ಸರ್ ಎಂಬ ಯಂತ್ರದಲ್ಲಿ ಎಷ್ಟು ಬೇಕೋ ಅಷ್ಟೇ ನೀರನ್ನು ಬೆರೆಸಿ ಈಗ ಸಾಮಾನ್ಯವಾಗಿ ಸಿಮೆಂಟ್ ಕಾಂಕ್ರೀಟನ್ನು ತಯಾರಿಸುತ್ತಾರೆ. ವಿದ್ಯುತ್

**ಚಿತ್ರ 4 ಸಪ್ರಮಾಣದ ಸಿಮೆಂಟು – ಮರಳು ಮಿಶ್ರಣ ಕಾರ್ಯಯೋಗ್ಯ ಮತ್ತು ಅಧಿಕ ತ್ರಾಣ ಪೂರಿತವಾಗಿದೆ.**

ಮೋಟಾರಿನ ಬಲದಿಂದ ನಡೆಯುವ ಬೆರೆಸುವ ಯಂತ್ರಗಳು ಒಂದು ಸಾರಿಗೆ ಅರ್ಧಗಜ ಕಾಂಕ್ರೀಟಿನಿಂದ ಹಿಡಿದು 250 ಸಲೆ ಗಜಗಳವರೆಗೂ ಒದಗಿಸಬಲ್ಲವು. ಕೆಲವು ವೇಳೆ ಈ ಯಂತ್ರವನ್ನು ಕಲ್ಲಿನ ಜಲ್ಲಿ, ಮರಳು, ಸಿಮೆಂಟ್ ಇವುಗಳಿಂದ ತುಂಬಿದ ಲೋಹದ ಕಣಜಗಳುಳ್ಳ ಉಕ್ಕಿನ ಗೋಪುರಗಳಂತಿರುವ ಬ್ಯಾಚಿಂಗ್ ಪ್ಲಾಂಟಿನಲ್ಲಿ ಇಟ್ಟಿರುತ್ತಾರೆ. ಒಂದೊಂದು ಸಾಮಗ್ರಿಯನ್ನು ಕರಾರುವಾಕ್ಕಾಗಿ ಅಳೆದು ಮಿಶ್ರಣದ ಯಂತ್ರಕ್ಕೆ ಇದು ತಾನಾಗಿಯೇ ಒದಗಿಸುತ್ತದೆ.

ಕಾಂಕ್ರೀಟಿನ ಕಟ್ಟಡವನ್ನು ಕಟ್ಟುವಾಗ ತಾತ್ಕಾಲಿಕವಾದ ಮರದ ಹಲಗೆಯ ಚೌಕಟ್ಟನ್ನು ಮಾಡಿ ಕಾಂಕ್ರೀಟನ್ನು ಹಾಕಬೇಕಾದ ಜಾಗದ ಸುತ್ತ ಎಚ್ಚರಿಕೆಯಿಂದ ಜೋಡಿಸುತ್ತಾರೆ. ಕೆಲವು ವೇಳೆ ಈ ಕಾಲಾವಧಿಯನ್ನು ಉಕ್ಕಿನಿಂದ ಮಾಡುವುದೂ ಉಂಟು. ಕಾಲಾವಧಿಯ ಒಳಗಡೆ ಸಂವಿಧಾನಕ್ಕೆ ಸರಿಯಾಗಿ ಉಕ್ಕಿನ ಕಂಬಿಗಳನ್ನು ಎರಡು ದಿಕ್ಕುಗಳಲ್ಲಿಯೂ ಜೋಡಿಸುತ್ತಾರೆ. ಏರ್ಪಾಡುಗಳೆಲ್ಲವೂ ಆದ ಮೇಲೆ ಆಗ ತಾನೇ ಕಲಸಿದ ಸಿಮೆಂಟ್ ಕಾಂಕ್ರೀಟನ್ನು ಉಕ್ಕಿನ ಕಂಬಿಗಳ ಕೆಳಗೂ ಮೇಲೂ ಕಾಲಾವಧಿಯೊಳಗಡೆ ಇರಿಸಿ ದಮ್ಮಸುಗಳಿಂದಲೋ ಯಂತ್ರಗಳಿಂದಲೋ ಗಟ್ಟಿ ಮಾಡುತ್ತಾರೆ. ಕಾಂಕ್ರೀಟು ಗಟ್ಟಿಯಾದ ಮೇಲೆ ಎರಡು ವಾರಗಳಿಂದ ಮೂರು ವಾರಗಳ ಅವಧಿಯ ಮೇಲೆ ಹೊರಗಡೆಯ ಕಾಲಾವಧಿಯನ್ನು ತೆಗೆಯಬಹುದು. ಕಾಂಕ್ರೀಟು ಗಟ್ಟಿಯಾಗುತ್ತಿರುವಾಗ ಅದು ಬೇಗ ಒಣಗಿ ಬಿರುಕುಗಳು ಬರದ ಹಾಗೆ ನೀರನ್ನು ದಿನವೂ ಹಾಕುತ್ತ ತೇವವಾಗಿ ಇಟ್ಟಿರಬೇಕು. ಆಗ ಉಂಟಾಗುವ ರಾಸಾಯನಿಕ ಕ್ರಿಯೆಗಳಿಂದ ಉಷ್ಣ ಉತ್ಪತ್ತಿಯಾಗುತ್ತದೆ. ಇದು ಹೊರಕ್ಕೆ ವಿಸರಣೆಯಾಗದಿದ್ದರೆ ಕಟ್ಟಡ ಒಂದೊಂದು ಕಡೆ ಒಂದೊಂದು ರೀತಿಯಾಗಿ ಹಿಗ್ಗಿ ಬಿರುಕುಗಳಿಗೆ ಅವಕಾಶ ಕೊಡಬಹುದು. ಸಣ್ಣ ಕೆಲಸಗಳಲ್ಲಿ ಕಾಂಕ್ರೀಟಿನ ಮೇಲೆ ಗಾರೆಯ ಕಟ್ಟೆಗಳನ್ನು ಕಟ್ಟಿ ಪಾತಿಗಳಲ್ಲಿ ಯಾವಾಗಲೂ ನೀರನ್ನು ತುಂಬುತ್ತಾರೆ. ದೊಡ್ಡ ಕಾಂಕ್ರೀಟಿನ ಕಟ್ಟೆಗಳಲ್ಲಿ ಒಳಗಡೆ ಕೊಳವಿಗಳನ್ನು ಹೂಳಿ ಅವುಗಳಲ್ಲಿ ತಣ್ಣಗಿರುವ ನೀರು ಸಂಚರಿಸುವಂತೆ ಮಾಡುತ್ತಾರೆ. ಇನ್ನೊಂದು ಕ್ರಮದಲ್ಲಿ ಕಾಂಕ್ರೀಟನ್ನು ಒಂದು ಬಿಟ್ಟು ಒಂದು ಅಂಕಣದಲ್ಲಿ ಒಂದು ಸಾರಿ ತುಂಬಿ ನಡುವಿನ ಅಂಕಣಗಳನ್ನು ಆಮೇಲೆ ತುಂಬುತ್ತಾರೆ. ಇನ್ನು ಕೆಲವು ವೇಳೆ ಗಟ್ಟಿಯಾಗುವಾಗ ಹೆಚ್ಚಿನ ಉಷ್ಣವನ್ನು ಉತ್ಪಾದನೆ ಮಾಡದೆ ಇರುವ ವಿಶಿಷ್ಟ ನಮೂನೆಯ ಸಿಮೆಂಟನ್ನು ಉಪಯೋಗಿಸುತ್ತಾರೆ.

ವಿಜ್ಞಾನ ಮುಂದುವರಿದಂತೆ ಭದ್ರಕಾಂಕ್ರೀಟಿನಲ್ಲಿ ಹೆಚ್ಚು ಹೆಚ್ಚಿನ ಸಂಶೋಧನೆ ನಡೆದು ಅದರ ಬಲವನ್ನು ಇನ್ನೂ ಹೆಚ್ಚಿಸಲು ತಜ್ಞರು ಪ್ರಯತ್ನಿಸುತ್ತಲೇ ಇದ್ದಾರೆ. ಕಾಂಕ್ರೀಟಿನ ಮೇಲೆ ತೂಕವನ್ನು ಹೇರುವ ಮೊದಲೆ ಕಂಬಿಗೂ ಕಾಂಕ್ರೀಟಿಗೂ ಯಂತ್ರಗಳ ಸಹಾಯದಿಂದ ಒತ್ತಡವನ್ನು ಪ್ರಯುಕ್ತಿಸಿ ಅದನ್ನು ಇನ್ನೂ ಹೆಚ್ಚು ಬಲವುಳ್ಳದ್ದನ್ನಾಗಿ ಮಾಡುತ್ತಾರೆ. ಇದರ ಬಲ ಸಾಧಾರಣ ಕಾಂಕ್ರೀಟಿನ ಬಲಕ್ಕಿಂತ 4ರಷ್ಟು ಜಾಸ್ತಿ ಇರುತ್ತದೆ. ಕಬ್ಬಿಣದ ಬಲ ಚ.ಅಂ. 18,000 ಪೌಂಡಿನಿಂದ 1,50,000 ಪೌಂಡಿಗೆ ಏರುತ್ತದೆ. ಇದರಿಂದ ಹೆಚ್ಚಿಗೆ ಉಳಿತಾಯ ಮಾಡಬಹುದು.

ಪ್ರಯೋಗಶಾಲೆಯಲ್ಲಿ ಕಾಂಕ್ರೀಟಿನ ಬಲ, ಬಗ್ಗುವಿಕೆ, ತಿರುಚುವಿಕೆ, ತೂಕವನ್ನು ಎತ್ತಿ ಹಿಡಿಯುವ ಬಗ್ಗೆ ಸಂಶೋಧನೆಗಳನ್ನು ಮಾಡುತ್ತಾರೆ. ಇವುಗಳಿಂದ ಕಾಂಕ್ರೀಟಿನ ಗಾತ್ರ ಮತ್ತು ಉಪಯೋಗಿಸುವ ಕಂಬಿಗಳ ವ್ಯಾಸವನ್ನು ತೀರ್ಮಾನಿಸಬಹುದು. ಕಾಂಕ್ರೀಟ್ ಗಾತ್ರವನ್ನು ಬೇರೆ ಬೇರೆ ಕೆಲಸಗಳಿಗೆ ಉಪಯೋಗಿಸುವಾಗ ಅದು ಹೊರುವ ಒಟ್ಟು ತೂಕ, ಎರಡು ಕಂಬಗಳ ಮಧ್ಯೆ ಇರುವ ಸ್ಥಳ ಇವನ್ನು ನಿರ್ಧರಿಸಿ ಲೆಕ್ಕಾಚಾರ ಮಾಡುತ್ತಾರೆ.

ಎಲ್ಲ ಕಟ್ಟಡಗಳಿಗೂ ಕಾಂಕ್ರೀಟ್ ಅತ್ಯುತ್ತಮವಾದ ಸ್ಥಿರವಾದ ವಸ್ತು. ಸಿಮೆಂಟ್ ಒಂದನ್ನು ಬಿಟ್ಟು ಬಾಕಿ ಮಿಶ್ರಣದ ವಸ್ತುಗಳಾದ ಮರಳು ಜಲ್ಲಿಗಳನ್ನು ಸ್ಥಳದಲ್ಲಿಯೇ ಸುಲಭವಾಗಿ ಪಡೆದು ದೊಡ್ಡ ದೊಡ್ಡ ಸಾಧನಗಳನ್ನು ಮತ್ತು ಎಲ್ಲ ತರದ ಕಟ್ಟಗಳನ್ನು ಕಟ್ಟಬಹುದು.

**ಭದ್ರಪಡಿಸಿದ ಕಾಂಕ್ರೀಟ್:** ಸಿಮೆಂಟ್ ಕಾಂಕ್ರೀಟಿನೊಳಗೆ ಉಕ್ಕನ್ನು ಗರ್ಭೀಕರಿಸಿ ಬಲಪಡಿಸಿದ ಸಾಮಗ್ರಿ (ಫೆರ್ರೋ ಕಾಂಕ್ರೀಟ್). ಕಾಂಕ್ರೀಟ್ ಮತ್ತು ಉಕ್ಕಿನ ಕಂಬಿಗಳನ್ನು ವೈಜ್ಞಾನಿಕ ತತ್ತ್ವಗಳಿಗೆ ಅನುಗುಣವಾಗಿ ಜೋಡಿಸಿದರೆ ಬರುವ ಸಂಯುಕ್ತ ಸಾಮಗ್ರಿ ಅದುಮುವ ಹಾಗೂ ಎಳೆತದ ತ್ರಾಸಗಳನ್ನು ಎದುರಿಸುತ್ತದೆ. ಇದೇ ಫೆರ್ರೋ ಕಾಂಕ್ರೀಟ್ ಅಥವಾ ಭದ್ರಪಡಿಸಿದ ಕಾಂಕ್ರೀಟ್.

ಒಂದು ಮನೆಯ ಮಾಡಿಗೆ ಫೆರ್ರೋಕಾಂಕ್ರೀಟನ್ನು ಬಳಸುವಾಗ ನಾಲ್ಕು ಕಡೆಯ ಗೋಡೆಗಳೂ ಬೇಕಾದ ಮಟ್ಟಕ್ಕೆ ಎದ್ದ ಮೇಲೆ ಕಾಡುಮರದ ಲಂಬವಾದ ಆಧಾರಗಳನ್ನು ಸೂಕ್ತವಾದ ಅಂತರದಲ್ಲಿ ನಿಲ್ಲಿಸಿ, ಅವುಗಳ ಮೇಲುಗಡೆ ತೊಲೆಗಳನ್ನೆಳೆದು, ತೊಲೆಗಳಿಗೆ ಅಡ್ಡಲಾಗಿ, ಕೊಠಡಿಯ ಇನ್ನೊಂದು ದಿಕ್ಕಿನಲ್ಲಿ ಮರದ ಹಲಗೆಗಳನ್ನು ಮಟ್ಟವಾಗಿ ಕೂರಿಸಬೇಕು. ಅದರ ಮೇಲೆ ಸಂವಿಧಾನಕ್ಕೆ ಸರಿಯಾಗಿ ಕಬ್ಬಿಣದ ಕಂಬಗಳನ್ನು ಎರಡು ದಿಕ್ಕುಗಳಲ್ಲಿಯೂ ಜೋಡಿಸಬೇಕು.

ಈ ಕಡೆ ಮರಳು, ಕಲ್ಲಿನ ಜಲ್ಲಿ ಮತ್ತು ಸಿಮೆಂಟನ್ನು ಹದವಾಗಿ ಕಲಸಿ, ಬಂದ ಕಾಂಕ್ರೀಟನ್ನು ಮಾಡಿಗೆ ಸಾಗಿಸಿ, ಕಂಬಿಗಳ ಮೇಲೆ ನಿರ್ದಿಷ್ಟವಾದ ದಪ್ಪಕ್ಕೆ ಹರಡಬೇಕು. ಆಮೇಲೆ ಕಾಂಕ್ರೀಟಿನ ಮೇಲೆ ನೀರನ್ನು ಒಂದು ಅಂಗುಲ ಆಳವಾಗಿ ನಿಲ್ಲಿಸಿ ಕಾಂಕ್ರೀಟು ಗಟ್ಟಿಯಾಗಲು ಅವಕಾಶವನ್ನು ಕೊಟ್ಟು 15 ದಿವಸಗಳ ಮೇಲೆ ಕೆಳಗಿನಿಂದ ಕೊಟ್ಟ ಆಧಾರಗಳನ್ನು ತೆಗೆದು ಮುಂದಿನ ಕೆಲಸವನ್ನು ಪ್ರಾರಂಭಿಸಬಹುದು. (ಎಚ್.ಸಿ.ಕೆ.)

**ಮೊದಲೇ ಅಚ್ಚೊತ್ತಿದ ಕಾಂಕ್ರೀಟ್ (ಪ್ರೀಕ್ಯಾಸ್ಟ್ ಕಾಂಕ್ರೀಟ್):** ನಿರ್ದಿಷ್ಟ ಆಲೇಖ್ಯಾನುಸಾರ ಕಟ್ಟಡವನ್ನು ಕಟ್ಟುವಾಗ ಅದರ ವಿವಿಧ ಅಂಶಗಳನ್ನು ಆಯಾ ಸ್ಥಾನಗಳಲ್ಲೇ ರಚಿಸಿ ಒಟ್ಟು ಕಟ್ಟಡವನ್ನು ಪೂರೈಸುವುದು ಒಂದು ಬಗೆ. ಇಂಥ ರಚನೆಯಲ್ಲಿ ಕಾಂಕ್ರೀಟಿನ ಅಂಶಗಳನ್ನು ಸಹ ಆಯಾ ಸ್ಥಾನಗಳಲ್ಲೇ ಅಳವಡಿಸುತ್ತಾರೆ. ಕಟ್ಟಡ ನಿರ್ಮಾಣದ ಇನ್ನೊಂದು ಬಗೆಯಲ್ಲಿ ಅದರ ಬಿಡಿ ಭಾಗಗಳನ್ನು ಬೇರೆ ಕಡೆ ತಯಾರಿಸಿ ಅನಂತರ ಒಟ್ಟುಗೂಡಿಸಿ ಕಟ್ಟಡವನ್ನು ಪೂರೈಸುವುದು ಉಂಟು. ಇಂಥ ರಚನೆಗಳಲ್ಲಿ ಕಟ್ಟಡದಲ್ಲಿ ಬಳಸುವ ಕಾಂಕ್ರೀಟಿನ ಬಿಡಿ ಭಾಗಗಳನ್ನು ಪ್ರತ್ಯೇಕವಾಗಿ ಅಚ್ಚಿನಲ್ಲಿ ಹೊಯ್ದು ತಯಾರಿಸುತ್ತಾರೆ. ಇವನ್ನು ಮೊದಲೇ ಅಚ್ಚೊತ್ತಿದ ಕಾಂಕ್ರೀಟ್ ಎಂದು ಕರೆಯುತ್ತೇವೆ. ಇದರ ಏಕರೂಪದ ತುಂಡುಗಳನ್ನು ಒಂದೇ ಜಾಗ ಅಥವಾ ಕಾರ್ಖಾನೆ ಎಂದು ಕರೆಯುತ್ತೇವೆ. ಇದರ ಏಕರೂಪದ ತುಂಡುಗಳನ್ನು ಒಂದೇ ಜಾಗ ಅಥವಾ ಕಾರ್ಖಾನೆಯಲ್ಲಿ ತಯಾರಿಸಿ, ಬೇಕಾದೆಡೆಗಳಿಗೆ ಸಾಗಿಸಿ, ಜೋಡಿಸಿ ಜಾಗ್ರತೆಯಾಗಿಯೂ ಸುಲಭವಾಗಿಯೂ ಅಗ್ಗವಾಗಿಯೂ ಕಟ್ಟಡಗಳನ್ನು ಎತ್ತಬಹುದು. ಗೋಡೆಗಳ ಗಟ್ಟಿ ಅಥವಾ ಟೊಳ್ಳು ಇಟ್ಟಿಗೆಗಳು, ಕಿಟಕಿ ಬಾಗಿಲುಗಳ ಚೌಕಟ್ಟುಗಳು, ಮೇಲ್ಛಾವಣಿಯ ಅಂಗಭಾಗಗಳು, ಪಾಯಗಳಲ್ಲಿನ ಮೊನಚು ಕಂಬಗಳು ಇಂಥ ಅನೇಕ ಕಟ್ಟಡದ ಸಾಮಗ್ರಿಗಳನ್ನು ಈ ರೀತಿ ತಯಾರಿಸುವರು. ಇದರ ಗೋಡೆಗಳು ಕೊಠಡಿಯ ಶೀತೋಷ್ಣಗಳಲ್ಲಿ ಏಕರೀತಿಯಾಗಿರಿಸುವುವು. ಅಲ್ಲದೆ ಈ ಗೋಡೆಗಳಿಗೆ ತೆಳು ಗಿಲಾವೇ ಸಾಕು. (ಎಂ.ಆರ್.ಎಸ್.ಐ.)

**ಗಣಿಗಾರಿಕೆಯಲ್ಲಿ ಕಾಂಕ್ರೀಟ್:** ಗಣಿಯಲ್ಲಿ ಮುಖ್ಯ ಸುರಂಗಮಾರ್ಗವನ್ನು ಭದ್ರಪಡಿಸಲು ಕಾಂಕ್ರೀಟನ್ನು ಉಪಯೋಗಿಸುತ್ತಾರೆ. ಬಹು ಮುಖ್ಯವಾಗಿ ವೃತ್ತಕೂಪ (ಸರ್ಕ್ಯುಲರ್ ಷಾಫ್ಟ್) ಮತ್ತು ಆಯಕೂಪಗಳ ಒಳಗೋಡೆಯನ್ನು ಕಸಿದುಕೊಳ್ಳುವಿಕೆಯಿಂದ ಮತ್ತು ಕುಸಿತಗಳಿಂದ ಉಂಟಾಗುವ ಅಪಾಯವನ್ನು ತಪ್ಪಿಸಲು ಕಾಂಕ್ರೀಟ್ ಆಸರೆ ಕೊಟ್ಟು ಭದ್ರಪಡಿಸುತ್ತಾರೆ. ಇಳಿಕಲಿನಲ್ಲಿ ಸಹ ಮೇಲೆ ತಿಳಿಸಿದ ಅಪಾಯಗಳಿಂದ ತಪ್ಪಿಸಲು ಅದುರು ತೆಗೆಯುವ ಕ್ಷೇತ್ರದ ಮೇಲೆ ಗೋಡೆ ಹಾಗೂ ತಳಗೋಡೆಗಳ

ಮಧ್ಯದಲ್ಲಿ ಕಾಂಕ್ರೀಟ್ ಕಂಬಗಳನ್ನು ಪರಿಸರಕ್ಕೆ ಅನುಗುಣವಾಗಿ ರಚಿಸಿ ನಿರ್ಮಿಸಿ ಭದ್ರಪಡಿಸಲಾಗುವುದು.

ಭೂತಳ ಗಣಿಗಳಲ್ಲಿ ಕೆಲಸಕ್ಕೆ ಬಾರದ ಕೂಪಗಳನ್ನು (ಅಂದರೆ ಆ ಕೂಪದಿಂದ ಎಷ್ಟು ಸಾಧ್ಯವೋ ಅಷ್ಟು ಅದಿರನ್ನು ಮೇಲೆ ತೆಗೆದ ಅನಂತರ) ಕಾಂಕ್ರೀಟ್ ಬಿರುಟೆಯಿಂದ (ಪ್ಲಗ್) ಭದ್ರಪಡಿಸುತ್ತಾರೆ. ಇದರ ಮುಖ್ಯೋದ್ದೇಶ ಮುಂದೆ ಒದಗಬಹುದಾದ ಅನಾಹುತಗಳನ್ನು ತಪ್ಪಿಸುವುದು. ಇಳಿಕಲು ಕೂಪಗಳಲ್ಲಿ (ಇನ್‍ಕ್ಲೈನ್ಡ್ ಷಾಫ್ಟ್) ಅನ್ಯೋನ್ಯ ಸಂಬಂಧ ಮೋಜಣಿ (ಕಾರ‍್ರಿಲೇಷನ್ ಸರ್ವೆ) ನಡೆಸುವುದಕ್ಕಾಗಿ ಥಿಯೋಡಲೈಟ್ ಅಥವಾ ಗಣಿಗಾರನ ಡಯಲ್ ಇಡಲು ಅನುಕೂಲವಾಗುವಂತೆ ಗೊತ್ತಾದ ಸ್ಥಳಗಳಲ್ಲಿ ಕಾಂಕ್ರೀಟಿನಿಂದ ಸಮತಲ ಜಗಲಿಗಳನ್ನು ಕಟ್ಟುತ್ತಾರೆ. ಕೆಲವು ವೇಳೆ ಇದನ್ನು ಸಹ ಕಾಂಕ್ರೀಟ್ ಬಿರುಟೆಯೆಂದು ಕರೆಯುವುದುಂಟು. (ಟಿ.ಟಿ.)

**ಕಾಂಗರೂ :** ಅರೆಬೆಳೆದ ಮರಿಗಳನ್ನು ಹೆತ್ತು ಅವನ್ನು ತಮ್ಮ ಹೊಟ್ಟೆಯಲ್ಲಿನ ಚೀಲದಲ್ಲಿ ಹೊತ್ತು ಬೆಳೆಸುವ ಅನೇಕ ಪ್ರಾಣಿಜಾತಿಗಳಲ್ಲಿ ಒಂದು. ಅನೇಕ ವಿಚಿತ್ರಪ್ರಾಣಿಗಳಿಗೆ ಹೆಸರಾದ ಆಸ್ಟ್ರೇಲಿಯ ಇದರ ತವರು. ಟಾಸ್ಮೇನಿಯ ದ್ವೀಪದಲ್ಲೂ ಕಾಂಗರೂ ಕಾಣಬರುತ್ತದೆ.



ಕಾಂಗರೂ–ತನ್ನ ಮರಿಯೊಂದಿಗೆ

ಇದು ಮಾರ್ಸ್ಯೂಪಿಯೇಲಿಯ ಗಣಕ್ಕೂ ಮ್ಯಾಕ್ರೋಪೋಡಿಡೀ ಕುಟುಂಬಕ್ಕೂ ಸೇರಿದೆ. ತುಂಬ ವಿಚಿತ್ರ ಪ್ರಾಣಿಯಿದು. ನೆಗೆಯಲು ಅನುಕೂಲವಾದ ಉದ್ದನೆಯ ಹಾಗೂ ಬಲವಾದ ಹಿಂಗಾಲುಗಳು, ಮಾಂಸಲವಾಗಿ ಬೆಳೆದ ಉದ್ದವಾದ ಬಾಲ, ಮರಿಗಳನ್ನು ಹೊತ್ತು ಸಾಗಲು ಮತ್ತು ಪೋಷಿಸಲು ಅನುಕೂಲವಾದ ಹೊಟ್ಟೆಯ ಚೀಲ ಇದರ ವೈಶಿಷ್ಟ್ಯಗಳು. ಬಾಲ ಬುಡದಲ್ಲಿ ದಪ್ಪವಾಗಿಯೂ ತುದಿಯಲ್ಲಿ ಮೊನಚಾಗಿಯೂ ಇದೆ. ಕಾಂಗರೂ ಕುಳಿತಾಗ ತನ್ನ ಹಿಂಗಾಲುಗಳನ್ನೂ ಬಾಲವನ್ನೂ ಒಂದು ಬಗೆಯ ಊರೆಯಾಗಿ ಉಪಯೋಗಿಸಿಕೊಂಡು ವಿಚಿತ್ರ ಭಂಗಿಯಲ್ಲಿ ಕುಳಿತುಕೊಳ್ಳುತ್ತದೆ. ಅಲ್ಲದೆ ಓಡುವಾಗ ನಿಂತು ತನ್ನ ಬಲವಾದ ಕಾಲುಗಳನ್ನೂರಿ ಕುಪ್ಪಳಿಸುತ್ತ ಹೋಗುತ್ತದೆ. ನೆಗೆಯುವುದರಲ್ಲಿ ಬಲು ಕುಶಲಿ. ಒಂದು ನೆಗೆತಕ್ಕೆ ಸುಮಾರು 25' ದೂರ ಕ್ರಮಿಸಬಲ್ಲುದು; 9' ಎತ್ತರ ಹಾರಬಲ್ಲ ಸಾಮರ್ಥ್ಯವೂ ಇದೆ.

ಪೂರ್ಣಬೆಳೆದ ಕಾಂಗರೂ ಸುಮಾರು 8' ಉದ್ದ ಬೆಳೆದು ಸುಮಾರು 200 ಪೌಂ. ತೂಗುತ್ತದೆ. ಮೈಮೇಲೆಲ್ಲ ಕಂದು ಅಥವಾ ಬೂದಿಬಣ್ಣದ ಉಣ್ಣೆಯಂಥ ಕೂದಲಿದೆ. ಮೂತಿ ಹೆಚ್ಚುಕಡಿಮೆ ನಾಯಿಯಂತೆ. ಬಾಯಿ ಚಿಕ್ಕದು; ತುಟಿಗಳು ಮುಂಚಾಚಿವೆ. ಕಿವಿಗಳು ದೊಡ್ಡವು, ದುಂಡಗಿವೆ; ಹಿಂದಕ್ಕೂ ಮುಂದಕ್ಕೂ ಚಲಿಸಬಲ್ಲುವು. ಮುಂಗಾಲುಗಳು ಬಲು ಚಿಕ್ಕವು. ಎಲ್ಲ ಕಾಂಗರೂಗಳಿಗೂ ಮುಂಭಾಗದಲ್ಲಿ ತೆರೆಯುವಂಥ ಹೊಟ್ಟೆಯ ಚೀಲವಿದೆ. ಈ ಚೀಲದ ಒಳಗೆ 4 ಮೊಲೆತೊಟ್ಟುಗಳಿವೆ.

ಕಾಂಗರೂಗಳು ಹೆಚ್ಚಾಗಿ ಬಯಲಿನಲ್ಲೇ ವಾಸಮಾಡುತ್ತವೆ. ಸಾಮಾನ್ಯವಾಗಿ ಜೊತೆಯಾಗಿಯೋ ದೊಡ್ಡ ದೊಡ್ಡ ಹಿಂಡುಗಳಲ್ಲಿಯೋ ವಾಸಿಸುತ್ತವೆ. ಒಂದೊಂದು ಹಿಂಡಿನಲ್ಲಿ 50–60 ಪ್ರಾಣಿಗಳಿರುವುದೂ ಉಂಟು. ಪ್ರತಿಯೊಂದು ಹಿಂಡಿಗೂ ಅದರದೇ ಆದ ಅನ್ನಕ್ಷೇತ್ರವಿದೆ. ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸುವಾಗ ಮುಂದಾಳನ್ನು ಹಿಂಡಿನ ಉಳಿದ ಪ್ರಾಣಿಗಳು ಅನುಸರಿಸುತ್ತವೆ. ಕಾಂಗರೂಗಳು ಸ್ವಾಭಾವಿಕವಾಗಿ ಬಹಳ ಶಾಂತಸ್ವಭಾವದ ಪ್ರಾಣಿಗಳು. ಪುಕ್ಕಲುಸ್ವಭಾವದವೆಂದೇ ಹೇಳಬಹುದು. ಬೇಟೆಗಾಲದಲ್ಲಿ ಮಾತ್ರ ಇತರ ಪ್ರಾಣಿಗಳೊಂದಿಗೆ ಕ್ರೂರವಾಗಿ ಹೋರಾಡಬಲ್ಲುವು. ಇವುಗಳ ಹಿಂಗಾಲಿನೊದೆತ ಸಾಮಾನ್ಯವಾದ ಏಟಲ್ಲ. ಹೋರಾಡುವಾಗ ಇವು ನಿಮಿರಿನಿಂತು ಬಾಲವನ್ನೂ ಒಂದು ಕಾಲನ್ನೂ ನೆಲಕ್ಕೂರಿ ಮತ್ತೊಂದು ಕಾಲಿನಿಂದ ರಪರಪನೆ ಒದೆಯುತ್ತವೆ.

ಕಾಂಗರೂಗಳು ಸಸ್ಯಾಹಾರಿಗಳು. ಹುಲ್ಲು, ಗಿಡಗಳ ಚಿಗುರು ಇವುಗಳ ಪ್ರಧಾನ ಆಹಾರ. ಗರ್ಭಧಾರಣೆಯ ಕಾಲ ಬಲುಕಿರಿಯದು. ಅದರ ಅವಧಿ ಸುಮಾರು 3 ವಾರ ಮಾತ್ರ. ಒಂದು ಸೂಲಿಗೆ ಒಂದೇ ಮರಿ ಹುಟ್ಟುತ್ತದೆ. ಆಗತಾನೇ ಹುಟ್ಟಿದ ಮರಿ ತುಂಬ ಚಿಕ್ಕದು. ಸುಮಾರು ಒಂದು ಅಂಗುಲ ಉದ್ದವಿರುತ್ತದೆ. ಕಣ್ಣು ತೆರೆದೇ ಇರುವುದಿಲ್ಲ. ಮೈಮೇಲೆ ಕೂದಲಿನ ಹೊದಿಕೆಯೂ ಇರುವುದಿಲ್ಲ. ಹೀಗೆ ಅಪೂರ್ಣಾವಸ್ಥೆಯಲ್ಲಿ ಹುಟ್ಟುವ ಮರಿಯ ಉಳಿದ ಬೆಳವಣಿಗೆಯೆಲ್ಲ ತಾಯಿಯ ಹೊಟ್ಟೆಯ ಚೀಲದಲ್ಲಿಯೆ. ಮರಿ ಹುಟ್ಟಿದ ತತ್‍ಕ್ಷಣ ತನ್ನ ಮುಂಗಾಲುಗಳ ಸಹಾಯದಿಂದ ತಾಯಿಯ ಹೊಟ್ಟೆಚೀಲದೊಳಕ್ಕೆ ಹತ್ತಿಹೋಗುತ್ತದೆ. ಚೀಲದೊಳಕ್ಕೆ ಹೋದ ಅನಂತರ ಯಾವುದಾದರೊಂದು ಮೊಲೆತೊಟ್ಟನ್ನು ಬಾಯಿಯಿಂದ ಕಚ್ಚಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಸುಮಾರು 3 ತಿಂಗಳು ಕಾಲ ಕಳೆದು ತನ್ನ ಬೆಳವಣಿಗೆಯನ್ನು ಪೂರ್ಣಗೊಳಿಸುತ್ತದೆ. ಅನಂತರ ಅದು ಚೀಲದಿಂದ ಹೊರಗೆ ಬಂದು ತನ್ನ ಸ್ವಂತ ಬದುಕನ್ನು ನಡೆಸಲು ಪ್ರಾರಂಭಿಸಬಲ್ಲುದು. ಆದರೆ ಮುಂದೆಯೂ ಹಲವಾರು ತಿಂಗಳು ಕಾಲ ತಾಯಿಯೊಡನೆಯೇ ಇದ್ದು ಆಪತ್ತೊದಗಿದಾಗ ಪುನಃ ತನ್ನ ಈ ರಕ್ಷಣಾಸ್ಥಾನಕ್ಕೆ ಮರಳಬಹುದು.

ಕಾಂಗರೂಗಳಲ್ಲಿ ಸುಮಾರು 20ಕ್ಕಿಂತಲೂ ಹೆಚ್ಚು ಜಾತಿಗಳಿವೆ. ಇವುಗಳಲ್ಲಿ ಮುಖ್ಯವಾದವು ಇವು: 1 ಮ್ಯಾಕ್ರೋಪಸ್ ಜೈಗಾಂಟಿಯಸ್ ಎಂಬ ದೊಡ್ಡ ಗಾತ್ರದ ಕಾಂಗರೂ. ಇದರ ಬಣ್ಣ ಬೂದು. ಪೂರ್ವ ಹಾಗೂ ಪಶ್ಚಿಮ ಆಸ್ಟ್ರೇಲಿಯ ಮತ್ತು ಟಾಸ್ಮೇನಿಯಗಳಲ್ಲಿ ಜೀವಿಸುತ್ತದೆ. 2 ಮ್ಯಾಕ್ರೋಪಸ್ ರೂಫಸ್ (ಕೆಂಪು ಬಣ್ಣದ ಕಾಂಗರೂ). ಆಸ್ಟ್ರೇಲಿಯದ ಒಳನಾಡಿನ ವಾಸಿ ಇದು. ಇವಲ್ಲದೆ ಮ್ಯಾಕ್ರೋಪೋಡಿಡೀ ಕುಟುಂಬಕ್ಕೆ ಸೇರಿದ ಡೆಂಡ್ರೊಲೇಗಸ್ (ಟ್ರೀ ಕಾಂಗರೂ, ವಾಲಬೀಯ (ವಾಲಬೀ), ಪೆಟ್ರೋಗೇಲ್ (ರಾಕ್ ವಾಲಬೀ), ಡಾರ್ಕಾಪ್ಸಿಸ್ ಮುಂತಾದ ಜಾತಿಯ ಪ್ರಾಣಿಗಳನ್ನೂ ಸಾಮಾನ್ಯ ಭಾಷೆಯಲ್ಲಿ ಕಾಂಗರೂಗಳೆಂದೇ ಕರೆಯುತ್ತಾರೆ. (ಎ.)

**ಕಾಂಗರೂ ಇಲಿ :** ಉತ್ತರ ಅಮೆರಿಕ ಬೃಹದ್ ಮೈದಾನಗಳಲ್ಲಿ, ನೈಋತ್ಯಭಾಗದಲ್ಲಿನ ಮರುಭೂಮಿಯಲ್ಲಿ ವಾಸಿಸುವ ಒಂದು ಪುಟ್ಟ ದಂಶಕ (ರೋಡೆಂಟ್). ಡೈಪೊಡೋಮಿಸ್ ಜಾತಿಗೂ ಹೆಟರೋಮ್ಯೆಯಿಡೀ ಕುಟುಂಬಕ್ಕೂ ಸೇರಿದೆ. ಮೆಕ್ಸಿಕೋ, ಕ್ಯಾಲಿಫೋರ್ನಿಯ, ಇಡಾಹೊ, ವ್ಯೋಮಿಂಗ್ ಮತ್ತು ಓಕ್ಲಹೋಮ ರಾಜ್ಯಗಳಲ್ಲಿ ಬಲು ಸಾಮಾನ್ಯ. ಈ

ಜಾತಿಯಲ್ಲಿ ಸುಮಾರು 50 ಪ್ರಭೇದಗಳಿವೆ. ಎಲ್ಲವೂ ಸಾಧಾರಣವಾಗಿ 4"–6" ಉದ್ದ ಬೆಳೆಯುತ್ತವೆ. ದೇಹದ ಬಣ್ಣ ಕೆಲವದರಲ್ಲಿ ಕಂದು. ಇನ್ನು ಕೆಲವು ತಿಳಿಬೂದಿ ಬಣ್ಣದವು. ಮಧ್ಯವರ್ತಿ ಬಣ್ಣಗಳ ಇಲಿಗಳೂ ಉಂಟು. ಎಲ್ಲ ಪ್ರಭೇದಗಳಿಗೂ ಇರುವ ಸಾಮಾನ್ಯ ಲಕ್ಷಣಗಳಿವು: ದಪ್ಪತಲೆ, ದೊಡ್ಡದೊಡ್ಡ ಕಣ್ಣುಗಳು, ಬಲುಪುಟ್ಟ ಮುಂಗಾಲುಗಳು, ಬಹಳ ಉದ್ದವಾದ ಹಿಂಗಾಲುಗಳು, ಮತ್ತು ದೇಹಕ್ಕಿಂತ ಉದ್ದವಾದ ಬಾಲ. ಕೆನ್ನೆಯ ಎರಡೂ ಕಡೆ ಆಹಾರವನ್ನು ಕೂಡಿಡಲು ಸಂಚಿಗಳಿರುವುದು ಇವುಗಳ ಇನ್ನೊಂದು ವಿಶೇಷ ಲಕ್ಷಣ. ಪಾದಗಳು ಮತ್ತು ಉದರ ಭಾಗ ಬಿಳಿಯ ಬಣ್ಣವಾಗಿವೆ. ಪೃಷ್ಠಭಾಗ ಮತ್ತು ಬಾಲದ ಎರಡೂ ಪಕ್ಕಗಳಲ್ಲಿ ಉದ್ದನೆಯ ಬಿಳಿ ಪಟ್ಟೆಯಿದೆ. ಬಾಲದ ತುದಿ ಕುಚ್ಚಿನಂತಿದೆ.

ಮರದ ದಿಮ್ಮಿಗಳ ಕೆಳಗೆ, ದಟ್ಟವಾದ ಪೊದೆಗಳಲ್ಲಿ, ನೆಲದಲ್ಲಿ ಬಿಲಗಳನ್ನು ತೋಡಿ ಅವುಗಳಲ್ಲಿದ್ದು ವಾಸಿಸುತ್ತದೆ. ಕಾಳು, ಹುಲ್ಲು, ಮಿಡತೆ ಮುಂತಾದ ಕೀಟಗಳು ಇದರ ಪ್ರಧಾನ ಆಹಾರ. ಹೆಚ್ಚಾದ ಆಹಾರವನ್ನು ತನ್ನ ಬಿಲದಲ್ಲಿನ ಕೆಲವು ವಿಶೇಷ ಗೂಡುಗಳಲ್ಲಿ ಕೂಡಿಡುತ್ತದೆ. ಆಹಾರಕ್ಕಾಗಿ ಬಲು ಸುಟಿಯಾಗಿ ಕಾಂಗರೂಗಳಂತೆ ಹಿಂಗಾಲು ಊರಿ ಕುಪ್ಪಳಿಸುತ್ತ ಓಡಾಡುತ್ತದೆ. ಬಲುಚೆನ್ನಾಗಿ ನೆಗೆಯಲೂ ಬಲ್ಲುದು ; ಒಂದು ನೆಗೆತಕ್ಕೆ

ಸುಮಾರು 6'–7' ದೂರ ಕ್ರಮಿಸಬಲ್ಲುದು. ಹೀಗೆ ಹಾರುವಾಗ ಸಮತೋಲನವನ್ನು ಕಾಯ್ದುಕೊಳ್ಳಲೂ ದಿಕ್ಕನ್ನು ಬದಲಾಯಿಸಲೂ ಚುಕ್ಕಾಣಿಯಂತೆ ತನ್ನ ಬಾಲವನ್ನು ಉಪಯೋಗಿಸುತ್ತದೆ.

ಕಾಂಗರೂ ಇಲಿ ವರ್ಷಕ್ಕೆ ಎರಡು ಮೂರು ಸಲ ಮರಿ ಹಾಕುತ್ತದೆ. ಒಂದು ಸೂಲಿಗೆ 3–5 ಮರಿಗಳನ್ನು ಹೆರುವುದು ವಾಡಿಕೆ. ಹುಟ್ಟಿದಾಗಿನಿಂದ ಸುಮಾರು 15 ದಿವಸಗಳವರೆಗೂ ಮರಿಗಳ ಕಣ್ಣುಗಳು ಮುಚ್ಚಿಕೊಂಡೇ ಇರುತ್ತವೆ. (ಎ.)

**ಕಾಂಗರೂ ಹೆಗ್ಗಣ :** ದಕ್ಷಿಣ ಆಸ್ಟ್ರೇಲಿಯದ ನಿವಾಸಿಯಾದ ಒಂದು ಪುಟ್ಟದಾದ ಬಿಲವಾಸಿ ಸ್ತನಿ (ಮಾರ್ಸ್ಯೂಪಿಯಲ್ ಮೋಲ್). ಕಾಂಗರೂ ಮುಂತಾದುವುಗಳಲ್ಲಿರುವಂತೆ ಅಪ್ರಬುದ್ಧಾವಸ್ಥೆಯಲ್ಲಿ ಹುಟ್ಟುವ ಮರಿಗಳನ್ನು ಸಾಕಲು ಸಹಕಾರಿಯಾದ



ಕಾಂಗರೂ ಹೆಗ್ಗಣ, ಒಳಚಿತ್ರ–ಅದರ ಮುಂಗಾಲಿನ ಪಂಜ

ಹೊಟ್ಟೆಚೀಲವಿರುವುದರಿಂದಲೂ ನೋಡಲು ಇದು ಮುಖಮಲ್ ಹೆಗ್ಗಣ ಅಥವಾ ನೆಲಗುಮ್ಮದ (ಮೋಲ್) ಹಾಗೆ ಇರುವುದರಿಂದಲೂ ಇದಕ್ಕೆ ಕಾಂಗರೂ ಹೆಗ್ಗಣ ಎಂದು ಹೆಸರು. ಕಾಂಗರೂ, ವಾಲಬೀ ಮುಂತಾದ ಪ್ರಾಣಿಗಳನ್ನೊಳಗೊಂಡ ಮಾರ್ಸ್ಯೂಪಿಯೇಲಿಯ ಗಣಕ್ಕೂ ನೋಟೊರಿಕ್ಟಿಡೀ ಕುಟುಂಬಕ್ಕೂ ಸೇರಿದೆ. ಇದರ ಶಾಸ್ತ್ರೀಯನಾಮ ನೋಟೊರಿಕ್ಟೀಸ್ ಟಿಫ್ಲಾಪ್ಸ್.

ಸುಮಾರು 90–180 ಮಿಮೀ ಉದ್ದಕ್ಕೆ ಬೆಳೆಯುವ ಸಣ್ಣಗಾತ್ರದ ಪ್ರಾಣಿಯಿದು. ದೇಹದ ಮೇಲೆಲ್ಲ ಬಿಳಿಯ ಅಥವಾ ಹೊಂಬಣ್ಣದ ನಿಡಿದಾದ ರೇಷ್ಮೆಯಂಥ ಕೂದಲಿನ ಹೊದಿಕೆಯುಂಟು. ಬಾಲ ತುಂಬ ಚಿಕ್ಕದು; ಕೊಳವೆಯಂತಿದೆ; ಬಲು ಗಟ್ಟಿಯಾದುದೂ ಚರ್ಮಿಲವೂ ಆಗಿದೆ. ಅದರ ತುದಿಯಲ್ಲಿ ಕೊಂಬಿನಂಥ ಬುಗುಟಿದೆ. ಮೂಗಿನ ಮೇಲೂ ಕೊಂಬಿನಂಥ ಫಲಕವೊಂದಿದೆ. ಕಾಂಗರೂ ಹೆಗ್ಗಣಕ್ಕೆ ಹೊರಕಿವಿಗಳೇ ಇಲ್ಲ. ಇದರ ಬದಲು ತಲೆಯ ಮೇಲ್ಭಾಗದ ಎರಡೂ ಪಕ್ಕಗಳಲ್ಲಿ ಬರಿಯ ಎರಡು ತೂತುಗಳಿವೆ. ಅಲ್ಲದೆ ಈ ಪ್ರಾಣಿಗೆ ಬೇರೆ ಸಸ್ತನಿಗಳಲ್ಲಿರುವಂಥ ಕಣ್ಣುಗಳೂ ಇಲ್ಲ, ಹಿಂದೆ ಇದ್ದಿರಬಹುದಾದಂಥ ಕಣ್ಣುಗಳ ಅವಶೇಷವಾಗಿ ಎರಡು ಗುಳಿಗಳು ಮಾತ್ರ ಇವೆ. ಇವಕ್ಕೆ ಕನೀನಿಕೆಗಳು (ಪ್ಯೂಪಿಲ್ಸ್) ಇಲ್ಲ. ಮುಂಗಾಲಿನ ಪಾದಗಳಲ್ಲಿ ಎರಡೆರಡು ದೊಡ್ಡ ಪಂಜಗಳಿವೆ. ಇವು ಬಿಲ ತೋಡಲು ಅನುಕೂಲವಾಗಿವೆ. ಹಿಂಗಾಲಿನ ಪಾದಗಳಲ್ಲೂ ಮೂರು ಮೂರು ಪಂಜಗಳಿವೆ. ಕಾಂಗರೂ ಹೆಗ್ಗಣಗಳು ನೆಲದಲ್ಲಿ ಬಿಲ ತೋಡಿ ಅವುಗಳಲ್ಲಿ ವಾಸಿಸುತ್ತವೆ. ಇವುಗಳ ಆಹಾರ ಮುಖ್ಯವಾಗಿ ಎರೆಹುಳುಗಳು, ಕೀಟಗಳು ಇತ್ಯಾದಿ. ಆಹಾರ ತಿನ್ನುವಾಗ ಬಲು ಉದ್ರೇಕಗೊಂಡಂತೆ ಇರುತ್ತವೆ. ತಿನ್ನುತ್ತಿರುವಾಗಲೇ ಹಠಾತ್ತನೆ ನಿದ್ದೆ ಮಾಡುವುದೂ ಅಷ್ಟೇ ಚುರುಕಾಗಿ ಎಚ್ಚೆತ್ತು ಆಹಾರ ಭಕ್ಷಣೆಯನ್ನು ಮುಂದುವರಿಸುವುದೂ ಇದರ ಸೋಜಿಗಗಳು. ಇವು ಬಹಳ ವಿರಳ ಪ್ರಾಣಿಗಳಾದುದರಿಂದ ಇವುಗಳ ಸಂತಾನೋತ್ಪತ್ತಿಯ ಕ್ರಮದ ಬಗ್ಗೆ ಏನೂ ಗೊತ್ತಿಲ್ಲ. (ಬಿ.ಎಚ್.ಎಂ.)

**ಕಾಂಗೋ ಕೆಂಪು :** ಬಟ್ಟೆಗಳಿಗೆ ಬಣ್ಣ ಹಾಕುವುದಕ್ಕೆ ಮತ್ತು ರಾಸಾಯನಿಕ ವಿಶ್ಲೇಷಣೆಯಲ್ಲಿ ಆಮ್ಲ–ಪ್ರತ್ಯಾಮ್ಲಸೂಚಕವಾಗಿ ಉಪಯೋಗಿಸುವ ಆರ್ಗ್ಯಾನಿಕ್ ವಸ್ತು (ಕಾಂಗೋ ರೆಡ್). 1884ರಲ್ಲಿ ಪಿ. ಬಟೆಂಗರ್ ಈ ವರ್ಣವಸ್ತುವನ್ನು ಕಂಡುಹಿಡಿದ. ಇದು ಆಜೋಬಣ್ಣಗಳ ಗುಂಪಿಗೆ ಸೇರಿದೆ. ಅಂದರೆ ಈ ಗುಂಪಿನ ಬಣ್ಣಗಳಲ್ಲಿ ರ್‍ಯಾಡಿಕಲ್ಲು ಇರುತ್ತದೆ. ಹತ್ತಿ ಬಟ್ಟೆಗಳಿಗೆ ನೇರವಾಗಿ ಈ ಬಣ್ಣವನ್ನು ಲೇಪಿಸಬಹುದು. ವರ್ಣಬಂಧಕದ (ಮಾರ್ಡಂಟ್) ಸಹಾಯವಿಲ್ಲದೆ ಸುಲಭವಾಗಿ ಬಟ್ಟೆಗೆ ಈ ಬಣ್ಣ ಹಿಡಿಯುವುದರಿಂದ ಇದರ ಗುಂಪಿನ ಬಣ್ಣಗಳನ್ನು ನೇರ ಬಣ್ಣಗಳು (ಡೈರೆಕ್ಟ್ ಡೈಸ್) ಎಂದು ಕರೆಯುವರು. ಈ ಬಣ್ಣಗಳನ್ನೇ ಕೈಗಾರಿಕೆಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವರು.

ಕಾಂಗೋ ಕೆಂಪು ಸೂಚಕವು ಆಮ್ಲದಲ್ಲಿ ನೀಲಿ ಬಣ್ಣವನ್ನೂ ಪ್ರತ್ಯಾಮ್ಲದಲ್ಲಿ ಕೆಂಪು ಬಣ್ಣವನ್ನೂ ಕೊಡುತ್ತದೆ. (ಎಂ.ಎ.ಎಸ್.ಆರ್.)

**ಕಾಂಗೋ ಗಣರಾಜ್ಯ :** ಆಫ್ರಿಕದ ಸಮಭಾಜಕ ಪ್ರದೇಶದ ಒಂದು ಗಣರಾಜ್ಯ. ಸ್ವತಂತ್ರವಾಗುವುದಕ್ಕೆ ಮೊದಲು ಇದು ಫ್ರೆಂಚ್ ಸಮಭಾಜಕೀಯ ಆಫ್ರಿಕದ ಮಧ್ಯ ಕಾಂಗೋ ಅಥವಾ ಮೊಯೆನ್–ಕಾಂಗೋದ ಒಂದು ರಾಜ್ಯವಾಗಿತ್ತು. ಗ್ಯಾಬನ್, ಕ್ಯಾಮರೂನ್, ಮಧ್ಯ ಆಫ್ರಿಕ ಗಣರಾಜ್ಯ, ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ಅಂಗೋಲ ಮತ್ತು ಅಟ್ಲಾಂಟಿಕ್ ಸಾಗರ–ಇವು ಇದರ ಮೇರೆಗಳು. ವಿಸ್ತೀರ್ಣ 3,41,499 ಚ.ಕಿಮೀ, ಒಟ್ಟು ವಿಸ್ತೀರ್ಣ 3,42,000 ಚ.ಕಿಮೀ ಜನಸಂಖ್ಯೆ 37,02,314 (2006ರ ಅಂದಾಜು). ರಾಜಧಾನಿ ಬ್ರ್ಯಾಜವಿಲ್. ಕಾಂಗೋ ಎಂಬ ಹೆಸರಿನ ಇನ್ನೊಂದು ಗಣರಾಜ್ಯ (ನೋಡಿ–ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ) ಇರುವುದರಿಂದ ಇದನ್ನು ಬ್ರ್ಯಾಜವಿಲ್ ಕಾಂಗೋ ಎಂದು ಕರೆಯುವ ವಾಡಿಕೆಯಿದೆ.

**ಮೇಲ್ಮೈಲಕ್ಷಣ :** ಕಾಂಗೋ ಗಣರಾಜ್ಯ ಕಾಂಗೋ ನದೀ ಕಣಿವೆಯ ಒಂದು ಭಾಗ. ಈ ದೇಶದ ಪೂರ್ವದ ಗಡಿರೇಖೆಯಂತೆ ಹರಿಯುವ ಯುಬಾಂಗ್ ಮತ್ತು ಕಾಂಗೋ ನದಿಗಳ ಬಲದಂಡೆಯ ಬಳಿಯ ಪ್ರದೇಶ ಒಂದು ಮೈದಾನ. ಇದು ನದೀಕಣಿವೆಯ ನಡುಭಾಗದ ಮೆಕ್ಕಲುಮಣ್ಣಿನಿಂದ ಆವೃತ. ಇದರ ಅಗಲಕ್ಕೆ ಅಲ್ಲಲ್ಲಿ ಹಲವಾರು ನದಿಗಳೂ ಹಳ್ಳಗಳೂ ಹಾದುಹೋಗುತ್ತವೆ. ಮೊಟಾಬ ಎಂಬುದು ಇಂಥ ನದಿಗಳ ಪೈಕಿ ಒಂದು. ಅದು ಡಾಂಗೌ ಬಳಿ ಯುಬಾಂಗನ್ನು ಸೇರುತ್ತದೆ. ಲಿಕೌಲ,



ಕಾಂಗೋ ಗಣರಾಜ್ಯ : ಖನಿಜಗಳು : An–ಚಿನ್ನ, Ph– ರಂಜಕ, Pb–ಸೀಸ, Zn–ಸತು, Fe–ಕಬ್ಬಿಣ

ಸಾಂಗ ಮತ್ತು ಅಲಿಮ ಇತರ ನದಿಗಳು. ಇವೆಲ್ಲವೂ ಬಹುತೇಕ ಜಲಯಾನ ಯೋಗ್ಯ. ಕಾಂಗೋ ಯುಬಾಂಗ್‌ಗಳ ಮೇಲೆ ಬ್ರ್ಯಾಜವಿಲ್‌ನಿಂದ 2,400 ಕಿಮೀ ದೂರ ಯಾನ ಮಾಡಬಹುದು. ಈ ಮೈದಾನ ಪಶ್ಚಿಮದ ಕಡೆಗೆ ಕ್ರಮವಾಗಿ ಎತ್ತರವಾಗಿ ಸಾಗಿ, ಅಂತಿಮವಾಗಿ ಪ್ರಸ್ಥಭೂಮಿಯಲ್ಲಿ ಪರ್ಯವಸಾನವಾಗುತ್ತದೆ. ಇದನ್ನು ಅಲ್ಲಲ್ಲಿ ಕತ್ತರಿಸುವ ಕಣಿವೆಗಳುಂಟು. ಇದರ ಪಶ್ಚಿಮದಲ್ಲಿ ಪರ್ವತಶ್ರೇಣಿಗಳ ಶಿರಃ ಪ್ರದೇಶವಿದೆ. ದಕ್ಷಿಣದ ಕಡಲತೀರವೊಂದು ಕಿರುಮೈದಾನ.

**ವಾಯುಗುಣ, ಸಸ್ಯ :** ಗರಿಷ್ಠ ಉಷ್ಣತೆಯಿರುವ ಪ್ರದೇಶದ ಪಟ್ಟಿ ಸ್ವಲ್ಪ ಉತ್ತರದ ಕಡೆಗಿದ್ದರೂ ಸಮಭಾಜಕ ಈ ರಾಜ್ಯದ ನಡುವೆಯೇ ಹಾದುಹೋಗುವುದರಿಂದ ಇಲ್ಲಿಯದು ಬಹುತೇಕ ಸಮಭಾಜಕ ಪ್ರದೇಶದ ವಾಯುಗುಣವೆಂದೇ ಹೇಳಬಹುದು. ವರ್ಷವೆಲ್ಲ ಇಲ್ಲಿ ಸರಾಸರಿ ಉಷ್ಣತೆ 70° ಫ್ಯಾ.–80° ಫ್ಯಾ. (21° ಸೆಂ.–27° ಸೆಂ.) ನಡುವೆ ಇರುತ್ತದೆ. ವಾರ್ಷಿಕ ಮಳೆ 48". ಮಳೆಗಾಡಿರುವುದು ಸಮಭಾಜಕದ ದಕ್ಷಿಣದ ಮೈದಾನದಲ್ಲಿ ಮಾತ್ರ. ಮಧ್ಯ ಆಫ್ರಿಕ ಗಣರಾಜ್ಯದ ಬಳಿಯಲ್ಲಿರುವ ಪ್ರದೇಶದಲ್ಲಿ ಮಳೆ ಕಡಿಮೆಯಾದ್ದರಿಂದ ಅದು ಮರ ಬೆರೆತ ಹುಲ್ಲುಮೈದಾನ. ಸವಾನ ಕರಾವಳಿ ಮೈದಾನ, ಮೇಯೊಂಬ್

ಪರ್ವತ ನೆರಳಿನ ನೆಲದಲ್ಲೂ ಬಾಟೆಕ್‌ನ ಮರಳು ಕಲ್ಲಿನ ಪ್ರದೇಶದಲ್ಲೂ ಇದೇ ಸಸ್ಯಪ್ರಕಾರವನ್ನು ಕಾಣಬಹುದು.

**ವ್ಯವಸಾಯ, ಕೈಗಾರಿಕೆ :** ಕಾಂಗೋದ ಕಾಡುಗಳನ್ನು ಅಲ್ಲಲ್ಲಿ ಕಡಿಯಲಾಗಿದೆ. ಉಳಿದ ಕಡೆಗಳಲ್ಲೂ ಅದನ್ನು ಮೊದಲಿನಂತೆ ಸ್ವಚ್ಛಂದವಾಗಿ ಬೆಳೆಯಗೊಟ್ಟಿಲ್ಲ. ಕೆಸಾವ ಇಲ್ಲಿಯ ಮುಖ್ಯ ಆಹಾರ ಬೆಳೆ. ಸಾಂಗ ಮತ್ತು ನಿಯಾರಿ ಕಣಿವೆಗಳು ರಫ್ತಿಗಾಗಿ ಬೆಳೆತೆಗೆಯಲು ಅನುಕೂಲಕರ. ನಿಯಾರಿ ಬೇಸಾಯ ಪ್ರದೇಶ ಕಾಂಗೋ-ಓಷನ್ ರೈಲು ಮಾರ್ಗಕ್ಕೆ ಹತ್ತಿರದಲ್ಲಿರುವುದರಿಂದ ಅಲ್ಲಿ ಅನೇಕ ತೋಟಗಳಿವೆ. ಕೆಸಾವ, ನೆಲಗಡಲೆ, ನಾರುಗಿಡ ಮತ್ತು ಕಬ್ಬುಗಳನ್ನು ಇಲ್ಲಿ ಬೆಳೆಯುತ್ತಾರೆ. ದನಕರುಗಳನ್ನು ಸಾಕುವುದೂ ಉಂಟು. ಇವೆಲ್ಲ ಎರಡನೆಯ ಮಹಾಯುದ್ಧದಿಂದೀಚೆಗೆ ಬೆಳೆದ ಉದ್ಯಮಗಳು. ಮುಸುಕಿನ ಜೋಳ, ಕಬ್ಬು, ಎಣ್ಣೆ ಬೀಜ ಮುಂತಾದ ಬೆಳೆಗಳ ಅಭಿವೃದ್ಧಿಗಾಗಿ ಪ್ರಯೋಗಕೇಂದ್ರಗಳೂ ಸಂಶೋಧನಕೇಂದ್ರಗಳೂ ಸ್ಥಾಪಿತವಾಗಿವೆ.

ಕಾಂಗೋದಲ್ಲಿ ಅನೇಕ ಖನಿಜ ನಿಕ್ಷೇಪಗಳು ಉಂಟು. ಮಯೋಂಬದ ಚಿನ್ನ ಮತ್ತು ವಜ್ರ, ಮ್ಫೌಟಿ ಮತ್ತು ಮಿಂಡೌಲಿಯ ಸೀಸ ಮತ್ತು ತಾಮ್ರ ಇವು ಮುಖ್ಯ. ಬ್ರ್ಯಾಜವಿಲ್ ಮತ್ತು ಪಾಯಿಂಟ್-ನಾಯಿರ್‌ಗಳಲ್ಲಿ ಕೆಲವು ಕೈಗಾರಿಕೆಗಳಿವೆ.

ನೆಲಗಡಲೆ, ಕಕೇವೊ, ಕಾಫಿ, ಮುಸುಕಿನ ಜೋಳ, ಬತ್ತ, ತಾಳೆಹಣ್ಣು, ಹೊಗೆ ಸೊಪ್ಪು, ತಾಳೆಬೀಜ, ತೆಂಗಿನಕಾಯಿ, ಮರ, ಚಿನ್ನ, ಸೀಸ, ಸತು, ತಾಮ್ರ, ತವರ, ಎಣ್ಣೆ, ಸಕ್ಕರೆ, ಬೀರ್, ಸಾಬೂನು, ಮೀನು-ಇವು ಮುಖ್ಯ ಉತ್ಪನ್ನಗಳು.

**ವ್ಯಾಪಾರ, ಅಭಿವೃದ್ಧಿ, ಸಾರಿಗೆ :** ಗಟ್ಟಿ ಮರ, ವಜ್ರ, ಎಣ್ಣೆ, ಸಕ್ಕರೆ, ಕೋಕಾ, ಕಾಫಿ, ಪ್ಲೈವುಡ್, ಪೆಟ್ರೋಲಿಯಂ ಮುಂತಾದವುಗಳ ರಫ್ತು ಕಾಂಗೋದ ಅರ್ಥವ್ಯವಸ್ಥೆಗೆ ಅಸ್ತಿಭಾರ. ಪ್ರತಿಯಾಗಿ ಅದು ಯಂತ್ರ, ಮೋಟಾರು, ಜವಳಿ, ಪೆಟ್ರೋಲಿಯಂ ವಸ್ತು, ಕಬ್ಬಿಣ ಉಕ್ಕು, ಒಣಗಿಸಿ ಉಪ್ಪುಹಾಕಿದ ಮೀನು, ಕಾಗದ ಮತ್ತು ವೈನ್‌ಗಳನ್ನು ತರಿಸಿಕೊಳ್ಳುತ್ತದೆ. ಇದರ ಬಹುತೇಕ ವ್ಯಾಪಾರ ಫ್ರಾನ್ಸಿನೊಂದಿಗೆ. ಫ್ರಾನ್ಸಿನಿಂದಲೂ ಐರೋಪ್ಯ ಆರ್ಥಿಕ ಸಮುದಾಯದ ಇತರ ದೇಶಗಳಿಂದಲೂ ಅದು ಸಾಲ, ಆರ್ಥಿಕ ನೆರವು ಮತ್ತು ತಾಂತ್ರಿಕ ಸಹಾಯ ಪಡೆದಿದೆ. ಕೊಯಿತಾವಿನ ಮೇಲೆ ಕಟ್ಟೆ ಕಟ್ಟಿ 9,61,500 ಕಿವ್ಯಾ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇದರಿಂದ ಅಲ್ಯೂಮಿನಿಯಂ, ಫೆರೊಮ್ಯಾಂಗನೀಸ್, ಫೆರೊ-ಸಿಲಿಕಾನ್ ಮತ್ತು ಕಾಗದದ ತಿರುಳು ಕೈಗಾರಿಕೆಗಳ ಸ್ಥಾಪನೆಯಾಗಿದೆ. ಗ್ಯಾಬನ್‌ನಲ್ಲಿ ಸಿಗುವ ಮ್ಯಾಂಗನೀಸ್ ಅದುರನ್ನು ಪಾಯಿಂಟ್-ನಾಯಿರ್ ರೇವಿಗೆ ಸಾಗಿಸಲು ರೈಲು ಮತ್ತು ಕೇಬಲ್ ಮಾರ್ಗ ನಿರ್ಮಾಣವಾಗಿದೆ. ಇವು ಬ್ರ್ಯಾಜವಿಲ್ ಕಾಂಗೋದ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳು. ಇದರ GDP $2.161 ಬಿಲಿಯನ್, ತಲಾದಾಯ $700, ನಿಜವಾದ ಬೆಳವಣಿಗೆ ದರ ಶೇ.8, ಹಣದುಬ್ಬರ ಶೇ.2 ಇದೆ. (2005ರ ಜನಗಣತಿ ಪ್ರಕಾರ)

ಕಾಂಗೋದಲ್ಲಿ 894 ಕಿಮೀ ರೈಲುಮಾರ್ಗವಿತ್ತು (2004ರ ಪ್ರಕಾರ). ಹೆದ್ದಾರಿ 12,800 ಹಾಗೂ ಕಲ್ಲರಗಿನ ಮಾರ್ಗ 1,242 ಕಿಮೀ ಕಾಲುಮಾರ್ಗ 11,555 ಕಿಮೀ. (1999ರ ಪ್ರಕಾರ) ಜಲಮಾರ್ಗ 4,385 ಕಿಮೀ ಇದ್ದು, ಯುಬಾಂಗ್ ಮತ್ತು ಕಾಂಗೋ ನದಿಗಳು ಮುಖ್ಯ ಸಂಚಾರಮಾರ್ಗಗಳು. ಕಾಂಗೋ ನದಿಯ ಮೇಲಣ ಮುಖ್ಯ ಬಂದರು ಬ್ರ್ಯಾಜವಿಲ್. ಇಲ್ಲಿಯ ರೈಲು ಮಾರ್ಗಗಳು ಎರಡು: ಒಂದು ಅಟ್ಲಾಂಟಿಕ್ ಸಾಗರ ಮುಖದಲ್ಲಿರುವ ಪಾಯಿಂಟ್-ನಾಯಿರ್‌ನಿಂದ ಬ್ರ್ಯಾಜವಿಲ್ ವರೆಗೆ, ಇನ್ನೊಂದು ಬ್ರ್ಯಾಜವಿಲ್‌ನಿಂದ ಗ್ಯಾಬನ್‌ನಲ್ಲಿರುವ ಫ್ರಾನ್ಸ್‌ವಿಲ್‌ವರೆಗೆ. ಗ್ಯಾಬನ್-ಕಾಮಿಲಾಗ್ ರೈಲ್ವೆಗೂ ಮಸೆಂಜೊ-ನ್ಯಾಂಗಿಯ ಅರಣ್ಯ ಪ್ರದೇಶಕ್ಕೂ ಸಂಪರ್ಕ ಕಲ್ಪಿಸುವ ರಸ್ತೆಯ ನಿರ್ಮಾಣಕಾರ್ಯ 1963ರಲ್ಲಿ ಆರಂಭವಾಯಿತು. ಐರೋಪ್ಯ ಆರ್ಥಿಕ ಸಮುದಾಯದ ಸಹಾಯದಿಂದ ಕೈಕೊಳ್ಳಲಾದ ಈ ಕಾರ್ಯಕ್ರಮದಿಂದ ಬ್ರ್ಯಾಜವಿಲ್ ಕಾಂಗೋದ ಅರಣ್ಯೋತ್ಪನ್ನ ಶೇ.30ರಷ್ಟು ಅಧಿಕವಾಗುತ್ತದೆ. ಅಲ್ಲಿಯ ಮುಖ್ಯರಸ್ತೆಗಳು ಪಾಯಿಂಟ್-ನಾಯಿರ್‌ನಿಂದ ಬ್ರ್ಯಾಜವಿಲ್‌ಗೂ ಅಲ್ಲಿಂದ ಓಯೆಸೋಗೂ ಡಾಲಿಸೀಯಿಂದ ಗ್ಯಾಬನ್ ಮುಖಾಂತರ ಕ್ಯಾಮರೂನ್‌ಗೂ ಸಂಪರ್ಕ ಕಲ್ಪಿಸುತ್ತವೆ. ಕಾಂಗೋದಲ್ಲಿ ಆಂತರಿಕ ವಿಮಾನ ವ್ಯವಸ್ಥೆಯೂ ಉಂಟು. ಇಲ್ಲಿ 7000 ದೂರವಾಣಿ ಸಂಪರ್ಕ ಮಾರ್ಗಗಳು 1 ಆಕಾಶವಾಣಿ 5FM ಕೇಂದ್ರಗಳು 3 ಅಂತರಂಗಗಳು ಅಸ್ತಿತ್ವದಲ್ಲಿದ್ದವು. 1 ದೂರದರ್ಶನ ಕೇಂದ್ರ 46 ಅಂತರ್ಜಾಲ ಸೇವೆ ಕೊಡುವ ಸಂಪರ್ಕ ಕೇಂದ್ರಗಳಿವೆ.

**ಜನಸಂಖ್ಯೆ, ನಗರಗಳು ಮತ್ತು ಪಟ್ಟಣಗಳು :** ಕಾಂಗೋ ಜನಾಂಗ ಶೇ. 48, ಸಂಘ ಜನಾಂಗ ಶೇ. 20, ಎಂದೋಚಿ ಶೇ. 12, ಜಿಕೆ ಜನಾಂಗ ಶೇ. 17 ಯುರೋಪಿಯನ್ನರು ಹಾಗೂ ಇತರರು ಶೇ. 3ರ ರಷ್ಟಿದ್ದಾರೆ. ಬಂಟು (ಅದರ ನಾನಾ ಉಪಭಾಷೆಗಳು) ಇಲ್ಲಿಯ ಜನರ ಭಾಷೆ. ಫ್ರೆಂಚ್ ಅಧಿಕೃತ ಭಾಷೆ. ಅಲ್ಲದೆ ಲಿಂಗಾಲ, ಮೊನೊಕುತುಬ, ಕಿಕಾಂಗೊ ಇನ್ನೂ ಅನೇಕ ಸ್ಥಳೀಯ ಭಾಷೆಗಳನ್ನು ಹೊಂದಿದೆ.

1966-67ರಲ್ಲಿ ದೇಶದಲ್ಲಿ 857 ಪ್ರಾಥಮಿಕ ಶಾಲೆಗಳೂ 52 ದ್ವಿತೀಯಕ ಶಾಲೆಗಳೂ 33 ತಾಂತ್ರಿಕ ಶಾಲೆಗಳೂ ಇದ್ದುವು. ಇವುಗಳ ವಿದ್ಯಾರ್ಥಿಗಳ ಸಂಖ್ಯೆ ಶೇ. 84ರಷ್ಟಿದೆ. (2003ರ ಜನಗಣತಿ ಪ್ರಕಾರ) ಅನುಕ್ರಮವಾಗಿ 1,94,968, 15,939 ಮತ್ತು 2,931.



ಬ್ರ್ಯಾಜವಿಲ್ ಬಳಿ ಕಾಂಗೋ ನದಿಯ ನೀರಿನಿಂದ ವಿದ್ಯುದುತ್ಪಾದನೆಯಾಗುತ್ತದೆ

ಪ್ರಾಥಮಿಕ ಶಾಲೆಗಳ ಸಂಖ್ಯೆ ಸಾಕಷ್ಟಿಲ್ಲದಿದ್ದರೂ ಅಕ್ಷರಸ್ಥರ ಪ್ರಮಾಣ ಹೆಚ್ಚಾಗಿಯೇ ಇದೆ. 6 ರಿಂದ 16ರ ವರೆಗಿನ ವಯಸ್ಸಿನ ಮಕ್ಕಳಿಗೆಲ್ಲ ಕಡ್ಡಾಯ ಶಿಕ್ಷಣ ಜಾರಿಗೆ ಬಂದಿದೆ. 1965ರಲ್ಲಿ ಎಲ್ಲ ಖಾಸಗಿ ಶಾಲೆಗಳನ್ನೂ ಸರ್ಕಾರ ತೆಗೆದುಕೊಂಡಿತು. ತಾಂತ್ರಿಕ ಶಿಕ್ಷಣಕ್ಕಾಗಿ ಅನೇಕ ವಿದ್ಯಾರ್ಥಿಗಳು ಫ್ರಾನ್ಸಿಗೆ ಹೋಗುತ್ತಾರೆ. ಬ್ರ್ಯಾಜವಿಲ್‌ನ ಮಹಾ ವಿದ್ಯಾಲಯವನ್ನು ವಿಶ್ವವಿದ್ಯಾನಿಲಯದ ಅಂತಸ್ತಿಗೆ ಏರಿಸಿದ್ದಾರೆ.

ಫುಟ್‌ಬಾಲ್, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್, ಅಂಗಸಾಧನೆ ಇವು ಇಲ್ಲಿಯ ಮುಖ್ಯ ಕ್ರೀಡೆಗಳು. ಪ್ರಥಮ ಆಫ್ರಿಕನ್ ಕ್ರೀಡಾಕೂಟವನ್ನೇರ್ಪಡಿಸಿದ್ದು ಬ್ರ್ಯಾಜವಿಲ್‌ನಲ್ಲಿ (1965). 1963ರಲ್ಲಿ ನಿವೃತ್ತಿವೇತನ ಯೋಜನೆಯೊಂದನ್ನು ಸರ್ಕಾರ ಜಾರಿಗೆ ತಂದಿತು. ಸರ್ಕಾರ ಆಸ್ಪತ್ರೆಗಳನ್ನೂ ಆರೋಗ್ಯ ಕೇಂದ್ರಗಳನ್ನೂ ನಡೆಸುತ್ತಿದೆ.

ಆಫ್ರಿಕದ ಫ್ರೆಂಚ್ ಸಮುದಾಯದ ಫ್ರ್ಯಾಂಕ್ (ಸಿ.ಎಫ್.ಎ.) ಅಲ್ಲಿಯ ನಾಣ್ಯ. 1,000 ಸಿ.ಎಫ್.ಎ. = 4.05 ಅಮೆರಿಕನ್ ಡಾಲರ್. ಆಗಸ್ಟ್ 15 ಕಾಂಗೋದ ಸ್ವಾತಂತ್ರ್ಯ ದಿನ.

ಬ್ರ್ಯಾಜವಿಲ್ ಅಲ್ಲಿಯ ಅತ್ಯಂತ ದೊಡ್ಡ ನಗರ ಮತ್ತು ರಾಜಧಾನಿ; ಜನಸಂಖ್ಯೆ 11,69,900 (2006ರ ಅಂದಾಜು). ಪಾಯಿಂಟ್-ನಾಯಿರ್. ಜನಸಂಖ್ಯೆ 5,44,200. (2006ರ ಅಂದಾಜು) ಇಂಫಾಂಡೊ, ಫೋಟ್-ರೌಸೆ, ಡಾಲಿಸೀ ಮತ್ತು ಜಂಬಾಲ ಇತರ ಪಟ್ಟಣಗಳು.

**ಇತಿಹಾಸ :** ಕಾಂಗೋ ರಾಜ್ಯದ ಬ್ರ್ಯಾಜವಿಲ್‌ನಲ್ಲೂ ನಿಯಾರಿ ಕಣಿವೆಯಲ್ಲೂ ಪ್ರಾಗೈತಿಹಾಸಿಕ ಮಾನವನ ನೆಲೆಗಳು ಕಂಡುಬಂದಿವೆ. ಎರಡು ಪಕ್ಕಗಳಿರುವ ಒರಟು ಶಿಲೋಪಕರಣಗಳನ್ನು ಬಳಸುತ್ತಿದ್ದ ಕೆಳಪೇಲಿಯೊಲಿಥಿಕ್, ಎರಡು ಪಕ್ಕಗಳಿರುವ ಮತ್ತು ಚಕ್ಕೆಕಲ್ಲಿನ ಉಪಕರಣಗಳುಳ್ಳ ಸಂಗೋವನ್ ಮತ್ತು ಮೊನಚಾದ ಉಪಕರಣಗಳನ್ನು ಉಪಯೋಗಿಸುತ್ತಿದ್ದ ಉಪೆಂಬನ್ – ಹೀಗೆ ಮೂರು ಸಂಸ್ಕೃತಿಗಳ ಮಟ್ಟಗಳನ್ನು ಇಲ್ಲಿ ಕಾಣಬಹುದಾಗಿದೆ. ಪಿಗ್ಮಿಗಳು ಇಲ್ಲಿಯ ಅತ್ಯಂತ ಪುರಾತನವಾಸಿಗಳು. ಇವರು ಯುಬಾಂಗ್ ಬಳಿಯಿಂದ ಬಂದವರಿರಬೇಕು. ಸು. 15ನೆಯ ಶತಮಾನದಲ್ಲಿ ಕಾಂಗೋದಿಂದ ಇಲ್ಲಿಗೆ ಬಂದಿರಬಹುದಾದ ಕಾಂಗೋ ಜನರಲ್ಲಿ ವಿಲಿ ಗುಂಪಿನವರು ತೀರಪ್ರದೇಶದಲ್ಲೂ ಸುಂಡಿ ಗುಂಪಿನವರು ಅದಕ್ಕೆ ಪೂರ್ವದ ನದೀಪ್ರದೇಶದಲ್ಲೂ ನೆಲೆಸಿದರು. ಈ ಎರಡು ಗುಂಪುಗಳೂ ಲೊವಾಂಗೋ ಮತ್ತು ಕಕಾಂಗೋ ಎಂಬ ಎರಡು ರಾಜ್ಯಗಳನ್ನು ಸ್ಥಾಪಿಸಿದುವು. ಇವೆರಡೂ ಕಾಂಗೋ ಸಾಮ್ರಾಜ್ಯದ ಸಾಮಂತ ರಾಜ್ಯಗಳಾಗಿದ್ದವು. ಸ್ಟ್ಯಾನ್ಲಿ ಮಡುವಿನ ಪ್ರದೇಶದಲ್ಲಿದ್ದುದು ಟೆಕ್‌ಗಳ ರಾಜ್ಯ. ಇವರ ದೊರೆಯನ್ನು (ಮಕಾಕೋ) ನಾಯಕರು ಆರಿಸುತ್ತಿದ್ದರು. ಈತ ತಾಮ್ರದ ತಗಡಿನ ಕತ್ತುಪಟ್ಟಿ ತೊಟ್ಟು ಚಿರತೆಯ ಚರ್ಮ ಉಡುತ್ತಿದ್ದ. ಈಶಾನ್ಯ ಪ್ರದೇಶದಲ್ಲಿದ್ದವರು ಮ್ಬೋಚಿಗಳು. ಇವರ ಹಳ್ಳಿಗಳು ಕೋಟೆಗಳೊಳಗಡೆ ಇದ್ದುವು. ಲಿಕೌಲ ಮತ್ತು ಸಾಂಗ ಜೌಗು ನೆಲದಲ್ಲಿದ್ದವರು 'ನೀರಿನ ಜನ' ಮತ್ತು ಪಿಗ್ಮಿಗಳು. ಕಾಂಗೋದ ಕರಾವಳಿ ಪ್ರದೇಶ 15ನೆಯ ಶತಮಾನದಲ್ಲಿಯೇ ಪೋರ್ಚುಗೀಸ್ ನಾವಿಕರಿಗೆ ಪರಿಚಯವಾಗಿತ್ತು. ಕಾಂಗೋ ನದಿಯ ಮುಖವನ್ನು

ದಿಯೆಗೋ ಕ್ಯಾಮ್ 1484ರಲ್ಲಿ ಕಂಡುಹಿಡಿದ. ಗುಲಾಮರ ಮತ್ತು ದಂತದ ಆಸೆಯಿಂದ ಫ್ರೆಂಚ್ ವ್ಯಾಪಾರಿ ಕಂಪನಿಗಳು ಈ ಪ್ರದೇಶವನ್ನು 17ನೆಯ ಶತಮಾನದಲ್ಲಿ ಪ್ರವೇಶಿಸಿದುವು. 1785ರ ವರೆಗೆ ಇಲ್ಲಿಯ ಕರಾವಳಿಗೆ ವರ್ಷಕ್ಕೆ ನೂರಕ್ಕಿಂತಲೂ ಹೆಚ್ಚು ಹಡಗುಗಳು ಬಂದುಹೋದುವು. ಫ್ರಾನ್ಸಿನ ಕ್ರಾಂತಿಯ ತರುವಾಯ ಈ ಪ್ರದೇಶದಲ್ಲಿ ಫ್ರೆಂಚರ ಆಸಕ್ತಿ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಆದರೆ 1766ರಲ್ಲಿ ಫ್ರೆಂಚ್ ಪಾದ್ರಿಗಳಿಂದ ಉಂಟಾದ ಪ್ರಭಾವ ಅಳಿಯಲಿಲ್ಲ.

ಗುಲಾಮಗಿರಿ ಪದ್ಧತಿ ರದ್ದಾದ ಅನಂತರ ಕಾಂಗೋದಲ್ಲಿಯ ಫ್ರೆಂಚ್ ವ್ಯಾಪಾರಿಗಳು ಅನಧಿಕೃತವಾಗಿ ಗುಲಾಮ ವ್ಯಾಪಾರ ಮಾಡುತ್ತ ಬಂದರು. ಇದರ ವಿರುದ್ಧ ಫ್ರೆಂಚ್ ಸರ್ಕಾರ ಉಗ್ರಕ್ರಮಗಳನ್ನು ತೆಗೆದುಕೊಂಡು ಫ್ರೆಂಚ್ ಸೈನಿಕ ಕಾವಲು ಹಾಕಿತು. ಆದ್ದರಿಂದ ವ್ಯಾಪಾರಿಗಳು ಇತರ ಉದ್ಯೋಗಗಳಿಗೆ ಶರಣು ಹೋಗಬೇಕಾಯಿತು.

ಎಚ್.ಎಮ್. ಸ್ಟ್ಯಾನ್ಲಿ 1877ರಲ್ಲಿ ಕಾಂಗೋ ನದಿಯ ಮೇಲೆಯೇ ಯಾನ ಮಾಡುತ್ತ ತಲಪಿದ ಸ್ಥಳ ಸ್ಟ್ಯಾನ್ಲಿ ಸರೋವರವೆಂದು ಹೆಸರಾಗಿದೆ. ಪಿಯೆರೆ ಸವೋರ್‍ಗ್ನನ್ ಬ್ರ್ಯಾಜ಼ ಅಲ್ಲಿಯ ಮಕಾಕೋನೊಂದಿಗೆ ಒಪ್ಪಂದ ಮಾಡಿಕೊಂಡ. ಆತ ತನ್ನ ಅಧಿಕಾರವನ್ನು ಫ್ರೆಂಚರಿಗೆ ಒಪ್ಪಿಸಿದ. ಕಾಂಗೋ ನದಿಯ ದಂಡೆಯ ಪ್ರದೇಶ ಫ್ರೆಂಚ್ ಅಧೀನಕ್ಕೆ ಬಂತು.

1885 ಮತ್ತು 1887ರಲ್ಲಿ ಆದ ಒಪ್ಪಂದಗಳ ಪ್ರಕಾರ ಪೋರ್ಚುಗೀಸ್ ಮತ್ತು ಕಾಂಗೋಸ್ವತಂತ್ರ ರಾಜ್ಯಗಳ ನಡುವಣ ಗಡಿ ಹೊಂದಾಣಿಕೆಯಾಯಿತು. 1891ರಲ್ಲಿ ಫ್ರೆಂಚ್ ಕಾಂಗೋ ಸ್ಥಾಪಿತವಾಯಿತು. ಜನರಲ್ ಬ್ರ್ಯಾಜ಼ ತನಗೆ ದತ್ತವಾದ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡು ಸ್ಥಳೀಯ ಜನರನ್ನು ಶೋಷಿಸುತ್ತಿದ್ದ. 1905ರಲ್ಲಿ ಫ್ರಾನ್ಸ್ ಈ ವಿಚಾರವನ್ನು ತನಿಖೆ ನಡೆಸಲು ನಿಯೋಗವೊಂದನ್ನು ಕಳಿಸಿತು. ಅಲ್ಲಿಂದ ವಸಾಹತುದಾರರಿಗೆ ನೀಡಲಾಗಿದ್ದ ಸವಲತ್ತುಗಳನ್ನು ಮೊಟಕು ಮಾಡಲಾಯಿತು. 1911ರಲ್ಲಾದ ಒಪ್ಪಂದದ ಪ್ರಕಾರ ಫ್ರಾನ್ಸ್ ಜರ್ಮನಿಗೆ ಕಾಂಗೋ ನದಿಯವರೆಗಿನ ಸಾಂಗ ಕಣಿವೆ ಪ್ರದೇಶವನ್ನೊಪ್ಪಿಸಿತಾದರೂ ಒಂದನೆಯ ಮಹಾಯುದ್ಧದ ಫಲವಾಗಿ ಈ ಒಪ್ಪಂದ ರದ್ದಾಯಿತು. ಫ್ರೆಂಚ್ ಸಮಭಾಜಕೀಯ ಆಫ್ರಿಕಕ್ಕೆ ಬ್ರ್ಯಾಜ಼ವಿಲ್ ರಾಜಧಾನಿಯಾದದ್ದು 1910ರಲ್ಲಿ.

ಎರಡನೆಯ ಮಹಾಯುದ್ಧ ಕಾಲದಲ್ಲಿ ಫ್ರಾನ್ಸ್ ಜರ್ಮನಿಗೆ ವಶವಾದಾಗ (1940) ಕಾಂಗೋ ರಾಜ್ಯ ಡಿಗಾಲನ ಸ್ವತಂತ್ರ ಫ್ರಾನ್ಸಿನ ಪರವಾಗಿತ್ತು. 1946ರಲ್ಲಿ ಅದು ಫ್ರಾನ್ಸಿನ ಸಾಗರಾಂತರ ಪ್ರದೇಶವಾಗಿ ಪರಿವರ್ತನೆ ಹೊಂದಿತು. ಅದಕ್ಕೆ ಪ್ರಾದೇಶಿಕ ಸಭೆಯೊಂದು ಸ್ಥಾಪಿತವಾಯಿತು. ಫ್ರೆಂಚ್ ಸಂಸತ್ತಿನಲ್ಲೂ ಅದರ ಪ್ರತಿನಿಧಿಗಳಿದ್ದರು. 1958ರಲ್ಲಿ ಅದು ಫ್ರೆಂಚ್ ಸಮುದಾಯದ ಗಣರಾಜ್ಯವಾಗಿ 1960ರ ಆಗಸ್ಟ್ 15ರಂದು ಸ್ವತಂತ್ರವಾಯಿತು. ಕಾಂಗೋ ದೇಶಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವ ದೊರಕಿದ್ದು ಆ ವರ್ಷದ ಸೆಪ್ಟೆಂಬರ್ 20ರಂದು.

ಫುಲ್‍ಬರ್ಟ್ ಯೌಲೌ ಮತ್ತು ಅಲ್ಫಾನ್ಸ್ ಮಸಾಂಬ-ಡಿಬ ಅನುಕ್ರಮವಾಗಿ ಅದರ ಅಧ್ಯಕ್ಷರಾಗಿದ್ದರು. 1966ರ ಜೂನಿನಲ್ಲಿ ಸೈನಿಕ ಬಂಡಾಯ ಸಂಭವಿಸಿತು. ಕ್ಯಾಪ್ಟನ್ ನ್ಗೊಮಾಬಿಯ ಅಂತಸ್ಸನ್ನಿಳಿಸಿದ್ದರಿಂದ ಆದ ಅಸಂತುಷ್ಟಿಯೇ ಇದಕ್ಕೆ ಕಾರಣ. 1967ರ ಏಪ್ರಿಲ್ ಮತ್ತು 1968ರ ಜನವರಿ ಮತ್ತು ಮೇ ತಿಂಗಳುಗಳಲ್ಲಿ ಕ್ಷಿಪ್ರಕ್ರಾಂತಿಯ ಪ್ರಯತ್ನಗಳಾದುವು. ಅಶಾಂತಿ ಮುಂದುವರಿಯಿತು. ರಾಷ್ಟ್ರೀಯ ಸಭೆಯ ವಿಸರ್ಜನೆಯಾಯಿತು. ಅಧ್ಯಕ್ಷ ರಾಜೀನಾಮೆಯಿತ್ತ. ರಾಷ್ಟ್ರೀಯ ಕ್ರಾಂತಿ ಸಮಿತಿಗೆ ಪರಮಾಧಿಕಾರ ಲಭ್ಯವಾಯಿತು. ಆ ಸಮಿತಿಯ ಅಧ್ಯಕ್ಷನಾದ ಮೇಜರ್ ಮೆರಿಯನ್ ನ್ಗೊಯಾಬಿ ರಾಷ್ಟ್ರಾಧ್ಯಕ್ಷನಾದ. ನೆರೆಯ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ಅದರ ನಾಯಕರಲ್ಲೊಬ್ಬನಾದ ಪಿಯರ್ ಮ್ಯುಲೆಲ್‍ಗೆ ಫಾಸಿ ಶಿಕ್ಷೆ ವಿಧಿಸಿದ್ದರಿಂದ ಈ ಎರಡೂ ರಾಷ್ಟ್ರಗಳ ರಾಜತಾಂತ್ರಿಕ ಸಂಬಂಧ ಮುರಿದುಬಿತ್ತು. 1969ರ ಜನವರಿಯಲ್ಲಿ ಇವುಗಳ ಸಂಬಂಧದಲ್ಲಿ ಮತ್ತೆ ಯಥಾಸ್ಥಿತಿ ಏರ್ಪಟ್ಟಿತು. 1975ರಲ್ಲಿ 2ನೇ ಬಾರಿಗೆ 5 ವರ್ಷದ ಅವಧಿಗೆ ರಾಷ್ಟ್ರಾಧ್ಯಕ್ಷರಾಗಿ ನ್ಗೊಯಾದಿ ಮತ್ತೊಮ್ಮೆ ಪ್ರಮಾಣ ವಚನ ಸ್ವೀಕರಿಸಿದರು. 1977ರ ಮಾರ್ಚ್ 18ರಂದು ನಾಲ್ಕು ಜನರ ಸೈನ್ಯದಳ ನ್ಗೊಯಾಬಿಯವರನ್ನು ಗುಂಡಿಟ್ಟು ಸಾಯಿಸಿತು. ಅದೇ ವರ್ಷ ಏಪ್ರಿಲ್ 4ರಂದು ಸೈನ್ಯದ ಮುಖ್ಯಸ್ಥರಾಗಿದ್ದ ಕರ್ನಲ್ ಜೋಷಿಮ್ ಹ್ಯೊಂಬಿ ಒಪಾಂಗೋ ರಾಷ್ಟ್ರಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಇವರು 1979ರ ಫೆಬ್ರವರಿ 4ರಂದು ಕೊಟ್ಟ ರಾಜೀನಾಮೆಯಿಂದಾಗಿ ಕರ್ನಲ್ ಡೆನಿಸ್ ಸಸು ನೆಗೆಸ್ಸೋ ರಾಷ್ಟ್ರಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. 1990ರ ಜುಲೈಯಲ್ಲಿ ಆಡಳಿತ ಪಕ್ಷದ ನೇತಾರರೆಲ್ಲ ಸೇರಿ ಏಕಪಕ್ಷ ಪದ್ಧತಿಯನ್ನು ಅಂತ್ಯಗೊಳಿಸಲು ನಿರ್ಧರಿಸಿದರು.

1991ರಲ್ಲಿ ಸಬ್‍ಸಹರಾನ್ ಆಫ್ರಿಕದಲ್ಲಿಯೇ ಶ್ಲಾಘನೀಯವೆನ್ನಬಹುದಾದ ರೀತಿಯಲ್ಲಿ ರಾಷ್ಟ್ರೀಯ ರಾಜಕೀಯ ಸಮಾವೇಶ ಸಂಯೋಜಿಸಲ್ಪಟ್ಟಿತು. 1991ರಲ್ಲಿ ಮಾರ್ಕ್ಸ್‌ವಾದವನ್ನು ತ್ಯಜಿಸಿ 1992ರಲ್ಲಿ ಮುಕ್ತ ಚುನಾವಣೆಗಳನ್ನು ಏರ್ಪಡಿಸಲು ನಿರ್ಣಯಿಸಲಾಯಿತು. ಪಾಸ್ಕಲ್ ಲಿಸೋಬ ಪ್ರಜಾಸತ್ತಾತ್ಮಕವಾಗಿ ಏರ್ಪಡಿಸಲ್ಪಟ್ಟ ಚುನಾವಣೆಯ ಫಲವಾಗಿ ಕಾಂಗೋದ ಪ್ರಪ್ರಥಮ ಪ್ರಜಾಸತ್ತಾತ್ಮಕ ಅಧ್ಯಕ್ಷರಾದರು. 1993ರಲ್ಲಿ ವಿರೋಧ ಪಕ್ಷವು ಶಾಸನ ಸಭೆಗಳಿಗೆ ನಡೆದ ಚುನಾವಣೆಗಳ ಫಲಿತಾಂಶಗಳನ್ನು ತಿರಸ್ಕರಿಸಿದ್ದರಿಂದ ರಾಜಕೀಯ ಮತ್ತು ಜನಾಂಗೀಯ ದ್ವೇಷ ಮತ್ತೆ ಮರುಕಳಿಸಿತು. 1994ರ ಆಗಸ್ಟಿನಲ್ಲಿ ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವೆ ಶಾಂತಿಯೊಪ್ಪಂದವೇರ್ಪಟ್ಟಿತು. 1997ರ ಜೂನ್ 5 ರಿಂದ ಅಕ್ಟೋಬರ್ 15ರವರೆಗೆ 4 ತಿಂಗಳು ಕಾಲ ಸಂಭವಿಸಿದ ಆಂತರಿಕ ಯುದ್ಧ ರಾಜಧಾನಿಯಾದ ಬ್ರ್ಯಾಜ಼ವಿಲ್‍ನ್ನು ಧ್ವಂಸಗೊಳಿಸಿತು. ನೆರೆಯ ಅಂಗೋಲಾದ ಸೈನ್ಯ ಸಹಾಯದಿಂದ ಬೆಂಬಲಪಡೆದ ಮಾರ್ಕ್ಸ್‌ವಾದಿ ಮತ್ತು ಸರ್ವಾಧಿಕಾರಿಯಾಗಿದ್ದ ಡೆನಿಸ್ ಸಾಸೋ ನಾಗೆಸ್ಸೊ, ಚುನಾಯಿತ ರಾಷ್ಟ್ರಾಧ್ಯಕ್ಷರಾಗಿದ್ದ ಪಾಸ್ಕಲ್ ಲಿಸೋಬ ಅವರನ್ನು ಪದಚ್ಯುತಗೊಳಿಸಿದರು. 1999ರಲ್ಲಿ ಡೆನಿಸ್ ಸಾಸೋ ನಾಗೆಸ್ಸೋ ಮತ್ತು ಅಧಿಕ ಜನಸಂಖ್ಯೆಯುಳ್ಳ ದಕ್ಷಿಣ ಕಾಂಗೋವನ್ನು ಪ್ರತಿನಿಧಿಸುತ್ತಿದ್ದ ಬಂಡುಕೋರರ ನಡುವೆ ಶಾಂತಿ ಏರ್ಪಟ್ಟಿತು. ಯುದ್ಧೋತ್ತರ ಕಾಲದಲ್ಲಿ ಬಡರಾಷ್ಟ್ರವಾದ ಕಾಂಗೋದ ಸ್ಥಿತಿ ತುಂಬಾ ಚಿಂತಾಜನಕವಾದುದಾಗಿತ್ತು.

2002ರ ಮಾರ್ಚ್‌ನಲ್ಲಿ ಏರ್ಪಟ್ಟ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿಶತ 89.4 ಮತ ಪಡೆದು ಸಾಸೋ ನಾಗೆಸ್ಸೋ ಅಧ್ಯಕ್ಷರಾಗಿ ಮರು ಆಯ್ಕೆಗೊಂಡರು. ಇವರ ವಿರೋಧಿಗಳು ಚುನಾವಣಾ ಕಣದಿಂದ ಹಿಂದೆ ಸರಿಯಲೂ ಇಲ್ಲ ಮತ್ತು ರಾಷ್ಟ್ರದಿಂದ ಬಹಿಷ್ಕೃತಗೊಳ್ಳಲೂ ಇಲ್ಲ. ನಿಂಜಾಯೆಂದು ಕರೆಯಲ್ಪಡುವ ಬಂಡುಕೋರರು ರಾಷ್ಟ್ರದ ಶ್ರೀಮಂತ ತೈಲ ಬಾವಿಗಳ ಮೇಲೆ ನಿಯಂತ್ರಣ ಸಾಧಿಸಿ ನಿರ್ವಹಿಸಿಕೊಂಡು ಹೋಗಲು ಸರಕಾರದ ಸೈನ್ಯದೊಡನೆ ಕಾದಾಟಕ್ಕಿಳಿದರು. ಮೇ 2003ರಲ್ಲಿ ಸರಕಾರ ಮತ್ತು ನಿಂಜಾ ಬಂಡುಕೋರರು ಆಂತರಿಕ ಯುದ್ಧವನ್ನು ನಿಲ್ಲಿಸಲು ಒಪ್ಪಂದವೊಂದನ್ನು ಮಾಡಿಕೊಂಡರು. ಆಫ್ರೋ-ಮಲಗಾಸಿ ಸಾಮಾನ್ಯ ಸಂಸ್ಥೆ (ಓ.ಸಿ.ಎ.ಎಂ.), ಫ್ರೆಂಚ್ ಸಮುದಾಯ, ಆಫ್ರಿಕ ಐಕ್ಯ ಸಂಸ್ಥೆ (ಆರ್ಗನೈಸೇಷನ್ ಫಾರ್ ಆಫ್ರಿಕನ್ ಯೂನಿಟಿ), ವಿಶ್ವಸಂಸ್ಥೆ-ಇವುಗಳಲ್ಲಿ ಕಾಂಗೋ ಗಣರಾಜ್ಯ ಸದಸ್ಯತ್ವ ಪಡೆದಿದೆ. (ಎ.ಎಂ.ಆರ್.)

**ಕಾಂಗೋ ನದಿ :** ಆಫ್ರಿಕದ ಅತ್ಯಂತ ಉದ್ದನೆಯ ನದಿಗಳಲ್ಲಿ ಎರಡನೆಯದು. ಇದರ ಉದ್ದ 4,346 ಕಿಮೀ ಇದಕ್ಕಿಂತ ಉದ್ದವಾದ್ದು ನೈಲ್ ನದಿ (6,651 ಕಿಮೀ). ಕಾಂಗೋ ನದಿಯ ಜಲಾನಯನ ಪ್ರದೇಶ 36,90,750 ಚ.ಕಿಮೀ ನದಿಯ ಮೂಲ ಆಫ್ರಿಕದ ಪೂರ್ವ ಭಾಗದ ನ್ಯಾಸ ಮತ್ತು ಟಾಂಗನ್ಯೀಕ ಸರೋವರಗಳ ನಡುವೆ ಉದ್ಭವಿಸುವ ಛಾಂಬೇಸಿ ನದಿಯೆಂದು ಗುರ್ತಿಸಿದ್ದಾರೆ. ಛಾಂಬೀಸಿ ತನ್ನ ಪಥದಲ್ಲಿ ಅನೇಕ ಕಿರಿಯ ಮತ್ತು ಹಿರಿಯ ನದಿಗಳನ್ನು ಸೇರಿಸಿಕೊಂಡು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವನ್ನು ಸೇರುವವರೆಗೆ ನಾನಾ ಹೆಸರುಗಳನ್ನು ತಾಳಿ ಹರಿಯುತ್ತದೆಯಲ್ಲದೆ ಸಮಭಾಜಕವನ್ನು ಎರಡು ಸಾರಿ ದಾಟುತ್ತದೆ. ಮಧ್ಯ ಪಶ್ಚಿಮ ಆಫ್ರಿಕದಲ್ಲಿ ಕಾಮನಬಿಲ್ಲಿನಂತೆ ಬಾಗಿ ಹರಿಯುವ ಈ ನದಿಯ ವಿಶಾಲ ಕಣಿವೆ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ಬಹುತೇಕ ಎಲ್ಲ ಭಾಗವನ್ನೂ ಕಾಂಗೋ ಗಣರಾಜ್ಯದ ಪ್ರಮುಖ ಪ್ರದೇಶಗಳನ್ನೂ ಛಾಂಬಿಯದ ಪಶ್ಚಿಮ ಭಾಗವನ್ನೂ ಅಂಗೋಲದ ಉತ್ತರ ಭಾಗವನ್ನೂ ಆವರಿಸಿಕೊಂಡಿದೆ. ಕಾಂಗೋ ನದಿಯನ್ನು ಸಾಮಾನ್ಯವಾಗಿ ಮೇಗಣ ಕಾಂಗೋ, ನಡುವಣ ಕಾಂಗೋ ಮತ್ತು ತಳಗಣ ಕಾಂಗೋ ಎಂದು ವಿಭಜಿಸಬಹುದು. ನಡುವಣ ಕಾಂಗೋ ಅರ್ಧ ವರ್ತುಲಾಕಾರದಲ್ಲಿ ಹರಿಯುತ್ತದೆ.

**ಮೇಗಣ ಕಾಂಗೋ:** ಕಾಂಗೋ ನದಿಗೆ ಮೂಲವಾದ ಛಾಂಬೀಸಿ ಕರುಂಗ ನದಿಯನ್ನು ಕೂಡಿಕೊಂಡು ಫಲವತ್ತಾದ ಭೂಮಿಯಲ್ಲಿ ನೈಋತ್ಯಕ್ಕೆ ಹರಿದು ಬಂಗ್ವೂಲ ಸರೋವರಕ್ಕೆ ನೆರೆಯಲ್ಲಿರುವ ವಿಶಾಲ ಜೌಗು ಪ್ರದೇಶವನ್ನು ಸೇರುತ್ತದೆ. ಇಲ್ಲಿಂದ ಹೊರಡುವ ಲೂವಪೂಲ (ಲೂವೂವ) ನದಿ ಛಾಂಬೀಸಿ ನದಿಯ ಮುಂದುವರಿದ ಭಾಗ. ಲೂವಪೂಲ ನದಿಗೆ ದೊಡ್ಡ ನದಿ ಎಂಬ ಹೆಸರೂ ಇದೆ. ಲೂವಪೂಲ ಜೌಗು ಪ್ರದೇಶವನ್ನು ಬಿಟ್ಟಮೇಲೆ ತನ್ನ ಗತಿಯಲ್ಲಿ ಪಶ್ಚಿಮಕ್ಕೆ ಬಾಗಿ ತರುವಾಯ ದಕ್ಷಿಣಾಭಿಮುಖವಾಗಿ ಛಾಂಬೀಸಿ ನದಿಯ ಜಲಾನಯನ ಭೂಮಿಯತ್ತ ಸಾಗಿ ಉತ್ತರಕ್ಕೆ ತಿರುಗಿ ಮುಂಬಟುಟ (ಮುಂಬರಿಯ) ಜಲಪಾತವಾಗಿ ಪರಿಣಮಿಸುತ್ತದೆ. ಇದರ ಭೋರ್ಗರೆತ ನೀರವ ರಾತ್ರಿಯಲ್ಲಿ ಸುಮಾರು 13-15 ಕಿಮೀಗಳ ದೂರ ಕೇಳಿಸುವುದುಂಟು. ಇಲ್ಲಿಂದ ಮುಂದೆ 160 ಕಿಮೀ ದೂರ, ಜಾನ್‍ಸ್ಟನ್ ಜಲಪಾತವನ್ನು ಮುಟ್ಟುವವರೆಗೆ, ನದಿ ಜಲಸಂಚಾರಕ್ಕೆ ಯೋಗ್ಯವಾಗಿಲ್ಲ. ಅಲ್ಲಿಂದ ಮುಂದಕ್ಕೆ, ಮ್ವೇರೂ ಸರೋವರವನ್ನು ಸೇರುವುದಕ್ಕೆ ಮುಂಚೆ, ಲೂವಪೂಲ ಮತ್ತೊಮ್ಮೆ ನದೀಮುಖಜ ಭೂಮಿಯಂಥ ಜೌಗು ಪ್ರದೇಶವನ್ನು ಸೇರುತ್ತದೆ. ತರುವಾಯ ಅದು ಮ್ವೇರೂ ಸರೋವರದ ವಾಯವ್ಯ ಅಂಚಿನಿಂದ ಹೊರಬಂದು ಪಶ್ಚಿಮಾಭಿಮುಖವಾಗಿ ತಿರುಗಿ ಕೆಬಾರ ಮತ್ತು ಮುಗಿಲಾ ಪರ್ವತಶ್ರೇಣಿಗಳಿಗೆ ಅಡ್ಡಲಾಗಿ ಹರಿದು ಲೂವಲಾಬ (ಕೋಮೊಲೋಂಡೊ) ನದಿಯನ್ನು ಸೇರುತ್ತದೆ. ಕೆಲವರು ಕೋಮೊಲೋಂಡೊ ನದಿಯನ್ನೇ ಕಾಂಗೋ ನದಿಯ ಮೂಲವೆಂದು ತಿಳಿಯುತ್ತಾರೆ. ಲೂವಪೂಲ ಮತ್ತು ಲೂವಲಾಬ ನದಿಗಳ ಸಂಗಮವಾದ ಮೇಲೆ ಉತ್ತರಕ್ಕೆ ಹರಿಯುವ ನದೀಭಾಗಕ್ಕೆ ಲೂವಲಾಬ-

ಕಾಂಗೋ ಎಂಬ ಹೆಸರುಂಟು. ಆ ಪ್ರದೇಶದಲ್ಲಿ ನದಿಯ ಅಗಲ 0.8 ಕಿಮೀ ಅದು ಉತ್ತರ ಮತ್ತು ವಾಯವ್ಯ ದಿಕ್ಕುಗಳನ್ನನುಸರಿಸಿ ಭೂಮಧ್ಯರೇಖೆಯ ಕಡೆ ಹರಿಯುತ್ತದೆ. ನದಿಯ ಈ ಭಾಗದ ಹರಿವಿನಲ್ಲಿ ಡಿಯಾ ರಭಸದ ಇಳಿವುಗಳಿಂದ ಹಡಗಿನ ಸಂಚಾರಕ್ಕೆ ಮೊತ್ತಮೊದಲ ಅಡಚಣೆ ಕಾಣಿಸಿಕೊಳ್ಳುತ್ತದೆ. ಅಲ್ಲಿಂದ ಮುಂದಕ್ಕೆ ಲೂವಲಾಬ ಕಾಂಗೋ ಪೋರ್ಟೆ ದ ಎನ್‌ಫರ್ ಎಂಬ ಕಡಿದಾದ ಕಮರಿಗಳ ಮೂಲಕ ಪ್ರವಹಿಸುತ್ತದೆ. ಈ ಸ್ಥಳದಿಂದ ಮುಂದಕ್ಕೆ ಅನೇಕ ಜಲಪಾತಗಳಿಂದಲೂ ರಭಸಪ್ರವಾಹಗಳಿಂದಲೂ ಕೂಡಿ ಸಮತಲಭೂಮಿಯ ಅತಿರಮ್ಯ ಅರಣ್ಯಗಳ ನಡುವೆ ಬಲು ಶೀಘ್ರದಿಂದ ಹರಿಯುತ್ತದೆ. ಈ ಭಾಗದಲ್ಲಿ ನದಿಯ ಅಗಲ ಕೆಲವು ಕಡೆ 1.6 ಕಿಮೀ ಈ ಭಾಗದಲ್ಲಿ ಸೇರುವ ಕೂಡುನದಿಗಳಲ್ಲಿ ಮುಖ್ಯವಾದ ಲೂಕೂಗ ನದಿ ಟಾಂಗನ್ಯೀಕ ಸರೋವರಕ್ಕೂ ಕಾಂಗೋ ನದಿಗೂ ಸಂಬಂಧ ಕಲ್ಪಿಸುತ್ತದೆ.



ಸಮಭಾಜಕಕ್ಕೆ ಕೆಲವು ಕಿಮೀಗಳ ಕೆಳಕ್ಕೆ ನದಿ ಸ್ಟ್ಯಾನ್ಲಿ ಜಲಪಾತವಾಗಿ, ಅಲ್ಲಿಂದ, ಮುಂದಕ್ಕೆ ತನ್ನ ಉತ್ತರಾಭಿಮುಖ ಪಥವನ್ನು ಬದಲಿಸಿ, ಸಮಭಾಜಕದ ಮಹಾಕಣಿವೆಗಳ ಮೂಲಕ ಪಶ್ಚಿಮ ದಿಕ್ಕಿನತ್ತ ಸಾಗುತ್ತದೆ. ಸ್ಟ್ಯಾನ್ಲಿ ಜಲಪಾತ ಪ್ರದೇಶದಲ್ಲಿ ನದಿ ಸುಮಾರು 96 ಕಿಮೀಗಳಷ್ಟು ದೂರ ರಭಸದ ಹಲವಾರು ಜಾರುಗಳಿಂದ ಕೂಡಿರುವುದರಿಂದ ಅಲ್ಲಿ ಹಡಗಿನ ಸಂಚಾರಕ್ಕೆ ಅನುಕೂಲವಿಲ್ಲ.

**ನಡುವಣ ಕಾಂಗೋ:** ಸ್ಟ್ಯಾನ್ಲಿ ಜಲಪಾತದಿಂದ ಮುಂದಕ್ಕೆ, 1,568 ಕಿಮೀ ದೂರ, ನದಿ ಯಾವ ಅಡಚಣೆಯೂ ಇಲ್ಲದೆ ಹರಿದು, ಇಡೀ ವರ್ಷ ನೌಕಾಸಂಚಾರಕ್ಕೆ ಯೋಗ್ಯವಾಗಿದೆ. ಜಲಪಾತದ ಬಳಿಯಿಂದ ನದಿ ವಾಯವ್ಯಕ್ಕೆ 1008 ಕಿಮೀ ದೂರ ಅರ್ಧಚಂದ್ರಾಕಾರದಲ್ಲಿ ಹರಿದು ಮತ್ತೆ ಸಮಭಾಜಕವನ್ನು ಕತ್ತರಿಸುತ್ತದೆ. ನದಿ ತನ್ನ ಉತ್ತರದ ಗರಿಷ್ಠ ಬಿಂದುವನ್ನು ಮುಟ್ಟಬಾಗುವುದು ಈ ಅರ್ಧವೃತ್ತಾಕಾರದ ಹರಿವಿನಲ್ಲೇ. ಸ್ಟ್ಯಾನ್ಲಿ ಜಲಪಾತಗಳಿಗೂ, ಪಶ್ಚಿಮದಲ್ಲಿ ಸಮಭಾಜಕವನ್ನು ನದಿ ಮುಟ್ಟುವ ಎಡೆಗೂ ಇರುವ ಅಡ್ಡದೂರ 755 ಕಿಮೀ.

ಸ್ಟ್ಯಾನ್ಲಿ ಜಲಪಾತದಿಂದ ಮುಂದಕ್ಕೆ ಕಾಂಗೋ ನದಿ 0.8 ಕಿಮೀಯಿಂದ 1.6 ಕಿಮೀ ಅಗಲ ತಾಳಿ ಬೆಟ್ಟಗುಡ್ಡಗಳ ನಡುವೆ ಪ್ರವಹಿಸುತ್ತದೆ. ಜಲಪಾತಕ್ಕೆ 208 ಕಿಮೀ ದೂರದಲ್ಲಿ ಆರುವೀಮಿ ನದಿ ಅದರೊಂದಿಗೆ ಸಂಗಮವಾಗುತ್ತದೆ. ಅಲ್ಲಿಂದ ಮುಂದೆ ನದಿಯ ಅಗಲ 6–8 ಕಿಮೀ. ಈ ಭಾಗದಲ್ಲಿ ನದಿಯ ನಡುವೆ ನೆರೆಮಣ್ಣಿನಿಂದ ಕೂಡಿದ ಅನೇಕ ದ್ವೀಪಗಳುಂಟು. ಆರುವೀಮಿ ಮತ್ತು ಕಾಂಗೋ ನದಿಗಳ ಸಂಗಮಸ್ಥಳದಿಂದ ಮತ್ತೆ 160 ಕಿಮೀಗಳ ದೂರದಲ್ಲಿ ಲೊಯೀಕ ನದಿ ಉತ್ತರದಿಂದ ಬಂದು ಕಾಂಗೋವನ್ನು ಸೇರುತ್ತದೆ. ಲೊಯೀಕ ನದಿಗೆ ಇಟಿಂಬಿರಿ ಎಂಬುದು ಇನ್ನೊಂದು ಹೆಸರು.

ಕಾಂಗೋ ನದಿಯ ಹಿರಿಯ ದ್ವೀಪಗಳಿರುವುದು ಅದರ ಕುದುರೆಲಾಳಾಕೃತಿಯ ಹರಿವಿನ ದಕ್ಷಿಣ ಬಾಗಿನಲ್ಲಿ. ಅವುಗಳಲ್ಲಿ ಇಸುಂಬ ಮತ್ತು ನಸುಂಬ ದ್ವೀಪಗಳೇ ಅತ್ಯಂತ ದೊಡ್ಡವು. ಇವೆರಡು ದ್ವೀಪಗಳ ಉದ್ದ ಅನುಕ್ರಮವಾಗಿ 48 ಮತ್ತು 80 ಕಿಮೀ. ಪರಮಾಧಿ ಅಗಲ 8 ಕಿಮೀ. ನಸುಂಬ ದ್ವೀಪದ ಎದುರಿಗೆ ಉತ್ತರದಿಂದ ಮೊಂಗಾಲ ನದಿ ಬಂದು ಕಾಂಗೋವನ್ನು ಕೂಡುತ್ತದೆ. ಸಮಭಾಜಕಕ್ಕೆ ಸ್ವಲ್ಪ ಉತ್ತರದಲ್ಲಿ ಲುಲಂಬ, ಐಕೆಲೆಂಬ ಮತ್ತು ರುಕಿ–ಈ ಮೂರು ನದಿಗಳು ದಕ್ಷಿಣದಿಂದ ಹರಿದು ಬಂದು ಕಾಂಗೋವನ್ನು ಸೇರುತ್ತವೆ. ಸಮಭಾಜಕಕ್ಕೆ 48 ಕಿಮೀ ಕೆಳಗೆ ಕಾಂಗೋದ ಉತ್ತರದ ಕೂಡುನದಿಗಳಲ್ಲಿ ಅತ್ಯಂತ ದೊಡ್ಡದಾದ ಯುಬಾಂಗ್ ಬಂದು ಸಂಗಮಿಸುತ್ತದೆ. ಈ ಭಾಗದಲ್ಲಿ ಕಾಂಗೋ ನದಿಯ ಅಡ್ಡಳತೆ 13 ಕಿಮೀ. ಯುಬಾಂಗ್ ಸಂಗಮದ ಎದುರಿಗೆ 16 ಕಿಮೀ ಉದ್ದವುಳ್ಳ ಕಡಿದಾದ ನಾಲೆಯೊಂದರ ಮುಖವುಂಟು. ಈ ನಾಲೆ ಕಾಂಗೋ ನದಿಗೂ ನಟೊಂಬಾ ಮಹಾ ಸರೋವರಕ್ಕೂ ಸಂಪರ್ಕ ಕಲ್ಪಿಸುವುದಾಗಿದ್ದು ಪ್ರವಾಹ ಕಾಲದಲ್ಲಿ ಕಾಂಗೋ ನೀರು ಈ ಸರೋವರಕ್ಕೆ ಹರಿದು ಹೋಗುತ್ತದೆ. ನಟೊಂಬಾ ಸರೋವರದ ಉದ್ದ 37 ಕಿಮೀ ಅದರ ಅಗಲ 8ರಿಂದ 19 ಕಿಮೀ.

**ತಳಗಣ ಕಾಂಗೋ:** ಯುಬಾಂಗ್ ಸಂಗಮದ ತರುವಾಯ 200 ಕಿಮೀ ದೂರ ನದಿಯ ಅಗಲ 1.6 ರಿಂದ 3 ಕಿಮೀ. ನದಿಯ ಈ ಭಾಗಕ್ಕೆ ನಾಲೆ ಎಂದು ಹೆಸರು. ಈ ಭಾಗದಲ್ಲಿ ಕಾಂಗೋವನ್ನು ಸೇರುವ ನದಿ ಕಾಸ್ಯೆ. ಅಲ್ಲಿಂದ ಮುಂದೆ 32 ಕಿಮೀ ಉದ್ದ 22 ಕಿಮೀ ಅಗಲವಿರುವ ಸರೋವರಾಕೃತಿಯ ಸ್ಟ್ಯಾನ್ಲಿ ಮಡುವನ್ನು ಪ್ರವೇಶಿಸುತ್ತದೆ. ಇಲ್ಲಿಗೆ ನದಿಯ ಒಳನಾಡಿನ ನೌಕಾಸಂಚಾರದ ಹಂತ ಮುಗಿದಂತೆ.

ಸ್ಟ್ಯಾನ್ಲಿ ಮಡುವಿನ ಅಂಚಿನ ಬಳಿ ನದಿಯ ಉತ್ತರ ದಂಡೆಯ ಮೇಲೆ ಇರುವುದೇ ಬ್ರ್ಯಾಜವಿಲ್ ನಗರ. ಇದು ಕಾಂಗೋ ಗಣರಾಜ್ಯದ ರಾಜಧಾನಿ. ಮಡುವಿನ ದಕ್ಷಿಣದಲ್ಲಿರುವ ಬೆಟ್ಟಸಾಲುಗಳ ಮುಂದೆ 6 ಕಿಮೀ ದೂರದಲ್ಲಿ ಕಾಂಗೋ ನದಿಯನ್ನು ಪದೇ ಪದೇ ತಡೆಯುವ ಸುಮಾರು 30 ಪ್ರಮುಖ ಜಲಪಾತಗಳುಂಟು. ಇವುಗಳಲ್ಲಿ ಮೊದಲನೆಯದಕ್ಕೆ ಸುಮಾರು 272 ಕಿಮೀ ದೂರದಲ್ಲಿರುವುದೇ ಕೀನ್ಷಾಸ: ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ರಾಜಧಾನಿ. ಕೊನೆಯ ಜಲಪಾತ ಇರುವುದು ಮಟಾಡಿಯಲ್ಲಿ.

ಮಟಾಡಿಯ ಬಳಿಯ ಕಾಂಗೋ ಅಳಿವೆಯ ಭಾಗ 273 ಮೀ ಆಳವಾಗಿದ್ದು ಸಮುದ್ರ ಸೇರುವ ವರೆಗೆ ಸುಮಾರು 160 ಕಿಮೀ ಉದ್ದವುಂಟು. ಇದರ ಮೇಲೆ ಸುಮಾರು 136 ಕಿಮೀ ದೂರದ ವರೆಗೆ ಸಾಗರಗಾಮಿ ಹಡಗುಗಳು ಸಂಚಾರ ಮಾಡಬಹುದು. ನದಿ ಸಮುದ್ರವನ್ನು ಕೂಡುವ ಎಡೆಯಲ್ಲಿ ಉತ್ತರದ ಬನಾನಾ ಪಾಯಿಂಟ್ ಎಂಬ ಸ್ಥಳದಿಂದ ದಕ್ಷಿಣದ ಷಾರ್ಕ್ ಪಾಯಿಂಟ್‌ವರೆಗೆ 12 ಕಿಮೀ ಅಗಲವುಂಟು. ಸಮುದ್ರದೊಳಕ್ಕೆ ನದಿಯ ಓಟ 48 ಕಿಮೀ ದೂರಕ್ಕೆ ಸಾಗಿರುವುದನ್ನು ಕಾಂಗೋ ನದಿಯ ಕಂದು ನೀರಿನ ಹಾಗೂ ಸಾಗರದ ನೀಲಜಲದ ವ್ಯತ್ಯಾಸದಿಂದ ಕಾಣಬಹುದು.

ನಡುವಣ ಕಾಂಗೋ ಭಾಗದಲ್ಲಿ ಪ್ರವಾಹಕಾಲ ಮೇ ಮತ್ತು ನವೆಂಬರ್ ತಿಂಗಳುಗಳು. ನದಿಯ ತಳಗಣ ಪ್ರದೇಶದಲ್ಲಿ ಪ್ರವಾಹ ವಿಳಂಬವಾಗಿ ಬರುತ್ತದೆ.

**ಪರಿಶೋಧನೆ:** ಡಿಯಾಗೊ ಕಾವೊ ಎಂಬ ಪೋರ್ಚುಗೀಸ್ ನಾವಿಕ 1482 ಅಥವಾ 1483ರಲ್ಲಿ ಕಾಂಗೋ ನದೀಮುಖವನ್ನು ಕಂಡುಹಿಡಿದ. ಅಲ್ಲಿಯ ಪ್ರದೇಶ ಪೋರ್ಚುಗಲ್ ರಾಜ್ಯಕ್ಕೆ ಸೇರಿದುದೆಂಬ ಕುರುಹಾಗಿ ಆತ ಶಿಲಾಸ್ತಂಭವೊಂದನ್ನು ಈಗ ಷಾರ್ಕ್ ಪಾಯಿಂಟ್ ಎಂದು ಕರೆಯುವ ಸ್ಥಳದಲ್ಲಿ ನೆಟ್ಟುಹೋದ. ಈ ಶಿಲಾಸ್ತಂಭದ ಪ್ರಯುಕ್ತ ನಾವಿಕರು ಈ ನದಿಯನ್ನು ಪಿಲ್ಲರ್ ರಿವರ್ ಅಥವಾ ಕಂಬದ ನದಿ ಎಂದು ಕರೆದರು. ತರುವಾಯದ ದಿನಗಳಲ್ಲಿ ಐರೋಪ್ಯ ಪ್ರವಾಸಿಗರು ದೇಶೀಯ ನುಡಿಯ ಅಪಭ್ರಂಶವಾಗಿ ನದಿಯನ್ನು ಜೈರಿ ಎಂದು ಕರೆದರು. ಕೊನೆಗೆ ಅದಕ್ಕೆ ಕಾಂಗೋ ಎಂಬ ಹೆಸರು ಬಂದಿತು. ನದೀಮುಖವನ್ನು ಡಿಯಾಗೊ ಕಂಡುಹಿಡಿದ ಮೇಲೆ 3 ಶತಮಾನಗಳವರೆಗೆ ಇದರ ಪಾತ್ರವನ್ನು ಪರಿಶೋಧಿಸಲು ಯಾವ ಪ್ರಯತ್ನಗಳೂ ಆಗಲಿಲ್ಲ. 1816ರಲ್ಲಿ ಬ್ರಿಟಿಷ್ ಸರ್ಕಾರ ಕ್ಯಾಪ್ಟನ್ ಜೆ.ಕೆ.ಟಕ್ಕಿಯನ್ನು ಕಾಂಗೋ ನದಿಯ ಬಗ್ಗೆ ಪರಿಶೋಧನೆ ನಡೆಸಲು ಕಳುಹಿಸಿತ್ತು. ಆದರೆ ಅವನ ಪ್ರಯಾಣವೂ 60 ವರ್ಷಗಳ ತರುವಾಯ ಅದೇ ಸರ್ಕಾರ ಕಳುಹಿಸಿದ ಮತ್ತೆರಡು ಪರಿಶೋಧಕರ ತಂಡಗಳೂ ವಿಫಲಗೊಂಡುವು. ಕಾಂಗೋ ನದಿಯನ್ನು ಪರಿಶೋಧಿಸಲು ಹೊರಟ ಡೇವಿಡ್ ಲಿವಿಂಗ್‌ಸ್ಟನನ ನೆರವಿಗಾಗಿ 1872ರಲ್ಲಿ ಬಂದ ಲೆಫ್ಟಿನೆಂಟ್ ಡಬ್ಲ್ಯು. ಗ್ರಾಂಡಿ ಕಾಂಗೋ ಅಳಿವೆಯ ದಕ್ಷಿಣದಲ್ಲಿರುವ ಆಂಬ್ರಿಜಿನಿಂದ ಹೊರಟು 1873ರ ಕೊನೆಯಲ್ಲಿ ಜಲಪಾತಗಳ ವರೆಗೆ ಬಂದು ಅಲ್ಲಿಂದ ಮೇಲೆ ನದಿಯನ್ನು ಪರಿಶೋಧಿಸಲು ಪ್ರಯತ್ನಿಸಿದ. ಅಷ್ಟರಲ್ಲೇ ಲಿವಿಂಗ್‌ಸ್ಟನನ ಮರಣವಾರ್ತೆ ಬಂದಾಗ ಅವನನ್ನು ಇಂಗ್ಲೆಂಡಿಗೆ ವಾಪಸು ಕರೆಸಿಕೊಳ್ಳಲಾಯಿತು.

ಕಾಂಗೋ ನದಿಯ ಮೂಲವನ್ನು ಕಂಡುಹಿಡಿಯುವ ಸಮಸ್ಯೆ ಅದರ ಉಗಮಸ್ಥಾನದ ಬಳಿಯ ಹಲವಾರು ನದಿಗಳ ಬಗ್ಗೆ ನಡೆಸಿದ ಪರಿಶೋಧನೆಗಳಿಂದ ಬಗೆಹರಿಯಿತು. 1868ರಲ್ಲಿ ಡೇವಿಡ್ ಲಿವಿಂಗ್‌ಸ್ಟನ್ ಛಾಂಬೀಸಿ ನದಿ ಬಂಗವ್ಯೂಲು ಸರೋವರದಿಂದ ಹುಟ್ಟುತ್ತದೆ ಎಂಬುದನ್ನು ಕಂಡುಹಿಡಿದ. 1871ರಲ್ಲಿ ಆತ ಲೂವಲಾಬ ನದಿಯ ಅಂಚಿನಲ್ಲಿರುವ ನ್ಯಯಂಗ್ವೆ ಗ್ರಾಮವನ್ನು ಸೇರಿ, ಲೂವಲಾಬ ಯಾವ ನದಿಗೆ ಸೇರುತ್ತದೆ ಎಂಬುದನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ರೋಗ ಪೀಡಿತನಾಗಿ 1873ರಲ್ಲಿ ಮೃತನಾದ. ಲೂವಲಾಬ

ನದಿ ನೈಲ್ ನದಿಯನ್ನು ಸೇರುವುದೆಂಬುದು ಅವನ ಭಾವನೆಯಾಗಿತ್ತು. 1872ರ ಹೊತ್ತಿಗೆ ಭೂಗೋಳ ವಿಜ್ಞಾನಿಗಳು ಲಿವಿಂಗ್‌ಸ್ಟನನ ವರದಿಗಳ ಆಧಾರದ ಮೇಲೆಯೇ ಆತ ಕಂಡುಹಿಡಿದ ನದೀವ್ಯೂಹ ಕಾಂಗೋ ನದೀವ್ಯವಸ್ಥೆಗೆ ಸೇರಿದ್ದೇ ಹೊರತು ನೈಲ್ ನದೀ

ಕಾಗೋ ನದಿಯ ದಂಡೆಯ ಮೇಲೆ ಮೀನುಗಾರರು

ವ್ಯವಸ್ಥೆಗೆ ಸಂಬಂಧಿಸಿದ್ದಲ್ಲವೆಂಬ ನಿರ್ಣಯಕ್ಕೆ ಬಂದರು. ಆದರೂ ಮೂಲನದಿಯ ಗತಿಯ ಬಗ್ಗೆ ಆಗ ಯಾವ ತಿಳಿವಳಿಕೆಯೂ ಇರಲಿಲ್ಲ. ಲಿವಿಂಗ್‌ಸ್ಟನನ ಸಹಾಯಕ್ಕಾಗಿ ಅಮೆರಿಕದಿಂದ ಬಂದ ಎಚ್.ಎಂ.ಸ್ಟ್ಯಾನ್ಲಿ 1876ರ ಅಕ್ಟೋಬರಿನಲ್ಲಿ ಜಾಂಜಿಬಾರಿನಿಂದ ಪ್ರಯಾಣ ಮಾಡಿ ನ್ಯಯಂಗ್ವೆ ಗ್ರಾಮ ಸೇರಿ ಅಲ್ಲಿಂದ ಲೂವಲಾಬ ನದಿಯ ಮೇಲುಭಾಗದಲ್ಲಿ 2,560 ಕಿಮೀ ಸಂಚರಿಸಿ ಕ್ಯಾಪ್ಟನ್ ಟಕ್ಕಿ ಬಂದ ಸ್ಥಳಕ್ಕೂ ಮುಂದೆ ಇರುವ ಇಸಂಗಿಲ ಗ್ರಾಮ ತಲಪಿದ. ಈ ಸಂಚಾರದಿಂದ ಆತ ಲೂವಲಾಬ ನದಿಯೂ ಪೋರ್ಚುಗೀಸರು ಜೈರಿ ಎಂದು ಕರೆದ ನದಿಯೂ ಒಂದೇ ಎಂದು ಪುಷ್ಟೀಕರಿಸಿದ. ಸ್ಟ್ಯಾನ್ಲಿಯ ಈ ಮಹತ್ತರ ಪ್ರಯಾಣ ರಾಜಕೀಯ, ಭೌಗೋಳಿಕ ಹಾಗೂ ವಾಣಿಜ್ಯ ದೃಷ್ಟಿಯಿಂದ ಆಫ್ರಿಕದ ಇತಿಹಾಸದಲ್ಲಿ ಬಹು ಮುಖ್ಯ ಘಟನೆಯಾಗಿದೆ. ಸ್ಟ್ಯಾನ್ಲಿ 1887ರಲ್ಲಿ ಕೈಗೊಂಡ ತನ್ನ ಕೊನೆಯ ಪ್ರವಾಸದಲ್ಲಿ ಆರುವೀಮಿ ನದಿಯನ್ನು ಭಾಗಶಃ ಪರಿಶೋಧಿಸಿದ. ಅವನ ತರುವಾಯ ರೆವರೆಂಡ್ ಜಾರ್ಜ್ ಗ್ರೆನ್‌ಫೆಲ್ ಕಾಂಗೋ ನದಿ ಮತ್ತು ಅದರ ಉಪನದಿಗಳ ಬಗ್ಗೆ ಮಾಡಿದಷ್ಟು ಪರಿಶೋಧನೆಗಳನ್ನು ಮತ್ತಾವ ಪರಿಶೋಧಕನೂ ಮಾಡಿಲ್ಲ. 1913ರಲ್ಲಿ ಕ್ಯಾಪ್ಟನ್ ಆರ್.ವಾಕರ್ ಲೂವಪೂಲ ನದಿ ಬಂಗವ್ಯೂಲು ಸರೋವರದಿಂದ ಉದ್ಭವಿಸುವುದಿಲ್ಲವೆಂದೂ ಅದು ಜಾಂಬೀಸಿ ನದಿಯ ಮುಂದುವರಿಕೆಯೆಂದೂ ತೋರಿಸಿ ಕೊಟ್ಟ. ಕಾಂಗೋ ನದಿ ಯಾವ ಭಾಗಗಳಲ್ಲಿ ಹಡಗಿನ ಸಂಚಾರಕ್ಕೆ ಅನುಕೂಲವಾಗಿಲ್ಲವೋ ಅಲ್ಲೆಲ್ಲ ರೈಲುಮಾರ್ಗಗಳನ್ನು ಹಾಕಿದ್ದಾರೆ. (ಎ.ಜಿ.ಕೆ.)

**ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ :** ಸಮಭಾಜಕ ಪ್ರದೇಶದ ಒಂದು ಸ್ವತಂತ್ರ ಗಣರಾಜ್ಯ. ಸ್ವಾತಂತ್ರ್ಯ ಗಳಿಸುವುದಕ್ಕೆ ಮುನ್ನ ಇದಕ್ಕೆ ಬೆಲ್ಜಿಯನ್ ಕಾಂಗೋ ಎಂಬ ಹೆಸರಿತ್ತು. ಕಾಂಗೋ ನದೀ ಜಲಾನಯನ ಪ್ರದೇಶದ ಬಹುಭಾಗವನ್ನೂ ನೈಲ್ ನದಿಯ ಮೇಲ್ಕಣಿವೆಯ ಕೊಂಚ ಭಾಗವನ್ನೂ ಆವರಿಸಿಕೊಂಡಿರುವ ಈ ದೇಶದ ಮೇರೆಗಳು ಈ ರೀತಿ ಇವೆ: ವಾಯವ್ಯ ಮತ್ತು ಉತ್ತರ ದಿಕ್ಕುಗಳಲ್ಲಿ ಕಾಂಗೋ ಗಣರಾಜ್ಯ ಮತ್ತು ಮಧ್ಯ ಆಫ್ರಿಕ ಗಣರಾಜ್ಯ; ಈಶಾನ್ಯದಲ್ಲಿ ಸೂಡಾನ್; ಪೂರ್ವದಲ್ಲಿ ಉಗಾಂಡ, ರುವಾಂಡ, ಬುರುಂಡಿ ಮತ್ತು ಟಾನ್ಜಾನಿಯ; ಆಗ್ನೇಯ, ದಕ್ಷಿಣ ಮತ್ತು ನೈಋತ್ಯ ದಿಕ್ಕುಗಳಲ್ಲಿ ಜಾಂಬಿಯ ಮತ್ತು ಅಂಗೋಲ; ಪಶ್ಚಿಮದಲ್ಲಿ ಕಿರಿದಾಗಿ ಚಾಚಿಕೊಂಡಿರುವ ಈ ದೇಶಕ್ಕೆ ಕೇವಲ 38 ಕಿಮೀ ಉದ್ದದ ಅಟ್ಲಾಂಟಿಕ್ ಸಾಗರತೀರವಿದೆ. ಕಡಲಭಿಮುಖ ಮೂಲೆಯ ದಕ್ಷಿಣದ ಅಂಚು ಕಾಂಗೋ ನದಿ; ಉತ್ತರದಲ್ಲಿ ಅಂಗೋಲದ ಹೊರ ನೆಲವಾದ ಕಬಿಂಡ ಪ್ರದೇಶ. ಕಾಂಗೋದ ವಿಸ್ತೀರ್ಣ 23,44,116 ಚ.ಕಿಮೀ. ಜನಸಂಖ್ಯೆ 65,751,512 (ಜುಲೈ 2007ರ ಅಂದಾಜು). ಈ ದೇಶ ಸುಮಾರು 200 ಕುಲಧರ್ಮಗಳ ಜನರಿಗೆ ಆಶ್ರಯದಾತವಾಗಿದೆ. ಇಲ್ಲಿ ಶೇ. 50ರಷ್ಟು ಜನ ರೋಮನ್ ಕೆಥೊಲಿಕ್ ಪಂಥದವರಾಗಿದ್ದು, ಶೇ. 20ರಷ್ಟು ಪ್ರಾಟಸ್ಟೆಂಟರು, ಶೇ. 10ರಷ್ಟು ಕಿಂಬಾಂಗಿಸ್ಟರು, ಶೇ. 10ರಷ್ಟು ಇತರರಿದ್ದಾರೆ. ಜನಸಂಖ್ಯೆ ಬೆಳೆವಣಿಗೆ ದರ ಶೇ. 3.3 ರಷ್ಟಿದ್ದು ಜನನ ದರ ಪ್ರತಿ ಸಾವಿರಕ್ಕೆ ಶೇ. 42.96 ಮರಣ ದರ ಪ್ರತಿ ಸಾವಿರಕ್ಕೆ 10.34 ರಷ್ಟಿದೆ. (2007ರ ಅಂದಾಜು); ರಾಜಧಾನಿ ಕಿನ್ಶಾಸ (ಲೀಯೊಪೋಲ್ಡ್‌ವಿಲ್). ಬಂಟುವಿನ ಉಪಭಾಷೆಗಳನ್ನು–ಮುಖ್ಯವಾಗಿ ಸ್ವಾಹಿಲಿ ಮತ್ತು ಲಿಂಗಾಲ ಇವನ್ನು –ಜನ ಆಡುತ್ತಾರೆ. ಅಧಿಕೃತ ಭಾಷೆ ಫ್ರೆಂಚ್. ಇದೇ ಹೆಸರಿನ ಇನ್ನೊಂದು ದೇಶ (ನೋಡಿ– ಕಾಂಗೋ ಗಣರಾಜ್ಯ) ಇರುವುದರಿಂದ ಇದನ್ನು ಕಾಂಗೋ (ಕಿನ್ಶಾಸ) ಎಂದೂ ಕರೆಯುತ್ತಾರೆ

**ಮೇಲ್ಮೈ ಲಕ್ಷಣ:** ಕಾಂಗೋ ದೇಶ ಸಾಮಾನ್ಯವಾಗಿ ಸಮುದ್ರಮಟ್ಟದಿಂದ 3040–9140 ಮೀ ಎತ್ತರದ ಪ್ರಸ್ಥಭೂಮಿಯಾಗಿದೆ. ವಿಶಾಲ ಕಣಿವೆಯಂತಿರುವ ಈ ಪ್ರಸ್ಥಭೂಮಿಯ ನಡುವೆ ಹರಿಯುವ ಕಾಂಗೋ ನದಿಯ ಉದ್ದ 3456 ಕಿಮೀ ಇದರ ಜಲಾನಯನ ಪ್ರದೇಶ ಸುಮಾರು 37050 ಚ.ಕಿಮೀ ಇದರಲ್ಲಿ ಮೂರನೆಯೆರಡು ಭಾಗ ಕಾಂಗೋ ದೇಶದಲ್ಲಿದೆ. ಇದು ಈ ವಿಶಾಲ ಭೂಮಿಯನ್ನು ದಾಟುವಾಗ ಬಂಡೆಗಳನ್ನು ಕೊರೆದು ಕಮರಿಯಲ್ಲಿ ರಭಸವಾಗಿ ಮುನ್ನಡೆಯುತ್ತದೆ. ಇದರ ಬಲದಂಡೆಯ ಮೇಲಿರುವುದೇ ಮಯುಂಬೆಯ ಬೆಟ್ಟಪ್ರದೇಶ. ದಕ್ಷಿಣ ಕಾಂಗೋದಲ್ಲಿ ಕ್ವಾಂಗೋ (11083 ಮೀ), ಕಾಸೈ ಮತ್ತು ಕಟಾಂಗ ಪ್ರಸ್ಥಭೂಮಿಗಳಿವೆ. ಕ್ವಾಂಗೋ ಇರುವುದು ಅಂಗೋಲದ ಗಡಿಯ ಬಳಿ. ಲುಬುಂಬಾಷಿ (13826 ಮೀ), ಮಾನಿಕ, ಕುಂಡೆ ಲುಂಗು ಮತ್ತು ಕಿಬಾರ ಈ ಪ್ರದೇಶಗಳು ಕಾಸೈ ಮತ್ತು ಕಟಾಂಗಗಳಲ್ಲಿವೆ. ಕಮಲೆಂಡೊ–ಉಪೆಂಬ, ಲುಫೀರ ಮತ್ತು ಲೂವಪೂಲ ಕಣಿವೆಗಳು ಇವುಗಳ ನಡುವೆ ಇವೆ. ಉತ್ತರದಲ್ಲಿ ಕಾಂಗೋ ನದೀಪ್ರದೇಶವನ್ನೂ ಚಾಡ್ ಮತ್ತು ನೈಲ್ ಪ್ರದೇಶವನ್ನೂ ಪ್ರತ್ಯೇಕಿಸುವ ಪ್ರಸ್ಥ ಭೂಮಿಗಳು ಸ್ವಲ್ಪ ತಗ್ಗು. ಪೂರ್ವದ ಕಾಂಗೋ ದಂಡೆಯ ನೆಲದ ಎತ್ತರ ಹೆಚ್ಚು. ಇಲ್ಲಿ ಉದ್ದಕ್ಕೂ ಹಬ್ಬಿರುವ ಪರ್ವತಶ್ರೇಣಿಗಳ ನಡುವೆ ಟಾಂಗನ್ಯೀಕ, ಕೀವೂ, ಎಡ್ವರ್ಡ್ ಮತ್ತು ಆಲ್ಬರ್ಟ್ ಸರೋವರಗಳಿವೆ. ಕೀವೂಗೆ ಉತ್ತರದಲ್ಲಿರುವುದು ವಿರುಂಗ ಅಗ್ನಿಪರ್ವತಶಿಖರ. ಎಡ್ವರ್ಡ್ ಮತ್ತು ಆಲ್ಬರ್ಟ್ ಸರೋವರಗಳ ನಡುವೆ ಇರುವ ರುವೆಂಜೋರಿ ಶ್ರೇಣಿ (ಚಂದ್ರಪರ್ವತ) ಅತ್ಯಂತ ಎತ್ತರ ಪ್ರದೇಶ. ಇಲ್ಲಿರುವ ಸ್ಟ್ಯಾನ್ಲಿ ಶಿಖರದ ಎತ್ತರ 9087. ಮೀ ಇದರ ತುದಿ ಹಿಮಾವೃತ. ಈ

ಕಾಂಗೋ ಪ್ರದೇಶದ ಸಿಂಹ

ಶ್ರೇಣಿಯಿಂದ ಆಚೆಗೆ ಉಗಾಂಡ ಇದೆ. ಕಾಂಗೋ ನದಿಯ ನಡುಪ್ರದೇಶ ತಗ್ಗುಪ್ರಸ್ಥಭೂಮಿಗಳಿಂದಲೂ ಮೆಟ್ಟಲುದಿಬ್ಬಗಳಿಂದಲೂ ಕೂಡಿದ್ದು ಜೌಗು ಕಣಿವೆಗಳ ಅಂಚಿನಲ್ಲಿ ಕೋಡುಗಲ್ಲಿನ ಬಂಡೆಗಳೂ ಪ್ರಪಾತಗಳೂ ಕಾಣಸಿಗುತ್ತವೆ.

**ವಾಯುಗುಣ:** ಸಮಭಾಜಕದ ಮೇಲಿರುವ ಈ ದೇಶದ್ದು ಉಷ್ಣವಲಯದ ವಾಯುಗುಣ. ವರ್ಷವೆಲ್ಲ ಸರಾಸರಿಯಲ್ಲಿ 70° ಫ್ಯಾ.–80° ಫ್ಯಾ. ಉಷ್ಣತೆ ಇರುತ್ತದೆ. ವರ್ಷವೆಲ್ಲ ಮಳೆ. ಗರಿಷ್ಠ ಉಷ್ಣತೆ ಫೆಬ್ರುವರಿಯಲ್ಲಿ. ಗರಿಷ್ಠ ಮಳೆ ಏಪ್ರಿಲ್–ಮೇ ಮತ್ತು ಅಕ್ಟೋಬರ್–ನವೆಂಬರ್‌ಗಳಲ್ಲಿ. ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಮಳೆ ಕನಿಷ್ಠ. ವಾರ್ಷಿಕ ಮಳೆ 48". ಕರಾವಳಿಯಲ್ಲಿ ಜೂನಿನಿಂದ ಅಕ್ಟೋಬರ್‌ವರೆಗಿನ ಮಳೆ ಕನಿಷ್ಠ. ದಕ್ಷಿಣದಲ್ಲಿ ಕಟಾಂಗ ಪ್ರಸ್ಥಭೂಮಿಯಲ್ಲಿ ಉಷ್ಣತೆಯ ಅಂತರ ಹೆಚ್ಚು, ಮಳೆ ಕಡಿಮೆ.

**ಸಸ್ಯ, ಪ್ರಾಣಿ ಪ್ರಕಾರಗಳು:** ಕಾಂಗೋ ನದೀ ಜಲಾನಯನ ಪ್ರದೇಶದ ಉತ್ತರದ ನಡುಭಾಗ ನಿಬಿಡಾರಣ್ಯ. ಇದರ ಉತ್ತರ ದಕ್ಷಿಣಗಳಲ್ಲೂ ವ್ಯಾಪಕವಾದ ಕಾಡುಗಳಿವೆ. ಸಮಭಾಜಕೀಯ ಕಾಡುಗಳಲ್ಲಿಯ ಮರಗಳು ವೈವಿಧ್ಯಮಯ. ಅವು ನಿತ್ಯ ಹಸುರಿನವು. ಅರಣ್ಯ ಗರ್ಭದಲ್ಲಿ ಸೂರ್ಯಕಿರಣಕ್ಕಾಗಿ ಹೋರಾಟ ನಿರಂತರವಾಗಿ ಸಾಗಿದೆ. ಎಲ್ಲ ಸಸ್ಯಕ್ಕೂ ನಭೋಗಮನ ಪ್ರವೃತ್ತಿ. ಕತ್ತಲು ತುಂಬಿದ ನೆಲದ ಮೇಲೆ ಸಸ್ಯಗಳೇ ಇಲ್ಲವೆನ್ನಬಹುದು. ಕಾಡು ಕಡಿದಲ್ಲಿ ಮತ್ತೆ ಮರಗಳು ಶೀಘ್ರವಾಗಿ ಬೆಳೆದಿವೆ.

ಕ್ವಾಂಗೋದ ದಕ್ಷಿಣಕ್ಕೆ ಇರುವ ಮತ್ತು ಕಟಾಂಗದಲ್ಲಿಯ ಕಾಡುಗಳು ಅಷ್ಟು ದಟ್ಟವಲ್ಲ; ಮರಗಳ ಎತ್ತರ ಕಡಿಮೆ. ಪೂರ್ವದ ಪರ್ವತ ಪ್ರದೇಶದಲ್ಲಿ ಎತ್ತರಕ್ಕನುಗುಣವಾಗಿ ಸಸ್ಯ ಪ್ರಭೇದಗಳಿವೆ: ಕೆಳಗೆ ನಿತ್ಯ ಹಸುರಿನ ದಟ್ಟಗಾಡು; ಅದರ ಮೇಲೆ ಎಲೆ ಉದುರುವ ಮರಗಳ ಕಾಡು; ಇನ್ನೂ ಮೇಲೆ ಹುಲ್ಲು; ಅದಕ್ಕಿಂತ ಎತ್ತರದಲ್ಲಿ ಆಲ್ಪೈನ್ ಸಸ್ಯ ಮತ್ತು ಹುಲ್ಲು–ಇದು ಅಲ್ಲಿಯ ಸಸ್ಯ ವಿಂಗಡಣೆ.

ಸಮಭಾಜಕೀಯ ಕಾಡುಗಳ ಸುತ್ತ ಎತ್ತರ ಹುಲ್ಲು ಬೆಳೆಯುವ ನೆಲವಿದೆ. ಇದರ ನಡುನಡುವೆ ಮರಗಳೂ ಪೊದೆಗಳೂ ಇರುವುದುಂಟು.

**ಕಾಂಗೋದ ಪ್ರಾಣಿಗಳು ಮುಖ್ಯವಾಗಿ ಎರಡು ಬಗೆಯವು:** ಸಮಭಾಜಕೀಯ ಕಾಡುಗಳವು ಮತ್ತು ಹುಲ್ಲುಗಾವಲಿನವು. ಒತ್ತಾದ ಕಾಡಿನ ಮೃಗಗಳಲ್ಲಿ ಮುಖ್ಯವಾದವು ವಾನರಗಳು, ಕೋತಿಗಳು ಮತ್ತು ಚಿಂಪಾಂಜಿಗಳು. ಮಯೊಂಬೆ ಮತ್ತು ಕೀವೂ ಪರ್ವತಗಳಲ್ಲಿ ಗೊರಿಲ್ಲಾಗಳಿವೆ. ಒಕಾಪಿ, ಕಾಡುಹಂದಿ, ಆನೆ, ಬಿಳಿಯ ಘೇಂಡಾಮೃಗ ಮತ್ತು ಜಿರಾಫೆ ಇತರ ಮೃಗಗಳು. ಕಟಾಂಗದಲ್ಲಿ ತೆರವಾದ ಪ್ರದೇಶಗಳಲ್ಲೂ ಕಾಡಿನ ಸುತ್ತ ಇರುವ ಪೊದೆ ಪ್ರದೇಶದಲ್ಲೂ ಸಿಂಹಗಳಿವೆ. ಆನೆ, ಹುಲಿ, ಕಾಡೆಮ್ಮೆ, ಜಿಂಕೆ–ಇವು ಕಾಡುಗಳಲ್ಲೂ ಬಯಲುಗಳಲ್ಲೂ ಉಂಟು. ಕಿರುಬ, ಗುಳ್ಳೆನರಿ ಮುಂತಾದವು ಪೂರ್ವದಲ್ಲಿ ವಿಶೇಷ. ನೀರಾನೆಗಳೂ ಮೊಸಳೆಗಳೂ ನದಿಗಳಲ್ಲಿ ಅಧಿಕ ಸಂಖ್ಯೆಯಲ್ಲಿವೆ.

ಪಕ್ಷಿಸಂಕುಲವೂ ವೈವಿಧ್ಯಮಯ. ಕೊಕ್ಕರೆ, ಬಾತು, ಹದ್ದು, ಗೂಬೆ ಇವು ಸಾಮಾನ್ಯ. ಕೋಗಿಲೆ, ಪಾರಿವಾಳ, ಗಿಣಿ–ಇವೂ ಉಂಟು. ಹೆಬ್ಬಾವೂ ಸೇರಿ ಬಗೆಬಗೆಯ ಹಾವುಗಳು, ಆಮೆ, ಹಲ್ಲಿ, ಗೋಸುಂಬೆ, ದುಂಬಿ, ಚಿಟ್ಟೆ, ನೊಣ, ಚೇಳು, ಜೇಡ, ಗೆದ್ದಲು, ಇರುವೆ, ಉಣ್ಣಿ, ಸೊಳ್ಳೆ–ಇವೆಲ್ಲ ವ್ಯಾಪಕವಾಗಿವೆ. ನಿದ್ರಾರೋಗ ತರುವ ಟ್ಸೆಟ್ಸೆ ನೊಣ ಇಲ್ಲಿಯ ವೈಶಿಷ್ಟ್ಯ.

**ವ್ಯವಸಾಯ, ಕೈಗಾರಿಕೆ:** ರಬ್ಬರ್, ದಂತ ಮತ್ತು ದಿಮ್ಮಿ–ಇವು ಕಾಂಗೋದ ಮುಖ್ಯ ಉತ್ಪನ್ನಗಳು. ಮಲಯ ಮತ್ತು ಈಸ್ಟ್ ಇಂಡೀಸ್‌ಗಳಲ್ಲಿ ರಬ್ಬರ್ ತೋಟಗಳು ಅಭಿವೃದ್ಧಿ ಹೊಂದಿದ ಮೇಲೆ ಕಾಂಗೋದ ಕಾಡು ರಬ್ಬರಿಗೆ ಬೇಡಿಕೆ ತಗ್ಗಿತು. ಇಲ್ಲೂ ರಬ್ಬರ್ ತೋಟಗಳ ಸ್ಥಾಪನೆಯಾಯಿತು. ಮಟಾಡಿ ಮತ್ತು ಸ್ಟ್ಯಾನ್ಲಿ ಪೂಲ್‌ಗಳ ನಡುವಣ ಪ್ರದೇಶದಲ್ಲಿ 1926ರಲ್ಲಿ ಆರಂಭವಾದ ಕಬ್ಬು ಬೆಳೆಯುವ ಪ್ರಯೋಗ ಯಶಸ್ವಿಯಾಗಿದೆ. ಕೀವೂ ಮತ್ತು ಯೂಲ್ ಜಿಲ್ಲೆಗಳಲ್ಲಿ 1920 ರಿಂದ ಕಾಫಿ ಬೆಳೆಯಲಾಗುತ್ತಿದೆ. ತಾಳೆ ಎಣ್ಣೆ, ಬಾಳೆ, ನೆಲಗಡಲೆ, ಇತರ ಬೆಳೆಗಳು. ಕಟಾಂಗ, ಕಾಸೈ ಮತ್ತು ಉತ್ತರ ಪ್ರದೇಶದಲ್ಲಿ ಹತ್ತಿ ಬೆಳೆಯನ್ನು ವೃದ್ಧಿಪಡಿಸಲಾಗಿದೆ. ಕಸಾವ, ಮುಸುಕಿನ ಜೋಳ, ಅಕ್ಕಿ, ಬಟಾಣಿ, ಬಾಳೆ ಮತ್ತು ಹುರುಳಿ ಅವರ ಆಹಾರ ಬೆಳೆ. ಪಶುಪಾಲನೆಯನ್ನು ಕಟಾಂಗದಲ್ಲಿ ಆರಂಭಿಸಲಾಯಿತು. ಈಗ ಇದು ಕಾಸೈ ಮತ್ತು ಕಾಂಗೋ ಕೆಳನಾಡುಗಳಿಗೂ ಹಬ್ಬಿದೆ. ದನಗಳ ಜೊತೆಗೆ ಆಡು, ಕುರಿಗಳನ್ನೂ ಇಲ್ಲಿ ಸಾಕುತ್ತಾರೆ.

ಕಾಂಗೋ ಖನಿಜಸಮೃದ್ಧ ದೇಶ. ಕಟಾಂಗದಲ್ಲಿ ತಾಮ್ರನಿಕ್ಷೇಪ ಹೇರಳವಾಗಿದೆ. ಅಲ್ಲದೆ ತವರ, ಯುರೇನಿಯಂ, ಮ್ಯಾಂಗನೀಸ್, ಸತು, ಕೋಬಾಲ್ಟ್ ಧಾರಾಳವಾಗಿ ದೊರಕುತ್ತವೆ. ಅದು ವಿದ್ಯುಚ್ಛಕ್ತಿಯ ನೆಲೆಯೂ ಹೌದು. ಸುಡ್–ಕಾಸೈನಲ್ಲಿ ವಜ್ರವೂ ಕೀವೂನಲ್ಲಿ ತವರ, ಚಿನ್ನಗಳೂ ದೊರಕುತ್ತವೆ. ಸಿಮೆಂಟ್, ಬಂದೂಕದ ಮದ್ದು, ಸ್ಫೋಟಕ, ಸಲ್ಫ್ಯೂರಿಕ್ ಆಮ್ಲ, ಬೀರ್, ಕಡಲೆ ಕಾಯಿ ಎಣ್ಣೆ, ಬೆಣ್ಣೆ, ಜವಳಿ, ಚರ್ಮದ ಪಾದರಕ್ಷೆ, ಸಿಗರೇಟ್, ಇಟ್ಟಿಗೆ, ಹೆಂಚು, ಸೀಸೆ, ಡಬ್ಬ, ಉಡುಪು, ಚೀನಿ ಸರಕು (ಹೇಬರ್‌ಡ್ಯಾಷರಿ)–ಇವು ಕೆಲವು ಕೈಗಾರಿಕಾ ಸರಕುಗಳು.

ವಿದೇಶಿ ವ್ಯಾಪಾರ, ಹಣಕಾಸು, ಸಾರಿಗೆ: ಖನಿಜಗಳು ಮತ್ತು ವ್ಯವಸಾಯೋತ್ಪನ್ನಗಳು ಕಾಂಗೋದ ಮುಖ್ಯ ನಿರ್ಯಾತಗಳು. ಯಂತ್ರ, ಇಂಧನ, ಜವಳಿ ಮತ್ತು ಆಹಾರ ಆಯಾತವಾಗುತ್ತವೆ. ಎರಡನೆಯ ಮಹಾಯುದ್ಧದಿಂದೀಚೆಗೆ ಆಯಾತಕ್ಕಿಂತ ನಿರ್ಯಾತವೇ ಹೆಚ್ಚು. ಬೆಲ್ಜಿಯಂ ಮತ್ತು ಅಮೆರಿಕ ಸಂಯುಕ್ತಸಂಸ್ಥಾನ–ಇವು ಈ ದೇಶದೊಂದಿಗೆ ವ್ಯಾಪಾರಮಾಡುವ ಮುಖ್ಯ ದೇಶಗಳು.

ಕಾಂಗೋದ ನಾಣ್ಯ ಜ್ಹೇರ್. ಇದನ್ನು 1,000 ಮಕುಟಗಳಾಗಿ ವಿಂಗಡಿಸಲಾಗಿದೆ. 1.2 ಜ್ಹೇರ್=1 ಪೌಂ. ಸ್ಟರ್ಲಿಂಗ್; 50 ಮಕುಟ=1 ಅಮೆರಿಕನ್ ಡಾಲರ್ ಆಗಿತ್ತು. ಈಗ ಕಾಂಗೋದ ನಾಣ್ಯದ ಹೆಸರು ಕಾಂಗೋಲಿ ಫ್ರ್ಯಾಂಕ್ ಎಂದು ಬದಲಾಗಿದೆ. 48 ಅಮೆರಿಕನ್ ಡಾಲರಿಗೆ 464.69 ಕಾಂಗೋಲಿ ಪ್ರ್ಯಾಂಕ್ ಸಮನಾಗಿದೆ (2006 ಅಂದಾಜು).

ಕಾಂಗೋದಲ್ಲಿರುವ ಸಂಚಾರ ಮಾರ್ಗಗಳಿವು: ಜಲಮಾರ್ಗ 13628 ಕಿಮೀ; ರೈಲ್ವೆ 4825 ಕಿಮೀ; ರಸ್ತೆ 1,44,668 ಕಿಮೀ ನದೀಮಾರ್ಗಗಳಿಗೆ ಎಲ್ಲೆಲ್ಲಿ ತಡೆಯಾಗಿದೆಯೋ ಅಲ್ಲೆಲ್ಲ ಸಾಮಾನ್ಯವಾಗಿ ರೈಲ್ವೆ ನಿರ್ಮಿಸಲಾಗಿದೆ. ಬನಾನ, ಬೋಮ, ಆಂಗೊ ಮತ್ತು ಮಟಾಡಿ ಇವು ಸಾಗರಗಾಮಿ ಹಡಗುಗಳಿಗೆ ನಿಲುಕುವ ಬಂದರುಗಳು. ಕೀನ್ಷಾಸ, ಸ್ಟ್ಯಾನ್ಲಿವಿಲ್, ಎಲಿಸಬೆತ್‌ವಿಲ್ ಮುಖ್ಯ ವಿಮಾನ ನಿಲ್ದಾಣಗಳು.

ಕಾಂಗೋ ನದಿಯ ಮುಖದ ಒಳಗಿರುವ ಬನಾನ ಕಾಂಗೋದ ಅತ್ಯಂತ ಹಳೆಯ ವ್ಯಾಪಾರಕೇಂದ್ರ. ಐರೋಪ್ಯ ವರ್ತಕರು 16ನೆಯ ಶತಮಾನದಲ್ಲೇ ಇಲ್ಲಿ ನೆಲಸಿದ್ದರು. ನದೀಮುಖದ ಉತ್ತರ ದಂಡೆಯಲ್ಲಿ ಬೋಮ ಇದೆ. ಇದು ಹಿಂದೆ ಆಡಳಿತ ಕೇಂದ್ರವಾಗಿತ್ತು. ಈಗ ಮಯುಂಬೆ ಪ್ರದೇಶದ ಬಂದರು. ಇಲ್ಲಿಂದ ರೈಲುಮಾರ್ಗವಿದೆ. ನದಿಯ ಮೇಲೆ ಬನಾನಕ್ಕೆ 148 ಕಿಮೀ ದೂರದಲ್ಲಿರುವುದು ಮಟಾಡಿ. ಇಲ್ಲಿಯವರೆಗೂ ಸಾಗರಗಾಮಿ ಹಡಗುಗಳು ಬರುತ್ತವೆ. ಈ ಬಳಿ ಜಲಪಾತವಿರುವುದರಿಂದ ಇಲ್ಲಿಂದ ಮುಂದೆ ಸ್ಟ್ಯಾನ್ಲಿ ಮಡುವಿನ ವರೆಗೆ ರೈಲುಮಾರ್ಗವುಂಟು. ಕಾಂಗೋದ ರಾಜಧಾನಿ ಕೀನ್ಷಾಸ ಇರುವುದು ಅಲ್ಲಿ. ಇದರ ಜನಸಂಖ್ಯೆ 1,39,064 (2001). ಲುಬುಂಬಾಷಿ ಮತ್ತು ಕೀಸಾಂಗಾನಿ 6,82,599 (2004) ಇತರ ಮುಖ್ಯ ನಗರಗಳು.



**ಖನಿಜಗಳು: Au–ಚಿನ್ನ, Cb-ಕೋಲಂಬೈಟ್, Co-ಕೋಬಾಲ್ಟ್, Cu-ತಾಮ್ರ, Fe-ಕಬ್ಬಿಣ, Mn-ಮ್ಯಾಂಗನೀಸ್ Sn-ತವರ, U-ಯುರೇನಿಯಂ, W-ವೋಲ್ಫ್ರಮ್, Zn-ಸತು**

ಕಾಂಗೋದ ಶಿಕ್ಷಣ ಬಹಳ ಕಾಲದ ವರೆಗೆ ಕ್ರೈಸ್ತ ಸಂಸ್ಥೆಗಳ ಕೈಯಲ್ಲಿಯೇ ಇತ್ತು. ಈ ವಿಚಾರದಲ್ಲಿ ಇದು ಬಹಳ ಹಿಂದುಳಿದ ದೇಶ. ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳನ್ನು ಬಿಟ್ಟರೆ ಬೇರೆ ಯಾವುವೂ ಇರಲಿಲ್ಲ. ಉಚ್ಚಶಿಕ್ಷಣವಂತೂ ಕನಸಿನ ಗಂಟಾಗಿತ್ತು. ಕಾಂಗೋ ಸ್ವಾತಂತ್ರ್ಯ ಪಡೆದಾಗ ಅಲ್ಲಿ ಒಬ್ಬ ಕಾಂಗೋಲಿ ಡಾಕ್ಟರಾಗಲಿ ಎಂಜಿನಿಯರಾಗಲಿ ಇರಲಿಲ್ಲ. ಮೊದಲು ಸುಮಾರು 20,000 ಶಾಲೆಗಳನ್ನು ಕೆಥೊಲಿಕ್

ಸಂಸ್ಥೆಗಳು ನಡೆಸುತ್ತಿದ್ದುವು. ಎರಡನೆಯ ಮಹಾಯುದ್ಧದ ಅನಂತರ ಶಿಕ್ಷಣ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಪ್ರಗತಿ ಕಂಡುಬಂತು. ಈಗ ಈ ದೇಶದಲ್ಲಿ ಜೊತೆಗೆ ಇತರೇ ವಿಶ್ವವಿದ್ಯಾನಿಲಯಗಳಿವೆ. 1 ಸ್ಟೇಟ್ ವಿಶ್ವವಿದ್ಯಾನಿಲಯ; 2 ಕೆಥೊಲಿಕ್ ವಿಶ್ವವಿದ್ಯಾನಿಲಯ ಮತ್ತು 3 ಫ್ರೀ ವಿಶ್ವವಿದ್ಯಾನಿಲಯ.

**ಇತಿಹಾಸ :** ಪ್ರಪಂಚದ ಭೂಪಟದಲ್ಲಿ ಕಾಂಗೋದ ಅಸ್ತಿತ್ವ ಹೊರಗಡೆಯ ಪ್ರಪಂಚಕ್ಕೆ ಗೊತ್ತಾದದ್ದು 19ನೆಯ ಶತಮಾನದಲ್ಲಿ. ಬೆಲ್ಜಿಯಮಿನ ದೊರೆ ಎರಡನೆಯ ಲೀಯೊಪೋಲ್ಡನ ಆಸಕ್ತಿಯಿಂದಾಗಿ. ಅದಕ್ಕೆ ಮುಂಚೆ ಅಲ್ಲಿ ನೆಲಸಿದ್ದ ಅನೇಕ ಗುಂಪುಗಳಲ್ಲಿ ಒಂದು ರಾಷ್ಟ್ರದ ಕಲ್ಪನೆ ಇರಲಿಲ್ಲ. ಅಲ್ಲಿದ್ದ ರಾಜ್ಯಗಳಲ್ಲಿ ಒಂದರ ಹೆಸರು ಕಾಂಗೋ. ಅಲ್ಲಿಯ ನದಿಗೂ ಅದೇ ಹೆಸರಿತ್ತು. ಆ ರಾಜ್ಯ ಅತ್ಯಂತ ವಿಸ್ತಾರವಾಗಿದ್ದದ್ದು 16ನೆಯ ಶತಮಾನದಲ್ಲಿ.

ಕೊಂದ ಮಹಿಷದ ಹಂಚಿಕೆ. ಕಾಂಗೋದಲ್ಲಿ ಬೇಟೆ ಈಗಲೂ ಜೀವನಾಧಾರ

ಆಗಲೂ ಅದು ಸ್ಟ್ಯಾನ್ಲಿ ಮಡುವಿನಿಂದ ಕೆಳಗಡೆಯ ಭಾಗವನ್ನೂ ಈಗಿನ ಅಂಗೋಲದ ಉತ್ತರಭಾಗವನ್ನೂ ಒಳಗೊಂಡಿತ್ತು. 19ನೆಯ ಶತಮಾನದ ವೇಳೆಗೆ ಆ ರಾಜ್ಯ ಅಳಿದಿತ್ತು. 19ನೆಯ ಶತಮಾನದಲ್ಲಿ ಎರಡನೆಯ ಲೀಯೊಪೋಲ್ಡ್ ದೊರೆ ತನ್ನ ದೇಶಕ್ಕೊಂದು ವಸಾಹತು ಸಂಪಾದಿಸಬೇಕೆಂಬ ಉದ್ದೇಶದಿಂದ ಈ ನಾಡಿನ ಮೇಲೆ ಕಣ್ಣಿಟ್ಟ. ಆದರೆ ಅವನ ಕನಸಿಗೆ ಅವನ ಸರ್ಕಾರ ಬೆಂಬಲ ನೀಡಲಿಲ್ಲ. ಆಗ ಅವನು ಖಾಸಗಿಯಾಗಿ ಪ್ರಯತ್ನ ನಡೆಸಿ, ತನ್ನ ಸ್ವಂತ ವೆಚ್ಚದಿಂದ ಈ ಕಾರ್ಯದಲ್ಲಿ ಉದ್ಯುಕ್ತನಾದ. 1876ರಲ್ಲಿ ಆಫ್ರಿಕನ್ ಅಂತಾರಾಷ್ಟ್ರೀಯ ಸಂಘದ ಸ್ಥಾಪನೆಯಾಯಿತು. ಆಫ್ರಿಕನ್ ಪ್ರದೇಶದ ಪರಿಶೋಧನೆಯೂ ಅಲ್ಲಿಯ ಜನರನ್ನು ನಾಗರಿಕರನ್ನಾಗಿ ಮಾಡುವುದೂ ಆ ಸಂಘದ

ಕಟಾಂಗದಲ್ಲಿ ತೆಗೆಯಲಾದ ತಾಮ್ರದ ಇಟ್ಟಿಗೆಗಳು

ಉದ್ದೇಶ. ಆ ಸಂಘ ಅಷ್ಟೇನೂ ಯಶಸ್ಸು ಗಳಿಸಲಿಲ್ಲ. ಆದರೆ ಅದರ ಮರೆಯಲ್ಲಿ ಲೀಯೊಪೋಲ್ಡ್ ದೊರೆ ತನ್ನ ವಸಾಹತಿನ ಆಶೆಯ ಸುರುಳಿ ಬಿಚ್ಚಿದ. 1874–77ರಲ್ಲಿ ಹೆನ್ರಿ ಎ. ಸ್ಟ್ಯಾನ್ಲಿ ಈ ಪ್ರದೇಶದಲ್ಲಿ ಸಂಚರಿಸಿ, ಕಾಂಗೋ ನದಿಯ ಜಾಡನ್ನು ಪತ್ತೆ ಹಚ್ಚಿದ. 1878ರಲ್ಲಿ ಸ್ಟ್ಯಾನ್ಲಿಯನ್ನು ದೊರೆ ತನ್ನ ಆಶೆಯ ಸಾಧನೆಗಾಗಿ ನೇಮಿಸಿಕೊಂಡ. 1879–84ರಲ್ಲಿ ಸ್ಟ್ಯಾನ್ಲಿ ಕೆಲವು ತರುಣ ಸಾಹಸಿಗಳೊಡಗೂಡಿ ಕಾಂಗೋ ನದಿಯ ಮೇಲ್ಭಾಗದಲ್ಲೂ ಪರಿಶೋಧನೆ ನಡೆಸುವುದು ಸಾಧ್ಯವಾಯಿತು. ಆ ಭಾಗದಲ್ಲೆಲ್ಲೂ ಸ್ಥಳೀಯರಾಗಲಿ ವಿದೇಶೀಯರಾಗಲಿ ಅವನನ್ನು ಪ್ರತಿಭಟಿಸಲಿಲ್ಲ. ಆದರೆ ಸ್ಟ್ಯಾನ್ಲಿ ಸರೋವರದ ಬಳಿಗೆ ಆ ವೇಳೆಗಾಗಲೇ ಬ್ರ್ಯಾಜ಼ನ ಕಡೆಯವರು ಬಂದಿದ್ದರು. ಆದ್ದರಿಂದ ಸ್ಟ್ಯಾನ್ಲಿ ಅದರ ಉತ್ತರ ಭಾಗವನ್ನು ಫ್ರೆಂಚರಿಗೆ ಬಿಟ್ಟುಕೊಟ್ಟು ದಕ್ಷಿಣದ ದಡದಲ್ಲಿ ಲೀಯೊಪೋಲ್ಡ್‌ವಿಲ್ ಸ್ಥಾಪಿಸಿದ. ಅದೇ ಈಗಿನ ಕಿನ್ಷಾಸ. ಸ್ಟ್ಯಾನ್ಲಿ ಅನೇಕ ಆಫ್ರಿಕನ್ ನಾಯಕರೊಂದಿಗೆ ಒಪ್ಪಂದ ಮಾಡಿಕೊಂಡು ಉಪಾಯದಿಂದ ಅವರನ್ನೆಲ್ಲ ಅಧೀನರನ್ನಾಗಿ ಮಾಡಿಕೊಂಡ. ಈತರ ಪಾಶ್ಚಾತ್ಯ ರಾಷ್ಟ್ರಗಳಿಗೂ

ಕಾಂಗೋದ ಒಂದು ಹಳ್ಳಿ

ಈ ಪ್ರದೇಶದಲ್ಲಿ ವ್ಯಾಪಾರ ಮಾಡುವ ಸ್ವಾತಂತ್ರ್ಯ ದೊರಕಿಸಿಕೊಡುವ ಭರವಸೆ ನೀಡಿದ್ದರಿಂದ ಲೀಯೊಪೋಲ್ಡನ ಸ್ಥಾನ ಭದ್ರವಾಯಿತು. 1885ರಲ್ಲಿ ಲೀಯೊಪೋಲ್ಡ್ ದೊರೆ ಆ ಪ್ರದೇಶದ ಪ್ರಭುವಾದ. ಕಾಂಗೋ ಸ್ವತಂತ್ರ ರಾಜ್ಯ ಎಂದು ಅದಕ್ಕೆ ಹೆಸರಾಯಿತು. ರಾಜನ ಸ್ವಂತ ಆಸ್ತಿಯಾಗಿ ಇದನ್ನು ನಿರ್ವಹಿಸುವುದು ಕಷ್ಟವೆನಿಸಿದಾಗ ಆತ ಬೆಲ್ಜಿಯಂ ಸರ್ಕಾರವನ್ನು ಒಪ್ಪಿಸಿ 1908ರಲ್ಲಿ ಅದನ್ನು ಸರ್ಕಾರಕ್ಕೆ ವಶಪಡಿಸಿದ.

1960ರಲ್ಲಿ ಇತರ ಆಫ್ರಿಕನ್ ವಸಾಹತುಗಳು ಸ್ವತಂತ್ರ ರಾಷ್ಟ್ರಗಳಾದಂತೆ ಕಾಂಗೋವೂ ಸ್ವಾತಂತ್ರ್ಯ ಪಡೆಯಿತು. 1960ರ ಏಪ್ರಿಲ್ 26ರಿಂದ ಮೇ 16ರ ವರೆಗೆ ನಡೆದ ಆರ್ಥಿಕ ಪರಿಷತ್ತಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಕಾಂಗೋ ದೇಶದೊಡನೆ ಸಹಕರಿಸಲು ಬೆಲ್ಜಿಯಂ ಸರ್ಕಾರ ಒಪ್ಪಿತು.

ಕಾಂಗೋದ ತಾತ್ಕಾಲಿಕ ಸಂವಿಧಾನಕ್ಕೆ ಸಹಿ ಬಿದ್ದದ್ದು 1960ರ ಮೇ 19ರಂದು. ಸಂವಿಧಾನಕ್ಕೆ ಸಹಿಬಿದ್ದ ಕೇವಲ ಒಂದು ತಿಂಗಳು ನಾಲ್ಕು ದಿನಗಳಲ್ಲಿ ಅಂದರೆ 1960ರ

ಕಾಂಗೋ ಸ್ತ್ರೀಯರು, ಸ್ಥಳೀಯ ಮಾರುಕಟ್ಟೆಯೊಂದರಲ್ಲಿ

ಜೂನ್ 24ರಂದು ಪ್ಯಾಟ್ರಿಸ್ ಲುಮುಂಬನೇ ಪ್ರಧಾನ ಮಂತ್ರಿಯಾದ. ಆತನ ರಾಜಕೀಯ ಸ್ಪರ್ಧಿ ಕಸವುಬು ರಾಷ್ಟ್ರಾಧ್ಯಕ್ಷನಾದ. ಅಲ್ಲಿಂದ ಆರು ದಿನಗಳಲ್ಲಿ (ಜೂನ್ 30) ಕಾಂಗೋದ

ಸ್ವಾತಂತ್ರ್ಯವನ್ನು ಸಾರಲಾಯಿತಾಗಿ ಅದೊಂದು ಪ್ರಜಾಸತ್ತಾತ್ಮಕ ಗಣರಾಜ್ಯವೆನಿಸಿತು. ಆ ಮುಂದೂ ಪ್ಯಾಟ್ರಿಸ್ ಲುಮುಂಬ ಪ್ರಧಾನಿಯಾಗಿಯೂ, ಕಸವುಬು ಅಧ್ಯಕ್ಷರಾಗಿಯೂ



ಕಟಾಂಗ ಪ್ರಾಂತ್ಯದ ಒಂದು ಜಲಪಾತ : ವಿಭವ ವಿದ್ಯುತ್ ತಾಣಗಳಲ್ಲೊಂದು

ಮುಂದುವರಿದರು.

1960ರ ಕೊನೆಯ ವೇಳೆಗೆ ಕಾಂಗೋ ಹಲವು ಭಾಗಗಳಾಗಿ ಒಡೆದಿತ್ತು. ಲೀಯೊಪೋಲ್ಡ್‌ವಿಲ್ ಮತ್ತು ಈಕ್ವೇಟರ್ ಪ್ರಾಂತ್ಯಗಳಲ್ಲಿ ಕಸವುಬು ಮತ್ತು ಮೊಬುಟುರ



ಮಟಾಡಿ, ಪಕ್ಕದಲ್ಲಿರುವುದು ಕಾಂಗೋ ನದಿಯ ಅಳಿವೆ

ಅಧಿಕಾರ ಅಲ್ಪ ಸ್ವಲ್ಪವಿತ್ತು. ಲುಮುಂಬನ ಉಪಪ್ರಧಾನಿಯಾಗಿದ್ದ ಗಿಜೆಂಜೆಗೆ ಸ್ಟ್ಯಾನ್ಲಿವಿಲ್‌ನ ಈಸ್ಟರ್ನ್ ಮತ್ತು ಕೀವೂ ಪ್ರಾಂತ್ಯಗಳಲ್ಲೂ ಪ್ರಭಾವವಿತ್ತು. ಷೋಂಬೆ ಕಟಾಂಗ ಸ್ವತಂತ್ರ ರಾಜ್ಯದ ಅಧಿಪತಿಯೆಂದು 1960ರಲ್ಲಿ ಹೇಳಿಕೊಳ್ಳುತ್ತಿದ್ದ. ದಕ್ಷಿಣ ಕಾಸೈಯಲ್ಲಿದ್ದ ಆಲ್ಬರ್ಟ್ ಕಾಲೊಂಜಿಯೂ ತನ್ನ ಪ್ರತ್ಯೇಕತೆಯನ್ನು ವ್ಯಕ್ತಪಡಿಸುತ್ತಿದ್ದ. ಷೋಂಬೆಯದಂತೂ ಹೆಚ್ಚಿನ ತಕರಾರಾಗಿತ್ತು. ಬೆಲ್ಜಿಯನ್ ಸೇನೆ ನಿರ್ಗಮಿಸಿತ್ತಾದರೂ ಷೊಂಬೆಯ ಪಡೆಗಳಿಗೆ ಅದರದೇ ನಾಯಕತ್ವವಿತ್ತು. ಆ ಪ್ರಾಂತ್ಯದ ಗಣಿ ಕಂಪನಿಗಳ ಬೆಂಬಲವೂ ಅವನಿಗಿತ್ತು. ಬೆಲ್ಜಿಯಂ, ಬ್ರಿಟನ್ ಮತ್ತು ಫ್ರಾನ್ಸ್‌ಗಳ ಸಹಾನುಭೂತಿ

ಕೀನ್ಶಾಸ

ತನ್ನ ಕಡೆಗಿದೆಯೆಂಬುದು ಅವನ ಭರವಸೆ. ಅಧ್ಯಕ್ಷ ಕಸವುಬುವಿನ ಸಂಧಾನ ಫಲಿಸಲಿಲ್ಲ. ಅಂತರ್ಯುದ್ಧ ಆರಂಭವಾಯಿತು. ಲುಮುಂಬ ಕೊಲೆಗೀಡಾದ. ಷೋಂಬೆಯ ಅಧ್ಯಕ್ಷತೆಯಲ್ಲಿ ಕಟಾಂಗ ಸ್ವಲ್ಪಕಾಲ ಸ್ವತಂತ್ರವೆನಿಸಿಕೊಂಡಿತ್ತು. ಅಂತರ್ಯುದ್ಧವನ್ನು ಕೊನೆಗೊಳಿಸಿ ಕಾಂಗೋದಲ್ಲಿ ಶಾಂತಿಸ್ವಾತಂತ್ರ್ಯಗಳನ್ನು ಸ್ಥಾಪಿಸಲು ವಿಶ್ವಸಂಸ್ಥೆ ನಡುವೆ ಪ್ರವೇಶಿಸಿತು.

1963ರಲ್ಲಿ ಕಟಾಂಗ ಕೇಂದ್ರ ಸರ್ಕಾರದ ಅಧೀನಕ್ಕೆ ಬಂತು. ವಿಶ್ವಸಂಸ್ಥೆಯ ಕಾರ್ಯಾಚರಣೆ ಕೊನೆಗೊಂಡಿದ್ದು 1964ರಲ್ಲಿ. ಆಗ ಸ್ಥಾಪಿತವಾದ ಹೊಸ ಸರ್ಕಾರಕ್ಕೆ ಷೋಂಬೆ ಪ್ರಧಾನಿಯಾದ. ಅವನನ್ನು ಸರ್ಕಾರ ರಚಿಸಲು ಆಹ್ವಾನಿಸಿದ್ದರಿಂದ ಕಸವುಬು ಜನಪ್ರಿಯತೆ ಕಳೆದುಕೊಂಡ. ಮುಂದೆ ಷೋಂಬೆ ಪ್ರಬಲನಾಗುತ್ತಿದ್ದುದನ್ನು ಕಂಡು ಕಸವುಬು ಅವನನ್ನು ಪದಚ್ಯುತನನ್ನಾಗಿ ಮಾಡಿದ.

1965ರಲ್ಲಿ ಲೆ.ಜ. ಜೋಸೆಫ್ ಮೊಬುಟು ಪ್ರಬಲನಾದ. ಅವನಿಂದ ಕಸವುಬುವೇ ಅಧಿಕಾರ ಕಳೆದುಕೊಳ್ಳಬೇಕಾಯಿತು. ಸೈನಿಕ ವೃತ್ತಿಯ ಬಿಳಿಯರಿಂದ ಕೂಡಿದ ಸೇನೆಯ ಬಲದಿಂದ ಪೂರ್ವ ಪ್ರಾಂತ್ಯಗಳು 1967ರಲ್ಲಿ ಮತ್ತೆ ಬಂಡಾಯ ನಡೆಸಿದುವು. ಕೊನೆಗೆ ಈ ಸೈನ್ಯ ರುವಾಂಡಕ್ಕೆ ಹಿಂದೆಗೆಯಲಾಗಿ ಕಾಂಗೋಗೆ ಶಾಂತಿ ಬಂತು. 1968ರಲ್ಲಿ ಮಧ್ಯ ಆಫ್ರಿಕನ್ ಗಣರಾಜ್ಯ ಮತ್ತು ಚಾದ್‌ಗಳೊಂದಿಗೆ ಆರ್ಥಿಕ ಒಕ್ಕೂಟದ ಸ್ಥಾಪನೆಯಾಯಿತು. ಮಧ್ಯ ಆಫ್ರಿಕನ್ ಗಣರಾಜ್ಯ ಈ ಒಕ್ಕೂಟದಿಂದ ಅನಂತರ ವಾಪಸಾಯಿತು.

1967ರಲ್ಲಿ ಜನಮತಗಣನೆಯ ಆಧಾರದ ಮೇಲೆ ಜಾರಿಗೆ ಬಂದ ಸಂವಿಧಾನದ ಪ್ರಕಾರ ಅಲ್ಲಿ ಅಧ್ಯಕ್ಷೀಯ ಆಡಳಿತಕ್ಕೆ ಅವಕಾಶ ಕಲ್ಪಿಸಲಾಯಿತು. ಸಾರ್ವತ್ರಿಕ ಚುನಾವಣೆಯ ಮೂಲಕ ವಿಧಾನ ಸಭೆಯನ್ನು ರಚಿಸಲಾಗುತ್ತದೆ. ರಾಷ್ಟ್ರದ ಅಧ್ಯಕ್ಷನಿಗೆ ವಿಪುಲಾಧಿಕಾರವುಂಟು.

ಕಾಂಗೋದಲ್ಲಿ ಹತ್ತು ಪ್ರಾಂತ್ಯಗಳಿವೆ. ಅವುಗಳೆಂದರೆ, (ರಾಜಧಾನಿ ಕೀನ್ಶಾಸವನ್ನೊಳಗೊಂಡ ಸಂಯುಕ್ತ ಜಿಲ್ಲೆ), ಬಂಡುಂಡು ಬಾಸ್ಕಾಂಗೋ, ಈಕ್ವೇಟರ್, ಪಶ್ಚಿಮ ಕಸಾಯಿ, ಪೂರ್ವ ಕಸಾಯಿ, ಕಟಂಗ, ಮನಿಯೆಮೆ, ನಾರ್ಡ್-ಕಿವು, ಓರಿಯೆಂಟಲ್, ಸುದ್-ಕಿವು. 1966ರಲ್ಲಿ ಅಲ್ಲಿಯ ಅನೇಕ ಪಟ್ಟಣಗಳ ಐರೋಪ್ಯ ನಾಮಗಳನ್ನು ತೆಗೆದು ಅವಕ್ಕೆ ದೇಶೀಯ ಹೆಸರುಗಳನ್ನಿಡಲಾಯಿತು. ಲೀಯೊಪೋಲ್ಡ್‌ವಿಲ್ ಎಂಬುದು ಕೀನ್ಶಾಸ ಆಯಿತು. ಎಲಿಸಬೆತ್‌ವಿಲ್‌ನ ಈಗಿನ ಹೆಸರು ಲುಬುಂಬಾಷಿ. ಸ್ಟ್ಯಾನ್ಲಿವಿಲ್ ಎಂಬುದು ಕೀಸಾಂಗಾನಿ ಆಗಿದೆ. ಆಲ್ಬರ್ಟ್‌ವಿಲ್‌ನ ನಾಮಧೇಯ ಕಾಲೆಮೀ. ಕಾಕೀಯವಿಲನ್ನು ಈಗ ಮಾಬಂಡಾಕ ಎಂದು ಕರೆಯಲಾಗುತ್ತಿದೆ. ಈಗಿನ ಇಸಿರೊ ಹಿಂದೆ ಪಾಲಿಸ್ ಆಗಿತ್ತು. ಬ್ಯಾನಿಂಗ್‌ವಿಲ್‌ನ ಹೆಸರನ್ನು ತೆಗೆದುಹಾಕಿ ಅದಕ್ಕೆ ಪ್ರತಿಯಾಗಿ ಬಾಂಡುಂಡು ಎಂದು ನಾಮಕರಣ ಮಾಡಲಾಗಿದೆ. ಮತ್ತಿತರ ಪ್ರಮುಖ ಪಟ್ಟಣಗಳೆಂದರೆ, ಬೋಮ, ಬುಕಾವು, ಕಾಮಿನ, ಕನಂಗ, ಕೋಲ್ವೇಜಿ, ಲಿಕಾಸಿ, ಮಟಾಡಿ, ಮಬುಜಿಮಾಯಿ.

(ಎ.ಎಂ.ಆರ್.; ಟಿ.ಇ.ಎಚ್.)

**ಕಾಂಗ್ರಾ ಚಿತ್ರಕಲೆ :** ಹಿಮಾಚಲ ಪ್ರದೇಶದ ಬೆಟ್ಟಗುಡ್ಡಗಾಡಿನಲ್ಲಿ, ಮುಖ್ಯವಾಗಿ ಕಾಂಗ್ರಾ ಕಣಿವೆಯಲ್ಲಿ ಪ್ರಚಲಿತವಾಗಿದ್ದ ಚಿತ್ರಕಲೆ. ಇದು ರಜಪೂತ ಚಿತ್ರ ಕಲೆಯ ಒಂದು ಪ್ರಭೇದವೆಂದೇ ಹಿಂದಿನ ವಿದ್ವಾಂಸರು ಭಾವಿಸಿದ್ದರು. ಆದರೆ ಇತ್ತೀಚೆಗೆ ಆರ್ಚರ್, ರಾಂಧವ ಮುಂತಾದವರು ಈ ಕಲೆಯನ್ನು ಕುರಿತು ವಿಶೇಷ ಅಧ್ಯಯನ ನಡೆಸಿ, ಇದು ರಜಪೂತ ಚಿತ್ರಕಲೆಗಿಂತ ಭಿನ್ನವಾದುದೆಂದೂ ಕಾಂಗ್ರಾ ಕಣಿವೆಯಲ್ಲಿ ವಿಶೇಷವಾಗಿ ಪ್ರಚಲಿತವಾಗಿರುವುದರಿಂದ ಇದನ್ನು ಕಾಂಗ್ರಾ ಚಿತ್ರಕಲೆಯೆಂದು ಕರೆಯಬೇಕೆಂದೂ ವಾದಿಸಿದ್ದಾರೆ. ಇದರ ಮೂರು ಮುಖ್ಯ ಕೇಂದ್ರಗಳೆಂದರೆ ಗುಲೇರ್, ತಿರಸುಜನ್‌ಪುರ ಮತ್ತು ನೂರ್‌ಪುರ. ಅಲ್ಲಿಯ ರಾಜರ ಆಶ್ರಯದಲ್ಲಿ ಕಾಂಗ್ರಾ ಚಿತ್ರಕಲೆ ಬೆಳೆಯಿತು.

ಕಾಂಗ್ರಾ ಚಿತ್ರಕಲೆಯಲ್ಲಿ ರಜಪೂತ, ಮೊಗಲ್ ಮತ್ತು ಪಂಜಾಬಿನ ಜಾನಪದ ಶೈಲಿಗಳ ಮಿಳಿತವನ್ನು ಕಾಣುತ್ತೇವೆ. ಔರಂಗಜೇಬ್ ತನ್ನ ಆಸ್ಥಾನದ ಹಿಂದೂ ಕಲಾಕಾರರನ್ನು ರಾಜ್ಯದಿಂದ ಓಡಿಸಿದುದರಿಂದ, ಅವರು ನೆರೆ ರಾಜ್ಯಗಳಲ್ಲಿ ಆಶ್ರಯ ಪಡೆದರು. ಅವರಿಂದ ಬೆಳೆದ ಈ ಕಲೆಯಲ್ಲಿ ಅನೇಕ ಶೈಲಿಗಳುಂಟು. ಈ ಕಲೆ 18ನೆಯ ಶತಮಾನದಲ್ಲಿ ಜನ್ಮ ತಾಳಿದರೂ ಇದು ಹಠಾತ್ತನೆ ಉದ್ಭವಿಸಿದ ಸಾಂಸ್ಕೃತಿಕ ಕ್ರಿಯೆಯಲ್ಲ. ಉತ್ತರ ಭಾರತದಲ್ಲಿ ಭಕ್ತಿಪಂಥ, ಅದರಲ್ಲೂ ರಾಧಾಕೃಷ್ಣಪಂಥ ಬೆಳೆದಂತೆಲ್ಲ ಅಲ್ಲಿಯ ಗುಡ್ಡಗಾಡಿನ ಜನರಲ್ಲಿ ಉಂಟಾದ ಸಾಂಸ್ಕೃತಿಕ ಬದಲಾವಣೆಗಳೇ ಕಾಂಗ್ರಾ ಚಿತ್ರಕಲೆಯ ಉಗಮಕ್ಕೆ ಕಾರಣವೆಂಬುದು ವಿದ್ವಾಂಸರ ಮತ.

ಕಾಂಗ್ರಾ ಚಿತ್ರಕಲೆ ಅದು ಹುಟ್ಟಿ ಬೆಳೆದ ಪ್ರದೇಶಕ್ಕೆ ವಿಶಿಷ್ಟವಾದದ್ದು. ಆ ಚಿತ್ರಗಳಿಗೆ ಅಲ್ಲಿಯ ಬೆಟ್ಟಗುಡ್ಡಗಳೇ ಸ್ಫೂರ್ತಿ ನೀಡಿವೆ. ಉಡಿಗೆ ತೊಡಿಗೆಗಳಲ್ಲಿ ಆ ಪ್ರದೇಶದ ಛಾಯೆ ಎದ್ದುಕಾಣುತ್ತದೆ. ಚಿತ್ರಿತ ಕಥಾವಸ್ತುವಿಗೂ ಜಾನಪದ ಕಥೆಗಳ ಸ್ಪರ್ಶವಿದೆ. ಕಾಂಗ್ರಾ ಅರ್ಥಪೂರ್ಣವಾಗಿರುವುದು ಈ ವರ್ಣಮಯ ಹಿನ್ನೆಲೆಯಿಂದಾಗಿ.

ಕಾಂಗ್ರಾ ಚಿತ್ರಕಲೆಯಲ್ಲಿ ಪ್ರಯೋಗತಂತ್ರ ಕಡಿಮೆ. ಇದನ್ನು ಸರಿದೂಗಿಸುವುದಕ್ಕಾಗಿ ಚಿತ್ರಕಾರ ತನ್ನ ಕಲೆಯನ್ನೇ ಬಳಸುತ್ತಾನೆ. ಸ್ತ್ರೀ–ಪುರುಷರ ಅಂಗಾಂಗಗಳು, ಬೆಟ್ಟಗುಡ್ಡಗಳು ಇವನ್ನು ಪದೇ ಪದೇ ಬಳಸಿದರೂ ಬೇಸರ ತರಿಸದ ಜೀವಂತ ಕೃತಿಗಳನ್ನಾಗಿ ಮಾಡಲು ಆಶ್ಚರ್ಯಕರ ರೀತಿಯಲ್ಲಿ ಭಾವಗಳನ್ನು ಯಥಾವತ್ತಾಗಿ ಚಿತ್ರಿಸುತ್ತಾನೆ. ನಾಯಿಕೆಯ ಕಣ್ಣುಗಳು ಚಲಿಸುತ್ತಿವೆಯೋ ಎನ್ನುವಂತೆ ಭಾಸವಾಗುತ್ತದೆ. ಸಂಕೇತಗಳು ಬಹು ವಿರಳ. ಚಿತ್ರಕಾರನಿಗೆ ಪೂರ್ಣ ಸ್ವಾತಂತ್ರ್ಯವಿದ್ದು ತನ್ನ ಸ್ಫೂರ್ತಿಗೆ ತಕ್ಕಂತೆ ಚಿತ್ರರಚನೆಗೆ ಅವನಿಗೆ ಅವಕಾಶವಿತ್ತು. ಚಿತ್ರಗಳ ವೈವಿಧ್ಯಕ್ಕೆ ಈ ಸ್ವಾತಂತ್ರ್ಯ ಕಾರಣ.

ಕಾಂಗ್ರಾ ಚಿತ್ರಕಲೆಯ ಮುಖ್ಯ ಅಂಶಗಳೆಂದರೆ ರೇಖಾಚಿತ್ರದ ವಿನ್ಯಾಸ, ಪ್ರಕಾಶಮಾನವಾದ ಬಣ್ಣ ಮತ್ತು ಅತಿಸೂಕ್ಷ್ಮ ಅಲಂಕಾರಗಳು. ಇದಕ್ಕಾಗಿ ಚಿತ್ರಕಾರ ಬಹು ಸೂಕ್ಷ್ಮವೂ ಮೃದುವೂ ಆದ ಕುಂಚಗಳನ್ನು ಬಳಸುತ್ತಿದ್ದರು. ಇವು ಅಳಿಲಿನ ಕೂದಲುಗಳಿಂದ ತಯಾರಿಸಿದುವು. ಚಿತ್ರಗಳನ್ನು ಬರೆಯುವುದಕ್ಕೆ ಮುಂಚೆ ಕೈಯಿಂದ ಮಾಡಿದ ಕಂದುಬಣ್ಣದ ಸಿಯಾಲ್‌ಕೋಟ್ ಕಾಗದದ ಮೇಲೆ ತಿಳಿಕೆಂಪು ಬಣ್ಣದಲ್ಲಿ ಕರಡನ್ನು ತಯಾರಿಸುತ್ತಿದ್ದರು. ಇದರ ಮೇಲೆ ಬಿಳಿಯ ಬಣ್ಣ ಬಳಿದು ಕಾಗದವನ್ನು ಮೃದುಮಾಡಿ, ರೇಖಾಚಿತ್ರವನ್ನು ಕಪ್ಪು ಅಥವಾ ಕಂದುಬಣ್ಣದಲ್ಲಿ ಬರೆದು ಅನಂತರ ಅವುಗಳಿಗೆ ಬಣ್ಣ ತುಂಬುತ್ತಿದ್ದರು. ಇವರು ವಿಶೇಷವಾಗಿ ಬಳಸುತ್ತಿದ್ದದ್ದು ಸ್ವಚ್ಛ ಕೆಂಪು, ಹಳದಿ, ನೀಲಿ ಮತ್ತು ಹಸುರುಬಣ್ಣ. 200 ವರ್ಷಗಳ ಅನಂತರವೂ ಈ ಚಿತ್ರಗಳ ಬಣ್ಣಗಳು ಹಾಗೆಯೇ ಇರುವುದು ಗಮನಾರ್ಹ.

ಕಾಂಗ್ರಾ ಚಿತ್ರಕಲೆಯಲ್ಲಿ ಯಥಾವತ್ ರೂಪಣವಿಲ್ಲ. ಸ್ತ್ರೀಯರು, ಬೆಟ್ಟಗುಡ್ಡ ಮೊದಲಾದವನ್ನು ಚಿತ್ರಕಾರ ತನ್ನ ಜ್ಞಾಪಕ ಶಕ್ತಿಯಿಂದ ರಚಿಸಿದ್ದಾನೆ. ಸಾಮಾನ್ಯವಾಗಿ ತೆಳ್ಳಗೆ, ಬಳುಕುವ, ಹರಿಣಾಕ್ಷಿಯರಾಗಿ, ತುಂಬುಗಲ್ಲ ಮತ್ತು ನೇರ ಮೂಗುಗಳುಳ್ಳವರಂತೆ ಸ್ತ್ರೀಯರನ್ನು ಚಿತ್ರಿಸಲಾಗಿದೆ. ಆದರೂ ಪ್ರತಿಯೊಬ್ಬ ಚಿತ್ರಕಾರನೂ ಮುಖವನ್ನು ತನ್ನ ರುಚಿಗೆ ತಕ್ಕಂತೆ ಚಿತ್ರಿಸಿದ್ದಾನೆ. ಸಾಮಾನ್ಯವಾಗಿ ಸ್ತ್ರೀಯರ ಎಲ್ಲ ಚಿತ್ರಗಳು ಪಾರ್ಶ್ವ ದೃಶ್ಯದಲ್ಲಿ ಚಿತ್ರಿತವಾಗಿದೆ.

ಕಾಂಗ್ರಾ ಚಿತ್ರಕಲೆ ಹೆಚ್ಚಾಗಿ ಅನಾಮಧೇಯವಾಗಿಯೇ ಉಳಿದಿದೆ. ಕೆಲವು ಚಿತ್ರಗಳಲ್ಲಿ ಮಾತ್ರ ಗುರುಸಹಾಯ, ಕುಶನ್‌ಲಾಲ್, ಹಸ್ಸೂ, ಪುರ್ಖೂ ಮತ್ತು ರಾಮ ದಯಾಲ್ ಮುಂತಾದ ಚಿತ್ರಕಾರರ ಸಹಿಗಳು ಕಂಡುಬರುತ್ತವೆ.

ಶೃಂಗಾರವೇ ಕಾಂಗ್ರಾ ಚಿತ್ರಕಲೆಯ ಜೀವಾಳ. ಶೃಂಗಾರದ ವಿವಿಧ ಮುಖಗಳು ಉತ್ತಮ ರೀತಿಯಲ್ಲಿ ವ್ಯಕ್ತವಾಗಿವೆ. ರಾಧಾ–ಕೃಷ್ಣ ಇಲ್ಲವೇ ಶಿವಪಾರ್ವತಿಯರೇ ಪ್ರತಿಯೊಂದು ಚಿತ್ರದ ಪ್ರಧಾನ ವ್ಯಕ್ತಿಗಳು. ಸ್ತ್ರೀ–ಪುರುಷರ ಪರಸ್ಪರ ಆಕರ್ಷಣೆಯೇ ಕಾಂಗ್ರಾ ಚಿತ್ರಕಾರನಿಗೆ ಅತಿ ಮುಖ್ಯ ವಸ್ತು. ಹೆಣ್ಣಿನ ಅಂಗಾಂಗಗಳ ಸೌಂದರ್ಯಕ್ಕೆ ಈ ಚಿತ್ರಕಾರ ಆದ್ಯತೆ ನೀಡಿದ್ದಾನೆ. ಮಿಕ್ಕೆಲ್ಲವೂ ಅವನಿಗೆ ಗೌಣ. ಪ್ರಕೃತಿ ಚಿತ್ರಣವೂ ಹೆಣ್ಣಿನ ಸೌಂದರ್ಯವನ್ನು ಪ್ರತಿಬಿಂಬಿಸುವ ಇಲ್ಲವೇ ಹೆಚ್ಚಿಸುವ ಸಾಧನವೆಂದೇ ಅವನ ಭಾವನೆ. ಈ ದೃಷ್ಟಿಯಿಂದ ಕಾಂಗ್ರಾ ಚಿತ್ರಕಲೆಗೆ ಸಮವಾದ ಕಲೆ ಭಾರತದಲ್ಲಿ ಮತ್ತೊಂದಿಲ್ಲ. ಇಷ್ಟಾದರೂ ಈ ಚಿತ್ರಕಲೆಯಲ್ಲಿ ಘನತೆ ಗಾಂಭೀರ್ಯಗಳನ್ನು ಮೀರಿದ ಅಶ್ಲೀಲತೆಗೆ ಆಸ್ಪದವಿಲ್ಲ. ಲೈಂಗಿಕ ಆಕರ್ಷಣೆಯ ಸಂಕೇತಗಳನ್ನು ಮಾತ್ರ ಕೆಲವೆಡೆ ಬಳಸಿದ್ದಾರೆಂದು ಆರ್ಚರ್ ಅಭಿಪ್ರಾಯಪಡುತ್ತಾನೆ.

ಕಾಂಗ್ರಾ ಚಿತ್ರಕಲೆಯ ಇನ್ನೊಂದು ವಿಶಿಷ್ಟ ಗುಣವೆಂದರೆ ಕಲಾವಿದನ ಚಿತ್ತವೃತ್ತಿ. ಹಿಮಾಲಯದ ಬೆಟ್ಟಗುಡ್ಡಗಳ ಜೀವನ ಕಷ್ಟಕರವಾದದ್ದು. ಈ ಕಷ್ಟಜೀವನದ ಚಿತ್ರಣವನ್ನು ಎಲ್ಲ ಕಾಂಗ್ರಾ ಚಿತ್ರಗಳಲ್ಲೂ ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಕಾಂಗ್ರಾ ಚಿತ್ರಕಾರನಿಗೆ ಪ್ರಕೃತಿಯಲ್ಲೂ ವಿಶೇಷ ಆಸಕ್ತಿ. ತನಗೆ ವಿಶೇಷವಾಗಿ ಪರಿಚಿತವಾಗಿರುವ ಬೀಯಾಸ್ ನದೀ ಕಣಿವೆ, ಬೆಟ್ಟಗುಡ್ಡ, ಅವುಗಳ ಮೇಲೆ ಛತ್ರಿಯಂತಿರುವ ಮರಗಳು, ಮಾವಿನ ತೋಪು, ಗುಡಿಸಲು, ಮಂಜುಮಿಶ್ರಿತ ಹೊಳೆ ತೊರೆ, ಮೃಗಪಕ್ಷಿ – ಇವೆಲ್ಲವನ್ನೂ ನೈಜವಾಗಿ ಚಿತ್ರಿಸಿದ್ದಾನೆ.

ಭಾಗವತ ಪುರಾಣ, ಗೀತಗೋವಿಂದ, ಬಾರಾಮಾಸಾ ಮುಂತಾದ ಕೃತಿಗಳ ಪರಿಚಯ ಚಿತ್ರಕಾರನಿಗೆ ಚೆನ್ನಾಗಿದೆ. ಅಲ್ಲಿಯ ನಾಯಿಕೆಯರ ಚಿತ್ರಣದಲ್ಲಿ ಅವನ್ನು ವಿಶೇಷ ಆಸಕ್ತಿ ತೋರಿದ್ದಾನೆ. ಹಿಂದಿ ಕವಿ ಕೇಶವದಾಸನ ರಸಿಕಪ್ರಿಯ ಗ್ರಂಥದಲ್ಲಿ ಕಾಣಬರುವ ಎಂಟು ರೀತಿಯ ನಾಯಿಕೆಯರನ್ನು ಚಿತ್ರಿಸಿ, ಆ ಗ್ರಂಥದಿಂದ ಆಯ್ದ ಶ್ಲೋಕಗಳನ್ನು ಆ ಚಿತ್ರಗಳ ಕೆಳಗೆ ಕೊಡಲಾಗಿದೆ. ಸ್ವಾಧೀನಪತಿಕಾ, ಉತ್ಕಾ, ವಾಸಕಶಯ್ಯಾ, ಅಭಿಸಂಧಿತಾ, ಖಂಡಿತಾ, ಪ್ರೋಷಿತಪತಿಕಾ, ವಿಪ್ರಲಬ್ಧಾ, ಅಭಿಸಾರಿಕಾ ಮೊದಲಾದ ಅಷ್ಟ ನಾಯಿಕೆಯರ ವಿರಹ, ಮಾನ ಮತ್ತು ಸಂಯೋಗಗಳು ಬಹು ವಿಶದವಾಗಿ ಚಿತ್ರಿತವಾಗಿವೆ. ರಾಧಾಕೃಷ್ಣರು ಸೂಚ್ಯವಾಗಿ ಆಯಾ ಋತುಗಳಿಗೆ ತಕ್ಕ ಉಡಿಗೆ–ತೊಡಿಗೆಗಳಲ್ಲಿ ಚಿತ್ರಿತರಾಗಿದ್ದಾರೆ. ಸಂಗೀತದ ರಾಗಗಳಿಗನುಗುಣವಾದ ರಾಗಾಮಾಲಾ ಚಿತ್ರಗಳೂ ಈ ಶೈಲಿಯಲ್ಲಿ ಹೇರಳವಾಗುಂಟು.

ಕಾಂಗ್ರಾ ಚಿತ್ರಕಾರನಿಗೆ ಪ್ರಿಯವಾದ ಇನ್ನೊಂದು ವಸ್ತುವೆಂದರೆ ಕೃಷ್ಣಲೀಲೆ. ಕೃಷ್ಣನ ಕೊಳಲಿಗೆ ಮಾರು ಹೋದ ಗೋಪ ಗೋಪೀ ಗೋವುಗಳನ್ನು ಚಿತ್ರಿಸುವುದಕ್ಕೂ ಅವನಿಗೆ ವಿಶೇಷ ಆಸಕ್ತಿ. ಕಾಳೀಯಮರ್ಧನ, ಗೋವರ್ಧನಗಿರಿಧಾರಿ, ಗೋಪಿಕಾ ವಸ್ತ್ರಾಪಹರಣ ಈ ಚಿತ್ರಗಳು ಹಲವಾರಿವೆ.

ಕಾಲಕ್ರಮದಲ್ಲಿ ಈ ಶೈಲಿಯಲ್ಲಿ ಭಾವಕ್ಕಿಂತ ಅಲಂಕಾರಕ್ಕೆ ಹೆಚ್ಚು ಪ್ರಾಧಾನ್ಯ ಸಲ್ಲಲಾರಂಭವಾಗಿ ಚಿತ್ರದ ಸತ್ವ ಕಡಿಮೆಯಾಯಿತು. ಆ ವೇಳೆಗೆ ಅದರ ಪೋಷಕರಾಗಿದ್ದ ರಾಜರೂ ಕ್ಷೀಣದೆಸೆಗೆ ಬರಲಾರಂಭಿಸಿದರು. ಹೀಗಾಗಿ ಕಾಂಗ್ರಾ ಚಿತ್ರಕಲೆ ಅವನತಿ ಹೊಂದಿ ಸಂಗ್ರಹಾಲಯಗಳಲ್ಲೂ ಅರಮನೆಗಳಲ್ಲೂ ಇರುವ ಕಲಾಕೃತಿಗಳಲ್ಲಿ ಮಾತ್ರ ಈಗ ಉಳಿದುಕೊಂಡಿದೆ. (ಎ.ವಿ.ಎಸ್.)

**ಕಾಂಗ್ರೀವ್, ವಿಲಿಯಂ :** 1670–1729. ರೆಸ್ಟೋರೇಷನ್ ಯುಗದ ಇಂಗ್ಲಿಷ್ ನಾಟಕಕಾರ. ಡಬ್ಲಿನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ. ಅನಂತರ ಆಸ್ಥಾನದಲ್ಲಿ ಪ್ರಭಾವಶಾಲಿಯಾಗಿ ಲಾಭದಾಯಕವಾದ ಸ್ಥಾನಗಳನ್ನು ಪಡೆದು ಸುಖ ಕೀರ್ತಿಗಳನ್ನು ಸಂಪಾದಿಸಿದ.

ಕಡೆಯ ವರ್ಷಗಳಲ್ಲಿ ದೃಷ್ಟಿಯನ್ನು ಕಳೆದುಕೊಂಡು ಬಹಳ ಕಷ್ಟಪಟ್ಟ. ಡ್ರೈಡನ್, ವ್ಯಾನ್ಬ್ರೂ, ಕಾಂಗ್ರೀವ್ ಮೊದಲಾದವರ ನಾಟಕಗಳಲ್ಲಿನ ಅಶ್ಲೀಲತೆಯನ್ನು ಜೆರಿಮಿ ಕಾಲಿಯರ್ ಖಂಡಿಸಿದಾಗ ಕಾಂಗ್ರೀವ್ ವಾದರಂಗಕ್ಕಿಳಿದನಾದರೂ ಗೆಲ್ಲಲಾಗಲಿಲ್ಲ. ಮೊದಲ ನಾಟಕವಾದ ದ ಓಲ್ಡ್ ಬ್ಯಾಚಲರ್ (1693) ಇವನಿಗೆ ಕೀರ್ತಿಯನ್ನು ತಂದಿತು. ಅನಂತರ ದ ಡಬಲ್ ಡೀಲರ್ (1693), ಲವ್ ಫಾರ್ ಲವ್ (1695) ಮತ್ತು ದ ವೇ ಆಫ್ ದ ವರ್ಲ್ಡ್ (1700) ಎನ್ನುವ ವಿನೋದ ನಾಟಕಗಳನ್ನೂ ದಿ ಮಾರ್ನಿಂಗ್ ಬ್ರೈಡ್ (1697) ಎನ್ನುವ ದುರಂತ ನಾಟಕವನ್ನೂ ರಚಿಸಿದ. ಕಾಲಿಯರನ ಖಂಡನೆಯೊಂದಿಗೆ ದ ವೇ ಆಫ್ ದ ವರ್ಲ್ಡ್ ನಾಟಕ ರಂಗಭೂಮಿಯ ಮೇಲೆ ಅಯಶಸ್ವಿಯಾದುದೂ ಸೇರಿತಾಗಿ ಕಾಂಗ್ರೀವ್ ನಾಟಕಗಳ ರಚನೆಯನ್ನು ನಿಲ್ಲಿಸಬೇಕಾಯಿತು. ದ ಮಾರ್ನಿಂಗ್ ಬ್ರೈಡ್ ರಂಗಭೂಮಿಯ ಮೇಲೆ ಯಶಸ್ವಿಯಾದರೂ ಅದು ಶ್ರೇಷ್ಠ ಕೃತಿಯೇನಲ್ಲ. ಅದರಲ್ಲಿನ ಪ್ರಾಸರಹಿತ ಸರಳ ರಗಳೆಯ (ಬ್ಲ್ಯಾಂಕ್ ವರ್ಸ್) ಬಳಕೆ ಮೆಚ್ಚುವಂಥದು. ಇಂಗ್ಲಿಷಿನಲ್ಲಿ ಹಾಸ್ಯನಾಟಕಗಳ ಕರ್ತೃಗಳ ಪ್ರಥಮ ಪಂಕ್ತಿಯಲ್ಲಿದ್ದಾನೆ, ಕಾಂಗ್ರೀವ್. ಪ್ರಣಯಾಸಕ್ತರಾದ ಎಲ್ಲ ವಯಸ್ಸಿನ ಸ್ತ್ರೀಪುರುಷರ ಪಿತೂರಿಗಳನ್ನೂ ನೀತಿ–ಅನೀತಿಗಳ ಗೊಡವೆಯಿಲ್ಲದೆ ನಿರೂಪಿಸುವುದರಲ್ಲಿ ಮತ್ತು ಸಾಧನಗಳ ಬಳಕೆಯಲ್ಲಿ ಈತ

ಕೃತಕ ಹರ್ಷನಾಟಕದ (ಆರ್ಟಿಫಿಯಲ್ ಕಾಮೆಡಿ) ಸಂಪ್ರದಾಯವನ್ನು ಅನುಸರಿಸಿದ. ಪ್ರಮಾದವಶಾತ್ ಪತ್ರ ಮತ್ತೊಬ್ಬರ ಕೈಗೆ ಹೋಗುವುದು, ಪರದೆಯ ಹಿಂದೆ ನಿಂತು ಹೊಂಚಿ ಕೇಳುವುದು–ಇಂಥ ಪ್ರಸಂಗಗಳನ್ನು ಕಾಂಗ್ರೀವ್ ಬಳಸಿಕೊಳ್ಳುತ್ತಾನೆ. ಆದರೆ ವಿನೋದ ಪಾತ್ರಗಳು ಇವನ ಕೈಲಿ ಜೀವಕಳೆ ಪಡೆಯುತ್ತವೆ. ಷೇಕ್ಸ್‌ಪಿಯರ್‌ನಂತೆ ಕಾಂಗ್ರೀವ್ ವಿನೋದ ನಾಟಕಗಳ ಜಗತ್ತಿಗೆ ಎರಡು ಬಗೆಯ ಅಮರಪಾತ್ರಗಳನ್ನು ಕೊಟ್ಟಿದ್ದಾನೆ: ಚಮತ್ಕಾರ (ವಿಟ್) ಮಿಂಚುವ ಸಂಭಾಷಣೆಯ ಪ್ರಭುಗಳು ಮತ್ತು ಹಾಸ್ಯಕ್ಕೆ ಗುರಿಯಾಗುವ ಅಹಂಕಾರಿಗಳು, ಮಂಕರು. ಲವ್ ಫಾರ್ ಲವ್ ನಂಥ ಕೆಲವು ನಾಟಕಗಳಲ್ಲಿ ವಸ್ತುನಿರ್ವಹಣೆಯಲ್ಲಿಯೂ ಕಾಂಗ್ರೀವ್ ಅಸಾಧಾರಣ ಸಾಮರ್ಥ್ಯವನ್ನು ತೋರಿಸಿದ್ದಾನೆ. ಅಲ್ಲದೆ ಕಾಂಗ್ರೀವ್ ಬರಿಯ ವಿನೋದ ಪ್ರಸಂಗಗಳನ್ನು ಚಮತ್ಕಾರದ ಸಂಭಾಷಣೆಗಳನ್ನು ಮಾತ್ರ ರಚಿಸಿದವನಲ್ಲ. ನಾಟಕಗಳ ವಾದವಿವಾದಗಳಲ್ಲಿ ಗಂಭೀರ ಯೋಚನೆ ಮತ್ತೆ ಮತ್ತೆ ಮಿಂಚುತ್ತದೆ. ಶಬ್ದಗಳ ಬಳಕೆಯಲ್ಲಿಯೂ ಅಸಾಧಾರಣ ಎಚ್ಚರಿಕೆಯನ್ನು ಇವನಲ್ಲಿ ಕಾಣುತ್ತೇವೆ. ಈ ಗುಣಗಳಿಂದ ಹಲವರು ವಿಮರ್ಶಕರು ಕಾಂಗ್ರೀವ್‌ನಲ್ಲಿ ಕವಿಯ ಚೇತನವಿತ್ತೆಂದು ಅಭಿಪ್ರಾಯಪಡುತ್ತಾರೆ. ಕಾಂಗ್ರೀವನ ನಾಟಕಗಳು ಕೃತಕ ಹರ್ಷನಾಟಕ ಪ್ರಕಾರದ ಉತ್ತುಂಗ ಶಿಖರವನ್ನು ಮುಟ್ಟಿದವೆನ್ನಬಹುದು. ತನ್ನ ಗುರಿಯಲ್ಲಿ ಟೆರೆನ್ಸ್ ಮತ್ತು ಮಿನಾಂಡರ್‌ರ ಪ್ರಭಾವಕ್ಕೂ ಪಾತ್ರಸೃಷ್ಟಿ ಮತ್ತು ಸಂಭಾಷಣೆಯ ನಿರ್ವಹಣೆಯಲ್ಲಿ ಬೆನ್ ಜಾನ್‌ಸನ್ ಮತ್ತು ಷೇಕ್ಸ್‌ಪಿಯರನ ಪ್ರಭಾವಕ್ಕೂ ಕಾಂಗ್ರೀವ್ ಒಳಗಾಗಿದ್ದಾನೆ. ತನ್ನ ಸುತ್ತ ಮುತ್ತಲಿನ ಜೀವನವನ್ನು ಪೂರ್ಣದೃಷ್ಟಿಯಿಂದಾಗಲಿ ವಾಸ್ತವಿಕವಾಗಿಯಾಗಲಿ ಚಿತ್ರಿಸಲು ಈತ ಯತ್ನಿಸಲಿಲ್ಲ. ಆದರೆ ಫ್ಯಾಷನ್ನಿನ ಆರಾಧಕರಾದ ಶ್ರೀಮಂತವರ್ಗದ ಹುಚ್ಚು ಹೆಮ್ಮೆ, ಅವರ ಹುಸಿ ಮೌಲ್ಯಗಳು–ಇವನ್ನು ಅಸಾಧಾರಣ ಪ್ರತಿಭೆಯಿಂದ ಚಿತ್ರಿಸುತ್ತಾನೆ. ಚಮತ್ಕಾರದೊಂದಿಗೆ ಕಟಕಿಯ ಬಳಕೆಯಲ್ಲಿಯೂ ಈತ ನಿಷ್ಣಾತ.

ಉದಾಹರಣೆಯಾಗಿ ಈತನ ದ ವೇ ಆಫ್ ದಿ ವರ್ಲ್ಡ್ (1700) ನಾಟಕವನ್ನು ನೋಡಬಹುದು. ಇದರ ನಾಯಕ ಮಿರಬೆಲ್, ನಾಯಕಿ ಮಿಲಮಾಂಟ್. ಮಿರಬೆಲ್ ತನ್ನ ಪ್ರೇಮವನ್ನು ಬಚ್ಚಿಡಲು ಮಿಲಮಾಂಟಳ ಬಂಧು ಲೇಡಿ ವಿಷ್‌ಫೋರ್ಟ್‌ಳನ್ನು ಪ್ರೀತಿಸುವಂತೆ ನಟನೆ ಮಾಡುತ್ತಿದ್ದಾನೆ. ಅವನ ಪ್ರೇಮವನ್ನು ಪಡೆಯುವುದರಲ್ಲಿ ವಿಫಲಳಾದ ಮಿಸೆಸ್ ಮಾರ್‌ವುಡ್ ಅವನ ತಂತ್ರವನ್ನು ಲೇಡಿ ವಿಷ್‌ಫೋರ್ಟಳಿಗೆ ತಿಳಿಸುತ್ತಾಳೆ. ಇಡೀ ನಾಟಕ ತಂತ್ರ, ಪಿತೂರಿಗಳಿಂದ ತುಂಬಿಹೋಗಿದೆ. ಕಡೆಯಲ್ಲಿ ಲೇಡಿ ವಿಷ್‌ಫೋರ್ಟ್ ಮಿರಲ್‌ನನ್ನು ಕ್ಷಮಿಸಿ ಅವನು ಮಿಲಮಾಂಟಳನ್ನು ಮದುವೆಯಾಗಲು ಒಪ್ಪಿಗೆ ನೀಡುತ್ತಾಳೆ. ಸಾಹಿತ್ಯದ ದೃಷ್ಟಿಯಿಂದ ಇದನ್ನು ಕಾಂಗ್ರೀವನ ಅತಿ ಶ್ರೇಷ್ಠ ಕೃತಿ ಎನ್ನಬಹುದು. ಈ ಕೃತಿರಚನೆಯಲ್ಲಿ ತನ್ನ ಉದ್ದೇಶ ತಿದ್ದಲಾಗದ ದೋಷಗಳನ್ನು ಪಡೆದುಬಂದ ಪಾತ್ರಗಳ ಸೃಷ್ಟಿಯಲ್ಲ. ಸೋಗು ಮತ್ತು ಚಮತ್ಕಾರಗಳನ್ನು ಮರೆಯಲೆತ್ನಿಸಲು ಪಾತ್ರಗಳ ಸೃಷ್ಟಿ–ಎಂದು ಕವಿ ಪೀಠಿಕೆಯಲ್ಲಿ ಹೇಳಿದ್ದಾನೆ. ಇಲ್ಲಿನ ನಾಯಕ ನಾಯಕಿಯರ ಸಂಭಾಷಣೆ ಚಮತ್ಕಾರದ ಮಿಂಚಿನಮಾಲೆಯಾಗಿದೆ. ಮಿಲ್‌ಮಾಂಟ್ ಮತ್ತು ಮಿರ್‌ಬಲ್ ಇಂಗ್ಲಿಷ್ ವಿನೋದ ನಾಟಕದ ಜಗತ್ತಿನ ಮರೆಯಲಾಗದ ಪಾತ್ರಗಳಲ್ಲಿ ಇವರು ಸೇರಿದ್ದಾರೆ. ಈ ನಾಟಕದಲ್ಲಿ ಮಿಸೆಸ್ ಫೆಯನಾಲ್ ಮತ್ತು ಮಿಸೆಸ್ ಮಾರ್‌ವುಡ್‌ರಂಥ ಇತರ ಪಾತ್ರಗಳೂ ಸತ್ತ್ವಯುತವಾಗಿವೆ. ಸಾಮಾನ್ಯವಾಗಿ ಈ ಬಗೆಯ ನಾಟಕಗಳಲ್ಲಿ ಕಾಣಲಾಗದ ಭಾವದ ಒತ್ತಡವನ್ನು ಕಾಂಗ್ರೀವ್‌ನಲ್ಲಿ ಕಾಣಬಹುದು. ಆದರೆ ಕ್ರಿಯೆ ಅತಿ ಜಟಿಲವಾಗಿ ಪ್ರೇಕ್ಷಕರು ಅರ್ಥಮಾಡಿಕೊಳ್ಳುವಂತೆ ಅದನ್ನು ನಿರ್ವಹಿಸುವುದರಲ್ಲಿ ನಾಟಕಕಾರ ವಿಫಲನಾಗಿದ್ದಾನೆ. ಹೀಗಾಗಿ ಇಂಥ ಒಳ್ಳೆಯ ನಾಟಕ ರಂಗಭೂಮಿಯ ಮೇಲೆ ಅಯಶಸ್ವಿಯಾಯಿತು. ಇದೇ ಕಾಂಗ್ರೀವನ ಕಡೆಯ ನಾಟಕವೂ ಆಯಿತು.

ಕಾಂಗ್ರೀವನ ನಾಟಕಗಳ ಗದ್ಯ ಬಹು ಸೊಗಸಾದುದು. ಕೋರೈಸುವ ಚಮತ್ಕಾರ, ಉಸಿರು ಬಿಗಿಹಿಡಿಸುವ ವೇಗ, ಮಿಂಚುವ ಹಾಸ್ಯ–ಇವು ಕಾಂಗ್ರೀವನ ನಾಟಕಗಳ ಸಂಭಾಷಣೆಯನ್ನು ಉಜ್ವಲಗೊಳಿಸಿವೆ. ಸಂಭಾಷಣೆಯ ಓಟ, ಮಾತಿನ ಚಕಮಕಿ ಎಷ್ಟೇ ಸಹಜವೆಂದು ತೋರಿದರೂ ಈ ಗದ್ಯದ ಹಿಂದೆ ಕೃತಿಕಾರನ ಎಚ್ಚರಿಕೆ, ಶ್ರಮ, ಉದ್ದೇಶ, ಕಲೆ ಅಡಗಿವೆ. ಮಾತಿನ ಲಯ ಮೋಹಕವಾದರೂ ಅದು ಉದ್ದೇಶಿತವೆನ್ನುವುದನ್ನು ಮರೆಯಲಾಗದು. ಗದ್ಯ ನಿಧಾನವಾಗಿ ಓದಿ ಸವಿಯಬೇಕಾದುದು. 'ದ ವೇ ಆಫ್ ದ ವರ್ಲ್ಡ್' ನಲ್ಲಿ ಸಂಭಾಷಣೆ ಎಷ್ಟು ಚುರುಕಾಗಿತ್ತೆಂದರೆ ರಂಗಮಂದಿರದಲ್ಲಿ ಪ್ರೇಕ್ಷಕರಿಗೆ ಇದನ್ನು ಅರ್ಥ ಮಾಡಿಕೊಳ್ಳಲಾಗಲಿ ಸವಿಯಾಗಲಿ ಸಾಧ್ಯವಾಗಲಿಲ್ಲ. ಆದರೆ ಈ ನಾಟಕವನ್ನು ರಚಿಸಿದಾಗಿನಿಂದ ಇಂಗ್ಲೆಂಡಿನ ಅನೇಕ ಶ್ರೇಷ್ಠ ನಟಿಯರು ಮಿಲ್‌ಮಾಂಟ್‌ಳ ಪಾತ್ರವನ್ನು ಆರಿಸಿಕೊಂಡು ಅಭಿನಯಿಸಿದ್ದಾರೆ. ರೆಸ್ಟೊರೇಷನ್ ಯುಗದ ಸಾಮಾಜಿಕ ಜೀವನದ ಭಾಗವಾದ ಚಮತ್ಕಾರಯುತ ಸಂಭಾಷಣೆಯ ಉತ್ಕೃಷ್ಟ ನಿದರ್ಶನ ಈ ನಾಟಕಗಳಲ್ಲಿ ಕಂಡುಬರುತ್ತದೆ. ಇವನ 'ಲವ್ ಫಾರ್ ಲವ್' ಈಗಲೂ ರಂಗಭೂಮಿಯಲ್ಲಿ ಯಶಸ್ವಿಯಾಗುತ್ತದೆ.

(ಎಲ್.ಎಸ್.ಎಸ್.)

**ಕಾಂಗ್ರೆಸ್, ಭಾರತ ರಾಷ್ಟ್ರೀಯ :** ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅತ್ಯಂತ ದೊಡ್ಡ ರಾಜಕೀಯ ಸಂಸ್ಥೆ. 1885ರ ಡಿಸೆಂಬರ್ 28ರಂದು ಸ್ಥಾಪಿತವಾಯಿತು. ಇದರ ಪ್ರಥಮ ಅಧಿವೇಶನ ನಡೆದದ್ದು ಬೊಂಬಾಯಿಯಲ್ಲಿ (1885). ಕಲ್ಕತ್ತ ಉಚ್ಚ ನ್ಯಾಯಾಲಯದ ಉನ್ನತ ವಕೀಲರಾಗಿದ್ದ ಡಬ್ಲ್ಯು. ಸಿ. ಬಾನರ್ಜಿ ಪ್ರಥಮಾಧಿವೇಶನದ



ಗಾಂಧಿ, ನೆಹರು

ಅಧ್ಯಕ್ಷರು. ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ಕೊನೆಗೊಳಿಸಲು ಮಹತ್ತರ ಪಾತ್ರವಹಿಸಿದ ಈ ಸಂಸ್ಥೆಯ ಸ್ಥಾಪನೆಗೆ ಆಗ ಭಾರತದ ವೈಸ್‌ರಾಯಿಯಾಗಿದ್ದ ಲಾರ್ಡ್ ಡಫರಿನನಿಂದಲೇ



ಗಾಂಧಿ, ಪಟೇಲ್, ನೆಹರು

(1884–88) ಪರೋಕ್ಷವಾಗಿ ಪ್ರೋತ್ಸಾಹ ದೊರಕಿತ್ತು. ನಿವೃತ್ತ ಇಂಗ್ಲಿಷ್ ಅಧಿಕಾರಿ ಆಲೆನ್ ಆಕ್ಟೇವಿಯನ್ ಹ್ಯೂಂ ಇದರ ಸ್ಥಾಪನೆಗೆ ಬಹಳಮಟ್ಟಿಗೆ ಕಾರಣ.

ನಿಶ್ಚಿತ ರಾಜಕೀಯೋದ್ದೇಶಗಳಿಗಾಗಿ ರಾಷ್ಟ್ರೀಯ ಸಂಸ್ಥೆಯೊಂದನ್ನು ಸಂಘಟಿಸುವ ಆವಶ್ಯಕತೆಯನ್ನು ಮನಗಂಡವರೂ ಅದಕ್ಕಾಗಿ ಶ್ರಮಿಸಿದವರೂ ಅನೇಕ ಜನ. ಭಾರತದಲ್ಲಿ ಬ್ರಿಟಿಷ್ ಆಡಳಿತ ಸ್ಥಿರವಾಗುತ್ತಿದ್ದಂತೆಯೇ ನವೋದಯ ಭಾವನೆಗಳೂ ಕ್ಷಿಪ್ರವಾಗಿ ಪ್ರಚುರವಾಗಿ ಇವು ರಾಷ್ಟ್ರಪ್ರಜ್ಞೆಯ ಉಗಮಕ್ಕೆ ಪ್ರೇರಕ ಶಕ್ತಿಗಳಾಗಿ ಪರಿಣಮಿಸಿದುವು. ಅಂತಿಮವಾಗಿ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಜನ್ಮವಾಯಿತು. ಭಾರತದ ಅಖಂಡತಾದೃಷ್ಟಿ ಮತ್ತು ಸ್ವರಾಜ್ಯದ ಹಕ್ಕಿನ ತತ್ತ್ವಗಳ ಮೇಲೆ ರಾಷ್ಟ್ರೀಯ ಜಾಗೃತಿ ವಿಕಾಸಗೊಳ್ಳುವುದಕ್ಕೆ ಅನೇಕ ಅಂಶಗಳು ನೆರವಾದವು.

ಅನೇಕ ರಾಷ್ಟ್ರೀಯ ಚಳವಳಿಗಳಂತೆ ಭಾರತದ ರಾಜಕೀಯ ಜನ ಜಾಗೃತಿಗೂ ಬೌದ್ಧಿಕ ಹಿನ್ನೆಲೆಯೊಂದಿತ್ತು. ಇಂಗ್ಲಿಷ್ ಶಿಕ್ಷಣದ ಫಲವಾಗಿ ಭಾರತದ ಮಧ್ಯಮ ವರ್ಗದ ಜನರಲ್ಲಿ ಅಭೂತಪೂರ್ವವಾದ ಜಾಗೃತಿಯುಂಟಾಗಿತ್ತು. ಇಂಗ್ಲಿಷ್ ಸಾಹಿತ್ಯ ಇತಿಹಾಸಗಳಲ್ಲಿ ಕಂಡುಬಂದಿದ್ದ ಉದಾರವಾದಿ ಭಾವನೆಗಳಿಗೆ ಭಾರತದ ಈ ಜನ ಮಾರು ಹೋಗಿದ್ದರು.

ಬ್ರಿಟಿಷ್ ನ್ಯಾಯದೃಷ್ಟಿಯಲ್ಲಿ ಇವರಿಗೆ ಅಪಾರ ನಂಬುಗೆಯಿತ್ತು. ಬ್ರಿಟನಿನಲ್ಲಿದ್ದ ಉದಾರವಾದಿ ನಾಯಕತ್ವದಿಂದ ಮೊದಮೊದಲು ಭಾರತೀಯರ ಈ ತೆರನಾದ ಭಾವನೆಗಳಿಗೆ ಪ್ರೋತ್ಸಾಹವೂ ಸಿಕ್ಕಿತ್ತು. ಬ್ರಿಟಿಷ್ ಸರ್ಕಾರದ ನೀತಿ ನಿರೂಪಣೆಯಲ್ಲಿ ಈ ಅಂಶ ಪ್ರಧಾನವಾಗಿ ಎದ್ದು ಕಾಣುತ್ತಿತ್ತು. ಭಾರತೀಯ ಪ್ರಜೆಗಳ ಹಿತಸಾಧನೆಯೇ ಬ್ರಿಟನಿನ ಕರ್ತವ್ಯವೆಂಬುದು 1813ರ ಸನ್ನದು ಕಾಯಿದೆಯಲ್ಲಿ (ಚಾರ್ಟರ್ ಆಕ್ಟ್) ಕಂಡುಬಂದಿದ್ದ ಒಕ್ಕಣೆ. 1833ರ ಸಂಸದೀಯ ಸಮಿತಿ ವ್ಯಕ್ತಪಡಿಸಿದ್ದಾದರೂ ಇದೇ ಆಶಯವನ್ನೇ. ತನ್ನ ಸರ್ಕಾರದ ದೃಷ್ಟಿಯಲ್ಲಿ ಭಾರತದ ದೇಶೀಯ ಪ್ರಜೆಗಳಿಗೂ ಬ್ರಿಟಿಷ್ ಪ್ರಜೆಗಳಿಗೂ ಯಾವ ವ್ಯತ್ಯಾಸವೂ ಇಲ್ಲವೆಂದೇ ಬ್ರಿಟಿಷ್ ರಾಣಿ ಹೊರಡಿಸಿದ ಘೋಷಣೆಯಲ್ಲೂ (1858) ಹೇಳಲಾಗಿತ್ತು. ಇದನ್ನೆಲ್ಲ ಭಾರತೀಯ ಮಧ್ಯಮವರ್ಗದ ಬುದ್ಧಿಜೀವಿಗಳು ಮನಸಾರ ನಂಬಿದ್ದರು.

ರಾಜೇಂದ್ರ ಪ್ರಸಾದ್

ಆದರೆ ಬಹುಬೇಗ ಅವರಿಗೆ ಭ್ರಮನಿರಸನಕಾದಿತ್ತು. ಭಾರತದ ಲೋಕಸೇವಾ ಅಧಿಕಾರಿ ವರ್ಗಕ್ಕೆ ಭಾರತೀಯರನ್ನು ನೇಮಿಸಿಕೊಳ್ಳುವ ವಿಚಾರದಲ್ಲಿ ಸರ್ಕಾರ ಅನುಸರಿಸಿದ ಧೋರಣೆಯೇ ಮೊದಲ ಆಘಾತ. ಭಾರತೀಯ

ಗಾಂಧಿ, ಸರೋಜಿನಿ

ಪ್ರಜೆಯಾದ ಸುರೇಂದ್ರನಾಥ ಬ್ಯಾನರ್ಜಿ ಆ ಸಂಬಂಧವಾದ ಸ್ಪರ್ಧಾ ಪರೀಕ್ಷೆಯಲ್ಲಿ ಜಯಶಾಲಿಯಾಗಿದ್ದರೂ ಅವರ ಹೆಸರನ್ನು ಪಟ್ಟಿಯಿಂದ ಕಿತ್ತುಹಾಕಲು ಪ್ರಯತ್ನ ನಡೆಯಿತು. ಕೊನೆಗೆ ರಾಣಿಯ ನ್ಯಾಯ ಪೀಠದಿಂದ (ಕ್ವೀನ್ಸ್ ಬೆಂಚ್) ಬಂದ ಆಜ್ಞೆಯಿಂದಾಗಿ ಬ್ಯಾನರ್ಜಿಯನ್ನು ನೇಮಿಸಿಕೊಳ್ಳಲಾಯಿತಾದರೂ ಯಾವುದೋ ಕುಂಟು ನೆವದಿಂದ ಅವರನ್ನು ಸ್ವಲ್ಪ ಕಾಲಾನಂತರ ವಜಾ ಮಾಡಲಾಯಿತು.

ಹೀಗೆ ಬ್ರಿಟಿಷ್ ಸರ್ಕಾರಕ್ಕೆ ಸೇವೆ ಸಲ್ಲಿಸಲು ನಿರಾಕೃತರಾದ ವ್ಯಕ್ತಿಯೇ ಮುಂದೆ ರಾಷ್ಟ್ರೀಯ ಚಳವಳಿಯ ನಾಯಕರಾದರು. ಅವರಿಂದ ಕಲ್ಕತ್ತದ ಭಾರತೀಯ ಸಂಘದ ಸ್ಥಾಪನೆಯಾಯಿತು. ಮ್ಯಾಟ್ಸಿನಿಯಿಂದ ಸ್ಫೂರ್ತಿಗೊಂಡು ಅಖಿಲ ಭಾರತದ ವ್ಯಾಪ್ತಿಯುಳ್ಳ ಚಳವಳಿ ನಡೆಸುವುದು ಅದರ ಉದ್ದೇಶ. ಲೋಕಸೇವೆ, ಅಸ್ತ್ರಕಾಯಿದೆ, ದೇಶೀಯ ಪತ್ರಿಕಾ ಕಾಯಿದೆ ಮುಂತಾದ ನಾನಾ ವಿಚಾರಗಳಲ್ಲಿ ಸರ್ಕಾರ ತಳೆದ ಧೋರಣೆಯನ್ನು ಪ್ರತಿಭಟಿಸಿ ಅಖಿಲ ಭಾರತ ಮಟ್ಟದಲ್ಲಿ ಸಭೆಗಳು ನಡೆದುವು. ಐರೋಪ್ಯ, ಬ್ರಿಟಿಷ್ ಪ್ರಜೆಗಳನ್ನು ಭಾರತೀಯ ನ್ಯಾಯಾಧೀಶರು ವಿಚಾರಣೆ ನಡೆಸಬಾರದೆಂಬ ನಿಯಮವನ್ನು ರದ್ದು ಮಾಡಲು ತಂದ ವಿಧೇಯಕವೊಂದನ್ನು **(ನೋಡಿ– ಇಲ್ಬರ್ಟ್ ವಿಧೇಯಕ)** ವಿರೋಧಿಸಲು ಭಾರತದಲ್ಲಿದ್ದ ಐರೋಪ್ಯರು ಸಂಘಟಿತರಾದ ಬಗೆಯನ್ನು ಕಂಡು, ಸಂಘಟನೆಯೇ ಗೆಲವಿಗೆ ತಳಹದಿಯೆಂಬುದನ್ನು ಭಾರತೀಯರೂ ಅರಿತುಕೊಂಡರು. ಇದರ ಫಲವೇ ಕಲ್ಕತ್ತದಲ್ಲಿ ಸಮಾವೇಶಗೊಂಡ (1883) ಭಾರತ ರಾಷ್ಟ್ರೀಯ ಸಮ್ಮೇಳನ.

ಭಾರತದ ಪ್ರಜೆಗಳ ಮಾನಸಿಕ, ನೈತಿಕ, ಸಾಮಾಜಿಕ ಮತ್ತು ರಾಜಕೀಯ ಪುನರುಜ್ಜೀವನಕ್ಕಾಗಿ ಕಲ್ಕತ್ತ ವಿಶ್ವವಿದ್ಯಾಲಯದ ಪದವೀಧರರು ಸುಸಂಘಟಿತರಾಗಬೇಕೆಂದು ಆಲೆನ್ ಆಕ್ಟೇವಿಯನ್ ಹ್ಯೂಂ ಆ ಯುವಕರಿಗೆ ಕರೆ ಕೊಟ್ಟದ್ದು ಅದೇ ವರ್ಷವೇ. ಭಾರತ ಸರ್ಕಾರಕ್ಕೆ ಸಾಮಾನ್ಯ ಜನರ ಅರೆ–ಕೊರೆಗಳನ್ನೂ ಆಶೋತ್ತರಗಳನ್ನೂ ಅರಿಕೆ ಮಾಡಿಕೊಳ್ಳಲು ಅಖಿಲ ಭಾರತ ಸಂಸ್ಥೆಯೊಂದು ಅಗತ್ಯವೆಂಬುದನ್ನು ಮನಗಂಡ ಹ್ಯೂಂ ಆ ವಿಚಾರವಾಗಿ ಸರ್ಕಾರದೊಂದಿಗೂ ಸಮಾಲೋಚನೆ ನಡೆಸಿದ. ಸರ್ಕಾರದಿಂದ ಉತ್ತೇಜಕ ಪ್ರತಿಕ್ರಿಯೆ

ಅಖಿಲಭಾರತ ಕಾಂಗ್ರೆಸ್ ಸಮಿತಿಯಲ್ಲಿ (1945) : ಗಾಂಧಿ, ನೆಹರು

ದೊರಕಿದ್ದರಿಂದ ಆತ ಮುಂದುವರಿದ. ಅನೇಕ ಪ್ರಮುಖ ಭಾರತೀಯರ ಸಹಕಾರ ದೊರಕಿತು. 1885ರ ಕ್ರಿಸ್‌ಮಸ್ ವಾರದಲ್ಲಿ ಬೊಂಬಾಯಿಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಪ್ರಥಮಾಧಿವೇಶನ ನಡೆಯಿತು. ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಸಮ್ಮೇಳನದ ದ್ವಿತೀಯಾಧಿವೇಶನ ನಡೆದದ್ದೂ ಅದೇ ಸಮಯದಲ್ಲೇ. ರಾಷ್ಟ್ರದಲ್ಲಿ ಜಾಗೃತಿ ಸಾಧಿಸುವ ಉದ್ದೇಶದಿಂದ ಅಖಿಲ ಭಾರತದಲ್ಲಿ ಏಕೈಕ ಸಂಸ್ಥೆಯಿರಬೇಕೆಂಬ ಉದ್ದೇಶದಿಂದ ಭಾರತ ರಾಷ್ಟ್ರೀಯ ಕಾಂಗ್ರೆಸಿನಲ್ಲಿ ಭಾರತ ರಾಷ್ಟ್ರೀಯ ಸಮ್ಮೇಳನ ವಿಲೀನವಾಯಿತು.

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಪ್ರಥಮ ಅಧಿವೇಶನದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಸಂಖ್ಯೆ ಕೇವಲ 71. ಅಂದಿನಿಂದ ವರ್ಷವರ್ಷವೂ ಕ್ರಿಸ್‌ಮಸ್ ಸಮಯದಲ್ಲಿ ಅದರ ಅಧಿವೇಶನ ಒಂದೊಂದು ನಗರದಲ್ಲಿ ಸೇರುತ್ತಿತ್ತು. ಅಧಿವೇಶನ ನಡೆಯುತ್ತಿದ್ದಲ್ಲೆಲ್ಲ ಸ್ಥಳೀಯ ಜನ ಅತೀವ ಉತ್ಸಾಹ ತಳೆಯುತ್ತಿದ್ದರು. ಕ್ರಮೇಣ ಅಖಿಲ ಭಾರತದ ಪ್ರತಿನಿಧಿಗಳ ಸಂಖ್ಯೆಯೂ ಅಧಿಕಗೊಂಡಿತು. ರಾಷ್ಟ್ರಕಾರಣಕ್ಕಾಗಿ ಶ್ರಮಿಸುವ ಎಲ್ಲ ನಿಷ್ಠಾವಂತರೂ ಪರಸ್ಪರವಾಗಿ ಅರಿತುಕೊಳ್ಳಬೇಕು. ಬರಲಿರುವ ವರ್ಷದಲ್ಲಿ ಅನುಸರಿಸುವ ಕಾರ್ಯಕ್ರಮವನ್ನು ನಿರ್ಧರಿಸಿಕೊಳ್ಳಬೇಕು. ಈ ಸಮ್ಮೇಳನದಲ್ಲೇ ದೇಶೀಯ ಸಂಸತ್ತಿನ ಅಂಕುರಾರ್ಪಣ ವಾಗಬೇಕು. ಇದನ್ನು ಸರಿಯಾಗಿ ನಿರ್ವಹಿಸಿದರೆ ಯಾವುದೇ ಬಗೆಯ ಪ್ರಾತಿನಿಧಿಕ ಸಂಸ್ಥೆಗಳಿಗೆ ಭಾರತ ಅನರ್ಹವೆಂಬ ಸವಾಲಿಗೆ ಇದು ಜವಾಬೂ ಆಗಬಹುದು–ಎಂದು ಪ್ರಥಮಾಧಿವೇಶನದ ಪ್ರಣಾಳಿಕೆಯಲ್ಲಿ ಹ್ಯೂಂ ಹೇಳಿದ ಮಾತು ಸಾರ್ಥಕವಾಯಿತು.

ಹರಿಪುರ ಕಾಂಗ್ರೆಸ್ ಅಧಿವೇಶನಾಧ್ಯಕ್ಷ ಸುಬಾಷ್ ಚಂದ್ರಬೋಸ್ ಆಜಾದ್, ನೆಹರುಗಳೊಂದಿಗೆ

19ನೆಯ ಶತಮಾನದ ಪೂರ್ತಿ ಕಾಂಗ್ರೆಸ್ಸು ಸರ್ಕಾರದ ನೀತಿಯನ್ನು ಟೀಕಿಸುವುದರಲ್ಲೂ ಸುಧಾರಣೆಯ ಬೇಡಿಕೆಗಳನ್ನು ಮುಂದಿಡುವುದರಲ್ಲೂ ನಿರತವಾಗಿತ್ತು. ಯಾವಾಗಲೂ

ಗಾಂಧೀಜಿ ಅಖಿಲಭಾರತ ಕಾಂಗ್ರೆಸ್ ಸಮಿತಿ, (1942)

ಅದು ತನ್ನ ಗಾಂಭೀರ್ಯವನ್ನಾಗಲಿ ಮಿತವಾದವನ್ನಾಗಲಿ ಬಿಟ್ಟು ಹೋಗಲಿಲ್ಲ. ಸ್ವಯಮಾಡಳಿತದ ಬೆಳವಣಿಗೆ, ಇಂಡಿಯ ಕೌನ್ಸಿಲಿನ ರದ್ದು, ಶಿಕ್ಷಣಾಭಿವೃದ್ಧಿ, ಸೈನ್ಯ ವೆಚ್ಚದಲ್ಲಿ ಕಡಿತ, ಕಾರ್ಯಾಂಗ ಶಾಸನಾಂಗಗಳ ಪ್ರತ್ಯೇಕತೆ, ಉನ್ನತ ಹುದ್ದೆಗಳಲ್ಲಿ ಭಾರತೀಯರ ನೇಮಕ_ಇವು ಅದರ ಕೆಲವು ಬೇಡಿಕೆಗಳು. ಯಾವುದೇ ಸಂದರ್ಭದಲ್ಲೂ ಅದು ಬ್ರಿಟಿಷ್ ರಾಜಕಾರಣಿಗಳ ಮುತ್ಸದ್ದಿತನದಲ್ಲಾಗಲಿ ನ್ಯಾಯ ದೃಷ್ಟಿಯಲ್ಲಾಗಲಿ ಔದಾರ್ಯದಲ್ಲಾಗಲಿ ನಂಬಿಕೆ ಕಳೆದುಕೊಳ್ಳಲಿಲ್ಲ. ರಾಜಭಕ್ತಿ ಪ್ರದರ್ಶನದಲ್ಲೂ ಅದು ಹಿಂದೆಗೆಯಲಿಲ್ಲ.



ದಾದಾಬಾಯಿ ನವರೋಜಿ

1896ರಲ್ಲಿ ಕಾಂಗ್ರೆಸು ಆರ್ಥಿಕ ಸಾಮಾಜಿಕ ದೃಷ್ಟಿಗಳನ್ನೂ ಕೂಡಿಸಿಕೊಂಡಿತು. ಭಾರತೀಯ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕೈಗಾರಿಕಾ ಪ್ರದರ್ಶನವೊಂದನ್ನು ಏರ್ಪಡಿಸಿತು. ಸಮಾಜದ ಪೀಡೆಗಳನ್ನು ನಿವಾರಿಸುವ ಉದ್ದೇಶದಿಂದ ಸಾಮಾಜಿಕ ಸಮ್ಮೇಳನವೊಂದನ್ನು ವ್ಯವಸ್ಥೆಗೊಳಿಸಿದ್ದೂ ಅದೇ ವರ್ಷ.

ಮೊದಮೊದಲು ಸರ್ಕಾರ ಕಾಂಗ್ರೆಸ್ ಚಳವಳಿಯ ಬಗ್ಗೆ ಪ್ರೋತ್ಸಾಹಕರ ನಿಲವನ್ನೇ ತಳೆದಿತ್ತು. ಅಸಹನೆಯಂತೂ ಇರಲೇ ಇಲ್ಲ. 1886ರಲ್ಲಿ ಕಲ್ಕತ್ತದ ಅಧಿವೇಶನಕ್ಕೆ ಬಂದಿದ್ದ ಕಾಂಗ್ರೆಸ್ ಸದಸ್ಯರನ್ನು ವನಭೋಜನವೊಂದಕ್ಕೆ ಕೂಡ ಆಗಿನ ಗವರ್ನರ್ ಜನರಲ್ ಲಾರ್ಡ್ ಡಫರಿನ್ ಕರೆದಿದ್ದ.

ಆದರೆ ಕ್ರಮೇಣ ಈ ನಿಲವು ಬದಲಾಯಿತು. ತನ್ನ ಅಧಿಕಾರ ಬಿಟ್ಟುಕೊಡುವ ಮುನ್ನ ಲಾರ್ಡ್ ಡಫರಿನನೇ ಕಾಂಗ್ರೆಸಿನ ನೀತಿ ವಿಧಾನಗಳ ಬಗ್ಗೆ ಅತೃಪ್ತಿ ಸೂಚಿಸಿದ. ಈ ಸುದ್ದಿ ಸರ್ಕಾರಿ ಕಚೇರಿಗಳಲ್ಲೆಲ್ಲ ಹಬ್ಬಿತು. ಅಧಿಕಾರಿಗಳ ಧೋರಣೆ ಬಿಗಿಯಾಯಿತು. ಕಾಂಗ್ರೆಸೂ ಡಫರಿನ್ ಆಶಿಸಿದ ರೀತಿಯಲ್ಲೇ ಮುಂದುವರಿಯಲಿಲ್ಲ. ಭಾರತದ ಜನರ ಆಶೋತ್ತರಗಳಿಗೆ ರೂಪುಕೊಟ್ಟು ಹೋರಾಡಲು ಅದು ಮುಂದೆ ಬಂತು. ಕ್ರಮೇಣ ಅದರ ಶಕ್ತಿ ವರ್ಧಿಸಿತು. ಹ್ಯೂಂ ಮಾತ್ರ ಭಾರತ ಹಾಗೂ ಪರದೇಶಗಳಲ್ಲಿ (ವಿಶೇಷತಃ ಬ್ರಿಟನ್ನಿನಲ್ಲಿ) ಕಾಂಗ್ರೆಸಿನ ಏಳ್ಗೆಗಾಗಿ ಶ್ರಮಿಸಿದ. ಅವನ ಪರಿಶ್ರಮದ ಫಲವಾಗಿ ಬ್ರಿಟಿಷ್ ಪಾರ್ಲಿಮೆಂಟಿನ ಕೆಲಸದಸ್ಯರ ಸಹಾನುಭೂತಿಯನ್ನು ಗಳಿಸಲಾಯಿತು. 1893ರಲ್ಲಿ ಲಾಹೋರಿನಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಅಂದಿನ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯ ದಾದಾಭಾಯಿನವರೋಜಿ ವಹಿಸಿದ್ದರು.

ಆವರೆಗೆ ಮಂದಗಾಮಿಗಳ ನೇತೃತ್ವದಲ್ಲಿ ಸಂಘಟಿತವಾಗಿದ್ದ ಕಾಂಗ್ರೆಸ್ ಸಂಸ್ಥೆ ಚಿಕ್ಕಪುಟ್ಟ ಸುಧಾರಣೆಗಳಿಗಾಗಿ ಸರಕಾರಕ್ಕೆ ಪ್ರಾರ್ಥನೆಗಳನ್ನು ಸಲ್ಲಿಸುತ್ತಿತ್ತು. ಆದರೆ ಅವಕ್ಕೆ ಸರ್ಕಾರ ಗಮನ ಕೊಡುತ್ತಿರಲಿಲ್ಲ. ಈ ಮಧ್ಯೆ ಹಿಂದೂ ಧರ್ಮಸುಧಾರಕರ ವಾಣಿ ಜನತೆಯನ್ನೆಚ್ಚರಿಸಿತು.



ಅಖಿಲ ಭಾರತ ಕಾಂಗ್ರೆಸ್ ಸಮಿತಿ (1946) : ಗಾಂಧಿ, ಆಜಾದ್, ಕೃಪಲಾನಿ

ಕಾಂಗ್ರೆಸ್ ಸಂಸ್ಥೆ ಕೈಗೊಳ್ಳುತ್ತಿದ್ದ ಕಾರ್ಯದಲ್ಲಿ ಎಲ್ಲರೂ ಭಾಗಿಗಳಾದರು. ಇದರಿಂದ ಆವರೆಗೆ ಕೆಲವೇ ಸುಶಿಕ್ಷಿತರ ಸಂಘಟನೆಯಾಗಿದ್ದ ಕಾಂಗ್ರೆಸ್ ಸಂಸ್ಥೆ ರಾಷ್ಟ್ರೀಯ ಸಂಸ್ಥೆಯಾಗಿ ಮಾರ್ಪಟ್ಟಿತು.

**ಬಂಗಾಳ ವಿಭಜನೆ:** ಇಂಥ ಪರಿಸ್ಥಿತಿಯಲ್ಲಿ ಬ್ರಿಟಿಷರು ಭಾರತದಲ್ಲಿ ಒಡಕು ಹುಟ್ಟಿಸಲು ಪ್ರಯತ್ನಿಸಿದರು. ನಾಡಿನಲ್ಲಿ ಬೆಳೆಯುತ್ತಿದ್ದ ಏಕತೆಗೆ ಧಕ್ಕೆ ತರಲು ಮಾರ್ಗ ಹುಡುಕಿದರು. ಆ ವಿಚಾರದ ಫಲವಾಗಿಯೇ ಬಂಗಾಳ ವಿಭಜನೆಯ ಯೋಚನೆ ಬ್ರಿಟಿಷರಲ್ಲಿ ಬಂದದ್ದು.



ಕಾಂಗ್ರೆಸ್ ಅಧಿವೇಶನದ ವಿಷಯ ನಿಯಾಮಕ ಸಭೆ

ಬಂಗಾಳ ವಿಭಜನೆಯಿಂದ ಕಾಂಗ್ರೆಸಿನ ದೃಷ್ಟಿ ಧೋರಣೆಗಳಲ್ಲೂ ಬದಲಾವಣೆಯುಂಟಾಯಿತು. ಆವರೆಗೆ ಶಾಂತಿ ಸಹಕಾರಗಳಿಗೆ ಹೆಚ್ಚಿನ ಮಹತ್ತ್ವ ನೀಡಿದ್ದ ಕಾಂಗ್ರೆಸಿನ ಮಂದಗಾಮಿಗಳ ಪಾತ್ರ ಹಿರಿಯದಾಗಿತ್ತು. ಆದರೆ ಮುಂದೆ, ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ನಾನು ಅದನ್ನು ಪಡೆದೇ ತೀರುತ್ತೇನೆ ಎಂಬ ಘೋಷಣೆಯೊಂದಿಗೆ ಲೋಕಮಾನ್ಯ ತಿಲಕರು ಕಾಂಗ್ರೆಸ್ಸಿನಲ್ಲಿ ಮಹತ್ತ್ವದ ಪಾತ್ರ ವಹಿಸಿದರು. ತಿಲಕರು ಮಂದಗಾಮಿಗಳ ಧೋರಣೆಯನ್ನು ಕಟುವಾಗಿ ಟೀಕಿಸಿದ್ದಲ್ಲದೆ, ಪರದೇಶೀ ಬಹಿಷ್ಕಾರವೊಂದೇ ಕಾಂಗ್ರೆಸಿಗೆ ಉಳಿದ ಮಾರ್ಗವೆಂದು ಘೋಷಿಸಿದರು.

ಲೋಕಮಾನ್ಯ ತಿಲಕರ ನೇತೃತ್ವದಲ್ಲಿ ಕಾಂಗ್ರೆಸ್ ಸ್ವದೇಶಿಯ ಪರವಾಗಿಯೂ ಬಂಗಾಳ ವಿಭಜನೆಯ ವಿರುದ್ಧವಾಗಿಯೂ ಚಳವಳಿಗಳನ್ನು ಸಂಘಟಿಸಿತು. ಈ ಚಟುವಟಿಕೆಗಳೆಲ್ಲ ನ್ಯಾಯಬದ್ಧವಾದವೆಂದು 1906ರಲ್ಲಿ ಕಾಂಗ್ರೆಸ್ ಸಂಸ್ಥೆ ಗೊತ್ತುವಳಿಯೊಂದನ್ನು ಸ್ವೀಕರಿಸಿತು.

ಬಂಗಾಳ ವಿಭಜನೆ ಬ್ರಿಟಿಷರು ಭಾರತದಲ್ಲಿ ಅನುಸರಿಸುತ್ತಿದ್ದ 'ಒಡೆದು ಆಳುವ ಧೋರಣೆ'ಯ ಒಂದು ನಿದರ್ಶನ. ಇದರಿಂದ ಹಿಂದೂ ಮುಸ್ಲಿಂ ಏಕತೆಯನ್ನು ನಾಶಪಡಿಸಿ, ತಮ್ಮ ಸಾಮ್ರಾಜ್ಯವನ್ನು ಶಾಶ್ವತಗೊಳಿಸಲು ಅವರು ಪ್ರಯತ್ನಿಸಿದರು ಎಂದು ಹೇಳಬಹುದು.

ಬಂಗಾಳದಲ್ಲೆಲ್ಲ ಚಳವಳಿ, ಹರತಾಳಗಳ ಪ್ರತಿಭಟನೆಯ ವಾತಾವರಣ ಹರಡಿತು. ಭಾರತದ ಎಲ್ಲ ಪ್ರಾಂತ್ಯಗಳಿಗೂ ಹಬ್ಬಿತು. ಇದರೊಂದಿಗೆ ರಾಷ್ಟ್ರೀಯತಾ ಪ್ರಜ್ಞೆಯೂ ಬೆಳೆಯಿತು. ಲೋಕಮಾನ್ಯ ತಿಲಕ್, ಸುರೇಂದ್ರನಾಥ್ ಬ್ಯಾನರ್ಜಿ ಮುಂತಾದ ಕಾಂಗ್ರೆಸ್

**ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ (1883), ಬೊಂಬಾಯಿ, ಭಾಗವಹಿಸಿದ್ದ ಪ್ರತಿನಿಧಿಗಳು**

ಮುಖಂಡರ ನೇತೃತ್ವದಲ್ಲಿ 1905 ರಿಂದ 1908ರ ವರೆಗೆ ಬಂಗಾಳ ವಿಭಜನೆಯನ್ನು ವಿರೋಧಿಸುವ ಉಗ್ರ ಆಂದೋಲನವೆದ್ದಿತು. ಕಾಂಗ್ರೆಸ್ ಸಂಸ್ಥೆ ಜನಪ್ರಿಯತೆಗಳಿಸಿ ರಾಷ್ಟ್ರೀಯ ಸಂಸ್ಥೆಯಾಯಿತು. ಈ ಕ್ಷೋಭೆಯನ್ನು ತಡೆಹಿಡಿಯಲು ಬ್ರಿಟಿಷರು 1909ರಲ್ಲಿ ಮಾರ್ಲೆ-ಮಿಂಟೋ ಸುಧಾರಣೆಗಳನ್ನು ನೀಡಿದರು. ಆದರೆ ಈ ಸುಧಾರಣೆಯಲ್ಲೇ ಪಾಕಿಸ್ತಾನದ ಬೀಜಾವಾಪನೆಯಾಗಿತ್ತು. ಇದರಲ್ಲಿ ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣಾ ಸೌಲಭ್ಯವನ್ನು ಕೊಡಲಾಗಿತ್ತು. ಇದರ ಪರಿಣಾಮವಾಗಿ, ದೇಶದಲ್ಲಿ ತೃಪ್ತಿಗಿಂತ ಅತೃಪ್ತಿಯೇ ಹೆಚ್ಚಿತು. 1907ರಲ್ಲಿ ಸೂರತಿನಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಮುಂದಾಳುಗಳಲ್ಲಿ ಭಿನ್ನಾಭಿಪ್ರಾಯಗಳು ತೀವ್ರವಾಗಿದ್ದುವು. ಸಂಸ್ಥೆಯ ಚಟುವಟಿಕೆಗಳು ಅಷ್ಟೊಂದು ಸುಗಮವಾಗಿರಲಿಲ್ಲ.

**ಸುರೇಂದ್ರನಾಥ ಬ್ಯಾನರ್ಜಿ**

**ಅಸಹಕಾರ, ಕಾನೂನು ಭಂಗ:** ಒಂದನೆಯ ಮಹಾಯುದ್ಧದಲ್ಲಿ ಕಾಂಗ್ರೆಸ್ ಬ್ರಿಟಿಷರಿಗೆ ಬೆಂಬಲ ನೀಡಿತು. ಅದರ ಪ್ರತಿಫಲವಾಗಿ ಮತ್ತು ಅಸಂತುಷ್ಟ ಭಾರತೀಯರನ್ನು ತೃಪ್ತಿಪಡಿಸಲೆಂದು ಬ್ರಿಟಿಷ್ ಪಾರ್ಲಿಮೆಂಟ್ 1919ರಲ್ಲಿ ಸುಧಾರಣಾ ಕಾಯಿದೆಯೊಂದನ್ನು ಭಾರತಕ್ಕೆ ನೀಡಿತು. ಈ ಕಾಯಿದೆ ನಾಡಿನ ಜನರನ್ನು ಮತ್ತು ಕಾಂಗ್ರೆಸಿಗರನ್ನು ತೃಪ್ತಿಪಡಿಸಲಿಲ್ಲ. ಆಳರಸರ ಸಾಮ್ರಾಜ್ಯಷಾಹಿ ಯುದ್ಧಕ್ಕೆ ತಮ್ಮ ನೈತಿಕ ಹಾಗೂ ಭೌತಿಕ ಸಹಾಯ ನೀಡಿದ ಜನತೆಯ ಆಶೆಯನ್ನು ಈ ಸುಧಾರಣೆಯ ಕಾಯಿದೆ ಈಡೇರಿಸಲಿಲ್ಲ. ಜನ ಇದರ ವಿರುದ್ಧವಾಗಿ ಕಾಂಗ್ರೆಸಿನ ನೇತೃತ್ವದಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದರು.



**ಸರ್ದಾರ್ ವಲ್ಲಭಭಾಯಿ ಪಟೇಲ್**

1919ರಲ್ಲಿ ಪಂಜಾಬ್ ಪ್ರಾಂತದ ಜಲಿಯನ್ ವಾಲಾಬಾಗ್ ಹತ್ಯಾಕಾಂಡದಿಂದಾಗಿ ನೂರಾರು ಚಳವಳಿಗಾರರು ಹುತಾತ್ಮರಾದರು. ಇದರಿಂದ ದೇಶಾದ್ಯಂತ ಜನ ಬ್ರಿಟಿಷ್ ಸರ್ಕಾರದ ವಿರುದ್ಧ ಸಿಡಿದೆದ್ದರು. ಕಾಂಗ್ರೆಸ್ ಪಕ್ಷದ ಸಂಘಟನೆ ಪ್ರಬಲವಾಯಿತು. ಆ ವೇಳೆಗೆ ಕಾಂಗ್ರೆಸಿನ ಚಾಲಕರಲ್ಲಿ ಗಾಂಧೀಜಿ ಹಿರಿಯಸ್ಥಾನ ದೊರಕಿಸಿಕೊಂಡಿದ್ದರು. ದಕ್ಷಿಣ ಆಫ್ರಿಕದಂತೆ ಭಾರತದಲ್ಲೂ ಅಸಹಕಾರ ಮತ್ತು ಕಾನೂನು ಭಂಗ ಚಳವಳಿಗೆ ಸರಿಯಾದ ವಾತಾವರಣವಿದೆ ಎಂಬುದನ್ನರಿತ ಗಾಂಧೀಜಿ ಕಾಂಗ್ರೆಸಿನ ಆಶ್ರಯದಲ್ಲಿ ಅಸಹಕಾರ ಚಳವಳಿ ಪ್ರಾರಂಭಿಸಿದರು.

ಅಸಹಕಾರ ಚಳವಳಿಯ ಗೊತ್ತುವಳಿಯನ್ನು ಸ್ವೀಕರಿಸಲಾದದ್ದು 1920 ರಲ್ಲಿ, ಕಲ್ಕತ್ತದಲ್ಲಿ ಕರೆದ ಕಾಂಗ್ರೆಸ್ ವಿಶೇಷ ಅಧಿವೇಶನದಲ್ಲಿ. ಅದರ ಪ್ರಕಾರ ಶಾಸನಸಭೆ, ಶೈಕ್ಷಣಿಕ ಕ್ಷೇತ್ರ,

**ಫೈಜ್‌ಪುರ ಅಧಿವೇಶನದಲ್ಲಿ ಅಧ್ಯಕ್ಷ ನೆಹರು, ಮಹಾತ್ಮ ಗಾಂಧಿ**

ಕೋರ್ಟು, ಕಚೇರಿ ಮುಂತಾದವುಗಳಿಗೆ ಬಹಿಷ್ಕಾರ ಹಾಕಲಾಯಿತು. ಚಳವಳಿಯನ್ನು ಹತ್ತಿಕ್ಕಲು ಸರ್ಕಾರ ಕೈಕೊಂಡ ದಮನನೀತಿ ಜನತೆಯನ್ನು ರೊಚ್ಚಿಗೆಬ್ಬಿಸಿತು. ಇದಲ್ಲದೆ ಬ್ರಿಟಿಷರು ಒಂದನೆಯ ಮಹಾಯುದ್ಧದಲ್ಲಿ ತುರ್ಕಿಗೆ ಮಾಡಿದ ಅನ್ಯಾಯ ಭಾರತೀಯ ಮುಸಲ್ಮಾನರನ್ನು ಕೆರಳಿಸಿತ್ತು. ಹೀಗಾಗಿ ಭಾರತದ ಹಿಂದೂ ಮುಸ್ಲಿಮರು ಏಕತೆಯಿಂದ ಬ್ರಿಟಿಷರನ್ನು ಪ್ರತಿಭಟಿಸಿದರು.

**ಅಖಿಲಭಾರತ ಕಾಂಗ್ರೆಸ್ ಸಮಿತಿ : ಗಾಂಧಿ, ಆಜ಼ಾದ್, ಪಟೇಲ್ ಸಮಾಲೋಚನೆ**

ಕಾಂಗ್ರೆಸ್ ಬ್ರಿಟಿಷ್ ಪ್ರಭುತ್ವವನ್ನು ಅಲುಗಾಡಿಸುವ ದೃಷ್ಟಿಯಿಂದ ಮುಸಲ್ಮಾನರಿಗೆ ಪ್ರಿಯವಾದ ಖಿಲಾಫತ್ ಚಳವಳಿಗೆ ಬೆಂಬಲ ನೀಡಿತು. ಇದರಿಂದ ಹಿಂದೂ ಮುಸ್ಲಿಂ ಐಕ್ಯವಾಯಿತಾಗಿ ಬ್ರಿಟಿಷರು ಅಂಜಿದರು. ಆದರೆ ಇದು ತಾತ್ಕಾಲಿಕ ಐಕ್ಯ. ಅನಂತರ 1921ರ ಅಧಿವೇಶನದಲ್ಲಿ ಅಸಹಕಾರದೊಡನೆ ಕಾನೂನು ಭಂಗ ಚಳವಳಿಯನ್ನು ಪ್ರಾರಂಭಿಸಬೇಕೆಂದು ನಿರ್ಣಯವೊಂದನ್ನು ಕಾಂಗ್ರೆಸ್ ಸ್ವೀಕರಿಸಿತು. ತಮ್ಮ ಪ್ರಭುತ್ವವನ್ನೇ

ಪ್ರಶ್ನಿಸುವಂತಿದ್ದ ಈ ನಿರ್ಣಯವನ್ನು ಸರ್ಕಾರ ಸ್ವಾಗತಿಸಲಿಲ್ಲ. ಕಾಂಗ್ರೆಸಿನ ಮುಂದಾಳುಗಳಿಂದ ಸೆರೆಮನೆಗಳು ತುಂಬತೊಡಗಿದವು. ಆಂದೋಲನವನ್ನು ನಿಗ್ರಹಿಸಲು ಬ್ರಿಟಿಷರು ಕ್ರೂರ ನೀತಿಯನ್ನನುಸರಿಸಿದರು. ಇದಾವುದಕ್ಕೂ ಅಂಜದೆ ಕಾಂಗ್ರೆಸಿಗರು ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. 1924 ರಲ್ಲಿ ಕಾಂಗ್ರೆಸ್ ಅಧಿವೇಶನ ಬೆಳಗಾಂವಿಯಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಈ ಅಧಿವೇಶನದಲ್ಲಿ ಅಸ್ಪೃಶ್ಯತಾ ನಿವಾರಣೆ, ನಿರುದ್ಯೋಗ ಪರಿಹಾರ, ಪಾನನಿರೋಧ ಮುಂತಾದ ಮಹತ್ತ್ವದ ವಿಷಯಗಳ ಬಗ್ಗೆ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ಪ್ರಥಮಾಧಿವೇಶನದ (1883) ಅಧ್ಯಕ್ಷ ಡಬ್ಲ್ಯುಸಿ. ಬ್ಯಾನರ್ಜಿ

ತರುವಾಯ 1927ರಲ್ಲಿ ಬ್ರಿಟಿಷ್ ಸರ್ಕಾರ ಸೈಮನನ ನೇತೃತ್ವದಲ್ಲಿ ಒಂದು ಆಯೋಗ ನೇಮಿಸಿತು. ಭಾರತೀಯರ ಬೇಕು ಬೇಡುಗಳನ್ನು ವಿಚಾರಿಸಿ, ಭಾರತದ ರಾಜ್ಯಾಡಳಿತದಲ್ಲಿ ಕೈಕೊಳ್ಳಬೇಕಾದ ಬದಲಾವಣೆಯ ಬಗ್ಗೆ ಶಿಫಾರಸು ಮಾಡುವುದು ಈ ಆಯೋಗದ ಕಾರ್ಯ, ಯಾವ ಭಾರತೀಯನೂ ಇಲ್ಲದ ಆ ಆಯೋಗದ ಬಗ್ಗೆ ಸಂಶಯಪಟ್ಟು ಕಾಂಗ್ರೆಸ್ ಹಾಗೂ ಇನ್ನುಳಿದ ಸಂಸ್ಥೆಗಳು ಅದನ್ನು ಬಹಿಷ್ಕರಿಸಿದುವು.

1928ರಲ್ಲಿ ಕಾಂಗ್ರೆಸು ಮೋತಿಲಾಲ್ ನೆಹರು ಹಾಗೂ ಇನ್ನುಳಿದ ಮುಖಂಡರ ನೇತೃತ್ವದಲ್ಲಿ ಭಾರತಕ್ಕೆ ಒಂದು ಹೊಸ ರಾಜ್ಯಘಟನೆ ನಿರ್ಮಿಸಿತು. ಇದು ಕಾಂಗ್ರೆಸ್ ಪಕ್ಷದ ರಚನಾತ್ಮಕ ಕಾರ್ಯನೀತಿಗೆ ಉತ್ತಮ ಉದಾಹರಣೆಯೆಂದು ಹಲವಾರು ಬ್ರಿಟಿಷ್ ರಾಜಕಾರಣಪಟುಗಳೇ ಅಭಿಪ್ರಾಯಪಟ್ಟಿದ್ದಾರೆ. ಆದರೆ ಆಗಿನ ಸರ್ಕಾರ ನೆಹರು ಸಮಿತಿಯ ಬೇಡಿಕೆ ಅತಿಯಾಯಿತೆಂಬ ಆಪಾದನೆ ಹೊರಿಸಿ ಅದನ್ನು ತಿರಸ್ಕರಿಸಿತು.

**ರಾಷ್ಟ್ರಧ್ವಜ, ರಾಷ್ಟ್ರಗೀತೆ:** ಭಾರತ ಸ್ವತಂತ್ರವಾಗಲೇಬೇಕೆಂಬ ಬಲವಾದ ಬೇಡಿಕೆಯನ್ನು ಕಾಂಗ್ರೆಸ್ 1930ರಲ್ಲಿ ಮುಂದಿರಿಸಿತಲ್ಲದೆ, ಪ್ರತಿಯೊಂದು ರಾಷ್ಟ್ರಕ್ಕೂ ಒಂದು ಧ್ವಜ ಆವಶ್ಯಕವೆಂದು ಭಾವಿಸಿ ತನ್ನದೇ ರಾಷ್ಟ್ರಧ್ವಜವನ್ನು ಏರ್ಪಡಿಸಿಕೊಂಡಿತು. ಕಾಂಗ್ರೆಸಿನ

ಅಮೃತಸರ ಅಧಿವೇಶನದ (1919) ಕೆಲವು ಪ್ರತಿನಿಧಿಗಳು.
ಚಿತ್ರದಲ್ಲಿ ತಿಲಕ್, ಮೋತಿಲಾಲ್, ತಾರದಾನಂದ, ಬೆಸೆಂಟ್, ಮಾಲವೀಯ, ನೆಹರು, ಸತ್ಯಮೂರ್ತಿ ಇದ್ದಾರೆ

ಚಟುವಟಿಕೆಗಳಿಗೆ ನಾಂದಿಯಾಗಿ ಧ್ವಜಾರೋಹಣ ವಂದನೆಗಳು ಜನಪ್ರಿಯ ಕಾರ್ಯಕ್ರಮಗಳಾದುವು. ಮುಖಂಡರು ರಾಷ್ಟ್ರಧ್ವಜದ ಮಹತ್ತ್ವದ ಬಗ್ಗೆ ಜನತೆಗೆ ತಿಳಿವಳಿಕೆ ಕೊಡುತ್ತಿದ್ದರು. ಅದನ್ನು ಕುರಿತು ಹಿಂದಿ ಮತ್ತು ಇತರ ದೇಶಭಾಷೆಗಳಲ್ಲಿ ಹಾಡುಗಳನ್ನು ಕೂಡ ರಚಿಸಲಾಯಿತು. ತ್ರಿವರ್ಣಗಳಿಂದ ಕೂಡಿದ ಧ್ವಜದ ಮಧ್ಯೆ ಚರಕದ ಚಿತ್ರವನ್ನು ಸೇರಿಸಿ, ಭಾರತದ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಮನೆಮನೆಗೂ ನೂಲುವ ಕಾಯಕ ಪ್ರಸಾರವಾಗಬೇಕೆಂಬ ಸಂದೇಶವನ್ನು ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಸಾರಿತು. ರಾಷ್ಟ್ರಧ್ವಜವನ್ನು ಹಾರಿಸಲು ಸರ್ಕಾರ ಪ್ರತಿಬಂಧಿಸಿದಾಗ ಕಾಂಗ್ರೆಸ್ ಸಂಸ್ಥೆ ಧ್ವಜಸತ್ಯಾಗ್ರಹವನ್ನು ಕೂಡ ಕೈಕೊಂಡ ಪ್ರಸಂಗಗಳುಂಟು.

ಕಾಂಗ್ರೆಸು ಜನತೆಯನ್ನು ಆಕರ್ಷಿಸಲು ಹಾಗೂ ಅವರಲ್ಲಿ ಏಕತೆ ಬೆಳೆಸಲು ಏರ್ಪಡಿಸಿದ ಇನ್ನೊಂದು ಸಾಂಕೇತಿಕ ಅಂಶವೆಂದರೆ ರಾಷ್ಟ್ರಗೀತೆ. ಬಂಕಿಂ ಚಂದ್ರ ವಿರಚಿತ ವಂದೇ ಮಾತರಂ ಗೀತೆಯನ್ನು ಕಾಂಗ್ರೆಸ್ ಸಂಸ್ಥೆ ರಾಷ್ಟ್ರಗೀತೆಯೆಂದು ಅಂಗೀಕರಿಸಿತು. ಇದರ

**29ನೆಯ ಅಧಿವೇಶನದ ಪ್ರತಿನಿಧಿಗಳು, ಕರಾಚಿ (1931)**

ಜೊತೆಗೆ ರವೀಂದ್ರನಾಥ ಠಾಕೂರರ ಜನಗಣಮನ ಗೀತೆಯೂ ಜನಪ್ರಿಯವಾಯಿತು. ವಂದೇ ಮಾತರಂ ಗೀತೆ ನಾಡಿನ ಮನೆಮನೆಗೂ ಮುಟ್ಟಿ ರಾಷ್ಟ್ರೀಯತ್ವದ ಸಂದೇಶ ಸಾರಿತು.

ಭಾವೈಕ್ಯದ ಈ ಕ್ರಮಗಳನ್ನು ಬ್ರಿಟಿಷ್ ಸರ್ಕಾರ ನಿರೀಕ್ಷಿಸಿರಲಿಲ್ಲ. ಹೇಗಾದರೂ ಭಾರತೀಯರಲ್ಲಿ ಒಡಕು ಹುಟ್ಟಿಸಬೇಕೆಂಬುದು ಅದರ ಆಗಿನ ನಿರ್ಧಾರ. ಬ್ರಿಟಿಷರ ಈ ಧೋರಣೆ ಪ್ರಕಟವಾದದ್ದು ಅವರು ಕರೆದ ದುಂಡುಮೇಜಿನ ಪರಿಷತ್ತಿನಲ್ಲಿ (1930–32). ಭಾರತ ಮತ್ತು ಬ್ರಿಟಿಷ್ ಪ್ರತಿನಿಧಿಗಳ ಆ ಸಭೆಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. ಬ್ರಿಟಿಷ್ ಸರ್ಕಾರ ಹೊತ್ತಿಸಿದ ಜಾತೀಯತೆಯ ಬೆಂಕಿ ಮಾತ್ರ ಅಪಾಯಕಾರಿಯಾಗಿ ಪರಿಣಮಿಸಿತು.

ದೇಶದಲ್ಲಿ ಅನೇಕ ಗಲಭೆಗಳಾದುವು. ಕೊಲೆಸುಲಿಗೆಗಳು ನಡೆದುವು. ನೂರಾರು ಭಾರತೀಯರು ಗುಂಡಿನೇಟಿಗೆ ತುತ್ತಾದರು. ಪರಕೀಯ ಸರ್ಕಾರ ಎಂಥ ಕಠಿಣ ಕ್ರಮಗಳನ್ನು ಕೈಗೊಂಡರೂ ಕಾಂಗ್ರೆಸಿನ ಚಳವಳಿ ನಿಲ್ಲಲಿಲ್ಲ. ಆದ್ದರಿಂದ ಬ್ರಿಟಿಷ್ ಸರ್ಕಾರ 1933ರಲ್ಲಿ ಶ್ವೇತಪತ್ರವೊಂದನ್ನು ಹೊರಡಿಸಿ ಭಾರತದ ಭಾವೀ ಆಡಳಿತದಲ್ಲಿ ಮಹತ್ತರವಾದ ಸುಧಾರಣೆ ಮಾಡುವ ಇಚ್ಛೆಯನ್ನು ಪ್ರಕಟಪಡಿಸಿತು. ಆಮೇಲೆ 1934ರಲ್ಲಿ ಕಾಂಗ್ರೆಸ್ ಸಂಸ್ಥೆಯೇ ಈ ಅಸಹಕಾರ ಹಾಗೂ ಕಾನೂನು ಭಂಗ ಚಳವಳಿಗಳನ್ನು ಹಿಂತೆಗೆದುಕೊಂಡಿತು. ದೇಶದಲ್ಲಿ ಶಾಂತಿ ಸುವ್ಯವಸ್ಥೆಗಳು ಕಾಣಿಸಿಕೊಂಡುವು.

**ಪ್ರಾಂತೀಯ ಸ್ವಯಮಾಡಳಿತ:** 1935ರ ಕಾಯಿದೆ ಪ್ರಾಂತ್ಯಗಳಿಗೆ ಸ್ವಯಮಧಿಕಾರ ಕೊಟ್ಟಿತು. ಆದರೆ ಈ ಪ್ರಾಂತೀಯ ಸ್ವಾಯತ್ತೆ ಹಲವಾರು ಪರಿಮಿತಿಗಳಿಗೊಳಗಾಗಿತ್ತು. ಗವರ್ನರ್ ಅನೇಕ ವಿಚಾರಗಳಲ್ಲಿ ನಿರಂಕುಶ ಅಧಿಕಾರ ಪಡೆದಿದ್ದ. ಹೀಗಿರುವಾಗ ಅಧಿಕಾರ ಸ್ವೀಕರಿಸಿದರೆ ಹಗ್ಗಕೊಟ್ಟು ಕೈ ಕಟ್ಟಿಸಿಕೊಂಡಂತೆ ಎಂದು ಕಾಂಗ್ರೆಸ್ ಬಗೆದು, ಮಂತ್ರಿಮಂಡಲಗಳನ್ನು ರಚಿಸಲು ಹಿಂಜರಿಯಿತು. ಈ ಬಿಕ್ಕಟ್ಟು ಬಹಳ ದಿನಗಳ ವರೆಗೆ ಸಾಗಿ ಸರ್ಕಾರರಚನೆ ಹಾಗೆಯೇ ಉಳಿಯಿತು. ಕೊನೆಗೆ ವೈಸ್‌ರಾಯಿಯ ಪ್ರಾರ್ಥನೆಯಂತೆ ಕಾಂಗ್ರೆಸ್ ಇದಕ್ಕೆ ಒಡಂಬಟ್ಟಿತು. ಸುಧಾರಣಾ ಕಾಯಿದೆಗನುಗುಣವಾಗಿ, ಚುನಾವಣೆಗಳು ನಡೆದುವು. ಸಿಂಧ್ ಪ್ರಾಂತ್ಯವೂ ಸೇರಿ ಒಟ್ಟು ಎಂಟು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಪ್ರಚಂಡ ಬಹುಮತ ಗಳಿಸಿ ಆರಿಸಿ ಬಂತು.

ಆದರೆ ಸರ್ಕಾರದ ರಚನೆಗೆ ಅಡ್ಡಿಯಾದ ಇನ್ನೊಂದು ಅಂಶವೆಂದರೆ ಮುಸ್ಲಿಂ ಲೀಗು. ಪ್ರತಿಯೊಂದು ಪ್ರಾಂತ್ಯದಲ್ಲೂ ಸಂಮಿಶ್ರ ಸರ್ಕಾರವಿರಬೇಕೆಂಬ ಬೇಡಿಕೆಯೊಂದನ್ನು ಅದು ಸರ್ಕಾರದ ಮುಂದಿರಿಸಿತು. ಆ ನಿರ್ಣಯಕ್ಕೆ ಕಾಂಗ್ರೆಸ್ ಹಾಗೂ ಸರ್ಕಾರ ಒಪ್ಪಲಿಲ್ಲ.

ಗವರ್ನರರ ಅಧಿಕಾರಗಳ ಬಗ್ಗೆ ಸರ್ಕಾರದಿಂದ ನಿರ್ದಿಷ್ಟ ಭರವಸೆಗಳನ್ನು ಪಡೆದ ಮೇಲೆ ಪ್ರಾಂತ್ಯಗಳಲ್ಲಿ ಮುಂತ್ರಿಮಂಡಲ ರಚಿಸಲು ಕಾಂಗ್ರೆಸ್ ಒಪ್ಪಿಕೊಂಡಿತು. ಸಿಂಧನ್ನೂ ಒಳಗೊಂಡು ಒಟ್ಟು 8 ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಸ್ಥಾಪಿತವಾದುವು (1937).

ಮಂತ್ರಿಮಂಡಲಗಳ ಕಾರ್ಯಕ್ರಮಗಳಿಗೆ ಮೇಲಿಂದ ಮೇಲೆ ಆತಂಕ ಒಡ್ಡಲು ಗವರ್ನರರಿಗೆ ಧೈರ್ಯವಿರದಿದ್ದರೂ ಎಷ್ಟೋ ಮುಖ್ಯ ಸಂದರ್ಭಗಳಲ್ಲಿ ಅವರು ಮಂತ್ರಿಗಳ ಸಲಹೆಗಳನ್ನು ತಳ್ಳಿಹಾಕುತ್ತಿದ್ದರು. ಆದರೂ ಪ್ರಾಂತ್ಯಗಳ ಜನರ ಮೇಲ್ಮೆಗಾಗಿ ಕಾಂಗ್ರೆಸ್ ಸರ್ಕಾರ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಂಡಿತು.

ಕಾಂಗ್ರೆಸಿನ ಚುನಾವಣಾ ಘೋಷಣೆಯಲ್ಲಿ ನೀಡಿದ್ದ ವಾಗ್ದಾನಗಳನ್ನು ಪೂರೈಸಲು ಕಾಂಗ್ರೆಸ್ ಸರ್ಕಾರ ಕೈಲಾದಷ್ಟು ಪ್ರಯತ್ನಿಸಿತು. ವರ್ಧಾ ಶಿಕ್ಷಣ ಯೋಜನೆ, ರಾಷ್ಟ್ರೀಯ ಯೋಜನಾ ಸಮಿತಿ ಇವು ಕಾಂಗ್ರೆಸ್ ಸರ್ಕಾರ ದೇಶಕ್ಕೆ ಸಲ್ಲಿಸಿದ ಕಾಣಿಕೆಗಳು. ಇವಲ್ಲದೆ

ಅನೇಕ ಆಡಳಿತ ಸುಧಾರಣೆಗಳೂ ಜಾರಿಗೆ ಬಂದುವು. ಪಂಚಾಯಿತಿಗಳು ಪುನರುದ್ಧಾರವಾದುವು. ಗ್ರಾಮಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಸಿಕ್ಕಿತು. ರೈತರ ಮತ್ತು ಕೂಲಿಕಾರರ ಹಿತ ಸಾಧಿಸಲು ಅನೇಕ ಶಾಸನಗಳು ಸ್ವೀಕೃತವಾದುವು.

ಕಾಂಗ್ರೆಸ್ ಸರ್ಕಾರಗಳು ಯಶಸ್ವಿಯಾಗಿ ಆಡಳಿತ ನಡೆಸಿದರೂ ಗವರ್ನರುಗಳಿಂದ ಅಡ್ಡಿ ಅತಂಕಗಳು ಬಾರದೆ ಇರಲಿಲ್ಲ. ಆಳರಸರ ಕೈವಾಡವನ್ನು ಪ್ರತಿಭಟಿಸಿ ಎಷ್ಟೋ ವೇಳೆ



ಕರಾಚಿ ಅಧಿವೇಶನ 1931, ಅಧ್ಯಕ್ಷ ವಲ್ಲಭಭಾಯಿ ಪಟೇಲ್, ಗಾಂಧಿಯವರೊಂದಿಗೆ

ಅಧಿಕಾರಕ್ಕೆ ಶರಣುಹೊಡೆದ ಸನ್ನಿವೇಶಗಳೂ ಬಂದಿದ್ದುವು. ಗವರ್ನರುಗಳಿಗೂ ಮಂತ್ರಿಗಳಿಗೂ ಆಗಾಗ ಘರ್ಷಣೆಗಳಾಗುತ್ತಿದ್ದುವು. ಅಂಥ ಪ್ರಸಂಗಗಳಲ್ಲಿ ಕಾಂಗ್ರೆಸ್ ಸಹನೆಯಿಂದ ವರ್ತಿಸಿದ ಉದಾಹರಣೆಗಳು ಅನೇಕ ಇವೆ. ಕಾಂಗ್ರೆಸು ರಾಜನೀತಿ ನೈಪುಣ್ಯದಿಂದ ವರ್ತಿಸಿ ಪ್ರಜಾಸೇವೆ ಮಾಡಿತು; ಚಿಕ್ಕಪುಟ್ಟ ವಿಷಯಗಳಿಗಾಗಿ ಅಧಿಕಾರತ್ಯಾಗ ಮಾಡದೆ ಬಹು ಜಾಣತನದಿಂದ ವರ್ತಿಸಿತು. ಅತ್ತ ರಾಜ್ಯಯಂತ್ರ ನಿಂತೀತೆಂಬ ಭಯದಿಂದ ಗವರ್ನರ್‌ಗಳೂ ಗವರ್ನರ್-ಜನರಲ್‌ನ ಅನುಮತಿಯಿಲ್ಲದೆ ಮೇಲಿಂದ ಮೇಲೆ ಅಡ್ಡಿಗಳನ್ನು ತಂದೊಡ್ಡುತ್ತಿರಲಿಲ್ಲ. ಆದರೆ ಗವರ್ನರ್-ಜನರಲ್ ಇಚ್ಛಿಸಿದರೆ, ಗವರ್ನರುಗಳು 1935ರ ಕಾಯಿದೆಯ 126ನೆಯ ಕಲಮಿನನ್ವಯ ಮಂತ್ರಿಗಳ ಸಲಹೆಗಳನ್ನು ತಳ್ಳಿಹಾಕುತ್ತಿದ್ದರು. ತತ್ಪರಿಣಾಮವಾಗಿ ಮಂತ್ರಿಮಂಡಲ ನಿರಾಯುಧವಾಗಿ ಕುಳಿತುಕೊಳ್ಳಬೇಕಾಗಿತ್ತು, ಇಲ್ಲವೆ ರಾಜೀನಾಮೆ ಕೊಡಬೇಕಾಗುತ್ತಿತ್ತು. ಬಿಹಾರ, ಸಂಯುಕ್ತ ಪ್ರಾಂತ್ಯಗಳಲ್ಲಿ ಸಣ್ಣಪುಟ್ಟ ಕಾರಣಗಳಿಗಾಗಿ ಗರ್ವನರರು ಮಂತ್ರಿ ಮಂಡಲಗಳೊಡನೆ ಸಹಕರಿಸಲಿಲ್ಲವಾದುದರಿಂದ ಅಲ್ಲಿ ಮಂತ್ರಿಗಳು ರಾಜೀನಾಮೆ ಕೊಟ್ಟು ಹೊರಬಂದರು. ಗವರ್ನರುಗಳ ಹಸ್ತಕ್ಷೇಪ ಘಟನಾಸಂಪ್ರದಾಯಕ್ಕೆ ವಿರುದ್ಧವಾಗಿತ್ತು. ಇದೆಲ್ಲವನ್ನೂ ಸಹಿಸಿಕೊಂಡು ಹಲವಾರು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜಕೀಯ ಜಾಣ್ಮೆ ಹಾಗೂ ಮುತ್ಸದ್ದಿತನವನ್ನು ವ್ಯಕ್ತಪಡಿಸಿದುವು.

**ಹೋರಾಟದ ಕೊನೆಯ ಘಟ್ಟ:** 1939ರಲ್ಲಿ ಬ್ರಿಟಿಷರು ಭಾರತೀಯರೊಂದಿಗೆ ಸಮಾಲೋಚಿಸದೆಯೇ ಭಾರತವನ್ನು ಎರಡನೆಯ ಮಹಾಯುದ್ಧದಲ್ಲಿ ನೂಕಿದರು. ಇದು ಕಾಂಗ್ರೆಸ್ ಧೋರಣೆಗೆ ವಿರೋಧವಾಗಿತ್ತು. ಗುಲಾಮದೇಶವಾಗಿ ಭಾರತ ಬ್ರಿಟಿಷರೊಡನೆ ಯುದ್ಧದಲ್ಲಿ ಸಹಕರಿಸುವುದಿಲ್ಲ ಎಂದು ಕಾಂಗ್ರೆಸ್ ಸಂಸ್ಥೆ ತಿಳಿಸಿತು. ಭಾರತವೂ ಯುದ್ಧದಲ್ಲಿ ಭಾಗವಹಿಸಿ ಫ್ಯಾಸಿಸ್ಟ್ ಶಕ್ತಿಯ ವಿರುದ್ಧ ಹೋರಾಡಬೇಕಾದರೆ ಅದು ಮೊದಲು ಸ್ವತಂತ್ರವಾಗಬೇಕು. ಇದಕ್ಕೆ ಬ್ರಿಟಿಷ್ ಸರ್ಕಾರ ಒಪ್ಪದ್ದಕ್ಕಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಆಜ್ಞೆಯಂತೆ ಎಲ್ಲ ಕಾಂಗ್ರೆಸ್ ಮಂತ್ರಿಮಂಡಲಗಳೂ ಅಧಿಕಾರಕ್ಕೆ ರಾಜೀನಾಮೆಯನ್ನಿತ್ತು ತಮ್ಮ ಅಸಹಕಾರ ಪ್ರದರ್ಶಿಸಿದುವು. ಸ್ವಾತಂತ್ರ್ಯವಿಲ್ಲದೆ ಯುದ್ಧದಲ್ಲಿ ಭಾರತದ ಸಹಕಾರವಿಲ್ಲ ಎಂದು ಕಾಂಗ್ರೆಸ್ ಸಾರಿತು.

ಆಗ ಭಾರತೀಯರ ಮನವೊಲಿಸುವುದಕ್ಕಾಗಿ 1940ರ ಆಗಸ್ಟ್ 8ರಂದು ತಮ್ಮ ಹೇಳಿಕೆಯೊಂದರಲ್ಲಿ ಆಗಿನ ವೈಸ್‌ರಾಯಿ ಕೆಲವು ಸುಧಾರಣೆಗಳನ್ನು ಪ್ರಕಟಿಸಿದ. ಆದರೆ ಈ ಸುಧಾರಣೆಗಳು ಕಾಂಗ್ರೆಸ್ ಸಂಸ್ಥೆಯ ಹಾಗೂ ಭಾರತೀಯರ ಬಯಕೆಯನ್ನು ಈಡೇರಿಸಲು ಎಳ್ಳಷ್ಟೂ ಸಹಾಯಕವಾಗಿಲ್ಲ. ಆದ್ದರಿಂದ ಕಾಂಗ್ರೆಸ್ ಹಾಗೂ ಸರ್ಕಾರಗಳ ಮಧ್ಯೆ ತೀವ್ರ ಭಿನ್ನಾಭಿಪ್ರಾಯ ಉಂಟಾಗಿ ಕಾಂಗ್ರೆಸ್ ಪುನಃ ಕಾನೂನುಭಂಗ ಚಳವಳಿ ಪ್ರಾರಂಭಿಸಿತು.

ಬ್ರಿಟಿಷರು ಬಿತ್ತಿದ ಜಾತಿವಿಷಬೀಜದ ಮೇಲೆ 1940ರಲ್ಲಿ ಮುಸ್ಲಿಂ ಲೀಗ್ ದ್ವಿರಾಷ್ಟ್ರ ಸಿದ್ಧಾಂತ ಬೆಳೆಸಿ ಪ್ರತ್ಯೇಕ ಪಾಕಿಸ್ತಾನದ ಬೇಡಿಕೆಯನ್ನು ಮುಂದಿರಿಸಿತು. ಬರ್ಮದಲ್ಲಿ ಜಪಾನೀ ಆಕ್ರಮಣ ಆರಂಭವಾಯಿತು. ಬ್ರಿಟಿಷರು 1942ರಲ್ಲಿ ಸ್ಟಾಫರ್ಡ್ ಕ್ರಿಪ್ಸನ ನಾಯಕತ್ವದಲ್ಲಿ ಆಯೋಗವೊಂದನ್ನು ಸಂಧಾನಕ್ಕಾಗಿ ಭಾರತಕ್ಕೆ ಕಳುಹಿಸಿದರು. ಕ್ರಿಪ್ಸನ ಸಂಧಾನ ಫಲಕಾರಿಯಾಗಲಿಲ್ಲ **(ನೋಡಿ- ಕ್ರಿಪ್ಸ್, ರಿಚರ್ಡ್ ಸ್ಟ್ಯಾಫರ್ಡ್)**.

ಬ್ರಿಟಿಷರು ಭಾರತಕ್ಕೆ ಪೂರ್ಣ ಅಧಿಕಾರ ಕೊಡದಿದ್ದರೆ ಯುದ್ಧದಲ್ಲಿ ಸಹಕಾರವಿಲ್ಲ ಎಂದು ಕಾಂಗ್ರೆಸ್ ಸಾರಿತು. ಇದಾವುದಕ್ಕೂ ಸರ್ಕಾರ ಕಿವಿಗೊಡಲಿಲ್ಲ. ಯುದ್ಧದ ಬಿಸಿ ಭಾರತದ ಬಾಗಿಲಿಗೆ ಬಂತು. ಮುಂದಿನ ಕಾರ್ಯಕ್ರಮ ನಿರ್ಧರಿಸಲು ಆಗಸ್ಟ್ 7 ಮತ್ತು 8 ರಲ್ಲಿ ಬೊಂಬಾಯಿಯಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿತು. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕೆಂಬ ಚರಿತ್ರಾರ್ಹ ಯುದ್ಧ ಘೋಷಣೆಯ ನಿರ್ಣಯ ಸ್ವೀಕರಿಸಿತು. ನಿರ್ಣಯವನ್ನು



ವಿಠಲನಗರ, ಹರಿಪುರ ಅಧಿವೇಶನ, 1938

ಕಾರ್ಯಗತ ಮಾಡುವ ಮುನ್ನ ವೈಸ್‌ರಾಯಿಯನ್ನು ಕಂಡು ಕೊನೆಯ ಸಂಧಾನ ಮಾಡಬೇಕೆಂಬುದು ಗಾಂಧೀಜಿಯ ಇಚ್ಛೆಯಾಗಿತ್ತು. ಆದರೆ ನಿರ್ಣಯದ ಮರುದಿನ

ಗೋಖಲೆ

ಅರುಣೋದಯದೊಡನೆಯೇ ಕಾಂಗ್ರೆಸಿನ ಎಲ್ಲ ಮುಂದಾಳುಗಳನ್ನೂ ಬಂಧಿಸಲಾಯಿತು. ಕಾಂಗ್ರೆಸ್ ನಾಯಕರ ಮಾರ್ಗದರ್ಶನವಿಲ್ಲದೆ ಜನ ಮುಂಗಾಣದಾದರು. ಆದರೂ ಉಕ್ಕುತ್ತಿದ್ದ ಸ್ವಾತಂತ್ರ್ಯದ ಉತ್ಸಾಹ, ನಾಯಕರನ್ನು ಸೆರೆಹಿಡಿದ ರೋಷ, ದುಡಿ ಇಲ್ಲವೇ ಮಡಿ ಎಂಬ ಗಾಂಧೀಜಿಯವರ ಸಂದೇಶ, ಇವೆಲ್ಲವೂ ಜನರನ್ನು ಕಾರ್ಯೋನ್ಮುಖರನ್ನಾಗಿ ಮಾಡಿದುವು. ಸರ್ಕಾರವೇ ದುಡುಕಿ ಮಹಾಕ್ರಾಂತಿಗೆ ಸ್ವಾಗತ ಕೊಟ್ಟಂತಾಯಿತು. ಹೀಗೆ ಸೆಪ್ಟೆಂಬರ್ ಕೊನೆಯ ತನಕ ಕಾಂಗ್ರೆಸ್ ಚಳವಳಿ ಬಹಿರಂಗವಾಗಿ ಪ್ರಚಂಡವಾಗಿ ನಡೆಯಿತು. ಅನೇಕ ಕಡೆ ಸರ್ಕಾರಕ್ಕೂ ಜನತೆಗೂ ಘರ್ಷಣೆ ನಡೆದು ರಕ್ತ ಹರಿಯಿತು.

ಕಾಂಗ್ರೆಸಿನಿಂದ ಹೊರಬಿದ್ದ ಸುಭಾಷ್‌ಚಂದ್ರ ಬೋಸ್ ಜರ್ಮನಿ ಜಪಾನ್‌ಗಳೊಡನೆ ಸಂಬಂಧ ಬೆಳೆಸಿ ಆಜಾದ್ ಹಿಂದ್ ಸೈನ್ಯವನ್ನು ಸಿದ್ಧಪಡಿಸಿ ಬ್ರಿಟಿಷರನ್ನು ಭಾರತದಿಂದ ಹೊರದೂಡಲು ಪ್ರಯತ್ನಿಸಿದರು. ಆದರೆ ಜಪಾನಿನ ಸೋಲಿನೊಂದಿಗೆ ಸುಭಾಷರ ಸೈನ್ಯದ ಶಕ್ತಿಗುಂದಿತು. ಭಾರತೀಯರ ಸ್ವಾತಂತ್ರ್ಯದ ಕೂಗಿನ ಚಳವಳಿಯನ್ನು ಹತ್ತಿಕ್ಕಲು ಸರ್ಕಾರ ಬಹಳ ಪ್ರಯತ್ನಿಸಿತು.

1944ರಲ್ಲಿ ಗಾಂಧೀಜಿಯವರ ಬಿಡುಗಡೆಯಾದಾಗ ಅವರು ಕಾಂಗ್ರೆಸಿನ ಏಕಮೇವ ಪ್ರತಿನಿಧಿಯಾಗಿ ಮುಸ್ಲಿಂ ಲೀಗ್ ಅಧ್ಯಕ್ಷ ಜಿನ್ನಾನೊಡನೆ ಮಾತುಕತೆ ನಡೆಸಿ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಆದರೆ ಅದು ವ್ಯರ್ಥವಾಯಿತು. 1945ರಲ್ಲಿ ಬ್ರಿಟನ್ನಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಲೇಬರ್ ಪಕ್ಷ ಬಹುಮತಗಳಿಸಿ ಸರ್ಕಾರ ರಚಿಸಿತು. ಆ ಸರ್ಕಾರ ಭಾರತದ ಸಮಸ್ಯೆಯನ್ನು ಬಿಡಿಸಲು ಮನಃ ಪೂರ್ವಕವಾಗಿ ಪ್ರಯತ್ನಿಸಿತು.

ತನ್ನ ಧೋರಣೆಗನುಗುಣವಾಗಿ ಆ ಸರ್ಕಾರ ಮೇ 1946ರಲ್ಲಿ ಸಂಪುಟ ಸದಸ್ಯರ ನಿಯೋಗವೊಂದನ್ನು ಭಾರತಕ್ಕೆ ಕಳಿಸಿತು. ಅವರ ಯೋಜನೆಯ ತಾತ್ಕಾಲಿಕ ಸರ್ಕಾರ

ರಚನೆಯ ಸಲಹೆ ಕಾಂಗ್ರೆಸಿಗೆ ಅಸಮ್ಮತವಾಗಿತ್ತು. ಏಕೆಂದರೆ ಹಲವಾರು ಪಕ್ಷಗಳಿಂದ ಕೂಡಿದ ಸಂಮಿಶ್ರ ಸರ್ಕಾರ ಸಾಮೂಹಿಕ ಹೊಣೆಗಾರಿಕೆಯ ಮೇಲೆ ಕೆಲಸ ಮಾಡಲು ಶಕ್ಯವಿರಲಿಲ್ಲ. ಆದ್ದರಿಂದ ಆ ಭಾಗವನ್ನುಳಿದು ಬೇರೆ ಎಲ್ಲ ಶಿಫಾರಸುಗಳನ್ನೂ ಕಾಂಗ್ರೆಸ್ ಒಪ್ಪಿತು. ಆದರೆ ಮುಸ್ಲಿಂ ಲೀಗ್ ಮಾತ್ರ ಮೊದಲು ಒಪ್ಪಿ ಅನಂತರ ಒಪ್ಪಿಗೆಯನ್ನು ಹಿಂತೆಗೆದು ಕೊಂಡಿತಲ್ಲದೆ ನೇರ ಕ್ರಮ ಕೈಗೊಳ್ಳಲು ನಿರ್ಣಯ ಸ್ವೀಕರಿಸಿತು. ದ್ವಿರಾಷ್ಟ್ರ ಸೂತ್ರಸಾಧನೆಗಾಗಿ ಮುಸ್ಲಿಂ ಲೀಗ್ ಪ್ರೇರಿತ ಜನರಿಂದ ಕೊಲೆ, ಸುಲಿಗೆ, ದರೋಡೆ ಮುಂತಾದವು ಸಂಭವಿಸಿದವು. ಸರ್ಕಾರ ಯಾರ ರಕ್ಷಣೆಗೂ ಮುಂದೆ ಬರಲಿಲ್ಲ. ಹಿಂದೂಗಳು ಪ್ರತಿಕಾರ ಕ್ರಮ ಕೈಗೊಂಡರು. ಬಂಗಾಳ ಬಿಹಾರ ಪ್ರಾಂತ್ಯಗಳಲ್ಲಿ ಗಲಭೆ ಅಧಿಕ ಪ್ರಮಾಣದಲ್ಲಿ ಸಾಗಿತ್ತು.

ಪೂರ್ವಯೋಜನೆಯ ಮೇರೆಗೆ ಸಂವಿಧಾನ ಸಭೆಗೆ ಚುನಾವಣೆ ನಡೆದು ಕಾಂಗ್ರೆಸ್ ಸದಸ್ಯರು ಅಧಿಕ ಬಹುಮತದಿಂದ ಆರಿಸಿಬಂದರು. ಆದರೆ ಮುಸ್ಲಿಂ ಲೀಗ್ ಇದನ್ನು ಸೇರಲು ನಿರಾಕರಿಸಿತು. ಆದರೂ ಆಟ್ಲಿ ಸರ್ಕಾರ ಬಹುಮುಖ್ಯವಾದ ಧೋರಣೆಯೊಂದನ್ನು ಘೋಷಿಸಿ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವ ನಿರ್ಧಾರವನ್ನು ಪ್ರಕಟಪಡಿಸಿತು. ಅಲ್ಲದೆ ಲಾರ್ಡ್ ಮೌಂಟ್‌ಬ್ಯಾಟನನನ್ನು ಅಧಿಕಾರ ಸೂತ್ರದ ವರ್ಗಾವಣೆಗೆ ಸೂಕ್ತ ಏರ್ಪಾಟುಮಾಡಲು ನೇಮಿಸಿತು. ಈ ಧೋರಣೆಯನ್ನು ಹೊರಗೆಡಹಿದ ಕೂಡಲೆ ಮುಸ್ಲಿಂ ಲೀಗ್ ದೇಶದ ತುಂಬೆಲ್ಲ ಪ್ರಚಂಡ ಗಲಭೆಯನ್ನೆಬ್ಬಿಸಿತು. ಮುಂದಾಳುಗಳ ಹತೋಟಿಯಿಲ್ಲದೆ ಈ ಗೊಂದಲದಿಂದ ಭಯಂಕರ ಕಹಿ ಫಲಗಳೇ ಉಂಟಾದುವು. ಇದರಿಂದ ಬೇಸತ್ತ ಸರ್ಕಾರ ಹಾಗೂ ಅನೇಕ ಕಾಂಗ್ರೆಸ್ ಮುಂದಾಳುಗಳು ದೇಶದ ವಿಭಜನೆ ಅನಿವಾರ್ಯವೆಂಬುದನ್ನು ಕಂಡುಕೊಂಡರು. ಕೊನೆಗೆ ಕಾಂಗ್ರೆಸ್ ಮೌಂಟ್ ಬ್ಯಾಟನ್ ಯೋಜನೆಯನ್ನು ಒಪ್ಪಿಕೊಂಡಿತು. ಅದರ ಪ್ರಕಾರ ಅಖಂಡ ಭಾರತದ ವಿಭಜನೆಯೂ ಆಯಿತು. ಇದರಿಂದಾಗಿ ಹಲವಾರು ಕಡೆಗಳಲ್ಲಿ ಅರಾಜಕತೆಯ ಗಾಳಿ ಬೀಸಿತು. ಇಷ್ಟೇ ಅಲ್ಲದೆ ಲಕ್ಷಾಂತರ ಜನ ಸ್ಥಾನ ಪಲ್ಲಟಹೊಂದಿ ಅನೇಕ ಕಷ್ಟನಷ್ಟಗಳಿಗೆ ಗುರಿಯಾದರು. ಅಂತೂ 1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾಯಿತು.



**(ಜಿ.ಎಸ್.ಎಚ್.; ಪಿ.ಕೆ.ಎಸ್.ಆರ್.)**



ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ರಾಷ್ಟ್ರೀಯ ಹೋರಾಟದ ವೇದಿಕೆಯೆನಿಸಿದ್ದ ಕಾಂಗ್ರೆಸ್ ಸಂಸ್ಥೆ ಸ್ವಾತಂತ್ರ್ಯ ಲಭಿಸಿದ ಅನಂತರ ಒಂದು ರಾಜಕೀಯ ಪಕ್ಷವಾಗಿ ಪರಿವರ್ತನೆಗೊಂಡಿದೆ.

**ಅಂಗರಚನೆ:** ಭಾರತ ರಾಷ್ಟ್ರೀಯ ಕಾಂಗ್ರೆಸ್ ಒಂದು ಪ್ರಜಾಸತ್ತಾತ್ಮಕ ಸಂಸ್ಥೆ. ಪಿರಮಿಡ್ಡಿನಂತೆ ತಳದಿಂದ ಮೇಲುಮುಖವಾಗಿ ಹಂತಹಂತವಾದ್ದು ಇದರ ಅಂಗರಚನೆ. 18 ವರ್ಷ ವಯಸ್ಸಿಗೆ ಕಡಿಮೆಯಿರದ ಯಾವ ಭಾರತೀಯನಾದರೂ ಇದರ ಸದಸ್ಯನಾಗಬಹುದು. ಆತ ಇದರ ಪ್ರಾಥಮಿಕ ಸದಸ್ಯ. 20ಕ್ಕಿಂತ ಹೆಚ್ಚು ವಯಸ್ಸಿನ ಯಾವ ಸದಸ್ಯನಾದರೂ ಖಾದಿಧಾರಿಯಾಗಿದ್ದು ಇನ್ನು ಕೆಲವು ನಿಬಂಧನೆಗಳನ್ನು ಅನುಸರಿಸುವುದಾದರೆ ಕ್ರಿಯಾತ್ಮಕ ಸದಸ್ಯನಾಗಬಹುದು. ತಳದಲ್ಲಿ ಗ್ರಾಮ ಅಥವಾ ಮೊಹಲ್ಲಾ ಸಮಿತಿಯಿದೆ. ಅದರ ಮೇಲೆ ಜಿಲ್ಲಾ ಕಾಂಗ್ರೆಸ್ ಸಮಿತಿ, ಅನಂತರ ಪ್ರದೇಶ ಸಮಿತಿ. ಪ್ರದೇಶ ಸಮಿತಿಗಳ ಮೇಲಿರುವುದು ಅಖಿಲ ಭಾರತ ಕಾಂಗ್ರೆಸ್ ಸಮಿತಿ. ಅದಕ್ಕೆ ಇಡೀ ದೇಶದ ಪ್ರತಿನಿಧಿಗಳ ಆಯ್ಕೆಯಾಗುತ್ತದೆ. ಕಾಂಗ್ರೆಸ್ ಅಧ್ಯಕ್ಷನ ನೇತೃತ್ವದಲ್ಲಿ ಕಾರ್ಯಪ್ರವೃತ್ತವಾಗುವ ಅತ್ಯುಚ್ಚ ಸಮಿತಿಯೆಂದರೆ ಕಾರ್ಯಕಾರಿ ಸಮಿತಿ. ಮೇಲುನೋಟಕ್ಕೆ ತೀರ ಸಡಿಲವೆನಿಸಿದರೂ ದೇಶಾದ್ಯಂತ ಸುವ್ಯವಸ್ಥೆಗೊಂಡ ಸಂಸ್ಥೆಯಿದು.

ಸಂಸ್ಥೆಯ ನಾಯಕರಲ್ಲಿ ಉದ್ಭವಿಸಿದ ಭಿನ್ನಾಭಿಪ್ರಾಯಗಳಿಂದಾಗಿ 1967ರಲ್ಲಿ ಕಾಂಗ್ರೆಸ್ ಎರಡಾಯಿತು.

ಸ್ವಾತಂತ್ರ್ಯ ಬಂದಂದಿನಿಂದೀಚೆಗೆ ಕೇಂದ್ರ ಮತ್ತು ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ.

1885 ರಿಂದ 1947ರ ವರೆಗೆ ಕಾಂಗ್ರೆಸಿನ ಅಧ್ಯಕ್ಷರ ಪಟ್ಟಿಯನ್ನು ಮುಂದೆ ಕೊಟ್ಟಿದೆ:

| ವರ್ಷ | ಅಧಿವೇಶನದ ಸ್ಥಳ | ಅಧ್ಯಕ್ಷರು |
|---|---|---|
| 1885 | ಬೊಂಬಾಯಿ | ಡಬ್ಲ್ಯು. ಸಿ. ಬ್ಯಾನರ್ಜಿ |
| 1886 | ಕಲ್ಕತ್ತ | ದಾದಾಭಾಯಿ ನವರೋಜಿ |
| 1887 | ಮದರಾಸು | ಸೈಯದ್ ಬದ್ರುದ್ದೀನ್ ತ್ಯೆಯಬ್ಜಿ |
| 1888 | ಅಲಹಾಬಾದ್ | ಜಾರ್ಜ್ ಯೂಲ್ |
| 1889 | ಬೊಂಬಾಯಿ | ಸರ್ ವಿಲಿಯಂ ವೆಡ್ಡರ್‌ಬರ್ನ್ |
| 1890 | ಕಲ್ಕತ್ತ | ಸರ್ ಫಿರೋಜ್‌ಷಾ ಮೆಹ್ತ |
| 1891 | ನಾಗಪುರ | ಆನಂದಾಚಾರ್ಲು |
| 1892 | ಅಲಹಾಬಾದ್ | ಡಬ್ಲ್ಯು. ಸಿ. ಬ್ಯಾನರ್ಜಿ |
| 1893 | ಲಾಹೋರ್ | ದಾದಾಭಾಯಿ ನವರೋಜಿ |
| 1894 | ಮದರಾಸು | ಎ. ವೆಬ್ |
| 1895 | ಪೂನಾ | ಸುರೇಂದ್ರನಾಥ ಬ್ಯಾನರ್ಜಿ |
| 1896 | ಕಲ್ಕತ್ತ | ಎಂ. ರಹೀಮತ್ ಉಲ್ಲಾ ಸಾಯನಿ |
| 1897 | ಅಮ್ರೋಟಿ | ಸಿ. ಶಂಕರನ್ ನಾಯರ್ |
| 1898 | ಮದರಾಸು | ಆನಂದ ಮೋಹನ ಬೋಸ್ |
| 1899 | ಲಕ್ನೋ | ರಮೇಶ್‌ಚಂದ್ರ ದತ್ |
| 1900 | ಲಾಹೋರ್ | ಎನ್. ಜಿ. ಚಂದಾವರ್ಕರ್ |
| 1901 | ಕಲ್ಕತ್ತ | ಇ.ಡಿ. ವಾಚ |
| 1902 | ಅಹಮದಾಬಾದ್ | ಸುರೇಂದ್ರನಾಥ ಬ್ಯಾನರ್ಜಿ |
| 1903 | ಮದರಾಸು | ಲಾಲ್‌ಮೋಹನ್ ಘೋಸ್ |
| 1904 | ಬೊಂಬಾಯಿ | ಸರ್ ಹೆನ್ರಿ ಕಾಟನ್ |
| 1905 | ಬನಾರಸ್ (ವಾರಾಣಸಿ) | ಜಿ. ಕೆ. ಗೋಖಲೆ |
| 1906 | ಕಲ್ಕತ್ತ | ದಾದಾಭಾಯಿ ನವರೋಜಿ |
| 1907 | ಸೂರತ್ | ರಾಷ್‌ಬಿಹಾರಿ ಘೋಷ್ |
| 1908 | ಮದರಾಸು | ರಾಷ್‌ಬಿಹಾರಿ ಘೋಷ್ |
| 1909 | ಲಾಹೋರ್ | ಮದನ ಮೋಹನ ಮಾಳವೀಯ |
| 1910 | ಅಲಹಾಬಾದ್ | ಸರ್ ವಿಲಿಯಂ ವೆಡ್ಡರ್ ಬರ್ನ್ |
| 1911 | ಕಲ್ಕತ್ತ | ಬಿಷನ್ ನಾರಾಯಣ್ ಧಾರ್ |

| ವರ್ಷ | ಅಧಿವೇಶನದ ಸ್ಥಳ | ಅಧ್ಯಕ್ಷರು |
|---|---|---|
| 1912 | ಪಾಟ್ನ | ಆರ್. ಎನ್. ಮುಧೋಳ್ಕರ್ |
| 1913 | ಕರಾಚಿ | ನವಾಬ್ ಸೈಯದ್ ಮಹಮ್ಮದ್ ಬಹಾದುರ್ |
| 1914 | ಮದರಾಸು | ಭೂಪೇಂದ್ರನಾಥ ಬೋಸ್ |
| 1915 | ಬೊಂಬಾಯಿ | ಎಸ್. ಪಿ. ಸಿನ್ಹ |
| 1916 | ಲಕ್ನೋ | ಎ. ಸಿ. ಮಜುಂದಾರ್ |
| 1917 | ಕಲ್ಕತ್ತ | ಆನಿ ಬೆಸಂಟ್ |
| 1918 | ಬೊಂಬಾಯಿ (ವಿಶೇಷಾಧಿವೇಶನ) | ಸೈಯದ್ ಹಸನ್ ಇಮಾಂ |
| 1918 | ದೆಹಲಿ | ಮದನ ಮೋಹನ ಮಾಳವೀಯ |
| 1919 | ಅಮೃತಸರ | ಪಂಡಿತ ಮೋತಿಲಾಲ ನೆಹರು |
| 1920 | ಕಲ್ಕತ್ತ (ವಿಶೇಷಾಧಿವೇಶನ) | ಲಾಲಾ ಲಜಪತರಾಯ್ |
| 1920 | ನಾಗಪುರ | ಸಿ. ವಿಜಯರಾಘವಾಚಾರಿಯರ್ |
| 1921 | ಅಹಮದಾಬಾದ್ | ಹಕೀಂ ಅಜ್ಮಲ್ ಖಾನ್ |
| 1922 | ಗಯಾ | ಸಿ. ಆರ್. ದಾಸ್ |
| 1923 | ಕಾಕಿನಾಡ | ಮೌಲಾನಾ ಮಹಮ್ಮದ್ ಆಲಿ |
| 1923 | ದೆಹಲಿ (ವಿಶೇಷಾಧಿವೇಶನ) | ಅಬುಲ್ ಕಲಂ ಆಜ಼ಾದ್ |
| 1924 | ಬೆಳಗಾಂವಿ | ಮಹಾತ್ಮ ಗಾಂಧಿ |
| 1925 | ಕಾನ್ಪುರ | ಸರೋಜಿನಿ ನಾಯಿಡು |
| 1926 | ಗೌಹಾತಿ | ಶ್ರೀನಿವಾಸ ಅಯ್ಯಂಗಾರ್ |
| 1927 | ಮದರಾಸು | ಎಂ. ಎ. ಅನ್ಸಾರಿ |
| 1928 | ಕಲ್ಕತ್ತ | ಪಂಡಿತ ಮೋತಿಲಾಲ್ ನೆಹರು |
| 1929 | ಲಾಹೋರ್ | ಜವಾಹರಲಾಲ್ ನೆಹರು |
| 1930 | ಅಧಿವೇಶನ ಜರುಗಲಿಲ್ಲ | |
| 1931 | ಕರಾಚಿ | ವಲ್ಲಭಭಾಯಿ ಪಟೇಲ್ |
| 1932 | ದೆಹಲಿ | ಸೇಠ್ ರಣಚೋಢ್ ಲಾಲ್ ದಾಸ್‌ಅಮೃತ್‌ಲಾಲ್ |
| 1933 | ಕಲ್ಕತ್ತ | ನೆಲ್ಲಿ ಸೇನ್‌ಗುಪ್ತ |
| 1934 | ಬೊಂಬಾಯಿ | ರಾಜೇಂದ್ರ ಪ್ರಸಾದ್ |
| 1935 | ಅಧಿವೇಶನ ಜರುಗಲಿಲ್ಲ | |
| 1936 | ಲಕ್ನೋ | ಜವಾಹರಲಾಲ್ ನೆಹರು |
| 1937 | ಫೈಜ್‌ಪುರ | ಜವಾಹರಲಾಲ್ ನೆಹರು |
| 1938 | ಹರಿಪುರ | ಸುಭಾಷ್‌ಚಂದ್ರಬೋಸ್ |
| 1939 | ತ್ರಿಪುರಿ | ಸುಭಾಷ್‌ಚಂದ್ರ ಬೋಸ್ |
| 1940 | ರಾಂಘರ್ | ಮೌಲಾನಾ ಅಬುಲ್ ಕಲಂ ಆಜ಼ಾದ್ |
| 1941–45 | ಅಧಿವೇಶನಗಳು ಜರುಗಲಿಲ್ಲ | |
| 1946 | | ಜವಾಹರಲಾಲ್ ನೆಹರು |
| 1946 | ಮೀರತ್ | ಜೆ. ಬಿ. ಕೃಪಾಲನಿ |
| 1948–49 | ಜೈಪುರ | ಡಾ. ಪಟ್ಟಾಭಿಸೀತಾರಾಮಯ್ಯ |
| 1950 | ನಾಸಿಕ್ | ಪುರುಷೋತ್ತಮದಾಸ್ ಟಂಡನ್ |
| 1951–52 | ದೆಹಲಿ | ಪಂಡಿತ್ ಜವಾಹರ್‌ಲಾಲ್ ನೆಹರು |
| 1953 | ಹೈದರಾಬಾದ್ | ಪಂಡಿತ್ ಜವಾಹರ್‌ಲಾಲ್ ನೆಹರು |
| 1954 | ಕಲ್ಕತ್ತ | ಪಂಡಿತ್ ಜವಾಹರ್‌ಲಾಲ್ ನೆಹರು |
| 1955 | ಆವಡಿ | ಯು.ಎನ್. ದೇಬರ್ |
| 1956 | ಅಮೃತಸರ್ | ಯು.ಎನ್. ದೇಬರ್ |
| 1957 | ಇಂದೋರ್ | ಯು.ಎನ್. ದೇಬರ್ |
| 1958 | ಗೌಹಾತಿ | ಯು.ಎನ್. ದೇಬರ್ |
| 1959 | ನಾಗ್‌ಪುರ್ | ಯು.ಎನ್. ದೇಬರ್ |
| 1959 | ದೆಹಲಿ | ಇಂದಿರಾಗಾಂಧಿ |
| 1959 | ಬೆಂಗಳೂರು | ನೀಲಂ ಸಂಜೀವರೆಡ್ಡಿ |
| 1961 | ಭಾವನಗರ | ನೀಲಂ ಸಂಜೀವರೆಡ್ಡಿ |
| 1962–63 | ಪಾಟ್ನಾ | ನೀಲಂ ಸಂಜೀವರೆಡ್ಡಿ |
| 1964 | ಭುವನೇಶ್ವರ್ | ಕೆ. ಕಾಮರಾಜ್ |
| 1965 | ದುರ್ಗಾಪುರ್ | ಕೆ. ಕಾಮರಾಜ್ |
| 1966–67 | ಜೈಪುರ | ಕೆ. ಕಾಮರಾಜ್ |
| 1968 | ಹೈದರಾಬಾದ್ | ಎಸ್. ನಿಜಲಿಂಗಪ್ಪ |
| 1969 | ಫರೀದಾಬಾದ್ | ಎಸ್. ನಿಜಲಿಂಗಪ್ಪ |
| 1970–71 | ಬೊಂಬಾಯಿ | ಜಗಜೀವನ್‌ರಾಮ್ |
| 1972–74 | ಕಲ್ಕತ್ತ | ಡಾ. ಶಂಕರ್‌ದಯಾಳ್ |
| 1975–77 | ಚಂದಿಸ್‌ಘರ್ | ದೇವ್ ಕಾಂತ್‌ಬರೂವ |
| 1978–83 | ದೆಹಲಿ | ಇಂದಿರಾಗಾಂಧಿ |
| 1983–84 | ಕಲ್ಕತ್ತ | ಇಂದಿರಾಗಾಂಧಿ |
| 1985–91 | ಬೊಂಬಾಯಿ | ರಾಜೀವ್‌ಗಾಂಧಿ |
| 1992–96 | ತಿರುಪತಿ | ಪಿ.ವಿ. ನರಸಿಂಹರಾವ್ |
| 1997–98 | ಕಲ್ಕತ್ತ | ಸೀತಾರಾಮ್ ಕೇಸರಿ |
| 1998 ರಿಂದ ಇಲ್ಲಿಯವರೆಗೆ (2012) | ಕಲ್ಕತ್ತ | ಸೋನಿಯಾಗಾಂಧಿ |

*

**ಕಾಂಗ್ರೆಸ್ ಸಂದೇಶ:** ಭಾರತ ರಾಷ್ಟ್ರೀಯ ಕಾಂಗ್ರೆಸಿನ ಧ್ಯೇಯ ಧೋರಣೆಗಳನ್ನು ಜನತೆಗೂ, ಮುಖ್ಯವಾಗಿ ಕಾಂಗ್ರೆಸ್ ಸದಸ್ಯರಿಗೂ ತಿಳಿಯ ಹೇಳುವ ದೃಷ್ಟಿಯಿಂದ 1960ರಲ್ಲಿ ಮಾಸಿಕವಾಗಿ ಆರಂಭವಾಗಿ ಅನಂತರ ಸಾಪ್ತಾಹಿಕವಾಗಿ ಪರಿವರ್ತನೆಗೊಂಡ ಪತ್ರಿಕೆ. ರಾಜಕೀಯ ಸಂಸ್ಥೆಯ ಪತ್ರಿಕೆಯಾದ್ದರಿಂದ ಆರಂಭದಿಂದಲೂ ಪ್ರದೇಶ ಕಾಂಗ್ರೆಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರು ಅದರ ಸಂಪಾದಕರಾಗಿ ಪ್ರಕಾಶಕರಾಗಿ ನೇಮಕವಾಗುತ್ತಲಿದ್ದಾರೆ. ರಾಮಕೃಷ್ಣ ಹೆಗ್ಗಡೆ, ಕೆ.ವಿ. ಶಂಕರಗೌಡ ಮತ್ತು ವೈ. ರಾಮಚಂದ್ರ ಇವರು ಕ್ರಮವಾಗಿ ಪತ್ರಿಕೆಯ ಸಂಪಾದಕರಾಗಿದ್ದರು. ಮಾಸಪತ್ರಿಕೆಯಾದರೂ ಕುಂಟುತ್ತ ಸಾಗಿದ್ದ ಇದು 1961ರಲ್ಲಿ ಮರುವರ್ಷ ನಡೆಯಲ್ಲಿದ್ದ ಚುನಾವಣೆಗಳ ಪ್ರಚಾರದ ದೃಷ್ಟಿಯಿಂದ ವಾರಪತ್ರಿಕೆಯಾಗಿ ಬದಲಾಯಿತು. ಕುಮಾರ ವೆಂಕಣ್ಣ ಇದರ ಕಾರ್ಯನಿರತ ಸಂಪಾದಕರಾದರು.

1962ರಿಂದ ಪತ್ರಿಕೆ ಅನೇಕ ಬದಲಾವಣೆಗಳನ್ನು ಕಂಡಿದೆ. ಮೊದಲ ಬಾರಿಗೆ ಪಂಚತಂತ್ರದ ಕಥೆಗಳ ಮೂಲಕ ರಾಜಕೀಯ ಸಮಸ್ಯೆ, ಪ್ರಶ್ನೆ, ವಿವಾದಗಳಿಗೆ ಉತ್ತರ ನೀಡುವ ಲೇಖನಮಾಲೆ ಇದರಲ್ಲಿ ಆರಂಭವಾಗಿ, ಅದು ಜನಸಾಮಾನ್ಯರಿಗೆ ರಾಜಕೀಯ ವಿಚಾರ ವಿರಿಸುವಲ್ಲಿ ಮಹತ್ತ್ವದ ಪಾತ್ರ ವಹಿಸಿತು. ಹಾಗೆಯೇ ಭಾರತದ ಸ್ವಾತಂತ್ರ್ಯ ಇತಿಹಾಸದ ಪ್ರಮುಖ ಘಟನೆಗಳು, ಸ್ವಾತಂತ್ರ್ಯ ಯೋಧರ ಕಥೆಗಳು, ಕ್ರಾಂತಿಕಾರರ ಸಾಹಸಗಳು ಮತ್ತು ಸಾಮಾಜಿಕ ಲೇಖನಗಳು ಪ್ರಕಟವಾಗಿ ಇದು ದೇಶದ ಸ್ವಾತಂತ್ರ್ಯ ಹೋರಾಟ, ಸಾಧನೆ ಹಾಗೂ ಸ್ವತಂತ್ರ ಭಾರತದ ಪ್ರಗತಿಯ ಬಗ್ಗೆ ಜನತೆಗೆ ತಿಳಿಯಹೇಳುತ್ತ ಬಂದಿದೆ. ಕನ್ನಡ ನಾಡಿನಲ್ಲಿ ಪ್ರಕಟವಾಗುತ್ತಿರುವ ರಾಜಕೀಯ ವಾರಪತ್ರಿಕೆ (ಪೊಲಿಟಿಕಲ್ ವೀಕ್ಲಿ) ಇದು. (ಕೆ.ಯು.ವಿ.)

**ಕಾಂಚನಗಂಗ :** ಪ್ರಪಂಚದ ಅತ್ಯುನ್ನತ ಪರ್ವತಶೃಂಗಗಳಲ್ಲಿ ಮೂರನೆಯದು. ಹಿಮಾಲಯ ಪರ್ವತಶ್ರೇಣಿಯಲ್ಲಿ, ನೇಪಾಲ ಸಿಕ್ಕಿಂ ಗಡಿಯ ಮೇಲೆ, ಉತ್ತರ ಅಕ್ಷಾಂಶ 27°42' ಮತ್ತು ಪೂರ್ವರೇಖಾಂಶ 88° 11'ನಲ್ಲಿ ಡಾರ್ಜೀಲಿಂಗ್‌ನ ವಾಯವ್ಯಕ್ಕೆ 73 ಕಿಮೀ ದೂರದಲ್ಲಿದೆ. ಇದರ ಎತ್ತರ 8536 ಮೀ.

ಕಾಂಚನಗಂಗವೆಂಬ ಹೆಸರು ಇದಕ್ಕೆ ಪ್ರಾಪ್ತವಾದ್ದು ಟಿಬೆಟನ್ ಮೂಲದ ಕಾಂಗ್–ಚೆನ್–ಡ್ಜೋ–ನ್ಗ ಅಥವಾ ಯಾಂಗ್–ಛೆನ್–ಡ್ಜೋ–ನ್ಗ ಎಂಬ ನಾಲ್ಕು ಶಬ್ದಗಳಿಂದ. ಸಿಕ್ಕಿಂನಲ್ಲಿ ಇದಕ್ಕೆ ಪಂಚ ಮಹಾ ಹಿಮ ಸಂಚಯ ಎಂದು ಅರ್ಥ. ಆ ಸುತ್ತಿನ ಜನರ ಪುರಾಣ ಮತ್ತು ಧಾರ್ಮಿಕ ಆಚಾರಗಳಲ್ಲಿ ಈ ಪರ್ವತಶೃಂಗ ಬಹು ಮುಖ್ಯ ಪಾತ್ರ ವಹಿಸಿದೆ. ಪರಿಶೋಧಕನ ದೃಕ್ಪಥದಲ್ಲಿ ಬೀಳುವುದಕ್ಕೂ ಬಲು ಹಿಂದೆಯೇ ಇದರ ಇಳಿಜಾರುಗಳು ವ್ಯಾಪಾರಿಗಳಿಗೂ ದನಕಾಯುವವರಿಗೂ ಪರಿಚಿತವಾಗಿದ್ದುವು.

ಇದು ಕರ್ಕಾಟಕ ಸಂಕ್ರಾಂತಿ ವೃತ್ತದಿಂದ ಕೇವಲ ಸು. 0.4' ಉತ್ತರದಲ್ಲಿರುವುದರಿಂದ ಉಷ್ಣವಲಯಕ್ಕಿಂತ ಬಲುದೂರ ಇದ್ದಹಾಗೇನಲ್ಲ. ಆದರೆ ಔನ್ನತ್ಯದಿಂದಾಗಿ ಇದರ ತುದಿಭಾಗ ಬಲು ಶೀತ. ಸನಿಯದ ಡಾರ್ಜೀಲಿಂಗ್‌ನಿಂದ ಇದು ಹಿಮ ಹೊದೆದ ಮಹಾ ಗುಡಾರದಂತೆ ಕಾಣುತ್ತದೆ.

ಕಾಂಚನಗಂಗ ಪರ್ವತಪುಂಜದ್ದು ಬೃಹತ್ ಸಿಲುಬೆಯ ಆಕಾರ. ಉತ್ತರ ದಕ್ಷಿಣ ಪೂರ್ವ ಪಶ್ಚಿಮವಾಗಿ ಇದರ ದೈತ್ಯಾಕಾರದ ಚತುರ್ಭುಜಗಳು ಚಾಚಿವೆ. ದಕ್ಷಿಣ ಭುಜದ ಮೇಲಿರುವುದು ಕಾಂಚನಗಂಗದ ಎರಡನೆಯ ಶಿಖರ (8437 ಮೀ.) ಮೊದಲನೆಯ ಶಿಖರಕ್ಕೂ ಎರಡನೆಯದಕ್ಕೂ ನಡುವೆ ಇರುವುದು ಮೂರನೆಯ ಶಿಖರ. ನಾಲ್ಕನೆಯದು

ಪಶ್ಚಿಮ ಬಾಹುವಿನ ಮೇಲಿದೆ. ಕಾಂಚನಗಂಗದ ಚತುರ್ಬಾಹುಗಳೂ ನೆರೆಯ ಶಿಖರಗಳಲ್ಲಿ ಸಮಾವೇಶಗೊಳ್ಳುತ್ತವೆ. ದಕ್ಷಿಣ ಬಾಹುವಿಗೆ ಸೇರಿದ ಶಿಖರಗಳು ಟಾಲುಂಗ್ (6994 ಮೀ.) ಮತ್ತು ಕಬ್ರು (7273 ಮೀ.). ಪೂರ್ವಭುಜಕ್ಕೆ ಸೇರಿದಂತಿರುವುದು ಸಿಕ್ಕಿಮಿನಲ್ಲಿರುವ ಸಿಂವು (6776 ಮೀ.). ಪಶ್ಚಿಮದ ಬಾಹುವಿಗೆ ಕೂಡಿಕೊಂಡಿರತಕ್ಕವು ನೇಪಾಳದ

ಕಂಬಚೆನ್ (7821 ಮೀ.) ಮತ್ತು ಜನ್ನು (7665 ಮೀ.). ಉತ್ತರದ ಭುಜಕ್ಕೆ ಹೊಂದಿಕೊಂಡಂತೆ ಅವಳಿ (7308 ಮೀ.), ನೇಪಾಳಗಿರಿ (7121 ಮೀ.), ಲಾಂಗ್ಪೊ (6909 ಮೀ.) ಮುಂತಾದ ಅನೇಕ ಎತ್ತರ ಶಿಖರಗಳಿವೆ. ಇವು ನೇಪಾಳ ಸಿಕ್ಕಿಂಗಳ ಜಲಮೇಡಿನ ಮೇಲಿವೆ. ಈ ಕಡೆಯ ಬೆನ್ನೇಣು ಟಿಬೆಟಿಗೆ ಸಮೀಪ. ಕಾಂಚನಗಂಗದ ನಾಲ್ಕು ಬಾಹುಗಳ ನಡುವೆ ಈಶಾನ್ಯ ಆಗ್ನೇಯ ನೈಋತ್ಯ ವಾಯವ್ಯಗಳಲ್ಲಿ ಅನುಕ್ರಮವಾಗಿ ಹರಿಯುವವು ಜೆಮು, ಟಾಲುಂಗ್, ಕಾಂಚನಗಂಗ ಮತ್ತು ಯಾಲುಂಗ್ ಎಂಬ ನೀರ್ಗಲ್ಲ ನದಿಗಳು. ಈಗ ತಿಳಿದಿರುವಂತೆ ಕಾಂಚನಗಂಗದ ಪ್ರಥಮ ಭೂಪಟ ತಯಾರಾದದ್ದು 18ನೆಯ ಶತಮಾನದ ನಡುಗಾಲದಲ್ಲಿ–ರಿನ್ ಝಿನ್ ನಂಗ್ಯಾಲ್ ಎಂಬ ಪಂಡಿತ ಪ್ರವಾಸಿಯಿಂದ. ಈ ಪ್ರದೇಶವನ್ನು ಪ್ರಪ್ರಥಮವಾಗಿ ಸಂದರ್ಶಿಸಿದ ಐರೋಪ್ಯ ಜೋಸೆಫ್ ಹೂಕರ್. 1848ರಲ್ಲೂ 1849ರಲ್ಲೂ ಈತ ಅಲ್ಲಿಗೆ ಭೇಟಿ ನೀಡಿ ಅಲ್ಲಿಯ ಪರಿಸರವನ್ನು ಬಣ್ಣಿಸಿದ. ಡೊಗ್ಲಾಸ್ ಫ್ರೆಷ್ ಫೀಲ್ಡ್ 1899ರಲ್ಲಿ ಈ ಶೃಂಗವನ್ನು ಪ್ರದಕ್ಷಿಣೆ ಮಾಡಿ ಪರಿಶೀಲಿಸಿದ. ಯಾಲುಂಗ್ ಕಣಿವೆ ಯತ್ತಣಿಂದ ಶಿಖರಾರೋಹಣ ಸಾಧ್ಯವೆಂದು ಸೂಚಿಸಿದವನಾತ. ಆಂಗ್ಲ–ಸ್ವಿಸ್ ಪರ್ವತಾರೋಹಿ ತಂಡವೊಂದು 1905ರಲ್ಲಿ ಈ ಮಾರ್ಗದಲ್ಲಿ ಮೇಲೇರಲು ಪ್ರಯತ್ನ ನಡೆಸಿತಾದರೂ ಅದು ಸಿದ್ಧಿಸಲಿಲ್ಲ. ಒಬ್ಬ ಸ್ವಿಸ್ಸನೂ ಮೂವರು ಹೊರೆಯಾಳುಗಳೂ ಹಿಮಪ್ರವಾಹವೊಂದಕ್ಕೆ ಸಿಲುಕಿ ಪ್ರಾಣತೆತ್ತ ಫಲವಾಗಿ ಅದೊಂದು ದುರಂತ ಸಾಹಸವಾಯಿತು.

ಮತ್ತೆ ಇತ್ತಲಾಗಿ ಪಾಶ್ಚಾತ್ಯರ ಗಮನ ತೀವ್ರವಾಗಿ ಹರಿದದ್ದು ಕಾಲು ಶತಮಾನ ಕಳೆದ ಮೇಲೆ. ಅವರು ಈ ಪರ್ವತದ ಇತರ ಮುಖಗಳನ್ನು ಪರಿಶೋಧಿಸಿದರು. 1929ರಲ್ಲೂ 1931ರಲ್ಲೂ ಪಾಲ್ ಬೌವರನ ನಾಯಕತ್ವದಲ್ಲಿ ಬವೇರಿಯನ್ ತಂಡವೊಂದು ಝೆಮುವಿನ ಕಡೆಯಿಂದಲೂ 1930ರಲ್ಲಿ ಜಿ.ಓ. ಡಿಹ್ರೆನ್ ಫರ್ತನ ತಂಡ ಕಾಂಚನಗಂಗ ಕಣಿವೆಯ ಕಡೆಯಿಂದಲೂ ಆರೋಹಣ ಪ್ರಯತ್ನ ನಡೆಸಿದುವು. ಈ ಪ್ರಯತ್ನಗಳ ಫಲವಾಗಿ ಸಿದ್ಧಿಸಿದ ಔನ್ನತ್ಯ 7655 ಕಿಮೀ. 1931ರಲ್ಲಿ ಈ ಮಟ್ಟದಿಂದ ಮುಂದಕ್ಕೆ ಬೌವರನ ತಂಡ ಏರಲಾಗಲಿಲ್ಲ. ಅಲ್ಲಿದ್ದ ಹಿಮರಾಶಿ ಅಪಾಯಕಾರಿಯಾಗಿತ್ತು. ಅಪಘಾತಕ್ಕೆ ಕಾರಣವಾಯಿತು. ಕಾಂಚನಗಂಗದ ರುದ್ರಭೀಕರತೆಯಿಂದಾಗಿ 1954ರ ವರೆಗೂ ಯಾರೂ ಅದನ್ನೇರುವ ಪ್ರಯತ್ನ ಕೈಕೊಳ್ಳಲಿಲ್ಲ.

ಮತ್ತೆ ಯಾಲುಂಗ್ ಕಣಿವೆಯ ಕಡೆಯಿಂದ ಪ್ರಯತ್ನ ಮಾಡಿ ನೋಡಬಹುದೆಂಬುದು 1954ರಲ್ಲಿ ಗಿಲ್ಮರ್ ಲೂಯಿಸ್ ಮತ್ತು ಜಾನ್ ಕೆಂಪರ ಪ್ರವಾಸಗಳಿಂದ ದೃಢಪಟ್ಟ ಫಲವಾಗಿ 1955ರಲ್ಲಿ ಚಾರಲ್ಸ್ ಇವಾನ್ಸನ ನಾಯಕತ್ವದಲ್ಲಿ ಆರೋಹಣ ತಂಡವೊಂದು ಈ ಪ್ರಯತ್ನ ಕೈಕೊಂಡಿತು. ಆ ತಂಡ ಬುಡದ ಶಿಬಿರದಿಂದ (5454 ಮೀ.) ಹೊರಟು, ಮೂರು ವಾರಗಳ ಅನಂತರ 7173 ಮೀ. ಎತ್ತರದಲ್ಲಿರುವ ವಿಶಾಲವಾದ ಚಾಚೊಂದನ್ನು ತಲಪಿತು. ಅದರ ಎತ್ತರದ ಕೊನೆಯಲ್ಲಿ 7575 ಮೀ. ಪ್ರದೇಶವೇ ಆರೋಹಣತಂಡದ ಐದನೆಯ ಶಿಬಿರ. ಮುಂದಿನ ಶಿಬಿರದ ಎತ್ತರ 8181 ಮೀ. ಅಲ್ಲಿಂದ ಆರೋಹಣದ ಕೊನೆಯ ಮಜಲು ಆರಂಭವಾಯಿತು. ಆಮ್ಲಜನಕದೊಂದಿಗೆ ಸಜ್ಜಾಗಿದ್ದ ಆರೋಹಿಗಳು ಆತ್ಮವಿಶ್ವಾಸದಿಂದ ಏರಿ ನಡೆದರು. 1955ರ ಮೇ 25 ರಂದು ಜೋ ಬ್ರೌನ್ ಮತ್ತು ಜಾರ್ಜ್ ಬ್ಯಾಂಡರೂ 26 ರಂದು ನಾರ್ಮನ್ ಹಾರ್ಡಿ ಮತ್ತು ಎಚ್. ಆರ್. ಎ. ಸ್ಟ್ರೀತರರೂ ಕಾಂಚನಗಂಗವನ್ನೇರಿದರು. ಆದರೆ ಸಿಕ್ಕಿಮರಿಗೆ ಪವಿತ್ರವೆನಿಸಿರುವ ಶಿಖರದ ತಲೆ ಮೆಟ್ಟಬಾರದೆಂಬ ಅವರ ಪ್ರಾರ್ಥನೆಗೆ ಬೆಲೆ ಕೊಟ್ಟು ಶಿಖರಾರೋಹಿಗಳು ಅದರ ಶಿಖಾಪ್ರದೇಶಕ್ಕಿಂತ ಕೆಲವು ಗಜಗಳ ಆಚೆಗೆ ನಿಂತು ಹಿಂದಿರುಗಿದರು. *

**ಕಾಂಟ್, ಇಮ್ಯಾನ್ಯುಅಲ್ :** 1724–1804. ಜರ್ಮನಿಯ ಪ್ರಸಿದ್ಧ ತಾತ್ತ್ವಿಕ. ಈತ ಪ್ರಸಿದ್ಧಿಗೆ ಬರುವುದಕ್ಕೆ ಮುಂಚೆ ಜರ್ಮನಿ ತತ್ತ್ವಶಾಸ್ತ್ರ ಚರಿತ್ರೆಯಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡುಗಳಷ್ಟು ಪ್ರಗತಿ ಪಡೆದಿರಲಿಲ್ಲ. ಇವನಿಂದ ಪ್ರಾರಂಭವಾಗಿ ಅನಂತರ ಬಂದ



ಜಾರ್ಜ್ ವಿಲ್ಹೆಲ್ಮ್ ಹೆಗೆಲ್ ಮತ್ತು ಆರ್ಥರ್ ಷೋಪೆನ್ ಹೋವರ್ ಅವರ ಮೂಲಕ ಒಂದು ಶತಮಾನ ಕಾಲ ಪಾಶ್ಚಾತ್ಯ ತತ್ತ್ವಶಾಸ್ತ್ರ ಚರಿತ್ರೆಯಲ್ಲಿ ಜರ್ಮನಿ ತುಂಬ ಪರಿಣಾಮಕಾರಿಯಾಯಿತು. ಕಾಂಟ್ ಪೂರ್ವ ಪ್ರಷ್ಯದ ಕೋನಿಗ್ಸ್‌ಬರ್ಗ್ ಎಂಬ ಪಟ್ಟಣದಲ್ಲಿ 1724ರ ಏಪ್ರಿಲ್ 22ರಂದು ಜನಿಸಿದ. ತಂದೆ ಬಡವ; ಕುದುರೆಯ ಜೀನು ಮೊದಲಾದವುಗಳನ್ನು ತಯಾರಿಸಿ ಜೀವನ ನಡೆಸುತ್ತಿದ್ದ. ತಾತ ಸ್ಕಾಟ್ಲೆಂಡಿನಿಂದ ಬಂದವನೆಂದು ಕಾಂಟ್ ಹೇಳಿಕೆಯಿಂದಲೇ ಗೊತ್ತಾಗುತ್ತದೆ ತಾಯಿ ಕ್ರೈಸ್ತರ ಪಯಟಿಸ್ಟ್ ಗುಂಪಿಗೆ ಸೇರಿದವಳಾಗಿದ್ದು ತುಂಬ ಕಟ್ಟುನಿಟ್ಟಿನಿಂದ ಕ್ರೈಸ್ತಧರ್ಮವನ್ನು ಅನುಸರಿಸುತ್ತಿದ್ದಳು. ಕಾಂಟನ ಶೀಲವನ್ನು ಕುದುರಿಸಲು ಈಕೆ ಮುಖ್ಯ ಕಾರಣಳು.

ಕೋನಿಗ್ಸ್‌ಬರ್ಗ್‌ನ ಕೊಲೀಜಿಯಮ್ ಫ್ರೆಡರೀಸಿಯಂ ಎಂಬ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದ ಅನಂತರ ಕಾಂಟ್ ಅಲ್ಲಿನ ವಿಶ್ವವಿದ್ಯಾನಿಲಯದಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿ (1740) ಲ್ಯಾಟಿನ್ ಭಾಷೆಯಲ್ಲೂ ಲೈಬ್ನಿಟ್ಸ್‌ನ ತತ್ತ್ವ ಸಿದ್ಧಾಂತದಲ್ಲೂ ಪ್ರೌಢಿಮೆ ಪಡೆದ; 1746ರಲ್ಲಿ ಲೈಬ್ನಿಟ್ಸ್‌ನ ತತ್ತ್ವದ ಒಂದು ಅಂಶವನ್ನು ಕುರಿತು ಒಂದು ಪ್ರಬಂಧವನ್ನು ಬರೆದ.

ವಿಶ್ವವಿದ್ಯಾನಿಲಯವನ್ನು ಬಿಟ್ಟಮೇಲೆ ಈತ ತನ್ನ ಮನೆಯಲ್ಲೇ ಕೆಲವು ಹುಡುಗರಿಗೆ ಪಾಠ ಹೇಳಿ ಜೀವನ ನಡೆಸುತ್ತಿದ್ದ. ಈ ಕಾಲದಲ್ಲಿ ಕಾಂಟನ ಮನಸ್ಸು ವಿಜ್ಞಾನ ವಿಷಯಗಳಲ್ಲಿ ಆಸಕ್ತವಾಯಿತು. 1743ರಲ್ಲಿ ಜೀವಶಕ್ತಿಗಳನ್ನು ಕುರಿತು ಥಾಟ್ಸ್ ಆನ್ ದಿ ಟ್ರೂ ಎಸ್ಟಿಮೇಷನ್ ಆಫ್ ಲಿವಿಂಗ್ ಫೋರ್ಸಸ್ ಎಂಬ ಪ್ರಬಂಧವನ್ನು ಬರೆದ. 1755ರಲ್ಲಿ ಸಂಬಳವಿಲ್ಲದ ಉಪನ್ಯಾಸಕನಾಗಿ ಕೋನಿಗ್ಸ್‌ಬರ್ಗ್ ವಿಶ್ವವಿದ್ಯಾನಿಲಯವನ್ನು ಸೇರಿ ಹದಿನೈದು ವರ್ಷ ಕಾಲ ಉಪನ್ಯಾಸಗಳನ್ನು ಕೊಟ್ಟ. 1770ರಲ್ಲಿ ತರ್ಕ ಮತ್ತು ತತ್ತ್ವಶಾಸ್ತ್ರದ ಪ್ರಾಧ್ಯಾಪಕನಾಗಿ ಚುನಾಯಿತನಾದನಲ್ಲದೆ ಹೆಚ್ಚು ಕಡಿಮೆ ಜೀವನದ ಕೊನೆಯ ವರ್ಷಗಳವರೆಗೂ ಅದೇ ಕೆಲಸದಲ್ಲಿ ನಿರತನಾಗಿದ್ದ. ಕಾಂಟ್ ಮದುವೆಯಾಗಲಿಲ್ಲ. ಇವನದು ಅತ್ಯಂತ ಕ್ರಮಬದ್ಧವಾದ ಜೀವನ. ನಿತ್ಯವೂ ಸಂಜೆ ಗೊತ್ತಾದ ವೇಳೆಯಲ್ಲಿ ಈತ ಸಂಚಾರಕ್ಕಾಗಿ ಹೊರಟಾಗ ನೆರೆಯವರು ತಮ್ಮ ಗಡಿಯಾರಗಳನ್ನು ಸರಿಪಡಿಸಿಕೊಳ್ಳುತ್ತಿದ್ದರಂತೆ. ಕಾಂಟ್ ದೃಢಕಾಯನಲ್ಲದಿದ್ದರೂ ವೈದ್ಯರ ನೆರವಿಲ್ಲದೆ ಕಟ್ಟುನಿಟ್ಟಾದ ಕ್ರಮಜೀವನದ ಮೂಲಕ ತನ್ನ ಆರೋಗ್ಯವನ್ನು ಕಾಪಾಡಿಕೊಂಡಿದ್ದ. ತನ್ನ ಸ್ನೇಹಿತರೊಡನೆ ಸೇರಿ ಭೋಜನ ಮಾಡುತ್ತ ಸರಸ ಸಂಭಾಷಣೆಗಳಲ್ಲಿ ತೊಡಗುವುದು ಇವನ ದಿನಚರಿಯಾಗಿತ್ತು. ಕಾಂಟನ ಬೌದ್ಧಿಕ ಮತ್ತು ಸಾಂಸ್ಕೃತಿಕ ಆಸಕ್ತಿಗಳು ವಿಶಾಲವಾದುವು. ಇವನಿಗೆ ಇಂಗ್ಲಿಷ್ ಮತ್ತು

ಫ್ರೆಂಚ್ ಸಾಹಿತ್ಯಗಳಲ್ಲಿ ವಿಶೇಷ ಆಸಕ್ತಿ ಇತ್ತು. ರೂಸೋವಿನ 'ಸೋಷಿಯಲ್ ಕಾಂಟ್ರ್ಯಾಕ್ಟ್' ಎಂಬ ಗ್ರಂಥ ಕೈ ಸೇರಿದ ದಿನ ಈತ ತನ್ನ ಕಟ್ಟುನಿಟ್ಟಿನ ದೈನಂದಿನ ಕಾರ್ಯಕ್ರಮವನ್ನೂ ಪಾಲಿಸದೆ ಇಡೀ ದಿನವೆಲ್ಲ ಕುಳಿತು ಅದನ್ನು ಓದಿದನಂತೆ.

ಕೋನಿಗ್ಸ್‌ಬರ್ಗನ್ನು ಬಿಟ್ಟು ಹೊರಗೆ ಹೋಗದಿದ್ದರೂ ಈತನಿಗೆ ದೇಶ ವಿದೇಶಗಳ ಪ್ರವಾಸ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಇತ್ತು. ಭೂಗೋಳದ ವಿಚಾರವಾಗಿ ಈತ ಉಪನ್ಯಾಸ

ಕಾಂಟನ ಪ್ರಸಿದ್ಧ ಗ್ರಂಥ ಕ್ರಿಟೀಕ್ ಆಫ್ ಪ್ಯೂರ್ ರೀಸನ್‌ನ ಮುಖಪುಟ

ಮಾಡಿದ್ದುಂಟು. ಅಂದಿನ ಯುರೋಪಿನ ರಾಜಕೀಯ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಈತ ತುಂಬ ಕುತೂಹಲಿಯಾಗಿದ್ದ. ಫ್ರಾನ್ಸಿನ ಮಹಾಕ್ರಾಂತಿಯ ವಿಷಯದಲ್ಲಿ ಈತನಿಗಿದ್ದ ಉತ್ಸಾಹ ಬಲು ಉತ್ಕಟವಾದುದು.

ಕಾಂಟನ ವಿಚಾರದಲ್ಲಿ ಪ್ರಷ್ಯದ ರಾಜನೂ ವಿದ್ಯಾಮಂತ್ರಿಯೂ ಸ್ನೇಹದಿಂದಿದ್ದರು. ಕಾಂಟ್ ತನ್ನ ಮೊದಲ ಬೃಹದ್ ಗ್ರಂಥವನ್ನು ವಿದ್ಯಾಮಂತ್ರಿ ಜೆಡ್ಲಿಟ್ಸ್‌ಗೆ ನಿವೇದಿಸಿದ. ಅದನ್ನು ಮೆಚ್ಚಿದ ಮಂತ್ರಿ ಹಾಲ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಸ್ಥಾನವನ್ನು ಇವನಿಗೆ ಮೀಸಲಿಟ್ಟಿರುವುದಾಗಿ ತಿಳಿಸಿದ. ಆದರೆ ಕಾಂಟ್ ಕೋನಿಗ್ಸ್‌ಬರ್ಗನ್ನು ಬಿಟ್ಟು ಹೋಗಲು ಒಪ್ಪಲಿಲ್ಲ. ವೃದ್ಧಾಪ್ಯದಲ್ಲಿ ಕಾಂಟ್‌ಗೂ ಸರ್ಕಾರಿ ಆಡಳಿತಗಾರರಿಗೂ ಸ್ವಲ್ಪ ವೈಮನಸ್ಯ ಹುಟ್ಟಿತು. ಅದಕ್ಕೆ ಇವನು ಬರೆದ ವಿಚಾರಾತ್ಮಕ ಮತಗ್ರಂಥವಾದ ರಿಲಿಜನ್ ವಿದಿನ್ ದಿ ಬೌಂಡ್ಸ್ ಆಫ್ ಮಿಯರ್ ರೀಸನ್ (1793) ಎಂಬ ಗ್ರಂಥವೇ ಕಾರಣ. ಮತವಿಚಾರದಲ್ಲಿ ಕಾಂಟನ ಅಭಿಪ್ರಾಯಗಳು ಸಾಂಪ್ರದಾಯಿಕ ಕ್ರೈಸ್ತತತ್ತ್ವಕ್ಕೆ ವಿರುದ್ಧವಾದುವೆಂದೂ ಆದ್ದರಿಂದ ಇವನು ಮತವಿಚಾರವಾಗಿ ಇನ್ನು ಮುಂದೆ ತನ್ನ ಅಭಿಪ್ರಾಯಗಳನ್ನು ಪ್ರಕಟಪಡಿಸಕೂಡದೆಂದೂ ಪ್ರಷ್ಯದ ದೊರೆ ಕಾಂಟ್‌ಗೆ ಒಂದು ನಿರೂಪವನ್ನು ಕಳುಹಿಸಿದ. ಮತವಿಚಾರವಾಗಿ ತನ್ನ ಅಭಿಪ್ರಾಯಗಳನ್ನು ಪ್ರಕಟಿಸುವುದಿಲ್ಲವೆಂದು ದೊರೆಗೆ ಕಾಂಟ್ ವಾಗ್ದಾನ ಮಾಡಿದ. ದೊರೆ ಬದುಕಿರುವಷ್ಟು ಕಾಲ ಮಾತ್ರ ಆ ವಾಗ್ದಾನಕ್ಕೆ ತಾನು ಬದ್ಧನಾಗಿರುವುದಾಗಿಯೂ ದೊರೆಯ ಮರಣಾನಂತರ ತನ್ನ ಅಭಿಪ್ರಾಯಗಳನ್ನು ಪ್ರಕಟಿಸುವ ಸ್ವಾತಂತ್ರ್ಯ ತನಗಿರುವುದೆಂದೂ ಕಾಂಟ್ ಹೇಳುತ್ತಿದ್ದ. ದೊರೆ ಮರಣ ಹೊಂದಿದ (1797) ಮಾರನೆಯ ವರ್ಷ ಅದುವರೆಗೂ ನಿಷೇಧಿಸಿದ್ದ ವಿಷಯವನ್ನು ಕುರಿತು ದಿ ಕಾನ್‌ಫ್ಲಿಕ್ಟ್ ಆಫ್ ಫ್ಯಾಕಲ್ಟೀಸ್ ಎಂಬ ಗ್ರಂಥವನ್ನು ಬರೆದ. ಇದನ್ನು ಬರೆದ ಮೂರು ವರ್ಷಗಳ ಮೇಲೆ ಕಾಂಟನ ಆರೋಗ್ಯ ಕೆಟ್ಟಿತು; 1804ರ ಫೆಬ್ರವರಿ 12ರಂದು ನಿಧನನಾದ.

**ಕಾಂಟನ ಸುಪ್ರಸಿದ್ಧ ತತ್ತ್ವಗ್ರಂಥಗಳಿವು :** ಕ್ರಿಟೀಕ್ ಆಫ್ ಪ್ಯೂರ್ ರೀಸನ್ (1781), ಫೌಂಡೇಷನ್ಸ್ ಆಫ್ ದಿ ಮೆಟಫಿಸಿಕ್ಸ್ ಆಫ್ ಎಥಿಕ್ಸ್ (1785), ಕ್ರಿಟೀಕ್ ಆಫ್ ಪ್ರ್ಯಾಕ್ಟಿಕಲ್ ರೀಸನ್ (1788), ಕ್ರಿಟೀಕ್ ಆಫ್ ಜಜ್‌ಮೆಂಟ್ (1790), ರಿಲಿಜನ್ ವಿದಿನ್ ದಿ ಬೌಂಡರೀಸ್ ಆಫ್ ಪ್ಯೂರ್ ರೀಸನ್ (1793–94).

**ಕಾಂಟನ ತತ್ತ್ವವಿಚಾರಗಳು :** ತತ್ತ್ವದ ಬೆಳೆವಣಿಗೆಯ ದೃಷ್ಟಿಯಿಂದ ಕಾಂಟನ ಬರೆವಣಿಗೆಯ ಕಾಲಾವಧಿಯನ್ನು ಸ್ಥೂಲವಾಗಿ 1747 ರಿಂದ 1770ರ ವರೆಗಿನ ವಿಚಾರ ಪೂರ್ವ (ಪ್ರಿಕ್ರಿಟಿಕಲ್) ಅವಧಿ, 1770 ರಿಂದ 1790ರ ವರೆಗಿನ ವಿಚಾರ ಅವಧಿ (ಕ್ರಿಟಿಕಲ್), 1790 ರಿಂದ ಈಚಿನ ಅವಧಿ ಎಂದು ಮೂರಾಗಿ ವಿಭಾಗಿಸುತ್ತಾರೆ.

**ವಿಚಾರಪೂರ್ವ ಅವಧಿ :** ಈ ಅವಧಿಯ ತತ್ತ್ವ ವಿಶೇಷವಾಗಿ ಲೈಬ್ನಿಟ್ಸನ ತತ್ತ್ವದ ಅವಲಂಬನದಿಂದ ಹುಟ್ಟಿದುದು. ಈ ಕಾಲದಲ್ಲಿ ಜರ್ಮನಿಯ ವಿಶ್ವವಿದ್ಯಾನಿಲಯಗಳಲ್ಲಿ ಲೈಬ್ನಿಟ್ಸನ ತತ್ತ್ವವನ್ನು ಪ್ರಚಾರ ಮಾಡಿದವರು ಕ್ರಿಶ್ಚಿಯನ್ ವುಲ್ಫ್ ಮತ್ತು ಅಲೆಕ್ಸಾಂಡರ್ ಗಾಟಲೀ ಬಾಮ್ ಗಾರ್ಟನ್ ಎಂಬ ತಾತ್ತ್ವಿಕರು. ಲೈಬ್ನಿಟ್ಸನ ತತ್ತ್ವಕ್ಕೆ ಕಾಂಟ್ ಮಾರುಹೋದದ್ದು ಈ ಇಬ್ಬರ ಬೋಧೆಯ ಪರಿಣಾಮವಾಗಿ. ಲೈಬ್ನಿಟ್ಸನ ಮೂಲತತ್ತ್ವಗಳನ್ನು ಅಂಗೀಕರಿಸಿದ್ದರೂ ಅವುಗಳ ವಿಚಾರವಾಗಿ ಕೆಲವು ಸಂದೇಹಗಳು ಕಾಂಟನನ್ನು ಬಾಧಿಸುತ್ತಿದ್ದುವು. ಇವನ ಆ ಸಂದೇಹಗಳಿಗೆ ನ್ಯೂಟನ್ನನ ತತ್ತ್ವಗಳಲ್ಲಿದ್ದ ಶ್ರದ್ಧೆ ಮುಖ್ಯ ಕಾರಣ.

ಈ ಸಂದೇಹಗಳು ಮುಖ್ಯವಾಗಿ ಮೂರು ವಿಷಯಗಳಿಗೆ ಸಂಬಂಧಪಟ್ಟವು. ಲೈಬ್ನಿಟ್ಸ್ ತನ್ನ ತತ್ತ್ವಕ್ಕೆ ಆಧಾರವಾಗಿ ಉಪಯೋಗಿಸಿದ ಗಣಿತ ವಿಧಾನ ಒಂದು, ಕಾರ್ಯಕಾರಣ ಭಾವನೆ ಎರಡನೆಯದು, ಆಕಾಶದ ಭಾವನೆ ಮೂರನೆಯದು. ಈ ಸಂದೇಹಗಳು ಹುಟ್ಟಲು ಮುಖ್ಯವಾಗಿ ಆಂಗ್ಲೇಯ ವಿಜ್ಞಾನಿ ಐಸಾಕ್ ನ್ಯೂಟನ್ ಮತ್ತು ಆಂಗ್ಲೇಯ ತಾತ್ತ್ವಿಕ ಡೇವಿಡ್ ಹ್ಯೂಂ–ಇವರು ಕಾರಣರು. ಗಣಿತ ಮಾರ್ಗವನ್ನು ಅನುಸರಿಸಿ ತತ್ತ್ವಶಾಸ್ತ್ರವನ್ನು ರೂಪಿಸಬೇಕೆಂದು ಲೈಬ್ನಿಟ್ಸನ ಅಭಿಮತ. ಇದಕ್ಕೆ ವಿರುದ್ಧವಾಗಿ ಮತಮೀಮಾಂಸೆ ಮತ್ತು ನೀತಿಮೀಮಾಂಸೆಗಳು ಅನುಸರಿಸಬೇಕಾದ ವಿಧಾನಗಳು ಬೇರೆ ಬೇರೆ ಎಂದು ಕಾಂಟ್ 1764ರಲ್ಲಿ ತಾನು ಬರೆದ ಒಂದು ಪ್ರಬಂಧದಲ್ಲಿ ತೋರಿಸಿದ; ಹಾಗೆಯೇ 1765ರಲ್ಲಿ ಬರೆದ ಇನ್ನೊಂದು ಪ್ರಬಂಧದಲ್ಲಿ ಕಾರ್ಯಕಾರಣ ಸಂಬಂಧವೂ ದೇಶಕಾಲ ಸಂಬಂಧವೂ ಗಣಿತ ಪ್ರತಿಜ್ಞೆಗಳಿಗೆ ಇರುವ ಸಂಬಂಧಕ್ಕಿಂತ ಬೇರೆಯಾದವೆಂದೂ ಕೇವಲ ಬುದ್ಧಿಯ ಆಂತರಿಕ ಭಾವನೆಗಳ ಸಂಬಂಧಗಳನ್ನು ತಾರ್ಕಿಕವಾಗಿ ತಿಳಿದ ಮಾತ್ರಕ್ಕೇ ಅವುಗಳ ಮೂಲಕ ಹೊರಪ್ರಪಂಚದ ಜ್ಞಾನ ಹುಟ್ಟುವುದಿಲ್ಲ ಎಂದೂ ತೋರಿಸಿದ.

ವಿಚಾರಪೂರ್ವ ಅವಧಿಯಲ್ಲಿ ಕಾಂಟ್ ಒಮ್ಮೆ ಲೈಬ್ನಿಟ್ಸನತ್ತ ಇನ್ನೊಮ್ಮೆ ಹ್ಯೂಮನತ್ತ ವಾಲಿದ್ದಾನೆ. ಎರಡರ ವಿಚಾರವಾಗಿಯೂ ಸಂಶಯಪಟ್ಟಿದ್ದಾನೆ. ಈ ಕಾಲದಲ್ಲಿ ತನ್ನ ಸ್ವಂತ ತತ್ತ್ವವೇನೆಂಬುದನ್ನು ಈತ ಇನ್ನೂ ಮನಗಂಡಿರಲಿಲ್ಲ. ಆದರೂ ಆ ಇಬ್ಬರ ತತ್ತ್ವದಲ್ಲೂ ಈತ ಕಂಡ ಲೋಪಗಳು ಹೊಸ ತತ್ತ್ವಕ್ಕೆ ದಾರಿಮಾಡಿಕೊಟ್ಟುವು. ಲೈಬ್ನಿಟ್ಸ್ ತನ್ನ ತತ್ತ್ವಕ್ಕೆ ಮೂಲಾಧಾರವಾಗಿ ಇಟ್ಟುಕೊಂಡಿದ್ದ ಚೇತನದ ಆಂತರಿಕ ಭಾವನೆಗಳನ್ನು ಕಾಂಟ್ ರಕ್ತಮಾಂಸಗಳನ್ನೊಳಗೊಳ್ಳದ ಪ್ರೇತಗಳಂತೆ ಭಾವಿಸಿದ. ಈ ಭಾವನೆಗಳನ್ನು ಕೇವಲ ತಾರ್ಕಿಕ ನಿಯಮಗಳಿಂದ ಹೊಸೆದು ತನ್ನ ತತ್ತ್ವಸೌಧವನ್ನು ಕಟ್ಟಲು ಲೈಬ್ನಿಟ್ಸ್ ಪ್ರಯತ್ನಿಸಿದ್ದರಿಂದ ಅದು ಅನುಭವ ಪ್ರಪಂಚಕ್ಕೆ ಸಂಬಂಧಿಸದೆ ಕೇವಲ ಗಾಳಿಯಲ್ಲಿ ಕಟ್ಟಿದ ಗೋಪುರದಂತಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಹ್ಯೂಂ ಈ ಆಂತರಿಕವಾದ ಮಾನಸಿಕ ಭಾವನೆಗಳು ಅನುಭವವೇದ್ಯವಲ್ಲವೆಂದೂ ಅನುಭವಕ್ಕೆ ವೇದ್ಯವಾದ ಅಂಶಗಳು ಬಿಡಿಬಿಡಿಯಾದ ಇಂದ್ರಿಯಾನುಭವಗಳು ಮಾತ್ರವೇ, ಸಕಲ ಜ್ಞಾನವೂ ಹುಟ್ಟುವುದು ಮೇಣದಂತಿರುವ ಮನಸ್ಸಿನ ಮೇಲೆ ಹೊರವಸ್ತುಗಳು ಒತ್ತಿದ ಮುದ್ರೆಗಳಿಂದ ಮಾತ್ರವೇ–ಎಂದು ವಾದಿಸಿದ್ದ. ಕಾಂಟ್ ಈ ಎರಡು ಪಂಥಗಳನ್ನೂ ವಿಮರ್ಶೆಗೆ ಒಳಪಡಿಸಿ ಅವುಗಳಲ್ಲಿ ಕಂಡುಬಂದ ನ್ಯೂನತೆಗಳನ್ನು ಹೊರಹಾಕಿ, ಅವೆರಡರಲ್ಲೂ ಅಡಗಿದ್ದ ಸಾರಾಂಶವನ್ನು ಸಮನ್ವಯಗೊಳಿಸಿ ತನ್ನ ತತ್ತ್ವವನ್ನು ಏರ್ಪಡಿಸಿದ. ಪ್ರಕೃತಿಯ ವಿಷಯವಾದ ಜ್ಞಾನ ಪ್ರಾರಂಭವಾಗುವುದು ಇಂದ್ರಿಯಾನುಭವಗಳ ಮೂಲಕ ಎಂದು ಹ್ಯೂಂ ಹೇಳಿದ್ದನ್ನು ಕಾಂಟ್ ಒಪ್ಪಿಕೊಂಡು; ಆದರೆ ಜ್ಞಾನಸರ್ವಸ್ವವೂ ಇಂದ್ರಿಯಗಳ ಮೂಲಕ ಮಾತ್ರ ಅವತರಿಸಿದ್ದಲ್ಲ ಎಂದು ಹೇಳಿ ಲೈಬ್ನಿಟ್ಸನ ಅಭಿಪ್ರಾಯವನ್ನು ಸಮರ್ಥಿಸಿದ. ಆದರೆ ಈ ಆಂತರಿಕ ಭಾವನೆಗಳು ಇಂದ್ರಿಯಾನುಭವ ಹುಟ್ಟುವುದಕ್ಕೆ ಮೊದಲೇ ಅಲ್ಲಿ ಇರುವುದಿಲ್ಲ; ಇಂದ್ರಿಯಾನುಭವದ ಜೊತೆಯಲ್ಲೇ ಅದಕ್ಕೆ ಸೇರಿದಂತೆಯೇ ಮಾನಸಿಕ ಚಟುವಟಿಕೆಯ ರೂಪದಲ್ಲಿ ಅವು ಪ್ರಕಟವಾಗುತ್ತವೆ ಎಂದು ತೋರಿಸಿದ. ಆಂತರಿಕ ಭಾವನೆಗಳ ಸಂಪರ್ಕವಿಲ್ಲದ ಇಂದ್ರಿಯಾನುಭವ ಕುರುಡು; ಇಂದ್ರಿಯಾನುಭವದ ಸಂಪರ್ಕವಿಲ್ಲದ ಆಂತರಿಕ ಭಾವನೆಗಳು ಜಳ್ಳು ಎಂಬ ಕಾಂಟನ ಪ್ರಖ್ಯಾತವಾದ ಹೇಳಿಕೆ ಇವನ ವಿಚಾರತತ್ತ್ವದ ಅಡಿಗಲ್ಲು.

**ವಿಚಾರ ಅವಧಿ :** ಕ್ರಿಟೀಕ್ ಆಫ್ ಪ್ಯೂರ್ ರೀಸನ್ ಎಂಬ ಕಾಂಟನ ಮಹಾ ಗ್ರಂಥ ಮೂರು ಭಾಗಗಳನ್ನು ಒಳಗೊಂಡಿದೆ. ಮೊದಲನೆಯದು ಟ್ರಾನ್ಸೆಂಡೆಂಟಲ್ ಈಸ್ತೆಟಿಕ್ಸ್, ಎರಡನೆಯದು ಟ್ರಾನ್ಸೆಂಡೆಂಟಲ್ ಅನಲಿಟಿಕ್, ಮೂರನೆಯದು ಟ್ರಾನ್ಸೆಂಡೆಂಟಲ್ ಡಯಲೆಕ್ಟಿಕ್.

ಹಿಂದಿನ ತಾತ್ತ್ವಿಕರು ಜ್ಞಾನದ ವಿಚಾರವಾಗಿ ಕೇಳಿದ ಪ್ರಶ್ನೆ ಇದು: ನಮ್ಮ ಜ್ಞಾನ ಹೇಗೆ ಹುಟ್ಟುತ್ತದೆ? ಅದಕ್ಕೆ ಕಾರಣ ಯಾವುದು? ಅದು ಯಾವುದರಿಂದ ಹುಟ್ಟುತ್ತದೆ? ಈ ರೀತಿ ಪ್ರಶ್ನೆ ಕೇಳುವುದು ಅಯುಕ್ತವೆಂದು ಕಾಂಟನ ನಿಲವು. ಏಕೆಂದರೆ ಈ ರೀತಿ ಪ್ರಶ್ನೆ ಕೇಳಿದಾಗ ಜ್ಞಾನ ಹುಟ್ಟುವುದಕ್ಕೆ ಮುಂಚೆ ಅದಕ್ಕೆ ಹೊರತಾದ ಯಾವುದೋ ಇದೆ ಎಂದು ಭಾವಿಸುತ್ತೇವೆ. ಅನುಭವಕ್ಕೆ ಹೊರತಾದ ಯಾವುದೋ ಒಂದರಿಂದ ಅನುಭವದ ಹುಟ್ಟನ್ನು ತಿಳಿಯಲು ಪ್ರಯತ್ನಿಸುತ್ತೇವೆ. ಅಂದರೆ ಅನುಭವವಿಲ್ಲದ ಅಥವಾ ತಿಳಿಯದ

ಅಂಶದ ಮೂಲಕ ತಿಳಿದುದರ ಕಾರಣವನ್ನು ವಿವರಿಸಲು ಪ್ರಯತ್ನಿಸುತ್ತೇವೆ. ಮುಖ್ಯವಾಗಿ ಲಕ್ಷಿಸಬೇಕಾದುದು ಇದು: ನಮಗೆ ಅನುಭವವಿದೆ, ಗಣಿತ ಜ್ಞಾನವಿದೆ, ಭೌತಶಾಸ್ತ್ರ ಜ್ಞಾನವಿದೆ. ಗಣಿತಜ್ಞಾನ ಸಾಧ್ಯವಾಗಿರುವುದು ಹೇಗೆ? ಭೌತಶಾಸ್ತ್ರಜ್ಞಾನ ಸಾಧ್ಯವಾಗಿರುವುದು ಹೇಗೆ? ಈ ಪ್ರಶ್ನೆಗಳನ್ನು ಬಗೆಹರಿಸಲು ನಾವು ನಮಗೆ ಸಾಧ್ಯವಾಗಿರುವ ಜ್ಞಾನದಲ್ಲೇ ಹುದುಗಿರುವ ಭಾವನಾರೂಪಗಳನ್ನು (ಫಾರಮ್ಸ್) ವಿಶದಪಡಿಸಬೇಕು. ಆದ್ದರಿಂದ ಯುಕ್ತವಾದ ಮಾರ್ಗ ನಿರ್ವಿಚಾರವಾದವೂ (ಡಾಗ್ಮ್ಯಾಟಿಸಂ) ಅಲ್ಲ, ಕೇವಲ ಅನುಭವಾರೂಢವಾದವೂ (ಎಂಪಿರಿಸಂ) ಅಲ್ಲ. ಅದು ವಿಮರ್ಶಾವಾದ (ಕ್ರಿಟಿಸಿಸಂ)

ಈ ವಿಮರ್ಶಾವಾದವನ್ನು ಅನುಸರಿಸಿ ಕಾಂಟ್ ಕ್ರಿಟೀಕ್ ಆಫ್ ಪೂರ್ ರೀಸನಿನ ಮೊದಲನೆಯ ಭಾಗವಾದ ಈಸ್ಥೆಟಿಕ್‌ನಲ್ಲಿ ಇಂದ್ರಿಯಾನುಭವದ ತಳಹದಿಯ ಭಾವನಾ ರೂಪಗಳನ್ನು ವಿಚಾರ ಮಾಡುತ್ತಾನೆ. ಎರಡನೆಯ ಭಾಗವಾದ ಅನಲೆಟಿಕ್‌ನಲ್ಲಿ ಭೌತಶಾಸ್ತ್ರಜ್ಞಾನದ ತಳಹದಿಯ ಭಾವನಾರೂಪಗಳನ್ನು ವಿಚಾರ ಮಾಡುತ್ತಾನೆ. ಮೂರನೆಯ ಭಾಗವಾದ ಡಯಲೆಕ್ಟಿಕ್‌ನಲ್ಲಿ ಪರತತ್ತ್ವದ ತಳಹದಿಯ ಭಾವನಾ ರೂಪಗಳನ್ನು ವಿಮರ್ಶೆ ಮಾಡುತ್ತಾನೆ. ಇಂದ್ರಿಯಾನುಭವದ ತಳಹದಿಯ ಭಾವನಾ ರೂಪಗಳನ್ನು ಫಾರಮ್ಸ್ ಆಫ್ ಸೆನ್ಸಿಬಿಲಿಟಿ ಎಂದೂ ಭೌತಶಾಸ್ತ್ರಜ್ಞಾನದ ತಳಹದಿಯಾದ ಬುದ್ಧಿಯ ಭಾವನಾರೂಪಗಳನ್ನು ಕ್ಯಾಟಗೊರೀಸ್ ಆಫ್ ಅಂಡರ್‌ಸ್ಟ್ಯಾಂಡಿಂಗ್ ಎಂದೂ ಪರತತ್ತ್ವದ ತಳಹದಿಯ ಭಾವನಾರೂಪಗಳನ್ನು ಐಡಿಯಾಸ್ ಆಫ್ ರೀಸನ್ ಎಂದೂ ಕರೆದಿರುತ್ತಾನೆ.

**1 ಈಸ್ಥೆಟಿಕ್ :** ಈಸ್ಥೆಟಿಕ್ ಎಂಬ ಪದ ಈಗ ಸಾಮಾನ್ಯವಾಗಿ ಕಲೆಯ ತತ್ತ್ವಕ್ಕೆ ಮೀಸಲಾಗಿದೆ. ಆದರೆ ಕಾಂಟ್ ಈ ಪದವನ್ನು ಈಸ್ಥೆಟಿಕ್ (ಇಂದ್ರಿಯಾನುಭವ) ಎಂಬ ಗ್ರೀಕ್ ಪದದ ಮೂಲಾರ್ಥದಲ್ಲಿ ಉಪಯೋಗಿಸಿರುತ್ತಾನೆ. ಈಸ್ಥೆಟಿಕ್ ಎಂಬ ಮೊದಲ ಭಾಗದಲ್ಲಿ ಇಂದ್ರಿಯಾನುಭವದ ತಳಹದಿಯ ಭಾವನಾರೂಪಗಳನ್ನು ವಿವರಿಸಿರುತ್ತಾನೆ. ಇಂದ್ರಿಯಾನುಭವದ ತಳಹದಿಯ ಭಾವನಾರೂಪಗಳು ಎರಡು–ದೇಶ ಅಥವಾ ಆಕಾಶ, ಮತ್ತು ಕಾಲ. ನಮಗೆ ಯಾವ ಬಗೆಯಾದ ಇಂದ್ರಿಯಾನುಭವವಾಗಲಿ ಸಾಧ್ಯವಾಗಬೇಕಾದರೆ ಇಂದ್ರಿಯಗಳು ಒದಗಿಸಿದ ಮುದ್ರೆಗಳನ್ನು ದೇಶ ಕಾಲ ಭಾವನಾರೂಪಗಳು ಒಂದುಗೂಡಿಸಬೇಕು. ಕಣ್ಣಿನಿಂದ ನೋಡಿದ ಎಲ್ಲವೂ ಒಂದು ಆಕಾರ ಪಡೆದು ಒಂದು ಸ್ಥಳದಲ್ಲಿಯೇ ಒಂದು ಕಾಲದಲ್ಲಿ ಇದ್ದಂತೆ ನಮಗೆ ಅನುಭವವಾಗುತ್ತದೆ. ದೇಶಕಾಲಗಳ ಸಂಬಂಧವಿಲ್ಲದೆ ನಮಗೆ ಇಂದ್ರಿಯ ಪ್ರತ್ಯಕ್ಷಜ್ಞಾನ ಅಸಾಧ್ಯ.

ಈ ವಿಚಾರದಲ್ಲಿ ಹಿಂದಿನ ತಾತ್ತ್ವಿಕರು ಎರಡು ಬಗೆಯಾದ ಉತ್ತರಗಳನ್ನೂ ಕೊಟ್ಟಿದ್ದರು. ಅನುಭವಪ್ರಧಾನವಾದಿ ಹ್ಯೂಂ ಪ್ರತ್ಯಕ್ಷಾನುಭವವಾಗಬೇಕಾದರೆ ಮೊದಲು ಬಿಡಿಬಿಡಿಯಾದ ಅನೇಕ ಇಂದ್ರಿಯಗಳ ಮುದ್ರೆಗಳು ಬರಬೇಕು, ಅನಂತರ ಹೀಗೆ ಬಂದ ಬಿಡಿಬಿಡಿ ಮುದ್ರೆಗಳು ಸಾಹಚರ್ಯದ ಮೂಲಕ ಸೇರುತ್ತವೆ–ಎಂದು ಹೇಳಿದ.

ಕಾಂಟನ ಕಾಲದ ಕೋನಿಗ್ಸ್‌ಬರ್ಗಿನ ಒಂದು ದೃಶ್ಯ

ಬುಧ್ಯಾರೂಢವಾದಿಗಳಾದ ವುಲ್ಫ್ ಮತ್ತು ಬಾಮ್ ಗಾರ್ಟನರು ಪ್ರತ್ಯಕ್ಷಜ್ಞಾನ ಅಸ್ಪಷ್ಟವಾದ ಇಂದ್ರಿಯಗಳ ಮುದ್ರೆಗಳಿಂದ ಕುಲಷಿತವಾಗುತ್ತದೆಯಾದ್ದರಿಂದ ಅದನ್ನು ಬುದ್ಧಿಗೆ ಆಂತರಿಕವಾಗಿ ಬುದ್ಧಿಯಲ್ಲಿ ಅಡಗಿರುವ ದೇಶ ಕಾಲ ಭಾವನೆಗಳಿಂದ ಪ್ರತ್ಯೇಕಗೊಳಿಸಿ ಸ್ಪಷ್ಟಗೊಳಿಸಬೇಕು–ಎಂದು ಹೇಳಿದರು. ಮಾನಸಿಕ ಭಾವನೆಗಳನ್ನು ಬಿಟ್ಟು ಮೊದಲೇ ಇಂದ್ರಿಯಗಳ ಬಿಡಿ ಮುದ್ರೆಗಳು ಇರುವುದಿಲ್ಲ. ಬುದ್ಧಿಯ ಭಾವನೆಗಳು ಕೂಡ ಇಂದ್ರಿಯಗಳ ಮುದ್ರೆಗಳ ಸಂಪರ್ಕವಿಲ್ಲದೆ ತಾವೇತಾವಾಗಿ ಬುದ್ಧಿಯಲ್ಲಿ ಹುದುಗಿರುವುದಿಲ್ಲ–ಎಂದು ಕಾಂಟ್ ಎರಡು ಪಕ್ಷಗಳನ್ನೂ ಖಂಡಿಸಿ, ಇಂದ್ರಿಯಗಳ ಮುದ್ರೆಗಳು, ಬುದ್ಧಿಯ ಭಾವನೆಗಳು ಒಂದಕ್ಕೊಂದು ಸೇರಿದಂತೆಯೇ ಪ್ರತ್ಯಕ್ಷ ಜ್ಞಾನದಲ್ಲಿರುತ್ತವೆ; ಬುದ್ಧಿ, ಭಾವನೆಗಳ ಸಂಪರ್ಕವಿಲ್ಲದ ಇಂದ್ರಿಯಗಳ ಮುದ್ರೆಗಳು ಕುರುಡು, ಇಂದ್ರಿಯಗಳ ಮುದ್ರೆಗಳ ಸಂಪರ್ಕವಿಲ್ಲದ ಬುದ್ಧಿಯ ಭಾವನೆಗಳು ಜಳ್ಳು–ಎಂಬ ವಿಚಾರಪಕ್ಷವನ್ನು ಮಂಡಿಸಿದ. ಕ್ರಿಟೀಕ್ ಆಫ್ ಪ್ಯೂರ್ ರೀಸನಿನ ಮೊದಲ ಮುದ್ರಣದಲ್ಲಿ ಕಾಂಟನ ನಿಲವು ಇಷ್ಟು ಸ್ಪಷ್ಟ ಮತ್ತು ನಿರ್ದಿಷ್ಟವಾಗಿರಲಿಲ್ಲ. ಆದರೆ ಅದರ ಎರಡನೆಯ ಮುದ್ರಣದಲ್ಲಿ ಕಾಂಟ್ ಅದನ್ನು ನಿಸ್ಸಂದೇಹಕರವಾಗಿ ಸ್ಪಷ್ಟಪಡಿಸಿದ.

ಕಾಂಟನ ಕಾಲದಲ್ಲಿ ಪ್ರತಿಜ್ಞೆಗಳನ್ನು ಆಂತರಿಕ ಪ್ರತಿಜ್ಞೆಗಳು (ಅಪ್ರಿಯೊರಿ ಜಜ್‌ಮೆಂಟ್ಸ್) ಮತ್ತು ಅನುಭವಜನ್ಯ ಪ್ರತಿಜ್ಞೆಗಳು (ಸಿಂಪೆತೆಟಿಕ್ ಜಜ್‌ಮೆಂಟ್ಸ್) ಎಂದು ವಿಭಾಗ ಮಾಡುತ್ತಿದ್ದರು. ಪ್ರತಿಜ್ಞೆಯ ವಿಶೇಷ್ಯ ಪದದಲ್ಲೇ (ಸಬ್ಜೆಕ್ಟ್ ಟರ್ಮ್) ವಿಶೇಷಣ ಪದ (ಪ್ರೆಡಿಕೇಟ್ ಟರ್ಮ್) ಅಡಗಿರುವುದು ಆಂತರಿಕ ಪ್ರತಿಜ್ಞೆಯ ಲಕ್ಷಣ. ಉದಾಹರಣೆಗೆ, ತ್ರಿಭುಜ ಮೂರು ಭುಜಗಳುಳ್ಳದ್ದು ಎಂಬ ಪ್ರತಿಜ್ಞೆಯಲ್ಲಿ ತ್ರಿಭುಜ ಎಂಬ ವಿಶೇಷ್ಯದಲ್ಲಿ ಮೂರು ಭುಜಗಳು ಎಂಬ ವಿಶೇಷಣ ಅಡಗಿದೆ. ಇಂಥ ಪ್ರತಿಜ್ಞೆಗಳು ಪೂರ್ಣವಾಗಿ ನಿಶ್ಚಿತ ಪ್ರತಿಜ್ಞೆಗಳು. ಏಕೆಂದರೆ ಈ ಪ್ರತಿಜ್ಞೆಗಳಲ್ಲಿ ವಿಶೇಷ್ಯಕ್ಕೂ ವಿಶೇಷಣಕ್ಕೂ ಅಗತ್ಯಸಂಬಂಧವಿದೆ. ಅನುಭವ ಪ್ರತಿಜ್ಞೆಗಳಲ್ಲಾದರೋ ವಿಶೇಷ್ಯಕ್ಕೂ ವಿಶೇಷಣಕ್ಕೂ ಇಂಥ ಅಗತ್ಯ ಸಂಬಂಧವಿಲ್ಲದಿರುವುದಿಲ್ಲ. ಆ ಪ್ರತಿಜ್ಞೆಗಳಲ್ಲಿ ವಿಶೇಷ್ಯ ಪದದಲ್ಲೇ ವಿಶೇಷಣವೂ ಅಗತ್ಯವಾಗಿ ಅಡಗಿರುವುದಿಲ್ಲ. ಉದಾಹರಣೆಗೆ, ಈ ಅದುರಿನಲ್ಲಿ ಕಬ್ಬಿಣವಿದೆ ಎಂಬ ಅನುಭವಪ್ರತಿಜ್ಞೆಯಲ್ಲಿ, ಅದುರು ಎಂಬ ವಿಶೇಷ್ಯಕ್ಕೆ ಕಬ್ಬಿಣ ಎಂಬ ವಿಶೇಷಣ ಆಂತರಿಕವಲ್ಲ. ಅದಿರು ಎಂದ ಮಾತ್ರಕ್ಕೇ ಅದು ಕಬ್ಬಿಣದ್ದು ಎಂದು ಅಗತ್ಯವಾಗಿ ಹೇಳಲಾಗುವುದಿಲ್ಲ. ಅದನ್ನು ಅನುಭವದ ಮೂಲಕವೇ ಹೊಸದಾಗಿ ಕಂಡುಹಿಡಿಯಬೇಕಾಗುತ್ತದೆ. ನಮ್ಮ ಜ್ಞಾನ ಅನುಭವದೊಂದಿಗೆ ಪ್ರಾರಂಭವಾಗುತ್ತದೆ ಎಂಬ ಅನುಭವವಾದಿಗಳ ನಿಲವನ್ನು ಕಾಂಟ್ ಒಪ್ಪಿಕೊಂಡ. ಆದರೆ ನಮ್ಮ ಜ್ಞಾನ ಕೇವಲ ಅನುಭವದಿಂದಲೇ ಅವತರಿಸಿದ್ದಲ್ಲ. ನಮ್ಮ ಮನಸ್ಸಿನ ಚಟುವಟಿಕೆ ಮತ್ತು ರೂಪಗಳಿಗೆ ಒಳಪಟ್ಟ ವಿನಾ ಅನುಭವ ಅರ್ಥರಹಿತವಾದ ರೂಪುರಹಿತವಾದ ಗೊಂದಲವಾಗುತ್ತದೆ. ಅನುಭವದಲ್ಲಿ ಕ್ರಮ ಕಾಣುವುದು ಬುದ್ಧಿಯ ಭಾವನೆಗಳ ಪ್ರಭಾವದಿಂದ. ಆದ್ದರಿಂದ ನಮ್ಮ ಜ್ಞಾನ ಕೇವಲ ಆಂತರಿಕ ಪ್ರತಿಜ್ಞಾರೂಪವೂ ಅಲ್ಲ ಅಥವಾ ಕೇವಲ ಅನುಭವಜನ್ಯ ಅನುಭವ ಪ್ರತಿಜ್ಞಾರೂಪವೂ ಅಲ್ಲ. ಅದು ಆಂತರಿಕ ಭಾವನೆಗಳ ಮತ್ತು ಅನುಭವಗಳ ಸಮನ್ವಯ ಪ್ರತಿಜ್ಞೆ (ಅಪ್ರಿಯೊರಿ ಸಿಂಥತೆಟಿಕ್ ಜಜ್‌ಮೆಂಟ್). ಏಳು ಮತ್ತು ಐದು ಸೇರಿದರೆ ಹನ್ನೆರಡಾಗುತ್ತದೆ ಎಂಬ ಅಂಕಗಣಿತ ಪ್ರತಿಜ್ಞೆ ಆಂತರಿಕ ಮತ್ತು ಅನುಭವಗಳ ಸಮನ್ವಯ ಪ್ರತಿಜ್ಞೆ. ಏಳು ಮತ್ತು ಐದು ಎಂಬ ಅಂಶಗಳನ್ನು ಎಷ್ಟು ವಿಧದಲ್ಲಿ ವಿಭಜಿಸಿದರೂ ನಮಗೆ ಹನ್ನೆರಡು ಎಂಬ ಸಂಖ್ಯೆಯ ಅರಿವಾಗುವುದಿಲ್ಲ. ಆ ಅರಿವು ಉಂಟಾಗಲು ಮಾನಸಿಕ ಸಮನ್ವಯ ಕ್ರಿಯೆ ಅಗತ್ಯ. ಈ ಅಂಕಗಣಿತ ಪ್ರತಿಜ್ಞೆಯಂತೆ 'ನೇರವಾದ ಗೆರೆ ಎರಡು ಬಿಂದುಗಳ ಮಧ್ಯೆ ಇರುವ ಅತ್ಯಂತ ಕನಿಷ್ಠ ದೂರ ಎಂಬ ರೇಖಾಗಣಿತ ಪ್ರತಿಜ್ಞೆಯೂ ಎಷ್ಟೇ ಬದಲಾವಣೆ ಹೊಂದಿದರೂ ಭೌತದ್ರವ್ಯದ ಮೊತ್ತ ಒಂದೇ ಆಗಿರುತ್ತದೆ ಎಂಬ ಭೌತಶಾಸ್ತ್ರದ ಪ್ರತಿಜ್ಞೆಯೂ ಅನುಭವ ಮತ್ತು ಆಂತರಿಕ ಭಾವನೆಗಳ ಸಮನ್ವಯ ಪ್ರತಿಜ್ಞೆಗಳು. ಗಣಿತಶಾಸ್ತ್ರದ ಪ್ರತಿಜ್ಞೆಗಳು ದೇಶ ಕಾಲವೆಂಬ ಆಂತರಿಕ ಭಾವನೆಗಳ ಮೂಲಕ ಸಾಧ್ಯವಾದುದು ಹೇಗೆ' ಎಂಬುದನ್ನು ಈಸ್ಥೆಟಿಕ್ ನಲ್ಲಿ ಕಾಂಟ್ ವಿವರಿಸಿದ್ದಾನೆ.

ಕಾಂಟ್ ಮನಸ್ಸಿನ ಶಕ್ತಿಗಳನ್ನು ಇಂಟ್ಯೂಷನ್, ಅಂಡರ್‌ಸ್ಟ್ಯಾಂಡಿಂಗ್, ರೀಸನ್–ಎಂದು ಮೂರಾಗಿ ವಿಭಾಗ ಮಾಡಿರುತ್ತಾನೆ. ವಿಷಯಗಳನ್ನು ತರ್ಕಿಸದೆ ನೇರವಾಗಿ ಸಾಕ್ಷಾತ್ತಾಗಿ ತಿಳಿಯುವ ಶಕ್ತಿ ಮೊದಲನೆಯದು. ಅದನ್ನು ಇಂಟ್ಯೂಷನ್ ಎಂದು ಕರೆದಿರುತ್ತಾನೆ. ಇಂಟ್ಯೂಷನಿನಲ್ಲಿ ಎರಡು ಬಗೆ. ಮಾನವನ ಮನಸ್ಸು ನೇರವಾಗಿ ವಿಷಯವನ್ನು ಅಂಗೀಕರಿಸುವಂತೆ ಮಾಡುವ ಶಕ್ತಿ ಒಂದು. ಇದರ ಮೂಲಕ ಗ್ರಹಿಸಿದ ವಿಷಯ ಮಾನವನ ಮನಸ್ಸಿಗೆ ಹೊರತಾದದ್ದು. ಇನ್ನೊಂದು ಬಗೆಯ ಇಂಟ್ಯೂಷನ್‌ಗೆ ವಿಷಯ ಹೊರತಾದುದಲ್ಲ. ಅದನ್ನು ಕಾಂಟ್ ಇಂಟಲೆಕ್ಚುಅಲ್ ಇಂಟ್ಯೂಷನ್ ಎಂದು ಕರೆದಿದ್ದಾನೆ. ಇದು ಮಾನವಾತೀತ ಶಕ್ತಿ. ವಿಷಯವನ್ನು ನೇರವಾಗಿ ಅರಿತಕಾಲದಲ್ಲೇ ವಿಷಯ ಸೃಷ್ಟಿಯಾಗಿ ಅಸ್ತಿತ್ವಕ್ಕೆ ಬರುತ್ತದೆ. ಈ ಶಕ್ತಿ ಸೃಷ್ಟಿಕರ್ತನಾದ ಈಶ್ವರನಿಗೆ ಮಾತ್ರ ಸಾಧ್ಯ. ಇದು ಸೃಷ್ಟ್ಯಾತ್ಮಕ ದರ್ಶನಶಕ್ತಿ. ಮಾನವನ ದರ್ಶನ ಶಕ್ತಿ ಹೀಗೆ ಸೃಷ್ಟ್ಯಾತ್ಮಕವಲ್ಲ. ಅರಿತ ವಿಷಯ ಅದರಿಂದ ಸೃಷ್ಟಿಯಾದದ್ದಲ್ಲ. ಅದನ್ನು ಅದು ಅಂಗೀಕರಿಸುತ್ತದೆಯಾದುದರಿಂದ ಅದಕ್ಕೆ ಅದು ಅಧೀನ. ಹೀಗೆ ಅಧೀನವಾದ ಮಾನಸಿಕ ಶಕ್ತಿ ವಿಷಯವನ್ನು ಇದ್ದದ್ದನ್ನು ಇದ್ದಹಾಗೆಯೇ ತಿಳಿಯುವಂತಿಲ್ಲ. ಈಶ್ವರನಂತೆ. ಅದು ಮಾನವನ ಮನಸ್ಸಿಗೆ ಆಂತರಿಕವಾದ ದೇಶ ಕಾಲ ರೂಪಗಳ ಮೂಲಕ ಇಂದ್ರಿಯ ಗೋಚರವಾಗಬೇಕು. ದೇಶ ಬಾಹ್ಯೇಂದ್ರಿಯ ರೂಪ, ಕಾಲ ಅಂತಃಕರಣ ರೂಪ. ಮೊದಲನೆಯದರ ಮೂಲಕ ಹೊರವಸ್ತುಗಳ ತಿಳಿವು ಉಂಟಾಗುತ್ತದೆ; ಎರಡನೆಯದರ ಮೂಲಕ ಆತ್ಮದ ಅರಿವು ಉಂಟಾಗುತ್ತದೆ. ವಿಷಯಗಳು ತಾವಿದ್ದಂತೆಯೇ ಮಾನವನ ತಿಳಿವಿಗೆ ಬರಬೇಕು. ಆದ್ದರಿಂದ ನಮ್ಮ ಅರಿವಿನ ವಿಷಯಗಳು ತೋರಿಕೆಗಳು ಮಾತ್ರವೇ ಹೊರತು ಪಾರಮಾರ್ಥಿಕ ವಿಷಯಗಳಲ್ಲ. ಪಾರಮಾರ್ಥಿಕ

ವಿಷಯಗಳು ನಮಗೆ ಅತೀತವಾದುವು. ನಮ್ಮ ಅರಿವಿಗೆ ಬರುವ ವಿಷಯಗಳು ಕೋರಿಕೆಗಳಾದರೂ ಭ್ರಮೆಗಳಲ್ಲ. ಅವು ನಮ್ಮ ಅನುಭವ ಪ್ರಪಂಚಕ್ಕೆ ಅಂಗಭೂತವಾದವು. ನಿಯಮಿತವಾದವು. ನಮ್ಮ ಮನಸ್ಸಿಗೆ ಅಂತರಿಕವಾದ ಈ ದೇಶ ಕಾಲ ರೂಪಗಳು ಅನಿರ್ದಿಷ್ಟವಾದ ಇಂದ್ರಿಯಗಳ ಮುದ್ರೆಗಳನ್ನು ನಿರ್ದಿಷ್ಟರೂಪಗಳಾಗಿ ವಿನ್ಯಾಸಗೊಳಿಸುತ್ತವೆ.

2 ಟ್ರಾನ್ಸೆಂಡೆಂಟಲ್ ಅನಲಿಟಿಕ್ ಎಂಬೆರಡನೆಯ ಭಾಗದಲ್ಲಿ ಕಾಂಟ್ ಮನಸ್ಸಿನ ಎರಡನೆಯ ಶಕ್ತಿಯಾದ ಬುದ್ಧಿಶಕ್ತಿಯ ಮೂಲಕ ನಮಗೆ ಭೌತವಸ್ತುಗಳ ಅರಿವುಂಟಾಗುತ್ತದೆ ಎಂಬುದನ್ನು ವಿವರಿಸಿದ್ದಾನೆ. ಬುದ್ಧಿಶಕ್ತಿಯ ರೂಪಗಳನ್ನು ಇಂದ್ರಿಯಶಕ್ತಿರೂಪಗಳಿಂದ ಪ್ರತ್ಯೇಕಿಸಲು ಅವುಗಳನ್ನು ವಿಕಲ್ಪಗಳೆಂದು (ಕ್ಯಾಟಗೊರೀಸ್) ಕರೆದಿರುತ್ತಾನೆ. ವಿಕಲ್ಪಗಳು ಭೌತವಸ್ತುಗಳ ತಿಳಿವಿಗೆ ಅಗತ್ಯ ಎಂಬುದನ್ನು ಮೊದಲು ವಿವರಿಸಿ ಅನಂತರ ಅವುಗಳ ಸಂಖ್ಯೆ ಎಷ್ಟು, ವೈಶಿಷ್ಟ್ಯವೇನು ಎಂಬುದನ್ನು ವಿಚಾರಮಾಡಿರುತ್ತಾನೆ. ಮೊದಲ ವಿವರಣೆಯನ್ನು ಟ್ರಾನ್ಸೆಂಡೆಂಟಲ್ ಡಿಡಕ್ಷನ್ ಎಂದೂ ಎರಡನೆಯ ವಿವರಣೆಯನ್ನು ಮೆಟಫಿಸಿಕಲ್ ಡಿಡಕ್ಷನ್ ಎಂದೂ ಕರೆದಿದ್ದಾನೆ.

ಟ್ರಾನ್ಸೆಂಡೆಂಟಲ್ ಡಿಡಕ್ಷನ್ ಇಂದ್ರಿಯಾನುಭವದ ವಿಷಯದಿಂದ ಅಲಭ್ಯವಾದ ದೇಶ ಕಾಲಗಳಿಗೆ ಒಳಪಟ್ಟ ರೂಪ ಸಮುದಾಯದಿಂದ ಪ್ರಾರಂಭಿಸಿ ಅವುಗಳಲ್ಲಿ ಬುದ್ಧಿಯ ಮೂಲಕ ಬಿಕ್ಕಟ್ಟು ಹೇಗೆ ಏರ್ಪಡುತ್ತದೆ ಎಂಬುದನ್ನು ವಿಶದಪಡಿಸುತ್ತದೆ. ಬುದ್ಧಿಯ ವಿಕಲ್ಪಗಳಿಂದ ಒಂದುಗೂಡಿಸಲ್ಪಟ್ಟದ್ದನ್ನು ಕಾಂಟ್ ಜ್ಞಾನದ ವಿಷಯವೆಂದು ಕರೆದಿರುತ್ತಾನೆ. ದೇಶಕಾಲಗಳಿಗೆ ಒಳಪಟ್ಟ ರೂಪಗಳು ಇಂದ್ರಿಯಾನುಭವಕ್ಕೆ ಆಂತರಿಕವಾಗಿರುವಂತೆ ವಿಕಲ್ಪಗಳು ಬೌದ್ಧಿಕಜ್ಞಾನಕ್ಕೆ ಆಂತರಿಕವಾದುವು. ಇಂದ್ರಿಯದ ರೂಪ ಸಮುದಾಯ ವೈಜ್ಞಾನಿಕ ವಿಷಯವಾಗಿ ಪರಿವರ್ತನೆಯಾಗುವುದಕ್ಕೆ ನಾನು ಆಲೋಚಿಸುತ್ತೇನೆ ಎಂಬ ಆತ್ಮ ಚೇತನ ಅತ್ಯಗತ್ಯವಾದ ತಳಹದಿ.

ಇಂದ್ರಿಯ ರೂಪಗಳು ಬಿಡಿ ಬಿಡಿಯಾದುವು (ಪರ್ಟಿಕುಲರ್) ಮತ್ತು ಆಗಂತುಕವಾದುವು (ಕಂಟಿಂಜೆಂಟ್). ಬುದ್ಧಿಯ ವಿಕಲ್ಪಗಳಾದರೋ ಸಾಮಾನ್ಯಗಳು (ಯೂನಿವರ್ಸಲ್) ಮತ್ತು ಅಗತ್ಯ (ನೆಸೆಸರಿ) ಸ್ವಭಾವವುಳ್ಳವು. ಹೀಗೆ ಪರಸ್ಪರ ವಿಷಮವಾದಂಥವು ಸೇರುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇವೆರಡರ ಮಧ್ಯೆ ಇರುವ ಕಂದರವನ್ನು ಹೋಗಲಾಡಿಸಿ, ಒಂದರಿಂದ ಇನ್ನೊಂದಕ್ಕೆ ಹಾಯಲು ಕಾಂಟ್ ಪ್ರತಿಭೆಯ ನೆರವನ್ನು ಕೋರಿದ್ದಾನೆ. ಇಂದ್ರಿಯ ರೂಪಗಳನ್ನು ಪ್ರತಿಭೆ ಒಂದುಗೂಡಿಸಿದಾಗ ಪ್ರತಿಭೆಯಿಂದ ಸಂಘಟಿತವಾದ ಆ ರೂಪ ಇಂದ್ರಿಯ ರೂಪಗಳಂತೆ ಮೂರ್ತ ಸ್ವರೂಪವನ್ನೂ ವಿಕಲ್ಪಗಳಂತೆ ಸಾಮಾನ್ಯಗಳ ಸ್ವರೂಪವನ್ನೂ ಪಡೆದಿರುತಾದಾದ್ದರಿಂದ ಒಂದರಿಂದ ಒಂದಕ್ಕೆ ಸರಾಗವಾಗಿ ಹಾಯಲೂ ಅವೆರಡಕ್ಕೂ ಸಮೀಪ ಸಂಬಂಧವನ್ನು ಏರ್ಪಡಿಸಲೂ ಯೋಗ್ಯವಾದ ಮಧ್ಯವರ್ತಿಯಾಗುತ್ತದೆ.

ಕಾಂಟ್ ಇಲ್ಲಿ ಒಡ್ಡಿರುವ ಸಮಸ್ಯೆ ತುಂಬ ಕೃತಕವಾಗಿ ಕಾಣುತ್ತದೆ. ಅದನ್ನು ಬಗೆಹರಿಸಲು ಈತ ಕೊಟ್ಟಿರುವ ಸಲಹೆಯೂ ಅಷ್ಟೇ ಕೃತಕ. ಕಾಂಟನ ಈ ಗೊಂದಲಕ್ಕೆ ಮುಖ್ಯವಾಗಿ ಕಾರಣಗಳು ಎರಡು: 1 ಜ್ಞಾನವಿಷಯಕ್ಕೆ ಸಂಬಂಧಪಟ್ಟ ಇವನ ಮೂಲಭೂತ ಭಾವನೆಗಳು, 2 ಜ್ಞಾತೃವಿನ ಮನಸ್ಸಿಗೆ ಸಂಬಂಧಪಟ್ಟ ಭಾವನೆಗಳು. ಜ್ಞಾನದ ವಿಷಯಗಳು ತೋರಿಕೆಗಳು. ವಾಸ್ತವ ವಸ್ತುಗಳು ಇವುಗಳಿಗೆ ಹೊರತಾದುವು. ಅವುಗಳ ಮುದ್ರೆಗಳು ಬಿಡಿಬಿಡಿಯಾಗಿ ಕಾಣಿಸಿಕೊಳ್ಳುತ್ತವೆ–ಎಂಬ ಭಾವನೆ ನಮ್ಮ ಅನುಭವಕ್ಕೆ ವ್ಯತಿರಿಕ್ತವಾದದ್ದು. ವಾಸ್ತವ ವಿಷಯಗಳು ಬಿಡಿಬಿಡಿಯಾಗಿ ಕಾಣಿಸಿಕೊಂಡು ಅವು ಬರಿಯ ತೋರಿಕೆಗಳಾದರೆ ಅವುಗಳ ವಿಷಯವಾಗಿ ನಾವು ನಿಜವಾದ ಜ್ಞಾನವನ್ನು ಪಡೆಯಲಾಗುವುದಿಲ್ಲ. ಸಾಮಾನ್ಯ ಅನುಭವದಲ್ಲಿ ಸಾಮಾನ್ಯಗಳನ್ನು ಬಿಟ್ಟು ವಿಶೇಷಗಳಾಗಲೀ ವಿಶೇಷಗಳನ್ನು ಬಿಟ್ಟು ಸಾಮಾನ್ಯಗಳಾಗಲೀ ಇರುವುದಿಲ್ಲ. ವಿಕಲ್ಪಗಳ ನೆರವಿಲ್ಲದ ಪ್ರತ್ಯಕ್ಷ ಕುರುಡು, ಪ್ರತ್ಯಕ್ಷದ ನೆರವಿಲ್ಲದ ವಿಕಲ್ಪ ಜೊಳ್ಳು–ಎಂಬುದನ್ನು ಕಾಂಟ್ ಹೇಳಿರುತ್ತಾನಾದರೂ ಆ ಭಾವನೆಯನ್ನು ಕೆಲವು ವೇಳೆ ಮರೆತುಬಿಡುತ್ತಾನೆ. ನಮ್ಮ ಮನಸ್ಸು ಇಂದ್ರಿಯಗಳ ಮುದ್ರೆಗಳನ್ನು ಪಡೆಯುವಾಗ ಜಡವಾಗಿರುತ್ತದೆ; ಅವನ್ನು ವಿಕಲ್ಪಗಳಿಂದ ಒಂದುಗೂಡಿಸುವಾಗ ಚುರುಕಾಗಿರುತ್ತದೆ–ಎಂಬ ಭಾವನೆಯೂ ಮನಶ್ಶಾಸ್ತ್ರಕ್ಕೆ ವ್ಯತಿರಿಕ್ತವಾದದ್ದು. ಒಂದುಗೂಡಿಸುವ ಚೇತನ ನಮ್ಮ ಅನುಭವದಲ್ಲಿ ಮೊದಲಿನಿಂದ ಕಾರ್ಯಕಾರಿಯಾಗಿರುತ್ತದೆ. ಒಂದುಗೂಡಿಸುವ ಶಕ್ತಿ ಮನಸ್ಸಿಗೆ ಮೂಲಭೂತವಾಗಿರದಿದ್ದರೆ ಯಾವ ಉಪಾಯದಿಂದಲೂ ವಸ್ತುಜ್ಞಾನಕ್ಕೆ ಅಗತ್ಯವಾದ ಒಕ್ಕಟ್ಟನ್ನು ಹುಟ್ಟಿಹಾಕುವುದಕ್ಕಾಗುವುದಿಲ್ಲ. ಅಲ್ಲದೆ ಕಾಂಟನ ವಿವರಣೆಯಲ್ಲಿ ಇಂಟ್ಯೂಷನ್ ಮತ್ತು ಇಮ್ಯಾಜಿನೇಷನ್‌ಗಳ ಪಾತ್ರ ಸಂದಿಗ್ಧವಾಗಿದೆ. ಅನಲಿಟಿಕ್ ಭಾಗದಲ್ಲಿ ಪ್ರತಿಭೆ (ಇಮ್ಯಾಜಿನೇಷನ್) ವಿಕಲ್ಪಗಳಿಗೆ ಅಧೀನವಾಗಿರುವಂತೆ ವರ್ಣಿತವಾಗಿದೆ. ವಿಜ್ಞಾನದಲ್ಲಿ ಪ್ರತಿಭೆಯ ಪಾತ್ರ ಯಾವ ಬಗೆಯದು. ಕಲೆಯಲ್ಲಿ ಅದರ ಪಾತ್ರ ಯಾವ ಬಗೆಯದು ಎಂಬುದೂ ಸ್ಪಷ್ಟವಾಗಿಲ್ಲ.

ಟ್ರಾನ್ಸೆಂಡೆಂಟಲ್ ಡಿಡಕ್ಷನ್ನಿನಲ್ಲಿ ವಿಕಲ್ಪಗಳ ಸಾಮಾನ್ಯ ಸ್ವರೂಪವನ್ನು ವಿವರಿಸಿ ಯಾದ ಮೇಲೆ ಮೆಟಫಿಸಿಕಲ್ ಡಿಡಕ್ಷನ್ ಎಂಬ ಮುಂದಿನ ಭಾಗದಲ್ಲಿ ಕಾಂಟ್ ಆ ವಿಕಲ್ಪಗಳು ಯಾವುವು ಅವುಗಳ ಸಂಖ್ಯೆ ಎಷ್ಟು ಎಂಬುದನ್ನು ನಿರ್ಧರಿಸಲು ಪ್ರಯತ್ನಪಟ್ಟಿರುತ್ತಾನೆ. ಭೌತ ವಸ್ತುವಿನ ಜ್ಞಾನಕ್ಕೆ ವಿಕಲ್ಪಗಳು ಯಾವುವು ಎಂಬುದಕ್ಕೆ ವಿಜ್ಞಾನದಲ್ಲಿ ಬಳಸುವ ವಿವಿಧ ಪ್ರತಿಜ್ಞೆಗಳು ಆಧಾರ. ಈ ಪ್ರತಿಜ್ಞೆಗಳನ್ನು ವಿಭಜಿಸಿದರೆ ಅವುಗಳ ತಳಹದಿಯಾದ ವಿಕಲ್ಪಗಳು ಯಾವವು ಮತ್ತು ಎಷ್ಟು ಎಂಬುದು ಸ್ಪಷ್ಟವಾಗುತ್ತದೆ. ಹಿಂದಿನಿಂದ ತಾರ್ಕಿಕರು ವಿಂಗಡಿಸಿರುವ ಪ್ರತಿಜ್ಞೆಗಳ ಸಂಖ್ಯೆ ಹನ್ನೆರಡು. ಅವುಗಳಲ್ಲಿ ಒಂದೊಂದನ್ನೂ ವಿಭಜಿಸಿ ನೋಡಿದಾಗ ಅವುಗಳ ತಳಹದಿಯಾದ ವಿಕಲ್ಪಗಳು ಹೊರಬೀಳುತ್ತವೆ. ಒಂದೊಂದು ಪ್ರತಿಜ್ಞೆಗೂ ಸಮಾನಾಂತರವಾದ ವಿಕಲ್ಪಗಳನ್ನು ಕೆಳಗಿನ ಪಟ್ಟಿ ತೋರಿಸುತ್ತದೆ.

| | **ಪ್ರತಿಜ್ಞೆಗಳು** | | **ವಿಕಲ್ಪಗಳು ಅಥವಾ ಚಿಂತನೆಯ ಬಗೆಗಳು** |
|---|---|---|---|
| ಅ. | ಪರಿಮಾಣ | ಅ. | ಪರಿಮಾಣ |
| 1 | ಸಾಮಾನ್ಯ ಪ್ರತಿಜ್ಞೆ | 1 | ಏಕತೆ |
| 2 | ಪ್ರತ್ಯೇಕ ಪ್ರತಿಜ್ಞೆ | 2 | ಅನೇಕತೆ |
| 3 | ವೈಯಕ್ತಿಕ ಪ್ರತಿಜ್ಞೆ | 3 | ಸಂಪೂರ್ಣತೆ |
| ಆ. | ಗುಣ | ಆ. | ಗುಣ |
| 4 | ಅಸ್ತ್ಯರ್ಥಕ ಪ್ರತಿಜ್ಞೆ | 4 | ಅಸ್ತಿತ್ವ |
| 5 | ನಾಸ್ತ್ಯರ್ಥಕ ಪ್ರತಿಜ್ಞೆ | 5 | ನಾಸ್ತಿತ್ವ |
| 6 | ಅನಂತ ಪ್ರತಿಜ್ಞೆ | 6 | ಪರಿಮಿತಿ |
| ಇ. | ಸಂಬಂಧ | ಇ. | ಸಂಬಂಧ |
| 7 | ನಿರುಪಾಧಿಕ ಪ್ರತಿಜ್ಞೆ | 7 | ಸಮವಾಯ |
| 8 | ಔಪಾಧಿಕ ಪ್ರತಿಜ್ಞೆ | 8 | ಆಧೀನ್ಯ |
| 9 | ಪಕ್ಷಾಂತರ ಪ್ರತಿಜ್ಞೆ | 9 | ಸಾಮೂಹಿಕ (ಪರಸ್ಪರತೆ) |
| ಈ. | ರೀತಿ | ಈ. | ರೀತಿ |
| 10 | ಸಂಭಾವ್ಯ ಪ್ರತಿಜ್ಞೆ | 10 | ಸಾಧ್ಯತೆ |
| 11 | ಸ್ಥಿರೀಕರಣ ಪ್ರತಿಜ್ಞೆ | 11 | ವಾಸ್ತವತೆ |
| 12 | ಅಗತ್ಯ ಪ್ರತಿಜ್ಞೆ | 12 | ಅಗತ್ಯತೆ |

ಕಾಂಟ್ ಅನಂತರ ಬಂದ ತಾತ್ತ್ವಿಕರು ಈ ವಿಕಲ್ಪಗಳ ಬಗೆಗಳ ಸಂಖ್ಯೆಯನ್ನು ಹೆಚ್ಚಿಸಿರಬಹುದು ಅಥವಾ ಕಡಿಮೆ ಮಾಡಿರಬಹುದು. ಆದರೆ ನಾವು ಲಕ್ಷಿಸಬೇಕಾದುದು ಇವನ ಮುಖ್ಯ ನಿಲವನ್ನು. ಈ ಬಗೆಗಳು ನಿಗಮದಿಂದಾಗಲೀ ಅನುಗಮನದಿಂದಾಗಲೀ ಪಡೆದುವಲ್ಲ. ಇವು ಕೇವಲ ಅನುಭವದಿಂದ ಅನುಗಮನದ ಮೂಲಕ ಸಂಗ್ರಹಿಸಿದವಲ್ಲ. ಇವನ್ನು ಬಿಟ್ಟು ಯಾವುದೊಂದು ಅನುಭವದ ಚಿಂತನವೂ ಸಾಧ್ಯವಿಲ್ಲ. ಅನುಭವವನ್ನು ಬಿಟ್ಟು ಇವು ತಾವೇ ತಾವಾಗಿ, ಅದಕ್ಕೆ ಹೊರತಾಗಿಯೂ ಇರುವುದಿಲ್ಲ. ಇವು ಎಲ್ಲ ಬಗೆಯ ವಾಸ್ತವ ಆಲೋಚನೆಗೆ ಆಂತರಿಕವಾಗಿ ಅಗತ್ಯಭಾವನೆಗಳು.

**3 ಟ್ರಾನ್ಸೆಂಡೆಂಟಲ್ ಡಯಲೆಕ್ಟಿಕ್ :** ಬುದ್ಧಿಯ ವಿಕಲ್ಪಗಳು ಇಂದ್ರಿಯಗಳ ಮುದ್ರೆಗಳನ್ನು ಜ್ಞಾನವಿಷಯವಾಗಿ ಪರಿವರ್ತಿಸುವ ಚೇತನಕ್ಕೆ ಸೀಮಿತವಾದವುವಾದರೂ ಅವು ಇಂದ್ರಿಯಾನುಭವದಿಂದ ಬೇರೆಯಾಗಿ ಸ್ವತಂತ್ರವಾದ ತಾರ್ಕಿಕ ರೂಪಗಳಾಗಿರಬಹುದು. ಇಂದ್ರಿಯಾನುಭವದಿಂದ ಬೇರೆಯಾಗಿ ಶುದ್ಧ ತಾರ್ಕಿಕ ರೂಪಗಳಿಂದ ನಮಗೆ ವಿಷಯ ಜ್ಞಾನ ಲಭಿಸದಿದ್ದರೂ ಅವನ್ನು ಶುದ್ಧರೂಪದಲ್ಲಿ ಯೋಚಿಸಬಹುದು; ತರ್ಕಿಸಬಹುದು. ಹೀಗೆ ವಿಷಯಚೇತನದಿಂದ ಪ್ರತ್ಯೇಕವಾದ ಅತೀತವಾದ ಶುದ್ಧರೂಪಗಳನ್ನು ಯೋಚಿಸಬಲ್ಲ ವಿಚಾರ ಚೇತನವನ್ನು ಕಾಂಟ್ ರೀಸನ್ ಎಂದು ಕರೆದಿರುತ್ತಾನೆ. ಈ ವಿಚಾರಚೇತನ ಮಾನವನನ್ನು ಪರತತ್ತ್ವ ಜಿಜ್ಞಾಸದ (ಮೆಟಫಿಸಿಕಲ್ ಸ್ಪೆಕ್ಯುಲೇಷನ್) ಕಡೆಗೆ ಒಯ್ಯುತ್ತದೆ. ಇಂದ್ರಿಯಾನುಭವದಿಂದ ಬಿಡುಗಡೆಹೊಂದಿದ ವಿಚಾರಚೇತನದ ರೂಪಗಳನ್ನು ವಿಷಯಚೇತನದ ವಿಕಲ್ಪಗಳಿಂದ (ಕಾನ್ಸೆಪ್ಟ್ಸ್ ಆಫ್ ಅಂಡರ್‌ಸ್ಟ್ಯಾಂಡಿಂಗ್) ಪ್ರತ್ಯೇಕಿಸಲು ಅವನ್ನು ಐಡಿಯಾಸ್ ಆಫ್ ರೀಸನ್ ಎಂದು ಕಾಂಟ್ ಕರೆದಿದ್ದಾನೆ. ಇಲ್ಲಿ ಐಡಿಯಾಸ್ ಎಂಬ ಪದಕ್ಕೆ ಐಡಿಯಲ್ಸ್ ಅಂದರೆ ಧ್ಯೇಯಗಳು ಎಂಬ ಅರ್ಥಬರುತ್ತದೆ. ವಿಷಯಗಳು (ಆಬ್ಜೆಕ್ಟ್ಸ್) ಇಂದ್ರಿಯಾನುಭವಕ್ಕೆ ಅಧೀನವಾದುವು. ಆದರೆ ವಿಚಾರಚೇತನದ ಧ್ಯೇಯಗಳಾದ ಐಡಿಯಾಸ್, ಇಂದ್ರಿಯಾತೀತ ಭಾವನೆಗಳು. ವಿಷಯಚೇತನದ ವಸ್ತುಗಳು ತೋರಿಕೆಗಳು (ಫೆನೋಮೆನ). ವಿಚಾರಚೇತನದ ವಸ್ತುಗಳಾದರೋ ಪರಸತ್ ವಸ್ತುಗಳು (ನೌಮೆನ). ಈ ಪರಸತ್ ವಿಷಯಗಳಿಗೆ ವಿಷಯ ಚೇತನದ ವಸ್ತುಗಳಂತೆ ಇಂದ್ರಿಯಗಳ ಮುದ್ರೆಗಳ ಆಶ್ರಯವಿಲ್ಲದ್ದರಿಂದ ಅವನ್ನು ವಿಷಯಚೇತನದ ವಸ್ತುಗಳಂತೆ ತಿಳಿಯಲಾಗದಿದ್ದರೂ ಅವುಗಳ ಬಗ್ಗೆ ಯೋಚಿಸಬಹುದು. ಇಂದ್ರಿಯಾತೀತ ಭಾವನೆಗಳ (ನೌಮೆನಲ್ ಕಾನ್ಸೆಪ್ಟ್ಸ್) ಮೂಲಕ ಅಂಥ ಪರವಸ್ತುಗಳನ್ನು ಯೋಚಿಸಬಹುದು. ಈ ಅತೀತ ಭಾವನೆಗಳು ವಿಚಾರಚೇತನದ ವಿಕಲ್ಪಗಳಂತೆ ನಿರ್ದಿಷ್ಟವಲ್ಲ; ಸಂದಿಗ್ಧ ಅಥವ ಅನಿಶ್ಚಿತ. ಏಕೆಂದರೆ ಅವುಗಳಿಗೆ ಹೊಂದಿಕೆಯಾಗುವ ಇಂದ್ರಿಯ ಮುದ್ರೆಗಳಿಲ್ಲ; ಅವುಗಳಿಗೆ

ಸಮಾನಾಂಥರವಾದ ವಾಸ್ತವ ವಿಷಯಗಳಿಲ್ಲ. ಈ ಅತೀತ ಭಾವನೆಗಳು (ಧ್ಯೇಯಗಳು) ವಿಷಯಜ್ಞಾನವನ್ನು ಕೊಡದಿದ್ದರೂ ಅವುಗಳಿಂದ ಪ್ರಯೋಜನವಿಲ್ಲದಿಲ್ಲ. ಇಂದ್ರಿಯಾನುಭವದಿಂದ ಸಜ್ಜುಗೊಂಡ ಭೌತ ವಿಷಯಗಳಾದ ತೋರಿಕೆಗಳು ಮಾತ್ರವೇ ಪ್ರಕೃತ ಮತ್ತು ಸತ್ಯ. ನಮ್ಮ ಜೀವನ ಸರ್ವಸ್ವವೂ ಸಂಪೂರ್ಣವಾಗಿ ಭೌತವಿಜ್ಞಾನದ ಆಳ್ವಿಕೆಗೆ ಒಳಪಡಬೇಕು ಎಂಬ ಭೌತವಾದವನ್ನು ತಡೆಗಟ್ಟುವುದಲ್ಲದೆ ಮಾನವೀಯ ನೀತಿ ಮತ್ತು ಮತಭಾವನೆಗಳಿಗೆ ದಾರಿಮಾಡಿಕೊಡುತ್ತವೆ. ವಿಚಾರಚೇತನ ದೃಢವಾದದ್ದು ಅದು ತಪ್ಪು ಅಥವಾ ಮಿಥ್ಯಾಭಾವನೆಗಳಿಗೆ ಎಡೆಕೊಡಬೇಕಾದ್ದಿಲ್ಲ. ಅದು ತೋರಿಕೆಯ ವ್ಯಾವಹಾರಿಕ ಪ್ರಪಂಚದಿಂದ ಬಿಡುಗಡೆಹೊಂದಿ ನಿಯಂತ್ರಣ ಅಥವಾ ಆದೇಶಿ (ರೆಗ್ಯುಲೆಟಿವ್ ಪ್ರಿನ್ಸಿಪಲ್) ತತ್ತ್ವವಾಗಿ ವರ್ತಿಸಬಹುದು. ವಿಜ್ಞಾನದ ತೋರಿಕೆಗಳನ್ನು ಮತ್ತಷ್ಟು ಸಂಗತವಾಗಿ ಮತ್ತು ವ್ಯಾಪಕವಾಗಿ ಒಂದುಗೂಡಿಸುವಂತೆ ಬುದ್ಧಿಗೆ ಅಥವಾ ವಿಷಯಚೇತನಕ್ಕೆ ಆದೇಶ ಕೊಡಬಹುದು. ಹಾಗೆ ಆದೇಶತತ್ತ್ವವಾಗಿ ವರ್ತಿಸಿದಾಗ ಅದು ತನ್ನ ನಿಜಧರ್ಮಕ್ಕೆ ಅನುಗುಣವಾಗಿ ವರ್ತಿಸುತ್ತದೆ ಮತ್ತು ಸಫಲವಾಗುತ್ತದೆ. ಬುದ್ಧಿಗೆ ಆದೇಶ ಕೊಡುವ ಬದಲು ತನ್ನ ಭಾವನೆಗಳು ವಾಸ್ತವ ವಿಷಯಗಳ ಜ್ಞಾನವೆಂದು ಸಾಧಿಸಲು ಪ್ರಯತ್ನಪಟ್ಟರೆ ಮಿಥ್ಯಾಭಾವನೆಗಳಿಗೆ ಮತ್ತು ಪರಸ್ಪರ ವಿರುದ್ಧ ಭಾವನೆಗಳಿಗೆ ಎಡೆಯಾಗುತ್ತದೆ.

ವಿಚಾರಚೇತನದ ಭಾವನೆಗಳು ಮೂರು–ಆತ್ಮ, ಪ್ರಕೃತಿ ಮತ್ತು ಈಶ್ವರ. ಈ ಭಾವನೆಗಳನ್ನು ಆದೇಶ ತತ್ತ್ವಗಳಾಗಿ ಉಪಯೋಗಿಸಿದಾಗ ಅವು ಸುಖಕರವಾದ ಭಾವನೆಗಳಾಗುತ್ತವೆ. ಅದರ ಬದಲು ವುಲ್ಫ್ ಮತ್ತು ಇತರ ತಾತ್ತ್ವಿಕರು ಭಾವಿಸಿದಂತೆ ಆತ್ಮವನ್ನು ವೈಚಾರಿಕ ಆತ್ಮವಿಜ್ಞಾನದ (ರ್‍ಯಾಷನಲ್ ಸೈಕಾಲಜಿ) ವಿಷಯವಾಗಿಯೂ ಪ್ರಕೃತಿಯನ್ನು ವೈಚಾರಿಕ ವಿಶ್ವಶಾಸ್ತ್ರದ (ರ್‍ಯಾಷನಲ್ ಕಾಸ್ಮಾಲಜಿ) ವಿಷಯವಾಗಿಯೂ ಈಶ್ವರನನ್ನು ವೈಚಾರಿಕ ದೇವತಾಶಾಸ್ತ್ರದ (ರ್‍ಯಾಷನಲ್ ಥಿಯಾಲಜಿ) ವಿಷಯವಾಗಿಯೂ ಭಾವಿಸಿದರೆ ಅವು ಮಿಥ್ಯಾವಾದಗಳಿಗೆ ಎಡೆಕೊಡುತ್ತವೆ. ಆತ್ಮಕ್ಕೆ ಸಂಬಂಧಪಟ್ಟ ಮಿಥ್ಯಾವಾದಗಳನ್ನು ಪ್ಯಾರಲಾಜಿಸಮ್ಸ್ ಆಫ್ ಪ್ಯೂರ್ ರೀಸನ್ ಎಂದೂ ವಿಶ್ವಕ್ಕೆ ಸಂಬಂಧಪಟ್ಟ ಮಿಥ್ಯಾವಾದಗಳನ್ನು ಆಂಟಿನೊಮೀಸ್ ಆಫ್ ಪ್ಯೂರ್ ರೀಸನ್ ಎಂದೂ ಈಶ್ವರನಿಗೆ ಸಂಬಂಧಪಟ್ಟ ಮಿಥ್ಯಾವಾದಗಳನ್ನು ಐಡಿಯಲ್ ಆಫ್ ಪ್ಯೂರ್ ರೀಸನ್ ಎಂದೂ ಕಾಂಟ್ ಕರೆದಿದ್ದಾನೆ.

**ಅ) ಪ್ಯಾರಲಾಜಿಸಮ್ಸ್ :** ಆತ್ಮ ಒಂದು ದ್ರವ್ಯ ಎಂಬುದನ್ನು ತೋರಿಸಲು ಉಪಯೋಗಿಸುವ ತರ್ಕಗಳು; ಅನಿಶ್ಚಿತ ಮಧ್ಯಮ ಪದದ ದೋಷಕ್ಕೆ (ಫ್ಯಾಲಸಿ ಆಫ್ ದಿ ಆಂಬಿಗ್ಯುಅಸ್ ಮಿಡ್ಲ್ ಟರ್ಮ್) ಒಳಪಡುತ್ತವೆ ಎಂಬುದನ್ನು ಕಾಂಟ್ ಈ ಅನುಮಾನ ವಾಕ್ಯದ (ಸಿಲೋಜಿಸಮ್) ಮೂಲಕ ಸ್ಪಷ್ಟಪಡಿಸಿದ್ದಾನೆ.

ಪ್ರಮಾತೃವಾಗಿ (ಸಬ್ಜೆಕ್ಟ್) ಅಲ್ಲದೆ ಬೇರೆ ವಿಧವಾಗಿ ಯೋಚಿಸಲಾಗದ್ದು ಒಂದು ದ್ರವ್ಯವಾಗಿ ಇದ್ದೇ ಇರಬೇಕು.

ಯೋಚಿಸುವ ವ್ಯಕ್ತಿಯನ್ನು ಪ್ರಮಾತೃವಾಗಿ ಅಲ್ಲದೆ ಬೇರೆಯಾಗಿ ಯೋಚಿಸಲಾಗುವುದಿಲ್ಲ. ಆದ್ದರಿಂದ ಅದು ಪ್ರಮಾತೃವಾಗಿ, ಅಂದರೆ ದ್ರವ್ಯವಾಗಿ ಮಾತ್ರ ಇರುತ್ತದೆ.

ಮೊದಲಿನ ಪ್ರತಿಜ್ಞೆಯಲ್ಲಿ ಪ್ರಮಾತೃವಾಗಿ ಅಲ್ಲದೆ ಬೇರೆಯಾಗಿ ಆಲೋಚಿಸಲಾಗ್ಯದ ಎಂಬ ಮಧ್ಯಪದವೇ ಬೇರೆ ಎರಡನೆಯ ಪ್ರತಿಜ್ಞೆಯಲ್ಲಿರುವ ಯೋಚಿಸುವ ವ್ಯಕ್ತಿ ಎಂಬ ಪದವೇ ಬೇರೆ. ಯೋಚಿಸುವ ವ್ಯಕ್ತಿ ಯೋಚನೆಯ ವಿಷಯ ಆದ್ದರಿಂದ ಅದು ಹ್ಯೂಂ ಹೇಳಿದಂತೆ, ಯಾವಾಗಲೂ ಒಂದನ್ನೊಂದು ನಿರಂತರವಾಗಿ ಹಿಂಬಾಲಿಸುವ ಮಾನಸಿಕ ಸ್ಥಿತಿಯಾಗಿ ಅಲ್ಲದೆ ಒಂದು ದ್ರವ್ಯವಾಗಿ ತೋರಿಸಿಕೊಳ್ಳುವುದಿಲ್ಲ. ಈ ಚಿತ್ತವೃತ್ತಿ ಕಾಲರೂಪಕ್ಕೆ ಒಳಪಟ್ಟಿದೆಯಾದ್ದರಿಂದ ಯಾವುದಾದರೊಂದು ಇಂದ್ರಿಯಾನುಭವಕ್ಕೆ ಸೇರಿದಂತೆಯೇ ಇರುವುದರಿಂದ ಅದು ಒಂದು ತೋರಿಕೆಯ ವಿಷಯವೇ ಹೊರತು ವಾಸ್ತವ ದ್ರವ್ಯವಲ್ಲ. ಆತ್ಮ ಒಂದು ವಾಸ್ತವದ್ರವ್ಯವಾಗಿ ನಮ್ಮ ಜ್ಞಾನದ ವಿಷಯವಾಗಲಾರದು. ಈ ಕಾರಣದಿಂದ ವಾಸ್ತವದ್ರವ್ಯವನ್ನು ತನ್ನ ವಿಷಯವಾಗಿ ಇಟ್ಟುಕೊಂಡಿರುವ ವೈಚಾರಿಕ ಆತ್ಮಶಾಸ್ತ್ರ ಅಸಾಧುವಾಗಿರುತ್ತದೆ.

ಈ ವಾದ ಸಮಂಜಸವಾಗಿ ತೋರುವುದಿಲ್ಲ. ಪ್ರತ್ಯಕ್ಷ ಜ್ಞಾನವೆಲ್ಲವೂ ಇಂದ್ರಿಯ ಪ್ರತ್ಯಕ್ಷವಾಗಿಯೇ ಇರಬೇಕು ಎಂದು ಕಾಂಟ್ ಭಾವಿಸಿದ್ದಾನೆ. ಇಂದ್ರಿಯ ಪ್ರತ್ಯಕ್ಷವಲ್ಲದೆ ಮಾನಸಿಕ ಪ್ರತ್ಯಕ್ಷವಿದೆ (ನಾನ್ ಸೆನ್ಸ್ಯುಅಸ್ ಪರ್ಸೆಪ್ಷನ್) ಎಂದು ನಂಬುವ ತಾತ್ತ್ವಕರು, (ಉದಾಹರಣೆಗೆ, ಆಲ್ ಫ್ರೆಡ್ ನಾತ ವೈಟ್ಹೆಡ್ ಮತ್ತು ಅರ್ನೆಸ್ಟ್ ಕ್ಯಾಸೀರರ್) ಈ ವಾದವನ್ನು ಒಪ್ಪುವುದಿಲ್ಲ. ಇಂದ್ರಯಾತೀತ ಆತ್ಮವನ್ನು ಒಪ್ಪಿದರೂ ಕಾಂಟ್ ಮಂಡಿಸಿರುವ ಜ್ಞಾನಮೀಮಾಂಸೆಯ ಪ್ರಕಾರ ಅದು ಭೌತವಸ್ತುವಿನಂತೆ ಇದೆ ಎಂದು ಹೇಳಲಾಗುವುದಿಲ್ಲ. ಇಂದ್ರಿಯಾತೀತ ಆತ್ಮ ನಮ್ಮ ನೀತಿಯ ನಿಷ್ಠೆಯಿಂದ ಸಾಧಿಸಿ ಬೆಳೆಸಬೇಕಾದ ಧ್ಯೇಯವೆಂದು ಮಾತ್ರ ಹೇಳಬಹುದು. ಆಗ ಅದು ನಮ್ಮ ನಡತೆಯನ್ನು ನಿಯಂತ್ರಿಸುವ ತತ್ತ್ವವಾಗಿ ಮಾತ್ರ ಪರಿಗಣಿಸಲ್ಪಡುತ್ತದೆ.

**ಆ) ಆಂಟಿನೋಮೀಸ್ ಆಫ್ ಪ್ಯೂರ್ ರೀಸನ್ :** ಎಂದರೆ ಒಂದೇ ಭಾವನೆಯನ್ನು ಹಿಂದಕ್ಕೂ ಮುಂದಕ್ಕೂ ಲಂಬಿಸಿದಾಗ ಎರಡು ಪರಸ್ಪರ ವಿರುದ್ಧ ಪ್ರತಿಜ್ಞೆಗಳಾಗಿ ಪರಿಣಾಮಗೊಳ್ಳುವ ಸ್ಥಿತಿ. ಈ ವಿಷಯ ಪರಿಸ್ಥಿತಿ ಆತ್ಮದ ವಿಚಾರಕ್ಕಿಂತ ವಿಶ್ವದ ವಿಚಾರದಲ್ಲಿ ಸ್ಪಷ್ಟವಾಗಿ ಎದ್ದುನಿಲ್ಲುತ್ತದೆ. ಪರಿಮಾಣ, ಗುಣ, ಸಂಬಂಧ, ರೀತಿ ಈ ನಾಲ್ಕು ವಿಕಲ್ಪಗಳನ್ನು ಹಿಂದಕ್ಕೂ ಮುಂದಕ್ಕೂ ಲಂಭಿಸಿದಾಗ ನಾಲ್ಕು ಜೊತೆ ಪರಸ್ಪರ ವಿರುದ್ಧ ಪ್ರತಿಜ್ಞೆಗಳು ಉದ್ಭವಿಸುತ್ತವೆ. ಈ ಪರಸ್ಪರವಿರುದ್ಧ ಪ್ರತಿಜ್ಞೆಗಳಲ್ಲಿ ಮೊದಲನೆಯದನ್ನು ಥೀಸೀಸ್ ಎಂದೂ ಎರಡನೆಯದನ್ನು ಆಂಟಿಥೀಸೀಸ್ ಎಂದೂ ಕಾಂಟ್ ಕರೆದಿದ್ದಾನೆ. ಥೀಸೀಸ್ ಬುಧ್ಯಾರೂಢವಾದಿಗಳ ನಿಲವನ್ನೂ ಆಂಟಿಥೀಸೀಸ್ ಅನುಭವ ಪ್ರಧಾನವಾದಿಗಳ ನಿಲವನ್ನೂ ಪ್ರತಿನಿಧಿಸುತ್ತವೆ.

**ಪರಿಣಾಮಕ್ಕೆ ಸಂಬಂಧಪಟ್ಟ ವಿರುದ್ಧಪ್ರತಿಜ್ಞೆಗಳು:** ಥೀಸೀಸ್ (ಪ್ರಮೇಯ)–ವಿಶ್ವಕ್ಕೆ ಹುಟ್ಟು ಇದೆ; ಅದರ ದೇಶ ವ್ಯಾಪ್ತಿ ಪರಿಮಿತವಾದದ್ದು. ಆಂಟಿಥೀಸೀಸ್ ಪ್ರತಿಪ್ರಮೇಯ–ವಿಶ್ವಕ್ಕೆ ಹುಟ್ಟಿಲ್ಲ; ಅದು ಅನಂತ.

ಗುಣಕ್ಕೆ ಸಂಬಂಧಪಟ್ಟ ವಿರುದ್ಧ ಪ್ರತಿಜ್ಞೆಗಳು: ಥೀಸೀಸ್–ಸಂಕೀರ್ಣವಸ್ತು ಸರಳವಾದ ವಸ್ತುಗಳಿಂದ ಕೂಡಿದೆ. ಆಂಟಿಥೀಸೀಸ್–ಪ್ರಕೃತಿಯಲ್ಲಿ ಸರಳ ವಸ್ತುಗಳಿಲ್ಲ.

ಸಂಬಂಧಕ್ಕೆ ಸಂಬಂಧಪಟ್ಟ ವಿರುದ್ಧ ಪ್ರತಿಜ್ಞೆಗಳು: ಥೀಸೀಸ್–ನಿಯತಿಗೆ ಒಳಪಟ್ಟ ವಿಶ್ವಕ್ಕೆ ನಿಯತಿ ನಿಯಮರಹಿತ ಸ್ವತಂತ್ರ ತತ್ತ್ವ ತಳಹದಿಯಾಗಿರಬೇಕು. ಆಂಟಿಥೀಸೀಸ್–ಕಾರಣ ಪ್ರಪಂಚದಲ್ಲಿ ಸ್ವತಂತ್ರ ತತ್ತ್ವಕ್ಕೆ ಅವಕಾಶವಿಲ್ಲ.

ರೀತಿಗೆ ಸಂಬಂಧಪಟ್ಟ ವಿರುದ್ಧಪ್ರತಿಜ್ಞೆಗಳು: ಥೀಸೀಸ್–ಸೋಪಾಧಿಕವಾದುದಕ್ಕೆ ನಿರುಪಾಧಿಕವಾದದ್ದು ಆಶ್ರಯವಾಗಿರಬೇಕು. ಆಂಟಿಥೀಸೀಸ್–ಇಂಥ ನಿರುಪಾಧಿಕವಸ್ತು ವಿಶ್ವದಲ್ಲಾಗಲಿ ಅದರ ಹೊರಗಾಗಲಿ ಇರಬಾರದು.

ಈ ವಿರುದ್ಧ ಪ್ರತಿಜ್ಞೆಗಳನ್ನು ಕಾಂಟ್ ಮಂಡಿಸಿದ ಉದ್ದೇಶ ಬುದ್ಧಿಪ್ರಧಾನವಾದ ಮತ್ತು ಅನುಭವ ಪ್ರಧಾನವಾದಗಳು ಅಸಂಗತವೆಂದು ತೋರಿಸಿ ತನ್ನ ವೈಚಾರಿಕ ನಿಲವನ್ನು ಸ್ಥಾಪಿಸುವುದಕ್ಕಾಗಿ. ವಿಶ್ವಕ್ಕೆ ಸಂಬಂಧಪಟ್ಟ ಬುದ್ಧಿಪ್ರಧಾನವಾದಿಗಳ ಪ್ರತಿಜ್ಞೆ ಯೋಚಿಸಲು ಅರ್ಹವಾದ ಧ್ಯೇಯ ಮಾತ್ರವಾಗಿ ಇರಬಹುದು. ಆದರೆ ಅದು ಜ್ಞಾನವಿಷಯವಾಗಿ ಇರಲಾರದು. ಧ್ಯೇಯ ಜ್ಞಾನವಿಷಯವಲ್ಲ; ಆಸ್ಥೆ ಅಥವಾ ಶ್ರದ್ಧೆಯ ವಿಷಯ. 'ನಾನು ಆ ಜ್ಞಾನವನ್ನು ನಿರಾಕರಿಸಿದ ಕಾರಣ, ಶ್ರದ್ಧಾಭಕ್ತಿಗೆ ದಾರಿಮಾಡಿ ಕೊಡುವುದಕ್ಕಾಗಿ' ಎಂದು ಸಾರಿ ಕಾಂಟ್ ತನ್ನ ಅಭಿಮತವನ್ನು ಸ್ಪಷ್ಟಪಡಿಸಿರುತ್ತಾನೆ.

**ಇ) ವೈಚಾರಿಕ ಮತಶಾಸ್ತ್ರ :** ಟ್ರಾನ್ಸೆಂಡೆಂಟಲ್ ಡಯಲೆಕ್ಟಿನ ಮೊದಲ ಭಾಗದಲ್ಲಿ ಕಾಂಟ್ ಈಶ್ವರ ಭಾವನೆಯನ್ನು ಸ್ಥಾಪಿಸಲು ಮಂಡಿಸಿರುವ ವಾದಗಳನ್ನು ವಿಮರ್ಶಿಸಿದ್ದಾನೆ. ಈ ವಾದಗಳು ಮೂರು: 1 ಆಂಟೋಲಾಜಿಕಲ್ (ಅಸ್ತಿತ್ವಕ್ಕೆ ಸಂಬಂಧಪಟ್ಟದ್ದು), 2 ಕಾಸ್ಮೋಲಾಜಿಕಲ್ (ವಿಶ್ವಕ್ಕೆ ಸಂಬಂಧಪಟ್ಟದ್ದು) ಮತ್ತು 3 ಥಿಯೋಲಾಜಿಕಲ್ (ಮತಕ್ಕೆ ಸಂಬಂಧಪಟ್ಟದ್ದು).

ಒಂದು ವಸ್ತು ಪರಿಪೂರ್ಣವೆಂದು ಭಾವಿಸಬೇಕಾದರೆ ಅಸ್ತಿತ್ವ ಅದರ ಲಕ್ಷಣಗಳಲ್ಲಿ ಒಂದಾಗಿ ಇರಬೇಕಾದದ್ದು. ಅಸ್ತಿತ್ವ ಇಲ್ಲದ್ದು ಪರಿಪೂರ್ಣವಾಗಿರಲು ಹೇಗೆ ಸಾಧ್ಯ ? ಪರಿಪೂರ್ಣವಾದ ಈಶ್ವರಭಾವನೆಯಲ್ಲಿ ಅಸ್ತಿತ್ವ ಸೇರಿರುತ್ತಾದ್ದರಿಂದ ಅಸ್ತಿತ್ವವನ್ನು ಬಿಟ್ಟು ಯೋಚಿಸಲಾಗದ್ದರಿಂದ ಈಶ್ವರನ ಇರವು ಸ್ವತಃಸಿದ್ಧ. ಪರಮ ಪರಿಪೂರ್ಣತೆಯ ಭಾವನೆಗೆ ಅಸ್ತಿತ್ವ ಅಗತ್ಯ. ಅಂಥ ಈಶ್ವರನನ್ನು ವಿಚಾರಚೇತನ ಒಂದು ಧ್ಯೇಯವಾಗಿ ಭಾವಿಸಬಹುದು. ಹಾಗೆ ಭಾವಿಸುವುದರಲ್ಲಿ ಅಸಾಂಗತ್ಯವಿಲ್ಲ. ಆದರೆ ಆ ಭಾವನೆಗೆ ಸಂವಾದಿಯಾಗಿ ಒಂದು ಇದ್ದೇ ಇರಬೇಕು ಎಂದು ಹೇಳಲಾಗುವುದಿಲ್ಲ. ಒಂದು ತ್ರಿಭುಜವಿದ್ದರೆ ಅದರಲ್ಲಿ ಮೂರುಕೋನಗಳು ಇರಬೇಕು. ತ್ರಿಭುಜಭಾವನೆ ಮೂರು ಕೊನಗಳು ಎಂಬ ಭಾವನೆಯನ್ನು ಒಳಗೊಂಡಿರುತ್ತದೆ ಎಂಬುದು ಸ್ವತಃಸಿದ್ಧ ಪ್ರತಿಜ್ಞೆ. ಆದರೆ ತ್ರಿಭುಜ ಇದ್ದೇಇದೆ ಎಂಬುದು ಸ್ವತಃಸಿದ್ಧ ಪ್ರತಿಜ್ಞೆಯಲ್ಲ. ಆದ್ದರಿಂದ ಈ ವಾದ ಅಸಮರ್ಪಕವೆಂದು ಕಾಂಟ್ ತಳ್ಳಿಹಾಕಿರುತ್ತಾನೆ. ಇದು ಅಸ್ತಿತ್ವಕ್ಕೆ ಸಂಬಂಧಪಟ್ಟ ವಿವರ.

ಎರಡನೆಯ ಮತ್ತು ಮೂರನೆಯ ಕಾಸ್ಮೋಲಾಜಿಕಲ್ ಮತ್ತು ಥಿಯೋಲಾಜಿಕಲ್ ವಾದಗಳನ್ನು ಇಲ್ಲಿ ವಿಸ್ತರಿಸಲು ಅವಕಾಶವಿಲ್ಲ. ಒಟ್ಟಿನಲ್ಲಿ ಇವುಗಳಲ್ಲೂ ಆಂಟೊಲಾಜಿಕಲ್ ವಾದದ ದೋಷಗಳೇ ಕಾಣುತ್ತವೆ. ಆಗಂತುಕವಾದದ್ದು ಎಂಬ ಭಾವನೆ ಅಗತ್ಯವಾದದ್ದು ಎಂಬ ಭಾವನೆಗೆ ದಾರಿ ಮಾಡಿಕೊಡುತ್ತದೆ. ಈ ಎರಡು ಭಾವನೆಗಳೂ ಸಾಧ್ಯ. ಆದರೆ ಅಗಂತುಕವಾದುದಕ್ಕೆ ಸಂವಾದಿಯಾದ ವಿಷಯಗಳಿವೆ. ಅಗತ್ಯವಾಗಿ ಇರಲೇಬೇಕಾದ್ದು ಎಂಬ ಭಾವನೆಗೆ ಸಂವಾದಿಯಾದ ವಿಷಯವಿರಲೇಬೇಕು ಎಂಬುದು ನಮ್ಮ ಜ್ಞಾನಕ್ಕೆ ಮೀರಿದ್ದು. ಸಾಧಾರಣವಾಗಿ ಎಲ್ಲ ಮತಗಳೂ ಈಶ್ವರ ಭಾವನೆಯನ್ನು ಆದರಿಸಿವೆ. ಇದು ನಿಜ. ಆದರೆ ಆ ಭಾವನೆಗೆ ಸಂವಾದಿಯಾದ ವಿಷಯಜ್ಞಾನವಿದೆಯೆಂಬುದು ಚರ್ಚಾಸ್ಪದ. ಈಶ್ವರನಲ್ಲಿ ಭಕ್ತಿ ಇದೆ. ಇದು ಭಕ್ತಿಯ ವಿಷಯವಾಗಿ ಜನರ ಜೀವನವನ್ನು ಸತ್ತ್ವಯುತವಾಗಿ ಮಾಡಿದೆ. ಆದರೆ ಇದು ಒಂದು ಧ್ಯೇಯವಾಗಿ, ಭಕ್ತಿಪುಂಜವಾದ ಭಾವನೆಯಾಗಿ

ಪರಿಣಾಮಕಾರಿಯಾಗಿದೆಯೇ ಹೊರತು. ಜ್ಞಾನನಿಷ್ಠೆಗೆ ಪಾತ್ರವಾದುದಲ್ಲ ಎಂಬುದು ಕಾಂಟನ ತೀರ್ಮಾನ.

**2 ಕ್ರಿಟೀಕ್ ಆಫ್ ಪ್ರ್ಯಾಕ್ಟಿಕಲ್ ರೀಸನ್:** ಮೇಲಿನ ತೀರ್ಮಾನವನ್ನು ವಿಸ್ತರಿಸಲು ಕ್ರಿಟೀಕ್ ಆಫ್ ಪ್ರ್ಯಾಕ್ಟಿಕಲ್ ರೀಸನ್ ಎಂಬ ತನ್ನ ಎರಡನೆಯ ಮಹಾಗ್ರಂಥವನ್ನು ಕಾಂಟ್ ಬರೆದಿದ್ದಾನೆ. ಮೊದಲ ಕ್ರಿಟೀಕಿನಲ್ಲಿ ಗಣಿತ ಮತ್ತು ಭೌತಶಾಸ್ತ್ರಗಳ ತಳಹದಿಯ ಆಂತರಿಕ ಭಾವನೆಗಳನ್ನು ವಿಶಪಡಿಸಿದಂತೆ ಎರಡನೆಯ ಕ್ರಿಟೀಕಿನಲ್ಲಿ ನೀತಿಶಾಸ್ತ್ರದ ತಳಹದಿಯ ಆಂತರಿಕ ಭಾವನೆಗಳನ್ನು ವಿಶದಪಡಿಸಲು ಪ್ರಯತ್ನ ಮಾಡಿದ್ದಾನೆ. ಅದು ವಿಚಾರಮಾಡುವ ವಿಷಯಗಳು ಇವು.

ಅ) ನೀತಿಯ ಕಾನೂನು ನೀತಿಜೀವನದ ವಾಸ್ತವ ವಿಷಯ.

ಆ) ಸತ್ ಸಂಕಲ್ಪ 1 ಪರಿಪೂರ್ಣವಾದ ಪವಿತ್ರವಾದ ಸಂಕಲ್ಪ 2 ಕರ್ತವ್ಯ ಭಾವನೆಗೆ ಒಳಪಟ್ಟ ಮಾನವ ಸಂಕಲ್ಪ.

ಇ) ಕೇವಲ ಕರ್ತವ್ಯ ನಿಯಮ ಪಾಲನೆ ಅಥವಾ ಅದರ ವಿಚಾರವಾಗಿ ಗೌರವ ಭಾವನೆಯೇ ನೀತಿ ನಡೆವಳಿಕೆಯ ಉದ್ದೇಶ.

ಈ) ಕಡ್ಡಾಯವಾದ ನಿಯೋಗ (ಕೆಟಗಾರಿಕಲ್ ಇಂಪರೆಟಿವ್).

1 ನಿಷ್ಕಾಮ 2 ವ್ಯಕ್ತಿಗಳು ಸತ್ವವನ್ನೇ ಧ್ಯೇಯವಾಗಿ ಉಳ್ಳವರು 3 ವ್ಯಕ್ತಿಗಳು ಧ್ಯೇಯಪ್ರಪಂಚದ ಸದಸ್ಯರು.

ಉ) ನೀತಿಸಂಕಲ್ಪ ಸ್ವಯಂನಿಯೋಜ್ಯ; ಪರಕೀಯ ಆಶೋತ್ತರಗಳಿಗೆ ಬದ್ಧವಲ್ಲ.

ಊ) ನೈತಿಕ ವಿಚಾರ ಚೇತನದ ಆಧಾರಭಾವನೆಗಳು–1 ಸ್ವಾತಂತ್ರ್ಯ, 2 ಅಮೃತತ್ವ 3 ಈಶ್ವರ.

ನೀತಿನಿಯಮಗಳು ವಾಸ್ತವಸಂಗತಿಗಳು. ಮಾಡಬೇಕಾದದ್ದು, ಬಿಡಬೇಕಾದದ್ದು ಎಂಬ ಸಾಮಾನ್ಯ ನಿಯಮ ಎಲ್ಲ ಜನಾಂಗಗಳಲ್ಲೂ ಕಂಡುಬರುತ್ತದೆ. ಯಾವುದನ್ನು ಮಾಡಬೇಕು ಯಾವುದನ್ನು ಬಿಡಬೇಕು ಎಂಬ ವಿಚಾರದಲ್ಲಿ ಭಿನ್ನತೆ ಇರಬಹುದು. ಆದರೆ ಅನಾಗರಿಕನಿಗಾಗಲಿ ನಾಗರಿಕನಿಗಾಗಲಿ, ಶಾಸ್ತ್ರ ತಿಳಿದವನಿಗಾಗಲಿ ತಿಳಿಯದವನಿಗಾಗಿ ಕರ್ತವ್ಯ (ಅಂದರೆ ಮಾಡಬೇಕಾದದ್ದು) ಎಂಬ ಸಾಮಾನ್ಯ ನಿಯಮದ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದರ ತಳಹದಿಯಾದ ಸಾಮಾನ್ಯ ಭಾವನೆಗಳನ್ನು ಹೊರಹಾಕುವುದು ನೈತಿಕ ವಿಚಾರಚೇತನದ ಕೆಲಸ. ಈ ಭಾವನೆಗಳಿಗೆ ಇಂದ್ರಿಯಾನುಭವ ಆಶ್ರಯವಲ್ಲ. ಅವು ನೈತಿಕಚೇತನಕ್ಕೆ ಆಂತರಿಕವಾದುವು.

ಈ ನೈತಿಕಚೇತನದ ಆದೇಶವನ್ನು ಪರೀಕ್ಷಿಸಿದಾಗ, ಸತ್ ಸಂಕಲ್ಪವನ್ನು ಬಿಟ್ಟರೆ ಈ ವಿಶ್ವದಲ್ಲಿ ಒಳ್ಳೆಯದು ಎಂಬುದು ಬೇರೆ ಯಾವುದೂ ಆಗಲಾರದು ಎಂಬುದು ಸ್ಪಷ್ಟವಾಗುತ್ತದೆ. ತನ್ನ ನಿಯಮದ ವಿಚಾರವಾಗಿ ಇರುವ ಗೌರವಭಾವನೆಯಿಂದಲ್ಲದೆ, ಐಶ್ವರ್ಯ, ಯಶಸ್ಸು ಮುಂತಾದ ಯಾವುದನ್ನೂ ಬಯಸುವ ಸಂಕಲ್ಪ ಒಳ್ಳೆಯದೆನ್ನಿಸಿಕೊಳ್ಳಲು ಅರ್ಹವಲ್ಲ. ಸತ್ ಸಂಕಲ್ಪವನ್ನು ಕಾಂಟ್ ಎರಡಾಗಿ ವಿಂಗಡಿಸಿದ್ದಾನೆ. ಒಂದು–ಪರಿಪೂರ್ಣವಾದ ಪವಿತ್ರ ಸಂಕಲ್ಪ. ಇಂಥ ಸಂಕಲ್ಪ ಈಶ್ವರ ಸಂಕಲ್ಪ. ಎರಡು–ಮಾನವನ ಸತ್ ಸಂಕಲ್ಪ. ಇದು ಪರಿಪೂರ್ಣವಲ್ಲ; ಆಶೆ, ಈರ್ಷ್ಯೆಗಳಿಂದ ವಿಮುಕ್ತವಾದುದಲ್ಲ. ಐಶ್ವರ್ಯ, ಅಧಿಕಾರ, ಅಗ್ಗಳಿಕೆ ಮುಂತಾದ ಐಹಿಕಗಳನ್ನು ಸತ್ ಸಂಕಲ್ಪಕ್ಕೆ ಅಧೀನಗೊಳಿಸಬೇಕು. ಇದನ್ನು ಹೇಗೆ ನಿರ್ವಹಿಸಬಹುದು ಎಂಬುದು ಮಾನವನೀತಿಜೀವನದ ಮುಖ್ಯ ಸಮಸ್ಯೆ. ಪರಿಪೂರ್ಣ ಸಂಕಲ್ಪವಿರುವ ದೇವರಿಗೆ ಯಾವುದನ್ನೂ ದಮನ ಮಾಡುವ ಆವಶ್ಯಕತೆ ಇಲ್ಲ. ಮಾನವನಾದರೋ ಐಹಿಕ ಸುಖವನ್ನು ತಡೆಗಟ್ಟಿ ಸತ್ ಸಂಕಲ್ಪಕ್ಕೆ ಶರಣಾಗಬೇಕು.

ಕರ್ತವ್ಯ ನಿಯೋಜ್ಯನಿಯಮ ಪಾಲನೆ. ತನ್ನ ನೀತಿವಿಚಾರಚೇತನ ನಿಯೋಜಿಸಿದ್ದು ಎಂದರೆ ಅಪ್ಪಣೆ ಮಾಡಿದ್ದು ನ್ಯಾಯ. ಅದನ್ನು ಸಾಧಿಸುವುದೇ ಕರ್ತವ್ಯ. ಕರ್ತವ್ಯಭಾವನೆಯಿಂದಲ್ಲದೆ ಉಪಯೋಗದೃಷ್ಟಿಯಿಂದ ಅಥವಾ ಇತರರ ಕಷ್ಟಗಳನ್ನು ನೋಡಿ ಕನಿಕರದಿಂದ ಅಥವಾ ಜೀವನದ ನೆಮ್ಮದಿಯ ದೃಷ್ಟಿಯಿಂದ ಮಾಡಿದ ಕೆಲಸ ಪೂರ್ಣವಾಗಿ ಕರ್ತವ್ಯ ದೃಷ್ಟಿಯಿಂದ ಹುಟ್ಟಿದ್ದಲ್ಲ. ಅನೇಕವೇಳೆ ನಾವು ಮರುಕದಿಂದ ಅಥವಾ ಉಪಯೋಗವಾಗುತ್ತದೆಯೆಂಬ ದೃಷ್ಟಿಯಿಂದ ಅಥವಾ ಸುಖವನ್ನುಂಟು ಮಾಡುತ್ತದೆ ಎಂಬ ಉದ್ದೇಶದಿಂದ ಒಬ್ಬನಿಗೆ ಹಣ ಕೊಡಬಹುದು. ಇದು ಮಾನವ ಸಹಜವಾದ ನೀತಿಯೆಂದು ತೋರಬಹುದು. ಹೀಗೆ ಮಾಡಿದ್ದನ್ನು ಜನರು ಮೆಚ್ಚಬಹುದು. ಆದರೆ ಅದು ಅಪ್ಪಟ ಕರ್ತವ್ಯವಲ್ಲ. ಅದು ಪರಿಪೂರ್ಣ ಕರ್ತವ್ಯವಲ್ಲ. ಈ ಯಾವ ಉಪಾಧಿಗಳಿಗೂ ಒಳಪಡದೆ ಇದ್ದು ವಿಚಾರಚೈತನ್ಯದಿಂದ ವಿಧಾಯಕವಾದ ನಿಯಮವೆಂದು ತಿಳಿದು ಕೇವಲ ಕರ್ತವ್ಯಭಾವದಿಂದ ಮಾಡಿದ ಕಾರ್ಯವೇ ನಿಜವಾದ ನೀತಿ. ಹೀಗೆ ನಿರುಪಾಧಿಕವಾಗಿ ಮಾಡಿದ ಕರ್ತವ್ಯವೇ ಶ್ರೇಷ್ಠ.

ನಿರುಪಾಧಿಕ ಕರ್ತವ್ಯವೇ ನೈತಿಕ ನಿಯಮ. ಇದರಿಂದ ಬೇರೆಯಾದ್ದು ಔಪಾಧಿಕ ಕರ್ತವ್ಯ (ಹೈಪೊಥೆಟಿಕಲ್ ಇಂಪರೆಟಿವ್). ಔಪಾಧಿಕ ಕರ್ತವ್ಯ ವಿಚಾರಚೇತನದ ನಿಯೋಗಕ್ಕೆ ಬಾಹಿರವಾದ ಉಪಯೋಗ ಅಥವಾ ಸೌಜ್ಯ ಮುಂತಾದ ಉದ್ದೇಶಗಳ ಉಪಾಧಿಗೆ ಕಟ್ಟುಬಿದ್ದದ್ದು; ನೀತಿಚೇತನದ ನಿಯೋಗವನ್ನು ಗೌರವಿಸಿ ಮಾಡಿದ್ದಲ್ಲ.

**ನಿರುಪಾಧಿಕ ಕರ್ತವ್ಯದ ಲಕ್ಷಣಗಳು ಮೂರು:** 1. ನಿಷ್ಕಾಮ (ಫಲಾಪೇಕ್ಷೆ ಇಲ್ಲದ) ಕರ್ತವ್ಯ. 2. ಈ ನಿಯೋಗ ಕರ್ತವ್ಯವನ್ನು ಫಲಾಪೇಕ್ಷೆ ಇಲ್ಲದೆ ಮಾಡು ಎಂದು ಹೇಳುತ್ತದೆಯಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ಪವಿತ್ರವಾದ ಆತ್ಮವನ್ನು ಪಡೆದಿರುತ್ತಾನೆ, ಆ ಪವಿತ್ರಾತ್ಮಕ್ಕಾಗಿಯೇ ಅವನು ಬಾಳುತ್ತಾನೆಂದು ಭಾವಿಸಿ ಅವನ ವ್ಯಕ್ತಿತ್ವವನ್ನು ಗೌರವಿಸಬೇಕು ಎಂದು ಹೇಳುತ್ತದೆ. ಹೀಗೆ ಹೇಳಿದಾಗ ಕಾಂಟ್ ಸ್ವಾರ್ಥವನ್ನು ಬೋಧಿಸುತ್ತಾನೆಂದು ತಿಳಿಯಕೂಡದು. ತಾರತಮ್ಯವಿಲ್ಲದೆ ಎಲ್ಲರ ವ್ಯಕ್ತಿತ್ವವೂ ಗೌರವಾರ್ಹ ಎಂದು ಅವನ ಭಾವನೆ. ಈ ಭಾವನೆಯಿಂದ ಒಂದು ಸಾರ್ವತ್ರಿಕ ನೀತಿ ನಿಯಮ ಹುಟ್ಟುತ್ತದೆ. ಆ ನಿಯಮದ ಆದೇಶ ಇದು 'ನೀನು ಹೇಗೆ ನಡೆದುಕೊಳ್ಳಬೇಕೆಂದರೆ ನೀನು ಸಂಕಲ್ಪಿಸಿದ ನ್ಯಾಯಸೂತ್ರ ಸಾರ್ವತ್ರಿಕ ನ್ಯಾಯವಾಗಿ ಪರಿಣಮಿಸಬೇಕು'. ತಾರತಮ್ಯವಿಲ್ಲದೆ ಈ ಸೂತ್ರ ಎಲ್ಲರಿಗೂ ಅನ್ವಯವಾಗಬೇಕು. 3. ಹೀಗೆ ಭಾವಿಸಿದಾಗ ವ್ಯಕ್ತಿಗಳು ಸ್ವಾರ್ಥಜೀವಿಗಳಾಗುವುದಿಲ್ಲ. ಧ್ಯೇಯಪ್ರಪಂಚದ ಸಮಾನ ಸದಸ್ಯರಾಗುತ್ತಾರೆ; ನೀತಿ ನಡೆವಳಿಕೆಗಳಲ್ಲಿ ಸಮಾನ ಭಾಗಿಗಳಾಗುತ್ತಾರೆ; ಅವರದೊಂದು ಒಕ್ಕೂಟವಾಗುತ್ತದೆ. ಸಮಾನಗೌರವ ಭಾವವಿಲ್ಲದ ವ್ಯಕ್ತಿಗಳು ಮಾತ್ರ ಸ್ವತಂತ್ರತಾಗಿರಬಲ್ಲರು. ಆ ಭಾವನೆ ಇಲ್ಲದವರಿಗೆ ನಿಜವಾದ ಸ್ವಾತಂತ್ರ್ಯವಿಲ್ಲ. ಈ ನೀತಿನಿಯಮ ಸ್ವಯಂ ನಿಯೋಜ್ಯ. ಸ್ವಯಂನಿಯೋಜ್ಯ ಕರ್ತವ್ಯವೇ ನಿಜವಾದ ಸ್ವಾತಂತ್ರ್ಯ.

ಕ್ರೈಸ್ತತಾತ್ತ್ವಿಕರಂತೆ ಕಾಂಟ್ ನೀತಿನಿಯಮಪಾಲನೆ ಪರಮೇಶ್ವರ ಪ್ರೀತ್ಯರ್ಥವೆಂದು ಹೇಳಲಿಲ್ಲ. ಏಕೆಂದರೆ ಈಶ್ವರ ಭಾವನೆ ಶುದ್ಧವಿಮರ್ಶಚೇತನದಿಂದ ಸ್ಥಾಪಿತವಾದದ್ದಲ್ಲ. ಬದಲು ಈಶ್ವರ ಭಾವನೆಗೆ ಸ್ವಯಂ ನಿಯೋಜಿತವಾದ ನೀತಿತತ್ತ್ವ ಆಧಾರವೆಂದು ಆತ ಹೇಳುತ್ತಾನೆ. ಅಮೃತತ್ವ, ಸ್ವಾತಂತ್ರ್ಯ, ಈಶ್ವರ–ಈ ಮೂರು ಧ್ಯೇಯರೂಪವಾದ ಭಾವನೆಗಳು ನೀತಿ ಜೀವನವನ್ನು ಪರಿಪೂರ್ಣಗೊಳಿಸುವುದಕ್ಕೆ ಅಗತ್ಯವಾದ ಆಧಾರಕಲ್ಪನೆಗಳಾಗಿ ಅವನು ಭಾವಿಸಿದ್ದಾನೆ. ವ್ಯಾವಹಾರಿಕ ಪ್ರಪಂಚದಲ್ಲಿ ನಮ್ಮ ಕರ್ತವ್ಯಭಾವನೆಗೂ ಕರ್ತವ್ಯಕ್ಕೂ ಪ್ರಕೃತಿನಿಯಮಕ್ಕೂ ಸೌಖ್ಯಕ್ಕೂ ವಿರೋಧವಿರುತ್ತದೆ. ಈ ವಿರೋಧವಿಲ್ಲದೆ ಕರ್ತವ್ಯವೂ ಸೌಖ್ಯವೂ ಸಮನ್ವಯಗೊಳ್ಳುವಂತೆ ಒಂದು ಧ್ಯೇಯ ಪರಿಸ್ಥಿತಿಯನ್ನು ನಾವು ಕಲ್ಪಿಸಿಕೊಳ್ಳಬೇಕು. ಸೌಖ್ಯವನ್ನು ನಿರಾಕರಿಸಿದ ಸ್ಟೋಯಿಕ್ ನೀತಿಯಾಗಲಿ ಅಥವಾ ಸುಖವೊಂದನ್ನೇ ಬಯಸಿದ ಎಪಿಕ್ಯೂರಿಯನ್ ನೀತಿಯಾಗಲಿ ನೀತಿಸಂಕಲ್ಪದ ಧ್ಯೇಯವನ್ನು ಸಮಂಜಸವಾಗಿ ನಿರೂಪಿಸಿಲ್ಲ. ಸ್ವತಂತ್ರವಾದ ಮತ್ತು ಅಮೃತವಾದ ಆತ್ಮಕ್ಕೂ ಮತ್ತು ಪ್ರಕೃತಿಗೂ ಸಾಮರಸ್ಯ ಕುದುರಿಸುವ ಈಶ್ವರಭಾವನೆ ನಮಗೆ ವಿಶ್ವದ ವಸ್ತುಗಳಂತೆ ದತ್ತವಾದುದಲ್ಲ. ಅದು ಅಚಲವಾದ ನೈತಿಕಸಂಕಲ್ಪ ಸಾಧನೆಯಿಂದ ಸೃಷ್ಟಿಯಾಗಬೇಕಾದದ್ದು. ಈ ಭಾವನೆಯನ್ನು ಕಾಂಟ್ ವಿಚಾರ ಚೇತನದ ಎಲ್ಲೆಯೊಳಗೆ ಮಾತ್ರ ಸ್ಥಾಪಿಸಬಹುದಾದ ಮತ (ರಿಲಿಜನ್ ವಿದಿನ್ ದಿ ಲಿಮಿಟ್ಸ್ ಆಫ್ ರೀಸನ್ ಅಲೋನ್) ಎಂಬ ತನ್ನ ಗ್ರಂಥದಲ್ಲಿ ವಿಸ್ತರಿಸಿದ್ದಾನೆ.

3 ಕ್ರಿಟೀಕುಗಳಲ್ಲಿ ಉಳಿದಿರುವುದು ಕ್ರಿಟೀಕ್ ಆಫ್ ಜಜ್‌ಮೆಂಟ್ ಎಂಬ ಅವನ ಮೂರನೆಯ ಮೇರುಕೃತಿ. ಈ ಗ್ರಂಥದಲ್ಲಿ ಅವನು ಮುಖ್ಯವಾಗಿ ವಿಚಾರಮಾಡುವ ವಿಷಯಗಳು ಎರಡು: ಕಲೆಯ ಕೃತಿಯಲ್ಲಿರುವಂತೆ ಪ್ರಕೃತಿಯಲ್ಲಿ ನಾವು ಕಾಣಬಹುದುದಾದ ಸೌಂದರ್ಯ ಮತ್ತು ಹೊಂದಿಕೆ. ಇದು ಸುಂದರವಾದದ್ದು ಎಂದು ನಾವು ಭಾವಿಸಿದಾಗ ಅದರಲ್ಲಿ ನಾವು ಕಾಣುವ ಹೊಂದಿಕೆಯಿಂದ ನಮಗೆ ಆಹ್ಲಾದವುಂಟಾಗುತ್ತದೆ. ಇದು ವೈಯಕ್ತಿಕವಾಗಿ ಒಬ್ಬರಿಗೆ ಮಾತ್ರ ಉಂಟಾಗುವ ಆಹ್ಲಾದವಲ್ಲ. ಸೂರ್ಯ ಮುಳುಗಿದಾಗ ಅಥವಾ ಕಾಮನಬಿಲ್ಲನ್ನು ನೋಡಿದಾಗ ನಮಗೆ ಕಾಣುವ ಬಣ್ಣಗಳ ಹೊಂದಿಕೆ ಅನೇಕರನ್ನು ಸಂತೋಷದಲ್ಲಿ ಮುಳುಗಿಸುತ್ತದೆ. ಹಾಗೆಯೇ ಒಂದು ಪ್ರಾಣಿಯನ್ನು ನೋಡಿದಾಗ ಅದರ ಅಂಗರಚನೆಯಲ್ಲಿ ಕಾಣುವ ಹೊಂದಿಕೆ ನಮ್ಮನ್ನು ವಿಸ್ಮಯ ಗೊಳಿಸುತ್ತದೆ. ಈ ಸೌಂದರ್ಯದ ಅರಿವು ಭಾವ (ಫೀಲಿಂಗ್) ರೂಪವಾದದ್ದು; ವೈಜ್ಞಾನಿಕ ತಿಳಿವಿನಂತೆ ವಿಕಲ್ಪರೂಪವಾದ್ದಲ್ಲ. ಆದರೂ ಈ ಅರಿವು ಸಾರ್ವತ್ರಿಕ. ಇದು ಸುಂದರವಾದದ್ದು ಎಂಬುದು ಸಾರ್ವತ್ರಿಕವಾದ್ದರಿಂದ ಇದು ವಿಜ್ಞಾನದ ಸಾಮಾನ್ಯ ಪ್ರತಿಜ್ಞೆಯನ್ನು ಹೋಲುತ್ತದೆ. ನಾವು ಪ್ರಕೃತಿಯ ಭಾಗಗಳಲ್ಲಿ ಕಾಣುವ ಹೊಂದಿಕೆ ಉದ್ದೇಶ ಪೂರ್ವಕವಾಗಿ ಯಾವುದೋ ಒಂದು ಅತೀತಚೇತನದಿಂದ ಹುಟ್ಟಿದ್ದು ಎಂದು ಹೇಳಲಾಗದಿದದ್ದರೂ ಆ ಹೊಂದಿಕೆ ಕೇವಲ ಆಕಸ್ಮಿಕವೆಂದು ಹೇಳಲಾಗದು. ಅದು ಕೇವಲ ಆಕಸ್ಮಿಕವೆಂದು ನಂಬುವುದಾದರೆ ನಮಗೆ ವೈಜ್ಞಾನಿಕ ಸಂಶೋಧನೆಯಲ್ಲಿ ಇರುವ ಸಹಜವಾದ ಆಸಕ್ತಿ ಬತ್ತಿಹೋಗುತ್ತದೆ. ವಿಜ್ಞಾನಿಗಳಾದ ನಾವು ಸೂರ್ಯಚಂದ್ರಾದಿಗಳು ಯಾವುದೋ ಒಂದು ಚೇತನ ಸಂಕಲ್ಪಕ್ಕೆ ಅನುಸಾರವಾಗಿ ನಡೆಯುತ್ತಿವೆ ಎಂದು ನಂಬಿ, ಉದ್ದೇಶವನ್ನು ಪ್ರಕೃತಿಯ ನಡೆವಳಿಕೆಗೆ ಆರೋಪಿಸುವುದು ದೂಷ್ಯವಾದರೂ ಪ್ರಕೃತಿ ಹಾಗಿರುವುದೋ ಎಂಬಂತೆ ಭಾವಿಸುವುದು ಅನಿವಾರ್ಯವಾಗುತ್ತದೆ. ವಿಜ್ಞಾನಿಗಳಾದ ನಮಗೆ ಸಾಮರಸ್ಯದಲ್ಲಿ ನಂಬಿಕೆ ತಪ್ಪಿದಲ್ಲಿ ನಮ್ಮ

ವೈಜ್ಞಾನಿಕ ಸಂಶೋಧನೆಯ ಉತ್ಸಾಹ ಕುಸಿದು ಬೀಳುತ್ತದೆ. ಇಂಥ ನಂಬಿಕೆಯ ನಿಯಂತ್ರಣದಿಂದಲ್ಲವೆ ನ್ಯೂಟನ್ ಭೌತ ವಿಜ್ಞಾನ ಸಂಶೋಧನೆಯ ಸಾಹಸದಲ್ಲಿ ತೊಡಗಿದ್ದು. ಈ ಉದ್ದೇಶ ಸಕಲ ವೈಜ್ಞಾನಿಕ ಸಾಹಸಕ್ಕೆ ಆಧಾರವಾದ ಕಲ್ಪನೆ. ಇದು ಕೇವಲ ವೈಜ್ಞಾನಿಕ ಕಾರ್ಯವಿಧಾನಕ್ಕೆ ನಿಯತವಾದ ಕಲ್ಪನೆಯಾಗಿ ಭಾವಿಸಬೇಕೇ ಹೊರತು ವಿಜ್ಞಾನ ವಿಚಾರ ಮಾಡುವ ವಸ್ತುಗಳು ಉದ್ದೇಶಪೂರ್ವಕವಾಗಿ ನಡೆಯುತ್ತವೆ ಎಂಬ ಪರಮ ಸಿದ್ಧಾಂತವಾಗಿ ಭಾವಿಸಕೂಡದು.

**ವಿಚಾರ ಅವಧಿಯ ಅನಂತರ ಬರೆವಣಿಗೆಗಳು:** 1781ರಿಂದ 1791ರ ವರೆಗೆ ಕಾಂಟ್ ರಚಿಸಿದ ಮೂರು ಕೃತಿಗಳು ವಿಚಾರ ಅವಧಿಗೆ ಸೇರಿದವು. ಅದರ ಅನಂತರದ ಬರೆವಣಿಗೆಗಳು ಸಂಕೀರ್ಣ ಸಂಪುಟಗಳು. ರಿಲಿಜನ್ ವಿದಿನ್ ದಿ ಬೌಂಡ್ಸ್ ಆಫ್ ಮಿಯರ್ ರೀಸನ್ (1793) ಮತ ಮೀಮಾಂಸೆಗೆ ಸಂಬಂಧಪಟ್ಟದ್ದು. ಪರ್ಪೆಚ್ಯುಅಲ್ ಪೀಸ್ ಎಂಬ ಗ್ರಂಥ ರಾಜ್ಯಶಾಸ್ತ್ರಕ್ಕೆ ಸಂಬಂಧಪಟ್ಟದ್ದು. ಮೆಟಫಿಸಿಕ್ಸ್ ಆಫ್ ಮಾರಲ್ಸ್ ನೀತಿಶಾಸ್ತ್ರಬೋಧಕರ ಉಪಯೋಗಕ್ಕಾಗಿ ಬರೆದ ಸಣ್ಣ ಗ್ರಂಥ. ಕಾಂಟ್ ತನ್ನ ಜೀವನದ ಅಂತ್ಯಕಾಲದಲ್ಲಿ ಟಿಪ್ಪಣಿಗಳ ರೂಪದಲ್ಲಿ ಕೆಲವು ಲೇಖನಗಳನ್ನು ಬರೆದಿದ್ದ. ಅವುಗಳನ್ನೆಲ್ಲ ಸೇರಿಸಿ ಇವನ ಅನುಯಾಯಿಗಳು ಅದಕ್ಕೆ ಓಪಸ್ ಕಾಸ್ಟೂಮಮ್ ಎಂಬ ಶೀರ್ಷಿಕೆಯನ್ನು ಕೊಟ್ಟು ಅವನ ಮರಣಾನಂತರ ಬರ್ಲಿನ್‌ನಲ್ಲಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದರು. ಈ ಟಿಪ್ಪಣಿಗಳಲ್ಲಿ ಇವನ ಅನಂತರ ಬಂದ ಷೆಲ್ಲಿಂಗ್ ಮುಂತಾದವರ ತತ್ತ್ವಕ್ಕೆ ಪ್ರಚೋದಕಗಳಾದ ಅಂಶಗಳು ಕಂಡುಬರುತ್ತವೆ.

ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದ ದಾರಿಯಲ್ಲಿ ಕಾಂಟನ ಸ್ಥಾನವೇನು, ಇವನ ತತ್ತ್ವ ಮುಂದೆ ಯಾರ ಮೇಲೆ ಎಷ್ಟು ಪ್ರಭಾವ ಬೀರಿತು ಎಂಬುದನ್ನು ತಿಳಿಯಲು (**ನೋಡಿ– ಆಧುನಿಕ–ಪಾಶ್ಚಾತ್ಯತತ್ತ್ವದ ಮುನ್ನಡೆ**). (ಜಿ.ಎಚ್.)

**ಕಾಂಟನ ಸೌಂದರ್ಯ ಮೀಮಾಂಸೆ :** ಕ್ರಿಟೀಕ್ ಆಫ್ ಜಜ್‌ಮೆಂಟ್ ಎನ್ನುವ ಗ್ರಂಥದಲ್ಲಿ ಕಾಂಟನ ಸೌಂದರ್ಯ ಮೀಮಾಂಸೆ ಅಡಕವಾಗಿದೆ. ಸೌಂದರ್ಯಾನುಭವವನ್ನು ಒಂದು ವಿಶಿಷ್ಟ ರೀತಿಯ ಜ್ಞಾನವೆಂದೇ ಈತ ಪರಿಗಣಿಸುತ್ತಾನೆ. ಇದೊಂದು ಪರಿಪೂರ್ಣ ಜ್ಞಾನ. ಆದರೆ ಇದನ್ನು ಸಾಧಿಸುವುದು ಕೇವಲ ಬುದ್ಧಿಯಿಂದ ಆಗದ ಮಾತು. ಬುದ್ಧಿಗೆ ನಿಲುಕುವ ಜ್ಞಾನ ಅನುಭವಸಿದ್ಧವಾಗಿರುತ್ತದೆ. ಅನುಭವದ ಆಧಾರವೂ ಇಲ್ಲದೆ ಅನುಮಾನವೂ ಕಷ್ಟವಾಗುತ್ತದೆ. ಎಂದರೆ ಇದು ಬುದ್ಧಿ ಅಥವಾ ತರ್ಕಜನ್ಯ ಜ್ಞಾನದ ಮಿತಿ. ಈ ಮಿತಿ ನೀತಿಜ್ಞಾನದಲ್ಲಿ ಸ್ವಲ್ಪ ಸುಧಾರಿಸಿರುತ್ತದೆ. ಏಕೆಂದರೆ ನೀತಿಜ್ಞಾನ ಬುದ್ಧ್ಯಾರೂಢ. ಇಂಥ ಸಂದರ್ಭಗಳಲ್ಲಿ ಅನುಭವದ ಆಧಾರವಿಲ್ಲದೆಯೇ ಪ್ರತ್ಯಕ್ಷ ಜ್ಞಾನ ನಮ್ಮನ್ನು ನಡೆಸಿರುತ್ತದೆ. ಇಂಥ ಪ್ರತ್ಯಕ್ಷ ಜ್ಞಾನದ ಮೂಲಕವೇ ಆತ್ಮಜ್ಞಾನ ಲಭಿಸುವುದು.

ಅನುಭವಲೋಕದ ಒಂದು ಇರುವಿಕೆ, ನೀತಿಲೋಕದ ಒಂದು ಆದರ್ಶ ಸ್ಥಿತಿ– ಇವೆರಡೂ ಒಂದೇ ಸಂದರ್ಭದಲ್ಲಿ ಸಿದ್ಧಿಸುವುದು ದುರ್ಲಭ. ಎಂದರೆ ಹೇಗೆ ಇರಬೇಕೋ ಹಾಗೆಯೇ ಇರುವುದು ಬಹಳ ಅಪರೂಪ. ಅಂಥ ಸ್ಥಿತಿ ಒದಗಿದರೆ ಅದು ನಮ್ಮ ಪುಣ್ಯ. ಇಂಥ ಒಂದು ಭಾಗ್ಯ ಅಥವಾ ಸುಸಂದರ್ಭ ಸೌಂದರ್ಯ ಕ್ಷೇತ್ರದಲ್ಲಿ ಲಭಿಸುತ್ತದೆಂದು ಕಾಂಟನ ಮತ. ಎಂದರೆ ಸೌಂದರ್ಯಾನುಭವದಲ್ಲಿ ತರ್ಕ ಮತ್ತು ನೀತಿಗಳು ಒಂದಾಗುತ್ತವೆ. ಆದ್ದರಿಂದ ಸೌಂದರ್ಯಾನುಭವ ಇವೆರಡಕ್ಕಿಂತಲೂ ಹೆಚ್ಚು ಉದಾತ್ತ ಮಟ್ಟದಲ್ಲಿದ್ದು ಆತ್ಮದರ್ಶನದ ಸಾಧನವಾಗುತ್ತದೆ. ಆ ಕ್ಷೇತ್ರದಲ್ಲಿ ಆತ್ಮದ ಪ್ರಕಾಶನಕ್ಕೆ ಅವಕಾಶವಿದ್ದು ಆತ್ಮ ತಾನೇ ತಾನಾಗಿ ಮೆರೆಯುತ್ತದೆ. ಸೌಂದರ್ಯಾನುಭವದ ಲಕ್ಷಣವೆಂದರೆ–ಅದು ವೈಯಕ್ತಿಕವಲ್ಲ, ಸಾರ್ವತ್ರಿಕ, ಸೌಂದರ್ಯದ ವಸ್ತು ದೇಶಕಾಲಗಳಲ್ಲಿರಬಹುದಾದ ವಸ್ತುವಲ್ಲ. ತರ್ಕಜ್ಞಾನ ಒಂದು ಸಿದ್ಧಾಂತವನ್ನು ಸೃಷ್ಟಿಮಾಡುವಂತೆ ಸೌಂದರ್ಯಾನುಭವ ಒಂದು ಸುಂದರ ವಸ್ತುವನ್ನು ನಿರ್ಮಾಣಮಾಡುತ್ತದೆ. ಈ ವಸ್ತು ಇಂದ್ರಿಯಾತೀತ ಮತ್ತು ಬುದ್ಧಿಗೆ ಅಪ್ರಾಪ್ಯ. ಎಂದರೆ ಸೌಂದರ್ಯಾನುಭವದ ವಸ್ತು ವ್ಯವಹಾರಿಕ ಅಥವಾ ಪ್ರಾಪಂಚಿಕ ನಿಯಮಗಳಿಗೆ ಅತೀತವಾಗಿದ್ದು, ಅವುಗಳ ಮಾನದಂಡಗಳಿಗೆ ತಲೆಬಾಗುವುದಿಲ್ಲ.

ಕಾಂಟನ ಈ ವಿಚಾರದ ಮೇರೆಗೆ, ಸೌಂದರ್ಯ ಜ್ಞಾನ ತರ್ಕ ಮತ್ತು ನೀತಿಜ್ಞಾನಗಳಿಂದ ಪ್ರತ್ಯೇಕವೆಂದು ತಿಳಿಯುತ್ತದೆ. ಸೌಂದರ್ಯಾನುಭವ ಇಂದ್ರಿಯಜನ್ಯವಲ್ಲ, ಬೋಧಕವಲ್ಲ. ಅದೊಂದು ನಿಸ್ವಾರ್ಥ, ನಿರ್ಲಿಪ್ತ, ಅನಾಸಕ್ತ ಅನುಭವ. ಆದ್ದರಿಂದ ಒಂದು ಕಲಾಕೃತಿಯ ನಿರ್ಮಾಣದಲ್ಲಿ ಕಲಾವಿದನಾದ ಮಾನವ ಕೇವಲ ಕುಂಚ. ಕಲಾಕೃತಿ ಸ್ವಯಂಶಾಸನಾಧಿಕಾರಿಯಾಗಿದ್ದು ತನ್ನನ್ನು ತಾನೇ ಚಿತ್ರಿಸಿಕೊಳ್ಳುವ ಒಂದು ಮಹಾ ಚೈತನ್ಯವಾಗಿದೆ. ಒಂದು ಕೃತಿಯ ಆದರ್ಶ ಆ ಕೃತಿಗೇ ಸೇರಿದ್ದು. ಅದಕ್ಕೆ ಅನ್ಯವಾದ ಆದರ್ಶ ಬೇರೊಂದಿಲ್ಲ. ಕಲಾವಿದನಾಗಲೀ ವಿಮರ್ಶಕನಾಗಲೀ ಅದನ್ನು ನಿರ್ದೇಶಿಸುವ ಹಾಗೆಯೂ ಇರುವುದಿಲ್ಲ. ಕಲಾಕೃತಿಯೆಂದರೆ ಸ್ವಯಂ ಪರಿವರ್ತನಾ ಶಕ್ತಿಯನ್ನೂ ನಿರ್ದೇಶನ ಶಕ್ತಿಯನ್ನೂ ಹೊಂದಿರುವ ಬ್ರಹ್ಮಚೈತನ್ಯ. ಈ ಕಾರಣದಿಂದ ಬಹು ಶ್ರೇಷ್ಠ ಕಲಾಕೃತಿ ಅಮರ ಮತ್ತು ಸರ್ವ ಸಮರ್ಪಕ. (ಕೆ.ಬಿ.ಆರ್.)

**ಕಾಂಟಿ, ನಿಕ್ಕೊಲೊ ಡೆ :** 1395–1469. ವೆನಿಸಿನ ವ್ಯಾಪಾರಿ ಮತ್ತು ಪ್ರವಾಸಿ. ಚಿಯೊಗ್ಗಿಯಲ್ಲಿ ಜನಿಸಿ ಸಿರಿಯದ ಮುಖ್ಯನಗರ ಡಮಾಸ್ಕಸಿನಲ್ಲಿ ಬಾಲ್ಯವನ್ನು ಕಳೆದ. ಅಲ್ಲಿ ಅರಬ್ಬೀಭಾಷೆಯನ್ನೂ ಕಲಿತ. 1414ರಿಂದ ಇರಾಕ್, ಇರಾನ್ ದೇಶಗಳಲ್ಲಿ ಅಲೆದಾಡಿ ಅನಂತರ ಇರಾನಿನ ಕಲಕಟಿಯದಲ್ಲಿ ಸ್ಥಳೀಯ ವ್ಯಾಪಾರಿಗಳ ಜೊತೆಗೂಡಿದ. ಅವರೊಡನೆ ಭಾರತ ಮತ್ತು ಪೌರಸ್ತ್ಯ ದೇಶಗಳಿಗೆ ವ್ಯಾಪಾರಸಂಬಂಧವಾಗಿ ಭೇಟಿಕೊಟ್ಟ. ಭಾರತದ ಪಶ್ಚಿಮ ಕರಾವಳಿಯಲ್ಲಿರುವ ಕ್ಯಾಂಬೆಗೂ ವಿಜಯನಗರಸಾಮ್ರಾಜ್ಯ ಮತ್ತು ಮಲಬಾರ್‌ಗಳಿಗೂ ಭೇಟಿಕೊಟ್ಟ. ಈತ ಬರೆದಿರುವ ಪ್ರವಾಸಾನುಭವಗಳಲ್ಲಿ ವಿಜಯನಗರಸಾಮ್ರಾಜ್ಯ ವೈಭವವನ್ನು ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ಕಾಂಟಿ ವಿಜಯನಗರವನ್ನು ಸಂದರ್ಶಿಸಿದಾಗ ಅಲ್ಲಿ ಆಳುತ್ತಿದ್ದವನು ಎರಡನೆಯ ದೇವರಾಯ. ಆ ನಗರದ ಸುತ್ತಳತೆ 96 ಕಿಮೀಯೆಂದೂ ಅದು ದೊಡ್ಡ ಮತ್ತು ಬಲವಾದ ಕೋಟೆ ಗೋಡೆಗಳಿಂದ ರಕ್ಷಿತವಾಗಿತ್ತೆಂದೂ ಅಲ್ಲಿ ಯಾವಾಗಲೂ 90,000 ಜನ ಯುದ್ಧಕ್ಕೆ ಸಜ್ಜಾಗಿರುತ್ತಿದ್ದರೆಂದೂ ದೊರೆ ಬಹಳ ಪ್ರಬಲನಾಗಿದ್ದನೆಂದೂ ಕಾಂಟಿ ಹೇಳಿದ್ದಾನೆ. ಉಗಾದಿ, ನವರಾತ್ರಿ, ದೀಪಾವಳಿ ಮುಂತಾದ ಮುಖ್ಯ ಹಬ್ಬಗಳನ್ನು ಕುರಿತು ಕಾಂಟಿ ಮಾಡಿರುವ ವರ್ಣನೆ ಸ್ವಾರಸ್ಯವಾದದ್ದು. ಹೋಳಿ ಹಬ್ಬದ ಓಕುಳಿಯಾಟವನ್ನು ಈತ ಚೆನ್ನಾಗಿ ಬಣ್ಣಿಸಿದ್ದಾನೆ. ಬಹುಪತ್ನೀತ್ವ ಮತ್ತು ಸತಿ ಪದ್ಧತಿಗಳು ಆಚರಣೆಯಲ್ಲಿದ್ದುವೆಂದು ಬರೆದಿದ್ದಾನೆ. ರಾಣಿವಾಸಕ್ಕೆ ಸೇರಿದ 12,000 ಹೆಂಗಸರನ್ನೂ ರಾಜನ ಹೆಂಡಿರೆಂದು ಈತ ಹೇಳಿರುವುದು ತಪ್ಪೆಂದು ಕಾಣುತ್ತದೆ.

ಅನಂತರ ಈತ ಸಿಂಹಳ, ಸುಮಾತ್ರ ಮತ್ತು ತೆನಾಸರಿಮ್ ಮಾರ್ಗವಾಗಿ ಬಂಗಾಳಕ್ಕೂ ತರುವಾಯ ಅರಾಕಾನ್ ಮಾರ್ಗವಾಗಿ ಬರ್ಮಾಕ್ಕೂ ಅಲ್ಲಿಂದ ಜಾವಕ್ಕೂ ಹೋಗಿದ್ದ. ಜಾವದಿಂದ ಹಿಂತಿರುಗಿ ಕ್ವಿಲಾನಿಗೆ ಬಂದ. ಭಾರತದ ಪಶ್ಚಿಮತೀರ ಮತ್ತು ಪರ್ಷಿಯನ್ ಕೊಲ್ಲಿಯ ಮೂಲಕ ಜಿಡ್ಡಾವರೆಗೂ ಹೋಗಿ ಅನಂತರ ಭೂಮಾರ್ಗವಾಗಿ ಕೈರೋಗೆ ತೆರಳಿ ಅಲ್ಲಿಂದ ವೆನಿಸ್ ನಗರವನ್ನು 1444ರಲ್ಲಿ ತಲಪಿದ. 1469ರಲ್ಲಿ ನಿಧನವಾಗುವವರೆಗೂ ಅಲ್ಲಿ ವ್ಯಾಪಾರ ಮಾಡುತ್ತಿದ್ದ. (ಬಿ.ಎಸ್.ಕೆ.)

**ಕಾಂಡಕೊರಕ ಜೀರುಂಡೆಗಳು :** ಕೀಟವರ್ಗದ ಕೋಲಿಯಾಪ್ಟರ ಗಣಕ್ಕೆ ಸೇರಿದ ಜೀರುಂಡೆಗಳು. ಇವು ಸಾಮಾನ್ಯವಾಗಿ ದೀರ್ಘಕಾಲ ಬಾಳುವ ಬೃಹದಾಕಾರದ ಮರಗಳ ಕಾಂಡಗಳನ್ನು ಕೊರೆಯುತ್ತವೆ. ಬೇರು, ಕುಡಿ, ಮೊಗ್ಗು, ಕಾಯಿ, ಬೀಜಗಳನ್ನೂ ಕೊರೆಯುವುದುಂಟು. ಪ್ರೌಢಕೀಟಗಳು ಕಾಂಡವನ್ನು ಕೊರೆಯಲಾರವಾದರೂ ಇವುಗಳ ಮರಿಗಳು (ಗ್ರಬ್) ಮಾತ್ರ ಕಾಂಡಕೊರೆಯುವುದರಲ್ಲಿ ಕುಶಲಿಗಳು. ಇದರಿಂದಾಗಿ ಪ್ರೌಢಕೀಟಗಳಿಗೂ ಕಾಂಡಕೊರಕ ಜೀರುಂಡೆಗಳೆಂದೇ ಹೆಸರು ಬಂದಿದೆ. ಮರಿಗಳು ಬಿಳಿ ಅಥವಾ ನಸುಹಳದಿ ಬಣ್ಣದವು. ಇವುಗಳ ದೇಹವನ್ನು ಸ್ಪಷ್ಟವಾಗಿ ತಲೆ, ಎದೆ ಹಾಗೂ ಉದರ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಕೆಲವು ಪ್ರಭೇದಗಳಲ್ಲಿ ಎದೆಯ ಭಾಗದಲ್ಲಿ 3 ಜೊತೆ ಕಾಲುಗಳಿವೆ, ಆದರೆ ಉದರಭಾಗದಲ್ಲಿ ಉಪಪಾದಗಳಿಲ್ಲ. ಇನ್ನು ಕೆಲವು ಪ್ರಭೇದಗಳಲ್ಲಿ ಸ್ಪಷ್ಟವಾದ ತಲೆಯಾಗಲೀ ಕಾಲು ಹಾಗೂ ಉಪಪಾದಗಳಾಗಲೀ ಇಲ್ಲ. ಎದೆಯ ಕಾಲುಗಳುಳ್ಳ ಪ್ರಭೇದಗಳನ್ನು ಬ್ಯೂಪ್ರೆಸ್ಟಿಡೀ, ಸೆರಾಂಬೈಸಿಡೀ ಮತ್ತು ಸ್ಕೊಲೈಟಿಡೀ ಎಂಬ ಮೂರು ಕುಟುಂಬಗಳಿಗೂ ಕಾಲುಗಳಿಲ್ಲದವನ್ನು ಕರ್ಕ್ಯೂಲಿಯಾನಿಡೀ ಕುಟುಂಬಕ್ಕೂ ಸೇರಿಸಿದ್ದಾರೆ.

ಈ ಮರಿಗಳು ಪ್ರೌಢಾವಸ್ಥೆ ತಲುಪುವವರೆಗೂ ಕಾಂಡಗಳೊಳಗೆ ರಂಧ್ರಗಳನ್ನು ಕೊರೆದು ತಿರುಳು, ರಸ ತಿಂದುಕೊಂಡು ಹೊರವಾತಾವರಣದ ಸಂಪರ್ಕವಿಲ್ಲದೆ ಜೀವಿಸುತ್ತವೆ. ಇವುಗಳಿಂದ ಕೆಲವು ಆರ್ಥಿಕ ಮಹತ್ತ್ವವುಳ್ಳ ಮರಗಳಿಗೆ ಆಗುವ ಹಾನಿ ಅಪಾರ. ಹುಳು ಹತ್ತಿದ ಸಸ್ಯಗಳ ಬೆಳೆವಣಿಗೆ ಕುಂಠಿತಗೊಳ್ಳುವುದಲ್ಲದೆ, ಎಲೆ ರೆಂಬೆಗಳು ಒಣಗಿ ಹೋಗುತ್ತವೆ. ಕಾಯಿಗಳೂ ಉದುರಿಹೋಗುತ್ತವೆ. ಅಲ್ಲದೆ ಕಾಂಡದಲ್ಲೆಲ್ಲ ಇವುಗಳ ಕೊರೆತದಿಂದ ರಂಧ್ರಗಳಾಗುವುದರಿಂದ ಅದು ಟೊಳ್ಳಾಗಿ ಗಾಳಿ ಜೋರಾಗಿ ಬೀಸಿದರೆ ಮುರಿದು ಬೀಳುವ ಸಂಭವವುಂಟು.

ಕಾಂಡಕೊರಕ ಜೀರುಂಡೆಗಳಲ್ಲಿ ಹಲವಾರು ಪ್ರಭೇದಗಳಿವೆ. ಇವುಗಳಲ್ಲಿ ಮುಖ್ಯವಾದವು ಇವು: 1. *ಸ್ತೀನಾಪ್ಟೆರ ಗಾಸಿಪಿಯೈ* (ಹತ್ತಿಗಿಡದ ಕಾಂಡಕೊರಕ), 2. *ಬ್ಯಾಟೋಸೀರ ರೂಫೋಮ್ಯಾಕ್ಯುಲೇಟ* (ಮಾವಿನ ಕಾಂಡಕೊರಕ). 3. *ಕ್ಲೋರಿಡೋಲಮ್ ಆಲ್ಕಮೀನ್* (ಕಿತ್ತಳೆ ಜಾತಿಯ ಗಿಡಗಳ ಕಾಂಡಕೊರಕ), 4. *ಜೈಲೋಟ್ರೇಕಸ್ ಕ್ವಾಡ್ರಿಪಿಸ್* (ಕಾಫಿ ಕಾಂಡಕೊರಕ), 5. *ಪ್ಲಾಕೀಡೆರಸ್ ಫೆರುಜಿನಿಯಸ್* (ಗೋಡಂಬಿಯ ಕಾಂಡಕೊರಕ). 6. *ಸೈಲಾಸ್ ಫಾರ್ಮಿಕೇರಿಯಸ್* (ಗೆಣಸು ಕಾಂಡಕೊರಕ), 7. *ರಿಂಕೋಫೋರಸ್ ಫೆರುಜಿನಿಯಸ್* (ತೆಂಗಿನ ಕಾಂಡಕೊರಕ), 8. *ಜೈಲೆಬೋರಸ್ ಮಾರ್ಸಾಟೈ* (ಕಾಫಿ ಕಾಂಡಕೊರಕ). (ಡಿ.ಎಸ್.)

**ಕಾಂಡಕೊರಕ ನೊಣ :** ಕೀಟವರ್ಗದ ಡಿಪ್ಟರ (ನೊಣ) ಗಣದ ಸೆಸಿಡೋಮೈಯಿಡೀ, ಅಗ್ರೋಮೈಜಿಡೀ ಮತ್ತು ಆಂಥೊಮೈಯಿಡೀ – ಎಂಬ ಕುಟುಂಬಗಳಿಗೆ ಸೇರಿದ ನೊಣಗಳು (ಸ್ಟೆಮ್ ಬೋರರ್ ಫ್ಲೈ). ಇವುಗಳಲ್ಲಿ ಸೆಸಿಡೋಮೈಯಿಡೀ ಕುಟುಂಬದ ಪ್ಯಾಕಿಡಿಪ್ಲಾಸಿಸ್ ಒರೈಜೆ ಎಂಬ ನೊಣ ಬತ್ತದ ಕಣೆ ಅಥವಾ ಕೊಳವೆ ರೋಗಕ್ಕೆ ಕಾರಣ. ಅಗ್ರೋಮೈಜಿಡೀಗೆ ಸೇರಿದ ಅಗ್ರೋಮೈಜ ಫೇಸಿಯೋಲಿ ಅಲಸಂದೆ (ತಡಗುಣಿ) ಬೆಳೆಯ ಮುಖ್ಯವಾದ ಪೀಡೆ. ಇದರ ಪ್ರೌಢಾವಸ್ಥೆಯ ನೊಣ ಸಾಮಾನ್ಯ ನೊಣವನ್ನು ಹೋಲುತ್ತದೆ. ಇದರ ತೆಳು ಹಳದಿ ಬಣ್ಣದಮರಿಹುಳುಗಳು (ಮ್ಯಾಗಟ್) ಎಳೆಗಿಡದ ಮೃದು ಕಾಂಡವನ್ನು ಕೊರೆಯುವುದರಿಂದ ಗಿಡ ಬಾಡುತ್ತದೆಯಲ್ಲದೆ ಕೆಲವು ವೇಳೆ ಸಾಯುವುದೂ ಉಂಟು. ತಾಯಿ ನೊಣ ಮೃದುಕಾಂಡದ ಮೇಲೆ ತೊಗಟೆಯೊಳಗೆ ಮೊಟ್ಟೆಗಳನ್ನು ಇಡುತ್ತದೆ. ಆಂಥೊಮೈಯಿಡೀ ಕುಟುಂಬಕ್ಕೆ ಸೇರಿದ ಅಥೆರಿಗೋನ ಇಂಡಿಕ ಎಂಬ ನೊಣ ಜೋಳದ ಬೆಳೆಯ ಎಳೆ ಸಸಿಗಳಿಗೆ ಮಾರಕ. ಇದು ಕಪ್ಪು ಬಣ್ಣದ ಸಣ್ಣ ನೊಣ; ಮೊಳೆಯುತ್ತಿರುವ ಸಸಿಯ ಮೆತುವಾದ ಕಾಂಡದ ಮೇಲೆ ಮೊಟ್ಟೆಗಳನ್ನಿಡುತ್ತದೆ. ಮರಿಹುಳುಗಳು ಕಾಂಡವನ್ನು ಕೊರೆದು ಸತ್ತ ಸುಳಿಗಳಿಗೆ (ಡೆಡ್ ಹಾರ್ಟ್ಸ್) ಕಾರಣವಾಗುತ್ತದೆ. ಬತ್ತಕ್ಕೆ ಅಥೆರಿಗೋನ ಒರೈಜೆ ಎಂಬ ನೊಣದಿಂದಲೂ ನವಣೆಗೆ ಅ. ಡಿಸ್ಪರ್ಸ ಎಂಬ ನೊಣದಿಂದಲೂ ಇದೇ ರೀತಿಯ ತೊಂದರೆಯುಂಟು. (ಡಿ.ಎಸ್.)

**ಕಾಂಡಕೊರಕ ಹುಳುಗಳು :** ವಿವಿಧ ಬಗೆಯ ಸಸ್ಯಗಳ ಕಾಂಡಗಳನ್ನು ಕೊರೆದು ಅವುಗಳೊಳಗಿನ ರಸ ಕುಡಿದು ಜೀವನ ಸಾಗಿಸುವ ಕೆಲವು ಬಗೆಯ ಮರಿಕೀಟಗಳು. ಕೀಟವರ್ಗದ ಲೆಪಿಡಾಪ್ಟರ (ಪತಂಗ), ಕೋಲಿಯಾಪ್ಟರ (ಜೀರುಂಡೆ) ಮತ್ತು ಡಿಪ್ಟರ (ನೊಣ) ಗಣಗಳ ಕೀಟಗಳ ಮರಿಗಳಿಗೆ ಈ ಸಾಮಾನ್ಯ ಹೆಸರಿದೆ. ಈ ಮರಿಕೀಟಗಳನ್ನು ಕ್ರಮವಾಗಿ ಕ್ಯಾಟರ್‌ಪಿಲ್ಲರ್ (ಕಂಬಳಿಹುಳು), ಗ್ರಬ್ ಮತ್ತು ಮ್ಯಾಗಟ್ ಎಂದು ಕರೆಯಲಾಗುತ್ತದೆ. ತಾಯಿಕೀಟ ಸಸ್ಯಗಳ ಮೇಲೆ ತೊಗಟೆಗಳ ಕೆಳಗೆ ಇಡುವ ಮೊಟ್ಟೆಗಳೊಡೆದು ಹೊರಬರುವ ಮರಿಗಳಿವು. ಹೊರಬಂದ ಮರಿಗಳು ಸಸ್ಯಗಳ ಮೃದುವಾದ, ಭಾಗಗಳನ್ನು ಕೊರೆದು, ಅಲ್ಲಿನ ಅಂಗಾಂಶಗಳನ್ನು ತಿಂದು ಬೆಳೆಯುತ್ತವೆ, ಸಾಮಾನ್ಯವಾಗಿ ಇವು ಕಾಂಡವನ್ನು ಮಾತ್ರ ಕೊರೆಯುವುದಾದರೂ ಬೇರು, ಎಳೆಚಿಗುರು, ಮೊಗ್ಗು ಕಾಯಿ ಮುಂತಾದವನ್ನೂ ಕೊರೆಯುವುದುಂಟು. ಸ್ಥೂಲವಾಗಿ ಕಾಂಡಕೊರಕ ಹುಳುಗಳನ್ನು ಕೆಳಕಂಡಂತೆ ವಿಂಗಡಿಸಬಹುದು.

1. **ದಂಟುಕೊರಕಗಳು:** ಬತ್ತ, ರಾಗಿ, ಜೋಳ ಮುಂತಾದ ಹುಲ್ಲಿನ ಜಾತಿಯ ಸಸ್ಯಗಳ ಕಾಂಡಗಳನ್ನು ಕೊರೆಯುತ್ತವೆ. ಲೆಪಿಡಾಪ್ಟರ ಕಣಕ್ಕೆ ಸೇರಿದೆ.

2. **ಮೃದು ಕಾಂಡಕೊರಕಗಳು;** ಏಕವಾರ್ಷಿಕ ಸಸ್ಯಗಳ ಕಾಂಡ ಕೊರೆಯುವಂಥವು. ಉದಾಹರಣೆಗೆ ಹೊಗೆಸೊಪ್ಪು, ಬದನೆ ಇತ್ಯಾದಿ. ಲೆಪಿಡಾಪ್ಟರ ಗಣಕ್ಕೆ ಸೇರಿವೆ.

3. **ಗಟ್ಟಿಕಾಂಡಕೊರಕಗಳು:** ಮರ ಮತ್ತು ಪೊದೆಸಸ್ಯಗಳ ಕಾಂಡಗಳನ್ನು ಕೊರೆಯುವ ಹುಳುಗಳಿವು. ಇವು ಕೋಲಿಯಾಪ್ಟರ ಗಣಕ್ಕೆ ಸೇರಿವೆ.

4. **ಎಳೆಸಸಿ ಕೊರಕಗಳು:** ಕಾಫಿ, ಕಿತ್ತಳೆ, ಮಾವು, ತೆಂಗು ಮುಂತಾದ ಸಸ್ಯಗಳ ಎಳೆಸಸಿಗಳನ್ನು ಕೊರೆಯುವ ಹುಳುಗಳು ಇವು ಡಿಪ್ಟರ ಗಣಕ್ಕೆ ಸೇರಿವೆ. (ಡಿ.ಎಸ್.)

**ಕಾಂಡನ್, ಇ.ಯು. :** (1902) ಅಮೆರಿಕನ್ ಭೌತವಿಜ್ಞಾನಿ. ಶಕಲ ಸಿದ್ಧಾಂತ (ಕ್ವಾಂಟಮ್ ಥಿಯೊರಿ), ಅಣು ಮತ್ತು ಪರಮಾಣು ರೋಹಿತಶಾಸ್ತ್ರ, ನ್ಯೂಕ್ಲಿಯಸ್ಸಿಗೆ ಸಂಬಂಧಿಸಿದ ಭೌತವಿಜ್ಞಾನ ಈ ಕ್ಷೇತ್ರಗಳಲ್ಲಿಯೇ ಅಲ್ಲದೆ ಅತಿ ಸೂಕ್ಷ್ಮ ರೇಡಿಯೊ ಅಲೆಗಳಿಗೆ ಸಂಬಂಧಿಸಿದಂತೆಯೂ ಅನೇಕ ವ್ಯಾಪಕ ಸಂಶೋಧನೆಗಳ ಖ್ಯಾತಿ ಈತನದು. ಅಣುರೋಹಿತಕ್ಕೆ ಸಂಬಂಧಿಸಿದಂತೆ ಕಾಂಡನ್ ಮತ್ತು ಇನ್ನೊಬ್ಬ ವಿಜ್ಞಾನಿ ಫ್ರಾಂಕ್ ಇಬ್ಬರೂ ಸೇರಿ ಒಂದು ಮುಖ್ಯ ತತ್ತ್ವವನ್ನು ಪ್ರತಿಪಾದಿಸಿದ್ದಾರೆ. ಅಣುವಿನಲ್ಲಿರುವ ಎಲೆಕ್ಟ್ರಾನ್ ಒಂದು ಶಕ್ತಿ ಮಟ್ಟದಿಂದ ಇನ್ನೊಂದು ಶಕ್ತಿಮಟ್ಟಕ್ಕೆ ಸ್ಥಿತ್ಯಂತರಗೊಳ್ಳಲು ಬೇಕಾಗುವ ಕಾಲಾವಧಿ ನ್ಯೂಕ್ಲಿಯಸ್ಸಿನ ಕಂಪನ ಚಲನೆಗೆ ಹೋಲಿಸಿದಾಗ ಅತ್ಯಧಿಕ ಪ್ರಮಾಣವುಳ್ಳದ್ದಾಗಿರುವ ಕಾರಣ ಈ ಅವಧಿಯಲ್ಲಿ ನ್ಯೂಕ್ಲಿಯಸ್ ನಿಶ್ಚಲವಾಗಿರುವುದೆಂದು ಭಾವಿಸಬಹುದು ಎಂಬುದೇ ಫ್ರಾಂಕ್–ಕಾಂಡನ್ ತತ್ತ್ವದ ಮುಖ್ಯ ಅಂಶ. ಈ ತತ್ತ್ವ ಪ್ರತಿಪಾದಿತವಾದ ಕೆಲವು ವರ್ಷಗಳಲ್ಲೇ ಇದನ್ನು ಶಕಲಸಿದ್ಧಾಂತದಿಂದ ಪಡೆಯಬಹುದೆಂದು ಗೊತ್ತಾಯಿತು. ಘನ ಪದಾರ್ಥಗಳಿಗೆ ಸಂಬಂಧಿಸಿದ ಭೌತವಿಜ್ಞಾನ ಭಾಗದಲ್ಲಿ ಈ ತತ್ತ್ವದ ಅನೇಕ ಅನ್ವಯಗಳು ಕಂಡುಬಂದಿವೆ.

ಪ್ರಿನ್ಸ್‌ಟನ್, ಮಿನ್ನಿಸೋಟ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ್ದೇ ಅಲ್ಲದೆ, ಕಾಂಡನ್ 1945ರಿಂದ 1951ರವರೆಗೆ ಅಮೆರಿಕದ ಬ್ಯೂರೋ ಆಫ್ ಸ್ಟಾಂಡರ್ಡ್ಸ್ ಸಂಸ್ಥೆಯ ಮುಖ್ಯಾಧಿಕಾರಿಯಾಗಿಯೂ ಆಗಿದ್ದ. 1958ರಲ್ಲಿ ಹೂ ಓಡಿಷಾ ಮತ್ತು ಕಾಂಡನ್ ಭೌತವಿಜ್ಞಾನಕ್ಕೆ ಸಂಬಂಧಿಸಿದಂತೆ ಹ್ಯಾಂಡ್ ಬುಕ್ ಆಫ್ ಫಿಸಿಕ್ಸ್ ಎಂಬ ಅತ್ಯುಪಯುಕ್ತ ಭೌತವಿಜ್ಞಾನದ ಕೈಪಿಡಿಯೊಂದನ್ನು ಪ್ರಕಟಿಸಿದರು. (ಕೆ.ಎಸ್.ಆರ್.ಐ.)

**ಕಾಂಡಾರ್ ಹಕ್ಕಿ :** ದಕ್ಷಿಣ ಅಮೆರಿಕದ ಆಂಡಿಸ್ ಪರ್ವತ ಪ್ರದೇಶಗಳಲ್ಲಿ ಸಿಗುವ ಅಪೂರ್ವ ಜಾತಿಯ ರಣಹದ್ದು. ಸಾಮಾನ್ಯವಾಗಿ 10,000' – 16,000' ಎತ್ತರದ ಪ್ರದೇಶಗಳಲ್ಲಿದರ ವಾಸ. ಪಕ್ಷಿವರ್ಗದ ಕೆಥಾರ್ಟಿಡೀ ಕುಟುಂಬಕ್ಕೆ ಸೇರಿದೆ. ಇದರ ಶಾಸ್ತ್ರೀಯನಾಮ ವಲ್ಚರ್ ಗ್ರೈಫಸ್. ಇದರ ಹತ್ತಿರ ಸಂಬಂಧಿಯಾದ ಜಿಮ್ನೋಜಿಪ್ಸ್



ಕ್ಯಾಲಿಫೋರ್ನಿಯಾನಸ್ ಎಂಬ ರಣಹದ್ದನ್ನು ಸಹ ಕ್ಯಾಲಿಫೋರ್ನಿಯ ಕಾಂಡಾರ್ ಎಂದು ಕರೆಯಲಾಗುತ್ತದೆ. ಇದು ಉತ್ತರ ಅಮೆರಿಕದ ಕ್ಯಾಲಿಫೋರ್ನಿಯ ರಾಜ್ಯದ ದಕ್ಷಿಣ ಭಾಗದಲ್ಲಿ ಕಾಣಬರುತ್ತದೆ.

ಕಾಂಡಾರ್ ಹಕ್ಕಿ ರಣಹದ್ದು, ಗಿಡುಗ, ಗರುಡ ಮುಂತಾದ ಹಕ್ಕಿಗಳನ್ನು ಹೋಲುತ್ತದೆ. ದೈತ್ಯಾಕಾರದ ಹಕ್ಕಿಯಿದು. ಸಾಧಾರಣವಾಗಿ 4' ಉದ್ದವಿದೆ. ರೆಕ್ಕೆಯನ್ನು ಹರಡಿದಾಗ ಒಂದು ತುದಿಯಿಂದ ಇನ್ನೊಂದು ತುದಿಗೆ 9'–10' ಅಗಲ. ಇದರ ತಲೆ ಮತ್ತು ಕತ್ತಿನ ಮೇಲೆ ಪುಕ್ಕಗಳಿಲ್ಲ. ನೆತ್ತಿ ಚಪ್ಪಟೆಯಾಗಿದೆ. ಗಂಡಿನಲ್ಲಿ ತಲೆಯ ಮೇಲೆ ಒಂದು ಶಿಖೆಯಿದೆ; ಕತ್ತು ಸುಕ್ಕುಸುಕ್ಕಾಗಿದೆ. ಕತ್ತಿನ ಬುಡದಲ್ಲಿ ಬಿಳಿಯ ಬಣ್ಣದ ಪುಕ್ಕಗಳಿವೆ. ಮೈಮೇಲಿನ ಪುಕ್ಕಗಳ ಬಣ್ಣ ಕಪ್ಪು. ರೆಕ್ಕೆಯಲ್ಲಿ ಬಿಳಿಯ ಮಚ್ಚೆಗಳಿವೆ. ನಖಗಳು ಮೊನಚಾಗಿಲ್ಲ. ಕೊಂಚ ನೆಟ್ಟಗಿವೆ. ಹೆಣ್ಣು ಹಕ್ಕಿ ಗಾತ್ರದಲ್ಲಿ ಗಂಡಿಗಿಂತ ಚಿಕ್ಕದು. ಇದರ ಹಾರಾಟ ಬಲು ಸೊಗಸು. ಕೊಂಚ ಎತ್ತರಕ್ಕೆ ಏರುವವರೆಗೂ ರೆಕ್ಕೆ ಬಡಿಯುತ್ತಿದ್ದು ಅನಂತರ ಗಾಳಿಯಲ್ಲಿ ತೇಲುವಂತೆ ನಿರಾಯಾಸವಾಗಿ ಹಾರಾಡುತ್ತದೆ. ಸತ್ತ ಪ್ರಾಣಿಗಳ ದೇಹ ಇದರ ಮುಖ್ಯ ಆಹಾರ. ಕೆಲವೊಮ್ಮೆ ಕುರಿ, ಮೇಕೆ, ಜಿಂಕೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುವುದೂ ಉಂಟು. ಬಲು ಹೊಟ್ಟೆಬಾಕ ಹಕ್ಕಿಯೆಂದೇ ಪ್ರಸಿದ್ಧವಾಗಿದೆ.

ಕಾಂಡಾರುಗಳು ಹಗಲೆಲ್ಲ ಬಹು ಪಾಲು ನಿದ್ರೆಯಲ್ಲಿಯೇ ಕಳೆಯುತ್ತಿದ್ದು ಬೆಳಗ್ಗೆ ಮತ್ತು ಸಂಜೆ ಆಹಾರದ ಅನ್ವೇಷಣೆಯಲ್ಲಿ ತೊಡಗುತ್ತವೆ. ಹಗಲು ನಿದ್ರಿಸುವುದರಿಂದ ಇವನ್ನು ಹಿಡಿಯುವುದು ಬಲು ಸುಲಭ. ಹೊಟ್ಟೆ ತುಂಬಿದಾಗ ಬಲು ಆಲಸಿಗಳಾಗುವುದರಿಂದ ಆಗಲೂ ಇವುಗಳ ಬೇಟೆ ಬಲು ಸುಲಭ.

ಪರ್ವತದ ಅತಿ ಎತ್ತರ ಪ್ರದೇಶಗಳಲ್ಲಿ ವಾಸ ಮಾಡುವ ಈ ಹಕ್ಕಿಗಳು ಕೋಡುಗಲ್ಲುಗಳ ಪೊಟರೆಗಳಲ್ಲಿ ಒರಟುಗೂಡುಗಳನ್ನು ಕಟ್ಟಿ ವರ್ಷಕ್ಕೊಮ್ಮೆ ಎರಡು ಮೊಟ್ಟೆಗಳನ್ನಿಡುತ್ತವೆ. ಸುಮಾರು ಏಳು ವಾರಗಳ ಕಾಲ ಕಾವು ಕೊಟ್ಟು ಮರಿ ಮಾಡುತ್ತವೆ. ಮರಿಗಳು ತಾಯಿತಂದೆಯೊಡನೆ ಒಂದು ವರ್ಷಕಾಲ ಇದ್ದು, ಆಮೇಲೆ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. (ಜಿ.ಎಂ.ಬಿ.)

**ಕಾಂಡಿ ದ್ರಾವಕ :** ಸೋಡಿಯಂ ಮ್ಯಾಂಗನೇಟ್ ಮತ್ತು ಸೋಡಿಯಂ ಪರ್‌ಮ್ಯಾಂಗನೇಟ್ ಎಂಬ ಪದಾರ್ಥಗಳ ದ್ರಾವಣ (ಕಾಂಡೀಸ್ ಫ್ಲೂಯಿಡ್). ಪೈರೋಲ್ಯೂಸೈಟ್ ($MnO_2$) ಎಂಬ ಖನಿಜವನ್ನು ಕಾಸ್ಟಿಕ್ ಸೋಡಾ ಸಂಗಡ ಕಾಸಿದಾಗ ಇದು ಉತ್ಪನ್ನವಾಗುತ್ತದೆ. ಇದನ್ನು ವಿಷಕ್ರಿಮಿನಾಶಿಯಾಗಿ ಬಳಸುವರು. (ಎನ್.ಎಸ್.ಕೆ.)

**ಕಾಂಡ್ಲಾ :** ಭಾರತದ ಪಶ್ಚಿಮ ತೀರದಲ್ಲಿರುವ ಒಂದು ಅಂತಾರಾಷ್ಟ್ರೀಯ ಬಂದರು. ಗುಜರಾತ್ ರಾಜ್ಯದ ಕಚ್ ಜಿಲ್ಲೆಯ ದಕ್ಷಿಣ ಕರಾವಳಿಯಲ್ಲಿ (ಉ.ಅ. 23° ಪೂ.ರೇ. 70°) ಅಂಜಾರ್ ನಿಂದ ಆಗ್ನೇಯಕ್ಕೆ 19 ಕಿಮೀ ದೂರದಲ್ಲಿದೆ. ಇದು ಹಿಂದೆ ಒಂದು ಹಳ್ಳಿಯಾಗಿತ್ತು. 1930ರಲ್ಲಿ ಇದನ್ನು ಒಂದು ಬಂದರನ್ನಾಗಿ ಪರಿವರ್ತಿಸಲಾಯಿತು. ಸ್ವಾತಂತ್ರ್ಯಪೂರ್ವ ಭಾರತದ ಪಶ್ಚಿಮ ತೀರದ ಮುಖ್ಯ ಬಂದರುಗಳಲ್ಲೊಂದಾಗಿದ್ದ ಕರಾಚಿ ಪಾಕಿಸ್ತಾನಕ್ಕೆ ಸೇರಿದುದರಿಂದ ಭಾರತದ ಪಶ್ಚಿಮ ಮತ್ತು ವಾಯವ್ಯ ಭಾಗಗಳ ಸಾಗರಾಂತರ ವ್ಯಾಪಾರ ನಿರ್ವಹಿಸುವುದಕ್ಕೂ ಮುಂಬಯಿ ಬಂದರಿನ ಅತಿಯಾದ ಒತ್ತಡದ ನಿವಾರಣೆಗೂ

ಇಂಥ ಒಂದು ಬಂದರಿನ ಆವಶ್ಯಕತೆಯನ್ನು ಮನಗಂಡ ಭಾರತ ಸರ್ಕಾರ ಅಭಿವೃದ್ಧಿಗಾಗಿ ವಿಶೇಷ ಗಮನ ನೀಡಿತು. ಸೂಕ್ತ ಸಾರಿಗೆ ವ್ಯವಸ್ಥೆಯ ಕೊರತೆ, ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಹಿನ್ನಾಡಿನ ಅಭಾವ–ಈ ಕಾರಣಗಳಿಂದ ಕಾಂಡ್ಲಾ ಬಂದರಿನ ಬೆಳವಣಿಗೆ ಮೊದಮೊದಲು ಸ್ವಲ್ಪ ಕುಂಠಿತವಾದರೂ 1960ರ ದಶಕದಲ್ಲಿ ಇದು ಗಮನಾರ್ಹವಾಗಿ ವೃದ್ಧಿ ಹೊಂದಿದೆ. ಕಚ್, ಉತ್ತರ ಗುಜರಾತ್, ರಾಜಸ್ಥಾನ, ಪಂಜಾಬ್, ಜಮ್ಮು ಮತ್ತು ಕಾಶ್ಮೀರ, ದೆಹಲಿ, ಉತ್ತರ ಪ್ರದೇಶದ ಪಶ್ಚಿಮ ಭಾಗ ಇವು ಕಾಂಡ್ಲಾ ಬಂದರಿನಿಂದ ನೇರ



ಕಾಂಡ್ಲಾ ಬಂದರು

ಪ್ರಯೋಜನ ಪಡೆಯಬಹುದಾದ ಪ್ರದೇಶಗಳು. ಇದರ ಹಿನ್ನಾಡಿನ ವಿಸ್ತೀರ್ಣ 212250 ಚ.ಕಿಮೀ. 1947ಕ್ಕೆ ಪೂರ್ವದಲ್ಲಿ ಕಾಂಡ್ಲಾವನ್ನು ಒಂದು ಉಪಯುಕ್ತ ಬಂದರನ್ನಾಗಿ ಅಭಿವೃದ್ಧಿಪಡಿಸುವುದರಲ್ಲಿ ಕಚ್‌ನ ಮಹಾರಾಜರುಗಳು ಬಹಳ ಪ್ರಯತ್ನಿಸಿದರು. ಹೀಗೆ ಶ್ರಮಿಸಿದವರಲ್ಲಿ 3ನೆಯ ಮಹಾರಾವ್ ಖಿಂಗರ್ಜಿ ಪ್ರಮುಖ.

ಇತ್ತೀಚೆಗೆ ನಿರ್ಮಿತವಾದ ಕಾಂಡ್ಲಾ–ಅಹಮದಾಬಾದ್ ಬ್ರಾಡ್ ಗೇಜ್ ರೈಲು ಮಾರ್ಗ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಂದ ಕಾಂಡ್ಲಾದ ಉಪಯೋಗ ಪಡೆಯುವ ಪ್ರದೇಶದ ವ್ಯಾಪ್ತಿ ದ್ವಿಗುಣಗೊಂಡಿದೆ. ಈ ಬಂದರನ್ನು ಎಲ್ಲ ಬಗೆಯ ಸರಕು ವಿಲೇವಾರಿಗೆ ಅನುಕೂಲವಾಗುವಂತೆ ಆಧುನಿಕ ಯಂತ್ರಗಳಿಂದ ಸಜ್ಜುಗೊಳಿಸಲಾಗಿದೆ. 3 ರಿಂದ 10 ಟನ್ ಭಾರವನ್ನೆತ್ತಿ ಇಳಿಸಬಲ್ಲ 21 ಎತ್ತುಗೆಯಂತ್ರಗಳು (ಕ್ರೇನ್) ಇಲ್ಲಿ ಕೆಲಸ ಮಾಡುತ್ತವೆ. ಸರಕುಗಳನ್ನು ಸುರಕ್ಷಿತವಾಗಿ ಕಾಪಾಡಲು ಎರಡೆರಡು ಮಹಡಿಗಳ 4 ಉಗ್ರಾಣಗಳುಂಟು.

ಕಡಿಮೆ ಮಳೆ, ಶುಷ್ಕ ವಾತಾವರಣ ಮತ್ತು ಆಧುನಿಕ ಯಂತ್ರ ಸೌಲಭ್ಯಗಳು ಈ ಬಂದರಿನ ಬೆಳವಣಿಗೆಗೆ ಸಹಾಯಕ. ಭಾರತದ ಇತರ ಬಂದರುಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ತೇವದ ವಾತಾವರಣ ಇಲ್ಲಿಲ್ಲ. ವರ್ಷದ ಬಹುಕಾಲ ಇಲ್ಲಿ ಶುಷ್ಕ ಹವೆ ಇರುವುದಂತೂ ವಿಶೇಷ ಅನುಕೂಲ. ಮಳೆ ಕಡಿಮೆಯಾದ್ದರಿಂದ ವರ್ಷದ ಅತಿ ಹೆಚ್ಚು ದಿನಗಳಲ್ಲಿ ಇಲ್ಲಿ ಕೆಲಸ ನಡೆಸಲು ಸಾಧ್ಯ. ಜೊತೆಗೆ ಈ ಬಂದರಿನ ನೆರೆಯಲ್ಲಿ ಕೈಗಾರಿಕೆಗಳ ಸ್ಥಾಪನೆ ಮತ್ತು ಬೆಳವಣಿಗೆಗೆ ಅನುಕೂಲವಾದ ವಿಶಾಲ ಪ್ರದೇಶಗಳುಂಟು. ಭಾರತ ವಿಭಜನೆಯ ಪರಿಣಾಮವಾಗಿ ಸಿಂಧಿನಿಂದ ವಲಸೆ ಬಂದವರಿಗಾಗಿ ನಿರ್ಮಿಸಲಾದ ಗಾಂಧಿಧಾಮ ಇರುವುದು ಕಾಂಡ್ಲಾಕ್ಕೆ ಸಮೀಪದಲ್ಲೇ. ಅದು ಶೀಘ್ರವಾಗಿ ಬೆಳೆಯುತ್ತಿರುವ ಒಂದು ಮುಖ್ಯ ಕೈಗಾರಿಕಾ ನಗರ.

223 ಮೀಗಳಿಗಿಂತ ಹೆಚ್ಚು ಉದ್ದವಾದ, 35,000 ಟನ್ನುಗಳಿಗೂ ಹೆಚ್ಚು ಭಾರ ಹೊತ್ತ ಹಡಗುಗಳು ಯಾವ ತೊಂದರೆಯೂ ಇಲ್ಲದೆ ಇಲ್ಲಿಗೆ ಆಗಮಿಸಬಲ್ಲುವು. ರಾಜಸ್ಥಾನದ ಪರಮಾಣುವಿದ್ಯುತ್ ಕೇಂದ್ರಕ್ಕೆ ವಿದೇಶಗಳಿಂದ ಆಮದು ಮಾಡಿಕೊಂಡ ಯಂತ್ರೋಪಕರಣಗಳನ್ನು ಈ ಬಂದರಿನಲ್ಲೇ ಇಳಿಸಿಕೊಳ್ಳಲಾಯಿತು. ಕಳೆದ ಕೆಲವು ವರ್ಷಗಳಲ್ಲಿ ಭಾರೀ ಪ್ರಮಾಣದ ಆಹಾರ ಸಾಮಗ್ರಿಗಳನ್ನಿಲ್ಲಿಂದ ವಿಲೇವಾರಿ ಮಾಡಿದೆ. ಮಿತವ್ಯಯದ ದೃಷ್ಟಿಯಿಂದ ಅಹಮದಾಬಾದ್–ಕಾಂಡ್ಲಾ ಬ್ರಾಡ್ ಗೇಜ್ ರೈಲುಮಾರ್ಗ ಕಾಂಡ್ಲಾದ ಮಹತ್ತ್ವವನ್ನು ಹೆಚ್ಚಿಸಿದೆ. ಅಹಮದಾಬಾದಿನ ವ್ಯಾಪಾರಿಗಳು ಹತ್ತಿಯನ್ನು ಮುಂಬಯಿ ಬಂದರಿನ ಬದಲಾಗಿ ಕಾಂಡ್ಲಾದ ಮೂಲಕ ತರಿಸಿಕೊಂಡರೆ ಆಗುವ ಉಳಿತಾಯ ಗಮನಾರ್ಹ. ಮೀಟರ್ ಗೇಜ್ ರೈಲು ಇದ್ದಾಗಲೆ ಪ್ರತಿ ಟನ್ನಿಗೆ ರೂ. 5.30 ಉಳಿತಾಯವಾಗುತ್ತಿತ್ತು. ಬ್ರಾಡ್ ಗೇಜ್ ರೈಲು ನಿರ್ಮಾಣದ ಫಲವಾಗಿ ಆಗುವ ಉಳಿತಾಯ ಪ್ರತಿ ಟನ್ನಿಗೆ ರೂ. 20.50 ಆಗಿತ್ತು.

ಸರಕುಗಳ ಸಾಗಾಣಿಕೆಗೆ ಅತ್ಯಾವಶ್ಯಕವಾದ ರೈಲುಮಾರ್ಗ ಮತ್ತು ಹೆದ್ದಾರಿ ಸೌಕರ್ಯಗಳನ್ನು ಹೊಂದಿರುವ ಕಾಂಡ್ಲಾ ಬಂದರಿನ ಸುತ್ತಮುತ್ತಣ ಪ್ರದೇಶ ಭಾರತದ ಒಂದು ಮುಖ್ಯ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ. ಖನಿಜ ಮತ್ತು ವ್ಯವಸಾಯೋತ್ಪನ್ನಗಳ ಕಾರ್ಖಾನೆಗಳು ಬೆಳೆಯಲು ಇಲ್ಲಿ ಒಳ್ಳೆಯ ವಾತಾವರಣವಿದೆ. ಎಂಜಿನಿಯರಿಂಗ್ ಸಲಕರಣೆಗಳ, ಲವಣಸಂಬಂಧ ವಸ್ತುಗಳ ಕಾರ್ಖಾನೆಗಳ ಸ್ಥಾಪನೆ ಯೋಜನೆಗಳೂ ರೂಪುಗೊಂಡಿವೆ. ರಾಜಾಸ್ಥಾನದ ಪರಮಾಣು ವಿದ್ಯುತ್ ಕೇಂದ್ರ, ರಾಸಾಯನಿಕ ಗೊಬ್ಬರ, ತೈಲ ಶುದ್ಧೀಕರಣ, ರಬ್ಬರ್ ಹಾಗೂ ಕೃತಕ ತಂತು ಕಾರ್ಖಾನೆಗಳು ಮುಖ್ಯವಾದವು. ಈ ಬಂದರಿಗೆ ಅತಿ ಸಮೀಪದಲ್ಲಿ ಫಾರ್ಮಾಲ್ಡಿಹೆಡ್ ಮತ್ತು ಹೆಕ್ಸಾಮಿನ್ ಕಾರ್ಖಾನೆಗಳು ಸ್ಥಾಪಿತವಾಗಿವೆ. ಕಾಂಡ್ಲಾಕ್ಕೆ ಸಮೀಪದಲ್ಲಿರುವ ಆದಿಪುರದಲ್ಲಿ 12,000 ಕದಿರುಗಳ ಸಾಮರ್ಥ್ಯದ ನೂಲು ಗಿರಣಿ ಸ್ಥಾಪನೆಯಾಗಿ ಈ ಪ್ರದೇಶದ ಕೈಗಾರಿಕಾ ಸಂಪತ್ತನ್ನು ಮತ್ತಷ್ಟು ಹೆಚ್ಚಿಸಿದೆ.

ಕಾಂಡ್ಲಾ ಬಂದರು ಮತ್ತು ಅದರ ಸುತ್ತಲಿನ ಪ್ರದೇಶ ಭಾರತದ ಪ್ರಪ್ರಥಮ ಮುಕ್ತ ವ್ಯಾಪಾರ ವಲಯ. ಭಾರತದಲ್ಲಿ ಲಭ್ಯವಿಲ್ಲದ ಅನೇಕ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲು ಕಾಂಡ್ಲಾ ಬಂದರಿನಲ್ಲಿ ಸುಂಕವಿಮೋಚನೆಯ ಸೌಲಭ್ಯವಿದೆ. ಅಂಥ ಸಲಕರಣೆಗಳನ್ನು ಆಯಾತ ಮಾಡಿಕೊಳ್ಳಲು ಮುಂಗಡ ಪರವಾನೆಗಳನ್ನು ಕೂಡ ಕೊಡಲಾಗುತ್ತದೆ. ವಿದೇಶಗಳಿಗೆ ರಫ್ತು ಮಾಡುವ ಅನೇಕ ಪದಾರ್ಥಗಳ ತಯಾರಿಕೆಗೆ ಅತ್ಯಾವಶ್ಯಕವಾದ ಯಂತ್ರ ಸಲಕರಣೆಗಳು, ರಾಸಾಯನಿಕ ಸಾಮಗ್ರಿಗಳು ಮತ್ತು ಕಚ್ಚಾ ವಸ್ತುಗಳಿಗೆ ಆಮದು ಸುಂಕ ಮತ್ತು ಕೇಂದ್ರ ಅಬ್ಕಾರಿ ಸುಂಕದ ವಿನಾಯ್ತಿಗಳು ಈ ಮುಕ್ತ ವ್ಯಾಪಾರ ವಲಯದಲ್ಲಿ ದೊರೆಯುತ್ತವೆ. ಈ ಮುಕ್ತ ವ್ಯಾಪಾರ ವಲಯ ನಿರ್ಮಾಣದಿಂದ ಭಾರತದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸಿ ವಿದೇಶೀ ವಿನಿಮಯವನ್ನು ಗಳಿಸುವುದೂ ಈಗಾಗಲೇ ಲಭ್ಯವಿರುವ ಬಂದರು ಮತ್ತು ಕೈಗಾರಿಕೆಗಳ ಪ್ರಯೋಜನಗಳನ್ನು ಮತ್ತಷ್ಟು ವೃದ್ಧಿಪಡಿಸುವುದೂ ಗಾಂಧಿಧಾಮ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉದ್ಯೋಗ ಸೌಕರ್ಯ ಹೆಚ್ಚಿಸುವುದೂ ಸಾಧ್ಯವಾಗಿದೆ.

ಕಾಂಡ್ಲಾ ಬಂದರು ಪ್ರತಿ ವರ್ಷ 25 ಲಕ್ಷ ಟನ್ನುಗಳಷ್ಟು ಸರಕುಗಳನ್ನು ಹಡಗುಗಳಿಗೆ ತುಂಬಿಳಿಸುವ ಸಾಮರ್ಥ್ಯ ಪಡೆದಿದೆ. ಅದರ ಮೂಲಕ ಸಾಗುತ್ತಿರುವ ಸರಕಿನ ಪರಿಮಾಣ 20 ಲಕ್ಷ ಟನ್ ಗಳಿಗೂ ಅಧಿಕ. ಕಚ್ಚಾ ತೈಲಗಳನ್ನು ಮತ್ತು ಅಪಾಯಕರ ರಾಸಾಯನಿಕ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಅನುಕೂಲವಾಗುವಂಥ ಪ್ರತ್ಯೇಕ ಘಟಕಗಳನ್ನಿದು ಹೊಂದಿದೆ. ಮುಂಬೈ ಮತ್ತು ಇತರ ನಗರಗಳಿಂದ ಕಾಂಡ್ಲಾಕ್ಕೆ ದೈನಿಕ ವಿಮಾನ ಯಾನ ಸೌಕರ್ಯವುಂಟು. ಬ್ರಿಟನ್, ಜಪಾನ್ ಮತ್ತು ಇತರ ಪ್ರಮುಖ ರಾಷ್ಟ್ರಗಳಿಗೆ 15 ದಿನಗಳಿಗೊಮ್ಮೆ ಪ್ರಯಾಣಿಕ ಹಡಗುಗಳು ಹೊರಡುತ್ತವೆ. ಕಾಂಡ್ಲಾ ಬಂದರಿನ ಆಡಳಿತವನ್ನು ನಿರ್ವಹಿಸಲು ಅಭಿವೃದ್ಧಿ ಸಮಿತಿಯೊಂದುಂಟು. ಆಹಾರ ಧಾನ್ಯ, ಖನಿಜ, ತೈಲಸಾಮಗ್ರಿ, ಯಂತ್ರೋಪಕರಣಗಳು, ರಾಸಾಯನಿಕ ವಸ್ತು, ಕೃತಕ ಗೊಬ್ಬರ ಇವು ಈ ಬಂದರಿನ ಮೂಲಕ ಹಾಯುವ ಆಮದುಗಳು. ಹತ್ತಿ, ಉಪ್ಪು, ಸಕ್ಕರೆ, ಚೂರ್ಣಾಸ್ಥಿ, ಖನಿಜ, ತೈಲಸಾಮಗ್ರಿ ಇವು ರಫ್ತುಗಳು. (ಬಿ.ಎನ್.ಎ.ಜಿ.)

**ಕಾಂತ ಏಕಧ್ರುವಗಳು :** ವಿದ್ಯುತ್ತಿಗೆ ಸಮಾನ ಸ್ಥಾನದಲ್ಲಿ ಕಾಂತತ್ವವನ್ನು ಸಹ ಸ್ಥಾಪಿಸಲು ಊಹಿಸಿಕೊಂಡಿರುವ ಕಣಗಳು (ಮ್ಯಾಗ್ನೆಟಿಕ್ ಮೋನೋಪೋಲ್ಸ್). ಕಾಂತೀಯ ಆವೇಶ ಒಯ್ಯುತ್ತಿರುವ ಒಂದು ಊಹಾತ್ಮಕ ಕಣ. ಆವಿಷ್ಟ ಕಣವೊಂದು ವಿದ್ಯುತ್‌ಕ್ಷೇತ್ರಕ್ಕೆ ಆಕರವಾಗಿರುವಂತೆಯೇ ಇದು ಕಾಂತ ಕ್ಷೇತ್ರಕ್ಕೆ ಆಕರವಾಗಿರುವುದು. ವಿದ್ಯುದಂಶವೊಂದು ವಿದ್ಯುತ್ ಕ್ಷೇತ್ರಕ್ಕೆ ಆಕರವಾಗುತ್ತದೆ ಮತ್ತು ಚಲಿಸುವಾಗ ಅದು ಕಾಂತಕ್ಷೇತ್ರವನ್ನು ಸೃಷ್ಟಿಸುತ್ತದೆ. ಸಮಾಂಗತ್ವಕ್ಕೋಸ್ಕರ (ಸಿಮೆಟ್ರಿ) ಸ್ಥಾಯೀ ಸ್ಥಿತಿಯಲ್ಲಿರುವಾಗ ಕಾಂತಕ್ಷೇತ್ರದ ಆಕರವಾಗುವ ಮತ್ತು ಚಲಿಸುವಾಗ ವಿದ್ಯುತ್ ಕ್ಷೇತ್ರವನ್ನು ಸೃಷ್ಟಿಸುವ ಕಾಂತಾಂಶ ಇರಬೇಕೆಂದು ಊಹಿಸುವುದು ಸ್ವಾಭಾವಿಕ. ಕಾಂತಾಂಶದ ಇರುವಿಕೆಯನ್ನು ಅಭಿಜಾತ (ಕ್ಲಾಸಿಕಲ್) ಭೌತವಿಜ್ಞಾನ ಅಲ್ಲಗಳೆದಿಲ್ಲ. ಡಿರ್ಯಾಕ್ ಎಂಬಾತ ಶಕಲಶಾಸ್ತ್ರದ ನಿಯಮಗಳೇನಾದರೂ ಕಾಂತಾಂಶದ ಇರುವಿಕೆಯನ್ನು ಅಲ್ಲಗಳೆಯುತ್ತವೆಯೇ ಎಂಬುದನ್ನು ಪರಿಶೀಲಿಸಿದ (1931). ಅಂಥದೇನೂ ಕಾಣಲಿಲ್ಲ. ಹೀಗಿದ್ದರೂ ಆತ ಕಾಂತ ಏಕಧ್ರುವಗಳ ಬಗ್ಗೆ ನಡೆಸಿದ ಗಣಿತೀಯ ಸಂಶೋಧನೆಗಳಿಂದ ಅವುಗಳ ಗುಣಗಳ ವಿಚಾರವಾಗಿ ಕೆಲವು ಕುತೂಹಲ ಕಾರಿಯಾದ ಸಂಗತಿಗಳು ತಿಳಿದುಬಂದಿವೆ:

1 ಕಾಂತ ಏಕಧ್ರುವಗಳಿದ್ದರೆ ವಿದ್ಯುದಂಶದಂತೆ ಅವುಗಳೂ ಎಂಬ ಸೂತ್ರವನ್ನು ಪಾಲಿಸುತ್ತವೆ. ಇಲ್ಲಿ ಪೂರ್ಣಾಂಕ, ಕಾಂತ ಧ್ರುವತ್ರಾಣದ ಶಕಲ. ಇದು ವಿದ್ಯುದಂಶದ ಶಕಲಕ್ಕಿಂತ 68.5 ರಷ್ಟು ಹೆಚ್ಚಾಗಿರುತ್ತದೆ. ಅಂದರೆ ಎರಡು ವಿದ್ಯುತ್ ಶಕಲಗಳ ನಡುವೆ ವರ್ತಿಸುವ ಬಲಕ್ಕಿಂತ ಅಷ್ಟೇ ಅಂತರದಲ್ಲಿ ಇರಿಸಿರುವ ಎರಡು ಕಾಂತಶಕಲಗಳ ನಡುವೆ ವರ್ತಿಸುವ ಬಲ 4,692 ರಷ್ಟು.

2 ಕಾಂತ ಏಕಧ್ರುವದ ಜಡಾಂಶ ಪ್ರೋಟಾನಿನ ಜಡಾಂಶಕ್ಕಿಂತ ಮೂರರಷ್ಟು ಹೆಚ್ಚು.

3 ಕಾಂತಧ್ರುವಗಳು ಜೊತೆಯಾಗಿ ಸೃಷ್ಟಿಯಾಗುತ್ತವೆ ಮತ್ತು ಜೊತೆಯಾಗಿ ಲಯವಾಗುತ್ತವೆ.

4 ಕಾಂತ ಏಕಧ್ರುವಗಳು ಎಲೆಕ್ಟ್ರಾನುಗಳಂತೆ ಫೋಟಾನುಗಳನ್ನು ಹೀರಿಕೊಳ್ಳುತ್ತವೆ ಮತ್ತು ಹೊರಸೂಸುತ್ತವೆ. ಒಂದು ಫ್ರೋಟಾನುವಿನೊಂದಿಗೋ ನ್ಯೂಕ್ಲಿಯಸಿನೊಂದಿಗೋ




ಡಿಕ್ಕಿ ಹೊಡೆಯುವಾಗ ಕಾಂತ ಏಕಧ್ರುವಗಳು ಸೃಷ್ಟಿಯಾಗಬಹುದು. ಇದರಿಂದ ವಿಶ್ವಕಿರಣಗಳಲ್ಲಿ ಕಾಂತ ಏಕಧ್ರುವಗಳನ್ನು ಪತ್ತೆಹಚ್ಚಬಹುದೆಂಬ ನಂಬಿಕೆಯಿದೆ. ಇವು ಉಲ್ಕೆಗಳಲ್ಲೂ ಕಬ್ಬಿಣದ ಅದುರಿನಲ್ಲೂ ಹೂತುಕೊಂಡಿರಬಹುದು. ಇವನ್ನು ಕಾಂತಕ್ಷೇತ್ರದ ಪ್ರಭಾವದಿಂದ ಹೊರಕ್ಕೆಳೆಯುವುದು ಸುಲಭ.

5 ಕಾಂತಕ್ಷೇತ್ರದಲ್ಲಿ ಇವು ವೇಗೋತ್ಕರ್ಷಗೊಳ್ಳುತ್ತವೆ. ಬ್ರಹ್ಮಾಂಡದಲ್ಲಿರುವ ಕಾಂತಕ್ಷೇತ್ರದಲ್ಲಿ ವೇಗೋತ್ಕರ್ಷಗೊಳ್ಳುವ ಈ ಕಣಗಳ ಶಕ್ತಿ ನೂರು ಬಿಲಿಯನ್ ಬಿಲಿಯನ್ ಎಲೆಕ್ಟ್ರಾನ್ ವೋಲ್ಟುಗಳಿಗೆ ಮಿಕ್ಕಿರುತ್ತದೆ.

6 ಇವು ಅನಿಲ, ದ್ರವ, ಮತ್ತು ಘನ ಮಾಧ್ಯಮಗಳಲ್ಲಿ ಹಾಯುವಾಗ ತೀವ್ರವಾಗಿ ಅಯಾನೀಕರಣವನ್ನುಂಟುಮಾಡುತ್ತವೆ. ಆದ್ದರಿಂದ ಫೋಟೋಗ್ರಫಿ ತಟ್ಟೆಗಳಲ್ಲಿ ಮತ್ತು ಗುಳ್ಳೆ ಮಂದಿರಗಳಲ್ಲಿ ಇವುಗಳ ಜಾಡನ್ನು ಕಾಣಬಹುದು ಎಂದು ವಿಜ್ಞಾನಿಗಳು ನಿರೀಕ್ಷಿಸುತ್ತಾರೆ.

ಕಾಂತ ಏಕಧ್ರುವಗಳು ಇನ್ನೂ ಊಹಾಕರಣಗಳಾಗಿಯೆ ಉಳಿದಿವೆ. ಸೈದ್ಧಾಂತಿಕವಾಗಿ ಇವು ಇರಬೇಕಾಗಿಲ್ಲವೆಂಬ ಸುಳಿವೇನೂ ಸಿಕ್ಕಿಲ್ಲ. ಆದ್ದರಿಂದ ಇವುಗಳ ಅನ್ವೇಷಣೆ ನಡೆಯುತ್ತಲೆ ಹೋಗುತ್ತದೆ. (ಎಸ್.ಎ.ಎಚ್.)

**ಕಾಂತಗೋಳ :** ಭೌತ ವಿದ್ಯಮಾನಗಳ ಮೇಲೆ ಭೂಕಾಂತಕ್ಷೇತ್ರದ ಪ್ರಭಾವ ಪ್ರಧಾನವಾಗಿರುವ ಭೂಭಾಗ (ಮ್ಯಾಗ್ನೆಟೋಸ್ಫಿಯರ್). ಅಯಾನ್ ಗೋಳೀಯ $E$ ಪ್ರದೇಶಕ್ಕೆ ಅನುಗುಣವಾಗುವಂತೆ ಭೂಮಿಯಿಂದ ಸುಮಾರು 100 ಕಿಮೀ ಎತ್ತರದಿಂದ ಕಾಂತಗೋಳ ಪ್ರಾರಂಭವಾಗಿ ಅಲ್ಲಿಂದ ಮುಂದಕ್ಕೆ ಕಾಂತಸೀಮಾ (ಮ್ಯಾಗ್ನೆಟೋಪಾಸ್) ಎಂದು ಕರೆಯಲ್ಪಡುವ ಅಂತರಗ್ರಹ ಮಧ್ಯವರ್ತಿಗೆ ಸಂಕ್ರಮವನ್ನು ಗುರುತಿಸುವ ಅತಿದೂರದ ಎಲ್ಲೆಯವರೆಗೂ ಹರಡಿಕೊಂಡಿದೆ. ಧೂಮಕೇತುವಿನ ಆಕಾರದಂತೆ ಇದಕ್ಕೆ ಸಹ ಸೂರ್ಯನಿಗೆ ವಿಮುಖವಾಗಿ ಪಸರಿಸಿರುವ ದೊಡ್ಡ ಬಾಲವಿದೆ. ಈ ಬಾಲ ಸೂರ್ಯಾಭಿಮುಖ ದಿಕ್ಕಿನಲ್ಲಿ ಅಗಲವಾಗಿದೆ, ಚೂಪಾಗಿಲ್ಲ.

ಕಾಂತಗೋಳದ ನಾಸಿಕಕ್ಕೆ ಭೂ ಕೇಂದ್ರದಿಂದ ಇರುವ ದೂರ ಸಾಮಾನ್ಯವಾಗಿ ಸುಮಾರು 10 $R_e$ ($R_e$= ಭೂ ತ್ರಿಜ್ಯ $\simeq$ 6400 ಕಿಮೀ.). ಆದರೆ ಈ ದೂರ ಅಂತರಗ್ರಹ ಮಧ್ಯವರ್ತಿಯ ಪರಿಸ್ಥಿತಿಯನ್ನವಲಂಬಿಸಿ 6 ಮತ್ತು 14 $R_e$ಗಳ ನಡುವೆ ವ್ಯತ್ಯಾಸವಾಗಬಹುದೆಂದೂ ಗೊತ್ತಾಗಿದೆ. ಕಾಂತಗೋಳವು ಬಾಲದ ಉದ್ದಕ್ಕೂ ಅಡ್ಡಲಾಗಿ ವಿಕಾಸವಾಗುತ್ತ ಬಂದು ಚಂದ್ರನ ದೂರದಲ್ಲಿ (60 $R_e$) ಅದರ ತ್ರಿಜ್ಯ ಸುಮಾರು 20 $R_e$ ಆಗುವುದು. ಸೂರ್ಯನಿಗೆ ಆಭಿಮುಖವಾಗಿ, ಭೂಮಿಯಿಂದ ದೂರ ಹೆಚ್ಚಿದಂತೆಲ್ಲ ಕಾಂತಗೋಳ ಕ್ರಮೇಣ ವಿಸ್ತಾರವಾಗುತ್ತದೆ. ಆದರೂ ಅದರ ಪ್ರಭಾವ 800 $R_e$ ದೂರದಲ್ಲಿ ಕೂಡ ಪತ್ತೆಯಾದದ್ದು ಪಯೋನಿಯರ್–6 ಆಕಾಶನೌಕೆ ಮಾಡಿದ ವೀಕ್ಷಣೆಗಳಿಂದ. ಕಾಂತಗೋಳದ ಬಾಲದಲ್ಲಿ ಸೌರ ಎಲೆಕ್ಟ್ರಾನ್ ವಿದ್ಯಮಾನಗಳ ವೀಕ್ಷಣೆಗಳು ಅದರ ಉದ್ದ $2 \times 10^7$ ಕಿಮೀ ಗಿಂತ ($\simeq$ 3000 $R_e$) ಹೆಚ್ಚಾಗಿರಲಾರದೆಂದು ಸಲಹೆ ನೀಡುತ್ತವೆ.

**ಆಕಾರ:** ಅಂತರಗ್ರಹ ಮಧ್ಯವರ್ತಿಯನ್ನು ರಚಿಸುವುದು ಸೌರವಾಯು. ಇದು ಕಾಂತಸೀಮಾದಲ್ಲಿ ಪ್ರಯುಕ್ತಿಸುವ ಪ್ರತಿಬಲಗಳಿಂದ ಕಾಂತಗೋಳದ ಆಕಾರವನ್ನು ಕಂಡುಹಿಡಿಯುತ್ತಾರೆ. ಸೂರ್ಯನಿಗೆ ಅಭಿಮುಖವಾಗಿ ಪ್ರಯಕ್ತವಾಗುವ ಅಭಿಲಂಬ (ನಾರ್ಮಲ್) ಪ್ರತಿಬಲ ಅತಿಮುಖ್ಯವಾದದ್ದು. ಸೌರವಾಯುವಿನಿಂದ ಕಾಂತಸೀಮಾದ ಹೊರಗೆ ಪ್ರಯುಕ್ತವಾಗುವ ಒತ್ತಡವನ್ನು ಸೀಮಾದ ಒಳಗಡೆ ಇರುವ ಕಾಂತೀಯ ಒತ್ತಡಕ್ಕೆ ಸಮೀಕರಿಸುವುದರಿಂದ ಆಕಾರವನ್ನು ತಕ್ಕಮಟ್ಟಿಗೆ ಗುಣಿಸಬಹುದು. ಸೌರವಾಯು ಶಬ್ದಾತೀತ (ಸೂಪರ್ ಸಾನಿಕ್) ಆಗಿರುವುದರಿಂದ ಧಕ್ಕಾತರಂಗ ಕಾಂತಗೊಳದ ಪ್ರವಾಹದ ಎದಿರುದಿಕ್ಕಿನ ಕಡೆಗೆ ನೆಲೆ ನಿಲ್ಲಬೇಕು. ಧಕ್ಕೆ ಮತ್ತು ಕಾಂತಸೀಮಾ ಇವೆರಡರ ಸಾಪೇಕ್ಷ ತೆಳು ಸಂಕ್ರಮ ಪ್ರದೇಶದಲ್ಲಿ ಒತ್ತಡ ಸೌರವಾಯುವಿನ ಸ್ಥಳೀಯ ಬಡಿತದ ಒತ್ತಡಕ್ಕೆ ಉಪಸಮವಾಗಿ ಸಮವಾಗಿರಬೇಕು. ಆದ್ದರಿಂದ

$$P \simeq nmV^2 \cos^2 \theta$$

ಸಮೀಕರಣ ಒಪ್ಪಾಗುತ್ತದೆ. ಇಲ್ಲಿ ಸಂಕ್ರಮ ಪ್ರದೇಶದಲ್ಲಿನ ಒತ್ತಡ, ಸಂಖ್ಯಾ ಸಾಂದ್ರತೆ, ಧಕ್ಕೆಗೆ ಅಭಿಮುಖವಾಗಿ ಸೌರವಾಯುವಿನ ವೇಗ, $m$ ಸೌರವಾಯು ಆಯಾನುಗಳ ಮಧ್ಯಸ್ಥ ರಾಶಿ ಮತ್ತು $\theta$ವು ಸೌರವಾಯುವಿನ ದಿಕ್ಕು ಹಾಗೂ ಧಕ್ಕೆ ಕಾಂತಸೀಮಾಗಳಿಗೆ ಅಭಿಲಂಬ ಇವುಗಳ ನಡುವಣ ಕೋನ. ಕಾಂತಗೋಳದ ಅಗ್ರದ ಕಡೆ ಕಾಂತಸೀಮಾದ ಸರಿಯಾಗಿ ಒಳಗಡೆ ಕಾಂತಕ್ಷೇತ್ರದ ತ್ರಾಣ ( ) ಭೂಮಿಯ ದ್ವಿಧ್ರುವದ ಸುಮಾರು ಎರಡರಷ್ಟು; ಈ ಹೆಚ್ಚುವಳಿಗೆ ಕಾಂತ ಸೀಮಾದಲ್ಲಿಯೇ ಹರಿಯುವ ಪ್ರವಾಹಗಳೇ ಕಾರಣ. ಸಿದ್ಧಾಂತದಿಂದ ಮತ್ತು ವೀಕ್ಷಣದಿಂದ ಪಡೆದ ರೂಪರೇಖೆಗಳು ಬಹಳ ಮಟ್ಟಿಗೆ ಒಪ್ಪಾಗಿವೆ.

ಸೌರವಾಯು ಶಬ್ದಾತೀತವಾಗಿರುವುದರಿಂದಲೂ ಕಾಂತಗೋಳದಿಂದ ಪ್ರತಿನಿಧಿಸಲ್ಪಟ್ಟಿರುವ ತಡೆಯ ಸುತ್ತ ಹರಿಯುವಿಕೆಯನ್ನು ನಿರ್ದೇಶಿಸಲು ಅದರ ಗುಣಗಳಲ್ಲಿ ಪ್ರಬಲವಾದ ವ್ಯತ್ಯಾಸಗಳನ್ನು ಮಾಡಬೇಕಾಗುವುದರಿಂದಲೂ ಕಾಂತಗೋಳದಲ್ಲಿ ಸೂರ್ಯನ ಕಡೆಗೆ ಇರುವ ಸೌರವಾಯುವಿನಲ್ಲಿ ನೆಲೆನಿಂತಿರುವ ಧಕ್ಕಾಂತರಂಗದ ಇರುವಿಕೆ ಮುನ್ಸೂಚಿಸಲ್ಪಟ್ಟಿತು. ವಾಯುಗತಿವಿಜ್ಞಾನದ (ಏರೋಡೈನಮಿಕ್ಸ್) ಪ್ರಕ್ರಿಯೆಗಳನ್ನು ಉಪಯೋಗಿಸಿಕೊಂಡು ಕಾಂತಗೋಳದ ಆಕಾರ ಗೊತ್ತಿದ್ದರೆ ಧಕ್ಕಾತರಂಗದ ನಿರೀಕ್ಷಿತಸ್ಥಾನವನ್ನು ಗುಣಿಸಬಹುದು. ಧಕ್ಕಾತರಂಗದ ವೀಕ್ಷಿತ ಮತ್ತು ಗಣಿಸಿದ ಸ್ಥಾನಗಳು ಬಹುಮಟ್ಟಿಗೆ ಹೊಂದಾಣಿಕೆಯಾಗುತ್ತವೆ. ಈ ವಿಶೇಷ ಧಕ್ಕಾತರಂಗದ ಅತಿ ಲಕ್ಷ್ಯಾರ್ಹವಾದ ರೂಪರೇಖೆ ಏನೆಂದರೆ ಕಣಕಣಗಳ ನಡುವೆ ಸಂಘಟನೆಗಳನ್ನೊಳಗೊಂಡಿರುವುದಿಲ್ಲ. ಭೂಮಿಯ ಕಕ್ಷೆಯಲ್ಲಿರುವ ಸೌರವಾಯುವಿನಲ್ಲಿ ಮಧ್ಯಸ್ಥ ಮುಕ್ತಪಥ $10^8$ ಸೆಂಮೀ. ಸುಮಾರಿನಷ್ಟು ಮತ್ತು ಧಕ್ಕಾತರಂಗದ ದಪ್ಪ ವಾಸ್ತವವಾಗಿ ಕೆಲವೇ ಶತ ಕಿಮೀ.ಗಳಿಗಿಂತ ಹೆಚ್ಚಾಗಿಲ್ಲದಿರುವುದೇ ಇದಕ್ಕೆ ಕಾರಣ. ತರಂಗದ ದಪ್ಪ ಸ್ಥೂಲವಾಗಿ ಭೂಮಿಗೆ ಸಮೀಪದಲ್ಲಿರುವ ಅಂತರಗ್ರಹ ಕಾಂತಕ್ಷೇತ್ರದಲ್ಲಿ ಪ್ರೋಟಾನಿನ ಗೈರೋತ್ರಿಜ್ಯ. ಪ್ರಕೃತಿಯಲ್ಲಿ ಅಥವಾ ಪ್ರಯೋಗಶಾಲೆಯಲ್ಲಿ ಸಂಘಟ್ಟನಾಮುಕ್ತ ಧಕ್ಕಾತರಂಗಕ್ಕೆ ಇದೇ ಪ್ರಥಮ ಸ್ಪಷ್ಟ ಉದಾಹರಣೆ.

**ಬಾಲ :** ಕಾಂತಗೋಳದ ಬಾಲದ ರೇಖಾಗಣಿತ ಸರಳವಾಗಿ ಒತ್ತಡವನ್ನು ಸರಿದೂಗುವುದರಿಂದ ನಿರ್ಧರಿಸಲಾಗುವುದಿಲ್ಲ. ಹೀಗೆ ಮಾಡಬಹುದಾಗಿದ್ದರೆ ಅದು ದುರ್ಬಲವಾಗಿದ್ದು ಭೂಮಿಯ ದ್ವಿಧ್ರುವ ಕಾಂತಕ್ಷೇತ್ರದ ಅಲ್ಪಭಾಗಗಳಿಂದ




ಭೂಮಿಯ ಕಾಂತಅಕ್ಷ ಭೂಅಕ್ಷದೊಡನೆ ಕೂಡಿಕೊಳ್ಳುವುದಿಲ್ಲ. ದೊಡ್ಡ ಛಾಯಾ ಪ್ರದೇಶ ಕಾಂತಗೋಳದ ವ್ಯಾಪ್ತಿಯನ್ನು ಸೂಚಿಸುತ್ತದೆ.

ಕೂಡಿರಬೇಕಾಗಿರುತ್ತಿತ್ತು. ವಾಸ್ತವವಾಗಿ ಬಾಲದಲ್ಲಿರುವ ಕಾಂತಾಭಿವಾಹ (ಮ್ಯಾಗ್ನೆಟಿಕ್ ಫ್ಲಕ್ಸ್) ಬಹಳ ಹೆಚ್ಚು ಮತ್ತು ಭೂಕಾಂತ ಧ್ರುವಗಳಿಂದ 1500 ಕಿಮೀ ಒಳಗಡೆ ಇರುವ ದೂರದಿಂದ ಭೂಮಿಯನ್ನು ಪ್ರವೇಶಿಸುವ ಅಥವಾ ಬಿಡುವ ಕ್ಷೇತ್ರರೇಖೆಗಳನ್ನಿದು ಒಳಗೊಂಡಿದೆ. ಬಾಲದಲ್ಲಿನ ಕಾಂತಕ್ಷೇತ್ರ ರೇಖೆಗಳು ಮಂದವಾಗಿ ತಿರುಗಿ ಭೂಮಿಯ ಎರಡು ಧ್ರುವಪ್ರದೇಶಗಳನ್ನು ಸೇರಿಸುವುದಿಲ್ಲ. ಇದಕ್ಕೆ ಪ್ರತಿಯಾಗಿ ಅವು ಭೂಮಿ ಸೂರ್ಯರೇಖೆಗೆ ಬಹುಮಟ್ಟಿಗೆ ಸಮಾಂತರದಲ್ಲಿವೆ. ಬಾಲದ ಉತ್ತರಾರ್ಧದಲ್ಲಿ ಕಾಂತಕ್ಷೇತ್ರ ಭೂಮಿಯ ಕಡೆಗೂ ದಕ್ಷಿಣಾರ್ಧದಲ್ಲಿ ಭೂಮಿಗೆ ವಿರುದ್ಧ ದಿಕ್ಕಿನಲ್ಲೂ ನಿರ್ದೇಶಿತವಾಗಿದೆ. ಬಾಲದ ಈ ಅರ್ಧಗಳ ನಡುವೆ ಅತಿದುರ್ಬಲಕಾಂತಕ್ಷೇತ್ರದ ತೆಳು ಶೂನ್ಯ ಪದರವಿದೆ. ಇದರಲ್ಲಿ ಪ್ರತಿ ಪಾರ್ಶ್ವದಲ್ಲಿಯೂ ವಿರುದ್ಧದಿಕ್ಕಿನಲ್ಲಿರುವ ಕಾಂತಕ್ಷೇತ್ರಗಳು ಜೋಡಣೆಯಾಗದಂತೆ ಸಾಕಷ್ಟು ಒತ್ತಡದಲ್ಲಿ ಪ್ಲಾಸ್ಮ ಇದೆ. ಹೀಗಾಗಿ ದಿಕ್ಸೂಚಿಯಿಂದ ಭೂಕಾಂತ ದಕ್ಷಿಣ ಧ್ರುವದಿಂದ ಪ್ರಾರಂಭಿಸಿ ಕಾಂತ ಕ್ಷೇತ್ರರೇಖೆಯನ್ನು ಗುರುತಿಸುತ್ತ

ಹೋದರೆ ಸಾಮಾನ್ಯವಾಗಿ ಇದು ಭೂಕಾಂತ ಉತ್ತರ ಧ್ರುವಕ್ಕೆ ಕೊಂಡೊಯ್ಯುವುದಕ್ಕೆ ಬದಲಾಗಿ ಅಂತರಗ್ರಹ ಮಧ್ಯವರ್ತಿಗೋ ಅಥವಾ ಅಂತಿಮವಾಗಿ ಸೂರ್ಯ ಅಥವಾ ಸೌರವ್ಯೂಹವನ್ನೂ ಮೀರಿ ಆಕಾಶಗಂಗೆಗೋ ಕೊಂಡೊಯ್ಯಬಹುದು. ಸೌರಜ್ವಾಲೆಗಳಿಂದ ಉತ್ಸರ್ಜಿತವಾದ ಅಲ್ಪ–ಶಕ್ತಿ (40 $Kev$) ಎಲೆಕ್ಟ್ರಾನುಗಳು ಭೂಮಿಯ ಕಡೆಗೆ ಸೂರ್ಯನ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರುವುದನ್ನು ಬಾಲದಲ್ಲಿ ವೀಕ್ಷಿಸಲಾಗಿದೆ. ಈ ಕಣಗಳು ಕಾಂತಕ್ಷೇತ್ರದ ರೇಖೆಗಳಿಗೆ ಸಮಾಂತರದಲ್ಲಿ ಚಲಿಸಲೇಬೇಕಾಗಿರುವುದರಿಂದ ಬಾಲ ಅಂತರಗ್ರಹ ಮಧ್ಯವರ್ತಿಯೊಡನೆ ಜೋಡಣೆ ಹೊಂದಿರಬೇಕೆಂಬುದಕ್ಕೆ ಸ್ಪಷ್ಟವಾದ ಆಧಾರ ಸಿಕ್ಕಿದಂತಾಯಿತು.

ಈ ಬಾಲ ಸೌರವಾಯುವಿನಿಂದ ಕಾಂತಸೀಮಾದಲ್ಲಿ ಅಡ್ಡ ಅಥವಾ ಸ್ನಿಗ್ಧತಾ (ವಿಸ್ಕಸ್) ಪ್ರತಿಬಲ ಪ್ರಯೋಗಗಳಿಂದ ಉತ್ಪಾದಿಸಲ್ಪಟ್ಟಿರಬೇಕು. ಬಹುಶಃ ಭೂಕಾಂತ ಕ್ಷೇತ್ರ ರೇಖೆಗಳು ಮತ್ತು ಕಾಂತಗೋಳದ ಪ್ರವಾಹದ ಎದುರು ದಿಕ್ಕಿನ ಅಂತರಗ್ರಹ ಕಾಂತ ಕ್ಷೇತ್ರದ ಜೋಡಣೆ, ಅನಂತರ ಸೌರವಾಯುವಿನಿಂದ (ಸೂರ್ಯನಿಗೆ ವಿರುದ್ಧ ದಿಕ್ಕಿನಲ್ಲಿ) ಪ್ರವಾಹ ದಿಕ್ಕಿನಲ್ಲಿ ಸಾಗಾಣಿಕೆ–ಈ ರೀತಿಯ ಕ್ರಿಯಾವಿನ್ಯಾಸದಿಂದ ಬಾಲ ಉಂಟಾಗಿರಬೇಕು. ಈ ಪ್ರಕ್ರಿಯೆಯಿಂದ ಸೌರವಾಯುವಿನ ಶಕ್ತಿ ಬಾಲದಲ್ಲಿ ಕಾಂತಶಕ್ತಿಯಾಗಿ ವ್ಯತ್ಯಾಸವಾಗುವುದು. ಮತ್ತು ಬಾಲದಲ್ಲಿ ಒಟ್ಟು ಕಾಂತಾಭಿವಾಹ ಕಾಂತಾಗೋಳದ ಅಗ್ರಭಾಗದ ಅಭಿವಾಹವನ್ನು ಉಪಯೋಗಿಸಿಕೊಂಡು ಬೆಳೆಯುತ್ತ ಹೋಗುವುದು. ಆದರೆ ಈ ಬಾಲ ಅನಂತವಾಗಿ ಬೆಳೆಯಲಾರದು. ಏಕೆಂದರೆ ಬಾಲದಲ್ಲಿನ ಕಾಂತಕ್ಷೇತ್ರ ರೇಖೆಗಳನ್ನು ಶೂನ್ಯ ಪದರದೊಂದಿಗೆ ಪುನಃ ಸೇರಿಸಬಹುದು. ಸೇರುವೆ ಸಂಕುಚಿತವಾದಾಗ ಮತ್ತೊಮ್ಮೆ ಇವು ಕುಣಿಕೆಯಾಗಿರುವ ಭೂಕಾಂತಕ್ಷೇತ್ರರೇಖೆಗಳಾಗಿ ಭೂಮಿಯ ಹತ್ತಿರ ಸಮಾಪ್ತವಾಗುತ್ತವೆ. ಹೀಗಾಗಿ ಕಾಂತಗೋಳದ ಮೂಲಕ ಕಾಂತಕ್ಷೇತ್ರದ ಸಾಮಾನ್ಯ ಪರಿಚಲನೆ ಸಂಭವಿಸಲೇಬೇಕು; ಈ ಪ್ರಕ್ರಿಯೆಯಲ್ಲಿ ಬಾಲ ಸ್ವಾಭಾವಿಕ ಉಪೋತ್ಪನ್ನವಾಗಿ, ಸೌರವಾಯುವಿನಿಂದ ಕಾಂತಸೀಮಾದ ಅಗ್ರಭಾಗವನ್ನು ಸವೆಯಿಸಿ ಪರಿಚಲನೆಯನ್ನುಂಟು ಮಾಡುತ್ತದೆ. ಪರಿಚಲನೆಯಾಗಬೇಕಾದರೆ, ಅರ್ಧ–ಅಚರ ವಿದ್ಯುತ್ ಕ್ಷೇತ್ರ ಇರಬೇಕು. ಈ ಕ್ಷೇತ್ರವೇ ಧ್ರುವೀಯ ಜ್ಯೋತಿ, ಭೂಕಾಂತ ಬಿರುಗಾಳಿ ಇವೇ ಮೊದಲಾದ ತತ್ ಕ್ಷಣವೇ ಗೋಚರವಾಗುವ ಕಾಂತಗೋಳೀಯ ಘಟನೆಗಳಿಗೆ ಮುಖ್ಯ ಕಾರಣ.

**ಕೋಡುಬಳೆ (ಡೋನಟ್) ಪ್ರದೇಶ:** ಕಾಂತಗೋಳವನ್ನು ಭೂಕಾಂತ ಅಕ್ಷಾಂಶ ($\Lambda$) $70^\circ$–$75^\circ$ಗಿಂತ ಕಡಿಮೆ ಇರುವ ಪ್ರದೇಶಗಳಿಂದ ಉದ್ಭವಿಸುವ ಕೋಡುಬಳೆ ಆಕೃತಿಯ ಮುಚ್ಚಿದ ಕಾಂತ ರೇಖೆಗಳ ಕ್ಷೇತ್ರ ಮತ್ತು ಧ್ರುವೀಯ ಪ್ರದೇಶಗಳಿಂದ ($\Lambda \geq 70^\circ$–$75^\circ$) ಉತ್ಪನ್ನವಾಗುವ ತೆರೆದ ಕ್ಷೇತ್ರ ರೇಖೆಗಳ ಸಮೂಹ ಇವೆರಡರಿಂದಲೂ ಕೂಡಿದೆಯೆಂದು ಭಾವಿಸಬಹುದು. ಶಕ್ತಿಯುತವಾದ ಆವಿಷ್ಟ (ಚಾರ್ಜ್‌ಡ್) ಕಣಗಳನ್ನು ಈ ಕೋಡು ಬಳೆಯೊಳಗೆ ಬಹುಕಾಲದವರೆಗೂ ಕೂಡಿಹಾಕಬಹುದು ಮತ್ತು ಈ ಪ್ರದೇಶದಲ್ಲಿ ಭೂಮಿಯ ವಿಸರಣ ಪಟ್ಟಿ (ರೇಡಿಯೇಷನ್ ಬೆಲ್ಟ್) ಕಾಣಬರುತ್ತದೆ. ಅದಕ್ಕೆ ಪ್ರತಿಯಾಗಿ ಬಾಲದಲ್ಲಿರುವ ತೆರೆದ ಕಾಂತ ಕ್ಷೇತ್ರ ರೇಖೆಗಳು ಬೋನಿನಂತೆ ವರ್ತಿಸಲಾರವು. ಇಲ್ಲಿರುವ ಕಣಗಳು ಭೂಮಿಯ ಕಡೆಗೋ ವಿರುದ್ಧ ದಿಕ್ಕಿನಲ್ಲೋ ಹರಿದು ಹೋಗುತ್ತಲೇ ಇರಬೇಕು.

**ಕಾಂತಗೋಳೀಯ ಪ್ಲಾಸ್ಮ:** ಕೆಲವೇ ಎಲೆಕ್ಟ್ರಾನ್‌ವೋಲ್ಟ್‌ಗಳಿಗಿಂತಲೂ ಕಡಿಮೆ ಇರುವ ಕಣಶಕ್ತಿಗಳನ್ನೊಳಗೊಂಡಿರುವ ಅಲ್ಪಶಕ್ತಿ ಪ್ಲಾಸ್ಮ ಸಮಗ್ರ ಕೋಡುಬಳೆ ಪ್ರದೇಶವನ್ನು ವ್ಯಾಪಿಸಿಕೊಂಡಿದೆ. ಇದನ್ನು ಆಕಾಶಯಾನಗಳಲ್ಲಿ ನೇರವಾಗಿ ಪತ್ತೆ ಹಚ್ಚಬಹುದು. ಕಾಂತಗೋಳಿಯ ಪ್ಲಾಸಮ ಅಯಾನುಗೋಳದ ವಿಸ್ತರಣವೆಂದು ಕಾಣಬರುತ್ತದೆ. ಇದರಲ್ಲಿ ಸೂರ್ಯನ ಬೆಳಕಿನಿಂದ ವಾಯುಮಂಡಲದಲ್ಲಿರುವ ಸಮ ವಿದ್ಯುತ್ ಪರಮಾಣುಗಳ ಅಯಾನೀಕರಣದಿಂದ ಉತ್ಪನ್ನವಾದ ಲಘು ಅಯಾನುಗಳು $(H^+, He^+)$ ಇವೆ. ಆದರೆ ಪ್ಲಾಸ್ಮ ಲಕ್ಷ್ಯಾರ್ಹವಾದ ಒಂದು ರೂಪರೇಖೆಯನ್ನು ಪ್ರದರ್ಶಿಸುತ್ತದೆ. $\Lambda \simeq 60^\circ$ಲ್ಲಿ ಭೂಮಿಯನ್ನು ಛೇದಿಸುವ ಭೂಕಾಂತ ಕ್ಷೇತ್ರ ರೇಖೆಗಳಿಂದ ಸ್ಪಷ್ಟಪಡಿಸಲ್ಪಟ್ಟ ಚಿಪ್ಪಿನ ಮೇಲೆ ಸಾಂದ್ರತೆ ತೀವ್ರವಾಗಿ (10 ಅಥವಾ ಹೆಚ್ಚಿನ ಗುಣಕದಿಂದ) ಕುಸಿಯುತ್ತದೆ. ಪ್ಲಾಸ್ಮದ ಸೀಮಾ ಎಂದು ಕರೆಯಲ್ಪಡುವ ಈ ಚಿಪ್ಪಿನಲ್ಲಿ ಅಯಾನುಗೋಳದೊಡನೆ ಪ್ಲಾಸ್ಮ ವಿಸರಿತಸಮತೋಲಸ್ಥಿತಿಯಲ್ಲಿರುವುದು. ಆದರೆ ಚಿಪ್ಪಿನ ಹೊರಗಡೆ ಸಾಂದ್ರತೆ ಅತ್ಯಂತ ಕಡಿಮೆಯಾಗಿದೆ (ಕಾಂತಗೋಳೀಯ ಸಮಭಾಜಕ ಸಮತಲದ ಸಮೀಪದಲ್ಲಿ ಒಂದು ಘನ ಸೆಂಮೀಗೆ 10 ಕಣಗಳಿಗಿಂತ ಕಡಿಮೆ). ಅಲ್ಲದೆ ಯಾವ ರೀತಿಯ ಸಮತೋಲಸ್ಥಿತಿಯೂ ಕಾಣಬರುವುದಿಲ್ಲ. ಬಹುಶಃ ಆ ಭೂಕಾಂತ ಕ್ಷೇತ್ರರೇಖೆಗಳ ಒಳಭಾಗದ ಎಲ್ಲೆಯನ್ನು ಈಗ ತೆರೆದಿರುವ ಕೋಡುಬಳೆಯ ಭಾಗ, ಪ್ಲಾಸ್ಮ ಗುರುತಿಸುವುದೇ ಇದಕ್ಕೆ ವಿವರಣೆಯೆಂದು ತೋರುತ್ತದೆ. ಕ್ಷೇತ್ರರೇಖೆಗಳು ಬಾಲದ ಭಾಗವನ್ನು ರೂಪಿಸಿದರೆ ಪ್ಲಾಸ್ಮ ಸ್ವತಂತ್ರವಾಗಿ ಅಂತರಿಕ್ಷದಲ್ಲಿ ಹರಿದುಹೋಗಿ ನಷ್ಟವಾಗಿ ಬಿಡುತ್ತದೆ. ಪ್ಲಾಸ್ಮದಿಂದ ಈ ರೀತಿ ಸೋರಿ ಹೋದ ಕ್ಷೇತ್ರರೇಖೆಗಳನ್ನು ಪುನಃ ತುಂಬಲು ಅಯಾನುಗೋಳದಲ್ಲಿ ಉತ್ಪನ್ನವಾಗುವ ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳಿಗೆ ಸುಮಾರು ಒಂದು ದಿವಸವಾದರೂ ಬೇಕು. ಹೀಗಾಗುವುದರಿಂದ ಪ್ಲಾಸ್ಮಸೀಮಾದ ಇರುವಿಕೆ ಬಾಲ ಮತ್ತು ಕೋಡುಬಳೆಗಳೊಡನೆ ಭೂಕಾಂತಕ್ಷೇತ್ರ ರೇಖೆಗಳ ವಿನಿಮಯಕ್ಕೆ ಒಂದು ಉತ್ತಮ ಸಾಕ್ಷಿ. ಅದೇ ರೀತಿ ಕಾಂತಗೋಳದಲ್ಲಿ ಅರ್ಧ–ಸ್ಥಿರ ವಿದ್ಯುತ್ ಕ್ಷೇತ್ರದ ಅಸ್ತಿತ್ವವನ್ನು ಸ್ಥಿರಪಡಿಸಿದಂತಾಯಿತು.

**ವಾನ್ ಆಲೆನ್ ವಿಸರಣ ಪಟ್ಟಿ (ರೇಡಿಯೇಷನ್ ಬೆಲ್ಟ್):** ಕೋಡುಬಳೆಯೊಳಗೆ ಬಂಧಿತವಾಗಿರುವ ಶಕ್ತಿಯುತ ಕಣಗಳ ಪಟ್ಟಿಯನ್ನು ಜೇಮ್ಸ್ ವಾನ್ ಆಲೆನ್ ಮತ್ತು ಸಹೋದ್ಯೋಗಿಗಳು 1958ರಲ್ಲಿ ಕಂಡುಹಿಡಿದರು. ವಾಸ್ತವವಾಗಿ ಅವರ ಆರಂಭಿಕ ಪ್ರಯೋಗಗಳಲ್ಲಿ ಬಂಧಿತಕಣಗಳಲ್ಲಿ ಅತಿಯಾಗಿ ಭೇದಿಸುವ ಘಟಕಗಳನ್ನು ಮಾತ್ರ ಕಂಡುಹಿಡಿಯಲು ಸಾಧ್ಯವಾಯಿತು. ಪಟ್ಟಿಯ ಮೊದಲನೆ ಪಟ್ಟೆಯಲ್ಲಿ 1–100 $\chi = \frac{C}{T-\theta}$ ಶಕ್ತಿಯ ಪ್ರೋಟಾನುಗಳಿವೆ; ಈ ಸ್ಥಾಯೀಪಟ್ಟಿ ಸಮಭಾಜಕದಿಂದ ಸುಮಾರು 4000 ಕಿಮೀ ಮೇಲೆ ಇದೆ. ಇದಕ್ಕೆ ಆಂತರಿಕ ವಾನ್ ಆಲೆನ್ ಪಟ್ಟಿ ಎಂದು ಹೆಸರು. ಎರಡನೆಯ ಪಟ್ಟೆಯಲ್ಲಿ 1–10 $Mev$ ಪರಿಸರದ ಶಕ್ತಿಯ ಎಲೆಕ್ಟ್ರಾನುಗಳಿವೆ. ಭೂಕೇಂದ್ರದಿಂದ 4 $R_e$ ದೂರದಲ್ಲಿರುವ ಈ ಪಟ್ಟೆಗೆ ಬಾಹ್ಯ ವಾನ್ ಆಲೆನ್ ಪಟ್ಟೆ ಎಂದು ಹೆಸರು.

ಕೋಡುಬಳೆಯನ್ನು ಸಮಗ್ರವಾಗಿ ತುಂಬಿರುವ ಕಣಗಳಲ್ಲಿ ಆಂತರಿಕ ಮತ್ತು ಬಾಹ್ಯ ವಾನ್ ಆಲೆನ್ ಪಟ್ಟಿಗಳು ಅಲ್ಪಸಂಖ್ಯಾ ಅಂಶಗಳು. ಇವುಗಳಲ್ಲಿ ಮೇಲೆ ತಿಳಿಸಿದ ಉಷ್ಣತಾ ಪ್ಲಾಸ್ಮದಲ್ಲಿರುವ ಅಲ್ಪ ಎಲೆಕ್ಟ್ರಾನ್ ವೋಲ್ಟ್ ಶಕ್ತಿಕಣಗಳಿಂದ ಹಿಡಿದು ಹೆಚ್ಚು ಶಕ್ತಿಕಣಗಳವರೆಗೂ ಇವೆ. ಇವುಗಳ ಗುಣಾಂಶಗಳು ಉಷ್ಣತೆ ಮತ್ತು ಸ್ಥಳೀಯ ವ್ಯತ್ಯಾಸಗಳಿಂದ ನಾನಾರೀತಿಯಲ್ಲಿ ಮಾರ್ಪಾಡಾಗುತ್ತವೆ. ಈ ಕಣಗಳಲ್ಲಿನ ಒಟ್ಟು ಶಕ್ತಿ ಅತಿ ಹೆಚ್ಚಾಗಿದೆ.

**ಭೂಕಾಂತ ಬಿರುಗಾಳಿ:** ಕಾಂತಗೋಳ ಉಬ್ಬಲು 10 $Kev$ ಸುಮಾರಿನ ಶಕ್ತಿಯ ಪ್ರೋಟಾನುಗಳೇ ಬಲುಮಟ್ಟಿಗೆ ಕಾರಣವೆಂದು ಗೊತ್ತಾಗಿದೆ. ಈ ಉಬ್ಬುವಿಕೆ ಭೂಮಿಯ ರಾತ್ರಿಭಾಗದಲ್ಲಿ ಪ್ರಾರಂಭವಾಗುತ್ತದೆ. ಇದರಿಂದ ಪರಿಣಾಮವಾಗುವ ಕೋಡುಬಳೆಯ ಅಸಮಾಂಗ ಉಬ್ಬುವಿಕೆ ಕೆಲವು ಗಂಟೆಗಳ ಕಾಲ ರಚನೆಯಾಗಿ ಅನಂತರ ಪ್ಲಾಸ್ಮ–ಸೀಮಾದ ಹೊರಗಡೆ ಸಿಡಿತದ ಶ್ರೇಣಿಯಿಂದ ಕೋಡುಬಳೆಯ ಪೂರ್ತ ಹರಡಿಕೊಳ್ಳುತ್ತದೆ. ಇದರಲ್ಲಿ ಪ್ರತಿಯೊಂದೂ ಧ್ರುವೀಯ ಜ್ಯೋತಿಯ ಪ್ರವೃತ್ತಿಯಲ್ಲಿ ಸಂಗುಣಿತವಾಗಿದೆ. ಇದಕ್ಕೆ ಧ್ರುವೀಯ ಉಪಬಿರುಗಾಳಿ ಎಂದು ಹೆಸರು. ಈ ಉಪಬಿರುಗಾಳಿಯ ಕಾಲದಲ್ಲಿ ಶಕ್ತಿ $3\times10^{1}$ಅರ್ಗ್ ಸೆ$^{-1}$ ಪ್ರಮಾಣದಲ್ಲಿ ಊರ್ಧ್ವವಾಯುಮಂಡಲದಲ್ಲಿ ಹಂಚಿಹೋಗುತ್ತದೆ. ಕಿರಿದಾದ ಭೂಕಾಂತ ಬಿರುಗಾಳಿಗಳು, ಕ್ರಮೇಣ ಸಂಭವಿಸುತ್ತವೆ. ಆದರೆ ದೊಡ್ಡಪ್ರಮಾಣದ ಬಿರುಗಾಳಿಗಳು, ಭೂಮಟ್ಟದಲ್ಲಿ ವೀಕ್ಷಿತವಾದ ಭೂಕಾಂತ ಕ್ಷೇತ್ರಬಲ ಹಠಾತ್ತನೆ ಹೆಚ್ಚಾಗುವುದರಿಂದ, ಪ್ರಾರಂಭವಾಗುತ್ತವೆ. ಪ್ರತಿಯೊಂದು ದೃಷ್ಟಿಯಲ್ಲಿಯೂ ಕಾಂತಗೋಳ ಲಕ್ಷ್ಯಾರ್ಹವಾದ ಸ್ವಾಭಾವಿಕ ಪ್ಲಾಸ್ಮ ಪ್ರಯೋಗಶಾಲೆಯೇ ಆಗಿದೆ. ಇದರಲ್ಲಿರುವ ಸ್ವಭಾವಸಿದ್ಧ ಪ್ರಾಮುಖ್ಯದಿಂದ ಅಭ್ಯಾಸವನ್ನು ಮುಂದುವರಿಸಲು ತಕ್ಕದಾದ ವಿಷಯವಾಗಿದೆ. *(ಎ.ಸಿ.)*

**ಕಾಂತ ತಂತಿ :** ವಿದ್ಯುತ್ ಕಾಂತಗಳು ಮತ್ತು ವಿದ್ಯುತ್ ಕಾಂತ ಉಪಕರಣಗಳಲ್ಲಿ ಉಪಯೋಗಿಸುವ, ಅವಾಹಕದಿಂದ ಮುಚ್ಚಿದ ತಾಮ್ರ ಅಥವಾ ಅಲ್ಯೂಮಿನಿಯಮ್ ತಂತಿ (ಮ್ಯಾಗ್ನೆಟಿಕ್ ವೈರ್). ಇದು ಕಾಗದ, ದಾರ, ಎನಾಮಲ್, ಫಾರಮ್‌ವಾರ್ ಮುಂತಾದ ಅವಾಹಕ ವಸ್ತುಗಳಿಂದ ಮುಚ್ಚಿರುವ ಒಂದೆಳೆ ತಂತಿ. ವಿವಿಧ ಉಪಯೋಗಗಳಿಗೆ ವಿವಿಧ ರೀತಿಯ ಅವಾಹಕಗಳನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ ಕೆಲವು ವಿದ್ಯುತ್ ಟ್ರಾನ್ಸ್‌ಫಾರ್ಮರುಗಳಲ್ಲಿ ಕಾಗದದಿಂದ ಮುಚ್ಚಿದ ತಂತಿಯನ್ನು ಉಪಯೋಗಿಸಿದರೆ ವಾಹನಗಳ ಜ್ವಲನ (ಇಗ್ನಿಷನ್) ಸುರುಳಿಗಳು, ಮ್ಯಾಗ್ನೆಟೋ ಸುರುಳಿಗಳು, ರಿಲೇಗಳು, ಟ್ಯೂಬ್‌ಲೈಟ್‌ಗಳ ಬೆಲ್ಲಾಸ್ಟುಗಳು, ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಉಪಯೋಗಿಸುವ ಸುರುಳಿಗಳು ಟ್ರಾನ್ಸ್‌ಫಾರ್ಮರುಗಳು ಮುಂತಾದುವುಗಳಲ್ಲಿ ಎನಾಮಲಿನಿಂದ ಮುಚ್ಚಿದ ತಂತಿಯನ್ನು ಉಪಯೋಗಿಸುತ್ತಾರೆ. ಕೆಲವು ಉಪಕರಣಗಳಲ್ಲಿ ಹೆಚ್ಚು ಉಷ್ಣ ಉತ್ಪತ್ತಿಯಾಗುವುದರಿಂದ ಅವುಗಳಲ್ಲಿ ಉಪಯೋಗಿಸುವ ತಂತಿಯನ್ನು ಮುಚ್ಚಿದ ಅವಾಹಕ ಆ ಉಷ್ಣವನ್ನು ತಡೆಯುವಂಥದ್ದಾಗಿರಬೇಕು. ಅವು ತಡೆಯಬಹುದಾದ ಅತ್ಯಧಿಕ ಉಷ್ಣತೆಯನ್ನನುಸರಿಸಿ ಅವಾಹಕಗಳನ್ನು ಐದು ಭಾಗಗಳಾಗಿ ವಿಂಗಡಿಸಿದ್ದಾರೆ: ಭಾಗ 0–$90^0$ಸೆಂ. ಭಾಗ A–$105^0$ಸೆಂ. ಭಾಗ B–$130^0$ಸೆಂ. ಭಾಗ F–$155^0$ಸೆಂ; ಮತ್ತು ಭಾಗ H–$180^0$ಸೆಂ. **(ಕೆ.ಜಿ.)**

**ಕಾಂತತ್ವ :** ಸೂಜಿಗಲ್ಲಿನಲ್ಲಿ ಮತ್ತು ಕಾಂತದಲ್ಲಿ (ಮ್ಯಾಗ್ನೆಟ್) ಪ್ರಕಟಿತವಾಗುವ ಒಂದು ಭೌತ ವಿದ್ಯಮಾನ; ಕಬ್ಬಿಣವನ್ನು ಆಕರ್ಷಿಸುವ ಗುಣ ಇದಕ್ಕಿದೆ; ಇದು ಚರವಿದ್ಯುತ್ತಿನ ಒಂದು ಅವಿಭಾಜ್ಯ ಅಂಗ; ಬಲಕ್ಷೇತ್ರ ಇದರ ಲಕ್ಷಣ; ಕಾಂತಗಳೂ ವಿದ್ಯುತ್ಪ್ರವಾಹಗಳೂ ಈ ಕ್ಷೇತ್ರದಲ್ಲಿ ಯಾಂತ್ರಿಕ ಬಲಗಳನ್ನು ಅನುಭವಿಸುತ್ತವೆ (ಮ್ಯಾಗ್ನೆಟಿಸಂ).

**ಇತಿಹಾಸ :** ಅತಿ ಪ್ರಾಚೀನ ಕಾಲದಿಂದಲೂ (ಪ್ರ.ಶ.ಪೂ.600ಕ್ಕಿಂತಲೂ ಹಿಂದೆ) ಸೂಜಿಗಲ್ಲು ಅಥವಾ ಚುಂಬಕ ಎನ್ನುವುದು ಕಬ್ಬಿಣದ ಚೂರುಗಳನ್ನು ಅಥವಾ ಕಬ್ಬಿಣದ ಪುಡಿಯನ್ನು ಆಕರ್ಷಿಸುತ್ತದೆ ಎನ್ನುವ ವಿಚಾರ ಭಾರತವನ್ನೂ ಒಳಗೊಂಡಂತೆ ಅನೇಕ

ದೇಶಗಳಲ್ಲಿ ತಿಳಿದಿತ್ತು. ಏಷ್ಯ ಮೈನರಿನ ನಗರಗಳಲ್ಲಿ ಒಂದಾದ ಮ್ಯಾಗ್ನೀಸಿಯಾದಲ್ಲಿ ದೊರೆತ ಕಬ್ಬಿಣದ ಅದುರು ಸೂಜಿಗಲ್ಲಿನ ಗುಣವನ್ನು ಪ್ರದರ್ಶಿಸಿದುದರಿಂದ ಅದುರಿಗೆ ಮ್ಯಾಗ್ನೆಟೈಟ್ ಎಂಬ ಹೆಸರೂ ಅದುರಿನ ಚೂರಿಗೆ ಮ್ಯಾಗ್ನೆಟ್ (ಕಾಂತ) ಎಂಬ ಹೆಸರೂ ಬಂದಿರಬಹುದು. ನೈಸರ್ಗಿಕವಾಗಿ ದೊರೆಯುವ ಸೂಜಿಗಲ್ಲಿನ ಉದ್ದವಾದ ಒಂದು ತುಂಡನ್ನು ಸರಾಗವಾಗಿ ತಿರುಗುವುದಕ್ಕೆ ಆಗುವಂತೆ ತೂಗು ಹಾಕಿದರೆ ಅದರ ಒಂದು ತುದಿ ಯಾವಾಗಲೂ ಉತ್ತರದಿಕ್ಕಿಗೆ ತೋರಿಸುವಂತೆ ನಿಲ್ಲುವುದೆಂದು ಕೆಲವು ಕಾಲಾನಂತರ ತಿಳಿಯಬಂದಿತು. ಈ ಕಾರಣದಿಂದ ಸೂಜಿಗಲ್ಲಿಗೆ ದಾರಿತೋರಿಸುವ ಕಲ್ಲು (ಲೋಡ್ ಸ್ಟೋನ್) ಅಥವಾ ದಿಕ್ಸೂಚಿ ಎಂಬ ಹೆಸರು ಲಭಿಸಿತು. 1600ರಲ್ಲಿ ಇಂಗ್ಲೆಂಡಿನ ಒಂದನೆಯ ಎಲಿಜಬೆತ್ ರಾಣಿಯ ಖಾಸಗಿ ವೈದ್ಯನಾಗಿದ್ದ ವಿಲಿಯಂ ಗಿಲ್ಬರ್ಟ್ ಎಂಬಾತ ಕಾಂತಗಳ ಗುಣಗಳನ್ನು ಪರಿಶೀಲಿಸಿ 'ಡೆ ಮ್ಯಾಗ್ನೆಟ್' ಎಂಬ ಪುಸ್ತಕವನ್ನು ಪ್ರಕಟಿಸಿದ. ಭೂಮಿ ಒಂದು ಕಾಂತಗೋಳದಂತೆ ವರ್ತಿಸುವುದೆಂದು ಆತ ಸೂಚಿಸಿದ. ಕಾಂತಗಳ ಮೇಲೆ ವಿದ್ಯುತ್ಪ್ರವಾಹಕ್ಕೆ ಪ್ರಭಾವವಿದೆಯೆಂದೂ ವಿದ್ಯುತ್ಪ್ರವಾಹದ ಸಮೀಪ ಕಾಂತಕ್ಷೇತ್ರ ಏರ್ಪಡುವುದೆಂದೂ ಹ್ಯಾನ್ಸ್ ಅರ್ ಸ್ಟೆಡ್ ತೋರಿಸಿದ (1820). ಒಂದು ತಂತಿಯ ಸುರುಳಿಯಲ್ಲಿನ ಕಾಂತಕ್ಷೇತ್ರವನ್ನು ಬದಲಾಯಿಸಿದರೆ ಸುರುಳಿಯಲ್ಲಿ ವಿದ್ಯುತ್ಪ್ರವಾಹ ಪ್ರೇರಿತವಾಗುವ ವಿದ್ಯಮಾನವನ್ನು ಫ್ಯಾರಡೇ ಆವಿಷ್ಕರಿಸಿದ (1813). ಅರ್‌ಸ್ಟೆಡ್ಡನ ಅನ್ವೇಷಣೆಯಿಂದ ಕಾಂತತ್ವದ ಚರ್ಚಾತ್ಮಕ ವಿವರಣೆ ಸಾಧ್ಯವಾಯಿತು. ಫ್ಯಾರಡೇಯ ಆವಿಷ್ಕಾರದಿಂದ ವಿದ್ಯುತ್ ಎಂಜಿನಿಯರಿಂಗ್ ಎಂಬ ಹೊಸ ಶಾಖೆಯೇ ಬೆಳೆಯಿತು.

**ನೈಸರ್ಗಿಕ ಮತ್ತು ಕೃತಕ ಕಾಂತಗಳು :** ಅದುರಿನ ರೂಪದಲ್ಲಿ ದೊರೆಯುವ ಸೂಜಿಗಲ್ಲು ಅಥವಾ ಮ್ಯಾಗ್ನೆಟೈಟ್ ಎಂಬುದೇ ನೈಸರ್ಗಿಕ ಕಾಂತ (ಮ್ಯಾಗ್ನೆಟ್). ಇದು ಕಬ್ಬಿಣದ ಪುಡಿ ಅಥವಾ ಚೂರುಗಳನ್ನು ಆಕರ್ಷಿಸುತ್ತದೆ. ಕಬ್ಬಿಣದ ಪುಡಿ ಅಧಿಕ ಪರಿಮಾಣದಲ್ಲಿ ತಗುಲಿಕೊಳ್ಳುವ ಎರಡು ಭಾಗಗಳನ್ನು ಸೂಜಿಗಲ್ಲಿನ ಧ್ರುವಗಳೆಂದು ಕರೆಯುತ್ತಾರೆ. ದಂಡಾಕಾರದ ಒಂದು ಸೂಜಿಗಲ್ಲನ್ನು (ಇದರ ಧ್ರುವಗಳು ದಂಡದ ಕೊನೆಗಳ ಸಮೀಪ ಇರುತ್ತವೆ) ಒಂದು ತೆಳ್ಳನೆಯ ರೇಷ್ಮೆ ಎಳೆಯಿಂದ ತೂಗುಹಾಕಿದರೆ ದಕ್ಷಿಣೋತ್ತರವಾಗಿ ನಿಲುವನ್ನು ತಳೆಯುತ್ತದೆ. ಉತ್ತರ ದಿಕ್ಕನ್ನು ಸೂಜಿಸುವ ತುದಿಗೆ ಉತ್ತರ ಧ್ರುವ (ನಾರ್ತ್ ಪೋಲ್) ಎಂದೂ ದಕ್ಷಿಣ ದಿಕ್ಕನ್ನು ಸೂಚಿಸುವ ತುದಿಗೆ ದಕ್ಷಿಣ ಧ್ರುವ (ಸೌತ್ ಪೋಲ್) ಎಂದೂ ಹೆಸರು.

$-m$

ಶಾಶ್ವತಕಾಂತಗಳನ್ನು (ಪರ್ಮನೆಂಟ್ ಮ್ಯಾಗ್ನೆಟ್ಸ್) ತಯಾರಿಸಲೂಬಹುದು. ಒಂದು ದಂಡಕಾಂತದ (ಬಾರ್ ಮ್ಯಾಗ್ನೆಟ್) ಒಂದು ಧ್ರುವದಿಂದ ಒಂದು ಉಕ್ಕಿನ ತುಂಡನ್ನು ಅದರ ಒಂದು ನಿರ್ದಿಷ್ಟ ತುದಿಯಿಂದ ಮತ್ತೊಂದರವರೆಗೆ ಒಂದೇ ದಿಕ್ಕಿನಲ್ಲಿ ಹಲವು ಸಾರಿ ಉಜ್ಜಿದರೆ ಉಕ್ಕಿನ ತುಂಡು ಶಾಶ್ವತಕಾಂತವಾಗುತ್ತದೆ. ಹೀಗೆ ಪಡೆದ ಕಾಂತದ



**ಚಿತ್ರ 1**

ಎರಡನೆಯ ತುದಿ ಉಜ್ಜುವುದಕ್ಕೆ ಉಪಯೋಗಿಸಿದ ಧ್ರುವಕ್ಕೆ ವ್ಯತಿರಿಕ್ತವಾದ ಧ್ರುವವನ್ನು ಪಡೆಯುತ್ತದೆ. ವಿದ್ಯುತ್ಪ್ರವಾಹವನ್ನು ಉಪಯೋಗಿಸಿ ಶಾಶ್ವತ ಕಾಂತಗಳನ್ನು ನಿರ್ಮಿಸಬಹುದು. ವಿದ್ಯುನ್ನಿರೋಧಿ ಹೊದಿಕೆಯುಳ್ಳ ತಂತಿಯ ಸುರುಳಿಯ ಒಳಗೆ (ಚಿತ್ರ ಒಂದರಲ್ಲಿ ತೋರಿಸಿರುವಂತೆ) ಉಕ್ಕಿನ ತುಂಡನ್ನು ಇಟ್ಟು ಮೂಲಕ ವಿದ್ಯುತ್ ಹರಿಯುವಂತೆ ಮಾಡಿದರೆ ಉಕ್ಕಿನ ತುಂಡು ಶಾಶ್ವತಕಾಂತವಾಗಿ ಮಾರ್ಪಡುತ್ತದೆ. ತುಂಡಿನ ತುದಿಯನ್ನು ನೋಡುವಾಗ ಅದರ ಸುತ್ತ ಹರಿವ ವಿದ್ಯುತ್ಪ್ರವಾಹದ ದಿಕ್ಕು ಪ್ರದಕ್ಷಿಣವಾಗಿದ್ದರೆ ಆ ತುದಿ ದಕ್ಷಿಣ ಧ್ರುವವನ್ನೂ ಅಪ್ರದಕ್ಷಿಣವಾಗಿದ್ದರೆ ಆ ತುದಿ ಉತ್ತರ ಧ್ರುವವನ್ನೂ ಸೂಚಿಸುತ್ತವೆ. ಉಕ್ಕಿನ ತುಂಡನ್ನು U(ಕುದುರೆಲಾಳ) ಆಕಾರದಲ್ಲಿ ಮಾಡಿ ಅದರ ಸುತ್ತ ಮೇಲೆ ಹೇಳಿದ ರೀತಿ ವಿದ್ಯುತ್ಪ್ರವಾಹವನ್ನು ಹರಿಸಿ ಶಾಶ್ವತ ಕಾಂತವನ್ನು ತಯಾರಿಸಬಹುದು. ಉಕ್ಕಿನ ಬದಲು ಮಿದು ಕಬ್ಬಿಣದ (ಸಾಫ್ಟ್ ಐರನ್) ದಿಂಡನ್ನು ಉಪಯೋಗಿಸಿದಾಗ ವಿದ್ಯುತ್ಪ್ರವಾಹ ಹರಿಯುತ್ತಿರುವಷ್ಟು ವೇಳೆ ಅದು ಕಾಂತವಾಗಿ ವರ್ತಿಸುತ್ತದೆ; ಪ್ರವಾಹ ನಿಂತೊಡನೆ ಅದು ಕಾಂತತ್ವವನ್ನು ಕಳೆದುಕೊಳ್ಳುತ್ತದೆ. ತಾತ್ಕಾಲಿಕ ಕಾಂತಗಳನ್ನು ತಯಾರಿಸುವ ಬಗೆ ಇದು.

**ಕಾಂತಧ್ರುವತ್ರಾಣ :** ಎರಡು ಕಾಂತಗಳ ಉತ್ತರಧ್ರುವಗಳ (ಅಂತೆಯೇ ದಕ್ಷಿಣ ಧ್ರುವಗಳ) ಒಂದು ಜೊತೆಗೆ ಸಜಾತೀಯ ಧ್ರುವಗಳೆಂದು ಹೆಸರು. ಕಾಂತಗಳ ಒಂದು ಪ್ರಮುಖ ಲಕ್ಷಣ ಈ ಧ್ರುವಗಳ ವರ್ತನೆ: ವಿಜಾತೀಯ ಧ್ರುವಗಳು ಆಕರ್ಷಿಸುತ್ತವೆ, ಸಜಾತೀಯ ಧ್ರುವಗಳು ವಿಕರ್ಷಿಸುತ್ತವೆ. ಆದ್ದರಿಂದ ಕಾಂತಧ್ರುವಗಳಿಗೆ ತ್ರಾಣವಿದೆಯೆಂದೂ (ಸ್ಟ್ರೆಂಗ್ತ್) ಇದರ ಪರಿಣಾಮವಾಗಿ ಬೇರೆ ಬೇರೆ ಬಿಂದುಗಳಲ್ಲಿ ಧ್ರುವಗಳು ಬಲಗಳನ್ನು (ಫೋರ್ಸಸ್) ಪ್ರಯುಕ್ತಿಸುವುವೆಂದೂ ತರ್ಕಿಸಬಹುದು. ಈ ಬಲಗಳು ಪಾಲಿಸುವ ನಿಯಮವನ್ನು ಕೂಲಾಂಬ್ ಎಂಬ ವಿಜ್ಞಾನಿ ಪ್ರಾಯೋಗಿಕವಾಗಿ ಆವಿಷ್ಕರಿಸಿ (1785) ಇದರ ಪ್ರಕಾರ ಎರಡು ಕಾಂತಗಳ ಧ್ರುವಗಳ ನಡುವೆ ಇರುವ ಆಕರ್ಷಣ ಅಥವಾ ವಿಕರ್ಷಣ ಬಲ ಆ ಧ್ರುವತ್ರಾಣಗಳ ಗುಣಲಬ್ಧಕ್ಕೆ ಸರಳ ಪ್ರಮಾಣದಲ್ಲಿಯೂ ಧ್ರುವಾಂತರದ ವರ್ಗಕ್ಕೆ ವಿಲೋಮಪ್ರಮಾಣದಲ್ಲಿಯೂ ಇದೆ. ಎರಡು ಬಿಂದು-ಕಾಂತಗಳಿವೆಯೆಂದೂ (ವಾಸ್ತವಿಕವಾಗಿ ಇಂಥವುಗಳಿಗೆ ಅಸ್ತಿತ್ವವಿಲ್ಲ; ಒಂದು ಕಾಂತವನ್ನು ಎಷ್ಟೇ ಕಿರಿಯ ಗಾತ್ರದ ಕಾಂತವಾಗಿ ತುಂಡುಮಾಡುತ್ತ ಹೋದರೂ ದೊರೆಯುವ ಒಂದೊಂದು ತುಂಡು ಸಹ ಒಂದೊಂದು ಕಾಂತವಾಗಿಯೇ-ಎಂದರೆ ಉತ್ತರ, ದಕ್ಷಿಣ ಧ್ರುವಗಳಿರುವ-ಉಳಿಯುತ್ತವೆ. ಹಾಗಿದ್ದರೂ ಗಣನೆಯ ಸೌಕರ್ಯಕ್ಕೆ ಬಿಂದು-ಕಾಂತಗಳನ್ನು ಕಲ್ಪಿಸಿಕೊಂಡು ಅಲ್ಲಿ ಯಾವುದೇ ಒಂದು ಧ್ರುವ ಮಾತ್ರ ಇದೆ ಎಂದು ಭಾವಿಸಬಹುದು. ಅವುಗಳ ತ್ರಾಣಗಳು $m, m'$ ಮತ್ತು ಅವುಗಳ ನಡುವಿನ ಅಂತರ $d$ ಎಂದೂ ಭಾವಿಸಿದರೆ ಧ್ರುವಗಳ ನಡುವೆ ಇರುವ ಆಕರ್ಷಣ ಅಥವಾ ವಿಕರ್ಷಣ ಬಲ $F$ ಎಂಬುದು

$$F = k \frac{mm'}{d^2} \qquad ...........1$$

ಆಗುತ್ತದೆ. ಇಲ್ಲಿ $k$ ಒಂದು ನಿಯತಾಂಕ. ದರ ಬೆಲೆ ಧ್ರುವಗಳಿರುವ ಮಾಧ್ಯಮವನ್ನು ಅವಲಂಬಿಸಿದೆ. ನಿರ್ವಾತ ಪ್ರದೇಶದಲ್ಲಿ $k=1$ ಎಂದು ಭಾವಿಸಿದಾಗ ಮೇಲಿನ ಸೂತ್ರ

$$F = \frac{mm'}{d^2} \qquad ........2$$

ಆಗುತ್ತದೆ. ಈಗ, ಸಮಾನತ್ರಾಣದ ಎರಡು ಧ್ರುವಗಳನ್ನು 1 ಸೆಂಮೀ. ಅಂತರದಲ್ಲಿಟ್ಟು ಅವುಗಳ ಆಕರ್ಷಣ (ವಿಕರ್ಷಣ) ಬಲ 1 ಡೈನ್ ಆಗುವಂತೆ ಧ್ರುವತ್ರಾಣವನ್ನು ಅಳವಡಿಸಬೇಕು. ಸಮೀಕರಣ (2) ಬದಲಾಗುವ ಸ್ಥಿತಿಗಳು ಹೀಗಿವೆ:

$F = m^2$, ($m=m'$, $d=1$ ಆಗಿರುವುದರಿಂದ)

$1=m^2$, ($F=1$ ಆಗಿರುವುದರಿಂದ)

$\therefore\ m=1$

ಈ ಪ್ರಕಾರ ದೊರೆಯುವ ಧ್ರುವತ್ರಾಣದ ಬೆಲೆಯೇ ಅದರ ಏಕಮಾನ.

**ಕಾಂತಕ್ಷೇತ್ರ ಮತ್ತು ಕ್ಷೇತ್ರಬಲ:** ಒಂದು ಕಾಂತವಸ್ತುವಿನ ಸುತ್ತಲೂ ಅದರ ಪರಿಣಾಮವಾಗಿ ಉಂಟಾಗಿರುವ ಕಾಂತಬಲಗಳನ್ನು ಗುರುತಿಸಬಹುದಾದ ಒಂದು ಪರಿಸ್ಥಿತಿಯೇ ಆ ಕಾಂತದ ಕಾಂತಕ್ಷೇತ್ರ, ಕಾಂತಗಳ ಮತ್ತು ವಿದ್ಯುತ್ಪ್ರವಾಹದ ಸಮೀಪದಲ್ಲಿ ಕಾಂತಕ್ಷೇತ್ರ ಉಂಟಾಗುತ್ತದೆ. ಕ್ಷೇತ್ರದ ಯಾವುದೇ ಒಂದು ಬಿಂದುವಿನಲ್ಲಿ ಒಂದು ಉತ್ತರ ಧ್ರುವವನ್ನಿಟ್ಟರೆ ಅದು ಆಗ ಒಂದು ನಿರ್ದಿಷ್ಟವಾದ ದಿಕ್ಕಿನಲ್ಲಿ ಚಲಿಸಲು ತೊಡಗುತ್ತದೆ. ಇದರ ಕಾರಣ ಕಾಂತಕ್ಷೇತ್ರ ಧ್ರುವದ ಮೇಲೆ ಪ್ರಯುಕ್ತಿಸುವ ಬಲ. ಧ್ರುವದ ಚಲನೆಯ ದಿಕ್ಕು ಕ್ಷೇತ್ರಬಲದ ದಿಕ್ಕನ್ನು ಅವಲಂಬಿಸಿದೆ. ಉತ್ತರ ಧ್ರುವದ ಬದಲು ದಕ್ಷಿಣ ಧ್ರುವವನ್ನಿಟ್ಟರೆ ಅದು ಕ್ಷೇತ್ರಕ್ಕೆ ವಿಮುಖವಾಗಿ ಚಲಿಸಲು ಪ್ರಾರಂಭಿಸುವುದು. ಹೀಗೆ ಒಂದು ಕಾಂತಕ್ಷೇತ್ರದ ಪರಿಣಾಮವಾಗಿ ಒಂದು ಏಕಮಾನ ಧ್ರುವ ಅನುಭವಿಸುವ ಬಲದ ಹೆಸರು ಕಾಂತಕ್ಷೇತ್ರಬಲ. (ಇನ್ ಟೆನ್ಸಿಟಿ ಆಫ್ ದಿ ಮ್ಯಾಗ್ನೆಟಿಕ್ ಫೀಲ್ಡ್). ಇದು $F$ ಡೈನುಗಳಾಗಿದ್ದರೆ ಧ್ರುವ ಅನುಭವಿಸುವ ಈ ಬಲ ಯಾಂತ್ರಿಕ ಬಲ) ಇದನ್ನು ಉಂಟುಮಾಡುವ ಕಾಂತಕ್ಷೇತ್ರಬಲ $F$ ಅರ್ ಸ್ಟೆಡ್ಡುಗಳಾಗುತ್ತದೆ. ಈ ವ್ಯಾಖ್ಯೆಯ ಪ್ರಕಾರ ತ್ರಾಣವಿರುವ ಕಾಂತಧ್ರುವ ಅದರಿಂದ $d$ ದೂರದಲ್ಲಿರುವ ಬಿಂದುವಿನಲ್ಲಿ

$$F = \frac{m}{d^2} \qquad ...(3)$$

ಅರ್ ಸ್ಟೆಡ್ಡುಗಳಷ್ಟು ಬಲವನ್ನು ಪ್ರಯುಕ್ತಿಸುವುದು. ಅದರ ದಿಕ್ಕು ಕಾಂತಧ್ರುವವನ್ನು ಬಿಂದುವಿಗೆ ಸೇರಿಸುವ ದಿಕ್ಕಿನಲ್ಲಿದೆ.

**ದಂಡಕಾಂತದ ಕ್ಷೇತ್ರ ಬಲ** (ಇನ್‌ಟೆನ್ಸಿಟಿ ಆಫ್ ದಿ ಮ್ಯಾಗ್ನೆಟಿಕ್ ಫೀಲ್ಡ್ ಆಫ್ ಎ ಬಾರ್ ಮ್ಯಾಗ್ನೆಟ್): ಒಂದು ದಂಡಕಾಂತದ ಉತ್ತರ ಧ್ರುವದ ತ್ರಾಣ $m$ ಆಗಿದ್ದರೆ ಅದರ ದಕ್ಷಿಣ ಧ್ರುವದ ತ್ರಾಣ ಆಗುತ್ತದೆಂದು ಪ್ರಾಯೋಗಿಕವಾಗಿ ತೋರಿಸಬಹುದು.

ದಂಡಕಾಂತದ ಅಕ್ಷವಾದ ನ್ನು ವೃದ್ಧಿಸಿ ಅದರ ಮೇಲೆ $P$ ಎಂಬ ಯಾವುದೇ ಒಂದು ಬಿಂದುವನ್ನು ಆಯಬೇಕು. $P$ ಯಲ್ಲಿನ ಕಾಂತಕ್ಷೇತ್ರಬಲ $F_1$ ಆಗಿದ್ದರೆ




ಚಿತ್ರ 2

$$F_1 = \frac{m}{(d-i)^2} - \frac{m}{(d+i)^2} = \frac{4mld}{(d^2-1^2)^2} - \qquad ...(4)$$

ಇದು $SN$ ದಿಶೆಯಲ್ಲಿದೆ. ಚಿತ್ರ (2)ರಲ್ಲಿ 0 ಬಿಂದು $SN$ ನ ಮಧ್ಯ ಬಿಂದು. OS = ON = 1, OP = d.

ಈಗ, ಕಾಂತಧ್ರುವಬಲ $m$ ಮತ್ತು ಕಾಂತಾಂತರ ಇವುಗಳ ಗುಣಲಬ್ಧವಾದ $2lm$ ನ್ನು ಕಾಂತಭ್ರಮಣಾಂಕ (ಮ್ಯಾಗ್ನೆಟಿಕ್ ಮೊಮೆಂಟ್) ಎಂದು ವ್ಯಾಖ್ಯಿಸುತ್ತೇವೆ. $2lm = m$ ಎಂದು ಬರೆದರೆ ಸಮೀಕರಣ (4) ಕೆಳಗಿನ ರೂಪ ತಳೆಯುತ್ತದೆ:

...............5




ಚಿತ್ರ 3

$d$ ಗೆ ಹೋಲಿಸಿದಾಗ $l$ ಅತ್ಯಲ್ಪವಾದರೆ, ಎಂದರೆ ದತ್ತ ಕಾಂತವನ್ನು ಕುರಿತು $P$ ಯನ್ನು ಸಾಕಷ್ಟು ದೂರದಲ್ಲಿ ಆಯ್ದರೆ ಅಥವಾ ಕಾಂತವೇ ಕಿರಿದಾಗಿದ್ದು $P$ ದೂರದಲ್ಲಿದ್ದರೆ, ಆಗ

$$F_1 = \frac{2M}{d^3} \qquad ..............6$$

ದಂಡಕಾಂತದ ಅಕ್ಷ $SN$ ನ್ನು ಸಮದ್ವಿಭಾಗಿಸುವ ಲಂಬರೇಖೆಯ ಮೇಲೆ ಇರುವ ಯಾವುದೇ ಬಿಂದು $Q$ ನಲ್ಲಿ ಕಾಂತಕ್ಷೇತ್ರ ಉತ್ತರಧ್ರುವದ ಕ್ಷೇತ್ರ ಬಲ $\frac{m}{QN^2} = QA$ ಎನ್ನುವುದನ್ನೂ ದಕ್ಷಿಣಧ್ರುವದ ಕ್ಷೇತ್ರಬಲ $\frac{m}{QS^2} = QB$ = ಎನ್ನುವುದನ್ನೂ ಸದಶೀಯವಾಗಿ (ವೆಕ್ಟೋರಿಯಲಿ) ಸಂಕಲಿಸಿದರೆ

$$QR = F_2 = \frac{m \times 2l}{(QN)^{3/2}} = \frac{M}{(d^2+l^2)^{3/2}} \qquad .............7$$

ಎಂಬ ಒಟ್ಟು ಕ್ಷೇತ್ರಬಲ ಲಭಿಸುತ್ತದೆ. ಇದು $NS$ ಗೆ ಸಮಾಂತರವಾಗಿ ಅದೇ ದಿಶೆಯಲ್ಲಿರುವುದು. ದಂಡಕಾಂತದ ಅರ್ಧ ಉದ್ದ $l$ ನ್ನು $SN$ ನಿಂದ $Q$ ನ ಲಂಬ ದೂರವಾದ $d$ ಯೊಡನೆ ಹೋಲಿಸಿದಾಗ ಅತ್ಯಲ್ಪವಾಗಿದ್ದರೆ

$$S l F2 = \frac{m}{d3} \qquad .......8$$

ಅಲ್ಪ ಉದ್ದದ ದಂಡಕಾಂತದ ಅಕ್ಷ $SN$ ನ ಮಧ್ಯಬಿಂದು $O$ ಗೆ ಸಂಬಂಧಿಸಿದಂತೆ ( $d$ ,) ಗಳಿಂದ ನಿರ್ದೇಶಿಸಬಹುದಾದ ಬಿಂದು $T$ ಯಲ್ಲಿ ಕ್ಷೇತ್ರ ಬಲ

$$F3 = \frac{M}{d3}\sqrt{1+3\cos 2} \qquad .............9$$




ಚಿತ್ರ 4

ಇದನ್ನು ಪಡೆಯಲು ಸದಿಶ ಪರಿಮಾಣವಾದ (ಕಾಂತದ) $M$ ನ್ನು $OT$ ದಿಶೆಯಲ್ಲೂ ಅದಕ್ಕೆ ಲಂಬದಿಶೆಯಲ್ಲೂ ವಿಭಜಿಸಬೇಕು. ಆಗ ಕ್ರಮವಾಗಿ $m\cos$ ಮತ್ತು ಎಂಬ ಘಟಕಗಳು ದೊರೆಯುತ್ತವೆ. ಇವುಗಳ ಕ್ಷೇತ್ರಬಲಗಳು ಅನುಕ್ರಮವಾಗಿ

$$TB = \frac{2M\cos\theta}{d3} \text{ ಮತ್ತು } TA = \frac{M\sin}{d3}\theta$$

ಆಗುವುದರಿಂದ ಇವುಗಳ ಸದಿಶ ಮೊತ್ತವಾದ $TR = \frac{M}{d3}\sqrt{1+3\cos\theta}$ ಆಗುತ್ತದೆ. $F3 = TR$ ಎನ್ನುವುದರ ದಿಶೆ $OT$ ಯೊಡನೆ $a$ ಕೋನವನ್ನು ರಚಿಸಿದರೆ

. . . (10)

**ಏಕರೀತಿ ಕಾಂತಕ್ಷೇತ್ರದಲ್ಲಿ ದಂಡಕಾಂತ** (ಮ್ಯಾಗ್ನೆಟ್ ಇನ್ ಎ ಯೂನಿಫಾರಂ ಮ್ಯಾಗ್ನೆಟಿಕ್ ಫೀಲ್ಡ್): ಎಲ್ಲ ಬಿಂದುಗಳಲ್ಲೂ ಒಂದೇ ಪರಿಮಾಣ ಮತ್ತು ದಿಶೆಗಳನ್ನುಳ್ಳ ಕಾಂತಕ್ಷೇತ್ರದಲ್ಲಿ ಒಂದು ದಂಡಕಾಂತ ಅಥವಾ ಕಾಂತಸೂಜಿಯನ್ನು (ಅಲ್ಪ ಉದ್ದದ ದಂಡಕಾಂತ) ಒಂದು ಊರ್ಧ್ವ ತಿರುಗಣೆಯ (ಪಿವೋಟ್) ಮೇಲೆ ಇಲ್ಲವೆ ಒಂದು ತೆಳ್ಳನೆಯ ರೇಷ್ಮೆಯ ದಾರದಿಂದ ಸಮತಲದಲ್ಲಿ ಸರಾಗವಾಗಿತಿರುಗುವಂತೆ ತೂಗುಹಾಕಿದರೆ ಅದು ತನ್ನ ಅಕ್ಷ ಕ್ಷೇತ್ರ ಬಲದ ದಿಶೆಯಲ್ಲಿ ಇರುವಂತೆ ನಿಲ್ಲುತ್ತದೆ. ಅದರ ಅಕ್ಷ ಎನ್ನುವುದನ್ನು ಕಾಂತಕ್ಷೇತ್ರ ನೊಡನೆ $\theta$ ಕೋನವನ್ನು ಪಡೆಯುವಂತೆ ತಿರುಗಿಸಿದರೆ (ಚಿತ್ರ 5) ಅದರ ಧ್ರುವಗಳ ಮೇಲೆ $mH$ ಮತ್ತು $-mH$ ಎಂಬ ಬಲಯುಗ್ಮ ಉಂಟಾಗುತ್ತದೆ. ಈ ಬಲಯುಗ್ಮದ ಭ್ರಮಣಾಂಕ (ಮೊಮೆಂಟ್ ಆಫ್ ದಿ ಕಪಲ್)



ಚಿತ್ರ 5

$$mH \times PS = mH \times SN \sin\theta$$

$$= mH \sin\theta \qquad ......11$$

$SN$ ಅಕ್ಷ $H$ ದಿಶೆಯನ್ನು ತಲಪುವ ತನಕವೂ ಕಾಂತವನ್ನು ಬಲಯುಗ್ಮ ತಿರುಗಿಸುತ್ತದೆ.

**ಕಾಂತಕ್ಷೇತ್ರದ ಬಲರೇಖೆಗಳು (ಮ್ಯಾಗ್ನೆಟಿಕ್ ಲೈನ್ಸ್ ಆಫ್ ಫೋರ್ಸ್):** ಕಾಂತಕ್ಷೇತ್ರದಲ್ಲಿ ಊರ್ಧ್ವ ತಿರುಗಣೆಯ ಮೇಲೆ ಕ್ಷಿತಿಜೀಯ ಸಮತಲದಲ್ಲಿ ತಿರುಗಲು ಸಾಧ್ಯವಾಗುವಂತೆ ತೂಗುಹಾಕಿರುವ ಒಂದು ಕಾಂತಸೂಜಿ (ಮ್ಯಾಗ್ನೆಟಿಕ್ ನೀಡಲ್) ಕ್ಷೇತ್ರಬಲದ ದಿಕ್ಕಿನಲ್ಲಿ ನಿಲ್ಲುವುದರಿಂದ ಅದರ ದಿಕ್ಕನ್ನು ಸುಲಭವಾಗಿ ಗೊತ್ತುಮಾಡಬಹುದು. ಇಂಥ ಕಾಂತಸೂಜಿ ಇರುವ ಸಣ್ಣ ದಿಕ್ಸೂಚಿಯ ಪೆಟ್ಟಿಗೆಯನ್ನು ಉಪಯೋಗಿಸಿ ಬೇರೆ ಬೇರೆ ಬಿಂದುಗಳಲ್ಲಿ ಕ್ಷೇತ್ರಬಲದ ದಿಕ್ಕುಗಳನ್ನು ಒಂದಾದ ಮೇಲೆ ಮತ್ತೊಂದುರಂತೆ ಬಿಂದುಗಳನ್ನು ಗುರ್ತಿಸಿ ಅವುಗಳ ಮೂಲಕ ಒಂದು ವಕ್ರ ರೇಖೆಯನ್ನು ಎಳೆದರೆ ಅದೇ ಕಾಂತ ಬಲರೇಖೆ. ಇಂಥ ರೇಖೆಯ ಪ್ರತಿ ಬಿಂದುವಿನಲ್ಲೂ ಅದರ ಸ್ಪರ್ಶ ರೇಖೆಯನ್ನು ಉತ್ತರ ಕಾಂತ ಧ್ರುವ ನೂಕಲ್ಪಡುವ ದಿಶೆಯಲ್ಲಿ ಎಳೆದರೆ ಅದೇ ಆ ಬಿಂದುವಿನಲ್ಲಿ ಕಾಂತಬಲದ ದಿಶೆ. ಕಾಂತಬಲರೇಖೆಗಳನ್ನು ಕಾಂತಕ್ಷೇತ್ರವನ್ನು ಆವರಿಸುವಂತೆ ಒಂದರ ಪಕ್ಕದಲ್ಲಿ ಮತ್ತೊಂದರಂತೆ ಎಳೆಯಬಹುದು.



ಚಿತ್ರ 6—(a, b)

ಕಾಂತಕ್ಷೇತ್ರದ ಬಲರೇಖೆಗಳ ಕಲ್ಪನೆಯನ್ನು ಫ್ಯಾರಡೇ ಮೊದಲು ಮಾಡಿದ ಕಾಂತಧ್ರುವಗಳು ಒಂದರಿಂದ ಮತ್ತೊಂದು ದೂರದಲ್ಲಿ ಇದ್ದರೂ ಆಕರ್ಷಿಸುವುದನ್ನು ಇಲ್ಲವೇ ವಿಕರ್ಷಿಸುವುದನ್ನು ಚಿತ್ರರೂಪದಲ್ಲಿ ಮನಗಾಣುವಂತೆ ಮಾಡುವುದೇ ಅವನ ಉದ್ದೇಶವಾಗಿತ್ತು. ಈ ಕಲ್ಪನೆಯ ಪ್ರಕಾರ ಉತ್ತರ ಧ್ರುವದಿಂದ ಕಾಂತಬಲ ರೇಖೆಗಳು ಒಂದಕ್ಕೊಂದು ವಿಮುಖವಾಗಿ ಹೊರಬೀಳುತ್ತವೆ. ದಕ್ಷಿಣ ಧ್ರುವವನ್ನು ಎಲ್ಲ ದಿಶೆಗಳಿಂದಲೂ ಬಂದು ಸೇರುತ್ತವೆ. ಉತ್ತರ ಮತ್ತು ದಕ್ಷಿಣ ಧ್ರುವಗಳು ಪರಸ್ಪರ ಸಮೀಪದಲ್ಲಿ ಇದ್ದರೆ ಕಾಂತಬಲರೇಖೆಗಳ ಧ್ರುವಗಳ ನಡುವೆ ಚಿತ್ರ ಯಲ್ಲಿ ತೋರಿಸಿರುವಂತೆ ಒಂದರಿಂದ ಮತ್ತೊಂದು ಹಾಯುತ್ತವೆ.



ಚಿತ್ರ 6. (c-d)

ಫ್ಯಾರಡೇಯ ಕಲ್ಪನೆಯಂತೆ ಈ ರೇಖೆಗಳು ಸಾಧ್ಯವಾದಷ್ಟು ಕುಗ್ಗುವಂತೆ ಮಾಡುವ ಕರ್ಷಣವನ್ನು (ಟೆನ್ಷನ್) ಪಡೆದಿವೆ. ಈ ಕರ್ಷಣವೆ ವಿಜಾತೀಯ ಧ್ರುವಗಳ ಪರಸ್ಪರ ಆಕರ್ಷಣೆಗೆ ಕಾರಣ. ಸಜಾತೀಯ ಧ್ರುವಗಳು ಪಕ್ಕ ಪಕ್ಕದಲ್ಲಿ ಇದ್ದರೆ ಕಾಂತಬಲರೇಖೆಗಳು ಚಿತ್ರ 6(d)ಯಲ್ಲಿ ತೋರಿಸಿರುವ ರೂಪವನ್ನು ತಾಳುತ್ತವೆ. ಕಾಂತಬಲರೇಖೆಗಳು ಪಕ್ಕಗಳಲ್ಲಿ ಒಂದನ್ನೊಂದು ವಿಕರ್ಷಿಸುತ್ತವೆ ಎಂದು ಫ್ಯಾರಡೇಯ ಭಾವನೆ. ಇದರ ಪ್ರಕಾರ ಬಲರೇಖೆಗಳು ಚಿತ್ರ 6(d)ಯಲ್ಲಿ ಪಕ್ಕಗಳಲ್ಲಿ ಒಂದನ್ನು ಮತ್ತೊಂದು ಹೊರದೂಡುತ್ತವೆ. ಆದ್ದರಿಂದ ಸಜಾತೀಯ ಧ್ರುವಗಳ ವಿಕರ್ಷಣೆಯನ್ನು ಅರ್ಥಮಾಡಿಕೊಳ್ಳಬಹುದು.

**ಕಾಂತಬಲರೇಖಾಪ್ರವಾಹ (ಮ್ಯಾಗ್ನೆಟಿಕ್ ಫ್ಲಕ್ಸ್):** ಕಾಂತಬಲರೇಖೆಗಳ ಪರಿಕಲ್ಪನೆ ವಿದ್ಯುತ್ಕಾಂತ ವಿಷಯಗಳ ಚಿತ್ರರೂಪವಾದ ಸ್ಪಷ್ಟ ವಿವರಣೆಗೆ ಹೆಚ್ಚು ಹೆಚ್ಚಾಗಿ ಸಹಾಯವಾಗುತ್ತ ಬಂದಿರುವುದರಿಂದ ಇವು ಕಾಂತಕ್ಷೇತ್ರಗಳಲ್ಲಿ ವಾಸ್ತವಿಕವಾಗಿಯೂ ಇವೆ ಎಂಬ ಭಾವನೆ ಬಲವಾಗಿ ನೆಲೆಗೊಂಡಿದೆ. ಒಂದು ಬಿಂದುವಿನಲ್ಲಿ ಇರುವ ಕಾಂತಬಲಕ್ಷೇತ್ರವನ್ನು ಈ ಪರಿಕಲ್ಪನೆಯ ಸಹಾಯದಿಂದ ಚಿತ್ರರೀತಿಯಾಗಿತೋರಿಸಬಹುದು. ಕಾಂತಕ್ಷೇತ್ರಬಲ ಒಂದು ಬಿಂದುವಿನಲ್ಲಿ $H$ ಅರ್ ಸ್ಟೆಡ್ಡುಗಳಾದರೆ ಆ ಬಿಂದುವಿನಲ್ಲಿ ಕ್ಷೇತ್ರಕ್ಕೆ ಅಡ್ಡವಾಗಿರುವ ಏಕಮಾನ ವಿಸ್ತೀರ್ಣದ ಮೂಲಕ ಕ್ಷೇತ್ರಬಲರೇಖೆಗಳು ಹಾದುಹೋಗುತ್ತವೆ ಎಂದು ಭಾವಿಸಿಕೊಳ್ಳಬೇಕು. ಕ್ಷೇತ್ರಬಲ ರೇಖೆಗಳ ಒಟ್ಟು ಸಂಖ್ಯೆಗೆ ಕಾಂತಬಲರೇಖಾಪ್ರವಾಹ ಎಂದು ಹೆಸರು. ಇದರ ಏಕಮಾನಕ್ಕೆ $cgs$ ಪದ್ಧತಿಯಲ್ಲಿ ಮ್ಯಾಕ್ಸ್‌ವೆಲ್ ಎಂದು ಹೆಸರು. ಆದ್ದರಿಂದ ಒಂದು ಆರ್ ಸ್ಟೆಡ್ ಕ್ಷೇತ್ರಬಲವನ್ನು ಒಂದು ಚದರ ಸೆಂಟಿಮೀಟರನ್ನು ಹಾಯುವ ಮ್ಯಾಕ್ಸ್‌ವೆಲ್ಲುಗಳು ಎಂದು ಕರೆಯಬಹುದು. ಪದ್ಧತಿಯಲ್ಲಿ ಕಾಂತಬಲರೇಖಾಪ್ರವಾಹದ ಏಕಮಾನಕ್ಕೆ 1 ವೆಬರ್ ಎಂದು ಹೆಸರು. 1 ವೆಬರ್ $10^8$ ಮ್ಯಾಕ್ಸ್‌ವೆಲ್ಲುಗಳಿಗೆ ಸಮ.

**ಕಾಂತಬಲರೇಖಾಪ್ರವಾಹ ಮತ್ತು ಏಕಮಾನ ಧ್ರುವಬಲ (ಮ್ಯಾಗ್ನೆಟಿಕ್ ಫ್ಲಕ್ಸ್ ಆಂಡ್ ಯೂನಿಟ್ ಪೋಲ್):** $cgs$ ಪದ್ಧತಿಯಲ್ಲಿ ಏಕಮಾನಧ್ರುವದಿಂದ 1 ಸೆಂಮೀ. ದೂರದಲ್ಲಿ ಕ್ಷೇತ್ರಬಲ 1 ಅರ್ ಸ್ಟೆಡ್ ಅಥವಾ 1 ಚ.ಸೆಂಮೀ.ಗೆ 1 ಮ್ಯಾಕ್ಸ್‌ವೆಲ್ ಆಗಿರುತ್ತದೆ. ಏಕಮಾನ ಧ್ರುವವನ್ನೇ ಕೇಂದ್ರವಾಗಿ ಉಳ್ಳ 1 ಸೆಂಮೀ.ತ್ರಿಜ್ಯಗೋಳದ ವಿಸ್ತೀರ್ಣ 4π ಆಗಿರುವುದರಿಂದ ಏಕಮಾನ ಧ್ರುವದಿಂದ ಸೂರಬೀಳುವ ಒಟ್ಟು ಬಲರೇಖಾಪ್ರವಾಹ 4π ಮ್ಯಾಕ್ಸ್‌ವೆಲ್ಲುಗಳಾಗಿರುತ್ತದೆ. ಆದ್ದರಿಂದ 4 ಮ್ಯಾಕ್ಸ್‌ವೆಲ್ಲುಗಳ ಒಟ್ಟು ಕಾಂತಬಲ ಪ್ರವಾಹವನ್ನು ಉಂಟುಮಾಡುವ ಧ್ರುವವನ್ನು ಏಕಮಾನ ಧ್ರುವ ($cgs$ ಯೂನಿಟ್ ಪೋಲ್) ಎಂದು ನಿರೂಪಿಸುವ ವಾಡಿಕೆ ಇದೆ. ಪದ್ಧತಿಯಲ್ಲಿ 4π ಬರದಂತೆ ಭಾಗಲಬ್ಧೀಕರಿಸಿದ (ರ್‍ಯಾಷನಲೈಜ್ಡ್ $l$ ಸಿಸ್ಟಮ್) ಅನಂತರ ಒಟ್ಟು ಒಂದು ವೆಬರ್ ಬಲರೇಖಾಪ್ರವಾಹವನ್ನು ನೀಡುವ ಧ್ರುವ ಆ ಪದ್ಧತಿಯ ಏಕಮಾನ ಧ್ರುವ ಆಗುತ್ತದೆ.

**ಕಾಂತ ಭ್ರಮಣಾಂಕ ಮತ್ತು ಭೂಕಾಂತಕ್ಷೇತ್ರ ಬಲಗಳ ಆಳತೆಗಳು :** ದಂಡಕಾಂತದ ಭ್ರಮಣಾಂಕ $M$ ಮತ್ತು ಕ್ಷಿತಿಜೀಯ ಸಮತಲದಲ್ಲಿ ಭೂಕಾಂತ ಕ್ಷೇತ್ರಬಲಗಳನ್ನು



ಚಿತ್ರ 7

ವಿಚಲನ ಕಾಂತಮಾಪಕದಿಂದ (ಡಿಫ್ಲೆಕ್ಷನ್ ಮ್ಯಾಗ್ನೆಟೋಮೀಟರ್) ಅಳೆಯಬಹುದು. ಈ ಕಾಂತಮಾಪಕದಲ್ಲಿ ಒಂದು ಸಣ್ಣ ಕಾಂತಸೂಜಿಯನ್ನು ಒಂದು ವರ್ತುಲಮಾನಕದ (ಸ್ಕೇಲ್) ಕೇಂದ್ರದಲ್ಲಿ ನೆಟ್ಟಿರುವ ಊರ್ಧ್ವ ತಿರುಗಣೆಯ ಮೇಲೆ ಕ್ಷಿತಿಜೀಯ ಮತದಲ್ಲಿ ತಿರುಗಲು ಸಾಧ್ಯವಾಗುವಂತೆ ತೂಗುಹಾಕಿದೆ. ವರ್ತುಲಮಾನಕವನ್ನು ಚಿತ್ರ 7 ರಲ್ಲಿ ತೋರಿಸಿರುವಂತೆ ಡಿಗ್ರಿಗಳಲ್ಲಿ ವಿಭಜಿಸಿದೆ. ಕಾಂತಸೂಜಿಯ ವಿಚಲನವನ್ನು ಕಳೆಯುವುದಕ್ಕೆ ಸೂಜಿಗೆ ಅಡ್ಡಲಾಗಿ ಅದರ ಮಧ್ಯಬಿಂದುವಿನಲ್ಲಿ ಒಂದು ಅಲ್ಯೂಮಿನಿಯಂಗಾಚಕವನ್ನು ತಗುಲಿಸಿದೆ. ಕಾಂತಮಾಪಕವನ್ನು ಒಮದು ಉದ್ದಳತೆಯ ಮಾನಕದ ಮಧ್ಯ ಭಾಗದಲ್ಲಿ ಇಟ್ಟು ವರ್ತುಲಮಾನಕದ ಕೇಂದ್ರ ಮತ್ತು ಉದ್ದನೆಯ ಮಾನಕದ ಮಧ್ಯಭಾಗದಲ್ಲಿರುವ ಸೊನ್ನೆಯ ಗುರುತು ಸ್ಪರ್ಶದಲ್ಲಿರುವಂತೆ ಅಳವಡಿಸಿದೆ. ಆರಂಭದಲ್ಲಿ ಉದ್ದನೆಯ ಮಾನಕವನ್ನು

ಭೂಕಾಂತಕ್ಷೇತ್ರದ ಕ್ಷಿತಿಜೀಯ ಭಾಗ $H$ಗೆ ಲಂಬವಾಗಿಟ್ಟು ಅಲ್ಯೂಮಿನಿಯಂ ಸೂಚಕ ಅದರಲ್ಲಿನ ಸೂಜಿಯನ್ನು ಸೂಚಿಸುವಂತೆ ಏರ್ಪಡಿಸಿದೆ. ಅನಂತರ ದಂಡಕಾಂತವನ್ನು ಚಿತ್ರ 7 ರಲ್ಲಿ ತೋರಿಸಿರುವಂತೆ ಅದರ ಅಕ್ಷ $H$ಗೆ ಲಂಬವಾಗಿ ವರ್ತುಲ ಮಾನಕದ ಕೇಂದ್ರದ ಕಡೆಗೆ ಇರುವಂತೆ ಮತ್ತು ಅದರಿಂದ ದಂಡಕಾಂತದ ಮಧ್ಯ ಬಿಂದು O ಎನ್ನುವುದು ದೂರ $d$ ಯಲ್ಲಿ ಇರುವಂತೆ ಇಟ್ಟರೆ ದಂಡಕಾಂತದ ಕ್ಷೇತ್ರಬಲ

$F=\dfrac{2Md}{(d2-l2)2}$ [ಸಮೀಕರಣ (5)ನ್ನು ನೋಡಿ] ಕಾಂತ ಸೂಜಿಯ ವಿಚಲನೆ ವನ್ನು ಉಂಟುಮಾಡುತ್ತದೆ. ಆಗ ಸಮೀಕರಣ (11) ರಲ್ಲಿ ಸೂಚಿಸಿರುವಂತೆ $F$ ಮತ್ತು $H$ ಗಳ ಬಲಯುಗ್ಮಗಳ ನಡುವೆ ಸಮತೋಲ ಏರ್ಪಡುವುದರಿಂದ $\dfrac{F}{H}=\tan$ ಆಗುತ್ತದೆ. ಇದರಲ್ಲಿ $F$ ನ ಬೆಲೆಯನ್ನು ಆದೇಶಿಸಿದರೆ

$$\frac{M}{H}=\frac{(d^2-l^2)^2}{2d}\tan\theta \qquad \text{.....}(\mathbf{12})$$

ಎಂದಾಗುತ್ತದೆ.

ವಿಚಲನಕ್ಕೆ ಉಪಯೋಗಿಸಿದ ದಂಡಕಾಂತವನ್ನು ಒಂದು ರೇಷ್ಮೆಯ ಎಳೆಯಿಂದ ಕ್ಷಿತಿಜೀಯ ಸಮತಲದಲ್ಲಿ ತಿರುಗಲು ಸಾಧ್ಯವಾಗುವಂತೆ ತೂಗುಹಾಕಿ ಅದರ ಕೋನೀಯ ಆಂದೋಳನದ ಕಾಲ $T$ಯನ್ನು ಕಂಡುಹಿಡಿದರೆ

$$MH=\frac{4\pi^2 I}{T^2} \qquad \text{.....}(13)$$

ಆಗುತ್ತದೆ. ಇದರಲ್ಲಿ $I$ ಎನ್ನುವುದು ದಂಡಕಾಂತದ ಅಂದೋಳನ ಅಕ್ಷಕ್ಕೆ ಅನ್ವಯಿಸುವ ಜಡಭ್ರಮಣಾಂಕ (ಮೊಮೆಂಟ್ ಆಫ್ ಇನರ್ಷಿಯ). ದಂಡಕಾಂತದ ವಸ್ತು ಪರಿಮಾಣ ಮತ್ತು ಅದರ ಉದ್ದ ಅಳತೆಗಳಿಂದ $I$ ಯನ್ನು ಲೆಕ್ಕಮಾಡಿ $MH$ ನ ಬೆಲೆಯನ್ನು ಪಡೆಯಬಹುದು. ಸಮೀಕರಣ (13)ರ ಪ್ರಕಾರ $M/H$ ನ ಬೆಲೆ $X$ ಮತ್ತು ಸಮೀಕರಣ (13)ರ ಪ್ರಕಾರ $MH$ ನ ಬೆಲೆ $Y$ ಆಗಿದ್ದರೆ $M=\sqrt{XY}$ ಮತ್ತು $H=\sqrt{Y/X}$ ಆಗುವುದರಿಂದ ಅವುಗಳ ಬೆಲೆಗಳನ್ನು ಕಂಡುಹಿಡಿಯಬಹುದು. ಈ ಅಳತೆಗಳಲ್ಲಿ ಹೆಚ್ಚಿನ ನಿಖರತೆಯನ್ನು ಪಡೆಯುವುದಕ್ಕೆ ದರ್ಪಣಕಾಂತಮಾಪಕವನ್ನು (ಮಿರರ್ ಮ್ಯಾಗ್ನೆಟೋಮೀಟರ್) ಉಪಯೋಗಿಸಬೇಕು.

**ಕಾಂತೀಕರಣದ ತೀವ್ರತೆ (ಇನ್‌ಟೆನ್ಸಿಟಿ ಆಫ್ ಮ್ಯಾಗ್ನೆಟೈಸೇಷನ್):** ಕಾಂತತ್ವವನ್ನು ಪಡೆಯಬಹುದಾದ ಒಂದು ವಸ್ತುವನ್ನು ಕಾಂತಕ್ಷೇತ್ರ $H$ ನಲ್ಲಿ ಇಟ್ಟರೆ ಆ ವಸ್ತು $H$ ನ ದಿಶೆಯಲ್ಲಿ ಅಕ್ಷವುಳ್ಳ ಕಾಂತವಾಗಿ ಪರಿವರ್ತನೆಗೊಳ್ಳುತ್ತದೆ. ಹೀಗೆ ಲಭಿಸಿದ ಕಾಂತದ ಭ್ರಮಣಾಂಕ $M$ ಧ್ರುವಗಳ ಅಂತರ ಮತ್ತು ಧ್ರುವತಾಣ– ಇವುಗಳ ಗುಣಲಬ್ಧ – ಮ್ಯಾಗ್ನಟಿಕ್ ಮೊಮೆಂಟ್ ಅದರ ಗಾತ್ರ $V$ ಆಗಿದ್ದರೆ ಅದರ ಕಾಂತೀಕರಣದ ತೀವ್ರತೆ $I$ ಯನ್ನು

$$I=\frac{M}{V} \qquad \text{.......}(14)$$

ಸಮೀಕರಣ ಕೊಡುತ್ತದೆ; $I$ ಯು $H$ ನ್ನು ಅವಲಂಬಿಸಿದೆ. $I/H=K$ ಆಗಿದ್ದರೆ $K$ ಎನ್ನುವುದು ವಸ್ತುವಿನ ಕಾಂತತ್ವಗ್ರಾಹಕತೆ (ಮ್ಯಾಗ್ನೆಟಿಕ್ ಸಸೆಪ್ಟಿಬಿಲಿಟಿ). ಆದ್ದರಿಂದ ಕಾಂತತ್ವದ ಪರಿಣಾಮವಾಗಿ $4\pi 1$ ಕಾಂತ ಬಲರೇಖೆಗಳು ದಂಡದ ದಕ್ಷಿಣಧ್ರುವದ ತುದಿಯ ಏಕಮಾನ ವಿಸ್ತೀರ್ಣವನ್ನು ಪ್ರವೇಶಿಸಿ ವಸ್ತುವಿನ ಅದೇ ವಿಸ್ತೀರ್ಣದಲ್ಲಿ ಹರಿದು ಉತ್ತರಧ್ರುವದ ಏಕಮಾನ ವಿಸ್ತೀರ್ಣದ ಮೂಲಕ ಹೊರ ಬೀಳುತ್ತವೆ. ಕಾಂತೀಕರಣ ಬಲ $H$ ಸಹ ಏಕಮಾನ ವಿಸ್ತೀರ್ಣದ ಮೂಲಕ $H$ ಬಲರೇಖೆಗಳನ್ನು ಕಳುಹಿಸುತ್ತದೆ. ಈ ಎರಡು ಕಾರಣಗಳಿಂದಲೂ ವಸ್ತುವಿನ ಏಕಮಾನ ಅಡ್ಡವಿಸ್ತೀರ್ಣದ ಮೂಲಕ ಹರಿಯುವ ಕಾಂತಬಲ ರೇಖಾಪ್ರವಾಹವನ್ನು (ಮ್ಯಾಗ್ನೆಟಿಕ್ ಫ್ಲಕ್ಸ್ ಪರ್ ಯೂನಿಟ್ ಏರಿಯ) ಕಾಂತೀಯ ಪ್ರೇರಕತ್ವ (¨$B$) (ಮ್ಯಾಗ್ನೆಟಿಕ್ ಇಂಡಕ್ಷನ್) ಎಂದು ಕರೆಯುತ್ತಾರೆ. ಪರಿಮಾಣ ¨$B$ ಸಹ $H$ನ್ನು ಅವಲಂಬಿಸಿದೆ. ¨$B$/ $H=\mu$ ಎನ್ನುವುದಕ್ಕೆ ವಸ್ತುವಿನ ಕಾಂತೀಯ ಪಾರಗಮ್ಯತೆ (ಮ್ಯಾಗ್ನೆಟಿಕ್ ಪರ್ಮಿಯೆಬಿಲಿಟಿ) ಎಂದು ಹೆಸರು. $\mu$ ಮತ್ತು ( ) ಗಳಿಗೆ ಇರುವ ಸಂಬಂಧ

$$\mu=\frac{B}{H}=\frac{H+4\pi I}{H}=1+4\pi I \qquad \text{...}(16)$$

$\mu$ ಮತ್ತು ಗಳು ವಸ್ತುವಿನ ಕಾಂತೀಯ ಗುಣವನ್ನು ತಿಳಿಸುತ್ತವೆ.

**ಮೂರು ಬಗೆಯ ಕಾಂತತ್ವಗಳು:** ಅನುಕಾಂತತ್ವ (ಪ್ಯರಾಮ್ಯಾಗ್ನೆಟಿಸಂ), ಪ್ರತಿಕಾಂತತ್ವ (ಡಯಾಮ್ಯಾಗ್ನೆಟಿಸಂ), ಫೆರ್ರೋಕಾಂತತ್ವ (ಫೆರ್ರೋಮ್ಯಾಗ್ನೆಟಿಸಂ) ಎಂಬ ಮೂರು ಬಗೆಯ ಕಾಂತತ್ವಗಳಿವೆ.



ಚಿತ್ರ 8

**ಅನುಕಾಂತತ್ವ:** ಇದು ಇರುವ ವಸ್ತುಗಳ ಕಾಂತತ್ವ ಗ್ರಾಹಕತೆ $K$ ಧನಾತ್ಮಕ. ಇದರ ಬೆಲೆ ಕಡಮೆ. ಬೆಲೆ ಸುಮಾರು 10–3 ಏಕಮಾನಗಳು. ಇದು ಕಾಂತೀಕರಣ ಬಲವನ್ನು ಅವಲಂಬಿಸಿಲ್ಲ. ಅಂದರೆ ಕಾಂತತ್ವ ತೀವ್ರತೆ $I$ ಯು $H$ ನ ದಿಶೆಯಲ್ಲಿಯೇ ಇದೆ. ಚಿತ್ರ 8ರಲ್ಲಿ ತೋರಿಸಿರುವಂತೆ ಬಲರೇಖೆಗಳು ವಸ್ತುವಿನಲ್ಲಿ ಸಾಧ್ಯವಾದಷ್ಟು ಒಟ್ಟುಗೂಡುತ್ತವೆ. ಇವುಗಳಿಗೆ $\mu$ವಿನ ಬೆಲೆ 1ಕ್ಕಿಂತ ಹೆಚ್ಚು. ಈ ಬಗೆಯ ವಸ್ತುಗಳು ಕಾಂತಧ್ರುವಗಳಿಂದ ಆಕರ್ಷಿಸಲ್ಪಡುತ್ತವೆ. ಅಂದರೆ ದುರ್ಬಲ ಕ್ಷೇತ್ರ ಪ್ರದೇಶಗಳಿಂದ ಪ್ರಬಲ ಕ್ಷೇತ್ರ ಇರುವ ಭಾಗಕ್ಕೆ ಚಲಿಸಲು ಪ್ರಯತ್ನಿಸುತ್ತವೆ. ಎನ್ನುವುದು ಏಕಮಾನ ಗಾತ್ರದ ಕಾಂತತ್ವ ಗ್ರಾಹಕತೆ. $K$ ಯನ್ನು ವಸ್ತುವಿನ ಸಾಂದ್ರತೆ d ದಿಂದ ಭಾಗಿಸಿದರೆ ದೊರೆಯುವ (K /d) $=\Psi$ ಎಂಬುದು ಏಕಮಾನ ದ್ರವ್ಯರಾಶಿಯ ಕಾಂತಗ್ರಾಹಕತೆ (ಮಾಸ್ ಸಸೆಪ್ಟಿಬಿಲಿಟಿ). ಅನುಕಾಂತ ವಸ್ತುಗಳ ಬೆಲೆ ನಿರಪೇಕ್ಷ ಉಷ್ಣತೆ ವ್ಯತ್ಯಾಸವಾದಂತೆ

$$\Psi=\frac{C}{T} \qquad \text{..............}17$$

ಎಂಬ ಕ್ಯೂರಿ ನಿಯಮವನ್ನು ಅನುಸರಿಸುತ್ತದೆ. C ಎಂಬುದು ಕ್ಯೂರಿ ಸ್ಥಿರಾಂಕ, ಕಬ್ಬಿಣದ, ಕೊಬಾಲ್ಟಿನ ಮತ್ತು ನಿಕ್ಕಲುಗಳ ಸಂಯೋಜಿತ ವಸ್ತುಗಳು ವಿರಳ ಭಸ್ಮಧಾತುಗಳು (ರೇರ್ ಅರ್ತ್ಸ್) ಅನುಕಾಂತ ವಸ್ತುಗಳಿಗೆ ಉದಾಹರಣೆಗಳು.

**ಪ್ರತಿಕಾಂತತ್ವ:** ಇದು ಇರುವ ವಸ್ತುಗಳಲ್ಲಿ K ಋಣಾತ್ಮಕವಾಗಿರುವುದು. ಆದರೆ ನಿರಪೇಕ್ಷ ಮೌಲ್ಯ ಸುಮಾರು $10-6cgs$ ಏಕಮಾನಗಳು. K ಕಾಂತೀಕರಣ ಬಲವನ್ನು ಅವಲಂಬಿಸುವುದಿಲ್ಲ. ಚಿತ್ರ 8(b)ಯಲ್ಲಿ ತೋರಿಸಿರುವಂತೆ ಕಾಂತ ಬಲರೇಖಾಪ್ರವಾಹ ವಸ್ತುವಿನಿಂದ ಆದಷ್ಟು ದೂರ ಸರಿಯುವುದರಿಂದ ವಸ್ತುವಿನ ಪ್ರದೇಶದಲ್ಲಿ ಮೊದಲು ಇದ್ದುದಕ್ಕಿಂತ ಬಲರೇಖಾಪ್ರವಾಹ ಕಡಿಮೆಯಾಗುತ್ತದೆ. ಆದರೆ ಅದರ ಹೊರಗೆ ಹೆಚ್ಚುತ್ತದೆ. ಇಂಥ ವಸ್ತುಗಳಿಗೆ ಪ್ರತಿಕಾಂತೀಯ ವಸ್ತುಗಳೆಂದು ಹೆಸರು. ಚಿತ್ರ 8(b)ಯಲ್ಲಿ ತೋರಿಸಿರುವಂತೆ ಇವು ಕಾಂತಧ್ರುವಗಳಿಂದ ವಿಕರ್ಷಿಸಲ್ಪಡುತ್ತವೆ. ಅಂದರೆ ಹೆಚ್ಚು ಬಲದ ಕ್ಷೇತ್ರಭಾಗಗಳಿಂದ ಕಡಿಮೆ ಬಲದ ಭಾಗಗಳಿಗೆ ಚಲಿಸಲು ಪ್ರಯತ್ನಿಸುತ್ತವೆ. ಇವುಗಳ ಏಕಮಾನ ದ್ರವ್ಯರಾಶಿಯ ಕಾಂತತ್ವ ಗ್ರಾಹಕತೆ ಉಷ್ಣತೆಯೊಡನೆ ವ್ಯತ್ಯಾಸ ಹೊಂದುವುದಿಲ್ಲ. ಆಂಟಿಮನಿ, ಬಿಸ್ಮತ್, ನೀರು, ಅನೇಕ ಲವಣಗಳು, ಆರ್ಗ್ಯಾನಿಕ್ ಸಂಯುಕ್ತ ವಸ್ತುಗಳು ಪ್ರತಿಕಾಂತ ವಸ್ತುಗಳಿಗೆ ಉದಾಹರಣೆಗಳಾಗಿವೆ.

**ಫೆರ್ರೋಕಾಂತತ್ವ:** ಈ ಬಗೆಯ ವಸ್ತುಗಳಿಗೆ K ಧನಾತ್ಮಕವಾಗಿರುವುದು. ಅದರ ಬೆಲೆ ಸುಮಾರು 10 cgs ಏಕಮಾನಗಳು. ಈ ವಸ್ತುಗಳ ಮೂಲಕ ಕಾಂತ ಬಲರೇಖಾ ಪ್ರವಾಹ ಅತ್ಯಧಿಕವಾಗಿ ಶೇಖರವಾಗುತ್ತದೆ. ಈ ಕಾರಣದಿಂದ ಒಂದು ಉಂಗುರದ ಆಕಾರದ ಕಾಂತವಸ್ತುವಿನ ಒಳಗಡೆ, ಕಾಂತ ಬಲರೇಖೆ ಇರುವುದಿಲ್ಲ. ಇದನ್ನು ಚಿತ್ರ (9)ರಲ್ಲಿ ತೋರಿಸಿದೆ. ಅಂಥ ಪ್ರದೇಶವು ಕಾಂತಬಲದಿಂದ ಬಿಡುಗಡೆಯಾಗಿರುತ್ತದೆ. ಕಾಂತಬಲದಿಂದ ಮರೆ ಮಾಡುವಿಕೆ (ಮ್ಯಾಗ್ನೆಟಿಕ್ ಸ್ಕ್ರೀನಿಂಗ್)

ಎಂದು ಇದರ ಹೆಸರು. K ಯ ಬೆಲೆ ಕಾಂತೀಕರಣ ಬಲ ಮತ್ತು ಉಷ್ಣತೆಗಳನ್ನು ಅವಲಂಬಿಸುವುದರ ಜೊತೆಗೆ ವಸ್ತುವಿನ ಮೇಲೆ ಹಿಂದೆ ಪ್ರಯೋಗಿಸಲ್ಪಟ್ಟಿದ್ದ ಕಾಂತಕ್ಷೇತ್ರಬಲವನ್ನು ಸಹ ಅವಲಂಬಿಸಿದೆ. ಉಷ್ಣತೆ ಅಧಿಕವಾದಂತೆ ಒಂದು ವಸ್ತುವಿನ ಕಾಂತತ್ವ ದುರ್ಬಲಗೊಳ್ಳುತ್ತ ಕೊನೆಗೆ ಆ ವಸ್ತುವಿನ ಕ್ಯೂರಿ ಉಷ್ಣತೆಯನ್ನು ಮೀರಿದ ಬಳಿಕ ಫೆರ್ರೋಕಾಂತತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡು ಅನುಕಾಂತ ವಸ್ತುವಾಗಿ ಪರಿವರ್ತಿತವಾಗುತ್ತದೆ.



ಚಿತ್ರ 9

ಅನುಕಾಂತ ಮತ್ತು ಪ್ರತಿಕಾಂತ ಗ್ರಾಹಕತೆಗಳ ಅಳತೆ: ಕಾಂತತ್ವ ಗ್ರಾಹಕತೆ K ಇರುವ ಒಂದು ವಸ್ತು ಒಂದು ಅಸಮ ರೀತಿಯ (ನಾನ್ ಯೂನಿಫಾರಂ) ಕಾಂತ ಕ್ಷೇತ್ರದಲ್ಲಿ ಇದ್ದರೆ ಅದರ ಮೇಲೆ ಪ್ರಯೋಗವಾಗುವ ಬಲ

$$f = \frac{1}{2}\iiint K\, grad H^2 dv \qquad .............18$$

ಆಗುತ್ತದೆ. ಇದರಲ್ಲಿ $dv$ ವಸ್ತುವಿನ ಅನಂತ ಸೂಕ್ಷ್ಮ ಘನಗಾತ್ರ (ಇನ್‌ಫಿನಿಟೆಸಿಮಲ್ ವಾಲ್ಯೂಂ), $gradH2$ವು ಶೇ. $dv$ ಇರುವ ಬಿಂದುವಿನಲ್ಲಿ ಕಾಂತಬಲದ ವರ್ಗವು ಸ್ಥಳವನ್ನು ಅನುಸರಿಸಿ ಬದಲಾಗುವ ಗರಿಷ್ಠ ದರ (ಮ್ಯಾಕ್ಸಿಮಂ ಗ್ರೇಡಿಯೆಂಟ್) ಸಮಾಸಂಕಲನ (ಇಂಟಿಗ್ರಲ್) ಚಿಹ್ನೆಗಳು ಮೂರು ಇರುವುವು. Vಯು ವ್ಯಾಪಿಸಿರುವ ಗಾತ್ರಕ್ಕೆ ಅನ್ವಯಿಸುವುದಕ್ಕಾಗಿ. ವಸ್ತುವಿನ ಎಲ್ಲ ಭಾಗಗಳಲ್ಲೂ K ಒಂದೇ ಆಗಿದ್ದು ಮಸ್ತುವಿನ ಗಾತ್ರ ಸಣ್ಣದಾಗಿದ್ದರೆ ಮತ್ತು ಚಿತ್ರ (10)ರಲ್ಲಿ ತೋರಿಸಿರುವಂತೆ ಕಾಂತಬಲ $H$ ಎಂಬುದು y ದಿಶೆಯಲ್ಲಿ ಮಾತ್ರ ಇದ್ದು ಅದರ ಬದಲಾವಣೆ x ದಿಶೆಯಲ್ಲಿ ಮಾತ್ರ $\partial Hy / \partial x$ ಆಗಿದ್ದರೆ ಸಮೀಕರಣ (18) ರಿಂದ x ದಿಶೆಯ ಬಲವಾದ $Fx$

$$F_x = K\, H_y (\frac{\partial H_y}{\partial x}) v \qquad ......... (19)$$



ಚಿತ್ರ 6



ಚಿತ್ರ 10

ಆಗುತ್ತದೆ. ವಸ್ತುವಿನ ಸುತ್ತ ಕಾಂತತ್ವ ಗ್ರಾಹಕತೆ $Ka$ ಇರುವ ಗಾಳಿ ಇದ್ದರೆ

$$Fx = (K - Ka) Hy (\frac{\partial Hy}{\partial x}) v \qquad . . (20)$$

ಫೆರ್ರೋಕಾಂತೀಯ ವಸ್ತುಗಳ ಕಾಂತೀಕರಣ ತೀಕ್ಷ್ಣತೆಯ ಅಳತೆ: ಒಂದು ಗಾಜಿನ ಇಲ್ಲವೆ ಹಿತ್ತಾಳೆಯ ಕೊಳವೆಯ ಮೇಲೆ 1 ಸೆಂ.ಮೀ.ಗೆ N ಸುತ್ತುಗಳು ಬರುವಂತೆ ವಿದ್ಯುದ್ರಕ್ಷಕವಿರುವ ತಂತಿಯನ್ನು ಸುತ್ತಿ ಅದರ ಮೂಲಕ C ಆಂಪಿಯರುಗಳ ವಿದ್ಯುತ್ಪ್ರವಾಹವನ್ನು ಹರಿಸಿದರೆ ಸುರುಳಿಯ ಒಳಗಡೆ ಅದರ ಅಕ್ಷದ ದಿಶೆಯಲ್ಲಿ ಕಾಂತಕ್ಷೇತ್ರಬಲ $H$ =4 /




ಚಿತ್ರ 11

10 ಅರೆಸ್ಟೆಡ್ಡುಗಳಷ್ಟು ಉಂಟಾಗುತ್ತದೆ. ಈ ಸುರುಳಿಯೊಡನೆ (ಸೊಲೆನಾಯಿಡ್) ಇನ್ನೊಂದು ಪೂರಣ ಸುರುಳಿಯನ್ನು (ಕಾಂಪೆನ್ಸೇಟಿಂಗ್ ಕಾಯಿಲ್) ಶ್ರೇಣಿಯಾಗಿ ಸೇರಿಸಿ ಚಿತ್ರ (11) ರಲ್ಲಿ ತೋರಿಸಿರುವ ವಿದ್ಯುನ್ಮಂಡಲವನ್ನು ನಿರ್ಮಿಸಿ ಸುರುಳಿಗಳ ಸಮಾನ ಅಕ್ಷ ಕ್ಷಿತಿಜೀಯ ಸಮತಲದ ಭೂಕಾಂತ ಬಲ h ನ ದಿಶೆಗೆ ಲಂಬವಾಗಿರುವಂತೆ ಏರ್ಪಡಿಸಲಾಗುತ್ತದೆ.

ಸಮಾನ ಅಕ್ಷದ ಮೇಲೆ 0 ಬಿಂದುವಿನಲ್ಲಿ ವಿಚಲನ ಕಾಂತ ಮಾಪಕದ ಕೇಂದ್ರ ಇರುವಂತೆ ಅದನ್ನು ಇಡಲಾಗುತ್ತದೆ. ಸುರುಳಿಗಳಲ್ಲಿ ವಿದ್ಯುತ್ಪ್ರವಾಹ ಇದ್ದಾಗ ನಿವಾರಕ ಸುರುಳಿಯ ದೂರವನ್ನು 0 ಬಿಂದುವಿನಲ್ಲಿ ಒಂದರ ಕಾಂತ ಕ್ಷೇತ್ರವನ್ನು ಇನ್ನೊಂದು ನಿವಾರಿಸುವಂತೆ ಅಳವಡಿಸಲಾಗುತ್ತದೆ.

ಪ್ರಯೋಗಕ್ಕೆ ಒಳಪಟ್ಟ ವಸ್ತುವನ್ನು ಸಮಾನ ವಿಸ್ತೀರ್ಣ $A$ ಮತ್ತು ಉದ್ದ L=21 ಇರುವ ದಂಡದ ಆಕಾರದಲ್ಲಿ ಪಡೆದು ಅದನ್ನು ಪರ್ಯಾಯ ವಿದ್ಯುತ್ಪ್ರವಾಹ ಹರಿಯುತ್ತಿರುವ ಸುರುಳಿಯ ಮೂಲಕ ಹಾಯಿಸಿ ವಿಕಾಂತ (ಡೀಮ್ಯಾಗ್ನೆಟೈಸ್) ಗೊಳಿಸುತ್ತದೆ. ಅನಂತರ ಅದನ್ನು ವಿದ್ಯುತ್ಪ್ರವಾಹ ಇಲ್ಲದಿರುವಾಗ ಪ್ರಯೋಗ ಸುರುಳಿಯ ಅಕ್ಷದಲ್ಲಿ ಇಡಲಾಗುತ್ತದೆ. 0 ನಿಂದ ವಸ್ತುವಿನ ದಂಡದ ಮಧ್ಯ ಬಿಂದು ಇರುವ ದೂರ d ಯನ್ನು ಅಳೆಯಲಾಗುತ್ತದೆ. ವಿದ್ಯುತ್ಪ್ರವಾಹ ನಿಯಂತ್ರಕಗಳ ಸಹಾಯದಿಂದ ಸುರುಳಿಗಳಲ್ಲಿ ಅತಿಕ್ಷೀಣ ವಿದ್ಯುತ್ಪ್ರವಾಹ C ಯನ್ನು ಹರಿಸಿದರೆ ವಸ್ತುವಿನ ಮೇಲಿನ ಕಾಂತೀಕರಣ ಬಲ H=0.4NC ಆಗುತ್ತದೆ. ಇದರಿಂದ ಮಸ್ತುವಿನ ಕಾಂತತ್ವದ ತೀವ್ರತೆ $I$ ಆಗಿದ್ದರೆ ಅದು ಕಾಂತ ಭ್ರಮಣಾಂಕ M=IAL ಇರುವ ಕಾಂತ ದಂಡವಾಗಿ ಪರಿವರ್ತನೆ ಹೊಂದುತ್ತದೆ. ಇದರ ಕಾಂತಕ್ಷೇತ್ರದಿಂದಕಾಂತಮಾಪಕದ ಸೂಚಿಯ ವಿಚಲನ $\theta$ ಆಗಿದ್ದರೆ

$$\frac{M}{h} = \frac{(d^2 - l^2)^2}{2d} \tan\theta$$

$$\text{ಅಥವಾ} \quad I = \frac{h}{AL} = \frac{(d^2 - l^2)^2}{{}^2 d} \tan\theta \qquad \cdots(21)$$

ಆದ್ದರಿಂದ ವನ್ನು ಅಳೆದರೆ I ಯನ್ನು ಗಣಿಸಬಹುದು. ಇದು ಕಾಂತೀಕರಣ ಬಲದಿಂದ ಉಂಟಾದದ್ದು. C ಯ ಬೆಲೆಯನ್ನು ಸಣ್ಣ ಸಣ್ಣ ಹಂತಗಳಲ್ಲಿ ಹೆಚ್ಚಿಸಿ ಪ್ರತಿ H ಬೆಲೆಗೂ ಅದಕ್ಕೆ ಸಂಗತವಾಗುವ ಬೆಲೆಯನ್ನು ಕಂಡುಹಿಡಿದು ಅದನ್ನು ಒಂದು ಲಂಬನಿರ್ದೇಶಕ ವ್ಯವಸ್ಥೆಯಲ್ಲಿ ಗುರ್ತಿಸಿ ಪಡೆದ ನಕ್ಷೆಯನ್ನು ಕಾಂತೀಕರಣ ವಕ್ರರೇಖೇ (ಮ್ಯಾಗ್ನೆಟೈಸೇಷನ್ ಕರ್ವ್) ಎಂದು ಕರೆಯಲಾಗುತ್ತದೆ. ಚಿತ್ರ (12) ರಲ್ಲಿ ಈ ರೇಖಾನಕ್ಷೆಯನ್ನು OABS ಎನ್ನುವುದರಿಂದ ತೋರಿಸಿದೆ. BS ಭಾಗದಲ್ಲಿ ವ್ಯತ್ಯಾಸವಾಗದೇ ಇರುವುದರಿಂದ ಇದನ್ನು ಸಂತೃಪ್ತ ಕಾಂತೀಯತೆ (ಸ್ಯಾಚುರೇಷನ್ ಮ್ಯಾಗ್ನೆಟೈಸೇಷನ್) ಎಂದು ಕರೆಯಲಾಗುತ್ತದೆ.

B ಯನ್ನು ತಲಪಿದ ಮೇಲೆ H ನ ಬೆಲೆಯನ್ನು ಸ್ವಲ್ಪ ಸ್ವಲ್ಪವಾಗಿ ಕಡಿಮೆ ಮಾಡುತ್ತ ಹೋದರೆ I ಯ ಬೆಲೆ ಚಿತ್ರ (12)ರಲ್ಲಿ ತೋರಿಸಿರುವ BC ನಕ್ಷೆಯನ್ನು ಅನುಸರಿಸಿ ಕುಗ್ಗುತ್ತದೆ; H ಸೊನ್ನೆಯಾದಾಗ I ಯ ಬೆಲೆ OC=Ir ಆಗಿ ಉಳಿಯುವುದೇ ಹೊರತು ಸೊನ್ನೆಯಾಗುವುದಿಲ್ಲ. Ir ನ ಹೆಸರು ಶೇಷ ಕಾಂತೀಯತೆ (ರೀಟೈನ್ಡ್ ಮ್ಯಾಗ್ನೆಟೈಸೇಷನ್).

ಕಾಂತೀಯತೆಗೆ ಕಾರಣವಾದ ಕಾಂತೀಕರಣ ಬಲ H ಇಲ್ಲವಾದರೂ ಅದರ ಫಲವಾದ ಕಾಂತತ್ವ ತೀವ್ರತೆ I ಸೊನ್ನೆಯಾಗದೆ Ir ನಷ್ಟು ಉಳಿಯುತ್ತದೆ. ಈ ಗುಣಕ್ಕೆ ಕಾಂತೀಯ ಹಿಂಬೀಳುವಿಕೆ ಅಥವಾ ಕಾಂತೀಯ ಜಡತ್ವ (ಮ್ಯಾಗ್ನೆಟಿಕ್ ಹಿಸ್ಟರಿಸಿಸ್) ಎಂದು ಹೆಸರು.



ಚಿತ್ರ 12

ವಿದ್ಯುತ್ ಸುರುಳಿಯಲ್ಲಿ ವಿದ್ಯುತ್ಪ್ರವಾಹವನ್ನು ಅತಿ ಕ್ಷೀಣ ಬೆಲೆಯಿಂದ ಕ್ರಮವಾಗಿ ಏರಿಸುತ್ತ ಪ್ರತಿ – H ಬೆಲೆಗೂ ಅದಕ್ಕೆ ಅನ್ವಯಿಸುವ I ಬೆಲೆಯನ್ನು ಅಳೆದು ನಕ್ಷೆಯಲ್ಲಿ ಗುರ್ತಿಸಿದರೆ CDE ವಕ್ರರೇಖೆ ದೊರೆಯುತ್ತದೆ. ಇದರಲ್ಲಿ OD = – Hc ಎನ್ನುವುದನ್ನು ವಿಚುಂಬಕ ಬಲ (ಕೊಎರ್ಸಿವ್ ಫೋರ್ಸ್) ಎಂದು ಕರೆಯುತ್ತೇವೆ. E ಬಿಂದುವಿನಲ್ಲಿ ಮೊದಲಿನ ದಿಶೆಗೆ ಎದುರಾಗಿ ಸಂತೃಪ್ತ ಕಾಂತೀಯತೆ ಉಂಟಾಗುತ್ತದೆ. ಪುನಃ ವಿದ್ಯುತ್ಪ್ರವಾಹ – C ಯನ್ನು ಕಡಿಮೆ ಮಾಡಿ – Hನ್ನು ಕಡಿಮೆ ಮಾಡುತ್ತ ಅದಕ್ಕೆ ಅನ್ವಯಿಸುವ I ಯನ್ನು ಗುರ್ತಿಸಿದರೆ H=0 ಆದಾಗ ನಕ್ಷೆ I ಊರ್ಧ್ವಾಕ್ಷವನ್ನು ( I–ಅಕ್ಷ) F ನಲ್ಲಿ ಸಂಧಿಸುತ್ತದೆ. OF ಎನ್ನುವುದು ಎದುರು ದಿಕ್ಕಿನಲ್ಲಿ ಶೇಷಕಾಂತತ್ವ. ವಿದ್ಯುತ್ಪ್ರವಾಹವನ್ನು ಪೂರ್ವದಿಶೆಗೆ ತಿರುಗಿಸಿ ಕ್ರಮವಾಗಿ H ನ್ನು ಹೆಚ್ಚಿಸಿ I ಯ ಬೆಲೆಗಳನ್ನು ಗುರ್ತಿಸುತ್ತ ಹೋದರೆ ಅದು FGB ವಕ್ರರೇಖೆಯನ್ನು ಅನುಸರಿಸಿ ಹೆಚ್ಚುತ್ತ ಕೊನೆಗೆ B ಯಲ್ಲಿ ಪುನಃ ಮೊದಲ ದಿಶೆಯಲ್ಲಿ ಸಂತೃಪ್ತತೆಯನ್ನು ತಲುಪುತ್ತದೆ.

BCDEFGB ಎನ್ನುವ ನಕ್ಷೆಯಿಂದ ಪ್ರತಿರೂಪಿಸಲ್ಪಡುವ ಚಕ್ರೀಯ ಪರಿವರ್ತನೆಯನ್ನು ಕಾಂತೀಯ ಜಡತ್ವಚಕ್ರ (ಮ್ಯಾಗ್ನೆಟಿಕ್ ಹಿಸ್ಟರಿಸಿಸ್ ಸೈಕಲ್) ಎಂದು ಕರೆಯುತ್ತಾರೆ. ಕಾಂತೀಕರಣ ರೇಖೆ OAB ಮತ್ತು ಜಡತ್ವಚಕ್ರ ಇವು ಫೆರ್ರೋ ಕಾಂತೀಯ ವಸ್ತುಗಳ ಗುಣವನ್ನು ನಿರ್ಧರಿಸುವುದಕ್ಕೆ ಸಹಾಯಕವಾಗಿವೆ. ಇವುಗಳ ಅಧ್ಯಯನದಿಂದ ವಿವಿಧ ಉದ್ದೇಶಗಳಿಗೆ ತಕ್ಕುದಾದ ಫೆರ್ರೋಕಾಂತೀಯ ವಸ್ತುಗಳನ್ನು ಆರಿಸಿಕೊಳ್ಳುವುದು ಸಾಧ್ಯ.

**ಫೆರ್ರೋಕಾಂತೀಯ ವಸ್ತುಗಳ ಗುಣ ನಿರ್ದೇಶನ :** ಕಾಂತೀಕರಣ ರೇಖೆಯ ಓಟದಿಂದ (ಸ್ಲೋಪ್) ಬೇರೆ ಬೇರೆ ಕಾಂತೀಕರಣ ಬಲಗಳಲ್ಲಿ ಕಾಂತೀಯ ಪಾರಗಮ್ಯತೆ μ ವನ್ನು ಪಡೆಯಬಹುದು. ಕೆಲವು ಕೆಲಸಗಳಿಗೆ ಆರಂಭ ಪಾರಗಮ್ಯತೆ ಅಧಿಕವಾಗಿರುವುದು ಆವಶ್ಯಕ. ಮಿಕ್ಕ ಕೆಲಸಗಳಿಗೆ ಅಧಿಕ ಕಾಂತಕ್ಷೇತ್ರಗಳಲ್ಲಿ ಹೆಚ್ಚಿನ ಪಾರಗಮ್ಯತೆ ಬೇಕಾಗುತ್ತದೆ. ಆದ್ದರಿಂದ ಸೂಕ್ತ ಫೆರ್ರೋಕಾಂತೀಯ ವಸ್ತುಗಳನ್ನು OAB ರೇಖೆಯ ಅಧ್ಯಯನದಿಂದ ಆರಿಸಿಕೊಳ್ಳಬಹುದು. ಈ ರೇಖೆಯ ಕೊನೆಯ ಭಾಗ BS ಸಂತೃಪ್ತ ಕಾಂತೀಯತೆಯ ಬೆಲೆಯನ್ನು ತಿಳಿಸುತ್ತದೆ. ಆದ್ದರಿಂದ ಈ ತಿಳಿವಳಿಕೆಯಿಂದ ವಿದ್ಯುತ್ಕಾಂತಗಳ ನಿರ್ಮಾಣಕ್ಕೆ ಬೇಕಾಗುವ ಒಳದಿಂಡಿನ (ಕೋರ್) ಆಯ್ಕೆ ಸಾಧ್ಯವಾಗುತ್ತದೆ. ಕಾಂತೀಯ ಜಡತ್ವ ವಿಸ್ತೀರ್ಣದಿಂದ ಒಂದು ಚಕ್ರೀಯ ಪರಿವರ್ತನೆಯಲ್ಲಿ ಕಾಂತವಸ್ತುವಿನ ಏಕಮಾನಗಾತ್ರದ ಮೇಲೆ ಕಾಂತೀಕರಣದಿಂದ ನಡೆಸಲಾಗುವ ಕಾರ್ಯದ ಪರಿಮಾಣ ದೊರಕುತ್ತದೆ.

ಶಾಶ್ವತ ಕಾಂತಗಳನ್ನು ನಿರ್ಮಿಸುವುದಕ್ಕೆ ಆರಿಸಿಕೊಳ್ಳುವ ವಸ್ತು ಅಧಿಕವಾದ ಶೇಷಕಾಂತತ್ವ Ir = OC ಮತ್ತು ಹೆಚ್ಚಿನ ವಿಚುಂಬಕ ಬಲ Hc=OD ಇವನ್ನು ಪಡೆದಿರಬೇಕು. ಆದ್ದರಿಂದ ಸೂಕ್ತ ಫೆರ್ರೋಕಾಂತೀಯ ವಸ್ತುವನ್ನು ಕಂಡುಹಿಡಿಯುವುದಕ್ಕೆ ಜಡತ್ವಚಕ್ರದ ಅಧ್ಯಯನ ಆವಶ್ಯಕ. ಕಾಂತ ಜಡತ್ವಚಕ್ರದಿಂದ *I* ಯ ಗರಿಷ್ಠ ಬೆಲೆಯನ್ನು ಪಡೆದು ಅದರಿಂದ ಕಾಂತೀಯ ಪ್ರೇತಕತ್ವದ ಗರಿಷ್ಠ ಬೆಲೆಯನ್ನು

$$B_{\max} = H + 4\pi\, I_{\max}$$

ಎನ್ನುವುದರಿಂದ ಪಡೆಯಬಹುದು. ಸ್ಟೈನ್‌ಮೆಟ್ಜ್ ಎಂಬುವನು ಪ್ರಾಯೋಗಿಕವಾಗಿ ಕಂಡುಹಿಡಿದ ನಿಯಮದಲ್ಲಿ ಇದನ್ನು ಉಪಯೋಗಿಸಿದರೆ ಒಂದು ಘನ ಸೆಂಮೀ. ವಸ್ತುವಿನಲ್ಲಿ ಪ್ರತಿಯೊಂದು ಕಾಂತಚಕ್ರೀಯ ಬದಲಾವಣೆಯಲ್ಲಿ ಆಗುವ ಶಕ್ತಿ ನಷ್ಟ W' ಎನ್ನುವುದನ್ನು ಪಡೆಯಬಹುದು. ಅರ್ಗ್/ಘನ ಸೆಂಮೀ. ಎಂಬುದೇ ಸ್ಟೈನ್ ಮೆಟ್ಜ್ ನಿಯಮ. ಎನ್ನುವುದು ಸ್ಟೈನ್ ಮೆಟ್ಜ್ ಗುಣಾಂಕ. ಬೇರೆ ಬೇರೆ ಫೆರ್ರೋಕಾಂತೀಯ ವಸ್ತುಗಳಲ್ಲಿ ಇದರ ಬೆಲೆ ಬೇರೆ ಬೇರೆ ಆಗಿದೆ. ಉದಾಹರಣೆಗೆ ಅತಿ ಮೆದು ಕಬ್ಬಿಣಕ್ಕೆ 0.002, ಪೆಡಸು ಕಬ್ಬಿಣಕ್ಕೆ 0.028.

**ವಿಚುಂಬಕೀಕರಣ (ಡೀಮ್ಯಾಗ್ನೆಟೈಸೇಷನ್) :** ಫೆರ್ರೋಕಾಂತೀಯ ವಸ್ತುವಿನ ಕಾಂತತ್ವ ತೀವ್ರತೆಯನ್ನು ಶೂನ್ಯಗೊಳಿಸಿದ ಮಾತ್ರಕ್ಕೆ ಅದು ಿ ಬಿಂದುವಿನಿಂದ ಸೂಚಿಸಲ್ಪಡುವ ವಿಚುಂಬಕ ಸ್ಥಿತಿಗೆ ಹಿಂತಿರುಗದೇ ಇರಬಹುದು. ಉದಾಹರಣೆಗೆ ಚಿತ್ರ 12ರಲ್ಲಿ D ಬಿಂದುವಿನಲ್ಲಿ I=C ಆದರೆ ಕಾಂತೀಕರಣ ಬಲವನ್ನು ಹೆಚ್ಚುಮಾಡುತ್ತ ಹೋದರೆ I ಎನ್ನುವುದು ಅದೇ ಚಿತ್ರದಲ್ಲಿ ತೋರಿಸಿರುವ ಬಿಂದುಗೆರೆಯನ್ನು ಅನುಸರಿಸಿ ಹೆಚ್ಚುತ್ತದೆ. ಇದು OAB ಗಿಂತ ಭಿನ್ನವಾಗಿದೆ. ಆದ್ದರಿಂದ ಆ ಚಿತ್ರದಲ್ಲಿ O ಪ್ರತಿ ರೂಪಿಸುವ ಸ್ಥಿತಿಯೇ ವಿಚುಂಬಕ ಸ್ಥಿತಿ. ಈ ಸ್ಥಿತಿಗೆ ವಸ್ತುವನ್ನು ತರುವುದಕ್ಕೆ ಅದರ ಮೇಲೆ ಕಂಪನವೈಶಾಲ್ಯ (ಅಂಪ್ಲಿಟ್ಯೂಡ್) ಕಡಿಮೆಯಾಗುತ್ತ ಹೋಗುವ ಆವರ್ತ ಕಾಂತೀಕರಣ ಬಲವನ್ನು ಪ್ರಯೋಗಿಸಬೇಕು. ಈ ಕಾರ್ಯಕ್ಕೆ ವಸ್ತುವನ್ನು ಒಂದು ಪರ್ಯಾಯ ವಿದ್ಯುತ್ಪ್ರವಾಹ ಇರುವ ತಂತಿಯ ಸುರುಳಿಯ ಮೂಲಕ ಹಾಯುವಂತೆ ಮಾಡಬೇಕು. ಆಗ ಕಾಂತತ್ವ ತೀವ್ರತೆ I ಸಣ್ಣದಾಗುತ್ತ ಹೋಗುವ ಜಡತ್ವ ಚಕ್ರವನ್ನು ಚಿತ್ರ (13)ರಲ್ಲಿ ತೋರಿಸಿರುವಂತೆ ಅನುಸರಿಸುತ್ತ ಕೊನೆಗೆ O ಬಿಂದುವಿನ ಸ್ಥಿತಿಯನ್ನು ತಲಪುತ್ತದೆ.



ಚಿತ್ರ 13

**ಫೆರ್ರೋಕಾಂತೀಯ ವಸ್ತುಗಳು :** 1 ಶುದ್ಧ ಲೋಹಗಳು: ಶುದ್ಧ ಕಬ್ಬಿಣ, ಕೊಬಾಲ್ಟ್ ಮತ್ತು ನಿಕ್ಕಲುಗಳು ಫೆರ್ರೋಕಾಂತೀಯ ಲೋಹಗಳು. ಇವುಗಳಿಗೆ ಅಗಲ ಕಿರಿದಾದ ಆದರೆ ಹೆಚ್ಚು ಉದ್ದವುಳ್ಳ ಜಡತ್ವಚಕ್ರಗಳಿವೆ. ಆದಕಾರಣ ಇವುಗಳಲ್ಲಿ ಜಡತ್ವದಿಂದ ಆಗುವ ಶಕ್ತಿನಷ್ಟ ಅಲ್ಪ. ಶುದ್ಧ ಕಬ್ಬಿಣವನ್ನು ವಿದ್ಯುತ್ಕಾಂತಗಳ ಒಳದಿಂಡಿಗೆ ಉಪಯೋಗಿಸಲಾಗುತ್ತದೆ.

**2 ಮಿಶ್ರಲೋಹಗಳು. ಕಬ್ಬಿಣ–ಸಿಲಿಕಾನ್ ಮಿಶ್ರಲೋಹ :** ಕಬ್ಬಿಣದೊಡನೆ ಸಿಲಿಕಾನನ್ನು ಮಿಶ್ರಿಸುವುದರಿಂದ ಕೆಲವು ಅಪೇಕ್ಷಣೀಯವಾದ ಕಾಂತಗುಣಗಳನ್ನು ಪಡೆಯಬಹುದೆಂದು ಹಾಡ್ ಫೀಲ್ಡ್ ಕಂಡುಹಿಡಿದ. ಸಿಲಿಕಾನ್ ಸೇರಿಸುವುದರಿಂದ ಕಬ್ಬಿಣದ ಗರಿಷ್ಠಕಾಂತ ಪಾರಗಮ್ಯತೆ (μ) ಹೆಚ್ಚುತ್ತದೆ, ಜಡತ್ವಚಕ್ರದ ವಿಸ್ತೀರ್ಣ ಕುಗ್ಗುತ್ತದೆ ಮತ್ತು ವಿದ್ಯುದ್ರೋಧ ಅಧಿಕಗೊಳ್ಳುತ್ತದೆ. ಈ ಕಾರಣಗಳಿಂದ ಸಿಲಿಕಾನ್ ಉಕ್ಕನ್ನು ವಿದ್ಯುತ್ ಪರಿವರ್ತಕಗಳ (ಟ್ರಾನ್ಸ್ ಫಾರ್ಮರ್ಸ್) ದಿಂಡನ್ನು ತಯಾರಿಸುವುದಕ್ಕೆ ಉಪಯೋಗಿಸಲಾಗುತ್ತದೆ. ಈ ಸಲಕರಣೆಗಳಲ್ಲಿ ಸಿಲಿಕಾನ್ ಉಕ್ಕಿನ ತಗಡುಗಳಿಗೆ ಬಣ್ಣಬಳಿದು ಅವನ್ನು ಜೋಡಿಸಿ ದಿಂಡನ್ನು ನಿರ್ಮಿಸಲಾಗುವುದು. ಆದ್ದರಿಂದ ಜಡತ್ವದಿಂದಾಗುವ ನಷ್ಟ ಕಡಿಮೆಯಾಗುವುದರ ಜೊತೆಗೆ, ದಿಂಡಿನಲ್ಲಿ ವಿದ್ಯುತ್ಕಾಂತ ಪ್ರೇರಣೆಯಿಂದ (ಎಲೆಕ್ಟ್ರೊಮ್ಯಗ್ನೆಟಿಕ್ ಇಂಡಕ್ಷನ್) ಉದ್ಭವಿಸುವ ಸುಳಿ ವಿದ್ಯುತ್ ಪ್ರವಾಹಗಳಿಂದ (ಎಡ್ಡಿ ಕರೆಂಟ್ಸ್) ಆಗುವ ಶಕ್ತಿನಷ್ಟವೂ ಕಡಿಮೆಯಾಗುತ್ತದೆ. ಈ ಮಿಶ್ರಲೋಹದ ಅತಿಸೂಕ್ಷ್ಮ ಹರಳುಗಳು ಒಂದೇ ದಿಶೆಯಲ್ಲಿ ಓಲುವಂತೆ ಬಲ ಪ್ರಯೋಗಮಾಡಿ ಮತ್ತು ಉಷ್ಣದಿಂದ ಪಳಗಿಸುವುದರಿಂದ (ಅನ್ನೀಲಿಂಗ್) ಇವುಗಳ ಉಪಯುಕ್ತತೆ ಹೆಚ್ಚುವಂತೆ ಮಾಡಬಹುದು.

ಕಬ್ಬಿಣ–ನಿಕ್ಕಲ್ ಮತ್ತು ಇತರ ಮಿಶ್ರಲೋಹಗಳು: ಇವನ್ನು ಬಾರೆಲ್, ಬ್ರೌನ್ ಮತ್ತು ಹಾಡ್ ಫೀಲ್ಡ್ ಎಂಬುವರು ಪರೀಕ್ಷಿಸಿ ಅವುಗಳ ವಿಶೇಷ ಗುಣಗಳನ್ನು ಪತ್ತೆ ಮಾಡಿದರು. ಅನಂತರ ಆರ್ನಾಲ್ಡ್ ಮತ್ತು ಎಲ್ಮನ್ ಎಂಬುವರು ಈ ಪರಿಶೀಲನೆಯನ್ನು ಮುಂದುವರಿಸಿದರು. ಈ ಮಿಶ್ರಲೋಹಗಳಿಗೆ ಅವುಗಳ ಗುಣಗಳಿಗೆ ತಕ್ಕಂತೆ ಮ್ಯೂಮೆಟಲ್, ಪರ್ಮಲಾಯ್, ಮೆಗಾಪರ್ಮ್ ಮುಂತಾದ ಅನ್ವರ್ಥ ನಾಮಗಳು ಬಳಕೆಯಲ್ಲಿವೆ. ಶೇ.76 ನಿಕ್ಕಲ್, ಶೇ.17 ಕಬ್ಬಿಣ, ಮಿಕ್ಕದ್ದು ತಾಮ್ರ ಇಲ್ಲವೆ ಮೋಲಿಬ್ಡಿನಮ್ ಉಳ್ಳ ಮಿಶ್ರಲೋಹಕ್ಕೆ ಪರ್ಮಲಾಯ್ ಎಂದು ಹೆಸರು. ಅತಿ ಸ್ವಲ್ಪ ಕಾಂತೀಕರಣ ಬಲದಲ್ಲಿಯೂ ಇದಕ್ಕೆ ಅಧಿಕವಾದ ಪಾರಗಮ್ಯತೆ ಇದೆ. ಅಲ್ಲದೆ ಅತಿ ಕಿರಿದಾದ ಜಡತ್ವ ಚಕ್ರ ಮತ್ತು ಅತಿ ಸ್ವಲ್ಪ ವಿಚುಂಬಕ ಬಲಗಳು ಇವೆ. ಇದನ್ನು ವಿದ್ಯುತ್ಕಾಂತಗಳ ಧ್ರುವ ಭಾಗಗಳಿಗೆ ತಗುಲಿಸುವ ಮೂತಿಗಳಿಗೆ (ಪೋಲ್ ಪೀಸಸ್) ಉಪಯೋಗಿಸುತ್ತಾರೆ. ಮ್ಯೂಮೆಟಲ್ ಮಿಶ್ರಲೋಹದಲ್ಲಿ ನಿಕ್ಕಲ್ ಶೇ.75, ಕಬ್ಬಿಣ ಶೇ.18, ಕ್ರೋಮಿಯಂ ಶೇ.2 ಮತ್ತು ತಾಮ್ರ ಶೇ.5 ಇವೆ. ಇದನ್ನು ಅತಿನಿಖರ ಅಳತೆಯ ಸಾಧನಗಳಿಗೆ ಬೇಕಾಗುವ ವಿದ್ಯುತ್ ವಿಭವ ಪರಿವರ್ತಕಗಳ

ದಿಂಡಿಗೆ ಉಪಯೋಗಿಸುತ್ತಾರೆ. ಈ ಮಿಶ್ರಲೋಹದ ತಗಡಿನ ಹೊದಿಕೆ ಅದರ ಒಳಗಡೆ ಇರುವ ಭಾಗಕ್ಕೆ ಕಾಂತರಕ್ಷಣೆ (ಮ್ಯಾಗ್ನೆಟಿಕ್ ಸ್ಕ್ರೀನಿಂಗ್) ಒದಗಿಸುತ್ತದೆ.

**ಕಬ್ಬಿಣ–ಕೋಬಾಲ್ಟ್ ಮಿಶ್ರಲೋಹಗಳು:** ಗರಿಷ್ಠ ಸಂತೃಪ್ತ ಕಾಂತತ್ವವನ್ನು ಪಡೆಯುವುದಕ್ಕೆ ಇವು ತಕ್ಕವು. ಪರ್ಮೆಂಡುರ್ ಎಂದು ಇವುಗಳ ಒಟ್ಟು ಹೆಸರು. ಇವು ಅತಿ ಪೆಡಸು. ಆದರೆ ಸ್ವಲ್ಪ ಕ್ರೋಮಿಯಂ ಮತ್ತು ವನೇಡಿಯಂ ಲೋಹಗಳನ್ನು ಸೇರಿಸಿ ತಕ್ಕ ಉಷ್ಣತೆಯಲ್ಲಿ ಪಳಗಿಸಿದರೆ ಮೃದುತ್ವವನ್ನು ಪಡೆಯುತ್ತವೆ. ವಿದ್ಯುದ್ಯಂತ್ರಗಳ ಸ್ಟ್ಯಾಟರುಗಳಿಗೆ ತಗುಲಿಸಿರುವ ಧ್ರುವಗಳನ್ನು ಈ ಮಿಶ್ರಲೋಹದಿಂದ ಮಾಡಿ ಹೆಚ್ಚಾದ ಕಾಂತಕ್ಷೇತ್ರಪ್ರವಾಹ ಸಾಂದ್ರತೆಯನ್ನು ಪಡೆಯಬಹುದು.

**ಹಯ್ಸಲರ್ ಮಿಶ್ರಲೋಹಗಳು:** ಮ್ಯಾಂಗನೀಸ್, ತಾಮ್ರ ಮತ್ತು ಅಲ್ಯೂಮಿನಿಯಮ್‌ಗಳನ್ನು ಸೇರಿಸಿ ಹಯ್ಸಲರ್ ಎಂಬಾತ ಈ ಮಿಶ್ರಲೋಹವನ್ನು ತಯಾರಿಸಿದ. ಅದರ ರಾಸಾಯನಿಕ ಸೂತ್ರ $Cu_2\ Mn\ Al$ ಇದರಲ್ಲಿರುವ ಯಾವ ಲೋಹವೂ ಫೆರ್ರೋಕಾಂತೀಯ ವಸ್ತುವಲ್ಲ. ಆದರೂ ಈ ಮಿಶ್ರಲೋಹ ಫೆರ್ರೋಕಾಂತೀಯ ವಸ್ತುವಾಗಿರುವುದು ಸ್ವಾರಸ್ಯವಾದ ವಿಚಾರ. ಇದರಲ್ಲಿರುವ ತಾಮ್ರಕ್ಕೆ ಬದಲಾಗಿ ಬೆಳ್ಳಿ ಅಲ್ಲದೆ ಅಲ್ಯೂಮಿನಿಯಮಿಗೆ ಬದಲಾಗಿ ತವರ ಅಥವಾ ಸಮೇರಿಯಮನ್ನು ಉಪಯೋಗಿಸಬಹುದು.

**ಶಾಶ್ವತ ಕಾಂತಗಳಿಗೆ ಬೇಕಾಗುವ ವಸ್ತುಗಳು:** ಶಾಶ್ವತ ಕಾಂತಗಳ ನಿರ್ಮಾಣಕ್ಕೆ ಉಪಯೋಗವಾಗುವ ವಸ್ತುಗಳಿಗೆ ಶೇಷಕಾಂತತ್ವ ತೀವ್ರತೆ Ir (ಅಥವಾ ಶೇಷಕಾಂತ ಪ್ರೇರಕತ್ವ (Br) ಹೆಚ್ಚಾಗಿದ್ದರೆ ಕಾಂತ ಹೆಚ್ಚು ಬಲಯುಕ್ತವಾಗಿರುತ್ತದೆ. ಕಾಂತ ಅದರ ಕಾಂತತ್ವವನ್ನು ಸುಲಭವಾಗಿ ಕಳೆದುಕೊಳ್ಳದೇ ಇರುವುದಕ್ಕೆ ವಿಚುಂಬಕ ಬಲ (Hc) ಅಧಿಕವಾಗಿರಬೇಕು. ಇದಲ್ಲದೆ ಹೆಚ್ಚಾದ ಕಾಂತಬಲವು ಕಾಂತದಲ್ಲಿ ಶೇಖರವಾಗುವುದಕ್ಕೆ (BH) ನ ಬೆಲೆ (B) ಯೊಡನೆ ವ್ಯತ್ಯಾಸವಾದಾಗ (BH) ನ ಗರಿಷ್ಠ ಬೆಲೆ (BH ) max ಎನ್ನುವುದು ಆರಿಸಿಕೊಂಡ ವಸ್ತುವಿಗೆ ಅಧಿಕವಾಗಿರಬೇಕು. ಶಾಶ್ವತ ಕಾಂತಗಳ ನಿರ್ಮಾಣಕ್ಕೆ ಟಂಗ್ ಸ್ಟನ್ ಉಕ್ಕು ಮತ್ತು ಕೊಬಾಲ್ಟ್ ಉಕ್ಕುಗಳನ್ನು ಮೊದಲು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಅಮೆರಿಕನರು ಅಲ್ನಿಕೊ–ಮ್ಯಾಕ್ಸ್ 5 ಎಂಬ ಶೇ.24 Co, ಶೇ.14 Ni, ಶೇ.8 Al, ಶೇ.3 Cu ಮಿಕ್ಕ ಭಾಗ ಕಬ್ಬಿಣ ಸಂಘಟನೆಯುಳ್ಳ ಮಿಶ್ರಲೋಹವನ್ನು ತಯಾರಿಸಿರುತ್ತಾರೆ. ಇದು ಶಾಶ್ವತ ಕಾಂತಕ್ಕೆ ಉತ್ಕೃಷ್ಟವಾದದ್ದು. ಈ ಮಿಶ್ರಲೋಹವನ್ನು ಬ್ರಿಟಿಷರು ಆಲ್ಕೊಮಾಕ್ಸ್ ಎಂದು ಕರೆಯುತ್ತಾರೆ. ಇದೇ ಮಿಶ್ರಲೋಹವನ್ನು ಟಿಕೊನಾಲ್ ಎಂದೂ ಕರೆಯುತ್ತಾರೆ.

ಕಬ್ಬಿಣದ ಪುಡಿಯಲ್ಲಿ ಇರುವ ರೇಣುಗಳ ಗಾತ್ರವನ್ನು ಒಂದು ನಿರ್ದಿಷ್ಟ ಗಾತ್ರಕ್ಕಿಂತ ಕಡಿಮೆ ಮಾಡಿ, ಅದರ ಅದರ ಜೊತೆಗೆ ಶೇ.30 ಕೊಬಾಲ್ಟನ್ನು ಸೇರಿಸಿ ಉತ್ತಮವಾದ ಶಾಶ್ವತ ಕಾಂತಗಳನ್ನು ತಯಾರಿಸುತ್ತಾರೆ. ಆದರೆ ಶಾಶ್ವತಕಾಂತ ರಚನೆಗೆ ಆಲ್ನಿಕೊ–5 ಸದ್ಯಕ್ಕೆ ಎಲ್ಲ ವಸ್ತುಗಳಿಗಿಂತಲೂ ಶ್ರೇಷ್ಠವಾಗಿದೆ.

**ಕಾಂತತ್ವದ ಸಿದ್ಧಾಂತ :** ಒಂದು ವಸ್ತುವಿನ ಕಾಂತತ್ವ ಅದರ ಅಣು ಅಥವಾ ಅದರ ಪರಮಾಣುವಿನ ಕಾಂತತ್ವಕ್ಕೆ ಸಂಬಂಧಿಸಿದೆ. ಆದ್ದರಿಂದ ಪರಮಾಣುವಿನ ಕಾಂತತ್ವವನ್ನು ತಿಳಿಯಬೇಕು.

**ಪರಮಾಣುವಿನಕಾಂತ ಭ್ರಮಣಾಂಕ :** ಧನವಿದ್ಯುತ್ ಉಳ್ಳ ಪರಮಾಣುವಿನ ನ್ಯೂಕ್ಲಿಯಸಿನ ಸುತ್ತಲೂ ವೃತ್ತಾಕಾರ ಅಥವಾ ದೀರ್ಘವೃತ್ತಾಕಾರ ಕಕ್ಷೆಗಳಲ್ಲಿ ಎಲೆಕ್ಟ್ರಾನುಗಳು ಪರಿಭ್ರಮಿಸುತ್ತ ಇರುತ್ತವೆ. ಇವುಗಳಿಗೆ ಸ್ವಂತಾಕ್ಷಗಳ ಸುತ್ತ ಆವರ್ತನ ಚಲನೆಯೂ ಇದೆ. ಎಲೆಕ್ಟ್ರಾನಿಗೆ ತನ್ನ ಕಕ್ಷೆಯಲ್ಲಿ ಇರುವ ಕೋನಸಂವೇಗ mrw. (ಇಲ್ಲಿ r ನ್ಯೂಕ್ಲಿಯಸಿನಿಂದ ಎಲೆಕ್ಟ್ರಾನಿನ ದೂರ ಮತ್ತು wಕೋನವೇಗ). ಎಲೆಕ್ಟ್ರಾನಿನ ಕಕ್ಷೆಯ ವಿಸ್ತೀರ್ಣ A ಆಗಿದ್ದು ಅದರ ಅವಧಿ (ಪೀರಿಯಡ್) t ಆಗಿದ್ದರೆ ಎಲೆಕ್ಟ್ರಾನಿನ ಕೋನಸಂವೇಗ 2Am/t.ಕಕ್ಷೆಯ ಒಂದು ಬಿಂದುವಿನ ಮೂಲಕ e/c ವಿದ್ಯುದಾವಿಷ್ಟವುಳ್ಳ (ಇಲ್ಲಿ (c=3x10 ಸೆಂಮೀ/ಸೆಕೆಂಡ್) ಎಲೆಕ್ಟ್ರಾನ್ ಒಂದು ಸೆಕೆಂಡಿನಲ್ಲಿ 1/t ಸಲ ಹಾಯುವುದರಿಂದ ಅದು ವಿದ್ಯುತ್ಪ್ರವಾಹ i=(e/tc)ಗೆ ಸಮ. ಇದು ವಿದ್ಯುತ್ಕಾಂತ ಏಕಮಾನದಲ್ಲಿ ಇದೆ. ಆದ್ದರಿಂದ ಅಂಪಿಯರನ ನಿಯಮದಂತೆ ಎಲೆಕ್ಟ್ರಾನ್ ಕಕ್ಷೆಯ ಕಾಂತ ಭ್ರಮಣಾಂಕ iA ಅಥವಾ eA/tc ಆಗುತ್ತದೆ. ಇದರಿಂದ ಎಲೆಕ್ಟ್ರಾನಿನ ಕಕ್ಷೆಯ

$$\frac{\text{ಕಾಂತ ಭ್ರಮಣಾಂಕ}}{\text{ಕೋನಸಂವೇಗ}} = \frac{e}{2mc}$$ ಆಗುತ್ತದೆ.

ನ್ಯೂಕ್ಲಿಯಸಿಗೆ ಅತಿಸಮೀಪ ಎಲೆಕ್ಟ್ರಾನ್ ಕಕ್ಷೆಗೆ *l*=0, ಎರಡನೆಯದಕ್ಕೆ *l*=1 ಎಂಬ ಕಕ್ಷೆಯ ಶಕಲ ಸಂಖ್ಯೆಗಳನ್ನು ಸೂಚಿಸಿದರೆ ಕಕ್ಷೆಯ ಕೋನಸಂವೇಗ lh/2 ಆಗುತ್ತದೆ. ಇದರಲ್ಲಿ h ಎನ್ನುವುದು ಪ್ಲಾಂಕಿನ ಸ್ಥಿರಾಂಕ. ಇದರ ಜೊತೆಗೆ ಎಲೆಕ್ಟ್ರಾನಿನ ಆವರ್ತನೆಯ ಸಂವೇಗ ½h/2 ಆಗುತ್ತದೆ.

ಒಂದೇ ಕಕ್ಷೆಯಲ್ಲಿ ಒಂದಕ್ಕಿಂತ ಹೆಚ್ಚು ಆದರೆ ನಿರ್ದಿಷ್ಟ ಮಿತಿ ಉಳ್ಳ ಎಲೆಕ್ಟ್ರಾನುಗಳು ಇರಬಹುದು. ಆಗ ಎಲ್ಲ ಎಲೆಕ್ಟ್ರಾನುಗಳ ಕಕ್ಷೆಯ ಕೋನಸಂವೇಗವನ್ನು ಒಟ್ಟುಗೂಡಿಸಿ ಮತ್ತು ಎಲ್ಲ ಎಲೆಕ್ಟ್ರಾನುಗಳ ಆವರ್ತನ ಸಂವೇಗಗಳನ್ನು ಒಟ್ಟುಗೂಡಿಸಿದರೆ ಆಗ ಅನುಕ್ರಮವಾಗಿ ಕಕ್ಷೆಯ ಒಟ್ಟು ಭ್ರಮಣಾಂಕ (L= lh/2) ಎಂದೂ ಒಟ್ಟು ಆವರ್ತನ ಭ್ರಮಣಾಂಕ (S=sh/2 ಎಂದೂ ಪಡೆಯುತ್ತೇವೆ. ಇವೆರಡರ ಸದಿಶ ಮೊತ್ತ j=jh/2 ಆಗುತ್ತದೆ. ಒಟ್ಟು ಕಾಂತ ಭ್ರಮಣಾಂಕ M ಎನ್ನುವುದು j ಯ ದಿಶೆಯಲ್ಲಿ ಇದ್ದು



ಚಿತ್ರ 14

$$\frac{M}{\text{J ದಿಶೆಯ ಕೋನಸಂವೇಗ}} = \frac{e}{2mc}$$

ಇದರಿಂದ L ಮತ್ತು S ಗಳ ದಿಶೆಯ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ

$$M = \frac{e}{4\pi mc}\{l\cos(L,J) + 2s\cos(S,J)\}$$ ಎಂದು ಲಭಿಸುತ್ತದೆ.

(L,J) ಮತ್ತು (S,J) ಇವು ಆಯಾ ಸದಿಶ ಪರಿಮಾಣಗಳ ನಡುವೆ ಇರುವ ಕೋನಗಳು. ಈ ಕೊಸೈನುಗಳ ಬೆಲೆಗಳನ್ನು ಉಪಯೋಗಿಸಿ ಸುಲಭರೂಪಕ್ಕೆ ತಂದರೆ

$$m = j\frac{eh}{4\pi mc}\{1 + \frac{j^2 + S^2 + l^2}{2j^2}\}$$ ಆಗುತ್ತದೆ. ಆದರೆ ಹೊಸ ಶಕಲ ಸಿದ್ಧಾಂತದ ಪ್ರಕಾರ

$$M = j\frac{eh}{4\pi mc}\{1 + \frac{j(j+1) + s(s+1) - l(l+1)}{2j(j+1)}\} \quad ......22$$

ಒಂದು ಎಲೆಕ್ಟ್ರಾನ್ ಕಕ್ಷೆಯಲ್ಲಿ ಇರಬೇಕಾದಷ್ಟು ಎಲೆಕ್ಟ್ರಾನುಗಳು ಇದ್ದು ಕಕ್ಷೆ ಸಂತೃಪ್ತವಾಗಿದ್ದರೆ J ಸೊನ್ನೆಯಾಗಿ ಅದರ ಜೊತೆಗೆ M ಕೂಡ ಸೊನ್ನೆಯಾಗುತ್ತದೆ. ಇಂಥ ಪರಮಾಣುಗಳು ಮತ್ತು ಅಯಾನುಗಳು ಪ್ರತಿಕಾಂತತ್ವವನ್ನು ಪ್ರದರ್ಶಿಸುತ್ತವೆ. ಎಲೆಕ್ಟ್ರಾನ್ ಕಕ್ಷೆಯಲ್ಲಿ ಇರಬೇಕಾದಷ್ಟು ಎಲೆಕ್ಟ್ರಾನುಗಳು ಇಲ್ಲದೆ ಅಸಂತೃಪ್ತವಾದಾಗ J ಮತ್ತು M ಗಳಿಗೆ ಒಂದು ಗೊತ್ತಾದ ಬೆಲೆ ಇರುವುದರಿಂದ ಅಂಥ ಪರಮಾಣುಗಳು ಮತ್ತು ಅಯಾನುಗಳು ಅನುಕಾಂತತ್ವವನ್ನೂ ಕೆಲವು ಸಂದರ್ಭಗಳಲ್ಲಿ ಫೆರ್ರೋಕಾಂತತ್ವವನ್ನೂ ಪಡೆಯುತ್ತವೆ.

**ಪ್ರತಿಕಾಂತತ್ವ ಸಿದ್ಧಾಂತದ ವಿವರಣೆ :** ಎಲೆಕ್ಟ್ರಾನುಗಳಿಂದ ಸಂತೃಪ್ತಿಗೊಂಡಿರುವ ಎಲೆಕ್ಟ್ರಾನು ಕಕ್ಷೆಗಳುಳ್ಳ ಪರಮಾಣುವಿನ ಕಾಂತಭ್ರಮಣಾಂಕ ಶೂನ್ಯವಾದಾಗ ಅಂಥ ಪರಮಾಣುಗಳಿಂದಲೇ ಮಾಡಲ್ಪಟ್ಟಿರುವ ವಸ್ತುವಿನಲ್ಲಿ ಪ್ರತಿಕಾಂತತ್ವ ಇರುತ್ತದೆ. ಇಂಥ ವಸ್ತುವಿನ ಮೇಲೆ ಕಾಂತೀಕರಣ ಬಲ Hನ್ನು ಪ್ರಯೋಗಿಸಿದರೆ ಎಲೆಕ್ಟ್ರಾನ್ ಕಕ್ಷೆಯೇ H ನ ದಿಶೆ ಅಕ್ಷವಾಗಿರುವಂತೆ ಅದರ ಸುತ್ತಲೂ ಪ್ರದಕ್ಷಿಣೆಯನ್ನು ಮಾಡುತ್ತದೆ. ಇದಕ್ಕೆ ಕಕ್ಷೆಯ ಅಯನಾಂಶ (ಪ್ರಿಸೆಷ್ಷನ್) ಎಂದು ಹೆಸರು. ಲಾರ್ಮಾರನ ಪ್ರಮೇಯದಂತೆ ಈ ಅಯನಾಂಶದ ಕೋನ ವೇಗ w=(–eH/2mc) ಆಗುತ್ತದೆ. ಇದರಿಂದ ಉದ್ಭವಿಸುವ ಕಾಂತ ಭ್ರಮಣಾಂಕ $\frac{em\bar{r}1^2\omega}{2mc} = -\frac{e^2H}{4mc^2}\bar{r}^{-2}$ ಇದರಲ್ಲಿ r1 ಅಯನ ಪಥದ ತ್ರಿಜ್ಯ ಮತ್ತು r12 ಅದರ ವರ್ಗದ ಮಧ್ಯಮ ಬೆಲೆ. ಎಲೆಕ್ಟ್ರಾನ್ ಕಕ್ಷೆಯಲ್ಲಿ ನ್ಯೂಕ್ಲಿಯಸಿನಿಂದ ಇರುವ ದೂರ r, ಅದರ ವರ್ಗದ ಮಧ್ಯಮ ಬೆಲೆ $\bar{r}2$ ಆಗಿದ್ದರೆ ಆಗ $\overline{r_1}^2 = \frac{2}{3}\bar{r_1}^2$. ಆದ್ದರಿಂದ ಪ್ರತಿ ಎಲೆಕ್ಟ್ರಾನಿಗೆ ಕಾಂತಭ್ರಮಣಾಂಕ $(-e2H\bar{r_1}2/6mc2)$ ಆಗಿ ಪರಮಾಣುವಿನ ಒಟ್ಟು ಕಾಂತ ಭ್ರಮಣಾಂಕ $-\frac{e2H}{6mc2}\sum_r \bar{}2$ ಆಗುತ್ತದೆ. ಒಂದು ಗ್ರಾಂ

ಅಣುವಿಗೆ ಕಾಂತಭ್ರಮಣಾಂಕ $-\frac{e^2 H}{6mc^2}\sum \bar{r}^{2}$ ಆಗಿ

$$xm = -\frac{Ne^2}{6mc^2}\sum \bar{r}^{2} - 2.832\times 10/10\sum \bar{r}^{2} \qquad .......32$$

ಎನ್ನುವುದು ಒಂದು ಗ್ರಾಂ ಅಣುವಿನ ಪ್ರತಿಕಾಂತತ್ವ ಗ್ರಾಹಕತೆ (ಗ್ರಾಂ ಮಾಲೆಕ್ಯುಲರ್ ಸಸೆಪ್ಟಿಬಿಲಿಟಿ) ಆಗುತ್ತದೆ. ಇದರಲ್ಲಿ N ಅವೊಗಾಡ್ರೊ ಸಂಖ್ಯೆ ಮತ್ತು $\sum \bar{r}^{2}$ ಎಲ್ಲ ಎಲೆಕ್ಟ್ರಾನುಗಳಿಗೂ ಸಂಬಂಧಿಸಿದ –r2 ರ ಮೊತ್ತ. $\sum \bar{r}^{2}$ ನ್ನು ಪ್ರತಿ ಎಲೆಕ್ಟ್ರಾನಿನ ಕಕ್ಷೆಯ ಶಕಲ ಸಂಖ್ಯೆ n ಮತ್ತು 1 ಗಳನ್ನೊಳಗೊಂಡಂತೆ ಲೆಕ್ಕಮಾಡಬಹುದು. ಸ್ಲೇಟರ್ ಎಂಬಾತನು ಈ ಬಗೆಯ ಲೆಕ್ಕಮಾಡಿ

$$x_A = -0.79\times 10^{-6}\sum \frac{(n'^2)(n'+\frac{1}{2})(n'+1)}{(Z-s)^2} \qquad ...........24$$

ಎಂದು ತೋರಿಸಿದ್ದಾನೆ. ಇಲ್ಲಿ xa ಒಂದು ಪರಮಾಣುವಿನ ಪ್ರತಿಕಾಂತತ್ವ ಗ್ರಾಹಕತೆ ; n'n ನ ಸಾರ್ಥಕ ಬೆಲೆ (ಎಫೆಕ್ಟಿವ್ ನಂಬರ್) ; Z ಪರಮಾಣು ಸಂಖ್ಯೆ ; (Z.s) ಸಾರ್ಥಕ ಪರಮಾಣು ಸಂಖ್ಯೆ (ಎಫೆಕ್ಟಿವ್ ಅಟಾಮಿಕ್ ನಂಬರ್). ಇದನ್ನು ಸಹ ಸ್ಲೇಟರನ ನಿಯಮದಿಂದ ಪಡೆಯಬಹುದು. ಬ್ರಿಂಡ್ಲೆ ಎಂಬಾತ ಈ ಸಮೀಕರಣದಿಂದ ಲೆಕ್ಕಮಾಡಿದ ಬೆಲೆಗಳು ಪ್ರಾಯೋಗಿಕ ಅಳತೆಗಳಿಂದ ಪಡೆದ ಬೆಲೆಗಳೊಡನೆ ಹೊಂದಿಕೊಳ್ಳುತ್ತವೆ. xaಯ ಬೆಲೆ ಕಾಂತೀಕರಣ ಬಲವನ್ನಾಗಲೀ ಉಷ್ಣತೆಯನ್ನಾಗಲೀ ಅವಲಂಬಿಸದೆ ಸ್ಥಿರವಾಗಿರುತ್ತದೆ.

**ಲಾಂಜೆವಿನ್ನನ ಅನುಕಾಂತತ್ವ ಸಿದ್ಧಾಂತ :** ಇದು ಅನುಕಾಂತ ಅನಿಲಕ್ಕೆ ಅನ್ವಯಿಸುತ್ತದೆ. ಅನಿಲದ ಪ್ರತಿಯೊಂದು ಅಣುವಿನ ಕಾಂತಭ್ರಮಣಾಂಕ μ ಆಗಿರಲಿ. ಅನಿಲದ ಅಣುಗಳ ನಿರಂತರ ಉಷ್ಣತಾಚಲನೆ ಮತ್ತು ಒಂದರೊಡನೆ ಇನ್ನೊಂದರ ಸಂಘಟನೆ ಇವುಗಳಿಂದ ಅನುಕಾಂತ ಭ್ರಮಣಾಂಕದ ಅಕ್ಷಗಳು ಹಲವಾರು ದಿಕ್ಕುಗಳಲ್ಲಿ ಸಮವಾಗಿ ಹಂಚಿಹೋಗುತ್ತವೆ. ಇದರಿಂದ ಯಾವ ದಿಕ್ಕಿನಲ್ಲಿಯೂ ಒಟ್ಟು ಕಾಂತೀಯತೆ ಕಂಡು ಬರುವುದಿಲ್ಲ. ಅನಿಲದ ಮೇಲೆ ಕಾಂತೀಕರಣ ಕ್ಷೇತ್ರ Hಅನ್ನು ಬೀರಿದರೆ ಅನುಕಾಂತ ಅಕ್ಷಗಳು Hನ ದಿಶೆಯನ್ನು ತಲುಪುವುದಕ್ಕೆ ಪ್ರಯತ್ನಿಸುತ್ತವೆ. ಆದರೆ ಉಷ್ಣತಾ ಚಲನೆಯಿಂದ ಕಾಂತಾಕ್ಷಗಳು ನಾನಾ ದಿಶೆಗಳಿಗೆ ಹರಡುತ್ತವೆ. ಈ ಎರಡು ಕಾರ್ಯಗಳ ನಡುವೆ ಬೋಲ್ಟ್ಜ್‌ಮನ್ ಪ್ರಮೇಯವನ್ನು ಅನ್ವಯಿಸಿ ಸಮಸ್ಥಿತಿಯನ್ನು ಪಡೆಯಬಹುದು. ಇದರ ಪ್ರಕಾರ ಒಂದು ಅಣು E ಶಕ್ತಿ ಪರಿಮಾಣವನ್ನು ಹೊಂದುವ ಸಂಭಾವ್ಯತೆ $T^O$ ನಿರಪೇಕ್ಷ ಉಷ್ಣತೆಯಲ್ಲಿ exp (–E/KT) ಆಗುತ್ತದೆ. ಅಂದರೆ ಈ ಶಕ್ತಿಯನ್ನು ಪಡೆದಿರುವ ಅಣುಗಳ ಸಂಖ್ಯೆ $dN_E$ ಎನ್ನುವುದು ಒಟ್ಟು ಸಂಖ್ಯೆ (N)ಗಳ ಒಂದು ಅಂಶ.

$$\frac{dN_E}{N} = A\exp(-E/KT)$$

ಆಗುತ್ತದೆ. ಇದರಲ್ಲಿ K ಬೋಲ್ಟ್ಜ್‌ಮನ್ ಸ್ಥಿರಾಂಕ. ಪ್ರತಿಯೊಂದು ಅಣುವಿನ ಕಾಂತಭ್ರಮಣಾಂಕ μ ಆಗಿ ಅದು ಪ್ರಯೋಗಿಸಿದ ಕಾಂತೀಕರಣ ಬಲ H ದಿಶೆಗೆ θ ಕೋನದಷ್ಟು ವಾಲಿದ್ದರೆ ಅದರ ವಿಭವಶಕ್ತಿ E=μH ಈ ಶಕ್ತಿ E ಮತ್ತು E+ dEಗಳ ನಡುವೆ ಇರುವ ಸಂಭಾವ್ಯತೆ. ಅಂದರೆ ಅಣುವಿನ ಕಾಂತಕ್ಷ θ ಮತ್ತು θ+dθ ಗಳ ಅಂತರದಲ್ಲಿ θ ಇರುವ ಸಂಭಾವ್ಯತೆ.

$$\frac{dN_E}{N} = A \quad e\frac{\mu H\cos\theta/KT}{.2\pi\ \sin\theta\ \ d\theta}$$

dNEಸಂಖ್ಯೆಯ ಅಣುಗಳಿಂದ H ದಿಶೆಯಲ್ಲಿ ಲಭಿಸುವ ಕಾಂತ ಭ್ರಮಣಾಂಕ

$$dN_E\times\mu\cos\theta = 2\pi NAe^{\mu H\ \cos\theta/KT}\mu\cos\theta\sin\theta\, d\theta$$

ಈಗ μ ಎನ್ನುವುದು ಒಂದು ಅಣುವಿನ ಸರಾಸರಿ ಕಾಂತಭ್ರಮಣಾಂಕ ಆಗಿದ್ದರೆ ( ಮೀನ್ ಮ್ಯಾಗ್ನೆಟಿಕ್ ಮೊಮೆಂಟ್)

$$\mu = \frac{2\pi NA\mu\int_o^\pi \exp(\mu H\cos\theta/KT)\sin\theta\cos\theta\, d\theta}{2\pi\ NA\int_o^\pi \exp(\mu H\cos\theta/KT)\sin\theta\, d\theta}$$

$$\frac{\mu}{\mu} = \frac{\int_o^\pi \exp(\mu H\cos\ \theta/KT)\sin\theta\cos\theta\ \ d\theta}{\int_o^\pi \exp(\mu H\cos\theta/KT)\sin\theta\, d\theta}$$

ಒಂದು ಗ್ರಾಂ ಅಣು ಅನಿಲದ ಕಾಂತ ಭ್ರಮಣಾಂಕ M ಆಗಿ ಸಂತೃಪ್ತ ಕಾಂತ ಭ್ರಮಣಾಂಕ M0 ಆಗಿದ್ದರೆ ಆಗ H ಮತ್ತು T ಗಳಲ್ಲಿ

$$\frac{M}{M_o} = \frac{\mu}{\mu}$$

ಆಗುತ್ತದೆ. μH/KT ಯನ್ನು x ಎನ್ನುವುದರಿಂದಲೂ cos ಎನ್ನುವುದನ್ನು ξ ಅನ್ನುವುದರಿಂದಲೂ ಸೂಚಿಸಿದರೆ

$$\frac{M}{M_o} = \frac{\int_{-1}^{1} e^{x\xi}\xi.d\xi}{\int_{-1}^{1} e^{x\xi}\xi d} = \frac{e^{x}+e^{-x}}{e^{x}-e^{-x}} - \frac{1}{x}$$

$$= \coth x - \frac{1}{x} = \frac{x}{3} - \frac{x^3}{45} + \frac{2x^5}{945} \qquad ....25$$

M/M0 ಯನ್ನು x=μH/KT ಗೆ ಎದುರಾಗಿ ಗುರ್ತಿಸಿದರೆ ಚಿತ್ರ (16) ರಲ್ಲಿ ತೋರಿಸಿರುವ ನಕ್ಷೆ ಲಭಿಸುತ್ತದೆ. ಸಾಧಾರಣ ಉಷ್ಣತೆಗಳಲ್ಲಿ ಮತ್ತು ನಾವು ಪ್ರಯೋಗಿಸಲು ಸಾಧ್ಯವಾಗುವ ಕಾಂತೀಕರಣ ಬಲ H ಗಳಲ್ಲಿ ಬಲಗಡೆ ಇರುವ ಮೊದಲನೆಯ ಪದವನ್ನು




ಚಿತ್ರ 15

ಮಾತ್ರ ಉಳಿಸಿಕೊಂಡರೆ ಸಾಕು. ಇದರಿಂದ $\frac{M}{M_o} = \frac{x}{3} = \frac{\mu H}{3KT}$ ಆಗುತ್ತದೆ. N ಅವೊಗಾಡ್ರೊ ಸಂಖ್ಯೆಯಾದರೆ Nμ=Mo ಮತ್ತು NK=R=1 ಗ್ರಾಂ ಅಣು ಅನಿಲದ ಸಂಖ್ಯೆ (ಗ್ಯಾಸ್ ಕಾನ್ಸ್‌ಟೆಂಟ್ ಪರ್ ಮಾಲಿಕ್ಯುಲರ್ ಗ್ರಾಂ). ಆದ್ದರಿಂದ

$$\frac{M}{M_o} = \frac{M_o H}{3RT}$$

$X_M$ =M/H ಎನ್ನುವುದು ಒಂದು ಗ್ರಾಂ ಅಣುವಿನ ಅನುಕಾಂತಗ್ರಾಹಕತೆ. ಆಗ

$$XM = M_o^2 / 3RT$$

ಅಂದರೆ $X_M T = \frac{M_0^2}{3R}$ = ಸ್ಥಿರಾಂಕ C

ಇದು ಕ್ಯೂರಿ ನಿಯಮ. ಕ್ಯೂರಿ ಇದನ್ನು ಪ್ರಾಯೋಗಿಕವಾಗಿ ಸಾಧಿಸಿದ. C ಯನ್ನು ಕಂಡುಹಿಡಿದರೆ Mo ಯನ್ನು ಲೆಕ್ಕಮಾಡಬಹುದು.

**ಪ್ರತಿಫೆರ್ರೋಕಾಂತತ್ವ (ಆಂಟಿಫೆರ್ರೋಮ್ಯಾಗ್ನಟಿಸಂ) :** ಕೆಲವು ವಸ್ತುಗಳು ಸ್ವಲ್ಪಪರಿಮಾಣದ ಅನುಕಾಂತಗ್ರಾಹಕತೆಯನ್ನು ಪಡೆದಿದ್ದರೂ ಇದು ಉಷ್ಣತೆಯ ಏರಿಕೆಯೊಡನೆ ಹೆಚ್ಚುತ್ತ ಹೋಗುವುದರಿಂದ ಮಿಕ್ಕ ಅನುಕಾಂತವಸ್ತುಗಳಿಗಿಂತ ಭಿನ್ನಗುಣ ಉಳ್ಳವಾಗಿವೆ. ನೀಲ್




ಚಿತ್ರ 16




ಚಿತ್ರ 17

ಕ್ಯೂರಿನಿಯಮ

$x = \frac{C}{T-\theta}$ ಕ್ಯೂರಿ–ವೀಯ್ಸ್ ನಿಯಮ

$\theta = ClH$

$x = \frac{C}{T}$




$$x = \frac{C}{T+\theta}(T > Tc)$$

ಉಷ್ಣತೆ ಅಥವಾ ಲ್ಯಾಂಬ್ಡಾ ಬಿಂದು ಎಂದು ಹೆಸರಿರುವ ಅವಧಿಕ ಉಷ್ಣತೆಯನ್ನು (ಕ್ರಿಟಿಕಲ್ ಟೆಂಪರೇಚರ್) ತಲುಪುವವರೆಗೆ ಈ ವಸ್ತುಗಳ ಅನುಕಾಂತ ಗ್ರಾಹಕತೆಯೂ ಏರುತ್ತ ಹೋಗಿ ಅನಂತರ ಮಿಕ್ಕ ಅನುಕಾಂತ ವಸ್ತುಗಳಂತೆಯೇ ಇವುಗಳ ಅನುಕಾಂತ ಗ್ರಾಹಕತೆ ಉಷ್ಣತೆ ಏರಿದಂತೆ ತಗ್ಗುತ್ತ ಹೋಗುತ್ತದೆ (ಚಿತ್ರ 17). ಈ ವಸ್ತುಗಳ ಗ್ರಾಹ್ಯೋಷ್ಣಗಳು (ಸ್ಪೆಸಿಫಿಕ್ ಹೀಟ್ಸ್) ಸಹ ಈ ಅವಧಿಕ ಉಷ್ಣತೆಯಲ್ಲಿ ಬದಲಾವಣೆ ಹೊಂದುತ್ತವೆ. ಮ್ಯಾಂಗನೀಸ್ ಆಕ್ಸೈಡ್ (MnO), ಮ್ಯಾಂಗನೀಸ್ ಸಲ್ಫೈಡ್ (MnS), ಫೆರ್ರಸ್ ಆಕ್ಸೈಡ್ (FeO), ಫೆರಿಕ್ ಆಕ್ಸೈಡ್ (Fe2O3), ಕೊಬಾಲ್ಟ್ ಆಕ್ಸೈಡ್ (CoO), ನಿಕಲ್ ಆಕ್ಸೈಡ್ (NiO) ಇವು ಪ್ರತಿಫೆರ್ರೋಕಾಂತತ್ವವನ್ನು ಪ್ರದರ್ಶಿಸುವ ವಸ್ತುಗಳಿಗೆ ಕೆಲವು ಉದಾಹರಣೆಗಳು.

ಈ ಬಗೆಯ ವರ್ತನೆಗೆ ಈ ವಸ್ತುಗಳ ಲೋಹ ಅಯಾನುಗಳು ಅಪೂರ್ಣ ಎಲೆಕ್ಟ್ರಾನು ಕಕ್ಷೆಗಳನ್ನು ಪಡೆದಿರುವುದೇ ಕಾರಣ. ಲೋಹದ ಅಯಾನುಗಳಿರುವ ಸ್ಫಟಿಕ




ಚಿತ್ರ 18

ಜಾಲಗಳು ಈ ವಸ್ತುಗಳಲ್ಲಿ A ಮತ್ತು B ಗಳಿಂದ ಸೂಚಿಸಬಹುದಾದ ಎರಡು ಬಗೆಗಳಾಗಿದ್ದು ಒಂದರೊಳಗೆ ಇನ್ನೊಂದು ಹೊಕ್ಕಿರುತ್ತವೆ. A ಜಾಲದ ಲೋಹದ ಅಯಾನು ಮತ್ತು B ಜಾಲದ ಅಯಾನುಗಳು ಪರಸ್ಪರ ಹತ್ತಿರವಾಗಿರುತ್ತವೆ. ಆಗ ಇವುಗಳ ನಡುವೆ ಶಕಲ ಯಾಂತ್ರಿಕ ವಿನಿಮಯ ಸಮಾಸಕಲನ ಋಣಾತ್ಮಕ ಬೆಲೆಯನ್ನು ಪಡೆಯುವುದರಿಂದ A ಮೇಲಿನ ಕಾಂತ ಭ್ರಮಣಾಂಕಗಳು B ಮೇಲಿನ ಕಾಂತ ಭ್ರಮಣಾಂಕಗಳಿಗೆ ವಿರುದ್ಧ ದಿಶೆಯಲ್ಲಿ ಚಿತ್ರ (18) ರಲ್ಲಿ ತೋರಿಸಿದಂತೆ ಇರುತ್ತವೆ.

ಆದ್ದರಿಂದ ಒಂದು ಪ್ರಭಾವ ಪ್ರದೇಶದಲ್ಲಿ ನಿವ್ವಳಕಾಂತತ್ವ ಶೂನ್ಯವಾಗುತ್ತದೆ. ಉಷ್ಣತೆ ಹೆಚ್ಚಿದಂತೆ ಶಕಲ ವಿನಿಮಯ ಬಲ ದುರ್ಬಲಗೊಳ್ಳುತ್ತದೆ. ಇದರಿಂದ ಪರಮಾಣು ಕಾಂತಭ್ರಮಣಾಂಕಗಳನ್ನು ಹೆಚ್ಚು ಹೆಚ್ಚಾಗಿ ಪ್ರಯೋಗಿಸಿದ ಕಾಂತೀಕರಣ ಬಲದ ದಿಶೆಗೆ ತಿರುಗಿಸುವುದು ಸಾಧ್ಯವಾಗುವುದರಿಂದ ಕಾಂತೀಕರಣ ಗ್ರಾಹಕತೆ ಹೆಚ್ಚುತ್ತದೆ. ಲ್ಯಾಂಬ್ಡಾ ಬಿಂದುವಿನಲ್ಲಿ ಶಕಲ ವಿನಿಮಯಬಲ ಶೂನ್ಯವಾಗುತ್ತದೆ. ಅನಂತರ ಕಾಂತಭ್ರಮಣಾಂಕಗಳು ಕಾಂತೀಯಬಲದ ದಿಶೆಗೆ ತಿರುಗುವುದಕ್ಕೆ ಇರುವ ಪ್ರತಿಬಂಧಕ, ಉಷ್ಣತೆಯಿಂದ ಉಂಟಾಗುವ ಚಲನೆ (ಥರ್ಮಲ್ ಅಜಿಟೇಶನ್) ಮಾತ್ರ ಆಗಿರುತ್ತದೆ. ಆದ್ದರಿಂದ ಲ್ಯಾಂಬ್ಡಾ ಬಿಂದುವಿಗೆ ಮೀರಿದ ಉಷ್ಣತೆಯಲ್ಲಿ ಈ ವಸ್ತುಗಳು ಮಿಕ್ಕ ಅನುಕಾಂತ ವಸ್ತುಗಳಂತೆಯೇ ವರ್ತಿಸುತ್ತವೆ. *(ಎಚ್.ಎಸ್.ವಿ.)*

**ಕಾಂತ ದೃಕ್‌ಶಾಸ್ತ್ರ :** ಗದೃಕ್ ವಿದ್ಯಮಾನಗಳ ಮೇಲೆ ಕಾಂತ ಕ್ಷೇತ್ರದ ಪ್ರಭಾವವನ್ನು ಪರಿಶೀಲಿಸುವ ಭೌತವಿಜ್ಞಾನದ ವಿಭಾಗ (ಮ್ಯಾಗ್ನೆಟೊ ಆಪ್ಟಿಕ್ಸ್). ಬೆಳಕು ವಿದ್ಯುತ್‌ಕಾಂತ ವಿಕಿರಣವಾಗಿರುವ ಅಂಶವನ್ನು ಜ್ಞಾಪಿಸಿಕೊಂಡರೆ ಬೆಳಕು ಮತ್ತು ಕಾಂತ ಕ್ಷೇತ್ರಗಳ ನಡುವೆ ಅಂತರಕ್ರಿಯೆ (ಇಂಟರ‍್ಯಾಕ್ಷನ್) ಸಂಭವಿಸುವುದು ಸಾಧ್ಯವೆಂದು ತೋರುತ್ತದೆ. ಆದರೂ ಕಾಂತಕ್ಷೇತ್ರ ಮತ್ತು ಬೆಳಕು ಇವೆರಡರ ನೇರ ಪ್ರತಿಕ್ರಿಯೆಯಿಂದ ಕಾಂತದೃಕ್‌ಪರಿಣಾಮಗಳು ಉಂಟಾಗುವುದಿಲ್ಲ. ಆದರೆ ಬೆಳಕನ್ನು ಉತ್ಸರ್ಜಿಸುವ ಅಥವಾ ಅವಶೋಷಿಸುವ ಪ್ರಕ್ರಿಯೆಯಲ್ಲಿರುವ ವಸ್ತುವಿನ ಮೇಲೆ ಕಾಂತಕ್ಷೇತ್ರದ ಸ್ವಭಾವವೇ ಈ ಪರಿಣಾಮಗಳಿಗೆ ಕಾರಣ.

**ಜೀಮಾನ್ ಪರಿಣಾಮ:** ರೇಖಾರೋಹಿತವನ್ನು ಉತ್ಸರ್ಜಿಸುವ ಆಕರವನ್ನು ಪ್ರಬಲ ಕಾಂತಕ್ಷೇತ್ರದಲ್ಲಿಟ್ಟಾಗ ಒಂಟಿ ರೇಖೆಗಳು ಸನ್ನಿಕಟ ರೇಖಾ ಸಮೂಹಗಳಾಗಿ ಸೀಳಲ್ಪಡುವ ವಿದ್ಯಮಾನ. ಇದೇ ಜೀಮಾನ್ ಪರಿಣಾಮ. ಪ್ರತಿ ಲೋಮ (ಇನ್ವರ್ಸ್) ಜೀಮಾನ್ ಪರಿಣಾಮದಲ್ಲಿ ಅವಶೋಷಿಸುವ ವಸ್ತುವನ್ನು ಕಾಂತಕ್ಷೇತ್ರದಲ್ಲಿಟ್ಟಾಗ ಅವಶೋಷಿತ ರೇಖೆಗಳು ಸೀಳುತ್ತವೆ. ಅತ್ಯಲ್ಪ ಅಂತರದ ಮಟ್ಟಗಳಿಂದ ಉತ್ಪನ್ನವಾಗುವ ರೋಹಿತ ರೇಖೆಗಳಿಗೆ ಜೀಮಾನ್ ಪರಿಣಾಮವನ್ನು ಪ್ಯಾಷನ್–ಬ್ಯಾಕ್ ಪರಿಣಾಮ ಎಂದು ಕರೆಯುತ್ತಾರೆ. ಹೆಚ್ಚು ಕಡಿಮೆ ಎಲ್ಲ ಕಾಂತ ದೃಕ್ ಪರಿಣಾಮಗಳಿಗೆ ವಿವರಣೆ ಜೀಮಾನ್ ಪರಿಣಾಮದ ಮೇಲೆಯೇ ಆಧಾರಿತವಾಗಿದೆ. ಆದ್ದರಿಂದ ಜೀಮಾನ್ ಪರಿಣಾಮವನ್ನು ಕಾಂತದೃಕ್ ಪರಿಣಾಮಗಳಿಗೆಲ್ಲ ಮೂಲವೆಂದು ಪರಿಗಣಿಸಬಹುದು. ಇದರಿಂದ ಪರಮಾಣುವಿನ ರಚನೆ ಕುರಿತ ಮಾಹಿತಿಯನ್ನು ನಿಗಮಿಸಬಹುದು.

**ಫ್ಯಾರಡೇ ಪರಿಣಾಮ :** ಪ್ರಬಲ ಕಾಂತಕ್ಷೇತ್ರದಲ್ಲಿಟ್ಟಿರುವ ಸಮದೈಶಿಕ ಪಾರಕ ಮಾಧ್ಯಮದ ಮೂಲಕ ಸಮತಲ ಧ್ರುವೀಕೃತ (ಪ್ಲೇನ್ ಪೋಲರೈಸ್ಡ್ ಲೈಟ್) ಬೆಳಕನ್ನು ಕಾಂತಕ್ಷೇತ್ರ ಘಟಕದ ದಿಶೆಯಲ್ಲಿ ಹರಿಸಿದಾಗ ಧ್ರುವೀಕರಣ ತಲದಲ್ಲಿ ಕಂಡುಬರುವ ಆವರ್ತನೆಗೆ ಫ್ಯಾರಡೇ ಪರಿಣಾಮವೆಂದು ಹೆಸರು. ಬೆಳಕು ಚಲಿಸಿದ ದೂರ $l$, ಸಂಚರಣ ದಿಶೆಯಲ್ಲಿ ಕ್ಷೇತ್ರದ ಸಾಮರ್ಥ್ಯ $H$, ಮತ್ತು ಆವರ್ತನ ಕೋನ $\theta$ ಆಗಿದ್ದರೆ, ಆಗ ಇಲ್ಲಿ ಗೆ ವರ್ಡೆಟ್ ಸ್ಥಿರಾಂಕವೆಂದು ಹೆಸರು.

**ವಾಯಿಗ್ಟ್ ಪರಿಣಾಮ :** ಕಾಂತಕ್ಷೇತ್ರದಲ್ಲಿ ಅಸಮವರ್ತಿ (ಅನ್–ಐಸೋಟ್ರೋಪಿಕ್) ವಸ್ತುವನ್ನು ಇಟ್ಟರೆ ಅದು ದ್ವಿವಕ್ರೀಕಾರಕ (ಬೈರೆಫ್ರಿಂಜೆಂಟ್) ಆಗುವುದು. ಅದರ ದೃಕ್ ಗುಣಧರ್ಮಗಳು ಏಕಾಕ್ಷೀಯ ಹರಳಿನ ಗುಣಗಳಿಗೆ ಸಮರೂಪವಾಗಿರುತ್ತವೆ. ಕಾಂತಕ್ಷೇತ್ರಕ್ಕೆ ಸಮಾಂತರದಲ್ಲಿ ವೀಕ್ಷಣೆಗಳನ್ನು ಮಾಡಿದರೆ ಫ್ಯಾರಡೆ ಪರಿಣಾಮವನ್ನು ನೋಡಬಹುದು. ಕಾಂತರೇಖೆಗಳಿಗೆ ಲಂಬವಾಗಿ ನೋಡಿದಾಗ ಕಾಣುವ ಅಡ್ಡಕಾಂತೀಯ ದ್ವಿವಕ್ರೀಕಾರಕ ಪರಿಣಾಮಕ್ಕೆ ವಾಯಿಗ್ಟ್ ಪರಿಣಾಮವೆಂದು ಹೆಸರು. ಒಳಹೊಕ್ಕ ಬೆಳಕಿನ ಕಿರಣವನ್ನು ಎರಡಾಗಿ ಒಡೆದು ಬೇರೆ ಬೇರೆ ಕೋನಗಳಲ್ಲಿ ವಕ್ರೀಭವನಗೊಳ್ಳುವಂತೆ ಮಾಡಬಲ್ಲ ಪ್ರಕ್ರಿಯೆಗೆ ದ್ವಿವಕ್ರೀಭವನವೆಂದು ಹೆಸರು.

**ಕಾಟನ್–ಮೂಟಾನ್ ಪರಿಣಾಮ :** ದ್ರವವನ್ನು ಅಡ್ಡಕಾಂತಕ್ಷೇತ್ರದಲ್ಲಿಟ್ಟಾಗ (ಟ್ರಾನ್ಸ್‌ವರ್ಸ್ ಮ್ಯಾಗ್ನೆಟಿಕ್ ಫೀಲ್ಡ್) ಬೆಳಕಿನ ದ್ವಿ–ವಕ್ರೀಭವನಕ್ಕೆ ಈ ಪರಿಣಾಮ ಸಂಬಂಧಪಟ್ಟಿದೆ. ತೊಡಕಾದ ಅಣುರಚನೆಯುಳ್ಳ ದ್ರವಗಳಲ್ಲಿ ಇದನ್ನು ನೋಡಬಹುದು. ಪರಮಾಣು ದೃಕ್‌ಅಸಮವರ್ತಿಯಾಗಿದ್ದರೆ ದ್ರವವೂ ಅಸಮವರ್ತಿಯಾ ವಕ್ರೀಭವನವನ್ನು ದ್ವಿ–ವಕ್ರೀಭವನವನ್ನು ಪ್ರದರ್ಶಿಸುತ್ತದೆ. ನೈಟ್ರೋಬೆಂಜೀನ್ ಮತ್ತು ಆರೋಮ್ಯಾಟಿಕ್ ಸಂಯುಕ್ತ ವಸ್ತುಗಳಲ್ಲಿ ಈ ಪರಿಣಾಮವನ್ನು ವೀಕ್ಷಿಸಬಹುದು.

**ಕಾಂತ–ದೃಕ್ ಕೆರ್ ಪರಿಣಾಮ :** ಲೋಹ–ಕಾಂತೀಯ ವಸ್ತುವನ್ನು ಕಾಂತವಾಗುವಂತೆ ಮಾಡಿದಾಗ ಅದರ ದೃಕ್ ಗುಣಧರ್ಮಗಳು ವ್ಯತ್ಯಾಸವಾಗುತ್ತವೆ.

ವಿದ್ಯುಕ್ಷೇತ್ರದ ವರ್ಗಕ್ಕೆ ಅನುಪಾತೀಯವಾಗಿರುವ ವಿದ್ಯುತ್ಪ್ರೇರಿತ ದ್ವಿ–ವಕ್ರೀಭವನಕ್ಕೆ ಕೆರ್ ಪರಿಣಾಮವೆನ್ನುತ್ತಾರೆ. ಒಂದು ಲಾಕ್ಷಣಿಕ ಪರಿಸ್ಥಿತಿಯಲ್ಲಿ ಲೋಹೀಯ ಪರಾವರ್ತನದ ಸಾಮಾನ್ಯ ನಿಯಮಗಳ ಪ್ರಕಾರ ಸಮತಲ–ಧ್ರುವೀಕರಣದ ಬೆಳಕು ಉತ್ಪನ್ನವಾಗಬೇಕು ; ಇದಕ್ಕೆ ಪ್ರತಿಯಾಗಿ ದೀರ್ಘವೃತ್ತ ಧ್ರುವೀಕರಣದ ಬೆಳಕು ಕಾಣಬರುತ್ತದೆ. ಜಾನ್ ಕೆರ್ (1824–1907) ಇದನ್ನು 1875ರಲ್ಲಿ ಆವಿಷ್ಕರಿಸಿದನು.

**ಮೇಜರಾನ ಪರಿಣಾಮ :** ಕಲಿಲ (ಕೊಲ್ಲಾಯ್ಡಲ್) ದ್ರಾವಣಗಳಲ್ಲಿನ ದೃಕ್ ವಿಷಮದೈಶಿಕ ವಿಷಯಕ್ಕೆ ಈ ಪರಿಣಾಮ ಸಂಬಂಧಿಸಿದೆ. ಕಾಂತಕ್ಷೇತ್ರದಲ್ಲಿ ಕಣಗಳ ದೃಕ್‌ವಿನ್ಯಾಸದಿಂದ ಬಹುಶಃ ಈ ಪರಿಣಾಮ ಸಂಭವಿಸಿರಬಹುದು.

ಸೂಕ್ಷ್ಮತರಂಗ ರೋಹಿತ ವಿಜ್ಞಾನದಲ್ಲಿ ಕಾಂತ–ದೃಕ್ ಪರಿಣಾಮಗಳು ಹೆಚ್ಚು ಹೆಚ್ಚು ಮುಖ್ಯಪಾತ್ರವನ್ನು ವಹಿಸುತ್ತವೆ ; ಇಲ್ಲಿ ಒಂಟಿ ಮಟ್ಟದ ಜೀಮಾನ್ ಘಟಕಗಳ ನಡುವೆ ಸಂಕ್ರಮಗಳನ್ನು ನೇರವಾಗಿ ವೀಕ್ಷಿಸಬಹುದು. *(ಎ.ಸಿ.)*

**ಕಾಂತಪ್ರವರ್ಧಕ :** ಪರ್ಯಾಪ್ತಶೀಲ (ಸ್ಯಾಚುರೇಬಲ್) ರಿಯಾಕ್ಟರುಗಳನ್ನು ಪ್ರತ್ಯೇಕವಾಗಿ ಅಥವಾ ಇತರ ಮಂಡಲ ಧಾತುಗಳೊಂದಿಗೆ (ಸರ್ಕ್ಯೂಟ್ ಎಲಿಮೆಂಟ್ಸ್) ಉಪಯೋಗಿಸಿಕೊಂಡು ಪ್ರವರ್ಧನೆಯನ್ನು (ಆಂಪ್ಲಿಫಿಕೇಶನ್) ಪಡೆಯಲು ಬಳಸುವ ಸಾಧನ ಮ್ಯಾಗ್ನೆಟಿಕ್ ಆಂಪ್ಲಿಫೆಯರ್. ಚಿತ್ರ 1 ರಲ್ಲಿ ತೋರಿಸಿರುವ ಮಂಡಲದಲ್ಲಿ A ಒಂದು ಕಾಂತ ವಸ್ತುವಿನಿಂದ ತಯಾರಿಸಲಾಗಿರುವ ದಿಂಡು (ಕೋರ್).




ಚಿತ್ರ 1

ಇದಕ್ಕೆ ಎರಡು ಸುರುಳಿಗಳನ್ನು ಸುತ್ತಿದೆ. ಸುರುಳಿ 2 ಮತ್ತು ಹೊರೆಪ್ರತಿರೋಧತ್ವ $R_L$ (ಲೋಡ್‌ರೆಸಿಸ್ಟೆನ್ಸ್) ಮೂಲಕ ಪರ್ಯಾಯ ವಿದ್ಯುತ್ಪ್ರವಾಹ $I_L$ನ್ನು ಪರ್ಯಾಯ




ಚಿತ್ರ 2

ಮೂಲ $E_S$ ನ ಸಹಾಯದಿಂದ ಹರಿಸಲಾಗುತ್ತಿದೆ. ಈಗ ಸುರುಳಿ 2 ಒಂದು ಪ್ರೇರಕತ್ವವಾಗಿ (ಇಂಡಕ್ಟೆನ್ಸ್) ವರ್ತಿಸುತ್ತದೆ. ಈಗ ಸುರುಳಿ 1ರಲ್ಲಿನ ನೇರ ವಿದ್ಯುತ್ಪ್ರವಾಹ IC ಯನ್ನು (ಇದನ್ನು ನಿಯಂತ್ರಣ ವಿದ್ಯುತ್ಪ್ರವಾಹವೆನ್ನುತ್ತಾರೆ) ವ್ಯತ್ಯಾಸ ಮಾಡಿದರೆ ಅದು A ದಿಂಡಿನ ಕಾಂತಸ್ಥಿತಿಯಲ್ಲಿ ವ್ಯತ್ಯಾಸ ಮಾಡುತ್ತದೆ. ಆದ್ದರಿಂದ ಸುರುಳಿ 2ರ ಪ್ರೇರಕತ್ವ ವ್ಯತ್ಯಾಸವಾಗುತ್ತದೆ. ಆದ್ದರಿಂದ IL ವ್ಯತ್ಯಾಸವಾಗುತ್ತದೆ. IL ಮತ್ತು IC ಗಳಿಗೆ ರೇಖೀಯ ಸಂಬಂಧ (ಲೀನಿಯರ್ ರಿಲೇಷನ್‌ಶಿಪ್) ಇಲ್ಲದಿದ್ದರೂ ಸ್ವಲ್ಪ IC ವ್ಯತ್ಯಾಸ ಜಾಸ್ತಿ IL ವ್ಯತ್ಯಾಸವನ್ನುಂಟುಮಾಡುತ್ತದೆಂದು ತೋರಿಸಬಹುದು. ಅಂದರೆ ವಿದ್ಯುತ್ಪ್ರವಾಹದ ವರ್ಧನೆಯಾಯಿತು. ಚಿತ್ರ 1ರಲ್ಲಿ ತೋರಿಸಿರುವ ಮಂಡಲದ ಹೆಸರು ಪರ್ಯಾಪ್ತಶೀಲ (ಸ್ಯಾಚುರೇಬಲ್) ರಿಯಾಕ್ಟರ್. ಇದಕ್ಕೆ ಕಾಂತಪ್ರವರ್ಧಕವೆಂದು ಸಹ ಹೆಸರಿದೆ.

ಚಿತ್ರ 1ರ ಮಂಡಲದಲ್ಲಿರುವ ತೊಂದರೆಯೆಂದರೆ ಸುರುಳಿ 2ರಲ್ಲಿ ಉಂಟಾಗುವ ವಿದ್ಯುತ್ಪ್ರವಾಹ ವ್ಯತ್ಯಾಸ ಸುರುಳಿ 1ರಲ್ಲಿ (ಅಂದರೆ ನಿಯಂತ್ರಣ ಮಂಡಲದಲ್ಲಿ) ವಿದ್ಯುತ್ತನ್ನು




ಚಿತ್ರ 3(a)

ಪ್ರೇರಿಸುತ್ತದೆ. ಇದರಿಂದ ನಿಯಂತ್ರಣ ಮಂಡಲದಲ್ಲಿ ಶಕ್ತಿ ವ್ಯಯವಾಗುತ್ತದೆ. ಈ ತೊಂದರೆಯನ್ನು ತಪ್ಪಿಸಲು ಸಾಮಾನ್ಯವಾಗಿ ಎರಡು ಪರ್ಯಾಪ್ತಶೀಲ ರಿಯಾಕ್ಟರುಗಳನ್ನು ಉಪಯೋಗಿಸುತ್ತಾರೆ. ಇಲ್ಲಿ ಎರಡು ದಿಂಡುಗಳ ನಿಯಂತ್ರಣ ಸುರುಳಿಗಳನ್ನು ವಿರೋಧವಾಗಿ ಸಂಬಂಧಿಸಿರುವುದನ್ನು ಗಮನಿಸಬಹುದು. ಇದರಿಂದಾಗಿ ನಿಯಂತ್ರಣ ಸುರುಳಿಯಲ್ಲಿ ಉಂಟಾಗುವ ನಿವ್ವಳ ಪ್ರೇರಣ ವಿದ್ಯುತ್ತು ಸೊನ್ನೆಯಾಗುತ್ತದೆ.

ಅನೇಕ ರೀತಿಯ ಕಾಂತಪ್ರವರ್ಧಕ ಮಂಡಲಗಳುಂಟು. ಇವೆಲ್ಲವುಗಳಲ್ಲೂ ಪರ್ಯಾಪ್ತಶೀಲ ರಿಯಾಕ್ಟರುಗಳನ್ನೇ ಉಪಯೋಗಿಸುತ್ತಾರೆ. ಇವುಗಳ ದಿಂಡನ್ನು ಸಾಮಾನ್ಯವಾಗಿ ಡೆಲ್ಟಾಮ್ಯಾಕ್ಸ್ ಎಂಬ ವಸ್ತುವಿನಿಂದ ತಯಾರಿಸಿರುತ್ತಾರೆ. ಡೆಲ್ಟಾ ಮ್ಯಾಕ್ಸ್




ಚಿತ್ರ 3 (b)

ಹೆಚ್ಚು ವ್ಯಾಪ್ಯತೆ ಮತ್ತು ಸುಮಾರು ಆಯಾಕಾರದ ಜಡತ್ವರೇಖೆ (ಹಿಸ್ಟರಿಸಿಸ್ ಕರ್ವ್) ಉಳ್ಳದ್ದಾಗಿದೆ. ಚಿತ್ರ 3ರಲ್ಲಿ ಎರಡು ಕಾಂತಪ್ರವರ್ಧಕ ಮಂಡಲಗಳನ್ನು ತೋರಿಸಿದೆ. ಚಿತ್ರ 3(a)ರಲ್ಲಿ ತೋರಿಸಿರುವ ದ್ವಿಧ್ರುವ ಬ್ರಿಜ್‌ಮಂಡಲ (ಡೈಯೋಡ್ ಬ್ರಿಜ್ ಸರ್ಕ್ಯೂಟ್) ಪರ್ಯಾಯ ವಿದ್ಯುತ್ತನ್ನು (ಎ.ಸಿ.) ನೇರವಿದ್ಯುತ್ತಾಗಿ (ಡಿ.ಸಿ.) ಮಾರ್ಪಡಿಸುತ್ತದೆ. ಚಿತ್ರ 3(b) ಯಲ್ಲಿನ ಎರಡು ಮಂಡಲಗಳು ಸಮಾಂತರವಾಗಿ ಕೆಲಸ ಮಾಡುತ್ತವೆ. ಇಲ್ಲಿಯೂ ದ್ವಿಧ್ರುವ ಪರ್ಯಾಯ ವಿದ್ಯುತ್ತನ್ನು ನೇರ ವಿದ್ಯುತ್ತಾಗಿ ಮಾರ್ಪಡಿಸುತ್ತದೆ. ಕಾಂತಪ್ರವರ್ಧಕಗಳು ನಿಧಾನವಾಗಿ ವ್ಯತ್ಯಾಸವಾಗುವ ಸಂಕೇತಗಳನ್ನು (ಸಿಗ್ನಲ್ಸ್) ಮಾತ್ರ ವರ್ಧಿಸಬಲ್ಲುವು. ಕಾಂತಪ್ರವರ್ಧಕಗಳನ್ನು ವೋಲ್ಟೇಜ್ ಮತ್ತು ವೇಗನಿಯಂತ್ರಕಗಳು, ಸ್ವಯಂಚಾಲಕಗಳು ಮುಂತಾದುವುಗಳಲ್ಲಿ ಉಪಯೋಗಿಸುತ್ತಾರೆ. (ಕೆ.ಜಿ.)

**ಕಾಂತ ಭ್ರಮಣಾಂಕ :** ದಂಡಕಾಂತ ಅಥವಾ ವಿದ್ಯುತ್ ಪ್ರವಾಹದ ಕುಣಿಕೆಯ (ಕರೆಂಟ್ ಲೂಪ್) ಮೇಲೆ ಅವುಗಳಿರುವ ಕಾಂತಕ್ಷೇತ್ರ ಆರೋಪಿಸುವ ಗರಿಷ್ಠ ಭ್ರಮಣಾಂಕಕ್ಕೂ (ಟಾರ್ಕ್) ಕಾಂತಕ್ಷೇತ್ರದ ತೀವ್ರತೆಗೂ ಇರುವ ಸಂಬಂಧ (ಮ್ಯಾಗ್ನೆಟಿಕ್ ಮೊಮೆಂಟ್). H ತೀವ್ರತೆಯುಳ್ಳ ಕಾಂತಕ್ಷೇತ್ರದಲ್ಲಿ m ಧ್ರುವ ತ್ರಾಣವಿರುವ ಒಂದು ದಂಡಕಾಂತ ಅದರ ಅಕ್ಷ ಕ್ಷೇತ್ರದ ದಿಕ್ಕಿಗೆ $\theta$ ಕೋನವನ್ನು ರಚಿಸುವಂತೆ ಇರಲಿ. ಆಗ ದಂಡಕಾಂತದ ಮೇಲೆ ಕಾಂತಕ್ಷೇತ್ರ ಆರೋಪಿಸುವ ಭ್ರಮಣಾಂಕ

$$L = mH \times SN \sin\theta = MH \sin\theta \quad ..........(1)$$

ಇಲ್ಲಿ M=mSN ದಂಡ ಕಾಂತದ ಕಾಂತಭ್ರಮಣಾಂಕ; SN ದಂಡಕಾಂತದ ಉದ್ದ. $\theta=90^0$ ಆದಾಗ sin (=1. ಈಗ ನಿರೂಪಣೆಯಂತೆ ಸಮೀಕರಣ (1) ರಿಂದ

M=Lmax/H ..........2

ಎಂದು ಬರೆಯಬಹುದು. Lmax ದಂಡಕಾಂತದ ಮೇಲೆ ಆರೋಪಿತವಾಗುವ ಗರಿಷ್ಠ ಭ್ರಮಣಾಂಕ.

i ವಿದ್ಯುತ್ ಪ್ರವಾಹವಿರುವ N ಸುತ್ತುಗಳು ಮತ್ತು A ಸಲೆಯುಳ್ಳ ಒಂದು ಚಪ್ಪಟೆಯಾದ ಸುರುಳಿ ಅದರ ಸಮತಲಕ್ಕೆ ಲಂಬವಾಗಿರುವ ರೇಖೆ H ತೀವ್ರತೆಯಿರುವ ಕಾಂತಕ್ಷೇತ್ರದ ದಿಕ್ಕಿಗೆ θ ಕೋನವನ್ನು ರಚಿಸುವಂತೆ ಇರಲಿ. ಆಗ ಕುಣಿಕೆಯ ಮೇಲೆ ಕಾಂತಕ್ಷೇತ್ರ ಆರೋಪಿಸುವ ಭ್ರಮಣಾಂಕ



ಚಿತ್ರ 1

L=Ni AH sin θ ............3

(=900ಆದಾಗ in (=l. ಈಗ ನಿರೂಪಣೆಯಂತೆ ಕುಣಿಕೆಯ ಕಾಂತ ಭ್ರಮಣಾಂಕ M ಅನ್ನು

$M=NiA=L_{max}/H$ ..............4

ಎಂದು ಬರೆಯಬಹುದು. $L_{max}$ ಕುಣಿಕೆಯ ಮೇಲೆ ಆರೋಪಿತವಾಗಿರುವ ಗರಿಷ್ಠ ಭ್ರಮಣಾಂಕ.

ಎಲೆಕ್ಟ್ರಾನಿನ ಕಾಂತಭ್ರಮಣಾಂಕ: ನ್ಯೂಕ್ಲಿಯಸಿನ ಸುತ್ತ ಎಲೆಕ್ಟ್ರಾನ್ ಪರಿಭ್ರಮಿಸುವುದರಿಂದ ಮತ್ತು ಸ್ವಂತ ಅಕ್ಷದ ಸುತ್ತ ಆವರ್ತಿಸುವುದರಿಂದ ಎಲೆಕ್ಟ್ರಾನಿಗೆ ಕಾಂತಭ್ರಮಣಾಂಕ ಒದಗುತ್ತದೆ. ನ್ಯೂಕ್ಲಿಯಸಿನ ಸುತ್ತ ಪರಿಭ್ರಮಿಸುವ ಎಲೆಕ್ಟ್ರಾನು i ವಿದ್ಯುತ್ ಪ್ರವಾಹಕ್ಕೆ ಸಮವೆಂದು ತಿಳಿದರೆ



ಚಿತ್ರ 2

i=e/cT ..............5

ಎಂದು ಬರೆಯಬಹುದು. ಇಲ್ಲಿ e ಎಲೆಕ್ಟ್ರಾನಿನ ವಿದ್ಯುದಂಶ, T ಅದರ ಪರಿಭ್ರಮಣಾವಧಿ [illegible] C ಬೆಳಕಿನ ವೇಗ. A ಎಲೆಕ್ಟ್ರಾನಿನ ಕಕ್ಷೆ ನಿರ್ಮಿಸುವ ಕುಣಿಕೆಯ ಸಲೆಯಾದರೆ [illegible]ಸಿನ ಪರಿಭ್ರಮಿಸುವುದರಿಂದ ಎಲೆಕ್ಟ್ರಾನ್ ಪಡೆಯುವ ಕಾಂತಭ್ರಮಣಾಂಕ ಅನ್ನು

..................**6**

ಎಂದು ಬರೆಯಬಹುದು. ಚಿತ್ರ (3) ರಿಂದ

.....................7

ಎಂದು ಬರೆಯಬಹುದು. ಎಲೆಕ್ಟ್ರಾನಿನ ಕೋನಸಂವೇಗ (ಆಂಗ್ಯುಲರ್ ಮೊಮೆಂಟಂ) $P_l$ ಗಿದ್ದರೆ

$$p_l = mr^2 \frac{d\phi}{dt}$$ ............8

ಎಂದು ಬರೆಯಬಹುದು. m ಎಲೆಕ್ಟ್ರಾನಿನ ದ್ರವ್ಯರಾಶಿ. ಸಮೀಕರಣ (7) ಮತ್ತು (8) ರಿಂದ

$$A = \frac{1}{2}\frac{pl}{m}T$$ ..............**9**

ಎಂದು ಬರೆಯಬಹುದು. ಸಮೀಕರಣ (5), (6) ಮತ್ತು (9)ರಿಂದ

$$\mu l = \frac{e}{2mc} pl$$ .............10

ಎಂದು ಬರೆಯಬಹುದು. ಕೋನಸಂವೇಗ $P_l$ ಅನ್ನು ಶಕಲ ಸಿದ್ಧಾಂತದ ಮೇರೆಗೆ

$$p_l = lh/2\pi$$ ..................11

ಎಂದು ಬರೆಯಬಹುದು. ಇಲ್ಲಿ l ಕೋನಸಂವೇಗ ಶಕಲ ಸಂಖ್ಯೆ, h ಪ್ಲಾಂಕನ ನಿಯತಾಂಕ. ಈಗ ಸಮೀಕರಣ (10) ಮತ್ತು (11)ರಿಂದ

$$\mu l = l\frac{eh}{4\pi mc}$$ ................12

ಎಂದು ಬರೆಯಬಹುದು. $eh/4\pi mc$ ಒಂದು ಬೋರ್ ಮ್ಯಾಗ್ನಟಾನ್. ಇದು ಎಲೆಕ್ಟ್ರಾನ್ ಮತ್ತು ಪರಮಾಣುಗಳ ಕಾಂತಭ್ರಮಣಾಂಕವನ್ನು ವ್ಯಕ್ತಪಡಿಸಲು ಉಪಯೋಗಿಸುವ ಏಕಮಾನ. ಇದನ್ನು $\mu_B$ ಯಿಂದ ಸೂಚಿಸುತ್ತೇವೆ. ಈಗ

$$\mu_l = l\mu_B$$ .........13

ಎಂದು ಬರೆಯಬಹುದು. ಎಲೆಕ್ಟ್ರಾನಿನ ವಿದ್ಯುದಂಶ ಋಣಾತ್ಮಕವಾದ್ದರಿಂದ $\mu_l$ ಮತ್ತು $l$ ಗಳು ಪರಸ್ಪರ ವಿಮುಖವಾಗಿವೆ.

ಎಲೆಕ್ಟ್ರಾನಿಗೆ ಅದರ ಅಕ್ಷದ ಮೇಲೆ ಆವರ್ತನೆ ಇರುವುದರಿಂದ ಕಾಂತಭ್ರಮಣಾಂಕವನ್ನು ಗಣಿತೀಯವಾಗಿ ಪಡೆಯುವುದು ಕಷ್ಟ. ಪ್ರಯೋಗ ಫಲಗಳಿಗೆ ಹೊಂದಿಕೊಳ್ಳುವಂತೆ ಆವರ್ತನೆಯಿಂದ ಎಲೆಕ್ಟ್ರಾನು ಪಡೆಯುವ ಕಾಂತ ಭ್ರಮಣಾಂಕ $\mu_s$ ನ್ನು

$$\mu s = 2s\frac{eh}{4\pi ml} = 2s\mu B$$ ..............14

ಎಂದು ಬರೆಯಬಹುದು. $S = \frac{1}{2}$ ಆವರ್ತನ ಶಕಲ ಸಂಖ್ಯೆ. $\mu_s$ ಮತ್ತು S ಗಳು ವಿಮುಖವಾಗಿವೆ.

ಪ್ರೋಟಾನಿನ ಕಾಂತಭ್ರಮಣಾಂಕ: ಪ್ರೋಟಾನು ಧನಾತ್ಮಕ ವಿದ್ಯುದಂಶವುಳ್ಳ ಕಣ. ಅದು ಒಂದು ಕೇಂದ್ರದ ಸುತ್ತ (ನ್ಯೂಕ್ಲಿಯಸಿನಲ್ಲಿ) ಪರಿಭ್ರಮಿಸುವುದರಿಂದ ಮತ್ತು ಸ್ವಂತ ಅಕ್ಷದ ಮೇಲೆ ಆವರ್ತಿಸುವುದರಿಂದ ಕಾಂತಭ್ರಮಣಾಂಕವನ್ನು ಪಡೆಯುತ್ತದೆ. ಒಂದು ಕೇಂದ್ರದ ಸುತ್ತ ಪರಿಭ್ರಮಿಸುವ ಪ್ರೋಟಾನು ಪಡೆಯುವ ಕಾಂತ ಭ್ರಮಣಾಂಕ ಯನ್ನು

.................15

ಎಂದು ಬರೆಯಬಹುದು. ಇಲ್ಲಿ $e$ ಪ್ರೋಟಾನಿನ ವಿದ್ಯದಂಶ, ಅದರ ದ್ರವ್ಯರಾಶಿ, $p_l$ ಅದರ ಕೋನ ಸಂವೇಗ ಮತ್ತು $c$ ಬೆಳಕಿನ ವೇಗ.

ಎಂದು ಬರೆದರೆ ಸಮೀಕರಣ 15 ನ್ನು

$$\mu_{lp} = l\frac{eh}{4\pi m_p c} = l\mu_n$$ .......16

ಎಂದು ಬರೆಯಬಹುದು. ಇಲ್ಲಿ $\mu_n = eh/4\pi m_p c$ ಒಂದು ನ್ಯೂಕ್ಲಿಯಸ್ ಮ್ಯಾಗ್ನಟಾನ್. ಇದನ್ನು ನ್ಯೂಕ್ಲಿಯಾನ್ ಮತ್ತು ನ್ಯೂಕ್ಲಿಯಸುಗಳ ಕಾಂತಭ್ರಮಣಾಂಕವನ್ನು ವ್ಯಕ್ತಪಡಿಸಲು ಒಂದು ಏಕಮಾನವಾಗಿ ಉಪಯೋಗಿಸುತ್ತೇವೆ. ಸಮೀಕರಣ (16)ನ್ನು

$$\mu_p = gl_p\, l$$ ...........17

ಎಂದು ಬರೆಯಬಹುದು. ನ್ಯೂಕ್ಲಿಯಸ್ ಮ್ಯಾಗ್ನಟಾನ್. $\mu_{lp}$ ಮತ್ತು $l$ ಗಳು ಒಂದೇ ದಿಕ್ಕಿನಲ್ಲಿವೆ.

ಆವರ್ತನೆಯಿಂದ ಪ್ರೋಟಾನು ಪಡೆದಿರುವ ಕಾಂತಭ್ರಮಣಾಂಕ $\mu_{sp}$ ಯನ್ನು ಸಮೀಕರಣ (17) ರಂತೆ

$$\mu_{sp} = g_{sp}\,S$$ ..........18

ಎಂದು ಬರೆಯಬಹುದು. ಇಲ್ಲಿ ನ್ಯೂಕ್ಲಿಯಸ್ ಮ್ಯಾಗ್ನಟಾನುಗಳು. $\mu_{sp}$ ಮತ್ತು S ಗಳು ಒಂದೇ ದಿಕ್ಕಿನಲ್ಲಿವೆ.

ನ್ಯೂಟ್ರಾನಿನ ಕಾಂತಭ್ರಮಣಾಂಕ: ನ್ಯೂಟ್ರಾನಿನ ನಿವ್ವಳ ವಿದ್ಯುದಂಶ ಸೊನ್ನೆ. ಆದ್ದರಿಂದ ಅದು ಒಂದು ಕೇಂದ್ರದ ಸುತ್ತ ಪರಿಭ್ರಮಿಸಿ ಆ ಕಾರಣದಿಂದ ಕಾಂತ ಭ್ರಮಣಾಂಕವನ್ನು ಪಡೆಯುವುದಿಲ್ಲ. ಅದು ಹೊಂದಿರುವ ಋಣಾತ್ಮಕವಾದ ಕಾಂತ ಭ್ರಮಣಾಂಕ ಅದರ ಆವರ್ತನೆಯಿಂದ ಉಂಟಾದುದು. ಇದನ್ನು ಅರ್ಥ ಮಾಡಿಕೊಳ್ಳಲು ನ್ಯೂಟ್ರಾನಿನ ಗಟ್ಟಿತಿರುಳು ಧನಾತ್ಮಕ ವಿದ್ಯುದಂಶವನ್ನೂ ಹೊರಭಾಗ ಅಷ್ಟೇ ಪರಿಮಾಣದ ಋಣಾತ್ಮಕ ವಿದ್ಯುದಂಶವನ್ನೂ ಹೊಂದಿವೆಯೆಂದು ಭಾವಿಸಬೇಕು. $\mu_{sn}$ ನ್ಯೂಟ್ರಾನಿನ ಕಾಂತಭ್ರಮಣಾಂಕವೆಂದು ತಿಳಿದರೆ

$$\mu_{sn} = g_{sn} S \qquad \text{.............19}$$

ಎಂದು ಬರೆಯಬಹುದು. $g_{sn} = 3.83$ ನ್ಯೂಕ್ಲಿಯಸ್ ಮ್ಯಾಗ್ನಟಾನುಗಳು. ಮತ್ತು S ಗಳು ವಿಮುಖವಾಗಿವೆ. (ಎಸ್.ಎ.ಎಚ್.)

**ಕಾಂತ ಮಂಡಲ :** ಒಂದು ಕಾಂತ ಅಭಿವಾಹದ (ಮ್ಯಾಗ್ನೆಟಿಕ್ ಫ್ಲಕ್ಸ್) ರೇಖೆಗಳ ಗಣ ರಚಿಸುವ ಸಂಪೂರ್ಣ ಸಂವೃತ ಪಥ (ಮ್ಯಾಗ್ನೆಟಿಕ್ ಸರ್ಕ್ಯೂಟ್). ವಿದ್ಯುತ್ ಯಂತ್ರಗಳು, ಟ್ರಾನ್ಸ್‌ಫಾರ್ಮರುಗಳು, ವಿದ್ಯುತ್ಕಾಂತಗಳು, ವಿದ್ಯುತ್ಕಾಂತ ಉಪಕರಣಗಳು ಮುಂತಾದವುಗಳಲ್ಲಿ ಕಾಂತ ಬಲ ಕಾಂತವಸ್ತುಗಳಿಂದ ಮಾಡಲ್ಪಟ್ಟ ಭಾಗಗಳಲ್ಲಿ ಪ್ರವಹಿಸಲು ಅವಕಾಶವಿದೆ. ಈ ಭಾಗಗಳಿಗೆ ಕಾಂತದಿಂಡು (ಕೋರ್) ಎಂದು ಹೆಸರು. ದಿಂಡಿನ ಸುತ್ತ ಅಳವಡಿಸಿದ ಸುರುಳಿಗಳ ಮೂಲಕ ವಿದ್ಯುತ್ಪ್ರವಾಹವನ್ನುಂಟುಮಾಡುವುದರಿಂದ ದಿಂಡಿನಲ್ಲಿ ಕಾಂತಬಲಪ್ರವಾಹವಾಗುತ್ತದೆ. ಮೇಲೆ ಹೇಳಿದ ಉಪಕರಣಗಳನ್ನು ವಿದ್ಯುನ್ಮಂಡಲಗಳಂತೆಯೇ ಪರೀಕ್ಷಿಸಬಹುದು. ಆದ್ದರಿಂದಲೇ ಅವನ್ನು ಸಹ ಕಾಂತಮಂಡಲಗಳೆನ್ನುತ್ತಾರೆ. ಚಿತ್ರ (1)ರಲ್ಲಿ ಒಂದೇ ಕಾಂತವಸ್ತುವಿನಿಂದ ಮಾಡಿದ ಒಂದು ದಿಂಡನ್ನು ತೋರಿಸಿದೆ. ಅದರ ಒಂದು ಬಾಹುವಿನ ಅಡ್ಡ ಕೊಯ್ತದ ಸಲೆ $S_1$, ಉಳಿದ ಮೂರರ ಅಡ್ಡಕೊಯ್ತದ ಸಲೆ $S_2$ ಆಗಿರಲಿ. ದಿಂಡಿನಲ್ಲಿನ ಕಾಂತ ಅಭಿವಾಹ (ಫ್ಲಕ್ಸ್) $\phi$ ಆಗಿರಲಿ. ಆದ್ದರಿಂದ $l_1$ ಅಂತರದಲ್ಲಿ ಕಾಂತಾಭಿವಾಹ ಸಾಂದ್ರತೆ



ಚಿತ್ರ 1

ಮತ್ತು

$l_2$ ಅಂತರದಲ್ಲಿ ಕಾಂತಾಭಿವಾಹ ಸಾಂದ್ರತೆ $B_2 = \phi / S_2$ l1 ಮತ್ತು l2 ಗಳಲ್ಲಿ ಕಾಂತ ತೀವ್ರತೆ (ಮ್ಯಾಗ್ನೆಟಿಕ್ ಇಂಟೆನ್ಸಿಟಿ)

$$H_1 = \frac{B_1}{\mu} = \frac{\phi}{\mu S_1} \quad \text{ಮತ್ತು} \quad H_2 = \frac{B_2}{\mu} = \frac{\phi}{\mu S_2}$$

ಇಲ್ಲಿ $\mu$ ದಿಂಡುವಸ್ತುವಿನ ಕಾಂತಪಾರಗಮ್ಯತೆ (ಪರ್ಮಿಯೆಬಿಲಿಟಿ). l1+l2 ಕಾಂತ ದಾರಿಯಲ್ಲಿ $Hdl = H1/1 + H_{2}l_{2}$ ಆಗಿದ್ದರೆ $\oint Hdl = NI$ ಎಂದು ತೋರಿಸಬಹುದು. ಇಲ್ಲಿ N ಸುರುಳಿಯ ಸುತ್ತುಗಳ ಸಂಖ್ಯೆ ಮತ್ತು I ಸುರುಳಿಯಲ್ಲಿನ ವಿದ್ಯುತ್ಪ್ರವಾಹ. ಆದ್ದರಿಂದ

$$NI = H_1 l_1 + H_2 l_2$$

$$== \phi \frac{l_1}{\mu S_1} + \phi \frac{l_2}{\mu S_2}$$

$$= \phi R_1 + \phi R_2$$

ಇಲ್ಲಿ R1 ಮತ್ತು R2 ಗಳಿಗೆ ಆಯಾ ಭಾಗಗಳ ಪ್ರತಿಷ್ಟಂಭ (ರೆಲೆಕ್ಟೆನ್ಸ್) ಎಂದು ಹೆಸರು. ಕಾಂತಾಭಿವಾಹ ಮತ್ತು ಪ್ರತಿಷ್ಟಂಭಗಳ ಗುಣಲಬ್ಧಕ್ಕೆ ಕಾಂತವಾಹಕ ಬಲ (ಮ್ಯಾಗ್ನೆಟೋಮೋಟಿವ್ ಪೋರ್ಸ್,mmf) ಎಂದು ಹೆಸರು. ಇದನ್ನು $\phi$ ಇರುವ ನೇರದಲ್ಲಿ ನಿರ್ದೇಶಿಸುತ್ತಾರೆ. l2 ಅಂತರದಲ್ಲಿ ಇರುವ mmf ಅನ್ನು ಎಂದು ಬರೆಯಬಹುದು. ಈ ಸಮೀಕರಣ ಓಮನ ನಿಯಮದಂತೆಯೇ ಕಾಣುವುದರಿಂದ ಇದಕ್ಕೆ ಕಾಂತ ಓಮನ ನಿಯಮ ಎಂದು ಹೆಸರು.

ಮೇಲಿನ ಕಾಂತಮಂಡಲದ ಒಟ್ಟು mmf

$$IN = \phi R_1 + \phi R_2$$



ಚಿತ್ರ 2

ಕಾಂತಮಂಡಲದ (mmf) ವಿದ್ಯುನ್ಮಂಡಲದ ವಿದ್ಯುದ್ವಾಹಕ ಬಲಕ್ಕೆ (ಎಲೆಕ್ಟ್ರೊಮೋಟಿವ್ ಪೋರ್ಸ್, emf) ಸಮಾನವಾಗಿಯೂ ಕಾಂತಾಭಿವಾಹ ($\phi$) ವಿದ್ಯುತ್ಪ್ರವಾಹಕ್ಕೆ ಸಮಾನವಾಗಿಯೂ ಪ್ರತಿಷ್ಟಂಭ (R) ವಿದ್ಯುತ್‌ರೋಧತ್ವಕ್ಕೆ ಸಮಾನವಾಗಿಯೂ ಇವೆ. ವಿದ್ಯುನ್ಮಂಡಲಗಳಲ್ಲಿರುವಂತೆಯೇ ಕಾಂತ ಮಂಡಲಗಳಿಗೂ ಕಿರ್ಚಾಫನ ನಿಯಮಗಳನ್ನು ಹೀಗೆ ನಿರೂಪಿಸಬಹುದು :

(1) ಕಾಂತಮಂಡಲದ ಸಂಪಾತಬಿಂದುಗಳಲ್ಲಿ (ನೋಡ್ಸ್) ಕಾಂತಾಭಿವಾಹ ಸೊನ್ನೆ. ಅಂದರೆ ಚಿತ್ರ (2)ರಲ್ಲಿ ಸಂಪಾತಬಿಂದು (1)ರಲ್ಲಿ .

(2) ಒಂದು ಕಾಂತಮಂಡಲದ ಸುತ್ತ mmf ಗಳ ಬೀಜಮೊತ್ತ ಆ ಕಾಂತ ದಾರಿಯಲ್ಲಿರುವ ಬೇರೆ ಬೇರೆ mmfಗಳ ಮೊತ್ತ.

ಅಂದರೆ ಚಿತ್ರ (2) ರ 1,2,3,4,1 ಸುತ್ತು ದಾರಿಯಲ್ಲಿ

$$\sum \begin{matrix} I_1N_1 - I_3N_3 + I_5N_5 + I_2N_2 \\ \phi_1R_1 - \phi_3R_3 + \phi_5R_5 + \phi_2R_2 \end{matrix}$$

(ಕೆ.ಜಿ.)

**ಕಾಂತ ಮಸೂರ :** ಎಲೆಕ್ಟ್ರಾನ್ ದೂಲಗಳನ್ನು ಅಭಿಸರಿಸಲು (ಕನ್ವರ್ಜ್) ಉಪಯೋಗಿಸುವ ಕಾಂತಕ್ಷೇತ್ರ (ಮ್ಯಾಗ್ನೆಟಿಕ್ ಲೆನ್ಸ್). ಬೆಳಕಿನ ಕಿರಣಗಳನ್ನು ಗಾಜಿನ ಮಸೂರ ಬಾಗಿಸಿ ಅಭಿಸರಿಸುವ ರೀತಿಯಲ್ಲಿ ಇದು ಎಲೆಕ್ಟ್ರಾನುಗಳನ್ನು ಬಾಗಿಸಿ ಅಭಿಸರಿಸುತ್ತದೆ. ಚಿತ್ರ 1ರಲ್ಲಿ ತೋರಿಸಿರುವಂಥ ಒಂದು ಸುರುಳಿಯ ಮೂಲಕ ವಿದ್ಯುತ್ತನ್ನು ಹರಿಸಿದರೆ ಅದರ ಅಕ್ಷನೇರದಲ್ಲಿ ಕಾಂತಕ್ಷೇತ್ರ (ಚುಕ್ಕಿಗೆರೆ) ಉಂಟಾಗುತ್ತದೆ. ಈಗ ಇದರ ಅಕ್ಷನೇರದಲ್ಲಿ ಎಲೆಕ್ಟ್ರಾನುಗಳ ಒಂದು ಅಪಸರಣ ದೂಲವನ್ನು ಕಳುಹಿಸಿದರೆ ಎಲೆಕ್ಟ್ರಾನುಗಳು ಮುಂದೆ ಸ್ವಲ್ಪ ದೂರದಲ್ಲಿ ಅಭಿಸರಿಸುತ್ತವೆ. ಚಿತ್ರ (2)ರಲ್ಲಿ ತೋರಿಸಿರುವಂತೆ ಸ್ವಲ್ಪ ತೆರಪು ಉಳ್ಳ ಮಿದು ಕಬ್ಬಿಣ ಕವಚದಲ್ಲಿ ಒಂದು ಸುರುಳಿಯನ್ನು ಸುತ್ತಿ ಅದರಲ್ಲಿ ವಿದ್ಯುತ್ತನ್ನು ಹರಿಸಿದರೆ ಅಲ್ಲಿ ಉಂಟಾಗುವ



ಚಿತ್ರ 1

ಮೆದುಕಬ್ಬಿಣದ ಕವಚ


ಚಿತ್ರ 2

ಕಾಂತಕ್ಷೇತ್ರ (ಚುಕ್ಕಿಗೆರೆ) ಕಾಂತ ಮಸೂರದಂತೆ ವರ್ತಿಸುತ್ತದೆ.

ಕಾಂತ ಮಸೂರಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳಲ್ಲಿ ಮತ್ತು ಹೆಚ್ಚು ವೋಲ್ಟೇಜಿನ ಕ್ಯಾಥೋಡ್ ಕಿರಣ ಕವಾಟಗಳಲ್ಲಿ ಉಪಯೋಗಿಸುತ್ತಾರೆ. ಕಾಂತ ಮಸೂರ ಉಂಟುಮಾಡುವ ಬಿಂಬ ಬಾಗಿರುತ್ತದೆ. ಈ ಬಾಗುವಿಕೆ ಕಾಂತಕ್ಷೇತ್ರವನ್ನವಲಂಬಿಸಿರುವುದು. *(ಕೆ.ಜಿ.)*

**ಕಾಂತ ಮಾಪಕ :** ಪ್ರಮುಖವಾಗಿ ಕಾಂತಕ್ಷೇತ್ರದ ತೀವ್ರತೆಯನ್ನು ಅಳೆಯುವ ಉಪಕರಣ (ಮ್ಯಾಗ್ನೆಟೋಮೀಟರ್). ಭೂಮಿಯ ಕಾಂತಕ್ಷೇತ್ರಕ್ಕೆ ಸಂಬಂಧಿಸಿದಂತೆ, ಕಾಂತಮಾಪಕವನ್ನು ನಿರಪೇಕ್ಷ ಮತ್ತು ಸಾಪೇಕ್ಷ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಶಿಷ್ಟ ಕಾಂತೀಯ ಉಪಕರಣದೊಂದಿಗೆ ನೇರವಾಗಿ ಹೋಲಿಸದೆ ಅಂಶಾಂಕನ (ಕ್ಯಾಲಿಬ್ರೇಷನ್) ಮಾಡಲು ಸಾಧ್ಯವಾಗುವ ಉಪಕರಣವೇ ನಿರಪೇಕ್ಷ ಕಾಂತಮಾಪಕ. ಆದರೆ ಸಾಮಾನ್ಯವಾಗಿ ಹೆಚ್ಚಿನವು ಸಾಪೇಕ್ಷ ಕಾಂತಮಾಪಕಗಳೇ.



ಸೈನ್ ಗ್ಯಾಲ್ವನೋಮೀಟರ್

ನಿರಪೇಕ್ಷ ಮಾದರಿಯವು. 1 ಸಾಂಪ್ರದಾಯಿಕ ಕಾಂತಮಾಪಕ : ಇದನ್ನು 1832ರಲ್ಲಿ ಗೌಸ್ ಎಂಬಾತ ಭೂಮಿಯ ಕಾಂತಕ್ಷೇತ್ರದ ಕ್ಷಿತಜೀಯ ಘಟಕವನ್ನು ಕಂಡುಹಿಡಿಯಲು ನಿರ್ಮಿಸಿದ. ಇದರಲ್ಲಿ ಸ್ಥಾಯೀ ದಂಡಕಾಂತವೊಂದನ್ನು ಚಿನ್ನದ ತೆಳು ತಂತಿಯಿಂದ ಸಮತಲದಲ್ಲಿ ತೂಗು ಹಾಕಿದೆ. ಸಮತಲದಲ್ಲಿ ಈ ಕಾಂತ ಆಂದೋಲಿಸಿದರೆ ಅದರ ಅವಧಿ (ಪೀರಿಯಡ್) ಭೂಮಿಯ ಕಾಂತಕ್ಷೇತ್ರದ ಕ್ಷಿತಿಜೀಯ ಘಟಕ H ಮತ್ತು ಕಾಂತದ ಭ್ರಮಣಾಂಕ M ಇವೆರಡರ ಗುಣಲಬ್ಧಕ್ಕೆ ಪ್ರತಿಲೋಮದಲ್ಲಿರುವುದು. ಈ ಕಾಂತವನ್ನು ಇದೇ ರೀತಿ ತೂಗುಹಾಕಿರುವ ಇನ್ನೊಂದು ಕಾಂತವನ್ನು ದಿಕ್ಪಲ್ಲಟ ಮಾಡಲು ಉಪಯೋಗಿಸುತ್ತಾರೆ. ಸಮತೋಲ ಸ್ಥಿತಿಯಿಂದ ದಿಕ್ಪಲ್ಲಟವಾದ ಮೇಲೆ ಕೋನವನ್ನು ಅಳತೆ ಮಾಡುವುದರಿಂದ M/H ಪ್ರಮಾಣ ದೊರೆಯುವುದು. ಹೀಗೆ ಆಂದೋಲನಾವಧಿ ಮತ್ತು ದಿಕ್ಪಲ್ಲಟಗಳ ಶ್ರೇಣಿಗಳನ್ನು ಅಳತೆ ಮಾಡುವುದರಿಂದ ನಮಗೆ ಬೇಕಾಗುವ ಮೌಲ್ಯಗಳನ್ನು ಪಡೆದುಕೊಳ್ಳಬಹುದು. ಆದರೆ ಇದರಲ್ಲಿ ಎದ್ದುಕಾಣುವ ಕೊರತೆ ಏನೆಂದರೆ H ಮೌಲ್ಯವನ್ನು ಕಂಡುಹಿಡಿಯಲು 1 ಗಂಟೆ ಅದಕ್ಕೂ ಹೆಚ್ಚು ಕಾಲ ಬೇಕಾಗುತ್ತದೆ.



ಪ್ರೋಟಾನ್ ವೆಕ್ಟಾರ್ ಕಾಂತಮಾಪಕ

**ಸೈನ್ ಗ್ಯಾಲ್ವನೋಮೀಟರ್:** ಈ ಉಪಕರಣದಲ್ಲಿ ಹುರಿ ಮಾಡದೆ ಇರುವ ಎಳೆಯಿಂದ ಕಾಂತವನ್ನು ಹೆಲ್ಮ್–ಹೋಲ್ಟ್ಸ್ ಸುರುಳಿಗಳ ನಡುವೆ ಮಧ್ಯಕ್ಕೆ ಸರಿಯಾಗಿ ತೂಗು ಹಾಕಿದೆ. ಈ ಸುರುಳಿಗಳ ಮೂಲಕ ವಿದ್ಯುತ್ ಪ್ರವಾಹವನ್ನು ಹರಿಸಿದಾಗ ಕಾಂತ ದಿಕ್ಪಲ್ಲಟಗೊಳ್ಳುವುದು. ದಿಕ್ಪಲ್ಲಟವಾದ ಕೋನ ಮತ್ತು ಸುರುಳಿಗಳ ಸಂಖ್ಯೆ, ವಿದ್ಯುತ್ ಪ್ರವಾಹ ಇವನ್ನು ಅಳೆದು H ಬೆಲೆಯನ್ನು ನಿಷ್ಕರ್ಷೆ ಮಾಡಬಹುದು.

**ನ್ಯೂಕ್ಲಿಯರ್ ಕಾಂತಮಾಪಕಗಳು:** ಹಳೆಯ ಉಪಕರಣಗಳಿಗಿಂತ ಇವು ಹೆಚ್ಚು ಉತ್ಕೃಷ್ಟವಾಗಿವೆ. ಆದ್ದರಿಂದ ಇವು ತ್ವರಿತವಾಗಿ ಉಪಯೋಗಕ್ಕೆ ಬರುತ್ತಿವೆ. ಪ್ರೋಟಾನ್ ಪುರಸ್ಸರಣ (ಪ್ರಿಸೆಶ್ಯನ್) ಕಾಂತಮಾಪಕದಿಂದ ಸಮಗ್ರ ಕಾಂತ ತೀವ್ರತೆಯನ್ನು ಅಳೆಯಬಹುದು. ಈ ಉಪಕರಣವನ್ನು H ಮತ್ತು ಊರ್ಧ್ವ ಘಟಕ V ಇವನ್ನು ಅಳತೆ ಮಾಡಲು ಅಳವಡಿಸಬಹುದು. ವಾಯುಮಂಡಲದಲ್ಲಿ ಹಾರಾಡುವಾಗ ಮತ್ತು ಸಮುದ್ರಯಾನ ಮಾಡುವಾಗ ಪ್ರೋಟಾನ್ ಕಾಂತಮಾಪಕವನ್ನು ಹೆಚ್ಚು ಕಡಿಮೆ ಸಾರ್ವತ್ರಿಕವಾಗಿ ಉಪಯೋಗಿಸುತ್ತಾರೆ.



ಕ್ವಾರ್ಟ್ಜ್ ಕ್ಷಿತಿಜೀಯ ಕಾಂತಮಾಪಕ

ದೃಕ್ ರೇಚಕೀಯ (ಆಪ್ಟಿಕಲ್ ಪಂಪಿಂಗ್) ಕಾಂತಮಾಪಕಗಳಲ್ಲಿ ನ್ಯೂಕ್ಲಿಯರ್–ಅನುರಣನ ತತ್ತ್ವಗಳನ್ನು ಉಪಯೋಗಿಸಿಕೊಂಡು ರುಬಿಡಿಯಂ ಆವಿ, ಸೀಸಿಯಂ ಆವಿ ಅಥವಾ ಮಿತಸ್ಥಾಯೀ ಹೀಲಿಯಂ ಇವುಗಳ ಸಹಾಯದಿಂದ ಅವಿಚ್ಛಿನ್ನವಾಗಿ ಅಳತೆಗಳನ್ನು ಮಾಡಬಹುದು. ಆದರೆ ಇವುಗಳ ಪರಿಶುದ್ಧತೆ ಪ್ರೋಟಾನ್–ಪುರಸ್ಸರಣದ್ದಕ್ಕಿಂತ ಕೆಳಗಿನ ದರ್ಜೆಯದು. ರಾಕೆಟ್ಟುಗಳು, ಉಪಗ್ರಹಗಳು ಅಥವಾ ಅಂತರಿಕ್ಷದ ಪರಿಶೋಧನೆಗಳಲ್ಲಿ ದೃಕ್ ರೇಚಕೀಯ ಕಾಂತಮಾಪಕಗಳನ್ನು ಉಪಯೋಗಿಸುತ್ತಾರೆ.

ಸಾಪೇಕ್ಷ ಮಾದರಿಯವು. ಕ್ವಾರ್ಟ್ಜ್ ಕ್ಷಿತಿಜೀಯ ಕಾಂತಮಾಪಕ: ಡಿ.ಲಾ.ಕೂರ್ ಎಂಬಾತ ಇದನ್ನು ಡೆನ್ಮಾರ್ಕಿನಲ್ಲಿ ರೂಪಿಸಿದ. ಭೂಕಾಂತ ಕ್ಷೇತ್ರದ ಉಪಕರಣವಾಗಿಯೂ ವೀಕ್ಷಣಾಲಯದ (ಅಬ್ಸರ್ವೇಟರಿ) ದೈನಂದಿನ ಅಳತೆಗಳನ್ನು ಮಾಡುವ ಸಾಧನವಾಗಿಯೂ ಇದರ ಉಪಯೋಗ ಉಂಟು.

ಇಲ್ಲಿ ಹೆಸರಿಸಬಹುದಾದ ಸಾಪೇಕ್ಷ ಮಾದರಿಯ ಇತರ ಕಾಂತಮಾಪಕಗಳು ಷ್ಮಿಟ್ ಊರ್ಧ್ವ ಕ್ಷೇತ್ರ ತ್ರಾಸು, ಕಾಂತಮಾಪೀಯ ಶೂನ್ಯ ತ್ರಾಸು (ಮ್ಯಾಗ್ನೆಟೋಮೆಟ್ರಿಕ್ ಜ಼ೀರೋ ಬ್ಯಾಲೆನ್ಸ್) ಮತ್ತು ಸಂತೃಪ್ತಶೀಲ ದಿಂಡಿನ ಕಾಂತಮಾಪಕ (ಸ್ಯಾಚುರೆಬಲ್–ಕೋರ್ ಮ್ಯಾಗ್ನೆಟೋಮೀಟರ್). ಕೊನೆಯದರಲ್ಲಿ ಅತೀ ಕ್ಷೀಣ ಕಾಂತಕ್ಷೇತ್ರಗಳಲ್ಲಿ ಸಂತೃಪ್ತವಾಗುವ ಮಿಶ್ರಲೋಹವಿದೆ. ಈ ರೀತಿಯ ಕಾಂತಮಾಪಕವನ್ನು ಎರಡನೆಯ ಮಹಾಯುದ್ಧದ ಕಾಲದಲ್ಲಿ ಪರಿಷ್ಕರಿಸಿದರು. ಇದನ್ನು ವಾಯುವಿನಲ್ಲಿ ಹಾರಾಡಿಸಿ ಸಬ್‌ಮೆರೀನುಗಳನ್ನು ಪತ್ತೆ ಮಾಡಲು ವ್ಯಾಪಕವಾಗಿ ಉಪಯೋಗಿಸಲಾಯಿತು. *(ಎ.ಪಿ.)*

**ಕಾಂತ ಮುದ್ರಣ :** ಕಾಂತೀಕರಿಸಿದ ಫೆರ್ರೋ ಕಾಂತೀಯ ಚೂರ್ಣಲೇಪಿತ ಕಾಗದದ ಇಲ್ಲವೇ ಪ್ಲಾಸ್ಟಿಕ್ ಆಧಾರಿತ ಪಟ್ಟಿಯ ಮೇಲೆ ಅಥವಾ ಕಾಂತೀಕರಿಸಿದ ತಂತಿಯ ಮೇಲೆ ಸಮಾಚಾರವನ್ನು ಮುದ್ರಿಸುವ ವಿಧಾನ (ಮ್ಯಾಗ್ನೆಟಿಕ್ ರೆಕಾರ್ಡಿಂಗ್). ಧ್ವನಿಮುದ್ರಣದಲ್ಲಿ ಇದರ ಬಳಕೆ ಅಧಿಕ. ಗಣಕಯಂತ್ರಗಳ ದತ್ತಾಂಶಗಳಿಗೆ, ಟೆಲಿವಿಷನ್ ಚಿತ್ರಗಳಿಗೆ ಹಾಗೂ ರೇಡಿಯೋ ಸಂದೇಶಗಳಿಗೆ ಸಂಬಂಧಿಸಿದ ಸಂಜ್ಞೆಗಳನ್ನು ಮುದ್ರಿಸುವಲ್ಲಿ ಸಹ ಈ ವಿಧಾನದ ಉಪಯೋಗ ಗಮನಾರ್ಹವಾಗಿದೆ. ಇಂಥ ಎಲ್ಲ ಮುದ್ರಣಗಳನ್ನೂ ಬೇಕೆಂದಾಗ ಮರುನುಡಿಸಬಹುದು (ಪ್ಲೇ ಬ್ಯಾಕ್).

ಅಮೆರಿಕದ ಪ್ರಖ್ಯಾತ ಯಂತ್ರವಿಜ್ಞಾನಿ ಥಾಮಸ್ ಅಲ್ವಾ ಎಡಿಸನ್ ಫೊನೋಗ್ರಾಫನ್ನು ನಿರ್ಮಿಸಿದಾಗಲೇ (1877) ಧ್ವನಿಮುದ್ರಣ ಕಾರ್ಯವೂ ಪ್ರಾರಂಭವಾಯಿತು. ಮನುಷ್ಯ ಅಥವಾ ಯಾವುದಾದರೂ ಆಕರದ ಶಬ್ದವನ್ನು ಒಂದು ಸೂಜಿಯ ಕಂಪನಗಳನ್ನಾಗಿ ಪರಿವರ್ತಿಸಿ ಆ ಮೂಲಕ ಅದನ್ನು ಒಂದು ಉರುಳೆಯ (ಸಿಲಿಂಡರ್) ಮೇಲೆ ಮುದ್ರಣ ಮಾಡಿ ಮತ್ತೆ ಸೂಜಿಯನ್ನು ಆ ಮುದ್ರಣದ ಮೇಲೆಯೇ ಓಡಿಸುವುದರಿಂದ ಮೊದಲಿನ ಧ್ವನಿಯನ್ನೇ ಎಡಿಸನ್ ಪುನಃ ಸೃಷ್ಟಿಸಿದ. ಡಿಕ್ಟಾಫೋನ್ ಎಂದು ಮೊದಲಾಗಿ ಹೆಸರುಗಳನ್ನುಳ್ಳ ಅನೇಕ ಧ್ವನಿಮುದ್ರಣ ಯಂತ್ರಗಳಲ್ಲಿ ಇದೇ ತತ್ತ್ವವನ್ನು ಬಳಸಲಾಗಿದೆ.

ಎಡಿಸನ್ನನ ಉಪಜ್ಞೆ (ಇನ್‌ವೆನ್ಷನ್) ಆದ 21 ವರ್ಷಗಳ ತರುವಾಯ ಡೆನ್ಮಾರ್ಕಿನ ವಾಲ್ಡೆ ಮಾರ್ ಪೌಲ್ಸನ್ ಟೆಲಿಗ್ರಾಫೋನ್ ಎಂಬ ಯಂತ್ರವನ್ನು ನಿರ್ಮಿಸಿದ (1898). ಇದೇ ಇಂದಿನ ತಂತಿ ಮತ್ತು ಪಟ್ಟಿ ಮುದ್ರಿಕೆಗಳ ಮೂಲವಾಗಿದೆ. ಪೌಲ್ಸನನ ಯಂತ್ರದಲ್ಲಿ ಒಂದು ಪೀಪಾಯಿಯ ಸುತ್ತಲೂ ಉಕ್ಕಿನ ತಂತಿಯನ್ನು ಸುತ್ತಲಾಗಿತ್ತು. ಕಾಂತಶಿರದಲ್ಲಿ

(ಮ್ಯಾಗ್ನೆಟಿಕ್ ಹೆಡ್) ಒಂದು ತಂತಿಯ ಸುರುಳಿಯೊಳಗೆ ಕಬ್ಬಿಣದ ತೆಳ್ಳನೆಯ ಪದರಗಳು (ಲ್ಯಾಮಿನೇಷನ್ಸ್) ಇದ್ದುವು. ಪೀಪಾಯಿಗೆ ಸಮಾಂತರವಾಗಿ ಶಿರ ಚಲಿಸುತ್ತಿತ್ತು. ಸೂಕ್ಷ್ಮ ಧ್ವನಿವರ್ಧಕದಿಂದ ಬಂದ ಧ್ವನಿರೂಪದ ವಿದ್ಯುತ್ಪ್ರವಾಹ ಸುರುಳಿಯಲ್ಲಿ ಹರಿದಾಗ ಅದಕ್ಕನುಗುಣವಾಗಿ ಪದರಗಳಿಗೆ ಅಂದರೆ ಪಟಲ ಬಂಧನಕ್ಕೆ ತಗಲಿಕೊಂಡಿದ್ದ ಉಕ್ಕಿನ ತಂತಿ ಕಾಂತೀಕೃತವಾಗುತ್ತಿತ್ತು. ಪೀಪಾಯಿ ಸುತ್ತಿದಾಗ ಶಿರವೂ ಮುಂದೆ ಚಲಿಸುತ್ತಿತ್ತು. ಧ್ವನಿಯನ್ನು ಪುನಃ ಕೇಳಬೇಕಾದಾಗ ಅದೇ ಸುರುಳಿಗೆ ಒಂದು ಹೆಡ್‌ಫೋನನ್ನು ಜೋಡಿಸಲಾಗುತ್ತಿತ್ತು. ಈ ಯಂತ್ರ ನಯವಾಗಿರಲಿಲ್ಲ. ಇದರಲ್ಲಿ ಆಧುನಿಕ ಕಾಂತಧ್ವನಿಮುದ್ರಣದಲ್ಲಿರುವ ತತ್ತ್ವದ ಉಪಯೋಗವನ್ನು ಕಾಣಬಹುದು.



ಚಿತ್ರ 1

ಜರ್ಮನಿಯ ಮಿಕ್ಸ್ ಮತ್ತು ಗೆನೆಸ್ಟ್ ಎಂಬುವರು (1900)ರಲ್ಲಿ ಕಾಂತ ಧ್ವನಿಮುದ್ರಕವನ್ನು (ಮ್ಯಾಗ್ನೆಟಿಕ್ ವಯರ್ ರೆಕಾರ್ಡರ್) ತಯಾರಿಸಿದರು. ಇದರಲ್ಲಿ ತಂತಿ ಸೆಕೆಂಡಿಗೆ 200 ಸೆಮೀ ವೇಗದಲ್ಲಿ ಚಲಿಸುತ್ತಿತ್ತು. ಧ್ವನಿಮುದ್ರಣವಾಗುತ್ತಿದ್ದ ಕಾಲ ಬಹಳ ಕಡಿಮೆ. ಸುಮಾರು ಒಂದು ಮಿನಿಟ್ ಕಾಲ ಮಾತ್ರ. ಅನಂತರ ಉಕ್ಕಿನ ತೆಳ್ಳಗಿನ ಪಟ್ಟಿಯನ್ನು ಉಪಯೋಗಿಸಿ ಹಲವು ಯಂತ್ರಗಳ ರಚನೆಯಾಯಿತು. ನೂರಾರು ಮೀಟರ್ ಉದ್ದದ ಪಟ್ಟಿಯನ್ನು ಉಪಯೋಗಿಸಿ ಸುಮಾರು ಅರ್ಧಗಂಟೆಯ ಕಾಲ ಧ್ವನಿಮುದ್ರಣ ಮಾಡಬಹುದಾಗಿತ್ತು. ರೇಡಿಯೋ ಕವಾಟಗಳ ಉಪಯೋಗ ಹೆಚ್ಚಾಗಿ ಬಳಕೆಗೆ ಬಂದ ಮೇಲೆ (1919) ಇವುಗಳ ಪ್ರಭಾವ ಕಾಂತ ಧ್ವನಿಮುದ್ರಣದ ಮೇಲೆಯೂ ಆಯಿತು. ಈ ಕವಾಟಗಳ ಸಹಾಯದಿಂದ ಅತಿ ಸೂಕ್ಷ್ಮ ಶಬ್ದವನ್ನೂ ಪ್ರವರ್ಧಿಸುವುದು ಸಾಧ್ಯ. ಮುಂದೆ ಹಲವು ವಿಧದ ಧ್ವನಿಮುದ್ರಕಗಳು ತಯಾರಾದುವು. ಗ್ರಾಮಾಫೋನ್ ತಟ್ಟೆಯ ಆಕಾರದ (121\2) ಸೆಂಮೀ. ಅಗಲದ ಉಕ್ಕಿನ ತಟ್ಟೆಯೊಂದನ್ನು ಉಪಯೋಗಿಸಿದ ಯಂತ್ರವೊಂದಿತ್ತು. ಅಮೆರಿಕದ ಕಾರ್ಲಸನ್ ಮತ್ತು ಕಾರ್ಪೆಂಟರ್ ಎಂಬುವರು ಹೆಚ್ಚಿನ ಆವೃತ್ತಿ ಸಂಖ್ಯೆಯ (ಹೈಫ್ರೀಕ್ವೆನ್ಸಿ) ಒಂದು ವಿದ್ಯುತ್ಪ್ರವಾಹವನ್ನು ಮೊದಲು ಪಟ್ಟಿಯ ಮೇಲೆ ಪ್ರಯೋಗಿಸಿದರೆ ಹಿನ್ನೆಲೆಯ ಇತರ ಸದ್ದು ಅಡಗಿ ಸ್ಫುಟವಾದ ಧ್ವನಿಮುದ್ರಣ ದೊರೆಯುವುದೆಂದು ಕಂಡುಹಿಡಿದರು (1927). ಈ ತತ್ತ್ವ ಇಂದು ಸಾರ್ವತ್ರಿಕವಾಗಿ ಉಪಯೋಗದಲ್ಲಿದೆ. ಎರಡನೆಯ ಮಹಾಯುದ್ಧದ ಅನಂತರ ಪ್ಲಾಸ್ಟಿಕ್ಕಿನ ಪಟ್ಟಿಗಳು ಉಪಯೋಗಕ್ಕೆ ಬಂದುವು. ಉಕ್ಕಿನ ತಂತಿ ಮತ್ತು ಪಟ್ಟಿಗಳ ಉಪಯೋಗ ಈಗ ನಿಂತೇ ಹೋಗಿದೆ ಎನ್ನಬಹುದು.



ಚಿತ್ರ 2

**ಕಾಂತೀಕರಣ (ಮ್ಯಾಗ್ನೆಟೈಸೇಷನ್):** ಮುದ್ರಿಸಬೇಕಾದ ಧ್ವನಿಯನ್ನು ಮೊದಲು ಒಂದು ವಿದ್ಯುತ್ಪ್ರವಾಹವನ್ನಾಗಿ (E) ರೂಪಾಂತರಿಸಿಕೊಂಡು ಅನಂತರ ಅದನ್ನು ಒಂದು ತಾಮ್ರದ ತಂತಿಯ ಸುರುಳಿಯಲ್ಲಿ ಹರಿಸಲಾಗುತ್ತದೆ. ಸುರುಳಿಯ ಮಧ್ಯಭಾಗದಲ್ಲಿ ಮೆದು ಕಬ್ಬಿಣದ ದಿಂಡು C (ಕೋರ್) ಇದೆ (ಚಿತ್ರ 1). ದಿಂಡು ಉಂಗುರದ ಆಕಾರದಲ್ಲಿದೆ. ಅದರ ಒಂದು ಭಾಗವನ್ನು ಕತ್ತರಿಸಿದೆ. ವಿದ್ಯುತ್ಪ್ರವಾಹದ ಪ್ರಭಾವದಿಂದ ಕಬ್ಬಿಣ ಕಾಂತವಾಗಿ ಮಾರ್ಪಡುತ್ತದೆ. ಕತ್ತರಿಸಿದ ಭಾಗದಲ್ಲಿ ಅಂದರೆ ಗಾಳಿಯ ಸಂದಿಯಲ್ಲಿ (ಏರ್‌ಗ್ಯಾಪ್) ಪ್ರವಾಹದ ಬಲಕ್ಕೆ ಅನುಗುಣವಾಗಿ ಒಂದು ಕಾಂತಕ್ಷೇತ್ರ (H) ಏರ್ಪಡುತ್ತದೆ. ಧ್ವನಿಯನ್ನು ಅನುಸರಿಸಿ ವಿದ್ಯುತ್ಪ್ರವಾಹ ಏರಿಳಿದ ಹಾಗೆಲ್ಲ ಕಾಂತಕ್ಷೇತ್ರ ಸಹ ಅದೇ ರೀತಿಯಲ್ಲಿ ಏರಿಳಿಯುತ್ತದೆ. ಹೀಗೆ ಧ್ವನಿ ವಿದ್ಯುತ್ಪ್ರವಾಹವನ್ನು ಕಾಂತಕ್ಷೇತ್ರವನ್ನಾಗಿ ಪರಿವರ್ತಿಸುವ ಈ ಉಪಕರಣವೇ ಮುದ್ರಣ ಶಿರ (ರೆಕಾರ್ಡಿಂಗ್ ಹೆಡ್).

B-H ರೇಖೆ : ಕಾಂತಕ್ಷೇತ್ರ H ಬದಲಾದಂತೆ ಉಂಟಾದ ಕಾಂತೀಕರಣ B ಹೇಗೆ ಬದಲಾಗುತ್ತದೆ ಎನ್ನುವುದನ್ನು BH ನಕ್ಷೆಯ (ಗ್ರಾಫ್) ಮೂಲಕ ಅರಿತುಕೊಳ್ಳಬಹುದು. ಮೊದಲು ಕಾಂತಕ್ಷೇತ್ರವಿಲ್ಲದಿದ್ದಾಗ H=0 ಆಗಿರುತ್ತದೆ.

ಆಗ B ಕೂಡ 0 ಆಗಿರುವುದು. ಕ್ಷೇತ್ರವನ್ನು 0 ಯಿಂದ $+H_1$ ವರೆಗೆ ಹೆಚ್ಚಿಸಿದಾಗ B ಯ ಬೆಲೆ ಕ್ರಮವಾಗಿ 0 ಯಿಂದ Aವರೆಗೆ ಹೆಚ್ಚುತ್ತದೆ. ಈಗ H ನ ಬೆಲೆಯನ್ನು +H ನಿಂದ ಮತ್ತೆ 0ಗೆ ತಂದಾಗ B ತನ್ನ ಮೊದಲಿನ ದಾರಿಯನ್ನು ಪುನಃ ಕ್ರಮಿಸುವುದರ ಬದಲು A ಯಿಂದ B ಗೆ ಬರುತ್ತದೆ. ಹೀಗೆಯೇ BCDEFAB ದಾರಿ ಮುಂದುವರಿಯುತ್ತದೆ. ABCDEFA ಸುತ್ತಿಗೆ ಜಡತ್ವ ಕುಣಿಕೆ (ಹಿಸ್ಟರಿಸಸ್ ಲೂಪ್) ಎಂದು ಹೆಸರು. ಇದರ ರೂಪದಿಂದ ಒಂದು ಪದಾರ್ಥದ ಕಾಂತೀಕರಣ ಸ್ವಭಾವ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. (ನೋಡಿ– ಕಾಂತೀಯ–ವಸ್ತುಗಳು)

**ಪಕ್ಷಪಾತ (ಬಯಾಸ್):** ಕಾಂತಧ್ವನಿಮುದ್ರಣ ಮಾಡುವ ಮೊದಲು ಕಾಂತಪದಾರ್ಥವನ್ನು ಇರಿಸಿದ ಕಾಂತೀಕರಣ ಸ್ಥಿತಿಗೆ ಪಕ್ಷಪಾತ ಎಂದು ಹೆಸರು. ಮೊದಮೊದಲು ಇದನ್ನು ಏಕಮುಖ ವಿದ್ಯುತ್ (ಡೈರೆಕ್ಟ್ ಕರೆಂಟ್–ಡಿ.ಸಿ.) ಅಥವಾ ಶಾಶ್ವತ ಕಾಂತದ ಸಹಾಯದಿಂದ ಮಾಡಲಾಗುತ್ತಿತ್ತು. ಇದಕ್ಕೆ ಡಿ.ಸಿ. ಪಕ್ಷಪಾತ ಎಂದು ಹೆಸರು. B–H ಸುತ್ತಿನ ಯಾವುದಾದರೂ ನೇರವಾದ ಭಾಗದ ಮಧ್ಯದಲ್ಲಿ ಬರುವಂಥ B ಬೆಲೆಯನ್ನು ಪಕ್ಷಪಾತವನ್ನಾಗಿ ಮಾಡಬೇಕು. ಇಲ್ಲದಿದ್ದರೆ ಧ್ವನಿಮುದ್ರಣ ವಿಕೃತರೂಪವನ್ನು ತಾಳುವುದು.

**ಪರ್ಯಾಯ ವಿದ್ಯುತ್ ಪ್ರವಾಹದ ಪಕ್ಷಪಾತ (ಆಲ್ಟರ್‌ನೇಟಿಂಗ್ ಕರೆಂಟ್–ಎ.ಸಿ. ಬಯಾಸ್):** ಡಿ.ಸಿ. ಪಕ್ಷಪಾತವನ್ನು ಹಿಡಿತದಲ್ಲಿಟ್ಟುಕೊಂಡು ಕೆಲಸ ಮಾಡುವುದು ಸ್ವಲ್ಪ ಕಷ್ಟವಾದುದು. ಆದ್ದರಿಂದ ಪರ್ಯಾಯ ವಿದ್ಯುತ್ ಪ್ರವಾಹದ ಪಕ್ಷಪಾತವನ್ನು ಬಳಸಲಾಗುತ್ತದೆ. ಚಿತ್ರ 1ರ ತಂತಿಯಲ್ಲಿ ಪರ್ಯಾಯ ವಿದ್ಯುತ್ಪ್ರವಾಹವನ್ನು ಹರಿಸಿದಾಗ ಕಾಂತಕ್ಷೇತ್ರ H+ ಮತ್ತು – ದಿಶೆಗಳ ನಡುವೆ ಬದಲಾಗುತ್ತ ಇರುತ್ತದೆ. ಇದನ್ನೇ ಅನುಸರಿಸಿ B ಸಹ + ಮತ್ತು – ಬೆಲೆಗಳ ನಡುವೆ ಓಲಾಡುತ್ತದೆ. ಈ ಪರ್ಯಾಯ ವಿದ್ಯುತ್ಪ್ರವಾಹದ ಆವೃತ್ತಿಗಳು ಶ್ರವಣಾತೀತವಾಗಿವೆ : ಸೆಕೆಂಡಿಗೆ 35,000 ದಿಂದ 1, 00,000 ಆವೃತ್ತಿ ಸಂಖ್ಯೆಗಳನ್ನುಳ್ಳದ್ದು. ಪರ್ಯಾಯ ವಿದ್ಯುತ್ಪ್ರವಾಹದ ಪಕ್ಷಪಾತದಿಂದ ಧ್ವನಿಮುದ್ರಣದ ಕೆಲಸ ಚೆನ್ನಾಗಿ ನಡೆಯುತ್ತದೆ. ಇದನ್ನು ಉಪಯೋಗಿಸುವುದು ಸುಲಭ.

**ಅಳಿಸುವಿಕೆ (ಇರೇಸಿಂಗ್):** ಹೊಸ ಶಬ್ದವನ್ನು ಧ್ವನಿಮುದ್ರಿಸುವ ಮೊದಲು ಹಿಂದಿದ್ದ ಶಬ್ದವನ್ನು ಅಳಿಸಬೇಕು. ಈ ಕಾರ್ಯಕ್ಕೆ ಡಿ.ಸಿ. ವಿದ್ಯುತ್ಪ್ರವಾಹವನ್ನು ಉಪಯೋಗಿಸುವುದು ಬಲು ಕಷ್ಟ. ಬದಲು, ಎ.ಸಿ. (ಪರ್ಯಾಯ) ವಿದ್ಯುತ್ತನ್ನು ಉಪಯೋಗಿಸಿ ಅಳಿಸಲಾಗುತ್ತದೆ. ಸಾಮಾನ್ಯವಾಗಿ ಅಳಿಸುವುದಕ್ಕೆ ಬೇರೊಂದು ಅಳಿಸುವ ಶಿರ (ಇರೇಜಿಂಗ್ ಹೆಡ್) ಇರುವುದು. ಇದರ ತಂತಿಯಲ್ಲಿ ಪಕ್ಷಪಾತ ಆವರ್ತ ಸಂಖ್ಯೆಯದೇ ಪ್ರವಾಹವನ್ನು (ಸೆಕೆಂಡಿಗೆ 35,000–1,00,000) ಹರಿಸಲಾಗುತ್ತದೆ. ಅನಂತರ ಇದನ್ನು ಟೇಪಿನ ಗಾಳಿಯ ಸಂದಿಯ ಮೂಲಕ ಹಾಯಿಸಲಾಗುತ್ತದೆ. ಆಗ ಅದರ ಮೇಲೆ ಪರ್ಯಾಯ ಕಾಂತಕ್ಷೇತ್ರ H ನ ಪರಿಣಾಮ ಕಡಿಮೆಯಾಗಿದ್ದು ಅನಂತರ ಹೆಚ್ಚಾಗಿ ಪುನಃ ಕಡಿಮೆಯಾಗುತ್ತದೆ.



ಚಿತ್ರ 3



ಚಿತ್ರ 4

ಪಟ್ಟಿಯ ತೆರಪಿನ ಮುಂದೆ ಹಾಯುವಾಗ ಅದರ ಬೆಲೆ ಹಲವು ಸಲ ಋಣಧನ ಚಿಹ್ನೆಗಳನ್ನು ಬದಲಿಸುವಷ್ಟು ಹೆಚ್ಚಿನ ಆವೃತ್ತಿಯ ಪ್ರವಾಹವನ್ನು ಉಪಯೋಗಿಸಬೇಕು. H ಕಡಿಮೆಯಾಗುವಾಗ ಕಾಂತೀಕರಣವೂ ಕಡಿಮೆಯಾಗುತ್ತ ಬಂದು ಕೊನೆಗೆ H ಮತ್ತು

B ಎರಡೂ ಸೊನ್ನೆಯಾಗಿ ಹೋಗುವುವು. ಸಾಮಾನ್ಯವಾಗಿ ಅಳಿಸುವಿಕೆಗೂ ಪಕ್ಷಪಾತಕ್ಕೂ ಒಂದೇ ವೇಗವರ್ಧಕದಿಂದ ಪರ್ಯಾಯ ವಿದ್ಯುತ್ಪ್ರವಾಹವನ್ನು ಒದಗಿಸಲಾಗುತ್ತದೆ.

ಒಂದು ಪಟ್ಟಿಯ ಸುರುಳಿಯನ್ನು (ರೀಲ್) ಅಳಿಸಲು ಬಲ್ಬ್ ಇರೇಜರ್ ಎಂಬ ಯಂತ್ರವನ್ನು ಉಪಯೋಗಿಸಲಾಗುತ್ತದೆ. ಇದರಲ್ಲಿ ಶಕ್ತಿಯುತವಾದ ಒಂದು ದೊಡ್ಡ



ಚಿತ್ರ 5 ಕಾಂತ ಮುದ್ರಣದ ವ್ಯವಸ್ಥೆಯ ಚಿತ್ರ

ವಿದ್ಯುತ್ಕಾಂತವಿದೆ. ಇದರ ಮೂಲಕ ಪರ್ಯಾಯ ವಿದ್ಯುತ್ಪ್ರವಾಹವನ್ನು ಹರಿಸಿದಾಗ ಉಂಟಾಗುವ ಪರ್ಯಾಯ ಆವರ್ತಕ್ಷೇತ್ರದ ಸಹಾಯದಿಂದ ಸುರುಳಿಗಳನ್ನು ಕ್ಷಿಪ್ರದಲ್ಲಿಯೇ ಅಳಿಸಬಹುದು. ಇದು ಪಟ್ಟಿಯ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆಯಾಗಿ ಅಳಿಸುವುದಕ್ಕಿಂತ ಉತ್ತಮವಾದ ಕ್ರಮ.

**ಪಟ್ಟಿ ಧ್ವನಿಮುದ್ರಕ (ಟೇಪ್ ರೆಕಾರ್ಡರ್):** ಇದರ ಮುಖ್ಯವಾದ ಭಾಗಗಳಿವು– ಧ್ವನಿಮುದ್ರಿಸುವ ಭಾಗ, ಮರುನುಡಿಸುವ ಭಾಗ, ಪಟ್ಟಿ ಮತ್ತು ಅದನ್ನು ಓಡಿಸುವ ಭಾಗ.

**ಮುದ್ರಿಸುವ ವಿಧಾನ :** ಯಾವುದೇ ರೀತಿಯಲ್ಲಾದರೂ ಉಂಟಾದ ಧ್ವನಿಯನ್ನು ಸೂಕ್ಷ್ಮ ಧ್ವನಿವರ್ಧಕ ವಿದ್ಯುತ್ತಿನ ವೋಲ್ಟೇಜಾಗಿ ಪರಿವರ್ತಿಸಲಾಗುತ್ತದೆ. ಈ ವೋಲ್ಟೇಜುಗಳ ವ್ಯತ್ಯಾಸರೂಪ ಮೂಲ ಶಬ್ದದ ರೂಪವನ್ನೇ ಹೊಂದಿರುತ್ತದೆ. ಆದರೆ ಇವುಗಳ ಶಕ್ತಿ ಕಡಿಮೆಯಾದ್ದರಿಂದ ಎಲೆಕ್ಟ್ರಾನ್ ಕೊಳವೆ ಅಥವಾ ಟ್ರಾನ್ಸಿಸ್ಟರುಗಳಿಂದ ಕೂಡಿದ ಒಂದು ಪ್ರವರ್ಧಕದ ಸಲಕರಣೆಯನ್ನು ಉಪಯೋಗಿಸಿ ವೋಲ್ಟೇಜನ್ನು ಪ್ರವರ್ಧಿಸಲಾಗುತ್ತದೆ. ಈ ಹೆಚ್ಚಿನ ಶಕ್ತಿಯ ವೋಲ್ಟೇಜ್ ತಕ್ಕಮಟ್ಟಿನ ವಿದ್ಯುತ್ಪ್ರವಾಹವನ್ನು ಒಂದು ತಂತಿಯ ಸುರುಳಿಯಲ್ಲಿ ಹರಿಸುತ್ತದೆ. ಉಂಗುರದ ಒಂದು ಭಾಗದಲ್ಲಿ ಅದನ್ನು ಕತ್ತರಿಸಿ ಗಾಳಿಯ ತೆರಪನ್ನುಂಟುಮಾಡುತ್ತಾರೆ. ಈ ಸ್ಥಳದಿಂದ ಮೊದಲಿನ ಶಬ್ದದ ರೂಪವನ್ನೇ ಅನುಸರಿಸಿ ಬದಲಾಗುತ್ತಿರುವ ಕಾಂತಕ್ಷೇತ್ರ ಉಂಟಾಗುತ್ತದೆ. ಗಾಳಿ ತೆರಪಿನ ಮುಂದೆ ಒಂದೇ ವೇಗದಿಂದ ಹಾಯುತ್ತಿರುವ ಪಟ್ಟಿಯ ಮೇಲೆ ಸವರಿರುವ ಕಾಂತಸಾಮಗ್ರಿ ಬದಲಿಸುತ್ತಿರುವ ಕ್ಷೇತ್ರವನ್ನು ಅನುಸರಿಸಿ ವಿವಿಧ ಮಟ್ಟದಲ್ಲಿ ಕಾಂತೀಕೃತವಾಗುತ್ತದೆ. ಇದೇ ಧ್ವನಿಮುದ್ರಣ. ಪಟ್ಟಿಯ ಮೇಲೆ ಮುದ್ರಣವಾಗುವ ಮೊದಲು ಅದು ಇನ್ನೊಂದು ಸುರುಳಿಯಲ್ಲಿರುವ ಕಬ್ಬಿಣದ ಉಂಗುರದ ಗಾಳಿ ತೆರಪಿನ ಮೂಲಕ ಹಾದುಹೋಗಿರುತ್ತವೆ. ಈ ಉಂಗುರಕ್ಕೆ ಅಳಿಸುವ ಶಿರ ಎಂದು ಹೆಸರು. ಇದರ ತಂತಿಯಲ್ಲಿ ಶ್ರವಣಾತೀತ (ಅಲ್ಟ್ರಾಸಾನಿಕ್) ಶಬ್ದದ ಅಂದರೆ ಸೆಕೆಂಡಿಗೆ 20,000 ಕ್ಕೂ ಹೆಚ್ಚಿನ ಆವರ್ತ ಸಂಖ್ಯೆಯ ವಿದ್ಯುತ್ಪ್ರವಾಹ ಹರಿಯುವುದರಿಂದ ಪಟ್ಟಿಯಲ್ಲಿ ಹಿಂದೆ ಇದ್ದ ಕಾಂತೀಕರಣಗಳು ಈಗ ಹೊಸ ಧ್ವನಿಮುದ್ರಣವನ್ನು ಸ್ವೀಕರಿಸಲು ಸಿದ್ಧವಾಗುತ್ತವೆ.

**ಧ್ವನಿಯ ಮರುನುಡಿಸಿಕೆಯ ವಿಧಾನ :** ಧ್ವನಿಮುದ್ರಣವಾದ ಪಟ್ಟಿಯಿಂದ ಧ್ವನಿಯನ್ನು ಹೊರಡಿಸುವುದರಲ್ಲಿ ಈಗ ಮಾಡಿದ ಕಾರ್ಯವನ್ನೇ ತಿರುಗುಮುರುಗು ಮಾಡಬೇಕಾಗುತ್ತದೆ. ಧ್ವನಿಮುದ್ರಿತವಾದ ಪಟ್ಟಿಯನ್ನು ಮರುನುಡಿಸುವ ಶಿರ (ಪ್ಲೇಬ್ಯಾಕ್ ಹೆಡ್) ಎಂಬ ಮೆದು ಕಬ್ಬಿಣದ ಉಂಗುರದ ಗಾಳಿ ತೆರಪಿನ ಮುಂದೆ ಸರಿಸಿದರೆ ಆಗ ಉಂಗುರವನ್ನು ಸುತ್ತಿರುವ ತಂತಿಯಲ್ಲಿ ವಿದ್ಯುತ್ಪ್ರವಾಹಗಳು ಉದ್ಭವಿಸುತ್ತವೆ ; ಇವುಗಳ ರೂಪ ಪಟ್ಟಿಯಲ್ಲಿರುವ ಕಾಂತೀಕರಣದ ಶಕ್ತಿಯ ರೂಪವನ್ನೇ ಬಿಂಬಿಸುತ್ತದೆ. ಈ ವಿದ್ಯುತ್ಪ್ರವಾಹವನ್ನು ಪ್ರವರ್ಧಿಸಿ ಒಂದು ಧ್ವನಿವರ್ಧಕದ ಮೂಲಕ ಹರಿಸಿದರೆ ಆಗ ಮೊದಲಿನ ಶಬ್ದವನ್ನೇ ಅನುಕರಿಸುವ ಶಬ್ದ ಧ್ವನಿವರ್ಧಕದಲ್ಲಿ ಉಂಟಾಗುತ್ತದೆ.

**ಕಾಂತ ಪಟ್ಟಿ (ಟೇಪ್) :** ಸಾಮಾನ್ಯವಾಗಿ ಕಾಂತೀಕರಿಸಲು ಸಾಧ್ಯವಾಗುವ ಎಲ್ಲ ವಸ್ತುಗಳನ್ನೂ (ತಂತಿ, ಕಾಗದದ ಪಟ್ಟಿ, ಫಿಲ್ಮ್, ಪ್ಲಾಸ್ಟಿಕ್ ಪಟ್ಟಿ ಇತ್ಯಾದಿ) ಧ್ವನಿಮುದ್ರಣ ಮಾಡುವ ಮಾಧ್ಯಮವನ್ನಾಗಿ ಉಪಯೋಗಿಸಲಾಗಿದೆ. ಆದರೆ ಈಗ ಪ್ಲಾಸ್ಟಿಕ್ ಪಟ್ಟಿ ಬಂದು ಇವೆಲ್ಲವನ್ನೂ ಸಂಪೂರ್ಣವಾಗಿ ಮೂಲೆಗೆ ಒತ್ತಿದೆಯೆನ್ನಬಹುದು. ಪಟ್ಟಿಯಲ್ಲಿ ಸಾಮಾನ್ಯವಾಗಿ ಸೆಲ್ಯುಲೋಸ್ ಅಸಿಟೇಟ್ ಎಂಬ ಪಾಲಿಮರಿನಿಂದ ತಯಾರಾದ ವಸ್ತುವೊಂದಿದೆ. ತಯಾರಾದಾಗ ಇದು 15 ಸೆಂಮೀ ಅಥವಾ 60 ಸೆಂಮೀ ಅಗಲದ



ಚಿತ್ರ 6 ಧ್ವನಿಯ ಮರುನುಡಿಸಿಕೆಯ ವಿಧಾನವನ್ನು ಸೂಚಿಸುವ ಚಿತ್ರ

ಸುರುಳಿ ಸುತ್ತಿನ ರೂಪದಲ್ಲಿರುತ್ತದೆ. ಅನಂತರ ಇದನ್ನು ಸಣ್ಣ ಅಗಲದ ರಾಟೆಯನ್ನಾಗಿ ಕತ್ತರಿಸುತ್ತಾರೆ. ಇದರ ದಪ್ಪ ಒಂದು ಮಿಮೀ. ಗೂ ಕಡಿಮೆ. ಕಾಂತೀಕೃತವಾಗುವ ವರ್ಣದ್ರವ (ಪಿಗ್‌ಮೆಂಟ್) ವಸ್ತುವನ್ನು ಮೂಲ ಪಟ್ಟಿಯ ಮೇಲೆ ಲೇಪನ ಮಾಡಲಾಗುತ್ತದೆ. ಇದರಲ್ಲಿ ಫೆರಿಕ್ ಆಕ್ಸೈಡಿನ ಸಣ್ಣ ಸೂಜಿಯಾಕಾರದ ಕಣಗಳಿವೆ. ಇವನ್ನು ಪಟ್ಟಿಯ ಉಪಯೋಗಕ್ಕಾಗಿಯೇ ವಿಶೇಷವಾಗಿ ತಯಾರು ಮಾಡುತ್ತಾರೆ. ಕಣಗಳು ಸಣ್ಣದಾದಷ್ಟು ಉತ್ತಮ. ಫೆರಿಕ್ ಆಕ್ಸೈಡನ್ನು ಅಂಟುಪದಾರ್ಥ ಕರಗಿಸುವ ಪದಾರ್ಥ ಮತ್ತು ಮೃದುಚಾಲಕ ಎಣ್ಣೆ (ಲೂಬ್ರಿಕೆಂಟ್) ಇವುಗಳೊಡನೆ ಬೆರೆಸಿ ಮೂಲ ಪಟ್ಟಿಯ ಮೇಲೆ ಲೇಪನ ಮಾಡಲಾಗುತ್ತದೆ. ಆಕ್ಸೈಡಿನ ಲೇಪನದ ದಪ್ಪ ಮೂಲ ಪಟ್ಟಿಯ ಸುಮಾರು (1\3) ರಷ್ಟಿರುತ್ತದೆ.



ಚಿತ್ರ 7 ಕಾಂತಪಟ್ಟಿ ಮುದ್ರಣ ಮತ್ತು ಮರುನುಡಿಸಿಕೆಯ ವ್ಯವಸ್ಥೆ

**ಪಟ್ಟಿಯನ್ನು ಓಡಿಸುವ ವಿಧಾನ:** ಪಟ್ಟಿಯನ್ನು ಸುತ್ತಿರುವ ಸುರುಳಿ ತಟ್ಟೆಯೂ ಅದನ್ನು ಪಡೆಯುವ ತಟ್ಟೆಯೂ ಏಕವೇಗದಿಂದ ಒಂದೇ ದಿಶೆಯಲ್ಲಿ ಆವರ್ತಿಸುವ ಏರ್ಪಾಡು ಇದೆ. ಪಟ್ಟಿ ಹೀಗೆ ಚಲಿಸುವಾಗ ಅದರ ಒಂದೊಂದು ಅಂಶವೂ ಕಾಂತಶಿರಗಳ ಮುಂದೆ ಬರುವಂಥ ವ್ಯವಸ್ಥೆ ಉಂಟು.

**ಉಪಯೋಗಗಳು :** ಕಾಂತ ಧ್ವನಿಮುದ್ರಣದ ಕೆಲವು ಮುಖ್ಯ ಉಪಯೋಗಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಸಂಗೀತ ಮತ್ತಿತರ ಕಾರ್ಯಕ್ರಮಗಳನ್ನು ಪೂರ್ವಭಾವಿಯಾಗಿ ಧ್ವನಿಮುದ್ರಿಸಿ ಅನಂತರ ರೇಡಿಯೋದಲ್ಲಿ ಅಥವಾ ಟೆಲಿವಿಷನ್ನಿನಲ್ಲಿ ಪ್ರಸಾರ ಮಾಡಬಹುದು. ಹಲವು ಧ್ವನಿ ಮರುನುಡಿಸುವಿಕೆ ಯಂತ್ರಗಳಲ್ಲಿ ಉಪಯೋಗಿಸಿ ಇವುಗಳಲ್ಲಿ ಉದ್ಭವವಾದ ಶಬ್ದಗಳನ್ನು ಕಲೆಸಿದರೆ ಆಗ ಮರುಧ್ವನಿಯ ತರಹೆಯ ಶಬ್ದ ಉಂಟಾಗುತ್ತದೆ. ನಾಟಕಗಳಲ್ಲಿ ಈ ತರಹೆಯ ಕೃತಕ ಧ್ವನಿಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ದೊಡ್ಡ ದೊಡ್ಡ ಸಭಾಂಗಣಗಳಲ್ಲಿ ಧ್ವನಿವರ್ಧಕ ವ್ಯವಸ್ಥೆ ಮಾಡಲು ಸುತ್ತುತ್ತಿರುವ ಕಾಂತ ತಟ್ಟೆಯನ್ನು ಉಪಯೋಗಿಸುತ್ತಾರೆ. ಉಪನ್ಯಾಸವನ್ನು ಪ್ರವರ್ಧಕದಿಂದ ನೇರವಾಗಿ ಹಲವು ಧ್ವನಿವರ್ಧಕಗಳಿಗೆ ಕೊಟ್ಟರೆ ನೇರವಾದ ಧ್ವನಿಗೂ ಧ್ವನಿವರ್ಧಕದ ಧ್ವನಿಗೂ ಕಾಲವ್ಯತ್ಯಾಸವಿರುವುದರಿಂದ ಕೇಳುವವರಿಗೆ ಬೆರಕೆಯ ಶಬ್ದದ ಪರಿಣಾಮ ಆಗುತ್ತದೆ. ಆದ್ದರಿಂದ ನೇರವಾದ ಶಬ್ದ ಒಂದು ಧ್ವನಿವರ್ಧಕದ ಸ್ಥಳಕ್ಕೆ ಬರಲು ಎಷ್ಟು ಕಾಲ ಬೇಕೋ ಅಷ್ಟು ಕಾಲ ವಿಳಂಬದ ತರುವಾಯ ಧ್ವನಿವರ್ಧಕಕ್ಕೆ ಧ್ವನಿ ಬರುವಂತೆ ಈ ತಟ್ಟೆ ಅವಕಾಶ ಮಾಡಿಕೊಡುತ್ತದೆ. ದೂರವೀಕ್ಷಣ (ಟೆಲಿವಿಷನ್) ಕಾರ್ಯಕ್ರಮದಲ್ಲಿ ಎರಡು ಅಥವಾ ಹೆಚ್ಚು ಮೆಗಾಹರ್ಟ್ಸ್‌ಗಳಷ್ಟು ಆವೃತ್ತಿ ಸಂಖ್ಯೆಯ ಸಂಜ್ಞೆಗಳನ್ನು ಧ್ವನಿಮುದ್ರಣ ಮಾಡಬೇಕಾಗುತ್ತದೆ. ಇದಕ್ಕಾಗಿ ವಿಶೇಷವಾದ ಉಪಕರಣಗಳು ಬೇಕಾಗುತ್ತವೆ.

ಸಂಪರ್ಕ ಸಾಧನಗಳಲ್ಲಿ ಧ್ವನಿಮುದ್ರಕದ ಕೆಲವು ಉಪಯೋಗಗಳು ಹೀಗಿವೆ. ರಹಸ್ಯದ ಮಾತುಗಳನ್ನು ಬೆರೆಸಿ ಮತ್ತೆ ಆರಿಸಿ ಬೇರೆಯವರಿಗೆ ಸುದ್ದಿ ಗೊತ್ತಾಗದೆ ತಲುಪಬೇಕಾದವರಿಗೆ ಮಾತ್ರ ಗೊತ್ತಾಗುವಂತೆ ಮಾಡುವ ಸಾಧನಗಳು; ದೀರ್ಘಕಾಲ ಒಂದೇ ಸಮನೆ ಮುದ್ರಣ ಮಾಡುವುದು ; ದೂರವಾಣಿಯನ್ನು ಉತ್ತರಿಸುವ ಯಂತ್ರ ; ಚಿತ್ರಗಳನ್ನು ಕಾಂತ ರೂಪದಲ್ಲಿ ಮುದ್ರಿಸುವುದು ; ಆಸ್ಪತ್ರೆಗಳಲ್ಲಿ ರೋಗಿಗಳ ಚರಿತ್ರೆಯ ಧ್ವನಿಮುದ್ರಣ ; ಮನಶಾಸ್ತ್ರ ಸಂಬಂಧವಾದ ರೋಗಿಗಳ ಮಾತುಕತೆಗಳ ಧ್ವನಿಮುದ್ರಣ ; ಇತ್ಯಾದಿ. ವಿದ್ಯಾಭ್ಯಾಸ ಮತ್ತು ಕಲಿಯುವಲ್ಲಿ ಮಾತುಗಾರಿಕೆಯನ್ನು ಕಲಿಸಲು, ಭಾಷೆಗಳನ್ನು ಕಲಿಸಲು, ಸಂಗೀತವನ್ನು ಕಲಿಸಲು, ನಾಟಕದ ಅಭ್ಯಾಸದಲ್ಲಿ ಧ್ವನಿಮುದ್ರಕದ ಉಪಯೋಗ ಉಂಟು.


ಚಿತ್ರ 8 ಟೇಪ್ ರೆಕಾರ್ಡರ್ ಯಂತ್ರ

ವೈಜ್ಞಾನಿಕ ಸಂಶೋಧನೆಯಲ್ಲಿ ಅಂಕಿ-ಅಂಶಗಳು ಮತ್ತು ಸಮಾಚಾರಗಳನ್ನು ಸೂತ್ರ ರೂಪದಲ್ಲಿ ಧ್ವನಿಮುದ್ರಿಸಿ ಕೊಳ್ಳಲಾಗುವುದು. ಗಣಕಯಂತ್ರಗಳಲ್ಲಿ ಅತಿ ಮುಖ್ಯವಾದ ಜ್ಞಾಪಕಯಂತ್ರ ಎಂದರೆ ಒಂದು ಕಾಂತ ಧ್ವನಿಮುದ್ರಕ ಪೀಪಾಯಿ. ಗಲಭೆ ಗೊಂದಲದ ಮಧ್ಯೆ ಹುದುಗಿರುವ ಕ್ಷೀಣವಾದ ಆವಶ್ಯಕ ಸಮಾಚರವನ್ನು ಅದು ನಿರ್ದಿಷ್ಟ ಅವಧಿಯಲ್ಲಿ ಪುನರುಚ್ಚಾರವಾಗುತ್ತಿದ್ದರೆ ಅದನ್ನು ಕಂಡುಹಿಡಿಯಬಹುದು.

ಕಾರ್ಖಾನೆಗಳಲ್ಲಿ ಯಂತ್ರಗಳಿಗೆ ಸ್ವಯಂಚಾಲಿತವಾಗಿ ಕೆಲಸ ಮಾಡಲು ಆಜ್ಞೆಗಳನ್ನು ಸೂತ್ರರೂಪದಲ್ಲಿ ಧ್ವನಿಮುದ್ರಿತವಾಗಿಸಬಹುದು. ವಸ್ತುಗಳ ಪರೀಕ್ಷೆಯ ಸುತ್ತುಗಳನ್ನು ನಿರ್ಬಂಧಿಸಬಹುದು. ಮುಖ್ಯವಾದ ಮಾತುಕತೆಗಳನ್ನು ಧ್ವನಿಮುದ್ರಿಸಿ ಕೊಳ್ಳಬಹುದು. (ಎನ್.ಕೆ.ಎಸ್.)

**ಕಾಂತ ರಸಾಯನವಿಜ್ಞಾನ :** ಪರಮಾಣ್ವಿಕ ಮತ್ತು ಆಣ್ವಿಕ ರಚನೆಗಳಿಗೂ ಒಂದು ಕಾಂತಕ್ಷೇತ್ರಕ್ಕೂ ಇರುವ ಅಂತರಸಂಬಂಧವನ್ನು ಅಭ್ಯಸಿಸುವ ರಸಾಯನವಿಜ್ಞಾನ ವಿಭಾಗ (ಮ್ಯಾಗ್ನೆಟೊಕೆಮಿಸ್ಟ್ರಿ). ಕಾಂತದಿಂದ ಆಕರ್ಷಕವಾಗುವ ವಸ್ತುಗಳಲ್ಲಿ ಕಬ್ಬಿಣ ಪ್ರಧಾನವಾದದ್ದು ನಿಜ. ಈ ಗುಣಕ್ಕೆ ಕಾಂತಪ್ರವೃತ್ತಿ (ಮ್ಯಾಗ್ನೆಟಿಕ್ ಸಸೆಪ್ಟಿಬಿಲಿಟಿ) ಎಂದು ಹೆಸರು. ಕಾಂತಪ್ರವೃತ್ತಿ ಇರುವ ಇತರ ವಸ್ತುಗಳೂ ಇವೆ-ಕೆಲವು ಇತರ ಲೋಹಗಳು, ಆಕ್ಸಿಜನ್ ಮುಂತಾದ ಅನಿಲಗಳು, ಮುಕ್ತರ್‍ಯಾಡಿಕಲ್‌ಗಳು ಎಂದು ಹೆಸರಿರುವ ಅಷ್ಟೊಂದು ಸ್ಥಿರತೆ ಇರದ ಬಿಡಿಮೂಲ ಘಟಕಗಳು, ಇತ್ಯಾದಿ. 1845ರಲ್ಲಿ ಫ್ಯಾರಡೆ ತನ್ನ ಒಂದು ಪ್ರಯೋಗದಲ್ಲಿ ಎಲ್ಲ ವಸ್ತುಗಳನ್ನೂ ಕಾಂತಪ್ರವೃತ್ತಿಯ ದೃಷ್ಟಿಕೋನದಿಂದ ಪರೀಕ್ಷಿಸಿದ. ಒಂದು ವಸ್ತುವನ್ನು ಅಧಿಕ ಕಾಂತಸಾಮರ್ಥ್ಯ (ಮ್ಯಾಗ್ನೆಟಿಕ್ ಸ್ಟ್ರೆಂತ್) ಇರುವ ಕ್ಷೇತ್ರದಲ್ಲಿಟ್ಟಾಗ ಅದು ಕಾಂತಕ್ಷೇತ್ರದ ಕಡೆಗೆ ಆಕರ್ಷಿತವಾದರೆ ಅದನ್ನು ಅನುಕಾಂತೀಯವೆಂದೂ (ಪ್ಯಾರಾಮ್ಯಾಗ್ನೆಟಿಕ್) ವಿಕರ್ಷಿತವಾದರೆ ಅದನ್ನು ಪ್ರತಿಕಾಂತೀಯವೆಂದೂ (ಡಯಾಮ್ಯಾಗ್ನೆಟಿಕ್) ಎಂದೂ ಹೆಸರಿಸಿದ. ಕಾಂತಕ್ಷೇತ್ರದಿಂದ ವಸ್ತು ಎಷ್ಟು ಪ್ರಭಾವಿತವಾಗುತ್ತದೆ ಎಂಬುದರ ಮಾನಕವೇ ಆ ವಸ್ತುವಿನ ಕಾಂತ ಪ್ರವೃತ್ತಿ. ವಸ್ತುವಿನಲ್ಲಿ ಮೂಡುವ ಕಾಂತಪ್ರವೃತ್ತಿ ಅನುಕಾಂತೀಯಗಳಲ್ಲಿ ಹೆಚ್ಚು. ಉಷ್ಣತೆಯಲ್ಲಿನ ಬದಲಾವಣೆ ಪ್ರತಿಕಾಂತೀಯಗಳ ಈ ಗುಣವನ್ನು ವ್ಯತ್ಯಾಸ ಮಾಡಲಾರದು ಎಂಬುದನ್ನು ಪಿ. ಕ್ಯೂರಿ ಕಂಡುಹಿಡಿದಿದ್ದಾನೆ. ಕಾಂತದಿಂದ ಕಬ್ಬಿಣ ಬಲು ಹೆಚ್ಚಾಗಿ ಆಕರ್ಷಿಕವಾಗುವುದರಿಂದಲೂ ಅದಕ್ಕೆ ಇತರ ವಿಶೇಷ ಗುಣಗಳಿರುವುದರಿಂದಲೂ ಅದನ್ನು ಫೆರ್ರೋಕಾಂತೀಯವೆಂದೂ (ಫೆರ್ರೋಮ್ಯಾಗ್ನೆಟಿಕ್) ಕರೆಯುತ್ತಾರೆ. ಕಾಂತಕ್ಷೇತ್ರ ಸಾಮರ್ಥ್ಯದಿಂದ ಈ ರೀತಿ ಪ್ರಭಾವಿತವಾಗುವ ವಸ್ತುಗಳು ಪರಮಾಣುಗಳು ಅಣುಗಳು; ಹರಳುಗಳು, ರಸಾಯನವಸ್ತುಗಳು, ಕಡೆಗೆ ಬಿಡಿಮೂಲಘಟಕಗಳೂ ಆಗಿರಬಹುದು, ಲೋಹಗಳಲ್ಲಿ ಪೆಲೇಡಿಯಂ, ಪ್ಲಾಟಿನಂ ಮುಂತಾದುವುಗಳಿಗೆ ಅದರಲ್ಲೂ ವಿರಳ ಖನಿಜ (ರೇರ್ ಅರ್ತ್) ಗುಂಪಿಗೆ ಸೇರಿದ ಲೋಹಗಳಿಗೆ ಅನುಕಾಂತೀಯ ಗುಣಗಳಿವೆ. ಸಾಧಾರಣವಾಗಿ ಉತ್ತಮ ವಿದ್ಯುದ್ವಾಹಕಗಳಿಗೆ ಈ ಗುಣ ಕಡಿಮೆ.

ಸಾಧಾರಣವಾಗಿ ರಸಾಯನವಸ್ತುಗಳು ಪ್ರತಿಕಾಂತೀಯವಾಗಿರುವುವು. ಆದರೆ ಆ ಗುಣ ಪ್ರಕಟಿತವಾಗಿಯೇ ಇರಬೇಕೆಂದಿಲ್ಲ. ಈ ಗುಣಕ್ಕೂ ರಸಾಯನವಸ್ತುಗಳಿಗೂ ಇರುವ ಸಂಬಂಧ ಪರಮಾಣುಗಳಲ್ಲಿನ ಋಣವಿದ್ಯುತ್ತಿನಲ್ಲಿ ಎಲೆಕ್ಟ್ರಾನುಗಳಿಂದ. ಎಲೆಕ್ಟ್ರಾನುಗಳು ತಮ್ಮ ತಮ್ಮ ಅಕ್ಷಗಳ ಸುತ್ತಲೂ ಆವರ್ತಿಸುತ್ತಿರುತ್ತವೆ. ಈ ಆವರ್ತನೆಯಿಂದ ಅವು ಸಹ ಕಾಂತಸಾಮರ್ಥ್ಯ ಪಡೆದಿರುತ್ತವೆ. ಸಾಧಾರಣವಾಗಿ ಧಾತುಗಳಲ್ಲಿ ಎಲೆಕ್ಟ್ರಾನುಗಳು ಜೊತೆಯಾಗಿ ಇದ್ದು ವಿರುದ್ಧ ದಿಕ್ಕಿನಲ್ಲಿ ತಿರುಗುವುದರಿಂದ ಒಂದರ ಪರಿಣಾಮವನ್ನು ಇನ್ನೊಂದು ಹೊಡೆದು ಹಾಕುತ್ತದೆ. ಹೀಗಾಗಿ ಇವುಗಳ ನಿವ್ವಳ ಕಾಣಿಕೆ ಸೊನ್ನೆ (ಆಗ ಕಕ್ಷಕ ಚಲನೆಯಲ್ಲಿ ಪ್ರತಿಕಾಂತೀಯತೆ ಕಾಣಿಸಿಕೊಳ್ಳುತ್ತದೆ.) ಆದರೆ ಜೊತೆಗೂಡದ ಒಂಟಿ ಎಲೆಕ್ಟ್ರಾನುಗಳು ಒಂದು ಧಾತುವಿನಲ್ಲಿ ಇದ್ದಾಗ ಧಾತುವಿಗೆ ಸಹಜವಾಗಿ ಅನುಕಾಂತೀಯ ಗುಣ ಇರುವುದು. ಒಂಟಿ ಎಲೆಕ್ಟ್ರಾನುಗಳು ಪರಮಾಣುಗಳಲ್ಲಿ ಹೆಚ್ಚಾಗಿ ಇದ್ದರೆ ಅಂಥ ಧಾತುಗಳು ಅಧಿಕ ಅನುಕಾಂತಪ್ರವೃತ್ತಿ ಉಳ್ಳವಾಗಿರುತ್ತವೆ. ಒಂಟಿ ಎಲೆಕ್ಟ್ರಾನಿಗೂ ಒಂಟಿ ಎಲೆಕ್ಟ್ರಾನುಗಳಿಂದ ಕೂಡಿರುವ ರಸಾಯನ ವಸ್ತುಗಳಿಗೂ ಕಾಂತಭ್ರಮಣಾಂಕ (ಮ್ಯಾಗ್ನೆಟಿಕ್ ಮೊಮೆಂಟ್) ಇರುವಂತೆಯೇ ಧನವಿದ್ಯುತ್ತಿರುವ ಪ್ರೋಟಾನಿಗೂ ಕಾಂತಭ್ರಮಣಾಂಕವಿದೆ. ಆದರೆ ಇದು ಎಲೆಕ್ಟ್ರಾನಿನ ಎರಡು ಸಾವಿರದಲ್ಲೊಂದು ಭಾಗ ಮಾತ್ರ.

ಕಬ್ಬಿಣದ ಪರಮಾಣುವಿನಲ್ಲಿ ಒಂಟಿ (ವೇಲೆನ್ಸ್) ಎಲೆಕ್ಟ್ರಾನುಗಳು ಇವೆ. ಆದ್ದರಿಂದ ಸಹಜವಾಗಿಯೇ ಕಾಂತಕ್ಷೇತ್ರದ ಪ್ರಭಾವ ಆ ಪರಮಾಣುವಿನ ಮೇಲೆ ಹೆಚ್ಚು. ಕಬ್ಬಿಣದ ಪರಮಾಣುವನ್ನು ಫೆರ್ರೊಕಾಂತೀಯ (ಫೆರ್ರೊಮ್ಯಾಗ್ನೆಟಿಕ್) ಗುಂಪಿಗೆ ಸೇರಿಸಿದ್ದಾರೆ. ಅದಕ್ಕೆ ಕಾಂತವಾಗುವ ಶಕ್ತಿ ಇದೆ. ಇದರ ಲೋಹದ ಪರಮಾಣುಗಳ ಕಾಂತ ಭ್ರಮಣಾಂಕದ ಪರಿಣಾಮ ಸ್ಥಿರ. ಅಲ್ಲದೆ ಒಂದು ಕ್ರಮದಲ್ಲಿ ಇದರ ಪರಮಾಣುಗಳು ವ್ಯವಸ್ಥಿತವಾಗಬಲ್ಲುವಾದ್ದರಿಂದ ಕಬ್ಬಿಣ ಕಾಂತವಾಗಬಲ್ಲುದು. ಆದರೆ ಮ್ಯಾಂಗನೀಸ್ ಲೋಹ ಇದಕ್ಕೆ ವಿರುದ್ಧ. ಅದರ ಪರಮಾಣುಗಳಿಗೆ ಈ ಗುಣವಿಲ್ಲ. ಆದ್ದರಿಂದ ಮ್ಯಾಂಗನೀಸನ್ನು ಪ್ರತಿಫೆರ್ರೊಕಾಂತೀಯ ಗುಂಪಿಗೆ (ಆಂಟಿಫೆರ್ರೋಮ್ಯಾಗ್ನೆಟಿಕ್) ಸೇರಿಸಿದ್ದಾರೆ. ವಸ್ತುಗಳಲ್ಲಿ ಈ ರೀತಿಯ ವೈವಿಧ್ಯ ಏಕೆ ಎಂಬುದನ್ನು ಖಚಿತವಾಗಿ ಹೇಳುವುದು ಬಲು ಕಷ್ಟ. ಕಬ್ಬಿಣ, ಕೋಬಾಲ್ಟ್, ನಿಕಲ್ ಲೋಹಗಳು, ಯುರೇನಿಯಂ ಹೈಡ್ರೈಡ್ ಮತ್ತು ನಿಕಲ್ ಸಲ್ಫೈಡುಗಳು ಫೆರ್ರೊಕಾಂತೀಯಗಳು; ಮ್ಯಾಂಗನೀಸ್, ಟೈಟಾನಿಯಂ, ಯುರೇನಿಯಂಗಳ ಕ್ಲೋರೈಡುಗಳು ಮತ್ತು ನೆಪ್ಚೂನಿಯಂ ಡೈಆಕ್ಸೈಡ್ ಪ್ರತಿಫೆರ್ರೊಕಾಂತೀಯಗಳು.

ಆಕ್ಸಿಜನ್ನಿನ ಪರಮಾಣುವಿನಲ್ಲಿ ಎರಡು ಒಂಟಿ ಎಲೆಕ್ಟ್ರಾನುಗಳು ಇವೆ. ಆದ್ದರಿಂದ ಇದಕ್ಕೆ ಅನುಕಾಂತೀಯ ಗುಣವಿದೆ. ಈ ಗುಣದಿಂದ ಉಳಿದ ಅನಿಲಗಳು ನೈಟ್ರಸ್ ಆಕ್ಸೈಡ್, ಕ್ಲೋರೀನಿನ ಡೈ ಮತ್ತು ಟ್ರೈಆಕ್ಸೈಡುಗಳು. ಇದೇ ರೀತಿ ಬಿಡಿ ಮೂಲ ಘಟಕಗಳಲ್ಲಿಯೂ ಎರಡು ಒಂಟಿ ಎಲೆಕ್ಟ್ರಾನುಗಳಿರುವುದರಿಂದ ಅವೂ ಅನುಕಾಂತೀಯಗಳೇ. ಉದಾಹರಣೆಗೆ ಟ್ರೈ ಫೀನೈಲ್ ಮೀಥೈಲ್. ಇದು ಹೆಕ್ಸಫಿನಲೀನ್ ಈಥೇನನ್ನು ಬೆಂಜೀನಿನಲ್ಲಿ ವಿಲೀನವಾಗುವುದರಿಂದ ಬರುತ್ತದೆ. ಇನ್ನೊಂದು ಡೈಫಿನೈಲ್-ಪಿಕ್ರೈಲ್ ಹೈಡ್ರಜೈಲ್, ಇದು ಘನರೂಪದಲ್ಲಿಯೂ ಸ್ಥಿರವಾಗಿರುತ್ತದೆ.

ಅನುಕಾಂತೀಯ ಮತ್ತು ಪ್ರತಿಕಾಂತೀಯ ವಸ್ತುಗಳನ್ನು ಪರೀಕ್ಷೆ ಮಾಡಲು ಹೆಚ್ಚಾಗಿ ಇವುಗಳ ಕಾಂತಪ್ರವೃತ್ತಿಯನ್ನು ಕಂಡುಹಿಡಿಯುತ್ತಾರೆ. ಕಾಂತಪ್ರವೃತ್ತಿ ಅನುಕಾಂತೀಯಗಳಲ್ಲಿ ಉಷ್ಣತೆಯನ್ನು ಅವಲಂಬಿಸಿದೆ. ಫೆರ್ರೊಕಾಂತೀಯಗಳೂ ಪ್ರತಿ ಫೆರ್ರೊಕಾಂತೀಯಗಳೂ ಉಷ್ಣತೆಯನ್ನಲ್ಲದೆ ಕಾಂತಕ್ಷೇತ್ರ ಸಾಮರ್ಥ್ಯವನ್ನೂ ಅವಲಂಬಿಸಿರುತ್ತವೆ. ಈ ಅವಲಂಬನೆ ಒಂದು ಉಷ್ಣತೆಯ ಮಟ್ಟದ (ಕ್ಯೂರಿ ಬಿಂದು ಎಂಬ ಉಷ್ಣತೆ ಫೆರ್ರೊಕಾಂತೀಯಗಳಲ್ಲಿ, ನೀಲ್ ಬಿಂದು ಎಂಬ ಉಷ್ಣತೆ ಪ್ರತಿ ಫೆರ್ರೊಕಾಂತೀಯಗಳಲ್ಲಿ) ವರೆಗೆ ಮಾತ್ರ. ಅದರ ಮೇಲಿನ ಉಷ್ಣತೆಯಲ್ಲಿ ಕಾಂತಪ್ರವೃತ್ತಿಯ ಮೇಲೆ ಪ್ರಭಾವವಿಲ್ಲ.

ಇತ್ತೀಚಿನ ಸಂಶೋಧನೆಗಳಿಂದ ಕಾಂತಾನುನಾದವನ್ನು (ಮ್ಯಾಗ್ನೆಟಿಕ್ ರೆಸೊನೆನ್ಸ್) ಕಂಡುಹಿಡಿಯಲು ಸಾಧ್ಯವಾಗಿದೆ. ಎಲೆಕ್ಟ್ರಾನಿನ ಕಾಂತಾನುನಾದದಿಂದ ಅಥವಾ ನ್ಯೂಕ್ಲಿಯದ ಕಾಂತಾನುನಾದಗಳಿಂದ ಕಾಂತಭ್ರಮಣಾಂಕವನ್ನು ನಿರ್ಧರಿಸುತ್ತಾರೆ. ಪರಮಾಣುವಿನಲ್ಲಿ

ಎಲೆಕ್ಟ್ರಾನುಗಳು ಸಾಧಾರಣವಾಗಿ ಎರಡು ಸ್ಥಿತಿಗಳಲ್ಲಿ ಇರುತ್ತವೆ. ಶಕ್ತಿಯ ಕೆಳಮಟ್ಟದಲ್ಲಿರುವ ಸ್ಥಿತಿಯೇ ಹೆಚ್ಚು. ಇವನ್ನು ಕಾಂತಕ್ಷೇತ್ರಕ್ಕೆ ಒಳಪಡಿಸಿದಾಗ ಎಲೆಕ್ಟ್ರಾನುಗಳು ಶಕ್ತಿ ಹೀರಿ ಇನ್ನೊಂದು ಸ್ಥಿತಿಗೆ ಹಾರುತ್ತವೆ. ಆಗ ಬರುವ ಕಾಂತಾನುನಾದರೋಹಿತದ (ಮ್ಯಾಗ್ನೆಟಿಕ್ ರೆಸೊನೆನ್ಸ್ ಸ್ಪೆಕ್ಟ್ರಂ) ಅಧ್ಯಯನ ಕಾಂತ ರಸಾಯನವಿಜ್ಞಾನದ ಉಪಯೋಗ ವಿಪುಲವಾಗಿ ಹರಡುವಂತೆ ಮಾಡಿದೆ. ಈ ಮಾರ್ಗದ ಮೂಲಕ ಬಿಡಿ ಪರಮಾಣು ಘಟಕಗಳು 10,000,000 ಭಾಗದಲ್ಲಿ ಒಂದರಷ್ಟು ಇದ್ದರೂ ಅವು ಎಷ್ಟು ಇವೆ ಎಂಬುದನ್ನು ನಿಖರವಾಗಿ ಕಂಡುಹಿಡಿಯಲು ಸಾಧ್ಯವಾಗಿದೆ. ಹೀಗೆ ಇಷ್ಟೊಂದು ಸೂಕ್ಷ್ಮ ಮಾರ್ಗ ಇರುವುದರಿಂದ ಈ ಬಿಡಿ ಪರಮಾಣು ಘಟಕಗಳು ಇವೆಯೇ ಇದ್ದರೆ ಎಷ್ಟು ಇವೆ? ಯಾವ ಪ್ರಮಾಣದಲ್ಲಿ ಇವೆ? ಎಂಬುದನ್ನು ಕಂಡುಹಿಡಿಯುವುದು ಸಾಧ್ಯವಾಗಿದೆ. ಅಲ್ಲದೆ ಅವುಗಳಲ್ಲಿನ ಎಲೆಕ್ಟ್ರಾನುಗಳ ರಚನೆಯ ವಿಷಯ, ಅವುಗಳ ಸ್ಥಿರತೆಗೆ ಕಾರಣಗಳೇನು ಎಂಬ ಪ್ರಶ್ನೆಗಳಿಗೂ ಉತ್ತರ ದೊರಕಿಸುವ ಸಂಶೋಧನೆಗಳಿಗೆ ಇದು ಸಹಾಯವಾಗಿದೆ. ರಸಾಯನವಿಜ್ಞಾನದ ಸಮಸ್ಯೆಗಳನ್ನು ಬಿಡಿಸಲು ಕಾಂತಮಾರ್ಗವನ್ನೇ ಹೆಚ್ಚುಹೆಚ್ಚಾಗಿ ಬಳಸುತ್ತಿದ್ದಾರೆ. ವಸ್ತುಗಳ ಇರವನ್ನು ಕಂಡುಹಿಡಿಯಲು, ಬಿಡಿ ಪರಮಾಣು ಘಟಕಗಳನ್ನು ಶೋಧಿಸಲು, ಇನಾರ್ಗೇನಿಕ್ ವಸ್ತುಗಳ ಅಣು ರಚನೆಯನ್ನು ಕಂಡುಹಿಡಿಯಲು ಮತ್ತು ವೇಗೋತ್ಕರ್ಷಕಗಳ ಕಾರ್ಯವಿನ್ಯಾಸದ ಸಂಶೋಧನೆಯಲ್ಲೂ ಇದೇ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ಅನುಕಾಂತೀಯ ವಸ್ತುಗಳು ಕೇವಲ ಅತಿ ಕಡಿಮೆ ಪ್ರಮಾಣದಲ್ಲಿ ಬೆರಕೆಯಾಗಿದ್ದರೂ ಕಾಂತಮಾರ್ಗದಿಂದ ಅವನ್ನು ಕಂಡುಹಿಡಿಯಬಹುದು. ಉದಾಹರಣೆಗೆ, ಗಾಜನ್ನು ತಯಾರಿಸಲು ಬಳಸುವ ಮರಳಿನಲ್ಲಿ ಸ್ವಲ್ಪವೂ ಕಬ್ಬಿಣ ಇರಕೂಡದು: ಹಾಗೆಯೇ ಮೆಗ್ನಿಸಿಯಂನಲ್ಲಿ ಕಬ್ಬಿಣ ಇರಕೂಡದು. ಇಂಥ ಸಂದರ್ಭಗಳಲ್ಲಿ ಪರಿಶುದ್ಧತೆಯನ್ನು ಕಂಡುಹಿಡಿಯಲು ಕಾಂತಮಾರ್ಗ ಬಲು ಪ್ರಯೋಜನಕಾರಿ. ಕಾಂತಪರಿಶುದ್ಧತೆ (ಮ್ಯಾಗ್ನೆಟಿಕಲಿ ಪ್ಯೂರ್) ಎಂಬುದೇ ಪರಿಶುದ್ಧತೆಯಲ್ಲಿ ಒಂದು ಉಚ್ಚರೀತಿಯ ಮಟ್ಟ. ಅನಿಲಗಳ ಮಿಶ್ರಣದಲ್ಲಿ ಆಕ್ಸಿಜನ್ ಎಷ್ಟು ಇದೆ ಎಂಬುದನ್ನು ನಿರ್ಧರಿಸುವುದು ಕಾಂತ ರಸಾಯನಶಾಸ್ತ್ರದ ಉಪಯೋಗಕ್ಕೆ ಇನ್ನೊಂದು ಉದಾಹರಣೆ. ಹಾಗೆಯೇ ರಸಾಯನ ಮತ್ತು ಲೋಹಶಾಸ್ತ್ರಗಳಲ್ಲಿನ ಅನೇಕ ರೀತಿಯ ರಸಾಯನಕಾರ್ಯಗಳ ಸಂಶೋಧನೆಗೆ ಅದರಲ್ಲೂ ಅತಿ ಚಿಕ್ಕ ಕಣಗಳ ತ್ರಿಜ್ಯ ಮತ್ತು ಆಕಾರ ಕಂಡುಹಿಡಿಯಲೂ ಈ ಮಾರ್ಗ ಅನುಕೂಲ. ಇದನ್ನು ಉಷ್ಣಕಾಂತ ವಿಶ್ಲೇಷಣ (ಥರ್ಮೋ ಮ್ಯಾಗ್ನೆಟಿಕ್ ಅನಾಲಿಸಿಸ್) ಮಾರ್ಗವೆಂದು ಕರೆಯುತ್ತಾರೆ. ರಕ್ತದಲ್ಲಿ ಆಕ್ಸಿಜನ್ನನ್ನು ಸಾಗಿಸುವ ಹೀಮೋಗ್ಲಾಬಿನ್ ಅಣುವಿನಲ್ಲಿ ಕಬ್ಬಿಣ ಇದೆ. ಆದ್ದರಿಂದ ಅದು ಅನುಕಾಂತೀಯ. ಅದು ಶ್ವಾಸ ಕೋಶದ ಲೋಮರಕ್ತನಾಳಗಳ ಮೂಲಕ ಹರಿಯುವಾಗ ಆಕ್ಸಿಜನ್ನನ್ನು ಹೀರಿಕೊಂಡು ಪ್ರತಿಕಾಂತೀಯ ಆಗುತ್ತದೆ.

ಕಾಂತರಸಾಯನವಿಜ್ಞಾನದ ನೆರವಿನಿಂದ ಎಲೆಕ್ಟ್ರಾನಿಕ್ ಸಲಕರಣೆಗಳ ತಯಾರಿಕೆಗೆ ಬೇಕಾದ ಫ್ರಿರ್ರೈಟುಗಳ ವಿಷಯ ತಿಳಿಯಬಹುದು. ಕಾಂತಮಾರ್ಗ ಬಳಕೆಯಲ್ಲಿರುವ ಇನ್ನೊಂದು ಕ್ಷೇತ್ರ ಉತ್ಕರ್ಷಣಕ್ರಿಯೆಯ ಸಂಶೋಧನೆಯಲ್ಲಿ. ನಿಕಲ್ ಕ್ರೋಮಿಯಂ ಮತ್ತು ಅವುಗಳ ರಾಸಾಯನಿಕ ವಸ್ತುಗಳು ಕಾಂತ ಪರಿಣಾಮವನ್ನು ತೋರಿಸುತ್ತವೆ. ಇವುಗಳ ಪರಮಾಣುಗಳಲ್ಲಿ ಒಂಟಿ ಎಲೆಕ್ಟ್ರಾನುಗಳಿರುವುದೇ ಇವೆರಡು ಕ್ರಿಯೆಗಳಿಗೂ ಮೂಲ. ವಸ್ತುವು ರಸಾಯನ ಕ್ರಿಯೆ ನಡೆಯುವ ಮೊದಲು ಮತ್ತು ನಡೆಯುತ್ತಿರುವಾಗ ಹೇಗಿರುತ್ತದೆ ಎಂಬುದನ್ನು ಕಂಡುಹಿಡಿಯಲು ಫಲಕಾರಿಯಾಗಿದೆ (ಕೆಮಿ ಐಸಾರ್ಪ್‍ಷನ್). ಫ್ಲೊರಸೀನ್ ಮತ್ತು ನ್ಯಾಫ್ಥಲೀನುಗಳು ಪ್ರತಿಕಾಂತೀಯಗಳು. ಆದರೆ ಇವನ್ನು ಅತಿನೇರಿಳೆ ಕಿರಣಗಳಿಗೆ ಒಡ್ಡಿದಾಗ ಇವು ಅನುಕಾಂತೀಯಗಳಾಗುತ್ತವೆ. ಈ ಗುಣಗಳನ್ನು ವಿವಿಧ ಪರಿಸ್ಥಿತಿಗಳಲ್ಲಿ ಕಂಡುಹಿಡಿದು ಸ್ಫುರದೀಪ್ತಿ. ಫಾಸ್ಫರಸೆನ್ಸ್ ಹೇಗೆ ಆಗುತ್ತದೆ ಎಂಬುದರ ಸಂಶೋಧನೆಯಲ್ಲಿ ಸಹ ಕಾಂತರಸಾಯನವಿಜ್ಞಾನವನ್ನು ಉಪಯೋಗಿಸಿಕೊಂಡಿದ್ದಾರೆ. (ಎ.ಎಸ್.ಆರ್.)

**ಕಾಂತ ವಿಘಟನೆ :** ಕಾಂತಗಳ ಉಪಯೋಗದಿಂದ ಕಬ್ಬಿಣ ಮುಂತಾದ ಕಾಂತಾಕರ್ಷಿತ ವಸ್ತುಗಳನ್ನು ಒಂದು ಮಿಶ್ರಣದಿಂದ ಬೇರ್ಪಡಿಸುವ ಕ್ರಿಯೆ (ಮ್ಯಾಗ್ನೆಟಿಕ್ ಸೆಪರೇಷನ್). ಕೈಗಾರಿಕೆಯಲ್ಲಿ ಅನೇಕ ಘನಪದಾರ್ಥಗಳನ್ನು ಜಜ್ಜಿ ಪುಡಿಮಾಡಿ ಪದಾರ್ಥದ ಉಪಯುಕ್ತತೆಯನ್ನು ಹೆಚ್ಚಿಸುವ ಸಂದರ್ಭಗಳಿರುತ್ತವೆ. ಇದಕ್ಕಾಗಿ ನಿರ್ಮಿತವಾದ, ಜಜ್ಜಿ ಪುಡಿಮಾಡುವ ಯಂತ್ರಗಳು ಉಪಯೋಗದಲ್ಲಿವೆ. ಪುಡಿಮಾಡಲಿರುವ ಘನಪದಾರ್ಥದಲ್ಲಿ ಕಬ್ಬಿಣದ ಚೂರುಗಳು ಸೇರಿಹೋಗಿದ್ದರೆ ಅವು ಯಂತ್ರಗಳ ಭಾಗಗಳನ್ನು ಹಾಳುಮಾಡಬಹುದು: ಬೆಂಕಿ ಕೂಡ ಉದ್ಭವಿಸಿ ಅಪಾಯ ಒದಗಬಹುದು. ಆದ್ದರಿಂದ ಕಬ್ಬಿಣದ ಚೂರುಗಳನ್ನು ಪ್ರತ್ಯೇಕಿಸುವ ಆವಶ್ಯಕತೆ ಉಂಟು. ಇನ್ನು ನಗರಗಳಲ್ಲಿ ದಿನಂಪ್ರತಿ ಸಂಗ್ರಹವಾಗುವ ಕಸ ಮುಂತಾದ ತ್ಯಾಜ್ಯ ವಸ್ತುಗಳಲ್ಲಿ ಸೇರಿರುವ ಲೋಹದ ತುಣುಕುಗಳನ್ನು ಬೇರ್ಪಡಿಸಿ ಉಳಿಯುವ ಕಸವನ್ನು ಉಪಯುಕ್ತ ಗೊಬ್ಬರವನ್ನಾಗಿ ಪರಿವರ್ತಿಸಬಹುದು. ಇಂಥ ಪರಿಸ್ಥಿತಿಗಳಲ್ಲಿ ಕಾಂತ ವಿಘಟಕದ ಉಪಯುಕ್ತತೆ ಹೆಚ್ಚಾಗಿದೆ.

ಕಾಂತವಿಘಟಕದ ರೇಖಾಚಿತ್ರವನ್ನು ಇಲ್ಲಿ ಕೊಟ್ಟಿದೆ. ಇದರಲ್ಲಿರುವ ಕಪ್ಪಿಗೆ (ಪುಲ್ಲಿ) ವಿದ್ಯುತ್ಪ್ರವಾಹದಿಂದ ಕಾಂತಬಲ ಒದಗುತ್ತದೆ. ಇದರಿಂದ ಆಕರ್ಷಿತವಾಗಿಟ್ಟಿದ್ದ ವಸ್ತು




**ಕಾಂತ ವಿಘಟಕ : 1 ವಿದ್ಯುತ್ ಕಾಂತೀಯ ಶಿರಕಪ್ಪಿ 2 ಒದಗಣೆ 3 ಪ್ರಾರಂಭಿಕ ಕಪ್ಪಿ 4 ರವಾನಕ 5 ಹೊಂದಿಸುವ ವಿಭಜನಾವ್ಯವಸ್ಥೆ 6 ಕಾಂತೀಯ ವಸ್ತು 7 ಅಕಾಂತೀಯ ವಸ್ತು**

ಅದು ಕಪ್ಪಿಯನ್ನು ಬಿಟ್ಟೊಡನೆಯೇ ಕೆಳಗೆ ಬಿದ್ದು ಶೇಖರಗೊಳ್ಳುವುದು. ಕಾಂತಬಲದಿಂದ ಪ್ರಭಾವಿತವಾಗದ ಎಲ್ಲ ಪದಾರ್ಥಗಳನ್ನೂ ಬೇರೆ ದ್ವಾರದಿಂದ ಎಸೆಯಲಾಗುವುದು. ಆವರ್ತಿಸುವ ಪೀಪಾಯಿಯಿಂದಲೂ ಈ ವಿಘಟನೆಯನ್ನು ಮಾಡಬಹುದು. ಸ್ಥಿರವಾಗಿ ಇಟ್ಟಿರುವ ಒಂದು ಕಾಂತವನ್ನು ಆವರಿಸಿಕೊಂಡು ಒಂದು ಖಾಲಿ ಪೀಪಾಯಿ ತನ್ನ ಅಕ್ಷದ ಮೇಲೆ ಆವರ್ತಿಸುತ್ತಿರುವುದು. ಈ ಕಾಂತ ಪೀಪಾಯಿಯ ವರ್ತುಳದ ಖಂಡಭಾಗದಲ್ಲಿ ಮಾತ್ರ ಇದೆ. ಆದ್ದರಿಂದ ಈ ಭಾಗದಲ್ಲಿ ಚಲಿಸುವ ಪೀಪಾಯಿ ಮಾತ್ರ ಕಾಂತಬಲವನ್ನು ಪಡೆದು ಉಳಿದ ಭಾಗ ಅದರ ಹೊರಗಿರುವುದು. ಪದಾರ್ಥಗಳನ್ನು ರವಾನಿಸುವ ಮಾರ್ಗದ ಕೆಳಗೆ ಬಲಯುತವಾದ ಕಾಂತಗಳನ್ನಿಟ್ಟು ಚುಂಬಕ ಲೋಹಗಳು (ಮ್ಯಾಗ್ನೆಟಿಕ್) ಅಲ್ಲೇ ಶೇಖರಗೊಳ್ಳುವಂತೆ ಮಾಡಿ ಅವನ್ನು ಬೇರ್ಪಡಿಸಬಹುದು. ಚಲಿಸುವ ರವಾನಕಗಳ ಮೇಲೆ ಕಾಂತಗಳನ್ನು ತೂಗುಹಾಕಿ ರವಾನಕದ ಮೇಲೆ ಚಲಿಸುವ ಪದಾರ್ಥದಿಂದ ಕಬ್ಬಿಣದ ಚೂರುಗಳನ್ನು ಬೇರ್ಪಡಿಸಬಹುದು. ಧಾನ್ಯ, ಕಲ್ಲಿದ್ದಲು ಇವುಗಳ ಸಾಗಾಣಿಕೆಯಲ್ಲಿ ಈ ಪದ್ಧತಿಯನ್ನು ಅನುಸರಿಸಲಾಗುವುದು. ಯಾವುದಾದರೂ ವಿಧಾನದಿಂದ ಈ ಪೀಪಾಯಿಯ ಮೇಲೆ ಪದಾರ್ಥಗಳನ್ನು ಹಾಕಿದಾಗ ಕಾಂತಬಲದಿಂದ ಕಬ್ಬಿಣದ ಚೂರುಗಳು ಮಾತ್ರ ಪೀಪಾಯಿಗೆ ಅಂಟಿಕೊಂಡಿದ್ದು, ಕಾಂತಕ್ಷೇತ್ರದಿಂದ ಹೊರಗೆ ಬಂದೊಡನೆಯೇ ಕೆಳಗೆ ಬೀಳುವುವು. (ಕೆ.ವಿ.ಜಿ.ಆರ್.)

**ಕಾಂತ ಸ್ಥಿತಿವಿಜ್ಞಾನ :** ಕಾಂತಗಳು ಮತ್ತು ಅವುಗಳಿಂದ ಉತ್ಪನ್ನವಾದ ಕ್ಷೇತ್ರಗಳ ಅಧ್ಯಯನ (ಮ್ಯಾಗ್ನೆಟೋಸ್ಟ್ಯಾಟಿಕ್). ಇಲ್ಲಿ ಕಾಂತಧ್ರುವಗಳನ್ನು ಕಾಂತತೆಯ ಉದ್ಭವಸ್ಥಾನಗಳೆಂದು ಪರಿಗಣಿಸುತ್ತಾರೆ. ಶೂನ್ಯಪ್ರದೇಶದಲ್ಲಿ ಬಿಂದುಧ್ರುವಗಳ ನಡುವೆ ಬಲದ ಕೊಲಾಂಬನ ನಿಯಮ ಇಲ್ಲಿ ಪ್ರಧಾನವಾದದ್ದು. ಸಾಮರ್‌ಫೆಲ್ಡನ ಸಲಹೆಯನ್ನು ಉಪಯೋಗಿಸಿಕೊಂಡು ಪರಿಮೇಯ (ರಾಷ್ಯನಲೈಸ್ಡ್) mks ಮಾನಗಳಲ್ಲಿ ಈ ನಿಯಮಗಳನ್ನು ಹೀಗೆ ಬರೆಯಬಹುದು.

$$F = \frac{\mu_0}{4\pi} \frac{m_1 m_2}{r^2}$$

ಇಲ್ಲಿ $u_0 = 4\pi \times 10^{-7}$ ವೆಬರ್/ಆಂಪೇರ್–ಮೀ: ಶೂನ್ಯಪ್ರದೇಶದ ವ್ಯಾಪ್ಯತೆ; $m_1$ ಒಂದು ಬಿಂದುಧ್ರುವದ ತ್ರಾಣ (ಸ್ಟ್ರೆಂತ್), $m_2$ ಇನ್ನೊಂದರದ್ದು. ಈ ಧ್ರುವತ್ರಾಣಗಳನ್ನು ಆಂಪೇರ್–ಮೀಟರುಗಳಲ್ಲಿ ಉಕ್ತಿಸಿದೆ. F ನ್ಯೂಟನ್ ಮಾನಗಳಲ್ಲಿ ಅಳೆದ ಬಲ ಮತ್ತು ಧ್ರುವಗಳ ನಡುವೆ ಇರುವ ಅಂತರ r ಮೀಟರನಲ್ಲಿದೆ. ಧ್ರುವಗಳು ವಿಜಾತಿಯವಾದರೆ ಆಕರ್ಷಣಬಲವಾಗುವುದು: ಸಜಾತಿಯವಾದರೆ ವಿಕರ್ಷಣವಾಗುವುದು. m ಆಂಪೇರ್–ಮೀಟರ್ ಧ್ರುವತ್ರಾಣ ಇರುವ ಕಾಂತಧ್ರುವದಿಂದ ಶೂನ್ಯಪ್ರದೇಶದಲ್ಲಿ r ಮೀಟರ್ ದೂರದಲ್ಲಿ ಕಾಂತಕ್ಷೇತ್ರದ ತೀವ್ರತೆ Hನ್ನು $H=m/4\pi r^2$ ಸಮೀಕರಣ ಕೊಡುತ್ತದೆ. ಬಿಂದುಧ್ರುವಗಳ ಸಮೂಹಕ್ಕೆ ಅಧ್ಯಾರೋಪಣ ತತ್ತ್ವದ (ಪ್ರಿನ್ಸಿಪಲ್ ಆಫ್ ಸೂಪರ್ ಪೊಸಿಷನ್) ಪ್ರಕಾರ P ಬಿಂದುವಿನಲ್ಲಿ ಪರಿಣಾಮೀ H ಸದಿಶೀಯ ಮೊತ್ತ

$$H = \frac{1}{4\pi} \sum_{i=1}^{n} \frac{m_i}{r_{1^2}}$$

ಇಲ್ಲಿ ದಕ್ಷಿಣ ಧ್ರುವಗಳಿಗೆ ಋಣ ಚಿಹ್ನೆಯೂ ಉತ್ತರ ಧ್ರುವಗಳಿಗೆ ಧನಚಿಹ್ನೆಯೂ ಇವೆ. Pಯಲ್ಲಿ ಉತ್ತರ ಧ್ರುವವನ್ನು ಇಟ್ಟರೆ ಅದು ಯಾವ ದಿಕ್ಕಿನಲ್ಲಿ ಚಲಿಸುವುದೋ ಅದೇ ಆ ಬಿಂದುವಿನಲ್ಲಿ Hನ ದಿಕ್ಕು. (ಎ.ಸಿ.)

**ಕಾಂತೀಯ ಅನುರಣನ ಚಿತ್ರಣ :** ಕಾಂತೀಯ ಅನುರಣನದಿಂದ (ಮ್ಯಾಗ್ನೆಟಿಕ್ ರೆಸೋನೆನ್ಸ್) ವಸ್ತುಗಳ ಚಿತ್ರಣವನ್ನು ಪಡೆಯಬಲ್ಲ ತಾಂತ್ರಿಕತೆಯ ಬಳಕೆಯಿಂದ ಇತ್ತೀಚಿನ ಕಾಲದಲ್ಲಿ ರೋಗ ತಪಾಸಣೆಯ ಮತ್ತು ರೋಗ ಎಚ್ಚರಿಕೆ ಕ್ರಮಗಳಲ್ಲಿ ಅಪಾರ ಸುಧಾರಣೆಗಳು ಕಂಡುಬಂದಿವೆ. ಇದನ್ನು ಇಂಗ್ಲಿಷ್ ಭಾಷೆಯಲ್ಲಿ ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್ (ಎಂಆರ್‌ಐ) ಎಂದು ಕರೆಯುತ್ತಾರೆ. ಇದು ಉನ್ನತ ಗುಣಮಟ್ಟದ ಮೂರು ಆಯಾಮದ ಪ್ರತಿಬಿಂಬಗಳನ್ನು ಯಾವುದೇ ಕೋನದಲ್ಲಿ ಮತ್ತು ದಿಕ್ಕಿನಲ್ಲಿ ಪಡೆಯುವ ವಿಧಾನ. ಶಸ್ತ್ರಕ್ರಿಯೆಯನ್ನು ಮಾಡಿ ಮಾನವನ ದೇಹದೊಳಗಿನ ಅವಯವಗಳ ನೋಟವನ್ನು ಪಡೆಯುವ ಅಗತ್ಯವಿಲ್ಲದೆಯೇ ಬಹಳ ಕಡಮೆ ಕಾಲಾವಧಿಯಲ್ಲಿ ದೇಹದ ಅಂಗಭಾಗಗಳ ಒಳಗಿನ ನೋಟವನ್ನು ಇದು ಒದಗಿಸುತ್ತದೆ. ಇದು ಸರ್ವತೋಮುಖವಾದ, ಶಕ್ತಿಶಾಲಿಯಾದ ಮತ್ತು ಸಂವೇದನೆಯುಳ್ಳ ತಂತ್ರವಾಗಿದ್ದು ವೈದ್ಯಕೀಯ ಚಿಕಿತ್ಸೆ, ರೋಗ ತಪಾಸಣೆ, ಚಿಕಿತ್ಸೆ ಹಾಗೂ ಮರುಪರೀಕ್ಷಾ ಕ್ರಿಯೆಗಳಿಗೆ ಒಂದು ಪ್ರಮುಖವಾದ ವಿಧಾನವಾಗಿದೆ.

ಕಾಂತೀಯ ಅನುರಣನ ಚಿತ್ರಣಕ್ಕೆ ಸಂಬಂಧಿಸಿದ ಮಹತ್ವದ ಸಂಶೋಧನೆಗಳನ್ನು ಗುರುತಿಸಿ 2003ನೆಯ ವರ್ಷದ ಜೀವವಿಜ್ಞಾನ ಅಥವಾ ವೈದ್ಯವಿಜ್ಞಾನದ ನೊಬೆಲ್ ಪ್ರಶಸ್ತಿಯನ್ನು ಅಮೆರಿಕದ ಇಲಿನಾಯ್ಸ್ ವಿಶ್ವವಿದ್ಯಾಲಯದ ಪೌಲ್ ಸಿ. ಲಾಟೆರ್‌ಬರ್ ಮತ್ತು ಸಂಯುಕ್ತ ರಾಜ್ಯದ ನೊಟಿಂಗಾಮ್ ವಿಶ್ವವಿದ್ಯಾಲಯದ ಸರ್ ಫೀಟರ್ ಮಾನ್ಸ್‌ಫೀಲ್ಡ್ ಅವರಿಗೆ ಜಂಟಿಯಾಗಿ ಕೊಡಲಾಯಿತು. ಈ ಸಂದರ್ಭದಲ್ಲಿ, ಕಾಂತೀಯ ಅನುರಣನ ಚಿತ್ರಣದ ಕ್ರಿಯೆಯನ್ನು ವಿವಿಧ ಬಗೆಯ ರಚನಾ ಕೃತಿಗಳ ದೃಶ್ಯೀಕರಣಕ್ಕಾಗಿ ಉಪಯೋಗಿಸುವುದಕ್ಕೆ ಸಂಬಂಧಿಸಿದಂತೆ ಈ ಇಬ್ಬರು ವಿಜ್ಞಾನಿಗಳ ಪ್ರಮುಖ ಸಾಧನೆಗಳನ್ನು ಪರಿಗಣಿಸಲಾಯಿತು. ಕಾಂತೀಯ ಅನುರಣನದ ಮೂಲಕ ದೇಹದೊಳಗಿನ ವಿವಿಧ ಭಾಗಗಳ ಪ್ರತಿಬಿಂಬಗಳನ್ನು ಪಡೆಯುವ ಆಧುನಿಕ ಸಲಕರಣೆಗಳ ಅಭಿವೃದ್ಧಿಗೆ ಈ ಸಂಶೋಧನೆಗಳು ದಾರಿಮಾಡಿಕೊಟ್ಟವು. ಇದು ವೈದ್ಯಕೀಯ ರೋಗ ತಪಾಸಣೆ ಮತ್ತು ಸಂಶೋಧನೆಯ ಮುನ್ನಡೆಯನ್ನು ಪ್ರತಿನಿಧಿಸುತ್ತದೆ. ಕಾಂತೀಯ ಅನುರಣನ ಚಿತ್ರಣವು ಪರಮಾಣುಗಳ ಕಾಂತೀಯ ಅನುರಣನಾ ತತ್ವಗಳನ್ನು ಆಧಾರವಾಗಿ ಹೊಂದಿದೆ. ಅಣುಗಳ ಬಗ್ಗೆ ರಾಸಾಯನಿಕ ಮತ್ತು ಭೌತಿಕವಾದ ಸೂಕ್ಷ್ಮದರ್ಶಕ ನೋಟವನ್ನು ಪಡೆಯಲು ವಿಜ್ಞಾನಿಗಳು ವರ್ಣಪಟಲ ದರ್ಶಕ ತಂತ್ರವನ್ನು ಉಪಯೋಗಿ ಸುತ್ತಾರೆ. ಅದರ ಉಗಮದ ಪ್ರಕಾರ ಆ ತಂತ್ರವನ್ನು ಪರಮಾಣು ಸಂಬಂಧಿ ಕಾಂತೀಯ ಅನುರಣನ ಪ್ರತಿಬಿಂಬವೆಂದು ಸೂಚಿಸಬಹುದಾಗಿದೆ. ಆದರೆ ಇದು ಅದಕ್ಕೆ ಸಂಬಂಧಿಸಿದ ದಾಖಲೆಯಲ್ಲಿ ಕಾಂತೀಯ ಅನುರಣನಾ ಪ್ರತಿಬಿಂಬಕ್ಕೆ ಸಂಬಂಧಿಸಿದ ಕ್ರಿಯೆಗಳು ವಿಕಿರಣ ಕ್ರಿಯೆ ಅಥವಾ ಪರಮಾಣು ಶಕ್ತಿ ಕ್ರಿಯೆಗೆ ಸೇರಿದುದೆಂದು ತಪ್ಪಾಗಿ ಸೂಚಿತವಾಗಿದೆ. ಆದರೆ ವೈದ್ಯ ಕ್ಷೇತ್ರದಲ್ಲಿ ಬಳಕೆಯಾದಾಗ ಕಾಂತೀಯ ಅನುರಣನಾ ಚಿತ್ರಣ ಎಂದು ನಾಮಕರಣಗೊಂಡಾಗ ಪರಮಾಣು ಜಗತ್ತಿನ ಋಣಾತ್ಮಕ ಅರ್ಥದೊಡನೆ ಸೇರಿದುದನ್ನು ನಿವಾರಿಸಿತು.

ಕಾಂತೀಯ ಅನುರಣನಾ ಚಿತ್ರಣದ (ಕಾನುಚಿತ್ರಣ) ಕಾರ್ಯತಂತ್ರವನ್ನು ಅರ್ಥಮಾಡಿಕೊಳ್ಳಲು ಮತ್ತು ಆ ದಿಕ್ಕಿನಲ್ಲಿ 2003ನೆಯ ಇಸವಿಯ ನೊಬೆಲ್ ಪ್ರಶಸ್ತಿಯ ವಿಜೇತರ ವೈಜ್ಞಾನಿಕ ಕಾಣಿಕೆಯನ್ನು ತಿಳಿಯಲು ಅವುಗಳು ಆಧಾರ ಹೊಂದಿರುವ ಮೂಲತಂತ್ರದ ತತ್ವವನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಕಾನುಚಿತ್ರಣ ತಂತ್ರವೇ ಹೆಚ್ಚು ಕ್ರಾಂತಿಕಾರವಾದುದು. ಆ ಕ್ಷೇತ್ರದಲ್ಲಿ ಕಾರ್ಯಮಾಡಿದ ವಿಜ್ಞಾನಿಗಳಿಗೆ ಮೂರು ಸನ್ನಿವೇಶಗಳಲ್ಲಿ ನೊಬೆಲ್ ಪ್ರಶಸ್ತಿಯನ್ನು ಕೊಡಲಾಗಿದೆ.

**ಕಾಂತೀಯ ಅನುರಣನಾ ಚಿತ್ರಣದ ಜನನ :** ರಸಾಯನವಿಜ್ಞಾನ ಮತ್ತು ಜೀವವಿಜ್ಞಾನದಲ್ಲಿ ದ್ರವ್ಯವೊಂದರ ಅಣುಗಳ ರಸಾಯನಿಕ ಸ್ವಭಾವವನ್ನು ಗುರುತಿಸುವ ವಿವಿಧ ಬಗೆಯ ಉದ್ದೇಶಗಳಿಗೆ ವರ್ಣಪಟಲದರ್ಶಕವನ್ನು ಉಪಯೋಗಿಸಲಾಗುತ್ತದೆ. ಪ್ರತಿಯೊಂದು ಅಣುವೂ ತನ್ನದೇ ಆದ ಗುಣಲಕ್ಷಣಗಳನ್ನು ಪಡೆದಿದ್ದು ಅದು ಬೆಳಕು ಅಥವಾ ಕ್ಷ-ಕಿರಣ ಮೊದಲಾದವುಗಳಿರುವಾಗ ಹೇಗೆ ಪ್ರತಿಕ್ರಿಯೆ ತೋರಿಸುತ್ತದೆ ಎನ್ನುವುದನ್ನು ವರ್ಣಪಟಲದರ್ಶಕವು ತಿಳಿಸುತ್ತದೆ. ಅವುಗಳಿಗೇ ಪ್ರತ್ಯೇಕವಾಗಿರುವ ಲಕ್ಷಣಗಳನ್ನು ಅರಿಯಲು ವಿವಿಧ ಬಗೆಯ ವರ್ಣಪಟಲದರ್ಶಕ ತಂತ್ರಗಳನ್ನು ಉಪಯೋಗಿಸಲಾಗುತ್ತದೆ.

1950ರ ದಶಕದಲ್ಲಿ ಅಮೆರಿಕದ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ ಫೆಲಿಕ್ಸ್‌ಬ್ಲಾಚ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯದ ಎಡ್‌ವರ್ಡ್ ಮಿಲ್ಸ್ ಪರ್ಸೆಲ್ ಕಾನುಚಿತ್ರಣ ತಾಂತ್ರಿಕತೆಯನ್ನು ಕಂಡುಹಿಡಿದರು. ಅವರು ಅಭಿವೃದ್ಧಿಪಡಿಸಿದ ಪರಮಾಣು ಕಾಂತೀಯತೆಯ ನಿಖರ ಅಳತೆಗಳ ಹೊಸ ವಿಧಾನಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಸಂಶೋಧನೆಗಳಿಗಾಗಿ ಅವರಿಗೆ 1950ರ ಭೌತವಿಜ್ಞಾನದ ನೊಬೆಲ್ ಪ್ರಶಸ್ತಿಯನ್ನು ಕೊಡಲಾಯಿತು.

ಪರಮಾಣುವಿನ ಮೂಲಭೂತ ಭೌತರಚನಾಕೃತಿಯು ನಮ್ಮ ಸೌರವ್ಯೂಹದ ವ್ಯವಸ್ಥೆಯನ್ನು ಹೋಲುತ್ತದೆ. ಪರಮಾಣುವಿನ ನಬ್ಬೀಜದಲ್ಲಿ ಧನವಿದ್ಯುದಾವೇಶವುಳ್ಳ ಪ್ರೋಟಾನ್‌ಗಳು ಮತ್ತು ವಿದ್ಯುದಾವೇಶವಿರದ ನ್ಯೂಟ್ರಾನ್‌ಗಳು ಹಾಗೂ ಪರಮಾಣುವಿನ ಸುತ್ತ ಚಲಿಸುತ್ತಿರುವ ಋಣವಿದ್ಯುದಾವೇಶಪ್ರೇರಿತ ಎಲೆಕ್ಟ್ರಾನ್‌ಗಳು ಇರುತ್ತವೆ. ಕಾಂತೀಯ ಕ್ಷೇತ್ರದಲ್ಲಿ ಪದಾರ್ಥವೊಂದನ್ನು ಇಟ್ಟಾಗ ಪರಮಾಣುವಿನ ಕೆಲವು ಕೇಂದ್ರಗಳು ಸೂಕ್ಷ್ಮರೂಪದ ದಿಕ್ಸೂಚಿ ಮುಳ್ಳುಗಳ ರೀತಿ ವರ್ತಿಸುತ್ತವೆ ಎನ್ನುವುದನ್ನು ಬ್ಲೋಚ್ ಮತ್ತು ಪರ್ಸೆಲ್‌ರವರು ಗಮನಿಸಿದರು. ಅದನ್ನು ಪರಮಾಣುವಿನ ತಿರುಗುವಿಕೆ ಎಂದು ಕರೆಯುತ್ತಾರೆ. ಅತ್ಯಂತ ಸಣ್ಣ ಗಾತ್ರದ ದಿಕ್ಸೂಚಿ ಮುಳ್ಳುಗಳು ಅಥವಾ ಪರಮಾಣು ಭ್ರಮಣೆಗಳು ಪರಮಾಣು ಚಲನಶಾಸ್ತ್ರದ ನಿಯಮಗಳಿಗೆ ಅನುಗುಣವಾಗಿ ಕಾಂತೀಯ ಕ್ಷೇತ್ರದಲ್ಲಿ ತಮ್ಮ ಭ್ರಮಣೆಯನ್ನು ಕೆಲವು ರೀತಿಯಲ್ಲಿ ಮಾತ್ರವೇ ಹೊಂದಿಸಿಕೊಳ್ಳುತ್ತವೆ. ಆ ವಾಲುವಿಕೆಯ ಕ್ರಿಯೆಯ ವಿವಿಧ ಶಕ್ತಿಮಟ್ಟಗಳಿಗೆ ಅನುಗುಣವಾಗಿ ನಡೆಯುತ್ತದೆ. ಆ ಭ್ರಮಣ ಕ್ರಿಯೆಗಳನ್ನು ರೇಡಿಯೋ ಅಲೆಗಳಿಗೆ ತೆರೆದಿಟ್ಟಾಗ ಅವುಗಳ ಕಂಪನವು ಶಕ್ತಿಯ ಅಂತರಗಳಿಗೆ ಸರಿಯಾಗಿ ಹೊಂದಿಕೆಯಾದಾಗ ಆ ಭ್ರಮಣ ಕ್ರಿಯೆಗಳು ಆ ಅಂತರಗಳ ನಡುವೆ ಬದಲಾಗತೊಡಗಬಹುದು. ಈ ಕ್ರಿಯೆಯನ್ನು ಅನುರಣನ ಅಥವಾ ಅನುಕಂಪನವೆನ್ನುತ್ತಾರೆ. ಶಕ್ತಿಯ ವಿವಿಧ ಮಟ್ಟದ ಅಂತರಗಳನ್ನು ಅಳತೆ ಮಾಡುವ ಒಂದು ವಿಧಾನವಾಗಿ ರೇಡಿಯೋ ಅಲೆಗಳ ಕಂಪನವನ್ನು ನಿಧಾನಗತಿಯಲ್ಲಿ ಬದಲಾವಣೆ ಮಾಡಲಾಗುವುದು. ಅನುಕಂಪನದಲ್ಲಿ, ಆ ಭ್ರಮಣೆಗಳು ಮೀಟಲ್ಪಟ್ಟು, ಸಂಕೇತವನ್ನು ಉತ್ಪನ್ನ ಮಾಡಿ ಶೋಧಕದಲ್ಲಿ ಗುರುತಿಸಲ್ಪಡುತ್ತವೆ. ಅಂದರೆ ಪರಮಾಣು ಕೇಂದ್ರವು ತನ್ನ ಹಿಂದಿನ ಶಕ್ತಿಯ ಮಟ್ಟಕ್ಕೆ ಹಿಂದಿರುಗಿದಾಗ ರೇಡಿಯೋ ಅಲೆಗಳು ವಿಸರ್ಜಿತವಾಗುತ್ತವೆ. ಆ ಸಂಕೇತದ ಬಲವನ್ನು ಚಿತ್ರರೂಪದಲ್ಲಿ ಸೂಚಿಸಿದಾಗ, ಅದು ಕಂಪನದ ನಿಯಮಿತ ಕ್ರಿಯೆಗಾಗಿ ನಕ್ಷೆಯಲ್ಲಿ ವ್ಯಕ್ತವಾಗುತ್ತದೆ. ಅದನ್ನೇ ಪರಮಾಣು ಸಂಬಂಧಿ ಕಾಂತೀಯ ಅನುರಣನ ವರ್ಣಪಟ್ಟಿ ಎಂದು ಕರೆಯುತ್ತಾರೆ. ಆ ಪರಮಾಣು ಸಂಬಂಧಿ ಕಾಂತೀಯ ಅನುರಣನ ವರ್ಣಪಟ್ಟಿಯಲ್ಲಿರುವ ಏರಿಕೆಯ ಶಿಖರಗಳನ್ನು ವ್ಯಾಖ್ಯಾನಿಸಿದಾಗ, ಅದರ ಸಹಾಯದಿಂದ ಮೂರು ಆಯಾಮದ ಚಿತ್ರವನ್ನು ರಚಿಸಬಹುದಲ್ಲದೆ ಆ ಅಣುವನ್ನು ಅಧ್ಯಯನ ಮಾಡಲು ಸಹಾಯವಾಗುವುದು.

ಪರಮಾಣು ಅನುರಣನ ಕ್ರಿಯೆಗೆ ಸಹಾಯಕವಾಗುವ ಕಂಪನವು ಅಯಸ್ಕಾಂತೀಯ ಕ್ಷೇತ್ರದ ಬಲ ಮತ್ತು ಪರಮಾಣುವಿನ ವಿಧದ ಮೇಲೆ ಮಾತ್ರವೇ ಅವಲಂಬಿತವಾಗಿರುವುದಲ್ಲದೇ ಪರಮಾಣುವಿನ ಸ್ಥಾನಿಕ ಪರಿಸ್ಥಿತಿಯ ಮೇಲೆಯೂ ಅವಲಂಬಿಸಿರುತ್ತದೆ. ಅದರ ಜೊತೆಗೆ ಪರಮಾಣು ನಬ್ಬೀಜದ ವಿವಿಧ ಪರಮಾಣು ಸಂಬಂಧಿ ಭ್ರಮಣೆಗಳೂ ಸಹ ಒಂದು ಮತ್ತೊಂದರ ಮೇಲೆ ಪರಿಣಾಮ ಬೀರಿ, ಸುಧಾರಿತವಾದ ರಚನಾ ಪ್ರತಿಗಳನ್ನು ಉತ್ಪತ್ತಿಮಾಡುತ್ತವೆ. ಅಂದರೆ ಪರಮಾಣು ಸಂಬಂಧಿ ಕಾಂತೀಯ ಅನುರಣನೆಯ ವರ್ಣಪಟಲದ ಶಿಖರಗಳ ಸಂಖ್ಯೆ ಹೆಚ್ಚುತ್ತದೆ.

ಈ ಪರಮಾಣು ಕಾಂತೀಯ ಅನುರಣನೆಯನ್ನು (ಎನ್‌ಎಮ್‌ಆರ್) ರಾಸಾಯನಿಕ ವಿಜ್ಞಾನದಲ್ಲಿ ಉಪಯೋಗಿಸುವುದು ಅನುಕೂಲಕರವೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಸಂಯುಕ್ತ ವಸ್ತುವಿನಲ್ಲಿರುವ ರಾಸಾಯನಿಕಗಳ ಸಂಖ್ಯೆ ಮತ್ತು ವಿಧವನ್ನು ನಿರ್ಧರಿಸಲು ಈ ಸಂಕೇತಗಳನ್ನು ಉಪಯೋಗಿಸಬಹುದು. 1950 ಮತ್ತು 1970ರ ಅವಧಿಯ ನಡುವೆ ಈ ಅನುರಣನಾ ಚಿತ್ರಣ ಕ್ರಿಯೆಯನ್ನು ಅಣುಗಳ ರಸಾಯನಿಕ ಮತ್ತು ಭೌತಿಕ ಅಣುಗಳ ವಿಶ್ಲೇಷಣೆಗೆ ಉಪಯೋಗಿಸಲಾಯಿತು. ಆದರೆ ಈ ವಿಧಾನವನ್ನು ಉಪಯೋಗಿಸುವುದರಲ್ಲಿ ಪ್ರಮುಖವಾಗಿ ಅದರ ಕಡಿಮೆ ಸಂವೇದನೆಗೆ ಸಂಬಂಧಿಸಿದ ಕೆಲವು ಸಮಸ್ಯೆಗಳಿದ್ದವು. ಆದ ಕಾರಣ ಆ ವಿಧಾನವನ್ನು ಬಳಸಿದಾಗ ಸಾಂದ್ರವಾದ ದ್ರವಗಳನ್ನು ಕುರಿತು ಅಧ್ಯಯನ ಮಾಡಲು ಮಾತ್ರ ಸಾಧ್ಯವಾಯಿತು ಮತ್ತು ಅತಿಚಿಕ್ಕಸಂಖ್ಯೆಯಷ್ಟು ಅಣುಗಳಿರುವೆಡೆ ಮಾತ್ರ ಉಪಯೋಗಿಸಲು ಅವಕಾಶವಿತ್ತು.

ಈ ವಿಚಾರಗಳಲ್ಲಿ ಮತ್ತಷ್ಟು ಸಂಶೋಧನೆಗಳಾಗುತ್ತಿರುವಾಗ 1966ರಲ್ಲಿ ಒಂದು ಪ್ರಮುಖವಾದ ಮುನ್ನಡೆಯು ಸಂಭವಿಸಿತು. ಸ್ವಿಟ್ಜರ್‌ಲೆಂಡಿನ ರಿಚರ್ಡ್ ಆರ್ ಎರ್ನ್ಸ್ ಮತ್ತು ಅಮೆರಿಕದ ವೆಸ್ಟನ್ ಎ. ಅಂಡರ್‌ಸನ್‌ರವರು ಪರಮಾಣು ಸಂಬಂಧಿ ಕಾಂತೀಯ ಅನುರಣನಾ ವರ್ಣಪಟಲದ ಸೂಕ್ಷ್ಮ ಸಂವೇದನೆಯನ್ನು ನಾಟಕೀಯವಾದ ರೀತಿಯಲ್ಲಿ ವರ್ಧಿಸಲು ಸಾಧ್ಯವೆನ್ನುವುದನ್ನು ಕಂಡುಹಿಡಿದರು. ಕಂಪನವನ್ನು ನಿಧಾನವಾಗಿ ಹೆಚ್ಚಿಸುವುದಕ್ಕೆ ಬದಲಾಗಿ ಆ ಮಾದರಿಯನ್ನು ಕಿರಿದಾದ ಮತ್ತು ತೀವ್ರತರ ಸಾಂದ್ರತೆಯ ರೇಡಿಯೋ ಕಂಪನದ ಮಿಡಿತಗಳಿಗೆ ಒಳಪಡಿಸಿದಾಗ ಅದು ಬದಲಾಗುವುದನ್ನು ಕಂಡುಕೊಂಡರು. ಆ ಮಿಡಿತಗಳಿಗೆ ಒಳಪಡಿಸಿದ ಕೆಲವು ಸೆಕೆಂಡುಗಳ ಅನಂತರ ಪರಮಾಣು ಕೇಂದ್ರದಿಂದ ಸಂಕೇತವು ವಿಸರ್ಜಿತವಾಗುತ್ತದೆ. ಅನಂತರ ಕಾಲದ ಉತ್ಪನ್ನವಾಗಿ ಮಿಡಿತವು ಹೊರಬಂದ ಮೇಲೆ ಸಂಕೇತವನ್ನು ಅಳತೆಮಾಡಬಹುದು. ಪ್ರತಿಯೊಂದು ಮಿಡಿತದ ಅನಂತರದ ಸಂಕೇತಗಳ ದಾಖಲೆಗಳನ್ನು ಗಣಕಯಂತ್ರದಲ್ಲಿ ಸಂಕಲನ ಮಾಡಬಹುದು. ಒಂದೇ

ಒಂದು ಸಮಸ್ಯೆಯೆಂದರೆ ಪರಮಾಣು ಕಾಂತೀಯ ಅನುರಣನಾ (ಎನ್‌ಎಮ್‌ಆರ್) ಸಂಕೇತವನ್ನು ಕಾಲದ ಉತ್ಪನ್ನ ಕ್ರಿಯೆಯಾಗಿ ಅಳತೆಮಾಡಲು ಸರಳವಾದ ರೀತಿ ಪರಿವರ್ತಿಸಿ ತಿಳಿಸಲು ಸಾಧ್ಯವಿಲ್ಲ. ಅರ್ನ್ಸ್ಟ್‌ರವರು ಈ ಅನುರಣನ ಕಂಪನಗಳ ಮೇಲೆ ಫೋರಿಯರ್ ವರ್ಗಾಂತರ (ಫೋರಿಯರ್ ಟ್ರಾನ್ಸ್‌ಫಾರ್ಮ್) ಕ್ರಿಯೆಯನ್ನು ನಡೆಸಿದಾಗ, ಆ ಮಾಹಿತಿಗಳನ್ನು ಸಂಕೇತಗಳಾಗಿ ವಿಶ್ಲೇಷಿಸಿ ಅನುರಣನಾ ಚಿತ್ರಣದ ವರ್ಣಪಟ್ಟಿಯಾಗಿ ನಡೆಸಲು ಪರಿವರ್ತಿಸಬಹುದು. ಇದನ್ನು ಗಣಕ ಯಂತ್ರದಲ್ಲಿ ವೇಗವಾಗಿ ನಡೆಸಲು ಸಾಧ್ಯ.

ಅರ್ನ್ಸ್‌ರವರ ಶೋಧನೆಯ ಆಧುನಿಕ ಅನುರಣನಾ ಚಿತ್ರಣದ ವರ್ಣ ಪಟಲದರ್ಶಕಕ್ಕೆ ಆಧಾರವಾಗಿ ಮಾರ್ಪಟ್ಟಿದ್ದು ಅದನ್ನು ಫೋರಿಯರ್ ಟ್ರಾನ್ಸ್‌ಫಾರ್ಮ್ ಎಂದು ಕರೆಯುತ್ತಾರೆ. ಈ ವಿಧಾನದಿಂದ ಸಂವೇದನೆಯನ್ನು 10ರಿಂದ 100ರಷ್ಟು ಹೆಚ್ಚಿಸಲು ಸಹಾಯವಾಗುತ್ತದೆ. ಏಕೆಂದರೆ ಆ ಮಿಡಿತದ ಪ್ರತಿಕ್ರಿಯೆಯಲ್ಲಿ ಎಲ್ಲಾ ಅನುರಣನ ಕಂಪನಗಳ ಮಾಹಿತಿಗಳು ಒಂದೇ ವೇಳೆಯಲ್ಲಿ ಒಳಗೊಂಡಿರುತ್ತವೆ. ಅಲ್ಪ ಪ್ರಮಾಣದ ಪದಾರ್ಥವಿದ್ದಾಗಲೂ ಸಹ ರಾಸಾಯನಿಕವಾಗಿ ಆಸಕ್ತಿಯಿರುವ ಸಮಸ್ಥಾನಿಗಳನ್ನು ಅಧ್ಯಯನ ಮಾಡಿ ತಿಳಿಯಲು ಫೋರಿಯರ್ ಟ್ರಾನ್ಸ್‌ಫಾರ್ಮ್ ಸಾಧ್ಯಮಾಡಿಕೊಡುತ್ತದೆ. ಆ ಸಮಸ್ಥಾನಿಗಳು ಸ್ವಾಭಾವಿಕವಾಗಿ ಕಡಮೆ ಪ್ರಮಾಣದಲ್ಲಿ ಅಥವಾ ಕಡಮೆ ಸಾಂದ್ರತೆಯಲ್ಲಿ ಇದ್ದರೂ ಸಹ ಅಧ್ಯಯನಮಾಡಿ ತಿಳಿಯಲು ಸಾಧ್ಯ.

1960 ಮತ್ತು 1970ರ ಅವಧಿಯಲ್ಲಿ ಪರಮವಾಹಕ ಪದಾರ್ಥಗಳು ಸುಧಾರಣೆಗೊಂಡುದರಿಂದ ಹೊಸದಾದ ಮತ್ತು ಉತ್ತಮ ಆಯಸ್ಕಾಂತಗಳನ್ನು ವಿನ್ಯಾಸ ಮಾಡಲು ಅವು ಸಹಾಯಕವಾದವು. ಉನ್ನತ ಗುಣಮಟ್ಟದ ಮತ್ತು ಸ್ಥಿರತೆಯುಳ್ಳ ಕಾಂತೀಯಕ್ಷೇತ್ರಗಳು ಉತ್ತಮ ಸಂವೇದನೆ ಮತ್ತು ವಿವರ ಸ್ಪಷ್ಟತೆಯನ್ನು ಒಳಗೊಂಡ ವರ್ಣಪಟಲವನ್ನು ಪಡೆಯಲು ಆಗ ಇದ್ದ ಅನುರಣನ ಕಂಪನಗಳ ತಾಂತ್ರಿಕತೆಯಿಂದ ಸಾಧ್ಯವಿರಲಿಲ್ಲ. ಅದಕ್ಕಾಗಿ ಮತ್ತಷ್ಟು ಸಂಶೋಧನೆಗಳು ನಡೆಯಬೇಕಾಯಿತು.

**ಎರಡು ಆಯಾಮದ ಫೋರಿಯರ್ ಟ್ರಾನ್ಸ್‌ಫಾರ್ಮ್** : 1975ರಲ್ಲಿ ಎರ್ನ್ಸ್ಟ್ ಮತ್ತು ಸಹ ಕಾರ್ಯನಿರತರು ಮೇಲೆ ತಿಳಿಸಿದ ಅಗತ್ಯಗಳಿಗೆ ಬೇಕಾದ ಮುನ್ನಡೆಯನ್ನು ಸಾಧಿಸಲು ಅವರ ಸಂಶೋಧನೆಯಾದ ಎರಡು ಆಯಾಮದ ಫೋರಿಯರ್ ಟ್ರಾನ್ಸ್‌ಫಾರ್ಮ್ ಸಹಾಯಕವಾಯಿತು. ಒಂದು ಆಯಾಮದಿಂದ ಎರಡು ಆಯಾಮದ ಫೋರಿಯರ್ ಟ್ರಾನ್ಸ್‌ಫಾರ್ಮ್ ಆಗಿ ವರ್ಗಾಂತರಿಸುವ ಕ್ರಿಯೆಯು ಒಂದು ಕ್ರಾಂತಿಕಾರಕ ವಿಧಾನವಾಗಿದ್ದು ಅದು ಅನುರಣನಾ ಚಿತ್ರಣದ ತಾಂತ್ರಿಕತೆಯಲ್ಲಿ ಅನೇಕ ಹೊಸ ಸಾಧ್ಯತೆಗಳನ್ನು ಸೇರಿಸಿತು. ಒಂದು ಆಯಾಮದ ಅನುರಣನಾ ಚಿತ್ರಣದ ಕ್ರಿಯೆಯು ಪರಮಾಣು ಭ್ರಮಣೆಗಳನ್ನು ಮಿಡಿತಕ್ಕೆ ಒಳಗಾಗುವಂತೆ ಮಾಡುತ್ತದೆ. ಆ ಸಂಕೇತವನ್ನು ಸ್ವೀಕಾರಕದಲ್ಲಿ 't' ಕಾಲದ ನಂತರ ಗುರುತಿಸಬಹುದು. ಅದನ್ನು ಆ ನಂತರ ಕಾಲ 't' ಯ ಉತ್ಪನ್ನವಾಗಿ ನಕ್ಷೆಯಾಗಿ ಗುರುತಿಸಲು ಮಿಡಿತದ ನಂತರ ಸಾಧ್ಯವಾಗಬಹುದು. ಎರಡು ಆಯಾಮದ ಅನುರಣನಾ ಚಿತ್ರಣದ ಕ್ರಿಯೆಯಲ್ಲಿ ಪರಮಾಣು ಭ್ರಮಣೆಗಳು ಎರಡು ಮಿಡಿತಗಳಿಗೆ ಒಳಗಾಗುತ್ತವೆ. ಅದು 't1' ಕಾಲದ ಅಂತರದೊಡನೆ ಒಳಗಾಗುತ್ತದೆ. ಎರಡನೆಯ ಮಿಡಿತದ ಅನಂತರ ಆ ಸಂಕೇತವನ್ನು ಒಂದು ಆಯಾಮದ ಅನುರಣನಾ ಚಿತ್ರಣದ ಕ್ರಿಯೆಯ ರೀತಿಯಲ್ಲಿಯೇ 't2' ಕಾಲದ ಅನಂತರ ಪ್ರಯೋಗದ ಮೊದಲ ಭಾಗಕ್ಕೆ ಹಿಂದಿರುಗಿ, 't1' ಅಳತೆಗಳೊಡನೆ ಪುನರಾವರ್ತನೆಯಾಗುತ್ತದೆ.

't1'ರ ವಿದ್ಯುದಾವೇಶ ಸಂಕೇತವನ್ನು ಪರಿವರ್ತನೆ 't2' ಕಾಲಾವಧಿಯಲ್ಲಿ ಅಳತೆ ಮಾಡಬಹುದು. ಇದು ಎರಡು ಆಯಾಮದ ಪಟ್ಟಿಯನ್ನು ಒದಗಿಸುತ್ತದೆ. ಅದರಲ್ಲಿ ಸಂಕೇತದ ತೀವ್ರತೆಯು 't1' ಮತ್ತು 't2'ಗಳೆರಡರ ಉತ್ಪನ್ನ ಕ್ರಿಯೆಯ ರೀತಿಯಲ್ಲಿರುತ್ತದೆ. ಫೋರಿಯರ್ ವರ್ಗಾಂತರದ ನಂತರ ಈ ಎರಡು ಚಲಾಂತರಗಳಿಗೆ ಸಂಬಂಧಿಸಿದಂತೆ ಎರಡು ಆಯಾಮದ ಅನುರಣನಾ ವರ್ಣಪಟ್ಟಿಯನ್ನು ಪಡೆಯಲು ಸಾಧ್ಯವಾಗುವುದು ಮತ್ತು ಎರಡು ಆಯಾಮದ ಅಣುವಿನ ರಚನಾ ಕೃತಿ ಪಡೆಯಲು ಸಹಾಯಕವಾಗುತ್ತದೆ.

1991ರಲ್ಲಿ ಎರ್ನ್ಸ್ಟ್‌ರವರಿಗೆ ಮಿಡಿತಗಳ ಫೋರಿಯರ್ ವರ್ಗಾಂತರ ಅನುರಣನಾ ಚಿತ್ರಣದ ಕ್ರಿಯೆಗಳ ಸಾಧನೆಗಳಿಗಾಗಿ ರಸಾಯನವಿಜ್ಞಾನದ ನೊಬೆಲ್ ಪ್ರಶಸ್ತಿಯು ದೊರಕಿತು. ಅವರ ಕಾಣಿಕೆಯು ಅಣುವಿನಲ್ಲಿ ಪರಮಾಣುಗಳು ಪರಸ್ಪರ ಹತ್ತಿರವಾಗಿರುವ ಅಳತೆಯನ್ನು (ಉದಾಹರಣೆಗೆ ಪರಮಾಣುಗಳು ಒಂದು ಮತ್ತೊಂದರೊಡನೆ ಆವೃತವಾಗಿರುವುದನ್ನು) ತಿಳಿಯಲು ಸಹಾಯಕವಾಯಿತು. ಅನುರಣನಾ ಚಿತ್ರಣದ ವರ್ಣಪಟ್ಟಿಯಲ್ಲಿನ ಸಂಕೇತಗಳನ್ನು ಅರ್ಥಮಾಡಿಕೊಳ್ಳಲು ಇದರಲ್ಲಿ ಸಾಧ್ಯವಾಗುತ್ತದೆ. ಇದರ ಸಹಾಯದಿಂದ ಅಣುವಿನ ಗೋಚರದ ಬಗೆಗೆ ಅದರ ರಚನಾ ವಿಧಾನಗಳ ಬಗ್ಗೆ ಆಲೋಚನೆ ಮಾಡಿ ತಿಳಿಯಲು ಸಾಧ್ಯವಾಗಬಹುದು.

ಈ ವಿಧಾನವು ಹೋಲಿಕೆಯಲ್ಲಿ ಚಿಕ್ಕಗಾತ್ರದ ಅಣುಗಳಿಗೆ ಹೆಚ್ಚು ಸೂಕ್ತವಾಗುತ್ತದೆ. ಆದರೆ ದೊಡ್ಡ ಗಾತ್ರದ ಅಣುಗಳಿಗೆ ಸಂಬಂಧಿಸಿದಂತೆ, ವಿವಿಧ ಪರಮಾಣು ಅನುರಣನಗಳ ನಡುವೆ ಇರುವ ವ್ಯತ್ಯಾಸದಿಂದ ಗುರುತಿಸಿ ತಿಳಿಯಲು ಕಷ್ಟವಾಗಿದೆ. ಈ ವಿಧದಲ್ಲಿ ಅನುರಣನಾ ಚಿತ್ರಣದ ವರ್ಣಪಟ್ಟಿಯಲ್ಲಿ ಸಾವಿರಾರು ಶಿಖರಗಳ ನಕ್ಷೆಯಿದ್ದು ಶಿಖರವು ಯಾವ ಪರಮಾಣುವಿಗೆ ಸಂಬಂಧಿಸಿದೆ ಎನ್ನುವುದನ್ನು ತಿಳಿಯಲು ಅಸಾಧ್ಯವಾಗುತ್ತದೆ. ಈ ಸಮಸ್ಯೆಯನ್ನು ಅಂತಿಮವಾಗಿ ಬಿಡಿಸಿದವರು ಸ್ವಿಸ್ ದೇಶದ ರಸಾಯನ ವಿಜ್ಞಾನಿ ಕುರ್ಟ್ ವುತ್ರಿಚರ್‌ರವರು.

**ಕಾನುಚಿತ್ರಣ ತಾಂತ್ರಿಕತೆಯ ಅನ್ವಯಗಳು** : ವೈದ್ಯಕೀಯ ಕ್ಷೇತ್ರದಲ್ಲಿ ಕಾಂತೀಯ ಅನುರಣನ ಚಿತ್ರಣದ ಪರಿಣಾಮಗಳು ಅನೇಕ ರೀತಿಯದ್ದಾಗಿವೆ. ಕಾನು ಚಿತ್ರಣದ ಆನ್ವಯಗಳಲ್ಲಿ ಶಸ್ತ್ರಕ್ರಿಯೆಯ ಯೋಜನಾ ವಿಧಾನ, ವಾಸ್ತವ ಕಾಲದಲ್ಲಿಯೇ ಹೃದಯ ಕ್ರಿಯೆಯ ಛಾಯಾಗ್ರಹಣ, ಮಾಂಸಖಂಡ ಮತ್ತು ಅಸ್ಥಿಪಂಜರದ ಗುಣಲಕ್ಷಣಗಳ ನಿರ್ಧಾರ ಹಾಗೂ ಮೆದುಳಿನ ಪ್ರತಿಬಿಂಬ ಗ್ರಹಣ ಕ್ರಿಯೆಗಳು ಸೇರಿದ್ದು ಅವು ಈಗ ವೈದ್ಯಕ್ಷೇತ್ರದ ನಿತ್ಯವಿಧಿಗಳಾಗಿವೆ. ಕೆಳಗೆ ಕೊಟ್ಟಿರುವ ವಿವರಣೆಗಳು ವಿವಿಧ ವೈದ್ಯಕೀಯ ಕ್ಷೇತ್ರಗಳಲ್ಲಿ ಕಾನುಚಿತ್ರಣದ ಆನ್ವಯಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತವೆ.

**ಮೆದುಳು ಹಾಗೂ ಮೆದುಳು ಬಳ್ಳಿ:** ನರಸಂಬಂಧ ಕೆಲ ರೋಗಗಳನ್ನು ತಪಾಸಣೆ ಮಾಡುವ ಪ್ರಮುಖ ರೋಗ ತಪಾಸಣಾ ಸಲಕರಣೆಯಾಗಿ ಕಾರ್ಯನಿರ್ವಹಿಸುತ್ತದೆ. ಅನೇಕ ರೀತಿಯ ರಕ್ತ ಪೆಡಸಣೆ ರೋಗ, ಅಲ್ಜೆಮರ್ ಅಥವಾ ಅಪಸ್ಮಾರ ಮುಂತಾದ ನರಸಂಬಂಧ ರೋಗಗಳ ಪ್ರಮುಖ ರೋಗತಪಾಸಣಾ ಸಲಕರಣೆಯಾಗಿ ಕಾನುಚಿತ್ರಣವು ನೆರವಾಗುತ್ತದೆ. ಮೆದುಳು ಮತ್ತು ಮೆದುಳು ಬಳ್ಳಿಯ ರೋಗದ ಗಡ್ಡೆಗಳು, ಸಾಂಕ್ರಾಮಿಕ ರೋಗಗಳು ಹಾಗೂ ನ್ಯೂನತೆಗಳನ್ನು ತಪಾಸಣೆ ಮಾಡಲು ಸಹ ಇದು ಸಹಾಯ ಮಾಡುತ್ತದೆ. ಕಾನುಚಿತ್ರಣದ ಸಹಾಯದಿಂದ ನರಗಳ ವ್ಯೂಹದಲ್ಲಿ ಉರಿಮೂತ್ರವು ಯಾವ ನಿರ್ದಿಷ್ಟ ಸ್ಥಳದಲ್ಲಿದೆ ಎನ್ನುವುದನ್ನೂ, ಅದು ಎಷ್ಟರ ಮಟ್ಟಿಗೆ ತೀವ್ರವಾಗಿದೆ ಹಾಗೂ ಚಿಕಿತ್ಸೆಯಿಂದ ಅದು ಎಷ್ಟು ಪ್ರಭಾವಗೊಂಡಿದೆ ಎನ್ನುವುದನ್ನೂ ನೋಡಲು ಸಾಧ್ಯವಿದೆ. ಮೊದಲಿಗೆ ರೋಗವನ್ನು ಪತ್ತೆಮಾಡಿ ತಿಳಿಯುವುದು ಈ ರೋಗಗಳ ಪರಿಣಾಮಕಾರಿ ಚಿಕಿತ್ಸೆಗೆ ಪ್ರಮುಖ ಕೀಲಿಕೈಯಾಗಿದೆ. ಅದು ಮಾಂಸಖಂಡಗಳಿಂದ ಬೆನ್ನುನೋವು ಮತ್ತು ಮೆದುಳು ಬಳ್ಳಿಯಲ್ಲಿ ಇರುವ ಉರಿಮೂತ್ರದಿಂದಾದ ಬೆನ್ನುನೋವನ್ನು ಪ್ರತ್ಯೇಕಮಾಡಿ ತಿಳಿಯಲು ಸಹಾಯವಾಗುತ್ತದೆ.

**ಸ್ತನಗಳು:** ಮೆದುವಾದ ಅಂಗಾಂಶಗಳ ನಡುವೆ ಇರುವ ಹೋಲಿಕೆ ವ್ಯತ್ಯಾಸಗಳನ್ನು ಉತ್ಕೃಷ್ಟವಾದ ರೀತಿಯಲ್ಲಿ ಪ್ರದರ್ಶನ ಮಾಡಿ ತೋರಿಸುವ ಕಾನುಚಿತ್ರಣದ ಸಾಮರ್ಥ್ಯದ ಸಹಾಯದಿಂದ ಸ್ತನ ಅರ್ಬುದ ರೋಗ ತಪಾಸಣೆ ಹಾಗೂ ವಿಶ್ಲೇಷಣೆಯ ಪ್ರಮುಖ ಸಲಕರಣೆಯಾಗಿ ಕಾರ್ಯನಿರ್ವಹಿಸಿ ಆ ರೋಗದ ಚಿಕಿತ್ಸೆಗೆ ನೆರವಾಗುತ್ತಿದೆ.

**ಎದೆ ಮತ್ತು ಉದರ:** ಎದೆ ಮತ್ತು ಹೊಟ್ಟೆಯ ಒಳಗಿನ ಅಂಗಭಾಗಗಳಾದ ಪಿತ್ತಜನಕಾಂಗ, ಮೂತ್ರಜನಕಾಂಗ ಮತ್ತು ಮೇದೋಜೀರಕಾಂಗಗಳನ್ನೂ ಸಹ ಕಾನುಚಿತ್ರಣದ ನೆರವಿನಿಂದ ಸಂಪೂರ್ಣವಾಗಿ ಪರೀಕ್ಷಿಸಲು ಸಾಧ್ಯವಿದೆ. ರೋಗದ ಗಡ್ಡೆಗಳು ಮತ್ತು ಅಂಗಭಾಗಗಳ ಕಾರ್ಯಚಟುವಟಿಕೆಯ ಏರುಪೇರುಗಳನ್ನು ತಪಾಸಣೆ ಮಾಡಿ ವಿಶ್ಲೇಷಿಸಲು ಈ ಪರೀಕ್ಷೆಗಳು ನೆರವಾಗುತ್ತವೆ.

**ಹೃದಯ:** ಅಂಗಭಾಗವನ್ನು ಛೇದನ ಮಾಡದೆಯೇ ಹೃದಯ ಸಮಸ್ಯೆಗಳಾದ ಜನ್ಮಜಾತಹೃದಯ ರೋಗ (ಹುಟ್ಟುವಾಗಲೇ ಇರುವ ಹೃದಯ ತೊಡಕುಗಳು)ಹೃದಯದ ರಕ್ತನಾಳಗಳ ಪೆಡಸುತನದ ರೋಗ ಹಾಗೂ ಹೃದಯದಲ್ಲಿರುವ ಬೇರೆ ತೊಂದರೆಗಳನ್ನು ತಪಾಸಣೆಮಾಡಿ ತಿಳಿಯಲು ಕಾನುಚಿತ್ರಣವು ಸಹಾಯ ಒದಗಿಸುತ್ತದೆ.

**ರಕ್ತನಾಳಗಳು:** ಜೀವಸತ್ವದ ಕೊರತೆ ಮತ್ತು ಮೆದುಳು, ಕತ್ತು, ಕಾಲುಗಳು ಅಥವಾ ದೇಹದ ಬೇರೆ ಭಾಗದ ಪ್ರದೇಶಗಳಲ್ಲಿ ರಕ್ತನಾಳಗಳು ಗಡಸಾಗುವುದರಿಂದ ಅವು ಕಿರಿದಾಗಿ ರಕ್ತ ಸರಬರಾಜಿನ ಕೊರತೆ ಆ ಅಂಗಕ್ಷೇತ್ರಗಳಲ್ಲಿ ಸಂಭವಿಸಿರುವುದನ್ನು ಕಾನುಚಿತ್ರಣದ ಸಹಾಯದಿಂದ ವಿಶ್ಲೇಷಣೆ ಮಾಡಿ ತಿಳಿಯಲು ಸಾಧ್ಯ.

**ಮಾಂಸಖಂಡ–ಅಸ್ಥಿಪಂಜರ:** ಮೂಳೆಗಳ ಸುತ್ತಮುತ್ತ ಇರುವ ಮೃದು ಅಂಗಾಂಗಗಳ ರಚನಾ ಕೃತಿಯ ಸ್ಪಷ್ಟ ವಿವರಗಳ ಚಿತ್ರಗಳನ್ನು ಕಾನುಚಿತ್ರಣ ಒದಗಿಸಬಲ್ಲದು. ಈ ಅನುಕೂಲತೆಯಿಂದಾಗಿ ಬೆನ್ನುಹುರಿ ಮತ್ತು ಮೊಣಕಾಲು, ತೋಳು, ಜನನಾಂಗ ಪ್ರದೇಶ ಮತ್ತು ಪೃಷ್ಠ, ಮೊಳಕೈ, ಮಣಿಕಟ್ಟು ಮುಂತಾದ ಸಂಧಿ ಪ್ರದೇಶಗಳ ತಪಾಸಣೆಗೆ ಇದು ಉತ್ತಮ ಐಚ್ಛಿಕ ಸಲಕರಣೆಯಾಗಿ ಕಾರ್ಯನಿರ್ವಹಿಸುತ್ತಿದೆ; ಅಸ್ಥಿ ರಜ್ಜು ಹಾಗೂ ಮಾಂಸಖಂಡಗಳ ಹಾನಿಯನ್ನು ಸ್ಪಷ್ಟವಾಗಿ ನೋಡಲು ಸಹಾಯಮಾಡುತ್ತದೆ.

**ಶ್ವಾಸಕೋಶಗಳು:** ಇತ್ತೀಚಿನ ತಾಂತ್ರಿಕತೆಯ ಮುನ್ನಡೆಗಳು ಕಾನುಚಿತ್ರಣವನ್ನು ಗಣನೀಯವಾಗಿ ಸುಧಾರಣೆ ಮಾಡಿರುವುದರಿಂದ ಹೀಲಿಯಮ್ ಮತ್ತು ಕ್ಸೆನಾನ್ ಮುಂತಾದ ವಿರಳ ಅನಿಲಗಳನ್ನು ಉಪಯೋಗಿಸಿಕೊಂಡು ಶ್ವಾಸಕೋಶಗಳ ಕಾಂತೀಯ ಅನುರಣನ ಚಿತ್ರಣಕ್ಕೆ ಉಪಯೋಗಿಸಲಾಗುತ್ತದೆ. ಈ ತಾಂತ್ರಿಕತೆಯ ಸಹಾಯದಿಂದ ಅಂಗಶಾಸ್ತ್ರಜ್ಞರು ಲೋಮನಾಳಗಳ ಪೆಡಸುತನ, ಶ್ವಾಸಕೋಶಗಳಲ್ಲಿ ರಕ್ತಕಣಗಳು ಉನ್ನತವಾಗಿರುವುದು ಮುಂತಾದವನ್ನು ಚಿಕಿತ್ಸೆಗೆ ಮೊದಲೇ ತಿಳಿದು ಅವುಗಳನ್ನು

ನಿವಾರಣೆ ಮಾಡಲು ಸಹಾಯಮಾಡುತ್ತದೆ. ಈ ತೊಂದರೆಗಳಿಂದ ರೋಗಿಯು ಸಾವಿಗೀಡಾಗುವುದಕ್ಕೆ ಮೊದಲೇ ಈ ರೋಗಗಳನ್ನು ಗುರುತಿಸಿ ಚಿಕಿತ್ಸೆ ನಡೆಸಲು ಕಾನುಚಿತ್ರಣವು ಸಹಾಯ ಮಾಡುತ್ತದೆ.

**ಅರ್ಬುದ ರೋಗಗಳು:** ಅರ್ಬುದ ರೋಗದ ರೋಗತಪಾಸಣೆ, ಚಿಕಿತ್ಸೆ ಮತ್ತು ರೋಗ ಸುಧಾರಣೆಯನ್ನು ತಿಳಿಯಲು ಕಾನುಚಿತ್ರಣ ಪರೀಕ್ಷಾ ವಿಧಾನಗಳು ಅತಿ ಹೆಚ್ಚು ಪ್ರಮುಖವಾದವು. ಅದು ಒದಗಿಸುವ ಪ್ರತಿಬಿಂಬಗಳ ಸಹಾಯದಿಂದ ಅರ್ಬುದ ರೋಗದ ಗಡ್ಡೆಗಳ ಗಡಿಗಳನ್ನು ಕರಾರುವಾಕ್ಕಾಗಿ ತಿಳಿಯಲು ಸಾಧ್ಯ. ಇದರಿಂದಾಗಿ ನಿಖರವಾದ ರೀತಿಯಲ್ಲಿ ಅಂಗ ಶಸ್ತ್ರಕ್ರಿಯೆ ಮಾಡಿ ಅರ್ಬುದ ರೋಗ ಭಾಗವನ್ನು ಬೇರ್ಪಡಿಸಿ ತೆಗೆದು ನಿಖರವಾಗಿ ವಿಕಿರಣ ಚಿಕಿತ್ಸೆ ಮಾಡಲು ಕಾನುಚಿತ್ರಣವು ಸಹಾಯ ಮಾಡುತ್ತದೆ.

**ರೋಗಿಗಳ ನರಳುವಿಕೆಯನ್ನು ಕಡಮೆಮಾಡಲು:** ಈ ಹಿಂದೆ ಭೇದನ ಶಸ್ತ್ರಕ್ರಿಯೆಯ ಮೂಲಕ ಪರೀಕ್ಷೆಗಳನ್ನು ನಡೆಸುತ್ತಿದ್ದುದನ್ನು ಬಿಟ್ಟುಬಿಡುವುದರಿಂದ ಅನೇಕ ರೋಗಗಳಿಗೆ ಶಸ್ತ್ರಕ್ರಿಯೆಗಳ ಅಗತ್ಯವಿಲ್ಲವಾಗುವುದರಿಂದ ಕಾನುಚಿತ್ರಣವು ರೋಗಿಗಳು ನರಳುವುದನ್ನು ಕಡಮೆ ಮಾಡುತ್ತದೆ. ಈ ವಿಧಾನಕ್ಕೆ ಭೇದನ ಕ್ರಿಯೆಯ ಅಗತ್ಯವಿರುವ ಯಾವುದೇ ಉಪಕರಣವನ್ನು ಉಪಯೋಗಿಸುವುದಿಲ್ಲವಾದ್ದರಿಂದ ಶಸ್ತ್ರಕ್ರಿಯೆಯಲ್ಲಾಗುತ್ತಿದ್ದ ಸೋಂಕನ್ನು ಇದು ಪೂರ್ಣವಾಗಿ ನಿವಾರಣೆ ಮಾಡುತ್ತದೆ.

**ಕಾರ್ಯನಿರ್ವಹಿಸುವ ಮಾರ್ಗದರ್ಶಿ:** ಹೊಸ ತಾಂತ್ರಿಕತೆಯ ಅಭಿವೃದ್ಧಿಗಳು ಹೆಚ್ಚಿನ ಮುನ್ನಡೆಗೆ ಸಹಾಯಕವಾಗಿ ಈಗ ಶಸ್ತ್ರಚಿಕಿತ್ಸೆಯ ಕೊಠಡಿಯಲ್ಲಿ ಕಾನುಚಿತ್ರಣದ ಮಾರ್ಗದರ್ಶನವಿರುವ ಶಸ್ತ್ರಕ್ರಿಯೆಯು ನಡೆಯುವಂತಾಗಿದೆ. ಈ ಮುನ್ನಡೆಯ ಪರಿಣಾಮವಾಗಿ ಶಸ್ತ್ರಚಿಕಿತ್ಸೆಯ ಕಾಲದಲ್ಲೇ ಶಸ್ತ್ರವೈದ್ಯರಿಗೆ ದೇಹದ ಒಳಗಿನ ಅಂಗಭಾಗಗಳ ಬಗೆಗೆ ದೃಶ್ಯ ಪ್ರತಿಬಿಂಬಗಳನ್ನು ದೊರಕಿಸಿ ಅದರ ಮಾರ್ಗದರ್ಶನದಿಂದ ಶಸ್ತ್ರಕ್ರಿಯೆಯನ್ನು ಮುಂದುವರೆಸಬಹುದಾದ ಅನುಕೂಲತೆಗಳನ್ನು ಒದಗಿಸುತ್ತಿದೆ.

**ಕ್ರಮಾನುಗತಿ ನಿರ್ದೇಶನ:** 1980ರ ಆರಂಭದಲ್ಲಿ ಕುರ್ಟ್ ವುತ್‌ರಿಚ್‌ರವರು ಕಾನುಚಿತ್ರಣವನ್ನು ಬಳಸಿಕೊಂಡು ಪ್ರೋಟೀನ್ ಮುಂತಾದ ಜೈವಿಕ ಅಣುಗಳನ್ನು ಸಹ ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ವಿಸ್ತರಿಸಬಹುದೆಂಬ ನೂತನ ಕಲ್ಪನೆಯನ್ನು ಅಭಿವೃದ್ಧಿಪಡಿಸಿದರು. ಪ್ರತಿಯೊಂದು ಕಾನುಚಿತ್ರಣದ ಸಂಕೇತವನ್ನು ಜಲಜನಕದ ನಬ್ಬೀಜದ (ಅಂದರೆ ಪ್ರೋಟಾನ್) ಜೊತೆ ಕ್ರಮವಾದ ರೀತಿ ಜೋಡಣೆ ಮಾಡುವ ವಿಧಾನವನ್ನು ಅವರು ಕಂಡುಹಿಡಿದರು. ಈ ವಿಧಾನವನ್ನು ಕ್ರಮಾನುಗತಿಯ ನಿರ್ದೇಶನವೆಂದು ಕರೆಯುತ್ತಾರೆ. ಈಗ ಇದು ಎಲ್ಲಾ ಅನುರಣನಾ ವಿಧಾನದ ವಿಶ್ಲೇಷಣೆಗಳ ಆಧಾರಸ್ತಂಭವಾಗಿದೆ. ಹೆಚ್ಚಿನ ಸಂಖ್ಯೆಯ ಜಲಜನಕದ ಎರಡೆರಡು ನಬ್ಬೀಜಗಳ ನಡುವಿನ ಅಂತರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎನ್ನುವುದನ್ನು ಅವರು ತೋರಿಸಿದರು. ಅನಂತರ ಈ ಮಾಹಿತಿಯನ್ನು ಗಣಿತೀಯ ವಿಧಾನದೊಂದಿಗೆ ಬಳಸಿಕೊಂಡು ಅಣುವಿನ ಮೂರು ಆಯಾಮದ ರಚನಾಕೃತಿಯನ್ನು ತಿಳಿದುಕೊಳ್ಳಲು ಉಪಯೋಗಿಸಿದರು. ಈ ತಂತ್ರವನ್ನು ಈ ಮುಂದೆ ತಿಳಿಸಿದ ರೀತಿ ಸರಳವಾಗಿ ತಿಳಿಸಬಹುದು. ಒಂದು ಮನೆಯ ಎಲ್ಲಾ ಭಾಗಗಳ ಅಳತೆಗಳನ್ನು ತಿಳಿದುಕೊಂಡಿದ್ದರೆ ಅದರ ಸಹಾಯದಿಂದ ಮನೆಯ ಮೂರು ಆಯಾಮದ ಚಿತ್ರವನ್ನು ಬರೆಯಬಹುದು. ಅದೇ ವಿಧಾನದ ರೀತಿ ಸಸಾರಜನಕವೊಂದರ ಹೆಚ್ಚಿನ ಸಂಖ್ಯೆಯ ಚಿಕ್ಕ ದೂರಗಳನ್ನು ಅಳತೆ ಮಾಡುವುದರ ಮೂಲಕ ಅದರ ಮೂರು ಆಯಾಮದ ಚಿತ್ರವನ್ನು ರಚಿಸಲು ಸಾಧ್ಯವಾಗಬಹುದು. ಪರಮಾಣು ಕಾಂತೀಯ ಅನುರಣನಾ ವರ್ಣಪಟಲ ದರ್ಶಕದ ಸಹಾಯದಿಂದ ಒಂದು ದ್ರಾವಕದಲ್ಲಿರುವ ಜೈವಿಕ ಅಣುಗಳಿಗಾಗಿ ಮೂರು ಆಯಾಮದ ರಚನಾ ಕೃತಿಯನ್ನು ರಚಿಸಲು ಸಾಧ್ಯವಾಗುವುದನ್ನು ತೋರಿಸಿಕೊಟ್ಟ ವುಡ್‌ರಿಚ್‌ರವರಿಗೆ 2002ರ ರಾಸಾಯನಿಕಶಾಸ್ತ್ರದ ನೋಬೆಲ್ ಪ್ರಶಸ್ತಿಯನ್ನು ನೀಡಲಾಯಿತು.

**ಕಾನುಚಿತ್ರಣದ ಕಲ್ಪನೆ :** ಪರಮಾಣು ಕಾಂತೀಯ ಅನುರಣನಾ ಚಿತ್ರಣದ ತಂತ್ರವನ್ನು ಆರಂಭಿಸಿದ ವರ್ಷಗಳಲ್ಲಿ ಆ ತಂತ್ರವನ್ನು ರಾಸಾಯನಿಕ ಸಂಯುಕ್ತವಸ್ತುಗಳ ರಚನಾಕೃತಿಯನ್ನು ನಿರ್ಧಾರ ಮಾಡಲು ಉಪಯೋಗಿಸುತ್ತಿದ್ದು ಈ ತಂತ್ರವನ್ನು ಜೀವವಿಜ್ಞಾನ ಮತ್ತು ವೈದ್ಯವಿಜ್ಞಾನ ಕ್ಷೇತ್ರಗಳಲ್ಲಿ ಉಪಯೋಗಿಸಲು ಸ್ವಲ್ಪಮಟ್ಟಿನ ಕಾಲವು ಅಗತ್ಯವಾಯಿತು. ಆದರೆ ವಿಜ್ಞಾನಿಗಳು ರಾಸಾಯನಿಕ ಸಂಯುಕ್ತಗಳು ದ್ರಾವಣದಲ್ಲಿ ಮತ್ತು ಜೈವಿಕ ಅಣುಗಳು ಮಾನವನ ದೇಹದೊಳಗೆ ಇರುವುದನ್ನು ಹಾಗೂ ಅವುಗಳ ನಡುವೆ ಮೂಲ ಸಂಬಂಧವಿರುವುದನ್ನು ಬೇಗ ಕಂಡುಕೊಂಡರು.

ಮಾನವನ ದೇಹದ ತೂಕದಲ್ಲಿ ಸುಮಾರು ಮೂರನೆಯ ಒಂದು ಪ್ರಮಾಣದಷ್ಟು ನೀರಿನಿಂದಾಗಿದೆ. ನೀರು ಜಲಜನಕ ಮತ್ತು ಆಮ್ಲಜನಕದ ಪರಮಾಣುಗಳಿಂದಾದ ಅಣು. ಆದುದರಿಂದ ಜಲಜನಕ ಪರಮಾಣುಗಳ ನಬ್ಬೀಜಗಳು ಪರಮಾಣು ಭ್ರಮಣೆಗಳ ರೀತಿ ವರ್ತಿಸುವ ಸಾಮರ್ಥ್ಯವನ್ನು ಹೊಂದಿವೆ. ದೇಹವನ್ನು ಪ್ರಬಲ ಆಯಸ್ಕಾಂತ ಕ್ಷೇತ್ರಕ್ಕೆ ಒಡ್ಡಿದಾಗ ಜಲಜನಕ ಪರಮಾಣುಗಳು ಪ್ರಬಲ ಅಯಸ್ಕಾಂತ ದಿಕ್ಕಿನಲ್ಲಿ ತಿರುಗಿ ನಿಲ್ಲುತ್ತವೆ. ರೇಡಿಯೋ ಅಲೆಗಳ ಮಿಡಿತಗಳನ್ನು ಆರೋಪಿಸಿದಾಗ ಪರಮಾಣು ಕೇಂದ್ರದ ಶಕ್ತಿ ಪ್ರಮಾಣವು ಬದಲಾಗುತ್ತದೆ. ಆ ಮಿಡಿತದ ನಂತರ ಅನುರಣನ ಅಲೆಯು ವಿಸರ್ಜಿತವಾಗುತ್ತದೆ. ಈ ಹಿಂದೆ ವಿವರಿಸಿದ ರೀತಿಯಲ್ಲಿ ಪರಮಾಣು ಕೇಂದ್ರವು ತನ್ನ ಹಿಂದಿನ ಸ್ಥಿತಿಗೆ ಮರಳಿದಾಗ ಅನುರಣನ ಅಲೆಯು ವಿಸರ್ಜಿತವಾಗುತ್ತದೆ.

1970ರ ದಶಕದಲ್ಲಿ ಪರಮಾಣು ಕೇಂದ್ರದ ಆಂದೋಲನಗಳ ಚಿಕ್ಕ ವ್ಯತ್ಯಾಸಗಳನ್ನು ಗುರುತಿಸಲು ಕಾನುಚಿತ್ರಣದ ತಂತ್ರವು ನೆರವಾಯಿತು. ವಾಸ್ತವವಾಗಿ, ದೇಹದಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ನೀರಿನ ಅಂಶವು ಈ ತಂತ್ರವನ್ನು ವೈದ್ಯಕೀಯ ಕ್ಷೇತ್ರದಲ್ಲಿ ಉಪಯೋಗಿಸಲು ಸಹಾಯಮಾಡುತ್ತದೆ. ಸಾಮಾನ್ಯವಾಗಿ, ದೇಹದಲ್ಲಿರುವ ಅಂಗಾಂಶಗಳ ಮತ್ತು ಅಂಗಗಳ ನಡುವೆ ಇರುವ ನೀರಿನ ಪ್ರಮಾಣವು ಬೇರೆಬೇರೆಯಾಗಿರುತ್ತದೆ. ಅದರ ಜೊತೆಗೆ, ಅನೇಕ ರೋಗಗಳಲ್ಲಿ ರೋಗಸ್ಥಿತಿಯ ಅರಿವಿನ ಕ್ರಿಯೆಯು ನಿರ್ದಿಷ್ಟ ಅಂಗಾಂಶ ಅಥವಾ ಅಂಗದಲ್ಲಿನ ನೀರಿನ ಪ್ರಮಾಣವು ಬದಲಾಗುವಂತೆ ಮಾಡುತ್ತದೆ. ಆದುದರಿಂದ ಅಂಗಾಂಶಗಳು ಮತ್ತು ಅಂಗಗಳ ವಿವರಪೂರ್ಣವಾದ ಪ್ರತಿಬಿಂಬವನ್ನು ಪಡೆಯಲು ಹಾಗೂ ಪರೀಕ್ಷೆಗೆ ಒಳಪಡಿಸಲ್ಪಟ್ಟ ಜಾಗದಲ್ಲಿರುವ ನೀರಿನ ಅಂಶವನ್ನು ಮತ್ತು ನೀರಿನ ಅಣುಗಳ ಚಲನೆಗಳನ್ನು ಅರಿಯಲು ಸಾಧ್ಯವಾಗುತ್ತದೆ ಎಂದು ಹೇಳಬಹುದು. ಇದನ್ನು ತಿಳಿದ ವಿಜ್ಞಾನಿಗಳು ಕಾನುಚಿತ್ರಣ ತಂತ್ರವನ್ನು ವೈದ್ಯಕೀಯಕ್ಷೇತ್ರದ ಹೆಚ್ಚಿನ ವಿಭಾಗಗಳಲ್ಲಿ ಉಪಯೋಗಿಸಿಕೊಳ್ಳಲು ಅಗತ್ಯವಾದ ಆಲೋಚನೆಗಳನ್ನು ಒದಗಿಸಿದರು.

**ಕಾನುಚಿತ್ರಣ ತಂತ್ರದ ಅಭಿವೃದ್ಧಿ** : ಎರ್ನ್ಸ್ಟ್ ಮತ್ತು ಅವರ ಸಹಕಾರ್ಯಕರ್ತರುಗಳ ಪ್ರಯತ್ನಗಳಿಂದ ಸುಧಾರಿಸಿದ ಕಾನುಚಿತ್ರಣ ತಂತ್ರವು ವೈದ್ಯಕೀಯ ಕ್ಷೇತ್ರಗಳಲ್ಲಿ ಅದರ ಬಳಕೆಗೆ ಆಧಾರವಾಯಿತು. ಆರಂಭದ ಅರ್ಬುದ ರೋಗಲಕ್ಷಣಗಳನ್ನು ತಿಳಿಯಲು ಕಾಂತೀಯ ಅನುರಣನ ವಿಧಾನವನ್ನು ಉಪಯೋಗಿಸುವ ಬಗ್ಗೆ 1969ರಲ್ಲಿ ರೇಮಾಂಡ್ ವಿ ಡಮಾಡಿಯನ್ ಎಂಬ ನ್ಯೂಯಾರ್ಕ್‌ನ ಶಸ್ತ್ರವೈದ್ಯರು ಆಲೋಚಿಸತೊಡಗಿದರು. 1970ರಲ್ಲಿ ಪ್ರಯೋಗಾಲಯದ ಇಲಿಗಳಲ್ಲಿ ವೇಗವಾಗಿ ಬೆಳೆಯುವ ರೋಗದ ಗಡ್ಡೆಗಳನ್ನು ಶಸ್ತ್ರಕ್ರಿಯೆಯ ಮೂಲಕ ತೆಗೆದು ಅದರ ಕಾಂತೀಯ ಅನುರಣನ ಸಂಕೇತಗಳು ಸ್ವಾಭಾವಿಕ ಅಂಗಾಂಶಗಳ ಸಂಕೇತಗಳಿಗಿಂತ ಬೇರೆಯಾಗಿರುವುದನ್ನು ತೋರಿಸಿದರು. 1971 ರಲ್ಲಿ ಡಮಾಡಿಯನ್‌ರವರು ಅಂಗಾಂಶಗಳು ಮತ್ತು ರೋಗದ ಗಡ್ಡೆಗಳಿಗೆ ಸಂಬಂಧಿಸಿದಂತೆ ಪರಮಾಣು ಕಾಂತೀಯ ವಿಶ್ರಾಂತಿಕಾಲಗಳು ಬೇರೆಯಾಗಿರುವುದನ್ನು ಪ್ರಾಯೋಗಿಕವಾಗಿ ತೋರಿಸಿದರು. ಇದರಿಂದ ಉತ್ಸಾಹಿತರಾದ ವಿಜ್ಞಾನಿಗಳು ಕಾಂತೀಯ ಅನುರಣದಿಂದ ರೋಗವನ್ನು ಪತ್ತೆ ಮಾಡಲು ಸಾಧ್ಯವಾಗುವುದನ್ನು ಅಧಿಕೃತವಾಗಿ ಪರಿಗಣಿಸಿದರು. 1977ರಲ್ಲಿ ರೇಮಂಡ್ ಡಮಾಡಿಯನ್‌ರವರು ಪೂರ್ಣದೇಹದ ಕಾಂತೀಯ ಅನುರಣನ ಚಿತ್ರಣವನ್ನು ಪಡೆಯಲು ಸಾಧ್ಯವೆನ್ನುವುದನ್ನು ಮೊದಲಬಾರಿಗೆ ಸ್ಪಷ್ಟವಾಗಿ ತೋರಿಸಿದರು.

ಇದೇ ಕಾಲದಲ್ಲಿಯೇ 1972ರಲ್ಲಿ ಪೌಲ್ ಲೌಟರ್‌ಬಾರ್ ಕಾನುಚಿತ್ರಣಕ್ಕೆ ಗಣಕಾಧಾರಿತ ಟೊಮೋಗ್ರಫಿ ಅವಲೋಕನದ (ಕಂಪ್ಯೂಟರ್ ಏಡೆಡ್ ಟೊಮೋಗ್ರಫಿ ಸ್ಕ್ಯಾನ್) ಕಲ್ಪನೆಯನ್ನು ಸೇರಿಸಿದರು. ಇದರ ಸೇರ್ಪಡೆಯಿಂದ ಮೊದಲಬಾರಿಗೆ ಕಾಂತೀಯ ಅನುರಣನ ಚಿತ್ರಣವನ್ನು (ಎಂಆರ್‌ಐ) ಪಡೆದರು. ಅಯಸ್ಕಾಂತ ಕ್ಷೇತ್ರದಲ್ಲಿ ಏರಿಳಿತ ಪ್ರಮಾಣವನ್ನು ಸೇರಿಸುವುದರಿಂದ ಬೇರೆ ತಂತ್ರಗಳಿಂದ ನೋಡಿ ತಿಳಿಯಲು ಸಾಧ್ಯವಿರದ ರಚನಾಕೃತಿಗಳ ಎರಡು ಆಯಾಮದ ಪ್ರತಿಬಿಂಬಗಳನ್ನು ಸೃಷ್ಟಿಮಾಡಲು ಸಾಧ್ಯವಾಗುವುದೆಂದು ಲೌಟರ್‌ಬರ್ 1973ರಲ್ಲಿ ಕಂಡುಹಿಡಿದರು. ಏರಿಳಿತಗಳ ಪ್ರಮಾಣ ಪಡೆದ ಆಯಸ್ಕಾಂತಗಳನ್ನು ಪ್ರಮುಖ ಅಯಸ್ಕಾಂತಕ್ಕೆ ಸೇರಿಸುವುದರಿಂದ ಕೊಳವೆಗಳ ಅಡ್ಡ ಭೇದನದ ಪ್ರತಿಬಿಂಬಗಳನ್ನು ಪಡೆದು ಭಾರಜಲವನ್ನು ಸುತ್ತುವರೆದ ಸಾಮಾನ್ಯ ನೀರನ್ನು ವೀಕ್ಷಿಸಲು ಸಾಧ್ಯವಾಗುವುದನ್ನು ವಿವರಿಸಿದರು. ಈ ತಂತ್ರಜ್ಞಾನಕ್ಕೆ ಮೊದಲು ಬೇರಾವುದೇ ವಿಧದ ಪ್ರತಿಬಿಂಬ ಗ್ರಹಣ ವಿಧಾನವು ಸಾಮಾನ್ಯ ನೀರು ಮತ್ತು ಭಾರತರ ನೀರಿನ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸುವ ಸಾಮರ್ಥ್ಯವನ್ನು ಪಡೆದಿರಲಿಲ್ಲ.

ಅಯಸ್ಕಾಂತ ಕ್ಷೇತ್ರದ ಏರಿಳಿತಗಳ ಪ್ರಮಾಣವನ್ನು ಉಪಯೋಗಿಸಿಕೊಂಡು ಅನುರಣನದೊಳಗೆ ಇರುವ ವ್ಯತ್ಯಾಸಗಳನ್ನು ಹೆಚ್ಚು ನಿಖರವಾಗಿ ತಿಳಿಯಲು ಸಾಧ್ಯವಾಗುವುದೆಂಬುದನ್ನು ಪೀಟರ್ ಮ್ಯಾನ್ಸ್‌ಫೀಲ್ಡ್ ತೋರಿಸಿದರು. ಲೌಟರ್‌ಬರ್‌ರವರು ಪ್ರತಿಪಾದಿಸಿದ ಏರಿಳಿತ ಪ್ರಮಾಣ ವಿಧಾನದಿಂದ ಉತ್ಪನ್ನವಾದ ಸಂಕೇತಗಳನ್ನು ವೇಗವಾಗಿ ವಿಶ್ಲೇಷಣೆ ಮಾಡುವ ವಿಧಾನವನ್ನು ಪೀಟರ್ ಮ್ಯಾನ್ಸ್‌ಫೀಲ್ಡ್‌ರವರು ರೂಪಿಸಿದರು ಮತ್ತು ಅವುಗಳನ್ನು ಪರಿವರ್ತಿಸಿ ಪ್ರತಿಬಿಂಬವನ್ನು ಪಡೆದರು. ಗುರುತಿಸಿದ ಸಂಕೇತಗಳನ್ನು ಹೇಗೆ ವೇಗವಾಗಿ ಹಾಗೂ ಪರಿಣಾಮಕಾರಿಯಾಗಿ ವಿಶ್ಲೇಷಿಸಿ ಪ್ರತಿಬಿಂಬವಾಗಿ ಪರಿವರ್ತಿಸಲು ಸಾಧ್ಯವಿದೆ ಎಂದು ತೋರಿಸಿದರು. ಪ್ರಾಯೋಗಿಕ ವಿಧಾನಕ್ಕೆ ಇದು ಪ್ರಮುಖವಾದ ಹೆಜ್ಜೆಯಾಗಿ ದಾರಿಮಾಡಿಕೊಟ್ಟಿತು. ಈ ವಿಧಾನವನ್ನು ಬಳಸಿಕೊಂಡು ಮೊದಲಬಾರಿಗೆ 1970ರ ದಶಕದಲ್ಲಿ ಮಬ್ಬಾಗಿರುವ ಪ್ರತಿಬಿಂಬವನ್ನು ಸೃಷ್ಟಿಸಿದರು. ಅದು ಪ್ರಾಯೋಗಿಕ ಉದ್ದೇಶಗಳಿಗೆ ಬಳಸುವಷ್ಟು ಸ್ಪಷ್ಟವಾಗಿರಲಿಲ್ಲ. ಆ ತಂತ್ರದ ಪೂರ್ಣ ಸಾಮರ್ಥ್ಯವನ್ನು ತಿಳಿಯಲು ಆಗ ತನಗೆ ಸಾಧ್ಯವಿರಲಿಲ್ಲವೆಂದು ಅವರೇ ಒಪ್ಪಿಕೊಳ್ಳುತ್ತಾರೆ. ಪೂರ್ಣ

ದೇಹದ ಪ್ರತಿಬಿಂಬವನ್ನು ಅದರ ಸಹಾಯದಿಂದ ಪಡೆಯಲು ಸಾಧ್ಯವೇ ಎಂದು ಅವರನ್ನು ಜನರು ಕೇಳುತ್ತಿದ್ದರು. ಆ ರೀತಿಯ ಪ್ರತಿಬಿಂಬವನ್ನು ಪಡೆಯಲು ಸಾಧ್ಯವಿದ್ದು ಅವು ಸ್ಪಷ್ಟವಾಗಿದ್ದರೆ ಮಾತ್ರ ವೈದ್ಯಕ್ಷೇತ್ರದಲ್ಲಿ ಉಪಯೋಗಿಸಲು ಸಾಧ್ಯವಾಗುವುದೆಂದು ಅವರಿಗೆ ತಿಳಿಸಿದರು. ಈ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾಳಲು ಇದು ಅವರನ್ನು ಪ್ರೇರೇಪಿಸಿತು.

ಅವರು ಅದಕ್ಕಾಗಿ ಛಲದಿಂದ ಕಾರ್ಯನಿರ್ವಹಿಸತೊಡಗಿದರು. ಮೆದುಳಿನ ರೀತಿಯ ಅವಯವಗಳಲ್ಲಿ ಬದಲಾ ವಣೆಗಳಾಗುವುದನ್ನು ವಾಸ್ತವ ಕಾಲದಲ್ಲಿಯೇ ಸತತವಾಗಿ ವೀಕ್ಷಿಸಲು ಸಾಧ್ಯವಾಗುವಂತೆ ಈ ಕಾಂತೀಯ ಅನುರಣನ ಚಿತ್ರಣ ತಂತ್ರಜ್ಞಾನದ ವೇಗವು ಹೆಚ್ಚುವಂತೆ ಮಾಡಲು ಪ್ರಯತ್ನಿಸಿದರು. 1977ರಲ್ಲಿ ಮ್ಯಾನ್‌ಫೀಲ್ಡ್ ರವರು ಪ್ರತಿಧ್ವನಿ–ಸಮತಲ ಚಿತ್ರಗ್ರಹಣ (ಇಪಿಐ–ಎಕೊಪ್ಲಾನರ್ ಇಮೇಜಿಂಗ್) ತಂತ್ರವನ್ನು ಅಭಿವೃದ್ಧಿಪಡಿಸಿದರು; ಏರಿಳಿತದ ಅತ್ಯಂತ ವೇಗದ ಬದಲಾವಣೆಗಳಿಂದ ಅತಿ ಶೀಘ್ರಗತಿಯ ಪ್ರತಿಬಿಂಬವನ್ನು ಪಡೆಯಬಹುದಾಗಿದೆ ಎಂದು ತೋರಿಸಿದರು. ಪ್ರತಿಬಿಂಬಗ್ರಹಣಕ್ಕೆ ಕಾಂತೀಯ ಅನುರಣನಗಳನ್ನು ಪ್ರಮುಖವಾದ ಆಧಾರವನ್ನಾಗಿಸಲು ಈ ಶೋಧನೆಗಳು ಸಹಾಯಮಾಡಿದವು. ಆ ನಂತರದ ವರ್ಷಗಳಲ್ಲಿ ಈ ವಿಧಾನದಿಂದ ವೀಡಿಯೋ ದರಗಳಲ್ಲೇ (30 ಮಿಲಿ ಸೆಕೆಂಡಿಗೆ ಒಂದು ಪ್ರತಿಬಿಂಬದಂತೆ) ದೇಹದೊಳಗಿನ ಅಂಗಾಂಗಗಳ ಪ್ರತಿಬಿಂಬಗಳನ್ನು ಪಡೆಯಲು ಸಾಧ್ಯವಾಯಿತು.

ಸಾಂಪ್ರದಾಯಕವಾದ ಕ್ಷ–ಕಿರಣಗಳ ತಪಾಸಣೆಯ ವಿಧಾನಗಳಿಗಿಂತ ಕಾಂತೀಯ ಅನುರಣನ ಚಿತ್ರಣವು ಕೆಲವು ಪ್ರಮುಖ ಅನುಕೂಲಕರ ಗುಣಗಳನ್ನು ಪಡೆದಿದೆ. ಕ್ಷ–ಕಿರಣ ಸಂಶೋಧನೆಗಾಗಿ ಜರ್ಮನಿಯ ವಿಲ್‌ಹೆಲ್ಮ್ ರಾಂಟೆಜನ್ 1901ರ ಭೌತವಿಜ್ಞಾನದ ನೊಬೆಲ್ ಪ್ರಶಸ್ತಿಯನ್ನು ಪಡೆದರು. ಗಣಕಾಧಾರಿತ ಟೊಮೋಗ್ರಫಿ ಸ್ಕ್ಯಾನಿಂಗ್‌ಗಿಂತಲೂ (CAT) ಇದು ಉತ್ತಮವಾದುದು. ಕ್ಷಕಿರಣ ಅಥವಾ ಕ್ಯಾಟ್ ವಿಧಾನಗಳು ಅಯಾನೀಕೃತ ವಿಕಿರಣದ ಮೇಲೆ ಅವಲಂಬಿತವಾಗಿದ್ದು ಕಾಂತೀಯ ಅನುರಣನ ಚಿತ್ರಣವು (MRI) ರೇಡಿಯೋ ಕಂಪನದ ಅಲೆಗಳನ್ನು ಉಪಯೋಗಿಸುವುದರಿಂದ ಇದು ಅತ್ಯಂತ ವಿಶಿಷ್ಟ ಅದ್ವಿತೀಯ ಪ್ರತಿಬಿಂಬ ಗ್ರಹಣ ತಾಂತ್ರಿಕತೆಯಾಗಿದೆ. ಕಾಂತೀಯ ಅನುರಣನ ಚಿತ್ರಣವು ಮೃದು ಅಂಗಾಂಶಗಳಲ್ಲಿನ ಅತಿ ಸೂಕ್ಷ್ಮ ವ್ಯತ್ಯಾಸಗಳನ್ನು ತೋರಿಸುತ್ತದೆಯಲ್ಲದೆ ಇದರಿಂದ ಯಾವುದೇ ದಿಕ್ಕಿನಿಂದ ಬೇಕಾದರೂ ಪ್ರತಿಬಿಂಬಗಳನ್ನು ಪಡೆಯಲು ಸಾಧ್ಯವಿದ್ದು ವಿವಿಧ ಅಂಗಾಂಶಗಳನ್ನು ಎದ್ದು ಕಾಣುವಂತೆ ತೋರಿಸಲು ಸಹಾಯಕ. ಆದರೆ ದೇಹದೊಳಗೆ ಕಾಂತೀಯ ಲೋಹವನ್ನು ಹೊಂದಿರುವ ರೋಗಿಗಳನ್ನು ಅಥವಾ ಹೃದಯ ಮಿಡಿತ ಸ್ಥಿರವಾಗಿ ಕಾಯ್ದುಕೊಳ್ಳುವ ಉಪಕರಣವನ್ನು (ಪೇಸ್ ಮೇಕರ್) ಅಳವಡಿಸಿಕೊಂಡ ವ್ಯಕ್ತಿಯನ್ನು ಕಾಂತೀಯ ಅನುರಣನ ಚಿತ್ರಣದ ಸಹಾಯದಿಂದ ಪರೀಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಇದರ ಪ್ರಬಲ ಆಯಸ್ಕಾಂತ ಕ್ಷೇತ್ರವು ರೋಗಿಯ ದೇಹದೊಳಗಿರುವ ಉಪಕರಣಗಳ ಮೇಲೆ ಪರಿಣಾಮ ಬೀರುತ್ತದೆ.

ವೈದ್ಯಕೀಯ ರೋಗತಪಾಸಣೆಗಳಲ್ಲಿ ಕಾಂತೀಯ ಅನುರಣನ ಚಿತ್ರಣವು ವ್ಯಾವಹಾರಿಕವಾದ, ಬಹುಮುಖ ಸಾಮರ್ಥ್ಯಹೊಂದಿದ ಮತ್ತು ಅತಿಹೆಚ್ಚು ಬಳಕೆಯ ತಾಂತ್ರಿಕ ಸಾಧನವಾಗಿ ಬಳಕೆಯಾಗಲು ಲಾಟೆರ್‌ಬುರ್ ಮತ್ತು ಮ್ಯಾನ್ಸ್‌ಫೀಲ್ಡ್‌ರವರ ಕಾರ್ಯಗಳಿಂದ ಸಾಧ್ಯವಾಯಿತು. ಮೊದಲ ಕಾಂತೀಯ ಅನುರಣನ ಚಿತ್ರಣ ಉಪಕರಣಗಳು 1980ರ ದಶಕದ ಆರಂಭದಲ್ಲಿ ದೊರಕತೊಡಗಿದವು. 2002ರ ವೇಳೆಗೆ ವಿಶ್ವಾದ್ಯಂತ ಸುಮಾರು 22000 ಕಾಂತೀಯ ಅನುರಣನ ಚಿತ್ರಣದ ಕ್ಯಾಮೆರಾಗಳು ಬಳಕೆಗೆ ಬಂದಿದ್ದವು ಮತ್ತು ಅವುಗಳ ನೆರವಿನಿಂದ 60ದಶಲಕ್ಷ ರೋಗ ಪರೀಕ್ಷೆಗಳನ್ನು ನಡೆಸಲಾಗಿದೆ.

ಬೇರೆ ಪ್ರತಿಬಿಂಬ ಗ್ರಹಣ ತಂತ್ರಗಳಿಗೆ ಹೋಲಿಸಿದಾಗ ಕಾಂತೀಯ ಅನುರಣನ ಚಿತ್ರಣದ ಶ್ರೇಷ್ಠತೆಯ ಅರಿವಾಗುತ್ತದೆ. ಅನೇಕ ರೋಗಗಳನ್ನು ತಪಾಸಣೆಮಾಡುವ ವಿಧಾನಗಳನ್ನು ಇದು ಗಣನೀಯವಾಗಿ ಸುಧಾರಿಸಿತು. ಶಸ್ತ್ರಕ್ರಿಯೆಗಳ ಮೂಲಕ ಅಂಗಗಳನ್ನು ಅನೇಕ ವಿಧದಲ್ಲಿ ಛೇದನಮಾಡಿ ಪರೀಕ್ಷಿಸಬೇಕಾಗುವ ವಿಧಾನಗಳನ್ನು ಇದು ನಿವಾರಿಸಿತು. ಅದುದರಿಂದ ಅನೇಕ ರೋಗಿಗಳು ರೋಗ ತಪಾಸಣೆಗಾಗಿಯೇ ಅನುಭವಿಸಬೇಕಾಗಿದ್ದ ತೊಂದರೆಗಳು ಹಾಗೂ ನರಳಿಕೆಗಳನ್ನು ನಿವಾರಿಸಿತು.

ಕಾಂತೀಯ ಅನುರಣನ ಚಿತ್ರಣ ತಂತ್ರವು ಇನ್ನೂ ವೇಗದ ಸುಧಾರಣೆಯನ್ನು ಪಡೆಯತ್ತಿದೆ. ಆದರೆ ಲೌಟರ್ ಬುರ್ ಮತ್ತು ಮ್ಯಾನ್ಸ್‌ಫೀಲ್ಡ್‌ರವರ ಕ್ರಾಂತಿಕಾರಿ ಆಲೋಚನೆಗಳನ್ನು ಮಾನವ ಸಮುದಾಯವು ಮುಂದೆ ನೆನಪಿಸಿಕೊಳ್ಳುವುದು ಖಂಡಿತ. ಅವರ ಆಲೋಚನೆಗಳೇ ಕಾಂತೀಯ ಅನುರಣನ ಚಿತ್ರಣದ ಪ್ರತಿಬಿಂಬಗಳನ್ನು ಪಡೆಯಲು ಸಹಾಯಮಾಡಿದವು. ಅದರ ಸಾಮರ್ಥ್ಯವನ್ನು ಇಂದು ನಾವು ನೋಡುತ್ತಿದ್ದೇವೆ. ನೊಬೆಲ್ ಸದಸ್ಯರ ಸಭೆಯು ಇದರ ಬಗೆಗೆ ತಿಳಿಸುವಾಗ ಕಾಂತೀಯ ಅನುರಣನ ಚಿತ್ರಣದ ಅಭಿವೃದ್ಧಿಯು ವೈದ್ಯಕೀಯ ರೋಗತಪಾಸಣೆ ಮತ್ತು ಸಂಶೋಧನೆಗಳ ಮುನ್ನಡೆಯನ್ನು ಸೂಚಿಸುತ್ತದೆ ಎಂದು ಪ್ರತಿಪಾದಿಸಿದೆ. ನೋವಿರದ, ನಮ್ಮ ದೇಹದ ಒಳಗಿನ ಭಾಗವನ್ನು ಯಾವುದೇ ಅಪಾಯವಿರದ ರೀತಿ ಅಥವಾ ಶಸ್ತ್ರಛೇದನ ಕ್ರಿಯೆಯ ಅಗತ್ಯವಿಲ್ಲದೆಯೇ ಅತ್ಯಂತ ಸ್ಪಷ್ಟರೂಪದ ಪ್ರತಿಬಿಂಬಗಳನ್ನು ನೋಡಲು ಇದರಿಂದ ನಮಗೆ ಸಾಧ್ಯವಾಗಿದೆ. 2003ನೆಯ ಇಸವಿಯ ದೇಹಶಾಸ್ತ್ರ ಅಥವಾ ವೈದ್ಯ ವಿಜ್ಞಾನಕ್ಕೆ ದೊರೆತ ನೊಬೆಲ್ ಪ್ರಶಸ್ತಿಯು ಈ ಇಬ್ಬರು ಶ್ರೇಷ್ಠ ವಿಜ್ಞಾನಿಗಳ ಮಾನವೀಯ ಸೇವೆಯನ್ನು ಮನ್ನಿಸಿದ್ದಕ್ಕೆ ದ್ಯೋತಕವಾಗಿದೆ.

**(ಬಿ.ಬಿ.ಚಿನ್ಮಯಕುಮಾರ್)**

**ಕಾಂತೀಯ ವಸ್ತುಗಳು** : ಫೆರ್ರೊಕಾಂತತ್ವವನ್ನು ಪ್ರದರ್ಶಿಸುವ ವಸ್ತುಗಳಿಗೆ ಸಾಮಾನ್ಯವಾಗಿ ಬಳಸುವ ಪದ (ಮ್ಯಾಗ್ನೆಟಿಕ್ ಮೆಟೀರಿಯಲ್ಸ್). ಈ ವಸ್ತುಗಳು ತಮ್ಮ ಕಾಂತಗುಣಗಳ ಪರಿಣಾಮವಾಗಿ ಒಂದು ಕಾಂತಕ್ಷೇತ್ರಕ್ಕೆ ಯಾವುದೋ ಒಂದು ವಿಧದಲ್ಲಿ ಪ್ರತಿಕ್ರಿಯೆಯನ್ನು ಪ್ರದರ್ಶಿಸುತ್ತವೆ. ಬಹುತೇಕ ವಸ್ತುಗಳು ಪ್ರತಿ ಕಾಂತೀಯ ಅಥವಾ ಅನುಕಾಂತೀಯವಾಗಿದ್ದು ಕಾಂತಕ್ಷೇತ್ರಕ್ಕೆ ಹೆಚ್ಚು ಕಡಿಮೆ ಏನೂ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಿಲ್ಲ. ಆದ್ದರಿಂದ ಕಾಂತ ತಂತ್ರವಿಜ್ಞಾನದಲ್ಲಿ (ಮ್ಯಾಗ್ನೆಟಿಕ್ ಟೆಕ್ನಾಲಜಿ) ಫೆರೊಕಾಂತೀಯ ವಸ್ತುಗಳು ಬಲು ಮುಖ್ಯವಾದವು. ಬಾಹ್ಯ ಕಾಂತಕ್ಷೇತ್ರ ಸಾಮರ್ಥ್ಯ (H) ಗೆ ಅವುಗಳ ಕಾಂತೀಯ ಅಭಿವಾಹ ಸಾಂದ್ರತೆಯನ್ನು B ಯನ್ನು (ಮ್ಯಾಗ್ನೆಟಿಕ್ ಇಂಡಕ್ಷನ್) ನಡುವಿನ ನಿಷ್ಪತ್ತಿಯನ್ನು ಸಂಬಂಧದಿಂದ ನಿರೂಪಿಸಿದೆ (ನೋಡಿ– ಕಾಂತತ್ವ). ಇಲ್ಲಿ $\mu$ ಕಾಂತೀಯ ವ್ಯಾಪ್ಯತೆ (ಪರ್ಮಿಯಬಿಲಿಟಿ) ಇದು ಸ್ಥಿರಾಂಕವಲ್ಲ.

ಕಾಂತೀಯ ವಸ್ತುಗಳನ್ನು ವಿಕಾಂತನಬಲ (ಕೊಎರ್ಸಿವ್ ಫೋರ್ಸ್) ಪ್ರಮಾಣದ ಮೇರೆಗೆ ಮೃದು ಮತ್ತು ಗಡಸು ಎಂದು ವಿಭಾಗಿಸಲಾಗಿದೆ. ಮೃದು ಕಾಂತೀಯ ವಸ್ತುಗಳನ್ನು ಸುಲಭವಾಗಿ ಕಾಂತೀಕರಿಸಬಹುದು. ಕಾಂತಕ್ಷೇತ್ರವನ್ನು (H) ಹಿಂದೆ ತೆಗೆದಾಗ ಇವುಗಳಲ್ಲಿ ಶೇಷಕಾಂತತ್ವ ಬಹಳ ಕಡಿಮೆ ಇರುತ್ತದೆ. ಮೃದು ಕಾಂತೀಯ ವಸ್ತುಗಳನ್ನು ಸಾಮಾನ್ಯವಾಗಿ ವಿದ್ಯುತ್ಪರಿವರ್ತಕಗಳಲ್ಲಿ (ಟ್ರಾನ್ಸ್ ಫಾರ್ಮರ್ಸ್), ವಿದ್ಯುಚ್ಚಾಲಕ ಯಂತ್ರಗಳಲ್ಲಿ, ಪ್ರಸಾರ ಯಂತ್ರಗಳಲ್ಲಿ, ದೂರವಾಣಿ ಗ್ರಾಹಕಗಳಲ್ಲಿ ಮತ್ತು ವಿದ್ಯುತ್ಕಾಂತಗಳಲ್ಲಿ ಉಪಯೋಗಿಸಿತ್ತಾರೆ. ಕಡಿಮೆ ವಿಕಾಂತನಬಲ ಹಾಗೂ ಅತಿ ಹೆಚ್ಚಿನ ಕಾಂತೀಯ ಪ್ರೇರಕತ್ವದೊಂದಿಗೆ ಹೆಚ್ಚಿನ ಕಾಂತೀಯ ವ್ಯಾಪ್ಯತೆ ಇರುವ ಮೃದು ಕಾಂತೀಯ ವಸ್ತುಗಳನ್ನು ಸಂಪರ್ಕ ಸಾಧನಗಳಲ್ಲೂ ಉಪಯೋಗಿಸುತ್ತಾರೆ.

ಗಡಸು ಕಾಂತೀಯ ವಸ್ತುಗಳಲ್ಲಿ ಹೆಚ್ಚಿನ ಶೇಷಕಾಂತತೆ ಮತ್ತು ನಿರ್ಬಂಧತೆ ಇವೆ. ಆದ್ದರಿಂದ ಇವನ್ನು ಶಾಶ್ವತ ಕಾಂತಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಗಡಸು ಕಾಂತೀಯ ವಸ್ತುಗಳ ಗುಣಪ್ರಮಾಣ ಶಕ್ತಿಗುಣಲಬ್ಧ (BH) max ದ ಪ್ರಮಾಣವನ್ನವಲಂಬಿಸಿದೆ.

ಸಾಮಾನ್ಯವಾಗಿ ಎಲ್ಲ ಕಾಂತೀಯ ವಸ್ತುಗಳಲ್ಲಿಯಾ ಕಬ್ಬಿಣ ಪ್ರಧಾನಾಂಶ ಇದರೆ ಜೊತೆಯಲ್ಲಿ ಬೇರೆ ಬೇರೆ ಧಾತುಗಳನ್ನು ವಿವಿಧ ಪ್ರಮಾಣಗಳಲ್ಲಿ ಸಂಯೋಜಿಸುವುದರಿಂದ ವಿವಿಧ ಮಟ್ಟದ ಮೃದು ಮತ್ತು ಗಡಸು ಕಾಂತೀಯ ವಸ್ತುಗಳನ್ನು ಪಡೆಯಬಹುದು. ಉಷ್ಣ ಸಂಸ್ಕರಣದಿಂದ ಹಾಗೂ ಶೈತ್ಯಕಾರಕ ವಿಧಾನಗಳಿಂದ ಅವುಗಳ ಗುಣಮಟ್ಟದಲ್ಲಿ ನಿಖರತೆಯನ್ನುಂಟುಮಾಡಬಹುದು. ನಿದರ್ಶನಕ್ಕಾಗಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಕೆಲವು ವಸ್ತುಗಳನ್ನು ಪಟ್ಟಿ ಮಾಡಲಾಗಿದೆ. ಇವುಗಳಲ್ಲಿ ಮುಖ್ಯವಾದವು ; ಇಂಗಾಲದ ಉಕ್ಕು, ಟಂಗ್‌ಸ್ಟನ್ ಉಕ್ಕು, ಆಲ್‌ನಿಕೊ ಇತ್ಯಾದಿ ಸ್ಥಿರಕಾಂತೀಯ ಮಿಶ್ರಣಗಳು (ಗಡಸು).

ಹೆಚ್ಚಿನ ಕಾಂತೀಯ ವ್ಯಾಪ್ಯತೆ ಇರುವ ಮಿಶ್ರಲೋಹಗಳಲ್ಲಿ ಮುಖ್ಯವಾದವು. : ಕಬ್ಬಿಣ, ಸಿಲಿಕಾನ್ ಕಬ್ಬಿಣ, ಪರ್ಮಲಾಯ್, ಮ್ಯೂಮೆಟಲ್ ಮತ್ತು ಕಾರ್ಬೋನೈಟ್ ಕಬ್ಬಿಣ. ಇವು ಮೆದು ಅಥವಾ ಮೃದು ಕಾಂತೀಯ ಪದಾರ್ಥಗಳು.

ಕಾಂತೀಯ ಪ್ರವೃತ್ತಿ ಸ್ವಲ್ಪ ನಿಷೇಧಾತ್ಮಕವಾಗಿರುವ ಅನೇಕ ಪದಾರ್ಥಗಳೂ ಇವೆ. ಇವಕ್ಕೆ ಡಯಾಕಾಂತೀಯ ವಸ್ತುಗಳೆಂದು ಹೆಸರು. ಕಾಂತೀಕರಣ ಬಲವನ್ನು ಈ ಪದಾರ್ಥಗಳು ವಿರೋಧಿಸುತ್ತವೆ. ಕಾಂತೀಯ ಪಾರಕತೆ ನಿದ್ರವ್ಯತೆಯದಕ್ಕಿಂತ ಕಡಿಮೆ. ತಾಮ್ರ, ಸೀಸ, ಪಾದರಸ, ನೀರು, ಗಾಳಿ, ಹೈಡ್ರೋಜನ್ ಇತ್ಯಾದಿ ಇದಕ್ಕೆ ಉದಾಹರಣೆ.

ಪದಾರ್ಥಗಳ ಪ್ರೇರ್ಯತೆ ಧನಾತ್ಮಕವಾಗಿದ್ದು, ವ್ಯಾಪ್ಯತೆ ಏಕಮಾನಕ್ಕಿಂತ ತುಸು ಹೆಚ್ಚಾಗಿರುವ ಪದಾರ್ಥಗಳಿಗೆ ಅನುಕಾಂತೀಯ (ಪ್ಯಾರಾಮ್ಯಾಗ್ನೆಟಿಕ್) ಗಳೆಂದು ಹೆಸರು. ಅನ್ವಿತ ಕಾಂತಕ್ಷೇತ್ರವಿದ್ದಾಗ ಪರಮಾಣುಗಳ ಅಥವಾ ಅಣುಗಳ ಕಾಂತೀಯ ಮಹತ್ವಗಳು ಸಾಲು ಗೂಡುವಂತೆ ಪ್ರವರ್ತಿಸುತ್ತದೆ ಮತ್ತು ಈ ಪದಾರ್ಥವು ಕ್ಷೇತ್ರದ ದಿಶೆಯಲ್ಲಿ ಕಾಂತೀಕರಣ ಪಡೆಯುತ್ತದೆ. ಕ್ಷೇತ್ರವನ್ನು ನಿವಾರಿಸಿದಾಗ ಕಾಂತತ್ವ ಅದೃಶ್ಯವಾಗುತ್ತದೆ. ಉಷ್ಣಾಪಾರಣೀಯ ವಿಕಾಂತೀಕರಣದಿಂದ (ಅಡಿಯಬ್ಯಾಟಿಕ್ ಡಿಮ್ಯಾಗ್ನೆಟೈಸೇಷನ್) ಅತಿ ಕಡಿಮೆ ಉಷ್ಣತೆ ಪಡೆಯಲು ಉಪಯೋಗ. ಅಲ್ಯುಮಿನಿಯಮ್, ಕ್ರೋಮಿಯಮ್, ಪ್ಲಾಟಿನಮ್, ಆಕ್ಸಿಜನ್ ಇತ್ಯಾದಿ ಇದಕ್ಕೆ ಉದಾಹರಣೆ.

ಎರಡನೆಯ ಮಹಾಯುದ್ಧದ ಅನಂತರ ಮೃದು ಕಾಂತೀಯ ವಸ್ತುಗಳ ಗುಂಪಿಗೆ ಸೇರುವ ಹೊಸ ರೀತಿಯ ಅಲೋಹ ಫೆರೈಟುಗಳು (ಉದಾಹರಣೆಗೆ ನಿಕ್ಕಲ್ ಫೆರೈಟ್ $NiFe_2O_4$, ಮ್ಯಾಂಗನೀಸ್ ಫೆರೈಟ್ $MnFe_2O_4$) ಬೆಳಕಿಗೆ ಬಂದುವು. ಇವುಗಳಿಗೆ ಮೃದು ಕಾಂತೀಯ ವಸ್ತುಗಳ ಗುಣಗಳೊಂದಿಗೆ ಅತಿ ಹೆಚ್ಚಿನ ವಿದ್ಯುನ್ನಿರೋಧಕ ಶಕ್ತಿ ಸಹ ಇದೆ: ಈ ಕಾರಣದಿಂದ ಸುಳಿ ವಿದುತ್ಪ್ರವಾಹ ನಷ್ಟಗಳು ಕಡಿಮೆ ಮಟ್ಟದಲ್ಲಿರುತ್ತವೆ.

ಅತ್ಯಧಿಕ ಕಂಪನಗಳನ್ನುಳ್ಳ ರಾಡರ್ ಮತ್ತು ರೇಡಿಯೋ ಸಾಮಗ್ರಿಗಳಲ್ಲಿ ಹಾಗೂ ವಿದ್ಯುತ್ ಸಂಪರ್ಕ ಸಾಧನಗಳಲ್ಲಿ ಬಳಸುತ್ತಾರೆ. ಪಟ್ಟಿ ಧ್ವನಿಮುದ್ರಕಗಳ ಪಟ್ಟಿಯ ತಯಾರಿಕೆಯಲ್ಲಿ ಇವುಗಳ ಉಪಯೋಗ ವಿಶೇಷವಾಗಿದೆ. ಮೇಲಿನವಲ್ಲದೆ ಹ್ಯೂಸ್ಲರ್ ಮಿಶ್ರಲೋಹಗಳೆಂಬ ಕಾಂತೀಯ ವಸ್ತುಗಳಿಗೆ (ಉದಾಹರಣೆಗೆ $Cu_2MnAl$, $Cu_2MnSr$) ವಿಶೇಷವಾದ ಕಾಂತೀಯ ಸಂತೃಪ್ತತೆ ಇದೆ.

ಕಾಂತೀಯ ವಸ್ತುಗಳು ಮುಖ್ಯವಾಗಿ ಚಿಕ್ಕ ಹಾಗೂ ಶಾಶ್ವತ ಕಾಂತ ಅಣುಗಳಿಂದ ರಚನೆಗೊಂಡಿವೆ. ಇವುಗಳಲ್ಲಿ ಅಕ್ಕಪಕ್ಕದ ಅಣುಗಳ ಕಾಂತಭ್ರಮಣಾಂಕಗಳು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಶಕಲ ಚಲನ ಯಾಂತ್ರಿಕದ ವಿನಿಮಯ ಬಲಗಳಿಂದ ಹಿಡಿದಿಡಲ್ಪಟ್ಟಿರುತ್ತವೆ. ಸಾಮಾನ್ಯವಾಗಿ ಸಂಕ್ರಮಣ ಧಾತುಗಳಿಗೆ (ಉದಾಹರಣೆಗೆ ಕಬ್ಬಿಣ ಮತ್ತು ವಿರಳ ಭಸ್ಮಲೋಹಗಳು) ಸ್ಥಿರಕಾಂತೀಯ ಭ್ರಮಣಾಂಕವಿದೆ. ಈ ಕಾಂತ ಭ್ರಮಣದ ಅಸಮತೋಲನದಿಂದ ಉಂಟಾಗುತ್ತದೆ.

ಕಾಂತೀಯ ವಸ್ತುಗಳ ಅಧ್ಯಯನ ಘನವಸ್ತುಗಳ ಅಣುರಚನೆ ಮತ್ತು ಆಂತರಿಕ ಬಲಗಳ ಸ್ವಭಾವ ಮತ್ತು ಪ್ರಮಾಣಗಳನ್ನು ತಿಳಿಯುವಲ್ಲಿ ಬಹು ಮುಖ್ಯವಾಗಿದೆ. (ಜಿ.ಎಸ್.)

**ಕಾಂತೀಯ ವಿರಾಮಗಾಮಿತ್ವ :** ಒಂದು ಕಾಂತವ್ಯವಸ್ಥೆ ಪ್ರಯುಕ್ತ ಕಾಂತಕ್ಷೇತ್ರದಲ್ಲಿ ಸಮತೋಲ ಸ್ಥಿತಿಗೆ ಬರುವ ಪ್ರಕ್ರಿಯೆ (ಮ್ಯಾಗ್ನೆಟಿಕ್ ರಿಲ್ಯಾಕ್ಸೇಷನ್). ಒಂದು ಅನುಕಾಂತೀಯ ವಸ್ತುವಿನ ಮೇಲೆ ಹೊರಗಿನ ಕಾಂತಕ್ಷೇತ್ರವನ್ನು ಪ್ರಯೋಗಿಸಿದಾಗ ಅಡ್ಡಾದಿಡ್ಡಿಯಾಗಿದ್ದ ಕಾಂತ ದ್ವಿಧ್ರುವಗಳು (ಡೈಪೋಲ್ಸ್) ಕ್ಷೇತ್ರದ ದಿಶೆಯತ್ತ ವಾಲುತ್ತವೆ. ಇದರಿಂದ ವಸ್ತು ಕಾಂತೀಕರಣಗೊಳ್ಳುತ್ತದೆ. ಈ ಕಾಂತೀಕರಣ ಸಮತೋಲಪರಿಮಾಣವನ್ನು ಹೊಂದಲು ಸ್ವಲ್ಪ ಕಾಲ ಬೇಕು. ಈ ಕಾಲಕ್ಕೆ ವಿರಾಮಗಾಮಿತ್ವ ಕಾಲ (ರಿಲ್ಯಾಕ್ಸೇಷನ್ ಟೈಂ) ಎಂದು ಹೆಸರು. ಶಕ್ತಿ ಅಥವಾ ಚಲನೆಗೆ ಸಂಬಂಧಿಸಿದಂತೆ ಚಾಲಕಶಕ್ತಿಯನ್ನು ಕ್ರಮೇಣ ಕಳೆದುಕೊಂಡು ನಿಲ್ಲುವ ಸ್ಥಿತಿಗೆ ಶ್ರಾಂತಿ (ರಿಲಾಕ್ಸ್) ಎಂದೂ, ತೆಗೆದುಕೊಳ್ಳುವ ಅವಧಿಗೆ ಶ್ರಾಂತಿಕಾಲ ಅಥವಾ ವಿರಾಮಗಾಮಿತ್ವ ಕಾಲ ಎಂದೂ ಹೇಳುತ್ತೇವೆ. ದ್ವಿಧ್ರುವಗಳು ಸ್ವತಂತ್ರವಾಗಿದ್ದರೆ ಅವು ಪ್ರಯುಕ್ತ ಕ್ಷೇತ್ರದ ದಿಶೆಯನ್ನು ಕುರಿತು ಆವರ್ತಚಲನೆಯಲ್ಲಿರುತ್ತವೆ (ಪ್ರಿಸೆಸ್). ಆಗ ಮಾದರಿಯಲ್ಲಿ ಕಾಂತೀಕರಣ ಉಂಟಾಗುವುದಿಲ್ಲ. $\mu$ ಕಾಂತ ಸಂವೇಗ (ಮೊಮೆಂಟಂ) ಇರುವ ಒಂದು ದ್ವಿಧ್ರುವವು $H$ ತೀವ್ರತೆಯಿಂದ ಕಾಂತಕ್ಷೇತ್ರದಲ್ಲಿ ವಿಮುಖ ದಿಶೆಯಿಂದ ಸಮುಖ ದಿಶೆಗೆ ತಿರುಗಿದರೆ $2\mu H$ ಶಕ್ತಿ ಬಿಡುಗಡೆಯಾಗುತ್ತದೆ. ಹೀಗೆ ಬಿಡುಗಡೆಯಾದ ಶಕ್ತಿಯ ವಿನಿಮಯಕ್ಕೆ ಅವಕಾಶವಿರಬೇಕು. ಇಲ್ಲದಿದ್ದರೆ ಕಾಂತೀಕರಣ ಪ್ರಕ್ರಿಯೆ ನಡೆಯುವುದಿಲ್ಲ.

ಅನುಕಾಂತೀಯ (ಪ್ಯಾರಮ್ಯಾಗ್ನೆಟಿಕ್) ವಸ್ತುಗಳಲ್ಲಿ ಪ್ರತಿಯೊಂದು ದ್ವಿಧ್ರುವವೂ ಪಕ್ಕದ ದ್ವಿಧ್ರುವಗಳಿಂದ ಜನಿಸಿದ ಅಸ್ಥಿರವಾದ ಕಾಂತಕ್ಷೇತ್ರದಲ್ಲಿರುತ್ತದೆ. ಈ ಅಸ್ಥಿರವಾದ ಕ್ಷೇತ್ರದ ತೀವ್ರತೆ $H_i$ ಎಂದಿಟ್ಟುಕೊಂಡರೆ ಎರಡು ರೀತಿಯ ಸನ್ನಿವೇಶಗಳನ್ನು ಕಾಣಬಹುದು: 1 ಪ್ರಯುಕ್ತ ಕ್ಷೇತ್ರದ ತೀವ್ರತೆ $H_c >> H_i$ ಆಗಿರುವಂಥದು; 2 ಪ್ರಯುಕ್ತ ಕ್ಷೇತ್ರದ ತೀವ್ರತೆ $H_c << H_i$ ಆಗಿರುವಂಥದು. ಈ ಎರಡು ಸಂದರ್ಭಗಳಲ್ಲಿ ನಡೆಯುವ ಕಾಂತೀಕರಣ ಪ್ರಕ್ರಿಯೆಗಳು ಬೇರೆಬೇರೆಯಾಗಿರುತ್ತವೆ.

$H_c >> H_i$ ಆದಾಗ ದ್ವಿಧ್ರುವಗಳು ನೋಡುವ ಕ್ಷೇತ್ರದ ದಿಶೆಯಲ್ಲಿ ವ್ಯತ್ಯಾಸವಾಗುವುದಿಲ್ಲ. $H_c$ ಹೆಚ್ಚಾದಂತೆ ದ್ವಿಧ್ರುವಗಳು ವಿಮುಖ ದಿಶೆಯಿಂದ ಸಮುಖದಿಶೆಗೆ ಚಿಮ್ಮುವುದರಿಂದ ಕಾಂತೀಕರಣ ಉಂಟಾಗುತ್ತದೆ. ಈಗ ಬಿಡುಗಡೆಯಾಗುವ ಶಕ್ತಿ ಲ್ಯಾಟಿಸ್ಸಿನೊಂದಿಗೆ ವಿನಿಮಯವಾಗುತ್ತದೆ. ಇದು ನಡೆಯುವಾಗ ಕಾಂತವ್ಯವಸ್ಥೆ ಸಮತೋಲ ಸ್ಥಿತಿಗೆ ಬರುವ ಪ್ರಕ್ರಿಯೆಯನ್ನು ಸ್ಪಿನ್–ಲ್ಯಾಟಿಸ್ ವಿರಾಮಗಾಮಿತ್ವ ಎಂದು ಕರೆಯುತ್ತೇವೆ.

$H_c << H_i$ ಆದಾಗ ದ್ವಿಧ್ರುವಗಳು ನೋಡುವ ಕ್ಷೇತ್ರದ ದಿಶೆಯಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ. ದ್ವಿಧ್ರುವಗಳು ಈ ದಿಶೆಯನ್ನು ಕುರಿತು ಆವರ್ತಿಸುತ್ತವೆ. ತತ್ಪರಿಣಾಮವಾಗಿ ಕಾಂತೀಕರಣ ಉಂಟಾಗುತ್ತದೆ. ಈಗ ಸ್ಪಿನ್ ಮತ್ತು ಲ್ಯಾಟಿಸ್ಸಿನ ನಡುವೆ ಶಕ್ತಿ ವಿನಿಮಯವಾಗಬೇಕಿಲ್ಲ. ಸ್ಪಿನ್ ಮತ್ತು ಕ್ಷೇತ್ರಗಳ ನಡುವೆ ಶಕ್ತಿವಿನಿಮಯ ನಡೆಯುತ್ತದೆ. ಶಕ್ತಿವಿನಿಮಯವಾಗುವಾಗ ಕಾಂತವ್ಯವಸ್ಥೆ ಸಮತೋಲ ಸ್ಥಿತಿಗೆ ಬರುವ ಪ್ರಕ್ರಿಯೆಯನ್ನು ಸ್ಪಿನ್–ಸ್ಪಿನ್ ವಿರಾಮಗಾಮಿತ್ವವೆಂದು ಕರೆಯುತ್ತೇವೆ. ಸ್ಪಿನ್–ಸ್ಪಿನ್ ವಿರಾಮಗಾಮಿತ್ವ ಕಾಲ ಸ್ಪಿನ್–ಲ್ಯಾಟಿಸ್ ವಿರಾಮಗಾಮಿತ್ವ ಕಾಲಕ್ಕಿಂತ ಬಹಳ ಕಡಿಮೆ.

**ಫೆರೋಕಾಂತ ವಿರಾಮಗಾಮಿತ್ವ:** ಸಮಾಂತರವಾಗಿಯೇ ಇರಲು ಪ್ರಬಲವಾದ ಒಲವನ್ನು ಹೊಂದಿರುವ ಫೆರೋಕಾಂತ ಸ್ಪಿನ್ನುಗಳು ಎರಡು ಬಗೆಯ ವಿರಾಮಗಾಮಿತ್ವವನ್ನು ವಿಂಗಡಿಸಲು ನೆರವಾಗುತ್ತವೆ: 1 ವಿನಿಮಯಶಕ್ತಿ ನಿಯತವಾಗಿಯೇ ಇರುವಂತೆ ಒಟ್ಟು ಕಾಂತೀಕರಣದ ದಿಶೆ ಬದಲಾಯಿಸುವುದು; 2 ವಿನಿಮಯಶಕ್ತಿಯಲ್ಲಿ ಬದಲಾವಣೆಯಾಗುವಂತೆ ಕಾಂತೀಕರಣದ ಪರಿಮಾಣದಲ್ಲಿ ವ್ಯತ್ಯಾಸವಾಗುವುದು. ಎರಡನೆಯದು ಮಾದರಿಯ ಆಕಾರ ಮತ್ತು ಫೆರೋಕಾಂತ ಲ್ಯಾಟಿಸ್ಸುಗಳಲ್ಲಿರುವ ದೋಷಗಳನ್ನು ಅವಲಂಬಿಸಿದೆ. ಸ್ಫಟಿಕಗಳಲ್ಲಿ ಪರಮಾಣುಗಳ, ಅಯಾನ್‍ಗಳ ಅಥವಾ ಅಣುಗಳ ಕ್ರಮಬದ್ಧ ಆವರ್ತನೀಯ ವ್ಯವಸ್ಥೆಗೆ ಚಾಲಕ ಅಥವಾ ಲ್ಯಾಟಿಸ್ ಎಂದು ಕರೆಯುತ್ತಾರೆ. (ಎಸ್.ಎ.ಎಚ್.)

**ಕಾಂದಹಾರ್ :** ಆಫ್ಘಾನಿಸ್ತಾನದ ಎರಡನೆಯ ಪ್ರಮುಖ ನಗರ: ಅದೇ ಹೆಸರಿನ ಪ್ರಾಂತ್ಯದ ಮುಖ್ಯಸ್ಥಳ, ಸಮುದ್ರಮಟ್ಟಕ್ಕಿಂತ 1000 ಮೀ ಎತ್ತರದಲ್ಲಿ, ಕಾಬೂಲಿನ ನೈರುತ್ಯಕ್ಕೆ 512 ಕಿಮೀ ದೂರದಲ್ಲಿದೆ. ಪಾಕಿಸ್ತಾನದ ಕ್ವೆಟ್ಟ ಇರುವುದು ಇಲ್ಲಿಗೆ 208 ಕಿಮೀ ದೂರದಲ್ಲಿ–ಆಗ್ನೇಯಕ್ಕೆ. ಕಾಂದಹಾರದ ಜನಸಂಖ್ಯೆ 4,50,300 (2006). ಕಾಂದಹಾರದ ಸುತ್ತಮುತ್ತಣ ಸೀಮೆಯಲ್ಲಿರುವಂತೆ ಇಲ್ಲೂ ಪಠಾಣರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಪಠಾಣರ ಇನ್ನೊಂದು ಪ್ರಬಲ ಕೇಂದ್ರವೆಂದರೆ ಪಾಕಿಸ್ತಾನದಲ್ಲಿರುವ ಪೆಷಾವರ್. ಪೆಷಾವರಿನ ಜನ ಆಡುವ ಭಾಷೆಗಿಂತ (ಪಖ್ತು) ಕಾಂದಹಾರದವರದು (ಪಷ್ತೂ) ಹೆಚ್ಚು ಮೃದು.

ಆಧುನಿಕ ಕಾಂದಹಾರ್ ನಗರದಲ್ಲಿ ಶಾಲೆ, ಕಾಲೇಜು, ಚಿತ್ರಮಂದಿರಗಳೇ ಮುಂತಾದ ಅನೇಕ ನೂತನ ಭವನಗಳಿವೆ. ಜನನಿಬಿಡವಾದ ಹಳೆಯ ನಗರವಿರುವುದು ಇದಕ್ಕೆ ಪೂರ್ವದಲ್ಲಿ. ಅದನ್ನು ನಿರ್ಮಿಸಿದಾತ ಅಹಮದ್ ಷಾ ದುರಾನಿ (1724–73). ಹಳೆಯ ನಗರವನ್ನು ಬಳಸಿದ್ದ ಆಯಾಕಾರದ ಮಣ್ಣಿನ ಕೋಟೆ ಬಹುತೇಕ ಬಿದ್ದು ಹೋಗಿದೆ. ಆದರೂ ಅದರ ಕುರುಹುಗಳನ್ನು ಈಗಲೂ ಕಾಣಬಹುದು. ಅಹಮದ್ ಷಾನ ಸಮಾಧಿಯಿರುವುದು ಈಶಾನ್ಯ ಮೂಲೆಯಲ್ಲಿ. ನಗರದಲ್ಲಿರುವ ಸ್ಮಾರಕಶಿಲ್ಪ ಇದೊಂದೇ. ಪ್ರವಾದಿ ಮಹಮ್ಮದನ ಬಟ್ಟೆಯಿದೆಯೆಂದು ಹೇಳಲಾದ ಮಸೀದಿ ಇರುವುದು ಇದರ ಪಕ್ಕದಲ್ಲಿ.

ಈಗಿನ ನಗರಕ್ಕೆ ಪಶ್ಚಿಮದಲ್ಲಿ 6.5 ಕಿಮೀ ಅಂತರದಲ್ಲಿ ಬೆಟ್ಟದ ಪಾರ್ಶ್ವದಲ್ಲಿ ಹಳೆಯ ಕಾಂದಹಾರದ ಅವಶೇಷಗಳಿವೆ. 1738ರಲ್ಲಿ ನಾದಿರ್ ಷಾ ಅದನ್ನು ಕೊಳ್ಳೆಹೊಡೆದು



**ಕಾಂದಹಾರದ ಸರ್ಕಾರಿ ಅರಮನೆಯ ಮೇಲಿಂದ ಅಹಮದ್ ಷಾ ದುರಾನಿಯ ಗೋರಿಯ ದೃಶ್ಯ. ಅಹಮದ್ ಷಾ ಈಗಿನ ಕಾಂದಹಾರದ ಸ್ಥಾಪಕ**

ನಾಶಪಡಿಸಿದ. ಅದರ ನಡುವೆ ಇರುವ ಬಾಬಾವಾಲಿಯ ಉದ್ಯಾನವೂ ಈಗಲೂ ಯಾತ್ರಿಕರ ಆಕರ್ಷಣೆಯಾಗಿರುವ ಒಂದು ದೇವಮಂದಿರವೂ ಇವೆ. ಇಲ್ಲಿಯ ಬೆಟ್ಟದಲ್ಲಿ ಮೊಗಲ್ ಚಕ್ರವರ್ತಿಗಳಾದ ಬಾಬರ್ ಮತ್ತು ಅಕ್ಬರರ ಶಾಸನಗಳಿವೆ. ಅಶೋಕನದೊಂದು ಶಿಲಾಶಾಸನವೂ ಸನಿಯದಲ್ಲೇ ಸಿಕ್ಕಿದೆ. ಇದುವರೆಗೆ ದೊರಕಿರುವ ಅಶೋಕ ಶಾಸನಗಳಲ್ಲಿ ಇದೇ ಅತ್ಯಂತ ಪಶ್ಚಿಮದ್ದು.

ಕಾಂದಹಾರದ ಸ್ಥಾನ ಮಹತ್ತ್ವಪೂರ್ಣವಾದದ್ದು. ವಾಯವ್ಯ ಆಫ್ಘಾನಿಸ್ತಾನದ ಹೆರಾತಿನಿಂದ ಭಾರತ–ಪಾಕಿಸ್ತಾನ್ ಉಪಖಂಡಕ್ಕೆ ಹೋಗುವ ಹಾದಿ ಸಾಗುವುದು ಇದರ ಮೂಲಕವೇ, ಪಾಕಿಸ್ತಾನಕ್ಕೂ ಇದಕ್ಕೂ ರೈಲು ಮತ್ತು ರಸ್ತೆ ಸಂಪರ್ಕವಿದೆ. ಕಾಂದಹಾರದಿಂದ ಹೆರಾತಿನ ಮೂಲಕ ರಷ್ಯಾ ದೇಶಕ್ಕೂ ಕಾಬೂಲಿಗೂ ಮಾರ್ಗಗಳುಂಟು. ತೆಹರಾನ್–ದೆಹಲಿಗಳ ನಡುವೆ ಇರುವ ಕಾಂದಹಾರದಲ್ಲಿ 1960ರಲ್ಲಿ ಒಂದು ವಿಮಾನ ನಿಲ್ದಾಣವನ್ನು ನಿರ್ಮಿಸಲಾಯಿತು.

ಕಾಂದಹಾರ್ ಆಫ್ಘಾನಿಸ್ತಾನದ ಮುಖ್ಯ ವ್ಯಾಪಾರಕೇಂದ್ರ. ಇಲ್ಲಿಯ ಉಣ್ಣೆ ಅತ್ಯಂತ ಪ್ರಸಿದ್ಧ. ಇಲ್ಲೊಂದು ಆಧುನಿಕ ಉಣ್ಣೆ ಗಿರಣಿಯುಂಟು. ಇದು ಉತ್ಪಾದಿಸುವ ಬಟ್ಟೆ ಬಹುತೇಕ ಆಫ್ಘಾನಿಸ್ತಾನದಲ್ಲೇ ಮಾರಾಟವಾಗುತ್ತದೆ. ದ್ರಾಕ್ಷಿ, ಸೇಬು, ದಾಳಿಂಬೆ ಮುಂತಾದ ಹಣ್ಣುಗಳು ಹೇರಳವಾಗಿ ಇಲ್ಲಿಂದ ರಫ್ತಾಗುತ್ತವೆ. ಹತ್ತಿ, ಮಂಜಿಷ್ಟ, ಜೀರಿಗೆ ಮತ್ತು

ಇಂಗು ಇತರ ರಫ್ತುಗಳು. ಇಲ್ಲಿಯ ಪೇಟೆಬೀದಿಗಳಲ್ಲಿರುವ ಅಂಗಡಿಗಳಲ್ಲಿ ವಿಶ್ವದ ಎಲ್ಲ ಕಡೆಗಳಿಂದ ಬಂದ ಸರಕುಗಳನ್ನು ಪ್ರದರ್ಶಿಸಿರುವುದನ್ನು ಕಾಣಬಹುದು. (ಕೆ.ಆರ್.ಆರ್.)

ಕಾಂದಹಾರ್ ಪ್ರಾಂತ್ಯದ ಜನಸಂಖ್ಯೆ 8,86,000 (2006). ಉತ್ತರ ದಕ್ಷಿಣವಾಗಿ ಹಝಾರಾ ಪರ್ವತ ಪ್ರದೇಶದಿಂದ ರೆಜಿಸ್ತಾನ್ ಮರುಭೂಮಿ ಮತ್ತು ಪಾಕಿಸ್ತಾನದ

ಕಾಂದಹಾರದ ಕಮ್ಮಾರ : ಕುಡುಗೋಲು ನಿರ್ಮಾಣ ನಿರತ

ಗಡಿಯವರೆಗೂ ಪೂರ್ವಪಶ್ಚಿಮವಾಗಿ ಕಲಾತ್-ಇ-ಘಿಲ್ಜಾಯಿಯಿಂದ ಹೆಲ್ಮಂಡ್ ನದಿಯ ಸನಿಯದವರೆಗೂ ಈ ಪ್ರಾಂತ್ಯ ಹಬ್ಬಿದೆ. ಪ್ರಾಂತ್ಯದ ವಾಯುಗುಣ ಅತ್ಯಂತ ಹಿತಕರವಾಗಿರುವುದು ವಸಂತ ಋತುವಿನಲ್ಲಿ. ಸಹಿಸಲಸಾಧ್ಯವಾದ ಚಳಿಯೇನೂ ಇಲ್ಲಿಲ್ಲ. ಆದರೆ ಬೇಸಗೆ ಮಾತ್ರ ಬಲು ತಾಪಕರ; ಆಗ ಒಣ ಹವೆಯಿರುತ್ತದೆ. ನದಿಯಿರುವೆಡೆಯಲ್ಲಿ ನೀರಾವರಿ ಸೌಲಭ್ಯವುಂಟು. ಇಲ್ಲದಲ್ಲಿ ಬೆಟ್ಟದ ಬುಡದ ನೀರಿನ ಆಸರೆಯಿಂದ ನೆಲದಡಿಯಲ್ಲೇ ಕಾಲುವೆ ರಚಿಸಿ ನೀರು ಹಾಯಿಸಿಕೊಳ್ಳುವುದೂ ಉಂಟು. ಕಾಂದಹಾರದ ಮಧ್ಯಪ್ರದೇಶ ಫಲವತ್ತಾದುದ್ದು, ಕಾಂದಹಾರದ ದಕ್ಷಿಣಕ್ಕೂ ಪೂರ್ವಕ್ಕೂ ಇರುವ ಪ್ರದೇಶ ನೀರಾವರಿ ಬೇಸಾಯಕ್ಕೊಳಪಟ್ಟಿದೆ. ಕಜಕೈ ಮತ್ತು ಆರ್ಗಂದಾಬ್ ಕಟ್ಟೆಗಳಿಂದ ಕಲ್ಪಿಸಲಾದ ನೀರಾವರಿ ಸೌಲಭ್ಯದಿಂದ ಕಾಂದಹಾರ್ ಪ್ರಾಂತ್ಯದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸಲಾಗಿದೆಯಲ್ಲದೆ ಕಾಂದಹಾರ್ ನಗರಕ್ಕೆ ವಿದ್ಯುತ್ ಸರಬರಾಜೂ ಆಗುತ್ತದೆ. ಹೊಸದಾಗಿ ಬೇಸಾಯಕ್ಕೊಳಪಡಿಸಿದ ನೆಲದಲ್ಲಿ ಆಫ್ಘನ್ ಅಲೆಮಾರಿಗಳನ್ನೂ ಕುಚಿ ಜನರನ್ನೂ ನೆಲೆಗೊಳಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಹಣ್ಣು, ಉಣ್ಣೆ, ಗೋದಿ, ಬಾರ್ಲಿ, ಬೇಳೆ, ಮಂಜಿಷ್ಟ (ಮಾಡರ್), ಇಂಗು, ಕುದುರೆ ಮಸಾಲೆ ಸೊಪ್ಪು, (ಆಲ್ಫಾಲ್ಫ), ಕ್ಲೋವರ್, ಹೊಗೆಸೊಪ್ಪು-ಇವು ಮುಖ್ಯ ಬೆಳೆಗಳು.

**ಇತಿಹಾಸ:** ಮಧ್ಯ ಏಷ್ಯ, ಕಾಬೂಲ್ ಮತ್ತು ಭಾರತಗಳ ನಡುವೆ ಇರುವ ಕಾಂದಹಾರದ ಸ್ಥಾನಮಹತ್ತ್ವದಿಂದಾಗಿ ಅದರ ಇತಿಹಾಸ ಅನೇಕ ಘಟನೆಗಳಿಂದ ತುಂಬಿದ್ದಾಗಿದೆ. ಪರ್ಷಿಯನ್ ದೊರೆ 1ನೆಯ ಡೇರಿಯಸ್ (ಪ್ರ.ಶ.ಪೂ. 528-486) ಈ ಪ್ರದೇಶವನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡಿದ್ದ. ಪ್ರ.ಶ.ಪೂ. 329ರಲ್ಲಿ ಅಲೆಕ್ಸಾಂಡರ್ ಅದನ್ನು ಗೆದ್ದುಕೊಂಡ. ಸಿರಿಯದ ದೊರೆ ಸೆಲ್ಯೂಕಸನಿಂದ ಅದು ಪ್ರ.ಶ.ಪೂ. 305ರಲ್ಲಿ ಚಂದ್ರಗುಪ್ತ ಮೌರ್ಯನ ವಶಕ್ಕೆ ಬಂತು. ಅಶೋಕ ಇಲ್ಲೊಂದು ಶಿಲಾಶಾಸನ ಸ್ಥಾಪಿಸಿ ಅದಕ್ಕೆ ಇತಿಹಾಸದಲ್ಲಿ ಮರ್ಯಾದೆಯ ಸ್ಥಾನ ದೊರಕಿಸಿಕೊಟ್ಟ. ಅಲ್ಲಿಂದೀಚೆಗೆ ಅದು ಕ್ರಮವಾಗಿ ಗ್ರೀಕೋ-ಬ್ಯಾಕ್ಟ್ರಿಯನರ, ಪಾರ್ಥಿಯನರ, ಶಕರ, ಕುಶಾನರ ಮತ್ತು ಸಸಾನಿಯನರ ಒಡೆತನಕ್ಕೆ ಒಳಪಟ್ಟಿತ್ತು. 7ನೆಯ ಶತಮಾನದಲ್ಲಿ ಅದನ್ನು ಅರಬರು ವಶಪಡಿಸಿಕೊಂಡರು. 8ನೆಯ ಶತಮಾನದಲ್ಲಿ ಅಬ್ಬಾಸಿದ್ ಕಲೀಫ್ ಅಲ್-ಮನ್ಸೂರ್ ತನ್ನ ಒಡೆತನ ಸ್ಥಾಪಿಸಿದ. 9ನೆಯ ಶತಮಾನದಲ್ಲಿ ಇದು ಸಫರಿದ್ ರಾಜ್ಯಕ್ಕೂ 977ರಲ್ಲಿ ಘಜ್ನವೀಡ್ ಆಡಳಿತಕ್ಕೂ ಒಳಪಟ್ಟಿತ್ತು. ಕಾಂದಹಾರ್ ನಗರಕ್ಕೆ ಪ್ರತಿಸ್ಪರ್ಧಿಯಾಗಿದ್ದ ಬಸ್ತ್ ನಗರವನ್ನು 1150ರಲ್ಲಿ ಅಲ್ಲಾ ಉದ್-ದೀನ್ ಘೋರಿ ನಾಶಪಡಿಸಿದಾಗ ಕಾಂದಹಾರದ ಪ್ರಾಮುಖ್ಯ ಹೆಚ್ಚಿತು. 1383ರಲ್ಲಿ ತೈಮೂರ್ ಆ ಸುತ್ತಣ ಪ್ರದೇಶವನ್ನೆಲ್ಲ ಗೆದ್ದುಕೊಂಡು ಅಲ್ಲಿ ರಾಜ್ಯಪಾಲನ್ನೊಬ್ಬನನ್ನು ನೇಮಿಸಿದ. 15ನೆಯ ಶತಮಾನದಲ್ಲಿ ಅದು ಹೆರಾತಿನ ದೊರೆ ಹುಸೇನ್ ಬೇಕಾರನಿಗೆ ಸೇರಿತ್ತು.

1522ರ ವೇಳೆಗೆ ಅದರ ಮೇಲೆ ಮೊಗಲ್ ಚಕ್ರವರ್ತಿ ಬಾಬರನ ಒಡೆತನ ಸ್ಥಾಪಿತವಾಗಿತ್ತು. ಅನಂತರ ಅದಕ್ಕಾಗಿ ಮೊಗಲರಿಗೂ ಪರ್ಷಿಯನ್ ಸಫಾವಿದರಿಗೂ ಸ್ಪರ್ಧೆ ನಡೆದಿತ್ತು. 1545ರಲ್ಲಿ ಹುಮಾಯೂನ್ ದೇಶಭ್ರಷ್ಟನಾಗಿದ್ದಾಗ, ಅವನ ಪರ್ಷಿಯನ್



ಕಾಂದಹಾರದ ನೆರೆಯ ಬೆಟ್ಟ. ಮೊಗಲ್ ಚಕ್ರವರ್ತಿ ಬಾಬರ್ ಕೊರೆಸಿದ ನಲವತ್ತು ಮೆಟ್ಟಿಲುಗಳು ಇಲ್ಲಿವೆ.

ಮಿತ್ರರು ಅದನ್ನು ವಶಪಡಿಸಿಕೊಂಡಿದ್ದರು. ಅನಂತರ ಹುಮಾಯೂನ್ ಅದನ್ನು ತನ್ನ ಅಧೀನಕ್ಕೆ ತೆಗೆದುಕೊಂಡ. ಹುಮಾಯೂನ್ ಮರಣಾನಂತರ, 1558ರಲ್ಲಿ, ಅಕ್ಬರ್ ಇನ್ನೂ ಚಿಕ್ಕವನಾಗಿದ್ದಾಗ, ಷಾ ತಹಮಾಸ್ಪ್ ಕಾಂದಹಾರನ್ನು ಆಕ್ರಮಿಸಿಕೊಂಡ. 1585ರಲ್ಲಿ ಸಿಂಧ್ ಪ್ರದೇಶವನ್ನು ಅಕ್ಬರ್ ಗೆದ್ದುಕೊಂಡಾಗಲೇ ಕಾಂದಹಾರವೂ ಅವನ ಪುನರ್ವಶವಾದದ್ದು. 1622ರಲ್ಲಿ ಮೊಗಲರ ದೃಷ್ಟಿ ದಖನಿನ ಕಡೆಗೆ ಹರಿದಿದ್ದಾಗ ಷಾ ಅಬ್ಬಾಸ್ ಕಾಂದಹಾರನ್ನು ಕಬಳಿಸಿದ. ಆದರೆ 1638ರಲ್ಲಿ ಅಲ್ಲಿದ್ದ ಪರ್ಷಿಯನ್ ರಾಜ್ಯಪಾಲ ಅಲಿಮರ್ದಾನ್ ಖಾನ್ ಮೊಗಲರ ಕಡೆ ಸೇರಿಕೊಂಡಿದ್ದರಿಂದ ಕಾಂದಹಾರ್ ಮತ್ತೆ ಮೊಗಲರದಾಯಿತು. 1649ರಲ್ಲಿ 2ನೆಯ ಷಾ ಅಬ್ಬಾಸ್ ಕಾಂದಹಾರದ ಮೇಲೇರಿ ಹೋಗಿ ಅದನ್ನು ಗೆದ್ದುಕೊಂಡನಲ್ಲದೆ 1649, 1652 ಮತ್ತು 1653ರಲ್ಲಿ ಅವರ ಸೈನ್ಯಗಳನ್ನು ಎದುರಿಸಿದ.

ಆದರೆ ಪರ್ಷಿಯನರು ಬಹುಕಾಲ ಅದನ್ನು ಇಟ್ಟುಕೊಳ್ಳಲಾಗಲಿಲ್ಲ. ಘಿಲ್ಜೈಯಲ್ಲಿ ಅವರ ರಾಜ್ಯಪಾಲನಾಗಿದ್ದ ಮೀರ್ ವೇಸ್ 1709ರಲ್ಲಿ ಅದನ್ನು ತನ್ನದನ್ನಾಗಿ ಮಾಡಿಕೊಂಡ. ಅವನ ವಂಶಸ್ಥರು ಪರ್ಷಿಯದ ಬಹುಭಾಗವನ್ನು ಗೆದ್ದರು. ಅನಂತರ ನಾದಿರ್ ಷಾ ದೀರ್ಘ ಕಾಲ ಹೋರಾಟ ನಡೆಸಿ 1738ರಲ್ಲಿ ಕೊನೆಗೂ ಕಾಂದಹಾರದ ಮೇಲೆ ಪರ್ಷಿಯನ್ನರ ಅಧಿಕಾರವನ್ನು ಪುನಃಸ್ಥಾಪಿಸಿದ. ಆದರೆ ಅವನ ಮರಣಾನಂತರ ಕಾಂದಹಾರ್ ಮತ್ತೆ ಹಸ್ತಾಂತರಗೊಂಡಿತು. ಆಫ್ಘನ್ ಸೇನಾನಿ ಅಹಮದ್ ಷಾ ಕಾಂದಹಾರದ ಹೊಸ ನಗರ ಮಾಡಿ ಅದನ್ನು ದುರಾನಿ ಮನೆತನದ ರಾಜಧಾನಿಯನ್ನಾಗಿ ಮಾಡಿದ. ಅವನ ಮಗ ತೈಮೂರ್ ತನ್ನ ರಾಜಧಾನಿಯನ್ನು ಕಾಬೂಲಿಗೆ ವರ್ಗಾಯಿಸಿದನಾದರೂ ಕಾಂದಹಾರ್ ಮಾತ್ರ ಕೈಚೆಂಡಿನಂತೆ ಅರಸರ ನಡುವೆ ಪದೇಪದೇ ತಾಕಲಾಡುತ್ತಿತ್ತು.

ಪ್ರಾಬಲ್ಯ ಗಳಿಸುತ್ತಿದ್ದ ರಷ್ಯಕ್ಕೆ ತಡೆಯೊಡ್ಡಲು ಭಾರತದಲ್ಲಿದ್ದ ಬ್ರಿಟಿಷ್ ಸರ್ಕಾರ ಕಾಂದಹಾರದತ್ತ ಕಣ್ಣು ಹಾಯಿಸಿತು. 1839ರಲ್ಲಿ ಷಾ ಪೂಜನ ಸೈನ್ಯ ಕಾಂದಹಾರವನ್ನಾಕ್ರಮಿಸಿಕೊಂಡಾಗ ಅವನಿಗೆ ಬ್ರಿಟಿಷ್ ಬೆಂಬಲವಿತ್ತು. ಅದು ಮೊದಲನೆಯ ಆಫ್ಘನ್ ಯುದ್ಧ. 1842ರಲ್ಲಿ ಜನರಲ್ ವಿಲಿಯಂ ಕಾಬೂಲಿನ ಆಕ್ರಮಣ ಮಾಡಲು ಕಾಂದಹಾರವೇ ನೆಪವಾಗಿ ಪರಿಣಮಿಸಿತು. ಎರಡನೆಯ ಆಫ್ಘನ್ ಯುದ್ಧಕಾಲದಲ್ಲಿ ಬ್ರಿಟಿಷರು ಮತ್ತೆ ಕಾಂದಹಾರದ ಮೇಲೆ ಆಕ್ರಮಣ ನಡೆಸಿದರು (1879). ಬ್ರಿಟಿಷರು

ಆಫ್ಘಾನಿಸ್ತಾನವನ್ನು ಛಿದ್ರಗೊಳಿಸಲು ಬಗೆಬಗೆಯ ಹಂಚಿಕೆ ನಡೆಸಿದರು. ಅಬ್ದುಲ್ ರಹಮಾನನನ್ನು ಆಫ್ಘಾನಿಸ್ತಾನದ ವಜೀರನೆಂದು ಪರಿಗಣಿಸಿ ಕಾಂದಹಾರವನ್ನು ಅವನಿಗೆ

ಕಾಂದಹಾರದ ಬಳಿಯ ಪ್ರಾಚೀನ ಅವಶೇಷಗಳು

ಒಪ್ಪಿಸಿದರು. ಅನಂತರ ಅವನಿಗೂ ಅಯೂಬ್ ಖಾನನಿಗೂ ನಡೆದ ಹೋರಾಟಗಳಲ್ಲಿ ಕಾಂದಹಾರ್ ಮತ್ತೆ ಕೈ ಬದಲಾಯಿಸಿತ್ತು. 1881ರಲ್ಲಿ ಖಾಯಮ್ಮಾಗಿ ಅಬ್ದುಲ್ ರಹಮಾನನ ವಶಕ್ಕೆ ಬಂತು. ಅಲ್ಲಿಂದೀಚೆಗೆ ಕಾಂದಹಾರ್ ಬಹುತೇಕ ನೆಮ್ಮದಿಯ ನೆಲೆಯಾಗಿದೆ. *

**ಕಾಂಪರೆಟಿಯ :** ಅಪೂರ್ವವಾದ ಮತ್ತು ಚೆಲುವಾದ ಒಂದು ಜಾತಿಯ ಆರ್ಕಿಡ್ ಸಸ್ಯ. ಆರ್ಕಿಡೇಸೀ ಕುಟುಂಬಕ್ಕೆ ಸೇರಿದೆ. ಇದರಲ್ಲಿ ಸುಮಾರು 12 ಪ್ರಭೇದಗಳಿವೆ. ದಕ್ಷಿಣ ಅಮೆರಿಕದ ಪೆರು, ಬ್ರೆಜ಼ಿಲ್ ಮತ್ತು ಈಕ್ವೆಡಾರ್ ದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಎಲ್ಲ ಪ್ರಭೇದಗಳೂ ಅಪ್ಪು ಸಸ್ಯಗಳು. ಎಲ್ಲವುಗಳಲ್ಲೂ ಹರಿದುಕೊಂಡು ಬೆಳೆಯುವ ಪ್ರಕಂದವೂ (ರೈಜ಼ೋಮ್) ಅದರಿಂದ ಹುಟ್ಟುವ ಸಣ್ಣಗಾತ್ರದ ಮಿಥ್ಯಾಲಶುನಗಳೂ (ಸೂಡೋಬಲ್ಬ್) ಹಚ್ಚಹಸಿರಾದ ದಪ್ಪನೆಯ ಎಲೆಗಳೂ ಇವೆ. ಹೂಗಳು ಸರಳವಾದ ಅಥವಾ ಕವಲೊಡೆದ ಅಂತ್ಯಾರಂಭಿ ಹೂಗೊಂಚಲುಗಳಾಗಿ ಜೋಡಣೆಯಾಗಿವೆ. ಹೂಗಳ ಬಣ್ಣ ವಿವಿಧ ಬಗೆಗಳಲ್ಲಿ ಬೇರೆ ಬೇರೆಯಾಗಿದೆ, ಮೇಲ್ಭಾಗದ ಪುಷ್ಪಪತ್ರ ಮತ್ತು ದಳಗಳ ಹೆಡೆಯಂತಿವೆ. ಕೆಳಭಾಗದ 2 ಪುಷ್ಪಪತ್ರಗಳು ಉದ್ದನೆಯ ಸೊಂಡಿಲಿನಂತೆ ಚಾಚಿಕೊಂಡು ಹೂದುಟಿಯಿಂದಾದ (ಲೇಬೆಲಮ್) ಸೊಂಡಿಲಿನಂಥ ಇನ್ನೊಂದು ರಚನೆಯನ್ನು ಆವರಿಸಿಕೊಂಡಿವೆ. ಈ ರಚನೆಗಳಿಂದಾಗಿ ಹೂ ಬಲು ಸುಂದರವಾಗಿ ಕಾಣುತ್ತದೆ.

ಕಾಂಪರೆಟಿಯದ ಹಲವಾರು ಪ್ರಭೇದಗಳಲ್ಲಿ ಉದ್ಯಾನಪ್ರಾಮುಖ್ಯವಿರುವ ಪ್ರಭೇದಗಳು ಈ ಮೂರು: ಕಾ.ಮ್ಯಾಕ್ರೊಪ್ಲೆಕ್ಟ್ರಾನ್.ಕಾ.ಕಾಕ್ಸಿನಿಯ ಮತ್ತು ಕಾ. ಫಾಲ್ಕೇಟ. ಮೊದಲನೆಯದರಲ್ಲಿ ತಿಳಿಹಳದಿ ಬಣ್ಣ ಮತ್ತು ಕೇಸರಿ ಬಣ್ಣದ ಅಂಚುಳ್ಳ ಹೂಗಳೂ ಎರಡನೆಯದರಲ್ಲಿ ಉಜ್ವಲ ಕಡುಗೆಂಪು ಬಣ್ಣದ ಹೂಗಳೂ ಮೂರನೆಯದರಲ್ಲಿ ಗಾಢ ಕೆಂಪು ಬಣ್ಣದ ಹೂಗಳೂ ಇವೆ. ಇವೆಲ್ಲ ಪ್ರಭೇದಗಳನ್ನೂ ತೂಗು ಬುಟ್ಟಿಗಳಲ್ಲಿ ಉಷ್ಣತೆ ಹೆಚ್ಚಾಗಿರುವ ಸ್ಥಳಗಳಲ್ಲಿ ಬೆಳೆಸುತ್ತಾರೆ. (ಎನ್.ಆರ್.ಆರ್.)

**ಕಾಂಪಾನೆಲ್ಲಾ, ತೊಮ್‌ಮಾಜೊ಼ :** 1568–1639. ಇಟಲಿಯ ದಾರ್ಶನಿಕ, ಕವಿ. ಹುಟ್ಟಿದ್ದು ಕಾಲಬ್ರಿಯದ ಸ್ಟಿಲೊವಿನಲ್ಲಿ, ಡಾಮಿನಿಕನ್ ಪಂಥಕ್ಕೆ ಸೇರಿದವ. ಕ್ರಾಂತಿಕಾರಕ ತತ್ತ್ವಗಳಿಂದಾಗಿ ಈತ ಅಧಿಕಾರಿಗಳ ಕೋಪಕ್ಕೆ ತುತ್ತಾದ. ನಾನಾ ರೀತಿಯ ಚಿತ್ರಹಿಂಸೆಗಳನ್ನು ಅನುಭವಿಸಿದ ಮೇಲೆ ದಕ್ಷಿಣ ಇಟಲಿಯಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ. 1599ರಲ್ಲಿ ಸ್ಪೇನಿನ ವಿರುದ್ಧ ಬಂಡಾಯವೆಬ್ಬಿಸಲು ಪ್ರಯತ್ನಿಸಿದಾಗ ಬಂಧನಕ್ಕೊಳಗಾಗಿ ಸುಮಾರು 27 ವರ್ಷಗಳ ಕಾಲ ಕಾರಾಗೃಹವಾಸವನ್ನನುಭವಿಸಿದ. ಕಾರಾಗೃಹದಲ್ಲಿರುವಾಗಲೆ ಅನೇಕ ತಾತ್ತ್ವಿಕ ಗ್ರಂಥಗಳನ್ನು ಬರೆದ. ಸೂರ್ಯದೇವನ ನಗರ (ಸಿಟಿ ಆಫ್ ದಿ ಸನ್) ಎಂಬ ತನ್ನ ಉತ್ಕೃಷ್ಟ ಗ್ರಂಥದಲ್ಲಿ ಆದರ್ಶ ರಾಜ್ಯವೊಂದರ ಕನಸನ್ನು ಕಂಡಿದ್ದಾನೆ. ಈತ ಸತ್ತಿದ್ದು ಪ್ಯಾರಿಸಿನಲ್ಲಿ. (ಎಚ್.ಕೆ.ಆರ್.)

**ಕಾಂಪಿಲ್ಯ :** ವೇದಗಳ ಕಾಲದಲ್ಲಿ ಪ್ರಮುಖವಾಗಿದ್ದ ಪಂಗಡಗಳಲ್ಲೊಂದಾದ ಪಾಂಚಾಲ ರಾಜ್ಯದ ಮುಖ್ಯ ಪಟ್ಟಣ. ಪಾಂಚಾಲ ರಾಜ್ಯ ಈಗಿನ ಉತ್ತರ ಪ್ರದೇಶದ ಬರೈಲಿ, ಬುಡಾವುನ್ ಮತ್ತು ಫರೂಕಾಬಾದ್ ಜಿಲ್ಲೆಗಳಿಗೆ ಸೀಮಿತವಾಗಿತ್ತು. ಈ ರಾಜ್ಯಾಧಿಪತಿಗಳಾದ ಪಾಂಚಾಲರು ಋಗ್ವೇದದಲ್ಲಿ ಸೃಂಜಯ ಮತ್ತು ತುರ್ವಸ ಪಂಗಡಗಳೊಂದಿಗೆ ಹೆಸರಿಸಿರುವ ಕ್ರಿವಿ ಪಂಗಡಕ್ಕೆ ಸೇರಿದವರು. ಈ ಪಂಗಡದಲ್ಲಿ ದಿಗ್ವಿಜಯಾಕಾಂಕ್ಷಿಗಳಾದ ಅನೇಕ ರಾಜರು ಹುಟ್ಟಿ ಕುರುವಂಶದವರೊಂದಿಗೆ ಆಗಾಗ ಯುದ್ಧ ಅಥವಾ ಸಂಧಿಕಾರ್ಯಗಳಲ್ಲಿ ತೊಡಗಿರುತ್ತಿದ್ದರಲ್ಲದೇ ಸುಪ್ರಸಿದ್ಧರಾದ ಪ್ರವಹಣ, ಜೈವಲಿಯಂಥ ರಾಜರೂ ಶ್ವೇತಕೇತು, ಆರುಣಿಯಂಥ ಋಷಿ–ತತ್ತ್ವಶಾಸ್ತ್ರಜ್ಞರೂ ಕಂಡುಬಂದರು. ಕ್ರಮೇಣ ವಿದೇಹರಾಜ್ಯ ದೈವಜ್ಞ–ತತ್ತ್ವಶಾಸ್ತ್ರಜ್ಞರ ನೆಲೆವೀಡಾಗಿ ಪ್ರಫುಲಿಸಿದಾಗ ಕಾಂಪಿಲ್ಯದ ಪ್ರಾಮುಖ್ಯ ಕಡಿಮೆಯಾಯಿತು. (ಬಿ.ಕೆ.ಜಿ.)

**ಕಾಂಪೊಸಿಟ್ ದೂಲ :** ಸ್ಥಿತಿಸ್ಥಾಪಕತ್ವದ ಗುಣಾಂಕಗಳು (ಮಾಡಲೈ ಆಫ್ ಇಲಾಸ್ಟಿಸಿಟಿ) ಭಿನ್ನವಾಗಿರುವ ಎರಡು ಪದಾರ್ಥಗಳನ್ನು ಯೋಗ್ಯವಾಗಿ ಬಂಧಿಸಿ ತಯಾರಿಸಿದ ದೂಲ (ಕಾಂಪೊಸಿಟ್ ಬೀಮ್), ಪ್ರಬಲಿತ ಕಾಂಕ್ರೀಟಿನ ದೂಲಗಳು ಮತ್ತು ಉಕ್ಕಿನ ದೂಲಗಳು ಇವನ್ನು ಕಾಂಕ್ರೀಟಿನ ಅಂಗಕ್ಕೆ ಬಂಧಿಸಿರುವುದು; ಉಕ್ಕಿನ ಪಟ್ಟಿಗಳಿಂದ ಭದ್ರಗೊಳಿಸಿದ ಮರದ ತೊಲೆಗಳು–ಇವು ಕಾಂಪೊಸಿಟ್ ದೂಲಕ್ಕೆ ಉದಾಹರಣೆಗಳು. ಇವನ್ನು ಕಾಂಪೊಸಿಟುಗಳೆಂದು ಕರೆಯುವುದು ವಾಡಿಕೆ. **(ನೋಡಿ– ಸಮ್ಮಿಳಿತಗಳು; ಸಮ್ಮಿಳಿತ ನಿರ್ಮಾಣಗಳು)**

ಕಟ್ಟಡಗಳಲ್ಲಿ ಮತ್ತು ವಾಹನಗಳಲ್ಲಿ ಬಳಸುವ ಆಧುನಿಕ ಕಟ್ಟಡ ಸಾಮಗ್ರಿಗಳಲ್ಲಿ ಕಾಂಪೊಸಿಟುಗಳು ಇತ್ತೀಚೆಗೆ ಹೆಚ್ಚು ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತ ಬಂದಿವೆ. ಗಾಜಿನ ಹಾಳೆಗಳಿಗೆ ಕೆಲವು ನ್ಯೂನತೆಗಳಿರುವುದು ಸಹಜವಷ್ಟೆ. ಅವು ಸುಲಭವಾಗಿ ಒಡೆದುಹೋಗಬಹುದು. ಆದರೆ ಗಾಜಿನ ಮತ್ತು ಪ್ಲಾಸ್ಟಿಕ್ಕಿನ ಹಾಳೆಗಳನ್ನು ಪರಸ್ಪರ ಒಂದಕ್ಕೊಂದು ಅಂಟಿಕೊಂಡಿರುವಂತೆ ಬಂಧಿಸಿದಾಗ ದೊರೆಯುವ ಕಾಂಪೊಸಿಟ್ ಅಥವಾ ಲ್ಯಾಮಿನೇಟ್ ಹೆಚ್ಚು ಭದ್ರವಾಗಿರುತ್ತದೆ. ಒಂದೇ ಘಟಕವನ್ನು ಉಪಯೋಗಿಸುವುದಕ್ಕಿಂತ ಸೂಕ್ತವಾಗಿ ಜೋಡಿಸಿರುವ ಘಟಕಗಳ ಕಾಂಪೊಸಿಟಿನಲ್ಲಿ ಉತ್ತಮ ಲಕ್ಷಣಗಳಿರುತ್ತವೆ.

ಗಾಜಿನ ಹಾಳೆ, ಪ್ಲಾಸ್ಟಿಕ್ಕಿನ ಭಾಗಗಳು, ಕೃತಕ ಮತ್ತು ಸ್ವಾಭಾವಿಕ ನೂಲಿನ ಪದರುಗಳು, ಗ್ರಾಫೈಟಿನ ಕಣಗಳು, ಕಲ್ನಾರು, ತಂತುವಿನ ಸೀಳು—ಇವು ಕಾಂಪೊಸಿಟುಗಳ ತಯಾರಿಕೆಯಲ್ಲಿ ಉಪಯುಕ್ತವಾದ ಹಲವು ವಸ್ತುಗಳು. ಪ್ಲಾಸ್ಟಿಕ್ಕಿನ ತಗಡುಗಳ ನಡುವೆ ಹಾಳೆ, ಅಥವಾ ಕೃತಕ ಮತ್ತು ಸ್ವಾಭಾವಿಕ ನೂಲುಗಳನ್ನು ಗಾಜಿನೊಡನೆ ಸಂಯೋಜಿಸಿ ವಿಶೇಷ ಗುಣಗಳುಳ್ಳ ಕಾಂಪೊಸಿಟುಗಳನ್ನು ತಯಾರಿಸಬಹುದು. ಕರಗಿಸಿದ ಸಿಲಿಕಾನಿನ ಎಳೆಯನ್ನು ಅಲ್ಯೂಮಿನಿಯಂ ತಗಡುಗಳ ನಡುವೆ ಸಿಕ್ಕಿಸಿ ಕಾಂಪೊಸಿಟುಗಳನ್ನು ತಯಾರಿಸುವುದೂ ಉಂಟು.

**ಕಾಂಪೊಸಿಟುಗಳಲ್ಲಿ ಮಾದರಿಗಳು:** 1. ತಗಡುಗಳನ್ನು (ಯಾವುದೇ ವಸ್ತುವಿನ) ಪದರಪದರವಾಗಿ ಹಾಳೆಗಳಂತೆ ಸೂಕ್ತವಾದ ಅಂಟು ಹಾಕಿ ಲ್ಯಾಮಿನೇಟುಗಳನ್ನು ತಯಾರಿಸಬಹುದು. ಪ್ಲೈವುಡ್ ಹಲಗೆಗಳ ಮೇಲೆ ಅಂದವಾದ ವಿನ್ಯಾಸವುಳ್ಳ ಉತ್ಕೃಷ್ಟ ತೇಗದ ಎಳೆಯನ್ನು ಈ ರೀತಿ ಜೋಡಿಸಿ ಮನೆಗಳಲ್ಲಿ ಮತ್ತು ಕಛೇರಿಗಳಲ್ಲಿ ಬಾಗಿಲು ಮತ್ತು ಬೀರುಗಳಿಗೆ ಸಾಮಾನ್ಯವಾಗಿ ಬಳಸುತ್ತಾರೆ. 2. ರಚನೆಯಲ್ಲಿ ಕೆಲವು ಕಾಂಪೊಸಿಟುಗಳು ಕಣಗಳಂತಿರಬಹುದು. 3. ನೂಲಿನಂತಿರುವ ಕಾಂಪೊಸಿಟುಗಳು 4. ಹಲ್ಲೆಗಳಂತೆ ಕಾಣಿಸುವ ಹಾಳೆಗಳು. 5. ಒಂದು ವಸ್ತುವಿನ ಪಂಜರದಂಥ ಹಂದರದಲ್ಲಿ ಮತ್ತೊಂದು ವಸ್ತುವನ್ನು ಜೋಡಿಸಿರುವ ಕಾಂಪೊಸಿಟುಗಳು.

**ಗುಣಗಳು:** ಕಾಂಪೊಸಿಟುಗಳ ಗುಣಗಳು ಸಂಯೋಜಿಸಿರುವ ಘಟಕಗಳ ಲಕ್ಷಣಗಳು ಮತ್ತು ಅವು ಹೆಣೆದಿರುವ ರೀತಿಯನ್ನು ಅವಲಂಬಿಸಿವೆ. ಘಟಕಗಳ ಪ್ರಮಾಣ (ಕಾಂಪೊಸಿಷನ್), ಅವುಗಳ ನಡುವೆ ಜರುಗುವ ಪರಸ್ಪರ ಕ್ರೀಯೆ ಇವುಗಳು ಕೂಡ ಕಾಂಪೊಸಿಟುಗಳ ಲಕ್ಷಣಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಹಲವು ಕಾಂಪೊಸಿಟುಗಳಲ್ಲಿ ಘಟಕಗಳ ಮಹತ್ತ್ವ, ಸಾಂದ್ರತೆ ಮತ್ತಿತರ ಗುಣಗಳು ಪರಸ್ಪರ ಕೂಡಿಕೊಂಡುಬಂದಿರುತ್ತವೆ. ಇವಲ್ಲದೇ ಎರಡೂ ಘಟಕಗಳು ತಮ್ಮ ವಿಶಿಷ್ಟ ಗುಣಗಳನ್ನು ಮಿಶ್ರಣದಲ್ಲಿ ಕೂಡ ಕುಂದಿಲ್ಲದೇ ವ್ಯಕ್ತಪಡಿಸಬಹುದು ಸಮ್ಮಿಳಿಸಗೊಂಡ ಘಟಕಗಳ ಗುಣಗಳು ಒಂದಕ್ಕೊಂದು ಪೋಷಕವಾಗಿ ಅಥವಾ ಪೂರಕವಾಗಿರಬಹುದು. ಗಾಜಿನ ತಂತುವಿನಿಂದ ಬಲಗೊಳಿಸಿದ ಪ್ಲಾಸ್ಟಿಕ್ಕಿಗೆ ಎರಡರಷ್ಟು ಹೆಚ್ಚು ಶಕ್ತಿಯಿರುತ್ತದೆ.

**ಉಪಯೋಗಗಳು:** ಕಲ್ನಾರು ಮತ್ತು ಲೋಹದ ತಗಡುಗಳಿಂದ ಸಂಯೋಜಿತವಾಗಿರುವ ಲ್ಯಾಮಿನೇಟ್ ಅಥವಾ ಕಾಂಪೊಸಿಟುಗಳನ್ನು ಯಂತ್ರಗಳಲ್ಲಿ ಸಾಗುಪಟ್ಟಿಗಳಿಗೋಸ್ಕರ ಬಳಸುತ್ತಾರೆ. ಕೆಲವು ವಿಶೇಷವಸ್ತುಗಳ ತಯಾರಿಕೆಗೆ ಕಲ್ನಾರಿನಿಂದ ಭದ್ರ ಪಡಿಸಿದ ಪಾಲಿಪ್ರೊಪಿಲೀನ್ ನೂಲನ್ನು ಉಪಯೋಗಿಸುವುದುಂಟು. ಸಿನಿಮ ಮತ್ತು ನಾಟಕದ ಥಿಯೇಟರುಗಳಲ್ಲಿ ಧ್ವನಿನಿಯಂತ್ರಣಕ್ಕೆ ಪಾಲಿವೀನೈಲ್ ಕ್ಲೋರೈಡ್ (ಪಿವಿಸಿ) ಮತ್ತು ವರ್ಮಿಕ್ಯುಲೇಟಿನ ಕಾಂಪೊಸಿಟುಗಳನ್ನು ಬಳಸಲಾಗುವುದು. ರಬ್ಬರಿನಂತೆ ಸ್ಥಿತಿ ಸ್ಥಾಪಕ ಗುಣಗಳನ್ನುಳ್ಳ ವಸ್ತುವನ್ನು ಗ್ರಾಫೈಟ್ ಮತ್ತು ಸೀಸದ ಪುಡಿಯನ್ನು ಬೆರೆಸಿ

ತಯಾರಿಸಬಹುದು. ಪ್ಲಾಸ್ಟಿಕ್ ಮತ್ತು ಗಾಜಿನ ಚಕ್ಕೆಗಳು ಪರಸ್ಪರ ಜೋಡಿಸಿರುವ ಹಾಳೆಗಳನ್ನು ಬ್ಯಾಟರಿಗಳ ಮೇಲಹೊದಿಕೆಗಳಿಗೂ ಸೂಕ್ಷ್ಮವಾದ ವಿದ್ಯುತ್ತಿನ ಉಪಕರಣಗಳ ಕವಚಗಳಿಗೂ ಉಪಯೋಗಿಸುವರು. ಪ್ಲಾಸ್ಟಿಕ್ಕು ಮತ್ತು ಅಭ್ರಕದ ಕಾಂಪೊಸಿಟುಗಳನ್ನು ವಿದ್ಯುನ್ನಿರೋಧಕಗಳಾಗಿ ಬಳಸುತ್ತಾರೆ. ವಾಹನಗಳು ಅಪಘಾತಕ್ಕೀಡಾದಾಗ, ಅವುಗಳಲ್ಲಿನ ಗಾಜು ಒಡೆದು ಚೂರುಗಳಿಂದ ಹೆಚ್ಚು ಅಪಾಯ ಸಂಭವಿಸುತ್ತದೆ. ಇದನ್ನು ತಪ್ಪಿಸಲು, ವಾಹನಗಳಲ್ಲಿ ಗಾಜಿನ ಮತ್ತು ಪ್ಲಾಸ್ಟಿಕ್ಕಿನ ಕಾಂಪೊಸಿಟುಗಳನ್ನು ಉಪಯೋಗಿಸುವರು. ಆಗ ಗಾಜು ಒಡೆದರೂ ಚೂರುಗಳು ಛಿದ್ರಛಿದ್ರವಾಗಿ ಸಿಡಿಯದೇ ಪ್ಲಾಸ್ಟಿಕ್ಕಿನ ಪದರಕ್ಕೇ ಅಂಟಿಕೊಂಡಿರುತ್ತವೆ. ಸುಮಾರು ನಲವತ್ತು ಮಿಲಿಮೀಟರು ದಪ್ಪವಾಗಿರುವ ಗಾಜು ಮತ್ತು ಪ್ಲಾಸ್ಟಿಕ್ಕಿನ ಅನೇಕ ಪದರಗಳನ್ನೊಳಗೊಂಡ ಲ್ಯಾಮಿನೇಟು ಗುಂಡಿನೇಟನ್ನು ಕೂಡ ತಡೆಯುವಷ್ಟು ಶಕ್ತಿಯುತವಾಗಿರುತ್ತದೆ. (ಎಂ.ಎ.ಎಸ್.ಆರ್.)

**ಕಾಂಪ್ಟನ್, ಆರ್ಥರ್ ಹೋಲಿ :** 1892–1962. ಅಮೆರಿಕನ್ ಭೌತವಿಜ್ಞಾನಿ ನೊಬೆಲ್ ಪ್ರಶಸ್ತಿ ವಿಜೇತ. ಜನನ ಸೆಪ್ಟಂಬರ್ 10, 1892ರಂದು ಅಮೆರಿಕದ ಒಹಾಯೋ ಪ್ರಾಂತದ ವೂಸ್ಟರ್ ಎಂಬಲ್ಲಿ. 1913ರಲ್ಲಿ ವೂಸ್ಟರ್ ಕಾಲೇಜಿನಲ್ಲಿ (ಆತನ ತಂದೆ ಡೀನ್ ಆಗಿದ್ದ) ತನ್ನ ಸ್ನಾತಕಮಟ್ಟದ ವಿದ್ಯಾಭ್ಯಾಸ ಮುಗಿಸಿ ಹೆಸರಾಂತ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ 1916ರಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದು ಅನಂತರ ಮಿನ್ನೆಸೋಟಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ 1916–17ರವರೆಗೆ ಕೆಲಸ ಮಾಡಿದ. ಅನಂತರದ ಎರಡುವರ್ಷ ಪಿಟ್ಸ್‌ಬರ್ಗ್‌ನಲ್ಲಿರುವ ಲ್ಯಾಪ್ ಕಂಪನಿಯಲ್ಲಿ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದ. 1919ರಿಂದ 1920ರ ವರೆಗೆ ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದ ಖ್ಯಾತ ಕ್ಯಾವೆಂಡಿಷ್ ಪ್ರಯೋಗಶಾಲೆಯಲ್ಲಿ ಕೆಲಸಮಾಡಿದ. 1920ರಿಂದ 1923ರ ವರೆಗೆ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲೂ 1923–1945ರ ವರೆಗೆ ಶಿಕಾಗೋ ವಿಶ್ವವಿದ್ಯಾಲಯದಲ್ಲೂ ಪ್ರಾಧ್ಯಾಪಕನಾಗಿದ್ದ. 1940ರಲ್ಲಿ ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನ ವಿಭಾಗದ ಡೀನ್ ಆಗಿ ನೇಮಕಗೊಂಡ. ಶಿಕಾಗೋದಲ್ಲಿರುವಾಗಲೇ ಅಂದರೆ 1926–27ರ ವರೆಗೆ ಭಾರತದ ಪಂಜಾಬ್ ವಿಶ್ವವಿದ್ಯಾಲಯ 1934–35ರವರೆಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು 1940ರಲ್ಲಿ ವಾಷಿಂಗ್‌ಟನ್ ವಿಶ್ವವಿದ್ಯಾಲಯಗಳಲ್ಲಿ ಈತ ಗೌರವ ಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ. 1945ರಿಂದ 1953ರವರೆಗೆ ಸೇಂಟ್ ಲೂಯಿಯಲ್ಲಿರುವ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ಕುಲಾಧಿಪತಿ (ಛಾನ್ಸಲರ್) ಆಗಿದ್ದ. ಹೀಗೆ ಕಾಂಪ್ಟನ್ನನ ಕಾರ್ಯಕ್ಷೇತ್ರ ವ್ಯಾಪಕವಾಗಿದ್ದರೂ ವಿಜ್ಞಾನದ ಮೂಲ ಸಂಶೋಧನೆಗೆ ಸದಾ ಈತನ ಒಲವಿತ್ತು.

1942ರಲ್ಲಿ ಶಿಕಾಗೋ ವಿಶ್ವವಿದ್ಯಾಲಯದ ಲೋಹಶಾಸ್ತ್ರ ಪ್ರಯೋಗಶಾಲೆಯ ಮುಖ್ಯಸ್ಥನಾಗಿದ್ದುಕೊಂಡು ಪರಮಾಣು ಬಾಂಬಿಗೆ ಬೇಕಾದ ಪ್ಲುಟೋನಿಯಂ ತಯಾರಿಕೆಯ ಸಂಶೋಧನೆಯನ್ನೀತ ನಿರ್ದೇಶಿಸಿದ. ಇದು ಮುಖ್ಯವಾಗಿ ಎಕ್ಸ್‌ಕಿರಣ ಮತ್ತು ಗಾಮಕಿರಣಗಳಿಗೆ ಸಂಬಂಧಪಟ್ಟದ್ದಾಗಿತ್ತು. ಈತನ ಹೆಸರಿನಿಂದಲೇ ಪ್ರಸಿದ್ಧವಾಗಿರುವ ಕಾಂಪ್ಟನ್ ಪರಿಣಾಮವನ್ನು 1920ರಲ್ಲಿ ಆವಿಷ್ಕರಿಸಿದ. ಕೆಲವು ಪದಾರ್ಥಗಳು ಎಕ್ಸ್–ಕಿರಣಗಳನ್ನು ಚದರಿಸಿದಾಗ ಉಂಟಾಗುವ ಅಲೆಯುದ್ದದ ಹಿಗ್ಗುವಿಕೆಗೆ ಕಾಂಪ್ಟನ್ ಪರಿಣಾಮ ಎಂದು ಹೆಸರು. ಅಲ್ಪ ತೂಕದ ರಾಸಾಯನಿಕ ಧಾತುವಿನಿಂದ ಇವು ಚದರಿಸಲ್ಪಡುವಾಗ ಈ ಪರಿಣಾಮ ಪ್ರಕಟವಾಗುತ್ತದೆ. ಇದಕ್ಕಾಗಿ ಈತನಿಗೆ 1927ರಲ್ಲಿ ಮೇಘಮಂದಿರ ರಚಿಸಿದ ಇಂಗ್ಲೆಂಡಿನ ಸಿ.ಟಿ.ಆರ್. ವಿಲ್ಸನ್ನನೊಡನೆ ನೊಬೆಲ್ ಪಾರಿತೋಷಕ ಲಭಿಸಿತು.

ಭೌತವಿಜ್ಞಾನದ ಮೂಲ ಸಂಶೋಧನೆಯಲ್ಲಿ ಬಹು ಆಸಕ್ತಿಯಿದ್ದ ಈ ವಿಜ್ಞಾನಿ ಕೈಗಾರಿಕಾ ಸಲಹಾಗಾರನೂ ಆಗಿದ್ದ. ಸೋಡಿಯಂ ಆವಿ ದೀಪ ಮತ್ತು ಪ್ರತಿದೀಪ್ತ (ಫ್ಲೊರಸೆಂಟ್) ಬೆಳಕಿನ ಉತ್ಪನ್ನದ ವಿಷಯಗಳಲ್ಲಿ ಈತ ಕೆಲಸ ಮಾಡಿದ್ದಾನೆ. ವಿಜ್ಞಾನದಲ್ಲಿದ್ದಷ್ಟೇ ತೀವ್ರ ಆಸಕ್ತಿ ಮಾನವಿಕ ಹಾಗೂ ಧಾರ್ಮಿಕ ವಿಷಯಗಳಲ್ಲಿಯೂ ಈತನಿಗಿತ್ತು. ಅಮೆರಿಕದಲ್ಲಿ ಸರ್ವಮತಧರ್ಮಸಹಿಷ್ಣುತೆ, ವರ್ಣಭೇದ ನಿರ್ಮೂಲನ ಮತ್ತು ಅಂತರರಾಷ್ಟ್ರೀಯ ಸಹಕಾರಕ್ಕಾಗಿ ಈತ ಬಹುವಾಗಿ ಶ್ರಮಿಸುತ್ತಿದ್ದ.

**ಕಾಂಪ್ಟನ್ ಬರೆದು ಪ್ರಕಟಿಸಿರುವ ಕೆಲವು ಪ್ರಸಿದ್ಧ ವಿಜ್ಞಾನ ಪ್ರಬಂಧಗಳಿವು:** 1 ಎಕ್ಸ್ ಕಿರಣಗಳಿಂದುಂಟಾದ ದ್ವಿತೀಯ ರಶ್ಮಿಗಳು (1922), 2 ಎಕ್ಸ್ ಕಿರಣಗಳು ಮತ್ತು ಎಲೆಕ್ಟ್ರಾನುಗಳು (1926), 3 ಎಸ್. ಕೆ. ಆಲಿಸನನೊಡನೆ ಬರೆದಿರುವ ಉತ್ತಮ ಕೃತಿ–ಪ್ರಯೋಗ ಮತ್ತು ಸಿದ್ಧಾಂತದಲ್ಲಿ ಎಕ್ಸ್ ಕಿರಣಗಳು (1933), 4 ಮನುಷ್ಯನ ಸ್ವಾತಂತ್ರ್ಯ (1935), 5 ವಿಜ್ಞಾನದ ಮಾನವೀಯ ಅರ್ಥ (1946), 6 ಪರಮಾಣು (1956)

1953ರಿಂದ 1961ರ ವರೆಗೆ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ಗೌರವ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ ಕಾಂಪ್ಟನ್ 1961ರಲ್ಲಿ ರಾಜೀನಾಮೆಯಿತ್ತು ಆ ಕೆಲಸದಿಂದ ಹೊರಬಂದ. 1962 ಮಾರ್ಚ್ 15ರಂದು ನಿಧನನಾದ. (ಪಿ.ವಿ.)

**ಕಾಂಪ್ಟನ್ ಪರಿಣಾಮ :** ಎಲೆಕ್ಟ್ರಾನುಗಳಿಗೆ ಡಿಕ್ಕಿಹೊಡೆದು ಚದರುವ ಎಕ್ಸ್‌ಕಿರಣಗಳ ಅಲೆಯುದ್ದದಲ್ಲಿ ಉಂಟಾಗುವ ಹೆಚ್ಚುವರಿ (ಕಾಂಪ್ಟನ್ ಎಫೆಕ್ಟ್). ತೆಳುವಾದ ತಾಟುಗಳ ಮೂಲಕ ಹಾಯುವ ಕಿರಣಗಳ ಚದರಿಕೆಯನ್ನು ಜೆ. ಜೆ. ಥಾಮ್ಸನ್ (1856–1946) ಎಂಬ ವಿಜ್ಞಾನಿ ಆವಿಷ್ಕರಿಸಿ ಚದರಿದ ಕಿರಣಗಳ ಅಲೆಯುದ್ದ ಆಪಾತ ಕಿರಣಗಳ ಅಲೆಯುದ್ದದಷ್ಟೇ ಇರುತ್ತದೆಂದು ತಿಳಿಸಿದ. ಎಕ್ಸ್‌ಕಿರಣಗಳು ವಿದ್ಯುತ್ಕಾಂತ ಅಲೆಗಳು. ಅವು ತಾಮ್ರದ ತಾಟುಗಳ ಮೂಲಕ ಹಾಯುವಾಗ ಎಲೆಕ್ಟ್ರಾನುಗಳು ಕಂಪಿಸುತ್ತವೆ. ಎಲೆಕ್ಟ್ರಾನುಗಳು ವಿದ್ಯುತ್ಕಾಂತ ಅಲೆಗಳ ವಿದ್ಯುತ್ ಪ್ರೇರಣೆಯ ಪ್ರಭಾವದಿಂದ ಕಂಪಿಸುವುದರಿಂದ ಅವುಗಳ ಆವೃತ್ತಿ ಆಪಾತ ವಿದ್ಯುತ್ಕಾಂತ ಅಲೆಗಳ ಆವೃತ್ತಿಯಷ್ಟಿದ್ದು ಅದೇ ಆವೃತ್ತಿಯ ವಿದ್ಯುತ್ಕಾಂತ ಅಲೆಗಳು ಹೊರಚಿಮ್ಮುತ್ತವೆ. ಅವು ಇಂಥ ಕಡೆಗೇ ಚಿಮ್ಮಬೇಕೆಂಬ ನಿರ್ಬಂಧವಿಲ್ಲ. ಥಾಮ್ಸನ್ ತನ್ನ ಆವಿಷ್ಕರಣದ ಬಗ್ಗೆ ಕೊಟ್ಟ ವಿವರಣೆ ಇದು.



1912ರಲ್ಲಿ ಸಿ.ಎ. ಸ್ಯಾಡ್ಲರ್ ಮತ್ತು ಪಿ. ಮೆಶಾಮ್ ಎಂಬ ವಿಜ್ಞಾನಿಗಳು ಥಾಮ್ಸನ್ನನ ಪ್ರಯೋಗಗಳನ್ನು ಮತ್ತೆ ನಡೆಸಿದರು. ಈ ಸಾರಿ ಅವರು ಉಪಯೋಗಿಸಿದ ಮೂಲ ಎಕ್ಸ್‌ಕಿರಣಗಳ ಅಲೆಯುದ್ದ ಕಮ್ಮಿಯಾಗಿತ್ತು. ಚದರಿದ ಎಕ್ಸ್‌ಕಿರಣಗಳ ಅಲೆಯುದ್ದ ಹೆಚ್ಚಾಗಿತ್ತು. ಚದರಿದ ಗಾಮಕಿರಣಗಳ ಅಲೆಯುದ್ದ ಮೂಲ ಕಿರಣಗಳ ಅಲೆಯುದ್ದಕ್ಕಿಂತ ಖಚಿತವಾಗಿ ಹೆಚ್ಚಾಗಿರುವುದೆಂದು ಜಿ.ಎ.ಗ್ರೇ ಎಂಬಾತ ತೋರಿಸಿದ (1920). ಚದರಿಕೆಯ ಕೋನವನ್ನು ಅನುಸರಿಸಿ ಅಲೆಯುದ್ದದಲ್ಲಿ ಉಂಟಾಗುವ ಹೆಚ್ಚುವರಿ ಏರುತ್ತಲೇ ಹೋಗುವುದೆಂದು ಅವನು ತೋರಿಸಿದ.

ಚದರಿಕೆಯಿಂದ ಎಕ್ಸ್‌ಕಿರಣಗಳ ಅಲೆಯುದ್ದದಲ್ಲಿ ಉಂಟಾಗುವ ಹೆಚ್ಚುವರಿಯನ್ನು ಅಮೆರಿಕದ ಆರ್ಥರ್ ಕಾಂಪ್ಟನ್ (1892–1962) 1919ರಲ್ಲೇ ಗಮನಿಸಿದ್ದಲ್ಲದೆ. ಪ್ರಯೋಗಗಳನ್ನು ಅವಿರತವಾಗಿ ಮುಂದುವರಿಸಿ 1923ರಲ್ಲಿ ತತ್ಸಂಬಂಧ ಸಿದ್ಧಾಂತವನ್ನು ಮಂಡಿಸಿದ. ಎಕ್ಸ್‌ಕಿರಣಗಳು ಫೋಟಾನುಗಳ ಪ್ರವಾಹ, ಅವುಗಳಿಗೆ ಅಲೆಯುದ್ದ ಮತ್ತು ಆವೃತ್ತಿ ಹೇಗೆ ಸ್ವಾಭಾವಿಕವೋ ಹಾಗೆಯೇ ಶಕ್ತಿ ಮತ್ತು ಸಂವೇಗ (ಮೊಮೆಂಟಂ) ಕೂಡ ಸ್ವಾಭಾವಿಕ. ಅವು ಎಲೆಕ್ಟ್ರಾನುಗಳಿಗೆ ಡಿಕ್ಕಿಹೊಡೆಯುವಾಗ ಕಣಗಳಂತೆ ವರ್ತಿಸುತ್ತವೆ. ಆಗ ಒಟ್ಟು ಸಂವೇಗ ಕೂಡ ವ್ಯತ್ಯಾಸಗೊಳ್ಳುವುದಿಲ್ಲ. ಡಿಕ್ಕಿ ಹೊಡೆದ ಫೋಟಾನು ಚದರಿದ ತತ್‌ಕ್ಷಣದಲ್ಲೆ ಎಲೆಕ್ಟ್ರಾನ್ ಹಿನ್ನೆಗೆಯುತ್ತದೆ. ಫೋಟಾನಿನ ಚದರಿಕೆ ಮತ್ತು ಎಲೆಕ್ಟ್ರಾನಿನ ಹಿನ್ನೆಗೆತ ಸಂವೇಗ ಸಂರಕ್ಷಣಾ ತತ್ತ್ವಕ್ಕೆ (ಕನ್ಸರ್ವೇಶನ್ ಆಫ್ ಮೊಮೆಂಟಂ) ಅನುಗುಣವಾಗಿರುವುದರಿಂದ ಚದರಿಕೆಯ ಕೋನಕ್ಕೂ ಹಿನ್ನೆಗೆತದ ಕೋನಕ್ಕೂ ನಿರ್ದಿಷ್ಟವಾದ ಸಂಬಂಧವಿದೆ. ಫೋಟಾನು ಡಿಕ್ಕಿಹೊಡೆಯುವುದಕ್ಕೆ ಮುಂಚೆ ಎಲೆಕ್ಟ್ರಾನ್ ಚಲಿಸದೆ ಮುಕ್ತವಾಗಿತ್ತೆಂದು ಭಾವಿಸಿದರೆ ಚದರಿದ ಫೋಟಾನಿನ ಅಲೆಯುದ್ದದಲ್ಲಿ ಉಂಟಾಗುವ ಹೆಚ್ಚುವರಿ ಮತ್ತು ಎಲೆಕ್ಟ್ರಾನಿನ ಚಲನಶಕ್ತಿಗಳನ್ನು (ಕೈನೆಟಿಕ್ ಎನರ್ಜಿ) ಕಾಂಪ್ಟನ್ನನ ಸಿದ್ಧಾಂತದ ಮೇರೆಗೆ

$$\Delta\lambda = \frac{h}{mc}(1 - \cos\theta) \quad .....(1)$$

$$E_e = \frac{hc}{\lambda} \frac{2a\cos^2\phi}{(1+a)^2 - a^2\cos^2\phi} \quad ....(2)$$

ಎಂದು ತೋರಿಸಬಹುದು. ಇಲ್ಲಿ h ಪ್ಲಾಂಕ್ ಸ್ಥಿರಾಂಕ, m ಎಲೆಕ್ಟ್ರಾನಿನ ರಾಶಿ, c ನಿರ್ದ್ರವ್ಯದಲ್ಲಿ ಬೆಳಕಿನ ವೇಗ λ ಮೂಲ ಎಕ್ಸ್‌ಕಿರಣದ ಅಲೆಯುದ್ದ ಮತ್ತು $a = \frac{h}{\lambda mc}$ ಚದರಿಕೆಯ ಕೋನಕ್ಕೂ ಹಿನ್ನೆಗೆತದ ಕೋನಕ್ಕೂ ಇರುವ ಸಂಬಂಧ ಹೀಗಿರುತ್ತದೆ.

$$cot\,\phi = -(1+a)\,tan\,\frac{\theta}{2} \qquad .....3$$

ಪರಮಾಣುಗಳಲ್ಲಿ ಎಲೆಕ್ಟ್ರಾನುಗಳು ಬಂಧಿತವಾಗಿವೆ. ಅವುಗಳ ಬಂಧನಶಕ್ತಿ ಕಮ್ಮಿ ಪರಮಾಣುಸಂಖ್ಯೆಯ ಪರಮಾಣುಗಳಲ್ಲಿ ಕಮ್ಮಿಯಾಗಿರುತ್ತದೆ. ಆದ್ದರಿಂದ ಕಾಂಪ್ಟನ್ ತನ್ನ ಸಿದ್ಧಾಂತವನ್ನು ಶ್ರುತಪಡಿಸಲು ಮಾಡಿದ ಪ್ರಯೋಗಗಳಿಗೆ ಇಂಗಾಲದ ತಾಟುಗಳನ್ನು ಬಳಸಿದ. ಮೂಲ ಎಕ್ಸ್‌ಕಿರಣಗಳಿಗಾಗಿ ಮಾಲಿಬ್ಡಿನಮ್ Ka–ಕಿರಣಗಳನ್ನು ಉಪಯೋಗಿಸಿದ. ಚದರಿದ ಎಕ್ಸ್‌ಕಿರಣಗಳ ಅಲೆಯುದ್ದದಲ್ಲಿ ಉಂಟಾಗುವ ಹೆಚ್ಚುವರಿ ಮತ್ತು ಆ ಹೆಚ್ಚುವರಿಗೂ ಚದರಿಕೆಯ ಕೋನಕ್ಕೂ ಇರುವ ಸಂಬಂಧ ಸಮೀಕರಣ (1) ರಲ್ಲಿದ್ದಂತೆಯೇ ಇರುವುದನ್ನು ಆ ಪ್ರಯೋಗಗಳು ತೋರಿಸಿದುವು. ಇದಾದ ಕೆಲವು ತಿಂಗಳುಗಳಲ್ಲೇ ಬೊತೆ ಮತ್ತು ವಿಲ್ಸನ್ ಅವರು ಹಿನ್ನೆಗೆಯುವ ಎಲೆಕ್ಟ್ರಾನುಗಳನ್ನು ಮೇಘಮಂದಿರದ ಛಾಯಾಫಲಕಗಳಲ್ಲಿ ಪತ್ತೆ ಹಚ್ಚಿ ಅವುಗಳ ಚಲನಶಕ್ತಿ ಸಮೀಕರಣ (2) ನ್ನೇ ಅನುಸರಿಸಿರುವುದೆಂದು ತೋರಿಸಿದರು.

ಕಾಂಪ್ಟನ್ನನ ವಾದ ದ್ಯುತಿವಿದ್ಯುತ್ (ಫೋಟೊಎಲೆಕ್ಟ್ರಿಕ್) ಪರಿಣಾಮವನ್ನು ವಿವರಿಸಲು ಐನ್‌ಸ್ಟೈನ್ ಮಂಡಿಸಿದ್ದ ಶಕಲ (ಕ್ವಾಂಟಮ್) ಸಿದ್ಧಾಂತದ ಮುಂದುವರಿಕೆಯೇ ಆಗಿದೆ. ಐನ್‌ಸ್ಟೈನ್ ಫೋಟಾನುಗಳು ಶಕ್ತಿಯ ಪುಂಜಗಳೆಂದು ಭಾವಿಸಿ ದ್ಯುತಿವಿದ್ಯುತ್ ಪರಿಣಾಮವನ್ನು ವಿವರಿಸಿದ್ದ. ಫೋಟಾನುಗಳಿಗೆ ಇನ್ನೂ ಹೆಚ್ಚಿನ ನಿರ್ದಿಷ್ಟ ಗುಣಗಳನ್ನು ಕಾಂಪ್ಟನ್ ಆರೋಪಿಸಿದ. ಆಗಿನ ನಂಬಿಕೆಗಳಿಗೆ ಈ ವಾದ ತೀರ ದೂರವಾಗಿತ್ತು. ಆದ ಕಾರಣ ಬೋರ್, ಕ್ರೇಮರ್ ಮತ್ತು ಸ್ಲೇಟರ್ ಅವರು ಕಾಂಪ್ಟನ್ನನ ವಾದವನ್ನು ಒಪ್ಪದೆ ಎಕ್ಸ್‌ಕಿರಣಗಳು ವಿದ್ಯುತ್ಕಾಂತ ಅಲೆಗಳೆಂದು ಭಾವಿಸಿಯೇ ಕಾಂಪ್ಟನ್ ಪರಿಣಾಮದ ರೂಪರೇಖೆಯನ್ನು ತಿಳಿಯಬಹುದೆಂದು ವಾದಿಸಿದರು. ಅವರು ವಾದ ಥಾಮ್ಸನ್ನನ ವಾದವನ್ನು ಅವಲಂಬಿಸಿದೆ. ಫೋಟಾನು ಮತ್ತು ಎಲೆಕ್ಟ್ರಾನುಗಳ ಡಿಕ್ಕಿಗಳು ಸಂಖ್ಯಾಕಲನಶಾಸ್ತ್ರದ (ಸ್ಟ್ಯಾಟಿಸ್ಟಿಕ್ಸ್) ನಿಯಮಗಳಿಗೆ ಅನುಸಾರವಾಗಿವೆ. ಕಂಪಿಸುವ ಎಲೆಕ್ಟ್ರಾನುಗಳು ಒಮ್ಮೊಮ್ಮೆ ಮುಂಜಿಗಿಯಲೂಬಹುದು. ಇದು ಅವರ ತರ್ಕಸರಣಿ. ಈ ತರ್ಕಸರಣಿ ಸರಿಯಾದರೆ ಫೋಟಾನು ಚದರಿದ ತತ್‌ಕ್ಷಣದಲ್ಲಿ ಎಲೆಕ್ಟ್ರಾನ್ ಜಿಗಿಯಬೇಕೆಂದಿಲ್ಲ. ಫೋಟಾನಿನ ಚದರಿಕೆಯ ಕೋನಕ್ಕೂ ಎಲೆಕ್ಟ್ರಾನಿನ ಜಿಗಿತದ ಕೋನಕ್ಕೂ ಒಂದು ನಿರ್ದಿಷ್ಟ ಸಂಬಂಧ ಇರಬೇಕಾದುದಿಲ್ಲ. ಈ ಎರಡು ತರ್ಕ ಸರಣಿ ಇವುಗಳಲ್ಲಿ ಯಾವುದು ಸರಿ ಎಂದು ತೀರ್ಮಾನಿಸಲು ಅನೇಕ ಪ್ರಯೋಗಗಳು ನಡೆದವು. ಬೊತೆ ಮತ್ತು ಜೀಗರ್ ಅವರು ಎರಡು ಜಿ. ಎಮ್. ಗುಣಕಗಳನ್ನು (ಕೌಂಟರ್ಸ್) ಉಪಯೋಗಿಸಿ (1925) ಹೆಚ್ಚೆಂದರೆ ಫೋಟಾನು ಚದರಿದ $10^{-2}$ ಸೆಕೆಂಡಿನ ಒಳಗೆ ಎಲೆಕ್ಟ್ರಾನು ಹಿನ್ನೆಗೆಯುತ್ತದೆಂದು ಪ್ರಾಯೋಗಿಕವಾಗಿ ತೋರಿಸಿದರು. ಈ ಪ್ರಯೋಗಗಳು ದೋಷಮುಕ್ತವಾಗಿರದಿದ್ದರೂ ಬೋರ್, ಕ್ರೇಮರ್ ಮತ್ತು ಸ್ಲೇಟರ್ ಅವರ ವಾದದಲ್ಲಿ ಹುರುಳಿಲ್ಲವೆಂಬುದನ್ನು ತೋರಿಸಲು ಸಾಕಾಗಿದ್ದುವು. 1939ರಲ್ಲಿ ಶಾಂಕ್‌ಲ್ಯಾಂಡ್ ಮಾಡಿದ ಪ್ರಯೋಗಗಳು ಫೋಟಾನಿನ ಜಿಗಿತದ ಕಾಲಕ್ಕೂ ಎಲೆಕ್ಟ್ರಾನಿನ ಹಿನ್ನೆಗೆತದ ಕಾಲಕ್ಕೂ ಇರುವ ಅಂತರವನ್ನು $10^{-4}$ ಸೆಕೆಂಡಿಗೆ ಇಳಿಸಿದುವು. ಈ ಅಂತರವನ್ನು ಬೆಲ್ ಎಂಬಾತ ಮಾಡಿದ ಪ್ರಯೋಗಗಳು (1952) $10^{-10}$ ಸೆಕೆಂಡಿಗೆ ತಂದುವು. ಕಾಂಪ್ಟನ್ನನ ಸಿದ್ಧಾಂತವೇ ಫೋಟಾನಿನ ಚದರಿಕೆಯ ಕಾಲಕ್ಕೂ ಎಲೆಕ್ಟ್ರಾನಿನ ಹಿನ್ನೆಗೆತದ ಕಾಲಕ್ಕೂ ಇರುವ ಅಂತರವನ್ನು $10^{-19}$ ಸೆಕೆಂಡೆಂದು ತೋರಿಸುತ್ತದೆ. ಇಷ್ಟು ಅಲ್ಪ ಕಾಲದ ಅಂತರವನ್ನು ಅಳೆಯುವುದು ಸಾಧ್ಯವೇ ಆಗದಿರಬಹುದು.

ಕಾಂಪ್ಟನ್ನನ ಸಿದ್ಧಾಂತದ ಪರೀಕ್ಷೆ ಇನ್ನೂ ನಿಖರವಾಗಿ ನಡೆಯಬೇಕಾದರೆ ಈ ಪರಿಣಾಮವು ಚದರಿಕೆಯ ಕೋನಕ್ಕೂ ಹಿನ್ನೆಗೆತದ ಕೋನಕ್ಕೂ ಇರುವ ಸಂಬಂಧ ಸಮೀಕರಣವು (3) ನ್ನೇ ಅನುಸರಿಸುತ್ತದೆಂಬುದೂ ಸ್ಥಿರಪಡಬೇಕು. ಕಾಂಪ್ಟನ್ ಮತ್ತು ಸೈಮನ್ ಅವರೇ ಇದನ್ನು ಮೇಘಮಂದಿರದ ಛಾಯಾಫಲಕಗಳ ಸಹಾಯದಿಂದ ತೋರಿಸಿದರು. ಬಹುಸುಧಾರಿಸಿದ ಉಪಕರಣಗಳನ್ನು ಉಪಯೋಗಿಸಿ (1950) ಕ್ರಾಸ್ ಮತ್ತು ರ್‍ಯಾಮ್ಸೆ ಅವರು ಇದನ್ನು ಖಚಿತವಾಗಿ ತೋರಿಸಿದರು. 1950–52ರ ಹೊತ್ತಿಗೆ ಕಾಂಪ್ಟನ್‌ನವಾದ ಸರ್ವಮಾನ್ಯತೆ ಪಡೆಯಿತು. ಕಾಂಪ್ಟನ್ ಪರಿಣಾಮ ಫೋಟಾನುಗಳ ಗುಣಗಳನ್ನು ಬಹು ನಿರ್ದಿಷ್ಟವಾಗಿ ತೋರಿಸಿ ಶಕಲಬಲಸಿದ್ಧಾಂತದ ಒಂದು ಭದ್ರವಾದ ಅಡಿಗಲ್ಲಾಯಿತು.

ಕೀನ್ ಮತ್ತು ನಿಷಿನ ಅವರು ಕಾಂಪ್ಟನ್ ಪರಿಣಾಮದ ಆಂತರಿಕ ಸ್ವರೂಪವನ್ನು ತಿಳಿಯಲು ಡಿರ್‍ಯಾಕನ ಸಾಪೇಕ್ಷ ಶಕಲಬಲ ಸಿದ್ಧಾಂತವನ್ನು ಉಪಯೋಗಿಸಿದರು. ಡಿಕ್ಕಿಯ ಮೊದಲ ಘಟ್ಟದಲ್ಲಿ ಎಲೆಕ್ಟ್ರಾನು ಫೋಟಾನನ್ನು ನುಂಗಿಕೊಳ್ಳುತ್ತದೆ. ಮಧ್ಯಘಟ್ಟದಲ್ಲಿ ಅದು ಚದರಿದ ಫೋಟಾನನ್ನು ಹೊರದೂಡುತ್ತದೆ. ಆಗ ಮೂಲಫೋಟಾನ್ ಹೊರಗೆಡುತ್ತದೆ. ಕೊನೆಯ ಘಟ್ಟದಲ್ಲಿ ಎಲೆಕ್ಟ್ರಾನ್ ಮೂಲಫೋಟಾನನ್ನು ನುಂಗಿ ಚದರಿದ ಫೋಟಾನನ್ನು ಹೊರದೂಡುತ್ತದೆ. ಸಾಪೇಕ್ಷ ಶಕಲಬಲಸಿದ್ಧಾಂತದ ನಿಯಮಗಳ ಪ್ರಕಾರ ಶಕ್ತಿಸಂರಕ್ಷಣಾ ನಿಯಮ ಮಧ್ಯಘಟ್ಟದಲ್ಲಿ ಪಾಲಿತವಾಗಬೇಕಾಗಿಲ್ಲ. ಈ ಘಟ್ಟದಲ್ಲಿ ಋಣಶಕ್ತಿಸ್ಥಿತಿಯು ಮಾತ್ರ ವ್ಯಕ್ತವಾಗುವುದು. ಕ್ಲೀನ್ ಮತ್ತು ನಿಷಿನ ಅವರು ಋಣಶಕ್ತಿಸ್ಥಿತಿಯನ್ನು ತಮ್ಮ ಲೆಕ್ಕಾಚಾರದಲ್ಲಿ ಅಳವಡಿಸಿಕೊಂಡು ಕಾಂಪ್ಟನ್ ಡಿಕ್ಕಿಯಲ್ಲಿ ಚದರಿದ ಫೋಟಾನುಗಳ ತೀವ್ರತೆಗೆ (ಇನ್‌ಟೆನ್ಸಿಟಿ) ಒಂದು ಸೂತ್ರವನ್ನು ಪಡೆದರು. ಈ ಸೂತ್ರ ಅನೇಕ ಪ್ರಯೋಗಗಳಿಂದ ಶ್ರುತಪಟ್ಟಿದೆ.

ಕಾಂಪ್ಟನ್ ಪರಿಣಾಮ ಶಕಲಬಲಸಿದ್ಧಾಂತ ಮತ್ತು ಸಾಪೇಕ್ಷ ಶಕಲಬಲ ಸಿದ್ಧಾಂತಗಳ ಬೆಳವಣಿಗೆಗೆ ಸಹಾಯಕವಾದಂತೆ ಶಕಲ ವಿದ್ಯುತ್ ಬಲ ಸಿದ್ಧಾಂತದ ಬೆಳವಣಿಗೆಗೂ ಸಹಕಾರಿಯಾಗಬಹುದೆಂದು ನಂಬಲಾಗಿದೆ. ಮೂಲಭೂತ ಕಣಗಳ ಅತಿಶಕ್ತಿಯ ಪ್ರಕ್ರಿಯೆಗಳನ್ನು ವಿವರಿಸಬೇಕಾದರೆ ಈ ಸಿದ್ಧಾಂತದಲ್ಲಿ ಮಾರ್ಪಾಡಾಗಬೇಕಾದುದು ಅಗತ್ಯವೆಂದು ಶಂಕಿಸಲಾಗಿದೆ. ಇದು ಮೂಲಕಣಗಳ ಪ್ರಕ್ರಿಯೆಯಲ್ಲಿ ಸೇರಿರುವ ಒಂದು ಮೂಲಭೂತವಾದ ಉದ್ದವನ್ನೇ ಬಳಸಿಕೊಂಡಿದೆ. ಇದು ಅಳೆಯಬಹುದಾದ ಕನಿಷ್ಠ ಉದ್ದ ಎಂದು ಊಹಿಸಲಾಗಿದೆ. ಈ ಉದ್ದ ಪ್ರಕೃತಿಯಲ್ಲಿ ಒಂದು ಮೂಲಭೂತವಾದ ಗುಣವೇ ಆಗಿದ್ದರೆ ಅದರ ಬಗ್ಗೆ ಮಾಹಿತಿ ಅತಿಶಕ್ತಿಯ ಫೋಟಾನುಗಳ ಕಾಂಪ್ಟನ್ ಡಿಕ್ಕಿಯನ್ನು ಅವಲೋಕಿಸುವಾಗ ದೊರೆಯಬಹುದು. ಆಗ ಕಾಂಪ್ಟನ್ ಪರಿಣಾಮ ವಿದ್ಯುತ್ ಶಕಲಬಲ ವಿಜ್ಞಾನಕ್ಕೂ ಅಡಿಗಲ್ಲಾಗುತ್ತದೆ.

ಎಲೆಕ್ಟ್ರಾನ್‌ಗಳಿಂದ ಫೋಟಾನ್‌ಗಳ ಪುಟಿತ ಚದರಿಕೆ, ಅಂದರೆ ಸಂವೇಗ ಮತ್ತು ಶಕ್ತಿ ಸಂರಕ್ಷಣವಿರುವ ವಿಶೇಷ ಚದರಿಕೆಯೇ ಕಾಂಪ್ಟನ್ ಪರಿಣಾಮ. ಎಲೆಕ್ಟ್ರಾನ್‌ಗಳ ಜೊತೆ ಎಕ್ಸ್ ಅಥವಾ ಗ್ಯಾಮ–ಕಿರಣಗಳು ಸಂಘಟ್ಟಿಸಿದಾಗ ಇವುಗಳ ಅಲೆಯುದ್ದಗಳು ಹಿಗ್ಗುತ್ತವೆ.

ಕಾಂಪ್ಟನ್ ಪರಿಣಾಮ ಪ್ರಕಟಗೊಂಡ ಅನಂತರದ ಐದೇಐದು ವರ್ಷಗಳಲ್ಲಿ, ಇಂತಹದೇ ಪರಿಣಾಮವನ್ನು ದ್ಯುತಿವಿದ್ಯುತ್ ಕಾಂತ ಬೆಳಕನ್ನು ಬಳಸಿ, ಸಿ.ವಿ.ರಾಮನ್ ಕಂಡುಹಿಡಿದರು. ಇದು ರಾಮನ್ ಪರಿಣಾಮವೆಂದು ವಿಶ್ವವಿಖ್ಯಾತವಾಗಿದೆ. (ಎಸ್.ಎ.ಎಚ್.)

**ಕಾಂಪ್ಟನ್ ಬರ್ನೆಟ್, ಐ.ವಿ. :** 1892–, ಇಂಗ್ಲಿಷ್ ಕಾದಂಬರಿಕಾರ್ತಿ. ಸ್ವಂತವಾಗೂ ಲಂಡನ್ ವಿಶ್ವವಿದ್ಯಾಲಯದಲ್ಲೂ ವಿದ್ಯಾಭ್ಯಾಸ ಮಾಡಿ ಸಾಹಿತ್ಯದಲ್ಲಿ ಪದವಿ ಗಳಿಸಿದಳು. 20ನೆಯ ಶತಮಾನದ ಆರಂಭ ವರ್ಷಗಳಲ್ಲಿನ ಶ್ರೀಮಂತ ಮತ್ತು ಮಧ್ಯಮ ವರ್ಗದ ಪಾತ್ರಗಳ ರಮ್ಯ ಪರಿಚಯವನ್ನು ತನ್ನ ಕಾದಂಬರಿಗಳಲ್ಲೀಕೆ ಸಂಭಾಷಣೆಯ ಮಾಧ್ಯಮದಲ್ಲಿ ವ್ಯಕ್ತಗೊಳಿಸಿದ್ದಾಳೆ. ಸಜ್ಜನಿಕೆಯ ಮುಸುಕಿನಲ್ಲಿರುವ ಮಾನವನ ಕ್ರೌರ್ಯ, ಸ್ವಾರ್ಥ ಮುಂತಾದ ದೌರ್ಬಲ್ಯಗಳ ಸ್ಪಷ್ಟ ಚಿತ್ರೀಕರಣವನ್ನು ಈಕೆಯ ಬರೆಹದಲ್ಲಿ ಕಾಣಬಹುದು.

ಪಾಸ್ಟರ್ಸ್ ಅಂಡ್ ಮಾಸ್ಟರ್ಸ್ (1925), ಬ್ರದರ್ಸ್ ಅಂಡ್ ಸಿಸ್ಟರ್ಸ್ (1929), ಮ್ಯಾನ್ ಅಂಡ್ ವೈವ್ಸ್ (1931), ಡಾಟರ್ಸ್ ಅಂಡ್ ಸನ್ಸ್ (1937) ಡಾರ್ಕನೆಸ್ ಅಂಡ್ ಡೇ (1951), ಮದರ್ ಅಂಡ್ ಸನ್ (1955, ಇದಕ್ಕೆ ಟೇಟ್ ಬ್ಲ್ಯಾಕ್ ಮೆಮೋರಿಯಲ್ ಬಹುಮಾನ ದೊರೆಕಿತು)–ಇವೇ ಮೊದಲಾದವು ಇವಳ ಕಾದಂಬರಿಗಳಲ್ಲಿ ಕೆಲವು. 1951ರಲ್ಲಿ ಈಕೆ ಸಿ.ಬಿ.ಇ. (ಕಂಪ್ಯಾನಿಯನ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್) ಆಗಿ ಗೌರವಾನ್ವಿತಳಾದಳು. (ಎಚ್.ವಿ.ಎಸ್.)

**ಕಾಂಬೋಡಿಯ :** ಆಗ್ನೇಯ ಏಷ್ಯದಲ್ಲಿರುವ ಒಂದು ರಾಷ್ಟ್ರ. ಉತ್ತರದಲ್ಲಿ ಲಾವೋಸ್, ಪೂರ್ವ ಆಗ್ನೇಯಗಳಲ್ಲಿ ದಕ್ಷಿಣ ವಿಯೆಟ್ನಾಮ್, ಆಗ್ನೇಯದಲ್ಲಿ ಸೈಯಾಂ ಖಾರಿ ಮತ್ತು ಪಶ್ಚಿಮೋತ್ತರಗಳಲ್ಲಿ ಥೈಲೆಂಡ್ ಇವೆ. ವಿಸ್ತೀರ್ಣ 181,035 ಚ.ಕಿಮೀ ರಾಜಧಾನಿ ಪನಾಂ–ಪೆನ್. ಜನಸಂಖ್ಯೆ 14241640 (2009).

**ಮೇಲ್ಮೈ ಲಕ್ಷಣ, ವಾಯುಗುಣ:** ಕಾಂಬೋಡಿಯ ಮುಖ್ಯವಾಗಿ ಮೈದಾನ. ಒಮ್ಮೆ ಸಮುದ್ರದ ಖಾರಿಯಾಗಿದ್ದ ಈ ದೇಶದ ಬಹುಭಾಗ ಅವನತ ಪ್ರದೇಶ. ಮೇಕಾಂಗ್ ನದಿ ತಂದು ಹಾಕಿದ ಮಣ್ಣಿನಿಂದಾಗಿ ಇದು ಸಮುದ್ರದಿಂದ ಪ್ರತ್ಯೇಕಗೊಂಡು ಭೂಪ್ರದೇಶವಾಗಿ ಮಾರ್ಪಟ್ಟಿದೆ. ಉತ್ತರದಲ್ಲಿ ಥೈಲೆಂಡ್ ಗಡಿಯ ಅಂಚಿನಲ್ಲಿರುವ ಮರಳುಗಲ್ಲಿನ ಡಾಂಗ್ರೆಕ್ ಪರ್ವತಗಳು ಮಧ್ಯಕಾಂಬೋಡಿಯದ ತಗ್ಗು ಪ್ರದೇಶಗಳಲ್ಲಿ ತೊಡಗುತ್ತವೆ. ಈ ಪ್ರದೇಶಗಳ ವಾಯವ್ಯ ಭಾಗದಲ್ಲಿ ಕಟ್ಟಡಗಲ್ಲಿನ ಕಾರ್ಡಮಂ ಪರ್ವತಗಳು 1485 ಮೀ. ಎತ್ತರಕ್ಕೆ ಹೋಗಿವೆ. ಸುಣ್ಣಕಲ್ಲಿನ ಎಲಿಫೆಂಟ ಶ್ರೇಣಿ ಕಾರ್ಡಮಂ ಪರ್ವತದಿಂದ ದಕ್ಷಿಣ ಹಾಗೂ ಆಗ್ನೇಯಕ್ಕೆ ಸಾಗಿ ತಗ್ಗುಪ್ರದೇಶದ ಬಹುಭಾಗವನ್ನು ತೀರದಿಂದ ಪ್ರತ್ಯೇಕಿಸುತ್ತದೆ. ಕಡಲ ತೀರದಲ್ಲಿ ಅನೇಕ ಕಿರುದ್ವೀಪಗಳು ಅಂಚುಗಟ್ಟಿ ನಿಂತಿವೆ. ಟಾನ್‌ಲೇಸ್ಯಾಪ್ ಅಥವಾ ಮಹಾಸರೋವರದ ಸುತ್ತಣ ಇಳುಕಲು ನಾಡಿನ ಎರಡು ಪಾರ್ಶ್ವಗಳಲ್ಲು ಪರ್ವತಗಳಿವೆ. ಮೇಕಾಂಗ್ ನದಿಯಾಚೆ, ದಕ್ಷಿಣ ವಿಯೆಟ್‌ನಾಂ ಕಡೆ ಎತ್ತರವಾದ ಭೂಪ್ರದೇಶಗಳುಂಟು.

ಈಶಾನ್ಯದ ಕಟ್ಟಕಡೆಯಲ್ಲಿ, ಸ್ವಂಗ್–ಟ್ರೆಂಗ್ ಬಳಿ, ಸೆ ಕಾಂಗ್ ಮತ್ತು ಸ್ರೆಪೊಕ್ ನದಿಗಳ ಜಲನಯನ ಭೂಮಿಗಳೂ ಮೇಕಾಂಗ್ ಜಲಾನಯನ ಭೂಮಿಯೂ ಒಮ್ಮುಖವಾಗುತ್ತವೆ.




ಟಾನ್‌ಲೇ ಸ್ಯಾಪ್ ಪ್ರಾಚೀನ ಖಾರಿಯ ಅವಶೇಷ. ಸುತ್ತಣ ಮೇಲ್ನಾಡುಗಳಲ್ಲಿ ಹರಿಯುವ ನದಿಗಳು ಈ ಸರೋವರಕ್ಕೆ ಬಂದು ಬೀಳುತ್ತವೆ. ಒಣ ಋತುವಿನಲ್ಲಿ ಇದರ ಆಳ ಎಲ್ಲೂ 2 ಮೀ.ಗಿಂತ ಹೆಚ್ಚಾಗಿರುವುದಿಲ್ಲ. ಆಗ ಮಹಾನಾಲೆಯ ಮೂಲಕ ಅದರ ನೀರು ಮೇಕಾಂಗ್ ನದಿಗೆ ಹರಿಯುತ್ತದೆ; ಆದರೆ ಜೂನ್ ತಿಂಗಳಲ್ಲಿ ಮೇಕಾಂಗ್ ನದಿಯ ನೀರು 12–14 ಮೀ ಗಳಿಗೆ ಏರಿ ಅದೇ ನಾಲೆಯ ಮೂಲಕ ತನ್ನ ಪ್ರವಾಹವನ್ನು ಸರೋವರಕ್ಕೆ ಹರಿಸುತ್ತದೆ. ಆಗ ಟಾನ್‌ಲೇ ಸ್ಯಾಪಿನ ನೀರಿನ ಮಟ್ಟ 14–15 ಮೀ ಗಳಿಗೆ




ಏರಿ ಅದು ಸುತ್ತಮುತ್ತಣ ಜೌಗು ಪ್ರದೇಶಗಳು, ಅರಣ್ಯಗಳು ಹಾಗೂ ವ್ಯವಸಾಯದ ಭೂಮಿಗಳನ್ನೆಲ್ಲ ಆವರಿಸುತ್ತದೆ. ಕಾಂಬೋಡಿಯದ್ದು ಉಷ್ಣವಲಯದ ವಾಯುಗುಣ, ಮಾನ್ಸೂನ್ ಪ್ರಭಾವದಿಂದ ಮಳೆಯಾಗುತ್ತದೆ (ಸರಾಸರಿ 105 ಸೆಂಮೀ). ಪರಮಾವಧಿ ಮಳೆ ಸೆಪ್ಟೆಂಬರಿನಲ್ಲಿ. ಉಷ್ಣತೆಯ ಅಂತರ 20° ಸೆ – 36.1° ಸೆ. ಪನಾಂ–ಪೆನ್‌ನಲ್ಲಿ ಸರಾಸರಿ ಉಷ್ಣತೆ 27° ಸೆಂ.

**ಜನಜೀವನ:** ಕಾಂಬೋಡಿಯದ ಜನಸಂಖ್ಯೆಯಲ್ಲಿ ಶೇ. 87 ಮಂದಿ ಖ್ಮರ್ ಅಥವಾ ಕಾಂಬೋಡಿಯನರು. ಉಳಿದವರು ವಿಯಟ್ನಾಂ, ಥೈ ಮತ್ತು ಲಾವೋಸ್ ಜನ.

ಕಾಂಬೋಡಿಯದ ರಬ್ಬರ್ ತೋಟ

ಈ ರಾಜ್ಯದಲ್ಲಿ ಚೀನಿಯರು ಅಲ್ಪಸಂಖ್ಯಾತರಾಗಿದ್ದಾರೆ. ಕಾಂಬೋಡಿಯನರು ಕಂದು ಬಣ್ಣದ ಜನ. ಅವರ ಭಾಷೆ ದಕ್ಷಿಣ ಮಯನ್ಮಾರ್‌ನ ಮಾನ್ ಭಾಷೆಗೆ ಸಂಬಂಧಪಟ್ಟದ್ದಾಗಿದೆ. ಜನರಲ್ಲಿ ಶೇಕಡ 33ರಷ್ಟು ಮಂದಿ ಅಕ್ಷರಸ್ಥರು. ಕಾಂಬೋಡಿಯದ ವೃತ್ತಪತ್ರಿಕೆಗಳು ಚೀನೀ, ಖ್ಮರ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಹೊರಡುತ್ತವೆ. ಪ್ರಾರಂಭದಲ್ಲಿ ಅಲ್ಲಿ ಹಿಂದೂಧರ್ಮದ ಪ್ರಭಾವವಿದ್ದರೂ ಈಗ ಬೌದ್ಧಧರ್ಮ ಪ್ರಚಾರದಲ್ಲಿದೆ. ಜನ ಹೆಚ್ಚಾಗಿ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಬತ್ತ, ಮುಸುಕಿನ ಜೋಳ, ನೆಲಗಡಲೆ, ರಬ್ಬರ್ ಇವು ಮುಖ್ಯ ಬೆಳೆಗಳು. ಮೀನುಗಾರಿಕೆ ಒಂದು ಮುಖ್ಯ ಕಸಬು. ಕಾಂಬೋಡಿಯದಿಂದ ರಫ್ತಾಗುವ ಸರಕುಗಳು ರಬ್ಬರ್, ಅಕ್ಕಿ, ಮೆಕ್ಕೆಜೋಳ, ಅರಣ್ಯ ಮೃಗಗಳು, ಮೆಣಸು, ಚೌಬೀನೆ ಮತ್ತು ಮೀನು. ಇವು ಮುಖ್ಯವಾಗಿ ಫ್ರಾನ್ಸ್, ಅಮೆರಿಕ, ಹಾಂಕಾಂಗ್, ಮಲಯ, ಜಪಾನ್, ಚೀನ ಮತ್ತು ಜರ್ಮನಿಗಳಿಗೆ ರಫ್ತಾಗುತ್ತವೆ. ಹತ್ತಿಬಟ್ಟೆ, ಕಬ್ಬಿಣ–ಉಕ್ಕು ಯಂತ್ರೋಪಕರಣ, ವಿದ್ಯುತ್ಯಂತ್ರಗಳು ಹಾಗೂ ಸಲಕರಣೆಗಳು, ಔಷಧ, ರಾಸಾಯನಿಕ, ಕಾಗದ, ಪೆಟ್ರೋಲಿಯಂ, ಸಿಮೆಂಟ್ ಹಾಗೂ ಹೈನ ಉತ್ಪಾದನೆಗಳು—ಇವು ಆಮದುಗಳು. ಇಲ್ಲಿಯ ಅರಣ್ಯಗಳಲ್ಲಿ ಸಾಮಾನ್ಯವಾಗಿ ದಕ್ಷಿಣ ಏಷ್ಯದ ಮೃಗಗಳೇ ಇವೆ. ಆನೆಗಳು ಹಿಂಡು ಹಿಂಡಾಗಿವೆ.

ಪ್ರವಾಹ ಬಂದಾಗ ಕಾಂಬೋಡಿಯನರಿಗೆ ದೊಡ್ಡ ಹಬ್ಬ

ರಾಜಧಾನಿ ಪನಾಂ–ಪೆನ್. ಜನಸಂಖ್ಯೆ 2,009,264 (2006). ಅಲ್ಲಿಂದ ಸೈಗಾನಿಗೂ ಬಾಟ್ಟಂಬಾಂಗ್ ಮತ್ತು ಸಿಸೊಫಾನ್ ಮೂಲಕ ಬಾಂಕಾಕಿಗೂ ರೈಲು ಮಾರ್ಗಗಳುಂಟು. ಮುಖ್ಯವಾದ ಹೆದ್ದಾರಿಗಳಲ್ಲಿ ಮೂರು ಸೈಗಾನಿನಿಂದ ಕಾಂಬೋಡಿಯದ ಮೂಲಕ

ಹಾದುಹೋಗುತ್ತವೆ. ಕಾಂಬೋಡಿಯಕ್ಕೆ ಬ್ಯಾಂಕಾಕ್, ಸೈಗಾನ್ ಮತ್ತು ಹಾಂಕಾಂಗ್‌ಗಳಿಂದ ವಿಮಾನ ಸಂಪರ್ಕವುಂಟು.

ಪ್ರಾಚೀನ ಖ್ಮೆರ್ ಚಕ್ರಾಧಿಪತ್ಯದ ಸ್ಮಾರಕಗಳು ಕಾಂಬೋಡಿಯಕ್ಕೆ ಪ್ರವಾಸಿಗಳನ್ನು ಅಧಿಕ ಸಂಖ್ಯೆಯಲ್ಲಿ ಆಕರ್ಷಿಸುತ್ತವೆ. ಹಿಂದೂ ಪುರಾಣಗಳ ಮತ್ತು ರಾಜಾಸ್ಥಾನಗಳ ಚಿತ್ರಗಳನ್ನೊಳಗೊಂಡ ಭವ್ಯ ಆಂಕೋರ್‌ವಾಟ್ ದೇವಾಲಯವ್ಯೂಹ ವಿಶ್ವದ ಶಿಲ್ಪಕೌತುಕಗಳಲ್ಲೊಂದು. (ನೋಡಿ- ಆಂಕೋರ್‌ವಾಟ್). ಕಾಂಬೋಡಿಯದ ಆದ್ಯಂತ ಹಳ್ಳಿಗಳಲ್ಲಿ ಸಂಗೀತ ನೃತ್ಯಗಳನ್ನೊಳಗೊಂಡ ಹಲವಾರು ಹಬ್ಬಗಳು ಆಚರಣೆಯಲ್ಲಿವೆ. ಪ್ರಾಚೀನ ಪುರಾಣಗಳ ಸನ್ನಿವೇಶಗಳನ್ನು ಚಿತ್ರಿಸುವ ಸಂಗೀತ ನೃತ್ಯನಾಟಕಗಳನ್ನು ಪಟ್ಟಣಗಳಲ್ಲಿ ಅಭಿನಯಿಸುತ್ತಾರೆ.

ಕಾಂಬೋಡಿಯದ ನಾಣ್ಯ ರಿಯೆಲ್. 100ಸೆನ್=1 ರಿಯೆಲ್. (ವಿ.ಜಿ.ಕೆ.ಎಸ್.ಎ.)

**ಇತಿಹಾಸ :** ಕಾಂಬೋಡಿಯದ ಪ್ರಾಚೀನ ಇತಿಹಾಸ ಭವ್ಯವಾದದ್ದು. ಖ್ಮೆರ್ ಸಾಮ್ರಾಜ್ಯದ ವೈಭವದ ಕಾಲದಲ್ಲಿಯಂತೂ (9ನೆಯ ಶತಮಾನದಿಂದ 15ನೆಯ ಶತಮಾನದ ವರೆಗೆ) ಇದು ಕಲೆ ಸಂಸ್ಕೃತಿಗಳಿಗೆ ಸಲ್ಲಿಸಿದ ಕಾಣಿಕೆ ಹಿರಿದು.

1340ರ ವರೆಗೆ ಖ್ಮೆರ್ ದೊರೆಗಳ ಹೆಸರುಗಳು ವರ್ಮ ಎಂದು ಕೊನೆಗೊಳ್ಳುತ್ತಿದ್ದುವು. ಅಲ್ಲಿಂದೀಚೆಗೆ ಬದಲಾವಣೆ ಕಂಡುಬರುತ್ತದೆ. 8ನೆಯ ಜಯವರ್ಮನ ಕಾಲದ (1243–

ಆಂಗ್ಕೊರ್ ಥೊಂನ ಉತ್ತರ ಪ್ರವೇಶದ್ವಾರದ ಬಳಿ ದೇವತೆಗಳ ಸಾಲುಗಟ್ಟೆ

95) ವೇಳೆಗಾಗಲೇ ಖ್ಮೆರ್ ಸಾಮ್ರಾಜ್ಯದ ಅವನತಿಯ ಲಕ್ಷಣಗಳು ಕಂಡುಬಂದಿದ್ದುವು. ಥೈಲೆಂಡಿನ ಸುಖೋಥಾಯ್‌ನ ರಾಜ ರಾಮಾಕಂಹೇಂಗ ಕಾಂಬೋಡಿಯದ ಅನೇಕ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದ. ರಾಜ್ಯದಲ್ಲಿ ಒಗ್ಗಟ್ಟೂ ಇರಲಿಲ್ಲ. ಥೈ ಜನರ ಆಕ್ರಮಣವನ್ನು ತಡೆಗಟ್ಟುವುದು ಅಸಾಧ್ಯವಾಗಿತ್ತು. 8ನೆಯ ಜಯವರ್ಮ ಶೈವಮತವನ್ನು ಪುನರುಜ್ಜೀವನಗೊಳಿಸಲು ಮಾಡಿದ ಪ್ರಯತ್ನದಿಂದಾಗಿ ಬೌದ್ಧರು ದಂಗೆ ಎದ್ದರು. ರಾಜ ಬಂಧಿಯಾದ. ಅವನ ಅಳಿಯ 1293ರಲ್ಲಿ ಅವನನ್ನು ಕೊಲೆ ಮಾಡಿದ. ಬೌದ್ಧ ಮತ ಕ್ರಮೇಣ ಪ್ರಬಲವಾಯಿತು. 1350ರ ಅನಂತರ ಖ್ಮೆರ್ ಸಾಮ್ರಾಜ್ಯ, ಥೈಲೆಂಡಿನ ಅಯುತ್ತಿಯ ರಾಜ್ಯದ ಪೂರ್ವದಲ್ಲಿ ತಲೆಯೆತ್ತುತ್ತಿದ್ದ ವಿಯಟ್ನಾಮೀಯರ ಆಕ್ರಮಣವನ್ನು ಎದುರಿಸಬೇಕಾಯಿತು. 1431ರಲ್ಲಿ ಥೈಲೆಂಡಿನ ದಾಳಿಯನ್ನು ಎದುರಿಸಲಾರದೆ ರಾಜಧಾನಿಯನ್ನು ಆಂಕೋರ್ ನಿಂದ ಈಗಿನ ಪನಾಂ–ಪೆನ್ ಪ್ರದೇಶಕ್ಕೆ ಬದಲಾಯಿಸಲಾಯಿತು. ಇದರೊಂದಿಗೆ ಖ್ಮೆರ್ ಚಕ್ರಾಧಿಪತ್ಯದ ವೈಭವವೂ ಅದರ ಶಿಲ್ಪಕಲಾ ಸಿದ್ಧಿಯೂ ಕೊನೆಗೊಂಡುವೆನ್ನಬಹುದು. ವ್ಯವಸಾಯದಿಂದ ಸಮೃದ್ಧಿಯಾಗಿದ್ದ ಉತ್ತರದ ಪ್ರದೇಶಗಳು ಹಾಳುಬಿದ್ದುವು. 1473 ರಲ್ಲಿ ಥೈಲೆಂಡಿನವರು ಕೋರಟ್ ಮತ್ತು ಆಂಕೋರ್‌ಗಳ ಮೇಲೆ ಆಕ್ರಮಣ ನಡೆಸಿದರು. ದೊರೆ ಬಂಧಿಯಾದ. ಅವನನ್ನು ಅವನ ಸಂಸಾರದೊಂದಿಗೆ ಬ್ಯಾಂಕಾಕಿಗೆ ರವಾನಿಸಲಾಯಿತು. ಅಲ್ಲಿ ಅವನಿಗೆ ಹುಟ್ಟಿದ ಮಗನನ್ನು ಥೈಲೆಂಡಿನವರು ಅನಂತರ ಪಣವಾಗಿಟ್ಟುಕೊಂಡು ಕಾಂಬೋಡಿಯದ ಆಕ್ರಮಣ ಕಾರ್ಯವನ್ನು ಬಲಗೊಳಿಸಿಕೊಂಡರು. ಕಾಂಬೋಡಿಯನರಿಗೂ ಸೈಯಾಮಿಗಳಿಗೂ ಪದೇ ಪದೇ ಯುದ್ಧಸಂಭವಿಸುತ್ತಿತ್ತು. 16ನೆಯ ಶತಮಾನದಲ್ಲಿ ಮಯನ್ಮಾರ್‌ನವರು ಥೈಲೆಂಡನ್ನು ಮುತ್ತಿದ್ದರಿಂದ ಕಾಂಬೋಡಿಯ 1560ರಿಂದ 1590ರ ವರೆಗೆ ಸ್ವಲ್ಪ ಚೇತರಿಸಿಕೊಂಡಿತು. ಆ ಶತಮಾನದ ನಡುಗಾಲದಲ್ಲಿ ದೊರೆ ಅಂಗ್–ಚಾನ್ ಥೈಲೆಂಡನ್ನು ಸೋಲಿಸಿದ. ಶಾಂತಿ ನೆಲೆಗೊಂಡಿತು. ಆದರೆ ಇದು ಬಹುಕಾಲ ಉಳಿಯಲಿಲ್ಲ. ಥೈಲೆಂಡಿನ ಕಿರುಕುಳ ಮುಂದುವರಿಯಿತು. 1593ರಲ್ಲಿ ಅದು ಗಳಿಸಿದ ಜಯದಿಂದ ಕಾಂಬೋಡಿಯದ ಬೆನ್ನು ಮೂಳೆಯೇ ಮುರಿದು ಬಿದ್ದಂತಾಯಿತು. ಅನಂತರದ ಕಾಲ ಆಂತರಿಕ ಕ್ಷೋಭೆ, ಪಿತೂರಿ ಕೊಲೆಗಳಿಂದ ಕೂಡಿದ್ದು. ಇತ್ತ ಥೈಲೆಂಡೂ ಅತ್ತ ವಿಯಟ್ನಾಮೂ ಕಾಂಬೋಡಿಯವನ್ನು ಕಾಡಿಸುತ್ತಿದ್ದುವು. ಕ್ರಮಕ್ರಮವಾಗಿ ಕಾಂಬೋಡಿಯದ ಸ್ವಾತಂತ್ರ್ಯ ನಶಿಸಿಹೋಯಿತು. 19ನೆಯ ಶತಮಾನದಲ್ಲಿ ಫ್ರೆಂಚರು ಕಾಂಬೋಡಿಯವನ್ನು ವಶಪಡಿಸಿಕೊಳ್ಳುವವರೆಗೆ ಖ್ಮೆರ್ ಸಾಮ್ರಾಜ್ಯ ದಿನೇ ದಿನೇ ಕ್ಷೀಣವಾಗುತ್ತ ಸಾಗಿತು. ಕಾಂಬೋಡಿಯನರು ಪೂರ್ವದಲ್ಲಿದ್ದ ವಿಯಟ್ನಾಮೀಯರ ಅಥವಾ ಪಶ್ಚಿಮದಲ್ಲಿದ್ದ ಥೈ ಜನಾಂಗದವರ ಅಥವಾ ಅವರಿಬ್ಬರ ಅಧೀನದಲ್ಲಿ ಬಾಳ ಬೇಕಾಯಿತು. ಪರಾಧೀನವಾದ ಕಾಂಬೋಡಿಯ ಮತ್ತೆ ಗತಕಾಲದ ವೈಭವವನ್ನು ಕಾಣಲಿಲ್ಲ. 18ನೆಯ ಶತಮಾನದಲ್ಲಿ ಥೈಲೆಂಡ್ ಕಾಂಬೋಡಿಯದ ಮೂರು ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡಿತು. ವಿಯಟ್ನಾಮೀಯರು ಕೊಚಿನ್–ಚೀನ ಪ್ರದೇಶವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು.

19ನೆಯ ಶತಮಾನದಲ್ಲಿ ಫ್ರೆಂಚರು ಇಂಡೋಚೀನ ಪ್ರದೇಶದಲ್ಲಿ ತಮ್ಮ ಸಾಮ್ರಾಜ್ಯಶಾಹಿ ನೀತಿಯಿಂದ ಒಂದು ಪ್ರಬಲವಾದ ವಸಾಹತನ್ನು ಸ್ಥಾಪಿಸಿದರು. ಥೈಲೆಂಡ್ ಮತ್ತು ವಿಯಟ್ನಾಮೀಯರ ದಾಳಿಯನ್ನು ಸಹಿಸಲಾರದೆ ಕಾಂಬೋಡಿಯ ಫ್ರೆಂಚರ ಸಹಾಯವನ್ನು ಬೇಡಿತು. ಫ್ರೆಂಚರು ಆ ಅವಕಾಶವನ್ನು ಉಪಯೋಗಿಸಿಕೊಂಡು ಕಾಂಬೋಡಿಯದ ರಾಜನಿಗೆ ಸಹಾಯ ಮಾಡಿ 1863ರಲ್ಲಿ ಆ ದೇಶವನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡರು. ಅನಂತರ ಈ ದೇಶ ಫ್ರೆಂಚ್ ಇಂಡೋಚೀನದ ಒಂದು ಭಾಗವಾಯಿತು. 1907ರಲ್ಲಿ ಸೈಯಾಂ (ಥೈಲೆಂಡಿನ ಆಗಿನ ಹೆಸರು) ಕಾಂಬೋಡಿಯದ ಪ್ರದೇಶಗಳನ್ನು ಹಿಂದಿರುಗಿಸಿತು.

1930ರ ದಶಕದಲ್ಲಿ ಫ್ರೆಂಚರ ವಿರುದ್ಧ ದೇಶೀಯ ಚಳವಳಿಗಳು ನಡೆದುವು. ಆ ಕಾಲದಲ್ಲೇ ರಾಷ್ಟ್ರೀಯತೆಯ ಭಾವನೆ ಬೆಳೆಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಫ್ರೆಂಚ್ ಸರ್ಕಾರ ಜಪಾನಿನ ಬೇಡಿಕೆಗಳಿಗೆ ಒಪ್ಪಿಗೆ ನೀಡಿ ಕಾಂಬೋಡಿಯದಲ್ಲಿ ಮಿಲಿಟರಿ ನೆಲೆಗಳನ್ನು ಸ್ಥಾಪಿಸಲು ಅನುಮತಿ ಕೊಟ್ಟಿತ್ತು. ಸ್ವಲ್ಪಕಾಲ ಜಪಾನರ ಪಕ್ಷ ಸೇರಿದ ಥೈಲೆಂಡ್ ಕಾಂಬೋಡಿಯದ ಪ್ರದೇಶಗಳನ್ನು ಆಕ್ರಮಿಸಿಕೊಂಡಿತು. ಈ ಘಟನೆಗಳಿಂದಾಗಿ ದೇಶದಲ್ಲಿ ಫ್ರೆಂಚರ ವಿರುದ್ಧ ಭಾವನೆಗಳು ತಲೆ ಎತ್ತಿದ್ದುವು. 1941ರಲ್ಲಿ ಜಪಾನ್ ಕಾಂಬೋಡಿಯದಲ್ಲಿದ್ದ ಫ್ರೆಂಚರ ಆಡಳಿತವನ್ನು ಕೊನೆಗೊಳಿಸಿತು. ತನ್ನ 18ನೆಯ ವರ್ಷದಲ್ಲಿ, ಪಟ್ಟಕ್ಕೆ ಬಂದಿದ್ದ ದೊರೆ ನರೋದಮ್ ಸಿಹಾನೌಕ್ ಫ್ರಾನ್ಸಿನೊಡನೆ ಇದ್ದ ಎಲ್ಲ ಒಪ್ಪಂದಗಳನ್ನೂ ಕೊನೆಗೊಳಿಸಿದ.

ಎರಡನೆಯ ಮಹಾಯುದ್ಧದಲ್ಲಿ ಜಪಾನ್ ಸೋತ ಮೇಲೆ, ಫ್ರೆಂಚರು ಪುನಃ ತಮ್ಮ ಅಧಿಕಾರವನ್ನು ಕಾಂಬೋಡಿಯದ ಮೇಲೆ ಸ್ಥಾಪಿಸಿದರು. ಆದರೆ ಕಾಂಬೋಡಿಯ ಒಳಾಡಳಿತದಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆಯಿತು. 1947ರಲ್ಲಿ ಅದು ಸಂವಿಧಾನಬದ್ಧ ರಾಜ್ಯವೆಂದು ಘೋಷಿತವಾಯಿತು. 1949ರಲ್ಲಿ ಕಾಂಬೋಡಿಯಾ ಫ್ರೆಂಚ್ ಒಕ್ಕೂಟದ ಒಂದು ಅಂಗವಾಯಿತು. 1953ರಲ್ಲಿ ಫ್ರೆಂಚ್ ಇಂಡೋಚೀನದ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಸಿಹಾನೌಕ್ ಸಂಪೂರ್ಣ ಮಿಲಿಟರಿ ಅಧಿಕಾರ ಪಡೆದ. 1950ರಲ್ಲಿ ಉತ್ತರ ವಿಯಟ್ನಾಂ ಯುದ್ಧಕಾರ್ಯಾಚರಣೆಯಿಂದಾಗಿ ಕಾಂಬೋಡಿಯದಲ್ಲಿ ಆಂತರಿಕ ಶಾಂತಿಗೆ ಧಕ್ಕೆ ಬಂತು. 1954ರ ವೇಳೆಗೆ ಇಡೀ ಇಂಡೋ–ಚೀನದಲ್ಲಿ ಪರಿಸ್ಥಿತಿ ಹದಗೆಡುತ್ತಿದ್ದುದರಿಂದ 1954ರಲ್ಲಿ ಜಿನೀವ ಸಮ್ಮೇಳನ ನಡೆಯಿತು. ವಿಶ್ವದ ಅಗ್ರ ರಾಷ್ಟ್ರಗಳು ಕಾಂಬೋಡಿಯದ ತಟಸ್ಥ ನೀತಿಯನ್ನೂ ರಾಜ್ಯದ ಮೇರೆಗಳನ್ನೂ ರಕ್ಷಿಸುವ ಭರವಸೆ ನೀಡಿದುವು. 1955ರಲ್ಲಿ ಸಿಹಾನೌಕ್ ಸಿಂಹಾಸನವನ್ನು ತನ್ನ ತಂದೆಗೆ ಬಿಟ್ಟುಕೊಟ್ಟು ಸಮಾಜವಾದಿ ಪ್ರಜಾಸಮುದಾಯ ಪಕ್ಷ ಸ್ಥಾಪಿಸಿ, ಚುನಾವಣೆಗೆ ನಿಂತು ಗೆದ್ದು ಪ್ರಧಾನಿಯಾದ. ಆ ವರ್ಷವೇ ಫ್ರೆಂಚ್ ಒಕ್ಕೂಟದಿಂದ ಕಾಂಬೋಡಿಯ ಹೊರಬಂದು, ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡಿತು. 1960ರಲ್ಲಿ ತನ್ನ ತಂದೆ ಗತಿಸಿದುದರಿಂದ ಸಿಹಾನೌಕ್ ದೇಶದ ನಾಯಕನಾಗಿ ನೇಮಕ ಹೊಂದಿದ.

1960 ರಿಂದ 1979ರ ಮೊದಲ ಭಾಗದ ವರೆಗೆ ಸಿಹಾನೌಕ್ ಕಾಂಬೋಡಿಯದ ಅಧ್ಯಕ್ಷನಾಗಿದ್ದ. 1960ರಲ್ಲಿ ಆ ದೇಶದ ಆರ್ಥಿಕ ಅಭಿವೃದ್ಧಿ ಸಾಧನೆಗೆ ಮೊದಲ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸಲಾಯಿತು. ಸರ್ಕಾರ ತಟಸ್ಥ ನೀತಿಯನ್ನು ಪಾಲಿಸುತ್ತಿತ್ತಾದರೂ ಉತ್ತರ ದಕ್ಷಿಣ ವಿಯೆಟ್ನಾಂ ಯುದ್ಧದ ಪರಿಣಾಮವಾಗಿ ಅದರ ಸ್ಥಿತಿ ಕಠಿಣವಾಯಿತು. ಕಮ್ಯೂನಿಸ್ಟ್ ಚೀನದೊಡನೆ ರಾಜತಾಂತ್ರಿಕ ಸಂಬಂಧ ಬೆಳೆಯಿತು. ಅಮೆರಿಕ ಕೊಡುತ್ತಿದ್ದ ಮಿಲಿಟರಿ ಮತ್ತು ಆರ್ಥಿಕ ನೆರವುಗಳನ್ನು ಕಾಂಬೋಡಿಯ 1963ರಲ್ಲಿ ತಿರಸ್ಕರಿಸಿತಲ್ಲದೆ 1965ರಲ್ಲಿ ಅಮೆರಿಕದೊಡನೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡಿತು. ಜೂನ್ 1967ರಲ್ಲಿ ಸೋವಿಯತ್ ರಷ್ಯ ಮತ್ತು ಇತರ ಕಮ್ಯೂನಿಸ್ಟ್ ದೇಶಗಳು ಕಾಂಬೋಡಿಯದ ಮೇರೆಗಳನ್ನು ಒಪ್ಪಿದುವು. 1968ರ ಮೊದಲ ಭಾಗದಲ್ಲಿ ದೇಶದಲ್ಲಿ ಚುನಾವಣೆ ನಡೆಸಲು ಸಿದ್ಧತೆ ನಡೆದಿತ್ತು. ಇದು ಹೊಸ ವಿದೇಶಾಂಗನೀತಿಯ ಸಂಕೇತವಾಗುವಂತೆ ಕಾಣುತ್ತಿತ್ತು. ವಿಯಟ್‌ಕಾಂಗರು ದಕ್ಷಿಣ ವಿಯೆಟ್ನಾಂ ವಿರುದ್ಧ ಹೋರಾಟದಲ್ಲಿ ಕಾಂಬೋಡಿಯ ಪ್ರದೇಶ ಬಳಸಿಕೊಳ್ಳಲಾರಂಭಿಸಿದರು. ಅಂಥವನ್ನು ನೆಲೆಗಳನ್ನು ನಾಶಮಾಡಲು ಅಮೆರಿಕನ್ ಮತ್ತು ವಿಯಟ್ನಾಂ ಸೈನಿಕರು ಹಲವಾರು ಬಾರಿ ಕಾಂಬೋಡಿಯಕ್ಕೆ ಸೇರಿದ ಪ್ರದೇಶಗಳಿಗೆ

ಅನಧಿಕೃತವಾಗಿ ಪ್ರವೇಶ ಮಾಡಿದರು. ಸಿಹಾನೌಕ್ ಈ ಬಣಗಳ ಮಧ್ಯೆ ತನ್ನ ತಟಸ್ಥ ನೀತಿಯನ್ನು ಪಾಲಿಸಲು ಅಸಾಧ್ಯವೇ ಆಯಿತೆನ್ನಬಹುದು.

ಇದಲ್ಲದೆ ಕಾಂಬೋಡಿಯದ ಆಂತರಿಕ ವಿಷಯಗಳಲ್ಲಿ ಸಿಹಾನೌಕನ ಧೋರಣೆ ಅನೇಕರಿಗೆ ಹಿಡಿಸಲಿಲ್ಲ. ಯುದ್ಧ ವಾತಾವರಣದಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಸಿಹಾನೌಕ್ ಪ್ಯಾರಿಸಿಗೆ ಹೋಗಿದ್ದ ಸಮಯದಲ್ಲಿ 1970ರ ಮಾರ್ಚಿಯಲ್ಲಿ ಸೈನ್ಯಾಧಿಕಾರಿ ಲೋನ್ ನಾಲ್ ಸಿಹಾನೌಕನನ್ನು ಪದಚ್ಯುತನನ್ನಾಗಿ ಮಾಡಿದ. ಸಿಹಾನೌಕನಿಗೆ ಚೀನದ ಬೆಂಬಲ ದೊರಕಿತು. ಕಾಂಬೋಡಿಯ ಅಂತರ್ಯುದ್ಧಕ್ಕೆ ಒಳಗಾಯಿತು. ಲೋನ್ ನಾಲ್ ಕಾಂಬೋಡಿಯವನ್ನು ಗಣರಾಜ್ಯವೆಂದು ಘೋಷಿಸಿ ರಾಜಪ್ರಭುತ್ವವನ್ನು ಕೊನೆಗೊಳಿಸಿದ. ಸಿಹಾನೌಕನ ಬೆಂಬಲಿಗರಾದ ಉತ್ತರ ವಿಯಟ್ನಾಮೀಯರು ಕಾಂಬೋಡಿಯದ ಮೇಲೆ ದಾಳಿ ನಡೆಸಿದರು. ಅಮೆರಿಕನ್ನರು ಹಲವಾರು ವಾರಗಳ ಕಾಲ ಮಧ್ಯೆ ಪ್ರವೇಶಿಸಿ ಲೋನ್‌ನಾಲನಿಗೆ ಬೆಂಬಲ ನೀಡಿ, ಅನಂತರ ಸೈನ್ಯವನ್ನು ವಾಪಸು ಕರೆಸಿಕೊಂಡರು.

1973ರಲ್ಲಿ ವಾಯು ಪಡೆದಾಳಿ ನಿಂತರೂ ನೆಲದ ಮೇಲಿನ ಕದನ ಮುಂದುವರೆಯಿತು. 1975ರಲ್ಲಿ ಕಮ್ಯುನಿಸ್ಟರು ಕಾಂಬೋಡಿಯವನ್ನು ಆಕ್ರಮಿಸಿಕೊಂಡು ತಮ್ಮ ಸರ್ಕಾರ ಸ್ಥಾಪಿಸಿದರು. ಇದೇ ಕಾಲದಲ್ಲಿ ಪಕ್ಕದ ದಕ್ಷಿಣ ವಿಯಟ್ನಾಂ ಮತ್ತು ಲಾವೋಸ್ ಕಮ್ಯುನಿಸ್ಟ್ ಆಡಳಿತಕ್ಕೆ ಒಳಪಟ್ಟವು. ಪೋಲ್‌ಪಾಟ್ ಸರ್ಕಾರದ ಬಿಗಿ ಆಡಳಿತದಿಂದಾಗಿ ಕಾಂಬೋಡಿಯ ಅನೇಕ ಕಷ್ಟನಷ್ಟಗಳಿಗೆ ಒಳಗಾಯಿತು. ಒಂದು ಮಿಲಿಯನ್ ಕಾಂಬೋಡಿಯನ್ನರು ಆಹಾರ ಇತ್ಯಾದಿ ಕೊರತೆಗಳ ಕಾರಣ ಮರಣವನ್ನಪ್ಪಿದರು. 1982ರಲ್ಲಿ ಕಮ್ಯುನಿಸ್ಟರಲ್ಲದ ಹಾಗೂ ಕಮ್ಯುನಿಸ್ಟರ ಕೂಡು ಸರ್ಕಾರವನ್ನು ನರೋದಮ್ ಸಿಹನೌಕ್ ಅವರು ಸ್ಥಾಪಿಸಿದರು. 1992ರಲ್ಲಿ ವಿಶ್ವಸಂಸ್ಥೆ ಕಾಂಬೋಡಿಯದ ಆಡಳಿತ ವಹಿಸಿಕೊಂಡಿತು. 1993ರ ಹೊಸ ಸಂವಿಧಾನಬದ್ಧ ರಾಜಪ್ರಭುತ್ವವನ್ನು ಸಿಹನೌಕ್ ಸ್ಥಾಪಿಸಿದ. 2003ರಲ್ಲಿ ಚುನಾವಣೆ ನಡೆದು ಹುನ್‌ಸೆನ್ ಪ್ರಧಾನಿಯಾದರು. (ಎಂ.ವಿ.ಕೆ.; ಎಸ್.ಕೆ.ಎಸ್.; ಎಂ.ಎ.ಎನ್.)

**ಕಾಕ್, ರಾಬರ್ಟ್ :** (1843–1910). ಜರ್ಮನಿಯ ಏಕಾಣುಜೀವಿ ಶಾಸ್ತ್ರಜ್ಞ. ಕ್ಷಯಕ್ಕೆ ಕಾರಣವಾದ ದಂಡಾಣುಜೀವಿಯನ್ನು ಆವಿಷ್ಕರಿಸಿದ ಕೀರ್ತಿ ಈತನದು. ಜನನ ಹ್ಯಾನೋವರಿನ ಕ್ಲಾಸ್ತಾಲಿನಲ್ಲಿ ಡಿಸೆಂಬರ್ 11,1843ರಲ್ಲಿ. ಗಾಟಿಂಜನಿನಲ್ಲಿ ವೈದ್ಯಪದವೀಧರನಾದ (1866). 1870ರ ಯುದ್ಧದಲ್ಲಿ ಶಸ್ತ್ರ ವೈದ್ಯನಾಗಿದ್ದಾಗ ಬಿಡುವು ದೊರೆತಾಗಲೆಲ್ಲ ಸಂಶೋಧನೆಯಲ್ಲಿ ಕೈಯಾಡಿಸುತ್ತಿದ್ದ. ಆ ವೇಳೆ ನೆರಡಿ (ಆಂತ್ರಾಕ್ಸ್) ರೋಗ ಆಸುಪಾಸಿನ ದನಗಳಿಗೆ ಪಿಡುಗಿನ ರೂಪದಲ್ಲಿ ಹಬ್ಬಿತು. ಸಹಜವಾಗಿ ಕಾಕ್‌ನ ಕುತೂಹಲ ಈ ದಿಶೆಯಲ್ಲಿ ಹರಿಯಿತು. ವ್ಯಾಧಿಗ್ರಸ್ತ ದನದ ದೊರಳೆಯಿಂದ (ಸ್ಪ್ಲೀನ್) ನೆರಡಿ ರೋಗಕಾರಕ ಏಕಾಣುಜೀವಿಗಳನ್ನು ಈತ ಬೇರ್ಪಡಿಸಿ (1876) ಅವನ್ನು ಪುಟ್ಟಿಲಿಗಳಿಗೆ (ಮೈಸ್) ಚುಚ್ಚಿದ. ಈ ಪ್ರಕಾರ ಒಂದರಿಂದ ಇನ್ನೊಂದು ಪುಟ್ಟಿಲಿಗೆ ವ್ಯಾಧಿಯನ್ನು ವರ್ಗಾಯಿಸಿ ಅದರ ದಂಡಾಣುಜೀವಿಗಳನ್ನು ಕೊನೆಯ ಹಂತದಲ್ಲಿ ಪಡೆದ. ಇದಕ್ಕಿಂತಲೂ ಹೆಚ್ಚಾಗಿ ಏಕಾಣುಜೀವಿಗಳನ್ನು ಜೀವಂತ ದೇಹದ ಹೊರಗೆ ಬೆಳೆಸುವ ವಿಧಾನವನ್ನು ಆತ ಕಲಿತು ಪರಿಷ್ಕರಿಸಿದ. ತನ್ನ ಸಂಶೋಧನೆಗಳನ್ನು ಬ್ರೆಸ್ಲೊ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ಪ್ರಾಧ್ಯಾಪಕ ಕಾನ್ ಎಂಬಾತನ ಮುಂದೆ ಮಾಡಿ ತೋರಿಸಿದ. ಹಿಂತಿರುಗಿ ಬಂದು ಎಂದಿನಂತೆ ತನ್ನ ವೈದ್ಯ ಕಸಬಿನೊಂದಿಗೆ ಏಕಾಣುಜೀವಿಗಳ ಶೋಧನೆಯನ್ನು ಮುಂದುವರಿಸಿದ. ಏಕಾಣು ಜೀವಿಗಳಿಗೆ ಬಣ್ಣಕೊಟ್ಟು ಜಾರುಗಾಜುಗಳ (ಸ್ಲೈಡ್ಸ್) ಮೇಲೆ ಅಂಟಿಸುವ ವಿಧಾನವನ್ನು ಕಂಡುಹಿಡಿದ. ಪಟ್ಟಣದ ವೈದ್ಯನಾಗಿದ್ದ ಇನ್ನೂ 37 ವರ್ಷದ ಕಾಕ್‌ನಿಗೆ ಆರೋಗ್ಯ ಕಚೇರಿಯಲ್ಲಿ ಒಳ್ಳೆಯ ಹುದ್ದೆ ದೊರೆಯಿತು (1880). ಆಗ ಈತ ಬರ್ಲಿನ್ನಿನಲ್ಲಿ ನೆಲೆಸಿದ. ಮರುವರ್ಷವೇ ಮಾಂಸದ ಸಾರದೊಂದಿಗೆ ಜಿಲಟಿನ್ ಮಿಶ್ರಣದಲ್ಲಿ ಅಚ್ಚ ತಳಿಯ ಏಕಾಣುಜೀವಿಗಳನ್ನು ಸಹ ಬೆಳೆಸುವ ಹೊಸ ವಿಧಾನ ಕಂಡುಹಿಡಿದು ಲೂಯಿ ಪಾಶ್ಚರನ ಮೆಚ್ಚುಗೆ ಗಳಿಸಿದ. ಇದರೊಂದಿಗೆ ಬಣ್ಣ ಕೊಡುವ ವಿಧಾನವನ್ನೂ ಸೇರಿಸಿ ಕ್ಷಯಕ್ಕೆ ಕಾರಣವಾದ ದಂಡಾಣುಜೀವಿಯನ್ನು (ಬ್ಯಾಸಿಲ್ಲಸ್) ಮೊಟ್ಟಮೊದಲಿಗೆ (1882) ತೋರಿಸಿಕೊಟ್ಟ. ಒಂದು ರೋಗಕ್ಕೆ ಗೊತ್ತಾದ ಒಂದು ರೋಗಾಣು ಮೂಲ ಕಾರಣವೆಂದು ತೋರಿಸಿಕೊಡಲು ಆಗ ಕಾಕ್ ನಿರೂಪಿಸಿದ ಮೂಲ ತತ್ತ್ವಗಳು ಈಗಲೂ ಚಾಲ್ತಿಯಲ್ಲಿವೆ. ಜರ್ಮನಿಯ ಕಾಲರ ಆಯೋಗದ ನಾಯಕನಾಗಿ ಈಜಿಪ್ಟ್, ಭಾರತಗಳಿಗೆ ಬಂದಾಗ ಕಾಲರ ರೋಗಕ್ಕೆ ಕಾರಣವಾದ ರೋಗಾಣುಗಳನ್ನು ಕಂಡುಹಿಡಿದು ಅದು ನೀರು, ಉಣಿಸು, ಅರಿವೆಗಳ ಮೂಲಕ ಬರುವುದನ್ನು ತೋರಿಸಿಕೊಟ್ಟ (1883). ಈಜಿಪ್ಟಿಗರ ಕಣ್ಣು ಬೇನೆಗೆ ಕಾರಣವಾದ ದಂಡಾಣುಜೀವಿಯನ್ನೂ ಆಗಲೇ ಕಂಡುಹಿಡಿದ. ಕ್ಷಯಾಣು ಸಾರವನ್ನು (ಟ್ಯುಬರ್ಕ್ಯುಲಿನ್) ಸೂಕ್ಷ್ಮವಾಗಿ ಶೋಧಿಸಿ (1890) ಅದು ಕ್ಷಯ ಚಿಕಿತ್ಸೆಗೆ ಬರುವುದೆಂದು ಊಹಿಸಿದ.

ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿಯೂ (1885) ಬರ್ಲಿನ್ನಿನ ಅಂಟುರೋಗಗಳ ಸಂಸ್ಥೆಯ ನಿರ್ದೇಶಕನಾಗಿಯೂ (1891) ಕಾಕ್ ಇದ್ದ. ಬ್ರಿಟನ್ನಿನ ಸರ್ಕಾರದ ಕೋರಿಕೆಯಂತೆ ದಕ್ಷಿಣ ಆಫ್ರಿಕಕ್ಕೆ ಹೋದ (1896). ಆತನ ಉದ್ದೇಶವಾದ ಗೋಮಾರಿ(ದನದ ಪ್ಲೇಗು) ರೋಗದ ಕಾರಣ ಕಂಡುಹಿಡಿಯಲಾಗದಿದ್ದರೂ ಅದರೆದುರು ಹಾಕುವ ಲಸಿಕೆಯನ್ನು ಶೋಧಿಸಿದ. ಮತ್ತೆ ಆಫ್ರಿಕಕ್ಕೆ ಹೋದಾಗ (1906) ನಿದ್ದೆಯ ನರಳಿಕೆ (ಸ್ಲಿಪಿಂಗ್ ಸಿಕ್ನೆಸ್) ರೋಗಕ್ಕೆ ಮದ್ದನ್ನು ಬಳಕೆ ತಂದ. ವೈದ್ಯ ಹಾಗೂ ದೇಹಶಾಸ್ತ್ರ (ಮೆಡಿಸನ್ ಅಂಡ್ ಫಿಸಿಯಾಲಜಿ) ವಿಭಾಗದ ನೊಬೆಲ್ ಪಾರಿತೋಷಕ ಈತನಿಗೆ 1905ರಲ್ಲಿ ದೊರೆಯಿತು. ಇಡೀ ವೈದ್ಯಚರಿತ್ರೆಯಲ್ಲೇ ಉನ್ನತ ಏಕಾಣುಜೀವಿಶಾಸ್ತ್ರಜ್ಞರಲ್ಲಿ ಒಬ್ಬನಾಗಿದ್ದು ಅದರ ಹೆಚ್ಚಿನ ಮುನ್ನಡೆಗೂ ಏಕಾಣುಜೀವಿಗಳ ಅಚ್ಚತಳಿಗಳನ್ನು ಬೆಳೆಸುವ ವಿಧಾನಗಳನ್ನು ಕಂಡುಹಿಡಿಯಲೂ ಕಾರಣನಾಗಿ ಇಂದಿನ ಏಕಾಣುಜೀವಿಶಾಸ್ತ್ರದ ಜನಕನೆಂದು ಈತ ಹೆಸರಾಗಿದ್ದಾನೆ. (ಎಸ್.ಎನ್.ಎ.ಜಿ.)

**ಕಾಕಂಬಿ :** ಕಬ್ಬು ಮತ್ತು ಸಿಹಿಗೆಣಸುಗಳಿಂದ ಸಕ್ಕರೆಯನ್ನು ತಯಾರಿಸುವಾಗ ದೊರೆಯುವ ಪ್ರಮುಖ ಉಪೋತ್ಪನ್ನ; ವಾಣಿಜ್ಯದೃಷ್ಟಿಯಿಂದ ಸಕ್ಕರೆ ಹರಳುಗಳನ್ನು ಪೂರ್ಣವಾಗಿ ಪಡೆದ ತರುವಾಯ ಉಳಿಯುವ ಕಪ್ಪುಬಣ್ಣದ ದ್ರವರೂಪದ ಪಾಕ (ಮೊಲಾಸ್ಸಸ್). ಪಾಕದಲ್ಲಿ ಮೆಲಾಸ್ಸಿಜೆನಿಕ್ ಎಂಬ ವಸ್ತುಗಳು ಇರುವುದರಿಂದ ಕಾಕಂಬಿಯಿಂದ ಮತ್ತೆ ಸಕ್ಕರೆ ಹರಳುಗಳು ದೊರೆಯುವುದಿಲ್ಲ. ಇವು ಪ್ರಧಾನವಾಗಿ ಇನಾರ್ಗೇನಿಕ್ ಲವಣವಸ್ತುಗಳು ಮತ್ತು ಆರ್ಗೇನಿಕ್ ಸಕ್ಕರೆಯಲ್ಲದ ಕಶ್ಮಲಗಳು. ಸುಕ್ರೋಸಿನ ಸಂತೃಪ್ತ ದ್ರಾವಣದಲ್ಲಿ ಇವು ಲೀನವಾಗಿವೆ. ಸುಟ್ಟ ಸಕ್ಕರೆಯ ವಾಸನೆ ಇರುವ ಈ ಕಪ್ಪು ಪಾಕ (ಕಾಕಂಬಿ) ಕಚ್ಚಾ ಸಕ್ಕರೆಯ ತಯಾರಿಕೆಯಲ್ಲೂ ಅದರ ಪರಿಷ್ಕರಣ ಹಂತದಲ್ಲೂ ಸಿಕ್ಕುತ್ತದೆ. ಕಬ್ಬಿನಿಂದ ದೊರೆಯುವ ಕಾಕಂಬಿ ಸಂಯೋಜನೆಯ ಸ್ಥಳ, ಕಬ್ಬಿನ ದರ್ಜೆ, ಮಣ್ಣಿನ ಗುಣ, ಹವೆ, ಕಬ್ಬನ್ನು ಸಂಸ್ಕರಿಸುವ ವಿಧಾನ ಇವನ್ನು ಅವಲಂಬಿಸಿದೆ. ಒಂದು ದರ್ಜೆಯ ಕಾಕಂಬಿಯನ್ನು ಆಹಾರವಸ್ತುವಾಗಿ ಉಪಯೋಗಿಸುತ್ತಾರೆ. *

**ಕಾಕಡ :** ಮಲ್ಲಿಗೆ ಜಾತಿಗೆ ಸೇರಿದ, ಬಿಳಿ ಬಣ್ಣದ, ವಾಸನೆ ಇಲ್ಲದ ಹೂ ಬಿಡುವ ಸಸ್ಯ. ಇದನ್ನು ಉದ್ಯಾನವನಗಳಲ್ಲೂ ಮನೆಗಳಲ್ಲೂ ದೇವಸ್ಥಾನಗಳ ಬಳಿಯಲ್ಲೂ ಬೆಳೆಸುತ್ತಾರೆ. ಇದರ ಹೂವಿನಿಂದ ಹಾರ, ತುರಾಯಿ ಇತ್ಯಾದಿಗಳನ್ನು ಕಟ್ಟುವುದು ಒಂದು ಮುಖ್ಯವಾದ ಉದ್ಯಮವಾಗಿ ಬೆಳೆದಿದೆ. ಕಾಕಡಮೊಗ್ಗನ್ನು ಅರಳುವುದಕ್ಕೆ ಮುಂಚೆ ಕುಯ್ದು ಮಾರುಕಟ್ಟೆಗೆ ರವಾನಿಸುತ್ತಾರೆ.



ಕಾಕಡ : ಒಳಚಿತ್ರ – ಹೂಬಿಟ್ಟಿರುವ ಒಂದು ರೆಂಬೆ

ಕಾಕಡ ಓಲಿಯೇಸೀ ಕುಟುಂಬದ ಜಾಸ್‌ಮಿನಮ್ ಪ್ಯೂಬಿಸೆನ್ಸ್ ಪ್ರಭೇದಕ್ಕೆ ಸೇರಿದೆ. ಇದು ಸುಮಾರು 3'–4' ಎತ್ತರ ಬೆಳೆಯುವ ನಿತ್ಯಹಸುರಿನ ಬಹು ವಾರ್ಷಿಕ ಪೊದೆ ಸಸ್ಯ.

ಇದರ ಎಳೆಯ ಕಾಂಡ ಮತ್ತು ಎಲೆಗಳ ಮೇಲೆ ತುಕ್ಕು ಬಣ್ಣದ ನವಿರಾದ ರೋಮಗಳಿವೆ. ಎಲೆಗಳು ಚಿಕ್ಕ ತೊಟ್ಟುಳ್ಳವು; ಇವುಗಳ ಆಕಾರ ಕರನೆಯಂತೆ; ಅಂಚು ನಯ, ತುದಿ ಮೊನಚು, ಬಣ್ಣ ಗಾಢ ಹಸಿರು. ಹೂ ಗೊಂಚಲು ಮಧ್ಯಾರಂಭಿ (ಸೈಮೋಸ್) ಮಾದರಿಯದು; ರೆಂಬೆಗಳ ತುದಿಯಲ್ಲಿ ಹುಟ್ಟುತ್ತದೆ. ಪುಷ್ಪಪತ್ರಗಳು 7, ಕೂಡಿಕೊಂಡಿವೆ. ಅವುಗಳ ಬಣ್ಣ ಬಿಳಿ. ಕೇಸರಗಳು 2, ಅಂಡಾಶಯ ಉಚ್ಚಸ್ಥಾನದ್ದು. ಕಾಕಡ ವಿಪುಲವಾಗಿ ಕವಲೊಡೆಯುತ್ತದೆ. ಈ ಕವಲುಗಳು ಬಾಗಿ, ನೆಲವನ್ನು ಮುಟ್ಟಿ, ಬೇರು ಬಿಟ್ಟು ಸ್ವತಂತ್ರ್ಯ ಸಸಿಗಳಾಗುತ್ತವೆ. ಇಂಥ ಸಸಿಗಳಿಂದ ಕಾಕಡವನ್ನು ವೃದ್ಧಿ ಮಾಡಬಹುದು. ಸಸಿಗಳಿಗೆ ಕೊನೆಯ ಪಕ್ಷ ಎರಡು ತಿಂಗಳು ವಯಸ್ಸಾಗಿರಬೇಕು. ಸಸಿಗಳನ್ನು ತಾಯಿಸಸ್ಯದಿಂದ ಬೇರ್ಪಡಿಸುವಾಗ ಅವುಗಳ ತಾಯಿಬೇರು ಕಿತ್ತುಹೋಗದಂತೆ ಎಚ್ಚರಿಕೆ ವಹಿಸಬೇಕು. ಕಾಕಡ ಬೇಸಾಯಕ್ಕೆ ಕೆಂಪು ಮರಳು ಮಿಶ್ರಿತ ಗೋಡುಮಣ್ಣು ಉತ್ತಮವಾದದ್ದು. ಆದರೆ ಜೌಗಿಲ್ಲದ ಫಲವತ್ತಾಗಿರುವ ಮತ್ತು ಸಡಿಲವಾಗಿರುವ ಬೇರೆ ಬಗೆಯ ಮಣ್ಣುಗಳಲ್ಲೂ ಇದರ ಬೇಸಾಯವನ್ನು ಮಾಡಬಹುದು. ಬೇಸಾಯ ಮಾಡುವ ಮೊದಲು ತೋಟವನ್ನು ಒಂದು ತಿಂಗಳು ಮುಂಚೆಯೇ ಚೆನ್ನಾಗಿ ಉಳುಮೆ ಅಥವಾ ಅಗತೆ ಮಾಡಿ ಸಿದ್ಧ ಮಾಡಬೇಕು. ಅನಂತರ 6' ಅಂತರದ ಸಾಲುಗಳಲ್ಲಿ 2' ಉದ್ದ 2' ಅಗಲ ಹಾಗೂ 1' ಆಳದ ಗುಂಡಿಗಳನ್ನು ತೋಡಬೇಕು. ಗುಂಡಿಗಳ ಪರಸ್ಪರ ದೂರ 5' ಇರಬೇಕು. ಗುಂಡಿಗಳಿಗೆ ಕೊಟ್ಟಿಗೆ ಗೊಬ್ಬರ, ಕೆಂಪುಮಣ್ಣು ಮಿಶ್ರಮಾಡಿ ತುಂಬಿ ಅನಂತರ ಸಸಿಗಳನ್ನು ನಾಟಿ ಮಾಡಬೇಕು. ನಾಟಿ ಮಾಡಿದ ಒಂದು ವರ್ಷದ ಅನಂತರ ಗಿಡ ಹೂ ಬಿಡಲು ಪ್ರಾರಂಭಿಸುತ್ತದೆ. ಮಳೆಗಾಲದ ಪ್ರಾರಂಭದಲ್ಲಿ ಮತ್ತು ಚಳಿಗಾಲದ ಮುಕ್ತಾಯದಲ್ಲಿ ಕಾಕಡ ಬೆಳೆಗೆ ಮೇಲು ಗೊಬ್ಬರ ಕೊಡಬೇಕು. ಗೊಬ್ಬರ ಕೊಡುವುದಕ್ಕೆ ಮೊದಲು ಕಳೆ ತೆಗೆದು ಇಡೀ ತೋಟವನ್ನು ಮೇಲು ಅಗೆತಮಾಡಿ, ಸಸ್ಯಗಳ ಸುತ್ತಲು ಇರುವ ಮಣ್ಣನ್ನು ಪಕ್ಕಕ್ಕೆ ತೆಗೆದು, ಅನಂತರ ಗೊಬ್ಬರ ಕೊಟ್ಟು ವಿಶಾಲವಾಗಿ ಪಾತಿ ಮಾಡಬೇಕು. ಮಳೆಗಾಲದಲ್ಲಿ ನೀರಾವರಿ ಆವಶ್ಯಕತೆ ಇರುವುದಿಲ್ಲ. ಆದರೆ ಕಾಲಕಾಲಕ್ಕೆ ಅಗತ್ಯ ಬಿದ್ದಾಗ ನೀರು ಹಾಯಿಸುವುದರಿಂದ ಹೆಚ್ಚು ಇಳುವರಿ ಸಿಕ್ಕುತ್ತದೆ.

ಚೆನ್ನಾಗಿ ಬೇಸಾಯ ಮಾಡಿದ ತೋಟದಲ್ಲಿ ಒಂದೊಂದು ಗಿಡವೂ ವರ್ಷಕ್ಕೆ 1ರಿಂದ 2ಕೆಜಿ ಮೊಗ್ಗನ್ನು ಕೊಡುತ್ತದೆ. (ಡಿ.ಎಂ.)

**ಕಾಕತೀಯರು :** ಮೊದಲಿಗೆ ಅನುಮಕೊಂಡ ಮತ್ತು ಅನಂತರ ವಾರಂಗಲ್ ರಾಜಧಾನಿಗಳಿಂದ ಆಂಧ್ರಪ್ರವೇಶದಲ್ಲಿ 12ನೆಯ ಶತಮಾನದಿಂದ ಸು. 200 ವರ್ಷಕಾಲ ಆಳಿದ ಮನೆತನ. ಕಾಕತಿ ಗ್ರಾಮ ಮತ್ತು ಈ ಗ್ರಾಮದ ದೇವತೆ ಕಾಕತಮ್ಮ-ಇವು ಕಾಕತೀಯ ಪದದ ಮೂಲವನ್ನು ಸೂಚಿಸುತ್ತವೆ.

1ನೆಯ ಬೇತನಿಂದ ಈ ವಂಶದ ಚರಿತ್ರೆ ನಿಶ್ಚಿತವಾಗಿ ಗೊತ್ತಾಗಿದೆ. ಇವನು ಕಲ್ಯಾಣದ ಚಾಳುಕ್ಯ ಸಾಮ್ರಾಜ್ಯಕ್ಕೆ ಸೇರಿದ್ದ ತೆಲಂಗಾಣ ಪ್ರದೇಶದಲ್ಲಿ ಸಾಮಾನ್ಯ ನಾಯಕನಾಗಿದ್ದ. ಇವನ ಬಗ್ಗೆ ಹೆಚ್ಚಿನ ವಿವರಗಳು. ತಿಳಿದಿಲ್ಲ. ಕಲ್ಯಾಣ ಚಾಳುಕ್ಯ 1ನೆಯ ಸೋಮೇಶ್ವರ (1043–68) ಚೋಳರಾಜ್ಯದಲ್ಲಿ ಮಾಡಿದ ದಂಡಯಾತ್ರೆಯಲ್ಲಿ ಈತ ಭಾಗಹಿಸಿದ್ದ. ಇವನ ಮಗ 1ನೆಯ ಪ್ರೋಲ ಶತ್ರುದಮನ ಮಾಡಿ ಆ ಚಾಳುಕ್ಯ ದೊರೆಯಿಂದ ಅನುಮಕೊಂಡ ಸೀಮೆಯ ಸ್ವಾಮಿತ್ವವನ್ನು ಪಡೆದುಕೊಂಡ. ಇದು ಈ ವಂಶದ ಅಭ್ಯುದಯಕ್ಕೆ ನಾಂದಿ ಆಯಿತು. ಯುವರಾಜ ವಿಕ್ರಮಾದಿತ್ಯನ ಕೊಂಕಣ, ಚೋಳದೇಶ, ವೇಂಗಿ ಮತ್ತು ಚಕ್ರಕೋಟಗಳ ದಂಡಯಾತ್ರೆಗಳಲ್ಲಿ ಪ್ರೋಲ ಭಾಗಿಯಾಗಿ ಆತನ ವಿಜಯಕ್ಕೆ ಸಹಾಯಕನಾದ.

ಇವನ ಮಗ ಇಮ್ಮಡಿ ಬೇತ (1075–90) 6ನೆಯ ವಿಕ್ರಮಾದಿತ್ಯನಿಗೆ (1076–1126) ವಿರೋಧವಾಗಿ ವರ್ತಿಸಿ ಆತನ ಕ್ರೋಧಕ್ಕೆ ಈಡಾದರೂ ಅನಂತರ ಕ್ಷಮೆ ಕೋರಿ ತನ್ನ ಪಿತ್ರಾರ್ಜಿತ ರಾಜ್ಯವನ್ನು ಮತ್ತೆ ಸಂಪಾದಿಸಿಕೊಂಡ. ವಿಕ್ರಮಾದಿತ್ಯನ ಪರವಾಗಿ ಇವನು ಮಾಲ್ವದ ಪರಮಾರ ಉದಯಾದಿತ್ಯ, 1ನೆಯ ಕುಲೋತ್ತುಂಗ ಚೋಳ-ಇವರ ಮೇಲೆ ಜಯಗಳಿಸಿದ. ಸುಪ್ರೀತನಾದ ವಿಕ್ರಮಾದಿತ್ಯ ತ್ರಿಭುವನ ಮಲ್ಲ ಎಂಬ ಬಿರುದನ್ನೂ ಸಬ್ಬಿ 1000 ಪ್ರಾಂತ್ಯವನ್ನೂ ಇವನಿಗೆ ಕೊಟ್ಟಂತೆ ಕಾಣುತ್ತದೆ.

ಇಮ್ಮಡಿ ಪ್ರೋಲ ಇವನ ಅನಂತರ ಅಧಿಕಾರಕ್ಕೆ ಬಂದ (1115). ಈತ ಪರಾಕ್ರಮಿ, ಮಹಾತ್ವಾಕಾಂಕ್ಷಿ. ಆಗ 6ನೆಯ ವಿಕ್ರಮಾದಿತ್ಯನ ರಾಜ್ಯಭಾರ ಕೊನೆಯ ಹಂತ ಮುಟ್ಟಿತ್ತು. 1126ರಲ್ಲಿ ವಿಕ್ರಮಾದಿತ್ಯ ಮರಣ ಹೊಂದಿದ. ಅನಂತರ ಬಂದ ಚಾಳುಕ್ಯ ಅರಸರು ಸಮರ್ಥರಾಗಿರಲಿಲ್ಲ. ಈ ಸನ್ನಿವೇಶ ಪ್ರೋಲನ ರಾಜ್ಯ ವಿಸ್ತರಣಾಕಾಂಕ್ಷೆಯನ್ನು ಸಫಲಗೊಳಿಸಿತು. ಈತ ಕೊಂಡಪಲ್ಲಿಯ ಗೋವಿಂದರಾಜ ಮತ್ತು ಮಂತ್ರಕೂಟದ ಗುಂಡರನ್ನು ಸೋಲಿಸಿ, ಆ ಪ್ರದೇಶಗಳನ್ನು ವಶಪಡಿಸಿಕೊಂಡುದಲ್ಲದೆ ಚಾಳುಕ್ಯ ಚಕ್ರವರ್ತಿ ಮುಮ್ಮಡಿ ತೈಲನನ್ನು ಸೆರೆಹಿಡಿದ. ಅನಂತರ ದಯೆತೋರಿ ವಿಮುಕ್ತಿಗೊಳಿಸಿದನಲ್ಲದೆ ಚಾಳುಕ್ಯರ ಮಾಂಡಲಿಕತ್ವವನ್ನು ತ್ಯಜಿಸಿ ಸ್ವತಂತ್ರನಾದ. ಆರಂಭದಲ್ಲಿ ತೆಲಂಗಾಣದ ವಾರಂಗಲ್ ಮತ್ತು ಕರೀಂನಗರ ಜಿಲ್ಲೆಗಳ ಪ್ರದೇಶಕ್ಕೆ ಸೀಮಿತವಾಗಿದ್ದ ಕಾಕತೀಯ ಆಧಿಪತ್ಯ ಅನಂತರ ಗೋದಾವರಿ ಕೃಷ್ಣಾ ನದಿಗಳ ನಡುವಣ ಭೂಭಾಗವನ್ನೂ ವ್ಯಾಪಿಸಿತು. ಪ್ರೋಲ ಸು. 1158ರ ವರೆಗೆ ಜೀವಿಸಿದ್ದ.

ಬಳಿಕ ಪಟ್ಟಕ್ಕೆ ಬಂದ ಪ್ರೋಲನ ಪುತ್ರ ರುದ್ರದೇವನಿಂದ ಕಾಕತೀಯ ಚರಿತ್ರೆಯಲ್ಲಿ ಸ್ವತಂತ್ರ ಸಾಮ್ರಾಜ್ಯಾಧಿಕಾರದ ಹೊಸ ಅಧ್ಯಾಯ ಪ್ರಾರಂಭವಾಗುತ್ತದೆ. ರುದ್ರದೇವ ಸಂಗ್ರಾಮವೀರ, ಪ್ರತಾಪಶಾಲಿ. ಇವನು ನೆರೆನಾಡಿನ ಹಲವು ನಾಯಕರೊಡನೆ ಯುದ್ಧಹೂಡಿ ಅವರ ರಾಜ್ಯಗಳನ್ನು ವಶಪಡಿಸಿಕೊಂಡ. ಇವನು ಜಯಿಸಿದ ವೈರಿಗಳಲ್ಲಿ ತೋಟ ನಾಯಕರು, ತೆಲುಗು ಚೋಳರು, ಮತ್ತು ಚಾಳುಕ್ಯ ಮುಮ್ಮಡಿ ತೈಲಪ ಪ್ರಮುಖರು, ಕರಾವಳಿಯ ಪ್ರದೇಶವನ್ನೂ ವೆಂಗಿಮಂಡಲವನ್ನೂ ಗೆಲ್ಲಲು ಇವನಿಗೆ ಸಾಧ್ಯವಾಗಲಿಲ್ಲ. ಆದರೂ ಇವನಿಗೆ ಗೋದಾವರಿ ಕೃಷ್ಣಾನದಿಗಳ ಮಧ್ಯದ ವಿಸ್ತಾರವಾದ ರಾಜ್ಯ ವಶವಾಗಿತ್ತು. ರುದ್ರದೇವ ತನ್ನ ಆಳ್ವಿಕೆಯ ಕೊನೆಯ ಭಾಗದಲ್ಲಿ ಅನುಮಕೊಂಡ ರಾಜಧಾನಿಯ ಪಕ್ಕದಲ್ಲಿ ಓರುಗಲ್ಲು (ಈಗಿನ ವಾರಂಗಲ್) ಎಂಬ ಹೊಸ ನಗರವನ್ನು ಕಟ್ಟಿಸಿದ. ಇದು ಮುಂದೆ ಇವರ ಆಳ್ವಿಕೆಯಲ್ಲಿ ಸಮಸ್ತ ಆಂಧ್ರಪ್ರದೇಶದ ರಾಜಧಾನಿಯಾಯಿತು. ಇತ್ತ ಕಾಕತೀಯರು ಊರ್ಜಿತವಾಗುತ್ತಿದ್ದಾಗ ಅತ್ತ ಪಶ್ಚಿಮದಲ್ಲಿ ಸೇವುಣರು ಪ್ರಬಲರಾಗುತ್ತಿದ್ದರು. ಈ ಪ್ರತಿಸ್ಪರ್ಧಿಗಳಲ್ಲಿ ರುದ್ರದೇವ ಸು. 1196ರಲ್ಲಿ ನಡೆದ ಸಮರದಲ್ಲಿ ಹತನಾದ.

ರುದ್ರದೇವನ ಅನಂತರ (ಸು. 1196) ಪಟ್ಟಕ್ಕೆ ಬಂದ ಆತನ ತಮ್ಮ ಮಹಾದೇವ 3 ವರ್ಷ ಮಾತ್ರ ಅಧಿಕಾರದಲ್ಲಿದ್ದ. ಇವನು ಸೇವುಣರ ರಾಜಧಾನಿ ದೇವಗಿರಿಯ ಮೇಲೆ ದಾಳಿ ಮಾಡಿ ಸು. 1198ರಲ್ಲಿ ನಡೆದ ಕದನದಲ್ಲಿ ನಿಧನನಾದ. ಅದೇ ಕಾಲಕ್ಕೆ ಮಹಾದೇವನ ಮಗ ಗಣಪತಿದೇವ ಶತ್ರುಗಳ ಕೈಗೆ ಸಿಕ್ಕಿ ದೇವಗಿರಿಯ ಕಾರಾಗೃಹದಲ್ಲಿರಬೇಕಾಯಿತು. ಸ್ವಲ್ಪ ಕಾಲಾಂತರ ಸೆರೆಮನೆಯಿಂದ ಹೊರಬಂದ ಗಣಪತಿದೇವ ಮರಳಿ ತನ್ನ ರಾಜ್ಯಕ್ಕೆ ಬಂದಾಗ ಅಲ್ಲಿ ಅರಾಜಕತೆ ಉಂಟಾಗಿತ್ತು. ನೆರೆಯ ಅರಸರು ದಂಡೆತ್ತಿ ಬಂದಿದ್ದರು. ಈ ಅವ್ಯವಸ್ಥೆಯನ್ನು ಕೊನೆಗೊಳಿಸಿ. ಸೇನಾಪತಿ ರೇಚರ್ಲ ರುದ್ರ ಪುನಃ ಕಾಕತೀಯ ಪ್ರಭುತ್ವವನ್ನು ಸ್ಥಿರಗೊಳಿಸಿದ.

ಗಣಪತಿದೇವ (1198–1261) ಸು. 63 ವರ್ಷ ರಾಜ್ಯಭಾರ ಮಾಡಿದ. ಈತ ಪಟ್ಟಕ್ಕೆ ಬಂದಾಗ ಕಲ್ಯಾಣದ ಚಾಳುಕ್ಯರ ಮತ್ತು ಚೋಳರ ಸಾಮ್ರಾಜ್ಯಗಳು ಅಸ್ತಂಗತವಾಗಿ, ತುಂಡರಸರೂ ಪ್ರಾದೇಶಿಕ ಪಾಳೆಯಗಾರರೂ ತಲೆಯೆತ್ತಿ ರಾಜ್ಯಲಾಲಸೆಯಿಂದ ಕಾದಾಡುತ್ತಿದ್ದರು. ಶಕ್ತಿವಂತನೂ ಮಹತ್ವಾಕಾಂಕ್ಷಿಯೂ ರಾಜನೀತಿಚತುರನೂ ಕಾರ್ಯತತ್ಪರನೂ ಆದ ಗಣಪತಿ ಈ ಪರಿಸ್ಥಿತಿಯನ್ನು ತನ್ನ ರಾಜ್ಯಾಭಿವೃದ್ಧಿಗೆ ಬಳಸಿಕೊಂಡ. ಎಡೆಬಿಡದೆ ಅನೇಕ ಯುದ್ಧಗಳನ್ನು ಮಾಡಿ, ಪೂರ್ವ ಕರಾವಳಿ ಪ್ರದೇಶದ ವೆಲನಾಡು ನಾಯಕರ ಪ್ರದೇಶವನ್ನು ಆಕ್ರಮಿಸಿದ. ಇದರಿಂದ ಕಾಕತೀಯ ಸಾಮ್ರಾಜ್ಯರೇಖೆ ಪೂರ್ವಸಾಗರದ ವರೆಗೆ ಚಾಚಿತು. ದಕ್ಷಿಣದಲ್ಲಿ ನೆಲ್ಲೂರಿನ ತೆಲುಗು ಚೋಳನಾಯಕರ ಸಹಾಯದಿಂದ ಇವನ ವರ್ಚಸ್ಸು ಬೆಳೆಯಿತು. ಈತ ಕಳಿಂಗದ ಪೂರ್ವಗಂಗರೊಡನೆ ಮತ್ತು ಮಧುರೆಯ ಪಾಂಡ್ಯರೊಡನೆ ಯುದ್ಧಮಾಡಿ ಅತ್ಯಂತ ಸಮರ್ಥನೆಂಬ ಖ್ಯಾತಿ ಗಳಿಸಿದ.

ಗಣಪತಿ ದಕ್ಷ ಶಾಸಕ, ಪ್ರಜಾಹಿತ ಚಿಂತಕ. ಕೃಷಿ ವ್ಯಾಪಾರಗಳಿಗೆ ಪ್ರೋತ್ಸಾಹವಿತ್ತುದರಿಂದ ಆರ್ಥಿಕ ಅಭಿವೃದ್ಧಿ ಸಾಧ್ಯವಾಯಿತು. ಈತ ರಾಜಧಾನಿಯನ್ನು ಅನುಮಕೊಂಡದಿಂದ ಓರುಗಲ್ಲಿಗೆ (ವಾರಂಗಲ್ಲಿಗೆ) ಸ್ಥಳಾಂತರಿಸಿ ಅದರ ಸುತ್ತ ಭದ್ರವಾದ ಕೋಟೆ ಕಟ್ಟಿಸಿದ. ಈ ಕಾಲದಲ್ಲಿ ಕಾಕತೀಯ ರಾಜ್ಯಕ್ಕೆ ಸಾಮ್ರಾಜ್ಯದ ಘನತೆ ಬಂತು. ಮುಖ್ಯವಾಗಿ ತೆಲುಗು ಭಾಷೆಯ ನೆಲವನ್ನೆಲ್ಲ ಒಂದೇ ರಾಜ್ಯಶಾಸನಕ್ಕೆ ಒಳಪಡಿಸಿದ ಕೀರ್ತಿ ಇವನದು.

ರುದ್ರಾಂಬಾ (ರುದ್ರಮಹಾದೇವಿ) ಮತ್ತು ಗಣಪಾಂಬಾ (ಗಣಪಮಹಾದೇವಿ) ಇವರಿಬ್ಬರು ಅವನ ಪುತ್ರಿಯರು. ರುದ್ರಾಂಬಾ ಪೂರ್ವ ಚಾಳುಕ್ಯವಂಶದ ರಾಜಕುಮಾರ ವೀರಭದ್ರನನ್ನು ವರಿಸಿದ್ದಳು. ಗಣಪತಿದೇವ ಈಕೆಯನ್ನು ತನ್ನ ರಾಜ್ಯಕ್ಕೆ ಉತ್ತರಾಧಿಕಾರಿಣಿಯಾಗಿ ನೇಮಿಸಿ, ರುದ್ರದೇವ ಎಂಬ ಪುರಷನಾಮದಿಂದ ಕರೆದ. ಗಣಪತಿಗೆ ಮುಪ್ಪು ಬಂದಾಗ-1259ರ ಹೊತ್ತಿಗೆ-ರುದ್ರಮಹಾದೇವಿ ರಾಜ್ಯಭಾರದಲ್ಲಿ ಭಾಗವಹಿಸತೊಡಗಿದಳು. ಒಂದೆರಡು ವರ್ಷಗಳಲ್ಲಿ ಆತ ಅಧಿಕಾರದಿಂದ ನಿವೃತ್ತನಾದ. ಅನಂತರ ರಾಜಪುತ್ರಿಯೇ ರಾಜ್ಯಸೂತ್ರವನ್ನು ಸ್ವತಂತ್ರವಾಗಿ ವಹಿಸಿಕೊಂಡಳು. ಅನಂತರವೂ ಕೆಲವು ವರ್ಷಗಳ ಕಾಲ ಗಣಪತಿದೇವ ಬದುಕಿದ್ದ.

ರುದ್ರಮಹಾದೇವಿ ರಾಜ್ಯಾಧಿಕಾರ ವಹಿಸಿಕೊಂಡದ್ದು ಕೆಲವು ರಾಜವಂಶದವರ ಮತ್ತು ನಾಯಕರ ಅಸಂತೋಷ ಮತ್ತು ಪ್ರತಿಭಟನೆಗಳಿಗೆ ಕಾರಣವಾಯಿತು. ಆದರೆ ರೇಚರ್ಲ ಪ್ರಸಾದಿತ್ಯ, ಗೋನಗನ್ನಯರೆಡ್ಡಿ ಮೊದಲಾದ ಹಲವು ಸ್ವಾಮಿನಿಷ್ಠ ಸಾಮಂತರ ಮತ್ತು ಅಧಿಕಾರಿಗಳ ಬೆಂಬಲ ದೊರೆತದ್ದರಿಂದ ಈಕೆ ತನ್ನ ರಾಜ್ಯಭಾರವನ್ನು 35 ವರ್ಷಗಳ ಕಾಲ (1261–95) ಸ್ಥೈರ್ಯದಿಂದ ನಡೆಸಿದಳು. ಅಂತಶ್ಶತ್ರುಗಳಿಗಿಂತ ಹೆಚ್ಚಾಗಿ ಬಾಹ್ಯ ಶತ್ರುಗಳಿಂದ ಈಕೆಗೆ ಆತಂಕಗಳುಂಟಾದವು. ಹೊರಗಿನ ಶತ್ರುಗಳ ಪೈಕಿ ಪೂರ್ವದಲ್ಲಿ ಕಲಿಂಗದ ಗಜಪತಿ, ಪಶ್ಚಿಮದಲ್ಲಿ ಸೇವುಣರು ಮತ್ತು ದಕ್ಷಿಣದಲ್ಲಿ ಪಾಂಡ್ಯರು ಪ್ರಮುಖರು.

ರುದ್ರಮಹಾದೇವಿ ಎಲ್ಲ ಗಂಡಾಂತರಗಳನ್ನೂ ಧೈರ್ಯದಿಂದ ಎದುರಿಸುತ್ತ ಸಮರ್ಥ ರೀತಿಯಿಂದ ರಾಜ್ಯಭಾರ ಮಾಡಿದಳು. ಪೂರ್ವಭಾಗದಲ್ಲಿ ಗೋದಾವರಿಯ ಮತ್ತು ವೆಂಗಿಯ ಪ್ರದೇಶಗಳು ಕೆಲಕಾಲ ಕೈಬಿಟ್ಟು ಹೋಗಿ ಮತ್ತೆ ಸ್ವಾಧೀನವಾದುವು. ಸೇವುಣರ ಆಕ್ರಮಣವನ್ನು ಶೌರ್ಯದಿಂದ ವಿರೋಧಿಸಿದಳು. ಪಾಂಡ್ಯರು ಆಕ್ರಮಿಸಿದ್ದ ಪ್ರದೇಶಗಳನ್ನು ಗೆದ್ದುಕೊಂಡಳು. ಈ ಸಮರಗಳಲ್ಲಿ ರುದ್ರಮಹಾದೇವಿಯ ಮಗಳ ಮಗನೂ ದತ್ತುಪುತ್ರನೂ ಆದ ಕುಮಾರ ರುದ್ರದೇವ ಪರಾಕ್ರಮದಿಂದ ಹೋರಾಡಿ ಜಯಗಳಿಸಿದ. ಆಂಧ್ರ ದೇಶದ ಮತ್ತು ಭಾರತದ ಚರಿತ್ರಾರ್ಹ ಮಹಿಳೆಯರಲ್ಲಿ ಈಕೆಯೂ ಒಬ್ಬಳು. ಸ್ತ್ರೀಯಾದರೂ ಈಕೆ ರಾಜಕಾರ್ಯದಲ್ಲಿಯೂ ಶೌರ್ಯ ಪರಾಕ್ರಮದಲ್ಲಿಯೂ ಯಾವ ರಾಜನಿಗೂ ಕಡಿಮೆಯಿರಲಿಲ್ಲ. ಪುರುಷವೇಷ ಧರಿಸಿ ಉತ್ಸಾಹದಿಂದ ಸಕಲ ರಾಜಕೀಯ ವ್ಯವಹಾರಗಳನ್ನೂ ನಿರ್ವಹಿಸುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಸಮರಭೂಮಿಯಲ್ಲಿಯೂ ಮುನ್ನುಗ್ಗುತ್ತಿದ್ದದ್ದುಂಟು. ಈಕೆಯ ಆಳ್ವಿಕೆಯಲ್ಲಿ ಪ್ರಜೆಗಳು ಸುಖಸಮಾಧಾನಗಳಿಂದ ಬಾಳಿದರು.

ರುದ್ರಮಹಾದೇವಿಯ ಮರಣಾನಂತರ ಕುಮಾರ ರುದ್ರದೇವ 1295ರಲ್ಲಿ ತನ್ನ 35ನೆಯ ವಯಸ್ಸಿನಲ್ಲಿ ಪಟ್ಟವೇರಿದ. ಇವನಿಗೆ ಪ್ರತಾಪರುದ್ರನೆಂದೂ ಹೆಸರಿತ್ತು. ಇವನಿಗೆ ರಾಜನೀತಿ ಯುದ್ಧನೀತಿಗಳಲ್ಲಿ ಸಾಕಷ್ಟು ಅನುಭವವಿತ್ತು. ಶತ್ರುಗಳ ಆಕ್ರಮಣವನ್ನು ವಿರೋಧಿಸಲು ಇವನು ಸೈನ್ಯವನ್ನು ಸಂಗ್ರಹಿಸಿ ಅದರ ಬಲವನ್ನೂ ಸಂಘಟನೆಯನ್ನೂ ಹೆಚ್ಚಿಸಿದ.

ಈ ಹೊತ್ತಿಗೆ ದಿಲ್ಲಿಯ ಸಿಂಹಾಸನವನ್ನು ಆಕ್ರಮಿಸಿದ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ ಉತ್ತರ ಭಾರತದಲ್ಲಿ ತನ್ನ ಆಧಿಪತ್ಯವನ್ನು ಸ್ಥಿರಗೊಳಿಸಿ ದಕ್ಷಿಣ ಭಾರತವನ್ನು ಜಯಿಸುವ ಮಹತ್ವಾಕಾಂಕ್ಷೆಯಿಂದ ದಂಡಯಾತ್ರೆಗಳಲ್ಲಿ ತೊಡಗಿದ. 1303ರಲ್ಲಿ ಕಾಕತೀಯ ರಾಜ್ಯದ ಮೇಲೆ ನಡೆದ ದಂಡಯಾತ್ರೆಯಲ್ಲಿ ದಿಲ್ಲಿಯ ಸೇನೆ ಪರಾಭವ ಹೊಂದಿತು. ಅನಂತರ 1310ರಲ್ಲಿ ಸುಲ್ತಾನನ ಸೇನಾಪತಿ ಮಲ್ಲಿಕ್ ಕಾಫರ್ ಪ್ರಚಂಡ ಸೈನ್ಯದೊಂದಿಗೆ ನುಗ್ಗಿ, ವಾರಂಗಲ್ ರಾಜಧಾನಿಗೆ ಮುತ್ತಿಗೆ ಹಾಕಿದ. ಪ್ರತಾಪರುದ್ರ ಸೋತು, ಅಪಾರ ಹಣ ಕೊಡಬೇಕಾಯಿತು. ಇದರಿಂದ ಆಂಧ್ರದಲ್ಲಿ ರಾಜಕೀಯ ಪರಿಸ್ಥಿತಿ ಅಸ್ಥಿರವಾಯಿತು.

ಪ್ರತಾಪರುದ್ರ ಸುಲ್ತಾನನಿಗೆ ಕೊಡತಕ್ಕ ಪೊಗದಿಯನ್ನು ನಿಲ್ಲಿಸಿದನೆಂಬ ನೆಪಹೂಡಿ, ಸೈನ್ಯಾಧಿಕಾರಿ ಖಿಸ್ರುಖಾನ 1318ರಲ್ಲಿ ವಾರಂಗಲ್ಲಿಗೆ ದಾಳಿಯಿಟ್ಟಾಗ ಪ್ರತಾಪರುದ್ರ ಪುನಃ ನಿರುಪಾಯನಾಗಿ ಕಪ್ಪ ತೆರಬೇಕಾಯಿತು. ಮುಂದೆ ದೆಹಲಿಯಲ್ಲಿ ರಾಜಕೀಯ ಕ್ರಾಂತಿ ನಡೆದು ಖಿಲ್ಜಿ ಸುಲ್ತಾನರ ಆಳ್ವಿಕೆ ಕೊನೆಗೊಂಡು 1320ರಲ್ಲಿ ತುಗಲಖ್ ಮನೆತನದ ಆಳ್ವಿಕೆ ಪ್ರಾರಂಭವಾಯಿತು. ಘಿಯಾಸುದ್ದೀನ್ ಈ ಮನೆತನದ ಮೊದಲ ಸುಲ್ತಾನ. ಈತ ತನ್ನ ಮಗ ಉಲುಘ್‌ಖಾನನನ್ನು 1323ರಲ್ಲಿ ತೆಲಂಗಾಣದ ದಂಡಯಾತ್ರೆಗೆ ಕಳುಹಿಸಿದ. ಮೊದಲ ಸಲ ಈ ಆಕ್ರಮಣ ವಿಫಲವಾದುದರಿಂದ, ದೆಹಲಿಯ ಸೇನೆ ಬೇಗನೆ ಸುಸಂಘಟಿತವಾಗಿ ಎರಡನೆಯ ಸಲ ವಾರಂಗಲ್ಲಿನ ಮೇಲೆ ಎರಗಿತು. ಅಜಾಗರೂಕತೆಯಿಂದಾಗಿ ಪ್ರತಾಪರುದ್ರ ಈ ದಾಳಿಯನ್ನು ಎದುರಿಸಲಾರದೆ ಪರಾಜಯ ಹೊಂದಿ ರಾಜಧಾನಿಯನ್ನು ಶತ್ರುವಿನ ವಶಕ್ಕೆ ಒಪ್ಪಿಸಬೇಕಾಯಿತು. ಉಲುಘ್‌ಖಾನ್ ಪ್ರತಾಪರುದ್ರನನ್ನೂ ಅವನ ಪರಿವಾರದವರನ್ನೂ ಬಂಧಿಸಿ ದಿಲ್ಲಿಗೆ ಕಳುಹಿಸಿದ. ಮಾರ್ಗದಲ್ಲಿ ಪ್ರತಾಪರುದ್ರ ಮೃತನಾದ. ಇವನ ಮರಣದೊಂದಿಗೆ ಕಾಕತೀಯರ ಆಳ್ವಿಕೆ ಮುಗಿಯಿತು. ತೆಲಂಗಾಣ ಪ್ರದೇಶದ ಮೇಲೆ ದೆಹಲಿಯ ಪ್ರಭುತ್ವ ಸ್ಥಾಪಿತವಾಯಿತು. (ಪಿ.ಬಿ.ಡಿ.)

**ಕಾಕನಕೋಟೆ :** ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಸ್ಥಳ. ಖೆಡ್ಡಾಗಳಿಗೆ ಪ್ರಸಿದ್ಧ. ಮೈಸೂರಿಗೆ 77 ಕಿಮೀ ದೂರದಲ್ಲಿದೆ. ದಟ್ಟವಾದ ಕಾಡಿನಿಂದ ಕೂಡಿದ ಈ ಪ್ರದೇಶದಲ್ಲಿ ತೇಗ, ಹೊನ್ನೆ, ನಂದಿ, ಬೀಟೆ ಮುಂತಾದ ಮರಗಳು ಹುಲುಸಾಗಿ ಬೆಳೆದಿವೆ. ಇಲ್ಲಿ ತೇಗದ ಮರಗಳನ್ನು ಬೆಳೆಯುವ ಸರ್ಕಾರಿ ನೆಡುತೋಟಗಳಿವೆ.

ಕಾಕನಕೋಟೆಯು ಕಾಡು ಆನೆಗಳ ಬೀಡು. ಆನೆಗಳಿಂದ ಬೆಳೆಗಳಿಗೂ ಜನಜೀವನಕ್ಕೂ ಆಗಾಗ ತೊಂದರೆ ಆಗುವುದು ಸಾಮಾನ್ಯ. 1873–1971ರ ವರೆಗೆ ನಡೆಸಿದ 36 ಖೆಡ್ಡಾಗಳಲ್ಲಿ 24ನ್ನು ಕಾಕನಕೋಟೆ ಪ್ರದೇಶದಲ್ಲೇ ನಡೆಸಲಾಯಿತು. 1968ರಲ್ಲಿ ಹಿಡಿಯಲಾದ ಆನೆಗಳ ಸಂಖ್ಯೆ 88; 1971ರಲ್ಲಿ 41. ಕಪಿಲಾ ಯೋಜನೆಯಿಂದಾಗಿ ಈ ಪ್ರದೇಶದ ಬಹುಭಾಗ ನೀರಿನಲ್ಲಿ ಮುಳುಗಡೆಯಾಗಿದೆ. (ಕೆ.ಆರ್.ಆರ್.)

**ಕಾಕರ್, ಎಮಿಲ್ ತಿಯೊಡೋರ್ :** 1841–1917. ಸ್ವಿಟ್ಜರ್ಲೆಂಡಿನ ಶಸ್ತ್ರವೈದ್ಯ. ಬರ್ನ್ ವಿಶ್ವವಿದ್ಯಾಲಯದಲ್ಲಿ ಪದವೀಧರನಾಗಿ (1865) ಬರ್ಲಿನ್, ಲಂಡನ್, ಪ್ಯಾರಿಸ್, ವಿಯನ್ನಾಗಳಲ್ಲಿ ಅಭ್ಯಸಿಸಿದ. ವಿಯನ್ನಾದಲ್ಲಿ ಜಠರ ಶಸ್ತ್ರಕ್ರಿಯೆಗೆ ಹೆಸರಾಗಿದ್ದ ಬಿಲ್‌ರಾತನ ವಿದ್ಯಾರ್ಥಿಯಾಗಿದ್ದ. ಬರ್ನ್‌ನಲ್ಲಿ ರೋಗಿಬದಿಯ (ಕ್ಲಿನಿಕಲ್) ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ (1872) 45 ವರ್ಷಗಳ ಕಾಲ ಇಲಾಖೆಯ ಮುಖ್ಯಸ್ಥನಾಗಿದ್ದ. ಆಗಿನ ಕಾಲದಲ್ಲಿ (1881) ಸ್ವಿಟ್ಜರ್ಲೆಂಡಿನಲ್ಲಿ ಲಿಸ್ಟರ್ ತತ್ತ್ವಗಳನ್ನು ಇವನು ಮೊಟ್ಟಮೊದಲು ಜಾರಿಗೆ ತಂದ. ಆದರೂ ಈತನ ಮನೋಧರ್ಮ ಹೊಸ ವಿಧಾನಗಳನ್ನು ಸುಲಭವಾಗಿ ಒಪ್ಪಿಕೊಳ್ಳುವಂತಿತ್ತು. ಕೊನೆಗೆ ಪೂರ್ತಿ ನಂಜಿಲ್ಲದ (ಎಸೆಪ್ಟಿಕ್) ವಿಧಾನವನ್ನು ಒಪ್ಪಿಕೊಂಡ. ಪ್ರಯೋಗದ, ಅಂಗಕ್ರಿಯೆಯ ಸೂತ್ರಗಳನ್ನು ಶಸ್ತ್ರವೈದ್ಯಕ್ಕೆ ಚೆನ್ನಾಗಿ ಅಳವಡಿಸುವುದರಲ್ಲಿ ಕಾಕರ್ ಮುಂದಾಳಾಗಿದ್ದ. ಅವನಿಗೆ ಹೆಸರು ತಂದ ಗುರಾಣಿಕ (ಥೈರಾಯ್ಡ್) ಗ್ರಂಥಿಯ ಕೆಲಸ, ರೋಗ, ಶಸ್ತ್ರವೈದ್ಯ ಮುಖ್ಯವಾಗಿ ಗಳಗಂಡದ (ಗಾಯ್ಟರ್) ವಿಚಾರಗಳ ಪ್ರಬಂಧಗಳಿಗಾಗಿ ನೊಬೆಲ್ ಬಹುಮಾನ (1909) ದೊರೆಯಿತು. ಸುಮಾರು 9,000ಕ್ಕೂ ಮೀರಿದ ಗಳಗಂಡದ ಶಸ್ತ್ರಕ್ರಿಯೆಗಳನ್ನು ನಡೆಸಿ ಬಲು ಅಪಾಯಕರ, ಕಷ್ಟಕರ ಆದದ್ದನ್ನು ತೀರ ಸರಳ ಎನಿಸುವಂತೆ ತೋರಿಸಿಕೊಟ್ಟ. ಈ ಶಸ್ತ್ರಕ್ರಿಯೆಯಿಂದ ಇವನ ರೋಗಿಗಳ ಸಾವಿನ ಸಂಖ್ಯೆ ಶೇ.1ಕ್ಕೂ ಕಡಿಮೆ ಇತ್ತು. ಹೆಗಲಿನ ಕೀಲ್ತಪ್ಪಿಕೆಯನ್ನು ಸರಿಪಡಿಸುವ ವಿಧಾನವನ್ನು ಜಠರ, ಪುಪ್ಪುಸ, ಪಿತ್ತಕೋಶ, ನಾಲಗೆ, ಕಪಾಲನರಗಳು, ಬೂರುಗಳ ಶಸ್ತ್ರಕ್ರಿಯಾವಿಧಾನಗಳಲ್ಲಿ ಬದಲಾವಣೆಗಳನ್ನೋ ಹೊಸ ವಿಧಾನಗಳನ್ನೋ ಜಾರಿಗೆ ತಂದ. ಕರುಳನ್ನು ಕತ್ತರಿಸಿ ತೆಗೆದು ಉಳಿದ ಕೊನೆಗಳನ್ನು ಮತ್ತೆ ಹೊಲಿದು ಸರಿಪಡಿಸಿದವರಲ್ಲಿ ಇವನೇ ಮೊದಲಿಗ. ಅಲ್ಲದೆ, ಹಲವಾರು ಉಪಾಯಗಳು, ಸಲಕರಣೆಗಳು, ಉಪಕರಣಗಳನ್ನು ಕಂಡುಹಿಡಿದ. ಈಗಲೂ ಅವನ ಹೆಸರಿನ ಚಿಮಟವೂ ಹಲಬಗೆಯ ಇರಿತಗಳೂ (ಇನ್‌ಸಿಷನ್ಸ್) ಎಲ್ಲೆಲ್ಲೂ ಬಳಕೆಯಲ್ಲಿವೆ. ಕಾಕರ್ ಯುರೋಪಿನ ಅನೇಕ ಪ್ರಸಿದ್ಧ ಶಸ್ತ್ರವೈದ್ಯರ ಗುರುವಾಗಿದ್ದ. ಇವನ ಶಸ್ತ್ರವೈದ್ಯದ ಪಠ್ಯಪುಸ್ತಕ (1892) ಹಲವು ಭಾಷೆಗಳಿಗೆ ಅನುವಾದಗೊಂಡು ಕೆಲವು ಆವೃತ್ತಿಗಳನ್ನೂ ಕಂಡಿದೆ. (ಡಿ.ಎಸ್.ಎಸ್.)

**ಕಾಕಲ್ :** ಎರಡು ಹೋಳುಗಳಿಂದ ಕೂಡಿದ ಚಿಪ್ಪುಳ್ಳ ಕಾರ್ಡಿಯಂ ಎಂಬ ಶಾಸ್ತ್ರೀಯ ನಾಮದ ಸಾಗರವಾಸಿ ಮೃದ್ವಂಗಿ. ಹೃದಯಚಿಪ್ಪಿನ ಹುಳು ಎಂದು ಕರೆಯುವುದಿದೆ. ಇದು ಯೂಲಾಮೆಲಿಬ್ರಾಂಕಿಯ ಗಣದ ಕಾರ್ಡಿಡೀ ಕುಟುಂಬಕ್ಕೆ ಸೇರಿದೆ. ಚಿಪ್ಪಿನ ಹೋಳುಗಳಲ್ಲಿ ಪ್ರಮುಖವಾದ ಅಂಬೋಗಳು ಮತ್ತು ಹೋಳುಗಳ ಹೊರಮೈ ಮೇಲೆ ವಿಕಿರಣಗೊಳ್ಳುವ ದೆಬ್ಬೆಗಳು (ರಿಬ್ಸ್) ಇರುವುದು ಇವುಗಳ ವಿಶೇಷ ಲಕ್ಷಣ. ಅಲ್ಲದೆ ಎರಡು ಚಿಪ್ಪಿನ ಹೋಳುಗಳು ಮುಚ್ಚಿಕೊಂಡಾಗ ಹೃದಯದಾಕಾರವಾಗಿ ಕಾಣುವುದರಿಂದ ಈ ಮೃದ್ವಂಗಿಗಳಿಗೆ ಹೃದಯ ಚಿಪ್ಪಿನ ಹುಳುಗಳೆಂದೂ ಇಂಗ್ಲಿಷಿನಲ್ಲಿ ಸಾಮಾನ್ಯವಾಗಿ ಕಾಕಲ್ ಎಂದೂ ಹೆಸರು ಬಂದಿದೆ. ಪ್ರಪಂಚದ ಎಲ್ಲ ಸಾಗರಗಳಲ್ಲೂ ಕಾಣಬರುವ ಇವುಗಳಲ್ಲಿ ಸುಮಾರು 53 ಜಾತಿಗಳೂ 250 ಪ್ರಭೇದಗಳೂ ಇವೆ. ಉಷ್ಣವಲಯದಲ್ಲಿ ಇವುಗಳ ಸಂಖ್ಯೆ ಹೆಚ್ಚು. ಸಾಮಾನ್ಯವಾಗಿ ಉಬ್ಬರವಿಳಿತಗಳ ನಡುವಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರೂ ಕೆಲವು 1,800' ಆಳದ ವರೆಗೂ ವ್ಯಾಪಿಸಿರುತ್ತವೆ. ಸಾಮಾನ್ಯವಾಗಿ ಮರಳು ಅಥವಾ ಮಣ್ಣಿನಲ್ಲಿ 3 ಸೆಂಮೀ ಆಳದವರೆಗೆ ತಮ್ಮ ಪಾದದ ಸಹಾಯದಿಂದ ಬಿಲ ತೋಡಿ ಹುದುಗಿರುತ್ತವೆ. ಅಲ್ಲದೆ ಹಾಗೆಯೇ ಮಣ್ಣಿನಲ್ಲಿ ನೆಲ ಉಳುವ ರೀತಿಯಲ್ಲಿ ಚಲಿಸುತ್ತವೆ.

ಈ ಪ್ರಾಣಿಯ ದೇಹವನ್ನು ಎರಡು ಸಮರೂಪದ ಚಿಪ್ಪುಗಳು ಆವರಿಸಿವೆ. ಚಿಪ್ಪುಗಳು ಲಿಗಮೆಂಟು ಮತ್ತು ಕೀಲುಹಲ್ಲುಗಳ (ಹಿಂಜ್ ಟೀತ್) ಸಹಾಯದಿಂದ ಬಂಧಿತವಾಗಿವೆ. ಚಿಪ್ಪುಗಳನ್ನು ಮುಚ್ಚುವುದಕ್ಕೆ ತೆಗೆಯುವುದಕ್ಕೆ ಸಹಾಯಕವಾಗಿ ದೇಹದಲ್ಲಿ ಅಡ್ಡಲಾಗಿ ಅಳವಡಿಸಿರುವ ಎರಡು ಪ್ರಬಲವಾದ ಸ್ನಾಯುಗಳಿವೆ. ಪಾದ ಸ್ನಾಯುಮಯವಾಗಿದ್ದು ತುದಿಯಲ್ಲಿ ಸ್ವಲ್ಪಮಟ್ಟಿಗೆ ಚೂಪಾಗಿದೆ. ಅಲ್ಲದೆ ಮಧ್ಯಭಾಗದಲ್ಲಿ ಮಂಡಿಯಂತೆ ಕೊಂಚ ಬಾಗಿದೆ. ಇದರ ಸಹಾಯದಿಂದ ಕಾಕಲ್ ಮರಳಿನ ಮೇಲೆ ನೆಗೆಯಬಲ್ಲುದು. ಚಿಪ್ಪುಗಳು ಸಾಮಾನ್ಯವಾಗಿ ಕಂದು, ಹಳದಿ, ಕೆಂಪು ಮೊದಲಾದ ಮೋಹಕ ಬಣ್ಣಗಳಿಂದ ಕೂಡಿದ್ದು ವರ್ಣರಂಜಿತವಾಗಿವೆ. ಅಲ್ಲದೆ ಮೇಲೆಲ್ಲ ಸುಪುಷ್ಟವಾದ ಕೆತ್ತನೆಯಂಥ ರಚನೆಯೂ ಉಂಟು.

ಮ್ಯಾಂಟಲ್‌ಪಾಲಿಗಳು ದೇಹದ ಹಿಂಭಾಗದಲ್ಲಿ ಪರಸ್ಪರ ಕೂಡಿಕೊಂಡು ಎರಡು ಚಿಕ್ಕ ಜಲನಾಲೆಗಳಾಗಿ ರೂಪಗೊಂಡಿವೆ. ಒಂದು ನಾಲೆಯ ದ್ವಾರದ ಮೂಲಕ ಪ್ರಾಣಿಗೆ ಬೇಕಾದ ಸೂಕ್ಷ್ಮಜೀವಿಯನ್ನು ಒಳಗೊಂಡ ನೀರಿನ ಪ್ರವಾಹ ದೇಹವನ್ನು ಪ್ರವೇಶಿಸುತ್ತದೆ. ಮತ್ತೊಂದರಿಂದ ತ್ಯಾಜ್ಯವಸ್ತುಗಳಿಂದ ಕೂಡಿದ ನೀರಿನ ಪ್ರವಾಹ ದೇಹದಿಂದ ಹೊರಕ್ಕೆ ಬರುತ್ತದೆ. ಪಾದದ ಇಕ್ಕೆಡೆಗಳಲ್ಲಿ ಮತ್ತು ಹಿಂಭಾಗದಲ್ಲಿ ಶ್ವಸನಕಾರ್ಯದಲ್ಲಿ ನೆರವಾಗುವ ಎರಡು ಕಿವಿರುಗಳಿವೆ.

ಕಾಕಲ್ ಪ್ರಾಣಿಗಳಲ್ಲಿ ಗಂಡು, ಹೆಣ್ಣು ಎಂಬ ಲಿಂಗಭೇದವಿದೆ. ಅಂಡಾಣು ಮತ್ತು ಶುಕ್ರಾಣು ಪ್ರಾಣಿಗಳ ದೇಹದಿಂದ ಹೊರಬಂದು ಪರಸ್ಪರ ಕೂಡಿ ಯುಗ್ಮಾಣುವಾಗುತ್ತದೆ. ಇದರಿಂದ ಕೆಲವು ಕಾಲಾನಂತರ ಚಲನಸಾಮರ್ಥ್ಯವುಳ್ಳ ಚಿಕ್ಕ ಡಿಂಭಗಳು ಹೊರಬರುತ್ತವೆ. ಇವು ಸ್ವತಂತ್ರವಾಗಿ ಕೆಲಕಾಲ ಈಜಿ ಕಾಯಪರಿವರ್ತನೆ ಹೊಂದಿ ಕೊನೆಗೆ ನೀರಿನ ತಳಕ್ಕೆ ಹೋಗಿ ದೊಡ್ಡದಾಗುತ್ತವೆ.

ಯುರೋಪಿನ ಪಶ್ಚಿಮ ತೀರದ ಜನರು ಕಾರ್ಡಿಯಂ ಮತ್ತು ಸೆರಾಸ್ಟೋಡರ್ಮ ಎಡ್ಯೂಲ್ ಎಂಬ ಹೃದಯ ಚಿಪ್ಪುಹುಳುಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಕಾರ್ಡಿಯಂ ಪ್ರಭೇದ ಥೇಮ್ಸ್‌ನದೀ ಮುಖಜಭೂಮಿಯಲ್ಲಿ ಹೇರಳವಾಗಿ ಕಂಡುಬರುತ್ತದೆ.

ಬೆಸ್ತರು ಈ ಹುಳುಗಳನ್ನು ಬರಿಗೈಯಿಂದಲೇ ಬೇಟೆಯಾಡುವುದುಂಟು. ಆದರೆ ಸಾಮಾನ್ಯವಾಗಿ ಪಿಕಾಸಿ, ಗುದ್ದಲಿ ಮೊದಲಾದ ಉಪಕರಣಗಳನ್ನು ಉಪಯೋಗಿಸಿ ಅಗೆದು ಇವನ್ನು ಸಂಗ್ರಹಿಸುತ್ತಾರೆ. ಮಾರುಕಟ್ಟೆಗೆ ಸಾಗಿಸುವ ಮೊದಲು ಇವನ್ನು ಬಿಸಿ ನೀರಿನಲ್ಲಿ ಅದ್ದಿ ಚೆನ್ನಾಗಿ ತೊಳೆಯುತ್ತಾರೆ. ಇವುಗಳಲ್ಲಿರಬಹುದಾದ ಟೈಫಾಯ್ಡ್ ಬ್ಯಾಕ್ಟೀರಿಯಗಳನ್ನು ಕೊಲ್ಲುವ ಮುನ್ನೆಚ್ಚರಿಕೆಯ ಕ್ರಮ ಇದು. ಈ ಪ್ರಾಣಿಗಳನ್ನು ಉಪ್ಪು ಅಥವಾ ವಿನಿಗರ್‌ಗಳಲ್ಲಿ ನೆನೆಹಾಕಿ ಡಬ್ಬಗಳಲ್ಲಿಟ್ಟು ಸಂರಕ್ಷಿಸುವುದೂ ಉಂಟು. ಇವು ಕೇವಲ ಮಾನವನ ಆಹಾರ ಮಾತ್ರವಲ್ಲದೆ ಸಮುದ್ರದಲ್ಲಿ ವಾಸಿಸುವ ಮೀನು, ಪಕ್ಷಿ, ನಕ್ಷತ್ರಮೀನುಗಳ ಆಹಾರವೂ ಆಗಿವೆ.

ಆಸ್ಟ್ರೇಲಿಯದ ಗ್ಲೈಸಿಮೆರಿಡೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಚಿಪ್ಪುಹುಳುಗಳನ್ನು ನಾಯಿ ಹೃದಯ ಚಿಪ್ಪುಹುಳು (ಡಾಗ್ ಕಾಕಲ್) ಎಂದು ಕರೆಯುವುದುಂಟು. ಇದು ಹೊರನೋಟಕ್ಕೆ ನಿಜವಾದ ಹೃದಯ ಚಿಪ್ಪು ಹುಳುಗಳನ್ನೇ ಹೋಲುತ್ತದೆ. ಇದನ್ನು ಅಲ್ಲಿಯ ಮೂಲನಿವಾಸಿಗಳು ತಿನ್ನುತ್ತಾರೆ. (ಜಿ.ವಿ.ಎನ್.)

**ಕಾಕಸಸ್ :** ಕಪ್ಪುಸಮುದ್ರಕ್ಕೂ ಅಜ಼ಾಫ್ ಸಮುದ್ರಕ್ಕೂ ನಡುವೆ ಇರುವ ಕೆರ್ಚ್ ಜಲಸಂಧಿಯ ಬಳಿಯಿಂದ ಹಿಡಿದು ಕ್ಯಾಸ್ಪಿಯನ್ ಸಮುದ್ರದವರೆಗೆ ವಾಯುವ್ಯದಿಂದ ಆಗ್ನೇಯಾಭಿಮುಖವಾಗಿ 1440 ಕಿಮೀ ದೂರ ಹಬ್ಬಿರುವ ಪರ್ವತ ಶ್ರೇಣಿ. ಸಮ ಹರಡು, ಕಿರು ಅಗಲ, ಉತ್ತರ ದಕ್ಷಿಣ ಪಕ್ಕಗಳ ಖಚಿತ ಹೊರರೇಖೆ-ಇವುಗಳಿಂದಾಗಿ ಅದು ಆಲ್ಪ್ಸ್ ಪರ್ವತಕ್ಕಿಂತ ಪಿರನೀಸ್ ಪರ್ವತವನ್ನೇ ಹೆಚ್ಚಾಗಿ ಹೋಲುತ್ತದೆ. ಪಿರನೀಸಿನಂತೆ ಇದೂ ಎತ್ತರ. ಆಲ್ಪ್ಸ್ ಪರ್ವತದಂತೆ ಇದನ್ನು ಕಣಿವೆಗಳು ಸೀಳಿಲ್ಲ. ಪಿರನೀಸ್ ಪರ್ವತದಂತೆ ಕಾಕಸಸಿನ ಅತ್ಯುನ್ನತ ಶಿಖರಗಳೂ ಇದರ ಉಪಶ್ರೇಣಿಗಳಲ್ಲಿವೆಯೇ ಹೊರತು ಪ್ರಧಾನ ಶ್ರೇಣಿಯಲ್ಲಿಲ್ಲ.

**ಪಶ್ಚಿಮ ವಿಭಾಗ:** ಕಾಕಸಸ್ ಪರ್ವತಶ್ರೇಣಿಯನ್ನು ಪಶ್ಚಿಮ, ಮಧ್ಯ ಮತ್ತು ಪೂರ್ವವಿಭಾಗಗಳೆಂದು ವಿಂಗಡಿಸಬಹುದು. ಕೆರ್ಚ್ ಜಲಸಂಧಿಯ ಬಳಿಯಿಂದ ಉತ್ತರ ಇರಾನಿನ ಎಲ್‌ಬುರ್ಜ್ ಪರ್ವತದ ವರೆಗೆ ವ್ಯಾಪಿಸಿ, ಕಪ್ಪುಸಮುದ್ರಕ್ಕೆ ಸಮಾಂತರದಲ್ಲಿ 672 ಕಿಮೀ ದೂರ ಸಾಗಿರುವುದು ಪಶ್ಚಿಮವಿಭಾಗ, ಪ್ರಧಾನ ಶ್ರೇಣಿಗೂ ಸಮುದ್ರಕ್ಕೂ ನಡುವೆ ಇಕ್ಕಟ್ಟಾದ ಕಣಿವೆಗಳಿಂದ ಪ್ರತ್ಯೇಕವಾಗಿರುವ ಎರಡು ಸಮಾಂತರದ ಶ್ರೇಣಿಗಳಿವೆ. ಪ್ರಧಾನಶ್ರೇಣಿಯ ಹಿಂದೆಯೂ ಇದೇ ರೀತಿ ಕಡಿದಾದ ಬೊಕೊವೊಯ್ ಖ್ರಿಬೆಟ್ ಕಣಿವೆಯಿಂದ ಪ್ರತ್ಯೇಕವಾಗಿರುವ ಹಾಗೂ ಪ್ರಧಾನ ಶ್ರೇಣಿಗೆ ಸಮಾಂತರದಲ್ಲಿರುವ ಮೂರನೆಯ ಉಪಶ್ರೇಣಿಯೊಂದುಂಟು. ಈ ಪ್ರದೇಶದಲ್ಲಿ ಮಳೆ ಹೆಚ್ಚಾಗಿ ಬೀಳುವುದರಿಂದಲೂ ಅನುಕೂಲ ಹವಾಮಾನವಿರುವುದರಿಂದಲೂ ಈ ಎಲ್ಲ ಶ್ರೇಣಿಗಳ ಅನೇಕ ಇಕ್ಕಟ್ಟಾದ ಕಂದರಗಳಲ್ಲಿ ಹಾಗೂ ಕಮರಿಗಳಲ್ಲಿ ಸಸ್ಯಸಂಪತ್ತು ಸಮೃದ್ಧವಾಗಿದೆ. ಈ ಭಾಗದ ಬೆಟ್ಟದ ಚಾಚುಗಳು ಸಮುದ್ರದ ಕಡೆ ಕಡಿದಾಗಿರುವುದರಿಂದಲೂ ತೀರಪ್ರದೇಶ ಕಗ್ಗಾಡಿನಿಂದ ಕೂಡಿರುವುದರಿಂದಲೂ ಪ್ರವೇಶ ಸುಲಭ ಸಾಧ್ಯವಾಗಿಲ್ಲ. ಕೆಲವು ಕಡೆ ಈ ಚಾಚುಗಳು 600-909 ಮೀ ಎತ್ತರಕ್ಕಿವೆ. ಪ್ರಧಾನ ಶ್ರೇಣಿ ಪೂರ್ವದತ್ತ ಸಾಗಿದಂತೆ 3030 ಮೀ.ಗಳಿಂದ 3636 ಮೀ. ಗಳವರೆಗೆ ಏರುತ್ತದೆ. ಈ ವಿಭಾಗದಲ್ಲಿರುವ ಪ್ರಮುಖ ಶಿಖರಗಳಿವು: ಫಿಷ್ಟ್ (2436 ಮೀ), ಓಷ್ಟೆನ್ (2791 ಮೀ), ಷುಗುಜ್ (3224 ಮೀ), ಸೈಷ್ (3765 ಮೀ). ಪ್ರಧಾನ ಶ್ರೇಣಿ ಗಟ್ಟಿಯಾದ ಸ್ಫಟಿಕ ಮಾದರಿಯ ಕಲ್ಲುಬೆಟ್ಟಗಳಿಂದ ಕೂಡಿದೆ. ಉಪಶ್ರೇಣಿಗಳು ಸುಲಭವಾಗಿ ಬಿಡಿಸಬಹುದಾದ ಮೆತ್ತನೆಯ ಕಲ್ಲುಪದರಗಳಿಂದ ಕೂಡಿವೆ. ಅತ್ಯಂತ ಹಿರಿಯ ಶಿಖರಗಳಲ್ಲಿ 2727 ಮೀ ಎತ್ತರದಲ್ಲಿ ಮಂಜು ಮುಸುಕಿರುತ್ತದೆ. ಕೆಲವು ಕಡೆ 2424 ಮೀ ಎತ್ತರದಲ್ಲೂ ಹಿಮರೇಖೆಯುಂಟು. ಓಷ್ಟೆನ್ ಶೃಂಗದ ಪೂರ್ವದಲ್ಲಿ ಪ್ರಧಾನ ಪರ್ವತಪಂಕ್ತಿ ಸದಾ ಮಂಜಿನಿಂದ ಕೂಡಿ, ಅಲ್ಲಿಂದ ಅನೇಕ ಹಿಮನದಿಗಳು ಇಳಿಬಿದ್ದು ಕಣಿವೆಗಳಲ್ಲಿ ಸಾಗುತ್ತವೆ.

ಪಶ್ಚಿಮ ಕಾಕಸಸ್ ವಿಭಾಗದಲ್ಲಿರುವ ಕೆಲವೇ ಕಣಿವೆ ಮಾರ್ಗಗಳು ಬಹಳ ಎತ್ತರದಲ್ಲಿವೆ. ಪರ್ವತದ ಉತ್ತರಭಾಗದ ಮೇಡುಗಳು ಇಳಿಜಾರುಗಳಿಂದ ಕೂಡಿಲ್ಲದಿದ್ದರೂ ಕಪ್ಪುಸಮುದ್ರ ಮತ್ತು ಕೂಬ್ಯಾನ್ ಕಣಿವೆಗೂ ಆ ಕಣಿವೆಯ ಆಚಿನ ಮೈದಾನ ಪ್ರದೇಶಕ್ಕೂ ಸಂಪರ್ಕ ಸುಲಭವಲ್ಲ. ಪಶ್ಚಿಮದಿಂದ ಪೂರ್ವಕ್ಕೆ ಹೋಗುವ ಕಣಿವೆ ಮಾರ್ಗಗಳಲ್ಲಿ ಮುಖ್ಯವಾದವು-ಷೇಖ್ 1467 ಮೀ), ಷೆಟ್ಲಿಬ್ (1836 ಮೀ), ಸೆಯಷ್ಕ (2085 ಮೀ), ಸಾಂಚಾರ್ (2421 ಮೀ), ಸಾಂಚಾರ್ ಘಾಟ್ ಮಾರ್ಗಕ್ಕೂ ಎಲ್‌ಬುರ್ಜ್ ಪರ್ವತಕ್ಕೂ ನಡುವೆ ಮುರುಖ್ (3485 ಮೀ), ಕ್ಲುಖೋರ್ (2864 ಮೀ) ಮತ್ತು ನಾಖರ್ (2914 ಮೀ) ಕಣಿವೆ ಮಾರ್ಗಗಳಿವೆ.

ಪಶ್ಚಿಮ ಕಾಕಸಸ್ ವಿಭಾಗದ ಪ್ರಾದೇಶಿಕ ಲಕ್ಷಣ ಮತ್ತು ಅನುಕೂಲ ವಾಯುಗುಣದಿಂದ ಅದರ ದಕ್ಷಿಣದ ತೆರಪಿನಲ್ಲಿ ಗಿಡಮರಗಳು ಒತ್ತಾಗಿಯೂ ಯಥೇಚ್ಛವಾಗಿಯೂ ಬೆಳೆದು ನಿಂತಿವೆ. ವಿವಿಧ ಮರಗಳನ್ನೂ ಬಳ್ಳಿಗಳನ್ನೂ ಒಳಗೊಂಡ ದಟ್ಟ ಕಾಡುಗಳು ಈ ಪ್ರದೇಶದ ಶೇಕಡ 56ರಷ್ಟು ಭಾಗವನ್ನು ಆಕ್ರಮಿಸಿಕೊಂಡಿವೆ. ಆಷ್, ಫರ್, ಪೈನ್, ಬೀಚ್, ಎಲ್ಮ್, ಲೈಮ್, ಯ್ಯೂ, ಎಲ್ಡರ್, ವಿಲೊ, ಓಕ್ ಮೊದಲಾದ ಮಧ್ಯ ಐರೋಪ್ಯ ವೃಕ್ಷಗಳು ಈ



ಕಾಕಸಸ್ ಕಾಡು : ಪ್ರಕೃತಿಯ ವಿಜೃಂಭಣೆ

ಅರಣ್ಯಗಳಲ್ಲಿ ಬೆಳೆಯುವುವಲ್ಲದೆ ನಿತ್ಯಹಸುರಿನ ಪೈನ್ ಜಾತಿಯ ಮರಗಳೂ ವ್ಯಾಪಕವಾಗಿ ಉಂಟು. ಅನೇಕ ಬಗೆಯ ಕುರುಚಲುಗಳನ್ನೂ ಜಲಸಸ್ಯಗಳನ್ನೂ ಇಲ್ಲಿ ಕಾಣಬಹುದು. ದ್ರಾಕ್ಷಿ, ಪೀಚ್, ದಾಳಿಂಬೆ, ಅಂಜೂರ ಮತ್ತು ಆಲೈವ್ ಇವು ಸಮುದ್ರಮಟ್ಟಕ್ಕೆ 454 ಮೀ ಎತ್ತರದ ಪ್ರದೇಶಗಳಲ್ಲಿ ಬೆಳೆಯುತ್ತವೆ. ಚೆಸ್‌ನಟ್, ಏಪ್ರಿಕಾಟ್, ಸೇಬು, ಪೇರುಹಣ್ಣು, ಪ್ಲಮ್, ಚೆರಿ, ಕರಬೂಜು-ಕಲ್ಲಂಗಡಿ, ಮುಸುಕಿನ ಜೋಳ, ಆಲೂಗೆಡ್ಡೆ, ಬಟಾಣಿ, ಹತ್ತಿ, ಬತ್ತ, ಹೊಗೆಸೊಪ್ಪು-ಇವು ಈ ಪರ್ವತಭಾಗದ ಬೆಳೆಗಳು.

ಪರ್ವತದ ಈ ಭಾಗದ ನೆರೆಯ ಕಡಲಕರೆ-ಬಹುತೇಕ ನೇರ, ರೇವುಪಟ್ಟಣಗಳು ವಿರಳ, ಕ್ರಿಮಿಯದ ಆಗ್ನೇಯ ತೀರದಲ್ಲಿರುವಂತೆ ಇಲ್ಲಿ ಹಲವು ಬೇಸಗೆಯ ಈಜುದಾಣಗಳಿವೆ. ನಾವರಸ್ಸೈಕ್ಸ್, ಗ್ಲೆಂಜಿಕ್, ಅನಪ, ಸುಖುಂ-ಕಾಲ್ಪ್, ಪೋಟಿ ಮತ್ತು ಬಾಟೂ ಮುಖ್ಯ ಲಂಗರು ನೆಲೆಗಳು.

**ಮಧ್ಯ ವಿಭಾಗ:** ಪರ್ವತಶ್ರೇಣಿಯ ಮಧ್ಯವಿಭಾಗವನ್ನು ಮತ್ತೆ ಪಶ್ಚಿಮ ಪೂರ್ವಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮ ಉಪ ಭಾಗ ಎಲ್‌ಬುರ್ಜ್ ಪರ್ವತದಿಂದ ಪ್ರಾರಂಭವಾಗಿ ಕಾಸ್ಬೆಕ್ ಪರ್ವತ ಹಾಗೂ ಡೇರಿಯಲ್ ಘಾಟಿನ ವರೆಗೆ 320 ಕಿಮೀ ಅಂತರ ಹೊಂದಿದೆ. ಈ ಭಾಗದಲ್ಲಿ ಇಡೀ ಕಾಕಸಸ್ ಶ್ರೇಣಿಯಲ್ಲೇ ಅತ್ಯಂತ ಎತ್ತರವಾದ ಶಿಖರಗಳಿವೆ. ಸಮುದ್ರಮಟ್ಟಕ್ಕೆ 4545ಮೀ ಗೂ ಹೆಚ್ಚು ಎತ್ತರದ ಶಿಖರಗಳಿವು: ಷ್ಕಾರಾಟೌ (5164 ಮೀ) ಕಾಷ್ಟಾನ್-ಟೌ (5114 ಮೀ), ಎಲ್‌ಬುರ್ಜ್ (ಪಶ್ಚಿಮಶಿಖರ: 5595 ಮೀ; ಪೂರ್ವಶಿಖರ 5559 ಮೀ), ಜೈಕಿಲ್ (5388 ಮೀ), ಡಿಕ್-ಟೌ (5167 ಮೀ), ಜಂಗಾ-ಟೌ (ಪಶ್ಚಿಮಶಿಖರ 5030 ಮೀ; ಪೂರ್ವಶಿಖರ 5007 ಮೀ), ಕಾಸ್ಬೆಕ್ (5014 ಮೀ), ಮಿಷಿರ್ಘಿ-ಟೌ (ಪಶ್ಚಿಮಶಿಖರ 4973 ಮೀ; ಪೂರ್ವ ಶಿಖರ 4954 ಮೀ), ಅಡಿಷ್ ಅಥವಾ ಕಾಟ್ಯುನ್-ಟೌ (4938 ಮೀ), ಗೆಸ್ಟೊಲ (4830 ಮೀ), ಟೆಟ್‌ನುಲ್ಡ್ (4824 ಮೀ), ಗಿಮಾರೈ-ಖೋಖ್ (4748 ಮೀ) ಉಷ್ಬ (ನೈಋತ್ಯ ಶಿಖರ 4670 ಮೀ.; ಈಶಾನ್ಯ ಶಿಖರ 4667 ಮೀ), ಉಲ್ಲು-ಔಜ್ (4651 ಮೀ), ಆಡೈ-ಖೋಖ್ (4629 ಮೀ), ಟೆಖ್ ಟೆಂಜಿನ್ (4584 ಮೀ) ಮತ್ತು ಟಿಯುಟಿಯನ್-ಟೌ

(4580 ಮೀ). ಪರ್ವತಾರೋಹಿಗಳು ಹೆಚ್ಚಾಗಿ ಹತ್ತುವ ಶಿಖರಗಳು ಕಾಸ್ಬೆಕ್ ಮತ್ತು ಎಲ್‍ಬುರ್ಜ್.

ಪ್ರಧಾನ ಪರ್ವತಶ್ರೇಣಿಯ ತುದಿ 3030 ಮೀಗಳಿಗೆ ಏರಿದರೂ ಅದರ ಉಪಶ್ರೇಣಿಯಾದ ಬೊಕೊವೊಯ್ ಖ್ರಿಬೆಟ್ ಅದಕ್ಕಿಂತಲೂ ಎತ್ತರವಾಗಿದೆ. ಬೊಕೊವೊಯ್ ಪರ್ವತಸಾಲಿನಲ್ಲಿ ಬೆಟ್ಟಗಳು ಅಂತಸ್ತು-ಅಂತಸ್ತುಗಳಾಗಿ ರಚಿತವಾಗಿ ಅನೇಕ ಚಾಚುಗಳಿಂದ ಕೂಡಿವೆ. ಬೆಟ್ಟಗಳ ನಡುವೆ ಕಡಿದಾಗಿರುವ ಕಂದರಗಳಲ್ಲಿ ಹಿಮನದಿಗಳು ಇಳಿದು, ಸುಲಭವಾಗಿ



ಪಶ್ಚಿಮ ಕಾಕಸಸಿನಲ್ಲಿ ಚಳಿಗಾಲದ ಹಿಮಶಯ್ಯೆ

ಹರಿಯಲು ಅವಕಾಶವುಂಟಾದ ಕೂಡಲೆ ಆಳವಾದ ಕಮರಿಗಳಲ್ಲಿ ಪ್ರವಹಿಸಿ, ಉತ್ತರದ ಇಳುಕಲುಗಳಲ್ಲಿ ಸರಿದು, ಟೆರೆಕ್ ಅಥವಾ ಕೂಬ್ಯಾನ್ ನದಿಯನ್ನು ಸೇರುತ್ತವೆ; ಕೆಲವು ಹಿಮನದಿಗಳು ದಕ್ಷಿಣದ ಇಳಿಮೇಡಿನಲ್ಲಿ ಹರಿದು, ರಿಯಾನ್ ಅಥವಾ ಕೂರಾ ನದಿ ಸೇರುತ್ತವೆ. ಮೇಲ್ಮಟ್ಟದ ಒತ್ತಾದ ಕಣಿವೆಗಳಲ್ಲಿ ಸರೋವರಗಳಾಗಲಿ, ಜಲಪಾತಗಳಾಗಲಿ ಕಾಣಬರುವುದಿಲ್ಲ. ತಳಭಾಗದ ಕಣಿವೆಗಳಲ್ಲಿ ಸಹ ಸ್ವಿಟ್ಜರ್ಲೆಂಡಿನಲ್ಲಿರುವಂತೆ ಯಾವ ಸರೋವರಗಳೂ ಇಲ್ಲ. ಈ ಭಾಗದ ಅತ್ಯುನ್ನತ ಶಿಖರಗಳು ಪ್ರಧಾನ ಪರ್ವತಪಂಕ್ತಿಯಲ್ಲಿಲ್ಲ; ಬೊಕೊವೊಯ್ ಖ್ರಿಬೆಟ್ ಸಾಲಿಗೂ ಇತರ ಉಪಶ್ರೇಣಿಗಳಿಗೂ ಪ್ರಧಾನ ಪಂಕ್ತಿಯನ್ನು ಸೇರಿಸುವ ಕಿರಿಯ ಪರ್ವತಚಾಚುಗಳಲ್ಲಿವೆ.

ಮಧ್ಯ ಕಾಕಸಸ್ ಪರ್ವತದ ಪಶ್ಚಿಮಭಾಗದಲ್ಲಿ 2879-3030ಮೀ ಎತ್ತರದಲ್ಲಿ ನಿರಂತರ ಹಿಮಕವಚವುಂಟು. ದಕ್ಷಿಣಮುಖದಲ್ಲಿ ಹಿಮರೇಖೆ ಇರುವುದು. ಇನ್ನೂ ಎತ್ತರದಲ್ಲಿ ಈ ಭಾಗದಲ್ಲಿ 900 ಹಿಮನದಿಗಳು ಸರಿದು ಬರುತ್ತವೆ. ಅವು ಸಮುದ್ರಮಟ್ಟಕ್ಕೆ ನಿರ್ದಿಷ್ಟವಾದೊಂದು ಎತ್ತರದ ವರೆಗೆ ಹೆಪ್ಪುಗಟ್ಟಿದ್ದು ಅಲ್ಲಿಂದ ಕೆಳಕ್ಕೆ ಬಂದಾಗ ಕರಗಿ ಹರಿಯುತ್ತವೆ. ಇಲ್ಲಿಯ ಹಿಮನದಿಗಳ ಪೈಕಿ ಬೆಂಜಿಂಗ್ ಅಥವಾ ಉಲ್ಲುವಿನ ಉದ್ದ 17 ಕಿಮೀ; ಸಮುದ್ರಮಟ್ಟಕ್ಕೆ 1981 ಮೀವರೆಗೆ ಇಳಿಯುತ್ತದೆ. ಲೆಕ್ಸೈರ್ 12 ಕಿಮೀ; 1724 ಮೀ ಮಟ್ಟಕ್ಕೆ ಇಳಿಯುತ್ತದೆ. ಸ್ಯೆಯ ಅಥವಾ ಜೆ 10 ಕಿಮೀ; 2039 ಮೀ ಮಟ್ಟಕ್ಕೆ ಇಳಿಯುತ್ತದೆ. ಕಾರಗೊಂ 15 ಕಿಮೀ; 1754 ಮೀ ಮಟ್ಟಕ್ಕೆ ಇಳಿಯುತ್ತದೆ. ಡೈವಡೋರಕ್ 4 ಕಿಮೀ; 2282 ಮೀ ಮಟ್ಟಕ್ಕೆ ಸರಿದುಬರುತ್ತದೆ. ಬಾಲ್ಡ್ ಅಥವಾ ಗೆರೆಷೋ 7 ಕಿಮೀ; ಟುಯ್ಬರ್ 10 ಕಿಮೀ; 1989 ಮೀ ಮಟ್ಟಕ್ಕೆ ಇಳಿಯುತ್ತದೆ. ಸನ್ನೆರ್ ಅಥವಾ ಜನ್ನೆರ್ 10 ಕಿಮೀ; 2062 ಕಿಮೀ ಎತ್ತರದ ವರೆಗೆ ಇಳಿಯುತ್ತದೆ. ಆಡಿಷ್ ಅಥವಾ ಲರ್ಡ್‍ಖಟ್ ಹಿಮನದಿ 8 ಕಿಮೀ; 2257 ಮೀ ಮಟ್ಟಕ್ಕೆ ಇಳಿಯುತ್ತದೆ. ಪರ್ವತದ ಈ ಭಾಗದಲ್ಲಿ ಹಿಮನದಿಗಳು ಆವರಿಸಿರುವ ಪ್ರದೇಶ ಸುಮಾರು 168.5 ಚ.ಕಿಮೀ. ಇವುಗಳಲ್ಲಿ ಅತ್ಯಂತ ಉದ್ದವಾದ ಮಾಲಿವ್ 58 ಕಿಮೀ ದೂರ ಹಿಮಗಡ್ಡೆಗಳಿಂದ ಕೂಡಿದೆ. ಕೆಲವು ಹಿಮನದಿಗಳು ಹಿಂದಕ್ಕೆ ಸರಿಯುತ್ತಿವೆಯೆಂಬ ಅಭಿಪ್ರಾಯವುಂಟು.

ಮಧ್ಯ ಕಾಕಸಸಿನ ಪಶ್ಚಿಮ ಭಾಗದ ಪರ್ವತಪುಂಜ ಬಹಳ ಕಡಿದು. ಅಲ್ಲಿ ದಕ್ಷಿಣ ರಷ್ಯಕ್ಕೂ ಆರ್ಮೇನಿಯ ಮತ್ತು ಏಷ್ಯ ಮೈನರ್ ಭಾಗಗಳಿಗೂ ಸಂಪರ್ಕ ಕಲ್ಪಿಸುವ ಡೇರಿಯಲ್ ಮತ್ತು ಮಾಮಿಸನ್ ಕಣಿವೆ ಮಾರ್ಗಗಳಿವೆ. ಕಾಸ್ಬೆಕ್ ಶಿಖರಕ್ಕೆ ಪೂರ್ವದಲ್ಲಿರುವ ಡೇರಿಯಲ್ ಘಾಟಿನಲ್ಲಿ 1811-64ರ ಕಾಲಾವಧಿಯಲ್ಲಿ ನಿರ್ಮಿಸಿದ ಜಾರ್ಜಿಯನ್ ಮಿಲಿಟರಿ ರಸ್ತೆ ವ್ಲಾಡಿಕಾವ್‍ಕಜ್‍ನಿಂದ ಟಿಫ್ಲಿಸ್ ವರೆಗೆ ಹೋಗುತ್ತದೆ. ಇಬ್ಬದಿಯಲ್ಲೂ ಹಬ್ಬಿದ ಬೃಹದಾಕಾರದ ಪರ್ವತಗಳ ಮಧ್ಯೆ 11 ಕಿಮೀ ಉದ್ದದ ಸುಂದರ ಕಣಿವೆಯಲ್ಲಿ ಈ ಮಾರ್ಗ ಸಾಗುತ್ತದೆ. ಕಡಿದಾದ ಈ ಕಣಿವೆಯಲ್ಲಿ ರಸ್ತೆಗೂ ಅದರ ಪಕ್ಕದಲ್ಲಿ ಹರಿಯುವ ಟೆರೆಕ್ ನದಿಗೂ ಮಾತ್ರವೇ ಸ್ಥಳವುಂಟು. ರಸ್ತೆ ಇನ್ನೂ ಮುಂದೆ ದಕ್ಷಿಣದಲ್ಲಿ ಪ್ರಧಾನಶ್ರೇಣಿಗೆ ಅಡ್ಡಲಾಗಿ ಹಾದು ಹೋಗಲು ಸಾಧನವಾಗುವಂತೆ ಇರುವ ಕೆಸ್ಟೊವಾಯ ಗೋರಾ ಘಾಟ್ ಸಮುದ್ರಮಟ್ಟಕ್ಕೆ 2365 ಮೀ ಎತ್ತರದಲ್ಲಿದೆ. ಟೆರೆಕ್ ನದಿಯ ಭಾಗದಿಂದ ರಿಯಾನ್ ನದಿಯ ಕಂದರದ ಕುಟಾಯಿಸ್ ವರೆಗೆ ಹೋಗುವ ಒಸ್ಸೆಟಿಕ್ ಮಿಲಿಟರಿ ರಸ್ತೆ ಮಾಮಿಸನ್ ಕಣಿವೆಯ ಮೂಲಕವೇ ಸಾಗುತ್ತದೆ. ಅದನ್ನು 1889ರಲ್ಲಿ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ರಚಿಸಲಾಯಿತು. ಈ ಪರ್ವತಭಾಗದ ಇತರ ಕಣಿವೆ ಮಾರ್ಗಗಳಲ್ಲಿ ಕುದುರೆಯ ಮೇಲೆ ಕುಳಿತು ಬೇಸಗೆಯ ಕೆಲವು ದಿನಗಳಲ್ಲಿ ಮಾತ್ರ ಸಂಚರಿಸಬಹುದು. ಅವುಗಳಲ್ಲಿ ಹೆಚ್ಚಾಗಿ ಉಪಯೋಗದಲ್ಲಿರುವುದು ದಕ್ಷಿಣದ ಉಪಶ್ರೇಣಿಯಲ್ಲಿರುವ ಲಾಟ್‍ಪಾರಿ ಕಣಿವೆ ಮಾರ್ಗ.

ಕಾಕಸಸ್ ಪರ್ವತದ ಈ ಭಾಗದ ದಕ್ಷಿಣದ ಇಳಿಮೇಡುಗಳಲ್ಲಿ, ವಿಶೇಷವಾಗಿ ಸ್ವನೇತಿಯ ಪ್ರದೇಶದಲ್ಲಿ, ಗಿಡಮರಗಳು ಒತ್ತಾಗಿರುವುದಲ್ಲದೆ ಅಲ್ಲಿ ಬೆಳೆಯುವ ಪುಷ್ಪಗಳು ಆಲ್ಪ್ಸ್ ಪರ್ವತಗಳಲ್ಲಿ ಬೆಳೆಯುವವಕ್ಕಿಂತ ಹೆಚ್ಚು ವೈವಿಧ್ಯಪೂರಿತ. ಹಿರಿಯ ಜಾತಿಯ ಫರ್ನ್ ಸಸ್ಯಗಳು, ಬಳ್ಳಿಗಳು ಮತ್ತು ಗಗನಚುಂಬಿ ವೃಕ್ಷಗಳು ಈ ಪ್ರದೇಶವನ್ನು ರಮ್ಯಗೊಳಿಸಿವೆ. ಇಂಗ್ಲೆಂಡಿನ ತೋಟಗಳಲ್ಲಿ ಬೆಳೆಯುವ ಜಾತಿಯ ಹೂ ಗಿಡಗಳು ಇಲ್ಲಿ ಸ್ವಾಭಾವಿಕ



ಶಿಖರವೊಂದರ ದೂರನೋಟ

ಪರಿಸರದಲ್ಲಿ ಹುಲುಸಾಗಿ ಬೆಳೆದಿವೆ. ಸುಂದರವಾದ ವನಸುಮಗಳು 3939 ಮೀ ಎತ್ತರದ ಉತ್ತರದ ಮೇಡುಗಳಲ್ಲಿ ಯಥೇಚ್ಛವಾಗಿ ಉಂಟು. ವಾಲ್‍ನಟ್ ಮರಗಳು 1636 ಮೀ ಮಟ್ಟದವರೆಗಿನ ಪ್ರದೇಶಗಳಲ್ಲಿಯೂ ದ್ರಾಕ್ಷಿ ಮತ್ತು ಉಪ್ಪುನೇರಳೆ 985 ಮೀ. ಮಟ್ಟದಲ್ಲಿಯೂ ಬೆಳೆಯುತ್ತವೆ. ಮೂಲಿಕೆಗಳೂ ಪುಷ್ಪಸಿಂಚಿತ ನಿತ್ಯಹಸಿರು ಗಿಡಗಳೂ ಹುಲ್ಲುಗಾವಲುಗಳೂ 2727 ಮೀ ಮಟ್ಟದವರೆಗೆ ಹರಡಿಕೊಂಡಿವೆ. ಪರ್ವತದ

ಈ ಪ್ರದೇಶದಲ್ಲಿ ಗೋದಿ, ರೈ, ಓಟ್ಸ್, ಬಾರ್ಲಿ ಬೀನ್ಸ್, ಹೊಗೆಸೊಪ್ಪು ಇವನ್ನು ಹೇರಳವಾಗಿ ಬೆಳೆಯುತ್ತಾರೆ.

ಮಧ್ಯಕಾಕಸಸಿನ ಪೂರ್ವಭಾಗ ಕಾಸ್ಬೆಕ್ ಪರ್ವತ ಹಾಗೂ ಡೇರಿಯಲ್ ಕಣಿವೆಗಳಿಂದ ಹಿಡಿದು ಬಾಬಾ-ಡಾಘ್ ಪರ್ವತದ ವರೆಗೆ 368 ಕಿಮೀ ದೂರ ವ್ಯಾಪಿಸಿದೆ. ಕಾಕಸಸ್ ಪರ್ವತ ತನ್ನ ಪರಮಾವಧಿ ಅಗಲವಾದ 368 ಕಿಮೀ ಗಳಿಗೆ ಹಿಗ್ಗಿರುವುದು ಈ ಭಾಗದಲ್ಲೇ. ಸರಾಸರಿ ಎತ್ತರ 3030 ಮೀ ಅದರ ಶಿಖರಗಳು. ಈ ಎತ್ತರದಿಂದ 606-1515 ಮೀವರೆಗೆ ಮೇಲೆದ್ದು ನಿಂತಿವೆ. ಶಿಖರಗಳಿಂದ ಇಳಿಯುವ ಹಿಮನದಿಗಳು ಇದೇ ಅನುಪಾತದಲ್ಲಿ ಇಳಿದು ಸಮುದ್ರಮಟ್ಟದಿಂದ 1818 ಮೀ ಗಳಿಗೆ ಸರಿದಾಗ ಕರಗಿ ಹರಿಯುತ್ತವೆ. ಈ ಭಾಗದಲ್ಲಿ ಸಹ ಪ್ರಮುಖ ಶೃಂಗಗಳಿರುವುದು ಉಪಶ್ರೇಣಿಗಳಲ್ಲೆ. ಮುಖ್ಯವಾದುವು ಇವು; ಟಸ್ಮಿಯಾಕೊಂ-ಖೋಖ್ (4112 ಮೀ), ಷಾನ್-ಟೌ (4403 ಮೀ), ಕೆಡೆನ್ಯೆಸ್-ಮಾಗಲಿ (4194 ಮೀ), ಜಿಲ್ಲಾಖೋಖ್ (3832 ಮೀ), ಜಿಕಾರಿ (3807 ಮೀ) ಚೌಖಿ (3670 ಮೀ), ಜುಲ್ದಿ-ಡಾಘ್ (3767 ಮೀ), ಅಲಾ ಖುನ್-ಡಾಘ್(3845 ಮೀ) ಮತ್ತು ಮಾಘಿ-ಡಾಘ್ (3771 ಮೀ). ಈ ಭಾಗದ ಪ್ರಧಾನ ಪಂಕ್ತಿಯ ಶಿಖರಗಳಿವು ; ಬೋರ್ ಬಾಲೋ (3083 ಮೀ), ಮಹಾಷಾವಿ ಕಲ್ದೆ (3735 ಮೀ), ಮುರೋವ್ (3367 ಮೀ), ಅನ್‌ಸಾಲ್ (3861 ಮೀ), ಜಿನೋರ್-ರೊಸೊ (3370 ಮೀ) ಪ್ರಧಾನ ಶ್ರೇಣಿಗೆ ಮತ್ತೂ ಪೂರ್ವಕ್ಕಿರುವ ಶಿಖರಗಳಿವು: ಟ್ರಫಾನ್-ಡಾಘ್ (4171 ಮೀ), ಬಜಾರ್‌ಡ್ಯೆಯುಜ್ ಅಥವಾ ಕಿಚ್ಚೆನ್ (4463 ಮೀ). ಅದೇ ದಿಕ್ಕಿನಲ್ಲಿ, ಪ್ರಧಾನ ಪಂಕ್ತಿಯ ಪಕ್ಕಕ್ಕಿರುವ ಷಾ-ಡಾಘ್ (4229 ಮೀ), ಷಾಲ್‌ಬಜ್ (4144 ಮೀ) ಮತ್ತು ಮುಲ್ಲಾಮಡ್ (3864 ಮೀ).



ಕಾಕಸಸಿನ ಕಿಬ್ಬದಿಯ ಒಂದು ಕಂದರ

ಉತ್ತರದಲ್ಲಿ ಪ್ರಧಾನ ಪಂಕ್ತಿಗೆ ಜೋಡಿಸಿದಂತಿದ್ದು ಪೂರ್ವಕ್ಕೆ ಕ್ಯಾಸ್ಪಿಯನ್ ಸಮುದ್ರದೊಳಕ್ಕೆ ಚಾಚಿರುವ ವಿಶಾಲವಾದ ದಘೇಸ್ತಾನ್ ಪ್ರಸ್ಥಭೂಮಿಯೂ ಉತ್ತರದಲ್ಲಿರುವ ಸುಂದರ ಟೆರೆಕ್ ಕಣಿವೆಗಳೂ ಪರ್ವತದ ಈ ಭಾಗದ ವೈಶಿಷ್ಟ್ಯ. ಆಂಡಿ ಪರ್ವತದ ಅಡ್ಡಸಾಲೇ ಈ ಪ್ರಸ್ಥಭೂಮಿಯ ಒಂದು ಕೊನೆ. ಪ್ರಸ್ಥಭೂಮಿಯ ಉಳಿದ ಪ್ರದೇಶದಲ್ಲಿ 2273 ಮೀ ಗಳಿಂದ 3788 ಮೀ ಗಳವರೆಗಿನ ಹಲವಾರು ಸಮಾಂತರವಾದ ಹಾಗೂ ಒರಟು ಶೃಂಗಗಳುಂಟು. ಈ ಪ್ರದೇಶದಲ್ಲಿ ಹೆಚ್ಚು ಮರಗಳಿಲ್ಲ.

ಪರ್ವತದ ಈ ಭಾಗದ ಕೆಲವು ಶಿಖರಗಳಲ್ಲಿ ಅದರಲ್ಲೂ ಡಿಕ್ಲೋಸ್‌ಮಾಟ ಶಿಖರದಲ್ಲಿ ನೀರ್ಗಲ್ಲ ನದಿಗಳೂ ಹೆಪ್ಪುಗಟ್ಟಿ ಮರಳಿನಿಂದ ಕೂಡಿ ಹರಿಯುವ ನದಿಗಳೂ (ನೇವೆ) ಇಳಿದುಬರುತ್ತವೆ. ಡಿಕ್ಲೋಸ್‌ಮಾಟ ಶಿಖರದ ಹಿಮನದಿಗಳು ಉತ್ತರದ ಕಡೆ 2333 ಮೀ ಗಳಿಗೂ ದಕ್ಷಿಣದ ಕಡೆ 2530 ಮೀ ಗಳಿಗೂ ಇಳಿಯುತ್ತವೆ. ಈ ಭಾಗದ ಕಣಿವೆಗಳು ಎಲ್‌ಬುರ್ಜ್ ಮತ್ತು ಕಾಸ್ಬೆಕ್ ಪರ್ವತಗಳ ನಡುವೆ ಇರುವ ಕಣಿವೆಗಳಿಗಿಂತ ತಗ್ಗಿನವು. ಬಲು ಎತ್ತರದ ಕಣಿವೆಗಳು ಪರ್ವತದ ಪೂರ್ವವಿಭಾಗದ ಕಣಿವೆಗಳಂತೆ ಕಡಿದಾಗಿದ್ದು ಭಾರಿ ಪ್ರಪಾತಗಳಿಂದ ಕೂಡಿವೆ. ಇಲ್ಲಿಯ ಕಣಿವೆಗಳ ಪೈಕಿ ಕೆಸ್ಟೊವೊಯ ಗೋರ (2365 ಮೀ) ಇರುವುದು ಡೇರಿಯಲ್ ಕಣಿವೆಗೆ ದಕ್ಷಿಣದಲ್ಲಿರುವ ಜಾರ್ಜಿಯನ್ ಮಿಲಿಟರಿ ಮಾರ್ಗದಲ್ಲಿ. ಕೊಡೊರ್ (2818 ಮೀ), ಸಟ್ಸ್‌ಖೇನಿ ಮತ್ತು ಗೂಡೂರ್ (3067 ಮೀ) ಹಾಗೂ ಸಾಲ್ವಟ್ (2828 ಮೀ) ಕಣಿವೆಗಳು ಅಖಿಟ ಮಿಲಿಟರಿ ಮಾರ್ಗದಲ್ಲಿವೆ. ಈ ಭಾಗದ ವೃಕ್ಷಗಳು ಪರ್ವತದ ಪಶ್ಚಿಮತುದಿಯ ವೃಕ್ಷಗಳನ್ನೇ ಹೋಲುತ್ತವೆ.

**ಪೂರ್ವ ವಿಭಾಗ** : ಕಾಕಸಸ್ ಪರ್ವತದ ಪೂರ್ವಭಾಗ ಬಾಬಾಡಾಘ್ ಪರ್ವತದ ಪೂರ್ವದಲ್ಲಿ ಕ್ರಮಕ್ರಮವಾಗಿ ಕ್ಯಾಸ್ಪಿಯನ್ ಸಮುದ್ರದ ಕಡೆಗೆ ಇಳಿದು ಅಪ್ಷೆರಾನ್ ಪರ್ಯಾಯದ್ವೀಪದಲ್ಲಿ ಕೊನೆಗೊಳ್ಳುತ್ತದೆ. ಆದರೂ ಅದು ಕ್ಯಾಸ್ಪಿಯನ್ ಸಮುದ್ರದ ಜಲಮಟ್ಟದ ತಳದಲ್ಲಿಯೇ ಮುಂದುವರಿದು ಸಮುದ್ರಕ್ಕೆ ಪೂರ್ವದಿಕ್ಕಿನಲ್ಲಿ ಕೋಪೆಟ್-ಡಾಘ್ ಪರ್ವತದ ರೂಪದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ. ಆ ಪರ್ವತ ಇರುವುದು ಪರ್ಷಿಯದ ಈಶಾನ್ಯ ಅಂಚಿನಲ್ಲಿ. ಕಾಕಸಸ್ ಪರ್ವತದ ಪೂರ್ವಭಾಗದಲ್ಲಿ ಯಾವ ಶಿಖರವೂ 2743 ಮೀ ಗಿಂತ ಹೆಚ್ಚು ಎತ್ತರದಲ್ಲಿಲ್ಲ. ಪ್ರಧಾನ ಶ್ರೇಣಿಯ ಶಿಖರಗಳಲ್ಲಿ ಹಿಮ ಕವಿಯುವುದಿಲ್ಲ. ಅಲ್ಲಿಯ ಪ್ರಮುಖ ಘಾಟ್ ಮಾರ್ಗ 1327 ಮೀ ಮಟ್ಟದಲ್ಲಿರುವ ಆಲ್ಟಿ-ಅಗೆಜ್.

ಪರ್ವತದ ಈ ಭಾಗದಲ್ಲಿ ಉತ್ತರ-ದಕ್ಷಿಣ ದಿಕ್ಕುಗಳ ನಡುವೆ ವಾಯುಗುಣದಲ್ಲಿ ಬದಲಾವಣೆ ಕಾಣುವುದಲ್ಲದೆ ಪ್ರಕೃತಿಯಲ್ಲಿಯೂ ವ್ಯತ್ಯಾಸವುಂಟು. ಹೆಚ್ಚು ಮಳೆಯಾದರೂ ಬೆಚ್ಚನೆಯ ವಾಯುಗುಣ ಇರುವ ನೈರುತ್ಯದ ಇಳಿಜಾರುಗಳ ಮತ್ತು ಕಣಿವೆಗಳ ಪ್ರದೇಶವೆಲ್ಲ ಮನಮೋಹಕವಾದ ಅರಣ್ಯಗಳಿಂದ ತುಂಬಿದೆ. ಆದರೆ ಒಳನಾಡಿನ ಸುರಾಂ ಅಥವಾ ಮೆಸ್ಕೆಸ್ ಶ್ರೇಣಿಗಳಲ್ಲಿ ಬೆಂಗಾಡುಗಳೇ ಹೆಚ್ಚು. ಬಂಡೆಗಳಿಲ್ಲದ ಕಡೆ ಪರ್ವತದ ಇಳಿಮೇಡುಗಳು ಹುಲ್ಲುಗಾವಲುಗಳಿಂದ ಕೂಡಿವೆ. ಆದರೆ ನದಿಯ ಕಮರಿಗಳಲ್ಲಿಯ ಪ್ರಕೃತಿದೃಶ್ಯ ಆಲ್ಪ್ಸ್ ಪರ್ವತದ ಕಣಿವೆಗಳ ದೃಶ್ಯಕ್ಕಿಂತಲೂ ಹೆಚ್ಚು ಮನೋಹರ. ಬಾಕು-ಬಟೂಮಿ ರೈಲುಮಾರ್ಗ ಸುರಾಂ ಪರ್ವತ ಸಾಲುಗಳಿಗೆ ಅಡ್ಡಲಾಗಿ ಹಾದುಹೋಗುವುದು.

**ನದಿಗಳು** : ಕಾಕಸಸಿನ ಹಿರಿಯ ನದಿಗಳೆಲ್ಲ ಪರ್ವತದ ಮಧ್ಯಭಾಗದಲ್ಲಿಯೆ ಉದ್ಭವಿಸುತ್ತವೆ. ರಭಸವಾಗಿ ಹರಿಯುವ ಮಜಿಂಟ ಪಿಜೌವ್, ಬಿಜೈಬ್ ಮತ್ತು ಕೊಡೊರ್ ನದಿಗಳು ಎಲ್‌ಬುರ್ಜ್ ಪರ್ವತದ ಪಶ್ಚಿಮದಲ್ಲಿ ಹರಿಯುತ್ತವೆ. ಇನ್ಗುರ್, ಟಷ್ಕೇನಿಸ್-ಟಷ್ಕಲಿ, ರಿಯಾನ್ ಮತ್ತು ಅದರ ಕೂಡುನದಿಗಳು ಉದ್ದವಾಗಿರುವುವಲ್ಲದೆ ರಭಸವಾಗಿಯೂ ಹರಿಯುತ್ತವೆ. ಅವು ಎಲ್‌ಬುರ್ಜ್ ಮತ್ತು ಕಾಸ್ಬೆಕ್ ಪರ್ವತಗಳ ನಡುವಣ ಮಹಾ ಹಿಮಪ್ರದೇಶಕ್ಕೆ ಸೇರಿದವು. ರಿಯಾನ್ ನದಿಯನ್ನು ಪೂರ್ವಿಕರು ಘಾಸಿಸ್ ಎಂದು ಕರೆಯುತ್ತಿದ್ದರು. ಪ್ರಾಚೀನ ಗ್ರೀಕರು ಕಾಲ್ಚಿಸ್ ಎಂದು ಕರೆಯುತ್ತಿದ್ದ ಪ್ರದೇಶದಲ್ಲಿ ಅದು ಹರಿಯುತ್ತದೆ. ಕೂರಾದ ಉಪನದಿಗಳಾದ ಲ್ಯಾಖ್ವಾ ಮತ್ತು ಅರಗ್ವಗಳು ಪ್ರಧಾನ ಶ್ರೇಣಿಯ ಜಲವನ್ನು ಕಾಸ್ಬೆಕ್ ಪರ್ವತದ ದಕ್ಷಿಣಕ್ಕೆ ಸಾಗಿಸುತ್ತವೆ. ಉಳಿದ ಉಪನದಿಗಳು ಸಂಗ್ರಹಿಸುವುದು ಮೂಲಶ್ರೇಣಿಯ ಪೂರ್ವಭಾಗದ ನೀರನ್ನು. ಈ ಪ್ರದೇಶದಲ್ಲಿ ಹರಿಯುವ ಆರಾಸ್ ಮಹಾನದಿ ಹುಟ್ಟುವುದು ಕಾಕಸಸ್ ಪರ್ವತದಲ್ಲಲ್ಲ; ಅರಾರತ್ ಪರ್ವತದ ನೈರುತ್ಯಕ್ಕೆ ಅತ್ಯಂತ ದೂರದಲ್ಲಿರುವ ಆರ್ಮೀನಿಯದ ಪ್ರಸ್ಥಭೂಮಿಯಲ್ಲಿ. ಕಾಕಸಸ್ ಪರ್ವತದ ಮಧ್ಯಭಾಗದಲ್ಲಿ ಹುಟ್ಟಿ ಹರಿಯುವ ನದಿಗಳು ದಕ್ಷಿಣಕ್ಕೆ ಹರಿಯುವ ನದಿಗಳಿಗಿಂತ ಉದ್ದ. ಅವುಗಳಲ್ಲಿ ಮುಖ್ಯವಾದವು ಕೂಬ್ಯಾನ್, ಟೆರೆಕ್, ಮಲ್ಕಾ ಬಕ್ಸಾನ್, ಛೆಗೆಂ, ಛೆರೆಕ್, ಉರುಖ್ ಮತ್ತು ಆರ್ಡನ್. ಟೆರೆಕ್ ನದಿಯ ಉತ್ತರಕ್ಕೆ ಬೆಂಗಾಡಿನಲ್ಲಿ ಹರಿಯುವ ಕೂಮಾ ನದಿ ಹುಟ್ಟುವುದು ಪ್ಯಟಿಗೋರಸ್ಕ್ ಬಳಿಯ ಪರ್ವತಗಳ ನಡುವೆ. ಇದು ಸಮುದ್ರವನ್ನು ಸೇರುವುದಕ್ಕೆ ಮುಂಚೆ ಬಂಜರು ಮೈದಾನಗಳಲ್ಲಿ ಬಹಳವಾಗಿ ಇಂಗುತ್ತದೆ. ದಘೇಸ್ತಾನದ ಎತ್ತರವಾದ ಮಲೆನಾಡು ಪ್ರಾಂತ್ಯಗಳಲ್ಲಿ ಹರಿಯುವ ನಾಲ್ಕು ಪ್ರಮುಖ ನದಿಗಳು ಸಂಗಮಿಸಿದಾಗ ತಳೆಯುವ ಹೆಸರು ಸಮೂರ್, ಈ ನದಿ ಬೀಳುವುದು ಕ್ಯಾಸ್ಪಿಯನ್ ಸಮುದ್ರಕ್ಕೆ. ಕಾಕಸಸ್ ಪರ್ವತದ ಹಿರಿಯ ನದಿಗಳು ಮುಖ್ಯವಾಗಿ ಕೂಬ್ಯಾನ್, ರೀಯಾನ್ ಮತ್ತು ಟೆರೆಕ್ ನದಿಗಳು-ವಿದ್ಯುಚ್ಛಕ್ತಿಯ ಉತ್ಪಾದನೆಗೂ ವ್ಯವಸಾಯಕ್ಕೂ ಉಪಯುಕ್ತವಾದವು.

**ಅಗ್ನಿಪರ್ವತಗಳು:** ಕಾಕಸಸಿನ ಪ್ರಧಾನ ಮತ್ತು ಉಪಶ್ರೇಣಿಗಳು ಸಂಧಿಸುವ ಹಲವು ಕಡೆಗಳಲ್ಲಿ ಒಮ್ಮೆ ಜೀವಂತವಾಗಿದ್ದು ಈಗ ಸ್ತಬ್ಧವಾಗಿರುವ ಜ್ವಾಲಾಮುಖಿಗಳುಂಟು. ಅವುಗಳಲ್ಲಿ ಪ್ರಸಿದ್ಧವಾದವು ಎಲ್‌ಬುರ್ಜ್ ಮತ್ತು ಕಾಸ್ಪಕ್ ಪರ್ವತಗಳಲ್ಲಿವೆ. ಕಾಕಸಸ್ ಪರ್ವತದ ಪೂರ್ವ ಅಂಚಿನಲ್ಲಿರುವ ಷೆಮಖ ನಗರದ ಬಳಿಯ ಅಗ್ನಿಪರ್ವತ 1859, 1872 ಮತ್ತು 1902ರಲ್ಲಿ ಉಕ್ಕಿತ್ತು. ಅದರ ಪಕ್ಕದ ಅಪ್ಷೆರಾನ್ ಪರ್ಯಾಯದ್ವೀಪದಲ್ಲಿ

ಮಣ್ಣಿರಚುವ ಅನೇಕ ಪರ್ವತಗಳುಂಟು. ಕಾಕಸಸಿನ ಉತ್ತರದ ತಪ್ಪಲಿನ ಉದ್ದಕ್ಕೂ ಅನೇಕ ಕಡೆ ಖನಿಜಸತ್ತ್ವವುಳ್ಳ ಬಿಸಿನೀರಿನ ಊಟೆಗಳಿವೆ. ಪ್ಯಾಟಿಗೋರಸ್ಕ್, ಝೆಲೆಸ್ನೋವೊಡಸ್ಕ್, ಎಸ್ಸೆನ್ಟುಕಿ ಮತ್ತು ಕ್ಲಿಸ್ಲೊವೊಡಸ್ಕ್‌ಗಳಲ್ಲಿ ಅವನ್ನು ಕಾಣಬಹುದು. ದಘೇಸ್ತಾನದ ಬೆಟ್ಟಗಾಡಿನ ಈಶಾನ್ಯ ಸ್ಥಳಗಳಲ್ಲಿ ಬುಗ್ಗೆಗಳುಂಟು. ಅರಾರತ್, ಅಲಗೋಜ್, ಅಕ್ಮಂಗನ್, ಸಂಸರ್, ಗೋಡೊರ್ಬಿ ಮತ್ತು ಅಬುಲ್ ಬೆಟ್ಟಗಳ ದಕ್ಷಿಣಕ್ಕೆ, ಆರ್ಮೇನಿಯದ ಪ್ರಸ್ಥಭೂಮಿಯ ಉತ್ತರದ ಅಂಚಿನಲ್ಲಿ, ಅಗ್ನಿಪರ್ವತಗಳಿದ್ದ ಚಿಹ್ನೆಗಳಿವೆ.



ಕಣಿವೆಯೊಂದರಲ್ಲಿ ನೆಲ ಕುಸಿದು ಸಂಭವಿಸಿರುವ ರಿಟ್ಸ ಸರೋವರ

**ಭೂ ರಚನೆ :** ಕಾಕಸಸ್ ಪರ್ವತ ಬೀಸಣಿಗೆಯ ಆಕಾರದಲ್ಲಿ ಬಾಗಿದೆ. ಅದರ ಭೌಗೋಳಿಕ ಪ್ರದೇಶ ಕಪ್ಪುಸಮುದ್ರದಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ವ್ಯಾಪಿಸಿದ್ದು, ಇಡೀ ಪರ್ವತ ಪಂಕ್ತಿಗಳು ಇರುವುದು ಸೋವಿಯತ್ ದೇಶದ ಗಡಿಯೊಳಗೆ. ಪರ್ವತದ ಮಧ್ಯಭಾಗವೆಲ್ಲ ಬಲು ಗಟ್ಟಿಯಾದ ಸ್ಫಟಿಕಮಾದರಿಯ ಕಲ್ಲುಬೆಟ್ಟಗಳಿಂದ ಕೂಡಿದೆ. ಈ ರಚನೆ ಕ್ರಮೇಣ ಪೂರ್ವಭಾಗದಲ್ಲಿ ಕಾಣದಂತಾಗುತ್ತದೆ. ಕಲ್ಲುಬೆಟ್ಟಗಳಲ್ಲಿ ಆದಿ ಭೂಯುಗದ ಖನಿಜ ಪದರಶಿಲೆಗಳೂ ಜೂರಾಜ್ ಪರ್ವತದಲ್ಲಿರುವಂಥ ಸುಣ್ಣಕಲ್ಲು ಪದರಗಳೂ ಉಂಟು. ಪರ್ವತದ ಉತ್ತರ ಭಾಗದಲ್ಲಿ ಸಹ ಇದೇ ಬಗೆಯ ಸುಣ್ಣಕಲ್ಲು ಪದರಗಳೂ, ಸೀಮೆಸುಣ್ಣ ಮಾದರಿಯ ಪದರಗಳೂ ಹೇರಳವಾಗಿವೆ. ಪರ್ವತದ ದಕ್ಷಿಣ ಭಾಗದಲ್ಲಿರುವವು ಮೂರನೆಯ ಭೂ ಯುಗದ ಶೇಖರಣೆಗಳನ್ನುಳ್ಳ ದ್ವಿತೀಯ ಪದರಗಳು. ಪೂರ್ವಕ್ಕೆ ಸ್ಫಟಿಕ ಅಥವಾ ಬೆಣಚುಕಲ್ಲು ಬೆಟ್ಟಗಳಿಲ್ಲ. ಉತ್ತರಭಾಗ ಎರಡನೆಯ ಭೂಯುಗದ ಶಿಲಾಸ್ತರಗಳಿಂದ ಕೂಡಿದ್ದು, ಆದಿಭೂಯುಗದ ಪದರಗಳು ಹಂತ ಹಂತಗಳಲ್ಲಿ ಕೂರಾ ಬಯಲಿನಲ್ಲಿ ಇಳಿಯುತ್ತವೆ. ಅವುಗಳ ತಳದಲ್ಲಿ ಎರಡನೆಯ ಭೂಯುಗದ ಖನಿಜಪದರಗಳು ಮುಂದುವರಿದಿವೆ. ಕಾಕಸಸ್ ಶಿಲಾಪದರಗಳಲ್ಲಿ ಪ್ರಾಣಿ ಹಾಗೂ ಸಸ್ಯಗಳ ಪಳೆಯುಳಿಕೆಗಳಿಲ್ಲ. ಆದಿ ಭೂಯುಗದಿಂದಲೂ ಅಸ್ತಿತ್ವದಲ್ಲಿರುವ ಈ ಪರ್ವತಶ್ರೇಣಿಯ ಬೆಳೆವಣಿಗೆಯಲ್ಲಿ ಎಲ್‌ಬುರ್ಜ್ ಮತ್ತು ಕಾಸ್ಬೆಕ್ ಪರ್ವತಗಳ ಜ್ವಾಲಾಮುಖಿಗಳು ಕೊನೆಯ ಹಂತದ ರಚನೆಗೆ ಸೇರಿರಬೇಕು.

ರಷ್ಯದ ಎರಡು ಸ್ವಾಭಾವಿಕ ವಿಭಾಗಗಳಾದ ಉತ್ತರ ಮತ್ತು ದಕ್ಷಿಣ ಕಾಕಸಸ್ ಪರ್ವತ ಪ್ರದೇಶಗಳಲ್ಲಿ ಕೈಗಾರಿಕೆಗಳಿಗೆ ಉಪಯುಕ್ತವಾದ ಖನಿಜ ಸಂಪತ್ತು ಹೇರಳವಾಗಿದೆ. ಬಾಕು, ಗ್ರೋಜ್ನಿ ಮತ್ತು ಮೈಕಾಫ್‌ಗಳಲ್ಲಿ ಪೆಟ್ರೋಲ್, ಚೈಟ್ರೂರಾದಲ್ಲಿ ಮ್ಯಾಂಗನೀಸ್, ಓರ್ಜೋನಿಕಿಡ್ಜ್‌ನಲ್ಲಿ ಸೀಸ ಮತ್ತು ತವರ ಮತ್ತು ಟೈರ್ನಿಔಜ್‌ನಲ್ಲಿ ಕಬ್ಬಿಣ ಮಿಶ್ರಲೋಹಗಳು ಸಿಗುತ್ತವೆ. ಜಾರ್ಜಿಯ ಪ್ರದೇಶದಲ್ಲಿ ಸಣ್ಣಪುಟ್ಟ ಕಲ್ಲಿದ್ದಲ ಗಣಿಗಳಿರುವುದರಿಂದಲೂ ಕಬ್ಬಿಣದ ಅದಿರು ದೊರಕುವುದರಿಂದಲೂ ಟಿಫ್ಲಿಸ್ ಬಳಿ ಹೊಸ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆಗಳುಂಟು. ಕಾಕಸಸ್ ಪ್ರದೇಶದಲ್ಲಿರುವ ಪ್ರಾಣಿ–ಪಕ್ಷಿಗಳು ವೈವಿಧ್ಯಮಯ. ಅವಕ್ಕಾಗಿ ಅಭ್ಯಯಾರಣ್ಯಗಳನ್ನು ಏರ್ಪಡಿಸಿದೆ. ಕಾಕಸಸ್ ಪ್ರದೇಶದಾದ್ಯಂತ ಅನೇಕ ಬುಡಕಟ್ಟುಗಳಿಗೆ ಹಾಗೂ ದೇಶಗಳಿಗೆ ಸೇರಿದ ಜನರನ್ನೂ ವಿವಿಧ ಭಾಷೆಗಳನ್ನಾಡುವ ಜನಾಂಗಗಳನ್ನೂ ಕಾಣಬಹುದು. ಸ್ವರ್ಗದ ಜ್ಯೋತಿಯನ್ನು ತಂದ ಪ್ರೊಮೀಥಿಯಸನನ್ನು ಜ್ಯೂಸ್ ದೇವತೆ ಈ ಪರ್ವತದ ಬಂಡೆಯೊಂದರ ಮೇಲೆ ಬಂಧಿಸಿದನೆಂಬುದು ಗ್ರೀಕ್ ಐತಿಹ್ಯ. (ವಿ.ಜಿ.ಕೆ.)

**ಕಾಕಿನಾಡ :** ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿರುವ ಒಂದು ಪಟ್ಟಣ. ಹಿಂದೆ ಇದಕ್ಕೆ ಕೋಕನಾಡ ಎಂಬ ಹೆಸರಿತ್ತು. ಗೋದಾವರಿ ನದೀಮುಖಜಭೂಮಿಯ ಈಶಾನ್ಯ ತುದಿಯಲ್ಲಿದೆ. ವಿಸ್ತೀರ್ಣ 21.56 ಚ.ಕಿಮೀ ಜನಸಂಖ್ಯೆ 368672 (2001). ಕಾಕಿನಾಡ ಪುರಸಭೆ ಸ್ಥಾಪಿತವಾದ್ದು 1866ರಲ್ಲಿ. ಭರತದ (ಸಮುದ್ರದ ಉಬ್ಬರದಿಂದ ಸಂಭವಿಸಿದ) ನದಿಯಾಚೆ ಇರುವ ಜಗನ್ನಾಥಪುರ ಉಪನಗರಕ್ಕೂ ಪಟ್ಟಣದ ಮುಖ್ಯ ಭಾಗಕ್ಕೂ ಹೆದ್ದಾರಿಯುಂಟು. ಜಗನ್ನಾಥಪುರವನ್ನು 1628ರಲ್ಲಿ ಡಚ್ಚರು ನಿರ್ಮಿಸಿದರು. 1825ರಲ್ಲಿ ಅದು ಇಂಗ್ಲಿಷರ ವಶವಾಯಿತು. 1839ರಲ್ಲಿ ಭರತದ ಅಲೆಯಿಂದ ಅದು ನಾಶವಾಗಿತ್ತು.

ಕಾಕಿನಾಡದಲ್ಲಿ ಕಲೆ, ವಿಜ್ಞಾನ, ತಾಂತ್ರಿಕ ಮತ್ತು ವೈದ್ಯಕ ಕಾಲೇಜುಗಳೂ ಆಧುನಿಕವಾಗಿ ಸಜ್ಜಾದ ದೊಡ್ಡ ಆಸ್ಪತ್ರೆಯೂ ಇವೆ.

ಕಾಕಿನಾಡ ಕೊಲ್ಲಿಯ ಲಂಗರುದಾಣ ಆಳವಾಗಿಲ್ಲ. ಹಡಗುಗಳು 12 ಕಿಮೀ ಗಳಾಚೆ ಲಂಗರು ಹಾಕಿ ನಿಲ್ಲಬೇಕು. ದಕ್ಷಿಣ ರೈಲ್ವೆಯ ಸಮಲ್ಕೋಟ್ ನಿಲ್ದಾಣದಿಂದ ಕಾಕಿನಾಡಕ್ಕೆ ಕವಲು ರೈಲುಮಾರ್ಗವುಂಟು. ಗೋದಾವರಿ ಮುಖಜಭೂಮಿಯ ಕಾಲುವೆ ವ್ಯವಸ್ಥೆಯೊಂದಿಗೆ ಧವಳೇಶ್ವರಂ ಬಳಿ ಕಾಕಿನಾಡ ಕಾಲುವೆಯ ಮೂಲಕ ಸಂಪರ್ಕ ಏರ್ಪಟ್ಟಿದೆ. ಕಾಕಿನಾಡದಿಂದ ರಫ್ತಾಗುವ ಪದಾರ್ಥಗಳು ಅಕ್ಕಿ, ಎಣ್ಣೆಬೀಜ, ಹೊಗೆಸೊಪ್ಪು ಮತ್ತು ಹತ್ತಿ, ಜವಳಿ, ಅಕ್ಕಿ. ಎಣ್ಣೆ ಗಿರಣಿಗಳು ಇಲ್ಲಿವೆ. (ಎಂ.ಎ.ಎಚ್.)

**ಕಾಕುತ್ಸ್ಥವರ್ಮ :** ಕದಂಬ ರಾಜಮನೆತನದ ಪ್ರಖ್ಯಾತ ದೊರೆಗಳಲ್ಲೊಬ್ಬ. ಭಗೀರಥನ (365–385) ಮಗ ಮತ್ತು ರಘುವಿನ (385–405) ಸೋದರ. 405 ರಿಂದ 430ರ ವರೆಗೆ ಆಳಿದ. ಇವನ ಕಾಲದಲ್ಲಿ ಕದಂಬರಾಜ್ಯ ವಿಸ್ತಾರಗೊಂಡಿತು. ಈತ ದಕ್ಷಿಣದಲ್ಲಿ ಪಲ್ಲವರೊಂದಿಗೆ ಹೋರಾಡಿದ. ಗುಪ್ತ, ಗಂಗ ಮತ್ತು ವಾಕಾಟಕ ರಾಜವಂಶಗಳವರಿಗೆ ತನ್ನ ಹೆಣ್ಣುಮಕ್ಕಳನ್ನು ಕೊಟ್ಟು ವಿವಾಹ ಮಾಡಿ ರಾಜ್ಯದ ಸುಭದ್ರತೆ ಖ್ಯಾತಿಗಳನ್ನು ಬೆಳೆಸಿದ. ಈತನ ಕಾಲದಲ್ಲಿ ರಾಜ್ಯ ಸುರಕ್ಷಿತವಾಗಿತ್ತು. ರಾಜ್ಯವನ್ನು ತನ್ನ ಮಕ್ಕಳಾದ ಶಾಂತಿವರ್ಮ ಮತ್ತು ಮೊದಲನೆಯ ಕೃಷ್ಣವರ್ಮನಿಗೆ ವಿಭಾಗ ಮಾಡಿ ಕೊಟ್ಟಿದ್ದನೆಂದೂ ಶಾಂತಿವರ್ಮ ಬನವಾಸಿಯಿಂದಲೂ ಕೃಷ್ಣವರ್ಮ ತ್ರಿಪರ್ವತದಿಂದಲೂ ಸ್ವತಂತ್ರರಾಗಿ ಆಳಿದರೆಂದೂ ತಿಳಿದುಬರುತ್ತದೆ.**(ನೋಡಿ– ಕದಂಬ ಮನೆತನ)** (ಜಿ.ಎನ್.ಎಸ್.)

**ಕಾಕುಪುಷ್ಟಿ :** ಆಹಾರಾಂಶಗಳ ಪೋಷಣೆಯ ವ್ಯತ್ಯಾಸ (ಮಾಲ್ ನ್ಯೂಟ್ರಿಷನ್). ಪೋಷಕಾಂಶಗಳ ಕೊರತೆಯಿಂದ ಇಳಿಪುಷ್ಟಿ (ಅಂಡರ್ ನ್ಯೂಟ್ರಿಷನ್)ಹೆಚ್ಚಳದಿಂದ (ಓವರ್ ನ್ಯೂಟ್ರಿಷನ್) ಬೊಜ್ಜು ಉಂಟಾಗುತ್ತದೆ. ಎರಡು ರೀತಿಯ ನ್ಯೂನ ಪೋಷಣೆಯಿಂದ ದೇಹಾರೋಗ್ಯ ಕೆಡುತ್ತದೆ.

ದೇಹದ ಬೆಳೆವಣಿಗೆಗೆ ಮಾಂಸಖಂಡಗಳ ಬಲಕ್ಕೆ, ಪ್ರೋಟಿನ್ ಅತ್ಯಗತ್ಯ. ದೇಹದಲ್ಲಾಗುವ ಗಾಯಗಳ ದುರಸ್ತಿ, ರಕ್ತಕಣಗಳ ಉತ್ಪತ್ತಿ, ಜೀವ ದ್ರವ, ಹಾರ್ಮೋನ್ ಎನ್ಜೈಮ್ಗಳ ಉತ್ಪತ್ತಿಗೆ, ರೋಗ ನಿರೋಧಕ ಶಕ್ತಿಯ ಬೆಳೆವಣಿಗೆ ಇವೆಲ್ಲವಕ್ಕೂ ಪ್ರೋಟೀನ್ ಅತ್ಯಗತ್ಯ.

ಧಾನ್ಯ, ಬೇಳೆಕಾಳು, ಮಾಂಸ, ಮೊಟ್ಟೆ, ಮೀನು, ಹಲು, ಸೋಯ, ಅವರೆಯಲ್ಲಿ ಅಧಿಕ ಪ್ರೋಟಿನ್ ಇದೆ. ವಯಸ್ಕರಿಗೆ ಪ್ರತೀ ಕಿಲೋ ದೇಹದ ತೂಕಕ್ಕೆ ಒಂದು ಗ್ರಾಂ (ನಿತ್ಯ) ಪ್ರೋಟಿನ್ ಬೇಕಾಗುತ್ತದೆ.

ಬಾಲ್ಯದಲ್ಲಿ ಪ್ರೋಟಿನ್ ಕೊರತೆಯಾದರೆ, ಮಗುವಿನ ದೈಹಿಕ ಮಾನಸಿಕ ಬೆಳೆವಣಿಗೆ ಕುಂಠಿತವಾಗುತ್ತದೆ. ಮಾಂಸಖಂಡಗಳು ದುರ್ಬಲಗೊಳ್ಳುತ್ತವೆ. ಕೈ, ಕಾಲು ಮುಖ ಬಾತುಕೊಳ್ಳುತ್ತದೆ. ತಲೆ ಕೂದಲು ಕೆಂಪುಬಣ್ಣಕ್ಕೆ ತಿರುಗುತ್ತದೆ. ಕೂದಲುಗಳು ಉದುರುತ್ತವೆ. ಮಗುವಿಗೆ ಬಾಹ್ಯ ಜಗತ್ತಿನ ಆಸಕ್ತಿ ಕಡಿಮೆಯಾಗುತ್ತದೆ. ಮಗುವಿನ ಚರ್ಮ ಬಿಳಿಚಿಕೊಳ್ಳುತ್ತಾ ಸುಲಿದು ಬರುತ್ತದೆ. ಮಗುವಿನ ಮೆದುಳಿನ ಶಕ್ತಿ ತಾತ್ಕಾಲಿಕವಾಗಿ ಇಲ್ಲವೇ ಶಾಶ್ವತವಾಗಿ ಕಡಿಮೆಯಾತ್ತದೆ. ಹೀಗೆ ಪ್ರೋಟಿನ್ ಅಭಾವದಿಂದ ಮಕ್ಕಳು ನರಳುವ ಕಾಯಿಲೆಗೆ 'ಕ್ವಾಶಿಯೋರ್ಕರ್' ಕಾಯಿಲೆ ಎನ್ನುತ್ತಾರೆ. ಕಾಯಿಲೆಯನ್ನು ಆದಷ್ಟು ಬೇಗ ಗುರುತಿಸಿ, ಉತ್ತಮ ಪ್ರೋಟಿನ್‌ಯುಕ್ತ ಆಹಾರ ನೀಡಿದರೆ ಮಗು ಚೇತರಿಸಿಕೊಳ್ಳುತ್ತದೆ. ಅಲಕ್ಷಿಸಿದರೆ ಮಗು ನರಪೇತಲಾಗಿ ಬುದ್ಧಿಮಾಂದ್ಯವಾಗಿ ಬೆಳೆಯುತ್ತದೆ ಅಥವಾ ಸಾಯುತ್ತದೆ.

ಮಗುವಿಗೆ ಸಾಕಾಗದಷ್ಟು ಶಕ್ತಿ ಆಹಾರದಿಂದ ದೊರೆಯದಿದ್ದರೆ ಮಗುವಿನ ದೇಹದ ಕೊಬ್ಬು ಮಾಂಸಖಂಡ ಎಲ್ಲಾ ಕರಗಿ ಮಗು ಮೂಳೆಗೆ ಚರ್ಮ ಹೊದಿಸಿದಂತೆ ಕಾಣುತ್ತದೆ. ಮುಖ ಕೋತಿಯ ಮುಖದಂತಾಗುತ್ತದೆ. ದೇಹದ ಚರ್ಮ ಸುಕ್ಕುಗಟ್ಟಿ ಜೋಲುತ್ತದೆ. ಈ ಕಾಯಿಲೆಯನ್ನು ಮರಾಸ್ ಮಸ್ ಎನ್ನುತ್ತಾರೆ. ಮಗುವಿಗೆ ತಕ್ಷಣದಿಂದಲೇ ಸಾಕಷ್ಟು ಆಹಾರ ನೀಡಿದರೆ ಮಗು ಬೇಗನೆ ಚೇತರಿಸಿಕೊಳ್ಳುತ್ತದೆ.

ಮಕ್ಕಳನ್ನು ಸಾಮನ್ಯವಾಗಿ ಕಾಡುವ ಅಪೌಷ್ಟಿಕತೆಯಲ್ಲಿ ಕ್ವಾಶಿಯೋರ್ಕರ್ ಹಾಗೂ ಮರಾಸ್ ಮಸ್ ಮುಖ್ಯವಾದವುಗಳು. ಜೀವಸತ್ವಗಳ (ವಿಟಮಿನ್) ಕೊರತೆಯಿಂದಲೂ ಅನೇಕ ರೀತಿಯ ತೊಂದರೆಗಳು ಉಂಟಾಗುತ್ತದೆ. 'ಎ' ಜೀವಸತ್ವ ದ ಕೊರತೆಯಿಂದ ಮಕ್ಕಳಲ್ಲಿ ಅಂಧತ್ವ ಉಂಟಾಗುತ್ತದೆ. 'ಎ' ಜೀವಸತ್ವ ದ ಕೊರತೆಯ ಆರಂಭದಲ್ಲಿ ಮಗುವಿಗೆ ರಾತ್ರಿಯಲ್ಲಿ ಕಣ್ಣು ಕಾಣುವುದಿಲ್ಲ. ಕೊರತೆಯ ತೀವ್ರತೆ ಹೆಚ್ಚಿದಂತೆ ಕಣ್ಣಿನಲ್ಲಿ ಹೊಳಪು ತೇವಾಂಶ ನಾಶವಾಗುತ್ತದೆ. ಕಣ್ಣಿನಲ್ಲಿ ಬೂದಿಯಂತಹ ಕಣಗಳು ಕಲೆಯುತ್ತವೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ದೃಷ್ಟಿ ಶಾಶ್ವತವಾಗಿ ನಾಶವಾಗುತ್ತದೆ. 'ಎ' ಜೀವಸತ್ವವುಳ್ಳ ಸೊಪ್ಪು, ತರಕಾರಿ, ಹಣ್ಣು, ನುಗ್ಗೇಕಾಯಿ, ಬೆಣ್ಣೆ ಮುಂತಾದ ಆಹಾರಗಳ ಸೇವನೆಯಿಂದ 'ಎ' ಜೀವಸತ್ವದ ಅಭಾವವನ್ನು ತಡೆಗಟ್ಟಬಹುದು. 'ಎ' ಜೀವಸತ್ವದ ಅಭಾವವನ್ನು ತಡೆಗಟ್ಟಲು ಸರಕಾರವು ಮಕ್ಕಳಿಗೆ 'ಎ' ಜೀವಸತ್ವದ ದ್ರವವನ್ನು ಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

'ಡಿ' ಜೀವಸತ್ವವು ನಮಗೆ ಸೂರ್ಯನ ಕಿರಣಗಳಿಂದ ದೊರೆಯುತ್ತದೆ. ಇದರ ಅಭಾವದಿಂದ ರಿಕೆಟ್ಸ್ ಎಂಬ ಕಾಯಿಲೆ ಉಂಟಾಗುತ್ತದೆ. ಮೀನು, ಲಿವರ್ ಎಣ್ಣೆ, ಬೆಣ್ಣೆ ಮೊಟ್ಟೆಯ ಹಳದೀ ಭಾಗದಲ್ಲಿಯೂ 'ಡಿ' ಜೀವಸತ್ವವಿದೆ.

'ಇ' ಜೀವಸತ್ವವು ಮೊಳಕೆಕಾಳು ಎಣ್ಣೆಕಾಳು ಮೊಟ್ಟೆಯ ಹಳದಿಯಲ್ಲಿ ಇರುತ್ತದೆ. 'ಇ' ಜೀವಸತ್ವದ ಅಭಾವದಿಂದ ಬಂಜೆತನ ಪ್ರಾಪ್ತವಾಗಬಹುದು. 'ಬಿ' ಕಾಂಪ್ಲೆಕ್ಸ್ ಜೀವಸತ್ವದ ಅಭಾವದಿಂದ ಬೆರಿಬೆರಿ, ಪೆಲೆಗ್ರ, ನಾಲಿಗೆ ಕೆಂಪಾಗುವುದು, ಬಾಯಲ್ಲಿ ಹುಣ್ಣಾಗುವುದು, ನರಗಳ ದೌರ್ಬಲ್ಯ ಮತ್ತಿತರ ತೊಂದರೆಗಳು ಉಂಟಾಗುತ್ತವೆ. 'ಸಿ' ಜೀವಸತ್ವದ ಅಭಾವದಿಂದ ಸ್ಪರ್ಶ ರೋಗ ಉಂಟಾಗುತ್ತದೆ.

ಕಬ್ಬಿಣದ ಕೊರತೆಯಿಂದ ರಕ್ತಹೀನತೆ. ಅಯೋಡಿನ್ ಕೊರತೆಯಿಂದ ಗಳಗಂಡ, ಫ್ಲೂರಿನ್ ಕೊರತೆಯಿಂದ ಹಲ್ಲು ಹುಳುಕು ಉಂಟಾಗುತ್ತದೆ.

ಜೀವಸತ್ವ ಹಾಗೂ ಲವಣಗಳಿಂದ ಅನೇಕರೀತಿಯ ಅಪೌಷ್ಟಿಕತೆ ಮತ್ತು ಕಾಯಿಲೆಗಳು ಉಂಟಾಗುತ್ತವೆ. ಇವುಗಳ ಹೆಚ್ಚಳದಿಂದಲೂ ಹಲವಾರು ರೀತಿಯ ತೊಂದರೆಗಳು ತಲೆದೋರುತ್ತವೆ.

ಅತಿ ಹೆಚ್ಚು ಆಹಾರ ಇಲ್ಲವೆ ಕೊಬ್ಬು ಪದಾರ್ಥಗಳನ್ನು ಹೇರಳವಾಗಿ ಸೇವಿಸುವುದರಿಂದ ದೇಹದಲ್ಲಿ ಕೊಬ್ಬು ಕಲೆಯುತ್ತದೆ. ದೇಹ ಸ್ಥೂಲವಾಗುತ್ತದೆ. ಬೊಜ್ಜಿನಿಂದ ಬಿ.ಪಿ., ಹೃದಯ ರೋಗ, ಕ್ಯಾನ್ಸರ್ ಹಾಗೂ ಸಕ್ಕರೆ ಕಾಯಿಲೆ ಉಂಟಾಗುವ ಅಪಾಯವಿರುತ್ತದೆ. *

**ಕಾಕೇಸಿಯನ್ ಭಾಷಾ ಪರಿವಾರ :** ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರಗಳ ಮಧ್ಯ ಭಾಗದಲ್ಲಿ ಇರುವ ಬಹು ವಿಶಾಲವಾದ ಕಾಕೇಸಿಯ ಪ್ರದೇಶದಲ್ಲಿ ವಾಸಿಸುವ ಜನ ಆಡುತ್ತಿರುವ ವಿವಿಧ ಭಾಷೆಗಳ ಒಂದು ಸಮೂಹ. ಈ ಭಾಷಾಕ್ಷೇತ್ರ ರಷ್ಯದ ದಕ್ಷಿಣದಲ್ಲಿ ಕಾಕೇಸಿಯನ್ ಭೂಸಂಧಿಯಿಂದ ಮೊದಲಾಗಿ ತುರ್ಕಿ ಮತ್ತು ಇರಾನ್ ದೇಶಗಳವರೆಗೂ ಹರಡಿಕೊಂಡಿದೆ. ಈ ವಿಶಾಲವಾದ ಭೂಪ್ರದೇಶದಲ್ಲಿ ಸುಮಾರು 40 ಲಕ್ಷಕ್ಕೂ ಹೆಚ್ಚು ಜನ ಈ ಭಾಷೆಗಳನ್ನು ಬಳಸುತ್ತಿದ್ದಾರೆ. ಈ ಭಾಷಾಪರಿವಾರಕ್ಕೆ ಸೇರಿದ ಹೆಚ್ಚು ಉಪಭಾಷೆಗಳು ಕಾಕಸಸ್ ಪರ್ವತದ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಾಗಿ ದೊರೆಯುತ್ತವೆ. ಈ ಎಲ್ಲ ಭಾಷೆ ಮತ್ತು ಉಪಭಾಷೆಗಳನ್ನು ಅಧ್ಯಯನ ಮಾಡಲು ಹೊರಟಾಗ ಅವು ಪರಸ್ಪರ ಭಿನ್ನ ಭಿನ್ನವಾಗಿಯೇ ಕಂಡುಬಂದಿವೆ. ಈ ಕಾರಣಗಳಿಂದಾಗಿ ಇವು ವಿಶ್ವದ ಯಾವ ಭಾಷಾ ಪರಿವಾರಕ್ಕೂ ಸೇರದೆ ಒಂದು ಸ್ವತಂತ್ರಭಾಷಾ ಪರಿವಾರವಾಗಿಯೇ ಉಳಿದಿವೆ. ಇವು ಪ್ರಾಚೀನ ಮೆಡಿಟರೇನಿಯನ್ ಭಾಷೆಗಳ ಪಳೆಯುಳಿಕೆಗಳಿಂದ ವಿಕಾಸಗೊಂಡ ಭಾಷೆಗಳಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಹೆಚ್ಚಿನ ವಿಚಾರಗಳನ್ನು ತಿಳಿಯಲು ಸಾಕಷ್ಟು ಪ್ರಮಾಣಗಳು ಇಲ್ಲದೆ ಇವು ಇನ್ನೂ ಅಸ್ಪಷ್ಟವಾಗಿಯೇ ಉಳಿದಿವೆ. ಈ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ.

ಕಾಕೇಸಿಯನ್ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳನ್ನು ಮುಖ್ಯವಾಗಿ ಮೂರು ವರ್ಗಗಳನ್ನಾಗಿ ವಿಂಗಡಿಸಬಹುದು:

**1 ಪೂರ್ವ ಕಾಕೇಸಿಯನ್ ಭಾಷಾವರ್ಗ:** (1) ಚೆಚೆನ್ (2) ಅವ್ರೋ–ಅಂದಿ (3) ದರ್ಘಿ (4) ಸಮುರ್ (5) ಲಕ್ ಅಥವಾ ಕಸಿ–ಕುಮುಕ್ (6) ಅರ್ಚ್ಚಿ (7) ಹಿನುಲುಫ್ (8) ಉದಿ ಎಂಬ ಎಂಟು ಭಾಷಾಶಾಖೆಗಳು ಸೇರಿವೆ.

**2 ಪಶ್ಚಿಮ ಕಾಕೇಸಿಯನ್ ಭಾಷಾವರ್ಗ:** (1) ಅಭಜ಼ (2) ಉಬಿಕ್ (3) ಅದಿಘೆ ಎಂಬ ಮೂರು ಭಾಷಾ ಶಾಖೆಗಳು ಸೇರಿವೆ.

**3 ದಕ್ಷಿಣ ಕಾಕೇಸಿಯನ್ ಭಾಷಾವರ್ಗ:** (1) ಜಾರ್ಜಿಯಸ್ (2) ಮಿಂಗ್ರೆಲಿಯನ್ ಮತ್ತು ಲಜ಼್ (3)ಸ್ವನೇತಿಯನ್ ಎಂಬ ಭಾಷಾಶಾಖೆಗಳು ಸೇರಿವೆ.

ಈ ಭಾಷಾವರ್ಗೀಕರಣವನ್ನು ಸಮರ್ಪಕ ಹಾಗು ಪರಿಪೂರ್ಣ ಎಂದು ಒಪ್ಪದ ಕೆಲವು ವಿದ್ವಾಂಸರು ಈ ವರ್ಗದ ಕೆಲವು ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿ ಅವುಗಳಲ್ಲಿ ಮುಖ್ಯವಾಗಿ ಕಂಡುಬರಬಹುದಾದ ಸಾಮ್ಯಗಳನ್ನು ಆಧಾರವಾಗಿರಿಸಿಕೊಂಡು ಅವನ್ನು ಮತ್ತೆ ವರ್ಗೀಕರಿಸತೊಡಗಿದರು. ಪೂರ್ವ ಮತ್ತು ಪಶ್ಚಿಮ ಕಾಕೇಸಿಯನ್ ಭಾಷೆಗಳಲ್ಲಿ ಸಾಕಷ್ಟು ಸಾಮ್ಯ ಕಂಡು ಬಂದ ಕಾರಣದಿಂದ ಅವನ್ನು ಒಟ್ಟುಗೂಡಿಸಿ ಉತ್ತರ ಕಾಕೇಸಿಯನ್ ಭಾಷಾವರ್ಗವೆಂದು ಕರೆದರು. ಅಂದಿನಿಂದ ಈ ಕಾಕೇಸಿಯನ್ ಭಾಷಾಪರಿವಾರಕ್ಕೆ ಸೇರಿದ ಎಲ್ಲ ಭಾಷೆಗಳನ್ನೂ ಉತ್ತರ ಮತ್ತು ದಕ್ಷಿಣ ಕಾಕೇಸಿಯನ್ ಭಾಷಾವರ್ಗಗಳೆಂದು ಕರೆಯುವುದು ರೂಢಿಗೆ ಬಂತು. ಉತ್ತರ ಕಾಕೇಸಿಯನ್ ಭಾಷೆಗಳಾದ ಪೂರ್ವ ಮತ್ತು ಪಶ್ಚಿಮ ಕಾಕೇಸಿಯನ್ ಭಾಷೆಗಳು ದಕ್ಷಿಣ ಕಾಕೇಸಿಯನ್ ಭಾಷೆಗಳೊಡನೆ ಹೋಲಿಸಿದಾಗ ಪರಸ್ಪರ ಭಿನ್ನವಾಗಿಯೇ ಕಂಡುಬರುತ್ತವೆ.

ಉತ್ತರ ಕಾಕೇಸಿಯನ್ ಭಾಷೆಗಳ ಬಹು ಮುಖ್ಯ ವೈಶಿಷ್ಟ್ಯವೆಂದರೆ ಅವುಗಳಲ್ಲಿ ಸ್ವರಗಳು ಕಡಿಮೆ ಇದ್ದು ವ್ಯಂಜನಗಳು ಹೆಚ್ಚಾಗಿರುವುದು. ಅದರಲ್ಲೂ ಪಾರ್ಶ್ವಿಕ ವ್ಯಂಜನಗಳೇ ಅಧಿಕ. ಪೂರ್ವ ಮತ್ತು ಪಶ್ಚಿಮ ಕಾಕೇಸಿಯನ್ ಭಾಷೆಗಳನ್ನೇ ಪರಸ್ಪರ ಹೋಲಿಸಿದಾಗ ಪಶ್ಚಿಮ ಕಾಕೇಸಿಯನ್ ಭಾಷೆಗಳಲ್ಲಿ ವ್ಯಂಜನಯುಗ್ಮಗಳು ಅಧಿಕವಾಗಿ ಕಂಡುಬರುತ್ತವೆ. ಪೂರ್ವ ಕಾಕೇಸಿಯನ್ ಭಾಷೆಗಳಲ್ಲಿ ಇಂಥ ವ್ಯಂಜನಯುಗ್ಮಗಳು ಕಂಡುಬಂದರೂ ಅತಿ ಕಡಿಮೆ. ಕೆಲವು ಸಂದರ್ಭಗಳಲ್ಲಿ ಇಂಥ ವ್ಯಂಜನಯುಗ್ಮಗಳನ್ನು ಪರಕೀಯನೊಬ್ಬ ಸುಲಭವಾಗಿ ಉಚ್ಚರಿಸಲಾರ. ಇಂಥ ವ್ಯಂಜನಸಮುದಾಯ ಅಧಿಕವಾಗಿ ಕಂಡುಬರುವುದು ಈ ವರ್ಗದ ಭಾಷೆಗಳ ಬಹುಮುಖ್ಯ ಲಕ್ಷಣಗಳಲ್ಲಿ ಒಂದು. ಮತ್ತೊಂದು ಮುಖ್ಯ ವೈಶಿಷ್ಟ್ಯವೇನೆಂದರೆ ಈ ಎಲ್ಲ ಭಾಷೆಗಳಲ್ಲೂ ವಿಭಕ್ತಿಪ್ರತ್ಯಯಗಳಿಗಿರುವ ಪ್ರಾಧಾನ್ಯ. ಕೆಲವು ಭಾಷೆಗಳಲ್ಲಿ ಈ ವಿಭಕ್ತಿಗಳ ಸಂಖ್ಯೆ 35ಕ್ಕೂ ಹೆಚ್ಚಿರಬಹುದು. ಈ ಭಾಷೆಗಳ ಪದರಚನಾಕ್ರಮವೂ ವಿಚಿತ್ರ ಹಾಗು ತುಂಬ ಕ್ಲಿಷ್ಟ. ಅದೂ ಅಲ್ಲದೆ, ವಿಶೇಷ್ಯ ಸೂಚಕ ರೂಪಗಳು ಈ ಭಾಷೆಗಳಲ್ಲಿ ವಿವಿಧ ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಲಿಂಗ, ವಚನ, ವಿಭಕ್ತಿಗಳಲ್ಲಿ ಈ ವಿಶೇಸ್ಯ ಸೂಚಕ ರೂಪಗಳು ಯಾವ ವರ್ಗಕ್ಕೆ ಸೇರಿವೆ ಎಂಬುದನ್ನು ರೂಪದಿಂದಾಗಲಿ ಅರ್ಥದಿಂದಾಗಲಿ ಹೇಳಲು ಬರುವುದಿಲ್ಲ. ಕೆಲವು ವೇಳೆ, ಒಂದೇ ಒಂದು ವಿಶೇಷ್ಯ ಸೂಚಕರೂಪ ಏಕವಚನ ಮತ್ತು ಬಹುವಚನಗಳೆರಡರಲ್ಲೂ ಒಂದೇ ಆಗಿ ಕಾಣಿಸಿಕೊಂಡು ಭಿನ್ನ ಭಿನ್ನ ಅರ್ಥವನ್ನು ಸೂಚಿಸುತ್ತದೆ. ಹಾಗೆಯೇ ಅದು ವಿವಿಧ ಲಿಂಗಗಳನ್ನೂ ಸೂಚಿಸಬಲ್ಲುದು. ಕೆಲವು ಸಂದರ್ಭಗಳಲ್ಲಿ ವಿಶೇಷ್ಯ ಸೂಚಕ ರೂಪಗಳ ಪರ, ಮಧ್ಯ ಅಥವಾ ಅಂತ್ಯದಲ್ಲಿ ವಿವಿಧ ವ್ಯಂಜನಗಳನ್ನು ಪ್ರತ್ಯಯದ ರೂಪದಲ್ಲಿ ಉಪಯೋಗಿಸಿದಾಗ ಆ ರೂಪಗಳು ಭಿನ್ನ ಭಿನ್ನವಾಗಿ ಕಾಣಿಸಿಕೊಂಡು ಬೇರೆ ಬೇರೆ ಅರ್ಥವನ್ನು ವ್ಯಕ್ತಪಡಿಸುತ್ತವೆ. ಈ ವಿಶೇಷ್ಯ ಸೂಚಕ ರೂಪಗಳ ಸಂಖ್ಯೆ ಕೆಲವು ಭಾಷೆಗಳಲ್ಲಿ ಎರಡರಿಂದ ಆರರವರೆಗೆ ಕಂಡುಬರುತ್ತವೆ ಈ ಭಾಷೆಗಳ ಮತ್ತೊಂದು ಲಕ್ಷಣವೇನೆಂದರೆ ವಿಶೇಷಣ, ಕ್ರಿಯಾಪದ, ಸರ್ವನಾಮ ಅಥವಾ ಕ್ರಿಯಾವಿಶೇಷಣ ಗಳಿಗೆ ಮೇಲೆ ಹೇಳಿದಂತೆ ವಿವಿಧ ವ್ಯಂಜನಗಳನ್ನು ಪ್ರತ್ಯಯರೂಪದಲ್ಲಿ ಸೇರಿಸಿದಾಗ ಬೇರೆ ಬೇರೆ ಅರ್ಥವನ್ನು ಸೂಚಿಸಿ ಅವು ಲಿಂಗ, ವಚನ, ವಿಭಕ್ತಿಗಳ ಕಾರ್ಯವನ್ನು ನಿರ್ವಹಿಸುತ್ತವೆ. ಇಂಥ ಪದರಚನಾಕ್ರಮದಲ್ಲಿ ಅವುಗಳ ಮೂಲರೂಪವನ್ನು ಸುಲಭವಾಗಿ ಪತ್ತೆ ಹಚ್ಚಲು ಬರುವುದಿಲ್ಲ. ಈ ಭಾಷೆಗಳಲ್ಲಿ ಸಾಮಾನ್ಯ ಕ್ರಿಯಾಮೂಲ ರೂಪ ಒಂದೇ ವ್ಯಂಜನ ಉಳ್ಳದ್ದಾಗಿರುವುದು ಹೆಚ್ಚು. ಈ ವಿವಿಧ ಕ್ರಿಯಾರೂಪಗಳ ಹಿಂದೆ ಅಥವಾ ಮುಂದೆ ಅನೇಕ ಪ್ರತ್ಯಯಗಳು ಬರುತ್ತವೆ. ಅಂಥ ಸಂದರ್ಭದಲ್ಲಿ ಮೂಲರೂಪಕ್ಕೂ ಈ ಹೊಸ ರೂಪಕ್ಕೂ ರಚನಾಕ್ರಮದಲ್ಲಿ ಸಂಬಂಧವೇ ಗೋಚರವಾಗುವುದಿಲ್ಲ. ಇಂಥ ಕ್ಲಿಷ್ಟತೆಗಳ ಕಾರಣದಿಂದಾಗಿ ಕಾಕೇಸಿಯನ್ ಭಾಷೆಗಳ ವ್ಯಾಕರಣ ಬಹಳ ಸಂಕೀರ್ಣ ಹಾಗು ಜಟಿಲವಾಗಿ ಕಂಡುಬರುತ್ತದೆ.

ಪಶ್ಚಿಮ ಕಾಕೇಸಿಯನ್ ಭಾಷೆಗಳಲ್ಲಿ ವಿಭಕ್ತಿಗಳು ಬಹಳ ಕಡಿಮೆ. ಅದಿಘೆ, ಉದಿಕ್ ಭಾಷೆಗಳಲ್ಲಿ ಮೂರೇ ಮೂರು ವಿಭಕ್ತಿಗಳು ಕಂಡುಬರುತ್ತವೆ. ಅಭಜ಼್ ಭಾಷೆಯಲ್ಲಿ ವಿಭಕ್ತಿಗಳೇ ಇಲ್ಲ. ಇಲ್ಲಿ ಪೂರ್ವಕಾಕೇಸಿಯನ್ ಭಾಷೆಗಳಿಗಿಂತ ಕ್ರಿಯಾರೂಪಗಳು (ಮೂಲಧಾತು) ಕಡಿಮೆ. ಸಮಾಸಪದಗಳೇ ಹೆಚ್ಚು. ಸಾಮಾನ್ಯ ಮೂಲಪದಗಳೂ ಬಹಳ ಕಡಿಮೆ. ಈ ಕಾರಣದಿಂದ ಸಮಾಸಪದಗಳೇ ವಿವಿಧ ವಿಚಾರಗಳ ಅರ್ಥವನ್ನು ವ್ಯಕ್ತಪಡಿಸುತ್ತವೆ. ಈ ರೀತಿಯ ವ್ಯತ್ಯಾಸವಿದ್ದರೂ ಪೂರ್ವ ಮತ್ತು ಪಶ್ಚಿಮ ಕಾಕೇಸಿಯನ್ ಭಾಷೆಗಳ ಪದಸಮೂಹದಲ್ಲಿ ಸಾಮ್ಯವಿದೆ. ಸರ್ವನಾಮ, ಕ್ರಿಯಾಪದ, ಸಂಖ್ಯಾವಾಚಕ ಮತ್ತು ಇತರ ಪದಗಳಲ್ಲಿ ಸರಳತೆ ಹೆಚ್ಚು..

ದಕ್ಷಿಣ ಕಾಕೇಸಿಯನ್ ಭಾಷೆಗಳ ಧ್ವನಿವ್ಯವಸ್ಥೆ ಉತ್ತರ ಕಾಕೇಸಿಯನ್ ಭಾಷೆಗಳ ಧ್ವನಿವ್ಯವಸ್ಥೆಗಿಂತ ತುಂಬ ಸರಳ. ಇಲ್ಲಿ ಪ್ರತ್ಯಯದ ರೂಪದಲ್ಲಿ ಉಪಯೋಗಿಸುವ ವ್ಯಂಜನಗಳು

ಅಧಿಕವಾಗಿ ಕಂಡುಬರುತ್ತವೆ. ಕೆಲವು ಮೂಲಧಾತುಗಳಿಗೆ ವಿವಿಧ ಪ್ರತ್ಯಯಗಳನ್ನು ಸೇರಿಸಿ ವಿವಿಧ ಅರ್ಥವನ್ನು ಪಡೆಯುವುದೂ ಸ್ವಲ್ಪ ಕಷ್ಟ. ಈ ದಕ್ಷಿಣ ಕಾಕೇಸಿಯನ್ ಭಾಷೆಗಳಲ್ಲೆಲ್ಲ ಜಾರ್ಜಿಯನ್ ಭಾಷೆ ಅತಿ ಪ್ರಾಚೀನವಾದುದು. ಇದರಲ್ಲಿ ಅತಿಪ್ರಾಚೀನ ಸಾಹಿತ್ಯ ದೊರೆಯುತ್ತದೆ. ಅಷ್ಟೇ ಅಲ್ಲದೆ, ಬಹು ಹಿಂದಿನಿಂದಲೂ ಲಿಪಿಯುಳ್ಳ ಭಾಷೆಯಾಗಿದು ಬೆಳೆದು ಬಂದಿದೆ. ಇತ್ತೀಚೆಗೆ ಕೆಲವು ಕಾಕೇಸಿಯನ್ ಭಾಷೆಗಳಲ್ಲಿ ಗ್ರಂಥಗಳು, ವೃತ್ತಪತ್ರಿಕೆಗಳು ಕಾಣಿಸಿಕೊಳ್ಳುತ್ತಿವೆ. ಉತ್ತರ ಕಾಕೇಸಿಯನ್ ಭಾಷೆಗಳನ್ನು ದಕ್ಷಿಣ ಕಾಕೇಸಿಯನ್ ಭಾಷೆಗಳೊಡನೆ ಹೋಲಿಸಿದಾಗ ಉತ್ತರ ವರ್ಗದ ಹೆಚ್ಚು ಭಾಷೆಗಳಿಗೆ ತಮ್ಮವೇ ಆದ ಲಿಪಿ ಹಾಗೂ ಸಾಹಿತ್ಯ ಇಲ್ಲವೆನ್ನಲಾಗಿದೆ. (ಕೆ.ಕೆ.ಜಿ.)

**ಕಾಕೊಥ್ರೈನ್ಯಾಕ್ಸ್ :** ಪಾಮೇಸೀ ಕುಟುಂಬಕ್ಕೆ ಸೇರಿದ ಮಧ್ಯಮ ಗಾತ್ರದ ಒಂದು ಜಾತಿಯ ಮರ. ಇದು ಫ್ಲಾರಿಡ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳ ಮೂಲವಾಸಿ. ಇದರಲ್ಲಿ ಸುಮಾರು 30 ಪ್ರಭೇದಗಳಿವೆ. ಇವು ಥ್ರೈನ್ಯಾಕ್ಸ್ ಎಂಬ ಜಾತಿಯ ಮರಗಳನ್ನು ಹೋಲುತ್ತವೆ. ಬಹಳಕಾಲದವರೆಗೂ ಇವನ್ನು ಥ್ರೈನ್ಯಾಕ್ಸ್ ಜಾತಿಯವೆಂದೇ ಪರಿಗಣಿಸಲಾಗಿತ್ತು. ಸಾರ್ಜೆಂಟ್ ಎಂಬ ಸಸ್ಯವಿಜ್ಞಾನಿ ಇವೆರಡು ಮರಗಳಿಗೂ ಹಲವಾರು ಸಸ್ಯಗಳಿರುವುದನ್ನು ಗಮನಿಸಿ (1899) ಇದನ್ನು ಬೇರೆ ಜಾತಿಯಾಗಿ ವಿಂಗಡಿಸಿದ. ಕಪ್ಪುಬಣ್ಣದ ಹಣ್ಣುಗಳು, ಚಿಕ್ಕಗಾತ್ರದ ಹೂಗೊಂಚಲು ತೊಟ್ಟು, ಸುಕ್ಕು ಸಿಪ್ಪೆಯ ಬೀಜಗಳು ಇವುಗಳಿಂದಾಗಿ ಕಾಕೊಥ್ರೈನ್ಯಾಕ್ಸ್ ಸಸ್ಯ ಥ್ರೈನ್ಯಾಕ್ಸ್ ಸಸ್ಯದಿಂದ ಭಿನ್ನವಾಗಿದೆ.

ಕಾಕೊಥ್ರೈನ್ಯಾಕ್ಸ್‌ಗೆ 30' ಉದ್ದದ ನೀಳವಾದ ಕಂಬದಂಥ ಕಾಂಡವಿದೆ. ತುದಿಯಲ್ಲಿ ಕಿರೀಟದೋಪಾದಿಯಲ್ಲಿ ಜೋಡಣೆಯಾಗಿರುವ ಎಲೆಗಳ ಸಮೂಹವಿದೆ. ಎಲೆಗಳು ಬೀಸಣಿಗೆಯಂತಿವೆ. ಹೂಗೊಂಚಲು ತಾಳಗುಚ್ಛ ಮಾದರಿಯದು. ಹೂಗಳು ಬಲುಚಿಕ್ಕ ಗಾತ್ರದವು. ಒಂದೊಂದರಲ್ಲಿ 6 ಹಾಲೆಗಳುಳ್ಳ ಪೆರಿಯಾಂತ್ ಭಾಗ, 9 ಕೇಸರಗಳು ಮತ್ತು ಒಂದೇ ಕೋಣೆಯುಳ್ಳ ದುಂಡನೆಯ ಉಚ್ಚಸ್ಥಾನದ ಅಂಡಾಶಯ ಇವೆ. ಫಲ ಒಂದೇ ಬೀಜವುಳ್ಳ ಬೆರಿಯಂಥವು. ಮಾಗಿದಾಗ ದಪ್ಪಗೂ ರಸಭರಿತವೂ ಹೊಳೆಯುವ ಕಣ್ಣು ಬಣ್ಣದ್ದೂ ಆಗುತ್ತದೆ.

ಕಾಕೊಥ್ರೈನ್ಯಾಕ್ಸ್ ಕ್ರೈನೇಟ ಮತ್ತು ಕಾ. ಅರ್ಜೆಂಟಿಯ ಎಂಬ ಎರಡು ಪ್ರಭೇದಗಳನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಬೆಳೆಸುತ್ತಾರೆ. (ಎನ್.ಆರ್.ಆರ್.)

**ಕಾಕ್‌ರಾಫ್ಟ್, ಸರ್ ಜಾನ್ ಡಗ್ಲಾಸ್ :** 1897–1967. ಬ್ರಿಟನ್ನಿನ ನ್ಯೂಕ್ಲಿಯರ್ ವಿಜ್ಞಾನಿ. ನ್ಯೂಕ್ಲಿಯರ್ ಭೌತವಿಜ್ಞಾನ ಬಾಲ್ಯಾವಸ್ಥೆಯಲ್ಲಿದ್ದಾಗ ಪರಮಾಣುವಿನ ನ್ಯೂಕ್ಲಿಯಸನ್ನು ಪ್ರಯೋಗಕ್ಕೊಳಪಡಿಸಿ, ನ್ಯೂಕ್ಲಿಯಸ್ ಪರಿವರ್ತನೆಯನ್ನು ಸಂಪೂರ್ಣ ಕೃತ್ರಿಮವಾಗಿ ಸಾಧಿಸಬಹುದೇ ಎಂದು ರುದರ್‌ಫೋರ್ಡ್ ಮತ್ತು ಅವರ ಶಿಷ್ಯರು ಆಲೋಚಿಸುತ್ತಿದ್ದರು. ಆ ಮೊದಲೇ ರುದರ್‌ಫೋರ್ಡ್ ನೈಸರ್ಗಿಕ ಆಲ್ಫಾಕಣಗಳಿಂದ ನ್ಯೂಕ್ಲಿಯಸ್ ಪರಿವರ್ತನೆ ಸಾಧಿಸಿದ್ದ. ವೇಗವೃದ್ಧಿಗೊಳಿಸಲ್ಪಟ್ಟ ವಿದ್ಯುತ್ ಕಣಗಳ ಆವಶ್ಯಕತೆ ಆಗ ತಿಳಿಯಿತು. ಕಾಕ್‌ರಾಫ್ಟ್ (ವಾಲ್ಟನ್ ಮತ್ತು ಗಲ್ಬರ್ಟರೊಂದಿಗೆ) 1930ರಲ್ಲಿ ಕಣವೇಗೋತ್ಕರ್ಷಕವನ್ನು ಸಂಶೋಧಿಸಿ ಈ ಕೊರತೆಯನ್ನು ಭರ್ತಿ ಮಾಡಿದ; ಮತ್ತು ಮುಂದಿನ ಎರಡೇ ವರ್ಷಗಳೊಳಗೆ (1932ರಲ್ಲಿ ವಾಲ್ಟನ್ನನೊಡನೆ) ಕಣ ವೇಗೋತ್ಕರ್ಷಕದಲ್ಲಿ ವೇಗವೃದ್ಧಿಗೊಳಿಸಲ್ಪಟ್ಟ ವಿದ್ಯುತ್‌ಕಣಗಳಿಂದ ಪರಮಾಣು ನ್ಯೂಕ್ಲಿಯಸ್ ಪರಿವರ್ತನೆಯನ್ನು ಸಹ ಸಾಧಿಸಿದ. ಈ ಪ್ರಯೋಗದಲ್ಲಿ ಕಾಕ್‌ರಾಫ್ಟ್ ಲೀಥಿಯಮನ್ನು ಪ್ರೋಟಾನುಗಳ ತಾಡನೆಗೆ ಈಡು ಮಾಡಿ ಹೀಲಿಯಮ್ ನ್ಯೂಕ್ಲಿಯಸುಗಳನ್ನು (ಆಲ್ಫ ಕಣಗಳನ್ನು) ದೊರಕಿಸಿದ. ಈ ಕ್ರಿಯೆ ಆನುಷಂಗಿಕವಾಗಿ ಐನ್‌ಸ್ಟೈನನ ರಾಶೀ–ಶಕ್ತಿ ಸಮೀಕರಣವನ್ನು ಪ್ರಾಯೋಗಿಕವಾಗಿ ದೃಢಪಡಿಸಿತು. ಕಾಕ್‌ರಾಫ್ಟನ ಇವೆರಡೂ ಸಾಧನೆಗಳು ಪ್ರಪ್ರಥಮಗಳು. ಪರಮಾಣು ನ್ಯೂಕ್ಲಿಯಸ್ ಪರಿವರ್ತನೆಯ ಮಹತ್ತ್ವದ ಸಾಧನೆಗಾಗಿ 1951ರಲ್ಲಿ ಭೌತವಿಜ್ಞಾನ ವಿಭಾಗದ ನೊಬೆಲ್ ಬಹುಮಾನ ಈತನಿಗೆ (ವಾಲ್ಟನ್ನನೊಂದಿಗೆ) ಲಭಿಸಿತು.

ಕಾಕ್‌ರಾಫ್ಟ್ ಹುಟ್ಟಿದ್ದು ಇಂಗ್ಲೆಂಡಿನ ಟಾಡ್ ಮಾರ್ಡೆನ್ನಿನಲ್ಲಿ, 27 ಮೇ, 1897ರಂದು. ವಿದ್ಯಾರ್ಜನೆ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ ಮತ್ತು ಕೇಂಬ್ರಿಜ್‌ನ ಸೇಂಟ್ ಜಾನ್ಸ್ ಕಾಲೇಜಿನಲ್ಲಿ. 1928ರಿಂದ 1946ರವರೆಗೆ ಸೇಂಟ್ ಜಾನ್ಸ್ ಕಾಲೇಜಿನ ಫೆಲೋ ಆಗಿಯೂ 1947ರಿಂದ ಅದೇ ಕಾಲೇಜಿನ ಗೌರವ ಫೆಲೋ ಆಗಿಯೂ ಕೆಲಸ ಮಾಡಿದ. ಕಾಕ್‌ರಾಫ್ಟ್‌ನ ಎರಡು ಅತ್ಯಂತ ಪ್ರಮುಖ ಉಪಜ್ಞೆಗಳು ಹೀಗಿವೆ. ಮೊದಲನೆಯದು ಮೂಲಕಣವಾದ ಪ್ರೋಟಾನ್ ಅನ್ನು ವೇಗೋತ್ಕರ್ಷಗೊಳಿಸಬಲ್ಲ ವಿದ್ಯುತ್ ವಿಭವವನ್ನು ಸೃಷ್ಟಿಸುವ 'ವೇಗೋತ್ಕರ್ಷಕ'. ಎರಡನೆಯ ಮಹಾಯುದ್ಧದ ಮೊದಲು ಮತ್ತು ಅನಂತರ ಪರಮಾಣು ಬಾಂಬ್ ತಯಾರಿಕೆಯಲ್ಲಿ ಪ್ರಮುಖ ಪಾತ್ರ, ಎರಡನೆಯದು ಮುಂದೆ ಹೈಡ್ರೋಜನ್ ಬಾಂಬ್ ತಯಾರಿಕೆಗೂ ಈತನ ಉಪಜ್ಞೆ ನೆರವು ನೀಡಿತು.

ಕಾಕ್‌ರಾಫ್ಟನಿಗೆ ದೊರೆತ ಪದವಿ ಪ್ರಶಸ್ತಿಗಳೂ ಅವನು ಪಡೆದ ಸ್ಥಾನಗಳೂ ಅತ್ಯುಚ್ಚ ಮಟ್ಟದವು. ಪದವಿ ಪ್ರಶಸ್ತಿಗಳಲ್ಲಿ ಮುಖ್ಯವಾದವು: ರಾಯಲ್ ಸೊಸೈಟಿಯ ಫೆಲೋ (1936), ಹ್ಯಾಘ್ಸ್ ಪದಕ (1938), ನೈಟ್ ಪದವಿ (1948), ನೊಬೆಲ್ ಪಾರಿತೋಷಕ (1951), ನೈಟ್ ಕಮಾಂಡರ್ ಆಫ್ ದಿ ಬಾಥ್ (1953) ಬ್ರಿಟಿಷ್ ಅಸೋಸಿಯೇಷನ್ನಿನ ಅಧ್ಯಕ್ಷ ಪದವಿ (1962)– ಇವನು ಪಡೆದ ಸ್ಥಾನಗಳಲ್ಲಿ ಮುಖ್ಯವಾದವು: ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಜಾಕ್ಸೋನಿಯನ್ ಪ್ರೊಫೆಸರ್ ಆಫ್ ನ್ಯಾಚುರಲ್ ಫಿಲಾಸಫಿ (1939–1946), ಬ್ರಿಟಿಷ್ ಸರ್ಕಾರದ ಆಕಾಶ ಸಂರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಇಲಾಖೆಯ ಚೀಫ್ ಸೂಪರಿಂಟೆಂಡೆಂಟ್ (1914–44), ಕೆನಡದ ನ್ಯಾಷನಲ್ ರಿಸರ್ಚ್ ಕೌನ್ಸಿಲ್ಲಿನ ಪರಮಾಣುಶಕ್ತಿ ವಿಭಾಗದ ಡೈರೆಕ್ಟರ್ (1944–46), ಇಂಗ್ಲೆಂಡಿನ ಹಾರ್ವೆಯಲ್ಲಿರುವ ಪರಮಾಣುಶಕ್ತಿ ಸಂಶೋಧನೆ ಇಲಾಖೆಯ ಡೈರೆಕ್ಟರ್ (1946), ಸಂರಕ್ಷಣಾ ಇಲಾಖೆಯ ಸಂರಕ್ಷಣಾ ಸಂಶೋಧನ ನೀತಿ ಸಮಿತಿಯ ಅಧ್ಯಕ್ಷ ಮತ್ತು ವೈಜ್ಞಾನಿಕ ಸಲಹೆಗಾರ (1952–54), ಬ್ರಿಟಿಷ್ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್ನಿನ ವೈಜ್ಞಾನಿಕ ಸಲಹಾಮಂಡಳಿಯ ಸದಸ್ಯ (1948–52).

ಈತ ಕೇಂಬ್ರಿಡ್ಜ್‌ನಲ್ಲಿ ಸೆಪ್ಟಂಬರ್ 1967ರಲ್ಲಿ ನಿಧನನಾದ. (ಆರ್.ಎಸ್.ಬಿ.)

**ಕಾಕ್ಸ್ ಕೂಂಬ್ :** ನಾನಾ ಬಗೆಯ ಬಣ್ಣಗಳಿಂದ ಕೂಡಿದ ಅಂದವಾದ ಹೂ ಬಿಡುವ ವಾರ್ಷಿಕ ಸಸ್ಯ. ಹೂಗೊಂಚಲುಗಳು ಹುಂಜದ ತಲೆಯ ಮೇಲಿನ ಶಿಖೆಯನ್ನು ಹೋಲುವುದರಿಂದ ಇದಕ್ಕೆ ಈ ಹೆಸರು. ಕನ್ನಡದಲ್ಲಿ ಕೋಳಿಜುಟ್ಟು ಗಿಡ ಎಂಬ ಹೆಸರೂ ಇದೆ. ಇದು ಸುಂದರವಾದ ಉದ್ಯಾನಸಸ್ಯವೆಂದು ಪ್ರಸಿದ್ಧವಾಗಿದೆ. ಕುಂಡಗಳಲ್ಲಿ, ಮಡಿಗಳಲ್ಲಿ ಬೆಳೆಸುತ್ತಾರೆ. ಇದು ದಂಟಿನ ಸೊಪ್ಪಿನ ಕುಟುಂಬವಾದ ಅಮರಾಂತೇಸೀ ಕುಟುಂಬಕ್ಕೆ ಸೇರಿದೆ. ಇದರ ಶಾಸ್ತ್ರೀಯ ಹೆಸರು ಸಿಲೋಸಿಯ ಕ್ರಿಸ್ಟೇಟ. ಸುಮಾರು 35–60 ಸೆಂಮೀ ಎತ್ತರಕ್ಕೆ ಬೆಳೆಯುವ ಮೂಲಿಕೆ ಸಸ್ಯ (ಹರ್ಬ್) ಇದು. ಎಲೆಗಳು ಉದ್ದವಾಗಿವೆ; ಅವುಗಳ ಜೋಡಣೆ ಪರ್ಯಾಯ ಮಾದರಿಯದು. ಗಿಡಕ್ಕೆ ಸುಮಾರು 5 ತಿಂಗಳ

ಕಾಕ್ಸ್ ಕೂಂಬ್ – ಸಿಲೋಸಿಸ್ ಕ್ರಿಸ್ಟೇಟ

ವಯಸ್ಸಾದಾಗ ಮುಖ್ಯ ಕಾಂಡದ ತುದಿಯಲ್ಲಿ ಸಂಕೀರ್ಣ ಮಾದರಿಯ ಒಂದು ದೊಡ್ಡ ಹೂ ಗೊಂಚಲು ಹುಟ್ಟುತ್ತದೆ. ಇದು ಬುಡದಲ್ಲಿ ಚಪ್ಪಟೆಯಾಗಿಯೂ ತುದಿಯಲ್ಲಿ ಮುದ್ದೆಯಾಗಿಯೂ ಇದೆ. ಅಲ್ಲದೆ ಮೇಲ್ಭಾಗದಲ್ಲಿನ ಕವಲುಗಳೆಲ್ಲ ಬಹಳ ಒತ್ತಾಗಿಯೂ ಅಲೆಯಲೆಯಾಗಿಯೂ ಜೋಡಣೆಯಾಗಿವೆ. ಹೂಗೊಂಚಲು ಮಖಮಲ್ಲಿನಂತೆ ಮೃದುವಾಗಿ ಕೆಂಪು, ತಿಳಿಗೆಂಪು, ಹಳದಿ, ಕಿತ್ತಳೆ, ಊದಾ ಮುಂತಾದ ಬಣ್ಣಗಳಿಂದ ಕೂಡಿ ನೋಡಲು ಬಲು ಆಕರ್ಷಕವಾಗಿದೆ. ಇದು ಸುಮಾರು ಒಂದೂವರೆ ತಿಂಗಳಿನವರೆಗೂ ಕೆಡದಂತೆ ಬಾಡದಂತೆ ಗಿಡದ ಮೇಲಿರುವುದು ಇದರ ವೈಶಿಷ್ಟ್ಯ. ಹೂಗಳು ಬಲು ಚಿಕ್ಕ ಗಾತ್ರದವು. ಒಂದೊಂದಕ್ಕೂ ವರ್ಣಮಯವಾದ ಬ್ರ್ಯಾಕ್ಟುಗಳಿವೆ. ಪ್ರತಿಹೂವಿನಲ್ಲೂ 5 ಬಿಡಿ ಬಿಡಿಯಾದ ಪರಿಯಾಂತು ಪಾಲಿಗಳೂ 5 ಕೇಸರಗಳೂ ಒಂದೇ ಕೋಣೆಯುಳ್ಳ ಉಚ್ಚಸ್ಥಾನದ ಅಂಡಾಶಯವೂ ಇವೆ. ಅಂಡಕಗಳು 4–8. ಫಲ ಚೀಲದಂತೆ ಕಾಣುತ್ತದೆ. ಇದಕ್ಕೆ ಪೈಕ್ಸಿಸ್ ಎಂದು ಹೆಸರು. ಬೀಜಗಳು ಅತಿ ಚಿಕ್ಕವು; ಅವಕ್ಕೆ ಗಟ್ಟಿಯಾದ ಹೊದಿಕೆಯಿದೆ. ಹೂಗೊಂಚಲಿನ ಕೆಳಭಾಗದಲ್ಲಿರುವ ಹೂಗಳಲ್ಲಿ ಮಾತ್ರ ಬೀಜಗಳು ಉತ್ಪತ್ತಿಯಾಗುತ್ತವೆ.

ಉದ್ಯಾನಪ್ರಾಮುಖ್ಯವನ್ನು ಪಡೆದಿರುವ ಈ ಸಸ್ಯವನ್ನು ಬೀಜಗಳ ಮುಖಾಂತರ ವೃದ್ಧಿಸಬಹುದು. ಮೊದಲು ಬೀಜಗಳನ್ನು ಒಟ್ಲು ಪಾತಿಗಳಲ್ಲಿ ಬಿತ್ತಬೇಕು. ಬೀಜ ಮೊಳೆತು ಹುಟ್ಟಿದ ಸಸಿಗಳು 4–6 ಎಲೆಗಳುಳ್ಳವಾದ ಮೇಲೆ ಬೇರೆ ಮಡಿಗಳಿಗೂ ಕುಂಡಗಳಿಗೂ ಸ್ಥಳಾಂತರಿಸಬೇಕು. ಮಡಿಗಳಲ್ಲಿ ಬೆಳೆಸುವುದಾದರೆ ಸಸಿಗಳಿಗೆ ಒಂದರಿಂದ ಒಂದೂವರೆ ಅಡಿ ಅಂತರವಿರಬೇಕು. ಅನಂತರ ಒಂದೂವರೆ, ಎರಡು ಮತ್ತು ಮೂರು ತಿಂಗಳುಗಳಿಗೊಮ್ಮೆಯಂತೆ ಮೂರು ಬಾರಿ ಮೇಲುಗೊಬ್ಬರ ಕೊಡಬೇಕು. ಆಮೇಲೆ 5 ಸಲ ಹಿಂಡಿ ಗೊಬ್ಬರದ ದ್ರಾವಣ ಹಾಕಬೇಕು. ಹೀಗೆ ಮಾಡಿದಲ್ಲಿ ಗಿಡದ ಬೆಳವಣಿಗೆ ಹುಲುಸಾಗಿದ್ದು ಸುಮಾರು 5 ತಿಂಗಳಿಗೆ ಹೂ ಬಿಡುತ್ತದೆ.

ಕಾಕ್ಸ್‌ಕೂಂಬಿಗೆ ಔಷಧಿಯ ಮಹತ್ತ್ವವೂ ಇದೆ. ಅತಿಸಾರ ಮುಂತಾದ ರೋಗಗಳಿಗೆ ಹೂವಿನ ಭಾಗಗಳನ್ನು ಬಳಸುವುದುಂಟು. (ಎಂ.ಎಸ್.ಎಸ್.ಆರ್.; ಕೆ.)

**ಕಾಕ್ಸಿಡೀ :** ಸಸ್ಯತಿಗಣೆಗಳ (ಪ್ಲಾಂಟ್ ಬಗ್ಸ್) ಒಂದು ಕುಟುಂಬ. ಕೀಟವರ್ಗದ ಹೆಮಿಪ್ಟರ ಗಣದ ಹೋಮಾಪ್ಟರ ಉಪಗಣಕ್ಕೆ ಸೇರಿದೆ. ಹುರುಪೆ ಕೀಟಗಳು (ಸ್ಕೇಲ್ ಇನ್ಸೆಕ್ಟ್) ಮತ್ತು ಮೇಣ ತಿಗಣೆಗಳು (ಮೀಲೀ ಬಗ್ಸ್) ಇದಕ್ಕೆ ಸೇರಿದ ವಿಶೇಷ ಬಗೆಯ ಕೀಟಗಳು. ಇವು ಗಾತ್ರದಲ್ಲಿ ಸಣ್ಣವು ರಚನೆಯಲ್ಲಿ ಬೇರೆ ಹೋಮಾಪ್ಟರ ಕೀಟಗಳ ಲಕ್ಷಣಗಳನ್ನು ತೋರಿಸಲಾರದಷ್ಟು ವಿಶಿಷ್ಟವಾಗಿ ಮಾರ್ಪಟ್ಟಿವೆ. ಹೆಣ್ಣುಗಳಿಗೆ ರೆಕ್ಕೆಗಳು ಮತ್ತು ಕಾಲುಗಳು ಇಲ್ಲದಿರುವುದರಿಂದ ಇವು ಸಾಧಾರಣವಾಗಿ ಒಂದೇ ಕಡೆ ಅಂಟಿಕೊಂಡು ಚಲಿಸದೆ ಇರುತ್ತವೆ. ಆದರೆ ಗಂಡು ಕೀಟಕ್ಕೆ ಒಂದು ಜೊತೆ ರೆಕ್ಕೆಗಳಿವೆ. ವಿರಳವಾಗಿ ಇವಕ್ಕೂ ರೆಕ್ಕೆಗಳಿಲ್ಲದಿರುವುದುಂಟು. ಈ ಕುಟುಂಬದ ಕೀಟಗಳಿಗೆ ಆಹಾರವನ್ನು ಹೀರುವ ವದನಾಂಗಗಳಿಲ್ಲ. ಆದರೆ ಉದರದ ತುದಿಯಲ್ಲಿ ಸೂಜಿಯಂಥ ಸ್ಟೈಲೆಟ್ ಎಂಬ ವಿಶೇಷ ರಚನೆಯೊಂದಿದೆ. ಇದರ ಮೂಲಕ ಆಹಾರವನ್ನು ಹೀರುತ್ತವೆ.

ಹೆಣ್ಣಿನ ಕುಡಿಮೀಸೆ ಖಂಡರಹಿತವಾಗಿರಬಹುದು ಇಲ್ಲವೆ 11 ಖಂಡಗಳಿಂದ ಕೂಡಿರಬಹುದು. ಆದರೆ ಗಂಡಿನ ಕುಡಿಮೀಸೆಯಲ್ಲಿ 10 ರಿಂದ 25 ಖಂಡಗಳಿವೆ. ಗಂಡು ಕೀಟ ಹೆಚ್ಚುಕಡಿಮೆ ನ್ಯಾಟ್ ಸೊಳ್ಳೆಯ ರೀತಿ ಕಾಣುತ್ತದೆ. ಆದರೆ ಇದರಲ್ಲಿ ವದನಾಂಗಗಳು ಇಲ್ಲದೆ ಇರುವುದರಿಂದ ಮತ್ತು ಸ್ಟೈಲೆಟ್ ಇರುವುದರಿಂದ ಇದನ್ನು ನ್ಯಾಟ್‌ಸೊಳ್ಳೆಯಿಂದ ಬೇರೆ ಎಂದು ಗುರುತಿಸಬಹುದು.

ಹುರುಪೆ ಕೀಟಗಳ ಬೆಳವಣಿಗೆ ವಿವಿಧ ಪ್ರಭೇದಗಳಲ್ಲಿ ಭಿನ್ನವಾಗಿದೆ. ಕೆಲವಲ್ಲಂತೂ ಬೆಳವಣಿಗೆ ಬಹಳ ಸಂಕೀರ್ಣ. ಪ್ರಥಮ ಪೊರೆಬಿಟ್ಟ ಮರಿಯಲ್ಲಿ ಕಾಲುಗಳೂ ಕುಡಿಮೀಸೆಗಳೂ ಇರುತ್ತವೆ. ಇವು ಸಾಮಾನ್ಯವಾಗಿ ಬಲು ಚಟುವಟಿಕೆಯವು. ಚೆನ್ನಾಗಿ ಹರಿದಾಡುವುದರಿಂದ ಇವನ್ನು 'ತೆವಳುಕೀಟ' (ಕ್ರಾಲರ್ಸ್) ಎಂದು ಕರೆಯುತ್ತಾರೆ. ಮೊದಲನೆಯ ಬಾರಿ ಪೊರೆಬಿಟ್ಟಮೇಲೆ ಕಾಲುಗಳು ಮತ್ತು ಕುಡಿಮೀಸೆಗಳು ಕ್ಷೀಣಿಸಿ ಮರಿಗಳು ಚಲಿಸದೆ ಒಂದೇ ಕಡೆ ಇರುತ್ತವೆ. ಇವು ತಮ್ಮ ದೇಹದ ಮೇಲೆ ಮೇಣದಂಥ ಅಥವಾ ಹುರುಪೆಯಂಥ ಕವಚವನ್ನು ರೂಪಿಸಿಕೊಳ್ಳುತ್ತವೆ. ಒರಟುದೇಹದ ಕೀಟಗಳಲ್ಲಿ ಈ ಕವಚ ದೇಹದಿಂದ ಬೇರೆಯಾಗಿರುತ್ತದೆ. ಇಂಥ ತಿಗಣೆಗಳ ಹೆಣ್ಣು ತನ್ನ ಪ್ರೌಢಾವಸ್ಥೆಯಲ್ಲಿ ಈ ಹುರುಪೆಯ ಕವಚದಲ್ಲಿದ್ದು ಅದರಲ್ಲಿ ಮೊಟ್ಟೆಗಳನ್ನು ಅಥವಾ ಮರಿಗಳನ್ನು ಹಾಕುತ್ತದೆ. ಗಂಡು ತಿಗಣೆಗಳು ತಮ್ಮ ಬೆಳವಣಿಗೆಯಲ್ಲಿ ಹೆಣ್ಣುಗಳನ್ನು ಹೋಲುತ್ತವಾದರೂ ಪ್ರೌಢಾವಸ್ಥೆಯ ಪ್ರಥಮ ಹಂತದಲ್ಲಿ ಇವು ನಿಶ್ಚಲವಾಗಿರುತ್ತವೆ. ಈ ಅವಸ್ಥೆಯನ್ನು ಕೆಲವು ವೇಳೆ ಕೋಶಾವಸ್ಥೆ ಎಂದು ಕರೆಯುವುದುಂಟು. ಈ ಅವಸ್ಥೆಯಲ್ಲಿ ಹೊರರೆಕ್ಕೆಗಳು ಬೆಳೆಯುತ್ತವೆ.

ಈ ಕುಟುಂಬದಲ್ಲಿ 9 ಉಪಕುಟುಂಬಗಳಿವೆ.

**1 ಮಾರ್ಗರೊಡಿನೀ (ಮಾನೊಫ್ಲೆಬಿನೀ):** ದೈತ್ಯ ಕಾಕ್ಸಿಡುಗಳು ಮತ್ತು ನೆಲ ಮುತ್ತುಗಳು (ಗ್ರೌಂಡ್ ಪರ್ಲ್ಸ್). ಹೆಣ್ಣುತಿಗಣೆಗಳು ಬಹು ದೊಡ್ಡವು. ಗುಂಡಗಿವೆ. ದೇಹ ಖಂಡಗಳಿಂದ ಕೂಡಿದೆ. ಕಾಲುಗಳು ದೃಢವಾಗಿರಬಹುದು ಅಥವಾ ಕ್ಷೀಣಿಸಿರಬಹುದು. ಈ ಗುಂಪಿನ ಪ್ರಭೇದಗಳ ಸಂಖ್ಯೆ ಹೆಚ್ಚಿಲ್ಲದಿದ್ದರೂ ಇವು ವಿಶ್ವವ್ಯಾಪಿಗಳು. ಬಹಳ ದೊಡ್ಡ ಗಾತ್ರದ ಕೀಟಗಳಿವು. ಲ್ಯಾವಿಯ ಮತ್ತು ಕ್ಯಾಲಿಪಾಪಸ್ ಜಾತಿಯ ಕೀಟಗಳು ಒಂದು ಅಂಗುಲದವರೆಗೂ ಬೆಳೆಯುತ್ತವೆ. ಮೆಕ್ಸಿಕೊ ದೇಶದ ಲ್ಯಾವಿಯ ಆಕ್ಸಿನ್ ಎಂಬ ಕೀಟಗಳನ್ನು ಬಣ್ಣ ತಯಾರಿಸಲು ಉಪಯೋಗಿಸುವುದುಂಟು. ಉಷ್ಣವಲಯದ ಕೆಲವು ಸಸ್ಯಗಳ ಬೇರುಗಳಲ್ಲಿ ವಾಸವಾಗಿರುವ ನೆಲ ಮುತ್ತುಗಳು ಕಂದು ಅಥವಾ ಹೊಂಬಣ್ಣದವಾದ್ದರಿಂದ ಅವುಗಳಿಂದ ಆಕರ್ಷಕ ಮಣಿಗಳನ್ನು ಮಾಡುವರು. ಈ ನೆಲ ಮುತ್ತುಗಳು ಮಾರ್ಗರೋಡಿಸ್ ಎಂಬ ಹೆಣ್ಣುಕೀಟಗಳ ಮೇಣದ ಕೋಶಗಳು. ಹತ್ತಿಯಂತೆ ಮೃದುವಾಗಿರುವ ಹುರುಪೆ ಕೀಟವಾದ ಐಸೀರಿಯ ಪರ್ಚೇಸಿ ಎಂಬುದು ನಿಂಬೆ ಜಾತಿಯ ಗಿಡಗಳ ಒಂದು ಮುಖ್ಯವಾದ ಪಿಡುಗು.

**2 ಆರ್ತೆಸಿನೀ :** ಈ ಉಪಕುಟುಂಬದ ಕೀಟಗಳಿಗೆ ಎನ್‌ಸೆನ್ ಕಾಕ್ಸಿಡುಗಳೆಂದು ಹೆಸರು. ಇವು ಸಸ್ಯಗಳ ಬೇರುಗಳಲ್ಲಿ ವಾಸಿಸುತ್ತವೆ. ಇವುಗಳ ದೇಹದ ಖಂಡಗಳು ಸ್ಪಷ್ಟವಾಗಿವೆ. ದೇಹ ಅಂಡಾಕಾರದ್ದು. ಕುಡಿಮೀಸೆಗಳು 4 ರಿಂದ 9; ಖಂಡಗಳನ್ನೊಳಗೊಂಡಿವೆ. ದೇಹ ಗಟ್ಟಿಯಾಗಿ, ಬಿಳಿಯ ಮೇಣದ ಫಲಕಗಳಿಂದ ಆವೃತವಾಗಿದೆ. ಕೆಲವು ಬಗೆಗಳಲ್ಲಿ ಮೇಣದ ಮೊಟ್ಟೆಯ ಚೀಲ ದೇಹದ ಹಿಂತುದಿಯಲ್ಲಿದೆ. ಆರ್ತೆಜೀಯ ಇನ್ಸಿಗ್ನಿಸ್ ಎಂಬ ಕೀಟ ಹಸುರುಮನೆ (ಗ್ರೀನ್‌ಹೌಸ್) ಸಸ್ಯಗಳ ಪಿಡುಗು. ಇದು ಉಷ್ಣವಲಯಗಳಲ್ಲಿ ಸಾಮಾನ್ಯ.

**3 ಲ್ಯಾಸಿಫೆರಿನೀ (ಟಕಾರ್ಡಿನೀ):** ಈ ಗುಂಪಿಗೆ ಅರಗು ಕೀಟಗಳು ಸೇರಿವೆ. ಹೆಣ್ಣುಕೀಟಗಳು ದುಂಡಗಿವೆ. ಇವಕ್ಕೆ ಪಾದಗಳಿಲ್ಲ. ಕುಡಿಮೀಸೆಗಳಲ್ಲಿ 3 ಅಥವಾ 4 ಖಂಡಗಳು ಇವೆ. ಈ ತಿಗಣೆಗಳು ತಾವು ಸ್ರವಿಸಿದ ಅಂಟಿನೊಳಗೆ ವಾಸಿಸುತ್ತವೆ. ಅನೇಕ ಬಗೆಗಳು ಉಷ್ಣವಲಯ ಅಥವಾ ಸಮಶೀತೋಷ್ಣವಲಯ ವಾಸಿಗಳು. ಭಾರತದ ಲ್ಯಾಸಿಫರ್ ಲಕ್ಕ ಪ್ರಭೇದ ವಾಣಿಜ್ಯದೃಷ್ಟಿಯಿಂದ ಬಹಳ ಮುಖ್ಯವಾದುದು. ಇದು ಅಂಜೂರ, ಆಲದಮರ ಮತ್ತಿತರ ಜಾತಿಯ ಸಸ್ಯಗಳ ಮೇಲೆ ವಾಸಿಸುತ್ತದೆ. ಇಂಡೋಚೀನ, ಫಾರ್ಮೋಸ, ಸಿಂಹಳ ಮತ್ತು ಫಿಲಿಪೀನ್ಸ್ ದ್ವೀಪಗಳಲ್ಲಿಯೂ ಇವು ವ್ಯಾಪಿಸಿವೆ. ಕೆಲವು ವೇಳೆ ತಾವು ವಾಸಿಸುವ ಕೊಂಬೆಗಳಲ್ಲಿ ¼ ರಿಂದ ½ ಅಂಗುಲದಷ್ಟು ದಪ್ಪ ಅರಗಿನ ಲೇಪನವಿರುತ್ತದೆ. ಇಂಥ ಕೊಂಬೆಗಳನ್ನು ಕಡಿದು ಅರಗನ್ನು ಬೇರ್ಪಡಿಸಿ ಕರಗಿಸಿ ಆಮೇಲೆ ಶುದ್ಧಿಮಾಡಿ ಅದನ್ನು ಶೆಲ್ಲಾಕ್ ಬಣ್ಣಮಾಡುವುದಕ್ಕೆ ಉಪಯೋಗಿಸುವುದುಂಟು. ಮರುಭೂಮಿಯ ಪಾಪಾಸುಕಳ್ಳಿ ಮತ್ತು ಇತರ ಕೆಲವು ಜಾತಿಯ ಗಿಡಗಳಲ್ಲಿ ಜೀವಿಸುವ ಟಕಾರ್ಡಿಯೆಲ ಜಾತಿಯ ಕೆಲವು ಪ್ರಭೇದಗಳು ಸಹ ಅರಗನ್ನು ಉತ್ಪತ್ತಿಮಾಡುತ್ತವೆ. ಕೆಲವು ಪ್ರಭೇದಗಳು ಬಣ್ಣದ ಅರಗನ್ನೂ ಸ್ರವಿಸುತ್ತವೆ.

**4 ಕರ್ಮಿನೀ (ಕರ್ಮೆಸಿನೀ, ಹೆಮಿಕಾಕ್ಸಿನೀ):** ಈ ಗುಂಪಿಗೆ ಗಂಟು ಅಥವಾ ಮಣಿಗಂಟು (ಗಾಲ್ಸ್) ಅಥವಾ ಮಿಥ್ಯಗಂಟು (ಸ್ಯೂಡೋಗಾಲ್ಸ್) ಕಾಕ್ಸಿಡ್‌ಗಳು ಸೇರಿವೆ. ಹೆಣ್ಣು ಕೀಟಗಳು ದುಂಡಗೆ, ಅರ್ಧಚಂದ್ರಾಕಾರವಾಗಿ ಇಲ್ಲವೆ ಅಂಡಾಕಾರವಾಗಿವೆ. ಪ್ರೌಢಾವಸ್ಥೆಯಲ್ಲಿ ಕಾಲುಗಳಿರುವುದಿಲ್ಲ. ಕುಡಿಮೀಸೆ 8 ಖಂಡಗಳಿಂದ ಕೂಡಿದೆ. ಎಲ್ಮ್ ಹುರುಪೆಕೀಟ (ಎರಿಕೊ ಕಾಕಸ್‌ಸ್ಪೂರಿಯಸ್) ಎಲ್ಮ್ ಮರದ ಸಾಮಾನ್ಯ ಪಿಡುಗು. ಕೆರ್ಮೆಸ್ ಎಂಬುದು ಓಕ್‌ಮರದಲ್ಲಿರುತ್ತದೆ. ಟ್ರಬುಟೈನ ಮನ್ನಿಪಾರ ಎಂಬ ತಿಗಣೆ ಟಮಾರಿಕ್ಸ್ ಎಂಬ ಗಿಡಗಳ ಮೇಲಿರುತ್ತವೆ. ಈ ಪ್ರಭೇದದ ತಿಗಣೆ ಸಿಹಿಯಾದ ಮಧುವನ್ನು ಸ್ರವಿಸುತ್ತದೆ. ಶುಷ್ಕ ವಾತಾವರಣಗಳಲ್ಲಿ ಈ ದ್ರವ ಗಟ್ಟಿಯಾಗಿ ಎಲೆಗಳ ಮೇಲೆ ನಿಂತು ದಪ್ಪದರವಾಗುತ್ತದೆ. ಇದಕ್ಕೆ ಮನ್ನಾ ಎಂದು ಹೆಸರು.

**5 ಡಾಕ್ಟಿಲೋಪಿನೀ (ಕಾಕ್ಸಿನೀ):** ಕೊಚಿನೀಲ್ ಕೀಟಗಳ ಗುಂಪು. ಇವು ಲಕ್ಷಣಗಳಲ್ಲಿ ಮತ್ತು ವರ್ತನೆಗಳಲ್ಲಿ ಮೇಣ ತಿಗಣೆಗಳನ್ನು ಹೋಲುತ್ತವೆ. ಹೆಣ್ಣುತಿಗಣೆಗಳು ಕೆಂಪಗಿವೆ. ಅವುಗಳ ದೇಹದ ಮೇಲೆ ಬಿಳಿಯ ಮೇಣದ ಫಲಕಗಳಿವೆ. ಕಾಲುಗಳು ಮತ್ತು ಕುಡಿಮೀಸೆಗಳು ಮೊಟಕಾಗಿವೆ. ಎಲೆಕಾಕಸ್ ಮತ್ತು ಡ್ಯಾಕ್ಟಿಲೋಪಿಯಸ್ ಎಂಬುವು ಈ ಗುಂಪಿನ ಎರಡು ಜಾತಿಗಳು. ಡ್ಯಾಕ್ಟಿಲೋಪಿಯಸ್ ಕಾಕಸ್ ಕೀಟಗಳು ಪಾಪಾಸುಕಳ್ಳಿಯನ್ನು ತಿನ್ನುತ್ತವೆ. ಮೆಕ್ಸಿಕೋ ದೇಶದಲ್ಲಿ ಇವುಗಳಿಂದ ಕೆಲವು ಬಗೆಯ ಬಣ್ಣಗಳನ್ನು ತಯಾರಿಸುತ್ತಾರೆ. ಪ್ರೌಢಹೆಣ್ಣುಕೀಟಗಳನ್ನು ಕಳ್ಳಿಯಿಂದ ಬಿಡಿಸಿ, ಒಣಗಿಸಿ ಅವುಗಳಿಂದ ಬಣ್ಣವನ್ನು ತೆಗೆಯುವುದು ರೂಢಿ. ಈ ಬಣ್ಣವನ್ನು ಐಸ್‌ಕ್ರೀಂ, ಬೇಕರಿ ಪದಾರ್ಥಗಳ ತಯಾರಿಕೆಯಲ್ಲಿ ಬಳಸುತ್ತಾರೆ.

**6 ಸ್ಯೂಡೊಕಾಕಿನೀ (ಕಿರಿಯೊಕಾಕ್ಸಿನೀ):** ಇವನ್ನು ಮೇಣತಿಗಣೆಗಳೆಂದು (ಮೀಲೀಬಗ್ಸ್) ಕರೆಯುವರು. ಇವು ಮೇಣದಂಥ ವಸ್ತುವನ್ನು ಸ್ರವಿಸಿ ತಮ್ಮ ದೇಹಗಳನ್ನು ರಕ್ಷಿಸಿಕೊಳ್ಳುವುದರಿಂದ ಇವಕ್ಕೆ ಈ ಹೆಸರು ಬಂದಿದೆ. ಹೆಣ್ಣು ತಿಗಣೆಯ ದೇಹ ಉದ್ದವಾಗಿ ಖಂಡಗಳಿಂದ ಕೂಡಿದೆ. ಇವಕ್ಕೆ ಬಲವಾದ ಕಾಲುಗಳಿವೆ. ಕೆಲವು ಪ್ರಭೇದಗಳು ಮೊಟ್ಟೆಗಳನ್ನಿಡುತ್ತವೆ ಮತ್ತೆ ಕೆಲವು ನೇರವಾಗಿ ಮರಿಗಳನ್ನು ಹಾಕುತ್ತವೆ. ಮೊಟ್ಟೆಗಳನ್ನು ಮೃದುವಾದ ಮೇಣದಲ್ಲಿಡುತ್ತವೆ. ಸ್ಯೂಡೊಕಾಕಸ್ ಜಾತಿಯ–ಸಿಟ್ರಿ ಮತ್ತು ಫ್ರಜಾಲಿಸ್ ಪ್ರಭೇದಗಳು ನಿಂಬೆ ಜಾತಿಗಿಡಗಳು ಮತ್ತಿತರ ಕೆಲವು ಸಸ್ಯಗಳಿಗೆ ಬಹಳ ಅಪಾಯಕಾರಿಗಳು.

ಸ್ಯೂಡೊಕಾಕಸ್ ಲಾಂಗಿಸ್ಪೈನಸ್ ತಿಗಣೆಗಳು ಹಸಿರು ಮಂದಿರದ ಗಿಡಗಳಿಗೆ ಉಪದ್ರವಕಾರಿಗಳು.

**7 ಆಸ್ಟರೊಲೆಕಾನಿನೀ:** ಕುಳಿ ಹುರುಪೆ ಕೀಟಗಳು (ಪಿಟ್ ಸ್ಕೇಲ್ ಇನ್ಸೆಕ್ಟ್ಸ್). ಇವು ಅಂಡಾಕೃತಿಯ ಕಾಕ್ಸಿಡುಗಳು. ಹೆಣ್ಣುಕೀಟಗಳ ದೇಹ ಗಟ್ಟಿಯಾದ ಮೇಣದ ಪೊರೆಯಿಂದ ಆವೃತವಾಗಿವೆ. ಇಲ್ಲವೆ ಮೇಣದಲ್ಲಿ ಹುದುಗಿರುತ್ತವೆ. ಕಾಲುಗಳು ಇಲ್ಲದಿರಬಹುದು ಇದ್ದರೂ ಬಲು ಸಣ್ಣವು. ಕಣ್ಣುಗಳಿಲ್ಲ. ಕುಡಿಮೀಸೆಗಳು ಮೊಟಕಾಗಿವೆ. ಇವುಗಳಲ್ಲಿ 4–6 ಖಂಡಗಳಿವೆ. ಸೀರೊಕಾಕಸ್ ಕ್ವರ್ಕಸ್ ಪ್ರಭೇದದ ಕೀಟಗಳು ಮೇಣದಲ್ಲಿ ಪೂರ್ತಿಯಾಗಿ ಹುದುಗಿರುತ್ತವೆ. ಇವುಗಳ ವಾಸ ಓಕ್ ಮರಗಳಲ್ಲಿ. ಇವನ್ನು ಚ್ಯುಯಿಂಗ್ ಗಂ ರೀತಿ ಇಂಡಿಯನ್ನರು ಹಿಂದೆ ಉಪಯೋಗಿಸುತ್ತಿದ್ದರು.

**8 ಕಾಕ್ಸಿನೀ (ಲೆಕಾನಿನೀ):** ಮೃದು ಹುರುಪೆ ಕೀಟಗಳು (ಸಾಫ್ಟ್ ಸ್ಕೇಲ್ ಇನ್ಸೆಕ್ಟ್ಸ್), ಮೇಣದ ಹುರುಪೆ ಕೀಟಗಳು (ವ್ಯಾಕ್ಸ್ ಸ್ಕೇಲ್ ಇನ್ಸೆಕ್ಟ್ಸ್) ಮತ್ತು ಆಮೆ ಹುರುಪೆ ಕೀಟಗಳು (ಟಾರ್ಟಾಯ್ಸ್ ಸ್ಕೇಲ್ ಇನ್ಸೆಕ್ಟ್ಸ್) ಇದಕ್ಕೆ ಸೇರಿವೆ. ಹೆಣ್ಣುಕೀಟಗಳು ಚಪ್ಪಟೆಯಾಗಿ ಉದ್ದವಾಗಿವೆ. ಇವುಗಳ ಹೊರಕವಚ (ಎಕ್ಸೊಸ್ಕೆಲಿಟನ್) ಗಟ್ಟಿಯಾಗಿ ನುಣುಪಾಗಿರುವುದಲ್ಲದೆ ಮೇಣದಿಂದ ಮುಚ್ಚಿರುತ್ತದೆ. ಕುಡಿಮೀಸೆಗಳು ಇಲ್ಲ. ಇದ್ದರೂ ಬಹಳ ಚಿಕ್ಕದಾಗಿವೆ. ಅನೇಕ ಪ್ರಭೇದಗಳ ಹೆಣ್ಣುತಿಗಣೆಗಳು ಆಕಾರದಲ್ಲಿ ಆಮೆಯನ್ನು ಹೋಲುತ್ತವೆ. ಸೈಸೆಟ್ಟಿಯ ಓಲಿಯೆ ತಿಗಣೆಗಳು ಉಷ್ಣವಲಯ ಪ್ರದೇಶಗಳಲ್ಲಿ ಹೇರಳವಾಗಿವೆ. ಇವು ನಿಂಬೆ ಜಾತಿಯ ಗಿಡಗಳನ್ನು ಹಾನಿಗೊಳಿಸುತ್ತವೆ. ಎರಿಸೀರಸ್ ಪೆಲು ಪ್ರಭೇದ ಏಷ್ಯದಲ್ಲಿ ಕಾಣಬರುವುದು. ಗಂಡು ಬಿಳಿಯ ಮೇಣವನ್ನು ಹೆಚ್ಚಾಗಿ ಸ್ರವಿಸುತ್ತದೆ. ಇದರಿಂದ ಮೇಣದ ಬತ್ತಿಯನ್ನು ಮಾಡುತ್ತಾರೆ. ಸಿರೊಪ್ಲಾಸ್ಟಸ್ ಸೆರಿಫೆರಸ್ ಭಾರತದಲ್ಲಿ ಕಂಡುಬರುವ ಪ್ರಭೇಧ. ಇದರ ಮೇಣವನ್ನು ಔಷಧಿಗಳ ತಯಾರಿಕೆಯಲ್ಲಿ ಉಪಯೋಗಿಸುವರು.

**9. ಡಿಯಾಸ್ಪಿಡಿನೀ (ಮುಳ್ಳಿನ ಹುರುಪೆ ಕೀಟಗಳು):** ಇದು ಕಾಕ್ಸಿಡೀ ಕುಟುಂಬದ ಬಹಳ ಮುಖ್ಯವಾದ ಹಾಗೂ ದೊಡ್ಡ ಉಪಕುಟುಂಬ. ಅನೇಕ ಪ್ರಭೇದಗಳು ಸಸ್ಯಗಳ ಪಿಡುಗುಗಳಾಗಿ ಹೆಸರಾಗಿವೆ. ಹೆಣ್ಣುಕೀಟದ ದೇಹ ಬಹಳ ಸಣ್ಣದಾಗಿಯೂ ಮೃದುವಾಗಿಯೂ ಇದೆ. ಹುರುಪೆಯ ರಕ್ಷಾಕವಚವಿದೆ. ಹುರುಪೆಗಳು ವಿವಿಧ ಪ್ರಭೇದಗಳಲ್ಲಿ ಗುಂಡಗೆ ಅಥವಾ ಅಂಡಾಕಾರವಾಗಿ, ನುಣ್ಣಗೆ ಅಥವಾ ಒರಟಾಗಿ ವಿವಿಧ ಬಣ್ಣವುಳ್ಳದ್ದಾಗಿದೆ. ಗಂಡುಕೀಟದ ಹುರುಪೆ ಹೆಣ್ಣಿನದಕ್ಕಿಂತ ಸಣ್ಣದು ಮತ್ತು ಉದ್ದವಾದುದು. ಪ್ರೌಢಾವಸ್ಥೆಯ ಹೆಣ್ಣುಗಳ ದೇಹ ಸಣ್ಣದಾಗಿ ಚಪ್ಪಟೆಯಾಗಿ ಗುಂಡಗಿದೆ. ದೇಹದ ಖಂಡಗಳು ಅಸ್ಪಷ್ಟವಾಗಿರಬಹುದು. ಅವುಗಳಿಗೆ ಕಣ್ಣುಗಳಾಗಲಿ ಕಾಲುಗಳಾಗಲಿ ಇಲ್ಲ. ಕುಡಿಮೀಸೆಗಳು ಮೋಟಾಗಿ ಇರಬಹುದು ಇಲ್ಲವೆ ಇಲ್ಲದೇ ಇರಬಹುದು. ಗಂಡುಗಳಲ್ಲಿ ರೆಕ್ಕೆಗಳೂ ದೃಢವಾದ ಕಾಲುಗಳೂ ಕುಡಿಮೀಸೆಗಳೂ ಇವೆ.

ಸಂತಾನಾಭಿವೃದ್ಧಿ ಲಿಂಗರೀತಿಯಲ್ಲಿ ಅಥವಾ ಪಿತೃರಹಿತ ಸಂತಾನ (ಪಾರ್ಥೆನೊ ಜೆನೆಟಿಕ್) ರೀತಿಯಲ್ಲಿ ಆಗಬಹುದು. ಕೆಲವು ಪ್ರಭೇದಗಳು ಮೊಟ್ಟೆಗಳನ್ನಿಡುತ್ತವೆ. ಇನ್ನು ಕೆಲವು ಮರಿಗಳನ್ನು ಹಾಕುತ್ತವೆ. ಪ್ರಥಮ ಪೊರೆಬಿಟ್ಟ ಮರಿ ಅಥವಾ ಹರಿದಾಡುವ ಹುಳುಗಳು (ಕ್ರಾಲರ್ಸ್) ಬಹಳ ಚುರುಕಾಗಿರುತ್ತವೆ. ಇವು ಅನೇಕ ದಿನಗಳವರೆಗೆ ಆಹಾರವಿಲ್ಲದೆ ಜೀವಿಸಬಲ್ಲುವು. ಕಾಕ್ಸಿಡ್ ಕೀಟಗಳು ಅನೇಕ ರೀತಿಯಲ್ಲಿ ಒಂದು ಸ್ಥಳದಿಂದ ಬೇರೆ ಸ್ಥಳಗಳಿಗೆ ಹರಡುತ್ತವೆ. ಹರಿದಾಡುವ ಹುಳುವಿನ ಅವಸ್ಥೆಯಲ್ಲಿ ತಾವೇ ಬೇರೆ ರೀತಿಯಲ್ಲಿ ಬೇರೆ ಸ್ಥಳಗಳಿಗೆ ಹರಡುತ್ತವೆ. ಈ ಹರಿದಾಡುವ ಹುಳುಗಳು ಯಾವುದಾದರೂ ಆಸರೆ ಸಸ್ಯವನ್ನು ತಲುಪಿದ ಮೇಲೆ ತಮ್ಮ ವದನಾಂಗಗಳನ್ನು ಚುಚ್ಚಿ ತಮ್ಮ ಮಿಕ್ಕ ಜೀವಮಾನವನ್ನು ಒಂದೇ ಸ್ಥಳದಲ್ಲಿ ಚಲಿಸದೆ ಕಳೆಯುತ್ತವೆ. ಇವು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಸಸ್ಯಗಳ ಸಾರವನ್ನು ಹೀರಿ ಅವನ್ನು ನಾಶಗೊಳಿಸುತ್ತವೆ. (ಎನ್.ವಿ.ಎ.)

**ಕಾಕ್ಸಿನೆಲ್ಲಿಡೀ :** ಕೀಟವರ್ಗದ ಕೋಲಿಯಾಪ್ಟರ ಗಣದ ಒಂದು ಕುಟುಂಬ. ಹುರುಪೆ ಕೀಟಗಳು. ಈ ಕುಟುಂಬ ಸದಸ್ಯರನ್ನು ಲೇಡಿ ಬೀಟಲ್ಸ್ ಎಂದು ಕರೆಯುವರು. ಇವು ಮಾಂಸಾಹಾರಿಗಳು, ಸಸ್ಯಹೇನುಗಳು ಮತ್ತು ಇತರ ವಿನಾಶಕಾರಿ ಕೀಟಗಳನ್ನು ತಿಂದು ಜೀವಿಸುತ್ತವೆ. ಸಾಮಾನ್ಯವಾಗಿ ಇವು ಸಣ್ಣಗಾತ್ರದ ಜೀರುಂಡೆಗಳು; ಕಾಲು ಅಥವಾ ಅರ್ಧ ಅಂಗುಲ ಉದ್ದವಿರುತ್ತವೆ. ದೇಹ ಗುಂಡಗೂ ಅಂಡಾಕಾರವಾಗೂ ಇದೆ; ಮೇಲ್ಭಾಗ ಉಬ್ಬಿದ್ದು ತಳಭಾಗ ಚಪ್ಪಟೆಯಾಗಿದೆ. ಇವುಗಳ ಬಣ್ಣ ಸಾಮಾನ್ಯವಾಗಿ ಕಪ್ಪು, ಕೆಂಪು ಇಲ್ಲವೆ ಕೆಂಪು ಮಿಶ್ರಿತ ಕಂದು. ಕೆಂಪುಬಣ್ಣದ ದೇಹವಾದರೆ ಕಪ್ಪುಚುಕ್ಕೆಗಳೂ ಕಪ್ಪುಬಣ್ಣದ್ದಾದರೆ ಕೆಂಪುಚುಕ್ಕೆಗಳೂ ಇವೆ. ತಲೆ ಸಣ್ಣದು; ಕೆಳಮುಖವಾಗಿ ಬಗ್ಗಿದೆ. ಇದರಿಂದ ಎದೆಯ ಮುಂದಿನ ಖಂಡದ ಮೇಲ್ಭಾಗ ಚೆನ್ನಾಗಿ ಎದ್ದುಕಾಣುತ್ತದೆ. ತಲೆಯ ತುದಿಯಲ್ಲಿ ಕುಡಿಮೀಸೆಗಳಿವೆ. ಮೊದಲನೆಯ ಜೊತೆ ರೆಕ್ಕೆಗಳು ಉದ್ದವಾಗಿರುವುದರಿಂದ ಹೊಟ್ಟೆಯ ಭಾಗ ಕಾಣುವುದಿಲ್ಲ. ಕಾಲುಗಳು ಮೊಟಕು; ಮೂರು ಟಾರ್ಸಸ್ ಖಂಡಗಳಿಂದ ಕೂಡಿವೆ. ಈ ಕೀಟಗಳ ಡಿಂಭಗಳು ಬಹಳ ಚಟುವಟಿಕೆಯಿಂದ ಎಲೆಗಳ ಮತ್ತು ಕೊಂಬೆಗಳ ಸುತ್ತ ಆಹಾರಕ್ಕಾಗಿ ಹರಿದಾಡುತ್ತವೆ. ಡಿಂಭಗಳ ದೇಹದ ಬಣ್ಣ ಕಪ್ಪು. ದೇಹದ ಎರಡು ಪಕ್ಕಗಳಲ್ಲಿ ಹಳದಿ ಅಥವಾ ನೀಲಿ ಬಣ್ಣದ ಚುಕ್ಕೆಗಳಿವೆ. ಡಿಂಭಗಳು ಪ್ರೌಢಕೀಟಗಳಾಗುವವರೆಗೂ ಒಂದೇ ಗಿಡದಲ್ಲಿ ಜೀವಿಸುತ್ತವೆ. ಕಾಕ್ಸಿನೆಲ್ಲಿಡೀ ಕುಟುಂಬದ ಹಲವಾರು ಪ್ರಭೇದಗಳು ಸಸ್ಯಪಿಡುಗುಗಳಾದ ಇತರ ಕೀಟಗಳನ್ನು ತಿಂದು ಜೀವಿಸುತ್ತವೆ. ಕಾಕ್ಸಿನೆಲ ಸೆಪ್ಟೆಂಪಂಕ್ಟೇಟ ಎಂಬ ಕಪ್ಪುಚುಕ್ಕೆಗಳುಳ್ಳ ಕೆಂಪು ಜಾತಿಯ ಕೀಟಗಳು ಬೆಟ್ಟಗಾಡುಗಳಲ್ಲಿರುವ ಪಿಯರ್ ಮರಗಳನ್ನು ಕಾಡುವ ಏಫಿಡುಗಳನ್ನು ತಿಂದು ಜೀವಿಸುತ್ತವೆ. ಇವು ಹಸಿರು ಹುರುಪೆ ತಿಗಣೆಗಳ (ಗ್ರೀನ್ ಸ್ಕೇಲ್ ಇನ್ಸೆಕ್ಟ್ಸ್) ವೈರಿಗಳೆಂದೂ ಹೆಸರಾಗಿವೆ. ಸಿಮ್ನಸ್ ಎಂಬ ಜಾತಿಯವು ಏಫಿಡುಗಳ ಮೊಟ್ಟೆಗಳನ್ನೇ ಆಹಾರವಾಗಿ ತಿನ್ನುತ್ತವೆ.

ಅಮೆರಿಕ ಸಂಯುಕ್ತಸಂಸ್ಥಾನದ ಎಲ್ಲೆಡೆಯಲ್ಲೂ ಹರಡಿರುವ ಅಡಿಲಿಯ ಬೈಪಂಕ್ಟೇಟ ಜಾತಿಯ ಜೀರುಂಡೆಗಳು ಸಸ್ಯ ಹೇನುಗಳನ್ನೇ ಆಹಾರವಾಗಿ ತಿನ್ನುತ್ತವೆ. ಕೈಲೊಕೋರಸ್ ಸ್ಟಿಗ್ಮ ಜಾತಿಯವು ಹುರುಪೆಕೀಟಗಳು, ಏಫಿಡ್ ಮತ್ತು ಆಲೂಗಡ್ಡೆ ಬೀಟಲ್ ಮುಂತಾದುವನ್ನು ತಿನ್ನುತ್ತವೆ. ಕೋಲಿಯೊಮೆಜಿಲ್ಲ ಫ್ಯುಸಿಲೇಬ್ರಿಸ್ ಜಾತಿಯವು ಅನೇಕ ವಿಧದ ಸಸ್ಯಹೇನು ಮತ್ತು ಇತರ ಚಿಕ್ಕ ಕೀಟಗಳಿಗೆ ವಿನಾಶಕಾರಿ. ಹಿಪ್ಪೊಡೇಮಿಯ ಕನ್ವರ್ಜೆನ್ಸ್ ಜಾತಿಯವು ಎಲ್ಲೆಡೆಯಲ್ಲಿಯೂ ಹರಡಿದ್ದು ಅನೇಕ ವಿಧದ ಸಸ್ಯಹೇನುಗಳನ್ನು ತಿನ್ನುವುವಲ್ಲದೆ ಕೆಂಪು ಜೇಡಗಳು ಮತ್ತು ಅಲ್ಫಾಲ್ಫ ಕುಟ್ಟಿ ಹುಳುಗಳನ್ನೂ ತಿನ್ನುತ್ತವೆ. ಕೆಲವುಬಾರಿ ಇವು ಪೆಸಿಫಿಕ್ ಸಾಗರದ ತೀರದಲ್ಲೂ ಎತ್ತರದ ಪರ್ವತ ಶ್ರೇಣಿಗಳಲ್ಲೂ ಗುಂಪು ಗುಂಪಾಗಿ ಸೇರುವುದುಂಟು. ಹೀಗೆ ಸೇರುವ ಜೀರುಂಡೆಗಳನ್ನು ಸಸ್ಯಸಂರಕ್ಷಣಾಧಿಕಾರಿಗಳು ಕಲೆಹಾಕಿ, ವಸಂತಕಾಲದಲ್ಲಿ ಕಾಣಿಸಿಕೊಳ್ಳುವ ಸಸ್ಯಹೇನುಗಳನ್ನು ನಾಶಮಾಡಲು ಅಮೆರಿಕ ಸಂಯುಕ್ತ ಸಂಸ್ಥಾನದ ಎಲ್ಲೆಡೆಗಳಿಗೂ ಹಂಚುತ್ತಾರೆ. ಹತ್ತು ಎಕರೆ ಜಮೀನಿನಲ್ಲಿರುವ ಸಸ್ಯಗಳನ್ನು ಸಸ್ಯಹೇನುಗಳ ಕಾಟದಿಂದ ರಕ್ಷಿಸಲು ಮೂವತ್ತು ಸಾವಿರಗಳಷ್ಟು ಜೀರುಂಡೆಗಳು ಸಾಕು ಎಂದು ಅಂದಾಜಿದೆ. ಹೊರದೇಶಗಳಿಂದ ಆಮದಾಗುವ ಸಸ್ಯಗಳೊಂದಿಗೆ ಬಂದ ಕೆಲವು ಕೀಟಗಳು ಅಮೆರಿಕದ ಹೊರದೇಶಗಳಿಂದ ಆಮದಾಗುವ ಸಸ್ಯಗಳೊಂದಿಗೆ ಬಂದ ಕೆಲವು ಕೀಟಗಳು ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ವಿನಾಶಕಾರಿ ಕೀಟಗಳಾಗಿ ಪರಿಣಮಿಸಿರುವುದರಿಂದ ಇದನ್ನು ನಾಶಮಾಡಲು ಕೆಲವು ಜಾತಿಯ ಜೀರುಂಡೆಗಳನ್ನು ಹೊರದೇಶಗಳಿಂದ ತರಿಸಿ, ಸಾಕಿ ಬೇಕಾದಾಗ ಉಪಯೋಗಿಸುತ್ತಾರೆ. ಉದಾಹರಣೆಗೆ ರೊಡೋಲಿಯ ಕರ್ಡಿನಾಲಿಸ್ ಎಂಬ ಆಸ್ಟ್ರೇಲಿಯಾದ ಜೀರುಂಡೆಗಳನ್ನು ಹತ್ತಿ ಗಿಡದ ಮೇಲಿರುವ ಹುರುಪೆ ಕೀಟಗಳನ್ನು ನಾಶಪಡಿಸಲು ಉಪಯೋಗಿಸುತ್ತಾರೆ. ಇದೇ ರೀತಿ ಕ್ರಿಪ್ಟೋಲೇಮಸ್ ಮಾನ್‌ಟ್ರಾನ್‌ಜೆಯರಿ ಎಂಬ ಜೀರುಂಡೆಯನ್ನು ಕ್ಯಾಲಿಫೋರ್ನಿಯ ರಾಜ್ಯದ ಹಲವು ಬಗೆಯ ಮೇಣತಿಗಣೆಗಳನ್ನು (ಮೀಲೀಬಗ್ಸ್) ನಾಶ ಮಾಡಲು ಬಳಸುತ್ತಾರೆ. ಈ ರೀತಿ ಇತರ ದೇಶಗಳಿಂದ ಆಮದು ಮಾಡಿಕೊಂಡ ಲೇಡಿ ಬೀಟಲ್‌ಗಳು ಹಾನಿಕಾರಕ ಕೀಟಗಳನ್ನು ನಾಶಮಾಡುವುದರಲ್ಲಿ ಬಹಳ ಯಶಸ್ವಿಯಾಗಿವೆ. ಇದು ಜೈವಿಕ ಕೀಟನಿಯಂತ್ರಣಕ್ಕೊಂದು ಉತ್ತಮ ಉದಾಹರಣೆ. (ಪಿ.ಎ.ಆರ್.)

**ಕಾಕ್ಸೀಡಿಯ ರೋಗ :** ಏಕಕೋಶ ಜೀವಿಗಳ ವಂಶದ ಕಾಕ್ಸೀಡಿಯ ವರ್ಗಕ್ಕೆ ಸೇರಿದ ಪರಾವಲಂಬಿ ಜೀವಿಗಳು ಮೊಲ, ಕೋಳಿ ಮುಂತಾದ ಪ್ರಾಣಿಗಳನ್ನು ಹೊಕ್ಕು, ಆ ಪ್ರಾಣಿಗಳಲ್ಲಿ ಉತ್ಪತ್ತಿ ಮಾಡುವ ರೋಗ ಕಾಕ್ಸಿಡಿಯೋಸಿಸ್. ಈ ಪರಾವಲಂಬಿಗಳು ಆಶ್ರಯದಾತ ಪ್ರಾಣಿಯ ಸಣ್ಣ ಕರುಳಿನ ಉಪಲೇಪಕ ಅಂಗಾಂಶದ (ಎಪಿತೀಲಿಯಲ್ ಟಿಶ್ಯು) ಜೀವಕೋಶಗಳಲ್ಲಿ ಜೀವಿಸುತ್ತವೆ. ಬೆಳವಣಿಗೆಯ ಸ್ಥಿತಿಯಲ್ಲಿದ್ದಾಗ ಟ್ರೋಫೋಜ಼ೂಆಯ್ಟ್ ಎಂದೂ ಪುನರುತ್ಪತ್ತಿ ಸ್ಥಿತಿಯಲ್ಲಿದ್ದಾಗ ಸ್ಕಿಜ಼ಾಂಟ್ ಎಂದೂ ಹೆಸರು. ಸ್ಕಿಜ಼ಾಂಟ್ ಸ್ಥಿತಿಯಲ್ಲಿ ನ್ಯೂಕ್ಲಿಯಸ್ ಹಲವು ಭಾಗಗಳಾಗಿ ವಿಭಜನೆ ಹೊಂದಿ ಮೀರೋಜ಼ೋಯ್ಟ್ ಎಂಬ ಮರಿಗಳು ಉತ್ಪತ್ತಿಯಾಗುತ್ತದೆ. ಪ್ರತಿಯೊಂದು ಮೀರೋಜ಼ೋಯ್ಟ್ ಪುನಃ ಟ್ರೋಫೋಜ಼ೂಆಯ್ಟ್, ಆಗಿ ಬೆಳೆಯುತ್ತವೆ. ಈ ತರದ ನಿರ್ಲಿಂಗ ವಂಶಾಭಿವೃದ್ಧಿ ಅನೇಕ ಪೀಳಿಗೆಗಳವರೆಗೆ ನಡೆಯಬಹುದು. ರೋಗ ಉಲ್ಬಣಿಸುವುದಕ್ಕೆ ಈ ಬಗೆಯ ವಂಶಾಭಿವೃದ್ಧಿ ಕಾರಣ.

ಆಶ್ರಯದಾತ ಜೀವಿಯಲ್ಲಿ ಈ ಪರಾವಲಂಬಿಗಳ ವಿರುದ್ಧವಾಗಿ ಏರ್ಪಡುವ ರಕ್ಷಣೆಯ ಪ್ರತಿಕ್ರಿಯೆಯಿಂದಾಗಿ ಮೀರೋಜ಼ೋಯ್ಟ್‌ಗಳು ಸ್ಕಿಜ಼ಾಂಟ್‌ಗಳಾಗಿ ಬೆಳೆಯದೆ ಗಂಡು, ಹೆಣ್ಣು ಜೀವಿಗಳಾಗಿ ಪರಿಣಮಿಸುತ್ತವೆ. ಗಂಡಾಗಿ ರೂಪಗೊಂಡ ಸೂಕ್ಷ್ಮ ಪ್ರಜನನ ಜೀವಿ (ಮೈಕ್ರೊಗ್ಯಾಮಿಟೊಸೈಟ್) ಅನೇಕ ಭಾಗಗಳಾಗಿ ವಿಭಜನೆ ಹೊಂದಿ ಸೂಕ್ಷ್ಮ ಸಂಯೋಗಿ ಕಣಗಳಾಗುತ್ತವೆ (ಮೈಕ್ರೊಗ್ಯಾಮೀಟ್). ಹೆಣ್ಣಾಗಿ ರೂಪಗೊಂಡ ಸ್ಥೂಲ ಪ್ರಜನನ ಜೀವಿಯಿಂದ (ಮ್ಯಾಕ್ರೊಗ್ಯಾಮಿಟೊಸೈಟ್) ಕೇವಲ ಒಂದು ಸ್ಥೂಲ ಸಂಯೋಗಿಕರಣ (ಮ್ಯಾಕ್ರೊಗ್ಯಾಮೀಟ್) ಉದ್ಭವಿಸುತ್ತದೆ. ಒಂದೊಂದು ಸ್ಥೂಲ ಮತ್ತು ಸೂಕ್ಷ್ಮ ಸಂಯೋಗಿ ಕಣಗಳ ಸಂಯೋಗದಿಂದ ಒಂದು ಯುಗ್ಮಕಣ (ಜೈಗೋಟ್) ಉತ್ಪತ್ತಿಯಾಗುತ್ತದೆ. ಇದು ತನ್ನ ದೇಹದ ಸುತ್ತಲೂ ರಕ್ಷಣಾ ಕವಚವನ್ನು ರೂಪಿಸಿಕೊಂಡು ಊಸಿಸ್ಟ್ ಆಗಿ ಪರಿಣಮಿಸುತ್ತದೆ. ಇಂಥ ಅನೇಕ ಊಸಿಸ್ಟ್‌ಗಳು ಆಶ್ರಯದಾತ ಜೀವಿಯ ಮಲದ ಮೂಲಕ ಹೊರಬಿದ್ದು, ಆಮೇಲೆ ಅನೇಕ ಸ್ಪೋರೊಜ಼ೋಯ್ಟ್‌ಗಳನ್ನು ಉತ್ಪಾದಿಸಿ ಕೆಲವು

ದಿನಗಳಲ್ಲಿ ಪ್ರಬುದ್ಧ ಸ್ಥಿತಿಗೆ ಬರುತ್ತವೆ. ಇಂಥ ಊಸಿಸ್ಟ್‌ಗಳು ಆಹಾರದಲ್ಲಿ ಅಥವಾ ಕುಡಿಯುವ ನೀರಿನಲ್ಲಿ ಬೆರೆತು ಮತ್ತೊಂದು ಆಶ್ರಯದಾತ ಜೀವಿಯನ್ನು ಸೇರುತ್ತವೆ. ಕರುಳಿನಲ್ಲಿ ಊಸಿಸ್ಟ್ ಒಡೆದು, ಸ್ಪೈರೊಜ಼ೋಯ್ಟ್‌ಗಳು ಹೊರಬಂದು ಉಪಲೇಪಕ ಅಂಗಾಂಶವನ್ನು ಪ್ರವೇಶಿಸಿ ನಿರ್ಲಿಂಗ ರೀತಿ ಜೀವನ ಚರಿತ್ರೆಯನ್ನು ಪ್ರಾರಂಭಿಸುತ್ತವೆ.

ಐಮೀರಿಯ ಜೂರ್ನಿ ದನಗಳಲ್ಲಿ ತೀಕ್ಷ್ಣವಾದ ಕಾಕ್ಸೀಡಿಯ ರೋಗವನ್ನುಂಟುಮಾಡುವುದು. ಬೇಸಗೆಯಲ್ಲಿ ಕರುಗಳು ಈ ರೋಗಕ್ಕೆ ತುತ್ತಾಗುತ್ತವೆ. ರೋಗದ ಮೊದಲ ಚಿಹ್ನೆ ಭೇದಿ, ಅನಂತರ ಎರಡು ಮೂರು ದಿನಗಳಲ್ಲಿ ಮಲದಲ್ಲಿ ರಕ್ತದ ಕಲೆಗಳು ಕಂಡುಬರುತ್ತವೆ. ಮಲವಿಸರ್ಜನೆ ಆಗುವ ವೇಳೆಯಲ್ಲಿ ಕರುಳಿನ ಶೂಲೆಯಿಂದ ಕರುಗಳು ವಿಪರೀತ ನರಳುತ್ತವೆ. ಸಕಾಲದಲ್ಲಿ ಚಿಕಿತ್ಸೆ ಮಾಡಿದರೆ ರೋಗ ಚಿಹ್ನೆಗಳು ಕ್ರಮೇಣ ಕಡಿಮೆಯಾಗಿ ಕರುಗಳು ಚೇತರಿಸಿಕೊಳ್ಳುತ್ತವೆ. ಇಲ್ಲದಿದ್ದರೆ ಸೇಕಡ ಹತ್ತರಷ್ಟು ಮರಣ ಸಂಭವಿಸಬಹುದು. ಐಮೀರಿಯ ಸ್ಟೆಯಿಡೀ ಎಂಬ ಪ್ರಭೇದ ಮೊಲಗಳಲ್ಲಿ ಕಾಕ್ಸೀಡಿಯ ರೋಗವುಂಟು ಮಾಡುತ್ತದೆ. ಇದು ಇತರ ಕಾಕ್ಸೀಡಿಯಾಗಳಂತೆ ಕರುಳನ್ನು ಆಕ್ರಮಿಸದೆ, ಪಿತ್ತಜನಕಾಂಗವನ್ನು ಆಕ್ರಮಿಸುತ್ತದೆ.

ಕೋಳಿಗಳಲ್ಲಿ ಸುಮಾರು ಒಂಬತ್ತು ಜಾತಿಯ ಕಾಕ್ಸೀಡಿಯಗಳು ರೋಗೋತ್ಪತ್ತಿ ಮಾಡುವುವೆಂದು ಕಂಡುಬಂದಿದೆ. ಇವುಗಳಲ್ಲಿ ಕರುಳಿನ ಸೀಕಂ ಎಂಬ ಭಾಗವನ್ನು ಆಕ್ರಮಿಸುವ ಐಮೀರಿಯ ಟೆನೆಲ ಎಂಬ ಪ್ರಭೇದ ಬಹಳ ಕ್ರೂರವಾದದ್ದು. ಈ ರೋಗ 5–8 ವಾರ ವಯಸ್ಸಾದ ಮರಿಗಳಿಗೆ ತಗಲುವುದು ಹೆಚ್ಚು. ಒಂದು ವಾರದ ಮರಿಗಳಿಗೂ ವಯಸ್ಸಾದ ಕೋಳಿಗಳಿಗೂ ಬರುವುದುಂಟು. ರೋಗ ತಗುಲಿದ ನಾಲ್ಕು ದಿನಗಳಲ್ಲಿ ಆಮಶಂಕೆ ಕಂಡುಬಂದು ಒಂದೆರಡು ದಿನಗಳಲ್ಲಿ ಸಾಯುತ್ತವೆ. ಕೆಲವೊಮ್ಮೆ ಸ್ವಾಭಾವಿಕವಾಗೇ ಚೇತರಿಸಿಕೊಳ್ಳುವುದೂ ಉಂಟು. ಸೂಕ್ತ ಚಿಕಿತ್ಸೆ ನೀಡದಿದ್ದರೆ ಶೇ. 90ರಷ್ಟು ಸಾವು ಸಂಭವಿಸಬಹುದು.

ಇಕ್ಕಟ್ಟಾದ ಜಾಗದಲ್ಲಿ ಹೆಚ್ಚು ಕೋಳಿಗಳನ್ನು ಇಡುವುದರಿಂದ ಕಾಕ್ಸೀಡಿಯ ರೋಗ ಹರಡುವಿಕೆ ಹೆಚ್ಚು. ತೇವವೂ ಊಸಿಸ್ಟುಗಳ ಬೆಳವಣಿಗೆಗೆ ಆವಶ್ಯಕ. ಇವುಗಳನ್ನು ಗಮನದಲ್ಲಿಟ್ಟು ತಕ್ಕ ನಿವಾರಣೆ ಕ್ರಮಗಳನ್ನು ಅನುಸರಿಸಬೇಕು. ಸಲ್ಫಮೆತಸೇನ್ ಮುಂತಾದ ಔಷಧಗಳು ಕಾಕ್ಸೀಡಿಯ ರೋಗಕ್ಕೆ ಗುಣಕಾರಕ ಮದ್ದು. ರೋಗ ತಲೆದೋರಿದ ಕೂಡಲೇ ಆ ಗುಂಪಿನ ಎಲ್ಲ ಮರಿಗಳೂ ಕುಡಿಯುವ ನೀರಿನಲ್ಲಿ ತಕ್ಕ ಪ್ರಮಾಣದಲ್ಲಿ ಈ ಔಷಧಿಯನ್ನು ಬೆರೆಸಿ ಒದಗಿಸುವುದು ರೋಗ ನಿವಾರಣೆಯ ಒಂದು ಮುಖ್ಯ ಕ್ರಮ. (ಎಸ್.ಎನ್.ಕೆ.ಆರ್.)

**ಕಾಗದ :** ಸಾರಗುಂದಿದ (ಡೈಲ್ಯೂಟ್) ನೀರಿನಲ್ಲಿ ತೇಲುತ್ತಿರುವ ಮತ್ತು ನವುರಾದ ಸೂಕ್ಷ್ಮ ತಂತಿ ಬಲೆಯಮೇಲೆ ಹಾಸಿದ ಸೆಲ್ಯುಲೋಸ್ ಎಳೆಗಳ ಹಾಳೆಯಿಂದ ನೀರನ್ನು ಹಿಂಗಿಸಿ ಬಲೆಯನ್ನು ತೆಗೆದು ಒಣಗಿಸಿದಾಗ ದೊರೆಯುವ ಪೊರೆ (ಪೇಪರ್). ಇದು ಮೊದಲಿದ್ದ ಅರ್ಥ. ಇಂದು ಕಾಗದ ಶಬ್ದದ ಅರ್ಥ ವಿಶೇಷವಾಗಿ ವಿಸ್ತರಿಸಿದೆ–ಬಂಧಗೊಂಡ ಖನಿಜದ ಅಥವಾ ಸಂಶ್ಲೇಷಿತ ಎಳೆಗಳಿಂದ ರಚಿತವಾದ ಪೊರೆಯೇ ಕಾಗದ ಎನ್ನಿಸಿಕೊಂಡಿದೆ. ಹೀಗಿದ್ದರೂ ಕಾಡಿನಿಂದ ಕಾಗದ ಎನ್ನುವಷ್ಟರಮಟ್ಟಿಗೆ ಕಾಗದದ ಕೈಗಾರಿಕೆ ಅರಣ್ಯ ಸಂಪತ್ತನ್ನು ಅವಲಂಬಿಸಿದೆ. ಸೆಲ್ಯುಲೋಸ್ ಎಂಬ ರಾಸಾಯನಿಕ ವಸ್ತುವಿರುವ ಮರ, ಬಿದಿರು, ಚಿಂದಿಬಟ್ಟೆ, ಕಬ್ಬಿನಸಿಪ್ಪೆ, ಹುಲ್ಲು ಕೃಷಿಯಲ್ಲಿನ ಶೇಷ ವಸ್ತುಗಳು ಮತ್ತು ಹಳೆಯ ಕಾಗದವೇ ಅದಕ್ಕೆ ಬೇಕಾದ ಕಚ್ಚಾವಸ್ತುಗಳು.

ನೈಲ್‌ನದಿಯ ಪಾತ್ರದ ಅಕ್ಕಪಕ್ಕಗಳಲ್ಲಿ ಪಾಪಿರಸ್ ಎಂಬ ಎತ್ತರವಾದ ಜೊಂಡಿನಂಥ ಹುಲ್ಲು ಬೆಳೆಯುವುದು. ಪ್ರ.ಶ.ಪೂ. 2500–2000 ಅವಧಿಯಲ್ಲಿ ಈ ಹುಲ್ಲಿನಿಂದ ಬರೆಯಲು ಯೋಗ್ಯವಾದ ಹಾಳೆಗಳನ್ನು ತಯಾರಿಸುವ ಕ್ರಮ ಮೊದಲಾಯಿತು. ಆದ್ದರಿಂದ ಇದಕ್ಕೆ ಪೇಪರ್ ಎಂದು ಹೆಸರು ಬಂತು. ಸುಮಾರು 2000 ವರ್ಷಗಳ ಹಿಂದೆ ಮಲ್ಬರಿ ಗಿಡದ ತೊಗಟೆಯಿಂದ ಮೊದಲು ಕಾಗದ ತಯಾರಿಸಿದವನು ಕ್ಸಿಲುನ್ ಎಂಬ ಚೀನೀ ಕುಶಲಕರ್ಮಿ. ಈ ತೊಗಟೆಯನ್ನು ನೀರಿನಲ್ಲಿ ನೆನೆಹಾಕಿ ಅರೆದು ರುಬ್ಬಿದ ತಿರುಳನ್ನು ನೀರಿನೊಂದಿಗೆ ತೆಳುಗೊಳಿಸಿ ತಂತಿಯ ಬಟ್ಟೆಯ ಮೂಲಕ ಶೋಧಿಸಿದಾಗ ನೀರು ಸೋರಿಹೋಗಿ ನವುರಾದ ಕಾಗದದ ಹಾಳೆ ಅದರ ಮೇಲೆ ಉಳಿಯುತ್ತಿತ್ತು. ಅದನ್ನು ಬಿಸಿಲಿನಲ್ಲಿ ಒಣಗಿಸಿ ನಾಗರಿಕ ಪ್ರಪಂಚಕ್ಕೆ ಮೊದಲ ಕಾಗದದ ಹಾಳೆಯ ಕಾಣಿಕೆಯಿತ್ತವನು ಆತ. ವಾಸ್ತವವಾಗಿ ಪ್ರ.ಶ. 150ರ ಸುಮಾರಿನಲ್ಲಿ ಕೈಗಾರಿಕಾ ಪ್ರಮಾಣದಲ್ಲಿ ಕಾಗದದ ಉತ್ಪಾದನೆ ಪ್ರಾರಂಭವಾದುದೂ ಚೀನೀಯರಿಂದಲೇ. ಹದಿನಾಲ್ಕನೆಯ ಶತಮಾನದ ಅಂತ್ಯದ ಹೊತ್ತಿಗೆ ಕಾಗದ ಉತ್ಪಾದನ ವಿಧಾನದಲ್ಲಿ ಸುಧಾರಣೆಗಳಾಗಿದ್ದು ದಕ್ಷಿಣ ಯುರೋಪಿನಲ್ಲೆಲ್ಲ ಅದು ಪರಿಚಿತವಾಗಿತ್ತು. ಇಷ್ಟಾದರೂ ಅಮೆರಿಕೆಯಲ್ಲಿ ಮೊದಲ ಕಾಗದದ ಕಾರ್ಖಾನೆ ಸ್ಥಾಪಿತವಾದದ್ದು 1690ರಲ್ಲಿ.

ಕಾಗದದ ಕೈಗಾರಿಕೆಯ ಶೈಶವಾವಸ್ಥೆಯಲ್ಲಿ ಕಚ್ಚಾವಸ್ತುವಾಗಿ ಬಳಸುತ್ತಿದ್ದುದು ಚಿಂದಿ ಬಟ್ಟೆಯನ್ನು ಮಾತ್ರ. ಅದನ್ನು ತೊಳೆದು ಜಲಶಕ್ತಿಯಿಂದ ನಡೆಯುವ ಹಾರೆಗಳಿಂದ ಕುಟ್ಟಿ ಫಲಿತ ವಸ್ತುವಿಗೆ ನೀರು ಸೇರಿಸುತ್ತಿದ್ದರು. ತಂತಿ ಜಾಲರಿಯಿರುವ ಮರದ ಚೌಕಟ್ಟನ್ನು ಪಲ್ಪಿನಲ್ಲಿ ಅದ್ದಿ ಅಲ್ಲಾಡಿಸುತ್ತಿದ್ದರೆ ನೀರೆಲ್ಲ ಸೋರಿ ಹೋಗಿ ಎಳೆಗಳು ಹೆಣೆದುಕೊಂಡು ಹಾಳೆಯಂತಾಗುತ್ತಿತ್ತು. ಈ ಹಾಳೆಗಳನ್ನು ಫ಼ೆಲ್ಟಿನ ಮೇಲೆ ಪೇರಿಸಿ ಹೆಚ್ಚುವರಿ ನೀರನ್ನು ಒತ್ತಿ ತೆಗೆದು ಒಣಗಿಸಿದರೆ ಕಾಗದವಾಗುತ್ತಿತ್ತು. ಅಂದಿನಿಂದ ಇಂದಿನವರಿಗೆ ಕಾಗದದ



ಚಿತ್ರ 1 ಸೆಲ್ಯುಲೋಸಿನ ಅಂಗರಚನೆ

ತಯಾರಿಕೆಯಲ್ಲಿ ಅಗಾಧ ಪ್ರಗತಿಯಾಗಿದೆ. ಪಲ್ಪಿನ ತಯಾರಿಕೆಯಲ್ಲಿ ಮತ್ತು ಅದಕ್ಕಾಗಿ ಬಳಸುವ ಯಂತ್ರೋಪಕರಣಗಳಲ್ಲಿ ಸುಧಾರಿತ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಕಾಗದದ ಕೈಗಾರಿಕೆಯಲ್ಲಿ ಮೊದಲ ಹಂತವೆಂದರೆ ಸೆಲ್ಯುಲೋಸ್‌ಪ್ರಧಾನವಾದ ವಸ್ತುಗಳಿಂದ ತಿರುಳನ್ನು ರೂಪಿಸಿಕೊಳ್ಳುವುದು. ಈ ವಿಧಾನವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಸೆಲ್ಯುಲೋಸಿನಲ್ಲಿರುವ ಅಂಗಭಾಗಗಳು, ಅದರ ರಾಸಾಯನಿಕ ರಚನೆ ಮತ್ತು ಗುಣಗಳ ಅರಿವು ಅಗತ್ಯ.

ಸೆಲ್ಯುಲೋಸು ಒಂದು ನೈಸರ್ಗಿಕ ಸಾವಯವ ಬಹ್ವಂಗೀಕೃತ ವಸ್ತು. ಇದು ಎಲ್ಲ ಸಸ್ಯಗಳಲ್ಲೂ ಇದೆ. ಗ್ಲೂಕೋಸಿನ ಅಣುಗಳನ್ನು ಒಳಗೊಂಡ ಬೃಹದಣು. ಅದರ ಅಣುಸೂತ್ರ $(C_6H_{10}O_5)_n$. $n$ ಸಂಖ್ಯೆಯ ಬೆಲೆ ಇನ್ನೂ ನಿರ್ಣಯವಾಗಿಲ್ಲ. ಸುಮಾರು 615–3,075 ಇರಬಹುದೆಂದು ಒಂದು ಅಂದಾಜು. ಕೆಲವು ನಮೂನೆ ಸೆಲ್ಯುಲೋಸಿನ ಅಣುತೂಕ 100,000–500,000 ಇರುವುದುಂಟು. ಅತಿಕೇಂದ್ರಾಪಗಮನದ ಸಹಾಯದಿಂದ ಮಾಡಿದ ಪ್ರಯೋಗಗಳ ಪ್ರಕಾರ ಸುಮಾರು 3,600 ಗ್ಲೂಕೋಸಿನ ಅಣುಗಳಿರಬಹುದೆಂದು ಲೆಕ್ಕ ಹಾಕಲಾಗಿದೆ. ಪ್ರತಿಯೊಂದು ಗ್ಲೂಕೋಸ್ ಘಟಕವೂ ಹಿಂದಿನದಕ್ಕೆ ಲಂಬಕೋನದಲ್ಲಿ ಜಂಟಿಯಾಗಿದ್ದು ನೀಳ ಸರಣಿ ರಚನೆಯನ್ನು ಹೊಂದಿರುವುದೆಂದು ಎಕ್ಸ್‌ಕಿರಣಗಳ ಪರೀಕ್ಷೆಯಿಂದ ಗೊತ್ತಾಗಿದೆ. ಸೆಲ್ಯುಲೋಸಿನ ಅಂಗ ರಚನೆ ಮೇಲೆ ತೋರಿಸಿದೆ.

ಸಸ್ಯದ ನಾರಿನ ಭಾಗದಲ್ಲೆಲ್ಲ ಸೆಲ್ಯುಲೋಸ್ ಇರುತ್ತದೆ. ಹತ್ತಿಯನ್ನು ಶುದ್ಧ ಸೆಲ್ಯುಲೋಸ್ ಎಂದೇ ಪರಿಗಣಿಸಬಹುದು. ಸೆಲ್ಯುಲೋಸ್ ಬಿಳಿಯ ಘನವಸ್ತು. ನೀರಿನಲ್ಲಿ ಅದ್ರಾವ್ಯ. ಸಾವಯವ ದ್ರವಗಳಲ್ಲೂ ಲೀನವಾಗುವುದಿಲ್ಲ. ಕ್ಯುಪ್ರಮೋನಿಯಂ ಸಲ್ಫೇಟಿನ ದ್ರಾವಣದಲ್ಲೂ ಜ಼ಿಂಕ್ ಕ್ಲೋರೈಡಿನ ಹೈಡ್ರೊಕ್ಲೋರಿಕಾಮ್ಲದ ದ್ರಾವಣದಲ್ಲೂ ದ್ರಾವ್ಯ. ಈ ತತ್ತ್ವದ ಆಧಾರದ ಮೇಲೆಯೇ ಕೃತಕ ರೇಷ್ಮೆಯನ್ನು ತಯಾರಿಸುವುದು. ಸೋಡಿಯಂ ಹೈಡ್ರಾಕ್ಸೈಡಿನ ಪ್ರಬಲ ದ್ರಾವಣದ ಸಂಪರ್ಕದಲ್ಲಿ ಊದಿಕೊಳ್ಳುತ್ತದೆ; ಮತ್ತು ಧಾರಣಶಕ್ತಿ, ರೇಷ್ಮೆಯ ಹೊಳಪು, ವರ್ಣದ್ರವ್ಯಗಳನ್ನು ಆಕರ್ಷಿಸುವ ಗುಣಗಳು ಪ್ರಾಪ್ತವಾಗುತ್ತವೆ. ಈ ಸಂಸ್ಕರಣಕ್ಕೆ ಮರ್ಸರೈಸೇಷನ್ ಕ್ರಿಯೆ ಎನ್ನುವರು. ಕೊಂಚ ಸಲ್ಫ್ಯೂರಿಕ್ ಆಮ್ಲದ ಸಂಪರ್ಕದಲ್ಲಿ ಅಸಿಟಿಕ್ ಅನ್‌ಹೈಡ್ರೈಡಿನ ಅಸಿಟಿಕ್ ಆಮ್ಲದ ದ್ರಾವಣದೊಡನೆ ವರ್ತಿಸಿದಾಗ ಸೆಲ್ಯುಲೋಸ್ ಅಸಿಟೇಟ್ ಆಗುವುದು. ಇದನ್ನು ಛಾಯಾಗ್ರಾಹಕ ಫಿಲ್ಮುಗಳು ಮತ್ತು ಸೆಲೋಫೇನ್ ಕಾಗದದ ತಯಾರಿಕೆಯಲ್ಲಿ ಬಳಸುತ್ತಾರೆ. ಪ್ರಬಲ ನೈಟ್ರಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ವರ್ತನೆಯಿಂದ ಸೆಲ್ಯುಲೋಸ್ ಡೈ ಮತ್ತು ಟ್ರೈನೈಟ್ರೇಟುಗಳು ಬರುವುವು. ಸೆಲ್ಯುಲೋಸ್ ಟ್ರೈನೈಟ್ರೇಟಿಗೆ ತೀವ್ರ ಸ್ಫೋಟಕಗುಣವಿದೆ. ಇದನ್ನೇ ನಾವು ಸಿಡಿಹತ್ತಿ ಎನ್ನುವುದು. ಡೈನೈಟ್ರೇಟಿನ ಆಲ್ಕೊಹಾಲ್ ಅಥವಾ ಈಥರ್ ದ್ರಾವಣವೇ ಕಲೋಡಿಯನ್.

ಸೆಲ್ಯುಲೋಸಿನ ಅಣುಗಳು ಪರಸ್ಪರ ಅಂಟಿಕೊಂಡು ನಾರಿನಂತಾಗಲು ಮತ್ತು ಈ ಎಳೆಗಳು ಕೂಡಿಕೊಂಡು ಮರದ್ರವ್ಯದಲ್ಲಿರುವ ಕೋಶಗಳಾಗಲು ಲಿಗ್ನಿನ್ ಎಂಬ ಆರ್ಗ್ಯಾನಿಕ್ ವಸ್ತು ಕಾರಣ. ಸೆಲ್ಯುಲೋಸ್ ಮತ್ತು ಲಿಗ್ನಿನ್ ಅಲ್ಲದೆ ಮರದಲ್ಲಿ ಹೆಮಿಸೆಲ್ಯುಲೋಸುಗಳು, ರಾಳಗಳು ಮತ್ತು ವರ್ಣದ್ರವ್ಯಗಳಿವೆ. ಕೆಲವು ಸಂದರ್ಭಗಳಲ್ಲಿ ಸಿಲಿಕಾ ಇತ್ಯಾದಿ ಇನಾರ್ಗ್ಯಾನಿಕ್ ವಸ್ತುಗಳೂ ಇರುವುದುಂಟು. ಮರವನ್ನು ಭೌತ ಅಥವಾ ರಾಸಾಯನಿಕ ಕ್ರಿಯೆಗೆ ಗುರಿಪಡಿಸಿ ಅಂಟು ವಸ್ತುವಾದ ಲಿಗ್ನಿನ್ನನ್ನು ಮೆದುಗೊಳಿಸಿ ಇಲ್ಲವೇ ಕರಗಿಸಿ ಸೆಲ್ಯುಲೋಸನ್ನು ಬಿಡುಗಡೆ

ಮಾಡುವುದೇ ಪಲ್ಪಿನ ತಯಾರಿಕೆಯಲ್ಲಿರುವ ತತ್ತ್ವ. ಹೀಗೆ ತಯಾರಿಸಿದ ಪಲ್ಪಿಗೆ ಕಪ್ಪುಛಾಯೆ ಇರುವುದು. ಮರವನ್ನು ರಾಸಾಯನಿಕ ಕ್ರಿಯೆಗೆ ಗುರಿಪಡಿಸಿದಾಗ ಹುಟ್ಟಿದ ಅಥವಾ ಅದರಲ್ಲಿ ಮುಂಚೆಯೇ ಇದ್ದ ವರ್ಣದ್ರವ್ಯಗಳಿಂದ ಹೀಗಾಗುತ್ತದೆ. ಪಲ್ಪನ್ನು ಅಪೇಕ್ಷಿತ ಮಟ್ಟಕ್ಕೆ ಚಲುವೆ ಮಾಡಲು ಅದನ್ನು ಮತ್ತಷ್ಟು ಶುದ್ಧಿಗೊಳಿಸಿ ಉತ್ಕರ್ಷಣ ಅಥವಾ ಅಪಕರ್ಷಣ ಗುಣವುಳ್ಳ ಸೂಕ್ತ ರಾಸಾಯನಿಕ ವಸ್ತುಗಳ ಸಂಪರ್ಕದಲ್ಲಿ ಬಿಡಬೇಕು.

ಕಚ್ಚಾ ಮರದಿಂದ ಕಾಗದವನ್ನು ರೂಪಿಸುವವರೆಗೆ ಎರಡು ಪ್ರಧಾನ ಹಂತಗಳನ್ನು ಗುರುತಿಸಬಹುದು–ಕಚ್ಚಾ ಮರದಿಂದ ಪಲ್ಪಿನ ತಯಾರಿಕೆ ಮತ್ತು ಪಲ್ಪನ್ನು ಕಾಗದವಾಗಿ ಪರಿವರ್ತಿಸುವುದು. ಮರದ ಪಲ್ಪುಗಳಲ್ಲಿ ಯಾಂತ್ರಿಕ, ಸಲ್ಫೇಟ್, ಸಲ್ಫೈಟ್ ಮತ್ತು ಸೋಡಾ ಪಲ್ಪುಗಳೆಂದು ನಾಲ್ಕು ವಿಧಗಳಿವೆ. ಮೊದಲನೆಯದನ್ನು ಯಾಂತ್ರಿಕ ವಿಧಾನಗಳಿಂದಲೂ ಉಳಿದ ಮೂರನ್ನು ರಾಸಾಯನಿಕವಾಗಿಯೂ ತಯಾರಿಸುವರು. ಸಂಗ್ರಹಣ ಮತ್ತು ಸಾಗಾಣಿಕೆಯ ಕಾಲದಲ್ಲಿ ನಷ್ಟವಾದ ಅಂಶಗಳು ಮತ್ತು ತೊಗಟೆಯನ್ನು ಬಿಟ್ಟರೆ ಮೂಲ ಮರದ್ರವ್ಯದಲ್ಲಿದ್ದುದೆಲ್ಲವೂ ಯಾಂತ್ರಿಕ ಪಲ್ಪಿನಲ್ಲಿರುತ್ತವೆ. ರಾಸಾಯನಿಕ ಪಲ್ಪುಗಳಲ್ಲಿ ಶುದ್ಧ ಸೆಲ್ಯುಲೋಸ್ ಇರುವುದು. ಉತ್ತಮ ದರ್ಜೆಯ ಕಾಗದವನ್ನು ಮಾಡಲು ರಾಸಾಯನಿಕ ಪಲ್ಪಿಗೇ ಹೆಚ್ಚು ಬೇಡಿಕೆಯಿರುವುದು ಈ ಕಾರಣದಿಂದಲೇ. ಪತ್ರಿಕೆಗಳನ್ನು ಮುದ್ರಿಸಲು ಬೇಕಾದ ಅಗ್ಗದ ಕಾಗದದ ಉತ್ಪಾದನೆಗೆ ಇದು ತಕ್ಕುದಲ್ಲ.

**ಕಚ್ಚಾವಸ್ತುಗಳು:** ಕಾಗದದ ತಯಾರಿಕೆಗೆ ಬಳಸುವ ಮುಖ್ಯ ಕಚ್ಚಾವಸ್ತುವೆಂದರೆ ಮರ. ಹತ್ತಿ, ಚಿಂದಿಬಟ್ಟೆ ಇತ್ಯಾದಿಗಳನ್ನು ಸಹ ಬಳಸುತ್ತಾರೆ. ಕೈದುಡಿಮೆಯನ್ನು ಬಿಟ್ಟರೆ ಮರದಿಂದ ತೊಗಟೆ ಬಿಡಿಸುವ ಎರಡು ಮುಖ್ಯ ವಿಧಾನಗಳಿವೆ. ನೀರಿನ ತೊಟ್ಟಿಯಲ್ಲಿ ಭಾಗಶಃ ಮುಳುಗಿ ಚಲಿಸುತ್ತಿರುವ ಪೀಪಾಯಿಯೊಂದಿದೆ. ಅದರ ಮೇಲ್ಭಾಗದಿಂದ ಮರದ ತುಂಡುಗಳನ್ನು ಹಾಕುವರು. ಅವುಗಳ ತೊಗಟೆ ಉಜ್ಜಿ ತೆಗೆಯಲ್ಪಟ್ಟು ಶುಭ್ರವಾದ ಮರ ಇನ್ನೊಂದು ಬದಿಯಿಂದ ಹೊರಬೀಳುವುದು. ಎರಡನೆಯ ವಿಧಾನದಲ್ಲಿ ಚದರಂಗುಲಕ್ಕೆ ಸುಮಾರು 1,400 ಪೌಂಡು ಒತ್ತಡ ಬೀಳುವಷ್ಟು ರಭಸದಲ್ಲಿ ನೀರು ಮರದ ಮೇಲೆ ಎರಗುವುದು. ಆಗ ತೊಗಟೆ ಚುಪ್ಪಾಚೂರಾಗಿ ಕಳಚಿ ಬೀಳುತ್ತದೆ. ಆಸ್ಪ್ರಾಮ್ ತೊಗಟೆಯಂತ್ರದ ಕಾರ್ಯವಿಧಾನ ಭಿನ್ನವಾಗಿದೆ. ವರ್ತುಲಾಕಾರದಲ್ಲಿ ಸುತ್ತುತ್ತಿರುವ ಸರಪಳಿಯ ಚೌಕಟ್ಟಿನ ಮೂಲಕ ಮರದ ತುಂಡು ಹಾಯುವುದು. ಅದಕ್ಕೂ ಚೌಕಟ್ಟಿಗೂ ಅಲ್ಪ ಅಂತರವಿರುವುದರಿಂದ ತುಂಡು ತಿರುಗದೆ ತೊಗಟೆ ಮಾತ್ರ ತೆಗೆಯಲ್ಪಡುವುದು.

**ಯಾಂತ್ರಿಕ ಪಲ್ಪ್:** ಕೋನಿಫರಸ್ ವರ್ಗದ ಮೆದು ಮರಗಳಾದ ಸ್ಪ್ರೂಸ್ ಮತ್ತು ಬಾಲ್ಸಂಗಳನ್ನು ಇದಕ್ಕಾಗಿ ಬಳಸುವುದು ಹೆಚ್ಚು. ಇವನ್ನು ನದಿಯಲ್ಲಿ ತೇಲಿಬಿಟ್ಟು ಕಾರ್ಖಾನೆಯ ನಿವೇಶನಕ್ಕೆ ಸಾಗಿಸುವುದು ಸುಲಭ. ಪಾಪ್ಲರ್ ಮರವಾದರೆ ನೀರಿನಲ್ಲಿ ಮುಳುಗುವುದು.

ಚಿತ್ರ 2 ಪಲ್ಪ್ ಮತ್ತು ಕಾಗದದ ತಯಾರಿಕೆಗೆ ಬೇಕಾದ ಅಧಿಕ ಪ್ರಮಾಣದ ನೀರನ್ನು ಕ್ಲ್ಯಾರಿಫ್ಲಾಕ್ಯುಲೇಟರುಗಳಲ್ಲಿ ಸ್ವಚ್ಛಗೊಳಿಸಲಾಗುವುದು. ಬದಿಯಲ್ಲಿ ಬೊಂಬಿನ ರಾಶಿಯನ್ನು

ಗಿರಣಿಯ ಬಳಿ ಬಂದ ಕೂಡಲೇ ಮರದ ದಿಮ್ಮಿಗಳನ್ನು ಕತ್ತರಿಸಿ ಮೇಲೆ ಹೇಳಿದಂತೆ ತೊಗಟೆಯನ್ನು ಸುಲಿಯಲಾಗುವುದು. ಅನಂತರ ಅದನ್ನು ನೀರಿನಲ್ಲಿ ಅರೆಯುವರು ಘರ್ಷಣೆಯಿಂದ ಹುಟ್ಟಿದ ಶಾಖದ ನಿವಾರಣೆಗೆ ಮತ್ತು ಎಳೆಗಳನ್ನು ತೇಲಿಸಿಕೊಂಡು ಹೋಗಲು ನೀರಿದ್ದರೆ ಅನುಕೂಲ. ಸಮಕೋನದಲ್ಲಿ ದಿಮ್ಮಿಗಳನ್ನು ಕತ್ತರಿಸಿದಾಗ ಎಲೆಗಳು ತುಂಡಾಗುವ ಸಂಭವವಿದೆ. ಆದರೆ ಮರದ ತುಂಡನ್ನು ಲಘುಕೋನದಲ್ಲಿ ಕತ್ತರಿಸಿದರೆ ಎಳೆಗಳು ಕಿತ್ತಂತಾಗಿ ಉದ್ದುದ್ದವಾಗಿ ಬರುವುವು. ಸ್ವಲ್ಪ ಮರವನ್ನು ಕತ್ತರಿಸಲು ಮೂರು ಪಾಕೆಟ್ ಗ್ರೈಂಡರ್ ಅನುಕೂಲ. ಇದರಲ್ಲಿ ಉಕ್ಕಿನ ಗೂಟದ ಮೇಲೆ ಕೂರಿಸಿರುವ ಬೀಸುವ ಕಲ್ಲಿದೆ. ಇದರ ಅಂಚಿನಲ್ಲಿ ಮೂರು ಗುಳಿಗಳಿರುತ್ತವೆ. ಒಂದೊಂದು ಗುಳಿಯ ಮೇಲೂ ಹೈಡ್ರಾಲಿಕ್ ಸಿಲಿಂಡರ್ ಇದೆ. ಮರದ ತುಂಡುಗಳನ್ನು ಬೀಸುವ ಕಲ್ಲಿಗೆ ತಾಡಿಸುವುದು ಇದರ ಕರ್ತವ್ಯ. ಘರ್ಷಣೆಯಲ್ಲಿ ಹುಟ್ಟುವ ಶಾಖವನ್ನು ಹೀರಲು ಮತ್ತು ಉತ್ಪನ್ನ ವಸ್ತುವನ್ನು ಕೊಚ್ಚಿಸಿ ತೆಗೆಯಲು ಶ್ವೇತೋದಕವನ್ನು (ವೈಟ್ ವಾಟರ್) ಚಿಮುಕಿಸುತ್ತಿರುವರು. ನೂರಾರು ಟನ್ ಮರಗಳನ್ನು ಪುಡಿ ಮಾಡಬೇಕಾದಾಗ ವಿಶೇಷ



ಚಿತ್ರ 3 ಬೊಂಬನ್ನು ತುಂಡರಿಸುವ ಯಂತ್ರ ಬೊಂಬನ್ನು ಈ ಯಂತ್ರದಲ್ಲಿ ಸಮಗಾತ್ರ ಚೂರುಗಳನ್ನಾಗಿ ಮಾಡಿ ಅನಂತರ ಪಾಚಕ ಯಂತ್ರಕ್ಕೆ ರವಾನಿಸಲಾಗುವುದು

ಗಿರಣಿಗಳು ಅಗತ್ಯ. ಜಲಮಿಶ್ರಿತ ಪಲ್ಪು ಒರಳಿನ ಕೆಳಗಿರುವ ಮೋರಿಗಳಲ್ಲಿ ಸಂಗ್ರಹಿಸುತ್ತದೆ. ಇದನ್ನು ಜರಡಿ ಹಿಡಿಯಲಾಗುವುದು. ಸಣ್ಣ ಚೂರುಗಳು ವಂದರಿಯ ಮೂಲಕ ಹಾದು ಒಂದು ಗುಂಡಿಯಲ್ಲಿ ಬೀಳುವುವು. ಇವನ್ನು ಇನ್ನೂ ಸೂಕ್ಷ್ಮವಾದ ವಂದರಿಯಲ್ಲಿ ಆಡಿಸಲಾಗುವುದು. ಅದರ ಮೇಲೆ ಉಳಿದ ತರಿಯನ್ನು ಮತ್ತಷ್ಟು ಪುಡಿ ಮಾಡಿ ಅದೇ ವಂದರಿಗೆ ಹಿಂತಿರುಗಿಸುವರು. ಜರಡಿಯಾಡಿಸಿದ ವಸ್ತುವನ್ನು ಮಂದಕಾರಿಗಳಲ್ಲಿ (ಥಿಕನರ್ಸ್) ಸಾಂದ್ರೀಕರಿಸಲಾಗುವುದು. ಇದೇ ಯಾಂತ್ರಿಕ ಪಲ್ಪ್. ಮಂದಕಾರಿಗಳು ವಿಸರ್ಜಿಸುವ ನೀರಿನಲ್ಲಿ ಮರದಲ್ಲಿದ್ದ ನಾರಿನ ಶೇ. 15–20 ಭಾಗ ಇರುತ್ತದೆ. ಇದನ್ನೇ ಶ್ವೇತೋದಕ ಎನ್ನುವರು. ವಿಧಾನ ಮುಂದುವರಿದಂತೆ ಉಷ್ಣತೆಯನ್ನು ತಗ್ಗಿಸಲು ಹೊಸ ನೀರನ್ನು ಸೇರಿಸುತ್ತಿರಬೇಕು. ಆದ್ದರಿಂದ ಶ್ವೇತೋದಕದ ಸ್ವಲ್ಪ ಭಾಗವನ್ನು ತೆಗೆಯುವುದು ಅನಿವಾರ್ಯವಾಗುತ್ತದೆ. ಅದನ್ನು ವಿಸರ್ಜಿಸುವ ಮುನ್ನ ಅದರಲ್ಲಿರುವ ನಾರಿನ ಭಾಗವನ್ನು ಶೋಧಿಸಿ ಮಂದಕಾರಿಗಳಿಗೆ ಹಿಂತಿರುಗಿಸುವರು. ಅರೆಯಲು ಅಗತ್ಯವಾದ ಯಾಂತ್ರಿಕ ಶಕ್ತಿಯನ್ನು ಬಿಟ್ಟರೆ ಇನ್ನಾವ ಶಕ್ತಿ ಸಂಚಯನವೂ ಇಲ್ಲಿ ನಡೆಯುವುದಿಲ್ಲ. ಬಹುಕಾಲ ನೀರಿನ ಸಂಪರ್ಕದಲ್ಲಿ ಇರುವುದರಿಂದ ಸೆಲ್ಯುಲೋಸು ಕೊಂಚ ನೀರನ್ನು ಹೀರುತ್ತದೆ. ಇದೊಂದೇ ಇಲ್ಲಿ ನಡೆಯುವ ರಾಸಾಯನಿಕ ಕ್ರಿಯೆ. ಯಾಂತ್ರಿಕ ಪಲ್ಪಿನಿಂದಾದ ಕಾಗದ ಬಹುಕಾಲ ಬಾಳುವುದಿಲ್ಲ. ಹೀಗಾಗಲು ಅದರಲ್ಲಿರುವ ಸೆಲ್ಯುಲೋಸೇತರ ವಸ್ತುಗಳು ರಾಸಾಯನಿಕ ವಿಭಜನೆ ಹೊಂದುವುದು ಕಾರಣ. ವೃತ್ತಪತ್ರಿಕೆಗಳಿಗೆ ಬಳಸುವ ಕಾಗದ ಸುಲಭ ಬೆಲೆಗೆ ಸಿಗುವಂತಿರಬೇಕು. ಅದರ ತ್ರಾಣ ಮತ್ತು ಬಾಳಿಕೆ ಗೌಣ. ಆದ್ದರಿಂದ ಅಂಥ ಕಾಗದವನ್ನು ಮಾಡಲು ಯಾಂತ್ರಿಕ ಪಲ್ಪನ್ನು ಬಯಸುತ್ತಾರೆ. ಕೆಲವು ವೇಳೆ ಇದನ್ನು ಸ್ವಲ್ಪ ರಾಸಾಯನಿಕ ಪಲ್ಪಿನೊಡನೆ ಬೆರೆಸಿ ಅಗ್ಗದ ಬೆಲೆಯ ಪತ್ರಿಕಾ ಕಾಗದ, ಟಿಷ್ಯೂ ಕಾಗದ, ಗೋಡೆಗೆ ಹಚ್ಚುವ ಮತ್ತು ಹೊದಿಕೆಯ ಕಾಗದಗಳನ್ನು ಮಾಡುವರು.

**ಸಲ್ಫೇಟ್ ಪಲ್ಪ್:** ಇದನ್ನು ಕ್ರಾಫ್ಟ್ ಪಲ್ಪೆಂದೂ ಕರೆಯುವರು. ಇಂದು ತುಂಬ ಬಳಕೆಯಲ್ಲಿರುವ ವಿಧಾನ. ಈ ಪಲ್ಪಿನ ತಯಾರಿಕೆಗೆ ಗಟ್ಟಿ ಮತ್ತು ಮೆದು ಮರಗಳೆರಡನ್ನೂ ಉಪಯೋಗಿಸಬಹುದು. ಇದೊಂದು ವಿಶಿಷ್ಟ ಅನುಕೂಲ. ಈ ವಿಧಾನ ರೂಪಿತವಾದದ್ದು ಮರಗಳಲ್ಲಿರುವ ಅಂಟು ಮತ್ತು ತೈಲ ವಸ್ತುಗಳನ್ನು ಪಡೆಯಲೆಂದು. ಇಲ್ಲಿ ನಡೆಯುವ

ರಾಸಾಯನಿಕ ಕ್ರಿಯೆಗಳ ಸ್ವರೂಪ ಸ್ಪಷ್ಟವಾಗಿಲ್ಲ. ಲಿಗ್ನಿನುಗಳು ಆಯಾ ಆಲ್ಕೊಹಾಲ್ ಮತ್ತು ಆಮ್ಲಗಳಿಗೆ ಜಲವಿಶ್ಲೇಷಣೆ ಹೊಂದುವುವೆಂದು ಭಾವಿಸಲಾಗಿದೆ. ಪ್ರಾಸಂಗಿಕವಾಗಿ ಮರ್‌ಕ್ಯಾಪ್ಟನುಗಳು ಮತ್ತು ಸಲ್ಫೈಡುಗಳು ಹುಟ್ಟುವುದರಿಂದ ಸಲ್ಫೇಟ್ ಕಾಗದ ಕಾರ್ಖಾನೆಗಳು ದುರ್ಗಂಧ ಬೀರುವುವು. ಒಂದು ಟನ್ ಸಲ್ಫೇಟ್ ಪಲ್ಪಿನ ಉತ್ಪಾದನೆಗೆ ಅಗತ್ಯವಾದ ವಿವರಗಳು ಕೆಳಗಿವೆ.

| | | |
|---|---|---|
| ಮರ | ... | 42 ಟನ್ನುಗಳು |
| ಹೊಸ ಸುಣ್ಣ | ... | 325 ಪೌಂಡುಗಳು |
| ಸಾಲ್ಟ್ ಕೇಕ್ | ... | 450 ಪೌಂಡುಗಳು |
| ಹಬೆ | ... | 10,000 ಪೌಂಡುಗಳು |
| ವಿದ್ಯುಚ್ಛಕ್ತಿ | ... | 250 ಕಿಲೊವ್ಯಾಟ್ ಗಂಟೆಗಳು |
| ಕೈದುಡಿಮೆ | ... | 5 ಆಳು, 1 ಗಂಟೆ ಕಾಲ |

ಸಲ್ಫೇಟ್ ಪಲ್ಪಿನ ತಯಾರಿಕೆಯ ವಿವಿಧ ಹಂತಗಳು ಹೀಗಿವೆ. ಮರದ ದಿಮ್ಮಿಗಳನ್ನು ಕತ್ತರಿಸಿ ತೊಗಟೆ ತೆಗೆದು ಚಕ್ಕೆಯಂತ್ರಕ್ಕೆ (ಚಿಪ್ಪರ್) ಒಡ್ಡಲಾಗುವುದು. ಇದರಲ್ಲಿ ಸುತ್ತುತ್ತಿರುವ ತಟ್ಟೆಗಳಿವೆ. ಒಂದೊಂದೂ ಉದ್ದವಾದ ಮತ್ತು ಭಾರವಾದ 3–4 ಕತ್ತಿಗಳಿಂದ ಸಜ್ಜಾಗಿದೆ. ಇವು ಮರವನ್ನು ಸಣ್ಣ ಚಕ್ಕೆಗಳನ್ನಾಗಿ ಮಾಡುವುವು. ಚಕ್ಕೆಗಳನ್ನು ತಿರುಗುವ ಅಥವಾ ಅಲ್ಲಾಡುವ ಜರಡಿಗಳ ಮೇಲಿಟ್ಟರೆ ಹೊಟ್ಟು ಮತ್ತು ಸಣ್ಣ ಚಕ್ಕೆಗಳು ಪ್ರತ್ಯೇಕಿಸಲ್ಪಡುತ್ತವೆ. ದೊಡ್ಡ ಚಕ್ಕೆಗಳನ್ನು ಅಪೇಕ್ಷಿತ ಗಾತ್ರಕ್ಕೆ ಪುನಃ ಚೂರು ಮಾಡಿ ಬೇಕಾದಾಗ ಪಾಚಕಕ್ಕೆ (ಡೈಜೆಸ್ಟರ್) ಗುರುತ್ವಾಕರ್ಷಣೆಯಿಂದ ರವಾನಿಸುವರು. ಇದನ್ನು ಉಕ್ಕಿನಿಂದ ಮಾಡಿರುತ್ತಾರೆ. ಅದರಲ್ಲಿ ಸೋಡಿಯಂ ಸಲ್ಫೈಡ್ ಮತ್ತು ಕಾಸ್ಟಿಕ್ ಸೋಡಾ ಮಿಶ್ರಣವಿದೆ. ಇದನ್ನು ಬೇಗುದಿ ದ್ರಾವಕ (ಕುಕ್ಕಿಂಗ್ ಲಿಕ್ಕರ್) ಎನ್ನುತ್ತಾರೆ. ಹಬೆ ಹಾಯಿಸಿದರೆ ಪಚನ ಕ್ರಿಯೆ ಪ್ರಾರಂಭವಾಗುವುದು. ಒತ್ತಡ ಚದರಂಗುಲಕ್ಕೆ 110ಪೌಂಡುಗಳಷ್ಟಿರುತ್ತದೆ. ಪಾಚಕಗಳು ಸ್ಥಾಯೀ ಅಥವಾ ಸುತ್ತುವ ಮಾದರಿಯವಾಗಿರಬಹುದು. ಬೇಯಿಸುವ ಅವಧಿ ಸುಮಾರು 3 ತಾಸುಗಳು. ಅನಂತರ ಒತ್ತಡವನ್ನು 80 ಪೌಂಡುಗಳಿಗೆ ತಗ್ಗಿಸಿ ಚಾರ್ಜನ್ನು ಮೊಹರಾದ ಕಡಾಯಗಳಿಗೆ ಬಿಡುವರು. ಇವು ಪ್ರತಿಪ್ರವಾಹ ತತ್ತ್ವದ ಪ್ರಕಾರ ಕೆಲಸ ಮಾಡುತ್ತವೆ. ಇಲ್ಲಿ ಶಾಖವಿನಿಮಯ ತೃಪ್ತಿಕರವಾಗಿ ಜರುಗಿ ಸಾಮಾನ್ಯವಾಗಿ ನಷ್ಟವಾಗುತ್ತಿದ್ದ ಹಬೆ ಉಳಿತಾಯವಾಗುವುದಲ್ಲದೆ ಮಾರ್ಜನವೂ ಚೆನ್ನಾಗಿರುವುದು. ನಿಸ್ಸಾರ (ಸ್ಪೆಂಟ್) ದ್ರಾವಕವನ್ನು ತೊಟ್ಟಿಗಳಲ್ಲಿ ಶೇಖರಿಸುತ್ತಾರೆ. ಅದರಿಂದ ಮುಂದೆ ರಾಸಾಯನಿಕ ವಸ್ತುಗಳನ್ನು ಉದ್ಧರಿಸುವ ತನಕ ಅದು ಅಲ್ಲೇ ಉಳಿಯುವುದು. ಇದಕ್ಕೆ ಕಪ್ಪು ದ್ರಾವಕ ಪಲ್ಪನ್ನು ಬೇರ್ಪಡಿಸಿ, ತೊಳೆದು, ಹೆಣಿಗೆ ಯಂತ್ರಕ್ಕೆ (ನಾಟ್ಟರ್) ಒಡ್ಡುವುದು ಮುಂದಿನ ಕ್ರಮ. ಬೇಯಿಸಿದಾಗ ಬಿಡಿಸಿಕೊಂಡಿರದ ನಾರಿನ ಗಂಟುಗಳನ್ನು ಇದು ತೆಗೆದು ಹಾಕುವುದು. ಅನಂತರ ಜರಡಿ ಹಿಡಿದರೆ ಬೇಯದ ಮರದ ಭಾಗ ಪ್ರತ್ಯೇಕವಾಗುವುದು. ಅಂತಿಮವಾಗಿ ಶೋಧಕಗಳು ಮತ್ತು ಮಂದಕಾರಿಗಳು ನೀರಿನ ಬಹುಪಾಲನ್ನು ನಿವಾರಿಸುವುವು. ಮಂದಕಾರಿಗಳಲ್ಲಿ ಕೊಳವೆಯಾಕಾರದ ಚೌಕಟ್ಟಿಗೆ ತಂತಿಯ ಜಾಲರಿಯಿದೆ. ಇವು ತೆಳುಗೊಳಿಸಿದ ಪಲ್ಪಿನಲ್ಲಿ ಚಲಿಸಿದಾಗ ಜಾಲರಿಗೆ ಪಲ್ಪು ಸುತ್ತಿಕೊಳ್ಳುವುದು. ಎಲ್ಲ ನೀರೂ ಸೋರಿಹೋಗುವುದು.

ಮಂದಗೊಳಿಸಿದ ಪಲ್ಪನ್ನು ಆಮೇಲೆ ಚಲುವೆ ಮಾಡಬೇಕು. ಎರಡು ವಿಧವಾದ ಚಲುವೆಯ ಕ್ರಮಗಳು ರೂಢಿಯಲ್ಲಿವೆ. ಒಂದೇ ಹಂತದಲ್ಲಿ ಕ್ಯಾಲ್ಸಿಯಂ ಹೈಪೋಕ್ಲೋರೈಟಿನಿಂದ ಚಲುವೆ ಮಾಡುವುದು. ಇದರಿಂದ ಕೆನೆಬಣ್ಣದ ಕಾಗದವಾಗುತ್ತದೆ. ಮತ್ತೊಂದು ಮೂರು ಹಂತಗಳ ವಿಧಾನ. ಕ್ಲೋರಿನ್ನಿನ ಪ್ರಯೋಗ, ಸುಣ್ಣದ ಹಾಲು ಅಥವಾ ಕಾಸ್ಟಿಕ್ ಸೋಡಾದಿಂದ ತಟಸ್ಥೀಕರಣ ಮತ್ತು ಕ್ಯಾಲ್ಸಿಯಂ ಹೈಪೊಕ್ಲೋರೈಟಿನಿಂದ ವರ್ತನೆ. ಮರದ್ರವ್ಯದಲ್ಲಿದ್ದ ಟ್ಯಾನಿನುಗಳು ಬಣ್ಣಕಾರಕ ವಸ್ತುಗಳನ್ನು ಬಿಡುಗಡೆ ಮಾಡುತ್ತವೆ. ಇವನ್ನು ಉತ್ಕರ್ಷಿಸಿ ನಾಶಪಡಿಸುವುದು ಚಲುವೆ ಮಾಡುವ ಉದ್ದೇಶ. ಚಲುವೆಯಾದ ಅನಂತರ ಪಲ್ಪನ್ನು ತೊಳೆದು ಪುನಃ ಮಂದಗೊಳಿಸಬೇಕು. ಆಗ ಮತ್ತಷ್ಟು ಶುಷ್ಕವಾಗಿ ಹಾಳೆಗಳನ್ನು ಕಂತೆಗಳಾಗಿ ಮಡಿಸಲು ಅನುಕೂಲ. ಈ ಕಂತೆಗಳಿಗೆ ಲ್ಯಾಪ್ ಎಂದು ಹೆಸರು. ಇದಕ್ಕಾಗಿ ಬಳಸುವ ಮಂದಕಾರಿಗಳಲ್ಲಿ ಒಂದು ಕೊಳವೆ ದಾಸ್ತಾನು ದ್ರಾವಣವಿರುವ ಹಂಡೆಯಲ್ಲಿ ತಿರುಗುತ್ತಿರುತ್ತದೆ. ಇದಕ್ಕೊಂದು ಅನಂತವಾದ ಫೆಲ್ಟಿನ ಪಟ್ಟಿ ಇದೆ. ಇದಕ್ಕೆ ಅಂಟಿಕೊಂಡ ಪಲ್ಪಿನ ಹಾಳೆಗಳು ಅನುಕ್ರಮವಾಗಿ ಹಿಂಡುವ ಮತ್ತು ಒತ್ತುವ ರೋಲರುಗಳ ಮೂಲಕ ಹಾದುಹೋದಾಗ ಪಲ್ಪಿನ ನಾರುಗಳಲ್ಲಿ ಶೇ. 55–65 ತೇವಾಂಶವಿರುವುದು. ಹೈಡ್ರಾಲಿಕ್ ಪ್ರೆಸ್ಸುಗಳಲ್ಲಿ ಚದರಂಗುಲಕ್ಕೆ 3,000 ಪೌಂಡುಗಳಷ್ಟು ಒತ್ತಡ ಬಿದ್ದಾಗ ತೇವಾಂಶ ಶೇ. 40–50 ಆಗುವುದು.

ಕೋನಿಫರಸ್ ಮರಗಳಿಂದಾದ ಪಲ್ಪಿನಲ್ಲಿರುವ ನಾರುಗಳು ಅತ್ಯಂತ ಉದ್ದವಾಗಿರುವುವು. ಅಲ್ಲದೆ ಈ ಪಲ್ಪಿನ ತಯಾರಿಕೆಗೆ ಬಳಸುವ ರಾಸಾಯನಿಕ ವಸ್ತುಗಳೂ ಅಷ್ಟು ತೀಕ್ಷ್ಣ ಸ್ವಭಾವದ ಪದಾರ್ಥಗಳಲ್ಲ. ಹೀಗಾಗಿ ಇತರ ಎರಡು ರಾಸಾಯನಿಕ ವಿಧಾನಗಳಿಂದ ತಯಾರಿಸಿದ ಕಾಗದಕ್ಕಿಂತ ಇಲ್ಲಿ ಹೆಚ್ಚು ತ್ರಾಣವಿರುವ ಕಾಗದ ದೊರೆಯುತ್ತದೆ. ಹಿಂದೆ ಕ್ರಾಫ್ಟ್ ಕಾಗದದ ಕಪ್ಪು ಛಾಯೆಯಿಂದಾಗಿ ಅದರ ಉಪಯೋಗ ಹೊದಿಕೆಗಳು, ಚೀಲಗಳು ಮತ್ತು ರಟ್ಟುಗಳ ತಯಾರಿಕೆಗೆ ಸೀಮಿತವಾಗಿತ್ತು. ನವೀನ ಚಲುವೆ ವಿಧಾನಗಳ ಅನ್ವಯದಿಂದ ತೆಳುಬಣ್ಣದ ಮತ್ತು ಶುಭ್ರವಾದ ಪಲ್ಪಿನ ಉತ್ಪಾದನೆ ಸಾಧ್ಯವಾಗಿದೆ. ಅಲ್ಲದೇ ಈ ಸುದೃಢವಾದ ಪಲ್ಪನ್ನು ಇತರ ಪಲ್ಪುಗಳೊಂದಿಗೆ ಬೆರೆಸಿ ಕಾಗದದ ತ್ರಾಣವನ್ನು ಹೆಚ್ಚಿಸಬಹುದಾಗಿದೆ.

**ಕಪ್ಪು ದ್ರಾವಕದ ಗಳಿಕೆ :** ಇದನ್ನು ಸಂಪಾದಿಸದಿದ್ದರೆ ಸಲ್ಫೇಟ್ ವಿಧಾನದ ಆರ್ಥಿಕ ಸಮತೋಲನ ಹದಗೆಡುತ್ತದೆ. ಪಾಚಕಕ್ಕೆ ನಾವು ಒದಗಿಸುವ ಕ್ಷಾರದ ಶೇ. 95–98 ಭಾಗ ಕಪ್ಪು ದ್ರಾವಣದಲ್ಲಿರುವುದು ಗಮನಾರ್ಹ. ಅದು ಸೋಡಿಯಂ ಕಾರ್ಬೊನೇಟ್ ಅಥವಾ ಆರ್ಗ್ಯಾನಿಕ್ ಸೋಡಿಯಂ ಲವಣಗಳ ರೂಪದಲ್ಲಿದೆ. ಸೋಡಿಯಂ ಸಲ್ಫೈಡಿನೊಂದಿಗೆ ಸಂಯೋಜಿತ ಸ್ಥಿತಿಯಲ್ಲಿ ಗಣನೀಯ ಪ್ರಮಾಣದ ಗಂಧಕಯುಕ್ತ ಆರ್ಗ್ಯಾನಿಕ್ ವಸ್ತುಗಳು ಇರುವುವು. ಜೊತೆಗೆ ಸ್ವಲ್ಪ ಸೋಡಿಯಂ ಸಲ್ಫೇಟ್, ಉಪ್ಪು, ಸಿಲಿಕ ಮತ್ತು ಲೇಶಮಾತ್ರ ಸುಣ್ಣ, ಕಬ್ಬಿಣದ ಆಕ್ಸೈಡ್, ಅಲ್ಯೂಮಿನಾ ಮತ್ತು ಪೊಟ್ಯಾಷುಗಳಿವೆ. ಒಟ್ಟು ಘನವಸ್ತುಗಳ ಪ್ರಮಾಣ ಸರಾಸರಿ ಶೇ. 20 ಆಗುವುದು. ಮಲ್ಟಿಪಲ್ ಪರಿಣಾಮದ ಅಥವಾ ಕ್ಯಾಸ್ಕೇಡ್ ಬಾಷ್ಪಕಾರಕಗಳಲ್ಲಿ ಸಾಂದ್ರೀಕರಿಸಿದರೆ ಶೇ. 45–70 ಘನವಸ್ತುಗಳಿರುವ ದ್ರಾವಕ ಉಳಿಯುತ್ತದೆ. ಜಲಾಂಶವನ್ನು ಈ ಮಟ್ಟಕ್ಕೆ ತಗ್ಗಿಸದಿದ್ದರೆ, ಮುಂದೆ ಕುಲುಮೆಗೆ ಎರಚಿದಾಗ ಅದು ಹೊತ್ತಿ ಉರಿಯುವುದಿಲ್ಲ. ಆಧುನಿಕ ಗಳಿಕೆಯ ವಿಧಾನದಲ್ಲಿ ಸಾಂದ್ರೀಕರಿಸಿದ ಬಿಸಿಯಾದ ದ್ರಾವಕಕ್ಕೆ ಸೋಡಿಯಂ ಸಲ್ಫೇಟ್ ಸೇರಿಸಿ ತಟ್ಟೆ ಬಾಷ್ಪಕಾರಕಕ್ಕೆ (ಡಿಸ್ಕ್ ಎವಾಪೊರೇಟರ್) ಒದಗಿಸುವರು. ದ್ರಾವಕ ಇಳಿಯುವ ದಿಕ್ಕಿಗೆ ವಿರುದ್ಧವಾಗಿ ಅನಿಲ ಪ್ರವಾಹವಿರುವುದು. ದ್ರಾವಕ ಕೆಳಗೆ ಇಳಿದಂತೆಲ್ಲ ನೀರು ಆವಿಯಾಗಿ ಆರ್ಗ್ಯಾನಿಕ್ ಲವಣಗಳು ವಿಭಜಿಸುವುವು. ಇಂಗಾಲ ಉರಿದು ಹೋಗುವುದು. ಇನಾರ್ಗ್ಯಾನಿಕ್ ಲವಣಗಳು ವಿಭಜಿಸುವುವು. ಇಂಗಾಲ ಉರಿದು ಹೋಗುವುದು. ಇನಾರ್ಗ್ಯಾನಿಕ್ ವಸ್ತುಗಳು ದ್ರವಿಸುವುವು. ಕೆಳಕಂಡ ಕ್ರಿಯೆ ನಡೆಯುವುದು.

$$Na_2SO_4 + 2C \rightarrow Na_2S + 2CO_2$$

ದ್ರವೀಕರಿಸಿದ ವಸ್ತು ಜ್ವಲನ ಕ್ರಿಯಾಘಟಕದಿಂದ (ಕಾಸ್ಟಿಸೈಸಿಂಗ್ ಪ್ಲಾಂಟ್) ಬರುತ್ತಿರುವ ಲೀನಕಾರಿ ದ್ರಾವಕದ (ಡಿಸಾಲ್ವಿಂಗ್ ಲಿಕ್ಕರ್) ದುರ್ಬಲ ದ್ರಾವಣಕ್ಕೆ ಬೀಳುವಂತೆ ಏರ್ಪಡಿಸಿರುತ್ತಾರೆ. ಆಗ ಹಸುರು ದ್ರಾವಕ ಉಂಟಾಗುವುದು. ಅದ್ರಾವ್ಯ ವಸ್ತುಗಳನ್ನು ಒತ್ತರಿಸಲು ಬಿಟ್ಟು ಉಳಿದ ದ್ರಾವಕಕ್ಕೆ ಅರಳಿದ ಸುಣ್ಣವನ್ನು ಸೇರಿಸಲಾಗುವುದು. ಮುಂದೆ ಒದಗುವ ಕ್ಯಾಲ್ಸಿಯಂ ಕಾರ್ಬೊನೇಟಿನಿಂದ ಇದನ್ನು ಮಾಡಿಕೊಳ್ಳಬಹುದು. ಈ ಸನ್ನಿವೇಶದಲ್ಲಿ ಕೆಳಕಂಡ ಉಷ್ಣಗ್ರಾಹಕ ಕ್ರಿಯೆ ಕ್ಷಿಪ್ರವಾಗಿ ನಡೆಯುತ್ತದೆ.

$$\underset{(aq)}{Na_2CO_3} + \underset{(s)}{Ca(OH)_2} \rightarrow \underset{(aq)}{2NaOH} + CaCO_3$$

ÄH =-2100 ಕೆಲೊರಿಗಳು

ಫಲಿತ ಬಗ್ಗಡವನ್ನು ಸೋಸಲು ಮಾನೆಲ್ ಮಿಶ್ರಲೋಹದಿಂದ ತಯಾರಿಸಿದ ಜರಡಿಗಳಿರುವ ನಿರಂತರ ಆವರ್ತ ಸೋಸಣಿಗೆಗಳು (ಕಂಟಿನ್ಯುವಸ್ ರೋಟರಿ ಫಿಲ್ಟರ್ಸ್) ಬಳಕೆಯಲ್ಲಿವೆ. ಕ್ಯಾಲ್ಸಿಯಂ ಕಾರ್ಬೊನೇಟಿನ ಮಡ್ಡಿಯನ್ನು ಸುಣ್ಣದ ಗೂಡಿಗೆ ರವಾನಿಸಿ ಕ್ಯಾಲ್ಸಿಯಂ ಆಕ್ಸೈಡ್ ತಯಾರಿಸಿಕೊಳ್ಳುವರು. ಸೋಸಣಿಗೆಗಳಿಂದ ನಿರ್ಗಮಿಸುವ ದ್ರವವೇ ಶ್ವೇತೋದಕ. ನಾರುಗಳನ್ನು ಬೇಯಿಸಲು ಇದನ್ನು ವಿನಿಯೋಗಿಸುವರೆಂದು ಹಿಂದೆಯೇ ಹೇಳಿದೆ. ಇದರಲ್ಲಿ ಕಾಸ್ಟಿಕ್ ಸೋಡಾ, ಸೋಡಿಯಂ ಸಲ್ಫೈಡ್ ಮತ್ತು ಕೊಂಚ ಸೋಡಿಯಂ ಕಾರ್ಬೊನೇಟ್, ಸಲ್ಫೇಟ್ ಮತ್ತು ಥಯೊಸಲ್ಫೇಟುಗಳಿವೆ.

ಕಪ್ಪುದ್ರಾವಕದ ಗಳಿಕೆಯ ಕಾಲದಲ್ಲಿ ನೀಳತೈಲವೆಂಬ (ಟಾಲ್ ಆಯಿಲ್) ಉಪವಸ್ತು ದೊರೆಯುವುದು. ಇದು ಸ್ನಿಗ್ಧವಾದ ಕಪ್ಪು ಬಣ್ಣದ ಅಂಟುದ್ರವ. ಇದರಲ್ಲಿ ರೆಸಿನ್ ಆಮ್ಲಗಳು ಮತ್ತು ಮಿಥೆನಾಲ್ ಇವೆ. ನೀಳತೈಲದ ಬೇರ್ಪಡೆಗೆ ಕೇಂದ್ರಾಪಗಮನ ಯಂತ್ರ ಬೇಕು. ಸಾಬೂನುಗಳು, ಚರಬಿಗಳು (ಗ್ರೀಸಸ್) ಮತ್ತು ಎಮಲ್ಷನುಗಳ ತಯಾರಿಕೆಗೆ ನೀಳತೈಲ ಉಪಯೋಗವಾಗುತ್ತಿದೆ. ಕಪ್ಪು ದ್ರಾವಕವನ್ನು ಬೇರಿಯಂ ಹೈಡ್ರೇಟಿನೊಡನೆ ಹಿಂಗಿಸಿದರೆ ಘನವಸ್ತುವಾಗುತ್ತದೆ. ಇದನ್ನು ಪುಡಿ ಮಾಡಿ ವಿನಾಶಕ ಬಾಷ್ಪೀಭವನಕ್ಕೆ ಗುರಿಪಡಿಸಿದರೆ ಮೆಥೆನಾಲ್ ದೊರೆಯುವುದು. ಈ ಕ್ರಮ ದುಬಾರಿಯಾಗುವುದರಿಂದ ಅನುಷ್ಠಾನಯೋಗ್ಯವಲ್ಲ. ಪಾಚಕದಿಂದ ಹೊರಬಿದ್ದ ಅನಿಲಗಳಲ್ಲಿ ಸಾಕಷ್ಟು ಸ್ಪ್ರೂಸ್ ಟರ್ಪೆಂಟೈನ್ ಇರುತ್ತದೆ. ಒಂದು ಟನ್ ಪಲ್ಪಿನಿಂದ 2–10 ಗ್ಯಾಲನ್ ಟರ್ಪೆಂಟೈನ್ ಎಣ್ಣೆ ಸಿಗಬಹುದು. ಇದನ್ನು ಶುದ್ಧಿ ಮಾಡಿದರೆ ಸಲ್ಫೇಟ್ ಟರ್ಪೆಂಟೈನ್ ಆಗುತ್ತದೆ.

**ಸೋಡಾ ಪಲ್ಪ್ :** ಇದರ ತಯಾರಿಕೆ ಸಲ್ಫೇಟ್ ಪಲ್ಪಿನಂತೆಯೇ. ಎರಡೂ ಕ್ಷಾರೀಯ ವಿಧಾನಗಳು. ಇದಕ್ಕೆ ಡೆಸಿಡುಯಸ್ ಮಾದರಿಯ ಅಥವಾ ಅಗಲವಾದ ಎಲೆಗಳುಳ್ಳ ಮರಗಳಾಗಬೇಕು. ಆದ್ದರಿಂದ ಸೋಡಾಪಲ್ಪಿನ ತಯಾರಿಕೆಗೆ ಪಾಪ್ಲರ್ ಮರಗಳಿಗೆ ಪ್ರಾಶಸ್ತ್ಯ ಹೆಚ್ಚು. ಅವನ್ನು ಬೇಯಿಸುವುದು ಸುಲಭ. ಬರ್ಚ್, ಮೇಪಲ್, ಚೆಸ್ಟ್‌ನಟ್ ಇತ್ಯಾದಿ ಮರಗಳನ್ನು ಉಪಯೋಗಿಸುವ ಪರಿಪಾಠವಿದೆ. ಅಗಲವಾದ ಎಲೆಗಳಿರುವ ಮರಗಳು ನೀರಿನಲ್ಲಿ ಮುಳುಗುವುದರಿಂದ ಅವನ್ನು ರೈಲಿನಲ್ಲಿ ಅಥವಾ ಹಡಗುಗಳಲ್ಲಿ ಕಾರ್ಖಾನೆಗೆ ಸಾಗಿಸಬೇಕಾಗುತ್ತದೆ. ಬೇಯಿಸುವ ಮುನ್ನ ಮರವನ್ನು ಸಲ್ಫೇಟ್ ವಿಧಾನದಂತೆಯೇ

ಸಿದ್ಧಗೊಳಿಸುತ್ತಾರೆ. ಬೇಯಿಸುವ ದ್ರಾವಕದಲ್ಲಿ ಶೇ. 6–7 ಕಾಸ್ಟಿಕ್ ಸೋಡಾ ಇರುತ್ತದೆ. ಪಾಚಕಗಳ ರಚನೆಯೂ ಅಲ್ಲಿಯಂತೆಯೇ ಇದ್ದು ಚದರಂಗುಲಕ್ಕೆ 110 ಪೌಂಡುಗಳಷ್ಟು



**ಚಿತ್ರ 4** ಪಾಚಕಯಂತ್ರ ಬೊಂಬಿನ ಚೂರುಗಳನ್ನು ಪಲ್ಪಾಗಿ ಮಾರ್ಪಡಿಸುವ ಸಂಮರ್ದ ಪಾತ್ರೆ ರಾಸಾಯನಿಕಗಳನ್ನು ಮತ್ತು ಆವಿಯನ್ನು ಬಳಸಿಕೊಂಡು ಈ ಕಾರ್ಯ ನಡೆಯುತ್ತದೆ.

ಒತ್ತಡ ಮತ್ತು 173° ಸೆ. ಉಷ್ಣತೆಯಲ್ಲಿ 2–3 ತಾಸುಗಳ ಕಾಲ ಬೇಯಿಸಲಾಗುವುದು. ಲಭ್ಯವಾದ ಪಲ್ಪನ್ನು ತೆರೆದ ತೊಟ್ಟಿಯಲ್ಲಿ ತೊಳೆಯುವರು. ತೊಟ್ಟಿಗೆ ಸರಂಧ್ರವಾದ ಉಕ್ಕಿನ ಹುಸಿತಳವಿದೆ. ರಂಧ್ರಗಳು ಅರ್ಧ ಅಂಗುಲದ ಅಂತರದಲ್ಲಿವೆ. ತಳದಲ್ಲಿ ನವುರಾದ ತಂತಿಯ ಬಲೆ ಇದೆ. ಉಳಿದ ವಿವರಗಳು ಸಲ್ಫೇಟ್ ಪಲ್ಪಿನಂತೆ.

ಈ ವಿಧಾನದಲ್ಲಿ ದೊರೆಯುವ ಕಪ್ಪು ದ್ರಾವಕದಲ್ಲಿ ಶೇ. 16 ಘನವಸ್ತು ಮತ್ತು ಶೇ. 4–5 ಕ್ಷಾರವಿದೆ. ಕ್ಷಾರದ ಬಹುಭಾಗ ಸೋಡಿಯಂ ಕಾರ್ಬೋನೇಟಾಗಿಯೂ ಉಳಿದದ್ದು ಸೋಡಿಯಂ ಹೈಡ್ರಾಕ್ಸೈಡಿನ ರೂಪದಲ್ಲಿಯೂ ಇರುವುದು. ಸಲ್ಫೇಟ್ ವಿಧಾನದಂತೆಯೇ ಸಾಂದ್ರೀಕರಿಸಿದರೂ ದ್ರವೀಕರಣ ಕುಲುಮೆಯ ಅಗತ್ಯವಿಲ್ಲ, ಲಭ್ಯವಸ್ತುವೇ ಕರಿಯ ಬೂದಿ. ಇದರಲ್ಲಿ ಶೇ. 20–25 ಇಂಗಾಲವಿರುವುದು. ಹುಸಿತಳಗಳಿರುವ ತೊಟ್ಟಿಗಳಲ್ಲಿ ಪ್ರತಿಪ್ರವಾಹ ತತ್ತ್ವದ ಪ್ರಕಾರ ನೀರು ಅಥವಾ ದುರ್ಬಲ ಕ್ಷಾರದಿಂದ ಈ ಬೂದಿಯನ್ನು ಅವಶೋಷಿಸಲಾಗುವುದು. ದೊರೆತ ದ್ರಾವಣವನ್ನು ಮತ್ತೊಂದು ತೊಟ್ಟಿಗೆ ಹರಿಸಿ ಇಂಗಾಲದ ಕಸವನ್ನು ಬಿಸುಡುವರು. ಈಗ ಸುಣ್ಣವನ್ನು ಸೇರಿಸಿದರೆ ಮಡ್ಡಿಯಾಗುವುದು. ಇದನ್ನು ಜ್ವಲನಕೋಶಕ್ಕೆ ಒಯ್ದು ಸೋಡಿಯಂ ಕಾರ್ಬೊನೇಟನ್ನು ಪೂರೈಸುವುದು. ಆಗ ಪರಸ್ಪರ ಪಲ್ಲಟವಾಗಿ ಕ್ಯಾಲ್ಸಿಯಂ ಕಾರ್ಬೊನೇಟು ಒತ್ತರಿಸುತ್ತದೆ. ಇದನ್ನು ಶೋಧಿಸಿ ಸುಣ್ಣದ ಗೂಡಿಗೆ ರವಾನಿಸುವರು.

$$Na_2CO_3 + Ca(OH)_2 \rightarrow 2NaOH + CaCO_3\downarrow$$

ಶೋಧಿತ ದ್ರವವೇ ಬಿಳಿಯ ದ್ರಾವಕ. ಇದು ಮಾಮೂಲಿನಂತೆ ವಿನಿಯೋಗವಾಗುವುದು.

ಅಗಲವಾದ ಎಲೆಗಳಿರುವ ಮರದ ನಾರುಗಳು 1.5 ಮಿಲಿಮೀಟರುಗಳಷ್ಟಿದ್ದರೆ, ಕೋನಿಫರಸ್ ಮರದ ನಾರುಗಳು ಇದರ ಎರಡರಷ್ಟು ಉದ್ದವಿರುವುವು. ಆದ್ದರಿಂದ ಸೋಡಾ ಪಲ್ಪಿನಿಂದಾದ ಕಾಗದದ ತ್ರಾಣ ಕಡಿಮೆ. ಇದಕ್ಕೋಸ್ಕರವೇ ಈ ಪಲ್ಪನ್ನು ಇತರ ಪಲ್ಪುಗಳೊಡನೆ ಬೆರೆಸಿ ಉಪಯೋಗಿಸುವುದು. ಪುಸ್ತಕ ಮತ್ತು ನಿಯತಕಾಲಿಕಗಳ ಮುದ್ರಣಕ್ಕೆ ಬೇಕಾದ ಕಾಗದ ಮತ್ತು ಟಿಷ್ಯೂಕಾಗದದ ತಯಾರಿಕೆಗೆ ಇದು ವಿಶೇಷವಾಗಿ ಬಳಸಲ್ಪಡುತ್ತದೆ. ಒಂದು ಟನ್ ಸೋಡಾ ಪಲ್ಪಿನ ಉತ್ಪಾದನೆಯಲ್ಲಿ ಆಗುವ ವಸ್ತು ಮತ್ತು ಶಕ್ತಿಸಂಚಯನದ ವಿವರ ಹೀಗಿದೆ:

| | | |
|---|---|---|
| ಮರ | ... | 1.5–2 ಟನ್ನುಗಳು |
| ಹೊಸ ಸುಣ್ಣ | ... | 500 ಪೌಂಡುಗಳು |
| ಸೋಡಾಬೂದಿ | ... | 250 ಪೌಂಡುಗಳು |
| ಹಬೆ | ... | 13,000 ಪೌಂಡುಗಳು |
| ವಿದ್ಯುಚ್ಛಕ್ತಿ | ... | 250 ಕಿಲೊವಾಟ್ ಗಂಟೆಗಳು |
| ನೇರದುಡಿಮೆ | ... | 5 ಆಳುಗಳು, 1 ಗಂಟೆ ಕಾಲ |

**ಸಲ್ಫೈಟ್ ಪಲ್ಪ್:** ಉತ್ಪಾದನಾ ಪ್ರಮಾಣದಲ್ಲಿ ಸಲ್ಫೇಟ್ ವಿಧಾನವನ್ನು ಬಿಟ್ಟರೆ ಇದೇ ಪ್ರಮುಖವಾದುದು. ಇಲ್ಲಿ ಸಾಮಾನ್ಯವಾಗಿ ಉಪಯೋಗಿಸುವುದು ಸ್ಪ್ರೂಸ್ ಮರ. ಆದರೆ



**ಚಿತ್ರ 5** ಪಾಚಕಯಂತ್ರದಲ್ಲಿ ಬೆಂದ ಪಲ್ಪನ್ನು ಊದುತೊಟ್ಟಿಗಳಿಗೆ ವರ್ಗಾಯಿಸಿ ಅನಂತರ ಬ್ರೌನ್ ಸ್ಟಾಕ್ ತೊಳೆಯುವ ಯಂತ್ರಗಳಿಗೆ ರವಾನಿಸುತ್ತಾರೆ. ಈ ಯಂತ್ರಗಳು ಕಂದುಬಣ್ಣದ ಪಲ್ಪನ್ನು ರಾಸಾಯನಿಕಗಳಿಂದ ವಿಮುಕ್ತಗೊಳಿಸುತ್ತವೆ.

ಹೆಮ್‌ಲಾಕ್ ಮತ್ತು ಬಾಲ್ಸಂಗಳನ್ನು ಸಹ ಉಪಯೋಗಿಸುವುದುಂಟು. ಮರದ ತೊಗಟೆ



**ಚಿತ್ರ 6** ಶೇಖರಣಾ ಪೆಠಾರಿ. ಬ್ರೌನ್‌ಸ್ಟಾಕ್ ತೊಳೆಯುವ ಯಂತ್ರಗಳಲ್ಲಿ ಸ್ವಚ್ಛಗೊಳಿಸಿದ ಪಲ್ಪನ್ನು ದೊಡ್ಡ ದೊಡ್ಡ ಪೆಠಾರಿಗಳಲ್ಲಿ ಶೇಖರಿಸಿಟ್ಟು ಮುಂದಿನ ಹಂತಗಳಾದ ವಿಂಗಡನೆ ಮತ್ತು ಚಲುವೆಗಳಿಗೆ ಒಳಪಡಿಸಲಾಗುತ್ತದೆ.

ಬಿಡಿಸಿ ಶುದ್ಧ ಮಾಡಿ ಸಲ್ಫೇಟ್ ವಿಧಾನದಂತೆ ಅರ್ಧ ಅಂಗುಲದ ಚಕ್ಕೆಗಳಾಗಿ ಮಾಡುವರು. ಬೇಯಿಸುವುದಕ್ಕೆ ಮುಂಚೆ ಪಾಚಕಗಳ ಮೇಲ್ಭಾಗದಲ್ಲಿರುವ ವಿಶೇಷ ಡಬ್ಬಗಳಲ್ಲಿ ಈ

ಚಕ್ಕೆಗಳನ್ನು ಕೂಡಿಟ್ಟಿರುತ್ತಾರೆ. ಅನಂತರ ಕ್ಯಾಲ್ಸಿಯಂ ಬೈಸಲ್ಫೈಟ್ ಮತ್ತು ಗಂಧಕದ ಡೈ ಆಕ್ಸೈಡುಗಳಿರುವ ದ್ರಾವಣದಲ್ಲಿ ಬೇಯಿಸಲಾಗುವುದು. ಪ್ರಾಯಶಃ ಕೆಳಕಂಡ ಕ್ರಿಯೆಗಳು ಏಕಕಾಲದಲ್ಲಿ ನಡೆಯುವುವು. ಲಿಗ್ನಿನ್ನಿನೊಡನೆ ಬೈಸಲ್ಫೈಟಿನ ವರ್ತನೆ ಮತ್ತು ಸೆಲ್ಯುಲೋಸ್–ಲಿಗ್ನಿನ್ ಸಂಕೀರ್ಣದ ಜಲವಿಶ್ಲೇಷಣೆ. ಮರದಲ್ಲಿದ್ದ ಹೆಮಿಸೆಲ್ಯುಲೋಸುಗಳು ಸರಳ ಸಂಯುಕ್ತಗಳಾವುವು. ಬಳಸಿದ ಕಚ್ಚಾವಸ್ತುವಿನ ಅರ್ಧಕ್ಕೂ ಮೀರಿದಷ್ಟು ಭಾಗ ಸಾವಯವ ಘನವಸ್ತುಗಳು ವಿಲೀನ ಸ್ಥಿತಿಯಲ್ಲಿ ಶೇಷ ದ್ರಾವಕದಲ್ಲಿರುವುವು. ಇದರ ವಿನಿಯೋಗ ಒಂದು ಸಮಸ್ಯೆ. ಸುಣ್ಣದ ಬದಲು ಮ್ಯಾಗ್ನೀಸಿಯಾ, ಕ್ಯಾಲ್ಸಿಯಂ ಬದಲು ಸೋಡಿಯಂ ಮತ್ತು ಅಮೋನಿಯಾ ಬಳಸುವ ಯತ್ನ ನಡೆದಿದೆ. ಆದರೆ ಶೇಷ ರಾಸಾಯನಿಕ ಗಳಿಕೆ ದುಬಾರಿಯಾಗುವುದರಿಂದ ಇವುಗಳ ಬಳಕೆ ಸೀಮಿತಗೊಂಡಿದೆ.

ಕ್ಯಾಲ್ಸಿಯಂ ಆಧರಿತ ಸಲ್ಫೈಟ್ ಪಲ್ಪಿಂಗ್ ವಿಧಾನವನ್ನು ಕೆಳಗೆ ವಿವರಿಸಲಾಗಿದೆ. ಬೇಗುದಿ ದ್ರಾವಕದ ತಯಾರಿಕೆ ಗೋಪುರ ಮತ್ತು ಸುಣ್ಣದ ಹಾಲಿನ ವಿಧಾನಗಳೂ ಬೇಯಿಸುವುದಕ್ಕೆ ನೇರ ಮತ್ತು ಪರೋಕ್ಷ ವಿಧಾನಗಳೂ ಅನುಷ್ಠಾನದಲ್ಲಿವೆ. ಗೋಪುರ ವ್ಯವಸ್ಥೆಯ ನೇರ ಬೇಯಿಸುವ ವಿಧಾನವನ್ನು ಮುಂದೆ ವಿವೇಚಿಸಲಾಗಿದೆ. ಬೇಗುದಿ ದ್ರಾವಕದ ತಯಾರಿಕೆಯಲ್ಲಿ ಆಗುವ ಮೂಲಕ್ರಿಯೆಗಳು ಬಹು ಸರಳ.

$$S + O_2 \rightarrow SO_2$$
$$2\,SO_2 + H_2O + CaCO_3 \rightarrow Ca(HSO_3)_2 + CO_2$$
$$2\,SO_2 + H_2O + MgCO_3 \rightarrow Mg(HSO_3)_2 + CO_2$$

ಆವರ್ತ ಜ್ವಾಲಕದಿಂದ (ರೋಟರಿ ಬರ್ನರ್) ಕಾಸಿದ ತೊಟ್ಟಿಯಲ್ಲಿ ಗಂಧಕವನ್ನು ಕರಗಿಸಲಾಗುವುದು. ದ್ರವಿತ ಗಂಧಕವನ್ನು ಜ್ವಾಲಕಕ್ಕೆ ಒದಗಿಸಿದರೆ ಗಂಧಕ ಉತ್ಕರ್ಷಿತವಾಗುವುದು. ಆವಿಯಾಗಿ ಹೋದ ಗಂಧಕ ದಹನ ಕೋಶವೊಂದನ್ನು ಪ್ರವೇಶಿಸಿ



**ಚಿತ್ರ 7 ಪರಿಶುದ್ಧಿಕಾರಿ ಚಲುವೆಯಾದ ಅಥವಾ ಚಲುವೆಯಾದ ಪಲ್ಪನ್ನು ಒಂದಕ್ಕಿಂತ ಹೆಚ್ಚು ಪರಿಶುದ್ಧಿಕಾರಿಗಳಿಗೆ ಒಳಪಡಿಸಿ ಕಾಗದ ತಯಾರಿಕೆಗೆ ಅಗತ್ಯವಿರುವ ಗೊತ್ತಾದ ಸಾಮರ್ಥ್ಯವುಳ್ಳ ಪಲ್ಪನ್ನು ಮಾಡಲಾಗುವುದು**

ಅಲ್ಲಿ ತಾನೂ ಗಂಧಕ ಡೈ ಆಕ್ಸೈಡ್ ಆಗುವ ಸಂಭವವಿದೆ. ಉತ್ಪತ್ತಿಯಾದ ಗಂಧಕದ ಡೈ ಆಕ್ಸೈಡು ಆಗುತ್ತದೆ. ಈ ಹಂತದಲ್ಲಿ ಗಾಳಿನಿಯಂತ್ರಣ ಮುಖ್ಯ. ಇಲ್ಲದಿದ್ದರೆ ಗಂಧಕದ ಟ್ರೈ ಆಕ್ಸೈಡು ನೀರಿನಿಂದ ಆವೃತವಾದ ಕೊಳಾಯಿಗಳ ಮೂಲಕ ಹಾದುಹೋಗುವಾಗ ತಣಿಯುವುದು. ಅನಿಲವನ್ನು ನೀರಿನಲ್ಲಿ ಲೀನಗೊಳಿಸುವುದು ಮುಂದಿನ ಕ್ರಮ. ಇದಕ್ಕಾಗಿ ಎರಡು ಮೂರು ಗೋಪುರಗಳಲ್ಲಿ ಸುಣ್ಣಕಲ್ಲನ್ನು ತುಂಬಿರುತ್ತಾರೆ. ಕೆಳಗಿನ ಹಾಯುವ ಗಂಧಕದ ಡೈ ಆಕ್ಸೈಡು ಮೇಲಿನಿಂದ ಸಿಂಪಡಿಸಲ್ಪಡುತ್ತಿರುವ ನೀರಿನಲ್ಲಿ ಲೀನವಾಗುವುದು. ಅಂತಿಮವಾಗಿ ಪಾಚಕಗಳನ್ನು ತಲಪುವ ದ್ರಾವಣದಲ್ಲಿ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಬೈಸಲ್ಫೈಟುಗಳ ರೂಪದಲ್ಲಿ ಶೇ. 4.5 ಸಂಯೋಜಿತ ಗಂಧಕದ ಡೈ ಆಕ್ಸೈಡೂ ಶೇ. 3.5 ಸ್ವತಂತ್ರ ಗಂಧಕದ ಡೈ ಆಕ್ಸೈಡೂ ಇರುತ್ತವೆ. ಪಾಚಕಕ್ಕೆ ಮರದ ಚಕ್ಕೆಗಳನ್ನು ತುಂಬಿ ಆಮ್ಲೀಯ ಬೇಗುದಿ ದ್ರಾವಕವನ್ನು ಕೆಳಗಿನಿಂದ ಪಂಪ್ ಮಾಡಲಾಗುವುದು. ಪಾಚಕಗಳು ಕೊಳವೆಯಾಕಾರದ ಉಕ್ಕಿನ ಪಾತ್ರೆಗಳು. ಅವುಗಳಲ್ಲಿ 1–23 ಟನ್ ನಾರೂ 3,000–5,1000 ಗ್ಯಾಲನ್ ದ್ರಾವಕವೂ ಹಿಡಿಸುತ್ತವೆ. ಪಾಚಕದ ಅಸ್ತರಿಯನ್ನು ಸಿಮೆಂಟ್ ಬೆಣಚುಕಲ್ಲಿನ ಪುಡಿ ಮತ್ತು ಆಮ್ಲ ನಿರೋಧಕ ಇಟ್ಟಿಗೆಗಳ ಹುಡಿ ಮಿಶ್ರಣದಿಂದ ಮಾಡಿರುತ್ತಾರೆ. ಇಲ್ಲದಿದ್ದರೆ ಬೇಗುದಿ ದ್ರಾವಕ ಒಳಭಾಗವನ್ನು ತಿಂದು ಹಾಕುವುದು.

ಪಾಚಕಕ್ಕೇ ನೇರವಾಗಿ ಹಬೆಯನ್ನು ನುಗ್ಗಿಸಿ ಕಾಸುವ ಪದ್ಧತಿಯಿತ್ತು. ಇದರಿಂದ ದ್ರಾವಕ ದುರ್ಬಲವಾಗುತ್ತಿದ್ದುದರಿಂದ ಈಗ ಕೈ ಬಿಡಲಾಗಿದೆ. ಸ್ಟೇನ್‌ಲೆಸ್ ಉಕ್ಕಿನ ಕೊಳಾಯಿಗಳಲ್ಲಿ ದ್ರಾವಕವನ್ನಿಟ್ಟು ಹೊರಭಾಗದಿಂದಲೇ ಹಬೆಯಿಂದ ಕಾಸಿ ಅನಂತರ ಚಾರ್ಜಿನ ಮೂಲಕ ಹಾಯಿಸುವುದು ಈಚಿನ ಪದ್ಧತಿ. ಚಾರ್ಜಿನ ಸ್ವಭಾವಕ್ಕೆ ಅನುಗುಣವಾಗಿ 70–160 ಪೌಂಡು ಒತ್ತಡ, 105°–155° ಸೆ. ಉಷ್ಣತೆಯಲ್ಲಿ ಸುಮಾರು 10–12 ತಾಸುಗಳ ಕಾಲ ಪಚನಕ್ರಿಯೆ ನಡೆಯುವುದು. ಪಾಚಕದಿಂದ ಉತ್ಪನ್ನ ಒಂದು ಗುಂಡಿಗೆ ಬೀಳುತ್ತದೆ. ಇಲ್ಲಿ ಪಲ್ಪನ್ನು ಹೊಸ ನೀರಿನಿಂದ ತೊಳೆಯುವ ವ್ಯವಸ್ಥೆ ಇದೆ. ಬೇಗುದಿ ದ್ರಾವಕವನ್ನು ಪುನಃ ಉಪಯೋಗಿಸುವುದಿಲ್ಲ. ಅನಂತರ ಪಲ್ಪನ್ನು ಜರಡಿಗಳಿಗೆ ಪಂಪ್ ಮಾಡುವರು. ಇಲ್ಲಿ ಗಂಟುಗಳೂ ನಾರಿನ ದೊಡ್ಡ ಕಂತೆಗಳೂ ತಡೆಯಲ್ಪಡುವುವು. ಜರಡಿಗಳು ರವಾನಿಸಿದ ಪಲ್ಪು ಫೆಲ್ಟ್ ಒಳ ಕವಚವಿರುವ ಉದ್ದುದ್ದವಾದ ತೊಟ್ಟಿಗಳನ್ನು ತಲಪುವುದು. ಇವುಗಳಲ್ಲಿ 6 ಅಡಿಗಳ ಅಂತರದಲ್ಲಿ ಅಡ್ಡ ಪಟ್ಟಿಗಳಿವೆ. ಕಲ್ಮಷಗಳು ಕ್ರಮೇಣ ಒತ್ತರಿಸಲು ಇವು ಸಹಾಯಕ. ಪಾಚಕದಿಂದ ಪಲ್ಪು ಮಂದಕಾರಿಗಳಿಗೆ ಹೋಗುತ್ತದೆ. ಇವು ಕೊಳವೆಯಾಕಾರದ ಚೌಕಟ್ಟುಗಳು. 80 ಸೈಜಿನ ಕಂಚಿನ ತಂತಿ ವಂದರಿಯಿಂದ ಸಜ್ಜಾಗಿರುತ್ತದೆ. ಇದರ ಮೂಲಕ ನೀರು ಸೋರಿ ಹೋಗಿ ಪಲ್ಪು ಜರಡಿಯ ಮೇಲೆ ಉಳಿಯುತ್ತದೆ. ಚಲುವೆಕಾರಿಯನ್ನು ಹೊಕ್ಕ ಪಲ್ಪು ಈಗ ಕ್ಲೋರಿನ್ನಿನ ವರ್ತನೆಗೆ ಗುರಿಯಾಗುತ್ತದೆ. ಕ್ಲೋರೀನು ಖರ್ಚಾದ ಅನಂತರ ಸುಣ್ಣದ ಹಾಲನ್ನು ಸಿಂಪಡಿಸಿ ವಸ್ತುವನ್ನು ತಟಸ್ಥಗೊಳಿಸಬೇಕು. ಅನಂತರ ತೊಳೆದು ಪುನಃ ಮಂದಗೊಳಿಸಿ ಮಿಷನ್ ಚೆಸ್ಟಿಗೆ ಹಾಕುವರು. ಇಲ್ಲಿ ಪಲ್ಪು ಲ್ಯಾಪ್ ಆಗಿ ಶೇ. 35 ಒಣಗುವುದು. ಹಬೆಯಿಂದ ಕಾದ ರೋಲರುಗಳು ಶೇ. 80–90 ಒಣಗಿದ ಪಲ್ಪನ್ನು ನೀಡುವುವು.

ಬೇಗುದಿ ದ್ರಾವಕ ತಯಾರಿಸುವ ಸುಣ್ಣದ ಹಾಲಿನ ವಿಧಾನವಿರುವುದು ಸರಿಯಷ್ಟೆ. ಇದರಲ್ಲಿ ಮ್ಯಾಗ್ನೀಸಿಯಾದ ಪ್ರಮಾಣ ಹೆಚ್ಚಾಗಿರುವ ಸುಟ್ಟ ಬಿಸಿನೀರನ್ನು ಹಾಕಿ ದುರ್ಬಲ ದ್ರಾವಣ ಮಾಡಿಕೊಳ್ಳಲಾಗುವುದು. ಮ್ಯಾಗ್ನೀಸಿಯಾದ ಪ್ರಮಾಣ ಹೆಚ್ಚಾಗಿರುವುದು ಅಪೇಕ್ಷಣೀಯ. ಏಕೆಂದರೆ ಕ್ಯಾಲ್ಸಿಯಂ ಸಲ್ಫೈಟುಗಳು ಹೆಚ್ಚು ದ್ರಾವ್ಯವಾದ ವಸ್ತುಗಳು. ಅಲ್ಲದೆ ಕ್ಯಾಲ್ಸಿಯಂ ಸಲ್ಫೈಟುಗಳು ಒತ್ತರಿಸಿ ಕೊಳಾಯಿಗಳಲ್ಲಿ ಅಡಚಣೆಯುಂಟಾಗುವ ಸಾಧ್ಯತೆಯಿದೆ. ಈ ದ್ರಾವಣಕ್ಕೆ ಗಂಧಕದ ಡೈ ಆಕ್ಸೈಡನ್ನು ಕೂಡಿಸಿದರೆ ಬೇಗುದಿ ದ್ರಾವಕವಾಗುತ್ತದೆ. ನೇರ ಬೇಯಿಸುವ ವಿಧಾನದಲ್ಲಿ ಉಪಯೋಗಿಸುವ ಪಾಚಕದಲ್ಲಿ ಸೀಸ ಅಥವಾ ತಾಮ್ರದಿಂದ ಮಾಡಿದ ಸುರುಳಿ ಕೊಳವೆಗಳಿವೆ. ಪಚನ ಕಾಲ ಸುಮಾರು 58 ತಾಸುಗಳು. 130° ಸೆ. ಉಷ್ಣತೆಯೂ ಚದುರಂಗುಲಕ್ಕೆ 60 ಪೌಂಡು ಒತ್ತಡವೂ ಅಗತ್ಯ. ಸಲ್ಫೈಟ್ ಪಲ್ಪ್ ಉತ್ತಮ ದರ್ಜೆಯದು. ಬಾಂಡ್ ಕಾಗದ ಮತ್ತು ಬರೆವಣಿಗೆಯ ಕಾಗದವನ್ನು ತಯಾರಿಸುವುದು ಇದರಿಂದಲೇ.

ಇಲ್ಲಿ ಉಳಿಯುವ ಸಲ್ಫೈಟ್ ದ್ರಾವಕದ ವಿನಿಯೋಗ ಒಂದು ಭಾರೀ ಸಮಸ್ಯೆ. ಇದುವರೆಗೆ ಅದನ್ನು ಸಮೀಪದಲ್ಲಿರುವ ಯಾವುದಾದರೂ ನದಿಗೆ ಬಿಡಲಾಗುತ್ತಿತ್ತು. ಇದರಿಂದ ಸಾರ್ವಜನಿಕರ ಆರೋಗ್ಯಕ್ಕೆ ಕುಂದು ಎಂದು ಮನವರಿಕೆಯಾದ ಮೇಲೆ ಕಾನೂನಿನನ್ವಯ ಈ ಅಭ್ಯಾಸವನ್ನು ನಿಷೇಧಿಸಲಾಗಿದೆ. ಆದರೆ ಕಾನೂನಿನ ಭಯಕ್ಕಿಂತ ಆರ್ಥಿಕ ಕಾರಣಗಳಿಗೆ ಅದರ ವಿನಿಯೋಗ ಪ್ರಾಮುಖ್ಯವನ್ನು ಪಡೆದಿದೆ. ಅದರಿಂದ ಆಲ್ಕೊಹಾಲನ್ನು ತಯಾರಿಸುವ ಪ್ರಯತ್ನ ನಡೆದಿವೆ. ಅದರಲ್ಲಿರುವ ಲಿಗ್ನಿನಿಂದ ವ್ಯಾನಿಲಿನ್ ಮತ್ತು ಪ್ಲಾಸ್ಟಿಕ್ಕುಗಳನ್ನು ತಯಾರಿಸಬಹುದು. ಆಕ್ಸಾಲಿಕ್ ಆಮ್ಲ, ಚರ್ಮ ಹದಮಾಡಲು ಬೇಕಾದ ರಾಸಾಯನಿಕಗಳು, ವಿಶೇಷ ಸಿಮೆಂಟಗಳು ರಸ್ತೆ ದುರಸ್ತಿಗೆ ಉಪಯೋಗಿಸುವ ಅಂಟುವಸ್ತುಗಳು ಇತ್ಯಾದಿಗಳನ್ನೂ ಇದರಿಂದ ರೂಪಿಸಬಹುದು. ಆದರೆ ಈಚೆಗೆ ದ್ರಾವಕವನ್ನು ಸಾಕಷ್ಟು ಸಾಂದ್ರೀಕರಿಸಿ ಅನಂತರ ಉರಿಸಿ ನಾಶಪಡಿಸುವ ಕ್ರಮದತ್ತ ಒಲವು ಹೆಚ್ಚುತ್ತಿದೆ.

**ಚಿಂದಿಯಿಂದ ಪಲ್ಪ್:** ಉತ್ತಮ ದರ್ಜೆಯ ಕಾಗದವನ್ನು ಮಾಡಲು ಇದೇ ಆಧಾರ. ಹಳೆಯ ಚಿಂದಿಯಾದರೆ ಸಾರ್ವಜನಿಕರಿಂದಲೂ ಹೊಸ ಚಿಂದಿಯಾದರೆ ಬಟ್ಟೆ ಗಿರಣಿಗಳು ಮತ್ತು ಉಡುಪು ತಯಾರಿಕಾ ಕಾರ್ಖಾನೆಗಳಿಂದಲೂ ಸರಬರಾಜಾಗುತ್ತದೆ. ಇದನ್ನು ಬಡಿದು ದೂಳು ತೆಗೆದು ಬಣ್ಣದ ಪ್ರಕಾರ ವಿಂಗಡಿಸುವರು. ಚಲುವೆಗೊಳಿಸಲು ಕಷ್ಟವಾದ ಬಣ್ಣವಿದ್ದರೆ ಅಂಥ ಚಿಂದಿಯನ್ನು ಮಾಸಲು ಬಣ್ಣದ ಕಾಗದಕ್ಕೆ ಪರಿವರ್ತಿಸುವರು. ಚಲುವೆ ಮಾಡಲು ಸಾಧ್ಯವಾದ ಬಣ್ಣವನ್ನು ಹೊಂದಿದ್ದರೆ ತಿಳಿಬಣ್ಣದ ಕಾಗದದ ತಯಾರಿಕೆಗೆ ವಿನಿಯೋಗವಾಗುತ್ತದೆ. ಚಿಂದಿಯನ್ನು ವಿಂಗಡಿಸಿದ ಮೇಲೆ ಸಣ್ಣ ಚೌಕಾಕರದ ಚೂರುಗಳಾಗಿ ಕತ್ತರಿಸಿ ದೂಳು ಹೊಡೆದು ಕಾಂತಗಳ ಮೇಲೆ ಹಾಯಿಸಿದರೆ ಲೋಹವಸ್ತುಗಳು ನಿವಾರಣೆಯಾಗುವುವು. ಅನಂತರ ಬೇಯಿಸಲಾಗುವುದು. ಈ ಹಂತದಲ್ಲಿ ನಾರುಗಳಿದ್ದ ಮೇಣ, ಅಂಟುಗಳು, ಕೊಳೆ ಮತ್ತು ವರ್ಣದ್ರವ್ಯಗಳು ತೊಡೆದು ಹೋಗುವುವು. ಇಲ್ಲಿ ಉಪಯೋಗಿಸುವ ಬೇಗುದಿ ದ್ರಾವಕದಲ್ಲಿ ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಇರುತ್ತದೆ. ಇದರೊಂದಿಗೆ ಕಾಸ್ಟಿಕ್ ಸೋಡಾ ಬೂದಿ ಇರುವುದುಂಟು. ಪಾಚಕ ಕೊಳವೆಯಾಕಾರದಲ್ಲಿದ್ದು ಆವರ್ತಿಸುತ್ತಿರುತ್ತದೆ. ಇದರಲ್ಲಿ 5 ಟನ್ ಚಿಂದಿಯನ್ನು ತುಂಬಬಹುದು. 120° ಸೆ. ಉಷ್ಣತೆಯಲ್ಲಿ 10–12 ಗಂಟೆಗಳ ಕಾಲ ಪಚನ ಕ್ರಿಯೆ ಮುಂದುವರಿಯುವುದು. ಬಂದ

ಪಲ್ಪನ್ನು ಕ್ಲೋರೀನ್ ಅಥವಾ ಕ್ಯಾಲ್ಸಿಯಂ ಹೈಪೊಕ್ಲೋರೈಟಿನಿಂದ ಚಲುವೆ ಮಾಡಿ ಪುನಃ ತೊಳಯಲಾಗುವುದು. ಇಂಥ ಪಲ್ಪಿನಿಂದ ಉತ್ತಮ ಗುಣದ, ಬರೆಯುವ ಕಾಗದವನ್ನು ಮಾಡಬಹುದು.

**ಕಾಗದದ ತಯಾರಿಕೆ :** ಮೇಲೆ ಹೇಳಿದ ವಿವಿಧ ಪಲ್ಪುಗಳು ಹಾಳೆಗಳಂತೆ ಇರುವುವು. ಆದರೆ ಅವುಗಳಿಗೆ ಉತ್ತಮ ಮೇಲ್ಮೈ, ಅಪಾರಕತೆ, ತ್ರಾಣ ಮತ್ತು ಸ್ಪರ್ಶಭಾವ ಮೊದಲಾದ ಸಿದ್ಧ ಕಾಗದಕ್ಕಿರುವ ಗುಣಗಳು ಇರುವುದಿಲ್ಲ. ಎರಡು ಪ್ರಧಾನ ಹಂತಗಳಲ್ಲಿ ಪಲ್ಪು ಕಾಗದವಾಗಿ ಪರಿವರ್ತನೆ ಹೊಂದುತ್ತದೆ. ಮೊದಲನೆಯದು: ತಾಡನ(ಬೀಟಿಂಗ್), ಎರಡನೆಯದು: ಸಂಸ್ಕರಣ(ರಿಫೈನಿಂಗ್), ಇವೆರಡು ಕ್ರಿಯೆಗಳ ನಡುವಣ ವ್ಯತ್ಯಾಸ ಅಲ್ಪ. ಕಾರ್ಖಾನೆಗಳು ಇವುಗಳ ಪೈಕಿ ಯಾವುದೇ ಒಂದನ್ನು ಅಥವಾ ಎರಡನ್ನು ಬಳಸುವುದುಂಟು.

ಜನಪ್ರಿಯವಾದ ತಾಡನ ಯಂತ್ರವೆಂದರೆ ಹಾಲೆಂಡರ್, ಇದರ ವಿವರಗಳು ಚಿತ್ರ 8ರಲ್ಲಿವೆ. ಇದೊಂದು ಅಂಡಾಕಾರದ ತೊಟ್ಟಿ, ಮರ ಅಥವಾ ಲೋಹದಿಂದ ಮಾಡಿದುದು. ಮಧ್ಯಭಾಗದಲ್ಲಿ ಗೋಡೆಯಂಥ ವಿಭಾಜಕವೊಂದಿದೆ. ಇದರಿಂದ ಪಲ್ಪಿನ ಚಲನೆಗೆ ಅಂಡಾಕಾರದ



ಚಿತ್ರ 8

ಕಾಲುವೆ ದೊರೆತಂತಾಗುವುದು. ತೊಟ್ಟಿಯ ತಳದಲ್ಲಿರುವ ಮರದ ಬೆಡ್ಡಿನಲ್ಲಿ ಲೋಹದ ಪಟ್ಟಿಗಳನ್ನು ಭದ್ರವಾಗಿ ನೆಟ್ಟಿರುತ್ತಾರೆ. ಈ ಆಧಾರದ ಮೇಲೆ ಲೋಹದ(ಬ್ಲೇಡು) ಅಲಗುಗಳಿರುವ ಒಂದು ರೋಲರು ತಿರುಗುವುದು. ರೋಲರನ್ನು ಮೇಲೆ ಕೆಳಗೆ ಏರಿಸಿ ಇಳಿಸಬಹುದು. ಇದರಿಂದ ರೋಲರು ಮತ್ತು ಬೆಡ್‌ಪ್ಲೇಟಿನ ನಡುವಣ ಅಂತರವನ್ನು ನಮ್ಮ ಇಷ್ಟಾನುಸಾರ



ಚಿತ್ರ 9 ಕೇಂದ್ರಕ ಸ್ವಚ್ಛತಾಕಾರಿಗಳು ಪರಿಶುದ್ಧಗೊಂಡ ಪಲ್ಪನ್ನು ಕಾಗದದ ತಯಾರಿಕೆಯ ಮೊದಲ ಘಟ್ಟಕ್ಕೆ ರವಾನಿಸುವ ಮೊದಲು ಅದನ್ನು ಕೇಂದ್ರಕ ಸ್ವಚ್ಛತಾಕಾರಿಗಳ ಮೂಲಕ ಹಾಯಿಸಿ ಬಾಹ್ಯವಸ್ತುವಿನಿಂದ ಮತ್ತು ಇತರ ಕಶ್ಮಲಗಳಿಂದ ಅದನ್ನು ಮುಕ್ತಗೊಳಿಸಲಾಗುತ್ತದೆ.

ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಇವೆರಡರ ಮಧ್ಯೆ ಅನಿವಾರ್ಯವಾಗಿ ಹಾಯಲೇಬೇಕಾದ ಪಲ್ಪು ಗಟ್ಟಿಸಲ್ಪಟ್ಟು ನಿರೀಕ್ಷಿತ ಫಲ ಪ್ರಾಪ್ತವಾಗುವುದು. ಗಟ್ಟಣೆಯಾದ ನಾರಿನಿಂದ ಮಾಡಿದ ಕಾಗದಕ್ಕೆ ತ್ರಾಣ ಹೆಚ್ಚು. ಇದು ಏಕರೀತಿಯಾಗಿದ್ದು ಹೆಚ್ಚು ಸಾಂದ್ರ ಮತ್ತು ಅಪಾರಕವಾಗಿರುವುದು. ಅಷ್ಟು ರಂಧ್ರಮಯವಾಗಿರುವುದಿಲ್ಲ. ಫಿಲ್ಲರುಗಳು, ಬಣ್ಣಗಳು ಮತ್ತು ಸೈಜಿಂಗ್ ರಾಸಾಯನಿಕಗಳನ್ನು ಕಾಗದಕ್ಕೆ ಮೈಗೂಡಿಸುವುದು ತಾಡನ ಯಂತ್ರದಲ್ಲೇ. ಇವು ಸರದಿಯ ಪ್ರಕಾರ ಕೆಲಸ ಮಾಡುವುದರಿಂದ ಕೆಲವು ಕಾರ್ಖಾನೆಗಳು ತಾಡನ ಯಂತ್ರಗಳನ್ನು ಉಪಯೋಗಿಸುವುದೇ ಇಲ್ಲ; ಕೇವಲ ಸಂಸ್ಕರಣ ಯಂತ್ರಗಳನ್ನು ಬಳಸುತ್ತವೆ. ಇವು ಅಹರ್ನಿಶಿ ಕೆಲಸ ಮಾಡಬಲ್ಲವು. ಆದರೆ ಉತ್ತಮ ದರ್ಜೆಯ ಕಾಗದದ, ಉತ್ಪಾದನೆಯಲ್ಲಿ ಎರಡು ಯಂತ್ರಗಳನ್ನೂ ಹೂಡುವುದು ವಿಧಿವತ್ತಾದ ಪದ್ಧತಿ.

ಜೋರ್ಡಾನ್ ಎಂಜಿನ್ ಆದರ್ಶ ಸಂಸ್ಕರಣ ಯಂತ್ರ, ಅದೊಂದು ಶಂಕ್ವಾಕೃತಿಯ ಕೋಶ. ಅದರೊಳಗೆ ಅದೇ ಆಕಾರದ ಮತ್ತೊಂದು ಕೋಶ ಚಲಿಸುತ್ತಿರುತ್ತದೆ. ಒಳಕೋಶದ ಹೊರಭಾಗ ಮತ್ತು ಹೊರಕೋಶದ ಒಳಭಾಗಗಳು ಲೋಹದ ಪಟ್ಟಿಗಳಿಂದ ಸಜ್ಜಾಗಿರುತ್ತವೆ. ಇವೆರಡರ ನಡುವೆ ಸಿಕ್ಕಿಬಿದ್ದ ಪಲ್ಪು ಅರೆದಂತಾಗಿ ಶಂಕುವಿನ ದೊಡ್ಡ ಬಾಯಿಯ ಬಳಿ ಹೊರಬೀಳುವುದು. ಈ ಎಂಜಿನ್ನಿನ ಕಾರ್ಯವಿಧಾನವನ್ನು ಮುಂದಿನ ಚಿತ್ರದಲ್ಲಿ




ಚಿತ್ರ 10

ಸೂಚಿಸಿದೆ. ಫಿಲ್ಲರುಗಳು, ಸೈಜಿಂಗ್ ರಾಸಾಯನಿಕಗಳು ಮತ್ತು ಬಣ್ಣಗಳನ್ನು ಹಾಲೆಂಡರ್ ಅಥವಾ ಜೋರ್ಡಾನಿ, ಅಥವಾ ಎರಡರಲ್ಲೂ ಕೂಡಿಸಬಹುದು. ಹಾಲೆಂಡರಿನಲ್ಲಿ ಈ ವಸ್ತುಗಳನ್ನು ಕೂಡಿಸುವ ಕ್ರಮ ಆಯಾ ಕಾರ್ಖಾನೆಯ ವೈಶಿಷ್ಟ್ಯವಾಗಿದ್ದರೂ ಸಾಮಾನ್ಯವಾಗಿ ಅದು ಹೀಗಿರುವುದು: 1. ವಿವಿಧ ನಮೂನೆಯ ಪಲ್ಪುಗಳನ್ನು ಮಿಳಿತ ಮಾಡಿ ಅಪೇಕ್ಷಿತ ಸಾಂದ್ರತೆಯನ್ನು ಪಡೆಯುವುದು. 2. ನಾರಿನೊಡನೇಯೇ ಫಿಲ್ಲರ್ ಸೇರಿಸುವುದು. 3. ಸಾಕಷ್ಟು ಗಟ್ಟಣೆಯಾದ ಅನಂತರ ಸೈಜಿಂಗ್ ರಾಸಾಯನಿಕವನ್ನು ಕೂಡಿಸಿ ಸಮಾನ ಮಿಶ್ರಣವಾಗುವಂತೆ ಕಲಸುವುದು. 4. ಬಣ್ಣವನ್ನು ಸೇರಿಸಿ ಅದು ಪಲ್ಪಿನಲ್ಲೆಲ್ಲ ಸಮನಾಗಿ ಹಂಚಿಹೋಗುವಂತೆ ಮಾಡುವುದು. 5. ಪಟಿಕವನ್ನು ಬೆರೆಸುವುದರಿಂದ ಗರಣೆ ಗಟ್ಟಿಸಿ ಎಳೆಗಳ ಮೇಲೆ ಅಪೇಕ್ಷಿತ ಹೊದಿಕೆ ಮೂಡುವಂತೆ ನೋಡಿಕೊಳ್ಳುವುದು.

ಹೀರುವ ಗುಣವುಳ್ಳ ಟಿಷ್ಯೂ ಮತ್ತು ಒತ್ತುವ ಕಾಗದಗಳನ್ನು ಬಿಟ್ಟರೆ ಉಳಿದೆಲ್ಲ ಕಾಗದಕ್ಕೂ ಫಿಲ್ಲರುಗಳನ್ನು ಸೇರಿಸಲೇಬೇಕು. ಎಳೆಗಳ ನಡುವೆ ಖಾಲಿ ಸ್ಥಳಗಳನ್ನು ತುಂಬುವುದು ಇದರ ಉದ್ದೇಶ. ತತ್ಫಲವಾಗಿ ಕಾಗದಕ್ಕೆ ಮೆದು ಮೇಲ್ಮೈ, ಶುಭ್ರವಾದ ಬಿಳಿಯ ಬಣ್ಣ, ಮುದ್ರಣಸಾಧ್ಯತೆ ಮತ್ತು ಅಧಿಕ ಅಪಾರಕತೆ ಪ್ರಾಪ್ತವಾಗುವುವು. ಫಿಲ್ಲರುಗಳು ಸಾಮಾನ್ಯವಾಗಿ ಇನಾರ್ಗ್ಯಾನಿಕ್ ವಸ್ತುಗಳು. ಟಾಲ್ಕ್ ಮತ್ತು ಜೇಡಿಯ ಮಣ್ಣಿನಂಥ ನೈಸರ್ಗಿಕ ವಸ್ತುಗಳನ್ನಾಗಲೀ ಕೃತಕವಾಗಿ ಪಡೆದ ಒತ್ತರಿಸಿದ ಕ್ಯಾಲ್ಸಿಯಂ ಕಾರ್ಬೊನೇಟ್ ಅಥವಾ ಟಿಟ್ಯಾನಿಯಂ ಡೈ ಆಕ್ಸೈಡನ್ನಾಗಲೀ ಉಪಯೋಗಿಸಬಹುದು. ಆದರೆ ಎಲ್ಲವನ್ನು ನುಣ್ಣಗೆ ಪುಡಿ ಮಾಡಿಟ್ಟಿರಬೇಕು.

ಹೀರುವ ಕಾಗದಗಳಿಗೆ ಸೈಜಿಂಗ್ ಸೇರಿಸುವ ಅಗತ್ಯವಿಲ್ಲ. ಏಕೆಂದರೆ ಅದನ್ನು ಹಾಕುವುದೇ ಕಾಗದ ದ್ರವಗಳನ್ನು ಹೀರದಂತೆ ಮಾಡಲು, ಸೈಜಿಂಗನ್ನು ತಾಡನ ಹಂತದಲ್ಲೇ ಕೂಡಿಸಿ ಬಿಡಬಹುದು. ಇಲ್ಲವೆ ಕಾಗದ ಸಿದ್ಧವಾದ ಅನಂತರ ಅದರ ಮೈಮೇಲೆ ಲೇಪಿಸಬಹುದು. ಸೈಜಿಂಗ್ ವಸ್ತು ರಾಳವನ್ನು ಕ್ಷಾರದಿಂದ ಜಲ ವಿಶ್ಲೇಷಿಸಿ ಪಡೆದ ಸಾಬೂನಾಗಿರಬಹುದು ಅಥವಾ ಮೇಣದ ಎಮಲ್ಷನ್ ಆಗಿರಲು ಸಾಕು. ಅನಂತರ ಇದಕ್ಕೆ ಜಲಯುಕ್ತ ಅಲ್ಯೂಮಿನಿಯಂ ಸಲ್ಫೇಟನ್ನು $Al_2(SO_4)_3 . 18H_2O$ ಕಾಗದ ತಯಾರಿಸುವವರು ಇದನ್ನು ಪಟಿಕವೆಂದೇ ಕರೆಯುತ್ತಾರೆ– ಇದನ್ನು ಸೇರಿಸಿದರೆ ಸೈಜು ಒತ್ತರಿಸುವುದು. ಪರಿಣಾಮವಾಗಿ ಎಳೆಗಳ ಮೇಲೆ ಲೋಳೆಯಂಥ ಪದರವಾಗಿ ಇದು

ಸಂಯೋಜಿತ ಜಲವನ್ನು ಕಳೆದುಕೊಂಡು ಗಡಸಾದ ಮೇಲ್ಮೈ ಮೂಡುವುದು. ಒಣಗಿದ ಕಾಗದಕ್ಕೆ ಅಥವಾ ತಾಡನ ಹಂತದಲ್ಲಿ ಭಾಗಶಃ ಸೈಜಾಗದಿರುವ ಕಾಗದಕ್ಕೆ ಟಬ್ ಸೈಜಿಂಗ್ ಮಾಡಬೇಕು. ಇದಕ್ಕಾಗಿ ಪ್ರಾಣಿಮೂಲದ ಅಂಟುಗಳು, ಪರಿವರ್ತಿತ ಪಿಷ್ಟಗಳು ಮೊದಲಾದುವನ್ನು ಉಪಯೋಗಿಸುವುದು ರೂಢಿ. ಇದರ ಪ್ರಯೋಗ ಕಾಗದ ರೂಪಿಸುವ ಯಂತ್ರದಲ್ಲಿ ಅಥವಾ ಸೈಜಿಂಗ್ ಪ್ರೆಸ್ಸಿನಲ್ಲಿ ವಾಯುಶೋಷಕ (ಏರ್ ಡ್ರೈಯಿಂಗ್) ವಿಧಾನದಿಂದ



ಚಿತ್ರ 11 ತಂತಿ ವಿಭಾಗ ಅಥವಾ ಕಾಗದ ಯಂತ್ರದ ಹಸೀ ವಿಭಾಗ ಸ್ವಚ್ಛಗೊಂಡ ಪಲ್ಪಿಗೆ ಸೂಕ್ತ ರಾಸಾಯನಿಕಗಳನ್ನು ಯುಕ್ತ ಪ್ರಮಾಣದಲ್ಲಿ ಸೇರಿಸಿ ಅನಂತರ ಚಲಿಸುವ ಕೊನೆಯಿಲ್ಲದ ತಂತಿ ಬಟ್ಟೆಯ ಮೇಲಿರುವ ಸ್ಲೈಸ್ ಮೂಲಕ ಕಳುಹಿಸುತ್ತದೆ. ಹೆಚ್ಚಿನ ನೀರು ಇಲ್ಲಿ ಹೊರಬಂದು ಕಾಗದದ ಬಲೆ ರೂಪುಗೊಳ್ಳುತ್ತದೆ. ಒತ್ತುಯಂತ್ರ ಶ್ರೇಣಿಯ ಮೂಲಕ ಈ ಬಲೆಯನ್ನು ರವಾನಿಸಿ, ಉಳಿದಿರಬಹುದಾದ ನೀರಿನ ಅಂಶವನ್ನು ತೆಗೆಯಲಾಗುತ್ತದೆ. ಅನಂತರ ಆವಿಯಿಂದ ಕಾದ ಶುಷ್ಕಯಂತ್ರಗಳಿಗೆ ಈ ಬಲೆಯನ್ನು ಕಳುಹಿಸಿ, ಕಾಗದವನ್ನು ಒಣಗಿಸಲಾಗುತ್ತದೆ. ಮುಂದೆ ಕಾಗದ ಕ್ಯಾಲೆಂಡರ್ ಯಂತ್ರಕ್ಕೆ ಒಯ್ಯಲ್ಪಡುತ್ತದೆ.

ನಡೆಯುವುದು. ಸೈಜಿಂಗ್ ಬಾತಿನ ಮೂಲಕ ಹಾದು ಬಂದ ಕಾಗದ ರೋಲರುಗಳಲ್ಲಿ ಹೆಚ್ಚುವರಿ ಸೈಜಿಂಗ್ ವಸ್ತುವನ್ನು ಕಳೆದುಕೊಂಡು ಅಂತಿಮವಾಗಿ ಶುಷ್ಕಕಾರಕ ರೋಲರುಗಳ ಮೇಲೆ ಹಾಯುವುದು. ಇಂಥ ಸೈಜಿಂಗ್ ವಿಧಿಗೆ ಒಳಪಡಿಸುವುದರಿಂದ ಕಾಗದದ ಜಲನಿರೋಧಕ ಶಕ್ತಿ ಹೆಚ್ಚುತ್ತದೆ. ಮಸಿಯನ್ನದು ಸಮನಾಗಿ ಹೀರುತ್ತದೆ. ಬರೆಹ ಅಲ್ಲಲ್ಲಿ ಅಸ್ಪಷ್ಟವಾಗುವುದಿಲ್ಲ. ಬರವಣಿಗೆಯನ್ನು ಉಜ್ಜಿ ಅಳಿಸಿ ಆ ಸ್ಥಳದಲ್ಲೇ ಪುನಃ ಬರೆದಾಗ ಮಸಿ ಹರಡಿ ಅಂದಗೆಡುವ ಸಂಭವ ಕಡಿಮೆ.

ಬಣ್ಣ ಕೂಡಿಸದ ಕಾಗದ ಅಪೂರ್ವ. ಸುಮಾರು ಶೇ. 98 ಕಾಗದಕ್ಕೆ ಒಂದಲ್ಲ ಒಂದು ರೀತಿಯ ಬಣ್ಣವನ್ನು ಸೇರಿಸಿರುತ್ತಾರೆ. ಇದನ್ನು ತಾಡನ ಹಂತದಲ್ಲೇ ಮಿಶ್ರಮಾಡುವುದು ಸಾಮಾನ್ಯ. ಅನಂತರ ಕಾಗದದ ಹೊರಮೈಗೆ ಯಾವ ಬಣ್ಣವನ್ನಾದರೂ ಹಚ್ಚಿ ನಿರ್ದಿಷ್ಟ ಬಣ್ಣದ ಕಾಗದವನ್ನು ಪಡೆಯಲು ಸಾಧ್ಯ. ಆಮ್ಲೀಯ, ಕ್ಷಾರೀಯ, ನೇರ ಅಥವಾ ಗಂಧಕಯುಕ್ತ ಬಣ್ಣಗಳಲ್ಲಿ ಯಾವುದನ್ನಾದರೂ ಉಪಯೋಗಿಸಬಹುದು. ಸೆಲ್ಯುಲೋಸಿನ ಎಳೆಗಳಿಗೆ ಆಮ್ಲೀಯ ಬಣ್ಣಗಳ ಬಗ್ಗೆ ಒಲವು ಕಡಿಮೆ. ಆದ್ದರಿಂದ ಸ್ಥಾಪಕಗಳ (ಮಾರ್ಡಂಟ್) ಅಗತ್ಯ ಬೀಳುತ್ತದೆ. ತಾಡನ ಯಂತ್ರದಲ್ಲೇ ಕಾಗದಕ್ಕೆ ಬಣ್ಣ ಕೊಟ್ಟಿದ್ದ ಪಕ್ಷದಲ್ಲಿ ಸೈಜನ್ನು ಒತ್ತರಿಸಲು ಹಾಕಿದ್ದ ಪಟಿಕವೇ ಸ್ಥಾಪಕವಾಗಿಯೂ ವರ್ತಿಸಿ ಉಪಕರಿಸುತ್ತದೆ.

ಕಾಗದದ ಹಾಳೆಯನ್ನು ರೂಪಿಸುವ ಯಂತ್ರಗಳಲ್ಲಿ ಎರಡು ಬಗೆಯಿದೆ. ಮೊದಲನೆಯದು ಫೋರ್ ಡ್ರಿನಿಯರ್ ಯಂತ್ರ. ಸುಮಾರು ಶೇ. 0.5 ನಾರು ಇರುವ ಪಲ್ಪಿನ ಸಂಗ್ರಹ ಜರಡಿಯಾಡಿಸಲ್ಪಟ್ಟು ಶಿರೋಕರಂಡವನ್ನು (ಹೆಡ್ ಬಾಕ್ಸ್) ಪ್ರವೇಶಿಸುವುದು. ಇಲ್ಲಿಂದ ಕಾಲುವೆಯ ಮೂಲಕ ಕಂಚಿನ ತಂತಿ ವಂದರಿಯ ಮೇಲಕ್ಕೆ ಹರಿದು ಬರುವುದು. ಇದು ಅನಂತವಾಗಿದ್ದು ಚಲಿಸುತ್ತಿರುತ್ತದೆ. ಬಹುಪಾಲು ನೀರು ಸೋರಿ ಹೋಗಿ ಪಲ್ಪಿನ ಎಳೆಗಳು ಜರಡಿಯ ಮೇಲೆ ಉಳಿಯುವುವು. ಈ ಜರಡಿ ಸರಿದಂತೆಲ್ಲ ಅಕ್ಕಪಕ್ಕಕ್ಕೆ ಅಲ್ಲಾಡುತ್ತ ಹೋಗುವುದರಿಂದ ಎಳೆಗಳ ಜೋಡಣೆಯಾಗಿ ಹಾಳೆಗೆ ತ್ರಾಣ ಬರುವುದು. ಜರಡಿಯ ಮೇಲಿರುವಾಗಲೇ ಕಾಗದ ಚೋಷಕಕೋಶದ (ಸಕ್ಷನ್ ಬಾಕ್ಸ್) ಮೇಲೆ ಹಾಯುವುದು. ಇದರಿಂದ ಜಲಾಂಶದ ನಿವಾರಣೆಯಾಗುತ್ತದೆ. ಡ್ಯಾಂಡಿ ರೋಲರುಗಳ ಅಡಿಯಲ್ಲಿ ನುಸಳಿದಾಗ ಹಾಳೆಯ ಮೇಲ್ಭಾಗ ನುಣುಪಾಗುವುದು. ಸೂಕ್ತ ವೇಗದಲ್ಲಿ ಜರಡಿಯ ಬದಿಯಲ್ಲೇ ಚಲಿಸುವ ರಬ್ಬರಿನ ಪಟ್ಟಿಗಳು ಕಾಗದಕ್ಕೆ ಅಂಚು ಕಟ್ಟುತ್ತವೆ.

ತಂತಿ ವಂದರಿಯಿಂದ ಕಾಗದ ಮೊದಲನೆಯ ಫೆಲ್ಟ್ ಹಾಸಿಗೆ ರವಾನಿಸಲ್ಪಡುತ್ತದೆ. ಇದು ಕಾಗದವನ್ನು ಪ್ರೆಸ್ ರೋಲರುಗಳ ಮೂಲಕ ಒಯ್ದಾಗ ಮತ್ತಷ್ಟು ನೀರು ಹಿಂಡಲ್ಪಟ್ಟು ಅಪೇಕ್ಷಿತ ಜಲಚಿಹ್ನೆ (ವಾಟರ್ ಮಾರ್ಕ್) ಕಾಗದದಲ್ಲಿ ಮೂಡುತ್ತದೆ. ಮುಂದೆ ಉಕ್ಕಿನ ರೋಲರುಗಳ ಮೂಲಕ ಎರಡನೆಯ ಫೆಲ್ಟ್ ಹಾಸನ್ನು ತಲಪುತ್ತದೆ. ಆಂತರಿಕವಾಗಿ ಹಬೆಯಿಂದ ಕಾದ ರೋಲರುಗಳ ಮೂಲಕ ಕಾಗದವನ್ನು ಸಾಗಿಸುವುದು ಇದರ ಕರ್ತವ್ಯ. ಶೇ. 60–70 ತೇವಾಂಶವಿದ್ದ ಕಾಗದ ಈಗ ಶೇ. 90–94 ಒಣಗಿ ಹೊರಬರುವುದು. ಈ ಘಟ್ಟದಲ್ಲಿ ಕಾಗದಕ್ಕೆ ಸೈಜಿಂಗನ್ನು ಸಿಂಪಡಿಸಬಹುದು. ಇನ್ನೊಂದು ಸಾಲು ಶುಷ್ಕಕಾರಕ ರೋಲರುಗಳ ಮೂಲಕ ಹಾದುಬಂದ ಹೊರತು ಕಾಗದ ಕ್ಯಾಲೆಂಡರನ್ನು ಪ್ರವೇಶಿಸುವಂತಿಲ್ಲ. ಭಾರವಾದ ಉಕ್ಕಿನ ರೋಲರುಗಳ ಸಾಲಿದು. ಕಾಗದಕ್ಕೆ ಹೊಳಪು ಬರುವುದು ಇದರಿಂದಲೇ. ಸಿದ್ಧ ಕಾಗದವನ್ನು ಸಿಂಬಿಗಳಿಗೆ ಸುತ್ತಲಾಗುವುದು.

ಕಾಗದ ಒಣಗಿದಂತೆ ಕುಗ್ಗುವುದಷ್ಟೆ. ಇದರ ದೆಸೆಯಿಂದ ವಿವಿಧ ರೋಲರುಗಳ ಚಲನ ವೇಗದಲ್ಲಿ ಸಾಮರಸ್ಯ ಸಾಧಿಸುವ ದೊಡ್ಡ ಸಮಸ್ಯೆ ಏಳುತ್ತದೆ. ಈ ಯಂತ್ರದ ರೋಲರುಗಳು ಉತ್ತಮ ದರ್ಜೆಯ ಕಾಗದವನ್ನು ತಯಾರಿಸುವಾಗ ಮಿನಿಟಿಗೆ 200 ಅಡಿಗಳಷ್ಟು ಪತ್ರಿಕಾ ಕಾಗದವನ್ನು ಉತ್ಪಾದಿಸುವಾಗ 1,700 ಅಡಿಗಳಷ್ಟೂ ಗಮಿಸುವುವು.

**ಸಿಲಿಂಡರ್ ಯಂತ್ರ :** ದಪ್ಪ ಕಾಗದ, ರಟ್ಟು ಮತ್ತು ಒರಟು ಕಾಗದವನ್ನು ತಯಾರಿಸಲು ಬಳಸುವ ಸಾಧನವಿದು. ಅನೇಕ ಹಾಳೆಗಳನ್ನು ಕೂಡಿಸಿ ದಪ್ಪ ಹಾಳೆಯನ್ನಾಗಿ ಮಾಡುವುದು ಇದರ ಕೆಲಸ. ಇದರಲ್ಲಿ 4–7 ಬಾನಿಗಳಿವೆ. ಇವುಗಳಿಗೆ ಒಂದೇ ತೆರನಾದ ಅಥವಾ ವಿವಿಧ ದರ್ಜೆಯ ಜಲಮಿಶ್ರಿತ ಪಲ್ಪನ್ನು ಒದಗಿಸುತ್ತಾರೆ. ಪ್ರತಿಯೊಂದು ಬಾನೆಯಲ್ಲೂ ತಂತಿಯ ಹೊದಿಕೆಯಿರುವ ಕೊಳವೆಯೊಂದು ಚಲಿಸುತ್ತಿರುತ್ತದೆ. ಎಲ್ಲ ನೀರೂ ಬೇರ್ಪಟ್ಟು ಕಾಗದ ತಂತಿಯ ಬಲೆಗೆ ಸುತ್ತಿಕೊಳ್ಳುವುದು. ಸಿಲಿಂಡರು ದೂರ ಸರಿದಂತೆ ಮೇಲೇರಿ ಬಂದ ಒದ್ದೆ ಕಾಗದ ಚಲಿಸುವ ಫೆಲ್ಟೊಂದಕ್ಕೆ ಮೆತ್ತಿಕೊಳ್ಳುತ್ತದೆ. ಇದು ಒಂದು ರೋಲರಿನ ಅಡಿಯಲ್ಲಿ ಹಾದು ನೀರಿನ ಸ್ವಲ್ಪ ಭಾಗವನ್ನು ಕಳೆದುಕೊಂಡು ಮತ್ತೊಂದು ಸಿಲಿಂಡರಿನ ಮೇಲ್ಭಾಗವನ್ನು ತಲಪುವುದು. ಈಗ ಇನ್ನೊಂದು ಪದರ ಒದ್ದೆ ಕಾಗದ ಮೆತ್ತಿಕೊಳ್ಳುವುದು. ಹೀಗೆ ಮೇಲಿಂದ ಮೇಲೆ ಒದ್ದೆ ಕಾಗದದ ಪದರಗಳು ಅಂಟಿಕೊಂಡು ಸಂಘಟಿತ ದಪ್ಪ ಹಾಳೆ ಅಥವಾ ರಟ್ಟಾಗುವುದು. ಇದನ್ನು ಎಂದಿನಂತೆ ಒಣಗಿಸಬಹುದು. ಇಂಥ ಕಾಗದದ ಹೊರಮೈ ಉತ್ತಮ ಪಲ್ಪಿನಿಂದ ರೂಪಿತವಾಗಿದ್ದು ಒಳಪದರಗಳು ಕೀಳುದರ್ಜೆಯ ಯಾಂತ್ರಿಕ ಪಲ್ಪಿನಿಂದಾಗಿರಬಹುದು.

**ಮಸಿ ತೊಳೆಯುವಿಕೆ :** ಹಳೆಯ ಕಾಗದದಿಂದ ಹೊಸ ಸರಕನ್ನು ಉತ್ಪಾದಿಸುವಾಗ ಹೀಗೆ ಮಾಡಲೇಬೇಕು. ರಾಸಾಯನಿಕ ಮತ್ತು ಯಾಂತ್ರಿಕ ವಿಧಾನಗಳ ಹೊಂದಾಣಿಕೆಯಿಂದ ಇದನ್ನು ಸಾಧಿಸಬೇಕಾಗುತ್ತದೆ. ಹಳೆಯ ಕಾಗದವನ್ನು ವಿಂಗಡಿಸಿ ಕತ್ತರಿಸಿ ದೂಳು ಹೊಡೆದು ಬೇಯಿಸಲಾಗುವುದು. ಪಾಚಕ ತೆರೆದ ಬಾಯಿಯ ತೊಟ್ಟಿಯಾಗಿರಬಹುದು, ಅಥವಾ ಚಾಲಿತ ಕುದಿಪಾತ್ರೆಯಾಗಿರಬಹುದು. ಎರಡು ಸಂದರ್ಭಗಳಲ್ಲೂ ಹಬೆಯನ್ನು ನೇರವಾಗಿ ಹಾಯಿಸುವರು. 93° ಸೆ. ಉಷ್ಣತೆಯಲ್ಲಿ ಸುಮಾರು 10 ತಾಸು ಕುದಿಸಲಾಗುವುದು. ಬೇಗುದಿ ದ್ರಾವಕದಲ್ಲಿ ಸುಮಾರು ಶೇ. 8 ಕಾಸ್ಟಿಕ್ ಸೋಡಾ ಇರುತ್ತದೆ. ಪಚನಕ್ರಿಯಾ ಕಾಲದಲ್ಲಿ ಮಸಿ ತನ್ನ ವಾಹಕದಿಂದ ಬೇರ್ಪಡುವುದು. ಮಂದಕಾರಿಗಳನ್ನು ಹೋಲುವ ಜರಡಿಗಳ ಮೂಲಕ ಬೇಯಿಸಿದ ಪಲ್ಪನ್ನು ಶೋಧಿಸಿದಾಗ ಕೊಳೆ ಮತ್ತು ಮಸಿಯಿಂದ ಬಿಡುಗಡೆಯಾದ ಇಂಗಾಲಗಳು ನಿವಾರಿಸಲ್ಪಡುತ್ತವೆ. ಮಾರ್ಜನಕ್ಕೆ ಮುಂಚೆ ಪಲ್ಪನ್ನು ತಾಡನ ಯಂತ್ರಕ್ಕೆ ಒಡ್ಡುವುದು ಒಳ್ಳೆಯದು. ಎಳೆಗಳಿಂದ ಮಸಿಯನ್ನು ಕಳೆಯಲು ಇದು ಅನುಕೂಲ ಮಾಡಿಕೊಡುತ್ತದೆ. ತೊಳೆದ ಪಲ್ಪನ್ನು ಕ್ಲೋರಿನ್ನಿನಿಂದಾಗಲೀ ಕ್ಯಾಲ್ಸಿಯಂ ಹೈಪೊಕ್ಲೋರೈಟಿನಿಂದಾಗಲೀ ಚಲುವೆ ಮಾಡಿದರೆ ಶುಭ್ರವಾದ ಹಾಲು ಬಿಳುಪಿನ ಪಲ್ಪು ದೊರೆಯುವುದು. ಇದನ್ನು ಇತರ ಪಲ್ಪುಗಳೊಂದಿಗೆ ಧಾರಾಳವಾಗಿ ಬೆರೆಸಿ ನಾನಾ ಉತ್ತಮ ದರ್ಜೆಯ ಕಾಗದಗಳನ್ನು ಮಾಡಿಕೊಳ್ಳಬಹುದು.

ಹಳೆಯ ಟೆಲಿಫೋನ್ ಕೈಪಿಡಿಗಳ ವಿನಿಯೋಗಕ್ಕಾಗಿಯೇ ರೂಪಿಸಿರುವ ವಿಶೇಷ ಮಸಿ ತೊಳೆಯುವ ವಿಧಾನವೊಂದಿದೆ. ಕಾಗದದ ಮೇಲೆ ಹೆಮಟಿನ್ ವರ್ಣ ದ್ರವ್ಯವಿರುವ

ಮಸಿಯಿಂದ ಮುದ್ರಿಸುವರು. ಇದನ್ನು ಸಲಾಕೆ ಗಿರಣಿಗಳಲ್ಲಿ (ರಾಡ್ ಮಿಲ್ಸ್) ಛಿದ್ರ ಮಾಡಿ ವ್ಯಾಪಕಗಳಲ್ಲಿ (ಡಿಫ್ಯೂಸರ್ಸ್) ಗಂಧಕದ ಡೈ ಆಕ್ಸೈಡಿನ ಪ್ರಭಾವಕ್ಕೆ ಗುರಿಪಡಿಸುತ್ತಾರೆ. ಇದು ಮಸಿಯನ್ನು ತೊಡೆದು ಹಾಕುವುದು. ಮೊದಲು ಲೀಟರಿಗೆ 6 ಗ್ರಾಂ ಗಂಧಕದ ಡೈಆಕ್ಸೈಡ್ ಇರುವ ದ್ರಾವಣವನ್ನೂ ಅನಂತರ ಲೀಟರಿಗೆ 4 ಗ್ರಾಂ ಅನಿಲವಿರುವ ದುರ್ಬಲ ದ್ರಾವಣವನ್ನೂ ಪ್ರಯೋಗಿಸುವುದು ಪದ್ಧತಿ. ಮಸಿ ಮುಕ್ತವಾದ ಪಲ್ಪು ಕ್ರಮವಾಗಿ ಸ್ಟಫ್ ಚೆಸ್ಟ್, ಆವರ್ತ ಸೋಸಣಿಗೆ (ರೋಟರಿ ಫಿಲ್ಟರ್) ಸ್ಕ್ರೂ ಪ್ರೆಸ್ ಮೂಲಕ ಹಾದು ಬಂದ



**ಚಿತ್ರ 12. ಕ್ಯಾಲೆಂಡರ್ ಅಥವಾ ಇಸ್ತ್ರಿ ಮಾಡುವ ಯಂತ್ರ: ಒಂದರ ಮೇಲೊಂದು ಇರುವಂತೆ ಜೋಡಿಸಿರುವ ಮೆರುಗುವ ಲೋಹದ ಉರುಳೆಗಳು ಇಲ್ಲಿವೆ. ಶುಷ್ಕಯಂತ್ರದಿಂದ ಹೊರಬರುವ ಕಾಗದ ಈ ಉರುಳೆಗಳ ಮೂಲಕ ಹಾಯ್ದು, ತಯಾರಿಕೆಯ ಕೊನೆಯ ಮಜಲನ್ನು ತಲುಪುತ್ತದೆ.**

ಅನಂತರ ಸಿದ್ಧ ಕಾಗದ ವಸ್ತುವಾಗುವುದು. ವಿಸರ್ಜಿತ ದ್ರಾವಣವನ್ನು ಕಾಸ್ಟಿಕ್ ಸೋಡಾದಿಂದ ತಟಸ್ಥಗೊಳಿಸಿ, ಶೋಧಿಸಿ, ಮಸಿಯಲ್ಲಿದ್ದ ವರ್ಣದ್ರವ್ಯವನ್ನೂ ಸಂಪಾದಿಸಬಹುದು. ಲೀಟರಿಗೆ



**ಚಿತ್ರ 13. ಪೋಪ್ ರೀಲು ಅಥವಾ ರಾಟೆ ಉರುಳೆ. ಕ್ಯಾಲೆಂಡರ್ ಯಂತ್ರದಿಂದ ಹೊರಬರುವ ಕಾಗದ ಈ ರಾಟೆಗಳ ಮೇಲೆ ಸುತ್ತಿಕೊಳ್ಳುತ್ತದೆ. ಇದೇ ಕಾಗದಯಂತ್ರದ ಕೊನೆಯ ಘಟ್ಟ**

ಸುಮಾರು 2 ಗ್ರಾಂಗಳಷ್ಟು ಗಂಧಕದ ಡೈಆಕ್ಸೈಡು ನಿರುಪಯೋಗಿಯಾಗಿ ಬಚ್ಚಲನ್ನು ಸೇರುವುದು ಅನಿವಾರ್ಯ ನಷ್ಟವೇ ಸರಿ.

ಪಲ್ಪಿನ ತಯಾರಿಕೆಗೆ ಹಳೆಯ ಕಾಗದದ ಬಳಕೆ ಮಹತ್ತ್ವದ ವಿಷಯ. ಕಾರಣಗಳಿವು: 1. ಹೇರಳವಾಗಿ ದೊರೆಯುತ್ತದೆ. 2. ಸಂಗ್ರಹ ಕಾರ್ಯದುಬಾರಿಯಲ್ಲ. 3. ಪಲ್ಪ್ ಮಾಡಲು ತಗಲುವ ವೆಚ್ಚ ಕಡಿಮೆ. 4. ಉತ್ತಮ ದರ್ಜೆಯ ಕಾಗದವನ್ನು ಮಾಡಬಹುದು. 5. ಕೇವಲ ಯಾಂತ್ರಿಕ ವಿಧಾನಗಳಿಂದ ಹಳೆಯ ವೃತ್ತಪತ್ರಿಕೆಗಳು, ಹೊದಿಕೆಯ ಕಾಗದ ಮತ್ತು ಪೆಟ್ಟಿಗೆ ರಟ್ಟನ್ನು ಪಲ್ಪ್ ಮಾಡಬಹುದು. 6. ಇಂಥ ಪಲ್ಪಿನಿಂದ ಆಲಂಕಾರಿಕ ಚಾವಣಿ ಮತ್ತು ಭಿತ್ತಿಕಾಗದವನ್ನು ರೂಪಿಸಬಹುದು. 7. ಈ ಕಾಗದ ಉತ್ಪನ್ನಗಳಿಗೇ ದಟ್ಟ ಬಣ್ಣಗಳಿರುವ ಪ್ರಯುಕ್ತ ಕಚ್ಚಾ ಕಾಗದದಿಂದ ಮಸಿ ಮತ್ತು ವರ್ಣದ್ರವ್ಯಗಳನ್ನು ನಿರ್ಮೂಲ ಮಾಡುವ ತೊಂದರೆ ತಪ್ಪುತ್ತದೆ.

ಕಾಗದದ ಕೈಗಾರಿಕೆಯ ಉತ್ಪನ್ನಗಳು ವೈವಿಧ್ಯಮಯವಾಗಿವೆ. ಶತಮಾನಗಳ ಕಾಲ ತನ್ನ ಸಾಂಪ್ರದಾಯಿಕ ಉಪಯೋಗಗಳನ್ನೂ ವೈಶಿಷ್ಟವನ್ನೂ ಕಾಪಾಡಿಕೊಂಡು ಬಂದಿದ್ದ ಕಾಗದಕ್ಕೆ ಇಂದು ವಿನೂತನ ಉಪಯೋಗಗಳು ಹುಟ್ಟಿಕೊಂಡಿವೆ. ಅನಿವಾರ್ಯವಾಗಿ ತಯಾರಿಕಾ ತಂತ್ರಗಳೂ ಸುಧಾರಿತನಾಗಿವೆ. ನೂತನ ಕಾಗದದ ಉತ್ಪನ್ನಗಳನ್ನು ರೂಪಿಸಲು ಅನುಸರಿಸುವ ಕ್ರಮಗಳಲ್ಲಿ ಕೆಲವನ್ನು ಮಾತ್ರ ಮುಂದೆ ಹೆಸರಿಸಲಾಗಿದೆ. ಉನ್ನತ ಉರುಳು ಯಂತ್ರಕ್ಕೆ ಒಡ್ಡುವುದು, ಮೇಣದ ಲೇಪನ, ನಿರಿಗೆಗಟ್ಟಿಸುವಿಕೆ ಬಹುಪದರ ಲಟ್ಟಣೆ, ಉಬ್ಬುಚ್ಚು ಮಾಡುವುದು ಇತ್ಯಾದಿ. ಹಡಗುಗಳಲ್ಲಿ ಸರಕನ್ನು ಸಾಗಿಸುವುದಕ್ಕೆ ನೀರಿಗೆ ರಟ್ಟಿನ ಪೆಟ್ಟಿಗೆಗಳು ಬಲು ಅನುಕೂಲ. ಇದರ ಸಲುವಾಗಿಯೇ ಅನೇಕ ಮಿಲಿಯನ್ ಟನ್‌ಗಳಷ್ಟು ಕಾಗದ ವಿನಿಯೋಗವಾಗುತ್ತಿದೆ. ಕಾಳುಗಳು ಮತ್ತಿತರ ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಗಟ್ಟಿಮುಟ್ಟಾದ ಕಾಗದದ ಚೀಲಗಳ ಅಗತ್ಯವುಂಟು. ಇಂಥ ಕಾಗದಕ್ಕೆ ಮೇಣದ ಲೇಪನವಿರುವುದರಿಂದ ಒದ್ದೆಯಾಗುವ ಸಂಭವವಿಲ್ಲ. ಅಗಾಧ ಪ್ರಮಾಣದ ಕಾಗದವು ಚೀಲಗಳ ತಯಾರಿಕೆಗೆ ಬಳಸಲ್ಪಡುತ್ತಿದೆ. ಸೋಸಣಿಗೆ ಪತ್ರಗಳ ತಯಾರಿಕೆಗೆ ಖರ್ಚಾಗುವ ಕಾಗದದ ಪ್ರಮಾಣ ಕಡಿಮೆಯೇನಲ್ಲ. ಕಾಗದಕ್ಕೆ ಹೊಸ ಉಪಯೋಗಗಳ ಶೋಧವಾದಂತೆ ಅದರ ತಯಾರಿಕೆಗೆ ಬಳಸುತ್ತಿದ್ದ ಸಾಂಪ್ರದಾಯಿಕ ಕಚ್ಚಾ ವಸ್ತುಗಳನ್ನು ಕೈಬಿಡುವ ಪ್ರಸಂಗ ಒದಗಿದೆ. ಗಾಜು ಮತ್ತು ಇತರ ಖನಿಜಮೂಲದ ಎಳೆಗಳು ಮತ್ತು ಸಂಯೋಜಿತ ಬಹ್ವಂಗೀಕೃತ ವಸ್ತುಗಳ ಬಗ್ಗೆ ಒಲವು ಹೆಚ್ಚುತ್ತಿದೆ. ಈ ವಿಶೇಷ ಕಚ್ಚಾವಸ್ತುಗಳಿಂದ ಕಾಗದ ತಯಾರಿಸಬೇಕೆಂದರೆ ಉತ್ಪಾದನೆಯ ವಿಧಾನಗಳಲ್ಲೂ ಮಾರ್ಪಾಡುಗಳು ಆಗಲೇಬೇಕು. ಕಾಗದದ ಕೈಗಾರಿಕೆ ವಿಕಾಸದ ಹೊಸ್ತಿಲಲ್ಲಿದೆ. ಪರ್ವಕಾಲದ ಮೂಲಕ ಹಾಯುತ್ತಿದೆ. ಅನತಿಕಾಲದಲ್ಲಿ ಅದರ ಚರ್ಯೆ ಮತ್ತು ವ್ಯಾಪ್ತಿಗಳು ಗುರುತು ಸಿಗದಷ್ಟು ಬದಲಾಯಿಸಿರಲು ಸಾಕು.

ಕಾಗದ ಕೇವಲ ಆಧುನಿಕ ಸೌಕರ್ಯವಲ್ಲ. ನಮ್ಮ ನಾಗರಿಕತೆಯ ಉಳಿವು ಅದರ ಮೇಲೆ ನಿಂತಿದೆ. ಪೀಳಿಗೆಯಿಂದ ಪೀಳಿಗೆಗೆ ಜ್ಞಾನವಹನ ಆಗಬೇಕಾದರೆ ಇಂದಿನವರು ಮುಂದಿನವರ ಸಲುವಾಗಿ ಅದನ್ನು ಕಾಗದದ ಮೇಲೆ ಮೂಡಿಸಿದರೆ ಮಾತ್ರ ಸಾಧ್ಯವಿತ್ತು. ಈಗ ಇಂಥ ಪರಿಸ್ಥಿತಿ ಆಧುನಿಕ ತಂತ್ರಜ್ಞಾನದಿಂದ ಬದಲಾಗಿದೆ. ಸಿ.ಡಿ. (ಅಡಕ ತಟ್ಟೆ) ಕಾಗದದ ಸ್ಥಾನವನ್ನು ಆಕ್ರಮಿಸಿದೆ. (ಎಚ್.ಜಿ.ಎಸ್.; ಪಿ.ಎಸ್.ಎಚ್.)

**ಕಾಗದದ ಉತ್ಪನ್ನಗಳು:** ಲಕ್ಕೋಟೆಗಳು, ಪೊಟ್ಟಣಗಳು, ಪೆಟ್ಟಿಗೆಗಳು ಮುಂತಾದವು. ಇವುಗಳ ಬಳಕೆ 19ನೆಯ ಶತಮಾನದ ಉತ್ತರಾರ್ಧದಲ್ಲಿ ರೂಢಿಗೆ ಬಂತು. ಕೇವಲ ಬರೆಯುವ ಸಾಧನವಾಗಿದ್ದ ಕಾಗದದಿಂದ ಸುಮಾರು 1850ರಲ್ಲಿ, ಜನರು ಕೈಗಳಿಂದಲೇ ಕಾಗದದ ಪೊಟ್ಟಣಗಳನ್ನು ಮಾಡುವುದನ್ನು ಕಲಿತರು. ಅಲ್ಲಿಂದ ಈಚೆಗೆ ಇಪ್ಪತ್ತೈದು ವರ್ಷಗಳ ತರುವಾಯ ಪೊಟ್ಟಣಗಳನ್ನು ತಯಾರಿಸುವ ಸ್ವಯಂಚಾಲಿತ ಯಂತ್ರಗಳು ಅಸ್ತಿತ್ವಕ್ಕೆ ಬಂದುವು. 1903ರ ಹೊತ್ತಿಗೆ ಮರದ ಪೆಟ್ಟಿಗೆಗಳು ಮರೆಯಾಗಿ ಕಾಗದದ ಪೆಟ್ಟಿಗೆಗಳು ಬಳಕೆಗೆ ಬಂದುವು. ಮೂರು ವರ್ಷಗಳ ಅನಂತರ ಕಾಗದದ ರಟ್ಟಿನ ಪೆಟ್ಟಿಗೆಗಳು ಸಾಮಾನ್ಯವಾಯಿತು. ಕ್ರಮೇಣವಾಗಿ ಆಹಾರ ಪದಾರ್ಥಗಳನ್ನು ಅಮೆರಿಕದಲ್ಲಿ ಅದಕ್ಕೆಂದೇ ತಯಾರಿಸಿದ ಕಾಗದದಲ್ಲಿ ಸುತ್ತಿಡುತ್ತಿದ್ದರು. ಆಹಾರ ಪದಾರ್ಥಗಳೇ ಅಲ್ಲದೆ ಹಣ್ಣುಗಳನ್ನೂ ಕಾಗದದಲ್ಲಿ ಸುತ್ತಿ ಹಡಗುಗಳಲ್ಲಿ ರಫ್ತುಮಾಡುವುದು ಸಾಪೇಕ್ಷವಾಗಿ ಅನುಕೂಲಕರವಾಗಿತ್ತು. ಇಂದು ಅಮೆರಿಕದ ಕೈಗಾರಿಕೆಗಳಲ್ಲಿ ಕಾಗದದ ಉತ್ಪನ್ನಗಳ ಕೈಗಾರಿಕೆ ಐದನೆಯದಾಗಿದೆ.

ಸಾಮಾನ್ಯವಾಗಿ ಪ್ಯಾಕಿಂಗಿಗಾಗಿ ಉಪಯೋಗಿಸುವ ಕಾಗದಗಳಲ್ಲಿ ಗ್ಲಾಸ್ಸೈನ್, ಕ್ರಾಫ್ಟ್, ಚರ್ಮಕಾಗದ (ಪಾರ್ಚ್‌ಮೆಂಟ್), ಮೇಣಲೇಪಿತ ಕಾಗದ, ಟಿಷ್ಯೂ ಕಾಗದ ಇತ್ಯಾದಿಗಳು ಮುಖ್ಯವಾದವು. ಭಿನ್ನ ಭಿನ್ನ ಅಂಶಗಳಲ್ಲಿ ವಿವಿಧ ಘಟಕಗಳ ಸಂಯೋಜನೆ, ವಿವಿಧ ರಾಸಾಯನಿಕ ವಸ್ತುಗಳ ಲೇಪನಗಳಿಂದ ಪ್ಯಾಕಿಂಗ್ ಕಾಗದಗಳಲ್ಲಿ ಬಹುಸಂಖ್ಯಾತ ವಿಧಗಳಾಗಿವೆ. ಇವುಗಳಲ್ಲಿ ಕ್ರಾಫ್ಟ್ ಕಾಗದವನ್ನು ಒಂದಲ್ಲ ಒಂದು ವಿಧದಲ್ಲಿ ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ. ತೆಳುಹಾಳೆಗಳಿಂದ ಸಂಘಟಿತವಾದ ಕಾಗದದ ಡಬ್ಬಿಗಳಲ್ಲಿ ಬಹಳಷ್ಟುಮಟ್ಟಿಗೆ ಕ್ರಾಫ್ಟ್ ಕಾಗದದ ಒಂದು ವಿಧವನ್ನು ಉಪಯೋಗಿಸಲಾಗುತ್ತದೆ. ಕಾಗದದ ಉತ್ಪನ್ನಗಳ ತೂಕ ಬಲು ಕಡಿಮೆಯಾಗಿರುವುದರಿಂದ ಯಂತ್ರಗಳ ಎಣ್ಣೆಯ

ಮಾರುಕಟ್ಟೆಯಲ್ಲಂತೂ ಲೋಹದ ಡಬ್ಬಗಳ ಜಾಗದಲ್ಲಿ ತೆಳುಹಾಳೆಯ ಕಾಗದದ ಡಬ್ಬಿಗಳು ಪ್ರಯೋಜನಕಾರಿಯಾಗಿಯೂ ಲಾಭದಾಯಕವಾಗಿಯೂ ಇವೆ. ಕಾಗದದ ಉತ್ಪನ್ನಗಳ



**ಚಿತ್ರ 14** ರಾಟೆಗಳ ಮೇಲೆ ಸುತ್ತಿಕೊಂಡ ಕಾಗದದ ಹಾಳೆಯನ್ನು ನಿರ್ದಿಷ್ಟ ಗಾತ್ರಗಳಲ್ಲಿ ಬರುವಂತೆ ಬೇರೆ ಬೇರೆ ರಾಟೆಗಳ ಮೇಲೆ ಮತ್ತೆ ಸುತ್ತಿ ಅನಂತರ ಅದನ್ನು ಬೇಕಾದ ಅಳತೆಗೆ ಕತ್ತರಿಸುವ ಯಂತ್ರಕ್ಕೆ ಒದಗಿಸಲಾಗುವುದು

ಈ ರೀತಿಯಾದ ಅತಿ ಹೆಚ್ಚಿನ ಬಳಕೆಗೆ ಅನೇಕ ಕಾರಣಗಳಿವೆ. ಈ ಉತ್ಪನ್ನಗಳಲ್ಲಿ ಖರ್ಚು ಸಾಪೇಕ್ಷವಾಗಿ ಬಹಳ ಕಡಿಮೆ ಮತ್ತು ಇವುಗಳ ಉಪಯೋಗಗಳು ವಿವಿಧವಾದವು. ಕಾಗದದ ಆರ್ದ್ರ ಸಾಮರ್ಥ್ಯ (ವೆಟ್ ಸ್ಟ್ರೆಂತ್) ಬಹಳವಾಗಿರುವುದರಿಂದ ಅದನ್ನು ಯಾವ ಆಕಾರಕ್ಕೆ ಬೇಕಾದರೂ ಮಾರ್ಪಡಿಸಬಹುದು. ಸೂಕ್ತ ರಾಸಾಯನಿಕ ವಿಧಾನಗಳಿಂದ ಈ ಉತ್ಪನ್ನಗಳನ್ನು ತಯಾರಿಸಿದಲ್ಲಿ ಅವು ಬೇಗ ಮಡಿಚಿಹೋಗುವುದಿಲ್ಲ. ಹೀಗೆ ತಯಾರಿಸಲಾದ ಪ್ಯಾಕಿಂಗ್ ಉತ್ಪನ್ನಗಳ ಮೇಲೆ ನೀರಿನ ಆವಿ, ಎಣ್ಣೆ, ಕೊಬ್ಬು ಮತ್ತು ಕಿಲುಬುಗಳ ಪ್ರಭಾವ ಬೀಳಲಾರದು; ಬೆಂಕಿಯ ಉರಿಯಿಂದ ಮಾಸಲಾಗದಂತೆ, ಹುಳಹುಪ್ಪಟೆಗಳಿಗೆ ತುತ್ತಾಗದಂತೆ ಅವನ್ನು ತಯಾರಿಸಬಹುದು. ಬಣ್ಣ, ರುಚಿಗಳಿಲ್ಲದಿರುವುದರಿಂದಲೂ ವಿಷರಹಿತವಾಗಿರುವುದರಿಂದಲೂ ಕಾಗದದ ಉತ್ಪನ್ನಗಳನ್ನು ಆಹಾರಪದಾರ್ಥ ಶೇಖರಿಸಲು ನಿರ್ಭಯವಾಗಿ ಉಪಯೋಗಿಸಬಹುದು.

ಕಾಗದಕ್ಕೆ ಕೆಲವು ರಾಸಾಯನಿಕ ವಸ್ತುಗಳನ್ನು ಲೇಪಿಸುವುದರ ಮೂಲಕ ಅನೇಕ ಪ್ರಯೋಜನಗಳನ್ನು ಪಡೆಯಬಹುದು. ಕಾಗದದ ಲೋಟಗಳು, ರಟ್ಟಿನ ಪೆಟ್ಟಿಗೆಗಳು, ಸುತ್ತುವ ಕಾಗದ ಹಾಗೂ ಇನ್ನಿತರ ಉತ್ಪನ್ನಗಳ ಮೇಲೆ ಪ್ಯಾರಾಫಿನ್ ಹಾಗೂ ಮೇಣಗಳ ಲೇಪನದಿಂದ ಅವನ್ನು ಗಟ್ಟಿಯಾಗಿಯೂ ಅಂಟಿಕೊಳ್ಳದಿರುವಂತೆಯೂ ಮಾಡುವುದು ಸಾಧ್ಯ. ಅವುಗಳಿಗೆ ಯಥೇಚ್ಛವಾಗಿ ಹೊಳಪು ಕೊಡಬಹುದು. ಅತಿ ಸೂಕ್ಷ್ಮವಾದ ಸ್ಫಟಿಕಾಕಾರದಲ್ಲಿರುವ ಪ್ಯಾರಾಫಿನ್ ಮೇಣ ಹಾಗೂ ಸಾಧಾರಣ ಮೇಣಗಳಿಂದ ಲೇಪಿಸಿದ ಕಾಗದದಲ್ಲಿ ಎಣ್ಣೆ ಮತ್ತು ನೀರಿನ ಆವಿಗಳಿಗೆ ಪ್ರಬಲವಾದ ರೋಧಕತ್ವವೂ ಉಷ್ಣಸಂಚಯನ ಸಾಮರ್ಥ್ಯವೂ ಅಧಿಕವಾಗುತ್ತವೆಂದು ತಿಳಿದುಬಂದಿದೆ. ಆದ್ದರಿಂದ ಬೆಣ್ಣೆ, ಮಾಂಸ, ತಿಂಡಿಗಳು ಹಾಗೂ ಕೊಬ್ಬಿನ ಪದಾರ್ಥಗಳನ್ನು ಶೇಖರಿಸಿಡಲು ಕಾಗದದ ಇಂಥ ಉತ್ಪನ್ನಗಳು ಬಹಳವಾಗಿ ಬಳಕೆಯಲ್ಲಿವೆ. ಕೆಲವು ರೀತಿಯ ಕಾಗದಗಳ ಮೇಲೆ ನೈಟ್ರೋಸೆಲ್ಯುಲೋಸ್, ಈಥೈಲ್ ಸೆಲ್ಯುಲೋಸ್, ಪಾಲಿಎಥಿಲೀನ್, ಪಾಲಿವಿನಿಲುಗಳಂಥ ವಸ್ತುಗಳನ್ನು ಲೇಪಿಸುತ್ತಾರೆ. ವಿಲೇಯಕಗಳು ಒಂದು ರೀತಿಯ ತೆಳುವಾದ ಪದರವನ್ನು ಕಾಗದದ ಮೇಲೆ ರಚಿಸುತ್ತವೆ. ಈ ರೀತಿಯ ಹೊಳಪಿನ ಕಾಗದಗಳನ್ನು ಅಲಂಕಾರ ಸಾಮಗ್ರಿಯಾಗಿಯೂ ಬಣ್ಣ ಬಣ್ಣ ಪುಸ್ತಕಗಳ ರಟ್ಟಾಗಿಯೂ ಆಹಾರ ಪದಾರ್ಥಗಳನ್ನು ಸುತ್ತುವ ಸಾಧನವಾಗಿಯೂ ಉಪಯೋಗಿಸುತ್ತಾರೆ. ಲೇಪನಸಾಮಗ್ರಿಗಳಿಗೆ ಅನುಗುಣವಾಗಿ ಅವುಗಳಲ್ಲಿ ಜಲರೋಧಕತ್ವ, ಉಷ್ಣಸಂಚಯನ ಸಾಮರ್ಥ್ಯ, ಕ್ಷಾರ ನಿರೋಧಕತ್ವ ಇತ್ಯಾದಿಗಳನ್ನು ನಮೂದಿಸಬೇಕು.

ಪಾಲಿಎಥಿಲೀನ್ ಮುಂತಾದ ಪ್ಲಾಸ್ಟಿಕ್ ರೆಸಿನ್ನುಗಳನ್ನು (ಶಿಲಾರಾಳ) ಲೇಪಿಸಿದ ಕಾಗದಗಳಲ್ಲಿ ಅನೇಕ ವಿಶೇಷ ಗುಣಗಳಿವೆ. ಅವು ಬೇಗ ಹರಿಯಲಾರವು. ತೂತು ಬೀಳಲಾರವು, ಅಲ್ಲದೆ ಅವು ಬಹಳ ನುಣಪಾಗಿಯೂ ನೋಡಲು ಆಕರ್ಷಕವಾಗಿಯೂ ಇರುತ್ತವೆ. ಉಷ್ಣ, ತೇವ, ಅನಿಲಗಳು ಹಾಗೂ ಕೊಬ್ಬಿನಿಂದಾಗುವ ಪರಿಣಾಮಗಳನ್ನು ಅವು ತಡೆಗಟ್ಟಬಲ್ಲವು. ಕಾಗದದ ಬೋರ್ಡುಗಳಲ್ಲಿ ಗಡುಸುತನ ಅಧಿಕವಾಗಿದ್ದು, ಅವುಗಳ ಮೇಲೆ ಅಂಟಿಸಿದ ಕಾಗದಗಳ ಮೇಲೆ ಅತ್ಯುತ್ತಮವಾಗಿ ಮುದ್ರಿಸಲು ಸಾಧ್ಯವಿದೆ. ಲೇಪನದಲ್ಲಿ ಉತ್ಪನ್ನಕ್ಕೆ ಅನುಸಾರವಾದ ಗಾಢತೆ ಇರಬೇಕು. ಕಾಗದದ ಮೇಲ್ಭಾಗದಲ್ಲಿ ಪ್ಲಾಸ್ಟಿಕಿನ ಲೇಪನವಿದ್ದಲ್ಲಿ ಮುದ್ರಿಸಲು ಇನ್ನೂ ಉತ್ತಮ. ಅನೇಕ ವೇಳೆ ಮರವಜ್ರದಂತೆ ಅಂಟುವ ಪಾಲಿಎಥಿಲೀನಿನ ಲೇಪನವನ್ನೂ ಮಾಡುವುದುಂಟು. ಕ್ಷೀರರೂಪದಲ್ಲಿರುವ ಪಾಲಿಕಿನಿಲಿಡೈನ್ ಲೇಪನದಿಂದ ಕಾಗದದ ಉತ್ಪನ್ನಗಳಿಗೆ ನೀರಿನ ಆವಿ, ಅನಿಲಗಳು ಹಾಗೂ ಕೊಬ್ಬಿಗೆ ಉತ್ತಮವಾದ ರೋಧಕತ್ತ್ವ ಸಾಮರ್ಥ್ಯ ಉಂಟಾಗುವುದು.

ಒಂದನೆಯ ಮಹಾಯುದ್ಧದ ಸಮಯದಲ್ಲಿ ಹತ್ತಿ ಹಾಗೂ ಉಣ್ಣೆಯ ಬಟ್ಟೆಗಳ ಅಭಾವವಿದ್ದ ಕೆಲವು ದೇಶಗಳಲ್ಲಿ ಕಾಗದದ ವಸ್ತುಗಳ ಕೈಗಾರಿಕೆ ತೀವ್ರವಾಗಿ ಪ್ರಾರಂಭವಾಯಿತು. ಈ ಸಮಯದಲ್ಲೇ ಇಂಗ್ಲೆಂಡ್ ಫ್ರಾನ್ಸ್ ಮೊದಲಾದ ದೇಶಗಳಲ್ಲಿ ವಿಲ್ಟನ್ ಜಮಖಾನಗಳನ್ನು ತಯಾರಿಸಲು ಕಾಗದದ ಎಳೆಗಳನ್ನು ಉಪಯೋಗಿಸಲಾಯಿತು. ಸಂಯುಕ್ತಸಂಸ್ಥಾನಗಳಲ್ಲಂತೂ ಅನೇಕ ವರ್ಷಗಳಿಂದ ಕಾಗದದ ಎಳೆಗಳನ್ನು ಪೀಠೋಪಕರಣಗಳನ್ನು ತಯಾರಿಸಲು ಸಹ ಉಪಯೋಗಿಸುತ್ತಿದ್ದಾರೆ. ಕಾಗದದ ಎಳೆಗಳಿಗೆ ರಾಸಾಯನಿಕವಾಗಿ ಬಣ್ಣಗಳನ್ನು ಮಿಶ್ರಮಾಡಲು ಸಾಧ್ಯವಿರುವುದರಿಂದ ಯಾವುದೇ ಅಪೇಕ್ಷಿತ ಬಣ್ಣದ ಕಾಗದದ ವಸ್ತ್ರಗಳನ್ನು ತಯಾರಿಸಬಹುದು.

ವಿದ್ಯುಚ್ಛಕ್ತಿಯ ಪ್ರಪಂಚದಲ್ಲಿ ಕಾಗದ ಉತ್ಪನ್ನಗಳನ್ನು ತಂತಿಗಳನ್ನು ಮೆತ್ತಲು ಬಳಸಲಾಗುತ್ತಿದೆ. ಕಾಗದದಿಂದ ಉತ್ಪನ್ನವಾದ ಬಾಂಡ್–ವೆಬ್ ಎಂಬ ಬಟ್ಟೆಗಳು ಅನೇಕ ಮಾದರಿಗಳಲ್ಲಿ ದೊರೆಯುತ್ತವೆ. ಇವನ್ನು ಕತ್ತರಿಸುವುದೂ ಬಹಳ ಸುಲಭ. ಇವುಗಳಲ್ಲಿ ಕೆಲವನ್ನು ಬಟ್ಟೆಗಳಿಗೆ ಅಂಚುಕಟ್ಟಲು, ಕಾಲರ್ ಅಥವಾ ಕಫ್‌ಗಳ, ಪುರುಷರ ಉಡುಪುಗಳಿಗಾಗಿ ಅಥವಾ ಸ್ಕರ್ಟ್ ಮುಂತಾದ ಸ್ತ್ರೀಯರ ಉಡುಪುಗಳಿಗೆ ಅಂಚನ್ನು ಮಾಡಲು ಉಪಯೋಗಿಸುತ್ತಾರೆ. ಬಾಂಡ್–ವೆಬ್ ಉತ್ಪನ್ನಗಳು ಬಹಳ ಕಾಲ ಬಾಳುವುದರಿಂದ ಅವನ್ನು ನೆಲಗಂಬಳಿ, ಟವಲುಗಳು ಮುಂತಾದವುಗಳನ್ನು ತಯಾರಿಸಲು ಬಳಸುವುದುಂಟು. (ಎಸ್.ಎಲ್.ಎ.)

**ಭಾರತದಲ್ಲಿ ಕಾಗದದ ಕೈಗಾರಿಕೆ:** ಪ್ರ.ಶ. 150ರ ಸುಮಾರಿಗೆ ಚೀನಿಯರು ಮೊಟ್ಟಮೊದಲಿಗೆ ಕಾಗದವನ್ನು ತಯಾರಿಸಿದರೆಂದು ತಿಳಿದುಬರುತ್ತದೆ. ಚೀನಿ ಯಾತ್ರಿಕ ಇತ್ಸಿಂಗ್ ಭಾರತೀಯ ಕಾಗದದ ಬಗೆಗೆ ಉಲ್ಲೇಖಿಸಿರುವನಾದರೂ ಅದು ಅಷ್ಟೊಂದು ಜನಪ್ರಿಯ ಬರವಣಿಗೆಯ ಸಾಮಗ್ರಿಯಾಗಿರಲಿಲ್ಲವೆಂದು ತೋರುತ್ತದೆ. ತಾಳೆಗರಿ ಮತ್ತು ಭೂರ್ಜಪತ್ರದ ಮೇಲೆ ಬರೆಯುವುದು ಹೆಚ್ಚು ಪ್ರಚಲಿತವಾಗಿದ್ದರೂ 8ನೆಯ ಶತಮಾನದ ಸಂಸ್ಕೃತ–ಚೀನೀ ಕೋಶವೊಂದರಲ್ಲಿ ಶ್ಚೀ (ಕಾಗದ) ಎಂಬ ಚೀನೀ ಪದದ ಶಯ ಎಂಬ ಸಂಸ್ಕೃತರೂಪ ಕಾಣಬರುತ್ತದೆ. ಇದೇ ಕೋಶದಲ್ಲಿ ಕಾಘ್‌ಜ್ ಎಂಬ ಪದದ ಸಂಸ್ಕೃತ ಕಕಲಿ ಅಥವಾ ಕಕರಿ ಎಂಬ ರೂಪಗಳೂ ಸಿಗುತ್ತವೆ.

ಗುಜರಾತಿನಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಕಾಗದದ ಹಸ್ತಪ್ರತಿ 1223–24ರಲ್ಲಿ ಬರೆದದ್ದು. ಕಾಗದದ ಮೇಲೆ ಬರೆದ ಶತಪಥ ಬ್ರಾಹ್ಮಣದ ಕಾಶ್ಮೀರದ ಹಸ್ತಪ್ರತಿಯೊಂದು 1089ರಲ್ಲಿ ರಚಿತವಾದದ್ದೆಂದು ಎಂ. ಎ. ಸ್ಟೇನ್ ಉಲ್ಲೇಖಿಸಿದ್ದಾನೆ. ಜಿಪ್ಸಂ ಖನಿಜ ಬಳಿದಿದ್ದ ಕೆಲವು ಕಾಗದದ ಹಸ್ತಪ್ರತಿಗಳಲ್ಲಿ 5ನೆಯ ಶತಮಾನದ ಅಥವಾ ಇನ್ನೂ ಸ್ವಲ್ಪ ಪ್ರಾಚೀನವಾಗಿರಬಹುದಾದ ಉತ್ತರ ಭಾರತದ ಲಿಪಿಗಳಿವೆ. ಇವು ಮಧ್ಯ ಏಷ್ಯದ ಯಾರ್‌ಖಂಡ್ ಎಂಬಲ್ಲಿ ದೊರೆತಿವೆ. ಆದರೆ ಇವು ಭಾರತದ ಹೊರಗಡೆಯೇ ಬರೆದಂಥವುಗಳಿರಬೇಕು. (ಮೇಲಿನ ಎರಡು ಪರಿಚ್ಛೇದಗಳನ್ನು ಡಿ.ಸಿ. ಸರ್ಕಾರರ ಇಂಡಿಯನ್ ಎಪಿಗ್ರಫಿ ಎಂಬ ಗ್ರಂಥದಿಂದ ಉದ್ಧರಿಸಲಾಗಿದೆ.)



**ಚಿತ್ರ 15** ಅಳತೆಗೆ ಕತ್ತರಿಸಿದ ಕಾಗದವನ್ನು ರೀಮುಗಳಲ್ಲಿ ಪ್ಯಾಕು ಮಾಡುವುದು

ಕಾಗದ ತಯಾರಿಸುವ ಕಲೆ ಭಾರತದಲ್ಲಿ ತಡವಾಗಿಯೇ ಪ್ರಾರಂಭವಾಯಿತೆನ್ನಬಹುದು. ಯಂತ್ರಗಳಿಂದ ಕಾಗದದ ಉತ್ಪಾದನೆ ಮೊಟ್ಟಮೊದಲ ಬಾರಿ 1870ರಲ್ಲಿ

ಪ್ರಾರಂಭವಾಯಿತೆನ್ನಲು ದಾಖಲೆಗಳಿವೆ. ಕಲ್ಕತ್ತದಲ್ಲಿ ಪ್ರಾರಂಭವಾದ ಬ್ಯಾಲಿ ಮಿಲ್ಸ್ ಈ ಉದ್ಯಮಕ್ಕೆ ಅಸ್ತಿಭಾರ ಹಾಕಿತು. ಆದರೆ ಮೊಟ್ಟಮೊದಲ ಸಫಲ ಯತ್ನವಾದುದ್ದು 1881ರಲ್ಲಿ –ಬಂಗಾಳದಲ್ಲಿ; ಟಿಟಾಘರ್ ಪೇಪರ್ ಮಿಲ್ಲಿನ ಉದ್ಘಾಟನೆಯಿಂದ. ಅನಂತರ ಈ ಕೈಗಾರಿಕೆ ದೇಶದ ಹಲವಡೆ ಬೆಳೆಯಿತು. 1925ರಲ್ಲಿ ಕೈಗಾರಿಕೆ ಸಂರಕ್ಷಣ ಕರದ (ಪ್ರೊಟೆಕ್ಟಿವ್ ಟ್ಯಾರಿಫ್) ಆಶ್ರಯ ಪಡೆಯಿತು. 1945ರಲ್ಲಿ ಈ ಸುಂಕವನ್ನು ರೆವಿನ್ಯೂ ಕರವನ್ನಾಗಿ ಮಾರ್ಪಡಿಸಲಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ದೇಶದ ಕಾರ್ಖಾನೆಗಳ ಸಂಖ್ಯೆ 15ಕ್ಕೆ ಏರಿತು. ಉತ್ಪಾದನೆ 1,03,884 ಟನ್ನುಗಳಷ್ಟಾಯಿತು. ದೇಶ ಸ್ವಾತಂತ್ರ್ಯ ಗಳಿಸಿದ ಅನಂತರ, ಮುಖ್ಯವಾಗಿ ಯೋಜನೆಗಳು ಪ್ರಾರಂಭವಾದ ಮೇಲೆ ನಮ್ಮ ಪ್ರಗತಿಯಲ್ಲಿ ವೇಗ ಕಂಡುಬಂದಿದೆ

ಪ್ರಥಮ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಾಗ ಭಾರತ ದೇಶದಲ್ಲಿ 17 ಕಾಗದದ ಕಾರ್ಖಾನೆಗಳಿದ್ದವು. ಆ ಯೋಜನೆಯ ಅವಧಿಯಲ್ಲಿ ಮೂರು ಹೊಸ ಕಾರ್ಖಾನೆಗಳು ಸ್ಥಾಪಿತವಾದುವು. ಅಲ್ಲದೆ 14 ಕಾರ್ಖಾನೆಗಳ ನವೀಕರಣ ಕಾರ್ಯ ನಡೆಯಿತು. ಎರಡನೆಯ ಯೋಜನೆಯ ಅವಧಿಯಲ್ಲಿ 8 ಹೊಸ ಸಂಸ್ಥೆಗಳು ಉತ್ಪಾದನೆ ಆರಂಭಿಸಿದುವು. ಹಲವು ಹಳೆಯ ಕಾರ್ಖಾನೆಗಳು ವಿಸ್ತೃತವಾದುವು. ಅಭಿವೃದ್ಧಿಗೊಂಡುವು. ಮೂರನೆಯ ಯೋಜನೆಯ ಅವಧಿಯಲ್ಲಿ ಸ್ವಪರಿ ಪೂರ್ಣತೆಯ– ಎಂದರೆ 720 ಸಾವಿರ ಟನ್ನು ಕಾಗದ ಉತ್ಪಾದಿಸುವ–ಗುರಿ ಇತ್ತು, ಅಲ್ಲದೆ ಸಾಮರ್ಥ್ಯವನ್ನು 8,33,000 ಟನ್ನುಗಳಿಗೆ ಏರಿಸುವ ಗುರಿಯೂ ಇತ್ತು. ಆದರೆ ಮೂರನೆಯ ಯೋಜನೆಯಲ್ಲಿ ಈ ಗುರಿಯನ್ನು ಸಾಧಿಸಲಾಗಲಿಲ್ಲ.

ಯೋಜನೆಗಳು ಪ್ರಾರಂಭವಾದ ಅನಂತರ 1969ರ ವರೆಗೆ ದೇಶದ ಸಾಮರ್ಥ್ಯದಲ್ಲಿ 5½ ಪಟ್ಟು ಹೆಚ್ಚಳವಾಗಿದೆ. ಉತ್ಪಾದನೆಯಲ್ಲಿಯೂ ಸುಮಾರು 5 ಪಟ್ಟು ಹೆಚ್ಚಳವಾಯಿತು. ಆದರೆ ಕೈಗಾರಿಕೆಯ ಸ್ಥಾಪಿತ ಸಾಮರ್ಥ್ಯವನ್ನು (ಇನ್‌ಸ್ಟಾಲ್ಡ್ ಕೆಪ್ಯಾಸಿಟಿ) ಪೂರ್ಣ ಬಳಸಿಕೊಳ್ಳಲಾಗಲಿಲ್ಲ

ಭಾರತದಲ್ಲಿ (1971) 57 ಕಾಗದ ಕಾರ್ಖಾನೆಗಳಿದ್ದವು. ಒಂದನ್ನುಳಿದು ಎಲ್ಲವೂ ಖಾಸಗೀ ಕ್ಷೇತ್ರದಲ್ಲಿದ್ದವು. ಒಂದು ಪತ್ರಿಕಾಕಾಗದ (ನ್ಯೂಸ್ ಪ್ರಿಂಟ್) ಕಾರ್ಖಾನೆ ಮಾತ್ರ ಸರ್ಕಾರಿ ಕ್ಷೇತ್ರದಲ್ಲಿದೆ. ಕೇವಲ ಹತ್ತು ಕಾರ್ಖಾನೆಗಳು ತಲಾ 30,000 ಟನ್ನುಗಳಿಗಿಂತಲೂ ಹೆಚ್ಚು ವಾರ್ಷಿಕ ಉತ್ಪಾದನಾ ಸಾಮರ್ಥ್ಯ ಹೊಂದಿತ್ತು. ಟಿಟಾಘರ್ ಪೇಪರ್ ಮಿಲ್ಸ್ (ಪಶ್ಚಿಮ ಬಂಗಾಲ), ರೋಹತಾಸ್ ಇಂಡಸ್ಟ್ರಿಸ್(ಬಿಹಾರ), ಓರಿಯೆಂಟ್ ಪೇಪರ್ ಮಿಲ್ಸ್ (ಒರಿಸ್ಸ, ಮಧ್ಯ ಪ್ರದೇಶ), ಶ್ರೀ ಗೋಪಾಲ ಮಿಲ್ಸ್ (ಹರಿಯಾನ), ಬೆಲ್ಲಾರಪುರದ ಪೇಪರ್ ಅಂಡ್ ಸ್ಟ್ರಾ ಬೋರ್ಡ್ ಮಿಲ್ಸ್ (ಮಹಾರಾಷ್ಟ್ರ), ಸಿರಪುರ ಪೇಪರ್ ಮಿಲ್ಸ್ (ಆಂಧ್ರಪ್ರದೇಶ), ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ (ಮೈಸೂರು) ಈ ಕಾರ್ಖಾನೆಗಳನ್ನು ದೇಶದ ದೊಡ್ಡ ಕಾಗದ ಕಾರ್ಖಾನೆಗಳೆಂದು ಹೆಸರಿಸಬಹುದು.

**ಕಾರ್ಖಾನೆಗಳ ಗಾತ್ರ:** ಅಮೆರಿಕ ಮತ್ತು ಸ್ಕಾಂಡಿನೇವಿಯನ್ ದೇಶಗಳಲ್ಲಿ ಪ್ರತಿದಿನ 500 ರಿಂದ 1,000 ಟನ್ ಕಾಗದ ಉತ್ಪಾದಿಸುವ ಕಾರ್ಖಾನೆಗಳಿವೆ. ಆದರೆ ಜಪಾನ್, ಬ್ರಿಟನ್ ಮತ್ತು ಇತರ ದೇಶಗಳಲ್ಲಿರುವಂತೆ ಭಾರತ ದೇಶದಲ್ಲಿಯೂ ಸಣ್ಣ ಪ್ರಮಾಣದ ಕಾಗದ ಉದ್ಯಮಗಳಿಗೇ ಉತ್ತೇಜನ ದೊರಕಿದೆ. ಏಕೆಂದರೆ ಇಂಥವುಗಳಿಗೆ ಹೆಚ್ಚಿನ ಬಂಡವಾಳ ಹಾಗೂ ತಾಂತ್ರಿಕ ಪ್ರಾವೀಣ್ಯದ ಆವಶ್ಯಕತೆ ಇರುವುದಿಲ್ಲ. ಸ್ಥಾನಿಕ ಕಚ್ಚಾ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ಮಾರುಕಟ್ಟೆಗಳಿಗಾಗಿ ಕಾಗದ ಉತ್ಪಾದಿಸಬಹುದು. ಆದರೆ ಇಂಥ ಕಾರ್ಖಾನೆಗಳಿಂದ ದೊಡ್ಡ ಕೈಗಾರಿಕೆಗಳ ಮಿತವ್ಯಯಗಳು ಸಾಧ್ಯವಿಲ್ಲ.

**ರಾಜ್ಯಾನುಗುಣ ವಿಂಗಡಣೆ:** ಈ ಕೈಗಾರಿಕೆ ಮೊದಲು ಬಂಗಾಳ ರಾಜ್ಯದಲ್ಲಿ ಕೇಂದ್ರೀಕೃತವಾಗಿತ್ತು. ಆದರೆ ಈಗ ಹೊಸ ಕಚ್ಚಾಸಾಮಗ್ರಿಗಳ ಬಳಕೆ, ಕೈಗಾರಿಕೆಗಳ ವಿಕೇಂದ್ರಿಕರಣ ನೀತಿ ಮತ್ತು ವಿದ್ಯುಚ್ಛಕ್ತಿಯ ಬಳಕೆಯಿಂದಾಗಿ ಎಲ್ಲ ರಾಜ್ಯಗಳಲ್ಲಿಯೂ ಹಂಚಿದೆ. ಆದಾಗ್ಯೂ ಬಂಗಾಳ, ಬಿಹಾರ, ಒರಿಸ್ಸ, ಮಹಾರಾಷ್ಟ್ರಗಳು ಪ್ರಮುಖ ಉತ್ಪಾದಕ ರಾಜ್ಯಗಳು.

**ಸಂಘಟನೆ:** ಕೈಗಾರಿಕೆಯ ಆಡಳಿತ ವ್ಯವಸ್ಥೆಗೋಸ್ಕರ ಎರಡನೆಯ ಯೋಜನೆಯ ಕೊನೆಯ ವರೆಗೂ ಈ ಕೈಗಾರಿಕೆಯನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು: 1. ಕಾಗದ ಹಾಗೂ ಕಾಗದದ ರಟ್ಟು, 2. ಹುಲ್ಲಿನ ಮತ್ತು ಇತರ ಬಗೆಯ ರಟ್ಟುಗಳು (ಸ್ಟ್ರಾ ಅಂಡ್ ಅದರ್ ಬೋರ್ಡ್ಸ್), 3. ಪತ್ರಿಕಾ ಕಾಗದ. ಇವುಗಳ ಜೊತೆಗೆ ಈಗ ಸೆಕ್ಯೂರಿಟಿ ಕಾಗದ ಎಂಬ ಹೊಸ ವಿಭಾಗವನ್ನು ಸೇರಿಸಲಾಗಿದೆ.

**ಕಾಗದದ ಅನುಭೋಗ:** ಯಾವುದೊಂದು ದೇಶದ ಜನತೆಯ ತಲಾ ಅನುಭೋಗದ ಮೇಲಿಂದ ಅಲ್ಲಿಯ ಅಭಿವೃದ್ಧಿಯ ಮಟ್ಟವನ್ನು ಗುರುತಿಸಬಹುದು. ಪ್ರಪಂಚದ ಪ್ರಮುಖ ದೇಶಗಳೊಂದಿಗೆ ಭಾರತದ ತಲಾ ಅನುಭೋಗವನ್ನು ಹೋಲಿಸಿದರೆ ನಾವು ತೀರ ಹಿಂದುಳಿದ್ದೇವೆ ಎಂದು ತಿಳಿಯುತ್ತದೆ. ಅಮೆರಿಕದವರು ನಮ್ಮ 177ರಷ್ಟು, ಬ್ರಿಟಿಷರು 88ರಷ್ಟು ಜಪಾನಿಗಳು 59ರಷ್ಟು ಹೆಚ್ಚು ಕಾಗದ ಬಳಕೆ ಮಾಡುತ್ತಾರೆ.

**ಸಮಸ್ಯೆಗಳು :** ಈ ಕೈಗಾರಿಕೆ ತನ್ನ ಅಭಿವೃದ್ಧಿಯಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಪ್ರಮುಖ ಸಮಸ್ಯೆಯೆಂದರೆ ಕಚ್ಚಾಸಾಮಗ್ರಿಯ ಕೊರತೆ, ಮುಖ್ಯವಾಗಿ ಈ ಕೈಗಾರಿಕೆ ಬಿದಿರನ್ನೇ ಅವಲಂಬಿಸಿದೆ. ಭಾರತದಲ್ಲಿ 20 ಲಕ್ಷ ಟನ್ನುಗಳಷ್ಟು ಬಿದಿರು ಬೆಳೆದರೂ ಕೇವಲ 14 ಲಕ್ಷ ಟನ್‌ಗಳಷ್ಟು ಮಾತ್ರ ಕಾಗದದ ಕೈಗಾರಿಕೆಗೆ ದೊರೆಯುತ್ತಿತ್ತು. ಹೀಗಾಗಿ ಕಚ್ಚಾಸಾಮಗ್ರಿಯ ಕೊರತೆ ತೀವ್ರವಾಗಿದೆ. ಆದಕಾರಣ ಇತ್ತೀಚಿಗೆ ಕಬ್ಬಿನ ಸಿಪ್ಪೆ, ಮೃದು ಹಾಗೂ ಕಠಿಣ ಕಟ್ಟಿಗೆಗಳು ಮತ್ತು ಇತರ ವಸ್ತುಗಳಿಂದ ತಿರುಳು ತಯಾರಿಸಿ ಕೈಗಾರಿಕೆಯನ್ನು ಉಳಿಸಿಕೊಳ್ಳಬೇಕಾಗಿದೆ. ಬಿದಿರಿನ ಎಕರೆವಾರು ಉತ್ಪನ್ನವೂ ಭಾರತದಲ್ಲಿ ಕಡಿಮೆ–ಒಂದು ಎಕರೆಗೆ ಒಂದು ಟನ್ನು ಮಾತ್ರ. ಜಪಾನಿನಲ್ಲಿ ಎಕರೆಗೆ ನಾಲ್ಕು ಟನ್ನು. ಎಂದರೆ ನಾವು ನಮ್ಮ ಬಿದಿರಿನ ಉತ್ಪನ್ನವನ್ನು ಹೆಚ್ಚಿಸಬೇಕಾಗಿದೆ. ಕಚ್ಚಾಸಾಮಗ್ರಿಯ ಅಪವ್ಯಯವನ್ನು ಶೀಘ್ರವಾಗಿ ತಡೆಗಟ್ಟಬೇಕು. ಅಡವಿಗಳು ರಾಜ್ಯಸರ್ಕಾರಗಳಿಗೆ ಸಂಬಂಧಿದವು. ಕೆಲವು ರಾಜ್ಯ ಸರ್ಕಾರಗಳು ಹೆಚ್ಚು ಆದಾಯ ಗಳಿಸಲು ಅಡವಿಗಳನ್ನು ಕಡಿಯಲು ಗುತ್ತಿಗೆಗೆ ಕೊಟ್ಟಿವೆ. ಗುತ್ತಿಗೆದಾರರಿಗೆ ಕೈಗಾರಿಕೆಯ ಉಳಿಯುವಿಕೆ, ಅಭಿವೃದ್ಧಿಗಳ ಬಗ್ಗೆ ಚಿಂತಿಸುವ ಅವಕಾಶವಾದರೂ ಎಲ್ಲಿ? ಹಾಗಾಗಿ ಅಮೂಲ್ಯ ಅರಣ್ಯಸಂಪತ್ತಿನ ಅಪವ್ಯಯ ನಡೆದಿದೆ. ಇದನ್ನು ಶೀಘ್ರವಾಗಿ ನಿಲ್ಲಿಸಬೇಕು. ಅಲ್ಲದೆ ಬಿದಿರು ಹಾಗೂ ಇತರ ಕಚ್ಚಾ ಸಾಮಗ್ರಿಗಳ ಬೆಳೆವಣಿಗೆಗೆ ಯೋಗ್ಯ ಅವಕಾಶ ನಿರ್ಮಿಸಿ, ದೀರ್ಘಕಾಲಕ್ಕಾಗಿ ಒಂದು ನೀತಿಯನ್ನು ರೂಪಿಸುವುದು ಅತ್ಯಗತ್ಯ.

ಸಾಗಾಣಿಕೆಯ ತೊಂದರೆಗಳು ಈ ಕೈಗಾರಿಕೆಯ ಪ್ರಗತಿಗೆ ಅಡ್ಡಿಯಾಗಿವೆ. ಉತ್ಪಾದನವೆಚ್ಚ ಮಿತಿಮೀರಿ ಬೆಳೆಯುತ್ತಿದೆ, ಇದರಿಂದಲೂ ನಿರೀಕ್ಷಿಸಿದ ಪ್ರಗತಿ ಸಾಧ್ಯವಾಗಲಾರದು. ಬಂಡವಾಳದ ಅಭಾವ ಈ ಕೈಗಾರಿಕೆಯನ್ನು ಬಾಧಿಸುತ್ತಿದೆ. ಮಿತಿಮೀರಿದ ಉತ್ಪಾದನವೆಚ್ಚದಿಂದ ಈಗಿರುವ ಉತ್ಪಾದಕರಿಗೆ ಲಾಭ ಪ್ರಾಪ್ತವಾಗುತ್ತಿಲ್ಲ. ಹಾಗಾಗಿ ಅವರು ಹೆಚ್ಚು ಬಂಡವಾಳ ತೊಡಗಿಸಲಾರರು. ಲಾಭ ಕಡಿಮೆಯಾಗಿ ಹೆಚ್ಚು ಬಂಡವಾಳ ಬೇಕಾಗುವುದರಿಂದ ಹೊಸಬರು ಆಕರ್ಷಿತರಾಗಿರುವುದಿಲ್ಲ, ಹಾಗಾಗಿ ಬಂಡವಾಳದ ಕೊರತೆ ಕೈಗಾರಿಕೆಗಳ ಅಭಿವೃದ್ಧಿಗೆ ಅಡಚಣೆಯಾಗಿದೆ.

ಕರ್ನಾಟಕದಲ್ಲಿ ಕಾಗದ ಕಾರ್ಖಾನೆಗಳು: ದಿ ಮೈಸೂರ್ ಪೇಪರ್ ಮಿಲ್ಸ್ ಲಿಮಿಟೆಡ್, ಭದ್ರಾವತಿ; ದಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಲಿಮಿಟೆಡ್, ದಾಂಡೇಲಿ; ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಲಿಮಿಟೆಡ್, ಬೆಳಗೊಳ (ಈಗ ಸ್ಥಗಿತಗೊಂಡಿದೆ); ದಿ ಸೌತ್ ಇಂಡಿಯ ಪೇಪರ್ ಮಿಲ್ಸ್ ಲಿಮಿಟೆಡ್, ನಂಜನಗೂಡು–ಇವು ಕರ್ನಾಟಕದ ಕಾಗದ ಕಾರ್ಖಾನೆಗಳು. ಇವುಗಳಲ್ಲಿ ಅತ್ಯಂತ ಹಳೆಯದು ಭದ್ರಾವತಿಯ ಕಾರ್ಖಾನೆ. ಡಾಂಡೇಲಿಯದು ಅತ್ಯಂತ ದೊಡ್ಡದು.

ಜಾಗತೀಕರಣ ಕಾಗದದ ಉದ್ಯಮಕ್ಕೆ ಹೊಸ ಆಯಾಮ ಕೊಟ್ಟಿದೆ. ಇಂದು ಭಾರತದಲ್ಲಿ ಈ ಉದ್ಯಮ ಬೃಹತ್ತಾಗಿ ಬೆಳೆದಿದೆ. ಪ್ರಪಂಚದ ಒಟ್ಟು ಕಾಗದದ ಉತ್ಪಾದನೆಯಲ್ಲಿ ಭಾರತದ ಪಾಲು ಶೇಕಡ 1.6 ರಷ್ಟಿದೆ. ಇಂದು ಈ ಕ್ಷೇತ್ರದಲ್ಲಿನ ಒಟ್ಟು ವಹಿವಾಟು ಸುಮಾರು 25,000 ಕೋಟಿ. ಇದರಿಂದ ರಾಷ್ಟ್ರದ ಖಜಾನೆಗೆ ವಾರ್ಷಿಕ 2918 ಕೋಟಿ ತೆರಿಗೆ ರೂಪದಲ್ಲಿ ಅಪ್ರತ್ಯಕ್ಷವಾಗಿ ಸಂದಾಯವಾಗುತ್ತಿದೆ. ಈ ಉದ್ಯಮದಲ್ಲಿ ಪ್ರತ್ಯಕ್ಷವಾಗಿ 0.46 ಮಿಲಿಯನ್ ಜನರು ತೊಡಗಿದ್ದಾರೆ (2011). 2015–16ರ ಹೊತ್ತಿಗೆ 13.95 ಟನ್ ಕಾಗದದ ಉತ್ಪಾದನೆಯ ನಿರೀಕ್ಷೆ ಇದೆ. ಈ ಉದ್ಯಮಕ್ಕೆ ವಿದೇಶಿ ಬಂಡವಾಳ ಹರಿದುಬರುತ್ತಿರುವುದು ಇದರ ಬೆಳೆವಣಿಗೆಗೆ ತೀವ್ರಗೊಂಡಿರುವುದಕ್ಕೆ ಸಾಕ್ಷಿಯಾಗಿದೆ. (ಆರ್.ಪಿ.ಎಚ್.)

**ಕಾಗದದ ಉದ್ಯಮ :** ಕಾಗದ ತಯಾರಿಕೆ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಗೊಂಡಿತ್ತು. ಸ್ವಿಟ್ಜರ್ಲೆಂಡಿನ ಸ್ಮಿತ್‌ರವರ ಪ್ರಕಾರ ಕಾಗದ ತಯಾರಿಕೆ ಮೊದಲಾದುದು ಭಾರತದಲ್ಲೇ. ಕರ್ನಾಟಕದಲ್ಲೂ ಸ್ವಲ್ಪಮಟ್ಟಿಗೆ ಇದು ಗೃಹಕೈಗಾರಿಕೆಯಾಗಿ ಇದ್ದಿರಬೇಕು.

ಮರದ ತೊಗಟೆ, ಹುಲ್ಲು ಮುಂತಾದ ಕಚ್ಚಾವಸ್ತುಗಳಿಂದ ಪ್ರಾರಂಭವಾದ ಕಾಗದದ ಉದ್ಯಮ ಕ್ರಮೇಣ ಹತ್ತಿ ಮತ್ತು ಹತ್ತಿಬಟ್ಟೆ ಚಿಂದಿಗಳ ಉಪಯೋಗದೊಡನೆ ಇಲ್ಲಿ ಚೆನ್ನಾಗಿ ಬೇರೂರಿತು. ಈ ಕಚ್ಚಾವಸ್ತುಗಳ ಸರಬರಾಜು ಮಿತವಾಗಿದ್ದು, ಕಾಗದದ ಕೈಗಾರಿಕೆಗೆ ಒಂದು ನಿಗದಿ ಇತ್ತು. ಡೆಹ್ರಾಡೂನಿನ ಅರಣ್ಯ ಸಂಶೋಧನ ಸಂಸ್ಥೆಯ ಸಂಶೋಧನೆಯಿಂದ ಕಾಗದದ ತಯಾರಿಕೆಗೆ ಬೊಂಬು ಒಳ್ಳೆಯ ಕಚ್ಚಾವಸ್ತುವಾಗಬಲ್ಲುದೆಂದು 1912ರ ವೇಳೆಗೆ ಖಚಿತವಾಯಿತು. ಈ ವೇಳೆಗೆ ಮೈಸೂರಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಈ ವಿಷಯದಲ್ಲಿ ಆಸಕ್ತಿ ವಹಿಸಿದರು. ಮುಂಬಯಿಯ ಅಯ್ಯರ್ ಮತ್ತು ಬಾಲಕೃಷ್ಣರವರ ನೇತೃತ್ವದಲ್ಲಿ ಹಲವು ಮೂಲಭೂತ ಅಧ್ಯಯನಗಳು ನಡೆದವು. ಅನಂತರ ಮಿರ್ಜಾ ಇಸ್ಮಾಯಿಲರು ಕರ್ನಾಟಕದ ಮೊಟ್ಟಮೊದಲ ಕಾಗದ ಕಾರ್ಖಾನೆಯಾದ ಭದ್ರಾವತಿಯ

ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯನ್ನು 1936ರಲ್ಲಿ ಆರಂಭಿಸಿದರು. ಸರ್ಕಾರ ಮತ್ತು ಖಾಸಗಿ ಬಂಡವಾಳದೊಡನೆ ಪ್ರಾರಂಭವಾದ ಈ ಸಂಸ್ಥೆ ವರ್ಷಕ್ಕೆ 4000 ಟನ್ ಉತ್ಪಾದನಾ ಸಾಮರ್ಥ್ಯವುಳ್ಳದ್ದಾಗಿತ್ತು. ಕನ್ನಡ ನಾಡಿನ ಕಾಗದದ ಬೇಡಿಕೆ ಕಡಿಮೆಯಿದ್ದುದರಿಂದ ಹೆಚ್ಚು ಭಾಗ ತಮಿಳುನಾಡಿಗೆ ರಫ್ತಾಗುತ್ತಿತ್ತು. ಇದೇ ಕಾಲದಲ್ಲಿ ಗ್ರಾಮೋದ್ಯೋಗದ ಬೆಳೆವಣಿಗೆಯ ಅಂಗವಾಗಿ ಮೈಸೂರು ಸರ್ಕಾರ ಬದನವಾಳು ಖಾದಿಕೇಂದ್ರದಲ್ಲಿ ಕೈಯಲ್ಲಿ ಕಾಗದವನ್ನು ತಯಾರಿಸಲೂ ಆರಂಭಿಸಿತು. ಅನಂತರ ಮುಂಬಯಿ ಕರ್ನಾಟಕದಲ್ಲಿ ಬೊಂಬನ್ನು ಕಚ್ಚಾವಸ್ತುವಾಗಿ ಬಳಸಿ ಕಾಗದ ತಯಾರಿಸುವ ಉದ್ದೇಶದಿಂದ ಕರ್ನಾಟಕ ಪೇಪರ್ ಮಿಲ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಪ್ರಯತ್ನ ನಡೆದು, 1956–58ರ ವೇಳೆಗೆ ಉತ್ತರ ಕನ್ನಡ ಜಿಲ್ಲೆ ದಾಂಡೇಲಿಯಲ್ಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಸ್ಥಾಪಿತವಾಯಿತು. ಇದೇ ಸಮಯದಲ್ಲಿ ಕೊಡಗು, ಮೈಸೂರು, ಹಾಸನ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಗದ ಕಾರ್ಖಾನೆಗಳನ್ನು ಸ್ಥಾಪಿಸಲು ಪ್ರಯತ್ನಗಳು ನಡೆದುವು. ಸು.1954ರಲ್ಲಿ ನಂಜನಗೂಡಿನ ಕಾರ್ಖಾನೆ ಅಸ್ತಿತ್ವಕ್ಕೆ ಬಂತು.

ಸಕ್ಕರೆ ಕಾರ್ಖಾನೆಗಳಲ್ಲಿ ದೊರೆಯುವ ಕಬ್ಬಿನ ಸಿಪ್ಪೆಯನ್ನು ಕಚ್ಚಾ ವಸ್ತುವಾಗಿ ಬಳಸಿ ಕಾಗದ ತಯಾರಿಸುವ ಉದ್ದಿಶ್ಯವನ್ನು ಇಟ್ಟುಕೊಂಡು ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಎಂಬ ಕಾರ್ಖಾನೆ ಮೈಸೂರಿನ ಬಳಿ ಬೆಳಗೊಳದಲ್ಲಿ 1960ರಲ್ಲಿ ಸ್ಥಾಪಿತವಾಯಿತು. ಆದರೆ ಈ ಕಾರ್ಖಾನೆ ಬೊಂಬನ್ನೇ ಮೂಲ ಕಚ್ಚಾವಸ್ತುವಾಗಿ ಬಳಸುವ ಕಾರ್ಖಾನೆಯಾಗಿ ಪರಿವರ್ತನೆಗೊಂಡು ಅನೇಕ ವರ್ಷಗಳ ಕಾಲ ನಡೆಯಿತು. ಈಗ ಉತ್ಪಾದನೆ ಸ್ಥಗಿತಗೊಂಡಿದೆ.

ಬೊಂಬನ್ನಷ್ಟೇ ಅಲ್ಲದೆ, ಬಾಳೆನಾರು, ಹಳೆಯ ಗೋಣಿನಾರು, ನೆಲ್ಲುಹುಲ್ಲು (ಬತ್ತದ ಹುಲ್ಲು), ಹಳೆಯ ಕಾಗದಗಳನ್ನು ಉಪಯೋಗಿಸಿ ಕಾಗದ ಅಥವಾ ರಟ್ಟನ್ನು ತಯಾರಿಸುವ ಅನೇಕ ಪುಟ್ಟ ಕಾರ್ಖಾನೆಗಳು ಅಸ್ತಿತ್ವದಲ್ಲಿವೆ.

ಅರಣ್ಯಗಳು ಕುಗ್ಗುತ್ತಿದ್ದು ಈ ಎಲ್ಲ ಕಾರ್ಖಾನೆಗಳೂ ತಮ್ಮ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚುಹೆಚ್ಚಾಗಿ ಹೆಚ್ಚಿಸುತ್ತಿರುವುದರಿಂದ ಬೊಂಬಿನ ಬೇಡಿಕೆ ಹೆಚ್ಚುತ್ತಿದೆ. ಇಷ್ಟನ್ನೂ ಮತ್ತು ಮುಂದೆ ಬರುವ ಬೊಂಬಿನ ಬೇಡಿಕೆಗಳನ್ನೂ ಪೂರೈಸಲು ನಮ್ಮ ಅರಣ್ಯಗಳು ಅಸಮರ್ಥವಾಗುತ್ತಿವೆ. ಹೀಗಾಗಿ ಕರ್ಪೂರದ ಮರವನ್ನು ಪಲ್ಪಿಗಾಗಿ ಉಪಯೋಗಿಸಲು ಹೆಚ್ಚು ಹೆಚ್ಚು ಯಶಸ್ವೀ ಪ್ರಯತ್ನಗಳು ನಡೆಯುತ್ತಿವೆ. ಕಾಗದ ತಯಾರಿಕೆಗೆ ಬೇಕಾಗುವ ಮತ್ತೆಲ್ಲ ಕಚ್ಚಾ ವಸ್ತುಗಳೂ ಕನ್ನಡ ನಾಡಿನಲ್ಲೇ ದೊರೆಯುತ್ತವೆ.

ಕಾಗದ ಉದ್ಯಮದಲ್ಲಿ ಅಖಿಲ ಭಾರತ ಉತ್ಪಾದನಾ ಶಕ್ತಿ 9,00,000 ಟನ್. ಕರ್ನಾಟಕದ ಕಾರ್ಖಾನೆಗಳ ಒಟ್ಟು ಉತ್ಪಾದನೆ 1,02,000 ಟನ್. ಕರ್ನಾಟಕದಲ್ಲಿ ಉತ್ತಮ ವಿದ್ಯುತ್ ಮತ್ತು ನೀರಿನ ಸೌಲಭ್ಯ ವಿಶಾಲವಾದ ಬಿದಿರಿನ ಕಾಡುಗಳು ಇರುವುದಲ್ಲದೆ, ಕಬ್ಬಿನ ಸಿಪ್ಪೆ, ನೆಲ್ಲು ಹುಲ್ಲು ಇತ್ಯಾದಿಗಳೂ ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತವಾಗಿ ಈ ಉದ್ಯಮ ಮತ್ತಷ್ಟು ಬೆಳೆಯುವ ಸಾಧ್ಯತೆ ಇದೆ. (ಟಿ.ಕೆ.ಆರ್.ಎಸ್.)

**ಕಾಗದ ಹಣ :** ಐತಿಹಾಸಿಕವಾಗಿ ಗ್ರೀಕರು ಮೊಟ್ಟಮೊದಲಬಾರಿಗೆ ಲೋಹನಾಣ್ಯಗಳನ್ನು, ಇತರ ರೂಪದ ಹಣವನ್ನು ರೂಢಿಗೆ ತಂದರು ಎಂದು ತಿಳಿದುಬರುತ್ತದೆ. ಹಣಕ್ಕೆ ಮೂರು ರೀತಿಯ ಬೆಲೆಗಳು ಇರುತ್ತವೆ. ಮೊದಲನೆಯದು ವಾಸ್ತವಿಕ ಅಥವಾ ಅಂತರ್ಗತ ಮೌಲ್ಯ. ಉದಾಹರಣೆಗೆ ಒಂದು ಐದು ರೂಪಾಯಿಯ ನಾಣ್ಯವನ್ನು ತಯಾರಿಸಲು ತಗುಲುವ ಬೆಲೆಗೆ ಅದರ ವಾಸ್ತವಿಕ ಅಥವಾ ಸ್ವಾಭಾವಿಕ ಬೆಲೆ ಎಂದು ಹೇಳಬಹುದು. ಎರಡನೆಯದು ಮಾರುಕಟ್ಟೆಯ ಬೆಲೆ. ಅಂದರೆ ಯಾವುದೇ ದೇಶದಲ್ಲಿ ಹಣವನ್ನು ಚಿನ್ನ ಅಥವಾ ಬೆಳ್ಳಿಗಳ ಒಟ್ಟು ಮೌಲ್ಯವನ್ನು ಆಧರಿಸಿ ಹಣದ ಬೆಲೆಯನ್ನು ನಿರ್ಧರಿಸುತ್ತಿದ್ದರು. ಮೂರನೆಯದು ಕಾನೂನಿನನ್ವಯ ನಿಶ್ಚಿತ ಬೆಲೆಯ ಚಲಾವಣಾರ್ಥ.

ಬಹಳ ಹಿಂದೆ ಹಣದ ಚಾಲನೆ ನಾವು ತಿಳಿದಷ್ಟು ಸುಲಭವಾಗಿರಲಿಲ್ಲ. ಪದಾರ್ಥಗಳ ವಿನಿಮಯದಿಂದ ಪ್ರಾರಂಭವಾದ ಅನಂತರ ವಸ್ತುವಿನಿಮಯಗಳ ಚಾಲನೆ ಕೊಂಚ ಮಟ್ಟಿಗೆ ಸುಧಾರಿಸಿತು. ಮುಂದಿನ ಹಂತದಲ್ಲಿ ಕೆಲವು ಸಾಕು ಪ್ರಾಣಿಗಳ, ಹಾಗೂ ದವಸ ಧಾನ್ಯಗಳ ವಿನಿಮಯ ಪರಿಸ್ಥಿತಿಯನ್ನು ಇನ್ನಷ್ಟು ಸುಧಾರಿಸಿತು. ಮುಂದೆ ಕೆಲವು ಸಮುದ್ರದಲ್ಲಿ ವಾಸ ಮಾಡುವ ಹುಳುಗಳ ಚಿಪ್ಪನ್ನು ಹಣವನ್ನಾಗಿ ಉಪಯೋಗಿಸಿ ಪದಾರ್ಥಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು.

ಎಲ್.ವಿ. ಚಾಂಡ್ಲೆರ್ ಅವರ ಗ್ರಂಥ "ದಿ ಎಕನಾಮಿಕ್ಸ್ ಆಫ್ ಮನಿ ಬ್ಯಾಂಕಿಂಗ್"ನಲ್ಲಿ ಹೇಳಿರುವಂತೆ ಪ್ರಪಂಚದ ವಿವಿಧ ಭಾಗಗಳಲ್ಲಿ ಈ ಕೆಳಗಿನ ವಸ್ತುಗಳನ್ನು ಹಣವನ್ನಾಗಿ ಉಪಯೋಗಿಸುತ್ತಿದ್ದರು:

| | | | |
|---|---|---|---|
| ಜೇಡಿಮಣ್ಣು | ಕವಡೆ | ಚಿಪ್ಪು/ಶಂಖಗಳಿಂದ ಮಾಡಿದ ಮಣಿಗಳು | ಆಮೆಯ ಚಿಪ್ಪುಗಳು |
| ತಿಮಿಂಗಿಲ ಜಾತಿಯ ಅಥವಾ ಸ್ತನಿಯ ಹಲ್ಲುಗಳು | ತಿಮಿಂಗಿಲದ ದಂತಗಳು | ವರಾಹದ ಕೋರೆ ಹಲ್ಲುಗಳು | ವರಾಹದ ಕೋರೆ ಹಲ್ಲುಗಳು ಮರಕುಟಿಕದ ತಲೆಚಿಪ್ಪುಗಳು |
| ಮೇಕೆಗಳು | ಗುಲಾಮರು | ಅಕ್ಕಿ / ಬತ್ತ | ಚಹಾ |
| ತಂಬಾಕು | ಡಾಮರು ಮೇಣ | ಉಣ್ಣೆ | ಉಪ್ಪು |
| ಮಣ್ಣು ಅಗೆಯುವ ಉಪಕರಣಗಳು (ಸನಿಕೆ, ಗುದ್ದಲಿ) | ಮಡಿಕೆಗಳು | ದೋಣಿಗಳು | ಪಿಂಗಾಣಿ |
| ಕಲ್ಲುಗಳು | ಕಬ್ಬಿಣ | ತಾಮ್ರ | ಹಿತ್ತಾಳೆ |
| ಕಂಚು | ನಿಕ್ಕಲ್ | ಕಾಗದ | ಚರ್ಮ |
| ಅಂಟು ಫಲಕಗಳು | ಗಂಜೀಫಾ ಎಲೆ (ಪ್ಲೇಯಿಂಗ್ ಕಾರ್ಡ್ಸ್) | ಪಶುಗಳು | ಹಂದಿ |
| ಕುದುರೆಗಳು | ಕುರಿಗಳು | ತೆನೆ | ದ್ರಾಕ್ಷಾರಸ |
| ಬಿಯರ್ | ಚಾಕುಗಳು | ಚಿನ್ನ | ಬೆಳ್ಳಿ |
| ಚಿನ್ನಬೆಳ್ಳಿಯ ಮಿಶ್ರಲೋಹ | | ಸೀಸ | |

ಅನಂತರ ಲೋಹದ ಚಿಕ್ಕ ಚಿಕ್ಕ ಆಕಾರದ ಚೂರುಗಳನ್ನು ಉಪಯೋಗಿಸಿ ಹಣವನ್ನಾಗಿ ಒಪ್ಪಿಕೊಂಡು ವಿನಿಮಯಮಾಡಿಕೊಳ್ಳಲು ಪ್ರಾರಂಭಿಸಿದರು. ಲೋಹದ ಪ್ರಮಾಣ ಎಲ್ಲ ದೇಶಗಳಲ್ಲಿಯೂ ಒಂದೇ ಪ್ರಮಾಣದಲ್ಲಿ ಇಲ್ಲದಿದ್ದುದರಿಂದಾಗಿ ಹಣದ ಬೆಲೆಯನ್ನು ನಿರ್ಧರಿಸಲು ಕಷ್ಟವಾಯಿತು. ಆದ್ದರಿಂದ ಯಾವುದಾದರೂ ಎಲ್ಲ ದೇಶಗಳೂ ಒಪ್ಪಿಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ರೂಪಿಸಬೇಕಾಯಿತು. ಈ ಹಂತದಲ್ಲಿ ಕಾಗದದ ಹಣ ತನ್ನ ಸ್ವರೂಪವನ್ನು ತಳೆಯಿತು ಹಾಗೂ ಸಾರ್ವತ್ರಿಕ ಮಾನ್ಯತೆ ಪಡೆಯಿತು.

ಪ್ರ.ಶ. 970ರಲ್ಲಿ ಚೀನದ ಸ್ಯುಂಗ್ ಸರ್ಕಾರ ಮುದ್ರಿತ ಕಾಗದದ ಹಣವನ್ನು ಸಂಶೋಧಿಸಿತು.

1786 ಮತ್ತು 1789 ರ ನಡುವೆ ಫ್ರಾನ್ಸಿನ ಕ್ರಾಂತಿಕಾರಿ ಸರ್ಕಾರವು ಹೊಡಡಿಸಿದ್ದ ಕಾಗದದ ಹಣದ ಹೆಸರು 'ಅಸಿನೇಟ್' ಎಂದಾಗಿತ್ತು. ಇದನ್ನು ವಶಪಡಿಸಿಕೊಂಡಿದ್ದ ವಿದೇಶಿ ವಸ್ತುಗಳ (ಕಾನ್‌ಫಿಸ್ಕೇಟೆಡ್ ಗೂಡ್ಸ್) ಮೌಲ್ಯಾಧಾರದ ಮೇಲೆ ಮುದ್ರಿಸಲಾಗುತ್ತಿತ್ತು. 1861ರಲ್ಲಿ ಅಮೆರಿಕ ಸರ್ಕಾರವು ಚಿನ್ನಬೆಳ್ಳಿಗಳ ಆಧಾರವಿಲ್ಲದೆ ಗ್ರೀನ್‌ಬ್ಯಾಕ್ ಎಂಬ ಹೆಸರಿನ ಕಾಗದದ ಹಣವನ್ನು ಮುದ್ರಿಸಲು ಪ್ರಾರಂಭಿಸಿತು.

ಫ್ರಾನ್ಸ್‌ನ ಜಾನ್ ಲಾ ಎಂಬುವರು ಮೊಟ್ಟಮೊದಲಬಾರಿಗೆ ಅಧಿಕ ಪ್ರಮಾಣದಲ್ಲಿ ಕಾಗದದ ಹಣವನ್ನು ಜಾರಿಗೆ ತಂದರೂ ಫ್ರಾನ್ಸಿನ ಕ್ರಾಂತಿಯ ಸಮಯದಲ್ಲಿ ಫ್ರಾನ್ಸ್ ಹಾಗೂ ಅಮೆರಿಕಾದಲ್ಲಿ ಕಾಗದ ಹಣವು ಮುಕ್ತ ಚಲಾವಣೆಯಲ್ಲಿತ್ತು.

ಕಾಗದ ಹಣದ ಗುಣಧರ್ಮಗಳು: ಆರ್ಥಿಕ ಸ್ವರೂಪ, ವಿಶ್ವಾಸ, ಸರಳತೆ, ಭದ್ರತೆ, ಸ್ವಯಂಚಾಲನೆ ಹಾಗೂ ಸ್ಥಿತಿಸ್ಥಾಪಕತೆ ಇತ್ಯಾದಿಗಳು.

ಸರ್ಕಾರದಿಂದಾಗಲಿ ಸರ್ಕಾರದಿಂದ ಅಧಿಕಾರ ಪಡೆದ ಸಂಸ್ಥೆಯಿಂದಾಗಲಿ ಕಾಗದಪತ್ರರೂಪದಲ್ಲಿ ನೀಡಲಾದ ಹಣ (ಪೇಪರ್ ಮನಿ). ಇವುಗಳನ್ನು ನೋಟುಗಳೆನ್ನುತ್ತಾರೆ. ಚೆಕ್ಕುಗಳೂ ಹುಂಡಿಗಳೂ ಹಣದ ಕಾರ್ಯಭಾರ ನಡೆಸುವುವಾದರೂ ಅವುಗಳ ಮಿತಚಲಾವಣೆಯಿಂದಾಗಿ ಅವನ್ನು ಕಾಗದ ಹಣವೆಂದು ಕರೆಯುವ ರೂಢಿಯಿಲ್ಲ.

ಇಂಗ್ಲೆಂಡಿನ ಕಾಗದಹಣ ಬ್ಯಾಂಕ್ ಆಫ್ ಇಂಗ್ಲೆಂಡಿನ ಹಾಗೂ ಖಜಾನೆಯ ನೋಟುಗಳಿಂದ ಕೂಡಿದ್ದು ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್‌ಗಳ ಕೆಲವು ವಾಣಿಜ್ಯ ಬ್ಯಾಂಕುಗಳೂ ನೋಟು ಚಲಾಯಿಸುತ್ತವೆ. ಅಮೆರಿಕ ಸಂಯುಕ್ತಸಂಸ್ಥಾನದ ಖಜಾನೆ ವಿಭಾಗ ಹಾಗೂ ಫೆಡರಲ್ ರಿಸರ್ವ್ ಬ್ಯಾಂಕುಗಳು ಕಾಗದ ಹಣವನ್ನು ಸೃಷ್ಟಿಸುತ್ತವೆ. ಫೆಡರಲ್ ರಿಸರ್ವ್ ಬ್ಯಾಂಕುಗಳು ಐದು ಡಾಲರುಗಳಿಗೆ ಮೇಲ್ಪಟ್ಟ ನೋಟುಗಳನ್ನೂ ಖಜಾನೆ ವಿಭಾಗ ಒಂದು ಮತ್ತು ಎರಡು ಡಾಲರ್ ನೋಟುಗಳ ಜೊತೆಗೆ ಕೆಲವು ಐದು ಮತ್ತು ಹತ್ತು ಡಾಲರ್ ನೋಟುಗಳನ್ನೂ ಚಲಾವಣೆಗೆ ನೀಡುತ್ತವೆ. ಭಾರತದಲ್ಲಿ ಒಂದು ರೂಪಾಯಿಯ ನೋಟನ್ನು ಹಣಕಾಸು ಸಚಿವಾಲಯ ಇದಕ್ಕೆ ಮೇಲ್ಪಟ್ಟು ಎಲ್ಲ ನೋಟುಗಳನ್ನೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯವೂ ಚಲಾವಣೆಗೆ ನೀಡುತ್ತವೆ.

**ವಿಕಾಸ:** ನೋಟುಗಳು ಹಣವೆಂಬುದಾಗಿ ಹೇಗೆ ಸಾರ್ವಜನಿಕರ ಒಪ್ಪಿಗೆ ಪಡೆದುವು ಎಂಬುದನ್ನರಿಯಬೇಕಾದರೆ ಕಾಗದ ಹಣದ ವಿಕಾಸವನ್ನು ಅವಲೋಕಿಸಬೇಕು. ಕಾಗದ

ಹಣದ ವಿಕಾಸದಲ್ಲಿ ನಾಲ್ಕು ಹಂತಗಳನ್ನು ಕ್ರೌತರ್ ಗುರುತಿಸಿದ್ದಾನೆ. ವ್ಯಾಪಾರಿಗಳು ಊರಿಂದೂರಿಗೆ ಹೋಗುವಾಗ ಕಳುವಿನ ಭಯದಿಂದ ನಗದನ್ನು ಕೊಂಡೊಯ್ಯುವ ಬದಲಾಗಿ ತಮ್ಮೂರಿನ ಗಣ್ಯವ್ಯಕ್ತಿ ನೀಡಿದ ಹಣ ಪಡೆಯುವ ಹಕ್ಕಿನ ಪತ್ರಗಳನ್ನು ಕೊಂಡು ಹೋಗುತ್ತಿದ್ದದ್ದು ಮೊದಲನೆಯ ಹಂತ. ಪತ್ರದಲ್ಲಿ ನಮೂದಿಸಿರುವ ಹಣವನ್ನು ವ್ಯಾಪಾರಿ ತನ್ನಲ್ಲಿ ಠೇವಣಿ ಇಟ್ಟಿರುವನೆಂದೂ ಈ ಹಣವನ್ನು ವ್ಯಾಪಾರಿಯ ಆದೇಶದ ಮೇರೆಗೆ ಅವನಿಗೆ ಅಥವಾ ಆತ ಸೂಚಿಸಿದವರಿಗೆ ಕೊಡಲು ತಾನು ಬಾಧ್ಯನೆಂದೂ ಆ ಗಣ್ಯವ್ಯಕ್ತಿ (ಈಗಿನ ಬ್ಯಾಂಕರ್ ಎನ್ನಬಹುದಾದ ವ್ಯಕ್ತಿ) ಬರೆದು ಕೊಡುತ್ತಿದ್ದ. ಮುಂದಿನ ಹಂತದಲ್ಲಿ ಒಂದು ಸಣ್ಣ ಬದಲಾವಣೆ ಕಂಡುಬಂತು. ವ್ಯಾಪಾರಿ ಠೇವಣಿ ಇಟ್ಟಿರುವ ಹಣವನ್ನೆಲ್ಲವನ್ನೂ ಪತ್ರದಲ್ಲಿ ನಮೂದಿಸಿ ಅವನ ಹೆಸರಿನಲ್ಲಿ ಪತ್ರ ಬರೆಯುವುದಕ್ಕೆ ಬದಲಾಗಿ ಪತ್ರ ತರುವವನಿಗೆ ಎಂದು ಬರೆದು ಅನುಕೂಲ ಪರಿಮಾಣದ ಹಣಕ್ಕೆ ಪತ್ರವನ್ನು ತಯಾರಿಸುವ ರೂಢಿ ಜಾರಿಗೆ ಬಂದಿತು. ಹೀಗೆ 1 ಪೌಂ, 10ಪೌಂ ಅಥವಾ 100 ಪೌಂ ಹಣವನ್ನು ಯಾರು ಆ ಪತ್ರಗಳನ್ನು ತೋರಿಸುತ್ತಾರೂ ಅವರಿಗೆ ಕೊಡುವೆವು ಎಂಬ ವಚನವನ್ನೊಳಗೊಂಡ ಪತ್ರಗಳು ಜಾರಿಯಲ್ಲಿ ಬಂದುವು.

ಹೀಗೆ ಎರಡನೆಯ ಹಂತದವರೆಗೂ ವಚನಪತ್ರಗಳು ಹಣದ ಪ್ರತಿನಿಧಿ ರೂಪದಲ್ಲಿ ಬಳಕೆಯಲ್ಲಿದ್ದುವು. ಅವನ್ನು ಪಡೆದ ವ್ಯಾಪಾರಿ ಸಾಲಿಗ ಆ ಪತ್ರಗಳನ್ನು ಹೊರಡಿಸಿದ ಬ್ಯಾಂಕರನಿಂದ ಅವನ್ನು ನಗದು ಹಣಕ್ಕೆ ಪರಿವರ್ತಿಸಿಕೊಳ್ಳಬೇಕಾಗಿತ್ತು. ಆದರೆ ಕಾಲ ಕ್ರಮೇಣ ಪ್ರತಿನಿಧಿರೂಪದ ಹಣವನ್ನೇ ಸ್ವಯಂ ಹಣವಾಗಿ ಬಳಸಲು ಪ್ರಾರಂಭವಾಯಿತು. ಹೀಗೆ ಪತ್ರವನ್ನು (ನೋಟು) ಒಂದು ವ್ಯವಹಾರಕ್ಕೆ ಉಪಯೋಗಿಸಿ ತತ್ ಕ್ಷಣದ ನಗದು ಹಣಕ್ಕೆ ಪರಿವರ್ತಿಸಿಕೊಳ್ಳುವ ಬದಲು ಅದು ಅನೇಕ ವ್ಯವಹಾರಗಳನ್ನು ತೀರಿಸಲು ಬಳಕೆಗೆ ಬರಲಾಗಿ ಒಬ್ಬರ ಕೈಯಿಂದ ಮತ್ತೊಬರ ಕೈಗೆ ಓಡಾಡಲಾರಂಭಿಸಿತು. ಆದರೆ ಎಲ್ಲ ನೋಟುಗಳೂ ಹೀಗೆ ಚಲಾವಣೆಯಲ್ಲಿಯೆ ಇರುತ್ತಿರಲಿಲ್ಲ. ಅವುಗಳಲ್ಲಿ ಕೆಲವು ನಗದಿಗೆ ಪರಿವರ್ತನೆಗಾಗಿ ಬ್ಯಾಂಕರನ ಬಳಿಗೆ ಬರುತ್ತಿದ್ದವು. ನೀಡಲಾದ ನೋಟುಗಳಲ್ಲಿ ಸಾಮಾನ್ಯವಾಗಿ ಒಂದು ಗೊತ್ತಾದ ಪ್ರಮಾಣದ ನೋಟುಗಳು ಮಾತ್ರ ನಗದಿಗಾಗಿ ವಾಪಸಾಗುವುವೆಂಬುದನ್ನು ಬ್ಯಾಂಕರುಗಳು ಅನುಭವದಿಂದ ತಿಳಿದುಕೊಂಡರು. ಹೀಗೆ ಬ್ಯಾಂಕರುಗಳು ತಾವು ಸ್ವೀಕರಿಸಿದ ಠೇವಣಿಗಿಂತ ಹೆಚ್ಚು ಮೊಬಲಗಿನ ನೋಟುಗಳನ್ನು ಚಲಾವಣೆಗೆ ನೀಡಲು ಸಾಧ್ಯವಾಯಿತು. ಇದು ಮೂರನೆಯ ಹಾಗೂ ಗಮನಾರ್ಹವಾದ ಹಂತ. ಈ ಹಂತದಲ್ಲಿ ಬ್ಯಾಂಕು ನೋಟು ಸ್ವಯಂ ಹಣವಾಗಿ ಪುರಸ್ಕೃತವಾಯಿತಲ್ಲದೆ ನಗದಿಗಿಂತ ಅಧಿಕಪ್ರಮಾಣದ ನೋಟುಗಳನ್ನು ಹೊರಡಿಸುವ ಅನುಕೂಲವುಂಟಾಯಿತು. ಅಲ್ಲದೆ ಈ ಮಧ್ಯೆ ನೋಟುಗಳನ್ನು ಕಾನೂನಿನ ದೃಷ್ಟಿಯಲ್ಲೂ ಹಣವೆಂದು ಗುರುತಿಸಲಾಗಿ ಅವುಗಳ ಪರಿವರ್ತನೆಗೆ ಸಂಬಂಧಿಸಿದಂತೆ ಒಂದು ಕ್ರಾಂತಿಕಾರಕ ಬದಲಾವಣೆಯುಂಟಾಯಿತು. ಅದೇನೆಂದರೆ, ಕಾಗದಹಣ ಸುಭದ್ರವಾಗಿರಬೇಕಾದರೆ ಚಿನ್ನಕ್ಕಾಗಲಿ ಚಿನ್ನದ ನಾಣ್ಯಗಳಿಗಾಗಲಿ ಪರಿವರ್ತನೆಯಾಗುವ ಅವಕಾಶವಿರಬೇಕೆಂಬ ಸಾಮಾನ್ಯ ಭಾವನೆ ಅಲ್ಲಿಯವರೆಗೆ ಬೆಳೆದುಬಂದಿತ್ತು. ಆ ಅವಕಾಶವಿದ್ದುದರಿಂದಲೇ ನೋಟುಗಳು ಜನರ ನಂಬಿಕೆ ಗಳಿಸಿದ್ದುವು. ಆದರೆ ಯಾವಾಗ ನೋಟುಗಳು ಕಾಲಕ್ರಮೇಣ ಕಾನೂನಿನ ಬಲವುಳ್ಳ ಹಣವೆಂದು ಘೋಷಿತವಾಗಿ ಬಳಕೆಗೆ ಬಂದವೋ ಅಂದಿನಿಂದ ಪರಿವರ್ತನೆಯ ಅವಕಾಶ ಅನಾವಶ್ಯಕವಾಯಿತು. ಪರಿವರ್ತನೆಯೇ ಜನರ ನಂಬಿಕೆಗೆ ಆಧಾರಭೂತವಾದ್ದೆಂಬ ಭಾವನೆ ಬದಲಾಯಿತು. ಎಂದು ಹಣ ಮಾಡಬೇಕಾದ ಕಾರ್ಯಗಳನ್ನು ನೋಟುಗಳು ಮಾಡುವುವೆಂಬದನ್ನು ಮನಗಾಣಲಾಯಿತೋ ಅಂದಿನಿಂದ ಅವುಗಳ ಮೇಲೆ ಜನರಿಗೆ ನಂಬಿಕೆ ಬಂತು. ಆದ್ದರಿಂದ ನೋಟುಗಳ ಪರಿವರ್ತನೆಯ ಸಾಧ್ಯತೆ ಅನಾವಶ್ಯಕವಾಯಿತು. ವಾಹಕರಿಗೆ (ಬೇರರ್) ಪಾವತಿಮಾಡುವುದಾಗಿ ವಚನ ನೀಡುತ್ತೇನೆಂದು ನೋಟಿನ ಮೇಲೆ ಅಚ್ಚಾಗಿರುವ ಒಕ್ಕಣೆಗೆ ಈಗ ಏನೂ ಅರ್ಥವಿಲ್ಲ. ಬ್ಯಾಂಕಿನಲ್ಲಿ ನೋಟನ್ನು ಕೊಟ್ಟರೆ ಚಿಲ್ಲರೆ ನಾಣ್ಯ ಇಲ್ಲವೆ ಸಣ್ಣ ವರ್ಗದ ನೋಟುಗಳನ್ನು ಪಡೆಯಬಹುದು. ಮಾರುಕಟ್ಟೆಯಲ್ಲಿ ಚಿನ್ನ ಇಲ್ಲವೆ ಚಿನ್ನದ ನಾಣ್ಯಗಳಿಗೆ ನೋಟನ್ನು ಪರಿವರ್ತಿಸಬಹುದು. ಇದು ಕಾಗದ ಹಣದ ವಿಕಾಸದ ನಾಲ್ಕನೆಯ ಹಾಗೂ ಕೊನೆಯ ಹಂತ.

**ಕಾಗದದ ಹಣವನ್ನು ಮುದ್ರಿಸಲು ಇರುವ ವಿಧಾನಗಳು :**

1.ಸರಳ ಠೇವಣಿ ವಿಧಾನ, 2. ಗರಿಷ್ಠ ನ್ಯಾಸರಕ್ಷಣಾ ವಿಧಾನ (ಮ್ಯಾಕ್ಸಿಮಂ ಫಿಡ್ಯುಷಿಯರಿ ಸಿಸ್ಟಮ್), 3. ಸ್ಥಿರ ನ್ಯಾಸರಕ್ಷಣಾ ವಿಧಾನ(ಫಿಕ್ಸ್‌ಡ್ ಫಿಡ್ಯುಷಿಯರಿ ಸಿಸ್ಟಮ್), 4. ಅನುಪಾತೀಯ ಮೀಸಲು ವಿಧಾನ, 5. ಕನಿಷ್ಠ ಮೀಸಲು ವಿಧಾನ, 6. ಶೇಕಡಾವಾರು ಠೇವಣಿ ವಿಧಾನ, 7. ಹೆಚ್ಚುವರಿ ಲಾಭಾಂಶ ಠೇವಣಿ ವಿಧಾನ.

**ಕಾಗದ ಹಣ ಮತ್ತು ಉದ್ದರಿ ಹಣ:** ಈ ಸಂದರ್ಭದಲ್ಲಿ ನೋಟುಗಳಿಗೂ ಚೆಕ್ಕು ರೂಪದ ಬ್ಯಾಂಕು ಹಣ ಅಥವಾ ಉದ್ದರಿ ಹಣಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬಹುದು. ಚೆಕ್ಕುಗಳ ರೂಪದಲ್ಲಿ ಪ್ರಚಲಿತವಾಗಿರುವ ಹಣ ಪ್ರಭೇದವನ್ನು ನೋಟುಗಳು ಪ್ರಥಮ ಹಂತದಲ್ಲಿದ್ದಂತೆ ಹಣ ಪಡೆಯುವ ಹಕ್ಕಿನ ಪತ್ರಗಳೆನ್ನಬಹುದೇ ಹೊರತು ಸ್ವಯಂ ಹಣವೇನೂ ಅಲ್ಲ. ಚೆಕ್ಕು ಕೊಟ್ಟ ವ್ಯಕ್ತಿಯ ಬ್ಯಾಂಕು ಲೆಕ್ಕದಲ್ಲಿ ಅಷ್ಟೊಂದು ಹಣವಿದೆ ಎಂಬ ನಂಬಿಕೆಯೇ ಸಾಲತೀರುವೆಗಾಗಿ ಚೆಕ್ಕು ಸ್ವೀಕರಿಸಲು ಸಾಲಿಗ ಒಪ್ಪಲು ಕಾರಣ. ಎಲ್ಲಿಯವರೆಗೆ ಈ ನಂಬಿಕೆಯಿರುತ್ತದೆಯೊ ಅಲ್ಲಿಯವರೆಗೆ ಚೆಕ್ಕುಗಳು ಹಣದ ಕಾರ್ಯ ಮಾಡುತ್ತವೆ. ಚೆಕ್ಕುಗಳಿಗೆ ಕಾನೂನು ಬಲವಿಲ್ಲದ ಕಾರಣ ಸಾಲತೀರುವೆಯಲ್ಲಿ ಅವನ್ನು ಸ್ವೀಕರಿಸಲೇಬೇಕೆಂಬ ಕಡ್ಡಾಯವೇನೂ ಇಲ್ಲ. ಆದರೆ ಕಾಗದ ಹಣ ರೂಢಿಯಿಂದಲೂ ಕಾನೂನಿನ ಬಲದಿಂದಲೂ ಸ್ವೀಕಾರಾರ್ಹತೆ ಪಡೆದಿದ್ದು, ಅದನ್ನು ಸಾಲತೀರುವೆಯಲ್ಲಿ ಕಡ್ಡಾಯವಾಗಿ ಸ್ವೀಕರಿಸಲೇಬೇಕೆಂಬ ನಿಯಮವಿದೆ. ಆದರೂ ಉದ್ದರಿ ಹಣದಲ್ಲಿ ಒಂದು ಅನುಕೂಲವುಂಟು. ಒಬ್ಬ ವ್ಯಕ್ತಿಯ ಬಳಿ ಇರುವ ಕಾಗದ ಹಣ ನಾಶವಾದರೆ ಅಷ್ಟು ಹಣ ಹೋದಂತೆಯೇ ಸರಿ. ಆದರೆ ಚೆಕ್ಕು ಕೇವಲ ಹಣ ಪಡೆಯುವ ಹಕ್ಕು ಪತ್ರವಾದ್ದರಿಂದ ಇಲ್ಲಿ ಆ ಭಯವಿಲ್ಲ.

**ನೀಡಿಕೆ ನಿಯಂತ್ರಣ:** ಆರಂಭದಲ್ಲಿ ಅನೇಕ ವಾಣಿಜ್ಯ ಬ್ಯಾಂಕುಗಳು ನೋಟು ನೀಡಿಕೆಯ ಕಾರ್ಯದಲ್ಲಿ ನಿರತವಾಗಿದ್ದುವಾದರೂ ಕ್ರಮೇಣ ಇದು ಸರ್ಕಾರದ ಪರಮಾಧಿಕಾರವಾಗಿ ಪರಿಣಮಿಸಿರುವುದನ್ನು ಪಾಶ್ಚಾತ್ಯರಾಷ್ಟ್ರಗಳ ಇತಿಹಾಸದಲ್ಲಿ ಕಾಣಬಹುದು. ಸರ್ಕಾರ ನೇರವಾಗಿ ನೋಟು ನೀಡಿಕೆಯ ಕಾರ್ಯದಲ್ಲಿ ನಿರತವಾಗದೆ ಇದನ್ನು ಕೇಂದ್ರೀಯ ಬ್ಯಾಂಕಿಗೆ ವಹಿಸಿಕೊಟ್ಟಿರುತ್ತದೆ. ಈ ಪ್ರವೃತ್ತಿಗೆ ಕಾರಣಗಳು ಮುಖ್ಯವಾಗಿ ಎರಡು: 1 ಸರ್ಕಾರ ತನಗೆ ಆವಶ್ಯವಾದಾಗಲೆಲ್ಲ ನೋಟುಗಳನ್ನು ಸೃಷ್ಟಿಸಿ ಖರ್ಚಿಗೆ ಉಪಯೋಗಿಸಿಕೊಳ್ಳಲು ದುಷ್ಪ್ರೇರಣೆಯಾಗಬಹುದೆಂಬ ಭಯ. 2 ಹಣದ ಸರಬರಾಯಿ ವಾಣಿಜ್ಯ ವಹಿವಾಟುಗಳ ಆವಶ್ಯಕತೆಗೆ ಅನುಗುಣವಾಗಿ ಬದಲಾವಣೆ ಹೊಂದಬೇಕು. ಅರ್ಥವ್ಯವಸ್ಥೆಯ ಹಣದ ಆವಶ್ಯಕತೆಗಳನ್ನೂ ಅದರ ನಾಡಿಯ ಮಿಡಿತವನ್ನು ಸರ್ಕಾರಕ್ಕಿಂತ ಬ್ಯಾಂಕು ಚೆನ್ನಾಗಿ ಅರಿತಿರುತ್ತದೆ ಎಂಬ ನಂಬಿಕೆಯುಂಟು. ಆದರೆ ನೋಟು ನೀಡಿಕೆಯ ಅಧಿಕಾರವನ್ನು ಅನೇಕ ವಾಣಿಜ್ಯ ಬ್ಯಾಂಕುಗಳಿಗೆ ಹಂಚಿಕೊಡುವ ಬದಲು ರಾಷ್ಟ್ರದ ಪರಮೋಚ್ಚ ಹಣ ಪ್ರಾಧಿಕಾರಿಯಾದ ಕೇಂದ್ರೀಯ ಬ್ಯಾಂಕಿಗೆ ಅದನ್ನು ವಹಿಸಿಕೊಡುವುದು ಅತ್ಯಂತ ಉಚಿತ. ಇದರಿಂದ ಹಣ ಚಲಾವಣೆಯಲ್ಲಿ ಏಕರೂಪತೆ ಸಾಧ್ಯವಾಗುತ್ತದೆ. ಈ ಕಾರಣಗಳಿಂದಾಗಿ ಸಾಮಾನ್ಯವಾಗಿ ನೋಟು ನೀಡಿಕೆಯ ಏಕಸ್ವಾಮ್ಯವನ್ನು ಕೇಂದ್ರೀಯ ಬ್ಯಾಂಕು ಪಡೆದಿರುತ್ತದೆ. ಅದು ಈ ಕಾರ್ಯಭಾರದ ನಿರ್ವಹಣೆಯಲ್ಲಿ ಮುಖ್ಯವಾಗಿ ಅನುಸರಿಸಬೇಕಾದ ನಿಯಮಗಳು ಎರಡು: ಪುಟಿತತೆ ಮತ್ತು ಭದ್ರತೆ. ಯಾವುದೇ ನೋಟು ಪದ್ಧತಿ ವಾಣಿಜ್ಯ ವಹಿವಾಟುಗಳು ಏರಿಳಿತಗಳಿಗೆ ತಕ್ಕಂತೆ ಸ್ವಯಂಚಲಿಯಾಗಿ ಹಿಗ್ಗುವ ಕುಗ್ಗುವ ಅನುಕೂಲ ಪಡೆದಿರಬೇಕೆಂಬುದು ಒಂದನೆಯ ನಿಯಮ. ಹೊರಡಿಸಲಾದ ನೋಟುಗಳಿಗೆ ಬೆಂಗಾವಲಾಗಿ ಆಸ್ತಿಗಳನ್ನಿಡಬೇಕೆಂಬುದು ಎರಡನೆಯದು. ಇದುವರೆಗೆ ನಾನಾ ದೇಶಗಳಲ್ಲಿ ಅನುಸರಿಸಿಕೊಂಡುಬಂದಿರುವ ಕೆಲವು ನೋಟು ನೀಡಿಕೆ ಪದ್ಧತಿಗಳ ಪರಿಚಯವನ್ನು ಮುಂದೆ ಕೊಡಲಾಗಿದೆ.

ಇಂಗ್ಲೆಂಡಿನಲ್ಲಿ ಸ್ಥಿರ ವಿಶ್ವಾಸಾಶ್ರಿತ ನೋಟುನೀಡಿಕೆ ಪದ್ಧತಿ ಜಾರಿಗೆ ಬಂದದ್ದು 19 ನೆಯ ಶತಮಾನದ ಮಧ್ಯಭಾಗದಲ್ಲಿ. ಈ ಪದ್ಧತಿಯ ಪ್ರಕಾರ ಇಂಗ್ಲೆಂಡಿನ ಕೇಂದ್ರೀಯ ಬ್ಯಾಂಕಾದ ಬ್ಯಾಂಕ್ ಆಫ್ ಇಂಗ್ಲೆಂಡ್ ಒಂದು ನಿಗದಿಯಾದ ಮಿತಿಯವರೆಗೆ ಅಮೂಲ್ಯ ಲೋಹದ ಬೆಂಗಾವಲಿಲ್ಲದೆಯೆ ನೋಟುಗಳನ್ನು ನೀಡಬಹುದೆಂದೂ ಈ ನೋಟುಗಳಿಗೆ ಸರ್ಕಾರಿ ಪ್ರತಿಭೂತಿಗಳನ್ನು (ಸೆಕ್ಯೂರಿಟೀಸ್) ಬೆಂಗಾವಲಾಗಿಟ್ಟುಕೊಂಡರೆ ಸಾಕೆಂದೂ ರೂಢಿಯಾಗಿ ಬಂತು. ನೋಟು ನೀಡಿಕೆಯ ಈ ಮಿತಿಯನ್ನು ವಿಶ್ವಾಸಾಶ್ರಿತ ಮಿತಿ (ಫೈಡ್ಯೂಷಿಯರಿ ಲಿಮಿಟ್) ಎಂದು ಕರೆಯಲಾಯಿತು. ಈ ಮಿತಿಗೆ ಮೀರಿ ಹೊರಡಿಸಲಾದ ಪ್ರತಿಯೊಂದು ನೋಟಿಗೂ ಅದರ ಮೌಲ್ಯಕ್ಕನುಗುಣವಾದ ಅಮೂಲ್ಯ ಲೋಹವನ್ನು ಮೀಸಲಾಗಿಡಬೇಕೆಂದಾಯಿತು. ಇದು ನೋಟುಗಳ ಅತಿಪ್ರಸರಣಕ್ಕೆ ಪ್ರತಿಬಂಧಕವಾಗಿ ಪರಿಣಮಿಸುತ್ತದೆ. ನೋಟು ಪದ್ಧತಿಗೆ ಇದರಿಂದ ಒಂದು ಸುಭದ್ರ ಆಧಾರ ಸಿಕ್ಕಿದಂತಾಯಿತು. ಆದರೆ ಅವಶ್ಯವಿದ್ದಾಗ ಹಣ ವಿಸ್ತರಣೆಗೆ ಅವಕಾಶ ನೀಡುವಂತಿರಲಿಲ್ಲವಾದ ಕಾರಣ ಈ ಪದ್ಧತಿಯಲ್ಲಿ ಪುಟಿತ ಗುಣವಿಲ್ಲವೆಂಬ ಟೀಕೆಗೆ ಇದು ಗುರಿಯಾಯಿತು. ನೋಟು ನೀಡಿಕೆಗೆ ಪುಟಿತತೆ ದೊರಕಿಸಿಕೊಡುವ ದೃಷ್ಟಿಯಿಂದ ಇಂಗ್ಲೆಂಡಿನ ಸರ್ಕಾರ ಆಗಿಂದಾಗ್ಗೆ ವಿಶ್ವಾಸಾಶ್ರಿತ ಮಿತಿಯನ್ನು ಏರಿಸುತ್ತ ಬಂದಿದೆ. ಜಪಾನ್ ಮತ್ತು ನಾರ್ವೆಗಳು ಈ ಪದ್ಧತಿಯನ್ನು ಅನುಸರಿಸುತ್ತಿರುವ ಇತರ ದೇಶಗಳು.

ಜರ್ಮನಿ, ಫ್ರಾನ್ಸ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಬಳಕೆಯಲ್ಲಿರುವುದು ಅನುಪಾತಿ ಸಂಚಿತ ಪದ್ಧತಿ (ಪ್ರಪೋರ್ಷನಲ್ ರಿಸರ್ವ್ ಸಿಸ್ಟಂ). ಈ ಪದ್ಧತಿಯಲ್ಲಿ ರಕ್ಷೆಯಾಗಿಡುವ ಲೋಹದ ಮೀಸಲು, ಚಲಾವಣೆಗೆ ಬಿಟ್ಟಿರುವ ನೋಟುಗಳ ಮೌಲ್ಯದ ಯಾವುದೋ ಒಂದು ಪ್ರಮಾಣದಷ್ಟಿರಬೇಕು. ಉಳಿದುದಕ್ಕೆ ಸರ್ಕಾರಿ ಪ್ರತಿಭೂತಿಗಳು ಹಿನ್ನೆಲೆಯಾಗಿದ್ದರೆ ಸಾಕು ಎಂಬ ನಿಯಮವುಂಟು. ಉದಾಹರಣೆಗೆ, 1956ರ ವರೆಗೆ ಭಾರತದಲ್ಲಿ ಜಾರಿಯಲ್ಲಿದ್ದ ಈ ಪದ್ಧತಿಯ ಪ್ರಕಾರ ನೀಡಿಕೆಯಾದ ನೋಟುಗಳಿಗೆ

ಇಡಲಾಗುತ್ತಿದ್ದ ರಕ್ಷೆಯ ಮೌಲ್ಯದಲ್ಲಿ ಸೇ. 40ರಷ್ಟಾದರೂ ಚಿನ್ನ ಮತ್ತು ಸ್ಟರ್ಲಿಂಗ್ ಪ್ರತಿಭೂತಿಗಳ ರೂಪದಲ್ಲಿರಬೇಕೆಂದೂ ಇದರಲ್ಲಿ ಚಿನ್ನದ ಭಾಗ ರೂ. 40 ಕೋಟಿಗಿಂತ ಕಡಿಮೆಯಿರಬಾರದೆಂದೂ ಉಳಿದದ್ದು ರುಪಾಯಿ ಪ್ರತಿಭೂತಿಗಳ ರೂಪದಲ್ಲಿರಬಹುದೆಂದೂ ನಿಯಮವಿತ್ತು. ಈ ಪದ್ಧತಿಯಲ್ಲಿ ಎರಡು ಅನುಕೂಲಗಳುಂಟು: 1) ಇಲ್ಲಿ ಅನಾವಶ್ಯಕವಾಗಿ ನೋಟುಗಳ ವಿಸ್ತರಣೆ ಕೈಗೊಳ್ಳುವ ಪ್ರವೃತ್ತಿಗೆ ತಡೆಯಿರುತ್ತದೆ. ಏಕೆಂದರೆ ಈ ನಿಯಮದ ಪ್ರಕಾರ ಪ್ರತಿ 100 ರೂ. ಮೌಲ್ಯದ ನೋಟುಗಳನ್ನು ಸೃಷ್ಟಿಸಬೇಕಾದರೂ ಕೊನೆಯ ಪಕ್ಷ 40 ರೂ. ಮೌಲ್ಯದ ಚಿನ್ನ ಮತ್ತು ಸ್ಟರ್ಲಿಂಗ್ ಮೀಸಲಿಡಬೇಕು. (2) ಈ ಪದ್ಧತಿ ನೋಟು ಚಲಾವಣೆಗೆ ಸಾಕಷ್ಟು ಮಿಟಿತತೆ ನೀಡುತ್ತದೆ.

ಕೆಲವು ದೇಶಗಳಲ್ಲಿ ಪ್ರಚಲಿತವಾಗಿರುವ ಮತ್ತೊಂದು ಪದ್ಧತಿಯೆಂದರೆ ಕನಿಷ್ಠ ಮೀಸಲು ಪದ್ಧತಿ (ಮಿನಿಮಮ್ ರಿಸರ್ವ್ ಸಿಸ್ಟಂ). ಭಾರತದ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಅಧಿಕ ಪರಿಮಾಣದಲ್ಲಿ ನೋಟು ವಿಸ್ತರಣೆಯ ಆವಶ್ಯಕತೆಯಿದ್ದಾಗ ಅವರೆಗೆ ಪ್ರಚಲಿತವಿದ್ದ ಅನುಪಾತಿ ಪದ್ಧತಿ ಸಾಕಷ್ಟು ಮಿಟಿತತೆಯುಳ್ಳದ್ದಾಗಿಲ್ಲವೆಂಬುದು ಭಾರತ ಸರ್ಕಾರದ ಗಮನಕ್ಕೆ ಬಂತು. ಈ ಕಾರಣದಿಂದ ಅಕ್ಟೋಬರ್ 1956ರಲ್ಲಿ ಭಾರತ ಸರ್ಕಾರ ಒಂದು ಕಾಯಿದೆಯ ಮೂಲಕ ಕನಿಷ್ಠ ಮೀಸಲು ಪದ್ಧತಿಯನ್ನು ಜಾರಿಗೆ ತಂದಿತು. ಭಾರತದಲ್ಲಿ ಈಗ ಪ್ರಚಲಿತವಾಗಿರುವ ಏರ್ಪಾಡಿನ ಪ್ರಕಾರ ರಿಸರ್ವ್ ಬ್ಯಾಂಕು ನೋಟುಗಳಿಗೆ ಇಡುವ ರಕ್ಷೆಯಲ್ಲಿ ತನ್ನ ಮತ್ತು ವಿದೇಶೀ ವಿನಿಮಯ ಪತ್ರಗಳ ಭಾಗ ರೂ. 200 ಕೋಟಿಯಷ್ಟು ಇದ್ದರೆ ಸಾಕೆಂದೂ ಇದರಲ್ಲಿ ಚಿನ್ನದ ಭಾಗ ರೂ. 115 ಕೋಟಿಗಿಂತ ಕಡಿಮೆಯಿರಕೂಡದೆಂದೂ ನಿಯಮವಿದೆ. ಇದರಿಂದ ನೋಟು ಚಲಾವಣೆಗೆ ಯಥೇಚ್ಛವಾಗಿ ಮಿಟಿಕತೆ ದೊರಕಿದಂತಾಗುತ್ತದೆ. ಈ ಪದ್ಧತಿ ನೋಟು ಸೃಷ್ಟಿಕಾರ್ಯಕ್ಕೆ ಯಾವ ಬಗೆಯ ತಡೆಯನ್ನೂ ಹಾಕದ ಕಾರಣ ಇದು ಅತಿ ಪ್ರಸರಣಕ್ಕೆ ಅವಕಾಶ ಮಾಡಿಕೊಡಬಹುದು.

ಹೀಗೆ ಈಗ ಅನುಷ್ಠಾನದಲ್ಲಿರುವ ಯಾವ ಪದ್ಧತಿಯಲ್ಲೂ ಹಿಂದಿನ ಸುವರ್ಣ ಪ್ರಮಿತಿಯಲ್ಲಿದ್ದಂತೆ ಪೂರ್ಣ ರಕ್ಷೆಯ ನಿಯಮವನ್ನು ಅನುಸರಿಸುತ್ತಿಲ್ಲ; ಇದರ ಆವಶ್ಯಕತೆಯೂ ಇಲ್ಲ. ನೋಟುಗಳನ್ನು ಪರಿವರ್ತಿಸಬೇಕಾದಲ್ಲಿ ಮಾತ್ರ ಪೂರ್ಣ ರಕ್ಷೆಯ ಆವಶ್ಯಕತೆ ಕಂಡುಬರುತ್ತದೆ. ಆದರೆ ನೋಟುಗಳು ಹಣದ ಎಲ್ಲ ಕಾರ್ಯಗಳನ್ನೂ ಮಾಡುವ ಕಾರಣ ಸಾರ್ವಜನಿಕರು ಅವನ್ನು ಪರಿವರ್ತಿಸಿಕೊಳ್ಳುವ ಆವಶ್ಯಕತೆ ಆಂತರಿಕವಾಗಿಯಂತೂ ಕಾಣುವುದಿಲ್ಲ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ನೋಟುಗಳ ಪರಿವರ್ತನೆಯ ಆವಶ್ಯಕತೆಯುಂಟಾಗುತ್ತದೆ. ಆದರೆ ಸರ್ಕಾರ ಇದಕ್ಕಾಗಿ ಸಾಕಷ್ಟು ವಿದೇಶಿ ವಿನಿಮಯ ಸಂಚಿತಿಯನ್ನು (ರಿಸರ್ವ್) ಕೂಡಿಸಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಜೊತೆಗೆ ಪೂರ್ಣ ಉದ್ಯೋಗ ಸಾಧನೆ ಮತ್ತು ರಾಷ್ಟ್ರೀಯ ಉತ್ಪನ್ನದ ಏರಿಕೆಗೆ ನಾಣ್ಯಪದ್ಧತಿಯಲ್ಲಿ ಸಾಕಷ್ಟು ಮಿಟಿತತೆಯಿರಬೇಕು. ಅರ್ಥವ್ಯವಸ್ಥೆಯ ಆವಶ್ಯಕತೆಗೆ ತಕ್ಕ ಹಾಗೆ ನೋಟು ವಿಸ್ತರಣೆಗೆ ಅವಕಾಶವಿರಬೇಕು. ಪೂರ್ಣರಕ್ಷೆಯ ನಿಯಮವನ್ನು ಪಾಲಿಸಿದ್ದೇ ಆದರೆ ಲೋಹ ಸಂಚಿತಿಯ ಅಭಾವದ ಕಾರಣ ಈ ಅನುಕೂಲ ಕಡಿದುಹೋಗುತ್ತದೆ. ಈ ಕಾರಣದಿಂದಲೇ ಪಾರ್ಶ್ವ ಇಲ್ಲವೇ ಕನಿಷ್ಠ ರಕ್ಷೆಯ ನಿಯಮ ಅತ್ಯಂತ ಉಚಿತವಾದದ್ದು. ಆದರೆ ಇಲ್ಲಿಯ ಒಂದು ಭಯವೆಂದರೆ ನೋಟುಗಳ ಅತಿ ವಿಸ್ತರಣೆ, ಅತಿಪ್ರಸರಣ. ಆದರೂ ಅರ್ಥವ್ಯವಸ್ಥೆಯ ಆವಶ್ಯಕತೆಗೆ ತಕ್ಕಂತೆ ಮಾತ್ರ ನೋಟುವಿಸ್ತರಣೆಯನ್ನು ಕೈಗೊಂಡರೆ ಈ ಭಯ ಇರುವುದಿಲ್ಲ. ವಾಸ್ತವವಾಗಿ ಕೇಂದ್ರೀಯ ಬ್ಯಾಂಕುಗಳು ಬೆಲೆಗಳ ಹತೋಟಿಯ, ಪೂರ್ಣೋದ್ಯೋಗ ಸಾಧನೆಯ ಮತ್ತು ರಾಷ್ಟ್ರೀಯ ಉತ್ಪನ್ನದ ಪ್ರವರ್ತನೆಯ ಧ್ಯೇಯಗಳನ್ನು ಗಮನದಲ್ಲಿಟ್ಟುಕೊಂಡು ನೋಟು ವ್ಯವಸ್ಥೆಯನ್ನು ಪ್ರಬುದ್ಧಗೊಳಿಸುವುದರಲ್ಲಿ ಮಗ್ನವಾಗಿವೆ. (ಜಿ.ಬಿ.ಕೆ.; ಎ.ಬಿ.ಎ.)

**ಕಾಗಿಣಾ:** ಗುಲ್ಬರ್ಗ ಜಿಲ್ಲೆಯ ಒಂದು ನದಿ. ಆಂಧ್ರ ಪ್ರದೇಶದ ಕೋಹಿರ್ ಎಂಬಲ್ಲಿ ಹುಟ್ಟುತ್ತದೆ. ಸೇಡಂ ತಾಲ್ಲೂಕಿನ ಈಶಾನ್ಯದ ಅಂಚಿನಲ್ಲಿ ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸಿ ಹೈದರಾಬಾದ್–ವಾಡಿ ರೈಲುಮಾರ್ಗಕ್ಕೆ ಸಮಾನಾಂತರವಾಗಿ ಪಶ್ಚಿಮಾಭಿಮುಖವಾಗಿ ಹರಿದು ಚಿತ್ತಾಪುರ ತಾಲ್ಲೂಕನ್ನು ಪ್ರವೇಶಿಸಿ, ನೈಋತ್ಯಾಭಿಮುಖವಾಗಿ ಹರಿದು ಹುನಗುಂಟ ಗ್ರಾಮದ ಹತ್ತಿರ ಭೀಮಾನದಿಯನ್ನು ಸೇರುತ್ತದೆ. ಈ ಜಿಲ್ಲೆಯಲ್ಲಿ ನದಿಯ ಹರಿವಿನ ಒಟ್ಟು ಉದ್ದ 64ಕಿಮೀ. ಮುಲ್ಲಾಮಾರಿ, ಬೆಣ್ಣೆತೊರೆ ಮತ್ತು ಕಮಲಾವತಿ ಈ ನದಿಗೆ ಸೇರುವ ಮುಖ್ಯ ತೊರೆಗಳು. ಸೇಡಂ ಮತ್ತು ಚಿತ್ತಾಪುರ ಈ ನದಿಯ ಬಳಿ ಇರುವ ಮುಖ್ಯ ಊರುಗಳು. ಮಳಖೇಡ ಪುಣ್ಯಕ್ಷೇತ್ರ. ಗುಲ್ಬರ್ಗ–ಶಾಹಬಾದ–ವಾಡಿ ಮಾರ್ಗದಲ್ಲಿ ಶಾಹಬಾದದ ಸಮೀಪದಲ್ಲಿ ಕಾಗಿಣಾ ನದಿಗೆ ಸೇತುವೆ ಕಟ್ಟಲಾಗಿದೆ. ಈ ನದಿಗೆ ಯಡಹಳ್ಳಿ ಬಳಿ ಕಟ್ಟೆಯೊಂದನ್ನು ಕಟ್ಟಿ ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಸು.20,000 ಎಕರೆಗಳಿಗೆ ನೀರು ಒದಗಿಸಲಾಗುವುದು. *

**ಕಾಗಿನೆಲೆ :** ಕರ್ನಾಟಕ ರಾಜ್ಯದ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಒಂದು ಗ್ರಾಮ. ಕನಕದಾಸರ **(ನೋಡಿ– ಕನಕದಾಸ)** ಆರಾಧ್ಯದೈವ ಆದಿಕೇಶವನ ನೆಲೆಬೀಡು. ಹಾವೇರಿಯಿಂದ 11 ಕಿಮೀ ದೂರದಲ್ಲಿದೆ. ಹಿಂದೆ ಒಂದು ಪರಗಣೆಯಾಗಿ ಅನೇಕ ಗ್ರಾಮಗಳನ್ನು ಒಂಗೊಂಡಿತ್ತು. ಸುಮಾರು 15 ಶಿಲಾಶಾಸನಗಳೂ 10 ಪುರಾತನ ದೇವಾಲಯಗಳೂ ಇವೆ. ಒಮ್ಮೆ ಬನವಾಸಿಯ ಕದಂಬರ ಆಧಿಪತ್ಯಕ್ಕೆ ಒಳಪಟ್ಟಿತ್ತು. ಬನವಾಸಿ ಚಾಳುಕ್ಯರ ಕೈಗೆ ಬಂದಾಗ ಇದೂ ಚಾಳುಕ್ಯರ ಆಡಳಿತಕ್ಕೊಳಪಟ್ಟಿತು. ಕೆಲಕಾಲ ಇದು ದೇವಗಿರಿಯ ಯಾದವರ ಅಂಕಿತದಲ್ಲಿದ್ದುದೂ ಉಂಟು. ಚಾಳುಕ್ಯರ ಭುವನೈಕಮಲ್ಲ ದತ್ತಿ–ದಾನಗಳನ್ನು ಕೊಟ್ಟಿರುವುದರ ಬಗ್ಗೆ ಆಧಾರಗಳಿವೆ. ದೇವಗಿರಿಯ ಯಾದವರು ಬೆಟ್ಟೇಶ್ವರ ಮತ್ತು ಕಾಳಹಸ್ತೀಶ್ವರ ದೇವಾಲಯಗಳಿಗೆ ದಾನವಿತ್ತರು. 14ನೆಯ ಶತಮಾನದಲ್ಲಿ ಬಹಮನೀ ಸುಲ್ತಾನರು ವಿಜಯನಗರದ ದೊರೆ ಬುಕ್ಕನಿಂದ ಇದನ್ನು ವಶಪಡಿಸಿಕೊಂಡರು. ಅನಂತರ ಮತ್ತೆ ಇದು ವಿಜಯನಗರದಲ್ಲೇ ಇದ್ದು ಒಂದು ಪರಗಣೆಯಾಗಿ ಸುಭೆಯಾಗಿ ಇತ್ತು. ಈ ಕಾಲದಲ್ಲಿ ಕನಕ ಇದರ ಢಣಾಯಕನಾಗಿ ವಿಜಯನಗರದ ಮಾಂಡಲೀಕನಾಗಿದ್ದ. ವಿಜಾಪುರದ ಸುಲ್ತಾನ ಇದನ್ನು ಜಯಿಸಿ ಆಗ ಪ್ರಾಂತ್ಯವಾಗಿದ್ದ ಬಂಕಾಪುರಕ್ಕೆ ಸೇರಿಸಿದನೆಂದು (1573) ಹೇಳಲಾಗಿದೆ. ವಿಜಾಪುರದ ದಂಡನಾಯಕನಾಗಿದ್ದ ಮುಸ್ತಫಾಖಾನನ ದಾಳಿಯಿಂದ ಇಲ್ಲಿಯ ಕೋಟೆಕೊತ್ತಳಗಳು ನಾಶವಾಗಿರಬೇಕು. ಮುಂದೆ ಇದು ಸವಣೂರ ನವಾಬರ, ಅನಂತರ ಮೊಗಲರ, ವಿಜಾಪುರದ ಸುಲ್ತಾನರ, ಮರಾಠರ ಮತ್ತು ಬ್ರಿಟಿಷರ ಅಂಕಿತಕ್ಕೊಳಪಟ್ಟಿತ್ತು. ಮಲೆನಾಡಿನ ಅಂಚಿನಲ್ಲಿರುವ ಇದು ತನ್ನ ಪ್ರಕೃತಿ ಸೌಂದರ್ಯದಿಂದ ಅನೇಕರನ್ನು ಆಕರ್ಷಿಸಿದೆ. ಆಂಡಯ್ಯ ಮತ್ತು ಕನಕದಾಸರು ಇಲ್ಲಿಯ ಪ್ರಕೃತಿಸೌಂದರ್ಯವನ್ನು ಬಣ್ಣಿಸಿದ್ದಾರೆ. ಈ ಬಣ್ಣನೆಯನ್ನು ಚಾಳುಕ್ಯರ ಮತ್ತು ಯಾದವರ ಶಾಸನಗಳಲ್ಲಿಯೂ ಕಾಣಬಹುದಾಗಿದೆ.

ಪ್ರಾಚೀನ ಕಾಲದಿಂದಲೂ ಇದು ಧಾರ್ಮಿಕ ಕೇಂದ್ರವಾಗಿ ಬೆಳೆದು ಬಂದಿದೆ. ಜೈನ, ವೈಷ್ಣವ, ಶೈವ, ವೀರಶೈವ ಸಂಸ್ಕೃತಿಗಳ ಸಂಗಮ ಇದೆನ್ನುವುದಕ್ಕೆ ಸಾಕ್ಷಿ–ಇಲ್ಲಿಯ ಅನೇಕ ಗುಡಿ, ಗೋಪುರಗಳು. ಲಕ್ಷ್ಮೀನರಸಿಂಹ, ಆದಿಕೇಶವ, ಕಾಳಹಸ್ತೀಶ್ವರ, ವೀರಭದ್ರ, ಸೋಮೇಶ್ವರ, ಬ್ರಹ್ಮೇಶ್ವರ, ಸಂಗಮೇಶ್ವರ, ಬಸವಣ್ಣ, ಆದಿಶಕ್ತಿ–ಇವು ಇಲ್ಲಿಯ ಪ್ರಮುಖ ದೇವಾಲಯಗಳು. ಆದಿಶಕ್ತಿ ದೇವಾಲಯವೊಂದನ್ನುಳಿದು ಮಿಕ್ಕವೆಲ್ಲ 10ನೆಯ ಶತಮಾನದಿಂದೀಚೆಗೆ ಸ್ಥಾಪಿಸಲ್ಪಟ್ಟವು. ಇಲ್ಲಿನ ಮುಖ್ಯ ದೇವಾಲಯಗಳು ಆದಿಕೇಶವ, ನರಸಿಂಹ. ಮಣ್ಣುಗೋಡೆಯಿಂದ ಸುತ್ತುವರಿಯಲ್ಪಟ್ಟ ಪ್ರಾಕಾರದೊಳಗೆ ಎರಡೂ ದೇವಾಲಯಗಳಿವೆ. ಹೆಬ್ಬಾಗಿಲು ಪ್ರವೇಶಿಸಿದೊಡನೆ ಗೋಚರಿಸುವುದು ನರಸಿಂಹ ಮಂದಿರ. ಎಡಭಾಗದಲ್ಲಿ 3 ಮೀಟರ್ಗಳ ಅಂತರದಲ್ಲಿ ಆದಿಕೇಶವ ದೇವಾಲಯವಿದೆ. 16ನೆಯ ಶತಮಾನದಲ್ಲಿ ಆದಿಕೇಶವನ ಮೂರ್ತಿಯನ್ನು ಕನಕದಾಸ ಬಾಡ ಗ್ರಾಮದಿಂದ ತಂದು ಪ್ರತಿಷ್ಠಾಪಿಸಿದನಂತೆ. ಆದಿಕೇಶವನ ಮೂರ್ತಿ 45 ಸೆಂಮೀ ಎತ್ತರವಾಗಿದೆ. ಕಲ್ಯಾಣದಿಂದ ಹೊರಟ ಶರಣರ ಗುಂಪು ಈ ಸ್ಥಳದಿಂದ ಆಕರ್ಷಿತವಾಗಿ ಇಲ್ಲೊಂದು ಸಂಗಮನಾಥ ಮಂದಿರ ನಿರ್ಮಿಸಿದೆ. ಇಲ್ಲಿಯ ಕೆರೆಯ ದಂಡೆಯ ಮೇಲೆ ಕನಕದಾಸನ ಸಮಾಧಿಯಿದೆ. ಸುಮಾರು 9ನೆಯ ಶತಮಾನದಿಂದ 16ನೆಯ ಶತಮಾನದ ವರೆಗೆ ಧಾರ್ಮಿಕ–ಸಾಂಸ್ಕೃತಿಕ ಕೇಂದ್ರವಾಗಿದ್ದ ಇದು ಅನಂತರ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿದ್ದುದರಿಂದ ಅದರ ಧಾರ್ಮಿಕ ಚಟುವಟಿಕೆಗಳೆಲ್ಲ ಮಂದಗತಿಯಾದವು. *

**ಕಾಗೆ :** ಪ್ಯಾಸೆರಿಫಾರ್ಮೀಸ್ ಗಣದ ಕಾರ್ವಿಡೀ ಕುಟುಂಬಕ್ಕೆ ಸೇರಿದ ಕಾರ್ವಸ್ ಜಾತಿಯ ಹಕ್ಕಿ. ಪ್ರಪಂಚದ ಎಲ್ಲ ದೇಶಗಳಲ್ಲೂ ಇವೆ. ಇದರಲ್ಲಿ ಸುಮಾರು 32 ಪ್ರಭೇದಗಳಿವೆ. ಭಾರತದಲ್ಲಿ ಕಾರ್ವಸ್ ಮ್ಯಾಕ್ರೊರಿಂಕೋಸ್ (ಕಾಡುಕಾಗೆ) ಮತ್ತು ಕಾರ್ವಸ್ ಸ್ಪ್ಲೆಂಡೆನ್ಸ್ (ಊರುಕಾಗೆ) ಎಂಬ ಎರಡು ಪ್ರಭೇದಗಳಿವೆ. ಯುರೋಪಿನಲ್ಲಿ ಕಾರ್ವಸ್ ಕರೋನಿ ಮತ್ತು ಕಾ.ಕಾರ್ನಿಕ್ಸ್ ಎಂಬುವೂ ಉತ್ತರ ಅಮೆರಿಕಲ್ಲಿ ಕಾರ್ವಸ್ ಬ್ರಾಕಿರಿಂಕೋಸ್, ಕಾ.ಕರಿನಸ್ ಎಂಬವೂ ಸಾಮಾನ್ಯವಾಗಿ ಕಾಣಬರುವ ಕಾಗೆಗಳು. ಭಾರತದಲ್ಲಿನ ಪ್ರಭೇದಗಳು ಶ್ರೀಲಂಕ ಮತ್ತು ಮಯನ್ಮಾರ್‌ಗಳಲ್ಲೂ ಇವೆ. ಒಂದೊಂದು ಪ್ರಭೇದದಲ್ಲೂ ಅವುಗಳ ಭೌಗೋಳಿಕ ವ್ಯಾಪ್ತಿಯ ಆಧಾರದ ಮೇಲೆ ಹಲವಾರು ಬಣಗಳನ್ನು ಗುರುತಿಸುವುದುಂಟು.

ಭಾರತದ ಊರು ಮತ್ತು ಕಾಡು ಕಾಗೆಗಳಲ್ಲಿ ಕೆಲವು ವ್ಯತ್ಯಾಸಗಳುಂಟು. ಊರುಕಾಗೆ ಸಾಮಾನ್ಯವಾಗಿ ಬಯಲುಸೀಮೆಯ ವಾಸಿ. ಮಾನವವಸತಿಗಳ ಬಳಿ ಇದು ಸಾಮಾನ್ಯ. ಇದರ ಉದ್ದ ಸುಮಾರು 17". ಸುಮಾರು 7" ಉದ್ದದ ಬಾಲವೂ 2" ಉದ್ದದ ಕೊಕ್ಕೂ ಇದಕ್ಕಿವೆ. ಕೊಕ್ಕು ದೃಢ. ತುದಿಯಲ್ಲಿ ನಸು ಬಾಗಿದಂತಿದೆ. ದೇಹವೆಲ್ಲ ಕಪ್ಪು ಬಣ್ಣದ್ದು. ಕಂಠಪ್ರದೇಶ ಮಾತ್ರ ಬೂದಿಬಣ್ಣದ್ದಾಗಿದೆ. ಸತ್ತ ಇಲಿ ಮುಂತಾದ ಪ್ರಾಣಿಗಳು, ಕೀಟಗಳು, ಕಾಯಿ, ಬೀಜ, ಇತರ ಹಕ್ಕಿಗಳ ಮೊಟ್ಟೆ ಮತ್ತು ಮರಿ ಇತ್ಯಾದಿ ಎಂಥ ಬಗೆಯ ಆಹಾರವನ್ನಾದರೂ ಕಾಗೆ ತಿನ್ನಬಲ್ಲದು. ಇದು ಬಲು ಚುರುಕು ಹಾಗೂ ಧೈರ್ಯಶಾಲಿ. ಬಲು ಜಾಗರೂಕ ಪ್ರಾಣಿಯೂ ಹೌದು. ಸಂಜೆಯ ಹೊತ್ತು ಕಾಗೆಗಳೆಲ್ಲ ಯಾವುದಾದರೊಂದು ಮರದಲ್ಲೊ ಬಯಲಿನಲ್ಲೊ ಒಂದು ಕಡೆ ಗುಂಪುಗೂಡಿ, ವಿಚಾರವಿನಿಮಯ ಮಾಡಿಕೊಳ್ಳುವಂತೆ ವ್ಯವಹರಿಸುತ್ತವೆ. ಇದರ ಗುಟ್ಟು ಇನ್ನೂ ಬಯಲಾಗಿಲ್ಲ.

ಕಾಗೆ ತನ್ನ ಗೂಡನ್ನು ಮರದ ರೆಂಬೆಗಳ ಮೇಲೆ ಸಣ್ಣ ಕಡ್ಡಿಗಳಿಂದ ನಿರ್ಮಿಸುತ್ತದೆ. ಗೂಡು ಕಟ್ಟುವ ಕಾರ್ಯ ಹೆಚ್ಚಾಗಿ ಗಂಡಿನದು. ಗೂಡು ತಯಾರಾದ ಮೇಲೆ ಹೆಣ್ಣುಕಾಗೆ 4ರಿಂದ 5ರ ವರೆಗೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳ ಆಕಾರದಲ್ಲಿ, ಗಾತ್ರದಲ್ಲಿ ಮತ್ತು ಬಣ್ಣದಲ್ಲಿ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ ಮೊಟ್ಟೆಯ ಬಣ್ಣ ಹಸುರು ಇಲ್ಲವೆ ನೀಲಿಮಿಶ್ರಿತ

ಹಸುರು; ಅಲ್ಲಲ್ಲಿ ಕಂದುಬಣ್ಣದ ಚುಕ್ಕೆಗಳಿವೆ. ಗಂಡುಹೆಣ್ಣುಗಳೆರಡೂ ಕಾವು ಕೊಡುತ್ತವೆ. ಮೊಟ್ಟೆಯಿಡುವ ಕಾಲ ದೇಶದ ವಿವಿಧ ಭಾಗಗಳಲ್ಲಿ ವಾಸಿಸುವ ಕಾಗೆಗಳಲ್ಲಿ ಬೇರೆಬೇರೆಯಾಗಿದೆ. ಪಶ್ಚಿಮದಲ್ಲಿ ವಾಸಿಸುವ ಕಾಗೆಗಳು ಏಪ್ರಿಲ್ ಮತ್ತು ಜೂನ್ ತಿಂಗಳುಗಳ ನಡುವೆ ಗೂಡನ್ನು ನಿರ್ಮಿಸಿ ಮೊಟ್ಟೆಗಳನ್ನಿಡುತ್ತವೆ. ಬಂಗಾಳದ ಕಾಗೆಗಳು ಇದಕ್ಕಿಂತ ಸ್ವಲ್ಪ ಮೊದಲೂ ದಕ್ಷಿಣ ಭಾರತದಲ್ಲಿನ ಕಾಗೆಗಳು ಮುಂಗಾರು ಮಳೆ ಪ್ರಾರಂಭವಾಗುವ ಮುನ್ನವೂ ಮೊಟ್ಟೆಯಿಡುತ್ತವೆ. ಕಾಗೆ ತನ್ನ ಮರಿಗಳ ಪಾಲನೆಯಲ್ಲಿ ಹೆಚ್ಚಿನ ಶ್ರದ್ಧೆಯನ್ನು ವ್ಯಕ್ತಪಡಿಸುತ್ತದೆ.

ಕೋಗಿಲೆ ಸಾಮಾನ್ಯವಾಗಿ ತನ್ನ ಮೊಟ್ಟೆಗಳನ್ನು ಕಾಗೆಗಳ ಗೂಡಿನಲ್ಲಿಡುವುದುಂಟು. ಕಾಗೆ ಆ ಮೊಟ್ಟೆಗಳು ತನ್ನವೆಂದೇ ತಿಳಿದು ಅವಕ್ಕೆ ಕಾವುಕೊಟ್ಟು ಮರಿ ಮಾಡಿ ಗುಟುಕು ಕೊಟ್ಟು ಸಲಹುತ್ತದೆ. ಆದರೆ ಕೋಗಿಲೆ ಮರಿಗಳು ದೊಡ್ಡವಾದಾಗ ಕಾಗೆಗೆ ಅವು ತನ್ನವಲ್ಲ ಎಂದು ಅರಿವು ಬಂದು ಅವನ್ನು ಕುಕ್ಕಿ ಓಡಿಸುತ್ತದೆ. ಕೆಲವು ವೇಳೆ ಸಾಯಿಸುವುದೂ ಉಂಟು.

ಕಾಡುಕಾಗೆ ಬೆಟ್ಟ, ಗುಡ್ಡಗಳಲ್ಲಿನ ಕಾಡಿನಲ್ಲಿ ವಾಸಿಸುತ್ತದೆ. ಕೆಲವೊಮ್ಮೆ ಊರುಗಳ ಬಳಿ ಕಂಡುಬರುವುದೂ ಉಂಟು. ಇದು ಅತ್ಯಂತ ಧೈರ್ಯಶಾಲಿ. ನಿರ್ಭಯವಾಗಿ, ಯಾವ ವಿಧವಾದ ಆಹಾರ ದೊರೆತರೂ ಬಿಡದೆ ಅಪಹರಿಸುತ್ತದೆ. ಇದರ ಆಹಾರ ಮೊಟ್ಟೆಗಳು, ಸಣ್ಣ ಹಕ್ಕಿಗಳು, ಹಣ್ಣುಗಳು, ಹಲ್ಲಿಗಳು, ಮಿಡಿತೆಗಳು, ಇತ್ಯಾದಿ. ಇದು ಊರುಕಾಗೆಗಿಂತ ದೊಡ್ಡದು. ದೇಹದ ಉದ್ದ 21". ಬಾಲ 7.5" ರಿಂದ 8" ಉದ್ದವಿದೆ. ದೇಹದ ಬಣ್ಣ ಸಂಪೂರ್ಣ ಕಪ್ಪು. ಕಾಡುಕಾಗೆ ಊರಕಾಗೆಯಂತೆ ಸಂಜೆಯ ವೇಳೆ ಗಂಪು ಸೇರುವುದಿಲ್ಲ. ಇದು ತನ್ನ ಗೂಡನ್ನು ದೊಡ್ಡ ದೊಡ್ಡ ಮರಗಳ ರೆಂಬೆಗಳ ಮೇಲೆ ಸಣ್ಣ ಕಡ್ಡಿ, ಪುಳ್ಳೆಗಳಿಂದ ನಿರ್ಮಿಸಿಕೊಳ್ಳುತ್ತದೆ. ಗೂಡಿನಲ್ಲಿ 3 ಅಥವಾ 4 ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳು ಆಕಾರದಲ್ಲಿ ಮತ್ತು ಬಣ್ಣದಲ್ಲಿ ಊರುಕಾಗೆಯ ಮೊಟ್ಟೆಗಳಂತೆಯೇ ಇವೆ. ಆದರೆ ಗಾತ್ರದಲ್ಲಿ ದೊಡ್ಡವು.

ಕಾಗೆ ಬೇರೆ ಪಕ್ಷಿಗಳ ವಲಸೆ ಹೋಗುವ ಪರಿಪಾಟಿಯನ್ನು ಹೊಂದಿದ್ದರೂ ವಲಸೆಯ ಕ್ರಮ ಅತ್ಯಂತ ತಾತ್ಕಾಲಿಕವಾದುದು. ನಸುಬೆಳಕಿನಲ್ಲೇ ತನ್ನ ಗೂಡನ್ನು ತೊರೆದು ದೂರದ ಸ್ಥಳಗಳಿಗೆ ಆಹಾರಕ್ಕಾಗಿ ವಲಸೆಹೋಗಿ ಕತ್ತಲೆಗೆ ಮೊದಲೇ ಹಿಂತಿರುಗುವುದು ಇದರ ಸ್ವಭಾವ. ದಿನಬೆಳಗಾದರೆ ಊರುಕಾಗೆಗಳು ಕೂಡ ಗುಂಪು ಗುಂಪಾಗಿ ಹೊರಪ್ರದೇಶಗಳ ಕಡೆ ಹಾರಿಹೋಗುವುದನ್ನು ಎಲ್ಲರೂ ಗಮನಿಸಿದ್ದಾರೆ.

ಕಾಗೆ ನಗರವಾಸಕ್ಕೆ ಚೆನ್ನಾಗಿ ಹೊಂದಿಕೊಂಡಿದೆ. ಎಷ್ಟೇ ಹೊಂದಿಕೊಂಡಿದ್ದರೂ ಗುಬ್ಬಚ್ಚಿಯಂತೆ ಇದು ಮಾನವನೊಂದಿಗೆ ಸಲಿಗೆಯಿಂದ ವರ್ತಿಸದು. ಉಪಾಯವಾಗಿ ತಿಂಡಿ ತಿನಿಸನ್ನು ಎಗರಿಸುವುದರಲ್ಲಿದು ನಿಸ್ಸೀಮ. ಎಂಜಲನ್ನವನ್ನು, ಕಸ ಮುಸುರೆಯನ್ನು ಕಂಡಾಗ ಕಾಕಾ ಎನ್ನುತ್ತ ತನ್ನ ಬಳಗದೊಂದಿಗೆ ಪ್ರತ್ಯಕ್ಷವಾಗುತ್ತದೆ. ಚಿಕ್ಕ ಪುಟ್ಟ ಪಾತ್ರೆ ಪಡಿಗವನ್ನು ಚಮಚಗಳನ್ನು ಒಯ್ಯುವುದೂ ಉಂಟು. ಮನುಷ್ಯನ ಚಲನವಲನಗಳನ್ನಿದು ಬೆಕ್ಕಿನಂತೆ ಚೆನ್ನಾಗಿ ತಿಳಿದಿದೆ. ಆಹಾರ ಸಿಕ್ಕಾಗ ಹೇಗೋ ಹಾಗೆ ಸತ್ತ ಅಥವಾ ಪೆಟ್ಟುಬಿದ್ದ ಕಾಗೆಯ ಸುತ್ತ ಗುಂಪುಗೂಡುವುದು, ಗದ್ದಲ ಮಾಡುವುದು ಇದರ ಸ್ವಭಾವ. ಸರ್ಪವೊಂದನ್ನು ಉಪಾಯದಿಂದ ಕೊಂದುದು, ಹೂಜಿಯಲ್ಲಿದ್ದ ಸ್ವಲ್ಪ ನೀರನ್ನು ಚತುರತೆಯಿಂದ ಕುಡಿದುದು ಮುಂತಾದ ಕಥೆಗಳಲ್ಲಿನ ಕಾಗೆಯ ಜಾಣತನ ಕೇವಲ ಕಾಲ್ಪನಿಕವೆನ್ನಲಾಗದು. ಕಾಗೆಗೆ ಬೇಟೆಯ ಎಲ್ಲ ವರಸೆಗಳೂ ತಿಳಿದಿದೆ. ಹಕ್ಕಿಗಳ ಮೊಟ್ಟೆಗಳನ್ನು ಕದಿಯುವಲ್ಲಿ, ಸಣ್ಣ ಪುಟ್ಟ ಹಕ್ಕಿಗಳನ್ನೂ ಪ್ರಾಣಿಗಳನ್ನೂ ಹಿಡಿಯುವಲ್ಲಿ ಇದು ನಿಸ್ಸೀಮ. ಬೇಟೆ ದೊರೆತಾಗಲಂತೂ ಉಗ್ರವಾಗಿ ವರ್ತಿಸುತ್ತದೆ. ಕೊಳೆ ಕೊಳಚೆಗಳನ್ನು ತಿಂದು ಪರಿಸರವನ್ನು ಶುದ್ಧಿಮಾಡುವುದರಿಂದ ಇದು ಮನುಷ್ಯರಿಗೆ ಉಪಕಾರಿ ಎನಿಸಿದೆ.

ಪುರಾಣೇತಿಹಾಸದಲ್ಲಿ ಕಾಗೆಯ ಬಗ್ಗೆ ಅನೇಕ ಉಲ್ಲೇಖಗಳಿವೆ. ಸೀತೆಯನ್ನು ಬಾಧಿಸಿದ ಕಾಕಾಸುರನನ್ನು ರಾಮಬಾಣ ಅಟ್ಟಿಸಿಕೊಂಡು ಹೋದ ಪ್ರಸಂಗ ರಾಮಾಯಣದಲ್ಲಿದೆ. ಶನಿದೇವನ ರಥಕ್ಕೆ ಕಾಗೆಯನ್ನು ಹೂಡಲಾಗಿದೆಯೆಂದೂ ಕರ್ಣನ ಲಾಂಛನ ಕಾಗೆಯೆಂದೂ ಹೇಳಲಾಗಿದೆ. (ಎನ್.ಎಂ.)

**ಕಾಗೆಮಾಂಬಳ್ಳಿ :** ಇದು ಮೆನಿಸ್ಪರ್ಮೇಸೀ ಕುಟುಂಬಕ್ಕೆ ಸೇರಿದ ಅನಾಮಿರ್ಟ ಕಾಕ್ಯುಲಸ್ ಎಂಬ ಶಾಸ್ತ್ರೀಯ ಹೆಸರನ್ನುಳ್ಳ ದೊಡ್ಡ ಬಳ್ಳಿ. ಭಾರತದಲ್ಲಿ ಬಂಗಾಳ, ಖಾಸಿ ಬೆಟ್ಟಗಳು ಮತ್ತು ದಕ್ಷಿಣ ಭಾರತಗಳಲ್ಲೂ ಶ್ರೀಲಂಕ, ಮಯನ್ಮಾರ್ ಮಲಯಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ.

ಬೇರೆ ಆಸರೆ ಸಸ್ಯಗಳನ್ನು ಸುತ್ತುವರಿದು ಹಬ್ಬಿ ಬೆಳೆಯುವ ದೊಡ್ಡ ಬಳ್ಳಿ ಇದು. ಎಲೆಗಳು ಸರಳ; ಪರ್ಯಾಯವಾಗಿ ಜೋಡಣೆಯಾಗಿವೆ. ಹೂಗೊಂಚಲು ಸಂಕೀರ್ಣ ಮಾದರಿಯವು; ವಯಸ್ಸಾದ ಕಾಂಡದ ಗಿಣ್ಣುಗಳಿಂದ ಹುಟ್ಟುತ್ತವೆ. ಹೂಗಳು ಚಿಕ್ಕ ಗಾತ್ರದವು ಮತ್ತು ಭಿನ್ನ ಲಿಂಗಿಗಳು ಅವುಗಳ ಬಣ್ಣ ಹಸುರುಗಳ ಪುಷ್ಪಪತ್ರ ಸಂಖ್ಯೆ 6 ದಳಗಳಿಂದ ಗಂಡು ಹೂವಿನಲ್ಲಿ 6 ಕೇಸರಗಳೂ ಹೆಣ್ಣಿನಲ್ಲಿ 3 ಕಾರ್ಪೆಲುಗಳಿಂದಾದ ಉಚ್ಚಸ್ಥಾನದ ಅಂಡಾಶಯವೂ ಇದೆ. ಒಂದೊಂದು ಕಾರ್ಪೆಲಿಗೊಂದರಂತೆ 3 ಅಂಡಕಗಳಿವೆ. ಕಾಯಿ ಅಷ್ಟಿಫಲ (ಡ್ರೂಪ್) ಮಾದರಿಯದು.

ಕಾಯಿಯಲ್ಲೂ ಬೀಜಗಳಲ್ಲೂ ಹಲವಾರು ಬಗೆಯ ಸಂಯುಕ್ತ ವಸ್ತುಗಳಿವೆ. ಇವುಗಳಲ್ಲಿ ಪಿಕ್ರೋಟಾಕ್ಸಿನ್ ($C_{30}H_{34}O_2$), ಕಾಕ್ಯುಲಿನ್ ಅಥವಾ ಅನಾಮಿರ್ಟಿನ್ ಎಂಬ ರುಚಿರಹಿತ ವಸ್ತು ಮತ್ತು ಮೆನಿಸ್ಪರ್ಮಿನ್ ಎಂಬ ಸಸ್ಯಕ್ಷಾರಗಳು (ಆಲ್ಕಲಾಯಿಡ್) ಮುಖ್ಯವಾದುವು. ಪಿಕ್ರೋಟಾಕ್ಸಿನ್ ಎಂಬುದು ಕಹಿರುಚಿಯುಳ್ಳದ್ದೂ ಬಲು ವಿಷಪೂರಿತವಾದುದೂ ಆಗಿದೆ. ಅತಿಸ್ವಲ್ಪ ಪ್ರಮಾಣದಲ್ಲೂ ಅಪಾಯಕಾರಿ; ಸುಮಾರು 20 ಮಿಗ್ರಾಂ ನಷ್ಟು ಪಿಕ್ರೋಟಾಕ್ಸಿನ್‌ಗೆ ಮನುಷ್ಯನನ್ನೂ ಕೊಲ್ಲುವ ಶಕ್ತಿಯಿದೆ ಎಂದು ಹೇಳುವುದಿದೆ. ಇದರ ಸೇವನೆಯಿಂದ ಮನುಷ್ಯನಲ್ಲಿ ಹೊಟ್ಟೆ ಶೂಲೆ, ವಾಂತಿ ಕೆಲವೊಮ್ಮೆ ಚಿತ್ತಭ್ರಮೆ ಮುಂತಾದ ವಿಕಾರಗಳುಂಟಾಗಿ ಕೊನೆಗೆ ಸಾವು ಸಂಭವಿಸುತ್ತದೆ. ಈ ವಿಷವಸ್ತುವಿರುವುದರಿಂದ ಕೆಲವೆಡೆ ಮೀನು, ಕಾಗೆ ಮುಂತಾದ ಪ್ರಾಣಿಗಳನ್ನು ಕೊಲ್ಲಲು ಇದರ ಕಾಯಿಗಳನ್ನು ಬಳಸುವುದುಂಟು. ಈ ವಸ್ತು ಇಷ್ಟು ವಿಷಪೂರಿತವಾದರೂ ಇದನ್ನು ಕಾಯಿಗಳಿಂದ ಪ್ರತ್ಯೇಕಿಸಿ ಕೆಲವು ರೋಗಗಳಿಗೆ, ಸೊಂಕುಗಳಿಗೆ ಔಷಧಿಯಾಗಿ ಉಪಯೋಗಿಸುವುದೂ ಉಂಟು. ಕ್ಷಯ ರೋಗಿಗಳು ರಾತ್ರಿ ಬೆವರುವುದನ್ನು ತಡೆಯಲು, ಗಜಕರ್ಣಕ್ಕೆ ಮತ್ತು ಹೇನು ನಿವಾರಕ ಮುಲಾಮುಗಳಲ್ಲಿ ಈ ವಸ್ತುವನ್ನು ಉಪಯೋಗಿಸುತ್ತಾರೆ. ಒಣಗಿಸಿದ ಹಣ್ಣುಗಳಿಗೆ ಕಾಕ್ಯುಲಸ್ ಇಂಡಿಕಸ್ ಅಥವಾ ಕಾಕ್ಯುಲಸ್ ಫ್ರಕ್ಟಸ್ ಎಂಬ ವಾಣಿಜ್ಯ ನಾಮವಿದೆ. ಔಷಧೀಯ ಮಹತ್ತ್ವದಿಂದಾಗಿ ಕಾಗೆಮಾಂಬಳ್ಳಿಯ ಕಾಯಿಗಳು ಇತ್ತೀಚಿಗೆ ವಿದೇಶಗಳಿಗೆ ನಿರ್ಯಾತವಾಗುತ್ತಿದೆ. (ಪಿ.ಕೆ.ಆರ್.ಜಿ.)

**ಕಾಗೋಡು ಸತ್ಯಾಗ್ರಹ :** ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದಲ್ಲಿ ನಡೆದ ಗೇಣಿ ರೈತರ ಸತ್ಯಾಗ್ರಹ (1951). ದೇಶಕ್ಕೆ ಸ್ವಾತಂತ್ರ್ಯ ಬಂದಾಗ ರಾಜಕೀಯ ಅಧಿಕಾರ ಜನರಿಗೆ ಪ್ರಾಪ್ತವಾಗಿದ್ದರೂ ಆರ್ಥಿಕ ಶೋಷಣೆಯಿಂದ ಜನರು ಮುಕ್ತರಾಗಿರಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನ್ದಾರಿಕೆ ವ್ಯವಸ್ಥೆಯ ಮೂಲದಿಂದ ಬಂದ ಗೇಣಿ ಪದ್ಧತಿಯೂ ಅಂತಹ ಶೋಷಣೆಗೆ ಹೆಚ್ಚಿನ ಅವಕಾಶ ನೀಡಿತ್ತು. ಆಗ ಇಂಥ ವ್ಯವಸ್ಥೆಯ ವಿರುದ್ಧ ನಡೆದ ಈ ರೈತ ಹೋರಾಟ ಕರ್ನಾಟಕದ ರೈತ ಚಳವಳಿಯ ಇತಿಹಾಸದಲ್ಲಿ ಮೈಲಿಗಲ್ಲಾಗಿದೆ.

ಸಾಗರ ಪಟ್ಟಣದಿಂದ ಉತ್ತರದಿಕ್ಕಿಗೆ ಕೆಳದಿ ಮಾಸೂರು ಮಾರ್ಗದಲ್ಲಿ ಸಾಗರದಿಂದ 15ಕಿಮೀ ದೂರದಲ್ಲಿ ವರದಾ ನದಿಯ ದಂಡೆಯ ಮೇಲಿರುವ ಕಾಗೋಡು ಮಲೆನಾಡಿನ ಒಂದು ಪುಟ್ಟ ಹಳ್ಳಿ. ಕಾಗೋಡು ಚಳವಳಿ ನಡೆದ ಕಾಲಕ್ಕೆ ಇಲ್ಲಿ ಒಟ್ಟು 50 ಮನೆಗಳಿದ್ದುವು. ಈಗ 232 ಕುಟುಂಬಗಳಿವೆ. ಅವುಗಳಲ್ಲಿ ದೀವರ ಕುಟುಂಬಗಳೇ ಹೆಚ್ಚು. ಉಳಿದಂತೆ ಹರಿಜನರು, ಮಡಿವಾಳರು, ಅಕ್ಕಸಾಲಿಗರು, ಲಿಂಗಾಯಿತರು ಮೊದಲಾದವರಿದ್ದರು. ಒಟ್ಟು ಜಮೀನಿನ ವಿಸ್ತೀರ್ಣ ಸು.40 ಹೆಕ್ಟೇರುಗಳು.

ಆಗಿನ ಮೈಸೂರು ರಾಜ್ಯದ ಮಲೆನಾಡು ಪ್ರಾಂತ್ಯದಲ್ಲಿ ಭೂ ಒಡೆತನದ ಹಕ್ಕು ಹಿಂದೂ ಶ್ರೇಣೀಕೃತ ಸಮಾಜದ ಮೇಲ್ವರ್ಗದವರ ಕೈಯಲ್ಲಿ ಹೆಚ್ಚಾಗಿತ್ತು. ಕೆಲವೇ ಜಮೀನ್ದಾರರ ಅಡಿಯಲ್ಲಿ ರೈತಾಪಿ ಗೇಣಿ ಒಕ್ಕಲುಗಳು ಇರುತ್ತಿದ್ದರು. ಅವರೆಲ್ಲ ಬಹುತೇಕ ಗೇಣಿದಾರರಾಗಿ ಮತ್ತು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಈ ದುಡಿಮೆ ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುತ್ತಿತ್ತು. ಭೂ ಒಡೆಯರ ಮನೆಗಳಲ್ಲಿ ವರ್ಷದಲ್ಲಿ ಹಲವಾರು ದಿವಸ ಬಿಟ್ಟಿ ದುಡಿಮೆ ಮಾಡುವ ಪದ್ಧತಿಯೂ ಇತ್ತು. ರುಮಾಲು ಸುತ್ತಿಕೊಳ್ಳುವುದು, ಉದ್ದವಾಗಿ ಮೊಳಕಾಲ ಕೆಳಗಿನವರೆಗೆ ಪಂಚೆ ಉಡುವುದು, ಕಾಲಿಗೆ ಚಪ್ಪಲಿ ಹಾಕಿಕೊಳ್ಳುವುದು, ಒಡೆಯರ ಎದುರು ಛತ್ರಿ ಹಿಡಿದು ನಡೆಯುವುದು ಅಪರಾಧಗಳಾಗಿದ್ದುವು. ಒಡೆಯರು ಎದುರಾದಾಗ ಮಳೆ ಸುರಿಯುತ್ತಿದ್ದರೂ ಛತ್ರಿ ಮಡಿಚಿ ಹಿಡಿದು ಮಳೆಯಲ್ಲಿ ನೆನೆಯುತ್ತಲೇ ಮುಂದೆ ಹೋಗಬೇಕಾಗಿತ್ತು. ಒಡೆಯರು ಎದುರಾದಾಗ ಚಪ್ಪಲಿ ಕೈಯಲ್ಲಿ ಹಿಡಿದು ನಡುಬಗ್ಗಿಸಿ ನಮಸ್ಕರಿಸಿ ಮುಂದೆ ಹೋಗಬೇಕು. ತಪ್ಪಿದರೆ ಅದು ಅವಿಧೇಯ ವರ್ತನೆ ಎಂದು ಭಾವಿಸಲಾಗುತ್ತಿತ್ತು. ಅದಕ್ಕೆ ಶಿಕ್ಷೆ ಕಾದಿರುತ್ತಿತ್ತು. ಪ್ರತಿಯೊಬ್ಬ ಗೇಣಿದಾರನೂ ಭೂ ಮಾಲೀಕರ ಬಳಿ ವರ್ಷದಲ್ಲಿ 15–20 ದಿವಸ ಸಂಬಳವಿಲ್ಲದೆ ಬಿಟ್ಟಿ ಕೆಲಸ ಮಾಡಬೇಕಾಗಿತ್ತು.

ಮಲೆನಾಡಿನಲ್ಲಿ ಬತ್ತ ಮತ್ತು ಇತರ ಧಾನ್ಯಗಳನ್ನು ಅಳೆಯುವ ಸಾಧನವಾಗಿ ಕೊಳಗ ಎಂಬ ಮಾಪನವಿತ್ತು. ಒಂದು ಕೊಳಗಕ್ಕೆ ಮೂರು ಸೇರು ಎಂದು ಸರ್ಕಾರದ ಅಧಿಕೃತ ಅಳತೆ. ಆದರೆ ಕೆಲವು ಭೂಮಾಲೀಕರು ಗೇಣಿ ಬತ್ತ ಅಳೆಯಲು ಮೂರುವರೆ ಅಥವಾ ನಾಲ್ಕು ಸೇರುಗಳು ಹಿಡಿಯುವ ಕೊಳಗವನ್ನು ಮಾಡಿಸಿಟ್ಟುಕೊಂಡಿದ್ದರು. ತಮ್ಮ ಕೊಳಗದಲ್ಲೇ ಗೇಣಿ ಬತ್ತ ಅಳೆದುಕೊಡಬೇಕೆಂದು ರೈತರಿಗೆ ಕಡ್ಡಾಯ ಮಾಡುತ್ತಿದ್ದರು. ಅದಕ್ಕೆ ತಪ್ಪಿದರೆ ಜಮೀನು ಕಳೆದುಕೊಳ್ಳುವ ಅನಿಶ್ಚಿತತೆಯ ಬದುಕಿನ ಭಯದಿಂದಾಗಿ ರೈತರು ಯಾರೂ ಪ್ರತಿಭಟಿಸದೆ ಮೌನ ವಹಿಸಿದ್ದರು. ಇದಲ್ಲದೆ ಗೇಣಿ ರೈತ ಬತ್ತಕೊಡುವಾಗ ನಿಗದಿಪಡಿಸಿದ ಅಳತೆಯ ಬತ್ತವನ್ನು ಕೊಡುವುದಲ್ಲದೆ ಪ್ರತಿಯೊಂದು ಚೀಲಕ್ಕೆ ಹೆಚ್ಚು ಬತ್ತವೆಂದು ಒಂದು ಕೊಳಗವನ್ನು ಹೆಚ್ಚಾಗಿ ಕೊಡಬೇಕಾಗಿತ್ತು.

ರೈತ ಸಂಘಟನೆ ಸ್ವಾತಂತ್ರ್ಯ ಬರುವ ಸ್ವಲ್ಪ ಮೊದಲೇ ಒಂದು ನೆಲೆಯನ್ನು ಕಂಡುಕೊಂಡಿತ್ತು. ಕಾಂಗ್ರೆಸ್‌ನ ಪ್ರಮುಖರು ಮತ್ತು ಮುಂದೆ ಸಚಿವರಾಗಿ ಕೀರ್ತಿಪಡೆದ ಕಡಿದಾಳ್ ಮಂಜಪ್ಪನವರು **(ನೋಡಿ– ಕಡಿದಾಳ್ ಮಂಜಪ್ಪ)** 1945ರಲ್ಲಿಯೇ ತೀರ್ಥಹಳ್ಳಿಯಲ್ಲಿ ಮಲೆನಾಡು ಗೇಣಿ ರೈತ ಸಂಘವನ್ನು ಸ್ಥಾಪಿಸಿದ್ದರು. ಕಡಿದಾಳರೂ ಒಂದು ಗೇಣಿ ಕುಟುಂಬ ಮೂಲದಿಂದಲೇ ಬಂದವರಾಗಿದ್ದು ಅವರು ಭೂಮಾಲೀಕರು ಮತ್ತು ಒಕ್ಕಲುಗಳ ನಡುವೆ ಸಂಧಾನ ಮಾರ್ಗದಲ್ಲಿ ಸಮಸ್ಯೆಗಳ ಪರಿಹಾರವಾಗಬೇಕೆಂದು ನಂಬಿದ್ದರು. ಸಾಗರ ತಾಲ್ಲೂಕಿನಲ್ಲಿಯೂ ಅದೇವರ್ಷ ಗೇಣಿ ರೈತರ ಸಂಘಟನೆ ರೂಪುತಳೆಯಿತು. ಸ್ವಾತಂತ್ರ್ಯ ಹೋರಾಟಗಾರ ಎಚ್. ಗಣಪತಿಯಪ್ಪ, ಮರತ್ತೂರಿನ ಡಿ. ಮೂಕಪ್ಪ, ಮನೆಘಟ್ಟ ಚೌಡಪ್ಪ, ಎಲಗಳಲೆ ಡಿ.ಆರ್.ಹುಚ್ಚಪ್ಪ, ಬರಸಿನ ದ್ಯಾವಪ್ಪ, ಕಾಗೋಡಿನ ಪವಾಜಿ ಬೀರನಾಯ್ಕ, ಮಂಡಗಳಲೆ ಹೊಸೂರು ರಾಮನಾಯ್ಕ ಮೊದಲಾದ ಮುಖಂಡರು ಈ ಸಂಘಟನೆಯಲ್ಲಿ ಪಾಲ್ಗೊಂಡಿದ್ದರು. ಗೇಣಿದಾರರ ಸಮುದಾಯದ ಬಹುಭಾಗವಾಗಿದ್ದ ದೀವರ ಜನಾಂಗದ ಹಿರಿಯರು ಈ ಸಂಸ್ಥೆಯ ಮುಂಚೂಣಿಯಲ್ಲಿದ್ದರು. ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಗೇಣಿದಾರರಲ್ಲಿ ಅವರು ಜಾಗೃತಿ ಮೂಡಿಸತೊಡಗಿದರು.

ಆಗಿನ ಕಾಲಕ್ಕೆ ವಿದ್ಯಾವಂತರಾಗಿದ್ದ ಎಚ್. ಗಣಪತಿಯಪ್ಪನರು ಉತ್ತರ ಕನ್ನಡ ಜಿಲ್ಲೆ ಸಿದ್ಧಾಪುರದ ಸಮೀಪದ ಹೊಸೂರಿನವರು. ರೈತಕುಟುಂಬದಲ್ಲಿ ಹುಟ್ಟಿದ ಇವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಗಾಂಧೀವಾದಿಗಳಾಗಿದ್ದರು. ಸರ್ಕಾರಿ ನೌಕರಿ ಬಿಟ್ಟು ಖಾಸಗಿ ಶಾಲೆಯ ಉಪಾಧ್ಯಾಯರಾಗಿ ಜೀವನ ನಿರ್ವಹಿಸುತ್ತಿದ್ದರು. ಶೋಷಣೆಗೊಳಗಾದವರಲ್ಲಿ ಜಾಗೃತಿ ಉಂಟುಮಾಡುವುದು ಇವರ ಕಾರ್ಯನೀತಿಯಾಗಿತ್ತು. ಕಾಗೋಡು ಹಿರೇನೆಲ್ಲೂರು ಗ್ರಾಮಕ್ಕೆ ಸೇರಿದ ಮಜ್ರೆ ಗ್ರಾಮ. ಇಲ್ಲಿಯ ಭೂಮಾಲೀಕರಾದ ಕೆ.ಜಿ.ಒಡೆಯರ್ ಕುಟುಂಬದವರು ಶಿವಮೊಗ್ಗ ಜಿಲ್ಲೆಯ ಭೂಮಾಲೀಕರಲ್ಲಿ ಪ್ರಮುಖರಾಗಿದ್ದರು. ಅವರು ಮೂವರು ಅಣ್ಣ ತಮ್ಮಂದಿರು. ಕಾಗೋಡು ಚಳವಳಿಯ ಸಂದರ್ಭದಲ್ಲಿ ಕಾಗೋಡಿನಲ್ಲಿದ್ದ ಮನೆಗಳಲ್ಲಿ ಲಿಂಗಾಯತರದಾಗಿದ್ದ ಮನೆ ಅದೊಂದೇ. ಈ ಕಾಗೋಡು ಗೌಡರ ಮನೆಗೆ ಏಳುಹಳ್ಳಿ ಗೌಡಿಕೆ ಇತ್ತು. ನೆರೆಹೊರೆಯ ಅನೇಕ ಊರುಗಳಲ್ಲಿ ಇವರ ಜಮೀನುಗಳಿದ್ದುವು. ಆಗಿನ ಕಾಲದಲ್ಲಿ ಎಕರೆಗೆ ನಾಲ್ಕಾಣೆಯಂತೆ ಮೂರು ಸಾವಿರ ರೂಪಾಯಿ ಕಂದಾಯ ಕಟ್ಟುತ್ತಿದ್ದರು. ಸಾವಿರಾರು ಎಕರೆಭೂಮಿ ಇವರಿಗೆ ವಂಶಪಾರಂಪರ್ಯವಾಗಿ ಬಂದಿದ್ದಿತ್ತು. ಕಾಗೋಡು ಮನೆತನದ ಕೆ.ಗುರುಬಸಪ್ಪಗೌಡ ಅಥವಾ ಕೆ.ಜಿ.ಒಡೆಯರ್ ನಡುಕಲ ಸಹೋದರರಾಗಿದ್ದು ಉನ್ನತ ವ್ಯಾಸಂಗ ಮಾಡಿದ್ದರು. ವಿದೇಶ ಪ್ರವಾಸ ಮಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು. ರಾಜ್ಯಮಟ್ಟದ ಅನೇಕ ಕಾಂಗ್ರೆಸ್ ನಾಯಕರಿಗೆ ನಿಕಟ ಒಡನಾಡಿಗಳಾಗಿದ್ದರು. ಇವರು ಶಿವಮೊಗ್ಗ ಬೆಂಗಳೂರುಗಳಲ್ಲಿ ಹೆಚ್ಚಾಗಿರುತ್ತಿದ್ದರು.

ಇಂತಹ ಪ್ರಭಾವಶಾಲಿ ಕುಟುಂಬದ ಗುರುವೇಗೌಡರು ಗೇಣಿ ರೈತರನ್ನು ತಮ್ಮ ಕೊಳಗದಲ್ಲೇ ಬತ್ತ ಅಳೆದುಕೊಡಲು ಒತ್ತಾಯಿಸುತ್ತಿದ್ದರು. ಕೊಡದಿದ್ದವರ ಮೇಲೆ ದರ್ಪ ತೋರಿಸುತ್ತಿದ್ದರು. ಇಂಥದ್ದೊಂದು ಪರಿಸ್ಥಿತಿಯಲ್ಲಿ ಗೇಣಿ ರೈತರಲ್ಲಿ ಹುಟ್ಟಿದ ಜಾಗೃತಿ ಕ್ರಮೇಣ ದಂಗೆಯ ರೂಪ ತಳೆಯತೊಡಗಿತು. ಇದರ ಫಲವಾಗಿ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ರೈತರು ಒಡೆಯರ ಮನೆಗಳಿಗೆ ಬಿಟ್ಟಿ ಬಿಗಾರಿ ಕೆಲಸಗಳಿಗೆ ಹೋಗುವುದನ್ನು ನಿಲ್ಲಿಸಬೇಕು. ಪ್ರತಿವರ್ಷ ಗೇಣಿ ಬತ್ತ ಕೊಟ್ಟಿದ್ದಕ್ಕೆ ರಶೀದಿ ಪಡೆಯಬೇಕು. ಗೇಣಿ ಬತ್ತ ಅಳೆಯುವಾಗ ಸರ್ಕಾರಿ ಅಳತೆಯ ಮಾಪನವಾದ ಮೂರು ಸೇರಿನ ಕೊಳಗದಲ್ಲಿ ಅಳೆಯಬೇಕು. ರೈತರು ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಬೇಕು. ಗೇಣಿ ಜಮೀನಿನಿಂದ ಒಕ್ಕಲೆಬ್ಬಿಸದಂತೆ ಸರ್ಕಾರಕ್ಕೆ ರಕ್ಷಣೆ ನೀಡುವಂತೆ ಕೇಳಬೇಕು. ಇಂಥ ಅನೇಕ ಹೊಸ ವಿಚಾರಗಳು ರೈತ ಸಂಘದ ಸದಸ್ಯರಲ್ಲಿ ಚಲಾವಣೆಗೊಳ್ಳತೊಡಗಿದವು. ಈ ಬಗೆಯ ಸಂಘದ ಸಭೆಗಳಿಂದಾಗಿ ಪ್ರಭಾವಿತರಾದ ರೈತರು ಒಡೆಯರ ಮುಂದೆ ನಿಂತು ಧೈರ್ಯವಾಗಿ ತಮ್ಮ ಬೇಡಿಕೆಗಳನ್ನು ಮಂಡಿಸತೊಡಗಿದರು.

ಕಾಗೋಡಿನ ರೈತರಲ್ಲಿ ಜಾಗೃತಿ ಮೂಡಿಸುತ್ತಿದ್ದ ಎಲೆ ಕನ್ನಪ್ಪ ಗೇಣಿ ಬತ್ತ ಕೊಟ್ಟಿದ್ದಕ್ಕೆ ರಶೀದಿ ಕೇಳಿದನೆಂಬ ಕಾರಣಕ್ಕೆ ಕಾಗೋಡು ಗೌಡರು ಆತನನ್ನು ಹಿಡಿದು ಥಳಿಸಿದರು. ಈ ವಿಚಾರ ರೈತರಲ್ಲಿ ಕಿಚ್ಚು ಹಚ್ಚಿತು. ಆಗ ಸಾಗರ ತಾಲ್ಲೂಕು ರೈತಸಂಘದ ಮುಂಖಡರು ಕಾಗೋಡು ಒಡೆಯರ ದಬ್ಬಾಳಿಕೆಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಎದುರಾಗಿ ಸತ್ಯಾಗ್ರಹ ಹೂಡುವಂತೆ ಹುರಿದುಂಬಿಸಿದರು. ಈ ನಡುವೆ 1951 ಏಪ್ರಿಲ್ 16ರಂದು ಕಡಗಳಲೆ ಎಂಬ ಗ್ರಾಮದಲ್ಲಿ ಭೂಮಾಲೀಕರು ಮತ್ತು ರೈತರ ನಡುವೆ ಘರ್ಷಣೆ ನಡೆದು ರೈತರು ಜಮೀನು ಉಳುತ್ತಿದ್ದಾಗ ಅವರ ಮೇಲೆ ಹಲ್ಲೆಗಳು ನಡೆದವು. ಎತ್ತುಗಳನ್ನು ಬಿಚ್ಚಿ ಓಡಿಸಿ ನೇಗಿಲು ನೊಗಗಳನ್ನು ಕಡಿದು ಹಾಕಿ, ಹೊಡೆದು ಬಡಿದು ಅವರನ್ನು ಅಲ್ಲಿಂದ ಅಟ್ಟಲಾಯಿತು. ಈ ಸುದ್ದಿ ಕೂಡಲೇ ತಾಲ್ಲೂಕಿನಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು.

ಮಾರನೆಯ ದಿನ ಎಚ್.ಗಣಪತಿಯಪ್ಪನವರ ನೇತೃತ್ವದಲ್ಲಿ ಸಾವಿರಾರು ರೈತರು ಸಾಗರ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ತಹಸೀಲ್ದಾರರಿಗೆ ಮನವಿ ಸಲ್ಲಿಸಿ ಕಾನೂನನ್ನು ಕೈಗೆ ತೆಗೆದುಕೊಂಡವರ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿದರು. ಕಾಗೋಡಿನಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ನಡೆಸಲು ತೀರ್ಮಾನ ಮಾಡಲಾಯಿತು. ಏಪ್ರಿಲ್ 18ರಂದು ರೈತ ಸಂಘದ ಅಧ್ಯಕ್ಷರಾದ ಡಿ.ಮೂಕಪ್ಪನವರ (ಮಾಜಿ ಶಾಸಕರು) ಮುಖಂಡತ್ವದಲ್ಲಿ ಪ್ರಥಮ ಸತ್ಯಾಗ್ರಹ ತಂಡ ಧರಣಿ ಕುಳಿತು ಬಂಧನಕ್ಕೊಳಗಾಯಿತು. ಸರಕಾರ ನೂರಾರು ಪೊಲೀಸರನ್ನು ಒಡೆಯರ ಜಮೀನಿಗೆ ಪಹರೆ ಹಾಕಿತು. ರೈತರು ಅಲ್ಲಲ್ಲಿ ಚಳವಳಿ ನಡೆಸಿ ಲಾಠಿ ಏಟು ತಿಂದರೂ ಹೆದರದೆ ಬಂಧನಕ್ಕೊಳಗಾಗುತ್ತಿದ್ದರು. ಆಗ ಕಂದಾಯ ಸಚಿವರಾಗಿದ್ದ ಕಡಿದಾಳ್ ಮಂಜಪ್ಪನವರು ಕಾಗೋಡು ಭೂಮಾಲೀಕರಿಗೂ ರೈತರಿಗೂ ನಡುವೆ ಸಂಧಾನಸಭೆ ನಡೆಸಿದರು. ಆದರೆ ರೈತರಿಗೆ ಯಾವುದೇ ಭೂಮಿಯನ್ನು ಬಿಡಲು ಸಾಧ್ಯವಿಲ್ಲವೆಂದು ಗುರುವೇಗೌಡರು ಪಟ್ಟುಹಿಡಿದಾಗ ಈ ಸಂಧಾನ ವಿಫಲವಾಯಿತು. ಅನೇಕ ರೈತ ಮುಂದಾಳುಗಳು ಬಂಧಿತರಾದರು.

ಇದರಿಂದಾಗಿ ರೈತ ಚಳವಳಿ ದುರ್ಬಲಗೊಳ್ಳುತ್ತಾ ಸಾಗಿಬಂತು. 1951 ಮೇ 21ರಂದು ಎಚ್.ಗಣಪತಿಯಪ್ಪನವರು ಕಾಗೋಡಿನಲ್ಲಿ ರೈತ ಸಂಘದ ಸಭೆ ಏರ್ಪಡಿಸಿದರು. ಆಗ ಆ ಸಭೆಯಲ್ಲಿ ಸಮಾಜವಾದಿ ಪಕ್ಷದ ಮುಖಂಡರಾಗಿದ್ದ ತೀರ್ಥಹಳ್ಳಿ ತಾಲ್ಲೂಕಿನ ಶಾಂತವೇರಿ ಗೋಪಾಲಗೌಡರು ಭಾಗವಹಿಸಿದ್ದರು. ರೈತ ಸಂಘ ಮತ್ತು ಸಮಾಜವಾದಿ ಪಕ್ಷಗಳು ಒಟ್ಟಾಗಿ ಚಳವಳಿಯನ್ನು ಮುಂದುವರಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಗೋಪಾಲಗೌಡರು ಈ ಹೋರಾಟದ ನೇತೃತ್ವ ವಹಿಸಿದರು. 28ರ ಹರೆಯದ ಗೋಪಾಲಗೌಡರು ತಮ್ಮ ವಿದ್ಯಾರ್ಥಿದೆಸೆಯಿಂದಲೂ ಪುರೋಹಿತಶಾಹಿಯನ್ನು ಜಮೀನ್ದಾರಿ ದಬ್ಬಾಳಿಕೆಯನ್ನು ಮೂಢ ನಂಬಿಕೆಗಳನ್ನು ವಿರೋಧಿಸಿಕೊಂಡು ಬಂದಿದ್ದ ಹೋರಾಟಗಾರರಾಗಿದ್ದರು. 1948 ರಿಂದಲೇ ಅವರು ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಸಂಘಟನೆಯ ಹೊಣೆಹೊತ್ತಿದ್ದರು. ಅವರು ತೀರ್ಥಹಳ್ಳಿಯಲ್ಲಿ 1948ರಲ್ಲಿ ಸಂಘಟಿಸಿದ ರೈತ ಸಮಾವೇಶಕ್ಕೆ ರಾಮಾನಂದ ಮಿಶ್ರ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬಂದು ಭಾಗವಹಿಸಿದ್ದರು. ಹೀಗೆ ರೈತರೊಡನೆ ಸಂಪರ್ಕ ಮತ್ತು ರಾಜಕೀಯ ಪ್ರಬುದ್ಧತೆ ಪಡೆದಿದ್ದ ಗೋಪಾಲಗೌಡರ ನಾಯಕತ್ವ ಕಾಗೋಡು ಸತ್ಯಾಗ್ರಹಕ್ಕೆ ದೊರೆತದ್ದು ಅದರ ಶಕ್ತಿ ನೂರ್ಮಡಿಯಾಗಲು ಕಾರಣವಾಯಿತು.

ಕಾಗೋಡಿನ ಒಡೆಯರ ಮನೆತನದ ಕೆ.ಜಿ.ಒಡೆಯರು ಅಂದಿನ ಕಾಂಗ್ರೆಸ್‌ನ ಪ್ರಮುಖ ಮುಂದಾಳಾಗಿದ್ದುದರಿಂದ ಸಮಾಜವಾದಿ ಪಕ್ಷ ಈ ಚಳವಳಿಯನ್ನು ಒಂದು ಮಾದರಿ ಹೋರಾಟವಾಗಿ ರೂಪುಗೊಳಿಸಲು ಸಜ್ಜಾಯಿತು. ಈ ಚಳವಳಿಯಲ್ಲಿ ಸಮಾಜವಾದಿ

ಕಾರ್ಯಕರ್ತರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ರೈತರೊಂದಿಗೆ ಭಾಗವಹಿಸಿದರು. ಗೋಪಾಲಗೌಡರು, ವೈ.ಆರ್.ಪರಮೇಶ್ವರಪ್ಪ, ಜಿ.ಸದಾಶಿವರಾವ್, ಗರುಡಶರ್ಮ, ಖಾದ್ರಿಶಾಮಣ್ಣ, ಟಿ.ಎನ್.ಗಂಡುಗಲಿ, ಬೀ.ಸು.ಕೃಷ್ಣಮೂರ್ತಿ, ಸಿ.ಜಿ.ಕೆ. ರೆಡ್ಡಿ, ಮುಲ್ಕಾಗೋವಿಂದ ರೆಡ್ಡಿ, ಈಶ್ವರಪ್ಪ ಮೊದಲಾದವರು ಗೇಣಿ ರೈತರ ನಡುವೆ ಶಿಬಿರಗಳನ್ನು ನಡೆಸುತ್ತಾ ಹಳ್ಳಿ ಹಳ್ಳಿಗಳನ್ನು ಸುತ್ತುತ್ತಾ ರೈತರನ್ನು ಸತ್ಯಾಗ್ರಹಕ್ಕೆ ಹುರಿದುಂಬಿಸುತ್ತಿದ್ದರು. ಗೋಪಾಲಗೌಡರು, ಎಚ್. ಗಣಪತಿಯಪ್ಪ ಸೇರಿದಂತೆ ಅನೇಕ ಮುಖಂಡರು ಬಂಧನಕ್ಕೊಳಗಾಗಿ ಜೈಲು ಸೇರಿದರು. ಆಗ ಶಾಂತವೇರಿ ಗೋಪಾಲಗೌಡರು ರಾಷ್ಟ್ರಮಟ್ಟದ ಸಮಾಜವಾದಿ ನಾಯಕರಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ್, ಪಂಡಿತ ರಮಾನಂದ ಮಿಶ್ರರಂತಹವರ ಗಮನವನ್ನು ಈ ಚಳವಳಿಯತ್ತ ಸೆಳೆದರು. ಅವರು ತಮ್ಮ ಇತರ ಕಾರ್ಯಕ್ರಮಗಳನ್ನು ಬದಿಗೊತ್ತಿ ಕಾಗೋಡಿನತ್ತ ಧಾವಿಸಿದರು. ಈ ನಾಯಕರನ್ನು ನೋಡಲು ಮಲೆನಾಡಿನ ಜನಸಾಗರವೇ ಸೇರಿತ್ತು.

ಲೋಹಿಯಾರವರು ಕಾಗೋಡಿನಲ್ಲಿ ರೈತ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ್ದಲ್ಲದೆ ಸ್ವತಃ ಒಡೆಯರ ಜಮೀನನ್ನು ಸುತ್ತುವರಿದಿದ್ದ ಬೇಲಿಯನ್ನು ಕಿತ್ತೆಸೆದು ಮುನ್ನುಗ್ಗಿದ್ದರು. ಆಗ ರೈತ ಸಮೂಹ ಪ್ರವಾಹದೋಪಾದಿಯಲ್ಲಿ ನುಗ್ಗಿಬಂದು ಎಲ್ಲ ಬಂಧನಗಳನ್ನು ಕಿತ್ತೆಸೆದು ಉಳುವವನೆ ನೆಲದೊಡೆಯ, ಇಂಕ್ವಿಲಾಬ್ ಜಿಂದಾಬಾದ್ ಎಂಬ ಘೋಷಣೆಗಳನ್ನು ಮೊಳಗಿಸುತ್ತ ರೈತ ಚಳವಳಿಗೆ ಹೊಸ ಇತಿಹಾಸ ಬರೆಯಿತು. ಅಂದು ರಾತ್ರಿ ಸಾಗರ ರೈಲ್ವೆ ನಿಲ್ದಾಣದಲ್ಲಿ ಲೋಹಿಯಾ ಅವರನ್ನು ಬಂಧಿಸಲಾಯಿತು. ಅವರು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ರೈತರ ಹೋರಾಟದ ನ್ಯಾಯಸಮ್ಮತ ಬೇಡಿಕೆಯನ್ನು ಪ್ರತಿಪಾದಿಸಿದರು. ಈ ಸುದ್ದಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಯಿತು. ಆಗ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂರವರು ಕೂಡಲೇ ಲೋಹಿಯಾ ಅವರ ಮೇಲೆ ಹೂಡಿದ್ದ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದರು. ರೈತ ಚಳವಳಿ ಹಾಗೂ ಕಾಗೋಡು ಸತ್ಯಾಗ್ರಹ ಚಳವಳಿ ನಿಂತಿತು. ಆದರೆ ರೈತರು ಹಿಂದಿಗಿಂತ ಹೆಚ್ಚು ಸಂಘಟಿತರಾಗಲು ಇದು ನಾಂದಿಯಾಯಿತು.

ಕಾಗೋಡು ಸತ್ಯಾಗ್ರಹ ಮೈಸೂರು ರಾಜ್ಯದ ಮೇಲೆ ಪರೋಕ್ಷವಾಗಿ ರಾಜಕೀಯ ಮತ್ತು ಸಾಮಾಜಿಕ ಪರಿಣಾಮ ಬೀರಿತು. ಜೊತೆಗೆ ಗೇಣಿ ರೈತವರ್ಗದ ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆಯನ್ನು ಒದಗಿಸಿತು. ರಾಷ್ಟ್ರಮಟ್ಟದಲ್ಲಿಯೂ ಚಳವಳಿ ಗುರುತಿಸಲ್ಪಟ್ಟಿತು. ಶಾಂತವೇರಿ ಗೋಪಾಲಗೌಡರು 1952ರಲ್ಲಿ ಸಾಗರ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ವತಿಯಿಂದ ವಿಧಾನಸಭೆಗೆ ಸ್ಪರ್ಧಿಸಿ ಚುನಾಯಿತರಾದರು. ವಿಧಾನಸಭೆ ರಚಿತವಾದ ಸ್ವಲ್ಪ ಕಾಲದಲ್ಲೇ ಗೇಣಿದಾರರ ಶಾಸನ ಜಾರಿಗೆ ಬಂದಿತ್ತು. ಮುಂದೆ 1961ರ ಜತ್ತಿ ಸಮಿತಿ ವರದಿಯನ್ನು ಆಧರಿಸಿ ಮತ್ತೊಂದು ಗೇಣಿ ಶಾಸನವನ್ನು ರಚಿಸಲಾಯಿತು. ಅದು 1965ರಲ್ಲಿ ಜಾರಿಗೆ ಬಂತು. ಈ ಕಾಯಿದೆಗಳು ರೈತರ ಹಕ್ಕನ್ನು ಮತ್ತು ಉಳುವ ರೈತನೆ ನೆಲದೊಡೆಯನಾಗುವ ಅವಕಾಶವನ್ನು ಹೆಚ್ಚಿಸಿದ್ದವು. ಈ ಕಾಯಿದೆ ರಚನೆಯಲ್ಲಿ ಆಗ ಕಂದಾಯ ಸಚಿವರಾಗಿದ್ದ ಮಲೆನಾಡ ಗಾಂಧಿಯೆಂದು ಪ್ರಸಿದ್ಧರಾದ ಕಡಿದಾಳ್ ಮಂಜಪ್ಪನವರ ಪಾತ್ರವೂ ಗಣನೀಯವಾಗಿತ್ತು. 1974ರಲ್ಲಿ ಡಿ.ದೇವರಾಜ ಅರಸು ಅವರ ಸರ್ಕಾರ ತಂದ ಸಮಗ್ರ ಗೇಣಿ ಶಾಸನ ಸಂಪೂರ್ಣವಾಗಿ ಸಮಗ್ರ ಗೇಣಿ ಜಮೀನಿಗೆ ಗೇಣಿದಾರರನ್ನು ಒಡೆಯರನ್ನಾಗಿ ಮಾಡುವಲ್ಲಿ ದೊಡ್ಡ ಹೆಜ್ಜೆಯಾಯಿತು. ಅಲ್ಲಿಗೆ ಕಾಗೋಡು ಸತ್ಯಾಗ್ರಹ ಯಾವ ಧ್ಯೇಯೋದ್ದೇಶಗಳಿಗಾಗಿ ಹುಟ್ಟಿಕೊಂಡಿತೋ ಅದು ಪೂರ್ಣಗೊಂಡಂತಾಯಿತು. (ಎನ್.ಎಚ್.ಎಂ.)

**ಕಾಚಿನಿಯಾಲ್ :** ವಿವಿಧ ದರ್ಜೆಯ ಕೆಂಪು ಬಣ್ಣಗಳನ್ನು ನೀಡಬಲ್ಲ ವರ್ಣ ದ್ರವ್ಯ. ರೂಢಿಯ ಹೆಸರು ಕಿರುಮಂಜಿ. ಮೆಕ್ಸಿಕೋ ಮತ್ತು ಪೆರುದೇಶಗಳಲ್ಲಿನ ನೋಪೋಲಿಯಾ ಕೊಚಿಸೆಲ್ಲಿಫರ್ ಎಂಬ ಕಳ್ಳಿ ಸಸ್ಯದ ಮೇಲೆ ಜೀವಿಸುವ ಡ್ಯಾಕ್ಟ್ಲೋಪೈಪಸ್ ಕಾಕಸ್ ಎಂಬ ಕೀಟಗಳು ಇದರ ಆಕರ. ಅಲ್ಪಸಂಖ್ಯೆಯಲ್ಲಿರುವ ಗಂಡುಕ್ರಿಮಿಗಳಿಂದ ಈ ವರ್ಣದ್ರವ್ಯ ದೊರೆಯದು; ಹೆಣ್ಣುಕೀಟಗಳನ್ನು ರೇಷ್ಮೆಹುಳುಗಳಂತೆ ಬೆಳೆಸಲಾಗುತ್ತದೆ. ಇಂಥ ಒಂದೊಂದು ಕೀಟವೂ ಸಾವಿರಕ್ಕೂ ಮಿಗಿಲಾದ ಸಂತಾನ ನೀಡುತ್ತದೆ. ಗರ್ಭತಾಳಿದಾಗ ಹಿರಿಯ ಗಾತ್ರಕ್ಕೆ ಉಬ್ಬಿ ಗೋಂದಿನ ಹನಿಗಳಂತೆ ಕಾಣುವ, ಗಿಡದ ಮೇಲಿನ ಈ ಕೀಟಗಳನ್ನು ಮೊಂಡು ಚಾಕುಗಳಿಂದ ಬಿಡಿಸಿ ಚೀಲಗಳಲ್ಲಿ ಸಂಗ್ರಹಿಸಲಾಗುತ್ತದೆ. ಹೀಗೆ ವರ್ಷದಲ್ಲಿ ಮೂರು ಬಾರಿ ಸಂಗ್ರಹಿಸಲಾಗುವ ಕೀಟಗಳನ್ನು ಬಿಸಿನೀರಿನಲ್ಲಿ ಮುಳುಗಿಸಿ ಅಥವಾ ಆವಿ ಇಲ್ಲವೇ ಶಾಖಗಳಿಗೊಳಪಡಿಸಿ ಕೊಂದು ಅನಂತರ ಒಣಗಿಸಲಾಗುತ್ತದೆ. ಪರಿಷ್ಕರಿಸುವ ರೀತಿಯಲ್ಲಿರುವ ವ್ಯತ್ಯಾಸವೇ ಕಾಚಿನಿಯಾಲ್ ಮಾದರಿಗಳಲ್ಲಿ ಕಂಡುಬರುವ ವ್ಯತ್ಯಾಸಕ್ಕೆ ಕಾರಣ. ಸತ್ತ ಕೀಟಗಳ ಒಣಗಿದ ಪುಡಿಯೇ ಮಾರುಕಟ್ಟೆಯಲ್ಲಿ ದೊರೆಯುವ ವರ್ಣದ್ರವ್ಯ. ಈಚಿನ ಹಲವು ವರ್ಷಗಳವರೆಗೂ ಅನೇಕ ದೇಶಗಳಲ್ಲಿ ಕಾಚಿನಿಯಾಲ್ ಸಾಕಣೆ ಇತ್ತು. ಆದರೆ ಕೃತಕ ವರ್ಣದ್ರವ್ಯ ಉದ್ದಿಮೆಯಿಂದಾಗಿ ಈ ಕೀಟಗಳ ಸಾಕಣೆ ಬಹು ಕಡಿಮೆಯಾಗಿ ಮೆಕ್ಸಿಕೋವಿನಲ್ಲಿ ಮಾತ್ರ ಅಲ್ಪಸ್ವಲ್ಪ ಉಳಿದಿದೆ. (ಕೆ.ಟಿ.ಎಸ್.)

**ಕಾಚಿಹಣ್ಣಿನಗಿಡ :** ಸೊಲನೇಸೀ ಕುಟುಂಬಕ್ಕೆ ಸೇರಿದ ಸೋಲೇನಮ್ ನೈಗ್ರಮ್ ಎಂಬ ವೈಜ್ಞಾನಿಕ ಹೆಸರಿನ ಏಕವಾರ್ಷಿಕ ಮೂಲಿಕೆ ಸಸ್ಯ. ಇದಕ್ಕೆ ಕರಿ ಕಾಚಿ ಗಿಡ, ಕಾಕಮುಂಜಿ ಎಂಬ ಹೆಸರುಗಳೂ ಇವೆ. ಸ್ವಾಭಾವಿಕವಾಗಿ ಇದು ಹೊಲ ಮತ್ತು ತೋಟಗಳಲ್ಲಿ ಕಳೆಸಸ್ಯವಾಗಿ ಬೆಳೆಯುತ್ತದೆ. ಇದರ ಎಲ್ಲ ಭಾಗಗಳನ್ನು ಆಯುರ್ವೇದ ಔಷಧಿಗಳಲ್ಲಿ ಉಪಯೋಗಿಸುತ್ತಾರೆ. ಇದರ ಕಾಯಿ, ಎಲೆ ಮತ್ತು ಎಳೆಯ ಕಾಂಡಗಳನ್ನು ಮೂತ್ರೋತ್ತೇಜಕ, ಕಫ ಕತ್ತರಿಸುವ, ದೇಹದ ಪೋಷಣ ವ್ಯಾಪಾರಗಳನ್ನು ಬದಲಾಯಿಸಿ ಅವನ್ನು ಆರೋಗ್ಯಸ್ಥಿತಿಗೆ ತರುವಂಥ, ಶಾಮಕ ಔಷಧಿಗಳಾಗಿ ಉಪಯೋಗಿಸುತ್ತಾರೆ. ಎಲೆಗಳನ್ನು ಸಂಧಿವಾತ ರೋಗಕ್ಕೂ ಕೆಲವು ಚರ್ಮ ರೋಗಗಳಲ್ಲಿ ಬೆಚ್ಚಾರವಾಗೂ ಬಳಸುವುದುಂಟು. ಇದರ ಹಣ್ಣು ತಿನ್ನಲು ರುಚಿಯಾಗಿರುತ್ತದೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ ವಿಷವಾಗಿ ಪರಿಣಮಿಸುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ಸಸ್ಯದ ಎಳೆಯ ಎಲೆಗಳನ್ನು ಸೊಪ್ಪಿನ ತರಕಾರಿಯಾಗಿ ಉಪಯೋಗಿಸುತ್ತಾರೆ.

ಕಾಚಿಹಣ್ಣಿನ ಗಿಡ ಸುಮಾರು 3' ಎತ್ತರಕ್ಕೆ ಬೆಳೆಯುತ್ತದೆ. ಇದರ ಕಾಂಡ ಬಹುಕವಲೊಡೆದು ಹರಡಿರುತ್ತದೆ. ಎಲೆಗಳು ಸರಳ; ಪರ್ಯಾಯವಾಗಿ ಜೋಡಣೆಗೊಂಡಿವೆ. ಅವುಗಳ ಆಕಾರ ಕರನೆಯಂತೆ ಅಂಚು ನಯವಾಗಿದೆ. ಹೂಗೊಂಚಲು ಮಧ್ಯಾರಂಭಿ (ಸೈಮೋಸ್) ಮಾದರಿಯದು. ಇದು ಎಲೆಗೆ ಅಭಿಮುಖವಾಗಿ ಹುಟ್ಟುತ್ತದೆ. ಹೂಗಳು ದ್ವಿಲಿಂಗಿಗಳು. ಒಂದೊಂದು ಹೂವಿನಲ್ಲೂ 5 ಸಂಯುಕ್ತ ಮಾದರಿಯ ಪುಷ್ಪಪತ್ರಗಳೂ ಒಂದರೊಡನೊಂದು ಕೂಡಿಕೊಂಡ 5 ದಳಗಳೂ 5 ಕೇಸರಗಳೂ ಎರಡು ಕಾರ್ಪೆಲುಗಳಿಂದಾದ ಉಚ್ಚಸ್ಥಾನದ ಅಂಡಾಶಯವೂ ಇವೆ. ಪುಷ್ಪಪತ್ರಗಳು ಕಾಯಲ್ಲೂ ಉಳಿದಿರುತ್ತವೆ. ದಳಗಳ ಬಣ್ಣ ಬಿಳಿ. ಕೇಸರಗಳು ದಳಗಳ ಬುಡಕ್ಕೆ ಅಂಟಿಕೊಂಡಿವೆ. ಫಲ ಬೆರಿ ಮಾದರಿಯದು. ಅದರ ಬಣ್ಣ ಕಪ್ಪು. (ಡಿ.ಎಂ.)

**ಕಾಚು :** ಕೆಲವು ಜಾತಿಯ ಸಸ್ಯಗಳಿಂದ ದೊರೆಯುವ ಒಂದು ಬಗೆಯ ರಾಳದಂಥ (ರೆಸಿನ್) ವಸ್ತು. ಭಾರತದ ಇತರ ಭಾಗಗಳಲ್ಲಿ ಇದನ್ನು ಕತ್, ಕತಾ, ಕಚ್ ಮುಂತಾದ ಹೆಸರುಗಳಿಂದಲೂ ಇಂಗ್ಲಿಷಿನಲ್ಲಿ ಕಾಶೂ ಅಥವಾ ಕ್ಯಾಟಿಚೂ ಎಂಬ ಹೆಸರಿನಿಂದಲೂ ಕರೆವುದುಂಟು. ಇಂಗ್ಲಿಷ್ ಹೆಸರು ಕನ್ನಡದ ಕಾಚು ಪದದಿಂದಲೇ ಬಂದುದು. ಇದರ ವಿಷಯವಾಗಿ ಸಂಸ್ಕೃತ ಗ್ರಂಥಗಳಲ್ಲಿ ಉಲ್ಲೇಖವಿದೆ. ಸಂಸ್ಕೃತದಲ್ಲಿ ಇದನ್ನು ಖದಿರಸಾರ ಎಂದು ಕರೆಯುವರು. ಕಾಚಿನಲ್ಲಿ ಹಲವಾರು ಬಗೆಗಳಿವೆ. ಇವುಗಳಲ್ಲಿ ಕಚ್ ಮತ್ತು ಕತ್ ಎಂಬ ಎರಡು ಬಗೆಗಳನ್ನು ಕಗ್ಗಲಿ ಮರದಿಂದ (ಅಕೇಸಿಯ ಕ್ಯಾಟಿಚೂ) ತೆಗೆಯುತ್ತಾರೆ. ಇದಕ್ಕೆ ಬಂಗಾಳದ ಕಾಚು ಎಂಬ ಹೆಸರೂ ಇದೆ. ಇನ್ನೊಂದು ವಿಧವಾದ ಕಾಚನ್ನು ಗ್ಯಾಂಬಿಯರ್ ಗಿಡದಿಂದ (ಆಂಕೇರಿಯ ಗ್ಯಾಂಬಿಯರ್) ತೆಗೆಯುತ್ತಾರೆ. ಇದಕ್ಕೆ ಗ್ಯಾಂಬಿಯಾರ್ ಕಾಚು ಎಂದು ಹೆಸರು. ಅಡಕೆಯಿಂದಲೂ ಒಂದು ಬಗೆಯ ಕಾಚನ್ನು ತಯಾರಿಸುವುದುಂಟು. ಇದನ್ನು ಬಾಂಬೆ ಕಾಚು ಎಂದು ಕರೆಯಲಾಗುತ್ತದೆ.

ಕಾಚನ್ನು ಕಗ್ಗಲಿ ಮರದ ಎಲೆ, ಕಾಯಿ ಮತ್ತು ಕಾಂಡಗಳಿಂದ ತೆಗೆಯಬಹುದಾದರೂ ಮುಖ್ಯವಾಗಿ ಕಾಂಡದ ಚೇಗುಭಾಗದಿಂದ (ಹಾರ್ಡ್‌ವುಡ್) ಮಾತ್ರ ಇದನ್ನು ತಯಾರಿಸುತ್ತಾರೆ. ಚೇಗುಭಾಗವನ್ನು ಬೇರ್ಪಡಿಸಿ ಸಣ್ಣ ಚೂರುಗಳಾಗಿ ಕತ್ತರಿಸಿ ನೀರಿನಲ್ಲಿ ಹಾಕಿ ಕುದಿಸುತ್ತಾರೆ. ಚೇಗಿನಲ್ಲಿದ್ದ ಕಾಚೆಲ್ಲ ನೀರಿಗೆ ವರ್ಗಾವಣೆಯಾಗುತ್ತದೆ. ಈ ದ್ರಾವಣವನ್ನು ಹಾಗೆಯೇ ಕುದಿಸಿದರೆ ನೀರೆಲ್ಲ ಆವಿಯಾಗಿ ದ್ರಾವಣ ಕ್ರಮೇಣ ಗಟ್ಟಿಯಾಗತೊಡಗುತ್ತದೆ. ಆಗ ಇದನ್ನು ಬಾಣಲೆಗಳಿಗೆ ಸುರಿದು ಕೆಲವು ದಿನ ಹಾಗೇ ಬಿಡುತ್ತಾರೆ. ನಿಧಾನವಾಗಿ ಕಾಚೆಲ್ಲ ಗಟ್ಟಿಯಾಗಿ ತಳದಲ್ಲಿ ಸಂಗ್ರಹವಾಗುತ್ತದೆ. ಮೇಲೆ ನಿಂತಿರುವ ತಿಳಿನೀರನ್ನು ಬಸಿದು ತಳದಲ್ಲಿನ ಕಾಚನ್ನು ಶೇಖರಿಸುತ್ತಾರೆ. ಹೀಗೆ ಶೇಖರಿಸಿದ ಕಾಚು ಹಪ್ಪಳದ ರೀತಿ ಇರುತ್ತದೆ. ಸಣ್ಣ ಸಣ್ಣ ಚೂರುಗಳಾಗಿ ಅಥವಾ ಗುಂಡನೆಯ ಬಿಲ್ಲೆಗಳಾಗಿ ಕತ್ತರಿಸಿ ಇದನ್ನು ಮಾರುಕಟ್ಟೆಗೆ ಕಳಿಸುತ್ತಾರೆ. ಕಾಚಿಗೆ ಕೆಂಪು, ನಸುಗೆಂಪು, ಕಂದು, ಬೂದು ಇತ್ಯಾದಿ ಹಲವಾರು ಬಣ್ಣಗಳುಂಟು. ಕಾಚನ್ನು ಹತ್ತಿ ಮತ್ತು ರೇಷ್ಮೆ ಬಟ್ಟೆಗಳಿಗೆ ಬಣ್ಣ ಕಟ್ಟುವುದಕ್ಕೂ ಚರ್ಮ ಹದ ಮಾಡುವುದಕ್ಕೂ ಕ್ಯಾಲಿಕೊ ಮುದ್ರಣದಲ್ಲೂ ಉಪಯೋಗಿಸುತ್ತಾರೆ. ಇದರಿಂದ ಕಾಕಿ ಬಣ್ಣವನ್ನೂ ತಯಾರಿಸುತ್ತಾರೆ. ತಾಂಬೂಲದೊಂದಿಗೆ ಕಾಚನ್ನು ಸೇವಿಸುವ ರೂಢಿ ಭಾರತದ ಎಲ್ಲ ಪ್ರದೇಶಗಳಲ್ಲೂ ಇದೆ. ಇದಕ್ಕೆ ಔಷಧೀಯ ಮಹತ್ತ್ವವೂ ಇದೆ. ಇದು ಒಳ್ಳೆಯ ಪ್ರತಿಬಂಧಕ (ಆಸ್ಟ್ರಿಂಜೆಂಟ್) ಎಂದು ಹೆಸರಾಗಿದೆ. ಇದನ್ನು ಕೆಮ್ಮು, ಅತಿಸಾರ ಮುಂತಾದ ರೋಗಗಳ ನಿವಾರಣೆಗೂ ವಸಡುಗಳ ಪುಷ್ಟಿಗೂ ಬಳಸುತ್ತಾರೆ. ಹುಣ್ಣು, ಬೊಬ್ಬೆ ಮುಂತಾದವುಗಳಿಗೆ ಹಚ್ಚಲೂ ಇದನ್ನು ಉಪಯೋಗಿಸುವುದುಂಟು.

ವಯಸ್ಸಾದ ಕಗ್ಗಲಿ ಮರಗಳಿಂದ ಬರುವ ಕಾಚು ಹರಳುರೂಪದಲ್ಲಿದೆ. ಇದನ್ನು ಕೀರಸಾಲ್ ಎನ್ನುತ್ತಾರೆ. ಇದು ಬಹಳ ಬೆಲೆಬಾಳುವ ವಸ್ತು. ಇದನ್ನು ಕೆಮ್ಮು, ಗಂಟಲಿನ ಹುಣ್ಣು ಮುಂತಾದವುಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ. (ಎಂ.ಸಿ.ಆರ್.)

**ಕಾಚುಗುಣ ನಾಶ :** ಕಾಚಿನ ಅಥವಾ ಗಾಜಿನ ಗುಣವನ್ನು ನಾಶಪಡಿಸುವಿಕೆ (ಡೀವಿಟ್ರಿಫಿಕೇಶನ್). ದ್ರವಗಳು ಶೀಘ್ರವಾಗಿಯೂ ಅತಿಯಾಗಿಯೂ ಆರಿದಾಗ ಕಾಚಾಗುತ್ತವೆ. ಕಾಚಿನಲ್ಲಿ ಕಣಗಳ ರಚನೆ ಅಸ್ತವ್ಯಸ್ತ. ಕಣ ರಚನೆ ಹರಳುಗಳ ರಚನೆಯಿಂದ ಭಿನ್ನ. ಇಂಥ ಅಸ್ತವ್ಯಸ್ತ ರಚನೆ ಕಾಚಿಗೆ ಶಾಶ್ವತವಲ್ಲ. ಬಹಳ ಕಾಲದ ಮೇಲೆ ಕಾಚಿನಲ್ಲಿನ ಕಣಗಳ ರಚನೆಯಲ್ಲಿ ಬದಲಾವಣೆ ಉಂಟಾಗುವುದು. ಇದರಿಂದಾಗಿ ಆ ಕಣಗಳು ವ್ಯವಸ್ಥಿತವಾಗಿ ಸೂಕ್ಷ್ಮ ಹರಳುಗಳಾಗುತ್ತವೆ ಅಥವಾ ಒಂದು ಕೇಂದ್ರದಿಂದ ಪ್ರಸರಿಸುವ ಉದ್ದುದ್ದವಾದ ಹರಳುಗಳ ಸಮೂಹವಾಗುತ್ತವೆ. ಇದನ್ನು ಕಾಚುಗುಣನಾಶನವೆಂದು ಹೇಳಬಹುದು. ಈ ಬದಲಾವಣೆ ಬಲು ನಿಧಾನವಾದದ್ದು. ಆದರೆ ಹೆಚ್ಚಿನ ಒತ್ತಡ, ಉಷ್ಣ ಇಲ್ಲವೆ ಕಂಪನಗಳು ಇದನ್ನು ತ್ವರಿತಗೊಳಿಸಬಲ್ಲವು. ಕಾಚುಗುಣನಾಶ ಪುರಾತನಕಾಲದ ಅಗ್ನಿಪರ್ವತಗಳಿಂದ ಹೊರಹೊಮ್ಮಿದ ಶಿಲೆಗಳಲ್ಲಿ ಸಾಮಾನ್ಯ. ಹಳೆಯ ಗಾಜುಗಳಲ್ಲಿಯೂ ಈ ಗುಣ ಕಾಣಬರುತ್ತದೆ. ಈ ಬದಲಾವಣೆಯಿಂದಾಗಿ ಗಾಜಿನ ಪಾರಕತ್ವ ನಾಶವಾಗುವುದು. ಅಲ್ಲದೆ ಅದರ ಪ್ರಮಾಣ ಕುಗ್ಗಿ ಅನೇಕ ಬಿರುಕುಗಳು ಉಂಟಾಗುತ್ತವೆ. ಇದರಿಂದಾಗಿ ಶಿಲೆಗಳಲ್ಲಿಯೂ ಅವುಗಳ ಘನಪ್ರಮಾಣ ಕಡಿಮೆಯಾಗಿ ವರ್ತುಲಾಕಾರದ ಬಿರುಕುಗಳು ಉದ್ಭವಿಸುವುವು. ಈ ರೀತಿ ಬದಲಾವಣೆಗೊಂಡ ಶಿಲೆಗಳನ್ನು ಫೆಲ್ಸೈಟ್ ಎಂದು ಕರೆಯುವರು.

ಕಾಚುಗುಣ ಒಂದು ವಸ್ತುವಿನ ಭೌತಸ್ವರೂಪವನ್ನು ಸೂಚಿಸುವುದೇ ವಿನಾ ಅದರ ಸಂಯೋಜನೆಯನ್ನಲ್ಲ, ಅನೇಕ ವೇಳೆ ಎರಕ ಹೊಯ್ದ ಕಬ್ಬಿಣದ ತೊಲೆಗಳು ಮತ್ತು ಇತರ ಲೋಹಗಳ ವಸ್ತುಗಳೂ ಕಾಚಿನ ರೂಪದಲ್ಲಿರುತ್ತವೆ. ಕೆಲವು ವೇಳೆ ಸೇತುವೆಗಳ ಕಬ್ಬಿಣದ ತೊಲೆಗಳು ಅವುಗಳ ಮೇಲಿನ ರಭಸವಾದ ವಾಹನ ಸಂಚಾರದಿಂದಾಗಿ ಸ್ವಲ್ಪಕಾಲದ ಮೇಲೆ ಕಾಚುಗುಣನಾಶವನ್ನು ಹೊಂದುತ್ತವೆ. ಇದರಿಂದ ಅವುಗಳ ಶಕ್ತಿ ಕುಗ್ಗಿ ಸೇತುವೆ ಅನುಪಯುಕ್ತವಾಗುವುದು. (ಎಂ.ಎಸ್.ಎಸ್.ಎಚ್.)

**ಕಾಜಪುಟೆ ಎಣ್ಣೆಮರ :** ಮಿರ್ಟೇಸೀ ಕುಟುಂಬಕ್ಕೆ ಸೇರಿದ ಮೆಲಲ್ಯೂಕ ಲ್ಯೂಕೊಡೆಂಡ್ರಾನ್ ಎಂಬ ವೈಜ್ಞಾನಿಕ ಹೆಸರಿನ ಒಂದು ನಿತ್ಯಹರಿದ್ವರ್ಣದ ಸಸ್ಯ. ಮರಗಳ ಮತ್ತು ಪೊದೆಗಳ ರೂಪದಲ್ಲಿ ಬೆಳೆಯುತ್ತದೆ. ಈ ಮರದ ತೊಗಟೆ ಬೆಳ್ಳಗೆ ಮೃದುವಾಗಿದ್ದು ಕಾಗದದ ರೂಪದಲ್ಲಿ ಸುಲಿದು ಬರುತ್ತದೆ. ಎಲೆಗಳಲ್ಲಿ ಎಣ್ಣೆಗ್ರಂಥಿಗಳಿವೆ. ಹೂಗಳು ಮಾಸಲು ಬಿಳಿಯ ಬಣ್ಣದವು; ಇವಕ್ಕೆ ತೊಟ್ಟಿಲ್ಲ, ಬೀಜಗಳು ಗಟ್ಟಿ ಹಾಗೂ ಬಲು ಚಿಕ್ಕವು.

ಕಾಜಪುಟೆ ಎಣ್ಣೆಮರದ ಒಂದು ರೆಂಬೆ

ಇದು ಮಲಯ, ಥೈಲೆಂಡ್, ಮಯನ್ಮಾರ್, ಕಾಂಬೋಡಿಯ, ಆಸ್ಟ್ರೇಲಿಯ ದೇಶಗಳಲ್ಲಿ ಬೆಳೆಯುತ್ತದೆ. ಸಾಮಾನ್ಯವಾಗಿ ತಗ್ಗಾದ ಜೌಗುಪ್ರದೇಶಗಳಲ್ಲಿ ಸೊಂಪಾಗಿ ಬೆಳೆಯುತ್ತದೆ. ಭಾರತದಲ್ಲಿ ಉದ್ಯಾನವನಗಳಲ್ಲಿ ಬೆಳೆಸುವುದುಂಟು. ಮರದ ತೊಗಟೆಯಿಂದ ದಿಂಬುಗಳು, ಮೆತ್ತೆ, ಚಾಪೆಗಳು ಮತ್ತು ಮೀನಿನ ಬಲೆಗಳನ್ನು ಮಾಡುತ್ತಾರೆ. ಪೂರ್ವಕಾಲದಲ್ಲಿ ಈ ತೊಗಟೆಯನ್ನು ಕಾಗದದ ರೂಪದಲ್ಲಿ ಬಳಸುತ್ತಿದ್ದರು. ಮರ ಬಹಳ ದೃಢವಾಗಿರುವುದರಿಂದ ಇದನ್ನು ಸಮುದ್ರನೌಕೆಗಳನ್ನು ಕಟ್ಟಲು ಉಪಯೋಗಿಸುತ್ತಾರೆ. ರೈಲ್ವೆ ಸ್ಲೀಪರುಗಳಾಗಿಯೂ ಇದರ ಉಪಯೋಗ ಉಂಟು.

ಕಾಜಪುಟೆ ಎಣ್ಣೆಮರದ ಎಲೆಗಳನ್ನು ನೀರಿನಲ್ಲಿ ಅರೆದು ಬಟ್ಟಿ ಇಳಿಸಿ ಎಣ್ಣೆಯನ್ನು ಪಡೆಯಲಾಗುವುದು. ಹೊಸತಾಗಿ ತೆಗೆದ ಎಣ್ಣೆ ಬಣ್ಣರಹಿತ ಅಥವಾ ತೆಳು ಹಳದಿ ಬಣ್ಣದ್ದು. ಶೇಖರಿಸಿಟ್ಟ ಎಣ್ಣೆ ಕಾಲಕ್ರಮೇಣ ತನ್ನಲ್ಲಿಯ ತಾಮ್ರದ ಅಂಶದಿಂದಾಗಿ ಹಸುರು ಬಣ್ಣಕ್ಕೆ ತಿರುಗುತ್ತದೆ. ಈ ಎಣ್ಣೆ ಸುಲಭವಾಗಿ ಆವಿಯಾಗುತ್ತದೆ. ವಾಸನೆಯಲ್ಲಿ ಕರ್ಪೂರ ಮತ್ತು ಕರ್ಪೂರ ತೈಲವನ್ನು ಹೋಲುತ್ತದೆ. ಇದಕ್ಕೆ ಅತೀವಕಾರದ ರುಚಿಯಿದೆ. ಇದನ್ನು ತಂಪಾದ ಮತ್ತು ಬೆಳಕು ಇರದ ಪ್ರದೇಶಗಳಲ್ಲಿ ಶೇಖರಿಸಿ ಇಡಬೇಕು. ಈ ಎಣ್ಣೆಗೆ ಅನೇಕ ಉಪಯೋಗಗಳುಂಟು. ಮುಖ್ಯವಾಗಿ ಇದು ಚರ್ಮವ್ಯಾಧಿಗಳಲ್ಲಿ ಲೇಪನವಾಗಿ ನೋವು ನಿವಾರಕವಾಗಿ ಮತ್ತು ಚಿಕ್ಕ ಪ್ರಮಾಣದಲ್ಲಿ ಉದ್ದೀಪನಕಾರಿಯಾಗಿ ಮತ್ತು ವಾತಹರವಾಗಿ ಉಪಯೋಗವಾಗುವುದು. ಶ್ವಾಸಕೋಶ ಸಂಬಂಧಿ ವ್ಯಾಧಿಗಳಲ್ಲೂ ಇದರ ಬಳಕೆ ಉಂಟು. (ಬಿ.ಪಿ.; ಎಲ್.ಎ.ಆರ್.)

**ಕಾಜವಾರ :** ವಿಷಕರ ಕಹಿ ಮದ್ದು ದೊರೆವ ಬೀಜಬಿಡುವ ಸಸ್ಯ (ಸ್ಟ್ರಿಕ್ನಾಸ್‌ನಕ್ಸ್‌ವೋಮಿಕ). ಲೊಗಾನಿಯೇಸೀ ಕುಟುಂಬಕ್ಕೆ ಸೇರಿದೆ. ಇದನ್ನು ಕಾಸರ. ಕಾಸರ್ಕ, ಇಟ್ಟಿ, ಮುಷ್ಟಿ, ಕಾಂಜಿರ ಎನ್ನುವುದೂ ಉಂಟು. ಭಾರತ, ಬರ್ಮ, ಥೈಲೆಂಡ್, ಇಂಡೋಚೀನ, ಉತ್ತರ ಆಸ್ಟ್ರೇಲಿಯಗಳಲ್ಲಿ ಈ ಗಿಡ ಬೆಳೆಯುತ್ತದೆ. ಹಿಂದೆ ಮದ್ದುಗಳಲ್ಲಿ ಶಕ್ತಿವರ್ಧಕವಾಗಿ ಬಳಕೆಯಲ್ಲಿತ್ತು. ಇದಕ್ಕಾಗಿ ಪ್ರಾಣಿಗಳ ವೈದ್ಯದಲ್ಲಿ ಮಾತ್ರ ಈಗಲೂ ಕೊಡುವುದುಂಟು. ಬಟ್ಟುಗಳಂತಿರುವ ಇದರ ಬೀಜಗಳಲ್ಲಿ ಮುಖ್ಯವಾಗಿ ಸ್ಟ್ರಿಕ್ನೀನ್, ಬ್ರೂಸೀನ್ ಸಸ್ಯಕ್ಷಾರ (ಅಲ್ಕಲಾಯಿಡ್ಸ್) (ಸುಮಾರು ಶೇ. 1–2 ಪ್ರಮಾಣ). ಇವೆರಡರ ಗುಣಗಳೂ ಒಂದೇ ಆದರೂ ಮೊದಲಿನದು ಜೋರಿನದು. ಪ್ರಯೋಗ ಪ್ರಾಣಿಗೆ ಕೊಟ್ಟು ನೋಡಿದರೆ ಇದರ ಪ್ರಭಾವ ಮುಖ್ಯವಾಗಿ ಬೆನ್ನುಹುರಿಯ ಮೇಲೆ ತೋರುತ್ತದೆ. ಯಾವುದೇ ತಿನ್ನುವ ಬೀಜವೆಂದು ಮಕ್ಕಳು ಸೇವಿಸಿ ವಿಷವೇರಿದಾಗ ಎದೆಬಿಗಿದಂತಾಗಿ ಇದ್ದಕ್ಕಿದ್ದಹಾಗೆ ಸೆಟೆತ (ಕ್ಲಾನಿಕ್ ಕನ್ವಲ್ಷನ್) ಬಿಟ್ಟು ಬಿಟ್ಟು ಬರುತ್ತಿದ್ದು ರೋಗಿ ಸುಸ್ತಾಗುವನು. ಸೆಟೆಬೇನೆಯಲ್ಲೂ (ಟೆಟನಸ್, ಧನುರ್ವಾಯು) ಹೀಗೇ ಸೆಳವು ಇರುವುದಾದರೂ ಇದರಲ್ಲಿ ಗಾಯ, ಶಸ್ತ್ರಕ್ರಿಯೆ ಆಗಿರದು; ಅಲ್ಲದೆ, ಸೆಳವು ಬಿಟ್ಟು ಬಿಟ್ಟು ಬರುವುದು. ದವಡೆಬೀಗು (ಲಾಕ್ ಜಾ) ಕೊನೆಯ ಹಂತದಲ್ಲಿ ಕಾಣಿಸಿಕೊಳ್ಳುತ್ತದೆ. ಕಾಜವಾರ ಕಹಿಯಾದ್ದರಿಂದ ಕೆಲವೇಳೆ ಹಸಿವನ್ನು ಹುಟ್ಟಿಸಲು ಮದ್ದಾಗಿ ಕೊಡುವುದು ರೂಢಿ. (ಡಿ.ಎಸ್.ಎಸ್.)



**ಕಾಜಾಣ :** ಪಕ್ಷಿವರ್ಗದ ಪ್ಯಾಸೆರಿಫಾರ್ಮೀಸ್ ಗಣದ ಡೈಕ್ರೂರಿಡೀ ಕುಟುಂಬದ ಒಂದು ಜಾತಿಯ ಹಕ್ಕಿ (ಡ್ರಾಂಗೊ). ಇದಕ್ಕೆ ರಾಜಕಾಗೆ (ಕಿಂಗ್ ಕ್ರೋ) ಎಂಬ ಹೆಸರೂ ಇದೆ. ಈ ಜಾತಿಯ ವೈಜ್ಞಾನಿಕ ಹೆಸರು ಡೈಕ್ರೂರಸ್. ಇದರಲ್ಲಿ ಸುಮಾರು 30 ಪ್ರಭೇದಗಳಿವೆ. ಇವು ಆಗ್ನೇಯ ಏಷ್ಯ, ಇಥಿಯೋಪಿಯ, ಮಲಯ ಮತ್ತು ಆಸ್ಟ್ರೇಲಿಯಗಳ ನಿವಾಸಿಗಳು. ಭಾರತದಲ್ಲಿ ಡೈ. ಸೀರೂಲೆಸೆನ್ಸ್ (ಬಿಳಿಯ ಹೊಟ್ಟೆಯ ಕಾಜಾಣ) ಡೈ. ಪ್ಯಾರಡಿಸಿಯಸ್ (ಉದ್ದ ಬಾಲದ ಕಾಜಾಣ) ಮತ್ತು ಡೈ. ಮಾಕ್ರೊಸೆರ್‌ಕಸ್ (ಕಪ್ಪು ಕಾಜಾಣ) ಎಂಬ ಮೂರು ಪ್ರಭೇದಗಳಿವೆ.

ಕಾಜಾಣಗಳು ತೋಟಗಳು, ಕಾಡುಗಳು ಮುಂತಾದ ವನ್ಯಪ್ರದೇಶಗಳಲ್ಲಿ ಸಾಧಾರಣ ವಾಗಿ ಒಂಟಿಯಾಗಿ ಇಲ್ಲವೆ ಜೋಡಿಗಳಲ್ಲಿ ವಾಸಿಸುತ್ತವೆ. ದೊಡ್ಡ ಗುಂಪುಗಳಲ್ಲಿರುವುದು ಅಪೂರ್ಣ. ಕಾಜಾಣ ಸುಮಾರು 10"–12" ಉದ್ದದ ಸಣ್ಣ ಗಾತ್ರದ ಹಕ್ಕಿ. ನೋಡುವುದಕ್ಕೆ ಬಹಳ ಚೆಲುವಾಗಿದೆ. ದೇಹದ ಬಣ್ಣ ಮಿರಮಿರನೆ ಹೊಳೆಯುವ ಅಚ್ಚಕಪ್ಪು ಅಥವಾ ನೇರಳೆ. ಕೆಲವು ಪ್ರಭೇದಗಳಲ್ಲಿ ಹೊಟ್ಟೆ ಬಿಳಿಯಾಗಿಯೂ ಪುಕ್ಕಗಳು ಬೂದಿ ಅಥವಾ ಕಂದು ಬಣ್ಣದವಾಗಿಯೂ ಇರುವುದುಂಟು. ಈ ವರ್ಣಭೇದಗಳ ಆಧಾರದ ಮೇಲೆ ಪ್ರಭೇದಗಳನ್ನು ಬೇರೆ ಬೇರೆ ಬಣಗಳಾಗಿ ವಿಂಗಡಿಸಬಹುದು. ಬಾಲ ಉದ್ದವಾಗಿದ್ದು ಕವಲೊಡೆದಿದೆ. ಉದ್ದಬಾಲದ ಕಾಜಾಣದ ಹೆಸರು ಅನ್ವರ್ಥಕ. ಬಾಲದ ಕವಲುಗಳು ತುದಿಯಲ್ಲಿ ಅಗಲವಾಗಿವೆ. ಅಲ್ಲದೆ ಇದರ ತಲೆಯ ಮೇಲೆ ಶಿಖೆಯೊಂದಿದೆ. ಕನ್ನಡದಲ್ಲಿ ಇದನ್ನು ಭೀಮರಾಜ ಎಂದು ಕರೆಯುತ್ತಾರೆ. ಹಾರುವಾಗ ಪುಕ್ಕದ ತುದಿಯ ಕವಲುಗಳು ಬೀಸುವ ಗದೆಯಂತೆ ತುಯ್ದಾಡುವುದೇ ಇದಕ್ಕೆ ಮೂಲ. ಕಾಜಾಣ ಬಲು ಚುರುಕಾದ ಹಕ್ಕಿ. ಹಾರಾಟದಲ್ಲೂ ಬಲು ಕುಶಲಿ. ಕೀಟಗಳು, ಅದರಲ್ಲೂ ಹಾರಬಲ್ಲ ಕೀಟಗಳು. ಮಿಡತೆಗಳು ಇದರ ಆಹಾರ. ಹಾರುತ್ತಿರುವಾಗಲೇ ಆಹಾರದ ಮೇಲೆ ಹಠಾತ್ತನೆ ಎರಗಿ ಕ್ಷಣಾರ್ಧದಲ್ಲಿ ಹಿಡಿಯಬಲ್ಲ ಸಾಮರ್ಥ್ಯ ಇದಕ್ಕಿದೆ. ಹೂಗಳ ಮಕರಂದವನ್ನೂ ಕುಡಿಯುವುದು ಉಂಟು. ಕಾಜಾಣ ಹಲವಾರು ಬಗೆಗಳಲ್ಲಿ ಕೂಗುತ್ತದೆ. ಬೇರೆ ಹಕ್ಕಿಗಳ ಕೂಗನ್ನೂ ಚೆನ್ನಾಗಿ ಅನುಕರಿಸಬಲ್ಲದು.

ಗೂಡು ಕಟ್ಟುವ ಕಾಲ ಸಾಮಾನ್ಯವಾಗಿ ಮಾರ್ಚಿಯಿಂದ ಜೂನ್ ತಿಂಗಳುಗಳು, ಮರಗಳ ಕವಲುಗಳ ಮೇಲೆ ಸಣ್ಣ ಕಡ್ಡಿಗಳು ಬೇರು, ಎಲೆ, ನಾರು ಮುಂತಾದವನ್ನು

ಜೇಡಬಲೆಯಿಂದ ಬಂಧಿಸಿ ಗೂಡು ಕಟ್ಟುತ್ತದೆ. 3–5 ಮೊಟ್ಟೆಗಳನ್ನಿಡುತ್ತದೆ. ಗಂಡು ಹೆಣ್ಣುಗಳೆರಡೂ ಕಾವು ಕೊಡುವುದರಲ್ಲಿ, ಮರಿಗಳ ಪಾಲನೆಯಲ್ಲಿ ಪರಸ್ಪರ ಸಹಕರಿಸುತ್ತವೆ. (ಎಸ್.ವಿ.ಎ.)

**ಕಾಜಿಪೇಟ್ :** ಭಾರತದ ಆಂಧ್ರಪ್ರದೇಶ ರಾಜ್ಯದ ವಾರಂಗಲ್ ಜಿಲ್ಲೆಗೆ ಸೇರಿದ ಪಟ್ಟಣ, ರೈಲ್ವೆ ಜಂಕ್ಷನ್, ವಾರಂಗಲ್ಲಿಗೆ 15 ಕಿಮೀ ಮತ್ತು ಹೈದರಾಬಾದಿಗೆ 140 ಕಿಮೀ ದೂರದಲ್ಲಿದೆ. ಹೈದರಾಬಾದಿನಿಂದ ಬರುವ ರೈಲುಮಾರ್ಗ ಮದ್ರಾಸ್–ದೆಹಲಿ ರೈಲುಮಾರ್ಗವನ್ನು ಇಲ್ಲಿ ಕೂಡುತ್ತದೆ. ಪಾರ್ಕಲ್, ಆತ್ಮಕೂರು, ನರಸಂಪೇಟ್, ವಿಜಯವಾಡ, ಖಮ್ಮಂ, ಹೈದರಾಬಾದ್, ಬಿಲ್ಲಾರ್‌ಷಾ ಮುಂತಾದ ಕಡೆಗಳಿಂದ ಬರುವ ಬಸ್ಸುಗಳು ಇಲ್ಲಿ ಸಂಧಿಸುತ್ತವೆ. ಜನಸಂಖ್ಯೆ 928570. ಊರಿಗೆ ಸುಮಾರು 8 ಕಿಮೀ ದೂರದಲ್ಲಿರುವ ಧರ್ಮಸಾಗರ ಕೆರೆಯಿಂದ ರಕ್ಷಿತಜಲ ಸರಬರಾಜಾಗುತ್ತದೆ. ಕಾಜಿಪೇಟ್‌ನಲ್ಲಿ ಶಿವನ ಮತ್ತು ಆಂಜನೇಯನ ದೇವಸ್ಥಾನವೂ ಅಫ್‌ಜಲ್ ಷಾ ಬಿಯಾಬನಿಯ (1794–1857) ಗುಂಬಜೂ಼ ಇವೆ. ಸಂತ ಬಿಯಾಬನಿಯ ಪವಾಡಗಳ ಬಗ್ಗೆ ಅನೇಕ ದಂತಕಥೆಗಳುಂಟು, ವರ್ಷಕ್ಕೊಮ್ಮೆ ಎಂಟು ದಿನಗಳ ಕಾಲ ಇವನ ಹೆಸರಿನಲ್ಲಿ ನಡೆಯುವ ಉರ್ಸ್‌ಗೆ ಭಾರತದ ಎಲ್ಲ ಕಡೆಗಳಿಂದಲೂ ಭಕ್ತರು ಬರುತ್ತಾರೆ.

ಕಾಜಿಪೇಟ್‌ನಲ್ಲಿ ಲೇಡಿ ಫಾತಿಮಾ ಚರ್ಚೊಂದಿದೆ. ಕ್ರೈಸ್ತ ಪಾದ್ರಿಗಳು ಆಸ್ಪತ್ರೆಯನ್ನೂ ಒಂದು ಮಹಿಳಾ ಕಾಲೇಜನ್ನೂ ನಡೆಸುತ್ತಿದ್ದಾರೆ. ಕೃಷಿ ಮುಖ್ಯ ಕಸುಬು. ಅನೇಕ ಜನ ರೈಲ್ವೆ ಇಲಾಖೆ ನೌಕರರು, ಬೀಡಿ ತಯಾರಿಕೆ, ಚಾಪೆ ಮತ್ತು ಬುಟ್ಟಿ ಹೆಣಿಗೆ ಇತರ ಉದ್ಯೋಗಗಳು. (ಬಿ.ಎನ್.ಸಿ.ಎಚ್.)

**ಕಾಟನ್, ನಥೇನಿಯಲ್ :** (1705–1788). ಇಂಗ್ಲೆಂಡಿನ ವೈದ್ಯ ಹಾಗೂ ಕವಿ. ವರ್ತಕನ ಮಗನಾದ ಈತ ಹಾಲೆಂಡಿನ ಲೈಯ್ಡನ್ ನಗರದಲ್ಲಿ ವೈದ್ಯವಿದ್ಯಾಭ್ಯಾಸ ಮಾಡಿ 1740 ರಲ್ಲಿ ಇಂಗ್ಲೆಂಡಿನ ಸೆಂಟ್ ಆಲ್ಬನ್ಸ್ ನಗರದಲ್ಲಿ ವೈದ್ಯಕೀಯ ವೃತ್ತಿಯನ್ನು ಆರಂಭಿಸಿದ. ಇಲ್ಲಿಯೇ ಕಾಟನ್ ಒಂದು ಖಾಸಗಿ ಹುಚ್ಚಾಸ್ಪತ್ರೆಯನ್ನು ಸ್ಥಾಪಿಸಿದ. ಪ್ರಸಿದ್ಧ ಕವಿ ವಿಲಿಯಂ ಕೌಪರ್‌ಗೆ ಬುದ್ಧಿವಿಕಲ್ಪವಾಗಿ ಆತ್ಮಹತ್ಯೆಗೆ ತೊಡಗಿದಾಗ ಆತನನ್ನು ಕಾಟನ್‌ನ ಹುಚ್ಚಾಸ್ಪತ್ರೆಗೆ ಸೇರಿಸಲಾಯಿತು. ಕಾಟನ್ ವಿಶ್ವಾಸದ ಸೇವೆ, ಆತನ ಧಾರ್ಮಿಕ ಪ್ರವೃತ್ತಿ ಹಾಗೂ ಶ್ರಮದ ಫಲದಿಂದಾಗಿ ಕೌಪರನ ಬುದ್ಧಿ ಸಾಂತ್ವನಗೊಂಡಿತು. ಈ ಕವಿಯ ಸ್ನೇಹದಿಂದಾಗಿ ಕಾಟನ್ ಹೆಸರು ಸಾಹಿತ್ಯಪ್ರಪಂಚದಲ್ಲಿ ಉಳಿದಿದೆ.

ಜಾನ್ ಗೇ ಎಂಬಾತ ಬರೆದ ನೀತಿಕಥೆಗಳನ್ನು ಕಾಟನ್ ಪದ್ಯರೂಪದಲ್ಲಿ, ಕಿರಿಯರಿಗಾಗಿ ರಚಿಸಿ ಪ್ರಕಟಿಸಿದ್ದಾನೆ. ಆದರೆ ಈ ಪದ್ಯಗಳು ಜನರ ನೆನಪಿನಲ್ಲಿ ಚಿರಕಾಲ ಉಳಿಯುವಂಥವಲ್ಲ. ಕಾಟನ್ ಉತ್ತಮ ವೈದ್ಯನೆಂದು ಪ್ರಸಿದ್ಧನೇ ಹೊರತು ಕವಿಯಾಗಿ ಅಲ್ಲ. (ಟಿ.ವಿ.ಎಸ್.)

**ಕಾಟನ್‌ವುಲ್ :** ಆಸ್ಪತ್ರೆಗಳಲ್ಲಿ ಅಥವಾ ವೈದ್ಯ ಚಿಕಿತ್ಸೆ ಸಂದರ್ಭಗಳಲ್ಲಿ ಉಪಯೋಗಿಸತಕ್ಕ, ಹೀರುವ ಶಕ್ತಿ ಇರುವ ಹತ್ತಿ. ಅರಳೆಯನ್ನು ಎಕ್ಕಿ ಚಲುವೆ ಮಾಡಿ ಅದರ ಮೇಲಿರುವ ಮೇಣದ ಕವಚವನ್ನು ತೆಗೆದು ಶುಭ್ರ ಮಾಡಿ ಅದು ನೀರನ್ನು ಹೀರುವುದಕ್ಕೆ ಯೋಗ್ಯವಾಗುವಂತೆ ಮಾಡುವರು. ಅನಂತರ ಅದನ್ನು ರೋಬರ್ ಮೂಲಕ ಹಾಸಿ ಹಾಳೆಗಳಂತೆ ಅದುಮುವರು. ಹೀಗೆ ತಯಾರಿಸಿದ ಹತ್ತಿಯನ್ನು ರಕ್ತ, ಕೀವು, ನೀರು ಅಥವಾ ಇತರೇ ದ್ರಾವಕಗಳನ್ನು ಹೀರುವುದಕ್ಕೂ ಗಾಯವನ್ನು ರಕ್ಷಿಸುವುದಕ್ಕೂ ತೊಳೆಯುವುದಕ್ಕೂ ಉಪಯೋಗಿಸುವರು. ಈ ಹತ್ತಿ ಗಿಡದ ಎಲೆ, ತೊಟ್ಟು ಅಥವಾ ಇತರೇ ಕಳಂಕಗಳು ಯಾವುದೂ ಇಲ್ಲದಂತೆ ಶುಭ್ರವಾಗಿರಬೇಕು. ಇದು ವೈದ್ಯಕೀಯ ಕ್ರಮಗಳಿಗೆ ಉಪಯೋಗಿಸತಕ್ಕದ್ದು ಎಂಬುದರ ಸಂಕೇತವಾಗಿ ಇದಕ್ಕೆ ಸ್ವಲ್ಪ ರಂಗು ಹಾಕಿರುವರು. ವೈಜ್ಞಾನಿಕ ಸಂಶೋಧನೆಗಳಲ್ಲಿ ಕುಪ್ಪಿ, ಫ್ಲಾಸ್ಕು, ಇತ್ಯಾದಿಗಳಲ್ಲಿ ಇಡುವ ವಸ್ತುಗಳನ್ನು ಗಾಳಿಯ ಸೋಂಕಿನಿಂದ ರಕ್ಷಿಸುವುದಕ್ಕೆ ಅವುಗಳ ಬಾಯಿಗಳನ್ನು ಈ ಹತ್ತಿಯಿಂದ ಚೆನ್ನಾಗಿ ತುಂಬುತ್ತಾರೆ. (ಎಸ್.ಎನ್.ಬಿ.)

**ಕಾಟಿನಸ್ :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಅಲಂಕಾರ ವೃಕ್ಷಜಾತಿ. ಆಕರ್ಷಕವಾದ ಗರಿಗಳಂಥ ಹೂಗೊಂಚಲುಗಳಿಗಾಗಿಯೂ ಗ್ರೀಷ್ಮ ಋತುವಿನಲ್ಲಿ ವಿವಿಧ ವರ್ಣವಿನ್ಯಾಸವನ್ನು ತೋರುವ ಸುಂದರ ಎಲೆಗಳಿಗಾಗಿಯೂ ಇದನ್ನು ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಕಾಟಿನಸ್ ದೊಡ್ಡ ಪೊದೆಯಂತೆಯೋ ಸಣ್ಣ ಮರದಂತೆಯೋ ಬೆಳೆಯುವ ಸಸ್ಯ. ಇದರ ಕಾಂಡದಲ್ಲಿ ತೀವ್ರ ವಾಸನೆಯಿರುವ ರಸ ಇದೆ. ಎಲೆಗಳು ಸರಳ; ಪರ್ಯಾಯವಾಗಿ ಜೋಡಣೆಗೊಂಡಿವೆ. ಚಳಿಗಾಲದಲ್ಲಿ ಉದುರಿಹೋಗುತ್ತವೆ. ಹೂಗಳು ಬಲುಚಿಕ್ಕವು, ಭಿನ್ನಲಿಂಗಗಳು. ಕೆಲವು ಹೂಗಳು ಬಂಜೆಗಳಾಗಿರುವುದೂ ಉಂಟು. ಗಂಡು ಹೆಣ್ಣು ಹೂಗಳು ಒಂದೇ ಮರದಲ್ಲಿರಬಹುದು ಇಲ್ಲವೆ ಬೇರೆ ಬೇರೆ ಮರಗಳಲ್ಲಿರಬಹುದು. ಹೂಗೊಂಚಲು ಸಂಕೀರ್ಣಮಾದರಿಯದು. ವಿಫಲವಾಗಿ ಕವಲೊಡೆದು ಗರಿಯಂತೆ ಕಾಣುತ್ತದೆ. ಪುಷ್ಪಪತ್ರಗಳು 5, ದಳಗಳು 5, ಕೇಸರಗಳು 5, ಅಂಡಾಶಯ ಉಚ್ಚಸ್ಥಾನದ್ದು.

ಕಾಟಿನಸ್ ಕಾಗಿಗ್ರಿಯ

ಒಂದೇ ಕೋಣೆಯುಳ್ಳದ್ದೂ ಒಂದೇ ಅಂಡಕವನ್ನೊಳಗೊಂಡಿದೆ. ಫಲ ಚಿಕ್ಕದಾಗಿರುವ ಚಪ್ಪಟೆಯಾಗಿರುವ ಕಿರು ಅಷ್ಟಿಫಲ (ಡ್ರೂಪ್‌ಲೆಟ್). ಅದರ ಆಕಾರ ಅಸಮ ವಿರುದ್ಧ ಕರನೆಯಾಕಾರ (ಆಬ್ಲಿಕ್–ಆಬ್‌ಓವೇಟ್).

ಕಾಟಿನಸ್ ಮರದ ಹೂಗೊಂಚಲುಗಳು ಅರಳಿದಾಗ ಮರದ ಸುತ್ತ ಸಣ್ಣ ಸಣ್ಣ ಹೊಗೆಯ ಮೋಡಗಳು ಆವರಿಸಿದಂತೆ ಮೋಹಕವಾಗಿ ಕಾಣುವುದರಿಂದ ಇದಕ್ಕೆ ಸ್ಮೋಕ್–ಟ್ರೀ ಎಂಬ ಹೆಸರೂ ಇದೆ. ಪ್ರಭೇದಗಳಲ್ಲಿ ಮುಖ್ಯವಾದವು ಕಾ.ಕಾಗಿಗ್ರಿಯ ಮತ್ತು ಕಾ.ಅಮೆರಿಕಾನಸ್. ಗ್ರೀಷ್ಮದಲ್ಲಿ ಇವುಗಳ ಎಲೆಗಳು ಕಿತ್ತಳೆ, ಕಡುಗೆಂಪು ಮುಂತಾಗಿ ಬಣ್ಣಗಳನ್ನು ಬದಲಾಯಿಸುವುದರಿಂದ ಇವು ಬಲು ಸುಂದರವಾಗಿ ಕಾಣುತ್ತವೆ. (ಎಂ.ಎಚ್.ಎಂ.)

**ಕಾಟಲೀಡನ್ :** ಜನಪ್ರಿಯವಾದ ರಸಭರಿತವಾದ (ಸಕ್ಯುಲೆಂಟ್) ಸಸ್ಯ ಜಾತಿ. ಇದು ಆಕರ್ಷಕವಾದ ಎಲೆಯಿಂದ ಕೂಡಿದ್ದು ಸಂದರವಾದ ಹೂಗಳನ್ನು ಬಿಡುವುದರಿಂದ ಉದ್ಯಾನಪ್ರಾಮುಖ್ಯವನ್ನು ಪಡೆದಿದೆ. ಇದನ್ನು ಮನೆ ಅಲಂಕಾರ ಸಸ್ಯ, ಕುಂಡಸಸ್ಯ ಮತ್ತು ಕಲ್ಲೇರಿ ಸಸ್ಯವನ್ನಾಗಿ ಬೆಳೆಸುತ್ತಾರೆ. ಇದು ಕ್ರ್ಯಾಸುಲೇಸೀ ಕುಟುಂಬಕ್ಕೆ ಸೇರಿದೆ. ಇದರಲ್ಲಿ 40ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ದಕ್ಷಿಣ ಆಫ್ರಿಕದ ಮೂಲನಿವಾಸಿಗಳು. ಇವು ಸಾಮಾನ್ಯವಾಗಿ ಬಹುವಾರ್ಷಿಕ ಮೂಲಿಕೆ ಅಥವಾ ಪೊದೆಸಸ್ಯಗಳು. ಇವುಗಳು ಕಾಂಡ ಮತ್ತು ಎಲೆಗಳು ದಪ್ಪ ಮತ್ತು ಮೆತುವಾಗಿವೆ. ಎಲೆಗಳು ಕಾಂಡದ ಬುಡದಲ್ಲಿ ಕಮಲ ದಳಗಳ ರೀತಿ ಜೋಡಣೆಯಾಗಿರಬಹುದು ಅಥವಾ ಕಾಂಡದ ಮೇಲೆ ಅಭಿಮುಖವಾಗೋ ಪರ್ಯಾಯವಾಗೋ ಜೋಡಣೆಯಾಗಿರಬಹುದು. ಅವುಗಳಿಗೆ ತೊಟ್ಟಿರಬಹುದು ಅಥವಾ ಇಲ್ಲದಿರಬಹುದು. ಕೆಲವು ಪ್ರಭೇದಗಳಲ್ಲಿ ಎಲೆಗಳು ಚಳಿಗಾಲದಲ್ಲಿ ಉದುರಿ ಹೋಗುತ್ತದೆ. ಹೂಗೊಂಚಲು ಮಧ್ಯಾರಂಭಿ ಅಥವಾ ಅಂತ್ಯಾರಂಭಿ ಮಾದರಿಯದು. ಹೂಗಳು ಜೋಲು ಬಿದ್ದಿರಬಹುದು ಅಥವಾ ನೇರವಾಗಿ ನಿಂತಿರಬಹುದು. ಪುಷ್ಪ ಪತ್ರಗಳು 5, ದಳಗಳು 5; ಕೂಡಿಕೊಂಡಿವೆ. ಕೇಸರಗಳು 10, ಅಂಡಾಶಯ 5, ಬಿಡಿ ಬಿಡಿಯಾಗಿರುವ ಕಾರ್ಪೆಲ್‌ಗಳಿಂದ ಕೂಡಿದೆ. ಒಂದೊಂದು ಕಾರ್ಪೆಲಿನ ಬುಡದಲ್ಲೂ ಒಂದೊಂದು ಸಣ್ಣ ಹುರುಪೆಯಂಥ ರಚನೆಯಿದೆ, ಫಲ ಫಾಲಿಕಲ್ ಮಾದರಿಯದು. ಹಲವು ಬೀಜಗಳನ್ನೊಳಗೊಂಡಿದೆ.

ಕಾಟಲೀಡನ್ ಸೆಕಂಡ

ಕಾಟಲೀಡನ್ ಪ್ರಭೇದಗಳು ಮೈದಾನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಲಾರವು. ಉದ್ಯಾನಪ್ರಾಮುಖ್ಯವನ್ನು ಪಡೆದ ಕಾಟಲೀಡನ್ ಹಲವಾರು ಪ್ರಭೇದಗಳಲ್ಲಿ ಕಾ.ಜೆಬ್ಬಿಫ್ಲೋರ, ಕಾ. ಸೆಕಂಡ, ಕಾ. ಆರ್ಬಿಕ್ಯುಲೇಟ, ಕಾ. ಗ್ಲಾಕ, ಕಾ. ಅಗೇವಾಯ್ಡಿಸ್, ಕಾ. ಅಂಡ್ಯುಲೇಟ ಮುಖ್ಯವಾದವು. ಇವನ್ನು ಬೇರುಕಂದು, ತುಂಡು ಕಡ್ಡಿ ಮತ್ತು ಕಂಕುಳುಮೊಗ್ಗುಳ್ಳ ಎಲೆಗಳಿಂದ ವೃದ್ಧಿಪಡಿಸುತ್ತಾರೆ. ಮರಳುಭೂಮಿಯಲ್ಲಿವು ಚೆನ್ನಾಗಿ ಬೆಳೆಯುತ್ತವೆ.

ತುಂಡುಕಡ್ಡಿಗಳು ಬೇರು ಬಿಡುವ ವರೆಗೆ ನೀರು ಹಾಕಬಾರದು. ಏಕೆಂದರೆ ಈ ಗಿಡ ಹೆಚ್ಚು ತೇವವನ್ನು ಸಹಿಸುವುದಿಲ್ಲ. (ಬಿ.ಎ.ಸಿ.)

**ಕಾಟ್ರೆಲ್, ಫ್ರೆಡರಿಕ್ ಗಾರ್ಡನರ್ :** 1877–1948. ಅಮೆರಿಕದ ಸಂಯುಕ್ತಸಂಸ್ಥಾನಗಳ ಓರ್ವ ಉಪಾಧ್ಯಾಯ, ವಿಜ್ಞಾನಿ, ಕಾಟ್ರೆಲ್ ಸ್ಥಿರವಿದ್ಯುತ್ ಒತ್ತರಿಕದ ನಿರ್ಮಾಪಕ, ವಿದ್ಯಾಲಯಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮೂಲ ಸಂಶೋಧನೆಗೆ ಒತ್ತಾಸೆ ನೀಡಲು ಜನಿಸಿದ ಸಂಶೋಧನ ಸಂಸ್ಥೆಯೊಂದರ ಸಂಸ್ಥಾಪಕ. 10 ಜನವರಿ, 1877ರಲ್ಲಿ ಕ್ಯಾಲಿಫೋರ್ನಿಯದ ಓಕಲೆಂಡಿನಲ್ಲಿ ಜನಿಸಿದ. ಬರ್ಕ್ಲೀಯಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಓದಿದ. ಜರ್ಮನಿಯಲ್ಲಿ ಲೀಬಿಗ್ ಮತ್ತು ಆಸ್ಟ್‌ವಾಲ್ಡ್‌ರ ಕೈಕೆಳಗೆ ಸ್ನಾತಕೋತ್ತರ ಸಂಶೋಧನೆ ನಡೆಸಿದ. 1902 ರಿಂದ 1911ರವರೆಗೂ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಉಪಾಧ್ಯಾಯನಾಗಿದ್ದ. ಸ್ಯಾನ್ ಫ್ರಾನ್ಸಿಸ್ಕೋ ಪ್ರದೇಶದ ಕೈಗಾರಿಕಾ ಸಂಸ್ಥೆಗಳ ವಿಜ್ಞಾಪನೆ ಮೇರೆಗೆ ಕಾರ್ಖಾನೆಗಳು ಅಂತರಿಕ್ಷಕ್ಕೆ ಬಿಡುವ ಧೂಮದಲ್ಲಿನ ಕಲಿಲ (ಕಲಾಯ್ಡ್) ಕಣಗಳಿಂದ ವಾಯುಮಂಡಲ ಕಲುಷಿತವಾಗದಂತಿರಲು ಕಾಟ್ರೆಲ್ ಸ್ಥಿರವಿದ್ಯುತ್ ಒತ್ತರಿಕವನ್ನು ನಿರ್ಮಿಸಿದ (1906). ಇದರ ಹಕ್ಕುಗಳನ್ನು ಸಂಶೋಧನಸಂಸ್ಥೆ ನಡೆಸುತ್ತಿದ್ದ ಸ್ಮಿತ್‌ಸನ್ ಸಂಸ್ಥೆಗೆ ಈತ ಕೊಟ್ಟ. 1911 ರಿಂದ 1920ರವರೆಗೂ ಸಂಯುಕ್ತ ಸಂಸ್ಥಾನಗಳ ಗಣಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ. ಆಗ ನಿಸರ್ಗಾನಿಲದಿಂದ ಹೀಲಿಯಮ್ ಅನಿಲವನ್ನು ಬೇರ್ಪಡಿಸುವ ವಿಧಾನವನ್ನು ಕಂಡುಹಿಡಿದ. ಕುದಿಬಿಂದುವಿನ ಏರಿಕೆಯಿಂದ ವಸ್ತುಗಳ ಅಣುತೂಕವನ್ನು ಕಂಡುಹಿಡಿಯುವ ಉಪಕರಣವನ್ನು 1919ರಲ್ಲಿ ತಯಾರಿಸಿದ. ಗಣಿ ಇಲಾಖೆಯಲ್ಲಿ ಸುರಕ್ಷಣೆ ವಿಭಾಗದ ಮುಖಂಡನಾಗಿಯೂ ಮತ್ತು ಇಲಾಖೆಯ ಕಾರ್ಯ ನಿರ್ವಾಹಕನಾಗಿಯೂ ಕಾಟ್ರೆಲ್ ದುಡಿದ. 1922 ರಿಂದ 1943ರವರೆಗೂ ವ್ಯವಸಾಯ ಇಲಾಖೆಯಲ್ಲಿದ್ದು ವಾಯುಮಂಡಲದ ಸಾರಜನಕವನ್ನು ಭೂಮಿಯ ಮಣ್ಣಿಗಿಳಿಸಿ ನೈಟ್ರೇಟ್‌ಗಳಾಗಿ ಪರಿವರ್ತಿಸುವುದರ ಮೇಲೆ ಸಂಶೋಧನೆ ನಡೆಸಿದ. ಕಾಟ್ರೆಲ್ ತನ್ನ ಸ್ವಂತ ಹಣದ ಬಹುಭಾಗವನ್ನು ಸಂಶೋಧನಸಂಸ್ಥೆಗೆ ದಾನಮಾಡಿದ್ದರಿಂದ ಕೊನೆಗಾಲದಲ್ಲಿ ಕಷ್ಟಸನ್ನಿವೇಶಗಳನ್ನು ಎದುರಿಸಬೇಕಾಯಿತು. ಆದರೂ ಈತನ ವ್ಯಕ್ತಿತ್ವ ಮತ್ತು ವೈಜ್ಞಾನಿಕ ಆಸಕ್ತಿ ನೂರಾರು ಮಂದಿ ಯುವಕ ಸಂಶೋಧಕರಿಗೆ ಮಾರ್ಗದರ್ಶನವಾಯಿತು. ಕಾಟ್ರೆಲನ ಸಂಶೋಧನಸಂಸ್ಥೆಯಿಂದ ಧನಸಹಾಯ ಪಡೆದ ವ್ಯಕ್ತಿಗಳಲ್ಲಿ ಎಂಟು ಜನ ನೊಬೆಲ್ ಪಾರಿತೋಷಕವನ್ನು ಪಡೆದರು.

ಈತ 1948 ನವೆಂಬರ್ 16ರಂದು ಬರ್ಕ್ಲೀಯಲ್ಲಿ ನಿಧನ ಹೊಂದಿದ. (ಡಿ.ಎಸ್.ಎಂ.)

**ಕಾಟ್ಲಾ :** ಭಾರತದಲ್ಲಿ ಸಿಗುವ ಕಾರ್ಪ್ ಜಾತಿಯ ಮೀನುಗಳಲ್ಲಿ ಅತ್ಯಂತ ದೊಡ್ಡದು. ಸಿಹಿನೀರಿನ ವಾಸಿಯಾದ ಇದು ನದಿಗಳಲ್ಲೆಲ್ಲ ಸಾಮಾನ್ಯವಾಗಿ ಕಾಣಬರುತ್ತದೆ. ಕ್ಯಾಟ್ಲ ಇದರ ವೈಜ್ಞಾನಿಕ ನಾಮ. ಸೈಪ್ರಿನಿಡೆ ಕುಟುಂಬಕ್ಕೆ ಸೇರಿದೆ. ದೇಹ ಪಕ್ಕದಿಂದ ಪಕ್ಕಕ್ಕೆ ಒತ್ತಿದಂತಿದೆ. ತಲೆ ಬಹಳ ಅಗಲ, ಕೆಳದುಟಿ ಬಹಳ ಮುಂಚಾಚಿಕೊಂಡಿದೆ. ದೇಹದ ಬಣ್ಣ ಸಾಮಾನ್ಯವಾಗಿ ಮಸುಕು ಬಿಳಿ. ಆದರೆ ಹೆಚ್ಚು ಪಾಚಿಯಿರುವ ನೀರಲ್ಲಿ ವಾಸಿಸುವ ಮೀನು ಕಪ್ಪು ಬಣ್ಣದ್ದಾಗಿರುತ್ತದೆ.

ಕಾಟ್ಲಾ ನೀರಿನ ಮೇಲಿನ ವಲಯದಲ್ಲೇ ಇದ್ದು ನೀರಿನಲ್ಲಿ ತೇಲಾಡುವ ಅತಿ ಸೂಕ್ಷ್ಮ ಪ್ರಾಣಿ ಮತ್ತು ಸಸ್ಯಗಳನ್ನು ತಿಂದು ಜೀವಿಸುತ್ತದೆ. ಮರಿಗಳು ನೀರಿನಲ್ಲಿರುವ ಚಿಗಟ ಮತ್ತು ಇತರ ಸೂಕ್ಷ್ಮ ಪ್ರಾಣಿಗಳನ್ನು ಮುಖ್ಯವಾಗಿ ತಿನ್ನುತ್ತವೆ. ಮೀನಿನ ಬೆಳವಣಿಗೆ ಶೀಘ್ರಗತಿಯದು. ಮರಿಗಳು ತಿಂಗಳಿಗೆ 3"–4" ಗಳಷ್ಟು ಉದ್ದ ಬೆಳೆಯುತ್ತವೆ. ಪ್ರೌಢಮೀನು ಸುಮಾರು 4′ ಗಿಂತಲೂ ಹೆಚ್ಚು ಉದ್ದವಿದ್ದು 40 ಪೌಂಡುಗಳಿಗಿಂತಲೂ ಹೆಚ್ಚು ತೂಗುತ್ತದೆ. ಹೆಸರುಘಟ್ಟದ ಜಲಾಶಯದಲ್ಲಿ 64 ಪೌಂಡಿನ ಹೆಣ್ಣು ಮೀನುಗಳೂ ಸಿಕ್ಕಿವೆ.

ಕಾಟ್ಲಾ ಮೀನಿನ ಸಂತಾನಾಭಿವೃದ್ಧಿಯ ಕಾಲ ಜೂನ್–ಸೆಪ್ಟೆಂಬರ್ ತಿಂಗಳುಗಳು. ಇದು ನದಿಗಳಲ್ಲಿ ಮಾತ್ರ ಮೊಟ್ಟೆಯಿಡುತ್ತದೆ. ಉತ್ತರ ಭಾರತದಲ್ಲಿ ಬೆಸ್ತರು ಈ ಮೊಟ್ಟೆಗಳನ್ನು ಸಂಗ್ರಹಿಸಿ ಮಾರುತ್ತಾರೆ. ಕಾಟ್ಲಾ ಮೀನಿಗೆ ಬಹಳ ಬೇಡಿಕೆಯಿದ್ದು ಮೊಟ್ಟೆಗಳ ಮಾರಾಟ ಲಾಭದಾಯಕ ವೃತ್ತಿ ಎನಿಸಿದೆ.

ಕಾಟ್ಲಾ ಮೀನು ಬೇರೆ ಮೀನನ್ನು ತಿನ್ನುವುದಿಲ್ಲ. ಅಲ್ಲದೆ, ಇದು ಅತಿವೇಗವಾಗಿ ಬೆಳೆಯುವ ಮೀನು. ಆದ್ದರಿಂದ ಶಾಸ್ತ್ರೀಯ ಮೀನುಪಾಲನೆಯಲ್ಲಿ ಇದರ ಪ್ರಾಮುಖ್ಯ ಬಹಳ. ಸ್ವಲ್ಪ ಕಾಲ ನೀರು ನಿಲ್ಲುವ ಜಲಪ್ರದೇಶದಲ್ಲಿ ಕಡಿಮೆ ಪ್ರಮಾಣದಲ್ಲಿ ತುಂಬಿ ಒಳ್ಳೆಯ ಬೆಳೆಯನ್ನು ಪಡೆಯಬಹುದು. ಪಶ್ಚಿಮ ಬಂಗಾಳದಿಂದ ಇದರ ಮರಿಗಳನ್ನು ಕರ್ನಾಟಕ ರಾಜ್ಯಕ್ಕೆ ಆಮದು ಮಾಡಿ ಕೆರೆ, ಕಟ್ಟೆ ಮತ್ತು ಇತರ ದೊಡ್ಡ ಜಲಾಶಯಗಳಲ್ಲಿ ಬಿತ್ತಲು ವಿಶೇಷ ಪ್ರಯತ್ನ ಮಾಡಿದ್ದುಂಟು. ಇದು ಬಹಳ ಒಳ್ಳೆಯ ಆಹಾರದ ಮೀನೆಂದು ಪ್ರಸಿದ್ಧವಾಗಿದೆ. (ಬಿ.ಎಸ್.)

**ಕಾಡ್ ಮೀನು :** ಪ್ರಪಂಚದ ಮೀನುಗಾರಿಕೆಯಲ್ಲಿ ಅತ್ಯಂತ ಹೆಸರಾಂತ ಮೀನು. ಗೇಡಸ್ ಎಂಬ ವೈಜ್ಞಾನಿಕ ಹೆಸರಿನ ಜಾತಿಗೂ ಹ್ಯಾಡಕ್, ಹೇಕ್ ಮತ್ತು ಪೋಲಕ್ ಮೀನುಗಳನ್ನೊಳಗೊಂಡ ಗ್ಯಾಡಿಡೀ ಕುಟುಂಬಕ್ಕೆ ಸೇರಿದೆ. ಗೇಡಸ್ ಜಾತಿಯಲ್ಲಿ ಸುಮಾರು 30 ಪ್ರಭೇದಗಳಿವೆ. ಇವುಗಳಲ್ಲಿ ಗೇಡಸ್ ಮಾರ್ಹುವ (ಅಥವಾ ಗೇಡಸ್ ಕೆಲ್ಲೇರಿಯಸ್) ಮತ್ತು ಗೇಡಸ್ ಮೈಕ್ರೊಸಿಫ್ಯಾಲಸ್ ಮುಖ್ಯವಾದವು.



ಇವೆಲ್ಲ ಆಹಾರಯೋಗ್ಯವಾದ ಮೀನುಗಳು. ಅಲ್ಲದೆ ಇವುಗಳ ಯಕೃತ್ತಿನಿಂದ ಎಣ್ಣೆಯನ್ನೂ ತೆಗೆಯುತ್ತಾರೆ. ಈ ಎಣ್ಣೆಯಲ್ಲಿ ಎ–ವಿಟಮಿನ್ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದೆ. ಕಾಡ್ ಮೀನುಗಳು ಸಮಶೀತೋಷ್ಣ ಮತ್ತು ಶೀತಸಮುದ್ರಗಳ ನಿವಾಸಿಗಳು. ಸಮುದ್ರದ ಅಂಚು ಪ್ರದೇಶಗಳಲ್ಲಿ ನೀರಿನ ಆಳ 150 ಫ್ಯಾದಮ್‌ಗಿಂತ ಕಡಿಮೆ ಇರುವ ಸ್ಥಳಗಳಲ್ಲಿ ವಾಸಿಸುತ್ತವೆ.

ಗೇಡಸ್ ಮಾರ್ಹುವದಲ್ಲಿ (ಅಟ್ಲಾಂಟಿಕ್ ಕಾಡ್ ಮೀನು) ಮೂರು ಬೆನ್ನಿನ ರೆಕ್ಕೆಗಳೂ ಎರಡು ಗುದದ ರೆಕ್ಕೆಗಳೂ ಇವೆ. ಮೇಲುದವಡೆ ಕೆಳದವಡೆಗಿಂತಲೂ ಮುಂದಕ್ಕೆ ಚಾಚಿದೆ. ಬಾಯ ಕೆಳಗೆ ಮೀಸೆಯಂಥ ಎಳೆಗಳಿವೆ. ಇದರ ಬಣ್ಣ ಬೂದು ಮಿಶ್ರಿತವಾದ ಹಸಿರಿನಿಂದ ಇಟ್ಟಿಗೆ ಕೆಂಪಿನವರೆಗೆ ವ್ಯತ್ಯಾಸವಾಗುತ್ತದೆ. ಈ ಮೀನು ಉತ್ತರ ಯುರೋಪಿನ ಸಮುದ್ರಗಳಲ್ಲಿಯೂ ಉತ್ತರ ಅಮೆರಿಕ ಪೂರ್ವ ಕರಾವಳಿಯ ಉತ್ತರಭಾಗದಲ್ಲಿಯೂ ಹೇರಳವಾಗಿ ದೊರೆಯುತ್ತದೆ. ಇವು ಸುಮಾರು ಆರು ಅಡಿಗಳವರೆಗೆ ಬೆಳೆಯುತ್ತವಾದರೂ ಹಿಡಿವಳಿಯಲ್ಲಿ ಸಣ್ಣ ಮೀನುಗಳೇ ಹೆಚ್ಚಾಗಿರುತ್ತವೆ.

ಅಟ್ಲಾಂಟಿಕ್ ಕಾಡ್ ಮೀನು ನವೆಂಬರಿನಿಂದ ಆಗಸ್ಟ್ ತಿಂಗಳವರೆಗೆ (ಹೆಚ್ಚಾಗಿ ಜನವರಿ ತಿಂಗಳಿನಿಂದ ಮಾರ್ಚ್ ತಿಂಗಳ ವರೆಗೆ) ಮೊಟ್ಟೆಯಿಡುತ್ತದೆ. ಬೇಸಗೆಯಲ್ಲೆ ಮೊಟ್ಟೆಯಿಡುವುದು ಹೆಚ್ಚು. ಇದೊಂದು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮೊಟ್ಟೆಯಿಡುವ ಮೀನು. ಸುಮಾರು 75 ಪೌಂಡ್ ತೂಕದ ಹೆಣ್ಣು ಮೀನು 90 ಲಕ್ಷ ಮೊಟ್ಟೆಗಳನ್ನಿಡಬಹುದು. ಮೊಟ್ಟೆಗಳು ನೀರಿನ ಉಷ್ಣಾಂಶವನ್ನು ಅವಲಂಬಿಸಿ 10 ರಿಂದ 50 ದಿನಗಳಲ್ಲಿ ಒಡೆದು ಮರಿಗಳಾಗುತ್ತವೆ. ಬೇರೆ ಮೀನುಗಳು ಮತ್ತು ಇತರ ಸಣ್ಣ ಪ್ರಾಣಿಗಳು ಕಾಡ್‌ಮೀನಿನ ಆಹಾರ. ಕಾಡ್‌ಮೀನು ಬೇಸಗೆಯಲ್ಲಿ ಉತ್ತರಕ್ಕೂ ಚಳಿಗಾಲದಲ್ಲಿ ದಕ್ಷಿಣಕ್ಕೂ ವಲಸೆ ಹೋಗುವುದುಂಟು.

ಉತ್ತರ ಯುರೋಪಿನ ಮತ್ತು ಅಮೆರಿಕದ ಎಲ್ಲ ಕಡಲಂಚಿನ ರಾಷ್ಟ್ರಗಳಲ್ಲಿಯೂ ಕಾಡ್ ಮೀನುಗಾರಿಕೆ ಮುಖ್ಯವಾದ ಉದ್ಯಮ. ಟ್ರಾಲ್ ಬಲೆ ಮತ್ತು ಗಾಳಗಳೇ ಈ ಮೀನುಬೇಟೆಗೆ ಮುಖ್ಯ ಸಲಕರಣೆಗಳು. ಕಾಡ್ ಮೀನಿನ ಮಾಂಸ ಬಲುರುಚಿಯೆಂದು ಹೆಸರಾಗಿದೆ. ಹೆಚ್ಚು ಭಾಗವನ್ನು ಒಣಗಿಸಿ ಅಥವಾ ಉಪ್ಪು ಹಾಕಿ ಹದಮಾಡಲಾಗುತ್ತದೆ. ಅಟ್ಲಾಂಟಿಕ್ ಕಾಡ್‌ಮೀನಿನ ಸರಾಸರಿ ಉತ್ಪತ್ತಿ ವರ್ಷಕ್ಕೆ 28 ಲಕ್ಷ ಮಟನ್‌ಗಳು ಬ್ರಿಟನ್, ರಷ್ಯ, ಕೆನಡ, ನಾರ್ವೆ, ಸ್ಪೇನ್ ಮತ್ತು ಪಶ್ಚಿಮ ಜರ್ಮನಿಗಳಲ್ಲಿ ವರ್ಷಕ್ಕೆ 2 ಲಕ್ಷ ಟನ್‌ಗಿಂತಲೂ ಹೆಚ್ಚು ಕಾಡ್ ಮೀನನ್ನು ಹಿಡಿಯಲಾಗುತ್ತದೆ.

ಗೇಡಸ್ ಮೈಕ್ರೊಸಿಫ್ಯಾಲಸ್ (ಪೆಸಿಫಿಕ್ ಸಾಗರದ ಕಾಡ್ ಮೀನು) ಎಂಬ ಪ್ರಭೇದ ಪೆಸಿಫಿಕ್ ಸಾಗರದ ಪ್ರಮುಖವಾದ ಮೀನು. ಇದನ್ನು ಗೇ. ಮಾರ್ಹುವ ಪ್ರಭೇದದ ಒಂದು ಬಗೆಯೆಂದೂ ಪರಿಗಣಿಸಲಾಗಿದೆ. ಕೆನಡ, ಅಮೆರಿಕದ ಸಂಯುಕ್ತ ಸಂಸ್ಥಾನ, ಜಪಾನ್, ಕೊರಿಯ ಮತ್ತು ರಷ್ಯ ದೇಶಗಳಲ್ಲಿ ಇದರ ಮೀನುಗಾರಿಕೆ ಒಂದು ಪ್ರಮುಖ ಉದ್ಯಮವೆನಿಸಿದೆ.

ಕಾಡ್ ಮೀನಿನ ಯಕೃತ್ತಿನಿಂದ ಕಾಡ್‌ಲಿವರ್ ಎಣ್ಣೆಯನ್ನು ಉತ್ಪಾದಿಸುತ್ತಾರೆ. ಔಷಧ ಮಟ್ಟದ ಕಾಡ್‌ಲಿವರ್ ತೈಲವನ್ನು ಕ್ಷಾರಗಳಲ್ಲಿ ಹದಮಾಡುವುದರ ಮೂಲಕ ತಯಾರಿಸುತ್ತಾರೆ. 1914ರ ಅನಂತರ ಅದರಲ್ಲಿ ಎ ಮತ್ತು ಡಿ ವಿಟಮಿನ್ನುಗಳಿರುವುದು ತಿಳಿದುಬಂತು. ರಿಕೆಟ್ಸ್ ಮುಂತಾದ ರೋಗಗಳಲ್ಲಿ ಇದನ್ನು ಉಪಯೋಗಿಸುವುದುಂಟು. (ಸಿ.ಜಿ.ಕೆ.)

**ಕಾಡಸಿದ್ಧೇಶ[1] :** 18ನೆಯ ಶತಮಾನದ ಇಷ್ಟಲಿಂಗಶತಕವನ್ನು ಬರೆದ ವೀರಶೈವಕವಿ. ಇವನಲ್ಲದೆ ವಚನಕಾರ ಕಾಡಸಿದ್ಧೇಶನೊಬ್ಬನಿದ್ದಾನೆ. ಇಷ್ಟಲಿಂಗಶತಕದಲ್ಲಿ ವೃತ್ತಛಂದಸ್ಸಿನ

111 ಪದ್ಯಗಳಿವೆ. ಪರ್ವತೇಶನ ಅಂಗೈಯೊಳೊಗೆದಾತ ಭಕ್ತರಣುಗ ಕಾಡಸಿದ್ಧೇಶ ಎಂದು ಹೇಳಿಕೊಂಡಿರುವುದರಿಂದ ಈತನ ಗುರು ಪರ್ವತೇಶ ಎಂದು ತಿಳಿದುಬಂದಿದೆ. ಚತುರಾಚಾರ್ಯಪುರಾಣವನ್ನು ಬರೆದ ಪರ್ವತೇಶನೂ (1698) ಈತನೂ ಒಬ್ಬನೇ ಆದ ಪಕ್ಷದಲ್ಲಿ ಈತನ ಕಾಲ 1725 ಎಂದು ಊಹಿಸಬಹುದು. ಇಷ್ಟಲಿಂಗಶತಕದಲ್ಲಿನ ಪ್ರತಿಯೊಂದು ಪದ್ಯವೂ ಶ್ರೀಇಷ್ಟಲಿಂಗೇಶ್ವರಾ ಎಂದು ಮುಗಿಯುತ್ತದೆ. ಶಿವಾಧಿಕ್ಯವನ್ನು ಹೆಚ್ಚಾಗಿ ವರ್ಣಿಸಿರುವುದರಿಂದ ಈ ಗ್ರಂಥಕ್ಕೆ ಶಿವಾಧಿಕ್ಯ ಎಂಬ ಹೆಸರೂ ಉಂಟು. ಅದರ ಒಂದು ಪದ;

ಜಗಮಂ ರಕ್ಷಿಪ ದೇವ ತಾನೆ ಗುರುವಿಂ ಹಸ್ತಾಬ್ಜದಲ್ಲೊಪ್ಪಿರಲ್
ಬಗೆಯಿಂ ಪೂಜಿಸಿ ಮುಕ್ತರಾಗಿ ಭವಪಾರಾವಾರಮಂ ದಾಂಟದೇ।
ನಗೆಗೇಡಾಗಿ ಕುಜಾತಿಗೂಡಿ ಕುಣಿದಾಡೀ ಪಾಡಿ ಭೂತಂಗಳಂ
ಮಿಗಿಲಾರಾಧಿಸಿ ಬೀವ್ವಿರೇಕೆ ಭವದೊಳ್ ಶ್ರೀಇಷ್ಟಲಿಂಗೇಶ್ವರಾ॥ (ಎಂ.ಜಿ.ಎನ್.)

**ಕಾಡಸಿದ್ಧೇಶ[2] :** ಒಬ್ಬ ವಚನಕಾರ. ಈತನ ಕಾಲದೇಶಾದಿ ವಿಷಯಗಳು ತಿಳಿದಿಲ್ಲ. ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ ಎಂಬುದು ಈತನ ಅಂಕಿತ. ಈತ ತನ್ನ ಗುರುಪರಂಪರೆಯನ್ನು ಮೊದಲ ವಚನದಲ್ಲಿ ಹೇಳಿಕೊಂಡಿದ್ದಾನೆ. ಅಲ್ಲಿನ ಇಪ್ಪತ್ತೆರಡು ಮಂದಿ ಗುರುವರ್ಯರಲ್ಲಿ ಕಡೆಯವನಾದ ಸಂಗಮೇಶ್ವರ ದೇವರೇ ಕಾಡಿಸಿದ್ಧೇಶನ ಗುರು.

ಈತನ ವಚನಗಳು ಕಾಡಸಿದ್ಧೇಶರ ವಚನಗಳು ಎಂದು ಪ್ರಸಿದ್ಧವಾಗಿವೆ. ವಚನಗಳ ಸಂಖ್ಯೆ 561. ಇವುಗಳಲ್ಲಿ 77 ಬೆಡಗಿನ ವಚನಗಳಿವೆ. ಕೆಲವು ವಚನಗಳಿಗೆ ಟಿಪ್ಪಣಿಯಿದೆ. ಅನೇಕ ವಚನಗಳಲ್ಲಿ ಉರ್ದು ಭಾಷೆಯ ಪದಗಳು ಹೇರಳವಾಗಿವೆ. ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಸಿದ್ಧಾಂತ ರಹಸ್ಯಗಳನ್ನು ತಿಳಿಸಬಲ್ಲ ವಚನಶಾಸ್ತ್ರದಲ್ಲಿ ಕಾಡಸಿದ್ಧೇಶ್ವರ ವಚನಗಳಿಗೆ ಪ್ರಮುಖ ಸ್ಥಾನವಿದೆ. ಒಂದು ವಚನವನ್ನು ಇಲ್ಲಿ ಉದಾಹರಿಸಲಾಗಿದೆ : ಒಮ್ಮನದವರಿಗೆ ಹಣವಿಲ್ಲ ; ಇಮ್ಮನದವರಿಗೆ ಹಣವುಂಟು. ಇಮ್ಮನ ಸುಟ್ಟು, ಒಮ್ಮನ ನುಂಗಿ ಬಂದವರು ಮರಳಿ ಬಾರದೆ ಹೋದರು ನೋಡೆಂದನಯ್ಯ ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ. (ಎಂ.ಜಿ.ಎನ್.)

**ಕಾಡಿಕಾರ :** ಸ್ಫಟಿಕರೂಪದ ಅಸಿಟಿಕ್ ಆಮ್ಲ, ಪಟಕ, ಫೀನಾಲ್, ಟ್ರೈಕ್ಲೋರ್ ಅಸಿಟಿಕ್ ಆಮ್ಲ, ಬೆಳ್ಳಿಯ ನೈಟ್ರೇಟ್, ಸಾಲಿಸಿಲಿಕ್ ಆಮ್ಲ, ಸತುವಿನ ಕ್ಲೋರೈಡ್ ಮತ್ತು ಪೊಟಾಸಿಯಂ ಪರ್‌ಮ್ಯಾಂಗನೇಟ್ ಪ್ರಮುಖ ಉದಾಹರಣೆಗಳು (ಕಾಸ್ಟಿಕ್). ಇವನ್ನು ಲೇಪಿಸಿದ ಪ್ರದೇಶದಲ್ಲಿ ಉಂಟಾಗುವ ರಾಸಾಯನಿಕ ಕ್ರಿಯೆಯ ಫಲವಾಗಿ ಆ ಪ್ರದೇಶ ಧ್ವಂಸವಾಗುತ್ತದೆ. ಈ ವಸ್ತುಗಳು ನಂಜುರೋಧಕವಾಗಿಯೂ ಕೆಲಸಮಾಡುತ್ತವೆ. ಕಾಡಿಕಾರವನ್ನು ದೇಹದ ಮೇಲಿನ ನರೂಲಿ, ಮಚ್ಚೆ ಹೆಚ್ಚುವರಿಗೊಂಡು ಬೆಳೆದ ಅಂಗಭಾಗಗಳು ಮತ್ತು ಕಾಲಿನ ಆಣಿಯನ್ನು ಧ್ವಂಸಗೊಳಿಸಲು ಉಪಯೋಗಿಸಲಾಗುತ್ತದೆ.

ಶರೀರದ ಹೊರಭಾಗದಲ್ಲಿ ಕಾಡಿಕಾರ ವಸ್ತುಗಳನ್ನು ಸವರಿದಾಗ ಇಲ್ಲವೆ ತೀಡಿದಾಗ ಆ ಪ್ರದೇಶದಲ್ಲಿನ ಅಂಗಭಾಗಗಳು ಧ್ವಂಸಗೊಳ್ಳುತ್ತವೆ. ಈ ವಸ್ತುಗಳನೇಕವು ಅಲ್ಲಿನ ಜೀವಕಣದಲ್ಲಿನ ಸಾರಜನಕ ವಸ್ತುಗಳನ್ನು ಕರಣೆಗೊಳಿಸಿ ಒಗ್ಗೂಡಿಸುತ್ತವೆ. ಅದರಿಂದಾಗಿ ಉಂಟಾಗುವ ಉರಿಯ ಫಲವಾಗಿ ಆಗುವ ಒಸರಿಕೆ ಪಕಳೆಗೊಂಡು ಉದುರಿ ಆ ಪ್ರದೇಶದಲ್ಲಿ ಕಲೆಯನ್ನುಂಟುಮಾಡುತ್ತದೆ. ಕೆಲಮೊಂದು ಕ್ಷಾರವಸ್ತುಗಳು ಕರಣೆಯಂತೆ ಒಗ್ಗೂಡಿಸಿದ ಸಾರಜನಕ ವಸ್ತುಗಳನ್ನು ಮರಳಿ ಕರಗಿಸಲೂಬಲ್ಲವು. (ಪಿ.ಎಸ್.ಎಸ್.)

**ಕಾಡು ಇಪ್ಪೆ :** ಗಿಡ್ಡ ಕಾಂಡದ, ಹರಡಿದ ರೆಂಬೆಗಳ, ದೊಡ್ಡ ದುಂಡನೆಯ ಹಂದರದ, ಅಸ್ಥಿರ ಪರ್ಣವೃಕ್ಷ (ಬಾಸ್ಸಿಯ ಲ್ಯಾಟಿಫೊಲಿಯ). ತೊಗಟೆ ಬಣ್ಣ ಬೂದು. ಇದು ಉದ್ದುದ್ದನೆಯ ಸೀಳುಗಳಿಂದ ಕೂಡಿದೆ. ಮಧ್ಯ ಪ್ರದೇಶ, ಮಹಾರಾಷ್ಟ್ರ ಹಾಗೂ ಆಂಧ್ರದ ಕೆಲವು ಭಾಗಗಳಲ್ಲೂ ಒರಿಸ್ಸ, ಉತ್ತರ ಪ್ರದೇಶ, ಹಿಮಾಲಯ ತಪ್ಪಲಿನ ಕೆಲವು ಭಾಗಗಳಲ್ಲೂ ಇದರ ವ್ಯಾಪ್ತಿ ಇದೆ, ಮೈಸೂರು ದೇಶದಲ್ಲಿ ಬಲು ವಿರಳ.

ಇದರ ಹೂಗಳು ಮಾರ್ಚ್–ಏಪ್ರಿಲ್‌ನಲ್ಲಿ ಅರಳುತ್ತವೆ. ಹೂಗಳ ತಿರುಳು ಮೆತು, ರುಚಿ ಸಿಹಿ. ಇವು ಅರಳುತ್ತಿದ್ದಂತೆಯೇ ಉದುರುವುವು. ಇವನ್ನು ಹಸಿಯಾಗಿ ಅಥವಾ ಒಣಗಿಸಿ ಪುಡಿಮಾಡಿ ಹಿಟ್ಟಿನೊಂದಿಗೆ ರೊಟ್ಟಿಗೆ ಉಪಯೋಗಿಸುತ್ತಾರೆ. ಕ್ಷಾಮ ಕಾಲದಲ್ಲಿ ಜನರಿಗೆ ಇದರ ನೆರವು ಹೆಚ್ಚಿನದು. ಹೂಗಳಿಂದ ಮದ್ಯಸಾರವನ್ನು ತಯಾರು ಮಾಡಬಹುದು. ಆಗಸ್ಟ್‌ನಲ್ಲಿ ಕಾಯಿ ಮಾಗುವುದು. ಬೀಜದಿಂದ ದೊರೆಯುವ ಮಂದವಾದ ಎಣ್ಣೆ ಕೃತಕ ಬೆಣ್ಣೆ (ಮಾರ್ಗರೈನ್), ಗ್ಲಿಸರಿನ್, ಸೋಪುಗಳ ತಯಾರಿಕೆಗಳಿಗೆ ಉಪಯುಕ್ತ. ಚೌಬೀನೆ ಉಪಯುಕ್ತವಾದರೂ ಹೂ, ಬೀಜಗಳ ಉಪಯುಕ್ತತೆ ಹೆಚ್ಚಿನದಾಗಿರುವುದರಿಂದ ಹೆಚ್ಚಾಗಿ ಮರವನ್ನು ಉರುಳಿಸುವುದಿಲ್ಲ. (ಎ.ಕೆ.ಎಸ್.)

**ಕಾಡು ಓಮ :** ಕೀನೋಪೋಡಿಯೇಸೀ ಕುಟುಂಬಕ್ಕೆ ಸೇರಿದ ಪುಟ್ಟಗಾತ್ರದ ಮೂಲಿಕೆ ಸಸ್ಯ. ಇದಕ್ಕೆ ಕೀನೋಪೋಡಿಯಮ್ ಆಂಬ್ರೊಸಾಯ್ಡಿಸ್ ಎಂಬ ವೈಜ್ಞಾನಿಕ ಹೆಸರಿದೆ. ಗಿಡ ಸಾಧಾರಣವಾಗಿ 2 ರಿಂದ 4 ಅಡಿ ಎತ್ತರ ಬೆಳೆಯುತ್ತದೆ. ಕವಲುಗಳು. ಬಂಗಾಳ ಮತ್ತು ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ. ಸಸ್ಯದ ವಿವಿಧ ಭಾಗಗಳ ಮೇಲೆ ವಾಸನಾ ಗ್ರಂಥಿಗಳಿರುವ ಕೂದಲು ಬೆಳೆಯುತ್ತದೆ. ಹೂಗಳು ಎಲೆಯ ಕಂಕುಗಳಲ್ಲಿ ಗುಂಪಾಗಿ ಬೆಳೆಯುತ್ತವೆ; ಇವಕ್ಕೆ ತೊಟ್ಟುಗಳಿಲ್ಲ. ಹಣ್ಣಿನ ಮೇಲೂ ಗ್ರಂಥಿಗಳಿಂದ ಕೂಡಿದ ಕೂದಲುಂಟು. ಇದರಿಂದ ಇಡೀ ಸಸ್ಯಕ್ಕೆ ಕರ್ಪೂರದ ವಾಸನೆಯಿದೆ. ಈ ಕೂದಲುಗಳಿಂದ ಒಂದು ರೀತಿಯ ಎಣ್ಣೆಯನ್ನು ತೆಗೆದು ಔಷಧವಾಗಿ ಉಪಯೋಗಿಸುತ್ತಾರೆ.

ಸಸ್ಯದ ಕಾಂಡ, ಎಲೆ, ಹೂ ಇತ್ಯಾದಿ ಭಾಗಗಳನ್ನು ಬಟ್ಟಿಯಿಳಿಸಿ ಎಣ್ಣೆ ತೆಗೆಯುತ್ತಾರೆ. ಈ ಎಣ್ಣೆ ತೆಳು ಹಳದಿ ಅಥವಾ ಕಿತ್ತಲೆಹಣ್ಣಿನ ಹಳದಿ ಬಣ್ಣದ್ದಾಗಿದೆ. ವಾಸನೆ ಅಷ್ಟು ಹಿತಕರವಲ್ಲ. ಇದಕ್ಕೆ ಕಹಿರುಚಿಯಿದೆ. ಇದನ್ನು ಕರುಳಿನಲ್ಲಿ ಜೀವಿಸುವ ಪರತಂತ್ರ ಜೀವಿಗಳನ್ನು ನಾಶಪಡಿಸಲು, ಎಂಟಮೀಬದಿಂದ ಉಂಟಾಗುವ ಆಮಶಂಕೆ ಗುಣಪಡಿಸಲು ಔಷಧಿಯಾಗಿ ಉಪಯೋಗಿಸುತ್ತಾರೆ. ಈ ಔಷಧಿಯನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕು. ಅಧಿಕ ಪ್ರಮಾಣದಲ್ಲಿ ಉಪಯೋಗಿಸಿದರೆ ಮಂಕು ಕವಿಯುವುದು, ವಾಂತಿ, ಕಿವುಡು, ವಿಪರೀತ ನಿದ್ರೆ ಮುಂತಾದ ದುಷ್ಪರಿಣಾಮಗಳಾಗುತ್ತವೆ. ಸಾವು ಸಂಭವಿಸುವುದೂ ಉಂಟು. ಮನುಷ್ಯ ಮಾತ್ರ ಅಲ್ಲದೆ ನಾಯಿ. ಕುದುರೆ, ಬೆಕ್ಕು ಮುಂತಾದ ಪ್ರಾಣಿಗಳಲ್ಲಿರುವ ಕೊಕ್ಕೆ ಹುಳು, ದುಂಡು ಹುಳುಗಳ ಮೇಲೆ ಔಷಧಿಯಾಗಿ ಇದನ್ನು ಉಪಯೋಗಿಸಬಹುದು. ಇದರ ಬಳಕೆ ಈಗ ಅಷ್ಟಾಗಿ ಇಲ್ಲ. ಬೆಳಕು ಬಿದ್ದರೆ ಈ ಎಣ್ಣೆಯಲ್ಲಿರುವ ಆಸ್ಕರಿಡಾಲ್ ಎಂಬ ಅಂಶ ಕಡಿಮೆಯಾಗುತ್ತದಾಗಿ ಈ ಎಣ್ಣೆಯನ್ನು ತಂಪಾಗಿರುವ ಕತ್ತಲೆ ಇರುವ ಜಾಗದಲ್ಲಿ ಶೇಖರಿಸಿಡಬೇಕಾಗುತ್ತದೆ. (ಬಿ.ಪಿ.ಡಿ.ಎಸ್.ಎಸ್.)

**ಕಾಡುಕಟುಕರೋಹಿಣಿ :** ರ್‍ಯಾನನ್‌ಕ್ಯುಲೇಸೀ ಕುಟುಂಬಕ್ಕೆ ಸೇರಿದ ಹೆಲೆಬೋರಸ್ ನೈಜರ್ ಎಂಬ ಶಾಸ್ತ್ರೀಯ ಹೆಸರಿನ ಮೂಲಿಕೆ ಸಸ್ಯ. ಕಟುಕರೋಹಿಣಿ, ಕರೀಜೀರಿಗೆ ಮುಂತಾದ ಹೆಸರುಗಳೂ ಇದಕ್ಕಿವೆ. ಭಾರತದ ಗುಡ್ಡಗಾಡು ಪ್ರದೇಶದಲ್ಲಿ ಬೆಳೆಯುತ್ತದೆ. ಇದರ ಒಣಗಿದ ಬೇರು ಮತ್ತು ಬೇರಿನ ಕಷಾಯವನ್ನು ಔಷಧಿಯಲ್ಲಿ ಬಳಸಲಾಗುತ್ತದೆ. ಇದರ ಬೇರಿನಲ್ಲಿ ನೀರಿನಲ್ಲಿ ಕರಗುವ ಹೆಲಿಬೋರಿಯಿನ್ ಎಂಬ ವಸ್ತುವೂ ನೀರಿನಲ್ಲಿ ಕರಗದ ಹೆಲಿಬೋರಿಯಿನ್ ಎಂಬ ವಸ್ತುವೂ ಇವೆ. ಇವನ್ನು ಕರುಳುಹುಳು ರೋಧಕವಾಗಿ ಮೂರ್ಛೆಯ ರೋಗದಲ್ಲಿ, ಉನ್ಮಾದ ಸ್ಥಿತಿಯಲ್ಲಿ, ಜಲೋದರವಾದಾಗ, ಅಪಚನ ಮತ್ತು ಮಲಬದ್ಧತೆಯುಂಟಾದಾಗ ಉಪಯೋಗಿಸುತ್ತಾರೆ. ಅಲ್ಪ ಪ್ರಮಾಣದಲ್ಲಿ ಉಪಯೋಗಿಸಿದಾಗ ಹೃದಯದ ಬಡಿತವನ್ನು ಕಡಿಮೆ ಮಾಡುವ ಗುಣ ಇದಕ್ಕಿದೆ. ಕಣ್ಣಿನಲ್ಲಿ ಬೇರಿನ ರಸವನ್ನು ಹಿಂಡಿದಾಗ ಆ ಪ್ರದೇಶದ ಅರಿವಳಿಕೆಯನ್ನುಂಟುಮಾಡಬಲ್ಲದು. (ಪಿ.ಎಸ್.ಎಸ್.)

**ಕಾಡು ಕಣಗಿಲು :** ಡಿಲ್ಲೆನಿಯೇಸೀ ಕುಟುಂಬದ ಡಿಲ್ಲೆನಿಯ ಪೆಂಟಗೈನ ಎಂಬ ವೈಜ್ಞಾನಿಕ ಹೆಸರಿನ ಮರ. ಇದು ಭಾರತದಾದ್ಯಂತ ವ್ಯಾಪಿಸಿದೆ. ಸುಮಾರು 9.14–21 ಮೀ ಎತ್ತರಕ್ಕೆ ಬೆಳೆಯುತ್ತದೆ. ಇದರ ಎಲೆಗಳು ಬಹಳ ದೊಡ್ಡವು; ಅವುಗಳ ಉದ್ದ ಸುಮಾರು 2–3 ಅಡಿ. ಹೂಗಳು ಅಂಬೆಲ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಅವುಗಳ ಬಣ್ಣ ಹಳದಿ. ಕಾಯಿಗಳು ಮಾಗಿದಾಗ ಕಿತ್ತಳೆ ಬಣ್ಣದವೂ ರಸಭರಿತವಾಗಿಯೂ ಇವೆ. ಇವು ತಿನ್ನಲು ಯೋಗ್ಯ.

ಕಾಡುಕಣಗಿಲು ಹೆಚ್ಚು ಮಳೆ ಬೀಳುವ ಮತ್ತು ಉಷ್ಣತೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಚೆನ್ನಾಗಿ ಬಿಸಿಲು ಬೀಳುವ ಸ್ಥಳಗಳಲ್ಲಂತೂ ಇದರ ಬೆಳವಣಿಗೆ ಹುಲುಸು. ಚಳಿಯನ್ನು ಇದು ತಡೆಯಲಾರದು. ಮರವನ್ನು ಕತ್ತರಿಸಿದಾಗ ಬುಡದಿಂದ ಬಲುಬೇಗನೆ ಚಿಗುರೊಡೆಯುತ್ತದೆ. ಚೌಬೀನೆ ಮಧ್ಯಮ ಭಾರದ್ದು (ಘನ ಅಡಿಗೆ 45–48 ಪೌಂ. ತೂಗುತ್ತದೆ) ಮತ್ತು ಸಾಧಾರಣ ಬಲವುಳ್ಳದ್ದು. ರಸಕಾಷ್ಠ (ಸ್ಯಾಪ್‌ವುಡ್) ನಸುಗೆಂಪಾಗಿಯೂ ಚೇಗುಭಾಗ (ಹಾರ್ಡ್‌ವುಡ್) ಕೆಂಪುಮಿಶ್ರಿತ ಬೂದಿ ಬಣ್ಣದ್ದಾಗಿಯೂ ಇವೆ. ಚೌಬೀನೆಯನ್ನು ಮರಗೆಲಸಗಳಿಗೆ ಸುಲಭವಾಗಿ ಅಳವಡಿಸಬಹುದು. ಆದರೆ ಹೆಚ್ಚು ಬಾಳಿಕೆ ಬರುವುದಿಲ್ಲ. ಸಾಮಾನ್ಯ ದರ್ಜೆಯ ಪೀಠೋಪಕರಣವನ್ನು ಮಾಡಲೂ ಹಲಗೆ, ಆಸರೆಗಂಬ ಮುಂತಾದವುಗಳಿಗೂ ಇದನ್ನು ಉಪಯೋಗಿಸುತ್ತಾರೆ. ಕಾಡುಕಣಗಿಲು ಮರದ ತೊಗಟೆಯಿಂದ ಒಂದು ಬಗೆಯ ನಾರನ್ನು ತೆಗೆಯಬಹುದು; ಇದನ್ನು ಹಗ್ಗ ಮಾಡಲು ಬಳಸುವುದುಂಟು. ಎಲೆಗಳನ್ನು ಹಸುರುಗೊಬ್ಬರವಾಗಿಯೂ ಉಪಯೋಗಿಸಬಹುದು. (ಎ.ಕೆ.ಎಸ್.)

**ಕಾಡು ಕರಿಬೇವು :** ರೂಟೇಸೀ ಕುಟುಂಬದ ಮುರ್‍ರಾಯ ಕುಲದ ಎಗ್ಸೋಟಿಕ ಜಾತಿಯ ಸದಾ ಹಸುರಾಗಿರುವ ಪುಷ್ಕಳ ಪೊದೆ ಅಥವಾ ಸಣ್ಣ ಮರ. ರೂಢಿಯಲ್ಲಿ ಅಂಗಾರಕನ ಗಿಡವೆಂದು ಕರೆಯುವುದೂ ಉಂಟು. ಇದು ಭಾರತ ದೇಶದ ಮೂಲವಾಸಿ.

ಕಾಡು ಕರಿಬೇವನ್ನು ಸಾಮಾನ್ಯವಾಗಿ ತೋಟಗಳಲ್ಲಿ ಅದರ ಹಸಿರಾದ ಎಲೆಗಳಿಗಾಗಿಯೂ ಸುವಾಸನಾಯುಕ್ತ ಬಿಳಿ ಹೂಗಳಿಗಾಗಿಯೂ ಬೆಳೆಸುತ್ತಾರೆ. ಇದು ಅಲಂಕಾರದ ಬೇಲಿ ಸಸ್ಯವಾಗಿಯೂ ಪ್ರಖ್ಯಾತಿ ಪಡೆದಿದೆ. ವಿವಿಧ ಆಕರ್ಷಕ ಆಕಾರಗಳಲ್ಲಿ ಇದನ್ನು ಕತ್ತರಿಸಬಹುದು. ಇದರ ಎಲೆಗಳನ್ನು ಫಿಲಿಪೈನ್ ದೇಶದಲ್ಲಿ ಭೇದಿಗೂ ಎಲೆಯ ಪುಡಿಯನ್ನು ಕತ್ತರಿಸಿದ ಗಾಯಗಳಿಗೂ ಎಳೆದ ಕಾಂಡದ ಕಡ್ಡಿಯನ್ನು ಹಲ್ಲುಜ್ಜಲೂ ಉಪಯೋಗಿಸುತ್ತಾರೆ. ಇದರ ಮರದಿಂದ ಕುಶಲ ಕೈಗಾರಿಕಾ ವಸ್ತುಗಳನ್ನೂ ಬೆತ್ತ ಸಣ್ಣಪೆಟ್ಟಿಗೆ ಮತ್ತು ಗಣಿತಶಾಸ್ತ್ರದ ಉಪಕರಣಗಳನ್ನೂ ಮಾಡುತ್ತಾರೆ. ಕಾಡು ಕರಿಬೇವನ್ನು 1,500 ಮೀಟರ್ ಎತ್ತರದ ವರೆಗಿನ ಪ್ರದೇಶಗಳಲ್ಲೂ ಬೇಸಾಯ ಮಾಡಬಹುದು.

ಕಾಡು ಕರಿಬೇವಿನ ಎಲೆಗಳಿಗೆ ಹೊಳಪಿದೆ. ಅಂಚು ನಯವಾಗಿದೆ. ಎಳೆಯ ಎಲೆಗಳ ಮೇಲೆ ಮೃದು ಕೂದಲುಗಳಿರುತ್ತವೆ. ಎಲೆಗಳು ಬೆಸ. ಕಿರು ಎಲೆಗಳು 3–9, ಕರನೆಯಾಕಾರ ಅಥವಾ ವಜ್ರಾಕೃತಿ, 1"–2" ಉದ್ದ, ಮೊಂಡು ತುದಿ, ಕೆಲವು ಸಮಯ ತುದಿ ಕತ್ತರಿಸಿದಂತಿರುತ್ತವೆ. ಅಂಚು ನಯ ಅಥವಾ ಸೂಕ್ಷ್ಮದಂತಾಕೃತಿ. ಹೂ ಮಂಜರಿ ಮಧ್ಯಾರಂಭಿ. ಹೂ ಗಂಟೆಯಾಕಾರ, 3/4 ಅಥವಾ ಅದಕ್ಕಿಂತಲೂ ಸ್ವಲ್ಪ ಕಡಿಮೆ ಉದ್ದ. ಹೂ ದಳಗಳು ಚೂಪಾಗಿರುತ್ತವೆ. ಹಣ್ಣು ಮೊಟ್ಟೆಯಾಕಾರ ಅಥವಾ ಆಯತಾಕಾರ, 1/3"–1/2" ಉದ್ದ, ಚೂಪು ತುದಿ, ಪಕ್ವವಾದ ಮೇಲೆ ಕೆಂಪಗಿರುತ್ತದೆ. ಒಂದು ಹಣ್ಣಿನಲ್ಲಿ ಒಂದರಿಂದ ಎರಡು ಬೀಜಗಳಿರುತ್ತವೆ. ಕಾಡು ಕರಿಬೇವನ್ನು ಬೀಜಗಳಿಂದಲೂ ಕಾಂಡದ ತುಂಡುಗಳಿಂದಲೂ ಗೂಟ ಕಟ್ಟುವುದರಿಂದಲೂ ವೃದ್ಧಿ ಮಾಡಬಹುದು. (ಎಂ.ಎಚ್.ಎಂ.)

**ಕಾಡು ಕಸ್ತೂರಿ :** ಹೈಬಿಸ್ಕಸ್ ಅಬೆಲ್‌ಮಾಸ್ಕಸ್ ಎಂಬ ಶಾಸ್ತ್ರೀಯ ಹೆಸರಿನ ಸಸ್ಯ. ಕಸ್ತೂರಿ ಬೆಂಡೆ ಇದರ ಪರ್ಯಾಯ ನಾಮ. ಮಾಲ್ವೇಸೀ ಕುಟುಂಬಕ್ಕೆ ಸೇರಿದೆ. ಬ್ರೆಜಿಲ್, ಜಾವ, ವೆಸ್ಟ್ ಇಂಡೀಸ್ ಮತ್ತು ಭಾರತದ ಉಷ್ಣ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ.

ಇದನ್ನು ಉದ್ಯಾನವನಗಳಲ್ಲಿ ಅಂದಕ್ಕಾಗಿ ಬೆಳೆಸುವುದೂ ಉಂಟು. ಕಾಡು ಕಸ್ತೂರಿ ಸಾಮಾನ್ಯವಾಗಿ 2'-6' ಎತ್ತರಕ್ಕೆ ಬೆಳೆಯುವ ಪೊದೆ ಸಸ್ಯ. ಎಲೆಗಳು ಸಂಯುಕ್ತ ಮಾದರಿಯವು. ಆಕಾರ ಹಸ್ತದಂತೆ. ಪ್ರತಿ ಎಲೆಯಲ್ಲೂ 5-7 ಹಾಲೆಗಳಿವೆ. ಹೂಗಳು ದೊಡ್ಡ ಗಾತ್ರದವು. ಅವುಗಳ ಬಣ್ಣ ಹಳದಿ. ಕಾಯಿ ಸಂಪುಟ (ಕ್ಯಾಪ್ಸೂಲ್) ಮಾದರಿಯದು. ಒಳಗೆಲ್ಲ ಮೂತ್ರಪಿಂಡಾಕಾರದ, ಕಂದು ಬಣ್ಣದ ಅನೇಕ ಸಣ್ಣ ಬೀಜಗಳಿವೆ. ಬೀಜಗಳಿಗೆ ಒಂದು ವಿಶೇಷ ಬಗೆಯ ಸುವಾಸನೆಯಿದೆ. ಈ ಸುವಾಸನೆಯುಕ್ತ ಬೀಜಗಳಿಗಾಗಿ ಗಿಡ ಬಹಳ ಹೆಸರಾಗಿದೆ. ಬೀಜಗಳಿಗೆ ಕಸ್ತೂರಿ ಬೀಜ (ಮಸ್ಕ್ ಸೀಡ್ಸ್) ಎಂಬ ವಾಣಿಜ್ಯ ನಾಮವಿದೆ.

ಕಾಡು ಕಸ್ತೂರಿಯ ಬೀಜಗಳಿಂದ ಮಸ್ಕ್ ಬೀಜದ ಎಣ್ಣೆ ಅಥವಾ ಆಂಬ್ರೆಟ್ ಬೀಜದೆಣ್ಣೆ ಎಂದು ಕರೆಯಲಾಗುವ ತೈಲವೊಂದನ್ನು ತೆಗೆಯುತ್ತಾರೆ. ಬೀಜಗಳನ್ನು ಪುಡಿ ಮಾಡಿ ಉಗಿ ಆಸವೀಕರಣದ ಮೂಲಕ ಹೊರತೆಗೆಯುತ್ತಾರೆ. ಈ ಎಣ್ಣೆ ಸಾಮಾನ್ಯ ಉಷ್ಣತೆಯಲ್ಲಿ ಗಟ್ಟಿಯಾದ ದ್ರವರೂಪದಲ್ಲಿರುತ್ತದೆ. ಇದರಲ್ಲಿ ಕೊಬ್ಬಿನ ಅಂಶ ಜಾಸ್ತಿ. ಸುಗಂಧ ವಸ್ತುಗಳ ತಯಾರಿಕೆಯಲ್ಲಿ ಇದನ್ನು ಉಪಯೋಗಿಸುವಾಗ ಈ ಎಣ್ಣೆಯಲ್ಲಿರುವ ಕೊಬ್ಬಿನಂಶವನ್ನು ದುರ್ಬಲ ಮದ್ಯಸಾರದಲ್ಲಿ ಬೆರೆಸಿ ಬೇರ್ಪಡಿಸುತ್ತಾರೆ. ಈ ಎಣ್ಣೆಯಲ್ಲಿ ಫಾರ್ನಿಸಾಲ್ ಎಂಬ ಒಂದು ಬಗೆಯ ಆಲ್ಕೋಹಾಲ್ ಗಣನೀಯ ಪ್ರಮಾಣದಲ್ಲಿದೆ. ಅಲ್ಲದೆ ಇದರಲ್ಲಿ ಆಂಬ್ರೆಟಲೈಡ್ ($C_{16}H_{28}O_2$) ಎಂಬ ಕೀಟೋನ್ ಇರುವುದರಿಂದ ಈ ಎಣ್ಣೆಗೆ ಕಸ್ತೂರಿಯಂಥ ವಾಸನೆಯಿದೆ. ಇದಿರುವುದರಿಂದಲೇ ಕಸ್ತೂರಿ ಎಣ್ಣೆಯನ್ನು ಅಥವಾ ಇದನ್ನು ಪರಿಷ್ಕರಿಸಿ ಪಡೆಯಲಾಗುವ ಆಂಬ್ರೆಟಲೈಡನ್ನು ಉತ್ತಮ ದರ್ಜೆಯ ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಕಸ್ತೂರಿಯಂಥದೇ ಒಳ್ಳೆಯ ವಾಸನೆಯಿರುವುದರಿಂದ ಆದರೆ ಪ್ರಾಣಿ ಜನ್ಯ ಕಸ್ತೂರಿಯಲ್ಲಿ ಕೆಲವು ವೇಳೆ ಇರಬಹುದಾದಂಥ ಲದ್ದಿಯ ವಾಸನೆ ಇದರಲ್ಲಿ ಇಲ್ಲದಿರುವುದರಿಂದ ಕಾಡು ಕಸ್ತೂರಿ ಎಣ್ಣೆ ಉತ್ತಮ ದರ್ಜೆಯದೆಂದು ಪ್ರಸಿದ್ಧಿಯಾಗಿದೆ. ಅರಬ್ ದೇಶದಲ್ಲಿ ಕಾಫಿಪುಡಿಯೊಂದಿಗೆ ಇದನ್ನು ವಾಸನೆಗೋಸ್ಕರ ಮಿಶ್ರಮಾಡುತ್ತಾರೆ. ಭಾರತದಲ್ಲಿ ಈ ಎಣ್ಣೆಯನ್ನು ಅನೇಕ ವಸ್ತುಗಳೊಂದಿಗೆ ಬೆರಕೆ ಮಾಡಿ ಉಪಯೋಗಿಸುತ್ತಾರೆ. ಉಣ್ಣೆ ಬಟ್ಟೆಗಳನ್ನು ಕ್ರಿಮಿಕೀಟಗಳಿಂದ ದೂರವಿಡಲು ಬೀಜದ ಪುಡಿಯ ಬಳಕೆ ಉಂಟು. ಬೀಜಗಳನ್ನು ಬಲವರ್ಧಕ ಔಷಧಿಯಾಗಿ, ಹಸಿವುಂಟು ಮಾಡಲು, ನರಮಂಡಲದ ದುರ್ಬಲತೆಯನ್ನು ಹೋಗಲಾಡಿಸಲು ಉಪಯೋಗಿಸುವುದುಂಟು. ಕಾಂಡದಿಂದ ನಾರನ್ನು ಸಹ ತಯಾರು ಮಾಡಬಹುದು. ಎಲೆ, ಎಳೆ ಕಾಂಡ ಹಾಗೂ ಹಸುರುಕಾಯಿಗಳನ್ನು ತರಕಾರಿಯಾಗಿ ಉಪಯೋಗಿಸುವ ರೂಢಿ ಹಲವು ದೇಶಗಳಲ್ಲಿದೆ. (ಬಿ.ಪಿ.)

**ಕಾಡು ಕಾಸಿ ಕಣಗಿಲೆ :** ಅಪೋಸೈನೇಸೀ ಕುಟುಂಬಕ್ಕೆ ಸೇರಿದ ಗಿಡ. ಶಾಸ್ತ್ರನಾಮ ತೆವೀಷಿಯ ನಿರಿಫೋಲಿಯ. ಕಣಗಿಲು, ಬೆಪ್ಪಾಲೆ ಮುಂತಾದ ಗಿಡಗಳೂ ಇದೇ ಕುಟುಂಬಕ್ಕೆ ಸೇರಿವೆ. ಇದಕ್ಕೆ ಸಂಸ್ಕೃತದಲ್ಲಿ ಅಶ್ವಘ್ನ, ಅಶ್ವಹ, ಹರಿ ಪ್ರಿಯ, ಕರವೀರ ಮುಂತಾದ ಹೆಸರುಗಳಿವೆ. ಹಚ್ಚ ಕಣಗಿಲು ಎಂದೂ ಕರೆಯುತ್ತಾರೆ. ಇದು ನಿತ್ಯ ಹರಿದ್ವರ್ಣದ ದೊಡ್ಡ ಪೊದರುಗಿಡ. ಕೆಲವು ಕಡೆಗಳಲ್ಲಿ ಚಿಕ್ಕ ಮರವಾಗಿಯೂ ಬೆಳೆಯುತ್ತದೆ. ಇದರ ಮೂಲಸ್ಥಾನ ದಕ್ಷಿಣ ಅಮೆರಿಕ. ಭಾರತದ ಆದ್ಯಂತ ಸ್ವಾಭಾವಿಕವಾಗಿ ಬೆಳೆಯುತ್ತದೆ. ಗಿಡದಲ್ಲಿ ಹಾಲು ಬರುತ್ತದೆ. ಎಲೆಗಳು ಉದ್ದ ಮತ್ತು ನೀಳವಾಗಿವೆ. ಹೂಗಳ ಬಣ್ಣ ಹಳದಿ, ಆಕಾರ ಗಂಟೆಯಂತೆ. ದಳಗಳ ಮೇಲೆ ದಳರೋಮಗಳು (ಕೊರೋನಾ) ಬೆಳೆದಿರುತ್ತವೆ. ಕೇಸರಗಳು ದಳಕೊಳವೆಯ ಗಂಟಲಲ್ಲಿ ಒಟ್ಟುಗೂಡಿವೆ. ಶಲಾಕಾಗ್ರ ಲಿಂಗಾಕಾರವಾಗಿದೆ. ಕಾಯಿಯ ಉದ್ದ 3 ಸೆಂಮೀ, ಅಗಲ 3.8 ಸೆಂಮೀ. ಇದರಲ್ಲಿ 4 ಬೀಜಗಳಿವೆ. ಕಾಯಿಗೆ ದುಂಡಾದ ಮೂಲೆಗಳಿವೆ.

ಗಿಡ ಬಹಳ ಕಹಿ. ಇದರ ಹಾಲು ವಿಷ. ಆಗಾಗ ಬಿಟ್ಟು ಬರುವ ಜ್ವರಕ್ಕೆ ಗಿಡದ ತೊಗಟೆಯನ್ನು ಔಷಧಿಯಾಗಿ ಉಪಯೋಗಿಸುತ್ತಾರೆ. ಬೀಜಗಳು ಸಹ ವಿಷಪೂರಿತವಾದವು. ಮುಂಡರು ಹಂದಿ ಮತ್ತು ನರಿಗಳನ್ನು ಸಾಯಿಸಲು ಬೀಜಗಳನ್ನು ವಿಷವಾಗಿ ಉಪಯೋಗಿಸುತ್ತಾರೆ. ಇವುಗಳಿಂದ ತೆಗೆದ ಎಣ್ಣೆಗೆ ಭೇದಿ ಔಷಧಿಯಾಗಿ ಬಳಕೆ ಉಂಟು.

ಕಾಡು ಕಾಸಿಕಣಗಿಲೆ ಗಿಡದಿಂದ ಥೆವಿಟಿನ್, ಥೆವಿಟಾಕ್ಸಿನ್, ನಿರಿಫೋಲಿನ್, ಅಸಿಟೈಲ್ ಮುಂತಾದ ರಾಸಾಯನಿಕ ಔಷಧಿಗಳನ್ನು ಬೇರ್ಪಡಿಸಿದ್ದಾರೆ. ಥೆವಿಟಿನ್ ಮುಂತಾದ ಔಷಧಿ ಹೃದ್ರೋಗಗಳಿಗೆ ಬಹಳ ಪರಿಣಾಮಕಾರಿ ಎಂದು ತಿಳಿದುಬಂದಿದೆ ಮೂಲರೋಗ, ತೊನ್ನು, ಚರ್ಮರೋಗಗಳಿಗೂ ಈ ಗಿಡದಿಂದ ಔಷಧಿಗಳನ್ನು ತಯಾರಿಸುತ್ತಾರೆ. (ಎಂ.ಸಿ.ಆರ್.)

**ಕಾಡುಕೋಣ :** ಆರ್ಟಿಯೊಡ್ಯಾಕ್ಟೈಲ ಗಣದ ಬೋವಿಡೀ ಕುಟುಂಬಕ್ಕೆ ಸೇರಿದ ಸ್ಥೂಲಕಾಯದ ಪ್ರಾಣಿ (ಬೈಸನ್). ನೋಡುವುದಕ್ಕೆ ದೊಡ್ಡ ಗಾತ್ರದ ಕೋಣ ಅಥವಾ ಗೂಳಿಯಂತಿದೆ. ಇದರಲ್ಲಿ ಪ್ರಮುಖವಾಗಿ ಎರಡು ಜಾತಿಗಳಿವೆ. ಅಮೆರಿಕ ಮತ್ತು ಯುರೋಪಿನಲ್ಲಿ ವಾಸಿಸುವ ಬೈಸನ್ ಎಂಬುದು ಮತ್ತು ಭಾರತದಲ್ಲಿ ಕಾಣ ಬರುವ ಬೈಬಾಸ್ ಗೌರಸ್ ಎಂಬುದು.

ಭಾರತದ ಕಾಡುಕೋಣಕ್ಕೆ ಗೌರ್ ಎಂಬ ಹೆಸರು ಇದೆ. ಇದು ಮಯನ್ಮಾರ್, ಮಲಯ ದೇಶಗಳಲ್ಲೂ ಕಾಣಬರುತ್ತದೆ. ಸುಮಾರು 750–1,800 ಮೀ ಎತ್ತರದ ಗುಡ್ಡಗಾಡು ಪ್ರದೇಶಗಳಲ್ಲಿ ಗುಡ್ಡಗಳ ಮೇಲೆ ಹುಲ್ಲುಗಾವಲುಗಳಿರುವಂಥ ಸ್ಥಳಗಳಲ್ಲಿ ಸಾಮಾನ್ಯಾವಾಗಿ ವಾಸಿಸುತ್ತದೆ. ಕರ್ನಾಟಕದ ಮಲೆನಾಡುಗಳಲ್ಲಿ ಹಿಂದೊಮ್ಮೆ ಹೇರಳ ಸಂಖ್ಯೆಯಲ್ಲಿದ್ದ ಇದು ಈಗ ಬಿಳಿಗಿರಿರಂಗನ ಬೆಟ್ಟದ ಶ್ರೇಣಿ, ಬಂಡೀಪುರ ಅಭಯಾರಣ್ಯ, ಲಕ್ಕವಳ್ಳಿ, ನಾಗರಹೊಳೆ, ದಾಂಡೇಲಿ ಮುಂತಾದ ಪ್ರದೇಶಗಳಲ್ಲಿ ಮಾತ್ರ ಇದೆ. ಕಾಡು ಕೋಣ ಬಹಳ ದೊಡ್ಡ ಗಾತ್ರದ ಪ್ರಾಣಿ. ಪೂರ್ಣ ಬೆಳೆದ ಕೋಣ ಸುಮಾರು 10′ (ಬಾಲ ಬಿಟ್ಟು) ಉದ್ದ, ಸುಮಾರು 6′ ಎತ್ತರ ಇದ್ದು ಒಂದು ಟನ್ನಿಗಿಂತಲೂ ಹೆಚ್ಚು ತೂಗುತ್ತದೆ. ದೇಹದ ಬಣ್ಣ ಕಪ್ಪುಮಿಶ್ರಿತ ಕಂದು. ಕಾಲುಗಳು ಮಾತ್ರ ಬೆಳ್ಳಗಿವೆ. ಮೈಮೇಲೆ ಮೃದುವಾದ ರೇಷ್ಮೆಯಂಥ ಕೂದಲಿದೆ. ಹೆಗಲಿನಿಂದ ಬೆನ್ನಿನ ಮಧ್ಯದ ವರೆಗೂ ಎತ್ತರವಾದ ಏಣು

ಇದೆ. ತಲೆಯ ಮೇಲೆ ಅಗಲವಾಗಿ ಹರಡಿರುವ, ಬಲವಾದ ಚೂಪುತುದಿಯ ಸೊಗಸಾದ ಕೊಂಬುಗಳಿವೆ. ಕೊಂಬುಗಳ ನಡುವೆ ಇರುವ ನೆತ್ತಿ ಏಣಿನಂತೆ ಎದ್ದುಕೊಂಡಿದೆ. ಸಾಮಾನ್ಯವಾಗಿ 5–20 ಪ್ರಾಣಿಗಳನ್ನೊಳಗೊಂಡ ಹಿಂಡಿನಲ್ಲಿ ಸಂಚರಿಸುತ್ತದೆ. ಸಂಜೆ ಮತ್ತು ಮುಂಜಾನೆಯ ಮಬ್ಬುಗತ್ತಲಲ್ಲಿ ಹುಲ್ಲು, ಚಿಗುರು ಮುಂತಾದುವನ್ನು ತಿನ್ನುತ್ತ ತಿರುಗಾಡುತ್ತದೆ. ಹಗಲಲ್ಲಿ ದಟ್ಟವಾದ ಪೊದೆಗಳ ನೆರಳಿನಲ್ಲಿ ಬಿಸಿಲಿನ ತಾಪದಿಂದ ದೂರವಿದ್ದು ಆಹಾರವನ್ನು ಮೆಲುಕುಹಾಕುತ್ತ ವಿಶ್ರಮಿಸುತ್ತದೆ. ಇದು ನಾಚಿಕೆ ಹಾಗೂ ಸಾಧುಸ್ವಭಾವದ ಪ್ರಾಣಿ. ಆದರೆ ಗಾಯಗೊಂಡಾಗ, ಶತ್ರುಗಳು ಹಿಂಬಾಲಿಸಿದಾಗ ಕ್ರೂರವಾಗಿ

ಬಂಡೀಪುರದ ಒಂದು ಕಾಡುಕೋಣ

ಹೋರಾಡಬಲ್ಲುದು. ಸಾಧಾರಣವಾಗಿ ಶತ್ರುವಿನ ಸುಳಿವು ಸಿಕ್ಕಾಗ ಮರಗಿಡಗಳ ಮೆಳೆಗಳ ನಡುವೆ ವೇಗವಾಗಿ ಓಡಿಹೋಗುತ್ತದೆ. ಸಾಮಾನ್ಯವಾಗಿ ಎಮ್ಮೆ ಹಸುಗಳಂತೆಯೇ ಕೂಗುವುದಾದರು ಅಪಾಯ ಸನ್ನಿಹಿತವೆಂದು ಕಂಡಾಗ ಸಿಳ್ಳೆಯಂಥ ಗುಟುರು ಹಾಕುತ್ತದೆ. ಇದರ ಸಂತಾನೋತ್ಪತ್ತಿಯ ಕಾಲ ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳು. ಹೆಣ್ಣು ಒಂದು ಸಲಕ್ಕೆ ಒಂದೇ ಮರಿ ಹಾಕುತ್ತದೆ. ಉತ್ತರ ಅಮೆರಿಕದ ಕಾಡುಕೋಣದ ವೈಜ್ಞಾನಿಕ ಹೆಸರು ಬೈಸನ್ ಬೈಸನ್. ಇದನ್ನು ಬಫೆಲೋ ಎಂದೂ ಕರೆಯುವುದುಂಟು. ಅಮೆರಿಕಕ್ಕೆ ಯುರೋಪಿನ ಜನ ಬರುವ ಮುಂಚೆ ಅಲ್ಲಿನ ವಿಶಾಲವಾದ ಬಯಲುಗಳಲ್ಲಿ ನಿರ್ಭಯವಾಗಿ ಸಂಚರಿಸಿ ತನ್ನದೇ ಆದ ರಾಜ್ಯವನ್ನು ಸ್ಥಾಪಿಸಿದ್ದ ಈ ಕಾಡುಕೋಣ ಇಂದು ಅಮೆರಿಕದ ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ವನಗಳಲ್ಲಿ ಮಾತ್ರವೇ ಉಳಿದಿವೆ. ಹಿಂದಿನ ಕಾಲದಲ್ಲಿ ಇವುಗಳ ಸಂಖ್ಯೆ ಸುಮಾರು 60,000,000 ಇತ್ತೆಂದು ಅಂದಾಜಿದೆ. ಮಾಂಸ, ಚರ್ಮ ಮತ್ತು ಬೇಟೆಯ ಶೋಕಿಗಾಗಿ ಇವನ್ನು ಕೊಲ್ಲುತ್ತಬಂದಂತೆ ಇವುಗಳ ಸಂಖ್ಯೆಯೂ ಕಡಮೆಯಾಗುತ್ತ ಬಂದು 1900ರ ಸುಮಾರಿಗೆ ಇವುಗಳ ಸಂತತಿ ನಿರ್ನಾಮವಾಗುವ ಹಂತದಲ್ಲಿತ್ತು. ಆದರೆ ಈಗ ಕಾನೂನಿನ ರಕ್ಷಣೆ ದೊರಕಿ ಇವುಗಳ ಸಂಖ್ಯೆ ಕೊಂಚ ಏರುತ್ತ ಬಂದಿದೆ.

ಅಮೆರಿಕದ ಕಾಡುಕೋಣವೂ ದೊಡ್ಡ ಗಾತ್ರದ ಪ್ರಾಣಿ. ಇದರ ಉದ್ದ 7′–12′, ಎತ್ತರ 7′–9′, ತೂಕ ಒಂದು ಟನ್ನಿಗಿಂತಲೂ ಹೆಚ್ಚು. ದೊಡ್ಡ ಗಾತ್ರದ ತಲೆ, ನೆತ್ತಿಯ ಮೇಲೆ ಜೋತುಬಿದ್ದಿರುವ ಕೂದಲಿನ ಗುಚ್ಛ, ಕೊರಳು ಮತ್ತು ಹೆಗಲನ್ನು ಸಂಪೂರ್ಣವಾಗಿ ಆವರಿಸಿರುವ ಜಡೆಗಟ್ಟಿದ ಉದ್ದ ಕೂದಲಿನ ಬೊಂತೆ, ಚಿಕ್ಕ ಕತ್ತು, ಅಗಲವಾದ ಹಣೆ–ಇವು ಇದರ ಮುಖ್ಯ ಲಕ್ಷಣಗಳು. ದೇಹದ ಬಣ್ಣ ಕಂದು ಮಿಶ್ರಿತ ಕಪ್ಪು ಬಾಲದ ತುದಿ ಕುಚ್ಚಿನಂತಿದೆ. ದೇಹದ ಹಿಂಭಾಗ ಮುಂಭಾಗಕ್ಕಿಂತ ಕಡಿಮೆ ಎತ್ತರದ್ದು. ಕೊಂಬುಗಳು ಚಿಕ್ಕವು, ತಲೆಯ ಮುಂಭಾಗದಲ್ಲಿ ಮೇಲ್ಮುಖನಾಗಿ ಬಾಗಿವೆ. ಇದು ಸಾಮಾನ್ಯವಾಗಿ ಹಿಂಡುಗಳಲ್ಲಿ ಸಂಚರಿಸುತ್ತದೆ. ಹಿಂಡಿಗೆ ಎಮ್ಮೆಯೇ ಮುಂದಾಳು. ಹುಲ್ಲು ಇದರ ಪ್ರಧಾನ ಆಹಾರ. ಬೆಳಗಿನ ಹೊತ್ತು ಮತ್ತು ಸಂಜೆ ಆಹಾರಕ್ಕಾಗಿ ಅಲೆದಾಡುತ್ತದೆ. ಹಗಲೆಲ್ಲ ವಿಶ್ರಮಿಸುತ್ತ ಕಾಲ ಕಳೆಯುತ್ತದೆ. ಜುಲೈ–ಸೆಪ್ಟೆಂಬರ್ ತಿಂಗಳುಗಳ ನಡುವಣ ಕಾಲದಲ್ಲಿ ಗಂಡು ಹೆಣ್ಣುಗಳು ಕೂಡುತ್ತವೆ. ಹೆಣ್ಣು ಸುಮಾರು 9 ತಿಂಗಳು ಗರ್ಭಧಾರಣೆಯ ಅವಧಿಯ ಅನಂತರ ಒಂದೇ ಒಂದು ಮರಿಯನ್ನು ಈಯುತ್ತದೆ. ಮರಿಯ ಪಾಲನೆಯನ್ನು ಗಂಡು, ಹೆಣ್ಣು, ಕೆಲವೊಮ್ಮೆ ಹಿಂಡಿನ ಇತರ ಕೋಣಗಳೂ ನೋಡಿಕೊಳ್ಳುತ್ತದೆ. ಸುಮಾರು ಒಂದು ವರ್ಷ ಕಾಲ ಮರಿ ಹಾಲು ಕುಡಿದೇ ಜೀವಿಸುತ್ತದೆ. 3 ವರ್ಷಗಳಾದ ಅನಂತರ ಸ್ವತಂತ್ರ ಜೀವನ ನಡೆಸಲು ಪ್ರಾರಂಭಿಸುತ್ತದೆ. ಯುರೋಪಿನ ಕಾಡುಕೋಣ (ಬೈಸನ್ ಬೊನಾಸಸ್) ಹೆಚ್ಚು ಕಡಮೆ ಅಮೆರಿಕದ ಪ್ರಾಣಿಯಂತೆಯೇ ಇದೆ. ಆದರೆ ಅದಕ್ಕಿಂತ ದೊಡ್ಡ ಗಾತ್ರದ್ದು. ಇದಕ್ಕೆ ವೈಸೆಂಟ್ ಎಂಬ ಹೆಸರೂ ಇದೆ. ಪುರಾತನ ಕಾಲದಲ್ಲಿ ಯುರೋಪ್ ಮತ್ತು ಏಷ್ಯದ ಕಾಡುಗಳಲ್ಲಿ ಹೇರಳವಾಗಿತ್ತೆಂದು ಹೇಳಿಕೆ. ಈಗ ಪೋಲೆಂಡ್ ಮತ್ತು ಲಿಥುವೇನಿಯಗಳ ವನ್ಯಪ್ರದೇಶದಲ್ಲಿ ಮಾತ್ರ ಇದೆ. ಜೀವನಕ್ರಮದಲ್ಲಿ ಅಮೆರಿಕದ ಕಾಡುಕೋಣವನ್ನು ಹೋಲುತ್ತದೆ. (ಎ.)

**ಕಾಡು ಕೋಳಿ :** ಕೆರಾಡ್ರಿಫಾರ್ಮಿಸ್ ಗಣದ ಸ್ಕೊಲೋಪೇಸಿಡೀ ಕುಟುಂಬದ ಸ್ಕೊಲೋಪಾಕ್ ಜಾತಿಗೆ ಸೇರಿದ ಪಕ್ಷಿ (ವುಡ್ ಕಾಕ್). ಪ್ರಪಂಚದಾದ್ಯಂತ ಹರಡಿದ್ದರೂ ಉತ್ತರ ಯುರೋಪ್, ಏಷ್ಯ, ಜಪಾನ್ ದೇಶಗಳಲ್ಲಿ ಅಧಿಕವಾಗಿವೆ. ಭಾರತದ ಹಿಮಾಲಯ ತಪ್ಪಲಿನಲ್ಲಿ ಹೆಚ್ಚುಸಂಖ್ಯೆಯಲ್ಲಿ ಕಾಡುಕೋಳಿಗಳನ್ನು ಕಾಣಬಹುದು. ಬಣ್ಣ ಸಾಧಾರಣವಾಗಿ ಮಬ್ಬು ಬಿಳಿ ಅಥವಾ ಕಪ್ಪು ಮಿಶ್ರಿತ ಬಿಳುಪು. ಕಂದುಬಣ್ಣದ ಗರಿಗಳು, ಕೊಕ್ಕು ಮೋಟು, ತಲೆಯ ಮೇಲೆ ಬೂದು ಅಡ್ಡಪಟ್ಟಿಗಳಿವೆ. ತೂಕ ಸುಮಾರು 350 ಗ್ರಾಂಗಳಷ್ಟು. ಈ ಕುಟುಂಬದಲ್ಲಿ ಸುಮಾರು 77 ಪ್ರಭೇದಗಳಿವೆ. ವಾಸ ಹೆಚ್ಚಾಗಿ ನೀರಿನ ಬಳಿ ಮತ್ತು ಜೌಗು ಪ್ರದೇಶಗಳಲ್ಲಿ. ಕೀಟ ಮತ್ತು ಹುಳುಗಳು ಇವುಗಳ ಆಹಾರ. ಕಾಡುಕೋಳಿಗಳು ಹೊಟ್ಟೆಬಾಕ ಪ್ರಾಣಿಗಳು. ಸದಾ ತಿನ್ನುತ್ತಲೇ ಇರಬೇಕು. ಋತುಮಾಸದಲ್ಲಿ ವಿನಾ ಉಳಿದ ಕಾಲಗಳಲ್ಲಿ ಗುಂಪಾಗಿ ವಾಸಿಸುತ್ತವೆ. ಋತುಕಾಲದಲ್ಲಿ ಗಂಡು ಹೆಣ್ಣನ್ನು ಓಲೈಸಲು ನಾನಾ ನಾಟ್ಯಭಂಗಿಗಳನ್ನು ತಳೆಯುತ್ತದೆ: ಸುಸ್ವರಗಳನ್ನು ಹೊರಡಿಸುತ್ತದೆ. ಅನೇಕ ವೇಳೆ ಗಂಡು ಗಂಡುಗಳಲ್ಲಿ ಜಗಳವಾಗುವುದೂ ಉಂಟು. ಹೆಣ್ಣು ಒಂದು ಸಲಕ್ಕೆ 3–4 ಮೊಟ್ಟೆಗಳನ್ನು ಇಡುತ್ತದೆ. ಗೂಡು ಕಟ್ಟುವುದುಂಟು, ಖಾಲಿ ಪೊಟರೆಗಳನ್ನು ಆಶ್ರಯಿಸುವುದೂ ಉಂಟು. ತಾಯಿ ಹಕ್ಕಿ ಮರಿಗಳ ಪೋಷಣೆ ಮಾಡುತ್ತದೆ. (ಎನ್.ಬಿ.ಕೆ.)

**ಕಾಡುಗಂಧ :** ಮೀಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಮರ. ಪ್ರಭೇದ ನಾಮ ಡೈಸೋಕ್ಸೈಲಮ್ ಬೈನೆಕ್ಟರಿಫೆರಂ. ಸಾಮಾನ್ಯವಾಗಿ ಅಸ್ಸಾಂ, ಬಂಗಾಳ ಮತ್ತು ದಕ್ಷಿಣ ಭಾರತದ ಕಾಡುಗಳಲ್ಲಿ ಕಾಣಬರುತ್ತದೆ. ಇದು ಸುಮಾರು 30 ಅಡಿಗಳಷ್ಟೆತ್ತರ



ಎಡಭಾಗದಲ್ಲಿ ಹೂಗೊಂಚಲನ್ನೂ ಬಲಭಾಗದಲ್ಲಿ ಕಾಯಿಗಳನ್ನೂ ಕಾಣಿಸಿದೆ

ಬೆಳೆಯುವ ನಿತ್ಯಹರಿದ್ವರ್ಣ ವೃಕ್ಷ. ಇದರ ಕಾಂಡ ನೇರವಾಗಿ ಸ್ತಂಭಾಕೃತಿಯಲ್ಲಿದೆ. ಇಡೀ ಮರಕ್ಕೆ ದೇವದಾರು ಮರದ ವಾಸನೆಯಿದೆ. ಎಳೆಯ ರೆಂಬೆಗಳ ಮೇಲೆ ಮೃದುವಾದ ತುಪ್ಪಳಿನ ಹೊದಿಕೆ ಇದೆ. ಎಲೆಗಳು ಸಂಯುಕ್ತ ಮಾದರಿಯವು. ಅವುಗಳ ಬಣ್ಣ ತಿಳಿನೀಲಿ; ಉದ್ದ 6" ರಿಂದ 10". ಸಂಯುಕ್ತ ಎಲೆಯ ಬಿಡಿಭಾಗಗಳು ಪರ್ಯಾಯವಾಗಿ ಜೋಡಣೆಯಾಗಿದ್ದು, ಅಂಡವೃತ್ತಾಕಾರವುಳ್ಳವೂ ಮೊನಚು ತುದಿಯುಳ್ಳವೂ ಆಗಿವೆ. ಇವುಗಳ ಮೇಲ್ಮೈ ನಯ, ಅಂಚು ಗರಗಸದಂತೆ. ಈ ಮರ ಆಗಸ್ಟ್‌ನಿಂದ ಸೆಪ್ಟೆಂಬರ್ ವರೆಗೆ ಹೂ ಬಿಡುತ್ತದೆ. ಹೂಗೊಂಚಲು ಸಂಕೀರ್ಣ ಮಾದರಿಯದು. (ಪ್ಯಾನಿಕಲ್); ಎಲೆಗಳ ಕಂಕುಳಲ್ಲಿ ಜೋಡಣೆಗೊಂಡಿವೆ. ಪುಷ್ಪಪತ್ರಗಳು ಒರಟಾಗಿಯೂ ನೀಳವಾಗಿಯೂ ಇದ್ದು ಬಟ್ಟಲಿನ ಆಕಾರದಲ್ಲಿ ಜೋಡಣೆಯಾಗಿವೆ; ಅವುಗಳ ಅಂಚು ಅಸ್ಫುಟವಾದ ಹಲ್ಲುಗಳಿಂದ ಕೂಡಿವೆ. ದಳಗಳ ಸಂಖ್ಯೆ 4; ಬಣ್ಣ ಹಸುರು ಮಿಶ್ರಿತ ಹಳದಿ. ಇದಲ್ಲದೆ ದಳಗಳ ಒಳಭಾಗ ನುಣುಪಾಗಿಯೂ ಹೊರಭಾಗ ಮೃದುವಾದ ತುಪ್ಪುಳಗಳಿಂದ ಆವೃತವಾಗಿಯೂ ಇದೆ. ಕೇಸರಗಳ ಸಂಖ್ಯೆ 8. ಅಂಡಾಶಯ 4

ಕಾರ್ಪೆಲುಗಳನ್ನೊಳಗೊಂಡಿದೆ. ಬುಡದಲ್ಲಿ ಉದ್ದವಾದ ಮೃದುಗೂದಲಿನ ಹೊದಿಕೆಯಿದೆ. ಪ್ರತಿಕೋಶದಲ್ಲಿಯೂ ಎರಡೆರಡು ಅಂಡಕಗಳಿವೆ. ಶಲಾಕಾಗ್ರ ಮೊಟಕಾಗಿದ್ದು ಶಲಾಕೆ ಅರ್ಧವೃತ್ತಾಕಾರವಾಗಿದೆ. ಕಾಯಿ ಸಂಪುಟಮಾದರಿಯದು. ಹಣ್ಣುಗಳು ಮಾಗಿದಾಗ ಕಿತ್ತಳೆಬಣ್ಣಕ್ಕೆ ತಿರುಗುತ್ತವೆ. ಒಳಗೆ ಹೊಳೆಯುವ ಊದಾಬಣ್ಣದ ದೊಡ್ಡ ಗಾತ್ರದ 4 ಬೀಜಗಳಿವೆ.

ಈ ಮರದ ರಚನೆ ಇದೇ ಜಾತಿಯ ಬಿಳಿಬೂಡ್ಲಿಗೆಯನ್ನು (ಡೈ. ಮಲಬಾರಿಕಮ್) ಹೋಲುತ್ತದೆ. ಇದರ ತೊಗಟೆಯಲ್ಲಿ ಸುಮಾರು ಶೇ. 10–15 ಭಾಗದಷ್ಟು ಟ್ಯಾನಿನ್ ಇರುತ್ತದೆ. ಈ ಮರದ ರಸಕಾಷ್ಠದ ಬಣ್ಣ ಊದಾ ಮತ್ತು ಚೇಗಿನ ಬಣ್ಣ, ಕೆಂಪುಮಿಶ್ರಿತ ಕಂದು. ಇದು ಸಾಧಾರಣ ಗಟ್ಟಿಯಾದ, ಭಾರವಾದ ಚೌಬೀನೆಗಳಲ್ಲೊಂದು. ಈ ಮರ ಹೊರಗಿನ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುವಂತಿದ್ದು ಗೆದ್ದಲು ಮತ್ತು ಕೊರೆಯುವ ಹುಳುಗಳ ಹಾವಳಿಯನ್ನು ತಡೆಯುವಂಥದೂ ಆಗಿದೆ. ಈ ಮರ ಬಹುಪಾಲು ತೇಗದ ಮರವನ್ನು ಹೋಲುತ್ತದೆ.

ಮರದ ದಿಮ್ಮಿಯನ್ನು ಪೆಟ್ಟಿಗೆ, ದೋಣಿಗಳ ತಯಾರಿಕೆಯಲ್ಲಿಯೂ ಪೀಪಾಯಿ ಸರಕುಗಳ ಉತ್ಪಾದನೆಯಲ್ಲೂ ಉಪಯೋಗಿಸುತ್ತಾರೆ. ಅಲ್ಲದೆ ಪೀಠೋಪಕರಣಗಳ ತಯಾರಿಕೆಯಲ್ಲಿಯೂ ಬಳಸುವುದುಂಟು. (ಕೆ.ಎಸ್.ಜಿ.)

**ಕಾಡುಗುಂಬಳ :** ಮಧ್ಯಮ ಪ್ರಮಾಣದ, ಹರಡಿನ ಕೊಂಬೆಗಳ, ಅಸ್ಥಿರ ಪರ್ಣದ ಮರ (ಟ್ರೀವಿಯ ನ್ಯೂಡಿಫ್ಲೋರ). ಬಿಸಿಲಿನ ಆಸೆ ಹೆಚ್ಚು. ಮೈಸೂರಿನ ಉತ್ತರ ಕನ್ನಡ, ಶಿವಮೊಗ್ಗ ಕೊಡಗು ಜಿಲ್ಲೆಗಳ ತೇವಮಯ ಪ್ರದೇಶಗಳಲ್ಲಿ, ನದೀದಡಗಳಲ್ಲಿ ಕಾಣಬರುತ್ತದೆ. ಅನುಕೂಲ ವಾತಾವರಣದಲ್ಲಿ ಕಾಂಡ ನೇರವಾಗಿಯೂ ಎತ್ತರವಾಗಿಯೂ ಬೆಳೆಯುತ್ತದೆ. ಬುಡದಲ್ಲಿ ಆನಿಕೆಗಳಿವೆ. ಪರಸ್ಪರಾಭಿಮುಖವಾದ ಎಲೆಗಳಿಗೆ ಉದ್ದನೆಯ ತೊಟ್ಟಿದೆ. ಎಲೆಗಳು ಹೃದಯಾಕಾರದಲ್ಲಿದ್ದು ಶಿವನ್ನಿ ಮರದ ಎಲೆಗಳನ್ನು ಹೋಲುತ್ತವೆ. ಡಿಸೆಂಬರ್ ತಿಂಗಳ ಸುಮಾರಿಗೆ ಎಲೆ ಉದುರಿ, ಜನವರಿ ಮಾರ್ಚಿಯಲ್ಲಿ ಹೊಸ ಚಿಗುರು ಬರುವುದು. ಕಾಯಿ ಜುಲೈನಲ್ಲಿ ಮಾಗುವುದು. ಬೀಜ ಪ್ರಸಾರ ನೀರಿನ ಮೂಲಕ. ಬೀಜ ಬಿತ್ತಿ ಸಸ್ಯವನ್ನು ಬೆಳೆಸಬಹುದು. ಕತ್ತರಿಸಿದಾಗ ಚೆನ್ನಾಗಿ ಚಿಗುರುವುದು. ಬೇರುಸಸ್ಯಗಳು ಹುಟ್ಟುವುದರ ಮೂಲಕವೂ ಸಂತಾನಾಭಿವೃದ್ಧಿ ಆಗುತ್ತದೆ. ಚೌಬೀನೆಯ ಬಣ್ಣ ಕೆನೆಮಿಶ್ರ ಬಿಳುಪು. ಹೆಚ್ಚು ಎದ್ದುಕಾಣುವುದಿಲ್ಲ, ಹದಮಾಡಲು ಸುಲಭ. ಸೀಳುವುದಾಗಲೀ ಡೊಂಕಾಗುವುದಾಗಲೀ ಇಲ್ಲ. ಹಸಿಮರ ಬೂಷ್ಟು, ಅಣಬೆ, ಕೀಟಪೀಡೆಗಳಿಗೆ ಬೇಗ ತುತ್ತಾಗುವುದು. ಬಲಿತ ಗಿಡವೂ ಅಷ್ಟು ಶಕ್ತಿಯುತವಲ್ಲ. ಒಟ್ಟಿನಲ್ಲಿದು ಬಾಳಿಕೆ ಮರವಲ್ಲ. ಆದರೆ ರಕ್ಷಣೆ ಸುಲಭ. ಕೊಯ್ತವೂ ಸುಲಭ. ತೆಳುಪದರವನ್ನು ಸುಲಭವಾಗಿ ತೆಗೆಯಬಹುದು. ಹಗುರವಾಗಿರುವುದರಿಂದ ಭಾಂಗಿಪೆಟ್ಟಿಗೆ, ಬೆಂಕಿಕಡ್ಡಿ ತಯಾರಿಕೆಗೆ ಉಪಯುಕ್ತ. (ಎ.ಕೆ.ಎಸ್.)

**ಕಾಡು ಗುಬ್ಬಚ್ಚಿ :** ಫ್ರಿಂಜಿಲ್ಲಿಡೀ ಕುಲದ ಜಿಮ್ನೋರಿಸ್ ಜಾತಿಯ ಒಂದು ಪಕ್ಷಿ. (ಜಿಮ್ನೋರಿಸ್ ಗ್ಸ್ಯಾಂತಸ್ ಗ್ಸ್ಯಾಂತಸ್). ಸಾಮಾನ್ಯವಾಗಿ ಈ ಗುಬ್ಬಚ್ಚಿ ಮೈದಾನ ಪ್ರದೇಶಗಳಲ್ಲಿ ವಾಸಮಾಡುತ್ತದೆ. ಸುಮಾರು 4,500′ ಎತ್ತರ ಇರುವ ಬೆಟ್ಟಗಳಿಗೂ ಹೋಗುವುದುಂಟು. ಗುಂಡುಗುಬ್ಬಚ್ಚಿಯ ಉದ್ದ ಸುಮಾರು 6", ರೆಕ್ಕೆಯ ಅಳತೆ 3.25". ಗುಬ್ಬಚ್ಚಿಯ ದೇಹದ ಮೇಲ್ಭಾಗ ಕಂದು ಬೂದುಬಣ್ಣ. ಇದರ ಕೊಕ್ಕು ಕಪ್ಪು. ಕಾಲುಗಳು ಮಾಸಲು ಕಂದು ಬೂದು. ಭುಜಗಳು ಮತ್ತು ತಳ ಹೊದಿಕೆಗಳು ದಟ್ಟಕೆಂಗಂದು. ರೆಕ್ಕೆಗಳಿಗೆ ಎರಡು ಬಿಳಿಪಟ್ಟೆಗಳಿಂದ ಕೂಡಿದ ಕಂದು ಬಣ್ಣವಿದೆ. ಗಡ್ಡ ಮತ್ತು ಪುಕ್ಕದ ತಳಭಾಗದ ಹೊದಿಕೆಯ ಬಣ್ಣ ಬಿಳುಪು. ದೇಹದ ಉಳಿದ ತಳಭಾಗದ ಗರಿಗಳು ಬೂದು ಅಥವಾ ಕಂದು ಬಿಳುಪು. ಉದರ ಭಾಗ ಹಾಗು ತೆರಪು ಭಾಗಗಳು ಬಿಳುಪು. ಒಂದು ಪ್ರಕಾಶಮಾನವಾದ ಹಳದಿ ಚುಕ್ಕೆ ಕುತ್ತಿಗೆಯ ಮಧ್ಯೆ ಇರುವುದರಿಂದ ಇದನ್ನು ಹಳದಿ ಕುತ್ತಿಗೆ ಗುಬ್ಬಚ್ಚಿ ಎಂದು ಕರೆಯುತ್ತಾರೆ. ಹೆಣ್ಣು ಎಲ್ಲ ರೀತಿಯಲ್ಲೂ ಗಂಡನ್ನು ಹೋಲುತ್ತದೆ. ಆದರೆ ಅದರ ಕುತ್ತಿಗೆಯಲ್ಲಿರುವ ಚುಕ್ಕೆ ಮತ್ತು ಭುಜ ಭಾಗಗಳಲ್ಲಿರುವ ಬಣ್ಣ ಅಷ್ಟೊಂದು ಪ್ರಕಾಶಮಾನವಾಗಿರುವುದಿಲ್ಲ.

ಹುಲ್ಲು ಮತ್ತು ಗರಿಗಳನ್ನು ಕೂಡಿಸಿ ಮರದ ಪೊಟರೆಯಲ್ಲಿ ಕಾಡುಗುಬ್ಬಚ್ಚಿ ತನ್ನ ಗೂಡನ್ನು ಕಟ್ಟುತ್ತದೆ. ಅದು ಮರಿ ಮಾಡುವ ಕಾಲ ಏಪ್ರಿಲ್ ನಿಂದ ಜುಲೈ ತಿಂಗಳ ವರೆಗೆ. ಹೆಣ್ಣು ಸುಮಾರು 3 ರಿಂದ 4 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಬಣ್ಣ, ಕುರುವಿನಾಕಾರದ ಚುಕ್ಕೆಗಳನ್ನೊಳಗೊಂಡ ದಟ್ಟ ಕಂದು ಮಿಶ್ರಿತ ತಿಳಿನೀಲಿ ಹಸಿರು. ಮೊಟ್ಟೆ ಮಂದವಾಗಿರುವ ಕಡೆ ದಟ್ಟವಾದ ಬಣ್ಣವಿದೆ. ಕೆಲವು ಮೊಟ್ಟೆಗಳಿಗೆ ಕೆಂಪು–ಕಂದು ಕಲೆಗಳಿಂದ ಮಾಡಿದ ಕೆನೆಬಣ್ಣವಿದೆ. ಗುಬ್ಬಚ್ಚಿಯ ಮೊಟ್ಟೆಗಳು ಸರಾಸರಿ ಅಳತೆ 0.7–0.54 ಅಂಗುಲ. (ಕೆ.ಎಂ.ವಿ.)

**ಕಾಡುಗೋದಿ :** ಫ್ಯಾಗೋಪೈರಮ್ ಎಸ್ಕುಲೆಂಟಮ್ ಎಂಬ ವೈಜ್ಞಾನಿಕ ಹೆಸರುಳ್ಳ ಒಂದು ಏಕವಾರ್ಷಿಕ ಮೂಲಿಕ ಸಸ್ಯ (ಬಕ್ ಹ್ವೀಟ್). ಪಾಲಿಗೊನೇಸೀ ಕುಟುಂಬಕ್ಕೆ ಸೇರಿದೆ. ಯುರೋಪ್ ಮತ್ತು ಏಷ್ಯಗಳ ಮೂಲವಾಸಿ ಇದು. ಅಮೆರಿಕ, ರಷ್ಯ, ಫ್ರಾನ್ಸ್‌ಗಳಲ್ಲಿ ವಿಶೇಷವಾಗಿ ಬೆಳೆಸುತ್ತಾರೆ. ಭಾರತದಲ್ಲಿ ಇದೂ ಮತ್ತು ಇದನ್ನು ಹೋಲುವ ಇನ್ನೆರಡು ಪ್ರಭೇದಗಳೂ (ಫ್ಯಾ. ಟಾಟಾರಿಕಮ್, ಫ್ಯಾ. ಸೈಮೋಸಮ್) ಬೆಳೆಯುತ್ತವೆ. ತೇವಪೂರಿತ ತಂಪು ಪ್ರದೇಶಗಳಲ್ಲಿ ಇದು ಹುಲುಸಾಗಿ ಬೆಳೆಯುತ್ತದೆ. ಅಂತೆಯೆ ಹಿಮಾಲಯ, ಖಾಸಿ ಬೆಟ್ಟಗಳು ಮುಂತಾದೆಡೆ ಹೇರಳವಾಗಿವೆ. ನೀಲಗಿರಿ ಬೆಟ್ಟಗಳಲ್ಲೂ ಅಲ್ಪ ಪ್ರಮಾಣದಲ್ಲಿ ಬೆಳೆಸುತ್ತಾರೆ.

ಇದು ಶೀಘ್ರವಾಗಿ ಫಸಲನ್ನು ಕೊಡುವ ಬೆಳೆ. ಕನ್ನೆ ನೆಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮಣ್ಣು ಸಡಿಲವಾಗಿ ಕೊರೆದು ಹೋಗುವ ಭೂಮಿಗಳಲ್ಲಿ ಇದನ್ನು ಬೆಳೆಸಿದರೆ ಮಣ್ಣಿನ ಸವೆತವನ್ನು ತಡೆಯುತ್ತದೆ. ಆದ್ದರಿಂದ ಇದನ್ನು ಮಣ್ಣಿನ ಸವೆತ ತಡೆಗಟ್ಟುವ ಸಾಧನವನ್ನಾಗಿಯೂ ಬೆಳೆಸುತ್ತಾರೆ. ಗಿಡಗಳಿಂದ ಹಸುರು ಗೊಬ್ಬರವನ್ನೂ ತಯಾರಿಸಬಹುದು. ಮುಖ್ಯವಾಗಿ ಕಾಡುಗೋದಿ ಆಹಾರಕ್ಕಾಗಿ ಅಥವಾ ದನಗಳ ಮೇವಿಗಾಗಿ ಬೆಳೆಸುವ ಬೆಳೆ.

ಫ್ಯಾಗೋಪೈರಮ್–ಎಸ್ಕುಲೆಂಟಮ್

ಉತ್ತರ ಭಾರತದಲ್ಲಿ ಇದನ್ನು ಸಾಮಾನ್ಯವಾಗಿ ಜುಲೈ ತಿಂಗಳಿನಲ್ಲಿ ಬಿತ್ತನೆಮಾಡಿ ಅಕ್ಟೋಬರ್ ತಿಂಗಳಿನಲ್ಲಿ ಕೊಯಿಲು ಮಾಡುತ್ತಾರೆ. ನೀಲಗಿರಿಯಲ್ಲಿ ಏಪ್ರಿಲ್ ತಿಂಗಳಲ್ಲಿ ಬಿತ್ತಿ ಆಗಸ್ಟ್ ತಿಂಗಳಲ್ಲಿ ಕೊಯಿಲು ಮಾಡುತ್ತಾರೆ. ನವೆಂಬರ್–ಜನವರಿ ಕಾಲಗಳಲ್ಲಿ ಇದು ಬೆಳೆಯುವುದಿಲ್ಲ. ಎಕರೆಗೆ 40 ರಿಂದ 60 ಪೌಂಡು ಬೀಜವನ್ನು ಬಿತ್ತನೆಗೆ ಉಪಯೋಗಿಸಬೇಕು. ಸುಮಾರು 500 ರಿಂದ 1,200 ಪೌಂಡು ಧಾನ್ಯ ಇಳುವರಿ ಬರುತ್ತದೆ.

ಕಾಡುಗೋದಿ ಸುಮಾರು 3′ ರಿಂದ 5′ ಎತ್ತರ ಬೆಳೆಯುತ್ತದೆ. ಎಲೆಗಳ ಉದ್ದ 1" ರಿಂದ 3". ಹೂಗೊಂಚಲು ಎಲೆಗಳ ಕಂಕುಳಲ್ಲಿ ಅಥವಾ ಕಾಂಡದ ತುದಿಯಲ್ಲಿ ಹುಟ್ಟುತ್ತದೆ. ಹೂ ಬಿಳಿಪು, ನೇರಳೆ ವರ್ಣ ಮುಂತಾದ ಬಣ್ಣಗಳಲ್ಲಿದ್ದು ಸುವಾಸನಾ ಭರಿತವಾಗಿರುತ್ತದೆ. ಸ್ವಪರಾಗಾರ್ಪಣೆಗೆ ಎಡೆಯೇ ಇಲ್ಲ. ಕಾಯಿ ಶಂಕುವಿನ ಆಕಾರದಲ್ಲಿದೆ. ಸುಮಾರು 0.2" ರಿಂದ 0.4" ಉದ್ದವಿರುತ್ತದೆ. ಬೂದು ಬಣ್ಣ ಅಥವಾ ಕಂದು ಬಣ್ಣವಾಗಿರುತ್ತದೆ. ಬೀಜಗಳಲ್ಲಿ ಭ್ರೂಣಾಹಾರ ಇದೆ.

ಬೀಜಗಳಿಂದ ಹಿಟ್ಟುಮಾಡಿ ರೊಟ್ಟಿ, ಅಂಬಲಿ ಮುಂತಾದ ಆಹಾರವನ್ನು ತಯಾರಿಸುತ್ತಾರೆ. ಎಳೆಕಾಂಡ ಮತ್ತು ಎಲೆಗಳನ್ನು ತರಕಾರಿಯಾಗಿ ಉಪಯೋಗಿಸಬಹುದು. ಅಮೆರಿಕ ಮತ್ತು ರಷ್ಯ ದೇಶಗಳಲ್ಲಿ ಧಾನ್ಯವನ್ನು ಕೋಳಿಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ. ಹಿಟ್ಟನ್ನು ಗೋದಿ, ಅಕ್ಕಿ, ಮುಸುಕಿನ ಜೋಳಗಳ ಹಿಟ್ಟಿನೊಡನೆಯೊ ಹಾಲುಪುಡಿಯೊಡನೆಯೊ ಮಿಶ್ರಮಾಡಿ ಸಮ್ಮಿಶ್ರ ಆಹಾರವಾಗಿ ಅಮೆರಿಕದಲ್ಲಿ ಮಾರಾಟ ಮಾಡುತ್ತಾರೆ.

ಬೀಜದಲ್ಲಿ ಪೋಷಕಾಂಶಗಳು ಹೇರಳವಾಗಿವೆ. ಇದರಲ್ಲಿ ಶೇ. 11.3ರಷ್ಟು ತೇವಾಂಶ, 10.3 ಪ್ರೋಟೀನ್, 2.4 ಮೇದಸ್ಸು, 2.4 ಲವಣಾಂಶಗಳೂ 8.6 ನಾರೂ 65.0 ಶರ್ಕರಪಿಷ್ಟಗಳೂ 0.07 ಸುಣ್ಣ, 0.30 ರಂಜಕ, 13.2 ಮಿ.ಗ್ರಾಂ ಕಬ್ಬಿಣ ಇವೆ. ಜೊತೆಗೆ ಬಿ ವಿಟಮಿನ್, ನಿಕೋಟಿನಿಕ್ ಆಮ್ಲ, ತಾಮ್ರ, ನಿಕಲ್, ಜಿಂಕ್, ಅಯೋಡೀನ್ ರೈಬೋಫ್ಲೇವಿನ್ ಮುಂತಾದ ಪದಾರ್ಥಗಳೂ ಇವೆ. ಇದರಲ್ಲಿರುವ ಪ್ರೋಟೀನ್ ಅಂಶದಲ್ಲಿ

ಅನೇಕ ಮುಖ್ಯ ಅಮೈನೋ ಆಮ್ಲಗಳಿವೆ. ಇವುಗಳಲ್ಲಿ ಲೈಸಿನ್ ಎಂಬುದು ಬಹಳ ಮುಖ್ಯವಾದುದು.

ಹಿಟ್ಟನ್ನು ಮದ್ಯಸಾರ ಮತ್ತು ಬ್ರೆಡ್‌ತಯಾರಿಕೆ ಮುಂತಾದವುಗಳಲ್ಲಿನ ರಾಸಾಯನಿಕ ಕ್ರಿಯೆಗಾಗಿ ಉಪಯೋಗಿಸಬಹುದು. ಹೊಟ್ಟಿನಿಂದ ಬಣ್ಣವನ್ನು ತಯಾರಿಸುತ್ತಾರೆ. ಹೂಗಳಲ್ಲಿ ಮಕರಂದ ಹೆಚ್ಚಾಗಿರುವುದರಿಂದ ಈ ಗಿಡವನ್ನು ಜೇನುಸಾಕಣೆಗಾಗಿ ರಷ್ಯ ಮತ್ತು ಅಮೆರಿಕ ದೇಶಗಳಲ್ಲಿ ಹೇರಳವಾಗಿ ಬೆಳೆಸುತ್ತಾರೆ. ಇದರ ಜೇನುತುಪ್ಪ ಅತಿ ಶ್ರೇಷ್ಠ ವರ್ಗದ್ದೆಂದು ಹೇಳಲಾಗುತ್ತದೆ. ಬೀಜಗಳಿಂದ ರೂಟಿನ್ ಎಂಬ ರಾಸಾಯನಿಕ ವಸ್ತುವನ್ನು ತೆಗೆಯುತ್ತಾರೆ. ಇದು ಹರಳು ರೂಪದಲ್ಲಿರುವ ಹಳದಿ ಬಣ್ಣದ ವಸ್ತು. ಇದನ್ನು ರಕ್ತನಾಳಗಳ ಸಿಡಿತ, ಮೂತ್ರಪಿಂಡಗಳಲ್ಲಿನ ರಕ್ತಸ್ರಾವ ಮುಂತಾದ ರೋಗಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ. ಕಾಡುಗೋದಿಯನ್ನು ಹೆಚ್ಚಾಗಿ ಸೇವಿಸುವುದರಿಂದ ಕೆಲವು ಪ್ರಾಣಿಗಳಲ್ಲಿ ಫ್ಯಾಗೋಪೈರಿಸಂ ಎಂಬ ರೋಗವುಂಟಾಗುತ್ತದೆ. ಮನುಷ್ಯರಲ್ಲಿ ಇದರ ಅಧಿಕ ಸೇವನೆಯಿಂದ ಪೈತ್ಯವುಂಟಾಗುತ್ತದೆ. ಕೆಲವರಿಗೆ ಮೈಮೇಲೆ ಬೊಬ್ಬೆಗಳಾಗುವುದೂ ಉಂಟು. (ಎಂ.ಪಿ.ಆರ್.)

**ಕಾಡು ಚೆಂಡು ಹೂ :** ಕಾಡು ಚೆಂಡು ಹೂವಿನ ಮೈನೂಟಸ್ ಪ್ರಭೇದವು ಅತಿ ಹೆಚ್ಚಿನ ಸುಗಂಧವನ್ನು ಹೊಂದಿದೆ. ಪಶ್ಚಿಮ ಹಿಮಾಲಯದ 1000 ರಿಂದ 2500 ಮೀ ಎತ್ತರ ಪ್ರದೇಶಗಳಲ್ಲಿ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ ಮತ್ತು ಜಮ್ಮು, ಕಾಶ್ಮೀರಗಳಲ್ಲಿ ಈ ಬೆಳೆಯನ್ನು ಹೇರಳವಾಗಿ ಕಾಣಬಹುದಾಗಿದೆ. ಇದು ಒಂದು ವಾರ್ಷಿಕ ಬೆಳೆ. ಇದರಿಂದ ತೆಗೆದ ಸುಗಂಧ ತೈಲವನ್ನು ಸೌಂದರ್ಯವರ್ಧಕಗಳಲ್ಲಿ, ಖಾದ್ಯವಸ್ತುಗಳನ್ನು ಪರಿಮಳಗೊಳಿಸಲು ಉಪಯೋಗಿಸಲಾಗುತ್ತದೆ. ಸುಗಂಧ ತೈಲ ಪ್ರಮುಖವಾಗಿ ಮೊನೋಟರ್ಪೀನ್ ಕೀಟೋನ್ಗಳಾದ ಡೈಹೈಡ್ರೋ ಟಾಜಟೋನ್, ಟಾಜಟೋನ್ ಮತ್ತು ಆಸಿಮಿನೋನ್ ಹೊಂದಿರುವುದರಿಂದ ಸೌಂದರ್ಯವರ್ಧಕಗಳ ತಯಾರಿಕೆಯಲ್ಲಿ ಹೆಚ್ಚಿನ ಬೇಡಿಕೆಯಿದೆ. ಇದು ಔಷಧೀಯ ಗುಣಗಳನ್ನು ಹೊಂದಿರುವುದರಿಂದ ಸಸ್ಯದ ಕಷಾಯವನ್ನು ಸ್ನಾಯು ಸೆಳೆತ, ನೆಗಡಿ ಮತ್ತು ಅಸ್ತಮಾದ ಉಪಶಮನಕ್ಕಾಗಿ ಉಪಯೋಗಿಸುತ್ತಾರೆ.

ಚೆಂಡು ಹೂವನ್ನು ಸುಲಭವಾಗಿ ನೀರು ಬಸಿದು ಹೋಗುವಂತಹ ಮಣ್ಣಿನಲ್ಲಿ ಬೆಳೆಸಬಹುದು. ರಸಸಾರ 6.5 ರಿಂದ 7.5ರವರೆಗೆ ಇರುವ ಮರಳು ಮಿಶ್ರಿತ ಗೋಡು ಮಣ್ಣು ಅತಿ ಸೂಕ್ತ. ತೀಕ್ಷ್ಣ ಹವಾಮಾನ ಸೂಕ್ತವಲ್ಲ. ಆದಾಗ್ಯೂ ಬೇಸಗೆ, ಚಳಿಗಾಲ ಹಾಗೂ ಮಳೆಗಾಲದಲ್ಲೂ ಬೆಳೆಯಬಹುದು. ತೀವ್ರ ತಾಪಮಾನ ಅಥವಾ ಅತಿ ಶೀತಲ ವಾತಾವರಣವು ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ವಾಣಿಜ್ಯವಾಗಿ ಬೆಳೆಯಲು ಮೇ–ನವೆಂಬರ್ ಅಥವಾ ಜೂನ್–ನವೆಂಬರ್ ತಿಂಗಳುಗಳು ಸೂಕ್ತವಾದವು. ಅರ್ಧಭಾಗ ಸಾರಜನಕ ಮತ್ತು ಪೂರ್ತಿ ಭಾಗ ಕೊಟ್ಟಿಗೆ ಗೊಬ್ಬರ, ರಂಜಕ ಮತ್ತು ಪೊಟ್ಯಾಷ್‌ಗಳನ್ನು ಮೂಲ ಗೊಬ್ಬರವಾಗಿ ನಾಟಿಗೆ ಮೊದಲೇ ಭೂಮಿಗೆ ಸೇರಿಸುವುದು. ಉಳಿದ ಅರ್ಧಭಾಗ ಸಾರಜನಕವನ್ನು 2 ಸಮ ಕಂತುಗಳಲ್ಲಿ ಮೊಳಕೆಯೊಡೆದಾಗ ಒಮ್ಮೆ ಹಾಗೂ 48 ದಿನಗಳ ನಂತರ ಮೇಲುಗೊಬ್ಬರವಾಗಿ ಕೊಡಬಹುದು. ಭೂಮಿಯನ್ನು 2=3 ಬಾರಿ ಚೆನ್ನಾಗಿ ಉಳುಮೆ ಮಾಡಿ, ನೇರವಾಗಿ ಬೀಜಗಳನ್ನು ಬಿತ್ತನೆ ಮಾಡುವುದು ಅಥವಾ ಸಸಿ ಮಡಿಗಳಲ್ಲಿ ಸಸಿ ಬೆಳೆಸಿ ನಾಟಿ ಮಾಡುವುದು. ಸಸಿ ಬೆಳೆಸಿ ನಾಟಿ ಮಾಡುವುದರಿಂದ ಸ್ವಲ್ಪ ಹೆಚ್ಚಿಗೆ ವೆಚ್ಚ ತಗಲಿದರೂ ಇದರಿಂದ ಉತ್ತಮವಾದ ಸಸ್ಯ ಬೆಳವಣಿಗೆ ಸಾಧ್ಯ. ಒಂದು ತಿಂಗಳ ಸಸಿಗಳು (3–4 ಎಲೆಗಳಿರುವ ಸಸಿಗಳು) ನಾಟಿ ಮಾಡಲು ಸೂಕ್ತವಾದವು. ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ 30 ಅಥವಾ 20 ಸೆಂಮೀ ಅಂತರದಲ್ಲಿ ಸಸಿಗಳನ್ನು ನಾಟಿಮಾಡಿದರೆ ಉತ್ತಮ ಇಳುವರಿ ಲಭ್ಯ. ನಾಟಿ ಮಾಡಿದ ಮೊದಲನೆಯ ವಾರ ಪ್ರತಿ ಎರಡು ದಿನಕ್ಕೊಮ್ಮೆ ಕೊಡಬೇಕು. ನಂತರ ಪ್ರತಿ 4–6 ದಿನಕ್ಕೊಮ್ಮೆ ನೀರು ಒದಗಿಸಬೇಕು. ಮೊಗ್ಗು ಬಿಡುವಾಗ ತಪ್ಪದೆ ನೀರು ಕೊಡಬೇಕು. ಚೆಂಡು ಹೂ ಬೇಸಾಯದಲ್ಲಿ ಕಳೆಗಳ ಬಾಧೆ ಮಳೆಗಾಲದಲ್ಲಿ ಅಧಿಕವಾಗುತ್ತದೆ. ಬೆಳೆ ನಾಟಿ ಮಾಡಿದ ಅನಂತರ, ಬೆಳೆಗಿಂತ ಕಳೆಗಳು ಬಿರುಸಾಗಿ ಬೆಳೆದು ಚೆಂಡು ಹೂವಿನ ಬೆಳವಣಿಗೆಯನ್ನು ನಿಧಾನಗೊಳಿಸುತ್ತವೆ. ಆದ್ದರಿಂದ ಈ ಬೆಳೆಯ ಅವಧಿಯಲ್ಲಿ ಹಲವು ಬಾರಿ ಕಳೆ ತೆಗೆಯಬೇಕು.

ಸಾಮಾನ್ಯವಾಗಿ ಈ ಬೆಳೆಗೆ ಅಧಿಕವಾಗಿ ಬಾಧಿಸುವಂತಹ ಯಾವುದೇ ರೋಗಗಳು ಹಾಗೂ ಕೀಟಗಳು ಕಂಡುಬಂದಿಲ್ಲ. ಆದಾಗ್ಯೂ ಮಳೆಗಾಲದ ಅನಂತರ ವೈರಸ್ ರೋಗ ಬರುವುದರಿಂದ ಅದನ್ನು ಹರಡದಂತೆ ಅಂತರ್‌ವ್ಯಾಪಿ ಕೀಟನಾಶಕಗಳನ್ನು ಸಿಂಪಡಿಸುವರು. ಎಲೆ ಮತ್ತು ಭಟ್ಟಿ ಇಳಿಸಿ ಸುಗಂಧ ದ್ರವ್ಯ ತೆಗೆಯಬಹುದು. ತೈಲದ ಇಳುವರಿಯ ಕೊಯ್ಲು ಮಾಡುವ ಸಮಯ ಹಾಗೂ ಎಲೆ ಮತ್ತು ಹೂ ಹಂತದ ಮೇಲೆ ಅವಲಂಬಿತವಾಗಿರುತ್ತದೆ. ಆದುದರಿಂದ ಬೆಳೆಯನ್ನು ಪೂರ್ತಿ ಹೂ ಬಿಟ್ಟ ಸಮಯದಲ್ಲಿ ಕೊಯ್ಲು ಮಾಡಬೇಕು. ಕೊಯ್ಲು ಮಾಡುವ ಹಿಂದಿನ ರಾತ್ರಿ ಮಳೆಯಾದಲ್ಲಿ ಕೊಯ್ಲು ಮಾಡುವುದು ಸೂಕ್ತವಲ್ಲ. ಮಳೆಯಿಲ್ಲದೆ, ಬಿಸಿಲಿದ್ದಲ್ಲಿ ಉತ್ತಮ ಗುಣಮಟ್ಟದ ತೈಲ ದೊರೆಯುತ್ತದೆ. *

**ಕಾಡುಜೀರಿಗೆ :** ಸೆಂಟ್ರಾಂತೀರಂ ಆಂತೆಲ್ಮಿಂಟಿಕಂ ಅಥವಾ ವರ್‍ನೋನಿಯ ಆಂತೆಲ್ಮಿಂಟಿಕಂ ಪ್ರಭೇದನಾಮವುಳ್ಳ ಕಂಪಾಸಿಟೀ ಅಥವಾ ಆಸ್ಟರೇಸೀ ಕುಟುಂಬಕ್ಕೆ ಸೇರಿದ ಒಂದು ಮೂಲಿಕೆ ಸಸ್ಯ. ಇದು ಏಷ್ಯ, ಅಮೆರಿಕ ಮತ್ತು ಆಸ್ಟ್ರೇಲಿಯ ಖಂಡಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದನ್ನು ಸೋಮರಾಜಿ ಎನ್ನುವುದಿದೆ.

ಇದು 2'–3'ಗಳಷ್ಟು ಎತ್ತರವಾಗಿದ್ದು ಕಪ್ಪು ನೆಲದಲ್ಲಿ ಹುಲುಸಾಗಿ ಬೆಳೆಯುತ್ತದೆ. ಇದರ ಕಾಂಡ ಒರಟಾಗಿಯೂ ಗಟ್ಟಿಮುಟ್ಟಾಗಿಯೂ ಇದೆ. ರೆಂಬೆಗಳ ಮೇಲೆ ತುಪ್ಪುಳದಂಥ ರೋಮಗಳಿವೆ. ಎಲೆಗಳು ದೀರ್ಘವೃತ್ತಾಕಾರದವು, ತುದಿ ಮೊನಚು, ಅಂಚು ಗರಗಸದಂತೆ. ಎಲೆಗಳ ಮೇಲೂ ತುಪ್ಪಳದಂಥ ರೋಮಗಳಿವೆ. ಪುಷ್ಪ ಗುಚ್ಛ ಚಂಡುಮಂಜರಿ ಮಾದರಿಯದು. ಅದರಲ್ಲಿ ಸುಮಾರು 40 ಹೂಗಳಿವೆ. ಅದರ ಬುಡದಲ್ಲಿ ನೀಳವಾದ ಮೃದುವಾದ ಉಪಪತ್ರಗಳಿವೆ. ಕೆಲವು ವೇಳೆ ಇವು ವರ್ಣರಂಜಿತವಾಗಿದ್ದು ಹೂ ಗೊಂಚಲಿನ ಚೆಲುವನ್ನು ಹೆಚ್ಚಿಸುತ್ತವೆ. ಫಲ ಎಕೀನ್ ಎಂಬ ಬಗೆಯದು. ಕಾಯಿಯ ಮೇಲಿನ ಅಂಚಿನ ಸುತ್ತ ನಸುಗೆಂಪು ಬಣ್ಣದ ಬೀಜ ತುಪ್ಪುಳಿದೆ (ಪ್ಯಾಪಸ್). ಇವು ಬೀಜಪ್ರಸರಣದಲ್ಲಿ ಸಹಾಯಕವಾಗಿವೆ.

ಕಾಯಿಗಳಲ್ಲಿ ಪಾಮಿಟಿಕ್, ಓಲಿಯಿಲ್, ಲೀನೋಲಿಯಿಕ್, ಮಿರಿಸ್ಟಿಕ್, ವರ್‍ನೋಲೆಕ್ ಮುಂತಾದ ಫ್ಯಾಟಿ ಆಮ್ಲಗಳೂ ಹಳದಿಬಣ್ಣದ ಹರಳುರೂಪಕ್ಕೆ ಬದಲಾಗದ ಸಾಬೂನಿನಂಥ ವಸ್ತುವಿನಲ್ಲಿ ಕ್ರಿಮಿರೇಚಕ ಗುಣವಿದೆ. ಈ ಗುಣದಿಂದಾಗಿ ಇದು ಹಲವಾರು ಕ್ರಿಮಿಗಳ, ಮುಖ್ಯವಾಗಿ ಲಾಡಿಹುಳುಗಳ ವಿರುದ್ಧ ಹೆಚ್ಚು ಪರಿಣಾಮಕಾರಿಯೆನಿಸಿದೆ. ಇದರ ಜೊತೆಗೆ ರಸಕರ್ಪೂರ ಮತ್ತು ಮೆಗ್ನೀಸಿಯಂ ಸಲ್ಫೇಟುಗಳನ್ನು ಬೆರೆಸಿ ಉಪಯೋಗಿಸಿದಾಗ ಇದರ ಕ್ರಿಮಿರೇಚಕ ಗುಣ ಹೆಚ್ಚಾಗುತ್ತದೆ. ಅಲ್ಲದೆ ಇದನ್ನು ಮೂತ್ರಸ್ರಾವ ಉತ್ತೇಜಕವಾಗಿಯೂ ಕೆಲವು ಚರ್ಮರೋಗಗಳಿಗೂ ಚಿಗಟ ಮತ್ತು ಹೇನುಗಳ ನಿವಾರಣೆಗೂ ಉಪಯೋಗಿಸುತ್ತಾರೆ. (ಕೆ.ಎಸ್.ಜಿ.)

**ಕಾಡುತುಂಬೆಗಿಡ :** ಲೇಬಿಯೇಟೀ ಕುಟುಂಬಕ್ಕೆ ಸೇರಿದ ಲಿಯೋನೋಟಿಸ್ ನೆಪೆಟಿಫೋಲಿಯ ಎಂಬ ಶಾಸ್ತ್ರೀಯ ಹೆಸರುಳ್ಳ ಮೂಲಿಕೆ ಸಸ್ಯ. ಭಾರತದ ಉಷ್ಣವಲಯ ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದನ್ನು ಅಲಂಕಾರ ಸಸ್ಯವಾಗಿ ಬೆಳೆಸುವುದೂ ಉಂಟು.

ಇದು ಸುಮಾರು 1.2–1.8 ಮೀ ಎತ್ತರಕ್ಕೆ ಬೆಳೆಯುತ್ತದೆ. ಇದರ ಕಾಂಡ ದಪ್ಪ, ಒರಟು, ರೋಮಮಯ. ಎಲೆಗಳು ದೊಡ್ಡವು. ತೊಟ್ಟು ಉದ್ದ, ಆಕಾರ ದೀರ್ಘವೃತ್ತದಂತೆ. ಅಂಚು ಗರಗಸದಂತೆ. ಹೂಗೊಂಚಲು ಗಿಣ್ಣಿನ ಸುತ್ತ ಆವರ್ತಗಳಲ್ಲಿ ಹುಟ್ಟುತ್ತದೆ. ಹೂಗಳು ಕಿತ್ತಳೆ, ಕೇಸರಿ ಬಣ್ಣದವಾಗಿದ್ದು ಆಕರ್ಷಕವಾಗಿವೆ.

ಬೀಜಗಳಲ್ಲಿ ಆಲಿವ್ ಎಣ್ಣೆಯನ್ನು ಹೋಲುವ ಎಣ್ಣೆಯಿದೆ. ಇದರಲ್ಲಿ ಪಾಮಿಟಿಕ್, ಸ್ಟಿಯರಿಕ್, ಮಿರಿಸ್ಟಿಕ್, ಓಲಿಯಿಕ್, ಲಿನೋಲಿಯಿಕ್ ಮುಂತಾದ ಫ್ಯಾಟಿ ಆಮ್ಲಗಳು ಇವೆ. ಎಲೆ, ಪುಷ್ಪಪತ್ರ ಮತ್ತು ಹೂಗಳಲ್ಲಿ ಒಂದು ರೀತಿಯ ಕಹಿರುಚಿಯುಳ್ಳ ವಸ್ತು, ಎಣ್ಣೆ, ರೆಸಿನ್ ಮತ್ತು ರೆಸಿನಿಕ್ ಆಮ್ಲಗಳಿವೆ.

ಕಾಡುತುಂಬೆಗಿಡಕ್ಕೆ ಔಷಧೀಯ ಮಹತ್ತ್ವವೂ ಇದೆ. ಇದರ ಬೀಜಗಳನ್ನು ಮಲೇರಿಯಾ ರೋಗವನ್ನು ಗುಣಪಡಿಸಲು ಬಳಸುತ್ತಾರೆ. ಚರ್ಮರೋಗಗಳಿಗೆ, ಸುಟ್ಟುಗಾಯ ಮತ್ತು ಬೊಬ್ಬೆಗಳಿಗೆ ಈ ಗಿಡದ ಬೂದಿಯನ್ನು ಹಚ್ಚುವುದುಂಟು. ಮಡಗಾಸ್ಕರಿನಲ್ಲಿ ಈ ಗಿಡವನ್ನು ಶುದ್ಧಿಕಾರಕವಾಗಿಯೂ ಜ್ವರವನ್ನು ತಗ್ಗಿಸುವ ಔಷಧ ತಯಾರಿಕೆಯಲ್ಲೂ ವಿರೇಚಕಗಳನ್ನು ತಯಾರಿಸುವುದಕ್ಕೂ ಉಪಯೋಗಿಸುತ್ತಾರೆ. ಪೋರ್ಟೊರೀಕೊದಲ್ಲಿ ಎಲೆಗಳ ಕಷಾಯವನ್ನು ಬಲವರ್ಧಕವಾಗಿಯೂ ಬ್ರೆಜಿಲ್‌ನಲ್ಲಿ ಸಂಧಿವಾತರೋಗಗಳನ್ನು ಗುಣಪಡಿಸುವುದಕ್ಕೂ ಬಳಸುವ ರೂಢಿ ಉಂಟು. (ಎಸ್.ಆರ್.ಜಿ.)

**ಕಾಡುದಾಲ್ಚಿನ್ನಿ :** ಲಾರೇಸೀ ಕುಟುಂಬಕ್ಕೆ ಸೇರಿದ ಸಿನಮೋಮಮ್ ಟಮಾಲ ಎಂಬ ವೈಜ್ಞಾನಿಕ ಹೆಸರಿನ ನಿತ್ಯಹರಿದ್ವರ್ಣದ ಮರ. ದಾಲ್ಚಿನ್ನಿ ಅಥವಾ ಚೆಕ್ಕೆ (ಸಿನಮೋಮಮ್ ಜ಼ೀಲಾನಿಕ) ಗಿಡದ ಹತ್ತಿರ ಸಂಬಂಧಿ. ಹಿಮಾಲಯದ ಉಷ್ಣ ಹಾಗೂ ಸಮಶೀತೋಷ್ಣ ಪ್ರದೇಶಗಳ, ಬಂಗಾಳದ ಖಾಸಿ ಮತ್ತು ಜೈಂತಿಯ ಬೆಟ್ಟಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಸಿಲೆಟ್ ಜಲ್ಲೆಯ ಜೈಂತಿಯ ಪರಣಗಳಲ್ಲಿ ಸುಮಾರು 600 ಎಕರೆಗಳಷ್ಟು ತೋಟ ಪ್ರದೇಶದಲ್ಲಿ ಬೆಳೆಸುತ್ತಾರೆ. ಸುಮಾರು 25'–30' ಎತ್ತರಕ್ಕೆ ಬೆಳೆಯುವ ಮಧ್ಯಮಗಾತ್ರದ ಮರ ಇದು. ಇದರ ಕಾಂಡದ ದಪ್ಪ ಸಾಮಾನ್ಯವಾಗಿ 4'–41/2'. ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಬೀಜಗಳನ್ನು ನರ್ಸರಿಗಳಲ್ಲಿ ಮೊಳೆಯಲು ಹಾಕುತ್ತಾರೆ. 30–45 ದಿವಸಗಳಲ್ಲಿ ಮೊಳಕೆ ಬರುತ್ತದೆ. 4–5 ವರ್ಷ ವಯಸ್ಸಿನ ಸಸಿಗಳನ್ನು ನೆಡಲು ಸ್ಥಳಾಂತರ ಮಾಡುತ್ತಾರೆ. ಇವುಗಳ ಜೊತೆಗೆ ನೆರಳು ನೀಡುವ ಸಸ್ಯಗಳನ್ನು ಬೆಳೆಸುವುದು ಸಾಮಾನ್ಯ ರೂಢಿ. ಆದರೆ 8–9 ವರ್ಷಗಳಾದ ಮೇಲೆ ಈ ನೆರಳು ನೀಡುವ ಸಸ್ಯಗಳನ್ನು ಕಡಿದುಹಾಕುತ್ತಾರೆ. ಈ ಮರದ ಎಲೆ ಮತ್ತು ತೊಗಟೆ ಮುಖ್ಯವಾಗಿ ಉಪಯೋಗಕ್ಕೆ ಬರುವ ಭಾಗಗಳು. ಇವನ್ನು ಸಂಬಾರ ಪದಾರ್ಥವಾಗಿ ಉಪಯೋಗಿಸುವರು. 10 ವರ್ಷ ವಯಸ್ಸಾದ ಮರಗಳೇ ಎಲೆ ಕೊಯ್ಯಲು ಯೋಗ್ಯವಾದವು. ಎಳೆಯ ಮರಗಳಿಂದ ವರ್ಷಕ್ಕೊಮ್ಮೆ, ಸ್ವಲ್ಪ ವಯಸ್ಸಾದ ಮರಗಳಿಂದ ಎರಡು ವರ್ಷಗಳಿಗೊಮ್ಮೆ ಎಲೆಗಳನ್ನು ಕೊಯ್ಯುತ್ತಾರೆ. ಈ ಕಾರ್ಯ ಸಾಮಾನ್ಯವಾಗಿ ಅಕ್ಟೋಬರ್–ಡಿಸೆಂಬರ್ ತಿಂಗಳಿನಲ್ಲಿ ನಡೆಯುವುದು. ಒಂದು ಸಾಧಾರಣ ಗಾತ್ರದ ಮರದಿಂದ ಒಂದು ವರ್ಷಕ್ಕೆ 20–25 ಪೌಂಡುಗಳಷ್ಟು ಒಣಗಿದ ಎಲೆಯನ್ನು ಪಡೆಯಬಹುದು. ಮಾರುಕಟ್ಟೆಗೆ ಕಳುಹಿಸುವ ಮುನ್ನ 4–5 ದಿನ ಸೂರ್ಯನ ಬಿಸಿಲಿನಲ್ಲಿ ಎಲೆಗಳು ಒಣಗಬೇಕು.

ಕಾಶ್ಮೀರದಲ್ಲಿ ಈ ಮರದ ಎಲೆಗಳನ್ನು ವೀಳೆಯದೆಲೆಗಳ ಬದಲಾಗಿ ಉಪಯೋಗಿಸುವರು. ಕೆಲವು ವೇಳೆ ಬಟ್ಟೆಗಳಿಗೆ ಬಣ್ಣ ಹಾಕುವಾಗ ಅವನ್ನು ಸ್ವಚ್ಛಗೊಳಿಸುವುದಕ್ಕೆ ಇದರ ಎಲೆಗಳನ್ನು ಬಳಸುವುದೂ ಉಂಟು. ಎಲೆಗಳು ಜೀರ್ಣಕಾರಕ; ಆಮಶಂಕೆ ಮತ್ತು ಹೊಟ್ಟೆನುಲಿತಗಳನ್ನು ಗುಣಪಡಿಸಲು ಬಳಸುವರು. ಕಾಡು ದಾಲ್ಚಿನ್ನಿ ಮರದ ತೊಗಟೆ ದಾಲ್ಚಿನ್ನಿಯಂತೆಯೇ ಸುವಾಸನಾಯುಕ್ತವಾಗಿದೆ. ಆದರೆ ದಾಲ್ಚಿನ್ನಿಗಿಂತ ಸ್ವಲ್ಪ ಒರಟು. ದಾಲ್ಚಿನ್ನಿಯೊಂದಿಗೆ ಕಲಬೆರಕೆ ಮಾಡುವುದೂ ಉಂಟು. ತೊಗಟೆಯಿಂದ ತೆಳುಹಳದಿ ಬಣ್ಣದ ಚಂಚಲತೈಲವನ್ನು ತಯಾರಿಸುತ್ತಾರೆ. ಇದರಲ್ಲಿ ಶೇ. 70–85ರಷ್ಟು ಸಿನಮಿಕ್ ಆಲ್ಡಿಹೈಡುಗಳ ಕೃತಕ ಸಂಶ್ಲೇಷಣೆಯಿಂದ ಈ ಎಣ್ಣೆಯ ಬಳಕೆ ಇತ್ತೀಚೆಗೆ ಬಹಳ ಇಳಿದಿದೆ. (ಎಸ್.ಆರ್.ಜಿ.)

**ಕಾಡುನಾಯಿ :** ಕಾರ್ನಿವೊರ ಗಣದ ಕ್ಯಾನಿಡೀ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ವನ್ಯಪ್ರದೇಶವಾಸಿ ನಾಯಿಗಳಿಗಿರುವ ಸಾಮಾನ್ಯ ಹೆಸರು (ವೈಲ್ಡ್ ಡಾಗ್, ಹಂಟಿಂಗ್ ಡಾಗ್). ಪ್ರಮುಖವಾಗಿ ಏಷ್ಯದ ನಿವಾಸಿಯಾದ ಕ್ಯೂಆನ್ ಆಲ್ಪಿನಸ್, ಆಫ್ರಿಕದಲ್ಲಿ ಕಾಣಬರುವ ಲೈಕೆಯೋನ್ ಪಿಕ್ಟಸ್ ಮತ್ತು ಆಸ್ಟ್ರೇಲಿಯದಲ್ಲಿ ವಾಸಿಸುವ ಕೇನಿಸ್ ಡಿಂಗೋ ಎಂಬ ಮೂರು ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ.

ಕ್ಯೂಆನ್ ಆಲ್ಪಿನಸ್ ಎಂಬುದು ರಷ್ಯ, ಸೈಬೀರಿಯ, ಕೊರಿಯ, ಚೀನದ ಕೆಲವು ಪ್ರದೇಶಗಳು, ಭಾರತ, ಜಾವ, ಸುಮಾತ್ರ ಮತ್ತು ಆಗ್ನೇಯ ಏಷ್ಯಗಳಲೆಲ್ಲಾ ಕಾಣಬರುವ ಪ್ರಭೇದ. ಭಾರತದಲ್ಲಿ ಇದಕ್ಕೆ ದೋಲ್ ಎಂಬ ಹೆಸರಿದೆ. ಕೆಲವೆಡೆ ಇದನ್ನು ಸೀಳುನಾಯಿ ಎಂದೂ ಕರೆಯುವುದುಂಟು. ಸುಮಾರು 76–100 ಸೆಂಮೀ ಉದ್ದ ಮತ್ತು 14–21 ಕಿಗ್ರಾಂ. ತೂಕ ಇರುವ ಈ ನಾಯಿ ನೋಡುವುದಕ್ಕೆ ಸಾಕುನಾಯಿಯಂತೆಯೇ ಕಾಣುತ್ತದೆ. ಆದರೆ ಕಿವಿಗಳು ತುದಿ ಗುಂಡಗಿರುವುದರಿಂದ, ಹೆಣ್ಣುನಾಯಿಯಲ್ಲಿ 6–7 ಜೊತೆ ಮೊಲೆಗಳಿರುವುದರಿಂದ ಮತ್ತು ಕೆಳದವಡೆಯಲ್ಲಿನ ಕೊನೆಯ ದವಡೆ ಹಲ್ಲು ಇಲ್ಲದಿರುವುದರಿಂದ ಇದು ಸಾಕುನಾಯಿಗಿಂತ ಭಿನ್ನವಾಗಿದೆ. ಇದರ ಮೈಬಣ್ಣ ಆಯಾ ಪ್ರದೇಶದ ಮೇಲೆ ವ್ಯತ್ಯಾಸವಾಗುತ್ತದೆ. ಉತ್ತರ ಏಷ್ಯದ ನಾಯಿಯ ಮೈಮೇಲೆ ದಟ್ಟವಾದ ಉಣ್ಣೆಯಂಥ ಕೂದಲಿದೆ. ಭಾರತದ ನಾಯಿಗೆ ಕೂದಲು ಕಡಿಮೆ. ಎರಡು ಬಗೆಗಳಲ್ಲೂ ಬಾಲ ಹೆಚ್ಚುಕಡಿಮೆ ನರಿಯ ಬಾಲದಂತಿದೆ. ದೋಲ್‌ಗಳು ಸಾಮಾನ್ಯವಾಗಿ ಹಿಂಡುಗಳಲ್ಲಿರುತ್ತವೆ. ಒಂದೊಂದು ಹಿಂಡಿನಲ್ಲಿ 3 ರಿಂದ 30 ನಾಯಿಗಳಿರಬಹುದು. ಸಾಧಾರಣವಾಗಿ ಗುಹೆಗಳಲ್ಲೋ ಪೊದೆಗಳಲ್ಲೋ ವಾಸಿಸುವುದುಂಟು. ರಾತ್ರಿ, ಹಗಲು ಎರಡು ಕಾಲದಲ್ಲೂ ಆಹಾರ ಪ್ರಾಣಿಗಳನ್ನು ಬೇಟೆಯಾಡುವುವಾದರೂ ಸಾಮಾನ್ಯವಾಗಿ ರಾತ್ರಿ ವಿಶ್ರಮಿಸುವುದೇ ಹೆಚ್ಚು. ಇವು ಬೇಟೆಯಾಡುವುದರಲ್ಲಿ ಬಹಳ ನೈಪುಣ್ಯವನ್ನು ತೋರಿಸುತ್ತವೆ. ವಿವಿಧ ಬಗೆಯ ಎರೆಗಳನ್ನು ಇವು ಬೇಟೆಯಾಡುತ್ತವೆ. ಜಿಂಕೆ, ಕಾಡುಕುರಿ, ಕಾಡುಹಂದಿ, ಕೋಣ ಮುಂತಾದುವೇ ಪ್ರಮುಖ ಎರೆಗಳು. ಕೆಲವೊಮ್ಮೆ ಹಿಂಡು ದೊಡ್ಡದಿದ್ದಾಗ ಹುಲಿ, ಚಿರತೆ, ಕರಡಿ ಮುಂತಾದ ಹಿಂಸ್ರಪ್ರಾಣಿಗಳನ್ನು ಎದುರಿಸುವ ಧೈರ್ಯ ಮಾಡುವುದೂ ಉಂಟು. ಬೇಟೆಯಾಡುವ ಕ್ರಮ ಬಲು ವಿಶಿಷ್ಟವಾದುದು. ತಮ್ಮ ಚುರುಕಾದ ಘ್ರಾಣ ಶಕ್ತಿಯಿಂದ ಎರೆಯ ಸುಳಿವು ಹಿಡಿದು ಅದನ್ನು ಬೆನ್ನಟ್ಟುತ್ತವೆ. ಹಿಂಡಿನ ಮುಂಚೂಣಿಯಲ್ಲಿ ದೊಡ್ಡ ಗಂಡು ನಾಯಿಯೊಂದಿರುತ್ತದೆ. ಎರೆಯ ಸುಳಿವು ಸಿಕ್ಕ ತತ್‌ಕ್ಷಣ ಸಿಳ್ಳಿನಂಥ ಕೂಗಿನಿಂದ ಹಿಂಡಿನ ಉಳಿದೆಲ್ಲ ಪ್ರಾಣಿಗಳನ್ನು ಕರೆಯುತ್ತದೆ. ನಿಧಾನವಾಗಿ ಎರೆಯನ್ನು ಓಡಿಸಿಕೊಂಡು ಹೋಗಿ ಯಾವುದಾದರು ಇಕ್ಕಟ್ಟಿನ ಸ್ಥಳದಲ್ಲಿ ಅದನ್ನು ಸಿಕ್ಕಿಸಿಕೊಂಡು ಎಲ್ಲ ದಿಕ್ಕಿನಿಂದಲೂ ಸುತ್ತುವರಿಯುತ್ತವೆ. ಎರೆಯನ್ನು ಬೆನ್ನಟ್ಟುವಾಗ ಸಾಮಾನ್ಯವಾಗಿ ಯಾವ ಬಗೆಯ ಸದ್ದನ್ನೂ ಮಾಡುವುದಿಲ್ಲ. ಆದರೆ ಆಗಿಂದಾಗ ಕುಂಯಿಗುಡುವುದುಂಟು. ಮುಂದಾಳು ಮಾತ್ರ ಲಘುವಾಗಿ ಬೊಗುಳುವುದರ (ಯಾಪ್) ಮೂಲಕ ಬೇಟೆಯನ್ನು ನಿರ್ದೇಶಿಸುತ್ತದೆ. ಬಲು ಎಚ್ಚರಿಕೆಯಿಂದ ಎರೆಯನ್ನು ಸುತ್ತುವರಿದು, ಅದು ಸಾಕಷ್ಟು ಬಳಲಿದಾಗ, ಅದು ಯಾವುದೋ ಒಂದು ಕ್ಷಣ ಜೋಕೆ ತಪ್ಪಿದಾಗ ಮುಂದಾಳು ನಾಯಿ ಅದರ ಮೇಲೆ ಹಠಾತ್ತನೆ ಎರಗಿ ಅದರ ಕತ್ತಿಗೊ ಹೊಟ್ಟೆಗೊ ಬಾಯಿ ಹಾಕುತ್ತದೆ. ಇದೆ ಸಂಜ್ಞೆಯೆಂಬಂತೆ ಹಿಂಡಿನ ಉಳಿದೆಲ್ಲ ನಾಯಿಗಳು ಒಂದೇ ಬಾರಿಗೆ ಆಹಾರ ಪ್ರಾಣಿಯ ಮೇಲೆರಗಿ ಅದನ್ನು ಮುಗಿಸಿಬಿಡುತ್ತವೆ. ಇದು ಕ್ರೂರ ಎನಿಸಿದರೂ, ಚಿಕ್ಕ ಹಲ್ಲುಗಳುಳ್ಳ ಸಣ್ಣ ಪ್ರಾಣಿಗಳಾದ ಇವು ಬೇರೆ ಯಾವರೀತಿಯಿಂದಲೂ ಎರೆಯನ್ನು ಕೊಲ್ಲಲಾಗುವುದಿಲ್ಲ.

ದೋಲ್‌ಗಳ ಕೂಗು ಬೇರೆ ನಾಯಿಗಳ ಬೊಗುಳುವಿಕೆಯಂತಿಲ್ಲ. ಇವು ಊಳಿಡುವುದು, ಲಘು ಬೊಗುಳು (ಯಾಪ್), ಸಿಳ್ಳಿನಂತೆ ಕೂಗುವುದು ಮುಂತಾದುವನ್ನು ಮಾತ್ರ ಮಾಡುತ್ತವೆ. ಇವು ಮರಿ ಹಾಕುವ ಕಾಲ ಸಾಮಾನ್ಯವಾಗಿ ಜನವರಿ–ಫೆಬ್ರವರಿ ತಿಂಗಳುಗಳು. ಗರ್ಭಧಾರಣೆಯ ಅವಧಿ ಸುಮಾರು 9 ವಾರಗಳು. ಒಂದು ಬಾರಿಗೆ 2–6 ಮರಿಗಳು ಹುಟ್ಟುತ್ತವೆ. ಹುಟ್ಟಿದಾಗ ಮರಿಗಳ ಕಣ್ಣು ತೆರೆದೇ ಇರುವುದಿಲ್ಲ. ಅವುಗಳ ಚರ್ಮದ ಮೇಲೆ ಕೂದಲೂ ಇರುವುದಿಲ್ಲ. ಮರಿಗಳನ್ನು ಹೆರುವ ಸಮಯದಲ್ಲಿ ನಾಯಿಗಳು ಯಾವುದಾದರೂ ಗವಿಯನ್ನು ಸೇರಿ ಸಾಮೂಹಿಕವಾಗಿ ಮರಿ ಹಾಕುತ್ತವೆ. ಸಾಧಾರಣವಾಗಿ ಮರಿಗಳಿಗೆ ಒಂದು ವರ್ಷವಾಗುವವರೆಗೂ ತಂದೆತಾಯಿಗಳು ಅವುಗಳ ಪಾಲನೆ ಮಾಡುತ್ತವೆ. ಈ ಕಾಲದಲ್ಲಿ ಹಿಂಡು ಬೇಟೆಗೆಂದು ಹೋದಾಗ ಹೆಣ್ಣು ನಾಯೊಂದು ಮರಿಗಳ ರಕ್ಷಣೆ ಮಾಡುತ್ತದೆ. ಮರಿಗಳು ಒಂದು ವರ್ಷದಲ್ಲಿ ಪೂರ್ಣವಾಗಿ ಬೆಳೆದು ಪ್ರಬುದ್ಧಾವಸ್ಥೆ ತಲುಪುತ್ತವೆ. ಈ ನಾಯಿಗಳು ಹೊಲಗದ್ದೆಗಳಿಗೆ ನುಗ್ಗಿ ಪೈರನ್ನು ಹಾಳುಮಾಡುವ ಕಾಡುಹಂದಿಗಳನ್ನು ಕೊಂದು ಮಾನವನಿಗೆ ಉಪಕಾರಿಗಳೆನಿಸಿದ್ದರೂ ಕೆಲವೊಮ್ಮೆ ಸಾಕಿದ ಪ್ರಾಣಿಗಳನ್ನು ತಿಂದು ಹಾನಿ ಮಾಡುವುದುಂಟು. ಕಾಡುನಾಯಿಗಳನ್ನು ಪಳಗಿಸುವುದಕ್ಕಾಗುವುದಿಲ್ಲ.

ಆಫ್ರಿಕದಲ್ಲಿನ ಕಾಡುನಾಯಿಯಾದ ಲೈಕೆಯೋನ್ ಪಿಕ್ಟಸ್ ಪ್ರಭೇದದ ಪ್ರಾಣಿಗೆ ಕೇಪ್ ಹಂಟಿಂಗ್ ಡಾಗ್ ಎಂಬ ಸಾಮಾನ್ಯ ಹೆಸರಿದೆ. ಸಹಾರ ಮರುಭೂಮಿಯ ದಕ್ಷಿಣಕ್ಕಿರುವ ಪ್ರದೇಶಗಳಲ್ಲಿ ಇದು ಹೇರಳವಾಗಿವೆ. ಸಣ್ಣ ತೋಳದ ಗಾತ್ರದ ಈ ಪ್ರಾಣಿ ತನ್ನ ಹಲವಾರು ಲಕ್ಷಣಗಳಲ್ಲಿ ತೋಳವನ್ನು ಹೋಲುತ್ತದೆ. ಬಲಯುತವಾದ ದೇಹ, ನೀಳವಾದ ಕಾಲುಗಳು, ದಪ್ಪ ತಲೆ, ಬಲವಾದ ದವಡೆಗಳು, ಪೊದೆಯಂಥ ಬಾಲ– ಇದರ ಪ್ರಮುಖ ಲಕ್ಷಣಗಳು. ಇದರ ದೇಹದ ಬಣ್ಣ ಕಪ್ಪುಮಿಶ್ರಿತ ಕಂದು. ಅಲ್ಲಲ್ಲೆ ಹಳದಿ, ಕಪ್ಪು ಅಥವಾ ಬಿಳಿಯ ಬಣ್ಣದ ಮಚ್ಚೆಗಳಿವೆ. ಕಿವಿಗಳು ದೊಡ್ಡವು, ಅಂಡಾಕಾರವಾಗಿವೆ. ಹೆಚ್ಚುಕಡಿಮೆ ಕತ್ತೆಕಿರುಬದ ಕಿವಿಗಳಂತಿವೆ. ಇವುಗಳ ಜೀವನಕ್ರಮ, ಬೇಟೆಯಾಡುವ ರೀತಿ, ಸಂತಾನೋತ್ಪತ್ತಿಯ ಕ್ರಮ ಎಲ್ಲ ಹೆಚ್ಚುಕಡಿಮೆ ಭಾರತದ ಕಾಡುನಾಯಿಗಳಂತೆಯೇ. ಸಿಂಹಗಳು ಇವುಗಳ ಸ್ವಾಭಾವಿಕ ವೈರಿಗಳು.

ಆಸ್ಟ್ರೇಲಿಯದ ಕಾಡುನಾಯಿಯ ವೈಜ್ಞಾನಿಕ ಹೆಸರು ಕೇನಿಸ್ ಡಿಂಗೊ. ಸಾಮಾನ್ಯ ಹೆಸರು ಡಿಂಗೊ. ಸ್ವಲ್ಪಮಟ್ಟಿಗೆ ತೋಳವನ್ನು, ಸ್ವಲ್ಪಮಟ್ಟಿಗೆ ಸಾಕುನಾಯಿಯನ್ನು ಹೋಲುವ ಈ ಪ್ರಾಣಿ ಆಸ್ಟ್ರೇಲಿಯದ ಏಕೈಕ ಹಿಂಸ್ರಪ್ರಾಣಿ (ಕಾರ್ನಿವೋರ್). ಸಣ್ಣ ನಾಯಿಯ ಗಾತ್ರ, ಮೃದುವಾದ ಕೂದಲುಗಳು, ಪೊದೆಯಂಥ ಬಾಲ, ಚೂಪು ತುದಿಯ ನೇರವಾದ ಕಿವಿಗಳು, ಕಂದುಬಣ್ಣ, ಹೊಟ್ಟೆ, ಪಾದ ಮತ್ತು ಬಾಲದ ತುದಿಯಲ್ಲಿ ಬಿಳಿಯ ಚುಕ್ಕೆಗಳು ಇದರ ಪ್ರಮುಖ ಲಕ್ಷಣಗಳು. ಆಸ್ಟ್ರೇಲಿಯದ ಬಯಲು ಪ್ರದೇಶಗಳಲ್ಲಿ ಒಂಟಿಯಾಗಿಯೊ ಸಣ್ಣಸಣ್ಣ ಗುಂಪುಗಳಲ್ಲೊ ಬೇಟೆಯಾಡುತ್ತ ಓಡಾಡುತ್ತವೆ. ಕಾಂಗರೂಗಳು, ಮೊಲಗಳು ಇದರ ಪ್ರಧಾನ ಆಹಾರ. ಆದರೆ ಕುರಿಗಳನ್ನೂ ಬೇಟೆಯಾಡಿ ತಿನ್ನುವುದರಿಂದ ಅಲ್ಲಿನ ಜನರ ದ್ವೇಷವನ್ನು ಗಳಿಸಿವೆ. ಡಿಂಗೋಗಳನ್ನು ಪಳಗಿಸಿ ಸಾಕಬಹುದು. ಕೆಲವು ವೇಳೆ ಸಾಕುನಾಯಿಗಳೊಡನೆ ಸಂಪರ್ಕವೇರ್ಪಡಿಸಿ ಅಡ್ಡತಳಿಗಳನ್ನು ಪಡೆಯಬಹುದು. ಶುದ್ಧತಳಿಯ ಡಿಂಗೋದ ಕೂಗು ಊಳಿಡುವುದು ಮಾತ್ರ ಆಗಿದ್ದರೂ ಮಿಶ್ರತಳಿಗಳು ಡಿಂಗೋ ನಾಯಿಗಳಂತೆ ಬೊಗುಳಬಲ್ಲುದು. ಡಿಂಗೋ ವರ್ಷಕ್ಕೊಮ್ಮೆ 4–8 ಮರಿಗಳನ್ನು ಈಯುತ್ತದೆ. ಡಿಂಗೋವನ್ನು ಬಹುಪುರಾತನ ಕಾಲದಲ್ಲಿ ಮಲಯದ ಕಡೆಯಿಂದ ವಲಸೆಹೋದ ಆದಿವಾಸಿ ಜನ ಆಸ್ಟ್ರೇಲಿಯಕ್ಕೆ ಕೊಂಡೊಯ್ದರೆಂದು ಹೇಳಲಾಗಿದೆ. (ಎ.)

**ಕಾಡುಪಾಪ :** ಪ್ರೈಮೇಟ್ ಗಣದ ಲೋರಿಸಿಡೀ ಕುಟುಂಬದ ಲೋರಿಸ್ ಜಾತಿಯ ಮತ್ತು ಲೀಮರಿಡೀ ಕುಟುಂಬದ ಲೀಮರ್ ಜಾತಿಯ ಕೋತಿಗಳಿಗೆ ಇರುವ

ಸಾಮಾನ್ಯ ಹೆಸರು. ಇವುಗಳಲ್ಲಿ ಲೋರಿಸ್ ಜಾತಿಯ ಕಾಡುಪಾಪ ಭಾರತ, ಸಿಂಹಳಗಳಲ್ಲಿ ವಾಸಿಸುತ್ತದೆ. ಲೀಮರ್ ಜಾತಿಯವು ಮಡಗಾಸ್ಕರ್ ದ್ವೀಪದ ನಿವಾಸಿಗಳು.

ಲೀಮರ್ ಕಾಡುಪಾಪ ವೃಕ್ಷವಾಸಿ. ಪ್ರೈಮೇಟ್ ಗಣದ ಬಹಳ ಪ್ರಾಚೀನ ಲಕ್ಷಣಗಳನ್ನು ತೋರಿಸುತ್ತದೆ. ನೋಡುವುದಕ್ಕೆ ಅಳಿಲಿನಂತೆಯೇ ಕಾಣುತ್ತದೆ. 120–440 ಮಿಮೀ ಉದ್ದದ ಪೊದೆಪೊದೆಯಾದ ಬಾಲ, ದೊಡ್ಡ ಕಿವಿಗಳು, ತಲೆಯ ಮುಂಭಾಗದಲ್ಲಿರುವ ಪ್ರಧಾನವಾಗಿ ಕಾಣುವ ದೊಡ್ಡ ಕಣ್ಣುಗಳು–ಇದರ ಪ್ರಧಾನ ಲಕ್ಷಣಗಳು. ದೇಹದ ಮೇಲೆಲ್ಲ ಮೃದುವಾದ ಉಣ್ಣೆಯಂಥ ಕೂದಲಿವೆ. ಹಿಂಗಾಲುಗಳು ಮುಂಗಾಲು (ಕೈ)ಗಳಿಗಿಂತ ಚಿಕ್ಕವು. ಕೈಕಾಲುಗಳೆರಡರಲ್ಲೂ ರೆಂಬೆಗಳನ್ನು ಹಿಡಿಯಲು ಅನುಕೂಲವಾಗುವಂಥ, ಉಳಿದ ನಾಲ್ಕು ಬೆರಳುಗಳಿಗೆ ಎದುರಾಗಿರುವ ಹೆಬ್ಬೆರಳಿದೆ. ಕಾಲಿನ ಎರಡನೆಯ ಬೆರಳಿನಲ್ಲಿ ಪಂಜವಿದೆ. ಉಳಿದ ಬೆರಳುಗಳಲ್ಲಿ ಉಗುರುಗಳಿವೆ. ಸಾಮಾನ್ಯವಾಗಿ ಇವು 10–20 ಪ್ರಾಣಿಗಳನ್ನೊಳಗೊಂಡ ಗುಂಪುಗಳಲ್ಲಿ ವಾಸಿಸುತ್ತವೆ. ರೆಂಬೆಯಿಂದ ರೆಂಬೆಗೆ ಹಾರಿ ಚಲಿಸುತ್ತವಾದರೂ ನೆಲದ ಮೇಲೆ ಓಡುವುದು, ನೆಗೆಯುವುದು ಉಂಟು. ಇವು ನಿಶಾಚರಿಗಳು. ಹಗಲನ್ನು ಯಾವುದಾದರೂ ಮರದಲ್ಲಿ ನಿದ್ರಿಸುತ್ತ ಕಾಲ ಕಳೆಯುತ್ತವೆ. ನಿದ್ರಿಸುವಾಗ ಅಥವಾ ವಿಶ್ರಮಿಸುವಾಗ ಬಾಲವನ್ನು ಯಾವುದಾದರೂ ರೆಂಬೆಗೆ ಸುತ್ತುತ್ತವೆ. ಇವುಗಳ ಆಹಾರ ಕೀಟಗಳು, ಹಣ್ಣು, ಎಲೆ ಇತ್ಯಾದಿ. ಇವು ಪ್ರೈಮೇಟ್ ಗಣಕ್ಕೆ ಸೇರಿದ್ದರೂ ಸಂತಾನೋತ್ಪತ್ತಿ ಕ್ರಮದಲ್ಲಿ ಪ್ರಾಚೀನವಾದ ಈಸ್ಟ್ರಸ್ ಆವೃತ್ತಗಳನ್ನೇ ತೋರಿಸುತ್ತವೆ. ಒಂದು ವರ್ಷದಲ್ಲಿ ಹಲವಾರು ಈಸ್ಟ್ರಸ್ ಆವೃತ್ತಗಳಿರುತ್ತವೆ. ಗರ್ಭಕೋಶದಲ್ಲಿ ಎರಡು ಕವಲುಗಳಿವೆ. ಗರ್ಭಕೋಶ ತುಂಬ ಹಿಂದುಳಿದ ಲಕ್ಷಣವನ್ನು ತೋರುತ್ತವೆ. ಮಡಗಾಸ್ಕರಿನ ಕಾಡು ಪಾಪಗಳು ವರ್ಷಕ್ಕೊಮ್ಮೆ ಒಂದು ಎರಡು ಮರಿಗಳನ್ನು ಹಾಕುತ್ತವೆ. ಹುಟ್ಟಿದಾಗ ಮರಿಗಳಿಗೆ ತುಂಬ ದೊಡ್ಡ ತಲೆಯೂ, ರೋಮರಹಿತ ಬಾಲವೂ ಇರುವುವು. ತಂದೆತಾಯಿಗಳೆರಡೂ ಮರಿಗಳ ಪಾಲನೆ ಮಾಡುತ್ತವೆ.

ಮಡಗಾಸ್ಕರಿನಲ್ಲೇ ಕಾಣಬರುವ ಇಂಡ್ರಿಸ್ ಮತ್ತು ಅಯ್ ಅಯ್ ಎಂಬ ಎರಡು ಪ್ರಾಣಿಗಳೂ ಲೀಮರಿಡೀ ಕುಟುಂಬಕ್ಕೆ ಸೇರಿದ್ದು ಕಾಡುಪಾಪವನ್ನೆ ಹೋಲುತ್ತವೆ. ಇಂಡ್ರಿಸ್ ಪ್ರಾಣಿಗೆ ಇಂಡ್ರಿ ಇಂಡ್ರಿ ಎಂಬ ಶಾಸ್ತ್ರೀಯನಾಮವಿದೆ. ಬೆಕ್ಕಿನ ಅಥವಾ ಅಳಿಲಿನ ಪ್ರಮಾಣದ ಶರೀರ, ದೊಡ್ಡ ಕಣ್ಣು, ನರಿಯಂಥ ಮುಖ, ನಾಯಿಯ ಮೂಗು ಇದರ ಲಕ್ಷಣಗಳು. ಇದು ಸಂಕೋಚ ಸ್ವಭಾವದ್ದು. ನಿಶಾಚರಿ. ಇದರ ಇತರ ಲಕ್ಷಣಗಳೆಲ್ಲ ಲೀಮರಿನಂತೆಯೆ.



ಭಾರತದ ಕಾಡುಪಾಪ

ಅಯ್ ಅಯ್ ಎಂಬುದಕ್ಕೆ ಮ್ಯಾಲಗ್ಸೆ ಕಾಡುಪಾಪ ಎಂಬ ಇನ್ನೊಂದು ಹೆಸರಿದೆ. ಇದರ ವೈಜ್ಞಾನಿಕ ನಾಮ ಡಾಬೆಂಟೋನಿಯ ಮಡಗಾಸ್ಕರಿಯೆನ್ಸಿಸ್. ಇದೂ ನಿಶಾಚರಿಯೇ. ಬಿದಿರು ಮೆಳೆಗಳಲ್ಲಿ ವಾಸಿಸುತ್ತದೆ. ಕೀಟಗಳು, ಕಂಬಳಿ ಹುಳುಗಳು, ಹಕ್ಕಿಗಳ ಮೊಟ್ಟೆ, ಬಿದಿರಿನ ಎಳೆಯಕಾಂಡ ಮುಂತಾದವನ್ನು ತಿಂದು ಜೀವಿಸುತ್ತದೆ.

ಭಾರತದಲ್ಲಿ ಸಿಕ್ಕುವ ಕಾಡುಪಾಪಗಳು ಲೋರಿಸ್ ಟಾರ್ಡಿಗ್ರೇಡಸ್ ಎಂಬ ಪ್ರಭೇದಕ್ಕೆ ಸೇರಿವೆ. ದಕ್ಷಿಣ ಭಾರತ ಮತ್ತು ಸಿಂಹಳಗಳ ಕಾಡುಗಳಲ್ಲಿ ಸಾಮಾನ್ಯ. ಕರ್ನಾಟಕದಲ್ಲಿ ಮಲೆನಾಡ ಕಾಡುಗಳಲ್ಲಿ ಹೇರಳವಾಗಿ ಕಾಣಬರುತ್ತವೆ. ಇವಕ್ಕೆ 'ಅಡವಿ ಮನುಷ್ಯ' 'ಬಿದಿರ ಮೇಗಣ ಚದುರೆ' ಎಂಬ ಹೆಸರುಗಳೂ ಇವೆ. ಬಲು ಸಂಕೋಚದ ಸ್ವಭಾವದಿಂದಾಗಿ ಇವಕ್ಕೆ ಈ ಹೆಸರು ಬಂದಿರಬೇಕು. ಇವು ಕೂಡ ವೃಕ್ಷವಾಸಿಗಳು. ದೇಹದ ಉದ್ದ 175–275 ಮಿಮೀ. ಮೇಲೆಲ್ಲ ಹಳದಿ ಮಿಶ್ರಿತ ಬೂದು ಅಥವಾ ಕಗ್ಗಂದು ಬಣ್ಣದ ಉಣ್ಣೆಯಂಥ ಮೃದುವಾದ ಕೂದಲಿದೆ. ಬಾಲ ಇಲ್ಲ. ಹೆಬ್ಬೆರಳು ಮನುಷ್ಯರಲ್ಲಿರುವಂತಿದೆ. ಇದರಿಂದ ರೆಂಬೆಗಳನ್ನು ಹಿಡಿಯಲು ಅನುಕೂಲ. ಕಣ್ಣು ಬಲುದೊಡ್ಡವು; ಗುಂಡಗಿವೆ. ತಲೆಯ ಮೇಲೆ ಎರಡು ಪ್ರಧಾನವಾಗಿ ಕಾಣುವ ಕಿವಿಗಳಿವೆ.

ಇವೂ ನಿಶಾಚರಿಗಳೇ. ಹಗಲೆಲ್ಲ ಯಾವುದಾದರೊಂದು ಮರದ ಮೇಲೆ ನಿದ್ರಿಸುತ್ತ ಕಾಲ ಕಳೆಯುತ್ತವೆ. ನಿದ್ರಿಸುವಾಗ ತಲೆಯನ್ನು ಕಾಲುಗಳ ಮಧ್ಯೆ ತೂರಿಸಿ ಉಂಡೆಯಂತೆ

ಉಂಗುರ ಬಾಲದ ಕಾಡುಪಾಪ

ಮಲಗಿಬಿಡುತ್ತವೆ. ಇವುಗಳ ಓಡಾಟ ಬಲು ನಿಧಾನ. ಕೀಟಗಳು, ಹಲ್ಲಿಗಳು, ಮರಗಪ್ಪೆಗಳು, ಹಕ್ಕಿಗಳು ಇವುಗಳ ಆಹಾರ. ಸಾಕಿದ ಕಾಡುಪಾಪಗಳು ಹಾಲು, ಹಣ್ಣು ಸೇವಿಸುವುದೂ ಉಂಟು. ಹೊಸ ಆವರಣಗಳಲ್ಲಿ, ಪ್ರಖರವಾದ ಬಿಸಿಲಿನಲ್ಲಿ ಇವು ಬಹಳ ಎಚ್ಚರಿಕೆಯಿಂದ ನಿಧಾನವಾಗಿ ಓಡಾಡುತ್ತವಲ್ಲದೆ ತುಂಬ ಪುಕ್ಕಲು ಸ್ವಭಾವದ ಪ್ರಾಣಿಗಳಂತೆ ವರ್ತಿಸುತ್ತವೆ. ಆದರೆ ಮಸಕು ಬೆಳಕಿನಲ್ಲಿ ಮತ್ತು ತನ್ನ ಸ್ವಕ್ಷೇತ್ರದಲ್ಲಿ ಬಲು ಚುರುಕಾಗಿ ಓಡಾಡುವುದಂಟು. ಅಲ್ಲದೆ ಸಿಡುಕಿನ ಸ್ವಭಾವದವೆಂದೂ ಹೇಳುವುದಿದೆ.

ವರ್ಷಕ್ಕೆ ಒಂದು ಸೂಲು, ಒಂದು ಅಪೂರ್ವವಾಗಿ ಎರಡು ಮರಿಗಳನ್ನು ಹೆರುತ್ತವೆ. ಮರಿ ಒಂದು ವರ್ಷ ವಯಸ್ಸಿನದಾಗುವವರೆಗೂ ತಾಯಿಯ ಪಾಲನೆಯಲ್ಲೇ ಬೆಳೆಯುತ್ತದೆ.

ಕಾಡುಪಾಪವನ್ನು ಹಾವಾಡಿಗರು ಸಾಕಿ ಮಾರುವುದೂ ಉಂಟು. ಇದರ ಕಣ್ಣುಗಳನ್ನು ನೇತ್ರಸಂಬಂಧವಾದ ರೋಗಗಳಿಗೆ ಔಷಧಿಯಾಗಿ ಬಳಸುವ ರೂಢಿ ಭಾರತದ ಕೆಲವು ಪ್ರದೇಶಗಳಲ್ಲಿದೆ. (ಎಸ್.ಬಿ.ಡಿ.; ಎಸ್.ಎನ್.ಕೆ.ಯು.)

**ಕಾಡು ಪಾರಿವಾಳದ ಮರ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪಕುಟುಂಬಕ್ಕೆ ಸೇರಿದ ಎರಿತ್ರೈನ ಸೂಬಿರೋಸ ಎಂಬ ಶಾಸ್ತ್ರೀಯ ನಾಮವುಳ್ಳ ಮಧ್ಯಮ ಗಾತ್ರದ ಮರ. ಭಾರತದಲ್ಲೆಲ್ಲ ಒಣ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಶ್ರೀಲಂಕ, ಮಯನ್ಮಾರ್ ದೇಶಗಳಲ್ಲೂ ಸಾಮಾನ್ಯ. ಅಲ್ಲದೆ ಇದನ್ನು ಅಲಂಕಾರ ಸಸ್ಯವಾಗಿಯೂ ಬೇಲಿಗಿಡವಾಗಿಯೂ ಬೆಳೆಸುವುದುಂಟು. ಕಾಡು ಪಾರಿವಾಳದ ಮರದಲ್ಲಿ ಸಬ್‌ಲೊಬೇಟ ಮತ್ತು ಗ್ಲ್ಯಾಬ್ರೆಸೆನ್ಸ್ ಎಂಬ ಎರಡು ಪ್ರಮುಖ ವಿಧಗಳಿವೆ. ಇದರಲ್ಲಿ ಎರಡನೆಯ ಬಗೆಯದು ಕೊಂಚ ಎತ್ತರದ (3,000'ಗಳಿಗೂ ಮೇಲೆ) ಪ್ರದೇಶಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ಸುಮಾರು 20'–40' ಎತ್ತರಕ್ಕೆ ಬೆಳೆಯುವ ಈ ಮರದ ಕಾಂಡ ನೇರ, ವ್ಯಾಸ ಸುಮಾರು 3'–6'. ತೊಗಟೆದಪ್ಪ ಮತ್ತು ಕಂದುಮಿಶ್ರಿತ ಬೂದಿಬಣ್ಣದ್ದು. ಕಾಂಡದ ಮೇಲೆಲ್ಲ ಕೊಕ್ಕೆಯಾಕಾರದ ಮುಳ್ಳುಗಳಿವೆ. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ ; ಇವು ಸಂಯುಕ್ತ ಮಾದರಿಯವು. ಒಂದೊಂದು ಎಲೆಯಲ್ಲೂ 3 ಕಿರುಎಲೆಗಳಿವೆ. ಎಲೆತೊಟ್ಟು ಬಹಳ ಉದ್ದ. ಹೂಗೊಂಚಲು ಅಂತ್ಯಾರಂಭಿ (ರೇಸಿಮೋಸ್) ಮಾದರಿಯದು. ಎಲೆಗಳ ಕಂಕುಳಲ್ಲೊ ರೆಂಬೆಗಳ ತುದಿಯಲ್ಲೊ ಮೂಡುತ್ತದೆ. ಹೂಗಳು ಕೆಂಪುಬಣ್ಣದವಾಗಿದ್ದು ಬಲು ಆಕರ್ಷಕವಾಗಿವೆ ; ದ್ವಿಲಿಂಗಿಗಳು ಮತ್ತು ದ್ವಿಪಾರ್ಶ್ವ

ಸಮಾಂಗತೆಯುಳ್ಳವು (ಜೈಗೋಮಾರ್ಫಿಕ್). 5 ಬಿಡಿಯಾದ ಪುಷ್ಪಪತ್ರಗಳುಳ್ಳ ಪುಷ್ಪಪಾತ್ರೆ (ಕೇಲಿಕ್ಸ್), 5 ದಳಗಳುಳ್ಳ ಪುಷ್ಪದಳಗಳ ಸಮೂಹ (ಕರೋಲ), ಪರಸ್ಪರ ಕೂಡಿಕೊಂಡು 10 ಕೇಸರಗಳು, ಒಂದೇ ಕಾರ್ಪೆಲಿನ ಉಚ್ಚಸ್ಥಾನದ ಅಂಡಾಶಯ–ಇವು ಹೂವಿನ ಮುಖ್ಯ ಲಕ್ಷಣಗಳು. ಕಾಯಿ ಲೆಗ್ಯೂಮ್ ಅಥವಾ ಪಾಡ್ ಮಾದರಿಯದು. ಒಣಗಿದಾಗ ಇಬ್ಭಾಗವಾಗಿ ಒಡೆಯುತ್ತದೆ. ಬೀಜಗಳು ಹಲವಾರಿವೆ.

ಕಾಡುಪಾರಿವಾಳದ ಚೌಬೀನೆ ಹಗುರ ಮತ್ತು ಮೃದುವಾಗಿದೆ; ಇದರ ಬಣ್ಣ ಬಿಳಿ. ನಾರಿನಿಂದ ಕೂಡಿರುವ ಇದು ತಕ್ಕಮಟ್ಟಿಗೆ ಬಿರುಸಾಗಿದೆ. ಇದು ಹದಗೊಳ್ಳುವಾಗ (ಸೀಸನಿಂಗ್) ಬಿರಿಯುವುದಾಗಲೀ ಸೀಳುವುದಾಗಲೀ ಇಲ್ಲ. ಆದರೆ ಮಾಸಲು ಬಣ್ಣಕ್ಕೆ ತಿರುಗುವುದರಿಂದ ಮರ ಕೊಯ್ಯಲು ಸುಲಭ. ಈ ಮರವನ್ನು ತುಪ್ಪದ ಜಾಡಿ, ಮರದ ಸೌಟು, ಪೀಪಾಯಿ, ಹಲಗೆ, ನೀರಿನಬಾನಿ, ಟೀ ಮತ್ತು ಹಣ್ಣಿನ ಪೆಟ್ಟಿಗೆಗಳು, ಬೆಂಕಿಪೆಟ್ಟಿಗೆ ಮುಂತಾದುವನ್ನು ತಯಾರಿಸುವುದಕ್ಕೆ ಬಳಸುತ್ತಾರೆ. ಪ್ಲೈವುಡ್ ತಯಾರಿಕೆಯಲ್ಲೂ ಬಳಸುವುದುಂಟು. ಇದರಿಂದ ತೆಗೆದ ಕಾರ್ಕನ್ನು ಬಿರಟೆಗಳಾಗಿಯೂ ಶಾಖ ಮತ್ತು ವಿದ್ಯುತ್ ನಿರೋಧಕ ವಸ್ತುವಾಗಿಯೂ ಉಪಯೋಗಿಸಬಹುದು. (ಟಿ.ಪಿ.)

**ಕಾಡು ಪಿಂಡಿ :** ಮಿರಿಸ್ಟಿಕೇಸೀ ಕುಟುಂಬಕ್ಕೆ ಸೇರಿದ ಸುಗಂಧಪೂರಿತವಾದ ನಿತ್ಯಹರಿದ್ವರ್ಣದ ಮರ. ಇದರ ವೈಜ್ಞಾನಿಕ ನಾಮ ನೀಮ ಅಟೆನ್ಯುಯೇಟ. ರಕ್ತ ಮರ ಅಥವಾ ಹೆಡಗ್ಗಲ್ ಎಂದೂ ಕರೆಯುವುದುಂಟು. ಇದು ಸುಮಾರು 20' ಎತ್ತರಕ್ಕೆ ನೇರವಾಗಿ ಬೆಳೆಯುತ್ತದೆ. ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳಲ್ಲಿ 3,000' ಗಳಷ್ಟು ಎತ್ತರದ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿದೆ. ಎಲೆಗಳು ನೀಳವಾಗಿವೆ. ಅವುಗಳ ತುದಿ ಚೂಪು. ಹೂಗೊಂಚಲು ಸೋಕೀರ್ಣ (ಪ್ಯಾನಿಕಲ್) ಮಾದರಿಯದು. ಹೂಗೊಂಚಲಿನ ಮೇಲೆ ರೋಮಗಳಿವೆ. ಹೂಗಳು ಭಿನ್ನಲಿಂಗಿಗಳು. ಒಂದೊಂದು ಹೂವಿನಲ್ಲೂ 3 ಹಾಲೆಗಳುಳ್ಳ ಪೆರಿಯಾಂತ್ ಭಾಗವಿದೆ. ಗಂಡುಹೂವಿನಲ್ಲಿ 8–20 ಕೇಸರಗಳೂ ಹೆಣ್ಣು ಹೂವಿನಲ್ಲಿ ಒಂದೇ ಕಾರ್ಪೆಲ್ಲುಳ್ಳ ಉಚ್ಚಸ್ಥಾನದ ಅಂಡಾಶಯವೂ ಇವೆ. ಅಂಡಕೋಶದೊಳಗೆ ಒಂದೇ ಅಂಡಕವಿದೆ. ಫಲ ರಸಭರಿತವಾಗಿದೆ. ಬೀಜದ ಮೇಲೆ ಕಡುಗೆಂಪು ಬಣ್ಣದ ಏರಿಲ್ ಎಂಬ ಹೊದಿಕೆಯಿದೆ. ಕಾಡು ಪಿಂಡಿಯ ಚೌಬೀನೆ ಎಳೆಯದರಲ್ಲಿ ಮಾಸಲು ಕೆಂಪುಬಣ್ಣವಾಗಿದ್ದು ವಯಸ್ಸಾದಂತೆ ನಸುಕಂದು ಬಣ್ಣಕ್ಕೆ ತಿರುಗುತ್ತದೆ. ಅಲ್ಲಲ್ಲೆ ಕಂದುಗೆರೆಗಳು ಮತ್ತು ಮಚ್ಚೆಗಳು ಇವೆ. ಬಿಸಿಲು ಮತ್ತು ಮಳೆಯ ಸಂಪರ್ಕದಿಂದ ದೂರವಿರಿಸಿದ ಚೌಬೀನೆ ಗಟ್ಟಿಯಾಗಿಯೂ ಹಗುರವಾಗಿಯೂ ಇರುತ್ತದೆ. ಆದರೆ ಕ್ರಿಮಿಕೀಟಗಳು ಬಾಧೆಗೆ ಬೇಗನೆ ಒಳಗಾಗುತ್ತದೆ. ಗರಗಸದಿಂದ ಕೊಯ್ಯಲೂ ಹೊಳಪು ಕೊಡಲೂ ಸುಲಭ. ಮೇಲಿನ ಗುಣಗಳಿಂದಾಗಿ ಎಲ್ಲ ತರದ ಉಪಯೋಗಕ್ಕೂ ಬರುತ್ತದೆ. ಇದರಿಂದ ಪೆಟ್ಟಿಗೆ, ಹಲಗೆ, ಬೆಂಕಿಪೆಟ್ಟಿಗೆ ಮೊದಲಾದವನ್ನು ತಯಾರಿಸಬಹುದು, ಬೀಜಗಳಿಂದ ಒಂದು ಬಗೆಯ ಎಣ್ಣೆ ತೆಗೆಯುತ್ತಾರೆ. (ಎ.ಕೆ.ಕೆ.)

**ಕಾಡು ಬುಡುಮೆ :** ಹೊಲ ಮತ್ತು ತೋಟಗಳಲ್ಲಿ ಸ್ವಾಭಾವಿಕವಾಗಿ ಕಳೆಯಂತೆ ಬೆಳೆಯುವ ಒಂದು ಬಳ್ಳಿ. ಬುಡುಮೆ ಪರ್ಯಾಯನಾಮ. ಇದು ಕುಕುರ್ಬಿಟೇಸೀ

ಕುಟುಂಬಕ್ಕೆ ಸೇರಿದೆ. ಕುಕುಮಿಸ್ ಟ್ರೈಗೋನಸ್ ಇದರ ಶಾಸ್ತ್ರೀಯ ಹೆಸರು. ನೆಲದ ಮೇಲೆ 5'–6' ಉದ್ದವಾಗಿ ಹರಿದು ಬೆಳೆಯುವ (ಕ್ರೀಪಿಂಗ್) ಏಕವಾರ್ಷಿಕ (ಆನ್ಯೂಯಲ್) ಬಳ್ಳಿಯಿದು. ಎಲೆಗಳು ಕಂಕುಳಲ್ಲಿರುವ ಕುಡಿಗಳಿಂದ (ಟೆಂಡ್ರಿಲ್) ಹಬ್ಬಿ ಬೆಳೆಯುತ್ತದೆ. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ. ಅವುಗಳ ಆಕಾರ ಹಸ್ತದಂತೆ. ಹೂಗಳು ಭಿನ್ನಲಿಂಗಿಗಳು. ಗಂಡು ಹೂಗಳು ಮಧ್ಯಾರಂಭಿ (ಸೈಮೋಸ್) ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೆಣ್ಣುಹೂಗಳು ಒಂಟೊಂಟಿಯಾಗಿವೆ. ಪುಷ್ಪಪತ್ರಗಳು 5. ಇವೂ ಪರಸ್ಪರ ಕೂಡಿಕೊಂಡಿವೆ. ಇವು ಹಸಿರು ಮತ್ತು ರೋಮಾವೃತ ವಾಗಿವೆ. ದಳಗಳ ಸಂಖ್ಯೆ 5 ಇವುಗಳ ಬಣ್ಣ ಹಳದಿ. ಗಂಡು ಹೂವಿನಲ್ಲಿ 3 ಕೇಸರಗಳೂ ಹೆಣ್ಣು ಹೂವಿನಲ್ಲಿ ಮೂರು ಕಾರ್ಪೆಲುಗಳಿಂದ ಕೂಡಿದ ನೀಚಸ್ಥಾನದ ಅಂಡಾಶಯವೂ ಇವೆ. ಫಲ ಬೆರಿ ಮಾದರಿಯದು. ಸಿಪ್ಪೆ ನಯವಾಗಿಯೋ ಇಲ್ಲವೆ ಸಣ್ಣ ಸಣ್ಣ ಮುಳ್ಳುಗಳಿಂದ ಕೂಡಿಯೋ ಇದೆ. ಬೀಜಗಳು ಅಸಂಖ್ಯ. ಇದರ ಹಣ್ಣು ತಿನ್ನಲು ಬಹಳ ರುಚಿಯಾಗಿರುತ್ತದೆ. ಕಾಡುಬುಡುಮೆ ಸಸ್ಯದ ಎಲ್ಲ ಭಾಗಗಳು ಔಷಧಿ ಪ್ರಾಮುಖ್ಯವನ್ನು ಪಡೆದಿವೆ. ಇದರ ಕಾಯಿಗಳನ್ನು ಉಪ್ಪಿನಕಾಯಿಗಾಗಿ ಉಪಯೋಗಿಸುತ್ತಾರೆ. ಎಳೆಯ ಎಲೆಗಳನ್ನು ಸೊಪ್ಪು ತರಕಾರಿಯಾಗಿ ಬಳಸುತ್ತಾರೆ. ಇದು ಜಾನುವಾರುಗಳಿಗೆ ಉತ್ತಮ ಮೇವೂ ಹೌದು. (ಡಿ.ಎಂ.)

**ಕಾಡು ಬೆಂಡೆ :** ಹರ್ನಾಂಡಿಯೇಸೀ ಕುಟುಂಬಕ್ಕೆ ಸೇರಿದ ಮರ. ಇದರ ವೈಜ್ಞಾನಿಕ ಹೆಸರು ಗೈರೊಕಾರ್ಪಸ್ ಅಮೆರಿಕಾನಸ್. ನದಿ ಮತ್ತು ಸಮುದ್ರತೀರಗಳಲ್ಲಿ ಹಾಗೂ ಒಣಕಾಡುಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಇದು ದಪ್ಪಗಾತ್ರದ ಕೊಂಬೆಗಳುಳ್ಳ ದೊಡ್ಡಮರ. ಇದರ ಎಲೆಗಳು ದೊಡ್ಡಗಾತ್ರದವು; ಪರ್ಯಾಯವಾಗಿ ಜೋಡಣೆಗೊಂಡಿವೆ. ಅಖಂಡವಾಗಿರಬಹುದು ಇಲ್ಲವೆ ಹಲವಾರು ಹಾಲೆಗಳಾಗಿ ವಿಭಾಗವಾಗಿರಬಹುದು.

ಇವು ರೆಂಬೆಗಳ ತುದಿಯಲ್ಲಿ ದಟ್ಟವಾಗಿ ಗೊಂಚಲಿನಂತೆ ಸಮಾವೇಶಗೊಂಡಿವೆ. ಹೂಗಳು ಚಿಕ್ಕವು, ಭಿನ್ನಲಿಂಗಿಗಳು. ದೊಡ್ಡ ಮಧ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ನಿರ್ದಿಷ್ಟವಾದ ಪುಷ್ಪಪತ್ರಗಳಾಗಲೀ ದಳಗಳಾಗಲೀ ಇಲ್ಲ. ಅದರ ಬದಲು ಪೆರಿಯಾಂತ್ ಎಂಬ ಭಾಗವಿದೆ. ಇದು ಗಂಡು ಹೂವಿನಲ್ಲಿ 4–7 ಭಾಗಗಳಾಗಿಯೂ ಹೆಣ್ಣು ಹೂವಿನಲ್ಲಿ 2 ಭಾಗಗಳಾಗಿಯೂ ಸೀಳಾಗಿದೆ. ಕೇಸರಗಳ ಸಂಖ್ಯೆ 4–7ರ ವರೆಗೆ ವ್ಯತ್ಯಾಸ ವಾಗುತ್ತದೆ. ಪೆರಿಯಾಂತಿನ ಬುಡಭಾಗಕ್ಕೆ ಅಂಟಿಕೊಂಡಿವೆ. ಕೇಸರಗಳ ನಡುನಡುವೆ ಬಂಜೆಕೇಸರಗಳಿರುವುದೂ ಉಂಟು. ಹೆಣ್ಣುಹೂವಿನಲ್ಲಿ ಒಂದೇ ಕಾರ್ಪೆಲನ್ನೊಳಗೊಂಡ ನೀಚಸ್ಥಾನದ ಅಂಡಾಶಯವಿದೆ. ಫಲ ಅಷ್ಠಿಫಲದಂತಿದೆ. ಹೂವಿನ ಪೆರಿಯಾಂತ್ ಭಾಗದ ಹಾಲೆಗಳು ಫಲದಲ್ಲೂ ಉಳಿದಿದ್ದು ಎರಡು ಉದ್ದನೆಯ ರೆಕ್ಕೆಗಳಂಥ ರಚನೆಗಳಾಗಿ ಮಾರ್ಪಟ್ಟಿವೆ. ಈ ರೆಕ್ಕೆಗಳು ಫಲಪ್ರಸಾರದಲ್ಲಿ ಸಹಾಯಕವಾಗಿವೆ.

ಇದರ ಚೌಬೀನೆ ಮೃದುವಾಗಿಯೂ ಹಗುರಾಗಿಯೂ ಇದೆ. ಇದರ ಬಣ್ಣ ಬೂದು. ಬೊಂಬೆಗಳು, ಬಾಚಣಿಗೆ, ಪೆಟ್ಟಿಗೆ, ಪೀಠೋಪಕರಣ, ದೋಣಿ, ದೋಣಿಯ ಹುಟ್ಟುಗಳು ಮುಂತಾದುವನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ. ಬೀಜಗಳನ್ನು ಜಪಸರಗಳಲ್ಲಿ ಮತ್ತು ಕಂಠಹಾರಗಳಲ್ಲಿ ಮಣಿಗಳಾಗಿ ಉಪಯೋಗಿಸುವುದುಂಟು. (ಎಂ.ಎಸ್.ಎಸ್.ಆರ್.)

**ಕಾಡುಬೆಕ್ಕು :** ಸ್ತನಿ ಗುಂಪಿನ ಕಾರ್ನಿವೋರದ ಫೆಲೀಡಿ ಕುಟುಂಬಕ್ಕೆ ಸೇರಿದ ಪ್ರಾಣಿ. ಇದರ ಕೋರೆಹಲ್ಲುಗಳು ಉದ್ದ ಮತ್ತು ಚೂಪಾಗಿವೆ. ಇವು ಕತ್ತರಿಯ ಹಾಗೆ ಕೆಲಸ ಮಾಡಿ ಮಾಂಸವನ್ನು ಕತ್ತರಿಸಲು ಸಹಾಯ ಮಾಡುತ್ತವೆ. ಅತಿ ಚೂಪಾದ ನಖಗಳಿವೆ. ಇವನ್ನು ಉಪಯೋಗಿಸದೇ ಇದ್ದಾಗ ಪಾದದೊಳಕ್ಕೆ ಮಡಚಿಕೊಂಡು ಮರೆಯಾಗಿಡುವ ಶಕ್ತಿ ಈ ಪ್ರಾಣಿಗೆ ಉಂಟು. ಕಾಡುಬೆಕ್ಕಿನ ಮೂಗು ಸದಾ ಒದ್ದೆಯಾಗಿರುತ್ತದೆ. ವಾಸನೆಯಿಂದಲೇ ಆಹಾರವನ್ನು ಗುರುತಿಸಲು ಈ ತೇವವಾಗಿರುವ ಮೂಗು ಸಹಾಯ ಮಾಡುತ್ತದೆ. ಕಿವಿಯಲ್ಲಿ ಬಹಳ ಕೂದಲುಗಳಿವೆ. ಈ ಕೂದಲುಗಳ ಗ್ರಹಣ ಶಕ್ತಿ ಉತ್ತಮ

ಮಟ್ಟವಾಗಿದ್ದು, ಕಣ್ಣಿಗೆ ಕಾಣದಿರುವಂಥ ವಸ್ತುಗಳ ಚಲನವಲನಗಳನ್ನು ಗುರುತಿಸಲು ಸಹಾಯಕವಾಗಿವೆ. ಕಾಡುಬೆಕ್ಕು ಬೇಟೆಯಾಡುವುದು ಸಾಮಾನ್ಯವಾಗಿ ರಾತ್ರಿಯಲ್ಲಿ. ಕತ್ತಲಿನಲ್ಲಿ ಇದರ ಕಣ್ಣುಗಳು ಹೊಳೆಯುತ್ತಿರುತ್ತವೆ. ಗ್ವಾನಿನ್ ಎಂಬ ರಾಸಾಯನಿಕ ವಸ್ತು ಕಣ್ಣುಗಳಲ್ಲಿರುವುದರಿಂದ ಅದರ ಮೇಲೆ ಬಿದ್ದ ಬೆಳಕು ಪ್ರತಿಫಲಿತವಾಗುತ್ತದೆ. ಕತ್ತಲಲ್ಲಿ ತನ್ನ ಆಹಾರವನ್ನು ಹುಡುಕಲು ಬೆಕ್ಕುಗಳಿಗೆ ಈ ಎಲ್ಲ ಗುಣಗಳೂ ಹೊಂದಾಣಿಕೆಯನ್ನು ಒದಗಿಸಿಕೊಟ್ಟಿವೆ.



ಯುರೋಪಿನ ಕಾಡು ಬೆಕ್ಕು (ಫೆಲಿಸ್ ಸಿಲ್ವೆಸ್ಟ್ರಿಸ್)

ಫೆಲಿಸ್ ಸಿಲ್ವೆಸ್ಟ್ರಿಸ್ ಯುರೋಪಿನಲ್ಲಿರುವ ಕಾಡು ಬೆಕ್ಕು. ಇವು ಅತಿ ದಟ್ಟವಾದ ಕಾಡು ಅಥವಾ ಬಂಡೆಗಳಿರುವ ಸ್ಥಳಗಳಲ್ಲಿ ವಾಸಿಸುತ್ತದೆ. ರಾತ್ರಿಯಲ್ಲಿ ನದಿಗಳ ದಂಡೆ

ಭಾರತದ ಕಾಡುಬೆಕ್ಕು (ಫೆಲಿಸ್ ಚೌಸ್)

ಮತ್ತು ಕೊಳಗಳಿಗೆ ನುಗ್ಗಿ ಅಲ್ಲಿರುವ ಮೊಲ, ಸಣ್ಣ ಪಕ್ಷಿಗಳನ್ನು ಕೆಲವು ವೇಳೆ ಮೀನುಗಳನ್ನು ಬೇಟೆಯಾಡುತ್ತವೆ. ಬೇರೆ ಕಾಡುಬೆಕ್ಕುಗಳನ್ನು ಸಾಮಾನ್ಯವಾಗಿ ಸಾಕು ಪ್ರಾಣಿಗಳನ್ನಾಗಿ ಮಾಡಿಕೊಳ್ಳಬಹುದು. ಆದರೆ ಫೆಲಿಸ್ ಸಿಲ್ವೆಸ್ಟ್ರಿಸ್ ಹೀಗೆ ಪಳಗದು.

ಫೆಲಿಸ್ ಚೌಸ್ ಆಫ್ರಿಕ, ಉತ್ತರ ಅಮೆರಿಕ ಮತ್ತು ಭಾರತ ದೇಶಗಳಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಇದನ್ನು ಆಫ್ರಿಕದ ಕಾಡುಬೆಕ್ಕು ಎನ್ನುತ್ತಾರೆ. ಇದರ ಬಣ್ಣ ಬೂದು. ದೇಹದ ಹಿಂಭಾಗದಲ್ಲಿ ದಟ್ಟ ಮತ್ತು, ಉದ್ದ ಕೂದಲಿದೆ. ವೇಗವಾಗಿ ಚಲಿಸಲು

ಆಫ್ರಿಕದ ಕಾಡುಬೆಕ್ಕು (ಫೆಲಿಸ್ ನೈಗ್ರಿಪೆಸ್)

ಕೂದಲಿನಿಂದ ಸಹಾಯ ಉಂಟು. ಈ ಬೆಕ್ಕಿನ ಮುಖ್ಯ ಆಹಾರವೆಂದರೆ ಸಣ್ಣ ಸ್ತನಿಗಳು ಮತ್ತು ಪಕ್ಷಿಗಳು.

ಫೆಲಿಸ್ ಲೈಬಿಕಾ ಆಫ್ರಿಕಕ್ಕೆ ಮೀಸಲಾಗಿರುವ ಕಾಡುಬೆಕ್ಕು. ಇದನ್ನು ಕಫಿರ ಬೆಕ್ಕು ಎಂದೂ ಕರೆಯುತ್ತಾರೆ. ಕಫಿರ ಬೆಕ್ಕುಗಳು ಪೊದೆಗಳ ಕೆಳಗೆ, ದಟ್ಟವಾಗಿ ಬೆಳೆದಿರುವ ಹುಲ್ಲಿನ ಮಧ್ಯೆ ವಾಸಿಸುತ್ತವೆ. ಇವು ಬಹಳ ಶಕ್ತಿಯುತವಾಗಿವೆ. ಕಾಡು ನಾಯಿಗಳಿಂದ ಸ್ವರಕ್ಷಣೆ ಮಾಡಿಕೊಳ್ಳಬಲ್ಲುವು.

ಫೆಲಿಸ್ ನೈಗ್ರಿಪೆಸ್ ಕಾಡುಬೆಕ್ಕು ಕಾಡುಬೆಕ್ಕುಗಳಲ್ಲೆಲ್ಲ ಅತಿ ಚಿಕ್ಕದು. ಇದನ್ನು ಸೆಬಾಲಾ ಬೆಕ್ಕು ಅಥವಾ ಕಪ್ಪುಪಾದದ ಬೆಕ್ಕು ಎಂದೂ ಕರೆಯುತ್ತಾರೆ. ದಕ್ಷಿಣ ಆಫ್ರಿಕದ ಕಲಹರಿ ಮರಳುಗಾಡಿನಲ್ಲಿ ಇದು ವಾಸಿಸುತ್ತದೆ. ಇದರ ಉದ್ದ ಕೇವಲ 20". ಹಗಲನ್ನು ಯಾವುದಾದರೊಂದು ಬಿಲದಲ್ಲಿ ಮಲಗಿ ಕಳೆಯುತ್ತದೆ. ಈ ಬೆಕ್ಕು ಸಾಕುಬೆಕ್ಕಿನ ಜೊತೆ ಸೇರಿ ಸಂತಾನೋತ್ಪತ್ತಿ ಮಾಡಬಲ್ಲದು. ಎಲ್ಲ ಬೆಕ್ಕುಗಳಂತೆಯೇ ಇದು ಕೂಡ ಒಂದು ಸಾರಿಗೆ ಎರಡು ಅಥವಾ ಮೂರು ಮರಿಗಳನ್ನು ಈಯುತ್ತದೆ.

ಕೆನಡದ ಕಾಡುಬೆಕ್ಕಾದ ಫೆಲಿಸ್ ಕೆನಡೆನ್ಸಿಸ್ ನಿತ್ಯಹರಿದ್ವರ್ಣದ ಕಾಡುಗಳಲ್ಲಿ ವಾಸಿಸುತ್ತದೆ. ಇದರ ಕಿವಿಗಳಲ್ಲಿ ಒತ್ತಾಗಿ ಬೆಳೆದಿರುವ ಕೂದಲುಗಳಿವೆ. ಕಿವಿಯ ಅಂಚು ಕಪ್ಪು. ಇದರ ಬಾಲ ಅತಿ ಚಿಕ್ಕದು. ಹಿಂದಿನ ಕಾಲುಗಳು ಅತಿ ಉದ್ದ. ಕೆನಡದ ಈ ಬೆಕ್ಕು ಕೊಲರಾಡೊ ಹಾಗು ನ್ಯೂಯಾರ್ಕುಗಳಲ್ಲಿಯೂ ವಾಸಿಸುತ್ತದೆ. ಇದರ ಉಣ್ಣೆಗೆ ಬಹಳ ಬೆಲೆ. ಆದ್ದರಿಂದ ಇದನ್ನು ಬಹಳವಾಗಿ ಬೇಟೆಯಾಡುತ್ತಾರೆ. ಇದರ ದೃಷ್ಟಿ ಅತಿ ತೀಕ್ಷ್ಣ. ರಾತ್ರಿಯಲ್ಲಿ ಇದು ಬಿಳಿಯ ಮೊಲಗಳನ್ನು ಬೇಟೆಯಾಡುತ್ತದೆ. ಬಿಳಿಯ ಮೊಲಗಳು ಸಿಗದಿದ್ದರೆ ಇದು ಹಸಿವಿನಿಂದ ಸಾಯುತ್ತದೆ. ಸಾಮಾನ್ಯವಾಗಿ ಬೆಕ್ಕುಗಳು ನೀರಿನಿಂದ ದೂರವಿರುತ್ತವೆ. ಆದರೆ ಈ ಕೆನಡದ ಬೆಕ್ಕು, ನಾಯಿಗಳಂತೆ ಈಜಬಲ್ಲುದು. ಇವುಗಳ ಗರ್ಭಾವಧಿ ಎರಡು ತಿಂಗಳು. ಒಂದು ಸೂಲಿಗೆ ಮೂರು ಅಥವಾ ನಾಲ್ಕು ಮರಿಗಳಿಗೆ ಜನ್ಮ ಕೊಡುತ್ತವೆ. ಈ ಮರಿಗಳು ಹುಟ್ಟುವಾಗ ಕುರುಡಾಗಿದ್ದು, ಹತ್ತು ದಿನಗಳ ಅನಂತರ ಕಣ್ಣನ್ನು ತೆರೆಯುತ್ತವೆ. ತಾಯಿ ಎರಡು ತಿಂಗಳವರೆಗೆ ಮರಿಗಳಿಗೆ ಹಾಲುಣಿಸುತ್ತದೆ. ಅನಂತರ ಮರಿಗಳನ್ನು ತನ್ನ ಸಂಗಡ ಬೇಟೆಯಾಡಲು ಕರೆದೊಯ್ಯುತ್ತದೆ. ಮುಂದಿನ ಬೆದೆಯ ಕಾಲ ಬರುವವರೆಗೂ ಮರಿಗಳನ್ನು ಒಟ್ಟಿಗೆ ಇಟ್ಟುಕೊಂಡಿದ್ದು ಅನಂತರ ಅವನ್ನು ಓಡಿಸುತ್ತದೆ. (ಎಚ್.ಎ.ಆರ್.)

**ಕಾಡು ಬೆಳ್ಳುಳ್ಳಿ :** ಲಿಲಿಯೇಸೀ ಕುಟುಂಬಕ್ಕೆ ಸೇರಿದ ಸಿಲ ಇಂಡಿಕ ಮತ್ತು ಅರ್ಜಿನಿಯ ಇಂಡಿಕ ಎಂಬ ಶಾಸ್ತ್ರೀಯನಾಮವುಳ್ಳ ಎರಡು ಪುಟ್ಟಗಿಡಗಳಿಗಿರುವ ಸಾಮಾನ್ಯ ಹೆಸರು. ಇವಕ್ಕೆ ಕಾಡು ಈರುಳ್ಳಿ, ನಾಯಿ ಉಳ್ಳಿ ಮುಂತಾದ ಹೆಸರುಗಳೂ ಇವೆ. ಇಂಗ್ಲಿಷಿನಲ್ಲಿ ಇಂಡಿಯನ್ ಸ್ಕ್ವಿಲ್ ಎಂದು ಕರೆಯಲಾಗುತ್ತದೆ. ಇವೆರಡೂ ಅನೇಕ ಲಕ್ಷಣಗಳಲ್ಲಿ ಸಾಮಾನ್ಯವಾಗಿವೆ. ಎರಡೂ ಭಾರತದಾದ್ಯಂತ, ಎಲ್ಲ ಪ್ರದೇಶಗಳಲ್ಲೂ ಬೆಳೆಯುತ್ತವೆ. ಮರಳು ಭೂಮಿಯಲ್ಲಿ ಹೇರಳ.

ಸಿಲ ಇಂಡಿಕ ಎಂಬುದು ಬಹಳ ಪುಟ್ಟಗಾತ್ರದ ಮೂಲಿಕೆ ಸಸ್ಯ. ಇದರಲ್ಲಿ ಭೂಮಿಯೊಳಗೇ ಹುದುಗಿರುವ ಕಂದಗೆಡ್ಡೆಯಿದೆ (ಬಲ್ಬ್). ಇದು ನೋಡಲು ಈರುಳ್ಳಿಯಂತೆ ಕಾಣುತ್ತದೆ. ಎಲೆಗಳು ಮತ್ತು ಹೂಗೊಂಚಲು ಮಾತ್ರ ನೆಲದಮೇಲೆ ಇರುತ್ತದೆ. ಸಾಮಾನ್ಯವಾಗಿ ಈ ಗಿಡದಲ್ಲಿ ಮಳೆಗಾಲದಲ್ಲಿ ಮಾತ್ರ ಎಲೆ ಮತ್ತು ಹೂಗೊಂಚಲುಗಳು ಹುಟ್ಟುತ್ತವೆ. ಉಳಿದ ಕಾಲಗಳಲ್ಲಿ ಕಂದಗೆಡ್ಡೆ ಮಾತ್ರ ಭೂಮಿಯೊಳಗೆ ಹುದುಗಿರುತ್ತದೆ; ಎಲೆಗಳು ಈಟಿಯಾಕಾರ ಅಥವಾ ಆಯಾತಾಕಾರವಾಗಿವೆ. ಅವುಗಳ ಉದ್ದ ಸುಮಾರು 6"–18".

ಇವು ದಪ್ಪವಾಗಿದ್ದು ರಸಭರಿತವಾಗಿವೆ. ಎಲೆಯ ಮೇಲೆ ಅಲ್ಲಲ್ಲೆ ಕಪ್ಪು ಮಚ್ಚೆಗಳಿವೆ. ತುದಿಯಲ್ಲಿ ವಿಶೇಷ ಬಗೆಯ ಮೊಗ್ಗುಗಳು ಹುಟ್ಟುವುದೂ ಉಂಟು. ಇವು ನೆಲಕ್ಕೆ ತಾಗಿದಾಗ ಅಥವಾ ಕಳಚಿಕೊಂಡು ನೆಲಕ್ಕೆ ಬಿದ್ದಾಗ ಮೊಳೆತು ಸ್ವತಂತ್ರ ಸಸಿಗಳಾಗುತ್ತವೆ. ಇದೊಂದು ರೀತಿಯ ಸಂತಾನ ವೃದ್ಧಿಯ ಕ್ರಮ. ಎಲೆಗಳು ಹುಟ್ಟುತ್ತಿದ್ದಂತೆಯೇ ಅವುಗಳೊಂದಿಗೇ ಸಸ್ಯದ ಮಧ್ಯಭಾಗದಿಂದ ಅಂತ್ಯಾರಂಭಿ (ರೇಸಿಮೋಸ್) ಮಾದರಿಯ ಹೂಗೊಂಚಲೂ ಹುಟ್ಟುತ್ತದೆ. ಅದರ ಮೇಲೆ ನಕ್ಷತ್ರಗಳಂತೆ ಕಾಣುವ, ಒತ್ತಾಗಿ ಜೋಡಿಸಿರುವ ಕಿರಿಯ ಗಾತ್ರದ ಹೂಗಳಿವೆ. ಒಂದೊಂದು ಹೂವಿನಲ್ಲಿಯೂ 6 ಭಾಗಗಳುಳ್ಳ ಪೆರಿಯಾಂತ್ ವಲಯವೂ 6 ಬಿಡಿ ಕೇಸರಗಳೂ ಮೂರು ಕಾರ್ಪೆಲುಗಳನ್ನೊಳಗೊಂಡ ಉಚ್ಚಸ್ಥಾನದ ಅಂಡಾಶಯವೂ ಇವೆ. ಅಂಡಾಶಯದಲ್ಲಿ 3 ಕೋಣೆಗಳಿವೆ. ಅಂಡಕಗಳ ಸಂಖ್ಯೆ ಪ್ರತಿ ಕೋಣೆಗೂ 1–2 ಅಥವಾ ಹಲವಾರು. ಪೆರಿಯಾಂತಿನ ಬಣ್ಣ ಹಸುರುಮಿಶ್ರಿತ ಊದಾ. ಫಲ ಸಂಪುಟ ಮಾದರಿಯದು. ಇದರ ಆಕಾರ ಗುಂಡಗೆ ಅಥವಾ ಮೊಟ್ಟೆಯಂತೆ. ಸಿಪ್ಪೆ ತೆಳ್ಳಗೆ ಪೊರೆಯಂತಿದೆ.

ಅರ್ಜಿನಿಯ ಇಂಡಿಕ ಎಂಬ ಒಂದು ಬಗೆಯ ಕಾಡು ಬೆಳ್ಳುಳ್ಳಿಯೂ ಹೆಚ್ಚುಕಡಿಮೆ ಸಿಲ ಇಂಡಿಕವನ್ನೇ ಹೋಲುತ್ತದೆ. ಎಲೆಗಳಿಗಿಂತ ಮೊದಲು ಹೂಗೊಂಚಲು ಹುಟ್ಟುವ ಗುಣದಿಂದ ಕಂದುಬಣ್ಣದ ಹೂಗಳಿಂದ ಮತ್ತು ಹೂಗೊಂಚಲಿನಲ್ಲಿ ಹೂಗಳು ದೂರ ದೂರವಾಗಿ ಜೋಡಣೆಗೊಂಡಿರುವುದರಿಂದ ಇದು ಸಿಲ ಇಂಡಿಕದಿಂದ ಭಿನ್ನವಾಗಿದೆ. ಎರಡೂ ಬಗೆಯ ಕಾಡು ಬೆಳ್ಳುಳ್ಳಿಯ ಕಂದಗೆಡ್ಡೆಗಳಲ್ಲಿ ಸಿಲ್ಲೇರೆನ್–ಎ ಮತ್ತು ಸಿಲ್ಲೇರೆನ್–ಬಿ ಎಂಬ ರಾಸಾಯನಿಕ ಘಟಕಗಳು (ಗ್ಲೈಕೊಸೈಡ್ಸ್) ಇವೆ. ಅವುಗಳಲ್ಲಿ ಮೊದಲನೆಯದನ್ನು ಹರಳಿನ ರೂಪದಲ್ಲಿಯೂ ಎರಡನೆಯದನ್ನು ಪುಡಿಯ ರೂಪದಲ್ಲಿಯೂ ಪರಿಷ್ಕರಿಸಬಹುದಾಗಿದೆ.

ಕಾಡು ಬೆಳ್ಳುಳ್ಳಿಯ ಎಳೆಯ ಕಂದಗೆಡ್ಡೆಗಳಿಗೆ ಔಷಧೀಯ ಮಹತ್ತ್ವವಿದೆ. ಇವುಗಳ ರಸಕ್ಕೆ ಕಫ ಕತ್ತರಿಸುವ ಹೃದಯದ ಬಡಿತವನ್ನು ಪ್ರಚೋದಿಸುವ, ಜೀರ್ಣಕಾರಕ ಹಾಗೂ ಮೂತ್ರವರ್ಧಕ ಗುಣಗಳಿವೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಬಳಸಿದಾಗ ಈ ರಸ ತೀಕ್ಷ್ಣ ವಿಷಪೂರಿತವೂ ವಾಂತಿಕಾರಕವೂ ವಿರೇಚಕವೂ ಆಗಬಲ್ಲುದು. ಇದನ್ನು ಸಾಮಾನ್ಯವಾಗಿ ಆಸ್ತಮಾ (ದಮ್ಮು), ಜಲೋದರ, ಸಂಧಿವಾತ, ತೊನ್ನು, ಚರ್ಮರೋಗ ಇತ್ಯಾದಿಗಳಿಗೆ ಔಷಧಿಯಾಗಿ ಬಳಸುವುದುಂಟು. ರಸವನ್ನು ಜೇನುತುಪ್ಪದೊಂದಿಗೆ ಬೆರೆಸಿ, ನೆಗಡಿ, ಶ್ವಾಸನಾಳದ ಊತ, ಗೂರಲು, ಇತ್ಯಾದಿ ದೀರ್ಘಕಾಲದ ರೋಗಗಳಿಗೂ ಹೃದಯಕ್ಕೆ ಸಂಬಂಧಿಸಿದ ಜಲೋದರ ಮುಂತಾದುವುಗಳಲ್ಲಿ ಮೂತ್ರ ವರ್ಧಕವಾಗಿಯೂ ಇದನ್ನು ಬಳಸುವುದುಂಟು. ಚರ್ಮದ ಮೇಲಿನ ಗಂಟು ಅಥವಾ ನಾರುಲಿಗಳನ್ನು ನಾಶಪಡಿಸಲು ಕಂದಗೆಡ್ಡೆಯ ಪುಡಿಯನ್ನು ಲೇಪಿಸುವುದುಂಟು. ಕಾಲಿನಲ್ಲಿ ಆಣಿ, ಒತ್ತುಗಂಟು ಮುಂತಾದುವುಗಳನ್ನು ನಿವಾರಿಸಲು ಗೆಡ್ಡೆಯನ್ನು ಹುರಿದು ಪುಡಿಮಾಡಿ ಬೆಚ್ಚಗಾಗಿ (ಪೋಲ್ಟೀಸು) ಬಳಸುವುದುಂಟು. ಕುದುರೆಗಳ ಮೂತ್ರ ರೋಗಕ್ಕೂ, ಹೊಟ್ಟೆ ನೋವಿಗೂ ಇದು ಉಪಯುಕ್ತ. (ಎಂ.ಎಸ್.ಎಸ್.ಆರ್.)

**ಕಾಡು ಮೆಣಸಿನ ಗಿಡ :** ರೂಟೇಸೀ ಕುಟುಂಬಕ್ಕೆ ಸೇರಿದ ಒಂದು ಪೊದೆ ಸಸ್ಯ. ಮಸಿಮುಳ್ಳು ಎಂದೂ ಇದನ್ನು ಕರೆಯುವುದುಂಟು. ಟೊಡೇಲಿಯ ಏಷ್ಯಾಟಿಕ ಇದರ ಶಾಸ್ತ್ರೀಯನಾಮ. ಇದು ನೇರವಾಗಿ ಸ್ವತಂತ್ರವಾಗಿ ಬೆಳೆಯಬಲ್ಲುದಾದರೂ ಸಾಮಾನ್ಯವಾಗಿ ಯಾವುದಾದರೂ ಆಸರೆಯನ್ನು ಹಬ್ಬಿ ಬೆಳೆಯುವುದೇ ಹೆಚ್ಚು. ಈ ರೀತಿ ಹಬ್ಬಲು ಸಹಾಯಕವಾಗಿ ಬಾಗಿದ ಮುಳ್ಳುಗಳು ಇದರಲ್ಲಿವೆ. ಈ ಮುಳ್ಳುಗಳು ಗಿಡಕ್ಕೆ ರಕ್ಷಣೆಯನ್ನು ಒದಗಿಸುತ್ತವೆ. ಎಲೆಗಳು ಮೂರು ಮೂರು ಕಿರುಎಲೆಗಳನ್ನುಳ್ಳ ಸಂಯುಕ್ತ ಮಾದರಿಯವು. ಇವುಗಳ ಜೋಡಣೆ ಪರ್ಯಾಯ. ಎಲೆಗಳಲ್ಲಿ ಒಂದು ಬಗೆಯ ಎಣ್ಣೆಯನ್ನು ಸ್ರವಿಸುವಂಥ ಗ್ರಂಥಿಗಳಿವೆ. ಇವು ಸಣ್ಣ ಸಣ್ಣ ಚುಕ್ಕಿಗಳಂತೆ ಕಾಣುತ್ತವೆ. ಹೂಗೊಂಚಲುಗಳು ಎಲೆಗಳ ಕಂಕುಳಲ್ಲೊ ಇಲ್ಲವೆ ರೆಂಬೆಗಳ ತುದಿಯಲ್ಲೊ ಹುಟ್ಟುತ್ತವೆ: ಇವು ಮಧ್ಯಾರಂಭಿ ಅಥವಾ ಸಂಕೀರ್ಣ ಮಾದರಿಯವು. ಹೂಗಳು ಬಲು ಚಿಕ್ಕವು, ಭಿನ್ನಲಿಂಗಿಗಳು. ಒಂದೊಂದು ಹೂವಿನಲ್ಲೂ 5 ಬಿಡಿ ಪತ್ರಗಳಿಂದಾದ ಪುಷ್ಪಪಾತ್ರೆಯೂ 5 ಬಿಡಿ ದಳಗಳುಳ್ಳ ಪುಷ್ಪದಳ ಸಮೂಹವೂ ಇವೆ. ಗಂಡು ಹೂವಿನಲ್ಲಿ 5 ಕೇಸರಗಳಿವೆ. ಹೆಣ್ಣು ಹೂವಿನಲ್ಲಿ 5–6 ಕೋಣೆಗಳುಳ್ಳ ಉಚ್ಚಸ್ಥಾನದ ಗುಂಡನೆಯ ಅಂಡಾಶಯವಿದೆ. ಶಲಾಕಿಯಿಲ್ಲ. ಅಂಡಕಗಳ ಸಂಖ್ಯೆ ಪ್ರತಿಕೋಣೆಗೂ 2 ಫಲ ರಸಭರಿತವಾಗಿದೆ. ಅದರ ಬಣ್ಣ ಕಿತ್ತಳೆ.

ಕಾಡುಮೆಣಸಿನ ಗಿಡ ಭಾರತದ ಎಲ್ಲ ಪ್ರದೇಶಗಳಲ್ಲಿ ಸಾಮಾನ್ಯವಾದರೂ ದಕ್ಷಿಣ ಭಾರತ, ಒರಿಸ್ಸ, ಖಾಸಿಬೆಟ್ಟಗಳು ಮತ್ತು ಹಿಮಾಲಯದ ತಪ್ಪಲಿನಲ್ಲಿ ವಿಶೇಷವಾಗಿದೆ. ಈ ಗಿಡದಲ್ಲಿ ಬರ್ಬೆರಿನ್, ಟೊಡೆಲಿನ್ ಮತ್ತು ಟೊಡೆಲಿನಿನ್ ಎಂಬ ಸಸ್ಯಕ್ಷಾರಗಳಿವೆ. ಇದರ ಬೇರು, ತೊಗಟೆ, ಎಲೆ ಮತ್ತು ಕಾಯಿಗಳಿಗೆ ಔಷಧೀಯ ಮಹತ್ತ್ವವಿದೆ. ಎಲೆ ಮತ್ತು ಬೇರಿನ ತೊಗಟೆಯ ರಸವನ್ನು ನಿಯತಕಾಲಿಕ ಜ್ವರ ಮತ್ತಿತರ ಜ್ವರ ಹಾರಕವಾಗಿಯೂ ಶಕ್ತಿವರ್ಧಕವಾಗಿಯೂ ಪಚನಕಾರಕವಾಗಿಯೂ ಶಕ್ತಿವರ್ಧಕವಾಗಿಯೂ ಉಪಯೋಗಿಸಬಹುದು. ಮಲೆನಾಡು ಪ್ರದೇಶಗಳಲ್ಲಿ ಮಲೇರಿಯಕ್ಕೂ ಸಿದ್ಧೌಷಧವಾಗಿ ಬಳಸುವುದುಂಟು. ಬೇರಿನ ಕಷಾಯ ವಾತಹರವೂ ಹೌದು. ಅದನ್ನು ಭೇದಿ, ನರದೌರ್ಬಲ್ಯ, ಅಶಕ್ತತೆ ಮುಂತಾದುವುಗಳಲ್ಲೂ ಉಪಯೋಗಿಸಬಹುದು. ಬೇರು ಮತ್ತು ಕಾಯಿಗಳನ್ನು ಎಣ್ಣೆಯಲ್ಲಿ ಹುರಿದು ಸಂಧಿವಾತಕ್ಕೆ ಲೇಪನವಾಗಿ ಬಳಸುತ್ತಾರೆ. ಕಾಯಿಗಳ ಕಷಾಯಕ್ಕೆ ಉಪ್ಪು ಸೇರಿಸಿ ಹಲ್ಲು ನೋವು, ಉದರವಾಯುಗಳ ನಿವಾರಣೆಗೂ ಬಳಸಬಹುದು. ಕೆಲವೆಡೆ ಕಾಯಿಗಳಿಂದ ಉಪ್ಪಿನಕಾಯಿ ಮಾಡುವುದೂ ಉಂಟು. (ಎಂ.ಎಸ್.ಎಸ್.ಆರ್.)

**ಕಾಡು ಮೈನ :** ಆಕ್ರಿಡೋಥೀರಸ್ ಫಸ್ಕಸ್ ಎಂಬ ವೈಜ್ಞಾನಿಕ ಹೆಸರಿನ ಹಕ್ಕಿ. ನೋಡಲು ಮೈನಾ ಹಕ್ಕಿಯಂತಿರುವುದರಿಂದಲೂ ಕಾಡುಗಳಲ್ಲಿ ವಾಸಿಸುವುದರಿಂದಲೂ ಇದಕ್ಕೆ ಈ ಹೆಸರು. ಭಾರತದಲ್ಲಿ ಕರ್ನಾಟಕ, ಕೇರಳ, ಪಶ್ಚಿಮ ಘಟ್ಟಗಳು, ಉತ್ತರ ಗುಜರಾತ್, ನೀಲಗಿರಿ, ಪಳನಿ ಬೆಟ್ಟಗಳು, ಅಸ್ಸಾಮ್ ಮತ್ತು ಹಿಮಾಲಯದ 7000' ಎತ್ತರದ ಪ್ರದೇಶಗಳ ಕಾಡುಗಳಲ್ಲಿ ಹೇರಳವಾಗಿ ಕಾಣಬರುತ್ತವೆ. ಇದು ಗಾತ್ರದಲ್ಲೂ ದೇಹದ ಹಲವಾರು ಲಕ್ಷಣಗಳಲ್ಲೂ ಮೈನವನ್ನೇ ಹೋಲುತ್ತದೆ. ಆದರೆ ಇದರ ದೇಹದ



ಬಣ್ಣ ಬೂದಿಮಿಶ್ರಿತ ಕಂದು, ಕೇಸರಿ ಬಣ್ಣದ ಕಾಲುಗಳು ಮತ್ತು ಕೊಕ್ಕನ್ನು ಹೊಂದಿರುತ್ತವೆ. ಕಣ್ಣಿನ ಸುತ್ತ ಹಳದಿ ಬಣ್ಣದ ಚರ್ಮ ಇಲ್ಲ; ತಲೆಯ ಮೇಲೆ ಪೊದೆಯಂಥ ಶಿಖೆ ಇದೆ ಈ ಕಾರಣಗಳಿಂದ ಇದು ಮೈನ ಹಕ್ಕಿಯಿಂದ ಭಿನ್ನವಾಗಿದೆ. ಸಾಮಾನ್ಯವಾಗಿ ಜೋಡಿಗಳಲ್ಲಿಯೋ ಗುಂಪುಗಳಲ್ಲಿಯೋ ವಾಸಿಸುವುವು. ವಾಸಿಸುವ ಇದು ಮಾನವನ ವಸತಿಗಳಿಂದ ದೂರವಾಗಿರುತ್ತದೆ. ಸರ್ವಭಕ್ಷಕ. ಹಲವಾರು ಬಗೆಯ ಕೀಟಗಳು, ಮಿಡತೆಗಳು, ಕಪ್ಪೆ, ಹಣ್ಣು, ಕಾಯಿ, ಹೂವಿನ ಮಕರಂದ ಮುಂತಾದವು ಇದಕ್ಕೆ ಬಲು ಇಷ್ಟವಾದ ಆಹಾರ. ದನಗಳು ಹುಲ್ಲು ಮೇಯುತ್ತ ಹೋಗುವಾಗ ಹಾರುವ ಕೀಟಗಳನ್ನು ಹಿಡಿದು ತಿನ್ನುತ್ತವೆ. ಮೈನ ಹಕ್ಕಿಯಂತೆಯೇ ಕೂಗುವುದುಂಟು. ಫೆಬ್ರವರಿ–ಜುಲೈ ತಿಂಗಳುಗಳ ಸುಮಾರಿನಲ್ಲಿ ಗೂಡುಕಟ್ಟುತ್ತದೆ. ಗೂಡನ್ನು ಪ್ರತ್ಯೇಕವಾಗೇನೂ ಕಟ್ಟುವುದಿಲ್ಲ. ಮರಕುಟುಕ, ಸೊಪ್ಪುಕುಟಿರ ಇವೇ ಮುಂತಾದ ಮರದಲ್ಲಿ ರಂಧ್ರ ಕೊರೆದು ಗೂಡು ಮಾಡುವ ಹಕ್ಕಿಗಳ ಗೂಡನ್ನು ಅವು ತೊರೆದ ಅನಂತರ ಹುಲ್ಲು, ಸೊಪ್ಪುಗಳನ್ನು ತುಂಬಿ ಬಳಸಿಕೊಳ್ಳುತ್ತವೆ. ಆದ್ದರಿಂದ ಇವು ದ್ವಿತೀಯ ಹಂತದ ಬಳಕೆದಾರರು. ಸಾಮಾನ್ಯವಾಗಿ 3–4 ಮಿರುಗುವ ನೀಲಿಬಣ್ಣದ ಮೊಟ್ಟೆಗಳನ್ನಿಡುತ್ತವೆ. (ವಿ.ಕೆ.ವಿ.)

**ಕಾಡುರಾಗಿ ಹುಲ್ಲು :** ದನಕರುಗಳಿಗೆ ಮೇವಾಗಿ ಬಳಕೆಯಾಗುವ ಹುಲ್ಲುಗಳಲ್ಲಿ ಬಹಳ ಪ್ರಸಿದ್ಧವಾದುದು. ಇದು ಗ್ರಾಮಿನೀ (ಪೋಯೇಸೀ) ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕನಾಮ ಡ್ಯಾಕ್ಟಿಲೋಕ್ಟೀನಿಯಮ್ ಈಜಿಪ್ಟಿಕಮ್. ಎಲ್ಯುಸೈನೀ ಈಜಿಪ್ಟಿಕಮ್ ಎಂಬುದು ಇದರ ಪರ್ಯಾಯನಾಮ, ಉಷ್ಣ ಹಾಗೂ ಸಮಶೀತೋಷ್ಣವಲಯಗಳ ಬಯಲು ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ದಕ್ಷಿಣ ಆಫ್ರಿಕದಲ್ಲಿ ದನಗಳ ಮೇವಿಗೆಂದೇ ಇದನ್ನು ಹುಲ್ಲುಗಾವಲುಗಳಲ್ಲಿ ಬೆಳೆಸುವುದುಂಟು. ಸುಮಾರು 45 ಸೆಂಮೀ ಎತ್ತರಕ್ಕೆ ಬೆಳೆಯುವ ವಾರ್ಷಿಕ ಅಥವಾ ಬಹು ವಾರ್ಷಿಕ ಗಿಡ ಇದು. ಇತರ ಹುಲ್ಲುಗಳಲ್ಲಿರುವಂತೆಯೆ ಇದರಲ್ಲೂ ತೊಡಕು ಬೇರೂ ಸರಳವಾದ ಉದ್ದನೆಯ ಪಟ್ಟಿಯಂಥ ಎಲೆಗಳೂ ಇವೆ. ಹೂಗೊಂಚಲು ಬಹುವಾಗಿ ಕವಲೊಡೆದ ಅಂಬೆಲ್ ಮಾದರಿಯದು. 11/2"–3" ಉದ್ದವಿದೆ.

ಇದು ಹೆಚ್ಚಾಗಿ ಮೇವಾಗಿ ಉಪಯೋಗವಾಗುವುದಾದರೂ ಭಾರತ ಮತ್ತು ಆಫ್ರಿಕಗಳಲ್ಲಿ ಬರಗಾಲದ ಸಂದರ್ಭದಲ್ಲಿ ಇದರ ಕಾಳುಗಳನ್ನು ಆಹಾರವಾಗಿ ಬಳಸುವುದುಂಟು. ಇದರ ವಾಸನೆ ಅಷ್ಟು ಮಧುರವಾಗಿಲ್ಲದಿದ್ದರೂ ತಿನ್ನಲು ರುಚಿಯಾಗಿದೆ. ಕಾಡುರಾಗಿ

ಹುಲ್ಲಿಗೆ ಔಷಧೀಯ ಬೇಡಿಕೆಯೂ ಇದೆ. ಆಫ್ರಿಕದಲ್ಲಿ ಮೂತ್ರಪಿಂಡದ ರೋಗಗಳಿಗೆ ಇದನ್ನು ಔಷಧಿಯಾಗಿ ಉಪಯೋಗಿಸುತ್ತಾರೆ. (ಎ.ಕೆ.ಕೆ.)

**ಕಾಡು ರುದ್ರಾಕ್ಷಿ :** ಸ್ಟರ್ಕ್ಯೂಲಿಯೇಸೀ ಕುಟುಂಬಕ್ಕೆ ಸೇರಿದ ಗೌಝುಮ ಟೊಮೆಂಟೋಸ ಎಂಬ ಶಾಸ್ತ್ರೀಯ ಹೆಸರುಳ್ಳ ಮಧ್ಯಮ ಗಾತ್ರದ ಮರ (ಎತ್ತರ ಸುಮಾರು 20'–30'). ಭದ್ರಾಕ್ಷಿ ಮರ, ಜೇನುಮರ ಎಂದೂ ಇದನ್ನು ಕರೆಯುವುದುಂಟು. ಅಮೆರಿಕದ ಉಷ್ಣವಲಯದ ಮೂಲವಾಸಿಯಾದ ಇದನ್ನು ಈಗ ಭಾರತಕ್ಕೂ ತಂದು ಅಲಂಕಾರಸಸ್ಯವಾಗಿ ಬೆಳೆಸಿದ್ದಾರೆ. ಇದು ಕಾಡುಗಳಿಗೂ ಹಬ್ಬಿದೆ. ಎಲೆಗಳು ಸರಳ ಮಾದರಿಯವು. ಅವುಗಳ ಜೋಡಣೆ ಪರ್ಯಾಯ. ಎಲೆಯ ಮೇಲೆಲ್ಲ ಸೂಕ್ಷ್ಮವಾದ ಕೂದಲುಗಳಿರುವುದರಿಂದ ಎಲೆ ಒರಟಾಗಿದೆ. ಹೂಗಳು ಚಿಕ್ಕವು, ಹಳದಿ ಬಣ್ಣದವು, ದ್ವಿಲಿಂಗಿಗಳು. ಎಲೆಗಳ ಕಂಕುಳಲ್ಲಿ ಹುಟ್ಟುವ ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಪುಷ್ಪಪತ್ರಗಳು 5, ದಳಗಳೂ 5.ದಳಗಳ ಬುಡ ಕುಳಿಯಂತಿದೆ; ತುದಿ ಪಟ್ಟಿಯ ರೂಪದಲ್ಲಿ ಬೆಳೆದಿದ್ದು

ಹೂ ಬಿಟ್ಟಿರುವ ರೆಂಬೆ ಮತ್ತು ಕಾಯಿಗಳು

ಕವಲೊಡೆದಿದೆ. ಕೇಸರಗಳು 5; ಇವುಗಳಿಗೆ ಪರ್ಯಾಯವಾಗಿ 5 ಬಂಜೆಕೇಸರಗಳಿವೆ. ಕೇಸರಗಳ ಹಾಗೂ ಬಂಜೆ ಕೇಸರಗಳ ಬುಡ ಕೂಡಿಕೊಂಡಿದೆ. ಅಂಡಾಶಯ ಉಚ್ಚಸ್ಥಾನದ್ದು: 5 ಕಾರ್ಪೆಲುಗಳಿಂದ ಕೂಡಿದೆ. ಅಂಡಕಗಳು ಅಸಂಖ್ಯ. ಕಾಯಿ ಗುಂಡಗಿದೆ. ಬಲುಗಟ್ಟಿ. ಅದರ ಮೇಲೆಲ್ಲ ಸಣ್ಣ ಸಣ್ಣ ಗಂಟುಗಳಿವೆ. ಇದರಿಂದಾಗಿ ಕಾಯಿ ರುದ್ರಾಕ್ಷಿಯನ್ನು (ಎಲಿಯೋಕಾರ್ಪಸ್ ಜಾನಿಟ್ರಸ್ ಎಂಬ ಗಿಡದ ಕಾಯಿ) ಹೋಲುತ್ತದೆ.

ಕಾಯಿ ತಿನ್ನಲು ಯೋಗ್ಯ. ಇದರಲ್ಲಿ ಒಂದು ಬಗೆಯ ಸಿಹಿ ಅಂಟುಪದಾರ್ಥವಿದೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ ಅತಿಸಾರವುಂಟಾಗುತ್ತದೆ. ಮಾರಿಷಸ್ ದ್ವೀಪದಲ್ಲಿ ಕಾಯನ್ನು ಬ್ರಾಂಕೈಟಿಸ್ ರೋಗ ನಿವಾರಣೆಗೂ ಪ್ರತಿ ಬಂಧಕವಾಗೂ ಉಪಯೋಗಿಸುತ್ತಾರೆ. ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಇದರ ತೊಗಟೆಯನ್ನು ಆನೆಕಾಲಿನ ರೋಗ ನಿವಾರಣೆಗೂ ಶಕ್ತಿವರ್ಧನೆಗೂ ಬಳಸುವುದುಂಟು ಕಾಡುರುದ್ರಾಕ್ಷಿಯ ಎಳೆಯ ಕಾಂಡದಿಂದ ನಾರನ್ನು ತೆಗೆದು ಹಗ್ಗ ಮಾಡಲು ಉಪಯೋಗಿಸುತ್ತಾರೆ. ಚೌಬೀನೆಯಿಂದ ಪೆಟ್ಟಿಗೆ, ಪೀಠೋಪಕರಣಗಳನ್ನು ಮಾಡಬಹುದು. (ಕೆ.ಎಂ.)

**ಕಾಡು ಲೂಸರ್ನ್ ಸೊಪ್ಪು :** ಮೆಲಿಲೋಟಸ್ ಇಂಡಿಕ ಎಂಬ ವೈಜ್ಞಾನಿಕ ಹೆಸರಿನ ಏಕವಾರ್ಷಿಕ ಅಥವಾ ದ್ವೈವಾರ್ಷಿಕ ಮೂಲಿಕೆ ಸಸ್ಯ. ಎಲ್ಲೊ ಸ್ವೀಟ್ ಕ್ಲವರ್ ಎಂಬುದು ಇದರ ಸಾಮಾನ್ಯ ಬಳಕೆಯ ಇಂಗ್ಲಿಷ್ ಹೆಸರು. ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪಕುಟುಂಬಕ್ಕೆ ಸೇರಿದೆ. ಬಹಳ ಹಿಂದಿನಿಂದ ಭಾರತದಲ್ಲೆಲ್ಲ (ಬಹುತೇಕ ಪಂಜಾಬು, ಉತ್ತರಪ್ರದೇಶ, ದೆಹಲಿ, ಬಿಹಾರ್) ವಿಸ್ತಾರವಾಗಿ ಸಾಗುವಳಿ ಮಾಡಿದ ಹೊಲಗಳಲ್ಲಿ ಮೇವಿನ ಸಲುವಾಗಿ ಬೆಳೆಸುತ್ತಿದ್ದಾರೆ. ಪ್ರಪಂಚದ ಬೇರೆ ದೇಶಗಳಲ್ಲೂ ಹರಡಿದೆ. ಇದಕ್ಕೆ ಸಮಶೀತೋಷ್ಣ ಮತ್ತು ಉಷ್ಣಹವೆ ಉತ್ತಮ. ಎಲೆಗಳು ಮೂರು ಕಿರು ಎಲೆಗಳಿಂದ (ಪರ್ಣಿಕೆ) ಕೂಡಿದ ಸಂಯುಕ್ತ ಎಲೆಗಳು. ಪರ್ಣಿಕೆಗಳು ನೀಳವಾಗಿವೆ. ಅವುಗಳ ಅಂಚು ನೇರ. ಹೂಗೊಂಚಲು ಅಂತ್ಯಾರಂಭಿ ಮಾದರಿಯದು. ಎಲೆಗಳ ಕಂಕುಳಲ್ಲಿ ಹುಟ್ಟುತ್ತದೆ. ಹೂಗಳು ಚಿಕ್ಕವು. ಅವುಗಳ ಬಣ್ಣಹಳದಿ. ಫಲಗಳು ಚಪ್ಪಟೆ. ಅವುಗಳ ಬಣ್ಣ ಆಲಿವ್ ಹಸುರು. ಕಾಡು ಲೂಸರ್ನ್ ಸೊಪ್ಪಿಗೆ ತನ್ನದೇ ಆದ ಒಂದು ರೀತಿಯ ಮಧುರವಾಸನೆಯ ಕಹಿರುಚಿ ಇದೆ. ಇದಕ್ಕೆ ಕಾರಣ ಅದರಲ್ಲಿರುವ ಕೂಮರಿನ್ ಎಂಬ ರಾಸಾಯನಿಕ ವಸ್ತು.

ಕಾಡು ಲೂಸರ್ನ್ ಸೊಪ್ಪನ್ನು ಪಂಜಾಬಿನಲ್ಲಿ ಸುಮಾರು 3 ಲಕ್ಷ ಎಕರೆ ಪ್ರದೇಶದಲ್ಲಿ ಮೇವಿಗಾಗಿ ಬೆಳೆಸುತ್ತಾರೆ. ಅಲ್ಲಿ ಇದಕ್ಕೆ ಸೆಂಜಿ ಎಂಬ ಹೆಸರಿದೆ. ಇದನ್ನು ಆಹಾರದ ಬೆಳೆಗಳಾದ ಗೋದಿ, ಜೋಳ ಮತ್ತು ಬತ್ತದೊಂದಿಗೆ ಅಥವಾ ಹಣದ ಬೆಳೆಗಳಾದ ಹತ್ತಿ, ಕಬ್ಬು ಮತ್ತು ತಂಬಾಕಿನೊಂದಿಗೆ ಪರ್ಯಾಯ ಬೆಳೆಯಾಗಿ ಬೆಳೆಸುವುದೇ ಹೆಚ್ಚು. ಬಾರ್ಲಿ ಮತ್ತು ಸಜ್ಜೆಗಳೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಸುವುದೂ ಉಂಟು. ಪಂಜಾಬಿನ ನೀರಾವರಿ ಪ್ರದೇಶಗಳಲ್ಲಿ ಚಳಿಗಾಲದ ಬೆಳೆಯಾಗಿ ಬೆಳೆಸುತ್ತಿದ್ದರೂ ಕಡಿಮೆ ನೀರಾವರಿ ಸೌಕರ್ಯವಿರುವ ಪ್ರದೇಶಗಳಲ್ಲೂ ಬೆಳೆಯಬಲ್ಲದು. ಎಲ್ಲ ತರದ ಮಣ್ಣಿನಲ್ಲೂ ಬೆಳೆಯಬಲ್ಲ ಇದಕ್ಕೆ ಕ್ಷಾರೀಯ ಮತ್ತು ಫಲವತ್ತಾದ ಮಣ್ಣು ಉತ್ತಮ. ಬಿತ್ತನೆಯ ಕಾಲ ಸೆಪ್ಟೆಂಬರ್‌ನಿಂದ ನವೆಂಬರ್‌ವರೆಗೆ. ಬಿತ್ತನೆಯ ಮುನ್ನ ಹೊಲವನ್ನು ಮೂರು ನಾಲ್ಕು ಬಾರಿ ಮತ್ತು ಹದಗೊಳಿಸಬೇಕು. ಬೀಜಗಳ ಸಿಪ್ಪೆ ಗಟ್ಟಿಯಾಗಿರುವುದರಿಂದ, ಬಿತ್ತನೆಯ ಮುಂಚೆ ಸಿಪ್ಪೆಗಳನ್ನು ಒಡೆಯಬೇಕು. ಬೀಜಗಳನ್ನು ನೀರಿನಲ್ಲಿ 6–8 ದಿನ ನೆನೆಸಿದರೆ ಉತ್ತಮ. ಇಲ್ಲವೆ, ಬಿತ್ತಿದ ಮೇಲೆ ಹೊಲದಲ್ಲಿ ಒಂದು ವಾರದ ತನಕ ನೀರು ನಿಲ್ಲಿಸಬೇಕು. ಸಾಧಾರಣವಾಗಿ ಎಕರೆಯೊಂದಕ್ಕೆ 40–50 ಪೌಂಡು ಬೀಜಗಳನ್ನು ಬಿತ್ತಬಹುದು. ಪ್ರಾರಂಭದಲ್ಲಿ ಕಳೆಕೀಳುವುದು ಅಗತ್ಯ. ಪರ್ಯಾಯ ಬೆಳೆಗಾಗಿ ಬೆಳೆಸುವುದರಿಂದ ಇದಕ್ಕೆಂದೇ ಪ್ರತ್ಯೇಕವಾಗಿ ಗೊಬ್ಬರ ಹಾಕುವ ಅಗತ್ಯವಿಲ್ಲ. ಸಸ್ಯಗಳು ಎಳೆಯದರಲ್ಲಿ ಡೌನಿಮಿಲ್ಡ್ಯೂ ಮತ್ತು ಪೌಡರಿಮಿಲ್ಡ್ಯೂ ರೋಗಗಳಿಗೆ ತುತ್ತಾಗಬಹುದು. ಫೆಬ್ರವರಿ, ಏಪ್ರಿಲ್ ತಿಂಗಳಲ್ಲಿ ಕೊಯ್ಲು ಮಾಡುತ್ತಾರೆ. ಒಂದು ಬೆಳೆಯನ್ನು ಮೂರು ನಾಲ್ಕು ಸಲ ಕೊಯ್ಲು ಮಾಡಬಹುದು. ಎಕರೆಯೊಂದರ ಉತ್ಪನ್ನ 150 ರಿಂದ 250 ಟನ್‌ಗಳಷ್ಟು. ಕಾಡು ಲೂಸರ್ನ್ ಸೊಪ್ಪು ಬಹಳ ರುಚಿಕರವಾದ ಮೇವು. ಆದರೆ ಗಿಡಗಳು ಹೂ ಬಿಡುವುದಕ್ಕೆ ಮುಂಚೆಯೇ ಮೇವಾಗಿ ಉಪಯೋಗಿಸಬಾರದು. ಏಕೆಂದರೆ, ಈ ಸ್ಥಿತಿಯಲ್ಲಿ ದನಗಳು ತಿಂದರೆ ಅವು ಊದು ರೋಗಕ್ಕೆ ಈಡಾಗುವ ಸಂಭವವುಂಟು. ಅಲ್ಲದೆ ಈ ಸೊಪ್ಪನ್ನು ಬೂಸದೊಂದಿಗೆ ಮಿಶ್ರಮಾಡಿಯೇ ಬಳಸಬೇಕು. ಬರಿಯ ಸೊಪ್ಪನ್ನೇ ದನಗಳಿಗೆ ತಿನಿಸಿದರೆ ಅವಕ್ಕೆ ವಾತರೋಗ, ಒಗ್ಗದಿಕೆ, ಅಲಸಿಕೆ ಮುಂತಾದ ಕೆಟ್ಟ ಪರಿಣಾಮಗಳುಂಟಾಗುತ್ತವೆ. ಇದರಲ್ಲಿ ಸಾರಜನಕದ ಅಂಶ ಹೆಚ್ಚಾಗಿದ್ದು, ಭೂಮಿಯ ಸಾರಜನಕವನ್ನು ಹೆಚ್ಚಿಸುವಲ್ಲಿ ಸಸ್ಯಗಳು ಸಹಾಯಕವಾಗಿವೆ. ಈ ಗಿಡ ಭೂಸವೆತವನ್ನು ತಡೆಗಟ್ಟುವುದರಲ್ಲಿ ಸಹಕರಿಸಿ ಭೂರಕ್ಷಣೆಗೆ ಸಹಾಯಕವಾಗಿದೆ. ಪಂಜಾಬಿನಲ್ಲಿ ಇದನ್ನು ಹಸುರುಗೊಬ್ಬರವಾಗಿ ಉಪಯೋಗಿಸುತ್ತಾರೆ. ಮೇಲಿಂದ ಮೇಲೆ ಬತ್ತ ಮತ್ತು ಕಬ್ಬುಗಳೊಂದಿಗೆ ಪರ್ಯಾಯ ಬೆಳೆಯಾಗಿ ಬೆಳೆಸುವುದರಿಂದ ಮುಖ್ಯ ಬೆಳೆಯ ಉತ್ಪತ್ತಿಯೂ ಹೆಚ್ಚುತ್ತದೆ ಎಂದು ತಿಳಿದುಬಂದಿದೆ. (ಎ.ಕೆ.ಕೆ.)

**ಕಾಡುಸುವರ್ಣ ಗೆಡ್ಡೆ :** ಅರಿಸೀಮ ಎಂಬ ಹೆಸರಿನ ಮೂಲಿಕೆ ಸಸ್ಯ. ಏರೇಸೀ ಕುಟುಂಬಕ್ಕೆ ಸೇರಿದೆ. ಈ ಜಾತಿಯಲ್ಲಿ ಸುಮಾರು 105 ಪ್ರಭೇದಗಳಿವೆ. ಇವು ಏಷ್ಯ, ಅಬಿಸೀನಿಯ ಮತ್ತು ಉತ್ತರ ಅಮೆರಿಕದ ಉಷ್ಣ ಮತ್ತು ಸಮಶೀತೋಷ್ಣ ಪ್ರದೇಶಗಳಲ್ಲಿ ಬೆಳೆಯುತ್ತವೆ. ಹಿಮಾಲಯದ 4000' – 7000' ವರೆಗಿನ ಪ್ರದೇಶಗಳಲ್ಲಿ ಸುಮಾರು 30 ಪ್ರಭೇದಗಳು ಬೆಳೆಯುತ್ತವೆ. ದಕ್ಷಿಣ ಭಾರತದ ಗುಡ್ಡಗಾಡು ಪ್ರದೇಶಗಳಲ್ಲಿ ಸುಮಾರು 5 ಪ್ರಭೇದಗಳು ಕಾಣಬರುತ್ತವೆ. ಇದರ ಕಾಂಡ ಆಲೂಗೆಡ್ಡೆಯಲ್ಲಿರುವಂತೆ ನೆಲದೊಳಗೇ ಹುದುಗಿರುವ ಟ್ಯೂಬರ್ ಬಗೆಯದು. ಕಾಂಡದೊಳಗೆ ಅಧಿಕಪ್ರಮಾಣದಲ್ಲಿ ಪಿಷ್ಟವಿದೆ. ಕ್ಯಾಲ್ಸಿಯಮ್ ಆಕ್ಸಲೇಟ್ ಲವಣದ ಹರಳುಗಳೂ ಇವೆ. ಇವು ಇರುವುದರಿಂದ ತಿಂದರೆ ನಾಲಗೆ ಕಡಿತ ಬರುತ್ತದೆ. ಗೆಡ್ಡೆಯನ್ನು ಅನೇಕ ಸಾರಿ ನೀರಿನಲ್ಲಿ ಕುದಿಸಿ ಆ ನೀರನ್ನು ಹೊರಚೆಲ್ಲಿ, ಅನಂತರ ಉಪಯೋಗಿಸಬಹುದು. (ಎಚ್.ಎನ್.ಪಿ.)

**ಕಾಡು ಹಂದಿ :** ಇದು ಆರ್ಟಿಯೊಡ್ಯಾಕ್ಟೈಲ ಗಣದ ಸೂಯಿಡೀ ಕುಟುಂಬಕ್ಕೆ ಸೇರಿದ ಸಸ್ ಸ್ಕ್ರಾಫ ಕ್ರಿಸ್ಟೇಟಸ್, ಪೊಟ್ಯಾಮೊಕೀರಸ್ ಪಾರ್ಕಸ್, ಹೈಲೋಕೀರಸ್ ಮೈನರ್ಟ್‌ಜಾಗೆನಿ ಎಂಬ ಶಾಸ್ತ್ರೀಯ ಹೆಸರುಗಳುಳ್ಳ ವನವಾಸಿ ಹಂದಿಗಳಿಗಿರುವ ಸಾಮಾನ್ಯ ಹೆಸರು (ವೈಲ್ಡ್ ಬೋರ್). ಸಾಕುಹಂದಿಗಳ ಪೂರ್ವಜರಿವು. ಉದ್ದವಾದ ಚೂಪಾದ ತಲೆ, ಮೋಟಕಾದ ಕತ್ತು, ಗುಡಾಣದಂಥ ದೇಹ, ಮೊಂಡು ತುದಿಯ ಮೂತಿ, ಮೂತಿಯ ಕೊನೆಯಲ್ಲಿರುವ ಮೂಗಿನ ಹೊಳ್ಳೆಗಳು, ಸಣ್ಣ ಕಣ್ಣುಗಳು, ಉದ್ದನೆಯ ಕಿವಿಗಳು, ಒಂದೊಂದು ಪಾದದಲ್ಲೂ 4 ಬೆರಳುಗಳು ಮುಂತಾದ ಲಕ್ಷಣಗಳು ಎಲ್ಲ ಜಾತಿಗಳಲ್ಲೂ ಕಂಡುಬರುತ್ತವೆ. ಮೂತಿಯ ತುದಿಯಲ್ಲಿ ಮೃದ್ವಸ್ಥಿಯಿಂದ ರಚಿತವಾದ ತಟ್ಟೆಯೂ ಇದಕ್ಕೆ ಬಲ ಕೊಡುವಂತೆ ಒಂದು ಅನುನಾಸಿಕ ಮೂಳೆಯೂ ಇವೆ. ಇದರಿಂದಾಗಿ ಮೂತಿ ಬಲಯುತವಾಗಿದ್ದು ನೆಲವನ್ನು ತೋಡಲು ಅನುಕೂಲವಾಗಿದೆ. ಕಿವಿಗಳ ತುದಿಯಲ್ಲಿ ಕೂದಲಿನ ಕುಚ್ಚಿದೆ. ಪಾದದಲ್ಲಿನ

ನಾಲ್ಕು ಬೆರಳುಗಳಲ್ಲಿ ಮಧ್ಯದವೆರಡು ಚಪ್ಪಟೆಯಾಗಿವೆಯಲ್ಲದೆ ಅವಕ್ಕೆ ಗೊರಸುಗಳಿವೆ. ಉಳಿದವೆರಡು ನೆಲದಿಂದ ಮೇಲಕ್ಕೇ ಇವೆ. ಎಲ್ಲ ಕಾಡುಹಂದಿಗಳ ಮರಿಗಳ ದೇಹದ ಮೇಲೂ ವಿಶೇಷವಾದ ಉದ್ದುದ್ದನೆಯ ಬಿಳಿಯ ಪಟ್ಟೆಗಳಿವೆ. ಕಾಡುಹಂದಿಗಳ ಇನ್ನೊಂದು ವಿಶೇಷ ಲಕ್ಷಣವೆಂದರೆ ಮೇಲಿನ ಮತ್ತು ಕೆಳಗಿನ ದವಡೆಯ ಕೋರೆ ಹಲ್ಲುಗಳು ಬಹಳ ಉದ್ದವಿದ್ದು ಬಾಯಿಯಿಂದ ಹೊರಚಾಚಿ ಮೇಲ್ಮುಖನಾಗಿ ಬಾಗಿರುವುದು. ಚಾಕುವಿನಷ್ಟು ಹರಿತವಾಗಿರುವ ಇವು ಹಂದಿಗಳ ಸ್ವರಕ್ಷಣೆಯ ಪ್ರಮುಖ ಸಾಧನಗಳಾಗಿವೆ. ಕೆಲವು ಪ್ರಭೇದಗಳಲ್ಲಿ ಈ ಕೋರೆ ಹಲ್ಲುಗಳು ಪ್ರಾಣಿ ಬದುಕಿರುವವರೆಗೂ ಬೆಳೆಯುತ್ತಲೇ ಇರುತ್ತವೆ.

ಕಾಡುಹಂದಿಗಳು ಸಂಘಜೀವಿಗಳು. ಹಿಂಡಿನಲ್ಲಿ 40-50 ಪ್ರಾಣಿಗಳಿರುತ್ತವೆ. ಸ್ಥೂಲಕಾಯದವಾದರೂ ಇವು ಬಹಳ ವೇಗವಾಗಿ ಓಡಬಲ್ಲವು. ಇವಕ್ಕೆ ಚೆನ್ನಾಗಿ ಈಜುವುದಕ್ಕೂ ಬರುತ್ತದೆ. ಕೆಸರಿನಲ್ಲಿ ಬಿದ್ದು ಹೊರಳಾಡುವುದರೆಂದರೆ ಇವಕ್ಕೆ ಬಲು ಇಷ್ಟ. ಬಹಳ ಬಲಶಾಲಿ ಪ್ರಾಣಿಗಳೆಂದು ಹೆಸರಾಗಿರುವ ಇವು ಗಾಯಗೊಂಡಾಗ ಅಥವಾ ಶತ್ರುವಿನ ಆಕ್ರಮಣಕ್ಕೊಳಗಾದಾಗ ಬಲು ಕ್ರೂರವಾಗಿ ಅಸಾಮಾನ್ಯ ಧೈರ್ಯದಿಂದ ಹೋರಾಡಬಲ್ಲವು. ಚೂಪಾದ ಬಲವಾದ ಕೋರೆಗಳೇ ಇವುಗಳ ಆಯುಧ. ಶತ್ರು ಪ್ರಾಣಿ ಯಾವುದೇ ಇರಲಿ ದಿಟ್ಟತನದಿಂದ ಎದುರಿಸಬಲ್ಲವು. ಹುಲಿ, ಚಿರತೆ ಮುಂತಾದವನ್ನೂ ಎದುರಿಸಿ ಕೊಂದಿರುವ ನಿದರ್ಶನಗಳುಂಟು. ಸಾಧಾರಣವಾಗಿ ತಾವಾಗಿಯೇ ಆಕ್ರಮಣ ಮಾಡದಿದ್ದರೂ ಕೆಲವು ಬಗೆಯ ಕಾಡುಹಂದಿಗಳು ಯಾವ ಪ್ರಚೋದನೆಯೂ ಇಲ್ಲದೆ ಕೇವಲ ಆತ್ಮರಕ್ಷಣೆಗಾಗಿ ಮೇಲೆ ಬೀಳುತ್ತವೆ. ಕಾಡುಹಂದಿಗಳ ಚಟುವಟಿಕೆ ರಾತ್ರಿ ಕಾಲದಲ್ಲಿ ಹೆಚ್ಚು. ಸಂಜೆಯಿಂದ ಮುಂಜಾನೆಯವರೆಗೂ ಅವು ಆಹಾರಕ್ಕಾಗಿ ಅಲೆದಾಡುತ್ತವೆ. ಉಳಿದಂತೆ ಬೇರೆ ಪ್ರಾಣಿಗಳಿಂದ ದೂರವಾದ ಸ್ಥಳಗಳಲ್ಲಿ ಕೆಸರಿನಲ್ಲಿ ಹೊರಳಾಡಿಕೊಂಡೋ ಉದ್ದವಾಗಿ ಬೆಳೆದ ಹುಲ್ಲಿನ ಮರೆಯಲ್ಲೋ ಅಥವಾ ತಾವೇ ನಿರ್ಮಿಸಿಕೊಂಡ ಇಲ್ಲವೆ ಬೇರೆ ಪ್ರಾಣಿಗಳ ಬಿಲಗಳಲ್ಲೋ ಕಾಲ ಕಳೆಯುತ್ತವೆ. ಇವು ವಿವಿಧ ಬಗೆಯ ಆಹಾರವನ್ನು ತಿನ್ನುತ್ತವೆ. ಬೇರು, ಎಲೆ, ಕಂದಗೆಡ್ಡೆಗಳು, ಅಣಬೆಗಳು ಮುಂತಾದುವನ್ನೊಳಗೊಂಡ ಸಸ್ಯಾಹಾರವೇ ಪ್ರಧಾನವಾದರೂ ಕೆಲವು ಬಗೆಯವು ಎರೆಹುಳು, ಬಸವನಹುಳು, ಸಣ್ಣ ಇಲಿಗಳು, ಹಕ್ಕಿಗಳು, ಮೊಟ್ಟೆಗಳು ಮುಂತಾದವನ್ನೂ ತಿನ್ನುತ್ತವೆ. ಮೂತಿಯಿಂದ, ಕೋರೆ ಹಲ್ಲುಗಳಿಂದ ನೆಲವನ್ನು ಅಗೆದು ಆಹಾರವನ್ನು ಹುಡುಕಿ ಹೊರತೆಗೆದು ತಿನ್ನುವುದು ಇವಕ್ಕೆ ಇಷ್ಟ.



ಆಫ್ರಿಕದ ಕಾಡುಹಂದಿ–ಪೊಟ್ಯಾಮೊಕೀರಸ್ ಪಾರ್ಕಸ್

ಕಾಡುಹಂದಿಗಳ ಸಂತಾನೋತ್ಪತ್ತಿಯ ಕಾಲ ಸಾಮಾನ್ಯವಾಗಿ ಅಕ್ಟೋಬರ್–ಡಿಸೆಂಬರ್ ತಿಂಗಳುಗಳು. ಒಂದು ಸೂಲಿಗೆ ಹುಟ್ಟುವ ಮರಿಗಳ ಸಂಖ್ಯೆ 2 ರಿಂದ 14ರವರೆಗೆ. ಇದು ವಿವಿಧ ಪ್ರಭೇದಗಳಲ್ಲಿ ವ್ಯತ್ಯಾಸವಾಗಿರುತ್ತದೆ. ಅಂತೆಯೇ ಗರ್ಭಧಾರಣೆಯ ಅವಧಿಯೂ 112ರಿಂದ 175 ದಿವಸಗಳವರೆಗೆ ವ್ಯತ್ಯಾಸವಾಗುತ್ತದೆ. ಮರಿಗಳ ರಕ್ಷಣೆಯ ಭಾರ ಸಂಪೂರ್ಣವಾಗಿ ಹೆಣ್ಣು ಹಂದಿಯದು. ಮರಿಗಳು ಒಂದೂವರೆ ವರ್ಷ ವಯಸ್ಸಿನವಾಗುವ ವೇಳೆಗೆ ಲೈಂಗಿಕ ಪ್ರಬುದ್ಧತೆಯನ್ನು ತಲುಪುವುದಾದರೂ ಪೂರ್ಣ ಬೆಳವಣಿಗೆಗೆ 5-6 ವರ್ಷ ಬೇಕು. ಕಾಡುಹಂದಿಗಳ ಆಯಸ್ಸು ಸುಮಾರು 20 ವರ್ಷಗಳು.

ಸಸ್‌ಸ್ಕ್ರಾಫ ಎಂಬುದು ಯುರೋಪಿನ ಕಾಡುಹಂದಿ. ಸ್ಪೇನ್, ಆಸ್ಟ್ರಿಯ, ಜರ್ಮನಿ, ಉತ್ತರ ಆಫ್ರಿಕ, ಮಧ್ಯ ಹಾಗೂ ಉತ್ತರ ಏಷ್ಯಗಳಲ್ಲಿ ಇದರ ವ್ಯಾಪ್ತಿಯಿದೆ. ಅಮೆರಿಕ ಸಂಯುಕ್ತಸಂಸ್ಥಾನಗಳ ಕೆಲವು ಪ್ರದೇಶಗಳಲ್ಲೂ (ಟೆನೆಸ್ಸಿ ರಾಜ್ಯದ ಪೂರ್ವ ಭಾಗ) ಯುರೋಪಿನಿಂದ ಈ ಪ್ರಭೇದವನ್ನು ಕೊಂಡೊಯ್ದು ಬೆಳೆಸಲಾಗಿದೆ. ಸುಮಾರು 1 ಮೀ. ಎತ್ತರ ಮತ್ತು 1.8 ಮೀ ಉದ್ದದ ಈ ಕಾಡುಹಂದಿ 75-200 ಕೆಜಿ ತೂಗುತ್ತದೆ. ದೇಹದ ಬಣ್ಣ ಕಂದು ಅಥವಾ ಬೂದು ಮಿಶ್ರಿತ ಕಪ್ಪು. ಸಾಕುಹಂದಿಗಳ ಪೂರ್ವಜ ಪ್ರಾಣಿ ಇದು.

ಸಸ್‌ಸ್ಕ್ರಾಫ ಕ್ರಿಸ್ಟೇಟಸ್ ಎಂಬ ಪ್ರಭೇದ ಭಾರತದಲ್ಲಿ ಸಾಮಾನ್ಯವಾಗಿ ಕಾಣಸಿಗುವ ಕಾಡುಹಂದಿ. ಹಿಮಾಲಯದ 4500ಮೀ ಎತ್ತರದ ಪ್ರದೇಶಗಳಿಂದ ಹಿಡಿದು ಮೈದಾನ ಪ್ರದೇಶಗಳ ಕಾಡುಗಳಲ್ಲೆಲ್ಲ ಇದು ಅಮಿತ ಸಂಖ್ಯೆಯಲ್ಲಿದೆ. ಶ್ರೀಲಂಕ, ಮತ್ತು ಮ್ಯನ್ಮಾರ್‌ಗಳಲ್ಲೂ ಕಾಡುಹಂದಿಗಳಿರುವ ವರದಿಗಳಿವೆ. ಯುರೋಪಿನ ಕಾಡುಹಂದಿಗಿಂತ ಭಾರತದ್ದು ಹೆಚ್ಚು ಎತ್ತರ. ಮೈಮೇಲಿನ ಕೂದಲು ಒತ್ತಾಗಿಲ್ಲ. ಕತ್ತಿನಿಂದ ಬೆನ್ನಿನವರೆಗೂ ಕರಿಯ ಬಿರುಗೂದಲು ಹಬ್ಬಿದೆ. ಚಿಕ್ಕದಿದ್ದಾಗ ಬೂದುಮಿಶ್ರಿತ ಕಂದು ಬಣ್ಣಕ್ಕಿರುವ ಹಂದಿ ವಯಸ್ಸಾದಂತೆ ಕೆಂಗಂದು ಬಣ್ಣಕ್ಕೆ ತಿರುಗುತ್ತದೆ. ಇದು ಕಾಡುಹಂದಿಗಳಲ್ಲೆಲ್ಲ ಅತ್ಯಂತ ಧೈರ್ಯಶಾಲಿಯೂ ಕ್ರೂರಿಯೂ



ಯುರೋಪಿನ ಕಾಡುಹಂದಿ–ಸಸ್‌ಸ್ಕ್ರಾಫೆ

ಆದುದೆಂದು ಹೇಳಿಕೆ. ಅಂಡಮಾನ್ ದ್ವೀಪಗಳಲ್ಲಿ ಇದನ್ನು ಹೋಲುವ ಸಸ್‌ಸ್ಕ್ರಾಫ ಅಂಡಮಾನೆನ್ಸಸ್ ಎಂಬ ಪ್ರಭೇದ ಸಿಕ್ಕುತ್ತದೆ. ನೇಪಾಳ ಸಿಕ್ಕಿಂ, ಭೂತಾನ ಮತ್ತು ಅಸ್ಸಾಂಗಳಲ್ಲಿ ಒಂದು ಕುಳ್ಳ ಬಗೆಯ ಕಾಡುಹಂದಿ ಕಂಡುಬರುತ್ತದೆ. (ಸಸ್ ಸಾಲ್ವಾನಿಯಸ್). ಸುಮಾರು 33 ಸೆಂಮೀ ಎತ್ತರ, 66 ಸೆಂಮೀ ಉದ್ದವಿರುವ ಇದೂ 8 ಕೆಜಿ ತೂಗುತ್ತದೆ. ಇದರಲ್ಲಿ ಕತ್ತಿನ ಮೇಲಿನ ಕೇಸರ ಇಲ್ಲ; ಉಣ್ಣೆಯಂಥ ತುಪ್ಪಳ ಕೂದಲೂ ಇಲ್ಲ. ಕಿವಿಯ ತುದಿಯಲ್ಲಿರುವ ಕೂದಲೂ ಗಿಡ್ಡ. ಹೆಣ್ಣಿನಲ್ಲಿ ಮೂರು ಜೊತೆ ಮೊಲೆಗಳು ಮಾತ್ರ ಇವೆ (ಉಳಿದ ಕಾಡು ಹಂದಿಗಳಲ್ಲಿ ಮೊಲೆಗಳ ಸಂಖ್ಯೆ 6 ಜೊತೆ). ಉಳಿದೆಲ್ಲ ಜೀವನ ಕ್ರಮದಲ್ಲಿ ಇದು ಭಾರತದ ಕಾಡುಹಂದಿಯನ್ನು ಹೋಲುತ್ತದೆ.

ಪೊಟ್ಯಾಮೊಕೀರಸ್ ಪಾರ್ಕಸ್ ಎಂಬ ಶಾಸ್ತ್ರೀಯ ಹೆಸರಿನ ಕಾಡುಹಂದಿ ಆಫ್ರಿಕ ಖಂಡದ ಮೂಲವಾಸಿ. ಸಹರ ಮರುಭೂಮಿಯ ದಕ್ಷಿಣಕ್ಕಿರುವ ಪ್ರದೇಶಗಳಲ್ಲೂ ಮಡಗಾಸ್ಕರ್ ದ್ವೀಪದಲ್ಲೂ ಇದರ ವ್ಯಾಪ್ತಿಯಿದೆ. ಇದಕ್ಕೆ ಕೆಂಪುಹೊಳೆ ಹಂದಿ (ರೆಡ್ ರಿವರ್ ಪಿಗ್), ಆಫ್ರಿಕದ ಪೊದೆ ಹಂದಿ (ಆಫ್ರಿಕನ್ ಬುಷ್ ಪಿಗ್) ಎಂಬ ಸಾಮಾನ್ಯ ಬಳಕೆಯ ಹೆಸರುಗಳಿವೆ. ಬೇರೆ ಕಾಡುಹಂದಿಗಳಿಗಿಂತ ಗಾತ್ರದಲ್ಲಿದು ಚಿಕ್ಕದ್ದು. ಇದರ ಉದ್ದ 1.3 ಮೀ. ಎತ್ತರ 58-96 ಸೆಂಮೀ. ತೂಕ 75-130 ಕೆಜಿ. ದೇಹದ ಬಣ್ಣ ಕೆಂಪು ಮಿಶ್ರಿತ ಕಂದು. ಅಲ್ಲಲ್ಲಿ ಬಿಳಿಯ ಅಥವಾ ಹಳದಿ ಬಣ್ಣದ ಕೂದಲುಗಳಿವೆ. ಕಿವಿಯ ತುದಿಯ ಕೂದಲುಗಳು ಬಲು ಉದ್ದ. ಎರಡು ಕೆನ್ನೆಗಳ ಮೇಲೂ ಬಹಳ ಉದ್ದವಾದ ಕೂದಲುಗಳಿರುವುವಲ್ಲದೆ ಗಂಡು ಹಂದಿಯಲ್ಲಿ ಒಂದೊಂದು ಕಣ್ಣಿನ ಮುಂಭಾಗದಲ್ಲಿ ಮೂತಿಯ ಮೇಲೆ ಉದ್ದವಾದ ಒಂದು ಗಂಟಿದೆ.

ಮಧ್ಯ ಆಫ್ರಿಕದ ದಟ್ಟವಾದ ಕಾಡುಗಳಲ್ಲಿ ಹೈಲೋಕೀರಸ್ ಮೈನರ್ಟ್‌ಜಾಗೆನಿ ಎಂಬ ಹೆಸರಿನ ಕಾಡುಹಂದಿ ಕಾಣಸಿಗುತ್ತದೆ. ಇದರ ಉದ್ದ ಸುಮಾರು 76-86 ಸೆಂಮೀ. ಎತ್ತರ 15-19 ಸೆಂಮೀ. ದೇಹದ ಮೇಲೆಲ್ಲ ಉದ್ದವಾದ ಒರಟಾದ ಕಪ್ಪನೆಯ ಕೂದಲಿದೆ. ಚರ್ಮದ ಬಣ್ಣ ಕಪ್ಪು. ಕಣ್ಣಿನ ಸುತ್ತಣ ಪ್ರದೇಶ ರೋಮರಹಿತವಾಗಿರುವುದೂ ಕಣ್ಣಿನ ಮುಂಭಾಗದಲ್ಲಿ ಒಂದು ಗ್ರಂಥಿಯಿರುವುದೂ ಇದರ ವಿಶೇಷ ಲಕ್ಷಣಗಳು. ಸಾಮಾನ್ಯವಾಗಿ ಕೆಸರು ನೀರಿನಲ್ಲೇ ಹೆಚ್ಚು ಕಾಲ ಕಳೆಯುತ್ತದೆ. ಪೊದೆ ಸಸ್ಯಗಳ ಚಿಗುರು, ಹುಲ್ಲು ಇದರ ಪ್ರಧಾನ ಆಹಾರ.

ಎಲ್ಲ ಕಾಡುಹಂದಿಗಳೂ ಹೊಲಗದ್ದೆಗಳಿಗೆ ನುಗ್ಗಿ ಪೈರು ಹಾಳು ಮಾಡುವುದರಲ್ಲಿ ಹೆಸರಾದ ಪ್ರಾಣಿಗಳು. ಗೆಡ್ಡೆಗೆಣಸಿನ ಬೆಳೆ ಇವಕ್ಕೆ ಬಲು ಇಷ್ಟ. ಹೀಗೆ ಇವು ಅಪಾರವಾದ ನಷ್ಟವುಂಟುಮಾಡುವುದರಿಂದ ಮಾನವನ ಶತ್ರುಗಳೆನಿಸಿವೆ; ಮಾನವ ಇವನ್ನು ಬೇಟೆಯಾಡುತ್ತ ಬಂದಿದ್ದಾನೆ. ಇವುಗಳ ರುಚಿಕರವಾದ ಮಾಂಸಕ್ಕಾಗಿಯೂ ಕೇವಲ ಮೃಗಯಾ

ವಿನೋದಕ್ಕಾಗಿಯೂ ಇವನ್ನು ಬೇಟೆಯಾಡುವುದಿದೆ. ಕಾಡು ಹಂದಿ ಬಲು ಕ್ರೂರಿಯೂ ಬಲಶಾಲಿಯೂ ನಿರ್ಭಯವಾಗಿ ಶತ್ರುಗಳನ್ನು ಎದುರಿಸುವ ಛಾತಿಯುಳ್ಳದ್ದೂ ಆಗಿರುವುದರಿಂದ ಇದರ ಬೇಟೆ ಅತ್ಯಂತ ರೋಮಾಂಚಕಾರಿಯೂ ಅಪಾಯಕಾರಿಯೂ ಎನಿಸಿದೆ. ಕಾಡುಹಂದಿಯ ಬೇಟೆ ಬಹಳ ಹಿಂದಿನ ಕಾಲದಿಂದ ಭಾರತ ಮತ್ತು ಯುರೋಪುಗಳಲ್ಲಿ ರೂಢಿಯಲ್ಲಿದೆ. ಹಿಂದೆ ಕುದುರೆಗಳ ಮೇಲೇರಿ ಭಲ್ಲೆ ಮುಂತಾದ ಆಯುಧಗಳಿಂದ ಸಜ್ಜಾಗಿ ಹಂದಿಗಳನ್ನು ಬೆನ್ನಟ್ಟಿ ಬೇಟೆಯಾಡುವುದಿತ್ತು. ಹಂದಿಯನ್ನು ಬೆನ್ನಟ್ಟಲು ಬೇಟೆನಾಯಿಗಳ ಆವಶ್ಯಕತೆಯೂ ಇದೆ. ಈಗ ಭಲ್ಲೆಗಳ ಬದಲು ಬಂದೂಕುಗಳು ಬಂದಿವೆ. ಕಾಡುಹಂದಿಯ ಬೇಟೆ ಹಿಂದೆ ಯುರೋಪಿನ ಹಲವಾರು ರಾಜರುಗಳ ಅಚ್ಚು ಮೆಚ್ಚಿನ ಕ್ರೀಡೆಯಾಗಿತ್ತು. ಬೇಟೆ ಮುಗಿದ ಮೇಲೆ ಹಂದಿಯನ್ನು ಇಡಿಯಾಗಿಯೊ ಅದರ ತಲೆಯನ್ನೊ ಬೇಯಿಸಿ ರಸಭಕ್ಷ್ಯವಾಗಿ ಬಡಿಸುತ್ತಿದ್ದರು.

ಕಾಡುಹಂದಿ ಇಂಗ್ಲೆಂಡಿನ 3ನೆಯ ರಿಚರ್ಡ್ ದೊರೆಯ ಲಾಂಛನವಾಗಿತ್ತು. ವಿಜಯನಗರ ಅರಸರ ಲಾಂಛನವೂ ಇದೇ. (ಎಂ.)

**ಕಾಡು ಹುರಳಿ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪಕುಟುಂಬಕ್ಕೆ ಸೇರಿದ ಒಂದು ಮೂಲಿಕೆ ಸಸ್ಯ. ವಿಸಿಯ ಸೇಟಿವ ಇದರ ಶಾಸ್ತ್ರೀಯ ನಾಮ. ಇಂಗ್ಲಿಷಿನ ಸಾಮಾನ್ಯ ಬಳಕೆಯ ಹೆಸರು ಕಾಮನ್ ವೆಚ್. ಹಸಿ ಮೇವಾಗಿಯೂ ಹಸುರು ಗೊಬ್ಬರವಾಗಿಯೂ ಇದನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ತಂಪು ವಾತಾವರಣವಿರುವ ಪ್ರದೇಶಗಳಲ್ಲಿ ಇದನ್ನು ಬೇಸಗೆ ಬೆಳೆಯಾಗಿಯೂ ಉಷ್ಣಪ್ರದೇಶಗಳಲ್ಲಿ ಚಳಿಗಾಲದ ಬೆಳೆಯಾಗಿಯೂ ಕೃಷಿಮಾಡುತ್ತಾರೆ. ಇದು ಉದ್ದವಾಗಿ ನೆಲದ ಮೇಲೆ ಹರಡಿಕೊಂಡು ಬೆಳೆಯುವ ಗಿಡ. ಕಾಯಿಯಲ್ಲಿ ಪ್ರೋಟೀನು ಪ್ರಮಾಣ ಅಧಿಕವಾಗಿದೆ. (ಎಂ.)

**ಕಾಡು ಹೊಗೆಸೊಪ್ಪು :** ಕಂಪ್ಯಾನುಲೇಸೀ ಅಥವಾ ಲೊಬೀಲಿಯೆಸೀ ಕುಟುಂಬಕ್ಕೆ ಸೇರಿದ ಲೊಬೀಲಿಯ ನಿಕೊಟಿಯಾನಿಫೋಲಿಯ ಎಂಬ ವೈಜ್ಞಾನಿಕ ಹೆಸರುಳ್ಳ ಮೂಲಿಕೆ ಸಸ್ಯ. ಈ ಗಿಡ ಸಾಮಾನ್ಯವಾಗಿ 2900'–6900' ಎತ್ತರದ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳು, ನೀಲಗಿರಿ ಕಾಡುಗಳಲ್ಲಿ ವಿಶೇಷ. ಸಾಮಾನ್ಯವಾಗಿ 4'–10' ಎತ್ತರಕ್ಕೆ ಬೆಳೆಯುತ್ತದೆ. ಇದರ ಕಾಂಡ ದಪ್ಪ ಹಾಗೂ ಟೊಳ್ಳು. ಈ ಗಿಡದಲ್ಲಿ ರೆಂಬೆಗಳೇ ಬಹಳ ಕಡಿಮೆ. ಕಾಂಡ ಹಾಗೂ ಎಲೆಗಳಲ್ಲಿ ಬಿಳಿಯ ಬಣ್ಣದ ಹಾಲ್ನೊರೆ (ಲೇಟೆಕ್ಸ್) ಇದೆ. ಎಲೆಗಳು ಅಸಂಖ್ಯ; ಪರ್ಯಾಯವಾಗಿ ಜೋಡಣೆಗೊಂಡಿವೆ. ಕೆಳಗಿನ ಎಲೆಗಳು 15"ಗಳಷ್ಟು ದೊಡ್ಡದಾಗಿವೆ. ಕಾಂಡದ ತುದಿಗೇರಿದಂತೆ ಎಲೆಗಳ ಗಾತ್ರ ಚಿಕ್ಕದಾಗುತ್ತ ಬರುತ್ತದೆ. ಎಲೆಗಳು ಉದ್ದ, ಈಟಿಯಾಕಾರ. ಹೂಗೊಂಚಲು ಅಂತ್ಯಾರಂಭಿ ಮಾದರಿಯದು, 1 ಅಡಿ ಉದ್ದವಿದೆ. ಹೂಗಳ ಬಣ್ಣ ಬಿಳಿ. ಪುಷ್ಪಪತ್ರಗಳು 5, ದಳಗಳು 5, ಪರಸ್ಪರ ಕೂಡಿಕೊಂಡಿವೆ. ಕೂಡಿರುವ ಹೂದಳ ಸಮೂಹ 2 ತುಟಿಗಳಾಗಿ ಭಾಗವಾಗಿದೆ. ಕೇಸರಗಳು 3–5. ಕೇಸರದಂಡಗಳು ಒಂದರೊಡನೊಂದು ಕೂಡಿಕೊಂಡು ಕೊಳವೆಯಾಕಾರದಲ್ಲಿವೆ. ಅಂಡಾಶಯ ನೀಚಸ್ಥಾನದ್ದು ಅಥವಾ ಅರ್ಧ ನೀಚಸ್ಥಾನದ್ದು. ಫಲ ಸಂಪುಟ ಮಾದರಿಯದು. ಬೀಜಗಳು ಸೂಕ್ಷ್ಮ, ಅಸಂಖ್ಯಾತ ಚಪ್ಪಟೆಯಾಗಿವೆ. ಅವುಗಳ ಬಣ್ಣ ಹಳದಿ ಮಿಶ್ರಿತ ಕಂದು.

ಈ ಗಿಡದಿಂದ ಲೊಬಿಲೈನ್ ಗುಂಪಿಗೆ ಸೇರಿದ ಸಸ್ಯಕ್ಷಾರಗಳನ್ನು (ಆಲ್ಕಲಾಯಿಡ್ಸ್) ತೆಗೆಯುತ್ತಾರೆ. ಇವಕ್ಕೆ ಹೊಗೆಸೊಪ್ಪಿನಂಥ ಘಾಟು ವಾಸನೆಯಿದೆ. ಪುಷ್ಪಗುಚ್ಛದ ಭಾಗದಲ್ಲಿ ಈ ಕ್ಷಾರಗಳ ಅಂಶ ಹೆಚ್ಚಾಗಿದ್ದು ಎಲೆ ಮತ್ತು ಕಾಂಡಗಳಲ್ಲಿ ಕಡಿಮೆಯಾಗಿವೆ. ಈ ಕ್ಷಾರಗಳಲ್ಲಿ ಲಿಬಿಲಾನಿಡೈನ್ ಎಂಬುದು ಮುಖ್ಯವಾದುದು. ಲೊಬಿನಾನೈನ್ ಮತ್ತು ಲೊಬಿನೈನ್ ಎಂಬ ಕ್ಷಾರಗಳೂ ಸ್ವಲ್ಪ ಪ್ರಮಾಣದಲ್ಲಿರುತ್ತವೆ. ಕಾಂಡ ಮತ್ತು ಎಲೆ ಭಾಗವನ್ನು ಅಕ್ಟೋಬರ್ – ನವೆಂಬರ್ ತಿಂಗಳಲ್ಲಿ ಸಂಗ್ರಹಿಸಿ, ನೆರಳಿನಲ್ಲಿ ಒಣಗಿಸುವುದುಂಟು. ಇದಕ್ಕೆ ಲೊಬೀಲಿಯ ಹರ್ಬ ಎಂಬ ಔಷಧೀಯ ಹೆಸರಿದೆ. ಇದು ಆಸ್ತಮ ಮತ್ತು ಕೆಲವು ಶ್ವಾಸನಾಳಗಳ ರೋಗಗಳಿಗೆ ಒಳ್ಳೆಯ ಔಷಧಿಯೆಂದು ಹೆಸರಾಗಿದೆ.

ಈ ಗಿಡ ಒಣಗಿದಾಗ ಇದರಿಂದ ಅಂಟು ಅಂಟಾಗಿರುವ ಒಂದು ಬಗೆಯ ಕಪಿಯಾಗಿರುವ ಪದಾರ್ಥ ಅಲ್ಲಲ್ಲಿ ಒಸರುವುದು ಕಂಡುಬರುತ್ತದೆ. ಎಲೆಗಳಲ್ಲಿನ ಹಾಲ್ನೊರೆ ಚರ್ಮಕ್ಕೆ ತಗುಲಿದರೆ ಉರಿಯೂತ ಉಂಟಾಗುತ್ತದೆ. ಈ ಗಿಡ ವಿಷಪೂರಿತವಾದುದರಿಂದ ಇದನ್ನು ಪೂತಿನಾಶಕವಾಗಿಯೂ ಉಪಯೋಗಿಸಬಹುದು. ಸಿಂಹಳದಲ್ಲಿ ಇದನ್ನು ಕೀಟನಾಶಕವಾಗಿ ಬಳಸುತ್ತಾರೆ. ಇದರ ಎಲೆ ಅಥವಾ ಬೀಜಗಳನ್ನು ಆಕಸ್ಮಿಕವಾಗಿ ಸೇವಿಸಿದಲ್ಲಿ ಉಸಿರಾಟದ ಮೇಲೆ ತೀವ್ರ ಪರಿಣಾಮವುಂಟಾಗಿ ಸಾಯುವುದೂ ಉಂಟು.

ಇದೇ ಜಾತಿಯ ಇನ್ನೊಂದು ಮುಖ್ಯವಾದ ಗಿಡ ಲೊಬೀಲಿಯ ಇನ್‌ಫ್ಲೇಟ. ಈ ಗಿಡದಲ್ಲಿ ಮೇಲೆ ಹೇಳಿದ ಕ್ಷಾರಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಇದು ಹೆಚ್ಚು ಉಪಯೋಗಕಾರಿಯೂ ಹೌದು. ಆದರೆ ಇದು ಭಾರತದಲ್ಲಿ ಬೆಳೆಯುವುದಿಲ್ಲ ವಾದ್ದರಿಂದ ಇದರ ಬದಲಾಗಿ ಲೊಬೀಲಿಯ ನಿಕೊಟಿಯಾನಿಫೋಲಿಯವನ್ನೆ ಉಪಯೋಗಿಸುತ್ತಾರೆ. (ಆರ್.ಆರ್.ಆರ್.)

**ಕಾಡ್ಯನಾಟ:** ಕರಾವಳಿಯ ಉಡುಪಿ, ಕುಂದಾಪುರ ಪರಿಸರದ ಪರಿಶಿಷ್ಟ ಸಮುದಾಯಗಳಲ್ಲಿ ಒಂದಾದ ಮೇರರ ಆರಾಧ್ಯ ದೈವದ ಒಂದು ಆಚರಣೆ. ಈ ಸಮುದಾಯದ ವಾಸಸ್ಥಾನ ಇರುವಲ್ಲೆಲ್ಲ ಕಾಡ್ಯನ ಮನೆ ಅಥವಾ ಕಾಡ್ಯನ ಗುಡಿಗಳು ಕಾಣಿಸುತ್ತವೆ. ಕಾಡ್ಯನಾಟದ ಸಂದರ್ಭದಲ್ಲಿ ಹಾಡಲಾಗುವ ಹಾಡುಗಳನ್ನು ಗಮನಿಸಿದಾಗ ಕಾಡ್ಯ ಎಂದರೆ ಕಾಳಿಂಗಸರ್ಪ ಎಂದು ತಿಳಿಯುತ್ತದೆ. ಕಾಡ್ಯನ ಗುಡಿಗಳಲ್ಲಿರುವ ಹುತ್ತ, ಸರ್ಪದ ಸಂಕೇತವಿರುವ ಕಲ್ಲುಗಳು, ಸರ್ಪದ ಉಬ್ಬುಶಿಲ್ಪವನ್ನು ರೇಖಿಸಿರುವ ಮಣ್ಣಿನ ಗಡಿಗೆಗಳು, ವಿವಿಧ ಪ್ರಾಣಿ ಪಕ್ಷಿ, ಕೃಷಿಸಂಬಂಧಿ ವಸ್ತುಗಳಿರುವ ಮಂಡಲ ಚಿತ್ತಾರಗಳು ಕಾಡ್ಯನಾಟ ಒಂದು ಸರ್ಪಾರಾಧನೆ ನಾಗಾರಾಧನೆ ಎನ್ನುವುದನ್ನು ತಿಳಿಸುತ್ತವೆ.

ಕಾಡ್ಯನಾಟಕ್ಕೆ ಸಿದ್ಧತೆ

ಕಾಡ್ಯನ ಗುಡಿ ಸಾಮಾನ್ಯವಾಗಿ ಜನವಸತಿಯಿಂದ ದೂರ ಕಾಡಿನೊಳಗೆ ಅಥವಾ ಊರ ಹೊರಗಿರುತ್ತದೆ. ಅದು ಬರಿಯ ಗುಡಿಯಲ್ಲ. ಕಾಡ್ಯನೇ ಪ್ರಧಾನವಾಗಿರುವ ಹಲವು ದೈವಗಳ ಒಂದು ಸಂಕೀರ್ಣ. ಇಂತಹ ಗುಡಿಗಳು ಗೋಡೆಗಳಿಂದ ಆವೃತವಾಗಿರುವುದಿಲ್ಲ, ಕಲ್ಲು ಕಂಬಗಳ ಮೇಲೆ ನಿಂತ ಹುಲ್ಲುಹಾಸಿನ ಚಾವಣಿಗಳಿರುತ್ತವೆ. ಗುಡಿಯ ನಡುಭಾಗದಲ್ಲಿ ಸುಮಾರು ಹತ್ತರಿಂದ ಹದಿನೈದು ಅಡಿಎತ್ತರಕ್ಕೆ ಬೆಳೆದ ಹುತ್ತವಿದ್ದು ಬುಡದಲ್ಲಿ ನಾಗರಕಲ್ಲುಗಳಿರುತ್ತವೆ. ಸುತ್ತಲೂ ನೂರಾರು ಸಂಖ್ಯೆಯ ವಿವಿಧ ಗಾತ್ರಗಳ ಮಣ್ಣಿನ ಕಲಶಗಳಿರುತ್ತವೆ. ಅವುಗಳ ಮೇಲೆ ಹೆಡೆ ಎತ್ತಿದ ಸರ್ಪದ ಉಬ್ಬುಶಿಲ್ಪಗಳಿರುತ್ತವೆ. ಕಾಡ್ಯನ ಗುಡಿಯ ಪರಿಸರದಲ್ಲಿ ಸ್ವಾಮಿ, ಬ್ರಹ್ಮ, ಯಕ್ಷಿ, ಉಮ್ಮಳ್ತಿ, ಬೊಬ್ಬರ್ಯ ಮುಂತಾದ ದೈವಗಳ ಕಲ್ಲುಗಳನ್ನೂ ಕಾಣಬಹುದು. ಭಕ್ತರು ಕಾಡ್ಯನನ್ನು ಅಮ್ಮ, ತಾಯಿ, ಕಾಳಿಕಾಂಬ, ವನದುರ್ಗಿ ಎಂಬ ಪರ್ಯಾಯ ನಾಮದಿಂದಲೂ ಗುರುತಿಸುವುದುಂಟು. ಕಾಡ್ಯನನ್ನು ಚರ್ಮರೋಗ, ದೃಷ್ಟಿದೋಷ, ಸಂತಾನ ಹೀನತೆಯ ಸಂದರ್ಭಗಳಲ್ಲಿ ಹರಕೆಹೊತ್ತು ಮೇರ ಸಮುದಾಯ ಆರಾಧಿಸುತ್ತದೆ.

ಕಾಡ್ಯನಾಟ ನಾಲ್ಕುರಾತ್ರಿ ಮೂರು ಹಗಲುಗಳ ಕಾಲ ನಡೆಯುವ ಒಂದು ಆಚರಣೆ. ಇದರಲ್ಲಿ ಹುತ್ತದ ಪೂಜೆಯಷ್ಟೇ ಮಹತ್ವ ಕಲಶ ಪೂಜೆಗೂ ಇದೆ. ವಿಧ್ಯುಕ್ತವಾಗಿ ಕುಂಬಾರರಿಂದ ಮಡಕೆಗಳ ತಯಾರಿ, ಪೂಜೆ, ಕುಲದ ಸ್ತ್ರೀಯರಿಂದಲೇ ಅವುಗಳನ್ನು ಹೊತ್ತು ತರುವಿಕೆ, ಕಲಶದೊಳಗೆ ನೀರೆರೆದು ಮೇಲೆ ಮಾವಿನ ಚಿಗುರು ಇರಿಸುವುದು, ಬರೆದ ಮಂಡಲ ಚಿತ್ತಾರಗಳ ಮೇಲೆ ಕಲಶಹೊತ್ತ ಹೆಣ್ಣು ನಿಂತಾಗ ಆಕೆಯ ಮೇಲೆ ಅಕ್ಕಿಕಾಳುಗಳನ್ನು ಚೆಲ್ಲುವುದು, ಕೊನೆಯಲ್ಲಿ ಕಲಶವನ್ನು ಹರಿವ ನೀರಲ್ಲಿ ತೊಳೆದುಕೊಂಡು ಬರುವುದು ಇವೆಲ್ಲವೂ ಕಾಡ್ಯ ಸಂತಾನಾಭಿಮಾನಿ ದೇವತೆ ಎಂಬುದನ್ನು ಸೂಚಿಸುತ್ತವೆ.

ಈ ಸಂಪ್ರದಾಯದ ಪ್ರಮುಖ ಕ್ರಿಯಾಶೀಲ ಪಾತ್ರಧಾರಿಗಳು ಕಾಡ್ಯನ ಪ್ರತಿನಿಧಿ ಅಥವಾ ಪಾತ್ರಿ ಹಾಗೂ ಇಡಿಯ ಕ್ರಿಯೆಯ ನಿಯಂತ್ರಕ ವೈದ್ಯ. ಮಂಡಲ ಬರೆಯುವುದು ಕಾಡ್ಯನಾಟದ ಪ್ರಧಾನ ವಿಧಿ. ಸುಮಾರು ಹತ್ತು ಅಡಿ ವ್ಯಾಸದ ವೃತ್ತಾಕಾರದ ಮಂಡಲವನ್ನು ಪಂಚವರ್ಣದ ಹುಡಿಯಿಂದ ಬರೆಯುತ್ತಾರೆ. ಮಂಡಲದ ಮಧ್ಯದಲ್ಲಿ ಮುಹೂರ್ತದ ಕಂಬವಿರುತ್ತದೆ. ಆದಿಮ ಸಮಾಜದಿಂದ ಅಪ್ರಜ್ಞಾಪೂರ್ವಕವಾಗಿ ಇಳಿದು ಬಂದ ನೆನಪುಗಳನ್ನು ಇಲ್ಲಿನ ಚಿತ್ತಾರಗಳು ಪ್ರತಿನಿಧಿಸಿದಂತೆ ತೋರುತ್ತದೆ. ಈ ಸಮುದಾಯದ ಸಾಮೂಹಿಕ ಬದುಕನ್ನು ಪ್ರಭಾವಿಸಿದ ಸೂರ್ಯ, ಚಂದ್ರ, ನಕ್ಷತ್ರ, ದೇವತೆಗಳು, ಕಮಲದ ಹೂ, ಹೊನ್ನರಳಿ ಮರ, ಕಾಗೆ, ಗೂಗೆ, ಗುಬ್ಬಚ್ಚಿ, ನವಿಲು, ಒನಕೆ, ಒರಳು, ಗೆರಸೆ, ದೊರು, ಚೆನ್ನೆಮಣೆ, ಡೋಲು, ಕಾಡ್ಯ (ಕರಿನಾಗ), ನಾಗ (ಹಳದಿನಾಗ) – ಇತ್ಯಾದಿಗಳನ್ನು ಮಂಡಲ ಚಿತ್ತಾರ ಪ್ರತಿನಿಧಿಸುತ್ತದೆ. ಹಾಡುಗಳಲ್ಲಿ ಮೇಲಿನ ವಸ್ತುಗಳು ಒಂದಲ್ಲ ಒಂದು ರೀತಿಯಲ್ಲಿ ಸಂಬಂಧವನ್ನು ಪಡೆಯುತ್ತವೆ. ಕಾಡ್ಯನಾಟದ ಎರಡನೆಯ ಮತ್ತು ಮೂರನೆಯ

ರಾತ್ರಿಗಳಲ್ಲಿ ಮಂಡಲ ಬರೆದು ಐದು ಹೊಸ ಮಣ್ಣಿನ ಕಲಶಗಳನ್ನು ಅದರ ಮೇಲಿರಿಸಿ ಬೈದ್ಯ (ಪೂಜಾರಿ) ಹಾಡು ಕುಣಿತಗಳೊಂದಿಗೆ ಪೂಜೆ ಸಲ್ಲಿಸುತ್ತಾನೆ.

ಕಾಡ್ಯನಾಟದ ಪೂಜಾರಿ

ಕಾಡ್ಯನಾಟದ ಆರಾಧನಾ ವಿಧಿಗಳ ನಿಯಂತ್ರಕ ಬೈದ್ಯ. ಇವನಿಗೂ ಇವನ ಕುಟುಂಬದವರಿಗೂ ಕಾಡ್ಯನ ಮನೆಯ ಎದುರು ವಿಶೇಷ ಚಪ್ಪರವನ್ನು ನಿರ್ಮಿಸಲಾಗುತ್ತದೆ. ಅಲ್ಲಿ ಬೈದ್ಯ ಹಾಗೂ ಇವನ ಸಹಾಯಕರು ಡೋಲು ಬಡಿಯುತ್ತ ನಾಲ್ಕು ದಿನಗಳ ಕಾಲ ಹಾಡು ಹೇಳುತ್ತಿರುತ್ತಾರೆ. ಕಲಶಗಳನ್ನು ಹೊತ್ತುತರುವ ಸಂದರ್ಭ,. ಕಲಶಗಳಿಗೆ ಪೂಜೆ, ಕಲಶಗಳನ್ನು ಹೊತ್ತು ಊರಾಡಲು ಹಾಗೂ ಹರಿವ ನದಿಯಲ್ಲಿ ಕಲಶ ತೊಳೆಯಲು ಹೋಗುವ ಸಂದರ್ಭಗಳಲ್ಲಿ ಮಹಿಳೆಯರು ಹಾಡು ಹೇಳುತ್ತಾರೆ. ಈ ಹಾಡುಗಳು ಕಥೆ ಅಥವಾ ಐತಿಹ್ಯಗಳ ರೂಪದಲ್ಲಿರದೆ ಆಚರಣೆಗಳ ಘಟನಾವಳಿಗಳ ವಿವರಣಾತ್ಮಕ ರೂಪದಲ್ಲಿರುತ್ತವೆ. ಬೈದ್ಯ ಹಾಡುವ ಗುರುಶಾಸ್ತ್ರ, ಕಂಬಕಡಿವಹಾಡು, ಮಂಡಲಬರೆವಹಾಡು ಇವು ಜನಪದ ಗೀತೆಗಳ ಮಾದರಿಯಲ್ಲಿರುತ್ತವೆ. ಕಾಡ್ಯನ ಹುಟ್ಟು, ಹೆಣ್ಣು ಮಕ್ಕಳ ಹುಟ್ಟು, ರಣಸಿರಿ ಹಾಡು ಇವುಗಳಲ್ಲಿ ಜೀವನಾವರ್ತನಗಳ ವಿವರ ವಿಶ್ವಸೃಷ್ಟಿಯ ಹಂತ, ಕೊರಗ ಕೊರತಿಯರಿಂದ ಮಾನವರ ವಿಕಾಸವಾದುದೆನ್ನುವ ಹೇಳಿಕೆ, ಭೂಮಿಯಲ್ಲಿ ಕೃಷಿಪದ್ಧತಿ ಆರಂಭ ಗೊಂಡುದರ ಹಿನ್ನೆಲೆ, ಜನಪದೀಯರ ವಿಶಿಷ್ಟ ಲೋಕದೃಷ್ಟಿ ಪ್ರಕಟವಾಗುತ್ತವೆ.

ಕಾಡ್ಯನಾಟದಲ್ಲಿ ವಿಧಿಕ್ರಿಯೆಯೊಳಗೆ ಕ್ರೀಡೆಯ ಸ್ವರೂಪದ ಅಂಬೋಡಿ ಆಡುವುದು ಹಾಗೂ ಹಿಡ್ಗಾಯಿ ಹಾಕುವುದು ಎಂಬ ಎರಡು ಆಚರಣೆಗಳು ಇವೆ. ಅಂಬೋಡಿ ಒಂದು ಬಗೆಯ ಅಣಕುಕಾಳಗ. ಪಾತ್ರಿಯ ಎದುರು ಯುವಕರ ಎರಡು ತಂಡ ಕೈಯಲ್ಲಿ ಉದ್ದನೆಯ ಬರಲುಗಳನ್ನು ಹಿಡಿದು ಎದುರು ಬದುರಾಗಿ ನಿಲ್ಲುತ್ತಾರೆ. ಎರಡು ಕಂಬಗಳಿಗೆ ಅಡ್ಡವಾಗಿ ಕಟ್ಟಿದ ಹುರಿಹಗ್ಗಕ್ಕೆ ಯುವಕರು ಪರಸ್ಪರ ಬರಲುಗಳನ್ನು ತಾಗಿಸುತ್ತಾರೆ. ಯುವಕರ ದೈಹಿಕಶಕ್ತಿ ಹಾಗೂ ಕ್ರೀಡಾಕ್ಷಮತೆಯನ್ನು ಸ್ಪರ್ಧೆಗೊಡ್ಡುವ ಅಣಕು ಕಾಳಗ ಇದಾಗಿರಬಹುದು. ಇಲ್ಲಿನ ಪರವಿರೋಧ ತಂಡಗಳನ್ನು ಬಂಧುತ್ವ ವ್ಯವಸ್ಥೆಯ (ಕಿನ್‌ಶಿಪ್) ಹಿನ್ನೆಲೆಯಲ್ಲಿ ಗುರುತಿಸಲಾಗುವುದು. ಹಿಡ್ಗಾಯಿ ಹಾಕುವ ಕ್ರೀಡಾಚರಣೆಯಲ್ಲಿ ಸಂಸಾರದ ಮಕ್ಕಳ ಗುಂಪಿನ ನಡುವೆ ಪಾತ್ರಿ ತೆಂಗಿನಕಾಯಿಯನ್ನು ಹಾರಿಸುವನು. ಅವರೊಳಗೆ ಆ ತೆಂಗಿನಕಾಯನ್ನು ಹಿಡಿಯುವ ಬಗ್ಗೆ ಮೇಲಾಟ ನಡೆಯುತ್ತದೆ. ಈ ಸೆಣಸಾಟದಲ್ಲಿ ಯಶಸ್ವಿಯಾದ ಹುಡುಗ ಕಾಡ್ಯನ ಗುಡಿಯ ಸಮೀಪದ ಬೆಣಗಲ್ಲಿಗೆ ಅದನ್ನು ಒಡೆಯಬೇಕು. ಎರಡನೆಯ ಬಾರಿ ನೆಂಟರು ಮಕ್ಕಳ ನಡುವೆ ಈ ಸ್ಪರ್ಧೆ ನಡೆಯುವುದು. ಸಾಮಾನ್ಯವಾಗಿ ಕ್ರೀಡೆಗಳಲ್ಲಿ ನಿಯಮವಿರುವಂತೆ ಇಲ್ಲೂ ಕೆಲವು ಖಚಿತ ನಿಯಮಗಳಿರುತ್ತವೆ. ಕ್ರೀಡಾಳುಗಳು ಈ ನಿಯಮಗಳನ್ನು ಮುರಿಯದಂತೆ ನಿಗಾವಹಿಸುವುದು ಪಾತ್ರಿಯ ಕೆಲಸ. ಜೊತೆಗೆ ಪ್ರೇಕ್ಷಕರೂ ನಿರ್ಣಾಯಕ ಪಾತ್ರವಹಿಸುವುದುಂಟು.

ಕಾಡ್ಯನಾಟ ಆಚರಣೆಯಲ್ಲಿ ಕಾಡ್ಯ ಕಾಳಿಂಗ ಸರ್ಪನ ರೂಪದಲ್ಲಿ ಅಮೂರ್ತವಾಗಿ ಆರಾಧನೆಗೊಳ್ಳುವ ಅಲೌಕಿಕ ಶಕ್ತಿ ಎನ್ನುವುದು ವಿಧಿ ಆಚರಣೆಗಳಿಂದ ವ್ಯಕ್ತಗೊಳ್ಳುವ ಸಂಗತಿ. ಅಂತಹ ಅಲೌಕಿಕ ಶಕ್ತಿಗಳು ಭೌತಪ್ರಪಂಚಕ್ಕಿಂತ ಭಿನ್ನವಾದ ಅಲೌಕಿಕ ಜಗತ್ತಿನಲ್ಲಿರುತ್ತವೆ ಎಂದು ತಿಳಿಯಲಾಗುತ್ತದೆ. ಅವುಗಳನ್ನು ಭಯಭಕ್ತಿಯಿಂದ ಆರಾಧಿಸುವುದಕ್ಕೆ ಮೇರ ಸಮುದಾಯ ರೂಪಿಸಿಕೊಂಡಿರುವ ವಿಶಿಷ್ಟ ಆಚರಣೆ ಇದಾಗಿದೆ. ಇದು ಸಾಮಾನ್ಯ ಆಚರಣೆಗಳಿಂದ ಭಿನ್ನವಾದ, ವಿಶಿಷ್ಟ ಕಾಲದಲ್ಲಿ, ಊರ ಹೊರಗಿನ ಪರಿಸರದಲ್ಲಿ (ಕಾಡಿನೊಳಗೆ) ನಡೆಯುತ್ತಿರುವುದನ್ನು ಗಮನಿಸಬೇಕು. ಇದನ್ನು ಮಾನವ ಪ್ರಪಂಚಕ್ಕೆ ವೈದೃಶ್ಯ ಲೋಕವೆಂದೂ ಮಧ್ಯಂತರ ಜಗತ್ತೆಂದೂ ವಿದ್ವಾಂಸರು ಗುರುತಿಸಿದ್ದಾರೆ. ಈ ವಾಸ್ತವವಲ್ಲದ ಭ್ರಾಮಕಪ್ರಪಂಚದಲ್ಲಿ ಮಾನವ ಶ್ರೇಯಸ್ಸು ಹಾಗೂ ಅರ್ಥವಂತಿಕೆಯನ್ನು ಪಡೆಯುತ್ತಾನೆ. ಕಾಡ್ಯನಾಟದಂತಹ ಆರಾಧನೆಯ ಸಂದರ್ಭದಲ್ಲಿ ಲೌಕಿಕ, ಅಲೌಕಿಕ, ಲೋಕಗಳ ನಡುವೆ ಒಂದು ಬಗೆಯ ಅಂತರ್‌ಸಂಬಂಧ ಏರ್ಪಡುತ್ತದೆ. ಅಲೌಕಿಕ ಶಕ್ತಿಗಳಾದ ಕಾಡ್ಯ, ನಾಗ, ಸೂರ್ಯ, ಚಂದ್ರ, ನಕ್ಷತ್ರ ಮುಂತಾದ ಶಕ್ತಿಗಳನ್ನು ಮಂಡಲ ಚಿತ್ತಾರದೊಳಗೆ ರೇಖಿಸಿ ಹಾಡು ಹೇಳಿದಾಗ ಅವು ಅಲ್ಲಿ ನೆಲೆಗೊಳ್ಳುತ್ತವೆ ಎಂಬ ನಂಬಿಕೆಯಿದೆ. ಹಾಗೆಯೇ ಈ ವಿಶಿಷ್ಟ ಶಕ್ತಿಗಳು ಆಚರಣೆಯ ಸಂದರ್ಭದಲ್ಲಿ ದೈವದ ಪಾತ್ರಿಯ ಮೂಲಕ ಅಭಿವ್ಯಕ್ತಗೊಳ್ಳುತ್ತವೆ. ಲೌಕಿಕ ಹಾಗೂ ಅಲೌಕಿಕ ಜಗತ್ತಿನ ಮಧ್ಯಸ್ಥ ಈ ಪಾತ್ರಿಯಾದರೆ ಆಚರಣೆಯ ಎಲ್ಲ ಕ್ರಿಯೆಗಳನ್ನು ಚಾಲನೆಗೊಳಿಸುವವ ಹಾಗೂ ನಿಯಂತ್ರಿಸುವವ ಬೈದ್ಯ.

ಕಾಡ್ಯನಾಟ ಒಂದು ಸಮುದಾಯದ ಸಾಮೂಹಿಕ ಹಬ್ಬ. ಇದರಲ್ಲಿ ಭಾಗವಹಿಸುವವರು ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆಯೇ ಹೊರತು ವೀಕ್ಷಕರಾಗಿ ಉಳಿಯುವುದಿಲ್ಲ. ಕೂಡುಕಟ್ಟಿನ ಸದಸ್ಯರೆಲ್ಲರೂ ನಾಲ್ಕುರಾತ್ರಿ ಮೂರು ಹಗಲು ಕಾಡ್ಯನ ಮನೆಯ ಪರಿಸರದಲ್ಲೇ ಉಳಿಯುತ್ತಾರೆ. ಈ ಬಗೆಯ ಸಾಮೂಹಿಕ ಪಾಲ್ಗೊಳ್ಳುವಿಕೆ ಅವರಲ್ಲಿ ಒಂದು ಬಗೆಯ ಸಾಂಘಿಕ ಏಕತೆಯನ್ನು ರೂಪಿಸುತ್ತದೆ. ಇದರಿಂದಾಗಿ ಪ್ರತಿಯೊಬ್ಬನೂ ಸಮಾಜದೊಳಗೆ ತನ್ನ ಸ್ಥಾನ ಹಾಗೂ ಕರ್ತವ್ಯಗಳನ್ನು ಗುರುತಿಸಿಕೊಳ್ಳುವಂತಾಗುತ್ತದೆ.

ಧಾರ್ಮಿಕ ಆಚರಣೆಯ ಚೌಕಟ್ಟಿನೊಳಗೆ ಜನಪದ ರಂಗಭೂಮಿಯ ಪ್ರಕಾರಗಳು ಪ್ರದರ್ಶನಗೊಳ್ಳುವುದು ಸಹಜ ಸಂಗತಿ. ಕಾಡ್ಯನಾಟದಲ್ಲಿನ ಆಶುಪ್ರಹಸನ ರೂಪದ ಕೋಲಬಲಿ – ಹಗರಣಗಳು ಇಡಿಯ ಆಚರಣೆಗೆ ನಾಟಕೀಯತೆಯನ್ನು ತರುತ್ತವೆ. ಸಮಾಜದ ದುರ್ಬಲ ವರ್ಗವೊಂದು ಇಲ್ಲಿನ ಜಾತಿಪದ್ಧತಿ, ಏರು ಶ್ರೇಣಿ ವ್ಯವಸ್ಥೆ, ಮಡಿ ಮೈಲಿಗೆಯಿಂದ ಹತ್ತಿಕ್ಕಲ್ಪಟ್ಟ ಭಾವವನ್ನು ತುಟಿತೆರೆದು ಮಾತನಾಡುವ ದನಿಯನ್ನು ಇಲ್ಲಿ ಪಡೆಯುತ್ತದೆ. ಎಂಬುದು ಗಮನಿಸತಕ್ಕ ಅಂಶ. ಭಾಗಾಳುಗಳಲ್ಲಿನ ಉತ್ಸಾಹ, ಉಲ್ಲಾಸಗಳನ್ನೂ ಅವು ಮೂಡಿಸುವ ಮನರಂಜನೆಯನ್ನೂ ಈ ಹಗರಣಗಳನ್ನು ಹೋಲುವ ಆಚರಣೆಗಳಲ್ಲಿ ಗುರುತಿಸಬಹುದು. ದಾಸರಕೋಲ, ಹುಲಿಹಂದಿಕೋಲ, ಕುದುರೆಕೋಲ, ಜ್ವರನಕೋಲ, ಕೆಮ್ಮನಕೋಲ, ತಿಗಣೆಕೋಲ, ಬ್ರಾಹ್ಮಣಕೋಲಗಳು ವಿಧಿಕ್ರಿಯೆಯ ಭಾಗಗಳಾಗಿ ನಡೆಯುತ್ತವೆ.

ಕರಾವಳಿ ಪ್ರದೇಶದಲ್ಲಿ ನಾಗಾರಾಧನೆ ಎನ್ನುವುದು ಸ್ಥಳೀಕ ಜನರ ಒಂದು ಆರಾಧನಾ ಪದ್ಧತಿ. ನಾಗದರ್ಶನ, ನಾಗಮಂಡಲ, ಆಶ್ಲೇಷ ಬಲಿ ಮುಂತಾದ ನಾಗಸಂಬಂಧಿ ವೈದಿಕ ಆಚರಣೆಗಳು ಈ ಪ್ರದೇಶದಲ್ಲಿ ವ್ಯಾಪಕವಾಗಿದ್ದರೂ ಕಾಡ್ಯನಾಟ (ಮೇರ), ಸ್ವಾಮಿಕೋಲ (ಪಾಣರು) ಗಳಂತಹ ಆಚರಣೆಯನ್ನು ಕಂಡಾಗ ಸರ್ಪಾರಾಧನೆ ಮೂಲತಃ ಒಂದು ಅವೈದಿಕ ಹಿನ್ನೆಲೆಯುಳ್ಳ ಆಚರಣೆ ಎಂಬ ನಿರ್ಧಾರಕ್ಕೆ ಬರಬಹುದಾಗಿದೆ. (ಎ.ವಿ.ಎನ್‌ಎ.)

**ಕಾಣೆ, ಪಾಂಡುರಂಗ ವಾಮನ :** 1880–1972. ಉದ್ದಾಮ ಸಂಸ್ಕೃತ ವಿದ್ವಾಂಸರು, ಪ್ರಕಾಂಡ ಕಾಯಿದೆಪಂಡಿತರು, ಅಲಂಕಾರಶಾಸ್ತ್ರ ಹಾಗೂ ಧರ್ಮಶಾಸ್ತ್ರಗಳ ಮೊದಲ ಇತಿಹಾಸವನ್ನು ಆಧುನಿಕ ಸಂಶೋಧಕ ದೃಷ್ಟಿಯಿಂದ ಇಂಗ್ಲಿಷ್ ಮತ್ತು ಮರಾಠೀ ಭಾಷೆಗಳಲ್ಲಿ ರಚಿಸಿದ ಮಹಾ ಗ್ರಂಥಕಾರರು. ಲೋಕಮಾನ್ಯ ಬಾಲಗಂಗಾಧರ ಟಿಳಕ್, ಗೋಪಾಲ ಕೃಷ್ಣ ಗೋಖಲೆಯಂಥ ದೇಶಪ್ರೇಮಿಗಳನ್ನೂ ಸಮಾಜ ಸುಧಾರಕರನ್ನೂ ಕೊಟ್ಟಂಥ ಜಿಲ್ಲೆಯಾದ ರತ್ನಾಗಿರಿಯ ಪರಶುರಾಮ್ ಎಂಬ ಹಳ್ಳಿಯಲ್ಲಿ 1880ರಲ್ಲಿ ಜನಿಸಿದರು.

ತಂದೆ ವಾಮನರಾವ್ ನ್ಯಾಯವಾದಿ. ಸುಸಂಸ್ಕೃತ ಮನೆತನದಲ್ಲಿ ಹುಟ್ಟಿದ ಕಾಣೆಯವರು ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ ಪದವೀಧರರಾದರು (1901). ಮುಂದೆ ಎಲ್.ಎಲ್.ಬಿ. ಪದವಿ ಪಡೆದು 1903ರಲ್ಲಿ ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇಂಗ್ಲಿಷ್ ಮತ್ತು ಸಂಸ್ಕೃತಗಳೆರಡರಲ್ಲೂ ಮೇಧಾವಿ ಎನಿಸಿದ ಇವರಿಗೆ ಭೌದಾಜಿ ಮತ್ತು ಜಾಲಾ ವೇದಾಂತ ಬಹುಮಾನಗಳು ದೊರಕಿದುವು. 1906–07ರಲ್ಲಿ ಇವರ ವಿದ್ವತ್‌ಪೂರ್ಣ ಲೇಖನಗಳಿಗೆ ವಿ.ಎನ್. ಮಾಂಡ್ಲಿಕ್ ಸುವರ್ಣಪದಕ ಮತ್ತು ಬಹುಮಾನ ದೊರೆತವು.

ಕಾಣೆಯವರು 1904ರಲ್ಲಿ ಪ್ರೌಢಶಾಲೆಯೊಂದರಲ್ಲಿ ಉಪಾಧ್ಯಾಯ ವೃತ್ತಿಗೆ ಸೇರಿದರು. 1909ರಲ್ಲಿ ಬೊಂಬಾಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದರು. 1912ರಲ್ಲಿ ಎಲ್.ಎಲ್.ಎಂ. ಪದವಿ ಪಡೆದು ಬೊಂಬಾಯಿಯ ಶ್ರೇಷ್ಠ ನ್ಯಾಯಾಲಯದ ವಕೀಲರಾದರು.

ವಕೀಲರಾಗಿ ಸಾಕಷ್ಟು ಹೆಸರು ಪಡೆದರೂ ಸಂಸ್ಕೃತ ಮತ್ತು ಭಾರತೀಯ ಸಂಸ್ಕೃತಿಯ ಅಭ್ಯಾಸ ಕಾಣೆಯವರಿಗೆ ಅಚ್ಚುಮೆಚ್ಚಾಯಿತು. 1910ರಲ್ಲೇ ವಿಶ್ವನಾಥನ ಸಾಹಿತ್ಯ ದರ್ಪಣವನ್ನು

ಅಚ್ಚುಕಟ್ಟಾದ ಪೀಠಿಕೆ, ಟಿಪ್ಪಣಿ ಮತ್ತು ಅನುಬಂಧಗಳೊಡನೆ ಪ್ರಕಾಶಪಡಿಸಿದರು. ಇದೇ ಗ್ರಂಥ ಮುಂದೆ ಇವರ ಪ್ರಸಿದ್ಧವಾದ ಸಂಸ್ಕೃತ ಅಲಂಕಾರ ಶಾಸ್ತ್ರ ಚರಿತ್ರೆ ಎಂಬ ಗ್ರಂಥಕ್ಕೆ ನಾಂದಿಯಾಯಿತು. 1913ರಲ್ಲಿ ವಿಲ್ಸನ್ ಭಾಷಾಶಾಸ್ತ್ರ ಭಾಷಣಗಳು ಎಂಬ ಮಾಲೆಯಲ್ಲಿ ಸಂಸ್ಕೃತ ಮತ್ತು ತತ್‍ಸಂಬಂಧ ಭಾಷೆಗಳ ವಿಚಾರವಾಗಿ ಆರು ಭಾಷಣಗಳನ್ನಿತ್ತರು. ಎರಡು ವರ್ಷಗಳ ಕಾಲ ಮಹಾರಾಷ್ಟ್ರದ ಪುರಾತನ ಭೂಗೋಳಶಾಸ್ತ್ರ ಎಂಬ ವಿಷಯದಲ್ಲಿ ಸಂಶೋಧನೆ ನಡೆಸಲು ಇವರಿಗೆ ಸ್ಪ್ರಿಂಗರ್ ಸಂಶೋಧನ ವಿದ್ಯಾರ್ಥಿವೇತನ ಲಭಿಸಿತು. ಅನಂತರ ತಾವು ಓದಿದ ವಿಲ್ಸನ್ ಕಾಲೇಜಿನಲ್ಲಿ ಗೌರವ ಸಂಸ್ಕೃತ ಪ್ರಾಧ್ಯಾಪಕರಾಗಿ (1916) ಒಂದು ವರ್ಷ ಸೇವೆ ಸಲ್ಲಿಸಿದರು.

1917ರಿಂದ 1923ರ ವರೆಗೆ ಬೊಂಬಾಯಿಯ ಲಾ ಕಾಲೇಜಿನಲ್ಲಿ ಕಾಯಿದೆ ವಿಭಾಗದ ಪ್ರಾಚಾರ್ಯರಾಗಿದ್ದರು. ಕೆಲಕಾಲ ದೆಹಲಿಯ ಫೆಡರಲ್ ನ್ಯಾಯಾಲಯದ ವಕೀಲರಾಗಿಯೂ ಕೆಲಸ ಮಾಡಿದರು. ಅಲ್ಲದೆ ಬಿ.ಎ., ಎಂ.ಎ., ಎಲ್.ಎಲ್.ಬಿ., ಎಲ್.ಎಲ್.ಎಂ., ಪಿ.ಎಚ್.ಡಿ ಮತ್ತು ಡಿ.ಲಿಟ್ ಪರೀಕ್ಷೆಗಳಿಗೆ ನಾನಾ ಹಂತಗಳಲ್ಲಿ ಬೊಂಬಾಯಿ, ಮದರಾಸು, ನಾಗಪುರ ಮತ್ತು ಢಾಕಾ ಮುಂತಾದ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಕರಾಗಿಯೂ ಸೇವೆ ಸಲ್ಲಿಸಿದರು.

1919ರಿಂದ 1928ರ ವರೆಗೆ ಒಂಬತ್ತು ವರ್ಷಗಳ ಕಾಲ ಮುಂಬಯಿ ವಿಶ್ವವಿದ್ಯಾನಿಲಯದ ಫೆಲೊ ಆಗಿಯೂ ಕಲೆ ಮತ್ತು ಕಾಯಿದೆ ವಿಭಾಗಗಳಲ್ಲಿ ಹದಿನೈದು ವರ್ಷಗಳ ಕಾಲ ಸದಸ್ಯರಾಗಿಯೂ ಇದ್ದರು.

ಕಾಣೆಯವರು ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆ, ದಕ್ಷಿಣ ಬ್ರಾಹ್ಮಣಸಭೆ, ಮರಾಠೀ ಗ್ರಂಥ ಸಂಗ್ರಹಾಲಯ, ಭಂಡಾರ್‍ಕರ್ ಪ್ರಾಚ್ಯ ಸಂಶೋಧನಾಲಯ (ಭಂಡಾರಕರ್ ಓರಿಯಂಟಲ್ ರೀಸರ್ಚ್ ಇನ್‍ಸ್ಟಿಟ್ಯೂಟ್), ಮಹಾರಾಷ್ಟ್ರ ಸಾಹಿತ್ಯ ಪರಿಷತ್– ಮುಂತಾದ ಸಂಘಸಂಸ್ಥೆಗಳಲ್ಲಿ ನಾನಾಮುಖ ಸೇವೆ ಸಲ್ಲಿಸಿದ್ದಾರೆ. ಅಖಿಲ ಭಾರತೀಯ ಪೌರಸ್ತ್ಯ ಸಮ್ಮೇಳನಗಳಲ್ಲಿ ಇವರದ್ದು ಸುಕ್ರಿಯವಾದ ಪಾತ್ರ. 1947ರಿಂದ 1949ರ ವರೆಗೆ ಮುಂಬಯಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಪ್ಯಾರಿಸ್ (1948), ಇಸ್ತಾನ್‍ಬುಲ್ (1951), ಕೇಂಬ್ರಿಜ್ (1954) ನಗರಗಳಲ್ಲಿ ನಡೆದ ಇಂಟರ್‍ನ್ಯಾಷನಲ್ ಕಾಂಗ್ರೆಸ್ ಆಫ್ ಓರಿಯಂಟಲಿಸ್ಟ್ಸ್ ಮಹಾ ಸಮ್ಮೇಳನಗಳಲ್ಲಿ ಭಾರತ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. 1953 ರಿಂದ 1959ರ ವರೆಗೆ ಸರಕಾರದಿಂದ ಆಯ್ಕೆಗೊಂಡ ಲೋಕಸಭಾ ಸದಸ್ಯರಾಗಿದ್ದರು. 1956ರಲ್ಲಿ ಇವರ ಧರ್ಮಶಾಸ್ತ್ರದ ಇತಿಹಾಸದ ನಾಲ್ಕನೆಯ ಸಂಪುಟಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿತು. 1958ರಲ್ಲಿ ಭಾರತ ಸರಕಾರ ಇವರನ್ನು ಗೌರವಿಸಿ 1,500 ರೂಗಳ ವಾರ್ಷಿಕ ಜೀವನಾಂಶ ನೀಡಿತು. ಅಲಹಬಾದ್ ಮತ್ತು ಪುಣೆ ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದುವು. 1963ರಲ್ಲಿ ಇವರಿಗೆ ಭಾರತರತ್ನ ಪ್ರಶಸ್ತಿ ದೊರಕಿತು; ಅದೇ ವರ್ಷ ಮುಂಬಯಿ ವಿಶ್ವವಿದ್ಯಾನಿಲಯ ಡಾಕ್ಟರ್ ಆಫ್ ಲಾಸ್ ಪದವಿ ನೀಡಿತು.

**ಸಾಹಿತ್ಯ ಕೃತಿಗಳು**: ಸಂಸ್ಕೃತದ ವಿಶಾಲವಾದ ಕಾವ್ಯಶಾಸ್ತ್ರಗಳನ್ನು ಆಧುನಿಕ ಸಂಶೋಧನ ಪದ್ಧತಿಯಿಂದ ಆಳವಾಗಿ ಅಧ್ಯಯನ ಮಾಡಿ ಯಾವ ಪೂರ್ವಗ್ರಹವೂ ಇಲ್ಲದೆ ಕೇವಲ ವಿದ್ವಜ್ಜನೋಚಿತ ಪ್ರಾಮಾಣಿಕತೆಯಿಂದ ಗ್ರಂಥ ರಚನೆ ಮಾಡಿ ಭಾರತದಲ್ಲಿ ಮಾತ್ರವಲ್ಲದೆ ಅಂತರ್‍ರಾಷ್ಟ್ರೀಯ ಕೀರ್ತಿಯನ್ನು ಗಳಿಸಿರುವ ಕೆಲವೇ ಜನ ಭಾರತೀಯ ವಿದ್ವಾಂಸರಲ್ಲಿ ಕಾಣೆಯವರೂ ಒಬ್ಬರು. ಕಾಣೆಯವರ ವಿದ್ವತ್ಪೂರ್ಣ ಸಂಪಾದನೆಯಲ್ಲಿ ಅನೇಕ ಗ್ರಂಥಗಳು ಪ್ರಕಟವಾಗಿವೆ. ಬಾಣಭಟ್ಟನ ಕಾದಂಬರಿಯ ಎರಡು ಭಾಗಗಳನ್ನು 1911 ಮತ್ತು 1918ರಲ್ಲೂ ಹರ್ಷಚರಿತೆಯ ಎರಡು ಭಾಗಗಳನ್ನು 1918 ಮತ್ತು 1921ರಲ್ಲೂ ಭವಭೂತಿಯ ಉತ್ತರರಾಮಚರಿತ ನಾಟಕವನ್ನು 1913ರಲ್ಲೂ ನೀಲಕಂಠನ ವ್ಯವಹಾರ ಮಯೂಖವನ್ನು 1927ರಲ್ಲೂ ಪ್ರಕಟಿಸಿದರು. ಇವಲ್ಲದೆ ಪೂರ್ವ ಮೀಮಾಂಸಾದರ್ಶನ, ವಿಶ್ವನಾಥನ ಸಾಹಿತ್ಯದರ್ಪಣ, ಶಂಖಲಿಖಿತರ ಧರ್ಮಸೂತ್ರ, ಕಾತ್ಯಾಯನನ ಸ್ಮೃತಿ ಸಾರೋದ್ಧಾರ ಮುಂತಾದ ಗ್ರಂಥಗಳು ಸಮುಚಿತವಾದ ಪೀಠಿಕೆ, ಟಿಪ್ಪಣಿ, ಭಾಷಾಂತರ ಇತ್ಯಾದಿಗಳಿಂದ ಪ್ರಕಟಗೊಂಡಿವೆ. ಸಂಸ್ಕೃತದಷ್ಟೇ ಮರಾಠಿ ಭಾಷೆಯಲ್ಲಿಯೂ ಇವರು ಪ್ರಕಾಂಡ ಪಂಡಿತರು. ಭಾರತ ರಾಮಾಯಣ ಕಾಲಗಳ ಸಾಮಾಜಿಕ ಸ್ಥಿತಿ. ಸಂಸ್ಕೃತ ಸಾಹಿತ್ಯದ ಇತಿಹಾಸ, ಧರ್ಮಶಾಸ್ತ್ರ ವಿಚಾರ, ಋಕ್‍ಸಾರ ಸಂಗ್ರಹ ಮತ್ತು ಯುರೋಪಿನಲ್ಲಿ ಪ್ರವಾಸ ಎಂಬ ಗ್ರಂಥಗಳನ್ನಿವರು ಮರಾಠಿಯಲ್ಲಿ ರಚಿಸಿದ್ದಾರೆ.

**ಧರ್ಮಶಾಸ್ತ್ರ ಗ್ರಂಥಗಳು**: ಇವರ ಹಿಂದೂ ಕಸ್ಟಮ್ಸ್ ಅಂಡ್ ಮಾಡರ್ನ್ ಲಾ ಎಂಬ ಕೃತಿಯ ಮೂರು ಭಾಗಗಳು 1944ರೊಳಗೆ ಪ್ರಕಟವಾದುವು. 1951ರಲ್ಲಿ ಹಿಸ್ಟ್ರಿ ಆಫ್ ಸಂಸ್ಕೃತ ಪೊಯೆಟಿಕ್ಸ್ ಪ್ರಕಟವಾಯಿತು. ಇವರ ಮಹಾ ಗ್ರಂಥವಾದ ಹಿಸ್ಟ್ರಿ ಆಫ್ ಧರ್ಮಶಾಸ್ತ್ರದ ಐದು ಭಾಗಗಳು 1930 ರಿಂದ 1962ರೊಳಗೆ ಪ್ರಕಟವಾದುವು. ಧರ್ಮಶಾಸ್ತ್ರದ ಇತಿಹಾಸ ಕಾಣೆಯವರ ಬೃಹದ್ ಗ್ರಂಥ; ಭಾರತೀಯ ನ್ಯಾಯಶಾಸ್ತ್ರಕ್ಕೆ ನೀಡಿದ ಉತ್ತಮ ಕೊಡುಗೆ. ಹಿಂದೂ ಧರ್ಮಶಾಸ್ತ್ರದ ಪ್ರಚುರತೆಯ ಪರಿಜ್ಞಾನ, ಆ ಬಗ್ಗೆ ಸಾಮಾಜಿಕ ಮಾನ್ಯತೆಯ ಅಧ್ಯಯನ, ವಿಧಿ–ಶಾಸ್ತ್ರಗಳ ತುಲನಾತ್ಮಕ ವಿವೇಚನೆ ಮತ್ತು ಇತರ ಶಾಸ್ತ್ರಗಳು ಧರ್ಮಶಾಸ್ತ್ರದ ಮೇಲೆ ಬೀರಿದ ಪ್ರಭಾವ–ಇವುಗಳ ಪ್ರತಿಪಾದನೆಯ ದೃಷ್ಟಿಯಿಂದ ಅವಲೋಕಿಸಬಹುದಾದ ಆದ್ಯ ಗ್ರಂಥವಿದು. ವೇದಗಳ ಕಾಲದಿಂದ ಇತ್ತೀಚಿನವರೆಗೆ ಹಿಂದೂ ಧರ್ಮಶಾಸ್ತ್ರ ಬೆಳೆದು ಬಂದ ರೀತಿ ಮತ್ತು ವಿಧಿ–ವಿಧಾನಗಳ ವಿಕಸನವನ್ನು ಇದರಲ್ಲಿ ಪ್ರತಿಪಾದಿಸಲಾಗಿದೆ.

ಇಂಥ ಒಂದು ಬೃಹದ್ ಗ್ರಂಥದ ಯೋಜನೆ ಸುಮಾರು 1915ರಲ್ಲಿ ಕಾಣೆಯವರ ಮನಸ್ಸಿನಲ್ಲಿ ಸುಳಿಯಿತು. ಅದಕ್ಕಾಗಿ ಅವಿಶ್ರಾಂತ ದುಡಿಮೆಯನ್ನು ಆರಂಭಿಸಿದರು. ಪುಣೆಯ ಭಂಡಾರ್‍ಕರ್ ಸಂಶೋಧನ ಸಂಸ್ಥೆಯ ಆಶ್ರಯದಿಂದ 1930ರ ವೇಳೆಗೆ ಇದರ ಒಂದು ಸಂಪುಟ ಮಾತ್ರ ಪ್ರಕಟವಾಗುವಂತಾಯಿತು. ಇಷ್ಟು ದೀರ್ಘಕಾಲ, ಅವಿಶ್ರಾಂತ ಅಧ್ಯಯನದಿಂದ ಇವರು ಸಂಗ್ರಹಿಸಿದ ಅಂಶಗಳಲ್ಲಿ ಹತ್ತನೆಯ ಒಂದು ಪಾಲು ಕೂಡ ಅದರಲ್ಲಿ ಅಡಕವಾಗಲಿಲ್ಲ. ಕೇವಲ ಧರ್ಮಸೂತ್ರ, ಸ್ಮೃತಿಗಳು, ನಿಬಂಧಗಳು, ಧರ್ಮಶಾಸ್ತ್ರ ಗ್ರಂಥಗಳು, ಟೀಕೆ ಟಿಪ್ಪಣಿಗಳು ಇವುಗಳ ಐತಿಹಾಸಿಕ ಅವಲೋಕನ ಮಾತ್ರ ಪ್ರಥಮ ಸಂಪುಟದಲ್ಲಿ ಶಕ್ಯವಾಯಿತು. ಕೇವಲ ಪುಸ್ತಕ ಸೂಚಿಯೇ 257 ಪುಟಗಳಷ್ಟಾಗಿವೆ. ನೂರಾರು ಮುದ್ರಿತ ಗ್ರಂಥಗಳಲ್ಲದೆ ಸಾವಿರಾರು ಹಸ್ತಪ್ರತಿಗಳನ್ನು ಕೂಡ ಪರಿಶೀಲಿಸಿಯೇ ಕಾಣೆಯವರು ಈ ಇತಿಹಾಸವನ್ನು ಬರೆದಿದ್ದಾರೆ.

ಕಾಣೆಯವರು ಮೊದಲು ನಿರೀಕ್ಷಿಸಿದಂತೆ ಸಂಗ್ರಹಿಸಿದ್ದ ವಿಷಯ ವಿಸ್ತಾರ ಎರಡನೆಯ ಸಂಪುಟದಲ್ಲಿ ಕೂಡ ಕರಗಲಿಲ್ಲ. ಎರಡು ಭಾಗಗಳಲ್ಲಿ 1368 ಪುಟಗಳಷ್ಟು ಗಾತ್ರದ ಎರಡನೆಯ ಸಂಪುಟ 1941ರಲ್ಲಿ ಪ್ರಕಟವಾದರೂ ಕೇವಲ ವರ್ಣಾಶ್ರಮ ವಿಚಾರ, ಸಂಸ್ಕಾರಗಳು, ಆಹ್ನಿಕ, ಆಚಾರ, ದಾನ, ಪ್ರತಿಷ್ಠಾಪನೆ ಮತ್ತು ಉತ್ಸರ್ಗ, ಶ್ರೌತ ಯಜ್ಞಗಳು–ಇಷ್ಟು ವಿಷಯಗಳ ಚರ್ಚೆಗೆ ಮಾತ್ರ ಅಲ್ಲಿ ಅವಕಾಶವಾಯಿತು.

ಮುಂದೆ 1946ರಲ್ಲಿ ಪ್ರಕಟವಾದ ಮೂರನೆಯ ಸಂಪುಟದಲ್ಲಿ ಕೂಡ ರಾಜಧರ್ಮ, ವ್ಯವಹಾರ ಮತ್ತು ಸದಾಚಾರಗಳೆಂಬ ಮೂರೇ ವಿಷಯಗಳ ವಿವೇಚನೆ ಸಾಧ್ಯವಾಯಿತು. ಈ ಸಂಪುಟವೂ 1,088 ಪುಟಗಳಷ್ಟು ದೊಡ್ಡದು. ಪಾತಕ, ಕರ್ಮವಿಪಾಕ, ಪ್ರಾಯಶ್ಚಿತ, ಅಂತ್ಯೇಷ್ಟಿ, ಅಶೌಚ, ಶ್ರಾದ್ಧ ಎಂಬ ವಿಷಯಗಳ ವಿವರಣೆಗೆ ನಾಲ್ಕನೆಯ ಸಂಪುಟವೂ ವ್ರತ, ಉತ್ಸವ, ಕಾಲ, ಶಾಂತಿಗಳು, ಪೌರಾಣಿಕ ಧರ್ಮಗಳು, ಪೂರ್ವ ಮೀಮಾಂಸಾ ಮುಂತಾದ ಶಾಸ್ತ್ರಗಳಿಂದ ಧರ್ಮಶಾಸ್ತ್ರದ ಮೇಲಾದ ಪ್ರಭಾವ, ಭಾರತೀಯ ಸಂಸ್ಕೃತಿಯ ಸಾರಗ್ರಹಣ–ಮುಂತಾದವನ್ನೆಲ್ಲ ಚರ್ಚಿಸಲು ಎರಡು ಭಾಗಗಳಲ್ಲಿ ಪ್ರಕಟವಾದ (1958 ಮತ್ತು 1962) ಐದನೆಯ ಸಂಪುಟವೂ ಬೇಕಾಯಿತು. ಹೀಗೆ ಸತತ ಪರಿಶ್ರಮದಿಂದ ಐದು ದಶಕಗಳಿಗೂ ಹೆಚ್ಚಿನ ಕಾಲಾವಧಿಯನ್ನು ಕೇವಲ ಒಂದು ಧರ್ಮಶಾಸ್ತ್ರದ ಕೂಲಂಕಷ ನಿರೂಪಣೆಗೆ ಧಾರೆಯೆರೆದ ಕಾಣೆಯವರನ್ನು ಭಾರತ ಹೆಮ್ಮೆಯಿಂದ ಅಭಿನಂದಿಸುತ್ತಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಕಾಣೆಯವರ ನಿರೂಪಣೆಯಲ್ಲಿ ಭಾರತೀಯ ಗ್ರಂಥಕಾರರ ಅಭಿಪ್ರಾಯಗಳು ವಿಸ್ತೃತವಾಗಿ ಉಲ್ಲೇಖಿಸಲ್ಪಟ್ಟಿವೆ; ಆಧುನಿಕ ವಿಚಾರಗಳೊಂದಿಗೆ ಅವುಗಳ ವಿಮರ್ಶೆಯೂ ಬಂದಿದೆ. ಭಾರತೀಯ ಸಮಾಜಶಾಸ್ತ್ರದ ಪುನರ್‍ರಚನೆಗೆ ಈ ವಿಸ್ತೃತ ಗ್ರಂಥದ ಅಧ್ಯಯನ ಅಗತ್ಯವಾಗಿದೆ. ಐದು ಸಂಪುಟಗಳಲ್ಲಿರುವ ಈ ಮಹಾಗ್ರಂಥ 6,500 ಪುಟಗಳಷ್ಟಿದೆ. ಈ ಗ್ರಂಥ ಕಾಣೆಯವರಿಗೆ ಮಹಾಮಹೋಪಾಧ್ಯಾಯ ಪದವಿ ಮತ್ತು ಡಿ.ಲಿಟ್. ಪ್ರಶಸ್ತಿ, ಲಂಡನ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಓರಿಯಂಟಲ್ ಮತ್ತು ಆಫ್ರಿಕನ್ ಸ್ಟಡೀಸ್ ಗೌರವ ಸದಸ್ಯತ್ವಗಳನ್ನು ತಂದುಕೊಟ್ಟ ಮೇರುಕೃತಿಯಾಗಿದೆ.

ಕಾಣೆ ಅವರು ಸರಳ ಹಾಗೂ ಸಾರ್ಥಕವಾದ ತುಂಬು ಜೀವನ ನಡೆಸಿದ್ದಾರೆ. ಇವರದು ಆಡಂಬರವಿಲ್ಲದ ನಡೆನುಡಿ. ಸುಸಂಸ್ಕೃತ ವ್ಯಕ್ತಿತ್ವ. ತೊಂಬತ್ತೆರಡು ವಯಸ್ಸಿನ ಈ ವ್ಯಕ್ತಿ ತನ್ನ ಜೀವಿತ ಕಾಲದಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಅನುಪಮವಾದುದು. ಇವರು 1972ರಲ್ಲಿ ನಿಧನಹೊಂದಿದರು.

(ಸಿ.ಜಿ.ಪಿ.; ಕೆ.ಕೆ.; ಎಲ್.ಎಸ್.ಜೆ.)

**ಕಾಣ್ವ ಮನೆತನ :** ಪ್ರಾಚೀನ ಭಾರತದಲ್ಲಿ ಆಳಿದ, ಅಷ್ಟು ಪ್ರಮುಖವಲ್ಲದ ಒಂದು ರಾಜವಂಶ. ಇದರ ಚರಿತ್ರೆ ಪುರಾಣಗಳಲ್ಲಿ ಉಕ್ತವಾಗಿದೆ. ಈ ವಂಶದ ಸ್ಥಾಪಕ ವಸುದೇವ. ಈತ ಶುಂಗವಂಶದ ದೇವಭೂತಿಯ (ದೇವಭೂಮಿ) ಅಮಾತ್ಯನಾಗಿದ್ದ. ದೇವಭೂತಿಯನ್ನು ಕೊಂದು ರಾಜ್ಯವನ್ನು ಅಪಹರಿಸಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿದ. ಈತನ ಗೋತ್ರದಿಂದಾಗಿ ಈ ವಂಶಕ್ಕೆ ಕಾಣ್ವ (ಕಾಣ್ವಾಯನ) ಎಂಬ ಹೆಸರು ಬಂದಿದೆ. ವಸುದೇವ 9 ವರ್ಷ ಆಳಿದ. ಅನಂತರ ಇವನ ಸಂತತಿಯ ಭೂಮಿಮಿತ್ರ, ನಾರಾಯಣ, ಸುಶರ್ಮ–ಇವರು 36 ವರ್ಷ ರಾಜ್ಯಭಾರ ಮಾಡಿದರು. ಸುಶರ್ಮನೇ ಈ ವಂಶದ ಕೊನೆಯ ಅರಸ. ಈ ವಂಶದ ಆಳ್ವಿಕೆ ಪ್ರ.ಶ.ಪೂ. 76 ರಿಂದ 30ರ ವರೆಗೆ ನಡೆಯಿತು. ಸಾತವಾಹನ ಸಂತತಿಯ ಸೀಮುಖ ಇದನ್ನು ಕೊನೆಗಾಣಿಸಿದ.

(ಪಿ.ಬಿ.ಡಿ.)

**ಕಾತ್ಯಾಯನ :** ಪ್ರ.ಶ.ಪೂ. ಸು. 200. ವ್ಯಾಕರಣಶಾಸ್ತ್ರ ಪ್ರವರ್ತಕರೆಂದು ಪ್ರಸಿದ್ಧರಾದ ಮುನಿತ್ರಯರಲ್ಲಿ ಎರಡನೆಯವನು. ಉಳಿದವರು ಪಾಣಿನಿ ಮತ್ತು ಪತಂಜಲಿ. ಅಷ್ಟ

ದಿಗ್ಗಜಗಳಲ್ಲೊಂದಾದ ಪುಷ್ಪದಂತದ ಅವತಾರವೀತನೆನ್ನಲಾಗಿದೆ. ಶಿವಗಣಗಳಲ್ಲೊಬ್ಬನಾದ ಈತ ದೇವಮಾತಾಪಿತೃಗಳ ರಹಸ್ಯ ಸಂಭಾಷಣೆಯನ್ನು ಕದ್ದು ಕೇಳಿದುದರ ಪ್ರಾಯಶ್ಚಿತ್ತಕ್ಕಾಗಿ ಮಾನವಲೋಕದಲ್ಲಿ ಹುಟ್ಟಿದನೆಂದು ಐತಿಹ್ಯವಿದೆ.

ಪಾಣಿನಿಯ ಅನಂತರ ಬಂದ ಕಾತ್ಯಾಯನ ಪಾಣಿನೀಯ ವ್ಯಾಕರಣಕ್ಕೆ ವಾರ್ತಿಕವೆಂಬ ಅನುಬಂಧವನ್ನು ಬರೆದು ಆಗತಾನೆ ಬಳಕೆಗೆ ಬಂದಿದ್ದ ಅಭಿಜಾತ ಸಂಸ್ಕೃತದ ಬಗ್ಗೆ ಚರ್ಚೆ ನಡೆಸಿದ್ದಾನೆ; ಉದಾಹರಿಸಿದ್ದಾನೆ: ಹೊಸ ಸೂತ್ರಗಳನ್ನು ರೂಪಿಸಿದ್ದಾನೆ. ಪಾಣಿನಿಯಲ್ಲಿ ಹಳತಾಗಿ ಹೋಗಿದ್ದ ಕೆಲವು ಸೂತ್ರಗಳನ್ನಿವನು ತೆಗೆದು ಹಾಕಿದ್ದಾನೆ. ಕಾತ್ಯಾಯನ 866 ವಾರ್ತಿಕಗಳನ್ನು ರಚಿಸಿರುವುದಾಗಿ ತಿಳಿದುಬಂದಿದೆ. ಇವನ ತರುವಾಯ ಬಂದ ಪತಂಜಲಿ ಸೂತ್ರ ಮತ್ತು ವಾರ್ತಿಕಗಳಲ್ಲಿನ ಕೊರತೆಯನ್ನು ತುಂಬುವ ಉದ್ದೇಶದಿಂದಲೇ ಮಹಾಭಾಷ್ಯವನ್ನು ಬರೆದು ಸಂಸ್ಕೃತ ವ್ಯಾಕರಣಕ್ಕೆ ಪರಿಪೂರ್ಣತೆಯನ್ನು ಸ್ಥಾಪಿಸಿದ. ಅಲ್ಲಿಂದೀಚೆಗೆ ಬಂದ ವೈಯಾಕರಣರು ಹಿಂದೆ ಹೇಳಿದ ಈ ಮೂವರು ಮುನಿಗಳಲ್ಲಿ ಮುಂದು ಮುಂದಿನವರಿಗೆ ಪ್ರಾಮಾಣ್ಯವನ್ನಿತ್ತು ವ್ಯಾಖ್ಯೆಗಳನ್ನು ಬರೆದರು.

ಕಥಾಸರಿತ್ಸಾಗರದ ಅಭಿಪ್ರಾಯದಂತೆ ಪಾಣಿನಿ, ಕಾತ್ಯಾಯನ ಮತ್ತು ವ್ಯಾಡಿ ಈ ಮೂವರೂ ಸಮಕಾಲೀನರು. ಅವರಲ್ಲಿ ಪಾಣಿನಿಗಿಂತ ಕಾತ್ಯಾಯನನೇ ಹಿರಿಯ. ಪಾಣಿನಿ ಶಲಾತುರ (ಲಾಹೋರ್) ನಿವಾಸಿಗಳಾದ ದಾಕ್ಷೀ ಶಲಂಕು ಎಂಬುವರ ಮಗ. ಹೆಸರು ರಾಹಿಕ; ಪಾಣಿನಿ ಎಂಬುದು ಗೋತ್ರನಾಮ. ಕಾತ್ಯಾಯನ, ಕೌಶಾಂಬಿಯ ವಸುದತ್ತೆ ಮತ್ತು ಸೋಮದತ್ತರ ಪುತ್ರ. ಶ್ರುತಧರ ಅಥವಾ ವರರುಚಿ ಎಂದು ಹೆಸರಾಂತ ಈತ ಕಾತ್ಯಾಯನ ಗೋತ್ರದವ. ಇನ್ನು ವ್ಯಾಡಿ, ಪಾಣಿನಿಯ ಸೋದರತ್ತೆಯ ಮಗ. ಈತ ಪಾಣಿನಿಯ ಸೂತ್ರಗಳಿಗೆ ಸಂಗ್ರಹ ಎಂಬ ಒಂದು ಲಕ್ಷ ಶ್ಲೋಕಗಳ ವ್ಯಾಖ್ಯೆ ಬರೆದಿರುವಂತೆ ತಿಳಿದುಬಂದಿದೆ. ಈ ಮೂವರೂ ನಂದರಾಜಧಾನಿ ಪಾಟಲೀಪುತ್ರನಿವಾಸಿ ಶಂಕರ ಸ್ವಾಮಿಯ ಪುತ್ರನೂ ಪೂರ್ವೋತ್ತರ ಮೀಮಾಂಸೆಗಳಿಗೆ ಸೂತ್ರ ವೃತ್ತಿಕಾರನೂ ಆದ ಉಪವರ್ಷನ ಜ್ಯೇಷ್ಠ ಸೋದರ ವರ್ಷೋಪಾಧ್ಯಾಯನ ಶಿಷ್ಯರು ಎಂದು ಹೇಳಲಾಗಿದೆ. ಆದರೆ ಅವರೆಲ್ಲ ಸಮಕಾಲೀನರೆಂಬ ಈ ಮಾತನ್ನು ಗೋಲ್ಡ್‌ಸ್ಟಕರ್ ಮುಂತಾದ ಪಂಡಿತರು ಮಾನ್ಯ ಮಾಡಿಲ್ಲ.

ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ನವಮಣಿಗಳಲ್ಲಿ ಒಬ್ಬನಾದ ವರರುಚಿಯೇ ಕಾತ್ಯಾಯನನೆಂಬ ಪ್ರತೀತಿ ಇದೆ. ಕಾತ್ಯಾಯನನೆಂಬ ಹೆಸರಿನವರು ಒಂದು ಶ್ರೌತ ಸೂತ್ರವನ್ನೂ ಒಂದು ಯಜುರ್ವೇದ ಪ್ರಾತಿ ಶಾಖ್ಯವನ್ನೂ ಒಂದು ಧರ್ಮಶಾಸ್ತ್ರವನ್ನೂ ರಚಿಸಿರುವುದಾಗಿ ತಿಳಿಯುತ್ತದೆ. (ಎಂ.ಜಿ.ಎನ್.)

**ಕಾದಂಬರಿ :** ಒಂದು ದೃಷ್ಟಿಯಿಂದ ನೋಡಿದರೆ ಕಾದಂಬರಿ ಎನ್ನುವ ಸಾಹಿತ್ಯರೂಪದ ಚರಿತ್ರೆ ದೀರ್ಘವಾದುದೇ. ಆದರೆ ಇಂದು ಸಾಮಾನ್ಯವಾಗಿ ಈ ಪದದಿಂದ ನಿರ್ದೇಶಿಸುವ ಸಾಹಿತ್ಯರೂಪದ ಚರಿತ್ರೆ ಕಳೆದ ಇನ್ನೂರು ವರ್ಷಗಳದ್ದು. ಮಹಾಕಾವ್ಯ, ನಾಟಕ ಇಂಥ ರೂಪಗಳಿಗೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಇರುವ ದೀರ್ಘ ಚರಿತ್ರೆ ಇದಕ್ಕಿಲ್ಲ. ಹೀಗಾಗಿ, ಸ್ಫುಟವಾಗಿ ರೂಪುಗೊಂಡು ಸ್ಪಷ್ಟವಾಗಿ ಹೆಸರಿಸಬಹುದಾದ ಆದಿಕೃತಿ ಈ ರೂಪಕ್ಕಿಲ್ಲ. ಇಂಗ್ಲಿಷಿನ ನಾವೆಲ್ ಪದವೇ ಲ್ಯಾಟಿನಿನ ನೋವಸ್, ಎಂದರೆ ಹೊಸದು, ಎನ್ನುವ ಪದದಿಂದ ಬಂದದ್ದು.

ಕನ್ನಡದಲ್ಲಿ ಕಾದಂಬರಿ ಎಂಬ ಹೆಸರು ಪ್ರಚುರವಾದುದು ಬಹುಶಃ ಬಾಣನ ಕಾದಂಬರಿಯಿಂದ. ಬಾಣನ ಕಾದಂಬರಿ ಗದ್ಯದಲ್ಲಿ ರೂಪುಗೊಂಡಿರುವ ಸಂಕೀರ್ಣ ಕಥೆ. ಅದರಲ್ಲಿ ಕಾದಂಬರಿ, ಮಹಾಶ್ವೇತೆ, ಚಂದ್ರಾಪೀಡ, ಪುಂಡರೀಕ, ಕಪಿಂಜಲ, ಶೂದ್ರಕ ಮೊದಲಾದ ವ್ಯಕ್ತಿಗಳ ಜೀವನವೃತ್ತಾಂತ ನಿರೂಪಿತವಾಗಿದೆ. ಕೆಲವೇಳೆ ಕಥೆ ಭೂಲೋಕದಿಂದ ಗಂಧರ್ವಲೋಕಕ್ಕೂ ಇಂದಿನ ಜೀವನದಿಂದ ಮುಂದೆ ಮೂರು ಜನ್ಮಗಳಿಗೂ ಹರಿದಾಡುತ್ತವೆ. ಇಂಥದ್ದೇ ಕಥೆಗಳನ್ನು ಕಾದಂಬರಿ ಎಂಬ ಸಾಮಾನ್ಯ ನಾಮದಿಂದ ಕರೆದಿರುವುದು ಉಚಿತವಾಗಿಯೇ ಇದೆ. ತೆಲುಗು ಮೊದಲಾದ ಭಾಷೆಗಳಲ್ಲಿ ನಾವೆಲ್, ನಾವೆಲು ಎಂಬ ಪದಗಳೂ ಬಳಕೆಯಲ್ಲಿವೆ. ಬಂಗಾಳಿ ಭಾಷೆಯಲ್ಲಿ ಕಾದಂಬರಿಯನ್ನು ಉಪನ್ಯಾಸ ಎನ್ನಲಾಗುತ್ತದೆ.

ಪ್ರಕೃತ ಲೇಖನದಲ್ಲಿ ಕಾದಂಬರಿಯ ಲಕ್ಷಣ, ಚರಿತ್ರೆ, ವೈವಿಧ್ಯ, ವ್ಯಾಪ್ತಿಗಳ ಸಂಕ್ಷೇಪ ಪರಿಚಯವಿದೆ.

**ಗುಣಲಕ್ಷಣಗಳು:** ಪಾಶ್ಚಾತ್ಯ ಕಾದಂಬರಿ ರೂಪದ ಪ್ರಭಾವ ಇಡೀ ಜಗತ್ತಿನ ಸಾಹಿತ್ಯದ ಮೇಲೆ ಹಬ್ಬಿದೆ ಎನ್ನಬಹುದು. ಕಳೆದ 250 ವರ್ಷಗಳಲ್ಲಿ ಇದು ಸಾಧಿಸಿರುವ ವೈವಿಧ್ಯದಿಂದ ಇದರ ವಿವರಣೆಯೇ ಕಷ್ಟಸಾಧ್ಯವಾಗಿದೆ. ಜೇನ್ ಆಸ್ಟೆನಳ ಹಮ್ಮು-ಬಿಮ್ಮು (ಪ್ರೈಡ್ ಅಂಡ್ ಪ್ರೆಜುಡಿಸ್), ಟಾಲ್‌ಸ್ಟಾಯಿಯ ಸಮರ ಮತ್ತು ಶಾಂತಿ (ವಾರ್ ಅಂಡ್ ಪೀಸ್), ಜೇಮ್ಸ್ ಜಾಯ್ಸನ ಯೂಲಿಸಿಸ್, ಬೋರಿಸ್ ಪ್ಯಾಸ್ಟರ್‌ನಾಕ್‌ನ ಡಾಕ್ಟರ್ ಜಿವಾಗೊ, ಕಾರಂತರ ಮರಳಿ ಮಣ್ಣಿಗೆ, ಕುವೆಂಪು ಅವರ ಕಾನೂರು ಹೆಗ್ಗಡಿತಿ, ಗಸ್ಟಾವ್ ರಾಬ್‌ನ ಸಬೇರಿಯ-ಇಂಥ ಎಲ್ಲ ಕಾದಂಬರಿಗಳಿಗೂ ಅನ್ವಯಿಸುವಂಥ ಪರಿಪೂರ್ಣವಾದ ವಿವರಣೆಯನ್ನು ರೂಪಿಸುವುದು ತುಂಬ ಜಟಿಲವಾದ ಪ್ರಯತ್ನ. ಒಂದು ಮಹತ್ತ್ವದ ಅರ್ಥದ ಐಕ್ಯ ಸಾಧಿತವಾಗುವಂತೆ ಒಂದಕ್ಕೊಂದನ್ನು ಹೊಂದಿಸಿದ ಕಾಲ್ಪನಿಕ ಸನ್ನಿವೇಶಗಳ ಶ್ರೇಣಿಯ ವೃತ್ತಾಂತವೇ ಕಾದಂಬರಿ; ಕಥಾವಸ್ತು ಅರ್ಥದಲ್ಲಿ ಪ್ರತೀಕಾತ್ಮಕವೂ ಆಗುವಂತೆ ವೃತ್ತಾಂತದ ಪ್ರಗತಿಯ ಪ್ರತಿಬಿಂದುವಿನಲ್ಲಿ ಕಥಾವಸ್ತುವಿನ ಉದ್ದೇಶಿತ ಅರ್ಥಸ್ತರಗಳಿಗೆ ಮತ್ತೆ ಮತ್ತೆ, ಹಾಗೂ ಒಟ್ಟಿನಲ್ಲಿ ಪುಷ್ಟಿ ಕೊಡುವಂತೆ ಹಿನ್ನೋಟ ಮತ್ತು ನಿರೀಕ್ಷಣೆಗಳ ನಡುವೆ ಸಂಬಂಧವನ್ನು ಏರ್ಪಡಿಸಬಲ್ಲ ಭಾಷೆಯಲ್ಲಿ ಸನ್ನಿವೇಶಗಳು ನಿರೂಪಿತವಾಗಿರಬೇಕು, ವೃತ್ತಾಂತ ಗಮನಾರ್ಹವಾದ ಗಾತ್ರವನ್ನು ಪಡೆದಿರಬೇಕು-ಎನ್ನುವುದು ಒಟ್ಟಿನಲ್ಲಿ ಕಾದಂಬರಿಯ ಅಧ್ಯಯನಕ್ಕೆ ಸಹಾಯಕವಾಗುವ ವಿವರಣೆ. ಕಥಾವಸ್ತು ಮತ್ತು ಸನ್ನಿವೇಶಗಳು ಅನಿವಾರ್ಯವಾಗಿ ಪಾತ್ರಗಳನ್ನು ಒಳಗೊಳ್ಳಬೇಕು ಎಂಬುದು ಸ್ವಯಂವೇದ್ಯ.

ಈ ವಿವರಣೆಯಿಂದ ಕಾದಂಬರಿ ಮೇಲ್ಮೈಯಲ್ಲಿ ನಾವು ಗ್ರಹಿಸಬಹುದಾದ ಸನ್ನಿವೇಶಗಳ ನಿರೂಪಣೆಯೊಂದಿಗೆ ಅಂತರ್ಗತವಾದ ಒಂದು ಅರ್ಥವಿನ್ಯಾಸವನ್ನು ಸಾಧಿಸಲು ಪ್ರಯತ್ನಿಸುತ್ತದೆ ಎಂದಂತಾಯಿತು. ಮುಂದೇನಾಯಿತು ಎಂಬ ಸಹಜವಾದ ಕುತೂಹಲವನ್ನು ತಣಿಸುವ ಮಟ್ಟದಲ್ಲಿ ಮಾತ್ರ ನಿಲ್ಲದೆ ಕಥಾವಸ್ತುವಿನ ನಿರ್ವಹಣೆ ಇನ್ನೂ ಗಹನವಾದ ಜೀವನದ ಅನುಭವದ ಸ್ತರಕ್ಕೆ ಓದುಗನನ್ನು ಕೊಂಡೊಯ್ಯಲು ಸಮರ್ಥವಾದರೊಳ್ಳೆಯದು. ಕೃತಿಯ ಮೌಲ್ಯನಿರ್ಣಯ ಮಾಡುವಾಗ ಈ ಅನುಭವದ ಸ್ಫುಟತ್ವ ಮತ್ತು ಗಹನತೆ ಮತ್ತು ಅದರ ಸಂವಹನದ ಸಾಮರ್ಥ್ಯಗಳು ಗಮನಿಸಬೇಕಾದ ಅಂಶಗಳಾಗುತ್ತವೆ. ಕಾದಂಬರಿಯ ಕಥಾವಸ್ತು ಕಾಲ್ಪನಿಕ ಸನ್ನಿವೇಶಗಳ ಶ್ರೇಣಿಯನ್ನು ಒಳಗೊಂಡಿರುತ್ತದೆಯಾದರೂ ಅದು ನಿರೂಪಿಸುವ ಘಟನೆಗಳು ನಿಜವಾಗಿ ನಡೆದುವು. ಅದರ ವೃತ್ತಾಂತ ಅಕ್ಷರಶಃ ನಿಜ ಎಂಬ ಭಾವನೆಯನ್ನೇ ಮೂಡಿಸಲು ಕಾದಂಬರಿ ಪ್ರಯತ್ನಿಸುತ್ತದೆ. ಚಾರಿತ್ರಿಕ ಕಾದಂಬರಿಯಲ್ಲಿ ಕೆಲವು ಘಟನೆಗಳು ಕೆಲವು ಪಾತ್ರಗಳು ಒಮ್ಮೊಮ್ಮೆ ಕಥಾವಸ್ತುವಿನ ರೂಪರೇಖೆಕೂಡ ಚರಿತ್ರೆಯಿಂದ ತೆಗೆದುಕೊಂಡವಾಗಿದ್ದು. ಆ ಮಟ್ಟಿಗೆ ಅವುಗಳಲ್ಲಿ ಚಾರಿತ್ರಿಕ ಸತ್ಯವಿರಬಹುದು. ಆದರೆ ಅವು ಕಾದಂಬರಿಯ ಜಗತ್ತನ್ನು ಪ್ರವೇಶಿಸಿದಾಗ ಇಡೀ ಕೃತಿಯನ್ನು ರೂಪಿಸುವ ದೃಷ್ಟಿಗೆ ಬಾಗಿ ಅವು ಮಾರ್ಪಾಡಾಗಿ ವಿಭಾವನೆಯ ಸತ್ವವನ್ನು ತಳೆಯುತ್ತವೆ. ಇಲ್ಲವಾದರೆ ಕಾದಂಬರಿಯ ಐಕ್ಯಕ್ಕೆ ಭಂಗ ಬರುತ್ತದೆ. ಸನ್ನಿವೇಶಗಳ ಶ್ರೇಣಿ ಕಥಾವಸ್ತುವನ್ನು ಓದುಗರ ಮುಂದಿಡುವ ಸಾಧನ. ಸನ್ನಿವೇಶಗಳ ಜೋಡಣೆಯಲ್ಲಿ ಒಂದು ಆಂತರಿಕ ಸಂಬಂಧವಿರಬೇಕು. ಸಾಮಾನ್ಯವಾಗಿ ನಾವು ಕಾಣುವುದು ಪಾತ್ರ, ಆವರಣಗಳ ಸಂಬಂಧ. ಪಾತ್ರ ತನ್ನ ಆವರಣಕ್ಕೆ ಒಂದು ರೀತಿಯಲ್ಲಿ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಇದರಿಂದ ಸನ್ನಿವೇಶ ಮಾರ್ಪಾಡಾಗುತ್ತದೆ. ಇಲ್ಲವೆ ಇನ್ನೊಂದು ಸನ್ನಿವೇಶ ಏರ್ಪಡುತ್ತದೆ. ಆವರಣ ಪಾತ್ರದ ಮೇಲೆ ಒಂದು ರೀತಿಯ ಒತ್ತನ್ನು ಹಾಕುತ್ತದೆ. ಹೀಗೆ ಪಾತ್ರ ಮತ್ತು ಹೊರ ಜಗತ್ತುಗಳ ಪರಸ್ಪರ ಪ್ರತಿಕ್ರಿಯೆಯಿಂದ ಸನ್ನಿವೇಶಗಳ ಸರಪಳಿ ಬೆಳೆಯುತ್ತ ಹೋಗುತ್ತದೆ. ಪಾತ್ರದ ಸ್ವಭಾವ ಬಹುಮಟ್ಟಿಗೆ ನಾವು ಕಾದಂಬರಿಗಳಲ್ಲಿ ಕಾಣುವಂತೆ ಕ್ರಿಯೆಯಲ್ಲಿ ವ್ಯಕ್ತವಾಗುತ್ತದೆ; ಕ್ರಿಯೆ ಪಾತ್ರದ ಮೇಲೆ ಪ್ರಭಾವವನ್ನು ಬೀರುತ್ತದೆ. ಪಾತ್ರ-ಕ್ರಿಯೆಗಳ ನಿಕಟ ಸಂಬಂಧದ ಕಲ್ಪನೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಅರಿಸ್ಟಾಟಲನ ಪ್ರಭಾವದಿಂದ ರೂಪಿತವಾದದ್ದು. ಜಪಾನಿನಲ್ಲಿ ಹನ್ನೊಂದನೆಯ ಶತಮಾನದಲ್ಲಿ ರಚಿತವಾದ ದಿ ಟೇಲ್ ಆಫ್ ಗೆಂಜಿಯಂಥ ಕಾದಂಬರಿಯಲ್ಲಿ ಪಾತ್ರಗಳ ಮನೋವ್ಯಾಪಾರದ ಚಿತ್ರಣ ಸೂಕ್ಷ್ಮವಾಗಿದೆ. ಆದರೆ ಕೃತಿಯಲ್ಲಿ ಕ್ರಿಯೆ ಪಾತ್ರಗಳ ನಡುವೆ ಕಾರ್ಯ-ಕಾರಣ ಸಂಬಂಧ ಕಾಣುವುದಿಲ್ಲ. ಥಾಮಸ್ ಹಾರ್ಡಿಯ ಕಾದಂಬರಿಗಳಲ್ಲೂ ಕ್ರಿಯೆಯನ್ನು ಪಾತ್ರಗಳಲ್ಲದೆ ಪಾತ್ರಗಳಿಗಿಂತ ಹೆಚ್ಚಾಗಿ ಕಾಣದ ಶಕ್ತಿಯೊಂದು ನಡೆಸುತ್ತದೆ. ವಿಶ್ವದಲ್ಲಿ ಮಾನವನ ಸ್ಥಿತಿ ಅಸಂಬದ್ಧವೆಂಬ ತತ್ತ್ವವನ್ನು ರೂಪಿಸುವ ಕೃತಿಯಲ್ಲಿಯೂ ಇಂಥ ಕಾರ್ಯ-ಕಾರಣ ಸಂಬಂಧ ಕಾಣುವುದು ಸಾಧ್ಯವಿಲ್ಲ. ಪಾತ್ರ-ಕ್ರಿಯೆಗಳಿಗಿರುವ ನಿಕಟ ಸಂಬಂಧವನ್ನು ಕಾದಂಬರಿಕಾರನ ದೃಷ್ಟಿ ಹೀಗೆ ಗುರುತಿಸಬಹುದು. ಕಾದಂಬರಿಯ ಮೂಲಕ ಅರ್ಥ ವಿನ್ಯಾಸವನ್ನು ಸಂವಹನಗೊಳಿಸಲು ಕಾದಂಬರಿಕಾರನಿಗಿರುವ ಒಂದು ಸಾಧನವೆಂದರೆ ಭಾಷೆ. ಕಾದಂಬರಿಯ ವೃತ್ತಾಂತವನ್ನು ಮುಂದುವರಿಸುವುದು ಮಾತ್ರವೇ ಭಾಷೆಯ ಕೆಲಸವಲ್ಲ. ಒಂದು ಚಿತ್ರದ ರಸಾನುಭವವಾಗಬೇಕಾದರೆ ಇಡೀ ಕೃತಿ ಒಂದು ಏಕವಾಗಿ ಅನುಭವವಾಗಬೇಕು. ವಿಸ್ತಾರವಾದ ಕೃತಿಯನ್ನು ಒಂದು ಏಕವಾಗಿ ನಮ್ಮ ಅನುಭವಕ್ಕೆ ತಂದುಕೊಡುವುದರಲ್ಲಿ ಬಹುಮುಖ್ಯ ಸಾಧನ ಭಾಷೆ. ನಮ್ಮ ಗಮನ ಹಿಂದೆ ನಡೆದುದರತ್ತ ಹೋಗುವಂತೆ ಮತ್ತು ಮುಂದೆ ನಡೆಯಬಹುದಾದುದರತ್ತ ಮತ್ತೆ ಮತ್ತೆ ಸಾಗುವಂತೆ ಮಾಡಿ ಕೃತಿಯ ಭಾಷೆ ಇಡೀ ಕೃತಿಯ ಏಕವನ್ನು ಅನುಭವಕ್ಕೆ ತಂದುಕೊಡುತ್ತದೆ. ಕಾದಂಬರಿ ಘಟನೆಗಳ ಸ್ತರದಲ್ಲಿ ಮಾತ್ರ ಮುಂದುವರಿಯದೆ ಅರ್ಥವನ್ನು ವಿಸ್ತರಿಸುತ್ತ ಹೋಗುವುದು ಸಾಧ್ಯವಾಗುವುದೂ ಭಾಷೆಯನ್ನು ಎಚ್ಚರಿಕೆಯಿಂದ, ಕಲಾತ್ಮಕವಾಗಿ ಬಳಸುವುದರಿಂದ. ವೃತ್ತಾಂತ ಗಮನಾರ್ಹವಾದ ಗಾತ್ರವನ್ನು ಪಡೆದಿರಬೇಕು ಎನ್ನುವುದು ಸ್ವಲ್ಪ ಅಸ್ಪಷ್ಟ. ಕಾದಂಬರಿಯ ಕನಿಷ್ಠ ಗಾತ್ರ ಇಷ್ಟೆ ಇರಬೇಕು ಎಂದು ನಿಯಮ

ಮಾಡುವುದು ಅಸಾಧ್ಯ. ಕಿರುಕಾದಂಬರಿಗೂ (ನಾವೆಲೆಟ್) ಕಾದಂಬರಿಗೂ ನಡುವೆ ರೇಖೆಯನ್ನು ಎಲ್ಲಿ ಎಳೆಯ ಬೇಕು ಎಂಬುದನ್ನು ಅಂತಿಮವಾಗಿ ನಿರ್ಣಯಿಸುವುದು ಸಾಧ್ಯವಿಲ್ಲ. ಇ.ಎಂ.ಡಬ್ಲ್ಯು. ಟಲ್‌ಯಾರ್ಡ್ ಎಂಬ ವಿಮರ್ಶಕ ಕಾದಂಬರಿಯಲ್ಲಿ ಕಡೆಯ ಪಕ್ಷ 20,000 ಪದಗಳಿರಬೇಕು ಎಂದಿದ್ದಾನೆ. ಸ್ವತಃ ಕಾದಂಬರಿಕಾರನಾದ ಇ.ಎಂ. ಫಾರ್ಸ್ಟರ್ ಕಾದಂಬರಿ ಎಂದರೆ ಒಂದು ನಿರ್ದಿಷ್ಟ ಉದ್ದದ ಕಾಲ್ಪನಿಕ ಗದ್ಯ ಕೃತಿ ಎಂದು ಹೇಳಿ, ನಿರ್ದಿಷ್ಟ ಉದ್ದ ಎಂದರೆ ಕನಿಷ್ಟ 50,000 ಪದಗಳು ಎನ್ನುತ್ತಾನೆ. ಹೆನ್ರಿ ಜೇಮ್ಸ್‌ನ ದಿ ಟರ್ನ್ ಆಫ್ ದಿ ಸ್ಕ್ರೂ, ಶ್ರೀನಿವಾಸರ ಸುಬ್ಬಣ್ಣ–ಇಂಥ ಕೃತಿಗಳು ಕಿರುಕಾದಂಬರಿಗಳೇ ಎಂಬ ಬಗ್ಗೆ ಭಿನ್ನಾಭಿಪ್ರಾಯವಿರುವುದು ಸಾಧ್ಯ.

ಅಧ್ಯಯನದ ಅನುಕೂಲಕ್ಕಾಗಿ ಕಥಾವಸ್ತು ಪಾತ್ರ, ಸನ್ನಿವೇಶ, ಭಾಷೆ ಎಂದು ಬೇರೆ ಬೇರೆ ಅಂಶಗಳನ್ನು ಕುರಿತು ನಾವು ಮಾತನಾಡಬಹುದಾದರೂ ಇವೆಲ್ಲವೂ ಹೊಂದಿಕೊಂಡಾಗಲೇ ಮಹತ್ತ್ವದ ಅರ್ಥದ ಸಾಕ್ಷಾತ್ಕಾರವಾಗುವುದು. ಇದಾಗದಿದ್ದರೆ ಕೃತಿ ವಿಫಲವಾದಂತೆ. ಈ ಹೊಂದಾಣಿಕೆಯನ್ನು ಸಾಧಿಸುವುದು ಕಾದಂಬರಿಯ ತಂತ್ರ. ಕಾದಂಬರಿಕಾರನ ತಂತ್ರ ಕಾದಂಬರಿಯನ್ನು ಸ್ವಾರಸ್ಯಗೊಳಿಸುವುದು ಮಾತ್ರವಲ್ಲ, ಕಾದಂಬರಿಯ ಎಲ್ಲ ಅಂಶಗಳ ಮೇಲೆ ನಿಯಂತ್ರಣವನ್ನು ಸ್ಥಾಪಿಸಿ, ಕೃತಿಯಲ್ಲಿ ರೂಪಗೊಳ್ಳಬೇಕಾದ ಅರ್ಥದ, ಅನುಭವದ ದೃಷ್ಟಿಯಿಂದ ಉಚಿತವಾದ ಪ್ರಾಧಾನ್ಯವನ್ನು ನಿರ್ಧರಿಸಿ ಇಡೀ ಕೃತಿಯ ನಿರ್ವಹಣೆಯನ್ನು ಮಾಡಬೇಕಾಗುತ್ತದೆ. ಗಾಢವಾದ ಅರ್ಥವೇನೂ ಸ್ಫುರಿಸುವಂತೆ ಪ್ರಯತ್ನಿಸದೆ ಜೀವನಕ್ಕೆ ಉತ್ಸಾಹ ಮತ್ತು ವಿಶ್ವಾಸಗಳ ಪ್ರತಿಕ್ರಿಯೆಯನ್ನು ಮಾತ್ರ ಮೂಡಿಸುವ ಸಾಹಸ ಕಾದಂಬರಿಗಳಲ್ಲಿ ಅಂದರೆ ಆರ್.ಎಲ್.ಸ್ಟೀವನ್ ಸನ್ನನ ಟ್ರಷರ್ ಐಲೆಂಡ್, ಡೇನಿಯಲ್ ಡಿಫೋನ; ರಾಬಿನ್‌ಸನ್ ಕ್ರೂಸೋ ಇಂಥ ಕೃತಿಗಳಲ್ಲಿ, ಪಾತ್ರಕ್ಕಿಂತ ಸನ್ನಿವೇಶಗಳು ಪ್ರಧಾನ; ಪಾತ್ರಗಳು ಸರಳ. ಭಾಷೆ ಧ್ವನಿಯನ್ನು ಹೆಚ್ಚಾಗಿ ಬಳಸಬೇಕಾಗಿಲ್ಲ. ಸ್ಪಷ್ಟವಾದ ತರ್ಕದ ಸಂಬದ್ಧತೆಯಿಲ್ಲದೆ ಮನಸ್ಸಿನಲ್ಲಿ ಹರಿಯುವ ಭಾವನೆಗಳ ಅನುಭವವನ್ನು ತಂದುಕೊಡುವ ಪ್ರಜ್ಞಾಪ್ರವಾಹ ಕಾದಂಬರಿಯಲ್ಲಿ ಸನ್ನಿವೇಶ ಗೌಣ; ಭಾಷೆಯ ಮಹತ್ತ್ವ ಬಹು ಹೆಚ್ಚಿನದು. ಜೇಮ್ಸ್ ಜಾಯ್ಸನ ಯೂಲಿಸಿಸ್‌ನಲ್ಲಿ ಇದನ್ನು ಕಾಣಬಹುದು. ಹೊರಜಗತ್ತು ಮತ್ತು ಒಳಜಗತ್ತುಗಳ ಬಹುಮುಖ ವ್ಯಾಪಾರಗಳ ನಿಕಟ ಸಂಬಂಧವನ್ನು ಅನುಭವಕ್ಕೆ ತಂದುಕೊಡುವ ಕಾದಂಬರಿಯಲ್ಲಿ ಸನ್ನಿವೇಶ, ಪಾತ್ರಗಳೆರಡಕ್ಕೂ ಸಮನಾದ ಪ್ರಾಧ್ಯಾನ್ಯ–ಜೇನ್ ಆಸ್ಟೆನಳ ಕಾದಂಬರಿಗಳಲ್ಲಿ ಕಾಣುವಂತೆ. ಇಂಥ ಕಾದಂಬರಿಗಳ ಮುಖ್ಯ ಪಾತ್ರಗಳು ಹಲವು ಗುಣಗಳನ್ನು ತಳೆದಿರುತ್ತವೆ. ಅವುಗಳ ಸ್ವಭಾವಿಕ ಅನೇಕ ಮುಖಗಳಿರುತ್ತವೆ. ಒಂದೇ ವಾಕ್ಯದಲ್ಲಿ ಅವುಗಳ ಸ್ವಭಾವವನ್ನು ಸಂಗ್ರಹಿಸುವುದಾಗಲೀ ಯಾವುದಾದರೊಂದು ಮಾತು ಅಥವಾ ವಿಲಕ್ಷಣತೆ ಆಯಾ ಪಾತ್ರವನ್ನು ಸಂಪೂರ್ಣವಾಗಿ ತೋರಿಸಿಬಿಡಬಲ್ಲದು ಎಂದು ಆರಿಸುವುದಾಗಲೀ ಸಾಧ್ಯವಿಲ್ಲ. ಇಂಥ ಪಾತ್ರಗಳನ್ನು ದುಂಡು ಅಥವಾ ತುಂಬಿದ (ರೌಂಡ್) ಪಾತ್ರಗಳೆನ್ನುತ್ತಾರೆ. ಆದರೆ ಯಾವ ಕಾದಂಬರಿಯೂ ಈ ಬಗೆಯ ಪಾತ್ರಗಳನ್ನು ಮಾತ್ರವೇ ಒಳಗೊಂಡಿರಲು ಸಾಧ್ಯವಿಲ್ಲ. ಏಕೆಂದರೆ ಇಂಥ ಪಾತ್ರಗಳ ವಿಕಸನಕ್ಕೆ ತಕ್ಕಷ್ಟು ಅವಕಾಶ ಬೇಕು. ಡಬ್ಲ್ಯು. ಎಂ. ಥ್ಯಾಕರೆಯ ಜಂಬದ ಜಾತ್ರೆಯಲ್ಲಿನ (ವ್ಯಾನಿಟಿ ಫೇರ್) ಬೆಕಿಷಾರ್ಪ್ ಇಂಥ ಪಾತ್ರ. ಕಾದಂಬರಿಯಲ್ಲಿ ಇಂಥ ಎರಡು ಮೂರು ಪಾತ್ರಗಳನ್ನು ಸೃಷ್ಟಿಸಲು ಸಾಧ್ಯ. ಒಂದು ಗುಣ ಅಥವಾ ಭಾವನೆಯ ಮೂರ್ತಿಯಾದ ಪಾತ್ರವನ್ನು ಚಪ್ಪಟೆ (ಫ್ಲ್ಯಾಟ್) ಪಾತ್ರ ಎನ್ನುತ್ತಾರೆ. ವಾಲ್ಟರ್ ಸ್ಕಾಟ್‌ನ ಲ್ಯಾಮರ್‌ಮೋರ್‌ನ ವಧು (ದಿ ಬ್ರೈಡ್ ಆಫ್ ಲ್ಯಾಮರ್‌ಮೋರ್) ಎಂಬ ಕಾದಂಬರಿಯಲ್ಲಿ ಬಾಲ್ಡರ್‌ಸ್ಟನ್ ಇಂಥ ಪಾತ್ರ. ಯಜಮಾನನ ಬಡತನವನ್ನು ಬಚ್ಚಿಡುವುದೇ ಇವನ ಜೀವನದ ಸಾರ್ಥಕ್ಯ. ಇಂಥವು ಪಾತಿನಿಧಿಕ ಪಾತ್ರಗಳು. ಚಪ್ಪಟೆ ಪಾತ್ರ ಎಂದ ಮಾತ್ರಕ್ಕೆ ಅದು ಸಪ್ಪೆಯಾಗಬೇಕಾಗಿಲ್ಲ ಎನ್ನುವುದನ್ನು ಚಾರ್ಲ್ಸ್ ಡಿಕನ್ಸ್‌ನ ಮಿ. ಮಿಕಾಬರ್‌ನಂಥ ಹಲವು ಪಾತ್ರಗಳು ತೋರಿಸಿಕೊಟ್ಟಿವೆ. ಇಡೀ ಗುಂಪುಗಳನ್ನೇ ಚಿತ್ರಿಸುವ ಕಾದಂಬರಿಗಳಲ್ಲಿ ಪಾತ್ರಗಳು, ಸನ್ನಿವೇಶಗಳು, ಭಾಷೆ ಎಲ್ಲ ಕೆಲವು ನಿರೀಕ್ಷಣೆಗಳನ್ನು ಸಫಲಗೊಳಿಸಬೇಕು. ಉದಾಹರಣೆಗೆ ಅಮೆರಿಕದ ವೈಲ್ಡ್ ವೆಸ್ಟ್ ಅಥವಾ ಕೌಬಾಯ್ ಕಾದಂಬರಿಗಳನ್ನು ಓದುವವರು ಪಾತ್ರಗಳಲ್ಲಿ ಒರಟುತನ ಧೈರ್ಯ, ಗಟ್ಟಿತನಗಳನ್ನು ಸನ್ನಿವೇಶಗಳಲ್ಲಿ ಅಪಾಯವನ್ನೂ ಭಾಷೆಯಲ್ಲಿ ಗ್ರಾಮ್ಯ ಒರಟುತನಗಳನ್ನು ನಿರೀಕ್ಷಿಸುತ್ತಾರೆ. ಈ ನಿರೀಕ್ಷಣೆಗಳನ್ನು ಸಫಲಗೊಳಿಸಿಯೂ ಹೊಸತನವನ್ನು ತಂತ್ರದ ಮೂಲಕ ಸಾಧಿಸಬೇಕು. ಹೀಗೆ ಎಲ್ಲ ಕಾದಂಬರಿಗಳಲ್ಲೂ ಎಲ್ಲ ಅಂಶಗಳಿಗೂ ಸಮಾನವಾದ ಇಲ್ಲವೆ ಒಂದೇ ಬಗೆಯ ಪ್ರಾಧಾನ್ಯ ದೊರೆಯುವುದಿಲ್ಲ. ಈ ಎಲ್ಲ ಅಂಶಗಳನ್ನೂ ಬಳಸಿ, ಬೆರೆಸಿ, ಹೊಸದೊಂದು ಜಗತ್ತನ್ನು ಕಾದಂಬರಿಕಾರ ಸೃಷ್ಟಿಸಬೇಕು. ಈ ಜಗತ್ತಿನ ಸೃಷ್ಟಿಕರ್ತನಾದ ಆತ ಕೃತಿ ಮೂಡಿಸಬೇಕಾದ ಅನುಭವಕ್ಕೆ ಭಂಗಬಾರದಂತೆ ಎಲ್ಲ ವಿವರಗಳನ್ನೂ ಆರಿಸಬೇಕು. ಸಮನ್ವಯಗೊಳಿಸಬೇಕು. ತಾನು ಆ ಜಗತ್ತಿನಲ್ಲಿದ್ದೂ ಹೊರಗೆ ನಿಲ್ಲಬೇಕು. ಆತನ ಮತ್ತು ಆತ ಸೃಷ್ಟಿಸುವ ಜಗತ್ತಿನ ಸಂಬಂಧವನ್ನು ಆತನ ಧಾಟಿ (ಟೋನ್) ಓದುಗರಿಗೆ ತಿಳಿಸಿಕೊಡುತ್ತದೆ. ನಾವು ವಾಸಿಸುವ ಜಗತ್ತಿನಂತೆಯೇ ಇದ್ದೂ ವಿವರಗಳ ಆಯ್ಕೆ ಮತ್ತು ಜೋಡಣೆಯಿಂದ ವಿಶಿಷ್ಟವಾಗುವ ಜಗತ್ತಿನ ಸೃಷ್ಟಿ ಸಾಧ್ಯವಾಗುವುದು ಕಾದಂಬರಿಕಾರನ ತಂತ್ರದಿಂದ.

**ಉಗಮ, ವಿಕಾಸ, ವೈವಿಧ್ಯ:** ಪ್ರಾರಂಭದಲ್ಲಿಯೇ ಸೂಚಿಸಿದಂತೆ ಒಂದು ರೀತಿಯಲ್ಲಿ ಈ ಸಾಹಿತ್ಯರೂಪ ಹಳೆಯದೇ; ಮತ್ತೊಂದು ರೀತಿಯಲ್ಲಿ ಈಚೆಗಿನದು. ಕಥೆ ಕೇಳುವ ಆಸಕ್ತಿ, ಕಥೆ ಹೆಣೆಯುವ ಬಯಕೆ ಮನುಷ್ಯನಲ್ಲಿ ಆಳವಾದುವು. ಈಗ ನಮಗೆ ತಿಳಿದಿರುವಂತೆ ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಕಾದಂಬರಿಗಳು ಈಜಿಪ್ಟ್ ದೇಶದವು. ಪ್ರಾಯಶ: ಪ್ರ.ಶ.ಪೂ. 20, 21ನೆಯ ಶತಮಾನಗಳಿಗೆ ಸೇರಿದ ಕೆಲವು ಕೃತಿಗಳು ದೊರೆತಿವೆ. ಇವನ್ನು ಕಾದಂಬರಿಗಳು ಎನ್ನಬಹುದು. ಇವುಗಳಲ್ಲಿ ಹಾಸ್ಯ ಮತ್ತು ವಿಡಂಬನೆ ಪ್ರಧಾನವಾಗಿವೆ. ಇವು ಅರಸನನ್ನೂ ಹಾಸ್ಯಮಾಡುತ್ತವೆ. ಬಾಕ್‌ಸ್ಯಾದ ರಾಜಕುಮಾರಿ ಎಂಬುದು ಭಾವಪ್ರಧಾನವಾದ ಕಾದಂಬರಿ. ಸಿನುಹೆ ಎಂಬುದು ನೌಕಾಘಾತಕ್ಕೆ ಸಿಕ್ಕ ನಾಯಕನ ಕಥೆ. ರೋಮಿನ ಲೂಸಿಅಸ್ ಅಪೂಲಿಅಸ್‌ನ (ಪ್ರ.ಶ. 2ನೆಯ ಶತಮಾನ) ಬಂಗಾರದ ಕತ್ತೆ ಎಂಬ ಕಥೆಯಲ್ಲಿ ತರುಣ ತತ್ತ್ವಜ್ಞಾನಿಯೊಬ್ಬ ಕತ್ತೆಯಾಗಿ ಮಾರ್ಪಡುತ್ತಾನೆ. ಈ ಸ್ಥಿತಿಯಲ್ಲಿ ಆತ ಕಂಡ ನೋಟಗಳೂ ಕೇಳಿದ ಮಾತುಗಳೂ ಮನುಷ್ಯರ ಪ್ರಪಂಚವನ್ನು ಒಂದು ಹೊಸ ರೀತಿಯಲ್ಲಿ ಚಿತ್ರಿಸುತ್ತವೆ. ಈ ಪುಸ್ತಕ ಮುಂದಿನ ಕಾದಂಬರಿಕಾರರಿಗೆ ಸ್ಫೂರ್ತಿ ನೀಡಿತೆನ್ನಲಾಗಿದೆ. ಜಪಾನಿನಲ್ಲಿ ಸುಮಾರು ಹತ್ತನೆಯ ಶತಮಾನದಲ್ಲಿ ಮುರಾಸಾಕಿ ಎಂಬಾಕೆ ಬರೆದ ಗೆಂಜಿಯ ಕಥೆ ಬಹು ಆಶ್ಚರ್ಯಕರವಾದ ಕೃತಿ. ಹಲವು ಹೆಣ್ಣುಗಳೊಡನೆ ಸರಸವಾಡಿದ ತರುಣನ ಕಥೆ ಇದು. ಆದರೆ ಇದರಲ್ಲಿನ ಮಾನಸಿಕ ಅನುಭವಗಳ ವಿವರಗಳು ಇಂದಿಗೂ ಬೆರಗುಗೊಳಿಸುವಂಥವು. ಚೀನದಲ್ಲಿ ಹದಿಮೂರನೆಯ ಶತಮಾನದಲ್ಲಿಯೇ ಸಾಹಸದ ಕಥೆಗಳು ಜನಪ್ರಿಯವಾಗಿದ್ದುವೆಂದು ತೋರುತ್ತವೆ.

ಆದರೆ ಪ್ರಭಾವ ಮತ್ತು ವಿಕಸನದ ದೃಷ್ಟಿಯಿಂದ ಆಧುನಿಕ ಪಾಶ್ಚಾತ್ಯ ಕಾದಂಬರಿಯೇ ಮುಖ್ಯವಾಗಿದೆ. ಈ ಕಾದಂಬರಿಯ ಚರಿತ್ರೆ ಹ್ರಸ್ವವಾದುದೇ. ಸ್ಪೇನ್ ದೇಶದ ಸರ್‌ವಾಂಟಿಸ್‌ನ (1605–1615) ಡಾನ್ ಕ್ವಿಕ್ಸಟ್ ಮತ್ತು ಇಂಗ್ಲೆಡಿನ ಜಾನ್ ಬನ್ಯನನ (1678–79) ಯಾತ್ರಿಕನ ಮುನ್ನಡೆ (ದಿ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್) ಇವನ್ನು ಪ್ರಾರಂಭದ ಕಾದಂಬರಿಗಳೆಂದು ಭಾವಿಸಿದರೂ ಇದರ ಚರಿತ್ರೆ ಸುಮಾರು 400–550 ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಮಧ್ಯಮ ವರ್ಗದ ಪ್ರಾಬಲ್ಯ, ಅದರ ಅಭಿರುಚಿ ಮತ್ತು ಬೇಡಿಕೆಗಳು ಕಾದಂಬರಿಯ ವಿಕಾಸಕ್ಕೆ ನೆರವಾದುವು.

ಈ ಕಾದಂಬರಿಯ ತಾಯಿ ಬೇರು ಮಹಾಕಾವ್ಯಗಳಲ್ಲಿದೆ. ವಿಶಾಲವಾದ ಹಂದರದ ಮೇಲೆ ಹಬ್ಬಿಸಿದ ಹಲವಾರು ಪಾತ್ರಗಳನ್ನೊಳಗೊಂಡು ಒಂದು ಕೇಂದ್ರದೃಷ್ಟಿಯ ನಿರ್ವಹಣೆಗೆ ಒಳಪಟ್ಟ ಕಥೆಯನ್ನು ಎರಡರಲ್ಲಿಯೂ ಕಾಣಬಹುದು. ಮುಖ್ಯ ವ್ಯತ್ಯಾಸ ಎಂದರೆ ಮಹಾಕಾವ್ಯದ ಮಾಧ್ಯಮ ಪದ್ಯ. ಕಾದಂಬರಿಯ ಮಾಧ್ಯಮ ಗದ್ಯ. ಆದರೆ ಕಾದಂಬರಿ ಮಹಾಕಾವ್ಯಕ್ಕೆ ನೇರವಾದ ಉತ್ತರಾಧಿಕಾರಿಯಾಗಲಿಲ್ಲ. ಮಧ್ಯಯುಗದ ಪ್ರಣಯದ ಮತ್ತು ವಿರೋಚಿತ ಸಾಹಸ ಕಥೆಗಳು (ರೊಮಾನ್ಸ್‌ಗಳು) ಬಹು ಜನಪ್ರಿಯವಾಗಿದ್ದುವು. ಪ್ರಾಚೀನ ಕಾವ್ಯಗಳು, ಷಾರ್ಲಮನ್ನನ ಕಥೆಗಳು ಮತ್ತು ಆರ್ಥರ್ ದೊರೆಯ ಕಥೆಗಳು ಈ ರೊಮಾನ್ಸ್‌ಗಳಿಗೆ ಆಗರ. ಇವುಗಳಲ್ಲಿ ಕೆಲವು ಪದ್ಯ ಮಾಧ್ಯಮವನ್ನೂ ಕೆಲವು ಗದ್ಯ ಮಾಧ್ಯಮವನ್ನೂ ಬಳಸಿಕೊಂಡುವು. ಕ್ರಮೇಣ ದೀರ್ಘ ಕಥನಗಳ ಜನಪ್ರಿಯತೆ ಹೆಚ್ಚಿತು. ಇಂಥ ಒಂದೊಂದು ಕಥೆಯೂ ಹಲವು ಘಟನೆಗಳ ಸರಪಳಿ, ಅಷ್ಟೆ. ಏಕನಾಯಕನೇ ಇವನ್ನು ಒಂದುಗೂಡಿಸುವ ಅಂಶ. ಅಭಿರುಚಿ ಬದಲಾದಂತೆ ಗದ್ಯಕಥೆ ಹೆಚ್ಚು ಜನಪ್ರಿಯವಾಗಿ, ಕಥನ ಕವನಗಳು ವಿರಳವಾದುವು. ಹಲವು ಪಾತ್ರಗಳಲ್ಲಿ ಒಂದರ ಪ್ರಾಧಾನ್ಯ, ಗದ್ಯ ಮಾಧ್ಯಮ ಮುಂತಾದುವನ್ನು ಕಾದಂಬರಿ ರೊಮಾನ್ಸ್‌ಗಳಿಂದ ಪಡೆಯಿತು. ಕಾಲ ಕಳೆದಂತೆ, ರೊಮಾನ್ಸು ಕಾದಂಬರಿಗೆ ಸ್ಥಾನವನ್ನು ತೆರವು ಮಾಡಿಕೊಟ್ಟಿತು. ರೊಮಾನ್ಸ್‌ಗಳಲ್ಲಿ ಹಲವು ಘಟನೆಗಳು ಒಂದನ್ನೊಂದು ಹಿಂಬಾಲಿಸುತ್ತಿದ್ದುವು. ಆಗಲೇ ಹೇಳಿದಂತೆ ಇವನ್ನು ಒಟ್ಟುಗೂಡಿಸುವ ಅಂಶ ಕೇಂದ್ರದಲ್ಲಿ ಒಬ್ಬ ನಾಯಕನ ಸ್ಥಾನ ಮಾತ್ರವೇ. ಘಟನೆಗಳಿಗೆ ಇನ್ನೂ ನಿಕಟವಾದ ಸಂಬಂಧವನ್ನು ಕಲ್ಪಿಸಿ, ಕ್ರಿಯೆ ಪಾತ್ರದ ಸ್ವಭಾವದಿಂದ ರೂಪಿತವಾಗುವಂತೆ ಮಾಡಿದಾಗ ಕಾದಂಬರಿ ಜನ್ಮತಾಳಿತು. (ಕ್ರಿಯೆಯಲ್ಲಿ ಸ್ವಭಾವ ಪ್ರಕಟವಾಗುವುದು ಕಾದಂಬರಿಗೆ ನಾಟಕದಿಂದ ಬಂದ ಅಂಶ ಎಂದು ಕೆಲವು ವಿಮರ್ಶಕರ ಅಭಿಪ್ರಾಯ). ಈ ದೃಷ್ಟಿಯಿಂದಲೇ ಸರ್‌ವ್ಯಾಂಟಿಸನ ಡಾನ್ ಕ್ವಿಕ್ಸಟ್ ಯುರೋಪಿನ ಕಾದಂಬರಿ ಎನ್ನುವುದು. ಆದರೂ ಕ್ರಿಯೆ, ಪಾತ್ರಗಳ ಈ ನಿಕಟ ಸಂಬಂಧವನ್ನು ಸ್ಥಾಪಿಸಿದ ಡಾನ್ ಕ್ವಿಕ್ಸಟ್ ಪರಂಪರೆ ಬೆಳೆದುದು ನಿಧಾನವಾಗಿಯೆ. 1678ರಲ್ಲಿ ಫ್ರಾನ್ಸಿನಲ್ಲಿ ಪ್ರಕಟವಾದ ಲ ಪ್ರಿನ್ಸೆಸ್ ದ ಕ್ಲೀವ್ಸ್ ಎಂಬುದು ರೊಮಾನ್ಸ್ ಮತ್ತು ಕಾದಂಬರಿಗಳ ಮಧ್ಯೆ ತೂಗಾಡುತ್ತಿದೆ. ಇಂಗ್ಲೆಂಡಿನಲ್ಲಿ ಆಫ್ ಬೆನ್ (1640–89) ಮತ್ತು ವಿಲಿಯಂ ಕಾನ್‌ಗ್ರೀವರ (1670–1729) ಕೃತಿಗಳು ರೊಮಾನ್ಸ್‌ಗೆ ಸಮೀಪವಾದುವು. ಬನ್ಯನನ ದಿ ಪಿಲ್‌ಗ್ರಿಮ್ಸ್ ಪ್ರೋಗ್ರೆಸಿನ

ಅನಂತರ ಇಂಗ್ಲಿಷ್ ಭಾಷೆಯಲ್ಲಿ ಕಾದಂಬರಿ ಎಂದು ಗುರುತಿಸಬಹುದಾದ, ಸಂಪೂರ್ಣವಾಗಿ ಲೌಕಿಕದೃಷ್ಟಿಯಿಂದ ಪ್ರೇರಿತವಾದ ಮೊದಲ ಕೃತಿ ಎಂದರೆ ಡೇನಿಯಲ್ ಡೆಫೋನ ರಾಬಿನ್‌ಸನ್ ಕ್ರೂಸೊ (1719). ಆದರೆ ಡೆಫೋಗೆ ತಾನು ಹೊಸದೊಂದು ಸಾಹಿತ್ಯರೂಪದಲ್ಲಿ ಕೃತಿಗಳನ್ನು ರಚಿಸುತ್ತಿದ್ದೇನೆ ಎನ್ನುವ ಅರಿವೇ ಇದ್ದಂತೆ ಕಾಣುವುದಿಲ್ಲ. ಈ ಅರಿವನ್ನು ಇಂಗ್ಲೆಂಡಿನಲ್ಲಿ ನಾವು ನೋಡುವುದು ಹೆನ್ರಿ ಫೀಲ್ಡಿಂಗ್ (1707–54) ಮತ್ತು ಸ್ಯಾಮ್ಯುಅಲ್ ರಿಚರ್ಡ್‌ಸನ್ (1689–1791)–ಇವರ ಕಾದಂಬರಿಗಳಲ್ಲಿ.

ಹದಿನೆಂಟನೆಯ ಶತಮಾನದಲ್ಲಿ ಯುರೋಪಿನ ಹಲವು ದೇಶಗಳಲ್ಲಿ ಕಾದಂಬರಿ ಬೇರುಬಿಟ್ಟಿತು. ಅಲ್ಲಿಂದ ಇನ್ನೂರು ವರ್ಷಗಳಲ್ಲಿ ಅದು ಬೆರಗುಗೊಳಿಸುವ ವೈವಿಧ್ಯದಿಂದ ಬೆಳೆದಿದೆ. ಸಮಾಜದ ಸ್ಥಿತಿ, ಸಮಕಾಲೀನ ನಂಬಿಕೆಗಳು. ಹೆಚ್ಚಿನ ಸೌಲಭ್ಯ. ಪ್ರಯಾಣದ ಸೌಕರ್ಯ, ವಿಜ್ಞಾನದ ಬೆಳೆವಣಿಗೆ ತಂತ್ರಜ್ಞಾನದ ಕೊಡುಗೆಗಳು–ಎಲ್ಲ ಕಾದಂಬರಿಯ ಮೇಲೆ ಪ್ರಭಾವವನ್ನು ಬೀರಿವೆ. ಅಮೆರಿಕದ ನೀಗ್ರೊ ಗುಲಾಮರ ಜೀವನವನ್ನು ನಿರೂಪಿಸುವ, ಹ್ಯಾರಿಯೆಟ್ ಬೀಚರ್ ಸ್ಟೌಳ ಕೃತಿ–ಅಂಕಲ್ ಟಾಮ್ಸ್ ಕ್ಯಾಬಿನ್ ಸಮಾಜದ ಸ್ಥಿತಿಯಿಂದ ಪ್ರೇರಿತವಾಗಿದೆ. ಚಾರಲ್ಸ್ ಡಿಕನ್ಸ್ ಹತ್ತೊಂಬತ್ತನೆಯ ಶತಮಾನದಲ್ಲಿನ ಇಂಗ್ಲೆಂಡಿಗೆ ಅನಾಥಾಲಯಗಳು, ಕೆಲವು ಖಾಸಗಿ ಶಾಲೆಗಳು ಮತ್ತು ಸೆರೆಮನೆಗಳ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾನೆ. ಫ್ರಾನ್ಜ್ ಕಾಫ್ಕನ ಕಾದಂಬರಿಗಳು ಆಧುನಿಕ ಜಗತ್ತಿನಲ್ಲಿ ಮಾನವನ ಒಂಟಿತನದ ನೋವಿಗೆ ಹೃದಯಸ್ಪರ್ಶಿಯಾದ ಅಭಿವ್ಯಕ್ತಿ ನೀಡುತ್ತವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲೆಂಡಿನ ನಿಯತ ಕಾಲಿಕಗಳು ಧಾರವಾಹಿಯಾಗಿ ಕಾದಂಬರಿಗಳನ್ನು ಪ್ರಕಟಿಸುವ ಹೊಸ ವಿಧಾನವನ್ನು ಪ್ರಾರಂಭಿಸಿದುವು. ಇದರಿಂದ ಕಾದಂಬರಿಕಾರನಿಗೂ ಓದುಗನಿಗೂ ಹೊಸ ಬಾಂಧವ್ಯ ಏರ್ಪಟ್ಟಿತು. ಪ್ರತಿಭಾಗದ ಮುಕ್ತಾಯವೂ ಓದುಗನಲ್ಲಿ ಮುಂದಿನ ಭಾಗವನ್ನು ಓದುವಂತೆ ಪ್ರಚೋದಿಸುವಂತಿರಬೇಕಾದ್ದು ಅನಿವಾರ್ಯವಾಯಿತು. ಇದು ಕ್ರಿಯೆಯ ನಿರ್ವಹಣೆಯ ಮೇಲೆ ಪ್ರಭಾವ ಬೀರಿತು. ಇಡೀ ಕೃತಿ ಪ್ರಕಟವಾಗಿರದಿದ್ದುದರಿಂದ ಓದುಗರ ಬೇಕು–ಬೇಡಗಳು ಕಾದಂಬರಿಯ ಮೇಲೆ ಪ್ರಭಾವ ಬೀರುವುದು ಸಾಧ್ಯವಾಯಿತು. ಥ್ಯಾಕರೆ ಮತ್ತು ಡಿಕನ್ಸ್ ಓದುಗರ ಬೇಡಿಕೆಗೆ ತಲೆಬಾಗಿ ತಮ್ಮ ಪಾತ್ರಗಳ ಸ್ವಭಾವವನ್ನೊ ಕೃತಿಯ ಮುಕ್ತಾಯವನ್ನೊ ಮಾರ್ಪಡಿಸಿದುದುಂಟು. ಪ್ರಯಾಣ ಸುಲಭವಾಗಿ ಜಗತ್ತಿನ ವಿವಿಧ ಭಾಗಗಳ, ಅಲ್ಲಿಯ ಕೃತಿಗಳ ಪರಿಚಯ, ಚಲನಚಿತ್ರಗಳ ಪ್ರದರ್ಶನ–ಇವು ಹೆಚ್ಚಿದಂತೆ ಒಂದು ದೇಶದ ಕಾದಂಬರಿಗಳು ಮತ್ತೊಂದು ದೇಶದ ಕಾದಂಬರಿಗಳ ಮೇಲೆ ಪ್ರಭಾವ ಬೀರುವುದು ಪ್ರಾರಂಭವಾಯಿತು. ವಿಧಾನ ಮತ್ತು ತಂತ್ರಜ್ಞಾನಗಳ ಬೆಳೆವಣಿಗೆ ವೈಜ್ಞಾನಿಕ ಕಾದಂಬರಿಗಳನ್ನು ಬೆಳೆಸಿದೆ. ಫ್ರಾನ್ಸಿನ ಜೂಲ್ಸ್ ವರ್ನ್ (1828–1905), ಇಂಗ್ಲೆಂಡಿನ ಎಚ್.ಜಿ. ವೆಲ್ಸ್ (1866–1946) ಮೊದಲಾದವರು ವಿಜ್ಞಾನದ ಆಧಾರದ ಮೇಲೆ ಕಾಲ್ಪನಿಕ ಕೃತಿಗಳನ್ನು ರಚಿಸಿ ಜನಪ್ರಿಯಗೊಳಿಸಿದರು. ಅಲ್ಲಿಂದ ವೈಜ್ಞಾನಿಕ ಕಾದಂಬರಿ ಸಮೃದ್ಧವಾದ ಬೆಳೆಯನ್ನು ಕಂಡಿದೆ. ವಿಜ್ಞಾನ, ತಂತ್ರಜ್ಞಾನಗಳ ಮುನ್ನಡೆ ಮನುಷ್ಯನ ಜೀವನವನ್ನು ಹೇಗೆ ರೂಪಿಸಿಬಹುದು ಎಂಬ ವಿಚಾರ ಆಲ್ಡಸ್ ಹಕ್ಸ್ಲಿಯಂಥ (1894–1963) ಕಾದಂಬರಿಕಾರರ ಆಸಕ್ತಿಯನ್ನು ಸೆಳೆಯಿತು. ಕಾದಂಬರಿಕಾರರು ಜೀವನವನ್ನು ಕಾಣುವ ದೃಷ್ಟಿಯ ಮೇಲೆ ಹಲವು ಜ್ಞಾನ ವಿಭಾಗಗಳ ಪ್ರಗತಿ ಪ್ರಭಾವ ಬೀರಿದೆ. ಡಾರ್ವಿನನ ಜೀವವಿಕಾಸಸಿದ್ಧಾಂತದಿಂದ ಪ್ರಾರಂಭವಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಜೀವವಿಜ್ಞಾನ ಮತ್ತು ಖಗೋಳ ವಿಜ್ಞಾನಗಳು ಬೆಳೆದು ಜ್ಞಾನ ಥಾಮಸ್ ಹಾರ್ಡಿಯ (1840–1928) ಕಾದಂಬರಿಗಳ ಜಗತ್ತನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿತು. ಮನೋವಿಜ್ಞಾನದ ಪ್ರಗತಿ ಮನುಷ್ಯ ಸ್ವಭಾವದ ಜಟಿಲತೆ ಮತ್ತು ವೈಚಿತ್ರ್ಯಗಳನ್ನು ಅನಾವರಣ ಮಾಡಿದಂದು ಕಾದಂಬರಿಯಲ್ಲಿ ಪ್ರಜ್ಞಾಪ್ರವಾಹ ಪಂಥಕ್ಕೆ ದಾರಿಯಾಯಿತು. ವಾಸ್ತವಿಕತೆ ಎಂದರೇನು, ಸಹಜತೆ ಎಂದರೇನು ಎಂಬಂಥ ಪ್ರಶ್ನೆಗಳಿಗೆ ಕೃತಿಕಾರರು ಕಂಡುಕೊಂಡ ಉತ್ತರಗಳನ್ನು ಪ್ಲೊಬೇರ್, ಎಮಿಲಿಜ಼ೋಲಾ, ದಾಸ್ತಯೆವ್‌ಸ್ಕಿ, ತುರ್ಜ್ಯನೆಫ್, ಚೆಕಾಫ್–ಮೊದಲಾದವರ ಕಾದಂಬರಿಗಳಲ್ಲಿ ಕಾಣಬಹುದು. ಹೀಗೆ ಬೆರಗುಗೊಳಿಸುವ ವೈವಿಧ್ಯದಿಂದ ಕಾದಂಬರಿ ಬೆಳೆದಿದೆ. ಈ ವೈವಿಧ್ಯ ಕಾದಂಬರಿಗಳ ವರ್ಗೀಕರಣದಲ್ಲಿ ಪ್ರತಿಬಿಂಬಿತವಾಗಿದೆ.

**ವರ್ಗೀಕರಣ:** ವಿಮರ್ಶಕರು ಕಾದಂಬರಿಯನ್ನು ಬೇರೆ ಬೇರೆ ದೃಷ್ಟಿಗಳಿಂದ ವರ್ಗೀಕರಣಮಾಡಿದ್ದಾರೆ. ಒಂದು ಸ್ಥೂಲವಾದ ವಿಂಗಡಣೆ ವಿಚಿತ್ರ ಕಾದಂಬರಿ ಸಾಹಸ ಕಾದಂಬರಿ, ನೈಜ ಕಾದಂಬರಿ ಎಂದು ವಿಚಿತ್ರ ಕಾದಂಬರಿಯನ್ನು ರೊಮಾನ್ಸ್ ರೂಪಕ್ಕೆ ಹೋಲಿಸಬಹುದು. ರ್‍ಯಾಬಿಲೆಸ್‌ನ (1490–1554) ಗರ್‌ಗಾಂಟುಅ. ಜೋನಾಥನ್ ಸ್ವಿಫ್ಟ್‌ನ (1667–1745) ಗಲಿವರ್ಸ್ ಟ್ರಾವಲ್ಸ್ ಇಂಥ ಕೃತಿಗಳು. ಪೌರಾಣಿಕ ಕಥೆಗಳನ್ನು ಹೋಲುವ ಅದ್ಭುತ ಕಥೆಗಳನ್ನು ಕಾದಂಬರಿಕಾರ ಇಲ್ಲಿ ಸೃಷ್ಟಿಸುತ್ತಾನೆ. ವಾಸ್ತವಿಕತೆ, ಸಾಧ್ಯತೆಗಳ ಪ್ರಶ್ನೆಯೇ ಇಲ್ಲಿಲ್ಲ. ಕಾದಂಬರಿಕಾರ ಇಲ್ಲಿ ವಾಸ್ತವಿಕತೆಯನ್ನು ಅಲಕ್ಷಿಸುತ್ತಾನಲ್ಲದೆ ಸಂಕುಚಿತವಾದ ಅರ್ಥದಲ್ಲಿ ಸತ್ಯವಾಗಿರಲು ಸಾಧ್ಯವೇ ಇಲ್ಲದ ಕಥೆಯಿಂದ ಜೀವನದ ಗಹನವಾದ ಸತ್ಯವೊಂದನ್ನು ಮನಗಾಣಿಸಲು ಪ್ರಯತ್ನಿಸುತ್ತಾನೆ. ಗಲಿವರ್ಸ್ ಟ್ರಾವಲ್ಸ್ ವಿವಿಧ ದೃಷ್ಟಿಗಳಿಂದ–ಉದಾತ್ತ, ಪ್ರಾಮಾಣಿಕ ಕುದುರೆಗಳ ದೃಷ್ಟಿಯಿಂದ ಸಹ–ಮನುಷ್ಯನ ಜೀವನವನ್ನು ಕಟುವಾಗಿ ವಿಮರ್ಶಿಸುತ್ತದೆ. ವಾಲ್ಟೇರನ ಕ್ಯಾಂಡೈಡ್, ಸ್ಯಾಮ್ಯುಅಲ್ ಬಟ್ಲರನ ಎರವ್ಹನ್, ಕಾಫ್ಕನ ದಿ ಕ್ಯಾಸಲ್ (ಮಹಾಸೌಧ) ಇವು ಈ ವಿಭಾಗದ ಕೆಲವು ಕೃತಿಗಳು. ವಿಚಿತ್ರ ಕಾದಂಬರಿಯ ಅಂಶವನ್ನು ಬಾಲ್ಜಾಕ್, ಫ್ರಾಸ್ಟ್. ಡಿಕನ್ಸ್ ಮೊದಲಾದವರ ಕಾದಂಬರಿಗಳಲ್ಲಿ ಕಾಣಬಹುದು. ಈ ವಿಭಾಗಕ್ಕೆ ನಂಟುತನ ಸಾಹಸದ ಕಾದಂಬರಿಗಳಿಗೆ ಉಂಟಾದರೂ ಇವುಗಳಲ್ಲಿಯೂ ಅದ್ಭುತ ಘಟನೆಗಳೊನ್ನಳಗೊಂಡ ಕಥೆಯುಂಟು. ಆದರೆ ವಿಚಿತ್ರ ಕಾದಂಬರಿಯಲ್ಲಿ ಗಹನ ಸತ್ಯವೊಂದಿದ್ದರೆ, ಸಾಹಸ ಕಾದಂಬರಿಯಲ್ಲಿ ಕಥೆಯೇ ಮುಖ್ಯ. ಡಫೋನ ರಾಬಿನ್‌ಸನ್ ಕ್ರೂಸೊ, ಸ್ಟೀವನ್‌ಸನ್ನನ ಕಿಡ್‌ನ್ಯಾಪ್ಡ್ ಇಂಥ ಕಾದಂಬರಿಗಳು. ವೆಲ್ಸ್‌ನ ವೈಜ್ಞಾನಿಕ ರಮ್ಯ ಕಾದಂಬರಿಗಳಲ್ಲಿ ಸಾಹಸ ಕಥೆಗೆ ವಿಜ್ಞಾನದ ಸಂಶೋಧನೆಗಳ ಆಧಾರ ದೊರೆಕಿದೆ. ಸಾಮಾನ್ಯ ಜನದ ನಿತ್ಯಜೀವನವನ್ನೇ ವಸ್ತುವಾಗಿಟ್ಟುಕೊಂಡು ರಚಿತವಾದ ನೈಜ ಕಾದಂಬರಿಯ ತಿರುಳೆಂದರೆ ಅವರ ಕಷ್ಟ ಸುಖ, ಆಸೆ ನಿರಾಸೆ, ಸಮಸ್ಯೆ ನೆಲೆಗಳು, ಬಹುಮಟ್ಟಿಗೆ ಇವು ಸ್ತ್ರೀಪುರುಷರ ಆಕರ್ಷಣೀಯ ಕಥೆಗಳು. ಬಹುಮಂದಿಗೆ ಆಸಕ್ತಿಯನ್ನುಂಟುಮಾಡುತ್ತವಾಗಿ ಇವುಗಳ ಸಂಖ್ಯೆಯೂ ಹೆಚ್ಚು. ಗಯಟೆಯ ವರ್ದರ್‌ನ ದುಃಖಗಳು, ಜೇನ್ ಆಸ್ಟೆನಳ ಪ್ರೈಡ್ ಅಂಡ್ ಪ್ರೆಜುಡಿಸ್, ಷರ್ಲಾಟ್ ಬ್ರಾಂಟಿಯ ಜೇನ್ ಐರ್, ಫ್ಲೋಬೇರ್‌ನ ಮದಾಂ ಬಾವರಿ, ಟಾಲ್ಸ್ಟಾಯ್‌ಯ ವಾರ್ ಅಂಡ್ ಪೀಸ್, ದಾಸ್ತಯೆವ್‌ಸ್ಕಿಯ ದಿ ಈಡಿಯೆಟ್, ಜಾರ್ಜ್ ಮೆರಿಡಿತ್‌ನ ದಿ ಇಗೋಯಿಸ್ಟ್, ಡಿ.ಎಚ್. ಲಾರೆನ್ಸ್‌ನ ಸನ್ಸ್ ಅಂಡ್ ಲವರ್ಸ್–ಇಂಥ ಕೆಲವು ಮಹಾಕಾದಂಬರಿಗಳು.

ಕೃತಿಯ ಕ್ರಿಯೆಯ ಕಾಲ ಮತ್ತು ಆವರಣದ ದೃಷ್ಟಿಯಿಂದ ಕಾದಂಬರಿಯನ್ನು ಚಾರಿತ್ರಿಕ ಮತ್ತು ಕಾಲ್ಪನಿಕ (ಚಾರಿತ್ರಿಕವಲ್ಲದ್ದು) ಎಂದು ವಿಭಾಗ ಮಾಡಬಹುದು. ಚಾರಿತ್ರಿಕ ಕಾದಂಬರಿಯಲ್ಲಿ ಕ್ರಿಯೆ ಚಾರಿತ್ರಿಕವಾದ ಕಾಲದೇಶಗಳಿಗೆ ಸೀಮಿತವಾಗಿರುತ್ತದೆ. ಆ ಆವರಣ ಕಾದಂಬರಿಯ ಪರಿಣಾಮಕ್ಕೆ ಅಗತ್ಯವಾದ ಒಂದು ಅಂಶ. ವಾಲ್ಟರ್ ಸ್ಕಾಟ್‌ನ ಕೆನಿಲ್‌ವರ್ತ್‌ನ ಕ್ರಿಯೆ ರಾಣಿ ಎಲಿಜಬೆತಳ ಕಾಲದ ಇಂಗ್ಲೆಂಡಿನಲ್ಲಿ ನಡೆಯುತ್ತದೆ. ರಾಣಿ ಎಲಿಜಬೆತ್ ಅರ್ಲ್ ಆಫ್ ಲೀಸ್ಟರ್ ಮೊದಲಾದ ಐತಿಹಾಸಿಕಕಾಲದ ವ್ಯಕ್ತಿಗಳು ಇಲ್ಲಿ ಬರುತ್ತಾರೆ. ಇಂಥ ಕೃತಿಯಲ್ಲಿ ಕಾದಂಬರಿಕಾರ ತಾನು ಆರಿಸಿಕೊಂಡ ಕಾಲದ ರೀತಿಗಳು, ಸಂಸ್ಥೆಗಳು, ಪದ್ಧತಿಗಳು–ಇವನ್ನಲ್ಲದೆ ಜೀವನಮೌಲ್ಯಗಳನ್ನೂ ಎಚ್ಚರಿಕೆಯಿಂದ ಅಳವಡಿಸಬೇಕಾಗುತ್ತದೆ. ಚಾರಿತ್ರಿಕವಲ್ಲದ ಕಾದಂಬರಿಯಲ್ಲಿ ಕ್ರಿಯೆ ಸಾಮಾನ್ಯವಾಗಿ ಕಾದಂಬರಿಕಾರನ ಕಾಲಕ್ಕೆ ಸೇರಿದುದು. (ಇದಕ್ಕೆ ಅಪವಾದಗಳೂ ಉಂಟು). ಈ ಕಾದಂಬರಿಗಳಲ್ಲಿ ಕ್ರಿಯೆಯ ಕಾಲ ಅಷ್ಟು ಮುಖ್ಯವಲ್ಲ. ಪಾತ್ರಗಳೆಲ್ಲ ಕಾಲ್ಪನಿಕವೇ. ಪ್ರತಿ ಕಾದಂಬರಿಯ ಮೇಲೆಯೂ ಒಂದು ಯುಗದ ಛಾಯೆ ಬೀಳುತ್ತದೆ ಎನ್ನುವುದು ನಿಜ. ಇಂಗ್ಲೆಂಡಿನ ಜೇನ್ ಆಸ್ಟೆನ್ ಚಾರಿತ್ರಿಕವಾಗಿ ಮಹತ್ತ್ವಪೂರ್ಣ ಕಾಲದಲ್ಲಿದ್ದರೂ ಸಮಕಾಲೀನ ಘಟನೆಗಳ ಪ್ರಸ್ತಾಪವೇ ಆಕೆಯ ಕೃತಿಗಳಲ್ಲಿ ಇಲ್ಲ. ಆದರೂ ರೈಲು ಮುಂತಾದ ಸ್ವಯಂಚಾಲಿತ ವಾಹನಗಳು ಇಲ್ಲದೇ, ಐವತ್ತು ಮೈಲಿಗಳ ಪ್ರಯಾಣ ಎಂದರೆ ಒಂದು ಮುಖ್ಯ ಸಂಗತಿ ಎಂದು ಭಾವಿಸುತ್ತಿದ್ದ ಕಾಲವದು ಎಂದು ಆ ಕಾದಂಬರಿಗಳ ಓದುಗ ನೆನಪಿಡುವುದು ಅಗತ್ಯ. ಒಟ್ಟಿನಲ್ಲಿ ಚಾರಿತ್ರಿಕವಲ್ಲದ ಕಾದಂಬರಿಯಲ್ಲಿ ಪಾತ್ರಗಳು, ಘಟನೆಗಳು ಕಾಲ್ಪನಿಕ ಆದರೆ ನಡೆದದ್ದೇ ಅಲ್ಲ; ನಡೆಯಬಹುದಾದದ್ದು.

ಕಾದಂಬರಿಯ ಕ್ರಿಯೆ ಯಾವ ಪ್ರದೇಶದಲ್ಲಿ ನಡೆಯುತ್ತದೆ ಎಂಬ ದೃಷ್ಟಿಯಿಂದ ಕಾದಂಬರಿಗಳನ್ನು ಮತ್ತೊಂದು ರೀತಿಯಲ್ಲಿ ವರ್ಗೀಕರಿಸಬಹುದು. ಕ್ರಿಯೆ ನಡೆಯುವ ಸ್ಥಳ ನಿರ್ದಿಷ್ಟವಾಗಿದ್ದರೂ ಅದು ಮುಖ್ಯವಲ್ಲದ ಕಾದಂಬರಿಗಳು ಹಲವು. ಇನ್ನು ಕೆಲವು ಪ್ರಾದೇಶಿಕ ಕಾದಂಬರಿಗಳಲ್ಲಿ ಕ್ರಿಯೆ ನಡೆಯುವ ವಿಶಿಷ್ಟ ಪ್ರದೇಶದ ರೂಪು ರೇಖೆಗಳ ರೀತಿನೀತಿಗಳ ಪ್ರಭಾವ ಅನಿವಾರ್ಯವಾಗಿ ಪ್ರಮುಖವೆನಿಸಿತ್ತವೆ. ಆ ಪ್ರದೇಶದ ನಿಸರ್ಗದ ಶಕ್ತಿಗಳು ಅಥವಾ ಸಂಪ್ರದಾಯಗಳು ಅಥವಾ ಜೀವನ ವಿಧಾನ ಕ್ರಿಯೆಯ ಮೇಲೆ ನಿರ್ಣಾಯಕ ಪ್ರಭಾವ ಬೀರಿರುತ್ತವೆ. ಸಿಂಕ್ಲೇರ್ ಲೂಯಿಯ ಮೇನ್ ಸ್ಟ್ರೀಟ್ ಇಂಥ ಒಂದು ಕೃತಿ.

ಕಾದಂಬರಿಯ ತಂತ್ರವನ್ನೇ ವರ್ಗೀಕರಣದ ಅಂಶವನ್ನಾಗಿಯೂ ಪರಿಗಣಿಸಬಹುದು (ತಂತ್ರ ಕಾದಂಬರಿಕಾರನ ದೃಷ್ಟಿಯನ್ನು ಹೊಂದಿಕೊಂಡಿರುತ್ತದೆ). ಬಿಗಿಯಾದ ಬಂಧವಿಲ್ಲದೆ, ಒಬ್ಬ ನಾಯಕನ ಅನುಭವಗಳನ್ನು ಒಂದಾದ ಮೇಲೊಂದರಂತೆ ಬಿತ್ತರಿಸುವ ಕಾದಂಬರಿಗಳುಂಟು. ಇವು ಎರಡು ಬಗೆಯವು. ಸಾಹಸವಂತ ಮತ್ತು ಗುಣವಂತ ನಾಯಕನಾದರೆ ಸಾಹಸದ ಕಾದಂಬರಿ ಸೃಷ್ಟಿಯಾಗುತ್ತದೆ. ಸ್ಟೀವನ್‌ಸನ್ನರ ಟ್ರೆಷರ್ ಐಲೆಂಡ್ ಇಂಥ ಕೃತಿ. ತುಂಟನಾಯಕನ ಕಥೆಯಲ್ಲಿ ನಾಯಕನೇ ಪಟಿಂಗನಾಗಿರುತ್ತಾನಾಗಿ ನೈತಿಕಮೌಲ್ಯಗಳ ವಿಚಾರ ಅಲ್ಲಿ ಗೌಣ. ಸ್ಪೇನಿನ ಅಲೆಮಾನ್‌ನ ಗಜ್‌ಮಾನ್ ದ ಆಲ್ಫಾರಾಚ್(1599–1604), ಫೀಲ್ಡಿಂಗ್‌ನ ಜೊನಾಥನ್ ವೈಲ್ಡ್ ಮೊದಲಾದ ಕಾದಂಬರಿಗಳು ಒಂದು ಉದ್ದೇಶಿತ ರಚನೆ ಇರುವ ಕಾದಂಬರಿಗಳು. ನಾಟಕೀಯ ಕಾದಂಬರಿಯಲ್ಲಿ

ಕ್ರಿಯೆಯ ಬೆಳೆವಣಿಗೆ ಮುಖ್ಯವಾಗಿ ನಾಟಕೀಯ ದೃಶ್ಯಗಳಿಂದ. ನಾಟಕದಲ್ಲಿನಂತೆ ಪರಿಣಾಮಕಾರಿ ಸನ್ನಿವೇಶಗಳ ಪರಂಪರೆ ಮನಸ್ಸಿನಲ್ಲಿ ಮುಖ್ಯವಾಗಿ ನಿಲ್ಲುತ್ತದೆ, ನಡುವೆ ಅಗತ್ಯವಾದ ಕೊಂಡಿಗಳನ್ನು ಕೃತಿಕಾರ ಒದಗಿಸಿರುತ್ತಾನೆ. ಹೆನ್ರಿ ಜೇಮ್ಸ್‌ನ ದಿ ಅಂಬಾಸಡರ್ಸ್ ಈ ಬಗೆಯದು. ದೃಶ್ಯಾವಳಿ ಪ್ರಧಾನ ಕಾದಂಬರಿಯಲ್ಲಿ ಕಾದಂಬರಿಕಾರ ನಮ್ಮ ಜೊತೆಗೇ ಇರುವುದರ ಅನುಭವವಾಗುತ್ತದೆ; ನಾವು ಬೆಟ್ಟದ ಮೇಲೆ ನಿಂತು ಸುತ್ತಲಿನ ನಿಸರ್ಗದ ದೃಶ್ಯಗಳ್ನು ಕಂಡಂತೆ ಭಾಸವಾಗುತ್ತದೆ. ಥ್ಯಾಕರೆಯ ವ್ಯಾನಿಟಿ ಫೇರ್ ಇದಕ್ಕೆ ನಿದರ್ಶನ. ಕಾದಂಬರಿಯಲ್ಲಿ ಒಂದು ಅಥವಾ ಒಂದೆರಡು ಮುಖ್ಯ ಪಾತ್ರಗಳ ಜೀವನವನ್ನು ಅಥವಾ ಜೀವನದ ಒಂದು ಭಾಗವನ್ನು ಘಟನೆಗಳ ಮೂಲಕ ನಿರೂಪಿಸುವುದು ಜೀವನವೃತ್ತಾಂತದ ರೀತಿಯ ಕಾದಂಬರಿಯ ವಿಧಾನ. ಕಾದಂಬರಿಯಲ್ಲಿ ಬಹುಸಂಖ್ಯೆಯವು ಈ ವರ್ಗಕ್ಕೆ ಸೇರುತ್ತವೆ. ಜಗತ್ತಿನ ಮಹಾಕಾದಂಬರಿಗಳಲ್ಲಿ ಹಲವು ಈ ಬಗೆಯವು. ಕಾದಂಬರಿಯ ಪಾತ್ರಗಳಲ್ಲಿ ಒಂದು ತಾನು ಕಂಡಂತೆ ಕಥೆಯನ್ನು ಹೇಳುವುದು ಆತ್ಮವೃತ್ತದ ತಂತ್ರ. ಡೆಫೋನ ರಾಬಿನ್‌ಸನ್ ಕ್ರೂಸೋದಿಂದ ಷರ್ಲಾಟ್ ಬ್ರಾಂಟಿಯ ಜೇನ್ ಐರ್, ಜೆ.ಡಿ. ಸ್ಯಾಲಿಂಗರನ ಕ್ಯಾಚರ್ ಇನ್ ದಿ ರೈ ಮತ್ತು ಕಾಮೂನ ದಿ ಸ್ಟ್ರೇಂಜರ್ ವರೆಗೆ ಈ ತಂತ್ರವನ್ನು ಹಲವು ಕೃತಿಗಳು ಬಳಸಿಕೊಂಡಿವೆ. ಡಿಕನ್ಸ್‌ನ ಡೇವಿಡ್ ಕಾಪರ್‌ಫೀಲ್ಡ್‌ನಲ್ಲಿ ನಾಯಕನೇ ಕಥೆಯನ್ನು ಹೇಳುತ್ತಾನೆ. ಕೆಲವು ಕಾದಂಬರಿಗಳಲ್ಲಿ ಕಥೆಯನ್ನು ಹೇಳುವವನು ನಗೆಗೀಡಾಗಿ ಮತ್ತೊಂದು ಪಾತ್ರದ ಹಿರಿಮೆಯನ್ನು ತೋರಿಸಲು ಹಿನ್ನೆಲೆಯಾಗುತ್ತಾನೆ. ವುಡ್‌ಹೌಸನ ಹಲವು ಕಾದಂಬರಿಗಳಲ್ಲಿ ಕೇಂದ್ರವ್ಯಕ್ತಿ ಎನ್ನಿಸಿಕೊಳ್ಳಬಹುದಾದ ಬರ್ಟ್ರಮ್ ವೂಸ್ಟರ್, ಆರ್ಥರ್ ಕಾನನ್‌ಡಾಯ್ಲ್‌ನ ಷರ್ಲಾಕ್ ಹೋಮ್ಸ್ ಕಾದಂಬರಿಗಳಲ್ಲಿ ನಾಯಕನ ಗೆಳೆಯ ಡಾ.ವ್ಯಾಟ್ಸನ್ ಇಂಥವರು. ಸ್ಯಾಲಿಂಗರನ ದಿ ಕ್ಯಾಚರ್ ಇನ್ ದಿ ರೈ ನಂಥ ಕಾದಂಬರಿಯಲ್ಲಿ ಕಥೆ ಹೇಳುವವನಿಗೆ ತಾನು ಬರೆಹಗಾರ ಎಂಬ ಅರಿವು ಇದ್ದೆ ಇರುತ್ತದೆ. ದಿನಚರಿಗಳು ಮತ್ತು ಕಾಗದಗಳ ಮೂಲಕ ಕಥಾವಸ್ತುವನ್ನು ನಿರೂಪಿಸುವ ಕಾದಂಬರಿಗಳೂ ಉಂಟು.

ಉದ್ದೇಶದ ದೃಷ್ಟಿಯಿಂದಲೂ ಕಾದಂಬರಿಗಳನ್ನು ವರ್ಗೀಕರಿಸಬಹುದು. (ಉದ್ದೇಶತಂತ್ರಗಳಿಗೆ ನಿಕಟವಾದ ಸಂಬಂಧವುಂಟು ಎಂಬುದನ್ನು ಇಲ್ಲಿ ಗಮನಿಸಬೇಕು). ಕಾದಂಬರಿ ಅನ್ಯಾರ್ಥಪ್ರಧಾನವಾಗಬಹುದು ಅಂದರೆ ಒಂದು ವಿಸ್ತಾರವಾದ ನೀತಿ ದೃಷ್ಟಿಯನ್ನು ಪ್ರತೀಕಗಳಾದ ಪಾತ್ರಗಳ ಮೂಲಕ ನಿರೂಪಿಸಬಹುದು. ಬನ್ಯನನ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್‌ನಲ್ಲಿ ಕ್ರಿಶ್ಚಿಯನ್ ಎಂಬಾತ ವಿನಾಶದ ನಗರದಿಂದ (ಸಿಟಿ ಆಫ್ ಡಿಸ್ಟ್ರಕ್ಷನ್) ಅಮರ ನಗರಕ್ಕೆ (ದಿ ಎವರ್‌ಲಾಸ್ಟಿಂಗ್ ಸಿಟಿ) ಪ್ರಯಾಣಮಾಡುತ್ತಾನೆ. ಓದುಗರಲ್ಲಿ ಭಯಮಿಶ್ರಿತ ರೋಮಾಂಚನವನ್ನುಂಟುಮಾಡುವುದೇ ಗಾಥಿಕ್ ಕಾದಂಬರಿಯ ಮುಖ್ಯ ಉದ್ದೇಶ. ಹಾರೆಸ್ ವಾಲ್‌ಪೋಲನ ಕ್ಯಾಸಲ್ ಆಫ್ ಅಟ್ರಾಂಟೊ (1764) ಈ ಸಂಪ್ರದಾಯನ್ನು ಇಂಗ್ಲೆಂಡಿನಲ್ಲಿ ಪ್ರಾರಂಭಿಸಿತು. ಈ ಪರಂಪರೆಯಲ್ಲಿ ಮೇರಿ ಷೆಲಿಯ ಫ್ರಾಂಕಿನ್‌ಸ್ಟಿನ್ (1817) ಪ್ರಸಿದ್ಧವಾಗಿದೆ. ಮುಖ್ಯಪಾತ್ರದ ಸುತ್ತಲಿನ ಜೀವನಕ್ಕಿಂತ ಅದರ ಮಾನಸಿಕ ಜೀವನಕ್ಕೆ ಪ್ರಾಧಾನ್ಯ ಕಂಡುಬರುವುದು ಪರಿಣಾಮ ವಿಧಾನದ (ಇಂಪ್ರೆಷನಿಷ್ಟಿಕ್) ಕಾದಂಬರಿಯಲ್ಲಿ. ಜೇಮ್ಸ್ ಜಾಯ್ಸ್‌ನ ಪೋರ್‌ಟ್ರೇಟ್ ಆಫ್ ದಿ ಆರ್ಟಿಸ್ಟ್ ಆಸ್ ಎ ಯಂಗ್ ಮ್ಯಾನ್‌ನಲ್ಲಿ (1916) ನಾಯಕನ ಮನಸ್ಸಿನಲ್ಲಿ ಸ್ಫುರಿಸುವ ಭಾವಗಳ ನಿರೂಪಣೆ ಮುಖ್ಯ, ಅವನ ಸುತ್ತಣ ಪರಿಸರವಲ್ಲ. ಈ ಬಗೆಯ ಕಾದಂಬರಿಯ ಮುಂದಿನ ಬೆಳೆವಣಿಗೆ ಪ್ರಜ್ಞಾಪ್ರವಾಹ (ಸ್ಟ್ರೀಮ್ ಆಫ್ ಕಾನ್ಷಸ್‌ನೆಸ್) ಕಾದಂಬರಿ. ಇದರಲ್ಲಿ ಕಾದಂಬರಿಕಾರನ ಪ್ರಯತ್ನ ಸ್ಪಷ್ಟವಾದ ತಾರ್ಕಿಕ ಹೊಂದಾಣಿಕೆ ಇಲ್ಲದ ಮನಸ್ಸಿನಲ್ಲಿ ಹರಿಯುವ ಭಾವಗಳನ್ನು ಮತ್ತು ವಿಚಾರಗಳ ವಾಹಿನಿಯನ್ನು ಯಥಾವತ್ತಾಗಿ ನಿರೂಪಿಸುವುದು. ಈ ಪಂಥದ ಸುಪ್ರಸಿದ್ಧ ಕೃತಿ ಜೇಮ್ಸ್ ಜಾಯ್ಸ್‌ನ ಯೂಲಿಸಿಸ್ (1922). ಸಾಮಾಜಿಕ ರೀತಿಗಳ ಕಾದಂಬರಿಯಲ್ಲಿ (ನಾವೆಲ್ ಆಫ್ ಮ್ಯಾನರ್ಸ್) ಸಮಕಾಲೀನ ಸಮಾಜದ ರೀತಿಗಳನ್ನು ಸಾಮಾನ್ಯವಾಗಿ ವಿಡಂಬನಾತ್ಮಕವಾಗಿ ನಿರೂಪಿಸುವುದೇ ಉದ್ದೇಶ. ಫ್ಯಾನಿ ಬರ್ನಿಯ ಈವ್‌ಲೀನ್ (1778) ಮತ್ತು ಜೇನ್ ಆಸ್ಟೆನಳ ಕಾದಂಬರಿಗಳು ಈ ಬಗೆಯವು. ಮನುಷ್ಯ ನಿಸರ್ಗದೊಡನೆ ನಡೆಸಬೇಕಾದ ಹೋರಾಟದ ಚಿತ್ರಣ ನೆಲದ ಕಾದಂಬರಿಯ (ನಾವೆಲ್ ಆಫ್ ದಿ ಸಾಯ್ಲ್) ಗುರಿ. ಎಲೆನ್ ಗ್ಲಾಸ್‌ಗೋನ ಬ್ಯಾರನ್ ಗ್ರೌಂಡ್ (1925) ಇಂಥ ಕೃತಿ. ಎಲ್ಲ ಕಷ್ಟನಷ್ಟಗಳ ನಡುವೆ ಸ್ಥಿರವಾಗಿ ಬಂಡೆಯಂತೆ ನಿಂತ ಧರ್ಮನಿಷ್ಠೆಯನ್ನು ಚಿತ್ರಿಸುವುದೇ ಭಾವಾತಿರೇಕದ ಕಾದಂಬರಿಯ (ಸೆಂಟಿಮೆಂಟಲ್) ಉದ್ದೇಶ. ಆಲಿವರ್ ಗೋಲ್ಡ್‌ಸ್ಮಿತ್‌ನ ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಕಾದಂಬರಿಯ (1766) ನಾಯಕ ಡಾಕ್ಟರ್ ಪ್ರಿಮ್‌ರೋಸ್ ಆಸ್ತಿಯನ್ನು ಕಳೆದುಕೊಂಡು, ಸೆರೆಮನೆ ಸೇರಿ ತನ್ನ ಹೆಣ್ಣುಮಕ್ಕಳಿಗೆ ತೀರ ಅನ್ಯಾಯ, ಅಪಮಾನಗಳಾದಾಗಲೂ ದೇವರಲ್ಲಿ ವಿಶ್ವಾಸವನ್ನು ಉಳಿಸಿಕೊಳ್ಳುತ್ತಾನೆ; ಕಡೆಗೆ ಧರ್ಮಕ್ಕೆ ಜಯವಾಗುತ್ತದೆ. ಒಂದು ವಿಚಾರದೃಷ್ಟಿಯ ಪ್ರತಿಪಾದನೆಗಾಗಿ ರಚಿತವಾದದ್ದು ಥೀಸಿಸ್ ನಾವಲ್. ಆರಿಖ್ ಮರ್‍ಯೆಯ ಫಾನ್ ರಮಾರ್ಕ್‌ನ ಆಲ್ ಕ್ವಯಟ್ ಆನ್ ದಿ ವೆಸ್ಟರ್ನ್ ಫ್ರಂಟ್‌ನ ಉದ್ದೇಶ ಯದ್ಧದ ಭೀಕರ ಕ್ರೌರ್ಯ ಮತ್ತು ಮೂರ್ಖತನವನ್ನು ಚಿತ್ರಿಸುವುದು. ಒಂದು ಅಪರಾಧದ ಸಮಸ್ಯೆಯನ್ನು ಬಿಡಿಸುವುದರ ವೃತ್ತಾಂತದಿಂದ ಕುತೂಹಲವನ್ನು ಬೆಳೆಸುವುದು ಪತ್ತೇದಾರಿ ಕಾದಂಬರಿಯ ಉದ್ದೇಶ. ಆಗಾಥ ಕ್ರಿಸ್ಟಿ, ನಿಕೊಲಸ್ ಬ್ಲಾಕ್ (ಸಿ. ಡೇ. ಲೂಯಿಸ್), ಡರಥಿ ಎಲ್ ಸೇಯರ್ಸ್, ಅರ್ಲ್ ಸ್ಟ್ಯಾನ್ಲೆ ಗಾರ್ಡ್ನರ್ ಈ ಮೊದಲಾದವರು ಈ ವಿಭಾಗದಲ್ಲಿ ಬಹು ಜನಪ್ರಿಯತೆಯನ್ನು ಗಳಿಸಿದವರು.

ಹೀಗೆ ಕಾದಂಬರಿಗಳನ್ನು ಹಲವು ರೀತಿಗಳಲ್ಲಿ ವರ್ಗೀಕರಣ ಮಾಡಬಹುದು.

ಹದಿನೆಂಟನೆಯ ಶತಮಾನದಲ್ಲಿ ಪಾಶ್ಚಾತ್ಯ ಜಗತ್ತಿನಲ್ಲಿ ಸ್ಪಷ್ಟವಾಗಿ ಸಾಹಿತ್ಯ ರೂಪವನ್ನು ತಳೆದ ಕಾದಂಬರಿ ಕಳೆದ ಒಂದು ಶತಮಾನದಲ್ಲೂ ಬಹು ವೇಗವಾಗಿ ಹಲ ಮುಖನಾಗಿ ಬೆಳೆದಿದೆ. ಲೆಕ್ಕವಿಲ್ಲದಷ್ಟು ಪ್ರಯೋಗಗಳು ಈ ರೂಪದಲ್ಲಿ ನಡೆದಿವೆ. ಮಾರ್ಷಲ್ ಪ್ರೂಸ್ತ್‌ನ (1871–1922) ಕಳೆದುಹೋದ ಸಂಗತಿಗಳ ಸ್ಮರಣೆ ಎಂಬ ಕಾದಂಬರಿಯಲ್ಲಿ (ಅ ಲ ರಿಷರ್ಷ್ ದ್ಯೂ ತಾ ಪರ್ದ್ಯು) ಕಥಾವಸ್ತು ಅಷ್ಟು ಮುಖ್ಯವೇ ಅಲ್ಲ. ಇಲ್ಲಿ ನಡೆದುಹೋದ ಘಟನೆಗಳ ನಿರೂಪಣೆ ಇದೆ. ಆದರೆ ನಿರೂಪಣೆಯ ರೀತಿಯಿಂದ ಅವು ಗತಕಾಲದ ಘಟನೆಗಳೆಂದೇ ಭಾಸವಾಗುವುದಿಲ್ಲ; ಇನ್ನೂ ಅಸ್ತಿತ್ವದಲ್ಲಿರುವ ಪರಿಳಿತಗಳ ಭಾಗವೆಂದೇ ಅನುಭವವಾಗುತ್ತದೆ; ಕಾಲ ದೇಶ. ವ್ಯಕ್ತಿತ್ವಗಳು ಕರಗಿಹೋಗಿ ಉಳಿಯುವ ಅನಂತತೆಯ ಅನುಭವವಾಗುತ್ತದೆ. ಸಿ.ಪಿ. ಸ್ನೋನ (1905) ಸ್ಟ್ರೇಂಜರ್ಸ್ ಅಂಡ್ ಬ್ರದರ್ಸ್ ಹನ್ನೊಂದು ಸಂಪುಟಗಳ ಮಾಲೆ; ಇದು ಲೂಯಿ ಎಲಿಯೆಟ್ ಎಂಬಾತನ ಆತ್ಮವೃತ್ತರೂಪದಲ್ಲಿದೆ. ಅಧಿಕಾರ ಸ್ಥಾನಗಳಲ್ಲಿರುವವರ ಸಾರ್ವಜನಿಕ ಜೀವನ ಮತ್ತು ವೈಯಕ್ತಿಕ ಜೀವನಗಳ ಒತ್ತಡಗಳ ನಿರೂಪಣೆ ಇಲ್ಲಿನ ಉದ್ದೇಶ. ಇಲ್ಲಿನ ಚಿತ್ರಣದಲ್ಲಿ ಉದ್ವೇಗ ಮತ್ತು ವಿಡಂಬನೆಗಳಿಲ್ಲದ ಪರಿಪಕ್ವ ಮಾನವೀಯತೆಯನ್ನು ಕಾಣಬಹುದು. ಅಮೆರಿಕದ ಜೆ.ಡಿ. ಸ್ಯಾಲಿಂಗರನ ದಿ ಕ್ಯಾಚರ್ ಇನ್ ದಿ ರೈ ಸಮಕಾಲೀನ ಜೀವನದ ರೀತಿ ಮತ್ತು ಮೌಲ್ಯಗಳ ವಿರುದ್ಧ ಪ್ರತಿಭಟಿಸುವ ಯುವಕ ಮನೋಭಾವದ ಪ್ರತೀಕ. ಇದರಲ್ಲಿ ನಿಜವಾದ ಕಥಾವಸ್ತುವಿಲ್ಲ. ಹದಿನೈದು ವಯಸ್ಸಿನ ಬಾಲಕನೊಬ್ಬ ನ್ಯೂಯಾರ್ಕ್‌ನಲ್ಲಿ ಎರಡು ದಿನಗಳನ್ನು ಕಳೆಯಲು ಬಂದು, ಟ್ಯಾಕ್ಸಿ ಚಾಲಕರು, ಒಬ್ಬ ಸೂಳೆ, ತನ್ನ ತಂಗಿ, ಒಬ್ಬ ಸಲಿಂಗ ರತಿಯ ಹಿರಿಯವಯಸ್ಕ – ಇವರ ಮಧ್ಯೆ ಓಡಾಡುವುದು, ಆಷಾಢಭೂತಿತನ ಮತ್ತು ಅಪ್ರಾಮಾಣಿಕ ಮೌಲ್ಯಗಳ ಜಗತ್ತಿನ ಅನುಭವ ಇವುಗಳಿಂದ ಕಾದಂಬರಿ ಬೆಳೆದಿವೆ. ಮನೋವೈಜ್ಞಾನಿಕ ಚಿಕಿತ್ಸೆ ಪಡೆಯುತ್ತಿರುವ ನಾಯಕನ ಆತ್ಮವೃತ್ತ ಇದು. ಅವನ ಅನುಭವ ಗೊಂದಲ, ದಿಗ್ಭ್ರಮೆ, ಭಯಭೀತಿಗಳನ್ನೆಲ್ಲ ಭಾಷೆಯ ಮೂಲಕ ಸಂವಹನಗೊಳಿಸುವ ಪ್ರಯತ್ನ ಇಲ್ಲಿದೆ. ಆತ್ಮವೃತ್ತ ತಂತ್ರವನ್ನು ಬಳಸಿ ಒಂದು ವಿಲಕ್ಷಣ ಮನೋಧರ್ಮವನ್ನು ಚಿತ್ರಿಸುವ ಪ್ರಯತ್ನ ವ್ಲಾಡಿಮಿರ್ ನಬೊಕೊವ್‌ನ (1899) ಲೋಲಿಟದಲ್ಲಿಯೂ ಕಾಣುತ್ತದೆ. ಬಹು ಶೀಘ್ರವಾಗಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಕಾದಂಬರಿ ಇದು. ಎದುರಿಲ್ಲದ ಆಕರ್ಷಣೆ ಬೀರುವ ಎಳೆವಯಸ್ಸಿನ ಹುಡುಗಿಯಲ್ಲಿ ಅತ್ಯನುರಾಗ, ಮನಸ್ಸಿನ ವಿಕಾರ ಎನ್ನುವಷ್ಟರಮಟ್ಟಿನ ಗೀಳು ನಾಯಕನಿಗೆ ಅವನ ಮನಸ್ಸಿನ ವಿಕಾರ, ವಿಚಾರಗಳು ಅವನ ಭಾಷೆಯಲ್ಲಿಯೆ ಕಥೆಯಲ್ಲಿ ಪ್ರತಿಬಿಂಬಿತವಾಗುತ್ತವೆ. ಜಟಿಲವಾದ, ಸುತ್ತುಸುತ್ತಿನ, ದಟ್ಟವಾದ ಸೂಚನೆಗಳ, ಆದರೂ ಲವಲವಿಕೆಯ ವಿಚಿತ್ರಶೈಲಿ ಅಲ್ಲಿನ ಮನಸ್ಸಿನ ಸ್ಥಿತಿಯಷ್ಟೇ ವಿಶಿಷ್ಟವಾದುದು. ನೈಜೀರಿಯದ ಚಿನುಅ ಅಚಿಬೆಯ ದೇವರ ಬಾಣದ (ಆರೊ ಆಫ್ ಗಾಡ್– (1964) ವಸ್ತು ಶ್ವೇತವರ್ಣಕ್ಕೆ ಸೇರದವರ ನಾಗರಿಕತೆಗಳಿಗೆ, ಅವುಗಳ ಸತ್ತ್ವ ಶ್ರೀಮಂತಿಕೆ ಮತ್ತು ಸುಖಗಳನ್ನು ಗುರುತಿಸಲಾರದವರಿಂದ ಒದಗುವ ಅಪಾಯವೇ ಆಗಿದೆ. ಕುಷ್ವಂತ್ ಸಿಂಗರ ಐ ಷಲ್ ನಾಟ್ ಹಿಯರ್ ದಿ ನೈಟಿಂಗೇಲ್ಸ್ ಎಗೆನ್ (1961) ಎಂಬ ಪುಸ್ತಕದಲ್ಲಿ ಭಾರತದಲ್ಲಿ 1942–43ರ ಪರ್ವಕಾಲದ ಸಿಖ್ ಸಮುದಾಯದ ಜೀವನವನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಹಂಗೆರಿಯ ಗಜ್‌ಟಾವ್ ರಾಬ್‌ನ, ಸಬೇರಿಯ ಪುಸ್ತಕದ ವಸ್ತು ಕ್ರೈಸ್ತಧರ್ಮ ಮತ್ತು ಕಮ್ಯೂನಿಸಂಗಳ ಘರ್ಷಣೆ. ಆದರೆ, ಬಾಳಿನಲ್ಲಿ ಒಳ್ಳೆಯದು ಕೆಟ್ಟದು ಜೊತೆ ಜೊತೆಯಾಗಿ ಹೆಣೆದುಕೊಂಡಿರುತ್ತವೆ, ಒಂದರಿಂದ ಇನ್ನೊಂದನ್ನು ಸಂಪೂರ್ಣವಾಗಿ ಪ್ರತ್ಯೇಕಿಸುವಂತಿಲ್ಲ– ಎಂಬ ಬಾಳಿನ ದುರಂತವನ್ನು ಕಾದಂಬರಿ ಚಿತ್ರಿಸುತ್ತದೆ. ಆಲ್ಬರ್ಟ್ ಕಾಮೂನ (1931–60) ದಿ ಮಿತ್ ಆಫ್ ಸಿಸಿಫಸ್ ಶೂನ್ಯವಿಶ್ವದಲ್ಲಿ ಮನುಷ್ಯನ ಪ್ರಯತ್ನಗಳ ಅಸಂಬದ್ಧತೆಯನ್ನು ನಿರೂಪಿಸುತ್ತದೆ. ಜಾಪಾಲ್ ಸಾರ್ತ್ರ್ ಕಾದಂಬರಿ ಮಾಧ್ಯಮವನ್ನು ಅಸ್ತಿತ್ವವಾದದ ನಿರೂಪಣೆಗೆ ಬಳಸಿಕೊಂಡಿದ್ದಾನೆ. ಕಾದಂಬರಿಗೆ ವಿರುದ್ಧ (ಆಂಟಿ ನಾವಲ್) ಎನಿಸಿಕೊಂಡ ಕಾದಂಬರಿಗಳು ಮನುಷ್ಯನಿಗೆ ಅತಿ ಸಮೀಪದ ಸುತ್ತಲಿನ ಆವರಣ ಸಹ ಅವನಲ್ಲಿ ತೋರಿಸುವ ನಿರ್ಲ್ಯಕ್ಷ್ಯವನ್ನು ಒತ್ತಿಹೇಳುತ್ತೇವೆ. ಇವುಗಳಲ್ಲಿ ಕ್ರಿಯೆಯ ಗಮನ ಬಹು ನಿಧಾನ. ಮೈಕೇಲ್ ಬ್ಯೂಟರ್‌ನ ಕಾದಂಬರಿಗಳಲ್ಲಿ ಪಾತ್ರಗಳ ಬದುಕಿನ ಕಾಲವನ್ನೇ ಹಿಮ್ಮುಖ ಮಾಡುವ ಪ್ರಯತ್ನವಿದೆ. ಹೀಗೆ ಆಧುನಿಕ ಕಾಲದಲ್ಲಿ ಕಾದಂಬರಿ ಕ್ಷೇತ್ರದಲ್ಲಿ ಪ್ರಯೋಗಗಳಿಗೆ ಕೊನೆಯೇ ಇಲ್ಲ.

**ಪ್ರಪಂಚದ ಪ್ರಸಿದ್ಧ ಕಾದಂಬರಿಗಳು:** ಪ್ರಪಂಚದ ಪ್ರಸಿದ್ಧ ಕಾದಂಬರಿಗಳ ವಿಷಯದಲ್ಲಿ ಓದುಗರಲ್ಲಾಗಲಿ ವಿಮರ್ಶಕರಲ್ಲಾಗಲಿ ಒಮ್ಮತವಿರುವುದು ಸಹಜವಾಗಿ ಸಾಧ್ಯವಿಲ್ಲ. ಪ್ರಸಿದ್ಧವೆನಿಸಿದ ಕೇವಲ ಕೆಲವು ಕೃತಿಗಳನ್ನು (ಭಾರತ ಮತ್ತು ಗ್ರೇಟ್‌ಬಿಟನ್‌ಗಳಲ್ಲಿ ರಚಿತವಾದ ಕಾದಂಬರಿಗಳನ್ನುಳಿದು) ಇಲ್ಲಿ ಗಮನಿಸಬಹುದು.

ಸ್ಪೇನ್ ದೇಶದ ಸರ್‌ವಾಂಟಿಸ್ ಡಾನ್ ಕ್ವಿಕ್ಸಟ್‌ನ ಸಾಹಸಗಳು (1605) ಬೈಬಲನ್ನು ಬಿಟ್ಟರೆ ಪ್ರಪಂಚದಲ್ಲಿ ಅತಿ ಹೆಚ್ಚು ಬಾರಿ ಅನುವಾದವಾಗಿರುವ ಕೃತಿ ಎನ್ನುತ್ತಾರೆ. ಸಾಹಸವೀರರ ಅದ್ಭುತ ಸಾಧನೆಗಳ ಕಥೆಗಳನ್ನು ಓದಿ ತಾನೂ ಸಾಹಸಗಳನ್ನರಸಿ ಹೊರಟ ಮುದುಕನ ಕಥೆ ಇದು. ಕೃತಿ ಹಾಸ್ಯದ ಆಗರ. ನಾಯಕನನ್ನು ನೋಡಿ ನಗುವಂತೆಯೇ ಮತ್ತೆ ಮತ್ತೆ ಕಠಿಣ ವಾಸ್ತವಿಕತೆಗೆ ಎದುರಾಗಿ ಸೋಲುವ ಅವನನ್ನು ಕಂಡು ಮರುಕಪಡುತ್ತೇವೆ. ಅನುಭವಗಳ ಹೊರ ತೋರಿಕೆಯನ್ನು ಭೇದಿಸಿ ಅವುಗಳ ನಿಜವಾದ ಸ್ವರೂಪವನ್ನೂ ಅರ್ಥವನ್ನೂ ಕಾಣಿಸುವ ಪ್ರಯತ್ನ ಇಲ್ಲಿದೆ. ಕೆಲವು ರೀತಿಗಳಲ್ಲಿ ಹುಚ್ಚನಾದರೂ ಆದರ್ಶ ಪ್ರಿಯನೂ ಸೌಜನ್ಯಶೀಲನೂ ನಿಜವಾಗಿ ಒಳ್ಳೆಯವನೂ ಆದ, ನಮ್ಮ ಆದರವನ್ನು ಮೆಚ್ಚಿಗೆಯನ್ನು ಗಳಿಸುವ, ಎಂದೆಂದೂ ಮರೆಯಲಾಗದ ಪಾತ್ರವನ್ನು ಸರ್‌ವಾಂಟಿಸ್ ಚಿತ್ರಿಸಿದ್ದಾನೆ, ಜಗತ್ತಿಗೊಂದು ಹೊಸ ಪ್ರತೀಕವನ್ನು ನೀಡಿದ್ದಾನೆ. ಫ್ರಾನ್ಸ್ ಜಗತ್ತಿಗೆ ಹಲವು ಶ್ರೇಷ್ಠ ಕಾದಂಬರಿಗಳನ್ನು ಕೊಟ್ಟಿದೆ. ಪ್ರಪಂಚದ ಸಾಹಿತ್ಯದಲ್ಲಿ ಅತಿ ಸಮರ್ಥ ವಿಡಂಬನೆಗಳಲ್ಲಿ ಒಂದೆನಿಸಿರುವುದು ವಾಲ್ಟೇರನ ಕಾಂಡೈಡ್, ಕಹಿಯಾದ, ಕತ್ತರಿಸುವ ಇಲ್ಲಿನ ವಿಡಂಬನೆಯಲ್ಲಿ ಮಾರ್ದವತೆ ಮತ್ತು ವಿವೇಕಗಳ ಗುಪ್ತವಾಹಿನಿಯೂ ಉಂಟು. ಸದ್ದುಗದ್ದಲವಿಲ್ಲದ ನಿರಾಡಂಬರ ಕರ್ತವ್ಯಶೀಲತ್ವ, ಸುಖವನ್ನರಸುವ ಯುವಕನಾಯಕನಿಗೆ ಸಮಾಧಾನದ ಹಾದಿಯಾಗುತ್ತದೆ. ಮದಾಂ ಬವಾರಿ ಸುಖಕ್ಕಾಗಿ ಹಂಬಲಿಸುವ ಒಬ್ಬ ಸಾಮಾನ್ಯ ಹೆಣ್ಣಿನ ಕಥೆ; ಕಾದಂಬರಿಯಿಂದ ಸಂಪೂರ್ಣವಾಗಿ ಹೊರಕ್ಕೆ ನಿಂತು ನಿಷ್ಠುರ ವಾಸ್ತವಿಕತೆಯನ್ನು ಪರಿಪಾಲಿಸಬೇಕೆನ್ನುವ ಪಂಥದ ಗುಸ್ತಾವ್ ಫ್ಲೊಬೇರನ ಕೃತಿ ಇದು. ಪಾತ್ರ, ಕ್ರಿಯೆಗಳ ಸಮತೋಲನ, ಒಂದೇ ವಸ್ತುವಿನಲ್ಲಿ ಕಟ್ಟುನಿಟ್ಟಿನ ಗಮನ, ಪಾತ್ರಗಳ ವಿಷಯದಲ್ಲಿ ಅಷ್ಟೇ ಕಟ್ಟುನಿಟ್ಟಾದ ನಿಷ್ಪಕ್ಷಪಾತ, ಪ್ರತಿಭಟನೆಯ ಮತ್ತು ಪ್ರತಿ ಪಾತ್ರದ ಮನಸ್ಸಿನ ಸೂಕ್ಷ್ಮ ವಿಶ್ಲೇಷಣೆ ಇವು ಇಲ್ಲಿ ಅಚ್ಚರಿಗೊಳಿಸುವಂತಿವೆ, ಸುಖಕ್ಕಾಗಿ ಬೇರೆಲ್ಲವನ್ನೂ ಬಲಿಕೊಡುವ ಹೆಣ್ಣು ಸುಖಕ್ಕಾಗಿ ತೆರುವ ಬೆಲೆಯನ್ನು ಕಾದಂಬರಿಕಾರ ಉಪದೇಶದ ಗೋಜಿಗೇ ಹೋಗದೇ ನಿರೂಪಿಸುವ ರೀತಿ ಸಾಮಾನ್ಯ ವ್ಯಭಿಚಾರದ ಕಥೆಯನ್ನು ವಿಶ್ವಸಾಹಿತ್ಯದ ಮಟ್ಟಕ್ಕೆ ಏರಿಸಿದೆ. ಇವನ ಶಿಷ್ಯ ಮೊಪಾಸಾನ ಪೀರ್ ಎತ್ ಜೀನ್ (1888) ತನ್ನ ತಾಯಿಯ ವ್ಯಭಿಚಾರದ ಫಲವಾದ ಸೋದರನ (ಒಬ್ಬ ವ್ಯಕ್ತಿಯ) ಅಸೂಯೆಯನ್ನು ಗ್ರೀಕ್ ದುರಂತ ನಾಟಕದ ಗಾಂಭೀರ್ಯದಿಂದ ನಿರೂಪಿಸುತ್ತದೆ. ತಾವು ಕಡೆಗಣಿಸಿದ ವಿಧಿಯೊಂದಿಗೂ ಪಾತ್ರಗಳು ಹೋರಾಡಬೇಕಾಗುತ್ತದೆ; ಅದರ ಕೈಯಲ್ಲಿಯೇ ಸೋಲನ್ನಪ್ಪಬೇಕಾತ್ತದೆ. ಸ್ಪಷ್ಟವಾದ ಶೈಲಿ, ನಿಷ್ಕೃಷ್ಟವಾದ ಚಿತ್ರಗಳು, ಒಂದು ಕಾಲದ ಚಿತ್ರವಾದರೂ ಸರ್ವಕಾಲಿಕವಾದ ಅನುಭವ ಮತ್ತು ಕ್ರಿಯೆಗೆ ಕೃತಿಕಾರ ನೀಡುವ ಗಾಂಭೀರ್ಯ ಗಹನತೆಗಳು ಕೃತಿಗೆ ಅಪೂರ್ವ ಪರಿಣಾಮವನ್ನು ಒದಗಿಸುತ್ತವೆ. ಪ್ರೂಸ್ತನ ಅ ಲ ರಿಷರ್ಷ್ ದ್ಯೂ ತಾ ಪರ್ದ್ಯುನಲ್ಲಿ (1913–27) ಹಲವು ದೋಷಗಳುಂಟು. ಇದರದು ಭೀಕರ ಕತ್ತಲೆಯ ಜಗತ್ತು. ಆದರೂ ಇಲ್ಲಿ ವಿಶ್ಲೇಷಣೆಯ ಶಕ್ತಿ ಮತ್ತು ಕಾವ್ಯಶಕ್ತಿ ಕೈಕೈಹಿಡಿದು ಜೊತೆಯಾಗಿ ಸಾಗುತ್ತವೆ. ಅನುಭವವನ್ನು ಅರಗಿಸಿಕೊಂಡು ಅದರ ಮಹತ್ತ್ವವನ್ನು ಸೂಚಿಸುವ ಕಾದಂಬರಿಯ ಇಲ್ಲಿನ ರೀತಿ ವಿಶೇಷವಾದುದು. ಹಲವು ಬಗೆಗಳ, ಹಲವು ವ್ಯಕ್ತಿಗಳ ಅನುಭವದಲ್ಲಿ ಸರ್ವಕಾಲಿಕವಾದ ಮಾನವ ಅನುಭವವನ್ನು ಗುರುತಿಸುವ ಯಶಸ್ವೀ ಪ್ರಯತ್ನ ಇಲ್ಲಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ನೆಥಾನಿಯಲ್ ಹಾತಾರ್ನನ ದಿ ಸ್ಕಾರ್ಲೆಟ್ ಲೆಟರ್ (1850) ಮೂವರು ಪಾಪಿಗಳ ವ್ಯಭಿಚಾರ ಮಾಡಿದ ಹೆಣ್ಣು, ಅವಳ ಗುಪ್ತಪ್ರಣಯಿ, ಅವಳ ಗಂಡ ಇವರ ಕಥೆ. ಪಾಪದ ಅಸ್ವಾರ್ಥ ಬುದ್ಧಿಶಕ್ತಿಗೂ ಸಹಜಪ್ರವೃತ್ತಿಗೂ ಮನುಷ್ಯನ ಬಾಳಿನಲ್ಲಿ ನಡೆಯುವ ಘರ್ಷಣೆಯ ಶಕ್ತಿಯುತ ನಿರೂಪಣೆ ಇಲ್ಲಿದೆ. ಕೃತಿಯ ಬಂಧ ಬಹು ಬಿಗಿಯಾದದ್ದು, ಅಚ್ಚುಕಟ್ಟಾದ್ದು. ಇಲ್ಲಿ ಒಂದೇ ಒಂದು ವಾಕ್ಯಬಂಧವನ್ನೂ ತಗೆದುಹಾಕುವಂತಿಲ್ಲ. ಪಾತ್ರಗಳ ಬಾಳಿನ ಎಳೆಗಳು ಹೆಣೆದುಕೊಳ್ಳುತ್ತ ಹೋಗುವ ರೀತಿ. ಕಾದಂಬರಿ ಸಾಧಿಸುವ ಕ್ರಿಯೆಯ ಐಕ್ಯ ಎರಡೂ ಅಸಾಧಾರಣ. ಈ ದೇಶ ಹಲವು ಮಹಾಕಾದಂಬರಿಗಳನ್ನು ಜಗತ್ತಿನ ಸಾಹಿತ್ಯಕ್ಕೆ ನೀಡಿದೆ. ಮೆಲ್‌ವಿಲ್‌ನ ಮೋಬಿ ಡಿಕ್ (1851) ಒಂದು ಹಡಗಿನ ಕ್ಯಾಪ್ಟನ್ ಮತ್ತು ಒಂದು ಬಿಳಿಯ ತಿಮಿಂಗಿಲ ಇವುಗಳ ನಡುವಿನ ಹೋರಾಟದ ಕಥೆ. ಕೃತಿಯ ಕ್ರಿಯೆಗೆ ಬೇರೆ ಬೇರೆ ವಿಮರ್ಶಕರು ಬೇರೆ ಬೇರೆ ವಿವರಣೆಗಳನ್ನು ನೀಡಿದ್ದಾರೆ. ಕೃತಿಯ ವಸ್ತು ದುಷ್ಟತನ, ನಾಗರಿಕತೆಯಿಂದ ದೂರವಾದ ವಿಚಿತ್ರ, ಭಯಾನಕ ಜಗತ್ತನ್ನು ಕಾದಂಬರಿ ಸೃಷ್ಟಿಸುತ್ತದೆ. ಆದರೆ ವಿವರಗಳಲ್ಲಿ ಮತ್ತು ಘಟನೆಗಳಲ್ಲಿ ವಾಸ್ತವಿಕತೆಯನ್ನು ಸಾಧಿಸುತ್ತದೆ. ಇವೆರಡರ ಮಿಶ್ರಣ ವಿಚಿತ್ರವೂ ಆಳವೂ ಆದ ಅನುಭವವನ್ನು ನಿರ್ಮಿಸುತ್ತದೆ. ಮಾರ್ಕ್‌ಟ್ವೇನನ ಹಕಲ್‌ಬರಿ ಫಿನ್‌ನ ಸಾಹಸಗಳು (1885) ಇಂದಿಗೂ ತನ್ನ ಹಾಸ್ಯದ ಸತ್ತ್ವವನ್ನು ಕಳೆದುಕೊಂಡಿಲ್ಲ. ಜೊತೆಗೆ ಇದು ಮನುಷ್ಯ ತನ್ನ ಸಹಮಾನವರಿಗೆ ಎಷ್ಟು ಕ್ರೂರವಾಗಿರಬಲ್ಲ ಎಂಬುದರ ಗಂಭೀರ ಚಿತ್ರವನ್ನೂ ನೀಡುತ್ತದೆ. ಹಳ್ಳಿಯ ಹುಡುಕನ ಮಗ, 14 ವರ್ಷದ ಹಕಲ್‌ಬರಿ. ವಿದ್ಯೆ ಇಲ್ಲದಿದ್ದರೂ ಸದಾ ಅರಳಿರುವ ಮನಸ್ಸು ಇವನದು. ಮೂಢನಂಬಿಕೆಗಳ ತವರಾದಂತೆಯೆ ಈತ ಸಹನೆ ಮತ್ತು ಮರುಕಗಳ ತವರೂ ಆಗಿದ್ದಾನೆ. ಶಕ್ತಿಯುತರಾಗಿದ್ದು ಹೊಣೆ ಹೊತ್ತ ಅಮೆರಿಕದ ಜನ ತಮ್ಮನ್ನು ತಾವೇ ಅರ್ಥಮಾಡಿಕೊಳ್ಳುವ ಪ್ರಯತ್ನ ಇಲ್ಲಿ ಧ್ವನಿತವಾಗಿದೆ. ಸಮಾಜದ ನಿರ್ಬಂಧಗಳು ಮತ್ತು ನಾಗರಿಕತೆಗೂ ಹುಡುಗನ ನೈಜ ಪರಿಶುದ್ಧತೆಗೂ ನಡುವಣ ಘರ್ಷಣೆ ಇಲ್ಲಿ ಮಾನವೀಯವಾಗಿ ಚಿತ್ರಿತವಾಗಿದೆ. ಹೆನ್ರಿ ಜೇಮ್ಸ್‌ನ ದಿ ಅಂಬ್ಯಾಸಡರ್ಸ್‌ನಲ್ಲಿ(1903) ಒಂದು ಮನಸ್ಸನ್ನು ನಾಟಕೀಯವಾಗಿ ತೋರಿಸುವ ವಿಶಿಷ್ಟ ಕಲೆ ಇದೆ. ಸ್ಟ್ರೆದರ್ ಎಂಬ ಪಾತ್ರದ ಮನಸ್ಸಿನ ಕಥೆಯನ್ನು ಕಾದಂಬರಿಕಾರನೂ ಹೇಳುವುದಿಲ್ಲ, ಯಾವ ಪಾತ್ರವೂ ಹೇಳುವುದಿಲ್ಲ. ಆದರೂ ಮನಸ್ಸಿನ ಬಾಗಿಲುಗಳನ್ನೂ ಕಿಟಕಿಗಳನ್ನೂ ತೆರೆದಿಟ್ಟಂತೆ ಭಾಸವಾಗುತ್ತದೆ. ಬಹು ಜಟಿಲವಾದ ನಿರೂಪಣಾ ಕಲೆಯನ್ನು ಇಲ್ಲಿ ಕಾಣಬಹುದು. ವಿಲಿಯಂ ಫಾಕ್‌ನರ್‌ನ ದಿ ಸೌಂಡ್ ಅಂಡ್ ದಿ ಫ್ಯೂರಿ (1929) ಮೇಲ್ಮೈಯಲ್ಲಿ ವಾಸ್ತವಿಕತೆಯನ್ನು ವಿವರಗಳ ನಿಷ್ಕೃಷ್ಟತೆಯನ್ನೂ ಉಳಿಸಿಕೊಂಡು ಘಟನೆಗಳನ್ನೂ ಪಾತ್ರಗಳನ್ನೂ ಸಂಭಾಷಣೆಯನ್ನೂ ಕೃತಿಯಲ್ಲಿ ಅಂತರ್ಗತವಾದ ವಿನ್ಯಾಸ ಒಂದಕ್ಕೆ ಹೊಂದಿಸಿ, ಪ್ರಾರಂಭದಲ್ಲಿ ಓದುಗರಿಗೆ ದಿಗ್ಭ್ರಮೆಯನ್ನು ಉಂಟುಮಾಡಿತು.ಇದರ ಮೊದಲ ಮೂರು ಭಾಗಗಳಲ್ಲಿ ಪ್ರಜ್ಞಾಪ್ರವಾಹದ ರೀತಿಯಲ್ಲಿ ಮೂರು ಪಾತ್ರಗಳ ಸ್ವಗತಭಾಷಣಗಳಿವೆ. ಘಟನೆಗಳನ್ನು ಮೂರು ದೃಷ್ಟಿಗಳಿಂದ ಕಾಣುವುದು ಓದುಗರಿಗೆ ಸಾಧ್ಯವಾಗುತ್ತದೆ. ಒಕ್ಕಲಹೋಮದಲ್ಲಿ ನಿರಾಶ್ರಿತರಾಗಿ, ಸುಖ ಕಾಣುವ ಹಂಬಲದಿಂದ ಕ್ಯಾಲಿಫೋರ್ನಿಯಕ್ಕೆ ಬರುವ ಕುಟುಂಬದ ದಾರುಣ ಕಥೆಯನ್ನು ಸ್ಟೀನ್ ಬೆಕ್‌ನ ಗ್ರೇಪ್ಸ್ ಆಫ್ ರಾತ್ (1936) ಹೇಳುತ್ತದೆ. ಕಠೋರ ಕೃಷಿ ವ್ಯವಸ್ಥೆ ಕುಟುಂಬವನ್ನು ಶೋಷಿಸುವ ಬಗೆಗಳ ಇಲ್ಲಿನ ಚಿತ್ರ ಇಡೀ ದೇಶದಲ್ಲಿಯೇ ಉದ್ವೇಗದ ಅಲೆಗಳನ್ನೆಬ್ಬಿಸಿತು. ಅರ್ನೆಸ್ಟ್ ಹೆಮಿಂಗ್‌ವೆ ರಚಿಸಿರುವ ಫರ್ ಹೂಮ್ ದಿ ಬಿಲ್ ಟೋಲ್ಸ್ (1960) ಸ್ಪೇನಿನ ಅಂತರ್ಯುದ್ಧದಲ್ಲಿ ನಾಡಿನ ಹೊರಗಿನ ಫ್ಯಾಸಿಸ್ಟ್ ಮತ್ತಿತರ ಪಂಥಗಳಿಂದಲೂ ಒಳಗಿನ ಪ್ರತಿಗಾಮಿ ಗುಂಪುಗಳಿಂದಲೂ ಜನತೆಗಾದ ದ್ರೋಹವನ್ನು ಚಿತ್ರಿಸುತ್ತದೆ. ರಷ್ಯದ ತುರ್ಜ್ಯನೆಫ್‌ನ ಫಾಸರ್ಸ್ ಅಂಡ್ ಸನ್ಸ್ (1862) ಕಾದಂಬರಿಯ ಶೂನ್ಯ (ನಿಹಿಲಿಸ್ಟ್) ದೃಷ್ಟಿಯ ಪ್ರತೀಕ ಬಜರಫ್. ಸಮಕಾಲೀನ ಜೀವನದ ಸಂಪೂರ್ಣ ಸತ್ಯ ಮತ್ತು ವಾಸ್ತವಿಕತೆಗಳನ್ನು ಕಾಲ್ಪನಿಕ ಕಥೆಯಲ್ಲಿ ಮೂರ್ತಗೊಳಿಸುವ ಅದ್ಭುತ ಪ್ರಯತ್ನ ಇದು. ಇಡೀ ಜಗತ್ತಿನ ಕಾದಂಬರಿಗಳಲ್ಲಿ ಅತ್ಯುನ್ನತ ಶಿಖರಗಳಲ್ಲಿ ಒಂದು ಎನಿಸಿರುವುದು ಟಾಲ್ಸ್‌ಟಾಯ್ ಬರೆದ ವಾರ್ ಅಂಡ್ ಪೀಸ್ (1862–69). ಯುರೋಪಿನ ಚರಿತ್ರೆಯಲ್ಲಿ ಬಹುಮುಖ್ಯವಾದ ಒಂದು ದಶಕದ (1805–14) ಅವಧಿಯಲ್ಲಿ ಇಲ್ಲಿನ ಕ್ರಿಯೆ ನಡೆಯುತ್ತದೆ. ಸಾರ್ವಭೌಮರಿಂದ ಹಿಡಿದು ಸೈನಿಕರು ಮತ್ತು ರೈತರವರೆಗೆ ಇಲ್ಲಿ ಹಲವು ವರ್ಗಗಳ ವ್ಯಕ್ತಿಗಳ ಅಂತಸ್ತುಗಳ ಮತ್ತು ಸ್ವಭಾವಗಳ ಪಾತ್ರಗಳ ವಿಶಿಷ್ಟ ಜಗತ್ತು ರೂಪುಗೊಂಡಿದೆ. ವಾಸ್ತವಿಕ ಜಗತ್ತಿನ ಜೀವನದ ವೈವಿಧ್ಯ ಶ್ರೀಮಂತಿಕೆ ಮತ್ತು ಸಹಜತೆಗಳನ್ನು ಹೀಗೆ ಪುನರ್ ಸೃಷ್ಟಿಸಿದ ಕಾದಂಬರಿ ಮತ್ತೊಂದಿಲ್ಲ. ಭವ್ಯ ಸಮರ ದೃಶ್ಯಗಳಿದ್ದರೂ ಸಮರದ ವಸ್ತುವಿಗಿಂತ ಐದು ಕುಟುಂಬಗಳ ಜೀವನ ಕಥೆ ಇಲ್ಲಿ ಮುಖ್ಯವಾಗುತ್ತದೆ. ತನಗಾಗಿ ಬದುಕಬೇಕೇ ಇತರರಿಗಾಗಿ ಬದುಕಬೇಕೇ– ಈ ಎರಡು ದೃಷ್ಟಿಗಳ ಘರ್ಷಣೆ ಕಾದಂಬರಿಯಲ್ಲಿ ಅಂತರ್ಗತವಾಗಿದೆ. ದಾಸ್ತಯೆವ್‌ಸ್ಕಿಯ ಬ್ರದರ್ಸ್ ಕರಮಝಾವ್ (1879–80) ಮೂವರು ಸೋದರರ ಕಥೆ. ರಷ್ಯದ ಜೀವನವನ್ನು ಕುರಿತು ತನ್ನ ಭಾವನೆಗಳನ್ನೆಲ್ಲ ಈ ಅಚ್ಚಿನಲ್ಲಿ ಕಾದಂಬರಿಕಾರ ಎರಕ ಹೊಯ್ದಿದ್ದಾನೆ. ಗೊಂದಲಗೊಂಡ ಪ್ರಬಲ ರಾಗಗಳು ಇಲ್ಲಿ ಅಗ್ನಿಪರ್ವತದ ಶಿಲಾರಸದಂತೆ ಸುರಿಯುತ್ತವೆ. ಓದುಗನ ಮನಸ್ಸನ್ನು ಆವರಿಸಿ ಸ್ವಾಧೀನ ಮಾಡಿರುವ ಒಂದೇ ಒಂದು ಭವ್ಯ ಪ್ರೇಮಕಥೆ ಎಂದರೆ ಮೈಕೇಲ್ ಷೊಲೊಕಾವ್‌ನ ಅಂಡ್ ಕ್ವಯಟ್‌ಫ್ಲೋಸ್ ದಿ ಡಾನ್ (1928–40). ಡಾನ್ ಪ್ರದೇಶದ ಕಾಸ್ಸಾಕರ ಜೀವನದಲ್ಲಿ ದುರಂತ ದಶಕವೊಂದನ್ನು (1912–22) ಚಿತ್ರಿಸುವ ಕೃತಿ ಇದು. ಮರೆಯಲಾಗದ ಪಾತ್ರ ಸೃಷ್ಟಿಯನ್ನು ಇಲ್ಲಿ ಕಾಣಬಹುದು. ಪ್ಯಾಸ್ತರ್‌ನಾಕ್‌ನ ಡಾಕ್ಟರ್ ಜಿವಾಗೊ (ಇಂಗ್ಲಿಷ್ ಭಾಷಾಂತರ: 1958) ಒಬ್ಬ ಮನುಷ್ಯನ ಜೀವನ, ಆತ ಉಳಿಸಿಹೋದ ಸ್ಮರಣೆ–ಇವನ್ನು ನಲವತ್ತು ವರ್ಷಗಳ ಅವಧಿಯ ಕ್ರಿಯೆಯಲ್ಲಿ ಚಿತ್ರಿಸುತ್ತದೆ. ಆಧುನಿಕ ರಷ್ಯದ 40 ವರ್ಷಗಳ ಚರಿತ್ರೆಯ ಹೋರಾಟ, ಭರವಸೆ, ಕಷ್ಟ, ನಿರಾಸೆ–ಎಲ್ಲವನ್ನು ಕಾದಂಬರಿ ಅಡಕಮಾಡಿಕೊಂಡಿದೆ. ಭೀಕರವೂ ವಿಷಣ್ಣವೂ ಆದ ಘಟನೆಗಳ ಮಧ್ಯೆ ಜೀವನದ ಧೀರ ಸ್ವೀಕಾರವನ್ನು ಇಲ್ಲಿ ಕಾಣಬಹುದು. ಮಾನವನ ಸ್ವಾತಂತ್ರ್ಯಪ್ರೇಮದ ನೆಲದಲ್ಲಿ ಬೇರುಬಿಟ್ಟ ನೋವು, ಪ್ರೀತಿಗಳನ್ನು ರೂಪಿಸಿದ ಕೃತಿ ಇದು. ಜರ್ಮನಿಯ ಥಾಮಸ್ ಮ್ಯಾನ್‌ನ ದಿ ಮ್ಯಾಜಿಕ್ ಮೌಂಟನ್ (1925) ಕಾದಂಬರಿಯ ನಾಯಕ ಕಾಲ, ದೇಶಗಳ ಅರಿವೆ ಮಾಸಿಹೋಗುವ; ಸಮಕಾಲೀನ ಜಗತ್ತಿನ ಘರ್ಷಣೆ, ಚಲನೆ, ಗೊಂದಲಗಳಿಂದ ದೂರವಾದ ಆವರಣದಲ್ಲಿ ಅಂದರೆ ಕ್ಷಯರೋಗದ ಆಸ್ಪತ್ರೆಯಲ್ಲಿ ಇರುವಂಥವ. ಈ ಕಾದಂಬರಿಯಲ್ಲಿ ಹಲವು ಅರ್ಥಗಳ ಪದರಗಳು ಒಂದಕ್ಕೊಂದು ಅಂಟಿಕೊಂಡಿವೆ. ಏಕಾಂತಜೀವನ ಮತ್ತು ಸಾವುಗಳ ಆಕರ್ಷಣೆಗಳನ್ನು ಗೆದ್ದು ತನ್ನ ಜನರ ಸೇವೆಗೆ ಮುಡಿಪಾಗಲು ನಿಶ್ಚಯಿಸುವ ನಾಯಕ ತನ್ನ ವ್ಯಕ್ತಿತ್ವದಿಂದ ರಾಷ್ಟ್ರೀಯತೆಯನ್ನು ಮೀರಿದ ಆಧುನಿಕ ಮಾನವನ ಪ್ರತಿನಿಧಿಯಾಗುತ್ತಾನೆ. ಇದೇ ದೇಶದ ಕಾಫ್ಕನದಿ ಕ್ಯಾಸಲ್‌ಗೆ (1926) ವಿಮರ್ಶಕರು ವಿವಿಧ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಹಳ್ಳಿಯಲ್ಲಿ ಕೆಲಸಮಾಡಲು

ಬರುವ ತರುಣನೊಬ್ಬ ಪ್ರಾಸಾದದೊಳಗಿನ ಅದೃಶ್ಯ ಅಧಿಕಾರಿಗಳಿಂದ ನಿರ್ದೇಶನ ಪಡೆಯುತ್ತಾನೆ ; ತನ್ನ ಅಧಿಕಾರವನ್ನು ಸ್ಥಾಪಿಸಲು ಹಲವು ಘರ್ಷಣೆಗಳಲ್ಲಿ ಸಿಕ್ಕಿಕೊಳ್ಳುತ್ತಾನೆ; ಜಗತ್ತಿನಲ್ಲಿ ಕಾಲದ ಚಲನೆ ನಿಂತುಹೋದಂತೆ ಭಾಸವಾಗುತ್ತದೆ ; ದೃಶ್ಯಗಳೆಲ್ಲ ಕತ್ತಲೆಯಲ್ಲಿ ಸಾಗುತ್ತವೆ. ಜಗತ್ತಿನಲ್ಲಿ ಮನುಷ್ಯನ ಏಕಾಕಿತನದ ಅನುಭವಕ್ಕೆ ಮರೆಯಲಾಗದ ಅಭಿವ್ಯಕ್ತಿ ಇಲ್ಲಿ ದೊರೆಯುತ್ತದೆ.

ಜಗತ್ತಿನ ಪ್ರಸಿದ್ಧ ಕಾದಂಬರಿಗಳಲ್ಲಿ ಮೇಲಿನವು ಕೆಲವು. ಒಬ್ಬನೇ ಓದುಗನಿಗೆ ಟಾಲ್‍ಸ್ಟಾಯ್‍ಯ ವಾರ್ ಆಂಡ್ ಅಂಡ್ ಪೀಸ್, ಆನ ಕರಿನೀನ, ದಾಸ್ತಯೆವ್‍ಸ್ಕಿಯ ಕ್ರೈಮ್ ಅಂಡ್ ಪನಿಷ್‍ಮೆಂಟ್, ಕರಮಜ಼ಾವ್ ಸಹೋದರರು–ಇಂಥ ಕೃತಿಗಳಲ್ಲಿ ಒಂದನ್ನು ಆರಿಸಿ ಇನ್ನೊಂದನ್ನು ಬಿಡುವುದು ಕಷ್ಟವಾದೀತು. ಕಾದಂಬರಿಯ ಜಗತ್ತು ದಿನದಿನವೂ ಗೊಂದಲಗೊಳ್ಳುತ್ತಿದೆ. ಹಾಗೆಯೇ ಹೊಸ ಧೀರ ಪ್ರಯೋಗಗಳಿಂದಲೂ ಬೆರಗುಪಡಿಸುವ ಸಾಧನೆಗಳಿಂದಲೂ ಶ್ರೀಮಂತಗೊಳ್ಳುತ್ತಿದೆ ; ವಿಸ್ತಾರವಾದ ಹರಹನ್ನು ಒಡಗಿಸಿಕೊಡುವ ಈ ಮಾಧ್ಯಮ ಬಾಳಿಗೆ ಜಟಿಲವೂ ಸೂಕ್ಷ್ಮವೂ ಆದ ಪ್ರತಿಕ್ರಿಯೆಯ ಅಭಿವ್ಯಕ್ತಿಗೆ ಬಹು ಸಮರ್ಥವಾಗಿ ಹೊಂದಿಕೊಂಡಿದೆ ; ಜೀವನ ಜಟಿಲವಾದಂತೆ ಹೊಸ ಪ್ರಯೋಗಗಳಿಗೂ ಹೊಸ ಸಾಧನೆಗಳಿಗೂ ತೆರೆದು ನಿಂತಿದೆ.

ಕನ್ನಡದಲ್ಲಿ ವರ್ಷ ನೂರು ದಾಟಿದಲ್ಲಿ ಕಾದಂಬರಿ ಕ್ಷೇತ್ರ ವಿಪುಲವಾಗಿ ಬೆಳೆದಿದೆ. ಮರಾಠಿ, ಬಂಗಾಳಿ, ತಮಿಳು, ತೆಲುಗು, ಇಂಗ್ಲಿಷ್ ಮೊದಲಾದ ಭಾಷೆಗಳಿಂದ ಉತ್ತಮ ಕಾದಂಬರಿಗಳನ್ನು ಅನುವಾದ ಮಾಡಿಕೊಳ್ಳಲಾಗಿದೆ. ಅಲ್ಲದೆ ಪ್ರಸಿದ್ಧ ಲೇಖಕರಾದ ಶಿವರಾಮ ಕಾರಂತ, ಕುವೆಂಪು, ರಾವಬಹದ್ದೂರ, ಅನಕೃ, ತರಾಸು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ವಿ. ಅಯ್ಯರ್, ಬಿ. ಪುಟ್ಟಸ್ವಾಮಯ್ಯ–ಮೊದಲಾದವರು ಈ ಕ್ಷೇತ್ರದಲ್ಲಿ ವಿಪುಲವಾಗಿ ಕೆಲಸಮಾಡಿದ್ದಾರೆ. ಆ ವಿವರಗಳಿಗೆ **(ನೋಡಿ– ಕನ್ನಡದಲ್ಲಿ ಕಾದಂಬರಿ–ಸಾಹಿತ್ಯ)** (ಎಲ್.ಎಸ್.ಎಸ್.)

**ಕಾದಂಬರಿ ಸಂಗ್ರಹ :** ಚಾಮರಾಜನಗರದಿಂದ ಪ್ರಕಟವಾಗುತ್ತಿದ್ದ ಮಾಸ ಪತ್ರಿಕೆ. ಸಿ. ವೆಂಕಟರಮಣಶಾಸ್ತ್ರಿಗಳ ಸಂಪಾದಕತ್ವದಲ್ಲಿ 1912ರಲ್ಲಿ ಪ್ರಾರಂಭವಾಯಿತು ಸಂಪಾದಕರ ಅನಾನುಕೂಲತೆಯಿಂದಾಗಿ ನಿಂತು ನಿಂತು, ಮತ್ತೆ ಮತ್ತೆ ಪ್ರಾರಂಭವಾಗುತ್ತಿತ್ತು. ಆದರೂ ಅದು ನಡೆದ ಅವಧಿಯಲ್ಲಿ ಸುಮಾರು 60 ಗ್ರಂಥಗಳು ಈ ಪತ್ರಿಕೆಯ ಮೂಲಕ ಬೆಳಕು ಕಂಡುವು.

ಪತ್ರಿಕೆಯ ಹೆಸರು ಕಾದಂಬರಿ ಸಂಗ್ರಹವೆಂದಿದ್ದರೂ ಇದು ಕಾದಂಬರಿಗಳ ಜೊತೆಗೆ ಉಪನ್ಯಾಸ, ಗದ್ಯಪದ್ಯಾತ್ಮಕ ಲೇಖನ, ಮನೋರಂಜಕ ವಿಚಾರ, ನೈತಿಕ ಧಾರ್ಮಿಕ ವಿಷಯಕ ಲೇಖನ, ಕಥೆ, ಜೀವನ ಚರಿತ್ರೆ ಮುಂತಾದವನ್ನೂ ಪ್ರಕಟಿಸುತ್ತಿತ್ತು. ಸಂಪಾದಕರು ತಮ್ಮ ಸಂಚಾರವೊಂದರ ಬಗ್ಗೆ ಪ್ರಕಟಿಸಿರುವ ಸ್ವಾರಸ್ಯಕರವಾದ ವರದಿ ಆ ಕಾಲದ ಸಾರಿಗೆ ಸಂಪರ್ಕದ ವಿಶೇಷ ಅನುಭವಗಳಿಂದ ಕೂಡಿದ್ದಾಗಿದೆ. ವಿವಿಧ ವಿಷಯಪರಿಪೂರಿತವಾಗಿಯೂ ಲೋಕಾನಂದದಾಯಕವಾಗಿಯೂ ಇರುವ ಮನೋರಂಜಕ ಮಾಸಪತ್ರಿಕೆ ಎಂದು ಸಂಪಾದಕರೇ ತಮ್ಮ ಪತ್ರಿಕೆಯ ಬಗ್ಗೆ ಹೇಳಿಕೊಂಡಿದ್ದಾರೆ. ಭಾಷಾಸೇವೆಯ ಸಲುವಾಗಿಯೇ ಈ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿರುವುದಾಗಿ ಇನ್ನೊಂದೆಡೆಯಲ್ಲಿ ಹೇಳಲಾಗಿದೆ. ಪುಟಸಂಖ್ಯೆಯನ್ನು ಒಟ್ಟಿನಲ್ಲಿ ಅನುಕ್ರಮವಾಗಿ ಪ್ರಕಟಿಸದೆ ಆಯಾ ಗ್ರಂಥಗಳ ಪುಟಸಂಖ್ಯೆಗಳನ್ನು ಅವಿಚ್ಛಿನ್ನವಾಗಿ ಸಂಚಿಕೆಯಿಂದ ಸಂಚಿಕೆಗೆ ಮುಂದುವರಿಸಿಕೊಂಡು ಹೋಗಲಾಗಿದೆ.

ರಾಯಲ್ ಆಕಾರದ 36 ಪುಟಗಳ ಸಂಚಿಕೆಯಾಗಿ ಇದು ಪ್ರಕಟವಾಗುತ್ತಿತ್ತು. ವಾರ್ಷಿಕ ಚಂದಾ: 1–8–0 ರೂ. ; ಪೋಷಕರಿಗೆ–5 ರೂ. 1938 ರವರೆಗೆ ಪ್ರಕಟವಾಯಿತು. ಮುಂದೆ 'ಆರ್ಯಧರ್ಮ ಸಂಗ್ರಹ' ಎಂದು ಹೆಸರು ಬದಲಿಸಿತು. (ಎಸ್.ವಿ.ಪಿ.ಎ.)

**ಕಾದಾಟದ ಆಯಾಸ :** ಕಾದಾಟದ ದಿವಸಗಳಲ್ಲಿ ನಿರಂತರ ದೈಹಿಕ ಹಾಗೂ ಮಾನಸಿಕ ಚಟುವಟಿಕೆಗಳ ಪರಿಣಾಮವಾಗಿ ಸ್ನಾಯುಗಳ ಮತ್ತು ನರವ್ಯೂಹದ ಕಾರ್ಯಚಟುವಟಿಕೆಯಲ್ಲಿ ತೋರಿಬರುವ ಬಲಹೀನತೆ. ಈ ಎರಡೂ ತೆರನಾದ ಆಯಾಸಗಳು ಒಟ್ಟಾಗಿ ಇಲ್ಲವೆ ಬೇರೆಬೇರೆಯಾಗಿ ಕಂಡುಬಂದು ಕೆಲಸ ಮಾಡುವ ಶಕ್ತಿಯನ್ನು ಕುಂದಿಸಬಲ್ಲವು. ದೈಹಿಕಶ್ರಮದ ವೇಳೆಯಲ್ಲಿ ಉತ್ಪಾದನೆಗೊಳ್ಳುವ ವಿಷವಸ್ತುಗಳು ವಿಸರ್ಜನೆಗೊಳ್ಳದೆ ಸ್ನಾಯುಗಳಲ್ಲಿ ಉಳಿಯುತ್ತವೆ. ಜೊತೆಗೆ ಶಕ್ತಿದಾಯಕ ವಸ್ತುಗಳ ಪ್ರಮಾಣ ಅವುಗಳಲ್ಲಿ ಕಡಿಮೆಯಾಗುತ್ತದೆ. ಇದರ ಫಲವಾಗಿ ಸ್ನಾಯು, ಉಸಿರಾಟ ಮತ್ತು ರಕ್ತಪರಿಚಲನೆಯಲ್ಲಿ ವೈಪರೀತ್ಯಗಳು ತೋರಿಬರುತ್ತವೆ. ಆಮ್ಲಜನಕದ ಒತ್ತಡ ಕಡಿಮೆಯಾಗುವುದರ ಪರಿಣಾಮವಾಗಿ ಕೇಂದ್ರ ನರಮಂಡಲದ ಚಟುವಟಿಕೆ ಕಡಿಮೆಯಾಗುತ್ತದೆ ; ದೇಹಾಯಾಸ ಹೆಚ್ಚಾಗುತ್ತದೆ. ಆಮ್ಲಜನಕದ ಅಭಾವದಿಂದ ಸ್ನಾಯುಗಳಲ್ಲಿಯ ಜೀವಿತಕಣಗಳ ರಾಸಾಯನಿಕ ಕ್ರಿಯೆಗೆ ಅಡ್ಡಿಯಾಗಿ ಲ್ಯಾಕ್ಟಿಕ್ ಆಮ್ಲ ಸಿದ್ಧಗೊಳ್ಳುತ್ತದೆ. ಅದರ ಸಂಗ್ರಹದ ಫಲವಾಗಿ ಸ್ನಾಯುಗಳ ಸಂಕುಚನಕ್ಕೆ ಅಡ್ಡಿಯುಂಟಾಗುತ್ತದೆ. ಲ್ಯಾಕ್ಟಿಕ್ ಆಮ್ಲದ ಪ್ರಮಾಣ ರಕ್ತದಲ್ಲಿ ಹೆಚ್ಚುತ್ತದೆ. ಇದರಿಂದಾಗಿ ಕೆಲಸಮಾಡುವ ಶಕ್ತಿ ಕಡಿಮೆಯಾಗುತ್ತದೆ. ನಡೆದಾಡುವ ಶಕ್ತಿ ಕುಂದಿ ದೈಹಿಕವಾಗಿ ಆಯಾಸ ತೋರಿಬರುತ್ತದೆ. ಯುಕ್ತ ವಿಶ್ರಾಂತಿ, ಪೌಷ್ಟಿಕಾಹಾರ ಸೇವನೆಯಿಂದ ಈ ಆಯಾಸ ಪರಿಹಾರವಾಗಬಲ್ಲುದು. (ಪಿ.ಎಸ್.ಎಸ್.)

**ಕಾದಿಟ್ಟ ಸೈನ್ಯ :** ಪೌರವೃತ್ತಿಯಲ್ಲಿರುವ ಅಸೈನಿಕ ನಾಗರಿಕರಿಗೆ ಶಾಂತಿ ಕಾಲದಲ್ಲಿ ಯುಕ್ತ ಸೈನಿಕ ಶಿಕ್ಷಣ ನೀಡಿ ಅವರನ್ನು ಸ್ವಾಧೀನದಲ್ಲಿಟ್ಟುಕೊಂಡು ಸಮರ ಕಾಲದಲ್ಲಿ ಕರೆಯಿಸಿಕೊಳ್ಳುವ ವ್ಯವಸ್ಥೆ (ರಿಸರ್ವ್). ಕ್ರಮವಾದ ಸೈನ್ಯಗಳಿಂದ ಬೇರೆಯಾದ ಕೈಗಾವಲುಪಡೆ ಇದು. ಈ ದಳದವರಿಗೆ ಯುದ್ಧಕಾರ್ಯದ ಹೊಣೆಗಾರಿಕೆ ಯುದ್ಧವೊದಗಿದಾಗ ಮಾತ್ರ; ಉಳಿದ ಕಾಲದಲ್ಲಿಲ್ಲ. ದೇಶರಕ್ಷಣೆಗೆ ಯುದ್ಧಸಮಯದಲ್ಲಿ ಶಾಂತಿಕಾಲಕ್ಕಿಂತಲೂ ಬಹಳ ಹೆಚ್ಚು ಸೇನೆಗಳು ಅಗತ್ಯ. ಇಡೀ ಸಮರಸೈನ್ಯಕ್ಕೆ ವಿಪರೀತ ಖರ್ಚಾಗುವುದರಿಂದ ಅದನ್ನು ಶಾಂತಿಕಾಲದಲ್ಲಿಟ್ಟುಕೊಳ್ಳುವುದು ಅಸಾಧ್ಯ. ಯುದ್ಧವೊದಗಿದಾಗ ಜರೂರಿಗಾಗಿ ಸೈನ್ಯವನ್ನು ಹೆಚ್ಚಿಸಲು ತಕ್ಕ ತರಬೇತಿಯಿಲ್ಲದ ಹೊಸಬರನ್ನು ಸೇರಿಸಿಕೊಂಡರೆ ಹಲವಾರು ಅವ್ಯವಸ್ಥೆಗಳಾಗುವುವು. ಆದ್ದರಿಂದ ಕಾದಿಟ್ಟ ಸೈನ್ಯದ ಉಪಯುಕ್ತತೆ ಸ್ಪಷ್ಟವಾಗಿದೆ.

ಸಮರಸಜ್ಜಿತ ಸೈನ್ಯಗಳಲ್ಲಿ ಭೂಸೇನೆ, ನೌಕಾದಳ, ವಾಯುಪಡೆಗಳೆಂಬ ಮೂರು ಪ್ರತ್ಯೇಕ ಅಂಗಗಳಿರುವುದರಿಂದ ಅವುಗಳಿಗೆ ತಕ್ಕಂತೆ ಮೂರು ಬೇರೆ ಬೇರೆ ಕಾದಿಟ್ಟ ಶಾಖೆಗಳಿವೆ ; ಪ್ರತ್ಯೇಕ ನಮೂನೆಗಳ ಉಡುಪುಗಳಿವೆ. ಅವಕ್ಕೆ ಶಾಂತಿಕಾಲದಲ್ಲಿ ಮುಂಗೊತ್ತಿನ ರುಸುಮು (ರೀಟೇನಿಂಗ್ ಫೀ), ಶಿಕ್ಷಣ ಮತ್ತು ಯುದ್ಧಕಾಲಗಳಲ್ಲಿ ಪೂರ್ತಿ ಸಂಬಳ, ಭತ್ಯ ಪಡೆಯುತ್ತವೆ. ಸೇವಾವಧಿ, ಶಿಕ್ಷಣವಿಧಾನ, ಕಾರ್ಯಕ್ರಮಗಳು ಮುಂತಾದುವು ಒಂದೊಂದು ರಾಷ್ಟ್ರದಲ್ಲಿ ಒಂದೊಂದು ವಿಧ. ಉದಾಹರಣೆಗೆ ಡಾಮಿನಿಕನ್ ಗಣರಾಜ್ಯ ಮತ್ತು ಭಾರತದಲ್ಲಿ ಕಾದಿಟ್ಟ ಸೈನ್ಯದ ಸದಸ್ಯತ್ವ ಐಚ್ಛಿಕ.

ಕಾದಿಟ್ಟ ಫೌಜಿನಲ್ಲಿ ಕಮಿಷನ್ಡ್ ಮತ್ತು ನಾನ್ ಕಮಿಷನ್ಡ್ ಅಧಿಕಾರಿಗಳು, ಸೈನಿಕರು ಎಂಬ ಎರಡು ವರ್ಗಗಳಿವೆ. ಅವೆರಡಕ್ಕೂ ಯುಕ್ತ ವಿದ್ಯಾರ್ಹತೆ ಮತ್ತು ಇತರ ಯೋಗ್ಯತೆಗಳಿರುವ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿ ಆಯುತ್ತದೆ. ಕ್ರಮವಾದ ಸೇನೆಯಿಂದ ನಿವೃತ್ತರಾಗಿ ವಿಶ್ರಾಂತಿವೇತನ ಪಡೆದ ಅಧಿಕಾರಿಗಳೂ ಅಲ್ಪಾವಧಿ ಕಮಿಷನಿನಲ್ಲಿ ಐದು ವರ್ಷ ಉದ್ಯೋಗಮಾಡಿದರೂ ಸೈನ್ಯಕ್ಕೆ ಮೀಸಲಾಗಿರಲು ಅವಕಾಶವಿದೆ. ಅಮೆರಿಕದ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ರಿಸರ್ವ್ ಆಫೀಸರ್ ಟ್ರೇನಿಂಗ್ ಕೋರ್ ಎಂಬ ಶಿಕ್ಷಣದಲ್ಲಿ ಪದವೀಧರರಾದವರು ಅಧಿಕಾರಿಗಳಾಗಬಹುದು.

ಬೇರೆ ಬೇರೆ ಕಸಬುಗಳಿಗೆ ಆಯ್ಕೆಯಾದ ಅಧಿಕಾರಿಗಳಿಗೂ ಸೈನಿಕರಿಗೂ ಭಾರತದಲ್ಲಿ ಬೇರೆ ಬೇರೆ ಊರುಗಳಲ್ಲಿ ತರಬೇತಿ ಕೇಂದ್ರಗಳಿವೆ : ಎಲೆಕ್ಟ್ರಿಕ್ ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗಿಗೆ ಸಿಕಂದರಾಬಾದ್; ರೀಮೌಂಟ್ ಮತ್ತು ಪಶುವೈದ್ಯಕ್ಕೆ ಮೀರತ್ ; ಸೇನೆಯ ಪೊಲೀಸಿಗೆ ಫೈಜ಼ಾಬಾದ್ ; ಸುದ್ದಿಗಾರರಿಗೆ ಪುಣೆ; ಪಯನೀರ್ ಪಟಾಲಂಗೆ ನೈನಿತಾಲ್ ; ವಾಸ್ತುಕಲೆಗೆ (ಸ್ಯಾಪರ್ಸ್ ಅಂಡ್ ಮೈನರ್ಸ್) ರೂರ್ಕಿ ಮತ್ತು ಕರ್ಕಿ ; ಕೃಷಿಕಸಬಿಗೆ ಮೀರತ್; ಪ್ರೌಢ ವೈದ್ಯಕ್ಕೆ ಪುಣೆ ಇವಲ್ಲದೆ ಸೈನಿಕ ಸರ್ವೆ, ಸಿಗ್ನಲ್, ಗೋಲಂದಾಜು ಇಲಾಖೆ, ಫಿರಂಗಿ ಮತ್ತು ಯುದ್ಧೋಪಕರಣಗಳ ಖಾತೆ, ಸಾಗಣೆ ಪಟಾಲಂ ಮುಂತಾದುವುಗಳಿಗೂ ಶಿಕ್ಷಣ ಕೇಂದ್ರಗಳಿವೆ. ಶಿಕ್ಷಣ ಕಾಲವನ್ನು ಕಾದಿಟ್ಟವರ ಅನುಕೂಲ, ಕೃಷಿಕಾಲ, ಪೌರ ಉದ್ಯೋಗಗಳಿಗೆ ಅಡಚಣೆಯಾಗದಂತೆ ಏರ್ಪಡಿಸಿದೆ. ಕೆಲವು ವಿಶಿಷ್ಟ ಕಲಾವೃತ್ತಿಗಳನ್ನು ಉದ್ಯೋಗಿಗಳು ತಾವಿರುವ ಪೌರ ಇಲಾಖೆಗಳಲ್ಲೇ ತೃಪ್ತಿಕರವಾಗಿ ಮಾಡುತ್ತಿದ್ದಾರೆಂದು ಅವರ ಮೇಲಿನವರು ಪ್ರತಿವರ್ಷವೂ ಯೋಗ್ಯತಾಪತ್ರವನ್ನು ಕಳುಹಿಸಿದರೆ ಅಂಥವರನ್ನು ಸೈನಿಕ ಕೇಂದ್ರ ಶಿಕ್ಷಣದಿಂದ ಮುಕ್ತಮಾಡಲಾಗುತ್ತದೆ. ಎಲ್ಲರಿಗೂ ಪ್ರತಿವರ್ಷವೂ ಒಂದು ತಿಂಗಳ ಶಿಬಿರ ಶಿಕ್ಷಣ ಕಡ್ಡಾಯ. ಈ ಕೇಂದ್ರಗಳಿಗೆ ಉಚಿತವಾಗಿ ಪ್ರಯಾಣಮಾಡಲು ಸೌಕರ್ಯಗಳಿವೆ.

ಕಾದಿಟ್ಟ ಸಮುದ್ರಸೇನೆಯವರಲ್ಲಿ ಎರಡು ವಿಧದವರಿದ್ದಾರೆ: ಸಮುದ್ರ ಜೀವನವೇ ಕಸಬಾಗಿರುವವರು ಮತ್ತು ಸಮುದ್ರವೃತ್ತಿಯಿಲ್ಲದಿದ್ದರೂ ನೌಕಾವಿಹಾರಿಗಳಾಗಿ ಸಮುದ್ರ ಮತ್ತು ನೌಕೆಗೆ ಸಂಬಂಧಪಟ್ಟ ಕ್ರೀಡಾನೌಕೆ ಅಥವಾ ಅಂಥ ಉದ್ಯೋಗಗಳಲ್ಲಿ ತೀವ್ರ ಅಭಿರುಚಿಯುಳ್ಳವರು. ಎರಡನೆಯ ವರ್ಗಕ್ಕೆ ಭಾರತದ ಕಾದಿಟ್ಟ ಸ್ವಯಂಸೇವಕ ನೌಕಾಬಲ (ನೇವಲ್ ವಾಲ್ಯುಂಟಿಯರ್ ರಿಸರ್ವ್) ಎಂದು ಹೆಸರು. ನಾವಿಕರ ಹಡಗುಪಡೆಗಳ ಉದ್ಯೋಗಸ್ಥರಿಗೆ ನೌಕಾಬಲದ ಮೀಸಲು ಹುದ್ದೆದಾರರೆಂದು (ಫ್ಲೀಟ್ ರಿಸರ್ವಿಸ್ಟ್ಸ್) ಹೆಸರು. ಹತ್ತು ವರ್ಷಕಾಲ ನಾವಿಕೋದ್ಯೋಗದಲ್ಲಿದ್ದವರನ್ನು ಈ ಕಾದಿಟ್ಟ ದಳಕ್ಕೆ ಹತ್ತು ವರ್ಷಗಳವರೆಗೆ ವರ್ಗಾಯಿಸುತ್ತಾರೆ. ನೌಕಾಶಿಲ್ಪಶಾಸ್ತ್ರದಲ್ಲಿ ಪದವೀಧರರಾಗಿ ಹಡಗು ನಿರ್ಮಾಣದಲ್ಲಿ ಅನುಭವವಿರುವವರು ನೌಕಾ ಎಂಜಿನಿಯರಾಗಲು ಸಾಧ್ಯ. ಅವರಿಗೆ ಹಡಗುಕಟ್ಟೆಗಳಲ್ಲಿ ಶಿಕ್ಷಣ ದೊರೆಯುವ ವ್ಯವಸ್ಥೆಯಿದೆ.

ಅಮೆರಿಕದ ಕಾದಿಟ್ಟ ನೌಕಾದಳದಲ್ಲಿ ಮೂರು ಬಗೆಗಳಿವೆ : ಬೇಕಾದಾಗ ತತ್‍ಕ್ಷಣ ಸಿಕ್ಕುವಂತಿರುವ ಸೇನೆ, ಕೈಗಾವಲಾಗಿರುವ ಸೇನೆ ಮತ್ತು ನಾವಿಕೋದ್ಯೋಗದಿಂದ ವಿಶ್ರಾಂತಿ ಪಡೆದು ಯುದ್ಧವೊದಗಿದಾಗ ಕರೆಯಿಸಿಕೊಳ್ಳಬಹುದಾದ ನೌಕಾಪಡೆಯ ಮೀಸಲು

ಅಧಿಕಾರಿಗಳು. ಮೊದಲನೆಯ ವರ್ಗ ಯುದ್ಧ, ರಾಷ್ಟ್ರೀಯ ಅನಾಹುತ, ಭೂಕಂಪ ಪ್ರವಾಹಗಳಂಥ ನೈಸರ್ಗಿಕ ಪ್ರಮಾದಗಳಾದಾಗ ಆಜ್ಞೆ ಬಂದೊಡನೆ ಹೋಗಲು ಸನ್ನದ್ಧವಾಗಿರಬೇಕು. ಎರಡನೆಯದಕ್ಕೆ ಯುದ್ಧಕಾಲದಲ್ಲಿ ಮಾತ್ರ ಹಾಜರಾಗುವ ಹೊಣೆಗಾರಿಕೆ. ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ ಅಮೆರಿಕದ ಕಾದಿಟ್ಟ ನೌಕಾಬಲದಲ್ಲಿ ಮೂರು ಲಕ್ಷ ಅಧಿಕಾರಿಗಳೂ 25 ಲಕ್ಷ ಇತರ ಉದ್ಯೋಗಸ್ಥರೂ ಇದ್ದರು.

ವಾಯುಪಡೆಯ ಕಾದಿಟ್ಟ ದಳಗಳಲ್ಲಿ ಮೂರು ಬಗೆಗಳಿವೆ : ವಾಯುಸೈನ್ಯದಲ್ಲಿ ಉದ್ಯೋಗಮಾಡಿ ಬಿಡುಗಡೆ ಅಥವಾ ವಿಶ್ರಾಂತಿಪಡೆದ ಮೀಸಲು ಅಧಿಕಾರಿಗಳು ; ವೈಮಾನಿಕ ಕಲೆಯಲ್ಲಿ ತರಬೇತಿ ಪಡೆದು ವಾಯುರಕ್ಷಣೆಗೆ ಮೀಸಲಾದ ವಿಮಾನ ತಂತ್ರಜ್ಞರು ಮತ್ತು ವಿಮಾನಗಾಮಿಗಳು; ಮತ್ತು ಸಹಾಯಕ ವಾಯು ಸೈನ್ಯದವರು. ಈ ಸೇನಾಂಗದ ನಾನಾವೃತ್ತಿಗಳಿಗೆಲ್ಲ ಶಿಕ್ಷಣಕೇಂದ್ರಗಳಿವೆ. (ಎಂ.ಜಿ.ಕೆ.ಎಂ.)

**ಕಾನಡಾ ಧುರೀಣ :** ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಕಟವಾಗುತ್ತಿದ್ದ ಒಂದು ವಾರಪತ್ರಿಕೆ. 1918 ರಲ್ಲಿ ಸ್ಥಾಪಿತ. ಈ ಪತ್ರಿಕೆಯನ್ನೂ ಇದರ ಮುದ್ರಣ ಪ್ರಕಾಶನಗಳಿಗಾಗಿ ಶ್ರೀರಾಮಕೃಷ್ಣ ಪ್ರಿಂಟಿಂಗ್ ಪ್ರೆಸ್ಸನ್ನೂ ಏಕಕಾಲದಲ್ಲಿ ಒಂದು ಖಾಸಗಿ ಪರಿಮಿತ ಸಹಕಾರಿ ಸಂಸ್ಥೆಯಾಗಿ ಆರಂಭಿಸಲಾಯಿತು. ವ್ಯವಸ್ಥಾಪಕರಾಗಿದ್ದವರು ಗಣಪತಿರಾವ್ ಮಾಸೂರ್‌ಕರ್. ಇವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಚಳವಳಿಯ ಆದ್ಯ ಪ್ರವರ್ತಕರಲ್ಲಿ ಒಬ್ಬರು. ಅರಣ್ಯ ಸಂಕಷ್ಟ ನಿವಾರಣೆಗಾಗಿ ಹೋರಾಡಿದವರು. ಇವರು ನಿವೃತ್ತಿ ಹೊಂದಿದ ಅನಂತರ ಸದಾಶಿವರಾವ್ ಮಾಸೂರ್‌ಕರ್ ಪತ್ರಿಕೆಯ ಅಂತ್ಯದವರೆಗೂ ವ್ಯವಸ್ಥಾಪಕರಾಗಿದ್ದರು. ಈ ಪತ್ರಿಕೆಯ ಆರಂಭದ ಮೂರು ವರ್ಷ ಕಾಲ ಅದರಲ್ಲಿ ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಲೇಖನಗಳು ಪ್ರಕಟವಾಗುತ್ತಿದ್ದುವು. ರಾಮರಾವ್ ಎಸ್. ನಾಡಕರ್ಣಿ, ರಾಮರಾವ್ ಭಟಕಳಕರ, ಎಸ್. ಎಸ್. ಶಾಸ್ತ್ರಿ ಮತ್ತು ಜಿ. ಅಣ್ಣಾಜಿರಾವ್ ಅನುಕ್ರಮವಾಗಿ ಅದರ ಸಂಪಾದಕರಾಗಿದ್ದರು. ಮುಂದೆ ಗಣೇಶ ರಾಮಯಾಜಿಯವರು ಪತ್ರಿಕೆ ನಿಲ್ಲುವ ತನಕ ದೀರ್ಘ ಕಾಲ ಅದರ ಸಂಪಾದಕರಾಗಿದ್ದರು. ಅಖಿಲ ಕರ್ಣಾಟಕದಲ್ಲಿ ಪ್ರಚಾರ–ಪ್ರತಿಷ್ಠೆ ದೊರೆತು ಅದು ಕರ್ಣಾಟಕ ಧುರೀಣವಾಗಿ ಪರಿವರ್ತನೆಗೊಂಡಿತು. ಅದು ಪರಿಷ್ಕೃತ ಕನ್ನಡ ಶೈಲಿ, ದೊಡ್ಡ ಆಕಾರದ ರಚನೆ ಮತ್ತು ವಿಷಯಪ್ರೌಢಿಮೆಗಳಿಂದ ಜನಾದರಣೀಯವಾಗಿತ್ತು. ಉಗ್ರ ರಾಷ್ಟ್ರೀಯ ಸಂಪಾದಕೀಯ ಪ್ರಕಟಣೆಗಾಗಿ 1934ರ ಸುಮಾರಿಗೆ ಯಾಜಿ ಅವರಿಗೆ ಬ್ರಿಟಿಷ್ ಸರ್ಕಾರ ಒಂದು ತಿಂಗಳ ಜೈಲುಶಿಕ್ಷೆ ವಿಧಿಸಿತು. ಅನಂತರ ಕರ್ಣಾಟಕ ಧುರೀಣ ಮತ್ತೆ ಹೊರಡಲಿಲ್ಲ. ಯಾಜಿ ಅವರು ನಿವೃತ್ತರಾಗಿ ಚಿಕ್ಕಮಗಳೂರಿಗೆ ಹೋಗಿ ನೆಲೆಸಿದರು.

ಧುರೀಣ ಸಾಪ್ತಾಹಿಕ 1928ರ ಸುಮಾರಿಗೆ ಒಂದು ಸರ್ವಾಂಗ ಸುಂದರ ವಿಶೇಷಾಂಕವನ್ನು ಹೊರಡಿಸಿತ್ತು. 1952–54ರಲ್ಲಿ ಕರ್ಣಾಟಕ ಧುರೀಣ ಹೊಸ ವ್ಯವಸ್ಥಾಪನೆಯ ಅಡಿಯಲ್ಲಿ ಕೆಲಕಾಲ ಮತ್ತೆ ಪ್ರಕಟವಾಗುತ್ತಿತ್ತು. ಆಗ ಜಿ. ಆರ್. ಹೆಗ್ಗಡೆ ಮತ್ತು ರಾಮಚಂದ್ರ ವಾಲಗಳ್ಳಿ ಇವರು ಅನುಕ್ರಮವಾಗಿ ಅದರ ಸಂಪಾದಕರಾಗಿದ್ದರು. (ಜಿ.ಕೆ.ಎ.)

**ಕಾನಡಾ ವೃತ್ತ :** ಉತ್ತರ ಕನ್ನಡ ಜಿಲ್ಲೆಯ ಒಂದು ವಾರಪತ್ರಿಕೆ. ಆರಂಭವಾದ್ದು 1916ರಲ್ಲಿ, ಕುಮಟದಿಂದ. ಸ್ಟಾರ್ ಆಫ್ ಕೆನರ ಮುದ್ರಣಾಲಯದಿಂದ ಮುದ್ರಿತ ಮತ್ತು ಪ್ರಕಾಶಿತ. ಆರಂಭದ ಅಚ್ಚು–ಆಕಾರಗಳು ಬದಲಾಗಿಲ್ಲದಿರುವುದು ಇದರ ವೈಶಿಷ್ಟ್ಯ. ಮೊದಲು

ಪತ್ರಿಕೆಯ ಮುಖಪುಟದ ಮೇಲುಭಾಗ

ಇದರಲ್ಲಿ ಕನ್ನಡ. ಮರಾಠಿ ಮತ್ತು ಇಂಗ್ಲಿಷ್‌ಗಳಲ್ಲಿ ಲೇಖನಗಳು ಪ್ರಕಟವಾಗುತ್ತಿದ್ದುವು. ಆರಂಭದಿಂದ 1926ರ ವರೆಗೆ ಕೃಷ್ಣರಾವ್ ಕೇಶವರಾವ್ ಶೆಣೈ ಇದರ ಸಂಪಾದಕರಾಗಿದ್ದರು. ಅನಂತರ ಅವರ ಮಗ ಪಾಂಡುರಂಗ ಕೃಷ್ಣ ಶಾನಭಾಗರು ಸಂಪಾದಕತ್ವ ವಹಿಸಿಕೊಂಡರು. ಆರಂಭದ ಬರೆಹಗಾರರಲ್ಲಿ (1916–1922) ಕೆಲವರು ನಾರಾಯಣ ಚಂದಾವರಕರ, ಎಸ್. ಜಿ. ವರ್ಟಿ, ವಿ. ಎಂ. ದುಭಾಷಿ, ಎಮ್.ಎನ್. ಕಾಮತ್ ಮತ್ತು ವಿ. ಪಿ. ಪ್ರಭು. ಅನಂತರದ ಬರೆಹಗಾರರಲ್ಲಿ ಎನ್. ಜೆ. ಶಾನಭಾಗ, ಹ. ರಾ. ಮಾಂಜರೇಕರ, ಕೇಶವ ಯು. ಭಟ್ಟ ಇವರ ಲೇಖನಗಳು ಇತ್ತೀಚಿನವರೆಗೂ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು.

ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿ ಈ ಪತ್ರಿಕೆ ಬ್ರಿಟಿಷ್ ಸರ್ಕಾರದ ಉಗ್ರ ವಿರೋಧಕ್ಕೂ ದಮನಕ್ಕೂ ಬಲಿಯಾಯಿತು. 1931, 1932 ಮತ್ತು 1934ರಲ್ಲಿ ಅನುಕ್ರಮವಾಗಿ ರೂ. 200, ರೂ. 100 ಮತ್ತು ರೂ. 100 ದಂಡಗಳನ್ನು ವಿಧಿಸಲಾಯಿತು. ಆದರೆ 1931–34ರಲ್ಲಿ ಉಚ್ಚ ನ್ಯಾಯಾಲಯದಲ್ಲಿಯ ಅಪೀಲಿನಲ್ಲಿ ಪತ್ರಿಕೆಗೆ ಗೆಲುವಾಯಿತು. ಸರ್ಕಾರಿ ವಕ್ರದೃಷ್ಟಿಯಿಂದಾಗಿ ಈ ನಡುವೆ 1931ರಲ್ಲಿ ನಾಲ್ಕು ತಿಂಗಳು ಮತ್ತು 1933–34ರಲ್ಲಿ 1 ವರ್ಷ 8 ತಿಂಗಳು ಪತ್ರಿಕೆಗಳನ್ನು ಸ್ಥಗಿತವಿಡಬೇಕಾಯಿತು. ಜಿಲ್ಲೆಯ ರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ಮಹತ್ತ್ವದ ಪಾತ್ರ ನಿರ್ವಹಿಸಿದ ಈ ಪತ್ರಿಕೆ ಜಿಲ್ಲೆಯ ಆಡಳಿತ ಹಾಗೂ ಸಾರ್ವಜನಿಕ ಜೀವನದ ಎಲ್ಲ ಅನ್ಯಾಯ ದುರ್ವ್ಯವಹಾರಗಳ ಬಗೆಗೆ–ನಿರ್ಭಯ ಮತ್ತು ನಿರ್ದಾಕ್ಷಿಣ್ಯವಾದ ಲೇಖನಗಳನ್ನು ಪ್ರಕಟಿಸಿದೆ. (ಜಿ.ಕೆ.ಎ.)

**ಕಾನಾಜ಼ಾವಾ :** ಜಪಾನಿನ ಒಂದು ಐತಿಹಾಸಿಕ ನಗರ, ಕೈಗಾರಿಕಾ ಕೇಂದ್ರ, ಇಷಿಕಾವ ಪ್ರಾಂತ್ಯದ ಮುಖ್ಯಪಟ್ಟಣ. ಜಪಾನಿನ ಮುಖ್ಯ ದ್ವೀಪವಾದ ಹಾನ್ಷೂವಿನ ಮಧ್ಯಪ್ರದೇಶದಲ್ಲಿ ಜಪಾನ್ ಸಮುದ್ರತೀರದಲ್ಲಿದೆ. ವಿಸ್ತೀರ್ಣ: 467.77 ಚ.ಕಿಮೀ ಜನಸಂಖ್ಯೆ 462.478 (2010) 16ನೆಯ ಶತಮಾನದಲ್ಲಿ ಟೋಯೊಟೊಮಿ ಹಿಡೆಯೊಷಿ ಇದನ್ನೂ ಕಾಗಾ ಪ್ರಾಂತ್ಯವನ್ನೂ ಆಗ ಅತ್ಯಂತ ಶ್ರೀಮಂತನಾಗಿದ್ದ ಮೇಡ ಮನೆತನಕ್ಕೆ ಕೊಟ್ಟ. ಕಾನಾಜ಼ಾವಾನಗರ ಸುಮಾರು 300 ವರ್ಷಗಳ ಕಾಲ ಆ ಮನೆತನದವರ ಅಧೀನದಲ್ಲೇ ಇತ್ತು. ಆ ಕಾಲದಲ್ಲಿ ಕಟ್ಟಿದ ಕೋಟೆಕೊತ್ತಲಗಳ, ಮಹಾದ್ವಾರಗಳ, ಕಟ್ಟಡಗಳ ಪಳೆಯುಳಿಕೆಗಳನ್ನು ಈಗಲೂ ಕಾಣಬಹುದು. ಇಡೀ ಜಪಾನಿನಲ್ಲೇ ಅತ್ಯಂತ ಸುಂದರವೆನಿಸಿರುವ ಭೂದೃಶ್ಯ (ಲ್ಯಾಂಡ್‌ಸ್ಕೇಪ್) ಉಪವನವೊಂದು ಕಾನಾಜ಼ಾವಾದಲ್ಲಿದೆ.

ಭೋಗವಸ್ತುಗಳ ಅನೇಕ ಕೈಗಾರಿಕೆಗಳು ಇಲ್ಲಿ ಬೆಳೆದಿವೆ. ಇವು ಮೇಡ ಮನೆತನದವರ ಆಡಳಿತ ಕಾಲದಲ್ಲಿ ಮೆರುಗು ವಸ್ತುಗಳ ಮತ್ತು ಪಿಂಗಾಣಿ ಸರಕುಗಳ ಕೈಗಾರಿಕೆಗಳು ಪ್ರವರ್ಧಮಾನಕ್ಕೆ ಬಂದುವು. ಹಿಂದಿನಿಂದ ಬೆಳೆದು ಬಂದ ರೇಷ್ಮೆ ವಸ್ತ್ರಗಳ ಜೊತೆಗೆ ಹತ್ತಿ, ಉಣ್ಣೆ, ರೇಯಾನ್ ಮತ್ತು ನೈಲಾನ್ ಬಟ್ಟೆಗಳೂ ಈಚೆಗೆ ಹೆಚ್ಚಾಗಿ ತಯಾರಾಗುತ್ತವೆ. (ಆರ್.ಡಿ.ಆರ್.)

**ಕಾನೂನಿನ ಅಜ್ಞಾನ ಮತ್ತು ವಸ್ತುಸ್ಥಿತಿಯ ಅಜ್ಞಾನ :** ಭಾರತೀಯ, ಇಂಗ್ಲಿಷ್ ಮತ್ತು ಅಮೆರಿಕನ್ ನ್ಯಾಯದ ಪ್ರಕಾರ ಅಜ್ಞಾನ ಎರಡು ಬಗೆ : ಕಾನೂನಿನ ಅಜ್ಞಾನ (ಇಗ್ನೊರನ್ಸ್ ಆಫ್ ಲಾ) ಮತ್ತು ವಸ್ತುಸ್ಥಿತಿಯ ಅಜ್ಞಾನ (ಇಗ್ನೊರನ್ಸ್ ಆಫ್ ಫ್ಯಾಕ್ಟ್). ಪಾಶ್ಚಾತ್ಯ ನ್ಯಾಯಕ್ಕೆ ಮೂಲಭೂತವಾದ ರೋಮನ್ ನ್ಯಾಯದಲ್ಲೂ ಈ ವ್ಯತ್ಯಾಸ ಮಾಡಲಾಗಿದೆ.

ಒಂದು ದೇಶದ ಪ್ರಜೆ ಆ ದೇಶದ ಕಾನೂನನ್ನು ಅರಿತಿರುವನೆಂದು ನ್ಯಾಯಾಲಯ ಭಾವಿಸುತ್ತದೆ. ಕಾನೂನನ್ನುಲ್ಲಂಘಿಸಿದಾತ ನ್ಯಾಯಾಲಯದಿಂದ ದಂಡಾರ್ಹ. ಒಂದು ಕೃತ್ಯ ಮಾಡಿದ ವ್ಯಕ್ತಿ ಕಾನೂನು ದೃಷ್ಟಿಯಲ್ಲಿ ಅದರ ಪರಿಣಾಮವೇನೆಂಬುದರ ಬಗ್ಗೆ ತಪ್ಪುತಿಳಿವಳಿಕೆ ಹೊಂದಿದ್ದರೆ ಅಥವಾ ತಪ್ಪು ತೀರ್ಮಾನಕ್ಕೆ ಬಂದಿದ್ದರೆ ಅದು ಕಾನೂನಿನ ಅಜ್ಞಾನ ಅಥವಾ ತಪ್ಪು ತಿಳಿವಳಿಕೆ. ಕ್ರಿಮಿನಲ್ ಅಪರಾಧದ ಆಪಾದನೆಗೆ ಒಳಗಾದ ವ್ಯಕ್ತಿ ತನ್ನ ಕೃತ್ಯ ದಂಡಾರ್ಹ ಅಪರಾಧವೆಂಬುದನ್ನು ಅರಿತಿರಲಿಲ್ಲವೆಂಬುದಾಗಿ ಪ್ರತಿವಾದ ಹೂಡುವ ಹಾಗಿಲ್ಲ. ಕಾನೂನನ್ನು ಅರಿತೋ ಅರಿಯದೆಯೋ ಮಾಡಿ ಈ ಬಗೆಯ ಕೃತ್ಯವೆಲ್ಲ ಶಿಕ್ಷಾರ್ಹವೇ. ಕಾನೂನನ್ನು ಅರಿತಿರಲಿಲ್ಲವೆಂದ ಮಾತ್ರಕ್ಕೆ ಅದರ ಉಲ್ಲಂಘನೆ ಕ್ಷಮಾರ್ಹವಲ್ಲ. ಕಾನೂನಿನ ಅಜ್ಞಾನ ಯಾರಿಗೂ ಕ್ಷಮೆ ನೀಡುವುದಿಲ್ಲ ಎಂಬುದು ಸೂತ್ರ. ದಂಡಾರ್ಹ ಅಪರಾಧಗಳಿಗೆಲ್ಲ ಈ ಸೂತ್ರ ಸಂಪೂರ್ಣವಾಗಿ ಅನ್ವಯವಾಗುತ್ತದೆ. ಒಂದು ದೇಶದ ಕಾನೂನನ್ನು ಅರಿತಿರಬೇಕಾದ್ದಿಲ್ಲದ ವಿದೇಶೀಯನಿಗೆ ಕೂಡ ಆತನ ಅಜ್ಞಾನದ ಕಾರಣದಿಂದಾಗಿ ಕ್ಷಮೆ ಅಥವಾ ವಿನಾಯಿತಿ ದೊರುಕವುದಿಲ್ಲ. ಇದು ಬ್ಯಾರೊನೆಟ್ (1852) ತೀರ್ಪಿನಲ್ಲಿ ಸಿದ್ಧವಾಗಿದೆ. ಇಬ್ಬರು ಫ್ರೆಂಚರು ಇಂಗ್ಲೆಂಡಿನಲ್ಲಿ ಕತ್ತಿವರಸೆಯ ಕಾಳಗ ನಡೆಸಿದಾಗ ಅವರಲ್ಲೊಬ್ಬ ಮಡಿದ. ಅವನ ಕೊಲೆ ಮಾಡಿದ ಆಪಾದನೆ ಹೊರಿಸಿ ಇನ್ನೊಬ್ಬನ ಮೇಲೆ ಮೊಕದ್ದಮೆ ಹೂಡಲಾಯಿತು. ಕತ್ತಿವರಸೆಯಲ್ಲಿ ಕೊಂದರೆ ಅದು ತನ್ನ ದೇಶದಲ್ಲಿ ಅಪರಾಧವಲ್ಲವೆಂದೂ ಇಂಗ್ಲೆಂಡಿನಲ್ಲಿ ಅದನ್ನು ಕೊಲೆಯೆಂದು ಪರಿಗಣಿಸಲಾಗುವುದೆಂಬುದು ತನಗೆ ಅರಿವಿರಲಿಲ್ಲವೆಂದೂ ಆ ವ್ಯಕ್ತಿ ವಾದಿಸಿದ. ಆದರೆ ನ್ಯಾಯಾಲಯ ಅದನ್ನು ತಳ್ಳಿಹಾಕಿತು.

ಒಂದು ಕೃತ್ಯ ದಂಡಾರ್ಹ ಅಪರಾಧವೆಂದು ಮಾಡುವ ಕಾಯಿದೆಯೊಂದು ಆಗ ತಾನೇ ಜಾರಿಗೆ ಬಂದಿದ್ದು. ಅದರ ಬಗ್ಗೆ ತಿಳಿವಳಿಕೆ ಇನ್ನೂ ತಲಪುವುದು ಅಸಾಧ್ಯವೆನಿಸುವಂಥ ಸ್ಥಳದಲ್ಲಿ ಮತ್ತು ಸಮಯದಲ್ಲಿ ಆ ಅಪಕೃತ್ಯ ನಡೆದಿದ್ದರೆ ಕೂಡ ಆಪಾದಿತನ ಅಜ್ಞಾನ ಮಾಫಿಗೆ ಕಾರಣವಾಗಲಾರದು. ಅವನು ದಂಡನೆಯನ್ನು ತಪ್ಪಿಸಿಕೊಳ್ಳಲಾರ.

ಪ್ರತಿಯೊಬ್ಬನೂ ಕಾನೂನು ಕಟ್ಟಳೆಗಳನ್ನರಿತಿರಬೇಕು. ಅವನೊಬ್ಬ ಜಂಗಮ ವಿಶ್ವಕೋಶವಾಗಬೇಕು–ಎಂಬುದು ನ್ಯಾಯಾಲಯದ ಉದ್ದೇಶವಲ್ಲ. ಕಾನೂನಿನ ಅಜ್ಞಾನ

ಕ್ಷಮಾರ್ಹವೆಂದು ನ್ಯಾಯಾಲಯ ಒಪ್ಪಿದ ಪಕ್ಷದಲ್ಲಿ ಸಮಾಜದ ತಳಹದಿಯಾದ ನ್ಯಾಯಪರಿಪಾಲನೆಯೇ ಅಸಾಧ್ಯವಾಗುತ್ತದೆ. ಆಪಾದಿತರು ಕಾನೂನಿನ ಅಜ್ಞಾನದ ಸೋಗಿನಿಂದ ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದು ಸಾಧ್ಯ. ಅಪರಾಧಿಗೆ ಕಾನೂನಿನ ಅರಿವು ಇತ್ತೆಂದು ರುಜುವಾತು ಮಾಡುವುದು ಅನೇಕ ಸಾರಿ ಅಸಾಧ್ಯವಾಗುತ್ತದೆ. ಆದ್ದರಿಂದಲೇ ಕಾನೂನಿನ ಅಜ್ಞಾನದಿಂದಾಗಿ ಆಪಾದಿತನಿಗೆ ಬಿಡುಗಡೆ ಅಥವಾ ವಿನಾಯಿತಿಯಿಲ್ಲವೆಂದೇ ಎಲ್ಲ ನ್ಯಾಯಶಾಸ್ತ್ರಗಳೂ ಹೇಳುತ್ತವೆ. ನ್ಯಾಯ ವಿತರಣೆಯಲ್ಲಿ ಈ ತತ್ತ್ವ ಅತ್ಯಂತ ಅವಶ್ಯವಾದ್ದು. ತೀವ್ರ ದಂಡಾರ್ಹ ಅಪರಾಧಗಳಲ್ಲಿ ಆಪಾದಿತನಿಗೆ ಸಾಮಾನ್ಯವಾಗಿ ತನ್ನ ಕೃತ್ಯ ದಂಡಾರ್ಹ ಅಪರಾಧವೆನಿಸದಿದ್ದರೂ ಅದು ಅಕೃತ್ಯವೆಂಬುದರ ಅರಿವಂತೂ ಸಾಮಾನ್ಯವಾಗಿ ಇದ್ದೇ ಇರುತ್ತದೆ.

ಕಾಯಿದೆ, ನಿಯಮಗಳು (ರೂಲ್ಸ್), ಉಪನಿಯಮಗಳು (ಬೈ-ಲಾಸ್), ನಿಬಂಧನೆಗಳು (ರೆಗ್ಯುಲೇಷನ್ಸ್) ಇವೆಲ್ಲವೂ ಕಾನೂನು ಎಂಬ ಶಬ್ದದ ವ್ಯಾಪ್ತಿಗೆ ಒಳಪಡುತ್ತವೆ. ವಿಧಾನ ಮಂಡಲ ಅಥವಾ ಸಂಸತ್ತು ಕಾಯಿದೆಗಳನ್ನೂ ಸರ್ಕಾರ ನಿಯಮಗಳನ್ನೂ ವಿಶ್ವವಿದ್ಯಾನಿಲಯ ಮುಂತಾದ ಸಾರ್ವಜನಿಕ ಸಂಸ್ಥೆಗಳು ನಿಬಂಧನೆಗಳನ್ನೂ ರಚಿಸುತ್ತವೆ. ಪ್ರಜೆಗಳಿಗೆ ಅನುಕೂಲವಾಗುವಂತೆ ಇವನ್ನು ಪ್ರಚುರಪಡಿಸುವುದು ಆಯಾ ರಚನಾಂಗಗಳ ಕರ್ತವ್ಯ. ಯುಕ್ತಾಯುಕ್ತ ಪರಿಜ್ಞಾನವುಳ್ಳ, ವಯಸ್ಸಿಗೆ ಬಂದ ಪ್ರತಿಯೊಬ್ಬ ಪ್ರಜೆಯೂ ಅದನ್ನು ಅರಿಯುವುದು ಕರ್ತವ್ಯ. ಹಾಗೆ ಅರಿಯದೆ ಮಾಡಿದ ಉಲ್ಲಂಘನೆ ಶಿಕ್ಷಾರ್ಹ.

ಸಿವಿಲ್ ವಿಚಾರಗಳಲ್ಲಿ ಕಾನೂನಿನ ಅಜ್ಞಾನ ಸಾಮಾನ್ಯವಾಗಿ ಅಸಂಬದ್ಧವಾದ್ದು. ಕೊಟ್ಟ ಮಾತು ಬಂಧಕ ಕರಾರಾಗಿ ಪರಿಣಮಿಸಬಹುದೆಂಬ ಸಂದರ್ಭದಲ್ಲಿ, ತಾನು ವಚನ ನೀಡುತ್ತಿರುವುದರ ಅರಿವಿಲ್ಲದೆಯೇ ಅದನ್ನು ನೀಡಿದನೆಂಬ ಕಾರಣದಿಂದ ಯಾವ ವ್ಯಕ್ತಿಯೂ ತನ್ನ ವಚನವನ್ನು ನಿರಾಕರಿಸುವುದು ಸಾಧ್ಯವಿಲ್ಲ.

ವಸ್ತುಸ್ಥಿತಿಯ ಅಥವಾ ವಾಸ್ತವಾಂಶದ ಅಜ್ಞಾನದ ಫಲವಾದ ಅಪರಾಧಗಳನ್ನು ಕಾನೂನು ಕ್ಷಮಿಸುತ್ತದೆ. ಕೃತ್ಯಕ್ಕೆ ಅಥವಾ ವ್ಯವಹಾರಕ್ಕೆ ಸಾರಭೂತವಾದ (ಮಟೀರಿಯಲ್) ವಾಸ್ತವಾಂಶ ಅಥವಾ ವಸ್ತುಸ್ಥಿತಿಯ ಬಗ್ಗೆ ಅರಿವಿಲ್ಲದೆಯೇ ಒಂದು ಕೃತ್ಯ ಸಂಭವಿಸಿರಬೇಕು. ಅಜ್ಞಾನ ಕಾನೂನನ್ನು ಕುರಿತದ್ದಾಗಿರಬಾರದು. ಒಬ್ಬ ವ್ಯಕ್ತಿ ಕಾನೂನುಬದ್ಧ ಕೃತ್ಯವೊಂದನ್ನು ಮಾಡುವುದಾಗಿ ಉದ್ದೇಶಿಸಿ ಕಾನೂನುಬಾಹಿರವಾದ್ದನ್ನು ಮಾಡಿದ ಪಕ್ಷದಲ್ಲಿ ಅವನ ಉದ್ದೇಶವನ್ನೂ ಕೃತ್ಯವನ್ನೂ ಪ್ರತ್ಯೇಕವಾಗಿ ಪರಿಗಣಿಸಬೇಕಾಗುತ್ತದೆ. ಒಂದು ಕೃತ್ಯ ಸ್ವತಃ ತಪ್ಪಾದ್ದೆಂಬುದು ಸ್ಪಷ್ಟವಿದ್ದು, ಅದು ಯಾವಾಗ ಅಪರಾಧವಾಗುವುದೆಂಬುದನ್ನು ಕುರಿತ ವಾಸ್ತವಾಂಶಗಳ ಬಗ್ಗೆ ತಪ್ಪು ತಿಳಿವಳಿಕೆ ಅಥವಾ ಅಜ್ಞಾನದಿಂದಾಗಿ ಆ ಕೃತ್ಯವನ್ನೆಸಗಿದರೆ ಆತ ದಂಡಾರ್ಹ ಅಪರಾಧದ ತಪ್ಪಿಗೆ ಒಳಗಾಗುತ್ತಾನೆ. ಇನ್ನೊಬ್ಬನ ಸರಕುಗಳನ್ನು ತನ್ನವೆಂದೇ ಭಾವಿಸಿ ತೆಗೆದುಕೊಂಡು ಹೋದ ವ್ಯಕ್ತಿ ಕಳವಿನ ತಪ್ಪಿಗೆ ಒಳಗಾಗುವುದಿಲ್ಲ. ಏಕೆಂದರೆ ಇಲ್ಲಿ ಕದಿಯುವುದು ಅವನ ಉದ್ದೇಶವಲ್ಲ. ಅಪರಾಧದ ಉದ್ದೇಶಕ್ಕೂ ವಸ್ತುಸ್ಥಿತಿಯ ಅಜ್ಞಾನಕ್ಕೂ ಸಂಬಂಧ ಏರ್ಪಡದ್ದರಿಂದ ಆತ ನಿರಪರಾಧಿಯೆಂದು ಪ್ರತಿವಾದ ಹೂಡಬಹುದು. ಸಿವಿಲ್ ಮೊಕದ್ದಮೆಗಳಲ್ಲಿ ಕೂಡ ವಸ್ತುಸ್ಥಿತಿಯ ಅಜ್ಞಾನದಿಂದಾಗಿ ಒಂದು ವ್ಯಕ್ತಿಗೆ ಹೊಣೆಯಿಂದ ವಿಮೋಚನೆ ಲಭಿಸುವುದು ಸಾಧ್ಯ. ವಿಮಾ ಕಂಪನಿಯ ಪಾಲಿಸಿಯೊಂದು ವ್ಯಪಗತವಾಗಿದ್ದುದು (ಲ್ಯಾಪ್ಸ್) ಗೊತ್ತಿಲ್ಲದೆ ಆ ಕಂಪನಿ ವಿಮಾ ಮೊಬಲಗನ್ನು ಪಾಲಿಸಿದಾರನಿಗೆ ಕೊಟ್ಟಿದ್ದ ಪಕ್ಷದಲ್ಲಿ ಇದು ವಸ್ತುಸ್ಥಿತಿಯ ಅಜ್ಞಾನದಿಂದ ಮಾಡಿದ ಕೃತ್ಯ. ಕಂಪನಿಗೆ ಆ ಹಣವನ್ನು ವಾಪಸು ಪಡೆಯಲು ಹಕ್ಕುಂಟು.

ವಸ್ತುಸ್ಥಿತಿಯ ಬಗ್ಗೆ ಅಜ್ಞಾನ ರುಜುವಾತಾದರೆ ನ್ಯಾಯಾಲಯ ಕ್ಷಮೆ ತೋರುತ್ತದೆಯೆಂಬುದನ್ನು ಸಿದ್ಧಪಡಿಸುವ ಅನೇಕ ತೀರ್ಪುಗಳಿವೆ. ಗೋಪಾಲಿ ಕಲ್ಲಯ್ಯ (1923, 26 ಬಾಂಬೆ ಎಲ್.ಆರ್.138) ಮೊಕದ್ದಮೆಯ ತೀರ್ಪು ಒಂದು ಉದಾಹರಣೆ. ಒಬ್ಬನನ್ನು ಕೈದು ಮಾಡಲು ಪೋಲೀಸ್ ಅಧಿಕಾರಿಯೊಬ್ಬನಿಗೆ ವಾರಂಟ್ ಕೊಡಲಾಗಿತ್ತು. ಆತ ಸದುದ್ದೇಶದಿಂದ ಆಪಾದಿತನ ಬಗ್ಗೆ ವಿಚಾರಿಸಿ, ತಪ್ಪಾಗಿ ಇನ್ನೊಬ್ಬನನ್ನು ಕೈದು ಮಾಡಿದ. ಆತ ಅಧಿಕಾರವಿಲ್ಲದೆ ತನ್ನನ್ನು ಬಂಧಿಸಿದ್ದಾನೆಂದು ಬಂಧಿತ ವ್ಯಕ್ತಿ ಮೊಕದ್ದಮೆ ಹೂಡಿದ. ವಸ್ತುಸ್ಥಿತಿಯ ಅಜ್ಞಾನವಿದ್ದು, ಸದುದ್ದೇಶದಿಂದ ಪೋಲೀಸ್ ಅಧಿಕಾರಿ ಆ ಇನ್ನೊಬ್ಬನನ್ನು ಕೈದು ಮಾಡಿರುವುದು ಶಿಕ್ಷಾರ್ಹವಲ್ಲವೆಂದು ನ್ಯಾಯಾಲಯ ತೀರ್ಪು ನೀಡಿತು. ವಸ್ತುಸ್ಥಿತಿಯ ಅಜ್ಞಾನ ಕ್ಷಮಾರ್ಹವಾಗಬೇಕಾದರೆ, ಹಾಗೆಂದು ಸಿದ್ಧಪಡಿಸಬೇಕಾದರೆ ಅದು ಒಳಸಂಚಿರದ, ಸದುದ್ದೇಶದಿಂದೊಡಗೂಡಿದ ದುರದೃಷ್ಟ ಸಂದರ್ಭವಾಗಿರಬೇಕು.

ಪತಿ ದೇಶಾಂತರ ಹೋಗಿ ಏಳು ವರ್ಷಗಳು ಕಳೆದರೂ ಆತ ಬಾರದಿದ್ದುದರಿಂದ ಅವನು ಮಡಿದಿರಬೇಕೆಂದು ಭಾವಿಸಿದ ಪತ್ನಿ ಎರಡನೆಯ ವಿವಾಹವಾದಳು. ಆದರೆ ಪತಿ ಮಡಿದಿರಲಿಲ್ಲ. ವಸ್ತುಸ್ಥಿತಿಯ ಅರಿವು ಆಕೆಗೆ ಇರಲಿಲ್ಲ. ಆದ್ದರಿಂದ ಅವಳ ವಿವಾಹ ಎರಡನೆಯ ವಿವಾಹ ಅಪರಾಧವಾಗುವುದಿಲ್ಲವೆಂದು ನ್ಯಾಯಾಲಯ ತೀರ್ಪಿತ್ತಿತು (ಟಾಲ್‌ಸಲ್ 1889, 23 ಕೂ. ಬಿ.ಡಿ. 168).

ಪ್ರಿನ್ಸ್ (1875. ಎಲ್.ಆರ್. 2 ಸಿ.ಸಿ.ಆರ್. 154) ಮೊಕದ್ದಮೆಯ ತೀರ್ಪು ಈ ರೀತಿ ಇದೆ : ಅವಿವಾಹಿತ ಕನ್ಯೆಯೊಬ್ಬಳನ್ನು ಅಪಹರಿಸಿಕೊಂಡು ಹೋದ ಆಪಾದನೆಗೆ ಒಳಗಾಗಿದ್ದವನೊಬ್ಬ, ತನಗೆ ಆಕೆಯ ವಯಸ್ಸು 18ನ್ನು ಮೀರಿದಂತೆ ತೋರಿತೆಂದೂ ಆದ್ದರಿಂದ ತನ್ನ ಕೃತ್ಯ ಅವಯಸ್ಕಳ ಅಪಹರಣವಾಗುವುದಿಲ್ಲವೆಂದೂ ವಸ್ತುಸ್ಥಿತಿಯ ಅಜ್ಞಾನವಿದ್ದುದರಿಂದ ತಾನು ಕ್ಷಮಾರ್ಹನೆಂದೂ ವಾದಿಸಿದ. ಆತನ ಕೃತ್ಯ ದುರುದ್ದೇಶಪೂರಿತವಾದ್ದರಿಂದ (ಅಪಹಾರ) ಕ್ಷಮಾರ್ಹವಲ್ಲವೆಂದು ನ್ಯಾಯಾಲಯ ತೀರ್ಮಾನಿಸಿತು. (ಎಂ.ಎಸ್.ಆರ್.)

**ಕಾನೂನಿನ ಕಲ್ಪನೆಗಳು :** ಸುಳ್ಳು ಅಥವಾ ನಟನೆಗಳೆಂದು ತಿಳಿದೂ ಕಾನೂನಿನ ದೃಷ್ಟಿಯಲ್ಲಿ ನಿಜವೆಂಬಂತೆ ಸಾಮಾನ್ಯ ಒಪ್ಪಿಗೆಯಿಂದ ನೀಡಲಾದ ಹೇಳಿಕೆಗಳು ಅಥವಾ ಊಹೆಗಳು (ಲೀಗಲ್ ಫಿಕ್ಷನ್ಸ್). ಯಾವುದೋ ಸಂದರ್ಭ ಅಥವಾ ಸನ್ನಿವೇಶದ ಅಗತ್ಯದಿಂದಾಗಿ ಈ ಬಗೆಯ ಧೋರಣೆ ತಳೆಯಲಾಗುತ್ತದೆ.

ನಿತ್ಯಜೀವನದಲ್ಲಿ ಕಲ್ಪನೆಗಳಿಗೇನೂ ಕೊರತೆಯಿಲ್ಲ. ಅದೃಷ್ಟದೇವತೆಯ ಆಗಮನದ ನಿರೀಕ್ಷೆ ಮತ್ತು ಸ್ವಾಗತವನ್ನು ಕುರಿತ ಸಂಪ್ರದಾಯ ಒಂದು ದೃಷ್ಟಾಂತ. ಯಾವುದೋ ಒಂದು ಅಧಿಕೃತ ಸಂಧಾನ ವಾಸ್ತವವಾಗಿ ಯಶಸ್ವಿಯಾಗಿಲ್ಲದಿದ್ದರೂ ತತ್ಸಂಬಂಧವಾಗಿ ಏರ್ಪಟ್ಟ ಔತಣಕೂಟದಲ್ಲಿ ಉಭಯಪಕ್ಷಗಳೂ ಸದ್ಭಾವನೆಯ ಲಂಬಿತ ಭಾಷಣ ಮಾಡುವುದೂ ಸಂಧಾನ ಯಶಸ್ವಿಯಾಯಿತೆಂದು ಪರಸ್ಪರ ಹೊಗಳುವುದೂ ಸಂಯುಕ್ತ ಹೇಳಿಕೆ ನೀಡುವುದೂ ಕಲ್ಪನೆಗಳೇ. ಮುಂದುವರಿದ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಿದಾಗ ಹಾಗೆಂದೇ ಸ್ವೀಕರಿಸುವುದು ಬೆಳೆಯುತ್ತಿರುವ ರಾಷ್ಟ್ರಗಳ ಮರ್ಯಾದೆಗೆ ಒಪ್ಪುವುದಿಲ್ಲವಾದ್ದರಿಂದ ಅದನ್ನು ಪರಸ್ಪರ ಆರ್ಥಿಕ ಸಹಕಾರವೆಂದು ಕರೆಯುವುದು ಕೂಡ ಕಲ್ಪನೆಯ ಒಂದು ಉದಾಹರಣೆ. ರಾಜರು, ರಾಜಕಾರಣಿಗಳು, ಶ್ರೀಮಂತ ಪ್ರಭುಗಳು ಮುಂತಾದವರ ಅಧಿಕಾರ ಸ್ಥಾನಗಳು ಲುಪ್ತವಾದ ಮೇಲೂ ಅವರ ಗೌರವದ ಬಿರುದುಗಳನ್ನು ಹಾಗೆಯೇ ಉಳಿಸಿಕೊಂಡು ಅವರನ್ನು ಹಾಗೆಯೇ ಸಂಬೋಧಿಸುವುದುಂಟು. ಇದು ಸಾಮಾನ್ಯವಾಗಿ ಅವಿರೋಧಿಯಾದ ಕಲ್ಪನೆ, ಔಪಚಾರಿಕ ಮಿಥ್ಯೆ. ವಿಜ್ಞಾನದ ಎಷ್ಟೋ ಸೂತ್ರಗಳನ್ನು ಕಂಡು ಹಿಡಿಯಲು ಸಾಧ್ಯವಾಗಿರುವುದು ಕಲ್ಪನೆಗಳ ಅಥವಾ ಊಹೆಗಳ ತಳಹದಿಯ ಮೇಲೆ. ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ, ಆರ್ಥಿಕಮಾನವ, ಬೇಡಿಕೆ ಸರಬರಾಯಿಗಳೇ ಮುಂತಾದ ಬಲಗಳ ಪರಿಣಾಮ-ಈ ಎಲ್ಲ ವಿವೇಚನೆಗಳೂ ವಾಸ್ತದ ಪರಿಸ್ಥಿತಿಯನ್ನು ಸರಳಗೊಳಿಸುವ ಕೆಲವು ಊಹೆಗಳನ್ನೇ ಅವಲಂಬಿಸಿರುತ್ತವೆ. ಹೀಗೆ ಸರ್ವಸಮ್ಮತ ಊಹೆ ಅಥವಾ ಕಲ್ಪನೆಗಳೇ ಅನೇಕ ಶಾಸ್ತ್ರಗಳ ಮಹೋನ್ನತ ಸೂತ್ರಗಳಿಗೆ ಮೆಟ್ಟಿಲುಗಳಾಗಿವೆ.

ಕಾನೂನಿನ ಕಲ್ಪನೆಗಳ ಉದ್ದೇಶ ಕೂಡ ಭಿನ್ನವಾದವಲ್ಲ. ಅಗತ್ಯವಾದ ಹಲವಾರು ಬದಲಾವಣೆಗಳು ಸುಸೂತ್ರವೂ ಮರ್ಯಾದಾಪೂರಿತವೂ ಆಗುವಂತೆ ಮಾಡಲು ಕಲ್ಪನೆಗಳು ಒಂದು ಸಾಧನ. ವಿಜ್ಞಾನದ ಕಲ್ಪನೆಗಳ ಅಥವಾ ಊಹೆಗಳ ಹಾಗೆ ಇವು ಕೂಡ ನಿಜವಲ್ಲವೆಂದು ತಿಳಿದಿದ್ದೂ ಉಂಟೆಂದು ಭಾವಿಸಿಕೊಂಡು ಯಾವುದೋ ಒಂದು ಗುರಿಯನ್ನು ನಿಲುಕುವಂಥವು.

ಕಾನೂನಿನ ಕಲ್ಪನೆಗೆ ಗುರಿಯಾಗುವವುಗಳಲ್ಲಿ ಮುಖ್ಯವಾದ್ದೆಂದರೆ ಕಾಲ. ಒಂದು ದೇಶದ ಸಂಸತ್ತಿನ ಅಧಿವೇಶನ ನಡೆಯುತ್ತಿದ್ದು. ಅಂದು ಮಧ್ಯರಾತ್ರಿಯಿಂದಾಚೆಗೆ ಕೂರಲು ಅದಕ್ಕೆ ಅಧಿಕಾರವಿಲ್ಲದಿರಬಹುದು. ಆದರೆ ಅದರ ಕಲಾಪ ಇನ್ನೂ ನಾಲ್ಕಾರು ಗಂಟೆ ಹಿಡಿಸಬಹುದು. ಅವೆಲ್ಲವೂ ಅತಿ ಮುಖ್ಯವಾದವು. ಆಗ ಅದು ಮಾಡಬಹುದಾದ್ದು ಇಷ್ಟೆ : ಗಡಿಯಾರದ ಮುಳ್ಳನ್ನು ಹಿಂದೆ ತಿರುಗಿಸುವುದು. ಕಲಾಪಗಳೆಲ್ಲ ಮುಕ್ತಾಯವಾಗುವವರೆಗೂ ಸಂಸತ್ತಿನ ಸಭೆಯ ಗಡಿಯಾರ 12 ಗಂಟೆ ತೋರಿಸದಿದ್ದರಾಯಿತು. ಎಂದರೆ ಅದು ನಿಯಮೋಲ್ಲಂಘನೆ ಮಾಡಿದಂತಾಗುವುದಿಲ್ಲ. ಸದುದ್ದೇಶದಿಂದ ಕೈಕೊಂಡ ಈ ಕ್ರಮಕ್ಕೆ ಎಲ್ಲರ ಒಪ್ಪಿಗೆಯುಂಟು. ಇದೊಂದು ಕಲ್ಪನೆ. ರಾಷ್ಟ್ರ ಸಂವಿಧಾನವನ್ನು ಬದಲಾಯಿಸದೆಯೂ ಉದ್ದಿಷ್ಟ ಗುರಿ ಸಾಧಿಸಲು ಕೈಗೊಂಡ ಉಪಾಯ.

ಇಂಥ ಅನೇಕ ಕಲ್ಪನೆಗಳನ್ನು ಕಾನೂನಿನ ಕ್ಷೇತ್ರದಲ್ಲಿ ಕಾಣಬಹುದು. ಸಂತಾನ ಇಲ್ಲದವನು ಇನ್ನೊಬ್ಬನ ಮಗ ತನ್ನ ಆಸ್ತಿಯ ಉತ್ತರಾಧಿಕಾರಿಯಾಗಿ ತನ್ನ ಮಗನಂತೆ ನಡೆದುಕೊಳ್ಳಲು ಅವನನ್ನು ದತ್ತು ತೆಗೆದುಕೊಳ್ಳಬಹುದು. ತನಗೇ ಹುಟ್ಟಿದ ಮಗನಾಗಿದ್ದರೆ ಹೇಗೋ ಹಾಗೆ ಕಾನೂನಿನ ಪ್ರಕಾರ ಅವನಿಗೆ ಎಲ್ಲ ಹಕ್ಕುಬಾಧ್ಯತೆಗಳೂ ಪ್ರಾಪ್ತವಾಗುತ್ತದೆ. ಅವನು ತನ್ನ ಮಗನೆಂಬುದೂ ಕಾನೂನಿನ ಒಂದು ಕಲ್ಪನೆ.

ಇನ್ನೊಂದು ಬಗೆಯ ಕಲ್ಪನೆಯುಂಟು. ಹಿಂದೂ ಅವಿಭಾಜ್ಯ ಕುಟುಂಬದ ಸದಸ್ಯನೊಬ್ಬ ಮಕ್ಕಳಿಲ್ಲದೆ ಸತ್ತರೆ, ಹಿಂದೆ ಇದ್ದ ಹಿಂದೂ ವಾರಸು ಕಾಯಿದೆಯ ಪ್ರಕಾರ ಅವನ ಭಾಗದ ಆಸ್ತಿ ಅವನ ವಾರಸುದಾರರಿಗೆ ಹೋಗುತ್ತಿತ್ತು. ಅವನ ವಿಧವೆಗೆ ಆಸ್ತಿಯಲ್ಲಿ ಪಾಲು ಕೇಳುವ ಅಧಿಕಾರವಿರಲಿಲ್ಲ. ವಿಧವೆಯರು ಜೀವನಾಂಶಕ್ಕೆ ಮಾತ್ರ ಅರ್ಹರಾಗಿದ್ದರು. ಈ ಪರಿಸ್ಥಿತಿಯನ್ನು ತಪ್ಪಿಸಲೆಂದು ಒಂದು ಕಾಯಿದೆ ಮಾಡಲಾಯಿತು. ಗಂಡ ಸತ್ತರೂ

ಅವನು ಬದುಕಿದ್ದರೆ ಯಾವ ಹಿಸ್ಸೆ ಸಿಗುತ್ತಿತ್ತೋ ಅಷ್ಟೇ ಪಾಲನ್ನು ಹೆಂಡತಿಗೆ ಕೊಡಬೇಕೆಂದು. ಅವನಿಗೆ ಮಗನಿದ್ದಿದ್ದರೆ ಎಷ್ಟು ಪಾಲು ಸಿಗಬಹುದಿತ್ತೋ ಅಷ್ಟನ್ನೂ ವಿಧವೆಗೆ ಕೊಡಬೇಕೆಂದು ವಿಧಿಸಲಾಯಿತು. ಇಂಥ ಸಂದರ್ಭದಲ್ಲಿ ಸತ್ತವನು ಬದುಕಿದ್ದಂತೆ, ಇಲ್ಲದ ಮಗ ಹುಟ್ಟಿದಂತೆ ಭಾವಿಸುವುದಕ್ಕೆ ಕಾನೂನಿನ ಮನ್ನಣೆಯಿದೆ.

ವಿಧಿಸಲಾದ ಒಂದು ತೆರಿಗೆ, ತತ್ಸಂಬಂಧವಾದ ಕಾಯಿದೆಗೆ ಅನುಸಾರವಾಗಿಲ್ಲವೆಂದು ನ್ಯಾಯಾಲಯ ತೀರ್ಪು ನೀಡಿ ವಸೂಲಾದ ಹಣವನ್ನು ವಾಪಸು ಕೊಡಬೇಕೆಂದು ಸರ್ಕಾರಕ್ಕೆ ಆದೇಶ ನೀಡಿದಾಗ, ರಾಜ್ಯದ ವಿಧಾನ ಸಭೆ ಹೊಸದೊಂದು ಕಾಯಿದೆಗೆ ಅಂಗೀಕಾರ ನೀಡಿ ಆ ತೆರಿಗೆಯನ್ನು ಕ್ರಮಬದ್ಧಗೊಳಿಸಬಹುದು. ಆ ತೆರಿಗೆಯನ್ನು ವಸೂಲಿ ಮಾಡಿದಂದಿಗೂ ಹಿಂದಣ ಗೊತ್ತಾದ ಒಂದು ದಿನದಿಂದಲೇ ಅದು ಜಾರಿಗೆ ಬಂದಂತೆ ಭಾವಿಸತಕ್ಕದ್ದೆಂದು ಕಾಯಿದೆಯಲ್ಲಿ ವಿಧಿಸಬಹುದು. ಸಂಸತ್ತಿನ ಸಭೆಯ ಕಲಾಪವನ್ನು ಕಾನೂನುಬದ್ಧಗೊಳಿಸಲು ಗಡಿಯಾರದ ಮುಳ್ಳನ್ನು ಹಿಂತಳ್ಳಿದಂತೆಯೇ ಇದು ಕೂಡ.

ಸಾಧಾರಣ ರೀತಿಯಿಂದ ಉತ್ತರಿಸಲಾಗದ ಬಿಕ್ಕಟ್ಟು ಅಥವಾ ಇಕ್ಕಟ್ಟಿನ ಸಂದರ್ಭಗಳಲ್ಲಿ ಕಲ್ಪನೆಯ ವಿಧಾನವನ್ನು ಅವಲಂಬಿಸುವುದು ಅನಿವಾರ್ಯವಾಗುತ್ತದೆ. ಕಾನೂನಿನಿಂದಲೇ ನಿರ್ಮಿತವಾದ ಸಂದಿಗ್ಧ ಸಂದರ್ಭಗಳಿಗೆ ಪರಿಹಾರ ಪಡೆಯಲೋಸುಗ ಕಲ್ಪನೆಯ ತತ್ತ್ವವನ್ನು ಬಳಕೆ ಮಾಡಿಕೊಳ್ಳಬೇಕು. ಹಾಗೆ ಮಾಡದಿದ್ದರೆ ಅನೇಕ ಸಾರಿ ಆಡಳಿತ ವ್ಯವಸ್ಥೆಗೆ ಆತಂಕ ಉಂಟಾಗಬಹುದು. ಹಾನಿಯೂ ಉಂಟಾಗಬಹುದು. ಒಮ್ಮೊಮ್ಮೆ ಉಚ್ಚ ನ್ಯಾಯಾಲಯ ಅಥವಾ ಪರಮೋಚ್ಚ ನ್ಯಾಯಾಲಯ ನೀಡಿದ ತೀರ್ಪಿನಿಂದ ಉದ್ಭವಿಸಿದ, ಸಾಧಾರಣ ರೀತಿಯಿಂದ ಉತ್ತರಿಸಲಾಗದ ವಿಪರೀತ ಸಂದರ್ಭಗಳಲ್ಲಿ ಕಲ್ಪನೆಗೆ ಶರಣು ಹೋಗಬೇಕು. ಇಲ್ಲದಿದ್ದರೆ ರಾಜ್ಯದ ಆರ್ಥಿಕ, ರಾಜಕೀಯ, ಸಾಮಾಜಿಕ ವ್ಯವಸ್ಥೆಯಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ಒಮ್ಮೊಮ್ಮೆ ಅನ್ಯಾಯಗಳೂ ಕಾನೂನಿನ ಹೆಸರಿನಲ್ಲಿ ನಡೆಯುವುದುಂಟು. ಇಂಥ ಅನ್ಯಾಯಗಳನ್ನು ತಪ್ಪಿಸಲು ಶಾಸಕಾಂಗ ಈ ತತ್ತ್ವವನ್ನು ಅವಲಂಬಿಸಿ ರಾಜ್ಯರಥವನ್ನು ಸುಗಮವಾಗಿ ನಡೆಸುತ್ತದೆ.

ಆಧುನಿಕ ಕಾನೂನು ಕಲ್ಪನೆಗಳು ನಾನಾ ತೆರನಾದವು. ಇಲ್ಲದ್ದು ಇದ್ದಂತೆ ಭಾವಿಸುವುದನ್ನೂ ಅನೇಕ ವೇಳೆ ಕ್ರಮಬದ್ಧಗೊಳಿಸಲಾಗಿದೆ. ಒಬ್ಬ ಇನ್ನೊಬ್ಬನಿಂದ ತಪ್ಪಾಗಿ ಹಣ ಪಡೆದು, ಅದನ್ನು ವಿವೇಚನಾಯುಕ್ತವಾದ ರೀತಿಯಲ್ಲಿ ನಿಯೋಜಿಸಿದ್ದ ಪಕ್ಷದಲ್ಲಿ, ವಾಸ್ತವವಾಗಿ ಹಾಗೆಂದು ನಿಯುಕ್ತನಾಗಿಲ್ಲದಿದ್ದರೂ ಕಾರ್ಯತಃ ಅವನು ಆ ಹಣದ ನ್ಯಾಸಧಾರಿಯಾಗಿ (ಟ್ರಸ್ಟೀ) ವರ್ತಿಸಿದ್ದಾನೆಂದು ನ್ಯಾಯಾಲಯ ಪರಿಭಾವಿಸಬಹುದು.

ಕಾನೂನಿನ ಕಲ್ಪನೆಯ ಇನ್ನೊಂದು ಉದಾಹರಣೆಯೆಂದರೆ ಯಾವುದಾದರೊಂದು ಕಾಯಿದೆಯ ರೀತ್ಯಾ ಸ್ಥಾಪಿಸಲಾದ ಸಂಘ. ಸಂಸ್ಥೆ ಅಥವಾ ಕಂಪನಿ. ಹಲವು ಜನರು ಕೂಡಿದ ಒಂದು ಸಂಘ, ಸಂಸ್ಥೆ ಅಥವಾ ಕಂಪನಿಯೂ ಕಾನೂನಿನ ದೃಷ್ಟಿಯಲ್ಲಿ ಒಂದು ವ್ಯಕ್ತಿ. ಇದೊಂದು ಕಲ್ಪನೆ. ಇದರಲ್ಲಿ ಸಮಾವೇಶಗೊಂಡ ಸದಸ್ಯರು ತಾತ್ಕಾಲಿಕವಾಗಿ ಇಲ್ಲವೆಂದೇ ಕಾನೂನು ಪರಿಭಾವಿಸುತ್ತದೆ. ಬಿಡಿ ವ್ಯಕ್ತಿಗಳನ್ನು ಬಿಟ್ಟು ಇಡಿಯ ಸಂಸ್ಥೆಯನ್ನೇ ವ್ಯಕ್ತಿಯೆಂದು ವ್ಯವಹರಿಸುವುದು ಅನೇಕ ವೇಳೆ ಅನುಕೂಲಕರ. ಆದರೆ ಕಂಪನಿಯ ತೆರೆಯ ಮರೆಯಲ್ಲಿ ಅನ್ಯಾಯಗಳು ಜರುಗಿದಾಗ ಕಾನೂನು ಅದರ ಹಿಂದಿರುವ ವ್ಯಕ್ತಿಗಳನ್ನು ಗುರುತಿಸಿ ಅವರ ಮೇಲೆ ಕ್ರಮ ಕೈಕೊಳ್ಳುವುದೂ ಉಂಟು. ಆಗ ಕಲ್ಪನೆಯನ್ನು ತಳ್ಳಿಬಿಡಲಾಗುತ್ತದೆ.

ಕಾನೂನನ್ನು ನಿರ್ಮಿಸುವ ಸಂಸತ್ತು ಅಥವಾ ವಿಧಾನಸಭೆ ಸೃಷ್ಟಿಸುವ ಕಲ್ಪನೆಯಾಗಲಿ, ಕಾನೂನಿನ ಕ್ಷೇತ್ರದಲ್ಲಿ ಸಂದರ್ಭಾನುಗುಣವಾಗಿ ಸಂಭವಿಸುವ ಇತರ ಸೃಷ್ಟಿ ಕ್ರಿಯೆಗಳಾಗಲಿ ಎಷ್ಟರ ಮಟ್ಟಿಗೆ ಸೂಕ್ತವೆಂಬುದು ವಿಚಾರಿಸಬೇಕಾದ ಪ್ರಶ್ನೆ. ಕಲ್ಪನೆಯಿಂದ ಯಾರಿಗೂ ಅನ್ಯಾಯವಾಗದಾಗ, ಅದರಿಂದ ಯಾವುದೋ ಅನ್ಯಾಯವೊಂದನ್ನು ಸರಿಪಡಿಸುವುದು ಸಾಧ್ಯವಾಗುವಾಗ, ನ್ಯಾಯಸ್ಥಾಪನೆಯಾಗಬೇಕೆಂದಾಗ ಅದು ಸ್ವೀಕಾರಾರ್ಹವೇ. ಸಾಮಾನ್ಯ ಒಪ್ಪಿಗೆಯೇ ಇದರ ತಳಹದಿ. ವಿವೇಚನೆಯೇ ಇದರ ಜೀವಸತ್ತ್ವ. ಬ್ರಿಟಿಷ್ ಪಾರ್ಲಿಮೆಂಟು ಲಿಂಗ ಪರಿವರ್ತನೆಯೊಂದನ್ನುಳಿದು ಮಿಕ್ಕ ಏನನ್ನಾದರೂ ಮಾಡಬಲ್ಲುದು–ಎಂಬ ಹೇಳಿಕೆಯೊಂದುಂಟು. ಕಾನೂನು ಪಾಲನೆಗೆ ಕಲ್ಪನೆಯ ನೆರವನ್ನು ಅದು ಎಷ್ಟರಮಟ್ಟಿಗೆ ಪಡೆದುಕೊಳ್ಳುತ್ತದೆಯೆಂಬುದಕ್ಕೆ ಈ ಹೇಳಿಕೆಯೊಂದು ಸಾಕ್ಷಿ. (ಕೆ.ಪಿ.)

**ಕಾನೂನು** : ಒಂದು ಸಮಾಜದ ಅನುಸರಣೆಗಾಗಿ ಅಲ್ಲಿಯ ಆಡಳಿತ ವ್ಯವಸ್ಥೆ ಜಾರಿಗೆ ತಂದಂಥ ವಿಧಿಗಳು, ಕಾಯಿದೆಗಳು, ನಿಬಂಧನೆಗಳು ಇತ್ಯಾದಿ : ಇವುಗಳ ಆಧಾರದ ಮೇಲೆ–ತಮ್ಮ ಮುಂದೆ ವಿಚಾರಣೆಗೆ ಬಂದ ಮೊಕದ್ದಮೆಗಳಲ್ಲಿ–ನ್ಯಾಯಾಲಯಗಳು ನೀಡಿದ ತೀರ್ಪುಗಳಲ್ಲಿ ಸೃಷ್ಟೀಕೃತವಾದ ಸೂತ್ರಗಳು (ಲಾ). ನ್ಯಾಯ, ಕಾನೂನು ಈ ಶಬ್ದಗಳು ಕೆಲವು ವೇಳೆ ಸಮಾನಾರ್ಥಕಗಳಾಗಿಯೂ ಇನ್ನು ಕೆಲವು ಸಂದರ್ಭಗಳಲ್ಲಿ ಭಿನ್ನಾರ್ಥಕಗಳಾಗಿಯೂ ಬಳಕೆಯಲ್ಲಿವೆ. ನ್ಯಾಯಶಬ್ದ ಸಾಮಾನ್ಯವಾಗಿ ಹೆಚ್ಚು ವ್ಯಾಪಕ. ನಿಸರ್ಗ ನಿಯಮಗಳು, ವಿಜ್ಞಾನ ಸೂತ್ರಗಳು, ವೈಯಕ್ತಿಕ ನಡತೆಗೆ ಅನ್ವಯಿಸುವ ವಿಧಿನಿಷೇಧಗಳು, ಧರ್ಮನೀತಿ ಇದಕ್ಕೆ ಸಂಬಂಧಿಸಿದಂತೆ ಕೂಡ ನ್ಯಾಯಶಬ್ದವನ್ನು ಬಳಸಲಾಗುತ್ತಿದೆ.

ಒಂದು ದೇಶದ ನ್ಯಾಯವ್ಯವಸ್ಥೆಯಲ್ಲಿ ಮುಖ್ಯವಾಗಿ ನಾಲ್ಕು ಅಂಗಗಳುಂಟು. ಆ ದೇಶದ ಸಂವಿಧಾನದಲ್ಲಿ ಆವಿಷ್ಕಾರಗೊಂಡ ಹಕ್ಕುಬಾಧ್ಯತೆಗಳೂ ನಿರ್ದೇಶಕ ತತ್ತ್ವಗಳೂ ವಿಧಿಗಳೂ ಅಲ್ಲಿಯ ನ್ಯಾಯವ್ಯವಸ್ಥೆಯ ಅಡಿಪಾಯ. ಉಳಿದೆಲ್ಲ ವಿಧಿ ನಿಷೇಧಗಳೂ ನಿಯಮ ನಿಬಂಧನೆಗಳೂ ಇದಕ್ಕೆ ಅಧೀನ : ಇದರಿಂದ ಸೀಮಿತ. ಸಂವಿಧಾನ ಪ್ರೇಷಿತ ಪ್ರಾಧಿಕಾರಗಳಿಂದ (ಅಥಾರಿಟಿ) ಜಾರಿಗೆ ಬಂದ ಕಾಯಿದೆಗಳು ಅನಂತರ ಬರುತ್ತವೆ. ಸಂಸತ್ತೂ ರಾಜ್ಯ ವಿಧಾನಮಂಡಲಗಳೂ ಕಾಯಿದೆಗಳನ್ನು ರಚಿಸುತ್ತವೆ. ಇವು ಒಟ್ಟಿನಲ್ಲಿ ಕಾನೂನು ಎನಿಸಿಕೊಳ್ಳುತ್ತವೆ. ಸಂವಿಧಾನದ ವಿಧಿಗಳ ಮತ್ತು ಪ್ರಾಧಿಕಾರವಿಚಿತ ಕಾಯಿದೆಗಳ ಅನ್ವಯಕ್ಕೆ ಸಂಬಂಧಿಸಿದಂತೆ, ಅವುಗಳ ಆಧಾರದ ಮೇಲೆ. ದೇಶದ ನ್ಯಾಯಾಲಯಗಳು ನೀಡುವ ತೀರ್ಪುಗಳೂ ವ್ಯಾಖ್ಯಾನಗಳೂ ನ್ಯಾಯವ್ಯವಸ್ಥೆಯಲ್ಲಿ ಸೇರಿಕೊಳ್ಳುತ್ತವೆ. ಇವು ಅನ್ವಯಿಕ ನ್ಯಾಯ. ನ್ಯಾಯಾಲಯಗಳು ಹೊಸದಾಗಿ ಕಾನೂನನ್ನು ಸೃಷ್ಟಿಸಲಾರವು. ಜಾರಿಯಲ್ಲಿರುವ ಕಾನೂನನ್ನು ವಿವರಿಸುವುದು, ಅರ್ಥೈಸುವುದು, ಅದಕ್ಕನುಗುಣವಾಗಿ ಆದೇಶಗಳನ್ನು ನೀಡುವುದು–ಇದು ನ್ಯಾಯಾಲಗಳ ಕಾರ್ಯಭಾರ. ನ್ಯಾಯವ್ಯವಸ್ಥೆಯ ಇನ್ನೊಂದು ಅಂಗವೆಂದರೆ ಸಂಪ್ರದಾಯ, ಪದ್ಧತಿ, ಕಟ್ಟಳೆ. ಮೊದಲನೆಯ ಮೂರು ಸಂಸ್ಥೆಗಳಿಂದ ರಚಿತವಾದವಾದರೆ ಇದು ಪರಂಪರಾಗತವಾದ್ದು. ರೂಢಿಯಲ್ಲಿ ಬಂದದ್ದು. ಅವು ಅರ್ವಾಚೀನವಾದರೆ ಇದು ಪ್ರಾಚೀನ. ಹಿಂದಿನ ಕಾಲದಲ್ಲಿ ಸಂಪ್ರದಾಯದ ಕಟ್ಟುಕಟ್ಟಳೆಗಳೇ ಪ್ರಬಲವಾಗಿದ್ದುವು. ನಾಗರಿಕ ಜೀವನಕ್ಷೇತ್ರದ ಬಹು ಭಾಗವನ್ನಾರಿಸಿಕೊಂಡಿದ್ದುವು. ಹಿಂದೆ ಸಂಪ್ರದಾಯಕ್ಷೇತ್ರದಲ್ಲಿದ್ದ ಎಷ್ಟೋ ವಿಚಾರಗಳಿಗೆ ಸಂಬಂಧಿಸಿದಂತೆ ಈಗ ಸಂಸ್ಥೆಗಳಿಂದ ರಚಿತವಾದ ನ್ಯಾಯವೇ ಜಾರಿಗೆ ಬಂದಿದೆ. ಆದರೂ ಮತೀಯ ಆಚರಣೆಗಳು, ಗಂಡು ಹೆಣ್ಣುಗಳ ಸಂಬಂಧ–ಮುಂತಾದ ಅನೇಕ ವಿಚಾರಗಳಲ್ಲಿ ಸಂಪ್ರದಾಯ ನ್ಯಾಯ ಇಂದೂ ಬಹುತೇಕ ಜಾರಿಯಲ್ಲಿದೆ. ಅಲ್ಲದೆ ಒಂದೊಂದು ವಿಶಿಷ್ಟ ಸಮುದಾಯಕ್ಕೂ ಜಾತಿಮತಗಳಿಗೂ ಪ್ರತ್ಯೇಕವಾದ ಸಂಪ್ರದಾಯಗಳೇ ಇರುವುದುಂಟು. ಆಡಳಿತ ವ್ಯವಸ್ಥೆ ಆಧುನಿಕವಾದಂತೆಲ್ಲ ಸಂಪ್ರದಾಯನ್ಯಾಯದ ಕ್ಷೇತ್ರ ಕಿರಿದಾಗುತ್ತಿದೆ. ಬುದ್ಧಿಪೂರ್ವಕವಾಗಿ ಜಾರಿಗೆ ತರಲಾದ ನ್ಯಾಯದ ಭಾಗವೇ ಅಧಿಕವಾಗುತ್ತಿದೆ. ಈ ಭಾಗವನ್ನು ಸ್ಥೂಲವಾಗಿ ಕಾನೂನು ಎಂದು ಇಲ್ಲಿ ಸಂಬೋಧಿಸಲಾಗಿದೆ. ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದ ವಿವಿಧ ಕಾಯಿದೆಗಳ, ನಿಬಂಧನೆಗಳ, ನಿಯಮಾವಳಿಗಳ ಮತ್ತು ನ್ಯಾಯಾಲಯಗಳ ತೀರ್ಪುಗಳ ಸಮೂಹವನ್ನೂ ಕಾನೂನು ಎನ್ನುವುದು ವಾಡಿಕೆ (ಉದಾ : ಕಾರ್ಮಿಕ ಕಾನೂನು).

ಕಾನೂನುಕಟ್ಟಳೆಗಳ ನ್ಯಾಯವ್ಯವಸ್ಥೆ ಮಾನವನ ಸಾಮಾಜಿಕ–ರಾಜಕೀಯ ಬೆಳವಣಿಗೆಯ ಅತ್ಯಂತ ಪ್ರಮುಖ ಅಭಿವ್ಯಕ್ತಿಗಳಲ್ಲೊಂದು. ಆದ್ದರಿಂದ ಸಮಾಜದ ಸ್ವರೂಪವನ್ನರಿತುಕೊಳ್ಳಲು ಈ ವ್ಯವಸ್ಥೆಯ ಅಂತರ್ದರ್ಶನ ಪಡೆಯಬೇಕಾದ್ದು ಅವಶ್ಯ. ನ್ಯಾಯದ ಅರ್ಥ, ಸ್ವರೂಪ, ಉದ್ದೇಶ, ಇತರ ಶಾಸ್ತ್ರ ಪ್ರಕಾರಗಳಿಗೂ ಇದಕ್ಕೂ ಇರುವ ಸಂಬಂಧ, ಇದರ ವಿಕಾಸಕ್ಕೆ ಕಾರಣವಾದ ಪ್ರಭಾವಗಳು, ವಿವಿಧ ನ್ಯಾಯಪಂಥಗಳು–ಇವನ್ನೆಲ್ಲ ನ್ಯಾಯತತ್ತ್ವ (ಜೂರಿಸ್ಪ್ರುಡೆನ್ಸ್) ಎಂಬ ಲೇಖನದಲ್ಲಿ ವಿವೇಚಿಸಲಾಗಿದೆ. ನ್ಯಾಯವೃತ್ತಿ (ಲೀಗಲ್ ಪ್ರೊಫೆಷನ್) ಎಂಬ ಲೇಖನದಲ್ಲಿ ವಕೀಲರ ಕಾರ್ಯಭಾರ, ಅವರ ವಿವಿಧ ಹೊಣೆಗಳು, ಅವರ ವೃತ್ತಿಯ ಸಂಘಟನೆಯನ್ನು ಕುರಿತ ವಿಚಾರಗಳು–ಇವೆಲ್ಲ ಇವೆ. ನ್ಯಾಯಕ್ಷೇತ್ರದಲ್ಲಿ ನ್ಯಾಯವಾದಿಗಳು ಕೈಗೊಳ್ಳುವ ಕ್ರಮಗಳು, ಪ್ರತಿಕ್ರಮಗಳು ಮುಂತಾದವಕ್ಕೆ ಆಧಾರಭೂತವಾದ ವಿಧಿನಿಯಮಗಳನ್ನು ಕುರಿತ ವಿಷಯಗಳನ್ನು ನ್ಯಾಯಪ್ರಕ್ರಿಯೆ (ಲೀಗಲ್ ಪ್ರೊಸೀಜರ್) ಎಂಬ ಲೇಖನದಲ್ಲಿ ಕೊಡಲಾಗಿದೆ. ನಾನಾ ದೇಶಗಳ ನ್ಯಾಯವ್ಯವಸ್ಥೆಗಳ ತಿಳಿವಳಿಕೆ ಪಡೆಯಲು ಅಯಾ ದೇಶಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕೊಡಲಾದ ಲೇಖನಗಳನ್ನು ನೋಡಿ. ಇವಲ್ಲದೆ ಸಿವಿಲ್ ನ್ಯಾಯ. ಅಪರಾಧ ನ್ಯಾಯ (ಕ್ರಿಮಿನಲ್ ಲಾ). ಸಂವಿಧಾನ ನ್ಯಾಯ (ಕಾನ್‌ಸ್ಟಿಟ್ಯೂಷನಲ್ ಲಾ). ವಾಣಿಜ್ಯ ನ್ಯಾಯ (ಕಮರ್ಷಿಯಲ್ ಲಾ), ಕರಾರು ಕಾಯಿದೆ (ಕಾಂಟ್ರಾಕ್ಟ್ ಆಕ್ಟ್), ಸರಕುಗಳ ಮಾರಾಟ ಕಾಯಿದೆ (ಸೇಲ್ ಆಫ್ ಗೂಡ್ಸ್ ಆಕ್ಟ್), ವ್ಯಾಪಾರ ಚಿಹ್ನೆಗಳ ಕಾಯಿದೆ, ಕೃತಿಸ್ವಾಮ್ಯ, ಸಮುದ್ರಯಾನ ಕಾನೂನು, ಕಾರ್ಮಿಕ ಕಾನೂನು ಮುಂತಾದ ಅನೇಕ ವಿಶಿಷ್ಟ ವಿಷಯಗಳ ಬಗ್ಗೆ ವಿಶ್ವಕೋಶದಲ್ಲಿ ಪ್ರತ್ಯೇಕ ಲೇಖನಗಳಿವೆ. ನ್ಯಾಯಶಿಕ್ಷಣ ಪ್ರಸಿದ್ಧ ನ್ಯಾಯಪಂಡಿತರ ಜೀವನ ಸಾಧನಗಳ ಪರಿಚಯಗಳು–ಇವನ್ನು ಕುರಿತ ಪ್ರಸಿದ್ಧ ನ್ಯಾಯಪಂಡಿತರ ಜೀವನ ಸಾಧನೆಗಳ ಪರಿಚಯಗಳು–ಇವನ್ನು ಕುರಿತ ಲೇಖನಗಳನ್ನೂ ಕೊಡಲಾಗಿದೆ. *

**ಕಾನೂನುಗಳ ಅಸಾಂಗತ್ಯ** : ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ರಾಜ್ಯ ರಾಷ್ಟ್ರಗಳ ಅಥವಾ ವಿವಿಧ ವರ್ಗ ಮತ ಪಂಗಡಗಳ ವಿಭಿನ್ನ ಕಾನೂನುಗಳು ಜಾರಿಯಲ್ಲಿರುವುದರ ಫಲವಾಗಿ ಒಬ್ಬ ವ್ಯಕ್ತಿಯ ಹಕ್ಕುಗಳಿಗೆ ಸಂಬಂಧಿಸಿದಂತೆ ಅನ್ವಯಿಸ ಬಹುದಾದ ಮತ್ತು ಪರಸ್ಪರ ವಿರುದ್ಧವಾದ ಎರಡು ಅಥವಾ ಹೆಚ್ಚು ನ್ಯಾಯಾಧಿಕಾರಗಳು ಇದ್ದ ಪಕ್ಷದಲ್ಲಿ

ಉದ್ಭವಿಸುವ ಸಂದಿಗ್ಧ (ಕಾನ್‌ಫ್ಲಿಕ್ಟ್ ಆಫ್ ಲಾಸ್). ಇಂಥ ಅಸಾಂಗತ್ಯ ಇರುವಂಥ ಮೊಕದ್ದಮೆಗಳಲ್ಲಿ ಅನ್ವಯಿಸಬೇಕಾದ ಸೂಕ್ತ ಕಾನೂನು, ಆ ಕಾನೂನಿನ ಅಧಿಕಾರವ್ಯಾಪ್ತಿ, ವಿಚಾರಣೆ ನಡೆಸಲು ಅಧಿಕಾರವುಳ್ಳ ನ್ಯಾಯಾಲಯ ಮುಂತಾದವನ್ನು ನಿರ್ಧರಿಸುವ ಕಾನೂನನ್ನೂ ಇದೇ ಹೆಸರಿನಿಂದ ಕರೆಯುವುದು ವಾಡಿಕೆ. ಅದನ್ನು ಕಾನೂನುಗಳ ಅಸಾಂಗತ್ಯದ ಕಾನೂನು (ಲಾ ಆಫ್ ಕಾನ್‌ಫ್ಲಿಕ್ಟ್ ಆಫ್ ಲಾಸ್) ಎಂದೂ ಕರೆಯುವುದುಂಟು.

ವಿಶ್ವದಲ್ಲಿ ಇಂದು ಅನೇಕ ರಾಷ್ಟ್ರಗಳಿವೆ. ಇವುಗಳಲ್ಲಿ ಒಂದೊಂದಕ್ಕೂ ತನ್ನದೇ ಆದ ಲಿಖಿತ-ಅಲಿಖಿತ ಕಾನೂನುಗಳಿವೆ, ನ್ಯಾಯಾಲಯಗಳಿವೆ. ಇದಕ್ಕೆಲ್ಲ ಮೇಲೆ ವಿಶ್ವಸರ್ಕಾರ ಯಾವುದೂ ಇಲ್ಲ. ಎಲ್ಲ ರಾಷ್ಟ್ರಗಳಿಗೂ ಸಮಾನವಾಗಿ ಕಡ್ಡಾಯವಾಗಿ ಅನ್ವಯಿಸುವಂಥ ಕಾನೂನುಗಳಿರಲಾರವು. ಆದ್ದರಿಂದ ಒಂದಕ್ಕಿಂತ ಹೆಚ್ಚು ರಾಷ್ಟ್ರಗಳಿಗೆ ಸಂಬಂಧಿಸಿದ ಯಾವುದಾದರೂ ವ್ಯಾಜ್ಯ ಬಂದಾಗ ಅದಕ್ಕೆ ಕಕ್ಷಿಗಳಾದವರಿಗೆ ಯಾವ ರಾಷ್ಟ್ರದ ಕಾನೂನು ಅನ್ವಯವಾಗಬೇಕು-ಎಂಬುದನ್ನು ನಿರ್ಣಯಿಸಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಅನುಸರಿಬೇಕಾದ ನ್ಯಾಯದ ವಿವೇಚನೆಯನ್ನು ಐರೋಪ್ಯ ರಾಷ್ಟ್ರಗಳಲ್ಲಿ ಖಾಸಗಿ ಅಂತರ ರಾಷ್ಟ್ರೀಯ ಕಾನೂನು (ಪ್ರೈವೇಟ್ ಇಂಟರ್ ನ್ಯಾಷನಲ್ ಲಾ) ಎಂದು ಕರೆಯುವುದು ವಾಡಿಕೆಯಾಗಿದೆ. ಕಾನೂನುಗಳ ಅಸಾಂಗತ್ಯವೆಂಬುದಕ್ಕೆ ಪರ್ಯಾಯವಾಗಿ ಇದು ಅಲ್ಲಿ ಬಳಕೆಯಲ್ಲುಂಟು.

ಹಲವಾರು ರಾಜ್ಯಗಳನ್ನೊಳಗೊಂಡ ಸಂಯುಕ್ತ ಮಾದರಿಯ ರಾಷ್ಟ್ರಗಳಲ್ಲೂ ವಿಭಿನ್ನ ಕಾನೂನುಗಳು ಇರುತ್ತವೆ. ಭಾರತ, ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನ ಉದಾಹರಣೆಗಳು. ಒಂದು ರಾಜ್ಯದಲ್ಲಿರುವ ಕಾನೂನುಗಳಿಗಿಂತ ಭಿನ್ನವಾದ ಕಾನೂನುಗಳು ಇನ್ನೊಂದು ರಾಜ್ಯದಲ್ಲಿರಬಹುದು. ಒಂದೇ ದೇಶದ ಎರಡು ರಾಜ್ಯಗಳಲ್ಲಿರುವ ಪ್ರಜೆಗಳ ನಡುವೆ ವಿವಾದ ಉದ್ಭವಿಸಿದಾಗ ಆ ವಿವಾದಕ್ಕೆ ಸಂಬಂಧಿಸಿದಂತೆ ಆ ಎರಡು ರಾಜ್ಯಗಳಲ್ಲಿ ಬೇರೆ ಬೇರೆ ಕಾನೂನುಗಳಿದ್ದರೆ ಆಗ ಅದು ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದು ಎಂಬುದೂ ಯಾವ ಕಾನೂನಿನ ಪ್ರಕಾರ ತೀರ್ಪು ನೀಡಬೇಕು ಎಂಬುದೂ ಜಿಜ್ಞಾಸೆಗೆ ಒಳಪಡುವುದು ಸಹಜ. ಸಂಯುಕ್ತ ಮಾದರಿಯದಲ್ಲದ-ಏಕಾತ್ಮಕವಾದ (ಯೂನಿಟರಿ) ರಾಜ್ಯ ವ್ಯವಸ್ಥೆಯಲ್ಲೂ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ಕಾನೂನುಗಳಿರುವುದು ಸಾಧ್ಯ. ಬ್ರಿಟನಿನಲ್ಲಿ ಇಂಗ್ಲೆಂಡ್, ಸ್ಕಾಟ್ಲೆಂಡ್, ಉತ್ತರ ಐರ್ಲೆಂಡ್ ಮುಂತಾದವುಗಳಲ್ಲಿ ವಿಭಿನ್ನ ಕಾನೂನುಗಳಿರುವುದನ್ನು ಕಾಣಬಹುದು.

ಒಂದು ದೇಶಕ್ಕೆ ವಸಾಹತುಗಳಿದ್ದ ಪಕ್ಷದಲ್ಲಿ ಅವುಗಳ ಕಾನೂನುಗಳೂ ಆಳುವ ದೇಶದ ಕಾನೂನುಗಳೂ ಸಾಮಾನ್ಯವಾಗಿ ಒಂದೇ ರೀತಿಯವಾಗಿರುವುದಿಲ್ಲ. ಆಳುವ, ಆಳಿಸಿಕೊಳ್ಳುವ ದೇಶಗಳ ವ್ಯಕ್ತಿಗಳ ನಡುವಣ ವ್ಯವಹಾರಗಳಲ್ಲಿ ಉದ್ಭವಿಸುವ ವ್ಯಾಜ್ಯಗಳಲ್ಲಿ ಯಾವ ಕಾನೂನಿನನ್ವಯ ತೀರ್ಪು ನೀಡಬೇಕೆಂಬ ಬಗ್ಗೆ ಇತ್ಯರ್ಥ ಮಾಡಲು ಸೂಕ್ತ ತೋರುಗಂಬಗಳು ಇರುವುದು ಅವಶ್ಯವಾಗಬಹುದು.

ಒಂದೇ ದೇಶ ವಿಭಜನೆಗೊಂಡಾಗಲೂ ಪ್ರತ್ಯೇಕವಾದ ನ್ಯಾಯವ್ಯವಸ್ಥೆಗಳು ಕ್ರಮೇಣ ಬೆಳೆಯುತ್ತವೆ. ಪೂರ್ವ-ಪಶ್ಚಿಮ ಜರ್ಮನಿಗಳು, ಉತ್ತರ ದಕ್ಷಿಣ ಕೊರಿಯ ಮತ್ತು ವಿಯೆಟ್ನಾಂಗಳು, ಭಾರತ-ಪಾಕಿಸ್ತಾನ-ಇವು ಉದಾಹರಣೆಗಳು. ಹಲವು ವಿಭಾಗಗಳನ್ನು ಸೇರಿಸಿ ಒಂದು ದೇಶವನ್ನು ಸ್ಥಾಪಿಸಿದಾಗ, ಒಂದು ದೇಶಕ್ಕೆ ಇನ್ನೊಂದು ವಿಭಾಗವನ್ನು ಸೇರಿಸಿದಾಗ ಆ ವಿಭಾಗಗಳಲ್ಲಿ ಏಕಕಾಲದಲ್ಲಿ ಕಾನೂನುಗಳು ಏಕೀಭವಿಸುವುದು ಸಾಧ್ಯವಿಲ್ಲ. ಅದು ಸಾಧಿಸುವವರೆಗೂ ಆ ವಿಭಾಗಗಳಿಗೆ ಸಂಬಂಧಿಸಿದಂತೆ ನ್ಯಾಯವಿತರಣೆ ಮಾಡುವಾಗ ತೊಡಕುಗಳು ಉದ್ಭವಿಸುವುದು ಸಹಜ. ಜರ್ಮನಿಗೆ ಸೇರಿದ್ದ ಆಲ್ಸೇಸ್-ಲೊರೇನನ್ನು 1920ರಲ್ಲಿ ಫ್ರಾನ್ಸಿಗೆ ಸೇರಿಸಿದಾಗ ಅಲ್ಲಿ ಕೆಲಕಾಲ ಜರ್ಮನ್ ಕಾನೂನುಗಳೇ ಜಾರಿಯಲ್ಲಿದ್ದುವು. ಹಲವು ಐರೋಪ್ಯ ರಾಷ್ಟ್ರಗಳಿಗೆ ಸೇರಿದ ಭಾಗಗಳನ್ನು ಒಂದುಗೂಡಿಸಿ ಸ್ಥಾಪಿಸಲಾಗಿದ್ದ ಪೋಲೆಂಡಿನಲ್ಲಿ ಏಕರೀತಿಯಾದ ನ್ಯಾಯವ್ಯವಸ್ಥೆಯನ್ನು ಸಾಧಿಸಲು ಹಲವು ವರ್ಷಗಳೇ ಬೇಕಾದವು.

ಒಂದು ದೇಶದಲ್ಲಿ ವಾಸಿಸುವ ಪ್ರಜೆಗಳ ಕುಲಧರ್ಮ ಭಿನ್ನತೆಗಳಿಂದಾಗಿಯೂ ಕಾನೂನುಗಳಲ್ಲಿ ಅಸಾಂಗತ್ಯ ಏರ್ಪಡಬಹುದು. ಆಸ್ತಿಯ ಹಕ್ಕುಗಳಿಗೆ ಸಂಬಂಧಿಸಿದಂತೆ ಹಿಂದೂ, ಮುಸ್ಲಿಂ, ಪಾರ್ಸಿ ಮತ್ತು ಬೌದ್ಧರ ಕಾನೂನುಗಳು ಭಿನ್ನವಾದಂಥವು, ಹಿಂದೂಗಳಲ್ಲೇ ಮಿತಾಕ್ಷರ ಮತ್ತು ದಾಯಭಾಗ ಪದ್ಧತಿಗಳು ಪರಸ್ಪರ ಭಿನ್ನವಾಗಿವೆ. ಲೆಬನಾನ್ ಮತ್ತು ಇಸ್ರೇಲ್‌ಗಳಲ್ಲಿ ಮುಸ್ಲಿಂ ಮತ್ತು ಯೆಹೂದ್ಯರ ಮತ್ತು ವಿವಿಧ ಕ್ರೈಸ್ತರ ನ್ಯಾಯಗಳು ಏಕರೀತಿಯಾಗಿಲ್ಲ. ಕೆನಡ, ಅಮೆರಿಕ ಮುಂತಾದ ದೇಶಗಳಲ್ಲಿ ಐರೋಪ್ಯರು ವಲಸೆ ಹೋಗುವ ಮುನ್ನ ಇದ್ದ ಮೂಲವಾಸಿಗಳಿಗೆ ಅವರವರವೇ ಆದ ಗುಂಪುಗಳ ಕಾನೂನುಗಳಿವೆ.

ವಿಶ್ವಾದ್ಯಂತ ಏಕರೀತಿಯ ನಾಗರಿಕತೆಯೂ ಜೀವನ ವಿಧಾನಗಳೂ ಹಬ್ಬುತ್ತಿರುವ ಈ ಯುಗದಲ್ಲಿ ಅನೇಕ ಆಧುನಿಕ ರಾಷ್ಟ್ರಗಳ ಕಾನೂನುಗಳು ಹಲವಾರು ಸಮಾನ ಲಕ್ಷಣಗಳನ್ನೇ ತಳೆಯುತ್ತಿವೆ. ಆದರೂ ಆಯಾ ರಾಷ್ಟ್ರಗಳಲ್ಲಿಯ ಜನಜೀವನ ವಿಕಾಸದ ಪರಿಣಾಮವಾಗಿ ಅವವಕ್ಕೇ ಸರಿಯೆನಿಸಿದ ಕೆಲವು ವೈಶಿಷ್ಟ್ಯಗಳೂ ಉಂಟು. ಸ್ವಂತ ಹಕ್ಕಿಗೆ ಸಂಬಂಧಿಸಿದಂತೆ ಎರಡು ರಾಷ್ಟ್ರಗಳ ವ್ಯಕ್ತಿಗಳ ಅಥವಾ ಕಕ್ಷಿಗಳ ನಡುವೆ ವ್ಯಾಜ್ಯ ಸಂಭವಿಸಿದಾಗ ಇಂಥ ವೈಶಿಷ್ಟ್ಯಗಳಿಂದಾಗಿ ನ್ಯಾಯವಿತರಣೆ ಕ್ಲಿಷ್ಟವೆನಿಸಬಹುದು. ಆಯಾ ಸನ್ನಿವೇಶಗಳಿಗೆ ತಕ್ಕಂತೆ ಅನುಸರಿಸಬೇಕಾದ ಸೂಕ್ತ ಕಾನೂನು ಯಾವುದೆಂಬುದರ ನಿರ್ಧಾರವೇ ಕಾನೂನುಗಳ ಅಸಾಂಗತ್ಯದ ಕಾನೂನಿನ ಉದ್ದೇಶ. ಪ್ರತಿ ಒಂದು ವಿಶಿಷ್ಟ ಸಂದರ್ಭದಲ್ಲಿ ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೆಷ್ಟು, ಯಾವ ಪಂಗಡದ ಅಥವಾ ಕುಲದ, ಮತದ ಅಥವಾ ರಾಜ್ಯಗಳ ಕಾನೂನುಗಳು ಎಷ್ಟರಮಟ್ಟಿಗೆ ಅನ್ವಯಾರ್ಹ-ಎಂಬುದನ್ನೆಲ್ಲ ವಿಚಾರಿಸುವುದೂ ಅವಶ್ಯ. ಹೀಗೆ, ಅಧಿಕಾರ ವ್ಯಾಪ್ತಿ, ಅನ್ಯದೇಶಗಳಲ್ಲಿ ನೀಡಲಾದ ನ್ಯಾಯ ನಿರ್ಣಯದ ಅನ್ವಯದ ಇತಿಮಿತಿ, ಅನುಸರಿಸಬೇಕಾದ ಕಾನೂನಿನ ಆಯ್ಕೆ-ಇವು ಮುಖ್ಯವಾಗಿ ಪರಿಗಣಿಸಬೇಕಾದ ಅಂಶಗಳು.

ವ್ಯಕ್ತಿ ಹಕ್ಕುಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಅಸಾಂಗತ್ಯಗಳ ಸ್ವರೂಪವನ್ನು ವಿವರಿಸಲು ಕೆಲವು ರಾಜ್ಯಗಳನ್ನು ಉದಾಹರಣೆಯಾಗಿ ಕೊಡಬಹುದು. 1865ರಲ್ಲಿ ಲಂಡನಿನ ಪ್ರಿವಿ ಕೌನ್ಸಿಲ್ ಮುಂದೆ ಬಂದ ಒಂದು ವ್ಯಾಜ್ಯ ಇಂಗ್ಲೆಂಡ್, ಈಜಿಪ್ಟ್, ಮತ್ತು ಮಾರಿಷಸ್ ಈ ಮೂರು ದೇಶಗಳ ಕಾನೂನುಗಳ ವಿಭಿನ್ನತೆಗೆ ಸಂಬಂಧಿಸಿದ್ದು. ಒಬ್ಬಾತ ಮಾರಿಷಸಿನಲ್ಲಿದ್ದ ತನ್ನ ಸರಕನ್ನು ಇಂಗ್ಲೆಂಡಿಗೆ ಸಾಗಿಸಬೇಕೆಂದು ಸೌತಾಂಪ್ಟನಿನಲ್ಲಿ ನೌಕಾಸಾರಿಗೆ ಕಂಪನಿಗೆ ಹಣ ಕೊಟ್ಟ. ಆ ಕರಾರಿನಂತೆ ಹಡಗು ಆತನ ಸರಕನ್ನು ತುಂಬಿಕೊಂಡು ಇಂಗ್ಲೆಂಡಿನ ಕಡೆಗೆ ಯಾನ ಮಾಡುತ್ತಿದ್ದಾಗ ಈಜಿಪ್ಟಿನಲ್ಲಿ ಅದು ಕಳೆದುಹೋಯಿತು. ಮಾರ್ಗಮಧ್ಯದಲ್ಲಿ ಸರಕು ಕಳೆದುಹೋದರೆ ಅದಕ್ಕೆ ಸಾರಿಗೆ ಕಂಪನಿ ಹೊಣೆಯಲ್ಲವೆಂಬುದು ಇಂಗ್ಲೆಂಡಿನ ಕಾನೂನು. ಆ ನಷ್ಟಕ್ಕೆ ಸಾರಿಗೆ ಕಂಪನಿ ಹೊಣೆಯೆಂಬುದು ಮಾರಿಷಸಿನ ಕಾನೂನಿನ ವಿಧಿ. ಸಾರಿಗೆ ಕಂಪನಿಯಿಂದ ಸರಕಿನ ಮಾಲೀಕ ಪರಿಹಾರ ಪಡೆಯಬಹುದೆಂದು ಒಂದು ಕಾನೂನು ಹೇಳಿದರೆ ಅದು ಸಾಧ್ಯವಿಲ್ಲವೆಂದು ಇನ್ನೊಂದು ಹೇಳುತ್ತದೆ. ಇದು ಆ ವ್ಯಾಜ್ಯ ಸಂಬಂಧವಾಗಿ ಉದ್ಭವಿಸಿದ್ದ ಅಸಾಂಗತ್ಯ. ಇನ್ನೊಂದು ಉದಾಹರಣೆ ಮಯನ್ಮಾರ್ ದೇಶದಲ್ಲಿ ನೆಲಸಿದ್ದ ಇಬ್ಬರು ಭಾರತೀಯರ ನಡುವಣ ವ್ಯಾಜ್ಯಕ್ಕೆ ಸಂಬಂಧಿಸಿದ್ದು. ಅವರಲ್ಲಿ ಒಬ್ಬ ಇನ್ನೊಬ್ಬನಿಂದ 1941ಕ್ಕಿಂತ ಮೊದಲು ಸಾಲ ತೆಗೆದುಕೊಂಡಿದ್ದ. ಅನಂತರ ಅವರಿಬ್ಬರೂ ಭಾರತಕ್ಕೆ ವಾಪಸಾಗಿ ಅಲ್ಲೇ ನೆಲಸಿದರು. ತನಗೆ ಬರಬೇಕಾಗಿದ್ದ ಹಣಕ್ಕಾಗಿ ಸಾಲಿಗ ಭಾರತದ ನ್ಯಾಯಾಲಯದಲ್ಲಿ ದಾವ ಹೂಡಿದ. 1941 ರಿಂದ 1947ರ ವರೆಗೆ ಸಾಲದ ಮೇಲೆ ಬೆಳೆದಿದ್ದ ಬಡ್ಡಿಯನ್ನು ವಜಾ ಮಾಡುವ ಕಾಯಿದೆಯೊಂದನ್ನು ಮಯನ್ಮಾರ್ ಸರ್ಕಾರ ಜಾರಿಗೆ ತಂದಿದ್ದುದರಿಂದ ಆ ಕಾಲಕ್ಕೆ ಬಡ್ಡಿ ಕೊಡಬೇಕಾಗಿಲ್ಲವೆಂಬುದು ಋಣಿಯವಾದವಾಗಿತ್ತು. ಆದರೆ ಭಾರತದ ಕಾನೂನಿನಲ್ಲಿ ಅಂಥ ಯಾವ ವಿಧಿಯೂ ಇರಲಿಲ್ಲ. ಇಲ್ಲಿ ವಾದಗ್ರಸ್ತವಾಗಿದ್ದ ಮುಖ್ಯ ಅಂಶವೆಂದರೆ ಈ ವ್ಯಾಜ್ಯದ ಇತ್ಯರ್ಥಕ್ಕೆ ಅನ್ವಯಿಸಬೇಕಾಗಿದ್ದ ಕಾನೂನು. ವ್ಯವಹಾರ ನಡೆದಿದ್ದದ್ದು ಮೈನ್ಮಾರ್‌ನ ; ಕಕ್ಷಿಗಳು ಅಲ್ಲಿದ್ದಾಗ. ಆದರೆ ಅವರು ಭಾರತೀಯ ಪ್ರಜೆಗಳು. ವ್ಯಾಜ್ಯ ನಡೆದಾಗ ಅವರು ವಾಸವಾಗಿದ್ದದ್ದು ಭಾರತದಲ್ಲಿ. ಈ ವಿವಾದವನ್ನು ವಿಚಾರಿಸಿದ ಮದ್ರಾಸಿನ ಉಚ್ಚ ನ್ಯಾಯಾಲಯ ಇದಕ್ಕೆ ಭಾರತದ ಕಾನೂನೇ ಅನ್ವಯವಾಗುವುದೆಂದು ತೀರ್ಮಾನಿಸಿ ಅದರಂತೆ ತೀರ್ಪು ನೀಡಿತು (1954).

ಅಸಾಂಗತ್ಯದ ಮತ್ತೊಂದು ಉದಾಹರಣೆ ಭಿನ್ನಮತೀಯರಿಗೆ ಅನ್ವಯಿಸುವ ಕಾನೂನಿಗೆ ಸಂಬಂಧಿಸಿದ್ದು. ಮೊದಲು ಹಿಂದೂ ಆಗಿದ್ದು ರೋಮನ್ ಕೆಥೊಲಿಕ್ ಕ್ರೈಸ್ತನಾಗಿ ಮತಾಂತರ ಹೊಂದಿದ್ದವನೊಬ್ಬನ ಇಬ್ಬರು ಮಕ್ಕಳು ನಡೆಸುತ್ತಿದ್ದ ಪಾಲುದಾರಿಕೆಯನ್ನು ಅಣ್ಣನ ಮರಣಾನಂತರ ತಮ್ಮನೇ ಸ್ವಲ್ಪಕಾಲ ಮುಂದುವರಿಸಿಕೊಂಡು ಹೋಗುತ್ತಿದ್ದು, ಕೊನೆಗೆ ತಮಗೆ ಹಿಂದೂ ಅವಿಭಕ್ತ ಕುಟುಂಬದ ಕಾನೂನು ಅನ್ವಯವಾಗತಕ್ಕದ್ದೆಂದೂ ಅದಕ್ಕೆ ತಾನೇ ಯಜಮಾನ ಅಥವಾ ಕರ್ತನೆಂದು ಮಿತಾಕ್ಷರ ನ್ಯಾಯದ ಪ್ರಕಾರ ಅತ್ತಿಗೆಗೆ ಆಸ್ತಿಯಲ್ಲಿ ಹಕ್ಕಿಲ್ಲವೆಂದೂ ವಾದಿಸಿದ. ವ್ಯಾಜ್ಯ ಪ್ರಿವಿಕೌನ್ಸಿಲ್ ವರೆಗೂ ಹೋಯಿತು. ಕ್ರೈಸ್ತನಾಗಿ ಮತಾಂತರ ಹೊಂದಿದ ಹಿಂದೂ ಇಚ್ಛೆಪಟ್ಟಲ್ಲಿ ಹಿಂದೂ ಕಾನೂನನ್ನೇ ಅನ್ವಯಿಸಿಕೊಳ್ಳಬಹುದು-ಎಂಬುದಾಗಿ ಅದು ಅಭಿಪ್ರಾಯಪಟ್ಟಿತಾದರೂ ಈ ವ್ಯಾಜ್ಯದಲ್ಲಿ ಕ್ರೈಸ್ತರಿಗೆ ಅನ್ವಯವಾಗುವ ಕಾಯಿದೆಯನ್ನೇ ಅನ್ವಯಿಸಬೇಕೆಂದು ಅದರ ತೀರ್ಪಾಗಿತ್ತು.

ಮೇಲೆ ಕೊಟ್ಟಿರುವ ಉದಾಹರಣೆಗಳಲ್ಲಿ ಮೊದಲನೆಯದರಲ್ಲಿ ಒಪ್ಪಂದ ಆದದ್ದು ಒಂದು ಕಡೆ ಮತ್ತು ಸರಕು ನಷ್ಟವಾದದ್ದು ಇನ್ನೊಂದು ಕಡೆಯಾದರೂ ವ್ಯಾಜ್ಯಕ್ಕೆ ಕಾರಣ ಎಲ್ಲಿ ಉಂಟಾಯಿತು ಎಂಬುದನ್ನು ಅವಲಂಬಿಸಿ ಅಲ್ಲಿಯ ಕಾನೂನನ್ನು ಅನ್ವಯಿಸಬೇಕಾಯಿತು. ಎರಡನೆಯ ವ್ಯಾಜ್ಯದ ಕಕ್ಷಿಗಳು ಒಪ್ಪಂದ ಮಾಡಿಕೊಂಡಾಗ ಮಯನ್ಮಾರ್‌ನಲ್ಲಿ ನೆಲೆಸಿದ್ದರೂ ವ್ಯಾಜ್ಯ ದಾಖಲು ಮಾಡಿದಾಗ ಭಾರತದಲ್ಲಿ ನೆಲೆಸಿದ್ದರಿಂದ ಅವರಿಗೆ ಭಾರತದ ಕಾನೂನನ್ನೇ ಅನ್ವಯಿಸಬೇಕೆಂದು ಇತ್ಯರ್ಥವಾಯಿತು.

**ಅಸಾಂಗತ್ಯದ ಇತ್ಯರ್ಥ ಸೂತ್ರಗಳು:** ಕಾನೂನುಗಳ ಅಸಾಂಗತ್ಯ ಸಂಭವಿಸಿದಾಗ ನ್ಯಾಯಾಲಯ ಎರಡು ಮುಖ್ಯ ವಿಷಯಗಳನ್ನು ಗಮನಿಸಬೇಕು. ಒಂದನೆಯದು: ಈ

ನ್ಯಾಯವನ್ನು ತೀರ್ಮಾನ ಮಾಡುವ ಅಧಿಕಾರ ನ್ಯಾಯಾಲಯಕ್ಕೆ ಇದೆಯೆ? ಇದ್ದರೆ, ಎರಡನೆಯದು: ಯಾವ ಕಾನೂನನ್ನು ಅನ್ವಯಿಸಿ ಈ ವ್ಯಾಜ್ಯವನ್ನು ಇತ್ಯರ್ಥಪಡಿಸಬೇಕು. ಮೊದಲು ನ್ಯಾಯಾಲಯ ಈ ಎರಡು ಪ್ರಶ್ನೆಗಳನ್ನು ರೂಪಿಸಿ, ಅವುಗಳಿಗೆ ಉತ್ತರ ಕೊಟ್ಟು ಮುಂದುವರಿಯಬೇಕು. ವ್ಯಾಜ್ಯಕಾರಣ ತನ್ನಹದ್ದಿನಲ್ಲಿ ಉಂಟಾಗಿದ್ದರೆ. ನಿಸ್ಸಂದೇಹವಾಗಿ ಆ ನ್ಯಾಯಾಲಯಕ್ಕೆ ವ್ಯಾಜ್ಯವಿಚಾರಣೆ ಮಾಡುವ ಅಧಿಕಾರವಿದೆ. ಹಾಗಾದರೆ ಯಾವ ಶಾಸನಕ್ಕೆ ಅನುಸಾರವಾಗಿ ಪರಿಹಾರ ನೀಡಬೇಕು ? ಒಂದು ದೇಶದ ನ್ಯಾಯಾಲಯಗಳು ಆ ದೇಶದ ಕಾನೂನನ್ನೇ ಅನ್ವಯಿಸಬೇಕು. ಇದು ಮೂಲಭೂತ ತತ್ತ್ವ. ಆದರೂ ಕೆಲವೊಂದು ಸಂದರ್ಭಗಳಲ್ಲಿ ಅನ್ಯ ದೇಶದಲ್ಲಿಯ ಕಾನೂನನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿಕೊಂಡ ಒಪ್ಪಂದವನ್ನು ವಿಚಾರಣೆ ನಡೆಸುತ್ತಿರುವ ನ್ಯಾಯಾಲಯ ಅದರ ಬಗ್ಗೆ ತನ್ನ ದೇಶದ ಕಾನೂನಿನ ಪ್ರಕಾರ ತೀರ್ಪು ನೀಡುವುದೂ ಕಕ್ಷಿ ಪ್ರತಿಕಕ್ಷಿಗಳನ್ನು ಅವರು ನಿರೀಕ್ಷಿಸಿದ್ದ ಬಾಧ್ಯತೆಗಳಿಂದ ಬಂಧಿಸುವುದೂ ಅನ್ಯಾಯವಾಗುತ್ತದೆ. ಕಾನೂನುಗಳ ಅಸಾಂಗತ್ಯ ತಲೆ ದೋರಿದ ಸಂದರ್ಭಗಳಲ್ಲಿ ಅನುಸರಿಸಲಾಗುವ ಸೂತ್ರಗಳನ್ನು ಸ್ಥೂಲವಾಗಿ ಹೀಗೆ ಹೇಳಬಹುದು: ವಿವಾಹ ಸಂಬಂಧವಾದ ವ್ಯಾಜ್ಯಗಳನ್ನು ಆ ಪ್ರಜೆಗಳು ಯಾವ ಕಾನೂನಿಗೆ ಬದ್ಧರೋ ಆ ಕಾನೂನಿಗೆ ಅನುಸಾರವಾಗಿಯೇ ಸಾಮಾನ್ಯವಾಗಿ ಇತ್ಯರ್ಥಪಡಿಸಬೇಕು. ಭೂಮಿ ಮುಂತಾದ ಸ್ಥಿರ ಸ್ವತ್ತಿಗೆ ಸಂಬಂಧಿಸಿದ ವ್ಯಾಜ್ಯವಾದರೆ ಆ ಸ್ವತ್ತು ಇರುವೆಡೆ ಯಾವ ಕಾನೂನು ಜಾರಿಯಲ್ಲಿದೆಯೋ ಅದನ್ನೇ ಅನುಸರಿಸಬೇಕು. ಮೂರನೆಯದಾಗಿ, ಖಾಸಗಿ ತಕ್ಸೀರುಗಳ (ಟಾರ್ಟ್ಸ್) ವಿಚಾರಣೆಯಲ್ಲಿ ಸರ್ವಸಾಧಾರಣವಾಗಿ ಅಪಕೃತ್ಯ ಎಲ್ಲಿ ನಡೆಯಿತೋ ಆ ನೆಲದಕಾಯಿದೆಗಳನ್ನು ಅನ್ವಯಿಸಬೇಕು. ಇದನ್ನು ನಿರ್ಧರಿಸುವುದು ಕಷ್ಟ. ಯಾವುದೋ ದೇಶದಲ್ಲಿ ಕುಳಿತು, ಅಲ್ಲಿರುವ ಪ್ರಬಲ ರೇಡಿಯೋ ಕೇಂದ್ರದ ಮೂಲಕ ಮಾನಹಾನಿಕಾರಕ ಸಂಗತಿಗಳನ್ನು ಪ್ರಚಾರ ಮಾಡಿದರೆ, ಅದು ಎಲ್ಲೆಲ್ಲೂ ಕೇಳಿಬರುತ್ತದೆ. ಆಗ ಆ ಅಪಕೃತ್ಯ ಎಲ್ಲಿ ನಡೆಯಿತೆಂದು ಹೇಳುವುದು ಕಷ್ಟ. ನಾಲ್ಕನೆಯದಾಗಿ, ಒಪ್ಪಂದಗಳಿಗೆ ಸಂಬಂಧಿಸಿದಾಗ. ಒಪ್ಪಂದ ಮಾಡಿ ಕೊಂಡವರ ಉದ್ದೇಶಕ್ಕೆ ಅನುಗುಣವಾಗಿ, ಒಪ್ಪಂದ ಮಾಡಿಕೊಂಡ ಜಾಗದಲ್ಲಿ ಜಾರಿಯಲ್ಲಿರುವ ಅಥವಾ ಒಪ್ಪಂದವನ್ನು ಮುರಿದ ಜಾಗದಲ್ಲಿ ಜಾರಿಯಲ್ಲಿರುವ ಕಾನೂನಿನ ಪ್ರಕಾರ ವ್ಯಾಜ್ಯಗಳ ಇತ್ಯರ್ಥವಾಗಬೇಕು. ಒಪ್ಪಂದವನ್ನು ಎಲ್ಲಿಯೇ ಮಾಡಿಕೊಳ್ಳಲಿ, ಆ ಒಪ್ಪಂದವನ್ನು ಎಲ್ಲಿ ಈಡೇರಿಸಬೇಕೋ ಅಲ್ಲಿಯ ಕಾನೂನು ಅನ್ವಯಿಸಬೇಕೆಂದು ಕಕ್ಷಿಗಳು ಒಪ್ಪಂದ ಮಾಡಿಕೊಳ್ಳಬಹುದು. ಆಗ ನ್ಯಾಯಾಲಯ ಆ ಒಪ್ಪಂದವನ್ನು ಮಾನ್ಯ ಮಾಡಲೇಬೇಕು. ಹಾಗೆಯೇ ಒಪ್ಪಂದ ಮಾಡಿಕೊಳ್ಳುವಾಗ ಒಪ್ಪಂದಕ್ಕೆ ಸಂಬಂಧಿಸಿದ ವಸ್ತು ಎಲ್ಲಿದೆಯೋ ಆ ದೇಶದ ಕಾನೂನು ಅನ್ವಯಿಸಬೇಕಾಗುತ್ತದೆ. ಐದನೆಯದಾಗಿ, ಪರದೇಶದ ಕಾನೂನು ತಮ್ಮ ದೇಶದ ಕಾನೂನುಗಳಿಗೆ ವಿರುದ್ಧವಾಗಿಲ್ಲದಿದ್ದಲ್ಲಿ, ಭಂಗತರದಿದ್ದಲ್ಲಿ ಅಂಥ ಪರದೇಶದ ಕಾನೂನನ್ನು ಅನ್ವಯಿಸಿ ನ್ಯಾಯ ಇತ್ಯರ್ಥ ಮಾಡುವುದರಲ್ಲಿ ಯಾವ ಅನ್ಯಾಯವೂ ಇಲ್ಲ.

ಇವು ಕೆಲವು ಸ್ಥೂಲ ಸೂತ್ರಗಳು ಮಾತ್ರ. ಸರ್ವಸಂದರ್ಭಗಳಿಗೂ ಅನ್ವಯಿಸುವ ಸೂತ್ರಗಳನ್ನು ರೂಪಿಸುವುದು ಸಾಧ್ಯವಿಲ್ಲ. (ಕೆ.ಪಿ.)

**ಕಾನೂನುಭಂಗ ಚಳವಳಿ :** ಭಾರತದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಕಾಂಗ್ರೆಸ್ಸು ಬ್ರಿಟಿಷ್ ಸರ್ಕಾರದ ವಿರುದ್ಧ ನಡೆಸಿದ ಹೋರಾಟದ ವಿಧಾನಗಳಲ್ಲೊಂದು. ದಕ್ಷಿಣ ಆಫ್ರಿಕದಲ್ಲಿ ಬಿಳಿಯರ ಸರ್ಕಾರದ ವರ್ಣಭೇದ ನೀತಿಯ ವಿರುದ್ಧ ನಡೆಸಿದ ಚಳವಳಿಯಲ್ಲಿ ಉಗಮವಾಗಿ, ಗಾಂಧಿಯವರು ಭಾರತಕ್ಕೆ ಪುನರಾಗಮಿಸಿದಾಗ ಬ್ರಿಟಿಷ್ ಸರ್ಕಾರದ ವಿರುದ್ಧ ಕ್ರಮಕ್ರಮವಾಗಿ ಬೃಹದಾಕಾರ ತಾಳಿತು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕೂಡ ನೀಗ್ರೋ ಜನರು ಬಿಳಿಯರೊಂದಿಗೆ ಸಮಾನ ನಾಗರಿಕ ಸೌಕರ್ಯಕ್ಕಾಗಿ ಈ ವಿಧಾನವನ್ನನುಸರಿಸಿದ್ದುಂಟು. ಅನ್ಯಾಯಕರವಾದ ವ್ಯವಸ್ಥೆಯ ವಿರುದ್ಧ ಹೋರಾಡಲು ಉಳಿದೆಲ್ಲ ಅಹಿಂಸಾತ್ಮಕ ಉಪಾಯಗಳೂ ಬರಿದಾದಾಗ ಅಂತಿಮವಾಗಿ ಇದನ್ನು ಅನುಸರಿಸಬೇಕೆಂಬುದು ಗಾಂಧಿಯವರ ಭಾವನೆಯಾಗಿತ್ತು. ಸರ್ಕಾರದ ಅನ್ಯಾಯಕರ ಹಾಗೂ ಅನಾಗರಿಕ ಕಾನೂನುಗಳನ್ನು ಮುರಿಯುವುದು ಇದರ ಉದ್ದೇಶ. ಅದರ ವಿರುದ್ಧವಾಗಿ ಉದ್ರೇಕಗೊಳ್ಳುವುದಾಗಲಿ ಹಿಂಸೆ ಎಸಗುವುದಾಗಲಿ ಇದರ ಆಶಯವಲ್ಲ. ಅನ್ಯಾಯಕರವಾದ ಆಡಳಿತದೊಂದಿಗೆ ಎಲ್ಲ ಬಗೆಯ ಸಹಕಾರವನ್ನೂ ಹಿಂತೆಗೆದುಕೊಳ್ಳುವುದೂ ಆ ವ್ಯವಸ್ಥೆಯಿಂದ ಲಬ್ಧವಾಗಬಹುದಾದ ಯಾವುದೇ ಬಗೆಯ ಅನುಕೂಲಗಳನ್ನು ನಿರಾಕರಿಸುವುದೂ ಇದರ ಮೂಲಸೂತ್ರ. ಕಾನೂನುಭಂಗ ಚಳವಳಿ ಅಸಹಕಾರ ಚಳವಳಿಯ ಒಂದು ಅವಿಭಾಜ್ಯ ಹಾಗೂ ಅವಶ್ಯ ಅಂಗ. ಒಂದು ಕೆಟ್ಟ ಆಡಳಿತ ವ್ಯವಸ್ಥೆಯ ಆದೇಶಗಳಿಗೂ ಕಾನೂನಿನ ನಿರ್ದೇಶನಗಳಿಗೂ ತಲೆಬಾಗುವುದರಿಂದ-ವಿಧೇಯತೆ ತೋರುವುದರಿಂದ ಆ ಆಡಳಿತದೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ ಸಹಕರಿಸಿದಂತೆಯೇ ಆಗುತ್ತದೆ. ಆ ಬಗೆಯ ವಿಧೇಯತೆಯನ್ನು ನಿರೀಕ್ಷಿಸುವುದಕ್ಕಾಗಲಿ ಪಡೆಯುವುದಕ್ಕಾಗಲಿ ದುರಾಡಳಿತಕ್ಕೆ ಎಂದಿಗೂ ಅರ್ಹತೆಯಿಲ್ಲ. ಅದಕ್ಕೆ ವಿಧೇಯತೆ ತೋರುವುದೆಂದರೆ ದುಷ್ಟಶಕ್ತಿಯೊಂದಿಗೆ ಪಾಲುದಾರಿಕೆ ವಹಿಸಿದಂತೆ. ಆದ್ದರಿಂದ ಸುತ್ಪುರುಷನಾದಾತ ಆತ್ಮಪುರಸ್ಸರವಾಗಿ ಅದನ್ನು ವಿರೋಧಿಸುತ್ತಾನೆ. ಅದ್ದರಿಂದ ದುಷ್ಟ ಸರ್ಕಾರದ ಕಾನೂನುಗಳಿಗೆ ಅವಿಧೇಯತೆ ತೋರಿಸುವುದು ಅದನ್ನು ಮುರಿಯುವುದು ಒಂದು ಕರ್ತವ್ಯ. ಹಿಂಸಾತ್ಮಕವಾಗಿ ಆಚರಿಸಿದ ಕಾನೂನುಭಂಗ ದುಷ್ಟ ವ್ಯವಸ್ಥೆಯ ವಿರುದ್ಧವಲ್ಲ. ಹಿಂಸೆಯಿಂದ ನಿವಾರಿಸಲಾದ ವ್ಯಕ್ತಿಗಳಿಗೆ ಬದಲಾಗಿ ಬೇರೆಯವರು ಬರಬಹುದು. ದುಷ್ಟಶಕ್ತಿಯಂತೂ ಹಾಗೆಯೇ ಉಳಿದುಕೊಳ್ಳುತ್ತದೆ. ಅದನ್ನು ಮುಟ್ಟಿದಂತೆಯೇ ಆಗುವುದಿಲ್ಲ, ಅಷ್ಟೇ ಅಲ್ಲ. ಅದು ಇನ್ನೂ ಹೆಚ್ಚು ದುಷ್ಟ ಲಕ್ಷಣ ತಳೆಯುತ್ತದೆ. ಅಹಿಂಸಾತ್ಮಕವಾದ ಕಾನೂನು ಭಂಗವೊಂದೇ ಅತ್ಯಂತ ಯಶಸ್ವೀ ಕ್ರಮ. ದುಷ್ಟ ವ್ಯವಸ್ಥೆಯೊಂದಿಗೆ ಸಹಕರಿಸುವುದಿಲ್ಲವೆನ್ನುವವನು ಈ ಮಾರ್ಗ ಅನುಸರಿಸುವುದು ಅವನ ಕರ್ತವ್ಯ. ಇದು ಮಹಾತ್ಮ ಗಾಂಧಿಯವರೇ ನೀಡಿರುವ ವಿವರಣೆ-ಸುಪ್ರಸಿದ್ಧ ದಂಡಿ ಯಾತ್ರೆಯ ಸಮಯದಲ್ಲಿ.

ಕಾನೂನುಭಂಗ ಚಳವಳಿಯಲ್ಲಿ ಅಪಾಯವಿಲ್ಲದೆಯೂ ಇಲ್ಲ. ಆದರೆ ಅಪಾಯಕ್ಕೆ ಕಾರಣವೊಂದೇ. ಇದು ಈವರೆಗೂ ಭಾಗಶಃ ಪ್ರಯೋಗಿಸಲಾದ ಕ್ರಮ ಮಾತ್ರ. ಹಿಂಸಾಪೂರಿತ ವಾತಾವರಣದಲ್ಲೇ ಇದನ್ನು ಯಾವಾಗಲೂ ಪ್ರಯೋಗಿಸಬೇಕಾಗಿ ಬಂದಿದೆ. ಕ್ರೌರ್ಯ ತಾನೇತಾನಾಗಿ ಮೆರೆಯುತ್ತಿರುವಾಗ ಅದಕ್ಕೆ ಬಲಿಯಾದವರಲ್ಲಿ ಅತಿಯಾದ ಉದ್ರೇಕ ಉದ್ಭವಿಸುತ್ತದೆ. ಅವರ ದೌರ್ಬಲ್ಯದಿಂದಾಗಿ ಅದು ಗುಪ್ತವಾಗಿರುತ್ತದೆ. ಅತ್ಯಲ್ಪ ನೆವ ಸಿಕ್ಕಿದರೂ ಸಾಕು ಅದು ಅತ್ಯುಗ್ರವಾಗಿ ಸ್ಫೋಟಿಸುತ್ತದೆ. ಅಶಿಸ್ತಿನಿಂದ ಕೂಡಿದ ಜೀವಧ್ವಂಸಕವಾದ ಗುಪ್ತಶಕ್ತಿಯನ್ನು ಖಂಡಿತ ಯಶಸ್ಸಿನ ಸಾಧನವಾದ ಜೀವಸಂಜೀವಿನೀ ಶಕ್ತಿಯಾಗಿ ಪರಿವರ್ತಿಸುವ ಅತ್ಯುತ್ಕೃಷ್ಟ ವಿಧಾನವೇ ಕಾನೂನುಭಂಗ. ಅದು ನೀಡಬಹುದಾದ ವರಪ್ರಸಾದದೊಂದಿಗೆ ಹೋಲಿಸಿದಾಗ ತರಂಗವಾಗಿ ಅನಭವಿಸಬೇಕಾದ ಕಷ್ಟನಷ್ಟಸಂಭವ ಏನೇನೂ ಇಲ್ಲ. ಇದರ ಬಳಕೆ ವಿಶ್ವಕ್ಕೆ ಪರಿಚಿತವಾದಾಗ, ಇದರ ಯಶಸ್ವೀ ಕಾರ್ಯದ ಬಗ್ಗೆ ಅನೇಕ ಪ್ರದರ್ಶನಗಳಾದಾಗ, ವಿಜ್ಞಾನದ ಅತ್ಯಧಿಕ ಬೆಳವಣಿಗೆಯ ಫಲವಾಗಿ ಸಾಧಿಸಲಾದ ವಿಮಾನಸಂಚಾರದಲ್ಲಿರುವುದಕ್ಕಿಂತಲೂ ಕಾನೂನುಭಂಗದಲ್ಲಿ ಕಡಿಮೆ ಅಪಾಯ ಇರುತ್ತದೆ. ಹೀಗೆಂದು ಗಾಂಧಿಯವರು ಈ ವಿಧಾನದ ಸಾಧಕ ಬಾಧಕಗಳನ್ನೂ ಇದರ ಸಾರ್ವತ್ರಿಕ ಸಾರ್ವಕಾಲಿಕ ಗುಣವನ್ನೂ ವಿವರಿಸಿದ್ದಾರೆ.

1920ರಲ್ಲಿ ಭಾರತದಲ್ಲಿ ಗಾಂಧಿಯವರಿಂದ ಆರಂಭವಾದ ಅಸಹಕಾರ ಆಂದೋಲನ ವಿಶಿಷ್ಟವಾದ್ದು. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಅದೇ ವರ್ಷ ಔಪಚಾರಿಕವಾಗಿ ಪ್ರಾರಂಭವಾಗಿ, ಮುಂದಿನ ವರ್ಷ (1921) ಅದರ ಪರಿಣಾಮವಾಗಿ ತಲೆದೋರಿದ ದಬ್ಬಾಳಿಕೆಯನ್ನು ಹತ್ತಿಕ್ಕಲು ಕಾನೂನುಭಂಗ ಚಳವಳಿಯನ್ನು ಕೂಡಲೆ ಆರಂಭಿಸಬೇಕೆಂದು ಬೇಡಿಕೆಗಳು ಬಂದುವು. ಆ ವರ್ಷ ನವೆಂಬರ್ ತಿಂಗಳಲ್ಲಿ ದೆಹಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಸಮಿತಿ ಕೆಲವು ನಿಬಂಧನೆಗಳಿಗೆ ಒಳಪಟ್ಟು ಪ್ರತಿಯೊಂದು ಪ್ರಾಂತ್ಯವೂ ತನ್ನ ಜವಾಬ್ದಾರಿಯ ಮೇಲೆ ಕಾನೂನುಭಂಗ ಮತ್ತು ಕರನಿರಾಕರಣೆ ಚಳವಳಿಯನ್ನು ಪ್ರಾರಂಭಿಸಬಹುದೆಂದು ಆದೇಶ ನೀಡಿದ್ದರೂ ಅದು ಯಾವ ಸ್ವರೂಪ ತಳೆಯಬಹುದೆಂಬುದನ್ನು ಯಾರೂ ವಿಚಾರ ಮಾಡಲಿಲ್ಲ. ಸ್ವತಃ ಗಾಂಧೀಜಿಯವರೇ ಆಗ ಅದರ ವ್ಯಾಖ್ಯೆ ಕೊಟ್ಟಿರಲಿಲ್ಲ. 1922ರ ಮೊದಲಲ್ಲಿ ಮುಂಬಯಿಯಲ್ಲಿ ಸಮಾವೇಶಗೊಂಡಿದ್ದ ಸಕಲ ಪಕ್ಷಗಳ ಸಮ್ಮೇಳನದಲ್ಲಿ ಸರ್ಕಾರದ ನೀತಿಯನ್ನು ಖಂಡಿಸಲಾಯಿತು. ಬಾರ್ಡೋಲಿಯಲ್ಲಿ ಕಾನೂನುಭಂಗ ಚಳವಳಿ ಆರಂಭಿಸುವುದಾಗಿ ಗಾಂಧೀಜಿಯವರು ವೈಸ್‌ರಾಯರಿಗೆ ತಿಳಿಸಿದರು. ಇದಕ್ಕೆ ಮೊದಲೇ ಕರನಿರಾಕರಣೆ ಚಳವಳಿ ಗುಂಟೂರು ಜಿಲ್ಲೆಯಲ್ಲಿ ಜನವರಿ 12ರಂದು ಆರಂಭವಾಗಿತ್ತು. ಭೂ ಕಂದಾಯ ಮತ್ತು ಹುಲ್ಲುಗಾವಲಿನ ಶುಲ್ಕವನ್ನು ಕೊಡಲು ಜನ ನಿರಾಕರಿಸಿದರು. ಆದರೆ ಈ ಮಧ್ಯೆ ವೇಲ್ಸ್ ರಾಜಕುಮಾರನ ಭೇಟಿಯ ಕಾರಣ ಮುಂಬಯಿ ಮತ್ತು ಮದ್ರಾಸುಗಳಲ್ಲಿ ನಡೆದ ಗಲಭೆಗಳು, ಬಿಹಾರದ ಚೌರಿ-ಚೌರಾದಲ್ಲಿ ಸಂಭವಿಸಿದ (1922) ಹಿಂಸಾಪ್ರಕರಣ-ಇವು ಬಾರ್ಡೋಲಿ ಚಳವಳಿಗೆ ಪೆಟ್ಟು ಕೊಟ್ಟುವು. ಇದ್ದಕ್ಕಿದ್ದಂತೆ ಚಳವಳಿಯನ್ನು ಹಿಂತೆಗೆದುಕೊಂಡುದಕ್ಕೆ ಗಾಂಧೀಜಿಯವರಲ್ಲಿ ಅನೇಕರು ಅಸಮಾಧಾನಗೊಂಡರೂ ದೇಶ ಇನ್ನೂ ಇಂಥ ಚಳವಳಿಗೆ ಪಕ್ವವಾಗಿಲ್ಲವೆಂಬ ಅಂಶವನ್ನು ಕಾಂಗ್ರೆಸ್ ತನ್ನ ಗಯಾ ಅಧಿವೇಶನದಲ್ಲಿ ಒಪ್ಪಿಕೊಂಡಿತು. ಗಾಂಧೀಜಿಯವರು ಅಹಮದಾಬಾದ್ ಅಧಿವೇಶನದಲ್ಲಿ ಹೇಳಿದಂತೆ ಕಾನೂನುಭಂಗ ಚಳವಳಿಯನ್ನು ಸಾಧಿಸಲು ಅವಶ್ಯವಾಗಿದ್ದ ಶಾಂತ ವಾತಾವರಣ ನಿರ್ಮಾಣವಾಗಿರಲಿಲ್ಲ.

ಮುಂದೆ-1929ರ ಡಿಸೆಂಬರ್ 31ರಂದು ಲಾಹೋರ್ ಅಧಿವೇಶನದಲ್ಲಿ ಅಂಗೀಕರಿಸಲಾದ ಪೂರ್ಣಸ್ವರಾಜ್ಯ ಗೊತ್ತುವಳಿ ಗಾಂಧೀಜಿಯವರಿಗೆ ಅದೇ ಅಸ್ತ್ರವನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ಮತ್ತೊಮ್ಮೆ ಅವಕಾಶ ಮಾಡಿಕೊಟ್ಟಿತು. 1930ರ ಫೆಬ್ರವರಿ ತಿಂಗಳಲ್ಲಿ ಸಬರ್ಮತಿಯಲ್ಲಿ ಸೇರಿದ್ದ ಕಾರ್ಯಕಾರಿ ಸಮಿತಿಯ ಅಧಿವೇಶನದಲ್ಲಿ ಮಹಾತ್ಮ ಗಾಂಧಿಯವರು ತಾವು ಕೈಗೊಳ್ಳಲಿದ್ದ ಚಳವಳಿಯ ಸ್ವರೂಪವನ್ನು ವಿವರಿಸಿದರು. ಮಾನವ ತನ್ನ ಬುದ್ಧಿಸಾಮರ್ಥ್ಯದಿಂದ ನಿರ್ಮಿಸಬಹುದಾದಂಥ ಅತ್ಯಂತ ಅಮಾನುಷ

ತಲೆಗಂದಾಯವೆಂದು ಉಪ್ಪಿನ ಕರವನ್ನು ವರ್ಣಿಸಿ ಆ ಕರದ ವಿರುದ್ಧ ಇಡೀ ದೇಶದ ಜನಾಭಿಪ್ರಾಯವನ್ನು ರೂಪಿಸಿದರು. ಉಪ್ಪಿನ ಕಾಯಿದೆಯನ್ನು ಮುರಿಯುವ ಉದ್ದೇಶದಿಂದ ತಮ್ಮ ಐತಿಹಾಸಿಕ ದಂಡಿಯಾತ್ರೆಯನ್ನು ಪ್ರಾರಂಭಿಸುವುಕ್ಕೆ ಒಂದು ದಿನ ಮುಂಚೆ- ಮಾರ್ಚಿ 11ರಂದು ಗಾಂಧಿಯವರು ಒಂದು ಚಿರಸ್ಮರಣೀಯ ಭಾಷಣ ಮಾಡಿದರು. ತಾವು ದಸ್ತಗಿರಿಯಾದರೆ ದೇಶ ಅನುಸರಿಸಬೇಕಾದ ಮಾರ್ಗವನ್ನು ವಿವರಿಸಿದರು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಉಪ್ಪನ್ನು ತಯಾರಿಸಿ ಮಾರಾಟ ಮಾಡಬೇಕು. ಅದನ್ನು ಕೊಳ್ಳಬೇಕು.

ಉಪ್ಪಿನ ಸತ್ಯಾಗ್ರಹ, 6 ಏಪ್ರಿಲ್ 1930

ಹೀಗೆ ಉಪ್ಪಿನ ಕಾಯಿದೆಯನ್ನು ಮುರಿಯಬೇಕು. ಅಲ್ಲದೆ, ಕರವನ್ನು ಕೊಡಲು ನಿರಾಕರಿಸಬೇಕು ಎಂದು ಅವರು ಹೇಳಿದರು. ಮಾರ್ಚಿ 12 ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಅತ್ಯಮೋಘವಾದ ದಿನವೆಂದು ಪರಿಗಣಿತವಾಗಿದೆ. ಅಂದು ಮುಂಜಾನೆ 6-30ಕ್ಕೆ ಸರಿಯಾಗಿ ಗಾಂಧೀಜಿಯವರು ತಮ್ಮ ಆಶ್ರಮದ 78 ನಿವಾಸಿಗಳೊಡನೆ ಸಬರ್ಮತಿ ಆಶ್ರಮದಿಂದ ಐತಿಹಾಸಿಕ ದಂಡಿಯಾತ್ರೆಯನ್ನು ಪ್ರಾರಂಭಿಸಿದರು. ದಿನವೂ 16 ಕಿಮೀಗಳಂತೆ ನಡೆದು ಯಾತ್ರೆಯನ್ನು ಪರಿಪೂರ್ಣಗೊಳಿಸಿದರು. 385 ಕಿಮೀ ನಡೆದು ಏಪ್ರಿಲ್ 5ರಂದು ಮುಂಜಾನೆ 8-30ಕ್ಕೆ ಸರಿಯಾಗಿ ಗಾಂಧೀಜಿಯವರು ಸಮುದ್ರದಿಂದ ಉಪ್ಪನ್ನು ತಯಾರಿಸಬಾರದೆಂಬ ಕಾಯಿದೆಯನ್ನು ಭಂಗಮಾಡಿ ಇಡೀ ರಾಷ್ಟ್ರಕ್ಕೆ ಮಾರ್ಗವನ್ನು ಸೂಚಿಸಿದರು. ಇನ್ನು ಮೇಲೆ ಯಾರು ಬೇಕಾದರೂ ಉಪ್ಪಿನ ಕಾಯಿದೆಯನ್ನು ಮುರಿಯಬಹುದೆಂದು ಸೂಚನೆಯಿತ್ತರು. ಸ್ವತಃ ತಾವು ನೆರೆಹೊರೆಯ ಹಳ್ಳಿಗಳಿಗೆ ದಿನವೂ ಹೋಗಿ ಚಳವಳಿಯ ಮಹತ್ತ್ವವನ್ನು ಉಪದೇಶಿಸಿ ಕಾಯಿದೆ ಮುರಿಯಲು ಪ್ರೇರೇಪಿಸಿದರು. ದಂಡಿಯಲ್ಲಿಯೇ ಹೇರಳ ಉಪ್ಪನ್ನು ತಯಾರಿಸಿ ಮಾರಲಾಯಿತು. ಜಪ್ತಿ ಮಾಡಲಾಯಿತು. ಗುಜರಾತ್, ಬೊಂಬಾಯಿ, ಮದರಾಸು ಮತ್ತು ಕರಾಚಿ ಕೂಡ ಹಿಂದೆ ಬೀಳದೆ ಅಕ್ರಮ ಉಪ್ಪು ತಯಾರಿಕೆಯನ್ನು ಪ್ರಾರಂಭಿಸಿದುವು. ಅಲ್ಲಲ್ಲಿ ಅಲ್ಪ ಸ್ವಲ್ಪ ಗಲಭೆಗಳೂ ಪೋಲೀಸರ ದಬ್ಬಾಳಿಕೆಯೂ ಪ್ರಾರಂಭವಾದುವು. ಏಪ್ರಿಲ್ 23ರಂದು ಖಾನ್ ಅಬ್ದುಲ್ ಗಫಾರ್ ಖಾನರನ್ನು ದಸ್ತಗಿರಿ ಮಾಡಲಾಗಿ ಪೆಷಾವರದಲ್ಲಿ ಪ್ರದರ್ಶನ ನಡೆಯಿತು. ಪೋಲೀಸರು ಗುಂಡುಹಾರಿಸಿ ಅನೇಕರನ್ನು ಕೊಂದರು. ನವಜೀವನ ಪತ್ರಿಕೆ ಮತ್ತು ಮುದ್ರಣಾಲಯಗಳನ್ನು ಸರ್ಕಾರ ವಶಪಡಿಸಿಕೊಂಡು ಮುದ್ರಣ ಸ್ವಾತಂತ್ರ್ಯವನ್ನು ಕಿತ್ತುಕೊಂಡಿತು. ಪ್ರತಿಯೊಂದು ಕಡೆಯೂ ಲಾಠಿ ಪ್ರಹಾರ, ಗುಂಡಿನ ಸುರಿಮಳೆ, ಆಸ್ತಿಗಳ ಜಪ್ತಿ, ಹಳ್ಳಿಗರನ್ನು ಸುತ್ತುಗಟ್ಟಿ ಗುಂಡಿಕ್ಕಿ ದಸ್ತಗಿರಿಗಳಾದುವು. ಅಂದಿನಿಂದ ಚಳವಳಿ ಉಗ್ರಸ್ವರೂಪ ತಾಳಿತು. ಮುಂಬಯಿಯ 50,000 ಕೆಲಸಗಾರರು ಮುಷ್ಕರ ಹೂಡಿದರು. ಕಲ್ಕತ್ತ ಮತ್ತು ದೆಹಲಿಗಳಲ್ಲಿ ಗುಂಡು ಹಾರಿಸಲಾಯಿತು. ಸೋಲ್ಲಾಪುರ ಒಂದು ವಾರದವರೆಗೆ ಜನರ ಕೈಯಲ್ಲಿತ್ತು. ಮೈಮನ್ ಸಿಂಗ್, ಕರಾಚಿ, ಲಖನೌ, ಮುಲ್ತಾನ್, ರಾವಲ್ಪಿಂಡಿ, ಪೆಷಾವರ್‌ಗಳಲ್ಲಿ ಗಲಭೆಗಳಾದುವು. ಅವನ್ನು ಸದೆಬಡಿಯಲು ವಾಯವ್ಯ ಪ್ರಾಂತದಲ್ಲಿ ಸೇನೆ, ವಿಮಾನ ಮತ್ತು ಟ್ಯಾಂಕ್‌ಗಳನ್ನು ಉಪಯೋಗಿಸಲಾಯಿತು. ಸರೋಜಿನಿ ನಾಯ್ಡು ಅವರ ನಾಯಕತ್ವದಲ್ಲಿ ಸುಮಾರು 2000 ಸ್ವಯಂಸೇವಕರು ದರ್ಶಾನ್ ಉಪ್ಪಿನ ಕೇಂದ್ರದ ಮೇಲೆ ಮಾಡಿದ ದಾಳಿಯನ್ನು ಪ್ರತ್ಯಕ್ಷವಾಗಿ ನೋಡಿದ ಅಮೆರಿಕನ್ ಪತ್ರಿಕಾಪ್ರತಿನಿಧಿ ಮಿಲ್ಲರನ ವರ್ಣನೆ ಗಮನಾರ್ಹವಾಗಿದೆ. ವಾಡ್ಲಾ ಉಪ್ಪಿನ ಕೋಠಿಯನ್ನು ಸುಮಾರು 1,500 ಸ್ವಯಂಸೇವಕರು ದಾಳಿ ಮಾಡಿ ಚೀಲಗಟ್ಟಲೆ ಒಯ್ದರು. ಕರ್ನಾಟಕದಲ್ಲಿ 10,000 ಮಂದಿ ಸಾಣಿಕಟ್ಟೆಯನ್ನು ದಾಳಿ ಮಾಡಿ 1,000 ಮಣ ಉಪ್ಪನ್ನು ಒಯ್ದರು. ವರ್ಷ ಮುಗಿಯುವುದರೊಳಗೆ ಸರ್ಕಾರ 12 ಸುಗ್ರೀವಾಜ್ಞೆಗಳನ್ನು ಹೊರಡಿಸಿತು. ಪೆಷಾವರ್ ದಿನ ಗಾಂಧಿ ದಿನ ಮೊದಲಾದ ದಿನಗಳನ್ನು ಆಚರಿಸಿ, ಬೊಂಬಾಯಿ ನಗರ ಇತರೆ ನಗರಗಳಿಗೆ ಮಾರ್ಗದರ್ಶನ ನೀಡಿತು. ಲಾಠಿ ಪ್ರಹಾರವನ್ನು ಎದುರಿಸುವುದೊಂದು ಗೌರವವೆಂದು ಎಣಿಸಲಾಯಿತು. ಅಶ್ವಾರೋಹಿ ಐರೋಪ್ಯ ಸೈನ್ಯ ಲಾಠಿಪ್ರಹಾರ ಮಾಡಿ ಜನರನ್ನು ಚದುರಿಸಿತು. ಖಾದಿ ಟೋಪಿ ಹಾಕುವದೇ ಒಂದು ಅಪರಾಧವಾಯಿತು.

ಕರ ನಿರಾಕರಣೆ ಕೂಡ ಇದರ ಮುಖ್ಯವಾದ ಅಂಗ. ಇದು ಬಾರ್ಡೋಲಿಯಲ್ಲಿ ಪಟೇಲರ ನೇತೃತ್ವದಲ್ಲಿ ಮುಂದುವರೆಯಿತು. ಆಂಧ್ರ, ಕರ್ನಾಟಕ, ಗುಜರಾತ್, ಬಿಹಾರ್, ಪಂಜಾಬ್, ಒರಿಸ್ಸ, ಬಂಗಾಳ, ಮಹಾರಾಷ್ಟ್ರ- ಎಲ್ಲ ಕಡೆಯೂ ಈ ಚಳವಳಿ ನಡೆದು ಭಾರತದ ಪ್ರತಿಯೊಂದು ಭಾಗವೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿತು. ಕರ್ನಾಟಕದಲ್ಲಿ, ಅದರಲ್ಲಿಯೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ ನಿರಾಕರಣೆ ಚಳವಳಿ ಉತ್ತಮ ರೀತಿಯಲ್ಲಿ ಸಂಘಟಿತವಾಗಿತ್ತು. ಶಿರಸಿ, ಸಿದ್ಧಾಪುರ ಮುಂತಾದೆಡೆಗಳಲ್ಲಿ ಅನೇಕ ಪಟೇಲರು ರಾಜೀನಾಮೆ ಸಲ್ಲಿಸಿದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 800 ಕುಟುಂಬಗಳು ಚಳುವಳಿಯಲ್ಲಿ ಭಾಗವಹಿಸಿದುವು. ಕರ್ನಾಟಕದ ಅನೇಕ ತಾಲ್ಲೂಕುಗಳು ಕಷ್ಟನಷ್ಟಗಳಿಗೆ ಒಳಗಾದವು. ಅನೇಕ ಮಂದಿ ಸ್ತ್ರೀಪುರುಷರು ಶಿಕ್ಷೆ ಅನುಭವಿಸಿದರು. 15 ಲಕ್ಷ ರೂಪಾಯಿಗಳಷ್ಟು ಆಸ್ತಿಯ ಜಪ್ತಿ ಆಯಿತು. 1931ರಲ್ಲಿ ಗಾಂಧೀಜಿಯವರ ಬಿಡುಗಡೆಯಾಯಿತು. ಗಾಂಧಿ ಮತ್ತು ವೈಸ್‌ರಾಯ್ ಇರ್ವಿನ್ ನಡುವೆ ಒಪ್ಪಂದವಾಗಿ ಗಾಂಧಿಯವರು ಚಳವಳಿಯನ್ನು ಹಿಂತೆಗೆದುಕೊಂಡರು. 1931ರಲ್ಲಿ ನಡೆದ ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಕಾಂಗ್ರೆಸ್ ಸಮ್ಮತಿಸಿತು.

ಆದರೆ ಭಾರತೀಯರ ಆಕಾಂಕ್ಷೆ ನೆರವೇರಬಹುದೆಂಬ ಭರವಸೆ ದೊರಕಲಿಲ್ಲ. ಗಾಂಧಿಯವರ ದಸ್ತಗಿರಿಯಾಯಿತು.ಕಾನೂನುಭಂಗ ಚಳವಳಿ ಮತ್ತೆ ಆರಂಭವಾಗಲು (1932) ಕಾರಣವಾದ್ದು ಈ ಪ್ರಕರಣ. ಸರ್ಕಾರ ಉಗ್ರಕ್ರಮಗಳಿಂದ ಈ ಚಳವಳಿಯನ್ನು ಹತ್ತಿಕ್ಕಲು ಯತ್ನಿಸಿತು.

ಬ್ರಿಟಿಷರ ದಬ್ಬಾಳಿಕೆಯಿಂದ ತಾತ್ಕಾಲಿಕವಾಗಿ ಗುಪ್ತವಾಗಿದ್ದ ಈ ಶಕ್ತಿ ಮತ್ತೆ ಪ್ರಕಟವಾದ್ದು 1910ರಲ್ಲಿ, ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕು, ಇಲ್ಲದಿದ್ದರೆ ಕಾನೂನುಭಂಗ ಚಳವಳಿ ಆರಂಭವಾಗುವುದು ಎಂದು ಗಾಂಧೀಜಿ ಸಾರಿದರು. 1942ರಲ್ಲಿ ಸರ್ಕಾರ ಕಾಂಗ್ರೆಸಿನ ಎಲ್ಲ ಪ್ರಮುಖರನ್ನೂ ಸೆರೆಯೊಳಕ್ಕೆ ತಳ್ಳಿತು. ಸಾಮೂಹಿಕ ಉದ್ರೇಕ, ಉದ್ವೇಗ, ಸರ್ಕಾರದ ಉಗ್ರಕ್ರಮ_ಇವು ಸಾರ್ವತ್ರಿಕವಾದುವು, ಮಹಾತ್ಮ ಗಾಂಧಿ ಮತ್ತು ಇತರ ನಾಯಕರನ್ನು ಸರ್ಕಾರ ಕೊನೆಗೂ ಬಿಡುಗಡೆ ಮಾಡಿ ಸಂಧಾನ ಆರಂಭಿಸಿತು. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕೆಂದು ಗಾಂಧಿಯವರು ಹೇಳಿದ ಏಳು ವರ್ಷಗಳ ಅನಂತರ ಅವರ ಮಾತು ನಿಜವಾಯಿತು. ಭಾರತಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂತು. (ಜಿ.ಆರ್.ಕೆ.)

**ಕಾನ್ಪುರ :** ಭಾರತದ ಉತ್ತರ ಪ್ರದೇಶ ರಾಜ್ಯದ ಒಂದು ಜಿಲ್ಲೆ ಮತ್ತು ಜಿಲ್ಲಾಡಳಿತ ಕೇಂದ್ರನಗರ. ಗಂಗಾನದಿಯ ದಕ್ಷಿಣ ದಂಡೆಯ ಮೇಲೆ ಉ.ಅ.26$^{0}$28' ಮತ್ತು ಪೂ.ರೇ.80$^{0}$21'ನಲ್ಲಿದೆ. ಲಖನೌಗೆ ನೈಋತ್ಯದಲ್ಲಿ 169 ಕಿಮೀ ದೂರದಲ್ಲೂ ಅಲಹಾಬಾದಿಗೆ ವಾಯವ್ಯದಲ್ಲಿ 184 ಕಿಮೀ ದೂರದಲ್ಲೂ ದೆಹಲಿಗೆ ಆಗ್ನೇಯದಲ್ಲಿ 392 ಕಿಮೀ ದೂರದಲ್ಲೂ ಇರುವ ಈ ನಗರ ಮೂರು ರೈಲ್ವೆ ವಸತಿಗಳನ್ನೂ ದಂಡಿನ ಪ್ರದೇಶವನ್ನೂ ಆರ್ಮಾಪುರ್ ಉಪನಗರವನ್ನೂ ಒಳಗೊಂಡಿದೆ. ನದೀ ದಂಡೆಯ ಮೇಲಿರುವ ಹಲವಾರು ನಗರಗಳಂತೆ ಇದರ ಹಳೆಯ ನಗರ ನದೀಪಾತ್ರಕ್ಕೆ ಹತ್ತಿರದಲ್ಲಿ ನಿರ್ಮಿತವಾಗಲಿಲ್ಲ. ಅದು ನದಿಯಿಂದ 1.6 ಕಿಮೀ ಆಚೆಗಿದೆ. ಕಾನ್ಪುರ ಹಿಂದಿನಿಂದಲೂ ಮುಖ್ಯ ಸೈನಿಕ ನೆಲೆಯಾಗಿತ್ತು. ಅದರ ಬಳಿಯಲ್ಲೇ ಸೈನಿಕ ವಿಮಾನ ನೆಲೆಯೂ ಸ್ಥಾಪಿತವಾದುದರಿಂದ ಕಾನ್ಪುರದ ಪ್ರಾಮುಖ್ಯ ಇನ್ನೂಹೆಚ್ಚಿತು. ಇದು ಉತ್ತರ ಪ್ರದೇಶದ ಪ್ರಮುಖ ನಗರವಷ್ಟೇ ಅಲ್ಲ; ಭಾರತದಲ್ಲೇ

ಅತ್ಯಂತ ದೊಡ್ಡ ನಗರಗಳಲ್ಲೊಂದಾಗಿದೆ. ವಿಸ್ತೀರ್ಣ 1600 ಚ.ಕಿಮೀ ಜನಸಂಖ್ಯೆ 4137, 489 (2001).

ಕಾನ್ಪುರ ಮುಖ್ಯ ರೈಲ್ವೆ ಮತ್ತು ರಸ್ತೆಗಳ ಸಂದಿಸ್ಥಳ. ದೆಹಲಿ-ಕೋಲ್ಕತ್ತ ಹೆದ್ದಾರಿ ಹಾದು ಹೋಗುವುದು ಕಾನ್ಪುರದ ಮೂಲಕ. ಉತ್ತರ, ಈಶಾನ್ಯ ಮತ್ತು ಮಧ್ಯ ರೈಲ್ವೆಗಳು ಇಲ್ಲಿ ಕೂಡುವುದರಿಂದ ಭಾರತದ ಉಳಿದ ಭಾಗಗಳೊಂದಿಗೆ ಇದಕ್ಕೆ ಸುಸಂಪರ್ಕ ಏರ್ಪಟ್ಟಿದೆ. ಇದು ಶಿಕ್ಷಣ ಕೇಂದ್ರ ಕೂಡ. ಕೃಷಿ ಮತ್ತು ವಸ್ತ್ರ ತಂತ್ರಶಾಸ್ತ್ರ ಕಾಲೇಜುಗಳೇ ಮುಂತಾದ ಹಲವು ಕಾಲೇಜುಗಳು ಇಲ್ಲುಂಟು. ಇವು ಆಗ್ರ ವಿಶ್ವವಿದ್ಯಾಲಯದ ಮನ್ನಣೆ ಪಡೆದಿವೆ. ಭಾರತೀಯ ತಂತ್ರಶಾಸ್ತ್ರ ಸಂಸ್ಥೆಯ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ವೈದ್ಯಕೀಯ ಕಾಲೇಜು ಲಖನೌ ವಿಶ್ವವಿದ್ಯಾಲಯದ ಮನ್ನಣೆ ಪಡೆದಿದೆ. ಸಣ್ಣ ಸರೋವರದ ಮೇಲೆ ನಿರ್ಮಿತವಾದ ಕಮಲಾ ವಿಶ್ರಾಂತಿ ಭವನ, ಸ್ಮಾರಕ ಸ್ತೂಪ, ಗಾಜಿನ ದೇಗುಲ ಇವು ನಗರದ ಪ್ರೇಕ್ಷಣೀಯ ಸ್ಥಳಗಳು.

ಕಾನ್ಪುರಕ್ಕೆ ಮೊದಲು ಕನ್ಹೈಯಪುರ ಎಂದು ಹೆಸರಿತ್ತು. ಅನಂತರ ಇದು ಕಾನ್ಹಪುರವಾಗಿ ಈಗ ಇದು ಕಾನ್ಪುರವೆನಿಸಿಕೊಂಡಿದೆ. ದೆಹಲಿಯ ಸುಲ್ತಾನರ ಕಾಲದಲ್ಲಿ ಕಾನ್ಪುರ ಪ್ರಾಂತೀಯ ರಾಜಧಾನಿಯಾಗಿತ್ತು. ಔಧ್ ಮತ್ತು ಬಂಗಾಳಗಳ ಗಡಿಯ ಕೊನೆಯ ಠಾಣೆಯಾಗಿದ್ದ ಕಾನ್ಪುರದ ಪ್ರಾಮುಖ್ಯವನ್ನರಿತಿದ್ದ ಬ್ರಿಟಿಷ್ ಗವರ್ನರ್-ಜನರಲ್ ರಾಬರ್ಟ್ ಕ್ಲೈವ್ ಇದನ್ನು ಸೈನ್ಯಠಾಣೆಯಾಗಿ ಆರಿಸಿಕೊಂಡು, ಔಧ್ ನವಾಬ ಕೊಟ್ಟ ಸೈನ್ಯದಳವನ್ನು ಅಲ್ಲಿ ನೆಲೆಗೊಳಿಸಿದ. 1801ರಲ್ಲಿ ಔಧ್ ನವಾಬನಿಂದ ರೋಹಿಲ್ಖಂಡ ಕೆಳದೋಆಬ್ ಮತ್ತು ಗೋರಖ್‌ಪುರ ವಿಭಾಗಗಳನ್ನು ಲಾರ್ಡ್ ವೆಲೆಸ್ಲಿ ಪಡೆದುಕೊಂಡಾಗ ಕಾನ್ಪುರ ಬ್ರಿಟಿಷ್ ರಾಜ್ಯದ ಗಡಿಯ ಮುಖ್ಯ ಸ್ಥಳವಾಯಿತು.

1857ರಲ್ಲಿ ಭಾರತದಲ್ಲಿ ಬ್ರಿಟಿಷರ ವಿರುದ್ಧ ಸಂಭವಿಸಿದ ಬಂಡಾಯದ ಕಾಲದಲ್ಲಿ ಕಾನ್ಪುರದ ಪಾತ್ರ ಪ್ರಧಾನವಾದದ್ದು. ಆ ಬಂಡಾಯ ಸಂಭವಿಸಿದಾಗ ಮಾಜಿ ಪೇಷ್ವೆ ಎರಡನೆಯ ಬಾಜಿರಾಯನ ಮಗ ನಾನಾಸಾಹೇಬ ವಾಸಿಸುತ್ತಿದ್ದದ್ದು ಕಾನ್ಪುರದ ಬಳಿಯ ಬಿಠೂರಿನಲ್ಲಿ. ಆತ ಕೂಡಲೇ ತಾನು ಪೇಷ್ವೆಯೆಂದು ಸಾರಿಕೊಂಡು, ಕಾನ್ಪುರದಲ್ಲಿ ನೆಲೆಗೊಂಡಿದ್ದ ಬಂಡಾಯಗಾರ ಸಿಪಾಯಿಗಳ ನಾಯಕತ್ವ ವಹಿಸಿಕೊಂಡ. ಬ್ರಿಟಿಷ್ ಭದ್ರ ನೆಲೆಗಳಿಗೆಲ್ಲ ಅವರು ಮುತ್ತಿಗೆ ಹಾಕಿದರು (1857ರ ಜೂನ್ 8). ಅಲ್ಲಿ ವಾಸಿಸುತ್ತಿದ್ದ ಬ್ರಿಟಿಷ್ ಜನ 27ರಂದು ಶರಣಾಗತರಾಗಬೇಕಾಯಿತು. ಅವರನ್ನೆಲ್ಲ ಸುರಕ್ಷಿತವಾಗಿ ಅಲಹಾಬಾದಿಗೆ ತಲಪಿಸಲು ಸಿಪಾಯಿಗಳು ಒಪ್ಪಿದರು. ಆದರೆ ಅವರ ದಂಡು ಅಲ್ಲಿಂದ ದೋಣಿಯಲ್ಲಿ ಕುಳಿತು ಹೊರಡುವಷ್ಟರಲ್ಲಿ ಅವರ ಮೇಲೆ ಗುಂಡಿನ ಮಳೆ ಕರೆಯಿತು. ನಾಲ್ವರು ಸೈನಿಕರು ವಿನಾ ಉಳಿದವರೆಲ್ಲ ಸತ್ತರು. ಇಂಗ್ಲಿಷರಲ್ಲಿ ಸಾಮಾನ್ಯ ಜನರೂ ಕೊಲೆಗೀಡಾದರು. ಅವರ ದೇಹಗಳನ್ನು ಬಾವಿಯೊಂದರೊಳಕ್ಕೆ ಎಸೆಯಲಾಯಿತೆಂದು ಹೇಳಲಾಗಿದೆ. ಇದರಿಂದ ಕೋಪಗೊಂಡ ಇಂಗ್ಲಿಷರು ನೀಲ್ ಮತ್ತು ಹ್ಯಾವ್‌ಲಾಕರ್ ನೇತೃತ್ವದಲ್ಲಿ ಸೈನ್ಯವೊಂದನ್ನು ಕಳುಹಿಸಿ ಕಾನ್ಪುರವನ್ನು ವಶಪಡಿಸಿಕೊಂಡು, ಭಾರತೀಯರ ಮೇಲೆ ಅತ್ಯಂತ ಕ್ರೂರವಾದ ರೀತಿಯಲ್ಲಿ ಸೇಡುತೀರಿಸಿಕೊಂಡರು. 1857ರ ನವೆಂಬರಿನಲ್ಲಿ ಗ್ವಾಲಿಯರ್ ವಿಭಾಗದ ದಳದ ಬಂಡಾಯಗಾರರು ಕಾನ್ಪುರವನ್ನು ಆಕ್ರಮಿಸಿಕೊಂಡಿದ್ದರು. ಡಿಸೆಂಬರಿನ ಆದಿಭಾಗದಲ್ಲಿ ಕಾಲಿನ್ ಕ್ಯಾಂಪ್‌ಬೆಲನ ನೇತೃತ್ವದಲ್ಲಿ ಇಗ್ಲಿಂಷ್ ಸೈನ್ಯ ಮತ್ತೆ ಅದನ್ನು ವಶಪಡಿಸಿಕೊಂಡಿತು.

ಕಾನ್ಪುರದ ಕೈಗಾರಿಕಾ ಬೆಳೆವಣಿಗೆ ಉತ್ತರ ಭಾರತದಲ್ಲೇ ವಿಶಿಷ್ಟವಾದ್ದು. ಜವಳಿ ಕೈಗಾರಿಕೆ ಬಹಳ ಮುಖ್ಯ. ಇದು ಸರ್ಕಾರಿ ಜೀನಿನ ಕಾರ್ಖಾನೆಯ ಸ್ಥಾಪನೆಯಿಂದ ಆರಂಭವಾಗಿ ಇಂದು ಬೃಹದ್ಗಾತ್ರ ಕೈಗಾರಿಕೆಯಾಗಿದೆ. ಹತ್ತಿ ನೂಲುವ, ನೇಯುವ, ಹಿಂಜುವ, ಒತ್ತುವ ಗಿರಣಿಗಳೂ ಸಣಬು ಮತ್ತು ಉಣ್ಣೆ ಗಿರಣಿಗಳೂ ವನಸ್ಪತಿ, ಸಾಬೂನು, ಪ್ಲಾಸ್ಟಿಕ್ಸ್, ಬಿಸ್ಕತ್ತು, ರಸಾಯನವಸ್ತು, ಹಿಟ್ಟು, ಅಕ್ಕಿತಯಾರಿಕೆ, ಭಟ್ಟಿ ಇಳಿಸುವುದು ಮತ್ತು ವಿವಿಧ ಎಂಜಿನಿಯರಿಂಗ್ ಕೈಗಾರಿಕೆಗಳೂ ಸ್ಥಾಪಿತವಾಗಿವೆ. ಹತ್ತಿ ಬಟ್ಟೆ, ಬಗೆಬಗೆಯ ಸರಕುಗಳು, ಸಕ್ಕರೆ, ಸಂಬಾರ ಮತ್ತು ಧಾನ್ಯಗಳ ವ್ಯಾಪಾರದ ಮುಖ್ಯ ಕೇಂದ್ರವಿದು.

1901ರಿಂದೀಚೆಗೆ ಕಾನ್ಪುರದ ಜನಸಂಖ್ಯೆ ನಾಲ್ಮಡಿಯಾಗಿ ಬೆಳೆದಿದೆ. 1931ರಿಂದ 1941ರ ವರೆಗಿನ ಕಾಲದಲ್ಲಿ ಇದು ಲಖನೌ ನಗರವನ್ನೂ ಮೀರಿ ಬೆಳೆಯಿತು. 1941ರಲ್ಲಿ ಇದರ ಜನಸಂಖ್ಯೆ 4,87,324. 1961ರಲ್ಲಿ ಇದು 9,71,062ಕ್ಕೆ ಏರಿತು. ಇದರ ಕೈಗಾರಿಕಾ ವಾಣಿಜ್ಯ ಪ್ರಾಮುಖ್ಯ ಅಧಿಕವಾದದ್ದು ಅಮೆರಿಕನ್ ಅಂತರ್ಯುದ್ಧ ಕಾಲದಲ್ಲಿ. ಅದರಿಂದಾಗಿ ಭಾರತದ ಹತ್ತಿಗೆ ಒಮ್ಮೆಗೇ ಬೇಡಿಕೆ ಹೆಚ್ಚಿತು. ಆಗ ತಾನೆ ಕಾನ್ಪುರಕ್ಕೆ ಕಲ್ಕತ್ತದೊಂದಿಗೆ ರೈಲ್ವೆ ಸಂಪರ್ಕ ಏರ್ಪಟ್ಟಿದ್ದುದರಿಂದ ಅದು ಉತ್ಕರ್ಷ ನಗರವಾಗಿ (ಬೂಮ್ ಟೌನ್) ಪರಿಣಮಿಸಿತು. ಸೈನ್ಯ ಶಿಬಿರಗಳ ಮಣ್ಣಿನ ಗೋಡೆಯ ಗುಡಿಸಲುಗಳನ್ನು ದಂಡಿನ ಮೋತೀಖಾನೆಯ ಇಲಾಖೆ ಆನೆಗಳಿಂದ ಉರುಳಿಸಲಾಯಿತು. ಹತ್ತಿಯ ಬೇಲುಗಳು ರಾಶಿರಾಶಿಯಾಗಿ ತುಂಬಿದ್ದುದರಿಂದ ನಗರದ ಕಿರು ಓಣಿಗಳಲ್ಲಿ ಸಂಚಾರಕ್ಕೆ ಅಡ್ಡಿಯುಂಟಾಗಿತ್ತೆಂದು ಹೇಳಲಾಗಿದೆ. ಜೊತೆಗೆ ದೋಆಬ್ ಮತ್ತು ಔಧ್ ಪ್ರದೇಶಗಳ ಸ್ಥಳೀಯ ತಯಾರಿಕೆಗಳೂ ಇಲ್ಲಿಗೆ ಬರಲಾರಂಭಿಸಿದುವು. ಕಾನ್ಪುರದ ಪ್ರಥಮ ಹತ್ತಿ ಗಿರಣಿಗಳು ಸ್ಥಾಪಿತವಾದ್ದು 1869 ರಿಂದ 1882ರ ವರೆಗಿನ ಕಾಲದಲ್ಲಿ. ಕಾನ್ಪುರವೀಗ ಭಾರತದ ಹಳೆಯ ಕಾರ್ಖಾನೆ ನಗರಗಳಲ್ಲೊಂದಾಗಿದೆ. ಅಹಮಬಾದಿನಂತೆ ಇದೂ ಹತ್ತಿ ವ್ಯಾಪಾರ ಮತ್ತು ಜವಳಿ ಕೈಗಾರಿಕೆಯಿಂದಾಗಿ ಮುಂದೆಬಂದಿತಾದರೂ ಇಲ್ಲಿಯ ಕೈಗಾರಿಕೆಗಳು ವೈವಿಧ್ಯಮಯವಾಗಿವೆ.

**ಕಾನ್ಪುರ ಜಿಲ್ಲೆ :** ಗಂಗಾ-ಯಮುನಾ ನದಿಗಳ ಮಧ್ಯೆ ಉ.ಅ. 25° 26'-26° 28' ಮತ್ತು ಪೂ.ರೇ. 79° 31'-80° 34' ನಡುವೆ ಹರಡಿದೆ. ಅತ್ಯಂತ ಫಲವತ್ತಾದ ದೋಆಬ್ ಪ್ರದೇಶವಿದು. ಇದರ ವಿಸ್ತೀರ್ಣ 6105 ಚ.ಕಿಮೀ. ಜನಸಂಖ್ಯೆ 4137479 (2001). ಖಿಂದ್, ಸೇಗುರ್, ಈಶಾನ್, ಪಾಂಡವ, ಉತ್ತರ ನೋನ್ ಮತ್ತು ದಕ್ಷಿಣ ನೋನ್ ಇಲ್ಲಿ ಹರಿಯುವ ಇತರ ನದಿಗಳು. ಈ ಜಿಲ್ಲೆ ಆಗಿಂದಾಗ್ಗೆ ಪ್ರವಾಹ ಉಪಟಳಕ್ಕೆ ತುತ್ತಾಗಿದೆ. 1924 ಮತ್ತು 1948ರಲ್ಲಿ ಪ್ರವಾಹ ಬಂದಾಗ ಪರಮಟ್ ಮತ್ತು ಹಳೆಯ ಕಾನ್ಪುರ ನಗರ ಪ್ರದೇಶಗಳು ನೀರಿನಲ್ಲಿ ಮುಳುಗಿದ್ದುವು. ಗಂಗಾನದಿಯಲ್ಲಿ ನೀರು ಅತಿಯಾಗಿ ಬಂದಾಗ ನೋನ್ ನದಿಯ ನೀರು ಹಿಂದಕ್ಕೆ ಒದೆದುಕೊಂಡು ಆ ಸುತ್ತೆಲ್ಲ ಹರಡುತ್ತದೆ. ಇಲ್ಲಿಯ ವಾಯುಗುಣ ಬೇಸಗೆಯಲ್ಲಿ ತಾಪಕರ, ಒಣಹವಾಯುಕ್ತ ; ಚಳಿಗಾಲದಲ್ಲಿ ಶೀತಲ. ಸರಾಸರಿ ಮಳೆ 84 ಸೆಂಮೀ. ಮಾವು ಮತ್ತು ಇಪ್ಪೆ ತೋಪುಗಳು ಅಲ್ಲಲ್ಲಿ ಹರಡಿವೆ. ಜಿಲ್ಲೆಯ ಒಂದು ಭಾಗ ಕಾಡು. ಗಂಗಾ ಕಾಲುವೆಯ ನಾಲ್ಕು ಶಾಖೆಗಳಿಂದಲೂ ಜಿಲ್ಲೆಗೆ ನೀರಾವರಿ ಸೌಲಭ್ಯಲಭಿಸಿದೆ. ಕಾಳು, ಗೋದಿ, ಅವರೆ, ಬಾರ್ಲಿ, ಸಾಸವೆ, ಮುಸುಕಿನ ಜೋಳ, ಎಳ್ಳು, ಬತ್ತ, ಬಾಜ್ರ, ಕಬ್ಬು, ಹತ್ತಿ-ಇವು ಮುಖ್ಯ ಬೆಳೆಗಳು.

ಬಿಠೂರ್ ಈ ಜಿಲ್ಲೆಯ ಪುರಾತನ ಕ್ಷೇತ್ರಗಳಲ್ಲೊಂದು. ಇಲ್ಲಿ ಬ್ರಹ್ಮನ ಪಾದದ ಗುರುತೆಂದು ಹೇಳಲಾದ ಚಿಹ್ನೆಯೊಂದು ಇದೆ. ಇದು ಹಿಂದೂಗಳಿಗೆ ಪವಿತ್ರ. ವಾಲ್ಮೀಕಿ ಇಲ್ಲಿ ಆಶ್ರಮ ಕಟ್ಟಿಕೊಂಡಿದ್ದನೆಂದು ಹೇಳಲಾಗಿದೆ. ಆರಾಂದ್‌ನ ಸುತ್ತ ಮುತ್ತ 6ರಿಂದ 9ನೆಯ ಶತಮಾನಗಳ ನಡುವಣ ಕಾಲದಲ್ಲಿ ನಿರ್ಮಿತವಾದ ಅನೇಕ ದೇಗುಲಗಳ ಅವಶೇಷಗಳುಂಟು.

(ಸಿ.ಕೆ.ವೈ.ಡಿ.; ಆರ್.ಡಿ.ಆರ್.)

**ಕಾನ್‌ಫ್ಯೂಷಸ್ :** ಪ್ರ.ಶ.ಪೂ. 551-479. ಚೀನದ ಓರ್ವ ಪ್ರಖ್ಯಾತ ಪ್ರತಿಭಾವಂತ ವ್ಯಕ್ತಿ. ರಾಜಕೀಯದ, ನಿತ್ಯಜೀವನದ ಆಚಾರ ವ್ಯವಹಾರಗಳಲ್ಲಿ ಉನ್ನತ ಮಟ್ಟ ಸಾಧಿಸಿದ ಮಹಾಪುರುಷ. ಈತ ಬೋಧಿಸಿದ ಸಾರ್ವಜನಿಕ, ರಾಜಕೀಯ ನೀತಿಬೋಧೆಯ ಆಧಾರದ

ಮೇಲೆ ಮುಂದೆ ಕಾನ್‌ಫ್ಯೂಷನಿಸಂ ಎಂಬ ಪಂಥವೊಂದು ತಲೆಯೆತ್ತಿ ಪ್ರಸಿದ್ಧವಾಯಿತು. ಕೂಂಗ್ ಫೂ ಟ್ಸು ಎಂಬುದು ಇವನ ಹೆಸರಿನ ಚೀನೀ ರೂಪ. ಪ್ರ.ಶ.ಪೂ. 551ರಲ್ಲಿ ಷಾಂಟುಂಗ್ ಪ್ರಾಂತ್ಯದ ಲು ಎಂಬಲ್ಲಿ ಜನ್ಮವೆತ್ತಿದ. ಇವನು ಷಾಂಗ್ ರಾಜವಂಶಕ್ಕೆ (ಪ್ರ.ಶ.ಪೂ. 1766-1122) ಸೇರಿದವನಾದರೂ ಬಡತನದಲ್ಲಿ ಬೆಳೆದ. ಈತ ಹುಟ್ಟಿದಾಗ 70 ವರ್ಷಗಳ ವೃದ್ಧ ತಂದೆ ಸೈನ್ಯದಲ್ಲಿ ಸಣ್ಣ ಅಧಿಕಾರಿಯಾಗಿದ್ದ. ಮೂರು ವರ್ಷಗಳ ಅನಂತರ ತಂದೆ ಮೃತನಾಗಲು ತಾಯಿ ಬಹು ಕಾರ್ಪಣ್ಯದಿಂದ ಈತನನ್ನು ಸಾಕಿದಳು. ಒಳ್ಳೆ ಶಿಕ್ಷಣ ದೊರಕಿ 17ನೆಯ ವಯಸ್ಸಿನಲ್ಲೇ ಕಾನ್‌ಫ್ಯೂಷಸನಿಗೆ ಸರ್ಕಾರಿ ನೌಕರಿಯೂ ಸಿಕ್ಕಿತು. 18ನೆಯ ವಯಸ್ಸಿನಲ್ಲಿ ವಿವಾಹ ನಡೆದು ಒಬ್ಬ ಮಗ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ತರುವಾಯ ಉಪಾಧ್ಯಾಯವೃತ್ತಿಗೆ ಕೈಹಾಕಿದ. ಪ್ರ.ಶ.ಪೂ. 517ರಲ್ಲಿ ರಾಜಧಾನಿಗೆ ಹೋದಾಗ ಟಾಓಯಿಸಂ ಪಂಥದ ಸ್ಥಾಪನಾಚಾರ್ಯ ಮಾವೊತ್ಸೆಯೊಡನೆ ಭೇಟಿಯಾಯಿತು. ಇಬ್ಬರಲ್ಲಿ ನಿಕಟ ಪರಿಚಯ ಬೆಳೆಯಿತು. ಕೆಲಕಾಲ ತನ್ನ ಹಿಂಬಾಲಕರೊಂದಿಗೆ ತನ್ನ ತತ್ತ್ವಪ್ರಚಾರಕಾರ್ಯದಲ್ಲಿ ತೊಡಗಿದ್ದ. 52ನೆಯ ವಯಸ್ಸಿನಲ್ಲಿ ಚುಂಗ್‌ಟೂವಿನ ನ್ಯಾಯಮೂರ್ತಿಯಾಗಿ ನೇಮಕಗೊಂಡ. ಈ ಕ್ಷೇತ್ರದಲ್ಲಿ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ದುಡಿದು ಪರಿಣಾಮಕಾರಿಯಾದ ಸುಧಾರಣೆಗಳನ್ನು ಸೂಚಿಸಿದ. ಕ್ರಮೇಣ ಮಂತ್ರಿ ಪದವಿಗೂ ಏರಿದ. ಇಬ್ಬರು ಬುದ್ಧಿವಂತರಾದ ಶಿಷ್ಯರ ಸಹಾಯದಿಂದಲು ಪ್ರಾಂತ್ಯವನ್ನು ಸಂಪತ್ಸಮೃದ್ಧಿಗಳೆಡೆಗೆ ಕೊಂಡೊಯ್ದು. ಆ ವೇಳೆಗೆ ಇವನ ಆಶ್ರಯದಾತನಾದ ಪ್ರಾಂತ್ಯಾಧಿಕಾರಿ ಮೃತನಾಗಿ, ತರುವಾಯ ಬಂದ ಪ್ರಮುಖಾಧಿಕಾರಿ ದುರ್ನೀತಿಗೆ ಇಳಿದದ್ದು ಇವನಿಗೆ ಸರಿ ಎನಿಸಲಿಲ್ಲ. ತನ್ನ ತತ್ತ್ವಗಳನ್ನು ಪಾಲಿಸುವ ಅಧಿಕಾರಿ ಬೇರೆಲ್ಲಿಯಾದರೂ ಸಿಕ್ಕಬಹುದೆಂಬ ಆಶೆಯಿಂದ 13 ವರ್ಷಕಾಲ ಅನೇಕ ಕಡೆ ಅಲೆದಾಡಿದ. ಅಂಥವರಾರೂ ಸಿಕ್ಕದಾಗ ನಿರಾಶನಾಗಿ ಪುನಃ ಲು ಪ್ರಾಂತ್ಯಕ್ಕೆ

ಹಿಂತಿರುಗಿದ (ಪ್ರ.ಶ.ಪೂ. 483). ಆದರೆ ಅಧಿಕಾರವನ್ನು ಮಾತ್ರ ಸ್ವೀಕರಿಸಲಿಲ್ಲ. ಅನಂತರದ ಐದು ವರ್ಷಗಳನ್ನು ವಿಶ್ರಾಂತಿಯಲ್ಲಿ ಕಳೆದು ತನ್ನ 72ನೆಯ ವಯಸ್ಸಿನಲ್ಲಿ ನಿಧನ ಹೊಂದಿದ. ಮರಣಸಮಯದಲ್ಲಿ ಇವನ ತತ್ತ್ವಗಳಿಂದ ಆಕರ್ಷಿತರಾಗಿದ್ದ ಯುವಕರ ತಂಡವೊಂದು ಇವನ ಸುತ್ತ ಸೇರಿದ್ದು, ಈತನ ತತ್ತ್ವಗಳ ಪ್ರಚಾರಕ್ಕೆ ಸಿದ್ಧರಾಗಿದ್ದರು. ಗುರುವಿನ ಪ್ರಭಾವದಿಂದ ಆ ಶಿಷ್ಯರು ಸರ್ಕಾರದ ಉನ್ನತ ಪದವಿಗಳನ್ನು ದೊರಕಿಸಿ ಕೊಂಡರಾದರೂ ಯಾರೂ ಬಹುಕಾಲ ಸಾಕಷ್ಟು ತತ್ತ್ವನಿಷ್ಠರಾಗಿ ಉಳಿಯಲಿಲ್ಲ.

ಕಾನ್‌ಫ್ಯೂಷಸ್ಸನ ಗುಣಗಳು ಅಪಾರ. ಸಾಧುಸ್ವಭಾವ, ಗೌರವ ವರ್ತನೆಗಳಿಗಿವನು ಹೆಸರಾಗಿದ್ದ. ನಿಸ್ವಾರ್ಥ, ಪ್ರಾಮಾಣಿಕ ಹಾಗೂ ಶೀಲವಂತ ವ್ಯಕ್ತಿಯೀತ. ಈ ಗುಣಗಳಿಂದ ಅಂದಿನ ಸಮಾಜ ಜೀವನದಲ್ಲಿ ಗಣ್ಯಸ್ಥಾನ ಗಳಿಸಿದರೂ ತಾನೊಬ್ಬ ಸುಧಾರಕನೇ ವಿನಾ ಪ್ರವಾದಿಯಲ್ಲ ಎಂದು ಹೇಳಿಕೊಂಡುದು ಈತನ ಘನತೆಗೊಂದು ನಿದರ್ಶನ. ಚೀನದ ಜನತೆಗೆ ವ್ಯಾವಹಾರಿಕ ಸಾಮಾಜಿಕ ಜೀವನದಲ್ಲಿ ಸಾತ್ತ್ವಿಕ ಹಾಗೂ ಸರಳಮಾರ್ಗದ ತತ್ತ್ವಗಳನ್ನು ಬೋಧಿಸಿದವರಲ್ಲಿ ಕಾನ್‌ಫ್ಯೂಷಸ್ ಮೊದಲಿಗ. ಉಪದೇಶವನ್ನು ಮನೋಜ್ಞವಾಗಿ ಮಾಡಲು ಈತ ಇತಿಹಾಸ ಕಾವ್ಯ ಮತ್ತು ಸಂಗೀತ ಮಾಧ್ಯಮಗಳನ್ನು ಬಳಸಿಕೊಂಡು ಮೊದಲಿಗೆ ಸಾತ್ತ್ವಿಕವಾಗೂ ತರುವಾಯ ಪ್ರಯೋಗಾತ್ಮಕವಾಗೂ ಬೋಧಿಸುತ್ತಿದ್ದ; ಔದ್ಧತ್ಯದಿಂದ ಅಥವಾ ಅಧಿಕಾರಪೂರ್ವಕ ಒತ್ತಾಯಿಸದೇ ಸ್ವಂತ ಆಚರಣೆಯಿಂದ ಶಿಷ್ಯರಿಗೆ ಮಾದರಿಯಾಗಿರುತ್ತಿದ್ದುದೇ ಈತನ ವೈಶಿಷ್ಟ್ಯ. ಅಂಧಾನುಕರಣೆ ಮಾಡದೆ ಸ್ವತಃ ಯೋಚಿಸಿ ತಮ್ಮ ಕಾರ್ಯಗಳ ರೀತಿಯನ್ನು ನಿರ್ಧರಿಸಲು ಶಿಷ್ಯವರ್ಗಕ್ಕೆ ಉತ್ತೇಜನ ನೀಡುತ್ತಿದ್ದ. ತನ್ನ ಶಿಷ್ಯರನ್ನು ಆರಿಸುವುದರಲ್ಲೂ ಸಮತಾಭಾವ ತೋರಿ ಬಡವ ಬಲ್ಲಿದರೆಂಬ ಭೇದಗಳಿಗೆ ಅವಕಾಶ ನೀಡದೆ ಅವರ ಸಚ್ಚಾರಿತ್ರ್ಯ ಮತ್ತು ಬೌದ್ಧಿಕ ಸಾಮರ್ಥ್ಯಗಳಿಗೆ ಪ್ರಾಶಸ್ತ್ಯ ನೀಡುತ್ತಿದ್ದ. ಈತನನ್ನು ಬೋಧಕನೆನ್ನುವುದಕ್ಕಿಂತಲೂ ಸುಧಾರಕನೆನ್ನುವುದು ಹೆಚ್ಚು ಉಚಿತ. ವಿದ್ವಾಂಸನೆಂಬುದು ನಿಜವಾದರೂ ಈತನ ಕೃತಿಗಳೆಂದು ಹೇಳಬಹುದಾದ ಗ್ರಂಥಗಳಾವುವೂ ಕಾಣಬರುವುದಿಲ್ಲ.

ಕಾನ್‌ಫ್ಯೂಷಸನ ಜೀವಿತಕಾಲ ಚೀನದ ಇತಿಹಾಸದಲ್ಲಿ ಸ್ವಾರಸ್ಯವಾದುದು. ಚೌ ವಂಶ ಇಳಿಗತಿಯಲ್ಲಿತ್ತು. ದೇಶದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ತುಂಬಾ ಏರುಪೇರುಗಳಾಗಿದ್ದುವು. ಅಧಿಕಾರಕ್ಕಾಗಿ ಪ್ರಾಂತ್ಯಗಳಲ್ಲಿ ತಿಕ್ಕಾಟಗಳಿದ್ದುವು. ಜನರು ರಾಜಪ್ರಭುತ್ವವನ್ನೇ ಬಯಸುತ್ತಿದ್ದರೂ ಒಟ್ಟಿನಲ್ಲಿ ದೇಶ ಒಗ್ಗಟ್ಟಿನಿಂದಲೂ ಶಿಸ್ತುಸಂಯಮದಿಂದಲೂ ಬಾಳ್ವೆ ನಡೆಸಬೇಕೆಂಬುದನ್ನು ಮನಗಂಡಿದ್ದರು. ಇದಕ್ಕಾಗಿ ನಿರ್ದಿಷ್ಟವಾದ ಧ್ಯೇಯಧೋರಣೆಗಳನ್ನು ಪ್ರತಿಪಾದಿಸಬಲ್ಲ ಒಬ್ಬ ಮೇಧಾವಿ. ಸುಧಾರಕ ಅತ್ಯಗತ್ಯ ಎಂದು ತಿಳಿದಿದ್ದರು. ಆ ಕಾಲದಲ್ಲಿದ್ದ ಪ್ರಭಾವಿ ವ್ಯಕ್ತಿಗಳೂ ಕೂಡ ರಾಜಕೀಯದ ಕಟ್ಟುಪಾಡಿಗಿಂತ ನೈತಿಕ ಧ್ಯೇಯಗಳೇ ಶ್ರೇಷ್ಠವಾದುವು. ಅವುಗಳ ಆಚರಣೆಗಾಗಿ ತವಕಗೊಂಡಿದ್ದರು. ಇಂಥ ಸಮಯದಲ್ಲೇ ಕಾನ್‌ಫ್ಯೂಷಸ್ ತನ್ನ ನೀತಿಪ್ರಧಾನ ಮಾರ್ಗವನ್ನು ಪ್ರಚಾರ ಮಾಡಲಾರಂಭಿಸಿದ್ದು. ಗೌತಮ ಬುದ್ಧನ ಸಮಕಾಲೀನ. ಪ್ರ.ಶ.ಪೂ. 5–4ನೆಯ ಶತಮಾನಗಳಲ್ಲಿದ್ದ ಗ್ರೀಕ್ ತತ್ತ್ವವೇತ್ತರ ವಿಚಾರಗಳಿಗೆ ಕಾನ್‌ಫ್ಯೂಷಸ್‌ನ ತತ್ತ್ವಗಳು ಸರಿಹೋಲುತ್ತವೆ.

ಕಾನ್‌ಫ್ಯೂಷಸ್‌ನ ತತ್ತ್ವಗಳು ಮತೀಯವಲ್ಲ; ನಿತ್ಯ ಜೀವನದಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮಗಳವು; ತನ್ಮೂಲಕ ಸಮಾಜ ಮತ್ತು ರಾಜ್ಯದ ಉದ್ಧಾರಕ್ಕೆ ಸಾಧಕವೆನಿಸತಕ್ಕವು. ಸ್ವಂತ ಮತ್ತು ಸಾಮೂಹಿಕ ಸಂಬಂಧಗಳಲ್ಲಿ ವ್ಯಕ್ತಿ ಯಾವ ರೀತಿ ವರ್ತಿಸಬೇಕು ಎಂಬುದೇ ಆ ತತ್ತ್ವಗಳ ಸಾರಾಂಶ. ಕಾನ್‌ಫ್ಯೂಷಸನ ಮತ ಹೀಗಿದೆ; ವಿಶ್ವದಲ್ಲಿ ನಿರೂಪಕ ಶಕ್ತಿಯುಳ್ಳದ್ದು ಸ್ವರ್ಗವೊಂದೇ. ಸಂಸಾರದಲ್ಲಿ ತಂದೆಗೆ ಆ ಅಧಿಕಾರವುಂಟು. ರಾಜ್ಯದಲ್ಲಿ ರಾಜನ ಸ್ಥಾನಮಾನ ವಿಶ್ವದಲ್ಲಿನ ಸ್ವರ್ಗದಂತೆ, ಸಂಸಾರದಲ್ಲಿನ ತಂದೆಯಂತೆ; ಅವನೇ ರಾಜ್ಯದ ನಿರೂಪಕ ಶಕ್ತಿ. ಸಂಸಾರದ ಮುಖ್ಯಸ್ಥನಿಗೆ ವಿಧೇಯನಾಗಿರುವುದು, ಅನೂಚಾನವಾಗಿ ಬಂದ ಪೂಜ್ಯತೆ ತೋರುವುದು ಇವೆರಡೂ ಸಂಸಾರ ಮತ್ತು ರಾಜಕೀಯ ಜೀವನಕ್ಕೆ ಅಸ್ತಿಭಾರವಿದ್ದಂತೆ. ಇದರಂತೆ ಜನ ನಡೆದುಕೊಂಡರೆ ಸೌಹಾರ್ದ ಏರ್ಪಡುತ್ತದೆ. ಜನತೆಯ ಅತಿಶಯವಾದ ಸುಖಕ್ಕೆ ಶ್ರಮಿಸಿ. ಮಾನವ ಸ್ವಭಾವಕ್ಕನುಗುಣವಾದ ರೀತಿಯಲ್ಲಿ ಮತ್ತು ಕಾಲದೇಶದ ಸ್ಥಿತಿಗತಿಗನುಸಾರವಾಗಿ ರೀತಿನೀತಿಗಳನ್ನು ರೂಪಿಸುವುದು ಆದರ್ಶ ಆಡಳಿತದ ಗುರಿ. ಅದಕ್ಕಾಗಿ ಶ್ರಮಿಸಿದ ಮಾನವ ಪ್ರೀತಿಯೇ ಸದ್ಗುಣ. ಮಾನವ ಪ್ರಕೃತಿಯನ್ನು ತಿಳಿಯುವುದೇ ಬುದ್ಧಿವಂತಿಕೆ. ಇಡೀ ಮಾನವಕುಲ ಒಂದು ಸಂಸಾರ. ತನ್ನ ಪ್ರಗತಿಯನ್ನು, ಸ್ಥಾನಮಾನಗಳನ್ನು ಅಪೇಕ್ಷಿಸುವನು ಇತರರ ಪ್ರಗತಿ, ಸ್ಥಾನಮಾನಗಳ ಸಾಧನೆಗೆ ಶ್ರಮಿಸುವುದೇ ಒಳ್ಳೆಯ ಮಾರ್ಗ. ಆದುದರಿಂದ ಪ್ರಭುತ್ವ ಜನತೆಯ ಸಹಕಾರೀ ಸಂಸ್ಥೆಯಾಗಿರಬೇಕು. ಜನತೆಯ ಸುಖಸಂಪತ್ತುಗಳ ಸಾಧನೆ ಮಾಡಬಲ್ಲವರೇ ಆಡಳಿತದಲ್ಲಿರಲು ಅರ್ಹರು. ಆದುದರಿಂದ ಆನುವಂಶಿಕ ರಾಜರು ಅರ್ಹರೂ ಸನ್ಮಾರ್ಗಿಗಳು ಆದ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಆಡಳಿತವನ್ನು ವಹಿಸುವುದೊಳ್ಳೆಯದು.

ಕಾನ್‌ಫ್ಯೂಷಸನ ಈ ತತ್ತ್ವಗಳಿಗೂ ಅನಂತರ ಕಾಲದ ಕಾನ್‌ಫ್ಯೂಷನಿಸಮಿನ ಆಚರಣೆಗಳಿಗೂ ಹಲವಾರು ಪ್ರಮುಖ ವ್ಯತ್ಯಾಸಗಳು ಕಂಡುಬರುತ್ತವೆ. ಮಹಾಪುರುಷರ ಬೋಧನೆಗಳು ಕಾಲಕ್ರಮೇಣದಲ್ಲಿ ವಿಕೃತಗೊಳ್ಳುವುದು ಸಾಮಾನ್ಯ. ಆದರೂ ಅನಂತರ ಕಾಲದಲ್ಲಿ ಉದಾ: ಹ್ಯಾನ್ ವಂಶದ ಕಾಲ ಪ್ರ.ಶ.ಪೂ. 202 ರಿಂದ ಕ್ರಿ.ಶ. 221ರ ವರೆಗೆ ಈತನ ಅನೇಕ ಬೋಧನೆಗಳು ಕಾರ್ಯಗತವಾದುವು. ಸಮಾಜದ ಕೆಳವರ್ಗದಲ್ಲಿ ಹುಟ್ಟಿದವರು ಸಹ ತಮ್ಮ ಸದ್ಗುಣ ದಕ್ಷತೆಗಳಿಂದ ಮಂತ್ರಿಗಳಾಗಬಹುದಿತ್ತು. ದೇಶದ ಆಗುಹೋಗುಗಳನ್ನು ನಿರ್ಧರಿಸುವ ಅಧಿಕಾರ ಅವರವರೆಗೂ ಬರುತ್ತಿತ್ತು. ಒಂದಲ್ಲ ಒಂದು ವಿಧದಲ್ಲಿ ಈತನ ತತ್ತ್ವಗಳು ಚೀನ ಮಾತ್ರವಲ್ಲದೆ ಇಡೀ ಆಗ್ನೇಯ ಏಷ್ಯದ ಸಂಸ್ಕೃತಿ, ಇತಿಹಾಸಗಳ ಮೇಲೆ ಪ್ರಭಾವ ಬೀರಿವೆ. (ಕೆ.ಜಿ.; ಎಂ.ವೈ.)

**ಕಾನ್ರಾಡ್, ಮೈಕೇಲ್ ಜಾರ್ಜ್ :** 1846–1927. ಜರ್ಮನ್ ಕಾದಂಬರಿಕಾರ, ವಿಮರ್ಶಕ. ಎಮಿಲ್ ಜೋಲನ ಆದರ್ಶಗಳಿಂದ ಸ್ಫೂರ್ತಿಪಡೆದನೆನ್ನಲಾಗಿದೆ. ಈತ 1885 ರಲ್ಲಿ ಕಾರ್ಲ್ ಬ್ಲೀಬ್ ಟ್ರ್ಯೂನೊಂದಿಗೆ ಸೇರಿದ ಗೆಸೆಲ್ ಷ್ಯಾಫ್ಟ್ (ಸಮಾಜ) ಎಂಬ ನಿಸರ್ಗವಾದದ ಸಾಹಿತ್ಯಾವ ಲೋಕನ ಪತ್ರಿಕೆಯನ್ನು ಆರಂಭಿಸಿದ. ಆಧುನಿಕ ಜರ್ಮನ್ ಸಾಹಿತ್ಯದ ತರುಣ ಲೇಖಕರಿಗೆ ಇದೊಂದು ಕೇಂದ್ರವಾಯಿತು. ಈತನ ಕೃತಿಗಳಲ್ಲಿ ಒಂದು ಸಂಪುಟದಷ್ಟು ವಿಮರ್ಶಾ ಲೇಖನಗಳಿವೆ. ಮದಾಂ ಲುಟೇಷಿಯಾ (1883) ವಾಫ್ ಡಿ ಇಸಾರ್ ರಾಷ್ಟ (ವಾಟ್ ದಿ ಇಸಾರ್ ಮರ್ಮರ್ಸ್) ಜೋಲನ ಕಾದಂಬರಿಗಳನ್ನು ಹೋಲುತ್ತವೆ.

ಫ್ಲಾಬರ್, ಮೊಪಾಸಾ ಮತ್ತು ಜೋಲ ಪ್ರತಿಪಾದಿಸಿದ ವಾಸ್ತವತೆ ಸಾಹಿತ್ಯದ ರೂಪರೇಷೆಗಳನ್ನು ಬದಲಿಸಿತು. ಟಾಲ್‌ಸ್ಟಾಯ್ ಮತ್ತು ದಾಸ್ತಯೆವ್‌ಸ್ಕಿ ಇವರ ಕೃತಿಗಳ ವಾಸ್ತವತಾ ವಾದಕ್ಕೆ ಹೆಚ್ಚಿನ ಪುಷ್ಟಿಯನ್ನು ಕೊಟ್ಟಿತು. ಸಾಮಾಜಿಕ ರುಜಿನಗಳಿಗೆಲ್ಲ ವಾಸ್ತವತೆಯೊಂದೇ ಸರ್ವೌಷಧಿ ಎಂದು ಭಾವಿಸಿದ ತರುಣ ಸಾಹಿತಿಗಳಲ್ಲಿ ಕಾನ್ರಾಡ್ ಪ್ರಮುಖನಾದವ. (ಕೆ.ಬಿ.ಪಿ.)

**ಕಾನ್ರಾಡ್, ಜೋಸೆಫ್ :** 1857–1924. ಸಮುದ್ರಯಾನಕ್ಕೆ ಸಂಬಂಧಿಸಿದ ಸಾಹಸ ಕಥೆಗಳಿಂದ ಪ್ರಸಿದ್ಧನಾದ ಕಾದಂಬರಿಕಾರ, ಪೂರ್ಣ ಹೆಸರು ಥಿಯೋಡರ್ ಜೋಸೆಫ್ ಕಾನ್ರಾಡ್ ನಲೆಜ್ ಕಾರ್ಜೆನಿಯೋಸ್ಕಿ. ಉಕ್ರೇನಿನ ಸಣ್ಣ ಊರೊಂದರಲ್ಲಿ ಹುಟ್ಟಿದ. ಈತನ ತಂದೆತಾಯಿಯರು ಇಬ್ಬರೂ ಪ್ರಸಿದ್ಧ ದೇಶಪ್ರೇಮಿಗಳ ವಂಶಿಗರು. ತನ್ನ ಮೂರನೆಯ ವರ್ಷದಲ್ಲೇ ತಂದೆ ರಷ್ಯಕ್ಕೆ ಗಡೀಪಾರಾದ ಕಾರಣದಿಂದ ಅನಾಥನಾದ ಈತ ಕ್ರಾಕೋದಲ್ಲಿದ್ದ ತನ್ನ ಸೋದರಮಾವನ ಬಳಿ ಬೆಳೆದ. ವಿಕ್ಟರ್ ಹ್ಯೂಗೊನ ಕಾದಂಬರಿ



ಟಾಯ್ಲರ್ಸ್ ಆಫ್ ದಿ ಸೀ ಓದಿದ ಬಳಿಕ ಸಮುದ್ರದ ಬಗ್ಗೆ ಈತನಲ್ಲಿ ಆಸಕ್ತಿ ಹುಟ್ಟಿತು. ಮಾರ್ಸೇಲ್ಸಿಗೆ ನಾವಿಕನಾಗಲು ಹೋದ ಈತ ಅಲ್ಲಿ ಬೇರೆ ಮೂವರೊಡನೆ ಕೂಡಿ ಟ್ರೆಮೋಲಿನೊ ಎಂಬ ಹಡಗಿನಲ್ಲಿ ಕಳ್ಳ ಸಾಗಾಣಿಕೆಗೆ ತೊಡಗಿದ. ಈ ಅನುಭವದ ಕೆಲವು ಅಂಶಗಳು ಈತನ ದಿ ಮಿರರ್ ಆಫ್ ದಿ ಸೀ (1906), ದಿ ಆರೋ ಆಫ್ ಗೋಲ್ಡ್ (1919) ಎಂಬ ಪುಸ್ತಕಗಳಲ್ಲಿ ನಿರೂಪಿತವಾಗಿವೆ. 1878 ರಲ್ಲಿ ಮೇವಿಸ್ ಎಂಬ ಹಡಗಿನಲ್ಲಿ ಮೊದಲ ಸಲ ಇಂಗ್ಲೆಂಡಿಗೆ ಬಂದ. ಅನಂತರ ಆಸ್ಟ್ರೇಲಿಯಕ್ಕೆ ತೆರಳಿ ಸಮುದ್ರಯಾನಕ್ಕೆ ಸಂಬಂಧಿಸಿದ ಅಗತ್ಯವಾದ ಕೆಲವು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಹಿಂದೂ ಮಹಾಸಾಗರದ ಅನೇಕ ಹಡಗುಗಳಲ್ಲಿ ಕೆಲಸಮಾಡಿದ. ಅಲ್ಲಿಯ ತನ್ನ ಬಹುತೇಕ ಅನುಭವಗಳನ್ನು ದಿ ನಿಗ್ಗರ್ ಆಫ್ ನಾರ್ಸಿಸಸ್ (1897), ಲಾರ್ಡ್ ಜಿಮ್ (1900), ದಿ ಷ್ಯಾಡೋ ಲೈನ್ (1917), ದಿ ರೆಸ್ಕ್ಯೂ (1920) ಕಥೆಗಳಲ್ಲಿ ವಿವರಿಸಿದ್ದಾನೆ. ಇವುಗಳಲ್ಲಿ ಒಂಟಿಜೀವನದ ಕಷ್ಟನಷ್ಟಗಳು, ಪ್ರಕೃತಿಯನ್ನು ಎದುರಿಸಿ ಹೋರಾಡುವ ಸಾಹಸಮಯ ಜೀವನ ಚಿತ್ರಿತಗೊಂಡಿವೆ. 1866ರಲ್ಲಿ ಈತ ಬ್ರಿಟಿಷ್ ಪ್ರಜೆಯಾಗಿ ಮಾಸ್ಟರ್ ಮ್ಯಾರಿನರ್ ಪ್ರಶಸ್ತಿಯನ್ನು ಪಡೆದ. ನಾಲ್ಕು ವರ್ಷಗಳ ಅನಂತರ ತನ್ನದೇ ಆದ ಹಡಗೊಂದರಲ್ಲಿ ಕಾಂಗೋಗೆ ಹೋದ. ಅಲ್ಲಿನ ಅನುಭವಗಳು ಈತನ ಹಾರ್ಟ್ ಆಫ್ ಡಾರ್ಕ್‌ನೆಸ್ ಕಥೆಯಲ್ಲಿ ಅಡಕವಾಗಿವೆ. 1894 ರಲ್ಲಿ ನಾವಿಕ ವೃತ್ತಿತೊರೆದು ಬರವಣಿಗೆಯ ಕಡೆ ಪೂರ್ಣ ಗಮನ ನೀಡಿದ. ಅದೇ ವೇಳೆಯಲ್ಲಿ ಜೆಸ್ಸಿ ಜಾರ್ಜ್ ಎಂಬಾಕೆಯನ್ನು ಮದುವೆಯಾದ. ಇಂಗ್ಲಿಷ್ ಭಾಷೆಯ ಉತ್ತಮ ಶೈಲಿಗೆ

ಹೆಸರಾದ ಈತನಿಗೆ ತನ್ನ 19ನೆಯ ವಯಸ್ಸಿನವರೆಗೂ ಇಂಗ್ಲಿಷ್ ಭಾಷೆಯ ಗಂಧವೇ ಇರಲಿಲ್ಲ ಎಂಬ ಮಾತು ಆಶ್ಚರ್ಯ ತಂದರೂ ಸತ್ಯಸಂಗತಿ. ಸಮುದ್ರಯಾನಕ್ಕೆ ಸಂಬಂಧಿಸಿದ ಕಥೆಗಳಲ್ಲದೆ ಅನೇಕ ಕಾದಂಬರಿಗಳನ್ನೂ ಈತ ಬರೆದಿದ್ದಾನೆ. ಅವುಗಳಲ್ಲಿ ನಾಸ್ಟ್ರೊಮೋ (1904), ದಿ ಸೀಕ್ರೆಟ್ ಏಜೆಂಟ್ (1907), ಚಾನ್ಸ್ (1913), ದಿ ರೋವರ್ (1923) ಮುಂತಾದವು ಮುಖ್ಯವೆನಿಸಿವೆ. ಸಣ್ಣ ಕಥೆಗಳಲ್ಲಿ ಯೂತ್ (1902), ಟೈಫೂನ್ (1903) ಮುಂತಾದವು ಮುಖ್ಯ. ಎ ಪರ್ಸನಲ್ ರಿಕಾರ್ಡ್ (1912) ಈತನ ಆತ್ಮಕಥೆ.

(ಎಚ್.ವಿ.ಎಸ್.)

**ಕಾನ್ವೆಂಟ್ :** ಕ್ರೈಸ್ತ ಸನ್ಯಾಸಿನಿಯರ ಮಠ ; ಇದೊಂದು ಧಾರ್ಮಿಕ ಸಂಸ್ಥೆ (ಕಾನ್ವೆಂಟ್). ದೇವರ ವಿಶೇಷ ಕರೆಗೆ ಓಗೊಟ್ಟ ಬಾಲಸಂನ್ಯಾಸಿನಿಯರು (ನನ್ಸ್) ತಮ್ಮ ಸರ್ವಸ್ವವನ್ನೂ ದೇವರಿಗೆ ಅರ್ಪಿಸಿ, ಮರಣ ಪರ್ಯಂತ ಬಡತನ, ವಿಧೇಯತೆ ಮತ್ತು ವೈರಾಗ್ಯವನ್ನು ಪಾಲಿಸುವುದಾಗಿ ವ್ರತ ತೊಟ್ಟು ಧ್ಯಾನ ಮತ್ತು ಪರೋಪಕಾರದ ಜೀವನವನ್ನು ಈ ಸಂಸ್ಥೆಗಳಲ್ಲಿದ್ದು ನಡೆಸುತ್ತಾರೆ. ದೇವಸೇವೆ ಮತ್ತು ಭ್ರಾತೃಪ್ರೇಮಗಳೇ ಇವರ ಜೀವನದುದ್ದೇಶ. ಸಾಮಾನ್ಯವಾಗಿ ಈ ಸಂಸ್ಥೆಗಳು ಮತಪ್ರಸಾರ, ಅನಾಥಪೋಷಣೆ, ವಿದ್ಯಾಭ್ಯಾಸ, ಆಸ್ಪತ್ರೆ ನಡೆಸುವುದು ಮುಂತಾದ ಕೆಲಸಗಳನ್ನು ನಿರ್ವಹಿಸುತ್ತವೆ.

(ಎ.ಪಿ.ಆರ್.; ಡಿ.ಎಸ್.ಒ.)

**ಕಾನ್ಸಲ್ :** ರೋಮನ್ ಪ್ರಜಾಪ್ರಭುತ್ವದಲ್ಲಿ ವರ್ಷೇ ವರ್ಷೇ ಚುನಾಯಿತನಾಗಿ ಪರಮಾಧಿಕಾರ ನಡೆಸುತ್ತಿದ್ದ ದಂಡಾಧಿಕಾರಿ. ಪ್ರ.ಶ.ಪೂ. 509ರಲ್ಲಿ ರೋಮಿನಲ್ಲಿ ರಾಜರ ಅಧಿಕಾರ ಕೊನೆಗೊಂಡಾಗ ಸೈನ್ಯಾಧಿಕಾರಿಗಳಿಂದ ಚುನಾಯಿತರಾದ ಕಾನ್ಸಲ್‌ಗಳ ಆಡಳಿತ ಜಾರಿಗೆ ಬಂತು. ಒಂದೊಂದು ಬಾರಿಗೆ ಇಬ್ಬರು ಕಾನ್ಸಲರನ್ನು ಆರಿಸಲಾಗುತ್ತಿತ್ತು. ಅವರ ಅಧಿಕಾರ ಬರುವುದಕ್ಕೆ ಮೊದಲು ಪೆಟ್ರಿಶಿಯನರನ್ನೇ ನೇಮಿಸಲಾಗುತ್ತಿತ್ತು. ಪ್ರ.ಶ.ಪೂ. 367ರಲ್ಲಿ ಜಾರಿಗೆ ಬಂದ ಲಿಸಿನಿಯೊ–ಸೆಕ್ಸ್ಟಿಯನ್ ವಿಧಿಯ ಪ್ರಕಾರ ಒಬ್ಬ ಪೆಟ್ರಿಶಿಯನ್ ಮತ್ತು ಒಬ್ಬ ಪ್ಲೆಬಿಯನರನ್ನು ನೇಮಕ ಮಾಡಬೇಕಾಯಿತು. ಇವರು ಸಾಮಾನ್ಯವಾಗಿ ಸೆನೆಟ್ ಸಭೆಯ ಆದೇಶದಂತೆ ಕಾರ್ಯ ನಿರ್ವಹಿಸುತ್ತಿದ್ದರು. ಸೆನೆಟ್ ಸಭೆಯನ್ನು ಕರೆಯುವ ಹಾಗೂ ವರ್ಜಿಸುವ ಅಧಿಕಾರ ಹೊಂದಿದ್ದರು. ಪ್ರಮುಖ ಆಡಳಿತ ಸೂತ್ರಗಳೆಲ್ಲ ಇವರ ಕೈಯಲ್ಲಿದ್ದವು. ಕಾನ್ಸಲ್ ಆಗಿ ನೇಮಕವಾಗುವವರ ಕನಿಷ್ಠ ವಯೋಮಿತಿ 40–45. ಒಮ್ಮೆ ಕಾನ್ಸಲ್ ಆಗಿದ್ದವ ಮತ್ತೆ ಕಡೆಯ ಪಕ್ಷ 10 ವರ್ಷಗಳ ವರೆಗಾದರೂ ಕಾನ್ಸಲ್ ಆಗುವಂತಿರಲಿಲ್ಲ. ಮಾಜಿ ಕಾನ್ಸಲರು ಸಾಮಾನ್ಯವಾಗಿ ರಾಜ್ಯಪಾಲರಾಗುತ್ತಿದ್ದರು.

ಇಬ್ಬರು ಕಾನ್ಸಲರಲ್ಲಿ ಯಾವನಾದರೂ ಒಬ್ಬ ತನ್ನ ಅಧಿಕಾರವಧಿಯಲ್ಲಿ ಸತ್ತರೆ, ಅವನ ಉತ್ತರಾಧಿಕಾರಿಯನ್ನು ಚುನಾಯಿಸಲಾಗುತ್ತಿತ್ತು; ಇಬ್ಬರು ಕಾನ್ಸಲರೂ ಸತ್ತಲ್ಲಿ ತಾತ್ಕಾಲಿಕ ಸಮಿತಿಯೊಂದನ್ನು (ಇಂಟರ್‌ರೆಕ್ಸ್) ನೇಮಿಸಲಾಗುತ್ತಿತ್ತು.

ರೋಮನ್ ಪ್ರಜಾಪ್ರಭುತ್ವದ ಕೊನೆಯ ಕಾಲದಲ್ಲಿ (ಪ್ರ.ಶ.ಪೂ. 133ರ ಅನಂತರ) ಕಾನ್ಸಲ್ ಪದವಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಅದರ ಅಧಿಕಾರಾವಧಿಯನ್ನು ಎರಡು ತಿಂಗಳ ವರೆಗೆ ಮೊಟಕುಗೊಳಿಸಲಾಯಿತು. ರೋಮಿನ ಕೊನೆಯ ಕಾನ್ಸಲ್ 536ರಲ್ಲಿ ನೇಮಕವಾದ ; ಕಾನ್‌ಸ್ಟಾಂಟಿನೋಪಲಿನ ಕೊನೆಯ ಕಾನ್ಸಲ್ 541 ರಲ್ಲಿ ನೇಮಕವಾದ.

ಫ್ರೆಂಚ್ ಪ್ರಜಾಪ್ರಭುತ್ವದಲ್ಲಿ 1799–1804 ಕಾನ್ಸಲರ ಅಧಿಕಾರ ಮತ್ತೆ ಅಸ್ತಿತ್ವಕ್ಕೆ ಬಂದಿತ್ತು. ಆರಿಸಲಾಗಿದ್ದ ಮೂವರು ಕಾನ್ಸಲರಲ್ಲಿ ನೆಪೋಲಿಯನ್ ಪ್ರಥಮ. 1804ರಲ್ಲಿ ನೆಪೋಲಿಯನ್ ಚಕ್ರವರ್ತಿಯಾದಾಗ ಅವನೇ ಸರ್ವಾಧಿಕಾರಿಯಾದನಾಗಿ ಅಲ್ಲಿಗೆ ಈ ಪದ್ಧತಿ ಕೊನೆಗೊಂಡಿತು. ಕಾನ್ಸಲ್ ಶಬ್ದಕ್ಕೆ ರಾಯಭಾರಿ ಅಥವಾ ಪರರಾಜ್ಯ ಪ್ರತಿನಿಧಿ ಎಂಬ ಅರ್ಥವಿದೆ **(ನೋಡಿ– ರಾಯಭಾರಿ)**. (ಬಿ.ಎಸ್.ಪಿ.)

**ಕಾನ್‌ಸ್ಟಂಟೈನ್ :** 1868–1923 : ಗ್ರೀಕರ ದೊರೆ. 1ನೆಯ ಜಾರ್ಜನ ಮಗ. ಅಥೆನ್ಸಿನಲ್ಲಿ ಹುಟ್ಟಿ, ಜರ್ಮನಿಯ ಲೀಪ್‌ಜಿಗ್ ವಿಶ್ವವಿದ್ಯಾಲಯ ಮತ್ತು ಪ್ರಷ್ಯದ ಮಿಲಿಟರಿ ಶಾಲೆಯಲ್ಲಿ ಶಿಕ್ಷಣ ಪಡೆದು, 1889ರಲ್ಲಿ ಜರ್ಮನ್ ಚಕ್ರವರ್ತಿ 2ನೆಯ ವಿಲಿಯಮನ ಸೋದರಿ ಸೋಫಿಯ ರತೀಯಳನ್ನು ವಿವಾಹವಾದ. 1897ರಲ್ಲಿ ಥೆಸ್ಸಲಿಯಲ್ಲಿ ಗ್ರೀಕ್ ಸೈನ್ಯ ಸೋತದ್ದರಿಂದ ಇವನ ಕೀರ್ತಿಗೆ ಕುಂದುಂಟಾಯಿತು. 1909ರಲ್ಲಿ ಗ್ರೀಸ್ ಮತ್ತು ಕ್ರೀಟ್ ದ್ವೀಪದ ಮಧ್ಯೆ ಒಕ್ಕೂಟದ ಸಂಧಾನ ವಿಫಲವಾದುದಕ್ಕೆ ಸೈನಿಕ ಕೂಟದವರು ಇವನೂ ಇವನ ಸೋದರರೂ ಕಾರಣರೆಂದು ದೂಷಿಸಿ ಅವರನ್ನು ಸೈನ್ಯದಿಂದ ಹೊರಹಾಕಿದರು. ಪುನಃ ಅವರನ್ನು ಸೈನ್ಯಕ್ಕೆ ಸೇರಿಸಿಕೊಂಡಾಗ ಈತ ಫ್ರಾನ್ಸಿನ ಸೈನ್ಯಸಮಿತಿಯ ಸಹಾಯದಿಂದ ಗ್ರೀಕ್ ಸೈನ್ಯವನ್ನು ಸುವ್ಯವಸ್ಥಿತಗೊಳಿಸಿ, 1912–13ರ ಬಾಲ್ಕನ್ ಯುದ್ಧಗಳಲ್ಲಿ ಗ್ರೀಕ್ ಸೈನ್ಯದ ವಿಜಯಕ್ಕೆ ಕಾರಣನಾದ. ಆಗ ಈತ ತನ್ನ ಯುದ್ಧ ದಕ್ಷತೆಯ ವಿಷಯದಲ್ಲಿ ಮತ್ತೆ ಮನ್ನಣೆಗಳಿಸಿದ. 1ನೆಯ ಜಾರ್ಜನ ಮರಣಾನಂತರ 1913 ಮಾರ್ಚಿ 18ರಂದು ಇವನಿಗೆ ರಾಜಪದವಿ ಪ್ರಾಪ್ತವಾಯಿತು.

ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ 1914ರ ಆಗಸ್ಟ್ 7ರಂದು ಈತ ಜರ್ಮನರ ಪರವಾಗಿ ಹೇಳಿಕೆಯಿತ್ತರೂ ಯುದ್ಧದಲ್ಲಿ ತಟಸ್ಥನೀತಿ ಅನುಸರಿಸಿದ. ತುರ್ಕಿ ಯುದ್ಧಕ್ಕೆ ಸೇರಿದಾಗಲೂ ಈತ ತನ್ನ ಸೇನಾಧಿಪತಿ ವೆನಿಝೊಲಸನ ಸಲಹೆಯನ್ನೊಪ್ಪದೆ ತಟಸ್ಥನೀತಿಯನ್ನೇ ಅನುಸರಿಸಿದ್ದರಿಂದ ಆ ಸೇನಾಧಿಪತಿ ರಾಜೀನಾಮೆ ನೀಡಿದನಾದರೂ 1915ರ ಜೂನಿನಲ್ಲಿ ನಡೆದ ಚುನಾವಣೆಗಳಲ್ಲಿ ಅವನೇ ಬಹುಮತದಿಂದ ಆರಿಸಿಬಂದ. ಇಬ್ಬರ ನಡುವಣ ಮನಸ್ತಾಪ ಉಲ್ಬಣಗೊಂಡಿತು. ಈ ಮಧ್ಯೆ ಗ್ರೀಕ್ ಮತ್ತು ಮಿತ್ರಕೂಟಗಳ ನಡುವೆ ವಿರಸವುಂಟಾಯಿತು. ಮಿತ್ರಕೂಟಕ್ಕೆ ಸೇರಿದ ಫ್ರೆಂಚ್ ದಳಪತಿ 1917ರಲ್ಲಿ ಕಾನ್‌ಸ್ಟಂಟೈನನನ್ನು ತೆಗೆದುಹಾಕಿ, ಅವನ ಎರಡನೆಯ ಮಗ ಅಲೆಕ್ಸಾಂಡರನನ್ನು ಸಿಂಹಾಸನಕ್ಕೆ ತಂದ. 1920ರ ನವೆಂಬರಿನಲ್ಲಿ ನಡೆದ ಚುನಾವಣೆಗಳ ಫಲವಾಗಿ ಸ್ವಿಟ್ಜರ್‌ಲೆಂಡ್‌ನಲ್ಲಿದ್ದ ಕಾನ್‌ಸ್ಟಂಟೈನ್ ಪುನಃ ಅಧಿಕಾರಕ್ಕೆ ಬಂದ. ಗ್ರೀಸ್–ತುರ್ಕಿಗಳ ಹಳೆಯ ದ್ವೇಷ ಮುಂದುವರಿಯಿತು. 1922ರ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಗ್ರೀಕರು ಸೋತರು. ಸೈನ್ಯದಲ್ಲಿ ದಂಗೆಯುಂಟಾಯಿತು. ಸೆಪ್ಟೆಂಬರ್ 30ರಂದು ಕಾನ್‌ಸ್ಟಂಟೈನ್ ಅಧಿಕಾರ ತ್ಯಾಗಮಾಡಿ, ಹಿರಿಯ ಪುತ್ರ 2ನೆಯ ಜಾರ್ಜನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟ. 1923ರ ಜನವರಿ 11ರಂದು ಈತ ಮೃತನಾದ. *

**ಕಾನ್‌ಸ್ಟಂಟೈನ್ : (ಫ್ಲೇವಿಯಸ್ ಕ್ಲಾಡಿಯಸ್ ಕಾನ್‌ಸ್ಟಾಂಟಿನಸ್):** ರೋಮನ್ ಚಕ್ರವರ್ತಿಯೆಂಬ ಪದವಿ ಕಸಿದುಕೊಂಡಿದ್ದವ (407); ಪಶ್ಚಿಮ ರೋಮನ್ ಚಕ್ರವರ್ತಿಯಾಗಿದ್ದ ಫ್ಲೇವಿಯಸ್ ಹೊನೋರಿಯಸನಿಂದಲೂ ಹಾಗೆಂದು ಮನ್ನಣೆ ಪಡೆದಿದ್ದ (409). ಬ್ರಿಟನಿನಲ್ಲಿ ಸಾಧಾರಣ ಸಿಪಾಯಿಯಾಗಿದ್ದು 407ರಲ್ಲಿ ದಳಪತಿಯಾದ. 406ರಲ್ಲಿ ಗಾಲ್ ಪ್ರಾಂತ್ಯದ ಮೇಲೆ ಅನಾಗರಿಕ ಜನರು ದಾಳಿ ನಡೆಸುತ್ತಿದ್ದುದರಿಂದ ಅವರ ವಿರುದ್ಧ ಬ್ರಿಟನಿನಲ್ಲಿದ್ದ ರೋಮನ್ ಸೈನ್ಯವನ್ನು ತೆಗೆದುಕೊಂಡು ಯುರೋಪಿಗೆ ಹೋದ. ಕೇಂದ್ರ ಸರ್ಕಾರ ಸಾರಸನ ನೇತೃತ್ವದಲ್ಲಿ ಕಾನ್‌ಸ್ಟಂಟೈನನ ವಿರುದ್ಧ ಸೈನ್ಯ ಕಳಿಸಿತು. ಮೊದಲಿಗೆ ಇವನು ಸೋತರೂ 408 ರಲ್ಲಿ ಸಾರಸ್ ಹಿಮ್ಮೆಟ್ಟಬೇಕಾಯಿತು. ಆರಿಲೇಟ್ ಪ್ರಾಂತ್ಯದಲ್ಲಿ ಕಾನ್‌ಸ್ಟಂಟೈನ್ ಭದ್ರವಾಗಿ ನೆಲೆನಿಂತ. ಸ್ಪೇನಿನ ರೋಮನ್ ಸೈನ್ಯವೂ ಇವನ ಕಡೆ ಸೇರಿತು. ತನ್ನ ಮಗ ಕಾನಸ್ಟನ್ಸನನ್ನು ಸೀಸರನೆಂದು ನೇಮಿಸಿದ. ಹೊನೋರಿಯಸನ ಬಂಧುಗಳು ಎಬ್ಬಿಸಿದ್ದ ದಂಗೆಯನ್ನಡಗಿಸಲು ಗೆರೊಂಷಿಯಸನ ನೇತೃತ್ವದಲ್ಲಿ ಸೈನ್ಯವೊಂದನ್ನು ಕಳಿಸಿದ. 408 ರಲ್ಲಿ ಇಟಲಿಯ ಮೇಲೂ ಯುದ್ಧ ಹೂಡಿದಾಗ ಚಕ್ರವರ್ತಿ ಹೊನೋರಿಯಸ್ ಅವನಿಗೆ ಜಂಟಿ ಚಕ್ರವರ್ತಿಯೆಂದು ಮನ್ನಣೆ ನೀಡಬೇಕಾಯಿತು (409). ಕಾನ್‌ಸ್ಟನ್ಸ್ ಸ್ಪೇನಿನ ಯಾತ್ರೆಯಲ್ಲಿ ಯಶಸ್ವಿಯಾಗಿ ಗಾಲಿಗೆ ಹಿಂದಿರುಗಿದ. ಆದರೆ ಸ್ಪೇನಿನಲ್ಲಿದ್ದ ಗೆರೊಂಷಿಯಸನೂ ಸೈನ್ಯವೂ ಒಂದಾಗಿ ಸಂಚು ಹೂಡಿ, ಮ್ಯಾಕ್ಸಿಮಸ್ ಎಂಬವನನ್ನು ಪ್ರತಿಸ್ಪರ್ಧಿ ಚಕ್ರವರ್ತಿಯಾಗಿ ಎತ್ತಿ ಕಟ್ಟಿದರು. ಇದರಿಂದ ಕಾನ್‌ಸ್ಟಂಟೈನನ ಪ್ರಾಬಲ್ಯ ಕುಗ್ಗಿತು. ಕೊನೆಗೆ ಸು.411ರಲ್ಲಿ ಕಾನ್‌ಸ್ಟನ್ಸ್ ಸೋತು ಸತ್ತ. ಕಾನ್‌ಸ್ಟಂಟೈನ್ ಇಟಲಿಗೆ ದಂಡೆತ್ತಿಹೋದ. ಆದರೆ ಅರಿಲೀಟಿಗೆ ಹಿಮ್ಮೆಟ್ಟಬೇಕಾಯಿತು. ಅಲ್ಲಿ ಹೊನೋರಿಯಸನ ದಳಪತಿಗಳು ಅವನ ಸೈನ್ಯಕ್ಕೆ ಮುತ್ತಿಗೆ ಹಾಕಿದರು. ಕಾನ್‌ಸ್ಟಂಟೈನ್ ಸೆರೆಸಿಕ್ಕಿದಾಗ ಶತ್ರುಗಳು 411ರಲ್ಲಿ ಅವನ ಪ್ರಾಣ ತೆಗೆದರು. *

**ಕಾನ್‌ಸ್ಟಂಟೈನ್ (ಪಾವ್ಲೊವಿಚ್) :** 1779–1831. ರಷ್ಯದ ಚಕ್ರವರ್ತಿ 1ನೆಯ ಪಾಲ್ ಮತ್ತು ಮೇರಿಯ ಫೆಡೆರೊವ್ನರ ಮಗ ; ರಾಣಿ ಕ್ಯಾಥರಿನ್ ಮಹಾಶಯೆಯ ಮೊಮ್ಮಗ. 1 ನೆಯ ಅಲೆಕ್ಸಾಂಡರ್ ಮತ್ತು 1ನೆಯ ನಿಕೊಲಾಸ್ ಇವನ ಸೋದರರು. ಫ್ರೆಡರಿಕ್ ಸೀಸರ್ ಡೆ ಲಾ ಹಾರ್ಪ್ ಇವನ ವಿದ್ಯಾಗುರು. ಸಣ್ಣ ವಯಸ್ಸಿನಲ್ಲಿ ಜರ್ಮನಿಯ ಜೂಲಿಯಾನ ಕೋಬರ್ಗ್‌ಳನ್ನು ವರಿಸಿ 1799ರಲ್ಲಿ ಆ ವಿವಾಹವನ್ನು ರದ್ದುಗೊಳಿಸಿದ. ಅದೇ ವರ್ಷ ಎ. ವಿ. ಸುವಾರಫನ ನೇತೃತ್ವದಲ್ಲಿ ಫ್ರಾನ್ಸಿನ ವಿರುದ್ಧ ಹೋರಾಡಿದ ಯುದ್ಧದಲ್ಲಿ ಬಾಸಿನಾನೊ ಕದನದಲ್ಲಿ ಸೋಲನ್ನನುಭವಿಸಬೇಕಾಯಿತಾದರೂ ನೊವಿ ಕದನದಲ್ಲಿ ಅಸಾಧಾರಣ ಶೌರ್ಯದಿಂದ ಕಾದಿ ಚಕ್ರವರ್ತಿಯ ಪ್ರೀತಿಯನ್ನೂ ಯುವರಾಜನೆಂಬ (ಝಾರೆವಿಚ್) ಬಿರುದನ್ನೂ ಗಳಿಸಿದ. 1805 ರಲ್ಲಿ ಆಸ್ಟರ್‌ಲಿಟ್ಸ್ ಕದನದಲ್ಲಿ ಇವನಿಗೆ ಸೋಲು ಕಾದಿತ್ತು. ಆದರೂ 1807, 1812, 1813 ಮತ್ತು 1814ರ ಕದನಗಳಲ್ಲಿ ಬಹಳ ಸಾಹಸದಿಂದ ಹೋರಾಡಿದ. ಯುದ್ಧತಂತ್ರದಲ್ಲಿ ಇವನು ನಿಪುಣನಾಗಿರಲಿಲ್ಲ.

1814 –15ರ ವಿಯೆನ್ನ ಕಾಂಗ್ರೆಸಿನ ತೀರ್ಮಾನದಂತೆ ಪೋಲೆಂಡಿನಲ್ಲಿ ಸಂವಿಧಾನಬದ್ಧ ರಾಜ್ಯವ್ಯವಸ್ಥೆಯೇರ್ಪಟ್ಟು ಅದು ರಷ್ಯದ ಚಕ್ರವರ್ತಿಯ ಆಡಳಿತಕ್ಕೊಳಪಟ್ಟಿತು. ಚಕ್ರವರ್ತಿ ಅಲೆಕ್ಸಾಂಡರ್ ತನ್ನ ಸೋದರನಾದ ಕಾನ್‌ಸ್ಟಂಟೈನನನ್ನು ಪ್ರಾಂತ್ಯಾಧಿಕಾರಿಯ ದರ್ಜೆಯಲ್ಲಿ ಪೋಲೆಂಡಿನ ಮುಖ್ಯ ದಂಡನಾಯಕನನ್ನಾಗಿ ನೇಮಿಸಿದ. ಕಾನ್‌ಸ್ಟಂಟೈನ್ ಅಲ್ಲೇ ನೆಲೆಸಿ, ವಿವಾಹವಾಗಿ, ಕ್ರಮೇಣ ಅಲ್ಲಿಯ ಜನರೊಡನೆ ಬೆರೆತ ; ಪೋಲೆಂಡಿನ ಸೈನ್ಯವನ್ನು ಸುವ್ಯವಸ್ಥಿತಗೊಳಿಸಿದ. ಅಲೆಕ್ಸಾಂಡರನ ಮರಣದಿಂದಾಗಿ ರಷ್ಯದ ಚಕ್ರವರ್ತಿಸ್ಥಾನ ತೆರವಾಯಿತು. ಆಡಳಿತದಲ್ಲಿ ಹೆಚ್ಚಿನ ಪಾಲನ್ನು ಬೇಡುತ್ತಿದ್ದ ಪೋಲೆಂಡಿನ ಕ್ರಾಂತಿಕಾರಿಗಳು

ಕಾನ್‌ಸ್ಟಂಟೈನನಿಗೆ ಚಕ್ರವರ್ತಿ ಪದವಿ ದೊರಕಬೇಕೆಂದು ಚಳವಳಿ ಹೂಡಿದರು. ಇದರಿಂದ ನಿಕೋಲಾಸನ ಮತ್ತು ಇವನ ನಡುವೆ ವೈಮನಸ್ಯವೇರ್ಪಟ್ಟಿತು. 1828–29 ರಲ್ಲಿ ರಷ್ಯ ತುರ್ಕಿಗಳ ನಡುವೆ ನಡೆದ ಯುದ್ಧದಲ್ಲಿ ಪೋಲೆಂಡಿನ ಸೈನ್ಯ ಭಾಗವಹಿಸದಷ್ಟು ಮಟ್ಟಿಗೆ ವಿರಸ ಬೆಳೆಯಿತು. ಈ ಮಧ್ಯೆ ಜನರೂ ಕಾನ್‌ಸ್ಟಂಟೈನನ ಕಠಿಣ ಆಡಳಿತದಿಂದ ಬೇಸತ್ತಿದ್ದರು. 1830ರ ನವೆಂಬರಿನಲ್ಲಿ ವಾರ್ಸಾದಲ್ಲಿ ದಂಗೆ ನಡೆದಾಗ ಅದನ್ನು ಕಾನ್‌ಸ್ಟಂಟೈನ್ ನಿರೀಕ್ಷಿಸಿರಲಿಲ್ಲ. ಸೈನ್ಯ ದಂಗೆಕಾರರ ಕಡೆ ಸೇರಿಕೊಂಡಿತು. ದಂಗೆ ಮುಗಿಯುವ ಮುನ್ನವೇ– 1831ರ ಜೂನಿನಲ್ಲಿ– ಕಾನ್‌ಸ್ಟಂಟೈನ್ ಮೃತನಾದ. *

**ಕಾನ್‌ಸ್ಟಂಟೈನ್, ಆಫ್ರಿಕದ :** 1020–87. ಮಧ್ಯಯುಗದಲ್ಲಿ ವೈದ್ಯಕ್ಷೇತ್ರದಲ್ಲಿ ಕೆಲಸ ಮಾಡಿದ ಒಬ್ಬ ಮುಖ್ಯ ವ್ಯಕ್ತಿ. ಅರಬ್ಬೀ ಭಾಷೆಯ ಪ್ರಮುಖ ಕೃತಿಗಳನ್ನು ಲ್ಯಾಟಿನ್‌ಗೆ ತರ್ಜುಮೆ ಮಾಡಲು ಪ್ರಾರಂಭಿಸಿದವ. ಬಹುಶಃ ಸಿಸಿಲಿಯಲ್ಲಿ ಕ್ರೈಸ್ತ ಮನೆತನವೊಂದರಲ್ಲಿ ಹುಟ್ಟಿ ಅರಬ್ಬೀ, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳನ್ನು ಕಲಿತ. 1071ರಲ್ಲಿ ನಾರ್ಮನ್ ಶ್ರೀಮಂತ ರಾಬರ್ಟ್ ಗ್ವಿಸ್ಕಾರ್ಡನ ಸೇವೆಯಲ್ಲಿದ್ದಾಗ ಸಾಲೆರ್ನೊ ನಗರಕ್ಕೆ ಹೋದ. ಅಲ್ಲಿ ಬೆನೆಡಿಕ್ಟೈನ್ ಪಂಥಕ್ಕೆ ಸೇರಿ ಕ್ರೈಸ್ತಪಾದ್ರಿಯಾದ. ಮಾಂಟೆ ಕ್ಯಾಸಿನೋದಲ್ಲಿಯ ಮಠದಲ್ಲಿದ್ದಾಗ ಅರಬ್ಬೀ ಗ್ರಂಥಗಳನ್ನು ಲ್ಯಾಟಿನ್‌ಗೆ ಭಾಷಾಂತರಿಸಿದ. ಸಾಂಸ್ಕೃತಿಕ ಇತಿಹಾಸಕ್ಕೆ ಇವು ಮಹತ್ತ್ವ ಪೂರ್ಣವಾದ ಕೊಡುಗೆಗಳು. ಇವು ಯುರೋಪಿನ ಅಂಧಕಾರಯುಗದ ಅಂತ್ಯವನ್ನೂ ವಿದ್ವದ್ಯುಗದ ಪ್ರಾರಂಭವನ್ನೂ ಸೂಚಿಸುತ್ತವೆ. ಇವನು ಭಾಷಾಂತರಿಸಿದ ಕೃತಿಗಳಲ್ಲಿ ಯಹೂದ್ಯ ಐಸಾಕ್ ಇಸ್ರೇಲಿಯ (855–955) ಎರಡು ದಾರ್ಶನಿಕ ಕೃತಿಗಳೂ ಪರ್ಷಿಯದ ಇಬ್ನ್ ಅಲ್ ಅಬ್ಬಾಸನ (ಮರಣ 994) ಲೈಬರ್ ರೆಜಿಯಸ್ ಎಂಬ ವೈದ್ಯಗ್ರಂಥದ ಸಂಗ್ರಹವಾದ ಪಾಂಟೆಕನ್ ಎಂಬುದೂ ಮುಖ್ಯವಾದವು. ಕೊನೆಯ ಗ್ರಂಥ ಪಾಶ್ಚಾತ್ಯರಿಗೆ ಮೊದಲ ಬಾರಿಗೆ ಗ್ರೀಕ್ ವೈದ್ಯಪದ್ಧತಿಯ ಪರಿಚಯ ದೊರಕಿಸಿಕೊಟ್ಟಿತು. ಅತಿ ಶೀಘ್ರದಲ್ಲಿ ಯುರೋಪಿನಲ್ಲೆಲ್ಲ ಇವನ ಬರೆವಣಿಗೆಗಳು ಪ್ರಸಾರವಾಗಿ ಪ್ರಭಾವ ಬೀರಿದುವು. ಸಾಲೆರ್ನೊ ನಗರದ ವೈದ್ಯಕ ಶಾಲೆಯಲ್ಲಿ ಇವುಗಳ ಪ್ರಭಾವ ಹೆಚ್ಚಾಗಿತ್ತು. *

**ಕಾನ್‌ಸ್ಟಂಟೈನರು :** ರೋಂ ಮತ್ತು ಬಿಜ಼ಾಂಟಿನ್ ಸಾಮ್ರಾಜ್ಯವನ್ನು ಈ ಹೆಸರಿನ 11 ಮಂದಿ ಚಕ್ರವರ್ತಿಗಳು ವಿವಿಧ ಕಾಲಗಳಲ್ಲಿ ಆಳಿದರು. ಅವರಲ್ಲಿ ಮುಖ್ಯರಾದವರ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

**1ನೆಯ ಕಾನ್‌ಸ್ಟಂಟೈನ್ : (ಫ್ಲೇವಿಯಸ್ ವಲೇರಿಯಸ್ ಕಾನ್‌ಸ್ಟಂಟೈನಸ್) :** 280–337. ಮಹಾಶಯನೆಂದು ಹೆಸರಾದ ಮೊದಲನೆಯ ಕ್ರೈಸ್ತ ರೋಮನ್ ಚಕ್ರವರ್ತಿ (306–337). 1ನೆಯ ಕಾನ್‌ಸ್ಟಾಂಷಿಯಸ್ ಕ್ಲೋರಸನಿಗೆ (293–306) ಅವನ ಮೊದಲನೆಯ ಹೆಂಡತಿ ಹೆಲೆನಳಲ್ಲಿ ಜನಿಸಿದ. ಕಾನ್‌ಸ್ಟಾಂಷಿಯಸನಿಗೆ ಸೀಸರ್ ಎಂಬ ಪದವಿಯನ್ನು ನೀಡಿದಾಗ (293) ಅವನ ಮಗ ಕಾನ್‌ಸ್ಟಂಟೈನ್ ಡಯೊಕ್ಲೀಷಿಯಸ್ ಚಕ್ರವರ್ತಿಯ ಆಸ್ಥಾನದಲ್ಲಿದ್ದ. ಅಲ್ಲಿ ಈತ ಪ್ರಜಾರಕ್ಷಕನಾಗಿ ನೇಮಕಗೊಂಡ. ಕ್ರೈಸ್ತರ ಬಗ್ಗೆ ಭವಿಷ್ಯ ವಾಣಿಯನ್ನು ಡಯೊಕ್ಲೀಷಿಯನ್ ತರಿಸಿಕೊಂಡಾಗ ಕಾನ್‌ಸ್ಟಂಟೈನನೂ ಅಲ್ಲಿದ್ದ. 303 ರಲ್ಲಿ ಕ್ರೈಸ್ತರಿಗೆ ನೀಡಲಾದ ಚಿತ್ರ ಹಿಂಸೆಯನ್ನು ಇವನೂ ನೋಡಿರಬೇಕು. 305 ರಲ್ಲಿ ಇವನ ತಂದೆಗೆ ಪಶ್ಚಿಮ ಪ್ರಾಂತ್ಯಗಳ ಆಗಸ್ಟಸ್ ಪದವಿ ದತ್ತವಾದಾಗ ಇವನೂ ತನ್ನ ತಂದೆಯನ್ನು ಕೂಡಿಕೊಳ್ಳಬಯಸಿದ. ಆದರೆ ಪೂರ್ವಪ್ರಾಂತ್ಯಗಳ ಆಗಸ್ಟಸ್ ಆಗಿದ್ದ ಗಲೇರಿಯಸ್ ಇವನನ್ನು ಬಿಟ್ಟು ಕೊಡಲಿಲ್ಲ. ಆದರೂ ಈತ ಗಾಲಿಗೆ ತಪ್ಪಿಸಿಕೊಂಡು ಹೋದ; ತಂದೆಯೊಂದಿಗೆ ಬ್ರಿಟನಿಗೆ ಹೋದ. 306 ರಲ್ಲಿ ತಂದೆ ಕಾಲವಾದಾಗ ಅವನ ಸೈನ್ಯ ಇವನನ್ನೇ ಆಗಸ್ಟಸ್ ಎಂದು ಸಾರಿತು. ಗಲೇರಿಯಸ್ ವಿಧಿಯಿಲ್ಲದೆ ಅವನನ್ನು ಸಸೀರ್ ಎಂದು ಒಪ್ಪಿಕೊಂಡ. ಆದರೆ ರೋಮನ್ ಚಕ್ರವರ್ತಿ ಮ್ಯಾಕ್ಸಿಮಿಯನನ ಮಗ ಮ್ಯಾಕ್ಸೆನ್ಷಿಯಸ್ 306 ರಲ್ಲಿ ಇಟಲಿಯಲ್ಲಿ ದಂಗೆಯೆದ್ದಾಗ



ಕಾನ್‌ಸ್ಟಂಟೈನನ ಬೃಹತ್ ವಿಗ್ರಹವೊಂದರ ತಲೆಯ ಭಾಗ

ಕಾನ್‌ಸ್ಟಂಟೈನ್ ಮ್ಯಾಕ್ಸಿಮೀಯನನಿಗೆ ಸ್ನೇಹದ ಕೈಚಾಚಿದ. ಮ್ಯಾಕ್ಸಿಮೀಯನ್ ಮತ್ತೆ ಸಿಂಹಾಸನವನ್ನು ಸಂಪಾದಿಸಿಕೊಂಡಾಗ ಕಾನ್‌ಸ್ಟಂಟೈನನನ್ನು ಆಗಸ್ಟಸ್ ಎಂದು ಪುರಸ್ಕರಿಸಿದನಲ್ಲದೆ ಅವನಿಗೆ ತನ್ನ ಪುತ್ರಿ ಫಾಸ್ಟಳನ್ನು ಕೊಟ್ಟು ಮದುವೆ ಮಾಡಿದ (307). ಆದರೆ ಮ್ಯಾಕ್ಸಿಮೀಯನ್ ಮಗನೊಂದಿಗೆ ಜಗಳವಾಡಿಕೊಂಡು ಅಳಿಯನಲ್ಲಿಗೆ ಬಂದು ಆಶ್ರಯ ಪಡೆದ. ಆದರೆ ಕಾನ್‌ಸ್ಟಂಟೈನ್ ಇಲ್ಲದಾಗ ಅವನು ಅರಲೇಟನಲ್ಲಿ ದಂಗೆಯೆದ್ದ. ಆದರೆ ಅದನ್ನು ಹತ್ತಿಕ್ಕಲಾಯಿತು. ಮ್ಯಾಕ್ಸಿಮೀಯನ್ ಆತ್ಮಹತ್ಯೆ ಮಾಡಿಕೊಂಡ. ಆಗ ಕಾನ್‌ಸ್ಟಂಟೈನ ತಾನು ಎರಡನೆಯ ಕ್ಲಾಡಿಯಸನ ವಂಶದವನೆಂದೂ ಆದ್ದರಿಂದ ಡಯೊಕ್ಲೀಷಿಯನನಿಗಿಂತಲೂ ಅವನು ನೇಮಕ ಮಾಡಿದ ಅಧಿಕಾರಿಗಳಿಗಿಂತಲೂ ತನಗೆ ಚಕ್ರಾಧಿಪತ್ಯದ ಮೇಲೆ ಹೆಚ್ಚು ಅಧಿಕಾರ ಇರುವುದಾಗಿ ವಾದಿಸಿದ.

ಗಾಲಿನ ಚಕ್ರವರ್ತಿಯಾಗುವಷ್ಟಕ್ಕೆ ಕಾನ್‌ಸ್ಟಂಟೈನನ ಆಕಾಂಕ್ಷೆ ತಣಿಯಲಿಲ್ಲ. ಈತ ಇಟಲಿಯನ್ನಾಕ್ರಮಿಸಿದ. ಸೆನೆಟ್ ಇವನನ್ನು ಹಿರಿಯ ಆಗಸ್ಟಸ್ ಎಂದು ಒಪ್ಪಿಕೊಂಡಿತು. ಪಶ್ಚಿಮದ ಎಲ್ಲ ಪ್ರಾಂತ್ಯಗಳೂ ಇದಕ್ಕೆ ಸಮ್ಮತಿ ನೀಡಿದವು. ಪೂರ್ವದ ಕೆಲವು ಪ್ರಾಂತ್ಯಗಳನ್ನಾಳುತ್ತಿದ್ದ ಲೈಸಿನೀಯಸ್ ಇವನ ಸ್ನೇಹ ಬೆಳೆಸಿದ; ಕಾನ್‌ಸ್ಟಂಟೈನನ ಮಗಳನ್ನು ವಿವಾಹವಾದ. ಅನಂತರ ಆತ ಎಲ್ಲ ಪೂರ್ವಪ್ರಾಂತ್ಯಗಳ ಏಕೈಕ ಅಧಿಪತಿಯಾದಾಗ ಕಾನ್‌ಸ್ಟಂಟೈನನೂ ಆತನೂ ಪರಸ್ಪರ ಸೌಹಾರ್ದ ನೀತಿ ಅನುಸರಿಸಿದರು. ಎಲ್ಲ ಧರ್ಮಗಳನ್ನೂ ಸಮಾನವಾಗಿ ಕಾಣುವುದಾಗಿಯೂ ಕ್ರೈಸ್ತರಿಗಾಗಿದ್ದ ಅನ್ಯಾಯಗಳನ್ನು ಸರಿಪಡಿಸುವುದಾಗಿಯೂ ಘೋಷಣೆ ಹೊರಡಿಸಲಾಯಿತು. ಕಾನ್‌ಸ್ಟಂಟೈನ್ ಇನ್ನೂ ಒಂದು ಹೆಜ್ಜೆ ಮುಂದೆ ಹೋದ. ಚರ್ಚುಗಳಿಗೆ ಧಾರಾಳವಾಗಿ ಧನದಾನ ಮಾಡಿದ. ಪುರೋಹಿತರಿಗೆ ವಿಶೇಷ ಸ್ಥಾನಮಾನಗಳು ಲಭಿಸಿದುವು. ಅನೇಕ ಪ್ರಬಲಶತ್ರುಗಳನ್ನು ನಿವಾರಿಸಿ ಸಾಮ್ರಾಟ ಪದವಿಗೇರುವುದು ದೈವಸಹಾಯವಿಲ್ಲದೆ ಸಾಧ್ಯವೇ ಇಲ್ಲ ಎಂದು ನಂಬಿದ್ದ ಕಾನ್‌ಸ್ಟಂಟೈನ್ ಎಲ್ಲ ಮತಧರ್ಮಗಳಿಗೂ ಒಂದೇ ರೀತಿಯ ಗೌರವ ನೀಡಿದ್ದು ಆಶ್ಚರ್ಯವೇನಲ್ಲ ; ನಾನಾರೀತಿಯ ಕಷ್ಟಸಂಕಟಗಳಿಗೀಡಾಗಿ ದೊರೆಗಳ ದಂಡನೆಯನ್ನು ಸಹಿಸುತ್ತ ಅಚಲಶ್ರದ್ಧೆಯಿಂದ ಯೇಸುವಿನ ಸಂದೇಶವನ್ನನುಸರಿಸಿಕೊಂಡು ಬಂದಿದ್ದ ಕ್ರೈಸ್ತರ ಪರವಾಗಿ ಸಹಜವಾಗಿ ಇವನ ಮನವೊಲಿದಿತ್ತು. ಇವನ ಕಾಲದಲ್ಲಾದ ಕೆಲವು ಸುಧಾರಣೆಗಳು ಕ್ರೈಸ್ತಧರ್ಮದಿಂದ ಪ್ರಭಾವಿತವಾಗಿದ್ದುವು. ರೋಮಿನಲ್ಲಿ ಹೊಸ ಕ್ರೈಸ್ತ ಪ್ರಾರ್ಥನ ಮಂದಿರಗಳನ್ನು ನಿರ್ಮಿಸಿದ. ಭಾನುವಾರ ಸಾರ್ವಜನಿಕ ಬಿಡುವಿನ ದಿನವಾಯಿತು. ಕ್ರೈಸ್ತಧರ್ಮಾಧಿಕಾರಿಗಳಿಗೆ ಧರ್ಮಸಂಸ್ಥೆಗಳ ಆಡಳಿತದಲ್ಲಿ ಹೆಚ್ಚು ಅಧಿಕಾರ ಕೊಟ್ಟ. ಅವಿವಾಹಿತರು ದಂಡನೆಯನ್ನನುಭವಿಸಬೇಕೆಂಬ ನಿಯಮವನ್ನು ರದ್ದುಗೊಳಿಸಿದ. ಕ್ರೈಸ್ತಧರ್ಮೀಯರಲ್ಲೇ ಬೆಳೆಯತೊಡಗಿದ್ದ ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ನಿವಾರಿಸಲೆತ್ನಿಸಿದ. ಇಂಥ ಒಡಕುಗಳು ಇರಲೇಕೂಡದೆಂದು ಇವನು ನಂಬಿದ್ದ.

ಕ್ರಮೇಣ ಇವನ ಮತ್ತು ಲೈಸಿನೀಯಸನ ಸಂಬಂಧ ಕೆಟ್ಟಿತು. ಕಾನ್‌ಸ್ಟಂಟೈನ್‌ನ ಅತಿಯಾದ ಕ್ರೈಸ್ತಶ್ರದ್ಧೆ ಲೈಸಿನೀಯಸನಿಗೆ ಒಪ್ಪಿಗೆಯಾಗಲಿಲ್ಲ. 314–315 ರಲ್ಲಿ ಅವರ ನಡುವೆ ಯುದ್ಧ ಪ್ರಾರಂಭವಾಯಿತು. ಸೋತ ಲೈಸಿನೀಯಸ್ ತನಗೆ ಸೇರಿದ್ದ ಕೆಲವು ಪ್ರಾಂತ್ಯಗಳನ್ನು ಕಾನ್‌ಸ್ಟಂಟೈನ್‌ನಿಗೆ ಬಿಟ್ಟುಕೊಡಬೇಕಾಯಿತು. ಕೆಲಕಾಲದ ಮೇಲೆ (323) ಪುನಃ ಯುದ್ಧ ಪ್ರಾರಂಭವಾಯಿತು. ಆಡ್ರಿಯಾನೋಪಲ್ (ಈಗಿನ ಎಡಿರ್ನೆ ; ತುರ್ಕಿಯಲ್ಲಿದೆ) ಕ್ರಿಸೋಪೊಲಿಸ್‌ಗಳಲ್ಲಿ (ಉಸ್ಕುಡಾರ್) ಕದನಗಳು ನಡೆದು ಲೈಸಿನೀಯಸ್ ಸೋತು ಶರಣಾಗತವಾದ. ಪುನಃ ದಂಗೆಯೇಳುವ ಪ್ರಯತ್ನ ಮಾಡಿದುದರ ಫಲವಾಗಿ ಸಿಂಹಾಸನವನ್ನು ಕಳೆದುಕೊಂಡು ಕಾನ್‌ಸ್ಟಂಟೈನ್ ಪೂರ್ವ–ಪಶ್ಚಿಮ ಭಾಗಗಳನ್ನೊಳಗೊಂಡ ವಿಶಾಲ ಸಾಮ್ರಾಜ್ಯದ ಚಕ್ರವರ್ತಿಯಾದ.

ರೋಂ ಚಕ್ರಾಧಿಪತ್ಯ ಮುಂದೆ ಕ್ರೈಸ್ತಧರ್ಮದ ನೆಲೆವೀಡಾಯಿತು. ಈ ಮಹತ್ಕಾರ್ಯದ ಸಾಧನೆಗಾಗಿಯೇ ದೇವರು ತನಗೆ ಇಂಥ ಸಾಮ್ರಾಜ್ಯ ದೊರಕುವಂತೆ ಮಾಡಿದನೆಂದು ನಂಬಿದ್ದ ಕಾನ್‌ಸ್ಟಂಟೈನ್ ಇದರ ಸ್ಮರಣಾರ್ಥವಾಗಿ ಬಿಜ಼ಾಂಟಿಯಂ ನಗರವನ್ನು ಬೃಹತ್ಪ್ರಮಾಣದ ನಗರವನ್ನಾಗಿ ಬದಲಾಯಿಸಿ ಅದಕ್ಕೆ ಕಾನ್‌ಸ್ಟಾಂಟಿನೋಪಲ್ **(ನೋಡಿ– ಕಾನ್‌ಸ್ಟಾಂಟಿನೋಪಲ್)** ಎಂಬ ಹೆಸರನ್ನಿತ್ತ (330). ಅಲ್ಲಿ ಸುಂದರವಾದ ದೊಡ್ಡ ಕ್ರೈಸ್ತ ಪ್ರಾರ್ಥನಾ ಮಂದಿರಗಳನ್ನು ಕಟ್ಟಿಸಿದ. ಲೈಸಿನೀಯಸನ ಆಳ್ವಿಕೆಯಲ್ಲಿ ಹಿಂಸೆಗೊಳಗಾಗಿದ್ದ ಕ್ರೈಸ್ತರಿಗೆ ಪರಿಹಾರ ದೊರಕಿತು. 337 ರಲ್ಲಿ ಪರ್ಷಿಯದೊಂದಿಗೆ ಯುದ್ಧ ಆರಂಭಿಸಿದಾಗ ಯುದ್ಧರಂಗಕ್ಕೆ ಹೊರಡುವ ಮುನ್ನ ಕಾಯಿಲೆ ಬಿದ್ದು ನಿಧನನಾದ.

ಸಾಮ್ರಾಜ್ಯದ ಪೂರ್ವಭಾಗದಲ್ಲಿದ್ದ ಕ್ರೈಸ್ತರಲ್ಲಿ ಮತತತ್ತ್ವಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿದ್ದುವು. ಕ್ರೈಸ್ತಧರ್ಮ ಒಂದೇಯೆಂದೂ ಕ್ರೈಸ್ತರಲ್ಲಿ ಒಡಕುಂಟಾದರೆ ಅದರಿಂದ ಸಾಮ್ರಾಜ್ಯಕ್ಕೆ ಅಪಾಯವೆಂದೂ ನಂಬಿದ್ದ ಕಾನ್‌ಸ್ಟಂಟೈನ್ ಈ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲೆತ್ನಿಸಿದ. ಸಿಸೀಯ ಎಂಬಲ್ಲಿ ಅಖಿಲ ಕ್ರೈಸ್ತ ಸಮ್ಮೇಳನವೊಂದನ್ನೇರ್ಪಡಿಸಿ. ಅದಕ್ಕೆ ತಾನೇ ಅಧ್ಯಕ್ಷನಾಗಿ ನಿಂತು, ಅದರ ನಿರ್ಣಯಗಳನ್ನು ಎಲ್ಲರೂ ಒಪ್ಪುವಂತೆ ಮಾಡಿದ. ಆದರೂ ಈ ಒಡಕು ಸಂಪೂರ್ಣವಾಗಿ ಪರಿಹಾರವಾಗಲಿಲ್ಲ.

ವಯಸ್ಸು ಕಳೆದಂತೆ ಇವನು ಹೆಚ್ಚುಹೆಚ್ಚಾಗಿ ಕ್ರೈಸ್ತಧರ್ಮ ನಿಷ್ಠೆ ಹೊಂದಿ, ಧರ್ಮಜಿಜ್ಞಾಸೆ ಪ್ರಾರ್ಥನೆಗಳಲ್ಲಿ ಕಾಲ ಕಳೆಯತೊಡಗಿದ. ಪ್ಯಾಲಸ್ಟೀನ್ ಮತ್ತು ಇತರ ಕಡೆಗಳಲ್ಲಿ ಪ್ರಾರ್ಥನ

ರೋಂನಲ್ಲಿರುವ ಕಾನ್‌ಸ್ಟಂಟೈನ್ ಮಹಾದ್ವಾರ; 312ರಲ್ಲಿ ನಿರ್ಮಿತವಾದ ವಿಜಯಸ್ಮಾರಕ

ಮಂದಿರಗಳಲ್ಲಿ ಕಟ್ಟಿಸಿದ. ಕ್ರೈಸ್ತ ಧರ್ಮದ ವಿಷಯವಾಗಿ ಇವನು ಹೊಂದಿದ್ದ ಆಸಕ್ತಿಯನ್ನು ಕಂಡ ಅನೇಕರು ತಾವೂ ಕ್ರೈಸ್ತರಾದರು. ಆದರೆ ಇವನ ಕ್ರೈಸ್ತಧರ್ಮಶ್ರದ್ಧೆ ಬೆಳೆದಂತೆಲ್ಲ ಇತರ ಧರ್ಮೀಯರ ವಿಷಯದಲ್ಲಿ ಅಸಹನೆ ಬೆಳೆಯಿತು. ತನ್ನ ನಿರೂಪಗಳಲ್ಲಿ ಎಲ್ಲರೂ ಪರಧರ್ಮ ಸಹಿಷ್ಣುತೆಯನ್ನು ಹೊಂದಿರಬೇಕೆಂದು ಹೇಳುತ್ತಿದ್ದರೂ ಸೈಲೀಷಿಯದಲ್ಲೂ ಫಿನಿಷಿಯದಲ್ಲೂ ಪ್ರಖ್ಯಾತ ಕ್ರೈಸ್ತೇತರ ದೇವಮಂದಿರಗಳನ್ನು ನಾಶಗೊಳಿಸಿ ಅವುಗಳ ಅಪಾರ ಸಂಪತ್ತನ್ನು ವಶಪಡಿಸಿಕೊಂಡ.

ಸಾಮ್ರಾಜ್ಯದ ನಾನಾಕಡೆಗಳಲ್ಲಿದ್ದ ನುರಿತ ಯೋಧರನ್ನೆಲ್ಲ ಕಾನ್‌ಸ್ಟಂಟೈನ್ ಬರಮಾಡಿಕೊಂಡು ತನ್ನ ಮೈಗಾವಲು ಪಡೆಯನ್ನು ದೊಡ್ಡ ಸೈನ್ಯವನ್ನಾಗಿ ಪರಿವರ್ತಿಸಿದ. ಹಿಂದಿನಿಂದ ಬಂದಿದ್ದ ಪ್ರಿಟೋರಿಯನ್ಸ್ ಎಂಬ ಅಂಗರಕ್ಷಕ ಪಡೆ ಕ್ಷೀಣಿಸಿತು. ಕಾನ್‌ಸ್ಟಂಟೈನ್ ಬಲು ಧಾರಾಳಿ. ಆದ್ದರಿಂದ ಹಣದ ಕೊರತೆ ನೀಗಿಸಿಕೊಳ್ಳಲು ಹೊಸ ತೆರಿಗೆಗಳನ್ನು ವಿಧಿಸಬೇಕಾಯಿತು. ಆದರೂ ಇವನ ಆಳ್ವಿಕೆಯಲ್ಲಿ ಒಟ್ಟಿನಲ್ಲಿ ನೆಮ್ಮದಿಯಿತ್ತು. 323ರಲ್ಲಿ ಇವನು ಒಟ್ಟುಗೂಡಿಸಿದ ರೋಮನ್ ಸಾಮ್ರಾಜ್ಯ ಇವನ ಮರಣಾನಂತರವೂ (337) ಸುಮಾರು ಅರ್ಧ ಶತಮಾನ ಕಾಲ ಒಂದಾಗಿಯೇ ಉಳಿಯಿತು. ಇದರ ಪರಿಣಾಮವಾಗಿಯೇ ಇವನು ಸಾಮ್ರಾಜ್ಯದ ರಾಜಕೀಯ ಮತ್ತು ಧಾರ್ಮಿಕ ರಂಗಗಳ ಸಮನ್ವಯವನ್ನು ಸಾಧಿಸಲು ಶಕ್ಯವಾದದ್ದು. (ಎ.ಎಂ.; ಪಿ.ಎಂ.ಯು.ಎಸ್.)

**5ನೆಯ ಕಾನ್‌ಸ್ಟಂಟೈನ್ (ಕೊಪ್ರೊನಿಮಸ್)** : 718–75. ಉತ್ತರ ಸಿರಿಯದ ದೊರೆಯಾಗಿದ್ದ 3ನೆಯ ಲಿಯೊನ ಮಗ ಮತ್ತು 741ರಿಂದ 775ರ ವರೆಗೆ ಬಿಜ಼ಾಂಟಿನ್ ಚಕ್ರವರ್ತಿ. ಸಿಂಹಾಸನಕ್ಕೆ ಬಂದ ಕೆಲಕಾಲದಲ್ಲೇ ಇವನ ಭಾವ ಅರ್ಟಬಸ್‌ಡಸ್ ಪ್ರತಿಕಕ್ಷಿಯಾಗಿ ಚಕ್ರವರ್ತಿಯೆಂದು ಸಾರಿಕೊಂಡ; ಅರಬರ ವಿರುದ್ಧವೂ ಈತ ಹೋರಾಡಬೇಕಾಯಿತು. 743ರಲ್ಲಿ ಈ ತೊಂದರೆಗಳಿಂದ ಪಾರಾಗಿ ಈತ ರಾಜಧಾನಿ ಕಾನ್‌ಸ್ಟಾಂಟಿನೋಪಲನ್ನು ಪುನಃ ಪ್ರವೇಶಿಸಿದ. 754ರಲ್ಲಿ 338 ಮಂದಿ ಬಿಷಪರ ಸಮ್ಮೇಳನವೊಂದನ್ನು ನಡೆಸಿ ವಿಗ್ರಹಾರಾಧನೆಯನ್ನು ಬಹಿಷ್ಕರಿಸುವ ನಿರ್ಣಯ ಮಾಡಿಸಿದರೂ ವಿಗ್ರಹಾರಾಧನೆಯ ಪರವಾಗಿದ್ದ ಕ್ರೈಸ್ತ ಸನ್ಯಾಸಿಗಳು ಇದನ್ನು ಪ್ರತಿಭಟಿಸಿದರು. ಕಾನ್‌ಸ್ಟಂಟೈನ್ ಈ ವಿರೋಧವನ್ನು ಹತ್ತಿಕ್ಕಿದ. ಈತ ಉತ್ತಮ ಸೈನಾಧಿಕಾರಿಯಾಗಿದ್ದ. 747ರಲ್ಲಿ ಭೂ ಮತ್ತು ನೌಕಾ ಯುದ್ಧಗಳಲ್ಲಿ ಅರಬರನ್ನು ಸೋಲಿಸಿದ. ಅನಂತರ ಆರ್ಮೇನಿಯ ಮತ್ತು ಮೆಸಪೊಟೇಮಿಯಗಳನ್ನು ಗೆದ್ದರೂ ಬಹುಕಾಲ ಅವು ಇವನ ವಶದಲ್ಲಿ ಉಳಿಯಲಿಲ್ಲ. ತನ್ನ ಅಂತ್ಯದವರೆಗೂ ಬಾಲ್ಕನ್ ಸಮುದ್ರ ಪ್ರದೇಶದಲ್ಲಿ ಬಲ್ಗೇರಿಯ ರಾಜ್ಯದೊಡನೆ ಹೋರಾಡುತ್ತಿದ್ದು 775ರ ಸೆಪ್ಟಂಬರ್ 14ರಂದು ಯುದ್ಧನಿರತನಾಗಿದ್ದಾಗಲೇ ನಿಧನನಾದ.

ಈತ ಈ ಯುದ್ಧಗಳಲ್ಲಿ ತೊಡಗಿದ್ದಾಗ ಇಟಲಿಯಲ್ಲಿ ಲಂಬಾರ್ಡರು ಇವನ ವಿರುದ್ಧ ಸಂಚು ನಡೆಸುತ್ತಿದ್ದರು. ಮೊದಲಿಗೆ ವಿಗ್ರಹಾರಾಧನೆಯ ಪರವಾಗಿ ಹೋರಾಡುತ್ತಿದ್ದರೂ ಪೋಪ್ ಇವನಿಗೆ ವಿಧೇಯನಾಗಿದ್ದ ; ಆದರೆ ತರುವಾಯ ಇವನ ಶತ್ರುಗಳ ಜೊತೆ ಸೇರಿದ. ಇದರಿಂದ ಇಟಲಿ ಪ್ರದೇಶದಲ್ಲಿ ಬಿಜ಼ಾಂಟಿನ್ ಅಧಿಕಾರ ನಶಿಸಿ, ದಕ್ಷಿಣ ಕೆಲಭಾಗಗಳು ಮಾತ್ರ ಇದರ ಅಂಕೆಯಲ್ಲುಳಿದವು.

**7ನೆಯ ಕಾನ್‌ಸ್ಟಂಟೈನ್ (ಪಾರ್‌ಫಿರೊಜೆನಿಟಸ್)**: 905–59. ಬಿಜ಼ಾಂಟಿನ್ ಚಕ್ರವರ್ತಿ, ಸ್ವತಃ ಲೇಖಕರಿಗೆ ಆಶ್ರಯದಾತ. ಪಾರ್‌ಫಿರೊಜೆನಿಟಸ್ ಎಂದರೆ ರಾಜಮನೆತನದಲ್ಲಿ ಹುಟ್ಟಿದವನೆಂದು ಅರ್ಥ. ಈತ 913 ರಿಂದ ಚಕ್ರವರ್ತಿಯಾಗಿದ್ದರೂ ತನ್ನ ಮಾವನಾದ ಮೊದಲನೆಯ ರೊಮಾನಸ್ ಲೆಕಾಪಿನಸನನ್ನು 944ರಲ್ಲಿ ದೇಶಭ್ರಷ್ಟನನ್ನಾಗಿ ಮಾಡುವವರೆಗೂ ಅಧಿಕಾರ ಇವನ ವಶವಾಗಿರಲಿಲ್ಲ. 945ರ ಅನಂತರದ ಕಾಲದಲ್ಲಿ ಈತ ತನ್ನ ಆಡಳಿತದಲ್ಲಿದ್ದ ಸಣ್ಣರೈತರ ಮತ್ತು ಸೈನಿಕರ ಆಸ್ತಿಯ ರಕ್ಷಣೆಯ ಕ್ರಮ ಕೈಕೊಂಡನಲ್ಲದೆ ಪೂರ್ವ ಮೆಡಿಟರೇನಿಯನ್ ಪ್ರಾಂತ್ಯದಲ್ಲಿ ಅರಬರ ವಿರುದ್ಧ ಹೋರಾಟಕ್ಕೆ ಗಮನ ನೀಡಿದ. ಹೊರ ದೇಶಗಳೊಡನೆ ಈತ ಉತ್ತಮ ಸಂಪರ್ಕ ಹೊಂದಿದ್ದ; ಕ್ರೈಸ್ತಧರ್ಮಕ್ಕೆ ಹೊಸದಾಗಿ ಪರಿವರ್ತನೆ ಹೊಂದಿದ್ದ ರಷ್ಯನ್ ರಾಜಕುಮಾರಿ ಓಲ್ಗ 957ರಲ್ಲಿ ಇವನ ಆಸ್ಥಾನಕ್ಕೆ ಭೇಟಿ ನೀಡಿದಳು.

ಕಾನ್‌ಸ್ಟಂಟೈನ್ ಖ್ಯಾತಿ ಗಳಿಸಿರುವುದು ರಾಜ್ಯಾಡಳಿತಕ್ಕಿಂತಲೂ ಅಧಿಕವಾಗಿ ಕಲೆ ಸಾಹಿತ್ಯಗಳಿಗೆ ನೀಡಿದ ಪ್ರೋತ್ಸಾಹದಿಂದಾಗಿ. ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ನರ ಐತಿಹಾಸಿಕ ಅವಶೇಷಗಳ ಅಧ್ಯಯನದಲ್ಲಿ ಈತನಿಗೆ ಹೆಚ್ಚು ಆಸಕ್ತಿಯಿತ್ತು. ಬಿಜ಼ಾಂಟಿನ್ ಸಾಮ್ರಾಜ್ಯದ ಬಗ್ಗೆ ಇವನು ಸ್ವತಃ ಬರೆದ. ಇವನ ಪ್ರೇರಣೆಯಿಂದ ರಚಿತವಾದ ಗ್ರಂಥಗಳಿಂದ ಅಮೂಲ್ಯಮಾಹಿತಿಗಳು ದೊರಕುತ್ತವೆ. ಇವನ ಗ್ರಂಥಗಳ ಪೈಕಿ ಡಿ ಅಡ್ಮಿನಿಸ್ಟ್ರಾಂಡೊ ಇಂಪೀರಿಯೊ ಎಂಬುದು ವಿದೇಶಾಂಗ ಕಛೇರಿಯನ್ನು ಕುರಿತ ಕೈಪಿಡಿ; ಡಿ ಸೆರಿಮೋನೀಸ್ ಅವುಲೇ ಬಿಸಾಂಟಿನೇ ಎಂಬುದು ಬಿಜ಼ಾಂಟಿನ್ ಚರ್ಚಿನ ಕಟ್ಟಳೆಗಳನ್ನೂ ಆಚಾರಗಳನ್ನೂ ವರ್ಣಿಸುವ ಕೃತಿ; ಥಿಯೋಫನೀಸ್ ಕಾಂಟಿನಾಟಸ್ ಎಂಬ ಪುಸ್ತಕದ ಐದನೆಯ ಸಂಪುಟದಲ್ಲಿ ಇವನ ತಾತನ (1ನೆಯ ಬೇಸಿಲ್) ಜೀವನ ಪರಿಚಯವಿದೆ. ಇವನ ಆಶ್ರಯದಲ್ಲಿ ವಿಶ್ವಕೋಶಸದೃಶವಾದ ಮತ್ತು ಪುರಾತನರ ಕೃತಿಗಳಿಂದ ಆಯ್ದ ಭಾಗಗಳನ್ನೊಳಗೊಂಡ ಅನೇಕ ಗ್ರಂಥಗಳು ರಚಿತವಾದವು.

**9ನೆಯ ಕಾನ್‌ಸ್ಟಂಟೈನ್ (ಮಾನೊಮ್ಯಾಕಸ್)** : ಸು. 980–1055. 1042 ರಿಂದ 1055ರ ವರೆಗೆ ಆಳಿದ ಬಿಜ಼ಾಂಟಿನ್ ಚಕ್ರವರ್ತಿ. ಮ್ಯಾನೊಮ್ಯಾಕಸ್ ಎಂದರೆ ಏಕಾಂಗವೀರ. ಮ್ಯಾಸಿಡೋನಿಯನ್ ಚಕ್ರವರ್ತಿನಿ ಸೋ ಇವನನ್ನು ತನ್ನ ಮೂರನೆಯ ಪತಿಯಾಗಿ ಸ್ವೀಕರಿಸಿದುದರಿಂದ ಇವನಿಗೆ ಚಕ್ರವರ್ತಿ ಪದವಿ ದೊರಕಿತು. ಈತ ಸೈನ್ಯಾಧಿಕಾರದ ವಿರೋಧಿಗಳಾದ ನಾಗರಿಕರ ಪಕ್ಷಕ್ಕೆ ಸೇರಿದ್ದುದರಿಂದ, ಸೈನ್ಯ ಬಲವನ್ನದು ಕುಂಠಿತಗೊಳಿಸಿತು. ವೈಭವ ಜೀವನ ಮತ್ತು ಉಜ್ಜ್ವಲ ಕಟ್ಟಡಗಳ ರಚನೆಗಾಗಿ ಅಧಿಕವಾಗಿ ವೆಚ್ಚ ಮಾಡಿದುದರಿಂದ ಸಂಭವಿಸಿದ ಹಣದ ಅಭಾವವನ್ನು ನಿವಾರಿಸಲು ನಾಣ್ಯಗಳಿಗೆ ಈತ ಕೀಳ್ಬೆರಕೆ ಮಾಡಿದ. ಉತ್ತರ ಭಾಗದಲ್ಲಿ ನಾರ್ಮನರು ಬಿಜ಼ಾಂಟಿನ್ ಸಾಮ್ರಾಜ್ಯಕ್ಕೆ ಸೇರಿದ ಇಟಲಿಯ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ಥ್ರೇಸ್ ಮತ್ತು ಮ್ಯಾಸಿಡೋನಿಯ ಪ್ರಾಂತ್ಯಗಳು ಪೆಚೆನೆಗ್ಗರ ವಶವಾದುವು. ಆರ್ಮೇನಿಯದ ಎಲ್ಲೆಯಲ್ಲಿ ಸೆಲ್ಜುಕ್ ತುರ್ಕರು ಆಕ್ರಮಣ ನಡೆಸಿದರು. ಆರ್ಮೇನಿಯದ ಆನಿ ರಾಜ್ಯ ಸ್ವತಂತ್ರವಾಯಿತು. ಹೀಗೆ ಎಲ್ಲ ದಿಕ್ಕುಗಳಿಂದಲೂ ತೊಂದರೆಗೊಳಗಾದಾಗ ಈತ ಇಟಲಿಯ ಪೋಪ್ ಗುರುವಿನ ನೆರವು ಬೇಡಿದ. ಆದರೆ ಪರಸ್ಪರ ಸೌಹಾರ್ದ ಕಳೆದುಕೊಂಡಿದ್ದ ಎರಡು ಪಕ್ಷಗಳಲ್ಲಿ ಸಾಮರಸ್ಯವೇರ್ಪಡುವುದು ಸಾಧ್ಯವಾಗಲಿಲ್ಲ. 1054ರಲ್ಲಿ ಪೋಪನ ಪ್ರತಿನಿಧಿಗಳು ಕಾನ್‌ಸ್ಟಾಂಟಿನೋಪಲ್‌ಗೆ ಬಂದಾಗ ಇವರಲ್ಲಿ ಭಿನ್ನಾಭಿಪ್ರಾಯಗಳು ಉಲ್ಬಣಗೊಂಡವು. ರಾಜ್ಯಾಡಳಿತದಲ್ಲಿ ಈ ರೀತಿ ಸಾರ್ವತ್ರಿಕ ಸೋಲನ್ನನುಭವಿಸಿದರೂ ಇವನು ನಿರ್ಮಿಸಿದ ಅಮೋಘ ವಾಸ್ತುಕೃತಿಗಳಿಂದಲೂ ಸಾಹಿತ್ಯ ವಿದ್ಯಾಭ್ಯಾಸಗಳಿಗೆ ಇವನು ನೀಡಿದ ಪ್ರೋತ್ಸಾಹದಿಂದಲೂ ಕಾನ್‌ಸ್ಟಾಂಟಿನೋಪಲ್ ವಿಶ್ವವಿದ್ಯಾಲಯದಲ್ಲಿ ಇವನು ಮಾಡಿದ ಸುಧಾರಣೆಗಳಿಂದಲೂ ಇತಿಹಾಸದಲ್ಲಿ ಸ್ಥಾನಗಳಿಸಿದ್ದಾನೆ.

**11 ನೆಯ ಕಾನ್‌ಸ್ಟಂಟೈನ್ (ಡ್ರಾಸಿಸ್ ಪೇಲಿಯಾಲೊಗಸ್)**: 1404–53. ಬಿಜ಼ಾಂಟಿನ್ ಸಾಮ್ರಾಜ್ಯದ ಕೊನೆಯ ಚಕ್ರವರ್ತಿ(1449–53). 2ನೆಯ ಮ್ಯಾನುಯಲ್ ಮತ್ತು ರಾಣಿ ಹೆಲೆನಳ ಮಗ. ಸಣ್ಣ ವಯಸ್ಸಿನಲ್ಲಿ ಮೋರಿಯ ಪ್ರಾಂತ್ಯಾಧಿಕಾರಿಯಾಗಿದ್ದು ಫ್ರಾಂಕರಿಂದ ಅದನ್ನು ಪೂರ್ಣ ವಶಪಡಿಸಿಕೊಂಡ. ತನ್ನ ಅಣ್ಣ 8ನೆಯ ಜಾನ್ ಸಂತತಿಯಿಲ್ಲದೆ 1448ರಲ್ಲಿ ಸತ್ತ ಅನಂತರ 1449ರ ಜನವರಿಯಲ್ಲಿ ಚಕ್ರವರ್ತಿಯಾದ. ಈತ ಶಕ್ತನೂ ಸಾಹಸಿಯೂ ಆಗಿದ್ದ. 1451ರಲ್ಲಿ ಆಟೋಮನ್ ಸಾಮ್ರಾಜ್ಯದ ಚಕ್ರವರ್ತಿಯಾದ. 2ನೆಯ ಮಹಮ್ಮದ್ ಸರ್ವಸೇನಾಬಲಸಜ್ಜಿತನಾಗಿ ಕಾನ್‌ಸ್ಟಾಂಟಿನೋಪಲ್ ಮೇಲೆ ಏರಿಬಂದಾಗ ಕಾನ್‌ಸ್ಟಾಂಟೈನ್, ಅದರ ಎದುರು ನಿಂತು ಗೆಲ್ಲಲಾಗಲಿಲ್ಲ. 1453ರ ಮೇ 23ರಂದು ಕಾನ್‌ಸ್ಟಾಂಟಿನೋಪಲ್ ಮಹಮ್ಮದನ ವಶವಾಯಿತು. ಕೋಟೆಯ ಗೋಡೆಗಳ ನೆರೆಯಲ್ಲಿ ನಿಂತು ಕಾದಾಡುತ್ತ ಕಾನ್‌ಸ್ಟಾಂಟೈನ್ ಪ್ರಾಣ ತೆತ್ತ. *

**ಕಾನ್‌ಸ್ಟಾಂಟಿನೋಪಲ್** : ಪಶ್ಚಿಮ ರೋಮನ್ ಸಾಮ್ರಾಜ್ಯ ಕೊನೆಗೊಂಡ ಮೇಲೆ, 476 ರಿಂದ 1453ರ ವರೆಗೆ ಬಿಜ಼ಾಂಟಿನ್ (ಪೂರ್ವರೋಮನ್) ಸಾಮ್ರಾಜ್ಯಕ್ಕೂ ಅದು ತುರ್ಕರಿಂದ ಪತನ ಹೊಂದಿದ ಅನಂತರ ಆಟೋಮನ್ ಸಾಮ್ರಾಜ್ಯಕ್ಕೂ ರಾಜಧಾನಿಯಾಗಿದ್ದು, ಈಗ ಇಸ್ತಾನ್‌ಬುಲ್ ಎನಿಸಿಕೊಂಡಿರುವ ನಗರ. ಮೊದಲು ಇದಕ್ಕೆ ಬಿಜ಼ಾಂಟಿಯಂ ಎಂಬ ಹೆಸರಿತ್ತು. ಬಾಸ್ಪೊರಸ್ ಜಲಸಂಧಿಯ ಐರೋಪ್ಯ ದಂಡೆಯ ಮೇಲಿದ್ದ ಈ ನಗರವನ್ನು 1ನೆಯ ಕಾನ್‌ಸ್ಟಂಟೈನ್ ಮಹಾಶಯ 330ರಲ್ಲಿ ತನ್ನ

ರಾಜಧಾನಿಯಾಗಿ ಉದ್ಘಾಟಿಸಿದಾಗ ಇದನ್ನು ಆತನ ಹೆಸರಿನಿಂದ ಕಾನ್‌ಸ್ಟಾಂಟಿನೋಪೊಲಿಸ್ ಎಂದೂ ಹೊಸ ರೋಂ ಎಂದೂ ಕರೆಯಲಾಯಿತು. ಏಳು ಮಲೆಗಳ ಮೇಲೆ ನಿರ್ಮಿತವಾಗಿ, ಮೂರು ಸುತ್ತಿನ ಕೋಟೆಯಿಂದ ರಕ್ಷಿತವಾಗಿದ್ದ ಈ ನಗರ ಬಿಜ್ಞಾಂಟಿನ್ ಚಕ್ರಾಧಿಪತ್ಯದ ವೈಭವದ ಪಡಿನೆಳಲಾಗಿ, 1453ರಲ್ಲಿ ತುರ್ಕರ ವಶವಾಗುವವರೆಗೂ ಮಧ್ಯ ಯುರೋಪಿನಲ್ಲೇ ಅತ್ಯಂತ ಪ್ರಸಿದ್ಧ ನಗರವಾಗಿತ್ತು.

ಪೂರ್ವ ಮತ್ತು ಪಶ್ಚಿಮ ರೋಮನ್ ಸಾಮ್ರಾಜ್ಯಗಳನ್ನು ಕಾನ್‌ಸ್ಟಂಟೈನ್ ಒಂದುಗೂಡಿಸಿ, ಕಾನ್‌ಸ್ಟಾಂಟಿನೋಪಲಿನಿಂದ ಅದನ್ನು ಆಳತೊಡಗಿದ ಮೇಲೆ ಈ ನಗರ ಸರ್ವತೋಮುಖವಾಗಿ ಬೆಳೆಯಿತು. ಭವ್ಯಸ್ಮಾರಕಗಳು, ಕ್ರೀಡಾರಂಗಗಳು ಮುಂತಾದ ರಚನೆಗಳಿಂದ ಕೂಡಿ ಅತ್ಯಂತ ಸುಂದರವೂ ವೈಭವಯುತವೂ ಆಗಿ ಕಂಗೊಳಿಸುತ್ತಿತ್ತು. ಕಾನ್‌ಸ್ಟಂಟೈನನ ಕಾಲದಲ್ಲಿ ಇಲ್ಲಿ ನಿರ್ಮಿತವಾದ ಸೇಂಟ್ ಸೋಫಿಯ ಅತ್ಯಂತ ಪ್ರಸಿದ್ಧ ಕಟ್ಟಡ. ಥಿಯೋಡೊಸಿಯಸ್ (415) ಮತ್ತು ಜಸ್ಟಿನಿಯನರ ಕಾಲದಲ್ಲಿ ವಿಸ್ತೃತವಾಗಿ ಭವ್ಯರೂಪು ತಳೆಯಿತು. ಕಲಾಪೂರ್ಣವಾದ ಇದರ ಒಳಭಾಗದ ಕೆತ್ತನೆಕೆಲಸವನ್ನು ಪೂರ್ಣಗೊಳಿಸಲು 10,000 ಕೆಲಸಗಾರರು ಸುಮಾರು ಆರು ವರ್ಷ ದುಡಿದರು. ಇದು ಮಧ್ಯಯುಗದ ಅತ್ಯಂತ ಅಪೂರ್ವ ಕಟ್ಟಡವಾಗಿತ್ತು. ಚಕ್ರವರ್ತಿಗಳ ಪವಿತ್ರ ಅರಮನೆಗಳೂ ಬೃಹದ್ವರ್ತುಲ ಕೀಡಾರಂಗವೂ ಸುವರ್ಣದ್ವಾರವೂ ಇದರ ಸುಪ್ರಸಿದ್ಧ ಸ್ಮಾರಕಗಳಾಗಿದ್ದವು.

ಇತಿಹಾಸದಲ್ಲಿ ಕಾನ್‌ಸ್ಟಾಂಟಿನೋಪಲ್ ವಹಿಸಿದ ಪಾತ್ರ ಪ್ರಮುಖವಾದದ್ದು. ಆಗಾಗ್ಗೆ ಇಲ್ಲಿ ಧಾರ್ಮಿಕ ಸಮ್ಮೇಳನಗಳು ನಡೆಯುತ್ತಿದ್ದವು. ಪೂರ್ವ ಪಶ್ಚಿಮ ರೋಮನ್ ಸಾಮ್ರಾಜ್ಯ ಚರ್ಚ್‌ಗಳ ಮನ್ನಣೆ ಪಡೆದ ಮೂರು ವಿಶ್ವಕ್ರೈಸ್ತ ಸಮ್ಮೇಳನಗಳು ಇವುಗಳಲ್ಲಿ ಮುಖ್ಯವಾದವು. ಈ ನಗರ ಕ್ರೈಸ್ತಸಂನ್ಯಾಸಿಗಳ ಪ್ರಸಿದ್ಧ ಕೇಂದ್ರವೂ ಆಗಿತ್ತು. ಇದು ಅತ್ಯಂತ ಪ್ರವರ್ಧಮಾನ ಸ್ಥಿತಿಯಲ್ಲಿದ್ದಾಗ (10ನೆಯ ಶತಮಾನ) ನಗರದ ಜನಸಂಖ್ಯೆ 10,00,000 ಆಗಿತ್ತು.

ಕಲೆ ಸಾಹಿತ್ಯ ಸಂಪತ್ತುಗಳ ಕೇಂದ್ರವಾಗಿದ್ದ ಕಾನ್‌ಸ್ಟಾಂಟಿನೋಪಲ್ 1453ರಲ್ಲಿ ತುರ್ಕರ ವಶವಾಗಿ ತನ್ನ ವೈಭವವನ್ನು ಕಳೆದುಕೊಂಡು, ಜನಹೀನವಾಗಿ ಕೆಲಕಾಲ ಮಸುಳಿಸಿತ್ತು. ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಅದು ಪುನಃ ತಲೆಯೆತ್ತಿ ಮತ್ತೊಮ್ಮೆ ವೈಭವಯುಕ್ತವಾಗಿ ಯುರೋಪಿನ ಒಂದು ಪ್ರಸಿದ್ಧ ರಾಜಕೀಯ ಹಾಗೂ ವಾಣಿಜ್ಯ ಕೇಂದ್ರವಾಗಿ ಬೆಳೆಯಿತು.ಒಂದನೆಯ ಮಹಾಯುದ್ಧದ ಅನಂತರ ಮಿತ್ರರಾಷ್ಟ್ರಗಳ ಆಕ್ರಮಣಕ್ಕೊಳಗಾಗಿತ್ತು (1918–23). 1923ರಲ್ಲಿ ತುರ್ಕಿಯ ರಾಜಧಾನಿಯಾದ್ದರಿಂದ ಇದರ ರಾಜಕೀಯ ಪ್ರಾಮುಖ್ಯ ಕಡಿಮೆಯಾಯಿತೆನ್ನಬಹುದು. ಈ ನಗರಕ್ಕೆ ಇಸ್ತಾನ್‌ಬುಲ್ ಎಂದು ನಾಮಕರಣವಾದದ್ದು 1930ರಲ್ಲಿ (**ನೋಡಿ– ಇಸ್ತಾನ್‌ಬುಲ್**). (ವಿ.ಕೆ.ಯು.)

**ಕಾನ್‌ಸ್ಟಾನ್‌ಷಸ್ :** ಈ ಹೆಸರಿನ ಮೂವರು ರೋಮನ್ ಚಕ್ರವರ್ತಿಗಳಿದ್ದಾರೆ. ಅವರ ಜೀವನಚರಿತ್ರೆಯ ವಿವರಗಳನ್ನು ಇಲ್ಲಿ ಕೊಡಲಾಗಿದೆ.

**1ನೆಯ ಕಾನ್‌ಸ್ಟಾನ್‌ಷಸ್ (ಕ್ಲೋರಸ್) :** ರೋಮಿನ ಚಕ್ರವರ್ತಿ. ಡಾರ್ಡಾನ್ ಪ್ರದೇಶಕ್ಕೆ ಸೇರಿದ ಬಡಕುಟುಂಬವೊಂದರಲ್ಲಿ ಜನಿಸಿ ಸೈನ್ಯದಲ್ಲಿ ಸೇವೆ ಸಲ್ಲಿಸಿದ ಅನಂತರ ಡಾಲ್ಮೇಷಿಯದ ಪ್ರಾಂತ್ಯಾಧಿಕಾರಿಯಾಗಿದ್ದ. ಮ್ಯಾಕ್ಸಿಮಿಯನ್ ಚಕ್ರವರ್ತಿಯಿಂದ 293ರ ಮಾರ್ಚಿ 1 ರಂದು ಸೀಸರ್ ಪದವಿ ಪಡೆದ ಮೇಲೆ ಅವನ ಪುತ್ರಿ ಥಿಯೋಡೋರಳನ್ನು ವಿವಾಹವಾದ. ಆ ವೇಳೆಗೆ ಇವನಿಗೊಬ್ಬ ಮಗನಿದ್ದ. ಅವನೇ ಮುಂದೆ ಚಕ್ರವರ್ತಿಯಾದ 1ನೆಯ ಕಾನ್‌ಸ್ಟಂಟೈನ್ ಮಹಾಶಯ. ಕನ್‌ಸ್ಟಾನ್‌ಷಸನಿಗೆ ಥಿಯೋಡೋರಳಲ್ಲಿ ಮೂವರು ಪುತ್ರರೂ ಮೂವರು ಪುತ್ರಿಯರೂ ಜನಿಸಿದರು. ಗಾಲ್ ಪ್ರಾಂತ್ಯಾಧಿಕಾರಿಯಾಗಿದ್ದಾಗ ಬ್ರಿಟನ್ ಪ್ರಾಂತ್ಯವನ್ನು ಕಬಳಿಸಿದ್ದ ಆರೇಲಿಯಸ್ ಕರಾಸಿಯಸನನ್ನು 293ರಲ್ಲೂ ಅವನ ಮಗ ಅಲೆಕ್ಟಸನನ್ನು 296 ರಲ್ಲೂ ಗೆದ್ದು ಬ್ರಿಟನ್ ಪ್ರಾಂತ್ಯವನ್ನು ಪುನರ್ವಶಪಡಿಸಿಕೊಂಡ. 298ರಲ್ಲಿ ಅಲಮನ್ನಿಯನ್ನು ಗೆದ್ದು ಬ್ರಿಟನ್ ಮತ್ತು ಗಾಲ್ ಪ್ರಾಂತ್ಯಗಳ ನಗರಗಳನ್ನು ಸ್ವಾಧೀನಮಾಡಿಕೊಂಡ. ಈತ ಕ್ರೈಸ್ತರ ಚರ್ಚುಗಳನ್ನು ನಾಶಪಡಿಸಿದರೂ ಆ ಮತಸ್ಥರನ್ನು ಹಿಂಸೆ ಮಾಡಲಿಲ್ಲ. 305ರ ಮೇ 1 ರಂದು ಡಯೊಕ್ಲಿಷಿಯನ್ ಮತ್ತು ಮ್ಯಾಕ್ಸಿಮಿಯನ್– ಇವರಿಬ್ಬರೂ ಅಧಿಕಾರ ತ್ಯಾಗಮಾಡಿದಾಗ ಪ್ರಥಮ ಆಗಸ್ಟಸ್ ಪದವಿ ಪಡೆದ ಕಾನ್‌ಸ್ಟಾನ್‌ಷಸ್ 306ರ ಬೇಸಗೆಯಲ್ಲಿ ಎಬೊರಕಮ್‌ನಲ್ಲಿ (ಈಗಿನ ಯಾರ್ಕ್) ನಿಧನನಾದ.

**2ನೆಯ ಕಾನ್‌ಸ್ಟಾನ್‌ಷಸ್ (ಫ್ಲೇವಿಯಸ್ ಜೂಲಿಯಸ್):** 317–61. ಕಾನ್‌ಸ್ಟಂಟೈನ್ ಮಹಾಶಯನ ಪುತ್ರ ಮತ್ತು ರೋಮನ್ ಚಕ್ರವರ್ತಿ. ಇಲ್ಲಿರಿಕಮ್‌ನಲ್ಲಿ 317ರ ಆಗಸ್ಟ್ 7ರಂದು ಜನಿಸಿದ. 324ರ ನವೆಂಬರ್ 8ರಂದು ಇವನಿಗೆ ಸೀಸರ್ ಪದವಿ ದೊರಕಿತು. 337ರಲ್ಲಿ ತನ್ನ ತಂದೆಯ ಮರಣ ಸಂಭವಿಸಿದ ತರುವಾಯ ಸೋದರರಾದ 2ನೆಯ ಕಾನ್‌ಸ್ಟಂಟೈನ್ ಮತ್ತು ಕಾನ್‌ಸ್ಟನ್ಸ್ ರೊಂದಿಗೆ ರಾಜ್ಯ ವಿಭಾಗಮಾಡಿಕೊಂಡಾಗ, ಥ್ರೇಸ್, ಮ್ಯಾಸಿಡೋನಿಯ, ಗ್ರೀಸ್, ಏಷ್ಯ ಮತ್ತು ಈಜಿಪ್ಟ್ ಪ್ರಾಂತ್ಯಗಳು ಇವನಿಗೆ ಲಭಿಸಿದುವು. ಇವನ ಆಳ್ವಿಕೆಯ ಪೂರ್ವಾರ್ಧ (338–50) ಪರ್ಷಿಯಾದ ದೊರೆ 2ನೆಯ ಷಾಪೂರ್‌ನೊಂದಿಗೆ ಮಾಡಿದ ಯುದ್ಧಗಳಲ್ಲಿ ಕಳೆಯಿತು. 350ರಲ್ಲಿ ಇವನ ದಳಪತಿ ವೆಟ್ರಾನಿಯೊ ದಂಗೆಯೆದ್ದುದರಿಂದ ಯುರೋಪಿಗೆ ಮರಳಿದಾಗ, ಅವನ ಸೈನ್ಯ ಯುದ್ಧವಿಲ್ಲದೆ ಕಾನ್‌ಸ್ಟಾನ್‌ಷಸನಿಗೆ ಶರಣಾಗತವಾದುವು. ಇನ್ನೊಬ್ಬ ಸೈನ್ಯಾಧಿಕಾರಿ ಮ್ಯಾಗ್ನೆನ್‌ಷಿಯಸನನ್ನು 351ರಲ್ಲಿ ಮುರ್ಸಾ ಕದನದಲ್ಲಿ ಹತ್ತಿಕ್ಕಿದ. ಪೌರಸ್ತ್ಯ ಪ್ರದೇಶಗಳಿಗೆ ತನ್ನ ಮಲತಮ್ಮ ಗ್ಯಾಲಸ್ ಸೀಸರನ್ನು 351ರಲ್ಲಿ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದರೂ 354ರಲ್ಲಿ ಅವನನ್ನು ಮರಣದಂಡನೆಗೀಡು ಮಾಡಬೇಕಾಯಿತು. ಕೊಲೋನಿನ ಚಕ್ರವರ್ತಿಯೆಂದು ನಟಿಸುತ್ತಿದ್ದ ಸಿಲ್ವನಸನನ್ನು 355ರಲ್ಲಿ ಕೊಲ್ಲಿಸಿ ಗಾಲ್ ಪ್ರಾಂತ್ಯಕ್ಕೆ ಗ್ಯಾಲಸನ ಮಲತಮ್ಮ ಜ್ಯೂಲಿಯನನನ್ನು ಅಧಿಕಾರಿಯಾಗಿ ನೇಮಿಸಿದ. 359ರಲ್ಲಿ ರೋಮಿಗೆ ತೆರಳಿ ಅಲ್ಲಿಯ ಜಗಳಗಳಲ್ಲಿ ನಿರತನಾಗಿದ್ದಾಗ, ಪರ್ಷಿಯನ್ ದೊರೆ ಷಾಪೂರ್ ಪೂರ್ವಪ್ರಾಂತ್ಯಗಳ ಮೇಲೆ ಆಕ್ರಮಣ ನಡೆಸಿದುದರಿಂದ 359ರಲ್ಲಿ ಮೆಸೊಪೊಟೇಮಿಯಕ್ಕೆ ಬರಬೇಕಾಯಿತು. ಪುನಃ 361ರಲ್ಲಿ ಜ್ಯೂಲಿಯನ್ ದಂಗೆಯೇಳಲು ಗಾಲ್ ಪ್ರಾಂತ್ಯಕ್ಕೆ ಹಿಂದಿರುಗುತ್ತಿದ್ದಾಗ 361ರ ನವೆಂಬರ್ 3 ರಂದು ಸೈಲೀಷಿಯದಲ್ಲಿ ಮೃತನಾದ.

ಕಾನ್‌ಸ್ಟಾನ್‌ಷಸ್ ಮತೀಯ ವಿಚಾರಗಳಲ್ಲಿ ಹೆಚ್ಚು ಆಸಕ್ತಿಹೊಂದಿದ್ದ. ಈತ ಆರಿಯನ್ ಪಂಥಕ್ಕೆ ಸೇರಿದವನಾಗಿದ್ದು, ಇತರ ಮತಗಳ ವಿರೋಧಿಯಾಗಿದ್ದ. ಇವನ ಕಾಲದಲ್ಲಿ ಹಲವಾರು ಮತೀಯ ಸಮ್ಮೇಳನಗಳು ನಡೆದವು.

**3ನೆಯ ಕಾನ್‌ಸ್ಟಾನ್‌ಷಸ್ :** ರೋಮನ್ ಚಕ್ರವರ್ತಿ. ನಯಿಸಸ್‌ನಲ್ಲಿ ಜನಿಸಿ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ, ಅಧಿಕಾರ ಕಸಿದುಕೊಂಡಿದ್ದ ಕಾನ್‌ಸ್ಟಂಟೈನ್‌ನನ್ನು ಸೋಲಿಸಲು ಹೋರಾಡಿದ. ಅನಂತರ ದಕ್ಷಿಣ ಗಾಲ್ ಪ್ರಾಂತ್ಯದಿಂದ ವಿಸಿಗಾತ್ ಜನರನ್ನು ಸ್ಪೇನಿಗೆ ದೂಡಲು ಮುಖ್ಯ ಕಾರಣನೀತ. 417ರಲ್ಲಿ ಚಕ್ರವರ್ತಿಯ ತಂಗಿ ಪ್ಲಾಸಿಡಿಯಳನ್ನು ವಿವಾಹವಾಗಿ, ಮುಂದಿನ ಚಕ್ರವರ್ತಿ 3ನೆಯ ವ್ಯಾಲೆಂಟಿನಿಯನನನ್ನು ಪಡೆದ. ಆಗಸ್ಟಸ್ ಪದವಿಯೊಂದಿಗೆ 421ರ ಫೆಬ್ರವರಿ 8 ರಂದು ಚಕ್ರವರ್ತಿಯಾಗಿ ಇವನ ನೇಮಕವಾಯಿತು. ಅದೇ ವರ್ಷದ ಸೆಪ್ಟಂಬರ್ 2 ರಂದು ರವೆನ್ನಾ ಎಂಬಲ್ಲಿ ನಿಧನನಾದ. *

**ಕಾನ್‌ಹೀಮ್, ಜೂಲಿಯಸ್ ಫ್ರೀಡ್ರಿಕ್ :** 1839–84. ರಸಿಕೆಯ (ಸೀರಸ್) ಪೊರೆಗಳ ಉರಿತದ (ಇನ್‌ಫ್ಲಮೇಷನ್) ಕೂಡುಗರಣೆಕೆಯ (ತ್ರಾಂಬೊಸಿಸ್), ಅಡಚಿಕೆಯ (ಎಂಬೊಲಿಸಂ) ಶೋಧನೆಗಳಿಗೆ ಹೆಸರಾಗಿದ್ದ ಜರ್ಮನಿಯ ರೋಗ ಶಾಸ್ತ್ರಜ್ಞ. ಸೇನೆಯಲ್ಲಿ ಶಸ್ತ್ರವೈದ್ಯನಾಗಿದ್ದವನು ಮುಂದೆ ಬರ್ಲಿನಿನ ರೋಗಶಾಸ್ತ್ರ ಸಂಸ್ಥೆಯಲ್ಲಿ ಸೇರಿಕೊಂಡು ರುಡಾಲ್ಫ್ ಫಿರ್ಕೋನ ಬಹಳ ಕೀರ್ತಿವಂತ ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದ. ಆಮೇಲೆ ಕೀಲ್ (1868), ಬ್ರೆಸ್ಲೊ (1872), ಲೀಪ್‌ಜಿಗ್‌ಗಳಲ್ಲಿ (1878–84) ರೋಗಶಾಸ್ತ್ರ ಪ್ರಾಧ್ಯಾಪಕನಾಗಿದ್ದು ಕೊನೆಗೆ ಲೀಪ್ ಜಿಗ್‌ನ ರೋಗಶಾಸ್ತ್ರ ಸಂಸ್ಥೆಯ ನಿರ್ದೇಶಕನಾದ. ಸಾಮಾನ್ಯ ರೋಗಶಾಸ್ತ್ರದ ಉಪನ್ಯಾಸಗಳು ಎಂಬ ಪಠ್ಯಪುಸ್ತಕ ಶಿಷ್ಟ ಮಟ್ಟದ್ದಾಗಿ ಕ್ರಾಂತಿಕಾರಕವಾಗಿತ್ತು. ಏಕಾಣುಜೀವಿಶಾಸ್ತ್ರದ ಮುನ್ನಡೆಗೂ ಇವನು ದುಡಿದ. ಪಾಲ್ ಎರ್ಲಿಕ್ ರಸಿಕೆಯ ಪೊರೆಗಳಲ್ಲಿ ಉರಿತವೇಳುವುದನ್ನು ಮೊತ್ತಮೊದಲು (1861) ಕಂಡುಹಿಡಿದು ಪ್ರೌಢಪ್ರಬಂಧ ಬರೆದು ಮುಂದೆ ಇನ್ನಷ್ಟು ವರದಿಗಳನ್ನೂ ತಯಾರಿಸುವಂತಾದ. ಈ ವಿಚಾರದಲ್ಲಿ ಕಾನ್‌ಹೀಮನ ನಿಲುವು ಫಿರ್ಕೋನದರ ಎದುರಾಗಿತ್ತು. ತುದಿಧಮನಿಗಳನ್ನು (ಎಂಡಾರ್ಟರೀಸ್) ಗಮನಿಸಿ, ಸರಿಪಕ್ಕದ (ಕೊಲ್ಯಾಟರಲ್) ರಕ್ತನಾಳಹರಿವನ್ನು ವಿವರಿಸಿದ ಮೊದಲಿಗ ಇವನು. ಲೋಮರಕ್ತನಾಳಗಳ ಗೋಡೆಗಳಿಂದ ಬಿಳಿಯ ರಕ್ತಕಣಗಳು ನುಸುತೂರುವುದರಿಂದ (ಡಯಪೆಡಿಸಿಸ್) ಉರಿತವೇಳುವುದೆಂದೂ ಇವು ಸತ್ತಾಗ ಕೀವು ಎನಿಸಿಕೊಳ್ಳುವುದೆಂದೂ ಕಾನ್‌ಹೀಮ್ ತೋರಿಸಿಕೊಟ್ಟ. ಊತಕಗಳನ್ನು ಥಕ್ಕನೆ ಶೀತಲೀಕರಿಸಿದ ಮೇಲೆ ಕತ್ತರಿಸುವ ಈಗಿನ ವಿಧಾನ ಇವನದೇ. ನರಕೊನೆಗಳನ್ನು ಎದ್ದು ತೋರುವ ಹಾಗೆ ಬಣ್ಣ ಹಾಕಿ ತೋರಲು ಚಿನ್ನ, ಬೆಳ್ಳಿಗಳ ಲವಣಗಳನ್ನು ಮೊದಲು ಬಳಸಿದ. ಮೈಯಲ್ಲಿ ಗಂತಿಗಳು ಏಳುವುದಕ್ಕೆ ಅಂಗಾಂಶಗಳಲ್ಲಿ ಎಳೆಯ ಜೀವಕಣಗಳ ಗೂಡುನೆಲೆಗಳೇ ಕಾರಣವೆಂಬ ಕಲ್ಪನೆಯನ್ನು ಮುಂದುವರಿಸಿದ. ಕಪ್ಪೆಯಲ್ಲಿರುವ ರಕ್ತವನ್ನೆಲ್ಲ ತೆಗೆದುಹಾಕಿ ಅದಕ್ಕೆ ಸಮನಾದ ಬರೀ ಉಪ್ಪುನೀರನ್ನು ತುಂಬಿ ಬದುಕಿರುವಂತೆ ಮಾಡಿತೋರಿಸಿದ. ಸೂಕ್ಷ್ಮದರ್ಶಕದ ಕೆಲಸದ ವಿಧಾನಗಳಲ್ಲಿ ಇನ್ನೂ ಎಷ್ಟೋ ಹೊಸ ರೀತಿ, ವಿಧಾನಗಳನ್ನು ಯೋಜಿಸಿದ. ಸ್ನಾಯುಗಳನ್ನು ಅಡ್ಡವಾಗಿ ಕತ್ತರಿಸಿ ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಮಚ್ಚೆಮಚ್ಚೆಯಾಗಿ ತೋರುವುದಕ್ಕೆ ಸ್ನಾಯುಕಿರಿತಂತುಗಳು (ಮಯೊಫೈಬ್ರಿಲ್) ಕಾರಣವೆಂದು ತೋರಿಸಿಕೊಟ್ಟ (1865). ಇವಕ್ಕೆ ಕಾನ್‌ಹೀಮನ ಪ್ರದೇಶಗಳೆಂದು ಈಗಲೂ ಹೆಸರಿದೆ. (ಡಿ.ಎಸ್.ಎಸ್.)

**ಕಾಪಾಲಿಕರು :** ದಕ್ಷಿಣ ಭಾರತದಲ್ಲಿ ಏಳನೆಯ ಶತಮಾನದಿಂದ ಪ್ರಬಲವಾದ ಶೈವಮತದ ಒಂದು ಪಂಗಡ. ಕಂಚಿ, ತಿರುವೊಟ್ರಿಯೂರ್, ಮೇಲ್ಪಾಡಿ ಮತ್ತು ಕೊಡುಂಬಾಳೂರು ಪ್ರಾಂತ್ಯಗಳಲ್ಲಿ ಇವರು ಪ್ರಬಲರಾಗಿದ್ದಂತೆ ಶಾಸನ ಮತ್ತು ಸಾಹಿತ್ಯಗಳಿಂದ ತಿಳಿದುಬರುತ್ತದೆ. ಶಿವ ದುರ್ಗೆಯರನ್ನು ಅವರ ಉಗ್ರರೂಪವಾದ ಭೈರವ ಮತ್ತು ಚಂಡಿಯ ಹೆಸರಿನಿಂದಿವರು ಪೂಜಿಸುತ್ತಿದ್ದರು. ತಲೆಬುರುಡೆಗಳ (ಕಪಾಲ) ಮಾಲೆ ಧರಿಸಿ ಒಂದು ಕಪಾಲವನ್ನೇ ಭಿಕ್ಷಾಪಾತ್ರೆಯನ್ನಾಗಿ ಉಪಯೋಗಿಸುತ್ತಿದ್ದುದರಿಂದ ಇವರಿಗೆ ಈ ಹೆಸರು ಬಂದಿತು. ಅದೇ ಬುರುಡೆಯನ್ನು ಇವರು ನೀರು ಕುಡಿಯಲೂ ಬಳಸುತ್ತಿದ್ದರು.

ಮಹೇಂದ್ರವರ್ಮ ಪಲ್ಲವನ ಮತ್ತ ವಿಲಾಸಪ್ರಹಸನ ಮತ್ತು ಭವಭೂತಿಯ ಮಾಲತೀಮಾಧವ ಕೃತಿಗಳಲ್ಲಿ ಈ ಪಂಥದ ಒಂದು ಇಣುಕುನೋಟ ದೊರೆಯುತ್ತದೆ. ಕರ್ನಾಟಕದಲ್ಲಿ ಚಳುಕ್ಯರ ಚಾಳುಕ್ಯ, ರಾಷ್ಟ್ರಕೂಟ ಕಾಲದಲ್ಲಿ ಇವರ ಕುರಿತು ಶಾಸನೋಲ್ಲೇಖಗಳೂ ಇವೆ. ಮದ್ಯ ಮತ್ತು ಹೆಣ್ಣುಗಳಿಗೆ ಪ್ರಾಶಸ್ತ್ಯವಿತ್ತಿದ್ದ ಈ ಮತದಲ್ಲಿ ಆಧುನಿಕ ದೃಷ್ಟಿಯಲ್ಲಿ ಕೀಳೆಂದು ಪರಿಗಣಿಸಲ್ಪಡುವ ಅನೇಕ ದುರಾಚಾರಗಳೂ ದುಷ್ಪಸಂಪ್ರದಾಯಗಳೂ ಬಳಕೆಯಲ್ಲಿದ್ದುವು. (ಜಿ.ಎನ್.ಎಸ್.)

**ಕಾಪ್ಟಿಕ್ ಕಲೆ :** ಈಜಿಪ್ಟ್‌ನಲ್ಲಿ ಕ್ರೈಸ್ತಧರ್ಮ ಹರಡಿದ ಮೇಲೆ ಬಳಕೆಗೆ ಬಂದ ಕ್ರೈಸ್ತಪಂಥೀಯರ ಕಲೆ. ಆರನೆಯ ಶತಮಾನದಲ್ಲಿ ಅರಬರು ಈಜಿಪ್ಟನ್ನು ಗೆದ್ದಾಗ ಅಲ್ಲಿನ

ಚಕ್ರವರ್ತಿಯೊಬ್ಬನ ಮುಖ

ಕ್ರೈಸ್ತ ಪಂಗಡವದವರನ್ನು ಕಾಪ್ಟರೆಂದು ಕರೆದಿದ್ದುದರಿಂದ ಇವರ ಕಲೆ ಕಾಪ್ಟಿಕ್ ಕಲೆ ಎನ್ನಿಸಿದೆ. ಇಲ್ಲಿನ ಕ್ರೈಸ್ತರ ಚರ್ಚು, ಮಠಗಳಲ್ಲಿ ಬೆಳೆದು ಬಂದ ವಾಸ್ತುಶೈಲಿಯಾಗಲಿ, ಶಿಲ್ಪಶೈಲಿಯಾಗಲಿ, ಚಿತ್ರಕಲೆಯಾಗಲಿ, ದಂತದ ಕಲೆ, ನೆಯ್ಗೆಯ ಕಲೆ ಅಥವಾ ಇತರ ಕಲೆಗಳೇ ಆಗಲಿ ವಿಭಿನ್ನ ಪರಂಪರೆಗಳಿಂದ ಪ್ರಭಾವಿತಗೊಂಡವು. ರೋಮನ್ನರ ಆಳ್ವಿಕೆಯಲ್ಲಿ ಮೆಡಿಟರೇನಿಯನ್ ತೀರದ ಹೆಲೆನಿಸ್ಟಿಕ್ ಕಲೆಯನ್ನು ಅವರು ಪ್ರಚಾರಕ್ಕೆ ತಂದಿದ್ದರೂ ಅದು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮೇಲ್ಮಟ್ಟದ ಜನಗಳ ಅಭಿರುಚಿಗನುಗುಣವಾಗಿ ಬೆಳೆದಿತ್ತು. ಇದೇ ಕಾಲದಲ್ಲಿ ಈಜಿಪ್ಟಿನಲ್ಲಿ ನೆಲೆಸಿದ್ದ ಮೂಲ ಮತದ ಅನೇಕ ಆಚರಣೆಗಳು ಅರ್ಥವಿಹೀನವಾಗಿ ಪರಿಣಮಿಸಿದ್ದು ಅದರ ಅವನತಿ ಆರಂಭವಾಗಿತ್ತು. ಆಗ ಕ್ರೈಸ್ತಮತ ಇಲ್ಲಿ ಪ್ರಚಾರಗೊಂಡು ಸಾಮಾನ್ಯ ಜನತೆಯನ್ನು ಆಕರ್ಷಿಸಿತು. ಮೇಲ್ಮಟ್ಟದ ಜನತೆಯಂತಲ್ಲದೆ ಇವರು ರೂಢಮೂಲವಾದ ತಮ್ಮ ಹಳೆಯ ಸಂಪ್ರದಾಯ, ಸಂಸ್ಕೃತಿ, ಕಲೆಗಳನ್ನು ಹೊಸ ಪಂಥಕ್ಕೆ ಸೇರಿದ ಮೇಲೂ ಉಳಿಸಿಕೊಂಡು ಬಂದರು. ಹೀಗೆ ಹೊಸ ಪಂಥದ ಹೆಲೆನಿಸ್ಟಿಕ್ ಕಲೆ ಮತ್ತು ಪ್ರಾಚೀನ ಈಜಿಪ್ಟ್ ಕಲೆಗಳ ಸಮ್ಮಿಲನದಿಂದ ನೂತನ ಕಾಪ್ಟಿಕ್ ಕಲೆ ಆವಿರ್ಭವಿಸಿತು. ಈ ಕಲೆಯ ಆರಂಭವನ್ನು ರೋಮನ್ ಆಳ್ವಿಕೆಯಲ್ಲಿಯೇ ಗುರುತಿಸಬಹುದಾದರೂ ಅದು ಪೂರ್ಣ ವಿಕಾಸಗೊಂಡುದು 5-6ನೆಯ ಶತಮಾನದಲ್ಲಿಯೇ. ಇವುಗಳೊಂದಿಗೆ ಬಿಜ಼ಾಂಟಿನ್, ಸಿರಿಯ ಮುಂತಾದ ಕಲೆಗಳ ಪ್ರಭಾವವನ್ನೂ ಕಾಣಬಹುದು.

ಆರನೆಯ ಶತಮಾನದಿಂದಾಚೆಗೆ ಅರಬರ ದಾಳಿಯಿಂದಾಗಿ ಕಾಪ್ಟಿಕ್ ಕಲೆಯ ಬಹುಭಾಗ ನಾಶ ಹೊಂದಿದರೂ ಅಲ್ಲಲ್ಲೇ ಉಳಿದ ಕಾಪ್ಟರು ಅದನ್ನು ಖಿಲವಾದ ರೂಪದಲ್ಲಿಯಾದರೂ ಉಳಿಸಿಕೊಂಡು ಬಂದರು. ಮುಸ್ಲಿಂ ಶೈಲಿಯ ಪ್ರಭಾವ ಈ ಕಾಲದ ಕಲೆಯ ಮೇಲೆ ಸಾಕಷ್ಟಾಗಿದೆ.

ಕ್ರೈಸ್ತಧರ್ಮ ಹರಡುತ್ತಿದ್ದಂತೆ ಹೆಲೆನಿಸ್ಟಿಕ್ ಕಲೆ ಅಲೆಕ್ಸಾಂಡ್ರಿಯದಲ್ಲಿ ಮಾತ್ರ ಉಳಿದು ಅಲ್ಲಿಂದ ಒಳನಾಡಿಗೆ ಹೋದಂತೆ ಅದರ ಪ್ರಭಾವ ಕಡಿಮೆಯಾಗಿ ದೇಶೀಯ ಪರಂಪರಾಗತ ಕಲೆಯನ್ನೇ ಹೆಚ್ಚು ಉಳಿಸಿಕೊಂಡಿರುವುದು ವೇದ್ಯವಾಗುತ್ತದೆ. ಅಲೆಕ್ಸಾಂಡ್ರಿಯದಂಥ ಕೆಲವು ಮುಖ್ಯ ಕೇಂದ್ರಗಳಲ್ಲಿ ಇಂಥ ದೇಶೀಯ ಪದ್ಧತಿಯನ್ನು ತಡೆಯಲು ಪ್ರಯತ್ನ ನಡೆದರೂ ಕಾಪ್ಟಿಕ್ ಶೈಲಿ ತನ್ನತನವನ್ನು ಬೆಳೆಸಿಕೊಳ್ಳುತ್ತಲೇ ಹೋಯಿತು. ಇದಕ್ಕೆ ಮುಖ್ಯ ಕಾರಣರಾದವರೂ ಈಜಿಪ್ಟಿನ ಮಠಗಳಲ್ಲಿ ನೆಲೆಸಿದ ಕ್ರೈಸ್ತ ಸನ್ಯಾಸಿಗಳು. ಇವರು ಸಾಮಾನ್ಯ ಜನತೆಯಿಂದ ಬಂದವರಾಗಿದ್ದು ಹೆಲೆನಿಸ್ಟಿಕ್ ಕಲೆ ಮತ್ತು ಶ್ರೀಮಂತಿಕೆಯ ವಿರೋಧಿಗಳಾಗಿದ್ದರು. ಕಾಪ್ಟರು ಏಕ ಪ್ರಕೃತಿವಾದಿ (ಮಾನೋ ಫಿಸೈಟಿಸಂ) ಪಂಥವನ್ನವಲಂಬಿಸಿಕೊಂಡು ತಮ್ಮದೇ ಸ್ವತಂತ್ರವಾದ ಚರ್ಚುಗಳನ್ನು ಸ್ಥಾಪಿಸಿಕೊಂಡರು; ಮತ, ಭಾಷೆ, ಕಲೆಗಳನ್ನು ಬೆಳೆಸಿದರು. ಕಾಪ್ಟಿಕ್ ಕಲೆ ಹೀಗೆ 500ರ ಹೊತ್ತಿಗೆ ಪೂರ್ಣವಾಗಿ ಬೆಳೆದು ಆ ಧರ್ಮಕ್ಕೆ ಸಂಬಂಧಿಸಿದ ಶಿಲ್ಪ, ವಾಸ್ತು, ಚಿತ್ರ ಮುಂತಾದವುಗಳಿಂದ ತುಂಬಿದ ಅನೇಕ ಮಠ,-ಚರ್ಚುಗಳನ್ನು ನಿರ್ಮಿಸಿದರು. ಅರಬರ ದಾಳಿಯ ಹೊತ್ತಿಗೆ ಈ ಸಂಸ್ಕೃತಿ ವಿಕಾಸಹೊಂದಿ ತನ್ನ ಪ್ರೌಢಾವಸ್ಥೆಯಲ್ಲಿತ್ತು; ಆದರೆ ದಾಳಿಯಲ್ಲಿ ಹೆಚ್ಚು ಭಾಗ ನಾಶವಾಗಿ ಮತ್ತೆ ಚೇತನ ಪಡೆಯದಾಯಿತು.

ಹೆಲೆನಿಸ್ಟಿಕ್ ಕಲೆಯ ಪ್ರಜ್ಞೆ ಪ್ರಾಚೀನ ಕಲೆಯ ಮೇಲೆ ತನ್ನ ಪ್ರಭಾವವನ್ನು ಬೀರಿದ್ದರೂ ಮೂಲಕಲೆಯ ಬಹು ಅಂಶ ಕಾಪ್ಟಿಕ್ ಕಲೆಯಲ್ಲಿ ಉಳಿದು ಬಂದು ರೋಮನ್ ಆಳ್ವಿಕೆಯಲ್ಲಿ ನಿಲುಗಡೆ ಹೊಂದಿದ್ದ ಈಜಿಪ್ಟಿನ ಪ್ರಾಚೀನ ಕಲೆ ಪುನರುಜ್ಜೀವನಗೊಂಡಂತೆ ತೋರುತ್ತದೆ.

ಕಾಪ್ಟಿಕ್ ಕಲೆ ತನ್ನ ಕೆಲವು ವಿಶಿಷ್ಟ ಗುಣಗಳನ್ನು ಮೊದಲಿನಿಂದಲೂ ಉಳಿಸಿಕೊಂಡು ಬಂದಿತ್ತು. ಹೆಲೆನಿಸ್ಟಿಕ್ ಶೈಲಿಯ ನವಿರು ಇದರಲ್ಲಿಲ್ಲ. ಅದಕ್ಕೆ ಬದಲು ಎದ್ದು ಕಾಣುವ

ಸಮುದ್ರ ದೇವತೆಗಳು

ಭಾವನಾತ್ಮಕ ರಚನೆಯ ರೂಪರೇಖೆಗಳಿರುವುದು ಇದರ ವೈಶಿಷ್ಟ್ಯ. ಜೊತೆಗೆ ಸಾಂಪ್ರದಾಯಿಕ ಆಕೃತಿಗಳು ಉದ್ದೇಶಪೂರ್ವವಾಗಿ ಇಲ್ಲಿ ಅಳವಟ್ಟಿವೆ. ಕಾಪ್ಟಿಕ್ ಕಲೆ ವಾಸ್ತುವಾಗಲೀ ಶಿಲ್ಪವಾಗಲೀ ಚಿತ್ರವಾಗಲೀ ಹೆಲೆನಿಸ್ಟಿಕ್ ಕಲೆಯನ್ನು ಸಾಧ್ಯವಾದಷ್ಟು ತಡೆಗಟ್ಟಿ ಪರಂಪರೆಯ ಪ್ರಾಚೀನ ಕಲೆಯ ಸತ್ತ್ವಕ್ಕೆ ಹೆಚ್ಚು ಅಂಟಿಕೊಂಡಿದೆ. ಕಾಪ್ಟಿಕ್ ಕಟ್ಟಡಗಳ ರಚನೆ ತುಂಬ ಸರಳ ಮತ್ತು ಸ್ಥೂಲ; ಹೊರಗೋಡೆಗಳು ನಿರಾಡಂಬರ; ಒಳಗೋಡೆಗಳು ಸಂತರ, ಸೆಡೆತು ಎದುರು ಮುಖವಾಗಿ ನಿಂತಿರುವ ಪೆಡಸು ಮೂರ್ತಿಗಳ ಚಿತ್ರಗಳಿಂದ ತುಂಬಿವೆ. ಈಜಿಪ್ಟಿನ ಮಧ್ಯ ಮತ್ತು ಉತ್ತರ ಭಾಗಗಳಲ್ಲಿರುವ ಅನೇಕ ಕ್ರೈಸ್ತಮಠಗಳು ಹೆಲೆನಿಸ್ಟಿಕ್ ಶೈಲಿಯಿಂದ ಭಿನ್ನವಾಗಿವೆ. ಸೊಹಾಗ್ ಬಳಿ ಇರುವ ಇಂಥ ಕಟ್ಟಡಗಳಲ್ಲಿ ಉದ್ದೇಶಪೂರ್ವಕವಾಗಿ ದೇಶೀಯ ವಾಸ್ತುರೀತಿಯನ್ನು ಬಳಸಿರುತ್ತಾರೆ. ದೇರ್-ಎಲ್-ಅಹಮರ್ ನ ಆರಾಧನಾ ಮಂದಿರ ಮತ್ತು ಸೊಹಾಗ್ ಸುತ್ತಮುತ್ತಲಿನ ಕಟ್ಟಡಗಳು ಪ್ರಾಚೀನ ಈಜಿಪ್ಟ್‌ನ ದೇವಾಲಯಗಳ ಅನೇಕ ಮೂಲಾಂಶಗಳನ್ನನುಕರಿಸಿವೆ. ಸಕ್ಕರದ ಮಂದಿರದಲ್ಲಿ ಗಜಪೃಷ್ಠಾಕಾರದ ಪೂಜಾ ಗೃಹವಿದ್ದು ಅದಕ್ಕೆ ಹೊಂದಿಕೊಂಡಂತೆ

ಅಕ್ಕಪಕ್ಕಗಳಲ್ಲಿ ಗೂಡುಗಳಿವೆ. ಕಾಪ್ಟಿಕ್ ರೀತಿಯ ಶಿಲ್ಪಗಳ ಅಲಂಕರಣಗಳಿಂದವು ತುಂಬಿಹೋಗಿವೆ. ಇಲ್ಲಿಯೂ ಇತರ ಕಡೆಗಳಲ್ಲಿಯೂ ಅನೇಕ ಸಂತರ ಮೂರ್ತಿಗಳು ಇವೆ. ಕೆಂಪು ಸಮುದ್ರದ ಸುತ್ತಮುತ್ತಲಿರುವ ಕೆಲವು ಮಂದಿರಗಳು ತಮ್ಮದೇ ಆದ ಮೂರ್ತಿಗಳು, ಶಿಲ್ಪಶೈಲಿಗಳನ್ನು ಅಳವಡಿಸಿಕೊಂಡಿದ್ದವು.

ಕಾಪ್ಟಿಕ್ ಶಾಸನವಿರುವ ಶವಸಂಸ್ಕಾರದ ಉಬ್ಬುಚಿತ್ರ

ಈಗ ಉಳಿದು ಬಂದಿರುವ ಚರ್ಚುಗಳಲ್ಲಿ ಅನೇಕವು ಆರನೆಯ ಶತಮಾನಕ್ಕಿಂತ ಈಚಿನವು. ಇಂಥ ಈಚಿನ ಕಾಪ್ಟಿಕ್ ಚರ್ಚುಗಳಿಗೆ ಕೈರೋದಲ್ಲಿರುವ ಮು ಅಲ್ಲಾಕ ಚರ್ಚು ಮಾದರಿಯಾಗಿದೆ. ನಿಟ್ರಿಯಾ ಮರಳುಗಾಡಿನ ಚರ್ಚುಗಳಲ್ಲಿ ಮುಸ್ಲಿಂ ಶೈಲಿಯನ್ನು ಗುರುತಿಸಬಹುದು.

ಶಿಲ್ಪಾಲಂಕಾರಗಳಲ್ಲಿಯೂ ಹೆಲೆನಿಸ್ಟಿಕ್ ಕಲೆಯನ್ನು ತಿರಸ್ಕರಿಸಿ ಮೂಲ ದೇಶೀಯ ಕಲೆಯಲ್ಲಿ ಇದು ಹೆಚ್ಚು ಆಸಕ್ತಿ ತೋರಿದೆ. ಆಕ್ಸರಿಂಕಸ್, ಅಹ್ನಾಸ್, ಸಕ್ಕರ ಮುಂತಾದ ಕಡೆ ಅಲೆಕ್ಸಾಂಡ್ರಿಯದ ಹೆಲೆನಿಸ್ಟಿಕ ಕಲೆಯ ಪ್ರಭಾವ ಕಂಡುಬಂದರೂ ಬಾವಿತ್, ಸೊಹಾಗ್ ಮುಂತಾದೆಡೆಗಳಲ್ಲಿ ಹೆಚ್ಚು ದೇಶಿಯತೆ ಉಳಿದುಬಂದಿದೆ. ಮೂರ್ತಿಗಳಲ್ಲಿ ಹೆಚ್ಚು ಸಾಂಪ್ರದಾಯಿಕತೆ, ಧ್ರುವೀಕರಣ ಎದ್ದು ಕಾಣುವಲ್ಲಿ ಮೂಲದೇಶೀಯ ಶಿಲ್ಪಗಳ ಛಾಯೆ ಸ್ಪಷ್ಟವಾಗಿದೆ. ಬಾವಿತ್ ಮೊದಲಾದ ಕಡೆಗಳಲ್ಲಿರುವ ಮೊದಲಿನ ಕ್ರೈಸ್ತಮಂದಿರಗಳಲ್ಲಿ ಕಂಬಗಳ ಬೋದಿಗೆಗಳು, ಗೋಡೆಗಳ ಅಲಂಕರಣಪಟ್ಟಿಕೆಗಳು, ಇತರ ಉಬ್ಬು ಶಿಲ್ಪಾಲಂಕಾರಗಳು ಬಿಜ಼ಾಂಟಿನ್ ಕಲೆಯ ಪ್ರಭಾವಕ್ಕೆ ಒಳಗಾಗಿವೆ. ಕೈರೋದ ಚರ್ಚುಗಳಲ್ಲಿನ ಮರದ ಕೆತ್ತನೆಗಳು, ದೇರ್–ಎಲ್–ಸುಯಾಣ ಮಂದಿರದ ತಿಳಿಗಚ್ಚಿನ ಶಿಲ್ಪಾಲಂಕರಣಗಳು ಮುಂತಾದ ಈಚಿನ ಕಾಪ್ಟಿಕ್ ಕೆಲಸಗಳಲ್ಲಿ ಇಸ್ಲಾಮಿಕ್ ಕಲೆಯ ಪ್ರಭಾವ ಹೆಚ್ಚಾಗಿದೆ.

ಅಪೊಲೊ ಮತ್ತು ಡಾಫ್ನಿ–ವರ್ಣಚಿತ್ರ

ಕಾಪ್ಟಿಕ್ ಶಿಲ್ಪ ಬೆಳವಣಿಗೆ ಹೊಂದಿದಂತೆ ಅಲಂಕರಣದ ರೀತಿಯಲ್ಲೂ ನವುರು ಕಡಿಮೆಯಾಗಿ ಸ್ಪಷ್ಟವಾದ, ಆಳವಾದ, ದೃಢವಾದ ಕಡೆತ ಆರಂಭವಾಗುತ್ತದೆ. ಸೊಹಾಗಿನ ಮಂದಿರಗಳಲ್ಲಿರುವ ಎಲೆ, ಬಳ್ಳಿ ಸುರುಳಿ, ಬೋದಿಗೆಯ ಅಲಂಕರಣಗಳಲ್ಲೆಲ್ಲ ಇದನ್ನು ನೋಡಬಹುದು. ಮೂರ್ತಿಶಿಲ್ಪದಲ್ಲಿ ಗುಂಡನೆಯ, ಆಳವಾಗಿ ಕಡೆದ ದೊಡ್ಡ ಕಣ್ಣುಗಳು, ಧ್ರುವೀಕರಿಸಿದ ಆಕೃತಿ, ಅಡಕವಾದ ರೂಪರೇಖೆ–ಇವೆಲ್ಲವೂ ಕಾಪ್ಟಿಕ್ ಮೂಲದ ಶಿಲ್ಪಕಲೆಯ ವೈಶಿಷ್ಟ್ಯ.

ಕಾಪ್ಟಿಕ್ ಮತದ ಪ್ರತಿಮೆಗಳು ಬಿಜ಼ಾಂಟಿನ್ ಪ್ರತಿಮೆಗಳಿಗಿಂತ ಭಿನ್ನ. ಏಕ ಪ್ರಕೃತಿ ವಾದಕ್ಕನುಗುಣವಾಗಿ ಹಳೇ ಒಡಂಬಡಿಕೆಯ ಸಂದಿಗ್ಧ ಕಥೆಗಳನ್ನನುಸರಿಸಿ, ಗ್ರೀಕ್ ಪುರಾಣದ ಕಥೆಗಳನ್ನವಲಂಬಿಸಿ ಯೇಸುವಿನ ಮೂರ್ತಿಯನ್ನು ಚಿತ್ರಿಸಿರುತ್ತಾರೆ. ಇವುಗಳಲ್ಲಿ ದೇವದೂತರಿಂದ ಸುತ್ತುವರಿದು ಸಿಂಹಾಸನಾರೂಢನಾಗಿರುವ ಯೇಸು ಮತ್ತು ಆತನ ಜೀವನದಿಂದ ಆರಿಸಿದ ಸನ್ನಿವೇಶಗಳು, ಮಾತೃದೇವತೆ ಐಸಿಸ್‍ಳನ್ನು ನೆನಪಿಗೆ ತರುವಂತೆ ಮಗುವಿಗೆ ಹಾಲೂಡಿಸುವ ಮೇರಿ, ಸಾಧುಗಳು, ಸಂತರು, ಮಠಗಳ ಸ್ಥಾಪಕರು ಮುಂತಾದವರ ಮೂರ್ತಿಗಳ ಸಾಲುಗಳು, ವಿಧರ್ಮೀಯ ಸಂಪ್ರದಾಯದ ಪ್ರಾಣಿ ಚಿತ್ರಗಳು, ಸಂತರಾದ ಯೋಧರ ಮೂರ್ತಿಗಳು– ಮುಂತಾದವನ್ನು ನೋಡಬಹುದು.

ಕಾಪ್ಟಿಕ್ ಚಿತ್ರಕಲೆ ಬಹುಮಟ್ಟಿಗೆ ನಾಶವಾಗಿರುವುದರಿಂದ ಅದರ ಬೆಳವಣಿಗೆಯನ್ನು ಗುರುತಿಸುವುದು ಕಠಿಣ. ಉಳಿದು ಬಂದಿರುವ ಚಿತ್ರಗಳು ತುಂಬ ಶಿಥಿಲವಾಗಿವೆ. ಬಾವಿತ್, ಸಕ್ಕರ, ಸೇಂಟ್ ಸಿಮಿಯನ್, ಸೊಹಾಗ್ ಮುಂತಾದೆಡೆ ಇರುವ ಮಠ ಚರ್ಚುಗಳಲ್ಲಿ ಇಂಥ ಭಿತ್ತಿ ಚಿತ್ರಗಳ ಅವಶೇಷಗಳು ಉಳಿದು ಬಂದಿವೆ. ಕೈರೋದಲ್ಲಿರುವ ಕಾಪ್ಟಿಕ್ ಮ್ಯೂಸಿಯಂನಲ್ಲಿ ಇಂಥ ಭಿತ್ತಿಚಿತ್ರಗಳು ಕೆಲವನ್ನು ರಕ್ಷಿಸಿಡಲಾಗಿದೆ.

ತಮಗೆ ಬೇಕಾದ ಆಯ್ದ ಸನ್ನಿವೇಶಗಳನ್ನೇ ಮತ್ತೆ ಮತ್ತೆ ಹಲವು ಏಕಪ್ರಕೃತಿವಾದಿ ಚರ್ಚುಗಳಲ್ಲಿ ಚಿತ್ರಿಸಿರುವುದರಿಂದ ಇವುಗಳಲ್ಲಿ ಬಹುಮಟ್ಟಿಗೆ ಏಕತೆಯನ್ನು ಕಾಣಬಹುದು. ಮುಖ್ಯವಾಗಿ ದೈವ ಸಾಕ್ಷಾತ್ಕಾರವನ್ನು ಸೂಚಿಸುವ ದೇವ ಶಿರಸ್ಸುಗಳು. ಜಕಾರಿಯಾಸ್,

ಸೊಹಾಗ್‍ನಲ್ಲಿರುವ ಶ್ವೇತಮಂದಿರದ ಒಂದು ದೃಶ್ಯ

ಸೇಂಟ್ ಜಾನರ ಮೂರ್ತಿಗಳು, ದಾವೂದನ ಕಥೆಗಳು, ಮುಂತಾದವು ಈ ಚಿತ್ರದಲ್ಲಿ ಎದ್ದು ಕಾಣುತ್ತವೆ. ದೇರ್–ಅಬು–ಹೆನಿಸ್ಸ ಭಿತ್ತಿಚಿತ್ರಗಳು ಸರಳ ವರ್ಣಸಂಯೋಜನೆಯಿಂದ ಕೂಡಿದ್ದು ಕಾಪ್ಟಿಕ್ ಚಿತ್ರಗಳಲ್ಲಿ ಪುರಾತನವಾದುದಾಗಿವೆ. ಬಾವಿತ್‍ನ ಚಿತ್ರಕಲೆಯಲ್ಲಿ ಹೆಲೆನಿಸ್ಟಿಕ್ ಕಲೆಯ ಕಡೆಯ ಅವಶೇಷಗಳನ್ನು ಕಾಣಬಹುದಾದರೆ ಉಳಿದ ಅನೇಕವು ಆರನೆಯ ಶತಮಾನಕ್ಕೆ ಸೇರಿದ್ದು, ಅವುಗಳಲ್ಲಿ ಪೂರ್ಣ ಕಾಪ್ಟಿಕ್ ಶೈಲಿ ಸ್ಪಷ್ಟವಾಗಿದೆ. ಇವುಗಳಲ್ಲಿ ಕಾಣುವ ವ್ಯಕ್ತಿಚಿತ್ರಗಳು ಎದುರು ಮುಖವಾಗಿರುವುದು, ಅವುಗಳ ಸಾಂಪ್ರದಾಯಿಕ ನಿಲುವು ಮತ್ತು ಶುದ್ಧವರ್ಣಗಳ ಸ್ಪಷ್ಟ ರೂಪರೇಖೆಗಳು ಕಾಪ್ಟಿಕ್ ಕಲೆಯ ಮುಖ್ಯ ಗುಣಗಳು. ಅವುಗಳಲ್ಲಿ ಜಡಸ್ವಭಾವ ಎದ್ದುಕಾಣುತ್ತದೆ. ಚಿತ್ರಗಳು ಚಪ್ಪಟೆಯಾಗಿವೆ. ಸಕ್ಕರದ ಚಿತ್ರಗಳು

ಇದನ್ನು ಹೆಚ್ಚಾಗಿ ಗಮನಿಸಬಹುದು. ಏಳು ಎಂಟನೆಯ ಶತಮಾನಗಳ ವ್ಯಕ್ತಿಚಿತ್ರಗಳಲ್ಲಿ ಕೆಲಮಟ್ಟಿಗೆ ಅವನತಿ ಕಂಡರೂ ಅರಬ್ಬೀ ದಾಳಿಯಿಂದ ಕಾಪ್ಟಿಕ್ ಚಿತ್ರಕಲೆ ನಿಲುಗಡೆಯನ್ನೇನೂ ಹೊಂದಲಿಲ್ಲ. ಅದರ ಬದಲು ಸಿರಿಯ ಮುಂತಾದ ಕಲೆಗಳಿಂದ ಪ್ರಭಾವಿಗೊಂಡು ವೈವಿಧ್ಯವನ್ನು ಪಡೆಯಿತು.

ಅನೇಕ ರೀತಿಯ ದಿನಬಳಕೆಯ ವಸ್ತುಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಮಣ್ಣಿನ ಮತ್ತು ಗಾಜಿನ ಸಾಮಾನುಗಳಲ್ಲಿ, ಬಟ್ಟೆಗಳಲ್ಲಿ ಕಾಪ್ಟಿಕ್ ಕಲೆಯ ಗುಣಗಳನ್ನು ನೋಡಬಹುದು.

ಸ್ತ್ರೀಯೊಬ್ಬಳ ಉಬ್ಬುಚಿತ್ರ

ಚರ್ಚುಗಳಲ್ಲಿ, ಮತಮಂದಿರಗಳಲ್ಲಿ, ಸಮಾಧಿಗಳಲ್ಲಿ ಉಳಿದು ಬಂದಿರುವ ಪಾತ್ರೆಗಳು, ಬೋಗುಣಿಗಳು, ಹಣತೆಗಳು, ಧೂಪದಾನಿಗಳು ಮುಂತಾದುವುಗಳಲ್ಲಿ ಮೊದಲು ಅಲೆಕ್ಸಾಂಡ್ರಿಯದ ಹೆಲೆನಿಸ್ಟಿಕ್ ರೀತಿಯನ್ನನುಸರಿಸಿರುವುದು ಕಂಡುಬಂದರೂ ಮುಂದೆ ದೇಶೀಯ ರೀತಿಯಲ್ಲಿಯೇ ಇವನ್ನು ರಚಿಸಿರುವುದು ಸ್ಪಷ್ಟವಿದೆ. ಮಣ್ಣಿನ, ಲೋಹದ ಪಾತ್ರೆಗಳ ಮೇಲೆ, ಹಣತೆಗಳ ಮೇಲೆ ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ ಹಲವಾರು ವಿಷಯಗಳು ಉಬ್ಬುಚಿತ್ರದಲ್ಲಾಗಲೀ ಗೀರುಚಿತ್ರಗಳಲ್ಲಾಗಲೀ ಇರುತ್ತವೆ. ಇದರೊಂದಿಗೆ ಅರಬ್ಬೀ ದಾಳಿಯ ಅನಂತರ ಬಣ್ಣದ ಚಿತ್ರಗಳನ್ನುಳ್ಳ ಮಣ್ಣಿನ ಪಾತ್ರೆಗಳು ತಯಾರಾದುವು.

ನೇಯ್ಗೆಯಲ್ಲಿ ಕಾಪ್ಟಿಕ್ ಕಲೆಯನ್ನು ಸುಂದರವಾಗಿ ಮೂಡಿಸಿರುವುದನ್ನು ಆ ಕಾಲದ ಅನೇಕ ರೀತಿಯ ಬಟ್ಟೆಗಳಲ್ಲಿ ನೋಡಬಹುದು. ಮುಖ್ಯವಾಗಿ ಹಲವು ಸಮಾಧಿಗಳಲ್ಲಿ ಉಪಯೋಗಿಸಿದ್ದ ಹೊದಿಕೆಗಳು, ದಿಂಬುಗಳು, ಹಾಸುಗಂಬಳಿಗಳು, ಇನ್ನೂ ಹಲವು ಬಗೆಯ ವಸ್ತ್ರಗಳ ಮೇಲೆ ನೆಯ್ದಿರುವ ಆಕೃತಿಗಳು, ಪ್ರಾಣಿ ಪಕ್ಷಿಗಳು, ಅಲಂಕರಣ ಪಟ್ಟಿಕೆಗಳು, ಕಾಪ್ಟಿಕ್ ಕಲೆಯ ಮಾದರಿಗಳಾಗಿದ್ದು ಅನೇಕ ವಸ್ತು ಸಂಗ್ರಹಾಲಯಗಳಲ್ಲಿ ಉಳಿದುಬಂದಿವೆ. (ಎಂ.ಎಚ್.)

**ಕಾಪ್ಟಿಕ್ ಚರ್ಚ್ :** ಇಸ್ಲಾಂ ಪ್ರಧಾನವಾದ ಈಜಿಪ್ಟಿನಲ್ಲಿ ವಾಸಿಸುವ ಕ್ರೈಸ್ತ ಜನಾಂಗದ ಮತೀಯ ಸಂಸ್ಥೆ. ಈಜಿಪ್ಟಿನ ಪ್ರಾಚೀನ ನಿವಾಸಿಗಳ ಸಂತತಿಗೆ ಸೇರಿದ ಇವರು ಪ್ರಾಚೀನ ಈಜಿಪ್ಟಿನ ಭಾಷೆಯಿಂದ ಹುಟ್ಟಿರುವ ಕಾಪ್ಟಿಕ್ ಭಾಷೆಯನ್ನಾಡುತ್ತಾರೆ. ಅರಬ್ಬೀ ಭಾಷೆಯ ಕುಬ್ಟ್ ಎಂಬ ಪದದಿಂದ ಕಾಪ್ಟ್ ಪದ ಹುಟ್ಟಿದೆ. 451ರಲ್ಲಿ ಸಮಾವೇಶಗೊಂಡಿದ್ದ ಚಾಲ್ಸಿಡಾನ್ ಸಮ್ಮೇಳನದಲ್ಲಿ 637 ಕ್ರೈಸ್ತ ಪ್ರಧಾನ ಗುರುಗಳು ಕೊಟ್ಟ ಯೇಸುಕ್ರಿಸ್ತನ ದೇವಮಾನವ ದ್ವಿಸ್ವಭಾವ ತೀರ್ಮಾನವನ್ನು ಈಜಿಪ್ಟಿನ ಮತ್ತು ಇತರ ಪ್ರಾಚ್ಯದೇಶಗಳ ಕ್ರೈಸ್ತರು ವಿರೋಧಿಸಿ ಗ್ರೀಸಿನ ಮತ್ತು ರೋಮಿನ ಕೆಥೊಲಿಕರ ಅಧಿಕಾರವನ್ನು ತಿರಸ್ಕರಿಸಿದರು. ಸಿರಿಯ, ಇರಾಕ್ ಮತ್ತು ಭಾರತದ ಜ್ಯಾಕೊಬೈಟ್ ಚರ್ಚಿನವರಂತೆ ಕಾಪ್ಟಿಕ್ ಚರ್ಚ್ ಕೂಡ ಕ್ರಿಸ್ತನ ಒಂದೇ ಸ್ವಭಾವದ ತತ್ತ್ವವನ್ನು ಪ್ರತಿಪಾದಿಸುತ್ತದೆ. ಈ ಚರ್ಚಿನ ಅನುಯಾಯಿಗಳು ಅರಬರ ಆಕ್ರಮಣದ ಅನಂತರ ಗ್ರೀಕ್ ಭಾಷೆಯನ್ನು ತ್ಯಜಿಸಿ ಕಾಪ್ಟಿಕ್ ಮತ್ತು ಅರಬ್ಬೀ ಭಾಷೆಗಳನ್ನು ತಮ್ಮ ಪ್ರಾರ್ಥನೆಗೆ ಉಪಯೋಗಿಸಲಾರಂಭಿಸಿದರು. 19–20ನೆಯ ಶತಮಾನಗಳ ವರೆಗೂ ಈಜಿಪ್ಟಿಗೆ ಸೀಮಿತವಾಗಿದ್ದ ಇವರ ಪ್ರಭಾವ ಆಗ ಜೆರುಸಲೆಂ ಪ್ರದೇಶಕ್ಕೆ ಹರಡಿತು. ಅನಂತರ ಸೂಡಾನ್ ಮತ್ತು ಇಥಿಯೋಪಿಯಗಳಿಗೂ ಪ್ರಸರಿಸಿತು. ಕಾಪ್ಟಿಕ್ ಮತ್ತು ಗ್ರೀಕ್ ಚರ್ಚುಗಳ ತತ್ತ್ವಗಳ ನಡುವೆ ಅಧಿಕ ಭೇದ ಕಂಡುಬರುವುದಿಲ್ಲ.

ಇವರ ಮತೀಯ ಮಂದಿರಗಳು ಆಕರ್ಷಕವಾಗಿದ್ದು ಅವುಗಳ ಗುಮ್ಮಟಗಳು ಅಂದವಾಗಿವೆ. ಅಲೆಕ್ಸಾಂಡ್ರಿಯದ ಪ್ರಧಾನಗುರುವೇ ಕಾಪ್ಟಿಕ್ ಚರ್ಚಿನ ಪ್ರಮುಖ ವ್ಯಕ್ತಿ. ಅವನ ಕೇಂದ್ರ ನಗರ ಕೈರೊ. ಈಜಿಪ್ಟ್ ದೇಶದಲ್ಲಿ ಇಸ್ಲಾಂಧರ್ಮದ ಪ್ರಭಾವ ಹೆಚ್ಚಾಗಿ ಕಾಪ್ಟಿಕ್ ಕ್ರೈಸ್ತರ ಅವನತಿಗೆ ಕಾರಣವಾಯಿತು. ಈಜಿಪ್ಟಿನಲ್ಲಿರುವ ಕಾಪ್ಟಿಕ್ ಕ್ರೈಸ್ತರ ಅಂದಾಜು ಸಂಖ್ಯೆ ಸುಮಾರು 75,00,000. (ಜಿ.ಆರ್.ಕೆ.)

**ಕಾಪ್ಟಿಕ್ ಭಾಷೆ ಮತ್ತು ಸಾಹಿತ್ಯ :** ಇಂದು ಮೃತ ಭಾಷೆಗಳ ವರ್ಗಕ್ಕೆ ಸೇರಿಹೋಗಿರುವ ಈಜಿಪ್ಟಿನ ಭಾಷೆಗಳಲ್ಲಿ ಕಾಪ್ಟಿಕ್ ಭಾಷೆಯೂ ಒಂದು. ಇದು ಪ್ರಾಚೀನ ಈಜಿಪ್ಷಿಯನ್ ಭಾಷೆಯಿಂದ ಉದಿಸಿದ ಭಾಷೆಗಳಲ್ಲೊಂದಾಗಿದೆ. ಭಾಷೆಯ ವರ್ಗೀಕರಣದ ದೃಷ್ಟಿಯಿಂದ ಹ್ಯಾಮಿಟೊ ಭಾಷಾವರ್ಗಕ್ಕೆ ಸೇರಿರುವ ಭಾಷೆ ಇದು. ಈಜಿಪ್ಟಿನವರು ಎಂಬ ಅರ್ಥವನ್ನು ಸೂಚಿಸುವ ಗ್ರೀಕ್ ಭಾಷೆಯ ಏಗುಪ್ಟೊಯ್ ಎಂಬುದರಿಂದ ನಿಷ್ಪನ್ನವಾದ ಕುಬ್ಟ್ ಅಥವಾ ಘುಬ್ಟ್ ಎಂಬ ಅರಬ್ಬೀ ಶಬ್ದದ ಐರೋಪ್ಯ ರೂಪವೇ ಕಾಪ್ಟ್ ಇರಬೇಕೆಂದು ವಿದ್ವಾಂಸರು ಭಾವಿಸಿದ್ದಾರೆ. ಮತ್ತೆ ಕೆಲವರು ಇದು ಉತ್ತರ ಈಜಿಪ್ಟಿನಲ್ಲಿದ್ದ ಕಾಪ್ಟೋಸ್ ಎಂಬ ಪ್ರಾಚೀನ ನಗರಕ್ಕೆ ಸಂಬಂಧಪಟ್ಟಿರುವ ಭಾಷೆ. ಈ ಭಾವನೆಯೇ ಕಾಪ್ಟ್ ಎನ್ನುವ ಶಬ್ದ ರೂಪಗೊಳ್ಳಲು ಕಾರಣವಾಗಿರಬಹುದು ಎಂದಿದ್ದಾರೆ. ಒಟ್ಟಿನಲ್ಲಿ ಕಾಪ್ಟ್ ಎಂಬುದು ಏಕಪ್ರಕೃತಿವಾದಿ ಜಾಕೊಬೈಟ್ ಪಂಥದ ಈಜಿಪ್ಟಿನ ಕ್ರೈಸ್ತರನ್ನೂ ಕಾಪ್ಟಿಕ್ ಎಂಬುದು ಅವರ ಭಾಷೆಯನ್ನೂ ಸೂಚಿಸುತ್ತದೆ. ಪ್ರ.ಶ.ಪೂ. 14 ರಿಂದ 12ನೆಯ ಶತಮಾನದವರೆಗಿನ ಅವಧಿಯಲ್ಲಿ ಪ್ರಚುರವಾಗಿದ್ದ ಪ್ರಾಚೀನ ಈಜಿಪ್ಟ್ ಭಾಷೆಯ ಕೊನೆಯ ಹಂತ ಇದು ಎಂದು ಕೆಲವು ವಿದ್ವಾಂಸರು ಭಾವಿಸಿದ್ದಾರೆ. ಆದರೆ ಆಧುನಿಕ ಭಾಷಾವಿಜ್ಞಾನಿಗಳೂ ಇತಿಹಾಸಜ್ಞರೂ ಇಷ್ಟೊಂದು ಪ್ರಾಚೀನತೆಯನ್ನು ಇದಕ್ಕೆ ಆರೋಪಿಸಲು ಸಿದ್ಧರಾಗಿಲ್ಲ. ಪ್ರ.ಶ.ಪೂ. ಮೂರನೆಯ ಶತಮಾನದಿಂದ ಈಜಿಪ್ಟಿನ ಕ್ರೈಸ್ತರ ಭಾಷೆಯಾಗಿದ್ದಿತೆಂದು ನಂಬಲು ಆಧಾರಗಳಿವೆ.

ಪ್ರಾಚೀನ ಕಾಪ್ಟಿಕ್ ಭಾಷೆ ಈಜಿಪ್ಷಿಯನ್ನರ ಪ್ರಾಚೀನ, ಪವಿತ್ರ ಭಾಷೆಯಿಂದ ನೇರವಾಗಿ ನಿಷ್ಪನ್ನವಾದ ಭಾಷೆಯಾದುದರಿಂದ ಶಾಂಪೋಲಿಯನ್, ಯಂಗ್ ಮುಂತಾದವರಿಗೆ ಈಜಿಪ್ಟಿನ ಚಿತ್ರಲಿಪಿ (ಹೀರೊಗ್ಲಿಫಿಕ್) ಶಾಸನಗಳನ್ನು ಓದಿ ಅರ್ಥೈಸುವುದಕ್ಕೆ ಅಗತ್ಯವಾಗಿದ್ದ ಕೀಲಿಕೈಯನ್ನು ಇದು ಒದಗಿಸಿತು ಎಂದು ಹೇಳಲಾಗಿದೆ. ಮುಂದೆ ಅಪ್ರಾಚುರ್ಯದಿಂದ ಶಬ್ದಗಳು ಮೂಲೆ ಗುಂಪಾಗಿಬಿಟ್ಟದ್ದರಿಂದಲೂ ವಾಕ್ಯರಚನೆ ತೀವ್ರವಾದ ಬದಲಾವಣೆಗಳಿಗೆ ಒಳಗಾಗಿಬಿಟ್ಟಿದ್ದರಿಂದಲೂ ಭಾಷೆಯ ಸ್ವರೂಪ ಬಹಳವಾಗಿ ಮಾರ್ಪಟ್ಟು ಪ್ರಾಚೀನ ಭಾಷೆಯ ಸ್ವರೂಪವನ್ನು ತಿಳಿಯುವುದು ಕಷ್ಟವಾಯಿತು. 640–646 ರಲ್ಲಿ ನಡೆದ ಮುಸ್ಲಿಮರ ದಾಳಿಯಿಂದಾಗಿ ಕ್ರಮೇಣ ಅರಬ್ಬೀ ಭಾಷೆ ಪ್ರಬಲವಾಗಿ ಕಾಪ್ಟಿಕ್ ಭಾಷೆ ಹಿನ್ನೆಲೆಗೆ ಹೋಯಿತು; ಹದಿನೈದನೆಯ ಶತಮಾನದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದ್ದಂತೆ ಕಂಡುಬರುತ್ತದೆಯಾದರೂ ಹದಿನೇಳನೆಯ ಶತಮಾನದ ಹೊತ್ತಿಗೆ ನಾಮಾವಶೇಷವಾಯಿತೆಂದೇ ಹೇಳಬೇಕು. ಹದಿನೈದನೆಯ ಶತಮಾನದ ಅರಬ್ಬೀ ಭಾಷಾಲೇಖಕ ಮಾಕ್ರೀಜಿ ಕಾಪ್ಟಿಕ್ ಭಾಷೆ ತನ್ನ ಕಾಲದಲ್ಲಿ ತುಂಬ ಪ್ರಚುರವಾಗಿತ್ತೆಂದು ತಿಳಿಸಿದ್ದಾನೆ. ಆದರೆ, ಸುಮಾರು ಇನ್ನೂರು ವರ್ಷಗಳ ಅನಂತರ ಅದೇ ನಾಡಿಗೆ ಭೇಟಿಕೊಟ್ಟ ಐರೋಪ್ಯ ಪ್ರವಾಸಿ ಪಿ.ವ್ಯಾನ್ ಸ್ಲೆಬ್ ಎಂಬಾತ ಲಕ್ಸರ್‌ಗೆ ಕೊಂಚ ಉತ್ತರಕ್ಕಿರುವ ಜೆನಿಯಾ ಎಂಬ ಹಳ್ಳಿಯಲ್ಲಿ ಒಂದೇ ಒಂದು ಕುಟುಂಬಕ್ಕೆ ಈ ಭಾಷೆ ತಿಳಿದಿತ್ತೆಂದೂ ಮುದುಕನೊಬ್ಬ ಮಾತ್ರ ಈ ಭಾಷೆಯಲ್ಲಿ ಮಾತನಾಡಬಲ್ಲವನಾಗಿದ್ದನೆಂದೂ ಹೇಳಿದ್ದಾನೆ. ಉತ್ತರ ಈಜಿಪ್ಟಿನ ಕೆಲವೊಂದು ಭಾಗಗಳಲ್ಲಿ ಇದರ ಕೆಲವು ಕುರುಹುಗಳು 19ನೆಯ ಶತಮಾನದಲ್ಲಿಯೂ ಕಾಣದೊರೆಯುತ್ತಿದ್ದುವು ಎಂದು ಹೇಳಲಾಗಿದೆ. ಉಪಭಾಷಾ ರೂಪದಲ್ಲಿ ಚರ್ಚಿನ ಭಾಷೆಯಾಗಿ ಬಳಕೆಯಲ್ಲಿತ್ತು ಎಂಬುದಕ್ಕೇನೋ ಆಧಾರಗಳಿವೆ. ಇಂದಿಗೂ ಈಜಿಪ್ಟಿನ ಕ್ರೈಸ್ತರ ಧಾರ್ಮಿಕ ಬರೆಹಗಳಲ್ಲಿ ಈ ಭಾಷೆಯನ್ನು ಬಳಸಲಾಗುತ್ತಿದೆಯಾದರೂ ಅದರೊಡನೆ, ಅನಿವಾರ್ಯವೋ ಎಂಬಂತೆ, ಅರಬ್ಬೀ ಭಾಷಾಂತರ ಇದ್ದೇ ತೀರುತ್ತದೆ. ಶಾಲೆಗಳಲ್ಲಿಯೂ ಬೈಬಲ್ಲಿನ ಹೊಸ ಒಡಂಬಡಿಕೆಯ ಸುವಾರ್ತೆ ಮತ್ತು ಸಂವಾದಗಳನ್ನು ಕಾಪ್ಟಿಕ್ ಮತ್ತು ಅರಬ್ಬೀ ಭಾಷೆಗಳಲ್ಲಿ ಕಲಿಸಿಕೊಡುತ್ತಾರಾದರೂ ವ್ಯಾಕರಣ ಬದ್ಧವಾಗಿ ಕಾಪ್ಟಿಕ್ ಭಾಷೆಯನ್ನೇನೂ ಹೇಳಿಕೊಡುವುದಿಲ್ಲ. ಕಾಪ್ಟಿಕ್ ಭಾಷೆಯ ಎಲ್ಲ ಧ್ವನಿಗಳಿಗೂ ಸಂವಾದಿಯಾದ ಅಕ್ಷರಗಳು ಗ್ರೀಕ್ ಲಿಪಿಯಲ್ಲಿ ಇಲ್ಲವಾದ ಕಾರಣ ಡೆಮೊಪಿಲಿಟಿಕ್‌ಯಿಂದ ಎರವಲು ಪಡೆಯಲಾದ ಆರು ಅಥವಾ ಏಳು ಅಕ್ಷರಗಳನ್ನು ಬಳಸಿಕೊಳ್ಳುತ್ತಾರೆ. ಖ, ಹ, ಫ, ಜಿ ಮತ್ತು ಶಕಾರದ ಎರಡು ರೂಪಗಳು–ಇವೇ ಬಹುವಾಗಿ ಬಳಕೆಗೆ ಡೆಮೊಟಿಕ್ ಅಕ್ಷರಗಳು. ಈ ಎಲ್ಲ ಬದಲಾವಣೆಗಳು ಉಂಟಾಗುವ ಹೊತ್ತಿಗೆ ಕಾಪ್ಟಿಕ್‌ಭಾಷೆಯ ಸ್ವರೂಪ ಬಹುಮಟ್ಟಿಗೆ ಬದಲಾಗಿತ್ತು. ಪ್ರಾಚೀನ, ಪವಿತ್ರ, ಭಾಷೆಗಿಂತ ಭಿನ್ನವಾಗಿ ಪರಿಣಮಿಸಿದ್ದರೂ ತನ್ನ ಈಜಿಪ್ಷಿಯನ್ ಲಕ್ಷಣಗಳನ್ನಿದು ಉಳಿಸಿಕೊಂಡಿತ್ತು. ಈ ಪದ್ಧತಿಯನ್ನು ಅನುಸರಿಸಿ ಕಾಪ್ಟಿಕ್ ಭಾಷೆಯನ್ನು ಬರೆಯುವುದಕ್ಕೆ ತೊಡಗಿದವರಲ್ಲಿ ಜ್ಯೋತಿಷ್ಯರು ಮತ್ತು ಮಾಂತ್ರಿಕರು ಮೊದಲಿಗರಾಗಿದ್ದರೆಂದು ಹೇಳಲಾಗಿದೆಯಾದರೂ ಭಾಷೆ, ಉಚ್ಚಾರಣೆ ಮತ್ತು ಕಾಗುಣಿತಕ್ಕೆ ನಿರ್ದಿಷ್ಟ ಸ್ವರೂಪವನ್ನು ಇತ್ತವರೆಂದರೆ ಬೈಬಲ್ಲಿನ ಭಾಷಾಂತರಕಾರರು. ಕಾಪ್ಟಿಕ್ಕಿನ ಎಲ್ಲ ಉಪಭಾಷೆಗಳಲ್ಲೂ ಬೈಬಲ್ಲಿನ ಭಾಷಾಂತರವನ್ನು ನೀಡಿದ ಈ ಭಾಷಾಂತರಕಾರರು ಅದಕ್ಕೆ ಒಂದು ಶಿಷ್ಟರೂಪವನ್ನು ನೀಡಿದರೆಂದೇ ಹೇಳಬೇಕು. ಆಧುನಿಕ ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳ ಮೇಲೆ ಆಗಿರುವಂತೆಯೇ ಕಾಪ್ಟಿಕ್ ಉಪಭಾಷೆಗಳ ಮತ್ತು ಅವುಗಳ ಸಾಹಿತ್ಯಕ ಶೈಲಿಯ ಮೇಲೆ ಬೈಬಲ್ಲಿನ ಭಾಷಾಂತರಗಳು ಆಳವಾದ ಪ್ರಭಾವವನ್ನು ಬೀರಿವೆ.

ಅನೇಕ ಉಪಭಾಷೆಗಳು ಬಳಕೆಯಲ್ಲಿದ್ದುದರಿಂದ ಕಾಪ್ಟಿಕ್‌ನ ಉಪಭಾಷೆಗಳ ಹೆಸರುಗಳ ಮತ್ತು ಸಂಖ್ಯೆಯ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. 19ನೆಯ ಶತಮಾನದ ವಿದ್ವಾಂಸರ ಬರೆಹಗಳನ್ನು ಪರಿಶೀಲಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಥೆಬನ್, ಮೆಂಫಿಕ್ ಮತ್ತು ಬಶ್ಮೂರಿಕ್ ಎಂಬುವೇ ಆ ಮೂರು ಉಪಭಾಷೆಗಳು. ಇವುಗಳಲ್ಲಿ ಮೊದಲನೆಯದಾದ ಥೆಬನ್ ಉತ್ತರ ಈಜಿಪ್ಟಿನಲ್ಲಿ ಬಳಕೆಯಲ್ಲಿತ್ತು, ಬಶ್ಮೂರಿಕ್ ಪ್ರಸ್ಥಭೂಮಿಯಲ್ಲಿ ಬಳಕೆಯಲ್ಲಿತ್ತು ಎಂದು ಒಬ್ಬರು ಅಭಿಪ್ರಾಯಪಟ್ಟರೆ ಮತ್ತೊಬ್ಬರು ಐದು ಉಪಭಾಷೆಗಳಿದ್ದುವೆಂದು ಫಯ್ಯೂಮ್ ಪ್ರದೇಶದಲ್ಲಿ ಫಯ್ಯೂಮಿಕ್, ನೈಲ್ ಪ್ರಾಂತ್ಯದ ಅಖ್ಮಿಮ್ ಪ್ರದೇಶದಲ್ಲಿ ಅಖ್ಮಿಮಿಕ್, ಅಸ್ಯುಟ್ ಪ್ರದೇಶದಲ್ಲಿ ಉಪ ಅಖ್ಮಿಮಿಕ್, ಪ್ರಾಚೀನ ಥೆಬ್ಸ್ ಅಥವಾ ಇಂದಿನ ಲಕ್ಸರ್ ಪ್ರದೇಶದಲ್ಲಿ ಸಾಹಿದಿಕ್ (ಈ ವಿಚಾರದಲ್ಲಿ ಮಿಲಿಯಮ್ ಎಚ್. ವೋರಲ್ ಅವರ ಅಭಿಪ್ರಾಯ ಬೇರೆಯಾಗಿದೆ. ಅವರು ಕೈರೊ ಮತ್ತು ಫಯೂಮ್ ನದೀಮುಖಜಭೂಮಿಯ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಉಪಭಾಷೆಯೇ ಸಾಹಿದಿಕ್ ಎನ್ನುತ್ತಾರೆ.), ಪಶ್ಚಿಮ ಪ್ರಸ್ಥಭೂಮಿಯಿಂದ ಮುಂದಕ್ಕೆ ಇರುವ ಪ್ರದೇಶದಲ್ಲಿ ಬೊಹೈರಿಕ್ ಎಂದು ವಿಲಿಯಮ್ ಎಫ್. ಎಜರ್‌ಟನ್ ಅಭಿಪ್ರಾಯಪಟ್ಟಿದ್ದಾರೆ. ಮತ್ತೊಬ್ಬ ವಿದ್ವಾಂಸರು ಇವುಗಳ ಸಂಖ್ಯೆಯನ್ನು ನಾಲ್ಕಕ್ಕೆ ಸೀಮಿತಗೊಳಿಸಿದ್ದಾರೆ : ಸಾಹಿದಿಕ್ ಅಥವಾ ಥೆಬೈಕ್, ಅಖ್ಮಿಮಿಕ್, ಬೊಹೈರಿಕ್ (ಮೊದಲಿಗೆ ಇದನ್ನೇ ಮೆಂಫಿಕ್ ಎಂದು ಕರೆಯುತ್ತಿದ್ದರೆಂದು ಇವರು ಅಭಿಪ್ರಾಯಪಟ್ಟಿದ್ದಾರೆ) ಮತ್ತು ಫಯ್ಯೂಮಿಕ್. ಇನ್ನೊಬ್ಬ ವಿದ್ವಾಂಸರು ಇವುಗಳ ಸಂಖ್ಯೆಯನ್ನು ಆರಕ್ಕೆ ಏರಿಸಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಅವುಗಳಲ್ಲಿ ಎರಡು ಕೆಳ ಅಥವಾ ದಕ್ಷಿಣ ಈಜಿಪ್ಟಿನಲ್ಲೂ ನಾಲ್ಕು ಮೇಲುಭಾಗದ ಅಥವಾ ಉತ್ತರ ಈಜಿಪ್ಟಿನಲ್ಲೂ ಬಳಕೆಯಲ್ಲಿದ್ದವು. ಇವು ಯಾವುವೆಂದರೆ, ಬಶ್ಮೂರಿಕ್, ಬೊಹೈರಿಕ್, ಫಯ್ಯೂಮಿಕ್ ಅಸ್ಯುಟಿಕ್, (ಉಪ–ಅಖ್ಮಿಮಿಕ್), ಅಖ್ಮಿಮಿಕ್ ಮತ್ತು ಸಾಹಿದಿಕ್. ಇವುಗಳಲ್ಲಿ ಬಶ್ಮೂರಿಕ್ ಇಂದು ಭಾಷ್ಯ ಅಥವಾ ವ್ಯಾಖ್ಯಾನ ಗ್ರಂಥಗಳಲ್ಲಿ ಮಾತ್ರ ಕಾಣಬರುತ್ತದೆ. ಕಾಪ್ಟಿಕ್ ಅಥವಾ ಈಜಿಪ್ಟಿಯನ್ ಮತ್ತು ಗ್ರೀಕ್ ಭಾಷಿಗಳ ವಿಕೃತ ಮಿಶ್ರ ಭಾಷೆಯಾದ ಈ ಉಪಭಾಷೆ ನೈಲ್ ಪ್ರಸ್ಥಭೂಮಿಯ ಪೂರ್ವವಲಯದಲ್ಲಿ ಪ್ರಚುರವಾಗಿತ್ತು. ಎರಡನೆಯದಾದ ಬೊಹೈರಿಕ್ ಅಲೆಕ್ಸಾಂಡ್ರಿಯ, ವಡಿ–ಎಲ್–ನ್ಯಾಟ್ರೊನ್ ಮತ್ತು ಮೆಂಫಿಸ್ ಪ್ರದೇಶಗಳೂ ಸೇರಿದಂತೆ ದಕ್ಷಿಣ ಈಜಿಪ್ಟಿನ ಉಪಭಾಷೆಗಳು. ಫೆಯ್ಯೂಮಿಕ್ ನೈಲ್ ಕಣಿವೆಯಲ್ಲಿ, ಅದರಲ್ಲೂ ವಿಶೇಷವಾಗಿ ನೈಲ್‌ನದಿಯ ಪಶ್ಚಿಮದಂಡೆಯಲ್ಲಿ ಬಳಕೆಯಲ್ಲಿತ್ತು. ಅಖ್ಮಿಮಿಕ್ ಉಪಭಾಷೆ ಅಖ್ಮಿಮ್ ನಗರ ಮತ್ತು ಅದರ ಸುತ್ತಮುತ್ತ ಬಳಕೆಯಲ್ಲಿತ್ತು. ಸಾಹಿದಿಕ್ ಉಪಭಾಷೆ ಉತ್ತರ ಈಜಿಪ್ಟಿನ ಆಂಟಿನೋ, ಹೆರ್ಮೊಪೊಲಿಸ್ ಮತ್ತು ಥೆಬಾಯ್ಡ್ ವಲಯದಲ್ಲಿ ಪ್ರಚುರವಾಗಿತ್ತು. ಈ ಮೂರು ಉತ್ತರ ಈಜಿಪ್ಟಿನಲ್ಲಿ ಬಳಕೆಯಲ್ಲಿದ್ದ ಉಪಭಾಷೆಗಳು. ಇವುಗಳಲ್ಲಿ ತುಂಬ ಪ್ರಾಚೀನವಾದ ಉಪಭಾಷೆಯೆಂದರೆ ಬಹುಶಃ ಸಾಹಿದಿಕ್. ಸಾಹಿದಿಕ್ ಉಳಿದ ಮೂರು ಉಪಭಾಷೆಗಳನ್ನು ಫಯ್ಯೂಮಿಕ್, ಅಖ್ಮಿಮಿಕ್ ಮತ್ತು ಅಸ್ಯುಟಿಕದ ಉಪಭಾಷೆಗಳನ್ನು–ಸುಲಭವಾಗಿ ಹಿಂದೆ ಹಾಕಿತಾದರೂ ಮುಂದೆ ಬೊಹೈರಿಕ್ ಭಾಷೆಗೆ ತನ್ನ ಸ್ಥಾನವನ್ನು ತೆರವು ಮಾಡಿಕೊಡಬೇಕಾಯಿತು. ಬೊಹೈರಿಕ್ ಕೊನೆಯದಾಗಿ ರೂಪು ತಳೆದ ಉಪಭಾಷೆಯಾದರೂ ಮುಂದೆ ತುಂಬ ಪ್ರಮುಖವಾದ ಸ್ಥಾನವನ್ನು ಗಳಿಸಿ, ಇತರ ಉಪಭಾಷೆಗಳನ್ನು ಕ್ರಮೇಣ ಮೂಲೆಗುಂಪಾಗಿಸುತ್ತ ಬಂದು, ಕೊನೆಗೆ ಹದಿನಾಲ್ಕನೆಯ ಶತಮಾನದ ಹೊತ್ತಿಗೆ ಅವುಗಳನ್ನು ಹೊಡೆದಟ್ಟಿತೆಂದೇ ಹೇಳಬೇಕು. ಕಾಪ್ಟಿಕ್–ಚರ್ಚಿನ ಪೂಜಾವಿಧಾನ ಮತ್ತಿತರ ಸಂಸ್ಕಾರಗಳ ಅಧಿಕೃತ ಭಾಷೆಯಾಗಿ, ಧಾರ್ಮಿಕ ಭಾಷೆಯಾಗಿ ಈಜಿಪ್ಟಿನಾದ್ಯಂತ ಅದಕ್ಕೆ ಮಾನ್ಯತೆ ದೊರಕಿದ್ದೇ ಇದಕ್ಕೆ ಕಾರಣ.

ಕಾಪ್ಟಿಕ್‌ನ ಉಪಭಾಷೆಗಳಲ್ಲಿ ಭೇದ ಕಂಡುಬರುವುದು ಪ್ರಮುಖವಾಗಿ ಧ್ವನಿಶಾಸ್ತ್ರ ಮತ್ತು ಶಬ್ದಕೋಶಗಳ ದೃಷ್ಟಿಯಿಂದ. ರೂಪಿಮ ಶಾಸ್ತ್ರದ ದೃಷ್ಟಿಯಿಂದ ಪರಿಶೀಲಿಸಿದಾಗ ಈ ಭೇದ ಇಷ್ಟು ಪ್ರಮುಖವಾಗಿ ಎದ್ದುಕಾಣುವುದಿಲ್ಲ. ವಾಕ್ಯರಚನೆಯ ದೃಷ್ಟಿಯಿಂದ ನೋಡಿದಾಗಲಂತೂ ಈ ಭೇದ ಅಷ್ಟಾಗಿ ಗೋಚರಿಸುವುದೇ ಇಲ್ಲ. ಅತ್ಯಂತ ಪ್ರಬಲ ಘಾತಲಕ್ಷಣವನ್ನುಳ್ಳ ಭಾಷೆ ಇದಾಗಿದ್ದುದರಿಂದ ಘಾತ ರಹಿತ ಸ್ವರಗಳು ಮತ್ತು ಶಬ್ದಗಳು ದುರ್ಬಲಗೊಳ್ಳಲು ಮತ್ತು ಬಹುಮಟ್ಟಿಗೆ ಕಾಣೆಯಾಗಲು ದಾರಿಯಾಯಿತು. ಇದರಲ್ಲಿ ವಚನಗಳು ಎರಡು, ಲಿಂಗಗಳು ಎರಡು. ಬಹುಮಟ್ಟಿಗೆ ನಾಮಪದಗಳಿಗೆ ವಿಶಿಷ್ಟ ಬಹುವಚನ ರೂಪಗಳು ಇವೆಯಾದರೂ ಅವುಗಳಲ್ಲಿ ಅನೇಕ ಶಬ್ದಗಳನ್ನು ಏಕವಚನ ಮತ್ತು ಬಹುವಚನಗಳಲ್ಲಿ ಸಮಾನರೂಪದಲ್ಲಿ ಬಳಸಬಹುದು. ಅರಬ್ಬೀ ಭಾಷೆಯಲ್ಲಿ ಕಾಣುವಂತೆ, ಇಲ್ಲಿಯೂ ವಿಶಿಷ್ಟ ಬಹುವಚನರೂಪಗಳನ್ನು ರೂಪಿಸುವ ವಿಧಾನ ಆಶ್ಚರ್ಯವನ್ನುಂಟುಮಾಡುವಷ್ಟರ ಮಟ್ಟಿನ ವೈವಿಧ್ಯವನ್ನು ಹೊಂದಿದೆ. ಹೀಗೆ ಸೇರುವ ಇತರ ಏಕಾಕ್ಷರ ಶಬ್ದಗಳು ಲಿಂಗ, ವಚನ, ಪುರುಷ ಮತ್ತು ಕಾಲಸೂಚಕವಾಗಿರುತ್ತವೆ. ಪುಲ್ಲಿಂಗಶಬ್ದದ ಸ್ವರವನ್ನು ಮಾರ್ಪಡಿಸುವುದರ ಮೂಲಕ ಕೆಲವೊಮ್ಮೆ ಸ್ತ್ರೀಲಿಂಗ ಶಬ್ದಗಳು ರೂಪುಗೊಳ್ಳುತ್ತವೆ. ನಿರ್ದೇಶಕ ಮತ್ತು ಅನಿರ್ದೇಶಕ ಸರ್ವನಾಮಗಳು ಪ್ರತ್ಯೇಕ ಅಥವಾ ಭಿನ್ನ ಏಕವಚನ ಮತ್ತು ಬಹುವಚನ ರೂಪಗಳನ್ನು ಹೊಂದಿವೆ. ನಿರ್ದೇಶಕ ಸರ್ವನಾಮ ಏಕವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗಗಳ ಭೇದವನ್ನೂ ತೋರುತ್ತದೆ. ಗುಣವಾಚಕಗಳು ಅಷ್ಟಾಗಿ ಇಲ್ಲ. ನ್ ಪ್ರತ್ಯಯವನ್ನು ಸೇರಿಸುವುದರ ಮೂಲಕ ನಾಮಪದಗಳನ್ನೇ ಈ ಭಾಷೆ ಗುಣವಾಚಕವನ್ನಾಗಿ ಪರಿವರ್ತಿಸಿಕೊಳ್ಳುತ್ತದೆ. ಪೂರ್ವ ಪ್ರತ್ಯಯಗಳನ್ನು ಸೇರಿಸುವುದರ ಮೂಲಕ ಕ್ರಿಯಾಪದಗಳನ್ನು ನಡೆಸಲಾಗುತ್ತದೆ. ಈ ಪೂರ್ವಪ್ರತ್ಯಯಗಳು ಪುರುಷ, ವಚನ, ಕಾಲ ಮುಂತಾದ ವಿವರಗಳನ್ನೂ ಸೂಚಿಸುತ್ತವೆ. ಕ್ರಿಯಾ ವಿಶೇಷಣ, ಸಂಬಂಧ ಸೂಚಕ ಮತ್ತು ಸಮುಚ್ಚಯಗಳನ್ನು ಬಹಳವಾಗಿ ಬಳಸಲಾಗುತ್ತದೆ. ಗ್ರೀಕ್‌ನಿಂದ ಅನೇಕ ಶಬ್ದಗಳನ್ನು ಎರವಲು ಪಡೆಯಲಾಗಿದೆ. ಈ ಭಾಷೆಯ ಶಬ್ದಗಳ ಮೂಲರೂಪ ಬಹುಮಟ್ಟಿಗೆ ಏಕಾಕ್ಷರ, ಬಹು ಅಕ್ಷರಗಳಿಂದ ಕೂಡಿದ ಶಬ್ದಗಳು ಎದುರಾದಲ್ಲಿ ಅವು ನಿಷ್ಪನ್ನ ಶಬ್ದಗಳು, ಇಲ್ಲವೆ ಸಮಾಸಶಬ್ದಗಳು ಎಂದು ಧೈರ್ಯವಾಗಿ ಹೇಳಬಹುದು. ಶಬ್ದ ರೂಪದಲ್ಲಿ ಪರಿವರ್ತನೆ ಆದಾಗ ಅರ್ಥದಲ್ಲಿಯೂ ಪರಿವರ್ತನೆಯಾಗುತ್ತದೆ. ಕಾಪ್ಟಿಕ್ ಭಾಷೆಯ ಧಾತುಗಳ ಅಂತ್ಯದಲ್ಲಿರುವ ವ್ಯಂಜನಗಳು ವಾಸ್ತವವಾಗಿ ಧಾತುವಿನ ಅಂಶವಾಗಿರುವುದಿಲ್ಲ. ಇವನ್ನು ಪದಾಂತ್ಯ ಅಧಿಕ ವ್ಯಂಜನ ಎನ್ನುತ್ತಾರೆ. ಇವನ್ನು ಉಚ್ಚಾರಣೆಯಲ್ಲಿನ ದೃಷ್ಟಿಯಿಂದ ಶಬ್ದದ ಭಾಗವಾಗಿದ್ದು ಮುಂದೆ ಉಚ್ಚಾರಣೆಯಲ್ಲಿ ಬಿದ್ದುಹೋಗಿ ಬರವಣಿಗೆಯಲ್ಲಿ ಮಾತ್ರ ಆ ಅಂಶ ಉಳಿದುಕೊಂಡಿದೆ ಎಂದು ವಿವರಿಸಬೇಕಾಗುತ್ತದೆ. ಈ ಕಾರಣಗಳಿಂದಾಗಿ ಶ್ವಾರ್ಟ್ಜ್ ಎಂಬ ಜರ್ಮನ್ ಭಾಷಾ ವಿಜ್ಞಾನಿ ಕಾಪ್ಟಿಕ್ ಭಾಷೆ ವ್ಯಾಕರಣದ ದೃಷ್ಟಿಯಿಂದ ಸೆಮಿಟಿಕ್ ಭಾಷಾವರ್ಗಕ್ಕೂ ಶಬ್ದಗಳ ಮೂಲರೂಪಗಳ ದೃಷ್ಟಿಯಿಂದ ಭಾರೋಪೀಯ ಭಾಷಾವರ್ಗಕ್ಕೂ ಸಂವಾದಿಯಾಗಿದೆ ಎಂದು ಹೇಳುವ ಬುನ್‌ಸೆನ್, ಮೆಯರ್, ಬೊಟ್ಟಿಶರ್ ಮೊದಲಾದವರು ಈ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ. ಆದರೆ, ಪಾಟ್, ಎವಾಲ್ಡ್, ವೆನರಿಚ್ ಮತ್ತು ರೆನನ್ ಈ ಅಭಿಪ್ರಾಯವನ್ನು ಒಪ್ಪಿಲ್ಲ.

ಇಷ್ಟೊಂದು ಪ್ರಾಚೀನ ಭಾಷೆಯಾಗಿದ್ದರೂ ಕಾಪ್ಟಿಕ್ ಸಾಹಿತ್ಯದಲ್ಲಿ ಮೌಲಿಕ ಸಾಹಿತ್ಯ ಸೃಷ್ಟಿಯಾಗಿರುವುದು ಬಹಳ ಕಡಿಮೆ ಅಥವಾ ಇಲ್ಲವೇ ಇಲ್ಲ ಎಂದರೂ ಸಲ್ಲುತ್ತದೆ. ಧಾರ್ಮಿಕೇತರ ಸಾಹಿತ್ಯ ಅಷ್ಟಾಗಿ ಉಳಿದುಬಂದಿಲ್ಲ. ತಂತ್ರಮಂತ್ರಗಳಿಗೆ ಸಂಬಂಧಿಸಿದ ಕೆಲವು ಗ್ರಂಥಭಾಗಗಳು, ವೈದ್ಯಕೀಯ ಗ್ರಂಥವೊಂದರ ಕೆಲವು ಭಾಗಗಳು ಮಾತ್ರ ದೊರೆತಿವೆ. ಧಾರ್ಮಿಕ ಕ್ಷೇತ್ರದಲ್ಲಿನ ಮೌಲಿಕ ಸಾಹಿತ್ಯವನ್ನು ಪರಿಶೀಲಿಸ ಹೊರಟರೆ, ಈ ದಿಕ್ಕಿನಲ್ಲಿ ನಮ್ಮ ಗಮನ ಸೆಳೆಯುವುದು ಶೆನುತೆ ಅಥವಾ ಸಂತ ಸಿನೂಥಿಯಸ್ ಎಂಬ ಏಕೈಕ ಲೇಖಕ. ಈತ ಅರುವತ್ತು ವರ್ಷಗಳಿಗೂ ಹೆಚ್ಚು ಕಾಲ ಕ್ರೈಸ್ತ ಧರ್ಮಾಧಿಕಾರಿಯಾಗಿದ್ದ. ಅಖ್ಮಿಮ್‌ನ ಪಶ್ಚಿಮಕ್ಕಿರುವ ಮರಳುಗಾಡಿನ ಅಂಚಿನಲ್ಲಿರುವ ಬಿಳಿಯರ ಮಹಾ ಮಠದ (ಮೊನಾಸ್ಟರಿ) ಧರ್ಮಾಧಿಕಾರಿಯಾಗಿ ತುಂಬ ಚಟುವಟಿಕೆಯ ಜೀವನವನ್ನು ನಡೆಸಿ ತನ್ನ ಇಳಿವಯಸ್ಸಿನಲ್ಲಿ 452ರ ಹೊತ್ತಿಗೆ ಮೃತನಾದಂತೆ ತಿಳಿದುಬರುತ್ತದೆ. ಸಾಹಿದಿಕ್, ಉಪಭಾಷೆಯಲ್ಲಿರುವ ಈತನ ಪತ್ರಗಳು, ಉಪದೇಶಗಳು ಮತ್ತಿತರ ಬರೆವಣಿಗೆಗಳೇ ಬಹುಶಃ ಮೌಲಿಕವೆಂದು ಹೇಳಬಹುದಾಗಿರುವ ಈ ಭಾಷೆಯಲ್ಲಿನ ಸಾಹಿತ್ಯ. ತನ್ನ ಕಾಲದ ಧಾರ್ಮಿಕ ಹಾಗೂ ಸಾಮಾಜಿಕ ಜೀವನದಲ್ಲಿ ಈತ ವಹಿಸಿದ ಪ್ರಭಾವ ಪೂರ್ಣ ಪಾತ್ರಕ್ಕೆ ಸಂವಾದಿಯಾಗಿದೆಯೋ ಎಂಬಂತೆ ಈತನ ಸಾಹಿತ್ಯ ಶಕ್ತಿಪೂರ್ಣವಾಗಿದೆ. ಅತ್ಯಂತ ವೈಯಕ್ತಿಕವೆನ್ನಬಹುದಾದ, ಈತನಿಗೇ ವಿಶಿಷ್ಟವಾದ ಸಾಹಿತ್ಯಿಕ ಶೈಲಿಯಲ್ಲಿ ರಚಿತವಾಗಿದೆ. 10ನೆಯ ಶತಮಾನದಲ್ಲಿ ಜನಪ್ರಿಯ ಧಾರ್ಮಿಕ ಕಾವ್ಯದ ಹೊಸ ಅಲೆಯೊಂದು ಎದ್ದಂತೆ ಕಾಣುತ್ತದೆ. ಈ ರಚನೆಗಳೂ ಸಾಹಿದಿಕ್ ಉಪಭಾಷೆಯಲ್ಲಿಯೇ ಇವೆ. ಇವೆಲ್ಲ ಅನಾಮಿಕ ಕವಿಗಳ ಜನಪದ ರಚನೆಗಳು. ಇದು ಬಹುಶಃ ಅರಬ್ಬೀ ಭಾಷೆ ಮತ್ತು ಇಸ್ಲಾಮ್ ಧರ್ಮದ ಹೇಳಿಕೆಯನ್ನು ವಿರೋಧಿಸಿ ಕ್ರೈಸ್ತರೂ ಈಜಿಪ್ಷಿಯನ್ನರೂ ರಚಿಸಿದ ಸಾಹಿತ್ಯವೆಂಬಂತೆ ತೋರುತ್ತದೆ. ಕಾರಣ: ಈ ಬಗೆಯ ಸಾಹಿತ್ಯದ ವಸ್ತು ಬೈಬಲ್ಲಿನಲ್ಲಿ ಉಕ್ತವಾಗಿರುವ ಸಂಗತಿಗಳು. ಬಹು ಮಟ್ಟಿಗೆ ಬಿಜ಼ಾಂಟಿನ್ ಧಾರ್ಮಿಕ ಕಾವ್ಯದ ಮಾದರಿಯನ್ನು ಅನುಸರಿಸಿ ಈ ಕಾವ್ಯ ರೂಪಗಳೆಲ್ಲ ಮೈದಳೆದಿವೆ. ಈ ಅನಾಮಿಕ ಕವಿಗಳ ಸಾಹಿತ್ಯದಲ್ಲಿ ಕಾಣಬರುವ ಹೊಸತನ ಮತ್ತು ಜೀವಂತಿಕೆ ಕಾಪ್ಟಿಕ್ ಸಾಹಿತ್ಯದ ಇತಿಹಾಸದಲ್ಲಿಯೇ ಅಪೂರ್ವವಾಗಿರುವಂಥದು. ಅಂತ್ಯಪ್ರಾಸದ ಬಂಧನ ಇಲ್ಲಿಲ್ಲ. ಸ್ವರಾಘಾತ ಕ್ರಮವನ್ನು ಅನುಸರಿಸಿರುವ ಛಂದೋ ವಿಧಾನದಲ್ಲಿ ಕವಿಗಳು ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯ ವಹಿಸಿರುವುದೂ ಕಂಡುಬರುತ್ತದೆ.

ಇವನ್ನು ಬಿಟ್ಟರೆ ಕಾಪ್ಟಿಕ್ ಸಾಹಿತ್ಯ ಬಹುಮಟ್ಟಿಗೆ ಶುದ್ಧ ಧಾರ್ಮಿಕ ಸ್ವರೂಪದ್ದಾಗಿದೆ. ಹಳೆಯ ಮತ್ತು ಹೊಸ ಒಡಂಬಡಿಕೆಯ ಕೆಲವು ಭಾಗಗಳು, ನೀತಿಬೋಧೆ, ಸುವಾರ್ತೆಗಳು, ಧರ್ಮೋಪದೇಶ ಭಾಷಣಗಳು, ಧರ್ಮಕ್ಕಾಗಿ ಬಲಿದಾನಮಾಡಿದ ಧರ್ಮವೀರರ ಚರಿತ್ರೆಗಳು–ಇವೆಲ್ಲ ಇಲ್ಲಿ ಕಾಣದೊರೆಯುತ್ತವೆ. ಬಹುಮಟ್ಟಿನ ಭಾಷಾಂತರವೆಲ್ಲ ಗ್ರೀಕ್ ಭಾಷೆಯಿಂದಲೇ ಆಗಿದೆ. ಹೀಗೆಂದ ಮಾತ್ರಕ್ಕೆ ಧಾರ್ಮಿಕ ಸಾಹಿತ್ಯವೆಲ್ಲ ಕ್ರೈಸ್ತಧರ್ಮಕ್ಕೆ ಸಂಬಂಧಪಟ್ಟಿದೆ ಎಂದಲ್ಲ. ಮೊದಲ ಹಂತದಲ್ಲಿ ಕ್ರೈಸ್ತಧರ್ಮ ವಿರೋಧವನ್ನು ಎದುರಿಸಬೇಕಾಗಿ ಬಂದುದು ಆಧ್ಯಾತ್ಮರಹಸ್ಯಜ್ಞಾನವಾದಿಗಳೆಂದು ಹೇಳಿಕೊಳ್ಳುತ್ತಿದ್ದ ಆದಿಕ್ರೈಸ್ತಪಾಷಂಡಿಗಳ ಪಂಥ (ಗ್ನಾಸ್ಟಿಸಿಮ್) ಮತ್ತು ದೇವರೊಡನೆ ಸೈತಾನನ ಶಾಶ್ವತ ಸಹ–ಅಸ್ತಿತ್ವವನ್ನು ಮಾನ್ಯಮಾಡುವ

ದ್ವಿತತ್ತ್ವವಾದಿಗಳ (ಮೆನಿಕಿಯಾನಿಸಮ್) ಪಂಥಗಳಿಂದ. ಈ ಪಂಥಗಳಿಗೆ ಸೇರಿದ ಪಿಸ್ಟಿಸ್ ಸೋಫಿಯಾ ಮತ್ತು ಬ್ರೂಸ್ ಕೋಡೆಕ್ಸ್ ಕೃತಿಗಳು ಕ್ರಮಶಃ ಬ್ರಿಟಿಷ್ ಮ್ಯೂಸಿಯಮ್ ಮತ್ತು ಬೋಡ್ಲಿಯನ್ ಗ್ರಂಥಾಗಾರದಲ್ಲಿ ಕಾಣದೊರೆಯುತ್ತವೆ. ಇವು 3ನೆಯ ಶತಮಾನದ ರಚನೆಗಳಾಗಿದ್ದಿರಬೇಕೆಂದು ನಂಬಲಾಗಿದೆ. ಕಾಪ್ಟಿಕ್ ಭಾಷೆಯಲ್ಲಿರುವ ಹಳೆಯ ಒಡಂಬಡಿಕೆಯ ಕೆಲವು ಭಾಗಗಳ ಮತ್ತು ಸುವಾರ್ತೆಗಳ ಭಾಷಾಂತರ ರೋಮಿನಲ್ಲಿ ಪ್ರಕಟವಾಗಿದೆ. ಶ್ವಾರ್ಟ್ಜ್ ಮತ್ತು ಸ್ಟರ್ನ್ ಅವರ ಕಾಪ್ಟಿಕ್ ವ್ಯಾಕರಣಗಳಲ್ಲಿಯು ಪೇರೋನ್ ಮತ್ತು ಪಾರ್ತೆಯವರ ಕಾಪ್ಟಿಕ್ ಕೋಶಗಳಲ್ಲಿಯೂ ಕಾಪ್ಟಿಕ್ ಭಾಷೆಯ ಅಧ್ಯಯನಕ್ಕೆ ಸಂಬಂಧಪಟ್ಟ ಸಾಮಗ್ರಿ ದೊರೆಯುತ್ತದೆ. (ಪಿ.ಜಿ.ಡಿ.)

**ಕಾಪ್ಟಿಕ್ ಲಿಪಿ :** ಪ್ರಾಚೀನ ಈಜಿಪ್ಟಿನ ಹ್ಯಾಮಿಟಿಕ್ ಭಾಷಾ ಸಂತತಿಗೆ ಸೇರಿದ ಮತ್ತು ಗ್ರೀಕ್ ಭಾಷೆಯ ಐಗುಪ್ಟೊಯ್ ಎಂಬ ಪದ ಅರಬ್ಬೀ ಭಾಷೆಯಲ್ಲಿ ಕಾಪ್ಟ್ ಅಥವಾ ಕುಬ್ತ್ ಎಂದಾಗಿ, ಅದರಿಂದ ಕಾಪ್ಟಿಕ್ ಎಂಬ ಹೆಸರು ಬಂದಿದೆ. ಆಫ್ರಿಕದ ಮೂಲ ನಿವಾಸಿಗಳನ್ನು ಈಗ ಕಾಪ್ಟಿಕ್ ಜನರೆಂದು ಕರೆಯುತ್ತಾರೆ. ಕಾಪ್ಟಿಕ್ ಲಿಪಿಯ ಶಾಸನಗಳು 2–3ನೆಯ ಶತಮಾನಗಳಿಂದ ದೊರಕುತ್ತವೆ. ಈ ಲಿಪಿಯ ಶಾಸನಗಳಲ್ಲಿ ಮೂವತ್ತೆರಡು ಅಕ್ಷರಗಳಿವೆ. ಅವುಗಳಲ್ಲಿ ಇಪ್ಪತ್ತೈದು ಗ್ರೀಕ್ ಲಿಪಿಯಿಂದಲೂ ಮಿಕ್ಕ ಏಳು ಅಕ್ಷರಗಳು ಈಜಿಪ್ಟಿನ ಡೆಮೊಟಿಕ್ ಲಿಪಿಯಿಂದಲೂ ಬಂದುವು. ಕಾಪ್ಟಿಕ್ ಲಿಪಿಯ ಬೆಳವಣಿಗೆ ಗ್ರೀಕ್ ಲಿಪಿಯನ್ನೇ ಅನುಸರಿಸಿತು. ಕಾಪ್ಟಿಕ್ ಭಾಷೆ ಮತ್ತು ಲಿಪಿ ವಿಶೇಷವಾಗಿ ಆಫ್ರಿಕದ ಹಳ್ಳಿಗಳಲ್ಲಿ ಬಳಕೆಯಲ್ಲಿದ್ದುದರಿಂದ, ಅರಬರ ದಾಳಿಗಳಿಂದ ಅದು ಪೂರ್ಣವಾಗಿ ನಶಿಸಿಹೋಗಲಿಲ್ಲ. ಹೀಗಾಗಿ ಅದು ಹದಿನೇಳನೆಯ ಶತಮಾನದವರೆಗೆ ಬಳಕೆಯಲ್ಲಿತ್ತು. (ಎ.ವಿ.ಎನ್.)

**ಕಾಫಿ :** ರೂಬಿಯೇಸೀ ಕುಟುಂಬದ ಕಾಫೀಯ ಜಾತಿಯ ಉಷ್ಣವಲಯ ನಿವಾಸಿಯಾದ ನಿತ್ಯಹರಿದ್ವರ್ಣದ ಪೊದೆ ಸಸ್ಯ ಅಥವಾ ಪುಟ್ಟ ಮರ; ಹಾಗೂ ಅದರ ಬೀಜಗಳನ್ನು ಹುರಿದು ಪುಡಿಮಾಡಿ ಅದರಿಂದ ತಯಾರಿಸಿದ ಉತ್ತೇಜಕ ಪಾನೀಯ–ಇವುಗಳ ಒಟ್ಟು ಹೆಸರು. ರೂಢಿಯ ಮಾತಿನಲ್ಲಿ ಕಾಫಿಗಿಡ, ಕಾಫಿಹೂ, ಕಾಫಿಹಣ್ಣು ಕಾಫಿಬೀಜ, ಕಾಫಿ (ಪಾನೀಯ) ಎಂಬವು ಪ್ರಚಲಿತವಾಗಿವೆ. ಕಾಫೀಯ ಜಾತಿಯಲ್ಲಿ ಸುಮಾರು 45 ಪ್ರಭೇದಗಳಿವೆ. ಇವುಗಳಲ್ಲಿ ಆರ್ಥಿಕಪ್ರಾಮುಖ್ಯ ಪಡೆದಿರುವವು ಮತ್ತು ಹೆಚ್ಚಿನ ಬೇಸಾಯದಲ್ಲಿರುವುವು ಕಾಫಿಯ ಅರ್ಯಾಬಿಕ, ಕಾ. ಕ್ಯಾನಿಪೊರ, ಕಾ. ಲೈಬೀರಿಕ, ಕಾ. ರೇಸಿಮೋಸ, ಕಾ. ಅಬೆಯಾಕುಟೆ ಮತ್ತು ಕಾ. ಡೆವಿವ್ರಿ. ಪ್ರಪಂಚದ ಕಾಫಿಯ ಉತ್ಪನ್ನದ ಶೇ. 75 ಭಾಗವನ್ನು ಅರ್ಯಾಬಿಕ ಪ್ರಭೇದದಿಂದಲೂ, ಶೇ.15–20 ಭಾಗವನ್ನು ಕ್ಯಾನಿಫೊರ ಪ್ರಭೇದದಿಂದಲೂ ಪಡೆಯಲಾಗುತ್ತದೆ.

**ಸಸ್ಯಶಾಸ್ತ್ರೀಯ ವಿವರಣೆ:** ಕಾಫಿಗಿಡ ಸುಮಾರು 6'–15' ಎತ್ತರಕ್ಕೆ ಬೆಳೆಯುತ್ತದೆ. ಕಾಫಿ ತೋಟಗಳಲ್ಲಿ ಸಾಮಾನ್ಯವಾಗಿ ಹಣ್ಣುಗಳನ್ನು ಬಿಡಿಸಲು ಅನುಕೂಲವಾಗುವಂತೆ ಇದನ್ನು ಆಗಾಗ್ಗೆ ಕತ್ತರಿಸಿ 6' ಗಿಂತ ಎತ್ತರ ಬೆಳೆಯದಂತೆ ನೋಡಿಕೊಳ್ಳುತ್ತಾರೆ. ಕತ್ತರಿಸದೆ ಹಾಗೆಯೇ ಬಿಟ್ಟಲ್ಲಿ ಸುಮಾರು 20'–25' ಎತ್ತರಕ್ಕೆ ಬೆಳೆದು ಸಣ್ಣ ಮರವಾಗುವುದುಂಟು. ಎಲೆಗಳು ಅಂಡಾಕಾರವಾಗಿವೆ. ಇವುಗಳ ಜೋಡಣೆ ಅಭಿಮುಖ ಮಾದರಿಯದು. ಒಂದೊಂದು ಎಲೆಯೂ ಸುಮಾರು 6" ಉದ್ದ ಮತ್ತು 3" ಅಗಲ ಇದೆ. ಅಂಚು ಅಲೆಯಂತೆ. ಹೂಗಳು ಎಲೆಗಳ ಕಂಕುಳಲ್ಲಿ ಮೂಡುವ ಮಧ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗಳ ಬಣ್ಣ ಅಚ್ಚ ಬಿಳಿ, ಅವಕ್ಕೆ ನವಿರಾದ ಸುವಾಸನೆಯೂ ಇದೆ. ಕಾಫಿಗಿಡ ಹೂ ಬಿಡುವ ಕಾಲ ಮಾರ್ಚ್–ಏಪ್ರಿಲ್ ತಿಂಗಳುಗಳು, ಹೂ ಬಿಡುವುದಕ್ಕೆ ಮುಂಚೆ ಒಂದು ಸಲ ಮಳೆ ಬೀಳಬೇಕು. ಇದಕ್ಕೆ ಹೂಮಳೆ ಅಥವಾ ಅರಳುಮಳೆ (ಬ್ಲಾಸಂ ಷವರ್) ಎಂದೇ ಕಾಫಿ ತೋಟಗಾರರ ಪರಿಭಾಷೆಯಲ್ಲಿ ಹೆಸರು. ಮಳೆ ಬಾರದಿದ್ದರೆ ಹೂ ಅರಳುವುದೇ ಇಲ್ಲ. ಹೂ ಅರಳಿದಾಗ ಕಾಫಿಗಿಡ ಅತಿರಮ್ಯವಾಗಿ ಕಾಣುತ್ತದೆ. ಒಂದೊಂದು ಹೂವಿನಲ್ಲಿ 5 ಪುಷ್ಪಪತ್ರಗಳು, 5 ಪುಷ್ಪದಳಗಳು, 5 ಕೇಸರಗಳು ಮತ್ತು 2 ಕಾರ್ಪೆಲ್‍ಗಳಿಂದ ಕೂಡಿದ ನೀಚಸ್ಥಾನದ ಅಂಡಾಶಯ ಇವೆ. ಅಂಡಾಶಯದಲ್ಲಿ 2 ಕೋಣೆಗಳೂ ಒಂದೊಂದು ಕೋಣೆಯಲ್ಲಿ ಅಕ್ಷಸ್ಥ ಅಂಡಕಾಧಾರಕ್ಕೆ ಅಂಟಿಕೊಂಡ ಒಂದೊಂದು ಅಂಡಕವೂ ಇವೆ. ಕಾಫಿ ಎರಡು ಬೀಳೆಗಳುಳ್ಳ ಅಷ್ಠಿಫಲ (ಡ್ರೂಪ್). ಕಾಯಿ ಚಿಕ್ಕದಿದ್ದಾಗ ಹಸುರಾಗಿದ್ದು ಬಲಿಯುತ್ತ ಹೋದಂತೆ ಹಳದಿ ಮತ್ತು ಕಿತ್ತಳೆ ಬಣ್ಣಕ್ಕೆ ತಿರುಗಿ ಪೂರ್ಣ ಮಾಗಿದಾಗ ಕಡುಗೆಂಪು ಬಣ್ಣವನ್ನು ತಾಳುತ್ತದೆ. ಚೆಂಬವಳಗಳ ಗುಚ್ಛಗಳನ್ನು ಪೋಣಿಸಿದಂತೆ ಕಾಣುವ ಈ ದೃಶ್ಯ ಅದ್ವಿತೀಯ. ಕಾಫಿಬೀಜಗಳನ್ನು ಚೆರಿಗಳೆನ್ನುತ್ತಾರೆ. ಬೀಜಗಳ ಸುತ್ತ ತೆಳುವಾದ ಒಂದು ಪೊರೆಸಹಿತವಾದ ಬೀಜಕ್ಕೂ ಪಾರ್ಚ್‍ಮೆಂಟ್ ಎಂದೇ ಹೆಸರು. ಬೀಜ ಒಣಗಿದಾಗ ಈ ಪೊರೆ ಸುಲಭವಾಗಿ ಬಿರಿದು ಹೋಗುತ್ತದೆ. ಬೀಜಗಳಿಗೆ ಹಳದಿ ಬಣ್ಣದ ತಿರುಳಿದೆ.

**ಕಾಫಿಯ ಇತಿಹಾಸ:** ಕಾಫಿ ಎಂಬ ಹೆಸರು ಬಹುಶಃ ಅರಬ್ಬೀ ಪದವಾದ ಕಹ್‍ವ ಎಂಬುದರಿಂದ ಬಂದಿರಬಹುದು. ಇನ್ನೊಂದು ಅಭಿಪ್ರಾಯದಂತೆ ನೈಋತ್ಯ ಇಥಿಯೋಪಿಯದ (ಅಬಿಸೀನಿಯ) ಕಾಫ ಎಂಬ ಪ್ರಾಂತ್ಯದ ಹೆಸರಿನಿಂದ ಬಂದುದಾಗಿದೆ. ಅಬಿಸೀನಿಯ ಕಾಫಿಗಿಡದ ಉಗಮಸ್ಥಾನವೆಂದು ಹೆಸರಾಗಿದೆ. ಪ್ರಪಂಚದ ವಿವಿಧ ಭಾಷೆಗಳಲ್ಲಿ ಕಾಫಿಗೆ ಮೂಲ ಹೆಸರಿನ ವಿವಿಧ ರೂಪಗಳ ಹೆಸರುಗಳು ಬಳಕೆಯಲ್ಲಿವೆ. ಲ್ಯಾಟಿನ್ ಭಾಷೆಯಲ್ಲಿರುವ ವೈಜ್ಞಾನಿಕ ಹೆಸರಾದ ಕಾಫೀಯ ಎಂಬ ಪದವೂ ಮೂಲ ಕಹ್‍ವ ಅಥವಾ ಕಾಫ ಪದವನ್ನೇ ಹೋಲುತ್ತದೆ.

ಕಾಫಿ ಪಾನೀಯದ ಸೇವನೆ ಹೇಗೆ ಆರಂಭವಾಯಿತು ಎಂಬುದರ ಬಗ್ಗೆ ಸರಿಯಾಗಿ ಗೊತ್ತಿಲ್ಲ. ಬಹುಶಃ ಅರಬ್ಬೀಯರೇ ಇದರ ಸೇವನೆಯನ್ನು ಮೊಟ್ಟ ಮೊದಲಿಗೆ ಪ್ರಾರಂಭಿಸಿರಬೇಕು. ಇದರ ಇತಿಹಾಸ ಗತಕಾಲದ ಗರ್ಭದಲ್ಲಿ ಅಸ್ಪಷ್ಟವಾಗಿಯೂ ನಿಗೂಢವಾಗಿಯೂ ಹುದುಗಿದೆಯಾದರೂ ಕಾಫಿಗಿಡ ಬೆಳಕಿಗೆ ಬಂದ ಬಗ್ಗೆ ಹಲವಾರು ದಂತಕಥೆಗಳಿವೆ. ಅರೇಬಿಯದ ಕಲ್ದಿ ಎಂಬ ಆಡು ಕಾಯುವವನು ಯಾವುದೋ ಒಂದು ಗಿಡದ ಹಣ್ಣುಗಳನ್ನು ಸೇವಿಸಿ ಉಲ್ಲಾಸಭರಿತದಂದೂ ಅನಂತರ ಹಣ್ಣುಗಳನ್ನು ಸಂಗ್ರಹಿಸಿ ಬೇರೆಯರಿಗೆ ಕೊಟ್ಟನೆಂದೂ ಐತಿಹ್ಯವಿದೆ. ಮುಂದೆ ಕಾಫಿಬೀಜದ ಉತ್ತೇಜಕ ಗುಣಗಳು ಬೆಳಕಿಗೆ ಬಂದಂತೆ ಅದರ ಬಳಕೆಯೂ ಹೆಚ್ಚುತ್ತ ಬಂದಿತು. ಮೊದಮೊದಲು ಇದರ ಬಳಕೆ ಕೇವಲ ಧಾರ್ಮಿಕ ಸಮಾರಂಭಗಳಲ್ಲಿ ಮಾತ್ರ ಇದ್ದು ಹಲವಾರು ಕಟ್ಟಳೆಗಳಿಂದ ನಿರ್ಬಂಧಿತವಾಗಿತ್ತು. ಅಲ್ಲದೆ ಅರೇಬಿಯದಲ್ಲಿ ಧಾರ್ಮಿಕ ಗುರುಗಳು ಇದನ್ನೊಂದು ಮಾದಕದ್ರವ್ಯವೆಂದು ಪರಿಗಣಿಸಿ ಇದರ ಸೇವನೆಯನ್ನು ನಿಷೇಧಿಸಿದ್ದೂ ಉಂಟು. ಆದರೆ ತನ್ನ ಚೇತೋಹಾರಿ ಗುಣಗಳಿಂದಾಗಿ ಕಾಫಿ ಬಲು ಬೇಗ ಜನಪ್ರಿಯವಾಯಿತು. ಕ್ರಮೇಣ ಕಾಫಿ ಅರೇಬಿಯದಿಂದ ಪ್ರಪಂಚದ ಬೇರೆ ದೇಶಗಳಿಗೂ ಹರಡಿತು. ಕಾಫಿಬೀಜ ಮತ್ತು ಪಾನೀಯದೊಂದಿಗೇ ಕಾಫಿಗಿಡ ಯುರೋಪ್, ದಕ್ಷಿಣ ಅಮೆರಿಕ ಹಾಗೂ ಏಷ್ಯಗಳಿಗೆ ಹರಡತೊಡಗಿತು. ಕಾಫಿಗಿಡ ಮೂಲತಃ ಅಬಿಸೀನಿಯ ದೇಶದ್ದು. ಕಾಫಿಯ ಬಳಕೆಯನ್ನು ಕಂಡುಕೊಂಡ ಮೇಲೆ ಇದನ್ನು ಪರ್ಷಿಯಕ್ಕೆ (ಇರಾನ್) ತೆಗೆದುಕೊಂಡು ಹೋಗಲಾಯಿತು. 15ನೆಯ ಶತಮಾನದ ವೇಳೆಗೆ ಕಾಫಿ ಮೆಕ್ಕಕ್ಕೂ ಅಲ್ಲಿಂದ ಈಜಿಪ್ಟಿಗೂ ಬಂತು. ಸುಮಾರು 200 ವರ್ಷಗಳ ಕಾಲ ಅರೇಬಿಯದಲ್ಲೇ ಇದ್ದ ಕಾಫಿಗಿಡ ಸುಮಾರು 16–17ನೆಯ ಶತಮಾನಗಳ ವೇಳೆಗೆ ಯುರೋಪಿಗೆ ಹರಡಿತು. ತುರ್ಕಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಎಡ್ವರ್ಡ್ ಎಂಬಾತ 1652ರಲ್ಲಿ ಇಂಗ್ಲೆಂಡಿಗೆ ಕಾಫಿಯನ್ನು ತಂದು ಬೆಳೆಸಿದ. 1693ರಲ್ಲಿ ಫಾನ್ ಹಾರ್ನ್ ಇದನ್ನು ಬಟೇವಿಯಕ್ಕೆ ತಂದು ರೂಢಿಸಿದ. ಅಲ್ಲಿಂದ ಫ್ರಾನ್ಸ್ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಿಗೆ ಕಾಫಿಯ ಬೆಳೆ ಹರಡಿತು. 16ನೆಯ ಶತಮಾನದ ಕೊನೆಯಲ್ಲಿ ಇಲ್ಲವೆ 17ನೆಯ ಶತಮಾನದ ಆದಿಯಲ್ಲಿ ಇದು ಭಾರತ, ಸಿಂಹಳ ಮತ್ತು ಈಸ್ಟ್ ಇಂಡೀಸ್ ದ್ವೀಪಗಳಿಗೆ ಕಾಲಿಟ್ಟಿತು. 1870ರ ವರೆಗೆ ಈ ಮೂರು ದೇಶಗಳು ಮಾತ್ರ ಕಾಫಿಯ ಉತ್ಪಾದನೆಗೆ ಹೆಸರಾಗಿದ್ದವು. 1871ರಲ್ಲಿ ಫಾದರ್ ವಿಲ್ಲಿಪೊ ಎಂಬ ಕ್ರೈಸ್ತ ಪಾದ್ರಿ ಬ್ರೆಜಿಲ್‍ನಲ್ಲಿನ ಸೇಂಟ್ ಅಂಥೋನಿ ಮಾನೆಸ್ಟರಿಗೆ ಕಾಫಿಯನ್ನು ತಂದು ಬೆಳೆಸಲಾರಂಭಿಸಿದ. ಅಲ್ಲಿಂದೀಚೆಗೆ ಕಾಫಿ ಪ್ರಪಂಚದ ಉಳಿದ ಉಷ್ಣವಲಯದ ಪ್ರದೇಶಗಳಿಗೆ ಹರಡಿ ಇಂದು ಕೊಲಂಬಿಯ, ಕೀನ್ಯ, ಐವರಿ ಕೋಸ್ಟ್, ಎಲ್ ಸಾಲ್ವಡಾರ್, ಜಾವ, ಕಾಸ್ಟರೀಕ, ಮೊಜಾಂಬಿಕ್. ಪೂರ್ವ ಆಫ್ರಿಕ, ಕಾಂಗೋ, ಮೆಕ್ಸಿಕೋ, ಕ್ಯಾಮರೂನ್ ಮುಂತಾದ ದೇಶಗಳಲ್ಲಿ ವ್ಯವಸಾಯದಲ್ಲಿದೆ. ಭಾರತಕ್ಕೆ ಇದು ಬಂದುದರ ಬಗ್ಗೆ ಸ್ವಾರಸ್ಯವಾದ ಕಥೆಯಿದೆ. ಇದರ ತೋಟಗಾರಿಕೆ ಮೊಟ್ಟ ಮೊದಲು ಆರಂಭವಾದುದು ಆಗಿನ ಮೈಸೂರು ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‍ಗಿರಿ ಬೆಟ್ಟದ ಮೇಲೆ. ಮಹಮ್ಮದೀಯರ ಗುರುಗಳಾದ ಬಾಬಾಬುಡನ್ ಸಾಹೇಬರು ಮೆಕ್ಕದಿಂದ ಬರುವಾಗ ಏಳು ಕಾಫಿಬೀಜಗಳನ್ನು ತಂದು ಬಾಬಾಬುಡನ್‍ಗಿರಿಯಲ್ಲಿ ತಮ್ಮ ಆಶ್ರಮದಲ್ಲಿ ನೆಟ್ಟರೆಂದೂ ಈ ಬೀಜಗಳಿಂದ ಹುಟ್ಟಿದ ಕಾಫಿ ಸಸಿಗಳೇ ಭಾರತದಲ್ಲಿನ ಈಗಿನ ಕಾಫಿ ತೋಟಗಳಿಗೆಲ್ಲ ಮೂಲವೆಂದೂ ಹೇಳಲಾಗಿದೆ. ಈಗ ಭಾರತದಲ್ಲಿ ಕಾಫಿಯನ್ನು ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆ, ಕೊಂಚ ದಕ್ಷಿಣ ಕನ್ನಡ ಜಿಲ್ಲೆ, ಬಿಳಿಗಿರಿರಂಗನ ಬೆಟ್ಟ–ಈ ಸ್ಥಳಗಳಲ್ಲಿಯೂ ಕೇರಳದ ವೈನಾಡು, ನೆಲ್ಲಿಯಂಪತಿ, ಕೊಟ್ಟಾಯಂಗಳಲ್ಲೂ ತಮಿಳುನಾಡಿನ ನೀಲಗಿರಿ, ಪಳನಿ, ಶೆವರಾಯ್ ಮತ್ತು ಮಹೇಂದ್ರಗಿರಿ ಬೆಟ್ಟಗಳಲ್ಲೂ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆ ಮತ್ತು ವಿಶಾಖಪಟ್ಟಣ ಜಿಲ್ಲೆಗಳಲ್ಲೂ ಬೆಳೆಸಲಾಗುತ್ತಿದೆ. ಅಲ್ಲದೆ ಒರಿಸ್ಸದ ಗುಡ್ಡಗಾಡು ಪ್ರದೇಶಗಳು, ಅಸ್ಸಾಂ, ಮೇಘಾಲಯಗಳ ಬೆಟ್ಟಪ್ರದೇಶಗಳು, ಕೊಂಚಮಟ್ಟಿಗೆ ತ್ರಿಪುರ ಮತ್ತು ಮಧ್ಯಪ್ರದೇಶಗಳಲ್ಲೂ ಕಾಫಿಯನ್ನು ಬೆಳೆಸುವ ಪ್ರಯತ್ನಗಳು ನಡೆಯುತ್ತಿವೆ.

**ವರ್ಗೀಕರಣ ಮತ್ತು ಬಗೆಗಳು:** ಕಾಫಿ ಜಾತಿಯನ್ನು 4 ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ–ಪ್ಯಾರಕಾಫೀಯ, ಅಗ್ರೊ ಕಾಫೀಯ, ಮಸ್ಕಾರೊ ಕಾಫೀಯ ಮತ್ತು ಯೂಕಾಫೀಯ. ಇವುಗಳಲ್ಲೆಲ್ಲ ಯೂಕಾಫೀಯ ಭಾಗವೇ ಬಹಳ ಮುಖ್ಯವಾದುದು. ಇದರಲ್ಲಿ ಸುಮಾರು 15 ಪ್ರಭೇದಗಳಿವೆ. ಇದನ್ನು 5 ಉಪಭಾಗಗಳಾಗಿ ವಿಂಗಡಿಸಲಾಗಿದೆ. ಇವು ಎರಿತ್ರೋಕಾಫೀಯ, ಪ್ಯಾಕಿಕಾಫೀಯ, ಮೆಲಾನೊಕಾಫೀಯ, ನ್ಯಾನೋಕಾಫೀಯ

ಮತ್ತು ಮೊಜಾಂಬಿಕಾಫೀಯ. ಇವುಗಳಲ್ಲಿ ಅತಿಮುಖ್ಯವಾದ ಉಪವಿಭಾಗ ಎರತ್ರೋಕಾಫಿಯ. ಪ್ರಪಂಚದಾದ್ಯಂತ ವ್ಯವಸಾಯದಲ್ಲಿರುವ ಬಹುಮುಖ್ಯ ಪ್ರಭೇದಗಳಾದ ಕಾ. ಅರ್ಯಾಬಿಕ ಮತ್ತು ಕಾ. ಕ್ಯಾನಿಫೊರಗಳು ಈ ಉಪವಿಭಾಗಕ್ಕೆ ಸೇರಿವೆ. ಕಾ. ಅರ್ಯಾಬಿಕದಲ್ಲಿ ಸುಮಾರು 27 ಬಗೆಗಳಿವೆ. ಇವುಗಳಲ್ಲಿ ಆರ್ಥಿಕ ದೃಷ್ಟಿಯಿಂದ ಮುಖ್ಯವಾದವು ಏಳು: ಟಿಪಿಕ, ಬೋರ್ಬಾನ್, ಮರಾಗೋಗೈಪ್, ಸೀರ, ಸೆಂಪರ್‌ವಿರೆನ್ಸ್, ಸಾನ್‌ರೇಮಾನ್, ಕ್ಯಾಟ್ಯುರ. ಇವೆಲ್ಲವೂ ಚತುರ್ಗುಣಿತ (ಟೆಟ್ರಪ್ಲಾಯಿಡ್) ಕ್ರೋಮೋಸೋಮುಗಳನ್ನುಳ್ಳ ವಿಧಗಳು. ಕಾಫಿಯಲ್ಲಿನ ಕ್ರೋಮೋಸೋಮುಗಳ ಸಂಖ್ಯೆ 11. ಅರ್ಯಾಬಿಕ ಪ್ರಭೇದದ ಎಲ್ಲ ವಿಧಗಳಲ್ಲೂ 44 ಕ್ರೋಮೋಸೋಮುಗಳಿರುವುದರಿಂದ ಅವನ್ನು ಚತುರ್ಗುಣಿತ ಕ್ರೋಮೋಸೋಮುಗಳುಳ್ಳ ವಿಧಗಳೆನ್ನುತ್ತಾರೆ. ಕಾಫಿಯಲ್ಲಿ ಪಂಚಗುಣಿತ (ಪೆಂಟಪ್ಲಾಯಿಡ್), ಷಡ್ಗುಣಿತ, ಅಷ್ಟಗುಣಿತ ಕ್ರೋಮೋಸೋಮುಗಳುಳ್ಳ ಪ್ರಭೇದಗಳೂ ಇವೆ.

ಮೇಲೆ ಹೇಳಿದ ಪ್ರಭೇದಗಳೆಲ್ಲ ಸ್ವಾಭಾವಿಕವಾದವು. ಇವಲ್ಲದೆ ತಳೀಕರಣ ವಿಧಾನಗಳಿಂದ ಮಾನವ ಪಡೆದ ಹಲವಾರು ತಳಿಗಳೂ ಇವೆ. ಕಾಫಿಯ ತಳೀಕರಣದ ಉದ್ದೇಶಗಳಲ್ಲಿ ಮುಖ್ಯವಾದವು ಇವು : 1 ಕಾಫಿಯ ಉತ್ಪನ್ನದ ಹೆಚ್ಚುವರಿ; 2 ಕಾಫಿಯ ಗುಣಮಟ್ಟದ ಏರಿಕೆ; 3 ಕಾಫಿಗೆ ಅಂಟುವ ವಿವಿಧ ಬಗೆಯ ಬೂಷ್ಟು ಹಾಗೂ ಕೀಟ ಪಿಡುಗುಗಳ ನಿರೋಧ ; 4 ಕಾಫಿಯಲ್ಲಿನ ಕೆಫೀನ್ ಪ್ರಮಾಣವನ್ನು ಇಳಿಸುವುದು. ತಳೀಕರಣ ಪ್ರಯೋಗಗಳೆಲ್ಲ ಹೆಚ್ಚಾಗಿ ನಡೆದಿರುವುದು ಅರ್ಯಾಬಿಕ ಕಾಫಿ ಮತ್ತು ರೊಬಸ್ಟ ಕಾಫಿಗಳಲ್ಲೆ. ಪೋರ್ಚುಗಲ್, ಕೀನ್ಯ ಮತ್ತು ಫಿಲಿಪೀನ್ ದ್ವೀಪಗಳಲ್ಲಿ ಅರ್ಯಾಬಿಕ ಕಾಫಿಯ ಮೇಲೂ ಭಾರತ, ಕಾಂಗೋ, ಅಂಗೋಲ, ಉಗಾಂಡ, ಟಾಂಜಾನಿಯಗಳಲ್ಲಿ ರೊಬಸ್ಟ ಮತ್ತು ಅರ್ಯಾಬಿಕ ಕಾಫಿಗಳ ಮೇಲೂ ಇಂಡೋನೇಷ್ಯ ಮತ್ತು ಐವರಿಕೋಸ್ಟ್‌ಗಳಲ್ಲಿ ರೊಬಸ್ಟ ಕಾಫಿಯ ಮೇಲೂ ಈ ಪ್ರಯೋಗಗಳು ನಡೆದಿವೆ. ಭಾರತದಲ್ಲಿ ಮೊದಮೊದಲು ತೋಟಗಾರಿಕೆಯಲ್ಲಿ ಬಳಸಲಾದ ತಳಿಗಳು ಚಿಕ್ಸ್ ಮತ್ತು ಕೂರ್ಗ್ಸ್; ಆದರೆ ಕ್ರಮೇಣ ಇವು ಕಾಫಿಗಿಡದ ಅರಿಸಿನ ರೋಗಕ್ಕೆ ಬಲುಬೇಗ ತುತ್ತಾಗುವುದು ಕಂಡುಬಂದಿತು. ಇದರಿಂದಾಗಿ ಕಾಫಿ ತೋಟಗಾರಿಕೆಯೇ ಹಾಳುಗುವಂತೆ ತೋರಿತು. ಆಗ ಖಾಸಗಿ ಬೆಳೆಗಾರರು ತಳೀಕರಣ ಪ್ರಯೋಗಗಳನ್ನು ಕೈಗೊಂಡು ನೇತ್ರಕೊಂಡ ಜಾಕ್‌ಸನ್ಸ್ , ಚಂದ್ರಪುರ ಮತ್ತು ಕೆಂಟ್ಸ್ ಎಂಬ ತಳಿಗಳನ್ನು ಅಭಿವೃದ್ಧಿಪಡಿಸಿದರು. ಇವುಗಳಲ್ಲೆಲ್ಲ ಕೆಂಟ್ಸ್ ತಳಿಯೇ ಹೆಚ್ಚು ಬಲಶಾಲಿಯೂ ಉತ್ಪಾದನಸಾಮರ್ಥ್ಯವುಳ್ಳದ್ದೂ ಆಗಿ ಕಂಡುಬಂದಿತು. ಆದರೆ ಇದು ಕೂಡ ಕ್ರಮೇಣ ಬೂಷ್ಟು ರೋಗಕ್ಕೆ ಬಲಿಯಾಗತೊಡಗಿತು. 1925–26ರ ಸುಮಾರಿಗೆ ಮೈಸೂರು ಸರ್ಕಾರದ ನೆರವಿನಿಂದ ಅಸ್ತಿತ್ವಕ್ಕೆ ಬಂದ ಬಾಳೆಹೊನ್ನೂರಿನಲ್ಲಿನ ಕೇಂದ್ರ ಕಾಫಿ ಸಂಶೋಧನ ಸಂಸ್ಥೆ ಈ ದಿಶೆಯಲ್ಲಿ ಹಲವಾರು ಪ್ರಯೋಗಗಳನ್ನು ಕೈಗೊಂಡು ಅರ್ಯಾಬಿಕ ಕಾಫಿಯಲ್ಲಿ ಸ್ಟೇಷನ್ ಸೆಲೆಕ್ಷನ್ 288 (SS 288) ಮತ್ತು ಸ್ಟೇಷನ್ ಸೆಲೆಕ್ಷನ್ 795 (SS 795) ಎಂಬ ತಳಿಗಳನ್ನೂ ರೊಬಸ್ಟ ಕಾಫಿಯಲ್ಲಿ S 274 ಮತ್ತು S 270 ಎಂಬ ತಳಿಗಳನ್ನೂ ಅಭಿವೃದ್ಧಿ ಪಡಿಸಿತು. ಇವು ನಾಲ್ಕು ತಳಿಗಳೂ ತಮ್ಮ ರೋಗನಿರೋಧಕ ಗುಣಗಳಿಗಾಗಿಯೂ ಉತ್ಪಾದನ ಸಾಮರ್ಥ್ಯಕ್ಕೂ ಹೆಸರಾಗಿವೆ. ಕಾಫಿ ಗಿಡದ ಅಭಿವೃದ್ಧಿಯನ್ನೇ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡು ಕೇಂದ್ರ ಕಾಫಿ ಸಂಸ್ಥೆಯಲ್ಲಿ ಜೀನ್ ಬ್ಯಾಂಕ್ ಒಂದನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಸುಮಾರು 21 ಪ್ರಭೇದ, ಬಗೆ ಹಾಗೂ ಮಿಶ್ರತಳಿಗಳಿವೆ. ಇವುಗಳಲ್ಲಿ ಹೆಚ್ಚಿನವು ಇಥಿಯೋಪಿಯದ ಮೂಲನಿವಾಸಿಗಳು. ಇವನ್ನು ಪೋರ್ಚುಗಲ್‌ನ ಕಾಫಿರೋಗ ಸಂಶೋಧನ ಕೇಂದ್ರದಿಂದ ಪಡೆಯಲಾಗಿದೆ. ಇವುಗಳಲ್ಲಿ ಮುಖ್ಯವಾದವು ಈ ರೀತಿ ಇವೆ–ಸಿಯೋಕ್ಕಿ (ಸಿ.ಸಿ.ಆರ್.ಐ.ನಂ. S 2126 ಮತ್ತು S 2127), ಅಗಾರೊ (S 2128 ಮತ್ತು S 2129), 134/4 S 12 ಕಾಫ (ಸಿ.ಸಿ.ಆರ್.ಐ.ನಂ. 2274), ಗೆಯಿಷ, ಹೈಬ್ರಿಡೊ–ಡಿ–ಟಿಮೋರ್, SS 1934 ಮತ್ತು ಸಾನ್‌ರೇಮಾನ್ ಬಗೆಯೊಂದಿಗೆ ಅಡ್ಡಹಾಯಿಸಿ ಪಡೆದ ಮಿಶ್ರತಳಿಗಳು. ಇವನ್ನು ಹಲವಾರು ಸ್ಥಳೀಯ ತಳಿಗಳೊಂದಿಗೂ ಅವುಗಳಲ್ಲೆ ಪರಸ್ಪರವಾಗಿಯೂ ಅಂತಃಪ್ರಭೇದ (ಇಂಟರ್ ಸ್ಪೆಸಿಫಿಕ್) ಹಾಗೂ ಅಂತಃಪ್ರಭೇದ (ಇಂಟ್ರಾ ಸ್ಪೆಸಿಫಿಕ್) ತಳೀಕರಣ ಪ್ರಯೋಗಗಳಲ್ಲಿ ಬಳಸಲಾಗುತ್ತಿದೆ. ಕಾ. ಕ್ಯಾನಿಫೊರ ಮತ್ತು ಕಾ. ಅರ್ಯಾಬಿಕಗಳ ನಡುವೆ, ಕಾಫೀಯ ಲೈಬೀರಿಕ ಮತ್ತು ಕಾ. ಕ್ಯಾನಿಫೊರ ಹಾಗೂ ಕಾ. ಯೂಜಿನಾಯ್ಡಿಸ್‌ಗಳ ನಡುವೆ ಮತ್ತು ಕಾ. ಎಕ್ಸೆಲ್ಸ ಮತ್ತು ಕಾ. ಯೂಜಿನಾಯ್ಡಿಸ್‌ಗಳ ನಡುವೆ ಅಡ್ಡತಳಿಯೆಬ್ಬಿಕೆ ಪ್ರಯೋಗಗಳನ್ನು ನಡೆಸಿ ಪಡೆದಿರುವ ಹಲವಾರು ಅಂತರಪ್ರಭೇದ ಮಿಶ್ರತಳಿಗಳು ಬಾಳೆಹೊನ್ನೂರಿನ ಸಂಶೋಧನ ಸಂಸ್ಥೆಯಲ್ಲಿವೆ.

ಕಾಫಿಯ ಉತ್ತೇಜಕ ಗುಣಕ್ಕೆ ಅದರಲ್ಲಿನ ಕೆಫೀನ್ ಮುಖ್ಯ ಕಾರಣವಾದರೂ ಅದು ದೇಹದ ಮೇಲೆ ಹಲವಾರು ದುಷ್ಪರಿಣಾಮಗಳನ್ನು ಮಾಡುವುದರಿಂದ ಕೆಫೀನ್ ಇಲ್ಲದಿರುವ, ಇದ್ದರೂ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಕಾಫಿಯ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದ ಸಹಕಾರದಿಂದ ನಡೆಸಲಾಗಿರುವ ಈ ಸಂಶೋಧನೆಯ ಫಲವಾಗಿ ಕಾಫಿಗಿಡದ ಸ್ಥಳೀಯ ಪ್ರಭೇದಗಳಾದ ಕಾ. ಬೆಂಗಾಲೆನ್ಸಿಸ್ ಮತ್ತು ಕಾ. ಟ್ರಾವಂಕೂ ರೆನ್ಸಿಸ್ ಎಂಬ ಪ್ರಭೇದಗಳಲ್ಲಿ ಕೆಫೀನ್ ಇಲ್ಲದಿರುವುದು ಕಂಡುಬಂದಿದೆ. ಇಥಿಯೋಪಿಯದಿಂದ ಪಡೆಯಲಾಗಿರುವ ಹಲವಾರು

ಮಿಶ್ರ ತಳಿ

ಅರ್ಯಾಬಿಕ ಕಾಫಿಯ ತಳಿಗಳಲ್ಲೂ ಕೆಫೀನ್ ಪ್ರಮಾಣ ಗಣನೀಯವಾಗಿ ಕಡಿಮೆಯಿರುವುದು ಗೋಚರವಾಗಿದೆ.

**ಕೆಲವು ಮುಖ್ಯ ಪ್ರಭೇದಗಳು:** ಅರ್ಯಾಬಿಕ ಕಾಫಿ: ಭಾರತದಲ್ಲಿ ಕಾಫಿ ಬೆಳೆಯುವ ಎಲ್ಲ ಪ್ರದೇಶಗಳಲ್ಲೂ ಈ ಪ್ರಭೇದ ಹೆಚ್ಚಿನ ಬೇಸಾಯದಲ್ಲಿದೆ. ಕಾಫಿ ಬೆಳೆಯುವ ಬೇರೆ ದೇಶಗಳಲ್ಲೂ ಈ ಕಾಫಿಯೇ ಸಾಮಾನ್ಯವಾಗಿದೆ. ಇದರ ತವರು ಇಥಿಯೋಪಿಯ. ಇದು ಸುಮಾರು 15'–30' ಎತ್ತರಕ್ಕೆ ಬೆಳೆಯುವ ಪೊದೆಸಸ್ಯ. ಕಾಯಿ ಬಿಡಿಸಲು ಅನುಕೂಲವಾಗುವಂತೆ ಆಗಾಗ್ಗೆ ಕೊಂಬೆಗಳನ್ನು ಕತ್ತರಿಸಿ ಇದರ ಎತ್ತರ 6'ಗಳಿಗೆ ಮೀರದಂತೆ ಹಿಡಿತದಲ್ಲಿಟ್ಟಿರುವುದು ವಾಡಿಕೆ. ಕಾ. ಕ್ಯಾನಿಫೊರ ಪ್ರಭೇದದ ಎಲೆಗಳಿಗೆ ಹೋಲಿಸಿದರೆ ಇದರ ಎಲೆಗಳು ಚಿಕ್ಕವು. ಕಾಯಿಗಳೂ ಸಣ್ಣ ಗಾತ್ರದವು. ಒಂದೊಂದು ಗೊಂಚಲಲ್ಲೂ ಬಹಳ ಕಡಿಮೆ ಸಂಖ್ಯೆಯಲ್ಲಿ ಕಾಯಿಗಳಿರುತ್ತವೆ. ಅರ್ಯಾಬಿಕ ಕಾಫಿ ತನ್ನ ಗುಣದ ಉತ್ಕೃಷ್ಟತೆಗೆ ಹೆಸರಾಗಿದೆ. ಆದರೆ ಇದು ಬಲು ಬೇಗ ಬೂಷ್ಟು ಹಾಗೂ ಕೀಟರೋಗಗಳಿಗೆ ಬಲಿಯಾಗುತ್ತದೆ. ಈ ಪ್ರಭೇದದಲ್ಲಿ ಅನೇಕ ವಿಧಗಳಿವೆ. ಇವುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಬೆಳೆಯುವ ಮುಖ್ಯ ವಿಧಗಳು ಚಿಕ್ಸ್, ಕೂರ್ಗ್ಸ್, ಕೆಂಟ್ಸ್ ಮತ್ತು ಮರಾಗೊ.

**ರೊಬಸ್ಟ ಕಾಫಿ:** ಕಾ. ಕ್ಯಾನಿಫೊರ ಪ್ರಭೇದಕ್ಕಿರುವ ಸಾಮಾನ್ಯ ಹೆಸರಿದು. ಅರ್ಯಾಬಿಕ ಕಾಫಿಗಿಂತ ದೊಡ್ಡದೂ ಕಸುವುಳ್ಳದ್ದೂ ಆಗಿದೆ. ವಾತಾವರಣದ ವ್ಯತ್ಯಾಸಗಳಿಗೂ ವಿವಿಧ ಬಗೆಯ ಮಣ್ಣುಗಳಿಗೂ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಅಲ್ಲದೆ ಬೂಷ್ಟು ರೋಗಗಳಿಗೆ ಮತ್ತು ಕೀಟಗಳಿಗೆ ಸುಲಭವಾಗಿ ತುತ್ತಾಗುವುದಿಲ್ಲ. ಇಳುವರಿಗೆ ಹೆಸರಾಗಿದೆ. ಇದನ್ನು ಅರ್ಯಾಬಿಕ ಕಾಫಿಯಷ್ಟು ಎಚ್ಚರಿಕೆಯಿಂದ ಬೇಸಾಯ ಮಾಡಬೇಕಿಲ್ಲ. ಎಲೆಗಳು ದೊಡ್ಡವು. ಕಾಯಿಗಳು ಒಂದೊಂದು ಗೊಂಚಲಿನಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ, ಬೀಜದಲ್ಲಿನ ಕೆಫೀನ್ ಪ್ರಮಾಣ ಹೆಚ್ಚು.

**ಲೈಬೀರಿಯ ಕಾಫಿ:** ಇದರ ವೈಜ್ಞಾನಿಕ ಹೆಸರು ಕಾ. ಲೈಬೀರಿಕ. ಲೈಬೀರಿಯ ದೇಶದ ಮೂಲವಾಸಿ. ಅರ್ಯಾಬಿಕ ಕಾಫಿಗಿಂತ ಎತ್ತರಕ್ಕೆ ಬೆಳೆಯುತ್ತದೆ. ಅರ್ಯಾಬಿಕ ಕಾಫಿಗಿಂತ ಹೆಚ್ಚಿನ ಉಷ್ಣತೆಯನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಇದಕ್ಕುಂಟು. ಇದನ್ನು ಕಡಿಮೆ ಸಾರವತ್ತಾಗಿರುವ ಭೂಮಿಯಲ್ಲೂ ಬೆಳೆಸಬಹುದು. ಇದರ ಇಳುವರಿ ಅರ್ಯಾಬಿಕ ಕಾಫಿಗಿಂತ ಹೆಚ್ಚಾಗಿದ್ದರೂ ಬೀಜಗಳ ಗುಣಮಟ್ಟ ಕಡಿಮೆ ದರ್ಜೆಯದು. ಇದು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಬೇಸಾಯದಲ್ಲಿಲ್ಲ. ಆದರೆ ಬೇರೆ ಪ್ರಭೇದಗಳೊಂದಿಗೆ ಅಡ್ಡಹಾಯಿಸಲು ಈ ಪ್ರಭೇದವನ್ನು ಬಳಸುತ್ತಾರೆ. ಅಲ್ಲದೆ ಅರ್ಯಾಬಿಕ ಕಾಫಿಯನ್ನು ಕಸಿಮಾಡಲು ಇದನ್ನು ತಾಳುಸಸಿಯಾಗಿ ಉಪಯೋಗಿಸುತ್ತಾರೆ.

**ಸಿಯರ ಕಾಫಿ:** ಕಾ. ಸ್ಟೆನೊಫಿಲ ಎಂಬ ವೈಜ್ಞಾನಿಕ ನಾಮವುಳ್ಳ ಪ್ರಭೇದದ ಸಾಮಾನ್ಯ ಹೆಸರು. ಪಶ್ಚಿಮ ಆಫ್ರಿಕದ ಸಿಯರ ಲಿಯೋನ್ ದೇಶದ ಮೂಲವಾಸಿ. ಇದು ಸುಮಾರು 25'–30' ಎತ್ತರಕ್ಕೆ ಬೆಳೆಯುತ್ತದೆ. ಅರ್ಯಾಬಿಕ ಕಾಫಿಗೆ ಹೋಲಿಸಿದರೆ ಇಳುವರಿಯಲ್ಲೂ ಬೀಜಗಳ ಗುಣದಲ್ಲೂ ಉನ್ನತ ದರ್ಜೆಯದು. ಆದರೆ ಇಳುವರಿ

ಕೊಡಲು ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಭಾರತದ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುವುದಿಲ್ಲವಾದ್ದರಿಂದ ವಾಣಿಜ್ಯ ದೃಷ್ಟಿಯಿಂದ ಪ್ರಮುಖವಾದುದಲ್ಲ.

**ತೋಟಗಾರಿಕೆ:** ಕಾಫಿ ತೋಟಗಾರಿಕೆ ಪ್ರಪಂಚದ ಉಷ್ಣ ಹಾಗೂ ಉಪೋಷ್ಣವಲಯದ ದೇಶಗಳಿಗೆ ಮಾತ್ರ ಸೀಮಿತವಾಗಿದೆ. ಇದರ ಬೇಸಾಯಕ್ಕೆ ತಂಪು ಹವೆಯುಳ್ಳ ಮತ್ತು ಹೆಚ್ಚು ಮಳೆ ಬೀಳುವ ಬೆಟ್ಟ ಪ್ರದೇಶಗಳು ಅತ್ಯಂತ ಅನುಕೂಲ. ವರ್ಷಕ್ಕೆ 90"–150" ಮಳೆ ಬೀಳುವ ಹಾಗೂ 2,000'–5,000' ಎತ್ತರದ ಪ್ರದೇಶಗಳು ಇದರ ಬೇಸಾಯಕ್ಕೆ ಅನುಕೂಲತಮವಾದವು. ಮಳೆ ಹೆಚ್ಚು ಬೇಕಾಗಿದ್ದರೂ ನೀರು ನಿಲ್ಲ ಬಾರದು. ಬಿದ್ದ ನೀರು ಸುಲಭವಾಗಿ ಹರಿದುಹೋಗುವಂತೆ ಇಳಿಜಾರು ಇರಬೇಕು. ಆದರೆ ಆಫ್ರಿಕದಲ್ಲಿ ಸಮತಟ್ಟಾದ ನೆಲದಲ್ಲಿ ಕಾಫಿಯನ್ನು ಬೆಳೆಸುವುದುಂಟು. ಕಾಫಿಗಿಡಕ್ಕೆ ನೆರಳು ಅತ್ಯಾವಶ್ಯಕ. ನೇರವಾಗಿ ಬೀಳುವ ಬಿಸಿಲನ್ನು ತೆಗೆದುಕೊಳ್ಳುವ ಶಕ್ತಿ ಇದಕ್ಕಿಲ್ಲ. ಗಿಡಗಳು ಚಿಕ್ಕವಾಗಿದ್ದು ಇನ್ನೂ ಬೆಳೆಯುತ್ತಿರುವಾಗ ಹಾಲುವಾಣದ ಮರವನ್ನು (ಎರಿತ್ರೈನ ಜಾತಿ) ನೆರಳಿಗೆಂದು ಬೆಳೆಸುತ್ತಾರೆ. ಜೊತೆಗೇ ದೊಡ್ಡಗಾತ್ರಕ್ಕೆ ಬೆಳೆಯುವ ಮರಗಳನ್ನೂ ಬೆಳೆಸಿ ಕಾಫಿಗಿಡಗಳು ದೊಡ್ಡವಾದ ಮೇಲೆ ಹಾಲುವಾಣದ ಮರಗಳನ್ನು ತೆಗೆದುಹಾಕುತ್ತಾರೆ. ಹೀಗೆ ಬೆಳೆಸಲಾಗುವ ನೆರಳಿನ ಮರಗಳಲ್ಲಿ ಮುಖ್ಯವಾದವು ಸಿಲ್ವರ್ ಮರ, ಹಲಸು, ಹೊನ್ನೆ, ನೀಲಿ, ಬೀಟೆ, ನೇರಳೆ, ಕಲ್ಬಾಗಿ, ಹೊಟ್ಟೆಬಾಗಿ, ಬಿಳಿಬಸರಿ. ಕರಿಬಸರಿ, ಅತ್ತಿ, ಮಿಟ್ಲೆ, ಕಂಡಗರಿಗೆ ಮುಂತಾದವು. ಕಾಫಿಗಿಡ ಕಡುಚಳಿಯನ್ನು (ಫ್ರಾಸ್ಟ್) ತಡೆದುಕೊಳ್ಳಲಾರದು. ಇದರ ಬೆಳವಣಿಗೆಗೆ ಸುಮಾರು 55°–80° ಫ್ಯಾ. ವರೆಗಿನ ಉಷ್ಣತೆಯ ವ್ಯಾಪ್ತಿ ಬೇಕು. 70° ಫ್ಯಾ. ಉಷ್ಣತೆ ಅತ್ಯಂತ ಅನುಕೂಲವಾದದ್ದು. ಬ್ರೆಜಿಲ್ ದೇಶದಲ್ಲಿ 50° ಫ್ಯಾ. ಉಷ್ಣತೆ ಇರುವ ಪ್ರದೇಶಗಳಲ್ಲಿ ಕಾಫಿಯನ್ನು ಬೆಳೆಸುವುದಿದ್ದರೂ ಭಾರತದಲ್ಲಿ 55⁰ ಫ್ಯಾ. ಗಿಂತ ಕಡಿಮೆ ಉಷ್ಣತೆಯಲ್ಲಿ ಬೆಳೆಸಲಾಗುವುದಿಲ್ಲ.

ಕಾಫಿಗೆ ಎಂಥ ಮಣ್ಣಿನಲ್ಲಾದರೂ ಬೆಳೆಯುವ ಸಾಮರ್ಥ್ಯ ಇದೆ. ಬ್ರೆಜಿಲ್ ದೇಶದಲ್ಲಿ ಲ್ಯಾಟರೈಟ್ ಮಣ್ಣಿನಲ್ಲೂ ಕೊಲಂಬಿಯ, ಮಧ್ಯ ಆಫ್ರಿಕ, ಕೀನ್ಯ, ಮತ್ತು ಟಾಂಜಾನಿಯಗಳಲ್ಲಿ ಜ್ವಾಲಾಮುಖಿಜ ಬೂದಿಯ ಮಣ್ಣಿನಲ್ಲೂ ಹವಾಯ್ ದ್ವೀಪಗಳಲ್ಲಿ ಲಾವಾಕಲ್ಲಿನಿಂದ ಉಂಟಾದ ಮಣ್ಣಿನಲ್ಲೂ ಭಾರತದಲ್ಲಿ ಗ್ರಾನೈಟ್ ಮತ್ತು ನೈಸ್ ಶಿಲೆಗಳಿಂದ ಉಂಟಾದ ಮಣ್ಣಿನಲ್ಲೂ ಕಾಫಿ ಬೆಳೆಯುತ್ತದೆ. ಆಳವಾದ ಕೆಂಪು ಗೋಡು ಇದರ ಬೇಸಾಯಕ್ಕೆ ಶ್ರೇಷ್ಠವಾದುದು. ಮಣ್ಣಿನ ಮೂಲ ಯಾವುದೇ ಇರಲಿ ಅದು ಗಾಳಿ ನೀರು ಮಂತಾದವು ಸರಾಗವಾಗಿ ಚಲಿಸುವಂತೆ ಬಿಡಿಕಣಗಳುಳ್ಳದ್ದೂ ಆಳವಾದದ್ದೂ ಸುಲಭವಾಗಿ ಪುಡಿಪುಡಿಯಾಗುವುದೂ ಆಗಿರಬೇಕು. ಮಣ್ಣಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಸಸ್ಯಜನ್ಯ ಸಾವಯವ ಪದಾರ್ಥಗಳಿರಬೇಕು. ಮಣ್ಣಿನ ಆಮ್ಲತೆ ಮತ್ತು ಕ್ಷಾರತೆಗಳು ಬಲುದೊಡ್ಡದಾದ ಅಂಶ. ಸುಮಾರು 5.5–6.5 pH ಉಳ್ಳ ಮಣ್ಣು ಕಾಫಿ ಬೆಳೆಗೆ ಯೋಗ್ಯವಾದದ್ದು. ಭಾರತದಲ್ಲಿ ಕಾಫಿ ಬೆಳೆಯುವ ಪ್ರದೇಶದಲ್ಲಿನ ಮಣ್ಣು ಹೆಚ್ಚು ಆಮ್ಲೀಯದಾಗಿದ್ದರೂ (ಇದರ pH ಸುಮಾರು 4.5) ಇದರಲ್ಲಿ ಸಾವಯವ ಅಂಶ ಹೆಚ್ಚಾಗಿರುವುದರಿಂದ ಕಾಫಿ ಚೆನ್ನಾಗಿ ಬೆಳೆಯಬಲ್ಲುದು. ಕಪ್ಪುಗೋಡು ಮತ್ತು ಜೇಡಿಮಣ್ಣಿನಲ್ಲೂ ಕಾಫಿಯ ಬೇಸಾಯ ಉಂಟು. ರೊಬಸ್ಟ ಕಾಫಿಗೆ ಅರ‍್ಯಾಬಿಕ ಕಾಫಿಗಿಂತ ಹೆಚ್ಚಿನ ಉಷ್ಣತೆ ಮತ್ತು ಆರ್ದ್ರತೆಗಳು ಅಗತ್ಯ.

**ಬೇಸಾಯದ ವಿಧಾನ:** ಕಾಫಿ ಬೆಳೆಯುವ ಪ್ರದೇಶಗಳೆಲ್ಲ ಸಾಮಾನ್ಯವಾಗಿ ಕಾಡು ಪ್ರದೇಶಗಳಾದ್ದರಿಂದ ಬೇಸಾಯದ ಮೊದಲ ಕ್ರಮ ಕಾಡನ್ನು ಕಡಿಯುವುದು, ಕೆಲವೆಡೆ

ಕಾಫಿಗಿಡದಿಂದ ಹಣ್ಣು ಬಿಡಿಸುತ್ತಿರುವುದು

ನೆರಳು ಕೊಡುವ ಮರಗಳನ್ನು ಉಳಿಸಿಕೊಳ್ಳುವುದು ರೂಢಿಯಲ್ಲಿರುವುದಾದರೂ ಕಾಡಿನ ಎಲ್ಲ ಮರಗಳನ್ನು ಕಡಿಯುವುದು ಒಳ್ಳೆಯ ಕ್ರಮ. ಕಾಫಿಯನ್ನು ಬೀಜಗಳಿಂದ ವೃದ್ಧಿಸಿ ಸಸಿಗಳನ್ನು ಪಡೆದು ಅನಂತರ ಅವನ್ನು ಅವುಗಳ ಶಾಶ್ವತ ಸ್ಥಳಕ್ಕೆ ಸಾಗಿಸಿ ನೆಡುತ್ತಾರೆ. ಬೀಜಗಳನ್ನು ವಿಶೇಷ ಬಗೆಯ ನರ್ಸರಿಗಳಲ್ಲಿ ನೆಟ್ಟು ಮೊಳೆಸುತ್ತಾರೆ. ಹೀಗೆ ನರ್ಸರಿಗಳಲ್ಲಿ

ಕಾಫಿ ಹಣ್ಣಿನ ವಿಂಗಡಣೆ

ನಡುವೆ ಮೊದಲು ಅವನ್ನು ಸಂಸ್ಕರಿಸಬೇಕು. ಬೀಜಕ್ಕೆಂದೇ ಬೆಳೆಸಿದ ಗಿಡಗಳಿಂದ ಒಳ್ಳೆಯ ಹದವಾದ ಹಣ್ಣುಗಳನ್ನು ಆರಿಸಿಕೊಂಡು ಬೀಜಗಳನ್ನು ಹೊರತೆಗೆದು ಬೂದಿಯೊಂದಿಗೆ ಮಿಶ್ರ ಮಾಡಿ ನೆರಳಿನಲ್ಲಿ ಒಣಗಿಸುತ್ತಾರೆ. ದಿವಸಕ್ಕೆ ಮೂರು ಸಲ ಬೀಜಗಳನ್ನು ಕದಡಿ ಇವು ಏಕಪ್ರಕಾರವಾಗಿ ಒಣಗುವಂತೆ ಮಾಡಬೇಕು. ಹೀಗೆ 5 ದಿವಸಗಳು ಒಣಗಿಸಿದ ಅನಂತರ ಹೆಚ್ಚಾದ ಬೂದಿಯನ್ನು ತೆಗೆದುಹಾಕಿ ಬೀಜಗಳನ್ನು ಯಾವುದಾದರೂ ಒಳ್ಳೆಯ ಬೂಷ್ಟು ನಿರೋಧಕದೊಂದಿಗೆ (ಅಗ್ರೋಸಾನ್ ಪುಡಿ) ಮಿಶ್ರಮಾಡುವುದು ಒಳ್ಳೆಯದು. ಇದರಿಂದ ಮುಂದೆ ಅಂಟಬಹುದಾದ ಬೂಷ್ಟನ್ನು ತಡೆಯಲು ಅನುಕೂಲ. ಹೀಗೆ ಸಂಸ್ಕರಿಸಿದ ಬೀಜಗಳನ್ನು ಜನವರಿ–ಮಾರ್ಚ್ ತಿಂಗಳುಗಳ ನಡುವಣ ಕಾಲದಲ್ಲಿ ನೆಟ್ಟು ಮೊಳೆಸುತ್ತಾರೆ. ಬೀಜಗಳನ್ನು ಮಣ್ಣಿನಲ್ಲಿ ನೆಟ್ಟು ಅವುಗಳ ಮೇಲೆ ತೆಳುವಾಗಿ ಮಣ್ಣನ್ನು ಹರಡುತ್ತಾರೆ. ಇದರ ಮೇಲೆ ದಪ್ಪವಾಗಿ ಬತ್ತದ ಹುಲ್ಲನ್ನು ಮುಚ್ಚುವುದೂ ರೂಢಿಯಲ್ಲಿದೆ. ಇದರಿಂದ ಒಂದೇ ಸಮನಾದ ಉಷ್ಣತೆಯನ್ನು ಕಾಪಾಡಲೂ ನೆಲದಿಂದ ನೀರು ಆರದಿರುವಂತೆ ಮಾಡಲೂ ಅನುಕೂಲ. ಇದರ ಮೇಲೆ ಚಪ್ಪರ ಹಾಕುವುದು ಬಹಳ ಮುಖ್ಯ. ಪ್ರತಿದಿವಸ ನೀರನ್ನು ಹಾಯಿಸಬೇಕು. ಬೀಜಗಳು ಸುಮಾರು 45 ದಿವಸಗಳಲ್ಲಿ ಮೊಳಕೆಯೊಡೆಯುತ್ತವೆ. ಅನಂತರ ಸಸಿಗಳನ್ನು ಎರಡನೆಯ ನರ್ಸರಿಗೋ ಇಲ್ಲವೇ ಸಣ್ಣ ಬಿದಿರಿನ ಬುಟ್ಟಿಗಳಿಗೋ ಅಥವಾ ಪಾಲಿಥೀನ್ ಚೀಲಗಳಿಗೋ ವರ್ಗಾಯಿಸುತ್ತಾರೆ. ಬುಟ್ಟಿ ಅಥವಾ ಚೀಲಗಳಿಗೆ ಗೊಬ್ಬರ, ಮರಳು ಮತ್ತು ಕಾಡಿನ ಮಣ್ಣಿನ ಮಿಶ್ರಣವನ್ನು ಭರ್ತಿಮಾಡಿ ಸಸಿಗಳನ್ನು ವರ್ಗಾಯಿಸುವುದು ಸಾಮಾನ್ಯ ಕ್ರಮ. ಎಳೆಯ ಸಸಿಗಳನ್ನು ಕೀಟ ಹಾಗೂ ಬೂಷ್ಟು ರೋಗಗಳಿಂದ ದೂರವಿಡಲು ಕಾಲಕಾಲಕ್ಕೆ ಕೀಟ ಹಾಗೂ ಬೂಷ್ಟುನಿರೋಧಕ ಔಷಧಿಗಳನ್ನು ಸಿಂಪಡಿಸಬೇಕು.

**ಸಸಿಗಳನ್ನು ನೆಡುವಿಕೆ:** ಸಸಿಗಳು ಸಿದ್ಧವಾಗುವ ಮೊದಲೇ ಗುಂಡಿಗಳನ್ನು ಅಗೆದಿರಬೇಕು. ಕಾಫಿ ಸಸಿಗಳನ್ನು ನೆಡುವ ಕಾಲವೆಂದರೆ ಜುಲೈ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ. ಗುಂಡಿಗಳನ್ನು ಏಪ್ರಿಲ್, ಮೇ ತಿಂಗಳಲ್ಲಿ ತೋಡಬೇಕು. ಗುಂಡಿಗಳ ಗಾತ್ರ 2' ಆಳ, 1½' ಅಗಲ 1½' ಉದ್ದ ಇರಬೇಕು. ತೋಡಿದ ಮೇಲು ಭಾಗದ ಮಣ್ಣನ್ನು ಬೇರೆ ಹಾಕಬೇಕು. ಗುಂಡಿಗಳು ನೆಡುವ ಕಾಫಿ ತಳಿಗಳನ್ನು ಅವಲಂಬಿಸಿದೆ. ಕಾಫೀಯ ಅರ‍್ಯಾಬಿಕ ತಳಿಗಳಿಗೆ 6' ಚದರಗಳಲ್ಲಿ ಗುಂಡಿಗಳನ್ನು ತೋಡುತ್ತಾರೆ. ವಿಶಾಲವಾಗಿ ಮತ್ತು ಎತ್ತರವಾಗಿ ಬೆಳೆಯುವ ಲೈಬೀರಿಯ ಮತ್ತು ರೊಬಸ್ಟ ತಳಿಗಳಿಗೆ 9' ಅಥವಾ 10' ಚದರಗಳಲ್ಲಿ ಗುಂಡಿಗಳನ್ನು ತೋಡಬೇಕು. ಮುಂಗಾರು ಮಳೆ ಪ್ರಾರಂಭವಾದ ಮೇಲೆ ಕಾಫಿಸಸಿಗಳನ್ನು ನೆಡಬೇಕು. ಸಾಧಾರಣವಾಗಿ ಜುಲೈ ತಿಂಗಳಿನಲ್ಲಿ ನೆಡುವುದನ್ನು ಪ್ರಾರಂಭಿಸಿ ಸೆಪ್ಟೆಂಬರ್ ತಿಂಗಳವರೆಗೆ ಮುಂದುವರಿಸುತ್ತಾರೆ. ಗುಂಡಿ ತೆಗೆದ ಮೇಲು, ಮಣ್ಣು ಎಲೆಯ ಗೊಬ್ಬರ ಮುಂತಾದುವುಗಳನ್ನು ಮಿಶ್ರ ಮಾಡಿ ಗುಂಡಿಗಳನ್ನು ತುಂಬುತ್ತಾರೆ. ಅನಂತರ ಮಧ್ಯದಲ್ಲಿ ಕಾಫಿಯ ಸಸಿಗಳನ್ನು ಇಟ್ಟು ಸುತ್ತಲೂ ಮಣ್ಣನ್ನು ಭದ್ರವಾಗಿ ಅಮುಕಬೇಕು. ಬುಟ್ಟಿಯಲ್ಲಿ ಬೆಳೆಸಿದ ಸಸಿಗಳನ್ನು ನೆಡುವಾಗ ಬುಟ್ಟಿಗಳನ್ನು ಮುರಿದು ಹಾಕಬೇಕು. ಪಾಲಿಥೀನ್ ಚೀಲದಲ್ಲಿರುವ ಸಸಿಗಳನ್ನು ನೆಡುವಾಗ ಚೀಲವನ್ನು ಹರಿದುಹಾಕಿ ನೆಡಬೇಕು. ಸಸಿಗಳು ಗಾಳಿಗೆ ಅಲುಗಾಡಿ ಮುರಿದು ಹೋಗದಂತೆ ಊರೆಗೋಲುಗಳನ್ನು ನೆಟ್ಟು ಅವಕ್ಕೆ ಸಸಿಗಳನ್ನು ಕಟ್ಟಬೇಕು. ಸಸಿಗಳನ್ನು ನೆಟ್ಟ ಮೇಲೆ ಚಿಗುರುವ ತನಕ ಪ್ರತಿನಿತ್ಯ ನೀರು ಕೊಡಬೇಕು.

**ಸಸಿಗಳಿಗೆ ನೆರಳು:** ಸಸಿಗಳನ್ನು ಬಿಸಿಲು ಆಲಿಕಲ್ಲು ಮಳೆ ರಭಸವಾದ ಮಳೆ ಮುಂತಾದುವುಗಳಿಂದ ಕಾಪಾಡಲು ಸರಿಯಾದ ಸಣ್ಣ ಚಪ್ಪರವನ್ನು ಹಾಕಬೇಕು. ಅನೇಕ

ವೇಳೆ ಮಳೆಯಿಂದ ಮಣ್ಣು ಕುಸಿದು ಸಸಿಗಳು ಬಿದ್ದು ಹೋಗುತ್ತವೆ. ಬಿದ್ದ ಮಣ್ಣನ್ನು ಸರಿಪಡಿಸಿ ಸಸಿಗಳನ್ನು ನೇರವಾಗಿ ನೆಡಬೇಕು.

**ಮಿಶ್ರ ಬೆಳೆ:** ಕಾಫಿಯನ್ನು ಕರಿಮೆಣಸು ಏಲಕ್ಕಿ, ಕಿತ್ತಳೆ, ಅಡಕೆ ಮುಂತಾದುವುಗಳೊಂದಿಗೆ ಮಿಶ್ರ ಬೇಸಾಯ ಮಾಡುವುದು ರೂಢಿಯಲ್ಲಿದೆ.

**ಜೌಗು ಕಾಲುವೆ:** ಕಾಫಿ ಸಸಿಗಳ ಮಧ್ಯ ಸಾಲುಗಳಲ್ಲಿ ಸುಮಾರು 1½'–2' ಆಳವಾದ ಕಾಲುವೆಗಳನ್ನು ಸಾಲುಗಳ ಉದ್ದಕ್ಕೂ ಮಾಡಬೇಕು. ಇದರಿಂದ ಮಳೆಯಿಂದ ಬಂದ ಹೆಚ್ಚಿನ ನೀರು ಹರಿದು ಹೋಗಲು ಅನುಕೂಲವಾಗುತ್ತದೆ, ಭೂಮಿ ನೀರನ್ನು ಚೆನ್ನಾಗಿ ಇಂಗಿ ಹೋಗಲು ಬಿಡುವಂತಿರುವ ಕಡೆಗಳಲ್ಲಿ ಜೌಗು ಕಾಲುವೆಗಳನ್ನು ತೋಡುವುದಿಲ್ಲ.

**ಗೊಬ್ಬರ ಕೊಡುವಿಕೆ:** ಹೊಸದಾಗಿ ಮಾಡಿದ ಕಾಫಿ ತೋಟಗಳಿಗೆ ಗೊಬ್ಬರದ ಅಗತ್ಯವಿಲ್ಲ. ಸಸಿಗಳನ್ನು ನೆಟ್ಟಮೇಲೆ ಎರಡು ವರ್ಷಗಳ ಅನಂತರ ಗೊಬ್ಬರ ಕೊಡುವ ಅಗತ್ಯ ಉಂಟು. ಗೊಬ್ಬರವನ್ನು ಮಳೆಗಾಲಕ್ಕೆ ಮುಂಚೆ ಒಂದು ಸಾರಿ ಮತ್ತು ಮಳೆಗಾಲ ಮುಗಿದ ಮೇಲೆ ಒಂದು ಸಾರಿ ಕೊಡುವುದು ವಾಡಿಕೆ. ಮೊದಲನೇ ಸಾರಿ ಮಾರ್ಚಿ ತಿಂಗಳಲ್ಲಿ ಎರಡನೆಯ ಸಾರಿ ಸೆಪ್ಟೆಂಬರ್ ತಿಂಗಳಲ್ಲಿ ಗೊಬ್ಬರವನ್ನು ಕಾಫಿಗಿಡದ ಸುತ್ತಲು ಹಾಕಿ ಮಣ್ಣಿನಲ್ಲಿ ಮಿಶ್ರ ಮಾಡುತ್ತಾರೆ.

**ಕೃತಕ ಗೊಬ್ಬರ ಕೊಡುವಿಕೆ:** ಕೃತಕ ಗೊಬ್ಬರ ಕೊಡುವುದು ಕಾಫಿ ಗಿಡಗಳ ವಯಸ್ಸು ಮತ್ತು ಇಳುವರಿ ವಯಸ್ಸನ್ನು ಅವಲಂಬಿಸಿರುತ್ತದೆ. ಹೆಚ್ಚುಇಳುವರಿ ಕೊಡುವ ತೋಟದ ಎಕರೆ ಒಂದಕ್ಕೆ 150 ಪೌಂಡ್ ಕಡಲೆಕಾಯಿ ಹಿಂಡಿ 40 ಪೌಂಡ್ ಅಮೋನಿಯಂ ಸಲ್ಫೇಟ್, 76 ಪೌಂಡ್ ಸೂಪರ್ ಫಾಸ್ಫೇಟ್ ಮತ್ತು 120 ಪೌಂಡು (ಸಮನಾಗಿ) ಪೊಟಾಸಿಯಂ ಸಲ್ಫೇಟ್ ಮತ್ತು ಪೊಕ್ಲೋರೈಡ್ ಇವಿಷ್ಟನ್ನು ವಾರ್ಷಿಕವಾಗಿ ಕೊಡಬೇಕು. ಭೂಮಿ ಹೆಚ್ಚು ಆಮ್ಲತೆಯಿಂದ ಕೂಡಿದ್ದರೆ ಅದಕ್ಕೆ ಐದು ವರ್ಷಕ್ಕೊಮ್ಮೆ ಎಕರೆಗೆ ಒಂದು ಟನ್ನು ಸುತ್ತ ಸುಣ್ಣವನ್ನು ಹಾಕಬೇಕು.

**ಅಗೆಯುವಿಕೆ:** ಉತ್ತಮ ಕಾಫಿ ಬೇಸಾಯಗಾರರು ವರ್ಷಕ್ಕೆ ಒಂದು ಸಾರಿ ಕಾಫಿ ತೋಟವನ್ನು ಅಗೆಸುತ್ತಾರೆ. ಕಾಫಿ ಗಿಡಗಳ ಹರಡುವವರೆಗೂ ಖಾಲಿ ಇರುವ ಜಾಗವನ್ನು ಅಗೆದು ಕಳೆಗಳನ್ನು ತೆಗೆದು ಹಾಕುವುದರಿಂದ ಕಾಫಿ ಗಿಡ ಬೇರು ಬಿಡಲು ಮಣ್ಣು ಸಡಿಲ ಮಾಡಿಕೊಡುತ್ತದೆ. ಅಗೆಯುವುದರಲ್ಲಿ ಎರಡು ಪದ್ಧತಿಗಳು ಬಳಕೆಯಲ್ಲಿವೆ: 1 ಆಳವಾಗಿ ಅಗೆಯುವುದು–ಇದಕ್ಕಾಗಿ ಹಣ ಹೆಚ್ಚು ಖರ್ಚಾಗುವುದರಿಂದ ಮೂರು ಅಥವಾ ನಾಲ್ಕು ವರ್ಷಗಳಿಗೆ ಒಂದು ಸಾರಿ ಮಾತ್ರ ಅಗೆಯುತ್ತಾರೆ. ಪ್ರತಿ ವರ್ಷ ಆಳವಾಗಿ ಅಗೆಯುವುದರಿಂದ ಕಾಫಿಗಿಡಗಳ ಬೇರೆಗಳು ಕಿತ್ತುಹೋಗಿ ಸಸ್ಯಗಳು ಅಪಾರ ನಷ್ಟವನ್ನು ಅನುಭವಿಸಬೇಕಾಗಿರುವುದರಿಂದ ಆಳವಾಗಿ ಅಗೆಯುವುದು ಸೂಕ್ತವಲ್ಲ. 2 ಪ್ರತಿ ವರ್ಷ ಮೇಲುಭಾಗದ 4"–5" ಲಘು ಅಗೆತ ಮಾಡುವುದು ಒಳ್ಳೆಯದು. ಲಘು ಅಗೆತ ಕಳೆ ವೃದ್ಧಿಯಾಗುವುದನ್ನು ತಪ್ಪಿಸಿ ಗಾಳಿ ಆಡಲು ಅನುಮಾಡಿಕೊಟ್ಟು ಭೂಮಿಯ ಮೇಲೆ ಬಿದ್ದಿರುವ ಎಲೆ ಮುಂತಾದುವನ್ನು ಮಣ್ಣಿಗೆ ಸೇರಿಸಿ ಫಲವಂತಿಕೆಯನ್ನು ಹೆಚ್ಚಿಸುತ್ತದೆ.

**ಕುಡಿ ಜಿಗುಟುವುದು:** ಕಾಫಿ ಗಿಡದಲ್ಲಿ ಹೊಸ ರೆಂಬೆಗಳು ಹೆಚ್ಚು ಕಾಯಿಗಳನ್ನು ಬಿಡುಬಲ್ಲವು. ಎರಡು ವರ್ಷದ ಕಾಫಿ ಸಸ್ಯದಲ್ಲಿ ಸುಮಾರು 6–7ಸಣ್ಣ ರೆಂಬೆಗಳು ಇರುತ್ತವೆ. ಇವುಗಳ ತುದಿಯ ಕುಡಿಗಳನ್ನು ಜಿಗುಟಿ ಹಾಕುವುದರಿಂದ ಹೆಚ್ಚು ರೆಂಬೆಗಳು ಹುಟ್ಟಿ ಕಾಯಿ ಬಿಡುವ ರೆಂಬೆಗಳು ಹೆಚ್ಚುತ್ತವೆ.

**ಸವರಿಕೆ:** ಕಾಫಿ ಸಸ್ಯವನ್ನು ಸವರಿ ಹಿಡಿತದಲ್ಲಿಡದಿದ್ದರೆ ಅದು ಎತ್ತರವಾಗಿ ಬೆಳೆದು ಚಿಕ್ಕ ಮರವಾಗುತ್ತದೆ. ಎತ್ತರವಾಗಿ ಬೆಳೆದ ಕಾಫಿ ತೋಟದಲ್ಲಿ ಔಷಧಿ ಸಿಂಪಡಿಸುವುದು, ಕಾಯಿ ಕೊಯ್ಯುವುದು ಮತ್ತು ಇತರ ಕೆಲಸಗಳು ಹೆಚ್ಚು ತ್ರಾಸಕರ; ಇಳುವರಿ ಕಡಿಮೆ. ಕಾಫಿ ಗಿಡಗಳಲ್ಲಿ ಫಲ ಕೊಟ್ಟ ರೆಂಬೆಗಳನ್ನು ಸ್ವಲ್ಪ ಸವರುವುದರಿಂದ ಹೊಸ ಫಲ ಕೊಡುವ ರೆಂಬೆಗಳು ಹುಟ್ಟುತ್ತವೆ. ಆದ್ದರಿಂದ ಸುಲಭ ಬೇಸಾಯ ಮತ್ತು ಹೆಚ್ಚು ಇಳುವರಿಗಾಗಿ ಸವರುವುದು ರೂಢಿಯಲ್ಲಿದೆ. ಪ್ರತಿವರ್ಷ ಕಾಫಿ ಗಿಡಗಳನ್ನು ಸವರುವುದು ಅಗತ್ಯ. ಕಾಫಿ ಕಾಯಿಯನ್ನು ಕೊಯ್ದ ಮೇಲೆ ಸವರಿ ತರುವಾಯ ಅಗೆದು ಗೊಬ್ಬರ ಕೊಡುವುದು ಲೇಸು.

**ಕೊಯ್ಲು:** ಕಾಫಿಗಿಡ ನೆಟ್ಟ ಮೂರು ವರ್ಷದ ತರುವಾಯ ಫಲ ಕೊಡಲು ಪ್ರಾರಂಭವಾಗುತ್ತದೆ. ಆದರೆ ಮೂರನೆಯ ವರ್ಷದಲ್ಲಿ ಇಳುವರಿಯನ್ನು ತೆಗೆದುಕೊಳ್ಳುವುದು ಕಾಫಿ ಸಸ್ಯಗಳ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಮೂರನೆಯ ವರ್ಷದಲ್ಲಿ ಬಿಟ್ಟ ಹೂವನ್ನು ತೆಗೆದುಹಾಕಿ ಕಾಫಿ ಗಿಡಗಳು ದಷ್ಟಪುಷ್ಟವಾಗಿ ಬೆಳೆಯಲು ಮಾರ್ಗ ಮಾಡಿಕೊಡುತ್ತಾರೆ. ನಾಲ್ಕನೆಯ ಅಥವಾ ಕೆಲವು ಸಾರಿ ಐದನೆಯ ವರ್ಷದಿಂದ ಫಸಲನ್ನು ತೆಗೆದುಕೊಳ್ಳುತ್ತಾರೆ. ಕಾಫಿ ಗಿಡದ ಆಯುಷ್ಯ ಸುಮಾರು 30–50 ವರ್ಷಗಳು. ಮಾರ್ಚಿ–ಏಪ್ರಿಲ್ ತಿಂಗಳಲ್ಲೂ ಹೂ ಬಿಟ್ಟು ಅಕ್ಟೋಬರ್–ನವಂಬರ್ ತಿಂಗಳಲ್ಲಿ ಫಸಲು ಕೊಯ್ಲಿಗೆ ಬರುತ್ತದೆ. ಚೆನ್ನಾಗಿ ಹಣ್ಣಾಗಿರುವ ಕಾಫಿಯನ್ನು ಮಾತ್ರ ಬಿಡಿಸಬೇಕು. ಕಾಯಿಗಳು ಹಣ್ಣಾದಂತೆಲ್ಲ ಬಿಡಿಸುತ್ತಿರಬೇಕು. ಹಣ್ಣಾಗಿ ಉದುರಿ ಹೋದವನ್ನು ಆರಿಸಿಕೊಳ್ಳುವುದು ರೂಢಿಯಲ್ಲಿದೆ. ಡಿಸೆಂಬರ್–ಜನವರಿ ತಿಂಗಳಲ್ಲಿ ಹೆಚ್ಚು ಭಾಗದ ಕೊಯ್ಲು ಮುಗಿದು ಹೋಗುತ್ತದೆ.

**ಇಳುವರಿ:** ಇದು ತಳಿ ಹಾಗೂ ತೋಟದ ವಯಸ್ಸನ್ನೂ ಭೂಮಿಯ ಸಾರವನ್ನೂ ಅವಲಂಬಿಸಿದೆ. ಉತ್ಕೃಷ್ಟವಾದ ಅರ್‍ಯಾಬಿಕ ಕಾಫಿ ಬಿತ್ತನೆಯಲ್ಲಿ ಎಕರೆಗೆ 200–300 ಪೌಂಡುಗಳಷ್ಟು ಹದ ಮಾಡಿದ ಬೀಜ ವರ್ಷವೊಂದಕ್ಕೆ ಸಿಕ್ಕುತ್ತವೆ. ಕೆಳದರ್ಜೆ ತಳಿಗಳು ಎಕರೆಗೆ 1,200 ಪೌಂಡುಗಳಷ್ಟು ಹದ ಮಾಡಿದ ಕಾಫಿ ಬೀಜಗಳನ್ನು ಕೊಡುತ್ತವೆ. ಒಂದು ಅರ್‍ಯಾಬಿಕ ಕಾಫಿಯ ಗಿಡ ವರ್ಷವೊಂದಕ್ಕೆ 5–25 ಪೌಂಡುಗಳಷ್ಟು ಕಾಫಿಬೀಜವನ್ನು ಕೊಡುತ್ತದೆ. ರೊಬಸ್ಟ ಕಾಫಿ ಎಕರೆಗೆ ಅತ್ಯಂತ ಹೆಚ್ಚಿನ ಇಳುವರಿಯಾಗಿ 2,000 ಪೌಂಡುಗಳನ್ನು ಕೊಡುತ್ತದೆ. ಇದರ ಸರಾಸರಿ ಇಳುವರಿ ಎಕರೆಗೆ 400–500 ಪೌಂಡುಗಳು. ಗಿಡಗಳಿಂದ ಕೊಯ್ದ ಕಾಫಿಯ ಹಣ್ಣುಗಳನ್ನು ಹದ ಮಾಡದೆ ಉಪಯೋಗಿಸುವುದು ಸಾಧ್ಯವಿಲ್ಲ. ಕಾಫಿ ಹಣ್ಣಿನ ಸಿಪ್ಪೆಗಳನ್ನು ತೆಗೆದು ಉಪಯೋಗಿಸುವ ಮಟ್ಟಕ್ಕೆ ಪರಿವರ್ತಿಸಬೇಕು. ಈ ಪರಿವರ್ತಿಸುವ ಪದ್ಧತಿಗೆ ಕಾಫಿಯನ್ನು ಹದ ಮಾಡುವುದು ಎಂದು ಹೆಸರು.

**ಮಾರುಕಟ್ಟೆಗೆ ಕಾಫಿಬೀಜವನ್ನು ಸಿದ್ಧ ಮಾಡುವುದು:** ಗಿಡದಿಂದ ಕಾಫಿ ಹಣ್ಣುಗಳನ್ನು ಬಿಡಿಸಿದ ಮೇಲೆ ಅವುಗಳ ಮೇಲಿನ ಮತ್ತು ಒಳಗಿನ ಸಿಪ್ಪೆಗಳನ್ನು ತೆಗೆದು ಹದ ಮಾಡಬೇಕು. ಈ ಸಿಪ್ಪೆಯನ್ನು ಒಣಗಿಸುವುದರಿಂದಾಗಲೀ ನೀರಿನ ಸಹಾಯದಿಂದಾಗಲೀ ಕಾಫಿ ಹಣ್ಣನ್ನು ಕಳಚಬಹುದು. ಒಣಗಿಸಿ ಸಿಪ್ಪೆಯನ್ನು ತೆಗೆದ ಬೀಜಕ್ಕೆ ಪಾರ್ಚ್‌ಮೆಂಟ್ ಕಾಫಿ ಎಂದು ಹೆಸರು.

**ಪಾರ್ಚ್‌ಮೆಂಟ್ ಕಾಫಿ:** ಕಡಿಮೆ ವಿಸ್ತೀರ್ಣದಲ್ಲಿ ಕಾಫಿ ತೋಟವಿದ್ದು ಸಿಪ್ಪೆಯನ್ನು ನೀರಿನ ಸಹಾಯದಿಂದ ತೆಗೆಯಲು ಬೇಕಾದ ಅನುಕೂಲತೆಗಳು ಇಲ್ಲದೆ ಮತ್ತು ನೀರಿನ ಸೌಕರ್ಯವಿಲ್ಲದೆ ಇರುವ ಕಡೆಗಳಲ್ಲಿ ಹಣ್ಣನ್ನು ಒಣಗಿಸಿ ಹದ ಮಾಡುತ್ತಾರೆ. ಕಾಫಿ ಹಣ್ಣನ್ನು ಗಿಡದಿಂದ ಬಿಡಿಸಿದ ಮೇಲೆ ಗಾರೆ ಅಥವಾ ಸಿಮೆಂಟಿನ ನೆಲದ ಮೇಲೆ ಬಿಸಿಲಿಗೆ ಹಾಕಿ 2–3 ವಾರಗಳ ಕಾಲ ಒಣಗಿಸಬೇಕು. ಮೇಲಿನ ಸಿಪ್ಪೆ ಬಿಸಿಲಿಗೆ ಸಿಕ್ಕಿ ಕಪ್ಪಗಾಗಿ ತೇವಾಂಶ ಇಂಗಿಹೋಗುತ್ತದೆ. ಅನಂತರ ಮರದ ಕೊಡತಿ ಅಥವಾ ಕಲ್ಲಿನ ಗಂಡುಗಳಿಂದ ಒಣಗಿದ ಬೀಜಗಳ ಸಿಪ್ಪೆಯನ್ನು ತೆಗೆದು ಹದ ಮಾಡುವ ಯಂತ್ರಕ್ಕೆ ಕಳುಹಿಸಬೇಕು.

**ನೀರಿನ ಸಹಾಯದಿಂದ ಸಿಪ್ಪೆಯನ್ನು ತೆಗೆಯುವುದು:** ಹಣ್ಣನ್ನು ಕೊಯ್ದ ಮೇಲೆ ನೀರಿನಲ್ಲಿ ಹಾಕಿ ಭಾರವಾಗಿ ನೀರಿನಲ್ಲಿ ಮುಳುಗುವ ಹಣ್ಣುಗಳನ್ನು ಯಂತ್ರಕ್ಕೆ ಹಾಕಿ ಸಿಪ್ಪೆಯನ್ನು ತೆಗೆದುಹಾಕಬೇಕು. ಸಿಪ್ಪೆ ತೆಗೆದು ಬೀಜಗಳನ್ನು ಹರಿಯುತ್ತಿರುವ ನೀರಿಗೆ ಹಾಕಿ ಉಜ್ಜಿ ಲೋಳೆಯನ್ನು ತೆಗೆಯಬೇಕು. ಜರಡಿಗಳಲ್ಲಿ ನೂಕಿ ಗಾತ್ರಕ್ಕೆ ತಕ್ಕಹಾಗೆ ವಿವಿಧ ಗುಂಪುಗಳನ್ನಾಗಿ ಮಾಡಬೇಕು.

**ರೋಗಗಳು ಮತ್ತು ಕೀಟಗಳು:** ಕಾಫಿಗೆ ಅನೇಕ ರೋಗಗಳು ತಗಲುತ್ತವೆ. ಇವುಗಳಲ್ಲಿ ಹೆಮಿಲಿಯ ವೆಸ್ಟಟ್ರಿಕ್ಸ್‌ನಿಂದ ಹರಡುವ ಬೂಷ್ಟು ರೋಗ ಮುಖ್ಯವಾದುದು. ಇದು ಹಿಂದೆ ಸಿಂಹಳದ್ವೀಪ ಮತ್ತು ದಕ್ಷಿಣ ಭಾರತದ ಅನೇಕ ಭಾಗಗಳಲ್ಲಿ ಕಾಫಿ ಬೆಳೆಯನ್ನೇ ನಾಶಮಾಡಿತ್ತು. ಈ ರೋಗ ಕಾಫಿಗೆ ತಗುಲಿದ ಮೇಲೆ ಕಾಫಿಯ ಎಲೆಯ ಕೆಳಭಾಗದಲ್ಲಿ ಕೇಸರಿ–ಹಳದಿ ಮಚ್ಚೆಗಳು ಬರುತ್ತವೆ. ಆಮೇಲೆ ಎಲೆಗಳು ಬಿದ್ದು ಹೋಗುತ್ತವೆ. ಇದರಿಂದ ಗಿಡ ಕ್ಷೀಣವಾಗಿ ಕಾಫಿಬೀಜದ ಉತ್ಪತ್ತಿ ಕಡಿಮೆಯಾಗುತ್ತದೆ. ಕೊಲ್ಲೆಟೋಟ್ರೈಕಮ್ ಕಾಫಿಯಾನಮ್ ಎಂಬ ಶಿಲೀಂಧ್ರ ಡೈ ಬ್ಯಾಕ್ ಮತ್ತು ಬ್ಲೈಟ್ ರೋಗಗಳನ್ನು ಹರಡುತ್ತದೆ. ಇದರಿಂದ ಎಲೆ ಮತ್ತು ಕಾಂಡಗಳ ಮೇಲೆ ಕಂದುಬಣ್ಣದ ಮಚ್ಚೆಗಳಾಗಿ ಎಲೆಗಳು ಬೀಳುತ್ತವೆ. ಮತ್ತು ಕಾಫಿ ಬೀಜಗಳು ಕಪ್ಪಾಗಿ ಕೊಳೆಯುತ್ತವೆ. ಕಾರ್ಟಿಕಂ ಕೊಳೆರೋಗ ಎಂಬ ಶಿಲೀಂಧ್ರ ಕೊಳೆರೋಗವನ್ನು ಹರಡುತ್ತದೆ. ಈ ರೋಗ ಎಲೆ, ಕಾಂಡ ಮತ್ತು ಹಣ್ಣುಗಳನ್ನು ಕೊಳೆಸಿ ಸಾಯಿಸುತ್ತದೆ. ಸರ್‌ಕೊಸ್ಪೊರ ಕಾಫಿಕೊಲ (ಬ್ರೌನ್ ಲೀಫ್ ಸ್ಪಾಟ್) ಎಂಬ ರೋಗವನ್ನು ಎಲೆಗಳು ಮತ್ತು ಹಣ್ಣುಗಳಿಗೆ ಹರಡುತ್ತದೆ. ಈ ರೋಗದಿಂದ ಹಣ್ಣುಗಳು ಕಪ್ಪಾಗಿ ಕೊನೆಗೆ ಬಿದ್ದುಹೋಗುತ್ತವೆ. ರೈಜೊಕ್ಟೋನಿಯ ಮತ್ತು ಫ್ಯೂಸೇರಿಯಂಗಳಿಂದ ನರ್ಸರಿ ಕಾಲರ್ ರಾಟ್ ಎಂಬ ರೋಗ ಬರುತ್ತದೆ. ಪೋಮ್ಸ್ ನಾಕ್ಸಿಯಸ್ ಎಂಬುದು ಸ್ಟಂಪ್‌ರಾಟ್ ಅಥವಾ ಬ್ರೌನ್ ರಾಟ್ ಎಂಬ ರೋಗಗಳನ್ನು ಹರಡುತ್ತದೆ. ಕಾ. ಅರ್‍ಯಾಬಿಕ ಗಿಡವನ್ನು ಮೆಲಾಯಿಡೊಗೈನಿ ಜಾತಿಯ ಹೆಣ್ಣು ನೆಮ ಟೋಡ್ ಹುಳುಗಳು ಬೇರಿನ ಒಳಗಡೆ ಸೇರಿಕೊಂಡು ಗಂಟು ಮಾಡುತ್ತವೆ. ಇದರಿಂದ ಎಲೆಗಳು ಮಾಸಲು ಹಸಿರಾಗಿ ಕೊನೆಗೆ ಉದುರಿ ಹೋಗುತ್ತವೆ. ಸಾಮಾನ್ಯವಾಗಿ ಈ ನೆಮಟೋಡುಗಳು ನರ್ಸರಿಯ ಗಿಡಗಳನ್ನು ಹಾಳು ಮಾಡುತ್ತವೆ. ಇದರ ಜೊತೆಗೆ ಅನೇಕ ರೀತಿಯ ನೆಮಟೋಡುಗಳು ಕಾಫಿಬೆಳೆಯನ್ನು ನಾಶಮಾಡುತ್ತವೆ. ಬ್ರೀವಿಪೇಲಸ್ ಆಬ್‌ವೇಟಸ್ ಮತ್ತು ಬ್ರೀವಿಪೇಲಸ್ ಪೋನಿಸಿಸ್ ಎಂಬ ಮೈಟುಗಳ ಜಾತಿಯ ಕೀಟಗಳು ಕಾಫಿ ಎಲೆಗಳ ಮೇಲೆ ಸೇರಿಕೊಂಡು ಎಲೆಗಳನ್ನು ಬೂದಿ–ಕಂದು ಬಣ್ಣ ಅಥವಾ ಕೆಂಪು–ಕಂದು ಬಣ್ಣಕ್ಕೆ ತಿರುಗಿಸುತ್ತವೆ. ಇದರಿಂದ ಎಲೆಗಳು ಬಿದ್ದು ಹಣ್ಣು ಬಿಡುವುದು ಕಡಿಮೆಯಾಗುತ್ತವೆ. ಗ್ಸೈಲೋಬೋರಸ್ ಮಾರ್‌ಸ್ಟಾಟಿ ಎಂಬ ಜೀರುಂಡೆಯ ಡಿಂಭಗಳು ಮುಖ್ಯವಾಗಿ ಕಾ. ರೊಬಸ್ಟದ ಎಳೆಯ ರೆಂಬೆ ಮತ್ತು ಎಲೆಯ ತೊಟ್ಟುಗಳನ್ನು ತೂತು ಮಾಡುತ್ತವೆ. ಈ ಭಾಗಗಳು ಬೇಸಗೆಯಲ್ಲಿ ಒಣಗಿ ಹೋಗಿ ಸಾಯುತ್ತವೆ. ಕಾಕಸ್ ವಿರಿಡಿಸ್ ಎಂಬ ಹಸುರು ತಿಗಣೆ ಎಳೆಯ

ಗಿಡಗಳಿಂದ ರಸವನ್ನು ಹೀರುತ್ತದೆ. ಆಮೇಲೆ ಗಿಡದ ಕಾಂಡ ಮತ್ತು ಎಲೆಗಳಿಗೆ ಪಾಚಿ ಕಟ್ಟಿದಂತಾಗಿ ಅವುಗಳ ಬೆಳೆವಣಿಗೆ ಕುಂಠಿತವಾಗುತ್ತದೆ. ಹೊಲೊಟ್ರಿಕಿಯ ಕನ್‍ಫರ್ಟ್ವ ಎಂಬ ಜೀರುಂಡೆಯ ಡಿಂಭಗಳು ಕಾಫಿಯ ಬೇರುಗಳನ್ನು ಹಾಳು ಮಾಡಿ ನರ್ಸರಿಯಲ್ಲಿ ಸಸಿಗಳನ್ನು ಸಾಯಿಸುತ್ತವೆ. ದೊಡ್ಡ ಗಿಡಗಳಲ್ಲಿ ಎಲೆಗಳು ಹಳದಿಯಾಗುತ್ತವೆ. ಥ್ರಿಪ್ಸ್ ಎಂಬ ಕೀಟಗಳು ಎಳೆಯ ಕಾಂಡ ಮತ್ತು ಎಲೆಗಳ ಮೇಲೆ ಸೇರಿಕೊಂಡು ಎಲೆಯ ಕೆಳಭಾಗಗಳನ್ನು ಮಾಸಲು ಕಂದುಬಣ್ಣದಿಂದ ಬೂದಿಬಣ್ಣಕ್ಕೆ ತಿರುಗಿಸುತ್ತವೆ. ಕ್ರಮೇಣ ಈ ಎಲೆಗಳು ಬಿದ್ದು ಹಣ್ಣುಗಳ ಬೆಳೆವಣಿಗೆಗೆ ಅಡಚಣೆಯಾಗುತ್ತದೆ. ಬೇಸಗೆ ಕಾಲದಲ್ಲಿ ಈ ಕ್ರಿಮಿಗಳು ಹೆಚ್ಚಾಗಿ ಕಾಫಿ ಬೆಳೆಯನ್ನು ಹಾಳು ಮಾಡುತ್ತವೆ. ಅರಾಸೆರಸ್ ಕ್ಯಾಸಿಕ್ಯುಲೇಟಸ್ ಎಂಬ ಕ್ರಿಮಿಗಳು ಗಿಡದಲ್ಲಿರುವ ಹಣ್ಣುಗಳನ್ನು ಮತ್ತು ಶೇಖರಿಸುವ ಬೀಜಗಳನ್ನು ನಾಶಮಾಡುತ್ತವೆ.

**ಬೆರ್ರಿ ಮತ್ತು ಅದರಲ್ಲಿರುವ ಪದಾರ್ಥಗಳು:** ಕಾಫಿ ಹಣ್ಣಿನಲ್ಲಿ ನಾಲ್ಕು ಸ್ಪಷ್ಟ ವಿಭಾಗಗಳಿವೆ. ಅವು ಅನುಕ್ರಮವಾಗಿ ಹೊರಸಿಪ್ಪೆ, ಲೋಳೆಭಾಗ, ಪೊರೆ, ಬೀಜ. ಸಿಪ್ಪೆ ತೆಗೆದು ಅನಂತರ ಉಳಿಯುವ ಭಾಗವನ್ನು (ಸಾಮಾನ್ಯವಾಗಿ ಲೋಳೆಯನ್ನು ಒಣಗಿಸಿದ ಮೇಲೆ) ಬೆರ್ರಿ ಎಂದು ಕರೆಯುತ್ತಾರೆ. ಒಂದೊಂದು ಅರ್‍ಯಾಬಿಕ ಬೆರ್ರಿಯಲ್ಲಿಯೂ ಎರಡು ಬೇಳೆಗಳಿರುವುದು ವಾಡಿಕೆ. ಈ ಒಂದೊಂದು ಬೇಳೆಯೂ ಬಲು ತೆಳುವಾದ ಪೊರೆಯೊಳಗೆ ಬಂಧಿತವಾಗಿರುತ್ತದೆ. ಬೇಳೆಗಳ ಮಟ್ಟಸಭಾಗಗಳು ಒಂದರ ಮೇಲೊಂದು ಅಡಕವಾಗಿ ಅಳವಡಿಕೆಗೊಂಡಿರುತ್ತವೆ. ಉರುಟು ಭಾಗಗಳು ಪೂರ್ಣಗೊಂಡು ಬೆರ್ರಿಗೆ ಗುಂಡಗಿನ ಆಕಾರ ಲಭಿಸುತ್ತದೆ. ಪೂರ್ಣಮಾಗಿದ (ಆದರೆ ಒಣಗದಿರುವ) ಕಾಫಿ ಹಣ್ಣನ್ನು ಎರಡು ಬೆಟ್ಟುಗಳ ನಡುವೆ ಹಿಡಿದು ಹಿಸುಕಿದಾಗ ಸಿಪ್ಪೆ ಒಡೆದು ಎರಡು ಬೇಳೆಗಳೂ ಹೊರಬೀಳುತ್ತವೆ. ವಾಸ್ತವಿಕವಾಗಿ ಪೆಲ್ಪರ್ ಯಂತ್ರ (ನೀರಿನ ಸಹಾಯದಿಂದ) ಮಾಡುವುದು ಇದೇ ಕೆಲಸವನ್ನು. ಈ ಯಂತ್ರಕ್ಕೆ ಅಪಕ್ವವಾಗಿ ಅಥವಾ ಅತಿ ಪಕ್ವವಾಗಿ ಒಣಗಿದ ಕಾಫಿ ಹಣ್ಣುಗಳನ್ನು ಪೂರೈಸಿದಾಗ ಹಿಸಕುವ ಕ್ರಿಯೆ ಫಲಕಾರಿಯಾಗದೇ ಕಾಫಿ ಹಣ್ಣುಗಳು ಯಥಾ ರೂಪದಲ್ಲಿಯೋ ನಜ್ಜುಗುಜ್ಜಾಗಿಯೋ ಹೊರಬೀಳಬಹುದು.

ಬೆರ್ರಿಗಳೆಲ್ಲವೂ ಎರಡು ಬೇಳೆಗಳನ್ನೇ ಒಳಗೊಂಡಿರಬೇಕೆಂದಿಲ್ಲ. ಕೆಲವು ಹಣ್ಣುಗಳು ಗಾತ್ರದಲ್ಲಿ ಸರಾಸರಿಗಿಂತ ಕಡಿಮೆ ಇರುವುದು ಸಾಧ್ಯ. ಇಂಥವುಗಳ ಒಳಗೆ ಎರಡು ಬೆಳೆಗಳ ಬದಲು ಒಂದೇ ಬೇಳೆ ಹೆಚ್ಚು ಬೆಳೆದು ಸರಿಸುಮಾರಾಗಿ ಗುಂಡಗಿನ ಆಕಾರ ತಳೆದಿರುವುದನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ಇದರಲ್ಲೂ ಎರಡು ಬೇಳೆಗಳ ಉತ್ಪತ್ತಿಗೆ ಬೇಕಾದ ಮೂಲದ್ರವ್ಯಗಳು ಇದ್ದಿರಬೇಕು. ಆದರೆ ಏನೋ ಪ್ರಮಾದದಿಂದ ಒಂದು ಅಂಶ ಫಲಿತವಾಗದೇ ಉಳಿದ ಒಂದು ಬೇಳೆಯೇ ಹಣ್ಣಿನ ಒಳಗಿನ ಅವಕಾಶದಲ್ಲಿ ಬೆಳೆಯುವ ಪರಿಸ್ಥಿತಿ ತಲೆದೋರಿರಬೇಕು. ಇಂಥ ಒಂದೇ ಬೇಳೆಯ ಕಾಫಿಬೀಜಗಳಿಗೆ ಪೀಬೆರ್ರಿ ಎಂದು ಹೆಸರು. ಪಲ್ಪರಿನಿಂದ ಹೊರಬಂದ ಬೀಜಗಳನ್ನು ಒಣಗಿಸಿದ ತರುವಾಯ ಪೀಬೆರ್ರಿಗಳನ್ನು ಪ್ರತ್ಯೇಕಗೊಳಿಸುತ್ತಾರೆ. ಬೇಳೆಯನ್ನು ಯಾಂತ್ರಿಕವಾಗಿ ಹುರಿಯುವ ವಿಧಾನ ಬಳಕೆ ಇಲ್ಲದ ಕಡೆಗಳಲ್ಲಿ–ಎಂದರೆ ಮನುಷ್ಯ ಶಕ್ತಿಯಿಂದ ಬೇಳೆಯನ್ನು ಹುರಿಯುವ ವಿಧಾನ ಬಳಕೆ ಇರುವಲ್ಲಿ–ಪೀಬೆರ್ರಿ ಬೀಜಗಳಿಗೆ ಪ್ರಾಶಸ್ತ್ಯ ಹೆಚ್ಚು. ಪೀಬೆರ್ರಿ ಕಾಫಿ ಪಾನೀಯ ಸಾಮಾನ್ಯ ಬೇಳೆಗಳಿಂದ ಮಾಡಿದ ಪಾನೀಯಕ್ಕಿಂತ ಹೆಚ್ಚು ರುಚಿಕರವೂ ಸುವಾಸನಯುಕ್ತವೂ ಆಗಿದೆಯೆಂದು ಹೇಳುವುದುಂಟು.

ಪೀಬೆರ್ರಿ ಸಾಮಾನ್ಯ ಕಾಫಿಯ ಕುಬ್ಜ ರೂಪವಾದರೆ ಎಲಿಫೆಂಟ್ ಎನ್ನುವುದು ಅದರ ದೈತ್ಯರೂಪ. ಎಲಿಫೆಂಟ್ ವಿಧದ ಕಾಫಿಯಲ್ಲಿ ಎರಡು ಬೇಳೆಗಳೂ ಒಂದಾಗಿ ಬಂಧಿತವಾಗಿ ಚೆನ್ನಾಗಿ ಬೆಳೆದಿರುತ್ತವೆ. ಈ ಅತಿ ಬೆಳೆವಣಿಗೆಯ ಪರಿಣಾಮವಾಗಿ ಅವು ಪೊರೆಯನ್ನು ಭೇದಿಸಿ ಹೊರಚಾಚಿರುವುದೂ ಉಂಟು.

ಮಾರುಕಟ್ಟೆಗೆ ಕಾಫಿಬೇಳೆಗಳನ್ನು ರಫ್ತು ಮಾಡುವ ಮೊದಲು ಪ್ರೀಬೆರ್ರಿ ಮತ್ತು ಎಲಿಫೆಂಟ್ ಬೀಜಗಳನ್ನು ಬೇರ್ಪಡಿಸುತ್ತಾರೆ. ಉಳಿಯುವ ಸರಾಸರಿ ಬೇಳೆಗಳನ್ನು ಗಾತ್ರ, ವರ್ಣ, ಬೆಳೆದ ಸ್ಥಳ ಮುಂತಾದ ಅಂಶಗಳನ್ನು ಆಧರಿಸಿ ಎ,ಬಿ,ಸಿ ದರ್ಜೆಗಳಾಗಿ ವಿಂಗಡಿಸಿ ಬೇರೆಬೇರೆಯಾಗಿ ಚೀಲಗಳಲ್ಲಿ ತುಂಬುತ್ತಾರೆ ಅಂತಿಮವಾಗಿ ಈ ವರ್ಗೀಕರಣ ಗ್ರಾಹಕರ ಒಲವು, ಆಸಕ್ತಿಗಳನ್ನು ಅವಲಂಬಿಸಿರುತ್ತದೆ.

ಕಾಫಿಯ ಬೀಜದಲ್ಲಿರುವ ಅನೇಕ ಅಂಶಗಳು ಒಂದೇ ಸಮ ಇರುವುದಿಲ್ಲವಾದ ಕಾರಣ, ಭೂಮಿಯ ಸಾರದ ವ್ಯತ್ಯಾಸ, ಹವಾಗುಣ, ಹಣ್ಣು ಮಾಗುವಿಕೆ ಮತ್ತು ಹದಮಾಡುವಿಕೆ–ಈ ಅಂಶಗಳ ಮೇಲೆ ಬೀಜಗಳಲ್ಲಿ ವ್ಯತ್ಯಾಸ ಕಾಣಬಹುದು. ಸಾಮಾನ್ಯವಾಗಿ ಈ ಕೆಳಗಿರುವ ಅಂಶಗಳು ಗಮನಾರ್ಹ.

**ಕಾಫಿ ಪಾನೀಯ:** ಆಯ್ದ ಕಾಫಿಬೇಳೆಗಳನ್ನು ಹಾಳಿತವಾಗಿ ಹುರಿದು ಪುಡಿಮಾಡಿ ಸಾಮಾನ್ಯವಾಗಿ ಕಾಫಿಪುಡಿಯನ್ನು ತಯಾರಿಸುತ್ತಾರೆ. ದಕ್ಷಿಣ ಭಾರತದಲ್ಲಿ ಅರ್‍ಯಾಬಿಕ ಕಾಫಿಯನ್ನೇ ಜನರು ಅಪೇಕ್ಷಿಸುತ್ತಾರೆ. ಆದರೆ ಕಾಫಿ ಪಾನೀಯಕ್ಕೆ ಮಂದತ್ವ ಬರಲು ಅಥವಾ ಕಹಿಯ ರೇಖೆ ಒದಗಲು ಯುಕ್ತ ಪ್ರಮಾಣದಲ್ಲಿ ಹುರಿದ ಚಿಕೋರಿಯನ್ನೋ ಹುರಿದ ರೊಬಸ್ಟ ಕಾಫಿಬೇಳೆಗಳನ್ನೊ ಮಿಶ್ರಮಾಡಿ ಒಟ್ಟಿಗೆ ಪುಡಿ ಮಾಡುವುದು ವಾಡಿಕೆಯಲ್ಲಿದೆ. ಒಂದೊಂದು ನಮೂನೆ ಮಿಶ್ರಮಾಡಿ ಒಂದೊಂದು ಪರಿಮಳ, ಒಂದೊಂದು ಮಂದತ್ವ ಪ್ರಾಪ್ತವಾಗಿ ಕಾಫಿತನವೆಂಬುದೊಂದು ವಿಶಿಷ್ಟ ಗುಣವಾಗಿ ಪರಿಣಮಿಸುವುದು. ಕಾಫಿಪುಡಿಯಿಂದ ಕಷಾಯವನ್ನು (ಡಿಕಾಕ್ಷನ್) ಬಟ್ಟಿ ಇಳಿಸಲು ಹಲವಾರು ವಿಧಾನಗಳು ಚಾಲ್ತಿಯಲ್ಲಿವೆ. ಕುದಿಯುತ್ತಿರುವ ಬೆಲ್ಲ ಮತ್ತು ನೀರಿನ ಮಿಶ್ರಣಕ್ಕೆ ಕಾಫಿಪುಡಿ ಹಾಕಿ ಅದನ್ನು ಇಳಿಸಿಟ್ಟು ಸ್ವಲ್ಪ ಕಾಲಾನಂತರ ಮೇಲಿನ ತಿಳಿಯನ್ನು ಬಗ್ಗಿಸಿಯೋ ದಪ್ಪ ಬಟ್ಟೆಯ ಮೂಲಕ ದ್ರವವನ್ನು ಆರಿಸಿಯೋ ಕಾಫಿ ಗಸಿ ಮಿಶ್ರವಾಗಿಲ್ಲದ ಕಷಾಯವನ್ನು ಪ್ರತ್ಯೇಕಿಸುತ್ತಾರೆ. ಇದಕ್ಕೆ ಕಾಸಿದ ಹಾಲನ್ನು ಯುಕ್ತ ಪ್ರಮಾಣದಲ್ಲಿ ಸೇರಿಸಿ ಪಾನೀಯವನ್ನು ಸಿದ್ಧಗೊಳಿಸುತ್ತಾರೆ. ಬರೇ ಕುದಿಯುವ ನೀರಿಗೆ ಕಾಫಿಪುಡಿ ಹಾಕಿ ಮೇಲಿನ ಕ್ರಮದಲ್ಲಿ ಸೋಸಿ ಅದಕ್ಕೆ ಹಾಲು ಸಕ್ಕರೆ ಬೆರೆಸಿ ಪಾನೀಯವನ್ನು ತಯಾರಿಸುವ ಕ್ರಮವೂ ಉಂಟು. ಇವು ಸಾಮಾನ್ಯ ವಿಧಾನಗಳಾದರೆ ಪರಿಷ್ಕೃತ ವಿಧಾನಗಳಲ್ಲಿ ಎರಡು ಮುಖ್ಯವಾದವನ್ನು ಇಲ್ಲಿ ಹೆಸರಿಸಬಹುದು. ಮೊದಲನೆಯದು ಸೋಸು (ಫಿಲ್ಟರ್) ಕಾಫಿ. ಇದರಲ್ಲಿ ಬಳಸುವ ಪಾತ್ರೆಯಲ್ಲಿ ಎರಡು ಭಾಗಗಳಿವೆ. ಮೇಲಿನದರ ತಳದಲ್ಲಿ ಹಲವಾರು ಚಿಕ್ಕ ರಂಧ್ರಗಳನ್ನು ಕೊರೆದಿರುತ್ತಾರೆ. ಅದರಲ್ಲಿ ಕಾಫಿಪುಡಿಯನ್ನು ತುಂಬಿ ಅದರ ಮೇಲೆ ಸರಂಧ್ರವಾದ ಮತ್ತು ಉದ್ದವಾದ ಹಿಡಿಯಿರುವ ಫಲಕವನ್ನು ಲಘುವಾಗಿ ಕೂರಿಸುತ್ತಾರೆ. ಈ ಪಾತ್ರೆಗೆ ಒಂದು ಮುಚ್ಚಳವಿದೆ. ಇದರ ತಳಭಾಗಕ್ಕೆ ಸರಿಯಾಗಿ ಅಡಕವಾಗುವಂತೆ ಇನ್ನೊಂದು ಸಮಾನ ಗಾತ್ರದ ಪಾತ್ರೆಯಿದೆ–ಮೇಲಿನದರ ಒಳಗೆ ಸಾಕಷ್ಟು ಕುದಿನೀರನ್ನು ಹಂತಹಂತವಾಗಿ ಎರೆದು ಮುಚ್ಚಳ ಹಾಕಿಬಿಡುತ್ತಾರೆ, ಸ್ವಲ್ಪ ಕಾಲಾನಂತರ ಕೆಳಗಿನ ಪಾತ್ರೆಯಲ್ಲಿ ತಿಳಿಯಾದ ಕಾಫಿ ಕಷಾಯ ಸಂಗ್ರಹಿತವಾಗಿರುವುದು. ಎರಡನೆಯ ವಿಧಾನ ಧಿಡೀರ್ ಕಾಫಿ. ಇದರ ವಾಣಿಜ್ಯ ನಾಮ ಎಕ್ಸ್‍ಪ್ರೆಸ್ಸೊ ಕಾಫಿ. ಇದನ್ನು ತಯಾರಿಸುವ ಉಪಕರಣದಲ್ಲೂ ಎರಡು ಭಾಗಗಳಿವೆ. ತಳಭಾಗದ ಪಾತ್ರೆಯಲ್ಲಿ ನೀರನ್ನು ಹಾಕಿ ಅದನ್ನು ಕುದಿಸುತ್ತಾರೆ. ಆಗ ಉಗಿ ಅತಿ ಒತ್ತಡದಿಂದ ಮಧ್ಯಭಾಗದಲ್ಲಿರುವ ಕಾಫಿಪುಡಿ ಮೂಲಕ ಮೇಲಿನ ಭಾಗಕ್ಕೆ ಧಾವಿಸುತ್ತದೆ. ಅಲ್ಲಿ ಅದು ಬಾಷ್ಪೀಕರಿಸಿ ಕಾಫಿ ಕಷಾಯ ಸಂಗ್ರಹವಾಗುತ್ತದೆ.

ಒಂದು ಉತ್ತಮ ಬಟ್ಟಲು ಕಾಫಿ ಪಾನೀಯವೆಂದರೆ ಬೇಳೆಯ ಆಯ್ಕೆ, ಹಾಳತವಾಗಿ ಹುರಿದು ಆಗಿಂದಾಗ ತಯಾರಿಸಿದ ಕಾಫಿಪುಡಿ. ನೀರು–ಪುಡಿ–ಹಾಲು–ಸಕ್ಕರೆ ಇವುಗಳ ಸಮತೂಕದ ಮಿಶ್ರಣ, ಅಂತಿಮವಾಗಿ ಗ್ರಾಹಕರ ರುಚಿಯ ಸೊಗಸು. ಒಂದೇ ಕಾಫಿ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ವಿಧದ ರುಚಿಕೊಡುವುದು ಕುಡಿಯುವವನ ಆಯಾ ಕಾಲದ ಮನೋಧರ್ಮವನ್ನು ಅನುಸರಿಸಿ ಎಂಬುದು ಕಾಫಿ ಕುಡಿಯುವವರೆಲ್ಲರಿಗೂ ತಿಳಿದಿರುವ ಸಂಗತಿ.

ಕಾಫಿ ಪಾನೀಯವನ್ನು ಸ್ವಂತವಾಗಿ ತಯಾರಿಸುವ ಈ ಯಾವ ತಾಪತ್ರಯವೂ ಬೇಡ, ಆದರೆ, ಉತ್ತಮ ಕಾಫಿ ಬೇಕು ಎನ್ನುವರಿಗೆ ಕ್ಷಿಪ್ರ ಕಾಫಿ, ಕ್ಷಣಕಾಲದಲ್ಲಿ ಕಾಫಿ ಎಂದು ಮುಂತಾದ ಸಿದ್ಧವಾದ ಕಾಫಿ ದೊರೆಯುತ್ತವೆ. ಕುದಿವ ನೀರಿಗೆ ಈ ಪುಡಿಗಳನ್ನು ಮಿಶ್ರಮಾಡಿ ಸಕ್ಕರೆ ಸೇರಿಸಿದರೆ ಪಾನೀಯ ಸಿದ್ಧವಾದಂತಾಯಿತು. (ಡಿ.ಎಂ.; ಜಿ.ಬಿ.)

**ವೈದ್ಯಕ ಗುಣಗಳು:** ಕಾಫಿಯಲ್ಲಿರುವ ಕ್ಷಾರರೂಪಿಯಾದ (ಆಲ್ಕಲಾಯ್ಡ್) ಕೆಫೀನ್ ಚಹ, ಕೋಲ ಪಾನೀಯಗಳಲ್ಲೂ ಇದೆ. ಕಾಫಿಯ ವೈದ್ಯಕ ಗುಣಗಳಿಗೂ ಪರಿಣಾಮಗಳಿಗೂ ಮುಖ್ಯ ಕಾರಣ ಅದರಲ್ಲಿನ ಕೆಫೀನ್, ಈ ರಾಸಾಯನಿಕ ಮನಸ್ಸಿನ ಯೋಚನೆಯ ಚಟುವಟಿಕೆಯನ್ನು ಚುರುಕುಗೊಳಿಸುತ್ತದೆ. ದಣಿವನ್ನು ಹೋಗಲಾಡಿಸುವುದು ಇಲ್ಲವೇ ಮುಂದೂಡುವುದು. ಮನಸ್ಸು, ಮೈಗಳ ಮೇಲಿನ ಇದರ ಪರಿಣಾಮ ಒಬ್ಬೊಬ್ಬರಲ್ಲಿ ಒಂದೊಂದು ತೆರ. ದುಡಿವ ಬಲವನ್ನು ಹೆಚ್ಚಿಸಿ ಮನದ ದಣಿವನ್ನೂ ಕಳೆಯುತ್ತದೆ. ಬುದ್ಧಿವಂತಿಕೆಯ ಕೆಲಸ ಮೈದಣಿವಿಂದಲೋ ಬೇಸರದಿಂದಲೋ ಕುಗ್ಗಿದ್ದರೆ ಕಾಫಿ ಸೇವನೆಯಿಂದ ಪಟುತ್ವ ಒದಗುತ್ತದೆ. ಮುಖ್ಯವಾಗಿ ಬೇಸರ, ದಣಿವು, ಗಮನಗೇಡು, ತೂಕಡಿಕೆಗಳನ್ನು ತಡೆಯುವುದು. ಆದರೆ ಮಿತಿಮೀರಿ ಕಾಫಿಯನ್ನು ಸೇವಿಸಿದರೆ ಕಳವಳ, ಒತ್ತಡ, ನಡುಕ, ತಬ್ಬಿಬ್ಬು, ತಲೆನೋವು, ಕೆಲಸದ ಕುಂದೂ ತೋರುವುದುಂಟು, ಗುಂಡಿಗೆಯನ್ನು ಚೋದಿಸಿ ಕೆಫೀನ್ ಅದರ ಬಡಿತವನ್ನು ಜೋರಾಗಿಸುವುದು. ಮೈಯೆಲ್ಲ ಬೆವರಿಸುವುದಾದರೂ ರಕ್ತದ ಒತ್ತಡದ ಮೇಲಿನ ಪರಿಣಾಮ ಹೀಗೇ ಎನ್ನುವಂತಿಲ್ಲ. ಮಿದುಳಲ್ಲಿನ ರಕ್ತದ ಹರಿವನ್ನು ಕುಂದಿಸುತ್ತದೆ. ಗೂರಲಿನ ಉಬ್ಬಸ ತಗ್ಗಿಸುವುದು. ಕೆಫೀನ್ ದುರ್ಬಲ ಮೂತ್ರಕಾರಿ. ಜಠರ ರಸದ ಸುರಿತವನ್ನು ಇದು ಹೆಚ್ಚಿಸುವುದರಿಂದ ಹೊಟ್ಟೆಯಲ್ಲಿ ಹುಣ್ಣಿರುವವರು ಕಾಫಿ ಕುಡಿಯಬಾರದು. ಮಕ್ಕಳಿಗೆ ಕಾಫಿ ಒಳ್ಳೆಯದಲ್ಲ. ಕಾಫಿ ಕುಡಿದರೆ ನಿದ್ದೆ ಗೆಡುವುದನ್ನು ತಪ್ಪಿಸಲು ಕೆಫೀನ್ ತೆಗೆದು ಹಾಕಿದ ಕಾಫಿ ಇದೆ. ಇದು ಸುಮ್ಮನೆ ದುಬಾರಿ ಖರ್ಚಿನದಲ್ಲದೆ ಪೂರ್ತಿಯಾಗಿ ಅದನ್ನು ತೆಗೆವಂತಿಲ್ಲ. ಕಾಫಿ ಎಲ್ಲರಿಗೂ ರಾತ್ರಿ ನಿದ್ರೆ ಕೆಡಿಸದು. ಒಬ್ಬೊಬ್ಬರಿಗೆ ಒಂದೊಂದು ವಯಸ್ಸಿನಲ್ಲಿ ಒಂದೊಂದು ತೆರನಾಗಿ ತೋರಬಹುದು. ವಯಸ್ಸಾದಂತೆ ಹೆಚ್ಚಬಹುದು. (ಡಿ.ಎಸ್.ಎಸ್.)

**ಕಾಫಿ ವ್ಯಾಪಾರ :** ವಿಶ್ವ ಮಾರುಕಟ್ಟೆಗಳಲ್ಲಿ ಕಾಫಿಯ ವ್ಯಾಪಾರದ ಮೊತ್ತ ಮತ್ತು ದಿಕ್ಕುಗಳು ಅದರ ಉತ್ಪಾದನೆಯನ್ನು ವಿಶೇಷವಾಗಿ ಅವಲಂಬಿಸಿದೆ. ನೆಲದ ಗುಣ, ವಾಯುಗುಣ ಕಾಫಿ ಗಿಡದ ಜಾತಿ. ಬಗೆ ಮತ್ತು ವಯಸ್ಸು, ಕೃಷಿ ವಿಧಾನ ಕಾಫಿ ಬೀಜವನ್ನು ಮಾರಾಟಕ್ಕೆ ಸಿದ್ಧಗೊಳಿಸುವ ಕ್ರಮ, ಕಾರ್ಮಿಕರ ಸರಬರಾಯಿ–ಇವು ಕಾಫಿಯ ಉತ್ಪಾದನೆಯನ್ನು ನಿಷ್ಕರ್ಷಿಸುವ ಅಂಶಗಳು. ಕಾಫಿಗಿಡಕ್ಕೆ ಅಂಟುವ ರೋಗಗಳೂ ಹಲವಾರು. ಈ ಕಾರಣಗಳಿಂದಾಗಿ ಕಾಫಿಯ ಉತ್ಪಾದನೆ ವರ್ಷದಿಂದ ವರ್ಷಕ್ಕೆ ಬಲು ತೀವ್ರವಾಗಿ ವ್ಯತ್ಯಾಸಗೊಳ್ಳುತ್ತದೆ. ಆದರೆ ಸರಬರಾಯಿಗೆ ಅನುಗುಣವಾಗಿ ಬೇಡಿಕೆಯೂ ಏರಿಳಿಯುವುದಿಲ್ಲವಾದ್ದರಿಂದ ಕಾಫಿಯ ಬೆಲೆಗಳು ಅಸ್ತವ್ಯಸ್ತವಾಗುವ ಸಂಭವವೇ ಹೆಚ್ಚು. ಹೀಗಾಗದಂತೆ ತಡೆಗಟ್ಟಲು ಮಾರುಕಟ್ಟೆಯಲ್ಲಿ ಕಾಫಿಯ ಸರಬರಾಯಿಯನ್ನು ನಿಯಂತ್ರಣಗೊಳಿಸುವ ಅನೇಕ ಕ್ರಮಗಳು ಜಾರಿಗೆ ಬಂದಿವೆ.

ಕಾಫಿಯ ಉತ್ಪಾದನೆ ಉಷ್ಣವಲಯ ಪ್ರದೇಶಗಳಿಗೆ ಸೀಮಿತವಾಗಿರುವುದರಿಂದ ಕಾಫಿ ನಿರ್ಯಾತ ಮಾಡುವ ದೇಶಗಳೆಲ್ಲ ಈ ವಲಯಕ್ಕೆ ಸೇರಿದವು. ಬ್ರಜಿಲ್, ಮಧ್ಯ ಅಮೆರಿಕ, ವೆನಿಜ್ವೇಲ, ಕೊಲಂಬಿಯ, ಭಾರತ, ಶ್ರೀಲಂಕ, ಇಂಡೊನೇಷ್ಯ, ಈಚೆಗೆ ಆಫ್ರಿಕದ ರಾಷ್ಟ್ರಗಳು ಇತರ ರಾಷ್ಟ್ರಗಳೊಂದಿಗೆ ಕಾಫಿ ವ್ಯಾಪಾರದಲ್ಲಿ ತೀವ್ರವಾಗಿ ಸ್ಪರ್ಧಿಸುತ್ತಿವೆ. ಅಂಗೋಲ, ಐವರಿ ಕೋಸ್ಟ್, ಉಗಾಂಡ ಇವು ಕಾಫಿ ಉತ್ಪಾದಿಸುವ ಮುಖ್ಯ ಆಫ್ರಿಕನ್ ದೇಶಗಳು. ಕ್ಯಾಮರೂನ್, ಕಾಂಗೋ (ಕೀನ್ಷಾಸ), ಇಥಿಯೋಪಿಯ, ಮಲಗಾಸಿ, ಕೀನ್ಯ, ಅರೇಬಿಯ ಟಾಂಜಾನಿಯ– ಇವು ಇತರ ಆಫ್ರಿಕನ್ ದೇಶಗಳು.

ಉತ್ಪಾದನೆಯ ಪರಿಮಾಣ, ಮೌಲ್ಯ– ಈ ಎರಡು ದೃಷ್ಟಿಗಳಿಂದಲೂ ಕಾಫಿ ವಿಶ್ವದ ಪ್ರಮುಖ ಬೆಳೆಗಳಲ್ಲೊಂದೇನೂ ಅಲ್ಲ. ಆದರೆ ಇತರ ಅನೇಕ ಕೃಷಿ ಉತ್ಪನ್ನಗಳಿಗಿಂತ ಕಾಫಿಯ ಒಟ್ಟು ಉತ್ಪನ್ನದ ಹೆಚ್ಚು ಪ್ರಮಾಣ ಅಂತಾರಾಷ್ಟ್ರೀಯ ವ್ಯಾಪಾರವನ್ನು ಪ್ರವೇಶಿಸುವುದರಿಂದ ವಿಶ್ವದ ಆರ್ಥಿಕತೆಯಲ್ಲಿ ಕಾಫಿಗೆ ವಿಶೇಷ ಮರ್ಯಾದೆಯುಂಟು. ಅಭಿವೃದ್ಧಿ ಹೊಂದುತ್ತಿರುವ ಅನೇಕ ರಾಷ್ಟ್ರಗಳ ರಫ್ತು ವ್ಯಾಪಾರದಲ್ಲಿ ಕಾಫಿಯ ಸ್ಥಾನ ಮುಖ್ಯವಾದ್ದು: ಅವಕ್ಕೆ ವಿದೇಶಿ ವಿನಿಯಮವನ್ನು ತಂದು ಕೊಡತಕ್ಕಂಥದು. ಒಟ್ಟು ಕಾಫಿ ಉತ್ಪನ್ನದಲ್ಲಿ ಶೇ. 70ರಷ್ಟು ರಫ್ತಾಗುತ್ತಿದೆ. ಇದರಲ್ಲಿ ಸುಮಾರು ಅರ್ಧ ಭಾಗ ಬ್ರೆಜಿಲಿನದು. ಕೊಲಂಬಿಯ ಮತ್ತು ಆಫ್ರಿಕಗಳ ಪಾಲು ತಲಾ ಶೇ. 20. ಅನೇಕ ಲ್ಯಾಟಿನ್ ಅಮೆರಿಕನ್ ದೇಶಗಳ ನಿರ್ಯಾತದಲ್ಲಿ ಕಾಫಿಯ ಪ್ರಮಾಣ ಶೇ. 44. ಕೊಲಂಬಿಯದ ಒಟ್ಟು ನಿರ್ಯಾತದಲ್ಲಿ ಶೇ. 62; ಕಾಸ್ಟ ರೀಕ, ಶೇ. 41; ಎಲ್ ಸಾಲ್ವಡಾರ್, ಶೇ. 50, ಗ್ವಾಟೆಮಾಲ, ಶೇ. 46, ಹೈಟಿ, ಶೇ. 58; ನಿಕರಾಗುವ, ಶೇ. 18; ಅಂಗೋಲ, ಶೇ. 34, ಎಕ್ವಡಾರ್, ಶೇ. 20; ಉಗಾಂಡ, ಶೇ. 48; ಈ ಎಲ್ಲ ದೇಶಗಳ ಆರ್ಥಿಕ ಪ್ರಗತಿಗೆ ಕಾಫಿಯ ನಿರ್ಯಾತವೇ ಆಧಾರ. ಪ್ರಪಂಚದ ಕಾಫಿ ಉತ್ಪಾದನೆಯಲ್ಲಿ ಭಾರತದ ಪಾಲು ಶೇ. 4.5 ರಷ್ಟು, ಇದರಲ್ಲಿ ಸು. 70–80 ರಷ್ಟು ಭಾಗ ಕಾಫಿ ರಫ್ತಾಗುತ್ತದೆ. ಈ ರಫ್ತಿನಲ್ಲಿ ಕರ್ನಾಟಕ ಶೇ. 53ರಷ್ಟು, ತಮಿಳುನಾಡು ಶೇ. 11 ರಷ್ಟು ಪಾಲು ಪಡೆದಿವೆ. ಭಾರತದಲ್ಲಿ ಒಟ್ಟು 399801 ಹೆ.ವಿಸ್ತೀರ್ಣದಲ್ಲಿ ಕಾಫಿ ಬೆಳೆಯು ಲಾಗುತ್ತಿದೆ. ಒಟ್ಟು 25 ಲಕ್ಷ ಕಾಫಿ ಬೆಳೆಗಾರರಿದ್ದಾರೆ. 2012–13ನೇ ಸಾಲಿನ ಕಾಫಿ ಉತ್ಪಾದನೆಯ ನಿರೀಕ್ಷೆ 3.25 ಲಕ್ಷ ಟನ್‌ಗಳು. ಇದರಲ್ಲಿ ಶೇ. 52ರಷ್ಟು ರೋಬಸ್ಟ್ ಕಾಫಿ ಯುನ್ನೂ ಶೇ. 48ರಷ್ಟು ಅರೇಬಿಕ ಕಾಫಿಯನ್ನೂ ಉತ್ಪಾದಿಸಲಾಗುತ್ತಿದೆ. ಕರ್ನಾಟಕದ ನಿರೀಕ್ಷಿತ ಕಾಫಿ ಉತ್ಪನ್ನ 205700 ಟನ್‌ಗಳು.




ಚಿತ್ರ 1

ಕಾಫಿಯನ್ನು ಆಮದು ಮಾಡಿಕೊಳ್ಳುವ ಮುಖ್ಯ ದೇಶಗಳು ಅಮೆರಿಕ ಸಂಯುಕ್ತ ಸಂಸ್ಥಾನ, ಫ್ರಾನ್ಸ್, ಸ್ವೀಡನ್, ಬೆಲ್ಜಿಯಂ, ಇಟಲಿ, ಬ್ರಿಟನ್ ಮತ್ತು ಕೆನಡ. ವಿಶ್ವದ ಕಾಫಿಯ ಶೇ. 55ರಷ್ಟನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಆಮದು ಮಾಡಿಕೊಳ್ಳುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನ ಬ್ರಿಟನ್ನಿನ ವಸಾಹತಾಗಿದ್ದ ಕಾಲದಲ್ಲಿ ಚಹವನ್ನೇ ಹೆಚ್ಚಾಗಿ ಸೇವಿಸುತ್ತಿತ್ತು. ಬ್ರಿಟಿಷ್ ಸರ್ಕಾರ ಚಹದ ಮೇಲೆ ಅತಿಯಾದ ಸುಂಕ ಹೇರಿದ್ದರಿಂದ ಕೋಪಗೊಂಡ ಅಮೆರಿಕನರು ಸ್ವಾತಂತ್ರ್ಯ ಸಾರಿಕೊಂಡರು. ಸ್ವತಂತ್ರ ಅಮೆರಿಕನ್ ಗಣರಾಜ್ಯದ ಜನ ಚಹದ ಬದಲು ಕಾಫಿಯನ್ನು ಹೆಚ್ಚಾಗಿ ಕುಡಿಯ ಲಾರಂಭಿಸಿದರು.




ಚಿತ್ರ 2

ಕಾಫಿಯನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳಲ್ಲಿ ಎರಡನೆಯದು ಜರ್ಮನಿ (ಶೇ.9). ಮೂರನೆಯದು ಫ್ರಾನ್ಸ್ (ಶೇ.8). ಕಾಫಿಯ ತಲಾ ವಾರ್ಷಿಕ ಸೇವನೆ ಅತ್ಯಧಿಕವಾಗಿರುವುದು ಸ್ವೀಡನಿನಲ್ಲಿ (24 ಪೌಂ.). ಈ ವಿಚಾರದಲ್ಲಿ ಡೆನ್‌ಮಾರ್ಕ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಎರಡು ಮೂರನೆಯಸ್ಥಾನ ಪಡೆಯುತ್ತವೆ. (ತಲಾ ವಾರ್ಷಿಕ ಸೇವನೆ ಅನುಕ್ರಮವಾಗಿ 21 ಪೌಂ. ಮತ್ತು 17 ಪೌಂ.) ಕಾಫಿ ಬಳಕೆಗಿಂತ ಅದರ ಉತ್ಪಾದನೆ ಅಧಿಕವಾಗಿದ್ದುದು ಬಹು ದೊಡ್ಡ ಸಮಸ್ಯೆಯಾಗಿತ್ತು.

ಕಾಫಿ ವ್ಯಾಪಾರದ ಈ ಪರಿಸ್ಥಿತಿಯನ್ನು ನಿವಾರಿಸುವ ಉದ್ದೇಶದಿಂದ 1963ರಲ್ಲಿ ಕಾಫಿ ಬೆಳೆಯುವ ಮತ್ತು ಕೊಳ್ಳುವ ರಾಷ್ಟ್ರಗಳು ಅಂತರರಾಷ್ಟ್ರೀಯ ಒಪ್ಪಂದವೊಂದನ್ನು ಮಾಡಿಕೊಂಡುವು. ಅಂತಾರಾಷ್ಟ್ರೀಯ ಕಾಫಿ ಮಂಡಲಿಯ ಸ್ಥಾಪನೆಯಾಯಿತು. ವಿವಿಧ ರಾಷ್ಟ್ರಗಳ ಕಾಫಿ ರಫ್ತುಹಸಿಗೆಗಳನ್ನು (ಎಕ್ಸ್‌ಪೋರ್ಟ್ ಕೋಟಾಸ್) ಈ ಮಂಡಲಿಯಲ್ಲಿ ನಿಷ್ಕರ್ಷಿಸ ಲಾಗುತ್ತದೆ. ವಿಶ್ವದಲ್ಲಿ ಕಾಫಿ ಸೇವನೆಗೆ ಪ್ರೋತ್ಸಾಹ. ಉತ್ಪಾದನೆಯ ನಿಯಂತ್ರಣ– ಇವಕ್ಕೂ ಈ ಒಪ್ಪಂದದ ಪ್ರಕಾರ ಕ್ರಮ ಕೈಕೊಳ್ಳಲಾಗಿದೆ. 1966ರಲ್ಲಿ ಕಾಫಿ ಉತ್ಪಾದನೆ ಅತ್ಯಧಿಕವಾಗಿದ್ದಾಗಲೂ ಈ ಒಪ್ಪಂದದ ಅನ್ವಯದಿಂದ ಹಿತಕಾರಿ ಪ್ರವೃತ್ತಿಗಳನ್ನು ಹತೋಟಿಯಲ್ಲಿಡಲು ಸಾಧ್ಯವಾಯಿತು.

ದೀರ್ಘಕಾಲದಲ್ಲಿ ಅಂತಾರಾಷ್ಟ್ರೀಯ ಕಾಫಿ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ಎರಡು ಮುಖ್ಯ ಆತಂಕಗಳುಂಟು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿರುವ ಲಕ್ಷಾಂತರ ಮಂದಿಯ ಜೀವನ ಮಟ್ಟ ಬಲು ಕಡಿಮೆಯಾಗಿರುವುದರಿಂದ ಈ ಜನಕ್ಕೆ ಕಾಫಿಯನ್ನು ಕೊಳ್ಳುವ ಶಕ್ತಿಯಿಲ್ಲ. ಕಾಫಿಯನ್ನು ಕೊಂಡು ಸೇವಿಸುವ ಅನೇಕ ಮುಂದುವರಿದ ದೇಶಗಳು ಇದರ ಆಮದಿನ ಮೇಲೆ ಹಲವಾರು ನಿರ್ಬಂಧಗಳನ್ನು ವಿಧಿಸಿವೆ.

ಉತ್ಪಾದಕರು ಮತ್ತು ಅನುಭೋಗಿಗಳು– ಈ ಎರಡೂ ಪಕ್ಷಗಳ ಹಿತಗಳಲ್ಲಿ ಹೊಂದಾವಣೆ ಏರ್ಪಡಿಸುವ ಉದ್ದೇಶದಿಂದ ಅಂತಾರಾಷ್ಟ್ರೀಯ ಕಾಫಿ ಮಂಡಳಿ ಆಗಿಂದಾಗ್ಗೆ ಸಭೆ ಸೇರಿ ಬೆಲೆಗಳನ್ನೂ ರಫ್ತು ಹಸಿಗೆಗಳನ್ನೂ ನಿಷ್ಕರ್ಷಿಸುತ್ತದೆ. ಆದರೆ ಹಸಿಗೆಗಳ ನಿಷ್ಕರ್ಷೆಯ ವಿಚಾರದಲ್ಲಿ ಎಲ್ಲ ಸದಸ್ಯ ರಾಷ್ಟ್ರಗಳಿಗೂ ತೃಪ್ತಿಯಿಲ್ಲ. ಈ ವಿಚಾರದಲ್ಲಿ ಕೆಲವು ರಾಷ್ಟ್ರಗಳಿಗೆ ಹೆಚ್ಚಿನ ಪಕ್ಷಪಾತ ತೋರಿಸಲಾಗಿದೆಯೆಂಬುದು ಒಂದು ಟೀಕೆ. ಒಟ್ಟು ರಫ್ತಿನಲ್ಲಿ ಬ್ರಜಿಲಿನದು ಮೂರನೆಯ ಒಂದು ಪಾಲು. ಇದರಲ್ಲಿ ಒಂದು ಅಂಶವನ್ನು ಆಫ್ರಿಕನ್ ದೇಶಗಳಿಗೆ ಬಿಟ್ಟುಕೊಡಬೇಕೆಂಬುದು ಕೆಲವು ಸದಸ್ಯ ರಾಷ್ಟ್ರಗಳ ವಾದವಾಗಿದೆ. ನಿರ್ಯಾತ ಮಾಡಬೇಕಾದ ಕಾಫಿಯ ಗುಣ ಜಾತಿಗಳನ್ನು ನಿರ್ಧರಿಸಲಾಗದಿರುವುದು ಹಸಿಗೆ ವ್ಯವಸ್ಥೆಯ ಒಂದು ದೊಡ್ಡ ದೋಷ. 1967 ರಿಂದೀಚೆಗೆ ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡಲಾಗಿದೆ.

**ಭಾರತದ ಕಾಫಿ ವ್ಯಾಪಾರ:** ಭಾರತದ ಕಾಫಿ ಫಸಲಿನಲ್ಲಿ ಸುಮಾರು ಅರ್ಧ ಭಾಗವನ್ನು ದೇಶದ ಜನರೇ ಉಪಯೋಗಿಸುತ್ತಾರೆ. ಚಹವನ್ನೇ ಹೆಚ್ಚಾಗಿ ಕುಡಿಯುವ ಜನರಿರುವ ಸ್ಥಳಗಳಲ್ಲಿ ಕೂಡ ಕಾಫಿ ಪ್ರಿಯವಾಗುತ್ತಿದೆ. ಬ್ರಿಟನ್, ಫ್ರಾನ್ಸ್, ಜರ್ಮನಿ. ನೆದರ್ಲೆಂಡ್ಸ್, ಬೆಲ್ಜಿಯಂ, ಆಸ್ಟ್ರೇಲಿಯ, ಇರಾಕ್– ಈ ದೇಶಗಳಿಗೆ ಭಾರತದಿಂದ ಕಾಫಿಯ ರಫ್ತಾಗುತ್ತದೆ. ನಿರ್ಯಾತವಾಗುವ ಒಟ್ಟು ಕಾಫಿಯಲ್ಲಿ ಮೂರನೆಯ ಒಂದು ಭಾಗ ಹೋಗುವುದು ಬ್ರಿಟನ್ನಿಗೆ. ಅದೇ ಭಾರತದ ಕಾಫಿಯ ಅತಿಮುಖ್ಯ ಗ್ರಾಹಕ ರಾಷ್ಟ್ರ. ಈಗ ರಷ್ಯಾ ಮತ್ತು ಯುರೋಪಿನ ಇತರ ರಾಷ್ಟ್ರಗಳಿಂದ ಬೇಡಿಕೆ ಹೆಚ್ಚಿದೆ.

ಭಾರತದ ಕಾಫಿಗೆ ಆಂತರಿಕ ಬೇಡಿಕೆಯೂ ತ್ವರೆಯಾಗಿ ಅಧಿಕವಾಗುತ್ತಿದೆ. 1957ರ ಕಾಫಿ ಮಾರುಕಟ್ಟೆ ವಿಸ್ತರಣ ಕಾಯಿದೆಯ ಪ್ರಕಾರ ಭಾರತೀಯ ಕಾಫಿ ಬೋರ್ಡಿನ

ಕಾಫಿ ಬೋರ್ಡಿನ ಭವನ, ಬೆಂಗಳೂರು

ಸ್ಥಾಪನೆಯಾಯಿತು. ಕಾಫಿಯ ಮಾರಾಟ ಮತ್ತು ನಿರ್ಯಾತಗಳನ್ನು ನಿಯಂತ್ರಿಸುವುದು ಈ ಸಂಸ್ಥೆಯ ಹೊಣೆ. ದೇಶದಲ್ಲಿ ಬೆಳೆದ ಕಾಫಿಯನ್ನೆಲ್ಲ ಕಾಫಿ ಬೋರ್ಡು ಏರ್ಪಡಿಸಿರುವ ಒಟ್ಟಿಲಿಗೆ (ಪೂಲ್) ಸಲ್ಲಿಸಬೇಕು. ಬಹಿರಂಗ ಹರಾಜಿನ ಮೂಲಕವೂ ಸಹಕಾರ ಸಂಘಗಳ ಮೂಲಕವೂ ಕಾಫಿಯನ್ನು ದೇಶದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಕಾಫಿಯ ರಫ್ತಿಗೆ ಬೋರ್ಡು ಲೈಸೆನ್ಸ್‌ಗಳನ್ನು ನೀಡುತ್ತದೆ. ಪ್ರಚಾರ, ಸಂಶೋಧನೆ, ಕಾಫಿ ತೋಟಗಳ ಅಭಿವೃದ್ಧಿಗೆ ನೆರವಿನ ನೀಡಿಕೆ–ಇವೂ ಕಾಫಿ ಬೋರ್ಡಿನ ಕರ್ತವ್ಯಗಳು. ಕಾಫಿಯ ಆಂತರಿಕ ಮಾರಾಟ ಮತ್ತು ನಿರ್ಯಾತಗಳ ಮೇಲೆ ವಿಧಿಸಲಾಗುವ ಸುಂಕದಿಂದ ಬೋರ್ಡಿನ ಪ್ರಚಾರದ ವೆಚ್ಚವನ್ನು ತುಂಬಲಾಗುತ್ತದೆ.

ಅಂತಾರಾಷ್ಟ್ರೀಯ ಕಾಫಿ ಒಪ್ಪಂದದಲ್ಲಿ ಭಾರತವೂ ಸೇರಿಕೊಂಡಿದೆ. ಒಪ್ಪಂದದ ರಾಷ್ಟ್ರಗಳಿಗೆ 1966–67ರಲ್ಲಿ ಭಾರತ ನಿರ್ಯಾತ ಮಾಡಬಹುದಾಗಿದ್ದ ಹಸಿಗೆಯ ಪರಿಮಾಣ 23,788 ಟನ್. ಭಾರತದ ದೃಷ್ಟಿಯಿಂದ ಇದು ಬಹಳ ಕಡಿಮೆಯೆಂಬ ಭಾವನೆಯಿತ್ತು. 1990ರ ದಶಕ ಕಾಫಿ ಮಾರಿಕಟ್ಟೆಯಲ್ಲಿ ತೀವ್ರತರ ಬದಲಾವಣೆ ಕಂಡ ಅವಧಿ. ಆಗ ಕಾಫಿ ಮಂಡಳಿ ಕಾಫಿ ವ್ಯಾಪಾರದ ಏಕಸ್ವಾಮ್ಯವನ್ನು ಬಿಟ್ಟುಕೊಟ್ಟಿತು. ಖಾಸಗಿ ವ್ಯಾಪಾರಸ್ಥರು ಈ ಸ್ಥಾನಕ್ಕೆ ಬಂದರು. ಈಗ ಸುಮಾರು ನಾಲ್ಕು ಲಕ್ಷಟನ್‌ಗಳ ವಾರ್ಷಿಕ ಉತ್ಪಾದನೆ ಇದ್ದು ಅದರಲ್ಲಿ ಶೇಕಡ 60ರಷ್ಟು ಕಾಫಿ ರಫ್ತಾಗುತ್ತಿದೆ. ಜಾಗತಿಕವಾಗಿ ಕಾಫಿ ಬಳಕೆಯಲ್ಲಿ ಏರಿಕೆಯಾಗಿದೆ. (ಜಿ.ಎನ್.ಕೆ.)

**ಕಾಫ್ಕಾ, ಕರ್ಟ್ :** 1886–1941. ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಕಾರ್ಲ್ ಸ್ಟುಂಫನ ಶಿಷ್ಯನಾಗಿ ಫ್ರಾಂಕ್‌ಫರ್ಟ್‌ನಲ್ಲಿ ಮ್ಯಾಕ್ಸ್ ವೆರ್ಥೈಮೇನ ಸಹೋದ್ಯೋಗಿಯಾಗಿ ಕೆಲಸಮಾಡಿದ ಈತ 'ಸಮಷ್ಟಿ ಮನಶ್ಶಾಸ್ತ್ರ'ದ (ಗೆಸ್ಟಾಲ್ಟ್ ಸೈಕಾಲಜಿ) ಪ್ರವರ್ತಕರಲ್ಲಿ ಒಬ್ಬ. ಕೊಯ್ಲರ್‌ನೊಂದಿಗೆ ವಿಶೇಷವಾದ ಸಂಶೋಧನೆ ನಡೆಸಿ ಗ್ರಂಥವೊಂದನ್ನು ಪ್ರಕಟಿಸಿದ. ಮರುವರ್ಷ ಮಕ್ಕಳ ಮೇಲೆ ಸಂಶೋಧನೆಗಳನ್ನು ನಡೆಸಿ ಸಮಷ್ಟಿ ಮನಶ್ಶಾಸ್ತ್ರಕ್ಕೆ ಸಮರ್ಥನೆ ಒದಗಿಸಿದ. 1921ರಲ್ಲಿ ಪ್ರಕಟವಾದ 'ದಿ ಗ್ರೋತ್ ಆಫ್ ದಿ ಮೈಂಡ್' ಕಾಫ್ಕಾನ ಪ್ರಮುಖ ಗ್ರಂಥಗಳಲ್ಲೊಂದು. ತನ್ನ ಧ್ಯೇಯಧೋರಣೆಗಳ ಪ್ರಸಾರಕ್ಕೆಂದು ಸೈಕಾಲಜಿಷ್ ಫೋರ್‌ಷಂಗ್ ಎಂಬ ಪತ್ರಿಕೆಯನ್ನೂ ಈತ ಆರಂಭಿಸಿದನಲ್ಲದೆ ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳಲ್ಲಿ ಈ ಮನಶ್ಶಾಸ್ತ್ರ ವಿಭಾಗವನ್ನು ಬಹುಮಟ್ಟಿಗೆ ಪ್ರಚಾರಕ್ಕೆ ತಂದ. (ಎಸ್.ಕೆ.ಆರ್.)

**ಕಾಫ್ಕಾ, ಫ್ರಾನ್ಜ್ :** 1883–1924. ಆಸ್ಟ್ರಿಯದ ಕಾದಂಬರಿಕಾರ ಹಾಗೂ ಪ್ರಬಂಧಕಾರ. ಯೆಹೂದಿ ಮನೆತನದಲ್ಲಿ ಹುಟ್ಟಿದ. ತಂದೆಯ ಉಗ್ರಶಿಸ್ತಿನಲ್ಲಿ ಬೆಳೆದ. 1906ರಲ್ಲಿ ಪ್ರೇಗ್ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಪಡೆದು ಕೆಲಸಕ್ಕೆ ಸೇರಿದ.

ಕಾಫ್ಕಾ ಧರ್ಮದೃಷ್ಟಿಯುಳ್ಳವ. ಈತನ ಪಾಲಿಗೆ ಬರೆವಣಿಗೆ ಪ್ರಾರ್ಥನೆಯಿದ್ದಂತೆ. ಯೆಹೂದಿಗಳ ಧರ್ಮಶಾಸ್ತ್ರ, ತಾಲ್ಮುದ್, ಪಾಸ್ಕಲನ ಧರ್ಮತತ್ತ್ವ ಕರ್‌ಕೆಗಾರ್ಡ್‌ನ ಅನುಭೂತಿ ಇವು ಈತನ ಮನೋಧರ್ಮವನ್ನು ರೂಪಿಸಿದ ಶಕ್ತಿಗಳು. ಮಾನವನ ಅಸಹಾಯಕ ಸ್ಥಿತಿ, ತಾನು ಪಾಪಾತ್ಮನೆಂಬ ಭಾವನೆ ಹಾಗೂ ದೇವರಲ್ಲಿನ ಅಚಲ ನಂಬಿಕೆ ಇವು ಈತನ ಕ್ರಿಯಾಶೀಲ ಬರೆವಣಿಗೆಗೆ ಸ್ಫೂರ್ತಿ ನೀಡಿದ ಅಂಶಗಳು.

ನಿಜಜೀವನದ ಸೂಕ್ಷ್ಮಾತಿ ಸೂಕ್ಷ್ಮಗಳ ವಿವರಣೆ, ಪಾತ್ರಗಳು ಸಿಕ್ಕಿಬೀಳುವ ಭಯಂಕರ ಸನ್ನಿವೇಶಗಳು, ಅವುಗಳಿಗೆ ಉಚಿತವೆನಿಸುವ ಶೈಲಿ–ಇವನ್ನು ಈತನ ಎಲ್ಲ ಕೃತಿಗಳಲ್ಲೂ ಕಾಣಬಹುದು. ಕ್ಷಯರೋಗಕ್ಕೆ ತುತ್ತಾಗಿ ಈತ ಪ್ರಾಣತೆತ್ತ. ಈತನ ಕೆಲವು ಕೃತಿಗಳು ಈತ ಜೀವಿಸಿದ್ದಾಗಲೇ ಪ್ರಕಟವಾದವು. ಕೆಲವನ್ನು ಮರಣಾನಂತರ ಈತನ ಸ್ನೇಹಿತ ಮ್ಯಾಕ್ಸ್ ಬ್ರಾಡ್ ಪ್ರಕಟಿಸಿದ. ಅವುಗಳಲ್ಲಿ ದಿ ಟ್ರಯಲ್ (1935), ದಿ ಕ್ಯಾಸಲ್ (1926), ಅಮೆರಿಕ (1927) ಇವು ಮುಖ್ಯವಾದುವು. ಇವು ಇಂಗ್ಲಿಷಿಗೆ ಭಾಷಾಂತರಗೊಂಡಿವೆ. ಮ್ಯಾಕ್ಸ್ ಬ್ರಾಡನೇ ಸಂಪಾದಿಸಿ ಪ್ರಕಟಿಸಿರುವ ದಿ ಯಡರೀಸ್ ಆಫ್ ಫ್ರಾನ್ಜ್ ಕಾಫ್ಕಾದಲ್ಲಿ ಕಾಫ್ಕಾನ ಜೀವನ ವಿವರಗಳೂ ದೃಷ್ಟಿ ಧ್ಯೇಯಗಳೂ ಕಾಣಸಿಗುತ್ತವೆ. (ಟಿ.ವಿ.ಎಸ್.)

**ಕಾಫ್‌ಮನ್, ಜಾರ್ಜ್ ಸೈಮನ್ :** 1889–1961. ಅಮೆರಿಕದ ನಾಟಕಕಾರ. ಪಿಟ್ಸ್‌ಬರ್ಗ್‌ನಲ್ಲಿ ಹುಟ್ಟಿದ ಈತ ಶಾಲಾ ವಿದ್ಯಾಭ್ಯಾಸವನ್ನು ಅಲ್ಲಿಯೇ ಮುಗಿಸಿದ. ನ್ಯಾಯಶಾಸ್ತ್ರವನ್ನು ಓದಿದನಾದರೂ ವಕೀಲಿವೃತ್ತಿಯನ್ನು ತ್ಯಜಿಸಿ ಕೆಲಕಾಲ ಮೋಜಣಿದಾರನಾಗಿದ್ದು ಅನಂತರ ವಾಣಿಜ್ಯ ಸಂಚಾರಿಯಾಗಿದ್ದ. 1908ರಲ್ಲಿ ಬರೆವಣಿಗೆಯನ್ನು ಪ್ರಾರಂಭಿಸಿ ಕೆಲಕಾಲ ನ್ಯೂಯಾರ್ಕಿನ ಈವಿನಿಂಗ್ ಮೇಲ್ ಮತ್ತು ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆಗಳಿಗೆ ಬರೆದ. ದಿ ಬಟರ್ ಅಂಡ್ ಎಗ್‌ಮ್ಯಾನ್ (1925) ಬಿಟ್ಟರೆ ಈತ ಬರೆದ ಬಹುತೇಕ ನಾಟಕಗಳು ಮತ್ತೊಬ್ಬರೊಂದಿಗೆ ಕೂಡಿ ಬರೆದವು. ಮಾರ್ಕ್ ಕಾನೆಲ್ಲಿಯ ಜೊತೆಗೂಡಿ ಟು ದಿ ಲೇಡಿಸ್ (1922), ಮೆರ್ಟನ್ ಆಫ್ ದಿ ಮೂವಿಸ್ (1922), ಬೆಗ್ಗರ್ ಆನ್ ಹಾರ್ಸ್‌ಬ್ಯಾಕ್ (1925) ನಾಟಕಗಳನ್ನೂ ಅಲೆಕ್ಸಾಂಡರ್ ವೂಲ್‌ಕಾಟನ ಜೊತೆಗೂಡಿ ದಿ ಚಾನಲ್ ರೋಡ್(1929), ದಿ ಡಾರ್ಕ ಟವರ್ (1933), ನಾಟಕಗಳನ್ನೂ ಮಾಸ್‌ಹಾರ್ಟ ಜೊತೆಗೂಡಿ 'ಯು ಕಾಂಟ್ ಟೇಕ್ ಇಟ್ ವಿತ್ ಯು' ನಾಟಕವನ್ನೂ ರಚಿಸಿದ. ಈ ನಾಟಕ ಪುಲಿಟ್ಜರ್ ಪದಕವನ್ನು ಪಡೆಯಿತು. *

**ಕಾಬಟ್, ಜಾನ್ (ಜಿಯೊವನ್ನಿ ಕಾಬಾಟೊ) :** 1450–1499. ಇಟಲಿಯ ನಾವಿಕ ಮತ್ತು ಭೂ ಪರಿಶೋಧಕ. ಜಿನೋವದಲ್ಲಿ ಹುಟ್ಟಿ 1461ರಲ್ಲಿ ವೆನಿಸಿಗೆ ವಲಸೆ ಹೋದ. ಈತನಿಗೆ ಇಟಲಿಯ ಪೌರಹಕ್ಕುಗಳು ಲಭ್ಯವಾದ್ದು 1476ರಲ್ಲಿ. ಪೂರ್ವ ಮೆಡಿಟರೇನಿಯನ್ ಸಮುದ್ರದಲ್ಲಿ ಈತ ನೌಕಾವ್ಯಾಪಾರದಲ್ಲಿ ನಿರತನಾಗಿದ್ದ. 1484ರಲ್ಲಿ ಇಂಗ್ಲೆಂಡಿಗೆ ತೆರಳಿ, ಬ್ರಿಸ್ಟಲಿನ ವರ್ತಕಪಂಗಡದ ಆಶ್ರಯಪಡೆದ. ಯುರೋಪಿನ ಪಶ್ಚಿಮಕ್ಕಿದ್ದ ರಾಷ್ಟ್ರಗಳೊಂದಿಗೆ ಒಂದು ನೌಕಾವ್ಯಾಪಾರ ಮಾರ್ಗವನ್ನು ಶೋಧನೆ ಮಾಡಬೇಕೆಂಬುದು ಇವನ ಗುರಿಯಾಗಿದ್ದಂತೆ ತೋರುತ್ತದೆ. ಇದಕ್ಕೆ ಇಂಗ್ಲಿಷರ ಸಹಾಯ ಯಾಚಿಸಿ ಇಂಗ್ಲೆಂಡಿಗೆ ಹೋದ. ಬ್ರಿಸ್ಟಲಿನ ವರ್ತಕಪಂಗಡದ ಸಹಾಯದಿಂದ ಚಕ್ರವರ್ತಿ 7ನೆಯ ಹೆನ್ರಿಯಿಂದ ನೌಕಾಯಾನದ ಸನ್ನದನ್ನು 1496ರಲ್ಲಿ ಪಡೆದು 1497ರ ಮೇ 2ರಂದು ಬ್ರಿಸ್ಟಲಿನಿಂದ ಹೊರಟ ಈತ ಬ್ರಿಟನ್ ದ್ವೀಪದ ಭೂಶಿರವನ್ನು ತಲುಪಿದ್ದು ಜೂನ್ 24ರಂದು. ಅದನ್ನು ಏಷ್ಯಖಂಡದ ಈಶಾನ್ಯಭಾಗವೆಂದು ತಪ್ಪು ತಿಳಿದು ಸೆಂಟ್ ಲಾರೆನ್ಸ್ ಕೊಲ್ಲಿಯ ತೀರಪ್ರದೇಶದಲ್ಲಿ ಸಂಚರಿಸಿ ಅನಂತರ ಇಂಗ್ಲೆಂಡಿಗೆ ಮರಳಿದ. ಇದರಿಂದ ಸಂಪ್ರೀತನಾದ ಚಕ್ರವರ್ತಿಯಿಂದ ಇವನಿಗೆ 10 ಪೌಂ ಬಹುಮಾನವೂ 20 ಪೌಂ ವಾರ್ಷಿಕವೇತನವೂ ದೊರಕಿದುವು. ಲಂಡನ್ ಮತ್ತು ಬ್ರಿಸ್ಟಲಿನ ವರ್ತಕರ ನೆರವಿನಿಂದ (1498) ಈತ ಮತ್ತೊಂದು ನೌಕಾಯಾನಕ್ಕೆ ಸನ್ನದನ್ನು ಪಡೆದ. ಇವನ ನೌಕಾತಂಡ ಬಿರುಗಾಳಿಗೀಡಾಗಿ ಐರ್ಲೆಂಡ್ ದಡವನ್ನು ಮುಟ್ಟಿತು. ಅನಂತರ ನೌಕಾಯಾನ ಮುಂದುವರಿಸಿದರೂ ಆ ವಿಷಯವಾಗಿ ಹೆಚ್ಚಿನ ಮಾಹಿತಿಗಳು ದೊರಕಿಲ್ಲ. ಒಟ್ಟಿನಲ್ಲಿ ಪೌರಸ್ತ್ಯ ದೇಶಗಳೊಡನೆ ವ್ಯಾಪಾರಸಂಪರ್ಕಕ್ಕಾಗಿ ಹತ್ತಿರದ ಮಾರ್ಗವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ಸಫಲನಾಗದೆ ಬರಿಗೈಯಿಂದ ಇಂಗ್ಲೆಂಡಿಗೆ ಹಿಂತಿರುಗಿದ. 1499ರಲ್ಲಿ ಬ್ರಿಟನ್ನಿನಿಂದ ವರ್ಷಾಶನ ಪಡೆದದ್ದಕ್ಕೆ ದಾಖಲೆಯುಂಟು, ಆಮೇಲೆ ಇವನ ಬಗ್ಗೆ ಇತಿಹಾಸದಲ್ಲಿ ಯಾವ ಮಾಹಿತಿಯೂ ದೊರಕುವುದಿಲ್ಲ. (ಎ.ಕೆ.ಎಸ್.ಎಚ್.ಎ.)

**ಕಾಬಟ್, ವಿಲಿಯಂ :** 1763–1835. ಇಂಗ್ಲಿಷ್ ಲೇಖಕ, ಪತ್ರಿಕೋದ್ಯಮಿ, ತೀವ್ರಗಾಮಿ. 18ನೆಯ ಶತಮಾನದ ಕ್ರಾಂತಿ ಮತ್ತು ವಿಕ್ಟೋರಿಯನ್ ಯುಗದ ಆರಂಭ–ಇವುಗಳ ಮಧ್ಯಕಾಲದ ಸಾಮಾನ್ಯ ಜನರ ಜೀವನದ ಚಿತ್ರಣ ಈತನ ಬರೆಹಗಳಲ್ಲಿ ಮೂಡಿದೆ. ಈತ ಹುಟ್ಟಿದ್ದು ಸರ್‍ರೆಯ ಫಾರ್ನಹ್ಯಾಂನಲ್ಲಿ, 1763ರ ಮಾರ್ಚ್ 9ರಂದು. ಈತನ ತಾತ ದಿನಗೂಲಿ ಕೆಲಸಗಾರ, ತಂದೆ ರೈತ. ಹದಿನಾಲ್ಕನೆಯ ವರ್ಷದವರೆಗೆ ತಂದೆಯ ಜೊತೆಯಲ್ಲಿ ಹೊಲದಲ್ಲಿ ಈತ ದುಡಿದ ಅನಂತರ ಸಾಹಸ ಜೀವನದಲ್ಲಿ ತೊಡಗಿದ. ಮನೆ ಬಿಟ್ಟು ಓಡಿಹೋಗಿ ಕ್ಯೂ ತೋಟಗಳಲ್ಲಿ ದುಡಿಮೆಗೆ ಸೇರಿದ. ಸ್ವಲ್ಪ ಸಮಯದ ಅನಂತರ ಮನೆಗೆ ಹಿಂದಿರುಗಿದ. 19ನೆಯ ವಯಸ್ಸಿನಲ್ಲಿ ಮತ್ತೆ ಮನೆಯಿಂದ ಹೊರಬಿದ್ದು ಲಂಡನಿನಲ್ಲಿ ಸಲಹಾವಕೀಲನೊಬ್ಬನ ಬಳಿ ಕೆಲಸಕ್ಕೆ ಸೇರಿದನಾದರೂ ಆ

ಕೆಲಸ ಈತನಿಗೆ ಹಿಡಿಸಲಿಲ್ಲ. ಕೊನೆಗೆ ಅದನ್ನು ಬಿಟ್ಟು ಸೈನ್ಯಕ್ಕೆ ಸೇರಿದ. ತರಬೇತಿಯ ಕೇಂದ್ರದಲ್ಲಿ ಒಂದು ವರ್ಷ ಇದ್ದಾಗ ಓದುಬರೆಹಗಳಲ್ಲಿ ನಿರತನಾದ. ಅನಂತರ ಈತನನ್ನು ಯುದ್ಧರಂಗಕ್ಕೆ ಕಳುಹಿಸಲಾಯಿತು.

1791ರ ವರೆಗೆ ಇವನು ಸೈನ್ಯದಲ್ಲೇ ಇದ್ದು ರೆಜಿಮೆಂಟಲ್ ಸಾರ್ಜಂಟ್ ಮೇಜರ್ ಹುದ್ದೆಗೇರಿದ. ಸೈನ್ಯದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದ್ದ ಮೋಸ, ಹಣದ ದುರುಪಯೋಗ ಮುಂತಾದುವನ್ನು ಕಣ್ಣಾರೆ ಕಂಡ ಇವನು ಆ ಬಗ್ಗೆ ಮಾಹಿತಿ ಸಂಗ್ರಹಿಸಿಕೊಂಡಿದ್ದ. ಸರ್ಕಾರ 1791ರಲ್ಲಿ ಸೈನ್ಯವನ್ನು ಯುದ್ಧಕ್ಷೇತ್ರದಿಂದ ಹಿಂದಕ್ಕೆ ಕರೆಸಿಕೊಂಡ ಒಡನೆಯೇ ಇವನು ಸೈನ್ಯ ಸೇವೆಯಿಂದ ಬಿಡುಗಡೆ ಪಡೆದು, ಭ್ರಷ್ಟಾಚಾರಿ ಅಧಿಕಾರಿಗಳ ವಿಚಾರಣೆಯಾಗಬೇಕೆಂದು ಕೇಳಿದ. ಕಾಬಟನ ಬೇಡಿಕೆಯನ್ನು ಕೊನೆಗೂ ಮನ್ನಿಸ ಲಾಯಿತಾದರೂ ಈ ಆಪಾದನೆಯ ನ್ಯಾಯವಾದ ವಿಚಾರಣೆಯಾಗುವುದಿಲ್ಲವೆಂಬುದು ಇವನಿಗೆ ಮನವರಿಕೆಯಾದಾಗ ನಿರಾಶೆಗೊಂಡು. ವಿಚಾರಣೆಯ ಸಮಯದಲ್ಲಿ ಹಾಜರಾಗದೆ ಫ್ರಾನ್ಸಿಗೆ ಓಡಿಹೋದ (1762). ಅದೇ ವರ್ಷ ಅಮೆರಿಕಕ್ಕೆ ಹೋಗಿ ಫ್ರೆಂಚ್ ವಲಸೆಗಾರರಿಗೆ ಇಂಗ್ಲಿಷ್ ಕಲಿಸುತ್ತ ಫಿಲಡೆಲ್ಫಿಯದಲ್ಲಿ ಜೀವನ ಸಾಗಿಸುತ್ತಿದ್ದ. (ಎಚ್.ಆರ್.ಡಿ.)

ಅದುವರೆಗೂ ಕಾಬಟ್ ಏನ್ನೂ ಬರೆದಿರಲಿಲ್ಲ. 1794ರಲ್ಲಿ ಆ ಅವಕಾಶ ಒದಗಿ ಬಂತು. ಕ್ರೈಸ್ತರ ತ್ರಿಮೂರ್ತಿ ತತ್ತ್ವದ ನಂಬಿಕೆಯನ್ನು ವಿರೋಧಿಸಿ, ಏಕಮೂರ್ತಿತ್ತ್ವವುಳ್ಳ ದೈವತತ್ತ್ವದ ಪ್ರತಿಪಾದನೆ ಮಾಡುತ್ತಿದ್ದ ಜೋಸೆಫ್ ಪ್ರೀಸ್ಲಿ ಆ ವರ್ಷ ಅಮೆರಿಕಕ್ಕೆ ಬಂದು ನೆಲಸಿದ. ಇವನ ಗೌರವಾರ್ಥ ಅನೇಕ ಸ್ವಾಗತ ಸಮಾರಂಭಗಳು ಜರುಗಿದುವು. ಜಗಳಗಂಟಿ ಕಾಬಟ್ ಒಡನೆಯೇ ಕೆರಳಿದ. ಪತ್ರಗಳನ್ನು ಬರೆದು ತನ್ನ ಪ್ರತಿಕ್ರಿಯೆಗಳನ್ನು ಪ್ರಕಟಿಸಿದ. 1800ರಲ್ಲಿ ಲಂಡನಿಗೆ ಹಿಂದಿರುಗುವವರೆಗೂ ಕಾಬಟ್ ಫ್ರೆಂಚ್ ಕ್ರಾಂತಿಯನ್ನೂ ಅದಕ್ಕೆ ಸಹಾಯ ಮಾಡಿದ ಅಮೆರಿಕನರನ್ನೂ ಟೀಕಿಸಿ ಬರೆಯುತ್ತಿದ್ದ. ಅತ್ಯಂತ ಶಕ್ತವಾದ ನಿಂದಾತ್ಮಕ ಶೈಲಿಯಲ್ಲಿ ಬರೆದ ಆ ಕೈಹೊತ್ತಗೆಗಳು ಕಾಬಟನ ಅನಂತರದ ಬರೆವಣಿಗೆಯ ಎಲ್ಲ ಲಕ್ಷಣಗಳನ್ನೂ ಒಳಗೊಂಡಿದ್ದುವು.

ಅಮೆರಿಕದ ನ್ಯಾಯವನ್ನೂ ಕಾಬಟ್ ಕೆಣಕಿದ. ಜಾರ್ಜ್‌ವಾಷಿಂಗ್ಟನನನ್ನು ಬೆಂಜಮಿನ್ ರಷ್ ಎಂಬ ವೈದ್ಯ ತನ್ನ ವಿಶಿಷ್ಟ ರಕ್ತಸ್ರಾವಣ ಚಿಕಿತ್ಸೆಯಿಂದ ಸಾಯಿಸಿದನೆಂದು ಆಪಾದಿಸಿ ಬರೆದ. ಇದರಿಂದಾಗಿ ಇವನು ಮಾನನಷ್ಟ ಮೊಕದ್ದಮೆಯನ್ನೆದುರಿಸಿ ಬಲು ಭಾರಿ ದಂಡ ತೆರಬೇಕಾಯಿತು. ಅವನ ವಿಚಾರಣೆ ನಡೆಸಿ ದಂಡ ವಿಧಿಸಿದ ನ್ಯಾಯಾಧೀಶ ಆ ವೈದ್ಯನ ಮಿತ್ರ. ಕಾಬಟ್ ಅವನನ್ನೂ ಬಿಡಲಿಲ್ಲ. ಕಾಬಟನ ಈ ನಿರ್ಭೀತ ಬರೆವಣಿಗೆಗಳಿಂದಾಗಿ ಅಮೆರಿಕದಲ್ಲಿ ಅವನು ಇರುವುದೇ ಅಸಹನೀಯವೆನಿಸಿತು. 1800ರಲ್ಲಿ ಅಲ್ಲಿನ ಹೋರಾಟವನ್ನು ಕೊನೆಗೊಳಿಸಿ ಕಾಬಟ್ ಇಂಗ್ಲೆಂಡಿಗೆ ಮರಳಿದ. ಅಮೆರಿಕದಲ್ಲಿದ್ದಾಗ ಇವನು ಬರೆದು ಪ್ರಕಟಿಸುತ್ತಿದ್ದ ಲೇಖನಗಳು ಇಂಗ್ಲೆಂಡಿನಲ್ಲಿ ಮರು ಪ್ರಕಟನೆಯಾಗುತ್ತಿದ್ದುದರಿಂದ ಅಲ್ಲೂ ಇವನಾಗಲೇ ಪ್ರಸಿದ್ಧನಾಗಿದ್ದ . ಕಾಬಟನಿಗೆ ಇಂಗ್ಲೆಂಡಿನಲ್ಲಿ ಭವ್ಯ ಸ್ವಾಗತವೇ ಕಾದಿತ್ತು. ಉಗ್ರರಾಷ್ಟ್ರಾಭಿಮಾನ ಪತ್ರಿಕೋದ್ಯಮದ ಕ್ಷೇತ್ರದಲ್ಲಿ ಕಾಬಟ್ ಕಾಲಿಟ್ಟ. ಭೋಜನಕೂಟವೊಂದರಲ್ಲಿ ಇವನಿಗೆ ಪಿಟ್ಟನ ಭೇಟಿಯಾಯಿತು. ಸರ್ಕಾರದ ಪ್ರಮುಖ ಪತ್ರಿಕೆಯೊಂದರ ಒಡೆತನ ಮತ್ತು ಸಂಪಾದಕತ್ವವನ್ನು ಕಾಬಟನಿಗೆ ವಹಿಸಿಕೊಡುವುದಾಗಿ ಪಿಟ್ ಹೇಳಿದ. ಆದರೆ ಕಾಬಟ್ ಅದನ್ನು ನಿರಾಕರಿಸಿದ. ಅಮೆರಿಕದಲ್ಲೂ ಈತ ತನ್ನ ಸೇವೆಗಾಗಿ ಸರ್ಕಾರದಿಂದ ಪ್ರತಿಫಲ ಸ್ವೀಕರಿಸಲು ನಿರಾಕರಿಸಿದ್ದ. ಪಾರ್ಕ್ಯುಪೈನ್ ಎಂಬ ಪತ್ರಿಕೆಯೊಂದನ್ನು ಸ್ವತಃ ಸ್ಥಾಪಿಸಲು ಯತ್ನ ನಡೆಸಿದ. ಆದರೆ ಇದು ವಿಫಲವಾಯಿತು. ಅನಂತರ ವಿಲಿಯಂ ವಿಂಡ್‌ಹ್ಯಾಮನ ನೆರವಿನಿಂದ ಪೊಲಿಟಿಕಲ್ ರಿಜಿಸ್ಟರ್ ಎಂಬ ಸಾಪ್ತಾಹಿಕವೊಂದನ್ನು ಪ್ರಾರಂಭಿಸಿದ. ಅನಂತರ ಅನೇಕ ವರ್ಷಗಳ ಕಾಲ ವಿಂಡ್‌ಹ್ಯಾಮನಿಂದ ಅವನಿಗೆ ರಾಜಕೀಯ ಬೆಂಬಲ ದೊರಕುತ್ತಿತ್ತು.

ಜೇಕೊಬಿನ್ ಅಧಿಕಾರದ ಕಾಲದಲ್ಲಿ ಫ್ರೆಂಚರೊಂದಿಗೆ ಬ್ರಿಟನ್ನು ಮಾಡಿಕೊಂಡ ಶಾಂತಿಯನ್ನು ಕಾಬಟನ ಪತ್ರಿಕೆ ವಿರೋಧಿಸಿತು. ಮತ್ತೆ ಫ್ರಾನ್ಸಿನ ವಿರುದ್ಧ ಯುದ್ಧ ಹೂಡಬೇಕೆಂಬುದು ಕಾಬಟನ ವಾದ. ಆದರೆ ಪಿಟ್ ಇನ್ನೊಮ್ಮೆ ಅಧಿಕಾರಕ್ಕೆ ಬಂದು ಮತ್ತೆ ಯುದ್ಧವನ್ನಾರಂಭಿಸಿದಾಗ ಕಾಬಟ್ ಕ್ರಮೇಣ ಯುದ್ಧ ವಿರೋಧಿಯಾಗಿ ಪರಿಣಮಿಸಿದ. ಯುದ್ಧವನ್ನು ವಿರೋಧಿಸುತ್ತಿದ್ದ ವಿಂಡ್‌ಹ್ಯಾಂ ಮತ್ತು ಫಾಕ್ಸರ ಪಕ್ಷವೇ ಇವನದೂ ಆಗಿತ್ತು. 1806ರಲ್ಲಿ ಸಕಲ ಪ್ರತಿಭೆಯ ಸಂಪುಟ ಏರ್ಪಟ್ಟಾಗ ಕಾಬಟನ ಮಿತ್ರರೂ ಸಚಿವರಾದರು. ಆದರೆ ಕಾಬಟ್ ಉತ್ತರೋತ್ತರದಲ್ಲಿ ಅವರಿಗೂ ವಿರೋಧಿಯಾದ. ಯುದ್ಧದ ಮುಂದುವರಿಕೆ, ವಿಶ್ರಾಂತಿ ವೇತನದ ಬೆಳೆವಣಿಗೆ, ರಾಷ್ಟ್ರಋಣದ ಮೊತ್ತದ ಏರಿಕೆ-ಇಂಥ ಅಪಾಯಕಾರಿ ಪ್ರವೃತ್ತಿಗಳನ್ನೆಲ್ಲ ಕಾಬಟ್ ಕಟುವಾಗಿ ಟೀಕಿಸಿದ. 1807ರಲ್ಲಿ ಆ ಸಂಪುಟ ಮುರಿದು ಬಿತ್ತು. ಆ ವೇಳೆಗೆ ಕಾಬಟನಲ್ಲೂ ಅಗಾಧ ಪರಿವರ್ತನೆಯಾಗಿತ್ತು. ಈತ ಕ್ರಾಂತಿವಾದಿಯಾಗಿದ್ದ. ಇಂಗ್ಲೆಂಡಿನಲ್ಲಿ ಪ್ರಬಲವಾಗಿದ್ದ ವ್ಹಿಗ್ ಮತ್ತು ಟೋರಿ ಪಕ್ಷಗಳೆರಡಕ್ಕೂ ಈತ ಕಡು ವಿರೋಧಿಯಾದ. ಶಾಂತಿ, ಸಂಸದೀಯ ಸುಧಾರಣೆ, ಆರ್ಥಿಕ ಸುಧಾರಣೆ-ಇವು ಆಗ ಕಾಬಟನ ಆದರ್ಶಗಳು.

1805ರಿಂದ ಕಾಬಟನ ನಿಲವಿನಲ್ಲಿ ಅಗಾಧ ಬದಲಾವಣೆಗಳು ಆದುವು. ಈತ ಸೌಂತಾಪ್ಟನಿನ ಬಳಿ ಒಂದು ಜಮೀನುಕೊಂಡು ಕೃಷಿಯಲ್ಲಿ ನಿರತನಾದ. ಬಾಲ್ಯಕಾಲದಲ್ಲಿದ್ದದ್ದಕ್ಕೂ ಆಗ್ಗೂ ಗ್ರಾಮಜೀವನದಲ್ಲಿ ಅಗಾಧ ಬದಲಾವಣೆಗಳಾಗಿದ್ದವು. ಕಾರ್ಮಿಕವರ್ಗದ ಹೀನಸ್ಥಿತಿಯನ್ನು ಕಂಡಾಗ ಇವನ ಕಣ್ಣು ತೆರೆಯಿತು. ಕೆರಳಿದ. ಸಂಪೂರ್ಣವಾಗಿ ತೀವ್ರಗಾಮಿಯಾದ. 1809ರಲ್ಲಿ ಎಲಿ ಎಂಬಲ್ಲಿಯ ಸೈನಿಕರು ತಮ್ಮ ಸಂಬಳದಿಂದ ಹಣವನ್ನು ಕಡಿತಗೊಳಿಸುವುದನ್ನು ವಿರೋಧಿಸಿ ಬಂಡಾಯವೆದ್ದಾಗ ಸರ್ಕಾರ ಅದನ್ನು ಕ್ರೂರ ವಿಧಾನಗಳಿಂದ ಅಡಗಿಸಿತು. ಬಂಡಾಯದ ನಾಯಕರಿಗೆ ಛಡಿ ಏಟಿನ ಶಿಕ್ಷೆ ವಿಧಿಸಲಾಯಿತು. ಇದನ್ನು ವಿರೋಧಿಸಿ ಕಾಬಟ್ ಲೇಖನ ಬರೆದ. ರಾಜದ್ರೋಹದ ಆಪಾದನೆಗೆ ಗುರಿಯಾಗಿ, ಒಂದು ಸಾವಿರ ಜುಲ್ಮಾನೆಯನ್ನೂ ಒಂದೊಂದು ಸಾವಿರ ಪೌಂಡ್‌ಗಳ ಎರಡು ಮುಚ್ಚಳಿಕೆಗಳನ್ನೂ ನೀಡುವುದರ ಜೊತೆಗೆ, 2 ವರ್ಷಗಳ ಕಾರಾಗೃಹ ಶಿಕ್ಷೆಯನ್ನೂ ಅನುಭವಿಸಬೇಕಾಯಿತು. ಜೈಲಿನಿಂದಲೇ ಈತ ರಿಜಿಸ್ಟರ್ ಪತ್ರಿಕೆಯ ಸಂಪಾದನ ಕಾರ್ಯ ನಡೆಸುತ್ತಿದ್ದ. ಬಂಧನದಿಂದ ಹಣಕಾಸಿನ ಮುಗ್ಗಟ್ಟು ಉಂಟಾದಾಗ ಈತ ಎಲ್ಲ ಆಸ್ತಿಗಳನ್ನೂ ಮಾರಿ ರಿಜಿಸ್ಟರ್ ಪತ್ರಿಕೆಯನ್ನು ಮಾತ್ರ ಉಳಿಸಿಕೊಂಡ. ಈ ಅವಧಿಯಲ್ಲೇ ಕಾಬಟ್ ಪ್ರಸಿದ್ಧವಾದ ಪೇಪರ ಅಗೇನ್ಸ್ಟ್ ಗೋಲ್ಡ್ ಪ್ರಬಂಧವನ್ನು ಬರೆದು, ಆಗಿನ ಆರ್ಥಿಕ ಸ್ಥಿತಿಯನ್ನೂ ನೋಟಿನ ಅತಿ ಪ್ರಸಾರಣವನ್ನೂ ಟೀಕಿಸಿ ಇದಕ್ಕೆಲ್ಲ ಪಿಟ್ ಮತ್ತು ಆತನ ಅನಂತರ ಬಂದವರ ಆರ್ಥಿಕ ನೀತಿಯೇ ಕಾರಣವೆಂದು ಆಪಾದಿಸಿದ.

ಕಾಬಟ್ ಕಾರಾಗೃಹದಿಂದ ಹೊರಬಂದಾಗ ಅವನಿಗೆ ಉಳಿದಿದ್ದದ್ದು ಅವನ ಪತ್ರಿಕೆ ಒಂದೇ. 1815ರಲ್ಲಿ ಯುದ್ಧ ಮುಗಿದಿತ್ತು. ಬೆಲೆಗಳು ಇಳಿದಿದ್ದರೂ ಎಲ್ಲೆಲ್ಲೂ ನಿರುದ್ಯೋಗವೂ ಕಾರ್ಮಿಕ ಮತ್ತು ರೈತವರ್ಗಗಳಲ್ಲಿ ಅಸಮಾಧಾನವೂ ಹಬ್ಬಿದ್ದವು. ತೆರಿಗೆಯೊಂದು ಹೊರೆಯಾಗಿತ್ತು. ಸರ್ಕಾರ ಇದಾವುದನ್ನು ಲೆಕ್ಕಿಸದೆ ಕುಳಿತಿತ್ತು. ಪಾರ್ಲಿಮೆಂಟನ್ನು ಸುಧಾರಿಸಬೇಕೆಂದೂ ರಾಷ್ಟ್ರದ ಸಾಲದ ಮೇಲಿನ ಬಡ್ಡಿಯನ್ನು ಇಳಿಸಬೇಕೆಂದೂ ಕಾಬಟ್ ಮತ್ತು ಅವನ ಅನುಯಾಯಿಗಳು ಚಳವಳಿ ಹೂಡಿದರು. ರಾಷ್ಟ್ರದ ಗಮನ ಸೆಳೆದ ಕಾಬಟ್ ಕೇಂದ್ರ ವ್ಯಕ್ತಿಯಾದ. ಕಾರ್ಮಿಕ ಮುಖಂಡರಲ್ಲಿ ಅತಿ ಪ್ರಭಾವಿತ ವ್ಯಕ್ತಿಯೆನಿಸಿಕೊಂಡ. ಸರ್ಕಾರ ಚಳವಳಿಯನ್ನು ದಮನ ಮಾಡಲು ಯತ್ನಿಸಿತು. ಕಾಬಟ್ ಸೆರೆವಾಸವನ್ನು ತಪ್ಪಿಸಿಕೊಳ್ಳಲು 1817ರಲ್ಲಿ ಓಡಿಹೋದ.

ಕಾಬಟ್ ಅಮೆರಿಕದ ಲಾಂಗ್ ಐಲೆಂಡಿನ ನಾರ್ತ್‌ಹೆಂಪ್‌ಸ್ಟೆಡಿನಲ್ಲಿ ನೆಲೆಸಿ ಇಂಗ್ಲೆಂಡಿನಲ್ಲಿ ಪ್ರಕಟವಾಗುತ್ತಿದ್ದ ತನ್ನ ಪೊಲಿಟಿಕಲ್ ರಿಜಿಸ್ಟರ್ ವಾರಪತ್ರಿಕೆಗೆ ಬರೆಯುತ್ತಿದ್ದ. ಅಲ್ಲಿಯವರೆಗೂ ಪತ್ರಿಕೋದ್ಯಮಿಯಾಗಿ ಹೆಸರು ಗಳಿಸಿದ್ದ ಕಾಬಟ್ 1817-1819ರ ಕಾಲದಲ್ಲಿ ಜರ್ನಲ್ ಆಫ್ ಎ ಇಯರ್‍ಸ್ ರೆಸಿಡೆನ್ಸ್ ಇನ್ ದಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ ಮತ್ತು ಗ್ರಾಮರ್ ಆಫ್ ದಿ ಇಂಗ್ಲಿಷ್ ಲಾಂಗ್ವೇಜ್ ಎಂಬ ಕೃತಿಗಳನ್ನು ರಚಿಸಿದ. ಇವುಗಳಿಂದ ಸಾಹಿತ್ಯದಲ್ಲಿ ಇವನಿಗೊಂದು ಸ್ಥಾನ ದೊರಕುವಂತಾಯಿತು.

1819ರಲ್ಲಿ ಕಾಬಟ್ ಮತ್ತೆ ಇಂಗ್ಲೆಂಡಿಗೆ ಹಿಂದಿರುಗಿ ಕಾರ್ಮಿಕ ಚಳವಳಿಯ ಮುಖಂಡನಾದ. 1820ರಿಂದ 1830ರ ವರೆಗೆ ಇವನ ಬರೆಹಗಳು ಪತ್ರಿಕೆಯಲ್ಲಿ ಪ್ರಕಟವಾಗಿ ಪುಸ್ತಕರೂಪದಲ್ಲಿ ಬಂದುವು.

ಕಾಬಟನ ಅತ್ಯುತ್ತಮ ಕೃತಿ ರೂರಲ್ ರೈಡ್ಸ್. ಇದರಲ್ಲಿ ಈತ ಅಂದಿನ ಜನಜೀವನವನ್ನು ಚೆನ್ನಾಗಿ ಚಿತ್ರಿಸಿದ್ದಾನೆ. ಮಿಲಿಟರಿ ಕಂಟ್ರಾಕ್ಟರುಗಳ ಏಳಿಗೆ, ಕೆಟ್ಟ ಮತ್ತು ಉತ್ತಮ ವ್ಯವಸಾಯ, ಬ್ಯಾಂಕರುಗಳು, ಹಳ್ಳಿಗಳ ಅವನತಿ, ಸಾಮಾನ್ಯ ಜನರ ಕಷ್ಟನಷ್ಟಗಳು-ಇವು ರೂರಲ್ ರೈಡ್ಸನ ವಸ್ತು. ಅನಂತರ 1822ರಲ್ಲಿ ಸೆರ್ಮನ್ಸ್, 1824-27ರಲ್ಲಿ ದಿ ಹಿಸ್ಟರಿ ಆಫ್ ದಿ ಪ್ರಾಟೆಸ್ಟಂಟ್ ರಿಫರ್ಮೇಷನ್ ಇನ್ ಇಂಗ್ಲೆಂಡ್ ಅಂಡ್ ಐರ್ಲೆಂಡ್, 1825ರಲ್ಲಿ ದಿ ವೂಡ್ ಲ್ಯಾಂಡ್ಸ್, 1829ರಲ್ಲಿ ಅಡ್ವೈಸ್ ಟು ಯಂಗ್ ಮೆನ್ ಮತ್ತು ದಿ ಇಂಗ್ಲಿಷ್ ಗಾರ್ಡ್‌ನರ್ ಪ್ರಕಟವಾದುವು. 1820-21ರಲ್ಲಿ ದೊರೆಯ ವಿರುದ್ಧವಾಗಿ ಕೆರೊಲೀನ್ ರಾಣಿಯ ಪಕ್ಷ ವಹಿಸಿ ಲೇಖನಗಳನ್ನು ಬರೆದ. ಅವಳ ವಿವಾಹವಿಚ್ಛೇದನದ ಮೊಕದ್ದಮೆಯಲ್ಲಿ ಇವನೇ ಸಲಹೆಗಾರನಾಗಿದ್ದ. ರಾಣಿಗೆ ನ್ಯಾಯ ಸಲ್ಲಬೇಕೆಂಬ ವಾದದ ನಿಮಿತ್ತ ಈತ ಸುಧಾರಣಾವಾದಿಗಳೆಲ್ಲರ ಕೇಂದ್ರಶಕ್ತಿಯಾಗಿ ಪರಿಣಮಿಸಿದ.

1830ರಲ್ಲಿ ವೆಲಿಂಗ್‌ಟನ್ ಅಧಿಕಾರ ಕಳೆದುಕೊಂಡಾಗ ಟೋರಿಗಳ ದೀರ್ಘ ಪ್ರಭಾವ ಇಳಿಮುಖವಾಯಿತು. ವಿಗ್ಗ್ ಮುಖಂಡ ಲಾರ್ಡ್ ಗ್ರೇ ಅಧಿಕಾರಕ್ಕೆ ಬಂದ. ಸುಧಾರಣೆಯ ಚಳವಳಿ ಅತಿಯಾಗಿ ಸರ್ಕಾರ ಅದನ್ನು ಹತ್ತಿಕ್ಕಿತು. ಕಾಬಟನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಕಾಬಟ್ ತನ್ನ ಪರವಾಗಿ ತಾನೇ ಅಮೋಘವಾಗಿ ವಾದಿಸಿ ಗೆದ್ದ. 1832ರಲ್ಲಿ ಸುಧಾರಣೆಯ ಕಾನೂನು ಬಂತು. ಓಲ್ಡ್‌ಹ್ಯಾಂನಿಂದ ಕಾಬಟ್ ಪಾರ್ಲಿಮೆಂಟಿಗೆ ಚುನಾಯಿತನಾದ. ಆಗ ಅವನಿಗೆ 68 ವರ್ಷ ವಯಸ್ಸು. ಆ ಮೊದಲು 1820 ಮತ್ತು 1826ರಲ್ಲಿ ಚುನಾವಣೆಗೆ ನಿಂತು ಜಯಶೀಲನಾಗಿರಲಿಲ್ಲ. 2 ವರ್ಷಗಳ ತನ್ನ ಪಾರ್ಲಿಮೆಂಟ್ ಸದಸ್ಯತನದಲ್ಲಿ ಯಾವೊಂದು ಪಕ್ಷವನ್ನೂ ಹಿಡಿಯದೆ, ತೀವ್ರವಾದಿಗಳ ಸಣ್ಣ ಗುಂಪಿನ ನಾಯಕನಾಗಿ ಮುಂದುವರಿದ. ಅವನ ಆರೋಗ್ಯ ಕೆಟ್ಟರೂ ದಿನಚರಿಯ ಕೆಲಸವನ್ನು ಆತ ಬಿಡಲಿಲ್ಲ. ಕೊನೆಗೆ 1835ರ ಜೂನ್ 18ರಂದು ಇನ್‌ಫ್ಲುಯೆಂಜಕ್ಕೆ ತುತ್ತಾಗಿ ಕೊನೆಯುಸಿರೆಳೆದ. ಕಾಬಟ್ ಪಾರ್ಲಿಮೆಂಟ್ ಸದಸ್ಯನಾಗಿ ಅಷ್ಟೇನೂ ಯಶಸ್ಸು ಗಳಿಸಲಿಲ್ಲವೆಂದು ಹೇಳಲಾಗಿದೆ. ಆದರೆ ಆತ್ಮಗೌರವಾನ್ವಿತ ಪತ್ರಿಕೋದ್ಯಮಿಯಾಗಿ, ಕಾರ್ಮಿಕ ಚಳವಳಿಯ ಮುಖಂಡನಾಗಿ, ಗ್ರಂಥಕರ್ತನಾಗಿ, ಒಳ್ಳೆಯ ಬೇಸಾಯಗಾರನಾಗಿ, ಮೇಲಾಗಿ ದೇಶಾಭಿಮಾನಿಯಾಗಿ, ಸಾಮಾನ್ಯ ಜನರ ಬಗ್ಗೆ ಮರುಗಿ ಅವರ ಏಳಿಗೆಗೆ ಕೆಲಸ ಮಾಡಿದ ವ್ಯಕ್ತಿ ಆತ. ಇವನ ಮರಣಾನಂತರ ಇವನ ಮಕ್ಕಳು ಪೊಲಿಟಿಕಲ್ ರಿಜಿಸ್ಟರ್ ಪತ್ರಿಕೆಯನ್ನು ನಡೆಸಿಕೊಂಡು ಬರಲು ಪ್ರಯತ್ನಿಸಿದರು. ಆದರೆ ಕಾಬಟನ ಪ್ರಭಾವಯುತ ಸಂಪಾದಕೀಯ ಲೇಖನವಿಲ್ಲದೆ ಪತ್ರಿಕೆ ಸಪ್ಪೆಯಾಗಿ ಕೆಲವು ತಿಂಗಳುಗಳಲ್ಲೇ ನಿಂತುಹೋಯಿತು. (ಬಿ.ಎಸ್.ಎಚ್.)

**ಕಾಬಾ :** ಸೌದಿ ಅರೇಬಿಯದಲ್ಲಿ ಮಹಮ್ಮದನ ಜನ್ಮಸ್ಥಳವಾದ ಮೆಕ್ಕದಲ್ಲಿನ ದೊಡ್ಡ ಮಸೀದಿಯ ಪ್ರಾಂಗಣದಲ್ಲಿರುವ ಘನಾಕೃತಿಯ ಕಪ್ಪು ಶಿಲಾಕಟ್ಟಡವಿದು. ಬಹು ಹಿಂದಿನಿಂದ ಮುಸ್ಲಿಮರಿಗೆ ಪವಿತ್ರ ಯಾತ್ರಾಸ್ಥಳವಾಗಿದೆ. ಅರಬೀ ಭಾಷೆಯಲ್ಲಿ ಕಾಬಾ ಪದಕ್ಕೆ ಚೌಕಾಕಾರದ ಕಟ್ಟಡ ಎಂದರ್ಥವಿದೆ. ಇದನ್ನು ಕಾಬಾಶಿಲೆಯೆಂದೇ ಕರೆಯುತ್ತಾರೆ. ಇದರ ನಿರ್ಮಾತೃ ಆದಂನೆಂದೇ ಮುಸ್ಲಿಮರ ನಂಬಿಕೆ. ಇಸ್ಲಾಂ ಮತ ಹುಟ್ಟುವುದಕ್ಕೆ ಮುಂಚೆ ಈ ಸ್ಥಳ ಅರಬರ ಪೂಜಾಸ್ಥಳವಾಗಿತ್ತು. ಮಹಮ್ಮದ್ ಮೆಕ್ಕವನ್ನು ಗೆದ್ದು ಅವರನ್ನು ಮುಸ್ಲಿಮರಾಗಿ

ಪರಿವರ್ತಿಸಿದ ಅನಂತರ ಅಲ್ಲಿನ ಪೂಜಾಸ್ತಂಭಗಳನ್ನು ಕೀಳಿಸಿ ಪ್ರಾರ್ಥನಾಮಂದಿರ ನಿರ್ಮಿಸಿದ. ಆ ಕಲ್ಲುಗಳಲ್ಲಿ ಕರಿಯ ಕಲ್ಲೊಂದನ್ನು ಏಬ್ರಹಾಂನ (ಇಬ್ರಾಹಿಂ) ಜ್ಞಾಪಕಾರ್ಥವಾಗಿ ಉಳಿಸಿದ. ಆ ಕಪ್ಪು ಕಲ್ಲು ಮುಸ್ಲಿಮರ ಪೂಜ್ಯ ವಸ್ತುವಾಯಿತು. ಇಂದಿಗೂ ಮುಸ್ಲಿಮರು ಕಾಬಾ ದಿಕ್ಕಿನ ಕಡೆ ಮುಖ ಮಾಡಿಕೊಂಡು ಪ್ರಾರ್ಥನೆ ಸಲ್ಲಿಸುತ್ತಾರೆ. (ಜಿ.ಎಚ್.)

**ಕಾಬಾಳೆ :** ಏಕದಳ ಬೀಜ ಸಸ್ಯಗಳಲ್ಲಿ ಸೈಟ್ಯಾಮಿನೀ ಎಂಬ ಉಪವರ್ಗದ ಕ್ಯಾನೇಸೀ ಕುಟುಂಬಕ್ಕೆ ಸೇರಿದ ಕ್ಯಾನ ಎಂಬ ಜಾತಿಯ ಲಶುನ ಸಸ್ಯ. ಇದರಲ್ಲಿ ಸುಮಾರು 51 ಪ್ರಭೇದಗಳಿವೆ. ಇದಕ್ಕೆ ಕರಿದಾಳ, ನೀರುಬಾಳೆ ಎಂಬ ಹೆಸರೂ ಇವೆ. ಇದು ಉದ್ಯಾನ ಹಾಗೂ ಕೈತೋಟಗಳಲ್ಲಿ ಬೆಳೆಸಲಾಗುವ ಒಂದು ಬಹು ವಾರ್ಷಿಕ ಸಸ್ಯ. ಇದು ದೊಡ್ಡ ಹಾಗೂ ಎತ್ತರ ಬೆಳೆಯುವ ಒಂದು ಮೂಲಿಕೆ. ಇದರ ಕಾಂಡ ಭೂಮಿಯೊಳಗೇ ಇದ್ದು ಗೆಡ್ಡೆಯಾಗಿ ಮಾರ್ಪಾಡಾಗಿದೆ. ಭೂಮಿಯ ಮೇಲೆ ಕಾಣುವ ತೋರಿಕೆಯ ಕಾಂಡ ಬಾಳೆಯ ಗಿಡದಂತೆ ಅನೇಕ ಎಲೆಗಳ ಬುಡದಿಂದ ಆದುದು. ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ. ಇವುಗಳ ಆಕಾರ ದೀರ್ಘ ವೃತ್ತದಂತೆ. ತುದಿ ಮೊನಚು. ಎಲೆಯ ಬುಡಗಳು ಮುಸುಕಿನಂತೆ ಒಂದರ ಮೇಲೊಂದು ಜೋಡಿಸಲ್ಪಟ್ಟಿರುತ್ತವೆ. ಹೂಗಳು ವರ್ಷಪೂರ್ತಿ ಇರುತ್ತದೆ. ಅವುಗಳ ಬಣ್ಣ ಕೆಂಪು, ಹಳದಿ, ಬಿಳಿ, ಕಿತ್ತಳೆ, ಗುಲಾಬಿ ಹೀಗೆ ವಿವಿಧ ತಳಿಗಳಲ್ಲಿ ಬೇರೆ ಬೇರೆಯಾಗಿವೆ. ಹೂಗಳು ಗಿಡದ ತುದಿಯಿಂದ ಹೊರ ಬರುವ ಮಧ್ಯಾರಂಭಿ ಹೂಗೊಂಚಲಿನಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲಿನ ಮುಖ್ಯಕಾಂಡದ ಮೇಲೆ ಹಲವಾರು ಗುಣ್ಣುಗಳಿದ್ದು ಒಂದೊಂದರಲ್ಲೂ

ಒಂದೊಂದು ಬ್ರಾಕ್ಟ್ ಇದೆ. ಒಂದೊಂದು ಬ್ರಾಕ್ಟಿನ ಕಂಕುಳಲ್ಲೂ ಎರಡು ಬ್ರಾಕ್ಟಿಯೋಲುಗಳಿವೆ. ಪ್ರತಿ ಬ್ರಾಕ್ಟಿಯೋಲಿನ ಕಂಕುಳಲ್ಲಿ ಒಂದೂ ಹೂವಿದೆ. ಪುಷ್ಪಪತ್ರಗಳು ಮೂರು. ಅವುಗಳು ಬಣ್ಣ ಮಾಸಲು ಹಸುರು. ಒಂದೊಂದು ಎಸಳಿನ ಆಕಾರ ಅಂಡದಂತೆ. ತುದಿಮೊನಚು. ಪುಷ್ಪದಳಗಳು ಮೂರು. ಗಾತ್ರದಲ್ಲಿ ಕಿರಿದಾಗಿವೆ. ಅವುಗಳ ತುದಿಯೂ ಮೊನಚು. ದಳ ಮತ್ತು ಹೂವಿನ ಇತರ ಭಾಗಗಳು ಕೂಡಿಕೊಂಡು ಆಗಿರುವ ಬುಡ ಕೊಳವೆಯಂತಿದೆ. ಕೇಸರಹಳ ಒಟ್ಟು ಸಂಖ್ಯೆ ಐದು. ಆದರೆ ಅವುಗಳಲ್ಲಿ ನಾಲ್ಕು ಬರಡು ಕೇಸರಗಳು. ಇವುಗಳಲ್ಲಿ ಮೂರು ಕೇಸರಗಳು ಕೆಂಪು ಅಥವಾ ಹಳದಿ ಬಣ್ಣವಾಗಿ ದಳಗಳಂತೆ ಕಾಣುತ್ತವೆ. ನಾಲ್ಕನೆಯದು ನಾಲಗೆಯಂತೆ ಇದೆ. ಇದರ ಮೇಲೆ ಕೆಂಪು ಮತ್ತು ಹಳದಿ ಬಣ್ಣದ ಚುಕ್ಕೆಗಳಿವೆ. ಇದನ್ನು ಲೇಬೆಲ್ಲಮ್ ಎಂದು ಕರೆಯಲಾಗುತ್ತದೆ. ಐದನೆಯ ಕೇಸರವೂ ದಳದಂತೆಯೇ ಇದೆ. ಇದರಲ್ಲಿ ಮಾತ್ರ ತುದಿಯಲ್ಲಿ ಅರ್ಧ ಪರಾಗಕೋಶವಿದೆ. ಅಂಡಾಶಯ ನೀಚಸ್ಥಾನದ್ದು. ಅದರಲ್ಲಿ ಮೂರು ಕೋಣೆಗಳಿವೆ. ಶಲಾಕೆ ಚಪ್ಪಟೆಯಾಗಿ ದಳದಂತೆಯೇ ವರ್ಣಮಯವಾಗಿದೆ. ಶಲಾಕಾಗ್ರ ಕಿರಿದು. ಓರೆಯಾಗಿ ಬಾಗಿದೆ. ಕಾಯಿಗೆ ಡಿಪ್ಲೊಟೇಜಿಯ ಎಂದು ಹೆಸರು. ಇದು ಮೂರು ಭಾಗಗಳಿಂದ ಕೂಡಿದೆ. ಮೇಲೆಲ್ಲ ಸಣ್ಣ ಸಣ್ಣ ಮುಳ್ಳುಗಳಿವೆ. ಬೀಜಗಳು ಅಸಂಖ್ಯ. ಇವು ಅತಿ ಬಿರುಸು, ದುಂಡು ಮತ್ತು ಕಪ್ಪು ಬಣ್ಣದವು.

ಶುಂಠಿಯಂತಿರುವ ಅದರ ಗೆಡ್ಡೆಗಳಿಂದಲೇ ಕಾಬಾಳೆಯನ್ನು ವೃದ್ಧಿಸುವುದು ವಾಡಿಕೆ; ವರ್ಷದ ಎಲ್ಲ ಕಾಲದಲ್ಲಿ ಬೆಳೆಯುವುದಾದರೂ ಚಳಿಗಾಲದ ಅನಂತರ ಫೆಬ್ರವರಿಯಿಂದ ಏಪ್ರಿಲ್ ತಿಂಗಳವರೆಗೆ ಅದಕ್ಕೆ ಬಿಡುವ ಕೊಡುವುದು ಒಳಿತು. ಮಳೆಗಾಲ ಪ್ರಾರಂಭವಾದೊಡನೆ ಗೆಡ್ಡೆಗಳನ್ನು ಹೊರ ತೆಗೆದು ಮತ್ತೆ ಹೊಸ ಮಡಿಗಳಲ್ಲಿ ಊರಬೇಕು. ಯಥೇಚ್ಛವಾಗಿ ನೀರು ಮತ್ತು ಗೊಬ್ಬರ ಕೊಡಬೇಕು.

ಹಲವು ವೈದ್ಯಕೀಯ ಗುಣವಿಶೇಷಗಳಿರುವ ಕಾಬಾಳೆಯ ಬೇರುಗಳು ಜ್ವರ, ಜಲೋದರ ಇತ್ಯಾದಿ ಹಲವಾರು ರೋಗಗಳಿಗೆ ಉಪಯುಕ್ತ. ಕಾಂಡದ ದಂಟುಗಳನ್ನು ಚೂರು ಚೂರೂ ಮಾಡಿ, ಅನ್ನದ ಗಂಜಿಯಲ್ಲಿ ಮೆಣಸಿನೊಡನೆ ಕುಡಿಸಿ, ವಿಷಯುಕ್ತವಾದ ಹುಲ್ಲನ್ನು ಮೇಯ್ದ ದನಗಳಿಗೆ ಪ್ರತಿವಿಷಹಾರಿ ಔಷಧವಾಗಿ ಕೊಡುವುದುಂಟು. ಕೆಲವು ಪ್ರಭೇದಗಳ ಗುಪ್ತಕಾಂಡಗಳಲ್ಲಿ ಪಿಷ್ಟ ಹೇರಳವಾಗಿರುವುದರಿಂದ ಅವನ್ನು ಆಹಾರವಾಗಿ ಬಳಸುವುದುಂಟು.

ಉದ್ಯಾನಪ್ರಾಮುಖ್ಯ ಪಡೆದಿರುವ ಹಲವಾರು ಪ್ರಭೇದಗಳಲ್ಲಿ ಮುಖ್ಯವಾದವು ಇವು: 1 ಪೆರು ದೇಶದ ಮೂಲವಾಸಿಯಾದ ಕ್ಯಾನ ಇಂಡಿಫ್ಲೋರಯೆಂಬುದು 8'–10' ಎತ್ತರಕ್ಕೆ

ಬೆಳೆಯುತ್ತದೆ. ಹೂಗಳ ಬಣ್ಣ ಗುಲಾಬಿ. 2 ಕ್ಯಾ. ವಾರ್ಸ್ಕವಿಕ್ಸಿಯೈ. ಕಾಸ್ಟರೀಕ ಮತ್ತು ಬ್ರೆಜಿಲ್‌ಗಳ ನಿವಾಸಿ. 3'–4' ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳಿಗೆ ಕೊಂಚ ಕಂಚಿನ ಬಣ್ಣ ಇದೆ. ಹೂಗಳು ಕಡುಕೆಂಪು. 3 ಕ್ಯಾ. ಪ್ಯಾನಿ ಕ್ಯುಲೇಟ ಯಂಬುದು ದಕ್ಷಿಣ ಅಮೆರಿಕದ ಆಂಡಿಸ್ ಪರ್ವತಗಳ ಮೂಲವಾಸಿ. ಹೂಗಳು ಹಳದಿಮಿಶ್ರಿತ ಹಸಿರು ಬಣ್ಣದವು. 4 ಕ್ಯಾ. ಕಾಂಪ್ಯಾಕ್ಟ್. ಇದೂ ದಕ್ಷಿಣ ಅಮೆರಿಕದ ನಿವಾಸಿಯೇ. ಹೂದಳಗಳು ಹಳದಿಮಿಶ್ರಿತ ಕೆಂಪು ಬಣ್ಣದವು. ಬರಡು ಕೇಸರಗಳು ಕಿತ್ತಳೆ ಅಥವಾ ಕಡುಕೆಂಪು ಬಣ್ಣದವು. 4 ಕ್ಯಾ. ಎಡ್ಯುಲಿಸ್ 8'–12' ಎತ್ತರಕ್ಕೆ ಬೆಳೆಯುವ ಪ್ರಭೇದ ಇದು. ಹೂಗಳ ಬಣ್ಣ ಕಗ್ಗಂಪು. ಬರಡು ಕೇಸರಗಳು ಕಿತ್ತಳೆ ಬಣ್ಣದವು. ಇದರ ತವರು ವೆಸ್ಟ್ ಇಂಡೀಸ್ ಹಾಗೂ ದಕ್ಷಿಣ ಅಮೆರಿಕ. 5 ಕ್ಯಾ. ಪ್ಯಾಲಿಡ. ಹಸಿರು ಮಿಶ್ರಿತ ಗಂಧಕ ಹಳದಿಬಣ್ಣದ ಹೂ ಬಿಡುವ ಪ್ರಭೇದ. 6 ಕ್ಯಾ. ಇಂಡಿಕ. 3'–5' ಎತ್ತರಕ್ಕೆ ಬೆಳೆಯುವ ಪ್ರಭೇದ ವೆಸ್ಟ್ ಇಂಡೀಸ್ ಮಧ್ಯ ಹಾಗೂ ದಕ್ಷಿಣ ಅಮೆರಿಕಗಳಲ್ಲಿ ಬಲು ಸಾಮಾನ್ಯ. ಭಾರತದಲ್ಲೂ ಬೆಳೆಯುತ್ತದೆ. ಹೂದಳಗಳು ತಿಳಿಹಸಿರು ಬಣ್ಣದವು. ಬರಡು ಕೇಸರಗಳು ಪ್ರಕಾಶಯುಕ್ತ ಕೆಂಪು ಬಣ್ಣದವು. ಇವನ್ನು ಇಂಗ್ಲಿಷಿನಲ್ಲಿ ಇಂಡಿಯನ್ ಶಾಟ್ ಎನ್ನುತ್ತಾರೆ. ಮೇಲೆ ತಿಳಿಸಿದ ಪ್ರಭೇದಗಳನ್ನು ಅಡ್ಡತಳಿಯೆಬ್ಬಿಕೆಯಿಂದ ಪಡೆದ ಹಲವಾರು ತಳಿಗಳಿವೆ. ಇವನ್ನು ಎತ್ತರವಾದವು, ಕುಳ್ಳುತಳಿಗಳು ಎಂದು ಎರಡು ಮುಖ್ಯ ಬಗೆಗಳಾಗಿ ವಿಂಗಡಿಸಬಹುದು. ಎತ್ತರ ತಳಿಗಳಲ್ಲಿ ಬಿಳಿಯ ಬಣ್ಣದ ಹೂ ಬಿಡುವ ವೈಟ್‌ಕ್ವೀನ್, ಹಳದಿಬಣ್ಣದ ಹೂಗಳುಳ್ಳ ಅರೋರ ಬೋರಿಯಾಲಿಸ್, ಕ್ಯಾನರಿ ಬರ್ಡ್, ಮಾಸ್ಟರ್‌ಪೀಸ್, ಕಿತ್ತಳೆ ಬಣ್ಣದ ಹೂವಿನ ಅಮೆರಿಕನ್ ಬ್ಯೂಟಿ, ವ್ಯೋಮಿಂಗ್ ಮುಂತಾದವು, ನಸುಗೆಂಪು ಬಣ್ಣದ ಹೂಗಳುಳ್ಳ ಆಲಿಪೂರ್ ಬ್ಯಾಟಿ, ಡೂಪಾಂಟ್, ಪ್ರಿನ್ಸ್ ಆಫ್ ವೇಲ್ಸ್, ಏಪ್ರಿಕಾಟ್ ಕಿಂಗ್, ಕ್ಲಿಯೋಪಾತ್ರ, ದಿ ಅಂಬಾಸಿಡರ್, ಸ್ವಾಚ್ಯೂ ಆಫ್ ಲಿಬರ್ಟಿ ಮೊದಲಾದುವು ಮುಖ್ಯವಾದುವು. ಕುಳ್ಳು ತಳಿಗಳಲ್ಲಿ ಕಿತ್ತಳೆ ಬಣ್ಣದ ಹೂವಿನ ತಳಿಗಳಾದ ಆರೆಂಜ್ ಗ್ಲೋರಿ, ಆರೆಂಜ್ ಫ್ಲಮ್, ಕಡುಗೆಂಪು ಬಣ್ಣದ ಹೂವಿನ ಹಂಗೇರಿಯ ಸೆಂಟಿನಿಯರೆ ರೋಸಿನ್ ಮತ್ತು ಹಳದಿ ಬಣ್ಣದ ಹೂಗಳುಳ್ಳ ಸ್ಟಾರ್‌ಡಸ್ಟ್, ಏಪ್ರಿಕಾಟ್ ಮುಖ್ಯವಾದವು. (ಎಂ.ಎಸ್.ಆರ್.; ಎಂ.ಎಸ್.ಎಂ.)

**ಕಾಬುಕೀ :** ಹದಿನೇಳನೆಯ ಶತಮಾನದಲ್ಲಿ ಜಪಾನಿನಲ್ಲಿ ಉಗಮಗೊಂಡ ಸಾಂಪ್ರದಾಯಿಕವೂ ಜನಪ್ರಿಯವೂ ಆದ ಒಂದು ನಾಟಕಪ್ರಕಾರ. ವಿಪರೀತ ವೇಷ ಭೂಷಣಗಳೂ ಪ್ರಾಸಬದ್ಧ ಸಂಭಾಷಣೆಗಳೂ ವಿಚಿತ್ರ ರೀತಿಯ ಅಭಿನಯಗಳೂ ಈ ನಾಟಕಗಳಲ್ಲಿದ್ದು ನೃತ್ಯ, ಸಂಗೀತಗಳು ನಾಟಕಕ್ಕೆ ಕಳೆ ಕೊಡುತ್ತವೆ. ಕಾಬುಕೀ ಎಂಬುದಕ್ಕೆ ಜಪಾನಿನಲ್ಲಿ ಈಗ ಗೀತ–ನೃತ್ಯಕಲೆ ಎಂಬುದಾಗಿ ಅರ್ಥ ಮಾಡುವುದಾದರೂ ವಿನೋದಪಡಿಸುವುದು, ಸಂತೋಷಪಡಿಸುವುದು ಎಂಬರ್ಥವುಳ್ಳ ಒಂದು ಶಬ್ದ ಹಿಂದೆ ಇದ್ದು ಬಹುಶಃ ಆ ಶಬ್ದದಿಂದ ಕಾಬುಕೀ ಎಂಬ ಪದದ ಉಗಮವಾಗಿರಬೇಕೆಂದು ಕೆಲವರ ಮತ. ಓ–ಕುನಿ ಎಂಬ ದೇವಾಲಯ ನರ್ತಕಿ ಮತ್ತು ಕೇವಲ ಹೆಂಗಸರೇ ಇದ್ದಂಥ ಅವಳ ತಂಡ ನಡೆಸಿದ ಪ್ರದರ್ಶನಗಳಿಂದ ಇಂಥ ನಾಟಕಗಳಿಗೆ ಅವಕಾಶವಾಗಿದ್ದಿರಬಹುದೆಂದೂ ಹೇಳಲಾಗಿದೆ. ಈ ಬಗೆಯ ನಾಟಕ ಕಂಪನಿಗಳಲ್ಲಿ ಮೊದಮೊದಲಿಗೆ ಹೆಂಗಸರೇ ಹೆಚ್ಚಾಗಿ ಇರುತ್ತಿದ್ದರು. ಕಾಲಕ್ರಮೇಣ ಅಶ್ಲೀಲ ನೃತ್ಯಗಳೂ ತತ್ಸಂಬಂಧೀ ಗೀತೆಗಳೂ ಇಂಥ ನಾಟಕದಲ್ಲಿ ಕಾಣಬರಲಾಗಿ, ಇವನ್ನು ನಿಲ್ಲಿಸಲು ಟೋಕುಗಾವ ಸರ್ಕಾರ ಹಾಕಿದ ನಿಷೇಧದಿಂದಾಗಿ (1629) ಮಹಿಳೆಯರಾರೂ ನಾಟಕಗಳಲ್ಲಿ ಭಾಗವಹಿಸುವುದು ಸಾಧ್ಯವಿಲ್ಲವಾಯಿತು. ಇದರಿಂದಾಗಿ ಕೇವಲ ಹುಡುಗರು ಮತ್ತು ಯುವಕರೇ ಹೆಂಗಸರ ಪಾತ್ರಗಳನ್ನು ಹಾಕತೊಡಗಿದರು. ಕೊನೆಕೊನೆಗೆ ಎಲ್ಲ ಪಾತ್ರಗಳನ್ನೂ ಗಂಡಸರೇ ಅಭಿನಯಿಸುತ್ತಿದ್ದರು. ಹೀಗಾಗಿ ಕಾಬುಕೀ ನೈಜವೈಶಿಷ್ಟ್ಯಗಳಿಂದ ಹೊರತಾಗಿತ್ತಾದರೂ ಕೆಲಕಾಲ ಉತ್ತಮ ಸಂಭಾಷಣೆ ಮತ್ತು ದೃಶ್ಯಾವಳಿಗಳಿಂದ ಜನಪ್ರಿಯವಾಗಿತ್ತು. ಸಮಯ ಕಳೆದಂತೆ ಪಾತ್ರನಿರೂಪಣೆಯಲ್ಲಿ ಮಾರ್ಪಾಟುಗಳುಂಟಾದುವು. ಆಯಾ ಪಾತ್ರನಿರೂಪಣೆಗೆ ಮುಖಕ್ಕೆ ಬಣ್ಣ ಬಳಿದುಕೊಳ್ಳುವ ಪದ್ಧತಿ ಚೀನದಿಂದ ಬಂದು ಇಲ್ಲಿಯೂ ಕಾಣಿಸಿತಾದರೂ ಕಾಬುಕೀ ಮಾತ್ರ ತನ್ನ ಜಪಾನೀ ದೇಶೀಯತೆಯನ್ನು ಉಳಿಸಿಕೊಂಡಿತು.

ಮೊದಮೊದಲಿನ ಕಾಬುಕೀ ನಾಟಕಗಳು ಜಪಾನಿನ ನೊ ಗೀತನಾಟಕಗಳಂತೆಯೇ ಒಂದು ಅಂಕದ ನಾಟಕವಾಗಿದ್ದುವು. ಕಾಲಕ್ರಮೇಣ ಚಾರಿತ್ರಿಕವೂ ಸಾಮಾಜಿಕವೂ ಆದ ಕಥಾಪ್ರಸಂಗಗಳು ಬಂದುವು. ಕೆಲವೊಂದು ಸಲ ಅವು ಹತ್ತು ಅಂಕಗಳಿಗಿಂತಲೂ ಹೆಚ್ಚು ವ್ಯಾಪಕವಾಗಿರುತ್ತಿದ್ದುವು. ಪರದೆ, ನೈಜ ದೃಶ್ಯಾವಳಿಗಳು, ತಿರುಗುವ ರಂಗ ಸಜ್ಜಿಕೆ– ಮುಂತಾದ ತಾಂತ್ರಿಕ ವಿಶೇಷಗಳು ಕಾಬುಕೀ ಮತ್ತು ನೊ ನಾಟಕಗಳಿಗಿದ್ದ ತಾರತಮ್ಯವನ್ನು ಎತ್ತಿತೋರಿಸುತ್ತಿದ್ದುವು. ಕಾಬುಕೀಯಲ್ಲಿನ ಭಾವಸಮೃದ್ಧಿ ಮತ್ತು ಅಬಾಧಿತ ಭಾವಪೂರ್ಣ ಸನ್ನಿವೇಶಗಳು ಅದು ಜನಪ್ರಿಯವಾಗಲು ಸಹಕಾರಿಯಾದವು. ಹದಿನೇಳನೆಯ ಶತಮಾನದ ಅಂತ್ಯ ಮತ್ತು ಹದಿನೆಂಟನೆಯ ಶತಮಾನದ ಪ್ರಾರಂಭದ ವರ್ಷಗಳನ್ನು ಕಾಬುಕೀಯ ಪ್ರವರ್ಧಮಾನದ ಕಾಲವೆನ್ನಬಹುದು. ರಂಗ ಸಜ್ಜಿಕೆಯಲ್ಲಿ ಆದ ಸುಧಾರಣೆಗಳಲ್ಲದೆ ನಾಟಕ ಕಲಾಸಕ್ತರಾದ ಅನೇಕರು ಮುಂದೆ ಬಂದು ನಾಟಕಕಲೆಗೆ ಪುಷ್ಟಿಕೊಟ್ಟರು; ಹೊಸ ಹೊಸ ತಾಂತ್ರಿಕ ಸುಧಾರಣೆಗಳನ್ನು ತಂದರು. ಕಾಬುಕೀನಾಟಕಗಳು ಆಕರ್ಷಿಸಿದ್ದು ಹೆಚ್ಚಾಗಿ ವರ್ತಕವರ್ಗದವರನ್ನೇ. ತಮ್ಮಲ್ಲಿದ್ದ ಐಶ್ವರ್ಯ ಮತ್ತು ವಿರಾಮವನ್ನು ನಾಟಕ ನೋಡುವುದಕ್ಕೆ ವಿನಿಯೋಗಿಸುತ್ತಿದ್ದ ಆ ವರ್ಗಕ್ಕೆ ಟೋಕುಗಾವ ಸರ್ಕಾರ ಹಾಕಿದ ನಿರ್ಬಂಧದಿಂದಾಗಿ ಅವರವರ ಕೆಲಸಕಾರ್ಯಗಳ ಮೇಲೆ ಅವರವರು ಗಮನ ನೀಡುವಂತಾಯಿತು. ಹಿಂದಿನ ಕಾಲದ ಕೆಲವು ಚಾರಿತ್ರಿಕ ನಾಟಕಗಳನ್ನು ಅಭಿನಯಿಸುವಲ್ಲಿ ಇಂದಿನ ನೈಜತೆಗೂ ಅಂದಿನ ಕಾಲ ಧರ್ಮಕ್ಕೂ ನಡುವೆ ಬರುವ ಕೆಲವು ಅಹಿತಗಳನ್ನು ಮರೆಮಾಚುವಲ್ಲಿ ಪಾತ್ರಧಾರಿಗಳು ಕೌಶಲದಿಂದ ಅಭಿನಯಿಸುತ್ತಿದ್ದರಲ್ಲದೆ ಅಂದಿನ ಆ ಉನ್ನತ ಜೀವನದ ಚಿತ್ರಣವನ್ನೂ ಆಗಿನ ಸಾಹಸಕಾರ್ಯಗಳ ಭಾವೋದ್ರೇಕ ದೃಶ್ಯಗಳನ್ನೂ ಸಭಿಕರ ಕಣ್ಣುಮುಂದೆ ತರುತ್ತಿದ್ದರು. ಸಾಮಾಜಿಕ ನಾಟಕಗಳಲ್ಲಿ, ಮನುಷ್ಯನ ಬಾಳುವೆ ಅನುಕಂಪ ಮತ್ತು ದೌರ್ಭಾಗ್ಯಗಳ ಹೋರಾಟದಲ್ಲಿ ಸಿಲುಕಿರುವುದನ್ನೂ ಮನುಷ್ಯನ ಭಾವನೆ ಮತ್ತು ನಿರ್ಬಂಧಗಳ ನಡುವೆ ಆತನ ಜೀವನ ಸಿಕ್ಕಿ ನೀರಸವಾಗಿರುವುದನ್ನೂ ಎತ್ತಿ ತೋರಿಸುತ್ತಿದ್ದರು.

ಕಾಬುಕೀಯಲ್ಲಿ ಕೆಲವು ಸಂಪ್ರದಾಯಬದ್ಧವಾದ ವಿಶೇಷಗಳು ಕಾಣಸಿಗುತ್ತವೆ. ಹೆಚ್ಚು ಕೃತಕವಾದ ಆಲಂಕಾರಿಕ ಭಾಷಣಗಳು, ಪರಾಕಾಷ್ಠೆಗೇರಿ ಸಹಜತೆಗೆ ದೂರವಾದ ಕೆಲವು ಪ್ರಸಂಗಗಳು ಎದ್ದು ಗೋಚರಿಸುತ್ತವೆ. ಆದರೆ ಸಾಮಾಜಿಕ ನಾಟಕ ಅಥವಾ ಈಚಿನ ಚಾರಿತ್ರಿಕ ನಾಟಕಗಳಲ್ಲಿ ನೈಜ ಅಭಿನಯಕ್ಕೆ ಹೆಚ್ಚಿನ ಅವಕಾಶವಿದೆ. ಸಂಪ್ರದಾಯಬದ್ಧವಾದ ನಾಟಕಗಳು ಆಧುನಿಕ ಜಪಾನಿನಲ್ಲಿ ಏಳಿಗೆಗೆ ಬರಲಾರವು ಎಂಬ ಮಾತುಗಳು ಹಲವಾರು ಸಲ ಕೇಳಿಬಂದಿದೆಯಾದರೂ ಕಾಬುಕೀ ನಾಟಕ ತನ್ನದೇ ಆದ ವೈಶಿಷ್ಟ್ಯ, ಚೈತನ್ಯ ಮತ್ತು ಪರಿಸರಕ್ಕೆ ತಕ್ಕಂತೆ ಹೊಂದಿಕೊಳ್ಳುವ ಶಕ್ತಿಗಳಿಂದಾಗಿ ಇಂದಿಗೂ ಜಪಾನಿನಲ್ಲಿ ಮುಂದುವರಿದುಕೊಂಡು ಬರುತ್ತಿದೆ. *

**ಕಾಬೂಲ್ :** ಆಫ್ಘಾನಿಸ್ತಾನದ ರಾಜಧಾನಿ, ಆ ದೇಶದ ಅತ್ಯಂತ ದೊಡ್ಡ ನಗರ. ಕಾಬೂಲ್ ನದಿಯ ಬಲದಂಡೆಯ ಮೇಲೆ, ಸಮುದ್ರಮಟ್ಟದಿಂದ 1828 ಮೀ ಎತ್ತರದಲ್ಲಿದೆ.

ಕಾಬೂಲ್ ನದಿಯ ಮೇಲಿರುವ ಮಸ್ಜಿದ್–ಇ–ಷಹ–ದೋ–ಷಂಫೀರ : ಜೋಡಿ ಕತ್ತಿಗಳ ದೊರೆಯ ಮಸೀದಿ

ಜನಸಂಖ್ಯೆ 14,24,000. ಬಹುತೇಕ ಜನ ಪರ್ಷಿಯನ್ ಭಾಷೆಯನ್ನಾಡುವವರು ; ಪಠಾಣರೂ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಅಸ್ಮೈ ಮತ್ತು ಷೇರ್ ದರ್ವಾಜ಼ಾ ಬೆಟ್ಟಗಳ ಮಧ್ಯದ ಕಣಿವೆಯಲ್ಲಿ ಈ ನಗರವಿದೆ. ಇಕ್ಕಟ್ಟಾದ ಕಣಿವೆಯೊಂದರ ಮುಖಾಂತರ ಹೊರಪ್ರದೇಶಗಳೊಡನೆ ಸಂಪರ್ಕ ಪಡೆದಿದೆ. ಈ ಕಣಿವೆಯ ಮೂಲಕವೇ ಕಾಬೂಲ್

ನದಿಯೂ ಘಜ಼ಿ ಮತ್ತು ಪಘ್‌ಮಾನ್ ರಸ್ತೆಗಳೂ ಹಾದುಹೋಗುತ್ತವೆ. ಬೆಟ್ಟಗಳ ಮೇಲಿರುವ ಮಣ್ಣಿನ ಕೋಟೆಯ ಅವಶೇಷಗಳು ಕಾಬೂಲ್‌ಷಾಹಿ ಸುಲ್ತಾನರಿಂದ ನಿರ್ಮಿತವಾದ ಕೋಟೆಯ ಉಳಿಕೆಗಳಿರಬಹುದು. ಹಿಂದೂಕುಷ್ ಪರ್ವತಗಳ ಮೂಲಕ ಹಾದುಹೋಗುವ



ಕಾಬೂಲಿನ ಒಂದು ಬೀದಿ

ಉತ್ತರದ ಎಲ್ಲ ಕಣಿವೆಮಾರ್ಗಗಳ ಮೇಲೂ ತನ್ನ ಪ್ರಭಾವ ಬೀರುವ ಈ ನಗರದ ಭೌಗೋಳಿಕ ನೆಲೆ ಭಾರತ–ಪಾಕಿಸ್ತಾನ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಭೂಸಂಪರ್ಕಕ್ಕೆ ಮುಖ್ಯ ದ್ವಾರದಂತಿದೆ.

ಹಳೆಯ ಮತ್ತು ಈಗಿನ ನಗರ ವಿಭಾಗಗಳು ಒಂದಾಗಿ ಸೇರಿದ್ದು ಇದು ಇಕ್ಕಟ್ಟಾದ ಮತ್ತು ಅಗಲವಾದ ರಸ್ತೆಗಳಿಂದಲೂ ಹಳೆಯ ಮತ್ತು ಆಧುನಿಕ ಕಟ್ಟಡಗಳಿಂದಲೂ ಕೂಡಿದೆ. ನಗರವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಅನೇಕ ಸ್ಮಾರಕಗಳೂ ಆಧುನಿಕ ಭವ್ಯ ಕಟ್ಟಡಗಳೂ ಉದ್ಯಾನಗಳೂ ಇಲ್ಲುಂಟು. ಆಫ್ಘಾನಿಸ್ತಾನದ ಪ್ರಮುಖ ಕೈಗಾರಿಕಾ ಕೇಂದ್ರವಾದ ಇಲ್ಲಿ ಬೆಂಕಿಕಡ್ಡಿ, ಚರ್ಮ, ಹತ್ತಿ ಮತ್ತು ಉಣ್ಣೆ ಗಿರಣಿಗಳು ಸ್ಥಾಪಿತವಾಗಿವೆ. (ಡಿ.ಎಸ್.ಎ.)

ಅರಬರು ಕಾಬೂಲನ್ನು ಗೆದ್ದರೂ (656) ಹಲವು ಶತಮಾನಗಳವರೆಗೂ ಈ ಪ್ರದೇಶದ ಮೇಲೆ ಮಹಮ್ಮದೀಯರು ಶಾಶ್ವತ ಅಧಿಕಾರ ಪಡೆಯಲಾಗಲಿಲ್ಲ.

ಬಾಬರ್ 1504ರಲ್ಲಿ ಈ ಪ್ರಾಂತ್ಯವನ್ನು ಗೆದ್ದ. 1526ರಲ್ಲಿ ಆತ ಭಾರತದ ಮೇಲೆ ಆಕ್ರಮಣ ನಡೆಸುವವರೆಗೂ ಕಾಬೂಲ್ ಅವನ ರಾಜಧಾನಿಯಾಗಿತ್ತು. ಮೊಗಲ್ ಸಾಮ್ರಾಜ್ಯದ ಕಾಲದಲ್ಲಿ ಪ್ರಾದೇಶಿಕ ರಾಜಧಾನಿಯಾಯಿತು. 1738ರಲ್ಲಿ ನಾದಿರ್ ಷಾನ ವಶವಾಯಿತು. ಅಹ್ಮದ್ ಷಾ 1747ರಲ್ಲಿ ನಾದಿರ್ ಷಾನನ್ನು ಕೊಂದು ಸ್ವತಂತ್ರ ಆಫ್ಘನ್ ರಾಜ್ಯ ಸ್ಥಾಪಿಸಿದ. ಒಂದನೆಯ ಮತ್ತು ಎರಡನೆಯ ಆಫ್ಘನ್ ಯುದ್ಧಗಳ ಪರಿಣಾಮವಾಗಿ ಇದು ಬ್ರಿಟಿಷರ ವಶವಾಯಿತು. 1880ರ ಅನಂತರ ಸ್ವತಂತ್ರ ಆಫ್ಘಾನಿಸ್ತಾನದ ರಾಜಧಾನಿಯಾಗಿದೆ.

**ಕಾಬೂಲ್ ಪ್ರಾಂತ್ಯ:** ಆಫ್ಘಾನಿಸ್ತಾನದ ಒಂದು ದೊಡ್ಡ ಪ್ರಾಂತ್ಯ. ವಿಸ್ತೀರ್ಣ 46618 ಚ.ಕಿಮೀ. ಕಾಬೂಲ್ ನಗರದ ಸುತ್ತಣ ಪ್ರದೇಶದಲ್ಲಿ ಪ್ರಧಾನವಾಗಿ ತಾಜಿಕರೂ ಪಠಾಣರೂ ವಾಸವಾಗಿದ್ದಾರೆ. ಪ್ರಾಂತ್ಯದ ಪರ್ವತಮಯವಾದ ಪಶ್ಚಿಮಾರ್ಧ ಪ್ರದೇಶದಲ್ಲಿ ಮಂಗೋಲ್



ಕಾಬೂಲಿನ ಅರಮನೆ : ರಕ್ಷಣೆಯ ದೃಷ್ಟಿಯಿಂದ ಕೋಟೆಯಂತೆ ನಿರ್ಮಿತ

ವಂಶದ ಹಜಾರಾ ಜನರಿದ್ದಾರೆ. ಬೇಸಗೆಯಲ್ಲಿ ಪಾಕಿಸ್ತಾನ್ ಗಡಿಯ ಬಳಿಯ ಕುಚಿ ಅಲೆಮಾರಿ ಜನ ತಮ್ಮ ಕುರಿಮಂದೆಗಳನ್ನು ಇಲ್ಲಿಗೆ ಮೇವಿಗಾಗಿ ಕರೆತರುತ್ತಾರೆ.

ಕಾಬೂಲ್ ಪ್ರಾಂತ್ಯದ ವಾಯುಗುಣ ಹಿತಕರ. ವಸಂತಕಾಲದಲ್ಲಿ ಗುಡುಗು ಸಿಡಿಲುಗಳಿಂದ ಕೂಡಿ ಮಳೆ ಸುರಿಯುತ್ತದೆ. ಕೃಷಿ ಮಾಡಬಹುದಾದ ಪ್ರದೇಶಗಳ

ಕಾಬೂಲ್ ನದಿ ಅದೇ ಹೆಸರಿನ ನಗರದ ಜೀವವಾಹಿನಿ. ತೂಗು ಸೇತುವೆಯ ಅಡಿಯಲ್ಲಿ ಸ್ತ್ರೀಯರು ಬಟ್ಟೆ ಒಗೆಯುತ್ತಿದ್ದಾರೆ

ಮುಖ್ಯ ಬೆಳೆಗಳು ಗೋದಿ ಮತ್ತು ಬಾರ್ಲಿ. ಹಣ್ಣುಗಳೂ ವಿಶೇಷವಾಗಿ ಬೆಳೆಯುತ್ತವೆ. ಇಲ್ಲಿಯ ಕೋಹ–ಇ–ದಾಮನ್ ಕಣಿವೆ ಅತ್ಯಂತ ಸುಂದರವಾದ್ದು. ಪ್ರಾಚೀನ ಇತಿಹಾಸದಲ್ಲಿ

ಕಾಬೂಲ್ ವಿಶ್ವವಿದ್ಯಾಲಯದ ಒಂದು ಪ್ರಯೋಗಾಲಯ

ಇದು ವಹಿಸಿದ್ದ ಪಾತ್ರ ಹಿರಿದು. ಇಸ್ಲಾಂ ಪೂರ್ವಕಾಲದಲ್ಲಿ ಇದು ಆಗಿನ ಸಂಸ್ಕೃತಿಯ ನೆಲೆಯಾಗಿತ್ತು. ಇಲ್ಲಿ ಅನೇಕ ಪಟ್ಟಣಗಳು ಪ್ರವರ್ಧಮಾನವಾಗಿದ್ದವು.

ಕಾಬೂಲಿಗೆ 40 ಕಿಮೀ ಉತ್ತರದಲ್ಲಿ ಕಣಿವೆಯ ಪಶ್ಚಿಮ ಭಾಗದಲ್ಲಿರುವ ಸುಂದರ ಪಟ್ಟಣ ಇಸ್ತಾಲಿಫ್. ಬಾಬರ್ ಇದನ್ನು ಹೊಗಳಿದ್ದಾನೆ. ಸುಂದರವಾದ ಮಡಕೆ ಕುಡಿಕೆಗಳನ್ನೂ ಬಣ್ಣಬಣ್ಣದ ಕಂಬಳಿಗಳನ್ನೂ ಇಲ್ಲಿ ತಯಾರಿಸುತ್ತಾರೆ. ಕಾಬೂಲಿನ ಪಶ್ಚಿಮಕ್ಕೆ 25 ಕಿಮೀ ದೂರದಲ್ಲಿ ಪಘ್‌ಮಾನ್ ಪಟ್ಟಣವಿದೆ. ಇದು ಬೇಸಗೆಯ ವಿಶ್ರಾಂತಿಧಾಮ. ದೊರೆಯ ಮತ್ತು ಅನೇಕ ಶ್ರೀಮಂತರ ಬೇಸಗೆ ಬಿಡಾರಗಳು ಇಲ್ಲಿವೆ. ಇಲ್ಲಿ ಅನೇಕ ಸುಂದರ ಉಪವನಗಳುಂಟು. ಕಾಬೂಲಿಗೂ ಈ ಪಟ್ಟಣಕ್ಕೂ

ಮಧ್ಯದಲ್ಲಿ ಹರಿಯುವ ಪಘ್‌ಮಾನ್ ನದಿಗೆ ಕಟ್ಟೆ ಕಟ್ಟಿ ನಿರ್ಮಿಸಲಾಗಿರುವ ಜಲಾಶಯವೂ ಒಂದು ವಿಹಾರ ಸ್ಥಳ.

ಕಳೆದ ದಶಕದ ರಾಜಕೀಯ ಬದಲಾವಣೆಗಳಿಂದಾಗಿ ಕಾಬೂಲ್ ಈಗ ಹೊಸ ರೂಪ ಧರಿಸುತ್ತಿದೆ. ತಾಲಿಬಾನ್ ಆಳ್ವಿಕೆಯಿಂದ ಆಫ್ಘಾನಿಸ್ತಾನವನ್ನು ವಿಮೋಚನೆಗೊಳಿಸಿದ ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳು ಕರ್ಜೈ ನೇತೃತ್ವದಲ್ಲಿ ಆಡಳಿತದ ಮೂಲಕ ಕಾಬೂಲು ಒಳಗೊಂಡಂತೆ ಇಡೀ ರಾಷ್ಟ್ರಕ್ಕೆ ಪಾಶ್ಚಾತ್ಯೀಕರಣದ ಸ್ವರೂಪ ನೀಡಲು ಪ್ರಯತ್ನಿಸುತ್ತಿವೆ. *

**ಕಾಬ್ಡೆನ್, ರಿಚರ್ಡ್ :** 1804–65. ಇಂಗ್ಲೀಷ್ ಅರ್ಥಶಾಸ್ತ್ರಜ್ಞ, ವಿಕ್ಟೋರಿಯ ಆಳ್ವಿಕೆಯ ಆರಂಭ ಕಾಲದಲ್ಲಿ ಮುಕ್ತ ವ್ಯಾಪಾರವನ್ನು (ಫ್ರೀ ಟ್ರೇಡ್) ಪ್ರತಿಪಾದಿಸಿದವರಲ್ಲಿ ಅಗ್ರಗಣ್ಯ. ಸಸೆಕ್ಸಿನ ಮಿಡ್‌ಹರ್ಸ್ಟ್ ಬಳಿ ಡನ್‌ಫರ್ಡ್ ಕೃಷಿಕ್ಷೇತ್ರದಲ್ಲಿ 1804ರ ಜೂನ್ 3ರಂದು ಇವನ ಜನನ. ತಂದೆ ತಾಯಿಯರದು ಬಡತನದ ಜೀವನ. ಆದರೂ ಅವರಿಗೆ ಮಕ್ಕಳು ಹನ್ನೊಂದು ಜನ. ನಂತರೇ ಇವರನ್ನೆಲ್ಲ ಸಾಕಿದರು. ರಿಚರ್ಡ್ ಕಾಬ್ಡೆನ್ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡಿ, ಲಂಡನಿನಲ್ಲಿ ಬಂಧುವೊಬ್ಬನ ದಿನಸಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಕೊಂಡ. ಸ್ವಲ್ಪ ಕಾಲಾನಂತರ ಇವನೂ ಇನ್ನಿಬ್ಬರೂ ಸೇರಿ ಸ್ವಂತ ವ್ಯಾಪಾರವನ್ನಾರಂಭಿಸಿದರು. ಕ್ರಮೇಣ ಇವನಿಗೆ ರಾಜಕೀಯದ ಗೀಳು ಹತ್ತಿತು. ಈತ ವ್ಯಾಪಾರದಿಂದ ಬಿಡುಗಡೆ ಹೊಂದಿ ರಾಜಕಾರಣವನ್ನು ಪ್ರವೇಶಿಸಿದ. (ಪಿ.ಎಂ.ಯು.ಎಸ್.)

ಚಿಕ್ಕಂದಿನಲ್ಲಿ ಚೆನ್ನಾಗಿ ಓದಲಿಲ್ಲವೆಂಬ ಕೊರತೆ ಕಾಬ್ಡೆನನಿಗೆ ಇದ್ದೇ ಇತ್ತು. ಆದ್ದರಿಂದ ಇವನು ಆಳವಾಗಿಯೂ ವಿಸ್ತಾರವಾಗಿಯೂ ವ್ಯಾಸಂಗ ಮಾಡಿದ. ಫ್ರಾನ್ಸ್, ಸ್ವಿಟ್ಜರ್ಲೆಂಡ್, ಅಮೆರಿಕ ಸಂಯುಕ್ತಸಂಸ್ಥಾನ, ಪಶ್ಚಿಮ ಏಷ್ಯ ಮತ್ತು ಜರ್ಮನಿಗಳಲ್ಲಿ ಪ್ರವಾಸ ಮಾಡಿದ್ದರಿಂದ ಇವನ ಅನುಭವ ಬೆಳೆಯಿತು. 1835 ಮತ್ತು 1836ರಲ್ಲಿ ಅನುಕ್ರಮವಾಗಿ ಪ್ರಕಟವಾದ ಇವನ ಇಂಗ್ಲೆಂಡ್, ಐರ್ಲೆಂಡ್ ಅಂಡ್ ಅಮೆರಿಕ ಮತ್ತು ರಷ್ಯ ಎಂಬ ಹೊತ್ತಗೆಗಳು ಇವನ ವಿದ್ವತ್ತು ಅನುಭವಗಳ ದ್ಯೋತಕ. ಅಮೆರಿಕದ ಉತ್ಕರ್ಷ, ಶಕ್ತಿ ಸಮತೋಲದ ನವಕಲ್ಪನೆ, ಬ್ರಿಟನ್ನು ತನ್ನ ವಿದೇಶೀ ವ್ಯಾಪಾರವನ್ನು ವರ್ಧಿಸಿಕೊಳ್ಳುವುದರ ಆವಶ್ಯಕತೆ–ಮುಂತಾದ ಅನೇಕ ವಿಚಾರಗಳು ಆ ಪುಸ್ತಿಕೆಗಳಲ್ಲಿ ವಿವೇಚಿತವಾಗಿವೆ. ಸೈನ್ಯಬಲ ಮತ್ತು ಹಿರಿಮೆಯ ಡಂಭಗಳನ್ನು ಬಿಟ್ಟು ಮುಕ್ತವ್ಯಾಪಾರದಲ್ಲಿ ತೊಡಗುವುದರಿಂದಲೇ ದೇಶದ ಉನ್ನತಿ ಸಾಧಿಸುವುದೆಂಬುದು ಇವನ ವಾದವಾಗಿತ್ತು. ನಮ್ಮ ವಾಣಿಜ್ಯವನ್ನು ಬೆಳೆಸಿ ರಕ್ಷಿಸುವ ಸಾಧನವೆಂದರೆ ಕತ್ತಿಯಲ್ಲ, ಅಗ್ಗದ ಸರಕು–ಎಂದು ಕಾಬ್ಡೆನ್ ಬೋಧಿಸಿದ. ಬ್ರಿಟನ್ನು ವ್ಯಾಪಾರಿ ರಾಷ್ಟ್ರವಾಗಿ ಬೆಳೆಯುವುದರಿಂದ ಸರಕಿನ ಸುಸೂತ್ರ ಸಾಗಣೆ ಮತ್ತು ಸಂಪತ್ತಿನ ವೃದ್ಧಿ ಸಾಧಿಸುತ್ತದೆ; ಇದು ಹೊಸ ಅಂತಾರಾಷ್ಟ್ರೀಯ ವ್ಯವಸ್ಥೆಯ ಸ್ಥಾಪನೆಗೆ ನಾಂದಿಯಾಗುತ್ತದೆ ಎಂಬ ಕಾಬ್ಡೆನ್ ವಾಣಿ ಭವಿಷ್ಯದ ಮುನ್ನೋಟವಾಗಿತ್ತು.

1838 ರಿಂದ 1846ರವರೆಗಿನ ಕಾಲದಲ್ಲಿ ಕಾಬ್ಡೆನನ ಗಮನ ಮುಖ್ಯವಾಗಿ ಹರಿದಿದ್ದುದು ಧಾನ್ಯ ಕಾಯಿದೆಗಳತ್ತ. ಬ್ರಿಟನಿನಲ್ಲಿ ಬೆಳೆಯುತ್ತಿದ್ದ ಧಾನ್ಯದ ಬೆಲೆಗಳು ಇಳಿಯದಂತೆ ರಕ್ಷಿಸುವುದು ಸುಮಾರು ನಾನೂರು ವರ್ಷಗಳಿಂದಲೂ ಸರ್ಕಾರದ ಆಶಯವಾಗಿತ್ತು. ಇದಕ್ಕಾಗಿ ಅನ್ಯದೇಶಗಳಿಂದ ಆಮದಾಗುವ ಧಾನ್ಯಗಳ ಮೇಲೆ ಸುಂಕ ವಿಧಿಸಲಾಗುತ್ತಿತ್ತು. ಅಗ್ಗದ ಧಾನ್ಯ ಬ್ರಿಟನ್ನಿಗೆ ಬಾರದಂತೆ ತಡೆಗಟ್ಟಲಾಗಿತ್ತು. ಇದರಿಂದ ಕಷ್ಟ ಅನುಭವಿಸುತ್ತಿದ್ದವರು ಕಾರ್ಮಿಕಜನ, ಸಾಮಾನ್ಯಜನ. ಧಾನ್ಯ ಕಾಯಿದೆಗಳನ್ನು ಕಟುವಾಗಿ ವಿರೋಧಿಸಿ, ಅವನ್ನೆಲ್ಲ ಶಾಸನ ಕಡತದಿಂದ ತೊಡೆದುಹಾಕಿಸುವುದು ಕಾಬ್ಡೆನನ ಗುರಿಯಾಯಿತು. ಬ್ರಿಟನಿನಲ್ಲಿ ಸ್ಥಾಪಿತವಾದ ಧಾನ್ಯ ಕಾಯಿದೆ ವಿರೋಧಿ ಸಂಘದ ಮುಂದಾಳುಗಳಲ್ಲಿ ಕಾಬ್ಡೆನ್ ಪ್ರಮುಖ. ದರಿದ್ರರಲ್ಲಿ ಅತಿ ದರಿದ್ರರಾದವರಿಂದ ಕಿತ್ತುಕೊಂಡು ಶ್ರೀಮಂತರಲ್ಲಿ ಅತಿ ಶ್ರೀಮಂತರಿಗೆ ಹಣ ನೀಡುವುದೇ ಧಾನ್ಯ ಕಾನೂನು ಮಾಡುತ್ತಿರುವ ಕೆಲಸವೆಂದು ಕಾಬ್ಡೆನ್ ಹೇಳಿದ. ಇದು ನೈತಿಕ ಪಾತಕ, ಆರ್ಥಿಕವಾಗಿ ಅನುಚಿತ. ಇದರಿಂದ ಲಾಭ ಪಡೆಯುವವರು ಜಮೀನುಗಳ ಒಡೆಯರು. ಸಮಾಜದ ಕೊಳ್ಳೆ ಹೊಡೆದು ತುಂಬಿಕೊಳ್ಳುವ ಲಾಭವಿದು–ಎಂದು ಕಾಬ್ಡೆನನೂ ಇವನ ಅನುಯಾಯಿಗಳೂ ವಾದಿಸಿದರು. ಈ ವಾದ ಹೊಸದೇನೂ ಆಗಿರಲಿಲ್ಲ. ಆದರೆ ಇದನ್ನು ಆಳುವ ಜನಕ್ಕೆ ಮನದಟ್ಟು ಮಾಡಿಕೊಡಲು ಕಾಬ್ಡೆನ್ ಅನುಸರಿಸಿದ ಕ್ರಮ ತೀವ್ರವಾದ್ದಾಗಿತ್ತು. ಇವನ ಸಕಲ ಬುದ್ಧಿಯೂ ಇದಕ್ಕಾಗಿ ಮುಡಿಪಾಯಿತು. ಪಟ್ಟಣಗಳಲ್ಲಿ ಆರಂಭವಾಗಿ ಹಳ್ಳಿಯನ್ನೂ ದಾಳಿಯಿಟ್ಟ ಈ ವೈಚಾರಿಕ ಪ್ರಚಾರದಿಂದ ಸರ್ಕಾರ ತಬ್ಬಿಬ್ಬಾಯಿತು. 1841ರಲ್ಲಿ ಸ್ಟಾಕ್‌ಪೋರ್ಟಿನಿಂದ ಇಂಗ್ಲೆಂಡಿನ ಪಾರ್ಲಿಮೆಂಟಿಗೆ ಆಯ್ಕೆಯಾಗಿ ಬಂದ ಕಾಬ್ಡೆನ್ ಗುಡುಗಿದ. ಕ್ರಮಕ್ರಮವಾಗಿ ಪೀಲ್ ಕಾಬ್ಡೆನನ ವಾದದ ಹಿಂದಿನ ಸತ್ವವನ್ನು ಗುರುತಿಸಬೇಕಾಯಿತು. 1845ರಲ್ಲಿ ಐರ್ಲೆಂಡಿನಲ್ಲಿ ಭೀಕರವಾದ ಆಲೂಗಡ್ಡೆ ಕ್ಷಾಮ ಸಂಭವಿಸಿದಾಗ ಪೀಲ್‌ನ ಪರಿವರ್ತನೆ ಸಂಪೂರ್ಣವಾಯಿತು. ಆದರೆ ಧಾನ್ಯ ಕಾಯಿದೆಗಳನ್ನು ತೊಡೆದುಹಾಕುವ ಬಗ್ಗೆ ಸಂಪುಟದಲ್ಲಿ ಒಮ್ಮತ ಇರಲಿಲ್ಲ. ಪೀಲ್ನ ಸಂಪುಟ ಮುರಿದು ಬಿತ್ತು. ಸರ್ಕಾರವನ್ನು ರಚಿಸಲು ಲಾರ್ಡ್ ಜಾನ್ ರಸೆಲನಿಗೆ ಆಹ್ವಾನ ಬಂತು. ಆತ ಕಾಬ್ಡೆನನಿಗೂ ಸಚಿವತ್ವ ನೀಡಬಯಸಿದ. ಆದರೆ ಕಾಬ್ಡೆನ್ ಒಪ್ಪಲಿಲ್ಲ. ರಸೆಲ್ ಸಂಪುಟ ರಚಿಸಲು ಅಸಮರ್ಥನಾದಾಗ ಪೀಲ್ ಮತ್ತೆ ಅಧಿಕಾರಕ್ಕೆ ಬಂದ. ಅವನ ಅನುಯಾಯಿಗಳಲ್ಲಿ ಅನೇಕರು ಪೀಲನನ್ನು ತೊರೆದರು. ಆದರೆ ರಾಜಕೀಯ ವಿರೋಧಿಗಳನೇಕರು ಅವನಿಗೆ ಬೆಂಬಲ ನೀಡಿದರು.

ಧಾನ್ಯ ಕಾಯಿದೆಗಳನ್ನು ತೊಡೆದು ಹಾಕಲಾಯಿತು. ಆದರೆ ಬೇರೊಂದು ವಿಷಯದಲ್ಲಿ ಪೀಲನ ಸರ್ಕಾರಕ್ಕೆ ಪಾರ್ಲಿಮೆಂಟಿನಲ್ಲಿ ಸೋಲಾಯಿತು. 1846ರ ಜೂನ್ 29ರಂದು ಪೀಲ್ ಮಾಡಿದ ಅಂತಿಮ ಭಾಷಣದಲ್ಲಿ ಕಾಬ್ಡೆನನನ್ನು ಕೊಂಡಾಡಿದ. ಈ ಕ್ರಮದ ಯಶಸ್ಸಿಗೆ ಕಾರಣ ತಾನಲ್ಲ, ಕಾಬ್ಡೆನ್–ಎಂದು ಆತ ಹೊಗಳಿದ. ನಿಸ್ವಾರ್ಥದೃಷ್ಟಿ, ಅವಿರತಪ್ರಯತ್ನ, ಅದಮ್ಯಉತ್ಸಾಹ, ವಾದಚಾತುರ್ಯ, ವಾಗ್ಮಿತೆ: ಕಾಬ್ಡೆನನ ಗುಣಗಳಿವು–ಎಂದು ಪೀಲ್ ಹೇಳಿದ.

ಈ ಅಭೂತಪೂರ್ವ ವಿಜಯದ ನಡುವೆ ಕಾಬ್ಡೆನನ ಸ್ವಂತ ಆರ್ಥಿಕಸ್ಥಿತಿ ಚಿಂತಾಜನಕವಾಗಿತ್ತು. ಧಾನ್ಯ ಕಾಯಿದೆಗಳ ರದ್ದಿಗಾಗಿ ಹೋರಾಟದ ಕಣಕ್ಕಿಳಿಯುವ ಮುನ್ನ ವ್ಯಾಪಾರದಿಂದ ಈತ ಸಾಕಷ್ಟು ಐಶ್ವರ್ಯ ಗಳಿಸಿದ್ದ. ಅದೆಲ್ಲ ಕರಗಿ ಹೋಗಿತ್ತು. ಮೈಯೆಲ್ಲ ಸಾಲವಾಗಿತ್ತು. ಅದನ್ನು ತೀರಿಸಲು ಸಾರ್ವಜನಿಕರು ಚಂದಾ ನೀಡಿದರು (1847). ಬಂದ ಹಣದಲ್ಲಿ ಒಂದು ಭಾಗದಿಂದ ಕಾಬ್ಡೆನ್ ತನ್ನ ಹುಟ್ಟಿದ ಸ್ಥಳದಲ್ಲಿ ಕೃಷಿಕ್ಷೇತ್ರವನ್ನು ಕೊಂಡ. ಅದೇ ಇವನ ವಾಸ ಸ್ಥಳವಾಯಿತು. ಕಾಬ್ಡೆನ್ ವಿವಾಹವಾದದ್ದು 1840ರಲ್ಲಿ. ಕ್ಯಾದರೀನ್ ಆನೆ ವಿಲಿಯಮ್ಸ್ ಚೆಲುವೆ. ಒಬ್ಬನೇ ಮಗ ರಿಚರ್ಡ್ ಬ್ರೂಕ್ ಕಾಬ್ಡೆನ್ 15ನೆಯ ವರ್ಷದಲ್ಲಿ ಹಠಾತ್ತನೆ ತೀರಿಕೊಂಡ (1856). ಕಾಬ್ಡೆನ್ ದಂಪತಿಗಳ ಹೆಣ್ಣುಮಕ್ಕಳು ಐವರು. ಅವರಲ್ಲೊಬ್ಬಾಕೆ ಕಾದಂಬರಿಗಾರ್ತಿ: ಎಲೆನ್ ಮಿಲಿಸೆಂಟ್.

ಧಾನ್ಯ ಕಾಯಿದೆಗಳ ವಿಸರ್ಜನೆಯೊಂದಿಗೆ ಕಾಬ್ಡೆನ್ ರಾಜಕಾರಣದಿಂದ ನಿವೃತ್ತಿ ಹೊಂದಲಿಲ್ಲ. ಸ್ವಲ್ಪ ಕಾಲ ವಿಶ್ರಾಂತಿಗಾಗಿ ಸ್ಪೇನ್, ಇಟಲಿ, ರಷ್ಯಗಳಲ್ಲಿ ಪ್ರವಾಸ ಕೈಕೊಂಡ. 1847ರ ಚುನಾವಣೆಯಲ್ಲಿ ಮತ್ತೆ ಇವನಿಗೆ ವಿಜಯ ದೊರಕಿತು. ಮುಂದಣ ಹತ್ತು ವರ್ಷಗಳ ಕಾಲ ಈತ ಪಾರ್ಲಿಮೆಂಟ್ ಸದಸ್ಯನಾಗಿ ಮುಂದುವರಿದ. ಮುಕ್ತವ್ಯಾಪಾರದ ಸ್ಥಾಪನೆಗಾಗಿ ಪ್ರಚಾರ ಸಾಗಿಸಿದ. ಶಸ್ತ್ರಾಸ್ತ್ರಗಳ ಕಡಿತ, ಐರೋಪ್ಯ ವ್ಯವಹಾರಗಳಲ್ಲಿ ಹಸ್ತಕ್ಷೇಪದ ಅಂತ್ಯ, ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆಗೆ ವಿರೋಧ–ಇವಕ್ಕಾಗಿ ಹೋರಾಟ ಮುಂದುವರಿಯಿತು. ಪೀಲನ ಮರಣಾನಂತರ ಬ್ರಿಟಿಷ್ ರಾಜಕೀಯದಲ್ಲಿ ಪ್ರಧಾನ ಸ್ಥಾನ ಗಳಿಸಿದ್ದ ಲಾರ್ಡ್ ಪಾಮರ್‌ಸ್ಟನ್ ಕಾಬ್ಡೆನನ ಟೀಕೆಗಳನ್ನೆದುರಿಸಬೇಕಾಯಿತು. ಕಾಬ್ಡೆನನ ವಿಚಾರಗಳಿಗೆ ಹಲವು ಕಡೆ ಮನ್ನಣೆ ದೊರಕಿತು. ಅಂತರರಾಷ್ಟ್ರೀಯ ಶಾಂತಿ ಚಳುವಳಿಗೆ ಕಾಬ್ಡೆನನೂ ಒಬ್ಬ ಅಧ್ವರ್ಯುವಾದ. 1848ರಿಂದ 1851ರ ವರೆಗಿನ ಕಾಲದಲ್ಲಿ ಈತ ಅನೇಕ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸಿದ.

ಆದರೆ ಕಾಲಕ್ರಮದಲ್ಲಿ ದೇಶದ ವಿಚಾರಧಾರೆ ಬದಲಾಯಿತು. ಯುದ್ಧದ ಖರ್ಚಿಲ್ಲದ, ಶಾಂತಿಪ್ರಧಾನವಾದ ರಾಜನೀತಿಯಲ್ಲೂ ಮುಕ್ತ ವ್ಯಾಪಾರದಲ್ಲೂ ನಂಬಿಕೆ ಕಡಿಮೆಯಾಯಿತು. ಆದರೂ ಕಾಬ್ಡೆನ್ ಹಿಂದೆಗೆಯಲಿಲ್ಲ. ಗತಕಾಲದ ತಪ್ಪುಗಳನ್ನೆ ಮತ್ತೆ ಮಾಡಬಾರದೆಂದು ತನ್ನ ಹಸ್ತಪತ್ರಗಳಲ್ಲಿ ಎಚ್ಚರಿಸುತ್ತಲೇ ಇದ್ದ. ಫ್ರಾನ್ಸಿನೊಂದಿಗೆ ಯುದ್ಧ ಬೇಡವೆಂಬುದು ಇವನ ದೃಢ ನಿಲುವು. ಕ್ರಿಮಿಯ ಯುದ್ಧ ಆರಂಭವಾಯಿತು. ವಾಟ್ ನೆಕ್ಸ್ಟ್–ಅಂಡ್ ನೆಕ್ಸ್ಟ್ ಎಂಬ ಪತ್ರದಲ್ಲಿ ಅವನು ತನ್ನ ನಂಬಿಕೆಯನ್ನು ಮತ್ತೆ ದೃಢೀಕರಿಸಿದ. ವ್ಯಾಪಾರ ಮತ್ತು ಮಾನವತೆಗಳಿಗಾಗಿ ರಷ್ಯದೊಂದಿಗೆ ಸ್ನೇಹ ಅವಶ್ಯ ಎಂದು ಬೋಧಿಸಿದ. ಆದರೆ ಇವನ ಸಮಕಾಲೀನರಲ್ಲಿ ಅನೇಕರು ಯುದ್ಧೋನ್ಮಾದಕ್ಕೆ ಸಿಲುಕಿದ್ದರು. 1857ರಲ್ಲಿ ಇವನ ಸೂಚನೆಯೊಂದಕ್ಕೆ ಪಾರ್ಲಿಮೆಂಟಿನಲ್ಲಿ ವಿಜಯ ದೊರಕಿತಾದರೂ ಅನಂತರ ನಡೆದ ಚುನಾವಣೆಯಲ್ಲಿ ಕಾಬ್ಡೆನ್ ಸೋತ.

ಈ ವೇಳೆಯಲ್ಲಿ ಕಾಬ್ಡೆನ್ ಅಮೆರಿಕಕ್ಕೆ ಹೋಗಿ ಬಂದ. 1859ರಲ್ಲಿ ಪಾರ್ಲಿಮೆಂಟಿಗೆ ನಡೆದ ಚುನಾವಣೆಯಲ್ಲಿ ಮತ್ತೆ ಗೆದ್ದ. ಹಿಂದೆ ಇವನ ವಿರೋಧಿಯಾಗಿದ್ದ ಲಾರ್ಡ್ ಪಾಮರ್‌ಸ್ಟನನೇ ಇವನನ್ನು ಸಂಪುಟಕ್ಕೆ ಸೇರಬೇಕೆಂದು ಆಹ್ವಾನಿಸಿದ. ವ್ಯಾಪಾರ ಮಂಡಳಿಯ (ಬೋರ್ಡ್ ಆಫ್ ಟ್ರೇಡ್) ಅಧ್ಯಕ್ಷನಾಗಬೇಕೆಂಬ ಅವನ ಆಹ್ವಾನವನ್ನು ಕಾಬ್ಡೆನ್ ಪುರಸ್ಕರಿಸಲಿಲ್ಲ. ಫ್ರಾನ್ಸಿನೊಂದಿಗೆ ಹೊಸ ವಾಣಿಜ್ಯ ಕೌಲೊಂದನ್ನು ಏರ್ಪಡಿಸಿಕೊಳ್ಳುವ

ಬಗ್ಗೆ ಸಂಧಾನವೊಂದರಲ್ಲಿ ಕಾಬ್ಡೆನ್ ನಿರತನಾದ. 1860 ರಲ್ಲಿ ಅಂಥ ಕೌಲಿಗೆ ಎರಡೂ ದೇಶಗಳ ಸಹಿ ಬಿತ್ತು. ಬೇರೆ ದೇಶಗಳ ಸರಕುಗಳಿಗೆ ವಿಧಿಸದ ಯಾವ ಸುಂಕವನ್ನೂ ಈ ದೇಶಗಳು ಪರಸ್ಪರವಾಗಿ ವಿಧಿಸುವುದಿಲ್ಲವೆಂಬುದು ಈ ಕೌಲಿನ ಮುಖ್ಯ ಸೂತ್ರ. ಈ ಸೂತ್ರ ಅನಂತರ ಇತರ ಅನೇಕ ಕೌಲುಗಳಿಗೆ ತಳಹದಿಯಾಯಿತು. 1870ರ ಮತ್ತು 1880ರ ದಶಕಗಳಲ್ಲಿ ಮುಕ್ತ ವ್ಯಾಪಾರ ತತ್ತ್ವಕ್ಕೆ ಮತ್ತೆ ಪ್ರಾಮುಖ್ಯ ತಪ್ಪಿತಾದರೂ 1860ರಲ್ಲಿ ಸಹಿ ಹಾಕಲಾದ ಕೌಲು ಕಾಬ್ಡೆನನ ಹಿರಿಯ ಸಾಧನೆಗಳಲ್ಲೊಂದು.

1860ರ ಅನಂತರ ಕಾಬ್ಡೆನನ ಗಮನ ಸೆಳೆದ ವಿಚಾರವೆಂದರೆ ಅಮೆರಿಕನ್ ಅಂತರ್ಯುದ್ಧ. ಅಲ್ಲಿ ಯಾವ ಪಕ್ಷವನ್ನು ವಹಿಸಬೇಕೆಂಬ ಬಗ್ಗೆ ಕಾಬ್ಡೆನ ಮೊದಮೊದಲು ನಿರ್ಣಯಿಸಲಾರನಾಗಿದ್ದ. ಅನತಿಕಾಲದಲ್ಲೇ ಇವನ ನೈತಿಕ ಬೆಂಬಲ ಉತ್ತರದ ಪಕ್ಷಕ್ಕೆ ದೊರಕಿತು.

ಎಡೆಬಿಡದ ಹೋರಾಟ, ಬಿಡುವಿಲ್ಲದ ಸಂಧಾನ, ದುಡಿಮೆ–ಇವುಗಳಿಂದಾಗಿ ಕಾಬ್ಡೆನನ ಆರೋಗ್ಯ ಕೆಟ್ಟಿತು. ಪ್ಯಾರಿಸಿನ ಚಳಿಗಾಲದ ಹವ ಇವನಿಗೆ ವಿರೋಧಿಸಿತು. ಕಾಬ್ಡೆನನ ಜೀವನದ ಕೊನೆಯ ಐದು ವರ್ಷಗಳಲ್ಲಿ ಇವನ ಆರೋಗ್ಯ ತೀರ ಅಸಮರ್ಪಕವಾಗಿತ್ತು. ಹಾಗೂ ಕಾಬ್ಡೆನ್ ಪಾರ್ಲಿಮೆಂಟಿನ ಅಧಿವೇಶನಕ್ಕೆ ಹಾಜರಾಗಿ ಯುದ್ಧಕಾರ್ಯಗಳಿಗೆ ಸಂಬಂಧಿಸಿದ ವೆಚ್ಚದ ಸೂಚನೆಯೊಂದಕ್ಕೆ ವಿರೋಧವಾಗಿ ಮತ ನೀಡಿದ. ಆದರೆ ಇವನ ಮುದಿದೇಹ ಶ್ರಮವನ್ನು ಸಹಿಸಲಿಲ್ಲ. 1865ರ ಏಪ್ರಿಲ್ 2ರಂದು ಕಾಬ್ಡೆನ್ ನಿಧನನಾದ.

ಕಾಬ್ಡೆನ್ 19ನೆಯ ಶತಮಾನದ ಮಧ್ಯವರ್ಗದ ಪ್ರತಿನಿಧಿಸ್ವರೂಪ. ಕೈಗಾರಿಕಾ ಕ್ರಾಂತಿಯ ಶಿಶು. ಆ ಕ್ರಾಂತಿಯಿಂದುದ್ಭವಿಸಿದ ಸಮಸ್ಯಾವಿಶೇಷಗಳಿಗೆಲ್ಲ ಮುಕ್ತ ಆರ್ಥಿಕ ಸ್ವಾತಂತ್ರ್ಯವೇ ಮದ್ದೆಂಬುದು ಇವನ ಭಾವನೆಯಾಗಿತ್ತು. ಈ ಭಾವನೆಯನ್ನು ಈತ ಪರಮಾವಧಿಗೆ ಕೊಂಡೊಯ್ದ. ಪ್ರತಿಯೊಬ್ಬನಿಗೂ ಅವನವನ ಹಿತವನ್ನು ಸಾಧಿಸಿಕೊಳ್ಳುವ ಅವಕಾಶವಿರಲಿ. ಆಗ ಯಾರೂ ಯಾರ ಹಿತಕ್ಕೂ ವ್ಯತಿರಿಕ್ತವಾಗಿರುವುದು ಸಾಧ್ಯವಿಲ್ಲ–ಎಂಬುದು ಇವನ ವಾದಸಾರ. ಕಾರ್ಖಾನೆ ಕಾನೂನನ್ನೂ ಕೂಡ ಇವನು ವಿರೋಧಿಸಿದ. ಸರ್ಕಾರ ಇಂಥ ಕ್ಷೇತ್ರಗಳಲ್ಲಿ ಪ್ರವೇಶಿಸಬಾರದೆಂಬುದು ಕಾಬ್ಡೆನನ ಭಾವನೆ. ಕಾರ್ಮಿಕ ಸಂಘಗಳಿಗೂ ಕಾಬ್ಡೆನ್ ವಿರೋಧಿಯಾಗಿದ್ದ. ಮಧ್ಯವರ್ಗದ ಸಂಘಟನೆಗಾಗಿಯೇ ಕಾಬ್ಡೆನ್ ಶ್ರಮಿಸಿದ್ದು. ಧಾನ್ಯ ಕಾಯಿದೆಗಳ ರದ್ದಿಗಾಗಿ ನಡೆಸಿದ ಚಳವಳಿ ಕೂಡ ಮಧ್ಯಮವರ್ಗದ ಚಳವಳಿಯೆಂದೇ ಇವನ ಭಾವನೆಯಾಗಿತ್ತು. ಊಳಿಗಮಾನ್ಯವ್ಯವಸ್ಥೆಯ ಆಡಳಿತವನ್ನು ಅಳಿಸಿ ಮಧ್ಯಮವರ್ಗಕ್ಕೆ–ವರ್ತಕರು ಮತ್ತು ತಯಾರಿಕೆದಾರರಿಗೆ– ಆಡಳಿತಾಧಿಕಾರ ಹಸ್ತಾಂತರವಾಗಲು ನಿಮಿತ್ತವಾದವನೀತ. ಆಗಿನ ಕಾಲದ ಆರ್ಥಿಕ ಹಿತಗಳನ್ನು ನೈತಿಕ ಸೂತ್ರಗಳಾಗಿ ಪರಿವರ್ತಿಸಿ, ಅವನ್ನು ಮಧ್ಯಮವರ್ಗಕ್ಕೆ ಬೋಧಿಸಿ, ಅವುಗಳ ಮೂಲಕ ಅಂತಾರಾಷ್ಟ್ರೀಯ ಶಾಂತಿ ಸೌಹಾರ್ದಗಳ ಮೆಟ್ಟಲು ಕಟ್ಟಲು ಯತ್ನಿಸಿದ ಅಧ್ವರ್ಯುಗಳಲ್ಲಿ ಕಾಬ್ಡೆನ್ ಪ್ರಮುಖ. *

**ಕಾಮಂದಕಿ :** ಕಾಮಂದಕೀಯ ಎಂಬ ನೀತಿಶಾಸ್ತ್ರದ ಕರ್ತೃ. ಕಮಂದಕ ಋಷಿಯ ಮಗ. ಪ್ರ.ಶ.ಪೂ. ಸು. 320–80ರ ನಡುವೆ ಇದ್ದನೆಂದು ತಿಳಿದುಬರುತ್ತದೆ. ಈತನ ರಾಜನೀತಿಶಾಸ್ತ್ರ ವಿಷಯಕವಾದ ನೀತಿಸಾರ ಕೌಟಿಲ್ಯನ ಅರ್ಥಶಾಸ್ತ್ರದ ಧಾಟಿಯಲ್ಲಿದೆ. ಕರ್ತೃವೇ ಒಂದು ಕಡೆ ಹೇಳುವಂತೆ ಗ್ರಂಥದ ಬಹುಪಾಲು ಕೌಟಿಲ್ಯನ ರಚನೆಗಳಿಂದ ಆಯ್ದ ಸಾರಾಂಶವನ್ನು ಉಳ್ಳದ್ದಾಗಿದೆ.

ಈ ಗ್ರಂಥ ಪದ್ಯರೂಪದಲ್ಲಿ ಬರೆದಿರುವ ಪ್ರಥಮ ರಾಜನೀತಿಶಾಸ್ತ್ರವೆಂದು ಹೇಳಲಾಗಿದೆ. 1 ರಾಜಾಧಿಕಾರ ಮತ್ತು ಸಮಾಜ ವ್ಯವಸ್ಥೆಯ ಕಾನೂನಿನ ಮೂಲ; 2 ರಾಜನ ಕರ್ತವ್ಯಗಳು ಮತ್ತು ಅಧಿಕಾರದ ಉಪಯೋಗ; 3 ರಾಜ್ಯ ಮತ್ತು ಸರ್ಕಾರದ ರಚನೆಯ ವಿವರಗಳು; 4 ಸರ್ಕಾರದ ನೀತಿ ಮತ್ತು ಕರ್ತವ್ಯಗಳ ವಿವರಗಳು; 5 ರಾಜನ ಮತ್ತು ಸಮುದಾಯದ ರಕ್ಷಣೆಯ ವಿಚಾರಗಳು; 6 ರಾಜ್ಯರಾಜ್ಯಗಳ ನಡುವಿನ ಸಂಬಂಧಗಳು; 7 ರಾಜನೀತಿಗೆ ಸಂಬಂಧಪಟ್ಟ ವಿಚಾರಗಳು– ಹೀಗೆ ಇಲ್ಲಿನ ವಿಷಯಾನುಕ್ರಮಣಿಕೆ ಇದೆ.

ಈತನೂ ದಂಡನೀತಿಯ ಅಂಶವನ್ನು ಎತ್ತಿ ಹಿಡಿದಿದ್ದಾನೆ. ಆ ಮೂಲಕ ಸಂಪ್ರದಾಯದ ಸಾಮಾಜಿಕ ಮತ್ತು ನೈತಿಕ ತತ್ತ್ವಗಳನ್ನು ಗುರುತಿಸಿದ್ದಾನೆ. ರಾಜ್ಯದ ಅಂತಿಮ ಧ್ಯೇಯ ಮತ್ತು ಗುರಿಗಳ ಬಗ್ಗೆ ಚರ್ಚಿಸಿದ್ದಾನೆ. ಪ್ರಜೆಗಳ ಮತ್ತು ಪ್ರಭುಗಳ ಆಸಕ್ತಿಗಳು ಒಂದೇ ಆಗಿರುತ್ತವೆ ಎಂದು ಹೇಳಿದ್ದಾನೆ. ರಾಜನಲ್ಲಿಯ ನೈತಿಕ ಶಿಸ್ತು ಮತ್ತು ಕರ್ತವ್ಯಗಳ ಬಗ್ಗೆ ವಿವರಣೆ ನೀಡುವುದರೊಂದಿಗೆ ಕ್ರೂರ ಮತ್ತು ಅನೈತಿಕ ಗುಣಗಳಿಂದಾಗಿ ನಾಶ ಹೊಂದಿದ ರಾಜರುಗಳನ್ನು ಕುರಿತೂ ಬರೆದಿದ್ದಾನೆ. ಯುವರಾಜನ ವಿದ್ಯೆ ಮತ್ತು ತರಬೇತಿಯ ವಿಚಾರದಲ್ಲಿ ಸಾಕಷ್ಟು ವಿಪುಲವಾಗಿ ಚರ್ಚಿಸಿದ್ದಾನೆ. ಅನುಜೀವಿಗಳು (ರಾಜಸೇವಕರು) ರಾಜನಿಗೆ ಸಲ್ಲಿಸಬೇಕಾದ ಸೇವೆಯನ್ನು ಕುರಿತ ವಿವರಗಳನ್ನು ಕೊಟ್ಟಿದ್ದಾನೆ.

ಕಂಟಕಶೋಧನ ಅಥವಾ ಅಪರಾಧಗಳ ಪತ್ತೆಯ ಬಗ್ಗೆ ಅನೇಕ ಮಹತ್ತ್ವದ ವಿಷಯಗಳನ್ನು ಇಲ್ಲಿ ಸೂಚಿಸಲಾಗಿದೆ. ಸಪ್ತಾಂಗಗಳ ಪ್ರಸ್ತಾಪವಿಲ್ಲಿದೆ. ಸೈನ್ಯವನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಮುಖ್ಯ ಗಮನ ಕೊಡಬೇಕೆಂದು ಕಾಮಂದಕಿಯ ಮತ. ಮಂಡಲ ವ್ಯವಸ್ಥೆಯ ಬಗ್ಗೆಯೂ ವಿವರಣೆಯಿದೆ. ಕೌಟಿಲ್ಯ ಗ್ರಾಮಗಣ ರಾಜ್ಯಗಳ ಬಗ್ಗೆ ಪ್ರತ್ಯೇಕವಾಗಿ ಬರೆದಿರುವಂತೆ ಈತ ಬರೆದಿಲ್ಲ. ಬಹುಶಃ ಈತನ ಕಾಲದಲ್ಲಿ ಅಂಥ ವ್ಯವಸ್ಥೆಗಳಿಲ್ಲದೆ ಇರಬಹುದು. ಹಾಗೆಯೇ ಅರ್ಥಶಾಸ್ತ್ರದಲ್ಲಿ ಕೌಟಿಲ್ಯ ಪ್ರಜೆಯ ನಾಗರಿಕ ಮತ್ತು ಆಪರಾಧಿಕ ಕಾನೂನುಗಳನ್ನು ಚರ್ಚಿಸಿರುವಂತೆ ಇಲ್ಲಿ ಆ ವಿಷಯಗಳ ಬಗ್ಗೆ ಹೆಚ್ಚು ಗಮನವಿತ್ತಂತಿಲ್ಲ. ಇಲ್ಲಿನ ಬರೆಹಗಳಲ್ಲಿ ಹೆಚ್ಚಾಗಿ ರಾಜನ ಮತ್ತು ಆತನ ಸೇನಾಧಿಕಾರಿಗಳ ಬಗ್ಗೆ ವಿವರಣೆಗಳು ಸಿಕ್ಕುತ್ತವೆಯೇ ಹೊರತು ಬೇರಾವ ಆಡಳಿತ ಅಥವಾ ಕಾನೂನು ಪಾಲನೆಯ ವಿವರಣೆಗಳೂ ದೊರಕುವುದಿಲ್ಲ. (ಸಿ.ಪಿ.)

**ಕಾಮ :** ಚತುರ್ವಿಧ ಪುರುಷಾರ್ಥಗಳಲ್ಲಿ ಒಂದು. ತೃತೀಯ ಪುರುಷಾರ್ಥ ಎನ್ನುವುದಿದೆ. ಬ್ರಹ್ಮನ ಹೃದಯ ಇಚ್ಛಾರೂಪ ಕಾಮದ ಉತ್ಪತ್ತಿಸ್ಥಾನ. ರಜೋಗುಣದಿಂದ ಇದು ಉತ್ಪನ್ನವಾಗಿದೆ. ಭೂಮಿಯಲ್ಲಿ ಹುಟ್ಟಿದ ಕೂಡಲೇ ಪ್ರಾಣಿಗಳಿಗೆ ಕಾಮವೆಂಬುದು ಇರಕೂಡದೆಂದು ಬ್ರಹ್ಮನ ಶಾಪ. ಅನುಭವಿಸುವುದರಿಂದ ಕಾಮ ನಶಿಸುವುದಿಲ್ಲ, ಹೆಚ್ಚುತ್ತದೆ. ಬಯಸಿದುದನ್ನು ಕೊಡುವ ವಿಷ್ಣುವಿಗೂ ಗಣಗಳ ಅಧಿಪನಾದ ಮಹಾದೇವನಿಗೂ ಕಾಮನೆಂಬ ಹೆಸರಿದೆ. ಶ್ರೀಕೃಷ್ಣನ ಮಕ್ಕಳಲ್ಲಿ ಕಾಮನೂ ಒಬ್ಬ. ಮದನ, ಮನ್ಮಥ, ಮಾರ, ಪ್ರದ್ಯುಮ್ನ, ಮೀನಕೇತನ, ಕಂದರ್ಪ, ಪಂಚಶರ, ಸ್ಮರ–ಇತ್ಯಾದಿ ಹೆಸರುಗಳಿಂದ ಈತ ಪ್ರಸಿದ್ಧ. ನಾಯಕ ನಾಯಕಿಯರ ಮೇಳನ ಕಾರ್ಯದಲ್ಲಿ ಈತನದೇ ಮುಖ್ಯಪಾತ್ರ. ರೂಪದಲ್ಲಿ ಈತ ಅತ್ಯಂತ ಮನೋಹರ. ಈಶ್ವರನ ಹಣೆಗಣ್ಣಿನ ದೃಷ್ಟಿಯಿಂದ ಸುಟ್ಟು ಭಸ್ಮವಾಗಿ ಶರೀರವಿಲ್ಲದವನಾದ (ಅತನು). ಈ ವೃತ್ತಾಂತ ಕಾಳಿದಾಸನ ಕುಮಾರಸಂಭವದಲ್ಲಿ ರಮ್ಯವಾಗಿ ವರ್ಣಿತವಾಗಿದೆ. ಕಬ್ಬು ಈತನ ಬಿಲ್ಲು. ಅರವಿಂದ, ಅಶೋಕ, ಚೂತ, ಮಲ್ಲಿಕಾ, ನೀಲೋತ್ಪಲ–ಈ ಐದು ವಿಧ ಹೂಗಳು ಈತನ ಬಾಣಗಳು. ಮೀನು ಈತನ ಧ್ವಜದ ಸಂಕೇತ. ವಸಂತಋತು ಈತನ ಮಂತ್ರಿ. ರತಿ ಈತನ ಹೆಂಡತಿ. ಕಾಮ ಶಿವನ ಮೇಲೆ ಯುದ್ಧಮಾಡಿ ಗೆದ್ದ ಕಥೆಯನ್ನು ಕನ್ನಡಕವಿ ಆಂಡಯ್ಯ ತನ್ನ ಕಾಮನಗೆಲ್ಲಂ ಎಂಬ ಕಾವ್ಯದಲ್ಲಿ ಬಿತ್ತರಿಸಿದ್ದಾನೆ.

ಕಾಮ : ನಂಜನಗೂಡಿನ ನಂಜುಂಡೇಶ್ವರ ದೇವಾಲಯ

ಪಾಡ್ಯ ಮೊದಲಾದ ಹದಿನೈದು ತಿಥಿಗಳಿಗನುಗುಣವಾಗಿ ಪ್ರತಿಯೊಬ್ಬ ಮನುಷ್ಯನಲ್ಲೂ ಪಾದಾಂಗುಷ್ಠ, ಗುಲ್ಫ, ಊರು, ಭಗ, ನಾಭಿ, ಎದೆ, ಹೃದಯ, ಕಕ್ಷ, ಕಂಠ, ಓಷ್ಠ, ಗಂಡ, ನಯನ, ಶ್ರವಣ, ಲಲಾಟ, ಶಿಖೆ–ಈ ಹದಿನೈದು ಸ್ಥಾನಗಳಲ್ಲಿ ಯಥಾಕ್ರಮವಾಗಿ ಸ್ತ್ರೀಯರಿಗೆ ಎಡಪಾರ್ಶ್ವದಲ್ಲೂ ಪುರುಷರಿಗೆ ಬಲಪಾರ್ಶ್ವದಲ್ಲೂ ಕಾಮ ಸಂಚರಿಸುತ್ತಾನೆ. (ಎಸ್.ಎನ್.ಕೆ.)

**ಕಾಮಕಟಂಕಟೆ :** ಒಬ್ಬ ರಾಕ್ಷಸಿ. ಪ್ರಾಗ್‍ಜ್ಯೋತಿಷಪುರದ ದೊರೆಯಾಗಿದ್ದ ನರಕಾಸುರನ ಸೇನಾಪತಿ ಮುರುವಿನ ಮಗಳು. ಕಾಮಾಖ್ಯಾ ದೇವತೆಯ ಔಪಾಸಕಳಾದ ಈಕೆ ಪ್ರಬಲೆಯಾಗಿದ್ದು ಸಾಹಸ, ಸದ್ಗುಣ ಸೌಂದರ್ಯಗಳಿಗೆ ಹೆಸರಾದವಳಾಗಿದ್ದಳು. ಶ್ರೀಕೃಷ್ಣ ಮುರುವನ್ನು ಯುದ್ಧದಲ್ಲಿ ಕೊಂದಾಗ ಆತನೊಡನೆ ಇವಳು ಯುದ್ಧ ಮಾಡಿ ದೈವವಿಘ್ನದಿಂದ ತಟಸ್ಥೆಯಾದಳು. ನರಕಪುತ್ರ ಭಗದತ್ತ ಈಕೆಗೆ ಆಶ್ರಯ ನೀಡಿದ. ತನ್ನ ಒಗಟುಗಳನ್ನು ಬಿಡಿಸಿ, ಯುದ್ಧದಲ್ಲಿ ತನ್ನನ್ನು ಗೆದ್ದವನನ್ನು ಮದುವೆಯಾಗುವೆನೆಂದು ಪಣತೊಟ್ಟು ಆ ನೆಪದಲ್ಲಿ ಲಕ್ಷಾಂತರ ವೀರರನ್ನು ಈ ರಾಕ್ಷಸಿ ಕೊಂದಿದ್ದಳು. ಭೀಮಪುತ್ರ ಘಟೋತ್ಕಚ ಶ್ರೀಕೃಷ್ಣನ ಅನುಗ್ರಹದಿಂದ ಈಕೆಯನ್ನು ಗೆದ್ದು ಇಂದ್ರಪ್ರಸ್ಥದಲ್ಲಿ ವಿವಾಹವಾದ. ಪರಾಕ್ರಮಿ ಬರ್ಬರಕ ಈಕೆಯ ಮಗ. (ಬಿ.ಎಚ್.ಎಸ್.)

**ಕಾಮಕಸ್ತೂರಿ :** ಲೇಬಿಯೇಟೀ ಕುಟುಂಬಕ್ಕೆ ಸೇರಿದ ಒಂದು ಮೂಲಿಕೆ ಸಸ್ಯ. ಶಾಸ್ತ್ರೀಯ ನಾಮ ಆಸಿಮಮ್ ಬೇಸಿಲಿಕಮ್. ಇಂಗ್ಲಿಷಿನ ಸಾಮಾನ್ಯ ಬಳಕೆಯ ಹೆಸರು ಸ್ವೀಟ್ ಬೇಸಿಲ್. ತುಳಸಿ ಗಿಡದ ಹತ್ತಿರ ಸಂಬಂಧಿಯಾದ ಇದೂ ಪರಿಮಳಯುಕ್ತವಾಗಿದೆ.

ಮಧ್ಯ ಏಷ್ಯ ಮತ್ತು ವಾಯವ್ಯ ಭಾರತ ಇದರ ಮೂಲ ಸ್ಥಾನ. ಈಗ ಭಾರತದಾದ್ಯಂತ ಬೆಳೆಯುತ್ತದೆ. ಸುಗಂಧಪೂರಿತ ಎಣ್ಣೆಗಾಗಿ ತೋಟಗಳಲ್ಲಿ ಇದನ್ನು ಬೆಳೆಸುತ್ತಾರೆ. ಗಿಡ ನೆಲದಿಂದ ನೇರವಾಗಿ 30–90 ಸೆಂಮೀ ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ಅಭಿಮುಖವಾಗಿ ಜೋಡಣೆಗೊಂಡಿವೆ; ಆಕಾರ ಈಟಿಯಂತೆ ಅಥವಾ ಅಂಡದಂತೆ; ತುದಿ ಚೂಪು; ಅಂಚು ಗರಗಸದಂತೆ; ರೋಮರಹಿತ. ಹೂಗಳು ಬಿಳಿ ಅಥವಾ ತಿಳಿ ಊದಾಬಣ್ಣದವು. ಸರಳವಾದ ಅಥವಾ ಕವಲೊಡೆದ ಅಂತ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ನಾಲ್ಕು ಪುಷ್ಪಪತ್ರಗಳು ಕೂಡಿಕೊಂಡು ಆಗಿರುವ ಪುಷ್ಪಪಾತ್ರೆ ಎರಡು ತುಟಿಗಳಂತೆ ಭಾಗವಾಗಿದೆ. ಇದರ ಆಕಾರ ಗಂಟೆಯಂತೆ. ಪುಷ್ಪಪಾತ್ರೆ ಹಣ್ಣಿನಲ್ಲೂ ಉಳಿದಿರುತ್ತದೆ. ಪುಷ್ಪದಳ ಸಮೂಹ ನಾಲ್ಕು ದಳಗಳಿಂದ ಕೂಡಿದೆ. ಇದೂ ಕೂಡ ಎರಡು ತುಟಿಗಳಂತೆ ಇಬ್ಭಾಗವಾಗಿದೆ. ಕೇಸರಗಳು ನಾಲ್ಕು. ಇವುಗಳಲ್ಲಿ ಎರಡು ಉಳಿದೆರಡಕ್ಕಿಂತ ದೊಡ್ಡವು. ಅಂಡಾಶಯ ಉಚ್ಚಸ್ಥಾನದ್ದು; ಎರಡು ಕಾರ್ಪೆಲುಗಳಿಂದ ಕೂಡಿದೆ. ಫಲ ನಾಲ್ಕು ಭಾಗಗಳಿಂದ ಕೂಡಿದ ವಿಶಿಷ್ಟ ಬಗೆಯದಾಗಿದೆ. ಇದಕ್ಕೆ ನಟ್‍ಲೆಟ್ಸ್ ಗುಂಪು ಎಂದು ಹೆಸರು. ಒಂದೊಂದು ನಟ್‍ಲೆಟಿನಲ್ಲಿಯೂ ಒಂದೊಂದೇ ಬೀಜ ಇದೆ. ಬೀಜವನ್ನು ನೀರಿಗೆ ಹಾಕಿದಾಗ ಉಬ್ಬಿಕೊಂಡು ಒಂದು ಬಗೆಯ ಅರ್ಧ ಪಾರದರ್ಶಕ ವಸ್ತುವಿನಿಂದ ಆವೃತವಾಗುತ್ತದೆ. ಕಾಮಕಸ್ತೂರಿಯಲ್ಲಿ ಗಾತ್ರ, ಬೆಳವಣಿಗೆ, ರೋಮರಾಶಿ, ಎಲೆ, ಹೂ, ಕಾಂಡಗಳ ಬಣ್ಣಗಳಲ್ಲಿ ವ್ಯತ್ಯಾಸವನ್ನು ತೋರಿಸುವ ಅನೇಕ ಬಗೆಗಳಿವೆ. ಇವುಗಳಲ್ಲಿ ಬೇಸಿಲಿಕಮ್. ಪೈಲೋಸಮ್, ಮೇಜಸ್, ಡಿಫಾರ್ಮೆ (ಸುರುಳಿ ಎಲೆಯ ಬೇಸಿಲ್), ಪರಿಪ್ಯೂರೆಸೆನ್ಸ್ (ನಸುಕೆಂಪು ಬೇಸಿಲ್) ಮತ್ತು ಗ್ಲಾಬ್ರೇಟಮ್ (ಬಿಳಿ ಬೇಸಿಲ್)– ಎಂಬುವು ಮುಖ್ಯವಾದವು.

ಬೀಜಗಳಿಂದ ತಳಿ ವೃದ್ಧಿ. ಭಾರತದ ಮೈದಾನ ಪ್ರದೇಶಗಳಲ್ಲಿ ಅಕ್ಟೋಬರ್–ನವಂಬರ್ ತಿಂಗಳುಗಳಲ್ಲೂ ಗುಡ್ಡಗಾಡು ಪ್ರದೇಶಗಳಲ್ಲಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲೂ ಬಿತ್ತನೆ ಮಾಡುತ್ತಾರೆ. ಮೊದಲು ಒಟ್ಲುಪಾತಿಗಳಲ್ಲಿ ಬೀಜ ಬಿತ್ತಿ ಸಸಿಗಳನ್ನು ಪಡೆದು ಆಮೇಲೆ ಬೇರೆಡೆಗೆ ನಾಟಿ ಹಾಕುತ್ತಾರೆ. ನಾಟಿ ಮಾಡಿದ ಎರಡು ಮೂರು ತಿಂಗಳಲ್ಲಿ ಕೊಯ್ಲು ಮಾಡಬಹುದು. ಗಿಡಗಳನ್ನು ನೆಲಮಟ್ಟಕ್ಕೆ ಕತ್ತರಿಸಿ ಕಂತೆಕಟ್ಟಿ, ಒಣಗಿಸುತ್ತಾರೆ. ಒಣಗಿದ ಎಲೆ ಮತ್ತು ಹೂವಿರುವ ರೆಂಬೆಗಳನ್ನು ಮುಖ್ಯಕಾಂಡದಿಂದ ಬೇರ್ಪಡಿಸಿ ಗಾಳಿಯ ಸಂಪರ್ಕಕ್ಕೆ ಬಾರದಂತೆ ಡಬ್ಬಗಳಲ್ಲಿ ಶೇಖರಿಸಿಡುತ್ತಾರೆ. ಒಂದು ಫಸಲಿನಿಂದ ಹಲವಾರು ಬಾರಿ ಕುಯ್ಲು ಮಾಡಬಹುದು. ಹೆಕ್ಟೇರ್ ಒಂದಕ್ಕೆ ಸುಮಾರು 6800 ಕೆಜಿ ಉತ್ಪನ್ನವಿದೆ.

ಕಾಮಕಸ್ತೂರಿಗೆ ಲವಂಗದಂಥ ಪರಿಮಳವೂ ಸ್ವಲ್ಪ ಉಪ್ಪಿನಂಥ ರುಚಿಯೂ ಇದೆ. ಎಲೆ ಮತ್ತು ಹೂಗೊಂಚಲುಗಳಿಂದ ಒಂದು ಬಗೆಯ ಸುಗಂಧಪೂರಿತ ಚಂಚಲ ತೈಲವನ್ನು ಇಳಿಸಬಹುದು. ಇದನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಹಳ ಉಪಯೋಗಿಸುತ್ತಾರೆ. ಈ ಎಣ್ಣೆಯ ರಾಸಾಯನಿಕ ಸಂಯೋಜನೆ ಮತ್ತು ಗುಣ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಇದರ ಆಧಾರದ ಮೇಲೆ ಎಣ್ಣೆಯನ್ನು ನಾಲ್ಕು ಮುಖ್ಯ ವಿಧಗಳಾಗಿ ವಿಂಗಡಿಸಬಹುದು: (1) ಐರೋಪ್ಯ ವಿಧ–ಇದರಲ್ಲಿ ಮೀಥೈಲ್ ಚಾವಿಕಾಲ್ ಮತ್ತು ಲಿನಲೂಲ್ ಎಂಬ ವಸ್ತುಗಳಿವೆ. ಇದರ ವಾಸನೆ ಉತ್ಕೃಷ್ಟವಾದುದು. ಇದರಿಂದ ಇದಕ್ಕೆ ಬಹಳ ಬೆಲೆ. (2) ರಿಯೂನಿಯನ್ ವಿಧ–ಇದನ್ನು ರಿಯೂನಿಯನ್ ದ್ವೀಪದಲ್ಲಿ ಪ್ರಥಮವಾಗಿ ಬಟ್ಟಿ ಇಳಿಸಲಾಯಿತು. ಈಗ ಮಡಗಾಸ್ಕರ್‌ನಲ್ಲೂ ತಯಾರಿಸುತ್ತಿದ್ದಾರೆ. ಇವುಗಳಲ್ಲಿರುವ ಮುಖ್ಯ ಘಟಕಗಳೆಂದರೆ ಮೀಥೈಲ್ ಚಾವಿಕಾಲ್ ಮತ್ತು ಕರ್ಪೂರ. ಲಿನಲೂಲ್ ಇಲ್ಲ. ಇದು ಯೂರೋಪಿಯನ್ ವಿಧಕ್ಕಿಂತ ಕೆಳದರ್ಜೆಯದು. (3) ಮೀಥೈಲ್ ಸಿನ್ನಮೇಟ್ ಬಗೆ–ಇದರ ಘಟಕಾಂಶಗಳು ಮೀಥೈಲ್ ಚಾವಿಕಾಲ್, ಲಿನನೂಲ್ ಮತ್ತು ಮೀಥೈಲ್ ಸಿನಮೇಟ್. ಬಲ್ಗೇರಿಯ, ಸಿಸಿಲಿ, ಭಾರತ, ಈಜಿಪ್ಟ್‌ಗಳಲ್ಲಿ ಇದನ್ನು ತಯಾರಿಸುತ್ತಾರೆ. (4) ಯೂಜಿನಾಲ್ ಬಗೆ–ಇದರ ಮುಖ್ಯ ಘಟಕ ಯೂಜಿನಾಲ್, ರಷ್ಯ, ಜಾವ ಮತ್ತು ಸಮೋವ ದ್ವೀಪಗಳಲ್ಲಿ ಇದನ್ನು ತಯಾರಿಸುತ್ತಾರೆ.

ಐರೋಪ್ಯ ಬಗೆಯ ಎಣ್ಣೆಯನ್ನು ಸಿಹಿ ತಿಂಡಿ ತಯಾರಿಕೆಯಲ್ಲಿ, ಚಟ್ನಿ ತಯಾರಿಸುವಾಗ, ಟೊಮ್ಯಾಟೊ ಹಣ್ಣಿನ ಕಣಕದ ಜೊತೆಗೆ, ಉಪ್ಪಿನಕಾಯಿಯೊಂದಿಗೆ, ಮಾಂಸಾಹಾರದಲ್ಲಿ ಮಸಾಲೆಯೊಂದಿಗೆ ರುಚಿ ಮತ್ತು ಸುವಾಸನೆ ಕೊಡಲು ಉಪಯೋಗಿಸುತ್ತಾರೆ. ಮಲ್ಲಿಗೆ ಎಣ್ಣೆ ಜೊತೆ ಮಿಶ್ರಮಾಡಿ ದಂತಧಾವನ ವಸ್ತುಗಳ ತಯಾರಿಕೆಯಲ್ಲಿ ಬಳಸುವುದೂ ಉಂಟು. ರಿಯೂನಿಯನ್ ಬಗೆಯ ಎಣ್ಣೆ ಕೂಡ ಇದೇರೀತಿ ಉಪಯೋಗಿಸಲ್ಪಡುತ್ತದೆ. ಅದಲ್ಲದೆ ಸಾಬೂನು ತಯಾರಿಕೆಯಲ್ಲಿ ಹಾಗೂ ಕೀಟನಾಶಕ ಮತ್ತು ಕೀಟನಿವಾರಕ ಆಗಿ, ಉಪಯೋಗಿಸುವುದುಂಟು. ಬೀಜಗಳಿಂದ ತಯಾರಿಸಿದ ಎಣ್ಣೆಗೂ ಈ ಮೇಲಿನ ಔಷಧೀಯ ಗುಣಗಳಿವೆ. ಸಸ್ಯದಿಂದ ತಯಾರಿಸಿದ ಎಣ್ಣೆಯನ್ನು ಹೊಟ್ಟೆನೋವಿನ ನಿವಾರಣೆಗೆ, ಜ್ವರಶಮನಕ್ಕಾಗಿ ಜಂತು ನಿವಾರಣೆಗೆ, ವಾತಹರಣಕ್ಕೆ ಮತ್ತು ಹೆಚ್ಚಿನ ಚೈತನ್ಯಕ್ಕೆ ಉಪಯೋಗಿಸುತ್ತಾರೆ. ನಿದ್ರೆ ಬರಿಸುವ ಗುಣವೂ ಇದಕ್ಕೆ ಇದೆ. ಎಲೆಯ ರಸ ಮತ್ತು ಬೀಜಗಳಿಗೆ ಕಿವಿನೋವನ್ನು ತಡೆಯುವ, ಬದಲಾದ ಉಸಿರಾಟಕ್ರಿಯೆಯನ್ನು ಸರಿಯಾಗಿಸುವ, ಗಂಟಲು ತುರಿಕೆಯನ್ನು ನಿಲ್ಲಿಸುವ, ಮಲಬದ್ಧತೆಯನ್ನು ನಿವಾರಿಸುವ ತಂಪುಗೊಳಿಸುವ ಶಕ್ತಿಯೂ ಇದೆ. ಮಿಕ್ಕಂತೆ ಇದರ ಎಲೆ ಕುಡಿಗಳನ್ನು ಹೂವಿನೊಂದಿಗೆ ಕಟ್ಟಿ ಮುಡಿಯುವ ಪದ್ಧತಿ ಭಾರತದಲ್ಲಿ ಬಳಕೆಯಲ್ಲಿದೆ. (ಎ.ಕೆ.ಕೆ.)

**ಕಾಮತ್, ಎಂ.ಎನ್.:** 1883–1940. ಹೊಸಗನ್ನಡ ಅರುಣೋದಯ ಕಾಲದ, ದಕ್ಷಿಣ ಕನ್ನಡ ಜಿಲ್ಲೆಯ ಆದ್ಯಲೇಖಕರಲ್ಲೊಬ್ಬರು. ಪಂಜೆಮಂಗೇಶರಾಯ, ಗೋವಿಂದ ಪೈ ಅವರ ಸಮಕಾಲೀನರು. ಮುಂಡ್ಕೂರು ನರಸಿಂಹ ಕಾಮತ್ ಇವರ ಪೂರ್ಣ ಹೆಸರು. 1883 ಮಾರ್ಚ್ 17ರಂದು ಮುಂಡ್ಕೂರಿನಲ್ಲಿ ಜನಿಸಿದರು. ತಂದೆ ಶ್ರೀನಿವಾಸ ಕಾಮತ್, ತಾಯಿ ತುಂಗಭದ್ರ. ಕಾಮತ್ ಈ ದಂಪತಿಗಳ ಏಕೈಕ ಪುತ್ರರು. ಬಾಲ್ಯ ಜೀವನವನ್ನು ಬಡತನದಲ್ಲೇ ಕಳೆದರು. ಮೆಟ್ರಿಕ್ಯುಲೇಶನ್ ವರೆಗೆ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲೂ ಎಫ್.ಎ. ವರೆಗಿನ ಶಿಕ್ಷಣವನ್ನು ಸೇಂಟ್ ಅಲೋಯಿಸಿಯಸ್ ಕಾಲೇಜಿನಲ್ಲೂ ಮುಗಿಸಿದರು. ಪ್ರೌಢ ಶಾಲೆಯಲ್ಲಿ ರಾಷ್ಟ್ರಕವಿ ಗೋವಿಂದಪೈಯವರ ಸಹಪಾಠಿಯಾಗಿದ್ದರು. ಚಿಕ್ಕವಯಸ್ಸಿನಿಂದಲೇ ಮೇಧಾವಿಯೂ ಜ್ಞಾನಪಿಪಾಸುವೂ ಅಸಾಧಾರಣ ಪ್ರತಿಭಾವಂತರೂ ಆಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ರಾಬಿನ್ ರೆಡ್‍ಬ್ರೆಸ್ಟ್ ಎಂಬ ಕಾವ್ಯನಾಮದಲ್ಲಿ ಗಾಡ್ಸ್ ಲೈಟ್ ಹೌಸ್, ಕ್ರಿಯೇಷನ್ಸ್ ಬ್ಯಾಪ್ಟಿಸಮ್, ಸ್ನೇಲ್ ಎಂಬ

ಸ್ವತಂತ್ರ ಇಂಗ್ಲಿಷ್ ಕವನಗಳನ್ನು ಬರೆದುದಲ್ಲದೆ ಸೋಮೇಶ್ವರ ಶತಕದ ಕೆಲವು ಭಾಗವನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದರು.



ಮುಂದೆ ಕಾರ್ಕಳದ ಅನುಸೂಯಾಬಾಯಿ ಎಂಬುವರನ್ನು ವಿವಾಹವಾದರು. ಅನಂತರ ಮುಂಬಯಿಯ ರೋಸ್ ಎಂಡ್ ಕಂಪೆನಿ ಎಂಬ ವಾದ್ಯವಾದನಗಳ (ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ಸ್) ವಿದೇಶಿ ಕಂಪನಿಯ ಉದ್ಯೋಗಿಯಾಗಿ ಎರಡು ವರ್ಷ ಸೇವೆ ಸಲ್ಲಿಸಿದರು. ಆಗ ಇವರು ಮರಾಠಿ ರಂಗಭೂಮಿ, ಮರಾಠಿ ಭಾಷೆ ಸಾಹಿತ್ಯಗಳ ಪರಿಚಯ ಮಾಡಿಕೊಂಡರು. ಅನಂತರ ಇವರಿಗೆ ಕಲ್ಕತ್ತಕ್ಕೆ ವರ್ಗವಾಯಿತು. ಅಲ್ಲಿ ನೆಲೆಸಿದ್ದ ಹತ್ತುವರ್ಷಗಳಲ್ಲಿ ಇವರು ಸಾಹಿತಿಯಾಗಿ ಎತ್ತರಕ್ಕೆ ಬೆಳೆದರು. ವಂಗಸಾಹಿತ್ಯ, ಬಂಗಾಲಿಭಾಷೆ, ರವೀಂದ್ರ ಸಾಹಿತ್ಯ, ವಂಗರಂಗಭೂಮಿಗಳ ಪರಿಚಯ ಮತ್ತು ಪ್ರಭಾವಗಳು ಇವರನ್ನು ಸಾಹಿತಿಯಾಗಿ ರೂಪಿಸಿದುವು. ಆಮೇಲೆ ಹುಟ್ಟೂರಿಗೆ ಮರಳಿ ಶಿಕ್ಷಕ ತರಬೇತಿ ಪಡೆದು ಮೂಲ್ಕಿ ಮತ್ತು ಬಂಟ್ವಾಳದಲ್ಲಿ ಕೆಲಸಮಯ ಅಧ್ಯಾಪಕರಾಗಿದ್ದು ಸಾಹಿತ್ಯರಚನೆಗೆ ತೊಡಗಿದರು. ಕನ್ನಡದಲ್ಲೇ ಬರೆವೆನೆಂಬ ಪಣ ತೊಟ್ಟರು. ಸು.22 ವರ್ಷಗಳ ಕಾಲ ಇವರು ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು (1918–40).

ಸುಮಾರು ಮೂರು ದಶಕಗಳ ಕಾಲ (1910–40) ಇವರು ಅವಿರತವಾಗಿ ಸಾಹಿತ್ಯ ರಚಿಸಿದರು. ಜನಪ್ರಿಯ ಅಧ್ಯಾಪಕರೂ ಜನಪ್ರಿಯ ಸಾಹಿತಿಯೂ ಆಗಿ ದಕ್ಷಿಣ ಕನ್ನಡದ ಜನತೆಯಲ್ಲಿ ಓದುವ ಹವ್ಯಾಸ ಬೆಳೆಸಿದರು. ಇವರು ಮಕ್ಕಳ ನಾಟಕಕಾರ, ಮೊದಲ ಏಕಾಂಕ ನಾಟಕಕಾರ, ಲಘು ಪ್ರಬಂಧಕಾರ ಎಂದೇ ಪ್ರಸಿದ್ಧರು. ಸ್ವದೇಶಾಭಿಮಾನಿ, ಕನ್ನಡ ಸಹಕಾರಿ, ಕಂಠೀರವ, ವಾಗ್ಭೂಷಣ, ಮಧುರವಾಣಿ, ಕಾದಂಬರಿ ಸಂಗ್ರಹ, ಪ್ರವಾಸಿ, ಜಯಕರ್ನಾಟಕ, ಕಲಾರಂಗ ಮೊದಲಾದ ವೃತ್ತಪತ್ರಿಕೆ ನಿಯತಕಾಲಿಕಗಳಿಗೆ ಬರೆದು ಆ ಪತ್ರಿಕೆಗಳ ಹೆಸರನ್ನು ಪ್ರಚುರಗೊಳಿಸಿದರು.

ಇವರದು ಸದಭಿರುಚಿಯ ಶುಚಿಯಾದ ಸಾಹಿತ್ಯ. ಹಾಸ್ಯ ಮತ್ತು ಸಹ್ಯವಾದ ವಿಡಂಬನೆಯಿಂದ ರಂಜನೀಯವಾದುದು. ಇವರ ಸಾಹಿತ್ಯದಲ್ಲಿ ಮಕ್ಕಳ ಮನಸ್ಸನ್ನು ಧಕ್ಕೆಗೊಳಿಸುವ ಒಂದಾದರೂ ವಿಕೃತಮಾತು ಬಾರದು. ಇವರ ವೈನೋದಿಕಗಳ ಹಾಸ್ಯ ಮಂಗಳೂರಿನಲ್ಲಿ ಮನೆಮಾತು. ಇವರ ಸಾಹಿತ್ಯವೆಲ್ಲ ಮಂಗಳೂರು ಶೈಲಿಯಲ್ಲೇ. ನಾಟಕಗಳಲ್ಲಿ ಕೂಡ ಧಾರವಾಡ ಅಥವಾ ಮೈಸೂರು ಕನ್ನಡ ಕಾಣಸಿಗದು. ಇವರು ತಾಸುಗಟ್ಟಲೆ ಹಾಸ್ಯಪೂರಿತ ಶೈಲಿಯಿಂದ ಸಭಿಕರನ್ನು ಹೊಟ್ಟೆ ಹುಣ್ಣಾಗಿಸುವಂತೆ ನಗಿಸಬಲ್ಲ ಸಮರ್ಥ ವಾಗ್ಮಿಯಾಗಿದ್ದರು. ಹಾಸ್ಯವೆಂದರೆ ಕಾಮತರು, ಕಾಮತರೆಂದರೆ ಹಾಸ್ಯ ಎಂಬ ಖ್ಯಾತಿ ಇವರದು. ಭೂಗೋಳದ ಅಧ್ಯಾಪಕರಾದರೂ ಯಾವ ವಿಷಯವನ್ನೂ ರಸವತ್ತಾಗಿ ಬೋಧಿಸಬಲ್ಲ ಪ್ರತಿಭೆ ಇವರಲ್ಲಿತ್ತು.

ಕಾಮತರು ವಿಪುಲವಾಗಿ ಸಾಹಿತ್ಯ ಸೃಷ್ಟಿಕಾರ್ಯ ನಡೆಸಿದ್ದಾರೆ. ಈ ಸಾಹಿತ್ಯದಲ್ಲಿ ವೈವಿಧ್ಯವಿದೆ. ಯಾದವಕೃಷ್ಣ, ಗದಾಯುದ್ಧದ ಕಥೆ, ಭೀಷ್ಮಚರಿತೆ, ಕರ್ಣಕಥೆ, ಆರ್ಯಮತೋಪಾಖ್ಯಾನ, ಸೀತಾರಾಮ, ಚಂಡಕೌಶಿಕ, ನಾಗಾನಂದ ಇವು ಪೌರಾಣಿಕ ಕಥೆಗಳು. ಕುಮಾರ ಭೀಮಸಿಂಹ, ಪ್ರೇಮ ಪಿಪಾಸೆ, ಕಮಲ ಕುಮಾರಿ, ಪಟ್ಟಾಭಿಷೇಕ ವಿಂಧ್ಯವಾಸಿನಿ, ಅಶ್ವತ್ಥಮೃಗ, ದಯಾಳುವಾದ ಬುದ್ಧ, ಅಲ್ಲಾವುದ್ದೀನ ಮೊದಲಾದವು ಐತಿಹಾಸಿಕ ಕಥೆಗಳು. ಕಾಮತರದು ಕಟ್ಟಾ ಸ್ತ್ರೀಪಕ್ಷಪಾತಿ ಅಥವಾ ಸ್ತ್ರೀವಾದಿ ಸಂವೇದನೆ, ಸ್ತ್ರೀ ಶೋಷಣೆಯ ಎಲ್ಲ ಮುಖಗಳನ್ನೂ ಪರಿಚಯಿಸುವ ಸ್ವಪ್ನದ ತೊಟ್ಟಿಲು, ಕನ್ಯಾಬಲಿ, ವಧುಪರೀಕ್ಷೆ ಹಣದಪ್ರಭಾವ, ವರದಕ್ಷಿಣೆಯ ವಿಡಂಬನೆ, ಶಾಂತಿ ಮೊದಲಾದ ಸಾಮಾಜಿಕ ಕಥೆಗಳು ನಮ್ಮ ಗಮನ ಸೆಳೆಯುತ್ತವೆ. ಹತ್ತರೊಡನೆ ಹನ್ನೊಂದು ಎಂಬುದು 11 ವಿನೋದ ಕಥೆಗಳ ಒಂದು ಗುಚ್ಛ. ಬೀಡಿ ಸೇದಬೇಡಿ, ಆಮಗು, ಕೆಪ್ಪಟೆರಾಯ, ಕರಿನಾಯಿ, ಅಧ್ಯಕ್ಷ, ಆಮೆ, ರಾಜ್ಯಪ್ರೇಮ, ಡಾಕ್ಟರರ ವಿಜಿಟ್, ಕಲಾವತಿ, ಕೋಳಿ ಜೀವನ –ಇವು ಬಿಡಿ ಕಥೆಗಳು. ಇವರ ಅತ್ಯಂತ ಪ್ರಸಿದ್ಧಕೃತಿ, 'ಅಂದಿನ ಆವೂರು', ಇದರಲ್ಲಿರುವ ಕದ್ದವರು ಯಾರು? –ಭಾರತ ಪ್ರಯೋಗ, ಬೊಗ್ಗು ಮಹಾಶಯ, ಆವೂರು ಮಠ, ವೈದ್ಯರಾಜ ಧನ್ವಂತರಿ –ಈ ಕಥೆಗಳು ಪ್ರಾತಿನಿಧಿಕ ಮೌಲ್ಯವುಳ್ಳ, ಪ್ರಾದೇಶಿಕ ಸನ್ನಿವೇಶ ಮತ್ತು ಪಾತ್ರಗಳಿಂದ ಸೊಗಸಾಗಿವೆ. ಜಯಕರ್ನಾಟಕದಲ್ಲಿ ಪ್ರಕಟವಾದ ಒಂದು ಚಿಕ್ಕ ಕತೆಯ ಕತೆ ಮತ್ತು ಕೂಲಿ –ಇವು ಸಣ್ಣಕಥೆಗಳಂತೆ ಇದ್ದು, 'ಕೂಲಿ' ನವ್ಯದ ಲಕ್ಷಣವಿರುವ ಕಥೆಯೆನ್ನಬಹುದು. ಸಣ್ಣಕಥೆಗಳ ತಂತ್ರ, ನಿರೂಪಣೆಗೆ ಯಾವುದೇ ಸೂತ್ರವಿಲ್ಲದ ಕಾಲದಲ್ಲಿ ಕಾಮತರು ಸಣ್ಣಕಥೆ ರಚಿಸಿದರೆಂಬುದು ಮಹತ್ವದ ಸಂಗತಿ. ಮಕ್ಕಳಿಗಾಗಿಯೇ ಬರೆದ ಬಾಲಕರ ಮಹಾಭಾರತ ಮತ್ತು ರಾಮಾಯಣ –ಇವು ಪಠ್ಯಗಳಾಗಿ ಹಲವು ವರ್ಷ ಪ್ರಚಲಿತವಿದ್ದುವು.

ಕಾಮತರು ಕಾವ್ಯ ರಚನೆಯನ್ನೂ ಸಾಕಷ್ಟು ಮಾಡಿದ್ದಾರೆ. ಅನೇಕ ಕವಿತೆಗಳನ್ನು ರಚಿಸಿದ್ದಾರೆ. ವಟಪುರಾಧೀಶ್ವರ ಶತಕ ಎಂಬ ನೂರು ಪದ್ಯಗಳ ಭಾಮಿನಿ ಷಟ್ಪದಿ ಕಾವ್ಯವನ್ನು ರಚಿಸಿದ್ದಾರೆ. ಮಕ್ಕಳಿಗಾಗಿ ಬರೆದ ಇರುವೆಯೂ ಮಿಡಿತೆಯೂ, ಗೂಡಿನಲ್ಲಿಯ ಇಲಿ, ಬಾಲ ಕಳೆದ ನರಿಯ ಉಪದೇಶ, ಸಂತೆಯ ಕುರುಡನ ಹಾಡು, ಆನೆ ಆನೆಯೋ?, ಗೋವಿನ ಕತೆ,ತಂದೆ ಮಕ್ಕಳೂ ಕುದುರೆಯೂ, ತುಳುನಾಡ ರಾಣಿ, ಹರಕೆ, ತಾಯಿ, ಬೆಂಬಲ, ಕೊಡೆ, ನಾವೆಲ್ಲ ಒಂದೇ ಜಾತಿ, ನನ್ನ ನೆರಳು, ಢಿಲ್ಲಿ, ನಮ್ಮ ತಾಯಿ ಭಾರತಿ, ನೇಗಿಲು ದೇವರು, ಸವಾರನ ಸಮಾಧಾನ, ದೀಪಗಳು, ಹೂವು ಹಂಬಲಿಸಲೇಕೆ? ಈ ಮೊದಲಾದ ರಚನೆಗಳು ಮಕ್ಕಳ ಮಾನಸಿಕ ಬೆಳೆವಣಿಗೆಗೆ ಹೊಂದತಕ್ಕವುಗಳಾಗಿವೆ. ಮಕ್ಕಳ ಕೂಗನು ಕೇಳಿದಿರಾ, ನಮ್ಮ ಬೇಡಿಕೆ, ಬಂಡಿಯೆತ್ತು, ವೀರಪಥ, ಹೊಲೆಯನ ಹಂಬಲ, ದೀನನಾಥನಿಗೆ, ದರಿದ್ರ ನಾರಾಯಣ, ಪೀಡಕನಿಗೆ, ಗ್ರಾಮ ಸೇವಕರ ಹಾಡು ಎಂಬ ಕವನಗಳಲ್ಲಿ ಕಾಮತರ ಕ್ರಾಂತಿಕಾರಿ ಮನೋಭಾವ ವ್ಯಕ್ತವಾಗಿದೆ. 'ಬೇಡಿಕೆ' ಕವಿತೆಯಲ್ಲಿ ಬಂಡಾಯದ ಧ್ವನಿಮಾತ್ರವಲ್ಲ ಕಾಮತರ ಕಾವ್ಯಮಾರ್ಗ ಹಾಗೂ ಚಿಂತನೆ ತಮ್ಮ ಕಾಲಕ್ಕಿಂತ ಬಲುಮುಂದೆ ಇದ್ದಿತೆಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಗಾಂಧಿವಾದಿಯಾಗಿದ್ದ ಇವರು ಅಸ್ಪೃಶ್ಯರ ಪರವಾಗಿ ಬರೆದ ಕವನಗಳು ತುಂಬ ಮಾರ್ಮಿಕವಾಗಿವೆ; ಮನುಷ್ಯತ್ವದ ಚಿಂತನೆಯನ್ನು ಅನಾವರಣಗೊಳಿಸುತ್ತವೆ. ಆ ಕಾಲದಲ್ಲಿ ಇವರು ಅಸ್ಪೃಶ್ಯರೊಡನೆ ಸಹಪಂಕ್ತಿ ಭೋಜನಗೈದುದರಿಂದ ಜಾತಿಯಿಂದ ಬಹಿಷ್ಕೃತರೂ ಆಗಿದ್ದರು. ನಮ್ಮ ತಾಯಿ ಭಾರತಿಯಂಥ ದೇಶಭಕ್ತಿಗೀತೆಯಲ್ಲದೆ ನೀರುಳ್ಳಿಯ ಫಿರ್ಯಾದಿಯ ಯಥಾನಕಲು ಎಂಬ ವಿಡಂಬನ ಗೀತೆಯನ್ನೂ ಇವರು ರಚಿಸಿದ್ದಾರೆ. ಇಂಗ್ಲಿಷ್‌ನಿಂದ, ಬಂಗಾಲಿಯಿಂದ ಅನೇಕ ಪದ್ಯಗಳನ್ನು ಅದರಲ್ಲಿಯೂ ಠಾಕೂರರ ಕವಿತೆಗಳನ್ನು ಅನುವಾದ ಮಾಡಿದ್ದಾರೆ. ಎಲ್ಲಿ ಮನಕಳುಕಿರದೊ (ಠಾಕೂರರ ವೇರ್ ದಿ ಮೈಂಡ್ ಈಸ್ ಹೈ ಎಂಬ ಪದ್ಯದ ಅನುವಾದ) ಮತ್ತು ಸರಿದಾರಿ ತಪ್ಪದಂತೆ (ಲೀಡ್ ಕೈಂಡ್ಲಿ ಲೈಟ್ ಎಂಬ ನ್ಯೂಮನ್‌ನ ಪದ್ಯದ ಅನುವಾದ) ಎಂಬ ಪ್ರಾರ್ಥನಾ ಗೀತೆಗಳು ಪ್ರಸಿದ್ಧವಾಗಿವೆ.

ಇವರು ಹೆಚ್ಚಾಗಿ ಮಕ್ಕಳಿಗಾಗಿ ಅನೇಕ ನಾಟಕಗಳನ್ನು ಬರೆದರು; ಅನುವಾದಿಸಿದರು. ಕೆಲವೊಮ್ಮೆ ತಾವೇ ನಿರ್ದೇಶಿಸಿದರು. ಇವರ ರಚನೆಯಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಈ ಎಲ್ಲ ಪ್ರಕಾರದ ನಾಟಕಗಳೂ ಇವೆ. ಒಂದು ಅಂದಾಜಿನಂತೆ ಇವರು 100 ನಾಟಕಗಳನ್ನು ರಚಿಸಿದ್ದಾರೆಂದು ತಿಳಿದುಬರುತ್ತದೆ. ಆದರೆ ಇದುವರೆಗೆ 27 ನಾಟಕಗಳು ಮಾತ್ರ ದೊರೆತಿವೆ. ಈ ನಾಟಕಗಳನ್ನು ಕಾಮತರು ಅನೇಕ ಶಾಲಾ ವರ್ಧಂತಿಯಂದು ಆಡಿಸುತ್ತಿದ್ದುದುಂಟು. ಶಿವರಾಮ ಕಾರಂತರಿಗಿಂತಲೂ ಮೊದಲು ಇವರು ನಾಟಕ ರಚನೆ ಮಾಡಿದ್ದರು ಎಂಬ ಸಂಗತಿ ಇಲ್ಲಿ ಗಮನಾರ್ಹವಾದುದು. ಇವರೇ ದಕ್ಷಿಣ ಕನ್ನಡ ಜಿಲ್ಲೆಯ ಆದ್ಯ ಏಕಾಂಕ ನಾಟಕಕಾರರೆನ್ನಬಹುದು. 1912ರಲ್ಲಿ ಬರೆದ 'ಸಂಗೀತ ಸಂವಾದ' ಎಂಬುದು ಸಾಮಾಜಿಕ ನಾಟಕ, ಚಂದ್ರಹಾಸಾಭ್ಯುದಯ (ಸಂಗೀತ ನಾಟಕ), ಅರ್ಜುನ ಚಾತುರ್ಮಾಸ (ಕಿರ್ಲೋಸ್ಕರರ ಮರಾಠಿ ನಾಟಕದ ಅನುವಾದ), ನಾಗಾನಂದ, ಮಧ್ಯಮ ವ್ಯಾಯೋಗ, ಸಾಧನೆ ಅಥವಾ ಏಕಲವ್ಯ (ಕಾಮತರ ಕೊನೆಯ ನಾಟಕ), ಕೃಷ್ಣ–ಸಂಧಾನ –ಇವು ಪೌರಾಣಿಕ ನಾಟಕಗಳು. ಮೌರ್ಯಸಿಂಹಾಸನ (ಸಂಗೀತ ನಾಟಕ), ತುಕಾರಾಮ, ತೆನಾಲಿರಾಮ, ದಾಮಾಜಿಪಂತ, ಪ್ರತಾಪಸಿಂಹ, ಚಂದ್ರರಾವ್ ಮೋರೆ, ವಜ್ರಮುಷ್ಟಿ, (ಸಿಖ್ ಪಂಥ ಕುರಿತದ್ದು), ವಿಠೂಮಹಾರ್, ಸತೀ ಮೀರಾಬಾಯಿ –ಇವು ಐತಿಹಾಸಿಕ ನಾಟಕಗಳು. ಮರ್ಜಿ, ವಂತಿಗೆ, ಮೆಂಬರು, ವಂತಿಗೆದಾರ, ಮಧುಸೂದನ, ಪುನರ್ಜನ್ಮ, ಮಾಲಿ, ಉದ್ಧಾರಾನಂದ (ಬಿಷಪ್‌ನ ಕ್ಯಾಂಡಲ್ ಸ್ಟಿಕ್ ನಾಟಕದ ರೂಪಾಂತರ), ಯೋಗಕ್ಷೇಮ (ಟಾಲ್‌ಸ್ಟಾಯನ್ ಒಂದು ನಾಟಕದ ರೂಪಾಂತರ), ಅಂಚೆಮನೆ (ಠಾಕೂರರ ಪೋಸ್ಟ್ ಆಫೀಸ್ ನಾಟಕದ ಭಾಷಾಂತರ), ಶಿಕ್ಷಣ ಪರೀಕ್ಷೆ, ಶೋಕ ಶಿಕ್ಷಣ, ಹಾರೆದೊರೆ, ಸದ್ರಿಸುಬ್ಬ, ಇದ್ದವರು ಮೂವರು, ಅವಳಿ ಜವಳಿ, ನಮ್ಮ ಹಳೆಯ ನಾಟಕದ ನೆನಪು, ಮನೆಯಲ್ಲಿ ಮಹಾಸಭೆ, ನಮ್ಮ ನಾಟ್ಯಾಭಿನಯ, ಸಾಣೂರು ಸಂಕಯ್ಯ, ಯುದ್ಧಾಂತ್ಯ –ಇವು ಸಾಮಾಜಿಕ ನಾಟಕಗಳು.

ಕಾಮತರು ಸಸ್ಯಶಾಸ್ತ್ರದಿಂದ ಹಿಡಿದು ಆಧ್ಯಾತ್ಮಿಕ ಚಿಂತನದವರೆಗೆ ನೂರಾರು ಪ್ರಬಂಧಗಳನ್ನೂ ಲೇಖನಗಳನ್ನೂ ಹರಟೆಗಳನ್ನೂ ಬರೆದಿದ್ದಾರೆ. ನನ್ನ ಕೊಡೆ, ಗಾಳಿ, ಆ ಬೆಕ್ಕಲ್ಲ ಈ ಬೆಕ್ಕು, ಪೆನ್ಶನರ್ ಮೊದಲಾದ ಹಾಸ್ಯ ಪ್ರಬಂಧಗಳನ್ನೂ ಪ್ರಾಚೀನಕಾಲದ ಪತ್ರಲೇಖನ, ಸಾಹಿತ್ಯ ರೈಲ್ವೇ ಕಂಪನಿ ಎಂಬ ವಿಡಂಬನ ಪ್ರಬಂಧಗಳನ್ನೂ ಇಲ್ಲಿ ಹೆಸರಿಸಬಹುದು. ಇವರ ಪತ್ರಿಕಾ ವ್ಯವಸಾಯವೂ ಗಮನಾರ್ಹವಾದದ್ದು. ಆನಂದ

ಎಂಬ ಪತ್ರಿಕೆ ಇವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. 'ಭಾರತಿ' ಪತ್ರಿಕೆಗೆ ಇವರೇ ಆಧಾರಸ್ತಂಭವಾಗಿದ್ದರು. ಬೋಧಿನಿ (1914–18) ಎಂಬ ಅಮೂಲ್ಯವಾದ ಶಿಕ್ಷಣ ಕೈಪಿಡಿಯನ್ನು ಇವರು ನಡೆಸಿದರು. ಮಂಗಳೂರಿನ ಮಿತ್ರಮಂಡಳಿಯನ್ನು ಹುಟ್ಟುಹಾಕಿದವರೇ ಕಾಮತರು. ಶಾಲಾ ಮಕ್ಕಳಿಗಾಗಿ ಅನೇಕ ಪಠ್ಯಗಳನ್ನು ರಚಿಸಿಕೊಟ್ಟಿದ್ದಾರೆ. ಇತ್ತೀಚೆಗೆ ಪುತ್ತೂರು ಕರ್ನಾಟಕ ಸಂಘ ಕಾಮತರ ಎಲ್ಲ ಬರೆಹಗಳನ್ನು ಎಮ್.ಎನ್. ಕಾಮತ್ ಕೃತಿಗಳು (ಸಂ: ಲೀಲಾ ಭಟ್) ಎಂಬ ಹೆಸರಿನಲ್ಲಿ ಐದು ಸಂಪುಟಗಳಲ್ಲಿ ಪ್ರಕಟಿಸಿದೆ. ಕಾಮತರಿಗೆ ಪ್ರಶಸ್ತಿ ಪುರಸ್ಕಾರಗಳು ದೊರೆಯುವುದು ಒತ್ತಟ್ಟಿಗಿರಲಿ, ಇಷ್ಟೆಲ್ಲ ಕೆಲಸಮಾಡಿಯೂ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇವರದು ಮರೆತುಹೋದ ಮಹನೀಯರ ಹೆಸರಾಗಿತ್ತು. ಇವರು ನಿಧನರಾಗುವುದಕ್ಕೆ ಮೂರು ತಿಂಗಳ ಮೊದಲು ನಡೆದ ಅಖಿಲ ಕರ್ನಾಟಕ ಸಣ್ಣಕಥೆಗಳ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು (1940) ಎಂಬ ಸಂಗತಿಯನ್ನು ಇಲ್ಲಿ ಉಲ್ಲೇಖಿಸಬಹುದು. (ಎಲ್.ಬಿ.)

**ಕಾಮತ್, ಎಂ.ವಿ.:** 1921–. ಹೆಸರಾಂತ ಪತ್ರಿಕೋದ್ಯಮಿ, ಲೇಖಕ. ಇವರ ಪೂರ್ಣ ಹೆಸರು ಮಾಧವ ವಿಠ್ಠಲ ಕಾಮತ. ತಂದೆ ವಿಠ್ಠಲ ಕಾಮತ, ತಾಯಿ ಗಿರಿಜಾ. ಕಾಮತರು 1921 ಸೆಪ್ಟೆಂಬರ್ 7ರಂದು ಉಡುಪಿಯಲ್ಲಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಉಡುಪಿಯ ಸಿಸಿಲ್ಸ್ ಕಾನ್ವೆಂಟ್, ಕ್ರಿಶ್ಚಿಯನ್ ಹೈಸ್ಕೂಲ್ ಮತ್ತು ಬೋರ್ಡ್ ಹೈಸ್ಕೂಲುಗಳಲ್ಲಾಯಿತು. 1937ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾದರು. ಅನಂತರ ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿ ಮುಂಬಯಿಯ ಸೆಂಟ್ ಝೇವಿಯರ್ಸ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು (1941). ಇ.ಡಿ.ಸಸೂನ್ ಟರ್ಕಿ ರೆಡ್ ಡೈ ವರ್ಕ್ಸ್‌ನಲ್ಲಿ ಕೆಮಿಸ್ಟ್ ಆಗಿ ಸೇರಿ (1941) ಕೆಲಸ ಮಾಡಿದರು. ಮುಂಬಯಿಯ ಓರಿಯೆಂಟಲ್ ಫಾರ್ಮಾಸ್ಯುಟಿಕಲ್ ಕಂಪನಿಯಲ್ಲಿ ಸೀನಿಯರ್ ಕೆಮಿಸ್ಟ್ ಮತ್ತು ಅಸಿಸ್ಟೆಂಟ್ ಫ್ಯಾಕ್ಟರಿ ಮ್ಯಾನೇಜರಾಗಿ ಕೆಲಸ ಮಾಡಿದರು (1944–46). ಅನಂತರ ಫ್ರೀಪ್ರೆಸ್ ಜರ್ನಲ್ ಪತ್ರಿಕೆಯ ವರದಿಗಾರರೂ ಲೇಖಕರೂ ಆಗಿ ಮೂರು ವರ್ಷ ಕೆಲಸ ಮಾಡಿದರು. ಅದೇ ಪತ್ರಿಕೆಯ ದೆಹಲಿ ವರದಿಗಾರರಾಗಿ (1949–50), ಮುಂಬಯಿಯ ಫ್ರೀಪ್ರೆಸ್ ಬುಲೆಟಿನ್‌ನ ಸಂಪಾದಕರಾಗಿ (1950–55), ಕೆಲಸಮಾಡಿದರು. ಭಾರತಜ್ಯೋತಿ ಪತ್ರಿಕೆಯ ಸಂಪಾದಕರಾಗಿದ್ದರು (1954–55). ಅನಂತರ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಸಂಸ್ಥೆಯ ನ್ಯೂ ಯಾರ್ಕ್‌ನ ವಿಶೇಷ ವರದಿಗಾರರಾಗಿ ನಿಯುಕ್ತರಾದರು (1955–58). ಯುನೈಟೆಡ್ಏಷ್ಯ ಮುಂಬಯಿ ಪತ್ರಿಕೆಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಯುರೋಪ್ ಖಂಡದ ವಿಶೇಷ ವರದಿಗಾರರಾಗಿ 1959ರಿಂದ ಎಂಟು ವರ್ಷಗಳ ಕಾಲ ಕೆಲಸ ಮಾಡಿದರು. ಅದೇ ಪತ್ರಿಕೆಯ ಭಾನುವಾರ ಸಂಚಿಕೆಯ ಸಂಪಾದಕರಾಗಿಯೂ ಎರಡುವರ್ಷ ಕೆಲಸ ನಿರ್ವಹಿಸಿದರು. ಟೈಮ್ಸ್ ಆಫ್ ಇಂಡಿಯಾದ ವಾಷಿಂಗ್ ಟನ್ ವಿಶೇಷ ವರದಿಗಾರರಾಗಿ ಕಾರ್ಯನಿರ್ವಹಿಸಿದರು (1969–78). ಇದರಿಂದ ಅಂತಾರಾಷ್ಟ್ರೀಯ ಕೀರ್ತಿಗೆ ಭಾಜನರಾದರು. ಅನಂತರ ಇಂಗ್ಲಿಷಿನ ಪ್ರಸಿದ್ಧ ಪತ್ರಿಕೆ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾದ ಸಂಪಾದಕರಾಗಿ ನಿಯುಕ್ತರಾದರು (1979). ತಮ್ಮ ಸಂಪಾದಕತ್ವದ ಅವಧಿಯಲ್ಲಿ ಪತ್ರಿಕೆಯ ಆಕರ್ಷಣೆಯನ್ನೂ ಪ್ರಸಾರ ಸಂಖ್ಯೆಯನ್ನೂ ಹೆಚ್ಚಿಸಿದ್ದರು.



ಇವರು ಫ್ರೀಪ್ರೆಸ್ ಜರ್ನಲ್, ಜನ್ಮಭೂಮಿ, ಪ್ರವಾಸಿ, ಆಫ್ಟರ್‌ನೂನ್ ಡಿಸ್‌ಪ್ಯಾಚ್ ಅಂಡ್ ಕೊರಿಯರ್, ನಾಗಪುರದ ಹಿತವಾದ, ದಿಲ್ಲಿಯ ಆರ್ಗನೈಜರ್, ದಿ ಸೆಂಟಿನೆಲ್ (ಗೌಹಾತಿ), ರಾಜಸ್ತಾನ ಪತ್ರಿಕಾ, ಕೇಸರಿ, ಉದಯವಾಣಿ, ಪ್ರಿಯದತ್ತ, ಇಶ್ಯೂಸ್ ಅಂಡ್ ಕನ್‌ಸರ್ನ್ಸ್, ನ್ಯೂಸ್ ಟುಡೇ ಮೊದಲಾದ ಪತ್ರಿಕೆಗಳ ಅಂಕಣ ಬರೆಹಗಾರರಾಗಿದ್ದರು. ಇವರ ಬರೆವಣಿಗೆಯ ಹೃದ್ಯಶೈಲಿ, ಅಧ್ಯಯನಪೂರ್ಣ ಖಚಿತ ವಿಚಾರಗಳು, ರಾಜಕೀಯ ಆಗುಹೋಗುಗಳ ಭಾಷ್ಯ ಓದುಗರನ್ನು ಸೆರೆಹಿಡಿದಿದ್ದವು.

ತಮ್ಮ ಬಿಡುವಿಲ್ಲದ ಪತ್ರಿಕಾ ವ್ಯವಸಾಯದ ನಡುವೆಯೂ ಅನೇಕ ಕೃತಿಗಳನ್ನು ಇವರು ರಚಿಸಿದ್ದಾರೆ. ಪಾರ್ಟೀಸ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ (1946), ದ ಕಾಫೈನ್ (1972), ಕಿಸಿಂಜರ್ ದಿ ಇನ್‌ಕಂಪ್ಲೀಟ್ ಡಿಪ್ಲೊಮ್ಯಾಟ್ (1975), ಹಿಸ್ಟರಿ ಆಫ್ ಇಂಡಿಯನ್ ಮರ್ಚಂಟ್ಸ್ ಚೇಂಬರ್ (1982), ಪ್ರೊಫೆಷನಲ್ ಜರ್ನಲಿಸಂ (1980), ದಿ ಜರ್ನಲಿಸ್ಟ್ಸ್ ಹ್ಯಾಂಡ್‌ಬುಕ್ (1983), ಬಿಹೈಂಡ್ ದಿ ಬೈಲೈನ್ (1985), ದ ಇನೊವೇಟಿವ್ ಬ್ಯಾಂಕರ್ (1983), ಮ್ಯಾನೇಜ್‌ಮೆಂಟ್ ಕುರಿಯನ್ ಸ್ಟೈಲ್, ದಿ ಯುನೈಟೆಡ್ ಸ್ಟೇಟ್ಸ್ ಅಂಡ್ ಇಂಡಿಯಾ (1976), ವಾಟ್ ಜರ್ನಲಿಸಂ ಇಸ್ ಆಲ್ ಅಬೌಟ್ (1986), ಬಿ.ಜಿ. ಖೇರ್, ದಿ ಜಂಟಲ್‌ಮ್ಯಾನ್ ಪ್ರೀಮಿಯರ್ (1989), ದಿ ಪರ್‌ಸ್ಯೂಟ್ ಆಫ್ ಎಕ್ಸಲೆನ್ಸ್ (1982), ಗಣೇಶ ವಾಸುದೇವ ಮಾಲವಣಕರ್ (1990), ಫಿಲಾಸಫಿ ಆಫ್ ಡೆಥ್ ಅಂಡ್ ಡೈಯಿಂಗ್ (1978), ದ ಕಫ್ ಆಫ್ ಲವ್ (1981), ಸಮ್ ಆಫ್ ಅಸ್ ಆರ್ ಲಕೀ (1996), ದಿ ಮೇಕಿಂಗ್ ಆಫ್ ಎ ಮಿಲಿನೇರ್‌ಯು (1991), ದೇವಿ ಅಹಲ್ಯಬಾಯಿ ಹೋಳ್ಕರ್, ದಿ ಫಿಲಾಸಫರ್ ಕ್ವೀನ್ (1995), ಪಾಯಿಂಟ್ಸ್ ಅಂಡ್ ಲೈನ್ಸ್ (1994), ಲೇಟರ್ಸ್ ಟು ಗೌರಿ (1996), ಮಿಲಿಟೆಂಟ್ ಬಟ್ ನಾನ್ ವಯಲಂಟ್ ಟ್ರೇಡ್ ಯೂನಿಯನಿಸಂ (1993), ಗಾಂಧೀಸ್ ಕೂಲಿ (1988), ಮಿಲ್ಕ್ ಮ್ಯಾನ್ ಫ್ರಂ ಆನಂದ (1996), ಜಾಯ್ಸ್ ಬುಕ್ ಆಫ್ ಇಂಡಿಯನ್ ನೇಮ್ಸ್ (1997), ಥರ್ಟಿ ಥೌಸಂಡ್ ಇಂಡಿಯನ್ ನೇಮ್ಸ್ (2001), ರಿ ಡಿಸ್ಕವರಿಂಗ್ ಕರ್ನಾಟಕ (1985), ಎ ಬ್ಯಾಂಕಿಂಗ್ ಓಡಿಸ್ಸಿ (1991), ಸೆವೆಂಟಿಫೈವ್ ಇಯರ್ಸ್ ಆಫ್ ಸರ್ವಿಂಗ್ ದಿ ಕಾಮನ್ ಮ್ಯಾನ್ (1994), ಸಿಂಡಿಕೇಟ್ ಬ್ಯಾಂಕ್ ಎ ಪೀಪಲ್ಸ್ ಬ್ಯಾಂಕ್ (2000), ಕಾರ್ಪೋರೇಶನ್ ಬ್ಯಾಂಕ್; ಎ ಕಾರ್ಪೋರೇಟ್ ಜರ್ನಿ (1997), ಟೈಡ್ ಆಫ್ ಟೈಮ್, ಹಿಸ್ಟರಿ ಆಫ್ ಮುಂಬಯ್ ಪೋರ್ಟ್ (2000), ದಿ ಎಕ್ಸಲ್ ಸ್ಟೋರಿ (2001), ದಿ ಅದರ್ ಫೇಸ್ ಆಫ್ ಇಂಡಿಯಾ (1991) ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಪುನರಪಿ ಜನನಂ ಎಂಬ ಕೃತಿಯನ್ನು ಇವರು ಕನ್ನಡದಲ್ಲಿ ರಚಿಸಿದ್ದಾರೆ. ದಿ ಇಂಡಿಯಾ ಆಫ್ ಅವರ್ ಡ್ರೀಮ್ಸ್ (1982), ಅನ್‌ಟೋಲ್ಡ್ ಸ್ಟೋರಿ ಆಫ್ ಡಾರ್ಕ್ಸ್ ಅಂಡ್ ಪೇಷಂಟ್ಸ್ (1993), ನೆಹರು ರಿ ವಿಸಿಟೆಡ್ (2003) –ಇವು ಇವರ ಸಂಪಾದಿತ ಕೃತಿಗಳು.

ಭಾರತ ಸರ್ಕಾರ ಇವರನ್ನು ಪ್ರಸಾರಭಾರತಿ ಸಂಸ್ಥೆಯ ಅಧ್ಯಕ್ಷರನ್ನಾಗಿ ನೇಮಿಸಿತ್ತು. ಇವರು ನವದೆಹಲಿಯ ವಿಜ್ಞಾನ ಭಾರತಿ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು. ಇವರು ಹಲವು ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿಯೂ ಕೆಲಸ ನಿರ್ವಹಿಸಿದ್ದರು. ಹಲವು ಸಾರ್ವಜನಿಕ ಹಿತಾಸಕ್ತಿಯ ಸಂಸ್ಥೆಗಳ ಧರ್ಮದರ್ಶಿಗಳೂ ಆಗಿದ್ದರು. ಬಾಂಬೆ ಯೂನಿಯನ್ ಆಫ್ ಜರ್ನಲಿಸ್ಟ್ (1953), ಅಖಿಲ ಭಾರತ ಕೊಂಕಣಿ ಭಾಷಾ ಪರಿಷದ್ ಈ ಸಂಸ್ಥೆಯ ಅಧ್ಯಕ್ಷರಾಗಿದ್ದರು.

ಇವರ ಸೇವೆಯನ್ನು ಪರಿಗಣಿಸಿ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಹಲವು ಪ್ರಶಸ್ತಿಗಳನ್ನು ನೀಡಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಟಿಳಕ– ಮೊಹರೆ ಪತ್ರಿಕೋದ್ಯಮ ಪ್ರಶಸ್ತಿ, ಗೋಕರ್ಣ ಪರ್ತಗಾಳಿ ಮಠದ ವಿದ್ಯಾಧಿರಾಜ ಪ್ರಶಸ್ತಿ, ಉಡುಪಿಯ ಮಠಾಧೀಶರ ಸಮಾಜ ಭೂಷಣ ಬಿರುದು ಮುಖ್ಯವಾದವು.

ತಮ್ಮ ಜೀವಮಾನವನ್ನೆಲ್ಲ ಕರ್ನಾಟಕದ ಹೊರಗೆ ಕಳೆದರೂ ತಮ್ಮ ಬರೆಹಗಳಿಂದ, ಅರ್ಥಪೂರ್ಣ ಕೃತಿಗಳಿಂದ ಇವರು ಕನ್ನಡ ನಾಡಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. (ಎಸ್.ಎಂ.ಕೆ.)

**ಕಾಮದೇವ (ಕದಂಬರಾಜ) :** ಕದಂಬ ದೊರೆಗಳಲ್ಲೊಬ್ಬ 1181–1217. 12ನೆಯ ಶತಮಾನದಲ್ಲಿ ಹಾನಂಗಲ್ ಪ್ರದೇಶವನ್ನು ಆಳುತ್ತಿದ್ದ ರಾಜರಲ್ಲಿ ಪ್ರಮುಖ. ಈತನ ತಂದೆ ಇಮ್ಮಡಿ ಕೀರ್ತಿನೃಪಾಲ. ಕದಂಬರ ಬಿರುದುಗಳಾದ ಮಾಲತೀ ಮಧುಕೇಶ್ವರ, ಬನವಾಸಿ ಪುರವರಾಧೀಶ್ವರ ಎಂಬವನ್ನು ಕಾಮದೇವ ತಳೆದಿದ್ದ. ಕಾಳಲದೇವಿ ಈತನ ರಾಣಿ. ಬರಮ, ಸೋಮ ಮತ್ತು ಮಲ್ಲಿದೇವ ಇವನ ಗಂಡು ಮಕ್ಕಳು. ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ಕಾಮದೇವ ಕಳಚುರಿ ಸಾಮ್ರಾಟರ ಅಧೀನನಾಗಿದ್ದ. 1184ರಲ್ಲಿ ಕಳಚುರಿ ಮನೆತನ ಕೊನೆಗೊಂಡು ನಾಲ್ಮಡಿ ಸೋಮೇಶ್ವರ ಚಾಳುಕ್ಯ ಮನೆತನವನ್ನು ಪುನಃ ಸ್ಥಾಪಿಸಿದ ಮೇಲೆ ಅವರ ಅಧೀನನಾಗಿದ್ದ. ಕಲ್ಯಾಣವನ್ನು ಕಳಚುರಿಗಳಿಂದ ಮರಳಿ ಪಡೆಯುವ ಪ್ರಯತ್ನದಲ್ಲಿ ಸೋಮೇಶ್ವರನಿಗೆ ಕಾಮದೇವನ ಸಹಕಾರ ದೊರಕಿತು. 1189ರಲ್ಲಿ ಚಾಳುಕ್ಯ ಮನೆತನ ಅಳಿದು ಹೊಯ್ಸಳ ವೀರಬಲ್ಲಾಳ ಬನವಾಸಿ, ಹಾನಂಗಲ್, ನಾಗರಖಂಡ ನಾಡುಗಳನ್ನು ಗೆದ್ದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ. ಕಾಮದೇವ ಹಲವು ವರ್ಷಗಳ ಕಾಲ ವೀರಬಲ್ಲಾಳ ಚಕ್ರವರ್ತಿಯ ಅಧೀನನಾಗಿದ್ದ. ಈತ 1205ರ ವೇಳೆಗೆ ಸ್ವತಂತ್ರ ರಾಜನೆಂದು ಘೋಷಿಸಿಕೊಂಡುದರಿಂದ ಬಲ್ಲಾಳನ ಸೈನ್ಯ ಇವನನ್ನು ಅನೇಕ ಬಾರಿ ಸೋಲಿಸಿತು. ಸೋತಾಗಲೆಲ್ಲ ಈತ ತಲೆತಪ್ಪಿಸಿಕೊಂಡು ಮರಸು ಯುದ್ಧದಲ್ಲಿ ತೊಡಗುತ್ತಿದ್ದ. ಕೊನೆಗೆ 1211ರ ವೇಳೆಗೆ ಕಾಮದೇವ ಸ್ವತಂತ್ರನಾದ. ಆದರೆ ಹಾನಂಗಲ್ ಕದಂಬರ ಸ್ವಾತಂತ್ರ್ಯ ಮುಂದುವರಿಯಲಿಲ್ಲ. ಇವನ ಉತ್ತರಾಧಿಕಾರಿ ಮಲ್ಲಿದೇವ ಸೇವುಣರ ಸಾಮಂತನಾದ. ಕಾಮದೇವ ಕಬ್ಬಿಗರ ಕಾವ್ಯದ ಕರ್ತೃವಾದ ಆಂಡಯ್ಯನ ಪೋಷಕನಾಗಿದ್ದನೆಂದು ತಿಳಿದುಬರುತ್ತದೆ. (ಜಿ.ಆರ್.ಆರ್.)

**ಕಾಮದೇವ (ಪಾಂಡ್ಯರಾಜ) :** ಉಚ್ಚಂಗಿ ಪಾಂಡ್ಯ ಮನೆತನದ ಕೊನೆ ಅರಸ (1161–87). ವಿಜಯ ಪಾಂಡ್ಯನೆಂದೂ ಇವನಿಗೆ ಹೆಸರಿತ್ತು. 11–12ನೆಯ ಶತಮಾನಗಳಲ್ಲಿ ಪಾಂಡ್ಯರು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ, ಉಚ್ಚಂಗಿಯನ್ನು ರಾಜಧಾನಿಯಾಗಿ

ಮಾಡಿಕೊಂಡು ಇಂದಿನ ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳ ಹಲವು ಭಾಗಗಳನ್ನೊಳಗೊಂಡ ನೊಳಂಬವಾಡಿ ಎಂಬ ರಾಜ್ಯವನ್ನು ಆಳುತ್ತಿದ್ದರು. ಕಾಮದೇವನ ಆಳ್ವಿಕೆಯ ಪ್ರಾರಂಭಕ್ಕೆ ಮೊದಲೇ ಕಲ್ಯಾಣ ಚಾಳುಕ್ಯರ ಸಿಂಹಾಸನವನ್ನು ಕಳಚುರಿ ಮನೆತನದ ಬಿಜ್ಜಳ ಆಕ್ರಮಿಸಿಕೊಂಡಿದ್ದ. ಈತ 1162ರಲ್ಲಿ ಕಾಮದೇವನನ್ನು ಸೋಲಿಸಿದ. ಆದರೂ ಕಾಮದೇವ ಪದಚ್ಯುತರಾದ ಚಾಳುಕ್ಯರ ಪಕ್ಷಪಾತಿಯಾಗಿದ್ದ. 1177ರಲ್ಲಿ ಹೊಯ್ಸಳ ಇಮ್ಮಡಿ ವೀರಬಲ್ಲಾಳ ಉಮ್ಮತ್ತೂರಿನಲ್ಲಿ ಕಾಮದೇವನನ್ನು ಸೋಲಿಸಿ ದುರ್ಗಮವಾದ ಉಚ್ಚಂಗಿಯನ್ನು ಮುತ್ತಿ, ಕಾಮದೇವನಿಂದ ಅಪಾರ ಕಪ್ಪಕಾಣಿಕೆಗಳನ್ನು ಪಡೆದ. ಅವನ ರಾಜ್ಯವನ್ನು ಅವನಿಗೇ ಹಿಂತಿರುಗಿಸಿ, ಪಾಂಡ್ಯರಾಜಪ್ರತಿಷ್ಠಾಪನಾಚಾರ್ಯ ಎಂಬ ಬಿರುದನ್ನು ತಳೆದ. 1184ರಿಂದ 1187ರ ವರೆಗೆ ಕಾಮದೇವ ಪುನಃ ಸ್ಥಾಪಿಸಲಾದ ಕಲ್ಯಾಣ ಚಾಳುಕ್ಯ ರಾಜ್ಯದ ನಾಲ್ಮಡಿ ಸೋಮೇಶ್ವರನ ಪಕ್ಷ ವಹಿಸಿದ. ಇದರಿಂದ ಕೋಪಗೊಂಡ ಬಲ್ಲಾಳ 1187ರಲ್ಲಿ ಉಚ್ಚಂಗಿಯನ್ನು ಮುತ್ತಿದ. ಯುದ್ಧದಲ್ಲಿ ಕಾಮದೇವನೂ ಆತನ ಮಗನಾದ ಒಡೆಯನೂ ಮರಣ ಹೊಂದಿದರು. ನೊಳಂಬವಾಡಿ ಹೊಯ್ಸಳ ಸಾಮ್ರಾಜ್ಯದಲ್ಲಿ ಸೇರಿತು. **(ನೋಡಿ– ಉಚ್ಚಂಗಿ ಪಾಂಡ್ಯರು)** (ಜಿ.ಆರ್.ಆರ್.)

**ಕಾಮಧೇನು[1] :** ದೇವಲೋಕದ ಹಸು. ಕೇಳಿದ ಪದಾರ್ಥಗಳನ್ನು ಕೊಟ್ಟು ತಣಿಸುವ ಗುಣವುಳ್ಳದ್ದು. ಅಮೃತಮಥನ ಕಾಲದಲ್ಲಿ ಕ್ಷೀರಸಮುದ್ರದಿಂದ ಹುಟ್ಟಿದ ಇದನ್ನು ದೇವತೆಗಳು ಸಪ್ತರ್ಷಿಗಳಿಗೆ ದಾನ ಮಾಡಲಾಗಿ ಇದು ಕಾಲಕ್ರಮದಲ್ಲಿ ವಸಿಷ್ಠರ ಸ್ವತ್ತಾಯಿತು.

ಇದರ ಬಣ್ಣ ಬಿಳುಪು. ನಾಲ್ಕು ವೇದಗಳೇ ಇದರ ಕಾಲುಗಳು. ನಾಲ್ಕು ಪುರುಷಾರ್ಥಗಳೇ ಇದರ ಕೆಚ್ಚಲು. ನಂದಾ, ಸುನಂದಾ, ಸುರಭೀ, ಸುಶೀಲಾ, ಸುಮನಾ ಎಂಬ ಐದು ರೂಪಗಳಿಂದ ಇದು ಪ್ರಸಿದ್ಧವಾಗಿದೆ. ಭಾರ್ಗವ, ಆಂಗೀರಸ, ಭಾರದ್ವಾಜ, ಕಶ್ಯಪ, ವಸಿಷ್ಠ–ಈ ಐವರು ಋಷಿಗಳ ಆಶ್ರಮದಲ್ಲಿ ಒಂದೊಂದು ಧೇನುವಿದ್ದು ದೇವ, ಅತಿಥಿ, ಪಿತೃ ಮೊದಲಾದವರ ಪೂಜೆಗಳಲ್ಲಿ ನೆರವಾಗಿವೆಯೆಂದು ಪ್ರತೀತಿ. ಅಭೀಷ್ಟಸಿದ್ಧಿಗೆ ಬಲಿಪಾಡ್ಯಮಿಯ ದಿವಸ ಇದನ್ನು ಪೂಜಿಸುತ್ತಾರೆ.

ರಾಮಾಯಣದ ಪ್ರಕಾರ ವಿಶ್ವಾಮಿತ್ರ ಒಮ್ಮೆ ವಸಿಷ್ಠ ಮಹರ್ಷಿಗಳ ಆಶ್ರಮಕ್ಕೆ ಭೇಟಿಯಿತ್ತಾಗ ವಸಿಷ್ಠರು ಕಾಮಧೇನುವಿನ (ನಂದಿನೀಧೇನು) ಸಹಾಯದಿಂದ ಅತಿಥಿ ಸತ್ಕಾರವನ್ನು ವಿಜೃಂಭಣೆಯಿಂದ ಮಾಡಿದರು. ಇದರಿಂದ ಸಂತೃಪ್ತಿ ಹೊಂದಿದ ವಿಶ್ವಾಮಿತ್ರ ಕಾಮಧೇನುವನ್ನು ತಾನು ಪಡೆಯಬೇಕೆಂದು ಇಚ್ಛಿಸಿ ಈ ಒಂದು ಹಸುವಿಗಾಗಿ ತನ್ನಲ್ಲಿರುವ ಹಸುಗಳನ್ನೆಲ್ಲ ಕೊಡುವುದಾಗಿ ವಸಿಷ್ಠರನ್ನು ಕೇಳಿದ. ವಸಿಷ್ಠರು ಕಾಮಧೇನುವನ್ನು ಕೊಡಲು ನಿರಾಕರಿಸಿದರು. ತತ್ಫಲವಾಗಿ ಪರಸ್ಪರ ಯುದ್ಧವಾಗಿ ವಿಶ್ವಾಮಿತ್ರ ಸೋಲನ್ನೊಪ್ಪಿಕೊಂಡು ಅಂದಿನಿಂದ ತನ್ನ ಕ್ಷಾತ್ರಭಾವ ತ್ಯಜಿಸಿ ಬ್ರಹ್ಮ ಪದವಿ ಪಡೆಯಲು ತಪಸ್ಸು ಮಾಡಲು ಉದ್ಯುಕ್ತನಾದ. ಅನೇಕ ವರ್ಷಗಳ ತಪಸ್ಸಿಂದಾಗಿ ಕಾಮಧೇನುವಿನ ಕರುವನ್ನು ಜಮದಗ್ನಿ ಮಹರ್ಷಿಗಳು ಪಡೆದಿದ್ದರೆಂದೂ ಇದನ್ನು ಕಾರ್ತವೀರ್ಯ ಅಪಹರಿಸಿದನೆಂದೂ ಇದರಿಂದಾಗಿ ಜಮದಗ್ನಿಯ ಮಗ ಪರಶುರಾಮ ಸಿಟ್ಟಿಗೆದ್ದು ಸಮಸ್ತ ಕ್ಷತ್ರಿಯರ ವಧೆಗೆ ಕಾರಣನಾದನೆಂದೂ ಇನ್ನೊಂದು ಹೇಳಿಕೆಯಿದೆ.

ಕಾಮಧೇನು ದಕ್ಷನ ಮಗಳೆಂದೂ ಕಶ್ಯಪರ ಪತ್ನಿಯೆಂದೂ ಇನ್ನೊಂದು ಹೇಳಿಕೆಯುಂಟು. (ಎಸ್.ಎನ್.ಕೆ.)

**ಕಾಮಧೇನು[2] :** 'ಪ್ರಗತಿ ಸಮೃದ್ಧಿ ಸಂಸ್ಕೃತಿ' ಈ ಧ್ಯೇಯ ವಾಕ್ಯ ಹೊಂದಿದ್ದ ಕೃಷಿವಿಚಾರಗಳಿಗೆ ಮೀಸಲಾಗಿದ್ದ ಮಾಸಿಕೆ. ಕೌಜಲಗಿ ಹಣಮಂತರಾವ್ ಸ್ಮಾರಕನಿಧಿಯಿಂದ 1958ರ ಆಗಸ್ಟ್‌ನಲ್ಲಿ ಆರಂಭವಾಯಿತು. ಕೃಷಿಕರನ್ನು ಪ್ರಗತಿಪರರನ್ನಾಗಿ ಮಾಡುವುದು, ಅವರಲ್ಲಿ ಶಾಸ್ತ್ರೀಯ ದೃಷ್ಟಿಕೋನವನ್ನು ಬೆಳೆಸುವುದು, ಶಾಸ್ತ್ರೀಯ ಕೃಷಿತಂತ್ರವನ್ನು ಅನುಸರಿಸಿ ಸಮೃದ್ಧ ಬೆಳೆ ಬೆಳೆಸುವ ಬಗ್ಗೆ ಅವರಿಗೆ ಸಲಹೆ ಮತ್ತು ಅನುಭವ ಕಥನಗಳನ್ನು ಒದಗಿಸುವುದು, ನಾಡಿನಲ್ಲೂ ವಿದೇಶಗಳಲ್ಲೂ ಕೃಷಿರಂಗದಲ್ಲಿ ನಡೆದ ಪ್ರಯೋಗಗಳ ಪರಿಚಯ ಮಾಡಿಕೊಡುವುದು, ಜೊತೆಗೆ ಬಿಡುವಿನ ಸಮಯದಲ್ಲಿ ಓದಲು ಸರಸ ಸಾಹಿತ್ಯ ಒದಗಿಸುವುದು–ಇವು ಈ ಪತ್ರಿಕೆಯ ಉದ್ದೇಶಗಳು. ಡಿಮ್ಮೈ ಚತುರ್ಥಾಕಾರದ 48 ಪುಟಗಳ ಈ ಪತ್ರಿಕೆಯ ಸಂಪಾದಕರಾಗಿದ್ದವರು ರಂಗನಾಥ ದಿವಾಕರ. ಬಿಡಿ ಸಂಚಿಕೆಯ ಬೆಲೆ 50 ಪೈ. ವಾರ್ಷಿಕ ಚಂದಾ ರೂ. 5.

ಪ್ರಗತಿಪರ ರೈತರ ಅನುಭವ ಕಥನ, ದುಡಿದು ಪಡೆದವರು, ಕೃಷಿಯಲ್ಲಿ ನೀವು ಅರಿತಿರಬೇಕಾದುದು–ಮೊದಲಾದ ಶೀರ್ಷಿಕೆಗಳ ಅಡಿಯಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು ಆಕರ್ಷವಾಗಿದ್ದುವು. ಅಲ್ಲದೆ ಕೃಷಿರಂಗದಲ್ಲಿ ಕಾಲಕಾಲಕ್ಕೆ ಅನುಸರಿಸಬೇಕಾದ ರೀತಿನೀತಿಗಳ ತಿಳಿವಳಿಕೆಯನ್ನೂ ಕೊಡಲಾಗುತ್ತಿತ್ತು. ಇದರಿಂದಾಗಿ 'ಕಾಮಧೇನು' ಎಂಬ ಹೆಸರು ಅದಕ್ಕೆ ಅನ್ವರ್ಥವಾಗಿ ಪರಿಣಮಿಸಿತು. ಸಾಹಿತಿ ರಾವ್‌ಬಹದ್ದೂರರು ಈ ಪತ್ರಿಕೆಯಲ್ಲಿ 'ಒಡೆದ ಕನ್ನಡಿ' ಎಂಬ ಶೀರ್ಷಿಕೆಯಲ್ಲಿ ಬರೆಯುತ್ತಿದ್ದ ಕಥೆಗಳು ಹಳ್ಳಿಗರ ಜೀವನದಲ್ಲಿ ಬರುವ ನಾನಾ ಸಮಸ್ಯೆಗಳ ಮೇಲೆ ಕ್ಷ–ಕಿರಣ ಬೀರುತ್ತಿದ್ದುವು. ಜೊತೆಗೆ ಅನ್ಯಭಾಷೆಗಳ ಉತ್ತಮ ಕಥೆಗಳನ್ನೂ ಪತ್ರಿಕೆ ಪ್ರಕಟಿಸುತ್ತಿತ್ತು. ದನಗಳ ಪಾಲನೆ, ಪೋಷಣೆ, ಅವುಗಳ ರೋಗರುಜಿನಗಳ ನಿವಾರಣೆ–ಮೊದಲಾದ ವಿಷಯಗಳನ್ನು ಕುರಿತ ಲೇಖನಗಳು



ಉಪಯುಕ್ತವಾಗಿದ್ದುವು. ಮೊದಲ ಕೆಲವು ಸಂಚಿಕೆಗಳ ಮುಖಪತ್ರ ತ್ರಿವರ್ಣದಲ್ಲಿ ಮುದ್ರಿತವಾಗುತ್ತಿತ್ತು. ಈ ಪತ್ರಿಕೆಯನ್ನು ನಿಧಿಯವರು 1963ರ ಮಾರ್ಚಿಯ ವರೆಗೆ ನಡೆಸಿ ಶಿರಸಿಯ ಒಂದು ಸಂಸ್ಥೆಗೆ ಒಪ್ಪಿಸಿದರು. ಸ್ವಲ್ಪ ಕಾಲವಾದ ಮೇಲೆ ಅದು ಮತ್ತೆ ಹಸ್ತಾಂತರಗೊಂಡಿತಲ್ಲದೆ ಅದರ ಹೆಸರೂ ಬದಲಾಯಿತು. ರೈತರಿಗೆ ತುಂಬ ಉಪಯುಕ್ತವಾಗಿದ್ದರೂ ಈ ಪತ್ರಿಕೆಯ ಪ್ರಸಾರ 1,500ಕ್ಕೆ ಮಿಕ್ಕಿರಲಿಲ್ಲ. ಪತ್ರಿಕೆಯ ಲೇಖಕರಿಗೆ ಸಂಭಾವನೆ ಕೊಡಲಾಗುತ್ತಿತ್ತು. (ಎಸ್.ವಿ.ಪಿ.ಎ.)

**ಕಾಮನಬಿಲ್ಲು :** ಅಧಿಕ ಸಂಖ್ಯೆಯಲ್ಲಿ ಬೀಳುತ್ತಿರುವ ಮಳೆ ಹನಿಗಳ ಮೇಲೆ ಬಿಸಿಲು ಅಥವಾ ಬೆಳುದಿಂಗಳು ಬಿದ್ದಾಗ ಸೂರ್ಯ ಅಥವಾ ಚಂದ್ರನ ನೇರಿದಿರು (180° ಅಂತರದಲ್ಲಿ) ಕಾಣುವ ವರ್ಣಮಯ ಚಾಪ (ರೇನ್‌ಬೋ). ನೇರಿದಿರು ಬಿಂದುವಿನ ಹೆಸರು ಸೂರ್ಯವಿರುದ್ಧ ಅಥವಾ ಚಂದ್ರವಿರುದ್ಧ ಬಿಂದು ಎಂದು ಹೆಸರು. ಕಾಮನಬಿಲ್ಲು ಸಾಮಾನ್ಯವಾಗಿ ಈ ವಿರುದ್ಧ ಬಿಂದುವಿನ ಸುತ್ತಲೂ ವ್ಯಾಪಿಸಿರುತ್ತದೆ. ಈ ವಿದ್ಯಮಾನ ತೋರುವ ಮೊದಲು ನಡೆಯುವ ಭೌತ ಕ್ರಿಯೆಯಿಷ್ಟು. ಬೀಳುತ್ತಿರುವ ನೀರಹನಿಗಳಲ್ಲಿ ಬೆಳಕಿನ ಕಿರಣಗಳು ವಕ್ರೀಭವಿಸಿ ಒಳಹೊಕ್ಕು ಒಮ್ಮೆ ಅಥವಾ ಎರಡು ಬಾರಿ ಸಂಪೂರ್ಣ ಆಂತರಿಕವಾಗಿ ಪ್ರತಿಫಲಿಸಿ ಮತ್ತೆ ವಕ್ರೀಭವಿಸಿ ಹೊರಬಂದು ವೀಕ್ಷಕನನ್ನು ತಲುಪುತ್ತವೆ. ಆಗ ಒಂದು ಅಥವಾ ಕೆಲವೊಮ್ಮೆ ಎರಡು ಕಾಮನಬಿಲ್ಲು ಆಕಾಶದಲ್ಲಿ ವಿರುದ್ಧ ಬಿಂದುವಿನ ದಿಕ್ಕಿನಲ್ಲಿ ಕಾಣುತ್ತವೆ. ಸೂರ್ಯನಿಂದ ಬಂದ ಸಮಾಂತರ ಕಿರಣಗಳು ಆಕಾಶದ ತುಂಬ ಹರಡಿರುವ ಎಲ್ಲ ಹನಿಗಳೊಂದಿಗೆ ಮೇಲೆ ವರ್ಣಿಸಿದಂತೆ ವರ್ತಿಸಿದರೂ ಕನಿಷ್ಠ ವಿಚಲನ ಕೋನ (ಆ್ಯಂಗಲ್ ಆಫ್ ಮಿನಿಮಂ ಡೀವಿಯೇಷನ್) ಕೊಡಬಲ್ಲ ಸ್ಥಾನಗಳಲ್ಲಿದ್ದ ಹನಿಗಳು ವೀಕ್ಷಕನ ಕಡೆಗೆ ಕಳಿಸುವ ಕಿರಣಗಳು ಮಾತ್ರ ಅಧಿಕ ತೀವ್ರವಾಗಿರುತ್ತವೆ. ಸೂರ್ಯ (ಚಂದ್ರ) ವಿರುದ್ಧ ಬಿಂದುವಿನ ಸುತ್ತ ವೃತ್ತಾಕಾರದ ಯಾವುದೇ ಕಂಸದ ಮೇಲಿರುವ ಮಳೆಯ ಹನಿಗಳೆಲ್ಲವೂ ಸ್ಥಿರವಾದ ವಿಚಲನಕೋನ ಕೊಡುವುದರಿಂದ ಕನಿಷ್ಠ ವಿಚಲನಕೋನದಲ್ಲಿ ಸೂರ್ಯನ ಬೆಳಕನ್ನು ಪ್ರತಿಫಲಿಸುವ ಹನಿಗಳು ವೃತ್ತಾಕಾರ ಕಂಸದ ಮೇಲಿರಬೇಕು. ಅಂದರೆ ತೀವ್ರತೆ ಸಾಕಷ್ಟು ಇರುವ ಬಿಳಿ ಬಿಲ್ಲು ಕಾಣಬೇಕು. ಆದರೆ ಹೀಗೆ ಆಗದೆ ಕಾಮನ ಬಿಲ್ಲಿನಲ್ಲಿ ಬಣ್ಣ ಬಣ್ಣಗಳ ಪೂರಕ ಬಿಲ್ಲುಗಳು ಹೊಂದಿಕೊಂಡಿರುವಂತೆ ಕಾಣುವುದು ಬೆಳಕು ಸಪ್ತವರ್ಣಗಳ ಮಿಶ್ರಣವಾಗಿರುವುದರಿಂದ (**VIBGYOR**-ನೇರಿಳೆ, ತೀವ್ರನೀಲಿ, ನೀಲಿ, ಹಸುರು, ಹಳದಿ, ಕಿತ್ತಳೆ, ಕೆಂಪು). ಕನಿಷ್ಠ ವಿಚಲನೆಯ ಕೋನಗಳು

ಬೇರೆ ಬೇರೆ ಬಣ್ಣಗಳಿಗೆ ಬೇರೆ ಬೇರೆ ಬೆಲೆಗಳುಳ್ಳವಾದ್ದರಿಂದ ಮೇಲಿನ ಪ್ರತಿಯೊಂದು ಬಣ್ಣದ ಬೆಳಕೂ ತನ್ನದೇ ಆದ ಬಿಲ್ಲನ್ನು ಕೊಡುವುದು. ಇದಕ್ಕೆ ವರ್ಣವಿಭಜನೆ ಎನ್ನುತ್ತಾರೆ. ಆದ್ದರಿಂದ ಕಾಮನಬಿಲ್ಲಿನಲ್ಲಿ ಕೆಳಗಿನಿಂದ ಮೇಲೆ ಹೋದಂತೆ ನೇರಿಳೆಯಿಂದ ಕೆಂಪಿನವರೆಗಿನ ರೋಹಿತ ಸಿಕ್ಕುತ್ತದೆ. ಬಿಲ್ಲಿನ ಕೋನೀಮ ವ್ಯಾಪ್ತಿ ಸುಮಾರು $40^0$–$40^0$

ಕೆಲವೊಮ್ಮೆ ಈ ಪ್ರಧಾನ ಬಿಲ್ಲು ಮಾತ್ರವಲ್ಲದೆ ಅದರ ಮೇಲೆ ಮಸುಕಾಗಿ ಎರಡನೆಯ ಕಾಮನಬಿಲ್ಲು ಮೂಡಿರುವುದನ್ನೂ ನೋಡಬಹುದು. ಮಳೆ ಹನಿಗಳಲ್ಲಿ ಎರಡು ಬಾರಿ ಆಂತರಿಕ ಪ್ರತಿಫಲನವಾಗಿ ಬಂದ ಕಿರಣಗಳು ಕನಿಷ್ಠ ವಿಚಲನ ಕೋನ ಮಾಡಿದಾಗ ಈ ಎರಡನೆಯ ಬಿಲ್ಲು ಸಿಗುತ್ತದೆ. ಇದರಲ್ಲಿ ಬಣ್ಣಗಳು ಪ್ರಧಾನ ಬಿಲ್ಲಿನಲ್ಲಿಯ ವಿರುದ್ಧ ಕ್ರಮದಲ್ಲಿದ್ದು ಸುಮಾರು $51^0$ ಕೋನ ಮಾಡುವ ವೃತ್ತದ ಮೇಲೆ ಸಿಕ್ಕುತ್ತವೆ.

ಮಳೆಯಾಗದಿದ್ದಾಗ ಕೂಡ ನೀರಿನ ತುಂತುರು ಹನಿಗಳು ಸೂರ್ಯನ ಬೆಳಕಿನ ವರ್ಣವಿಭಜನೆ ಮಾಡುವ ಅವಕಾಶವಿದ್ದರೆ ಅಲ್ಲಿಯೂ ಕಾಮನ ಬಿಲ್ಲನ್ನು ಕಾಣಬಹುದು. ಜಲಪಾತಗಳಲ್ಲಿ ಎದುರಿನಿಂದ ಸೂರ್ಯಪ್ರಕಾಶ ಬೀಳುವಾಗ ಇಂಥ ಮನೋಹರ ಬಿಲ್ಲುಗಳು ಸಾಮಾನ್ಯವಾಗಿ ಕಂಡೇ ಕಾಣುವುವು. (ಆರ್.ಎಸ್.ಬಿ.)

**ಕಾಮನಹಬ್ಬ:** ಕರ್ನಾಟಕದಲ್ಲಿ ಆಚರಣೆಯಲ್ಲಿರುವ ಒಂದು ಜನಪದ ಹಬ್ಬ. ಉತ್ತರ ಕರ್ನಾಟಕದಲ್ಲಿ ಈ ಹಬ್ಬವನ್ನು ಹೋಳಿ ಹುಣ್ಣಿಮೆ, ಹೋಳಿಹಬ್ಬ ಎಂದು ಆಚರಿಸುವ ರೂಢಿಯಿದೆ. ಇದು ಪ್ರತಿವರ್ಷದ ಫಾಲ್ಗುಣ ಮಾಸದಲ್ಲಿ ನಡೆಯುತ್ತದೆ.

ವಿಜಯನಗರದ ಅರಸರು ಕಾಮನ ಹಬ್ಬವನ್ನು ತುಂಬ ಉತ್ಸಾಹದಿಂದ ಆಚರಿಸುತ್ತಿದ್ದ ಸಂಗತಿಯನ್ನು ಕಣ್ಣಾರೆ ಕಂಡು ಆನಂದಿಸಿದ ವಿದೇಶೀ ಯಾತ್ರಿಕ ಡೆಮಿಂಗೊ ಪೆಯಸ್ ವರದಿ ಮಾಡಿದ್ದಾನೆ. ಕನಕದಾಸರ ವಿಖ್ಯಾತ ಹಾಡುಗಬ್ಬ 'ಮೋಹನ ತರಂಗಿಣಿ' ಕಾಮನ ಹಬ್ಬದ ಹಿನ್ನೆಲೆಯನ್ನು ಕುರಿತುದಾಗಿದೆ.

ಜನಪದ ಪರಂಪರೆಯ ಸಾಮಾಜಿಕ ಸಂಪ್ರದಾಯಗಳ ಸಂಕೇತಗಳನ್ನು ಈ ಹಬ್ಬದ ನಡೆವಳಿಯಲ್ಲಿ ನಾವು ಗುರುತಿಸಬಹುದು. ಹಳೆಯ ವಸ್ತುಗಳನ್ನು ಹೋಳಿಗಾಗಿ ಸಂಗ್ರಹಿಸುವುದು, ಕುಳ್ಳು (ಬೆರಣಿ), ಕಟ್ಟಿಗೆ ಕಳವು ಮಾಡಿ ತರುವುದು, ಕಾಮದಹನದ ಬೇರೆ ಬೇರೆ ಕಾರ್ಯಕ್ಕಾಗಿ ಹಳ್ಳಿಗಳಲ್ಲಿ ಬೇರೆ ಬೇರೆ ಹಕ್ಕುದಾರರಿರುವುದು, ಇವರೆಲ್ಲರ ಮೇಲೆ ಹೋಳಿಯ ನಾಯಕ ಎಂಬ ಹಿರಿಯನಿರುವುದು, ಅಸ್ಪೃಶ್ಯರೂ ಈ ಹಬ್ಬದಲ್ಲಿ ಪಾಲ್ಗೊಳ್ಳುವ ಅವಕಾಶವಿರುವುದು, ತಮ್ಮಟೆಗಳನ್ನು ಬಾರಿಸುವುದು, ಸಕ್ಕರೆಯ ಸರಗಳನ್ನು ಒಬ್ಬರು ಇನ್ನೊಬ್ಬರ ಮಕ್ಕಳಿಗೆ ಒಲವುಗಾಣಿಕೆಗಳನ್ನಾಗಿ ಕೊಡುವುದು, ಕಾಮದಹನದ ಕಾಲದಲ್ಲಿ ಉರಿಯಮೇಲೆ ಮಾಸ್ತಿ ಎಂಬ ಹೆಸರಿನಿಂದ ಹೆಣ್ಣು ಕೋಳಿಯನ್ನು ಹಾರಿಸುವುದು, ಉರಿಯುವ ಹೋಳಿಯಲ್ಲಿ ಕಬ್ಬಿನ ಗಣಿಕೆ (ತುಂಡು), ಬೆಲ್ಲದಿಂದ ಮಾಡಿದ ಚೇಳು, ತೆಂಗಿನಕಾಯಿ – ಇವುಗಳನ್ನು ಒಗೆಯುವುದು, ಹೋಳಿಯ ಬೆಂಕಿಯನ್ನು ಮನೆಗೆ ತಂದು ಅದರಲ್ಲಿ ಕಡಲೆಗಳನ್ನು ಸುಟ್ಟು ತಿನ್ನುವುದು ಇವೆಲ್ಲ ನಮ್ಮ ಜನಪದ ಸಂಪ್ರದಾಯಗಳಾಗಿವೆ ಎಂಬ ಬೆಟಗೇರಿ ಕೃಷ್ಣಶರ್ಮರ ಮಾತುಗಳು ಕಾಮನ ಹಬ್ಬದ ಆಚರಣೆಯ ವೈಶಿಷ್ಟ್ಯಗಳನ್ನು ನಿರೂಪಿಸುತ್ತವೆ. ಈ ಹಬ್ಬ ಕುರಿತಂತೆ ಉತ್ತರ ಕರ್ನಾಟಕದಲ್ಲಿ ಜನಪದ ಲಾವಣಿಗಳು, ದುಂದುಮೆ ಹಾಡು, ಹಿಯಾಲು ಮುಂತಾದ ಜನಪದ ಸಾಹಿತ್ಯ ಕಂಡುಬರುತ್ತದೆ.

ಕಾಮನ ಹಬ್ಬಕ್ಕೆ ಪೌರಾಣಿಕ ಅಂಶಗಳೂ ಸೇರಿಕೊಂಡಿವೆ. ವಿಷ್ಣುಪುರಾಣ, ಲಿಂಗಪುರಾಣಗಳ ಪ್ರಕಾರ ಪರಮೇಶ್ವರನ ಉಗ್ರತಪಸ್ಸಿಗೆ ಭಂಗತಂದ ಮನ್ಮಥ ಮುಕ್ಕಣ್ಣನ ಉರಿಗಣ್ಣಿನ ಬಿರುಬಿಗೆ ಸಿಕ್ಕು ಬೆಂದು ಹೋದ. ಅನಂತರ ರತಿಯ ಮೇಲಿನ ಕನಿಕರದಿಂದ ಕಾಮ ಅನಂಗನಾಗಿ ಬಾಳುವಂತೆ ಪರಮೇಶ್ವರ ಅನುಗ್ರಹಿಸಿದ. ಈ ಕಲ್ಪನೆಯಂತೆ ರತಿ–ಮನ್ಮಥರನ್ನು ಮೊದಲು ಪೂಜಿಸಿ ಹಾಡಿ ಕುಣಿದು ಅನಂತರ ಕಾಮನನ್ನು ಸುಡುವ ಸಂಪ್ರದಾಯ ಕರ್ನಾಟಕದಲ್ಲಿದೆ. (ಎನ್.ಟಿ.)

**ಕಾಮನ್‌ವೆಲ್ತ್ ಕ್ರೀಡೆಗಳು :** ಒಲಿಂಪಿಕ್ ಕ್ರೀಡೆಗಳನ್ನು ಬಿಟ್ಟರೆ ವಿಶ್ವದಲ್ಲೇ ಅತ್ಯಂತ ದೊಡ್ಡ ಕ್ರೀಡಾಕೂಟ ಕಾಮನ್‌ವೆಲ್ತ್ ಗೇಮ್ಸ್. ಇದು ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ. ಕತ್ತಿವರಸೆ, ಈಜು, ಬೋಲ್ಸ್, ಮುಷ್ಟಿಕಾಳಗ, ಸೈಕಲ್ ಸವಾರಿ, ಹುಟ್ಟುದೋಣಿ ಚಾಲನೆ (ರೋಯಿಂಗ್), ಭಾರ ಎತ್ತುಗೆ, ಕುಸ್ತಿ ಇವುಗಳಲ್ಲಿ ಪಂದ್ಯಗಳನ್ನೇರ್ಪಡಿಸಲಾಗುತ್ತದೆ. ಕೆಲವಕ್ಕೆ ಸ್ತ್ರೀಯರೂ ಪ್ರವೇಶಿಸಬಹುದು. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಹವ್ಯಾಸಿಗಳಾಗಿರಬೇಕು; ಕಾಮನ್‌ವೆಲ್ತ್ ಕೂಟದ ಯಾವುದಾದರೂ ಸದಸ್ಯರಾಷ್ಟ್ರದಲ್ಲಿ ಹುಟ್ಟಿದವರಾಗಿರಬೇಕು ಅಥವಾ ಅದರ ನಿವಾಸಿಗಳಾಗಿರಬೇಕು.

ಮೊದಲು ಇದಕ್ಕೆ ಬ್ರಿಟಿಷ್ ಸಾಮ್ರಾಜ್ಯ ಮತ್ತು ಕಾಮನ್‌ವೆಲ್ತ್ ಕ್ರೀಡೆಗಳು ಎಂಬ ಹೆಸರಿತ್ತು. ಇಂಥ ಕೂಟವನ್ನು ಏರ್ಪಡಿಸುವ ವಿಚಾರ ಮೊಟ್ಟಮೊದಲಿಗೆ ಬಂದದ್ದು 1891ರಲ್ಲಿ–ರೆವರೆಂಡ್ ಆಸ್ಟ್ಲಿ ಕೂಪರ್ ಅವರಿಂದ. ಸಾಮ್ರಾಜ್ಯ ಕ್ರೀಡೆಗಳನ್ನು ಏರ್ಪಡಿಸಬೇಕೆಂದು ಆಸ್ಟ್ರೇಲಿಯದ ಅಮೆಚೂರ್ ಅಥ್ಲೆಟಿಕ್ ಯೂನಿಯನ್ನಿನ ರಿಚರ್ಡ್ ಕೂಂ ತೀವ್ರವಾಗಿ ಪ್ರಚಾರ ಮಾಡಿದ. 5ನೆಯ ಜಾರ್ಜ್ ದೊರೆಯ ಪಟ್ಟಾಭಿಷೇಕೋತ್ಸವದ ಅಂಗವಾಗಿ 1911ರಲ್ಲಿ ಲಂಡನ್ನಿನಲ್ಲಿ ಸಣ್ಣ ಪ್ರಮಾಣದಲ್ಲಿ ಅಂತರ ಸಾಮ್ರಾಜ್ಯ ಕ್ರೀಡೆಗಳು ನಡೆದುವು. ಇದರಲ್ಲಿ ಭಾಗವಹಿಸಿದ್ದವರು ನಾಲ್ಕು ದೇಶಗಳ ಕ್ರೀಡಾಪಟುಗಳು ಮಾತ್ರ: ಇಂಗ್ಲೆಂಡ್, ಕೆನಡ, ಆಸ್ಟ್ರೇಲಿಯ ಮತ್ತು ದಕ್ಷಿಣ ಆಫ್ರಿಕದವರು. ಈಜು, ಕುಸ್ತಿ ಮತ್ತು ಮುಷ್ಟಿಕಾಳಗಗಳಲ್ಲಿ ಒಟ್ಟು ಐದು ಸ್ಪರ್ಧೆಗಳು ಮಾತ್ರ ನಡೆದುವು.

ಅಧಿಕೃತವಾಗಿ ಮೊಟ್ಟಮೊದಲಿನ ಕ್ರೀಡಾಕೂಟವನ್ನು ಏರ್ಪಡಿಸಲಾದ್ದು 1930ರಲ್ಲಿ, ಕೆನಡದ ಹ್ಯಾಮಿಲ್ಟನ್ ನಗರದಲ್ಲಿ. ಬ್ರಿಟಿಷ್ ಚಕ್ರಾಧಿಪತ್ಯ ಕ್ರೀಡೆಗಳು ಎಂಬುದು ಅದರ ಅಧಿಕೃತ ಹೆಸರು. ಹನ್ನೊಂದು ರಾಷ್ಟ್ರಗಳ ತಂಡಗಳು ಭಾಗವಹಿಸಿದ್ದ ಆ ಕೂಟ ತುಂಬ ಯಶಸ್ವಿಯಾಯಿತು. ಇಂಥ ಕ್ರೀಡಾಕೂಟವನ್ನು ನಾಲ್ಕು ವರ್ಷಗಳಿಗೊಮ್ಮೆ – ಎರಡು ಒಲಿಂಪಿಕ್ ಕೂಟಗಳ ನಡುವೆ – ಏರ್ಪಡಿಸಬೇಕೆಂಬ ತೀರ್ಮಾನವಾದದ್ದು ಆ ಸಂದರ್ಭದಲ್ಲೇ.

ಎರಡನೆಯ ಕಾಮನ್‌ವೆಲ್ತ್ ಕ್ರೀಡಾಕೂಟ ಲಂಡನ್ನಿನಲ್ಲಿ 1934ರಲ್ಲಿ ಜರುಗಿದಾಗ ಸುಮಾರು 50,000 ಕ್ಕೂ ಹೆಚ್ಚು ಕ್ರೀಡಾಭಿಮಾನಿಗಳು ಅದನ್ನು ವೀಕ್ಷಿಸಿದರು. ಸ್ತ್ರೀಯರೂ ಭಾಗವಹಿಸಬಹುದಾದ ಸ್ಪರ್ಧೆಗಳ ಸಂಖ್ಯೆ ಹೆಚ್ಚಿತು. ಭಾರತ, ಹಾಂಗ್‌ಕಾಂಗ್, ಜಮೈಕ, ದಕ್ಷಿಣ ರೊಡೇಷಿಯ ಮತ್ತು ಟ್ರಿನಿಡಾಡ್ – ಇವು ಈ ಕ್ರೀಡೆಯಲ್ಲಿ ಭಾಗವಹಿಸಿದ ಹೊಸ ರಾಷ್ಟ್ರಗಳು. ಪಾಲ್ಗೊಂಡ ಒಟ್ಟು ಕ್ರೀಡಾಪಟುಗಳ ಸಂಖ್ಯೆ 600.

ಆಸ್ಟ್ರೇಲಿಯದ 150ನೆಯ ವಾರ್ಷಿಕೋತ್ಸವದ ಸವಿನೆನಪಿಗಾಗಿ ಮೂರನೆಯ ಕಾಮನ್‌ವೆಲ್ತ್ ಕ್ರೀಡೆಗಳು 1938ರಲ್ಲಿ ಸಿಡ್ನಿಯಲ್ಲಿ ಜರುಗಿದಾಗ ಸುಮಾರು 507 ಸ್ಪರ್ಧಿಗಳು ಭಾಗವಹಿಸಿದ್ದರು.

ಎರಡನೆಯ ಮಹಾಯುದ್ಧದ ಪರಿಣಾಮವಾಗಿ 1942 ಮತ್ತು 1946ರಲ್ಲಿ ಈ ಕ್ರೀಡಾಕೂಟ ಜರುಗಲಿಲ್ಲ. 1950ರಲ್ಲಿ ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ನಡೆದ 4ನೆಯ ಕೂಟದಲ್ಲಿ 12 ರಾಷ್ಟ್ರಗಳ ಪರವಾಗಿ 663 ಸ್ಪರ್ಧಿಗಳು ಭಾಗವಹಿಸಿದ್ದರು.

ಅಥ್ಲೆಟಿಕ್ ಕ್ರೀಡೆಗಳ ಇತಿಹಾಸದಲ್ಲಿಯೇ ಮೊಟ್ಟಮೊದಲನೆಯ ಬಾರಿಗೆ ಒಂದು ಮೈಲಿ ದೂರವನ್ನು 4 ನಿಮಿಷಗಳ ಒಳಗೆ ಓಡಿ ವಿಶ್ವವಿಖ್ಯಾತಿಯನ್ನು ಸಂಪಾದಿಸಿದ ಬ್ರಿಟನಿನ ರೋಜರ್ ಬ್ಯಾನಿಸ್ಟರ್ ಈ ವಿಕ್ರಮವನ್ನು ಸಾಧಿಸಿದ್ದು ಕೆನಡದ ವಾಂಕೂವರ್‌ನಲ್ಲಿ ನಡೆದ 5ನೆಯ ಕೂಟದಲ್ಲಿ. ಇದು ಕೆನಡದಲ್ಲಿ ಸಮಾವೇಶಗೊಂಡಿದ್ದ ಎರಡನೆಯ ಕೂಟ.

ಕಾಮನ್‌ವೆಲ್ತ್ ಕ್ರೀಡೆಯಲ್ಲಿ ಭಾರತದ ವಿಜಯಪತಾಕೆಯನ್ನು ಹಾರಿಸಿದ ಖ್ಯಾತಿ ಮಿಂಚಿನ ಓಟದ ಮಿಲ್ಖಾಸಿಂಗನದು. 1958ರಲ್ಲಿ ವೇಲ್ಸಿನ ಕಾರ್ಡಿಫ್‌ನಲ್ಲಿ ನಡೆದ ಆರನೆಯ ಕೂಟದಲ್ಲಿ ಮಿಲ್ಖಾಸಿಂಗ್ 440 ಗಜಗಳ ಓಟದಲ್ಲಿ ಸ್ವರ್ಣಪದಕ ಗಳಿಸಿದ. ಕುಸ್ತಿಪಟು ಲೀಲಾರಾಂ ಭಾರದ ತೂಕದ (ಹೆವಿ ವೇಟ್) ತಂಡದ ಕುಸ್ತಿ ಸ್ಪರ್ಧೆಯಲ್ಲಿ ಭಾರತಕ್ಕೆ ಎರಡನೆಯ ಸ್ವರ್ಣಪದಕವನ್ನು ಗಳಿಸಿಕೊಟ್ಟ ಸ್ಪರ್ಧಿ.

1962ರಲ್ಲಿ ಆಸ್ಟ್ರೇಲಿಯದ ಪರ್ತ್‌ನಲ್ಲಿ ನಡೆದ ಏಳನೆಯ ಕ್ರೀಡಾಕೂಟದಲ್ಲಿ ಭಾಗವಹಿಸಿದ ಭಾರತೀಯ ಅಥ್ಲೆಟಿಕ್ ತಂಡಕ್ಕೆ ಕರ್ನಾಟಕದ ಹೆಮ್ಮೆಯ ಓಟಗಾರ ಕೆನೆತ್ ಪೊವೆಲ್ ನಾಯಕ. ಬ್ರಿಟಿಷ್ ಚಕ್ರಾಧಿಪತ್ಯ ಮತ್ತು ಕಾಮನ್‌ವೆಲ್ತ್ ಕ್ರೀಡೆಗಳು ಎಂದಿದ್ದ ಹೆಸರನ್ನು ಕೇವಲ ಕಾಮನ್‌ವೆಲ್ತ್ ಕ್ರೀಡೆಗಳು ಎಂದು ಬದಲಾಯಿಸಿದ್ದು ಈ ಕೂಟದ ಸಮಯದಲ್ಲಿಯೇ. ಈ ಕೂಟದಲ್ಲಿ ಭಾರತದ ಕುಸ್ತಿಪಟುಗಳು ಮೂರು ಚಿನ್ನದ, ಮೂರು ಬೆಳ್ಳಿಯ ಮತ್ತು ಮೂರು ಕಂಚಿನ ಪದಕಗಳನ್ನು ಸಂಪಾದಿಸಿ, ಭಾರತದ ಹಿರಿಮೆಯನ್ನು ಎತ್ತಿ ಸಾರಿದರು. ಹ್ಯಾಮರ್ ಎಸೆತದಲ್ಲಿ ಪ್ರವೀಣ್‌ಕುಮಾರ್‌ಗೆ ಬೆಳ್ಳಿಯ ಪದಕ ದೊರಕಿತು.

1970ರಲ್ಲಿ ಸ್ಕಾಟ್ಲೆಂಡಿನ ಎಡಿನ್‌ಬರೋದಲ್ಲಿ ನಡೆದ ಕ್ರೀಡಾಕೂಟ ಆವರೆಗೆ ನಡೆದ ಎಲ್ಲ ಕ್ರೀಡಾಕೂಟಗಳಿಗಿಂತಲೂ ಹೆಚ್ಚು ಯಶಸ್ವಿಯಾಗಿ ನಡೆಯಿತು. ಭಾರತದ ಕುಸ್ತಿ ತಂಡದವರು ಎಲ್ಲ ರಾಷ್ಟ್ರಗಳಿಗಿಂತಲೂ ಹೆಚ್ಚಿನ ಸ್ವರ್ಣಪದಕಗಳನ್ನು ಗಳಿಸಿದರು. ತಂಡದಲ್ಲಿ



100 ಗಜಗಳ ಓಟದ ಪಂದ್ಯ : ಕೆನಡದ ಹ್ಯಾರಿ ಜೆರೋಂ–ಗೆಲ್ಲುವ ಘಟ್ಟದಲ್ಲಿ

ಭಾಗವಹಿಸುವಂಥ ಯಾವ ಸ್ಪರ್ಧೆಯೂ ಇಲ್ಲದ್ದು ಮತ್ತು ಎಲ್ಲ ಸ್ಪರ್ಧೆಗಳೂ ವೈಯಕ್ತಿಕವಾಗಿರುವುದು ಕಾಮನ್‌ವೆಲ್ತ್ ಕ್ರೀಡೆಗಳ ವೈಶಿಷ್ಟ್ಯ.

1974ರಲ್ಲಿ ನ್ಯೂಜಿಲೆಂಡಿನ ಕ್ರೈಸ್ಟ್‌ಚರ್ಚ್‌ನಲ್ಲಿ 1978ರಲ್ಲಿ ಕೆನಡದ ಎಡ್ಮಂಟನ್‌ನಲ್ಲೂ 1982ರಲ್ಲಿ ಆಸ್ಟ್ರೇಲಿಯದ ಬ್ರಿಸ್ಬೇನ್‌ನಲ್ಲೂ, ಸ್ಕಾಟ್ಲಂಡಿನ ಎಡಿನ್‌ಬರದಲ್ಲೂ, 1990ರಲ್ಲಿ ಸ್ವಾಸಿಲೆಂಡಿನ ಆಕ್ಲಂಡಿನಲ್ಲಿ 1994ರಲ್ಲಿ ಕೆನಡದ ವಿಕ್ಟೋರಿಯದಲ್ಲೂ, 1998ರಲ್ಲಿ ಕೌಲಲಂಪುರದ ಮಲೇಷಿಯದಲ್ಲೂ, 2002ರಲ್ಲಿ ಇಂಗ್ಲೆಂಡಿನ ಮ್ಯಾಂಚೆಸ್ಟರ್‌ನಲ್ಲೂ 2006ರಲ್ಲಿ ಆಸ್ಟ್ರೇಲಿಯದ ಮೆಲ್ಬರ್ನ್‌ನಲ್ಲೂ, 2010ರಲ್ಲಿ ಭಾರತದ ನವದೆಹಲಿಯಲ್ಲೂ ಈ ಕ್ರೀಡಾಕೂಟಗಳು ನಡೆದವು. 2014ರಲ್ಲಿ ಸ್ಕಾಟ್ಲೆಂಡಿನ ಗ್ಲಾಸ್‌ಗೌನಲ್ಲೂ, 2018ರಲ್ಲಿ ಆಸ್ಟ್ರೇಲಿಯದ ಗೋಲ್ಡ್‌ಕೋಸ್ಟ್‌ನಲ್ಲೂ ನಡೆಸುವಂತೆ ತೀರ್ಮಾನವಾಗಿದೆ.

ಒಟ್ಟಿನಲ್ಲಿ ಆಸ್ಟ್ರೇಲಿಯ ಇಲ್ಲಿಯವರೆಗೆ 4 ಸಲ, ಕೆನಡ 4 ಸಲ, ನ್ಯೂಜಿಲೆಂಡ್ ಮೂರು ಸ್ಕಾಟ್ಲೆಂಡ್ 3 ಸಲ, ಇಂಗ್ಲೆಂಡ್ 2 ಸಲ, ಭಾರತ ಒಂದು ಸಲ, ಮಲೇಷ್ಯ ಒಂದು ಸಲ, ಜಮೈಕ ಒಂದು ಸಲ ಮತ್ತು ವೇಲ್ಸ್ ಒಂದು ಸಲ ಕಾಮನ್‌ವೆಲ್ತ್ ಕ್ರೀಡಾಕೂಟಗಳನ್ನು ಏರ್ಪಡಿಸಿವೆ. ಆರು ರಾಷ್ಟ್ರಗಳ ಕ್ರೀಡಾ ತಂಡಗಳು ಮಾತ್ರ ಎಲ್ಲಾ ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಭಾಗವಹಿಸಿವೆ. ಆಸ್ಟ್ರೇಲಿಯ, ಕೆನಡ, ಇಂಗ್ಲೆಂಡ್, ನ್ಯೂಜಿಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್, ಆಸ್ಟ್ರೇಲಿಯ ಅತಿ ಹೆಚ್ಚು ಕ್ರೀಡೆಗಳಲ್ಲಿ– ಅಂದರೆ 11 ಕ್ರೀಡೆಗಳಲ್ಲಿ–, ಇಂಗ್ಲೆಂಡ್ ಏಳರಲ್ಲಿ, ಮತ್ತು ಕೆನಡ ಒಂದರಲ್ಲಿ ಅತಿ ಹೆಚ್ಚು ಅಂಕಗಳಿಸಿವೆ.

ಒಟ್ಟು 21 ಬಗೆಯ ಆಟೋಟಗಳನ್ನು ಕಾಮನ್‌ವೆಲ್ತ್ ಕ್ರೀಡೆಗಳ ಒಕ್ಕೂಟ ಅಂಗೀಕರಿಸಿದೆ. ಉಳಿದವು ಐಚ್ಛಿಕ, ಅವನ್ನು ಕ್ರೀಡಾಕೂಟ ನಡೆಸುವ ದೇಶವು ಆರಿಸಿಕೊಳ್ಳಬಹುದು.

ಕ್ರೀಡೆಗಳ ಪಟ್ಟಿಯಲ್ಲಿ ಈ ಕೆಳಕಂಡವು ಸೇರಿವೆ:

ಬಿಲ್ವಿದ್ಯೆ (ಆರ್ಚರಿ), ಅಂಗಸಾಧನೆ (ಅಥ್ಲೆಟಿಕ್ಸ್), ಬ್ಯಾಡ್ಮಿಂಟನ್, ಕುಕ್ಕೆಚೆಂಡು (ಬ್ಯಾಸ್ಕೆಟ್ ಬಾಲ್), ಬಿಲ್ಯರ್ಡ್ಸ್, ಬಾಕ್ಸಿಂಗ್ ದೋಣಿ ಚಾಲನೆ (ಕ್ಯಾನೋಯಿಂಗ್), ಕ್ರಿಕೆಟ್, ಸ್ಕೈಕ್ಲಿಂಗ್, ಡೈವಿಂಗ್, ಕತ್ತಿವರಿಸೆ (ಫೆನ್ಸಿಂಗ್), ಗಾಲ್ಫ್, ಜಿಮ್ನ್ಯಾಸ್ಟಿಕ್ಸ್, ಹ್ಯಾಂಡ್‌ಬುಲ್, ಹಾಕಿ, ಜೂಡೊ, ಲಾನ್‌ಚೌಲ್ಸ್, ಲೈಫ್‌ಸೇವಿಂಗ್, ನೆಟ್‌ಬಾಲ್, ಹುಟ್ಟುಹಾಕುವುದು (ರೋವಿಂಗ್), ರಗ್ಬಿ ಸೆವೆನ್ಸ್, ಸೇಲಿಂಗ್, ಷೂಟಿಂಗ್, ಸಾಸ್ಟ್‌ಬಾಲ್, ಸ್ಕ್ವಾಷ್, ಈಜು, ಸಿಂಕ್ರೊನೈಸ್ಡ್, ಈಜು, ಟೇಬಲ್ ಟೆನಿಸ್, ಟೇಕ್‌ವಾಂಡೊ, ಟೆನಿಸ್, ಟೆನ್–ಪಿನ್ ಬೌಲಿಂಗ್, ಟ್ರೈಅಕ್ಲಾನ್, ವಾಲಿಬಾಲ್, ನೀರಿನ ಪೋವೋ, ತೂಕ ಎತ್ತುವುದು, ಕುಸ್ತಿ. ಭಾರತದ ಕಬಡ್ಡಿ ಪಂದ್ಯ ವಿಶ್ವಮಟ್ಟದಲ್ಲಿ ಅಂಗೀಕೃತವಾಗಿದ್ದು ಅದು ಕ್ರೀಡೆಗಳಲ್ಲಿ ಸೇರಲಿದೆ. (ಎ.ಆರ್.ಸಿ.ಪಿ.)

**ಕಾಮನ್‌ವೆಲ್ತ್ ರಾಷ್ಟ್ರಸಮುದಾಯ :** ಬ್ರಿಟಿಷ್ ದೊರೆತನಕೆ ಗೌರವ ಸಲ್ಲಿಸುವ ದೇಶ ಪ್ರದೇಶಗಳ ಅಥವಾ ಅದರ ಅಧ್ಯಕ್ಷತೆಯಲ್ಲಿ ಒಂದುಗೂಡಲು ಸ್ವಂತ ಇಚ್ಛೆಯಿಂದ ಒಡಂಬಟ್ಟ ಸ್ವತಂತ್ರ ರಾಷ್ಟ್ರಗಳ ಸಮುದಾಯ (ಕಾಮನ್‌ವೆಲ್ತ್ ಆಫ್ ನೇಷನ್ಸ್). ಈ ಸಮುದಾಯದ ರಾಷ್ಟ್ರಗಳು ಹಿಂದೆ ಬ್ರಿಟಿಷ್ ಕಾಮನ್‌ವೆಲ್ತ್ ಅಥವಾ ಬ್ರಿಟಿಷ್ ಚಕ್ರಾಧಿಪತ್ಯದ ಅಂಗಗಳಾಗಿದ್ದುವು. ಈ ಸಮುದಾಯದಲ್ಲಿ ಅಧೀನ ರಾಷ್ಟ್ರಗಳೂ ಆಶ್ರಿತ ದೇಶಗಳೂ ವಿಶ್ವಸಂಸ್ಥೆಯಿಂದ ಬ್ರಿಟನಿನ ಆಳ್ವಿಕೆಗೆ ಕೊಡಲಾದ ನ್ಯಾಸ ಪ್ರದೇಶಗಳೂ ಇವೆ. ಈ ಸಮುದಾಯದಲ್ಲಿಯ ಅನೇಕ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಬ್ರಿಟನಿಗೆ ಯಾವುದೇ ಬಗೆಯ ನೇರ ಸಂಬಂಧವಾಗಲಿ ಪ್ರಭಾವವಾಗಲಿ ಇಲ್ಲ. ಆದರೆ ಕೆಲವು ದೇಶಗಳಲ್ಲಿ ಆಯಾದೇಶಗಳ ಜನಪ್ರತಿನಿಧಿಗಳಿಂದ ಸೂಚಿತವಾಗಿ ಬ್ರಿಟನಿನ ರಾಣಿಯಿಂದ (ಅಥವಾ ದೊರೆಯಿಂದ) ನೇಮಕವಾದ ಗವರ್ನರ್ ಜನರಲರು ಅಧಿಕಾರ ನಡೆಸುತ್ತಾರೆ. ಈ ಸಮುದಾಯದಲ್ಲಿ ಸಂಸದೀಯ ಸರ್ಕಾರಗಳಿರುವ ದೇಶಗಳ ಸಂಖ್ಯೆಯೇ ಅಧಿಕ.

ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜಪ್ರಭುತ್ವ, ಕೆನಡ, ಆಸ್ಟ್ರೇಲಿಯ, ನ್ಯೂಜೀಲೆಂಡ್, ಶ್ರೀಲಂಕ, ಸೀಯೆರ ಲಿಯೋನ್, ಜಮೈಕ, ಟ್ರಿನಡಾಡ್ ಮತ್ತು ಟಬೇಗೋ, ಮಾಲ್ಟ, ಗಾಂಬಿಯ, ಬಾರ್ಬಡಾಸ್, ಗಿಯಾನ, ಮಾರಿಷಸ್ ಮತ್ತು ಇತರ ಸ್ವತಂತ್ರ ಪ್ರದೇಶಗಳೂ ಬ್ರಿಟಿಷ್ ರಕ್ಷಣೆಗೆ ಒಳಪಟ್ಟ ಪ್ರದೇಶಗಳೂ ರಾಜ್ಯಗಳೂ ಭಾರತ, ಪಾಕಿಸ್ತಾನ, ಘಾನ, ಸೈಪ್ರಸ್, ತಾಂಜನೀಯ, ನೈಜೀರಿಯ, ಉಗಾಂಡ, ಜಾಂಬಿಯ, ಕೀನ್ಯ, ಸಿಂಗಪುರ, ಮಲಾವಿ, ಬೋಟ್‌ಸ್ವಾನ ಗಣರಾಜ್ಯಗಳೂ ಮಲೇಷ್ಯ, ಲಸೋತೋ, ಸ್ವಾಜೀ ಲ್ಯಾಂಡ್ ಸ್ವತಂತ್ರ ರಾಜಪ್ರಭುತ್ವಗಳೂ ಕಾಮನ್‌ವೆಲ್ತಿನ ಸದಸ್ಯತ್ವ ಪಡೆದಿವೆ. ವಿಶ್ವದ ಪ್ರತಿಯೊಂದು ಖಂಡದಿಂದಲೂ ಒಂದು ರಾಷ್ಟ್ರವಾದರೂ ಕಾಮನ್‌ವೆಲ್ತ್ ರಾಷ್ಟ್ರಸಮುದಾಯದಲ್ಲಿ ಸದಸ್ಯತ್ವವುಂಟು. ಬ್ರಿಟಿಷರ ಆಡಳಿತಕ್ಕೊಳಪಟ್ಟಿರುವ ರಾಜ್ಯಗಳೂ ರಕ್ಷಿತ ಪ್ರದೇಶಗಳೂ ನ್ಯಾಸ ಪ್ರದೇಶಗಳೂ ಈ ಸಮುದಾಯದಲ್ಲಿವೆ.

ಒಂದು ಹೊಸ ರಾಷ್ಟ್ರ ಕಾಮನ್‌ವೆಲ್ತಿನ ಸದಸ್ಯತ್ವ ಪಡೆಯಬೇಕಾದರೆ ಉಳಿದ ಸದಸ್ಯ ರಾಷ್ಟ್ರಗಳ ಒಪ್ಪಿಗೆ ಬೇಕು. ಸದಸ್ಯತ್ವ ಐಚ್ಛಿಕ. ಅಂದರೆ ಬ್ರಿಟನಿನ ಅಧೀನದಲ್ಲಿರುವ ಒಂದು ರಾಷ್ಟ್ರ ಸ್ವಾತಂತ್ರ್ಯ ಗಳಿಸಿದ ಮೇಲೆ, ಕಾಮನ್‌ವೆಲ್ತಿಗೆ ಬೇಕಾದಲ್ಲಿ ಸೇರಬಹುದು; ಹಾಗಿಲ್ಲದೆ ಇದ್ದರೆ ಬಿಡಬಹುದು. ಉದಾಹರಣೆಗೆ ಬರ್ಮ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ಮೇಲೆ ಕಾಮನ್‌ವೆಲ್ತನ್ನು ಸೇರಲಿಲ್ಲ. ಕಾಮನ್‌ವೆಲ್ತಿನಲ್ಲಿರುವ ರಾಷ್ಟ್ರ ಅದರಿಂದ ಹೊರಬರಲೂಬಹುದು. ಉದಾಹರಣೆಗೆ 1949ರಲ್ಲಿ ದಕ್ಷಿಣ ಆಫ್ರಿಕ ಗಣರಾಜ್ಯ ಹಾಗೂ ಐರ್ಲೆಂಡ್ ಗಣರಾಜ್ಯ ಕಾಮನ್‌ವೆಲ್ತ್ ಒಕ್ಕೂಟದಿಂದ ಹೊರಬಂದವು. ಕಾಮನ್‌ವೆಲ್ತ್ ರಾಷ್ಟ್ರಸಮುದಾಯ ಸ್ವಂತ ಇಚ್ಛೆಯಿಂದ ಪ್ರೇರಿತವಾದ ರಾಷ್ಟ್ರಗಳ ಸಂಘವೆಂಬುದಕ್ಕೆ ಇವು ದೃಷ್ಟಾಂತಗಳು.

ಕಾಮನ್‌ವೆಲ್ತ್ ರಾಷ್ಟ್ರ ಸಮುದಾಯದ 53 ಸದಸ್ಯ ರಾಷ್ಟ್ರಗಳ ವಿಸ್ತೀರ್ಣ ಮತ್ತು ಜನಸಂಖ್ಯೆಗಳನ್ನು ಸೂಚಿಸುವ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ:

**ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರಗಳು**

**ಸೇರಿದ ದಿನಾಂಕ ಖಂಡ ಜನಸಂಖ್ಯೆ (2007)**

| | | | | |
|---|---|---|---|---|
| 1) | ಆ್ಯಂಟಿಗುವಾ ಮತ್ತು ಬಾರ್ಬುಡ | 1.11.1981 | ಉತ್ತರ ಅಮೆರಿಕ | 88,000 |
| 2) | ಆಸ್ಟ್ರೇಲಿಯ | 11.12.1931 | | 4000 |
| 3) | ಬಹಾಮಸ್ | 10.7.1973 | ಉತ್ತರ ಅಮೆರಿಕ | 342,000 |
| 4) | ಬಾಂಗ್ಲಾದೇಶ್ | 18.4.1972 | ಏಷ್ಯ | 162,221,000 |
| 5) | ಬಾರ್ಬಡಾಸ್ | 30.11.1966 | ಉತ್ತರ ಅಮೆರಿಕ | 279,000 |
| 6) | ಬೆಲೀಸ್ | 21.9.1987 | ಉತ್ತರ ಅಮೆರಿಕ | 322,130 |
| 7) | ಬೋಟ್‌ಸ್ವಾನ | 30.9.1966 | ಉತ್ತರ ಅಮೆರಿಕ | 1,950,000 |
| 8) | ಬ್ರುನೇ | 01.1.1984 | ಏಷ್ಯ | 400,000 |
| 9) | ಕ್ಯಾಮರೂನ್ | 13.11.1995 | ಆಫ್ರಿಕ | 19,522,000 |
| 10) | ಕೆನಡ | 11.12.1931 | ಉತ್ತರ ಅಮೆರಿಕ | 34,053,000 |
| 11) | ಸೈಪ್ರಸ್ | 13.3.1961 | ಯುರೋಪ್ | 803,000 |
| 12) | ಡಾಮಿನಿಕ | 3.11.1978 | ಉತ್ತರ ಅಮೆರಿಕ | 79,000 |
| 13) | ಗಾಂಬಿಯ | 18.2.1965 | ಆಫ್ರಿಕ | 1,717,000 |
| 14) | ಘಾನ | 6.3.1957 | ಆಫ್ರಿಕ | 23,837,000 |
| 15) | ಗ್ರೆನಡ | 7.2.1974 | ಉತ್ತರ ಅಮೆರಿಕ | 103,000 |
| 16) | ಗಿಯಾನ್ | 26.5.1966 | ದಕ್ಷಿಣ ಅಮೆರಿಕ | 761,000 |
| 17) | ಭಾರತ | 15.8.1947 | ಏಷ್ಯ | 1,210,193,422 |
| 18) | ಜಮೈಕ | 6.8.1962 | ಉತ್ತರ ಅಮೆರಿಕ | 2,721,000 |
| 19) | ಕೀನ್ಯ | 12.12.1963 | ಆಫ್ರಿಕ | 39,856,000 |
| 20) | ಕಿರಿಬತಿ | 12.7.1979 | ಓಷಿಯಾನಿಕ | 99,000 |
| 21) | ಲೆಸೋಕೊ | 6.7.1966 | ಆಫ್ರಿಕ | 2,000,000 |

| | | | | |
|---|---|---|---|---|
| 22) | ಮಲಾಯ್ | 31.8.1964 | ಆಫ್ರಿಕ | 15,884,000 |
| 23) | ಮಲೇಷ್ಯ | 31.8.1957 | ಏಷ್ಯ | 28,356,000 |
| 24) | ಮಾಲ್ಡಿವ್ಸ್ | 9.7.1982 | ಏಷ್ಯ | 329,000 |
| 25) | ಮಾಲ್ಟ | 4.9.1964 | ಯುರೋಪ್ | 412,668 |
| 26) | ಮಾರಿಷಸ್ | 12.3.1968 | ಆಫ್ರಿಕ | 1,285,000 |
| 27) | ಮೊಸಾಂಬಿಕ್ | 13.11.1995 | ಆಫ್ರಿಕ | 22,892,000 |
| 28) | ನಮೀಬಿಯ | 21.3.1990 | ಆಫ್ರಿಕ | 2,131,000 |
| 29) | ನೌರು | 1.11.1968 | ಓಷಿಯಾನಿಯ | 14,000 |
| 30) | ನ್ಯೂಜಿಲೆಂಡ್ | 11.12.1931 | ಓಷಿಯಾನಿಯ | 4,317,972 |
| 31) | ನೈಜೀರಿಯ | 1.10.1960 | ಆಫ್ರಿಕ | 1,54,796,000 |
| 32) | ಪಾಕಿಸ್ತಾನ | 15.8.1947 | ಏಷ್ಯಾ | 168,052,000 |
| 33) | ಪಪುವನ್ಯೂಗಿನಿ | 16.9.1975 | ಓಷಿಯಾನಿಯ | 6,737,000 |
| 34) | ರುವಾಂಡ | 29.11.2009 | ಆಫ್ರಿಕ | 9,998,000 |
| 35) | ಸೇಂಟ್ ಕಿಟ್ಸ್ ಮತ್ತು ನೆವಿಸ್ | 19.9.1983 | ಉತ್ತರ ಅಮೆರಿಕ | 52,000 |
| 36) | ಸೇಂಟ್ ಲೂಸಿಯ | 22,02,1979 | ಉತ್ತರ ಅಮೆರಿಕ | 171,000 |
| 37) | ಸೇಂಟ್ ವಿನ್ಸೆಂಟ್ ಅಂಡ್ ಗ್ರೆನೆಡೀನ್ಸ್ | 27.10.1979 | ಉತ್ತರ ಅಮೆರಿಕ | 119,000 |
| 38) | ಸಮೋವ | 28.08.1970 | ಓಷಿಯಾನಿಯ | 185,000 |
| 39) | ಸೆಕಿಲೀಸ್ | 29.6.1976 | ಆಫ್ರಿಕ | 84,000 |
| 40) | ಸಿಯೆರಲಿಅನ್ | 27.4.1961 | ಆಫ್ರಿಕ | 5,695,000 |
| 41) | ಸಿಂಗಪೂರ್ | 9.8.1966 | ಏಷ್ಯ | 4,986,000 |
| 42) | ಸಾಲೊಮನ್ ದ್ವೀಪಗಳು | 7.7.1978 | ಓಷಿಯಾನಿಯ | 913,000 |
| 43) | ದಕ್ಷಿಣ ಆಫ್ರಿಕ | 11.12.1931 | ಆಫ್ರಿಕ | 49,423,000 |
| 44) | ಶ್ರೀಲಂಕ | 4.2.1948 | ಏಷ್ಯ | 20,743,000 |
| 45) | ಸ್ವಾಸಿಲ್ಯಾಂಡ್ | 6.9.1968 | ಆಫ್ರಿಕ | 1,182,000 |
| 46) | ಟಾಂಜಾನಿಯ | 26.4.1964 | ಆಫ್ರಿಕ | 437,29,000 |
| 47) | ಟಾಂಗ | 4.6.1970 | ಓಷಿಯಾನಿಯ | 102,000 |
| 48) | ಟನಿಡಾಡ್ ಮತ್ತು ಟೊಬೇಗೊ | 31.8.1962 | ಉತ್ತರ ಅಮೆರಿಕ | 1,335,000 |
| 49) | ತುವಲು | 1.10.1978 | ಓಷಿಯಾನಿಯ | 12,000 |
| 50) | ಉಗಾಂಡ | 9.10.1978 | ಆಫ್ರಿಕ | 32,816,000 |
| 51) | ಯು.ಕೆ. | 11.12.1931 | ಯುರೋಪ್ | 61,609,500 |
| 52) | ವನುಆಟು | 30.7.1980 | ಓಷಿಯಾನಿಯ | 241,000 |
| 53) | ಜಾಂಬಿಯ | 24.10.1964 | ಆಫ್ರಿಕ | 12,935,000 |

ಆಧಾರ: ದಿ ಯುರೋಪ್ ಇಯರ್ ಬುಕ್, 1969

**ಕಾಮನ್‌ವೆಲ್ತ್ ರಾಷ್ಟ್ರಸಮುದಾಯದ ಕಾರ್ಯವಿಧಾನ** : ಕಾಮನ್‌ವೆಲ್ತ್ ರಾಷ್ಟ್ರ ಸಮುದಾಯ ಒಂದು ಅನೌಪಚಾರಿಕ ಸಂಸ್ಥೆ. ಅಂದರೆ ನಿಗದಿಯಾದ ಕಾರ್ಯಕ್ರಮಗಳ ಪಟ್ಟಿಗಳನ್ನು ಹೊಂದಿರತಕ್ಕಂಥ ಸಂಸ್ಥೆಯಲ್ಲ. ಆದ್ದರಿಂದ ಕಾಮನ್‌ವೆಲ್ತ್ ರಾಷ್ಟ್ರಕೂಟ ಇಂಥದೇ ಕಾರ್ಯಗಳನ್ನು ನಿರ್ವಹಿಸುತ್ತದೆಯೆಂದು ಖಚಿತವಾಗಿ ಹೇಳುವುದು ಕಷ್ಟ ಏಕತೆಗಿಂತ ವೈವಿಧ್ಯವೇ ಕಾಮನ್‌ವೆಲ್ತಿನ ಮುಖ್ಯ ಗುಣ. ವಿಭಿನ್ನ ರಾಷ್ಟ್ರಗಳು, ಜನಾಂಗಗಳು, ಭಾಷೆಗಳು ಮತ್ತು ಸಂಸ್ಕೃತಿಗಳ ಸಂಗಮವಿದು. ಈ ಒಕ್ಕೂಟದಲ್ಲಿ ರಾಜಪ್ರಭುತ್ವವಿದೆ. ಪ್ರಜಾಪ್ರಭುತ್ವವನ್ನು ಒಪ್ಪಿರುವ ಗಣರಾಜ್ಯಗಳಿವೆ. ಮಿಲಿಟರಿ ಆಳ್ವಿಕೆಗೆ ಒಳಗಾಗಿರುವ ರಾಷ್ಟ್ರಗಳಿವೆ. ಇವುಗಳ ವಿದೇಶಾಂಗನೀತಿಯಲ್ಲೂ ಅದೇ ರೀತಿಯ ವೈವಿಧ್ಯವನ್ನು ಕಾಣಬಹುದು. ಉದಾಹರಣೆಗೆ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತದ್ದು ಅಲಿಪ್ತ ನೀತಿ; ಆಸ್ಟ್ರೇಲಿಯ, ನ್ಯೂಜಿಲೆಂಡ್‌ಗಳು ಸಾಮಾನ್ಯವಾಗಿ ಬ್ರಿಟನ್ ಅನುಸರಿಸುವ ನೀತಿಯನ್ನೇ ಅನುಸರಿಸುತ್ತವೆ. ಹೀಗಿದ್ದರೂ ಈ ಸದಸ್ಯ ರಾಷ್ಟ್ರಗಳ ಮಧ್ಯೆ ಸಾಮಾನ್ಯ ದೃಷ್ಟಿಕೋನ ಮತ್ತು ಉದ್ದೇಶಗಳನ್ನು ಕಂಡುಹಿಡಿಯುವುದು ಕಷ್ಟವಿಲ್ಲ. ಎಲ್ಲರೂ ಒಪ್ಪುವ ಉದ್ದೇಶಗಳನ್ನು ಕಾಮನ್‌ವೆಲ್ತ್ ಹೊಂದಿರುವುದರಿಂದ ಅದು ಇಂದಿಗೂ ಬದುಕಿ ಉಳಿದಿದೆ.

ಎರಡನೆಯ ಮಹಾಯುದ್ಧಕ್ಕೆ ಹಿಂದೆ ಕಾಮನ್‌ವೆಲ್ತಿನಲ್ಲಿದ್ದ ರಾಷ್ಟ್ರಗಳ ಸಂಖ್ಯೆ ಬಹು ಕಡಿಮೆ. ಮುಖ್ಯವಾಗಿ ಆಸ್ಟ್ರೇಲಿಯ, ನ್ಯೂಜಿಲೆಂಡ್, ಕೆನಡ ಮತ್ತು ದಕ್ಷಿಣ ಆಫ್ರಿಕಗಳು ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರಗಳಾಗಿದ್ದುವು. ಈ ರಾಷ್ಟ್ರಗಳ ಹೆಚ್ಚಿನ ಜನ ಬ್ರಿಟಿಷ್ ಸಂಜಾತರು. ಆದ್ದರಿಂದ ಅವರ ಮಧ್ಯೆ ಸಾಮಾನ್ಯ ಉದ್ದೇಶಗಳನ್ನು ಕಂಡುಹಿಡಿಯುವುದು ಸುಲಭವಾಗಿತ್ತು. ಈಗ ಕಾಮನ್‌ವೆಲ್ತ್ ಸಮುದಾಯದ ಪ್ರಧಾನ ಮಂತ್ರಿಗಳ ಸಭೆ ಸೇರುವಂತೆ, ಎರಡನೆಯ ಮಹಾಯುದ್ಧಕ್ಕಿಂತ ಮುಂಚೆ ಸಾಮ್ರಾಜ್ಯ ಸಮ್ಮೇಳನಗಳು ಸೇರುತ್ತಿದ್ದುವು. ಈ ಸಭೆಗೆ ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರಗಳು ತಮ್ಮ ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಿದ್ದುವು. ಬ್ರಿಟಿಷ್ ಸಾಮ್ರಾಜ್ಯದ ಶಾಂತಿ, ಯುದ್ಧ, ಆರ್ಥಿಕ ಅಭಿವೃದ್ಧಿ ಹಾಗೂ ರಕ್ಷಣೆಗೆ ಸಂಬಂಧಿಸಿದಂತೆ ಬರುವ ಸಮಸ್ಯೆಗಳನ್ನು ಚರ್ಚಿಸಲಾಗುತ್ತಿತ್ತು. ಈ ಸಭೆಗಳಲ್ಲಿ ಒಮ್ಮತ ಸುಲಭಸಾಧ್ಯವಾಗಿತ್ತು.

ಆದರೆ ಎರಡನೆಯ ಮಹಾಯುದ್ಧದ ತರುವಾಯ ಕಾಮನ್‌ವೆಲ್ತ್ ರಾಷ್ಟ್ರಕೂಟದ ರಚನೆಯಲ್ಲಿ ವ್ಯತ್ಯಾಸವಾಗಿದೆ. ಹಿಂದಿದ್ದ ಸರಳತೆ ಮಾಯವಾಗಿ ಸಂಕೀರ್ಣತೆ ವೈವಿಧ್ಯಗಳು ಪ್ರಧಾನವಾಗಿವೆ. ಏಷ್ಯನ್ ಮತ್ತು ಆಫ್ರಿಕನ್ ರಾಷ್ಟ್ರಗಳು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದು ಕಾಮನ್‌ವೆಲ್ತ್ ರಾಷ್ಟ್ರಕೂಟದಲ್ಲಿ ಸದಸ್ಯತ್ವ ಗಳಿಸಿಕೊಂಡಾಗ, ಸಂಕೀರ್ಣತೆ ಏರ್ಪಟ್ಟಿತ್ತು. ಹಾಗೆಂದ ಮಾತ್ರಕ್ಕೆ ಸರ್ವೇಸಾಮಾನ್ಯವಾದ ಎಲ್ಲರೂ ಒಪ್ಪುವಂಥ ಕಾರ್ಯಕ್ರಮಗಳನ್ನು ರಚಿಸಲು ಅಸಾಧ್ಯವಾಯಿತೆಂದೇನೂ ಅಲ್ಲ. ಹಿಂದೆ ಇದ್ದದ್ದಕ್ಕಿಂತ ಈಗ ಸಾಮಾನ್ಯ ಉದ್ದೇಶಗಳು ಕಡಿಮೆಯಾಗಿವೆ.

ಕಾಮನ್‌ವೆಲ್ತ್ ಸಮುದಾಯ ಇಂದು ಎಷ್ಟೇ ಸಂಕೀರ್ಣವಾಗಿದ್ದರೂ ಅನೇಕ ವಿಷಯಗಳಲ್ಲಿ ಸದಸ್ಯ ರಾಷ್ಟ್ರಗಳ ನಡುವೆ ಒಮ್ಮತವಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವೂ ಕಾಮನ್‌ವೆಲ್ತ್ ಸಮುದಾಯದಿಂದ ತನಗೆ ಲಾಭವಿದೆ ಎಂಬ ಅಂಶವನ್ನು ಅಥವಾ ಲಾಭವಿಲ್ಲದಿದ್ದರೂ ನಷ್ಟವಿಲ್ಲವೆಂಬುದನ್ನು ಮನಗಂಡಿದೆ. ಸಮುದಾಯದ ಅನೇಕ ರಾಷ್ಟ್ರಗಳು ಈಚೆಗೆ ರಾಜಕೀಯ ಸ್ವಾತಂತ್ರ್ಯ ಗಳಿಸಿ, ಆರ್ಥಿಕವಾಗಿ ತಮ್ಮ ಕಾಲುಗಳ ಮೇಲೆ ತಾವೇ ನಿಂತುಕೊಳ್ಳುವ ಪ್ರಯತ್ನದಲ್ಲಿವೆ. ಇಂದಿಗೂ ಈ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೆ ಬ್ರಿಟನ್ ಬಂಡವಾಳವನ್ನೂ ತಾಂತ್ರಿಕ ನೆರವನ್ನೂ ಒದಗಿಸುತ್ತಿದೆ. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲ ಎಂಬ ಸತ್ಯವನ್ನು ಮನಗಂಡ ಈ ರಾಷ್ಟ್ರಗಳು ಕಾಮನ್‌ವೆಲ್ತ್ ಸಮುದಾಯದಿಂದ ಸಾಧ್ಯವಾದಷ್ಟು ನೆರವು ಪಡೆಯಲು ಆಶಿಸಿವೆ.

ಇದಲ್ಲದೆ ಮತ್ತೊಂದು ಅಂಶ ಕಾಮನ್‌ವೆಲ್ತಿನ ಕಾರ್ಯಕ್ರಮವನ್ನು ಸರಳಗೊಳಿಸಲು ಕಾರಣವಾಗಿದೆ. ಕಾಮನ್‌ವೆಲ್ತಿನ ಅನೇಕ ರಾಷ್ಟ್ರಗಳ ನಾಣ್ಯ ಪದ್ಧತಿಗೆ ಬ್ರಿಟಿಷ್ ಸ್ಟರ್ಲಿಂಗೇ

ಕಾಮನ್‌ವೆಲ್ತ್ ರಾಷ್ಟ್ರಗಳಲ್ಲೊಂದು ವೆಸ್ಟ್ ಇಂಡೀಸಿನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಡುವೆ ಬ್ರಿಟನ್ ರಾಣಿ

ಆಧಾರ. ಬ್ರಿಟನಿನ ಪೌಂಡಿಗೆ ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಉನ್ನತ ಸ್ಥಾನವಿತ್ತು. ಈಗಲೂ ಅದಕ್ಕೆ ತಕ್ಕಮಟ್ಟಿನ ಪ್ರಾಮುಖ್ಯವುಂಟು.

ಕಾಮನ್‌ವೆಲ್ತ್ ರಾಷ್ಟ್ರಗಳಲ್ಲೊಂದಾದ ವೆಸ್ಟ್ ಇಂಡೀಸಿನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಡುವೆ ಬ್ರಿಟಿಷ್ ರಾಣಿ

ಅದರ ಮೌಲ್ಯವನ್ನು ಕಾಪಾಡಿಕೊಂಡು ಬರುವುದು ಅನೇಕ ರಾಷ್ಟ್ರಗಳ ಆರ್ಥಿಕ ಆರೋಗ್ಯಕ್ಕೆ ಆವಶ್ಯಕ. ಹಲವು ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಸಾಮಾನ್ಯವಾಗಿರುವ ಅಂಶಗಳಲ್ಲಿ ಇದೂ ಒಂದು.

ಇಂದು ಕಾಮನ್‌ವೆಲ್ತ್ ರಾಷ್ಟ್ರಸಮುದಾಯ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಸದಸ್ಯ ರಾಷ್ಟ್ರಗಳ ಸಮಾಲೋಚನೆ ಸಹಕಾರಗಳನ್ನು ನಡೆಸಿಕೊಂಡು ಬರುವ ವೇದಿಕೆಯಾಗಿದೆ. ಭಿನ್ನ ಜನಾಂಗದವರಿಗೆ ಇದೊಂದು ಸಾಮಾನ್ಯ ವೇದಿಕೆ. ಇಲ್ಲಿ ಎಲ್ಲರೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ಪರರ ಅಭಿಪ್ರಾಯವನ್ನು ಒಪ್ಪಲೇಬೇಕೆಂಬ ನಿಯಮವಿಲ್ಲ. ಅನೌಪಚಾರಿಕ ಸಭೆ ಇದರ ಲಕ್ಷಣ. ಇಂಗ್ಲಿಷ್ ಭಾಷೆ, ಸಂಸ್ಕೃತಿ, ಸಂಸ್ಥೆ, ಕಾನೂನುಗಳನ್ನು ಮೈಗೂಡಿಸಿಕೊಂಡ ಸದಸ್ಯ ರಾಷ್ಟ್ರಗಳ ಜನನಾಯಕರು ಕಾಮನ್‌ವೆಲ್ತ್ ಸಭೆಗಳಲ್ಲಿ, ಕಾರ್ಯಕ್ಷೇತ್ರಗಳಲ್ಲಿ ಸಮಾಲೋಚನೆ ನಡೆಸಬಹುದಾಗಿದೆ.

ಕಾಮನ್‌ವೆಲ್ತ್ ಸಭೆಗಳ ಮತ್ತೊಂದು ಪ್ರಧಾನಗುಣವೆಂದರೆ, ಅಲ್ಲಿ ತೀರ್ಮಾನಗಳನ್ನು ಕೈಗೊಳ್ಳುವ ರೀತಿ. ಆ ಸಭೆಗಳಲ್ಲಿ, ಉಳಿದ ಸಭೆಗಳಲ್ಲಿರುವಂತೆ, ಮತ ನೀಡಿ, ಅವುಗಳ ಎಣಿಕೆ ಮಾಡಿ, ಯಾವ ತೀರ್ಮಾನಕ್ಕೆ ಹೆಚ್ಚಿನ ಮತ ಬರುತ್ತದೋ ಅದನ್ನು ಪಾಲಿಸಿಕೊಂಡು ಬರುವ ಪದ್ಧತಿ ಇಲ್ಲ. ಈ ಸಭೆಗಳಲ್ಲಿ ವಿವಿಧ ಅಭಿಪ್ರಾಯಗಳನ್ನು ಕ್ರೋಡೀಕರಿಸಿ, ಸರ್ವಸಮ್ಮತ ತೀರ್ಮಾನ ಕೈ ಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ಇದರಿಂದ ಸದಸ್ಯರಲ್ಲಿ ಗಲಾಟೆ, ಗಲಭೆ ಕಡಿಮೆ.

ಬ್ರಿಟನ್ ತನ್ನ ಸಾಮ್ರಾಜ್ಯವನ್ನು ಕಳೆದುಕೊಂಡಾಗ ಅದರ ಪ್ರಭಾವ ಮತ್ತು ಪ್ರತಿಷ್ಠೆಗಳಿಗೆ ಕುಂದುಂಟಾಯಿತು. ಆದರೆ ಈ ನಷ್ಟ ಸ್ವಲ್ಪಮಟ್ಟಿಗೆ, ಕಾಮನ್‌ವೆಲ್ತ್ ರಾಷ್ಟ್ರಸಮುದಾಯದ ಉದಯದಿಂದ ಕಡಿಮೆಯಾಯಿತು. ಬಂಡವಾಳ ನಿಯೋಜನೆ, ವ್ಯಾಪಾರ, ಉದ್ಯಮ, ಕ್ರೀಡಾಂಗ, ಸಾಂಸ್ಕೃತಿಕವೇ ಮೊದಲಾದ ಸಂಪರ್ಕಗಳಿಂದ ಬ್ರಿಟನ್ ತನ್ನ ಸಂಬಂಧವನ್ನು ಈ ದೇಶಗಳೊಡನೆ ಉಳಿಸಿಕೊಂಡು ಬಂದಿದೆ. ಬ್ರಿಟನ್ ಯೂರೋಪಿನ ಕಡೆ ಹೆಚ್ಚಿಗೆ ಗಮನ ಕೊಡದೆ, ಕಾಮನ್‌ವೆಲ್ತ್ ರಾಷ್ಟ್ರಗಳ ಕಡೆಗೆ ಹೆಚ್ಚಿನ ಗಮನ ಕೊಡಬೇಕೇ ವಿನಾ ಉಳಿದ ರಾಷ್ಟ್ರಗಳ ಕಡೆಗಲ್ಲ ಎಂಬುದು ಅವರ ಅಭಿಪ್ರಾಯವಾಗಿದೆ. ಅದು ಹೇಗಿದ್ದರೂ ಕಾಮನ್‌ವೆಲ್ತ್ ಸಮುದಾಯ ತನ್ನ ಸಂಬಂಧಗಳನ್ನು ಪರ ರಾಷ್ಟ್ರಗಳೊಡನೆ ಕುದುರಿಸಿಕೊಳ್ಳಲು ಉತ್ತವ ಮಾಧ್ಯಮ.

ಕಾಮನ್‌ವೆಲ್ತಿನ ಅಂಗಗಳು : ಕಾಮನ್‌ವೆಲ್ತಿಗೆ ನಿರ್ದಿಷ್ಟವಾದ ಯಾವ ಅಂಗಸಂಸ್ಥೆಗಳೂ ಇರಲಿಲ್ಲ. ಕಾಮನ್‌ವೆಲ್ತಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಲು ಅವುಗಳ ಮುಖಂಡರ ಸಭೆಯಲ್ಲಿ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತಿತ್ತು. 1965ರಲ್ಲಿ ಸಮುದಾಯದ ಕೇಂದ್ರ ಆಡಳಿತ ಕಚೇರಿಯನ್ನು ಸ್ಥಾಪಿಸಲಾಯಿತು. ಕಾಮನ್‌ವೆಲ್ತಿನ ಮುಖ್ಯ ಅಂಗಗಳು ಇವು: 1 ಕಾರ್ಯಾಲಯ, 2 ಕಾಮನ್‌ವೆಲ್ತ್ ಸಭೆಗಳು. 3 ಕಾಮನ್‌ವೆಲ್ತ್ ಸಂಬಂಧಗಳ ಕಛೇರಿ. 4 ಹೈ ಕಮಿಷನ್‌ಗಳು.

**ಕಾರ್ಯಾಲಯ:** ಕಾಮನ್‌ವೆಲ್ತ್ ಕಾರ್ಯಾಲಯವನ್ನು 1965ರಲ್ಲಿ ಲಂಡನಿನಲ್ಲಿ ಸ್ಥಾಪಿಸಲಾಯಿತು. ಮಹಾಕಾರ್ಯದರ್ಶಿಯೇ ಇದರ ಮುಖ್ಯಸ್ಥ. ಕಾರ್ಯಾಲಯದ ಕಾರ್ಯ ಮೂರು ಬಗೆ: 1 ಸದಸ್ಯ ರಾಷ್ಟ್ರಗಳಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮಾಹಿತಿಯ ಸಂಗ್ರಹಣ ಮತ್ತು ವಿತರಣ, 2 ವಿವಿಧ ಕ್ಷೇತ್ರಗಳಲ್ಲಿ ಕಾಮನ್‌ವೆಲ್ತಿನ ಉದ್ದೇಶಗಳನ್ನು ನಿರ್ವಹಿಸುವಲ್ಲಿ ಅಗತ್ಯವಾದ ಸಹಾಯದ ನೀಡಿಕೆ. 3 ಸದಸ್ಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಸಭೆ ನಡೆಸಲು ಕ್ರಮ ಕೈಕೊಳ್ಳುವುದು. ಇಂಗ್ಲೆಂಡಿನ ಹೊರಗೆ ಈ ಸಭೆ ನಡೆದಾಗ, ಆ ದೇಶದವರ ಸಹಕಾರದಿಂದ ಸಭೆ ಏರ್ಪಡಿಸಬೇಕಾಗುತ್ತದೆ. ಕಾರ್ಯಾಲಯದ ಸಿಬ್ಬಂದಿಯನ್ನು ಸದಸ್ಯರಾಷ್ಟ್ರಗಳಿಂದ ಆರಿಸಲಾಗುತ್ತದೆ. ಕಾರ್ಯಾಲಯ ಮುಖ್ಯವಾಗಿ ಸದಸ್ಯ ರಾಷ್ಟ್ರಗಳ ವಿನಿಮಯ ಕೇಂದ್ರದಂತೆ ಕಾರ್ಯ ನಿರ್ವಹಿಸುತ್ತದೆ.

**ಕಾಮನ್‌ವೆಲ್ತ್ ಸಭೆಗಳು:** ಆಗಾಗ್ಗೆ ನಡೆಯುವ ಕಾಮನ್‌ವೆಲ್ತ್ ಸಭೆಗಳಲ್ಲಿ ಪ್ರಧಾನಮಂತ್ರಿಗಳ, ಹಣಕಾಸು ಸಚಿವರ ಮತ್ತು ವಾಣಿಜ್ಯ ಮಂತ್ರಿಗಳ ಸಭೆಗಳು ಮುಖ್ಯವಾದವು. ಪ್ರಧಾನ ಮಂತ್ರಿಗಳ ಸಭೆಗಳು ಸಾಮಾನ್ಯವಾಗಿ ಸದಸ್ಯತ್ವ, ಕಾಮನ್‌ವೆಲ್ತಿನ ಕಾನೂನುಗಳು ಮೊದಲಾದ ವಿಷಯಗಳನ್ನು ಚರ್ಚಿಸುತ್ತವೆ. ಈ ಸಭೆಗಳಲ್ಲಿ ವಿದೇಶಾಂಗ ನೀತಿಯ ಬಗ್ಗೆ ಚರ್ಚೆ ನಡೆಯುತ್ತದೆ. ಒಮ್ಮತ ಬಹು ಅಪರೂಪ. ಪ್ರಧಾನ ಮಂತ್ರಿಗಳು ಸಮಾಲೋಚನೆ ನಡೆಸಿದ ಮೇಲೆ ಅದರ ಪರಿಣಾಮವನ್ನು ಒಂದು ಹೇಳಿಕೆಯಲ್ಲಿ ಪ್ರಕಟಿಸಲಾಗುತ್ತದೆ. ವಾದಗ್ರಸ್ತ ವಿಚಾರಗಳನ್ನು ಆದಷ್ಟು ಮಟ್ಟಿಗೆ ಪರ್ಯಾಲೋಚನೆಗೆ ತೆಗೆದುಕೊಳ್ಳದಿರುವುದೇ ಕಾಮನ್‌ವೆಲ್ತ್ ಸಭೆಗಳ ಒಂದು ವಿಶೇಷ. ಉದಾಹರಣೆ: ಕಾಶ್ಮೀರ ಸಮಸ್ಯೆ. ಭಾರತ ಪಾಕಿಸ್ತಾನಗಳೆರಡೂ ಕಾಮನ್‌ವೆಲ್ತ್ ರಾಷ್ಟ್ರಗಳಾಗಿದ್ದರೂ ಈ ಬಗ್ಗೆ ಸಮಾಲೋಚನೆ ನಡಿಸಿಲ್ಲ, ಪರಿಹಾರ ಸೂಚಿಸಿಲ್ಲ. ವಿವಿಧ ರಾಷ್ಟ್ರಗಳ ನಾಯಕರು ಒಂದೆಡೆ ಸೇರುವುದೇ

ಕಾಮನ್‌ವೆಲ್ತ್ ಕಲೆಗಳ ಉತ್ಸವ (1965) ಟ್ರಫಾಲ್ಗರ್ ಚೌಕದಲ್ಲಿ ಮಾವೊರಿ ಕುಣಿತ

ಇದರ ಒಂದು ವೈಶಿಷ್ಟ್ಯ. ವಿಶ್ವಸಂಸ್ಥೆಯನ್ನು ಬಿಟ್ಟರೆ ಬೇರಾವ ಸಭೆಯೂ ಇಷ್ಟೊಂದು ವ್ಯಾಪಕರೂಪದ್ದಲ್ಲ. ಆದ್ದರಿಂದ ವಿಶ್ವಸಮಸ್ಯೆಗಳ ಪರ್ಯಾಲೋಚನೆಗೆ ಇದೊಂದು ಮುಖ್ಯ ವೇದಿಕೆ.

**ಕಾಮನ್‌ವೆಲ್ತ್ ಸಂಬಂಧಗಳ ಕಚೇರಿ:** ಬ್ರಿಟಿಷ್ ಸರ್ಕಾರದ ಸಂಪುಟಕ್ಕೆ ಅಧೀನವಾದ ಕಚೇರಿ ಇದು. ಇದನ್ನು 1947ರಲ್ಲಿ ಸ್ಥಾಪಿಸಲಾಯಿತು. ಇದಲ್ಲದೆ ವಸಾಹತುಗಳ ಕಚೇರಿ ಎಂಬುದೊಂದಿತ್ತು. ಇದು ವಸಾಹತುಗಳ ವ್ಯವಹಾರಗಳನ್ನು ನೋಡಿಕೊಳ್ಳುತ್ತಿತ್ತು. ಈ ಎರಡು ಕಚೇರಿಗಳನ್ನೂ 1966ರಲ್ಲಿ ಒಂದುಗೂಡಿಸಲಾಯಿತು. ಹೊಸ ಕಾಮನ್‌ವೆಲ್ತ್

ಸಂಬಂಧಗಳ ಕಚೇರಿ ಉದಯವಾಯಿತು. ಈ ಕಚೇರಿಯ ಮುಖ್ಯಾಧಿಕಾರಿ ಕಾಮನ್‌ವೆಲ್ತ್ ವ್ಯವಹಾರಗಳ ಸಚಿವ. ಕಾಮನ್‌ವೆಲ್ತಿನ ಬೇರೆ ಯಾವ ಸದಸ್ಯ ರಾಷ್ಟ್ರದಲ್ಲೂ ಇಂಥ ಖಾತೆ ಇಲ್ಲ. ಉಳಿದ ದೇಶಗಳಲ್ಲಿ ಕಾಮನ್‌ವೆಲ್ತ್ ವ್ಯವಹಾರಗಳನ್ನು ವಿದೇಶಾಂಗ ವ್ಯವಹಾರಗಳ ಖಾತೆಯೇ ನೋಡಿಕೊಳ್ಳುತ್ತದೆ. ಅನೇಕ ರಾಷ್ಟ್ರಗಳಲ್ಲಿ ವಿದೇಶಾಂಗ ವ್ಯವಹಾರದ ವಿಭಾಗದಲ್ಲೇ, ಕಾಮನ್‌ವೆಲ್ತ್ ವ್ಯವಹಾರಗಳನ್ನು ನೋಡಿಕೊಳ್ಳುವ ಮತ್ತೊಂದು ವಿಭಾಗವಿರುವುದೂ ಉಂಟು.

**ಹೈ ಕಮಿಷನ್‌ಗಳು :** ಒಂದು ಕಾಮನ್‌ವೆಲ್ತ್ ಸದಸ್ಯರಾಷ್ಟ್ರದಲ್ಲಿರುವ ಮತ್ತೊಂದು ಸದಸ್ಯರಾಷ್ಟ್ರದ ರಾಯಭಾರಿ ಕಚೇರಿಯನ್ನು ಹೈ ಕಮಿಷನ್ (ಉಚ್ಚ ಆಯೋಗ) ಎಂದು ಕರೆಯಲಾಗುತ್ತದೆ. ಇದರ ಮುಖ್ಯಸ್ಥ ಹೈ ಕಮಿಷನರ್. ಹೈ ಕಮಿಷನರನ ಸ್ಥಾನ ರಾಯಭಾರಿಯದಕ್ಕಿಂತ ಉನ್ನತವಾದ್ದು. ಇವನು ಆ ದೇಶದ ಪ್ರಧಾನಮಂತ್ರಿಯನ್ನು ನೇರವಾಗಿ ಭೇಟಿ ಮಾಡುವ ಅಧಿಕಾರ ಪಡೆದಿರುತ್ತಾನೆ. ರಾಯಭಾರಿಗಳಿಗೆ ಈ ಸೌಲಭ್ಯವಿಲ್ಲ. ಅವರು ವಿದೇಶಿ ವ್ಯವಹಾರಗಳ ಮಂತ್ರಿಗಳನ್ನು ಮಾತ್ರ ನೇರವಾಗಿ ಭೇಟಿಯಾಗಬಹುದು. ಲಂಡನಿನಲ್ಲಿ ಕಾಮನ್ವೆಲ್ತ್ ರಾಷ್ಟ್ರಗಳ ದೊಡ್ಡ ದೊಡ್ಡ ಕಚೇರಿಗಳಿವೆ. ಕಾಮನ್‌ವೆಲ್ತಿಗೆ ಸಂಬಂಧಪಟ್ಟ ವ್ಯವಹಾರಗಳು ನಡೆಯುವುದು ಹೈ ಕಮಿಷನಿನ ಮೂಲಕ.

**ಸಂಪರ್ಕದ ಅಭಿವೃದ್ಧಿ :** ಆಧುನಿಕ ಪ್ರಪಂಚದಲ್ಲಿ ಸಂಪರ್ಕ ಸಾರಿಗೆಗಳು ಮಹತ್ತ್ವದ ಪಾತ್ರ ವಹಿಸಿವೆ. ಆರ್ಥಿಕಾಭಿವೃದ್ಧಿಗೆ ನರನಾಡಿಗಳಂತಿರುವ ಇವುಗಳ ಬೆಳೆವಣಿಗೆಗೂ ಕಾಮನವೆಲ್ತ್ ರಾಷ್ಟ್ರಸಮುದಾಯ ಸಾಕಷ್ಟು ಕೆಲಸ ಮಾಡುತ್ತಿದೆ. ವಾಣಿಜ್ಯ ನೌಕೆಯನ್ನು ಉತ್ತಮ ಪಡಿಸುವುದು, ಹಡಗು ಸಾರಿಗೆಯನ್ನು ಸರಳಗೊಳಿಸುವುದು ಮೊದಲಾದ ಕೆಲಸಗಳನ್ನು ಕಾಮನ್‌ವೆಲ್ತ್ ಹಡಗು ಸಾರಿಗೆ ಸಮಿತಿ ನೋಡಿಕೊಳ್ಳುತ್ತದೆ.

**ರಕ್ಷಣೆ :** ಅನೇಕ ಕಾಮನ್‌ವೆಲ್ತ್ ರಾಷ್ಟ್ರಗಳು ರಕ್ಷಣೆಯ ಸಲುವಾಗಿ ಬ್ರಿಟನಿನೊಡನೆ ಒಪ್ಪಂದಗಳನ್ನು ಮಾಡಿಕೊಂಡಿವೆ. ಈ ರಾಷ್ಟ್ರಗಳ ಪೈಕಿ ವಿಶ್ವದ ವಿವಿಧ ಮಿಲಿಟರಿ ಒಕ್ಕೂಟಗಳ ಸದಸ್ಯ ರಾಷ್ಟ್ರಗಳೂ ಉಂಟು. ಬ್ರಿಟನ್ ಮತ್ತು ಕೆನಡ ಉತ್ತರ ಅಟ್ಲಾಂಟಿಕ್ ಕೌಲು ಸಂಸ್ಥೆಯ ಸದಸ್ಯ ರಾಷ್ಟ್ರಗಳು. ಆಸ್ಟ್ರೇಲಿಯ, ನ್ಯೂಜಿಲೆಂಡ್, ಬ್ರಿಟನ್ ಮತ್ತು ಪಾಕಿಸ್ತಾನಗಳಿಗೆ ಆಗ್ನೇಯ ಏಷ್ಯ ಕೌಲು ಸಂಸ್ಥೆಯ ಸದಸ್ಯತ್ವವಿದೆ. ಬ್ರಿಟನ್ನು ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಮಿಲಿಟರಿ ನೆರವನ್ನು ನೀಡುವುದಲ್ಲದೆ, ಆ ದೇಶಗಳ ಸೈನ್ಯ ಶಿಕ್ಷಣಕ್ಕೆ ಸಹಾಯ ಒದಗಿಸುತ್ತದೆ. ಅನೇಕ ರಾಷ್ಟ್ರಗಳು ಬ್ರಿಟನಿನ ಮಿಲಿಟರಿ ಕಾಲೇಜುಗಳಲ್ಲಿರುವ ಸೌಲಭ್ಯಗಳನ್ನು ಪಡೆದು ತಮ್ಮ ಸೈನಾಧಿಕಾರಿಗಳಿಗೆ ತರಬೇತಿ ಕೊಡಿಸುತ್ತವೆ. ಕಾಮನ್‌ವೆಲ್ತ್ ಒಂದು ಮಿಲಿಟರಿ ಒಕ್ಕೂಟವಲ್ಲದಿದ್ದರೂ ಇತರ ರಾಷ್ಟ್ರಗಳ ಆಕ್ರಮಣಕ್ಕೆ ತುತ್ತಾದಾಗ ನೆರವು ನೀಡಲು ಬ್ರಿಟನ್ ಮುಂದೆ ಬರಬಹುದು. ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ಗಳಿಗೆ ಬ್ರಿಟನಿನ ಮಿಲಿಟರಿ ನೆರವು ಉಂಟು. ಚೀನ 1962 ರಲ್ಲಿ ಭಾರತದ ಗಡಿಯ ಆಕ್ರಮಣ ನಡೆಸಿದಾಗ ಬ್ರಿಟನ್, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್ ಸಹಾಯ ಮಾಡಿದುವು.

**ವಿದ್ಯಾಭ್ಯಾಸ ಮತ್ತು ವಿಜ್ಞಾನ ಕ್ಷೇತ್ರಗಳು:** ಈ ಕ್ಷೇತ್ರಗಳಲ್ಲೂ ಸಹಕಾರ ಎದ್ದು ಕಾಣುತ್ತದೆ. ಬ್ರಿಟನಿನ ಶಿಕ್ಷಣ ಪದ್ಧತಿ ಉಳಿದ ರಾಷ್ಟ್ರಗಳಿಗೆ ಮಾದರಿ. ಬ್ರಿಟನಿನ ವಿಶ್ವವಿದ್ಯಾಲಯಗಳ ಮಾದರಿಯಲ್ಲಿ ಉಳಿದ ಕಡೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. 1931 ರಲ್ಲಿ ಸ್ಥಾಪಿತವಾದ ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ಸಂಘ ಶಿಕ್ಷಣಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ಮಾಡುತ್ತದೆ. ಆಫ್ರಿಕದಲ್ಲಿರುವ ಕಾಮನ್‌ವೆಲ್ತ್ ದೇಶಗಳಲ್ಲಿ ಹೊಸ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಬ್ರಿಟನ್ ಸಹಾಯ ನೀಡಿತು. 1959 ರಲ್ಲಿ ಕಾಮನ್‌ವೆಲ್ತ್ ಶಿಕ್ಷಣ ಸಮ್ಮೇಳನ ಬ್ರಿಟನಿನ ಆಕ್ಸ್‌ಫರ್ಡಿನಲ್ಲಿ ನಡೆಯಿತು. ಹೆಚ್ಚಿನ ಶಿಕ್ಷಣಕ್ಕಾಗಿ ಅರ್ಹರಾದ ವಿದ್ಯಾರ್ಥಿಗಳಿಗೆ ನೀಡಲು 1,000 ವಿದ್ಯಾರ್ಥಿವೇತನಗಳನ್ನು ಈ ಸಮ್ಮೇಳನದಲ್ಲಿ ನಿರ್ಮಿಸಲಾಯಿತು. ಇದರಲ್ಲಿ ಅರ್ಧವನ್ನು ಬ್ರಿಟನ್ ನೀಡಿತು. ಕೆನಡದ್ದು ಕಾಲು ಭಾಗ. ಉಳಿದುದರಲ್ಲಿ ಹೆಚ್ಚಿನ ಭಾಗವನ್ನು ಭಾರತ, ಆಸ್ಟ್ರೇಲಿಯ, ಪಾಕಿಸ್ತಾನ ಮತ್ತು ನ್ಯೂಜಿಲೆಂಡ್‌ಗಳು ಕೊಟ್ಟವು. ಶಿಕ್ಷಕರ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸುವಂತೆ ಈ ಸಮ್ಮೇಳನ ಸೂಚನೆ ನೀಡಿತು. ಇದಕ್ಕೆ ಅನುಗುಣವಾಗಿ ಅನೇಕ ರೀತಿಗಳಲ್ಲಿ ಪ್ರಗತಿಗಳಾಗುತ್ತಿವೆ. ಇದರ ಸಭೆ 1962 ರಲ್ಲಿ ದೆಹಲಿಯಲ್ಲೂ 1964 ಒಟ್ಟಾವದಲ್ಲೂ ನಡೆಯಿತು. ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ವಿಜ್ಞಾನದ ಬೆಳೆವಣಿಗೆ ಮತ್ತು ಸಂಶೋಧನೆ. ವಿಜ್ಞಾನಿಗಳಲ್ಲಿ ಸೌಹಾರ್ದ ಸಂಬಂಧ ಸ್ಥಾಪನೆ, ವಿಜ್ಞಾನದ ಬಗ್ಗೆ ವಿಚಾರಗೋಷ್ಠಿಗಳ ಏರ್ಪಾಡು– ಇವು ಕಾಮನ್‌ವೆಲ್ತ್ ವೈಜ್ಞಾನಿಕ ಸಮಿತಿಯ ಕಾರ್ಯಭಾರಗಳು.

**ನ್ಯಾಯವ್ಯವಸ್ಥೆ :** ಕಾಮನ್‌ವೆಲ್ತ್ ರಾಷ್ಟ್ರಸಮುದಾಯದ ಸದಸ್ಯ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಬ್ರಿಟಿಷ್ ಮಾದರಿಯ ನ್ಯಾಯವ್ಯವಸ್ಥೆ ಬಳಕೆಯಲ್ಲಿದೆ. ಕಾನೂನಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪರ್ಯಾಲೋಚಿಸಲು ಅನುಕೂಲವಾಗುವಂತೆ ಕಾನೂನಿನ ಸಭೆಗಳನ್ನು ಕಾಮನ್‌ವೆಲ್ತ್ ಆಗಾಗ್ಗೆ ನಡೆಸುತ್ತದೆ. ಇಂಥ ಅಧಿವೇಶನಗಳು 1955 ರಲ್ಲಿ ಲಂಡನ್ನಿನಲ್ಲೂ 1960 ರಲ್ಲಿ ಕೆನಡದ ಒಟ್ಟಾವದಲ್ಲೂ 1965 ರಲ್ಲಿ ಸಿಡ್ನಿಯಲ್ಲೂ ನಡೆದುವು.

**ಪೌರತ್ವ :** ಪೌರತ್ವದ ಬಗ್ಗೆ ಈ ಸಮುದಾಯ ಅನೇಕ ಸೌಲಭ್ಯಗಳನ್ನು ಸದಸ್ಯ ರಾಷ್ಟ್ರಗಳಿಗೆ ಒದಗಿಸಿಕೊಡುತ್ತದೆ. ಬ್ರಿಟನಿಗೆ ಕಾಮನ್‌ವೆಲ್ತ್ ರಾಷ್ಟ್ರಗಳಿಂದ ಅನೇಕ ಜನ ವಲಸೆ ಹೋಗಿದ್ದಾರೆ. ಆದರೆ ಬ್ರಿಟನಿಗೆ ಬರುವ ವಲಸೆಗಾರರ ಬಗ್ಗೆ ಆ ದೇಶ ನಿರ್ಬಂಧಗಳನ್ನು ವಿಧಿಸಿರುವುದರಿಂದ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಅಸಮಾಧಾನ ತಲೆದೋರಿದೆ. ಇದಲ್ಲದೆ, ಪ್ರವಾಸಿಗಳಿಗೆ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಅನೇಕ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ.

**ಕಾಮನ್ ವೆಲ್ತಿನ ವಿಕಾಸ :** ಕಾಮನ್‌ವೆಲ್ತ್ ರಾಷ್ಟ್ರಸಮುದಾಯ ಬ್ರಿಟಿಷ್ ಸಾಮ್ರಾಜ್ಯದಿಂದ ವಿಕಾಸಗೊಂಡಿತು. ಹತ್ತೊಂಬತ್ತನೆಯ ಶತಮಾನದ ಕೊನೆ ಹಾಗೂ ಇಪ್ಪತ್ತನೆಯ ಶತಮಾನದ ಆದಿಭಾಗದ ಹೊತ್ತಿಗೆ ಬ್ರಿಟಿಷ್ ಸಾಮ್ರಾಜ್ಯ ಪ್ರಪಂಚದಲ್ಲೇ ಅತಿ ಉನ್ನತ ಸ್ಥಾನವನ್ನು ಪಡೆದಿತ್ತು. 1583 ರಲ್ಲಿ ಬ್ರಿಟಿಷರು ಮೊಟ್ಟಮೊದಲು ಉತ್ತರ ಅಮೆರಿಕದ ನ್ಯೂ ಫೌಂಡ್‌ಲೆಂಡಿನಲ್ಲಿ ವಸಾಹತನ್ನು ಸ್ಥಾಪಿಸಿದರು. ವ್ಯಾಪಾರ, ವಾಸಿಸಲು ಸ್ಥಳ–ಇವೇ ವಸಾಹತುಗಳನ್ನು ಹೊಸ ಹೊಸ ದೇಶಗಳಲ್ಲಿ

ಬ್ರಿಟಿಷ್ ಪ್ರಧಾನಿಯ ಅಧಿಕೃತ ನಿವಾಸದಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳು (1965)

ಚಿತ್ರ ಬ್ರಿಟಿಷ್ ಪ್ರಧಾನಿಯ ಅಧಿಕೃತ ನಿವಾಸದಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳು (1965)

ಸ್ಥಾಪಿಸಲು ಕಾರಣವಾದ ಆಕರ್ಷಣೆಗಳು. ಅವರು ಹಲವು ದೇಶಗಳನ್ನು ಯುಕ್ತಿ ಶಕ್ತಿಗಳಿಂದ ಗೆದ್ದು ತಮ್ಮದಾಗಿ ಮಾಡಿಕೊಂಡರು. ಒಪ್ಪಂದದ ಮೂಲಕವೂ ಆಕ್ರಮಣದ ಮೂಲಕವೂ ಈ ವಸಾಹತುಗಳನ್ನು ಲಂಡನ್ನಿನಲ್ಲಿರುವ ವಸಾಹತು ಕಚೇರಿ ಹಾಗೂ ಬ್ರಿಟಿಷ್ ಪಾರ್ಲಿಮೆಂಟಿನ ನೇತೃತ್ವದಲ್ಲಿ ಒಂದುಗೂಡಿಸಲಾಯಿತು. ಈ ವಸಾಹತುಗಳಲ್ಲಿ ತೆರಿಗೆ ವಿಧಿಸುವ ಹಾಗೂ ಕಾನೂನುಗಳನ್ನು ಮಾಡುವ ಅಧಿಕಾರ ಬ್ರಿಟಿಷ್ ಪಾರ್ಲಿಮೆಂಟಿಗೆ ಇತ್ತು. ಹೀಗೆ ಬ್ರಿಟಿಷ್ ಸಾಮ್ರಾಜ್ಯ ಬೆಳೆದಂತೆಲ್ಲ ವಸಾಹತುಗಳ, ರಾಜ್ಯಗಳ ಮತ್ತು ಬ್ರಿಟಿಷ್ ಪ್ರಭುತ್ವದ ಪರಸ್ಪರ ಸಂಬಂಧಗಳು ವೃದ್ಧಿಗೊಂಡುವು. 19ನೆಯ ಶತಮಾನ ಮುಗಿಯುವ ಹೊತ್ತಿಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಉತ್ತರ ಅಮೆರಿಕದ ಕೆನಡ, ದಕ್ಷಿಣ ಆಫ್ರಿಕ ಮತ್ತು ಇತರ ಕೆಲವು ಭಾಗಗಳು, ಭಾರತ, ಬರ್ಮ, ಮಲಯ, ಸಿಂಹಳ, ಆಸ್ಟ್ರೇಲಿಯ ಮತ್ತು ನ್ಯೂ ಜಿಲೆಂಡ್‌ಗಳು ಸೇರ್ಪಡೆಯಾಗಿದ್ದುವು. 20ನೆಯ ಶತಮಾನದ ಉದಯಕಾಲದಲ್ಲಿ ವಿಶ್ವದ ನಾಲ್ಕನೆಯ ಒಂದು ಭಾಗ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಒಳಪಟ್ಟಿತ್ತು. ಈ ರೀತಿ ಬೆಳೆದ ಸಾಮ್ರಾಜ್ಯದೊಳಗೇ ಕಾಮನ್‌ವೆಲ್ತಿನ ವಿಕಾಸವಾಯಿತು.

**ಅಮೆರಿಕದ ಕ್ರಾಂತಿ :** 18ನೆಯ ಶತಮಾನದಲ್ಲಿ ನಡೆದ ಅಮೆರಿಕನ್ ಕ್ರಾಂತಿ ಈ ವಿಕಾಸದಲ್ಲಿ ಒಂದು ವಿಶಿಷ್ಟ ಘಟನೆ ಎನ್ನಬಹುದು. ಉತ್ತರ ಅಮೆರಿಕದಲ್ಲಿದ್ದ 13 ವಸಾಹತುಗಳು ಬ್ರಿಟನಿನ ನೀತಿಯ ವಿರುದ್ಧ ಬಂಡಾಯವೆದ್ದು ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ಸಂಯುಕ್ತ ಸಂಸ್ಥಾನವಾಗಿ 1789 ರಲ್ಲಿ ಮಾರ್ಪಾಡು ಹೊಂದಿದವು. ಅಮೆರಿಕನರು ತಮ್ಮ ಪ್ರದೇಶಗಳಲ್ಲಿ ಹೆಚ್ಚಿನ ಸ್ವಾತಂತ್ರ್ಯ ಬಯಸಿದರು. ಬ್ರಿಟಿಷರು ಅದನ್ನು ಮೊಟಕುಗೊಳಿಸಲೂ ಆರ್ಥಿಕ ಅಡಚಣೆಗಳನ್ನೊಡ್ಡಲೂ ಯತ್ನಿಸಿದಾಗ ಈ ಕ್ರಾಂತಿ ನಡೆಯಿತು. ಬ್ರಿಟನ್ ಆಗ 13 ವಸಾಹತುಗಳನ್ನು ಕಳೆದು ಕೊಂಡಿತಾದರೂ ಇದರಿಂದ ಬ್ರಿಟನ್ ಒಂದು ಪಾಠ ಕಲಿಯಿತು. ಉಳಿದ ವಸಾಹತುಗಳೊಡನೆ ಅದು ತನ್ನ ಸಂಬಂಧವನ್ನು ಉತ್ತಮಪಡಿಸಿಕೊಳ್ಳುವ ಪ್ರಯತ್ನ ನಡೆಸಬೇಕಾಯಿತು. ಕ್ರಾಂತಿಯ ಅನಂತರವೂ ವಸಾಹತುಗಳ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟಿನ ರಾಜಕೀಯ ದೃಷ್ಟಿ ಅಷ್ಟಾಗಿ ಬದಲಾಗಲಿಲ್ಲ. ಆದರೆ ಕೆನಡದಲ್ಲಿ ಪರಿಸ್ಥಿತಿ ಹದಗೆಟ್ಟಾಗ ಮತ್ತೆ ಈ ಬಗ್ಗೆ ಯೋಚಿಸಲಾಯಿತು.

**ಡರ್‌ಹ್ಯಾಂ ವರದಿ :** ಡರ್‌ಹ್ಯಾಂ ವರದಿ ಕಾಮನ್‌ವೆಲ್ತ್ ವಿಕಾಸದಲ್ಲಿ ಒಂದು ವಿಶಿಷ್ಟ ಘಟ್ಟ. 19ನೆಯ ಶತಮಾನದ ಮೊದಲ ಭಾಗದಲ್ಲಿ ಬ್ರಿಟನಿನ ಅಧೀನದಲ್ಲಿದ್ದ ಕೆನಡದ ಜನರಲ್ಲಿ ಅಸಮಾಧಾನ ಬೆಳೆದಿತ್ತು. ಇಂಗ್ಲಿಷ್ ಜನರು ಅನೇಕ ಕಾರಣಗಳಿಂದ ಪ್ರೇರಿತವಾಗಿ ಬ್ರಿಟನ್ ದ್ವೀಪಗಳಿಂದ ವಲಸೆ ಹೊರಟು ಕೆನಡದ ಬ್ರಿಟಿಷ್ ವಿಭಾಗದಲ್ಲಿ ನೆಲೆಸಿದ್ದರು. ಹೊಸದಾಗಿ ಬಂದು ನೆಲೆಸಿದವರನ್ನು ಹಳಬರು ತಾತ್ಸಾರದಿಂದ ಕಾಣುತ್ತ ಆಡಳಿತದ

ಅಧಿಕಾರವೆಲ್ಲ ತಮಗೆ ಮಾತ್ರ ಇರುವಂತೆ ಒಳಸಂಧಾನ ನಡೆಸುತ್ತಿದ್ದರು. ಹೊಸದಾಗಿ ನೆಲೆಸಿದ ಬ್ರಿಟಿಷ್ ಗುಂಪಿನಲ್ಲಿ ಅತೃಪ್ತಿ ಬೆಳೆಯಿತು. ಕೆನಡದಲ್ಲಿ ಫ್ರೆಂಚ್ ಜನರ ವಿಭಾಗವೊಂದಿತ್ತು. 1837 ರ ವೇಳೆಗೆ ಈ ಎರಡು ಪ್ರಾಂತ್ಯಗಳಲ್ಲಿ ದಂಗೆಗಳೆದ್ದುವು. ಕೆನಡದ ಜನರೂ ಅಮೆರಿಕನರಂತೆ ಬ್ರಿಟನಿಗೆ ಎದುರುಬಿದ್ದು ಸ್ವಾತಂತ್ರ್ಯಕ್ಕೆ ಆಸೆ ಪಡಬಹುದಾದ ಸಂಭವ ಉಂಟಾಯಿತು. ಪರಿಸ್ಥಿತಿಯನ್ನು ಪರಿಶೀಲಿಸಿ ಸಮಾಧಾನಕರವಾದ ಏರ್ಪಾಟನ್ನು ಸೂಚಿಸುವಂತೆ ಲಾರ್ಡ್ ಡರ್‌ಹ್ಯಾಮನನ್ನು ಬ್ರಿಟಿಷ್ ಸರ್ಕಾರ ನೇಮಿಸಿತು. ಡರ್‌ಹ್ಯಾಂ ದೂರದೃಷ್ಟಿಯುಳ್ಳ ತೀವ್ರವಾದಿ. ಇಂಗ್ಲಿಷರು ಇಂಗ್ಲೆಂಡಿನಲ್ಲಿ ತಮ್ಮ ಆಡಳಿತ ನಡೆಸಲು ಪಡೆದಿರುವಂಥ ಸ್ವಾತಂತ್ರ್ಯವನ್ನೇ ನೆಲಸುನಾಡಿಗರಿಗೂ ಅವರ ಒಳಾಡಳಿತದಲ್ಲಿ ನೀಡುವುದೊಂದೇ ಉಪಾಯವೆಂದು ಈತ ತನ್ನ ವರದಿಯಲ್ಲಿ ಹೇಳಿದ. ಅದಕ್ಕನುಗುಣವಾಗಿ ಮೇಲಣ ಕೆಳಗಣ ಕೆನಡ ವಿಭಾಗಗಳು ಒಂದಾಗಬೇಕೆಂದೂ ಅಲ್ಲಿಯ ನಿವಾಸಿಗಳಿಗೆ ಜವಾಬ್ದಾರಿ ಸರ್ಕಾರ ನೀಡಬೇಕೆಂದೂ ಈತ ಸಲಹೆ ನೀಡಿದ. ಈತನ ಸಲಹೆಯನ್ನು ಬ್ರಿಟಿಷರು ಕೂಡಲೇ ಮೆಚ್ಚಲಿಲ್ಲ. ಆದರೆ ಕ್ರಮೇಣ ಅವರಿಗೆ ಇದರ ಅಗತ್ಯದ ಮನವರಿಕೆಯಾಯಿತು. 1846–49 ರಲ್ಲಿ ಉತ್ತರ ಅಮೆರಿಕದ ವಸಾಹತುಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿತವಾಯಿತು. ಆನಂತರ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡುಗಳಿಗೂ ಈ ಬಗೆಯ ಸರ್ಕಾರಗಳು ಬಂದುವು. ವಸಾಹತುಗಳು ಅಧಿರಾಜ್ಯಗಳಾಗಿ (ಡೊಮಿನಿಯನ್) ಪರಿವರ್ತನೆಗೊಂಡದ್ದು ಈ ವಿಕಾಸದ ಇನ್ನೊಂದು ಮುಖ್ಯ ಘಟ್ಟ. ಅಕ್ಕಪಕ್ಕದಲ್ಲಿದ್ದೂ ಬೇರೆಬೇರೆಯಾಗಿದ್ದ ವಸಾಹತುಗಳು ಒಂದಾಗಿ ರಾಷ್ಟ್ರತ್ವ ಪಡೆದುವು. ಕೆನಡ ಒಂದು ಉದಾಹರಣೆ. ಅಲ್ಲಿದ್ದ ನಾಲ್ಕು ಪ್ರಾಂತ್ಯಗಳು ಬ್ರಿಟನ್ನಿನ ಒಪ್ಪಿಗೆಯೊಂದಿಗೆ ಒಂದಾದುವು. ಕೆನಡ ಅಧಿರಾಜ್ಯ ಸ್ಥಾಪನೆಯಾಯಿತು. ಇತರ ಕಡೆಗಳಲ್ಲಿ ಈ ಪರಿವರ್ತನೆ ತಡವಾಯಿತು.

ಆಸ್ಟ್ರೇಲಿಯ ಅಧಿರಾಜ್ಯವಾದ್ದು 1901 ರಲ್ಲಿ. ದಕ್ಷಿಣ ಆಫ್ರಿಕ ಒಕ್ಕೂಟವಾದ್ದು 1910ರಲ್ಲಿ 1961 ರಿಂದ ಇದು ದಕ್ಷಿಣ ಆಫ್ರಿಕ ಗಣರಾಜ್ಯವಾಯಿತು. ನ್ಯೂಜಿಲೆಂಡಿನಲ್ಲಿ ಮೊದಲಿನಿಂದಲೂ ಒಂದೇ ಆಡಳಿತವಿತ್ತು. ಅಲ್ಲಿ ಏಕಾತ್ಮಕ ಸಂವಿಧಾನ ಜಾರಿಗೆ ಬಂದದ್ದು 1870 ರಲ್ಲಿ. ಅಧಿರಾಜ್ಯ ಸ್ಥಾನ ಅದಕ್ಕೆ ಲಭ್ಯವಾದ್ದು 1907ರಲ್ಲಿ.

20ನೆಯ ಶತಮಾನದ ಮೊದಲನೆಯ ದಶಕದಲ್ಲಿ ಒಟ್ಟು ಐದು ಅಧಿರಾಜ್ಯಗಳಿದ್ದುವು: 1 ಕೆನಡ, 2 ನ್ಯೂಜಿಲೆಂಡ್, 3 ನ್ಯೂ ಫೌಂಡ್‌ಲೆಂಡ್, 4 ಆಸ್ಟ್ರೇಲಿಯ ಮತ್ತು 5 ದಕ್ಷಿಣ ಆಫ್ರಿಕ ಒಕ್ಕೂಟ. ಬ್ರಿಟಿಷ್ ಕಾಮನ್‌ವೆಲ್ತ್ ಹುಟ್ಟಿಕೊಂಡಿತು. ಅಧಿರಾಜ್ಯಗಳ ಒಳಾಡಳಿತ ಅಲ್ಲಿಯ ನಿವಾಸಿಗಳದು. ರಕ್ಷಣೆ ಹಾಗೂ ವಿದೇಶಾಂಗ ವ್ಯವಹಾರಗಳು ಬ್ರಿಟನಿನ ಕೈಯಲ್ಲಿದ್ದುವು. ಕ್ರಮೇಣ ಈ ವಿಷಯಗಳಲ್ಲೂ ಅಧಿರಾಜ್ಯಗಳಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆಯಿತು.

**ಒಂದನೆಯ ಮಹಾಯುದ್ಧ :** ಒಂದನೆಯ ಮಹಾಯುದ್ಧದ ಕಾಲದಲ್ಲಿ (1914–18) ಬ್ರಿಟಿಷ್ ಸಾಮ್ರಾಜ್ಯವಿಭಾಗಗಳಿಂದ ಯಥೇಷ್ಟವಾದ ಸೈನ್ಯಸಹಾಯವೂ ಧನಸಹಾಯವೂ ಬ್ರಿಟನಿಗೆ ದೊರೆಯಿತು. ವಿದೇಶಾಂಗ ವ್ಯವಹಾರಗಳಲ್ಲಿ ತಮಗೆ ಬ್ರಿಟನಿನೊಂದಿಗೆ ಸರಿಸಮನಾದ ಸ್ವಾತಂತ್ರ್ಯ ಇರಬೇಕೆಂದು 1911 ರಲ್ಲಿ ನಡೆದ ಸಾಮ್ರಾಜ್ಯ ಸಮ್ಮೇಳನದಲ್ಲಿ ಅಧಿರಾಜ್ಯಗಳ ಪ್ರತಿನಿಧಿಗಳು ವಾದಿಸಿದ್ದರು. ವಿದೇಶಾಂಗ ವ್ಯವಹಾರಗಳನ್ನು ರೂಪಿಸುವ ವಿಚಾರದಲ್ಲಿ ಅಧಿರಾಜ್ಯಗಳ ಪಾತ್ರ ವಿಸ್ತರಿಸಿದ್ದು ಯುದ್ಧದ ಫಲ. 1917 ರಲ್ಲಿ ಸಾಮ್ರಾಜ್ಯ ಯುದ್ಧ ಸಂಪುಟದ ರಚನೆಯಾಯಿತು. ಯುದ್ಧ ಕಾರ್ಯದಲ್ಲಿ ಅಧಿರಾಜ್ಯಗಳು ಹೆಚ್ಚು ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡುವುದು ಇದರ ಉದ್ದೇಶ. ತತ್ಫಲವಾಗಿ ಬ್ರಿಟನಿನಲ್ಲಿ 1917–18 ರಲ್ಲಿ ಎರಡು ಸಂಪುಟಗಳಿದ್ದುವು. ಬ್ರಿಟಿಷ್ ಸಂಪುಟದ ಹೊಣೆ ಆ ದೇಶದ ವ್ಯವಹಾರಗಳನ್ನು ಕುರಿತದ್ದು. ಇಡೀ ಸಾಮ್ರಾಜ್ಯದ ರಕ್ಷಣೆಯ ಹೊಣೆ ಸಾಮ್ರಾಜ್ಯ ಯುದ್ಧಸಂಪುಟದ್ದಾಯಿತು. ಯುದ್ಧ ಮುಗಿಯುವ ವೇಳೆಗೆ ಪ್ರತಿಯೊಂದು ಅಧಿರಾಜ್ಯವೂ ಸ್ವತಂತ್ರ ರಾಷ್ಟ್ರದಂತೆ ಪ್ರತ್ಯೇಕ ಸೈನ್ಯ ಕಟ್ಟಿಕೊಂಡಿದ್ದಲ್ಲದೆ ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದುವು. ಪ್ಯಾರಿಸಿನಲ್ಲಿ ನಡೆದ ಶಾಂತಿಸಂಧಾನಗಳಲ್ಲಿ ಅಧಿರಾಜ್ಯಗಳ ಪ್ರತಿನಿಧಿಗಳು ವಹಿಸಿದ ಪಾತ್ರವೂ ಮುಖ್ಯವಾದದ್ದಾಗಿತ್ತು.

1922 ರಲ್ಲಿ ಬ್ರಿಟನಿಗೂ ತುರ್ಕಿಗೂ ನಡೆಯುತ್ತಿದ್ದ ವ್ಯವಹಾರದಲ್ಲಿ ತಮಗೇನೂ ಸಂಬಂಧವಿಲ್ಲವೆಂದು ಕೆನಡ ಅಧಿರಾಜ್ಯ ತಿಳಿಸಿತು. ಬ್ರಿಟನಿನ ವಿದೇಶಾಂಗ ವ್ಯವಹಾರದ ಪ್ರತಿಯೊಂದು ಅಂಶದಲ್ಲೂ ತಾವೇಕೆ ಭಾಗಿಗಳಾಗಬೇಕೆಂದು ವಾದಿಸುತ್ತ ಅಧಿರಾಜ್ಯಗಳು ಪ್ರತ್ಯೇಕವಾಗಿಯೇ ರಾಯಭಾರಗಳನ್ನು ಒಪ್ಪಂದಗಳನ್ನೂ ನಡೆಸುವ ಅಧಿಕಾರವನ್ನು ಬಯಸಿದುವು.

**ವೆಸ್ಟ್‌ಮಿನ್‌ಸ್ಟರ್ ಪರಿನಿಯಮ (ಸ್ಟ್ಯಾಚ್ಯೂಟ್) :** ಸಾಮ್ರಾಜ್ಯ ಸಮ್ಮೇಳನ ಮತ್ತೊಮ್ಮೆ ನಡೆಸಿದ್ದು 1926 ರಲ್ಲಿ, ಆ ಸಮ್ಮೇಳನದಲ್ಲಿ ಐರಿಷ್ ಸ್ವತಂತ್ರ ರಾಜ್ಯದ ಪ್ರತಿನಿಧಿಯೂ ಭಾಗವಹಿಸಿದ್ದ. ಬ್ರಿಟನ್ ಮತ್ತು ಅಧಿರಾಜ್ಯಗಳ ನಡುವೆ ಸಮಾನತೆಯನ್ನು ಏರ್ಪಡಿಸುವುದು ಹೇಗೆಂಬುದೇ ಅಲ್ಲಿ ನಡೆದ ಮುಖ್ಯ ಚರ್ಚೆ. ಇದರ ಫಲವಾಗಿ ರಚಿತವಾಗಿ 1930ರಲ್ಲಿ ಸಂಬಂಧಪಟ್ಟ ರಾಷ್ಟ್ರಗಳ ಒಪ್ಪಿಗೆಪಡೆದ ಪರಿನಿಯಮವೊಂದು 1931 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಅನುಮೋದನೆ ಪಡೆಯಿತು. ಬ್ರಿಟಿಷ್ ಪಾರ್ಲಿಮೆಂಟಿನ ಯಾವ ಕಾಯಿದೆಯೇ ಆಗಲಿ, ಅಧಿರಾಜ್ಯದ ಸಮ್ಮತಿಯಿಲ್ಲದೆ ಆ ರಾಜ್ಯಗಳಲ್ಲಿ ಜಾರಿಗೆ ಬರುವುದಿಲ್ಲವೆಂಬುದಾಗಿ ಶಾಸಿಸಲಾಯಿತು. ಇದರ ಪೀಠಿಕೆಯಲ್ಲಿ ಕಾಮನ್‌ವೆಲ್ತಿನ ಹೊಸ ರಚನೆಯ ಸ್ವರೂಪವನ್ನೂ ಅಧಿರಾಜ್ಯದ ಲಕ್ಷಣವನ್ನೂ ವಿವರಿಸಲಾಗಿದೆ. ಅಧಿರಾಜ್ಯಗಳಿಗೆ ನೀಡಿದ ಹೆಚ್ಚಿನ ಸ್ವಾತಂತ್ರ್ಯ ಮತ್ತು ಸಮಾನತೆಗಳಿಂದ ಸಾಮ್ರಾಜ್ಯದ ಕಟ್ಟು ಸಡಿಲವಾಗುವುದು ತಪ್ಪಿತು. ಬ್ರಿಟಿಷ್ ಸಾಮ್ರಾಜ್ಯವೆಂಬ ಹೆಸರು ರೂಢಿಯಲ್ಲಿದ್ದಾಗ್ಯೂ ಅದರ ಅರ್ಥ ಬದಲಾಯಿತು. ಬ್ರಿಟಿಷ್ ಕಾಮನ್‌ವೆಲ್ತ್ ಅಥವಾ ಬ್ರಿಟಿಷ್ ರಾಷ್ಟ್ರ ಸಮುದಾಯವೆಂಬುದು ಕ್ರಮೇಣ ಹೆಚ್ಚು ಪ್ರಚುರವಾಯಿತು. ಆರು ಪ್ರತ್ಯೇಕ ರಾಷ್ಟ್ರಗಳು ಸರಿಸಮಾನತೆಯಿಂದ ಒಂದಾಗಿ ಒಬ್ಬನೇ ದೊರೆಯನ್ನೊಪ್ಪಿ ಐಕಮತ್ಯವನ್ನು ರಕ್ಷಿಸಿಕೊಂಡುವು. 1936ರಲ್ಲಿ 8ನೆಯ ಎಡ್ವರ್ಡ್ ಚಕ್ರವರ್ತಿ ಸಿಂಹಾಸನ ಪರಿತ್ಯಾಗ ಮಾಡುವ ಪ್ರಶ್ನೆ ಬಂದಾಗಲೂ ಐರ್ಲೆಂಡನ್ನು ವಿಭಜಿಸುವ ಸಂದರ್ಭದಲ್ಲೂ ಬ್ರಿಟಿಷ್ ಸರ್ಕಾರ ಕಾಮನ್‌ವೆಲ್ತಿನ ರಾಷ್ಟ್ರಗಳ ಸಲಹೆ ಪಡೆದದ್ದಲ್ಲದೆ ಅವುಗಳ ಅನುಮತಿಯನ್ನೂ ಪಡೆಯಿತು.

**ಎರಡನೆಯ ಮಹಾಯುದ್ಧ ಮತ್ತು ಅನಂತರ :** ಕಾಮನ್‌ವೆಲ್ತ್ ಸದಾ ಪರಿವರ್ತನಶೀಲವಾದ ಸಂಸ್ಥೆ. ಎರಡನೆಯ ಮಹಾಯುದ್ಧ (1939–45) ಇದರ ಇತಿಹಾಸದಲ್ಲಿ ಇನ್ನೊಂದು ವಿಶಿಷ್ಟ ಘಟ್ಟವೆನ್ನಬಹುದು. ಆ ಕಾಲದಲ್ಲಿ ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ನಡುವೆ ಸಹಕಾರ ಮತ್ತು ಸಮಾಲೋಚನೆಗಳು ಬೆಳೆದುವು. ಒಗ್ಗಟ್ಟಿನಿಂದ ಎಲ್ಲರೂ ಹೋರಾಡಿದರು. ಆದರೆ ಈ ಮಹಾಯುದ್ಧ ಬ್ರಿಟನನ್ನು ಸಾಕಷ್ಟು ಹಣ್ಣು ಮಾಡಿತು. ಬ್ರಿಟಿಷ್ ವಸಾಹತುಗಳಲ್ಲಿ ರಾಷ್ಟ್ರೀಯ ಚಳವಳಿ ಬಿರುಸಾಗಿ ಸಾಗಿತು. ಭಾರತದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಸಾತಂತ್ರ್ಯ ಸಂಗ್ರಾಮ ಜೋರಾಗಿ ನಡೆಯಿತು. ಯುದ್ಧ ಮುಗಿದ ಮೇಲೆ ಬ್ರಿಟನ್ ಒಂದೊಂದೇ ವಸಾಹತಿಗೆ ಸ್ವಾತಂತ್ರ್ಯ ಕೊಡಬೇಕಾಯಿತು. 1947 ರಲ್ಲಿ ಭಾರತವೂ 1948 ರಲ್ಲಿ ಸಿಂಹಳ ಮತ್ತು ಬರ್ಮಗಳೂ ಸ್ವಾತಂತ್ರ್ಯ ಪಡೆದುವು. ಅದೇ ರೀತಿ ಆಫ್ರಿಕನ್ ದೇಶಗಳೂ ಕ್ರಮೇಣ ಸ್ವತಂತ್ರ್ಯವಾದುವು. ಇದರಿಂದ ಬ್ರಿಟಿಷ್ ಸಾಮ್ರಾಜ್ಯ ಚಿಕ್ಕದಾಯಿತು. ಬ್ರಿಟನ್ ತನ್ನ ಪ್ರತಿಷ್ಠೆ, ಗೌರವ ಮತ್ತು ಅಧಿಕಾರಗಳನ್ನು ಸ್ವಲ್ಪವಾದರೂ ಉಳಿಸಿಕೊಳ್ಳಬೇಕಾದರೆ ಕಾಮನ್‌ವೆಲ್ತಿನ ರಚನೆಯಲ್ಲಿ ಸೂಕ್ತ ಬದಲಾವಣೆ ಮಾಡಿ ಅದನ್ನು ಕಾಪಾಡಿಕೊಂಡು ಬರಬೇಕೆಂದು ಹಲವು ಬ್ರಿಟಿಷ್ ತಜ್ಞರು ಭಾವಿಸಿದರು. ಈ ಅಭಿಪ್ರಾಯ ಪುಷ್ಟಿಗೊಂಡು, ಯುದ್ಧಾನಂತರ ವರ್ಷಗಳಲ್ಲಿ ಬ್ರಿಟಿಷ್ ಕಾಮನ್‌ವೆಲ್ತ್ ಕೇವಲ ಕಾಮನ್‌ವೆಲ್ತ್ ರಾಷ್ಟ್ರಸಮುದಾಯವಾಗಿ ಮಾರ್ಪಾಡಾಯಿತು. ಸ್ವತಂತ್ರಗೊಂಡ ರಾಷ್ಟ್ರಗಳು ಬ್ರಿಟಿಷ್ ಕಾಮನ್‌ವೆಲ್ತನ್ನು ಸೇರಬೇಕೆಂದು ಬ್ರಿಟನ್ ಆಹ್ವಾನಿಸಿತು. ಕಾಮನ್‌ವೆಲ್ತಿನಲ್ಲಿ ಸೇರುವ ಅಥವಾ ಬಿಡುವ ವಿಚಾರವನ್ನು ಆಯಾ ದೇಶಗಳಿಗೇ ಬಿಡಲಾಯಿತು. ಮತ್ತೊಂದು ವಿಶೇಷ ಅಂಶವೆಂದರೆ ಸ್ವಾತಂತ್ರ್ಯಗಳಿಸಿದ ಅನೇಕ ರಾಷ್ಟ್ರಗಳು ಗಣರಾಜ್ಯಗಳಾಗಿದ್ದುವು. ಭಾರತ, ಪಾಕಿಸ್ತಾನ, ಸಿಂಹಳಗಳು ಕಾಮನ್‌ವೆಲ್ತನ್ನು ಸೇರಿದುವು. ಬರ್ಮ ಸೇರಲಿಲ್ಲ. ಕಾಮನ್‌ವೆಲ್ತಿನ ರಚನೆಯಲ್ಲಿ ಬದಲಾವಣೆಗಳಾದುವು. ಅದರ ತಳಹದಿ ವಿಶಾಲವಾಯಿತು. ವಿಭಿನ್ನ ರೀತಿನೀತಿಗಳ ರಾಷ್ಟ್ರಗಳು ಅದರ ಸದಸ್ಯತ್ವ ಪಡೆದುವು.

ಬ್ರಿಟಿಷ್ ಕಾಮನ್‌ವೆಲ್ತನ್ನು ಸೇರಿದ ಏಷ್ಯನ್ ರಾಷ್ಟ್ರಗಳು ತಮ್ಮ ಅಧೀನತೆಯ ಕಾಲದ ಅನೇಕ ಕಹಿ ನೆನಪುಗಳನ್ನು ತಮ್ಮೊಂದಿಗೆ ತಂದುವು. ಆ ರಾಷ್ಟ್ರಗಳಲ್ಲಿದ್ದ ಸ್ಪರ್ಧೆಯ ಮನೋಭಾವವೂ ತಿಕ್ಕಾಟಕ್ಕೆ ಅವಕಾಶಕೊಟ್ಟಿತು. ಭಾರತ ಪಾಕಿಸ್ತಾನಗಳ ನಡುವೆ ಸಂಭವಿಸಿದ ಬಿಕ್ಕಟ್ಟು, ದಕ್ಷಿಣ ಆಫ್ರಿಕದ ವರ್ಣನೀತಿ–ಇವು ಹೊಸ ರಾಷ್ಟ್ರಗಳು ತಮ್ಮೊಡನೆ ತಂದ ಬಿಕ್ಕಟ್ಟುಗಳಿಗೆ ಉದಾಹರಣೆಗಳು. ಅಲ್ಲದೆ ಈಗ ಕಾಮನ್‌ವೆಲ್ತ್ ಕೇವಲ ಒಕ್ಕೂಟವಾಗಿ ಉಳಿಯಲಿಲ್ಲ. ಎರಡನೆಯ ಮಹಾಯುದ್ಧಕ್ಕೆ ಮುಂಚೆ ಇದ್ದ ಬ್ರಿಟಿಷ್ ಕಾಮನ್‌ವೆಲ್ತ್ ಈಗ ಕೇವಲ ಕಾಮನ್‌ವೆಲ್ತ್ ರಾಷ್ಟ್ರ ಸಮುದಾಯವಾಯಿತು.

ಆದರೆ ಎರಡನೆಯ ಮಹಾಯುದ್ಧದಿಂದೀಚೆಗೆ ಕಾಮನ್‌ವೆಲ್ತಿನಲ್ಲಿ ಅನೇಕ ಬಿಕ್ಕಟ್ಟುಗಳು ತಲೆದೋರಿವೆ. ಈ ಸಮುದಾಯದ ರಾಷ್ಟ್ರಗಳಲ್ಲಿ ಅನೇಕ ವೇಳೆ ಸಮುದಾಯದ ಶಕ್ತಿಯ ಬಗ್ಗೆ ನಂಬಿಕೆ ಕುಸಿಯುವ ಸಂದರ್ಭಗಳು ಬಂದುದುಂಟು. 1956 ರಲ್ಲಿ ಸೂಯೆಜ್ ಕಾಲುವೆ ಪರಿಸ್ಥಿತಿ ಹದಗೆಟ್ಟಾಗ ಇಂಥ ಸಂದರ್ಭ ಒದಗಿಬಂತು. ಈಜಿಪ್ಟ್ ಸುಯೆಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದಾಗ. ಆ ದೇಶದ ಮೇಲೆ ದಂಡೆತ್ತಿ ಹೋಗಲು ಬ್ರಿಟನ್ ಫ್ರಾನ್ಸ್‌ಗಳು ಸನ್ನಾಹ ನಡೆಸಿದುವು. ಈ ಘಟನೆ ಕಾಮನ್‌ವೆಲ್ತಿನ ಏಷ್ಯನ್ ಆಫ್ರಿಕನ್ ರಾಷ್ಟ್ರಗಳನ್ನು ಕೆರಳಿಸಿತು. ಬ್ರಿಟನ್ ತನ್ನ ವಸಾಹತು ನೀತಿಯನ್ನು ಬಿಟ್ಟಿಲ್ಲವೆಂದೂ ಸಮಯ ಸಿಕ್ಕಿದರೆ ಪರ ರಾಷ್ಟ್ರಗಳ ಮೇಲೆ ಆ ನೀತಿಯನ್ನು ಹೇರಲು ಬ್ರಿಟನ್ ಹಿಂದೆಗೆಯುವುದಿಲ್ಲವೆಂದೂ ಅನೇಕ ರಾಷ್ಟ್ರಗಳು ಟೀಕೆ ಮಾಡಿದುವು. ಇದರಿಂದ ಬ್ರಿಟನಿನ ನೇತೃತ್ವದಲ್ಲಿದ್ದ ಕಾಮನ್‌ವೆಲ್ತಿನ ಬಗ್ಗೆ ನಂಬಿಕೆ ಸಡಿಲವಾಯಿತು. ಅದೇ ರೀತಿ 1946ರಿಂದಲೂ ಬ್ರಿಟನ್ ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಸೇರಲು ಸನ್ನಾಹ ನಡೆಸುತ್ತಿದ್ದು ಕೊನೆಗೆ 1971 ರಲ್ಲಿ ಅದನ್ನು ಸೇರಿತು. ಬ್ರಿಟನಿನ ದೃಷ್ಟಿ ಮೊದಲು ಯೂರೋಪಿನ ಮೇಲೆ ; ಕಾಮನ್‌ವೆಲ್ತ್

ಬರುವುದು ಅನಂತರ –ಎಂಬ ಭಾವನೆಗೆ ಇದೊಂದು ಕಾರಣ. ಅನೇಕರಿಗೆ ಇದರಿಂದ ನಿರಾಶೆಯುಂಟಾಗಿದೆ.

1962ರಲ್ಲಿ ಬ್ರಿಟನ್ ಕಾಮನ್‍ವೆಲ್ತ್ ರಾಷ್ಟ್ರಗಳಿಂದ ವಲಸೆ ಬರುವ ಜನರನ್ನು ನಿಯಂತ್ರಣಗೊಳಿಸುವ ಕಾನೂನನ್ನು ಜಾರಿಗೆ ತಂದಿತು. ಇದರಿಂದಲೂ ಅನೇಕ ರಾಷ್ಟ್ರಗಳಿಗೆ ಬೇಸರವಾಗಿದೆ. ಬ್ರಿಟನಿನಲ್ಲೂ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಅನೇಕ ವರ್ಣೀಯರು ಬ್ರಿಟನಿಗೆ ಬಂದು ನೆಲೆಸುವುದರಿಂದ ಉಂಟಾಗುವ ಸಮಸ್ಯೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಹೀಗೆ ಮಾಡಬೇಕಾಯಿತೆಂಬುದು ಬ್ರಿಟನಿನ ವಾದ. ಆದರೆ ಅದರ ಕ್ರಮ ಸಂಶಯಕ್ಕೆ ಎಡೆ ಕೊಟ್ಟಿತು. ಇಂಥ ಅನೇಕ ಬೆಳವಣಿಗೆಗಳು ಕಾಮನ್‍ವೆಲ್ತಿನ ಒಗ್ಗಟ್ಟನ್ನು ಸಡಿಲಗೊಳಿಸಿವೆ. (ಎ.ಎಂ.ಆರ್.; ಎಸ್.ಕೆ.ಎಸ್.)

**ಕಾಮಲಾಪುರ:** ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನಲ್ಲಿ ಕಸಬೆಯಿಂದ 11ಕಿಮೀ ಈಶಾನ್ಯಕ್ಕಿರುವ ಒಂದು ಊರು. ಹಂಪೆಯಿಂದ ಮೂರೂವರೆ ಕಿಮೀ ದೂರದಲ್ಲಿದೆ. ಈ ಊರು ಒಂದು ಕಾಲದಲ್ಲಿ ವಿಜಯನಗರ ರಾಜಧಾನಿಯ ಭಾಗವಾಗಿತ್ತು. ರಾಣಿ ಕಾಮಲಾದೇವಿ ಇಲ್ಲಿ ವಾಸಿಸುತ್ತಿದ್ದುದರಿಂದ ಈ ಹೆಸರು ಬಂತೆಂದು ಹೇಳಿಕೆ. ಇದು ಕೆಲವು ಕಾಲ ಆನೆಗೊಂದಿ ರಾಜನ ವಾಸಸ್ಥಳವಾಗಿತ್ತು. ವಿಜಯನಗರದ ಅರಸರ ಕಾಲದ ಅನೇಕ ದೇವಾಲಯಗಳು ಇಲ್ಲಿವೆ. ಅವುಗಳಲ್ಲಿ ನಗರೇಶ್ವರ, ಪಟ್ಟಾಭಿರಾಮ ಮತ್ತು ಕಂಪ್ಲಿಗೆ ಹೋಗುವ ಮಾರ್ಗದಲ್ಲಿ ಸಿಕ್ಕುವ ಮಾಲ್ಯವಂತ ರಘುನಾಥ ದೇವಾಲಯಗಳು ಪ್ರಸಿದ್ಧ **(ನೋಡಿ: ಹಂಪೆ)**.

ಊರಿನ ಮುಂಭಾಗದಲ್ಲಿ 476 ಎಕರೆ ಒಳ ಆಯ ಹೊಂದಿರುವ ದೊಡ್ಡಕೆರೆ ಇದೆ. ಫಲವತ್ತಾದ ಕೆಂಪು ಮಿಶ್ರಿತ ಮಣ್ಣಿರುವ ಈ ಪ್ರದೇಶದಲ್ಲಿ ಕಬ್ಬನ್ನು ಹೆಚ್ಚು ಬೆಳೆಸುವುದರ ಜೊತೆಗೆ ಬತ್ತ ಮತ್ತು ಬಾಳೆ ಬೆಳೆಯುತ್ತಾರೆ.

ಕಾಮಲಾಪುರಕ್ಕೆ ಸಮೀಪದಲ್ಲಿ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇಲ್ಲಿ ಕಾರ್ಮಿಕರು ಮತ್ತು ಇತರರು ನೆಲಸಿ ಒಂದು ಬಡಾವಣೆಯಾಗಿದೆ. ಹೊಸಪೇಟೆ ಬಳಿಯ ತುಂಗಭದ್ರಾ ಅಣೆಕಟ್ಟಿನಿಂದ ಸದಾ ದೊರಕುವ ನೀರಿನಿಂದ ಈ ಸುತ್ತಿನಲ್ಲಿ ವ್ಯವಸಾಯ ಪ್ರಗತಿಹೊಂದಿದೆ. ಕಬ್ಬನ್ನು ಬೆಳೆದು ಹೊಸಪೇಟೆ ಸಕ್ಕರೆ ಕಾರ್ಖಾನೆಗೆ ಒದಗಿಸುತ್ತಾರೆ. ಬೆಲ್ಲದ ತಯಾರಿಕೆಯೂ ಉಂಟು.

ಕಾಮಲಾಪುರ ನಗರ ಪಂಚಾಯಿತಿಯ ಆಡಳಿತಕ್ಕೆ ಸೇರಿದೆ. ಇಲ್ಲಿ ಒಂದು ಕಾಲೇಜು ಇದೆ. ಪ್ರವಾಸಿಮಂದಿರ ಮತ್ತು ಕೇಂದ್ರ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುವ ಪುರಾತತ್ತ್ವ ಇಲಾಖೆಯ ಒಂದು ಕಾರ್ಯಾಲಯ ಇವೆ. *

**ಕಾಮಲೇಖನ :** ಪ್ರಣಯಚೇಷ್ಟೆ ಮತ್ತು ಕಾಮಕೇಳಿಯನ್ನು ವರ್ಣಿಸುವ ಸಾಹಿತ್ಯ. ನಿಜವಾಗಿ ಅದು ಆ ಹೆಸರಿಗೆ ತಕ್ಕುದಾಗಬೇಕಾದರೆ ಓದಿದವರನ್ನು ಶಾರೀರಕ ಪ್ರಲೋಭನೆಗೆ ಎಳೆಯುವ ಶಕ್ತಿ ಅದಕ್ಕಿರಬೇಕು. ಅಲ್ಲದೆ ಶೃಂಗಾರದ ಕಡೆಗೆ ಅವರನ್ನು ಸೆಳೆಯುವಂತಿರಬೇಕು. ಸ್ತ್ರೀಪುರುಷರ ಕಾಮಾಂಗಗಳ ಕುರಿತು ವೇದ ಸಾಹಿತ್ಯದಲ್ಲೇ ವರ್ಣನೆಗಳು ಬರುತ್ತವೆ. ಆಗ ಅದನ್ನು ಅಶ್ಲೀಲವೆಂಬ ದೃಷ್ಟಿಗಿಂತ ವಸ್ತುನಿಷ್ಠತೆಯಿಂದ ವಿವರಿಸಲಾಗುತ್ತಿತ್ತು. ನಾಗರಿಕತೆ ಬೆಳೆದಂತೆ ಕಾಮ ಕುರಿತ ಬರೆಹ ಅಶ್ಲೀಲ, ಉದ್ರೇಕಕಾರಿ ಎಂಬ ಹಣೆಪಟ್ಟಿ ಧರಿಸಿತು. ಅದು ಒಂದು ಗುಪ್ತ ವಿಷಯವಾಗಿ ಕಾಮ ರಹಸ್ಯ ಸ್ಥಾನ ಪಡೆಯಿತು. ಅತಿನಿಷ್ಠೆಯುಳ್ಳವರು ಕಾಮ ಎಂಬ ಶಬ್ದವನ್ನು ಉಚ್ಚರಿಸುವುದಕ್ಕೂ ನಾಚಿಕೆಗೊಂಡು ಅದನ್ನು ತೃತೀಯ ಪುರುಷಾರ್ಥ ಎನ್ನುವುದು ವಾಡಿಕೆ. ಇಂದ್ರಿಯ ತೃಪ್ತಿಯ ಸಂಗತಿ ಎಲ್ಲರಿಗೂ ಗೊತ್ತು. ಸಭ್ಯರಾರೂ ಅದನ್ನು ಬಹಿರಂಗವಾಗಿ ಪ್ರಸ್ತಾಪಿಸುವುದಿಲ್ಲ. ಅದೊಂದು ಗೋಪ್ಯವಾಗಿರತಕ್ಕ ವಿಚಾರವೆಂದೇ ಎಲ್ಲ ನಾಗರಿಕ ಜನರ ಅಲಿಖಿತ ಒಪ್ಪಂದ. ಅದನ್ನು ಪ್ರಕಟವಾಗಿಯೋ ಆಸಕ್ತಿಯಿಂದಲೋ ನಿರೂಪಿಸ ಹೊರಟರೆ ಅಂಥ ಮಾತುಕಥೆ ಕಾಮಾಲಾಪವಾಗುತ್ತದೆ, ಬರವಣಿಗೆ ಕಾಮಲೇಖನವಾಗುತ್ತದೆ. ಪ್ರಾಚೀನ ಗ್ರೀಕರ ಹಾಗೂ ಪ್ರಾಚೀನ ರೋಮನರ ಹಲವು ನಾಟುನುಡಿಗಳೂ ಕೆಲವು ಚಿಕ್ಕ ಕವನಗಳೂ ಆ ಬಗೆಯ ಖಂಡನೀಯವಾದ ಸಾಹಿತ್ಯವೆಂದೇ ಶತಮಾನಗಳಿಂದ ಎಣಿಸಲ್ಪಟ್ಟಿವೆ. ಮಾರ್ಷಲನ ಕೆಲವು ಚೌಪದಿಗಳನ್ನು ಎಲ್ಲರಿಗೂ ತಿಳಿಯುವ ದೇಶೀಯ ಭಾಷೆಯಲ್ಲಿ ಅಚ್ಚು ಮಾಡದೆ ಅವರಾರಿಗೂ ಅರಿವಿಲ್ಲದ ಮೂಲ ಲ್ಯಾಟಿನ್ನಿನಲ್ಲೇ ಅಚ್ಚುಹಾಕುವ ಸಂಪ್ರದಾಯ ಇತ್ತೀಚಿನವರೆಗೂ ಇತ್ತು. ನಾಟುನುಡಿಗಳನ್ನು ಓದುವದಕ್ಕಿಂತ ಕಣ್ಮರೆಯಾಗಿ ಹೋಗುವುದು ಶ್ರೇಯಸ್ಸು ಎಂದು ಸದಾಚಾರಶೀಲನಾದ ಶ್ರೀಮಂತ ಚೆಸ್ಟರ್ ಫೀಲ್ಡ್ ತನ್ನ ಮಗನಿಗೆ ಹೇಳಿದನಂತೆ. ಆದಾಗ್ಯೂ ಭಾರತದಲ್ಲಿ ವಾತ್ಸಾಯನನ 'ಕಾಮಶಾಸ್ತ್ರ' ದಿಂದ ಹಿಡಿದು ಹಲವಾರು ಕೃತಿಗಳು ಸಂಸ್ಕೃತ ಮತ್ತು ದೇಶೀಯ ಭಾಷೆಗಳಲ್ಲಿ ಲಭ್ಯವಿವೆ. 19ನೆಯ ಶತಮಾನದಿಂದ ಈಚೆಗೆ ಸಮಾಜಗಳು ಬದಲಾವಣೆಗೊಂಡು ಹಿಂದಿನ ಸಂಭಾವ್ಯತೆಯ ಬಿಗಿಮುಷ್ಟಿಯಿಂದ ಸಡಿಲಗೊಂಡಿವೆ. ಸ್ತ್ರೀ ಪುರುಷರ ಸಂಪರ್ಕವಿಚಾರ ಹೆಚ್ಚು ಹೆಚ್ಚು ಸಹಜವೂ ಕುಭಾವನಾ ರಹಿತವೂ ಆಗುತ್ತಿದೆ. ಆದರೂ ಲೈಂಗಿಕ ಸಾಹಿತ್ಯ ವಿಚಾರವಾಗಿ ಹಳೆಯ ನಿಷೇಧ ಇಂದು ಬಹುಮಟ್ಟಿಗೆ ಸಡಿಲವಾಗಿದೆ.

ಹೊಸ ಹುಟ್ಟಿನ ನಾಟಕಗಳಲ್ಲೂ ಸಂಸ್ಕೃತ ಕನ್ನಡ ಚಂಪೂಕಾವ್ಯಗಳಲ್ಲೂ ಸುರತ ವ್ಯಾಪಾರಕ್ಕೆ ಸಂಬಂಧಿಸಿದ ವಾಕ್ಯಗಳು ಪರಿಚ್ಛೇದಗಳೂ ಮೀಸಲಾಗಿವೆ. ಅವನ್ನು ಕಾಮಲೇಖನ ಎನ್ನುವವರಿದ್ದಾರೆ. ಹಾಗೆನ್ನುವುದು ನ್ಯಾಯವಲ್ಲ. ಹೊಸಹುಟ್ಟಿನ ಕಾಲದಲ್ಲಿ ಕುಲೀನರ ಪರಸ್ಪರ ಸಂಭಾಷಣೆಯಲ್ಲಿ ಈಗ ನಮಗೆ ಹೆಚ್ಚೆಂದು ತೋರುವಷ್ಟು ಸ್ವಾತಂತ್ರ್ಯ ಕಾಣಬರುತ್ತಿತ್ತು. ಆದರಿಂದ ಯಾರಿಗೂ ಜುಗುಪ್ಸೆ ಉಂಟಾಗುತ್ತಿರಲಿಲ್ಲ. ನಾಟಕಗಳಲ್ಲಿ ಅದೇ ಸ್ವಾತಂತ್ರ್ಯ ತೋರಿಬಂದುದರಲ್ಲಿ ಆಶ್ಚರ್ಯವಿಲ್ಲ. ಚಂಪೂಕಾವ್ಯಕ್ಕೆ 18 ವರ್ಣನೆಗಳು ಬಂದೇ ಬರಬೇಕೆಂದು ಕಡ್ಡಾಯವಾಗಿತ್ತು. ಆದ್ದರಿಂದ ಸತಿಪತಿಯರ ಏಕಾಂತವನ್ನೂ ವೇಶ್ಯಾವಾಟಿಕೆಯನ್ನೂ ಕವಿಗಳು ಬಣ್ಣಿಸಿದರು. ವಿಷಯವನ್ನು ಅಲಂಕಾರಯುಕ್ತವಾಗಿಯೂ ರಸವತ್ತಾಗಿಯೂ ಕವನಗೈಯುವುದೇ ಅವರ ಉದ್ದೇಶ. ಲೈಂಗಿಕ ಪ್ರಚೋದನೆ ಅವರ ಸಂಕಲ್ಪದಿಂದ ಬಲು ದೂರ.

ಪುರಾತನ ಪ್ರಭು ಒಬ್ಬ ಕಾಮಕಾವ್ಯಗಳನ್ನು ಕಟ್ಟಲೋಸುಗವೇ ಒಂದು ಕವಿ ತಂಡವನ್ನು ಸಾಕಿ ಸಲಹುತ್ತಿದ್ದನಂತೆ. 19ನೆಯ ಶತಮಾನದ ಎರಡನೆಯ ಭಾಗದಲ್ಲಿ ಇಂಗ್ಲೆಂಡಿನಲ್ಲಿ ಫ್ರೆಂಚ್ ಕಾದಂಬರಿಗಳು ಎಂದರೆ ಅಂಥ ಕೆಟ್ಟದಾರಿಗೆ ಎಳೆಯುವ ಕಥೆಗಳೇ ಎಂಬ ಅರ್ಥವಿತ್ತು. ಹಿಂದಣ ಸಾಹಿತಿಗಳಲ್ಲಿ ಬೊಕಾಚೀಯೋವಿಗೆ ಉತ್ಕೃಷ್ಟ ಕಥೆಗಾರನೆಂಬ ಕೀರ್ತಿ ಸಂದಿತಾದರೂ ಲಾಂಪಟ್ಯದ ಕವಿಯೆಂಬ ಅಪಖ್ಯಾತಿ ತಪ್ಪಲಿಲ್ಲ. ಈಚಿನವರಲ್ಲಿ ಮೋಪಾಸನ ಹೆಸರನ್ನು ಈ ಗುಂಪಿಗೆ ಸೇರಿಸಬಹುದು.

ಕವಿತೆ, ಕಥೆ, ಕಾದಂಬರಿಗಳು ಹಾಗಿರಲಿ, ಈಚೆಗೆ ಕಾಮವ್ಯಾಪಾರವನ್ನು ವಿಶದವಾಗಿ ವಿವರಿಸಿ ವ್ಯಾಖ್ಯಾನ ಮಾಡುವ ಹೊತ್ತಗೆಗಳು ಹೆಚ್ಚುತ್ತಿವೆ. ಶಾಸ್ತ್ರವೆಂಬ ಹೆಸರಿನಲ್ಲಿ ಅವಕ್ಕೆ ಪರವಾನೆ ದೊರೆಯುತ್ತಿದೆ. ಆಗೊಂದು ಈಗೊಂದು ಪುಸ್ತಕವನ್ನು ಅಶ್ಲೀಲವೆಂದು ಮುಟ್ಟುಗೋಲು ಹಾಕುವುದೂ ಉಂಟು. ಲೈಂಗಿಕ ಶಿಕ್ಷಣದ ಹೆಸರಿನಲ್ಲಿ ಇಂದು ಲೈಂಗಿಕ ಕ್ರಿಯೆಯ ವಿವರಗಳು ಸಾಕಷ್ಟು ಲಭ್ಯವಿವೆ.

ಈ ವಿಚಾರದಲ್ಲಿ ಬಿಡಿ ವ್ಯಕ್ತಿಯ ಶೀಲಧರ್ಮ, ಇಡೀ ಸಮಾಜದ ಕಟ್ಟುನಿಟ್ಟು ಕಡೆಯ ಮಾತು. ಸಾಹಿತ್ಯದಲ್ಲಿ ಶೀಲ, ಅಶ್ಲೀಲ ಎಂಬ ಮಾತಿಗೆ ಬಹು ಎಚ್ಚರಿಕೆಯಿಂದ ವ್ಯಾಖ್ಯಾನ ಮಾಡಬೇಕಾಗುತ್ತದೆ. ಸಾಹಿತ್ಯ ಓದುಗರಲ್ಲಿ ಉಂಟುಮಾಡುವ ಪರಿಣಾಮದಿಂದ ಅದನ್ನು ಶೀಲ ಅಥವಾ ಅಶ್ಲೀಲ ಎಂದು ಗುರುತಿಸುವುದೊಳ್ಳೆಯದು. ಪರಿಣಾಮಕ್ಕೆ ಸಾಹಿತ್ಯ ಹೇಗೆ ಕಾರಣವೋ ಹಾಗೆ ಓದುಗರ ಸಂಸ್ಕೃತಿಯೂ ಕಾರಣವೆಂಬ ಮಾತನ್ನು ಮರೆಯಲಾಗದು **(ನೋಡಿ– ಅಶ್ಲೀಲ)**. (ಎಸ್.ಆರ್.)

**ಕಾಮವಿಕಾರಗಳು :** ಗಂಡು ಹೆಣ್ಣುಗಳಲ್ಲಿ ಇರಬೇಕಾದ ಸಹಜಕಾಮ ಪ್ರವೃತ್ತಿಗೆ ವಿರುದ್ಧವಾದ ವಿಕೃತಕಾಮ ಪ್ರವೃತ್ತಿಗಳನ್ನು ಈ ಹೆಸರಿನಿಂದ ಕರೆಯಲಾಗಿದೆ (ಸೆಕ್ಷುಅಲ್ ಡಿಸಾರ್ಡರ್ಸ್). ಕಾಮವಿಕಾರಗಳು ಇತರ ಮಾನಸಿಕ ಮತ್ತು ದೈಹಿಕ ವಿಕಾರಗಳಂತೆಯೇ ಮಾನವ ಹುಟ್ಟಿದಂದಿನಿಂದ ಅವನನ್ನು ಕಾಡಿಸಿವೆ ಎಂದು ಭಾವಿಸಲು ಸಾಕಷ್ಟು ಕಾರಣಗಳಿರುವುವಾದರೂ ಇವುಗಳ ವೈಜ್ಞಾನಿಕ ಅಧ್ಯಯನ ಇತ್ತೀಚಿನದು. ವಾಸ್ತವವಾಗಿ, ಕಾಮವರ್ತನೆ ಮತ್ತು ಕಾಮವಿಕಾರದ ಮೇಲಿನ ಸಂಶೋಧನೆಗಳು ಇತ್ತೀಚಿನ ದಶಕಗಳಲ್ಲಿ ನಿಖರವಾಗಿವೆ. ಕಾಮವಿಕಾರದ ವೈಜ್ಞಾನಿಕ ಅಧ್ಯಯನದ ಪ್ರಾರಂಭವೇ ತಡವಾದದ್ದಲ್ಲದೆ ಈ ಕ್ಷೇತ್ರದಲ್ಲಿ ಪ್ರಗತಿಯೂ ಕುಂಠಿತವಾಗಿರುವುದಕ್ಕೆ ಅನೇಕ ಕಾರಣಗಳಿವೆ. ಇವುಗಳಲ್ಲಿ ಮುಖ್ಯವಾದದ್ದೆಂದರೆ ಹೆಚ್ಚು ಕಡಿಮೆ ಎಲ್ಲ ಸಮಾಜಗಳೂ ಅಲ್ಲಿಂದಿಲ್ಲಿಗೂ ಕಾಮವೆಂಬುದು ಖಾಸಗಿಯಾದ, ಮುಚ್ಚುಮರೆ ಮಾಡಿಕೊಳ್ಳಬೇಕಾದ, ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಬಾರದಾದ ವೈಯಕ್ತಿಕ ವ್ಯಾಪಾರವೆಂದು ಪರಿಗಣಿಸಿದ್ದೇ ಆಗಿದೆ. ಜೊತೆಗೆ ಈ ಕ್ಷೇತ್ರದಲ್ಲಿ ಅಧ್ಯಯನಕ್ಕಿಳಿದವರು ಜನರ ಟೀಕೆಗೆ ಗುರಿಯಾಗುತ್ತಿದ್ದುದೂ ಒಂದು ಕಾರಣ. ಹಾಗೆ ನೋಡಿದರೆ ಮನುಷ್ಯನ ಕಾಮ ಜೀವನದ ವೈಜ್ಞಾನಿಕ ವಿಶ್ಲೇಷಣೆ ಭಾರತದಲ್ಲಿ ಬಲು ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ವಾತ್ಸ್ಯಾಯನನಂಥ ಮಹರ್ಷಿಗಳು ಕಾಮದ ಬಗ್ಗೆ ವಸ್ತುನಿಷ್ಠವಾಗಿ ಬರೆದು ಈ ವಿಷಯದ ಮೇಲಿನ ಚಿಂತನೆಗೆ ಘನತೆಯನ್ನು ತಂದುಕೊಟ್ಟಿದ್ದರು **(ನೋಡಿ– ಕಾಮಶಾಸ್ತ್ರ)**. ಇಂಥ ಬರೆಹಗಳು ಮತ್ತು ಶತಮಾನಗಳಿಂದ ಭಾರತದಲ್ಲಿ ಉಳಿದು ಬಂದಿರುವ ವಾಸ್ತುಶಿಲ್ಪ ಕೃತಿಗಳು ಬಹುಶಃ ಪ್ರಾಚೀನ ಭಾರತದಲ್ಲಿ ಕಾಮದ ಬಗ್ಗೆ ಹೆಚ್ಚು ತೆರೆದ ಮನಸ್ಸಿನ, ಆರೋಗ್ಯಕರವಾದ ಧೋರಣೆ ಇತ್ತೆಂಬುದನ್ನು ಸೂಚಿಸುತ್ತವೆ. ಆದರೆ ಪ್ರಾಚೀನ ಬರೆಹಗಳಲ್ಲಿ ಕಾಮ ವಿಕಾರಗಳಿಗಿಂತ ಅದರ ಸಹಜ ಅಭಿವ್ಯಕ್ತಿಗೆ ಹೆಚ್ಚಿನ ಗಮನವನ್ನು ಕೊಡಲಾಗಿದೆ. ಆದ್ದರಿಂದ ಇಲ್ಲಿ ಆಧುನಿಕ ಮನೋವಿಜ್ಞಾನಿಗಳು ಮತ್ತು ಮನೋವೈದ್ಯರು ಮಾಡಿದ ಅಧ್ಯಯನಗಳನ್ನನುಸರಿಸಿ ಕಾಮವಿಕಾರದ ವಿವರಣೆ ಮತ್ತು ವರ್ಣನೆಯನ್ನು ಕೊಡಲಾಗಿದೆ.

ಕಾಮವಿಕಾರಗಳೆಂದರೇನು ಎಂಬ ಪ್ರಶ್ನೆಗೆ ಎಲ್ಲ ಕಾಲಕ್ಕೂ ಎಲ್ಲ ಸಮಾಜಕ್ಕೂ ಒಪ್ಪಿಗೆಯಾಗುವಂಥ ಒಂದೇ ಒಂದು ಉತ್ತರವನ್ನು ಕೊಡುವುದು ಕಷ್ಟ. ಏಕೆಂದರೆ ಕಾಮವಿಕಾರದ ನಿರೂಪಣೆ ಸಹಜವಾದ ನಿರೂಪಣೆಯನ್ನು ಅವಲಂಬಿಸುತ್ತದೆ. ಒಂದು ಕಾಲದಲ್ಲಿ ವಿಕೃತಿ ಕಾಮವೆನಿಸಿಕೊಂಡದ್ದು ಅನಂತರ ಸಹಜಕಾಮವೆಂದು

ಪರಿಗಣಿಸಲ್ಪಟ್ಟಿರಬಹುದು. ಉದಾಹರಣೆಗೆ ಮುಷ್ಟಿಮೈಥುನ. ಒಂದು ಸಮಾಜದಲ್ಲಿ ವಿಕೃತವೆನಿಸಿಕೊಂಡದ್ದು ಇನ್ನೊಂದು ಸಮಾಜದಲ್ಲಿ ಸಹಜವಾಗಿರಬಹುದು. ಈ ರೀತಿ ಸಾಮಾಜಿಕ ಧೋರಣೆಗಳು ಬದಲಾದಂತೆ ಕಾಮವಿಕಾರಗಳ ವ್ಯಾಖ್ಯೆಯಲ್ಲೂ ಬದಲಾವಣೆಗಳಾಗಲೇಬೇಕಾಗುತ್ತದೆ. ಇಂಗ್ಲೆಂಡಿನಲ್ಲಿ ಸಲಿಂಗಕಾಮಿಗಳನ್ನು ಸಹನೆಯಿಂದ ಕಾಣಬೇಕೆಂಬ ಅಂಥವರು ವಿಕೃತರೆಂದು ಪರಿಗಣಿಸಬೇಕಾದ ಆವಶ್ಯಕತೆ ಇಲ್ಲವೆಂಬ ಧೋರಣೆ ಇತ್ತೀಚೆಗೆ ರೂಪುತಳೆಯುತ್ತಿರುವುದು ಈ ಎರಡನೆಯ ಅಂಶದ ನಿದರ್ಶನವಾಗಿದೆ. ಅಲ್ಲದೆ ಕೆಲವು ಸಮಾಜದಲ್ಲಿ, ಚಿಂತಕರಲ್ಲಿ ಮತ್ತು ಮತಧರ್ಮಗಳಲ್ಲಿ ಕಾಮವೆಂಬುದು ಸಂತಾನಾಭಿವೃದ್ಧಿಗೆ ಸಾಧಕವಾದಾಗ ಮಾತ್ರ ಸಹಜ; ಸಂತಾನಾಪೇಕ್ಷೆ ಇಲ್ಲದ ಲೈಂಗಿಕ ಚಟುವಟಿಕೆಗಳು ಅಸಹಜ–ಎಂಬ ಧೋರಣೆಯನ್ನು ಕೂಡ ಕಾಣಬಹುದು. ಈ ದೃಷ್ಟಿಯಿಂದ ಮುಷ್ಟಿಮೈಥುನ ಮತ್ತು ಸಂತಾನ ನಿರೋಧಕಗಳನ್ನೊಳಗೊಂಡ ಸಹಜ ಸಂಭೋಗ ಕೂಡ ವಿಕೃತವಾಗುತ್ತದೆ. ಆದರೆ ಆಧುನಿಕ ವಿಜ್ಞಾನ ಇದನ್ನು ತೀರ ಸಂಕುಚಿತವಾದ, ವಾಸ್ತವಿಕತೆಗೆ ದೂರವಾದ, ದೃಷ್ಟಿಕೋನವೆಂದು ತಳ್ಳಿಹಾಕಿದೆ. ಕಾಮದ ಅಂತಿಮ ಗುರಿ ಸಂತಾನಾಭಿವೃದ್ಧಿ ಎಂಬುದು ನಿಜವಾದರೂ ವಾಸ್ತವಿಕವಾಗಿ ಇದು ಎಂದೂ ಅಷ್ಟಕ್ಕೇ ಸೀಮಿತವಾಗಿರುವುದಿಲ್ಲ–ಎಂಬುದು ಸತ್ಯಕ್ಕೆ ಹತ್ತಿರವಾದ ಹೇಳಿಕೆಯಾಗಿದೆ. ಇದು ಹಾಗಿರಬೇಕೇ ಬೇಡವೇ ಎಂಬುದು ಬೇರೆಯೇ ಆದ ಪ್ರಶ್ನೆಯಾಗುತ್ತದೆ. ಅಲ್ಲದೆ ಎಲ್ಲರಲ್ಲೂ ಕಾಮ ವ್ಯಕ್ತವಾಗುವ ಬಗೆಯೇ ಸಂತಾನಾಭಿವೃದ್ಧಿಗೆ ಸೀಮಿತವಾಗಿಲ್ಲದಿದ್ದಾಗ ಅದು ಹಾಗಿರಬಾರದಿತ್ತು ಎಂಬುದೂ ವೈಜ್ಞಾನಿಕವಲ್ಲದ ಹೇಳಿಕೆಯಾಗುತ್ತದೆ. ಸಾಮಾನ್ಯವಾಗಿ ಸಮಾಜ ಮತ್ತು ಕಾನೂನು ಅಂಗೀಕರಿಸದ ಮತ್ತು ವ್ಯಕ್ತಿ ಸಹಜವಾಗಿ ಸಮಾಜಕ್ಕೆ ಹೊಂದಿಕೊಳ್ಳಲಾಗುವಂತೆ ಅಡಚಣೆಯನ್ನೊಡ್ಡುವ ಕಾಮ ಪ್ರವೃತ್ತಿಗಳು ವಿಕಾರವಾದವೆಂದು ಪರಿಗಣಿಸಬಹುದು. ವೈಜ್ಞಾನಿಕ ಅಧ್ಯಯನಗಳು ಹೆಚ್ಚಾದಂತೆ ಸ್ಪಷ್ಟವಾಗಿರುವ ಅಂಶವೆಂದರೆ ಮುಷ್ಟಿಮೈಥುನ, ನಿದ್ರಾಸ್ಖಲನಾದಿಗಳು ಅತ್ಯಂತ ಸಾಮಾನ್ಯವೂ ಸಹಜವೂ ಆದವೆಂಬುದಾಗಿದೆ. ಮೂಲತಃ ಮನೋರೋಗಿಗಳಾದವರಲ್ಲಿ ಮುಷ್ಟಿಮೈಥುನ ಒಮ್ಮೊಮ್ಮೆ ವಿಕೃತ ಸ್ವರೂಪಕ್ಕೆ ಹೋಗಬಹುದಾದರೂ ಸಾಮಾನ್ಯವಾಗಿ ಇದೊಂದು ಸಮಸ್ಯೆಯಾಗಿರುವುದಿಲ್ಲ. ಆದರೆ ತಾರುಣ್ಯಕ್ಕೇರುತ್ತಿರುವ ಹುಡುಗರಲ್ಲಿ ಅಜ್ಞಾನದಿಂದಾಗಿ ಕೆಲವೊಮ್ಮೆ ಮಾನಸಿಕ ತೊಂದರೆಗಳು ತಲೆದೋರುವುದು ಸಾಧ್ಯವಿದೆ. ಮುಷ್ಟಿಮೈಥುನ ಮತ್ತು ನಿದ್ರಾಸ್ಖಲನ ಅತ್ಯಂತ ಕೆಟ್ಟದ್ದು. ಇವುಗಳಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ಪೂರ್ತಿಯಾಗಿ ಕೆಟ್ಟು ಹೋಗುತ್ತದೆ – ಎಂದು ನಂಬಿಕೊಂಡಿರುವವರು ಅನಾವಶ್ಯಕವಾದ ಚಿಂತೆ, ತಳಮಳ, ಖಿನ್ನತೆ, ಆಯಾಸ, ಮತ್ತು ನೂರೆಂಟು ಕಾಲ್ಪನಿಕ ಭಾವನೆಗಳಿಂದ ನರಳುತ್ತಾರೆ. ಭಾರತದ ತರುಣರಲ್ಲಿ ಇದನ್ನು ಸಾಧಾರಣವಾಗಿ ಕಾಣಬಹುದು. ಆದರೆ ಈ ಬಾಧೆಗಳು ಮುಷ್ಟಿಮೈಥುನ ಅಥವಾ ನಿದ್ರಾಸ್ಖಲನದ ನೇರ ಪರಿಣಾಮಗಳಲ್ಲ ; ಅವುಗಳ ಬಗ್ಗೆ ವ್ಯಕ್ತಿ ಹಚ್ಚಿಕೊಂಡ ಚಿಂತೆಯ ಪರಿಣಾಮಗಳು ಅಷ್ಟೆ. ಇಂಥ ವ್ಯಕ್ತಿಗಳಿಗೆ ಶರೀರ ರಚನೆಯ ಸ್ಥೂಲಪರಿಚಯ ನೀಡಿ ಹೇಗೆ ಈ ತೊಂದರೆಗಳು ಎಲ್ಲರಲ್ಲೂ ಕಂಡುಬರುವ ಸಹಜವೂ ಸಾಮಾನ್ಯವೂ ಆದ ಶಾರೀರಿಕ ಪ್ರತಿಕ್ರಿಯೆಗಳು–ಎಂಬುದನ್ನು ವಿವರಿಸುವುದರಿಂದ ಮತ್ತು ಅವುಗಳಿಂದ ಆಗಬಹುದಾದ ಕೆಡುಕಿನ ವ್ಯಾಪ್ತಿಯನ್ನು ವಿವರಿಸುವುದರಿಂದ ಅವರ ಚಿಂತೆಯನ್ನು ನಿವಾರಿಸಬಹುದು.

ನಿಜವಾಗಿಯೂ ವಿಕೃತವೆನ್ನಬಹುದಾದ ಕಾಮಪ್ರವೃತ್ತಿಗಳಲ್ಲಿ ಈ ಕೆಲವು ಮುಖ್ಯ ನಮೂನೆಗಳನ್ನು ಗುರುತಿಸಲಾಗಿದೆ ; ಆಪಿರದಿಕೆ (ಇಂಪೋಟೆನ್ಸ್) ಮತ್ತು ಉದ್ರೇಕ ರಾಹಿತ್ಯ (ಫ್ರಿಜಿಡಿಟಿ), ಸಲಿಂಗಕಾಮ (ಹೋಮೊಸೆಕ್ಷುಯಾಲಿಟಿ), ಕದ್ದು ನೋಡುವಿಕೆ (ವಾಯುರಿಸಮ್), ಪ್ರದರ್ಶನಾತಿರೇಕತೆ (ಎಕ್ಸಿಬಿಷನಿಸಮ್), ವಸ್ತುಕಾಮ (ಫೆಟಿಷಿಸಮ್) ಬದಲುಡಿಗೆ (ಟ್ರಾನ್ಸ್ ವೆಸ್ಟಿಸಮ್) ಮತ್ತು ಸ್ವಹಿಂಸಕಾಮ (ಮ್ಯಾಸೊಕಿಸಮ್) ಮತ್ತು ಪರಹಿಂಸಕಾಮ (ಸಾಡಿಸಮ್).

1. **ಆಪಿರದಿಕೆ ಮತ್ತು ಉದ್ರೇಕರಾಹಿತ್ಯ** : ಇವೆರಡೂ ಗಂಡು ಮತ್ತು ಹೆಣ್ಣಿನ ಕಾಮಜೀವನದಲ್ಲಾಗುವ ಅಸ್ತವ್ಯಸ್ತತೆಗಳೇ ಹೊರತು ಕಾಮದ ವಿಕೃತಾಭಿವ್ಯಕ್ತಿಗಳಲ್ಲ. ಆಪಿರದಿಕೆ ಗಂಡಸರಲ್ಲಿ ಮತ್ತು ಉದ್ರೇಕರಾಹಿತ್ಯ ಹೆಂಗಸರಲ್ಲಿ ಕಂಡುಬರುವ ತಾರುಮಾರುಗಳು. ಆದರೆ ಇವೆರಡರ ಮೂಲ ಬಹುಶಃ ಒಂದೇ ಎಂದು ಭಾವಿಸಲು ಸಾಕಷ್ಟು ಕಾರಣಗಳಿವೆ. ಲೈಂಗಿಕ ಕ್ರಿಯೆಯಲ್ಲಿ ತೊಡಗಿದ ಹೊತ್ತಿಗೆ ಗಂಡಿಗೆ ತನ್ನ ಜನನೇಂದ್ರಿಯವನ್ನು ನಿಮಿರಿಕೆ ಸ್ಥಿತಿಯಲ್ಲಿ ಸಾಕಷ್ಟು ಕಾಲ ಇಡಲಾಗದೆ ಇಳಿದು ಹೋಗುವುದೇ ಆಪಿರದಿಕೆ. ಪರಿಣಾಮವಾಗಿ ಸಂಭೋಗಕ್ರಿಯೆಯನ್ನು ಪೂರೈಸುವುದು ಆತನಿಗೆ ಸಾಧ್ಯವಾಗುವುದಿಲ್ಲ. ಹೆಂಗಸರಲ್ಲಿ ಇದು ಒಟ್ಟಿನಲ್ಲಿ ಸಂಭೋಗಕ್ಕೆ ಸಿದ್ಧವಾಗದ ಸ್ವರೂಪವನ್ನು ಪಡೆಯುತ್ತದೆ. ಯುಕ್ತ ಉದ್ರೇಕರಾಹಿತ್ಯದಿಂದಾಗಿ ಯೋನಿ ಮತ್ತು ಒಟ್ಟು ಶರೀರಬಿಗಿದುಕೊಂಡು ಹೆಂಗಸಿಗೆ ಲೈಂಗಿಕ ಕ್ರಿಯೆ ತ್ರಾಸದಾಯವೆನಿಸುತ್ತದೆ.

ಮುದಿವಯಸ್ಸಿನಲ್ಲಿ ಬಹುಪಾಲು ಗಂಡಸರು ಮತ್ತು ಹೆಂಗಸರಲ್ಲಿ ಆಪಿರದಿಕೆ ಮತ್ತು ಉದ್ರೇಕರಾಹಿತ್ಯ ಸಾಮಾನ್ಯ. ಆಗ ಇವು ಕಾಮವಿಕಾರಗಳೆನಿಸುವುದಿಲ್ಲ. ತರುಣ ತರುಣಿಯಲ್ಲಿ ಮತ್ತು ಪ್ರಬುದ್ಧರಲ್ಲಿ ಕಂಡುಬಂದಾಗ ಮಾತ್ರ ಇವು ಸಮಸ್ಯೆಗಳಾಗುತ್ತವೆ. ಹಾಗೂ ಅವರಲ್ಲೂ ತುಂಬ ಬಳಲಿದಾಗ, ಯಾವುದೋ ಚಿಂತೆಯಲ್ಲಿರುವಾಗ ಅಪೂರ್ವವಾಗಿ ಈ ಪ್ರತಿಕ್ರಿಯೆಗಳು ಕಂಡು ಬಂದಲ್ಲಿ ಅವುಗಳ ಬಗ್ಗೆ ಗಮನಕೊಡಬೇಕಾಗಿಲ್ಲ. ಆದರೆ ಆಪಿರದಿಕೆ ಮತ್ತು ಉದ್ರೇಕರಾಹಿತ್ಯಗಳು ರೂಢಿಯಾದಾಗ ಮಾತ್ರ ತಜ್ಞರ ನೆರವನ್ನು ಪಡೆಯಬೇಕಾಗುತ್ತದೆ. ಈ ಎರಡೂ ತಾರುಮಾರುಗಳ ಮೂಲ ತೀವ್ರವಾದ ಉದ್ವಿಗ್ನತೆ (ಆಂಕ್ಸೈಟಿ) ಎಂಬುದನ್ನು ಹಲವು ತಜ್ಞರು ಒಪ್ಪುತ್ತಾರೆ. ಉದ್ವಿಗ್ನತೆಯ ಜೊತೆಗೆ ಸೇರಬಹುದಾದ ಅಥವಾ ಅದನ್ನು ಹೆಚ್ಚಿಸಬಹುದಾದ ಇನ್ನಿತರ ಕಾರಣಗಳೆಂದರೆ ಲೈಂಗಿಕ ಕ್ರಿಯೆಯ ಬಗೆಗೇ ಇರಬಹುದಾದ ಭಯ; ಬಸಿರಾಗುವ ಹೆದರಿಕೆ, ಗಂಡನಲ್ಲಿ ಹೆಂಡತಿಯ ಮೇಲೆ ಅಥವಾ ಹೆಂಡತಿಯಲ್ಲಿ ಗಂಡನ ಮೇಲೆ ಇರಬಹುದಾದ ನುಂಗಿಕೊಂಡ ಕೋಪ, ಜುಗುಪ್ಸೆ ಕೆಲವೊಮ್ಮೆ ಕೇವಲ ಅತಿಯಾದ ಉದ್ರಿಕ್ತತೆ – ಈ ಮೊದಲಾದುವು. ಈ ರೀತಿಯ ಭಾವಪ್ರತಿಕ್ರಿಯೆಗಳೆಲ್ಲ ಸಂಭೋಗದ ಸಮಯದಲ್ಲಿ ಗಂಡು ಹೆಣ್ಣಿನ ಸಾಮರ್ಥ್ಯವನ್ನು ಕುಂದಿಸಬಹುದು. ಇವುಗಳಲ್ಲದೆ ಮೊದಲಿನಿಂದಲೂ ಲೈಂಗಿಕತೆಯ ಬಗ್ಗೆ ಅತಿಕ್ರೂರವಾದ ಶಿಸ್ತಿನ ತರಬೇತಿಗೆ ಒಳಗಾಗಿರುವುದು ಮತ್ತು ಅಸಾಧಾರಣವಾದ ತಪ್ಪು ಕಲ್ಪನೆಗಳನ್ನು ಹೊಂದಿರುವುದೂ ಲೈಂಗಿಕ ಚಟುವಟಿಕೆಯಲ್ಲಿ ವ್ಯಕ್ತಿ ಸಹಜವಾಗಿ ತೊಡಗದಂತೆ ಮಾಡಬಹುದು. ಒಂದೆರಡು ಸಾರಿ ಇವುಗಳಲ್ಲಿ ಒಂದು, ಎರಡು ಅಥವಾ ಹಲವು ಕಾರಣಗಳಿಂದಾಗಿ ವ್ಯಕ್ತಿ ಲೈಂಗಿಕ ಕ್ರಿಯೆಯಲ್ಲಿ ಸೋತರೆ ಈ ಸೋಲೇ ಇನ್ನಷ್ಟು ಭಯ, ಉದ್ವಿಗ್ನತೆಯನ್ನು ಪ್ರೇರೇಪಿಸಬಹುದು. ಪರಿಣಾಮವಾಗಿ ಲೈಂಗಿಕ ಸನ್ನಿವೇಶಗಳಲ್ಲೆಲ್ಲ ಉದ್ವಿಗ್ನತೆ ಕಂಡುಬಂದು ಎಂದಿಗೂ ಸಂಭೋಗ ಸಾಧ್ಯವಾಗದಂತಾಗುತ್ತದೆ.

ಯಾರೊಬ್ಬರಿಗೆ ಸಮಸ್ಯೆ ಇದ್ದರೂ ಗಂಡ ಮತ್ತು ಹೆಂಡತಿ ಇಬ್ಬರ ಸಹಕಾರ ಮತ್ತು ಅನುಮತಿಯಿಂದ ಇಬ್ಬರಿಗೂ ಚಿಕಿತ್ಸೆ ಆಗಬೇಕಾಗುತ್ತದೆ. ಮಾನಸಿಕ ಚಿಕಿತ್ಸಾ ವಿಧಾನಗಳಿಂದ, ಅದರಲ್ಲೂ ವರ್ತನ ಚಿಕಿತ್ಸೆಯ ವಿಧಾನಗಳಿಂದ ಇತ್ತೀಚೆಗೆ ಈ ತಾರುಮಾರುಗಳನ್ನು ನಿವಾರಿಸಲು ಸಾಧ್ಯವೆಂಬುದು ಗೊತ್ತಾಗಿದೆ. ಮುಖ್ಯವಾಗಿ ಉದ್ವಿಗ್ನತೆಯನ್ನು ಹೋಗಲಾಡಿಸುವುದರಿಂದ ಇದನ್ನು ಸಾಧಿಸಬಹುದು.

2. **ಸಲಿಂಗಕಾಮ** : ಇದು ಗಂಡಸರು ಗಂಡಸರಲ್ಲಿ, ಹೆಂಗಸರು ಹೆಂಗಸರಲ್ಲಿ ಅನುರಕ್ತರಾಗಿ ಲೈಂಗಿಕತೃಪ್ತಿ ಪಡೆಯುವ ಕಾಮವಿಕಾರದ ಸಾಮಾನ್ಯ ಹೆಸರು. ಜನಸಾಮಾನ್ಯರಲ್ಲಿ ಬಹುಪಾಲು ಜೀವಮಾನದ ಒಂದಲ್ಲ ಒಂದು ಸಮಯದಲ್ಲಿ ಸಲಿಂಗಕಾಮದ ಅನುಭವವನ್ನು ಆಕಸ್ಮಿಕವಾಗಿಯಾದರೂ ಪಡೆದಿರುತ್ತಾರೆ. ತಾರುಣ್ಯಕ್ಕೆ ಬರುವ ಹೊತ್ತಿಗೆ ಹುಡುಗರು (ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಹುಡುಗಿಯರು) ಒಟ್ಟಿಗೇ ಮುಷ್ಟಿಮೈಥುನದಂಥ ಸಮರತಿಯ ಅಂದರೆ ಸಲಿಂಗರತಿಯ ಚಟುವಟಿಕೆಗಳಲ್ಲಿ ತೊಡಗುವುದು ಅಪರೂಪವಲ್ಲ. ಹಾಸ್ಟೆಲುಗಳಲ್ಲಿ, ಜೈಲುಗಳಲ್ಲಿ, ಹಡಗಿನಲ್ಲಿ, ಕಾನ್ವೆಂಟುಗಳಲ್ಲಿ ಸಲಿಂಗಕಾಮ ಚಟುವಟಿಕೆ ಹೆಚ್ಚೆಂಬುದು ಸ್ಪಷ್ಟವಾಗಿರುವ ಅಂಶ. ಆದರೆ ಈ ಚಟುವಟಿಕೆಗಳು ಅವಶ್ಯವಾಗಿಯೇ ವಿಕೃತವೇನಲ್ಲ. ಏಕೆಂದರೆ ಮುಂದೆ ಇವರಿಗೆ ಸಹಜ ಸಂಭೋಗದಲ್ಲಿ ಜುಗುಪ್ಸೆಯೇನಿರುವುದಿಲ್ಲ. ಆದರೆ ಸಲಿಂಗಕಾಮ ಕಾಮ ತೃಪ್ತಿಯ ಏಕೈಕ ವಿಧಾನವಾದಾಗ ಮತ್ತು ವ್ಯಕ್ತಿಗೆ ವಿಲಿಂಗಕಾಮದಲ್ಲಿ ತೊಡಗುವುದು ಅಸಾಧ್ಯವಾದಾಗ ವಿಕೃತವೆನಿಸಿಕೊಳ್ಳುತ್ತದೆ.

ಪುರುಷ ಸಲಿಂಗಕಾಮಿಗಳಲ್ಲಿ ಕೆಲವರು ಲೈಂಗಿಕಚಟುವಟಿಕೆಯಲ್ಲಿ ಗಂಡಸಿನಂತೆ ಪ್ರಧಾನವಾದ ಪಾತ್ರವಹಿಸಿದರೆ ಇನ್ನುಳಿದವರು ಹೆಂಗಸರ ಪಾತ್ರವಹಿಸುತ್ತಾರೆ. ಸಾಮಾನ್ಯವಾಗಿ ಸಲಿಂಗಕಾಮಿಗಳಾದ ಇಬ್ಬರು ಗಂಡಸರು ಬೇರೆ ಬೇರೆ ವಯಸ್ಸಿನವರಾಗಿದ್ದಾಗ ಹೆಚ್ಚು ವಯಸ್ಸಾದ ವ್ಯಕ್ತಿ ಪ್ರಾಧಾನವಾದ ಪಾತ್ರವಹಿಸುತ್ತಾನೆ. ಹೆಚ್ಚು ಕಡಿಮೆ ಇದೇ ಬಗೆಯ ವರ್ತನೆ ಸಲಿಂಗಕಾಮಿಗಳಾದ ಹೆಂಗಸರಲ್ಲೂ ಕಂಡುಬರುತ್ತದೆ. ಒಬ್ಬಾಕೆ ಗಂಡಸಿನಂತೆಯೂ ಇನ್ನೊಬ್ಬಾಕೆ ಹೆಂಗಸಿನಂತೆಯೂ ಲೈಂಗಿಕ ಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು. ತೋರಿಕೆಗೆ ಕೆಲವು ಸಲಿಂಗಕಾಮಿಗಳು ಎಲ್ಲರಂತೆಯೇ ಇರಬಹುದಾದರೂ ಅನೇಕರು ಮಾನಸಿಕವಾಗಿ ಮತ್ತು ಶಾರೀರಕವಾಗಿ ಪರಲಿಂಗದ ವ್ಯಕ್ತಿಗಳನ್ನೇ ಹೆಚ್ಚು ಹೋಲುತ್ತಾರೆ.

ಸಲಿಂಗಕಾಮದ ಕಾರಣಗಳು ಅಸ್ಪಷ್ಟವಾಗಿದ್ದು ಆನುವಂಶಿಕವಾಗಿ ಪಡೆದ ದೇಹ, ಚಿತ್ತಪ್ರಕೃತಿಗಳ ದೋಷದಿಂದಾಗಿ ಅನೇಕರು ಸಲಿಂಗಕಾಮಿಗಳಾಗುತ್ತಾರೆಂದು ಕೆಲವು ಸಂಶೋಧಕರು ಪ್ರತಿಪಾದಿಸಿದ್ದಾರೆ. ಮಾನಸಿಕವಾಗಿ ಮತ್ತು ಶಾರೀರಕವಾಗಿ ಸಲಿಂಗಕಾಮಿಗಳು ಪರಲಿಂಗದವರ ಲಕ್ಷಣಗಳನ್ನು ಪಡೆದಿರುವುದು ಜನಿಕ (ಜೀನು) ದೋಷವನ್ನು ಸೂಚಿಸುತ್ತದೆಂದು ಭಾವಿಸಲಾಗಿದೆ. ಏಕೆಂದರೆ ಗಂಡಸುತನ ಅಥವಾ ಹೆಂಗಸುತನವನ್ನು ಯಾವುದೇ ಒಂದು ನಿರ್ದಿಷ್ಟ ಜನಿಕ ಪೂರ್ತಿಯಾಗಿ ನಿರ್ಧರಿಸಿ ಬಿಡುವುದಿಲ್ಲ ; ಅನೇಕ ಜನಿಕಗಳ ಸಮತೋಲತೆ ಅದನ್ನು ನಿರ್ಧರಿಸುತ್ತದೆ. ಈ ಸಮತೋಲ ಸಾಧ್ಯವಾಗದೆ ಹೋದಾಗ ವ್ಯಕ್ತಿಯೊಬ್ಬನಲ್ಲಿ ಯಾವುದೇ ಒಂದು ಲಿಂಗದ ಲಕ್ಷಣಗಳು ಪ್ರಧಾನವಾಗಿ, ಉಳಿದವು ಹತ್ತಿಕ್ಕಲ್ಪಡದೆ ತೋರಿಕೆಗೆ ಆತ ಗಂಡಸಾಗಿದ್ದರೂ ಆಂತರಿಕವಾಗಿ ಹೆಂಗಸಾಗಿರುವ ಸ್ಥಿತಿಯುಂಟಾಗಬಹುದು. ಇದು ಮುಖ್ಯವಾಗಿ ಜೀವವಿಜ್ಞಾನದ ಧೋರಣೆಯನ್ನು ತಳೆದವರ ವಿಚಾರವಾಗಿದೆ. ಆದರೆ ಇನ್ನು ಕೆಲವು ಸಂಶೋಧಕರು ಮಾನಸಿಕ ಅಂಶಗಳ ಪ್ರಾಮುಖ್ಯವನ್ನು

ಒತ್ತಿಹೇಳಿದ್ದಾರೆ. ಸಹಜವಾದ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಹೆಣ್ಣುಮಕ್ಕಳು ತಾಯಿಯಲ್ಲಿಯೂ ಗಂಡು ಮಕ್ಕಳು ತಂದೆಯಲ್ಲಿಯೂ ತಾದಾತ್ಮ್ಯ ಹೊಂದಬೇಕಾಗುತ್ತದೆ. ಆದರೆ ಸಲಿಂಗಕಾಮಿಗಳಾದ ಗಂಡಸರು ಚಿಕ್ಕಂದಿನಲ್ಲಿ ತಾಯಿಯಲ್ಲಿ, ಹೆಣ್ಣುಮಕ್ಕಳು ತಂದೆಯಲ್ಲಿ ತಾದತ್ಮ್ಯ ಹೊಂದಿರುತ್ತಾರೆ. ಇದೇ ತೊಂದರೆಯ ಮೂಲ ಎಂಬುದು ಕೆಲವರ ಅಭಿಪ್ರಾಯ. ಈ ರೀತಿ ದೋಷಪೂರ್ಣ ತಾದಾತ್ಮ್ಯ ಅಥವಾ ಕಲಿಕೆಯಿಂದ ಪರಲಿಂಗದ ಮಾನಸಿಕ ಲಕ್ಷಣಗಳನ್ನೇ ಒಳಗೊಳ್ಳುತ್ತಾ ಹೋಗುವ ಸಾಧ್ಯತೆ ಇದೆ. ಅಲ್ಲದೆ ಇನ್ನೂ ಕೆಲವು ಸನ್ನಿವೇಶಗಳು ಮಗುವಿನ ಸಹಜವಾದ ಮನೋಲೈಂಗಿಕ ಬೆಳವಣಿಗೆಗೆ ಅಡ್ಡಬರಬಹುದು. ಉದಾಹರಣೆಗೆ ಗಂಡು ಮಕ್ಕಳನ್ನು ಮಾತ್ರ ಪಡೆದ ತಾಯ್ತಂದೆಗಳು, ಹೆಣ್ಣು ಹುಟ್ಟಬೇಕೆಂದು ತುಂಬಾ ಆಸೆ ಪಡುವವರು. ಕೊನೆಗೆ ನಿರಾಶರಾಗಿ ತಮ್ಮ ಗಂಡು ಮಗುವೊಂದನ್ನೇ ಹುಡುಗಿಯಂತೆ ಅಲಂಕರಿಸಿ ಹುಡುಗಿಯಂತೆಯೇ ನಡೆಸಿಕೊಳ್ಳುವುದರಿಂದ ಅವನ ಮನೋಲೈಂಗಿಕ ಬೆಳವಣಿಗೆ ತೊಂದರೆಗೀಡಾಗುತ್ತದೆ. ಕೊನೆಯದಾಗಿ ನವತಾರುಣ್ಯದ ವಯಸ್ಸಿನಲ್ಲಿ ಆಕಸ್ಮಿಕವಾಗಿ ಪಡೆದ ಸಲಿಂಗಕಾಮದ ಅನುಭವದಲ್ಲಿ ತೃಪ್ತಿಕಂಡಾತ ಮುಂದೆ ಈ ಮೂಲಕವೇ ತನ್ನ ಕಾಮವನ್ನು ತೃಪ್ತಿಪಡಿಸಿಕೊಳ್ಳುವ ಚಟಕ್ಕೆ ಇಳಿಯಬಹುದು ; ಇಂಥವರಲ್ಲಿ ಸಲಿಂಗಕಾಮ ಆಕಸ್ಮಿಕವಾದ ಅಪಕಲಿಕೆಯ ಪರಿಣಾಮವಾಗಿರುತ್ತದೆ. ಬಹುಶಃ ಎಲ್ಲ ಸಲಿಂಗಕಾಮಿಗಳಲ್ಲೂ ಇಂಥ ಕಲಿಕೆಯ ಅಂಶ ಇದ್ದೇ ಇದೆ ಎಂದು ಭಾವಿಸಲು ಕಾರಣಗಳಿವೆ.

ಸಲಿಂಗಕಾಮಿಗಳ ಚಿಕಿತ್ಸೆ ತುಂಬ ಕಠಿಣವಾದದ್ದಾಗಿದೆ. ಸಾಂಪ್ರದಾಯಿಕವಾದ ಮಾನಸಿಕ ಚಿಕಿತ್ಸೆಯಿಂದ ಹೇಳಿಕೊಳ್ಳುವಂಥ ಪ್ರಯೋಜನ ಕಂಡುಬಂದಿಲ್ಲ. ಇತ್ತೀಚಿಗೆ ಪ್ರವರ್ಧಮಾನಕ್ಕೆ ಬರುತ್ತಿರುವ ಪ್ಯಾವ್‌ಲವ್‌ನ ಅನುಬಂಧನೆಯ ಸೂತ್ರಗಳನ್ನು ಆಧರಿಸಿದ ವರ್ತನ ಚಿಕಿತ್ಸೆಯಿಂದ ತಕ್ಕಮಟ್ಟಿನ ಪ್ರಯೋಜನವಾಗಿದೆ. ಇದರಲ್ಲಿ ಸಲಿಂಗಕಾಮದ ಸನ್ನಿವೇಶವನ್ನು ವ್ಯಕ್ತಿಯ ಮನಸ್ಸಿನಲ್ಲಿ ಕಲ್ಪನೆಯ ಮೂಲಕ ಅಥವಾ ಅಂಥ ಚಿತ್ರಗಳ ಮೂಲಕ ಕೆರಳಿಸಿ ಆಗ ವಿದ್ಯುದಾಘಾತ ಕೊಡುವುದರಿಂದ ಸಲಿಂಗಕಾಮದ ಅನುಭವಕ್ಕೂ ತಾಪಕ್ಕೂ ಒಂದು ಅನುಬಂಧನೆಯನ್ನು ಉಂಟುಮಾಡಲಾಗುತ್ತದೆ. ಈ ಅನುಬಂಧಿತ (ಕಂಡಿಷನ್ಡ್) ತಾಪ ಅವರ ದುಶ್ಚಟವನ್ನು ಹತ್ತಿಕ್ಕಲು ಸಮರ್ಥನೆಯಾಗುತ್ತದೆ. ಸಲಿಂಗಕಾಮ ಒಂದು ಶಾರೀರಕ ರೋಗವಲ್ಲವಾದ್ದರಿಂದ ಇದಕ್ಕೆ ಔಷಧಗಳಿಲ್ಲ.

**3. ಕದ್ದು ನೋಡುವಿಕೆ** : ಚಿಕ್ಕವಯಸ್ಸಿನವರು ದೊಡ್ಡವರ ಲೈಂಗಿಕ ಚಟುಚಟಿಕೆಗಳಲ್ಲಿ ಕುತೂಹಲ ತಳೆಯುವುದು ಸಹಜ. ಕದ್ದು ನೋಡುವುದು ಯಾವಾಗಲೂ ವಿಕೃತವಾದದ್ದು ಎಂದು ಹೇಳಲಾಗದು. ಆದರೆ ಹೆಂಗಸರು ಬಟ್ಟೆ ಕಳಚುತ್ತಿರುವಾಗ ಅಥವಾ ಇತರರು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿರುವಾಗ ವಯಸ್ಸಾದ ದೊಡ್ಡವರು ಇಣಿಕಿನೋಡುವುದು ಹತ್ತಿಕ್ಕಿಕೊಳ್ಳಲಾಗದ ಚಟವಾಗಿ ಅದೇ ಅವರ ಕಾಮತೃಪ್ತಿಯ ಮುಖ್ಯಕ್ರಮವಾದಾಗ ಅದು ವಿಕೃತವೆನಿಸಿಕೊಳ್ಳುತ್ತದೆ. ಶುದ್ಧರೂಪದಲ್ಲಿ ಈ ಅಭ್ಯಾಸ ಕಾಣಿಸಿಕೊಳ್ಳುವುದು ಕಡಿಮೆ; ಇನ್ನಿತರ ಮನೋಬೇನೆಗಳು ಜೊತೆಗೂಡಿರುವುದು ಸಾಮಾನ್ಯ. ಮನೋವೈದ್ಯಕೀಯ ಸಾಹಿತ್ಯದಲ್ಲಿ ಈ ಸಂಗತಿಗಳು ಸ್ವಲ್ಪ ವಿರಳವೇ. ಅಭಾವವೇ ಇಂಥ ನಡೆವಳಿಕೆಗೆ ಮುಖ್ಯ ಕಾರಣವೆನ್ನಬಹುದು. ಸ್ತ್ರೀಗೆ ಪುರುಷನ ಹಾಗೂ ಪುರುಷನಿಗೆ ಸ್ತ್ರೀಯ ಸಾಮೀಪ್ಯ ಸಂಬಂಧಗಳು ಹೆಚ್ಚು ಹೆಚ್ಚಾಗಿ ಒದಗುವಂತೆ ಮಾಡುವುದರಿಂದ ಇಂಥ ಚಟ ಅಶ್ಲೀಲವಾದ್ದೆನ್ನುವ ಅಭಿಪ್ರಾಯವನ್ನು ಬೇರೂರಿಸುವುದರಿಂದ ಈ ಕೆಟ್ಟ ಚಾಳಿಯನ್ನು ಸ್ವಲ್ಪ ಮಟ್ಟಿಗೆ ಬಿಡಿಸಬಹುದು.

**4. ಪ್ರದರ್ಶನಾತಿರೇಕ** : ಇದು ಸ್ತ್ರೀ ಪುರುಷರಿಬ್ಬರಲ್ಲೂ ಕಂಡುಬರುವ ಕಾಮ ವಿಕಾರ. ಎಲ್ಲರಲ್ಲೂ ಕಂಡುಬರುವ ಸ್ವಪ್ರದರ್ಶನ ಭಾವವೇ ಇದರ ತಳಹದಿಯಾಗಿರಬಹುದಾದರೂ ಇದು ಲೈಂಗಿಕ ಕ್ಷೇತ್ರಕ್ಕೆ ಸೀಮಿತಗೊಂಡು, ಉತ್ಪ್ರೇಕ್ಷಿತವಾಗಿ ಸಾರ್ವಜನಿಕವಾಗಿ ಕಿರಿಕಿರಿಯಾಗಬಹುದು. ಪುರುಷರಲ್ಲಿ ಇದು ಅತಿರೇಕಕ್ಕೆ ಹೋಗುತ್ತದೆ. ಈ ವಿಕಾರಕ್ಕೆ ಒಳಗಾದ ವ್ಯಕ್ತಿ ಸಾರ್ವಜನಿಕ ಸ್ಥಳಗಳಲ್ಲಿ ತನ್ನ ಜನನೇಂದ್ರಿಯವನ್ನು ಪ್ರದರ್ಶಿಸಿಕೊಳ್ಳುವುದರಿಂದ ಲೈಂಗಿಕತೃಪ್ತಿಯನ್ನು ಪಡೆಯುತ್ತಾನೆ. ಇಂಥ ವ್ಯಕ್ತಿ ಸಾಮಾನ್ಯವಾಗಿ ಬೀದಿಯ ಕತ್ತಲೆ ಮೂಲೆಯಲ್ಲಿ, ಉದ್ಯಾನಗಳಲ್ಲಿ ಸಂದಿ ಗೊಂದಿಗಳಲ್ಲಿ ಕಾಣದಂತೆ ಅರೆಬೆತ್ತಲೆಯಾಗಿದ್ದು, ಹೊಂಚಿಕಾದು, ಹೆಂಗಸರು ಯಾರಾದರೂ ಆ ಕಡೆ ಸುಳಿದಾಗ ಥಟ್ಟನೆ ಬೆಳಕಿಗೆ ಜಿಗಿದು ತನ್ನ ಜನನೇಂದ್ರಿಯವನ್ನು ಪ್ರದರ್ಶಿಸುತ್ತಾನೆ. ಕೆಲವೊಮ್ಮೆ ಕೂಡಲೇ ಮುಷ್ಟಿಮೈಥುನ ಮಾಡಿಕೊಳ್ಳುತ್ತಾನೆ. ಸಾರ್ವಜನಿಕ ಸ್ಥಳಗಳಲ್ಲಿ ಈ ರೀತಿ ಅಶ್ಲೀಲವಾಗಿ ವರ್ತಿಸುತ್ತಾರೆಂಬ ಕಾರಣದಿಂದ ಇಂಥವರು ಜೈಲಿಗೆ ಹೋಗುವುದು ಸಾಮಾನ್ಯ. ಆದರೆ ಶಿಕ್ಷೆಯಿಂದ ಪ್ರದರ್ಶನಾತಿರೇಕವನ್ನು ನಿವಾರಿಸಲು ಸಾಧ್ಯವಿಲ್ಲ. ಕೆಲವು ಸ್ತ್ರೀಯರೂ ಪುರುಷರಂತಲ್ಲದಿದ್ದರೂ ತಮ್ಮ ದೇಹ ಭಾಗಗಳನ್ನು ಇತರರಿಗೆ ಉದ್ರೇಕಕಾರಿಯಾಗುವಂತೆ ಪ್ರದರ್ಶಿಸುತ್ತಾರೆ. ಅಲ್ಲದೆ ಈ ತೊಂದರೆ ಕೂಡ ಸಾಂಪ್ರದಾಯಿಕ ಮನೋಚಿಕಿತ್ಸೆಯಿಂದ ಗುಣವಾಗುವುದು ಕಷ್ಟ. ಬಹುಶಃ ಕಾಮತೃಪ್ತಿಗೆ ಬೇಕಾದ ಸಹಜ ಸೌಲಭ್ಯಗಳನ್ನು ಕೊಟ್ಟಲ್ಲಿ ಕ್ರಮೇಣ ಇಂಥವರ ಪ್ರದರ್ಶನ ಮನೋಭಾವ ಕಡಿಮೆಯಾದೀತು.

**5. ವಸ್ತು ಕಾಮ** : ವಸ್ತುಕಾಮವೆಂದರೆ ಸಾಮಾನ್ಯವಾಗಿ ಪರಲಿಂಗದ ವ್ಯಕ್ತಿಗಳು ಉಪಯೋಗಿಸುವ ಒಂದಲ್ಲ ಒಂದು ವಸ್ತುವೇ ಕಾಮೋದ್ರೇಕಕ್ಕೆ ಕಾರಣವಾಗುವುದು. ವಸ್ತುಕಾಮಿಗಳಾದ ಹಲವರು ಎಂದಿನಂತೆ ಲೈಂಗಿಕ ಕ್ರಿಯೆಯಲ್ಲಿ ತೊಡಗಬಹುದಾದರೂ. ಈ ವಸ್ತುವಿನ ಪ್ರಚೋದನೆಯಿದ್ದಾಗ ಮಾತ್ರ ಅವರಿಗದು ಸಾಧ್ಯವಾಗುತ್ತದೆ. ಆದರೆ ಇನ್ನು ಕೆಲವರಲ್ಲಿ ಕಾಮಿತವಸ್ತುವಿನ ಮೇಲೆ ಎರಗಿಬೀಳುವುದೇ ಲೈಂಗಿಕ ಕ್ರಿಯೆ ಬದಲಿ ಚಟುವಟಿಕೆಯಾಗಿಬಿಡುತ್ತದೆ. ಉದಾಹರಣೆಗೆ ಹೆಂಗಸರ ಕೈಚೀಲವನ್ನು ಕಂಡರೆ ಕಾಮೋದ್ರಿಕ್ತನಾಗುವ ವ್ಯಕ್ತಿ ಚೀಲ ಹಿಡಿದು ಬೀದಿಯಲ್ಲಿ ಹೊರಟ ಹೆಂಗಸಿನ ಮೈಮೇಲೆರಗಿ ಆಕೆಯ ಚೀಲವನ್ನು ಕಸಿದುಕೊಂಡು ಅದನ್ನು ನಾಶಮಾಡುವುದರಿಂದ ತನ್ನ ಕಾಮೋದ್ರೇಕವನ್ನು ತಣಿಸಿಕೊಳ್ಳಬಹುದು. ಇಷ್ಟು ತೀವ್ರಸ್ಥಿತಿಗೆ ಹೋಗಿರದ ವಸ್ತುಕಾಮಿಗಳು ಹೆಂಗಸಿನ ಉಡುಪೊಂದನ್ನು ಉದಾಹರಣೆಗೆ ರವಿಕೆಯೊಂದನ್ನು ಧರಿಸಿಕೊಂಡು ಸಂಭೋಗಕ್ಕೆ ಸಿದ್ಧರಾಗಬಹುದು. ಹೆಚ್ಚುಕಡಿಮೆ ಇದಕ್ಕೆ ವಿರುದ್ಧವಾದ ವಸ್ತುಕಾಮ ಪ್ರವೃತ್ತಿಯನ್ನು ಕಡಿಮೆ ಪ್ರಮಾಣದಲ್ಲಿ ಹೆಂಗಸರಲ್ಲೂ ಕಾಣಬಹುದು. ಹೆಂಗಸರ ಒಳ ಉಡುಪುಗಳು, ಚಪ್ಪಲಿಗಳು. ಕೈಚೀಲಗಳು, ಉಣ್ಣೆಯ ಬಟ್ಟೆ ಇತ್ಯಾದಿ ಸಾಮಾನ್ಯವಾಗಿ ವಸ್ತುಕಾಮಿ ಗಂಡಸರಲ್ಲಿ ಕಾಮೋದ್ರೇಕವನ್ನುಂಟು ಮಾಡುವ ಪದಾರ್ಥಗಳಾಗಿವೆ. ಪ್ರಾರಂಭದ ಲೈಂಗಿಕ ಅನುಭವಗಳು ಪದಾರ್ಥಗಳನ್ನು ಹೀಗೇ ಆಕಸ್ಮಿಕವಾಗಿ ಒಳಗೊಂಡಾಗ ಕಾಮೋದ್ರೇಕಕ್ಕೂ ಆ ಪದಾರ್ಥಗಳಿಗೂ ಅನುಬಂಧನೆ ಉಂಟಾಗಬಹುದು; ಮುಂದೆ ಆ ಪದಾರ್ಥಗಳೇ ಲೈಂಗಿಕ ಚಟುವಟಿಕೆಗೆ ಪ್ರಚೋದನೆಯಾಗಬಹುದು. ವಸ್ತುಕಾಮವನ್ನು ಈಗ ವರ್ತನ ಚಿಕಿತ್ಸೆಯಿಂದ ನಿವಾರಿಸುವ ಸಾಧ್ಯತೆ ಕಂಡುಬಂದಿದೆ. ವ್ಯಕ್ತಿಯಲ್ಲಿ ಕಾಮೋದ್ರೇಕ ಮಾಡುವ ವಸ್ತುಗಳನ್ನೊಳಗೊಂಡ ಸನ್ನಿವೇಶವನ್ನು ಕಾಲ್ಪನಿಕವಾಗಿ ಅಥವಾ ವಾಸ್ತವಿಕವಾಗಿ ಸೃಷ್ಟಿಸಿ, ಆಗ ವಿದ್ಯುದಾಘಾತ ಕೊಡುವ ವಿಧಾನ ಬಳಕೆಗೆ ಬರುತ್ತಿದೆ.

**6. ಬದಲುಡಿಗೆ** : ಪರಲಿಂಗಿಗಳಿಗೆ ಉಚಿತವಾದ ಉಡುಪನ್ನು ಧರಿಸುವ ವಿಕಾಸವೇ ಬದಲುಡಿಗೆ. ಬದಲುಡಿಗೆ ಮತ್ತು ವಸ್ತುಕಾಮ ಕೆಲವೊಮ್ಮೆ ಒಂದೇ ವ್ಯಕ್ತಿಯಲ್ಲಿ ಕಾಣಿಸಿಕೊಳ್ಳಬಹುದು. ಆದರೆ ಅನೇಕರಲ್ಲಿ ಬದಲುಡಿಗೆ ತಾನೇ ತಾನಾಗಿ ಉಳಿಯಬಹುದಾದ ವಿಕಾರವಾಗಿದೆ. ಹೆಂಗಸರಲ್ಲಿಗಿಂತ ಗಂಡಸರಲ್ಲಿ ಇದು ಹೆಚ್ಚು. ಈ ತೊಂದರೆಗೀಡಾದ ಗಂಡಸರು ತಾವು ಹೆಂಗಸರೆಂದು ದೃಢವಾಗಿ ನಂಬಿಕೊಂಡಿರುತ್ತಾರೆ; ಕೆಲವೊಮ್ಮೆ ಇವರ ಈ ನಂಬಿಕೆ ಭ್ರಾಂತಿ ಎನಿಸಿಕೊಳ್ಳುವ ಮಟ್ಟಕ್ಕೂ ಹೋಗುತ್ತದೆ. ಹಾಗಾಗಿ ಹೆಂಗಸರ ಉಡುಪನ್ನು ಧರಿಸಿದಾಗ ಇವರಿಗೆ ಹಾಯೆನಿಸಿ ಗಂಡಸರ ಉಡುಪಿನಲ್ಲಿ ಮುಜುಗುರ ಉಂಟಾಗುತ್ತದೆ. ವಸ್ತುಕಾಮದಲ್ಲಿ ಆಗುವಂತೆ ಹೆರರುಡಿಗೆಯನ್ನು ಧರಿಸಿದಾಗ ಕಾಮೋದ್ರೇಕ ಆಗಬೇಕೆಂದೇನೂ ಇಲ್ಲ. ಇದೇ ವಸ್ತುಕಾಮಕ್ಕೂ ಬದಲುಡಿಗೆಗೂ ಇರುವ ಮುಖ್ಯ ವ್ಯತ್ಯಾಸ. ಶಸ್ತ್ರಚಿಕಿತ್ಸೆಯ ಸಹಾಯದಿಂದ ಲಿಂಗಪರಿವರ್ತನೆ ಬಯಸುವ ಬಹುಮಂದಿ ಬದಲುಡಿಗೆಯ ವಿಕಾರಕ್ಕೆ ಒಳಗಾದವರಾಗಿರುತ್ತಾರೆ. ಹೆಂಗಸಾಗಿ ಪರಿವರ್ತನೆ ಹೊಂದಬೇಕೆಂದು ಬಯಸಿ ಆದರೆ ಅದು ಸಾಧ್ಯವಾಗದೆ ಹೋದಾಗ ಕೆಲವು ಗಂಡಸರು ತಮ್ಮ ಜನನೇಂದ್ರಿಯವನ್ನೇ ಹತಾಶೆಯಿಂದ ವಿರೂಪಗೊಳಿಸಿಕೊಂಡಿರುವುದುಂಟು. ಆದರೆ ಲಿಂಗಾಂತರಗೊಳ್ಳಬೇಕೆಂಬ ತೀವ್ರವಾದ ಬಯಕೆ ಇಲ್ಲದ ಬದಲುಡಿಗೆಗಾರರಿಗೆ ಈಗ ಮಾನಸಿಕ ವಿಧಾನಗಳಿಂದ ಚಿಕಿತ್ಸೆ ನೀಡುವುದು ಸಾಧ್ಯವಿದೆ.

**7. ಪರಹಿಂಸಕಾಮ ಮತ್ತು ಸ್ವಹಿಂಸಕಾಮ** : ಲೈಂಗಿಕವಾಗಿ ಹಿಂಸೆಯ ಮೂಲಕವೇ ಅಭಿವ್ಯಕ್ತಿ ಪಡೆಯುವುದು ಈ ಎರಡೂ ವಿಕಾರಗಳ ಮುಖ್ಯ ಅಂಶವಾಗಿದೆ. ಬೇರೆಯವರನ್ನು ವಿಧವಿಧವಾಗಿ ಹಿಂಸಿಸುವುದರ ಮೂಲಕವೇ ಲೈಂಗಿಕ ತೃಪ್ತಿಪಡೆಯುವುದು ಪರಹಿಂಸಕಾಮ. ತನ್ನನ್ನೇ ಅದೇ ಬಗೆಯ ಹಿಂಸೆಗೆ ಒಳಪಡಿಸಿಕೊಳ್ಳುವುದು ಸ್ವಹಿಂಸಕಾಮ. ಸಾಮಾನ್ಯವಾಗಿ ಸ್ವಹಿಂಸಕಾಮಿ ತನ್ನನ್ನೇ ತಾನು ಹಿಂಸಿಸಿಕೊಳ್ಳುವುದಿಲ್ಲ ; ಬದಲು ಪರಹಿಂಸಕಾಮಿಯೊಬ್ಬನ ಚಿತ್ರಹಿಂಸೆಗೆ ಖುಷಿಯಿಂದ ತನ್ನನ್ನೇ ಒಳಪಡಿಸಿಕೊಂಡು ಆ ಮೂಲಕ ಲೈಂಗಿಕ ತೃಪ್ತಿ ಅನುಭವಿಸುತ್ತಾನೆ. ಆದ್ದರಿಂದ ಸಾಧಾರಣವಾಗಿ ಪರಹಿಂಸಕಾಮಿಗಳು ಮತ್ತು ಸ್ವಹಿಂಸಕಾಮಿಗಳು ಜೊತೆ ಜೊತೆಯಾಗುತ್ತಾರೆ. ಸ್ವಹಿಂಸಕಾಮಿಯನ್ನು ಬೆತ್ತಲೆಗೊಳಿಸಿ ಪರಹಿಂಸಕಾಮಿ ಚಾಟಿಯಿಂದ ಹೊಡೆಯುವುದು, ಜನನೇಂದ್ರಿಯವನ್ನು ಗಾಸಿಗೊಳಿಸುವುದು ಸಾಮಾನ್ಯವಾದ ವಿಧಾನ. ಇದರಿಂದ ಹೊಡೆಯುವಾತ ಮತ್ತು ಹೊಡಿಸಿಕೊಳ್ಳುವವಳು (ಕೆಲವೊಮ್ಮೆ ಹೊಡೆಸಿಕೊಳ್ಳುವವನು) ಇಬ್ಬರೂ ಸಂಭೋಗದ ಸುಖವನ್ನೇ ಅನುಭವಿಸುತ್ತಾರೆ. ಆದರೆ ಕೆಲವು ಸಾರಿ ಪರಹಿಂಸಕಾಮಿಗೆ ಹೊಡೆಸಿಕೊಳ್ಳಲು ಖುಷಿಯಾಗಿ ಒಪ್ಪಿಕೊಳ್ಳುವ ಸ್ವಹಿಂಸಕಾಮಿ ಸಿಗದೆ ಇದ್ದಾಗ ಅವನ ಚಾಟಿಯ ಏಟಿಗೆ ಕೈಗೆ ಸಿಕ್ಕುವ ಆರೋಗ್ಯವಂತರಾದ ಅಸಹಾಯಕರು ಬಲಿಯಾಗಬಹುದು. ಕೊಲೆಗಡುಕರಲ್ಲಿ ಕೆಲವರಾದರೂ ಪರಹಿಂಸಕಾಮಿಗಳೆಂದು ಅಂದಾಜುಮಾಡಲಾಗಿದೆ. ತಾರುಣ್ಯದಲ್ಲೇ ಹಸು, ಎಮ್ಮೆ ನಾಯಿ ಇತ್ಯಾದಿ ಅಸಹಾಯಕ ಸಾಧುಪ್ರಾಣಿಗಳನ್ನು ಕಂಬಕ್ಕೆ ಕಟ್ಟಿ ಸುಮ್ಮನೆ ಹೊಡೆದು ಹಿಂಸಿಸುವುದರಲ್ಲಿ ಸಾಕಷ್ಟು ಸಮಯ ಕಳೆಯುವ ಹುಡುಗರನ್ನು ಅಲ್ಲಿ ಇಲ್ಲಿ ಕಾಣಬಹುದು. ಇವರಲ್ಲಿ ಕೆಲವರಲ್ಲಾದರೂ ಇದು ಪರಹಿಂಸಕಾಮದ ಮೊದಲ ಸೂಚನೆಯಾಗಿರಬಹುದು. ತಾಯ್ತಂದೆಗಳು ಇಂಥ ಮಕ್ಕಳನ್ನು ಪರಿಣತರಿಗೆ ತೋರಿಸುವುದು ಒಳ್ಳೆಯದು.

**ಇತರ ಬಗೆಗಳು** : ಅಷ್ಟೊಂದು ತೀವ್ರವಲ್ಲದ ಅಥವಾ ಅಪರೂಪವಾದ ಇನ್ನು ಕೆಲವು ಕಾಮವಿಕಾರಗಳಿವೆ. ಸಂಭೋಗಪೂರ್ವಸ್ಖಲನ ಉದ್ವಿಗ್ನತೆಯ ಚಿಹ್ನೆ ; ಇದು ಸಾಮಾನ್ಯವಾದ ಆದರೆ ತೀವ್ರವಲ್ಲದ ಕಾಮವಿಕಾರ, ಪ್ರಾಣಿ ಸಂಭೋಗ ಅಪೂರ್ವವಾಗಿ ಆದರೆ ಮುಖ್ಯವಾಗಿ ಬುದ್ಧಿಮಾಂದ್ಯವಿರುವವರಲ್ಲಿ ಕಂಡುಬರುವ ವಿಕಾರ. ಬಾಲ ಸಂಭೋಗ ವಯಸ್ಸಾದ ಕೆಲವರು ಮಕ್ಕಳನ್ನು ದುರುಪಯೋಗಪಡಿಸಿಕೊಳ್ಳುವುದು.

**ಚಿಕಿತ್ಸೆ** : ಒಟ್ಟಿನಲ್ಲಿ ಕಾಮವಿಕಾರಗಳ ಚಿಕಿತ್ಸೆ ಕಷ್ಟದ ಸಮಸ್ಯೆಯಾಗಿದೆ. ಈ ಮೇಲಿನವು ಯಾವುದೂ ಸಾಂಪ್ರದಾಯಿಕ ಅರ್ಥದಲ್ಲಿ ರೋಗಗಳಲ್ಲ. ಕೆಲವರಲ್ಲಿ ಕಾಮವಿಕಾರ ಇನ್ನಿತರ ಮಾನಸಿಕ ತಾರುಮಾರಿನ ಒಡನಾಡಿಯಾಗಿರಬಹುದು. ಕಾಮ ವಿಕಾರಗಳು ಮೂಲತಃ ಶಾರೀರಕ ರೋಗಗಳಲ್ಲವಾದ್ದರಿಂದ ಇದನ್ನು ವೈದ್ಯಕೀಯ ಚಿಕಿತ್ಸೆಯಿಂದ ನಿವಾರಿಸುವುದು ಸಾಧ್ಯವಿಲ್ಲ. ಸಾಂಪ್ರದಾಯಿಕವಾದ ಮನೋಚಿಕಿತ್ಸೆ (ಸೈಕೋತೆರಪಿ) ಕೂಡ ಸುಮಾರಾಗಿ ಮಾತ್ರ ಪರಿಣಾಮಕಾರಿ. ಆದರೆ ಕಲಿಕೆಯ ನಿಯಮಗಳನ್ನಾಧರಿಸಿದ ವರ್ತನ ಚಿಕಿತ್ಸೆಯಿಂದ (ಬಿಹೇವಿಯರ್ ತೆರಪಿ) ತಕ್ಕಮಟ್ಟಿಗಿನ ಯಶಸ್ಸನ್ನು ಪಡೆಯಲಾಗಿದೆ. (ಎಂ.ಎನ್.ಎಚ್.)

**ಕಾಮಶಾಸ್ತ್ರ** : ಭರತಖಂಡದಲ್ಲಿ ಅರ್ಥಶಾಸ್ತ್ರದ ಸಂಗಡ ಕಾಮಶಾಸ್ತ್ರವೂ ಪ್ರಗತಿಗೆ ಬಂತು. ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳಲ್ಲಿ ಕಡೆಯ ಎರಡೇ

ಚುಂಬನ : ಖಜುರಾಹೋ

ನಿಜವಾಗಿಯೂ ಶುದ್ಧಲೌಕಿಕ ಅಥವಾ ವ್ಯಾವಹಾರಿಕ ಸ್ವರೂಪವನ್ನು ಪಡೆದಿವೆ. ಯಾವರೀತಿ ಅರ್ಥವನ್ನು ದೊರಕಿಸಲು ಯುಕ್ತಸಾಧನಗಳ ನಿರ್ದೇಶ ಮತ್ತು ಅರ್ಥರಕ್ಷಣೆಗೆ ಅಗತ್ಯವಾದ ಸಂಗತಿಗಳ ನಿರೂಪಣೆ ಅರ್ಥಶಾಸ್ತ್ರದ ವಿಷಯವೋ ಅದೇ ರೀತಿ ಕಾಮದ ಸಂತೃಪ್ತಿಗೆ ಯುಕ್ತಸಾಧನ ಅಥವಾ ಪ್ರಣಾಲಿಗಳ ವಿವೇಚನೆ ಕಾಮಶಾಸ್ತ್ರದ ವಿಷಯ. ಅರ್ಥಶಾಸ್ತ್ರ ಹೇಗೆ ಮುಖ್ಯವಾಗಿ ಆಳುವ ರಾಜಾದಿಗಳನ್ನು ಕುರಿತು ಹೊರಟಿದೆಯೋ ಹಾಗೆಯೇ ಕಾಮಶಾಸ್ತ್ರ ಮುಖ್ಯವಾಗಿ ಕಾಮಕಲಾಸಕ್ತರಾದ ನಾಗರಿಕರನ್ನು (ರಸಿಕರನ್ನು) ಕುರಿತು ಹೊರಟಿದೆ. ಸ್ತ್ರೀಯರ ಮತ್ತು ನಗರದಲ್ಲಿಯ ರಸಿಕರ ಸಂಬಂಧ ಹೇಗೆ ಹೇಗೆ ಇರಲು ಶಕ್ಯವೆಂಬುದನ್ನು ಈ ಶಾಸ್ತ್ರ ವಿವೇಚಿಸುತ್ತದೆ. ಈ ಎರಡೂ ಶಾಸ್ತ್ರಗಳ ಗ್ರಂಥ ನಿರೂಪಣಾಶೈಲಿಯಲ್ಲಿ ತುಂಬ ಸಾಮ್ಯವಿದೆ. ಕಾಮಕಲೆಯನ್ನು ಕುರಿತ ಗ್ರಂಥಗಳಲ್ಲಿ ವಿಶ್ವದಲ್ಲೇ ಪ್ರಥಮ ಕೃತಿಯಾಗಿದೆ–ಮಲ್ಲನಾಗ ವಾತ್ಸ್ಯಾಯನನ ಕಾಮಸೂತ್ರ. ಅದರ ಶೈಲಿಗೂ ಕೌಟಿಲ್ಯನ ಅರ್ಥಶಾಸ್ತ್ರದ ಶೈಲಿಗೂ ಅತ್ಯಂತ ಸಾಮ್ಯವಿದೆ. ಕೌಟಿಲ್ಯನ ಮಾದರಿಯನ್ನೇ ವಾತ್ಸ್ಯಾಯನ ಅನುಸರಿಸಿದಂತಿದೆ. ಭಾಷ್ಯದಂತಿರುವ ಸೂತ್ರವಾಕ್ಯಗಳು ಅಧ್ಯಾಯದ ಕಡೆಗೂ ಕೆಲವು ಶ್ಲೋಕಗಳು ಬರುತ್ತವೆ. ಅರ್ಥಶಾಸ್ತ್ರದಂತೆಯೆ ಕಾಮಸೂತ್ರದಲ್ಲಿಯೂ ಆರಂಭದಲ್ಲಿ ವಿಷಯಾನುಕ್ರಮಣಿಕೆ, ತ್ರಿವರ್ಗಗಳ ವಿವೇಚನೆ, ವಿದ್ಯಾಸಮುದ್ದೇಶಗಳು ಬರುತ್ತವೆ. ಅರ್ಥಶಾಸ್ತ್ರ ಕಾಮಶಾಸ್ತ್ರಗಳೆರಡರಲ್ಲಿಯೂ ಧರ್ಮದ ಮಹತ್ತ್ವವನ್ನು ಮುಕ್ತಕಂಠದಿಂದ ಮಾನ್ಯಮಾಡಲಾಗಿದೆ. ಧರ್ಮಶಾಸ್ತ್ರದ ಪ್ರಕಾರ ಪುಣ್ಯ ಪಾಪಗಳನ್ನು ಒಪ್ಪಿ ಅವುಗಳಿಗೆ ಅವಿರುದ್ಧವಾದ ಅರ್ಥ ಕಾಮಗಳನ್ನು ಈ ಲೌಕಿಕ ಶಾಸ್ತ್ರಗಳು ವಿವೇಚಿಸುತ್ತವೆ. ಪರಸ್ತ್ರೀವಶೀಕರಣ, ಸಂಗ್ರಹಣ ಮುಂತಾದ ವಿಷಯಗಳನ್ನು ವಾತ್ಸ್ಯಾಯನ ನಿರೂಪಿಸುವುದು ಕೇವಲ ಶಾಸ್ತ್ರದ ಪೂರ್ಣತಾದೃಷ್ಟಿಯಿಂದ, ಅರ್ಥಶಾಸ್ತ್ರದಲ್ಲಿ ಕೌಟಿಲ್ಯ ಶತ್ರುವಿಜಯಕ್ಕೆ ಮೋಸದ ವಿಧಾನಗಳನ್ನೂ ಹೇಳಿರುವಂತೆ. ಇಷ್ಟರಿಂದಲೇ ಈ ಶಾಸ್ತ್ರ ಅನೀತಿಯನ್ನು ಉಪದೇಶಿಸುವುದಕ್ಕಾಗಿ ಹೊರಟಿದೆಯೆಂದು ತೀರ್ಮಾನಿಸಲು ಬಾರದು. ಒಂದರ್ಥದಲ್ಲಿ ವಾತ್ಸ್ಯಾಯನ ಪ್ರೇಮರಾಜ್ಯದ ಕೌಟಿಲ್ಯನೆಂದರೂ ಸಲ್ಲುತ್ತದೆ.

ಕಾಮಶಾಸ್ತ್ರದ ಬಹಳಷ್ಟು ವಿಷಯಗಳು ಆಧುನಿಕ ಅಭಿರುಚಿಗೆ ಅಶ್ಲೀಲವೆಂದು ತೋರಬಹುದು. ಏಕೆಂದರೆ ಪ್ರಾಚೀನ ಭಾರತೀಯರು ಸ್ವಲ್ಪವೂ ಮುಚ್ಚು ಮರೆಯಿಲ್ಲದೆ ಗೋಪ್ಯಸಂಗತಿಗಳನ್ನೆಲ್ಲ ವರ್ಣನೆಮಾಡಿದ್ದಾರೆ. ಆದರೂ ವಾತ್ಸ್ಯಾಯನನೇ ಗ್ರಂಥವಾಕ್ಯದಲ್ಲಿ

ಲಜ್ಜಾವತಿ : ಶ್ರೀರಂಗಂ

ತನ್ನ ಗ್ರಂಥದ ಉದ್ದೇಶ ಧರ್ಮ ವಿರೋಧವಲ್ಲವೆಂದೂ ಕಾಮಪ್ರಚೋದನೆಗೆ ತನ್ನ ಗ್ರಂಥ ಕಾರಕವಲ್ಲವೆಂದೂ ಸಾರಿಹೇಳಿದ್ದಾನೆ. ಈ ಕಾರಣದಿಂದಲೇ ಭಾರತೀಯ ಕಾಮಶಾಸ್ತ್ರ ಲ್ಯಾಟಿನ್ ಮುಂತಾದ ಇರತ ಭಾಷೆಗಳಲ್ಲಿರುವ ಓವಿಡನ ಕಾಮಕಲಾಗ್ರಂತ ಮುಂತಾದುವುಗಳಿಂದ ಭಿನ್ನವೆನ್ನಬೇಕಾಗಿದೆ. ಭಾರತೀಯ ಸಮಾಜಶಾಸ್ತ್ರ ಅಧ್ಯಯನಕ್ಕೆ ಅಲ್ಲಿ ಎಷ್ಟೋ ಮನನೀಯ ಅಂಶಗಳು ದೊರೆಯುತ್ತವೆ.

ಕಾಮಶಾಸ್ತ್ರದಲ್ಲಿ ಉಪಲಬ್ಧವಾಗಿರುವ ಗ್ರಂಥಗಳಲ್ಲೆಲ್ಲ ವಾತ್ಸ್ಯಾಯನನ ಕಾಮಸೂತ್ರವೇ ಪ್ರಾಚೀನವಾದರೂ ಅದೇ ಮೊದಲ ಕೃತಿಯೆನ್ನುವಂತಿಲ್ಲ. ಪ್ರಸ್ತಾವನೆಯಲ್ಲಿ ಆತ ಈ ಬಗ್ಗೆ ಹೇಳಿದ್ದಾನೆ. ಔದ್ದಾಲಕಿ ಶ್ವೇತಕೇತು ಪ್ರರಾತನ ಗ್ರಂಥವನ್ನು ಬರೆದ. ಅದರ ಮೇಲೆ ಪಾಂಚಾಲ ಬಾಭ್ರವ್ಯನ ಟೀಕೆ ಬಂತು. ಅದರಲ್ಲಿ ಏಳು ವಿಭಾಗಗಳಿದ್ದವು. ಆರನೆಯ ವಿಭಾಗವಾಗಿದ್ದ ವೈಶಿಕ (ವೇಶ್ಯೆಯರಿಗೆ ಸಂಬಂಧಿಸಿದ) ಪ್ರಕರಣವನ್ನು ಪಾಟಲೀಪುತ್ರದ ದತ್ತಕ ವಿಸ್ತರಿಸಿದ, ಮಿಕ್ಕ ಪ್ರಕರಣಗಳ ಮೇಲೆ ಚಾರಾಯಣ, ಸುವರ್ಣನಾಭ ಘೋಟಕಮುಖ, ಗೋನರ್ದೀಯ, ಗೋಣಿಕಾಪುತ್ರ ಕುಚಮಾರ ಎಂಬ ಪಂಡಿತರು ಭಾಷ್ಯಗಳನ್ನು ಬರೆದರು. ಹೀಗೆ ಶಾಸ್ತ್ರ ಖಂಡಖಂಡವಾಗಿದ್ದರೆ ಎಲ್ಲರಿಗೂ ಉಪಕಾರವಾಗದೆಂದು ಭಾವಿಸಿ ಸರ್ವಾಂಗಸುಂದರವಾದ ತನ್ನ ಕೃತಿಯನ್ನು ವಾತ್ಸ್ಯಾಯನ ಬರೆದನಂತೆ. ಇವರೆಲ್ಲರೂ ಕಾಲ್ಪನಿಕ ವ್ಯಕ್ತಿಗಳೆಂಬಂತಿಲ್ಲ. ಏಕೆಂದರೆ ಇವರ ವಚನಗಳನ್ನು ಮುಂದಿನ ಗ್ರಂಥಕಾರರು ಅನೇಕವೇಳೆ ಉದಾಹರಿಸುತ್ತಾರೆ.

ರಾಜಾಸ್ಥಾನಗಳಲ್ಲಿ ಖ್ಯಾತಿಗೆ ಬರುತ್ತಿದ್ದ ಕಾವ್ಯಪರಂಪರೆಗೂ ಅರ್ಥಶಾಸ್ತ್ರ ಕಾಮಶಾಸ್ತ್ರಗಳಿಗೂ ತುಂಬ ನಿಕಟವಾದ ಸಂಬಂಧವಿದೆ. ಪ್ರೌಢ ಕವಿಯಾಗತಕ್ಕವ ಕಾಮಶಾಸ್ತ್ರವನ್ನು ಅಭ್ಯಾಸಮಾಡಿರಬೇಕೆಂದು ಅಲಂಕಾರಶಾಸ್ತ್ರಕಾರರು ಹೇಳಿದ್ದಾರೆ. ಹಾಗೆಯೇ ಕಾಳಿದಾಸ, ಶ್ರೀಹರ್ಷ, ಮಯೂರ, ದಂಡಿ, ಮಾಘ, ಭವಭೂತಿ ಮುಂತಾದ ಮಹಾಕವಿಗಳೆಲ್ಲ ಕಾಮಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದವರೆಂದು ಹೇಳಲು ಆಂತರಿಕ ಪ್ರಮಾಣಗಳು ಸಿಕ್ಕುತ್ತವೆ. ಆದ್ದರಿಂದ ವಾತ್ಸ್ಯಾಯನ ಪ್ರ.ಶ. ನಾಲ್ಕನೆಯ ಶತಮಾನದವನಿರಬಹುದೆಂದು ತೋರುತ್ತದೆ. ಅಂದರೆ ಕೌಟಿಲ್ಯನ ಅನಂತರ ಮತ್ತು ಕಾಳಿದಾಸನಿಗೆ ಹಿಂದೆ ಈತ ಇದ್ದಿರಬಹುದು. ಆದರೆ ಇದು ಊಹೆ ಮಾತ್ರ. ವರಾಹಮಿಹಿರನ ಜ್ಯೋತಿಷ್ಯಗ್ರಂಥದಲ್ಲಿಯ (6ನೆಯ ಶತಮಾನ) ಕೆಲವು ಕಾಮಶಾಸ್ತ್ರ ವಿಷಯಗಳು ದೊರೆಯುತ್ತವೆ.

**ವಾತ್ಸ್ಯಾಯನನ ಕಾಮಸೂತ್ರ** : ಈ ಗ್ರಂಥದಲ್ಲಿ ಏಳು ಅಧಿಕರಣಗಳಿವೆ. ಅಧಿಕರಣದ ವಿಭಾಗಗಳಿಗೆ ಅಧ್ಯಾಯಗಳೆಂದು ಹೆಸರು. ಒಟ್ಟು 64 ವಿಷಯಗಳನ್ನು ಒಂದೊಂದು ಪ್ರಕರಣದಲ್ಲೂ ವಿವರಿಸಲಾಗಿದೆ.

ಮೊದಲು ವಿಷಯಾನುಕ್ರಮಣಿಕೆ ಬರುತ್ತದೆ. ಅನಂತರ ಪುರುಷಾರ್ಥಗಳ ಸಾಮಾನ್ಯ ನಿರೂಪಣೆ. ಆಮೇಲೆ ಕಾಮಪುರುಷಾರ್ಥದ ಮಹತ್ತ್ವ, ಮುಂದೆ ಈ ಶಾಸ್ತ್ರಾಧ್ಯಯನಕ್ಕೆ ಯೋಗ್ಯ ಅಧಿಕಾರಿ ಯಾರೆಂಬ ವಿಷಯ, ಸ್ತ್ರೀಯರಿಗೆ ಇದರ ಅಗತ್ಯ–ಇತ್ಯಾದಿ ವಿಷಯಗಳು ಬಂದಿವೆ. ರಸಿಕನಾದ ನಾಗರಿಕನ ಲಕ್ಷಣಗಳಾವುವು, ಅವನ ದೈನಂದಿನ ವೇಷ, ಭಾಷೆ ಭೂಷಣಾದಿಗಳು ಹೇಗಿರಬೇಕು, ಅವನ ಸಂಗಡಿಗರು ಎಂಥವರಿರಬೇಕು, ಎಂಥ ದೂತಿಯರನ್ನು ಆತ ನೇಮಿಸಿಕೊಳ್ಳಬೇಕು–ಈ ವಿಚಾರಗಳು ಮೊದಲ ಅಧಿಕರಣದ ವಿಷಯವೆನ್ನಬಹುದು.

ಎರಡನೆಯ ಅಧಿಕರಣಕ್ಕೆ ಸಾಂಪ್ರಯೋಗಿಕ ಎಂದು ಹೆಸರು. ಇಲ್ಲಿ ಸಂಭೋಗ ಪ್ರಯೋಗಗಳ ವಿವಿಧ ಪ್ರಕಾರಗಳ ನಿರ್ದೇಶನವಿದೆ. ಸಮಾನ ಸ್ತ್ರೀಪುರುಷರಲ್ಲಿ ಶಕ್ಯವಾದ

ಸಮರತಿ. ವೀರ್ಯಸ್ಖಲನ ಸ್ತ್ರೀ–ಪುರುಷರಿಬ್ಬರಿಗೂ ಸಮಕಾಲದಲ್ಲಿ ಹೇಗೆ ಶಕ್ಯ; ಇದಕ್ಕೆ ಅಗತ್ಯವಾದ ಪ್ರೀತಿವಿಶೇಷಕ್ಕೆ ಸಾಧಕಾಂಗಗಳಾದ ಚುಂಬನ, ಆಲಿಂಗನ, ನಖಕ್ಷತ, ದಂತಕ್ಷತ

ಪ್ರೇಮಿಗಳು : ಕುಂಭಕೋಣಂ

ಮುಂತಾದವುಗಳ ನಾನಾ ಪ್ರಾದೇಶಿಕ ಪ್ರಕಾರಗಳು; ಪುರುಷಾಯಿತ; ನಾನಾ ಜಾತಿಯ ಹಕ್ಕಿ ಮತ್ತು ಮೃಗಗಳಂತೆ ಚಿತ್ರವಿಚಿತ್ರ ರತಿಬಂಧಗಳು– ಇವೆಲ್ಲ ಎರಡನೆಯ ಅಧಿಕರಣದ ವಿಷಯ. ಖಜುರಾಹೋ ಮುಂತಾದ ದೇವಾಲಯಗಳಲ್ಲಿ ಈ ಚಿತ್ರ ಬಂಧಗಳನ್ನು ಶಾಸ್ತ್ರಕ್ಕೆ ಉದಾಹರಣೆಯಾಗಬೇಕೆಂದೇ ರಚಿಸಿದ ಶಿಲ್ಪಮಿಥುನಗಳನ್ನು ಇಂದಿಗೂ ನೋಡಬಹುದು.

ಮೂರನೆಯದು ಕನ್ಯಾಸಂಪ್ರಯುಕ್ತಕ ಎಂಬ ಅಧಿಕರಣ. ಇಲ್ಲಿ ಜನ್ಮ ನಕ್ಷತ್ರ ಹಾಗೂ ಅಂಗಾಂಗ ಲಕ್ಷಣಗಳ ದೃಷ್ಟಿಯಿಂದ ವಿವಾಹಕ್ಕೆ ಯೋಗ್ಯಳಾದ ಕನ್ಯೆ ಹೇಗಿರಬೇಕು, ಹೇಗಿದ್ದರೆ ಶುಭ, ಹೇಗಿದ್ದರೆ ಅಶುಭವೆಂಬುದನ್ನು ವಿವರವಾಗಿ ತಿಳಿಸಿದೆ. ಅಶ್ವಲಾಯನ ಧರ್ಮಸೂತ್ರದಲ್ಲಿ ಹೇಳಿರುವ ದೈವೀ ಪರೀಕ್ಷೆ ಕೂಡ ಇಲ್ಲಿ ಉಲ್ಲೇಖಿಸಲ್ಪಟ್ಟಿದೆ. ವಿವಾಹಕ್ಕೆ ವಿಘ್ನಗಳೆಂಥವು, ಅವನ್ನು ಪರಿಹರಿಸುವ ಮಾರ್ಗಗಳು ಯಾವುವು; ವಿವಾಹಾನಂತರ ತರುಣ ತರುಣಿಯೊಂದಿಗೆ ಹೇಗೆ ವ್ಯವಹರಿಸಬೇಕು, ಪರಸ್ಪರ ವೈರವನ್ನು ಹೇಗೆ ದೂರೀಕರಿಸಬೇಕು–ಇವೇ ಮುಂತಾದ ವಿಚಾರಗಳನ್ನು ಇಲ್ಲಿ ವಿವರವಾಗಿ ಉಪಪಾದಿಸಿರುವುದರಿಂದ ಅಧಿಕರಣದ ಹೆಸರು ಸಮಂಜಸವಾಗಿದೆ.

ನಾಲ್ಕನೆಯದು ಭಾರ್ಯಾಧಿಕರಣ. ಸಂಗಮಯೋಗ್ಯೆಯರಾದ ನಾಯಿಕೆಯರಲ್ಲಿ ಹೆಂಡತಿ, ಇಟ್ಟುಕೊಂಡವಳು, ವೇಶ್ಯೆ ಎಂಬ ಮೂರು ಬಗೆಗಳನ್ನು ತಿಳಿಸಲಾಗಿದೆಯಲ್ಲದೆ ಇವರನ್ನು ಮನೆಯಲ್ಲಿ ಸಂಭಾಳಿಸುವ ವಿವರಗಳಿವೆ. ಗೃಹಿಣಿಗೆ ಒಪ್ಪಿಸಬೇಕಾದ ಕೆಲಸಗಳು, ಆಕೆಯ ಗೃಹಕೃತ್ಯದ ದಕ್ಷತೆಯ ಪ್ರಕಾರ, ಸವತಿಯೊಡನೆ ಇರಬೇಕಾದ ರೀತಿ, ಅಸಭ್ಯಸ್ತ್ರೀಯರ ವರ್ತನೆ, ಅನೇಕ ಸ್ತ್ರೀಯರೊಡನೆ ಇರುವ ಪುರುಷನಲ್ಲಿರಬೇಕಾದ ದಾಕ್ಷಿಣ್ಯ– ಇತ್ಯಾದಿ ವಿವರಗಳಿಲ್ಲಿವೆ. ಕಾಳಿದಾಸನ ಶಾಕುಂತಲದಲ್ಲಿ ಕಣ್ವರು ಶಕುಂತಲೆಗೆ ಮಾಡುವ ಉಪದೇಶ ವಾಕ್ಯಗಳು ಈ ಅಧಿಕರಣದ ವಾಕ್ಯಗಳಿಂದಲೇ ಪ್ರಭಾವಿತವಾಗಿವೆ.

ಐದನೆಯದು ಪರಿಹಾರಕ ಎಂದರೆ ಪರರ ಹೆಂಡಿರನ್ನು ಒಲಿಸಿಕೊಳ್ಳುವ ವಿವರಗಳಿಗೆ ಮೀಸಲಾದ ವಿಭಾಗ, ಚಂಚಲ ಸ್ತ್ರೀಯರ ಹೆಗ್ಗುರುತುಗಳು, ಇತ್ಯಾದಿಗಳನ್ನರಿತವರು ಸ್ವಸ್ತ್ರೀಯರನ್ನು ದುರ್ನಡತೆಗಿಳಿಯದಂತೆ ರಕ್ಷಿಸಬಹುದೆಂದು ವಾತ್ಸ್ಯಾಯನ ಹೇಳಿದ್ದಾನೆ. ಇದೇ ಇದರ ಮೂಲ ಉದ್ದೇಶ, ಪರಸ್ತ್ರೀಗಮನವನ್ನು ಪ್ರೋತ್ಸಾಹಿಸುವುದಲ್ಲ. ಸುಲಭಸಾಧ್ಯ ಮತ್ತು ಕಷ್ಟಸಾಧ್ಯವಾದ ಸ್ತ್ರೀಯರ ಲಕ್ಷಣಗಳನ್ನು ಇಲ್ಲಿ ಹೇಳಲಾಗಿದೆ. ಸ್ತ್ರೀ ಪುರುಷರ ಗುಣಶೀಲಗಳ ವಿವೇಚನೆ, ಪ್ರವೃತ್ತಿಗೂ ಕಾರಣ ನಿರೂಪಣೆ, ಪರಿಚಯ ಬೆಳೆಸುವ

ಮಿಥುನ ಖಜುರಾಹೋ

ಉಪಾಯಗಳು, ಭಾವಪರೀಕ್ಷೆ, ಅಂತಃಪುರಸ್ತ್ರೀಯರ ರಕ್ಷಣೆ– ಮುಂತಾದ ವಿಷಯಗಳು ಈ ಅಧಿಕರಣದಲ್ಲಿ ಬರುತ್ತವೆ,

ಆರನೆಯದು ವೈಶಿಕ ಎಂದರೆ ವೇಶ್ಯೆಯರನ್ನು ಕುರಿತ ಅಧಿಕರಣ. ವೇಶ್ಯೆಯರನ್ನು ಒಲಿಸಿಕೊಳ್ಳುವ ಸಾಧನಗಳು, ವೇಶ್ಯೆಯರಿಗೆ ಅಗತ್ಯರಾದ ದೂತಿ, ಕುಂಟಣಿ ಮುಂತಾದವರು, ಅಗಮ್ಯರಾದವರು, ಕುಷ್ಠ ಮುಂತಾದ ರೋಗವುಳ್ಳವರು ಇತ್ಯಾದಿ–ನಾಯಕ ನಾಯಿಕೆಯರ ಗುಣವಿವೇಚನೆ, ದ್ರವ್ಯ ದೊರಕಿಸುವ ಪ್ರಣಾಲಿಗಳು, ವಿರಕ್ತ ಪುರುಷರ ಚಿಹ್ನೆಗಳು, ವಿರಕ್ತರನ್ನು ಅನುರಕ್ತರನ್ನಾಗಿ ಮಾಡುವ ವಿಧಾನಗಳು, ದ್ರವ್ಯಹೀನ ನಾಯಕರನ್ನು ಓಡಿಸು, ಪರಿಗಳು– ಇತ್ಯಾದಿಗಳೇ ಈ ಅಧಿಕರಣದ ವಿಷಯಗಳಾಗಿವೆ.

ಕಡೆಯದಾದ ಏಳನೆಯ ಅಧಿಕರಣಕ್ಕೆ ಔಪನಿಷದಕ ಅಥವ ರಹಸ್ಯಗಳ ಪ್ರಕಟಣೆ ಎಂಬ ಹೆಸರಿದೆ. ವಶೀಕರಣ, ಲಿಂಗವೃದ್ಧಿ, ಯೋನಿಸಂಕೋಚಗಳಿಗೆ ಉಪಯುಕ್ತವಾದ ಮಣಿಮಂತ್ರೌಷಧಗಳು ಇಲ್ಲಿ ಉಕ್ತವಾಗಿವೆ.

ಏಳು ಅಧಿಕರಣಗಳ ಈ ಕಾಮಸೂತ್ರ ಗ್ರಂಥಕ್ಕೆ ಜಯಮಂಗಲಾ ಎಂಬ ವ್ಯಾಖ್ಯೆ ಉಪಲಬ್ಧವಿದೆ. ಇದನ್ನು ರಚಿಸಿದ ಯಶೋಧರ ಹದಿಮೂರನೆಯ ಶತಮಾನದಲ್ಲಿದ್ದ ವೀಸಲದೇವನ (1243–61) ಆಸ್ಥಾನ ಕವಿ. ಈ ಟೀಕೆ ವಿಸ್ತಾರವಾಗಿದ್ದು, ವಾತ್ಸ್ಯಾಯನನ ಅನಂತರ ರಚಿತವಾದ ಕಾಮಶಾಸ್ತ್ರ ಗ್ರಂಥಗಳಿಂದಲೂ ಬೇಕಾದಂತೆ ಅವತರಣಿಕೆಗಳನ್ನು ಉದಾಹರಿಸುತ್ತದೆ. 17ನೆಯ ಶತಮಾನದಲ್ಲಿ ವೀರಸಿಂಹದೇವನೆಂಬ ಅರಸ ರಚಿಸಿರುವ ಪದ್ಯಮಯ ವ್ಯಾಖ್ಯಾನಕ್ಕೆ ಕಂದರ್ಪ ಚೂಡಾಮಣಿಯೆಂದು ಹೆಸರಿದೆ. 1788ರಲ್ಲಿ ಕಾಶಿಯ ಪಂಡಿತನಾದ ಭಾಸ್ಕರ ನರಸಿಂಹ ಬರೆದ ಟೀಕೆ ಇನ್ನೂ ಅಚ್ಚಾಗಿಲ್ಲ.

**ವಾತ್ಸ್ಯಾಯನನ ಅನಂತರದ ಗ್ರಂಥಗಳು:** ವಾತ್ಸ್ಯಾಯನನ ಗ್ರಂಥ ಮುಖ್ಯವಾಗಿ ಶಾಸ್ತ್ರಸರಣಿಯಲ್ಲಿದ್ದರೆ ಅನಂತರದ ಗ್ರಂಥಗಳೆಲ್ಲಾ ಸುರತಕ್ರೀಡೆಯನ್ನು ಕಲೆಯೆಂದು ಪರಿಗಣಿಸಿ ಕಾವ್ಯಮಯ ಪದ್ಯಶೈಲಿಯಲ್ಲಿ ವರ್ಣಿಸುವ ಗ್ರಂಥಗಳಾಗಿವೆ. ಇವುಗಳಲ್ಲೆಲ್ಲ ಸಾಹಿತ್ಯಕೌಶಲವೂ ಛಂದೋವೈಚಿತ್ರ್ಯವೂ ಮೋಹಕವಾಗಿರುತ್ತವೆ. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಗ್ರಂಥಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು.

1. ಪದಶ್ರೀ ಎಂಬಾತ ಬರೆದ ನಾಗರಸರ್ವಸ್ವ. ಈ ಗ್ರಂಥಕಾರ ಬೌದ್ಧನಾಗಿದ್ದು ದಾಮೋದರಗುಪ್ತ ರಚಿಸಿದ ಕುಟ್ಟನೀಮತವನ್ನು ಉಲ್ಲೇಖಿಸಿದ್ದಾನೆ. ಇವನ ಕಾಲ 10ನೆಯ ಶತಮಾನದ ಅಂತ್ಯವೆನ್ನಬಹುದು.

2. ಕಲ್ಯಾಣಮಲ್ಲನ ಅನಂಗರಂಗ. ಅಯೋಧ್ಯೆಯ ನವಾಬನ ಮನೋರಂಜನೆಗಾಗಿ ಬರೆದ ಈ ಗ್ರಂಥ ಅತ್ಯಂತ ಜನಪ್ರಿಯವಾಗಿದೆ. ಕಾಲ 16ನೆಯ ಶತಮಾನ.

3. ಕೊಕ್ಕೋಕ ಕವಿಯ ರತಿರಹಸ್ಯ. ಕವಿ ಸಿಂಹಳದೇಶದವನೆಂಬ ಐತಿಹ್ಯವಿದೆ. ಕಾಲ ಸುಮಾರು 13ನೆಯ ಶತಮಾನ. ಲೋಕ ಪ್ರಸಿದ್ಧಿಯ ಮೂಲಕ ಇವನ ಕಾಮಶಾಸ್ತ್ರಕ್ಕೆ ಕೊಕ್ಕೋಕಶಾಸ್ತ್ರವೆಂಬ ನಾಮಾಂತರ ಜನಜನಿತವಾಗಿದೆ. ಈ ಗ್ರಂಥ ಭಾರತೀಯ ಭಾಷೆಗಳಲ್ಲಿಯೂ ಐರೋಪ್ಯ ಭಾಷೆಗಳಲ್ಲಿಯೂ ಅನೇಕ ಅನುವಾದಗಳನ್ನು ಕಂಡು ತುಂಬ ಜನಪ್ರಿಯತೆಯನ್ನು ಗಳಿಸಿದೆ. ಈತ ತನ್ನ ಗ್ರಂಥದಲ್ಲಿ ವಾತ್ಸ್ಯಾಯನನ ಸಿದ್ಧಾಂತವನ್ನಷ್ಟೇ ಅಲ್ಲದೆ ನಂದಿಕೇಶ್ವರ, ಗೋಣಿಕಾಪುತ್ರರ ಸಿದ್ಧಾಂತಗಳನ್ನು ಸಂಗ್ರಹಿಸಿರುವುದಾಗಿ ಹೇಳುತ್ತಾನೆ. ಈ ಗ್ರಂಥವನ್ನು ಗೀತ ಗೋವಿಂದ ಕಾವ್ಯಕ್ಕೆ ವ್ಯಾಖ್ಯಾನ ಬರೆದಿರುವ ರಾಣಾ ಕುಂಭಕರ್ಣ ಮೇಲಿಂದ ಮೇಲೆ ಉದಾಹರಿಸಿದ್ದಾನೆ.

4. ಕವಿಶೇಖರಜ್ಯೋತಿರೀಶ್ವರನ ಪಂಚಸಾಯಕ.ಇದಾದರೂ ತುಂಬಾ ಖ್ಯಾತಿಯನ್ನು ಗಳಿಸಿದೆ. ಇಲ್ಲಿಯೂ ಗೋಣಿಕಾಪುತ್ರ, ನಂದೀಶ್ವರ, ಮೂಲದೇವ, ರತಿದೇವ ಮುಂತಾದ ಪೂರ್ವಲೇಖಕರ ಪ್ರಸ್ತಾಪವಿದೆ.

ಅಲಂಕರಣ : ಬೇಲೂರು

ಇವಲ್ಲದೆ ಹೆಚ್ಚು ಮುದ್ರಣಪ್ರಸಾರವಿಲ್ಲದ ಮತ್ತೆ ಕೆಲವು ಗ್ರಂಥಗಳಿವು: ಹರಿಹರನ ರತಿರಹಸ್ಯ ಅಥವ ಶೃಂಗಾರದೀಪಿಕೆ. ವಿಜಯನಗರದ ರಾಜ ಇಮ್ಮಡಿ ಪ್ರೌಢದೇವರಾಯನ (1422–48)ರತಿರತ್ನಪ್ರದೀಪಿಕೆ. ತಂಜಾವೂರು ರಾಜ ಶಾಹಜಿ (1684–1710) ಬರೆದಿರುವ ಶೃಂಗಾರಮಂಜರಿ. ಅನಂತನ ಕಾಮಸುಧೆ. ಮೀನನಾಥನ ಸ್ಮರದೀಪಿಕೆ. ಚಿತ್ರಧರನ ಶೃಂಗಾರಸಾರ.

ಕಾಮಶಾಸ್ತ್ರದಲ್ಲಿ ಬರುವ ಶೃಂಗಾರ ನಾಯಕಿಯರ ಹಾಗೂ ನಾಯಕರ ವಿಭಾಗ ಕ್ರಮಗಳು ಕಾವ್ಯಶಾಸ್ತ್ರದವರಿಗೂ ಕವಿಗಳಿಗೂ ಸಂಸ್ಕೃತದಲ್ಲಿ ಮಾರ್ಗದರ್ಶಕವಾದವು; ಅಷ್ಟೇ ಅಲ್ಲ, ಸ್ವಲ್ಪವೂ ಮಾರ್ಪಾಟಿಲ್ಲದೆ ಸ್ವೀಕೃತವೂ ಆದುವು. ನಾಯಕರನ್ನು ಪತಿ ಉಪಪತಿ, ವೈಶಿಕ, ಎಂದು ಸ್ಥೂಲವಾಗಿ ವಿಭಾಗಿಸಿ, ಪತಿಯನ್ನು ಅನುಕೂಲ, ದಕ್ಷಿಣ, ದೃಷ್ಟ, ಶಠ ಎಂಬ ನಾಲ್ಕು ಪ್ರಕಾರಗಳಾಗಿ ವಿಂಗಡಿಸಿ ಅವನಿಗೆ ಸಂಗಡಿಗರೆಂದು ಪೀಠಮರ್ದ, ವಿಟ, ಚೇಟ, ವಿದೂಷಕರನ್ನು ಹೇಳುವ ಮತ್ತು ಅಭಿಲಾಷೆ, ಚಿಂತೆ, ಸ್ಮೃತಿ, ಗುಣಗಾನ, ಉದ್ವೇಗ, ಪ್ರಲಾಪ, ಉನ್ಮಾದ, ವ್ಯಾಧಿ, ಜಡತ್ವ, ಮರಣ ಎಂಬ ಶೃಂಗಾರರಸದ ದಶಾವಸ್ಥೆಗಳನ್ನು ವರ್ಣಿಸುವ ಪ್ರಕ್ರಿಯೆ ಅಲಂಕಾರ ಶಾಸ್ತ್ರಗಳಲ್ಲಿ ಸರ್ವಮಾನ್ಯವಾಗಿದೆ. ಇದರಂತೆ ಶೃಂಗಾರ ನಾಯಕಿಯರನ್ನು ಕೂಡ ಸ್ವೀಯೆ, ಪರಕೀಯೆ ಸಾಮಾನ್ಯೆ ಎಂದು ಸ್ಥೂಲವಾಗಿ ಮೂರಾಗಿ ವಿಭಾಗಿಸಿ, ಸ್ವೀಯೆಯನ್ನು ಮುಗ್ಧೆ, ಮಧ್ಯೆ, ಪ್ರಗಲ್ಭೆಯರೆಂದೂ ಮತ್ತೆ ವಿಂಗಡಿಸಿ ಮಧ್ಯೆ, ಪ್ರಗಲ್ಭೆಯರನ್ನು ಧೀರೆ, ಅಧೀರೆ, ಧೀರಾಧೀರೆಯರೆಂದೂ ಹಾಗೆಯೇ ಶೃಂಗಾರಾವಸ್ಥೆಗಳನ್ನು ಗಮನಿಸಿ ಪ್ರೋಷಿತಭರ್ತೃಕೆ, ಖಂಡಿತೆ, ಉತ್ಕಂಠಿತೆ, ಕಲಹಾಂತರಿತೆ, ವಿಪ್ರಲಬ್ಧೆ, ವಾಸಕಸಜ್ಜೆ, ಸ್ವಾಧೀನಪತಿಕೆ, ಅಭಿಸಾರಿಕೆ–ಎಂದು ಎಂಟು ರೀತಿಯಾಗಿಯೂ ವರ್ಣಿಸುವ ಪರಿಪಾಠವನ್ನು ಸಂಸ್ಕೃತ ಸಾಹಿತ್ಯದ ಪರಿಷ್ಕೃತಯುಗದ ಮಹಾಕವಿಗಳೆಲ್ಲಾ ತದ್ವತ್ತಾಗಿ ಪಾಲಿಸಿದ್ದಾರೆ. ಈ ದೃಷ್ಟಿಯಿಂದ ರುದ್ರಭಟ್ಟನ ಶೃಂಗಾರತಿಲಕ ಮುಂತಾದ ಗ್ರಂಥಗಳು ಇತ್ತ ಕಾವ್ಯಶಾಸ್ತ್ರದ ಗ್ರಂಥವೆನಿಸುವಂತೆ ಅತ್ತ ಕಾಮಶಾಸ್ತ್ರದ ಗ್ರಂಥಗಳೆಂದರೂ ಸಲ್ಲುತ್ತದೆ. ಶೃಂಗಾರಾಷ್ಟಕ, ಶೃಂಗಾರಶತಕಗಳು(ಮಯೂರ, ಭರ್ತೃಹರಿ, ಅಮರುಕ ಮುಂತಾದವರಿಂದ ರಚಿತ) ಕಾಮಶಾಸ್ತ್ರದಿಂದ ಪ್ರಭಾವಿತವಾದ ಕಾವ್ಯರೂಪಗಳೇ ಸರಿ.

ಇದರಂತೆಯೇ ಕಾಮಶಾಸ್ತ್ರದ ಸ್ತ್ರೀ ಜಾತಿ ನಿರೂಪಣೆ (ಪದ್ಮಿನಿ, ಶಂಖಿನಿ, ಹಸ್ತಿನಿ) ಕಾವ್ಯಕಾರರಿಗೂ ಅಂಗೀಕಾರ ಯೋಗ್ಯವೆನಿಸಿದೆ. ತಿಥಿ ನಕ್ಷತ್ರಗಳಿಗನುಸಾರವಾಗಿ ಸ್ತ್ರೀ ಶರೀರದ ಅಂಗಾಂಗದಲ್ಲಿ ಬದಲಾಯಿಸಿ ನಿಲ್ಲುವ ಕಾಮಕಲೆಯ ಅಭಿಜ್ಞತೆಯೂ ರಸಿಕನಿಗೆ ಇರಬೇಕೆಂದು ಅದರ ವಿವರಗಳನ್ನು ಶಾಸ್ತ್ರೀಯವಾಗಿ ನಿರೂಪಿಸುತ್ತದೆ ಕಾಮಶಾಸ್ತ್ರ. ಕಾಮಶಾಸ್ತ್ರಕ್ಕೆ ಮನ್ಮಥನೇ ಅಧಿದೇವತೆ. ರತಿಯೇ ದೇವಿ. ಅವರ ಸ್ತೋತ್ರಗಳಿಂದಲೇ ಗ್ರಂಥಗಳೆಲ್ಲಾ ಆರಂಭವಾಗುತ್ತವೆ. ಸ್ತ್ರೀಯ ಭಾವಗ್ರಹಣ, ಯೋನಿದ್ರಾವಣ, ವಾಜೀಕರಣ, ಮುಂತಾದ ರಹಸ್ಯ ಪ್ರಕ್ರಿಯೆಯೆಲ್ಲ ಇಂದಿನ ಲೈಂಗಿಕ ಶಾಸ್ತ್ರದ ಆಧುನಿಕ ವಿಚಾರಸರಣಿಯಿಂದ ನೋಡಿದರೂ ಎಷ್ಟೋ ತಥ್ಯಪೂರ್ಣವಾಗಿರುವುದು ಇಲ್ಲಿ ವೇದ್ಯವಾಗುತ್ತದೆ. ಸುರತಕ್ರಿಯೆಯ ಅಂತರಂಗ ಬಹಿರಂಗಗಳನ್ನೆಲ್ಲ ಶಾಸ್ತ್ರ ವಿಜ್ಞಾನಿಯ ವಾಸ್ತವಿಕ ದೃಷ್ಟಿಯಿಂದ ನೋಡಿರುವುದು ಪ್ರಾಚೀನ ಭಾರತದ ಕಾಮಶಾಸ್ತ್ರದ ವೈಶಿಷ್ಟ್ಯವಾಗಿದೆ. ಕಾಮಶಾಸ್ತ್ರದ ಅಧ್ಯಯನದಿಂದ ಹೀಗೆ ವಾಸ್ತವಿಕ ಜೀವನಾನುಕೂಲ ರಹಸ್ಯಗಳ ಅರಿವಾಗುವುದಲ್ಲದೆ ಪ್ರಾಚೀನ ಕಾವ್ಯನಾಟಕಗಳ ಸ್ವಾರಸ್ಯಗ್ರಹಣೆಗೂ ಹೆಚ್ಚಿನ ಸಾಮರ್ಥ್ಯವುಂಟಾಗುತ್ತದೆ.

**ಕನ್ನಡದಲ್ಲಿ ಕಾಮಶಾಸ್ತ್ರ:** ಕನ್ನಡದಲ್ಲಿ ಕಾಮಶಾಸ್ತ್ರವೂ ಸಂಸ್ಕೃತ ಗ್ರಂಥಗಳ ಸಾರಸಂಗ್ರಹರೂಪವಾಗಿ ಅತ್ಯಂತ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿದೆ. ಗಂಗ



ನಿರೀಕ್ಷಣೆ

ವಂಶದ ದೊರೆಗಳಲ್ಲಿ ಒಬ್ಬನಾದ ಮಾಧವ ನಾಲ್ಕನೆಯ ಶತಮಾನದಲ್ಲಿಯೇ ದತ್ತಕ ಸೂತ್ರಕ್ಕೆ ವೃತ್ತಿಯನ್ನು ಬರೆದಿದ್ದನೆಂದು ಆತನ ತಾಮ್ರಶಾಸನಗಳು ಹೇಳುತ್ತವೆ.

ಇದಾದ ಮೇಲೆ ಸಂಸ್ಕೃತ ಕವಿಪರಂಪರೆಯನ್ನನುಸರಿಸಿ ಕಾವ್ಯರಚನೆ ಮಾಡಿದ ಪಂಪ, ಪೊನ್ನ ಮುಂತಾದ ಚಂಪೂಕವಿಗಳೆಲ್ಲ ಪ್ರಾಯಿಕವಾಗಿ ಕಾಮಶಾಸ್ತ್ರದ ಪರಿಚಯವನ್ನು ವ್ಯಕ್ತಮಾಡಿದರೂ ಸ್ವತಂತ್ರ ಗ್ರಂಥರಚನೆಯನ್ನು ಮೊದಲಿಗೆ ಮಾಡಿದ ಕೀರ್ತಿ ಕವಿಚಕ್ರವರ್ತಿ ಜನ್ನನಿಗೆ ಸೇರುತ್ತದೆ. ಅವನ ಅಭಿನವಮುಕುರ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಸಂಪಾದಿಸಲ್ಪಟ್ಟು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಮುದ್ರಿತವಾಗಿದೆ. ಗ್ರಂಥ ಸಣ್ಣದಾದರೂ ಮುಖ್ಯ ವಿವರಗಳನ್ನೆಲ್ಲ ಸಂಗ್ರಹಿಸುವುದರಲ್ಲಿದು ಯಶಸ್ವಿಯಾಗಿದೆ.

11ನೆಯ ಶತಮಾನದಲ್ಲಿ ಕಲ್ಯಾಣ ಚಾಳುಕ್ಯ ವಂಶಾವಳಿಯಲ್ಲಿ ಮಹಾರಾಜನಾಗಿದ್ದ ಜಯಸಿಂಹದೇವನ ಮಾಂಡಳಿಕ ರೇಚನೃಪನ ಆಶ್ರಯದಲ್ಲಿ ಚಂದ್ರರಾಜನೆಂಬ ಕವಿ

ರತಿಕ್ರೀಡೆಯಲ್ಲಿ ಮಗ್ನರಾದ ಸ್ತ್ರೀಪುರುಷರು : ಖಜುರಾಹೋ

ಬರೆದ ಮದನತಿಲಕವೆಂಬ ಕಾಮಶಾಸ್ತ್ರ ಗ್ರಂಥ 1953ರಲ್ಲಿ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಿಂದ ಪ್ರಕಟವಾಗಿದೆ. ಇದು ಮನೋಹರವಾದ ಕಂದವೃತ್ತಗಳಿಂದ ಕೂಡಿದ್ದು, ವಿವಿಧ ಛಂದೋವಿಲಾಸಗಳಿಂದ ಮನೋರಂಜಕವಾಗಿದುವುದಲ್ಲದೆ ಹನ್ನೊಂದು ಅಧ್ಯಾಯಗಳಲ್ಲಿ ವಿಪುಲ ವಿಷಯಗಳನ್ನೂ ತಿಳಿಸುತ್ತದೆ. ಇದರ ಪೀಠಿಕೆಯಲ್ಲಿ ವಾತ್ಸ್ಯಾಯನ ಹೇಳಿರುವ ಅಂಶಗಳೆಲ್ಲ ಅನುವಾದಗೊಂಡಿವೆ. ಆಗಮ ಲೌಕಿಕ ವಿರೋಧಮಂ ಕಳೆದು, ಸಾರಾಂಶಮಂ ಕೊಂಡು ಪಲವು ಮತಂಗಳನೊಂದು ಮಾಡಿ ಪದಿನೆಂಧಿಕರಣಗಳಿಂದಳಂಕಾರಂ ಕೃತಮಾಗೆ ನಾನಾಛಂದದಿನ್ನೈನೂರು ಗದ್ಯಪದ್ಯಂಗಳಿಂ ವಿಶ್ರುತಂ ಮಾಡಿರುವುದಾಗಿ ಚಂದ್ರರಾಜ ತನ್ನ ಕೃತಿಯ ಮೊದಲಲ್ಲಿ ಹೇಳಿದ್ದಾನೆ. ಪದ್ಮಿನಿ ಇತ್ಯಾದಿ ಸ್ತ್ರೀಜಾತಿ ಲಕ್ಷಣ ; ದೇವ, ಯಕ್ಷ, ರಾಕ್ಷಸ, ಪಿಶಾಚಾದಿ ಅಂಶವುಳ್ಳ ಸ್ತ್ರೀಯರ ವಿಭಾಗ ; ದೇಶ ವಿದೇಶಗಳ ಸ್ತ್ರೀಲಕ್ಷಣ ; ತ್ರಿದೋಷ ಪ್ರಕೃತಿ ವರ್ಣನೆ ; ಉತ್ತಮ, ಮಧ್ಯಮ, ಕನಿಷ್ಠನಾರಿಯರ ವಿಚಾರ ; ಬಾಲೆ, ಯೌವನೆ, ಪ್ರೌಢೆ, ಲೌಲ್ಯೆ ಮೊದಲಾದವರ ಅನುಭವವರ್ಣನೆ ; ಪಣ್ಯಾಂಗನಾವರ್ಣನೆ ; ಕುಲಸ್ತ್ರೀ ವರ್ಣನೆ ; ವೇಶ್ಯಾವರ್ಣನೆ ; ರತಿಭಾವಲಕ್ಷಣ–ಎಂಬ ಹೆಸರಿನ ಹನ್ನೊಂದೇ ಅಧ್ಯಾಯಗಳು ಸಿಕ್ಕಿವೆ. ಮಿಕ್ಕಭಾಗ ದೊರೆತಿಲ್ಲ.

ಕಾಮಶಾಸ್ತ್ರದ ಸೂಕ್ಷ್ಮ ಪ್ರಕ್ರಿಯವರ್ಣನೆ ನೇಮಿಚಂದ್ರನ ಲೀಲಾವತಿಯಲ್ಲಿ ಬೇಕಾದಷ್ಟು ಬಂದರೂ ಆತ ಸ್ವತಂತ್ರ ಕಾಮಶಾಸ್ತ್ರ ಗ್ರಂಥ ಬರೆದಂತಿಲ್ಲ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿಯಂತೂ ಪ್ರತ್ಯೇಕ ಅಧ್ಯಾಯದಲ್ಲಿ ವೈಶಿಕವೃತ್ತಾಂತ ವರ್ಣಿತವಾಗಿದೆ.

ಆದರೆ ಅಚ್ಚಾಗದಿರುವ ಎಷ್ಟೋ ಕಾಮಶಾಸ್ತ್ರ ಗ್ರಂಥಗಳು ಇನ್ನೂ ತಾಳೆಯೋಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ಸಂಸ್ಥೆ ಮುಂತಾದ ಪ್ರಾಚೀನ ಪುಸ್ತಕ ಭಂಡಾರಗಳಲ್ಲಿ ಅಡಗಿಕೊಂಡಿವೆ. ಇವೆಲ್ಲ ಪ್ರಾಯಿಕವಾಗಿ ಶರ, ಭಾಮಿನಿ, ವಾರ್ಧಕ ಷಟ್ಪದಿಗಳಲ್ಲಿ ರಚಿತವಾದವು. ಕೆಲವು ವಾತ್ಸ್ಯಾಯನನ ಕಾಮಸೂತ್ರಕ್ಕೆ ಟೀಕೆಗಳು. ಛಂದೋಬದ್ಧವಾದ ಕೃತಿಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಬಹುದು.

**1. ಕೊಕ್ಕೋಕ ಶಾಸ್ತ್ರ :** ಇದರಲ್ಲಿ ಏಳು ಸಂಧಿಗಳು ; ಪದ್ಯ 92. ಕವಿಯ ಹೆಸರು ತಿಳಿಯದು ; ಛಂದಸ್ಸು ಷಟ್ಪದಿ. ಉದಾಹರಣೆ:

ನಲ್ಲಳನು ಕೇಳು ಬಿದಿಗೆ
ಯಲ್ಲಿ ಪಂಚಮಿಯಲ್ಲಿ ಚೌತಿ
ಯಲ್ಲಿ ಷಷ್ಠಿಯಲ್ಲಿ ಅಷ್ಟಮಿಯಲ್ಲಿ
ದ್ವಾದಶಿಯಲ್ಲಿ ದಶಮಿಯಲ್ಲಿ ಪಿರಿದು
ಪಲ್ಲವಿಪುದು ಕಾಮಕೇಳಿ
ಸಲ್ಲಲಿತಾಂಗಿಯೆನಿಪ್ಪ ಪದ್ಮಿನಿಗೆ ನಿರಂತರಂ ॥
ಅಲಘು ಜಘನದ ತೋರ
ಮೊಲೆಯ ಮೆಲ್ನುಡಿಯ ಸಮ
ವೆಲೆಯ ಹಂಸಸ್ವರದ ಹಂಸಗತಿಯ
ನೆಲೆಯುಬ್ಬಿ ಬಡವಾಗಿ
ಕೆಲವು ರೋಮವನಾಂತು
ಸಲೆಯೊಸರುತಿರ್ಪ ಕಂದರ್ಪಗೃಹದ...

**2. ಕಾಮಶಾಸ್ತ್ರ :** ಕರ್ತೃ ತಿಳಿಯದು. ಮಯೂರಪದದ ವರ್ಣನೆ; ಗದ್ಯದಲ್ಲಿದೆ.

ಎಡದ ಕೈಯುಗರ ಸಣ್ಣಮೊನೆಮಾಡಿ ಹೆಬ್ಬೆರಳಂ ತನ್ನೊಂದೊಂದ ಮುಟ್ಟಿಸಿ ಮೊಲೆಯ ಮೇಲಿಕ್ಕಿ ಮೊಲೆಯ ಮೊದಲಿಂ ಮೊಲೆಯ ಮೂಗು ಪರಿಯಂತ ಮೊಲೆಯಂಬರಂ ತೆಗೆವುದು ನವಿಲಡಿಯಾಕಾರಮಪ್ಪುದರಿಂ ಮಯೂರ ಪದವೆಂಬ ಪೆಸರಾಯಿತು.

ವೇಷ್ಟಿತವೆಂಬ ಸುರತಬಂಧ ಹೇಗೆಂದರೆ :

ಸ್ತ್ರೀ ಮೆಲ್ಲನೆ ಮಲಗಿದವಳು ತನ್ನೆರಡು ತೊಡೆಗಳ ಎಡೆಯನಗಲಿಸುತ್ತಾ ಕೂಡಾಲೊತ್ತೊತ್ತುತಿರ್ದೊಡೆ ರಮಿಸುವುದು. ಅಲ್ಲಿ ಹಿಂದಣ ಕರಣಮೆನೆ ಒಂದೊಂದು ತೊಡೆಗಳನೊಂದೊಂದು ಕೈಗಳಿಂ ಪಲ್ಲಟದಿಂದೊತ್ತಿ ರಮಿಸಲ್ಕೆ ವೇಷ್ಟಿತಮೆಂಬ ಕರಣಂ.

**3 ಜನವಶ್ಯ :** ಇದನ್ನು ಬರೆದ ಕವಿ ಕಲ್ಲರಸ. ಇದೂ ಷಟ್ಪದಿಯಲ್ಲಿದೆ. ಒಟ್ಟು ಒಂಬತ್ತು ಸಂಧಿಗಳಿವೆ. ಉದಾಹರಣೆ–ಮಂದವೇಗನ ಲಕ್ಷಣ :

ಉಗುರು ಪಲ್ಲ ಕಳೆಗಳೇಳೆ
ಬಿಗಿದು ಮೊಲೆಯೆಡೆಯೊಳು ತೋಳ
ಮೊಗದೊಳೆಸಗಿ ಲಲ್ಲೆಗರೆದು ಪೊಯ್ದು ಮುದ್ದಿಸಿ
ಬಗೆಗೆ ತಂದು ಸತಿಯನಿಚ್ಚೆ
ಯೊಗೆಯೆ ನೆರೆವನವನೆ ಕೇಳ
ಬಗಸೆಗಣ್ಣ ಪೆಣ್ಣೆ ಮಂದವೇಗನೆಂಬನು.

ಈ ಮೇಲಿನ ಉದಾಹರಣೆಗಳು ಸೂಚಿಸುವಂತೆ ಸಾಮಾನ್ಯವಾಗಿ ಕನ್ನಡ ಕಾಮಶಾಸ್ತ್ರದ ಗ್ರಂಥಗಳೆಲ್ಲ ಪತಿ ಪತ್ನಿಗೆ ಸಂಬೋಧಿಸಿ ಹೇಳಿದಂತೆ ಸಂವಾದ ಶೈಲಿಯಲ್ಲಿ ರಚಿತವಾಗಿವೆ. ಕೊಕ್ಕೋಕನ ಗ್ರಂಥವೇ ಇವರಿಗೆಲ್ಲ ಪ್ರೇರಣೆಯಿತ್ತಂತೆ ಕಾಣುತ್ತದೆ. ವಿಷಯವೆಲ್ಲ ಸಂಸ್ಕೃತ ಶಾಸ್ತ್ರದಿಂದ ಬಂದುದೇ ಆದರೂ ಹೇಳುವ ಶೈಲಿಯಲ್ಲಿ ಲಾಲಿತ್ಯ ಗಾಂಭೀರ್ಯಗಳು ಕಾಣುತ್ತವೆ. ಇವುಗಳಲ್ಲದೆ. ಗದ್ಯದಲ್ಲಿರುವ ರತಿರಹಸ್ಯ ಟೀಕು, ಅಂಗಜಬೋಧೆ, ವಾತ್ಸ್ಯಾಯನಸೂತ್ರ ಮುಂತಾದ ಗ್ರಂಥಗಳ ಹಸ್ತಪ್ರತಿಗಳೂ ಉಂಟು. ಇವು ಪ್ರಕಟಗೊಂಡರೆ ಈ ಶಾಸ್ತ್ರಭಾಗದಲ್ಲಿ ಕನ್ನಡದ ಕಾಣಿಕೆಯೇನೆಂದು ತಿಳಿಯುವಂತಾಗುತ್ತದೆ. **(ಕೆ.ಕೆ.)**

**ಕಾಮಶಿಕ್ಷಣ :** ಗಂಡು ಹೆಣ್ಣುಗಳ ಸಮಸ್ಯೆಗಳಿಗೆ ಸಂಬಂಧಿಸಿದ ಶಿಕ್ಷಣ (ಸೆಕ್ಸ್ ಎಜ್ಯುಕೇಷನ್). ಕಾಮಪ್ರವೃತ್ತಿ ಮತ್ತು ಕಾಮವರ್ತನೆಯ ಜ್ಞಾನವನ್ನೂ ಅವುಗಳ ಮೇಲೆ ವ್ಯಕ್ತಿ ಅಗತ್ಯವಾಗಿ ಸಾಧಿಸಬೇಕಾದ ಹತೋಟಿಯನ್ನೂ ಒದಗಿಸುವ ಶಿಕ್ಷಣ. ಗಂಡು ಹೆಣ್ಣುಗಳೆಂಬ ಭೇದವಿಶೇಷದ ಫಲವಾಗಿ ವಸ್ತುಸ್ಥಿತಿಯಿಂದ ಉದ್ಭವಿಸುವ ವೈಯಕ್ತಿಕ ಮತ್ತು ಸಾಮುದಾಯಿಕ ಸಮಸ್ಯೆಗಳ ಮತ್ತು ನಿಯಮಗಳ ವೈಜ್ಞಾನಿಕ ಅಧ್ಯಯನ ಇದರಲ್ಲಿ ಸೇರುತ್ತದೆ. ಅಲ್ಲದೆ ಕಾಮಾಂಗಗಳ ರಚನೆ ಮತ್ತು ಆರೋಗ್ಯಗಳ ಅಧ್ಯಯನ, ಕಾಮಜೀವನದಲ್ಲಿ ಹಿತಕರವಾದ ಹೊಂದಿಕೆಯ ಜ್ಞಾನ–ಇವೂ ಸೇರುತ್ತವೆ. ವ್ಯಕ್ತಿಯ ಪರಿಸರ ವಿದ್ಯೆ, ವಯೋಮಾನಗಳಿಗೆ ಅನುಗುಣವಾಗಿ, ಹಂತಹಂತವಾಗಿ ಈ ಶಿಕ್ಷಣವನ್ನು ಒದಗಿಸಬೇಕಾಗುತ್ತದೆ.

ಸದ್ಯದಲ್ಲಿ ಸತಿಪತಿಯರ ಸಮಾಗಮ, ಸಂತಾನೋತ್ಪತ್ತಿ, ಜನನಾಂಗಗಳು, ಕಾಮಪ್ರಚೋದನೆ, ಗರ್ಭ–ಇತ್ಯಾದಿ ವಿಷಯಗಳ ಬಗ್ಗೆ ಮಕ್ಕಳಿಗೆ ಸಕ್ರಮವಾಗಿ ಏನನ್ನೂ ಬೋಧಿಸುತ್ತಿಲ್ಲ. ಈ ವಿಷಯಗಳನ್ನೆಲ್ಲ ಬಹು ಗುಟ್ಟಾಗಿ ಇಡಲಾಗಿದೆ. ಇವುಗಳ ಬಗ್ಗೆ ಮಕ್ಕಳು ಏನನ್ನು ಕೇಳಲೂ ಹೆದರುತ್ತವೆ. ನಾಚುತ್ತವೆ. ಸೂಕ್ತ ಮಾರ್ಗದರ್ಶನವಿಲ್ಲದಲ್ಲಿ ಮಕ್ಕಳ ಮನಸ್ಸು ತಮಗೆ ತೋರಿದ ದಾರಿಯಲ್ಲಿ ಅಂದರೆ ಅಹಿತಕರವಾದ ದಾರಿಯಲ್ಲಿ ಹರಿಯುವ ಸಂಭವವುಂಟು. ಲೈಂಗಿಕ ಸ್ವಚ್ಛತೆ, ಅವುಗಳ ಬೆಳೆವಣಿಗೆಯ ಉದ್ದೇಶ, ಮದುವೆ, ಸಂಭೋಗ, ಸಂತಾನ ಮೊದಲಾದವುಗಳ ಪರಸ್ಪರ ಸಂಬಂಧ–ಇತ್ಯಾದಿ ವಿಷಯಗಳನ್ನು ಶಾಸ್ತ್ರೀಯವಾಗಿ ತಿಳಿಯುವುದೂ ವಿದ್ಯಾಭ್ಯಾಸದ ಮುಖ್ಯ ಅಂಗವೇ ಆಗಿದೆ. ಸರಿಯಾದ ತಿಳಿವಳಿಕೆಯಿಂದ ಮಕ್ಕಳು ಯುಕ್ತಮಾರ್ಗ ಪ್ರವರ್ತಕರಾಗಲು ಸಾಧ್ಯವಾಗುತ್ತದೆ.

ಸರಿಯಾದ ಕಾಮಶಿಕ್ಷಣದಿಂದ ಮುಂದಿನ ವೈವಾಹಿಕ ಜೀವನ ಸುಗಮವಾಗುವುದಲ್ಲದೆ, ವಿವಾಹಾನಂತರದ ವಿರಸಗಳು, ವಿವಾಹವಿಚ್ಛೇದನ, ವ್ಯಭಿಚಾರ–ಮೊದಲಾದ ಅಕೃತ್ಯಗಳು ತಪ್ಪುತ್ತವೆಂದು ಕೆಲವರ ಮತ. ಏನಿಲ್ಲದಿದ್ದರೂ ವಿವಾಹಕ್ಕೆ ಮೊದಲು ಯುವಕ ಯುವತಿಯರು

ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆಯಂತೂ ಸರಿಯಾದ ಮಾರ್ಗದರ್ಶನ ನೀಡಬೇಕಾದುದು ಅಗತ್ಯವೆನಿಸುತ್ತದೆ.

ಕಾಮ ಎನ್ನುವುದು ಜೀವನದಲ್ಲಿ ಬಹುಮುಖ್ಯವಾದ ಒಂದು ಶಕ್ತಿಭಂಡಾರ. ಅದನ್ನು ಗಿರಿನಿರ್ಝರದಂತೆ ಹರಿದು ಬರಿದಾಗಲು ಬಿಡದೆ ಅದಕ್ಕೆ ಅಣೆ ನಿರ್ಮಿಸಿ ಯೋಗ್ಯವಾದ ರೀತಿಯಲ್ಲಿ ಬಳಸಿಕೊಂಡಲ್ಲಿ ಮನುಷ್ಯ ದೃಢಕಾಯನಾಗಿ ಆರೋಗ್ಯದಿಂದ ಬಹುಕಾಲ ಬದುಕುತ್ತಾನೆ, ಅವನಿಂದ ಪ್ರತಿಭಾನ್ವಿತವಾದ ಕೆಲಸಗಳು ಜರುಗುತ್ತವೆ. ಹೀಗೆಂದು ಪ್ರಸಿದ್ಧ ಮಾನವಶಾಸ್ತ್ರಜ್ಞರಾದ ಅಲೆಕ್ಸಿಸ್ ಕ್ಯಾರಲ್, ವಿಲ್ ಡು ರಾನ್ಸ್ ಮೊದಲಾದವರು ಹೇಳಿದ್ದಾರೆ. ಬರ್ಟ್‌ರೆಂಡ್ ರಸಲ್ ಮೊದಲಾದವರು ಯುವಜನಾಂಗಕ್ಕೆ ಯುಕ್ತ ಲೈಂಗಿಕ ಶಿಕ್ಷಣದೊಂದಿಗೆ ಲೈಂಗಿಕ ಅನುಭವವೂ ಅಗತ್ಯವೆಂದು ಹೇಳುತ್ತಾರೆ.

ಕಾಮಶಿಕ್ಷಣ ಕೊಡುವುದು ಕೇವಲ ಉಪಾಧ್ಯಾಯರ ಕರ್ತವ್ಯವೆಂದು ಕೆಲವರು ಹೇಳುವರು. ಯೋಗ್ಯ ಉಪಾಧ್ಯಾಯರ ಅಗತ್ಯವೆಂಬ ಮಾತನ್ನು ಒಪ್ಪಬಹುದಾದರೂ ಈ ಬಗ್ಗೆ ತಂದೆತಾಯಿಯರ, ಸಮಾಜದ ಹಿರಿಯರ ಕರ್ತವ್ಯ ಎಷ್ಟು ಮುಖ್ಯವೆಂಬುದನ್ನೂ ನಾವು ಗಮನಿಸಬೇಕು. ಮಕ್ಕಳ ಸಂಕೋಚಕ್ಕೆ ಎಡೆಗೊಡದಂತೆ, ಅವರವರ ಯೋಗ್ಯತೆಗೆ ಮೀರದಷ್ಟು ಲೈಂಗಿಕ ಜ್ಞಾನವನ್ನು ತಂದೆತಾಯಿಗಳು ಕೊಡಬೇಕಾಗುತ್ತದೆ. ಶಾಲೆಯಲ್ಲಿ ಈ ಶಿಕ್ಷಣಕ್ಕೆಂದು ಪ್ರತ್ಯೇಕವಾದ ಸ್ಥಳ, ಕಾಲಗಳನ್ನು ನಿಗದಿಮಾಡುವ ಅಗತ್ಯ ಕಾಣದು. ಸಸ್ಯ ಮತ್ತು ಪ್ರಾಣಿಶಾಸ್ತ್ರಗಳನ್ನು ಬೋಧಿಸುವಾಗ, ಕಾವ್ಯಪುರಾಣಾದಿಗಳ ಪ್ರಸಂಗಗಳು ಬಂದಾಗ ಉಚಿತವೆನಿಸುವಷ್ಟು ವಿಷಯಗಳನ್ನು ಉಪಾಧ್ಯಾಯ ತಿಳಿಸಬಹುದು. ವ್ಯಾಯಾಮರಂಗ, ಆಟದ ಮೈದಾನ, ಆರೋಗ್ಯಪಾಠದ ವೇಳೆ–ಇವು ಕಾಮಶಿಕ್ಷಣಕ್ಕೆ ಒಳ್ಳೆಯ ಸಮಯವೆನಿಸಿವೆ.

ಈ ವಿಷಯಗಳನ್ನು ಕಾಮಶಿಕ್ಷಣವೆನ್ನದೆ ಬ್ರಹ್ಮಚರ್ಯ ಪಾಲನೆ ಎಂದು ತಿಳಿದಲ್ಲಿ ಹೇಳುವವರಿಗೂ ಕೇಳುವವರಿಗೂ ಹೆಚ್ಚಿನ ಶ್ರದ್ಧೆ, ಗಾಂಭೀರ್ಯ ಮೂಡಬಹುದು. ವಿವಾಹಕ್ಕೆ ಮೊದಲು ಯುಕ್ತ ಬ್ರಹ್ಮಚರ್ಯಪಾಲನೆಯಿಂದಲೂ ಅನಂತರ ಸದ್ಗೃಹಸ್ಥ ಧರ್ಮಾಚರಣೆಯಿಂದಲೂ ನಮ್ಮ ಮಕ್ಕಳು ಬೆಳೆದು ಬಾಳುವಂತೆ ಮಾಡುವುದೇ ಲೈಂಗಿಕ ಶಿಕ್ಷಣದ ಮುಖ್ಯೋದ್ದೇಶವಾಗಬೇಕು.

ಈ ಬಗ್ಗೆ ಅಮೆರಿಕ ಮತ್ತು ಯುರೋಪಿನ ಅನೇಕ ಕಡೆಗಳಲ್ಲಿ ಹೆಚ್ಚಿನ ವ್ಯಾಸಂಗ ಮತ್ತು ಸಂಶೋಧನೆಗಳು ನಡೆಯುತ್ತಿವೆ. ಇಂಥ ಶಿಕ್ಷಣದ ಅಗತ್ಯದ ಬಗ್ಗೆ ಎಲ್ಲರೂ ಒಮ್ಮತದ ಒಪ್ಪಿಗೆ ಕೊಟ್ಟಿದ್ದಾರೆನ್ನುವುದು ಪ್ರಕೃತ ಮುಖ್ಯವಾದ ಅಂಶ. ಕಾಮ ಶಿಕ್ಷಣ ಜಟಿಲವಾದ ವಿಷಯವ್ಯಾಪ್ತಿ ಹೊಂದಿರುವ ಶಿಕ್ಷಣ. ಇದನ್ನು ಯಾವ ವಯೋಮಾನದವರಿಗೆ ಎಷ್ಟೆಷ್ಟು ಬೋಧಿಸಬೇಕೆಂಬುದರ ಬಗ್ಗೆ ಚರ್ಚೆಗಳು ಮತ್ತು ಸಂಶೋಧನೆಗಳು ನಡೆಯುತ್ತಲೇ ಇವೆ. ಇದನ್ನು ಒಂದು ಉಪಯುಕ್ತ ಶಿಸ್ತಾಗಿ ರೂಪಿಸುವ ಅಗತ್ಯವಿದೆ. (ಬಿ.ವಿ.ಆರ್.)

**ಕಾಮಳ್ಳಿ :** ಪಕ್ಷಿವರ್ಗದ ಸ್ಟರ್ನಿಡೀ ಕುಟುಂಬಕ್ಕೆ ಸೇರಿದ ಸುಂದರವಾದ ಹಕ್ಕಿ. ಇದರ ವೈಜ್ಞಾನಿಕ ನಾಮ ಗ್ರಾಕ್ಯುಲ ರಿಲಿಜಿಯೋಸ (ಗ್ರಾಕಲ್ ಅಥವಾ ಹಿಲ್ ಮೈನ).

ಇದರ ದೇಹದ ಬಣ್ಣ ಮಿರುಗುವ ಅಚ್ಚಕಪ್ಪು. ರೆಕ್ಕೆಗಳ ಮೇಲೆ ಎದ್ದುಕಾಣುವ ಬಿಳಿಯ ಮಚ್ಚೆಗಳಿವೆ. ಕೊಕ್ಕು ಮತ್ತು ಕಾಲುಗಳು ಹಳದಿ ಬಣ್ಣದವು. ತಲೆಯ ಮೇಲೆ ಕಿತ್ತಳೆ–ಹಳದಿ ಬಣ್ಣದ ಬೆತ್ತಲೆಯಾದ ಮಾಂಸಲ ಭಾಗವಿದೆ (ವ್ಯಾಟಲ್). ಗಂಡು ಹೆಣ್ಣು ಹಕ್ಕಿಗಳೆರಡೂ ಒಂದೇ ರೀತಿ ಇವೆ. ಸಾಮಾನ್ಯವಾಗಿ ನಿತ್ಯ ಹರಿದ್ವರ್ಣ ಕಾಡುಗಳು ಮತ್ತು ಬೆಟ್ಟಗಳಲ್ಲಿ ವಾಸಿಸುತ್ತವೆ. 350 ರಿಂದ 1200 ಮೀ. ಎತ್ತರದ ಗುಡ್ಡಗಾಡುಗಳಲ್ಲಿ ಇವುಗಳ ವ್ಯಾಪ್ತಿ ಹೆಚ್ಚು.

ಕಾಮಳ್ಳಿಗಳು ವೃಕ್ಷವಾಸಿಗಳು. ಸಾಧಾರಣವಾಗಿ ಗಂಡು ಹೆಣ್ಣು ಹಕ್ಕಿಗಳು ಜೊತೆಯಾಗಿಯೊ ಇಲ್ಲವೆ ಸಣ್ಣಸಣ್ಣ ಗುಂಪುಗಳಲ್ಲಿಯೊ ಇರುತ್ತವೆ. ಇವುಗಳ ಆಹಾರ ಅತ್ತಿ, ಅಂಜೂರ ಮುಂತಾದ ಹಣ್ಣುಗಳು ಮತ್ತು ಹೂವಿನ ಮಕರಂದ. ಬಲು ಗಲಾಟೆ ಸ್ವಭಾವದವಾದ ಇವು ಕೀರಲು ಧ್ವನಿಯಿಂದ ಯಾವಾಗಲೂ ಕೂಗುತ್ತಿರುತ್ತವೆ. ಬಹಳ ಚೆನ್ನಾಗಿ ಇತರ ಹಕ್ಕಿಗಳ ಕೂಗನ್ನಿವು ಅನುಕರಿಸಬಲ್ಲುವು. ಅಲ್ಲದೆ ಇವಕ್ಕೆ ಗಿಳಿಗಳಂತೆ ಮಾತನಾಡುವುದನ್ನೂ ಕಲಿಸಬಹುದು. ಇದರಿಂದ ಪಂಜರದ ಹಕ್ಕಿಗಳಾಗಿ ಇವನ್ನು ಸಾಕುವುದೂ ಉಂಟು.

ಮಾರ್ಚ್–ಅಕ್ಟೋಬರ್ ತಿಂಗಳುಗಳ ಅವಧಿಯಲ್ಲಿ ಇವು ಗೂಡು ಕಟ್ಟುತ್ತವೆ. ಎತ್ತರವಾದ ಮರಗಳ ಪೊಟರೆಗಳಲ್ಲಿ ಹುಲ್ಲು, ಎಲೆ, ಗರಿಗಳನ್ನು ಜೋಡಿಸಿ ಗೂಡು ಕಟ್ಟುವುದು ವಾಡಿಕೆ. ಮೊಟ್ಟೆಗಳ ಸಂಖ್ಯೆ 2–3; ಬಣ್ಣ ಗಾಢನೀಲಿ. ಅಲ್ಲಲ್ಲಿ ಕೆಂಪು ಮಿಶ್ರಿತ ಕಂದು ಬಣ್ಣದ ಅಥವಾ ಚಾಕೊಲೇಟ್ ಬಣ್ಣದ ಮಚ್ಚೆಗಳಿವೆ.

ಕಾಮಳ್ಳಿಗಳಲ್ಲಿ ಸುಮಾರು 5 ಬಣಗಳಿವೆ: ಹಿಮಾಲಯದ ಬುಡದ ಬೆಟ್ಟಗಳ ಶ್ರೇಣಿಯಲ್ಲಿ ಅಲ್ಮೋರದಿಂದ ಅಸ್ಸಾಮಿನವರೆಗೆ ಒಂದು ಬಣ ವ್ಯಾಪಿಸಿದೆ. ಇನ್ನೊಂದು ಒರಿಸ್ಸ ಮಧ್ಯಪ್ರದೇಶದ ಆಗ್ನೇಯ ಭಾಗದಲ್ಲಿ ಕಾಣಬರುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಮತ್ತೊಂದು ಬಣ ಕಾಣಸಿಗುತ್ತದೆ. ಅಂಡಮಾನ್ ದ್ವೀಪಗಳು ಸಿಂಹಳ ಮತ್ತು ದಕ್ಷಿಣ ಬರ್ಮ(ಇಂದಿನ ಮಯನ್ಮಾರ್)ಗಳಲ್ಲಿ ಒಂದು ಬಗೆಯ ಕಾಮಳ್ಳಿ ವಾಸಿಸುತ್ತದೆ. (ವಿ.ಕೆ.ವಿ.)

**ಕಾಮಾಕ್ಷಿ :** ಶೈವರ ತುಂಬ ಮೆಚ್ಚಿನ ದೇವತೆ. ದೇವತೆಗಳನ್ನು ಅಸುರರ ಹಿಂಸೆಯಿಂದ ಉಳಿಸಲು ಬಿಲಾಕಾಶವೆಂಬ ದ್ವಾರದಿಂದ ಕಾಮಾಕ್ಷಿ ಮೈದೋರಿದುದಾಗಿ ಹೇಳಲಾಗಿದೆ. ಭಾರತದ ಪ್ರಮುಖ ಶೈವಶಕ್ತಿಪೀಠಗಳಾದ ಮಧುರೆ, ಕಂಚಿ, ಮತ್ತು ಕಾಶಿ ಈ ಸ್ಥಳಗಳಲ್ಲಿ ಮೀನಾಕ್ಷಿ, ಕಾಮಾಕ್ಷಿ ಮತ್ತು ವಿಶಾಲಾಕ್ಷಿ ಎಂಬ ಹೆಸರುಗಳಿಂದ ಪೂಜೆಗೊಳ್ಳುವ ಆದಿಶಕ್ತಿರೂಪಿಣಿಯಾದ ಕಾಮಾಕ್ಷಿಯನ್ನು ದೂರ್ವಾಸ, ಪರಶುರಾಮ, ಧೌಮ್ಯ ಮುಂತಾದ ಋಷಿಗಳು ಪೂಜಿಸಿದರೆಂದು ಪ್ರತೀತಿಯಿದ್ದರೂ ಕಂಚಿಯ ಕಾಮಾಕ್ಷಿ ವಿಗ್ರಹವನ್ನೂ ಅದರ ಮುಂದಿರುವ ಶ್ರೀಚಕ್ರವನ್ನೂ ಶಂಕರಾಚಾರ್ಯರು ಪ್ರತಿಷ್ಠಾಪಿಸಿದಂತೆ ತಿಳಿದುಬರುತ್ತದೆ. ಕಂಚಿಯ ಈ ಪ್ರಸಿದ್ಧ ದೇವಾಲಯದ ಮುಖ್ಯ ಪೂಜೆಗಳೆಲ್ಲವೂ ಈ ಶ್ರೀಚಕ್ರಕ್ಕೆ ನಡೆಯುತ್ತವೆ. ದೇವಿಯ ಸನ್ನಿಧಿಗೆ ಕಾಮಕೋಟಿ ಪೀಠವೆಂದು ಹೆಸರು. (ಜೆ.ಎಚ್.)

**ಕಾಮಾಲೆ :** ರಕ್ತದಲ್ಲಿ ಮಿತಿಮೀರಿದ ಬಿಲಿರುಬಿನ್ ಇದ್ದಾಗ ಉಂಟಾಗುವ ಒಂದು ರೋಗ ಲಕ್ಷಣ (ಜಾಂಡೀಸ್). ಕಣ್ಣು ಮತ್ತು ಚರ್ಮ ಹಳದಿ ಬಣ್ಣ ತಳೆಯುವುದರಿಂದ ಇದು ಸ್ಪಷ್ಟವಾಗಿ ಪ್ರಕಟವಾಗುವುದು. ಅನೇಕ ವೇಳೆ ರೋಗಿಗಿಂತ ಮೊದಲು ಆತನನ್ನು ನೋಡಿದ ಇತರರು ಈ ರೋಗವನ್ನು ಗುರುತಿಸುವುದುಂಟು. ಕೆಂಪು ರಕ್ತ ಕಣಗಳಲ್ಲಿನ ಹೀಮೋಗ್ಲೋಬಿನ್ ಕುಗ್ಗುವಿಕೆಯಿಂದ ಅಂದರೆ (ಬಲಹೀನಗೊಳ್ಳುವುದರಿಂದ) ಉಂಟಾಗುವ ಹಳದಿಯ ವರ್ಣದ್ರವ್ಯವಾದ ಬೈಲಿರುಬಿನ್ ಪಿತ್ತಜನಕಾಂಗದಿಂದ ಒಂದು ನಾಳದ ಮೂಲಕ ಹೊರಕ್ಕೆ ವಿಸರ್ಜಿತವಾಗುವುದು. ಮುಂದೆ ಹೇಳಿರುವ ಮೂರು ಕಾರಣಗಳಿಗೆ ಅನುಸಾರವಾಗಿ ಕಾಮಾಲೆ ರೋಗವನ್ನು ಮೂರು ಬಗೆಗಳಾಗಿ ವರ್ಗೀಕರಿಸಿದೆ: 1 ಹೀಮೋಗ್ಲೋಬಿನ್ನಿನ ಅತೀವ ಆರೋಗ್ಯಹೀನತೆಯಿಂದ ಬರುವುದು ಹೀಮೋಲಿಟಿಕ್ ಕಾಮಾಲೆ, 2 ಪಿತ್ತಜನಕಾಂಗಗಳಿಗೆ ಸಂಬಂಧಪಟ್ಟ ಕಾಯಿಲೆಯ ಪರಿಣಾಮವಾಗಿ ಪಿತ್ತರಸದ ವಿಸರ್ಜನೆಗೆ ಅಡಚಣೆಯುಂಟಾದಾಗ ಬರುವುದು. ಹಿಪೆಟಿಕ್ ಕಾಮಾಲೆ, 3 ಪಿತ್ತರಸನಾಳಕ್ಕೆ ತಡೆಯುಂಟಾಗಿ, ಹಿಂದಿನಿಂದ ಒತ್ತಡವಾಗಿ ರಕ್ತದಲ್ಲಿ ಹೆಚ್ಚು ಹೆಚ್ಚಾಗಿ ಬೈಲಿರುಬಿನ್ನಿನ ಸಂಗ್ರಹಣೆ ಆದಾಗ ಬರುವುದು ತಡೆ (ಅಬ್‌ಸ್ಟ್ರಕ್ಟಿವ್) ಕಾಮಾಲೆ.

ಮೊದಲನೆಯ ಬಗೆಯಲ್ಲಿ ರೋಗಿಯ ರಕ್ತದಲ್ಲಿ ಬೈಲಿರುಬಿನ್ ಪ್ರಮಾಣ ಅಧಿಕವಾಗುವುದು. ಎರಡನೆಯ ಬಗೆಯದಾದ ಹಿಪೆಟಿಕ್ ಕಾಮಾಲೆ ಸರ್ವೇ ಸಾಮಾನ್ಯ. ಇದು ಸೋಂಕು ರೋಗ. ಒಂದು ಬಗೆಯ ಸೂಕ್ಷ್ಮ ವಿಷಕೀಟಾಣುಗಳಿಂದ ಇದು ಹರಡುತ್ತದೆ. ತಡೆ ಕಾಮಾಲೆಯಲ್ಲಿ ಹೆಸರೇ ಸೂಚಿಸುವಂತೆ ಪಿತ್ತರಸದ ವಿಸರ್ಜನೆಗೆ ತಡೆಯುಂಟಾಗುವುದು. ಆದ್ದರಿಂದ ಪಿತ್ತರಸವೂ ಅದರೊಡನೆ ಸೇರಿರುವ ಮತ್ತಿತರ ಪಿತ್ತಜನಾಕಾಂಗದ ರಸಗಳೂ ರಕ್ತದಲ್ಲಿಯೇ ಉಳಿಯುತ್ತವೆ. ಈ ತಡೆಗೆ ಪಿತ್ತನಾಳದ ಅಕ್ಕಪಕ್ಕದ ನಿರ್ನಾಳ ಗಂಟಿನ ಒತ್ತಡವೂ ಕಾರಣ.

ರೋಗದ ಚಿಹ್ನೆಗಳು ಮತ್ತು ವೇದನೆಗಳು : ರೋಗಿಯ ಚರ್ಮ, ಕಣ್ಣಿನ ಆರ್ದ್ರಚರ್ಮ, ಬೆವರು ಮತ್ತು ಮೂತ್ರ ಹಳದಿ ಬಣ್ಣಕ್ಕೆ ತಿರುಗುತ್ತವೆ. ಪಿತ್ತರಸದ ಲವಣಗಳು ಸಹ ರಕ್ತದಲ್ಲಿ ಸಂಗ್ರಹಿತವಾಗುತ್ತ ಹೋದಲ್ಲಿ ರೋಗಿಗೆ ಮೈ ಇಡೀ ತುರಿಕೆಯ ಅನುಭವವಾಗುವುದು. ರೋಗ ಪಿತ್ತಜನಕಾಂಗಕ್ಕೆ ಸಂಬಂಧಪಟ್ಟಲ್ಲಿ ಕೆ ಜೀವಾತುವಿನ ಅಭಾವದಿಂದ, ಮೂಗು ಮತ್ತು ವಸಡುಗಳಿಂದ ರಕ್ತಸ್ರಾವವಾಗುವುದು. (ಕೆ.ಎಸ್.ಎಸ್.ಎಚ್.)

**ಕಾಮಾಲೆ ಹಕ್ಕಿ :** ಪಕ್ಷಿವರ್ಗದ ಪ್ಯಾಸೆರಿಫಾರ್ಮೀಸ್ ಗಣದ ಓರಿಯೋಲಿಡೀ ಕುಟುಂಬಕ್ಕೆ ಸೇರಿದ ಚೆಲುವಾದ ಹಕ್ಕಿ (ಗೋಲ್ಡನ್ ಓರಿಯೋಲ್); ಶಾಸ್ತ್ರೀಯ ನಾಮ



ಓರಿಯೋಲಸ್. ಹೊಳೆಯುವ ಹೊನ್ನಿನ ಮೈಬಣ್ಣ, ಕಪ್ಪನೆಯ ಬಾಲ ಹಾಗೂ ರೆಕ್ಕೆಗಳು ಮತ್ತು ಕಣ್ಣಿನ ಆಚೀಚೆ ಇರುವ ಕಪ್ಪುಬಣ್ಣದ ಪಟ್ಟಿ–ಇವುಗಳಿಂದಾಗಿ ಹೊನ್ನಕ್ಕಿ ಬಲು ಸುಂದರವಾಗಿ ಕಾಣುತ್ತದೆ. ಹೆಣ್ಣು ಹಕ್ಕಿಯ ಬಣ್ಣ ಹಸಿರುಮಿಶ್ರಿತ; ನೋಡಲು ಗಂಡಿನಷ್ಟು ಚೆಲುವಾಗಿಲ್ಲ. ಹೊನ್ನಕ್ಕಿಯ ವಾಸ ತೋಟಗಳಲ್ಲಿ ಮತ್ತು ಕಾಡುಗಳಲ್ಲಿ. ಇದರ ಆಹಾರ ಮುಖ್ಯವಾಗಿ ಕೀಟಗಳು ಮತ್ತು ವಿವಿಧ ಬಗೆಯ ಹಣ್ಣುಗಳು. ಹೂವಿನ ಮಕರಂದವನ್ನೂ ಕುಡಿಯುತ್ತದೆ. ಸಾಮಾನ್ಯವಾಗಿ ಒಂಟಿಯಾಗಿಯೋ ಜೋಡಿಯಾಗಿಯೋ ಇರುವುದಾದರೂ ಆಸ್ಟ್ರೇಲಿಯದಲ್ಲಿನ ಕೆಲವು ಬಗೆಯವು ದೊಡ್ಡ ಗುಂಪುಗಳಲ್ಲಿರುವುದುಂಟು. ಪುಕ್ಕಲು ಸ್ವಭಾವದ್ದಾದರೂ ಸದಾ ಚಟುವಟಿಕೆಯಿಂದಿರುವ ಹಕ್ಕಿಯಿದು. ಹೊನ್ನಕ್ಕಿಗೆ ಮಧುರವಾದ ಕೊಳಲುಲಿಯಂಥ ಸ್ವರ ಇದೆ. ಬೆಳಗ್ಗೆ ಮತ್ತು ಸಂಜೆ ಹಾಡುತ್ತ ಕಾಲಕಳೆಯುತ್ತದೆ. ಕಾಮಾಲೆ ಹಕ್ಕಿಯನ್ನು ಹೊನ್ನ ಹಕ್ಕಿ ಎಂದು ಕರೆಯುತ್ತಾರೆ.

ಏಪ್ರಿಲ್–ಮೇ ತಿಂಗಳ ಅವಧಿಯಲ್ಲಿ ಇವು ಗೂಡು ಕಟ್ಟುತ್ತವೆ. ಹುಲ್ಲು, ನಾರು ಮತ್ತು ಜೇಡನ ಬಲೆಯ ಎಳೆಗಳನ್ನುಪಯೋಗಿಸಿ ಬಟ್ಟಲಿನಾಕಾರದ ಗೂಡುಗಳನ್ನು ಕಟ್ಟಿ ಮರದ ಕೊಂಬೆಗಳಿಗೆ ಜೋಲಿಯಂತೆ ತೂಗು ಹಾಕುವುದು ಈ ಹಕ್ಕಿಯ ವಿಶೇಷತೆ. ಮೊಟ್ಟೆಗಳ ಸಂಖ್ಯೆ 2–3. ಗಂಡುಹೆಣ್ಣುಗಳೆರಡೂ ಕಾವುಕೊಟ್ಟು ಮರಿಮಾಡುತ್ತವಲ್ಲದೆ ಮರಿಗಳ ಪಾಲನೆಯನ್ನೂ ಮಾಡುತ್ತವೆ.

ಹೊನ್ನಕ್ಕಿ, ಭಾರತದ ಮೈದಾನ ಪ್ರದೇಶಗಳ ಕಾಡುಗಳು, ಹಿಮಾಲಯದ 5000' ಎತ್ತರದ ಪ್ರದೇಶಗಳು, ಶ್ರೀಲಂಕ, ಯುರೋಪುಗಳಲ್ಲೆಲ್ಲ ವ್ಯಾಪಿಸಿದೆ. ವಲಸೆಗಾರ ಹಕ್ಕಿಯಾದ ಇದು ಬೇಸಗೆಯಲ್ಲಿ ರಷ್ಯದ ಇರ್ಕುಟ್ಸ್ಕ್‌ವರೆಗೂ ಚಳಿಗಾಲದಲ್ಲಿ ದಕ್ಷಿಣ ಆಫ್ರಿಕದವರೆಗೂ ವಲಸೆ ಹೋಗುತ್ತದೆ. ಭಾರತದಲ್ಲಿ ಓರಿಯೋಲಸ್ ಇರಿಯೋಲಸ್ ಕುಂದು ಎಂಬ ಒಂದು ಬಗೆಯಿದೆ. ಇದು ಬೇಸಗೆಯಲ್ಲಿ ಕಾಶ್ಮೀರದ ವರೆಗೂ ಪ್ರಯಾಣಮಾಡುತ್ತದೆ.

ಪಶ್ಚಿಮ ಘಟ್ಟಗಳಲ್ಲಿ ಮೂರು ಬಗೆಯ ಹೊನ್ನಕ್ಕಿಗಳು ಕಂಡುಬರುತ್ತದೆ. ಯುರೇಷಿಯಾದ ಹೊನ್ನಕ್ಕಿ (ಓರಿಯೋಲಸ್ ಓರಿಯೋಲಸ್), ಕಪ್ಪುತಲೆ ಹೊನ್ನಕ್ಕಿ (ಓರಿಯೋಲಸ್ ಜ಼ಾನ್‌ಥೊರ್‍ನಸ್), ಮತ್ತು ಕಪ್ಪು ನೆತ್ತಿಯ ಹೊನ್ನಕ್ಕಿ (ಓರಿಯೋಲಸ್ ಚೈನೆನ್ಸಿಸ್) (ವಿ.ಕೆ.ವಿ.)

**ಕಾಮಿಡಿ ಆಫ್ ಮ್ಯಾಂಟಲ್ ಅಂಡ್ ಸ್ವೋರ್ಡ್ :** ಅಭಿಜಾತ ಮಾರ್ಗವನ್ನನುಸರಿಸಿ ಬರೆದ ಸ್ಪೇನ್ ದೇಶದ ಒಂದು ಬಗೆಯ ವಿನೋದನಾಟಕ. ಇಂಥ ನಾಟಕಗಳನ್ನು ಹೆಚ್ಚಾಗಿ ಬರೆದ ಕೀರ್ತಿ ಸ್ಪೇನಿನ ಲೋಪೇ ದೇ ವೇಗ (1510 ? –1565) ಎಂಬುವನಿಗೆ ಸೇರಿದ್ದು. ರಸಿಕರಾದ ಸೈನಿಕರು, ದುರ್ಬಲಾನುಕಂಪೆಯುಳ್ಳ ರಾಹುತರು, ಮುಂತಾದವರು ನಾಟಕದಲ್ಲಿ ಬರುವ ಪ್ರಮುಖ ಪಾತ್ರಗಳು. ಪಾತ್ರಗಳು ಸಡಿಲವಾದ ಪೋಷಾಕನ್ನು ಧರಿಸಿ ಕತ್ತಿಹಿಡಿದು ಬರುತ್ತಿದ್ದುದರಿಂದ ಈ ಬಗೆಯ ವಿನೋದನಾಟಕಗಳಿಗೆ ಈ ಹೆಸರು ಬಂತು. ಈ ಸೊಗಸುಗಾರರು ಶ್ರೀಮಂತ ಸ್ತ್ರೀಯರನ್ನು ಪ್ರೀತಿಸಿ ಅವರಿಗೋಸ್ಕರ ಅಥವಾ ತಮ್ಮ ಆತ್ಮಗೌರವಕ್ಕೋಸ್ಕರ ಕಾದಾಡಲು ತವಕಿಸುತ್ತಾರೆ. ಅನೇಕ ವೇಳೆ ತಮ್ಮ ಹೆಂಡಿರನ್ನು ಕೊಂದು ತಮ್ಮ ಪ್ರೇಮವನ್ನು ಪ್ರದರ್ಶಿಸುವುದಕ್ಕೂ ಸಿದ್ಧ. ಮುಖ್ಯ ಪಾತ್ರಗಳ ಒಂದು ರೀತಿಯ ವೀರತ್ವ ಸ್ತ್ರೀಲೋಲುಪತೆ, ಸ್ತ್ರೀಯ ಗೌರವಕ್ಕಾಗಿ ಕಾದಾಡುವುದು; ಸೇವಕರು ಮತ್ತಿತ್ತರ ಗೌಣ ಪಾತ್ರಗಳ ಮಾತಿನ ಚಮತ್ಕಾರ, ಚಾಲಾಕಿನ ಹೆಂಗಸರು ಗಂಡಸರನ್ನು ಮೋಜಿನ ಪ್ರಸಂಗಗಳಲ್ಲಿ ಸಿಕ್ಕಿಬೀಳುವಂತೆ ಮಾಡುವುದು–ಇವು ಈ ವಿನೋದನಾಟಕಗಳಲ್ಲಿ ಆಗಾಗ ಬರುವ ಘಟನೆಗಳು. ಇಂಥ ಘಟನೆಗಳನ್ನು ಪಾತ್ರಗಳನ್ನೂ ನಾವು ಸರ್ವಾಂಟೀಸನ ಡಾನ್ ಕ್ವಿಕ್ಸಟ್ ಕಾದಂಬರಿಯಲ್ಲೂ ಕಾಣುತ್ತೇವೆ. (ಎಚ್.ಕೆ.ಆರ್.)

**ಕಾಮೋತ್ತೇಜಕ :** ವಿಷಯಾಸಕ್ತಿಯನ್ನೂ ಸಂಭೋಗ ಸಾಮರ್ಥ್ಯವನ್ನೂ ಉದ್ರೇಕಿಸಲು ಉಪಯೋಗಿಸುವ ವಸ್ತು (ಅಫ್ರೊಡಿಸ್ರೀಯಕ್). ಕಾಮೋತ್ತೇಜಕಗಳಲ್ಲಿ ಎರಡು ವಿಧ : ದೈಹಿಕ ಮತ್ತು ಮಾನಸಿಕ ವ್ಯಾಪ್ತಿಯುಳ್ಳ ದೃಷ್ಟಿ, ಗಂಧ, ಸ್ಪರ್ಶ ಮುಂತಾದ ಇಂದ್ರಿಯ ಜ್ಞಾನಗಳ ಉಪಯೋಗವನ್ನು ಪಡೆಯುವವು ; ಆಹಾರಗಳು, ಮೂಲಿಕೆಗಳು, ಔಷಧಗಳು, ಮದ್ಯಸಾರಗಳು ಮತ್ತು ಅನುರತಿಪೇಯಗಳು–ದೇಹದ ಒಳಗೆ ಸೇರಿ ಕೆಲಸ ಮಾಡುವಂಥವು.

ಕಾಮೋತ್ತೇಜಕಗಳನ್ನು ಕುರಿತ ಯಾವುದೇ ವಿಧವಾದ ಶಾಸ್ತ್ರಗ್ರಂಥಗಳೂ ಉಪಲಬ್ಧವಾಗಿಲ್ಲ. ಜೀವರಾಸಾಯನಿಕವಾಗಿ ಹೇಳುವುದಾದರೆ ಯಾವ ಆಹಾರ ವಸ್ತುವೂ ಕಾಮೋತ್ತೇಜಕವಲ್ಲ. ಹಾಗಿದ್ದರೂ ಆಕಾರ ಸಾಮ್ಯ ರುಚಿವೈವಿಧ್ಯಗಳನ್ನು ಲಕ್ಷಿಸಿ ಮಾನವ ಆಹಾರ ವಸ್ತುಗಳಲ್ಲಿ ಕೆಲವು ಕಾಮೋತ್ತೇಜಕಗಳೆಂದು ಕರೆದು ಹಾಗೆ ನಂಬಿ ಬಳಸುತ್ತ ಬಂದಿದ್ದಾನೆ.

ಕಾಮೋತ್ತೇಜಕ ಆಹಾರವಸ್ತುಗಳ ತಯಾರಿಕೆ ಮನುಷ್ಯನ ಲೈಂಗಿಕ ಚರಿತ್ರೆಯಲ್ಲಿ ಅಗಾಧಪಾತ್ರವಹಿಸಿದೆ ಮತ್ತು ಬಹುಜನಪ್ರಿಯವಾಗಿದೆ. ಏಲಕ್ಕಿ, ತಾಂಬೂಲ ಮುಂತಾದವು ಬ್ರಹ್ಮಚಾರಿಗಳಿಗೆ ವರ್ಜ್ಯವೆಂದೂ ಮೀನು, ಕೆಲವು ತರಕಾರಿಗಳು, ಮಸಾಲೆ ಪದಾರ್ಥಗಳು ಕಾಮೋತ್ತೇಜಕ ಸ್ವಭಾವವುಳ್ಳ ಪದಾರ್ಥಗಳೆಂದೂ ಅನೂಚಾನವಾಗಿ ಗಣಿಸಲ್ಪಟ್ಟಿದೆ. ಆದರೆ ಈ ಯಾವ ಪದಾರ್ಥಗಳೂ ಜನನೇಂದ್ರಿಯಗಳ ಸ್ವಾಭಾವಿಕ ಕಾರ್ಯಗಳ ಮೇಲೆ ನೇರವಾಗಿ ಪರಿಮಾಣವನ್ನುಂಟುಮಾಡಬಲ್ಲ ರಾಸಾಯನಿಕಗಳನ್ನು ಹೊಂದಿಲ್ಲ. ಆದ್ದರಿಂದ ಕಾಮೋತ್ತೇಜಕ ಆಹಾರವೆನ್ನಿಸಿಕೊಳ್ಳುವ ಅವುಗಳ ಪ್ರಖ್ಯಾತಿ ನಿಜಾಂಶವನ್ನಲ್ಲ, ಜನಶ್ರುತಿಯನ್ನು ಆಧರಿಸಿದೆ. ಆದರೂ ಕಾಮೋತ್ತೇಜಕಗಳಲ್ಲಿ ವಿಶ್ವಾಸ ಮುಂದುವರಿಯುತ್ತಲೇ ಇದೆ. ಶತಮಾನಗಳ ಹಿಂದೆ ವಿಜ್ಞಾನ ವಿಚಾರಗಳ ಅಭಾವವಿದ್ದಾಗ ಮತ್ತು ಜನರು ಮೂಲಿಕೆಗಳಿಗೆ ಅವುಗಳ ಅಥವಾ ಅವುಗಳ ಭಾಗಗಳ ಆಕರವಾಗಿರುವ ಅಂಗಗಳ ಮೇಲೆ ಪ್ರಭಾವಿರುವುದೆಂದು ನಂಬಿದ್ದಾಗ ಕಾಮೋತ್ತೇಜಕಗಳು ಈ ಪ್ರಖ್ಯಾತಿಯನ್ನು ಪಡೆದವು. ಹೀಗೆಯೇ ಹೃದಯದ ಆಕರದ ಮೂಲಿಕೆ ಹೃದ್ರೋಗಗಳಿಗೂ ಚೇಳಿನಕೊಂಡಿಯ ಆಕಾರದ ಮೂಲಿಕೆ ಚೇಳು ಕುಟುಕಿಗೂ ಔಷಧಗಳೆಂಬ ನಂಬಿಕೆ ಬೆಳೆದಿದೆ. ಅನೇಕ ವೇಳೆ ಮೂಲಿಕೆಗಳಿಗೆ ಅವುಗಳ ಈ ಹೋಲಿಕೆಯನ್ನು ಗಮನದಲ್ಲಿಟ್ಟುಕೊಂಡೇ ಹೆಸರನ್ನು ಕೊಡಲಾಗಿದೆ. ವ್ಯಾನಿ ಎಂಬ ಮೂಲಿಕೆಗೆ ಆ ಹೆಸರು ಬಂದಿರುವುದು ಸ್ಪ್ಯಾನಿಷ್ ಭಾಷೆಯಲ್ಲಿ ಅದಕ್ಕೆ ಯೋನಿ ಎಂಬ ಅರ್ಥ ಇರುವುದರಿಂದ.

ಆಯುರ್ವೇದದಲ್ಲಿ ಕಾಮೋತ್ತೇಜನಕ್ಕೆ ವಾಜೀಕರಣ ಎನ್ನುತ್ತಾರೆ. ಕುದುರೆಯಂತೆ ಮೈಥುನಶಕ್ತಿ ಪಡೆಯಬಲ್ಲ ಕಾರಣದಿಂದ ಈ ಹೆಸರು ಬಂದಿರಬೇಕು. ಯಾವ ಔಷಧಿ ಮನುಷ್ಯನಿಗೆ ಸಂತಾನವನ್ನು ಕೊಡುವುದೋ ಯಾವುದನ್ನು ಸೇವಿಸಿದರೆ ಕೂಡಲೇ ಇಂದ್ರಿಯಗಳಲ್ಲಿ ಚೈತನ್ಯ ಪ್ರವಹಿಸುವುದೋ ಯಾವುದರಿಂದ ಕೀರ್ತಿ, ಲಕ್ಷ್ಮೀಬಲ, ಪುಷ್ಟಿಗಳು ಲಭ್ಯವಾಗುವುವೋ ಆ ಔಷಧವೇ ವಾಜೀಕರಣ ಎಂದು ಚರಕ ಸಂಹಿತೆಯಲ್ಲಿ ಹೇಳಿದೆ.

ನವೀನ ಔಷಧಶಾಸ್ತ್ರದ ಪ್ರಕಾರ ನಿಜವಾಗಿ ಕಾಮೋತ್ತೇಜಕಗಳೆಂದು ಕರೆಯಬಹುದಾದ ವಸ್ತುಗಳು ಬಹು ವಿರಳ, ಪ್ರಾಯಶಃ ಒಂದು ತರಹ ಕೀಟದಿಂದ ತಯಾರಾದ ಕ್ಯಾಂಥರಿಡೀನ್ ಮತ್ತು ಮಧ್ಯ ಆಫ್ರಿಕದಲ್ಲಿ ಶತಮಾನಗಳಲ್ಲಿ ಹಿಂದಿನಿಂದಲೂ ಇದೇ ಉಪಯೋಗಕ್ಕೆ ಬಳಸುತ್ತಿದ್ದ ಯೋಹಿಂಬೆ ಮರದ ತೊಗಟೆಯಿಂದ ತಯಾರಾದ ಕಾಮೋತ್ತೇಜನ ಬಹುಶಃ ನಂಬಿಕೆ ಮನೋಭಾವದಿಂದಲೇ ಬಂದುದು ಎಂದು ಕಾಣಿಸುತ್ತದೆ. ಏಕೆಂದರೆ ಅವನ್ನು ಅವುಗಳ ವಿಷಗುಣ ವ್ಯಕ್ತವಾಗುವಷ್ಟು ಪ್ರಮಾಣದಲ್ಲಿ ಕೊಟ್ಟರೆ ಮಾತ್ರ ನಿಜವಾಗಿ ಕಾಮೋತ್ತೇಜನ ಉಂಟಾಗುತ್ತದೆ. ಘೇಂಡಾಮೃಗದ ಕೊಂಬು ಕಾಮೋತ್ತೇಜಕವೆಂಬ ನಂಬಿಕೆ ಬಹುಕಾಲದಿಂದಿದ್ದು ಈಚಿಗೆ ಬಹಳವಾಗಿ ಪ್ರಚಾರದಲ್ಲಿದೆ. ಇದರಿಂದಾಗಿ ಘೇಂಡಾಮೃಗದ ಕೊಂಬು ಅದರ ತೂಕದಷ್ಟು ಚಿನ್ನಕ್ಕಿಂತ ಹೆಚ್ಚು ಬೆಲೆಯಾಗಿದ್ದು ಭಾರತದಲ್ಲಿ ಈ ಮೃಗಗಳ ಅವನತಿಗೆ ಕಾರಣವೆನಿಸಿದೆ. ಕಾಮೋತ್ತೇಜಕ ಲೇಪನಗಳಲ್ಲಿ ಶಿಶ್ನವನ್ನು ದೀರ್ಘಕಾಲ ನಿಮಿರಿ ನಿಲ್ಲುವಂತೆ ಮಾಡುವ ಜೆಲ್ ಸಹ ಬರುತ್ತದೆ. ಇವುಗಳಲ್ಲಿ ಅಸಲಿಗಳೊಂದಿಗೆ ನಕಲಿ ಔಷಧಗಳೂ ಇವೆ. (ಎಸ್.ಆರ್.ಆರ್.; ಎಂ.ಎಸ್.ಎನ್.)

**ಕಾಮ್ಯುಟೇಟರ್ :** ತಾಮ್ರದ ಸಿಲಿಂಡರೊಂದನ್ನು ಬೇರೆ ಬೇರೆ ಭಾಗಗಳನ್ನಾಗಿ ವಿಭಾಗಿಸಿ ಆ ವಿಭಾಗಗಳಲ್ಲಿ ಮೈಕದಿಂದ, ಪರಸ್ಪರ ನೇರ ವಿದ್ಯುತ್ ಸಂಪರ್ಕವಿಲ್ಲದಂತೆ ಮಾಡಿರುವ ಒಂದು ಸಾಧನ. ಇದನ್ನು ನೇರ ವಿದ್ಯುತ್ಪ್ರವಾಹ (ಡಿಸಿ) ಯಂತ್ರಗಳಲ್ಲಿ ಮತ್ತು ಪರ್ಯಾಯ ವಿದ್ಯುತ್ಪ್ರವಾಹ (ಎಸಿ) ಮೋಟಾರುಗಳಲ್ಲಿ ಸಾಮಾನ್ಯವಾಗಿ ಬಳಸುವರು. ಇದರ ಉಪಯೋಗ ಅಥವಾ ಕಾರ್ಯವನ್ನು ಸ್ಥೂಲವಾಗಿ ತಿಳಿಯಲು, ಎರಡು ವಿಭಾಗ ಮಾತ್ರವಿರುವ ಕಾಮ್ಯುಟೇಟರನ್ನು ಪರಿಶೀಲಿಸಬೇಕು.


ಚಿತ್ರ 1
ಚಿತ್ರ 2
ಚಿತ್ರ 3

ಒಂದು ವಿದ್ಯುದ್ವಾಹಕ ಸುರುಳಿಯನ್ನು ಕಾಂತಕ್ಷೇತ್ರದ ನಡುವೆ ಸುತ್ತುವಂತೆ ಮಾಡಿದರೆ ಸುರುಳಿಯ ತುದಿಗಳೆರಡರಲ್ಲಿ ವಿದ್ಯುಚ್ಚಾಲಕ ಬಲ (emf) ಉಂಟಾಗುವುದು. ಇಲ್ಲಿ ಉತ್ಪತ್ತಿಯಾಗುವ ಪರ್ಯಾಯ ವಿದ್ಯುತ್ತನ್ನು ನೇರ ವಿದ್ಯುತ್ತಾಗಿ ಪರಿವರ್ತಿಸಲು ಕಾಮ್ಯುಟೇಟರ್ ಸಹಾಯ ಆವಶ್ಯಕ. ಚಿತ್ರ 1 ರಲ್ಲಿ PP' ಗಳು ಸುರುಳಿಯ ತುದಿಗಳನ್ನು ಪ್ರತಿನಿಧಿಸಲಿ. ಕಾಮ್ಯುಟೇಟರಿನ ಎರಡು ಭಾಗಗಳು ಸ್ಥಿರವಾಗಿರುವ ಎರಡು ಇಂಗಾಲದ ಬ್ರಷ್ BB ಗಳನ್ನು ತಾಕುವಂತೆ ಏರ್ಪಡಿಸಲಾಗಿದೆ. ಈ ಸ್ಥಾನದಲ್ಲಿ ಸುರುಳಿ ಕಾಂತ ಬಲರೇಖೆಗಳಿಗೆ ಲಂಬವಾಗಿ ಚಲಿಸುವುದರಿಂದ emf ಗರಿಷ್ಠವಾಗಿರುವುದು. ಮತ್ತು ಮೇಲಿನ ಬ್ರಷ್ +, ಕೆಳಗಿನ ಬ್ರಷ್ – ಆಗಿವೆ. ಇದನ್ನು ಫ್ಲೆಮಿಂಗನ ಎಡಗೈ ನಿಯಮದಿಂದ ತಿಳಿಯಬಹುದು.

ಚಿತ್ರ 2ರಲ್ಲಿ ಸುರುಳಿಯ ಚಲನೆ ಕಾಂತ ಬಲರೇಖೆಗಳ ನೇರದಲ್ಲಿರುವುದರಿಂದ emf ಶೂನ್ಯ. ಅಂದರೆ ಅದು ಗರಿಷ್ಠ ಬೆಲೆಯಿಂದ ಶೂನ್ಯಕ್ಕೆ ಇಳಿಯಿತು.

ಚಿತ್ರ 3ರಲ್ಲಿ ಸುರುಳಿ ಅರ್ಧ ಸುತ್ತು ಹಾಕಿರುವುದನ್ನು ನೋಡಬಹುದು. ಈ ಚಿತ್ರ 3 ಸ್ಥಾನದಲ್ಲಿಯೂ ಉತ್ಪತ್ತಿಯಾದ emf ಗರಿಷ್ಠವಾಗಿರುವುದು. ಈಗಲೂ ಮೇಲಿನ ಬ್ರಷ್ + ಕೆಳಗಿನದು – ಅಂದರೆ ಮೇಲಣ ಬ್ರಷ್‌ನಿಂದ ಯಾವಾಗಲೂ + ಕೆಳಗಿನದರಿಂದ – emf ಬರುವುದು. ಕಾಮ್ಯುಟೇಟರ್ ಬಳಕೆಯಿಂದ ಪರ್ಯಾಯ ಋಣ ಭಾಗವನ್ನು ಧನರೂಪಕ್ಕೆ ಪರಿವರ್ತಿಸಿದಂತಾಯಿತು.

ಯಾವುದಾದರೂ ವಿದ್ಯುನ್ಮಂಡಲದ ಒಂದು ಭಾಗದಲ್ಲಿ ಮಾತ್ರ ವಿದ್ಯುತ್ಪ್ರವಾಹದ ದಿಕ್ಕನ್ನು ಬದಲಾಯಿಸಲು ಸಹ ಕಾಮ್ಯುಟೇಟರನ್ನು ಪ್ರಯೋಗಶಾಲೆಯಲ್ಲಿ ಬಳಸುವುದುಂಟು. ತಾಮ್ರದ ಅಥವಾ ಹಿತ್ತಾಳೆಯ ವೃತ್ತಾಕಾರದ ದಪ್ಪ ಪಟ್ಟಿಯನ್ನು ಎರಡು ಭಾಗಮಾಡಿ ಎರಡಕ್ಕೂ ಸ್ವಲ್ಪ ಸ್ಥಳವಿರುವಂತೆ ಮಾಡಿ ಒಂದು ಮರದ ಪಟ್ಟಿಯ ಮೇಲೆ ಬಂಧಿಸಿದೆ. ವಿದ್ಯುನ್ಮಂಡಲಕ್ಕೆ ಸಂಪರ್ಕವೇರ್ಪಡಿಸಲು ಎರಡು ಪಟ್ಟಿಗಳಿಗೂ ಒಂದೊಂದು ಬಂಧಕ ಸ್ಕ್ರೂ ಸೇರಿಸಿದೆ. ಎಸಿ ಮೋಟಾರಿನಲ್ಲಿ ಬ್ರಷ್ ಬದಲು ತಾಮ್ರದ ತೆಳುವಾದ ತಗಡುಗಳನ್ನು ಉಪಯೋಗಿಸಿ ವಿದ್ಯುತ್ ಪ್ರವಾಹದ ದಿಕ್ಕನ್ನು ಬದಲಾವಣೆ ಮಾಡುವ ಏರ್ಪಾಡಿದೆ.

ಪ್ರಯೋಗಶಾಲೆಯಲ್ಲಿ ಮತ್ತೊಂದು ರೀತಿಯ ಕಾಮ್ಯುಟೇಟರ್ ಕೂಡ ಬಳಕೆಯಲ್ಲಿದೆ. ಇದನ್ನು ಪೋಹ್ಲ್ ಕಾಮ್ಯುಟೇಟರ್ ಎಂದು ಕರೆಯುವರು. ಇದರ ಕಾರ್ಯವೂ ವಿದ್ಯುನ್ಮಂಡಲದಲ್ಲಿ ವಿದ್ಯುತ್ಪ್ರವಾಹದ ದಿಕ್ಕನ್ನು ಬದಲಾಯಿಸುವುದೇ ಆಗಿದೆ. ಒಟ್ಟಿನಲ್ಲಿ ಇದೊಂದು ದಿಕ್ಪರಿವರ್ತಕ, ವ್ಯತ್ಯಯಕ, ವಿನಿಮಯಕಾರಿ. (ಪಿ.ವಿ.)

**ಕಾಯಕ :** ಮಾನವರು ತಮ್ಮ ಜೀವನ ನಿರ್ವಹಣೆಗಾಗಿ ಅವಲಂಬಿಸುವ ವೃತ್ತಿಯೇ ಕಾಯಕ. ಅದರಲ್ಲಿ ಮೇಲುಕೀಳೆಂಬುದಿಲ್ಲ. ಕಾಯಕ ಮಾಡದವನು ಉಣ್ಣಲು ಅರ್ಹನಲ್ಲ. ಧರ್ಮದೃಷ್ಟಿಯಿಂದ ನ್ಯಾಯವಾದ ರೀತಿಯಲ್ಲಿ ತಮ್ಮ ತಮ್ಮ ಕಾಯಕವನ್ನು ಮಾಡಬೇಕಾದ್ದು ಪ್ರತಿಯೊಬ್ಬರ ಕರ್ತವ್ಯ.

ಪ್ರತಿಯೊಬ್ಬ ಮಾನವನೂ ಉದ್ಯೋಗಶೀಲನಾಗಬೇಕು. ತಮ್ಮ ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಆವಶ್ಯಕವಾದ ಪ್ರತಿಯೊಂದು ಕೆಲಸವನ್ನೂ ಪ್ರತಿಯೊಬ್ಬರೂ ಹಂಚಿಕೊಂಡು ಶ್ರದ್ಧೆಯಿಂದದನ್ನು ಮಾಡಬೇಕು. ವೇದಕಾಲದಲ್ಲಿ ಉದ್ಯೋಗದಲ್ಲಿ ಮೇಲು ಕೀಳು ಎಂಬ ಭಾವನೆಯಿರಲಿಲ್ಲ. 'ನಾನು ಕವಿ, ನನ್ನ ತಂದೆ ವೈದ್ಯ, ನನ್ನ ತಾಯಿ ಕಾಳುಗಳನ್ನು ಬೀಸುತ್ತಾಳೆ. ಹೀಗೆ ಹಲವು ಕೆಲಸಗಳನ್ನು ಮಾಡುತ್ತ, ಗೋವುಗಳು ಹುಲ್ಲುಗಾವಲುಗಳಿಂದ ಆಹಾರವನ್ನು ಹೊಂದುವಂತೆ, ನಾವು ಐಶ್ವರ್ಯವನ್ನು ಸೌಖ್ಯವನ್ನೂ ಹೊಂದಲಿಚ್ಛಿಸುತ್ತೇವೆ' ಎಂಬ ಋಗ್ವೇದದ ಮಾತು ಸಮಾಜದಲ್ಲಿ ಕಾಯಕದ ಮಹತ್ವವನ್ನು ಸೂಚಿಸುತ್ತದೆ. (ಎಂ.ಜಿ.ಎನ್.)

ಕಾಯಕವೆಂಬುದು ವೀರಶೈವಧರ್ಮದ ಪಾರಿಭಾಷಿಕ ಶಬ್ದ. ಕಾಯಕವೇ ಕೈಲಾಸ ಎಂಬ ಮಾತು ಶರಣರಲ್ಲಿ ರೂಢಿಯಲ್ಲಿದೆ. ತನಗಾಗಿ ಮತ್ತು ಸಮಾಜಕ್ಕಾಗಿ ಶಿವಾರ್ಪಿತ ಭಾವದಿಂದ ಕಾರ್ಯಗಳನ್ನು ಕೈಗೊಂಡು ಎಲ್ಲರೂ ತಂತಮ್ಮ ಕಾಯಕದಲ್ಲಿ ನಿರತರಾಗಿರಬೇಕೆಂದು ಶರಣರ ಆಶಯ. (ಬಿ.ಎಸ್.)

ಸೋಂಬತನವನ್ನು ಶರಣರು ಖಂಡಿಸುತ್ತಾರೆ.
　　ಕಾಯಕಕಾರದೆ ಮೈ ಸೋಂಬತನದಿಂದೆ
ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯ!
　　ಒಡಲ ಸೀರೆಯ ಗಳಿಸಲಾರದೆ
ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯ!
　　ಮೀಯಲು ಎಣ್ಣೆ ಗಳಿಸಲಾರದೆ
ಮಂಡೆ ಬೋಳಾಗಿಪ್ಪರಯ್ಯ!
　　ದಿಟದಿಂದ ಬಿಡಿಸಲರಿಯದೆ ಸಂಸಾರದ ಶಠೆಯನವಧರಿಸಿ
ಕೊಂಡಿಪ್ಪವರಿಗೆ ನಾನಂಜುವೆನಯ್ಯ ಸಕಲೇಶ್ವರ!

(ಸಕಲೇಶ ಮಾದರಸ)

ತನ್ನ ದುಡಿಮೆಯ ಫಲವನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳದೆ ತನಗೆಷ್ಟು ಬೇಕೊ ಅಷ್ಟನ್ನು ಇಟ್ಟುಕೊಂಡು ಉಳಿದುದನ್ನು ಲೋಕಸಂಸಾರಕ್ಕೆ ಉಪಯೋಗಿಸಿದಾಗ ದುಡಿಮೆ ಕಾಯಕವಾಗುತ್ತದೆ. ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿ ದುಡಿದರು. 'ಹೊತ್ತಾರೆ ಎದ್ದು ಕಣ್ಣ ಹೊಸವುತ್ತ, ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದೊಡೆ ಎನ್ನ ಮನಕ್ಕೆ ಮನವೇ ಸಾಕ್ಷಿ' ಎಂದವರು ತಮ್ಮ ಕಾಯಕದ ಬಗ್ಗೆ ಉದ್ಗಾರವೆತ್ತಿದ್ದಾರೆ.

ಇನ್ನೊಬ್ಬರ ಹಂಗಿನಲ್ಲಿ ಬಾಳುವ ಜೀವನವನ್ನು ಬಸವಣ್ಣನವರು ನಿಷ್ಠುರವಾಗಿ ಖಂಡಿಸಿದ್ದಾರೆ. 'ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆ'. ಭಕ್ತನಾಗಲಿ, ಗುರುವಾಗಲಿ. ಜಂಗಮನಾಗಲಿ ಎಲ್ಲರೂ ತಮ್ಮ ತಮ್ಮ ಕಾಯಕದಲ್ಲಿ ನಿರತರಾಗಿರಬೇಕು. ಅದೇ ಶರಣರ ದೃಷ್ಟಿಯಾಗಿತ್ತು. ನುಲಿಯ ಚಂದಯ್ಯನ ಒಂದು ವಚನದಿಂದ ಈ ಮಾತಿನ ಅರ್ಥಕ್ಕೆ ಪುಷ್ಟಿಯೊದಗುತ್ತದೆ.

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದಡೂ ಕಾಯಕದಿಂದಲೇ ವೇಷಪಾಶ ಹರಿವುದು
ಇದು ಚನ್ನಬಸವಣ್ಣ ಪ್ರಿಯ ಚಂದೇಶ್ವರ ಲಿಂಗದ ಅರಿವು.

ಈತ ಹಗ್ಗ ಹೊಸೆಯುವ ಕಾಯಕ ಕೈಗೊಂಡವ. ಅದನ್ನು ನಡೆಸುತ್ತಲೇ ಸಾಧನೆ ಮುಂದುವರಿಸಿದ. ಇವನಂತೆಯೇ 12ನೆಯ ಶತಮಾನದಲ್ಲಿ ಅನೇಕ ಶರಣರು ವೃತ್ತಿಯಲ್ಲಿ ಬೇರೆಯಾದರೂ ಮೋಕ್ಷಸಾಧನೆಯ ಮಾರ್ಗದಲ್ಲಿ ಒಂದೇ ಆಗಿದ್ದರು. ಅವರಲ್ಲಿ ಮುಖ್ಯರು ಮಡಿವಾಳ ಮಾಚಯ್ಯ, ಮೇದರ ಕೇತಯ್ಯ, ಹಡಪದ ಅಪ್ಪಣ್ಣ, ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಸುಂಕದ ಬಂಕಣ್ಣ, ತಳವಾರ ಕಾಮಿದೇವ, ಗಾಣದ ಕನ್ನಪ್ಪ, ವೈದ್ಯ ಸಂಗಣ್ಣ, ಸೂಜಿಕಾಯಕದ ರಾಮಿತಂದೆ, ಬಾಚಿಕಾಯಕದ ಬಸಪ್ಪ, ಕೊಟ್ಟಣದ ರೆಮ್ಮವ್ವೆ, ಮೋಳಿಗೆ ಮಾರಯ್ಯ ಮುಂತಾದವರು. ಅವರ ಹೆಸರಿನ ಹಿಂದಿರುವ ಮಾತುಗಳೇ ಅವರು ಕೈಗೊಂಡಿದ್ದ ಕಾಯಕವನ್ನು ಸೂಚಿಸುತ್ತವೆ. ಇವರೆಲ್ಲ ಅನುಭವ ಮಂಟಪದ ಶರಣಗೋಷ್ಠಿಗೆ ಬಂದಾಗ ಮಂತ್ರಿ ಬಸವಣ್ಣನವರ ಸರಿಸಮರಾಗಿ ಕುಳಿತು ಅಧ್ಯಾತ್ಮ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ವೈದಿಕಯುಗದ, ಅನಂತರ ವೀರಶೈವ ಧರ್ಮದ ಕಾಯಕದ ಕಲ್ಪನೆ ಆಧುನಿಕ ಯುಗಕ್ಕೂ ಮಾರ್ಗದರ್ಶಕವಾಗಿದೆ. *

**ಕಾಯವ್ಯ :** ದರೋಡೆಕೋರ, ಕಳ್ಳರ ಗುಂಪಿನ ಒಬ್ಬ ಯಜಮಾನ. ಜಾತಿಯಲ್ಲಿ ಬೇಡ. ಕಾಪಷ್ಯನೆಂದೂ ನಾಮಾಂತರವುಂಟು. ನಿಷಾದಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿದವನಾದ ಈತ ಬ್ರಹ್ಮಕ್ಷತ್ರಗಳನ್ನು ಪಾಲಿಸುತ್ತಿದ್ದು ಶಾಸ್ತ್ರಾರ್ಥವೇತ್ತನೂ ವ್ಯವಹಾರತಜ್ಞನೂ ಆಗಿದ್ದ. ಮಾತಾಪಿತೃಪೂಜೆಯನ್ನು ತನ್ನ ಆದ್ಯ ಕರ್ತವ್ಯವೆಂದು ಈತ ತಿಳಿದಿದ್ದ. ಈತನ ಅನುಯಾಯಿಗಳು ಒಮ್ಮೆ ಈತನನ್ನು ಧರ್ಮರಹಸ್ಯದ ಬಗ್ಗೆ ಕೇಳಿದಾಗ ಸ್ತ್ರೀ, ಬಾಲ, ಬ್ರಹ್ಮ, ತಪಸ್ವಿ, ಗೋ ಮೊದಲಾದುವನ್ನು ಕೊಲ್ಲದೆ ದೇವ, ಬ್ರಾಹ್ಮಣ, ಪಿತೃಗಳನ್ನು ಯಾವಾಗಲೂ ಪೂಜಿಸುತ್ತ, ಲೋಕಶಾಸನಕ್ಕಾಗಿ ದಂಡವನ್ನು ಬಳಸಿಕೊಂಡು ಬಾಳಬೇಕೆಂದೂ ಅಂಥವರು ದಸ್ಯು ವೃತ್ತಿಯಲ್ಲಿದ್ದರೂ ಮೋಕ್ಷ ಪಡೆಯಬಹುದೆಂದೂ ಉಪದೇಶಿಸಿದ. (ಎನ್.ಎಸ್.ಆರ್.ಬಿ.)

**ಕಾಯಾಂತರೀಕರಣ :** ಹಲವು ಸಂದರ್ಭಗಳಲ್ಲಿ ಹಿಂದೆ ಇದ್ದ ಇಡೀಶಿಲೆಯನ್ನು ಅಥವಾ ಅದರಲ್ಲಿನ ಹಲಕೆಲವು ಖನಿಜಗಳನ್ನು ಹೊಸ ಖನಿಜಗಳಾಗಿ ಮಾರ್ಪಡಿಸುವ

ಕಾರ್ಯ (ಮೆಟಸೊಮ್ಯಾಟಿಸಂ). ಭೂವಿಜ್ಞಾನದಲ್ಲಿ ಮೆಟಸೊಮ್ಯಾಟಿಸಂ ಎಂಬ ಪದವನ್ನು ಮೊದಲು ಬಳಕೆಗೆ ತಂದವ ನೌಮನ್. ಖನಿಜ ನಿಕ್ಷೇಪಗಳ ಉತ್ಪತ್ತಿಯಲ್ಲಿ ಈ ಕ್ರಿಯೆಯ ಮಹತ್ತ್ವವನ್ನು ಮೊಟ್ಟಮೊದಲು ಕಂಡುಕೊಂಡವ ಜಿಮ್ಮರ್‌ಮನ್ (1749). ಆದರೂ ಇದರ ಪ್ರಾಮುಖ್ಯದ ಅರಿವಾದದ್ದು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ. ಈ ಕ್ರಿಯೆಯ ವೈಶಿಷ್ಟವೆಂದರೆ ಇದು ನಡೆಯುವುದರಿಂದ ಶಿಲೆಗೆ ಆ ಮೊದಲು ಇದ್ದ ಹೊರ ಆಕಾರದಲ್ಲಿ ಎಳ್ಳಷ್ಟೂ ಬದಲಾವಣೆಯಾಗುವುದಿಲ್ಲ. ಆದರೆ ರಸಾಯನಿಕ ಸಂಯೋಜನೆಯಲ್ಲಿ ಮಾತ್ರ ನಿರ್ದಿಷ್ಟ ಬದಲಾವಣೆ ಕಂಡು ಬರುತ್ತದೆ. ಈ ಕ್ರಿಯೆಯಲ್ಲಿ ಖನಿಜಪೂರಿತ ದ್ರವಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವುಗಳಿಗೆ ಮೆಟಸೋಮುಗಳೆಂದು ಹೆಸರು. ಇವು ಹಿಂದಿನ ಖನಿಜಗಳ ಅಣುಗಳನ್ನು ಕ್ರಮೇಣ ಹೊರದೂಡಿ ಅವುಗಳ ಸ್ಥಾನಗಳನ್ನು ಆಕ್ರಮಿಸಿ ಹೊಸ ಖನಿಜವನ್ನು ರೂಪಿಸುತ್ತವೆ. ಅಧಿಕ ಉಷ್ಣತೆಯಲ್ಲಿರುವ ದ್ರವಗಳು ಮತ್ತು ಅನಿಲಗಳು ಈ ಕ್ರಿಯೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ದ್ರವಸ್ಥಿತಿಯಲ್ಲಿ ಕಾಯಂತರೀಕರಣ ನಡೆಯುವುದರಿಂದ ಖನಿಜ ಬದಲಾವಣೆ ಬಹಳ ಸಮರ್ಪಕವಾದ ರೀತಿಯಲ್ಲಿ ಉಂಟಾಗುತ್ತದೆ. ಈ ಚಟುವಟಿಕೆ ಹೆಚ್ಚಿನ ಆಳದಲ್ಲಿ ಅಥವಾ ಹೆಚ್ಚು ಒತ್ತಡವಿರುವ ಆವರಣದಲ್ಲಿ ನಡೆದಾಗಲೂ ಕ್ರಿಯೆಗಿಳಿಗೊಳಗಾದ ಶಿಲೆ ಗಡಸಾಗಿದ್ದಾಗಲೂ ವಸ್ತುವಿನ ಮೊತ್ತದಲ್ಲಿ ಯಾವ ಬಗೆಯ ವ್ಯತ್ಯಾಸವೂ ಉಂಟಾಗುವುದಿಲ್ಲ. ಬಹುಶಃ ಇಲ್ಲಿ ಪರಮಾಣುಗಳ ಸ್ಥಾನಪಲ್ಲಟ ನಡೆಯಲಾರದೆಂದು ಭಾವಿಸಲಾಗಿದೆ. ಆದರೂ ಈ ಕ್ರಿಯೆ ನಡೆಯುವ ರೀತಿ ಅಷ್ಟು ನಿಖರವಾಗಿ ತಿಳಿದುಬಂದಿಲ್ಲ. ಹೀಗಿದ್ದರೂ ಇದಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನು ಗುರುತಿಸಲಾಗಿದೆ. ಹೊಸದಾಗಿ ರೂಪುಗೊಳ್ಳುತ್ತಿರುವ ಮತ್ತು ಕಾಯಾಂತರೀಕರಣಕ್ಕೊಳಗಾದ ಖನಿಜಗಳು ಪರಸ್ಪರ ತಾಗಿಕೊಂಡಿರುತ್ತದೆ. ಎರಡರ ನಡುವೆ ಬಹು ಸೂಕ್ಷ್ಮವಾದ ದ್ರಾವಣದ ಪೊರೆಯೊಂದಿದ್ದು ಕಣಗಳ ಅಥವಾ ಪರಮಾಣುಗಳ ಚಲನೆಗೆ ಉತ್ತಮ ಅವಕಾಶವಿರುತ್ತದೆ. ಖನಿಜಗಳ ಹೊರ ಅಂಚಿನಲ್ಲಿ, ಸೀಳುಗಳಲ್ಲಿ ಮತ್ತು ಬಿರುಕುಗಳಲ್ಲಿ ಕ್ರಿಯೆ ಪ್ರಾರಂಭವಾಗಿ ಕ್ರಮೇಣ ಹರಡುತ್ತ ಖನಿಜದ ಎಲ್ಲ ಅಣುಗಳನ್ನೂ ಹೊರದೂಡಿ ಅವುಗಳ ಸ್ಥಾನದಲ್ಲಿ ಮತ್ತೊಂದು ಹೊಸ ಖನಿಜವನ್ನೇ ರೂಪುಗೊಳಿಸುತ್ತದೆ. ಶಿಲೆಗಳು ಈ ಕ್ರಿಯೆಯ ಪ್ರಭಾವಕ್ಕೊಳಗಾದಾಗ ಮೊಟ್ಟಮೊದಲು ಮ್ಯಾಫಿಕ್ (ಮೆಗ್ನೀಷಿಯಂ ಕಬ್ಬಿಣದ) ಖನಿಜಗಳು ಅನಂತರ ಕ್ರಮವಾಗಿ ಫೆಲ್ಸ್‌ಪಾರ್ ಮತ್ತು ಕ್ವಾರ್ಟ್ಸ್‌ಗಳು ಕಾಯಾಂತರೀಕರಣಕ್ಕೆ ತುತ್ತಾಗುತ್ತವೆ. ಸಲ್ಫೈಡುಗಳು ಸಾಮಾನ್ಯವಾಗಿ ಎಲ್ಲ ಖನಿಜಗಳನ್ನೂ ಕಾಯಾಂತರೀಕರಿಸುತ್ತವೆ. ಅಲ್ಲದೆ ಕ್ರಿಯೆಯ ಮೊದಲ ಹಂತದಲ್ಲಿ ರೂಪುಗೊಂಡ ಖನಿಜಗಳು ಮತ್ತೆ ಮತ್ತೆ ಕಾಯಾಂತರೀಕರಣದ ಪ್ರಭಾವಕ್ಕೆ ಒಳಗಾಗಬಹುದು. ಹೀಗೆ ಸುಮಾರು ಎಂಟು ಹಂತಗಳವರೆಗೆ ಕಾಯಾಂತರೀಕರಣ ನಡೆಯಬಹುದೆಂದು ಭಾವಿಸಲಾಗಿದೆ. ಶಿಲೆಗಳ ಸ್ತರೀಕರಣ, ರಚನಾವೈವಿಧ್ಯಗಳು ಮತ್ತು ಅದರ ಭೌತ ಮತ್ತು ರಾಸಾಯನಿಕ ಲಕ್ಷಣಗಳು ಕ್ರಿಯೆಯ ಪರಿಮಿತಿಯನ್ನು ನಿರ್ಧರಿಸುವ ಅಂಶಗಳು.

**ಕಾಯಾಂತರೀಕರಣದ ಪ್ರೇರಕಗಳು:** ಕಾಯಾಂತರೀಕರಣದಲ್ಲಿ ದ್ರವ ಮತ್ತು ಅನಿಲಗಳ ಪಾತ್ರ ಬಹು ಮುಖ್ಯ. ಅದರಲ್ಲೂ ನೀರು ಬಹು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅನೇಕ ಅಂತರ್ಜನಿತ (ಹೈಪೋಜೀನ್) ಖನಿಜನಿಕ್ಷೇಪಗಳು ಹೆಚ್ಚು ಉಷ್ಣತೆಯ ಕ್ಷಾರೀಯ ದ್ರಾವಣಗಳ ಕಾರ್ಯಾಚರಣೆಯಿಂದ ಉಂಟಾಗಿವೆ. ಬಹುಶಃ ಇವು ಆಳದಲ್ಲಿ ಹುದುಗಿರುವ ಮಾತೃ ಶಿಲಾದ್ರವದಿಂದ ಹೊರಹೊಮ್ಮಿ ಸುತ್ತಮುತ್ತಲ ಶಿಲೆಗಳ ಮೂಲಕ ಪ್ರವಹಿಸುವಾಗ ಅವುಗಳ ಸಂಪರ್ಕದಿಂದಲೂ ಕ್ಷಾರತ್ವವನ್ನು ಪಡೆಯುತ್ತವೆಂದು ಭಾವಿಸಲಾಗಿದೆ. ಸಾಮಾನ್ಯ ನೀರು ಮತ್ತು ಆರ್ಟೀಸಿಯನ್ ಬಾವಿಗಳ ನೀರು ಸಹ ಕೆಲವು ಸಂದರ್ಭಗಳಲ್ಲಿ ಮೂಲ ಮತ್ತು ಬಹಿರ್ಜನಿತ ಖನಿಜ ನಿಕ್ಷೇಪಗಳಿಗೆ ಕಾರಣವಾಗಿವೆ. ಉದಾಹರಣೆಗೆ ಮ್ಯಾಂಗನೀಸ್ ಮತ್ತು ಸಲ್ಫೈಡ್ ನಿಕ್ಷೇಪಗಳು.

**ಕಾಯಂತರೀಕರಣದ ಉಷ್ಣತೆ ಮತ್ತು ಒತ್ತಡ :** ಬಹಿರ್ಜನಿತ ಕಾಯಾಂತರೀಕರಣ ಸಾಮಾನ್ಯ ಉಷ್ಣತೆ ಮತ್ತು ಒತ್ತಡಗಳ ಪ್ರಭಾವದಲ್ಲೂ ಸಂಸ್ಪರ್ಶ ಕಾಯಾಂತರೀಕರಣ ಹೆಚ್ಚಿನ ಉಷ್ಣತೆ ಮತ್ತು ಒತ್ತಡಗಳ ಪ್ರಭಾವದಲ್ಲೂ ಉಂಟಾಗುತ್ತವೆ. ಹೆಚ್ಚಿನ ಉಷ್ಣತೆಯಿರುವ ಕಡೆಯಂತೂ ಈ ಕ್ರಿಯೆ ಅತ್ಯಂತ ಪರಿಣಾಮಕಾರಿ. ಏಕೆಂದರೆ ರಾಸಾಯನಿಕ ಕ್ರಿಯೆಯನ್ನು ಉಷ್ಣತೆಪಟುಗೊಳಿಸುತ್ತದೆ. ಹಲವು ವೇಳೆ ಕಾಯಾಂತರೀಕರಣ ಮತ್ತು ಉಷ್ಣತೆ ಒತ್ತಡಕ್ಕನುಸಾರವಾಗಿ ಬದಲಾವಣೆಗಳನ್ನೂ ತೋರುವುದುಂಟು.

ಸಾಮಾನ್ಯ ಉಷ್ಣತೆಯಿಂದ ಉಂಟಾಗುವ ಕಾಯಂತರೀಕರಣದ ನಿಕ್ಷೇಪಗಳು ಬಲುಮಟ್ಟಿಗೆ ಸುಲಭವಾಗಿ ಕರಗುವಂಥ ಸುಣ್ಣಶಿಲೆ ಮುಂತಾದವುಗಳಿಗೆ ಸಂಬಂಧಿಸಿವೆ. ಈ ಶಿಲೆಗಳು ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರುಗಳ ಪರಮಾಣುಗಳ ಕಾಯಾಂತರೀಕರಣಕ್ಕೊಳಗಾಗಿ ಉತ್ತಮ ನಿಕ್ಷೇಪಗಳನ್ನು ಉಂಟುಮಾಡುತ್ತವೆ. ಹೀಗೆಯೇ ಫಾಸ್ಫೇಟ್ (ರಂಜಕವಿರುವ) ನಿಕ್ಷೇಪಗಳೂ ಉಂಟಾಗುತ್ತವೆ. ಕೆಲವು ಪ್ರದೇಶಗಳಲ್ಲಿ ಸುಣ್ಣಶಿಲಾಸ್ತರಗಳ ಬಹುಭಾಗ ಸ್ಮಿತ್‌ಸೊನೈಟ್ ಮತ್ತು ಮ್ಯಾಲಕೈಟ್–ಅಝುರೈಟ್ ಖನಿಜಗಳಿಂದ ಕೂಡಿದ ಉತ್ತಮ ದರ್ಜೆಯ ತವರ ಮತ್ತು ತಾಮ್ರದ ಅದಿರುಗಳ ನಿಕ್ಷೇಪಗಳಾಗಿ ಮಾರ್ಪಟ್ಟಿವೆ. ಇದೇ ರೀತಿ ಶುದ್ಧರೂಪದ (ನೇಟಿವ್) ತಾಮ್ರ ಮತ್ತು ಬೆಳ್ಳಿ ಮತ್ತು ಈ ಲೋಹಗಳ ಅದುರುಗಳಾದ ಆರ್ಜಂಟೈಟ್, ಚಾಲ್ಕೊಸೈಟ್, ಕೋವಿಲೈಟ್, ಮಾರ್ಕಸೈಟ್‌ಗಳ ನಿಕ್ಷೇಪಗಳೂ ಉಂಟಾಗಿವೆ. ಹೆಚ್ಚಿನ ಉಷ್ಣತೆ ಇರುವ ಸನ್ನಿವೇಶದಲ್ಲಿ ಕಾಯಾಂತರೀಕರಣ ತೀವ್ರಗತಿಯಲ್ಲಿ ನಡೆದು ಉತ್ತಮ ದರ್ಜೆಯ ಖನಿಜನಿಕ್ಷೇಪಗಳುಂಟಾಗಿವೆ. ಈ ವರ್ಗದಲ್ಲಿ ಬಹುಮಟ್ಟಿಗೆ ಸಲ್ಫೈಡುಗಳು, ಗಂಧಕವಿರುವ ಲವಣಗಳು ಸ್ವಲ್ಪ ಪ್ರಮಾಣದಲ್ಲಿ ತವರ, ಟಂಗ್‌ಸ್ಟನ್ ಮತ್ತು ಮ್ಯಾಗ್ನಟೈಟ್ ನಿಕ್ಷೇಪಗಳು ತಲೆದೋರಿವೆ.

**ಕಾಯಾಂತರೀಕರಣಕ್ಕೊಳಗಾಗುವ ಶಿಲೆಗಳು :** ಯಾವ ತೆರನಾದ ಶಿಲೆಯಾದರೂ ಕಾಯಾಂತರೀಕರಣದ ಪ್ರಭಾವಕ್ಕೆ ಒಳಗಾಗಬಹುದು. ಆದರೆ ಸುಲಭವಾಗಿ ಕರಗಿ ಹೋಗುವ ಕಾರ್ಬೊನೇಟ್ ಶಿಲೆಗಳು ಕ್ರಿಯೆ ನಡೆಯಲು ಅತ್ಯಂತ ಉತ್ತಮ ಸಹಕಾರಿ. ಸುಣ್ಣದ ಅಂಶವುಳ್ಳ ಜೇಡುಶಿಲೆ ಮತ್ತು ಮರಳುಶಿಲೆಗಳೂ ಈ ಕ್ರಿಯೆಗೆ ಸುಲಭವಾಗಿ ಒಳಗಾಗುತ್ತವೆ. ಇದೇ ರೀತಿ ಅನೇಕ ಅಗ್ನಿಶಿಲೆಗಳಲ್ಲಿ ಅದುರಿನ ನಿಕ್ಷೇಪಗಳೂ ಉಂಟಾಗಿವೆ. ರೂಪಾಂತರ ಶಿಲೆಗಳಲ್ಲಿ ಪದರುಶಿಲೆಗಳಲ್ಲಿ ಪದರುಶಿಲೆ ಮತ್ತು ಅಮೃತಶಿಲೆ ಅತ್ಯಂತ ಹೆಚ್ಚಿನ ಪ್ರಮಾಣದಲ್ಲೂ ನೈಸ್, ಫಿಲ್ಲೈಟ್ ಮತ್ತು ಕ್ವಾರ್ಟ್ಸೈಟುಗಳು ಕಡಿಮೆ ಪ್ರಮಾಣದಲ್ಲೂ ಕಾಯಾಂತರೀಕರಣದ ಪ್ರಭಾವಕ್ಕೆ ಒಳಗಾಗುತ್ತವೆ. ಜೇಡು ಮತ್ತು ಮರಳು ಶಿಲೆಗಳಲ್ಲಿ ಈ ಕ್ರಿಯೆ ಅಷ್ಟಾಗಿ ನಡೆಯುವುದಿಲ್ಲವೆಂದೇ ಹೇಳಬೇಕು.

ಹಲವು ಅಗ್ನಿಶಿಲೆಗಳಲ್ಲಿ (ಉದಾ : ಕಣಶಿಲೆಗಳು) ಕಾಯಾಂತರೀಕರಣ ಇಡೀ ಶಿಲೆಯನ್ನು ವ್ಯಾಪಿಸದೆ ಹಲಕೆಲವು ಸ್ಥಳಗಳಲ್ಲಿ ಮಾತ್ರ ತಲೆದೋರುತ್ತದೆ. ಇಲ್ಲಿ ಶಿಲೆಯ ರಚನೆ ಪ್ರಮುಖ ಪಾತ್ರವನ್ನು ವಹಿಸುತ್ತದೆಂಬುದನ್ನು ಮತ್ತೆ ಒತ್ತಿಹೇಳಬೇಕು. ಅದರಲ್ಲೂ ಸೀಳು ಮತ್ತು ಬಿರುಕುಗಳು ಬಹುಮುಖ್ಯ. ಖನಿಜಪೂರಿತ ದ್ರಾವಣಗಳು ಇವುಗಳ ಒಳಹೊಕ್ಕು ಶಿಲೆಯ ದುರ್ಬಲ ಜಾಡುಗಳಲ್ಲಿ ಸಂದರ್ಭಾನುಸಾರ ಪ್ರವಹಿಸಿ ಕಾಯಾಂತರೀಕರಣವನ್ನು ಉಂಟುಮಾಡುತ್ತವೆ. ಹೀಗಾಗಿಯೇ ಓರೆಮಡಿಕೆಗಳು (ಪಿಚ್ಚಿಂಗ್ ಫೋಲ್ಡ್ಸ್) ಅನೇಕ ಸಂದರ್ಭಗಳಲ್ಲಿ ಉತ್ತಮ ದರ್ಜೆಯ ಅದಿರಿನ ನಿಕ್ಷೇಪಗಳ ತೌರೂರು.

ಬೇಟ್‌ಮನ್ ಎಂಬಾತ ಕಾಯಾಂತರೀಕರಣದ ನಿಕ್ಷೇಪಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿದ್ದಾನೆ. 1 ಸ್ಥೂಲ (ಇರ್‍ರೆಗ್ಯುಲರ್) ನಿಕ್ಷೇಪಗಳು : ಇವುಗಳಿಗೆ ನಿರ್ದಿಷ್ಟ ರಚನೆಯಾಗಲೀ ಆಕಾರವಾಗಲೀ ಇಲ್ಲ. ಮಂದದಲ್ಲಿ ಹೆಚ್ಚಿನ ರೀತಿಯ ವ್ಯತ್ಯಾಸಗಳು ಕಂಡುಬರುತ್ತವೆ. ಕ್ವಿಬೆಕ್ ದೇಶದ ನೊರಾಂಡ ಪೈರೈಟಿಸ್ ಖನಿಜ ನಿಕ್ಷೇಪಗಳು ಉತ್ತಮ ಉದಾಹರಣೆ. ಹೀಗೆಯೇ ಅಮೆರಿಕದ ಸಂಯುಕ್ತಸಂಸ್ಥಾನದ ಮನಿಟೋಬಾ ಮತ್ತು ಸ್ಪೇನಿನ ರಿಯೊಟಿಂಟೋ ನಿಕ್ಷೇಪಗಳೂ ಈ ಬಗೆಯವು. ರಿಯೊಟಿಂಟೋ ನಿಕ್ಷೇಪದಲ್ಲಿ 500 ಮಿಲಿಯನ್ ಟನ್ನುಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ಪೈರೈಟ್ ಖನಿಜ ನಾಡಶಿಲೆಯ ಕಾಯಾಂತರೀಕರಣದಿಂದ ಉಂಟಾಗಿದೆ. ಈ ಗುಂಪಿನ ನಿಕ್ಷೇಪಗಳು ಬಹುಮಟ್ಟಿಗೆ ಸುಣ್ಣಶಿಲೆಯಲ್ಲಿ ಕಂಡುಬಂದರೂ ಇತರ ಶಿಲೆಗಳಲ್ಲೂ ಕಾಣಸಿಗುವುದುಂಟು.

**2. ಖನಿಜಸಿರಗಳು :** ಇವು ಶಿಲಾಸೀಳುಗಳು ಅಥವಾ ಶಿಲಾಪ್ರಸ್ತರಗಳ ನಡುವೆ ಶೇಖರವಾಗಿರುತ್ತವೆ. ಹೀಗಾಗಿ ಸಣ್ಣಸಣ್ಣ ಎಳೆಗಳೋಪಾದಿಯಲ್ಲಿ ಇವು ಶಿಲೆ ಇಡೀ ಹರಡಿರುವುವು. ಗಾತ್ರದಲ್ಲಿ ಅಷ್ಟು ದೊಡ್ಡವಾಗಿರುವುದಿಲ್ಲ. ಆಂಟೇರಿಯೋವಿನ ಕಿರ್ಕ್‌ಲ್ಯಾಂಡ್ ಲೇಕ್ ಪ್ರದೇಶದ ಚಿನ್ನದ ನಿಕ್ಷೇಪಗಳು, ಅಲಾಸ್ಕಾವಿನ ಕೆನಿಕಾಟ್‌ನ ತಾಮ್ರದ ನಿಕ್ಷೇಪಗಳು ಮತ್ತು ಇಡಾಹೋವಿನ ಕೂರ್‌ಡಿ ಆಲಿನ್‌ನ ಸೀಸದ ನಿಕ್ಷೇಪಗಳು ಈ ಬಗೆಯ ಕಾಯಾಂತರೀಕರಣದ ನಿಕ್ಷೇಪಗಳಿಗೆ ಉತ್ತಮ ನಿದರ್ಶನ.

**3. ಚದರಿರುವ ನಿಕ್ಷೇಪಗಳು :** ಇವುಗಳಲ್ಲಿ ಕಾಯಾಂತರೀಕರಣ ಖನಿಜ ಅಷ್ಟು ಹೆಚ್ಚಿನ ಪ್ರಮಾಣದಲ್ಲಿರುವುದಿಲ್ಲ. ಇಡೀ ನಾಡಶಿಲೆಯಲ್ಲಿ ಸಣ್ಣ ಕಣಗಳೋಪಾದಿಯಲ್ಲಿ ಚದುರಿ ಹೋಗಿರುತ್ತವೆ. ಖನಿಜ ಪ್ರಮಾಣ ಶಿಲೆಯೊಡನೆ ಹೋಲಿಸುವುದಾದರೆ ಅತ್ಯಲ್ಪ. ನೂರು ಭಾಗಗಳಿಗೆ ಕೇವಲ ಎರಡರಿಂದ ಹಿಡಿದು ಹತ್ತರವರೆಗೆ ಕಂಡುಬರುತ್ತದೆ. ಅಲ್ಲದೆ ಅದುರು ಸಹ ಸಾಮಾನ್ಯವಾಗಿ ಅಷ್ಟು ಉತ್ತಮ ದರ್ಜೆಯದಲ್ಲ. ಈ ಬಗೆಯ ನಿಕ್ಷೇಪಗಳಲ್ಲಿ ಖನಿಜವನ್ನು ಒಪ್ಪ ಮಾಡುವುದು ಅಷ್ಟು ಸುಲಭವಲ್ಲ. ಶ್ರಮಸಾಧ್ಯವಾದ ಗಣಿಯ ಕೆಲಸ ನಡೆಯಬೇಕು. ಚಿಲಿದೇಶದ ಚುಕ್ಕಿ ಕಮಾಟಾ ತಾಮ್ರದ ಗಣಿಗಳು ಅತ್ಯುತ್ತಮ ಉದಾಹರಣೆ. ಇಲ್ಲಿ ಕೇವಲ ಶೇ. 1.64 ರಷ್ಟು ಪ್ರಮಾಣದಲ್ಲಿ 1,035 ಮಿಲಿಯನ್ ಟನ್ನುಗಳಷ್ಟು ತಾಮ್ರದ ಅದುರು ಇರುವುದೆಂದು ಅಂದಾಜು ಮಾಡಲಾಗಿದೆ. ಊಟಾ ಪ್ರದೇಶದ ತಾಮ್ರದ ನಿಕ್ಷೇಪಗಳು ಸಹ ಈ ಬಗೆಯವು.

**ಕಾಯಾಂತರೀಕರಣ ನಿಕ್ಷೇಪಗಳ ಆಕಾರ ಮತ್ತು ಗಾತ್ರ :** ಈ ಬಗೆಯ ಖನಿಜ ನಿಕ್ಷೇಪಗಳ ಆಕಾರ ಬಲುಮಟ್ಟಿಗೆ ಮಾತೃಶಿಲೆಗಳ ಲಕ್ಷಣಗಳನ್ನೂ ಅಲ್ಲಿ ತಲೆದೋರಿದ ಭೂಚಟುವಟಿಕೆಗಳನ್ನೂ ಅವಲಂಬಿಸಿದೆ. ಸಾಮಾನ್ಯವಾಗಿ ಇವುಗಳಿಗೆ ನಿರ್ದಿಷ್ಟ ಆಕಾರವೇ ಇರುವುದಿಲ್ಲ. ಆದರೆ ಹಲವು ಬಾರಿ ಹಾಳೆಯಂತೆ ಚಪ್ಪಟೆಯಾಗಿರುವುದುಂಟು. ಹಲವು ಬಾರಿ ಉದ್ದನೆಯ ಕೊಳವೆಯಂತೆ ಅಥವಾ ಗೋಪುರ ಇಲ್ಲವೇ ಬಾಣಲೆಯಂತೆಯೂ ಕಂಡುಬರುತ್ತವೆ. ಗಾತ್ರದಲ್ಲಿ ಹೆಚ್ಚಿನ ಏರುಪೇರುಗಳನ್ನು ಕಾಣಬಹುದು. ಹಲವು ಸಣ್ಣಪುಟ್ಟ

ಬಿರುಕುಗಳೋಪಾದಿಯಲ್ಲಿದ್ದರೆ ಕೆಲವು ನೂರಾರು ಅಡಿಗಳಿಗೂ ಮೀರಿದ ಬೃಹದಾಕಾರವನ್ನು ತಳೆದಿರುತ್ತವೆ. ಇವುಗಳಲ್ಲಿ ಬಹುಮುಖ್ಯವಾದುದು ಅಮೆರಿಕದ ಕಾಲೊರಾಡೋವಿನ ಲೆಡ್‌ವಿಲ್ ಬಳಿಯ ಸತುವಿನ ನಿಕ್ಷೇಪ. ಇದರ ಉದ್ದ 3,500' ಅಗಲ 1600' ಮತ್ತು ಮಂದ 200'.

ಕಾಯಾಂತರೀಕರಣದಿಂದ ಉಂಟಾದ ಕಬ್ಬಿಣ, ತಾಮ್ರ, ಸೀಸ, ಸತು, ಚಿನ್ನ, ಬೆಳ್ಳಿ, ತವರ, ಮ್ಯಾಂಗನೀಸ್, ಒರೈಟ್, ಫ್ಲೂರೈಟ್ ಮತ್ತು ಮ್ಯಾಗ್ನಸೈಟ್ ಮೊದಲಾದ ಉಪಯುಕ್ತವಾದ ಖನಿಜಗಳ ನಿಕ್ಷೇಪಗಳನ್ನು ಪ್ರಪಂಚದ ಹಲವಾರು ಕಡೆ ನೋಡಬಹುದು. (ಬಿ.ವಿ.ಜಿ.)

**ಕಾಯಿಧೂಪ :** ಕೆನೇರಿಯಮ್ ಸ್ಟ್ರಿಕ್ಟಮ್ ಎಂಬ ಶಾಸ್ತ್ರೀಯ ಹೆಸರುಳ್ಳ ದೊಡ್ಡಗಾತ್ರದ ಚೆಲುವಾದ ಮರ. ಬರ್ಸೆರೇಸೀ ಕುಟುಂಬಕ್ಕೆ ಸೇರಿದೆ. ಪಶ್ಚಿಮ ಘಟ್ಟಗಳ 5000' ಎತ್ತರದಲ್ಲಿನ ದಟ್ಟವಾದ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಮಂಡಧೂಪ ಇದರ ಪರ್ಯಾಯ ನಾಮ. ಇಂಗ್ಲಿಷಿನಲ್ಲಿ ಇದರ ಹೆಸರು ಬ್ಲಾಕ್ ಡಮ್ಮಾರ್ ಟ್ರೀ. ಇದರ ಕಾಂಡ ನೇರ. ಬಣ್ಣ ಬಿಳಿ. ಎಲೆಗಳು ಸಂಯುಕ್ತಮಾದರಿಯವು; ಜೋಡಣೆ ಪರ್ಯಾಯ ಮಾದರಿಯದು. ಎಲೆಗಳು ಎಳೆಯವಾಗಿದ್ದಾಗ ಅಚ್ಚಹಳದಿ ಬಣ್ಣದವಾಗಿದ್ದು ಬರಬರುತ್ತ ಕೆಂಪು ಬಣ್ಣಕ್ಕೆ ತಿರುಗುತ್ತವೆ. ಹೂಗಳು ಭಿನ್ನಲಿಂಗಿಗಳು ಅಥವಾ ದ್ವಿಲಿಂಗಿಗಳು ; ಎಲೆಗಳ ಕಂಕುಳಲ್ಲೋ ಇಲ್ಲವೆ ರೆಂಬೆಗಳ ತುದಿಯಲ್ಲೋ ಇರುವ ಸಂಕೀರ್ಣಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಪುಷ್ಪಪತ್ರಗಳು 3, ದಳಗಳು 3, ಕೇಸರುಗಳು 6. ಅಂಡಾಶಯ ಉಚ್ಚಸ್ಥಾನದ್ದು. ಫಲ ಅಷ್ಟಿಫಲ ಮಾದರಿಯದು.

ಕಾಯಿಧೂಪದ ಕಾಂಡದಿಂದ ಒಂದು ಬಗೆಯ ಹೊಳೆಯುವ ಕಪ್ಪುಬಣ್ಣದ ರಾಳ ಒಸರುತ್ತದೆ. ಇದನ್ನು ಮೆರುಗೆಣ್ಣೆ, ಸೀಸೆಗಳ ಮುಚ್ಚಳವನ್ನು ಬಂಧಿಸುವ ಅರಗು ಮುಂತಾದವುಗಳ ತಯಾರಿಕೆಯಲ್ಲೂ ದೋಣಿಗಳ ಹಲಗೆಗಳ ಸಂದನ್ನು ನೀರು ಸೋರದಂತೆ ಮುಚ್ಚಲೂ ಉಪಯೋಗಿಸುತ್ತಾರೆ. ಕಾಂಡದ ಮೇಲೆ ಚಾಕುವಿನಿಂದ ಗಾಯಮಾಡಿ, ಮರದ ಬುಡದ ಸುತ್ತ ಬೆಂಕಿಯಿಡುತ್ತಾರೆ. ಇದರಿಂದ ತೊಗಟೆ ಮತ್ತು ಹೊರಪದರ ಸುಟ್ಟುಹೋಗಿ ಸುಮಾರು 2 ವರ್ಷಗಳ ಅನಂತರ ಗಾಯಮಾಡಿದ ಸ್ಥಳದಿಂದ ರಾಳ ಒಸರಲಾರಂಭಿಸುತ್ತದೆ. ಪ್ರತಿವರ್ಷವೂ ಸುಮಾರು 6 ತಿಂಗಳು ಕಾಲ ಈ ರಾಳ ಹೊರಬರುತ್ತದೆ. ಒಂದು ಮರದಿಂದ 10 ವರ್ಷಕಾಲ ರಾಳವನ್ನು ಪಡೆಯಬಹುದು. ಗಾಳಿಯ ಸಂಪರ್ಕಕ್ಕೆ ಬಂದ ಒಡನೆ ಇದು ಅರೆಪಾರದರ್ಶಕವಾದ ಹೊಳೆಯುವ ಕಪ್ಪುಬಣ್ಣದ ಗಾಜಿನಂಥ ಗಟ್ಟಿವಸ್ತುವಾಗುತ್ತದೆ. ಕಾಯಿಧೂಪದ ಚೌಬೀನೆ ಸಾಧಾರಣ ಗಟ್ಟಿಯಾದುದೂ ಭಾರವಾದುದೂ ಆಗಿದೆ. ಇದರ ಬಣ್ಣ ಹೊಳೆಯುವ ಬೂದಿ ಮಿಶ್ರಿತ ಬಿಳುಪು, ಕೊಯ್ಯಲು ಸುಲಭ. ಆದರೆ ಹೆಚ್ಚು ಬಾಳಿಕೆ ಬರುವುದಿಲ್ಲ. ಇದನ್ನು ಬೆಂಕಿಪೆಟ್ಟಿಗೆ, ಹಲಗೆಗಳು, ಪ್ಲೈವುಡ್ ಮುಂತಾದವನ್ನು ಮಾಡಲು ಬಳಸುತ್ತಾರೆ. (ಎ.ಕೆ.ಎಸ್.)

**ಕಾಯ್ಜೀವಿ :** ಸಣ್ಣಗೆ ದುಂಡಾಗಿರುವ ಏಕಾಣುಜೀವಿಗಳ ಒಂದು ವರ್ಗದ್ದು (ಕಾಕಸ್). ಸಣ್ಣಗೆ ದುಂಡನೆಯ ಹೀಚುಗಾಯಿಗಳನ್ನು ಬಿಡುವ ಗಿಡಗಳ ವರ್ಗಕ್ಕೆ ಕೆಲ ಕಾಲದಿಂದಲೂ ಸಸ್ಯಶಾಸ್ತ್ರದಲ್ಲಿ ಕಾಕಸ್ (ಕಾಯಿಗಿಡ) ಎಂದು ಹೆಸರಿತ್ತು. ವಿಯನ್ನದ ಶಸ್ತ್ರವೈದ್ಯನಾಗಿದ್ದ ತಿಯೋಡೋರ್ ಬಿಲ್ರಾತ್ (1847) ದುಂಡಗೆ ಹೀಚುಗಾಯಿಯಂತೆ ಇರುವ ಏಕಾಣುಜೀವಿಗೂ ಇದೇ ಹೆಸರಿತ್ತ. ರೋಗಶಾಸ್ತ್ರದಲ್ಲಿ ಈಗ ಹಲತೆರನ ಕಾಯ್ಜೀವಿಗಳಿವೆ. ಸೂಕ್ಷ್ಮ ಕಾಯ್ಜೀವಿ (ಮೈಕ್ರೊಕಾಕಸ್), ಸರ ಕಾಯ್ಜೀವಿ (ಸ್ಟ್ರೆಪ್ಟೊಕಾಕಸ್), ಗುಚ್ಛಿಕಾಯ್ಜೀವಿ (ಸ್ಟೆಫಿಲೊಕಾಕಸ್), ರೇತು ಕಾಯ್ಜೀವಿ (ಗೊನೊಕಾಕಸ್), ಮಿದುಳು ಪೊರೆಕಾಯ್ಜೀವಿ (ಮೆನಿಂಗೊಕಾಕಸ್), ಪುಪ್ಪುಸಕಾಯ್ಜೀವಿ (ನ್ಯೂಮೊಕಾಕಸ್), ಇತ್ಯಾದಿ. **(ನೋಡಿ– ಏಕಾಣುಜೀವಿಶಾಸ್ತ್ರ)** (ಡಿ.ಎಸ್.ಎಸ್.)

**ಕಾರಂತ, ಕೆ.ಆರ್.:** 1894–. ಪ್ರಸಿದ್ಧ ರಾಜಕೀಯ ಧುರೀಣ ಮತ್ತು ನ್ಯಾಯವಾದಿ. ದಕ್ಷಿಣ ಕನ್ನಡ ಜಿಲ್ಲೆ ಕೋಟದಲ್ಲಿ 1894 ಮೇ 1ರಂದು ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಪದವೀಧರರಾದ ಅನಂತರ ಮುಂಬಯಿಯಲ್ಲಿ ನ್ಯಾಯಶಾಸ್ತ್ರ ಪದವಿಯನ್ನು ಗಳಿಸಿಕೊಂಡರು. 1919ರಿಂದ ಮಂಗಳೂರಿನಲ್ಲಿ ನೆಲೆಸಿ ವಕೀಲಿವೃತ್ತಿ ಕೈಗೊಂಡರು.

ಗಾಂಧೀಜಿಯವರ ಕರೆಗೆ ಓಗೊಟ್ಟು ತಮ್ಮ ವೃತ್ತಿ ಬಿಟ್ಟು ಅಸಹಕಾರ ಚಳವಳಿಯಲ್ಲಿ ಪಾತ್ರವಹಿಸಿ ಕಾಂಗ್ರೆಸ್ಸಿನ ಕ್ರಿಯಾತ್ಮಕ ಸದಸ್ಯರಾದರು. 1924ರಿಂದ 1937ರವರೆಗೆ ಮಂಗಳೂರು ನಗರ ಯೋಜನೆಯಲ್ಲಿ ಹೆಚ್ಚು ಆಸಕ್ತಿವಹಿಸಿದ್ದ ಇವರು ಕಾಂಗ್ರೆಸ್ಸಿನ ಸ್ವರಾಜ್ಯ ಪಕ್ಷದ ಪ್ರತಿನಿಧಿಯಾಗಿ 1926ರಲ್ಲಿ ಮದರಾಸಿನ ಶಾಸನಸಭೆಗೆ ಚುನಾಯಿತರಾದರು. 1937ರಲ್ಲಿ ಎರಡನೆಯಸಾರಿ ಚುನಾಯಿತರಾಗಿ ಸಿ.ರಾಜಗೋಪಾಲಾಚಾರಿಯವರ ಮಂತ್ರಿಮಂಡಲದ ಸಂಸತ್ತಿನ ಕಾರ್ಯದರ್ಶಿಯಾಗಿ ನೇಮಿತರಾದರು. 1940ರಲ್ಲಿ ಸತ್ಯಾಗ್ರಹಿಯಾಗಿ ಸರ್ಕಾರದಿಂದ ಬಂಧಿತರಾದರು. 1942ರಿಂದ 1944ರವರೆಗೂ ಭಾರತ ಬಿಟ್ಟು ತೊಲಗಿ ಚಳವಳಿಯ ಅಂಗವಾಗಿ ಪುನಃ ಬಂಧಿತರಾಗಿದ್ದರು. 1946ರಲ್ಲಿ ಮದರಾಸು ವಿಧಾನಸಭೆಗೆ ಚುನಾಯಿತರಾಗಿ ಟಿ.ಪ್ರಕಾಶಂ ಅವರ ಮಂತ್ರಿಮಂಡಲದಲ್ಲಿ ಕಂದಾಯಮಂತ್ರಿಯಾಗಿದ್ದಾಗ ಜಮೀನ್ದಾರಿ ರದ್ದಿಯಾತಿ ಕಾನೂನಿನ ಕರಡನ್ನು ತಂದು, ಸ್ವಾತಂತ್ರ್ಯದ ಅನಂತರ ಅದು ಕಾನೂನಾಗಲು ಕಾರಣರಾದರು. ಮಲಬಾರು ಮತ್ತು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿ ಅರಣ್ಯರಕ್ಷಣೆ ಮತ್ತು ನೀರಾವರಿ ಕಾಯಿದೆಯನ್ನೂ ತಂದರು. 1951ರಲ್ಲಿ ಇಂಗ್ಲೆಂಡ್ ಮತ್ತು ಯುರೋಪಿನ ಕೆಲವು ದೇಶಗಳನ್ನು ಸುತ್ತಿಬಂದ ಕಾರಂತರು ತಮ್ಮ ಪ್ರವಾಸದ ಅನುಭವಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ.

1951ರ ಕೊನೆಯಲ್ಲಿ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟು ಕೆ.ಎಂ.ಪಿ. ಪಕ್ಷದ ಸದಸ್ಯರಾಗಿದ್ದರು. ಅನಂತರ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಸ್ಥಾಪಕ ಸದಸ್ಯ ಮತ್ತು ಉಪಾಧ್ಯಕ್ಷರಾದರು.

ರಾಜ್ಯ ಪುನರ್ ವಿಂಗಡಣೆಯಾದಮೇಲೆ ಇವರು ಬೆಂಗಳೂರಿನಲ್ಲಿ ನೆಲೆಸಿ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಮುಂದುವರಿಸಿದರು. ಪ್ರಸಿದ್ಧ ಸಾಹಿತಿಗಳಾದ ಶಿವರಾಮ ಕಾರಂತರು **(ನೋಡಿ)** ಇವರ ಸಹೋದರರಲ್ಲೊಬ್ಬರು. (ಬಿ.ಡಿ.ಎಸ್.)

**ಕಾರಂತ, ಬಿ. ವಿ. :** 1928–2002 ಕನ್ನಡ ಹೆಸರಾಂತ ನಾಟಕ ನಿರ್ದೇಶಕರು ಬಿ.ವಿ. ಕಾರಂತರು ಹುಟ್ಟಿದ್ದು 1928ರ ಅಕ್ಟೋಬರ್ 7 ರಂದು. ದಕ್ಷಿಣಕನ್ನಡದ ಬಂಟ್ವಾಳ ತಾಲ್ಲೂಕಿನ ಕುಕ್ಕಾಜೆಯಲ್ಲಿ ಜನಿಸಿದರು. ತಂದೆ ಬಾಬುಕೋಡಿ ನಾರಣಪ್ಪಯ್ಯನವರ ತಾಯಿ ಲಕ್ಷ್ಮಮ್ಮ. ಅಡಿಕೆ ತೋಟದವರ ಲೆಕ್ಕ ಬರೆಯುವುದು, ಮನೆಪಾಠ ಹೇಳುವುದು ನಾರಣಪ್ಪಯ್ಯನ ಉದ್ಯೋಗ. ತಾಯಿ ಲಕ್ಷ್ಮಮ್ಮ ಚೊಚ್ಚಲ ಕೂಸು ಬಿ.ವಿ.ಕಾರಂತರನ್ನು ಬೋಯಣ್ಣ ಎಂದು ಕರೆದು, ಕೊಂಡಾಟ ಮಾಡುತ್ತಿದ್ದರು. ಈ ಕೊಂಡಾಟದಲ್ಲಿ ಕಾರಂತರು ತಾಯಿಯಿಂದ ಸಂಪ್ರದಾಯದ ಹಾಡುಗಳು, ಭಜನೆ, ಹರಿಕಥೆ, ಯಕ್ಷಗಾನ ಮೊದಲಾದವುಗಳ ಸವಿಯನ್ನು ಉಂಡರು. ಬಾಲ್ಯದಲ್ಲೇ ಸಂಗೀತ ಕಾರಂತರ ಸುಪ್ತಪ್ರತಿಭೆಯಲ್ಲಿ ಊರಿಬಿಟ್ಟಿತು.



ಬೋಯಣ್ಣ ಮಾಣಿಗೆ ಇನ್ನೂ ಮೀಸೆ ಮೂಡದ ಪ್ರಾಯ. ಈ ಪ್ರಾಯಕ್ಕೇ ಗುಬ್ಬಿ ಕಂಪನಿಯ 'ಕೃಷ್ಣಲೀಲಾ' ನೋಡುವ ಕನಸು. ನಾಟಕ ನೋಡಲು ಮಾಣಿ ಬೋಯಣ್ಣ ಪಾಣೆ ಮಂಗಳೂರಿನಿಂದ ಮಂಗಳೂರಿಗೆ ಸೈಕಲ್ ಹೊಡೆದದ್ದು, ಸೈಕಲ್‌ನಿಂದ ಬಿದ್ದು ಹಲವು ದಿನ ನರಳಿದ್ದು. ಆದರೆ, ಗುಬ್ಬಿ ಕಂಪನಿ ನಾಟಕದ ರೋಮಾಂಚನ ಸುಖ, ಚಿರನೆನಪು. ಈ ಮಾಣಿ ಬೋಯಣ್ಣ, ಮುಂದೆ ಕನ್ನಡ ರಂಗಭೂಮಿಯ ಮೇರು ಪುರಷನಾಗಿ ಬೆಳೆದ. ತಮ್ಮ ಗಂಧರ್ವ ಸ್ಪರ್ಶದಿಂದ ಕನ್ನಡ ರಂಗಭೂಮಿಯ ಸಾಮರ್ಥ್ಯಗಳನ್ನು ಮಹೋನ್ನತೆಗೇರಿಸಿದ. ಇವರೇ ಬಿ.ವಿ.ಕಾರಂತ– ಬಾಬುಕೋಡಿ ವೆಂಕಟರಮಣ ಕಾರಂತ್.

ಬಿ.ವಿ. ಕಾರಂತರ ರಂಗ ಯಾತ್ರೆ ಶುರುವಾದದ್ದು ಪಾಣೆ ಮಂಗಳೂರಿನಿಂದ. ಮಂಗಳೂರಿಗೆ, ಮಂಗಳೂರಿನಿಂದ ಮೈಸೂರಿಗೆ, ಅಲ್ಲಿಂದ ಕಾಶಿ, ಭೋಪಾಲ, ದಿಲ್ಲಿ, ಹೈದರಾಬಾದ್ ಹೀಗೆ ದೇಶ ವಿದೇಶಗಳಲ್ಲಿ ಬಿ.ವಿ.ಕಾರಂತರು 'ಸೈಕಲ್ ಹೊಡೆದದ್ದೇ ಹೊಡೆದದ್ದು'. ಅವರದು ಕೊನೆಯುಸಿರು ಇರುವವರೆಗೆ ನಡೆದ ನಿರಂತರ ರಂಗಯಾತ್ರೆ. ಈ ಯಾತ್ರೆಯಲ್ಲಿ ಕುಕ್ಕಾಜೆಯ ಬೋಯಣ್ಣ, ಬಿ.ವಿ. ಕಾರಂತರಾಗಿ ನಾಡಿನುದ್ದಗಲ ರಂಗಭೂಮಿಯ ಮೇರುವಾಗಿ ಬೆಳೆದು ನಿಂತರು. ಸೀಮೋಲ್ಲಂಘನವನ್ನೂ ಮಾಡಿದರು.

ಕುಕ್ಕಜೆ ಶಾಲೆಯಲ್ಲೇ ಬಿ.ವಿ.ಕಾರಂತರ ರಂಗತಾಲೀಮೂ ಶುರುವಾಯಿತು. ಓದಿನೊಂದಿಗೆ 'ಸುಕುಂಡೆ ಐತಾಳರು', 'ನನ್ನ ಗೋಪಾಲ' ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ ಬಿ.ವಿ.ಕಾರಂತರು ಎರಡು ರೂಪಾಯಿ ಬಹುಮಾನವನ್ನೂಗಿಟ್ಟಿಸಿದ್ದರು. ಎಂಟನೆಯ ಕ್ಲಾಸು ಮುಗಿದದ್ದೇ ಪುತ್ತೂರಿನ ಕುಕ್ಕಬೈಲು ಕೃಷ್ಣಭಟ್ಟರ ಮಕ್ಕಳಿಗೆ ಮನೆಪಾಠ ಹೇಳುವ ಮಾಸ್ತರಾದರು. ಜೊತೆಗೆ, ಮಹಾಬಲಭಟ್ಟರ ತ್ಯಾಗರಾಜ ಸಂಗೀತ ಶಾಲೆಯಲ್ಲಿ ಸಂಗೀತ ಕಲಿಯಲಾರಂಭಿಸಿದ ಬೋಯಣ್ಣ ಬಿಡುವಾದಾಗ ಶಿವರಾಮ ಕಾರಂತರ 'ಬಾಲವನ' ಕ್ಕೂ ಭೇಟಿ ಕೊಡುತ್ತಿದ್ದುದುಂಟು.

ತ್ಯಾಗರಾಜ ಸಂಗೀತ ಶಾಲೆಯ 'ಸಾಪಾ' ಸಾಲದೆನಿಸಿತೇನೋ. ಮೈಸೂರು ಮಹಾರಾಜರನ್ನು ಭೇಟಿಯಾಗಿ ಅವರ ಆಶ್ರಯದಲ್ಲಿ ಸಂಗೀತ ಕಲಿಯಬೇಕೆಂಬ ಆಸೆ ಪ್ರಬಲವಾಯಿತು. 1944ರ ನವೆಂಬರ್ ಐದರಂದು ಪುತ್ತೂರಿನಿಂದ ಕಾಲ್ತೆಗೆದರು. ಮೈಸೂರು ತಲುಪಿದರು. ಮಹಾರಾಜರ ಭೇಟಿ ಕನಸಾಗಿಯೇ ಉಳಿಯಿತು. ವಾಸ್ತವದಲ್ಲಿ ಭೇಟಿಯಾದದ್ದು

ಗುಬ್ಬಿ ಕಂಪನಿ ಮ್ಯಾನೇಜರ್ ಮಹದೇವ ಸ್ವಾಮಿಯವರನ್ನು. ಎಂ.ಬಿ. ಮುನಿಯಪ್ಪನವರು ಗುಬ್ಬಿ ಕಂಪನಿಯ ಸಂಗೀತದ ಮಾಸ್ಟರ್. ಮಹದೇವ ಸ್ವಾಮಿಯವರು ಮಂಗಳೂರಿನ ಈ ಕೆಂಪುಮಾಣಿಯನ್ನು ಮುನಿಯಪ್ಪನವರ ಪರೀಕ್ಷೆಗೆ ಒಡ್ಡಿದರು. ಟೆಸ್ಟಲ್ಲಿ 'ಶಾರೀರ ಚೆನ್ನಾಗಿದೆ' ಎಂದು ಸಮರ್ಥನೆ ದೊರೆಯಿತು. ಗುಬ್ಬಿ ಕಂಪನಿ ಸೇರಿದರು. ಗುಬ್ಬಿ ಕಂಪನಿ ನಾಟಕಗಳಲ್ಲಿ ಬಾಲಕೃಷ್ಣ, ಮಾರ್ಕಾಂಡೇಯ ಮೊದಲಾದ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಗುಬ್ಬಿ ವೀರಣ್ಣ ಹಾಗೂ ಕಂಪನಿಯ ನಾಟಕಕಾರ, ನಿರ್ದೇಶಕ ಬಿ. ಪುಟ್ಟಸ್ವಾಮಯ್ಯನವರ ಗಮನ ಸೆಳೆದು, ವಿಶೇಷ ಪ್ರೋತ್ಸಾಹಕ್ಕೆ ಪಾತ್ರರಾದರು. ಕಾರಂತರು ಗುಬ್ಬಿ ಕಂಪನಿಯಲ್ಲಿ ಸ್ವಲ್ಪಕಾಲ ಕಾಯಮ್ಮಾಗಿ ಸ್ತ್ರೀ ಪಾತ್ರಗಳನ್ನು ಮಾಡಬೇಕಾಯಿತು. ಇದು, ಕಾರಂತರ ಸಂಗೀತ ಮತ್ತು ಅಭಿನಯ ಪ್ರತಿಭೆಗಳಿಗೆ ಹೆಚ್ಚು ಹೊಳಪು ನೀಡಿದ ಒರೆಗಲ್ಲಾಯಿತು. ಗುಬ್ಬಿ ಚನ್ನಬಸವೇಶ್ವರ ನಾಟಕ ಸಂಘದಲ್ಲಿ ಕಾರಂತರು ಆರು ವರ್ಷ ಇದ್ದು ವಿವಿಧ ಪಾತ್ರಗಳಲ್ಲಿ ಅಭಿನಯಿಸಿ ಉತ್ತಮ ನಟನಾಗಿ ಹೊರಹೊಮ್ಮಿದರು.

ಗುಬ್ಬಿ ಕಂಪನಿ ಬಿಟ್ಟು ಕಾರಂತರು ಬೆಂಗಳೂರಿಗೆ ಬಂದರು. ಗುಬ್ಬಿ ಕಂಪನಿಯಲ್ಲಿದ್ದಾಗಲೇ ಕಾರಂತರು ಗಾಂಧೀಜಿಯವರ 'ಹರಿಜನ' ಪತ್ರಿಕೆ ಓದುವ ಪರಿಪಾಠ ಬೆಳೆಸಿಕೊಂಡಿದ್ದರು. ಇದರಿಂದಾಗಿ ಹಿಂದಿಯಲ್ಲಿ ವಿಶೇಷ ಮುತುವರ್ಜಿ ಬೆಳೆಯಿತು. ಖಾಸಗಿಯಾಗಿ ಹಿಂದಿ ಮಾಧ್ಯಮದಲ್ಲಿ ಓದಿ ಬರೆದು, ಬಿ.ಎ., ಪರೀಕ್ಷೆ ಪಾಸುಮಾಡಿದರು. ಕಾರಂತರು ಗುಬ್ಬಿ ಕಂಪನಿ ಬಿಟ್ಟರೂ ವೀರಣ್ಣನವರ ಪ್ರೋತ್ಸಾಹ ನಿಂತಿರಲಿಲ್ಲ. ಓದಿನ ದಿನಗಳಲ್ಲಿ ಗುಬ್ಬಿ ವೀರಣ್ಣನವರು ಕಾರಂತರಿಗೆ ಆರ್ಥಿಕ ನೆರವು ನೀಡಿದರು. ಬೆಂಗಳೂರಿನ ಹಿಂದಿ ಪ್ರಚಾರಕ ವಿದ್ಯಾಲಯದಲ್ಲಿ ಸ್ನಾತಕದವರೆಗೆ ಕಲಿತ ಕಾರಂತರು ಸ್ನಾತಕೋತ್ತರ ಅಧ್ಯಯನಕ್ಕಾಗಿ ಕಾಶಿಗೆ ಹೋದರು. 1956–58ರಲ್ಲಿ ಕಾಶಿಯ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಎಂ.ಎ. ಪಾಸು ಮಾಡಿದರು. ಇದೇ ಕಾಲದಲ್ಲಿ ಪಂಡಿತ ಓಂಕಾರನಾಥ ಠಾಕೂರರಿಂದ ಹಿಂದೂಸ್ತಾನಿ ಸಂಗೀತ ಕಲಿತರು. ವೀರಣ್ಣನವರಿಂದ ಇನ್ನೂರು ರೂಪಾಯಿ ಸಾಲ ಪಡೆದು ಪಿಎಚ್.ಡಿ ಗೆ ನೋಂದಣಿ ಮಾಡಿಸಿದರು. ವಿಷಯ: 'ರಂಗಭೂಮಿ ಮತ್ತು ಹಿಂದಿ ನಾಟಕ'. ಪ್ರೊಫೆಸರ್ ಹಜಾರಿ ಪ್ರಸಾದ್ ದ್ವಿವೇದಿ ಮಾರ್ಗದರ್ಶಕರಾಗಿದ್ದರು.

1958ರ ಜೂನ್ 6ರಂದು ಕಾರಂತರು ಪ್ರೇಮಾರನ್ನು ಬಾಳ ಸಂಗಾತಿಯಾಗಿ ವರಿಸಿದರು. ಪರಸ್ಪರ ಒಪ್ಪಿ ಆದ ಮದುವೆಯಿದು.

ಹಿಂದಿ ಸಾಹಿತ್ಯ ಅಧ್ಯಯನಕ್ಕೂ ರಂಗಭೂಮಿ ಮತ್ತು ನಾಟಕವನ್ನೇ ಆರಿಸಿಕೊಂಡ ಬಿ.ವಿ. ಕಾರಂತರು 1960ರಲ್ಲಿ ಅಭಿನಯ ಕಲೆಯನ್ನು ಕರಗತಮಾಡಿಕೊಳ್ಳಲು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಸೇರಿದರು. ಎನ್. ಎಸ್. ಡಿ. ವಿದ್ಯಾರ್ಥಿಯಾಗಿದ್ದಾಗ ಭಾಸನ 'ಸ್ವಪ್ನ ವಾಸವದತ್ತ', ಕಾರ್ನಾಡರ 'ತುಘಲಕ್' ನಾಟಕಗಳನ್ನು ಹಿಂದಿಗೆ ಅನುವಾದಿಸಿದರು. ಈ ನಾಟಕಗಳ ಅನುವಾದ ಮತ್ತು ರಂಗ ಪ್ರಯೋಗಗಳಿಂದ ಶಾಲೆಯ ನಿರ್ದೇಶಕ ಅಲ್ಕಾಜಿಯವರ ವಿಶೇಷಗಮನಕ್ಕೆ ಪಾತ್ರರಾದರು. ಎನ್.ಎಸ್.ಡಿ. ಪದವಿ ಪಡೆದ ನಂತರ ಕಾರಂತರು ಸ್ವಲ್ಪ ಕಾಲ ದೆಹಲಿಯ ಪಟೇಲ್ ಸ್ಕೂಲಿನಲ್ಲಿ ಡ್ರಾಮಾಟೀಚರ್ ಆಗಿದ್ದರು. ಈ ಅವಧಿಯಲ್ಲಿ ಅವರು ಮಿತ್ರರೊಡಗೂಡಿ 'ಕನ್ನಡ ಭಾರತಿ' ಆರಂಭಿಸಿದರು. ಇಲ್ಲಿ, 'ತುಘಲಕ್', 'ದಾರಿಯಾವುದಯ್ಯ ವೈಕುಂಠಕ್ಕೆ' ಮೊದಲಾದ ನಾಟಕಗಳಿಂದ ದೆಹಲಿ ರಂಗಭೂಮಿ ವಲಯಗಳಲ್ಲಿ ವಿಶೇಷ ಗೌರವಾದರಗಳನ್ನು ಗಳಿಸಿದರು.

ಬಿ.ವಿ. ಕಾರಂತರು ಬೆಂಗಳೂರಿನಲ್ಲಿ ಢಾಳವಾಗಿ ಕಾಣಿಸಿಕೊಂಡದ್ದು ಎಪ್ಪತ್ತರ ದಶಕದ ಶುರುವಿನಲ್ಲಿ. ಈ ವೇಳೆಗೆ ಕರ್ನಾಟಕದಲ್ಲಿ ವೃತ್ತಿರಂಗಭೂಮಿ ಅವಸಾನದ ಅಂಚಿಗೆ ಬಂದಿತ್ತು. ಹವ್ಯಾಸಿ ರಂಗಭೂಮಿಯೂ ಡ್ರಾಯಿಂಗ್ ರೂಮ್ ನಾಟಕಗಳ ಸೀಮಿತಿಯಲ್ಲಿ ಚಲನಶೀಲತೆ ಕಳೆದುಕೊಂಡು ಜಡವಾಗಿತ್ತು. ಅದು, ಬೆಂಗಳೂರಿನ ಹವ್ಯಾಸಿ ರಂಗಭೂಮಿಯಂತೂ ಪುನರುಜ್ಜೀವನದ ದೋಹದಕ್ಕಾಗಿ ಕಾಯುತ್ತಾ ನಿಂತಿದ್ದ ದಿನಗಳು. ರವೀಂದ್ರ ಕಲಾಕ್ಷೇತ್ರವೂ ಬಂದಾಗಿತ್ತು.

ಶ್ರೀರಂಗರು ಕರ್ನಾಟಕ ಶಿಕ್ಷಣ ಇಲಾಖೆಯ ಶಿಕ್ಷಕರಿಗಾಗಿ ನಡೆಸುತ್ತಿದ್ದ ನಾಟಕ ಶಿಬಿರಗಳಲ್ಲಿ ಬೋಧಿಸಲು ಬೆಂಗಳೂರಿಗೆ ಆಗಮಿಸಿದ ಬಿ.ವಿ. ಕಾರಂತರನ್ನು ನಿಂತನೀರಾಗಿದ್ದ ಹವ್ಯಾಸಿ ರಂಗಭೂಮಿ ಸೆಳೆಯಿತು. ಲಂಕೇಶ್, ವಿ. ರಾಮಮೂರ್ತಿ ಮೊದಲಾದವರ ಕರೆಗೆ ಓಗೊಟ್ಟು ರವೀಂದ್ರ ಕಲಾಕ್ಷೇತ್ರದ ಹಿಂದಿನ ಬಯಲನ್ನೇ ರಂಗಭೂಮಿಯಾಗಿಸಿದರು. ಕಾರ್ನಾಡರ 'ಹಯವದನ', ಕಂಬಾರರ 'ಜೋಕುಮಾರಸ್ವಾಮಿ' ಮತ್ತು ಲಂಕೇಶರ 'ಸಂಕ್ರಾಂತಿ' ನಾಟಕಗಳನ್ನು ಆಡಿಸಿದರು. ಈ ಮೂರು ರಂಗ ಪ್ರಯೋಗಗಳು ಕನ್ನಡ ಹವ್ಯಾಸಿ ರಂಗಭೂಮಿಗೆ ನವಚೈತನ್ಯ, ನವೋಲ್ಲಾಸಗಳನ್ನು ತಂದು ಕೊಟ್ಟವು. ಕಾರಂತರು ಈ ಮೂರು ನಾಟಕಗಳಲ್ಲಿ ಜನಪದ ರಂಗಭೂಮಿಯ ಸಂಗೀತ, ಕುಣಿತಗಳನ್ನು ಸಾರ್ಥಕವಾಗಿ ಬಳಸಿ ತಮ್ಮ ಸೃಜನಶೀಲತೆಯನ್ನು ಮೆರೆದರು. 'ಸತ್ತವರ ನೆರಳು' ಕಾರಂತರ ನಿರ್ದೇಶನದಲ್ಲಿ ಇನ್ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡು ಹವ್ಯಾಸಿರಂಗಭೂಮಿಯಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿತು. ಕಾರಂತರು ಹವ್ಯಾಸಿರಂಗಭೂಮಿಗೆ ಪರಿಚಯಿಸಿದ ಜನಪದ ರಂಗಭೂಮಿಯ ಸಂಗೀತ, ನೃತ್ಯ ಮೊದಲಾದ ಪರಿಕರಗಳು ಈ ಬಗೆಯ ಹೊಸ ಅಲೆಯ ನಾಟಕಗಳಿಗೆ ನಾಂದಿ ಹಾಡಿದವು. ಶ್ರೀರಂಗರ ನಾಟಕಗಳು, ಸಂಸರ ನಾಟಕಗಳು, ಕುವೆಂಪು ಅವರ 'ಚಂದ್ರಹಾಸ'. ಪು.ತಿ.ನ ಅವರ 'ಗೋಕುಲ ನಿರ್ಗಮನ' ಮೊದಲಾದ ನಾಟಕಗಳನ್ನು ನಿರ್ದೇಶಿಸಿ ಕಾರಂತರು ರಂಗಭೂಮಿಯ ಹೊಸ ಹೊಸ ಸಾಧ್ಯತೆಗಳತ್ತ ಬೆರಳು ಮಾಡಿದರು. ಏವಂ ಇಂದ್ರಜಿತ್, ಸದ್ದು, ವಿಚಾರಣೆ ನಡೆಯುತ್ತಿದೆ, ಅಂಧಯುಗ ಮೊದಲಾದ ಅನುವಾದಿತ ನಾಟಕಗಳನ್ನು ರಂಗಕ್ಕೆ ತಂದು ಕನ್ನಡೇತರ ರಂಗಭೂಮಿಯನ್ನು ಪರಿಚಯಿಸಿದ ಕೀರ್ತಿ ಕಾರಂತರದು.

ಮಕ್ಕಳ ರಂಗಭೂಮಿ ಬಿ.ವಿ. ಕಾರಂತರ ಮತ್ತೊಂದು ಮುಖ್ಯ ಕಾಳಜಿಯಾಗಿತ್ತು. ಮಕ್ಕಳಿಗಾಗಿ, ಪತ್ನಿ ಪ್ರೇಮಾ ಅವರ ಜೊತೆಗೂಡಿ ರಂಗ ಶಿಬಿರಗಳನ್ನು ನಡೆಸಿದ ಕಾರಂತರು ಪಂಜರ ಶಾಲೆ, ಟಾಗೂರರ 'ಇಸ್ಪೀಟ್ ರಾಜ್ಯ' ಕುವೆಂಪು ಅವರ 'ನನ್ನ ಗೋಪಾಲ'; ಎಚ್.ಎಸ್.ವೆಂಕಟೇಶಮೂರ್ತಿಯವರ 'ಅಳಿಲು ರಾಮಾಯಣ', ಕಂಬಾರರ 'ಪುಷ್ಪರಾಣಿ' ಮೊದಲಾದ ಸ್ಮರಣೀಯ ರಂಗಪ್ರಯೋಗಗಳನ್ನು ಕೊಟ್ಟರು. ಮಕ್ಕಳ ಸುಪ್ತ ಪ್ರತಿಭೆ, ಕುತೂಹಲಗಳನ್ನು ಬಳಸಿಕೊಳ್ಳುವುದರಲ್ಲಿ ಕಾರಂತರು ಸಿದ್ಧ ಹಸ್ತರಾಗಿದ್ದರು.

ಬಿ.ವಿ. ಕಾರಂತರು ಸಂಚಾರಿ ರಂಗಭೂಮಿಯಂತಿದ್ದರು. ಯಾವುದೇ ಒಂದು ಊರು, ಒಂದು ಸಂಸ್ಥೆಗೆ ಕಟ್ಟು ಬಿದ್ದಿರಲಿಲ್ಲ. ದೆಹಲಿ, ಭೋಪಾಲ್, ಬೆಂಗಳೂರು, ಮೈಸೂರು, ಚಂಡೀಗಢ, ಗ್ವಾಲಿಯರ್, ಲಂಡನ್, ಹಂಗೇರಿ–ಹೀಗೆ ಕಾರಂತರ ರಂಗ ಯಾತ್ರೆಯ ಜಾಡು. 1977–81ರ ಅವಧಿಯಲ್ಲಿ ಕಾರಂತರು ದೆಹಲಿ ರಾಷ್ಟ್ರೀಯ ನಾಟಕ ಶಾಲೆ ಎನ್.ಎಸ್.ಡಿ ನಿರ್ದೇಶಕರಾಗಿದ್ದರು. ಈ ಅವಧಿಯಲ್ಲಿ ಅವರು ನಿರ್ದೇಶಿಸಿದ 'ಬರ್ನಮ್ ವನ' (ಶೇಕ್ಸ್ಪಿಯರನ 'ಮ್ಯಾಕಬೆತ್' ನಾಟಕದ ಹಿಂದಿ ರೂಪಾಂತರ), ಷಹಜಹಾನ್, ಅಂಧೇರ್ ನಗರಿ ಚೌಪಟ್ ರಾಜಾ ರಂಗ ಪ್ರಯೋಗಗಳು ರಾಷ್ಟ್ರವ್ಯಾಪಿ ರಂಗಭೂಮಿ ಅಭಿಮಾನಿಗಳ ಆಸಕ್ತಿಯನ್ನು ಸೆಳೆದವು. 'ಬರ್ನಮ್ ವನ'ದಲ್ಲಿ ಕಾರಂತರು ಯಕ್ಷಗಾನದ ಚಲನವಲನ ಹಾಗೂ ಮದ್ದಳೆ, ಚಂಡೆಗಳನ್ನು ಬಳಸಿದ್ದು; ಇಂಡೋನೇಷ್ಯ, ಕಾಂಬೋಡಿಯ ರಂಗಭೂಮಿಯ ವಸ್ತ್ರ ವಿನ್ಯಾಸಗಳನ್ನು ಬಳಸಿದ್ದು ಅವರ ಪ್ರಯೋಗಶೀಲತೆಗೆ ಉತ್ತಮ ನಿದರ್ಶನ.

ಕಾರಂತರು 1982ರಿಂದ 1986ರವರೆಗೆ ಭೋಪಾಲದ ರಂಗಮಂಡಲದಲ್ಲಿದ್ದರು. ಅಲ್ಲಿ ಅವರು 'ಘಾಸಿರಾಮ್ ಕೊತ್ವಾಲ್', 'ಮಾಳವಿಕಾಗ್ನಿ ಮಿತ್ರ', 'ಜರಾಸಂಧ' ಮೊದಲಾದ ನಾಟಕಗಳನ್ನು ನಿರ್ದೇಶಿಸಿ ಹೆಸರುಗಳಿಸಿದರು. ಭೋಪಾಲ್‌ನಲ್ಲಿ ಇದ್ದ ಕಾಲದಲ್ಲಿ ಕಾರಂತರು ತಮ್ಮ ವೈಯಕ್ತಿಕ ಜೀವನದ ಅಗ್ನಿ ದಿವ್ಯವನ್ನೂ ಎದುರಿಸಬೇಕಾಯಿತು. ನಟಿ ವಿಭಾ ಆಕಸ್ಮಿಕವಾಗಿ ಸುಟ್ಟುಕೊಂಡ ಪ್ರಕರಣದಲ್ಲಿ ಕಾರಂತರು ಬಂಧನ, ವಿಚಾರಣೆ ಎದುರಿಸಿ ಈ 'ಅಗ್ನಿ ದಿವ್ಯ'ದಲ್ಲಿ ಗೆದ್ದು ಬಂದರು.

ಕಾರಂತರ 'ಬರ್ನಮ್ ವನ' ಮೊದಲಾದ ನಾಟಕಗಳನ್ನು ನೋಡಿ ಪ್ರಭಾವಿತರಾಗಿದ್ದ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ಕರ್ನಾಟಕದಲ್ಲೂ ಭೋಪಾಲ್ ಮಾದರಿ ರಂಗಮಂಡಲ ಒಂದನ್ನು ಕಟ್ಟಬಾರದೇಕೆ ಎಂಬ ಆಲೋಚನೆ ಬಂತು. ಇದರ ಫಲವಾಗಿ ಮೈಸೂರಿನಲ್ಲಿ 1989ರಲ್ಲಿ ರಂಗಾಯಣ ರೆಪರ್ಟರಿ ಹುಟ್ಟಿಕೊಂಡಿತು. ಕಾರಂತರು ರಂಗಾಯಣದ ಮೊದಲ ನಿರ್ದೇಶಕರಾದರು. 1995ರವರೆಗೆ ಅಲ್ಲಿದ್ದು ತಮ್ಮ ಕನಸಿನ ರಂಗಾಯಣವನ್ನು ಹತ್ತು ಹಲವಾರು ಆಯಾಮಗಳೊಂದಿಗೆ ಕಟ್ಟಿ ಬೆಳೆಸಿದರು. ನಟ ನಟಿಯರ ತರಬೇತಿ, ಹೊಸ ನಾಟಕಗಳ ರಂಗ ಪ್ರಯೋಗ, ರಂಗ ಸಂಗೀತ, ರಂಗ ಸಜ್ಜಿಕೆ, ವಸ್ತ್ರ ವಿನ್ಯಾಸ, ಆಧುನಿಕ ರಂಗ ಸ್ಥಳಗಳ (ಸ್ಟೇಜ್) ನಿರ್ಮಾಣ ಹೀಗೆ ಹಲವಾರು ನಿಟ್ಟುಗಳಲ್ಲಿ ರಂಗಾಯಣವನ್ನು ಕಟ್ಟಿ ಬೆಳೆಸಿದ ಕೀರ್ತಿಕಾರಂತರದು. 'ರಂಗಾಯಣ' ರಂಗರಸಿಕರ ಯಾತ್ರಾಸ್ಥಳವಾಯಿತು.

**ಚಲನಚಿತ್ರ :** ರಂಗಭೂಮಿ ಕಾರಂತರ ತೌರುಮನೆ. ಅವರು ಸಿನಿಮಾ ಕಲೆಗೂ ಸ್ವಲ್ಪಕಾಲ ವಲಸೆ ಹೋಗಿದ್ದುಂಟು. ಆದರೆ ಸಿನಿಮಾದ ಜಗಮಗಗಳಿಗೆ ಮರುಳಾಗಿ ಅಲ್ಲೇ ನಿಲ್ಲಲಿಲ್ಲ.

'ಚೋಮನ ದುಡಿ' ಬಿ.ವಿ. ಕಾರಂತರ ಮೊದಲ ಚಿತ್ರ. ಮೊದಲ ಚಿತ್ರಕ್ಕೇ ರಾಷ್ಟ್ರ ಪ್ರಶಸ್ತಿಯ ಗರಿ. ರಾಷ್ಟ್ರ ಪ್ರಶಸ್ತಿಯ ತೀರ್ಪುಗಾರರಲ್ಲಿ ಒಬ್ಬರಾದ, ಭಾರತೀಯ ಸಿನಿಮಾದ ಅಗ್ರಗಣ್ಯ ನಿರ್ದೇಶಕ ಕೆ.ಎ. ಅಬ್ಬಾಸ್ ಕಾರಂತರಿಗೆ ಬರೆದ ಪತ್ರದಲ್ಲಿ, "ಭಾರತದಲ್ಲಿ ಮತ್ತೊಬ್ಬ ಸತ್ಯಜಿತ್ ರಾಯ್ ಹುಟ್ಟಿದ್ದಾನೆ ಎಂದು ಎಲ್ಲರೂ ಅಭಿಪ್ರಾಯಪಟ್ಟರು" ಎಂದು ತಿಳಿಸಿದ್ದಾರೆ. ಆದರೆ ಇಂಥ ಪ್ರಶಂಸೆಗಳಿಂದ ಕಾರಂತರು ಹಿಗ್ಗಲಿಲ್ಲ. "ನಾಟಕದಲ್ಲಿ ಮಾತ್ರ ಮನುಷ್ಯ ಹೇಗಿದ್ದೋ ಹಾಗೆ ಜೀವಂತವಾಗಿ ಕಾಣಿಸುತ್ತಾನೆ" ಎಂದು ರಂಗಭೂಮಿಯಲ್ಲೇ ಉಳಿದರು.

ಕಾರಂತರು, ಗಿರೀಶ್ ಕಾರ್ನಾಡರ ಜೊತೆಗೂಡಿ 'ವಂಶವೃಕ್ಷ' ಮತ್ತು 'ತಬ್ಬಲಿಯು ನೀನಾದೆ ಮಗನೆ' ಚಿತ್ರಗಳನ್ನು ನಿರ್ದೇಶಿಸಿದ್ದಾರೆ. 'ಚೋರ್ ಚೋರ್ ಛಿಪ್ ಛಿಪ್ ಜಾ'

ಕಾರಂತರು ಮಕ್ಕಳಿಗಾಗಿ ನಿರ್ದೇಶಿಸಿದ ಚಿತ್ರ. ಇದಲ್ಲದೆ, ' ಶಿವರಾಮ ಕಾರಂತರು ಮತ್ತು 'ದಕ್ಷಿಣ ಕನ್ನಡದ ಭೂತಾರಾಧನೆ' ಕಾರಂತರು ನಿರ್ದೇಶಿಸಿರುವ ಸಾಕ್ಷ್ಯ ಚಿತ್ರಗಳು.

ಸಿನಿಮಾ ರಂಗದಲ್ಲಿ, ನಿರ್ದೇಶನಕ್ಕಿಂತ ಕಾರಂತರ ಕೊಡುಗೆ ಸಂಗೀತದಲ್ಲೇ ಹೆಚ್ಚು. ಕಾರಂತರು ಹಲವಾರು ಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿದ್ದು, ಮೃಣಾಲ್ ಸೇನ್ ಅವರ 'ಪರಶುರಾಮ್', 'ಖಾರಿಜ್', ಮತ್ತು 'ಏಕ್ ದಿನ್ ಪ್ರತಿದಿನ್', ಎಂ.ಎಸ್.ಸತ್ಯು ಅವರ 'ಕನ್ನೇಶ್ವರ ರಾಮ', ಜಿ.ವಿ. ಅಯ್ಯರ್ ಅವರ 'ಹಂಸಗೀತೆ', 'ಕುದುರೆ ಮೊಟ್ಟೆ', ಶಂಕರಾಚಾರ್ಯ', 'ಭಗವದ್ಗೀತೆ', ಕಾರ್ನಾಡರ 'ಕಾಡು' ಮತ್ತು 'ಆ ಮನಿ' ಗಿರೀಶ್ ಕಾಸರವಳ್ಳಿಯವರ 'ಘಟಶ್ರಾದ್ಧ' 'ಆಕ್ರಮಣ' ಮತ್ತು 'ಮೂರುದಾರಿಗಳು', ಬರಗೂರರ 'ಬೆಂಕಿ, ಪ್ರೇಮಾಕಾರಂತರ 'ಫಣಿಯಮ್ಮ' ಮತ್ತು 'ನಕ್ಕಳಾ ರಾಜಕುಮಾರಿ' ಮುಖ್ಯವಾದವು. ವಿ.ಆರ್.ಕೆ ಪ್ರಸಾದರ 'ಋಷ್ಯಶೃಂಗ' ಹಾಗೂ ಕಾಸರವಳ್ಳಿಯವರ 'ಘಟಶ್ರಾದ್ಧ' ಚಿತ್ರಗಳ ಸಂಗೀತ ನಿರ್ದೇಶನಕ್ಕಾಗಿ ರಾಷ್ಟ್ರ ಪ್ರಶಸ್ತಿ ಹಾಗೂ 'ಹಂಸಗೀತೆ' ಸಂಗೀತ ನಿರ್ದೇಶನಕ್ಕಾಗಿ ರಾಜ್ಯ ಪ್ರಶಸ್ತಿ ಕಾರಂತರಿಗೆ ಲಭಿಸಿವೆ.

**ಪ್ರಶಸ್ತಿ ಪುರಸ್ಕಾರಗಳು:** ಮುಗ್ಧತೆಯೇ ಮೈವೆತ್ತಿ ಬಂದಂತಿದ್ದ ಬಿ.ವಿ. ಕಾರಂತರು, ಪ್ರಚಾರ–ಹೊಗಳಿಕೆ, ಪ್ರಶಸ್ತಿಗಳಿಗಾಗಿ ಎಂದೂ ಪರಿತಪಿಸಿದವರಲ್ಲ. ಆದರೆ ಇದಾವುದೂ ಅವರನ್ನು ಬಿಡಲಿಲ್ಲ. ತಾವಾಗಿಯೇ ಅವರನ್ನು ಅರಸಿಕೊಂಡು ಹೋದವು.

'ವಂಶವೃಕ್ಷ' ಚಿತ್ರಕ್ಕೆ ಗಿರೀಶಕಾರ್ನಾಡರ ಜೊತೆ ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿ ಪಡೆದಿರುವ ಕಾರಂತರು ರಂಗಭೂಮಿ ಮತ್ತು ಸಿನಿಮಾ ನಿರ್ದೇಶನಗಳಿಗಾಗಿ ಹಲವಾರು ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. 'ಚೋಮನ ದುಡಿ' ಚಿತ್ರಕ್ಕಾಗಿ ಅವರು ರಾಷ್ಟ್ರ, ರಾಜ್ಯ ಪ್ರಶಸ್ತಿಗಳ ಜೊತೆ ಲಂಡನ್ ಫಿಲ್ಮ್ ಫೆಸ್ಟಿವಲ್ ಪ್ರಶಸ್ತಿಯನ್ನೂ ಪಡೆದವರು. 1981ರಲ್ಲಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಕಾರಂತರನ್ನು ಗೌರವಿಸಿದೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1983), ಮಧ್ಯ ಪ್ರದೇಶ ಸರ್ಕಾರದ ಕಾಳಿದಾಸ ಸಮ್ಮಾನ ಪ್ರಶಸ್ತಿ (1994), ಗುಬ್ಬಿ ವೀರಣ್ಣ ಪ್ರಶಸ್ತಿ (1996)–ಬಿ.ವಿ. ಕಾರಂತರನ್ನು ಗೌರವಾಲಂಕಾರಗಳಿಂದ ಮಾನ್ಯ ಮಾಡಿದ ಪ್ರಮುಖ ಪ್ರಶಸ್ತಿಗಳು.

ಬಿ.ವಿ. ಕಾರಂತರು ನಿರುತ್ಸಾಹ, ಸೋಲು, ಆಯಾಸ ಇವುಗಳನ್ನು ಕಂಡೇ ಇಲ್ಲ ಎಂಬಂತೆ ಬದುಕಿನುದ್ದಕ್ಕೂ ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಂಡು ದುಡಿದರು. ಬೆಂಗಳೂರಿನ ಗಿರಿನಗರದಲ್ಲಿ ಮನೆಮಾಡಿ ನಿಂತರು. ರಂಗಭೂಮಿ 'ನನ್ನ ಪ್ರೊಫೆಷನ್' ಎಂದು ದೃಢವಾಗಿ ನಂಬಿದ್ದ, ಕೊನೆಯುಸಿರಿನವರೆಗೂ ರಂಗಭೂಮಿಗೆ ಮೀಸಲಾಗಿದ್ದ ಕಾರಂತರು 2002ರ ಸೆಪ್ಟಂಬರ್ 1 ರಂದು ನಿಧನರಾದರು.

ಕನ್ನಡ ಸಾಹಿತ್ಯದ ಸುಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ಹೇಳಿರುವಂತೆ '...ಕಾರಂತರೆಂದರೆ ಕನ್ನಡ ರಂಗಭೂಮಿ ಕಂಡ ಒಂದು ಕನಸು. ಅವರ ನಿಧನದಿಂದ ನಮಗೆ ಈಗ ಎಚ್ಚರವಾಗಿದೆ. ರಂಗಭೂಮಿ ಖಾಲಿಯಾಗಿದೆ'. ಕಾರಂತರು ಒಬ್ಬ ಶಾಪಗ್ರಸ್ತ ಗಂಧರ್ವ ಎಂಬುದೂ ಕುರ್ತಕೋಟಿಯವರ ಮಾತೇ. (ಜಿ.ಎನ್.ಆರ್)

ಬೆಂಗಳೂರಿನ ಗಿರಿನಗರ ಬಡಾವಣೆಯಲ್ಲಿರುವ ಕಾರಂತರ ಮನೆ 'ಬಾಬುಕುಡಿ' ಈಗ ರಂಗಭೂಮಿಗೆ ಸಂಬಂಧಪಟ್ಟಂತೆ ಅಪೂರ್ವ ಸಂಗ್ರಹವಾಗಿದೆ. ಕಾರಂತರು ತಮ್ಮ ಜೀವಿತಾವಧಿಯಲ್ಲಿ ಸಂಗ್ರಹಿಸಿದ ರಂಗಭೂಮಿಗೆ ಸಂಬಂಧಪಟ್ಟ ಗ್ರಂಥಗಳು, ಚಿತ್ರಗಳು, ಧ್ವನಿ ಸುರಳಿಗಳು, ವಾದ್ಯ ಪರಿಕರಗಳನ್ನೆಲ್ಲ ಒಪ್ಪವಾಗಿ ದಾಖಲಿಸಿ, ಜೋಡಿಸಿಟ್ಟಿದ್ದಾರೆ. ಅವರ ಪತ್ನಿ ಪ್ರೇಮಾ ಕಾರಂತ. *

**ಕಾರಂತ ಉಲ್ಲಾಸ, ಕೆ :** 1948 – . ವಿಶ್ವವಿಖ್ಯಾತ ವನ್ಯಜೀವಿ ವಿಜ್ಞಾನಿ. ತಂದೆ ಶಿವರಾಮ ಕಾರಂತ. ತಾಯಿ ಲೀಲ ಕಾರಂತ. ಕಳೆದ ಎರಡು ದಶಕಗಳಿಂದ ಹುಲಿ ಕುರಿತ ಸಂಶೋಧನೆಯಿಂದ ಪ್ರಪಂಚದ ಅತ್ಯಂತ ಗೌರವಾನ್ವಿತ ವನ್ಯಜೀವಿ ವಿಜ್ಞಾನಿ ಎಂಬ ಗೌರವಕ್ಕೆ ಭಾಜನರಾಗಿರುವವರು. ಸಂಶೋಧನೆಗಷ್ಟೇ ಸೀಮಿತವಾಗದೆ, ವೈಜ್ಞಾನಿಕ ವನ್ಯಜೀವಿ ಸಂರಕ್ಷಣೆಯಲ್ಲೂ ತೀವ್ರವಾಗಿ ತಮ್ಮನ್ನು ತೊಡಗಿಸಿಕೊಂಡಿರುವುದು ಇವರ ವೈಶಿಷ್ಟ್ಯ.

ಬಾಲ್ಯದಿಂದಲೇ ವನ್ಯಜೀವಿಗಳಲ್ಲಿ ಆಸಕ್ತಿ ಬೆಳೆಸಿಕೊಂಡ ಕಾರಂತರು, ತಂದೆ ಶಿವರಾಮ ಕಾರಂತರು ಓದಿ ಆ ಕೂಡಲೆ ಅನುವಾದಿಸಿ ಹೇಳುತ್ತಿದ್ದ ಜಿಮ್ ಕಾರ್ಬೆಟ್ ಮತ್ತು ಕೆನೆತ್ ಆಂಡರ್‌ಸನ್ ಅವರ ಹುಲಿ ಬೇಟೆ ಕಥೆಗಳಿಂದ ರೋಮಾಂಚಿತರಾಗಿದ್ದರು. ಮುಂದೆ ಕೆನೆತ್ ಆಂಡರ್‌ಸನ್ ಅವರ ಸಖ್ಯವನ್ನು ಸಹ ಬೆಳೆಸಿಕೊಂಡರು. ಬಾಲವನದ ಸುತ್ತಮುತ್ತಲಿನ ಹಾಗೂ ರಾಜ್ಯದ ಅರಣ್ಯಗಳಲ್ಲಿ ಸುತ್ತಾಡಿ ಹವ್ಯಾಸಿ ವನ್ಯಜೀವಿ ಸಂರಕ್ಷಕರಾಗಿ ಭಾರತದ ಅಪೂರ್ವ ವನ್ಯಜೀವಿ ಸಂಪತ್ತನ್ನು ಸಂರಕ್ಷಿಸುವ ಕೆಲಸದಲ್ಲಿ ಮಗ್ನರಾಗಿದ್ದರು. ಮುಂದೆ ಎಂಜಿನಿಯರಾಗಿ, ಕೃಷಿಕರಾಗಿ ಬದುಕಿನಲ್ಲಿ ನೆಲೆಕಂಡುಕೊಂಡರೂ ಅದು ಇವರಿಗೆ ಮಾನಸಿಕ ತೃಪ್ತಿಕೊಡಲಿಲ್ಲ.

ಜಾರ್ಜ್ ಷಾಲರ್ ಅವರ ಪುಸ್ತಕ: "ಡೀರ್ ಅಂಡ ದ ಟೈಗರ್" ಇವರ ಅಂತರ್ಯದಲ್ಲೇ ತುಡಿಯುತ್ತಿದ್ದ ವೈಜ್ಞಾನಿಕ ವನ್ಯಜೀವಿ ಸಂರಕ್ಷಣೆಯ ಮಹತ್ವಕ್ಕೆ ತೆರೆದಿಟ್ಟಿತು. ಕಾರಂತರು ಈ ಬಗ್ಗೆ ಹೇಳುತ್ತಾರೆ " ಮಬ್ಬುಗಣ್ಣಿನವನಿಗೆ ಕನ್ನಡಕ ತೊಡಿಸಿದಂತಾಗಿತ್ತು". ತಮ್ಮ ಆಸಕ್ತಿಯ ಜಾಡು ಹಿಡಿದು, ವರ್ಜೀನಿಯದ ಫ್ರಂಟ್ ರಾಯಲ್‌ನಲ್ಲಿರುವ ಕನ್ಸರ್ವೇಶನ್ ಅಂಡ್ ರೀಸರ್ಚ್ ಸೆಂಟರ್‌ನಲ್ಲಿ ವನ್ಯಜೀವಿ ನಿರ್ವಹಣೆ ಕುರಿತ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ಇವರು, ಮುಂದೆ ಫ್ಲಾರಿಡ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಅಧ್ಯಯನ ಕೈಗೊಂಡರು. ನ್ಯೂಯಾರ್ಕ್ ಮೂಲದ ವೈಲ್ಡ್‌ಲೈಫ್ ಕನ್ಸರ್ವೇಷನ್ ಸೊಸೈಟಿಯ ಸಹಾಯದಿಂದ ಭಾರತದಲ್ಲಿ ಹುಲಿಗಳ ಅಧ್ಯಯನಕ್ಕೆ ತೊಡಗುವ ಮೂಲಕ ವೃತ್ತಿಪರ ವನ್ಯಜೀವಿ ವಿಜ್ಞಾನಿಯಾದ ಕಾರಂತರು, ಇದುವರೆಗೂ 60ಕ್ಕೂ ಹೆಚ್ಚಿನ ಸಂಶೋಧನ ಲೇಖನಗಳನ್ನು, 50ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಲೇಖನಗಳನ್ನು ಬರೆದಿದ್ದಾರೆ. ನಾಲ್ಕು ಪುಸ್ತಕಗಳನ್ನು ಮತ್ತು ವನ್ಯಜೀವಿ ನಿರ್ವಾಹಕರಿಗೆ ಅನುಕೂಲವಾಗುವಂತಹ ಒಂದು ಕೈಪಿಡಿಯನ್ನು ಹೊರತಂದಿದ್ದಾರೆ.

ವನ್ಯಜೀವಿ ಸಂರಕ್ಷಣೆಯ ಮಹತ್ವ, ಸಂರಕ್ಷಣೆಯ ಕ್ರಮವನ್ನು ಜನರಿಗೆ ತಿಳಿಹೇಳಲು ಅನೇಕ ಲೇಖನಗಳನ್ನು, ಪುಸ್ತಕಗಳನ್ನು ಬರೆದಿದ್ದಾರೆ. ವೈಜ್ಞಾನಿಕ ವಿಷಯಗಳು ಪ್ರಾದೇಶಿಕ ಭಾಷೆಯಲ್ಲಿದ್ದಾಗ ಮಾತ್ರ ಹೆಚ್ಚಿನ ಪ್ರಯೋಜನವಾಗುತ್ತದೆ ಎಂಬುದನ್ನರಿತ ಇವರು ಕನ್ನಡದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ. ಕನ್ನಡದಲ್ಲಿನ ತಮ್ಮ ಬರೆಹಗಳಿಗೆ ಹಿರಿಯ ಪತ್ರಕರ್ತರಾದ ವೈ.ಎನ್. ಕೆ. ಅವರ ಪ್ರೇರಣಯೇ ಕಾರಣ ಎಂದು ಹೇಳುತ್ತಾರೆ. ಲೇಖನಗಳಲ್ಲಿನ ಧ್ವನಿಮಾತ್ರ ಕಾರಂತರ ಅಂತರಾಳದ ಪರಿಸರಪರ ಕಾಳಜಿಗಳನ್ನು ತೋರಿಸುತ್ತದೆ. ಸಂರಕ್ಷಣೆಯನ್ನು ಸಾಧಿಸುವ ರೀತಿಯನ್ನು ಸಾಮಾನ್ಯ ಓದುಗನಿಗೂ ತಿಳಿಯುವಂತೆ ಹೇಳುವ ಕಲೆ ಇವರಿಗೆ ಸಿದ್ಧಿಸಿದೆ. ಇವರ ಇಂಗ್ಲಿಷ್ ಆಗಲಿ ಕನ್ನಡದ ಲೇಖನಗಳಲ್ಲೇ ಆಗಲಿ, ಒಂದೇ ಒಂದು ವಾಕ್ಯವೂ ಕೇವಲ ಸಾಹಿತ್ಯಾತ್ಮಕವಾಗಿರುವುದಿಲ್ಲ. ಅದರಲ್ಲಿ ವಿಜ್ಞಾನ ಹಾಗೂ ಸಂರಕ್ಷಣೆಯ ನಿರೂಪಣೆ ಇರುತ್ತದೆ. ವಿವರಣೆಗಳು 'ಸತ್ಯವು ಸರಳವಾಗಿರುತ್ತದೆ' ಎಂಬ ಆಂಗ್ಲ ನುಡಿಯನ್ನು ಪೋಷಿಸುತ್ತದೆ. ಪರಿಸರದ ಸೂಕ್ಷ್ಮ ಕೊಂಡಿಗಳನ್ನು ವಿವರಿಸುವ ಇವರ ಈ ಪರಿ ನೋಡಿ: ಪರಿಸರ ವ್ಯವಸ್ಥೆಯಲ್ಲಿ "ಎ" ಎಂಬ ಸಸ್ಯ ಹುಟ್ಟಬೇಕಾದರೆ "ಬಿ" ಎಂಬ ಕೀಟದಿಂದ ಪರಾಗಸ್ಪರ್ಶವಾಗಬೇಕು. "ಬಿ" ಎಂಬ ಕೀಟವನ್ನು ನಿಯಂತ್ರಿಸುವ "ಸಿ" ಎಂಬ ಹಕ್ಕಿ "ಡಿ" ಎಂಬ ಸಸ್ಯದಲ್ಲಿ ಗೂಡು ಕಟ್ಟಬಹುದು. "ಡಿ" ಎಂಬ ಹಣ್ಣನ್ನು ಆಹಾರವಾಗಿಟ್ಟುಕೊಂಡ "ಇ" ಎಂಬ ಸಸ್ಯಾಹಾರಿ ಪ್ರಾಣಿಯೂ ಅದನ್ನು ಬೇಟೆಯಾಡುವ "ಎಫ್" ಎಂಬ ಬೇಟೆಗಾರ ಪ್ರಾಣಿಯೂ ಇದೆ. ಇವೆಲ್ಲಾ ಮಣ್ಣಾದಾಗ ಕಾರ್ಯಶೀಲವಾಗುವ "ಜಿ" ಎಂಬ ಬ್ಯಾಕ್ಟೀರಿಯಾವಿಲ್ಲದೆ ಸಸ್ಯಗಳಿಗೆ ಮಣ್ಣಿನ ಸಾರ ದೊರಕಲಾರದು.." ಇದು ಯಾರಿಗೆ ಅರ್ಥವಾಗುವುದಿಲ್ಲ? ಇದೇ ಪರಿಸರದ ವೈಜ್ಞಾನಿಕ ವಿಶ್ವರೂಪ.

ಕೇವಲ ವಿಜ್ಞಾನಿಯಾಗಿ ತೃಪ್ತಿಯಾಗದ ಕಾರಂತರು ಸಂರಕ್ಷಣಾ ಕೆಲಸಕ್ಕೆ ಕೈ ಹಾಕಿ ಸಾಕಷ್ಟು ಟೀಕೆಗೂ ಒಳಗಾದವರು. ಅನೇಕ ಲಾಬಿ ಒಳಸುಳಿಗಳಿರುವ ರಾಜಕೀಯ ಹಾಗೂ ಮಾಹಿತಿಯಿಲ್ಲದ ಜನಗಳ ನಡುವೆ ಸಿಲುಕಿ ತೊಂದರೆ ಅನುಭವಿಸಿದರು. ಹುಲಿಗಳಿಗೆ ರೇಡಿಯೋ ಕಾಲರ್ ತೊಡಿಸಿ ಅಧ್ಯಯನ ನಡೆಸುತ್ತಿದ್ದಾಗ ಕಾಲರ್ ತೊಟ್ಟುಕೊಂಡ ಹುಲಿಗಳ ಸಾವು, ಕಾಲರಿನಿಂದಲೇ ಆದ ಸಾವು ಎಂಬ ಅಪಪ್ರಚಾರ ಬಂದಾಗ ಕಾರಂತರು ನ್ಯಾಯಾಲಯದ ಮೊರೆಹೊಕ್ಕು ತಮ್ಮ ಹಕ್ಕನ್ನು ಉಳಿಸಿಕೊಳ್ಳಬೇಕಾಯಿತು. ತಮ್ಮ ಸಂರಕ್ಷಣಾ ಪರ್ವದ ಬಗ್ಗೆ ಇವರು ಹೀಗೆ ಹೇಳುತ್ತಾರೆ: "ಇದರ ಫಲವಾಗಿ ನನ್ನ ಸಂಶೋಧನೆಯ ಕೆಲಸಕ್ಕೆ ಸಾಕಷ್ಟು ಅಡಚಣೆಗಳು ಬಂದಿವೆ. ಆದರೆ, ಇದಕ್ಕೂ ಹತ್ತು ಪಾಲು ಸಂತಸ, ತೃಪ್ತಿಗಳೂ ನನ್ನ ಪಾಲಿಗೆ ಬಂದಿವೆ!".

ಸದ್ಯ ಕಾರಂತರು ವೈಲ್ಡ್‌ಲೈಫ್ ಕನ್ಸರ್ವೇಷನ್ ಸೊಸೈಟಿಯ ಭಾರತದ ಕಾರ್ಯಕ್ರಮಗಳ ನಿರ್ದೇಶಕರಾಗಿ ಕೆಲಸ ನಿರ್ವಹಿತ್ತಾ ಪರಿಸರ ಸಂರಕ್ಷಕರಿಗೆ ಸ್ಫೂರ್ತಿದಾಯಕರಾಗಿದ್ದಾರೆ. (ಕೆ.ಎಸ್.ಎನ್.)

**ಕಾರಕ ಪ್ರಯೋಗಗಳು :** ಯದೃಚ್ಛಾಕೃತ ಖಂಡಗಳು (ರ‍್ಯಾಂಡಮೈಸ್ಡ್ ಬ್ಲಕ್ಸ್), ಲ್ಯಾಟಿನ್ ಚೌಕ ಮುಂತಾದ ಆಲೇಖ್ಯಗಳಲ್ಲಿ (ಡಿಸೈನ್ಸ್) ಹಲವು ಪ್ರಕ್ರಿಯೆಗಳನ್ನು ಅಥವಾ ತಳಿಗಳನ್ನು ಹೋಲಿಸಿ ನೋಡಿ ಅವುಗಳಲ್ಲಿ ಕಂಡುಬರುವ ವ್ಯತ್ಯಾಸಗಳು ಅರ್ಥವತ್ತಾಗುವಷ್ಟು ಗುರುತರವಾಗಿವೆಯೇ ಎಂದು ಪರೀಕ್ಷಿಸಿ ನೋಡುತ್ತೇವೆ. ನಾವು ಪರೀಕ್ಷಿಸುತ್ತಿರುವ ವಿವರ್ತ (ವೇರಿಯೇಟ್) ಅಥವಾ ಚರದ ಮೇಲೆ ಹಲವು ಕಾರಕಗಳು (ಫ್ಯಾಕ್ಟರ್ಸ್) ಪರಿಣಾಮವನ್ನು ಬೀರಬಹುದು. ಅಂಥ ಸಂದರ್ಭದಲ್ಲಿ ಪ್ರತಿಯೊಂದು ಕಾರಕದ ಪರಿಣಾಮವೆಷ್ಟು ಮತ್ತು ಒಂದು ಕಾರಕದ ಪರಿಣಾಮ ಇತರ ಕಾರಕಗಳ ಮಟ್ಟಕ್ಕೆ ಅನುಸಾರವಾಗಿ ಹೇಗೆ ಬದಲಾಗುತ್ತದೆ ಎಂಬುದನ್ನೆಲ್ಲ ಅಂದಾಜು ಮಾಡಬೇಕಾಗಬಹುದು. ಕೃಷಿಶಾಸ್ತ್ರದಿಂದ ಉದಾಹರಣೆ ಕೊಡುವುದಾದರೆ ಒಂದು ಬೆಳೆಗೆ ನೈಟ್ರೋಜನ್ (n), ಫಾಸ್ಫೇಟ್ (p) ಮತ್ತು ಪೊಟಾಷ್ (k) ಹಲವಾರು ಪ್ರಾಯೋಗಿಕ ಏಕಮಾನಗಳಾಗಿ (ಯೂನಿಟ್ಸ್) ಇದ್ದಲ್ಲಿ ನೈಟ್ರೋಜನ್ನನ್ನು ನೀಡುವುದರಿಂದ ಬೆಳೆಯಲ್ಲಾಗುವ ಪರಿಣಾಮವೇನು? ಒಂದು ಪ್ರಮಾಣ ಅಥವಾ ಮಟ್ಟದಲ್ಲಿ

ಫಾಸ್ಫೇಟ್ ಗೊಬ್ಬರವನ್ನು ಹಾಕಿದ ಮೇಲೆ ನೈಟ್ರೋಜನ್ನನ್ನು ನೀಡಿದರೆ ಆಗಿನ ಪರಿಣಾಮವೇನು, ಫಾಸ್ಫೇಟಿನ ಮಟ್ಟವನ್ನು ಬದಲಾಯಿಸಿದಾಗ ಈ ಪರಿಣಾಮ ಹೇಗೆ ಬದಲಾಗುವುದು– ಇವನ್ನೆಲ್ಲ ಪರಿಶೀಲಿಸಬೇಕಾಗುವುದು. ಫಾಸ್ಫೇಟ್, ಪೊಟಾಷ್ ಇವುಗಳ ಮಟ್ಟವನ್ನು ಸ್ಥಿರವಾಗಿಟ್ಟುಕೊಂಡು ನೈಟ್ರೋಜನ್ನಿನ ಪರಿಣಾಮವನ್ನು ಅಂದಾಜು ಮಾಡಬಹುದು. ತರುವಾಯ ಫಾಸ್ಫೇಟಿನ ಮಟ್ಟವನ್ನು ಬದಲಾಯಿಸಿ ನೈಟ್ರೋಜನ್ನಿನ ಪರಿಣಾಮವನ್ನು ಕಂಡುಹಿಡಿಯಬಹುದು. ಹೀಗೆ ಮಾಡುತ್ತ ಹೋದರೆ ಪ್ರಯೋಗಗಳ ಸಂಖ್ಯೆ ಅತಿಯಾಗಿ ಹೆಚ್ಚುವುದು. ಮಾತ್ರವಲ್ಲ ಒಂದೊಂದೇ ಕಾರಕವನ್ನು ನೀಡಿ ಅದರ ಪರಿಣಾಮವನ್ನು ಬೇರೆ ಬೇರೆಯಾಗಿ ಅಂದಾಜು ಮಾಡಬೇಕು. ಇಂಥ ಸಂದರ್ಭದಲ್ಲಿ ಯಾವುದು ಪ್ರಧಾನವಾದುದು, ಯಾವ ಕಾರಕ ಹೆಚ್ಚು ಪರಿಣಾಮಕಾರಿ ಎಂಬುದನ್ನು ತಿಳಿದಿದ್ದರೆ ಕೆಲಸ ಸುಗಮವಾಗುವುದು.

ಹೆಚ್ಚು ಪ್ರಯೋಜನಕಾರಿಯಾದ ಕ್ರಮವೆಂದರೆ ಪ್ರತಿಯೊಂದು ಕಾರಕದ ಮಟ್ಟವನ್ನು ಬದಲಾಯಿಸಿ, ಕಾರಕಗಳ ಪ್ರತಿಯೊಂದರ ಆಯ್ಕೆಯಿಂದ (ಸೆಲೆಕ್ಷನ್) ವಿವರ್ತದ ಬೆಲೆ ಹೇಗೆ ಬದಲಾಯಿಸುತ್ತದೆ ಎಂದು ಅಂದಾಜು ಮಾಡುವುದು. ಇದಕ್ಕೆ ಅನುಗುಣವಾಗಿ ಆಲೇಖ್ಯಕ್ಕೆ ಕಾರಕೀಯ ಆಲೇಖ್ಯ (ಫ್ಯಾಕ್ಟೋರಿಯಲ್ ಡಿಸೈನ್) ಎಂದೂ ಇಂಥ ಪ್ರಯೋಗಗಳಿಗೆ ಕಾರಕ ಪ್ರಯೋಗಗಳು (ಫ್ಯಾಕ್ಟೋರಿಯಲ್ ಎಕ್ಸ್ಪರಿಮೆಂಟ್ಸ್) ಎಂದೂ ಹೆಸರು.

**ಎರಡು ಕಾರಕಗಳು** : ಎರಡು ಕಾರಕಗಳಿದ್ದು ಪ್ರತಿಯೊಂದನ್ನೂ ಎರಡು ಮಟ್ಟದಲ್ಲಿ ಉಪಯೋಗಿಸಿದರೆ ನಾಲ್ಕು ಆಯ್ಕೆಗಳು ದೊರೆಯುತ್ತವೆ. ನೈಟ್ರೋಜನ್ನನ್ನು $n_0$ ಮತ್ತು $n_1$ ಮಟ್ಟಗಳಲ್ಲೂ ಫಾಸ್ಫೇಟನ್ನು $P_0$ ಮತ್ತು $P_1$ ಮಟ್ಟಗಳಲ್ಲೂ ಬಳಸುತ್ತೇವೆಂದು ಭಾವಿಸೋಣ. ಆಗ ಲಭಿಸುವ ನಾಲ್ಕು ಆಯ್ಕೆಗಳನ್ನು $n_0p_0$, $n_1p_0$, $n_0p_1$, $n_1p_1$, ಎಂಬ ಸಂಕೇತಗಳಿಂದ ಸೂಚಿಸಬಹುದು. ಫಲಿತಾಂಶವನ್ನು ಆಯಾ ಆಯ್ಕೆಯ ಸಂಕೇತದಿಂದಲೇ ಸೂಚಿಸುವುದು ರೂಢಿ. ನೈಟ್ರೋಜನ್ನಿನ ಪರಿಣಾಮವನ್ನು ಹೀಗೆ ನಿರೂಪಿಸಬಹುದು. ಪ್ರಕ್ರಿಯೆಗಳ ಆಯ್ಕೆಗಳನ್ನು ಇಂಗ್ಲಿಷ್ ವರ್ಣಮಾಲೆಯ ಸಣ್ಣ ಅಕ್ಷರಗಳಿಂದ ಸೂಚಿಸುತ್ತೇವೆ.

ಫಾಸ್ಫೇಟಿನ $p_0$ ಮಟ್ಟದಲ್ಲಿ ನೈಟ್ರೋಜನ್ನಿನ ಪರಿಣಾಮ= $n_1p_0-n_0p_0$

ಫಾಸ್ಫೇಟಿನ $p_1$ ಮಟ್ಟದಲ್ಲಿ ನೈಟ್ರೋಜನ್ನಿನ ಪರಿಣಾಮ= $n_1p_1-n_0p_1$

ಮೇಲೆ ಹೇಳಿದ ಕಾರಕಗಳೆರಡೂ ಸ್ವತಂತ್ರ ರೀತಿಯಲ್ಲಿ ತಮ್ಮ ತಮ್ಮ ಪರಿಣಾಮಗಳನ್ನು ಬೀರುವುದಾದರೆ ಈ ಎರಡು ಫಲಿತಗಳೂ ಸಮವಾಗಿರುತ್ತವೆ. ಹಾಗಲ್ಲದೆ ಇವು ಅಸಮವಾಗಿದ್ದರೆ ಫಾಸ್ಫೇಟಿನ ಮಟ್ಟವನ್ನು ಅವಲಂಬಿಸಿ ನೈಟ್ರೋಜನ್ನಿನ ಫಲಿತಾಂಶ ಬೇರೆ ಬೇರೆಯಾಗುವುದು. ಫಾಸ್ಫೇಟಿನ ಬೇರೆ ಬೇರೆ ಮಟ್ಟದಲ್ಲಿ ಹೀಗೆ ನೈಟ್ರೋಜನ್ನಿನ ಪರಿಣಾಮ ಬೇರೆ ಬೇರೆ ಆಗಿರುವುದರಿಂದ ಸರಾಸರಿ ಬೆಲೆಯನ್ನು ತೆಗೆದುಕೊಳ್ಳಲಾಗುವುದು. ಅಂದರೆ ನೈಟ್ರೋಜನ್ನಿನ ಕ್ರಿಯೆಯ ಸನ್ನಿಕಟ ಬೆಲೆಯಾಗಿ $n_1p_0-n_0p_0$ ಮತ್ತು $n_1p_1-n_0p_1$ ಇವುಗಳ ಸರಾಸರಿಯನ್ನು ತೆಗೆದುಕೊಳ್ಳಬಹುದು. ನೈಟ್ರೋಜನ್ನಿನ ಪರಿಣಾಮವನ್ನು ಅಥವಾ ಪ್ರಧಾನ ಪ್ರಭಾವವನ್ನು (ಮೇನ್ ಎಫೆಕ್ಟ್) N ಎಂದು ಸೂಚಿಸಿದರೆ

$$N = \frac{1}{2}(n_1p_1-n_0p_1+n_1p_0-n_0p_0)$$

$$= \frac{1}{2}(n_1-n_0)(p_0+p_1)$$

ಗಣಿತ ಕ್ರಮದಿಂದ ಬಲಬದಿಯ ಪದಾವಳಿಯನ್ನು (ಕಾಂಟ್ರಾಸ್ಟ್) ಗುಣಿಸಿ ಕಾರಕಗಳ ವಿಕಲ್ಪಗಳ (ಕಾಂಬಿನೇಷನ್ಸ್) ಸ್ಥಾನಗಳಲ್ಲಿ ಅವುಗಳ ಫಲಿತಗಳನ್ನು ಆದೇಶಿಸಬೇಕು. ಇದೇ ರೀತಿಯಾಗಿ ಫಾಸ್ಫೇಟಿನ ಪರಿಣಾಮವನ್ನು ಹೀಗೆ ಗಣನೆ ಮಾಡಬಹುದು.

ನೈಟ್ರೋಜನ್ನಿನ $n_0$ ಮಟ್ಟದಲ್ಲಿ ಫಾಸ್ಫೇಟಿನ ಪರಿಣಾಮ = $n_0p_1-n_0p_0$

ನೈಟ್ರೋಜನ್ನಿನ $n_1$ ಮಟ್ಟದಲ್ಲಿ ಫಾಸ್ಫೇಟಿನ ಪರಿಣಾಮ= $n_1p_1-n_1p_0$

ಇವೆರಡೂ ಅಸಮವಾಗಿದ್ದಾಗ ಇವುಗಳ ಸರಾಸರಿಯನ್ನು ಫಾಸ್ಫೇಟಿನ ಪ್ರಧಾನ ಪರಿಣಾಮವಾಗಿ ತೆಗೆದುಕೊಳ್ಳಬಹುದು. ಈ ಪರಿಣಾಮವನ್ನು P ಎಂಬ ಸಂಕೇತದಿಂದ ಸೂಚಿಸಿದರೆ

$$P = \frac{1}{2}(n_1p_1-n_1p_0+n_0p_1-n_0p_0)$$

$$= \frac{1}{2}(n_1+n_0)(p_1-p_0)$$

ನೈಟ್ರೋಜನ್ನಿನ ಪರಿಣಾಮವೂ ಫಾಸ್ಫೇಟಿನ ಪರಿಣಾಮವೂ ಸ್ವತಂತ್ರವಾಗಿಲ್ಲದೆ ಪರಸ್ಪರ ಅವಲಂಬಿತವಾಗಿದ್ದಾಗ ನೈಟ್ರೋಜನ್ನಿನೊಡನೆ ಫಾಸ್ಫೇಟಿಗೆ ಇರುವ ಅಂತರ ಕ್ರಿಯೆಯನ್ನು (ಇಂಟರ್ಆಕ್ಷನ್) PN ಎಂದು ಸಂಕೇತಿಸಿ ಹೀಗೆ ವ್ಯಾಖ್ಯಿಸುತ್ತೇವೆ.

$PN = \frac{1}{2}$ (ನೈಟ್ರೋಜನ್ನಿನ $n_1$ ಮಟ್ಟದಲ್ಲಿ ಫಾಸ್ಫೇಟಿನ ಪರಿಣಾಮ – ನೈಟ್ರೋಜನ್ನಿನ $n_0$ ಮಟ್ಟದಲ್ಲಿ ಫಾಸ್ಫೇಟಿನ ಪರಿಣಾಮ)

ಅಂದರೆ $PN = \frac{1}{2}(n_1p_1-n_1p_0-n_0p_1-n_0p_0)$

ಈ ಪದಾವಳಿ n ಮತ್ತು p ಗಳಲ್ಲಿ ಸಮಾಂಗವಾಗಿದೆ. ಆದ್ದರಿಂದ ಫಾಸ್ಫೇಟಿನೊಡನೆ ನೈಟ್ರೋಜನ್ನಿಗೆ ಇರುವ ಅಂತರಕ್ರಿಯೆಯೂ ಇದಕ್ಕೆ ಸಮ. ಅಂದರೆ PN = NP ಇದರಿಂದಾಗಿ ಅಂತರಕ್ರಿಯೆಯನ್ನು ಸೂಚಿಸುವಲ್ಲಿ ಈ ಅಕ್ಷರಗಳನ್ನು ಬರೆಯುವ ಕ್ರಮದ ಕಡೆ ಲಕ್ಷ್ಯ ಕೊಡಬೇಕಾಗಿಲ್ಲ. ನಾಲ್ಕುವಿಕಲ್ಪಗಳ ಮಧ್ಯಮಾನವನ್ನು (ಮೀನ್) M ಎಂದು ಸಂಕೇತಿಸಿದರೆ

$$4M = n_1p_1 + n_1p_0 + n_0p_1 + n_0p_0$$

ಕೋಷ್ಟಕರೂಪದಲ್ಲಿ ಈ ಬೆಲೆಗಳನ್ನು ಹೀಗೆ ನಿರೂಪಿಸಬಹುದು:

| | $n_1p_1$ | $n_1p_0$ | $n_0p_1$ | $n_0p_0$ |
|---|---|---|---|---|
| 4M | +1 | +1 | +1 | +1 |
| 2N | +1 | +1 | -1 | -1 |
| 2P | +1 | -1 | +1 | -1 |
| 2NP | +1 | -1 | -1 | +1 |

ಮೊದಲನೆಯ ಸಾಲನ್ನು ಬಿಟ್ಟು ಉಳಿದ ಪ್ರತಿಸಾಲಿನ ಗುಣಕಗಳ ಮೊತ್ತ 0 ಆಗುವುದು ಈ ಗುಣವುಳ್ಳ ಪದಾವಳಿಗೆ ಮಾರೊಡ್ಡು ಎಂದು ಹೆಸರು. ಪ್ರಧಾನ ಮತ್ತು ಅಂತರ ಕ್ರಿಯೆಗಳನ್ನು ಇಂಗ್ಲಿಷ್ ವರ್ಣಮಾಲೆಯ ದೊಡ್ಡ ಅಕ್ಷರಗಳಿಂದ ಸೂಚಿಸುವುದು ರೂಢಿ. ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ ಎರಡು ಪ್ರಧಾನ ಕ್ರಿಯೆಗಳೂ ಅಂತರಕ್ರಿಯೆಯೂ ಪರಸ್ಪರ ಲಂಬ ಮಾರೊಡ್ಡಾಗಿರುವುದಲ್ಲದೆ (ಆರ್ಥಾಗೊನಲ್ ಕಾಂಟ್ರಾಸ್ಟ್) ಪ್ರಕ್ರಿಯೆಗಳು ನಾಲ್ಕು ವಿಕಲ್ಪಗಳಿಗೂ ಲಂಬವಾಗಿರುವುವು. ಮೇಲಿನ ಸಮೀಕರಣಗಳನ್ನು ವ್ಯತ್ಯಸ್ತಮಾಡಲು ಪ್ರಕ್ರಿಯೆಯ ಪ್ರತಿಯೊಂದು ಕ್ರಮಚಯದ (ಪರ್ಮ್ಯುಟೇಶನ್) ಬೆಲೆಯನ್ನೂ M, N, P, NP ಇವುಗಳ ಮೂಲಕ ಹೀಗೆ ನಿರೂಪಿಸಬಹುದು:

$$n_1p_1 = M + \frac{1}{2}N + \frac{1}{2}P + \frac{1}{2}NP$$

$$n_1p_0 = M + \frac{1}{2}N - \frac{1}{2}P - \frac{1}{2}NP$$

$$n_0p_1 = M - \frac{1}{2}N + \frac{1}{2}P - \frac{1}{2}NP$$

$$n_0p_0 = M - \frac{1}{2}N - \frac{1}{2}P + \frac{1}{2}NP$$

ಮೇಲೆ ಕೊಟ್ಟಿರುವ ಉದಾಹರಣೆಗಳಲ್ಲಿ ಪ್ರತಿಯೊಂದು ಕಾರಕದ ಮಟ್ಟಗಳ ಸಂಖ್ಯೆ 2 ಇದ್ದು ಅವು ಸಮವಾಗಿರುತ್ತವೆ. ಅಂಥ ಸಂದರ್ಭದಲ್ಲಿ ಅವಕ್ಕೆ ಸಮಾಂಗಕಾರಕೀಯ ಆಲೇಖ್ಯ (ಸಿಮೆಟ್ರಿಕಲ್ ಫ್ಯಾಕ್ಟೋರಿಯಲ್ ಡಿಸೈನ್) ಎಂದು ಹೆಸರು. ಮಟ್ಟಗಳ ಸಂಖ್ಯೆಗಳು ಬೇರೆಬೇರೆಯಾಗಿದ್ದರೆ ಅವಕ್ಕೆ ಅಸಮಾಂಗ ಕಾರಕೀಯ ಆಲೇಖ್ಯ ಎಂದು ಹೆಸರು.

ಮೂರು ಕಾರಕಗಳ ಪ್ರಕರಣ : ಪ್ರತಿಯೊಂದು ಕಾರಕವೂ 2 ಮಟ್ಟದಲ್ಲಿರುವಾಗ ಕಾರಕಗಳ ಮಾತ್ರೆಯನ್ನು(ಡೋಸ್) ಹೆಚ್ಚಿಸಿದಾಗ ಬೆಳೆದು ಇಳುವರಿಯಲ್ಲಾಗುವ ಹೆಚ್ಚಳವನ್ನು ಕಂಡುಹಿಡಿಯಬೇಕಾಗುತ್ತದೆ ಎನ್ನೋಣ. ನೈಟ್ರೋಜನ್ನಿನ ಮಾತ್ರೆಯನ್ನು $n_0$ಯಿಂದ $n_1$ಕ್ಕೂ ಫಾಸ್ಫೇಟನ್ನು $p_0$ ಯಿಂದ $p_1$ ಕ್ಕೂ ಪೊಟಾಷನ್ನು $k_0$ಯಿಂದ $k_1$ಕ್ಕೂ ಹೆಚ್ಚಿಸಿದಾಗ ಲಭಿಸುವ ಫಲಿತಾಂಶವೇನು? ಈ ಮೂರು ಕಾರಕಗಳನ್ನು ಎರಡೆರಡು ಮಟ್ಟಗಳಲ್ಲಿ ಬಳಸುವುದರಿಂದ 2 x 2 x 2 = 8 ಪ್ರಕ್ರಿಯೆಗಳ ಕ್ರಮಚಯಗಳು ದೊರೆಯುವುವು. ಅವು

$n_0\,p_0\,k_0$
$n_1\,p_0\,k_0$
$n_0\,p_1\,k_0$
$n_1\,p_1\,k_0$
$n_0\,p_0\,k_1$
$n_1\,p_0\,k_1$
$n_0\,p_1\,k_1$
$n_1\,p_1\,k_1$

ಇವನ್ನು ಬರೆದಿರುವ ಕ್ರಮವನ್ನು ಗಮನಿಸಬೇಕು. ಇದೇ ಶಿಷ್ಟಕ್ರಮ (ಸ್ಟ್ಯಾಂಡರ್ಡ್ ಆರ್ಡರ್). ಇದು ಬಹಳ ಉಪಯುಕ್ತವಾದುದು; ಮತ್ತು ಯಾವಾಗಲೂ ಇದೇ ಕ್ರಮವನ್ನು ಅನುಸರಿಸಬೇಕು. ಮೇಲೆ ನಮೂದಿಸಿರುವ ವಿಕಲ್ಪದಿಂದ ದೊರೆಯುವ ಇಳುವರಿಯನ್ನು ಅದೇ ಸಂಕೇತದಿಂದ ಸೂಚಿಸೋಣ. ನೈಟ್ರೊಜನ್ನಿನ ಮಟ್ಟವನ್ನು $n_o$ ಯಿಂದ $n_1$ಕ್ಕೆ ಹೆಚ್ಚಿಸಿದಾಗ ಇಳುವರಿಯಲ್ಲಾಗುವ ಪರಿಣಾಮವನ್ನು ಕೆಳಕಂಡಂತೆ ನಿರೂಪಿಸಬಹುದು.

| pಯ ಮಟ್ಟ | kಯ ಮಟ್ಟ | ನೈಟ್ರೊಜನ್ನಿನ ಕ್ರಿಯೆ |
|---|---|---|
| $p_0$ | $k_o$ | $n_1p_0k_o - n_op_0k_o$ |
| $p_1$ | $k_o$ | $n_1p_1k_o - n_op_1k_o$ |
| $p_0$ | $k_1$ | $n_1p_0k_1 - n_op_0k_1$ |
| $p_1$ | $k_1$ | $n_1p_1k_1 - n_op_1k_1$ |

ನೈಟ್ರೊಜನ್ನಿನ ಮಧ್ಯಮ ಕ್ರಿಯೆ = 1/4 (ಮೇಲಿನ ನಾಲ್ಕರ ಮೊತ್ತ)

ಇತರ ಕಾರಕಗಳ ಮಟ್ಟಗಳಿಗನುಸಾರವಾಗಿ ನೈಟ್ರೊಜನ್ನಿನ ಕ್ರಿಯೆ ಬದಲಾಗುವುದು. ಆದ್ದರಿಂದ ನಾಲ್ಕು ಬೇರೆ ಬೇರೆ ಬೆಲೆಗಳು ದೊರೆಯುತ್ತವೆ. ಈ ನಾಲ್ಕರ ಮಧ್ಯಕ ಬೆಲೆಯನ್ನು ತೆಗೆದುಕೊಂಡರೆ ನೈಟ್ರೊಜನ್ನಿನ ಸರಾಸರಿ ಕ್ರಿಯೆ ದೊರೆಯುವುದು. ಇದನ್ನು N ಎಂದು ಸಂಕೇತಿಸುತ್ತೇವೆ.

ಫಾಸ್ಫೇಟಿನ ಪ್ರತಿಮಟ್ಟಕ್ಕೂ ಪೊಟಾಷಿನ ಮಟ್ಟಗಳಿಗೆ ದೊರೆವ ಇಳುವರಿಯ ವ್ಯತ್ಯಾಸವನ್ನು ಪರಿಗಣಿಸಬಹುದು:

ನೈಟ್ರೊಜನ್ನಿನ ಕ್ರಿಯೆ $p_0$ ಮಟ್ಟದಲ್ಲಿ $k_o$ , $k_1$ಗಳ ಮಧ್ಯಕ

$$= \frac{1}{2}\ (n_1p_0k_o - n_op_0k_o) + (n_1p_0k_1 - n_op_0k_1)$$

ನೈಟ್ರೊಜನ್ನಿನ ಕ್ರಿಯೆ $p_1$ ಮಟ್ಟದಲ್ಲಿ = $\frac{1}{2}$ $(n_1p_1k_o - n_op_1k_o + n_1p_1k_1 - n_op_1k_1)$ ಇವೆರಡಕ್ಕೂ ಇರುವ ವ್ಯತ್ಯಾಸ ಅರ್ಧವನ್ನು ನೈಟ್ರೊಜನ್ ಮತ್ತು ಫಾಸ್ಫೇಟಿನ ಅಂತರಕ್ರಿಯೆ ಎನ್ನುತ್ತೇವೆ. ಇದನ್ನು NP ಎಂದು ಸಂಕೇತಿಸಿದರೆ

$$NP = ¼ (n_1 - n_0)\ (p_1 - p_0)\ (k_1 + k_0)$$

ಬಲಬದಿಯ ಪದಾವಳಿಯನ್ನು ಬೀಜಗಣಿತದ ರೀತಿಯಲ್ಲಿ ವಿಸ್ತರಿಸಿ ಇಳುವರಿಗಳನ್ನು ವಿಹಿತ ರೀತಿಯಲ್ಲಿ ಆದೇಶಿಸಬೇಕು. ಇದೇ ರೀತಿ NK ಮತ್ತು PK ಎಂಬ ಅಂತರ ಕ್ರಿಯೆಗಳನ್ನು ಪರಿಗಣಿಸುತ್ತೇವೆ. ಪೊಟಾಷಿನ ಪ್ರತಿಮಟ್ಟದಲ್ಲೂ ನೈಟ್ರೊಜನ್ ಮತ್ತು ಫಾಸ್ಫೇಟಿನ ಅಂತರಕ್ರಿಯೆಯನ್ನು ಕಂಡುಹಿಡಿಯಬಹುದು : ಪೊಟಾಷಿನ $k_0$ ಮಟ್ಟದಲ್ಲಿ $\frac{1}{2}$ $(n_1p_1k_o + n_op_0k_o - n_1p_0k_o - n_op_1k_o)$ ಪೊಟಾಷಿನ $k_1$ ಮಟ್ಟದಲ್ಲಿ $\frac{1}{2}$ $(n_1p_1k_1 + n_op_0k_1 - n_1p_0k_1 - n_op_1k_1)$. ಇವೆರಡರ ಸರಾಸರಿಯೇ ಮೇಲೆ ಕಾಣಿಸಿರುವ NPಯ ಬೆಲೆಯಾಗುವುದು. ಪೊಟಾಷಿನ $k_o, k_1$ ಮಟ್ಟದಲ್ಲಿನ ಈ ಎರಡು ಅಂತರಕ್ರಿಯೆಗಳು ವ್ಯತ್ಯಾಸವಾಗಿವೆ. ಇವೆರಡಕ್ಕೂ ಇರುವ ವ್ಯತ್ಯಾಸದ ಅರ್ಧವನ್ನು 3–ಕಾರಕ ಅಂತರಕ್ರಿಯೆ ಎನ್ನುತ್ತೇವೆ. ಇದನ್ನು NPK ಎಂದು ಸಂಕೇತಿಸುತ್ತೇವೆ. ಸರಳೀಕರಿಸಿದಾಗ

$$NPK = ¼ (n_1 — n_0)\ (p_1 — p_0)\ (k_1 — k_0)$$

ಎಂದು ನಿರೂಪಿಸಬಹುದು. NKP, KPN ಮುಂತಾದ 3–ಕಾರಕ ಅಂತರಕ್ರಿಯೆ ಬೆಲೆಗಳೂ ಇದೇ ಎಂಬುದನ್ನು ಗಮನಿಸಬೇಕು. ಮೂರು ಕಾರಕಗಳ ಆಯ್ಕೆಯಿಂದ ದೊರೆಯುವ 8 ಪ್ರಕ್ರಿಯೆಗಳ ವಿಕಲ್ಪಗಳ ಮಧ್ಯಕ ಇಳುವರಿಯನ್ನು M ಎಂದು ಸಂಕೇತಿಸುತ್ತೇವೆ.

ಕೆಲವು ವೇಳೆ ಪ್ರಕ್ರಿಯೆಗಳ ಆಯ್ಕೆಯನ್ನು ಸರಳೀಕರಿಸುವುದುಂಟು : $n_o, p_o, k_o$ ಇವುಗಳ ಸ್ಥಾನದಲ್ಲಿ 1,1,1 ಎಂದು ಬರೆದು $n_1, p_1, k_1$, ಇವುಗಳಿಗೆ ಬದಲು ಅನುಕ್ರಮವಾಗಿ n, p, k ಎಂದು ಬರೆಯುತ್ತೇವೆ. ಈ ಸಂಕೇತನ ಕ್ರಮದಲ್ಲಿ np (ಪೊಟಾಷ್) ಕೆಳಗಿನ ಮಟ್ಟದಲ್ಲೂ ನೈಟ್ರೊಜನ್, ಫಾಸ್ಫೇಟ್ ಇವು ಮೇಲಿನ ಮಟ್ಟದಲ್ಲೂ ಇರುವುವೆಂದರ್ಥ. ಎಲ್ಲ ಕಾರಕಗಳೂ ಕೆಳಗಿನ ಮಟ್ಟದಲ್ಲಿರುವುದನ್ನು (1) ಎಂದು ಸೂಚಿಸುತ್ತೇವೆ. ಈ ಸಂಕೇತದ ಮೇರೆಗೆ ಪ್ರಧಾನಕ್ರಿಯೆ ಮತ್ತು ಅಂತರಕ್ರಿಯೆಗಳನ್ನು ಹೀಗೆ ನಿರೂಪಿಸಬಹುದು.

$$N=¼\ (n—1)\ (p+1)(k+1)$$

$$NP=¼\ (n—1)(p—1)(k+1)$$

$$NPK=¼\ (n—1)(p—1)(k—1)$$

ಎಡಬದಿಯಲ್ಲಿ ಯಾವುದಾದರೂ ಅಕ್ಷರವಿದ್ದರೆ ಬಲಬದಿಯಲ್ಲಿ ಅದರ ಮುಂದೆ ಋಣ ಚಿಹ್ನೆ ಇರುವುದು. ಎಲ್ಲ ಪ್ರಭಾವಗಳನ್ನೂ ಇಳುವರಿಗಳ ಪರಿವರ್ತನೆಯನ್ನಾಗಿ (ಟ್ರಾನ್ಸ್‌ಫಾರ್ಮೇಷನ್) ಕೆಳಗೆ ಬರೆದಿರುವ ಕೋಷ್ಟಕದ ರೂಪದಲ್ಲಿ ಕಾಣಿಸಬಹುದು. ಕೋಷ್ಟಕದ ಯಾವ ಸಾಲನ್ನು ತೆಗೆದುಕೊಂಡರೂ ಅದು ಉಳಿದ ಪ್ರತಿಯೊಂದು ಸಾಲಿಗೂ ಲಂಬವಾಗಿರುವುದು ಅಂದರೆ ಸಂವಾದೀ ಗುಣಕಗಳ ಗುಣನ ಫಲಗಳ ಮೊತ್ತ ಸೊನ್ನೆಯಾಗುವುದು ಹೆಚ್ಚಿನ ಕಾರಕಗಳಿದ್ದಾಗಲೂ ಇದೇ ರೀತಿ ವರ್ತಿಸಬಹುದು.

| | (1) | n | p | np | K | nk | pk | nkp |
|---|---|---|---|---|---|---|---|---|
| 8M | 1 | 1 | 1 | 1 | 1 | 1 | 1 | 1 |
| 4N | -1 | 1 | -1 | 11 | -1 | 1 | -1 | 1 |
| 4P | -1 | -1 | 1 | 1 | -1 | -1 | 1 | 1 |
| 4NP | 1 | -1 | -1 | 1 | 1 | -1 | -1 | 1 |
| 4K | -1 | -1 | -1 | -1 | 1 | 1 | 1 | 1 |
| 4NK | 1 | -1 | 1 | -1 | -1 | 1 | -1 | 1 |
| 4PK | 1 | 1 | -1 | -1 | -1 | -1 | 1 | 1 |
| 4NPK | -1 | 1 | 1 | -1 | 1 | -1 | -1 | 1 |

ಉದಾಹರಣೆ : ಈ ಕೆಳಗಿನ ಉದಾಹರಣೆಯಿಂದ ಕಾರಕಪ್ರಯೋಗದ ವಿಧಾನವನ್ನು ವಿಶದೀಕರಿಸಿದೆ. ಲ್ಯಾಟಿನ್ ಚೌಕದಲ್ಲಿ ಅಳವಡಿಸಿದ ಪ್ರಯೋಗದ ಇಳುವರಿಯನ್ನು ಕೆಳಗೆ ಕೊಟ್ಟಿದೆ ;

| | | | | | | | |
|---|---|---|---|---|---|---|---|
| $n_op_o$ | 398 | $n_op_1$ | 320 | $n_1p_o$ | 332 | $n_1p_1$ | 375 |
| $n_op_1$ | 288 | $n_op_o$ | 376 | $n_1p_1$ | 318 | $n_1p_o$ | 328 |
| $n_1p_1$ | 287 | $n_1p_o$ | 321 | $n_op_1$ | 314 | $n_op_o$ | 343 |
| $n_1p_o$ | 330 | $n_1p_1$ | 310 | $n_op_o$ | 318 | $n_1p_o$ | 298 |

ಇಳುವರಿಯ ಅಳತೆಗೆ 300ನ್ನು ಮೂಲವಾಗಿಟ್ಟುಕೊಂಡು (ಆರಿಜಿನ್) ಲೆಕ್ಕಮಾಡುವುದರಿಂದ ಸಂಖ್ಯೆಗಳು ಅಡಕವಾಗಿರುತ್ತದೆ. ಈಗ ಸಂಸ್ಕರಣರಾಶಿ (ಕರೆಕ್ಷನ್ ಫ್ಯಾಕ್ಟರ್) = $(519)^2/16$=16,835,0625 ಆಗುವುದು ; ಮತ್ತು ವರ್ಗಗಳ ಒಟ್ಟು ಮೊತ್ತ = 33,901-16,835,0625 = 17,065.9375 ಆಗುವುದು; ಪ್ರಕ್ರಿಯೆಗಳ ಮೊತ್ತಗಳನ್ನು ಕೆಳಗೆ ಬರೆದಿದೆ.

$$n_op_o = 298$$

$$n_1p_o = 111$$

$$n_op_1 = 20$$

$$n_1p_1 = 90$$

ಪ್ರತಿಯೊಂದು ಮೊತ್ತ ನಾಲ್ಕು ತಾಕುಗಳ (ಪ್ಲಾಟ್ಸ್) ಇಳುವರಿಯ ಮೊತ್ತ ಎಂಬುದನ್ನು ಗಮನಿಸಬೇಕು. N,P ಮತ್ತು NP ಕ್ರಿಯೆಗಳನ್ನು ಕಂಡುಹಿಡಿಯಲು ಈ ಸಮೀಕರಣಗಳನ್ನು ಬಳಸಬೇಕು :

$$N = 90 - 20 + 111 - 298 = — 117$$

$$P = 90 + 20 - 111 - 298 = — 299$$

$$NP = 90 - 20 - 111 + 298 = — 257$$

ಪ್ರತಿ ಸಾಲಿನಲ್ಲೂ ಪ್ರಯೋಗದ ಲ್ಯಾಟಿನ್ ಚೌಕದ 16 ತಾಕುಗಳ ಇಳುವರಿಯ ಬೆಲೆಗಳು ಸಹಗುಣಕ +1 ಅಥವಾ –1 ನಿಶಿಕಾಣಿಸಿಕೊಳ್ಳುತ್ತವೆ. ಎಂಟು +1ಗಳೂ ಎಂಟು –1ಗಳೂ ಇರುವುವು. ಆದ್ದರಿಂದ ಪ್ರತಿಯೊಂದು ಕ್ರಿಯೆಯ ವರ್ಗವನ್ನು ಕಂಡುಹಿಡಿಯಲು ಮೊತ್ತ ಕ್ರಿಯೆಯ ವರ್ಗವನ್ನು ಕಂಡುಹಿಡಿದು 16 ರಿಂದ ಭಾಗಿಸಬೇಕು. ಅಂತೆಯೇ

Nನ ಸಲುವಾಗಿ ವರ್ಗಮೊತ್ತ = $(-177)^2/16$ = 13,689/16 = 885.5625

Pಯ ಸಲುವಾಗಿ ವರ್ಗಮೊತ್ತ = $(-299)^2/16$ = 89,401/16 = 5,587.5625

NPಯ ಸಲುವಾಗಿ ವರ್ಗಮೊತ್ತ = $(257)^2/16$ = 66,049/16 = 4,128.0625

ಅಡ್ಡಸಾಲುಗಳ ಮತ್ತು ನೀಟಸಾಲುಗಳ ವರ್ಗಮೊತ್ತವನ್ನು ಯಥಾಕ್ರಮ ಲೆಕ್ಕ ಹಾಕಿ ವಿಚಲನ ವಿಶ್ಲೇಷಣ (ಅನಾಲಿಸಿಸ್ ಆಫ್ ವೇರಿಯನ್ಸ್) ಕೋಷ್ಟಕವನ್ನು ಈ ಕೆಳಗಿನಂತೆ ರಚಿಸಬಹುದು.

| ವಿಚಲನೆಯ ಹೇತು | ಸ್ವತಂತ್ರತಾ ಗಣ | ವರ್ಗಮೊತ್ತ | ಮಧ್ಯಕವರ್ಗ | ವಿಚಲನೆಗಳ ನಿಷ್ಪತ್ತಿ |
|---|---|---|---|---|
| ಅಡ್ಡಸಾಲು | 3 | 3,442.6875 | – | – |
| ನೀಟಸಾಲು | 3 | 289.6875 | – | – |
| ಪ್ರಕ್ರಿಯೆಗಳ N | 1 | 855.5625 | 855.5625 | 1,858 |
| P | 1 | 5,587.5625 | 5,587.5625 | 12,13* |

| | | | | |
|---|---|---|---|---|
| NP | 1 | 4,128.0625 | 4,128.0625 | 8,964* |
| ದೋಷ (ಎರ್ರರ್) | 6 | 2,762.3750 | 460.4 | – |
| ಮೊತ್ತ | 15 | 17,065.9375 | – | – |

* 0.05 ಮಟ್ಟದಲ್ಲಿ ಅರ್ಥವತ್ತಾಗಿದೆ. ಆದರೆ 0.01 ಮಟ್ಟದಲ್ಲಿ ಅರ್ಥವತ್ತಾಗಿಲ್ಲ.

ಈ ಪ್ರಯೋಗದ ಆಧಾರದ ಮೇಲೆ Pಯ ಕ್ರಿಯೆಯೂ NPಯ ಅಂತರ ಕ್ರಿಯೆಯೂ ಗಣ್ಯವಾಗಿರುವುದೆಂದು ಸಿದ್ಧಾಂತ ಮಾಡುತ್ತೇವೆ. ಇದೇ ಕಾರಕ ಪ್ರಯೋಗದ ಉದ್ದೇಶ. (ಎಂ.ವಿ.ಜೆ.)

**ಕಾರ ಕಮರ್ :** ಪಶ್ಚಿಮ ಆಫ್ಘಾನಿಸ್ತಾನದಲ್ಲಿರುವ ಒಂದು ಪ್ರಾಗೈತಿಹಾಸಿಕ ನೆಲೆ. ಇಲ್ಲಿಯ ಗುಹೆಯಲ್ಲಿ ಕಲ್ಲುಚಕ್ಕೆ ಮತ್ತು ಕೂರಲಗು ಫಲಕದ ಉಪಕರಣಗಳನ್ನೊಳಗೊಂಡ ಪದರಗಳು ಕಂಡುಬಂದಿವೆ. ಲೆವಾಲ್ವಾಸಿಯನ್ ಸಂಸ್ಕೃತಿಯಿಂದ ಸೂಕ್ಷ್ಮಶಿಲಾಯುಗ ಸಂಸ್ಕೃತಿಯವರೆಗಿನ ಅವಶೇಷಗಳು ಇಲ್ಲಿವೆ. ಇಲ್ಲಿ ದೊರಕಿರುವ ಅವಶೇಷಗಳನ್ನು ಇನ್ನೂ ವಿಶದವಾಗಿ ಪ್ರಕಟಿಸಿಲ್ಲವಾದುದರಿಂದ ಖಚಿತವಾಗಿ ಏನೂ ಹೇಳಲಾಗುವುದಿಲ್ಲ. ಈ ಅವಶೇಷಗಳನ್ನು ಸಮೀಪದ ಭಾರತದಲ್ಲಿರುವ ನೆಲೆಗಳ ಅವಶೇಷಗಳೊಂದಿಗೆ ಹೋಲಿಸಿ ನೋಡಿದರೆ ಕೆಲವು ವಿಚಾರಗಳು ತಿಳಿದುಬರುತ್ತವೆ. ಗುಹೆಯೊಳಗೆ ನಡೆದ ಉತ್ಖನನಗಳಿಂದ ತಿಳಿದುಬರುವಂತೆ ಪ್ರಪ್ರಥಮವಾಗಿ ಒರಟಾದ ಕಲ್ಲುಚಕ್ಕೆಗಳನ್ನು ಉಪಯೋಗಿಸುತ್ತಿದ್ದ ಜನರೂ ಅನಂತರ ಪೂರ್ವಶಿಲಾಯುಗದ ಅಂತ್ಯಕಾಲಕ್ಕೆ ಸೇರುವ ಕೂರಲಗು ಫಲಕಗಳನ್ನು ಬಳಸುತ್ತಿದ್ದ ಜನರೂ ಕೊನೆಯದಾಗಿ ಸೂಕ್ಷ್ಮಶಿಲಾಯುಗ ರೀತಿಯ ಉಪಕರಣಗಳನ್ನು ಬಳಸುತ್ತಿದ್ದ ಜನರೂ ಈ ಗುಹೆಯಲ್ಲಿ ವಾಸಿಸುತ್ತಿದ್ದರು. ಇವುಗಳಲ್ಲಿ ಮೊದಲ ಸಂಸ್ಕೃತಿಯನ್ನು ಯುರೋಪಿನ ಲೆವಾಲ್ವಾಸಿಯನ್ ಸಂಸ್ಕೃತಿಯೊಂದಿಗೆ ಎರಡನೆಯ ಸಂಸ್ಕೃತಿಯನ್ನು ಯುರೋಪಿನ ಅರಿಗ್ನೇಸಿಯನ್ ಮತ್ತು ಇರಾಕಿನ ಷನಿದಾರ್ ಗುಹೆಯ ಸಂಸ್ಕೃತಿಯೊಂದಿಗೆ ಹೋಲಿಸಲಾಗಿದೆ. ಈ ಪದರಗಳೊಂದಿಗೆ ಗೆಜಿಲಿ, ಕಾಡುಕುರಿ, ಕಾಡುಕುದುರೆ ಮತ್ತು ಮೊಸಳೆಗಳನ್ನು ಬೇಟೆಯಾಡಿ ಆಹಾರಕ್ಕೆ ಉಪಯೋಗಿಸುತ್ತಿದ್ದ ಮಾಹಿತಿಗಳು ದೊರಕಿವೆ. ಸಾಕುಪ್ರಾಣಿಗಳು ಈ ಜನರಿಗೆ ಗೊತ್ತಿರಲಿಲ್ಲ. ಇಂಗಾಲ–14 ಕಾಲನಿರ್ಣಯ ಪದ್ಧತಿಯ ಮೇರೆಗೆ ಇಲ್ಲಿಯ ಸೂಕ್ಷ್ಮಶಿಲೋಪಕರಣ ಸಂಸ್ಕೃತಿ ಪ್ರ.ಶ.ಪೂ. 9ನೆಯ ಸಹಸ್ರಮಾನಕ್ಕೂ ಪೂರ್ವಶಿಲಾಯುಗದ ಸಂಸ್ಕೃತಿಗಳು ಪ್ರ.ಶ.ಪೂ. 30,000 ವರ್ಷಗಳ ಹಿಂದಕ್ಕೂ ಸೇರುತ್ತವೆ. *

**ಕಾರಕ ವಿಶ್ಲೇಷಣೆ :** ಫಲಿತ ಕ್ರಿಯೆಯನ್ನು ರೂಪಿಸಿರುವ ಕಾರಕಗಳ ಗಣಿತೀಯ ವಿಶ್ಲೇಷಣೆ (ಫ್ಯಾಕ್ಟರ್ ಅನಾಲಿಸಿಸ್). ಒಬ್ಬ ಮನುಷ್ಯನ ವ್ಯಕ್ತಿತ್ವ ಹಲವಾರು ಪ್ರಭಾವಗಳಿಂದ ರೂಪಿತವಾಗಿರುವುದು. ಅವನಿಗೆ ಜನ್ಮದತ್ತವಾಗಿ ಬಂದ ಹಲವಾರು ಗುಣಗಳು, ಅವನು ಬೆಳೆದ ಆವರಣ, ಅವನಿಗೆ ದೊರೆತ ವಿದ್ಯಾಭ್ಯಾಸ ಅವನ ದೇಹಾರೋಗ್ಯ ಮುಂತಾದುವು ಇಂಥ ಪ್ರಭಾವಗಳು. ಗಣಿತಶಾಸ್ತ್ರದ ಪರಿಭಾಷೆಯಲ್ಲಿ ಇವೇ ಕಾರಕಗಳು. ಆದ್ದರಿಂದ ಒಬ್ಬನ ವ್ಯಕ್ತಿತ್ವದ ಸಂಪೂರ್ಣ ಪರಿಚಯವಾಗಬೇಕಾದರೆ ಈ ಕಾರಕಗಳ ವಿಶ್ಲೇಷಣೆ ಮತ್ತು ಅಭ್ಯಾಸ ಅಗತ್ಯ.

ಕಾರಕವಿಶ್ಲೇಷಣೆಯನ್ನು ಸಂಖ್ಯಾಕಲನ (ಸ್ಟ್ಯಾಟಿಸ್ಟಿಕ್ಸ್) ಶಾಸ್ತ್ರದಲ್ಲಿ ಒಂದು ವಿಧಿಯಾಗಿ ಅಭ್ಯಸಿಸಬಹುದು. ಮನಸ್ಶಾಸ್ತ್ರ, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರ–ಇವುಗಳಲ್ಲಿ ಇದು ಬಳಕೆಯಲ್ಲಿದೆ. ಸಮಸ್ಯೆ ಯಾವುದೇ ಇರಲಿ, ಅದರ ಹಿನ್ನೆಲೆಯಲ್ಲಿರುವ ಕಾರಕಗಳ ಸಂಖ್ಯೆ ಅಮಿತವಾಗಿವೆ. ಆದ್ದರಿಂದ ಯಾವುದೇ ಒಂದು ನಿರ್ದಿಷ್ಟ ಸಮಸ್ಯೆಯನ್ನು ಅಭ್ಯಸಿಸುವಾಗಲೂ ಅದರ ಕಾರಕವಿಶ್ಲೇಷಣೆಯನ್ನು ಸಂಪೂರ್ಣವಾಗಿ ಮಾಡುವುದು ಸಾಧ್ಯವಾಗಲಾರದು. ಅದರ ಅಗತ್ಯವೂ ಇಲ್ಲ. ಇಲ್ಲೆಲ್ಲ ಕೆಲವು ಮುಖ್ಯ ಕಾರಕಗಳನ್ನು ಆಯ್ದು ಅವುಗಳ ವಿಶ್ಲೇಷಣೆ ಮಾಡಲು ಅಗತ್ಯವಾದ ವಿಶಿಷ್ಟ ಪ್ರಯೋಗಗಳನ್ನು ಸಿದ್ಧಪಡಿಸಬೇಕು. ಇದರಿಂದ ಸಮಸ್ಯೆಯನ್ನು ಸುವ್ಯವಸ್ಥಿತಗೊಳಿಸಿದಂತಾಗುವುದು ಮತ್ತು ಅದರ ನೇಯ್ಗೆಯ ಹಾಸು ಹೊಕ್ಕುಗಳಿಗೆ ಸಂಬಂಧಿಸಿದ ಕೆಲವು ಪ್ರಾಚಲಗಳು (ಪ್ಯರಾಮೀಟರ್ಸ್) ದೊರೆಯುವುವು.

ಉದಾಹರಣೆಗೆ ಭಾವೀ ವಿಮಾನಚಾಲಕರ ಮಾನಸಿಕ ವಿಚಕ್ಷಣೆಯನ್ನು ತಿಳಿಯಲು ಸುಮಾರು ಇಪ್ಪತ್ತು ಪರಿಶೀಲನ ಪರೀಕ್ಷೆಗಳನ್ನು ರೂಪಿಸಬಹುದು. ಇವುಗಳಲ್ಲಿ ಕೆಲವು ದೃಷ್ಟಿ ಮತ್ತು ಕೇಳುವಿಕೆಗೆ ಸಂಬಂಧಿಸಿದವು, ಕೆಲವು ಸಮಾಂಗತ್ವ ಮತ್ತು ನಿಯತಗತಿಯ ಅರಿವಿಗೆ ಸಂಬಂಧಿಸಿದವು, ಮತ್ತೆ ಕೆಲವು ವೇಗದ ಏರಿಳಿತಕ್ಕೆ ಸಂಬಂಧಿಸಿದವು. ಹೀಗೆ ರೂಪಿಸಿದ ಸುಮಾರು ಇಪ್ಪತ್ತರಷ್ಟು ಪರೀಕ್ಷೆಗಳಲ್ಲಿ ದೊರೆಯುವ ಅಂಕಗಳನ್ನು ಮೂರು ಅಥವಾ ನಾಲ್ಕು ಚರಸಂಖ್ಯೆಗಳಲ್ಲಿ ಒಂದು ಸರಳ ಸಮೀಕರಣವಾಗಿ ಬರೆಯಬಹುದು. ಈ ಚರಗಳು ಮನಸ್ಸಿನ ನೇಯ್ಗೆಯ ಪ್ರರೂಪವನ್ನು (ಪ್ಯಾಟರ್ನ್) ಸೂಚಿಸುವುವು.

n–ಪರೀಕ್ಷೆಗಳ ಒಂದು ಸಮುದಾಯದಲ್ಲಿ $x_1, x_2, x_3....x_n$ ಗಳು ದೊರೆತ ಅಂಕಗಳಾಗಿದ್ದರೆ ಅವನ್ನು ಈ ರೀತಿ ಬರೆಯಬಹುದು. :

$$x_1 = a_{11}\,u_1 + a_{12}\,u_2 + a_{13}\,u_3 + ....... + a_{1m}\,u_m + v_1$$
$$x_2 = a_{21}\,u_1 + a_{22}\,u_2 + a_{23}\,u_3 + ....... + a_{2m}\,u_m + v_2$$
$$\ldots\ldots \quad \ldots \quad \ldots \quad \ldots \quad \ldots \quad \ldots$$
$$\ldots\ldots \quad \ldots \quad \ldots \quad \ldots \quad \ldots \quad \ldots$$
$$x_n = a_{n1}\,u_1 + a_{n2}\,u_{n3} + a_{n3}\,u_3 + ....... + a_{nm}\,u_m + v_n$$

ಇಲ್ಲಿ $m$ ನೊಡನೆ ಹೋಲಿಸುವಾಗ $n$ ಅತಿ ದೊಡ್ಡದು. ಆದ್ದರಿಂದ $n$ ಪ್ರಯೋಗಾಂಕಗಳನ್ನು ಅಥವಾ ಚರಗಳನ್ನು $n$ ಗಿಂತ ಬಲು ಕಡಿಮೆಯದಾದ $m$ ಚರಗಳಲ್ಲಿ ಅಥವಾ ಯೋಗ್ಯತೆಗಳಲ್ಲಿ ಅಥವಾ ಕಾರಕಗಳಲ್ಲಿಯೂ $v_1, v_2, v_3.........v_n$ ಗಳಲ್ಲಿಯೂ ಬರೆಯಲಾಗಿದೆ. $n$ ಗಳಿಗೆ ಸಾಮಾನ್ಯ ಕಾರಕಗಳೆಂದೂ $v$ ಗಳಿಗೆ ಆಯಾ ಪ್ರಯೋಗಕ್ಕೆ ಮಾತ್ರ ವಿಶೇಷವಾಗಿರುವ ವಿಶಿಷ್ಟ ಕಾರಕಗಳೆಂದು ಹೆಸರು. ಮನಶ್ಶಾಸ್ತ್ರದಲ್ಲಿ ಸ್ಪಿಯರ್‌ಮನ್, ಥಾಮ್ಸನ್ ಮತ್ತು ಥರ್ಸ್‌ಟೋನ್ ಮತ್ತು ಅರ್ಥಶಾಸ್ತ್ರದಲ್ಲಿ ಫೀಶ್ ಎಂಬುವರು ಈ ದಿಶೆಯಲ್ಲಿ ಸಾಕಷ್ಟು ಪ್ರಯೋಗ ನಡೆಸಿದ್ದಾರೆ.

**ಪ್ರಧಾನ ಘಟಕ ವಿಶ್ಲೇಷಣೆ :** ಇದು ಕಾರವಿಶ್ಲೇಷಣೆಯ ಪೂರಕವಾದ ಕ್ರಿಯೆ. ಇದು ಅಮೆರಿಕದ ಸಂಖ್ಯಾಕಲನ ಶಾಸ್ತ್ರಜ್ಞನಾದ ಹೊಟೆಲ್ಲಿಂಗ್‌ನಿಂದ ರೂಢಿಯಲ್ಲಿ ಬಂದಿದೆ.

ಸಾಮಾನ್ಯ ಕಾರಕಗಳೆಂದು ಕರೆಯುವ m ಯೋಗ್ಯತೆಗಳನ್ನು ಒಂದು ಬಹುಚರ ಪ್ರಸಾಮಾನ್ಯ ವಿತರಣೆಯಾಗಿ (ಮಲ್ಟಿವೇರಿಯೇಟ್ ನಾರ್ಮಲ್ ಡಿಸ್ಟ್ರಿಬ್ಯೂಷನ್) ಬರೆದಿದೆ ಎಂದಿಟ್ಟುಕೊಳ್ಳೋಣ. ಈಗ ಸಮಾನಸಾಂದ್ರತೆಯಿರುವಂಥ ಮೈಗಳನ್ನು (ಸರ್ಫೇಸಸ್) ಆಯ್ಕೆ ಮಾಡಿದರೆ ನಮಗೊಂದು m–ಆಯಾಮಗಳಿರುವ ದೀರ್ಘ ವೃತ್ತಕಲ್ಪ (ಎಲ್ಲಿಪ್ಸಾಯಿಡ್) ದೊರೆಯುವುದು. ಅದರ ಸಮೀಕರಣ

$$\sum_i \sum_j aij(x_i - \mu_i)(x_j - \mu_j) = 0$$

ಈ ಸಮುದಾಯದ ಎಲ್ಲ ದೀರ್ಘ ವೃತ್ತಕಲ್ಪಗಳಿಗೂ $(\mu_1, \mu_2, \mu_3............\mu_m)$ ಎಂಬ ಒಂದೇ ಕೇಂದ್ರವಿದೆ. ಅಲ್ಲದೆ ಇವು ತಮ್ಮ ಪ್ರಧಾನ ಅಕ್ಷಗಳಿಗೆ ಹೊಂದಿ ಸಮಾಂಗವಾಗವಾಗಿವೆ. ಅಂದರೆ ಅವುಗಳ ಅತಿ ದೀರ್ಘ ಅಕ್ಷಗಳು ಒಂದೇ ರೇಖೆಯ ಮೇಲೆ (ಅಥವಾ ದಿಶೆಯಲ್ಲಿ) ಇವೆ; ಎರಡನೆಯ ಅತಿ ದೀರ್ಘ ಅಕ್ಷಗಳು ಇನ್ನೊಂದು ರೇಖೆಯ ಮೇಲೆ (ಅಥವಾ ದಿಶೆಯಲ್ಲಿ) ಇವೆ; ಇತ್ಯಾದಿ. ಈಗ ಒಂದು ಬಿಂದು $P$ ಇಂಥ ಒಂದು ದೀರ್ಘ ವೃತ್ತಕಲ್ಪದ ಪಾತಳಿಯ ಮೇಲೆ ಚಲಿಸುತ್ತಿದೆಯೆಂದು ಭಾವಿಸೋಣ. ಕೇಂದ್ರದಿಂದ Pಯ ದೂರ ಅತಿ ಹೆಚ್ಚು ಅಥವಾ ಅತಿ ಕಡಿಮೆಯಾಗಿರುವಂಥ $P$ಯ ಸ್ಥಾನಗಳ ಸಂಖ್ಯೆ $2m$. ಇಂಥ ಬಿಂದುಗಳು ಕೇಂದ್ರದಿಂದ ಯಾವ ದಿಶೆಯಲ್ಲಿವೆ. ಕೇಂದ್ರದಿಂದ ಅವುಗಳ ದೂರವೆಷ್ಟು ಎಂದು ವಿಶ್ಲೇಷಿಸುವ ಮತ್ತು ತಿಳಿಯುವ ವಿಧಿಯ ಹೆಸರು ಪ್ರಧಾನ ಘಟಕ ವಿಶ್ಲೇಷಣೆ. ಇವು ಕಾರಕಗಳ ಒಂದು ಪ್ರರೂಪವನ್ನು ಅಥವಾ ರಚನೆಯನ್ನು ಕೊಡುತ್ತವೆ. (ಆರ್.ಆರ್.ಯು.)

**ಕಾರಕೋರಂ :** ಉತ್ತರ ಕಾಶ್ಮೀರದಲ್ಲಿರುವ ಎತ್ತರದ ಪರ್ವತರಪ್ರದೇಶ. ದಕ್ಷಿಣದಲ್ಲಿ ಕೆಳ ಷೈಯಾಕ್ ಮತ್ತು ಸಿಂಧೂ ನದಿಗಳೂ ಉತ್ತರದಲ್ಲಿ ಯಾರ್ಕಂಡ್ ನದಿಯೂ ಪಶ್ಚಿಮದಲ್ಲಿ ಕಾರಂಬಾರ್ ಜಲವಿಭಾಗ ರೇಖೆಯೂ ಪೂರ್ವದಲ್ಲಿ ಷೈಯಾರ್ ನದಿಯ ಮೇಲ್ಭಾಗವೂ ಕಾರಕೋರಂ ಕಣಿವೆಯೂ ಇದನ್ನು ಸುತ್ತುವರಿದಿವೆ. ಪಶ್ಚಿಮದಲ್ಲಿ, ಪೂ. ರೇ $74^0$ ಯ ನೇರದಲ್ಲಿ, ಕಾರಂಬಾರ್ ಬಳಿ ಇದು ಹಿಂದೂಕುಷ್ ಶ್ರೇಣಿಯೊಂದಿಗೆ ಸೇರಿಕೊಳ್ಳುತ್ತದೆ. ಇದರ ಉದ್ದ ಸುಮಾರು 720 ಕಿಮೀ.

ಕಾರಕೋರಂ ಪರ್ವತಪ್ರದೇಶ ಹಿಮಗಡ್ಡೆಗಳಿಂದ ಕೂಡಿದ್ದು ಇಲ್ಲಿ ಅನೇಕ ಉದ್ದವಾದ ಹಿಮನದಿಗಳಿವೆ. ಇದರ ಪಶ್ಚಿಮದಲ್ಲಿರುವ ಬಟೂರ (58 ಕಿಮೀ), ಪೂರ್ವಕ್ಕಿರುವ ಸೈಯಾಚಿನ್ (75 ಕಿಮೀ) ಮತ್ತು ಹಿಸ್‌ಪಾರ್‌ಬಿಯಾಪೊ (121 ಕಿಮೀ) ಹಿಮ ನದಿಗಳು ಮುಖ್ಯವಾದವು. ಸೈಯಾಚಿನ್ ಹಿಮನದಿ ಷೈಯಾಕಿನ ಉಪನದಿಯಾದ ನುಬ್ರಕ್ಕೆ ನೀರನ್ನು ಒದಗಿಸುತ್ತದೆ. ಈ ಪರ್ವತದಲ್ಲಿರುವ, 7575 ಮೀ ಗಿಂತ ಎತ್ತರವಾದ ಶಿಖರಗಳ ಸಂಖ್ಯೆ 20. ಇವುಗಳಲ್ಲಿ 14 ಮಹಾಕಾರಕೋರಂ ಪರ್ವತದಲ್ಲಿವೆ. ಇವುಗಳಲ್ಲಿ ಒಂದಾದ $K_2$ ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಶಿಖರಗಳಲ್ಲಿ ಎರಡನೆಯದು.

ಮಹಾ ಕಾರಕೋರಂ ಪರ್ವತಶ್ರೇಣಿ ದಕ್ಷಿಣದ ಬಟೂರ ಹಿಮನದಿಗೂ ಉತ್ತರದ ಹಿಸ್‌ಪಾರ್, ಪುನ್‌ಮಾ, ಬಾಲ್ಟೋರು ಮತ್ತು ಸೈಯಾಚಿನ್ ಹಿಮನದಿಗಳಿಗೂ ನಡುವೆ ನಿಂತಿದೆ.

ಮಹಾ ಕಾರಕೋರಂ ಪರ್ವತವ್ಯವಸ್ಥೆಯ ದಕ್ಷಿಣ ಮತ್ತು ಉತ್ತರಪರ್ವತ ಶ್ರೇಣಿಗಳು ತಗ್ಗು. ಪರ್ವತಶ್ರೇಣಿಗಳ ಮೂಲಕ ಹಾದುಹೋಗುವ ನೈಸರ್ಗಿಕ ಮಾರ್ಗಗಳು ಎರಡು : ಗಿಲ್ಗಿಟನಿಂದ ಹುನ್‌ಜ಼ಾ ಕಮರಿಯ ಮೂಲಕ ಮಿಂಟಾಕಾ ಕಣಿವೆಯಲ್ಲಿ (5297 ಮೀ)

ಸಾಗಿ ಪಾಮಿರನ್ನು ದಾಟಿ ಕಾಷ್‌ಗರ್ ತಲುಪುವುದು ಒಂದು; ಪೂರ್ವದಲ್ಲಿ ಖಾರ್ಡಂಗ್ (5333 ಮೀ), ಸಾಸೆರ್ (5297 ಮೀ) ಮತ್ತು ಕಾರಕೋರಂ (5542 ಮಿ.) ಕಣಿವೆಗಳ ಮೂಲಕ ಸಾಗಿ ಖೋಟಾನ್ ಅಥವಾ ಯಾರ್ಕಂಡ್ ತಲುಪುವುದು ಇನ್ನೊಂದು. ಈ ಮಾರ್ಗದಲ್ಲಿ ಸುಮಾರು ಹತ್ತು ಘಟ್ಟಗಳಷ್ಟು ದೂರ ಜನವಸತಿಯಿಲ್ಲ; ಯಾವ ಸಾಮಗ್ರಿಯೂ ಒದಗುವುದಿಲ್ಲ. ಇತರ ಕಣಿವೆಗಳಲ್ಲಿ ಪರ್ವತಾರೋಹಿಗಳಲ್ಲದೆ ಬೇರೆ ಯಾರೂ ಕಾಲಿಡುವುದಿಲ್ಲ. ಆದರೆ ಈ ಪ್ರದೇಶದ ಸಮಗ್ರ ಭೂಪಟವನ್ನು ತಯಾರಿಸಲಾಗಿದೆ. 7575ಮೀ ಗಿಂತ ಎತ್ತರವಿರುವ ಇಪ್ಪತ್ತು ಶಿಖರಗಳ ಪೈಕಿ ಹನ್ನೆರಡನ್ನು ಆರೋಹಣ ಮಾಡಿ ಆಗಿದೆ. (ಎಂ.ಎ.ಎಚ್.)

**ಕಾರಖಾನೀಸ, ಗಣೇಶಗೋವಿಂದ:** 1890–. ಹರಿಜನರ ಏಳಿಗೆ, ದೇವದಾಸಿಯರ ವಿಮೋಚನೆ ಮತ್ತು ದೀನದಲಿತರ ಸೇವೆಗಾಗಿ ಜೀವನವನ್ನು ಮುಡುಪಾಗಿರಿಸಿದ ಖ್ಯಾತ ಸಮಾಜ ಸುಧಾರಕ, ಗಾಂಧೀವಾದಿ ಕನ್ನಡಿಗ.

1890 ಏಪ್ರಿಲ್ 28ರಂದು ಕೊಲ್ಲಾಪುರ ಜಿಲ್ಲೆ ಮಲಕಾಪುರದಲ್ಲಿ ಜನಿಸಿದರು. ತಂದೆ ಗೋವಿಂದ, ತಾಯಿ ಪಾರ್ವತೀಬಾಯಿ. ಕಾರಖಾನೀಸ ಎಂಬುದು ಮನೆತನದ ಹೆಸರು. ಇವರ ಪೂರ್ವಿಕರೊಬ್ಬರು ಛತ್ರಪತಿ ಶಿವಾಜಿ ಗೆದ್ದಿದ್ದ ಕೋಟೆಯೊಂದನ್ನು ಸುರಕ್ಷಿತವಾಗಿ ಕಾವಲು ನೋಡಿಕೊಂಡಿದ್ದರಿಂದ ಅವರಿಗೆ ಕಾರಖಾನೀಸ ಎಂಬ ಸನ್ನದನ್ನು ಶಿವಾಜಿ ನೀಡಿದ್ದನಂತೆ. ಅದೇ ಮನೆತನದ ಹೆಸರಾಯಿತು.

ಕಾರಖಾನೀಸರು ಮಲಕಾಪುರದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಜಮಖಂಡಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನೂ ಪಡೆದರು. ಬಿ.ಎ. ಪದವಿ ಪಡೆದ ಅನಂತರ ಒಂದು ವರ್ಷ ನ್ಯಾಯಶಾಸ್ತ್ರವನ್ನೂ ಅಭ್ಯಾಸ ಮಾಡಿದರು. ವಿದ್ಯಾರ್ಥಿಯಾಗಿದ್ದಾಗ್ಗೆ 1904ರ ವಂಗಭಂಗ ಚಳವಳಿಯಿಂದಲೂ ಲೋಕಮಾನ್ಯ ಟಿಳಕರ ಲೇಖನಗಳಿಂದಲೂ ರಾಷ್ಟ್ರಸೇವೆಯ ಸ್ಫೂರ್ತಿ ಪಡೆದರು. ಚಿಕ್ಕಂದಿನಿಂದಲೂ ಜ್ಞಾನೇಶ್ವರಿ, ದಾಸಬೋಧ ಮುಂತಾದ ಆಧ್ಯಾತ್ಮ ಗ್ರಂಥಗಳ ಸತತ ಅಧ್ಯಯನ ಮಾಡಿ ಸಮಾಜಸೇವಾ ಕಾರ್ಯಕ್ಕೆ ಅಧ್ಯಾತ್ಮದ ತಳಹದಿ ಹಾಕಿಕೊಂಡರು. ಆರ್.ಡಿ.ರಾನಡೆಯವರಿಂದ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಪ್ರಭಾವಿತರಾಗಿ ಇಂಚಗೇರಿಯ ಉಮದೀ ಭಾವುಸಾಹೇಬ ಮಹಾರಾಜರಿಂದ ಉಪದೇಶ ಪಡೆದು ಸಮಾಜಸೇವೆಗೆ ಪಣತೊಟ್ಟರು. ರಾಮದಾಸ, ರಾಮದಾಸಿ, ಜ್ಞಾನೇಶ್ವರಿ ಹಾಗೂ ಸಂತ ವಾಙ್ಮಯದ ಬಗ್ಗೆ ಅನೇಕ ಪ್ರಬುದ್ಧ ಲೇಖನಗಳನ್ನು ಬರೆದರು.

ಇವರು 1927ರಲ್ಲಿ ಗಾಂಧೀಜಿಯವರ ಸಬರಮತಿ ಆಶ್ರಮ ಸೇರಿ ಎರಡು ವರ್ಷಗಳ ಕಾಲ ಖಾದಿ ಮತ್ತಿತರ ವಿದಾಯ ಕಾರ್ಯಗಳ ಬಗ್ಗೆ ಶಿಕ್ಷಣ ಪಡೆದರು. ಅನಂತರ ಕೌಜಲಗಿ ಹಣಮಂತರಾಯರ ಸಲಹೆ ಮೇರೆಗೆ ಕರ್ನಾಟಕಕ್ಕೆ ಬಂದು ಖಾದಿ ಪ್ರಚಾರ ಮತ್ತು ಸೇವಾದಳದ ಸಂಘಟನೆಯಲ್ಲಿ ನಿರತರಾದರು. 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲೂ ತದನಂತರ ನಡೆದ ಸತ್ಯಾಗ್ರಹಗಳಲ್ಲೂ ಭಾಗವಹಿಸಿ ಸೆರೆಮನೆ ಶಿಕ್ಷೆಯನ್ನು ಅನುಭವಿಸಿದರು.

1933ರಲ್ಲಿ ಹರಿಜನ ಸೇವಾ ಸಂಘದ ಸ್ಥಾಪನೆಯಾದ ಮೇಲೆ ಅದರ ಆಜೀವ ಸೇವಕರಾಗಿ ಸೇರಿ ಅಂದಿನಿಂದ ನಿರಂತರವಾಗಿ ಹರಿಜನ ಸೇವಾ ಕಾರ್ಯದಲ್ಲಿ ತೊಡಗಿದರು. ಬಿಜಾಪುರದಲ್ಲಿ 1933ರಲ್ಲಿ ಹರಿಜನ ವಿದ್ಯಾರ್ಥಿ ವಸತಿಗೃಹವನ್ನೂ 1937ರಲ್ಲಿ ಹರಿಜನ ಕನ್ಯಾಮಂದಿರವನ್ನೂ ಸ್ಥಾಪಿಸಿದರು. ವರ್ಷವರ್ಷವೂ ನೂರಾರು ಮಂದಿ ಹರಿಜನ ಬಾಲಕ ಬಾಲಕಿಯರಿಗೆ ಊಟ, ಬಟ್ಟೆ, ವಸತಿ ಮತ್ತು ವಿದ್ಯೆಯನ್ನು ಒದಗಿಸಿ ಅವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಮುನ್ನಡೆಗೆ ಅಹರ್ನಿಶಿ ದುಡಿದರು.

ಬಿಜಾಪುರ ಜಿಲ್ಲೆ ಹಾಗೂ ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ ನಿಮ್ನವರ್ಗದ ಹಾಗೂ ಮತ್ತಿತರ ಹಿಂದುಳಿದ ವರ್ಗಗಳ ಹೆಣ್ಣು ಮಕ್ಕಳನ್ನು ದೇವದಾಸಿ ಪದ್ಧತಿಗೆ ದೂಡುವ ದುಷ್ಟ ಪದ್ಧತಿ ಆಚರಣೆಯಲ್ಲಿತ್ತು. ಅದರ ವಿರುದ್ಧ ಇವರು ಪ್ರಬಲವಾದ ಚಳವಳಿ ಕೈಗೊಂಡು ಈ ಪದ್ಧತಿ ಕಾನೂನು ಬಾಹಿರವೆಂದು ಶಾಸನ ಮಾಡಿಸಲು ಯಶಸ್ವಿಯಾಗಿ ದುಡಿದರು. ದೇವದಾಸಿಯರಾಗಿದ್ದವರನ್ನೂ ರಕ್ಷಿಸಿ ಅವರು ಗೌರವಸ್ಥರಾಗಿ ಬಾಳಲು ನೆರವು ನೀಡುವುದಕ್ಕಾಗಿ 1952ರಲ್ಲಿ ಅಹಲ್ಯೋದ್ಧಾರ ಮಂದಿರವನ್ನು ಬಿಜಾಪುರದಲ್ಲಿ ಸ್ಥಾಪಿಸಿದರು. ರಕ್ಷಿಸಲ್ಪಟ್ಟ ಮಹಿಳೆಯರು ಮದುವೆ ಮಾಡಿಕೊಂಡು ಗೌರವ ಜೀವನವನ್ನು ನಡೆಸಲು ಸಹಾಯ ಮಾಡಿದರು.

ಕಾರಖಾನೀಸರು ಆಜನ್ಮ ಬ್ರಹ್ಮಚಾರಿಗಳು. ತಮ್ಮ ನಿಷ್ಠಾವಿ ಸಮಾಜಸೇವೆಯಿಂದ ಜನಪ್ರಿಯರಾಗಿದ್ದ ಇವರು ಕಾಕಾ ಕಾರಖಾನೀಸ ಎಂದೇ ಪ್ರಸಿದ್ಧರಾಗಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸರ್ಕಾರ 1958ರಲ್ಲಿ ಪ್ರಶಸ್ತಿಯನ್ನು ನೀಡಿತು. 1959ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. (ಬಿ.ಆರ್.ಪಿ.)

**ಕಾರನ್ ಫ್ಲವರ್ :** ಸೆಂಟಾರಿಯ ಸಯೇನಸ್ ಎಂಬ ಶಾಸ್ತ್ರೀಯನಾಮವುಳ್ಳ ಏಕವಾರ್ಷಿಕ ಸಸ್ಯ. ಕಂಪಾಸಿಟೀ ಕುಟುಂಬಕ್ಕೆ ಸೇರಿದೆ; ಬ್ಲೂ ಬಾಟಲ್ ಎಂದೂ ಕರೆಯುವುದುಂಟು. ಅಂದವಾದ ಹೂಬಿಡುವ ಸಸ್ಯವಾದ್ದರಿಂದ ಉದ್ಯಾನ ಪ್ರಾಮುಖ್ಯ ಪಡೆದಿದೆ. ಇದು ಸುಮಾರು 30–60 ಸೆಂಮೀ ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ನೀಳ, ಹೂಗಳು ನೀಲಿ, ನಸುಗೆಂಪು, ಗುಲಾಬಿ, ಲೈಲಕ್, ಊದಾ. ಬಿಳಿ ಇತ್ಯಾದಿಯಾಗಿ ವರ್ಣರಂಜಿತವಾಗಿರುವುವಲ್ಲದೆ ಚೆಲುವಾದ ಚಂಡುಮಂಜರಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲುಗಳಿಗೆ ಬಹಳ ಉದ್ದವಾದ ತೊಟ್ಟಿರುವುದರಿಂದ ಕತ್ತರಿಸಿ ಹೂದಾನಿಗಳಲ್ಲಿಟ್ಟು ಅಲಂಕಾರಕ್ಕಾಗಿ ಬಳಸಬಹುದು. ಈ ಗಿಡವನ್ನು ಬೀಜಗಳ ಮೂಲಕ ವೃದ್ಧಿಸುತ್ತಾರೆ. ನೇರವಾಗಿ ಮಡಿಗಳಲ್ಲೆ ಬಿತ್ತುವುದು ವಾಡಿಕೆ. ಮೊಳಕೆಯೊಡೆದು ಸಸಿಗಳು ಬಂದ ಮೇಲೆ 3"–4" ಗಳಿಗೊಂದರಂತೆ ಗಿಡಗಳನ್ನು ಬಿಟ್ಟು ಉಳಿದವನ್ನು ತೆಗೆದುಹಾಕಬೇಕು. ಇದರಿಂದ ಗಿಡಗಳ ಬೆಳವಣಿಗೆಗೂ ಹೂಗಳು ಎದ್ದು ಕಾಣುವುದಕ್ಕೂ ಅನುಕೂಲ. ನೀರು ಹೆಚ್ಚಾಗಿ ಬೇಕಾಗಿಲ್ಲ. ಬಿತ್ತನೆ ಮಾಡಿದ ಅನಂತರ 30,40,50 ಮತ್ತು 60ನೆಯ ದಿನಗಳಲ್ಲಿ ಹಿಂಡಿ ಗೊಬ್ಬರ ಹಾಕಬೇಕು, 3 ತಿಂಗಳಲ್ಲಿ ಹೂ ಒಡೆಯುತ್ತದೆ. (ಪಿ.ಜಿ.)

**ಕಾರನ್ ಸ್ಟೀಪ್ ಲಿಕ್ಕರ್ :** ಪೆನಿಸಿಲಿಯಮ್ ಬೂಷ್ಟಿನ ಬೆಳವಣಿಗೆಗೆ ಬೇಕಾದ ಆಹಾರಾಂಶಗಳನ್ನು ಒದಗಿಸಲು ಉಪಯೋಗಿಸುವ ದ್ರಾವಣ. ಮುಸುಕಿನ ಜೋಳದಿಂದ ಪಿಷ್ಟ ಮತ್ತು ಎಣ್ಣೆ ತೆಗೆಯುವ ಕೈಗಾರಿಕೆಯಲ್ಲಿ ಒಂದು ಉಪಯುಕ್ತ ಉಪೋತ್ಪನ್ನವನ್ನಾಗಿ ಇದನ್ನು ಅಮೆರಿಕದಲ್ಲಿ ಪಡೆಯುತ್ತಿದ್ದಾರೆ. ಮುಸುಕಿನ ಜೋಳವನ್ನು ತುಸು ಗಂಧಕದ ಡೈಆಕ್ಸೈಡ್ ಇರುವ ಬಿಸಿನೀರಿನಲ್ಲಿಟ್ಟು ಮೆತುಮಾಡಿ ಕಾಳುಗಳನ್ನು ಒಡೆದು ನೀರಿನಲ್ಲಿ ಹಾಕಿದಾಗ ಎಣ್ಣೆಯಿರುವ ಭಾಗ ತೇಲುತ್ತದೆ. ಮುಳುಗಿ ತಳಸೇರಿದ ಭಾಗವನ್ನು ಅರೆದು ಪ್ರೋಟೀನ್ ಅಂಶವನ್ನು ಬೇರ್ಪಡಿಸಿದಾಗ ಉಳಿಯುವ ದ್ರಾವಣವೇ ಕಾರನ್ ಸ್ಟೀಪ್ ಲಿಕ್ಕರ್. ಪೆನಿಸಿಲಿನ್ ತಯಾರಿಕೆಯಲ್ಲಿ ಇದರ ಪಾತ್ರ ಹಿರಿದು ಎಂಬುದನ್ನು ಮಾಯರ್ ಮತ್ತು ಕಾಗ್ಹಿಲ್ ಎಂಬುವರು ಕಂಡುಹಿಡಿದರು (1944). ಬೂಷ್ಟು ಬೆಳೆಯಲು ಇದನ್ನು ಬಳಸಿದಾಗ ಪೆನಿಸಿಲಿನ್ನಿನ ಉತ್ಪನ್ನ ಹೆಚ್ಚುವುದೆಂದು ಇವರು ತೋರಿಸಿಕೊಟ್ಟರು. ಈ ರೀತಿ ತಯಾರಿಕೆ ಹೆಚ್ಚಲು ಕಾರಣ ಈ ದ್ರಾವಣದಲ್ಲಿರುವ ಫೀನೀಥೈಲಮೀನ್ ಎಂಬ ರಾಸಾಯನಿಕ ವಸ್ತು. ಇದು ಬೆಂಜೈಲ್ ಪೆನಿಸಿಲಿನ್ನಿನ ಪೂರ್ವಗಾಮಿ.

ಅನಂತರದ ಪರಿಶೋಧನೆಯಲ್ಲಿ ಅಮೆರಿಕದಲ್ಲಿ ಮತ್ತು ಬ್ರಿಟನಿನಲ್ಲಿ ತಯಾರಾದ ಪೆನಿಸಿಲಿನ್‌ಗಳ ಅಣುರಚನೆಯಲ್ಲಿ ವ್ಯತ್ಯಾಸವಿರುವುದು ಕಂಡುಬಂದಿತು. (ಬ್ರಿಟನಿನಲ್ಲಿ ತಯಾರಾದ ಪೆನಿಸಿಲಿನ್ನಿನಲ್ಲಿ ಬೆಂಜೈಲ್ ಭಾಗದ ಬದಲು ಪೆನ್ಟನೈಲ್ ಭಾಗ ಇದೆ). ಅಮೆರಿಕದಲ್ಲಿ ಕಾರನ್ ಸ್ಟೀಪ್ ಲಿಕ್ಕರನ್ನು ಪೋಷಕ ವಸ್ತುವಾಗಿ ಬಳಸುವುದೇ ಇದಕ್ಕೆ ಕಾರಣ ಎಂದು ಗೊತ್ತಾಯಿತು. ಈ ಪರಿಶೋಧನೆಯ ಫಲವಾಗಿ ಫೀನೀಥೈಲಮೀನ್ ಅಸಿಟಿಕ್ ಆಮ್ಲ ಮುಂತಾದುವನ್ನು ಪೆನಿಸಿಲಿಯಮ್ ಬೂಷ್ಟುಗಳ ವರ್ಧನ ಮಾಧ್ಯಮದಲ್ಲಿ (ಕಲ್ಚರ್ ಮೀಡಿಯಮ್) ಸೇರಿಸುವುದರಿಂದ ಬೇರೆ ಬೇರೆ ರೀತಿಯ ಪೆನಿಸಿಲಿನ್‌ಗಳನ್ನು ತಯಾರಿಸಬಹುದೆಂದು ಗೊತ್ತಾಯಿತು. ತತ್ಪರಿಣಾಮವಾಗಿ ಈ ಔಷಧಿಗಳ ತಯಾರಿಕೆಯಲ್ಲಿ ಹೊಸ ಮಾರ್ಗ ಹಾಕಿ ಕೊಟ್ಟ ಹಾಗಾಯಿತು.

ವಿಟಮಿನ್ ಬಿ ಸಂಕೀರ್ಣಕ್ಕೆ ಸೇರಿದ ಮತ್ತು ಔಷಧಗಾರಿಕೆಯಲ್ಲಿ ಉಪಯೋಗವಾಗುವ ಮೀಸೋ ಇನಾಸಿಟಾಲ್ ಎಂಬ ವಸ್ತುವನ್ನು ಈ ದ್ರಾವಣದಿಂದ ತಯಾರಿಸುತ್ತಾರೆ. ಕಾರನ್ ಸ್ಟೀಪ್ ಲಿಕ್ಕರ್‌ಗೆ ಸುಟ್ಟ ಸುಣ್ಣ (ಸ್ಲೇಕ್ಡ್ ಲೈಮ್) ಹಾಕಿ, ಶೋಧಿಸಿ ಬಂದ ಸೋಸಿಕವನ್ನು (ಫಿಲ್ಟ್ರೇಟ್) ಕ್ಯಾಲ್ಸಿಯಮ್ ಹೈಡ್ರಾಕ್ಸೈಡ್ ಅಥವಾ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸೇರಿಸಿ $100^{0}$–$200^{0}$ ಸೆಂ. ಉಷ್ಣತೆಯಲ್ಲಿ ಜಲವಿಶ್ಲೇಷಣೆಗೊಳಿಸುವುದರಿಂದ ಮೀಸೋ ಇನಾಸಿಟಾಲನ್ನು ಪಡೆಯಬಹುದು. ಆಕ್ಸಿಥೈಯಾಜ್ಹಿಕ್ ಆಮ್ಲ ಮತ್ತು ಕ್ಲೋರ್‌ಟೆಟ್ರಸೈಕ್ಲಿನ್ ಎಂಬ ಜೀವಿನಿರೋಧಕ ವಸ್ತುಗಳ ಆಕರವಾದ ಸ್ಟ್ರೆಪ್ಟೊಮೈಸಿಸ್ ಬೂಷ್ಟಿನ ಬೆಳವಣಿಗೆಗೆ ಆವಶ್ಯಕವಾದ ವರ್ಧನ ಮಾಧ್ಯಮದಲ್ಲಿ ಕಾರನ್ ಸ್ಟೀಪ್ ಲಿಕ್ಕರ್‌ನ್ನು ಸೇರಿಸುತ್ತಾರೆ. ಅಲ್ಲದೆ ಹುದುಗುವಿಕೆ ಕ್ರಿಯೆಗಳಲ್ಲೂ ಇದನ್ನು ಬಳಸುವುದುಂಟು. (ಎ.ಎಸ್.ಆರ್.)

**ಕಾರರ್, ಪಾಲ್ :** 1889–. ರಷ್ಯದಲ್ಲಿ ಜನಿಸಿದ ಸ್ವಿಸ್ ಜೀವರಸಾಯನ ವಿಜ್ಞಾನಿ. 21 ಏಪ್ರಿಲ್ 1889 ರಂದು ಜನಿಸಿದ. ನೊಬೆಲ್ ಪ್ರಶಸ್ತಿ ವಿಜೇತ (1937). ಪ್ರಖ್ಯಾತ ರಸಾಯನ ವಿಜ್ಞಾನಿ ಆಲ್ಫ್ರೆಡ್ ವೆರ್ನರನ ಶಿಷ್ಯನಾಗಿ ಜ್ಯೂರಿಚ್ ವಿಶ್ವವಿದ್ಯಾಲಯದಲ್ಲಿ ಡಾಕ್ಟೊರೇಟ್ ಪದವಿಯನ್ನು ಪಡೆದ (1911). ಮುಂದೆ ಪಾಲ್ ಏರ್ಲಿಕ್ ಎಂಬ ವಿಜ್ಞಾನಿಯೊಡನೆ ಕೆಲಸಮಾಡಿ 1919ರಲ್ಲಿ ಜ್ಯೂರಿಚಿಗೆ ಮರಳಿದ. ಅಲ್ಲಿ ವೆರ್ನರನ ನಿಧನದಿಂದ ತೆರವಾಗಿದ್ದ ಸ್ಥಾನದಲ್ಲಿ ನೇಮಕಗೊಂಡ.

ಈತನ ಪ್ರಧಾನ ಸಂಶೋಧನಕಾರ್ಯ ಸಸ್ಯಗಳಲ್ಲಿನ ವರ್ಣದ್ರವ್ಯಗಳನ್ನು ಕುರಿತದ್ದು. ಅದರಲ್ಲಿಯೂ ಹಳದಿವರ್ಣದ ಕ್ಯಾರೋಟಿನಾಯ್ಡುಗಳನ್ನು ಕುರಿತದ್ದು. ಇವು ರಕ್ತ ವರ್ಣದ ಕ್ಯಾರೆಟ್ ಎಂಬ ಗೆಡ್ಡೆಗಳಲ್ಲಿ ವರ್ಣದ್ರವ್ಯಗಳಿಗೆ ಸಂಬಂಧಪಟ್ಟಿವೆ. ಈ ವರ್ಣ ದ್ರವ್ಯಗಳ ರಚನೆಯ ರಾಸಾಯನಿಕ ಸೂತ್ರಗಳನ್ನು ಕಾರರ್ ವಿಶದಪಡಿಸಿದುದಲ್ಲದೆ ಇವುಗಳಲ್ಲಿ ಕೆಲವು ವರ್ಣದ್ರವ್ಯಗಳು ಪ್ರಾಣಿಗಳ ಅಂಗಗಳಲ್ಲಿ ಎ ಜೀವಸತ್ತ್ವವಾಗಿ ಮಾರ್ಪಾಡು ಹೊಂದುತ್ತವೆ ಎಂದು ಸಹ ತೋರಿಸಿಕೊಟ್ಟ. ಈ ಸಂಶೋಧನೆಯಿಂದಾಗಿ ಎ ಜೀವಸತ್ತ್ವದ ಉಪಗಾಮಿಯಾದ ಬೀಟ ಕ್ಯಾರೋಟಿನ್ ಎಂಬ ರಾಸಾಯನಿಕ ವಸ್ತುವಿನ ರಾಸಾಯನಿಕ ಸೂತ್ರ ಸ್ಥಿರಪಟ್ಟಿತು. ಹೀಗೆ ಮೊಟ್ಟಮೊದಲಿಗೆ ಒಂದು ಜೀವ ಸತ್ತ್ವದ ಸೂತ್ರವನ್ನು ಆವಿಷ್ಕರಿಸಿದ ಕೀರ್ತಿ ಕಾರರನದು.

ಮುಂದೆ ಈತ ಸಂಶೋಧನೆಯನ್ನು ಜೀವಸ್ತ್ವ ಬಿ$_2$, ಈ , ಕೆ, ಸಿ ಕ್ಷೇತ್ರಗಳಿಗೆ ವಿಸ್ತರಿಸಿ ಅವುಗಳ ರಾಸಾಯನಿಕ ಸೂತ್ರಗಳನ್ನು ಸಹ ಕಂಡುಹಿಡಿದ. ಮೇಲ್ಕಂಡ ವಿಷಯಗಳ ಬಗ್ಗೆ ಸಾವಿರಕ್ಕೂ ಮಿಗಿಲಾಗಿ ಸಂಶೋಧನ ಲೇಖನಗಳನ್ನು ಕಾರರ್ ಪ್ರಕಟಿಸಿದ್ದಾನೆ. ಈತನ ಪ್ರಖ್ಯಾತ ಗ್ರಂಥವಾದ ಲೆಹರ್‌ಬುಕ್‌ಡೆರ್ ಆರ್ಗಾನಿಷೆ ಕೆಮಿಷೆನ್ (1930) ಎಂಬುದು ಪ್ರಪಂಚದ ಪ್ರಮುಖ ಭಾಷೆಗಳಿಗೆ ತುರ್ಜುಮೆಗೊಂಡಿದೆ. (ಸಿ.ಎ.ಎಂ.)

**ಕಾರಲು ರೋಗ :** ಪ್ಲಾಟಿಹೆಲ್ಮಿಂತಿಸ್ ವಿಭಾಗದ ಟ್ರೆಮಟೋಡ ವರ್ಗಕ್ಕೆ ಸೇರಿದ ಫೆಸಿಯೊಲ ಹೆಪ್ಯಾಟಿಕ ಮತ್ತು ಫೆಸಿಯೊಲ ಜೈಗಾಂಟಿಕ ಎಂಬ ಎರಡು ಪರಾವಲಂಬಿ ಜೀವಿಗಳಿಂದ ಕುರಿ, ದನ ಮುಂತಾದ ಸಾಕುಪ್ರಾಣಿಗಳಲ್ಲಿ ಉಂಟಾಗುವ ರೋಗ (ಲಿವರ್ ರಾಟ್). ಮೊಲ, ಹಂದಿ, ಕುದುರೆ, ಜಿಂಕೆ ಮುಂತಾದ ಪ್ರಾಣಿಗಳಿಗೂ ಈ ರೋಗ ಬರುವುದಲ್ಲದೆ ರೋಗಪೀಡಿತ ದನದ ಮತ್ತು ಕುರಿಯ ಮಾಂಸ ತಿಂದ ಮನುಷ್ಯರಲ್ಲೂ ಇದು ಕಾಣಿಸುವುದುಂಟು.

ಇದರಲ್ಲಿ ಎರಡು ವಿಧಗಳುಂಟು. ಪಿತ್ತಜನಕಾಂಗವನ್ನೆಲ್ಲ ಗುಂಪುಗುಂಪಾಗಿ ಅಧಿಕ ಸಂಖ್ಯೆಗಳಲ್ಲಿ ಆಕ್ರಮಿಸುವ ಎಳೆಯ ಹುಳುಗಳಿಂದ ಉಂಟಾಗುವ ತೀವ್ರ ಸ್ವರೂಪದ ಕಾಯಿಲೆ (ನಿಜವಾದ ಯಕೃತ್ ಕೊಳೆ) ಮತ್ತು ಪಿತ್ತನಾಳಗಳಲ್ಲಿ (ಬೈಲ್ ಡಕ್ಟ್ಸ್) ದೀರ್ಘಕಾಲ ವಾಸಮಾಡಿಕೊಂಡಿರುವ ದೊಡ್ಡ ಹುಳುಗಳಿಂದ ಉತ್ಪತ್ತಿಯಾಗುವ ಚಿರಸ್ವರೂಪದ (ಕ್ರಾನಿಕ್ ಫಾರಮ್) ಕಾಯಿಲೆ. ಮಧ್ಯವರ್ತಿಯಾಗಿ ಆಸರೆಯಾಗಿರುವ ಕೆಲವು ಬಗೆಯ ಶಂಖು ಹುಳು ಅಥವಾ ಬಸವನ ಹುಳುಗಳು (ಲಿಮ್ನಿಯ, ಪ್ಲೆನಾರ್ಬಿಸ್ ಮೆಲೇನಿಯ ಮತ್ತು ವಿವಿಪೇರ ಜಾತಿಯ ಬಸವನ ಹುಳು) ವಾಸವಾಗಿರುವ ಜೌಗು ಪ್ರದೇಶಗಳಲ್ಲಿ ಮೇಯುವ ದನ ಕುರಿಗಳಲ್ಲಿ ಈ ಕಾಯಿಲೆ ಕಂಡುಬರುತ್ತದೆ.

**ಜೀವನಚರಿತ್ರೆಯಲ್ಲಿನ ಮುಖ್ಯ ವಿವರಗಳು:** ಕಾರಲು ರೋಗವನ್ನುಂಟುಮಾಡುವ ಹುಳು ತನ್ನ ವಿಚಿತ್ರ ಬಗೆಯ ಜೀವನ ಚಕ್ರದ ಮೊದಲನೆಯ ಘಟ್ಟವನ್ನು ಮುಖ್ಯ ಆಶ್ರಯದಾತ ಪ್ರಾಣಿಯಾದ ಕುರಿಯ ಪಿತ್ತಜನಕಾಂಗದಲ್ಲೂ ಎರಡನೆಯ ಘಟ್ಟವನ್ನು ಮಧ್ಯವರ್ತಿ ಆಶ್ರಯದಾತ ಪ್ರಾಣಿಯಾದ ಬಸವನ ಹುಳುವಿನ ದೇಹದಲ್ಲೂ ಸಾಗಿಸುತ್ತದೆ. ಅದರ ಜೀವನ ಚರಿತ್ರೆಯ ಮುಖ್ಯ ಅಂಶಗಳು ಈ ರೀತಿ ಇವೆ: ಜಾಡ್ಯ ತಗುಲಿದ ಪ್ರಾಣಿಯ ಶರೀರದಿಂದ ಮಲದೊಂದಿಗೆ ಹೊರಬಂದ ಕಾರಲು ಹುಳುವಿನ ಮೊಟ್ಟೆಗಳು ಸುಮಾರು 9 ದಿವಸಗಳಲ್ಲಿ ಮಿರಸಿಡಿಯಂ ಎಂಬ ಹೆಸರಿನ ಮರಿಗಳಾಗುತ್ತವೆ. ಸನ್ನಿವೇಶಗಳು ಅನುಕೂಲವಾಗಿಲ್ಲದ ಸಂದರ್ಭಗಳಲ್ಲಿ ಮೊಟ್ಟೆಗಳು 5–6 ತಿಂಗಳಿಗೂ ಮಿಗಿಲಾಗಿ ಜೀವಂತವಾಗಿದ್ದು ಸುಸಮಯ ದೊರಕಿದ ಅನಂತರ ಮರಿಗಳನ್ನು ಉತ್ಪತ್ತಿ ಮಾಡಬಹುದು. ಪ್ರಥಮಾವಸ್ಥೆಯ ಈ ಮಿರಸಿಡಿಯಂ ಎಂಬ ಮರಿಗಳು ಮಧ್ಯವರ್ತಿ ಆಸರೆಯಾದ ಬಸವನ ಹುಳುವಿನ ದೇಹವನ್ನು ಹೊಕ್ಕು 6–7ವಾರಗಳ ಅನಂತರ ಸರ್ಕೇರಿಯ ಎಂಬ ದ್ವಿತೀಯಾವಸ್ಥೆಯ ಮರಿಗಳಾಗಿ ರೂಪಾಂತರಗೊಂಡು ಬಸವನ ಹುಳುವಿನ ದೇಹದಿಂದ ಹೊರಬಂದು ಸಸ್ಯಗಳ ಮೇಲೆ ನೆಲೆಗೊಂಡು ಕೋಶಾವಸ್ಥೆಯನ್ನು ತಲುಪುತ್ತವೆ. ಇಂಥ ಸ್ಥಳಗಳಲ್ಲಿ ಮುಖ್ಯ ಆಶ್ರಯದಾತ ಪ್ರಾಣಿಗಳಾದ ಕುರಿ ದನ ಮುಂತಾದುವು ಹುಲ್ಲು ಮೇಯುವಾಗ ಅವುಗಳ ದೇಹವನ್ನು ಪ್ರವೇಶಿಸಿ ತಮ್ಮ ಪರಾವಲಂಬನ ಜೀವನವನ್ನು ಪ್ರಾರಂಭಿಸುತ್ತವೆ. ಕೋಶಾವಸ್ಥೆಯಲ್ಲಿ ಒಂದು ವರ್ಷವಾದರೂ ಇರಬಲ್ಲವು. ಮುಖ್ಯ ಆಸರೆಯಾದ ಪ್ರಾಣಿಯ ಸಣ್ಣ ಕರುಳನ್ನು ತಲಪಿದ ಎಳೆಯ ಕಾರಲು ಹುಳುಗಳು ಕರುಳಿನ ಗೋಡೆಯನ್ನು ಭೇದಿಸಿ ಹೊಟ್ಟೆಯಲ್ಲಿ ಕೆಲವು ದಿವಸಗಳನ್ನು ಕಳೆದು ಅನಂತರ ಪಿತ್ತಜನಕಾಂಗವನ್ನು ಆಕ್ರಮಿಸುತ್ತವೆ. ಅಲ್ಲಿ 5–6 ವಾರಗಳ ಬೆಳೆವಣಿಗೆಯನ್ನು ಸಾಗಿಸಿ 3–4 ಮಿಮೀ ಉದ್ದವಾಗಿ ಅನಂತರ ಪಿತ್ತನಾಳವನ್ನು ಸೇರಿ ಅಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ. ಪ್ರೌಢಾವಸ್ಥೆಗೆ ಬಂದ ಕೆಲವು ದಿವಸಗಳಲ್ಲೇ ಮೊಟ್ಟೆಯಿಡಲು ಆರಂಭಿಸುತ್ತವೆ. ಜಾಡ್ಯ ಸೋಕಿದ ಕಾಲದಿಂದ 11ರಿಂದ 13 ವಾರಗಳಲ್ಲಿ ರೋಗಪೀಡಿತ ಪ್ರಾಣಿಯ ಮಲದಲ್ಲಿ ಕಾರಲು ಹುಳುವಿನ ಮೊಟ್ಟೆಗಳು ಕಾಣಬರುತ್ತವೆ; ಈ ರೀತಿ ಮಲದಲ್ಲಿ ಮೊಟ್ಟೆಗಳು ಕಾಣಿಸಿಕೊಳ್ಳುವುದು ಇದಕ್ಕೆ 11 ರಿಂದ 13 ವಾರಗಳ ಹಿಂದೆ ಸೇರಿದ ಜಾಡ್ಯವನ್ನು ಸೂಚಿಸುತ್ತದೆ.

**ರೋಗಲಕ್ಷಣಗಳು** : 1 ತೀವ್ರ ಸ್ವರೂಪದ ರೋಗ: ಕುರಿಗಳಲ್ಲಿ ಈ ಕಾಯಿಲೆ ದಷ್ಟಪುಷ್ಟವಾಗಿರುವ ಪ್ರಾಣಿಗಳಲ್ಲಿ ಕಾಣಿಸಿಕೊಂಡು ಕೇವಲ ಕೆಲವೇ ದಿವಸಗಳ ರೋಗದಿಂದಲೇ ಮರಣ ಸಂಭವಿಸಬಹುದು. ಜಾಡ್ಯ ತಗುಲಿದ ಪ್ರಾಣಿಗಳು ಮಂದೆಯನ್ನು ಬಿಟ್ಟು ಬೇರೆ ನಿಂತು ಚಲಿಸಲು ಇಷ್ಟಪಡದೇ ಇರುತ್ತವೆ. ಹೊಟ್ಟೆ ಉಬ್ಬರಿಸಿಕೊಂಡು ಮುಟ್ಟಿದರೆ ನೋವುಂಟಾಗುತ್ತದೆ. ದನಗಳಲ್ಲಿ ಈ ಕಾಯಿಲೆ ಎಳೆಯ ಕರುಗಳಿಗೂ ಅಂಟುತ್ತದೆ. ಹಸಿವಿಲ್ಲದಿರುವಿಕೆ, ಮಂಕಾಗಿರುವಿಕೆ, ಗಂಟಲು ಊತ, ಹೊಟ್ಟೆಯುಬ್ಬರ ಮತ್ತು ನೋವು–ಇವು ಕಾಯಿಲೆಯ ಲಕ್ಷಣಗಳು. ಕೆಲವೇ ದಿವಸಗಳಲ್ಲಿ ಕರುಗಳು ಸತ್ತು ಹೋಗುತ್ತವೆ.

**2 ಚಿರಸ್ವರೂಪದ ರೋಗ:** ಕುರಿಗಳಲ್ಲಿ ಈ ರೀತಿಯ ಜಾಡ್ಯದ ಮೊದಲ ಚಿಹ್ನೆಯೆಂದರೆ ಮಂದೆಯನ್ನು ಮುಂದೋಡಿಸಿದಾಗ ಕೆಲವು ಕುರಿಗಳು ಹಿಂದೆ ಉಳಿಯುವುದು. ಇವನ್ನು ಹಿಡಿದು ಪರೀಕ್ಷಿಸಿದಲ್ಲಿ ರಕ್ತಹೀನತೆಯ ಲಕ್ಷಣಗಳು ಎದ್ದು ಕಾಣುತ್ತವೆ. ಕಾಯಿಲೆ ಮುಂದುವರಿದಂತೆ ಪ್ರಾಣಿಯ ದೇಹ ಒಣಗುತ್ತ ಬರುವುದು ಚೆನ್ನಾಗಿ ಕಾಣುತ್ತದೆ. ಗಂಟಲ ಮತ್ತು ಹೊಟ್ಟೆಯ ಕೆಳಭಾಗಗಳಲ್ಲಿ ನೀರು ತುಂಬಿಕೊಂಡು ಊದಿಕೊಳ್ಳಬಹುದು. ದನಗಳಲ್ಲಿ ರಕ್ತಹೀನತೆ, ಭೇದಿ ಮತ್ತು ಕೃಶವಾಗಿ ಕಾಣುವ ದೇಹ ಇವು ಮುಖ್ಯವಾಗಿ ಗೋಚರವಾಗುವ ಸಾಮಾನ್ಯ ಲಕ್ಷಣಗಳು. ಗಂಟಲಿನ ಊತವೂ ಉಂಟಾಗಬಹುದು. ಇಂಥ ರೋಗವುಳ್ಳ ಕುರಿ ಮತ್ತು ದನಗಳ ಮಲವನ್ನು ಪರೀಕ್ಷಿಸಿದಾಗ ಕಾರಲು ಹುಳುವಿನ ಮೊಟ್ಟೆಗಳನ್ನು ಕಾಣಬಹುದು. ಇದು ಕಾಯಿಲೆಯನ್ನು ಗುರುತಿಸಲು ಬಹಳ ಸಹಕಾರಿಯಾದುದು.

**ಮರಣಾನಂತರ ಪರೀಕ್ಷೆ** : ತೀವ್ರ ಸ್ವರೂಪದ ಕಾಯಿಲೆಯಿಂದ ಸತ್ತ ಪ್ರಾಣಿಯ ಹೊಟ್ಟೆಯಲ್ಲಿ ರಕ್ತವರ್ಣದ ದ್ರವ ಇದ್ದು, ಪಿತ್ತಜನಕಾಂಗ ಬಾತುಕೊಂಡು ರಕ್ತಸ್ರಾವವಾಗಿರುವುದನ್ನು ತೋರಿಸುತ್ತದೆ. ಈ ಪಿತ್ತಜನಕಾಂಗವನ್ನು ಕತ್ತರಿಸಿ, ಹಿಂಡಿ, ನೀರಿನಿಂದ ತೊಳೆಯಬೇಕು. ಇದರಿಂದ ಪಿತ್ತಜನಕಾಂಗದ ರಸದೊಂದಿಗೆ ಎಳೆಯ ಕಾರಲು ಹುಳುಗಳು ಹೊರಬರುತ್ತವೆ. ಅನಂತರ ರಸವನ್ನು ತಂಗುವುದಕ್ಕೆ ಬಿಟ್ಟರೆ ಹುಳುಗಳು ನಿಧಾನವಾಗಿ ರಸದಿಂದ ಬೇರ್ಪಡುತ್ತವೆ.

ಚಿರಸ್ವರೂಪದ ಕಾಯಿಲೆಯಲ್ಲಿ ಗಂಟಲು ಮತ್ತು ಹೊಟ್ಟೆಯಲ್ಲಿ ನೀರು ತುಂಬಿಕೊಂಡಿರುತ್ತದೆ. ಪಿತ್ತಜನಕಾಂಗ ಕ್ಷೀಣಗೊಂಡಿರುವುದಲ್ಲದೆ ಕೊಳೆತಿರುತ್ತದೆ. ಪಿತ್ತನಾಳಗಳು ವಿಶೇಷವಾಗಿ ದೊಡ್ಡದಾಗಿ ಅವುಗಳ ಗೋಡೆಗಳು ದಪ್ಪವಾಗಿರುತ್ತವೆ. ಅನೇಕ ವೇಳೆ ಪಿತ್ತನಾಳ ಮತ್ತು ಪಿತ್ತಕೋಶಗಳಲ್ಲಿ ದೊಡ್ಡ ಕಾರಲು ಹುಳುಗಳನ್ನು ಕಾಣಬಹುದು.

**ಚಿಕಿತ್ಸಾಕ್ರಮ:** ಕುರಿಗಳಿಗೆ ಕಾರ್ಬನ್ ಟೆಟ್ರಕ್ಲೋರೈಡನ್ನು ಜಿಲಾಟಿನ್ ಕೋಶದಲ್ಲಿ ತುಂಬಿಕೊಡುವುದು ಅತ್ಯುತ್ತಮವಾದ ಚಿಕಿತ್ಸಾ ಕ್ರಮ. ಕಾರಲು ಹುಳುವಿನ ಜಾಡ್ಯ ಒಂದು ಮಂದೆಯಲ್ಲಿನ ಕೆಲವು ಕುರಿಗಳಲ್ಲಿ ಇರುವ ಲಕ್ಷಣಗಳು ಕಂಡರೆ ಉಳಿದ ಕುರಿಗಳಲ್ಲೂ ಇದು ಗುಪ್ತವಾಗಿರುವ ಸೂಚಕವಾದುದರಿಂದ ಎಲ್ಲ ಕುರಿಗಳಿಗೂ ಚಿಕಿತ್ಸೆಯನ್ನು ಕೈಗೊಳ್ಳುವುದು ಸೂಕ್ತವಾದ ಕ್ರಮ. ಕೇವಲ ಪ್ರೌಢಾವಸ್ಥೆಯ ಕಾರಲು ಹುಳುಗಳು ಮಾತ್ರವೇ ಈ ಔಷಧಪ್ರಯೋಗದಿಂದ ನಾಶಗೊಳ್ಳುವುದರಿಂದ ಚಿಕಿತ್ಸೆಯನ್ನು ಒಂದು ತಿಂಗಳ ಅನಂತರ ಮತ್ತೊಮ್ಮೆ ಮಾಡಬೇಕು.

ದನಗಳಿಗೆ ಕಾರ್ಬನ್ ಟೆಟ್ರಕ್ಲೋರೈಡ್ ಪ್ರಯೋಗ ಸುರಕ್ಷಿತವಲ್ಲ. ಹೆಕ್ಸಕ್ಲೋರೆಥೇನ್ ಎಂಬ ಮದ್ದನ್ನು ದೇಹದ ತೂಕದ 100 ಪೌಂ.ಗೆ 10 ಗ್ರಾಂನಂತೆ ಒಟ್ಟು ಪ್ರಮಾಣ 60 ಗ್ರಾಂಗೆ ಮೀರದಂತೆ ನೀರಿನೊಂದಿಗೆ ಬೆರೆಸಿ ಒಮ್ಮೆ ಕುಡಿಸುವುದು ಸಾಧಾರಣವಾದ ಕ್ರಮ. ಒಟ್ಟು ಮಂದೆಯನ್ನೆಲ್ಲ ಚಿಕಿತ್ಸೆಗೆ ಒಳಪಡಿಸುವ ಮುನ್ನ 2–3 ದನಗಳ ಮೇಲೆ (ಮುಖ್ಯವಾಗಿ ಔಷಧಿಯನ್ನು ತಡೆದುಕೊಳ್ಳುವ ಶಕ್ತಿ ಅತ್ಯಂತ ಕಡಿಮೆಯಾಗುಳ್ಳ ದನಗಳ ಮೇಲೆ) ಪ್ರಯೋಗ ನಡೆಸುವುದು ಒಳ್ಳೆಯದು.

**ಹತೋಟಿ ಕ್ರಮ** : ಕುರಿ, ಕರುಗಳು ಮತ್ತು ಒಂದು ವರ್ಷ ಪ್ರಾಯದ ದನಗಳನ್ನು ನೀರಿನ ಅಂಚುಗಳಲ್ಲಿ ಅಥವಾ ಯಾವಾಗಲೂ ಜೌಗಾಗಿರುವ ಹುಲ್ಲುಗಾವಲುಗಳಲ್ಲಿ ಮೇಯಲು ಬಿಡಬಾರದು. ನಿಂತಿರುವ ನೀರನ್ನು ಹರಿದು ಹೋಗುವಂತೆ ಮಾಡುವುದು, ನೀರಿನ ಹಳ್ಳ, ಹೊಂಡಗಳನ್ನು ಶುದ್ಧೀಕರಣ ಮಾಡುವುದು ಮತ್ತು ಕಾವಲುಗಳಿಗೆ ಮೈಲುತುತ್ತನ್ನು ಉಪಯೋಗಿಸುವುದು ಮುಂತಾದ ಕ್ರಮಗಳ ಮೂಲಕ ಬಸವನ ಹುಳುಗಳನ್ನು

ನಿರ್ಮೂಲ ಮಾಡಲು ಯತ್ನಿಸಬೇಕು ಎಕರೆಯೊಂದಕ್ಕೆ 28 ಪೌಂಡುಗಳಂತೆ ಒಂದು ಭಾಗ ಮೈಲುತುತ್ತನ್ನು 4 ಭಾಗ ಮರಳಿನೊಂದಿಗೆ ಬೆರೆಸಿದ ಮಿಶ್ರಣವನ್ನು ಕೈಯಿಂದ ಎರಚುವುದು ಬಸವನ ಹುಳುವಿನ ನಿವಾರಣೆಗೆ ಉತ್ತಮ ಮಾರ್ಗ. (ಆರ್.ಎಫ್.ಪಿ.)

**ಕಾರವಾನ್ :** ದೆಹಲಿಯಿಂದ ಪ್ರಕಟವಾಗುತ್ತಿರುವ ಒಂದು ಇಂಗ್ಲಿಷ್ ಪತ್ರಿಕೆ. ಸಂಪಾದಕ ಮತ್ತು ಪ್ರಕಾಶಕ: ವಿಶ್ವನಾಥ್, ಡೆಲ್ಲಿ ಪ್ರೆಸ್ ಸಮಾಚಾರ್ ಪತ್ರ (ಪ್ರೈ.) ಲಿಮಿಟೆಡ್‌ನ ಪರವಾಗಿ.




ಪ್ರಚಲಿತ ಸಮಸ್ಯೆಗಳ ಮೇಲೆ ಪರಿಣತರು ಬರೆದ ಲೇಖನಗಳು, ಸುದ್ದಿಯ ಹಿನ್ನೆಲೆ, ಸಾಹಿತ್ಯ, ಕಲೆ, ಕ್ರೀಡೆ, ವಿಜ್ಞಾನಗಳೇ ಮುಂತಾದ ಕ್ಷೇತ್ರಗಳ ಪರಿಚಯಗಳು, ಕತೆಗಳು, ಧಾರಾವಾಹಿ ಕಾದಂಬರಿ, ಚಿತ್ರಗಳು, ವ್ಯಂಗಚಿತ್ರಗಳು, ಚಲನಚಿತ್ರವಿಹಾರ, ಪದ್ಯಗಳು, ವಾಚಕರ ಪತ್ರಗಳು ಮುಂತಾದವನ್ನೊಳಗೊಂಡ ಈ ವೈವಿಧ್ಯಮಯ ಪತ್ರಿಕೆಯ ಪ್ರಥಮ ಸಂಚಿಕೆ ಪ್ರಕಟವಾದ್ದು 1940ರ ಜೂನಿನಲ್ಲಿ. ಈಗ ಕಾರವಾನ್ ಪ್ರಕಟಣೆ ನಿಂತಿದೆ. ಅದರ ಸ್ಥಾನದಲ್ಲಿ 'ಅಲೈನ್' ಜನ್ಮ ತಾಳಿದೆ. ವಿಶ್ವನಾಥ ನಿಧನಾನಂತರ ರಾಕೇಶ್‌ನಾಥ ಸಂಪಾದಕರಾಗಿದ್ದರು. (ಎಚ್.ಎಸ್.ಎಚ್.)

**ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು. ಆ ತಾಲ್ಲೂಕು ಮತ್ತು ಜಿಲ್ಲೆಯ ಕೇಂದ್ರ ಪಟ್ಟಣ. ತಾಲ್ಲೂಕನ್ನು ಪಶ್ಚಿಮದಲ್ಲಿ ಅರಬ್ಬೀಸಮುದ್ರ, ದಕ್ಷಿಣದಲ್ಲಿ ಅಂಕೋಲ, ಪೂರ್ವದಲ್ಲಿ ಯಲ್ಲಾಪುರ, ಈಶಾನ್ಯದಲ್ಲಿ ಜೊಯಿಡಾ ತಾಲ್ಲೂಕುಗಳು, ವಾಯವ್ಯದಲ್ಲಿ ಗೋವ ರಾಜ್ಯ – ಇವು ಸುತ್ತುವರಿದಿವೆ. ಸಾವಂತವಾಡ, ಬಾಡ, ಕಿನ್ನಾರ, ಗಡಸಿ – ಇವು ಈ ತಾಲ್ಲೂಕಿನ ಹೋಬಳಿಗಳು. ಒಟ್ಟು 60 ಗ್ರಾಮಗಳಿವೆ. ಜನಸಂಖ್ಯೆ 1,47,842.

ಪಶ್ಚಿಮ ಘಟ್ಟಗಳ ತಡಿಯಲ್ಲಿ ಕರಾವಳಿ ಭಾಗದಲ್ಲಿರುವ ಕಾರವಾರ ತಾಲ್ಲೂಕಿನಲ್ಲಿ ಮರಳುಮಿಶ್ರಿತ ಮಟ್ಟ ಭೂಪ್ರದೇಶ ಹಾಗೂ ಬೆಟ್ಟಗುಡ್ಡಗಳಿವೆ. ಇಲ್ಲಿರುವ ಗುಡ್ಡಗಳಲ್ಲಿ ಪ್ರಸಿದ್ಧವಾದುದು ಕಾರವಾರದಿಂದ ಸು.5ಕಿಮೀ ದೂರದಲ್ಲಿರುವ ಗುಡ್ಡೆಹಳ್ಳಿ (ಎತ್ತರ ಸು.500ಮೀ). ಕಾಳಿ ಇಲ್ಲಿನ ಮುಖ್ಯ ನದಿ. ತಾಲ್ಲೂಕಿನ ಮಧ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಅರಬ್ಬೀಸಮುದ್ರವನ್ನು ಸೇರುತ್ತದೆ. ವರ್ಷದಲ್ಲಿ ಆರು ತಿಂಗಳು ಮಳೆಗಾಲವಾಗಿದ್ದು ಹೆಚ್ಚು ಮಳೆ ಈ ತಾಲ್ಲೂಕಿನಲ್ಲಿ ಬೀಳುತ್ತದೆ. ವಾರ್ಷಿಕ ಸರಾಸರಿ ಸು.3050ಮಿಮೀ ಸುತ್ತಲಬೆಟ್ಟಗುಡ್ಡಗಳು ಅರಣ್ಯಗಳಿಂದ ತುಂಬಿದ್ದು ತೇಗ, ಮತ್ತಿ, ಹೊನ್ನೆ, ಜಂಬೆ ಮುಂತಾದ ಮರಗಳಿವೆ. ಈ ತಾಲ್ಲೂಕಿನಲ್ಲಿ ಸಾಗುವಳಿ ಭೂಪ್ರದೇಶ ಇತರ ತಾಲ್ಲೂಕುಗಳಿಗಿಂತ ಕಡಿಮೆ. ಇಲ್ಲಿನ ಮರಳು ಮಣ್ಣಿನಲ್ಲಿ ಸಸ್ಯಪೋಷಕ ದ್ರವ್ಯವೂ ಕಡಿಮೆ. ಆದರೂ ಪ್ರಮುಖವಾಗಿ ಬತ್ತ, ಕಬ್ಬು, ಗೆಣಸು, ಗೇರು, ನೆಲಗಡಲೆ ಮುಂತಾದವನ್ನು ಬೆಳೆಯುತ್ತಾರೆ. ತೆಂಗು ಇನ್ನೊಂದು ಪ್ರಮುಖ ಉತ್ಪಾದನೆ. ಮೀನುಗಾರಿಕೆ ಈ ತಾಲ್ಲೂಕಿನ ಒಂದು ಮುಖ್ಯ ಉದ್ಯಮ ಬೆಸ್ತರು ಮೀನು ಹಿಡಿಯುವುದರಲ್ಲಿ ಪರಿಣತರಾಗಿದ್ದಾರೆ. ಇತ್ತೀಚೆಗೆ ಇಂಡೋ ನಾರ್ವೇಜಿಯನ್ ಯೋಜನೆಯ ಪರಿಣಾಮವಾಗಿ ದೂರಸಾಗರದಲ್ಲಿ ಮೀನು ಹಿಡಿಯುವ ಉದ್ಯಮ ಬೆಳೆಯುತ್ತಿದೆ. ದೋಣಿ ಕಟ್ಟುವುದು, ಕೈಮಗ್ಗದ ನೇಯ್ಗೆ ಇತರ ಉದ್ಯಮಗಳಿಗೆ. ಅರಣ್ಯ ಸಂಪತ್ತು ಬಳಕೆಯಾಗುತ್ತಿದೆ. ಕಾರವಾರದ ಉತ್ತರದಲ್ಲಿ ಕೋಡಿಭಾಗದಲ್ಲಿ ಅರಣ್ಯ ಇಲಾಖೆ ತೆರೆದಿರುವ ಕೋಠಿಯೊಂದಿದೆ. ಮಲೆನಾಡಿನ ಅರಣ್ಯದಿಂದ ತೇಲಿಸಿತಂದ ತೇಗದ ಮರದ ದಿಮ್ಮಿಗಳನ್ನು ಇಲ್ಲಿ ಕೂಡಿಸಿ ಬೇರೆ ಎಡೆಗಳಿಗೆ ಸಾಗಿಸುವರು. ಈ ತಾಲ್ಲೂಕಿನಲ್ಲಿ ರಸ್ತೆ ಸಂಪರ್ಕ ಉತ್ತಮವಾಗಿದೆ.

ಬೆಟ್ಟ ಗುಡ್ಡಗಳ ವನಶ್ರೀಯಿಂದ ಮತ್ತು ಸಮುದ್ರತೀರದಿಂದ ಈ ತಾಲ್ಲೂಕು ಸುಂದರ ಪ್ರದೇಶಗಳಲ್ಲಿ ಒಂದು ಎನಿಸಿಕೊಂಡಿದೆ. ತಾಲ್ಲೂಕಿನ ಪೂರ್ವಬದಿಯ ನೀಳಪರ್ವತಶ್ರೇಣಿ ಸೌಂದರ್ಯಪೂರಿತವಾದದ್ದು. ಕಾಳಿ ನದಿಯು ಸಮುದ್ರ ಸೇರುವೆಡೆ ಸಮುದ್ರದ ಹಿಂಬದಿಯ



ಸೀಬರ್ಡ್ ನೌಕಾನೆಲೆಯ ತಾಣ

ನೀರಿನ ಒತ್ತಡದಿಂದ ನದಿಯ ಪಾತ್ರ ವಿಶಾಲವಾಗಿ ಒಂದು ಸುಂದರ ಸರೋವರದ ಹಾಗೆ ಕಾಣುತ್ತದೆ. ಪ್ರವಾಸಿಗಳು ದೋಣಿಗಳಲ್ಲಿ ಕುಳಿತು ವಿಹರಿಸಿ ಆನಂದಿಸುವುದನ್ನು ಕಾಣಬಹುದು.

ಸದಾಶಿವಗಡ, ಮಾಜಾಳಿ, ಶಿವೇಶ್ವರ, ಕದ್ರ, ಬಾಡ, ಬಿಣಗಿ ಮುಂತಾದವು ತಾಲ್ಲೂಕಿನ ಪ್ರಮುಖ ಸ್ಥಳಗಳು. ಗುಡ್ಡೆಹಳ್ಳಿ ಬೇಸಗೆ ಕಾಲದ ವಿಶ್ರಾಂತಿಧಾಮ. ಇಲ್ಲಿ ಕೆಲವು ಪ್ರಾಚೀನ ಗುಹೆಗಳೂ ಇವೆ ಎನ್ನಲಾಗಿದೆ. ಕಾರವಾರದ ಹತ್ತಿರವೇ ಸಮುದ್ರದಲ್ಲಿನ ಕೂರ್ಮಗಡ **(ನೋಡಿ)** ನಡುಗಡ್ಡೆ ಸಮುದ್ರಮಟ್ಟದಿಂದ 60ಮೀ ಎತ್ತರವಿದೆ. ಇಲ್ಲಿ ಪೂರ್ವದ ಕಡೆ ಒಂದು ಕೋಟೆಯೂ ನರಸಿಂಹ ದೇವಸ್ಥಾನವೂ ಒಂದು ಬಾವಿಯೂ ಉಂಟು. ಪ್ರತಿ ಡಿಸೆಂಬರ್ ತಿಂಗಳಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಈ ದೇವಸ್ಥಾನದ ಮೂರ್ತಿಯನ್ನು ಅರಬ್ಬರು ತಂದರೆಂದು ಪ್ರತೀತಿ. ಇಲ್ಲಿರುವ ಕೋಟೆಯನ್ನು ಶಿವಾಜಿ ಕಟ್ಟಿಸಿ ಸಿದಗಡ ಎಂಬ ಹೆಸರನ್ನು ಇಟ್ಟ. 1715ರಲ್ಲಿ ಕಡವಾಡದಿಂದ ಕಲ್ಲುಗಳನ್ನು ತಂದು ಈ ಕೋಟೆಯ ನಿರ್ಮಾಣ ಪೂರೈಸಲಾಯಿತು. ಆಗಿನಿಂದ ಇದಕ್ಕೆ ಕೂರ್ಮಗಡವೆಂಬ ಹೆಸರು ಬಂತು. ಟಿಪ್ಪು ಈ ಕೋಟೆಯ ಮೇಲೆ ದಾಳಿ ಮಾಡಿದ್ದ.

ಕಾರವಾರಕ್ಕೆ ಪೂರ್ವದಲ್ಲಿರುವ ಕಡವಾಡ (ಹಿಂದಿನ ಹೆಸರು ಕಾಡೆವರ) ಪ್ರಾಚೀನ ಕಾಲದಿಂದಲೂ ಒಂದು ಬಂದರಾಗಿ ವ್ಯಾಪಾರ ಕೇಂದ್ರವಾಗಿತ್ತು. ಫಿನಿಶಿಯನರ ಕಾಲದಿಂದಲೂ ಇದು ಹೊರ ದೇಶಗಳೊಂದಿಗೆ ಸಂಪರ್ಕ ಪಡೆದಿತ್ತೆಂದೂ ಇಂಗ್ಲಿಷರು ಇಲ್ಲಿ 1639ರಲ್ಲಿ ಸ್ಥಾಪಿಸಿದ್ದ ಕಾರ್ಖಾನೆಯಲ್ಲಿ 5000 ಮಂದಿ ನೇಕಾರರು ಮಸ್ಲಿನ್ ವಸ್ತ್ರನೇಯ್ಗೆಯಲ್ಲಿ ನಿರತರಾಗಿದ್ದರೆಂದೂ ಹೇಳಲಾಗಿದೆ. ಇಲ್ಲಿಯ ವಸ್ತ್ರ ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಮಾರಾಟವಾಗುತ್ತಿತ್ತೆಂದು ಪ್ರತೀತಿ. ಕಡವಾಡ ಶಿವಾಜಿಯ ಆಳಿಕೆಗೆ ಒಳಪಟ್ಟಿದ್ದುದರಿಂದ ಒಮ್ಮೆ ಇಂಗ್ಲಿಷರು ಸಹ ಕರವನ್ನು ಕೊಟ್ಟಿದ್ದರು. ಅನಂತರ ಇದು ಬಿಜಾಪುರದ ಸುಲ್ತಾನರ ಆಳಿಕೆಗೆ ಸೇರಿತೆಂದೂ ಬಿಜಾಪುರದ ರಾಜ್ಯಪಾಲ ಇಲ್ಲಿ ವಾಸಿಸುತ್ತಿದ್ದನೆಂದೂ 1675ರಲ್ಲಿ ಶಿವಾಜಿಯ ಸೇನೆ ಈ ಸ್ಥಳವನ್ನು ಸುಟ್ಟಿತೆಂದೂ ಪ್ರತೀತಿ. 1720ರಲ್ಲಿ ಸೋದೆಯ ರಾಜ ಇಂಗ್ಲಿಷರನ್ನು ಇಲ್ಲಿಂದ ಹೊರಹಾಕಿದ. ಕಲ್ಯಾಣದಿಂದ ವಲಸೆ ಬಂದ ಕೊಂಕಣರು ಮೊದಲು ಇಲ್ಲಿ ನೆಲೆಸಿದ್ದು ಅನಂತರ ಸದಾಶಿವಗಡಕ್ಕೆ

ಹೋದರೆಂದೂ ತಿಳಿದುಬರುತ್ತದೆ. ಕಡವಾಡದಲ್ಲಿ ಒಂದು ವೈಷ್ಣವ ಮಠವಿದೆ. ಕಡವಾಡದ ಕೊಲ್ಲಿ ಮೀನುಗಾರಿಕೆಗೆ ಅನುಕೂಲವಾಗಿದೆ. ಕಡವಾಡದ ಬಳಿಯಲ್ಲಿರುವ 'ಹೆದಾರ್ ಫಾಟ್' ಪ್ರಸಿದ್ಧವಾದದ್ದು. ಹೆದಾರ್ ಫಾಟ್ ಮಾರ್ಗ ಒಂದು ಎಂಜಿನಿಯರಿಂಗ್ ಸಾಹಸವೆನ್ನುವರು. ಹೈದರ್ ಈ ಮಾರ್ಗವಾಗಿ ಹೆಚ್ಚು ಸಂಚರಿಸುತ್ತಿದ್ದನಂತೆ.

ಐದು ನಡುಗಡ್ಡೆಗಳ ಒಂದು ದ್ವೀಪಸ್ತೋಮದ ಅಂಜನಾದ್ವೀಪ ಕಾರವಾರಕ್ಕೆ 5ಕಿಮೀ ದೂರದಲ್ಲಿದೆ. ವಾಸ್ಕೋಡಗಾಮ ಈ ದ್ವೀಪದಲ್ಲಿ ಕೆಲವು ದಿವಸಗಳ ಕಾಲ ತಂಗಿದ್ದನಂತೆ. ಸ್ಥಳೀಯರು ಇದನ್ನು 'ಅಂಜಿ ದೀವ್' ಎಂದು ಕರೆಯುತ್ತಾರೆ (ಇದು ಗೋವಕ್ಕೆ ಸೇರಿದೆ). ಕಾರವಾರ ಬಂದರಿಗೆ ಪಶ್ಚಿಮದಲ್ಲಿ 11ಕಿಮೀ ದೂರದಲ್ಲಿ ದೇವಗಡ ನಡುಗಡ್ಡೆ ಇದೆ. ಇದು ಬಂದರಿಗೆ ಬಿರುಗಾಳಿಯಿಂದ ರಕ್ಷಣೆ ಕೊಟ್ಟಿದೆ. ಈ ನಡುಗಡ್ಡೆಯಲ್ಲಿ ಒಂದು ದೀಪಸ್ತಂಭವಿದೆ. ನಡುಗಡ್ಡೆಯನ್ನು ಆಯಿಸ್ಟರ್ ರಾಕ್ಸ್ ಎಂದೂ ಕರೆಯುತ್ತಾರೆ. ಇಲ್ಲಿ ಒಂದು ಕೋಟೆ ಸಹ ಉಂಟು. ಪ್ರವಾಸಿಗರು ಅಲ್ಲಿಗೆ ಹೋಗಿ ಬರುತ್ತಾರೆ. ಸದಾಶಿವಗಡ ಕಾರವಾರಕ್ಕೆ ಉತ್ತರದಲ್ಲಿ 5ಕಿಮೀ ದೂರದಲ್ಲಿದೆ. ಇದೂ ಒಂದು ಬಂದರು. ಇಲ್ಲಿಯ ಗುಡ್ಡದ ಮೇಲೆ ಇರುವ ಕೋಟೆಯನ್ನು 17ನೆಯ ಶತಮಾನದಲ್ಲಿ ಸ್ವಾದಿಯ ಒಂದನೆಯ ಸದಾಶಿವನಾಯಕ ಕಟ್ಟಿಸಿದನೆಂದು ತಿಳಿದುಬರುತ್ತದೆ. ಕಾರವಾರದಿಂದ 3ಕಿಮೀ ದೂರದಲ್ಲಿ ಪ್ರಸಿದ್ಧ ಸಜ್ಜೇಶ್ವರ ದೇವಾಲಯವಿದೆ.

ಕಾರವಾರ ಉತ್ತರ ಕನ್ನಡ ಜಿಲ್ಲೆಯ ಮತ್ತು ಅದೇ ತಾಲ್ಲೂಕಿನ ಕೇಂದ್ರ ಪಟ್ಟಣ. ಒಂದು ನೈಸರ್ಗಿಕ ಬಂದರು. ಪಶ್ಚಿಮಕ್ಕೆ ಅರಬ್ಬೀ ಸಮುದ್ರ, ಪೂರ್ವಕ್ಕೆ ಸಹ್ಯಾದ್ರಿ ಶ್ರೇಣಿ,

ಸಮುದ್ರತೀರ

ಉತ್ತರದಲ್ಲಿ ಕಾಳಿ ನದಿಯಿದ್ದು ಪಶ್ಚಿಮ ಕರಾವಳಿಯ ಪ್ರಕೃತಿಯ ಸೆರಗಿನಲ್ಲಿರುವ ಒಂದು ಸುಂದರ ಪಟ್ಟಣವೆಂದು ಹೆಸರು ಪಡೆದಿದೆ. ಜನಸಂಖ್ಯೆ 62960.

ಇಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಡಳಿತಕ್ಕೆ ಸಂಬಂಧಿಸಿದ ಎಲ್ಲ ಸರ್ಕಾರಿ ಕಚೇರಿಗಳೂ ನ್ಯಾಯಾಲಯ, ಆಸ್ಪತ್ರೆ, ಶಾಲಾ ಕಾಲೇಜುಗಳೂ ಇವೆ. ಇಲ್ಲಿಂದ ಗೋವ, ಮಂಗಳೂರು, ಹುಬ್ಬಳ್ಳಿ, ಬೆಳಗಾಂವಿ ಮತ್ತು ಬೆಂಗಳೂರಿಗೆ ರಸ್ತೆ ಸಂಪರ್ಕವಿದೆ. ಗೋವ, ಕುಮಟ, ಮುಂಬಯಿ, ಮಂಗಳೂರು, ಕೊಚ್ಚಿ ಮುಂತಾದೆಡೆಗೆ ಕರಾವಳಿಯ ಹಡಗು ಸಂಚಾರಸೌಲಭ್ಯವೂ ಇದೆ. ಕೊಂಕಣ ರೈಲು ಕಾರವಾರದ ಮೂಲಕ ಹಾದು ಹೋಗಿದೆ. ಕವಿ ರವೀಂದ್ರನಾಥ ಠಾಕೂರರ ಮನಸೂರೆಗೊಂಡಿದ್ದ ಈ ಪಶ್ಚಿಮ ಕಡಲತೀರದ ನಗರದಲ್ಲಿ 45ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕಡೆಂಗೋಡ್ಲು ಶಂಕರಭಟ್ಟ ಅವರ ಅಧ್ಯಕ್ಷತೆಯಲ್ಲಿ 1965ರಲ್ಲಿ ನಡೆಯಿತು.

ಕಾರವಾರ ಬಂದರು ಪ್ರದೇಶ ಸುತ್ತಣ ಗುಡ್ಡಗಳಿಂದ ಆವೃತ್ತವಾಗಿದ್ದು ಮಾರುತಗಳಿಂದ ಒಳ್ಳೆಯ ರಕ್ಷಣೆ ಪಡೆದಿರುವುದಲ್ಲದೆ ಇಲ್ಲಿ ದೊಡ್ಡ ಹಡಗುಗಳು ಸುಲಭವಾಗಿ ತಂಗುವಷ್ಟು ನೀರಿನ ಆಳವೂ ಇದೆ. ಅಲ್ಲದೆ ಇಲ್ಲಿನ ಪ್ರಾಕೃತಿಕ ಸನ್ನಿವೇಶದಿಂದಾಗಿ ಹೂಳುಬಿದ್ದು ಆಳ ಕಡಿಮೆಯಾಗುವ ಸಂಭವವೂ ಕಡಿಮೆ ಎನ್ನಲಾಗಿದೆ. ಆದರೂ ಇದು ಇನ್ನೂ ಸರ್ವಋತು ಬಂದರಾಗಿ ಬೆಳೆದಿಲ್ಲ. ಈಗ ಇದು ಸಣ್ಣ ಹಡಗುಗಳಿಗೆ ರೇವು. ಒಳನಾಡಿನಿಂದ ಬರುವ ಕಬ್ಬಿಣದ ಅದುರು ಈ ಬಂದರಿನಿಂದ ರಫ್ತಾಗುತ್ತದೆ. ಇದರ ಅಭಿವೃದ್ಧಿಗೆ ಎರಡು ಹಂತಗಳ ಯೋಜನೆ ಸಿದ್ಧವಾಗಿದೆ. (ಎಚ್.ಆರ್.ಆರ್.ಬಿ.)

**ಕಾರಸೈಯಿಫಾರ್ಮೀಸ್** : ಪಕ್ಷಿವರ್ಗದ ಒಂದು ಪ್ರಮುಖವಾದ ಗಣ. ನಿಯಾರ್ನಿತಿಸ್ ಉಪವರ್ಗಕ್ಕೂ ನಿಯೊನ್ಯಾತೀ ಅತಿಗಣಕ್ಕೂ ಸೇರಿದೆ. ಈ ಗಣಕ್ಕೆ ಸೇರಿದ ಹಕ್ಕಿಗಳು ವೈವಿಧ್ಯಮಯವಾಗಿದ್ದರೂ ಅವೆಲ್ಲಕ್ಕೂ ಕೆಲವು ಸಮಾನ ಲಕ್ಷಣಗಳಿವೆ. ಕಾಲಿನಲ್ಲಿನ ಮೂರನೆಯ ಮತ್ತು ನಾಲ್ಕನೆಯ ಬೆರಳುಗಳು ಬುಡದಲ್ಲಿ ಕೂಡಿಕೊಂಡಿರುವುದು, ದೃಢವಾದ ಕೊಕ್ಕು, ಗರಿಗಳ ಜೋಡಣೆ ಮುಂತಾದುವು ಇವುಗಳ ಪ್ರಮುಖ ಲಕ್ಷಣಗಳು. ಸಾಮಾನ್ಯವಾಗಿ ಈ ಗಣದ ಹಕ್ಕಿಗಳೆಲ್ಲ ವರ್ಣರಂಜಿತವಾಗಿವೆ. ಬಹುಪಾಲು ಬಗೆಯವು ಮಾಂಸಾಹಾರಿಗಳು. ಕೆಲವು ಮಾತ್ರ ಫಲಭಕ್ಷಕಗಳು. ಎಲ್ಲ ಜಾತಿಯ ಹಕ್ಕಿಗಳೂ ಕೀಟಗಳ ಗೂಡು, ಮರದ ಪೊಟರೆ ಮತ್ತು ನದೀ ತೀರಗಳಲ್ಲಿ ತೋಡುವ ಬಿಲಗಳು ಮುಂತಾದವುಗಳಲ್ಲಿ ಮೊಟ್ಟೆಯಿಡುತ್ತವೆ.

ಉಷ್ಣ ಮತ್ತು ಸಮಶೀತೋಷ್ಣ ವಲಯಗಳಲ್ಲೆಲ್ಲ ಇವುಗಳ ವ್ಯಾಪ್ತಿಯಿದೆ. ಪೂರ್ವಾರ್ಧಗೋಳದಲ್ಲಿ ಹೇರಳ ಸಂಖ್ಯೆಯಲ್ಲಿವೆ. ಈ ಗಣದಲ್ಲಿನ ಏಳು ಕುಟುಂಬಗಳು ಮತ್ತು ಅವುಗಳಿಗೆ ಸೇರಿದ ಹಕ್ಕಿಗಳು ಹೀಗಿವೆ–1 ಆಲ್ಸಿಡಿನಿಡೀ–ಮೀಂಚುಳ್ಳಿಗಳು (ಕಿಂಗ್‌ಫಿಶರ್ಸ್), 2 ಟೋಡಿಡೀ–ಟೋಡೀಸ್, 3 ಮೊಮಾಟಿಡೀ–ಮೋಟ್ ಮೋಟ್ಸ್, 4 ಮೆರಾಪಿಡೀ–ಕಳ್ಳಿಪೀರ (ಬೀ ಈಟರ್ಸ್), 5 ಕಾರಸೈಯಿಡೀ–ಉರುಳು ಹಕ್ಕಿಗಳು (ರೋಲರ್ಸ್), 6 ಯುಪ್ಯೂಪಿಡೀ–ಹೂಪೊ ಹಕ್ಕಿಗಳು, ಬ್ಯೂಸೆರಾಂಟಿಡೀ–ಮಲೆಹಕ್ಕಿಗಳು (ಹಾರ್ನ್ಸ್ ಬಿಲ್ಸ್). (ನೋಡಿ : ಮೀಂಚುಳ್ಳಿ, ಕಳ್ಳಿಪೀರ, ಉರುಳು ಹಕ್ಕಿ, ಮಂಗಟ್ಟೆ ಹಕ್ಕಿ) (ಜಿ.ಎಂ.ಬಿ.)

**ಕಾರಹುಣ್ಣಿಮೆ** : ಜ್ಯೇಷ್ಠಮಾಸದಲ್ಲಿ ಬರುವ ಹುಣ್ಣಿಮೆಗೆ ಈ ಹೆಸರಿದೆ. ಇದನ್ನು ಕಾರಹಬ್ಬ ಎಂದೂ ಕರೆವುದಿದೆ. ಜನಪದ ಭಾಷೆಯಲ್ಲಿ ಕಾರಹುಣ್ಣಿವೆ ಆಗಿದೆ. ಹೀಗೆಯೆ ಕನ್ನಡ ನಾಡಿನಲ್ಲಿ, ವರ್ಷದ ಹನ್ನೆರಡು ಹುಣ್ಣಿಮೆಗಳಿಗೂ ಬೇರೆ ಬೇರೆ ಜನಪದ ನಾಮಗಳಿವೆ. ಆ ನಾಮಗಳನ್ನೂ ಆಯಾ ಹುಣ್ಣಿವೆಗಳ ದಿನ ಜನಸಾಮಾನ್ಯರು ನಡೆಯಿಸುವ ಸಾಂಪ್ರದಾಯಿಕ ಪೂಜೆ–ಪುನಸ್ಕಾರಗಳನ್ನೂ ನಡೆವಳಿಗಳನ್ನೂ ಒಳಹೊಕ್ಕು ಸಂಶೋಧಕ ಬುದ್ಧಿಯಿಂದ ನೋಡಿದರೆ, ಹುಣ್ಣಿಮೆಗಳ ಹೆಸರುಗಳೆಲ್ಲ, ಕನ್ನಡ ನಾಡಿನ ಕೃಷಿಕ ಕುಲಪರಂಪರೆಯಲ್ಲಿ ಮೂಡಿ ಮೇಲೆದ್ದುವು–ಎಂಬ ಅಂಶ ಕಂಡುಬಾರದಿರದು. ಯಜ್ಞಕರ್ಮಪ್ರಧಾನವಾದ ಸನಾತನ ಸಂಪ್ರದಾಯದಲ್ಲಿ, ಹುಣ್ಣಿಮೆಗಳಿಗೆ ವಿಶಿಷ್ಟಪರ್ವದಿನದ ಸ್ಥಾನವಿರುವುದಾದರೂ ಕನ್ನಡ ನಾಡಿನಲ್ಲಿ ಹುಣ್ಣಿಮೆಗಳಂದು ನಡೆಯುತ್ತ ಬಂದ ಜನಪದ ಸಂಸ್ಕೃತಿ ಪ್ರಧಾನವಾದ ಕಾರ್ಯಕಲಾಪಗಳು, ಸನಾತನ ವೈದಿಕ–ಪರಂಪರೆಯವಾಗಿ ಕಾಣಿಸುವುದಿಲ್ಲ.

ಕನ್ನಡ ನಾಡಿನ ಇತಿಹಾಸದಲ್ಲಿ ಸಾವಿರ ವರ್ಷಗಳಿಗೆ ಹಿಂದಿನಿಂದಲೂ ಕಾರಹುಣ್ಣಿಮೆಯ ಹೆಸರು ಬಳಕೆಯಲ್ಲಿ ಇದ್ದಂತೆ ಕಾಣುವುದು. 1007 ಮತ್ತು 1104ನೆಯ ವರ್ಷದ ಶಿಲಾಶಾಸನಗಳಲ್ಲಿ ಕಾರಹುಣ್ಣಿಮೆ ಎಂಬ ಮಾತು ಬಂದಿದೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಜನಪದ ಸಾಹಿತ್ಯ ಪರಂಪರೆಯಲ್ಲಿ ಈ ಹುಣ್ಣಿಮೆಯ ಹೆಸರು ಹಲವಾರು ಸಲ ಕಿವಿಗೆ ಬೀಳುತ್ತದೆ. ಕಾರಹುಣ್ಣಿಮೆ ಆದ ಮೇಲೆ ಈರುಳ್ಳಿಯನ್ನು ಕತ್ತೆ ಕೂಡ ಮೂಸುವುದಿಲ್ಲ, ಕಾರಹುಣ್ಣಿಮೀ ಕರಿ ಹರಿದ ಮ್ಯಾಲೆ ಕಂಕಣಾ ಕಟ್ಟಬಾರದು–ಎಂಬ ನಾಣ್ಣುಡಿಗಳು ಕಾರಹುಣ್ಣಿಮೆಯ ನಾಮನಿರ್ದೇಶನದೊಂದಿಗೆ, ಜನಪದ ಸ್ಮೃತಿಯ ವಿಧಿನಿಷೇಧನಿಯಮಗಳನ್ನೂ ಹೇಳುತ್ತವೆ.

ನಿಜವಾಗಿಯೂ ಕಾರಹುಣ್ಣಿಮೆ ಅದರ ಹೆಸರೇ ತಿಳಿಸುವಂತೆ ಮಳೆಗಾಲದ ಮೊದಲ ಹುಣ್ಣಿಮೆ; ದೇವಮಾತೃಕ ಭೂಮಿಯೇ ಹೆಚ್ಚಾಗಿರುವ ಕನ್ನಡನಾಡಿನ ಕೃಷಿಕರು, ಮಳೆಗಾಲದ ಮೊದಲ ಹುಣ್ಣಿಮೆಯನ್ನು ಸಂತೋಷದಿಂದ ಸ್ವಾಗತಿಸುವುದು ಸ್ವಾಭಾವಿಕವೇ ಸರಿ.

ಕಾರಹುಣ್ಣಿಮೆಯ ಆಚರಣೆ ಕನ್ನಡದ ಬಯಲು ನಾಡಿನಲ್ಲಿಯೆ ವಿಶೇಷವಾಗಿದೆ. ಗಡಿನಾಡಿನಲ್ಲಿಯೂ ಅಲ್ಲಲ್ಲಿ–ಬಯಲುನಾಡಿನ ಪ್ರಭಾವದಿಂದಾಗಿ–ಹಳ್ಳಿಗರು ಈ ಹಬ್ಬವನ್ನು ಆಚರಿಸುವುದುಂಟು. ಆದರೆ ಮಲೆನಾಡಿನ ಪ್ರದೇಶದಲ್ಲಿ ಈ ಹಬ್ಬದ ಆಚರಣೆಯ ಜನಪದ ಸಂಪ್ರದಾಯ, ಅಷ್ಟೊಂದು ಪ್ರಭಾವಶಾಲಿಯಾಗಿ ಕಂಡುಬರುವುದಿಲ್ಲ. ಉತ್ತರ ಕರ್ನಾಟಕದ ಉತ್ತರದ ಗಡಿಗೆ ಹೊಂದಿದ ಮಹಾರಾಷ್ಟ್ರದ ಬಯಲು ಪ್ರದೇಶದ ಒಕ್ಕಲಿಗರಲ್ಲಿಯೂ ಈ ಹಬ್ಬದ ಪರಂಪರೆ ರೂಢಿಯಲ್ಲಿದೆ. ಮಹಾರಾಷ್ಟ್ರದ ಉತ್ತರದ ಸೀಮಾಪ್ರದೇಶವಾದ ವಿದರ್ಭ ಪ್ರಾಂತ್ಯದಲ್ಲಿಯೂ ಪೋಳಾಂಚಾ ಸಣ್ಣ ಎಂಬ ಹೆಸರಿನಿಂದ ಈ ಹಬ್ಬದ ಸಂಪ್ರದಾಯ ನಡೆದುಕೊಂಡು ಬಂದಿದೆ. ಇಲ್ಲಿ ಪೋಳ ಎಂದರೆ ಗೂಳಿ, ಕೊಬ್ಬಿದ ಹೋರಿ; ಸಣ್ಣ ಎಂದರೆ ಹಬ್ಬ. ಸಂಸ್ಕೃತ ಭಾಷೆಯಲ್ಲಿ ಈ ಹುಣ್ಣಿವೆಗೆ ಅನಡ್‌ವಾಹ ಪೌರ್ಣಿಮಾ ಎಂದು ಹೆಸರಿದೆ. ಅನಡ್‌ವಾಹ–ಎಂದರೆ ಎತ್ತು. ಸಾಂಸ್ಕೃತಿಕ ಪರಂಪರೆಯಲ್ಲಿಯೂ ಇದಕ್ಕೆ ಎತ್ತಿನ ಹುಣ್ಣವೆ ಎಂದು ಹೆಸರಿರುವುದೂ ಕಾರಹುಣ್ಣಿವೆಯ ಹಬ್ಬಕ್ಕಿರುವ ಕೃಷಿಕ ಕುಲಸಂಬಂಧವನ್ನೇ ಗಟ್ಟಿಗೊಳಿಸುತ್ತದೆ. ಎತ್ತು ಕೃಷಿಕನ ಪ್ರಧಾನ ಸಹಕಾರಿ. ಕೃಷಿಕರಲ್ಲದ ನಾಗರಿಕರೂ ಇಂದು ಹಬ್ಬದ ಸಂಪ್ರದಾಯದಂತೆ ಮಣ್ಣಿನ ಜೋಡೆತ್ತುಗಳನ್ನು ಮಾಡಿ ಪೂಜಿಸಿ, ಅದಕ್ಕೆ ಕೋಡಬಳೆ, ಕರಿಗಡಬಿನ ನೈವೇದ್ಯವೀಯುತ್ತಾರೆ.

ಪೌರಾಣಿಕ ಸಂಪ್ರದಾಯದವರು ಈ ಹುಣ್ಣಿಮೆಯನ್ನು ವಟಸಾವಿತ್ರಿ ಪೌರ್ಣಿಮೆ ಎಂದು ಹೇಳುವರು. ಕರ್ನಾಟಕ, ಮಹಾರಾಷ್ಟ್ರ ಪ್ರದೇಶಗಳಲ್ಲಿರುವ, ಪುರಾಣಸಂಪ್ರದಾಯದ ಸುಮಂಗಲೆಯರು, ಅಂದು ವಟಸಾವಿತ್ರೀ ವ್ರತಪೂಜೆಗಳನ್ನು ಆಚರಿಸುವರು. ಮುತ್ತೈದೆಯರೆಲ್ಲರೂ ಆ ದಿನ, ಸಾವಿತ್ರೀದೇವಿಯ ಸಾನ್ನಿಧ್ಯವೃಕ್ಷವೆಂದು, ಆಲದ ಮರವನ್ನು ಪೂಜಿಸುವರು; ಕೆಲವರು ಮನೆಯಲ್ಲಿಯೆ ಸಾವಿತ್ರೀದೇವಿಯ ಪಠವನ್ನಿರಿಸಿ ಪೂಜಿಸುವರು. ಸಾವಿತ್ರಿಯ ಕಥೆಯನ್ನು ಕೇಳುವರು. ಈ ಸಂಪ್ರದಾಯ ಕೇವಲ ನಾಗರಿಕ ಜಗತ್ತಿಗೆ ಸೇರಿದುದು.

ಜ್ಯೇಷ್ಠ ಪೌರ್ಣಿಮೆಯಂದು ಎತ್ತುಗಳ ಪೂಜೆಯಾದ ಮೇಲೆ, ಮುಂದೆ ಆಷಾಢ ಮಾಸದ ಪ್ರತಿ ಮಂಗಳವಾರದಂದು, ಹಳ್ಳಿಗರ ಮನೆಗಳಲ್ಲಿಯೂ ಸಾರ್ವಜನಿಕವಾಗಿಯೂ ನಡೆಯುವ ಗುಳ್ಳವ್ವ ಎಂಬ ಹೆಸರಿನ ಮಣ್ಣಿನ ಪೂಜೆ ಅವರ ನೆಲದಮ್ಮನ ಪೂಜೆಯ ಸಂಕೇತವೆನಿಸುವಂತಿದೆ. ಕಾರಹುಣ್ಣಿಮೆ ಆಚರಣೆಯಲ್ಲಿರುವ ಬಯಲು ನಾಡಿನಲ್ಲೆಲ್ಲ ಗುಳ್ಳವ್ವನ ಪೂಜೆ ಇದ್ದೇ ಇರುವುದು. ಗುಳ್ಳವ್ವ ಎಂಬ ದೇವತೆ ಕೇವಲ ಕನ್ನಡ ಜಾನಪದ ಸೃಷ್ಟಿ. ಈ ದೇವತೆ ಉತ್ತರದ ಸೀಮಾಪ್ರದೇಶದಲ್ಲಿರುವ ಮರಾಠಿಗರಲ್ಲಿಯೂ ಸೇರಿಕೊಂಡಿದ್ದಾಳೆ.

ಕಾರಹುಣ್ಣಿಮೆಗೆ ಸಂಬಂಧಿಸಿದ ಕಾರ್ಯಕಲಾಪಗಳು ಎರಡು ದಿನ ನಡೆಯುವುವು. ಜ್ಯೇಷ್ಠ ಶುದ್ಧ ಚತುರ್ದಶಿ ಕಾರಹಬ್ಬದ ಪೂರ್ವಾಂಗ ದಿನವಾಗಿರುವುದು. ಉತ್ತರಾಂಗ ದಿನ ಹುಣ್ಣಿಮೆ. ಈ ಚತುರ್ದಶಿಗೆ ಹೊನ್ನುಗ್ಗೆ (ಹೊನ್ನುಗ್ಗಿ) ಎಂದು ಹೆಸರು. ಕೆಲವೆಡೆಗಳಲ್ಲಿ ಹೊನ್ನುಕ್ಕೆ ಎಂಬ ಹೆಸರೂ ಇದೆಯಂತೆ. ಹೊನ್ನುಗ್ಗೆಯ ದಿನ ಹಳ್ಳಿಗರೆಲ್ಲರೂ ತಮ್ಮ ತಮ್ಮ ಮನೆಯ ಎತ್ತು, ಹೋರಿಗಳನ್ನು ಮೈ ತೊಳೆದು ಮೇಯಿಸುವರು. ಕೊಂಬುಗಳಿಗೆ ಚೆಂಬಣ್ಣವನ್ನು ತೊಡೆಯುವರು. ಮೈಮೇಲೆ ಅಂದ ಕಾಣುವಂತೆ ಕುಂಟೆಯ ಬಳೆಗಳಿಂದ, ಬೇರೆ ಬೇರೆ ಬಣ್ಣಗಳ ಮುದ್ರೆಗಳನ್ನು ಒತ್ತುವರು. ತುದಿಗೊಂಬುಗಳಿಗೆ ಮಿರುಗುವ ಕೊಂಬಣಸುಗಳನ್ನು ತೊಡಿಸುವರು. ಕೊರಳೊಳಗೆ ಹುರಿಗೆಜ್ಜೆ, ಕಿರುಗಂಟೆಗಳ ಸರಗಳನ್ನು ಹಾಕುವರು. ಹಣೆಗೆ ಕನ್ನಡಿ ಇರುವ ಹಣೆಪಟ್ಟುಗಳನ್ನು ಕಟ್ಟುವರು. ಗುಡಿಸಿ ಹಸನುಗೊಳಿಸಿದ ಕೊಟ್ಟಿಗೆಯಲ್ಲಿ ಸ್ಥಾನೌಚಿತ್ಯವನ್ನು ಅರಿತು ಅವನ್ನು ಕಟ್ಟುವರು.

ಅಂದಿನ ಮುನ್ನಿರುಳಲ್ಲಿ, ಎಲ್ಲ ಎತ್ತು, ಹೋರಿಗಳನ್ನು ಪೂಜಿಸಲಾಗುವುದು. ಆಗ ಗುಗ್ಗುಳ ಧೂಪದ ಕಂಪು ಕೊಟ್ಟಿಗೆಯಲ್ಲೆಲ್ಲ ತುಂಬಿರುವುದು. ಮನೆಯ ಮುತ್ತೈದೆಯರು ಎತ್ತು, ಹೋರಿಗಳಿಗೆಲ್ಲ ಕಲಶದಾರತಿಯನ್ನು ಎತ್ತುವರು. ನೈವೇದ್ಯಕ್ಕೆಂದು ಜೋಳವನ್ನು ಕುಟ್ಟಿ, ಜೋಳದಕ್ಕಿಯಿಂದ ತಯಾರಿಸಿದ ಹುಗ್ಗಿಯನ್ನೂ (ಕಿಚಡಿ) ಅಂಬಲಿಯನ್ನೂ ಎತ್ತುಗಳಿಗೆಲ್ಲ ತಿನ್ನಿಸುವರು. ಆಮೇಲೆ ಮನೆಯವರೆಲ್ಲರೂ ಈ ಹುಗ್ಗಿ ಅಂಬಲಿಗಳನ್ನೇ ಪ್ರಸಾದವೆಂದು ಊಟ ಮಾಡುವರು. ಇಂದಿನ ಈ ಹುಗ್ಗಿಯೇ ಹೊನ್ನುಗ್ಗಿ ಎಂದು ಹೆಸರು ಪಡೆದಿದೆ.

ಮರುದಿನವೇ ಕಾರಹುಣ್ಣಿಮೆ. ದನಗಳೆಲ್ಲ ಅಂದೂ ಪೂಜೆಗೊಳ್ಳುವುವು. ಮಧ್ಯಾಹ್ನ ಹೋಳಿಗೆ ಪಾಯಸಗಳ ಬಿರ್ದುಣಿಸು. ಕೆಲವೊಂದು ಹಳ್ಳಿಗಳಲ್ಲಿ ಹುರುಪಿನ ಜನ. ಊರಲ್ಲಿಯ ಎಲ್ಲ ಎತ್ತುಗಳನ್ನೂ ಸೇರಿಸಿ, ವಾದ್ಯವೈಭವದೊಂದಿಗೆ ಬೀದಿಯಲ್ಲಿ ಮೆರೆಸುವರು. ಕನ್ನಡನಾಡಿನ ಕೆಲವೊಂದು ಭಾಗದಲ್ಲಿ ಬಿತ್ತುವ ಬೀಜಗಳನ್ನು ಪೂಜಿಸುವ ಸಂಪ್ರದಾಯ ಕಾರಹುಣ್ಣಿಮೆಯಂದೇ ನಡೆಯುತ್ತದೆ.

ಹುಣ್ಣಿಮೆಯ ಸಂಜೆ ಕರಿ ಹರಿಯುವ ಸಂಪ್ರದಾಯ. ಈ ಕಾರ್ಯಕ್ರಮ ಮಾತ್ರ ನಾಡಿನ ಎಲ್ಲ ಭಾಗಗಳಲ್ಲಿಯೂ ಸಾರ್ವಜನಿಕವಾಗಿ ನಡೆಯುತ್ತದೆ. ಈ ಕಾರ್ಯಕ್ರಮದ ವಿವರಗಳಲ್ಲಿ ಪ್ರಾದೇಶಿಕ ಭೇದಗಳು ಕಂಡುಬರುವುವಾದರೂ ಕರಿ ಹರಿಯುವುದು ಎಂಬ ಕ್ರಿಯಾನಾಮ ಮಾತ್ರ, ಸರ್ವತ್ರ ಸಾಮಾನ್ಯವಾಗಿರುವುದು. ಈ ಕಾರ್ಯಕ್ರಮದ ಪರಿಣಾಮ ಮುಂಬರುವ ಬೆಳೆಯ ಭವಿಷ್ಯವನ್ನು ಸೂಚಿಸುವುದೆಂಬ ನಂಬುಗೆ ನಾಡಿನ ಜನರೆಲ್ಲರಲ್ಲಿಯೂ ಇದೆ.

ಈ ಆಚರಣೆಯಲ್ಲಿ ಕರಿ ಹರಿಯುವುದು ಮುಖ್ಯವಾದುದು. ಫಾಲ್ಗುಣ ಬಹುಳ ಪ್ರತಿಪದೆಯಂದು–ಎಂದರೆ ಹೋಳಿಯ ಹಬ್ಬದ ಮರುದಿನ ಬೆಳಗಿನಲ್ಲಿ, ಹೋಳಿಯನ್ನು ಸುಟ್ಟಾದ ಮೇಲೆ, ಆ ಹೋಳಿಯ ಬೂದಿಯನ್ನು (ಕರಿ) ತಮ್ಮಟೆಗಳ ಮೊಳಗಿನೊಂದಿಗೆ, ಹಬ್ಬದ ವಿಶಿಷ್ಟ ಹಕ್ಕುದಾರರು ತೆಗೆದುಕೊಂಡೊಯ್ದು, ಗ್ರಾಮದ ಸುತ್ತಲೂ ಚೆಲ್ಲಿ ರಕ್ಷೆಯನ್ನು ಕಟ್ಟುವರು. ಈ ರಕ್ಷಾಬಂಧನ ಕ್ರಿಯೆಯೇ ಕರಿ ಕಟ್ಟುವುದು ಎಂಬ ಜನಪದ ಭಾಷಾರೂಪವನ್ನು ಹೊಂದಿದೆ. ಈ ನಡೆವಳಿಯ ಹಿಂದೆ ಹಳ್ಳಿಗರದೊಂದು ಮುಗ್ಧಶ್ರದ್ಧೆ ಅಡಗಿ ಕುಳಿತಿದೆ. ಹೋಳಿಯ ಹುಣ್ಣಿಮೆಗೆಂದರೆ ಆ ವರ್ಷದ ಸುಗ್ಗಿಯ ಸಂಪತ್ತೆಲ್ಲವೂ ಊರಮನೆಗಳನ್ನು ತುಂಬಿರುತ್ತದೆ. ಈ ಸಂಪತ್ತಿಗೆ ಯಾವುದೇ ಬಗೆಯ ಭೀತಿ, ಉಪದ್ರವಗಳು ಉಂಟಾಗಬಾರದೆಂಬ ಅವರ ಭಾವನೆ, ಈ ಕರಿ ಕಟ್ಟುವ ಸಂಪ್ರದಾಯವನ್ನು ಇದುವರೆಗೆ ಉಳಿಸಿಕೊಂಡು ಬಂದಿದೆ. ಧಾನ್ಯ ತುಂಬಿದ ಹಗೇವು, ಸೊಪ್ಪು ಒಟ್ಟಿದ ಬಣವೆ–ಇವುಗಳಿಗೆ, ಕಾರಹುಣ್ಣಿಮೆಯಾಗುವವರೆಗೂ ಕೈಹಚ್ಚಬಾರದೆಂದಿರುವ ಹಳ್ಳಿಗರ ನಂಬುಗೆ, ಈ ಸಂಪ್ರದಾಯವನ್ನು ಪುರಸ್ಕರಿಸುವಂಥದಾಗಿದೆ. ಹೋಳಿಯ ಹಬ್ಬದಲ್ಲಿ ಕಟ್ಟಿದ ಕರಿಯನ್ನು (ರಕ್ಷೆ) ಕಾರಹುಣ್ಣಿಮೆಯ ಸಂಜೆ ಹರಿಯುವ ಸಾಂಕೇತಿಕ ಕಾರ್ಯವೊಂದು, ಸಾರ್ವಜನಿಕವಾಗಿ ಜರುಗುವುದು. ಇದೇ ಕರಿ ಹರಿಯುವ (ರಕ್ಷಾವಿಮೋಚನ) ಕಾರ್ಯ.

ಕರಿ ಹರಿಯುವ ಸಂಪ್ರದಾಯದ ಸಾಂಕೇತಿಕ ಉಪಕರಣಗಳಲ್ಲಿ ಪ್ರಾದೇಶಿಕ ಭೇದಗಳು ಕಂಡುಬರುವುವಾದರೂ ಬೇರೆ ಬೇರೆ ಬಣ್ಣದ ಎತ್ತುಗಳು ಮಾತ್ರ ಸರ್ವತ್ರ ಸಾಮಾನ್ಯವಾಗಿರುವುವು. ಆದರೆ ಬಯಲುಸೀಮೆಯ ಬಹುಭಾಗದಲ್ಲಿ ಈ ಕಾರ್ಯಕ್ರಮಕ್ಕೆ ಕರಿದು ಬಿಳಿದು ಅಥವಾ ಕೆಂದು ಬಿಳಿದು–ಹೀಗೆ ಎರಡೇ ಎತ್ತುಗಳು ಬೇಕಾಗುವುವು. ಬೇರೆ ಕೆಲವೆಡೆ ಐದು ಎತ್ತುಗಳು ಬೇಕೆಂಬ ನಿಯಮವಿರುವುದು. ಇನ್ನು ಕೆಲವೆಡೆ ಊರಲ್ಲಿಯ ಎಲ್ಲ ಎತ್ತುಗಳನ್ನು ತರಲಾಗುವುದು.

ಈ ಕಾರ್ಯಕ್ರಮದಲ್ಲಿ, ಇಂಥಿಂಥ ಕಾರ್ಯಗಳನ್ನೂ ಈಯೀ ಮನೆತನದವರೇ ವಹಿಸಿಕೊಳ್ಳಬೇಕೆಂಬ ನಿಯಮ, ವಂಶಾನುಗತವಾಗಿ ನಡೆದುಕೊಂಡು ಬಂದಿದೆ. ವಿಶಿಷ್ಟ ಕಾರಣಗಳಿಲ್ಲದೆ ಈ ನಿಯಮದ ಉಲ್ಲಂಘನೆಯಾಗುವಂತಿಲ್ಲ. ಊರ ಗೌಡ (ಪಟೇಲ), ಹತ್ತು ಸಮಸ್ತರು (ಪಂಚರು), ಹಕ್ಕುದಾರರು–ಇವರೇ ಈ ನಡೆವಳಿಕೆಯಲ್ಲಿ ಗೊತ್ತಾದ ವ್ಯವಸ್ಥಾಪಕರು.

ಕರಿ ಹರಿಯುವ ಪ್ರಮುಖ ಸಾಂಕೇತಿಕ ಸಾಧನವೆಂದರೆ, ಬೇವು, ಮಾವುಗಳ ತೊಂಗಲುಗಳಿಂದ ಮಾಡಿದ ತೋರಣವನ್ನು (ಸರಮಾಲೆ) ಎತ್ತುಗಳಿಂದ ಹರಿಸುವುದು. ಮಧ್ಯೇ ಮಧ್ಯೇ ಅದರಲ್ಲಿ ತೆಂಗಿನಕಾಯಿ ಕೊಬ್ಬರಿಬಟ್ಟಲುಗಳನ್ನೂ ಕಟ್ಟಿರುತ್ತಾರೆ. ಊರ ಅಗಸೆಯ ಮುಂಗಡೆ ಎಡ–ಬಲ ಬದಿಗಳಲ್ಲಿ ನಿಂತುಕೊಂಡಿರುವ ಕರೀ ಕಲ್ಲುಗಂಬಗಳಿಗೆ, ಎತ್ತುಗಳ ನಿಲುವಿನಳತೆಗೆ ಸರಿಯಾಗುವಂತೆ, ಕರಿಯ ಸರಮಾಲೆಯನ್ನು ಕಟ್ಟಲಾಗುವುದು. ಹಬ್ಬದ ಉಡಿಗೆತೊಡಿಗೆಗಳಿಂದ ಸಿಂಗರಗೊಂಡ ಜನಜಂಗುಳಿ ಕುತೂಹಲಭಾವವನ್ನು ಹೊತ್ತು ಅಲ್ಲಿ ನೆರದಿರುವುದು. ಆಗ, ಗೊತ್ತುಮಾಡಿದ ಮನೆಯ ಎತ್ತುಗಳನ್ನು, ವಾದ್ಯವೃಂದದ ಗುಲ್ಲುಗಲಾಟೆಯೊಂದಿಗೆ ಮೆರವಣಿಗೆ ಮಾಡುತ ಅಗಸೆಯ ಒಳಬಾಗಿಲಿಗೆ ತಂದು ನಿಲ್ಲಿಸುವರು. ಗರತಿಯರು ಎತ್ತುಗಳಿಗೆ ಆರತಿಯನ್ನೆತ್ತಿ ನಿವಾಳಿ ತೆಗೆಯುವರು.

ಬಳಿಕ ಸಿದ್ಧವಾಗಿ ನಿಂತ ಎತ್ತುಗಳನ್ನು ಹೊಡೆದು ಹೆದರಿಸಿ ರಭಸದಿಂದ ಓಡಿಸಲಾಗುವುದು, ಕರಿಯ ತೋರಣದ ತಡೆಯನ್ನು ಹರಿದು ಎತ್ತುಗಳು ಮುನ್ನುಗ್ಗಿ ಓಡುವುವು. ಈ ಓಟದ ಮೇಲಾಟದಲ್ಲಿ ಕರಿದು ಅಥವಾ ಕೆಂದು ಎತ್ತು ಮುಂದಾದರೆ ಆ ವರ್ಷ ಮುಂಗಾರು ಧಾನ್ಯಗಳು ಹೆಚ್ಚಾಗಿ ಬೆಳೆಯುವುವೆಂದೂ ಬಿಳಿಯ ಎತ್ತು ಮುಂದಾದರೆ ಹಿಂಗಾರು ಧಾನ್ಯಗಳ ಸಮೃದ್ಧಿಯೆಂದೂ ನಂಬುವ ಭಾವನಾತ್ಮಕ ಪರಂಪರೆ ಹಳ್ಳಿಗರಲ್ಲಿದೆ. ಇದೆಲ್ಲ ಕಾರ್ಯಕ್ರಮ ಮುಗಿದ ಮೇಲೆ ಅದರಲ್ಲಿ ಭಾಗವಹಿಸಿದ ಎತ್ತುಗಳನ್ನು, ಊರಲ್ಲಿ ಮೆರೆಸುತ್ತ ಅವರವರ ಮನೆಗೆ ತಲಪಿಸಲಾಗುವುದು. ಇಲ್ಲಿಗೆ ಹಬ್ಬದ ಆಚರಣೆ ಪೂರ್ತಿಗೊಂಡಂತಾಗುವುದು. ಕರಿಹರಿದ ಮೇಲೆಯೇ ಬಿತ್ತುವ ಬೀಜಗಳು ಹೊಲಗಳಿಗೆ ಹೋಗಬೇಕು. ಅಲ್ಲಿಯವರೆಗೂ ಬಿತ್ತನೆಯ ಕೆಲಸ ನಡೆಯಕೂಡದೆಂದು ಸಾಂಪ್ರದಾಯಿಕ ನಿಬಂಧವೂ ಇದೆ. **(ನೋಡಿ– ಕರ್ನಾಟಕದ ಹಬ್ಬಗಳು)** (ಬಿ.ಕೆ.ಆರ್.)

**ಕಾರಳ್ಳು :** ಚರ್ಮ, ಅದರ ಬಳಿಯ ಲೋಳೆಪೊರೆಗಳಲ್ಲಿ (ಮ್ಯುಕೋಸ) ಏಳುವ ಕೆಡುಕು ಮಾಡದ ಬೆಳೆತಗಳಿಗೆ ಇರುವ ಹೆಸರು (ವಾರ್ಟ್). ಪುಲ್ಲಂಪುರಿ, ಹುಲ್ಲುರಿ, ಹಾಲುಣ್ಣಿ, ಆಲಬು, ಮತ್ತಿ (ಮಚ್ಚೆ) ಎನ್ನುವುದೂ ಉಂಟು. ಆಣಿ, ಕಲ್ಲೊತ್ತು ಹುಟ್ಟುಮಚ್ಚೆಗಳು ಕಾರಳ್ಳುಗಳಲ್ಲ. ಕಾರಳ್ಳಿನ ಮೇಲ್ತಳ ಸೊಟ್ಟಾಪಟ್ಟವಾಗಿ, ಒರಟಾಗಿ ಗಡಸಾಗಿರುತ್ತದೆ. ಎಳೆಮಕ್ಕಳಲ್ಲಿ ಸಾಮಾನ್ಯವಾಗಿ ಬೆರಳು, ಬೆರಳುಸಂದುಗಳು, ಹಿಂಗೈ, ಅಂಗೈ, ಗೆಣ್ಣುಗಳು ಅಂಗಾಲುಗಳಲ್ಲಿ ಬೇಳೆಕಾಳಿನ ಗಾತ್ರಕ್ಕೆ ಎದ್ದಿರುವುದುಂಟು. ಕೆನ್ನೆ, ನೆತ್ತಿಯ ಅಂಚಿನಲ್ಲಿ ಏಳುವವು ತೀರ ಸಣ್ಣವು. ಅಂಗಾಲಲ್ಲಿ ಎದ್ದವು ನೋವು ಕೊಡಬಹುದು. ಚರ್ಮದ ಆಳದಿಂದ ಇವು ಏಳದ್ದರಿಂದ ಎಲ್ಲ ಕಡೆಗೂ ಆಡುವಂತಿರುತ್ತವೆ. ಕೋಳಿ, ನಾಯಿಗಳಲ್ಲಿ ಕಾರಳ್ಳು ತೀರ ಸಾಮಾನ್ಯವಾದ್ದರಿಂದ ಮಾನವನಿಗೆ ಇವುಗಳಿಂದ ಸೋಂಕಾಗಿ ಬರಬಹುದೆಂದು ಕೆಲವರ ಊಹೆ. ಚರ್ಮದೊಳಕ್ಕೆ ತೂರಿ ನೆಲೆಸಿ 5–6 ತಿಂಗಳ ಕಾಲ ಸುಮ್ಮನಿದ್ದು ಆಮೇಲೆ ಕಾರಳ್ಳಾಗಿ ಹೊರಗಾಣಿಸಿಕೊಳ್ಳುವ, ಸೋಸಬಹುದಾದ ಒಂದು ವಿಷ ಕಣ (ವೈರಸ್) ಇದರ ಮೂಲ ಕಾರಣ. ಇದ್ದಲ್ಲಿರದೆ ಈ ಸೋಂಕು ಹರಡಿಕೊಳ್ಳುವುದರಿಂದ ಎಷ್ಟೋ ಬಾರಿ ಕೆಲವೇ ತಿಂಗಳಲ್ಲಿ ಸುತ್ತಮುತ್ತ ಹತ್ತಾರು ಏಳುತ್ತವೆ. ಸಾಮಾನ್ಯ ಕಾರಳ್ಳು ಅಂಟುರೋಗವಾಗಿ ಬೇರೆಯವರಿಗೂ ಅಂಟುತ್ತದೆ. ಗರಡಿಮನೆ ನೆಲದಿಂದ ಒಬ್ಬರಿಂದೊಬ್ಬರಿಗೆ ಹರಡಬಹುದು. ಇವಕ್ಕೂ ನರಮಂಡಲ, ಮಿದುಳಿಗೂ ತೀರ ನಿಕಟಸಂಬಂಧ ಇರುವಂತೆ ತೋರುತ್ತದೆ. ಕೇವಲ ಸೂಚನೆಯ ಮನೋರೋಗಚಿಕಿತ್ಸೆಯಿಂದ ಇವು ಇಲ್ಲವಾಗುವುದಂತೂ ಸೋಜಿಗವೇ. ಇದರಿಂದಲೇ ಮನೋರೋಗ ಮದ್ದುಗಳಿಂದಲೂ ಮಾಯ ಮಂತ್ರಗಳಿಂದಲೂ ಮಾಯವಾಗುತ್ತವೆ. ಎಷ್ಟೋ ವೇಳೆ ಒಂದೆರಡು ವರ್ಷಗಳಲ್ಲಿ ಅವಪ್ಪಕ್ಕವೇ ಮಾಯವಾಗುವುದುಂಟು. ಮಕ್ಕಳಲ್ಲಿ ಏಳುವವು ಸಣ್ಣವು. ಅವು ಅಗಲವಾಗಿ, ಕೊಂಚ ನುಣುಪಾಗಿ ಇನ್ನೂ ಬೇಗನೆ ಹರಡಿಕೊಳ್ಳುವುವು. ಕೈಕಾಲುಗಳು, ಮೊಗದ ಮೇಲಂತೂ ಮಕ್ಕಳಲ್ಲಿ ನೂರಾರು ಸಣ್ಣವು ಎಲ್ಲೆಲ್ಲೂ ಹರಡಿಕೊಂಡು ಅಂದಗೆಡಿಸುತ್ತವೆ. ಇವು ಸಹ ವೈರಸ್‌ಗಳಿಂದೇಳುವ ಅಂಟುರೋಗಗಳೇ.

ಗಂಡಸರಲ್ಲೂ ಹೆಂಗಸರಲ್ಲೂ ತೇವವಾಡುತ್ತಿರುವ ಜನನಾಂಗಗಳು ಮತ್ತು ಗುದಗಳ ಅಂಚಿನಲ್ಲಿ ಅಗಲವಾಗಿ ಹರಡಿಕೊಳ್ಳುವವು ಮೇಹದ ಕಾರಳ್ಳುಗಳು ಚೂಪಾಗಿದ್ದವು ಅಕ್ಕಪಕ್ಕಗಳಲ್ಲಿ ದಟ್ಟವಾಗಿರುವುದರಿಂದ ನೋಡಲು ಹೂಕೋಸಿನ ಹಾಗೆ ಕಾಣುತ್ತವೆ. ಇವು ಅಂಟುವುದರಿಂದ ಬರುವುವಾದರೂ ಮೇಹದಿಂದಲೇ ಏಳಬೇಕಿಲ್ಲ. ಸಾಮಾನ್ಯ

ಕಾರಳ್ಳುಗಳ ಹಾಗೆ ಇವೂ ವೈರಸ್‌ಗಳಿಂದಲೇ ಏಳುತ್ತವೆ. ಇವುಗಳಿಂದ ಸುಲಭವಾಗಿ ರಕ್ತ ಸುರಿವುದಲ್ಲದೆ ಕೆಟ್ಟ ನಾತ ಬಡಿಯುತ್ತದೆ.

ಮೈಜಿಡ್ಡಿನ (ಸಬೇಸಿಯಸ್) ಕಾರಳ್ಳು ಎದೆ, ಹೊಟ್ಟೆ, ಬೆನ್ನುಗಳ ಮೇಲೇಳುವುವು. ಸಾಮಾನ್ಯವಾಗಿ ಯಾರೂ ಇವನ್ನು ಗಮನಿಸರು. ಅಗಲನೆಯ ದದ್ದುಗಳಂತಿದ್ದು ಮೇಲುಗಡೆ ಜಿಡ್ಡು ಅಂಟಿರುತ್ತದೆ. ಇವು ಬೆಳೆದ ಹಾಗೆಲ್ಲ ಅಚ್ಚ ಕಂದು, ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಇವುಗಳ ಕಾರಣ ಗೊತ್ತಿಲ್ಲ. ಕೆಲವೇಳೆ ಇವನ್ನು ಕೆರೆದಾಗಲೋ ಇವು ಕೆರಳಿದಾಗಲೋ ಏಡಿಗಂತಿ (ಕ್ಯಾನ್ಸರ್) ಆಗುವ ಸೂಚನೆ ತೋರುವುದರಿಂದ ಇವನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಯಾವ ಕಾರಳ್ಳೇ ಆಗಲಿ ಏಡಿಗಂತಿಯಾಗಿ ಬದಲಿಸುವುದು ಖಚಿತವಿಲ್ಲವಾದರೂ ಏಡಿಗಂತಿ ಮುಂಚಿನ ಬದಲಾವಣೆಗಳು ಇವು ಅಲ್ಲವೆಂದು ಗುರುತಿಸಲು ಪರಿಣತ ಪರೀಕ್ಷೆಗಳನ್ನೇ ಮಾಡಬೇಕಾಗಿಬರುತ್ತದೆ. ಕಲ್ಲೊತ್ತುಗಳನ್ನು ಕರಗಿಸಿ ತೆಗೆವ ಮದ್ದುಗಳು ಕಾರಳ್ಳುಗಳಿಗೂ ಆಗುತ್ತವೆ. ವಯಸ್ಸಾದವರ ಮೂಗು, ಕೆನ್ನೆ, ರೆಪ್ಪೆ, ಹಿಂಗೈಗಳ ಮೇಲೆ ಎದ್ದಿದ್ದವಕ್ಕೆ ಅವುಗಳ ಬಗೆ, ಇರುವ ಜಾಗ, ಗಾತ್ರಗಳಿಗೆ ತಕ್ಕ ಹಾಗೆ ಕಾರಳ್ಳುಗಳ ಚಿಕಿತ್ಸೆಯೂ ಆಗಬೇಕು. ಅದೂ ಇದೂ ಏನೇನೊ ಹಚ್ಚಿ ಕಿತ್ತಿ ಸುಮ್ಮನೆ ಸುಡುವುದು ಒಳ್ಳೆಯದಲ್ಲ. ಹಾಗೆ ಮಾಡಿದ ಮೇಲೆ ಗಾಯಕಲೆ ವಿಕಾರವಾಗಿ ಉಳಿಯುತ್ತದೆ. ಕೊಯ್ದು ತೆಗೆದಾಗ ಮತ್ತೆ ಬೆಳೆದರೆ, ವೈದ್ಯರ ಗಮನಕ್ಕೆ ಮೊದಲು ತರಬೇಕು. ಏಕೆಂದರೆ ಅದು ಏಡಿಗಂತಿಯಾಗುವ ಮುನ್ಸೂಚನೆ ಆಗಿರಬಹುದು. ಎಳೆಯದರಲ್ಲೇ ಇದನ್ನು ಗುರುತಿಸಿದರೆ ಸುಲಭವಾಗಿ ಹೋಗಲಾಡಿಸಬಹುದು. ತಡ ಮಾಡಿದರೆ ಆಳಕ್ಕೆ ಒಳಾಂಗಗಳಲ್ಲಿಳಿದು ಮಾರಕವಾಗಬಹುದು. ಯುರೋಪಿಗಿಂತ ಉಷ್ಣದೇಶಗಳಲ್ಲಿ ಹೀಗಾಗುವುದು ಹೆಚ್ಚು. ಬಹಳ ದಿವಸಗಳು ಸೋಮಲ (ಆರ್ಸಿನಿಕ್) ಮದ್ದುಗಳ ಸೇವನೆ, ಎಕ್ಸ್‌ಕಿರಣಗಳಿಗೆ ಒಡ್ಡುವುದರಿಂದ ಕಾರಳ್ಳುಗಳೆದ್ದು ಮುಂದೆ ಏಡಿಗಂತಿ ಆಗಬಹುದು. ಕೀಲೆಣ್ಣೆ (ಟಾರ್), ಒಲ್ಲಡೆಣ್ಣೆಗಳ (ಪ್ಯಾರಾಫಿನ್ಸ್) ಕಾರ್ಖಾನೆ ಕೆಲಸಗಾರರಲ್ಲೂ ಉಡುಗೆಯಿಂದ ಮುಚ್ಚಿರದ ಮೈಮೇಲೂ ಹೀಗೇ ಆಗುವುದುಂಟು. (ಡಿ.ಎಸ್.ಎಸ್.)

**ಕಾರಾಗೃಹ** : ಅಪರಾಧಿಗಳನ್ನು ಅಥವಾ ಕಾನೂನುಬದ್ಧ ಪ್ರಾಧಿಕಾರ ಒಪ್ಪಿಸಿಕೊಟ್ಟವರನ್ನು ಭದ್ರಸುಪರ್ದಿನಲ್ಲಿ ಅಥವಾ ಬಂಧನದಲ್ಲಿ ಇಡಲು ಬಳಸಲಾಗುವ ಕಟ್ಟಡ ಅಥವಾ ಸ್ಥಳ (ಪ್ರಿಸನ್). ಕಾರಾಗೃಹ, ಜೈಲು, ಬಂದೀಖಾನೆ ಮತ್ತು ಸೆರೆಮನೆ ಇವು ಸಮಾನ ಪದಗಳು. ಭಾರತದ ಕಾರಾಗೃಹಗಳಿಗೆ ಸಂಬಂಧಿಸಿದ ಕಾಯಿದೆಗಳಲ್ಲಿ ಕಾರಾಗೃಹ ಶಬ್ದದ ವ್ಯಾಖ್ಯೆಯನ್ನು ಹೇಳಲಾಗಿದೆ. ಈಗ ಶಾಸನ ವಿರೋಧವೆನಿಸುವ ಸಮಾಜಘಾತಕವೆನಿಸುವ ಕ್ರಿಯೆಗಳಿಗೆ ವಿಧಿಸಲಾಗುವ ಕಾರಾಗೃಹ ಶಿಕ್ಷೆ ಹಿಂದೆ ಶಿಕ್ಷೆಯೆನಿಸುತ್ತಿರಲಿಲ್ಲ. ಕಾರಾಗೃಹಗಳನ್ನು ಕೇವಲ ವಿಚಾರಣೆಯ ಮೊದಲು ಮತ್ತು ಶಿಕ್ಷೆಯನ್ನು ವಿಧಿಸುವವರೆಗೆ ಆಪಾದಿತನನ್ನು ಕಾವಲಿನಲ್ಲಿಡಲು ಉಪಯೋಗಿಸಲಾಗುತ್ತಿತ್ತು. ಎಲ್ಲ ದೇಶಗಳಲ್ಲೂ ಪ್ರತಿವರ್ಷವೂ ಸಾವಿರಾರು ಜನ ಕಾರಾಗೃಹವಾಸಿಗಳಾಗಿರುತ್ತಾರೆ. ಅವರೆಲ್ಲ ಅಪರಾಧದ ವಿಚಾರಣೆಗೋ ಸ್ಥಳೀಯ ಅಥವಾ ದೇಶದ ಕಾಯಿದೆಗಳನ್ನು ಅತಿಕ್ರಮಿಸಿದ ನಿಮಿತ್ತ ಶಿಕ್ಷೆಗೆ ಗುರಿಯಾಗಿಯೋ ಕಾರಾಗೃಹವಾಸಿಗಳಾಗುತ್ತಾರೆ. ಕಳ್ಳರು, ಕುಡುಕರು, ಕೊಲೆಗಡುಕರು, ಬಾಲದೋಷಿಗಳು, ವ್ಯಭಿಚಾರಿಗಳು, ಅಪರಾಧಿಗಳೆನಿಸಿದ ನಿರ್ದೋಷಿಗಳು, ಅಪರಾಧ ಮಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು, ಸಂದರ್ಭ ಸನ್ನಿವೇಶಗಳಿಗೆ ತುತ್ತಾಗಿ ಅಪರಾಧ ಮಾಡಿದವರು–ಹೀಗೆ ಆಪಾದಿತರಲ್ಲಿ ನಾನಾ ಬಗೆಗಳುಂಟು.

ಕಾರಾಗೃಹಗಳು ಅತಿಪ್ರಾಚೀನ ಕಾಲದಿಂದಲೆ, ಎಂದರೆ ಮಾನವ ಸಂಘಜೀವಿಯಾಗಿ ಬಾಳಲು ಆರಂಭಿಸಿದಾಗಿನಿಂದಲೆ, ಅಸ್ತಿತ್ವದಲ್ಲಿವೆ. ಆದರೆ ಅವು ಇದ್ದ ರೀತಿ ಮತ್ತು ಅವುಗಳ ಉದ್ದೇಶಗಳು ಕಾಲಕಾಲಕ್ಕೆ ಬೇರೆಯಾಗುತ್ತ ಬಂದಿವೆ. ಬಂಡೆಗಳ ಸಂದು, ಮರದ ಪೊಟರೆ, ಗವಿ ಮತ್ತು ಗುಡಿಸಲುಗಳಿಂದ ಆರಂಭವಾಗಿ ಕಗ್ಗತ್ತಲ ಕೋಣೆಗಳವರೆಗೆ ಕಾರಾಗೃಹಗಳ ಬೆಳೆವಣಿಗೆಯಾಗಿದೆ. ಈಗ ಸಾಮಾನ್ಯವಾಗಿ ಅಸ್ತಿತ್ವದಲ್ಲಿರುವ ಕಾರಾಗೃಹಗಳಲ್ಲಿ ಬಂದೀಖಾನೆಗಳು, ಬಯಲ ಸೆರೆಮನೆಗಳು ಮತ್ತು ಸುಧಾರಣಾ ಕೇಂದ್ರಗಳು–ಎಂದು ಮೂರು ವಿಧಗಳುಂಟು.

ಸುಮಾರು 200 ವರ್ಷಗಳಿಗೆ ಮುಂಚೆ ಕಾರಾಗೃಹಗಳನ್ನು ಬಾಕಿ ವಸೂಲಿಗಾಗಿ ಅಥವಾ ಆಪಾದಿತರನ್ನು ವಿಚಾರಣೆಗೆ ಮುನ್ನ ಮತ್ತು ಶಿಕ್ಷೆ ಕೊಡುವುದಕ್ಕೋಸ್ಕರ ಬಂಧನದಲ್ಲಿಡಲು ಉಪಯೋಗಿಸಲಾಗುತ್ತಿತ್ತು. ಹಿಂದಿನ ಕಾಲದಲ್ಲಿ ಅಪರಾಧಕ್ಕನುಗುಣವಾಗಿ ಜುಲ್ಮಾನೆಯ ರೂಪದಲ್ಲೊ ಶಾರೀರಿಕ ದಂಡನೆ, ಮರಣದಂಡನೆ ಹಾಗೂ ಗಡಿಪಾರು ಮುಂತಾದ ರೂಪುಗಳಲ್ಲೋ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಕಾರಾಗೃಹ ವಾಸವೂ ಶಿಕ್ಷೆಯ ಒಂದು ಪ್ರಕಾರವಾದ ಮೇಲೆ ಅದು ದಮನರೂಪದ ದಂಡನೆಯಾಗಿ ಪರಿಣಮಿಸಿತು. ಒತ್ತಾಯದ ಶ್ರಮ ಮತ್ತು ಸತತವಾಗಿ ಶಾರೀರಿಕ ಮತ್ತು ನೈತಿಕ ಅಪಮಾನಗಳಿಗೆ ಈಡುಮಾಡುವುದರ ಮೂಲಕ ಅಪರಾಧಿಯ ಚಿತ್ತವನ್ನು ಅಧೀನ ಮತ್ತು ನಿಯಂತ್ರಣಕ್ಕೊಳಪಡಿಸುವುದು ಕಾರಾಗೃಹಗಳಲ್ಲಿಯ ಪದ್ಧತಿಯಾಯಿತು. ಅಪರಾಧಿಯನ್ನು ದಂಡಿಸುವುದು ಮತ್ತು ಅವನ ಉಪಟಳದಿಂದ ಸಮಾಜಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಕಾರಾಗೃಹದ ಉದ್ದೇಶಗಳಾದುವು. ಇದರಿಂದಾಗಿ ಸಮಾಜಕ್ಕೆ ಒಂದು ರೀತಿಯ ರಕ್ಷಣೆ ದೊರೆಯಿತು.

ಅಪರಾಧಿಯೂ ಒಬ್ಬ ಮನುಷ್ಯ, ಅವನು ಸುಧಾರಣೆಗೊಂಡು ಉತ್ತಮ ಮಾನವನಾಗಿ, ಸತ್ಪ್ರಜೆಯಾಗಿ, ಸಮಾಜದ ಪ್ರಗತಿಯಲ್ಲಿ ಭಾಗಿಯಾಗುವುದು ವಿಹಿತ, ಅವನಿಗೆ ಇಂಥ ಅವಕಾಶಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಮತ್ತು ಸಮಾಜದ ಕರ್ತವ್ಯ ಎಂಬ ಭಾವನೆಗಳು ಕ್ರಮೇಣ ಬೆಳೆದು ಬಂದಿವೆ. ಹೀಗಾಗಿ ಕಾರಾಗೃಹ ಇತ್ತೀಚೆಗೆ ಅಪರಾಧ ಶಾಸ್ತ್ರದಲ್ಲಿ ಶಿಕ್ಷೆ, ಸುಧಾರಣೆ ಮತ್ತು ಪುನರ್ವಸತಿಗಳ ದ್ಯೋತಕವಾಗಿದೆ. ಅಪರಾಧಿಯನ್ನು ಅವನ ಸಂಪತ್ತು, ಸ್ವಜನ ಮತ್ತು ಸಮಾಜಗಳಿಂದ ಮತ್ತು ನಿತ್ಯಜೀವನದ ಆವಶ್ಯಕತೆಗಳಿಂದ ದೂರವಿಡುವುದರ ಮೂಲಕ ಬಂಧನದಲ್ಲಿಡುವುದು ಶಿಕ್ಷೆ. ಅವನ ಮಾನಸಿಕ ದೋಷ ದೌರ್ಬಲ್ಯಗಳನ್ನು ಕಂಡುಹಿಡಿದು ಉಪದೇಶ ಮತ್ತು ಕೃತಿಗಳಿಂದ ಅವನನ್ನು ತಿದ್ದುವುದು ಸುಧಾರಣೆ. ಅನೇಕ ವೃತ್ತಿ ಕೆಲಸಗಳ ಬಗೆಗೆ ತರಬೇತಿ ಕೊಡುವುದರ ಜೊತೆಗೆ ದುಡಿದು ಬಾಳಲು ಪ್ರೇರೇಪಿಸುವುದು ಪುನರ್ವಸತಿಗೆ ಸಹಾಯಕವಾಗುತ್ತದೆ.

ಸಮಾಜ ಘಾತಕರಿಂದ ಸಮಾಜವನ್ನು ರಕ್ಷಿಸುವ ಮತ್ತು ಪಾತಕಿಗಳನ್ನು ಸನ್ಮಾರ್ಗಿಗಳನ್ನಾಗಿ ಮಾರ್ಪಡಿಸುವ ಕಾರಾಗೃಹಗಳು ನಡೆದು ಬಂದಿರುವ ದಾರಿ ಮಾನವಕುಲದ ಇತಿಹಾಸದ ಒಂದು ಮುಖ್ಯ ಬೆಳೆವಣಿಗೆ.

ಪುರಾಣಗಳಲ್ಲಿ, ದಂತಕಥೆಗಳಲ್ಲಿ ಕಾರಾಗೃಹಗಳ ವಿವರಣೆ ಬಂದಿರುವುದಾದರೂ ಪ್ರಾಚೀನ ಭಾರತ ನ್ಯಾಯಶಾಸ್ತ್ರದಲ್ಲಿ ಕಾರಾಗೃಹಶಿಕ್ಷೆಯನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಸ್ಮೃತಿಕಾರರು ಮತ್ತು ನ್ಯಾಯಶಾಸ್ತ್ರಜ್ಞರು ಅಪರಾಧ ಮತ್ತು ಶಿಕ್ಷೆಗಳ ಬಗ್ಗೆ ಹಾಗೂ ಅಪರಾಧಿಗಳ ಮನೋವಿಶ್ಲೇಷಣೆಯ ಬಗ್ಗೆ ವಿವೇಚನೆ ಮಾಡಿದ್ದಾರೆ. ಆಕಸ್ಮಿಕವಾಗಿ ಅಥವಾ ಪ್ರಸಂಗವಶಾತ್ ಅಪರಾಧ ಮಾಡಿದವರು; ಮತ್ತು ಅಪರಾಧಗಳನ್ನು ಮಾಡುವುದನ್ನೇ ಸ್ವಭಾವವಾಗಿ ಉಳ್ಳಂಥ ದುಷ್ಟರು ಎಂದು ಮನುಸ್ಮೃತಿಯಲ್ಲಿ ಅಪರಾಧಿಗಳ ವರ್ಗೀಕರಣ ಮಾಡಲಾಗಿದೆ. ಗೌತಮ, ವಸಿಷ್ಠ, ಬೌಧಾಯನ, ವಿಷ್ಣು, ಯಾಜ್ಞವಲ್ಕ್ಯ ಮುಂತಾದವರು ಅಪರಾಧಗಳನ್ನು ಮತ್ತು ಅವುಗಳಿಗೆ ಅನುಗುಣವಾಗಿ ವಿಧಿಸಲಾಗುವ ಶಿಕ್ಷೆಗಳನ್ನು ಹೇಳಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಪರಾಧಿಗಳ ಮತ್ತು ಶಿಕ್ಷೆಗಳ ಒಂದು ಪಟ್ಟಿಯೇ ಇದೆ. ಅವುಗಳಲ್ಲಿ ವಿರೂಪಣ, ದೇಹದಂಡನೆ, ಮರಣದಂಡನೆ ಮುಂತಾದವು ಕಠಿಣ ಶಿಕ್ಷೆಗಳಾಗಿದ್ದುವು. ಕಾರಾಗೃಹಕ್ಕೆ ಶಿಕ್ಷೆಯ ಸ್ವರೂಪ ಇನ್ನೂ ಬಂದಿರಲಿಲ್ಲ. ಆದರೆ ಯುದ್ಧಕೈದಿಗಳನ್ನು ಕಾರಾಗೃಹದಲ್ಲಿಡುತ್ತಿದ್ದುದುಂಟು.

ಭಾರತದಲ್ಲಿ ಮುಸ್ಲಿಂ ರಾಜಮನೆತನಗಳ ಆಡಳಿತ ಬಂದ ಮೇಲೆಯೂ ಈ ಬಗ್ಗೆ ಯಾವ ಬದಲಾವಣೆಯೂ ಆಗಲಿಲ್ಲ. ಏಕೆಂದರೆ ಆಗ ಪ್ರಚಲಿತವಿದ್ದ ಹಿಂದೂ ಮತ್ತು ಇಸ್ಲಾಮೀ ನ್ಯಾಯಸೂತ್ರಗಳ ವ್ಯಾಪ್ತಿಯಲ್ಲಿ ಕಾರಾಗೃಹದ ಕಲ್ಪನೆಯಿರಲಿಲ್ಲ. ಇಸ್ಲಾಮೀ ನ್ಯಾಯಸೂತ್ರಗಳಲ್ಲೂ ಅಪರಾಧಗಳ ವರ್ಗೀಕರಣ ಉಂಟು. ಈಸ್ಟ್ ಇಂಡಿಯ ಕಂಪನಿಯವರು ಕಾರಾಗೃಹಗಳನ್ನು ಸರಿಯಾಗಿ ಇಟ್ಟಿರಲಿಲ್ಲವಾದ ಕಾರಣ ಮೆಕಾಲೆ 1835ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಭಾರತದ ಕಾರಾಗೃಹಗಳ ದುರವಸ್ಥೆಯನ್ನು ಕುರಿತು ವರದಿ ಮಾಡಿದ. 1836ರಲ್ಲಿ ಈ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಯಿತು. ದಂಡನೆಯ ಪ್ರಾಮುಖ್ಯವುಳ್ಳ ಹಲವು ಶಿಫಾರಸುಗಳನ್ನು ಸಮಿತಿ ಮಾಡಿತು. ಇದರಿಂದಾಗಿ 1846ರಲ್ಲಿ ಭಾರತದ ಪ್ರಥಮ ಕಾರಾಗೃಹವನ್ನು ಆಗ್ರದಲ್ಲಿ ಕಟ್ಟಲಾಯಿತು. ಮುಂದೆ 1848ರಲ್ಲಿ ಬರೈಲಿ ಮತ್ತು ಅಲಹಾಬಾದುಗಳಲ್ಲಿಯೂ 1857ರಲ್ಲಿ ಮದರಾಸಿನಲ್ಲಿಯೂ 1864ರಲ್ಲಿ ಮುಂಬಯಿ ಮತ್ತು ವಾರಾಣಸಿಗಳಲ್ಲಿಯೂ ಕಾರಾಗೃಹಗಳನ್ನು ಕಟ್ಟಲಾಯಿತು. ಆಮೇಲೆ ಲಖನೌ ಮುಂತಾದ ಕಡೆಗಳಲ್ಲಿಯೂ ಕಾರಾಗೃಹಗಳನ್ನು ಕಟ್ಟಲಾಯಿತು. ಭಾರತದ ಕಾರಾಗೃಹಪದ್ಧತಿ ಇಂಗ್ಲಿಷ್ ಕಾರಾಗೃಹಪದ್ಧತಿಯ ಜಾಡಿನಲ್ಲಿ ನಡೆದುಕೊಂಡು ಬಂದಿದೆ. ಪ್ರಪಂಚದ ಕಾರಾಗೃಹಪದ್ಧತಿಗಳ ಮೇಲೆ ಇಂಗ್ಲೆಂಡ್ ಮತ್ತು ಅಮೆರಿಕಗಳ ಕಾರಾಗೃಹಗಳು ಪ್ರಭಾವ ಬೀರಿವೆ.

**ಇಂಗ್ಲೆಂಡಿನಲ್ಲಿ** : ಇಂಗ್ಲೆಂಡಿನಲ್ಲಿ 1166ರಿಂದಲೂ ಸ್ಥಳೀಯ ಜೈಲುಗಳು ಮತ್ತು ರಾಜನ ನ್ಯಾಯಾಲಯಗಳ ಜೈಲುಗಳು ಇದ್ದ ಬಗ್ಗೆ ಉಲ್ಲೇಖ ದೊರೆಯುತ್ತದೆ. ಇವು ಬಹಳ ಹೀನಾವಸ್ಥೆಯಲ್ಲಿದ್ದುವು. ಮುಂದೆ, 1557ರಲ್ಲಿ, ಸಣ್ಣಪುಟ್ಟ ಅಪರಾಧಗಳನ್ನು ಮಾಡಿದವರು, ನಿರ್ಗತಿಕರು, ನೀತಿಗೆಟ್ಟವರು, ಭಿಕ್ಷುಕರು ಮತ್ತು ಕೆಲಸ ದೊರೆಯದೆ ಕಂಗಾಲಾದವರು ಕೆಲಸ ಮಾಡಿ, ಕೂಲಿ ಪಡೆದು ಜೀವನ ಸುಧಾರಿಸಿಕೊಳ್ಳುವುದಕ್ಕೆ ಸಹಾಯವಾಗಲು ಲಂಡನಿನಲ್ಲಿ ಸ್ಥಾಪಿಸಲಾದ ಬ್ರೈಡ್‌ವೆಲ್ ಮಾದರಿಯ ಕಾರಾಗೃಹಗಳು ಅಸ್ತಿತ್ವಕ್ಕೆ ಬಂದುವು. ಕಾರಾಗೃಹಗಳ ಬಗ್ಗೆ ಸರ್ಕಾರ ಒಂದು ಕಾಯಿದೆಯನ್ನು ಕೂಡ ಮಾಡಿತು. ಆಧುನಿಕ ವಿಚಾರಸರಣಿಗೆ ಸರಿಹೊಂದುವಂಥ ವಿಶ್ವದ ಪ್ರಥಮ ಕಾರಾಗೃಹವನ್ನು 1700ರಲ್ಲಿ 11ನೆಯ ಪೋಪ್ ಕ್ಲೆಮೆಂಟ್ ರೋಮಿನಲ್ಲಿ ಕಟ್ಟಿಸಿದ. ಇದೇ ಮಾದರಿಯ ಎರಡನೆಯ ಕಾರಾಗೃಹ ಬೆಲ್ಜಿಯಂ ದೇಶದಲ್ಲಿ 1773ರಲ್ಲಿ ಅಸ್ತಿತ್ವಕ್ಕೆ ಬಂತು. ಸುಧಾರಣೆಯೇ ಈ ಕಾರಾಗೃಹಗಳ ಉದ್ದೇಶವಾಗಿತ್ತು. ಆದರೆ ಇವು ಪ್ರಭಾವಶಾಲಿಗಳಾಗಿ ಉಳಿಯಲಿಲ್ಲ.

ಸರ್ ವಿಲಿಯಂ ಕೋಕನ ಪ್ರಶಂಸೆಗೆ ಪಾತ್ರವಾಗಿದ್ದ ಬ್ರೈಡ್‌ವೆಲ್ ಮಾದರಿಯ ಕಾರಾಗೃಹಗಳು ಹದಗೆಟ್ಟುವು. ಅಲ್ಲಿಯ ಕೊಳಕು, ಹಿಂಸೆ, ಕ್ರೂರತನ ಮತ್ತು ಸುಲಿಗೆಯನ್ನು ಕುರಿತು 1729ರಲ್ಲಿ ನೇಮಕವಾಗಿದ್ದ ಸಮಿತಿ ತನ್ನ ವರದಿಯಲ್ಲಿ ಹೇಳಿದ್ದರೂ ಪರಿಸ್ಥಿತಿ ಹಾಗೆಯೇ ಮುಂದುವರಿಯಿತು. ಬೆಡ್‌ಫರ್ಡ್‌ಷೈರಿನ ಷರೀಫನಾದ ಜಾನ್ ಹೌವರ್ಡನ ಹೋರಾಟವೇ ಇಂಗ್ಲೆಂಡಿನ ಕಾರಾಗೃಹಗಳ ಸುಧಾರಣೆಗೆ ಸೋಪಾನವಾಯಿತು. ಆತ ದಿ ಸ್ಟೇಟ್ ಆಫ್ ಪ್ರಿಸನ್ ಎಂಬ ತನ್ನ ಕೃತಿಯನ್ನು 1777ರಲ್ಲಿ ಪ್ರಕಟಿಸಿದ. ಅದರಲ್ಲಿ ಕಾರಾಗೃಹದ ಕಟ್ಟಡ, ಅಲ್ಲಿರಬೇಕಾದ ವಾತಾವರಣ, ಸೌಕರ್ಯಗಳು, ಸ್ತ್ರೀಪುರುಷ ಕೈದಿಗಳ ಬೇರ್ಪಡೆ–ಇವನ್ನೆಲ್ಲ ವಿವೇಚಿಸಿರುವುದಲ್ಲದೆ, ಬಾಲದೋಷಿಗಳು, ಪ್ರಥಮಾಪರಾಧಕ್ಕೆ ಗುರಿಯಾದವರು ಮತ್ತು ರೂಢಾಪರಾಧಿಗಳನ್ನು ಬೇರೆಬೇರೆಯಾಗಿ ಇಡುವಂತೆ ಸೂಚಿಸಲಾಗಿದೆ. ಹೌವರ್ಡ್ ಮತ್ತು ಅವನ ಅನುಯಾಯಿಗಳ ಪ್ರಯತ್ನಗಳ ಫಲವಾಗಿ 1774ರಿಂದ 1791ರ ಅವಧಿಯಲ್ಲಿ ಅನೇಕ ಕಾಯಿದೆಗಳು ಜಾರಿಗೆ ಬಂದುವು. ಆದರೆ ಅವು ಆಜ್ಞಾಪಕವಾಗಿರದ ಕಾರಣ ಅವುಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. 1817ರಲ್ಲಿ ಕಾರಾಗೃಹ ಶಿಸ್ತು ಸುಧಾರಣಾ ಸಂಸ್ಥೆಯ ಸ್ಥಾಪನೆಯಾಯಿತು. 1818ರಲ್ಲಿ ಅದು ಸಲ್ಲಿಸಿದ ವರದಿಯ ಮೇರೆಗೆ ಆಗ ಇಂಗ್ಲೆಂಡಿನಲ್ಲಿ 518 ಜೈಲುಗಳಿದ್ದುವು. ಅವುಗಳಲ್ಲಿ ಕೈದಿಗಳ ವರ್ಗೀಕರಣವಾಗಲಿ, ಸರಿಯಾದ ಸ್ಥಳಾವಕಾಶವಾಗಲಿ ಇರಲಿಲ್ಲ. ಇದೇ ಸುಮಾರಿಗೆ ಸ್ತ್ರೀಯರ ನ್ಯೂಗೇಟ್ ಕಾರಾಗೃಹವನ್ನು ನೋಡಿ ನೊಂದುಕೊಂಡ ಎಲಿಜಬೆತ್ ಫ್ರೈ ಇದರ ಸುಧಾರಣೆಗಾಗಿ ಪ್ರಯತ್ನ ನಡೆಸಿದಳು. ನೆಲದ ಮೇಲಿನ ಈ ನರಕವನ್ನು ನಾಕವನ್ನಾಗಿ ಮಾರ್ಪಡಿಸಿದ ಕೀರ್ತಿ ಆಕೆಯದು.

1821ರಿಂದ 1824ರ ಅವಧಿ ಇಂಗ್ಲೆಂಡಿನ ಕಾರಾಗೃಹಗಳ ಇತಿಹಾಸದಲ್ಲಿ ಮತ್ತೊಂದು ಪ್ರಮುಖ ಘಟ್ಟ. 1821ರಲ್ಲಿ ಮಿಲ್‌ಬ್ಯಾಂಕಿನಲ್ಲಿ ಪ್ರಥಮ ರಾಷ್ಟ್ರೀಯ ಕಾರಾಗೃಹವನ್ನು ಕಟ್ಟಲಾಯಿತು. ಪೀಲ್ 1824ರಲ್ಲಿ ಹಿಂದಿನ 23 ಕಾಯಿದೆಗಳನ್ನು ಕ್ರೋಡೀಕರಿಸಿ, ಒಂದು ಹೊಸ ಯೋಜನೆಯನ್ನು ಅನುಷ್ಠಾನಕ್ಕೆ ತಂದ. ಹೌವರ್ಡನ ಸಲಹೆಗಳ ಆಧಾರದ ಮೇಲೆ ಕಾರಾಗೃಹಗಳ ಆಡಳಿತ ಜರುಗಬೇಕು, ನ್ಯಾಯಾಧೀಶರು ಆಗಾಗ್ಗೆ ಅವನ್ನು ಸಂದರ್ಶಿಸಬೇಕು ಮತ್ತು ಆ ಬಗ್ಗೆ ಮೂರು ತಿಂಗಳುಗಳಿಗೆ ಒಮ್ಮೆ ಗೃಹಾಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ವರದಿ ಸಲ್ಲಿಸಬೇಕು. ಇವು ಈ ಯೋಜನೆಯ ಮುಖ್ಯ ಅಂಶಗಳು.

1831ರಲ್ಲಿ ಅಲ್ಲಿಯ ಸಂಸತ್ ಸಮಿತಿ ಕಾರಾಗೃಹಗಳನ್ನು ಕುರಿತ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಪರಾಮರ್ಶಿಸಿ ಎಲ್ಲ ಅಪರಾಧಿಗಳನ್ನೂ ಪ್ರತ್ಯೇಕವಾಗಿ ಇಡಬೇಕೆಂದೂ ಹಾಗೆ ಮಾಡಲು ಅನುಕೂಲವಾಗುವಂತೆ ಏಕಾಂತ ಕೋಣೆಗಳನ್ನು ಕಟ್ಟಬೇಕೆಂದೂ ಸಲಹೆ ಮಾಡಿತು. ಈ ಸುಮಾರಿಗೆ ಆಗಲೇ ಅಮೆರಿಕದಲ್ಲಿ ಕಾರಾಗೃಹಗಳ ಸುಧಾರಣೆ ಅವ್ಯಾಹತವಾಗಿ ನಡೆದಿದೆ ಎಂಬ ಸಮಾಚಾರ ಐರೋಪ್ಯ ದೇಶಗಳಲ್ಲೆಲ್ಲ ಹಬ್ಬಿತ್ತು. ಅಲ್ಲಿಯ ಪ್ರಯೋಗಗಳನ್ನು ನೋಡಿಕೊಂಡು ಬರಲು ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಬೆಲ್ಜಿಯಂ ದೇಶಗಳ ಪ್ರತಿನಿಧಿಗಳು ಒಟ್ಟಾಗಿಯೇ ಅಮೆರಿಕಕ್ಕೆ ಹೋದರು. ಅದರ ಫಲವಾಗಿ 1842ರಲ್ಲಿ ಪೆಂಟನ್‌ವಿಲ್ಲೆಯ ಏಕಾಂತ ಕೋಣೆಗಳ ಕಾರಾಗೃಹವನ್ನೇ ಅಲ್ಲದೆ ಇನ್ನೂ ಅನೇಕ ಕಾರಾಗೃಹಗಳನ್ನು ಕಟ್ಟಲಾಯಿತು.

ಇಂಗ್ಲೆಂಡಿನಲ್ಲಿಯ ಕಾರಾಗೃಹಗಳ ಸುಧಾರಣೆಗೆ ಅಲ್ಲಿಯ ಸಾಮಾಜಿಕ ಜಾಗೃತಿಯ ಜೊತೆಗೆ ಅಪರಾಧಶಾಸ್ತ್ರವನ್ನು ಕುರಿತ ಚಿಂತನ ಸಂಶೋಧನಗಳೂ ಅಪರಾಧಿಗಳನ್ನು ಗಡೀಪಾರು ಶಿಕ್ಷೆಯ ಮೇಲೆ ಅಮೆರಿಕ, ವೆಸ್ಟ್ ಇಂಡೀಸ್, ಆಸ್ಟ್ರೇಲಿಯ ಮತ್ತು ಟಾಸ್ಮೇನಿಯ ದೇಶಗಳಿಗೆ ಕಳಿಸುವುದನ್ನು ನಿರ್ಬಂಧಿಸಿದುದೂ ಕಾರಣವೆಂದು ಹೇಳಬಹುದು. 1878ರಲ್ಲಿ ಸರ್ಕಾರ ಎಲ್ಲ ಸ್ಥಳೀಯ ಕಾರಾಗೃಹಗಳನ್ನೂ ತನ್ನ ಹತೋಟಿಗೆ ತೆಗೆದುಕೊಂಡಿತು; ಕಾರಾಗೃಹಗಳ ಆಯೋಗವನ್ನು ನೇಮಿಸಿತು. ಕಾರಾಗೃಹಗಳಲ್ಲಿ ಸಶ್ರಮ ಮತ್ತು ಏಕಾಂತ ಸೆರೆವಾಸದ ವಿಧಾನಗಳು ಸಾಮಾನ್ಯವಾದುವು.

ಮುಂದಿನ ಇಪ್ಪತ್ತು ವರ್ಷಗಳಲ್ಲಿ ಕಾರಾಗೃಹಗಳ ಪರಿಸ್ಥಿತಿ ಕೆಟ್ಟು ಕೈದಿಗಳ ಶಾರೀರಿಕ, ಮಾನಸಿಕ ಅವನತಿಗೆ ಕಾರಣವಾಗುತ್ತಿವೆ ಎಂಬುದಾಗಿ ಅನೇಕ ಆರೋಪಗಳು ಬಂದು ಇವುಗಳ ವಿಚಾರಣೆಗಾಗಿ ಗ್ಲಾಡ್‌ಸ್ಟನ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಅಲ್ಲಿಯ ಕಾರಾಗೃಹಪದ್ಧತಿಯಲ್ಲಿ ದಂಡನೆಯೇ ಪ್ರಧಾನ ದೃಷ್ಟಿಯಾಗಿತ್ತು. ವ್ಯಕ್ತಿಯ ಸುಧಾರಣೆಗೂ ಮಾನ್ಯತೆ ದೊರೆಯಬೇಕೆಂದು ಆ ಸಮಿತಿ ಸಲಹೆ ಮಾಡಿತು. ಕೈದಿಯ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಕಾರಾಗೃಹ ಕಾರಣವಾಗಬೇಕೆಂದೂ ಅದು ಸೂಚಿಸಿತು. ಇದರ ಪರಿಣಾಮವಾಗಿ 1898ರಲ್ಲಿ ಕಾರಾಗೃಹ ಕಾಯಿದೆಯೊಂದು ಅನುಮೋದಿತವಾಯಿತು. ಇಂಗ್ಲೆಂಡಿನ ಕಾರಾಗೃಹ ವ್ಯವಸ್ಥೆಗೆ ಅದೇ ಮುಖ್ಯ ಅಡಿಪಾಯ. ಸಶ್ರಮದ ಎಲ್ಲ ವಿಧಾನಗಳನ್ನೂ ರದ್ದುಗೊಳಿಸಲಾಯಿತು. ಆ ಕಾಯಿದೆಯಲ್ಲಿ ಅಪರಾಧಿಗಳನ್ನು ಮೂರು ಬಗೆಗಳಾಗಿ ವಿಂಗಡಿಸುವ ವಿಧಾನವನ್ನು ಸೂಚಿಸಲಾಗಿದೆ. ದಂಡ ಸಲುವಳಿ ಮಾಡದಿರುವ ತಪ್ಪಿಗಾಗಿ ಒಬ್ಬನಿಗೆ ಕಾರಾಗೃಹ ಶಿಕ್ಷೆ ವಿಧಿಸಿದ್ದಲ್ಲಿ, ಭಾಗಶಃ ದಂಡ ತೆತ್ತು ಕಾರಾಗೃಹ ಶಿಕ್ಷೆಯನ್ನು ಕಡಿಮೆ ಮಾಡಿಸಿಕೊಳ್ಳುವ ಅವಕಾಶವನ್ನೂ ಕಾಯಿದೆಗೆ ವಿರುದ್ಧವಲ್ಲದ ನಿಯಮಗಳನ್ನು ಮಾಡಲು ಸರ್ಕಾರಕ್ಕೆ ಅಧಿಕಾರವನ್ನೂ ನೀಡಲಾಗಿದೆ.

1907 ರಿಂದ 1914ರ ವರೆಗಿನ ಅವಧಿಯನ್ನು ಮತ್ತೊಂದು ಮಹತ್ತ್ವದ ಘಟ್ಟವೆಂದು ಹೇಳಬಹುದು. ಈ ಅವಧಿಯಲ್ಲಿ ಪ್ರೊಬೇಷನ್ ಕಾಯಿದೆ, ಅಪರಾಧ ನಿರೋಧದ ಬಗೆಗಿನ ಕಾಯಿದೆ, ಮಕ್ಕಳಿಗೆ ಸಂಬಂಧಿಸಿದ ಕಾಯಿದೆ, ದಂಡನ್ಯಾಯಿಕ ಕಾಯಿದೆ ಮತ್ತು ಮನೋವಿಕಲತೆಯ ಕಾಯಿದೆಗಳು ಜಾರಿಗೆ ಬಂದುವು.

ಬಾರ್ಸ್ಟಲ್ ಗ್ರಾಮದಲ್ಲಿಯ ಪ್ರಯೋಗದ ಫಲವಾದ, ಬಾಲದೋಷಿಗಳನ್ನು ಸುಧಾರಿಸುವ ಬಾರ್ಸ್ಟಲ್ ಪದ್ಧತಿ 1908ರ ಅಪರಾಧ ನಿರೋಧ ಕಾಯಿದೆಯ ಪ್ರಕಾರ ಜಾರಿಗೆ ಬಂತು. ಕೈದಿ ಬಿಡುಗಡೆ ಹೊಂದಿದ ಮೇಲೆ ತಾನು ಉತ್ತಮ ಮತ್ತು ಉಪಯುಕ್ತ ಬಾಳನ್ನು ಸಾಗಿಸಬೇಕೆಂಬ ಆಶೆ ಕುದುರುವಂತೆ ಕಾರಾಗೃಹಗಳು ಸಹಕರಿಸಲು ಅನುಕೂಲವಾಗುವ ಉಪಬಂಧಗಳನ್ನು 1948ರ ದಂಡನ್ಯಾಯಿಕ ಕಾಯಿದೆಯಲ್ಲಿ ಅಳವಡಿಸಲಾಗಿದೆ.

ವೇಕ್‌ಫೀಲ್ಡಿನಲ್ಲಿಯ ಅನಾವೃತ ಕಾರಾಗೃಹ ಮತ್ತು ಸಿಬ್ಬಂದಿ ತರಬೇತಿ ಕೇಂದ್ರಗಳು ಈ ದಿಶೆಯಲ್ಲಿಯ ಮುಖ್ಯ ಹೆಜ್ಜೆಗಳು. ವೇಕ್‌ಫೀಲ್ಡ್, ಮೆಡಾಸ್ಟನ್, ಮ್ಯಾಂಚೆಸ್ಟರ್, ಲಿವರ್‌ಪೂಲ್, ವ್ಯಾಡ್ಸ್‌ವರ್ತ್ ಮುಂತಾದವು ಇಲ್ಲಿಯ ಪ್ರಮುಖ ಕಾರಾಗೃಹಗಳು. ಅಮೆರಿಕ, ರಷ್ಯ, ಇಂಗ್ಲೆಂಡ್‌ಗಳ ಕಾರಾಗೃಹಗಳು ವಿಶ್ವದಲ್ಲಿಯೇ ಉತ್ತಮವಾದವು.

**ಅಮೆರಿಕದಲ್ಲಿ :** ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ 1787ರ ಸುಮಾರಿಗಾಗಲೇ ಕ್ರೈಸ್ತ ಮಿತ್ರಸಂಘದವರು ಕಾರಾಗೃಹಗಳ ಸುಧಾರಣೆಯ ಕಾರ್ಯದಲ್ಲಿ ತೊಡಗಿದ್ದರು. ಅಪರಾಧಿಗಳು ಏಕಾಂತದಲ್ಲಿದ್ದು, ಬೈಬಲ್ ಓದುವುದರ ಮೂಲಕ ಮತ್ತು ಪಶ್ಚಾತ್ತಾಪಪಡುವುದರಿಂದ ಸುಧಾರಿಸುವರೆಂದು ಅವರು ನಂಬಿದ್ದರು. ಏಕಾಂತವಾಸದ ಕಾಲದಲ್ಲಿ ಚಾಪ್ಲೇನ್ ಮಾತ್ರ ಖೈದಿಗಳನ್ನು ಕಾಣಬಹುದಿತ್ತು. ಈ ರೀತಿಯ ಕಠಿಣ ಏಕಾಂತವಾಸ ಪದ್ಧತಿ ಫಿಲಡೆಲ್ಫಿಯ ಮತ್ತು ಇತರ ಕಡೆಗಳಲ್ಲಿ ಇತ್ತು. 1816ರಲ್ಲಿ ಆಬರ್ನ್ ಕಾರಾಗೃಹವನ್ನೂ 1817ರಲ್ಲಿ ವಾಲ್ನಟ್ ಸ್ಟ್ರೀಟ್ ಜೈಲು ಸಾಲದುದಕ್ಕೆ ಮತ್ತೆರಡು ಜೈಲುಗಳನ್ನೂ ಕಟ್ಟಲಾಯಿತು. ಆಬರ್ನ್ ಕಾರಾಗೃಹವನ್ನುಳಿದು ಇತರ ಕಡೆಗಳಲ್ಲಿ ಏಕಾಂತವಾಸದ ಪೆನ್‌ಸಿಲ್ವೇನಿಯ ಪದ್ಧತಿ ಇತ್ತು. ಆಬರ್ನ್ ಕಾರಾಗೃಹದ ಅಧಿಕಾರಿಯಾಗಿದ್ದ ಲೂಯಿ ಡ್ವೈಟ್ ಏಕಾಂತವಾಸದ ಪದ್ಧತಿಗೆ ವಿರೋಧವಾಗಿದ್ದ. ಏಕಾಂತವಾಸದಿಂದ ಮನೋದೌರ್ಬಲ್ಯ ಹೆಚ್ಚುವ ಕಾರಣ, ಆಬರ್ನ್ ಕಾರಾಗೃಹದಲ್ಲಿ ಹಗಲು ಹೊತ್ತು ಕೈದಿಗಳೆಲ್ಲರೂ ಸೇರಿ ಮೌನದಿಂದ ಕೆಲಸ ಮತ್ತು ಊಟ ಮಾಡುವುದು ಮತ್ತು ರಾತ್ರಿಯಲ್ಲಿ ಬೇರೆ ಬೇರೆ ಏಕಾಂತ ಕೋಣೆಗಳಲ್ಲಿರುವುದು ರೂಢಿಯಾಯಿತು. ಇದಕ್ಕೆ ಆಬರ್ನ್ ಪದ್ಧತಿ ಎಂದು ಹೆಸರು.

ಕಾರಾಗೃಹವಾಸ ಶಿಕ್ಷೆಯಾಗಿ ಪರಿಣಮಿಸಿದುದು ಅಮೆರಿಕದಲ್ಲಿ. ಅದು ಏಕಾಂತವಾಸದ ಪ್ರಭಾವದ ಫಲ. ಕಾರಾಗೃಹ ಶಿಕ್ಷೆ ಕೂಡಲೆ ಇಂಗ್ಲೆಂಡ್ ಮತ್ತು ವಿಶ್ವದ ಅನೇಕ ದೇಶಗಳಲ್ಲಿ ಆಚರಣೆಗೆ ಬಂದು ಈಗ ಎಲ್ಲ ದೇಶಗಳಲ್ಲೂ ಇದನ್ನು ಜಾರಿಗೆ ತರಲಾಗಿದೆ. ಪೆನ್‌ಸಿಲ್ವೇನಿಯ ಮತ್ತು ಆಬರ್ನ್ ಪದ್ಧತಿಗಳ ಬಗ್ಗೆ ಅನೇಕ ದೇಶಗಳಲ್ಲಿ ಜಿಜ್ಞಾಸೆ ಆರಂಭವಾಯಿತು. ಚಾರ್ಲ್ಸ್ ಡಿಕನ್ಸ್ ಈ ಸಂಬಂಧದಲ್ಲಿ ಅಮೆರಿಕಕ್ಕೆ ಹಲವು ಬಾರಿ ಹೋಗಿ ಬಂದಿದ್ದ.

ಬಾಲದೋಷಿಗಳ ಸುಧಾರಣೆ ಅಮೆರಿಕದ ಮತ್ತೊಂದು ಕೊಡುಗೆ. 1825ರಲ್ಲಿ ನ್ಯೂಯಾರ್ಕಿನಲ್ಲೂ 1826ರಲ್ಲಿ ಬಾಸ್ಟನ್ ಮತ್ತು ಫಿಲಡೆಲ್ಫಿಯಗಳಲ್ಲೂ ಮಕ್ಕಳ ಸುಧಾರಣಾಕೇಂದ್ರಗಳನ್ನು ಕಟ್ಟಲಾಯಿತು. ವಯಸ್ಕರ ಸುಧಾರಣೆ ಯುರೋಪಿನಲ್ಲಿ 1840ರಿಂದಲೇ ಆರಂಭವಾಯಿತೆನ್ನಬಹುದು. 1867ರಲ್ಲಿ ನ್ಯೂಯಾರ್ಕ್ ರಾಜ್ಯ 16ನೆಯ ವಯಸ್ಸಿನಿಂದ 30ನೆಯ ವರ್ಷದ ವರೆಗಿನ ಅಪರಾಧಿಗಳ ಸುಧಾರಣೆಗೆ ಕಾಯಿದೆ ಮಾಡಿತು. ಎಲ್ಮೀರಾ ಕಾರಾಗೃಹದ ಮುಖ್ಯಾಧಿಕಾರಿ ಜೆಬುಲೋನ್ ಬ್ರೂಕ್‌ವೇ ಈ ಬಗ್ಗೆ ಹಲವು ಸಲಹೆಗಳನ್ನು ನೀಡಿದ. ಅವುಗಳಲ್ಲಿ ಕೆಲಸದ ಬಗೆಗಿನ ತರಬೇತಿ, ಕೈದಿಗಳಿಗೆ ಕೊಡಬೇಕಾದ ಶಿಕ್ಷಣ, ವೃತ್ತಿಶಿಕ್ಷಣ, ಶಿಸ್ತು, ಸೈನಿಕ ಶಿಕ್ಷಣ, ಮತ್ತು ಕೈದಿಗಳ ಮತ್ತು ಕಾರಾಗೃಹ ಸಿಬ್ಬಂದಿಯ ನಡುವಣ ಸಹಕಾರ, ಇವು ಮುಖ್ಯವಾದವು. ಅವರ ಅತಿಮುಖ್ಯವಾದ ಸಲಹೆ ಎಂದರೆ ಕೈದಿಯ ಉತ್ತಮ ನಡೆವಳಿಕೆಗಾಗಿ ಕಾರಾಗೃಹ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡುವುದು. ಶಿಕ್ಷೆಯ ಅವಧಿಯನ್ನು ಕಡಿತಗೊಳಿಸುವ ಪದ್ಧತಿ ಈಗ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಇದೆ.

ಅಮೆರಿಕದ ಎಲ್ಲ ರಾಜ್ಯಗಳಲ್ಲಿಯೂ ವಿಶಾಲ ಹಾಗೂ ಉತ್ತಮ ಕಾರಾಗೃಹಗಳಿವೆ. ಅವುಗಳಲ್ಲಿ ಆಟಿಕ, ಆಬರ್ನ್, ಎಲ್ಮೈರ, ಕ್ಲಿಂಟನ್, ಗ್ರೇಟ್ ಮೆಡೋ, ಡೆನ್‌ವರ್, ಮಿಷಿಗನ್, ಲಾಸ್ ಏಂಜಲೆಸ್, ಸಿಂಗ್ ಸಿಂಗ್ ಇವನ್ನು ಹೆಸರಿಸಬಹುದು. ಡೆನ್ವರ್ ಕೌಂಟಿ ಜೈಲು ಮತ್ತು ಡಾಫಿನ್ ಕೌಂಟಿ ಜೈಲುಗಳನ್ನು ಆಧುನಿಕ ರೀತಿಯಲ್ಲಿ ಕಟ್ಟಿಸಲಾಗಿದೆ. ಇಲ್ಲಿಯ ಕಾರಾಗೃಹಗಳು ಭದ್ರತೆಯ ದೃಷ್ಟಿಯಿಂದಲೂ ಉತ್ತಮವಿವೆ. ಕಿಟಕಿಗಳು, ಬಾಗಿಲುಗಳು, ಏಕಾಂತ ಕೋಣೆಗಳ ಯೋಜನೆ, ಗೋಡೆಗಳು, ಪ್ರವೇಶಗಳು, ಒಳಗಡೆ ಉಪಯೋಗಿಸುವ ಗ್ರಿಲ್ಲು, ಉಪಯೋಗಿಸಲಾಗುವ ಕಬ್ಬಿಣ ಸಲಾಕಿಗಳು, ಪಹರೆಯ ಆವಾರ, ಹೆಬ್ಬಾಗಿಲು, ಬೀಗ ಮತ್ತು ಬೀಗ ಹಾಕುವ ತಂತ್ರಗಳು, ಕಾರಾಗೃಹದ ಮೇಲ್ವಿಚಾರಣೆ, ಎಚ್ಚರಿಕೆ ಕೊಡುವ ವಿಧಾನ–ಇವೆಲ್ಲದರಲ್ಲಿಯೂ ಭದ್ರತೆಯ ದೃಷ್ಟಿಯೇ ಮುಖ್ಯವಾಗಿರುತ್ತದೆ.

ಕಾರಾಗೃಹಗಳಲ್ಲಿ ಅಡುಗೆಮನೆ, ಊಟ ಮತ್ತು ಕೆಲಸಕಾರ್ಯಗಳಿಗೆ ಅನುಕೂಲ ಮಾಡಿರುವುದು ಸಹಜ. ಅನೇಕ ಕಾರಾಗೃಹಗಳಿಗೆ ಹೊಂದಿಕೊಂಡು ಕೃಷಿಕ್ಷೇತ್ರಗಳಿವೆ. ಚಿಕಿತ್ಸೆಯ ಸೌಲಭ್ಯ, ಶಿಕ್ಷಣ ಮತ್ತು ತರಬೇತಿಗಳ ವ್ಯವಸ್ಥೆ, ಬಯಲುಗಳು, ಗ್ರಂಥಾಲಯಗಳು, ಮನೋರಂಜನೆಯ ಕಾರ್ಯಕ್ರಮಗಳು-ಇವು ಎಲ್ಲ ಕಾರಾಗೃಹಗಳಲ್ಲಿಯೂ ಇವೆ. ಅಷ್ಟೇ ಅಲ್ಲ, ಕೆಲವು ಕಾರಾಗೃಹಗಳಲ್ಲಿ ಆಗಾಗ್ಗೆ ಪತ್ರಿಕಾಕರ್ತರನ್ನು ಆಮಂತ್ರಿಸಿ, ಕೈದಿಗಳ ಜೊತೆಗೆ ಸಾರ್ವಜನಿಕರ ಸಂಪರ್ಕವನ್ನೂ ಕಲ್ಪಿಸಿಕೊಡಲಾಗುತ್ತಿದೆ.

**ಭಾರತದಲ್ಲಿ :** ಅಮೆರಿಕ ಮತ್ತು ಇಂಗ್ಲೆಂಡ್‌ಗಳ ಕಾರಾಗೃಹಗಳಿಗೆ ಹಿಡಿಯುವ ವೆಚ್ಚವನ್ನು ನೋಡಿದರೆ, ಭಾರತದ ಕಾರಾಗೃಹಗಳ ವೆಚ್ಚ ತೀರ ಕಡಿಮೆ. ಇಲ್ಲಿಯ ಕಟ್ಟಡಗಳು ಸಮರ್ಪಕವಲ್ಲ. ಭದ್ರತೆಯ ದೃಷ್ಟಿಯಿಂದಲೂ ಇಲ್ಲಿಯ ಕಾರಾಗೃಹಗಳ ಮಟ್ಟ ಬಹಳ ಕಡಿಮೆ. ಆದರೆ ಕೈದಿಗಳು ಪಾರಾಗಿ ಓಡಿಹೋಗುವ ಘಟನೆಗಳು ಕಡಿಮೆ. ಇದಕ್ಕೆ ಕೈದಿಗಳ ಸ್ವಭಾವವೇ ಕಾರಣ. ಕೈದಿಗಳ ಸ್ಥಿತಿಗತಿಯ ದೃಷ್ಟಿಯಿಂದ ಹೇಳುವುದಾದರೆ, ಅವರಿಗೆ ದೊರಕುತ್ತಿರುವ ಅನುಕೂಲತೆಗಳು ಅತ್ಯಲ್ಪ. ಇದಕ್ಕೆ ದೇಶದ ಆರ್ಥಿಕ ಪರಿಸ್ಥಿತಿಯ ಜೊತೆಗೆ, ಅವುಗಳಲ್ಲಿಯ ಆಡಳಿತ ವ್ಯವಸ್ಥೆಯೂ ಸುಧಾರಣಾ ಪದ್ಧತಿಯ ಮತ್ತು ಪ್ರಯೋಗಗಳ ಅಭಾವವೂ ಕಾರಣವಾಗಿವೆ.

1858ರಲ್ಲಿ ಭಾರತ ಬ್ರಿಟಿಷ್ ಸರ್ಕಾರದ ನೇರ ಆಡಳಿತಕ್ಕೊಳಪಟ್ಟ ಮೇಲೆ ಅನೇಕ ಕೇಂದ್ರ ಕಾರಾಗೃಹಗಳ ಕಟ್ಟಡಗಳು ಅಸ್ತಿತ್ವದಲ್ಲಿ ಬಂದುವು. ವ್ಯವಹಾರಪ್ರಕ್ರಿಯಾ ಸಂಹಿತೆ, ದಂಡಸಂಹಿತೆ ಮತ್ತು ದಂಡಪ್ರಕ್ರಿಯಾ ಸಂಹಿತೆಗಳು ಕಾರಾಗೃಹಗಳ ವ್ಯಾಪ್ತಿಯನ್ನು ಹೆಚ್ಚಿಸಿದವು. ಆಗಿನ ಸರ್ಕಾರ ಎಲ್ಲ ಪ್ರಾಂತ್ಯಗಳಲ್ಲಿಯ ಕಾರಾಗೃಹಗಳಲ್ಲೂ ಸಿವಿಲ್ ಸರ್ಜನರನ್ನು ಸೂಪರಿಂಟೆಂಡೆಂಟರನ್ನಾಗಿ ನೇಮಿಸುವಂತೆ 1864ರಲ್ಲಿ ಆಜ್ಞೆ ಮಾಡಿತು ಮತ್ತು ಅದೇ ವರ್ಷ ಭಾರತದ ಜೈಲುಗಳ ಬಗೆಗಿನ ಎರಡನೆಯ ಸಮಿತಿಯನ್ನು ನೇಮಿಸಿತು. ಈ ಸಮಿತಿಯವರು ಪ್ರತಿಯೊಬ್ಬ ಅಪರಾಧಿಗೂ ಬೇಕಾಗುವ ಕನಿಷ್ಠ ಸ್ಥಳಾವಕಾಶವನ್ನು ನಿಗದಿಗೊಳಿಸಿದರು; ಏಕಾಂತ ಕೋಣೆಗಳ ನಿರ್ಮಾಣ, ಇತರ ಅಪರಾಧಿಗಳಿಂದ ಬಾಲದೋಷಿಗಳ ಪ್ರತ್ಯೇಕತೆ ಮತ್ತು ಅವರಿಗೆ ಸೂಕ್ತ ಶಿಕ್ಷಣ ನೀಡಿಕೆ-ಈ ಬಗ್ಗೆ ಶಿಫಾರಸು ಮಾಡಿದರು. 1870ರಲ್ಲಿ ಭಾರತದ ಕಾರಾಗೃಹಗಳ ಕಾಯಿದೆ ಜಾರಿಗೆ ಬಂತು. ಇದರಲ್ಲಿ ಕಾರಾಗೃಹ ಸಿಬ್ಬಂದಿ ಮತ್ತು ಅದರ ಆಡಳಿತದ ಸಿಬ್ಬಂದಿಯ ನಿಗದಿ ಮಾಡಲಾಗಿದೆ. ಬಾಲದೋಷಿ, ಸ್ತ್ರೀ ಮತ್ತು ಪುರುಷ ಅಪರಾಧಿಗಳನ್ನು-ಅದರಲ್ಲೂ ವ್ಯಾವಹಾರಿಕ ತಪ್ಪುಗಳಿಗೆ ಹೊಣೆಯಾಗಿರುವ ಕೈದಿಗಳು ಮತ್ತು ಗುನ್ಹೆದಾರ ಕೈದಿಗಳನ್ನು-ಬೇರೆಬೇರೆ ಇಡುವಂತೆ ಹೇಳಲಾಗಿದೆ. ಕೈದಿಗಳು ಕಾರಾಗೃಹದಲ್ಲಿ ಮಾಡುವ ಅಪರಾಧಗಳು ಮತ್ತು ಆ ಬಗ್ಗೆ ವಿಧಿಸಲಾಗುವ ಶಿಕ್ಷೆಗಳನ್ನು ಇದರಲ್ಲಿ ಹೇಳಲಾಗಿದೆ. ಭಾರತದ ಕಾರಾಗೃಹಗಳ ಸಮಿತಿಯೊಂದನ್ನು 1877ರಲ್ಲಿ ನೇಮಿಸಲಾಗಿತ್ತಾದರೂ ಅದರ ಶಿಫಾರಸುಗಳನ್ನು ಕಾರ್ಯಗತಗೊಳಿಸಲಿಲ್ಲ.

ಅಖಿಲಭಾರತ ಪ್ರಾತಿನಿಧ್ಯವುಳ್ಳ ನಾಲ್ಕನೆಯ ಜೈಲು ಸಮಿತಿಯನ್ನು 1889ರಲ್ಲಿ ನೇಮಿಸಲಾಯಿತು. ಇದರ ಸಲಹೆಗಳು ಹೆಚ್ಚಾಗಿ ಕಾರಾಗೃಹಗಳ ಆಡಳಿತವನ್ನು ಕುರಿತು ಇದ್ದುವು. ಅವನ್ನು ಪ್ರಾಂತೀಯ ಜೈಲು ಕೈಪಿಡಿಗಳಲ್ಲಿ ಅಳವಡಿಸಲಾಯಿತು. 1892ರಲ್ಲಿ ಮತ್ತೊಂದು ಸಮಿತಿ ಅಸ್ತಿತ್ವಕ್ಕೆ ಬಂತು. ಅದರ ವರದಿಯೇ 1894ರ ಕಾರಾಗೃಹಗಳ ಕಾಯಿದೆಗೆ ಆಧಾರವಾಯಿತು. ಭಾರತದ ಇಂದಿನ ಕಾರಾಗೃಹಗಳ ಪದ್ಧತಿಗೆ 1870ರ ಮತ್ತು 1894ರ ಕಾರಾಗೃಹಗಳ ಕಾಯಿದೆಗಳೇ ಅಡಿಪಾಯ. ಈ ಕಾಯಿದೆಯಲ್ಲಿ ಗುನ್ಹೆದಾರ ಕೈದಿಗಳಿಗೆ ಏಕಾಂತ ಮತ್ತು ಸಾಮೂಹಿಕ ವಾಸದ ಪದ್ಧತಿಗಳನ್ನು ಮತ್ತು 9 ಗಂಟೆಗಳ ಕೆಲಸದ ಅವಧಿಯನ್ನು ನಿಗದಿಗೊಳಿಸಲಾಯಿತು. ಕಾರಾಗೃಹಗಳ ಸುಧಾರಣೆಯ ಗಾಳಿ 1897ರಲ್ಲಿ ಭಾರತದ ಕಡೆಗೆ ಬೀಸತೊಡಗಿತು. ಆ ವರ್ಷದಲ್ಲಿ ಬಾಲದೋಷಿ ಸುಧಾರಣಾಶಾಲೆಗಳ ಕಾಯಿದೆ ಜಾರಿಗೆ ಬಂತು. ಪಶ್ಚಿಮ ಭಾರತದ ಮಕ್ಕಳ ರಕ್ಷಣೆಗಾಗಿ 1916ರಲ್ಲಿ ಮುಂಬಯಿಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಕಾರಾಗೃಹಗಳ ಹೀನ ಸ್ಥಿತಿಯ ಬಗ್ಗೆ ದೂರುಗಳು ಬಂದು, ಈ ಸಂಬಂಧದಲ್ಲಿ ಒಂದು ಕಮಿಟಿಯನ್ನು ನೇಮಿಸಲಾಯಿತು. 1919ರಲ್ಲಿ ಬಂದ ಅದರ ವರದಿಯಲ್ಲಿ ಕಾರಾಗೃಹಗಳ ಬಗ್ಗೆ ಇಂಗ್ಲೆಂಡಿನ ಜನಾಭಿಪ್ರಾಯದ ಪಡಿನೆಳಲನ್ನು ಕಾಣಬಹುದು. ಈ ಸಮಿತಿ ಅಮೆರಿಕ, ಇಂಗ್ಲೆಂಡ್, ಸ್ಕಾಟ್ಲೆಂಡ್, ಜಪಾನ್, ಫಿಲಿಪೀನ್ಸ್ ಮತ್ತು ಹಾಂಗ್‌ಕಾಂಗ್‌ಗಳಲ್ಲಿಯ ಕಾರಾಗೃಹ ಪದ್ಧತಿಗಳನ್ನು ಅಧ್ಯಯನ ಮಾಡಿ ಮಹತ್ತರವೂ ವಿಶಿಷ್ಟವೂ ಆದ ವರದಿಯನ್ನು ಸಲ್ಲಿಸಿದೆ. ಇದರಲ್ಲಿ ಭಾರತದಲ್ಲಿಯ ಕಾರಾಗೃಹಗಳ ವ್ಯವಸ್ಥೆ ತೀರ ಹಿಂದುಳಿದಿರುವುದನ್ನು ಒತ್ತಿ ಹೇಳಿರುವುದರ ಜೊತೆಗೆ ಅನೇಕ ಶಿಫಾರಸುಗಳನ್ನೂ ಮಾಡಲಾಗಿದೆ. ಕೈದಿಯ ವ್ಯಕ್ತಿತ್ವದ ಮಾರ್ಪಾಡಿಗೆ ಬೇಕಾಗುವಂಥ ಗಾಳಿ, ಬೆಳಕು, ಆಟ, ಊಟ, ಶಿಕ್ಷಣ, ಜನಸಂಪರ್ಕ, ಕೈದಿಗಳನ್ನು ನೋಡಿಕೊಳ್ಳುವ ಕಾರಾಗೃಹದ ಸಿಬ್ಬಂದಿವರ್ಗದ ವರ್ಗೀಕರಣ, ಅವರ ಸೇವಾನಿಯಮಗಳು, ಅವರಿಗೆ ಕೊಡಬೇಕಾದ ತರಬೇತಿ ಇವುಗಳ ಬಗ್ಗೆ ಸಲಹೆಗಳಿವೆ. ರೂಢಾಪರಾಧಿ ಯಾರು ಎಂಬುದನ್ನು ವಿವರಿಸಲಾಗಿದೆ. ಇದು ಕೈದಿಗಳ ವರ್ಗೀಕರಣದಲ್ಲಿ ಮತ್ತೊಂದು ಹೆಜ್ಜೆ. ಕೈದಿಗಳಿಗೆ ತಾಂತ್ರಿಕ ತರಬೇತಿಯನ್ನು ಕೊಡುವ ಹಾಗೂ ಉತ್ಪಾದನೆ ಹೆಚ್ಚಿಸುವ ಆವಶ್ಯಕತೆಯನ್ನು ಹೇಳಲಾಗಿದೆ. ಮತದ್ವೇಷವನ್ನು ನಿರ್ಮೂಲಮಾಡುವಂಥ ಮತ್ತು ನೈತಿಕ ಪ್ರಗತಿಗೆ ಕಾರಣವಾಗುವಂಥ ಪುಸ್ತಕಗಳನ್ನು ಕೈದಿಗಳಿಗೆ ಕೊಟ್ಟು ಅವರಲ್ಲಿ ಮಾನವೀಯ ದೃಷ್ಟಿಯನ್ನೂ ಸಮಾಜದಲ್ಲಿ ಆಸಕ್ತಿಯನ್ನೂ ಹುಟ್ಟಿಸುವುದರ ಅಗತ್ಯವನ್ನೂ ಹೇಳಲಾಗಿದೆ.

ಈ ವರದಿಯ ಪ್ರಕಟಣೆ ಭಾರತದ ಕಾರಾಗೃಹಗಳ ಸುಧಾರಣೆಯ ಬಾಗಿಲನ್ನು ತೆರೆಯಿತು. ಜೈಲು ಇಲಾಖೆಯಷ್ಟೇ ಅಲ್ಲ, ಭಾರತದ ದಂಡ ನ್ಯಾಯಸೂತ್ರಗಳ ಸುಧಾರಣೆಗೂ ಈ ವರದಿ ಕಾರಣವಾಯಿತು. ಇದರ ಪ್ರಭಾವದಿಂದ ಬಾರ್ಸ್ಟಲ್ ಕಾಯಿದೆ, ಮಕ್ಕಳ ಹಾಗೂ ಪ್ರೊಬೇಷನ್ ಕಾಯಿದೆಗಳು, ಪಂಜಾಬ್ ಸಚ್ಚರಿತ ಕೈದಿಗಳ ತಾತ್ಪೂರ್ತಿಕ ಬಿಡುಗಡೆಯ ಕಾಯಿದೆ ಮುಂತಾದವು ಜಾರಿಗೆ ಬಂದುವು. ಈ ಸುಧಾರಣೆಗಳ ಪ್ರವಾಹವನ್ನು 1919ರ ಭಾರತದ ಆಡಳಿತ ಸ್ವರೂಪಕ್ಕೆ ಸಂಬಂಧಿಸಿದ ಕಾಯಿದೆ ಮಂದಗೊಳಿಸಿತು. ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದ್ದ ಕಾರಾಗೃಹಗಳ ಇಲಾಖೆ ಪ್ರಾಂತೀಯ ಸರ್ಕಾರಗಳ ಆಡಳಿತಕ್ಕೆ ಒಳಪಟ್ಟಿತು. ಅಲ್ಲಿಂದೀಚೆಗೆ ಒಂದೊಂದು ಪ್ರಾಂತ್ಯದಲ್ಲೂ ಆಗಿರುವ ಸುಧಾರಣೆಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದರೂ ಅವುಗಳ ಮೂಲ ಸ್ವರೂಪದಲ್ಲಿ ಭಿನ್ನತೆಯಿರುವುದಿಲ್ಲ.

1921-22ರಲ್ಲಿ ಭಾರತಾದ್ಯಂತ ಅಸಹಕಾರ ಚಳವಳಿ ಹಬ್ಬಿತ್ತು. ಅನೇಕ ರಾಜಕಾರಣಿಗಳು ಕೈದಿಗಳಾದರು. ಇದರಿಂದಾಗಿ ಕಾರಾಗೃಹಗಳ ಬಗ್ಗೆ ಸಾರ್ವಜನಿಕರಿಂದ ಖಂಡನೆಗಳು ಬಂದುವು; ಅವು ಕಾರಾಗೃಹದ ಸುಧಾರಣೆಗೆ ಸಹಾಯಕವಾದುವು. 1935ರ ಭಾರತ ಸರ್ಕಾರದ ಕಾಯಿದೆಯ ಮೇರೆಗೆ ಚುನಾವಣೆಗಳು ನಡೆದು, ಪ್ರಾಂತ್ಯಗಳಲ್ಲಿ ಜವಾಬ್ದಾರಿ ಸರ್ಕಾರಗಳು ಅಸ್ತಿತ್ವಕ್ಕೆ ಬಂದುದು ಕಾರಾಗೃಹಗಳ ಸುಧಾರಣೆಗೆ ಅನುಕೂಲವಾಯಿತು. ಸುಮಾರು ಎರಡೂಕಾಲು ವರ್ಷಗಳ ಅವಧಿಯಲ್ಲಿ ಅನೇಕ ಪ್ರಾಂತ್ಯಗಳಲ್ಲಿ ಪ್ರೊಬೇಷನ್ ಮತ್ತು ಬಾರ್ಸ್ಟಲ್ ಪದ್ಧತಿಗಳ ಜಾರಿ, ಕೈದಿಗಳ ವರ್ಗೀಕರಣ ಮುಂತಾದ ಹಲವು ಸುಧಾರಣೆಗಳು ಆದುವು. 1939ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದ ಮೇಲೆ ಪ್ರಾಂತ್ಯಗಳಲ್ಲಿದ್ದ ಸರ್ಕಾರಗಳು ಅಧಿಕಾರವನ್ನು ಬಿಟ್ಟುಕೊಟ್ಟುವು. ಭಾರತೀಯ ದಂಡ ಸುಧಾರಣಾ ಸಂಸ್ಥೆ 1940ರಲ್ಲಿ ಮುಂಬಯಿಯಲ್ಲಿ ಸಭೆ ಸೇರಿತು. ಈ ಸಂಸ್ಥೆಯ ಕಾರ್ಯವ್ಯಾಪ್ತಿಯಲ್ಲಿ ಕಾರಾಗೃಹ ಸುಧಾರಣೆಯೂ ಸೇರಿತ್ತು. 1942ರ ಸತ್ಯಾಗ್ರಹ ಕಾಳ್ಗಿಚ್ಚಿನಂತೆ ಹಬ್ಬಿದುದು ಕಾರಾಗೃಹಗಳಿಗೆ ಒಂದು ಮಹಾ ಸಮಸ್ಯೆ ಆಯಿತು. ರಾಜಕೀಯ ಕೈದಿಗಳ ಸಂಖ್ಯೆ ಮಿತಿಮೀರಿ, ಇತರ ಕೈದಿಗಳ ಸ್ಥಿತಿ ಕೆಟ್ಟಿತು. ಆದರೂ ಭಾರತ ಸ್ವತಂತ್ರವಾದ ಮೇಲೆ ಕಾರಾಗೃಹಗಳ ಸುಧಾರಣೆಗೆ ಗಮನ ಕೊಡಲು ಈ ಹಿನ್ನೆಲೆ ಸಹಾಯಕವಾಯಿತು.

ಇಂಗ್ಲಿಷರ ಆಡಳಿತದಲ್ಲಿದ್ದ ಪ್ರಾಂತ್ಯಗಳಲ್ಲಿ ಕಾರಾಗೃಹಗಳು ಬಂದ ಜಾಡಿನಲ್ಲಿಯೇ ದೇಶೀಯ ಸಂಸ್ಥಾನಗಳಲ್ಲಿಯ ಜೈಲುಗಳೂ ನಡೆದು ಬಂದುವು. ಉತ್ತರ ಪ್ರದೇಶ, ಮುಂಬಯಿ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಆದಷ್ಟು ಪ್ರಗತಿ ಈ ಸಂಸ್ಥಾನಗಳಲ್ಲಿ ಆಗಿರಲಿಲ್ಲ. 1943ರಿಂದ ಮೈಸೂರು ಸಂಸ್ಥಾನದಲ್ಲಿ ಸುಧಾರಣೆಗಳು ಆಗುತ್ತಾ ಬಂದವು. ಹೈದರಾಬಾದ್, ಮೈಸೂರು, ಕಾಶ್ಮೀರ ಮುಂತಾದ ಸಂಸ್ಥಾನಗಳಲ್ಲಿ ಆಗಿದ್ದ ಪ್ರಗತಿಗೆ ಆಯಾ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾರಾಗೃಹಗಳ ಬಗೆಗಿನ ಕಾಯಿದೆಗಳು, ಮಕ್ಕಳ ರಕ್ಷಣೆಯ ಕಾಯಿದೆಗಳು, ಪ್ರೊಬೇಷನ್ ಮತ್ತು ಬಾರ್ಸ್ಟಲ್ ಕಾಯಿದೆಗಳು ಸಾಕ್ಷಿಗಳಾಗಿವೆ.

ಸ್ವತಂತ್ರ ಭಾರತದ ಸಂವಿಧಾನದ ಪ್ರಕಾರ ಕಾರಾಗೃಹಗಳು ಮತ್ತು ಅವುಗಳ ಆಡಳಿತ-ಇದು ರಾಜ್ಯಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಇವು ರಾಜ್ಯಗಳ ನಿಯಂತ್ರಣಕ್ಕೊಳಪಟ್ಟಿವೆ. ಆದರೂ ಕೇಂದ್ರ ಸರ್ಕಾರ ಈ ವಿಷಯದಲ್ಲಿ ಆಸಕ್ತಿ ವಹಿಸುತ್ತ ಬರುತ್ತಿದೆ. ಕೇಂದ್ರ ಸರ್ಕಾರ ಆರಿಸಿದ ಕೆಲವು ಕಾರಾಗೃಹಗಳ ಅಧಿಕಾರಿಗಳಿಗೆ ತರಬೇತಿ ಕೊಡಲು ಮತ್ತು ಕೈದಿಗಳ ಸುಧಾರಣೆಗೆ ಪುರೋಗಾಮಿ ಕ್ರಮಗಳನ್ನು ಸೂಚಿಸಲು ವಿದೇಶೀ ತಜ್ಞರನ್ನು ಕರೆಸಿಕೊಂಡಿತ್ತು. 1952ರಲ್ಲಿ ಅಖಿಲ ಭಾರತ ಪ್ರಾತಿನಿಧ್ಯವುಳ್ಳ ಎಲ್ಲ ರಾಜ್ಯಗಳ ಕಾರಾಗೃಹಗಳ ಇನ್‌ಸ್ಪೆಕ್ಟರ್-ಜನರಲರ ಸಭೆಯನ್ನು ಮುಂಬಯಿಯಲ್ಲಿ ಏರ್ಪಡಿಸಲಾಗಿತ್ತು. ಈ ಕ್ರಮಗಳ ಪರಿಣಾಮವಾಗಿ 1957ರಲ್ಲಿ ಅಖಿಲಭಾರತ ಕಾರಾಗೃಹಗಳ ಕೈಪಿಡಿ ಸಮಿತಿಯ ನೇಮಕವಾಯಿತು. ಆ ಸಮಿತಿ 1959ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಅನೇಕ ಸುಧಾರಣೆಗಳನ್ನು ರಾಜ್ಯಸರ್ಕಾರಗಳು ಕಾರ್ಯಗತಗೊಳಿಸಬೇಕಾಗಿದೆ. ಈ ವರದಿಯ ಮೇರೆಗೆ ಕೇಂದ್ರಸರ್ಕಾರ 1961ರಲ್ಲಿ ಸುಧಾರಣಾ ಶೋಧನ ಸೇವೆಗಳ ಕೇಂದ್ರ ಕಾರ್ಯಾಲಯವನ್ನು ದೆಹಲಿಯಲ್ಲಿ ಸ್ಥಾಪಿಸಿದೆ. ಕೇಂದ್ರ ಸರ್ಕಾರದ 1958ರ ಪ್ರೊಬೇಷನ್ ಕಾಯಿದೆ ಮತ್ತು 1960ರ ಮಕ್ಕಳ ಕಾಯಿದೆಗಳು ಕಾರಾಗೃಹಗಳ ಪ್ರಗತಿಯಲ್ಲಿ ಮಹತ್ತ್ವದ ಹೆಜ್ಜೆಗಳಾಗಿವೆ.

ಭಾರತದ ಇತರ ರಾಜ್ಯಗಳಂತೆ ಕರ್ನಾಟಕ ರಾಜ್ಯದಲ್ಲಿಯೂ ಕಾರಾಗೃಹಗಳನ್ನು ಕೇಂದ್ರ ಕಾರಾಗೃಹಗಳು, ಜಿಲ್ಲಾ ಕಾರಾಗೃಹಗಳು, ಉಪಕಾರಾಗೃಹಗಳು ಮತ್ತು ಬಾರ್ಸ್ಟಲ್ ಶಾಲೆಗಳು, ಅನಾವೃತ ಕಾರಾಗೃಹಗಳು ಎಂದು ವರ್ಗೀಕರಣ ಮಾಡಲಾಗಿದೆ. ಬೆಳಗಾಂವಿ, ಬೆಂಗಳೂರು, ಗುಲ್ಬರ್ಗ ಮತ್ತು ಬಳ್ಳಾರಿ ಕೇಂದ್ರ ಕಾರಾಗೃಹಗಳು ಪ್ರಗತಿಯ ಮಾರ್ಗದಲ್ಲಿವೆ. ಧಾರವಾಡದ ಬಾಲದೋಷಿ ಶಾಲೆಯಲ್ಲಿ ಸಾಹಿತ್ಯ ವಿದ್ಯಾಭ್ಯಾಸ ಮತ್ತು ಔದ್ಯೋಗಿಕ ಶಿಕ್ಷಣಗಳಿಗೆ ಅವಕಾಶ ಮಾಡಲಾಗಿದೆ. ಬಾಲದೋಷಿಗಳನ್ನು ಮತ್ತು ಸ್ತ್ರೀ ಮತ್ತು ಪುರುಷ

ಕೈದಿಗಳನ್ನು ಬೇರೆಬೇರೆ ಇಡುವ ಪದ್ಧತಿ ಇಲ್ಲಿಯ ಕಾರಾಗೃಹಗಳಲ್ಲಿಯೂ ಇದೆ. ಕೈದಿಗಳನ್ನು ಮೂರು ವಿಧವಾಗಿ ವಿಂಗಡಿಸುವ ಪದ್ಧತಿ ಇದೆ: ಅಪರಾಧ ಮಾಡುವುದನ್ನೇ ಸ್ವಭಾವವಾಗಿ ಉಳ್ಳಂಥ ಕೈದಿಗಳು (ದುಷ್ಟರು), ಒಳ್ಳೆಯವರು ಮತ್ತು ಒಳ್ಳೆಯವರಾಗಬಲ್ಲ ಕೈದಿಗಳು. ಹೀಗೆ ವರ್ಗೀಕರಣ ಮಾಡಿದ ಮೇಲೆ ಆಯಾ ವರ್ಗದವರನ್ನು ಇಡುವುದಕ್ಕೆ ನಿರ್ದಿಷ್ಟಗೊಳಿಸಿದ ಕಾರಾಗೃಹಗಳಿಗೆ ಅವರನ್ನು ಕಳಿಸಲಾಗುವುದು. ಈ ಎಲ್ಲ ರೀತಿಯ ಕೈದಿಗಳ ಬಗ್ಗೆ ಅವರ ವೈಯಕ್ತಿಕ ವಿವರಪಟ್ಟಿಯನ್ನು ತಯಾರಿಸಿಡಲಾಗುತ್ತದೆ. ಕೈದಿಗಳಿಗೆ ಕಾರಾಗೃಹದಲ್ಲಿ ಅವರ ನಡೆವಳಿಕೆಯನ್ನನುಸರಿಸಿ ಹಲವು ರಿಯಾಯಿತಿಗಳನ್ನು ಕೊಡಲಾಗುತ್ತದೆ.

ಭಾರತದ ಎಲ್ಲ ರಾಜ್ಯಗಳಲ್ಲಿಯ ಕಾರಾಗೃಹಗಳಲ್ಲಿ ಕೈದಿಗಳಿಗೆ ದೊರಕುವ ಸೌಕರ್ಯಗಳು ಹೆಚ್ಚು ಕಡಿಮೆ ಒಂದೇ ತೆರನಾಗಿವೆ. ಜೈಲುಗಳಲ್ಲಿ ಅಡುಗೆಮನೆಗಳಿರುತ್ತವೆ. ಇಲ್ಲಿ ದೊರೆಯುವ ಊಟ ಸಾಧಾರಣ ಮಟ್ಟದ್ದು. ಆರೋಗ್ಯವನ್ನು ಕಾಯ್ದುಕೊಳ್ಳುವುದಕ್ಕೆ ಆಟದ ಬಯಲುಗಳು ಉಂಟು. ಪ್ರಾಥಮಿಕ ಮಟ್ಟದ ಶಿಕ್ಷಣವನ್ನು ಸಾಧಾರಣವಾಗಿ ಕೈದಿಗಳಿಗೆ ಕೊಡಲಾಗುತ್ತದೆ. ಗ್ರಂಥಾಲಯಗಳೂ ಸಾಧಾರಣ ಚಿಕಿತ್ಸಾಲಯಗಳೂ ಅಲ್ಲದೆ ಮನೋರೋಗಗಳಂಥ ಕಾಯಿಲೆಗಳ ಚಿಕಿತ್ಸೆಗೂ ಸೌಲಭ್ಯಗಳಿವೆ. ಮನರಂಜನೆ, ಕ್ರೀಡಾಕೂಟ ಮತ್ತು ಚರ್ಚಾಕೂಟಗಳಿಗೂ ಏರ್ಪಾಟುಗಳುಂಟು. ಕೈದಿಗಳಿಗೆ ವೃತ್ತಿತರಬೇತಿ ಕೊಡಲಾಗುತ್ತದೆ. ಸಾಮಾನ್ಯವಾಗಿ ಜೈಲುಗಳಿಗೆ ಹೊಂದಿಕೊಂಡು ಕೈದೋಟಗಳು ಅಥವಾ ಕೃಷಿಕ್ಷೇತ್ರಗಳು ಇರುತ್ತವೆ.

ಕಾರಾಗೃಹಗಳ ಕ್ಲಿಷ್ಟ ಸಮಸ್ಯೆಗಳಲ್ಲಿ ಕೈದಿಗಳ ಲೈಂಗಿಕ ಸಮಸ್ಯೆಯೂ ಒಂದು. ಅನೈಸರ್ಗಿಕ ಪ್ರಮಾದಗಳು ನಡೆಯದಂತೆ ಕಾರಾಗೃಹ ಸಿಬ್ಬಂದಿಯವರು ಜಾಗರೂಕತೆ ವಹಿಸುತ್ತಾರೆ. ದೀರ್ಘಾವಧಿಯ ಸೆರೆವಾಸದ ಅನಂತರವೂ ದಾಂಪತ್ಯಜೀವನ ಖಿಲವಾಗದೆ ಇರುವುದು ವಿರಳ. ಅಮೆರಿಕ, ರಷ್ಯ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಪತಿ ಅಥವಾ ಪತ್ನಿಯರು ತಮ್ಮ ಜೀವನ ಸಂಗಾತಿಗಳನ್ನು ಕಾಣುವ ಮತ್ತು ಅವರ ದಾಂಪತ್ಯ ಜೀವನಕ್ಕೆ ನೆರವಾಗುವ ಅನುಕೂಲತೆಗಳುಂಟು. ದಕ್ಷಿಣ ಅಮೆರಿಕದ ದೇಶಗಳಲ್ಲೂ ಈ ಅನುಕೂಲತೆಗಳುಂಟು. ಸ್ವೀಡನಿನಲ್ಲಿ ಈ ಉದ್ದೇಶಕ್ಕಾಗಿ ಉತ್ತಮ ಸ್ವಭಾವದ ಕೈದಿಗಳು ಮನೆಗೆ ಹೋಗಲು ರಜ ಕೊಡಲಾಗುವುದು. ಭಾರತದಲ್ಲಿ, ದಾಂಪತ್ಯಜೀವನದಲ್ಲಿ ಅನುರಾಗ, ಸ್ವಜನರಲ್ಲಿ ಪ್ರೀತಿ ಹಗೂ ಸಾಮಾಜಿಕ ಜೀವನದಲ್ಲಿಯ ಆಸಕ್ತಿಗಳು ಕ್ಷೀಣವಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ನಂಬಿಕೆಯ ವಾಗ್ದಾನದ ಮೇಲೆ ಬಿಡುಗಡೆ ಮಾಡುವ (ಪರೋಲ್) ಪದ್ಧತಿ ಮತ್ತು ಗೈರುಹಾಜರಿಯ ರಜೆಗಳನ್ನು ಕೊಡುವ ಪದ್ಧತಿಗಳನ್ನು ಜಾರಿಗೆ ತರಲಾಗಿದೆ. ಒಳ್ಳೆಯ ನಡತೆಗೆ ಶಿಕ್ಷೆಯನ್ನು ಮಾಫಿ ಮಾಡುವ ಪದ್ಧತಿಯೂ ಆಚರಣೆಯಲ್ಲಿದೆ.

ಭಾರತದಲ್ಲಿಯ ಕಾರಾಗೃಹಗಳಲ್ಲಿ ಸಾಮಾನ್ಯವಾಗಿ ನೂಲುವುದು, ನೇಯ್ಗೆ, ಹೊಲಿಗೆ, ಜಮಖಾನೆ ತಯಾರಿಕೆ, ಡೇರೆ ತಯಾರಿಕೆ, ಬಡಗಿ ಕೆಲಸ, ಬೆತ್ತದ ಕೆಲಸ, ಮುದ್ರಣ, ಸಾಬೂನು ತಯಾರಿಕೆ ಮುಂತಾದ ಕೈಗಾರಿಕೆಗಳಲ್ಲಿ ಕೈದಿಗಳನ್ನು ಕೆಲಸಕ್ಕೆ ತೊಡಗಿಸಲಾಗುತ್ತದೆ. ತೆರಿಗೆ ಸಲುವಳಿ ಮಾಡುವ ಶ್ರೀಸಾಮಾನ್ಯನಿಗೆ ಭಾರ ಕಡಿಮೆ ಮಾಡುವ ಮತ್ತು ಬಿಡುಗಡೆಯ ಅನಂತರ ಕೈದಿಯ ಪುನರ್ವಸತಿಗೆ ನೆರವಾಗುವ ಉದ್ದೇಶದಿಂದ ಕೈದಿಗಳನ್ನು ಈ ಕೈಗಾರಿಕೆಗಳಲ್ಲಿ ದುಡಿಯಲು ತೊಡಗಿಸಲಾಗಿದೆ. ಅವರಿಗೆ ಕೂಲಿ ಕೊಡಲಾಗುತ್ತದೆ. ತಯಾರಿಸಿದ ವಸ್ತುಗಳನ್ನು ಸರ್ಕಾರದ ಉಪಯೋಗಕ್ಕೂ ಸಾರ್ವಜನಿಕರಿಗೆ ಮಾರಾಟಕ್ಕೂ ಒದಗಿಸಲಾಗುತ್ತದೆ. ಜಪಾನ್, ಅಮೆರಿಕ, ಇಂಗ್ಲೆಂಡ್, ಭಾರತ, ಸ್ವಿಟ್ಜರ್ಲೆಂಡ್ ಮುಂತಾದ ದೇಶಗಳಲ್ಲಿ ದುಡಿಮೆಯ ಕಾಲವನ್ನು ನಿಗದಿಗೊಳಿಸಲಾಗಿದೆ. ಅಮೆರಿಕದಲ್ಲಿ ಭಾನುವಾರದ ರಜೆಯೇ ಅಲ್ಲದೆ ಆರೋಗ್ಯ ಪರೀಕ್ಷೆಗೂ ರಜೆ ಕೊಡಲಾಗುತ್ತದೆ.

ಬಿಡುಗಡೆ ಹೊಂದಿದ ಕೈದಿಗಳಿಗೆ ಸಹಾಯ ನೀಡುವ ಯೋಜನೆಯನ್ನು ಅಮೆರಿಕದಲ್ಲಿ ನ್ಯೂಯಾರ್ಕಿನ ಕಾರಾಗೃಹ ಸಂಸ್ಥೆ 1846ರಲ್ಲಿ ಆರಂಭಿಸಿತು. ಬಿಡುಗಡೆ ಹೊಂದಿದ ಕೈದಿಗಳಿಗೆ ಇಟಲಿ, ಇಂಗ್ಲೆಂಡ್, ಮುಂತಾದ ಐರೋಪ್ಯ ದೇಶಗಳಲ್ಲಿ ಅನೇಕ ರೀತಿಯ ಸಹಾಯಗಳನ್ನು ಕೊಡಲಾಗುತ್ತದೆ. ಭಾರತದ ಬಹುತೇಕ ರಾಜ್ಯಗಳಲ್ಲಿ ಕೈದಿಗಳ ಬಿಡುಗಡೆಯ ಅನಂತರ ಅವರಿಗೆ ಸಹಾಯ ಮಾಡಲು ಸಂಸ್ಥೆಗಳು ಇವೆ. ಆದರೆ ದೊರಕುವ ಸಹಾಯ ಸಹಕಾರಗಳು ಅತ್ಯಲ್ಪ.

ಪ್ರಪಂಚದ ಎಲ್ಲ ದೇಶಗಳಲ್ಲೂ ಕಾರಾಗೃಹ ಪದ್ಧತಿ ಉಂಟು. ಕೈದಿಗಳ ಪುನರ್ವಸತಿಯೇ ಕಾರಾಗೃಹಗಳ ಉದ್ದೇಶವಾಗಬೇಕು. ಈ ದಿಶೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಪರಿಶೀಲನೆ ನಡೆಯುತ್ತ ಬಂದಿದೆ. 1872ರಲ್ಲಿಯೇ ಲಂಡನಿನಲ್ಲಿ ಅಂತಾರಾಷ್ಟ್ರೀಯ ಕಾರಾಗೃಹ ಕಾಂಗ್ರೆಸ್ಸಿನ ಸಭೆ ಸೇರಿತ್ತು. ಆದರೆ ಆಗ ಇಂಗ್ಲೆಂಡ್ ಅದರಲ್ಲಿ ಭಾಗವಹಿಸಿರಲಿಲ್ಲ. 1910ರಲ್ಲಿ ವಾಷಿಂಗ್ಟನ್ನಿನಲ್ಲಿ ಜರುಗಿದ ಸಭೆಗೆ ಇಂಗ್ಲೆಂಡಿನ ಕಾರಾಗೃಹಗಳ ಕಮಿಷನರ್ ಆಗಿದ್ದ ಆರ್. ಇ. ಬ್ರೈಸ್ ಅಧ್ಯಕ್ಷನಾಗಿದ್ದ ಕಾರಣ, ಆ ದೇಶವೂ ಕಾಂಗ್ರೆಸ್ಸಿಗೆ ಸೇರಿಕೊಂಡಿತು. 1925ರಲ್ಲಿ ಮತ್ತೆ ಈ ಸಭೆ ಲಂಡನಿನಲ್ಲಿ ಸೇರಿತು. ಈಗ ಈ ಬಗೆಯ ಚಟುವಟಿಕೆಗಳನ್ನು ವಿಶ್ವಸಂಸ್ಥೆ ವಹಿಸಿಕೊಂಡಿದೆ.

ಅಲೆಕ್ಸಾಂಡರ್ ಪ್ಯಾಟರ್ಸನ್ನನ, ಕಾರಾಗೃಹ ಏಕೆ? ಎಂಬ ಕರೆ ಈಗ ವಿಶ್ವದ ಅನೇಕ ದೇಶಗಳಲ್ಲಿ ಮಾರ್ದನಿ ಕೊಡುತ್ತಿದೆ. ಅತಿ ಹೆಚ್ಚಿನ ಭದ್ರತೆಯ ಕಾರಾಗೃಹ ಪದ್ಧತಿಯ ಪ್ರಭಾವ ಕಡಿಮೆಯಾಗಹತ್ತಿದೆ. ಅನಾವೃತ ಕಾರಾಗೃಹಗಳು ಈಗ ಅಮೆರಿಕ, ಇಂಗ್ಲೆಂಡ್, ಇಟಲಿ, ಗ್ರೀಸ್, ಭಾರತ, ರಷ್ಯ, ಸ್ವೀಡನ್, ಸ್ವಿಟ್ಜರ್ಲೆಂಡ್ ಮುಂತಾದ ಅನೇಕ ದೇಶಗಳಲ್ಲಿ ಇವೆ. ಹೀಗೆ ವಿಶ್ವದ ಕಾರಾಗೃಹಗಳು ತಮ್ಮ ಕೈದಿಗಳ ಸುಧಾರಣೆಯ ಜಾಡಿನಲ್ಲಿ ನಡೆಯುತ್ತ ಮಾನವನ ಮತಿವಿಕಲತೆಯ ಫಲವಾದ ಅಪರಾಧಗಳ ನಿಯಂತ್ರಣಕ್ಕೆ ಸಹಾಯ ಮಾಡುತ್ತಿವೆ. ಆಧುನಿಕ ಕಾರಾಗೃಹಗಳು ಸುವ್ಯವಸ್ಥಿತವಾಗಿದ್ದು ಅಲ್ಲಿ ಅಪರಾಧಿಗಳನ್ನು ಸುಧಾರಿಸುವತ್ತ ಗಮನಹರಿಸಲಾಗಿದೆ. (ಎಲ್.ಎಸ್.ಜೆ.)

**ಕಾರಾಗೃಹದಲ್ಲಿ ಶಿಕ್ಷಣ :** ಕಾರಾಗೃಹದ ಕಾರ್ಯನಿರ್ವಹಣೆ ಮೂರು ಬಗೆಯದು: ರಕ್ಷಣಾತ್ಮಕ, ಪ್ರತಿರೋಧಾತ್ಮಕ ಹಾಗೂ ಸುಧಾರಣಾತ್ಮಕ. ಅಪರಾಧಿಗೆ ಶಿಕ್ಷೆ ವಿಧಿಸುವುದೇ ಬಂಧನದ ಹಿನ್ನೆಲೆಯಲ್ಲಿ ಅಡಗಿರುವ ಮೂಲತತ್ತ್ವವಾದ್ದರಿಂದ ಕಾರಾಗೃಹವನ್ನು ಶಿಕ್ಷೆಯ ನಿವಾಸವೆಂದೂ ಅಪರಾಧವನ್ನು ಪ್ರೋತ್ಸಾಹಿಸದಂತೆ ತಡೆಗಟ್ಟುವ, ಜನರ ಆಸ್ತಿಪಾಸ್ತಿಯನ್ನು ರಕ್ಷಿಸುವ ಗೃಹವೆಂದೂ ಪರಿಗಣಿಸಲಾಗುತ್ತಿತ್ತು. ಆದರೆ ನಾಗರಿಕತೆ ಮುಂದುವರಿದಂತೆ ಬಂಧನದ ಹಿನ್ನೆಲೆಯ ತತ್ತ್ವಗಳೂ ಬದಲಾದವು. ಶಾಂತಿಗೆ ಭಂಗ ತರುವವರನ್ನು ಕೇವಲ ಶಿಕ್ಷಿಸುವುದಕ್ಕೆ ಬದಲು, ಅವರನ್ನು ಯೋಗ್ಯ ಪ್ರಜೆಗಳನ್ನಾಗಿ ಮಾಡುವ ಬಗ್ಗೆ ಈಚೆಗೆ ಹೆಚ್ಚಿನ ಗಮನ ಕೊಡಲಾಗುತ್ತಿದೆ. ಈ ಹೊಸ ಮಾರ್ಗ ಸುಭದ್ರವಾದ ಹಾಗೂ ವ್ಯಾಪಕ ಶಿಕ್ಷಣದ ವ್ಯವಸ್ಥೆಯನ್ನವಲಂಬಿಸಿದೆ. ಕಳ್ಳತನ, ಕೊಲೆಸುಲಿಗೆಗಳ ಮೂಲ ಬಹುತೇಕ ಅಶನವಸನಗಳ ಅಭಾವವೇ ಆಗಿರುವುದರಿಂದ ನಿರುದ್ಯೋಗದ ವಿರುದ್ಧ ಹಾಗೂ ರೋಗರುಜಿನಗಳ ವಿರುದ್ಧ ರಕ್ಷಣೆ ನೀಡುವುದರಿಂದ, ವೇತನದ ಮಟ್ಟವನ್ನು ಹೆಚ್ಚಿಸುವುದರ ಮೂಲಕ ಜೀವನದ ಮಟ್ಟವನ್ನು ಹೆಚ್ಚಿಸಬೇಕು ಎಂಬ ಭಾವನೆ ಬೆಳೆಯುತ್ತಿದೆ. ಹೀಗೆ ಮಾಡಿದಲ್ಲಿ ಅಪರಾಧ ಮನೋಧರ್ಮ ಕ್ರಮೇಣ ಕಡಿಮೆಯಾಗುತ್ತದಲ್ಲದೆ ಸರಿಯಾದ ಶಿಕ್ಷಣದಿಂದ ಅಪರಾಧಿಗಳೂ ಕ್ರಮೇಣ ನಾಗರಿಕರಾಗುವ ಸಂಭವ ಹೆಚ್ಚುಹೆಚ್ಚಾಗಿ ತೋರುತ್ತಿದೆ.

ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಸಲುವಾಗಿ ಹಾಗೂ ದುರಭ್ಯಾಸಿಗಳನ್ನು ತಿದ್ದಿ ಸರಿಪಡಿಸುವ ಸಲುವಾಗಿ ಇಂಗ್ಲೆಂಡಿನಲ್ಲಿ ಶಿಕ್ಷಾಗೃಹಗಳನ್ನು ಸ್ಥಾಪಿಸಲಾಯಿತು. ವೃತ್ತಿ, ಶಿಕ್ಷಣ ಹಾಗೂ ಧಾರ್ಮಿಕ ಉಪದೇಶಗಳ ಮೂಲಕ ಅಪರಾಧಿಗಳನ್ನು ಸತ್ಪ್ರಜೆಗಳನ್ನಾಗಿ ಮಾಡುವುದೇ ಇಂಥ ಸಂಸ್ಥೆಗಳ ಮುಖ್ಯ ಉದ್ದೇಶವಾಗಿತ್ತು. ಸಿ. ಬಿ. ಬೆಕಾರಿಯಾ ಮತ್ತು ಹೋವರ್ಡ್‍ರಂಥ ಅನೇಕ ಸಮಾಜ ಸುಧಾರಕರು ತಮ್ಮ ಗ್ರಂಥಗಳ ಮೂಲಕ ಪ್ರಪಂಚದ ಕರ್ತವ್ಯಜ್ಞಾನವನ್ನು ಬಡಿದೆಬ್ಬಿಸಿದರು. ಶಿಕ್ಷೆಯಿಂದಲೇ ಜನ ಉತ್ತಮರಾಗುವುದಿಲ್ಲ, ಯೋಗ್ಯ ಶಿಕ್ಷಣದ ಮೂಲಕ ಅಪರಾಧಿಗಳನ್ನು ತಿದ್ದಬಹುದು ಎನ್ನುವುದನ್ನು ಅನುಭವ ತೋರಿಸಿಕೊಟ್ಟಿದೆ. ಕಾರಾಗೃಹಗಳ ಕಮಿಷನರ್ ಅಲೆಗ್ಸಾಂಡರ್ ಪ್ಯಾಟರ್‌ಸನ್ನನ ಪ್ರಯತ್ನಗಳಿಂದಾಗಿ ಅನೇಕ ಬದಲಾವಣೆಗಳಾದವು. ಕಾರಾಗೃಹ ಜೀವನದ ದುಃಸ್ಥಿತಿಯನ್ನು ತೊಡೆದುಹಾಕಲಾಯಿತು. ಸಮಾಜದಲ್ಲಿ ಉಪಯುಕ್ತ ಸ್ಥಾನವನ್ನು ಗಳಿಸಿಕೊಳ್ಳುವಂತೆ ಕೈದಿಗಳಿಗೆ ತರಬೇತು ನೀಡುವತ್ತ ಗಮನ ಹರಿಸಲಾಯಿತು. ಎಚ್ಚರಿಕೆಯಿಂದ ಆಯ್ದ ಸಿಬ್ಬಂದಿ ವರ್ಗದವರು ಶಿಕ್ಷಣ ಹಾಗೂ ಮನರಂಜನೆಯ ಬಗ್ಗೆ ಕೈದಿಗಳ ಮೇಲೆ ತಮ್ಮ ವೈಯಕ್ತಿಕ ಪ್ರಭಾವ ಬೀರಬೇಕೆಂದೂ ಸಮುದಾಯದ ಹೊರಗಿಂತ ಆಯಲಾದ ಸ್ತ್ರೀಪುರುಷರು ಸಮಾಜ ಸೇವೆಯನ್ನು ತಾವೇ ಸ್ವಇಚ್ಛೆಯಿಂದ ಮಾಡಬೇಕೆಂದೂ ಒತ್ತಿ ಹೇಳಲಾಗಿದೆ. ದ್ವಿತೀಯ ಮಹಾಯುದ್ಧಾನಂತರ ಅವಧಿಯಲ್ಲಿ ಇಂಗ್ಲಿಷ್ ಕಾರಾಗೃಹ ಸಾಕಷ್ಟು ಪ್ರಗತಿಯನ್ನು ಸಾಧಿಸಿತು. ಶಿಕ್ಷಣದ ಜೊತೆಗೆ ಗ್ರಂಥಾಲಯ ಸೇವೆಯನ್ನು ಅವಕ್ಕೆ ಸ್ಥಳೀಯ ವಿದ್ಯಾಧಿಕಾರಿಗಳು ದೊರಕಿಸಿಕೊಟ್ಟಿದ್ದಾರೆ.

ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ದಂಡಸಂಸ್ಥೆ (ಪೀನಲ್ಲ ಇನ್‍ಸ್ಟಿಟ್ಯೂಷನ್) ರಾಜ್ಯಶಿಕ್ಷಾ ಇಲಾಖೆಗಳ ಹತೋಟಿಗೊಳಪಟ್ಟಂತೆ ಆರಂಭಿಕ ಶಿಕ್ಷಣವನ್ನು ಒದಗಿಸಿತು. ಹಿಂದಿನಿಂದಲೂ ಅಪರಾಧಿಗಳಿಗೆ ಶೈಕ್ಷಣಿಕ ಹಾಗೂ ವೃತ್ತಿಪರ ಶಿಕ್ಷಣವನ್ನು ನೀಡಲಾಗುತ್ತಿತ್ತು. ಸಾಮಾನ್ಯ ವಯಸ್ಕರಿರುವ ಕಾರಾಗೃಹ ಶಾಲೆಗಳಲ್ಲಿ ತರಬೇತು ಪಡೆಯದ ಉಪಾಧ್ಯಾಯರು ಮಕ್ಕಳಿಗಾಗಿ ರಚಿತವಾದ ಪಠ್ಯಪುಸ್ತಕಗಳನ್ನೇ ಉಪಯೋಗಿಸಿ ಪಾಠ ಹೇಳಿಕೊಡುತ್ತಿದ್ದರು. ಸಾಮಾನ್ಯ ಶಿಕ್ಷಣಕ್ಕಿಂತಲೂ ವೃತ್ತಿಪರ ಶಿಕ್ಷಣದ ಮಟ್ಟ ಹೆಚ್ಚಿನದಾಗಿತ್ತು. ಹಲವು ಸಂಸ್ಥೆಗಳಲ್ಲಿ ಇದು ಔದ್ಯೋಗಿಕ ಹಾಗೂ ವ್ಯವಸಾಯ ಚಟುವಟಿಕೆಗಳಿಂದ ಕೂಡಿತ್ತು. ಕಾರಾಗೃಹಗಳಲ್ಲಿನ ಪುಸ್ತಕ ಭಂಡಾರ ದೈವಿಕ ಹಾಗೂ ಧಾರ್ಮಿಕ ಸಾಹಿತ್ಯದಿಂದ ತುಂಬಿ ಹೋಗಿತ್ತು. ಆದರೆ ಕಾರಾಗೃಹದಲ್ಲಿ ಅಲ್ಪ ಕಾಲಾವಧಿಯವರೆಗೆ ಇರುವ ಕೈದಿಗಳ ಶಿಕ್ಷಣದ ಬಗ್ಗೆ ಯಾವ ಅನುಕೂಲವೂ ಇರಲಿಲ್ಲ. ಕೈದಿಯನ್ನು ಸಮಾಜಯೋಗ್ಯನನ್ನಾಗಿ ಮಾಡುವ ಕಾರ್ಯವನ್ನು ಶೈಕ್ಷಣಿಕ ಕಾರ್ಯವೆಂದು ಭಾವಿಸಲಾಗಿತ್ತು. ಸ್ವೋಪಕ್ರಮದ ವಿಕಾಸ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಕೈದಿಯಲ್ಲಿ ಉಂಟುಮಾಡುವುದೇ ಈ ಕಾರ್ಯದ ಮುಖ್ಯೋದ್ದೇಶವಾಗಿತ್ತು. ಸೋವಿಯತ್ ಒಕ್ಕೂಟದ ವಿನಾ ಉಳಿದೆಲ್ಲ ರಾಷ್ಟ್ರಗಳಲ್ಲೂ

ದಂಡನೆಯನ್ನು ಕೈಗೊಳ್ಳಬೇಕಾದಾಗಲೆಲ್ಲ ಧಾರ್ಮಿಕ ಬೋಧನೆ ಅಗತ್ಯವೆಂದು ಪರಿಗಣಿಸಲಾಗಿತ್ತು.

ಯುವಕರ ಮನಸ್ಸು ಅಪಕ್ವತೆಯಿಂದ ಕೂಡಿರುತ್ತದೆ. ಬಹು ಸುಲಭವಾಗಿ ಅದನ್ನು ಹೇಗೆ ಬೇಕಾದರೂ ತಿರುಗಿಸಬಹುದು. ತರುಣ ಅಪರಾಧಿಗಳ ಬಗ್ಗೆ ವಿಶೇಷ ಎಚ್ಚರಿಕೆ ವಹಿಸುವುದು ಅಗತ್ಯವಾಗುತ್ತದೆ. ಇವರನ್ನು ಹಿರಿಯ ಅಧಿಕಾರಿಗಳಿಂದ ಪ್ರತ್ಯೇಕಿಸಬೇಕಾಗುತ್ತದೆ. ಇವರನ್ನು ಹಿರಿಯರ ಮೇಲ್ವಿಚಾರಣೆಗೆ ಒಳಪಟ್ಟಂತೆ ರಿಮ್ಯಾಂಡ್ ಹೋಂನಲ್ಲಿ ಇಡುವುದು ವಾಡಿಕೆ. ತರುಣರಿಗೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ನೈತಿಕವಾಗಿ ಶಿಕ್ಷಣ ನೀಡಲು ಭಾರತದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವುದು ಬಾರ್ಸ್ಟಲ್ ಶಾಲೆಗಳು. ಬಾರ್ಸ್ಟಲ್ ಶಾಲೆಯ ವಾತಾವರಣ ಬಾಲಾಪರಾಧಿಗಳ ಸುಧಾರಣೆಗೆ ನೆರವಾಗುತ್ತದೆ. ಏಕೆಂದರೆ ಸಿಬ್ಬಂದಿ ವರ್ಗದವರೂ ನಿವಾಸಿಗಳೂ ಸಂತೋಷದಿಂದ ಹಾಗೂ ಶ್ರದ್ಧೆಯಿಂದ ಅಲ್ಲಿ ಕೆಲಸ ಮಾಡುತ್ತಾರೆ.

ಬಾರ್ಸ್ಟಲ್ ಶಾಲೆಯಲ್ಲಿ ಕೆಲಸಕಾರ್ಯಗಳು ಕಾರಾಗೃಹಕ್ಕಿಂತಲೂ ಕಷ್ಟಕರವಾಗಿರುತ್ತವೆ. ಕಾರಣ ವ್ಯಕ್ತಿ ಅಲ್ಲಿ ದಿನದಲ್ಲಿ ಎಂಟು ಗಂಟೆಗಳ ಕಾಲ ಕೆಲಸ ಮಾಡಬೇಕಾಗುತ್ತದೆ. ಇದರ ಜೊತೆಗೆ ಬೇರೆ ಬೇರೆ ವಿಷಯಗಳಲ್ಲಿ ಶಿಕ್ಷಣವನ್ನೂ ನೀಡಲಾಗುತ್ತದೆ. ಹುಡುಗರಿಗೆ ಕ್ರೀಡೆಗಳಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಏಕೆಂದರೆ ಅವರ ತರಬೇತಿಯಲ್ಲಿ ಇದು ಅತ್ಯಾವಶ್ಯಕ ಅಂಗವೆಂದು ಪರಿಗಣಿಸಲಾಗಿದೆ. ಕ್ರೀಡೆಯಲ್ಲಿ ಒಂದು ರೀತಿಯ ಶಿಸ್ತನ್ನು, ಒಂದುಗೂಡಿ ಕೆಲಸ ಮಾಡುವುದನ್ನು, ಕಷ್ಟಪಟ್ಟು ಕೆಲಸ ಮಾಡುವುದನ್ನೂ ಸ್ವತಂತ್ರವಾಗಿ ಗೌರವವಾಗಿ ಬಾಳುವುದು ಹೇಗೆ ಎಂಬುದನ್ನೂ ಕಲಿಸಲಾಗುತ್ತದೆ.

ಯಾವ ಸುಧಾರಣಾ ಶಾಲೆಯೂ ಯಶಸ್ಸಿನ ಬಗ್ಗೆ ನೂರಕ್ಕೆ ನೂರರಷ್ಟು ಭರವಸೆ ಕೊಡುವುದಿಲ್ಲ. ಅವರಲ್ಲಿ ಬಹುಮಂದಿ ಉತ್ತಮ ಪ್ರಜೆಗಳಾಗಿ ಪರಿವರ್ತಿತರಾದರೆ ಮುಖ್ಯೋದ್ದೇಶವನ್ನು ಸಾಧಿಸಿದಂತಾಗುವುದು. ಈ ವಿಷಯದಲ್ಲಿ ಯುನೈಟೆಡ್ ಕಿಂಗ್‍ಡಮಿನಲ್ಲಿ ಸೇ. 65 ರಿಂದ ಸೇ. 75ರಷ್ಟು ಯಶಸ್ಸನ್ನು ಸಾಧಿಸಲಾಗಿದೆ. ಭಾರತದಲ್ಲಿನ ಸಾಧನೆಯ ಬಗ್ಗೆ ನಿರ್ದಿಷ್ಟ ಅಂಕಿಅಂಶಗಳು ದೊರಕಿಲ್ಲ. ಈ ಸಂಸ್ಥೆಗಳಲ್ಲಿ ಮೊದಮೊದಲು ಸುಸ್ತಾಗುವಂಥ ಕೆಲಸವನ್ನೇ ಕೊಡಲಾಗುತ್ತದೆ. ಕ್ರೀಡೆಗೆ ಅವಕಾಶವಿರುವುದಿಲ್ಲ. ಹೊಸದಾಗಿ ಬಂದವರು ಉದ್ಧಟರಂತೆ ಕಂಡುಬರುತ್ತಾರಾದರೂ ತಮಗಿಂತ ಹಳಬರಾದ ಹುಡುಗರು ಸಂತೋಷದಿಂದ ಕೆಲಸ ಮಾಡುತ್ತಿರುವುದನ್ನು ಕಂಡು, ಸಿಬ್ಬಂದಿವರ್ಗ ತಮಗೆ ಅನುಕೂಲವಾಗಿರುವುದನ್ನು ಕಂಡು ಸಂಸ್ಥೆಯ ವಾತಾವರಣಕ್ಕೆ ಹೊಂದಿ ನಡೆಯಲಾರಂಭಿಸುತ್ತಾರೆ.

ಚಿಕಿತ್ಸಾನಂತರದ ಆರೈಕೆಯ ಬಗ್ಗೆಯೂ ಹೆಚ್ಚಿನ ಗಮನ ನೀಡುವ ಕಾರ್ಯ ತರಬೇತಿ ಶಾಲೆಗಳ ಕಾರ್ಯಕ್ಕೆ ಪೂರಕವಾಗಬೇಕು. ಬಿಡುಗಡೆ ಹೊಂದಿದ ಬಾಲಕರಿಗೆ ಪ್ರಾಮಾಣಿಕ ಜೀವನವನ್ನು ನಡೆಸುವ, ಸತ್ಪ್ರಜೆಗಳಾಗುವ ಆಸೆ ಇರಬಹುದು. ಆದರೆ ಸಮಾಜಕ್ಕೆ ಪುನಃ ಮರಳಿ ಬಂದಾಗ ಅವರಿಗೆ ನೌಕರಿ ದೊರಕದಿದ್ದಲ್ಲಿ, ಒಳ್ಳೆಯ ಮನೆ ದೊರಕದಿದ್ದಲ್ಲಿ ಅವರಿಗಾಗಿ ಮಾಡಿದ ಒಳ್ಳೆಯ ಕಾರ್ಯವೆಲ್ಲವೂ ನಿಷ್ಫಲವಾಗುತ್ತದೆ. ಆದ್ದರಿಂದ ತರಬೇತಿ ಶಾಲೆಗಳಿಂದ ಬಿಡುಗಡೆ ಹೊಂದಿದ ಬಾಲಕರನ್ನು ನೋಡಿಕೊಳ್ಳಲು ದಾನಶೀಲ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯವಾಗುತ್ತದೆ.

ಹೊಸ ವಿಧಾನದ ಮುಖ್ಯ ಲಕ್ಷಣ ಉಪಯುಕ್ತ ತರಬೇತಿಯನ್ನೇ ಅವಲಂಬಿಸಿದೆ. ಸಾಮಾನ್ಯವಾಗಿ ಆಸ್ತಿ ಲಪಟಾಯಿಸುವ ಅಪರಾಧಿಗಳು ಸೋಮಾರಿಗಳು. ಅವರಿಗೆ ಕೆಲಸ ಮಾಡಲು ಸ್ವಲ್ಪವೂ ಇಷ್ಟವಿರುವುದಿಲ್ಲ. ಹಾಗಾಗಿ ಅವರಿಗೆ ದೈನಂದಿನ ಶ್ರಮದ ಕೆಲಸಕಾರ್ಯಗಳನ್ನು ಹೇಗೆ ಮಾಡಬೇಕೆಂಬುದನ್ನು ಕಲಿಸುವುದೇ ಮೊದಲ ಹೆಜ್ಜೆಯಾಗಿದೆ. ಒಮ್ಮೆ ಒಬ್ಬ ವ್ಯಕ್ತಿ ಪ್ರಾಮಾಣಿಕವಾಗಿ ದೈನಂದಿನ ಕೆಲಸವನ್ನು ಮಾಡಲು ಕಲಿತನೆಂದರೆ ಸುಧಾರಣೆಯ ಅರ್ಧ ಹೋರಾಟವನ್ನು ಗೆದ್ದಂತೆಯೇ ಸರಿ. ಆರಂಭದಲ್ಲಿ ಕೆಲಸ ಶ್ರಮದಿಂದ ಕೂಡಿರುವಂತಿರಬೇಕು. ಆತನಲ್ಲಿ ಕೆಲಸದ ಬಗ್ಗೆ ಪವಿತ್ರ ಭಾವನೆಯನ್ನು ಹುಟ್ಟಿಸುವುದೇ ಅತ್ಯಂತ ಅಗತ್ಯದ ಕಾರ್ಯವಾಗುತ್ತದೆ.

ಭಾರತೀಯ ಕಾರಾಗೃಹ ವಾಸಿಗಳಲ್ಲಿ ಅನಕ್ಷರತೆ ಬಹು ಪ್ರಮಾಣದಲ್ಲಿರುವುದರಿಂದ ಅದು ಯಾವ ಬಗೆಯ ಮುನ್ನಡೆಗೂ ಅತ್ಯಂತ ತೊಡಕಾಗಿ ಪರಿಣಮಿಸಿದೆ. ಕಲಿಯಲು ಸಮರ್ಥರಾಗಿರುವ ಎಲ್ಲ ತರುಣರಿಗೂ ಸರಳ ಪ್ರಾಥಮಿಕ ಶಿಕ್ಷಣವನ್ನು ಮೊದಲು ನೀಡಬೇಕು. ಸ್ಥಳೀಯ ಇತಿಹಾಸ ಮತ್ತು ಭೂಗೋಳದ ಸಾಮಾನ್ಯ ಜ್ಞಾನ ಅವರಿಗೆ ಅಗತ್ಯ. ಅಂಥ ಮೂಲಭೂತ ಶಿಕ್ಷಣ ಸುಧಾರಣೆಯ ಬಗ್ಗೆ ಪ್ರಭಾವ ಬೀರಲು ಮತ್ತಷ್ಟು ಸಹಾಯಕವಾಗುತ್ತದೆ. ಒಬ್ಬ ವ್ಯಕ್ತಿ ಓದಲು ಬರೆಯಲು ಸಮರ್ಥನಾದಾಗ ಆತ ಆರಿಸಿದ ಗ್ರಂಥಗಳನ್ನು ತಾನೇ ಓದಿ ತನ್ನ ವಿದ್ಯೆಯನ್ನು ಹೆಚ್ಚಿಸಿಕೊಳ್ಳು ಅವಕಾಶ ಮಾಡಿಕೊಡಬಹುದು. ಅಧಿಕಾರಿಗಳಿಂದ ಹಾಗೂ ಅಧಿಕಾರೇತರರಿಂದ ಏರ್ಪಡಿಸುವ ಉಪನ್ಯಾಸಗಳು ಅಂಥ ಶೈಕ್ಷಣಿಕ ಶಿಕ್ಷಣಕ್ಕೆ ಪೂರಕವಾಗಬಲ್ಲವು. ದೇಶ ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಸಾಧಿಸಿದಂತೆಲ್ಲ ಕೌಟುಂಬಿಕ ಹಿಂಸೆ, ಆಸ್ತಿ ಸಂಬಂಧವಾದ ಹಿಂಸೆ, ಲೈಂಗಿಕ ಹಿಂಸೆ ಹಾಗೂ ಭ್ರಷ್ಟಾಚಾರದ ಪ್ರಸಂಗಗಳು, ಸೈಬರ್ ಅಪರಾಧಗಳು ಹೆಚ್ಚಿ ಸಾಕಷ್ಟು ವಿದ್ಯಾವಂತರಾದವರೂ ಖೈದಿಗಳಾಗಿ ಸೆರೆಮನೆ ಸೇರುತ್ತಿದ್ದಾರೆ. ಇವರ ಮನಪರಿವರ್ತನಾ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ.

ಅಪರಾಧಿಯನ್ನು ದೃಢಕಾಯನನ್ನಾಗಿ ಇಡುವುದು ಅಗತ್ಯ. ಇದರಿಂದಾಗಿ ಆತನ ಬುದ್ಧಿ ಉಲ್ಲಾಸಕರವಾಗಿಯೂ ಜಾಗೃತವಾಗಿಯೂ ಆಗುತ್ತದೆ. ಅಪರಾಧಿಗಳಿಗಾಗಿ ವ್ಯವಸ್ಥಿತ ಹೊರಾಂಗಣ ಕ್ರೀಡೆಗಳ ಜೊತೆಗೆ ದೈಹಿಕ ತರಬೇತಿಯನ್ನು ಒಳಗೊಂಡಂತೆ ಒಂದು ವ್ಯವಸ್ಥೆಯನ್ನು ರೂಪಿಸುವುದು ಒಳ್ಳೆಯದು. ಪ್ರಾಮಾಣಿಕ ಕೆಲಸ ಹಾಗೂ ಆರೋಗ್ಯದಿಂದ ಕೂಡಿದ ಹೊರಾಂಗಣ ವ್ಯಾಯಾಮದಿಂದ ಬಳಲಿದ ಅಪರಾಧಿಗಳು ತಂಟೆ ಮಾಡುವುದಿಲ್ಲ. ಇಂಥ ಕಡೆಗಳಲ್ಲಿ ಹೆಚ್ಚು ಗಲಭೆಗಳಾಗವು.

ಅಪರಾಧಿಗಳಿಗೆ ಧಾರ್ಮಿಕ ಶಿಕ್ಷಣ ನೀಡುವುದು ಇನ್ನೊಂದು ಅಪೇಕ್ಷಣೀಯ ಸುಧಾರಣೆ. ಒಳ್ಳೆಯ ನಡತೆ ಹಾಗೂ ಔಚಿತ್ಯಜ್ಞಾನವಿರುವಂಥವರು ಮಾತ್ರ ಬೋಧನೆಯ ಕೆಲಸಕ್ಕೆ ಯೋಗ್ಯರು. ಧಾರ್ಮಿಕ ಕ್ಷೇತ್ರದಲ್ಲಿ ಗಣ್ಯರಾದವರು ಆಗಾಗ ಬಂದು ಅಪರಾಧಿಗಳೊಡನೆ ಸಂಭಾಷಣೆ ನಡೆಸುವಂತೆ ಏರ್ಪಾಟು ಮಾಡಬಹುದು. ಅಪರಾಧಿಗಳ ಮೇಲೆ ಯಾವುದೇ ರೀತಿಯ ಪ್ರಭಾವ ಬೀರಲು ಸಾಮಾನ್ಯ ಕಾರಾಗೃಹ ವಿಧಾನಗಳು ವಿಫಲಗೊಂಡಾಗ ಪುರೋಹಿತವರ್ಗದವರ ಪ್ರೇರಣೆಯಿಂದಾಗಿ ಅದ್ಭುತ ಫಲಗಳು ದೊರೆತಿವೆ ಎಂಬುದನ್ನು ಕಾರಾಗೃಹ ಅಧಿಕಾರವರ್ಗದವರು ಮನಗಂಡಿದ್ದಾರೆ. ರಾಷ್ಟ್ರದ ಪ್ರತಿಯೊಂದು ಕಾರಾಗೃಹದಲ್ಲೂ ಆಧ್ಯಾತ್ಮಿಕ ಬೋಧಕನೊಬ್ಬ ಇರುವುದು ಒಳ್ಳೆಯದು. ಅಂಥವರ ಸಾನ್ನಿಧ್ಯ ಗಂಭೀರ ಪ್ರಭಾವವನ್ನು ಬೀರುತ್ತದೆ.

ಕಾರಾಗೃಹ ಸಿಬ್ಬಂದಿ ವರ್ಗಕ್ಕೂ ಬೋಧಕನ ನಡುವೆ ನಿಕಟ ಸಹಕಾರವಿರಬೇಕು. ಅಪರಾಧಿಗಳ ಆಧ್ಯಾತ್ಮಿಕ ತರಬೇತಿಯ ವಿಷಯದಲ್ಲಿ ಸಿಬ್ಬಂದಿ ವರ್ಗಕ್ಕೆ ನಂಬಿಕೆಯಿರಬೇಕು. ಅವರು ಆಧ್ಯಾತ್ಮಿಕ ವರ್ಗದವರನ್ನು ಗೌರವಿಸಬೇಕು. ಇದಕ್ಕೆ ಪ್ರತಿಯಾಗಿ ಅಪರಾಧಿಗಳು ಅವರನ್ನು ಗೌರವಿಸುತ್ತಾರೆ. ಭಾರತದಲ್ಲಿ ಅಸಂಖ್ಯಾತ ಧರ್ಮಗಳಿರುವುದರಿಂದ ಈ ಸಮಸ್ಯೆ ಜಟಿಲವಾಗಿದೆ. ಆದಷ್ಟುಮಟ್ಟಿಗೆ ಪ್ರತಿಯೊಂದು ವರ್ಗದವರ ಅಗತ್ಯಗಳನ್ನು ಪೂರೈಸುವ ಪ್ರಯತ್ನ ಕೈಗೊಳ್ಳಬೇಕು.

ವೃತ್ತಿಸಂಬಂಧವಾದ ತರಬೇತಿಯಂತೂ ಅಗತ್ಯವೆಂದು ಹಿಂದೆಯೇ ಹೇಳಿದೆ. ಅಲ್ಲದೆ ಕಾರಾಗೃಹದಲ್ಲಿ ಅನೇಕ ಉದ್ದಿಮೆಗಳನ್ನು ವ್ಯವಸ್ಥೆಗೊಳಿಸಬೇಕು. ಕ್ರಮೇಣ ಅವು ತಮ್ಮ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸಬೇಕು. ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ ಸರ್ಕಾರೀ ಇಲಾಖೆಗಳ ಸಹಕಾರವನ್ನು ಪಡೆಯಬೇಕು. ಬೆಂಗಳೂರು, ಮೈಸೂರುಗಳ ಕೇಂದ್ರ ಕಾರಾಗೃಹಗಳಲ್ಲಿ ವೃತ್ತಿಶಿಕ್ಷಣ ವ್ಯವಸ್ಥೆ ಚೆನ್ನಾಗಿದೆ. ಕೈದಿಗಳೇ ನೆಯ್ದ ಜಮಖಾನೆ, ಟವಲು, ಹೊದಿಕೆ, ಚಾಪೆ ಮುಂತಾದುವನ್ನು ವಸ್ತು ಪ್ರದರ್ಶನಗಳಲ್ಲಿ ಇಂದಿಗೂ ನೋಡಬಹುದು.

ಅಪರಾಧಿಗಳ ಶಿಕ್ಷಣ ವ್ಯಾಪಕವೂ ಸುಸ್ಥಿತವೂ ಆಗಿರಬೇಕೆಂಬ ಬಗ್ಗೆ ಏಕಾಭಿಪ್ರಾಯವಿದೆ. ವಾಸ್ತವವಾಗಿ ಇಳಿಮುಖವಾಗುತ್ತಿರುವ ಅಪರಾಧ ಹಾಗೂ ಅಪರಾಧಿಗಳ ಸಂಖ್ಯೆಯ ಮೇಲೆ ನಮ್ಮ ನಾಗರಿಕತೆಯ ಗುಣವನ್ನು ಅಳೆಯಲಾಗುತ್ತದೆ. ಅಪರಾಧಿಗಳ ಬಗ್ಗೆ ನಡೆದುಕೊಳ್ಳುವಾಗ ನಾವು ಮಾನವೀಯ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ವ್ಯಕ್ತಿಯಲ್ಲಿ ಪ್ರಬಲ ಪ್ರತಿರೋಧವನ್ನು ತುಂಬಿ ಅಪರಾಧದ ರೋಗವನ್ನು ಗುಣಪಡಿಸುವುದು ಸಮಾಜದ ನೈತಿಕ ಹೊಣೆಯಾಗಿದೆ. ಅಪರಾಧಿ ಸಮಾಜದ ಸದಸ್ಯ ಎಂಬ ನಂಬಿಕೆಯ ಮೇಲೆ ಸುಧಾರಣೆಯ ಅಡಿಪಾಯ ನಿಂತಿದೆ. ಸಮಾಜದ ದೋಷಗಳ ಪರಿಣಾಮವಾಗಿ ಬಾಲಾಪರಾಧ ಉಂಟಾಯಿತೆನ್ನುವುದನ್ನು ಇಂದಿನ ನಮ್ಮ ವಿಶಾಲ ಜ್ಞಾನ ತೋರಿಸಿಕೊಟ್ಟಿದೆ. ಪರಿಸರಣ, ಕೆಟ್ಟ ಶಿಕ್ಷಣ, ನಮ್ಮ ಹಳ್ಳಿಗಳ ನಗರಗಳ ಸ್ಥಿತಿಗತಿಗಳು, ತಂದೆತಾಯಿಗಳು ತಮ್ಮ ಮಕ್ಕಳನ್ನು ಸಾಕಷ್ಟು ರೀತಿಯಲ್ಲಿ ಹತೋಟಿಯಲ್ಲಿಟ್ಟುಕೊಳ್ಳದೇ ಇರುವುದು ಆಧುನಿಕ ಜೀವನ ಸೃಷ್ಟಿಸಿರುವ ದುಶ್ಚಟಗಳು, ದುರಭ್ಯಾಸಗಳು–ಇವೇ ಮೊದಲಾದವು ತರುಣ ಅಪರಾಧಿಗಳಿಗೆ ಎಡೆ ಮಾಡಿಕೊಟ್ಟಿವೆ. ಹಾಗಾಗಿ ತರುಣ ಅಪರಾಧಿಗಳಲ್ಲಿ ಬಹುಮಂದಿ ಸರ್ಕಾರದಿಂದ, ಸಮಾಜದಿಂದ ಪೋಷಕರ ಸನ್ನಡತೆಯಿಂದ ಉದ್ಧಾರವಾಗಬೇಕಾಗಿದ್ದಾರೆ. (ಕೆ.ಬಿ.)

**ಕಾರಾಗೃಹ ದುಡಿಮೆ :** ಕಾರಾಗೃಹದಲ್ಲಿರುವ ಕೈದಿಗಳ ಶ್ರಮವನ್ನು ಉತ್ಪಾದನೆಗಾಗಿ ಬಳಸಿಕೊಳ್ಳುವ ಪದ್ಧತಿ ಈಗ ಸಾಮಾನ್ಯವಾಗಿ ಪ್ರತಿಯೊಂದು ದೇಶದಲ್ಲೂ ಜಾರಿಯಲ್ಲಿದೆ. ರಾಷ್ಟ್ರದಲ್ಲಿರುವ, ದುಡಿಯಬಹುದಾದ, ಯಾರ ಶ್ರಮವೂ ವ್ಯರ್ಥವಾಗಬಾರದು ಎಂಬುದರ ಜೊತೆಗೆ ಕೈದಿಗಾಗಿ ಸರ್ಕಾರ ಮಾಡುವ ಖರ್ಚಿನಲ್ಲಿ ಉಳಿತಾಯ ಮಾಡುವುದೂ ಶಿಕ್ಷೆ ಪೂರೈಸಿದ ಮೇಲೆ ಕೈದಿ ಬಿಡುಗಡೆ ಹೊಂದಿದಾಗ ಸಮಾಜದಲ್ಲಿ ಅವನು ಯೋಗ್ಯ ಪ್ರಜೆಯಾಗಿ ಪುನಃಸ್ಥಾಪನಗೊಳ್ಳುವಂತೆ ಮಾಡುವುದೂ ಇದರ ಉದ್ದೇಶಗಳು. ಸುಯೋಜಿತವಾದ ದುಡಿಮೆಯಿಂದ ಕೈದಿಯ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವುಂಟಾಗುತ್ತದೆ.

ಯುದ್ಧಕೈದಿಗಳನ್ನು ಮತ್ತು ಅಪರಾಧಿಗಳನ್ನು ಊಳಿಗದವರನ್ನಾಗಿ ಮಾಡಿಕೊಂಡು ಅದರಿಂದ ಕಡ್ಡಾಯ ಸೇವೆ ಮಾಡಿಸಿಕೊಳ್ಳುವ ಪದ್ಧತಿ ಕ್ರಿ.ಶ. 12ನೆಯ ಶತಮಾನದವರೆಗೂ ಐರೋಪ್ಯ ರಾಷ್ಟ್ರಗಳಲ್ಲಿ ಜಾರಿಯಲ್ಲಿತ್ತು. ಅಲ್ಲಿ ಊಳಿಗಮಾನ್ಯ ಪದ್ಧತಿ ರದ್ದಾದ ಅನಂತರ, ಕೈದಿಗಳನ್ನು ಹಡಗುಗಳಲ್ಲಿ ಹುಟ್ಟುಹಾಕುವ ಕೆಲಸಕ್ಕೆ ನೇಮಕ ಮಾಡಲಾಗುತ್ತಿತ್ತು.

ಆದರೆ ಉಗಿಚಾಲಿತ ನೌಕೆಗಳು ಅಸ್ತಿತ್ವಕ್ಕೆ ಬಂದ ಅನಂತರ ಕೈದಿಗಳು ಈ ರೀತಿಯ ಶ್ರಮದಾನದಿಂದ ಮುಕ್ತಿ ಪಡೆದರು. ಬದಲಿಗೆ 18ನೆಯ ಶತಮಾನದಲ್ಲಿ ಆರಂಭವಾದ ಲೋಕೋಪಯೋಗಿ ಕೆಲಸಗಳಾದ ರಸ್ತೆ ನಿರ್ಮಾಣ ಮುಂತಾದ ಕಾರ್ಯಗಳಿಗೆ ಇವರ ಶ್ರಮವನ್ನು ಬಳಸಿಕೊಳ್ಳಲಾಗುತ್ತಿತ್ತು. ಇಂದು ಸಹ ಅನೇಕ ರಾಷ್ಟ್ರಗಳಲ್ಲಿ ಈ ರೀತಿಯ ದುಡಿಮೆ ರೂಢಿಯಲ್ಲಿದೆ. ತನ್ನ ವಸಾಹತುಗಳಲ್ಲಿದ್ದ ಶ್ರಮದ ಕೊರತೆಯನ್ನು ನೀಗಲು ಹಾಗೂ ಸ್ವದೇಶದಲ್ಲಿದ್ದ ಕಾರಾಗೃಹಗಳ ಕೊರತೆಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಇಂಗ್ಲೆಂಡ್ ತನ್ನ ಕೈದಿಗಳನ್ನು ವಸಾಹತುಗಳಿಗೆ ಮುಖ್ಯವಾಗಿ ಅಮೆರಿಕಕ್ಕೆ ಸಾಗಿಸಿ ಅಲ್ಲಿ ಅವರಿಂದ ದುಡಿಸುತ್ತಿತ್ತು. ಅಮೆರಿಕ ಸಂಯುಕ್ತಸಂಸ್ಥಾನ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ ಮೇಲೆ ಇಂಗ್ಲೆಂಡ್ ತನ್ನ ಕೈದಿಗಳನ್ನು ಆಸ್ಟ್ರೇಲಿಯಕ್ಕೆ ಸಾಗಿಸುತ್ತಿತ್ತು. ಆಸ್ಟ್ರೇಲಿಯದ ಕಾರ್ಮಿಕರು ಇಂಗ್ಲೆಂಡಿನ ಈ ವರ್ತನೆಯನ್ನು ತೀವ್ರವಾಗಿ ಪ್ರತಿಭಟಿಸಿದಾಗ ಅದು ಈ ಕ್ರಮವನ್ನು ಕೈಬಿಡಬೇಕಾಯಿತು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಕ್ರಾಂತಿಯಿಂದ ಕಾರ್ಮಿಕರ ದುಡಿಮೆಯ ಸ್ವರೂಪವೇ ಬದಲಾದಾಗ ಕೈದಿಗಳ ದುಡಿಮೆಯಲ್ಲೂ ವ್ಯತ್ಯಾಸವಾಯಿತು. ಯೂರೋಪ್ ಮತ್ತು ಅಮೆರಿಕಗಳಲ್ಲಿ ಕೈದಿಗಳ ಶ್ರಮವನ್ನು ಗುತ್ತಿಗೆಗೆ ಪಡೆಯುವ ಪದ್ಧತಿ ಜಾರಿಗೆ ಬಂತು. ಬಂದಿಗಳ ಮೇಲೆ ದೈಹಿಕ ಹಕ್ಕನ್ನು ಸರ್ಕಾರವೇ ಉಳಿಸಿಕೊಂಡು ತಲೆಗೆ ಇಷ್ಟೆಂಬ ಲೆಕ್ಕದ ಮೇಲೆ ಅವರನ್ನು ಖಾಸಗಿ ಉತ್ಪಾದಕರಿಗೆ ಗುತ್ತಿಗೆಯಾಗಿ ಕೊಡಲಾಗುತ್ತಿತ್ತು. ಕೈದಿಗಳು ಖಾಸಗಿ ಉತ್ಪಾದಕರ ನಿರ್ದೇಶನದಂತೆ ಕಾರಾಗೃಹದ ಗೋಡೆಗಳ ಒಳಗೆ ದುಡಿದು ವಸ್ತುಗಳನ್ನು ಉತ್ಪಾದಿಸುತ್ತಿದ್ದರು. ಕೈದಿಗಳ ಈ ಬಗೆಯ ಶೋಷಣೆಯನ್ನು ಕಾರ್ಮಿಕ ಸಂಘಗಳು ತೀವ್ರವಾಗಿ ವಿರೋಧಿಸಿದುವು. ಇದರಿಂದಾಗಿ ಗುತ್ತಿಗೆ ಶ್ರಮ ಪದ್ಧತಿ ಬಹುತೇಕ ಅಂತ್ಯವಾಯಿತು. ಅಷ್ಟೇ ಅಲ್ಲದೆ, ಕಾರಾಗೃಹದಲ್ಲಿ ಕೈದಿಗಳು ನಡೆಸುವ ಉತ್ಪಾದನೆಯನ್ನು ಬಹಿರಂಗ ಪೇಟೆಯಲ್ಲಿ ಮಾರಾಟ ಮಾಡುವ ಕ್ರಮ ಸಹ ತಪ್ಪಿ, ಕೈದಿಗಳು ತಮಗೆ ಅಗತ್ಯವಿರುವ ವಸ್ತುಗಳನ್ನು ಮತ್ತು ಸರ್ಕಾರಿ ಸಂಸ್ಥೆಗಳಿಗೆ ಉಪಯೋಗವಿರುವ ವಸ್ತುಗಳನ್ನು ಮಾತ್ರ ಉತ್ಪಾದಿಸುವ ಕ್ರಮ ಜಾರಿಗೆ ಬಂತು. ಕೈದಿಗಳ ದುಡಿಮೆಯ ದುರುಪಯೋಗವೂ ಸಹಜವಾಗಿಯೇ ಅಂತ್ಯವಾಯಿತು. ಕೈದಿಗಳ ಮನೋವೃತ್ತಿ, ಕುಶಲತೆ ಇವುಗಳಿಗೆ ಅನುಗುಣವಾದ, ಅವರು ಬಿಡುಗಡೆ ಹೊಂದಿದ ಅನಂತರ ಜೀವನೋಪಾಯಕ್ಕೆ ಅನುಕೂಲವಾಗುವ ಕೆಲಸವನ್ನು ಅವರಿಂದ ಮಾಡಿಸುವ ಪದ್ಧತಿ ಆರಂಭವಾದ್ದು ಆಗ.

ಕೃಷಿಪ್ರಧಾನ ರಾಷ್ಟ್ರಗಳಲ್ಲಿ ಕೈದಿಗಳ ಶ್ರಮವನ್ನು ಬೇಸಾಯದ ಕಾರ್ಯಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಸ್ಕಾಂಡಿನೇವಿಯನ್ ರಾಷ್ಟ್ರಗಳಲ್ಲೂ ಇಟಲಿಯಲ್ಲೂ ಉತ್ತಮ ಗುಣವುಳ್ಳ ಕೈದಿಗಳನ್ನು ಆಯ್ದು, ಅವರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಿ, ಅವರನ್ನು ಕೃಷಿ ಉದ್ಯಮಕ್ಕೆ ಹಚ್ಚಲಾಗುತ್ತಿದೆ. ಕೈದಿಗಳಿಗಾಗಿ ವಿಶಿಷ್ಟವಾದ ಕಾರ್ಮಿಕ ಕಾನೂನುಗಳು ಸಹ ಈ ರಾಷ್ಟ್ರಗಳಲ್ಲಿ ಜಾರಿಗೆ ಬಂದಿವೆ. ಕಾರ್ಮಿಕರ ಶ್ರಮದ ವೇಳೆ, ಅವನಿಗೆ ದೊರೆಯಬಹುದಾದ ವೇತನ ಇವನ್ನು ನಿಗದಿ ಮಾಡಲಾಗಿದೆ.

ಸೋವಿಯತ್ ದೇಶ ಮತ್ತು ಇಟಲಿಯಲ್ಲಿ ಕಾರಾಗೃಹ ಶ್ರಮಿಕನಿಗೆ ವೇತನ ಪಡೆಯಲು ಕಾನೂನಿನ ಹಕ್ಕನ್ನು ದೊರಕಿಸಿಕೊಡಲಾಗಿದೆ. ಅನೇಕ ಐರೋಪ್ಯ ರಾಷ್ಟ್ರಗಳಲ್ಲಿ ಮತ್ತು ಅಮೆರಿಕ ಸಂಯುಕ್ತಸಂಸ್ಥಾನದ ಕೆಲವು ರಾಜ್ಯಗಳಲ್ಲಿ ಕಾರಾಗೃಹ ಕಾರ್ಮಿಕನಿಗೆ ಕಾರ್ಮಿಕ ಅಪಘಾತದ ವಿರುದ್ಧ ರಕ್ಷಣೆಯೂ ಉಂಟು. ದುಡಿಯುವುದು ಪ್ರತಿಯೊಬ್ಬನ ಹಕ್ಕು ಎಂಬ ನೀತಿಯನ್ನು ಕಾರಾಗೃಹದ ಕೈದಿಗಳಿಗೂ ಸೋವಿಯತ್ ದೇಶದಲ್ಲಿ ಅನ್ವಯಿಸಲಾಗಿದೆ. ಕೆಲವೊಂದು ವರ್ಗದ ಕೈದಿಗಳನ್ನು ಬಿಟ್ಟು, ಉಳಿದ ಎಲ್ಲರೂ ತಮ್ಮ ದುಡಿಮೆಗೆ ಪ್ರತಿಯಾಗಿ, ಹೊರಗಡೆ ಇರುವ ಕಾರ್ಮಿಕರಿಗೆ ನೀಡುವಷ್ಟೇ ವೇತನವನ್ನು ಪಡೆಯುವ ಅನುಕೂಲವುಂಟು. ಕೈದಿಗಳಿಗೆ ಕಾರ್ಮಿಕ ಸಂಘಗಳ ಸದಸ್ಯರಾಗುವ ಹಕ್ಕುಂಟು. ಇತರ ಕಾರ್ಮಿಕರಿಗಾಗಿ ನಡೆಸುವ ಉತ್ಪಾದನ ಸ್ಪರ್ಧೆಯನ್ನು ಕೈದಿಗಳಿಗೂ ನಡೆಸಿ ಅವರಲ್ಲಿ ಹೆಚ್ಚು ಉತ್ಪಾದಿಸುವವರನ್ನು ಪುರಸ್ಕರಿಸಲಾಗುತ್ತದೆ. ಸೋವಿಯತ್ ದೇಶದಲ್ಲಿ ತಯಾರಾಗುವ ಇಟ್ಟಿಗೆಯಲ್ಲಿ ಅರ್ಧದಷ್ಟು ಉತ್ಪಾದನೆಯಾಗುವುದು ಕೈದಿಗಳಿಂದ. ಭಾರತದಲ್ಲಿ ಸಹ ಕಾರಾಗೃಹ ದುಡಿಮೆಗೆ ಮಾನ್ಯತೆಯಿದೆ. ಇಲ್ಲಿಯ ಕೈದಿಗೆ ಅವನ ದುಡಿಮೆಗೆ ಪ್ರತಿಯಾಗಿ ವೇತನ ದೊರೆಯುತ್ತದೆ. ಭಾರತದ ಜೈಲುಗಳಲ್ಲಿ ಕೈಕಸಬುಗಳೇ ಅಧಿಕ. ಉತ್ಪಾದನೆಯಾದ ವಸ್ತುಗಳ ಹೆಚ್ಚು ಭಾಗವನ್ನು ಸರ್ಕಾರಿ ಇಲಾಖೆಗಳಿಗೆ ಒದಗಿಸಲಾಗುತ್ತದೆ. ಸಾರ್ವಜನಿಕರಿಗೂ ಅಲ್ಪ ಪ್ರಮಾಣದಲ್ಲಿ ಮಾರಾಟ ಮಾಡುವುದುಂಟು. (ಸಿ.ಕೆ.ಆರ್.)

**ಕಾರಾಚಿ :** ಹಾರ್ಡ್‌ವಿಕಿಯ ಬೆ ನೇಟ ಎಂಬ ಶಾಸ್ತ್ರೀಯ ನಾಮವುಳ್ಳ ಒಂದು ಮರ. ಲೆಗ್ಯೂಮಿನೋಸೀ ಕುಟುಂಬದ ಸಿಸಾಲ್‌ಪಿನಿಯೇಸೀ ಉಪಕುಟುಂಬಕ್ಕೆ ಸೇರಿದೆ. ಎಣ್ಣೆಮರ, ಕಮ್ರ ಇದರ ಪರ್ಯಾಯನಾಮಗಳು. ಇದು ಸಾಮಾನ್ಯವಾಗಿ ಮಧ್ಯ ಭಾರತ ಮತ್ತು ದಕ್ಷಿಣ ಭಾರತದ ಸವನ್ನಮಾದರಿಯ ಕಾಡುಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಮೈಸೂರು ರಾಜ್ಯದಲ್ಲಿ ಬೆಳಗಾಂವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಾಣಸಿಗುವುದು. ಇದರ ಬೆಳೆವಣಿಗೆಗೆ ಕಲ್ಲುಗಳಿಂದ ಕೂಡಿದ ಒಣ ನೆಲವಿದ್ದರೆ ಚೆನ್ನ. ಬೆಳೆವಣಿಗೆ ಬಲು ನಿಧಾನ. ವಂಶಾಭಿವೃದ್ಧಿ ಸಾಮಾನ್ಯವಾಗಿ ಬೇರು ಹೀರಕಗಳಿಂದ (ರೂಟ್ ಸಕರ್ಸ್); ಬೀಜಪ್ರಸರಣದಿಂದ ಬಹಳ ಕಡಿಮೆ. ಆದರೆ ಕೃತಕವಾಗಿ ಬಿತ್ತನೆಯಿಂದಲೂ ನಾಟಿ ಮಾಡುವುದರಿಂದಲೂ ಬೆಳೆಸಬಹುದು. ಮೊದಲ ವಿಧಾನ ಹೆಚ್ಚು ಜಯಪ್ರದವಾದುದು.

ಈ ಮರ 100' ವರೆಗೂ ಬೆಳೆಯುವುದಾದರೂ ಇದರ ಸಾಮಾನ್ಯ ಎತ್ತರ 60' ಮಾತ್ರ. ಇದರ ಮುಖ್ಯ ಕಾಂಡ ನೀಳ. ತುದಿಯಲ್ಲಿ ಹೆಚ್ಚು ರೆಂಬೆಗಳಿವೆ. ಸಣ್ಣ ಗಿಡಗಳ ತೊಗಟೆ ನುಣುಪಾಗಿಯೂ ಬೆಳ್ಳಿಯಂತೆ ಬೆಳ್ಳಗೂ ಇದ್ದು ಮರಕ್ಕೆ ವಯಸ್ಸಾದಂತೆ ಒರಟಾಗಿ ಕಂದು ಬಣ್ಣಕ್ಕೆ ತಿರುಗುತ್ತದೆ. ಕೊನೆಗೆ ಹೆಚ್ಚಾಗಿ ಸೀಳು ಬಿಟ್ಟು ತೆಳುವಾದ ಪದರಗಳಾಗಿ ಬಿದ್ದುಹೋಗುತ್ತದೆ. ಎಲೆಗಳು ಕಂಚುವಾಳ ಅಥವಾ ಬಿಳಿ ಮಂದಾರದ (ಬಾಹಿನಿಯ) ಎಲೆಯಂತೆ ಎರಡು ಕಿರು ಎಲೆಗಳಿಂದ ಕೂಡಿದ್ದರೂ ಎರಡೂ ಬಿಡಿಬಿಡಿಯಾಗಿ ಇರುತ್ತವೆ. ಎಲೆ ಒರಟು. ತೊಟ್ಟಿಲ್ಲ. ಹೂಗಳು ಚಿಕ್ಕವು; ಸಂಕೀರ್ಣ ಪುಷ್ಪಗುಚ್ಛದಲ್ಲಿ ಸಮಾವೇಶಗೊಂಡಿವೆ. ಪುಷ್ಪಗುಚ್ಛ ಎಲೆಗಳ ಕಂಕುಳಲ್ಲೊ ರೆಂಬೆಗಳ ತುದಿಯಲ್ಲೊ ಇರುತ್ತದೆ. ಪುಷ್ಪಪತ್ರಗಳು 5; ಬಿಡಿಬಿಡಿಯಾಗಿವೆ. ಹಳದಿ ಮಿಶ್ರಿತ ಹಸಿರು ಬಣ್ಣದವಾಗಿದ್ದು ದಳಗಳಂತೆ ಕಾಣುತ್ತವೆ. ಹೂ ದಳಗಳು ಇಲ್ಲ. ಕೇಸರಗಳ ಸಂಖ್ಯೆ 10 ಅಥವಾ 5. ಇವು ಚಿಕ್ಕವು. ಅಂಡಾಶಯ ಉಚ್ಚಸ್ಥಾನದ್ದು; ಒಳಗೆ 2 ಅಂಡಕಗಳಿವೆ. ಶಲಾಕಾಗ್ರ ಗಾತ್ರದಲ್ಲಿ ದೊಡ್ಡದು; ಅಣಬೆಯ ಮಾದರಿಯಲ್ಲಿದೆ.

ಕಾರಾಚಿ ಹೂ ಬಿಡುವ ಕಾಲ ಡಿಸೆಂಬರ್–ಜನವರಿ ತಿಂಗಳು. ಏಪ್ರಿಲ್–ಮೇ ತಿಂಗಳಿನಲ್ಲಿ ಕಾಯಿಗಳು ಮಾಗುತ್ತವೆ. ಅವುಗಳ ಆಕಾರ ಚಪ್ಪಟೆ. ಉದ್ದ 2–3 ಇಂಚು ಬೀಜ ಒಂದೇ ಒಂದು.

ಈ ಮರ ಭಾರತದಲ್ಲಿ ಬೆಳೆಯುವ ಅತಿ ಭಾರವಾದ ಮತ್ತು ಗಟ್ಟಿಯಾದ ಮರಗಳಲ್ಲೊಂದು ಒಂದು ಘನ ಅಡಿಗೆ ಸುಮಾರು 80 ಪೌಂಡು ತೂಗುತ್ತದೆ. ಇದಕ್ಕೆ ಅಂಜನ್ ಎಂಬ ವಾಣಿಜ್ಯ ನಾಮವಿದೆ ಈ ಮರದ ಹಲಗೆಗಳ ಬಣ್ಣ ಕೆಂಪಿನಿಂದ ಕಪ್ಪಿನವರೆಗೆ ವ್ಯತ್ಯಾಸವಾಗುತ್ತದೆ. ಗಟ್ಟಿಮರವಾದುದರಿಂದ ಕೊಯ್ಯುವುದು ಬಹಳ ಕಷ್ಟ. ಆದರೆ ಲೇತಿನಿಂದ ಗುಂಡಾದ ಕೆತ್ತನೆ ಕೆಲಸಗಳನ್ನು ಮಾಡಬಹುದು. ಗಾಡಿಯ ಚಕ್ರಗಳು, ನೇಗಿಲು, ಕಂಬ ಮುಂತಾದುವುಗಳ ತಯಾರಿಕೆಯಲ್ಲಿ ಮತ್ತು ಎಣ್ಣೆ ಇಳಿಸುವ ಯಂತ್ರಗಳಲ್ಲಿ ಈ ಮರದ ಉಪಯೋಗ ಹೆಚ್ಚಾಗಿ ಉಂಟು. 5 ಅಡಿಗಿಂತ ಹೆಚ್ಚಾಗಿ ಸುತ್ತುವರಿಯುಳ್ಳ ಮರದಿಂದ ಒಂದು ಬಗೆಯ ಎಣ್ಣೆಯನ್ನು ಇಳಿಸಬಹುದು ಇದಕ್ಕಾಗಿ ನೆಲದಿಂದ 3 ಅಡಿ ಮೇಲೆ ಕಾಂಡಕ್ಕೆ ಒಂದು ರಂಧ್ರವನ್ನು ಮಾಡಬೇಕು. ಈ ರಂಧ್ರ ಮಧ್ಯದ ಬೆಂಡಿನ ವರೆಗೂ ಹೋಗಬೇಕು. ಒಂದು ಮರ ಸುಮಾರು 4 ರಿಂದ 16 ಗ್ಯಾಲನುಗಳಷ್ಟು ಎಣ್ಣೆಯನ್ನು ಕೊಡುತ್ತದೆ. ಈ ಎಣ್ಣೆಯನ್ನು ಗೊನರೀಯ ಮುಂತಾದ ಮೇಹರೋಗಗಳಿಗೆ ಔಷಧಿಯಾಗಿ ಬಳಸುವುದುಂಟು. ಮರದ ತೊಗಟೆಯಿಂದ ಒಂದು ವಿಧವಾದ ನಾರನ್ನು ಸಹ ಪಡೆಯಬಹುದು. ಈ ನಾರನ್ನು ಹೆಚ್ಚಾಗಿ ಬಾವಿಯ ಹಗ್ಗ ಮತ್ತು ಇತರ ವ್ಯಾವಸಾಯಿಕ ಸಲಕರಣೆಗಳಾಗಿ ಉಪಯೋಗಿಸುತ್ತಾರೆ. ಕೆಲವೆಡೆಗಳಲ್ಲಿ ಕಾರಾಚಿಯ ಎಲೆಯನ್ನು ದನಗಳಿಗೆ ಆಹಾರವಾಗಿ ಉಪಯೋಗಿಸುವುದೂ ಉಂಟು. (ಆರ್.ಆರ್.ಆರ್.)

**ಕಾರೀಯಾತ್, ಥಾಮಸ್ :** 1577–1617. ಪ್ರವಾಸಿ. ಸಾಹಸಿಗ. ಪಾದ್ರಿಯ ಮಗ. ಹುಟ್ಟಿದ್ದು ಸಾಮರ್‌ಸೆಟ್‌ನ ಓಡ್‌ಕೂಂಬ್‌ನಲ್ಲಿ. ಆಕ್ಸ್‌ಫರ್ಡ್ ಮತ್ತು ವಿಂಚೆಸ್ಟರ್‌ನಲ್ಲಿ ವಿದ್ಯಾಭ್ಯಾಸ ನಡೆಸಿದ. ಒಂದನೆಯ ಜೇಮ್ಸ್ ಇಂಗ್ಲೆಂಡಿನ ರಾಜನಾದ ಮೇಲೆ ಆತನ ಹಿರಿಯ ಮಗ ರಾಜಕುಮಾರ ಹೆನ್ರಿಯ ಬಳಿ ನೌಕರಿಗೆ ಸೇರಿ ಅನಂತರ ರಾಜಾಸ್ಥಾನದವರಲ್ಲಿ ಒಬ್ಬನಾದ. ಸ್ವಯಂ ಪ್ರತಿಷ್ಠೆಯನ್ನು ಮೆರೆಯುವುದರಲ್ಲಿ ಕಾರೀಯಾತ್ ಹೆಸರಾದವ. 1608ರಲ್ಲಿ ಫ್ರಾನ್ಸ್, ಇಟಲಿ, ಸ್ವಿಟ್ಜರ್‌ಲೆಂಡ್ ಮತ್ತು ಜರ್ಮನಿ ದೇಶಗಳಲ್ಲಿ ಸುಮಾರು ಎರಡು ಸಾವಿರ ಮೈಲಿಗಳಷ್ಟು ಕಾಲುನಡಿಗೆಯಲ್ಲೇ ಪ್ರವಾಸಮಾಡಿ ಬಂದ. ಈ ಪ್ರವಾಸದಿಂದ ಉತ್ತೇಜಿತನಾದ ಈತ ಭಾರತಕ್ಕೆ ಬಂದು ಮೊಗಲ್ ಚಕ್ರವರ್ತಿಯ ವೈಭವವನ್ನು ನೋಡಿ ಆನೆಯ ಮೇಲೆ ಸವಾರಿ ಮಾಡಬೇಕೆಂದು ಮನಸ್ಸು ಮಾಡಿದ. 1614ರಲ್ಲಿ ಭಾರತದ ಕಡೆಗೆ ಪ್ರವಾಸ ಹೊರಟು 1615ರ ಜುಲೈ ತಿಂಗಳಲ್ಲಿ ಆಗ್ರಕ್ಕೆ ಬಂದ. ಆಗ ಮೊಗಲ್ ಚಕ್ರವರ್ತಿ ಅಜ್ಮೀರದಲ್ಲಿದ್ದುದರಿಂದ ಅಲ್ಲಿಗೇ ಹೋದ. ಅಲ್ಲಿ ಇಂಗ್ಲೆಂಡಿನ ರಾಯಭಾರಿಯಾಗಿ ಮೊಗಲ್ ಆಸ್ಥಾನಕ್ಕೆ ಬಂದಿದ್ದ ಸರ್ ಥಾಮಸ್ ರೋನ ಪರಿಚಯ ಮಾಡಿಕೊಂಡು ಅವನೊಂದಿಗೆ ಸ್ನೇಹ ಬೆಳೆಸಿದ. ಹದಿನಾಲ್ಕು ತಿಂಗಳ ಕಲ ಅಜ್ಮೀರದಲ್ಲಿದ್ದ. ಅಲ್ಲಿಂದ ಆಗ್ರಕ್ಕೆ ಹಿಂದಿರುಗಿ 1617ರ ನವೆಂಬರ್‌ನಲ್ಲಿ ಸೂರತ್ ತಲುಪಿದ. ತಲುಪಿದವನೇ ಜ್ವರದಿಂದ ನರಳತೊಡಗಿ 1617ರ ಡಿಸೆಂಬರ್‌ನಲ್ಲಿ ಅಲ್ಲೇ ನಿಧನನಾದ. ತಪತೀನದಿಯ ದಡದ ಮೇಲೆ ಇವನ ಸಮಾಧಿಯಾಯಿತು. ಈಚೆಗೆ ಸೂರತ್ತಿನ ಕಲೆಕ್ಟರ್ ಆಗಿದ್ದ ಸರ್ ವಿಲಿಯಂ

ಮಾರಿಸನ್ ಆ ಸಮಾಧಿಯನ್ನು ಪತ್ತೆ ಹಚ್ಚಲು ಹೋಗಿ ವಿಫಲನಾದ. ಕಾರೀಯಾತ್ಸ್ ಕ್ರೂಡಿಟೀಸ್ ಎಂಬುದು ಕಾರೀಯಾತನ ಮೊದಲ ಪ್ರವಾಸ ಕಥನ. ಇದರಲ್ಲಿ ಇವನ ಸೂಕ್ಷ್ಮಬುದ್ಧಿ ಮತ್ತು ವಿದ್ವತ್ತನ್ನು ಕಾಣಬಹುದು. ಕಾರೀಯಾತ್ ಹಾಸ್ಯಗಾರನಲ್ಲದೆ ಒಳ್ಳೆಯ ಭಾಷಾಶಾಸ್ತ್ರಜ್ಞನೂ ಆಗಿದ್ದ. *

**ಕಾರುಗಹಳ್ಳಿಯ ಕಾಳಗ :** ಮೈಸೂರಿನ ಇತಿಹಾಸಕ್ಕೆ ಸಂಬಂಧಪಟ್ಟ ಒಂದು ಪ್ರಮುಖ ಘಟನೆಯನ್ನು ಸೂಚಿಸುವ ಕಾಳಗ. ಇದರ ಬಗ್ಗೆ ಜನಪದದಲ್ಲಿ ಬರುವ ವಿವರಗಳನ್ನಿಲ್ಲಿ ಕೊಡಲಾಗಿದೆ. ಕಾರುಗಹಳ್ಳಿ ಮತ್ತು ಹದಿನಾಡು ಅಕ್ಕಪಕ್ಕದ ಪಾಳೆಯಪಟ್ಟುಗಳು. ಕಾರುಗಹಳ್ಳಿಯಲ್ಲಿ ಮಾರನಾಯಕನೂ ಹದಿನಾಡಿನಲ್ಲಿ ಯಾದವ ವಂಶಸ್ಥನೊಬ್ಬನೂ ಆಳುತ್ತಿದ್ದರು. ಹದಿನಾಡು ಪಾಳೆಯಗಾರನಿಗೆ ಅನಿರೀಕ್ಷಿತವಾಗಿ ಬುದ್ಧಿವಿಕಲ್ಪ ಉಂಟಾಗಿ ಮರಣ ಹೊಂದಿದ. ಈ ಸಮಯವನ್ನು ಉಪಯೋಗಿಸಿಕೊಂಡು ಹದಿನಾಡನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಕಾರುಗಹಳ್ಳಿಯ ಪಾಳೇಗಾರ ಮಾರನಾಯಕ ಹಂಚಿಕೆ ಹಾಕಿದ. ಅದರಂತೆ ಹದಿನಾಡು ಪಾಳೆಗಾರನ ಒಬ್ಬಳೇ ಮಗಳನ್ನು ತನಗೆ ಕೊಟ್ಟು ಮದುವೆ ಮಾಡಬೇಕೆಂದು ಹೇಳಿ ಕಳುಹಿಸಿದ. ಆದರೆ ಮಾರನಾಯಕ ಕೀಳು ಕುಲದವನೆಂಬ ಕಾರಣದಿಂದ ಹದಿನಾಡು ಪ್ರದೇಶದ ಪಾಳೇಗಾರನ ಪತ್ನಿ ತನ್ನ ಮಗಳನ್ನು ಮಾರನಾಯಕನಿಗೆ ಕೊಡಲು ಒಪ್ಪಲಿಲ್ಲ. ಇದರಿಂದ ಸಿಟ್ಟುಗೊಂಡ ಮಾರನಾಯಕ ಹದಿನಾಡನ್ನು ಸುಲಭವಾಗಿ ವಶಕ್ಕೆ ತೆಗೆದುಕೊಂಡನಲ್ಲದೆ ರಾಜಪುತ್ರಿಯನ್ನು ತನಗೆ ಮದುವೆ ಮಾಡಿಕೊಡಲು ಏರ್ಪಾಡು ಮಾಡಿಕೊಡಬೇಕೆಂದು ಆಜ್ಞಾಪಿಸಿದ. ಮಾರನಾಯಕನನ್ನು ಎದುರಿಸಲು ಒಳಗೊಳಗೆ ಸಂಚು ನಡೆಯುತ್ತಿತ್ತು. ಆದರೆ ಮಾರನಾಯಕ ಈ ಯಾವುದನ್ನೂ ಗಮನಿಸಲಿಲ್ಲ. ಹೀಗಿರುವಾಗ ಉತ್ತರ ದೇಶದ ಕಡೆಯಿಂದ ಅಲೆಮಾರಿಗಳಾಗಿ ಬಂದವರು ವಿಜಯ, ಕೃಷ್ಣ ಎಂಬ ಯುವಕರಿಬ್ಬರು. ಅವರು ಹದಿನಾಡು ಪ್ರಾಂತ್ಯಕ್ಕೆ ಬಂದರು. ಜನರಿಂದ ಅಲ್ಲಿನ ಪಾಳೇಗಾರರ ಮನೆಗೆ ಒದಗಿರುವ ಕಷ್ಟದ ಕತೆ ಕೇಳಿದರು. ಸಾಹಸಿಗಳಾದ ಅವರು ಈ ಸಂದರ್ಭವನ್ನು ಸದುಪಯೋಗಿಸಿಕೊಳ್ಳಲು ಯೋಚಿಸಿ, ಅರಮನೆಗೆ ರಹಸ್ಯವಾಗಿ ಹೇಳಿ ಕಳಿಸಿದರು. ಮಾರನಾಯಕನ್ನು ಸಂಹರಿಸುವ ರಹಸ್ಯ ಯೋಜನೆಯೊಂದು ಹೀಗೆ ಸಿದ್ಧವಾಯಿತು. ಆಗ ಹದಿನಾಡು ನೇರವಾಗಿ ಯುದ್ಧದಲ್ಲಿ ಮಾರನಾಯಕನನ್ನು ಎದುರಿಸುವ ಸ್ಥಿತಿಯಲ್ಲಿ ಇರಲಿಲ್ಲ. ಎಲ್ಲವೂ ಸಿದ್ಧವಾದ ಮೇಲೆ ಮಾರನಯಕನನ್ನು ಅರಮನೆಗೆ ಭೋಜನಕ್ಕೆ ಆಹ್ವಾನಿಸಲಾಯಿತು. ಯಾವ ಆತಂಕವೂ ಇಲ್ಲದೆ ಊಟಕ್ಕೆ ಕುಳಿತಿದ್ದ ಮಾರನಾಯಕನ ಮೇಲೆ, ಆ ಮೊದಲೇ ಬಂದು ಅರಮನೆಯಲ್ಲಿ ಅಡಗಿದ್ದ ವಿಜಯ ಮತ್ತು ಕೃಷ್ಣರು ಬಿದ್ದು ಕೊಂದುಹಾಕಿದರು. ಆಹಾರದಲ್ಲಿ ಮಾದಕವಸ್ತು ಸೇರಿಸಿಕೊಟ್ಟು ಪ್ರಜ್ಞೆ ತಪ್ಪಿದ ಮಾರನಾಯಕನ್ನು ಕೊಂದರು ಎಂಬ ಕತೆಯೂ ಉಂಟು. ಕೂಡಲೇ ವಿಜಯ, ಕೃಷ್ಣರು ಹದಿನಾಡನ್ನು ತಮ್ಮ ವಶಪಡಿಸಿಕೊಂಡುದಲ್ಲದೆ ಸೈನ್ಯಸಮೇತರಾಗಿ ಕಾರುಗಹಳ್ಳಿಗೆ ಧಾವಿಸಿ ಅದನ್ನೂ ತಮ್ಮ ಅಧೀನಕ್ಕೆ ತೆಗೆದುಕೊಂಡರು. ಇದು ಕಾರುಗಹಳ್ಳಿಯ ಕಾಳಗದ ಮೊದಲ ಭಾಗ.

ವಿಜಯನಗರ ಸಾಮ್ರಾಜ್ಯ ಬಲಗುಂದುತ್ತ ಬಂದಂತೆಲ್ಲ ಅದರ ಸಾಮಂತರು, ಪಾಳೇಗಾರರು ಸ್ವತಂತ್ರರಾಗುತ್ತ ಬಂದರು. ಕಡೆಗೆ ಒಬ್ಬೊಬ್ಬರಾಗಿ ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಅವರಲ್ಲಿ ಮೈಸೂರು ಅರಸರೂ ಸೇರುತ್ತಾರೆ. ಆಗ ಈ ಪ್ರಾಂತ್ಯದ ರಾಜಧಾನಿ ಶ್ರೀರಂಗಪಟ್ಟಣ. ಈ ಸುಸಂದರ್ಭವನ್ನು ಉಪಯೋಗಿಸಿಕೊಂಡ ಕಾರುಗಹಳ್ಳಿಯ ಪಾಳೇಗಾರ ತಾನು ಸ್ವತಂತ್ರ ರಾಜನೆಂದು ಸಾರಿಕೊಂಡ. ವಿಜಯನಗರ ಪತನಾನಂತರ ಮೈಸೂರು ಅರಸರು ಮತ್ತು ಅನೇಕ ಪಾಳೇಗಾರರು ಪ್ರಬಲರಾದರು. ಇದರಲ್ಲಿ ಕಾರುಗಹಳ್ಳಿಯೂ ಒಂದು. ಆದರೆ ಮೈಸೂರು ಪ್ರಾಂತ್ಯದ ಅರಸರು ಹೆಚ್ಚು ಹೆಚ್ಚು ಪ್ರಬಲರಾಗುತ್ತಿದ್ದರು. ಯದುವಂಶದಲ್ಲಿ ಪ್ರಬಲನಾದ ರಾಜಒಡೆಯ ಈ ಹೊತ್ತಿಗೆ ಪ್ರಜ್ವಲವಾಗಿದ್ದ ಸುತ್ತಮುತ್ತಲಿನ ಅನೇಕ ಪಾಳೆಪಟ್ಟುಗಳನ್ನು ಸೋಲಿಸಿ ಮೈಸೂರು ಪ್ರಾಂತ್ಯದಲ್ಲಿ ವಿಲೀನಗೊಳಿಸುತ್ತ ನಡೆದಿದ್ದ. ಈ ಏಳಿಗೆಯನ್ನು ಹಾಗೇ ನಡೆಯ ಬಿಟ್ಟರೆ ತನ್ನ ಅಸ್ತಿತ್ವಕ್ಕೆ ಕುಂದುಬರುವುದೆಂಬ ಕಾರಣದಿಂದ ಕಾರುಗಹಳ್ಳಿಯ ವೀರರಾಜಯ್ಯ ಮೈಸೂರಿನ ಮೇಲೆ ದಂಡೆತ್ತಿ ಬಂದ. ಅವನ ಸೇನೆ ಚಾಮುಂಡಿಬೆಟ್ಟದ ಆಚೆಯ ತಪ್ಪಲಿನವರೆಗೆ ಒತ್ತಿಕೊಂಡು ಬಂತು. ಆದರೆ ರಾಜಒಡೆಯ ಬೇರೆ ಬೇರೆ ಕಡೆ ಯುದ್ಧದಲ್ಲಿ ತೊಡಗಿದ್ದ ತನ್ನ ಸೈನ್ಯವನ್ನೆಲ್ಲ ಒಂದುಗೂಡಿಸಿ ಕಾರುಗಹಳ್ಳಿಯ ಸೇನೆಯ ಮೇಲೆ ಬಿದ್ದ. ಈ ಅನಿರೀಕ್ಷಿತ ಹೊಡೆತಕ್ಕೆ ಕಾರಗಹಳ್ಳಿಯ ಸೇನೆ ಬೆದರಿ ಹಿಂದೋಡಿತು. ರಾಜಒಡೆಯನ ಸೇನೆ, ಕಾರುಗಹಳ್ಳಿಯ ಕೋಟೆಯವರೆಗೆ ನುಗ್ಗಿ, ಕೋಟೆಗೆ ಮುತ್ತಿಗೆ ಹಾಕಿತು. ಆ ಭದ್ರವಾದ ಕೋಟೆಯನ್ನು ವಶಕ್ಕೆ ತೆಗೆದುಕೊಳ್ಳಲು ಮೈಸೂರು ಸೇನೆಗೆ ಬಹಳ ದಿನಗಳು ಬೇಕಾದುವಲ್ಲದೆ ಬಹಳ ಪ್ರಯಾಸವೂ ಆಯಿತು. ಕಡೆಗೆ ಕೋಟೆ ರಾಜಒಡೆಯನ ವಶವಾಯಿತು. ಇಂಥ ಒಂದು ಭದ್ರ ಕೋಟೆ ಎಂದಾದರೊಂದು ದಿನ ಮೈಸೂರಿಗೆ ಅಪಾಯ ಎಂದರಿತ ರಾಜ ಒಡೆಯ ಕಾರುಗಹಳ್ಳಿಯ ಕೋಟೆಯನ್ನು ನೆಲಸಮಮಾಡಿ ಹರಳು ನೆಡಿಸಿದನಂತೆ. ಈ ಎರಡು ಘಟನೆಗಳನ್ನು ಒಂದು ಮಾಡಿ ಹೇಳುತ್ತವೆ, ಜನಪದ ಕತೆಗಳು. ಆದರೆ ಚಾರಿತ್ರಿಕ ಆಧಾರಗಳು ಕಾರುಗಹಳ್ಳಿಯ ಈ ಎರಡೂ ಕಾಳಗಗಳು ಬೇರೆ ಬೇರೆ ಕಾಲದವೆಂಬುದನ್ನು ಸ್ಪಷ್ಟಪಡಿಸುತ್ತವೆ.

ಮಂಟೇಸ್ವಾಮಿ ಸಂಪ್ರದಾಯದ ನೀಲಗಾರರು ಕಾರುಗಹಳ್ಳಿಯ ಕಾಳಗ ಎಂಬ ಐತಿಹಾಸಿಕ ಲಾವಣಿಯನ್ನೇ ಕಟ್ಟಿ ಹಾಡುತ್ತಾರೆ. ಮಂಟೇಸ್ವಾಮಿಯ ಕತೆಯಲ್ಲಿಯೂ ಈ ಕಾಳಗದ ಪ್ರಸ್ತಾಪ ಬರುತ್ತದೆ. ಮಂಟೇಸ್ವಾಮಿಯ ಶಿಷ್ಯರಾದ ರಾಚಪ್ಪಾಜಿಯವರು ಕಾರುಗಹಳ್ಳಿಯ ಪಾಳೆಗಾರನನ್ನು ಗೆಲ್ಲಲು ರಾಜ ಒಡೆಯನಿಗೆ ಪ್ರೇರಕರಾಗಿ ನಿಂತರು ಎಂಬ ಸ್ವಾರಸ್ಯವಾದ ಕತೆ ಅಲ್ಲಿ ಬರುತ್ತದೆ. (ಎಚ್.ಕೆ.ಆರ್.ಜಿ.)

**ಕಾರೆಗಿಡ :** ರೂಬಿಯೇಸೀ ಕುಟುಂಬಕ್ಕೆ ಸೇರಿದ ಕ್ಯಾಂತಿಯಮ್ ಪಾರ್ವಿಫ್ಲೋರಮ್ ಎಂಬ ಶಾಸ್ತ್ರೀಯ ಹೆಸರಿನ ಗಿಡ. ಮುಖ್ಯವಾಗಿ ಇದು ಉಷ್ಣಪ್ರದೇಶಗಳ ಬಂಜರುಭೂಮಿಯಲ್ಲಿ ಕಳೆಯಂತೆ ಬೆಳೆಯುತ್ತದೆ. ಭಾರತದಲ್ಲಿ ಈ ಪ್ರಭೇದವಲ್ಲದೆ ಇದರಂತೆಯೇ ಇರುವ ಕ್ಯಾ. ಡೈಕಾಕ್ಕಮ್ ಮತ್ತು ಕ್ಯಾ. ಅಂಬೇಲೇಟಮ್ ಎಂಬ ಪ್ರಭೇದಗಳು ಬೆಳೆಯುತ್ತವೆ. ಇವು ಚಿಕ್ಕ ಕುರುಚಲು ಗಿಡಗಳಾಗಿಯೊ ಸಣ್ಣ ಪೊದರುಗಳಾಗಿಯೊ ಇಲ್ಲವೆ ಸಣ್ಣ ಮರಗಳಾಗಿಯೊ ಬೆಳೆಯುತ್ತವೆ. ಎಲ್ಲ ಪ್ರಭೇದಗಳಲ್ಲೂ ಎಲೆಗಳು ಕಾಂಡದ ಮೇಲೆ ಅಭಿಮುಖವಾಗಿ ಜೋಡಣೆಗೊಂಡಿವೆ. ಇವುಗಳ ಕಂಕುಳುಗಳಲ್ಲಿ ಚೂಪಾದ ಮತ್ತು ಗಟ್ಟಿಯಾದ ಮುಳ್ಳುಗಳಿವೆ. ಇವು ಮಾರ್ಪಾಡಾದ ಕಂಕುಳು ಮೊಗ್ಗುಗಳು. ಹೂಗಳು ಸಣ್ಣವು, ಆಕರ್ಷಕವಾಗಿಲ್ಲ. ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹಣ್ಣು ಅಷ್ಟಿಫಲ ಮಾದರಿಯದು. ಮಾಗಿದಾಗ ಕಂದುಬಣ್ಣಕ್ಕೆ ತಿರುಗುತ್ತದೆ. ಒಳಗೆ ಎರಡು ಬೀಜಗಳಿವೆ. ಹಣ್ಣು ತಿನ್ನಲು ಯೋಗ್ಯವಾಗಿದೆ. ಕ್ಯಾಡೈಕಾಕ್ಕಮ್‌ನ ತೊಗಟೆಯನ್ನು ಜ್ವರಕ್ಕೆ ಉಪಯೋಗಿಸುತ್ತಾರೆ. ಮೂಳೆಗಳಿಗೆ, ಪೆಟ್ಟು ಬಿದ್ದಾಗ ಇದನ್ನು ಉಪಯೋಗಿಸುವುದುಂಟು. ಇದರ ಕಾಂಡವನ್ನು ಕೈ ಬೆತ್ತಗಳಿಗೂ ವ್ಯವಸಾಯದ ಸಲಕರಣೆಗಳಿಗೂ ಬಾಚಣಿಗೆ ಗೊಂಬೆ ಮುಂತಾದುವುಗಳ ತಯಾರಿಕೆಗೂ ಬಳಸುತ್ತಾರೆ. ಕ್ಯಾ. ಪಾರ್ವಿಫ್ಲೋರಮಿನಬೇರು ಮತ್ತು ಎಲೆಗಳ ಕಷಾಯವನ್ನು ಕೆಲವು ಶೀತ ಭೇದಿಗಳಿಗೆ ಉಪಶಮನ ಔಷಧಿಯಾಗಿಯೂ ಬೇರನ್ನು ಜಂತುಹುಳು ನಾಶಕವಾಗಿಯೂ ಉಪಯೋಗಿಸುತ್ತಾರೆ. ಕಾಂಡವನ್ನು ಬೀಸುವ ಕಲ್ಲುಗಳ ಹಿಡಿಗಳಾಗಿಯೂ ಅಚ್ಚುಗಳಾಗಿಯೂ ಬಳಸುವರು. ಅಲ್ಲದೆ ಎಲೆ, ಎಳೆಯಕಾಂಡ ಮತ್ತು ಹಣ್ಣುಗಳು ಆಡುಗಳಿಗೆ ಉತ್ತಮವಾದ ಮೇವು. (ಎಂ.ಸಿ.ಆರ್.; ಎನ್.)

ಕಾರೆಗಿಡದ ಒಂದು ರೆಂಬೆ

**ಕಾರೇವ ಸ್ತರಗಳು :** ಸಮುದ್ರಮಟ್ಟಕ್ಕಿಂತಲೂ ಸುಮಾರು 1,800 ಮೀಟರುಗಳಷ್ಟು ಎತ್ತರದಲ್ಲಿರುವ ಕಾಶ್ಮೀರ ಕಣಿವೆಯಲ್ಲಿನ ಸ್ತರಗಳು (ಕಾರೇವ ಬೆಡ್ಸ್). ಇವು ಭೂಚರಿತ್ರೆಯ ಪ್ಲಿಸ್ಟೊಸೀನ್ ಕಾಲದಲ್ಲಿ ಸರೋವರ, ನದಿ ಮತ್ತು ಹಿಮನದಿಗಳ ಕಾರ್ಯದಿಂದ ಶೇಖರವಾಗಿವೆಯೆಂದು ತಿಳಿದುಬಂದಿದೆ. ಈ ಸ್ತರಗಳಿಗೆ ಈಶಾನ್ಯದಲ್ಲಿ ಉನ್ನತ ಹಿಮಾಲಯ ಶ್ರೇಣಿಯೂ ನೈರುತ್ಯದಲ್ಲಿ ಪಿರ್ ಪಂಜಾಲ್ ಶ್ರೇಣಿಯೂ ಇವೆ. ಇವು ಕಾಶ್ಮೀರ ಕಣಿವೆಯಲ್ಲಿ ಸುಮಾರು 130 ಕಿಲೋಮೀಟರುಗಳಷ್ಟು ಉದ್ದ ಮತ್ತು 30 ಕಿಲೋಮೀಟರುಗಳಷ್ಟು ಅಗಲವಿರುವ ಪ್ರದೇಶದಲ್ಲಿ ವ್ಯಾಪಿಸಿವೆ.

ಕಾರೇವ ಸ್ತರಗಳು ಮುಖ್ಯವಾಗಿ ಸಣ್ಣಮರಳು ಮತ್ತು ನಯವಾದ ವರ್ಣರಂಜಿತ ಮಣ್ಣುಗಳಿಂದಾದ ಶಿಲೆಗಳಿಂದ ಉಂಟಾಗಿವೆ; ಮತ್ತು ಇವುಗಳ ಜೊತೆಗೆ 1–2 ಮೀಟರು ದಪ್ಪದ ಉತ್ಕೃಷ್ಟವಲ್ಲದ ಲಿಗ್ನೈಟ್ ಪದರಗಳೂ ಇವೆ. ಮೇಲೊತ್ತರಿಸಲ್ಪಡುತ್ತಿರುವ ಪರ್ವತಗಳ ಮಧ್ಯದಲ್ಲಿ ಕುಸಿಯುತ್ತಿರುವತಳದಿಂದುಂಟಾದ ಸರೋವರದಲ್ಲಿ ಈ ಸ್ತರಗಳು ಶೇಖರವಾಗಿವೆಯೆಂದು ಶಿಲಾವಿಧಗಳ ಆಧಾರಗಳಿಂದ ಕಂಡು ಬರುತ್ತದೆ. ಇವು ಟ್ರಯಾಸಿಕ್ ಮತ್ತು ಅದಕ್ಕೂ ಪುರಾತನ ಶಿಲೆಗಳ ಮೇಲೆ ಶೇಖರವಾಗಿರುವುದನ್ನು ಕಾಣಬಹುದು.

ಈ ಸ್ತರಗಳ ಅವಶೇಷಗಳು ಪಿರ್ ಪಂಜಾಲ್ ಶ್ರೇಣಿಯ ಈಶಾನ್ಯಭಾಗದ ಇಳಿಜಾರಿನಲ್ಲಿ ಸಮುದ್ರಮಟ್ಟಕ್ಕಿಂತ ಸುಮಾರು 3700ರಿಂದ 4,000 ಮೀಟರುಗಳಷ್ಟು ಎತ್ತರ ಪ್ರದೇಶಗಳಲ್ಲೂ ಕಂಡುಬಂದಿವೆ.

ಕಾರೇವ ಸ್ತರಗಳನ್ನು ಕೆಳವಿಭಾಗ ಮತ್ತು ಮೇಲು ವಿಭಾಗವೆಂದು ಭಾಗಿಸಬಹುದು. ಕೆಳಸ್ತರಗಳಲ್ಲಿ ಮಡಿಕೆಗಳುಂಟಾಗಿವೆ. ಆದರೆ ಅದೇ ಮೇಲುಸ್ತರಗಳು ಹೆಚ್ಚು ಕಡಿಮೆ ಸಮುದ್ರಮಟ್ಟದಲ್ಲೇ ಇವೆ. ಕೆಳ ಕಾರೇವಾದ ಕೆಳಗಿನ ಸುಮಾರು 900 ಮೀಟರುಗಳಷ್ಟು ಸ್ತರಗಳು ನದಿ ಮತ್ತು ಹಿಮನದಿಗಳಿಂದ ಮೊದಲನೇ ನೀರ್ಗಲ್ಲು ಯುಗಕ್ಕೂ ಮೊದಲು ಶೇಖರವಾದವೆಂದು ನಂಬಬಹುದು. ಅದೇ ಕೆಳ ಕಾರೇವಾದ ಮೇಲಿನ ಸ್ತರಗಳು ಮೊದಲನೆಯ ಮತ್ತು ಎರಡನೆಯ ನೀರ್ಗಲ್ಲು ಯುಗದ ಅಂತರ ಅವಧಿಯಲ್ಲಿ ಶೇಖರವಾಗಿರುವುದಾಗಿ ತಿಳಿದುಬರುತ್ತದೆ. ಈ ಕೆಳ ವಿಭಾಗದ ಮೇಲಿನ ಸ್ತರಗಳಲ್ಲಿ ಸುಮಾರು 70 ವಿಧದ ಸಸ್ಯಾವಶೇಷಗಳು ಸಿಕ್ಕಿವೆ. ಇವುಗಳಲ್ಲಿ ದ್ವಿದಳಬೀಜದ ಗುಂಪಿಗೆ ಸೇರಿದಂತಹವೇ ಹೆಚ್ಚು. ಈ ಸಸ್ಯಾವಶೇಷಗಳು ಸಾಮಾನ್ಯವಾಗಿ ಉಷ್ಣ ಮತ್ತು ಸಮಶೀತೋಷ್ಣ ವಾಯುಗುಣವನ್ನು ಸೂಚಿಸುವಂಥವು. ಈಗಿನ ಕಾಲದಲ್ಲಿ ಸಮುದ್ರಮಟ್ಟಕ್ಕೆ 1,700 ಮೀಟರುಗಳಷ್ಟು ಮೀರದ ಎತ್ತರವಿರುವ ಪ್ರದೇಶದಲ್ಲಿ ಮಾತ್ರ ಈ ಸಸ್ಯಗಳು ಬೆಳೆಯುತ್ತವೆ. ಆದರೆ ಇವುಗಳ ಅವಶೇಷಗಳು ಸಮುದ್ರಮಟ್ಟಕ್ಕಿಂತ ಸುಮಾರು 3,500 ಮೀಟರುಗಳಷ್ಟು ಎತ್ತರವಿರುವ ಈ ಸ್ತರಗಳಲ್ಲಿ ಕಂಡುಬಂದಿವೆ. ಆದ್ದರಿಂದ ಕಾರೇವ ಸ್ತರಗಳು ಶೇಖರವಾದ ಅನಂತರ ಅವು ಮೇಲೊತ್ತರಿಸಿವೆ ಎಂದು ತಿಳಿಯುವುದು. ಈ ಸಸ್ಯಾವಶೇಷಗಳಲ್ಲದೆ ಮೀನು, ಆನೆ, ಕುದುರೆ, ದನ, ಹಂದಿ ಮತ್ತು ರೈನಾಸೆರಸ್‌ಗಳ ಗುಂಪಿಗೆ ಸೇರಿದ ಅನೇಕ ಪ್ರಾಣಿಗಳ ಅವಶೇಷಗಳೂ ಈ ಸ್ತರಗಳಲ್ಲಿ ಕಂಡುಬಂದಿವೆ. ಕಾರೇವ ಮೇಲ್ವಿಭಾಗ ಸುಮಾರು 350 ಮೀ.ಗಳಷ್ಟು ದಪ್ಪಸ್ತರಗಳನ್ನೊಳಗೊಂಡಿದೆ. ಇವುಗಳಲ್ಲೂ ಬೆನ್ನೆಲುಬಿಲ್ಲದ ಪ್ರಾಣಿಗಳ ಮತ್ತು ಸಸ್ಯಗಳ ಅವಶೇಷಗಳು ಇವೆ.

ಕಾರೇವಸ್ತರಗಳ ಕೆಳವಿಭಾಗವನ್ನು ಪ್ರಾಣಿ ಅವಶೇಷಗಳ ಆಧಾರದ ಮೇಲೆ ಶಿವಾಲಿಕ್ ಯುಗದ ಪಿಂಜೊರ್ ಅವಧಿಯ ಸಮಕಾಲೀನವೆಂದು ಪರಿಗಣಿಸಲಾಗಿದೆ. ಕಾರೇವ ಸ್ತರಗಳನ್ನೊಳಗೊಂಡಿರುವ ಪಿರ್‌ಪಂಜಾಲ್ ಶ್ರೇಣಿಯ ಕೊನೆಯ ಮೇಲೊತ್ತರಿಸುವಿಕೆ ಕಾರೇವ ಶೇಖರಾಂತರವೆಂದೂ ಆ ಅವಧಿಯಲ್ಲಿ ಆಗಲೇ ಆದಿಮಾನವ ಕಾಣಿಸಿಕೊಂಡಿದ್ದನೆಂದೂ ನಂಬಲಾಗಿದೆ. ಆದರೆ ಇದುವರೆಗೂ ಕಾರೇವ ಸ್ತರಗಳಲ್ಲಿ ಆದಿಮಾನವನ ಜೀವಾವಶೇಷಗಳಾವುವು ಸಿಕ್ಕಿಲ್ಲ. (ಎಂ.ವಿ.ಎ.ಎಸ್.)

**ಕಾರೈಕ್ಕಾಲ್ :** ಭಾರತ ಒಕ್ಕೂಟ ಪ್ರದೇಶವಾದ ಪುದುಚೇರಿಯ ಆಡಳಿತಕ್ಕೆ ಸೇರಿರುವ ಭಾಗಗಳಲ್ಲೊಂದು; ಮತ್ತು ಅದೇ ಹೆಸರಿನ ಪಟ್ಟಣ. ಕಾರೈಕಾಲ್ ಪ್ರದೇಶ ಉ.ಅ. $10^0$ $50^1$ ನಿಂದ $11^0$ ರವರೆಗೆ ಮತ್ತು ಪೂ.ರೇ. $70^0$ $43^1$ನಿಂದ $79^0$ $52^1$ ವರೆಗೆ ಹಬ್ಬಿದೆ. ಪುದುಚೇರಿಯಿಂದ ದಕ್ಷಿಣಕ್ಕೆ 150 ಕಿಮೀ ದೂರದಲ್ಲಿ, ಬಂಗಾಳ ಕೊಲ್ಲಿಯ ದಂಡೆಯ ಮೇಲಿರುವ ಕಾರೈಕ್ಕಾಲ್ ಪ್ರದೇಶದ ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ತಮಿಳುನಾಡಿನ ತಂಜಾವೂರು ಜಿಲ್ಲೆಯೂ ಪೂರ್ವದಲ್ಲಿ ಬಂಗಾಳ ಕೊಲ್ಲಿಯೂ ಇವೆ. ತಂಜಾವೂರು ಜಿಲ್ಲೆಯ ಭಾಗದಂತಿರುವ ಈ ಪ್ರದೇಶದ ವಿಸ್ತೀರ್ಣ 150 ಚ.ಕಿಮೀ. ಕಾರೈಕ್ಕಾಲ್, ತಿರುನಲ್ಲೂರ, ನೆರಾವಿ, ನೆಡುಂಗಾಡು, ಕೊಟ್ಟುಚೆರಿ ಮತ್ತು ತಿರುಮಲೈರಾಯನ್ ಪಟ್ಟನಂ– ಎಂಬ ಆರು ಸಣ್ಣ ವಿಭಾಗಗಳಾಗಿವೆ (ಕಮ್ಯೂನ್). ಕಾರೈಕ್ಕಾಲ್ ಪಟ್ಟಣವೇ ಅಲ್ಲದೆ 118 ಗ್ರಾಮಗಳುಂಟು. ಕಾರೈಕ್ಕಾಲ್ ಪಟ್ಟಣದ ಜನಸಂಖ್ಯೆ 74333 (2001).

ಕಾವೇರಿ ಮುಖಜಭೂಮಿಯಲ್ಲಿ ಅದರ ಕವಲೊಂದರ ದಡದಲ್ಲಿರುವ ಕಾರೈಕ್ಕಾಲ್ ಪ್ರದೇಶದ ಕೃಷಿಕಾರ್ಯ ಕಾವೇರಿಯ ಕಾಲುವೆ ವ್ಯವಸ್ಥೆಗೆ ಒಳಪಟ್ಟಿದೆ. ಬತ್ತ ಮುಖ್ಯ ಬೆಳೆ. ತರಿ ಜಮೀನಿನ ವಿಸ್ತೀರ್ಣ ಸು. 10,000 ಹೆಕ್ಟೇರುಗಳು. ಇಲ್ಲಿಯ ಜನಸಾಂದ್ರತೆ ಬಲು ಹೆಚ್ಚು. ಕೆಲವು ಕಡೆಗಳಲ್ಲಿ ಚ.ಕಿಮೀಗೆ 3000ಕ್ಕಿಂತಲೂ ಅಧಿಕವಾಗಿದೆ.

ಕಾರೈಕ್ಕಾಲ್ ಪಟ್ಟಣ ಪೂರ್ವ ಕರಾವಳಿಯ ತೆರೆದ ಹಡಗುದಾಣಗಳಲ್ಲೊಂದು. ಇಲ್ಲಿ 43 ಮೀ ಎತ್ತರದ ದೀಪಸ್ತಂಭವುಂಟು. 13 ಕಿಮೀ ಫಾಸಲೆಯವರೆಗೂ ಇದು ಕಾಣಿಸುತ್ತದೆ. ದಕ್ಷಿಣ ರೈಲ್ವೆಯ ಮಾಯಾವರಂ–ಪೆರಾಲಂ ರೈಲುದಾರಿ ಕಾರೈಕ್ಕಾಲ್ ಮೂಲಕ ಹಾದು ಹೋಗುತ್ತದೆ.

ಕಾರೈಕ್ಕಾಲ್ 1739ರಲ್ಲಿ ಫ್ರೆಂಚರ ವಶಕ್ಕೆ ಬಂತು. ಪದಚ್ಯುತಿ ಹೊಂದಿದ್ದ ತಂಜಾವೂರಿನ ದೊರೆ ಸಯ್ಯಾಜಿಗೆ ಅವನ ರಾಜ್ಯವನ್ನು ದೊರಕಿಸಿಕೊಡಲು ಸಹಾಯಮಾಡಿದ್ದ ಫ್ರೆಂಚರ ಉಪಕಾರಕ್ಕೆ ಪ್ರತಿಯಾಗಿ ಕಾರೈಕ್ಕಾಲನ್ನು ಅವರಿಗೆ ನೀಡುವುದಾಗಿ ಆತ 1738ರಲ್ಲಿ ನೀಡಿದ್ದ ವಾಗ್ದಾನದಂತೆ ನಡೆದುಕೊಳ್ಳದಿದ್ದುದರಿಂದ ಫ್ರೆಂಚರು ಚಂದಾಸಾಹೆಬನ ನೆರವಿನಿಂದ ಇದನ್ನು ಗೆದ್ದುಕೊಂಡರು. 1760 ರಲ್ಲಿ ಇಂಗ್ಲಿಷರು ಇದನ್ನು ಫ್ರೆಂಚರಿಂದ ಕಿತ್ತುಕೊಡಿದ್ದು, 1765ರಲ್ಲಿ ಅವರಿಗೇ ಹಿಂತಿರುಗಿಸಿದರು. ಅನಂತರವೂ ಮೂರು ಸಾರಿ ಇದು ಇಂಗ್ಲಿಷರ ವಶಕ್ಕೆ ಬಂದಿತ್ತು. ಯುದ್ಧ ಪ್ರಚೋದಕ ಚಟುವಟಿಕೆಗಳಲ್ಲಿ ಕಾರೈಕ್ಕಾಲನ್ನು ಬಳಸಿಕೊಳ್ಳಬಾರದೆಂಬ ಷರತ್ತಿನ ಮೇಲೆ ಕೊನೆಗೆ ಫ್ರೆಂಚರಿಗೇ ಇದನ್ನು ಕೊಡಲಾಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ–1954ರಲ್ಲಿ –ಫ್ರೆಂಚರು ಇದನ್ನು ಭಾರತಕ್ಕೆ ವಸ್ತುತಃ ವರ್ಗಾವಣೆ ಮಾಡಿದರು. ಇದರ ಅಧಿಕೃತ ಹಕ್ಕು ಭಾರತಕ್ಕೆ ವರ್ಗವಾದ್ದು 1956ರಲ್ಲಿ. (ಯು.ಜಿ.ಎಂ.)

**ಕಾರೈಕ್ಕಾಲಮ್ಮೆ :** ಅರುವತ್ತಮೂರು ಪುರಾತನರಲ್ಲಿ ಒಬ್ಬಳು. ಚೋಳದೇಶದ ಕಾರೈಕ್ಕಾಲ್ ಎಂಬ ಪಟ್ಟಣದಲ್ಲಿದ್ದಳು. ಹೆತ್ತವರಿಟ್ಟ ಹೆಸರು ಪುನಿತವತಿ. ಪರಮದತ್ತನೆಂಬ ಈಕೆಯ ಪತಿ ವ್ಯಾಪಾರ ನಡೆಸುತ್ತಿದ್ದ. ಒಂದು ದಿನ ಪರಮದತ್ತ ಅಂಗಡಿಯಲ್ಲಿದ್ದಾಗ ಪರಿಚಿತಸ್ಥನೊಬ್ಬ ಎರಡು ಮಾವಿನ ಹಣ್ಣುಗಳನ್ನು ತಂದುಕೊಟ್ಟ. ಅವನ್ನು ಪರಮದತ್ತ ತನ್ನ ಮಡದಿಗೆ ಕಳುಹಿಸಿಕೊಟ್ಟ. ಹಸಿದಿದ್ದ ಒಬ್ಬ ಶಿವಭಕ್ತ ಮನೆಗೆ ಬರಲು ಪುನಿತವತಿ ಅವನನ್ನು ಸತ್ಕರಿಸಿ ಆರೋಗಣೆಗೆ ಒಂದು ಮಾವಿನಹಣ್ಣನ್ನು ಕುಯ್ದು ಬಡಿಸಿದಳು. ಮಧ್ಯಾಹ್ನದ ವೇಳೆಗೆ ಪರಮದತ್ತ ಊಟಕ್ಕೆ ಮನೆಗೆ ಬಂದ. ಗಂಡನಿಗೆ ಊಟದೊಂದಿಗೆ ಉಳಿದ ಮಾವಿನ ಹಣ್ಣನ್ನು ಹೆಂಡತಿ ಬಡಿಸಿದಳು. ಹಣ್ಣು ಬಹಳ ಸವಿಯಾಗಿರುವುದನ್ನು ಕಂಡು ಮತ್ತೊಂದು ಹಣ್ಣನ್ನೂ ತಂದು ಬಡಿಸುವಂತೆ ಗಂಡ ಕೇಳಿದ. ಪುನಿತವತಿ ಆ ಮಾತನ್ನು ಕೇಳಿ ಗಾಬರಿಗೊಂಡಳು. ನಡೆದ ವಿದ್ಯಮಾನವನ್ನು ಹೇಳಲು ಹೆದರಿದಳು. ಬಿಕ್ಕಟ್ಟಿನಿಂದ ತನ್ನನ್ನು ಪಾರು ಮಾಡಬೇಕು ಎಂದು ಉಮಾಪತಿಗೆ ಮೊರೆಯಿಟ್ಟಳು. ಆ ಕ್ಷಣದಲ್ಲಿ ಭಕ್ತೆಯ ಕರೆಗೆ ಶಿವ ಓಗೊಟ್ಟಂತೆ ಪುನಿತವತಿಯ ಕೈಯಲ್ಲಿ ಒಂದು ಮಾವಿನಹಣ್ಣು ಬಿತ್ತು. ಸಂತೋಷಗೊಂಡ ಪುನಿತವತಿ ಆ ಹಣ್ಣನ್ನು ತನ್ನ ಗಂಡನ ಎಡೆಯಲ್ಲಿ ಬಡಿಸಿದಳು. ಪರಮದತ್ತ ಆ ಹಣ್ಣನ್ನು ತಿಂದ. ಮೊದಲು ತಿಂದ ಮಾವಿನಹಣ್ಣಿಗಿಂತ ಅದು ಹೆಚ್ಚು ರುಚಿಕರವಾಗಿರುವುದನ್ನು ಕಂಡು ಬಹಳ ಅಚ್ಚರಿಗೊಂಡ. 'ಇದು ನಾನು ಕಳುಹಿಸಿಕೊಟ್ಟ ಮಾವಿನಹಣ್ಣಲ್ಲ. ಮೂರು ಲೋಕದಲ್ಲೂ ಇಂಥ ಮಧುರವಾದ ಮಾವಿನಹಣ್ಣನ್ನು ಪಡೆಯುವುದು ದುರ್ಲಭ. ಈ ಹಣ್ಣು ಎಲ್ಲಿಯದು? ಇದು ನಿನಗೆ ಹೇಗೆ ಸಿಕ್ಕಿತು?' ಎಂದು ತನ್ನ ಸತಿಯನ್ನು ಕೇಳಿದ. ಆಗ ಹೆಂಡತಿ ಮರೆಮಾಚದೆ ನಡೆದ ಸಂಗತಿಯನ್ನು ಗಂಡನಿಗೆ ತಿಳಿಸಿದಳು. ಪರಮದತ್ತ ಅವಳ ಮಾತುಗಳನ್ನು ನಂಬದಾದ. 'ಪರಶಿವನ ಕೃಪೆಯಿಂದ ನಿನಗೆ ಮಾವಿನಹಣ್ಣು ದೊರೆತದ್ದು ನಿಜವಾದರೆ, ಅದರಂತೆಯೇ ಮತ್ತೊಂದು ಮಾವಿನ ಹಣ್ಣನ್ನು ಈಗ ತರಿಸು, ನೋಡುವ' ಎಂದು ಹೆಂಡತಿಯನ್ನು ಕೇಳಿದ. ಇದನ್ನು ಕೇಳಿ ಪುನಿತವತಿ ವಿವಶಳಾಗಿ ಪರಶಿವನಲ್ಲಿ ಮತ್ತೊಮ್ಮೆ ಮೊರೆಯಿಟ್ಟಳು. ಪ್ರಾರ್ಥನೆ ಫಲಿಸಿ ಕೈಗೆ ಮತ್ತೊಂದು ಹಣ್ಣು ಬಿತ್ತು. ಅದನ್ನು ಪತಿಗೆ ನೀಡಿದಳು. ಅವನು ಅದನ್ನು ತೆಗೆದುಕೊಂಡು ನೋಡಿ ಅಚ್ಚರಿಗೊಂಡ. ಆದರೆ ಆ ಹಣ್ಣು ಅವನ ಕೈಯಲ್ಲಿದ್ದಂತೆಯೇ ಮಾಯವಾಯಿತು.

ಪರಮದತ್ತ ಅಂಜಿಕೆಯಿಂದ ನಡುಗಿದ. ಪರಶಿವನ ಅನುಗ್ರಹವನ್ನು ಪಡೆದ ಈ ವನಿತಾರತ್ನ ಮಾನವಕೋಟಿಗೆ ಸೇರಿದವಳಲ್ಲ : ಪರದೈವವೇ ಇರಬೇಕು–ಎಂದು ಬಗೆದ. ಅಂಥವಳೊಡನೆ ಸಂಸಾರ ನಡೆಸುವುದು ತಕ್ಕುದಲ್ಲವೆಂದು ನಿಶ್ಚಯಿಸಿದ. ತನ್ನ ಇಂಗಿತವನ್ನು ಯಾರಿಗೂ ತಿಳಿಯಗೊಡದೆ ಪುನಿತವತಿಯ ಸಂಪರ್ಕ ತೊರೆದು ಇರತೊಡಗಿದ. ಕೊನೆಗೊಮ್ಮೆ ಆಕೆಯಿಂದ ದೂರ ಹೋಗಿ ಬಾಳುವ ಸಂಕಲ್ಪ ಮಾಡಿದ. ವ್ಯಾಪಾರದ ಸಲುವಾಗಿ ದೊಡ್ಡದೊಂದು ಹಡಗನ್ನು ನಿರ್ಮಿಸಿ ಸರಕುಗಳನ್ನು ತುಂಬಿಕೊಂಡು ಸಮುದ್ರವನ್ನು ದಾಟಿ ದೇಶಾಂತರಕ್ಕೆ ಹೋಗಿ ಅಮಿತ ಲಾಭ ಸಂಪಾದನೆಮಾಡಿ ಹಿಂದಿರುಗಿ ಚೋಳದೇಶಕ್ಕೆ ಬರುತ್ತ ಪಾಂಡ್ಯದೇಶದ ಒಂದು ರೇವುಪಟ್ಟಣವನ್ನು ಸೇರಿ, ಅಲ್ಲಿ ಒಂದು ವ್ಯಾಪಾರಸ್ಥಾನವನ್ನು ಸ್ಥಾಪಿಸಿಕೊಂಡು ಅಲ್ಲೇ ನೆಲೆಸಿದ. ಅಲ್ಲಿನ ವೈಶ್ಯಕುಲದ ಕನ್ಯೆಯೊಬ್ಬಳನ್ನು ಮದುವೆಯಾದ. ಅವನಿಗೆ ಒಂದು ಹೆಣ್ಣು ಮಗು ಹುಟ್ಟಿತು. ಅದಕ್ಕೆ ಪುನಿತವತಿ ಎಂದೇ ಹೆಸರನ್ನಿಟ್ಟ.

ಇತ್ತ ಕಾರೈಕ್ಕಾಲಿನಲ್ಲಿ ಪುನಿತವತಿ ತನ್ನ ಪತಿಯ ಬರವನ್ನು ತವಕದಿಂದ ಇದಿರು ನೋಡುತ್ತಿದ್ದಳು. ಪರಮದತ್ತನ ನೆಲೆಯ ಸುದ್ದಿ ಪುನಿತವತಿಯ ಬಂಧುಬಳಗದವರಿಗೆ ಮುಟ್ಟಿತು. ಅವರು ಪುನಿತವತಿಯನ್ನು ಅವಳ ಪತಿಯಲ್ಲಿಗೆ ಕರೆದೊಯ್ದರು. ಪುನಿತವತಿಯ ಬರವನ್ನು ತಿಳಿದ ಪರಮದತ್ತ ಭಯಭೀತನಾದ. ಹೇಗೋ ಧೈರ್ಯ ತಂದುಕೊಂಡು ತನ್ನ ಕಿರಿಯ ಹೆಂಡತಿಯನ್ನೂ ಮಗಳನ್ನೂ ಕರೆದುಕೊಂಡು ಪುನಿತವತಿ ಇದ್ದೆಡೆಗೆ ಬಂದು ಬಂದವನೇ ಪುನಿತವತಿಯ ಕಾಲ್ಗಳಿಗೆರಗಿ ದಂಡಪ್ರಣಾಮ ಮಾಡಿದ. 'ನಾನು ತಮ್ಮ ಕೃಪೆಯಿಂದ ಈ ಪಟ್ಟಣದಲ್ಲಿ ನಲ್ಮೆಯಿಂದ ಬಾಳುತ್ತಲಿದ್ದೇನೆ, ಈಕೆ ನನ್ನ ಹೆಂಡತಿ ; ಈ ಮಗು ನನ್ನ ಮಗಳು. ಇವಳಿಗೆ ತಮ್ಮ ಹೆಸರನ್ನೇ ಇಟ್ಟಿದ್ದೇನೆ ' ಎಂದು ನುಡಿದ. ಪುನಿತವತಿಯ ಬಳಗದವರು ಪರಮದತ್ತನನ್ನು ಸಂಬೋಧಿಸಿ, ಹೆಂಡತಿಗೆ ಹೀಗೆ ನಮಸ್ಕರಿಸಿದುದೇಕೆಂದು ಕೇಳಿದರು. ಅದಕ್ಕೆ ಪರಮದತ್ತ ಆ ವನಿತಾರತ್ನದಲ್ಲಿ ತಾನು ಒಂದು ಅದ್ಭುತವನ್ನು ಕಂಡುದಾಗಿಯೂ ಆಕೆ ಪರಮದೈವವೇ ಹೊರತು ಮಾನವ ಕೋಟಿಗೆ ಸೇರಿದವಳಲ್ಲವಾದ್ದರಿಂದ ತಾನು ಆಕೆಯನ್ನು ತನ್ನ ಮನದೇವತೆಯಂತೆ ಭಾವಿಸುವುದಾಗಿಯೂ ತಿಳಿಸಿದ ; ತನ್ನಂತೆ ಅವರೂ ಆಕೆಗೆ ನಮಸ್ಕಾರ ಮಾಡಲು ಹೇಳಿದ. ಆ ಮಾತುಗಳನ್ನು ಕೇಳಿ ಅವರೆಲ್ಲರೂ ದಿಙ್ಮೂಢರಾದರು. ಪುನಿತವತಿ ದಿಕ್ಕು

ತೋಚದೆ ಮುಕ್ಕಣ್ಣನನ್ನು ಧ್ಯಾನಿಸಿ ಮೌನದಿಂದ ಮೊರೆಯಿಟ್ಟಳು. ಗಂಡನಿಗೆ ಬೇಡದ ಚೆಲುವಿನ ರೂಪ ತನಗೂ ಬೇಡವೆಂದು ಬಗೆದು ತನ್ನನ್ನು ಮರುಳಾಗಿಸುವಂತೆ ಭಗವಂತನಲ್ಲಿ ಬೇಡಿದಳು. ಪರಶಿವನ ಕೃಪೆಯಿಂದ ಆಕೆಯ ಮಾಂಸ ತುಂಬಿದ ದೇಹ ಅಳಿದು ಎಲುಬಿನ ಗೂಡು ಮಾತ್ರ ಉಳಿಯಿತು. ಬಂಧುಬಳಗದವರು ಅವಳ ರೂಪವನ್ನು ನೋಡಿ ಭೀತಿಗೊಂಡು ಅವಳಿಗೆ ಪೊಡಮೊಟ್ಟು ಅಲ್ಲಿಂದ ಹೊರಟುಹೋದರು. ಅಂದಿನಿಂದ ಆಕೆಯನ್ನು ಕಾರೈಕ್ಕಾಲಮ್ಮೆ ಎಂದು ಕರೆಯುವ ರೂಢಿಯಾಯಿತು.

ಪಿಶಾಚಿ ರೂಪವನ್ನು ತಳೆದ ಕಾರೈಕ್ಕಾಲಮ್ಮೆ ಹೊಸ ಜ್ಞಾನವನ್ನು ಪಡೆದು ತಿರುಪಾಡುಗಳನ್ನು ಹಾಡುತ್ತ ತೀವ್ರಗತಿಯಿಂದ ನಡೆದು ಕೈಲಾಸ ಪರ್ವತವನ್ನೈದಿದಳು. ಆ ಪವಿತ್ರಸ್ಥಳದಲ್ಲಿ ಕಾಲಿಂದ ನಡೆಯಲಾಗದೆಂದು ತಲೆಯಿಂದ ನಡೆದು ಹೋಗುತ್ತಿದ್ದಳು. ಇವಳ ಬರವನ್ನು ಕಂಡ ಗಿರಿಜೆ ಅಚ್ಚರಿಗೊಂಡು ಮಾದೇವಿಗೆ ಪೊಡಮಟ್ಟು, ತಲೆಯಿಂದ ನಡೆದುಬರುತ್ತಿರುವ ಈ ಮರುಳು ಯಾವುದು, ಎಲ್ಲಿಂದ ಬರುತ್ತಿರುವುದು–ಎಂದು ಬೆಸಗೊಂಡಳು. ಶಂಕರ ಈಕೆಯ ಕಥೆಯನ್ನು ಪಾರ್ವತಿಗೆ ಹೇಳಿದನಲ್ಲದೆ ಕಾರೈಕ್ಕಾಲಮ್ಮೆ ಹತ್ತಿರ ಬರುತ್ತಲೆ ಎನ್ನಮ್ಮೆ ಎಂದು ಬಲು ಪ್ರೀತಿಯಿಂದ ಆಕೆಯನ್ನು ಕರೆದ. ಅಮ್ಮೆಯೂ ಎನ್ನಪ್ಪ ಎಂದು ಉದ್ಗರಿಸುತ್ತ ಮುಂದೆ ಹೋಗಿ ಸದಾಶಿವನ ಪಾದಗಳಿಗೆರಗಿದಳು.

ಕಾರೈಕ್ಕಾಲಮ್ಮೆಯನ್ನು ನೋಡಿ ವಿರೂಪಾಕ್ಷ 'ನೀನು ಬೇಡುವ ವರವಾವುದು – ಎಂದು ಕೇಳಿದ. 'ದಯಾಪರನಾದ ಶಶಿಧರನೇ, ಅಮರವಾದ ನಿನ್ನ ಅನುಗ್ರಹ ಬೇಕು. ಇನ್ನು ಮುಂದೆ ಹುಟ್ಟು ಇಲ್ಲದಿರಬೇಕು, ಎಂದೂ ನಿನ್ನನ್ನು ಮರೆಯದಿರುವಂತೆ ದಯೆಗೈಯಬೇಕು' ಎಂದ ಅಮ್ಮೆಯ ಪ್ರಾರ್ಥನೆಗೆ ಪರಶಿವ ಅಸ್ತು ಎಂದ. 'ತೆಂಕಣದಲ್ಲಿರುವ ತಿರುವಾಲಂಗಾಡು ಎಂಬ ಪವಿತ್ರಕ್ಷೇತ್ರದಲ್ಲಿ ನಮ್ಮ ತಾಂಡವವನ್ನು ವೀಕ್ಷಿಸುತ್ತ ಮುದಿತಳಾಗಿ ನಮ್ಮನ್ನು ಪಾಡುತ್ತಲಿರು' ಎಂದು ಅನುಗ್ರಹಿಸಿದ. ಅದರಂತೆ ಅಮ್ಮೆ ತಿರುವಾಲಂಗಾಡನ್ನು ತಲುಪಿ ನಟರಾಜನ ವಿಶ್ವತಾಂಡವವನ್ನು ನೋಡಿ ಆನಂದಿಸುತ್ತ ತಿರುಪಾಡುಗಳನ್ನು ಪಠಿಸುತ್ತಲಿದ್ದಳು. ಶಂಕರ ಕರುಣೆದೋರಿ ಅವಳಿಗೆ ಗಣಪದವನ್ನಿತ್ತು ಸಂತೈಸಿದ.

ಹರಿಹರ ಈಕೆಯ ಕಥೆಯನ್ನು ರಗಳೆಯ ರೂಪದಲ್ಲಿ ಮನೋಜ್ಞವಾಗಿ ಹೇಳಿದ್ದಾನೆ. (ಎಂ.ವಿ.ಜೆ.)

**ಕಾರೊ, ಆನ್ನಿಬಾಲೆ :** 1507–1566. ಇಟಲಿಯ ಕವಿ, ಪಂಡಿತ, ಪ್ರಾಕ್ತನಶಾಸ್ತ್ರ ವಿಮರ್ಶಕ. ಸೆಲಿನಿ, ವರ್ಚಿ ಮತ್ತು ಬೆಂಬೊ ಮೊದಲಾದವರ ಸ್ನೇಹಿತ. ಪೆಟ್ರಾರ್ಕನ ಪ್ರಭಾವಕ್ಕೊಳಗಾಗಿ ಹಲವು ಸುಂದರ ಭಾವಗೀತೆಗಳನ್ನು ರಚಿಸಿದ. ವರ್ಜಿಲ್ ಕವಿಯ ಈನಿಯಡ್ ಕಾವ್ಯವನ್ನು ಸರಳರಗಳೆಯಲ್ಲೂ ಲಾಂಗಸ್‍ನ ಡಾಫ್ನೆ ಮತ್ತು ಕ್ಲೋ ಎಂಬ ಕಾವ್ಯವನ್ನು ಗದ್ಯರೂಪದಲ್ಲೂ ಇಟಲಿ ಭಾಷೆಗೆ ಅನುವಾದ ಮಾಡಿದ. ರೋಮಿನ ನಿತ್ಯಜೀವನದ ಆಧಾರದ ಮೇಲೆ ರಚಿತವಾದ ಈತನ ಚಿಂದಿ ಬಟ್ಟೆಯ ಸಹೋದರರು ಎಂಬ ಪ್ರಹಸನ ಜನಪ್ರಿಯತೆ ಗಳಿಸಿತ್ತು. (ಎಚ್.ಕೆ.ಆರ್.)

**ಕಾರ್ಕ್ :** ವಿಶಾಲಾರ್ಥದಲ್ಲಿ ಹೇಳುವುದಾದರೆ ನಿರ್ದಿಷ್ಟ ಆಕಾರವಿಲ್ಲದ ತೆಳುವಾದ ಕೋಶಭಿತ್ತಿಯುಳ್ಳ, ಮೇಣದಂಥ ಸೂಬರಿನ್ ಎಂಬ ವಸ್ತುವಿನ ಹೊದಿಕೆಯುಳ್ಳ ಅನೇಕ ಮರಗಳ ಹೊರ ತೊಗಟೆ. ಆದರೆ ನಿಷ್ಕೃಷ್ಟ ಅರ್ಥದಲ್ಲಿ ಓಕ್ ಮರದ ತೊಗಟೆಗೆ ಈ ಹೆಸರಿದೆ. ಈ ಮರದ ಶಾಸ್ತ್ರೀಯ ಹೆಸರು ಕ್ವರ್ಕಸ್ ಸೂಬರ್ (**ನೋಡಿ– ಓಕ್**). ಮೆಡಿಟರೇನಿಯನ್ ಪ್ರದೇಶ ಈ ಮರದ ತವರು. ಪೋರ್ಚುಗಲ್, ಸ್ಪೇನ್, ದಕ್ಷಿಣ ಫ್ರಾನ್ಸ್, ಇಟಲಿ, ಉತ್ತರ ಆಫ್ರಿಕದ ಟ್ಯುನಿಸಿಯ, ಆಲ್ಜೀರಿಯ ಮತ್ತು ಮೊರಾಕೋಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಈ ದೇಶಗಳಲ್ಲಿ 80,9400. ಹೆಕ್ಟೇರ್ ಕಾರ್ಕ್ ಮರದ ಕಾಡುಗಳಿವೆ.

ಕಾರ್ಕ್‍ಮರದ ಒಳತೊಗಟೆ ವಿಭಜನಶಕ್ತಿಯುಳ್ಳ ಕಾರ್ಕ್ ಕೇಂಬಿಯಮ್ ಎಂಬ ಅಂಗಾಂಶವನ್ನು ಉತ್ಪತ್ತಿಮಾಡುತ್ತದೆ. ಈ ಅಂಗಾಂಶ ತನ್ನ ಒಳ ಹಾಗೂ ಹೊರ ಭಾಗಗಳೆರಡರ ಕಡೆಗೂ ಆನುಷಂಗಿಕ ಅಂಗಾಂಶಗಳನ್ನು ಉತ್ಪಾದಿಸುತ್ತದೆ. ಹೊರ ಭಾಗದಲ್ಲಿ ರೂಪುಗೊಂಡ ಅಂಗಾಂಶವೇ ಕಾರ್ಕ್. ಇದನ್ನು ಮರದಿಂದ ಆಗಾಗ ಕತ್ತರಿಸಿ ತೆಗೆದುಕೊಳ್ಳಬೇಕು. ಮೊದಲಿನ ಎರಡು ಸಲ ಹೀಗೆ ತೆಗೆಯಲಾದ ಕಾರ್ಕ್ ಅಷ್ಟು ಉತ್ತಮ ಮಟ್ಟದ್ದಾಗಿರುವುದಿಲ್ಲ. ಆಮೇಲಿನವು ಉತ್ತಮ ದರ್ಜೆಯವಾಗಿದ್ದು ವಿವಿಧೋದ್ದೇಶಗಳಿಗೆ ಉಪಯೋಗವಾಗುತ್ತವೆ.

ಕಾರ್ಕಿಗೆ ಅಪೇಕ್ಷಣೀಯವಾದ ಹಲವಾರು ವಿಶೇಷ ಗುಣಗಳಿವೆ. ಇವುಗಳಲ್ಲಿ ಅದರ ತಗ್ಗುಮಟ್ಟದ ವಿಶಿಷ್ಟ ಸಾಂದ್ರತೆ (ಸ್ಪೆಸಿಫಿಕ್ ಗ್ರಾವಿಟಿ), ಸಂಕುಚಿತತೆ (ಕಂಪ್ರೆಸಿಬಿಲಿಟಿ), ಪುಟಿತತೆ (ಇಲ್ಯಾಸ್ಟಿಸಿಟಿ), ನೀರು ಮತ್ತು ಗಾಳಿಗೆ ಅಪಾರಗಮ್ಯತೆ, ತಗ್ಗುಮಟ್ಟದ ಉಷ್ಣವಾಹಕತ್ವ ಮತ್ತು ಸುಲಭವಾಗಿ ಹಾಳಾಗದಿರುವಿಕೆ ಮುಂತಾದ ಗುಣಗಳು ಮುಖ್ಯವಾದವು. ಅಲ್ಲದೆ ಇದು ರಾಸಾಯನಿಕವಾಗಿ ಜಡವಾಗಿರುವುದರಿಂದ ಆಮ್ಲಕ್ಷಾರ ಅಥವಾ ಜೈವಿಕ ದ್ರವ ವಸ್ತುಗಳು ಇದರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಇವೆಲ್ಲ ಗುಣಗಳಿಂದಾಗಿ ಕಾರ್ಕನ್ನು ವಿವಿಧ ಬಗೆಯ ಕೆಲಸಗಳಿಗೆ ಉಪಯೋಗಿಸುತ್ತಾರೆ.

ಮುಖ್ಯವಾಗಿ ಸೀಸೆಗಳ ಬಿರಡೆಯಾಗಿ, ದಾರ ತಂತಿ ಮುಂತಾದವನ್ನು ಸುತ್ತುವ ಉರುಳೆಗಳಾಗಿ, ಯಂತ್ರಭಾಗಗಳಲ್ಲಿ ಉಷ್ಣನಿರೋಧಕ ಹೊದಿಕೆಯಾಗಿ ಕಾರ್ಕ್ ಉಪಯೋಗುವಾಗುತ್ತದೆ. ಅಲ್ಲದೆ ಪಾದರಕ್ಷೆಗಳ ತಳಗಳು, ಚಾಪೆಗಳು, ಕೃತಕ ಕೈ ಕಾಲುಗಳು, ಪೆಟ್ಟಿಗೆ, ಟೋಪಿ ಮುಂತಾದವುಗಳ ಒಳಪದರದ ತಯಾರಿಕೆಯಲ್ಲಿಯೂ ಈಜುಬುರುಡೆಗಳು ಮುಂತಾದುವನ್ನು ಮಾಡಲೂ ಇದನ್ನು ಬಳಸುತ್ತಾರೆ. ಕಾರ್ಕನ್ನು ಕೊರೆಯುವಾಗ ಉಳಿಯುವ ಕಳಪೆ ಭಾಗಗಳನನ್ನು ಉಷ್ಣ, ವಿದ್ಯುತ್ತುಗಳನ್ನು ತಡೆಯುವ ಅವಾಹಕ ವಸ್ತುವಾಗಿ ಉಪಯೋಗಿಸುತ್ತಾರೆ.

ಮರಕ್ಕೆ 20 ವರ್ಷ ವಯಸ್ಸಾದ ಮೇಲೆ ಕಾರ್ಕನ್ನು ತೆಗೆಯುತ್ತಾರೆ. ಸುಮಾರು 150 ವರ್ಷ ಬಾಳುವ ಈ ಮರದಿಂದ 8 ರಿಂದ 10 ವರ್ಷಗಳಿಗೊಮ್ಮೆಯಂತೆ ಕಾರ್ಕ್ ತೆಗೆಯಬಹುದು. ಕಾರ್ಕನ್ನು ತೆಗೆಯುವಾಗ ತೊಗಟೆಯನ್ನು ಉದ್ದನೆಯಪಟ್ಟಿಗಳಾಗಿ ಬೇರ್ಪಡಿಸಿ, ಕಂತೆ ಕಟ್ಟಿ ಹಲವಾರು ವಾರಗಳ ಕಾಲ ಒಣಗಲು ಬಿಡುತ್ತಾರೆ. ಅನಂತರ ಅದನ್ನು ನೀರಿನಲ್ಲಿ ಕುದಿಸುತ್ತಾರೆ. ಇದರಿಂದ ಅದರಲ್ಲಿರುವ ಟ್ಯಾನಿಸ್ ಮುಂತಾದ ವಸ್ತುಗಳು ಪ್ರತ್ಯೇಕಗೊಳ್ಳುತ್ತವೆ. ಆಮೇಲೆ ಒಣಗಿಸಿ, ಬೇಕಾದ ಗಾತ್ರಕ್ಕೆ ಕತ್ತರಿಸಿ ಉಪಯೋಗಿಸುತ್ತಾರೆ.

ಬಿಗ್ನೋನಿಯೇಸೀ ಕುಟುಂಬಕ್ಕೆ ಸೇರಿದ ಮಿಲಿಂಗ್‍ಟೋನಿಯ ಹಾರ್ಟೆನ್ಸಿಸ್ ಎಂಬ ಮರದಿಂದಲೂ ಕೆಳದರ್ಜೆಯ ಕಾರ್ಕನ್ನು ತೆಗೆಯುತ್ತಾರೆ. ಈ ಮರಕ್ಕೆ ಬಿರಟು ಮರ ಎಂಬ ಕನ್ನಡ ಹೆಸರೂ ಇಂಡಿಯನ್ ಕಾರ್ಕ್ ಟ್ರೀ ಎಂಬ ಸಾಮಾನ್ಯ ಬಳಕೆಯ ಇಂಗ್ಲಿಷಿನ ಹೆಸರೂ ಇವೆ. (ಪಿ.ಕೆ.ಆರ್.ಜೆ.)

**ಕಾರ್ಕಳ :** ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯಲ್ಲಿರುವ ಒಂದು ಇತಿಹಾಸ ಪ್ರಸಿದ್ಧ ಪಟ್ಟಣ ಮತ್ತು ಅದೇ ಹೆಸರಿನ ತಾಲ್ಲೂಕಿನ ಕೇಂದ್ರ. ಸಮುದ್ರಮಟ್ಟದಿಂದ 241 ಅಡಿ ಎತ್ತರದಲ್ಲಿದೆ. ತಾಲ್ಲೂಕಿನ ವಿಸ್ತೀರ್ಣ 1400.63 ಚ.ಕಿಮೀ ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವ ಈ ಬೆಟ್ಟಗುಡ್ಡ ಪ್ರದೇಶದಲ್ಲಿ ಹಲರೀತಿಯ ಉತ್ತಮ ಕಟ್ಟಡಕಲ್ಲುಗಳು ಸಿಕ್ಕುತ್ತವೆ. ಚಪ್ಪಡಿಕಲ್ಲು, ಜಂಬುಕಲ್ಲು (ಲ್ಯಾಟರೈಟ್) ಇವು ಮುಖ್ಯವಾದವು. ಜಂಬುಕಲ್ಲು ಭೂಮಿಯಿಂದ ಅಗೆದು



ಗೊಮ್ಮಟೇಶ್ವರ

ತೆಗೆದಾಗ ಮೃದುವಾಗಿದ್ದು ಕ್ರಮೇಣ ಗಾಳಿಯಲ್ಲಿ ಗಟ್ಟಿಯಾಗುತ್ತದೆ. ಆದ್ದರಿಂದ ಆ ಕಲ್ಲಿನಲ್ಲಿ ಕೊಯ್ದು ತಯಾರಿಸಿದ ಇಟ್ಟಿಗೆಗಳನ್ನು ಈ ಪ್ರದೇಶದಲ್ಲೆಲ್ಲ ಕಟ್ಟಡಗಳಿಗೆ ಉಪಯೋಗಿಸುತ್ತಾರೆ. ಪಶ್ಚಿಮ ಘಟ್ಟಗಳನ್ನು ಆಗುಂಬೆ ಶ್ರೇಣಿಯ ಸ್ವಲ್ಪಭಾಗ ಕಾರ್ಕಳ ತಾಲ್ಲೂಕಿಗೆ ಸೇರುತ್ತದೆ. ಕಾರ್ಕಳದ ವಾಯುಗುಣ ಹಿತಕರವಾದುದು. ಜೂನ್ ಅಕ್ಟೋಬರ್ ವರೆಗೆ ಮಳೆಗಾಲ. ಅನೇಕ ಸಣ್ಣ ಹೊಳೆಗಳು ಇಲ್ಲಿ ಹರಿಯುತ್ತವೆ. ರಾಮಸಾಗರ ಇಲ್ಲಿಯ ಮುಖ್ಯ ಸರೋವರ. ಸುಮಾರು 700 ಅಡಿ ಎತ್ತರದಿಂದ ಬೀಳುವ ಭಂಡಾಜೆ ಜಲಪಾತ ಕಾರ್ಕಳ ತಾಲ್ಲೂಕಿನಲ್ಲಿದೆ. ಸಮೃದ್ಧವಾದ ಅರಣ್ಯಸಂಪತ್ತು ಮತ್ತು ಅರಣ್ಯಜನ್ಯ ಉತ್ಪನ್ನಗಳು ಕಾರ್ಕಳ ವೈಶಿಷ್ಟ್ಯ. ಈ ತಾಲ್ಲೂಕಿನ ಜನಸಂಖ್ಯೆ 2,05,598 (2001). ಪಟ್ಟಣದ ಜನಸಂಖ್ಯೆ 25,116 (2001).

ಇಲ್ಲಿಯ ಪ್ರಮುಖ ಬೆಳೆ ಬತ್ತ. ಇದಲ್ಲದೆ ತೆಂಗು, ಅಡಿಕೆ, ಮೆಣಸು, ಶುಂಠಿ, ಅನಾನಸ್, ಹಲಸು, ಮಾವು, ಬಾಳೆ ಮತ್ತು ಗೇರುಬೀಜ ಇಲ್ಲಿಯ ಉತ್ಪನ್ನಗಳಲ್ಲಿ ಮುಖ್ಯವಾದವು. ಕಲ್ಲುಕೆಲಸ, ಬೀಡಿ ಕಟ್ಟುವುದು. ನಶ್ಯದ ತಯಾರಿಕೆ, ಕೊಬ್ಬರಿ ಎಣ್ಣೆ ತಯಾರಿಕೆ, ಹೆಂಚಿನ ತಯಾರಿಕೆ, ಮಡಕೆ ಕುಡಿಕೆ ಮತ್ತು ಬೆತ್ತದ ಕೆಲಸ ಮುಂತಾದ ಗ್ರಾಮಕೈಗಾರಿಕೆಗಳಿವೆ. ಸರ್ಕಾರಿ ವ್ಯವಸಾಯ ಸಂಶೋಧನ ಕೇಂದ್ರಗಳು ಕೆಲವುಂಟು. ಬೀಜೋತ್ಪಾದನ ಕೇಂದ್ರ (ಸಾಣೂರು), ಅನಾನಸ್ ಸಂಶೋಧನ ಕೇಂದ್ರ (ಮೂಡಬಿದ್ರೆ) ಮತ್ತು ವ್ಯವಸಾಯಭಿವೃದ್ಧಿ ಫಾರ್ಮಸಿ (ಕಾರ್ಕಳ) ಇವು ಮುಖ್ಯವಾದವು, ಕಾರ್ಕಳದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳೂ ಆಸ್ಪತ್ರೆಗಳೂ ಇವೆ. ಜೈನಕಾಶಿ ಎಂದು ಪ್ರಸಿದ್ಧವಾದ ಮೂಡಬಿದ್ರೆ ಈ ತಾಲ್ಲೂಕಿನಲ್ಲಿದೆ. ಸೋಮೇಶ್ವರ ಇನ್ನೊಂದು ಮುಖ್ಯ ಸ್ಥಳ. ಇಲ್ಲಿ ಜೈನಬಸದಿಯೊಂದುಂಟು. ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ದನದ ಜಾತ್ರೆ ಪ್ರಸಿದ್ಧ. ಯಕ್ಷಗಾನ ಮತ್ತು ಚಿತ್ರಕಲೆ ಇಲ್ಲಿಯ ಮುಖ್ಯ ಲಲಿತಕಲೆಗಳು. ಕಾರ್ಕಳ ಪಟ್ಟಣದಿಂದ ಉಡುಪಿ, ಮೂಡಬಿದ್ರೆ, ಆಗುಂಬೆ ಮುಂತಾದ ಸ್ಥಳಗಳಿಗೆ ಬಸ್ ವ್ಯವಸ್ಥೆಯುಂಟು. (ಎಸ್.ಎನ್)

**ಇತಿಹಾಸ :** ಪಾಂಡ್ಯನಗರಿ ಎಂದು ಹೆಸರು ತಳೆದಿದ್ದ ಕಾರ್ಕಳದ ಉಲ್ಲೇಖವನ್ನುಳ್ಳ ಮೊಟ್ಟಮೊದಲಿನ ಶಾಸನ 1333ರದು. ಕಳಸ ರಾಜವಂಶದ ಭೈರರಸರ ಆಳ್ವಿಕೆಗೆ ಸೇರಿದ್ದ ಈ ಪಟ್ಟಣ ಬಹುಶಃ ಅವರ ರಾಜಧಾನಿಗಳಲ್ಲೊಂದು ಆಗಿದ್ದಿರಬೇಕು. ಭೈರರಸರು ಶಿವಮೊಗ್ಗ ಜಿಲ್ಲೆಯ ಹೊಂಬುಜದ ಸಾಂತರ ವಂಶದವರಾಗಿದ್ದರು. ಮೊದಲಿಗೆ ಹೊಯ್ಸಳರ, ಅನಂತರ ವಿಜಯನಗರದ ಅರಸರ ಅಧೀನರಾಗಿದ್ದರೂ ಇವರು ಒಳಾಡಳಿತದಲ್ಲಿ ಸ್ವತಂತ್ರರಾಗಿದ್ದುದಾಗಿ ತಿಳಿದುಬರುತ್ತದೆ. 17ನೆಯ ಶತಮಾನದಲ್ಲಿ ಇವರ ಆಳ್ವಿಕೆ ಕೊನೆಗೊಂಡಿತು. ಭೈರರಸ ವಂಶದವರು ಜೈನಧರ್ಮೀಯರಾಗಿದ್ದುದರಿಂದ ಇಲ್ಲಿ ಅನೇಕ ಜೈನಬಸದಿಗಳೂ ಜೈನರ ಮಠವೂ ಇವೆ. ಅಲ್ಲದೆ ಕೆಲವು ಪ್ರಸಿದ್ಧ ಹಿಂದೂ ದೇವಾಲಯಗಳೂ ಈ ರಾಜರ ಆಶ್ರಯದಲ್ಲಿ ಸ್ಥಾಪಿತವಾದುವು. ಇಲ್ಲಿರುವ ಅನಂತಶಯನ ದೇವಾಲಯವನ್ನು ಭೈರರಸ ವಂಶದಲ್ಲಿ ಪ್ರಮುಖನಾದ ಇಮ್ಮಡಿ ಭೈರವ 1557 ರಲ್ಲಿ ಸ್ಥಾಪಿಸಿದುದಾಗಿ ಐತಿಹ್ಯವಿದ್ದರೂ ಅದರಲ್ಲಿರುವ ಪ್ರತಿಮೆಗಳು 12–13ನೆಯ ಶತಮಾನಗಳ ಕೃತಿಗಳಂತೆ ಕಂಡುಬರುತ್ತವೆ. ತ್ರಿಭುವನ ಜಿನ ಚೈತ್ಯಾಲಯವೆಂದು ಹೆಸರು ಪಡೆದಿದ್ದ ಮತ್ತು ಈಗ ಚತುರ್ಮುಖ ಬಸದಿಯೆಂದು ಕರೆಯುವ ಜೈನಮಂದಿರ ನಿರ್ಮಿತವಾದ್ದೂ ಈ ರಾಜನ ನೇತೃತ್ವದಲ್ಲೆ (1545). ಕಾರ್ಕಳದಲ್ಲಿರುವ 41ವರೆ ಅಡಿ ಎತ್ತರದ ಗೊಮ್ಮಟೇಶ್ವರ ವಿಗ್ರಹವನ್ನು 1432 ರಲ್ಲಿ ವೀರಪಾಂಡ್ಯ ಸ್ಥಾಪಿಸಿದ. ಆ ಸಂದರ್ಭದಲ್ಲಿ ವಿಜಯನಗರದ ದೊರೆ ಇಮ್ಮಡಿ ದೇವರಾಯ ಇಲ್ಲಿಗೆ ಬಂದುದಾಗಿ ಹೇಳಲಾಗಿದೆ. ಇದೊಂದು ಏಕಶಿಲಾ ವಿಗ್ರಹ. ಶ್ರವಣಬೆಳಗೊಳದ ಗೊಮ್ಮಟ ವಿಗ್ರಹದಂತೆ ಇದೂ ಸುಂದರವಾಗಿದೆ. ಕಾರ್ಕಳದಲ್ಲಿರುವ ಮಾನಸ್ತಂಭಗಳು ಉತ್ತಮ ಕಲಾಕೃತಿಗಳು. ಚತುರ್ಮುಖ ಬಸದಿಯ ನಾಲ್ಕು ಮೂಲೆಗಳಲ್ಲಿ ಅರ–ಮಲ್ಲ–ಮುನಿಸುವ್ರತರ ಶಿಲಾಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದಲ್ಲದೆ 15–16 ನೆಯ ಶತಮಾನದ ಆದಿಭಾಗದಲ್ಲಿ ಜೈನಧರ್ಮಕ್ಕೆ ಸೇರಿದ ಲಲಿತಕೀರ್ತಿ ಭಟಾರಕರ ಮಠ ಇಲ್ಲಿ ಸ್ಥಾಪಿತವಾಯಿತು. ಇಲ್ಲಿರುವ ಅನಂತಪದ್ಮನಾಭಮೂರ್ತಿ ದಕ್ಷಿಣಭಾರತದಲ್ಲೇ ವಿಶಿಷ್ಟವಾದ್ದು. ಇದರ ಎತ್ತರ 8 ಅಡಿ. ವಿಜಯನಗರದ ಕಾಲಕ್ಕೆ ಸೇರಿದ ಕಾಳಿಕಾಂಬಾ ದೇವಾಲಯ ಮತ್ತೊಂದು ಮುಖ್ಯ ಮಂದಿರ. ಇದರ ಮೂಲ ವಿಗ್ರಹ ಬಹಳ ಸುಂದರವಾಗಿದೆ.

ಕಾರ್ಕಳದ ಭೈರರಸರು ಕಲಾಪ್ರೇಮಿಗಳೂ ಸಾಹಿತ್ಯೋಪಾಸಕರೂ ಆಗಿದ್ದರು. ಲಲಿತಕೀರ್ತಿ, ನಾಗಚಂದ್ರ, ಕಲ್ಯಾಣಕೀರ್ತಿ ಮುಂತಾದ ಸಂಸ್ಕೃತ ಕವಿಗಳೂ ರತ್ನಾಕರವರ್ಣಿ, ಚದುರ ಚಂದ್ರಮ ಮೊದಲಾದ ಕನ್ನಡ ಕವಿಗಳೂ ಇವರ ಆಶ್ರಿತರಾಗಿದ್ದರು. ಮುದ್ದಣ ಕವಿ ಹುಟ್ಟಿದ ನಂದಳಿಕೆ ಗ್ರಾಮ ಇರುವುದು ಕಾರ್ಕಳ ತಾಲ್ಲೂಕಿನಲ್ಲಿ. (ಬಿ.ಕೆ.ಜಿ.; ಕೆ.ಎಸ್.ಡಿ.; ಎಸ್.ಎಸ್.ಎ.)

**ಕಾರ್ಕೋಟ ರಾಜಸಂತತಿ :** ಕಾಶ್ಮೀರ ರಾಜ್ಯದಲ್ಲಿ ಗೋನಂದ ರಾಜ ಸಂತತಿ 627 ರಲ್ಲಿ ಕೊನೆಗೊಂಡ ಮೇಲೆ ಅಧಿಕಾರಕ್ಕೆ ಬಂದ ರಾಜಸಂತತಿ. ಇದರ ಸ್ಥಾಪಕ ದುರ್ಲಭವರ್ಧನ; ಗೋನಂದ ವಂಶದ ಕೊನೆಯ ದೊರೆ ಬಾಲಾದಿತ್ಯನ ಮಗಳನ್ನು ವಿವಾಹವಾಗಿ, ಗಂಡು ಸಂತತಿಯಿಲ್ಲದ ಬಾಲಾದಿತ್ಯನ ಉತ್ತರಾಧಿಕಾರಿಯಾಗಿ 627 ರಲ್ಲಿ ಸಿಂಹಾಸನವನ್ನೇರಿದ. ಈ ವಂಶ 855 ರ ವರೆಗೂ ಕಾಶ್ಮೀರದಲ್ಲಿ ಆಳಿತು.

ದುರ್ಲಭವರ್ಧನ 36 ವರ್ಷಗಳ ಕಾಲ ರಾಜ್ಯಭಾರ ಮಾಡಿದ. ಈತನ ಕಾಲದಲ್ಲಿ ಕಾಶ್ಮೀರಕ್ಕೆ ಯುವಾನ್‌ಚಾಂಗ್ ಭೇಟಿ ಕೊಟ್ಟಿದ್ದ. ದುರ್ಲಭವರ್ಧನ ಆಗಲೇ ರಾಜ್ಯ ವಿಸ್ತಾರದಲ್ಲಿ ನಿರತನಾಗಿದ್ದನೆಂಬುದು ಯುವಾನ್‌ಚಾಂಗ್‌ನಿಂದ ತಿಳಿದುಬರುತ್ತದೆ. ಆತ ರಾಜಕೀಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿವರವಾಗಿ ಹೇಳದೆ ಹೋದರೂ ಆಗಿನ ಸಾಮಾಜಿಕ, ಆರ್ಥಿಕ ಮತ್ತು ಬೌದ್ಧಿಕ ಪರಿಸ್ಥಿತಿಗಳನ್ನು ವಿವರಿಸಿದ್ದಾನೆ. ಬೌದ್ಧಧರ್ಮದ ಅವನತಿ ಮತ್ತು ಶೈವಧರ್ಮದ ಏಳಿಗೆಗಳನ್ನೂ ಜನರು ಶಿವ, ವಿಷ್ಣು ಮತ್ತು ಆದಿತ್ಯ ಇವರಿಗೆ ದೇವಸ್ಥಾನಗಳನ್ನು ಕಟ್ಟಿಸಲು ಧನಸಹಾಯ ಮಾಡುತ್ತಿದ್ದ ವಿಷಯವನ್ನೂ ಹೇಳಿದ್ದಾನೆ. ಇವನ ಬರವಣಿಗೆಯಿಂದ ಕಾಶ್ಮೀರವಲ್ಲದೆ ಪಶ್ಚಿಮ ಮತ್ತು ವಾಯವ್ಯ ಪಂಜಾಬು ದುರ್ಲಭವರ್ಧನನ ಆಳ್ವಿಕೆಗೆ ಸೇರಿದ್ದ ವಿಷಯ ತಿಳಿಯುತ್ತದೆ. ಇವನ ಮರಣಾನಂತರ ಮಗ ದುರ್ಲಭಕ 50 ವರ್ಷ ಕಾಲ ರಾಜ್ಯವಾಳಿದರೂ ಆತನ ವಿಷಯವಾಗಿ ಚಾರಿತ್ರಿಕ ವಿವರಗಳು ದೊರಕಿಲ್ಲ. ಈತನಿಗೆ ಚಂದ್ರಾಪೀಡ (ವಜ್ರಾದಿತ್ಯ), ತಾರಾಪೀಡ (ಉದಯಾದಿತ್ಯ) ಮತ್ತು ಮುಕ್ತಾಪೀಡ (ಲಲಿತಾದಿತ್ಯ) ಎಂಬ ಮೂವರು ಮಕ್ಕಳಿದ್ದರು.

ದುರ್ಲಭಕನ ಅನಂತರ 713 ರಲ್ಲಿ ಹಿರಿಯ ಮಗ ಚಂದ್ರಾಪೀಡ ಪಟ್ಟಕ್ಕೆ ಬಂದ. ಈತ ಚೀನದ ಚಕ್ರವರ್ತಿಯ ಆಸ್ಥಾನಕ್ಕೆ ದೂತನನ್ನು ಕಳಿಸಿ. ಅರಬರ ವಿರುದ್ಧ ನೆರವು ಕೋರಿದ. ಈ ಪ್ರಯತ್ನದಲ್ಲಿ ಸಫಲನಾಗದೆ ಹೋದರೂ ಅರಬರ ಆಕ್ರಮಣಗಳಿಂದ ತನ್ನ ದೇಶವನ್ನು ರಕ್ಷಿಸಿಕೊಂಡ. 720 ರಲ್ಲಿ ಚೀನದ ಚಕ್ರವರ್ತಿ ಚಂದ್ರಾಪೀಡನನ್ನು ರಾಜನೆಂದು ಗೌರವಿಸಿದನೆಂದು ಆ ದೇಶದ ಚಾರಿತ್ರಿಕ ದಾಖಲೆಗಳು ತಿಳಿಸುತ್ತವೆ. ಈತ ಧರ್ಮ, ಔದಾರ್ಯ, ಶ್ರದ್ಧೆ, ಭಕ್ತಿ ನ್ಯಾಯ ಮತ್ತು ನಿಷ್ಪಕ್ಷಪಾತ– ಈ ಗುಣಗಳಿಂದ ಪ್ರಸಿದ್ಧನಾಗಿದ್ದ. ಒಮ್ಮೆ ಚಂದ್ರಾಪೀಡನ ಅಧಿಕಾರಗಳು ಒಂದು ದೇವಸ್ಥಾನವನ್ನು ಕಟ್ಟಲು ಒಬ್ಬ ಮೋಚಿಯ ಮನೆ ಇದ್ದ ಸ್ಥಳವನ್ನು ಆರಿಸಿದರು. ಮೋಚಿ ರಾಜನ ಬಳಿ ತನ್ನ ವಿಪತ್ತಿನ ಬಗ್ಗೆ ದೂರು ಕೊಟ್ಟ. ಆಗ ರಾಜ ತನ್ನ ಅಧಿಕಾರಿಗಳ ತಪ್ಪನ್ನರಿತು ಅವರಿಗೆ ಶಿಕ್ಷೆ ವಿಧಿಸಿದ. ಮೋಚಿ ರಾಜನ ನ್ಯಾಯವನ್ನು ಮೆಚ್ಚಿ ಸ್ವತಃ ಆ ಸ್ಥಳವನ್ನು ಬಿಟ್ಟು ಕೊಟ್ಟ. ಈ ಘಟನೆ ರಾಜನ ನ್ಯಾಯಪರತೆಗೊಂದು ನಿದರ್ಶನ. ತನ್ನ ತಮ್ಮ ತಾರಾಪೀಡನ ಕುತಂತ್ರದಿಂದ ಚಂದ್ರಾಪೀಡ 722 ರಲ್ಲಿ ಕೊಲೆಯಾದ. ತಾರಾಪೀಡ ಅನಂತರ ಗದ್ದುಗೆಯನ್ನೇರಿದ. ಈತ ಕ್ರೂರಿ, ನಿರ್ದಯಿ, ಕೊಲೆಗಡುಕನಾಗಿ 4 ವರ್ಷ ಕಾಲ ರಾಜ್ಯಭಾರ ಮಾಡಿದ. ಅನೇಕರು ಈತನ ಶಿಕ್ಷೆಯನ್ನು ತಡೆಯಲಾರದೆ ಗುಡ್ಡಗಾಡಿಗೆ ಓಡಿಹೋದರು. ಇವನ ಅನಂತರ ಇವನ ತಮ್ಮ ಲಲಿತಾದಿತ್ಯ ಮುಕ್ತಾಪೀಡ ಸಿಂಹಾಸನಕ್ಕೆ 726 ರಲ್ಲಿ ಬಂದ. ಲಲಿತಾದಿತ್ಯ ಕಾರ್ಕೋಟ ರಾಜಸಂತತಿಯಲ್ಲೇ ಅಗ್ರಗಣ್ಯ. ಅಲೆಕ್ಸಾಂಡರನ ಹಾಗೆ ಇಡೀ ಪ್ರಪಂಚವನ್ನೇ ಜಯಿಸುವ ಗುರಿ ಹೊಂದಿದ್ದ. ಸದಾ ಯುದ್ಧನಿರತನಾಗಿದ್ದರೂ ಇವನ ಕಾಲವನ್ನು ಕಾಶ್ಮೀರ ಇತಿಹಾಸದ ಸುವರ್ಣಯುಗವೆಂದು ವರ್ಣಿಸಬಹುದು.

ಲಲಿತಾದಿತ್ಯ ಕನೌಜಿನ ಯಶೋವರ್ಮನೊಡನೆ ಒಂದುಗೂಡಿ ಟಿಬೆಟನರನ್ನು ಸೋಲಿಸಿದುದಲ್ಲದೆ, ಪರ್ವತವಾಸಿಗಳಾದ ದರ್ದ, ಕಾಂಬೋಜ ಮತ್ತು ತುರುಷ್ಕರನ್ನೂ ಸದೆಬಡಿದ. ಅನಂತರ ಪಂಜಾಬ್ ಪ್ರಾಂತ್ಯವನ್ನು ವಶಪಡಿಸಿಕೊಂಡು ಕನೌಜಿನ ಯಶೋವರ್ಮನ ಮೇಲೆ ಜಯ ಗಳಿಸಿ, ಅವನು ಗೆದ್ದ ರಾಜ್ಯಗಳನ್ನು ವಶಪಡಿಸಿಕೊಂಡ. ತರುವಾಯ ಬಿಹಾರ ಮತ್ತು ಬಂಗಾಳಗಳನ್ನು ಗೆದ್ದು ಒರಿಸ್ಸ ಪ್ರದೇಶದಲ್ಲಿ ಪೂರ್ವ ಸಮುದ್ರದವರೆಗೂ ಮುನ್ನುಗ್ಗಿದ. ದಕ್ಷಿಣ ಭಾರತದಲ್ಲಿ ರಾಷ್ಟ್ರಕೂಟ ರಾಜ್ಯದ ಮೇಲೆ ದಾಳಿ ಮಾಡಿದ. ಅನಂತರ ಕಾಶ್ಮೀರಕ್ಕೆ ಹಿಂತಿರುಗುವಾಗ ಗುಜರಾತ್, ಕಾಠಿಯಾವಾಡ, ಮಾಳ್ವ ಮತ್ತು ಮಾರ್‍ವಾಡಗಳ ಮೂಲಕ ಹಾದು ಹೋಗಿ ವಲ್ಲಭಿಯ ಮೈತ್ರಕ ಮತ್ತು ಚಿತ್ತೂರಿನ ರಾಜ್ಯಗಳನ್ನು ಗೆದ್ದು ಕಾಶ್ಮೀರಕ್ಕೆ ಹಿಂತಿರುಗಿದ.

ದಕ್ಷಿಣ ದಿಗ್ವಿಜಯದ ಅನಂತರ ತನ್ನ ರಾಜ್ಯದ ಉತ್ತರ ಭಾಗದಲ್ಲಿ ಅನೇಕ ಯುದ್ಧಗಳನ್ನು ಕೈಕೊಂಡ. ಲಲಿತಾದಿತ್ಯ ತುಖಾರಿ ಸ್ಥಾನವನ್ನೂ ಟಿಬೆಟಿಗೆ ಸೇರಿದ ಲಡಕ್ ಪ್ರಾಂತ್ಯವನ್ನೂ ವಶಪಡಿಸಿಕೊಂಡ. ಟಿಬೆಟನ್ನು ಸಂಪೂರ್ಣವಾಗಿ ಸೋಲಿಸಲು ಚೀನದೇಶದ ಸಹಾಯ ಕೋರಿದ. ಆದರೆ ಚೀನದ ರಾಜ ಲಲಿತಾದಿತ್ಯನನ್ನು ಕಾಶ್ಮೀರದ ದೊರೆ ಮತ್ತು ತನ್ನ ಗೆಳೆಯನೆಂದು ಗೌರವಿಸುವುದರ ಹೊರತು, ಯಾವ ರೀತಿಯ ಸಹಾಯವನ್ನೂ ಮಾಡಲಿಲ್ಲ. ಈತನ ಕಾಲದಲ್ಲಿ ಕಾಶ್ಮೀರ ನಾನಾ ಮುಖವಾಗಿ ಪ್ರಗತಿಹೊಂದಿತು. ಲಲಿತಾದಿತ್ಯ ತನ್ನ ದಂಡಯಾತ್ರೆಗಳಿಂದ ಗಳಿಸಿದ ಅಪಾರ ಐಶ್ವರ್ಯದಿಂದ ಭವನಗಳನ್ನೂ ದೇವಾಲಯಗಳನ್ನೂ ದೇವತಾಮೂರ್ತಿಗಳನ್ನೂ ನಿರ್ಮಿಸಿದ. ಈತನ ಹೆಸರು ಅಮರವಾಗಿ ಉಳಿಯುವಂತೆ ಮಾಡಿದ ಮತ್ತು ಶಿಲ್ಪಕಲೆಗೆ ಹೆಸರುವಾಸಿಯಾದ ಕೆಲಸಗಳೆಂದರೆ ಮಾರ್ತಾಂಡದಲ್ಲಿ ಸೂರ್ಯದೇವನಿಗೆ ಕಟ್ಟಿಸಿದ ದೇವಸ್ಥಾನ ಮತ್ತು ಪರಿಹಾಸಪುರ.

ಲಲಿತಾದಿತ್ಯ ಸರ್ವಧರ್ಮ ಸಮನ್ವಯ ದೃಷ್ಟಿಯುಳ್ಳವ. ಈತ ಹಿಂದೂ ಧರ್ಮವನ್ನು ಪ್ರತಿಪಾದಿಸಿದರೂ ಬೌದ್ಧಧರ್ಮಕ್ಕೂ ಆಶ್ರಯ ನೀಡಿ ಅನೇಕ ವಿಹಾರಗಳನ್ನು ಕಟ್ಟಿಸಿದ. ಎಲ್ಲ ದೇಶಗಳ ವಿದ್ವಾಂಸರನ್ನೂ ಗೌರವದಿಂದ ಕಾಣುತ್ತಿದ್ದ. ಯಶೋವರ್ಮನನ್ನು ಸೋಲಿಸಿದ ಅನಂತರ ಕನೌಜನಿಂದ ಭವಭೂತಿ ಮತ್ತು ವಾಕ್ಪತಿರಾಜ ಎಂಬ ಸುಪ್ರಸಿದ್ಧ ಕವಿಗಳನ್ನು ಕಾಶ್ಮೀರಕ್ಕೆ ಆಹ್ವಾನಿಸಿ ತನ್ನ ರಾಜ್ಯದಲ್ಲೇ ನೆಲೆಸುವಂತೆ ಮಾಡಿದ. ಆದರೂ ಕೆಲವುಬಾರಿ ಕ್ರೂರಿಯಾಗಿಯೂ ವಂಚಕನಾಗಿಯೂ ವರ್ತಿಸುತ್ತಿದ್ದನೆಂದು ಕಾಶ್ಮೀರದ ಚರಿತ್ರಕಾರ ಕಲ್ಹಣ ತಿಳಿಸಿದ್ದಾನೆ. 36 ವರ್ಷಗಳ ಆಳ್ವಿಕೆಯ ಅನಂತರ 760 ರಲ್ಲಿ ಲಲಿತಾದಿತ್ಯ ಮರಣಿಸಿದ. ಅನಂತರ ರಾಜರು ಅಪ್ರಯೋಜಕರಾಗಿದ್ದು ಕಾಶ್ಮೀರದ ಕೀರ್ತಿ ಇಳಿಮುಖವಾದರೂ ಮತ್ತೊಂದು ಶತಮಾನದ ಕಾಲ ಈ ವಂಶ ಅಧಿಕಾರದಲ್ಲುಳಿದಿತ್ತು.

ಲಲಿತಾದಿತ್ಯನ ಅನಂತರ ಆತನ ಹಿರಿಯ ಮಗ ಕುವಲ್ಯಪೀಡ ಸ್ವಲ್ಪ ಕಾಲ ಅಧಿಕಾರದಲ್ಲಿದ್ದ. ತರುವಾಯ ಅವನ ತಮ್ಮ ವಜ್ರಾದಿತ್ಯ ಗದ್ದುಗೆಯನ್ನೇರಿದ. ಇವನ ಆಳಿಕೆಯಲ್ಲಿ ಸಿಂಧಿನ ಅರಬ್ಬಿ ಅಧಿಕಾರಿ ಹಿಷಾಮ್ ಇಬ್ನ್‌ಅಮ್ರ್ ಅತ್ ಟಗ್ಲಿಬೀ (768–

772) ಕಾಶ್ಮೀರದ ಮೇಲೆ ದಾಳಿ ಮಾಡಿ ಅನೇಕರನ್ನು ಸೆರೆಹಿಡಿದು ಗುಲಾಮರನ್ನಾಗಿ ಕೊಂಡೊಯ್ದ. ಕ್ರೂರಿಯೂ ನಿರ್ದಯನೂ ಅಶಕ್ತನೂ ಆದ ವಜ್ರಾದಿತ್ಯನ ಕಾಲದಲ್ಲಿ ಅಶಾಂತಿ ತಾಂಡವವಾಡುತ್ತಿತ್ತು. ಇವನ ಮಕ್ಕಳಲ್ಲಿ ಹಿರಿಯನಾದ ಪ್ಥಿವ್ಯಾಪೀಡ ಅಧಿಕಾರಕ್ಕೆ ಬಂದಾಗ ಮಲತಮ್ಮ ಸಂಗ್ರಾಮಪೀಡ ದಂಗೆಯೆದ್ದು, ಸಿಂಹಾಸನವನ್ನು ವಶಮಾಡಿಕೊಂಡು 7 ದಿನಗಳ ಕಾಲ ರಾಜ್ಯವಾಳಿದ. ಅನಂತರ ಅವನ ತಮ್ಮ ಜಯಾಪೀಡ ವಿನಯಾದಿತ್ಯ ಸಿಂಹಾಸನವನ್ನೇರಿದ (770). ತನ್ನ ಅಜ್ಜ ಲಲಿತಾದಿತ್ಯನಂತೆ ಶಕ್ತನಾದ ಈತ ಪೂರ್ವದೇಶಗಳ ಮೇಲೆ ಯುದ್ಧ ಘೋಷಿಸಿ ಕಾಶ್ಮೀರವನ್ನು ಬಿಟ್ಟು ಹೊರಟ ಸಮಯದಲ್ಲಿ ಅವನ ಭಾವಮೈದುನ ಜಜ್ಜ ಅಧಿಕಾರವನ್ನು ಕಸಿದುಕೊಂಡ. ಪದಚ್ಯುತನಾದ ಜಯಾಪೀಡ ವೇಷಮರೆಸಿಕೊಂಡು ಅಲೆಯುತ್ತ ಪುಂಡ್ರವರ್ಧನ ದೊರೆ ಜಯಂತನ ಸೇವೆಯಲ್ಲಿದ್ದಾಗ ಅವನ ಮಗಳನ್ನು ಮದುವೆಯಾದ. ತನ್ನ ಮಾವನ ಪರವಾಗಿ ಗೌಡ ದೇಶದ ಐವರು ಪುಂಡ ನಾಯಕರನ್ನು ಸದೆಬಡಿದ. ಅನಂತರ ಪ್ರಯಾಗದಲ್ಲಿ ತನ್ನ ಅಳಿದುಳಿದ ಸೈನ್ಯವನ್ನು ಒಟ್ಟುಗೂಡಿಸಿ ಕಾನ್ಯಕುಬ್ಜವನ್ನು ಗೆದ್ದ. ಕಾಶ್ಮೀರವನ್ನು ತಲಪಿ, ಜಜ್ಜನೊಡನೆ ಹೋರಾಡಿ ಅವನನ್ನು ಕೊಂದು ಪುನಃ ತನ್ನ ರಾಜ್ಯವನ್ನು ವಶಪಡಿಸಿಕೊಂಡ. ಅನಂತರ ಪೂರ್ವಪ್ರಾಂತ್ಯದಲ್ಲಿ ಭೀಮಸೇನನೆಂಬ ರಾಜನನ್ನು ನೇಪಾಲದ ಅರಮುಡಿಯೆಂಬವನನ್ನೂ ಗೆದ್ದಂತೆ ತಿಳಿಯುತ್ತದೆ.

ಇವನ ಆಸ್ಥಾನದಲ್ಲಿ ಕ್ಷೀರಸ್ವಾಮಿನ್, ಉದ್ಭಟ ಮತ್ತು ದಾಮೋದರ ಗುಪ್ತರಂಥ ವಿಖ್ಯಾತ ಪಂಡಿತರಿದ್ದರು. ಸು.30 ವರ್ಷಗಳ ಕಾಲ ಆಳಿದ ಅನಂತರ ಬ್ರಾಹ್ಮಣರ ಪಿತೂರಿಯಿಂದ ಸಿಂಹಾಸನ ಕಳೆದುಕೊಂಡನೆಂದು ಹೇಳಲಾಗಿದೆ. ಇವನ ಮಕ್ಕಳಾದ ಲಲಿತಾಪೀಡ ಮತ್ತು ಸಂಗ್ರಾಮಪೀಡ ಅನುಕ್ರಮವಾಗಿ ಆಳಿದ ಅನಂತರ ಲಲಿತಾಪೀಡನ ಮಗ ಚಿಪ್ಪಟ ಜಯಾಪೀಡ ಅಧಿಕಾರಕ್ಕೆ ಬಂದ. ಬಾಲಕನಾದ ಚಿಪ್ಪಟ ಜಯಾಪೀಡನ ಐವರು ಸೋದರಮಾವಂದಿರು ಆಡಳಿತ ವಹಿಸಿಕೊಂಡಿದ್ದು, ಅವನನ್ನು ಕೊಲೆ ಮಾಡಿಸಿದರು. 40 ವರ್ಷಗಳ ಕಾಲ ಹೆಸರಿಗೊಬ್ಬ ರಾಜನನ್ನು ನೇಮಿಸಿ ತಾವೇ ಸರ್ವಾಧಿಕಾರಿಗಳಾಗಿದ್ದ ಆ ಸಹೋದರರಲ್ಲಿ ಅಂತಃಕಲಹಗಳುಂಟಾದುವು. ಈ ಅನಾಯಕ ಪರಿಸ್ಥಿತಿಯಲ್ಲಿ ಸುಖವರ್ಮನ ಪುತ್ರ ಅವಂತಿವರ್ಮ 855–56ರಲ್ಲಿ ಅಧಿಕಾರ ರೂಢಿಸಿಕೊಂಡು ಉತ್ಪಲ ವಂಶವನ್ನು ಸ್ಥಾಪಿಸಿದ. (ಎಸ್.ಎಚ್.ಐ.; ಬಿ.ಸಿ.ಪಿ.)

**ಕಾರ್ಖಾನೆಯ ಸಂಘಟನೆ** : ಒಂದು ಕಾರ್ಖಾನೆಯ ಉತ್ಪಾದನ ಕಾರ್ಯ ಸಮರ್ಪಕವಾಗಿ ನಡೆಯಬೇಕೆಂಬ ಉದ್ದೇಶದಿಂದ ಕೆಲಸ ಮಾಡುವ ಎಲ್ಲ ವ್ಯಕ್ತಿಗಳ ಕೌಶಲ ಮತ್ತು ಸಾಮರ್ಥ್ಯಗಳು ಸಂಪೂರ್ಣವಾಗಿ ಉಪಯೋಗಕ್ಕೆ ಬರುವಂತೆ ಮತ್ತು ಅವರ ದುಡಿಮೆಯಲ್ಲಿ ಸುಸಂಘಟಿತವಾಗಿ ಮತ್ತು ಸುಗಮವಾಗಿ ಕ್ರೋಡೀಕೃತವಾಗುವಂತೆ ಏರ್ಪಡಿಸಿದ ಸುವ್ಯವಸ್ಥೆ (ಫ್ಯಾಕ್ಟರಿ ಆರ್ಗನೈಸೇಷನ್). ಬಂಡವಾಳದ ಸದ್ವಿನಿಯೋಗ, ಉದ್ಯೋಗನಿರ್ಮಾಣ, ಬಹಿರಂಗ ಪೇಟೆಯಲ್ಲಿ ಮಾರಾಟ ಮಾಡಬೇಕಾಗಿರುವ ಪದಾರ್ಥಗಳ ತಯಾರಿಕೆ–ಎಲ್ಲಕ್ಕೂ ಇಂದು ತಾಂತ್ರಿಕ ಪರಿಣತಿ ಇರುವುದು ಅವಶ್ಯ. ತಯಾರಿಸಬೇಕಾದ ಪದಾರ್ಥಗಳ ಸ್ವರೂಪದ ನಿಷ್ಕರ್ಷೆಯಷ್ಟಕ್ಕೇ ಈ ಪರಿಣತಿ ಸೀಮಿತವಲ್ಲ. ಅವುಗಳ ತಯಾರಿಕೆಗೆ ಅವಶ್ಯವಾದ ಉಪಕರಣಗಳನ್ನೂ ವ್ಯಕ್ತಿಗಳನ್ನೂ ಹೊಂದಿಸುವುದೂ ಅವಶ್ಯ. ಕೆಲವು ದಶಕಗಳ ಹಿಂದೆ ಅನುಸರಣೆಯಲ್ಲಿದ್ದ ಸ್ಥೂಲ ಸರಳ ವಿಧಾನಗಳು ಅತ್ಯಂತ ಸಂಕೀರ್ಣವಾದ ಮತ್ತು ಸ್ಪರ್ಧಾತ್ಮಕವಾದ ಆಧುನಿಕ ಕೈಗಾರಿಕೆಗಳಿಗೆ ಪ್ರಯೋಜನಕ್ಕೆ ಬರುವುದಿಲ್ಲ. ಇಂದಿನ ಕೈಗಾರಿಕೆಗಳಿಗೆ ಸೂಕ್ತವಾದ ಸಂಘಟನೆ ವಿಧಾನಗಳ ಬಗ್ಗೆ ಶಾಸ್ತ್ರಿಯ ವಿವೇಚನೆ ವಿಪುಲವಾಗಿ ನಡೆದಿದೆ.

ಪ್ರತಿಯೊಂದು ಕಾರ್ಖಾನೆಯ ಸಂಘಟನೆಯೂ ಸರಕು ತಯಾರಿಕಾ ವಿಧಾನ, ಹಣಕಾಸು ವ್ಯವಹಾರ, ಆಡಳಿತ ವಿಧಾನ, ಸಂಸ್ಥೆಯ ಮಾಲೀಕರ ಧ್ಯೇಯ ಧೋರಣೆಗಳು–ಇವನ್ನು ಅನುಸರಿಸಿರುತ್ತದೆ. ಆದರೂ ಮುಖ್ಯವಾಗಿ ಕಾರ್ಖಾನೆಯ ಸಂಘಟನಾ ವಿಧಾನ ಹೆಚ್ಚು ಖರ್ಚಿಲ್ಲದ್ದಾಗಿ, ಕಾರ್ಖಾನೆ ದಕ್ಷತೆಯಿಂದ ಕೂಡಿ, ಸಂಸ್ಥೆಯ ಮೂಲ ತತ್ತ್ವಗಳನ್ನೂ ಧ್ಯೇಯಧೋರಣೆಗಳನ್ನೂ ಎಡಬಿಡದೆ ಪಾಲಿಸಿ, ಹೊಸ ವಿಚಾರಗಳಿಗೆ ಮತ್ತು ತತ್ತ್ವಗಳಿಗೆ ಆಸ್ಪದ ಕೊಟ್ಟು ಕಾರ್ಯ ಸಾಧಕವಾಗುತ್ತಿರಬೇಕು. ಯಶಸ್ವಿ ಸಂಘಟನೆಗೆ ಸಂಬಂಧಿಸಿದ ಮುಖ್ಯ ಅಂಶಗಳು ಇವು ; 1 ಕಾರ್ಖಾನೆಯ ಹಣಕಾಸು ವ್ಯವಹಾರ, ತಯಾರಿಕೆ ವಿಧಾನ, ಗುಣಮಟ್ಟ, ವ್ಯಾಪಾರ ಮತ್ತು ನಿತ್ಯದ ಆಡಳಿತ–ಇವಕ್ಕೆ ಸಂಬಂಧಿಸಿದ ರೀತಿನೀತಿಗಳ ರೂಪಣ. ಇದು ಕಾರ್ಖಾನೆಯ ಒಡೆಯರ ಕಾರ್ಯಭಾರ. 2 ಕಾರ್ಖಾನೆಯ ಒಡೆಯರು ರೂಪಿಸಿದ ರೀತಿನೀತಿಗಳನ್ನು ಆಡಳಿತ ವರ್ಗಕ್ಕೆ ಸಂಬಂಧಿಸಿದ ಅಧಿಕಾರಿಗಳು ಉತ್ಪಾದನಕಾರ್ಯದ ಪ್ರತಿ ಘಟ್ಟದಲ್ಲಿಯೂ ಪ್ರತಿ ಕಾರ್ಯಕ್ಷೇತ್ರದಲ್ಲಿಯೂ ಅಳವಡಿಸಿಕೊಂಡು ಅದನ್ನು ಉತ್ತಮಪಡಿಸಲು ಸದಾ ಪ್ರಯತ್ನಿಸಬೇಕು. 3 ಅಧಿಕಾರವರ್ಗದವರು ಅನುಷ್ಠಾನಕ್ಕೆ ತಂದ ರೀತಿನೀತಿಗಳನ್ನೂ ಅವುಗಳ ಸಾಧಕಬಾಧಕಗಳನ್ನೂ ಒಳಗೊಂಡ ವರದಿಗಳು ಒಡೆಯರಿಗೆ ತಲುಪುತ್ತಿರಬೇಕು. 4 ಪ್ರತಿಯೊಂದು ಕಾರ್ಯಕ್ಷೇತ್ರಕ್ಕೂ ಕಾರ್ಯವಿಧಾನಕ್ಕೂ ಒಬ್ಬ ಅಧಿಕಾರಿಯನ್ನು ಜವಾಬ್ದಾರನನ್ನಾಗಿ ಮಾಡಿ, ಅವನ ಹಕ್ಕುಬಾಧ್ಯತೆಗಳನ್ನೂ ನಿರ್ದಿಷ್ಟವಾಗಿ ಗೊತ್ತುಪಡಿಸಬೇಕು. ಒಬ್ಬನ ಹಕ್ಕುಬಾಧ್ಯತೆಗಳಿಂದ ಇನ್ನೊಬ್ಬನ ಹಕ್ಕುಬಾಧ್ಯತೆಗೆ ಅಡಚಣೆಯುಂಟಾಗದಂತಿರಬೇಕು. 5 ಒಂದು ಕಾರ್ಯಕ್ಷೇತ್ರದ ಜವಾಬ್ದಾರಿಯನ್ನು ಒಬ್ಬ ಅಧಿಕಾರಿಗೆ ವಹಿಸಿಕೊಟ್ಟ ಮೇಲೆ, ಕಾರ್ಯನಿರ್ವಹಣೆ ಸಮರ್ಪಕವಾಗಿದೆಯೆ ಇಲ್ಲವೆ ಎಂಬುದನ್ನು ಪರಿಶೀಲಿಸಲು, ಸೂಕ್ತವಾದ ಮೇಲ್ವಿಚಾರಣೆ ವಿಮರ್ಶೆಗಳನ್ನು ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಆಗಿಂದಾಗ್ಗೆ ನಡೆಸುತ್ತಿರಬೇಕು. 6 ಕಾರ್ಖಾನೆಯಲ್ಲಿ ಪದಾರ್ಥಗಳ ಉತ್ಪಾದನೆ ಸಮಂಜಸವಾಗಿರಬೇಕಾದರೆ ಅದಕ್ಕೆ ಅಗತ್ಯವಾದ ಸಾಮಗ್ರಿಯನ್ನು ಕೊಳ್ಳುವುದಕ್ಕೂ ಹೆಚ್ಚಿನ ಗಮನ ಕೊಡಬೇಕು. ಇದಕ್ಕಾಗಿ ಸ್ಥಾಪಿಸಲಾದ ಕೊಳ್ಳಿಕೆ ಇಲಾಖೆ ಅನುಸರಿಸಬೇಕಾದ ಮೂಲ ತತ್ತ್ವಗಳನ್ನೂ ನೀತಿನಿಯಮಗಳನ್ನೂ ರೂಪಿಸಬೇಕು. 7 ಕಾರ್ಖಾನೆಯಲ್ಲಿ ತಯಾರಾದ ಪದಾರ್ಥಗಳು ಗ್ರಾಹಕರಿಗೆ ತಲಪಿ, ಅವರ ಮನವೊಪ್ಪುವಂತಿರಲು, ದಕ್ಷತೆಯಿಂದ ಕೂಡಿದ ಮಾರಾಟ ಮತ್ತು ವಿತರಣ ವಿಭಾಗಗಳಿರಬೇಕು. ಮಾರಾಟ ಮತ್ತು ವಿತರಣೆಯಲ್ಲಿ ಸೂಕ್ತ ನೀತಿನಿಯಮಗಳನ್ನು ಪಾಲಿಸುವುದು ಅವಶ್ಯ. 8 ವಿವಿಧ ಕಾರ್ಯಕ್ಷೇತ್ರಗಳಿಗೆ ಬೇಕಾಗುವ ಬಗೆಬಗೆಯ ತಜ್ಞರನ್ನೂ ಕೆಲಸಗಾರರನ್ನೂ ಕಾರ್ಖಾನೆಗೆ ನೇಮಿಸಿಕೊಳ್ಳುವಾಗ ಅನುಸರಿಸಬೇಕಾದ ನೀತಿ ಮತ್ತು ವಿಧಾನಗಳ ನಿಷ್ಕರ್ಷೆಯಾಗಬೇಕು. 9 ವಿವಿಧ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದ ಅಧಿಕಾರವರ್ಗದವರ ಹೊಣೆಗಾರಿಕೆಯನ್ನು ತೋರಿಸುವ ನಕ್ಷೆಯೊಂದನ್ನು ತಯಾರಿಸಿ ಅದನ್ನು ಸೂಕ್ತ ಸ್ಥಳದಲ್ಲಿ ಪ್ರಕಟಿಸಬೇಕು. 10 ಕಾರ್ಖಾನೆಯಲ್ಲಿ ತಯಾರಾಗುವ ಪದಾರ್ಥದ ಉತ್ಪಾದನ ವಿಧಾನ, ಕಾರ್ಖಾನೆಗೆ ಬೇಕಾಗುವ ಸಾಮಗ್ರಿಯ ಕೊಳ್ಳಿಕೆ, ಪದಾರ್ಥಗಳ ಮಾರಾಟ–ಇವನ್ನು ಮೊದಲೇ ಆಲೋಚಿಸಿ ಸೂಕ್ತ ಸಲಹೆ ನೀಡುವ ಯೋಜನಾವಿಭಾಗವಿರಬೇಕು. 11 ಹಣಕಾಸು ಇಲಾಖೆ, ವೆಚ್ಚನಿರ್ಣಯ ಇಲಾಖೆ ಮತ್ತು ಅಂಕಿ–ಅಂಶ ಇಲಾಖೆಗಳು ಇದ್ದು, ಇವು ಕಾರ್ಯನಿರ್ವಹಣೆಯ ವರದಿಗಳನ್ನು ಮಾಲೀಕರಿಗೆ ಆಗಿಂದಾಗ್ಗೆ ಒದಗಿಸುತ್ತಿರಬೇಕು.

**ಸಂಘಟನೆಯ ಪ್ರರೂಪಗಳು**: ಕಾರ್ಖಾನೆ ಸಂಘಟನೆಯ ಅತ್ಯಂತ ಹಳೆಯ ಪ್ರರೂಪವೆಂದರೆ ಸೇನಾ ಅಥವಾ ಶ್ರೇಣಿ ಸಂಘಟನೆ. ಇದು ಸೇನಾವ್ಯವಸ್ಥೆಯ ಮುಖ್ಯ ಲಕ್ಷಣವೆಂಬ ಕಾರಣದಿಂದ ಇದಕ್ಕೆ ಈ ಹೆಸರು ಬಂದಿದೆ. ಆದರೆ ಈಗ ಇದೊಂದು ಅಪಪ್ರಯೋಗ. ಏಕೆಂದರೆ ಕೈಗಾರಿಕೆ ಮತ್ತು ಇತರ ಸಂಘಟನೆಗಳಲ್ಲಿ ಆಗಿರುವಂಥ ಮಾರ್ಪಾಡುಗಳು ಸೈನ್ಯವ್ಯವಸ್ಥೆಗಳಲ್ಲಿ ಕೂಡ ಸಂಭವಿಸಿವೆ.

ಕಾರ್ಖಾನೆಯ ಮಹಾ ವ್ಯವಸ್ಥಾಪಕನ (ಜನರಲ್ ಮ್ಯಾನೇಜರ್) ಹೊಣೆಗಳೂ ಕರ್ತವ್ಯಗಳೂ ಅತಿ ಭಾರವಾಗಿ ಸಂಭವಿಸಿದಾಗ ಅವನ ಕೈಕೆಳಗೆ ಮೇಲ್ವಿಚಾರಕನೊಬ್ಬನನ್ನು (ಸೂಪರಿಂಟೆಂಡೆಂಟ್) ನೇಮಿಸಲಾಯಿತು. ಮಹಾ ವ್ಯವಸ್ಥಾಪಕನ ಕೆಲವು ಕರ್ತವ್ಯಗಳನ್ನು ಅವನಿಗೆ ವಹಿಸಿಕೊಡಲಾಯಿತು. ಕಾರ್ಖಾನೆ ಇನ್ನೂ ಬೆಳೆದು, ಅದರ ಹೊಣೆಗಳೂ ಕರ್ತವ್ಯಗಳೂ ಮೇಲ್ವಿಚಾರಕನ ದೈಹಿಕ ಸಾಮರ್ಥ್ಯವನ್ನೂ ಮೀರಿ ಹೋದಾಗ, ಅವನ ಕೈಕೆಳಗೆ ಕಾರ್ಯಪ್ರಮುಖರನ್ನು (ಫೋರ್‌ಮೆನ್) ನೇಮಿಸಲಾಯಿತು. ವಿವಿಧ ಇಲಾಖೆಗಳ ನಿರ್ವಹಣೆಯ ಕೆಲಸದಲ್ಲಿ ಮೇಲ್ವಿಚಾರಕನಿಗೆ ನೆರವಾಗುವುದು ಇವರ ಕೆಲಸ. ಕೆಲಸಗಾರರು ಕಾರ್ಯಪ್ರಮುಖರಿಗೂ ಕಾರ್ಯಪ್ರಮುಖರು ಮೇಲ್ವಿಚಾರಕನಿಗೂ ಅವನು ಮಹಾ ವ್ಯವಸ್ಥಾಪಕರಿಗೂ ಹೊಣೆ. ಕಾರ್ಖಾನೆಯ ಕಾರ್ಯವನ್ನು ಎರಕ (ಫೌಂಡ್ರಿ), ಕುಲುಮೆ (ಫೋರ್ಜ್), ಯಂತ್ರ ಶಾಲೆ (ಮಷೀನ್ ಷಾಪ್) ಮುಂತಾಗಿ ನಾನಾ ಘಟಕಗಳಾಗಿ ವಿಂಗಡಿಸಿ, ಒಂದೊಂದು ಘಟಕಕ್ಕೂ ಒಬ್ಬೊಬ್ಬ ಕಾರ್ಯಪ್ರಮುಖನನ್ನು ನೇಮಿಸುವುದರಿಂದ ಶಿಸ್ತಿಗೇನೂ ಭಂಗ ಬರುವುದಿಲ್ಲ. ಏಕೆಂದರೆ ಎಲ್ಲ ನಿರ್ದೇಶಗಳೂ ಸೂಚನೆಗಳೂ ಬರುವುದು ಮೇಲಿನಿಂದ. ಒಂದೊಂದು ಹಂತದಲ್ಲಿರುವ ಎಲ್ಲರೂ ಸಮಾನರು. ಅವರು ಪರಸ್ಪರವಾಗಿ ಯಾವ ನಿರ್ದೇಶವನ್ನೂ ನೀಡುವುದೂ ಇಲ್ಲ, ಪಡೆಯುವುದೂ ಇಲ್ಲ. ಅವನವನ ಕೈಕೆಳಗಿನ ಕೆಲಸಗಾರರಿಗೆ ಅವನವನು ನಿರ್ದೇಶ ನೀಡುತ್ತಾನೆ. ಮಾನಸಿಕ ಮತ್ತು ಶಾರೀರಿಕ ಕಾರ್ಯಗಳು ಪ್ರತ್ಯೇಕಿಸಲ್ಪಟ್ಟಿರುತ್ತವೆ. ಆಡಳಿತಕ್ಕೆ ಸಂಬಂಧಿಸಿದ ಮಾನಸಿಕ ಕಾರ್ಯ ಬಹುತೇಕ ನಡೆಯುವುದು ಮೇಲಣ ಮಟ್ಟಗಳಲ್ಲಿ. ಈ ಬಗೆಯ ವಿಂಗಡಣೆಯಾಗಿರುವುದು ಕೇವಲ ಆಕಸ್ಮಿಕವೇ ಹೊರತು ಇದು ಯಾವ ತಾರ್ಕಿಕ ಅಧ್ಯಯನದ ಪರಿಣಾಮವೂ ಅಲ್ಲ. ಪ್ರತಿಯೊಬ್ಬನೂ, ಅವನ ಅಧಿಕಾರದ ಮಟ್ಟ ಯಾವುದೇ ಇರಲಿ, ತನ್ನ ಸ್ಥಾನಕ್ಕೆ ಅನುಗುಣವಾಗಿ ದತ್ತವಾದ ಕರ್ತವ್ಯಗಳನ್ನು ನಿರ್ವಹಿಸಲು ಅವನಿಗೆ ಸಂಪೂರ್ಣ ಅಧಿಕಾರವುಂಟು. ಪ್ರತಿಯೊಬ್ಬನ ಹೊಣೆ, ಅಧಿಕಾರ ಮತ್ತು ಕರ್ತವ್ಯಗಳ ನಿಷ್ಕರ್ಷೆಯಾಗಿರುವುದರಿಂದ ಯಾವ ಬಗೆಯ ಭಿನ್ನಾಭಿಪ್ರಾಯಗಳಿಗೂ ಅವಕಾಶವಿಲ್ಲ. ಆದರೆ ಈ ಬಗೆಯ ಸಂಘಟನೆಯ ಇತಿಮಿತಿಗಳು ಅನೇಕ. ಕಾರ್ಖಾನೆಯ ಗಾತ್ರ ಬೆಳೆದಂತೆಲ್ಲ ಒಬ್ಬೊಬ್ಬ ಅಧಿಕಾರಿಯ ಮೇಲೂ ಬಗೆಬಗೆಯ ಕರ್ತವ್ಯಗಳ ಹೊರೆಯೇ ಬೀಳುತ್ತದೆ. ಮೇಲ್ವಿಚಾರಕನಾದವನು ಮೊದಲಿನಂತೆಯೇ ಆಡಳಿತ ಮತ್ತು ನಕಾಸೆಯ ಕಾರ್ಯಗಳನ್ನು ಏಕಪ್ರಕಾರವಾಗಿ ನಿರ್ವಹಿಸಲಾರ. ಏಕೆಂದರೆ ಇವೆರಡೂ ಭಿನ್ನರೀತಿಯವು. ಕೆಲಸಗಾರರಿಗೆ ನೀಡಬಹುದಾದ ಸೂಚನೆಗಳು ಕೂಡ ತೀರ ಸಂಗ್ರಹವಾಗಿರಬೇಕಾಗುತ್ತದೆ. ಅವನ್ನು ಅರ್ಥಮಾಡಿಕೊಂಡು ಯಥೋಚಿತವಾಗಿ ಕಾರ್ಯಪ್ರವೃತ್ತನಾಗಬೇಕಾದ ಕೆಲಸಗಾರನ ಜ್ಞಾನ, ಅನುಭವ ಮತ್ತು

ಕುಶಲತೆಗಳನ್ನೇ ಕೆಲಸದ ಯಶಸ್ಸು ಅವಲಂಬಿಸಿರುತ್ತದೆ. ಈ ವಿಧಾನದಲ್ಲಿ ಇಡೀ ಸಂಘಟನೆ ನಿಂತಿರುವುದು ಕೆಲವೇ ಮಂದಿ ಸಮರ್ಥರ ಮೇಲೆ. ಅವರಲ್ಲಿ ಯಾರೊಬ್ಬರು ಹೋದರೂ ಇಡೀ ಉತ್ಪಾದನೆಯ ಭವನವೇ ಕುಸಿದು ಬೀಳಬಹುದು. ಆದ್ದರಿಂದ ಸೇವಾ ಅಥವಾ ಶ್ರೇಣಿ ಸಂಘಟನೆ ವಿಧಾನ ತನ್ನ ಶುದ್ಧ ರೂಪದಲ್ಲಿ ಜಾರಿಯಲ್ಲಿರುವುದು ಬಲು ವಿರಳ. ಉತ್ಪಾದನೆಯ ಗಾತ್ರ ಕಡಿಮೆಯಿದ್ದು, ಅದಕ್ಕೆ ವ್ಯಾಪಕವಾದ ವೈಜ್ಞಾನಿಕ ತಳಹದಿ ಇಲ್ಲದಲ್ಲಿ ಮಾತ್ರ ಈ ವಿಧಾನವನ್ನು ಅನುಸರಿಸಲಾಗುತ್ತದೆ.

ಮೇಲೆ ಹೇಳಿದಂತೆ ಈ ವಿಧಾನದಲ್ಲಿ ನಿರ್ದೇಶ ಅಥವಾ ಸೂಚನೆಗಳ ಹರಿವು ಉದಗ್ರ (ವರ್ಟಿಕಲ್) ರೀತಿಯದು. ಅದು ಹೀಗೆ :



**ಚಿತ್ರ 1**

ಸಂಘಟನೆಯ ಎರಡನೆಯ ಪ್ರರೂಪ ಶ್ರೇಣಿ ಮತ್ತು ಸಿಬ್ಬಂದಿ ಸಂಘಟನೆ. ಕಾರ್ಖಾನೆಯ ಗಾತ್ರವೂ ವೈಜ್ಞಾನಿಕ ತಳಹದಿಯೂ ಬೆಳೆದಂತೆ ವ್ಯವಸ್ಥಾಪಕನ ನೆರವಿಗೆ ಅನೇಕ ಮಂದಿ ತಜ್ಞರು ಆಗಮಿಸಿದರು. ಎಂಜಿನಿಯರುಗಳು, ರಸಾಯನಶಾಸ್ತ್ರಜ್ಞರು, ಸಾಮಗ್ರಿ ಕ್ರಯ ನಿಷ್ಣಾತರು, ಉಪಕರಣ ತಜ್ಞರು, ಉತ್ಪಾದನ ಪರಿಣತರು ಮುಂತಾದ ಅನೇಕರನ್ನು ಆಧುನಿಕ ಕಾರ್ಖಾನೆಗಳಲ್ಲಿ ಕಾಣಬಹುದು. ಇವರ ಆಗಮನದಿಂದ ಹೊಸ ಬಗೆಯ ಸಮಸ್ಯೆಗಳು ಹುಟ್ಟಿಕೊಂಡುವು. ಈ ಸಮಸ್ಯೆಗಳನ್ನು ಪರಿಹರಿಸಲು ಅನುಸರಿಸಲಾಗಿರುವ ವಿಧಾನಗಳು ಎರಡು ಬಗೆ: ತಜ್ಞರನ್ನು ಕೇವಲ ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವುದು ಮೊದಲನೆಯ ಬಗೆ. ಅವರಿಗೆ ವ್ಯಕ್ತವಾದ ಯಾವ ಅಧಿಕಾರಗಳೂ ಇರುವುದಿಲ್ಲ. ತಮಗೆ ಸಂಬಂಧಿಸಿದ ವಿಚಾರಗಳಲ್ಲಿ ಕೂಡ ಅವರು ಕೆಲಸಗಾರರಿಗೆ ಯಾವ ನಿರ್ದೇಶಗಳನ್ನೂ ನೀಡಲಾರರು. ಕಾರ್ಯನಿರ್ವಹಣೆಗೆ ಸಂಬಂಧಿಸಿದ ಯಾವ ಆದೇಶವೇ ಆಗಲಿ ಬರಬೇಕಾದರೆ ಶ್ರೇಣಿಯ ಯಾರಾದರೊಬ್ಬ ಅಧಿಕಾರಿಯ ಮುಖೇನ. ಅದು ಹೀಗಿದೆ :

ಯಂತ್ರಶಾಲೆಯ ತಾಂತ್ರಿಕ ವಿಧಾನಗಳ ಬಗ್ಗೆ ಕಾರ್ಯಪ್ರಮುಖನಿಗೆ ಸಲಹೆಗಳನ್ನು ನೀಡಲು ಒಬ್ಬ ವಿಧಾನತಜ್ಞನನ್ನೂ (ಪ್ರೋಸೆಸ್ ಸ್ಪೆಷಲಿಸ್ಟ್) ಉತ್ಪಾದನೆಯ ಬಗ್ಗೆ ಸಲಹೆಗಳನ್ನು ನೀಡಲು ಒಬ್ಬ ಉತ್ಪಾದನ ತಜ್ಞನನ್ನೂ (ಪ್ರೊಡಕ್ಷನ್ ಸ್ಪೆಷಲಿಸ್ಟ್) ನೇಮಿಸಬಹುದು. ಇದೇ ರೀತಿ ರಸಾಯನ ವಿಜ್ಞಾನಿ, ಎಂಜಿನಿಯರ್ ಮುಂತಾಗಿ ಅನೇಕ ತಜ್ಞರ ನೇಮಕಕ್ಕೆ ಅವಕಾಶವುಂಟು, ಇವರೆಲ್ಲರೂ ಮೇಲ್ವಿಚಾರಕನಿಗೆ ಅವನಿಗೆ ಪರಿಚಯವಿಲ್ಲದ ಕ್ಷೇತ್ರಗಳಲ್ಲಿ ಸಲಹೆ ನೀಡುತ್ತಾರೆ. ಈ ಬಗೆಯ ಸಂಘಟನೆಯನ್ನು ಶ್ರೇಣಿ ಮತ್ತು ಸಿಬ್ಬಂದಿ ಸಂಘಟನೆ ಎನ್ನುತ್ತಾರೆ. ಇದು ಬಹಳ ವ್ಯಾಪಕವಾಗಿ ಬಳಕೆಯಲ್ಲಿದೆ.

ಇಲ್ಲಿ ಸಂಘಟನೆ ರಚಿತವಾಗಿರುವುದು ಮೇಲಿನಿಂದ ತಳದವರೆಗೆ ಹರಿಯುವ ಭದ್ರವಾದ ಕೇಂದ್ರೀಯ ಶ್ರೇಣಿಯ ಸುತ್ತ. ಈ ಶ್ರೇಣಿ ಮೇಲಿನಿಂದ ಕೆಳಗಿನವರೆಗೆ ಎಲ್ಲ ಆದೇಶಗಳನ್ನೂ ಸೂಚನೆಗಳನ್ನೂ ನಿಖರವಾಗಿ ತಲುಪಿಸುತ್ತದೆ. ಆದರೆ ಪ್ರತಿಯೊಬ್ಬ ಮುಖ್ಯ ಆಡಳಿತಾಧಿಕಾರಿಯ ಸುತ್ತಲೂ ಆತನಿಗೆ ವಿಫುಲವಾಗಿ ವಿಶೇಷ ಸಲಹೆ ನೀಡುವ ಸಿಬ್ಬಂದಿಯ ವ್ಯೂಹವನ್ನೇ ರಚಿಸಲಾಗಿದೆ. ಖಜಾಂಚಿ ಮತ್ತು ಕಾರ್ಯದರ್ಶಿ–ಇವರು ನೇರವಾಗಿ ಅಧ್ಯಕ್ಷನಿಗೆ ಸಲಹೆ ನೀಡುತ್ತಾರೆ. ಕಾರ್ಖಾನೆ ವ್ಯವಸ್ಥಾಪಕನಿಗೆ ಮುಖ್ಯ ಎಂಜಿನಿಯರ್, ಕೈಗಾರಿಕಾ ಸಂಬಂಧಗಳ ನಿರ್ದೇಶಕ ಮುಂತಾದವರು ಸಲಹೆ ಸೂಚನೆಗಳನ್ನು ನೀಡಬಲ್ಲರು. ಕಾರ್ಖಾನೆ ವ್ಯವಸ್ಥಾಪಕನ ಅಡಿಯಲ್ಲಿ ಅನೇಕ ಸಿಬ್ಬಂದಿ ಅಧಿಕಾರಿಗಳು (ಸ್ಟಾಫ್ ಆಫೀಸರ್ಸ್) ಇರುತ್ತಾರೆ. ಇವರ ಸುತ್ತಲೂ ಅವರವರ ಹಂತಗಳಲ್ಲಿ ಸಲಹೆಗಾರ ತಜ್ಞರ ಬಲೆಯನ್ನೇ ನೇಯಬಹುದು. ಮೇಲಿನಿಂದ ಕೆಳಮುಖವಾಗಿ ಹರಿಯುವ ಸಲಹೆಗಾರ ಇಲಾಖೆಗಳಲ್ಲಿ ಕೆಲವು ಇಡೀ ಕಾರ್ಖಾನೆಯ ಕೆಳಗಿನ ಹಂತದವರೆಗೂ ಹರಿಯಬಹುದು (ಉದಾ; ಕಾರ್ಮಿಕ ಕಲ್ಯಾಣ, ವೈದ್ಯಕ, ರಕ್ಷಣೆ).

ಮೇಲಣ ವ್ಯವಸ್ಥೆಯಲ್ಲಿಯ ನಾನಾ ಸಿಬ್ಬಂದಿ ಇಲಾಖೆಗಳ ಕಾರ್ಯ ಸ್ವರೂಪ ವಿಶಿಷ್ಟವಾದ್ದು. ಸಿಬ್ಬಂದಿ ಅಧಿಕಾರಿಗಳ ಕಾರ್ಯಭಾರ ಸಲಹಾತ್ಮಕವಾದ್ದು. ಕಾರ್ಯದರ್ಶಿಯ ಹುದ್ದೆ ಇದಕ್ಕೊಂದು ಉದಾಹರಣೆ. ಸಿಬ್ಬಂದಿ ಅಧಿಕಾರಿಗಳು ಆಡಳಿತ ಶ್ರೇಣಿಯಲ್ಲಿ ಯಾರಿಗೂ ಕಾರ್ಯನಿರ್ವಹಣೆಯ ಬಗ್ಗೆ ಆದೇಶಗಳನ್ನು ನೀಡಲಾರರೆಂಬುದು ತತ್ತ್ವಶಃ ನಿಜ. ಆದರೂ ಅವರು ನೀಡುವ ಸಲಹೆ ಅನೇಕ ವೇಳೆ ವಾಸ್ತವವಾಗಿ ಆಜ್ಞೆಯೇ ಆಗಿರುತ್ತದೆ. ಉದಾಹರಣೆಗೆ, ಎಂಜಿನಿಯರಿಂಗ್ ಇಲಾಖೆ ನೀಡುವ ನಕಾಸೆಯನ್ನಾಗಲಿ, ರಸಾಯನ ಇಲಾಖೆಯಿಂದ ಬರುವ ಒಂದು ಸೂತ್ರವನ್ನಾಗಲಿ ಉತ್ಪಾದನ ಇಲಾಖೆಯಲ್ಲಿ ಯಾರೂ ಚಾಚೂ ಬದಲಾಯಿಸುವ ಹಾಗಿಲ್ಲ. ಆ ಇಲಾಖೆಗಳಿಂದ ಬಂದ ಸೂಚನೆಗಳಲ್ಲಿ ಒಂದು ವೇಳೆ ತಪ್ಪೇ ಇದ್ದರೂ ಉತ್ಪಾದನ ಇಲಾಖೆ ಮಾಡಬಹುದಾದ್ದು ಇಷ್ಟೆ; ಅವನ್ನು ಸಂಬಂಧಪಟ್ಟ ಸಿಬ್ಬಂದಿ ಇಲಾಖೆಗಳಿಗೆ ಪುನಃಪರಿಶೀಲನೆಗಾಗಿ ಹಿಂದಿರುಗಿಸುವುದು.

ಶ್ರೇಣಿ ಮತ್ತು ಸಿಬ್ಬಂದಿ ಸಂಘಟನ ವಿಧಾನದ ಮಾದರಿ ನಕ್ಷೆಯೊಂದನ್ನು ಎಂ.ಎ. ಲೀ ರಚಿಸಿದ್ದಾನೆ. ಅದು ಹೀಗಿದೆ :



**ಚಿತ್ರ 2**

ತಜ್ಞರ ಕೌಶಲ ಮತ್ತು ಜ್ಞಾನಗಳನ್ನು ಉತ್ಪಾದನ ವ್ಯವಸ್ಥೆಯಲ್ಲಿ ಸಮಾವೇಶಗೊಳಿಸಲು ಅನುಸರಿಸಲಾಗುವ ಇನ್ನೊಂದು ವಿಧಾನವೆಂದರೆ ಶ್ರೇಣಿ ಮತ್ತು ಕಾರ್ಯಾತ್ಮಕ ಸಂಘಟನೆ (ಲೈನ್ ಅಂಡರ ಫಂಕ್ಷನಲ್ ಆರ್ಗನೈಸೇಷನ್). ಅದು ಹೀಗಿದೆ :

ಮೇಲಣ ಉದಾಹರಣೆಯಲ್ಲಿ ತೋರಿಸಿರುವ ಕಾರ್ಯಾತ್ಮಕ ತಜ್ಞರು ಇಬ್ಬರು; ವಿಧಾತಜ್ಞ ಮತ್ತು ಉತ್ಪಾದನ ತಜ್ಞ. ಇವರಿಬ್ಬರ ಸ್ಥಾನಗಳೂ ಕಾರ್ಯನಿರ್ವಾಹಕ ಪ್ರಮುಖ ಸ್ಥಾನಕ್ಕೆ ಸರಿಸಮನಾದವು. ಈ ಮೂವರೂ ತಂತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೆಲಸಗಾರರಿಗೆ ಸಲಹೆಗಳನ್ನೂ ಸೂಚನೆಗಳನ್ನೂ ನೀಡುತ್ತಾರೆ. ಇದು ಕ್ರಿಯಾತ್ಮಕ ಸಂಘಟನೆಯ ಸರಳ ರೂಪ. ನಿರ್ದೇಶನ ಇಲ್ಲಿ ಅಧಿಕಾರಾನುಗುಣವಾದ್ದಲ್ಲ, ಅದನ್ನು ಕಾರ್ಯಾನುಗುಣವಾಗಿ ವಿಂಗಡಿಸಲಾಗಿದೆ. ಕಾರ್ಯಾತ್ಮಕ ಸಂಘಟನೆ ಎಂಬ ಶಬ್ದವನ್ನು ಮೊದಲು ಪ್ರಯೋಗಿಸಿದವನು ಎಫ್.ಡಬ್ಲ್ಯು. ಟೇಲರ್. ಲೋಹಗೆಲಸದ ಕಾರ್ಖಾನೆಯೊಂದಕ್ಕೆ ಸಂಬಂಧಿಸಿದಂತೆ ಅವನು ಈ ರೀತಿಯ ವಿಭಜನೆ ಮಾಡಿ ತೋರಿಸಿದ. ವಿಶೇಷಜ್ಞರಾದ ಕಾರ್ಯಪ್ರಮುಖರನ್ನು ಕಾರ್ಯಾತ್ಮಕ ಪ್ರಮುಖರೆಂದು (ಫಂಕ್ಷನಲ್ ಫೋರ್ ಮನ್) ಈತ ಕರೆದಿದ್ದಾನೆ.

ಟೇಲರ ಪ್ರೇಷಿತವಾದ ಈ ವಿಧಾನವನ್ನಾಧರಿಸಿ ವಿಸ್ತೃತವಾದ ಸಂಘಟನೆಯ ವಿನ್ಯಾಸವನ್ನೇ ರಚಿಸುವುದು ಇಂದು ಸಾಧ್ಯವಾಗಿದೆ.



ಚಿತ್ರ 3

ಆಧುನಿಕ ಕಾರ್ಖಾನೆಯೊಂದರ ಕ್ರಿಯಾತ್ಮಕ ಸಂಘಟನೆ ಸ್ಥೂಲವಾಗಿ ಹೇಗಿರುತ್ತದೆಂಬುದನ್ನು ಚಿತ್ರ 5ರಲ್ಲಿ ಕೊಟ್ಟಿದೆ.

ಈ ವ್ಯವಸ್ಥೆಯಲ್ಲಿ ಎಂಜಿನಿಯರ್, ಉತ್ಪಾದನೆಯ ಮೇಲ್ವಿಚಾರಕ, ರಸಾಯನ ವಿಜ್ಞಾನಿ ಈ ಮೂವರೂ ಸಮಾನಸ್ಕಂಧರು. ಪ್ರತಿಯೊಬ್ಬನೂ ಪ್ರತಿಯೊಬ್ಬ ಕಾರ್ಯಪ್ರಮುಖನಿಗೂ ನೇರವಾಗಿ ಆದೇಶಗಳನ್ನೂ ಸಲಹೆಗಳನ್ನೂ ನೀಡುವ ಅಧಿಕಾರ ಉಳ್ಳವನು. ಹೀಗೆ ಪ್ರತಿಯೊಬ್ಬ ಕಾರ್ಯಪ್ರಮುಖನಿಗೂ ಮೂರು ದಿಕ್ಕುಗಳಿಂದಲೂ ಆದೇಶಗಳೂ ಸಲಹೆಗಳೂ ಬರುತ್ತವೆ. ಈ ಮೂವರಲ್ಲಿ ಪ್ರತಿಯೊಬ್ಬ ತಜ್ಞನ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳಲ್ಲೂ ಆ ತಜ್ಞನಿಗೆ ಪ್ರತಿಯೊಬ್ಬ ಕಾರ್ಯಪ್ರಮುಖನೂ ಉತ್ತರವಾದಿಯಾಗಿರಬೇಕಾಗುತ್ತದೆ.




ಚಿತ್ರ 4

ಚಿತ್ರ 5 ರಲ್ಲಿ ತೋರಿಸುವಂತೆ ಪ್ರತಿಯೊಬ್ಬ ಕಾರ್ಯಪ್ರಮುಖನ ಕರ್ತವ್ಯಗಳೂ ಒಂದೇ ತೆರನಾಗಿಲ್ಲದೆ, ಒಬ್ಬೊಬ್ಬನೂ ಕೆಲಸಗಾರನ ಕರ್ತವ್ಯಗಳಲ್ಲಿ ಒಂದೊಂದು ಮುಖದ ಮೇಲ್ವಿಚಾರಣೆಯನ್ನು ಮಾತ್ರ ನಡೆಸಲು ಬಾಧ್ಯನಾಗಿರಬಹುದು. ಚಿತ್ರದಲ್ಲಿ ತೋರಿಸಿರುವ ನಾಲ್ವರು ಕಾರ್ಯಪ್ರಮುಖರಲ್ಲಿ ಪ್ರತಿಯೊಬ್ಬನೂ ತನ್ನ




ಚಿತ್ರ 5

ಮೇಲ್ಪಟ್ಟವರಿಂದ ಪಡೆಯುವ ಸೂಚನೆಗಳು ಉಳಿದ ಮೂವರು ಕಾರ್ಯಪ್ರಮುಖರು ಪಡೆಯುವ ಸೂಚನೆಗಳಿಂದ ಭಿನ್ನವಾಗಿರಬಹುದು. ಆಗ ಪ್ರತಿಯೊಬ್ಬ ಕೆಲಸಗಾರನಿಗೂ ನಾಲ್ವರು ಕಾರ್ಯಪ್ರಮುಖರಿಂದಲೂ ಪ್ರತ್ಯೇಕ ಸೂಚನೆಗಳು ಬರುತ್ತದೆ. ಮಾಡಬೇಕಾದ ಕೆಲಸದ ವಿವಿಧ ಮುಖಗಳಲ್ಲಿ ಒಂದೊಂದಕ್ಕೂ ಒಬ್ಬೊಬ್ಬ ಕಾರ್ಯಪ್ರಮುಖನಿಂದ ಚತುರ ಮಾರ್ಗದರ್ಶನ ಲಭ್ಯವಾಗುತ್ತದೆ. ಕಾರ್ಯಾತ್ಮಕ ಸಂಘಟನೆಯ ವೈಶಿಷ್ಟ್ಯವಿದು. ಬೃಹತ್ ಸಂಸ್ಥೆಗಳಲ್ಲಿ ಈ ವಿಧಾನ ಸಾಮಾನ್ಯವಾಗಿ ಜಾರಿಯಲ್ಲಿರುತ್ತದೆ.

ಉತ್ಪಾದನ ಪ್ರಕ್ರಿಯೆಗಳಿಗೆ ಕಾರ್ಯಾತ್ಮಕ ಸಂಘಟನೆಯನ್ನು ವಿಸ್ತರಿಸಿ ಅನ್ವಯಿಸುವ ಗಮನಾರ್ಹ ಪ್ರಯತ್ನ ಮಾಡಿದವನು ಎಫ್. ಡಬ್ಲ್ಯು. ಟೇಲರ್, ಈ ಅನ್ವಯ ವಿಧಾನಕ್ಕೆ ವೈಜ್ಞಾನಿಕ ವ್ಯವಸ್ಥಾಪನ (ಸೈಂಟಿಫಿಕ್ ಮ್ಯಾನೇಜ್‌ಮೆಂಟ್) ಎಂದು ಹೆಸರು ಬಂದಿದೆ.

ಕ್ರಿಯಾತ್ಮಕ ಸಂಘಟನೆಯ ಅನುಕೂಲಗಳು ಅನೇಕ. ಪ್ರತಿಯೊಬ್ಬ ಕೆಲಸಗಾರನೂ ನಾನಾ ಕ್ಷೇತ್ರಗಳಲ್ಲಿ ಅರೆಬರೆ ಜ್ಞಾನವುಳ್ಳ ಕಾರ್ಯಪ್ರಮುಖನ ಆದೇಶದಂತೆ ಕೆಲಸ ಮಾಡುವ ಬದಲು ತಜ್ಞರ ನಿರ್ದೇಶನದಲ್ಲಿ ಕೆಲಸ ಮಾಡುತ್ತಾನೆ. ಮಾನಸಿಕ ಮತ್ತು ದೈಹಿಕ ದುಡಿಮೆಗಳ ನಡುವಣ ವಿಭಜನೆಗೆ ಆಯಾ ಕ್ರಿಯೆಯ ಸ್ವರೂಪವೇ ಆಧಾರವಾಗಿರುತ್ತದೆ. ಶ್ರಮವಿಭಜನೆಯ ತತ್ತ್ವದ ಅನುಸರಣೆ ಸಾಧ್ಯವಾಗುತ್ತದೆ.

ಪ್ರತಿಯೊಬ್ಬನೂ ತಾನು ಮಾಡಬೇಕಾದ್ದೇನೆಂಬುದು ಖಚಿತವಾಗಿರುತ್ತದೆ. ಇವೆಲ್ಲದರ ಪರಿಣಾಮವಾಗಿ ಪ್ರತಿಯೊಬ್ಬನಿಗೂ ಕ್ರಿಯಾತ್ಮಕ ದಕ್ಷತೆ ಸಾಧ್ಯವಾಗುತ್ತದೆ.

ಕ್ರಿಯಾತ್ಮಕ ಸಂಘಟನೆಯ ದೊಡ್ಡ ದೋಷವೆಂದರೆ ಶಿಸ್ತಿನ ಶಿಥಿಲತೆ. ಶ್ರೇಣಿಯ ನಿಯಂತ್ರಣ ಅತ್ಯಲ್ಪ. ವಿವಿಧ ಇಲಾಖೆಗಳ ಮತ್ತು ಕೆಲಸಗಳ ಸಂಯೋಜನೆಯಾಗದಿದ್ದರೆ ದಕ್ಷತೆ ಕುಗ್ಗಬಹುದು. ಮಾನಸಿಕ ಮತ್ತು ದೈಹಿಕ ಕ್ರಿಯೆಗಳ ಪ್ರತ್ಯೇಕತೆಯ ತತ್ತ್ವವನ್ನು ಅತ್ಯಂತ ಕೆಳಗಿನ ಹಂತದವರೆಗೂ ಕೊಂಡೊಯ್ಯುವುದರಿಂದ ಅತಿ ಕೆಳ ದರ್ಜೆಯ ಕೆಲಸಗಾರರು ಯಂತ್ರದ ಭಾಗಗಳಂತೆ ಸತ್ತ್ವಹೀನರಾಗುವರೆಂಬುದು ಇದರ ಬಗ್ಗೆ ಬಂದಿರುವ ದೊಡ್ಡ ಟೀಕೆ. ಆದರೆ ಈ ವಿಧಾನದಿಂದ ಎಲ್ಲರಿಗೂ ಅವರವರ ಶಕ್ತಿಸಾಮರ್ಥ್ಯಾನುಗುಣವಾಗಿ ಕೆಲಸ ನೀಡುವುದು ಸಾಧ್ಯವಾಗಿದೆ. ಇದು ಕಾರ್ಖಾನೆ ಸಂಘಟನೆಯ ಒಂದು ಮುಖ್ಯ ಸೂತ್ರ.

ಶ್ರೇಣಿ ಸಿಬ್ಬಂದಿ ಮತ್ತು ಕ್ರಿಯಾತ್ಮಕ –ಈ ಮೂರನ್ನೂ ಕೂಡಿಸಿದ ವಿಧಾನವನ್ನು ಅತ್ಯಂತ ಪುರೋಗಾಮಿ ಕಾರ್ಖಾನೆಗಳಲ್ಲಿ ಅನುಸರಿಸಲಾಗುತ್ತದೆ. ಈ ಸಂಘಟನೆಯ ಬೆನ್ನಮೂಳೆಯಂತೆ ಅಧಿಕಾರಶ್ರೇಣಿ ಉದಗ್ರವಾಗಿ ಸಾಗುತ್ತದೆ. ಕಾರ್ಖಾನೆಯ ಮೇಲ್ವಿಚಾರಕನ ಕೆಳಗೆ ಸಂಪೂರ್ಣ ಕ್ರಿಯಾತ್ಮಕವಾದ ಸಂಘಟನೆಯ ನಿರ್ಮಾಣವಾಗಿರುತ್ತದೆ. ಇಡೀ ವ್ಯವಸ್ಥೆ ಸ್ಥೂಲವಾಗಿ ಹೀಗಿರುತ್ತದೆ :

ಇಲ್ಲಿ ಉತ್ಪಾದನೆಯ ಕ್ರಮವನ್ನು ನಿರ್ಧರಿಸುವುದು ಆದೇಶ ಇಲಾಖೆಯ ಹೊಣೆ.



ಚಿತ್ರ 6

ಕಾರ್ಖಾನೆ ವ್ಯವಸ್ಥೆ ಜಾರಿಗೆ ಬರುವುದಕ್ಕೆ ಮುಂಚೆ ಕಾರ್ಖಾನೆಗಳಿರಲಿಲ್ಲವೆಂದಲ್ಲ. ಪ್ರಾಚೀನ ಈಜಿಪ್ಟ್, ಅಸ್ಸಿರಿಯ ಮತ್ತು ಫಿನೀಷಿಯಗಳಲ್ಲಿಯ ಬಟ್ಟೆಯ ಉತ್ಪಾದನ ವಿಧಾನದ ಬಗ್ಗೆ ಹೆಚ್ಚು ತಿಳಿದಿಲ್ಲವಾದರೂ ಅದು ಕುಟುಂಬ ವ್ಯವಸ್ಥೆಯ ಉತ್ಪಾದನ ವಿಧಾನವನ್ನು ದಾಟಿ ಬೆಳೆದಿತ್ತು ಎಂದು ತಿಳಿದುಬರುತ್ತದೆ. 18ನೆಯ ಶತಮಾನಕ್ಕೂ ಹಿಂದೆ ಯೂರೋಪಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಅಲ್ಲಿಯ ದೊರೆಗಳೂ ಶ್ರೀಮಂತರೂ ಕಾರ್ಖಾನೆಗಳ ಸ್ಥಾಪನೆ ಮತ್ತು ಬೆಳೆವಣಿಗೆಗಳಿಗೆ ಪ್ರೋತ್ಸಾಹ ನೀಡಿದ್ದುಂಟು. ಕಾನ್‌ಸ್ಟಾಂಟಿನೋಪಲಿನ ರೇಷ್ಮೆ ಕಾರ್ಖಾನೆಗಳು ಹದಿನಾಲ್ಕನೆಯ ಲೂಯಿಯ ಕಾಲದ ಅವಧಿಯ ಕಾರ್ಖಾನೆಗಳು, ರೋಮನ್ ಚಕ್ರಾಧಿಪತ್ಯದಲ್ಲಿದ್ದ ಗಾಜಿನ ಮತ್ತು ಮಣ್ಣಿನ ವಸ್ತುಗಳ ಕಾರ್ಖಾನೆಗಳು, ಫ್ರಾನ್ಸಿನಲ್ಲಿ ಕೋಲ್‌ಬರ್ಟ್ ಅವಧಿಯ ಕಾರ್ಖಾನೆಗಳು–ಇವು ಇದಕ್ಕೆ ನಿದರ್ಶನ. ಇಷ್ಟೇ ಅಲ್ಲದೆ ಮಾನವನ ಶ್ರಮದಲ್ಲಿ ಮಿತವ್ಯಯ ಸಾಧಿಸುವ ದೃಷ್ಟಿಯಿಂದ ಬಹಳ ಹಿಂದಿನಿಂದಲೂ ಅಶ್ವಶಕ್ತಿ ಮತ್ತು ಜಲಶಕ್ತಿಗಳನ್ನು ಬಳಸಿಕೊಂಡು ಉತ್ಪಾದನೆ ನಡೆಸಿರುವುದನ್ನು ಕಾಣಬಹುದು. ಉದಾಹರಣೆಗೆ ಹದಿನಾಲ್ಕನೆಯ ಶತಮಾನದಷ್ಟು ಹಿಂದೆಯೇ, ಬೊಲೋನದಲ್ಲಿ ನೂಲಿನ ಉತ್ಪಾದನೆಗೂ ನ್ಯೂರೆಂಬರ್ಗಿನಲ್ಲಿ ಕಾಗದದ ಉತ್ಪಾದನೆಗೂ ಜಲಶಕ್ತಿಯನ್ನು ಬಳಸಿಕೊಳ್ಳಲಾಗುತ್ತಿತ್ತು. ಬಂಡವಾಳ ಮತ್ತು ಮಾರುಕಟ್ಟೆಗಳ ಕೊರತೆಯಿಂದಾಗಿ ಮತ್ತು ಮಿತವಾದ ಶಕ್ತಿಸಾಧನಗಳಿಂದಾಗಿ ಈ ಕಾರ್ಖಾನೆಗಳು ದೊಡ್ಡವಾಗಿ ಬೆಳೆಯಲು ಸಾಧ್ಯವಾಗಿರಲಿಲ್ಲ. ಆದರೆ ಇಂದು ಕಾರ್ಖಾನೆ ವ್ಯವಸ್ಥೆ ಎಂಬ ಶಬ್ದವನ್ನು ಬಳಸುವುದು ಮೇಲೆ ಹೇಳಿದ ವಿಶಿಷ್ಟಾರ್ಥದಲ್ಲಿ.

ಕಾರ್ಖಾನೆ ವ್ಯವಸ್ಥೆ ಬರುವುದಕ್ಕೆ ಮುನ್ನ ಇದ್ದ ಕುಟುಂಬ ಉತ್ಪಾದನ ವ್ಯವಸ್ಥೆಯಲ್ಲಿ ಕಾರ್ಮಿಕರು ತಂತಮ್ಮ ಮನೆಗಳಲ್ಲೇ ಉತ್ಪಾದನೆಯ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಎಂಥ ಪದಾರ್ಥ ಬೇಕು, ಎಷ್ಟು ಬೇಕು–ಎಂಬುದನ್ನು ಇವರಿಗೆ ತಿಳಿಸುತ್ತಿದ್ದವರು ವರ್ತಕರು. ಉತ್ಪಾದನೆಗೆ ಅವಶ್ಯವಾದ ಎಲ್ಲ ಉಪಕರಣಗಳನ್ನೂ ಸಲಕರಣೆಗಳನ್ನೂ ಒದಗಿಸುವುದು ಉಪಕರಣ ನಕಾಶೆ ಇಲಾಖೆಯ ಕೆಲಸ. ಪರೀಕ್ಷಣ ಇಲಾಖೆಯ ಅಧಿಕಾರ ವ್ಯಾಪಕವಾದ್ದು. ಮೇಲ್ವಿಚಾರಕನಿಗಿಂತ ಕೆಳದರ್ಜೆಯ ಯಾವ ಅಧಿಕಾರಿಯ ಅಧೀನಕ್ಕೂ ಅದು ಒಳಪಟ್ಟಿರುವುದಿಲ್ಲ. ಆದ್ದರಿಂದ ಅದು ಉತ್ಪಾದನೆಯ ಗುಣ ನಿಯಂತ್ರಣ ಮಾಡುವ ಅಧಿಕಾರ ಪಡೆದಿರುತ್ತದೆ. ಉತ್ಪಾದನಾ ವಿಧಾನಗಳ ಬಗ್ಗೆಯೂ ಅದು ಕೆಲವು ಸೂಚನೆಗಳನ್ನು ನೀಡಬಹುದು. ಕಾರ್ಯಪ್ರಮುಖನ ಹಂತದಿಂದ ಕೆಳಗಿನ ಸಂಘಟನೆ ಸಂಪೂರ್ಣವಾಗಿ ಸೇನಾ ಅಥವಾ ಶ್ರೇಣಿ ಸ್ವರೂಪದ್ದು. ಹೀಗೆ ಶ್ರೇಣಿ, ಸಿಬ್ಬಂದಿ ಕ್ರಿಯಾತ್ಮಕ–ಈ ಮೂರೂ ವಿಧಾನಗಳ ಸೂಕ್ತ ಸಂಯೋಜನೆಯಿಂದ ಸಮರ್ಪಕವಾದ ಸಂಘಟನೆಯ ವ್ಯವಸ್ಥೆಯನ್ನು ಸಾಧಿಸಿಕೊಳ್ಳಬಹುದು. ಇವು ಮೂರೂ ಯಾವ ಯಾವ ಪ್ರಮಾಣದಲ್ಲಿರಬೇಕೆಂಬುದು ಆಯಾ ಕಾರ್ಖಾನೆಯ ಸ್ವರೂಪಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಪ್ರತಿಯೊಬ್ಬ ಕೆಲಸಗಾರನ ಕಾರ್ಯದಕ್ಷತೆ, ಬುದ್ಧಿಯ ಮಟ್ಟ, ಅನುಭವ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ಶ್ರಮವನ್ನು ವಿಭಜಿಸುವುದೂ ಅವನಿಂದ ಪರಮಾವಧಿ ಪ್ರಯೋಜನ ಪಡೆಯುವುದೂ ಸುಸಂಘಟಿತ ವ್ಯವಸ್ಥೆಯ ಉದ್ದೇಶ. ಆಡಳಿತ ಸೂತ್ರಗಳು ಯಾವೊಬ್ಬನ ಪ್ರತಿಭೆಯನ್ನೂ ಕ್ರಿಯಾಶೀಲತೆಯನ್ನೂ ಮೊಟಕು ಮಾಡಬಾರದು. ಯಂತ್ರವಾಗಲಿ ವಿಧಾನಗಳಾಗಲಿ ಮಾನವನಿಗಿಂತ ಮುಖ್ಯವಲ್ಲ. (ಎ.ಕೆ.ಎಸ್.ಎಚ್.)

**ಕಾರ್ಖಾನೆ ವ್ಯವಸ್ಥೆ :** ಬೃಹತ್ ಘಟಕಗಳಲ್ಲಿ ಕೇಂದ್ರೀಕರಣಗೊಂಡ ಕೈಗಾರಿಕಾ ವ್ಯವಸ್ಥೆ (ಫ್ಯಾಕ್ಟರಿ ಸಿಸ್ಟಂ). 18ನೆಯ ಶತಮಾನದಲ್ಲಿ, ಶಕ್ತಿಚಾಲಿತ ಮಗ್ಗ ಮತ್ತು ಉಗಿಯಂತ್ರದ ಬೆಳೆವಣಿಗೆಯೊಂದಿಗೆ ಈ ಪ್ರವೃತ್ತಿ ಆರಂಭವಾಯಿತು. ಉತ್ಪಾದನ ವ್ಯವಸ್ಥೆಯ ವಿಕಾಸದ ಸರಣಿಯಲ್ಲಿ ಕುಟುಂಬ ಉತ್ಪಾದನ ವ್ಯವಸ್ಥೆಯ ಅನಂತರದ ಘಟ್ಟವಿದು.

ಅವರೇ ಕಾರ್ಮಿಕರಿಗೆ ಉತ್ಪಾದನೆಗೆ ಅಗತ್ಯವಾದ ಕಚ್ಚಾ ಸಾಮಗ್ರಿಯನ್ನೊದಗಿಸುತ್ತಿದ್ದರು; ಉತ್ಪಾದನೆಯಾದ ಸರಕನ್ನು ಅವರಿಂದ ಸಂಗ್ರಹಿಸುತ್ತಿದ್ದರು. ಆಗ ಉತ್ಪಾದನೆಗೆ ಅವಶ್ಯವಾಗಿದ್ದ ಉಪಕರಣಗಳು ಸಾಮಾನ್ಯವಾಗಿ ಸಣ್ಣವು; ಅವು ಅಧಿಕ ಬೆಲೆಯವುಗಳಾಗಿರಲಿಲ್ಲ. ಉತ್ಪಾದನೆಯಾಗುತ್ತಿದ್ದ ಪದಾರ್ಥವೂ ಹೆಚ್ಚಾಗಿರುತ್ತಿರಲಿಲ್ಲ. ಈ ಪದಾರ್ಥಗಳಿಗೆ ಬೇಡಿಕೆ ಹೆಚ್ಚಿದಾಗ, ಮಾರುಕಟ್ಟೆ ವಿಸ್ತರಿಸತೊಡಗಿದಾಗ ಉತ್ಪಾದನೆಯನ್ನು ಹೆಚ್ಚಿಸಬೇಕಾದ ಅಗತ್ಯ ಒದಗಿ ಬಂತು. ಜಲಶಕ್ತಿಯಿಂದಲೂ ಉಗಿಶಕ್ತಿಯಿಂದಲೂ ನಡೆಯುವ ದೊಡ್ಡ ದೊಡ್ಡ ಯಂತ್ರಗಳನ್ನು ಬಳಸಿಕೊಳ್ಳುವುದು ಸಾಧ್ಯವಾದಾಗ ಈ ಯಂತ್ರಗಳನ್ನು ಸ್ಥಾಪಿಸಿ ನಡೆಸುವುದಕ್ಕೂ ಇವಕ್ಕೆ ಅವಶ್ಯವಾದ ಶಕ್ತಿಯನ್ನೊದಗಿಸಿಕೊಳ್ಳುವುದಕ್ಕೂ ದೊಡ್ಡ ಕಟ್ಟಡಗಳನ್ನು ಕಟ್ಟುವುದು ಅನಿವಾರ್ಯವಾಯಿತು. ಇವಕ್ಕೆ ಬೇಕಾಗಿದ್ದ ಬಂಡವಾಳವೂ ಅಗಾಧವೇ. ಸಾಮಾನ್ಯವಾಗಿ ಸ್ವಂತ ಉಪಕರಣಗಳಿಂದ ತಂತಮ್ಮ ಮನೆಗಳಲ್ಲೆ ದುಡಿಯುತ್ತಿದ್ದ ಕಾರ್ಮಿಕರಿಗೆ ಇಷ್ಟೊಂದು ಬಂಡವಾಳ ಒದಗಿಸಿಕೊಳ್ಳುವ ಶಕ್ತಿ ಇರಲಿಲ್ಲ. ಇದಕ್ಕೆ ಬಂಡವಾಳ ಇದ್ದುದು ವರ್ತಕರಲ್ಲಿ. ಅವರೇ ಕಾರ್ಖಾನೆ ವ್ಯವಸ್ಥೆಯ ಪ್ರವರ್ತಕರು. ಕಾರ್ಮಿಕರು ತಂತಮ್ಮ ಮನೆಗಳಲ್ಲಿ ದುಡಿಯುವ ಬದಲು ಕಾರ್ಖಾನೆಯಲ್ಲಿ ನಿಗದಿಯಾದ ವೇಳೆಗಳಲ್ಲಿ ಕೆಲಸ ಮಾಡಲಾರಂಭಿಸಿದರು. ಕಾರ್ಖಾನೆಯಲ್ಲಿ ಉತ್ಪಾದನೆಯಾದ್ದು ಅವರ ಮಾಲೀಕನ ಸ್ವತ್ತು. ಅದಕ್ಕೆ ಬೇಕಾದ ಸಾಮಗ್ರಿಯನ್ನೊದಗಿಸುವವನೂ ಉತ್ಪತ್ತಿಯಾದ ಪದಾರ್ಥಕ್ಕೆ ಬೆಲೆ ನಿಗದಿ ಮಾಡಿ ಮಾರಾಟ ಮಾಡುವವನೂ ಅವನೇ. ಕಾರ್ಮಿಕರಿಗೆ ಅವರು ಮಾಡಿದ ಕೆಲಸಕ್ಕೆ ಅನುಗುಣವಾಗಿ ಕೂಲಿ ದೊರಕಲಾರಂಭವಾಯಿತು. ಉತ್ಪಾದನೆ ಸ್ವಂತ ಅನುಭೋಗಕ್ಕಾಗಿಯಲ್ಲ, ವಿಶಾಲವಾದ ಮಾರುಕಟ್ಟೆಗಾಗಿ, ಸಮಾನ ಗುಣಗಳುಳ್ಳ ಸರಕುಗಳ ಭೂರಿ ಉತ್ಪಾದನೆ, ನಾನಾ ಹಂತಗಳಾಗಿ ಉತ್ಪಾದನಕಾರ್ಯದ ವಿಂಗಡಣೆ, ಪ್ರತಿಯೊಂದು ಹಂತಕ್ಕೂ ವಿಶಿಷ್ಟವಾದ ಯಂತ್ರದ ಅಳವಡಿಕೆ ಮತ್ತು ವಿಶೇಷ ಪ್ರಾವೀಣ್ಯದ ಸಾಧನೆ–ಇವು ಕಾರ್ಖಾನೆ ಉತ್ಪಾದನೆ ವ್ಯವಸ್ಥೆಯ ಕೆಲವು ಮುಖ್ಯ ಲಕ್ಷಣಗಳು. ಉತ್ಪಾದನಾಂಗಗಳ ಸಂಘಟನೆ ಮತ್ತು ಅನುಕೂಲತಮ ಬಳಕೆಯ ಪ್ರಯೋಗಗಳು ನಡೆದುವು.

ಇಂಗ್ಲೆಂಡಿನಲ್ಲಿ ಆರಂಭವಾಗಿ ವಿಶ್ವದ ಇತರ ದೇಶಗಳಿಗೂ ಕ್ರಮೇಣ ಹಬ್ಬಿದ ಕಾರ್ಖಾನೆ ಉತ್ಪಾದನ ವ್ಯವಸ್ಥೆಯಿಂದಾಗಿ ಆ ದೇಶಗಳ ಆರ್ಥಿಕ ಸಾಮಾಜಿಕ ವ್ಯವಸ್ಥೆಗಳಲ್ಲಿ ಅನೇಕ ಬದಲಾವಣೆಗಳಾದುವು. ನಿರ್ಜೀವಿ ಶಕ್ತಿಯನ್ನೇ ಅಧಿಕವಾಗಿ ಅವಲಂಬಿಸಿದ ಕೈಗಾರಿಕೆಗಳು ಈ ಶಕ್ತಿಮೂಲಗಳಿರುವೆಡೆಯಲ್ಲಿ ಕೇಂದ್ರೀಕೃತವಾಗಲಾರಂಭಿಸಿದುವು. ಕಚ್ಚಾಸಾಮಗ್ರಿ, ಮಾರುಕಟ್ಟೆ, ಕಾರ್ಮಿಕರ ಸರಬರಾಯಿ–ಇವು ಕೈಗಾರಿಕೆಗಳ ಕೇಂದ್ರೀಕರಣಕ್ಕೆ ಇತರ ಕಾರಣಗಳು. ಇದರಿಂದ ಹೊಸ ನಗರಗಳು ಬೆಳೆದುವು.

ಕಾರ್ಖಾನೆ ವ್ಯವಸ್ಥೆ ಮೂಲತಃ ಭಾರಿ ಉತ್ಪಾದನೆಗೆ ಎಡೆ ಮಾಡಿ, ಪಾಶ್ಚಾತ್ಯ ದೇಶಗಳ ರಾಷ್ಟ್ರೀಯ ವರಮಾನ ವೃದ್ಧಿಯಾಗಲು ಕಾರಣವಾಯಿತು. ಭೂಮಿಯನ್ನೇ ಅವಲಂಬಿಸಿದ್ದ ರೈತರನ್ನೂ ತಲತಲಾಂತರದಿಂದ ತಂತಮ್ಮ ವೃತ್ತಿಗಳಿಗೆ ಅಂಟಿಕೊಂಡಿದ್ದ ಕಾರ್ಮಿಕರನ್ನೂ ಅದು ತನ್ನಲ್ಲಿಗೆ ಆಕರ್ಷಿಸಿ ಉತ್ತಮ ಮಟ್ಟದ ಜೀವನವನ್ನು ನಡೆಸುವ ಅನುಕೂಲವನ್ನು ಅವರಿಗೆ ಒದಗಿಸಿಕೊಟ್ಟಿತು. ಕಾರ್ಖಾನೆ ವ್ಯವಸ್ಥೆಯ ಆರಂಭಕಾಲದಲ್ಲಿ ಅನೇಕ ಕಠಿಣ ಪರಿಸ್ಥಿತಿಗಳು ಉದ್ಭವಿಸಿದರೂ ಕಾಲಕ್ರಮೇಣ ಅತ್ಯದ್ಭುತ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಮಾಡುವ ಸಾಮರ್ಥ್ಯವನ್ನು ಇದು ಪಡೆದುಕೊಂಡಿತು. ಮಾನವ ತಾನು ಕಂಡರಿಯದ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸುವುದಕ್ಕೆ, ಅವುಗಳ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಈ ವ್ಯವಸ್ಥೆ ದಾರಿ ಮಾಡಿಕೊಟ್ಟಿತು. ಇಂದು ಆರ್ಥಿಕವಾಗಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿನ ಜೀವನಮಟ್ಟ ಹೆಚ್ಚಿದ್ದರೆ, ಆರ್ಥಿಕವಾಗಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿನ ಜೀವನಮಟ್ಟ ಹೆಚ್ಚುವ ಆಶೆಯಿದ್ದರೆ ಅದು ಈ ಉತ್ಪಾದನಾ ಕ್ರಮದಿಂದಲೇ. ಒಂದೇ ಕಡೆಯಲ್ಲಿ ಅಧಿಕ ಸಂಖ್ಯೆಯಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಸುಸಂಘಟಿತರಾಗಿ ತಮ್ಮ ಹಿತರಕ್ಷಣೆಯ ಕ್ರಮ ಕೈಕೊಂಡರು. ಉತ್ಪಾದನ ಕಾರ್ಯ ಅಕುಂಠಿತವಾಗಿಯೂ ಪ್ರಗತಿಪರವಾಗಿಯೂ ಸಾಗುವುದಕ್ಕೆ ಕಾರ್ಮಿಕ–ಮಾಲೀಕ ಸೌಹಾರ್ದ ಒಂದು ಮುಖ್ಯ ಅಗತ್ಯವೆಂಬುದು ಈಗ ಬಹುತೇಕ ಮನವರಿಕೆಯಾಗಿದೆ.

ಕಾರ್ಖಾನೆ ವ್ಯವಸ್ಥೆ ಕೇವಲ ಉತ್ಪಾದಿತ ವಸ್ತುಗಳ ಮತ್ತು ಅನುಭೋಗಿ ವಸ್ತುಗಳ ಉತ್ಪಾದನೆಯಲ್ಲಿ ಮಾತ್ರ ಕ್ರಾಂತಿಯನ್ನುಂಟುಮಾಡಲಿಲ್ಲ. ಅರ್ಥವ್ಯವಸ್ಥೆಯ ವಿವಿಧ ರಂಗಗಳಲ್ಲಿಯ ಕ್ರಾಂತಿಗೆ ಇದು ಪೂರಕವಾಯಿತು. ಉದಾಹರಣೆಗೆ ಕೃಷಿರಂಗ, ಸಾರಿಗೆ ರಂಗ, ವಾಣಿಜ್ಯರಂಗಗಳಲ್ಲಿಯ ಕ್ರಾಂತಿಗೂ ಇದು ಪೋಷಕವಾಯಿತು. ಜನರು ಹೆಚ್ಚು ಸಂಖ್ಯೆಯಲ್ಲಿ ಪಟ್ಟಣಗಳಿಗೆ ವಲಸೆ ಹೋದುದರಿಂದ ಕೃಷಿರಂಗದಲ್ಲಿ ದುಡಿಯುವವರ ಸಂಖ್ಯೆ ಕಡಿಮೆಯಾಯಿತು. ಬೃಹದ್ಗಾತ್ರದಲ್ಲಿ ಕೃಷಿಕಾರ್ಯ ನಡೆಸಲು ಅಗತ್ಯವಾದ ಯಂತ್ರೋಪಕರಣಗಳು ಬಂದವು. ಕಾರ್ಖಾನೆಗಳಲ್ಲಿ ನಡೆಯುತ್ತಿದ್ದ ಭೂರಿ ಉತ್ಪಾದನೆಗೆ ಅಗತ್ಯವಾದ ಕಚ್ಚಾಸಾಮಗ್ರಿಗಳ ಮತ್ತು ಪಟ್ಟಣಗಳ ಜನಕ್ಕೆ ಬೇಕಾದ ಆಹಾರಪದಾರ್ಥಗಳ ಅಧಿಕೋತ್ಪಾದನೆಯ ಆವಶ್ಯಕತೆಯಿಂದಾಗಿ ಕೃಷಿ ಕೂಡ ಒಂದು ಉದ್ಯಮವಾಗಿ ಬೆಳೆಯಿತು. ಕಚ್ಚಾಸಾಮಗ್ರಿಗಳನ್ನೂ ಉತ್ಪಾದಿತ ವಸ್ತುಗಳನ್ನೂ ದೂರ ದೂರ ಶೀಘ್ರವಾಗಿ ಸಾಗಿಸಬೇಕಾಗಿ ಬಂದುದರಿಂದ ಸಾರಿಗೆಯಲ್ಲಿ ಕ್ರಾಂತಿ ಉಂಟಾಯಿತು. ಬೆಳೆಯುತ್ತಿದ್ದ ಮಾರುಕಟ್ಟೆಯ ಫಲವಾಗಿ ಇಡೀ ವಾಣಿಜ್ಯ ವ್ಯವಸ್ಥೆಯಲ್ಲೇ ಮೂಲಭೂತ ವ್ಯತ್ಯಾಸಗಳಾದುವು. 18 ನೆಯ ಶತಮಾನದ ಕೊನೆಯ ಭಾಗದಲ್ಲಿ ಹಾಗೂ 19 ನೆಯ ಶತಮಾನದ ಪ್ರಾರಂಭದಲ್ಲಿ ಇಂಗ್ಲೆಂಡಿನ ಪ್ರಜಾಸಂಖ್ಯೆ ಬೆಳೆಯುತ್ತಿತ್ತು. ಆರ್ಥಿಕ ಚಿಂತಕರು ನಿರಾಶಾವಾದದ ಸಿದ್ಧಾಂತಗಳನ್ನು ಮಂಡಿಸುತ್ತಿದ್ದರು. ಆಗ ಅಸ್ತಿತ್ವಕ್ಕೆ ಬಂದ ಕಾರ್ಖಾನೆ ವ್ಯವಸ್ಥೆ ಒಂದು ಕಡೆ ಉದ್ಯೋಗ ಸೃಷ್ಟಿಯನ್ನೂ ಮತ್ತೊಂದು ಕಡೆ ಕೃಷಿರಂಗದಲ್ಲಿಯ ಉತ್ಪಾದನೆಯ ಹೆಚ್ಚಳಕ್ಕೆ ದಾರಿಯನ್ನೂ ಮಾಡಿಕೊಟ್ಟು ಆರ್ಥಿಕ ಬೆಳೆವಣಿಗೆಯ ಹಾದಿಯನ್ನು ಸುಗಮ ಮಾಡಿತು.

ಕಾರ್ಖಾನೆ ವ್ಯವಸ್ಥೆ ಕಾಲಕ್ರಮದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮತ್ತೊಂದು ಗಮನಾರ್ಹವಾದ ಸಾಮಾಜಿಕ ಪರಿಣಾಮವನ್ನುಂಟುಮಾಡಿತು. ಪುರುಷರಂತೆ ಸ್ತ್ರೀಯರೂ ಕಾರ್ಖಾನೆಗಳಲ್ಲಿ ದುಡಿಯತೊಡಗಿದ್ದರಿಂದ ಕುಟುಂಬದ ಮೌಲ್ಯಗಳಲ್ಲಿ ವ್ಯತ್ಯಾಸವುಂಟಾಯಿತು. ಜೀವನಕ್ರಮದಲ್ಲಿ ಅಗಾಧ ಪರಿವರ್ತನೆಗಳಾದುವು.

ಈ ವ್ಯವಸ್ಥೆಯಲ್ಲಿ ದುಷ್ಪರಿಣಾಮಗಳೂ ಇಲ್ಲದಿಲ್ಲ. ಕಾರ್ಮಿಕವರ್ಗ ಮತ್ತು ಬಂಡವಾಳವರ್ಗ ಇವೆರಡೂ ಪರಸ್ಪರ ಭಿನ್ನ ಹಿತಾಸಕ್ತಿಗಳೆಂಬಂತೆ ಇವುಗಳ ನಡುವಣ ಅಂತರ ಬೆಳೆಯಿತು. ಹಿಂದಿನ ವ್ಯವಸ್ಥೆಯಲ್ಲಿ ಉತ್ಪಾದನೆಯ ಘಟಕದ ಯಜಮಾನನೂ ಕಾರ್ಮಿಕನಾಗಿ ತನ್ನ ಅಧೀನರೊಡನೆ ಕೆಲಸ ಮಾಡುತ್ತಿದ್ದ. ಅವರ ಹಿತಾಸಕ್ತಿಗಳ ರಕ್ಷಣೆ ತನ್ನ ಕರ್ತವ್ಯವೆಂದೇ ಅವನು ಸಾಮಾನ್ಯವಾಗಿ ಭಾವಿಸಿದ್ದ. ಆದರೆ ಕಾರ್ಖಾನೆ ವ್ಯವಸ್ಥೆಯಲ್ಲಿ ಇವರಿಬ್ಬರ ನಡುವೆ ಒಂದು ಬೃಹದ್ರೇಖೆಯನ್ನು ಎಳೆಯಲಾಯಿತು. ಮಾಲೀಕ ಉತ್ಪಾದನೆಗೆ ಅಗತ್ಯವಾದ ಎಲ್ಲ ಸಾಧನ ಸಂಪತ್ತುಗಳನ್ನೂ ಒದಗಿಸಿದರೆ ಕಾರ್ಮಿಕ ತನ್ನ ದೇಹಶ್ರಮವನ್ನು ಮಾರಿ ವಸ್ತುಗಳನ್ನು ಉತ್ಪಾದಿಸುವುದು ಆಚರಣೆಗೆ ಬಂತು. ವರ್ಗಹೋರಾಟ ತೀವ್ರವಾದ್ದು ಕಾರ್ಖಾನೆ ವ್ಯವಸ್ಥೆಯಿಂದಲೇ. ಕಾರ್ಖಾನೆ ವ್ಯವಸ್ಥೆಯ ಆರಂಭಕಾಲದಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ಕಾರ್ಮಿಕರ ಶೋಷಣೆ ಮೇರೆ ಮೀರಿ ಬೆಳೆದಿತ್ತು. ಅವರ ಕೆಲಸದ ವೇಳೆಗೆ ಮಿತಿಯೇ ಇರಲಿಲ್ಲ. ಹೆಂಗಸರು ಮಕ್ಕಳನ್ನೂ ಅತಿಯಾಗಿ ದುಡಿಸಲಾಗುತ್ತಿತ್ತು. ಪ್ರತಿಯೊಬ್ಬ ವ್ಯಕ್ತಿಗೂ ತನಗೆ ತೋರಿದಂತೆ ಕರಾರು ಮಾಡಿಕೊಳ್ಳುವ ಹಕ್ಕುಂಟೆಂಬ ತತ್ತ್ವದ ಅತಿರೇಕದ ಅನ್ವಯದಿಂದಾಗಿ ಕಾರ್ಖಾನೆ ವ್ಯವಸ್ಥೆ ಸಾಮೂಹಿಕ ಸಂಕಟದ ಸಂಕೇತವಾಗಿ ಪರಿಣಮಿಸಿತ್ತು. ನಿರುದ್ಯೋಗ ಅಧಿಕವಾಗಿತ್ತು. ಯಂತ್ರಶಕ್ತಿ ಮಾನವಶ್ರಮವನ್ನು ತೀವ್ರವಾಗಿ ಅನಗತ್ಯವನ್ನಾಗಿ ಮಾಡಬಹುದೇನೋ ಎನ್ನುವ ಶಂಕೆ ಇದರ ಜೊತೆಯಲ್ಲಿಯೇ ಮೂಡಿತು. ಕಾರ್ಖಾನೆ ವ್ಯವಸ್ಥೆಯ ಆಗಮನದೊಂದಿಗೆ ಬಂದ ಈ ಸಂಕಟಗಳನ್ನು ನಿವಾರಿಸಲು ಸರ್ಕಾರಗಳು ತಮ್ಮ ನಿರ್ಲಿಪ್ತತೆಯನ್ನು ತ್ಯಾಗಮಾಡಿ, ಕಾನೂನುಗಳ ಮೂಲಕ ಕಾರ್ಮಿಕರ ಹಿತಗಳನ್ನು ರಕ್ಷಿಸಬೇಕಾಯಿತು.

ಉತ್ಪಾದನೆ ಸುತ್ತುಬಳಸಿನದಾದ್ದು ಕಾರ್ಖಾನೆ ವ್ಯವಸ್ಥೆಯ ಒಂದು ಮುಖ್ಯ ಪರಿಣಾಮ. ಪದಾರ್ಥದ ಉತ್ಪಾದನೆಯ ಕಾರ್ಯದಲ್ಲಿ ತೊಡಗುವುದಕ್ಕೂ ಅದು ಕಾರ್ಖಾನೆಯಿಂದ ಹೊರಬಿದ್ದು ಅನುಭೋಗಿಯ ಕೈ ಸೇರುವುದಕ್ಕೂ ನಡುವಣ ಕಾಲಾವಧಿ ಬಲು ದೊಡ್ಡದಾಗುತ್ತ ಬಂತು. ಪೂರ್ವಯೋಜನೆಯಿಲ್ಲದ ಉತ್ಪಾದನ ಕಾರ್ಯದಿಂದಾಗಿ ಆಗಿಂದಾಗ್ಗೆ ಬೇಡಿಕೆ ಮತ್ತು ಸರಬರಾಯಿಗಳ ಸಮತೋಲ ತಪ್ಪಿ ಆರ್ಥಿಕತೆಯೇ ಅಸ್ವಸ್ಥವಾದ ಸಂದರ್ಭಗಳುಂಟು, ಬೆಲೆಗಳ ಕುಸಿತ, ಉತ್ಪಾದನೆಯ ಕಡಿತ ಮತ್ತು ಸಾಮೂಹಿಕ ನಿರುದ್ಯೋಗಗಳು ಪದೇ ಪದೇ ಸಂಭವಿಸಿದುವು. ಆದರೆ ಇದು ಕಾರ್ಖಾನೆ ವ್ಯವಸ್ಥೆಯ ದೋಷವೆನ್ನುವುದಕ್ಕಿಂತ, ಕ್ರಾಂತಿಕಾರಿ ಉತ್ಪಾದನ ವಿಧಾನಗಳಿಗೆ ತಕ್ಕಂತೆ ಅರ್ಥವ್ಯವಸ್ಥೆಯನ್ನು ಹೊಂದಿಸಿಕೊಳ್ಳುವ ಕಾರ್ಯ ನಡೆಯದಿದ್ದುದರ ದ್ಯೋತಕವೆನ್ನಬೇಕು.

ಇದು ಪ್ರಾರಂಭವಾದಾಗ ಉತ್ಪಾದನೆಯ ಎಲ್ಲ ಘಟ್ಟಗಳೂ ಒಂದೇ ಕಡೆ ಕೇಂದ್ರೀಕೃತವಾಗಿ, ಉತ್ಪಾದನೆ ಒಂದೇ ಸೂರಿನ ಕೆಳಗೆ ನಡೆಯುವುದು ಸಾಮಾನ್ಯವಾಗಿತ್ತು. ಆದರೆ ಇಂದು ಇಂಥ ವ್ಯವಸ್ಥೆ ಸಹ ತೀವ್ರವಾದ ಬದಲಾವಣೆಗಳಿಗೆ ಒಳಗಾಗಿದೆ. ಈಗ ಉತ್ಪಾದನೆಯ ವಿವಿಧ ಘಟ್ಟಗಳು ಬೇರೆ ಬೇರೆ ಪ್ರದೇಶಗಳಲ್ಲಿ ನಡೆಯುತ್ತವೆ. ಇದು ಮಿತವ್ಯಯದ ದೃಷ್ಟಿಯಿಂದ ಬಹಳ ಲಾಭದಾಯಕವೆಂದು ಕಂಡುಬಂದಿದೆ. ಆದ್ದರಿಂದ ಇಂದಿನ ಕಾರ್ಖಾನೆ ಇಡೀ ಉತ್ಪಾದನ ವ್ಯವಸ್ಥೆಯ ಒಂದು ಅಂಗ. ತನ್ನ ಪಾಲಿನ ಉತ್ಪಾದನೆಯನ್ನು ಅತ್ಯಂತ ನಿಖರವಾಗಿ, ವೈಜ್ಞಾನಿಕವಾಗಿ ಮಾಡುವುದು ಸರ್ವೇಸಾಮಾನ್ಯವಾಗಿದೆ. ಎರಡನೆಯ ಮಹಾಯುದ್ಧದ ಬಳಿಕ ಕಾರ್ಖಾನೆಗಳ ಸ್ವರೂಪದಲ್ಲಿ ಸಹ ಬಹಳ ಬದಲಾವಣೆಗಳಾಗಿವೆ. ಸ್ವಯಂಚಾಲಿತ ಯಂತ್ರಗಳ ಬಳಕೆ, ಹೆಚ್ಚು ವೈಜ್ಞಾನಿಕ ರೀತಿಯ ಉತ್ಪಾದನೆ, ಆದರ್ಶರೂಪದ ಸಂಘಟನೆ–ಇವು ಈ ಬದಲಾವಣೆಗಳಲ್ಲಿ ಮುಖ್ಯವಾದವು.

ಕಾರ್ಖಾನೆಗಳು ದಿಢೀರನೆ ಕಾಣಿಸಿಕೊಂಡವಲ್ಲ. ಯುದ್ಧ ಸಲಕರಣೆಗಳನ್ನು ತಯಾರಿಸಲು ರಥಗಳನ್ನು, ಸಾರೋಟುಗಳನ್ನು, ಪ್ರಾಣಿಗಳು ಎಳೆಯುವ ಗಾಡಿಗಳನ್ನು, ವ್ಯವಸಾಯೋಪಕರಣಗಳನ್ನೂ ತಯಾರಿಸಲು ಪ್ರಾಚೀನ ಭಾರತದಲ್ಲಿ ಕಾರ್ಖಾನೆಗಳಿದ್ದವು.

ದೋಣಿ, ಹಡಗು ನಿರ್ಮಾಣ, ಬಟ್ಟೆ ನೇಯ್ಗೆ, ಬಣ್ಣಗಳ ತಯಾರಿಕೆ ಮೊದಲಾದವುಗಳು ಕಾರ್ಖಾನೆಗಳಿಂದಲೇ ನಡೆಯುತ್ತಿದ್ದವು. ಆದರೆ ಅವೆಲ್ಲ ಮಾನವ ಶಕ್ತಿ ಚಾಲಿತವಾದದ್ದರಿಂದ ಅವಕ್ಕೆ ಆಧುನಿಕ ಕಾರ್ಖಾನೆಗಳ ಸ್ವರೂಪ ಬಂದಿರಲಿಲ್ಲ. ಪಾಶ್ಚಾತ್ಯ ದೇಶಗಳ ವೈಜ್ಞಾನಿಕ ಆವಿಷ್ಕಾರಗಳು ಭಾರತವೂ ಸೇರಿದಂತೆ ಪ್ರಪಂಚದ ಎಲ್ಲ ಭಾಗಗಳಲ್ಲೂ ಆಧುನಿಕ ಕಾರ್ಖಾನೆಗಳ ಹುಟ್ಟಿಗೆ ಪ್ರೇರಕವಾದವು. ಯುದ್ಧೋಪಕರಣಗಳು, ವಾಹನಗಳು, ಉಡುಪುಗಳು, ಲೋಹ ಯಂತ್ರಗಳ ತಯಾರಿಕೆಗೆ ಬೃಹತ್ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದವು.

ಕಾರ್ಖಾನೆ ವ್ಯವಸ್ಥೆ ಸರ್ವದಾ ಪರಿವರ್ತನ ಸ್ವರೂಪವುಳ್ಳದ್ದು. ಉತ್ಪಾದನ ಕಾರ್ಯಕ್ಕೆ ಒದಗಿ ಬರುತ್ತಿರುವ ಹೊಸಹೊಸ ಉಪಜ್ಞೆಗಳೂ ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳೂ ಅದರ ಈ ಗುಣಕ್ಕೆ ಕಾರಣ. ತಾಂತ್ರಿಕತೆ ಹೆಚ್ಚಿದಂತೆಲ್ಲ ಅವುಗಳ ಸ್ವರೂಪ ವೇಗವಾಗಿ ಮಾರ್ಪಾಡಾಗುತ್ತಿದೆ. (ಸಿ.ಕೆ.ಆರ್.)

**ಕಾರ್ಟಿಸೋನ್ :** ಒಂದು ಚೋದನಿಕ. ಮೂತ್ರಜನಕಾಂಗಗಳ ಮೇಲೆ ಅಂಟಿಕೊಂಡಿರುವ ನಿರ್ನಾಳಗ್ರಂಥಿ (ಅಡ್ರಿನಲ್ ಗ್ಲಾಂಡ್) ಇದನ್ನು ಉತ್ಪಾದಿಸುತ್ತದೆ. ಇದರ ರಾಸಾಯನಿಕ ರಚನೆ ಹೀಗಿದೆ:




17. ಹೈಡ್ರಾಕ್ಸಿ–11 ಡೀ ಹೈಡ್ರೋಕಾರ್ಟಿಕೋಸ್ಟಿರೋನ್

ದೇಹದ ಮೇಲೆ ಕಾರ್ಟಿಸೋನ್ ಬಹುಬಗೆಯ ಪರಿಣಾಮಗಳನ್ನುಂಟುಮಾಡುತ್ತದೆ. ರಕ್ತದಲ್ಲಿ ಸಕ್ಕರೆ (ಗ್ಲೂಕೋಸ್) ಮಟ್ಟವನ್ನು ಏರಿಸುವಿಕೆ ಇದರ ಅಸಂಖ್ಯಾತ ಪರಿಣಾಮಗಳಲ್ಲೊಂದು. ಸಸಾರಜನಕಗಳನ್ನು ಸಕ್ಕರೆಯನ್ನಾಗಿ ಪರಿವರ್ತನೆಗೊಳಿಸುವ ಕ್ರಿಯೆಗಳನ್ನು ಪ್ರಚೋದಿಸುವುದರ ಮೂಲಕ ಕಾರ್ಟಿಸೋನ್ ಭಾಗಶಃ ರಕ್ತದಲ್ಲಿ ಗ್ಲೂಕೋಸ್ ಮಟ್ಟವನ್ನು ಏರಿಸುತ್ತದೆ. ಚಿಕಿತ್ಸಾದೃಷ್ಟಿಯಿಂದ ಕಾರ್ಟಿಸೋನನ್ನು ಸಂಧಿವಾತ ರೋಗವನ್ನು ಹತೋಟಿಗೆ ತರಲು ಬಹಳವಾಗಿ ಉಪಯೋಗಿಸುತ್ತಾರೆ. ಕಣ್ಣಿನ ಉರಿಯೂತ ಗಾಯಗಳ ಚಿಕಿತ್ಸೆಯಲ್ಲಿ ಇದರ ಉಪಯೋಗ ವಿಶೇಷ ಮಹತ್ತ್ವ ಪಡೆದಿದೆ. ಹಲವು ವೇಳೆ ಕುರುಡುತನಕ್ಕೆ ಕಾರಣವಾಗುವ ಗಾಯದ ಕಲೆಗಳಿಲ್ಲದೆಯೇ ಕಣ್ಣಿನ ಉರಿಯೂತವನ್ನು ಗುಣಪಡಿಸುತ್ತದೆ. ಇದನ್ನು ತೀಕ್ಷ್ಣ ಲ್ಯೂಕೀಮಿಯಾವನ್ನು ಗುಣಪಡಿಸಲು ಉಪಯೋಗಿಸುತ್ತಾರೆ (ಹೆಚ್ಚಾಗಿ ಮಕ್ಕಳಲ್ಲಿ ಲ್ಯೂಕೀಮಿಯಾವನು ತಡೆಗಟ್ಟಲು). ಇದು ಪರಿಣಾಮಕಾರಿಯಾಗಿ ಅಸಾಮಾನ್ಯ ಜೀವಕಣಗಳ ಸಂಖ್ಯಾಭಿವೃದ್ಧಿಯನ್ನು ತಡೆಗಟ್ಟುವುದರ ಮೂಲಕ ರೋಗವನ್ನು ಸಂಪೂರ್ಣ ಗುಣಪಡಿಸದಿದ್ದರೂ ತಗ್ಗಿಸಲು ಸಹಕಾರಿಯಾಗುತ್ತದೆ. ಸ್ವಾಭಾವಿಕವಾಗಿ ದೊರೆಯುವ ಕಾರ್ಟಿಸೋನನ್ನು ಈಚೆಗೆ ಅಷ್ಟಾಗಿ ಔಷಧವಸ್ತುವಾಗಿ ಬಳಸುವುದಿಲ್ಲ. ಬದಲು ಸಿಸಾಲ್ ಎಂಬ ಪದಾರ್ಥದ ತಯಾರಿಕೆಯಲ್ಲಿ ಉಪಪದಾರ್ಥವಾಗಿ ಬರುವ ವಸ್ತುವಿನಿಂದ ಕೃತಕವಾಗಿ ಸಂಯೋಜಿಸಲ್ಪಡುವ ಚೋದನಿಕವನ್ನು ಬಳಸುತ್ತಾರೆ.

ಶರ್ಕರಪಿಷ್ಟ, ಮೇದಸ್ಸು ಮತ್ತು ಸಸಾರಜನಕಗಳ ಚಯಾಪಚಯ ಕ್ರಿಯೆಯ (ಮೆಟಬಾಲಿಸಮ್) ಮೇಲೆ ಕಾರ್ಟಿಸೋನ್ ಪರಿಣಾಮವನ್ನುಂಟುಮಾಡುತ್ತದೆ. ಪಿತ್ತಜನಕಾಂಗದಲ್ಲಿ ಗ್ಲೈಕೋಜೆನ್ ಶೇಖರಣೆಯನ್ನು ಹೆಚ್ಚಿಸುತ್ತದೆ ಮತ್ತು ಸಸಾರಜನಕಗಳ ವಿಭಜನೆಯನ್ನು ಹೆಚ್ಚಿಸುತ್ತದೆ. ದೇಹ ಬಳಸಲು ಉಪಯುಕ್ತವಾದ ಸಸಾರಜನಕದ ಸರಳ ರೂಪಗಳು ಈ ವಿಭಜನೆಯಿಂದ ಉಂಟಾಗುತ್ತವೆ. ಅನೇಕ ತೆರನಾದ ಕಾಯಿಲೆಗಳಿಗೆ ಸಂಬಂಧಿಸಿದ ಉರಿಯೂತ ಬರಿಸುವ ಕಾರ್ಯವಿಧಾನವನ್ನು ಕಾರ್ಟಿಸೋನ್ ತಡೆಗಟ್ಟುತ್ತದೆ. (ಪಿ.ಎಸ್.; ಎಸ್.ಎಂ.ಎಸ್.)

**ಕಾರ್ಟೀಸಿಯನಿಸಂ :** ಫ್ರೆಂಚ್ ದೇಶದ ಡೇಕಾರ್ಟ್ (1596–1650) ಎಂಬ ದಾರ್ಶನಿಕನ ಸಿದ್ಧಾಂತಕ್ಕೆ ಈ ಹೆಸರಿದೆ. ಈತ ಮಹಾ ಗಣಿತಶಾಸ್ತ್ರ ಪಂಡಿತನಾಗಿದ್ದುದಲ್ಲದೆ ಪಾಶ್ಚಾತ್ಯ ತತ್ತ್ವಶಾಸ್ತ್ರದ ಆಧುನಿಕ ಯುಗದ ಪ್ರವರ್ತಕನೂ ಆಗಿದ್ದ. ಮತೀಯ ಕಟ್ಟುಪಾಡನ್ನು ಬಿಟ್ಟು ಸ್ವತಂತ್ರವಾದ ವಿಚಾರಮಾರ್ಗದಿಂದ ತತ್ತ್ವನಿರೂಪಣೆಮಾಡುವ ಕ್ರಾಂತಿಕಾರಕ ಪದ್ಧತಿಯನ್ನು ಈತ ಪ್ರಾರಂಭಿಸಿದ. ಗಣಿತವಿಜ್ಞಾನದಲ್ಲಿರುವಂತೆ ದರ್ಶನದಲ್ಲೂ ಖಚಿತವಾದ ಆಲೋಚನಾಕ್ರಮ ಇರಬೇಕೆಂಬುದು ಇವನ ಮತ. ಸಂಶಯಾಸ್ಪದವಾದ ಭಾವಗಳನ್ನೆಲ್ಲ ತ್ಯಜಿಸಿ ಸಂಶಯರಹಿತವಾದ ಮೂಲತತ್ತ್ವವನ್ನು ಶೋಧಿಸಿ ಅಂಗೀಕರಿಸಬೇಕೆಂದು ಈತ ತನ್ನ ದರ್ಶನದ ಮಾರ್ಗವನ್ನು ರೂಪಿಸಿದ. ಇದನ್ನೇ ಕಾರ್ಟೀಸಿಯನ್ ಕ್ರಮ ಎನ್ನಲಾಗಿದೆ. ಈ ಕ್ರಮದ ತತ್ತ್ವಕ್ಕೆ ಕಾರ್ಟೀಸಿಯನಿಸಂ ಎಂದು ಹೆಸರು. ಸಂಶಯಾತೀತ ಮೂಲ ತತ್ತ್ವವೇ ಆತ್ಮ ಅಥವಾ ಬುದ್ಧಿ ಎಂದು ಡೇಕಾರ್ಟನ ವಾದ. ಸಂಶಯಕ್ಕೂ ಆಧಾರವಾದುದರಿಂದ ಆತ್ಮತತ್ತ್ವವನ್ನು ಸಂಶಯಾತೀತ ವಸ್ತುವೆಂದು ಈತ ಸಾಧಿಸುತ್ತಾನೆ. ನಾನು ಯೋಚಿಸುತ್ತೇನೆ; ಆದುದರಿಂದ ನಾನು ಇದ್ದೇನೆ–ಎಂಬ ಈತನ ವಾದ ಪ್ರಸಿದ್ಧವಾಗಿದೆ. ಇದರ ಆಧಾರದಿಂದ ಅಚೇತನ ಜಗತ್ತು ಮತ್ತು ಈಶ್ವರ ಎಂಬ ಇನ್ನೆರಡು ತತ್ತ್ವಗಳನ್ನು ಡೇಕಾರ್ಟ್ ಸಾಧಿಸುತ್ತಾನೆ. ಚೇತನ ಮತ್ತು ಅಚೇತನಗಳಿಗಿರುವ ವಿಭಿನ್ನತೆಯನ್ನು ವಿಶೇಷವಾಗಿ ಪ್ರತಿಪಾದಿಸುವುದರಿಂದ ಇವನದು ದ್ವೈತ ಪದ್ಧತಿಯಾಗುತ್ತದೆ. ಡೇಕಾರ್ಟ್ ಮೊದಲುಮಾಡಿದ ತತ್ತ್ವವನ್ನು ಬೆಳೆಸಿದವರಿಗೆ ಕಾರ್ಟೀಸಿಯನರೆಂದು ಹೆಸರು. ಇವರಲ್ಲಿ ಮುಖ್ಯರಾದವರು ಜೋನೀಸ್‌ಡಿರಯೆ, ಎಡ್ರಿಯನ್ ಹೆರಿಘರ್ಡ್, ಕ್ರಿಸ್ಟೋಫ್‌ವಿಟ್ಟಿಚ್, ಬಾಲ್ತಸಾರ್ ಬೆಕ್ಕರ್, ಅಲೆಕ್ಸಾಂಡರ್ ರೋಯೆಲ್. ಕಾರ್ಟೀಸಿಯನಿಸಮಿನ ಮುಖ್ಯ ಅಂಶಗಳಿವು.

1 ಗಣಿತಶಾಸ್ತ್ರದ ಮಾರ್ಗವನ್ನು ಅನುಸರಿಸಿ ವಿಶಿಷ್ಟವಾದ ದಾರ್ಶನಿಕ ಆಲೋಚನಾ ಮಾರ್ಗದ ನಿರೂಪಣೆ.

2 ಆತ್ಮ ಅಥವಾ ಬುದ್ಧಿ ಅಸಂದಿಗ್ಧವೂ ಅನಿರಾಕರಣೀಯವೂ ಆದ ಮೂಲತತ್ತ್ವವೆಂಬ ವಾದ

3 ಚೇತನಾಚೇತನಗಳಿಗೆ ಅತ್ಯಂತ ವೈಷಮ್ಯವನ್ನು ಸಾಧಿಸುವುದು. **(ನೋಡಿ– ಆಧುನಿಕ ಪಾಶ್ಚಾತ್ಯತತ್ತ್ವದ ಮುನ್ನಡೆ)** (ಎಸ್.ಎಸ್.ಆರ್.)

**ಕಾರ್ಟೆಸ್ ಹೆರ್ನಾಂಡೊ :** 1485–1547. ಮೆಕ್ಸಿಕೋ ದೇಶದ ವಿಜಯಿ. ಸ್ಪೇನ್ ದೇಶದ ಮೆಡೆಲ್ಲಿನ್ ಎಂಬ ಹಳ್ಳಿಯಲ್ಲಿ ಜನಿಸಿದ. 1511ರಲ್ಲಿ ವೇಲಸ್ಕ್ವೆಜನ ನೇತೃತ್ವದಲ್ಲಿ ನಡೆದ ಕ್ಯೂಬ ದಾಳಿಯಲ್ಲಿ ಪ್ರಸಿದ್ಧಿಗೆ ಬಂದ. ವೇಲಸ್ಕ್ವೆಜ್‌ನ ಆದೇಶದಂತೆ 1519 ರಲ್ಲಿ ಮೆಕ್ಸಿಕೋ ವಿಜಯಕ್ಕಾಗಿ ನೌಕೆಯಲ್ಲಿ ಹೊರಟ. ಇವನ ಪ್ರಾಬಲ್ಯದಿಂದ ಭೀತನಾದ ವೇಲಸ್ಕ್ವೆಜ್ ಮೆಕ್ಸಿಕೋ ವಿಜಯದ ಸನ್ನದನ್ನು ರದ್ದುಪಡಿಸಿದ. ಆದರೂ ಆ ಆಜ್ಞೆಯನ್ನು ಉಪೇಕ್ಷಿಸಿ, ಕಾರ್ಟೆಸ್ ಯುಕಟಾನ್ ಪ್ರದೇಶವನ್ನು ತಲುಪಿ ಅಲ್ಲಿನ ನಿವಾಸಿಗಳೊಂದಿಗೆ ಸ್ನೇಹ ಗಳಿಸಿದ. ಅನಂತರ ಟಬಾಸ್ಕೊನಗರವನ್ನು ವಶಪಡಿಸಿಕೊಂಡ. ಅಲ್ಲಿಯ ನಿವಾಸಿಗಳು ಇವನಿಗೆ ಅನೇಕ ಬೆಲೆಬಾಳುವ ವಸ್ತುಗಳನ್ನು ಅರ್ಪಿಸಿದರು. ತರುವಾಯ ಆಜ್ಟೆಕರನ್ನು ಸಂಧಿಸಿದಾಗ ಅವರ ದೊರೆಯಾದ ಮಾಂಟೆಜೂಮನಿಂದ ಇವನಿಗೆ ಕಾಣಿಕೆಗಳು ಬಂದುವು. ವೀರಾಕ್ರೂಝ್ ಪ್ರದೇಶದಲ್ಲಿ ಒಂದು ನಗರವನ್ನು ಸ್ಥಾಪಿಸಿ ಅದಕ್ಕೆ ಸ್ವಯಮಾಡಳಿತದ ಹಕ್ಕನ್ನು ನೀಡಿದ (1519). ಅನಂತರ ಮೆಕ್ಸಿಕೋ ನಗರದತ್ತ ಧಾವಿಸಿದ. ಮಾರ್ಗದಲ್ಲಿ ಟ್ಲಾಕ್ಸಕಲದ ನಿವಾಸಿಗಳು ಮೊದಲಿಗೆ ಇವನೊಂದಿಗೆ ಹೋರಾಡಿದರೂ ಅನಂತರ ಮಾಂಟೆಜೂಮನ ದಬ್ಬಾಳಿಕೆಯನ್ನೆದುರಿಸಲು ಇವನನ್ನು ಕೂಡಿಕೊಂಡರು. ಈ ಮಧ್ಯೆ ಮಾಂಟೆಜೂಮನ ಪಿತೂರಿಯ ವಿಷಯ ತಿಳಿದುಬಂದುದರಿಂದ ಅವನ ಸೈನ್ಯವನ್ನು ಹತಮಾಡಿ ಅವನ ರಾಜಧಾನಿ ಟೆನೊಚ್‌ಟಿಟ್ಲಾನ್ ಮೇಲೆ ನುಗ್ಗಿದ. ಸರೋವರದ ನಡುವೆ ಇದ್ದ ಮರದ ಮೂರು ಸೇತುವೆಗಳ ಮೂಲಕ ಪ್ರವೇಶಿಸಬೇಕಾಗಿದ್ದ ಆ ಸುಂದರ ನಗರದ ಮಹಾದ್ವಾರದಲ್ಲಿ, ತಮ್ಮ ಅಧಿದೇವತೆ ಕ್ವೆಟ್ಜಲ್‌ಕೋಟ್‌ಲ್‌ನೇ ಬಂದಿರುವನೆಂದು ಭೀತರಾದ ಮಾಂಟೆಜೂವ ಮತ್ತು ಅವನ ಪರಿವಾರದವರು ಕಾರ್ಟೆಸನನ್ನು ಭೀತಿಗೌರವಗಳೊಡನೆ ಸ್ವಾಗತಿಸಿದರು. ಮಾಂಟೊಜೂವನನ್ನು ತನ್ನ ಶಿಬಿರದಲ್ಲಿ ವಾಸಿಸುವಂತೆ ನಿರ್ಬಂಧಿಸಿ, ಈತ ಆ ರಾಜ್ಯವನ್ನು ತನ್ನ ಹತೋಟಿಯಲ್ಲಿರಿಸಿಕೊಂಡ. ಆ ವೇಳೆಗೆ ವೇಲಸ್ಕ್ವೆಜ್ ನಿಂದ ಕಳಿಸಲಾದ ಪನ್ ಫಿಲೊ ಡಿ ನರ್ವೆಇಜ್‌ನ ನಾಯಕತ್ವದಲ್ಲಿ ಸ್ಪಾನಿಷ್ ಸೈನ್ಯ ತನ್ನ ವಿರುದ್ಧ ಬಂದ ಸಂಗತಿ ತಿಳಿದುಬಂದುದರಿಂದ, ಕಾರ್ಟೆಸ್ ಅದನ್ನೆದುರಿಸ ಬೇಕಾಯಿತು. ಆ ಕದನದಲ್ಲಿ ಮಾಂಟೆಜೂಮ ಸತ್ತರೂ ಕಾರ್ಟೆಸ್ ಗೆದ್ದು ತನ್ನ ಅಧಿಕಾರವನ್ನು ಸ್ಥಿರಗೊಳಿಸಿಕೊಂಡ, ಅನಂತರ ಸ್ಪೇನ್ ಚಕ್ರವರ್ತಿಯ ಕೃಪೆ ಲಭ್ಯವಾಯಿತು. ಮೆಕ್ಸಿಕೋದಲ್ಲಿ ಈತ ಸ್ಪೇನಿನ ಮಹಾದಂಡನಾಯಕನಾದ. ಕ್ಯಾಲಿಫೋರ್ನಿಯದ ಹಲವು ಪ್ರದೇಶಗಳನ್ನು ವಶಪಡಿಸಿಕೊಂಡು ಅನಂತರ ಸ್ಪೇನಿಗೆ ಹಿಂತಿರುಗಿದ. ಇವನ ಶತ್ರುಗಳ ಪ್ರಭಾವದಿಂದ ಚಕ್ರವರ್ತಿಯ ಕೃಪೆ ಕಳೆದುಕೊಂಡು ತನ್ನ ಜಮೀನ್ದಾರಿಗೆ ಈತ ಮರಳಬೇಕಾಯಿತು. ಕಾರ್ಟೆಸ್ 1547 ರ ಡಿಸೆಂಬರ್ 2 ರಂದು ನಿಧನನಾದ.

ಕಾರ್ಟೆಸ್ ಮೆಕ್ಸಿಕೋದಲ್ಲಿ (ಹೊಸ ಸ್ಪೇನ್) ಕೈಕೊಂಡ ಕಾರ್ಯಗಳಿಂದ ಇವನಿಗೆ ಪ್ರಸಿದ್ಧಿ ದೊರಕಿತು. ದೇಶದ ಭೂಮಿಯನ್ನು ಜನರಲ್ಲಿ ಹಂಚಿದ್ದಲ್ಲದೆ ಗಣಿ ಅಭಿವೃದ್ಧಿಗೆ ಮತ್ತು ವ್ಯವಸಾಯಕ್ಕೆ ಕಾರ್ಟೆಸ್ ಹೆಚ್ಚಿನ ಪ್ರೋತ್ಸಾಹ ನೀಡಿದ. ವಸಾಹತು ಸ್ಥಾಪನೆಯಲ್ಲಿ

ಆಸಕ್ತಿ ವಹಿಸಿದ. ಸೈನ್ಯ ಪಡೆಗಳನ್ನು ಕಳಿಸಿ ಗ್ವಾಟೆಮಾಲ ಮತ್ತು ಹಾಂಡುರಸ್ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡ. (ಬಿ.ಎಸ್.ಪಿ.)

**ಕಾರ್ಟ್‌ರೈಟ್, ಎಡ್ಮಂಡ್ :** 1743–1823. ಇಂಗ್ಲಿಷ್ ಪರಿಶೋಧಕ, ವಿದ್ಯುತ್ ನೇಯ್ಗೆ ಯಂತ್ರವನ್ನು ಪರಿಶೋಧಿಸಿದ ಖ್ಯಾತಿ ಇವನದು. ನಾಟಿಂಗ್‌ಹಾಂಷೈರಿನ ಮಾರ್ನ್‌ಹ್ಯಾಂ ಎಂಬಲ್ಲಿ ಜನಿಸಿದ. ಇವನ ವಿದ್ಯಾಭ್ಯಾಸ ವೇಕ್‌ಫೀಲ್ಡ್ ಗ್ರಾಮರ್ ಶಾಲೆ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ನಡೆಯಿತು. 1779 ರಲ್ಲಿ ಲೀಸೆಸ್ಟರ್‌ಷೈರಿನ ಗೋಡ್‌ಬೈ ಮಾರ್‌ವುಡ್‌ನ ರೆಕ್ಟರ್ ಆಗಿ ಸೇವೆ ಸಲ್ಲಿಸಿದ. ಅನಂತರ ಲಿಂಕನ್ ಕತೀಡ್ರಲ್ಲಿ ಮಠವೇತನ ಪಡೆಯುವ ಕ್ರೈಸ್ತ ಪುರೋಹಿತನಾದ (1786). ಇವನ ಜೀವನದಲ್ಲಿ ಅಕಸ್ಮಾತ್ ಒಂದು ಹೊಸ ತಿರುವುಕಾಣಿಸಿದ್ದು 1784 ರಲ್ಲಿ. ನೇಯ್ಗೆ ಯಂತ್ರಕ್ಕೆ ವಿದ್ಯುತ್ ಸೌಲಭ್ಯವನ್ನು ಒದಗಿಸುವಲ್ಲಿ ಈತನ ಒಂದು ಪ್ರಯತ್ನವಿಲ್ಲದೆ ಹೋಗಿದ್ದ ಪಕ್ಷಕ್ಕೆ ಬಾಳಿನುದ್ದಕ್ಕೂ ಕ್ರೈಸ್ತ ಪುರೋಹಿತನಾಗಿಯೇ ಈತ ಉಳಿಯುತ್ತಿದ್ದ. ತನ್ನ ಪ್ರಯತ್ನದಲ್ಲಿ ಸಫಲತೆ ಕಂಡುಬಂದು ಕೊನೆಗೆ ವಿದ್ಯುತ್ ನೇಯ್ಗೆ ಯಂತ್ರವನ್ನು ರಚಿಸಿದ. ಈ ಯಂತ್ರಕ್ಕೆ ಮೊಟ್ಟಮೊದಲು 1785 ರಲ್ಲಿ ಸ್ವಾಮ್ಯವನ್ನು ಪಡೆದ. ಯಂತ್ರವನ್ನು ಅನೇಕ ರೀತಿಗಳಲ್ಲಿ ಈತ ಸುಧಾರಿಸಿದ ಕಾರಣ ಮತ್ತೆ 1786 ಮತ್ತು 1787 ರಲ್ಲಿ ಪುನಃ ಹೊಸ ಸ್ವಾಮ್ಯವನ್ನುಗಳಿಸಿ ಕ್ರಮೇಣ ಅದನ್ನು ಆಧುನಿಕ ವಿದ್ಯುತ್ ನೇಯ್ಗೆ ಯಂತ್ರವನ್ನಾಗಿಸಿದ ಡೋನ್‌ಕಾಸ್ಟರಿಗೆ ಬಂದು ಅಲ್ಲಿ ನೂಲುವ ಮತ್ತು ನೇಯುವ ಕಾರ್ಖಾನೆಯೊಂದನ್ನು ಪ್ರಾರಂಭಿಸಿದ (1785). ಹತ್ತಿ ಮತ್ತು ಉಣ್ಣೆ ಗಿರಣಿಗಳಿಗೆ ಈತನ ಯಂತ್ರ ಬಲು ಲಾಭದಾಯಕವಾಗಿ ಕಾಣಿಸಿದರೂ ಮೊದಮೊದಲಿಗೆ ತಯಾರಕರು ಹಾಗೂ ಕಾರ್ಮಿಕರಿಂದ ಪ್ರತಿಭಟನೆ ಇತ್ತು. ವಿನಿಯೋಗಿಸಿದ ಹಣ ಹೆಚ್ಚಾಗಿ ಕೊನೆಗೆ ಈ ಕಾರ್ಖಾನೆಯನ್ನು ಸಾಲಗಾರರ ವಶಕ್ಕೆ ಒಪ್ಪಿಸಬೇಕಾಯಿತು. ಈತನ ಅನೇಕ ಯಂತ್ರಗಳಿದ್ದ ಮ್ಯಾಂಚೆಸ್ಟರಿನಲ್ಲಿದ್ದ ಒಂದು ಗಿರಣಿ ಬೆಂಕಿಯ ಅಪಘಾತಕ್ಕೀಡಾಗಿ ಪೂರ್ಣವಾಗಿ ನಾಶಹೊಂದಿತು. ಅನಂತರ ಉಣ್ಣೆಯನ್ನು ಎಕ್ಕುವ ಯಂತ್ರಕ್ಕೆ ಈತ ಸ್ವಾಮ್ಯವನ್ನು 1789 ರಲ್ಲಿ ಗಳಿಸಿಕೊಂಡ. ಈ ಯಂತ್ರವನ್ನು ಸುಧಾರಿಸಿ ಮತ್ತೆ ಕ್ರಮವಾಗಿ 1790 ಮತ್ತು 1792 ರಲ್ಲಿ ಪುನಃ ಸ್ವಾಮ್ಯವನ್ನು ಪಡೆದುಕೊಂಡ. ಪೂರೈಸಿದ ಮಾಲುಗಳ ತಯಾರಿಕೆಯ ವೆಚ್ಚದಲ್ಲಿ ಈ ಯಂತ್ರ ಹೆಚ್ಚು ಮಿತವ್ಯಯ ಸಾಧಿಸಿತು. ಆದರೆ ಸಮಗ್ರ ಆರ್ಥಿಕ ಪರಿಸ್ಥಿತಿ ವಿದ್ಯುತ್ ನೇಯ್ಗೆ ಯಂತ್ರ ಸಾಧಿಸಿದ ಆರ್ಥಿಕ ಪರಿಸ್ಥಿತಿಗಿಂತ ಉತ್ತಮವಾಗಲಿಲ್ಲ. ಈ ದುಬಾರಿ ಖರ್ಚಿನ ಪರಿಸ್ಥಿತಿಯನ್ನು ಗಮನಿಸಿದ ಪಾರ್ಲಿಮೆಂಟ್ ಕಾರ್ಟ್‌ರೈಟನಿಗೆ ಯಂತ್ರ ಸ್ವಾಮ್ಯವನ್ನು 14 ವರ್ಷಗಳ ವರೆಗೆ ವಿಸ್ತರಿಸಿತು. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ.

ಯಂತ್ರ ರಚಿಸಿದ 25 ವರ್ಷಗಳ ತರುವಾಯವೂ ಬ್ರಿಟನಿನಲ್ಲಿ ಕೇವಲ 2,400 ವಿದ್ಯುತ್ ಯಂತ್ರಗಳಿದ್ದುವು. ಕ್ರಮೇಣ ಈ ಸಂಖ್ಯೆ ಬೆಳೆಯಿತು. ವಿದ್ಯುತ್ ನೇಯ್ಗೆ ಯಂತ್ರಕ್ಕೆ ನೀಡಿದ ಎಲ್ಲ ಸೌಲಭ್ಯಗಳನ್ನೂ ಈ ಯಂತ್ರಕ್ಕೆ ಒದಗಿಸಿಕೊಡಬೇಕೆಂಬ ಮನವಿಯೊಂದನ್ನು ಸರ್ಕಾರಕ್ಕೆ ಸಲ್ಲಿಸಿದ ಕಾರಣ (1807) ಅಲ್ಲಿನ ಕಾಮನ್ಸ್ ಸಭೆ 10,000 ಡಾಲರ್ ಧನಸಹಾಯವನ್ನು ಮಂಜೂರು ಮಾಡಿತು (1809). ಸೆವೆನ್‌ಓಕ್ಸ್ ಹತ್ತಿರದ ಹಾಲೆಂಡರಿನಲ್ಲಿ ಒಂದು ಬೇಸಾಯ ಭೂಮಿಯನ್ನು ಕಾರ್ಟ್‌ರೈಟ್ ಕೊಂಡುಕೊಂಡು ತನ್ನ ಜೀವನದ ಬಹುತೇಕ ವರ್ಷಗಳನ್ನು ಅಲ್ಲಿಯೇ ಕಳೆದ. ಸಸಿಕ್ಸಿನ ಹೇಸ್ಟಿಂಗ್‌ನಲ್ಲಿ ಈತ ಕಾಲವಾದ. ಈತ ರಚಿಸಿದ ಇತರ ಯಂತ್ರಗಳಲ್ಲಿ ಹಗ್ಗ ತಯಾರಿಸುವ ಯಂತ್ರ (ಕಾರ್ಡಲಿಯರ್ ಮಷಿನ್, 1792), ನೀರಿನ ಬದಲು ಆಲ್ಕೊಹಾಲಿನಿಂದ ನಡೆಯುವ ಉಗಿಯಂತ್ರ (1797) ಮತ್ತು ಅನೇಕ ಕೃಷಿ ಉಪಕರಣಗಳು ಇತ್ಯಾದಿ ಸೇರಿವೆ. *

**ಕಾರ್ಟ್‌ರೈಟ್, ವಿಲಿಯಂ :** 1611–1643. ಪಾದ್ರಿ ಮತ್ತು ಆಂಗ್ಲ ನಾಟಕಕಾರ. ವಿದ್ಯಾಭ್ಯಾಸ ವೆಸ್ಟ್‌ಮಿನಿಸ್ಟರ್ ಶಾಲೆ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ. ಬೆನ್ ಜಾನ್ಸನ್, ಹೆನ್ರಿ ವಾಹನ್, ಐಸಾಕ್ ವಾಲ್ಟನ್–ಇವರ ಸ್ನೇಹಿತನೀತ. ಕೆಲವು ಉತ್ತಮ ಕವನಗಳು ಹಾಗೂ ನಾಟಕಗಳನ್ನು ಬರೆದಿದ್ದಾನೆ. ವಿದ್ವಾಂಸ, ವಿನೋದ ಪ್ರಿಯ ಮತ್ತು ಉತ್ತಮ ನಾಟಕಕಾರನೆಂದು ತನ್ನ ಸಮಕಾಲೀನರ ಹೊಗಳಿಕೆಗೆ ಪಾತ್ರನಾಗಿದ್ದ. ದಿ ರಾಯಲ್ ಸ್ಲೇವ್, ದಿ ಸೀಜ್, ದಿ ಲೇಡಿ ಎರಂಟ್ ಈತನ ಉತ್ತಮ ನಾಟಕಗಳು. (ಎನ್.ಎಸ್.ಎಲ್.)

**ಕಾರ್ಡಿಲ್ಲೆರಾ :** ಇದು ಪ್ರಮುಖ ಪರ್ವತ ಶ್ರೇಣಿಗಳ ಒಂದು ಗುಂಪು. ಸಾಮಾನ್ಯವಾಗಿ ಖಂಡದ ಒಂದು ಭಾಗ. ಇಂಥ ಪ್ರದೇಶಗಳು ಹಲವಾರು ಪ್ರಸ್ಥಭೂಮಿಗಳನ್ನೂ ಸರೋವರಗಳನ್ನೂ ಕಣಿವೆಗಳನ್ನೂ ಅನೇಕ ಪರ್ವತಶ್ರೇಣಿಗಳನ್ನೂ ಒಳಗೊಂಡಿರುತ್ತವೆ.

ಕಾರ್ಡಿಲ್ಲೆರಾದ ವ್ಯಾಪ್ತಿ. ಕಪ್ಪು ಪ್ರದೇಶಗಳು ಕಾರ್ಡಿಲ್ಲೆರಾವನ್ನು ಗುರುತಿಸುತ್ತವೆ

ಉದಾಹರಣೆಗೆ, ಪಶ್ಚಿಮ. ಉತ್ತರ ಅಮೆರಿಕದ ಅಲಾಸ್ಕಾದಿಂದ ಮಧ್ಯಗಿರಿಗಳ ನಡುವಿನ ಸರೋವರಗಳೂ ಕಣಿವೆಗಳೂ ಸೇರಿದಂತೆ ಇರುವ ಪ್ರದೇಶವನ್ನು ಒಂದು ಕಾರ್ಡಿಲ್ಲೆರಾ ಎಂದು ಕರೆಯಬಹುದು. ಭಾರತದ ಉತ್ತರ ಭಾಗದಲ್ಲಿರುವ ಹಿಮಾಲಯವೂ ಒಂದು ಪರ್ವತಶ್ರೇಣಿಗಳ ಗುಂಪು. ಇದು ಸಹ ಹಲವಾರು ಪರ್ವತಶ್ರೇಣಿಗಳನ್ನೂ ಶಿಖರಗಳನ್ನೂ (ಗೌರೀಶಂಕರ, ನಂದಾದೇವಿ ಇತ್ಯಾದಿ) ಸರೋವರಗಳನ್ನೂ (ಮಾನಸ ಸರೋವರ, ನೈನಿತಾಲ್ ಇತ್ಯಾದಿ) ಕಣಿವೆಗಳನ್ನೂ (ಕೈಬರ್, ಬೋಲಾನ್ ಇತ್ಯಾದಿ) ಪ್ರಸ್ಥಭೂಮಿಗಳನ್ನೂ ಒಳಗೊಂಡಿದೆ. ಅಂತೆಯೇ ಇದು ಭಾರತದ ಒಂದು ಪ್ರಮುಖವಾದ ಭಾಗವೂ ಆಗಿದೆ.

ಪ್ರಮುಖ ಭೌಗೋಳಿಕ ಲಕ್ಷಣಗಳಲ್ಲಿ ಕಾರ್ಡಿಲ್ಲೆರಾ ಒಂದು. ಸಾಮಾನ್ಯವಾಗಿ ಭೌಗೋಳಿಕವಾಗಿ ಈ ಪದವನ್ನು ಬಳಸುವರು. ಆದರೆ ಇಂಥ ಪರ್ವತಶ್ರೇಣಿಗಳ ಗುಂಪುಗಳು ಭೂಗರ್ಭಶಾಸ್ತ್ರದ ದೃಷ್ಟಿಯಿಂದ ಸಹ ಮುಖ್ಯವಾದವು. ಇವು ಭೂಮಿಯ ಪ್ರಾಯಸೂಚಕಗಳು. ಪ್ರಾಚೀನ ಕಾಲದ ಇಂಥ ಎಷ್ಟೋ ಪರ್ವತ ಶ್ರೇಣಿಗಳ ಗುಂಪುಗಳು ಶಿಥಿಲೀಕರಣಕ್ಕೊಳಗಾಗಿ ಇಂದು ಅವುಗಳ ಅವಶೇಷಗಳು ಮಾತ್ರ ಜಗತ್ತಿನ ಎಲ್ಲ ಭಾಗಗಳಲ್ಲೂ ಕಾಣುತ್ತಿವೆ. ಈಗ ನಮಗೆ ಕಾಣುತ್ತಿರುವ ಎಲ್ಲ ಮಹಾ ಪರ್ವತಶ್ರೇಣಿಯ ಅವುಗಳ ಗುಂಪುಗಳು ತೀರ ಈಚೆಗೆ ಉದ್ಭವವಾದವು. ಉದಾಹರಣೆಗೆ ಹಿಮಾಲಯ. ಈ ಪರ್ವತಶ್ರೇಣಿಗಳ ಗುಂಪುಗಳು ಪ್ರಾಚೀನ ಕಾಲದಲ್ಲಾದ ಮಹಾ ಭೂಚಲನೆಗಳನ್ನೂ ಸೂಚಿಸುತ್ತವೆ. ಇಂಥ ಚಲನೆಗಳಿಂದಾಗಿ ಒಂದು ಕಾಲದಲ್ಲಿ ಸ್ವಲ್ಪವೂ ಮಡಿಕೆಗಳಿಲ್ಲದ ಓರೆಯಿಲ್ಲದ ಜಲಜಶಿಲಾ ಪದರುಗಳು ಸುತ್ತುಮುತ್ತಲಿನ ಒತ್ತಡದಿಂದಾಗಿ ಮಡಿಕೆಗಳಿಗೊಳಗಾಗಿ ಇಂದು ಪರ್ವತ ಶ್ರೇಣಿಗಳಾಗಿವೆ. ಸಾಮಾನ್ಯವಾಗಿ ಈ ಪರ್ವತಶ್ರೇಣಿಗಳ ಗುಂಪುಗಳ ಒಳಭಾಗದಲ್ಲಿ ಅಗ್ನಿಶಿಲೆಗಳಿರುತ್ತವೆ. ಹೀಗೆ ಮಡಿಕೆಗಳುಂಟಾದಾಗ ಕೆಲವು ಭಾರಿ ದೊಡ್ಡ ದೊಡ್ಡ ಬಿರುಕುಗಳುಂಟಾಗಿ ಅವುಗಳ ಮೂಲಕ ಶಿಲಾರಸ ಹೊರಕ್ಕೆ ಚಿಮ್ಮಿ ಜ್ವಾಲಾಮುಖಿಗಳುಂಟಾಗುವುವು. ಇಂಥ ಸನ್ನಿವೇಶಗಳನ್ನು ಅನೇಕ ಪರ್ವತಶ್ರೇಣಿಗಳಲ್ಲಿ ಕಾಣಬಹುದು. ಇದರೊಂದಿಗೇ ಅನೇಕ ಜ್ವಾಲಾಮುಖಿ ಗುಡ್ಡಗಳನ್ನೂ ಅವುಗಳಿಂದುಂಟಾದ ಸರೋವರಗಳನ್ನೂ ಶಿಲಾರಸ ಶಿಲೆಗಳನ್ನೂ ಅನೇಕ

ಪರ್ವತಶ್ರೇಣಿಗಳಲ್ಲಿ ಕಾಣಬಹುದು. ಈ ಪರ್ವತಶ್ರೇಣಿಗಳ ಗುಂಪಿನಲ್ಲಿ ವಿವಿಧ ಪರ್ವತಶ್ರೇಣಿಗಳು ಯಾವುದೇ ದಿಶೆಯನ್ನು ಅನುಸರಿಸಿದರೂ ಒಟ್ಟಾಗಿ ಈ ಸಮುದಾಯ ಒಂದು ನಿರ್ದಿಷ್ಟವಾದ ಸಾಮಾನ್ಯ ದಿಶೆಯನ್ನು ಅನುಸರಿಸುತ್ತವೆ. ಅಂತೆಯೇ ಇದು ಸಾಮಾನ್ಯವಾಗಿ ಒಂದು ಪಟ್ಟಿಯಂತಿದ್ದು ಭೂಪಟದಲ್ಲಿ ಸಹ ಹಾಗೆಯೇ ಕಾಣುತ್ತದೆ. ಅಲ್ಲದೇ ಇದು ಒಂದು ಖಂಡದ ಪ್ರಮುಖ ಪರ್ವತಾಕ್ಷವಾಗಿರುತ್ತದೆ. (ಎಸ್.ಬಿ.ಎಲ್.)

**ಕಾರ್ಡುರಾಯ್ :** ಉಬ್ಬುರಚನೆಯಿಂದ ಕೂಡಿದ ಕತ್ತರಿಸಿದ ಜುಂಗಿನ ಬಟ್ಟೆ. ಇದು ಫ್ರೆಂಚ್ ಕಾರ್ಡೆ–ಡು–ರಾಯ್ (ರಾಜ ಹುರಿ) ಎಂಬ ಪದದಿಂದ ನಿಷ್ಪನ್ನವಾಗಿದೆ ಎಂದು ನಂಬಲಾಗಿದೆ. ಇದನ್ನು ಸಾಮಾನ್ಯವಾಗಿ ಹತ್ತಿಯಲ್ಲಿ ಹೆಚ್ಚಿಗೆ ಜುಂಗು ಸೇರಿರುವ

ಕಾರ್ಡುರಾಯ್ ಬಟ್ಟೆಯ ತಯಾರಿಕೆಯಲ್ಲಿನ ಎರಡು ನಿರ್ದಿಷ್ಟ ಘಟ್ಟಗಳು. ಎಡಅರ್ಧದಲ್ಲಿ ಹಾಸುನೂಲಿನ (ತಳ) ಮೇಲೆ ತೇಲುವಂತಿರುವ ಅಡ್ಡೆಳೆಗಳನ್ನು ತೋರಿಸಿದೆ. ಬಲ ಅರ್ಧದಲ್ಲಿ, ಈ ಅಡ್ಡಳೆಗಳನ್ನು ಕತ್ತರಿಸಿದಾಗ ಅವು ಹೇಗೆ ಕಟ್ಟುಗಳಾಗಿ ಅಥವಾ ಉಬ್ಬುರಚನೆಗಾಗಿ ಎದ್ದು ಕಾಣುತ್ತವೆ ಎಂಬುದನ್ನು ಕಾಣಿಸಿದೆ.

ದಾರಗಳನ್ನು ಉಪಯೋಗಿಸಿ ತಯಾರಿಸುತ್ತಾರೆ. ಜುಂಗು ಸೇರಿರುವ ದಾರಗಳು ಉದ್ದಕ್ಕೆ ಉಬ್ಬುರಚನೆಗಳಾಗಿ ಅಥವಾ ಹುರಿಗಳಾಗಿ ಇಲ್ಲವೆ ತುದಿಗಂಟುಗಳಾಗಿ ರೂಪ ತಾಳುತ್ತವೆ. ಈ ಬಟ್ಟೆ ಒಂದೇ ಹಾಸುನೂಲಿನಲ್ಲಿ ಹಾಗೂ ಎರಡು ಹರವುಗಳಲ್ಲಿ ತಯಾರಾಗುತ್ತದೆ. ಹೆಚ್ಚಿಗೆ ಅಡ್ಡೆಳೆಗಳು ಅನೇಕ ಹಾಸು ನೂಲುಗಳ ಮೇಲೆ ತೇಲುವಂತಿದ್ದು ಉದ್ದಕ್ಕೂ ಅಲ್ಲಲ್ಲಿ ಬಂಧಿಸಲ್ಪಟ್ಟಿರುತ್ತವೆ. ನೇಯ್ಗೆ ಮುಗಿದ ತರುವಾಯ ವಿಶಿಷ್ಟವಾದೊಂದು ಕತ್ತರಿಸುವ ಯಂತ್ರದಿಂದ ಅವನ್ನು ಮಧ್ಯಭಾಗದಲ್ಲಿ ಕತ್ತರಿಸುತ್ತಾರೆ. ಹೀಗೆ ಕತ್ತರಿಸಿದ ಮೇಲೆ ದಾರದ ಕುಚ್ಚುಗಳು ತಳಹದಿ ಎದ್ದುಕಾಣುವ ಕಟ್ಟುಗಳಾಗಿ ಅಥವಾ ಉಬ್ಬುರಚನೆಗಳಾಗಿ ಬಟ್ಟೆಯ ಉದ್ದಕ್ಕೂ ಹೊರಚಾಚಿಕೊಳ್ಳುತ್ತವೆ. ಕತ್ತರಿಸುವುದಕ್ಕೆ ಮುಂಚೆ ಬಟ್ಟೆಯ ಹಿಂಭಾಗಕ್ಕೆ ಅಂಟನ್ನು ಲೇಪಿಸುತ್ತಾರೆ. ಅಂಟಿನಿಂದ ತುಂಬಿರುವ ಜುಂಗು ಕತ್ತರಿಸುವಾಗ ಹೊರಗೆ ಎಳೆದುಕೊಂಡು ಬರುವುದಿಲ್ಲ. ಕತ್ತರಿಸಿದ ಮೇಲೆ ಉಜ್ಜುವ, ಸಂಸ್ಕರಿಸುವ ಮತ್ತು ಕಮರಿಸುವ ಪ್ರಕ್ರಿಯೆಗಳಿಗೆ ಬಟ್ಟೆಯನ್ನು ಒಳಪಡಿಸಿ ಅಂಟನ್ನು ತೆಗೆಯುತ್ತಾರೆ. ಅದರಿಂದ ಹುರಿಯ ಹವಣಿಕೆ ಸ್ಪಷ್ಟವಾಗಿ ಕಾಣುತ್ತದೆ.

ಕಾರ್ಡುರಾಯ್ ಬಟ್ಟೆಗಳಿಗೆ ಸಾದಾ ಹಿಂಭಾಗವಾಗಲೀ ಮೂಲೆಯಿಂದ ಮೂಲೆಗೆ ನೇಯ್ದ ಟ್ವಿಲ್ ಹಿಂಭಾಗವಾಗಲೀ ಇರಬಹುದು. ಸಾದಾ ಹಿಂಭಾಗದ ಬಟ್ಟೆಯನ್ನು ಟಾಬ್ಬಿ ಬೆನ್ನಿನ ಕಾರ್ಡುರಾಯ್ ಬಟ್ಟೆ ಎಂದು ಕರೆಯುತ್ತಾರೆ. ಟ್ವಿಲ್ ನಮೂನೆಯ ಹಿಂಭಾಗವಿರುವ ಬಟ್ಟೆಗೆ ಜೆನೋವ ಬೆನ್ನಿನ ಕಾರ್ಡುರಾಯ್ ಎಂಬ ಹೆಸರಿದೆ.

ಕಾರ್ಡುರಾಯ್ ಬಲವಾದ ಹಾಗೂ ಭಾರವಾದ ಬಟ್ಟೆ, ಬಾಳಿಕೆಗೆ ಪ್ರಸಿದ್ಧವಾದುದು. ಇದನ್ನು ಕಾರ್ಮಿಕರ ಉಡುಪು, ಕುದುರೆ ಸವಾರಿಗಳಲ್ಲಿ ಉಪಯೋಗಿಸುವ ಬ್ರೀಚಸ್, ಬೇಟೆಯ ಉಡುಪು, ವೈಮಾನಿಕರ ಅಂಗಿ, ಆಟಗಾರರ ತೊಡಿಗೆ ಮೊದಲಾದವುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸಾದಾ ಬೆನ್ನಿನ ನಯವಾದ ಹಾಗೂ ಹಗುರವಾದ ಬಗೆಯ ಕಾರ್ಡುರಾಯ್ ಬಟ್ಟೆಗಳನ್ನು ಸ್ತ್ರೀಯರ ಉಡುಪು, ಷರಾಯಿ ಹಾಗೂ ಮಕ್ಕಳ ತೊಡಿಗೆಗಳಿಗೆ ಬಳಸುತ್ತಾರೆ. (ಎಲ್.ಡಿ.)

**ಕಾರ್ಡೂಚೀ, ಜೋಸುವ :** 1835–1907. ಇಟಲಿಯ ಸುಪ್ರಸಿದ್ಧ ಕವಿ, ವಿಮರ್ಶಕ. 1860 ರಿಂದ 1904 ವರೆಗೆ ಬೋಲೋನ್ಯಾ ವಿಶ್ವವಿದ್ಯಾನಿಲಯದಲ್ಲಿ ಅಲಂಕಾರಶಾಸ್ತ್ರದ ಪ್ರಾಧ್ಯಾಪಕನಾಗಿದ್ದ. ರೊಮ್ಯಾಂಟಿಕ್ ತತ್ತ್ವವನ್ನು ವಿರೋಧಿಸಿ, ಇಟಲಿಯ ಸಾಹಿತ್ಯದಲ್ಲಿ ಕ್ಲಾಸಿಕಲ್ (ಅಭಿಜಾತ) ಸಂಪ್ರದಾಯವನ್ನು ಪುನರುಜ್ಜೀವನ ಗೊಳಿಸಬೇಕೆಂಬುದು ಇವನ ಧ್ಯೇಯ. ರೈಮ್ ಎಂಬ ತನ್ನ ಪ್ರಥಮ ಕವನಸಂಗ್ರಹದಲ್ಲಿ ಇಟಲಿ ದೇಶ ಅವನತಿಗಿಳಿದು, ಕಾರ್ಯಶೀಲತೆಯನ್ನು ಕಳೆದುಕೊಂಡಿದೆಯೆಂದು ಟೀಕಿಸಿದ್ದಾನೆ. ಇಟಲಿಯ ಇಳಿಗತಿಗೆ ರೊಮ್ಯಾಂಟಿಕ್ ತತ್ತ್ವ ಹಾಗೂ ಕ್ರೈಸ್ತಧರ್ಮವೇ ಮೂಲಕಾರಣವೆಂದಿದ್ದಾನೆ. ಆದ್ದರಿಂದ ಕ್ಲಾಸಿಕಲ್ ಸಂಪ್ರದಾಯದಲ್ಲಿ ಅಭಿವ್ಯಕ್ತವಾದ, ಕ್ರಿಸ್ತನಿಗೆ ಪೂರ್ವದಲ್ಲಿದ್ದ ಪೇಗನಿಸಂ ತತ್ತ್ವವನ್ನು ಪುನಃ ರಾಷ್ಟ್ರದ ಸಾಹಿತ್ಯದಲ್ಲಿ ಮೈಗೂಡಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟು ನಿಸರ್ಗಚಿಂತನೆ, ಸ್ವತಂತ್ರ ಆಲೋಚನೆ, ಪ್ರಗತಿಮನೋಭಾವ–ಇವನ್ನು ಸಾಧಿಸುವ ಬೌದ್ಧಿಕವಾದವನ್ನು ಮಂಡಿಸಿದ್ದಾನೆ. ಇಟಲಿಯ ನಿಸರ್ಗದ ಸುಂದರ ದೃಶ್ಯಗಳಲ್ಲಿ ದೇಶದ ಇತಿಹಾಸದ ಪ್ರತೀಕವನ್ನೂ ಸ್ಮರಣೆಯನ್ನೂ ಕಂಡಿದ್ದಾನೆ. ಭವ್ಯಕಾವ್ಯವನ್ನು ನಿರ್ಮಿಸುವ ಯುಗ ಕಳೆದು ಹೋಗಿದ್ದರೂ ಕವಿ ಇತಿಹಾಸದ ಹಲವಾರು ಘಟನೆಗಳನ್ನೂ ರಸನಿಮಿಷಗಳನ್ನೂ ಭವ್ಯಕಾವ್ಯಶೈಲಿಯಲ್ಲಿ ಒಡಮೂಡಿಸಬಹುದೆಂದು ತೋರಿದ್ದಾನೆ. ಕೊನೆಯ ಕವನಗಳಲ್ಲಿ ಕ್ರೈಸ್ತಧರ್ಮದ ಕಟುಟೀಕೆ ಕಡಿಮೆಯಾಗಿ ಸುಕುಮಾರತೆ ಸಹಿಷ್ಣುತೆಗಳು ತೋರಿವೆ. ಇವನ ವಿಮರ್ಶಾಗ್ರಂಥಗಳಲ್ಲಿ ನಿರ್ದಾಕ್ಷಿಣ್ಯವಾದ, ಕೆಚ್ಚು, ಆವೇಶಗಳಿಂದ ಕೂಡಿದ. ಚುಚ್ಚು ಮಾತುಗಳೇ ಹೆಚ್ಚು. ಉತ್ತಮ ವಿಮರ್ಶಕನಿಗಿರಬೇಕಾದ ಸಂಯಮ, ವಸ್ತುನಿಷ್ಠೆ ಇವನಲ್ಲಿ ಮಸಕಾದಂತೆ ಕಾಣುತ್ತದೆ. ಆದರೂ ಅವು ಅಂದಿನ ಧೋರಣೆಗಳನ್ನು, ಅಭಿರುಚಿಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ. ಇನ್ನೊ ಎ ಸೇಟಾನ (1865) ರೈಮ್ ನುವೊ ಮತ್ತು ಓಡಿ ಬಾರ್ಬರ (1877–82)–ಇವು ಈತನ ಮುಖ್ಯ ಕೃತಿಗಳು. (ಎಚ್.ಕೆ.ಆರ್.)

**ಕಾರ್ಡೇಟ :** ಪ್ರಾಣಿಸಾಮ್ರಾಜ್ಯದ ಒಂದು ಬಹುಪ್ರಮುಖವಾದ ವಿಭಾಗ. ಆದಿ ಕಾರ್ಡೇಟುಗಳು, ಸೈಕ್ಲೊಸ್ಟೊಮೇಟುಗಳು (ಚಕ್ರಾಸ್ಯಗಳು), ಮೀನುಗಳು, ದ್ವಿಚರಿಗಳು, ಸರೀಸೃಪಗಳು, ಪಕ್ಷಿ ಮತ್ತು ಸ್ತನಿಗಳ ವರ್ಗಗಳು ಇದರಲ್ಲಿ ಸೇರಿವೆ. ಊರ್ಧ್ವಭಾಗದ ನಳಿಕೆಯಂತಿರುವ ನರಹುರಿ, ನೋಟೋಕಾರ್ಡ್ ಮತ್ತು ಗಂಟಲಿನ ಭಾಗದಲ್ಲಿರುವ ಕಿವಿರು ರಂಧ್ರಗಳು ಈ ಸಮುದಾಯಕ್ಕೆ ಸೇರಿದ ಪ್ರಾಣಿಗಳ ಅತಿ ವಿಶಿಷ್ಟ ಲಕ್ಷಣಗಳು, ಇವಲ್ಲದೆ ಉಭಯಪಾರ್ಶ್ವ ಸಮಾಂಗತೆ, 3 ಜನನ ಪದರಗಳು (ಜರ್ಮ್ ಲೇಯರ್ಸ್), ಖಂಡಸ್ಥ ದೇಹ, ಸಂಪೂರ್ಣವಾಗಿ ರೂಪುಗೊಂಡ ಪಚನ ಮಂಡಲ, ಚೆನ್ನಾಗಿ ರೂಪಿತವಾದ ಸೀಲೋಮ್ ಇತರ ಮುಖ್ಯ ಲಕ್ಷಣಗಳು.

ನರಹುರಿ ನಳಿಕೆಯಂತೆ ಟೊಳ್ಳಾಗಿದೆ. ಇದರ ಮುಂಭಾಗ ಕೆಲವು ನಿಮ್ನವರ್ಗದ ಕಾರ್ಡೇಟುಗಳಲ್ಲಿ ಸರಳವಾದ ಮಿದುಳು ಕೋಶದಂತೆಯೂ ಉಳಿದೆಲ್ಲ ಕಾರ್ಡೇಟುಗಳಲ್ಲಿ ಮಿದುಳಾಗಿಯೂ ಮಾರ್ಪಾಡಾಗಿದೆ. ಮಿದುಳಿನ ಹಿಂಭಾಗವೇ ಮಿದುಳುಬಳ್ಳಿ. ಹೆಮಿಕಾರ್ಡೇಟ ಉಪಭಾಗದ ಪ್ರಾಣಿಗಳಲ್ಲಿ ನರ ಅಂಗಾಂಶ ಹರಡಿಕೊಂಡಿದೆ. ಟ್ಯೂನಿಕೇಟ ಗುಂಪಿನವುಗಳಲ್ಲಿ ರೂಪಾಂತರತೆಯ ಹಂತದಲ್ಲಿ ಹುರಿಯೂ ಮಿದುಳು ಕೋಶವೂ ಗ್ಯಾಂಗ್ಲಿಯ ಆಗಿ ಪರಿವರ್ತಿತವಾಗುತ್ತವೆ. ಉನ್ನತ ವರ್ಗದ ಕಾರ್ಡೇಟಗಳಲ್ಲಿ ಕಶೇರುಸ್ತಂಭದಿಂದ ಕಮಾನುಗಳು ಹುಟ್ಟಿಕೊಂಡು ನರಹುರಿಯನ್ನು ಸುತ್ತುವರಿದು ಅದಕ್ಕೆ ರಕ್ಷಣೆ ನೀಡುತ್ತವೆ. ಮಿದುಳು ಮಸ್ತಕದಿಂದ ಆವೃತವಾಗಿದೆ.

ನರಹುರಿಯ ಕೆಳಬದಿಯಲ್ಲಿ ದೇಹಕ್ಕೆ ಆಧಾರವಾಗಿರುವ ನೋಟೋಕಾರ್ಡ್ ಇದೆ. ಸರಳಿನಂತಿರುವ ಇದು ಆದಿಕಾರ್ಡೇಟುಗಳಲ್ಲಿ ಜೀವಾವಧಿ ಉಳಿಯುತ್ತದೆ. ಉಳಿದೆಲ್ಲ ಕಾರ್ಡೇಟುಗಳಲ್ಲಿ ಭ್ರೂಣಾವಸ್ಥೆಯಲ್ಲಿ ಮಾತ್ರ ಇದ್ದು ಪ್ರಬುದ್ಧಾವಸ್ಥೆಯಲ್ಲಿ ಕ್ಷೀಣಗೊಂಡು ಕಶೇರುಸ್ತಂಭದಿಂದ ಆವೃತಗೊಳ್ಳುತ್ತದೆ ಇಲ್ಲವೆ ಸ್ಥಾನಪಲ್ಲಟಗೊಳ್ಳುತ್ತವೆ. ಹೆಮಿಕಾರ್ಡೇಟ್ ಪ್ರಾಣಿಗಳಲ್ಲಿ ಇದು ಚಿಕ್ಕದು ಮತ್ತು ದೇಹದ ಮುಂಭಾಗದಲ್ಲಿದೆ. ಟ್ಯೂನಿಕೇಟ ಪ್ರಾಣಿಗಳಲ್ಲಿ ಡಿಂಭಾವಸ್ಥೆಯಲ್ಲಿ ಬಾಲದ ಭಾಗದಲ್ಲಿ ಮಾತ್ರ ಇದೆ. ಸಿಫ್ಯಾಲೋಕಾರ್ಡೇಟ ಮತ್ತು ಉಳಿದ ಉಚ್ಚವರ್ಗದ ಪ್ರಾಣಿಗಳಲ್ಲಿ ದೇಹದುದ್ದಕ್ಕೂ ಚಾಚಿದೆ. ನೋಟೋಕಾರ್ಡಿನ ಕಾರ್ಯ ದೇಹಕ್ಕೆ ಕೇವಲ ಆಧಾರದಂತಿರುವುದು ಎಂದು ಕೆಲವರ ಅಭಿಪ್ರಾಯವಾದರೆ ಶರೀರದ ಸ್ನಾಯುಗಳ ಚಲನವಲನಕ್ಕೆ ಸಹಾಯಕವಾಗಿದೆ ಎಂದು ಇನ್ನು ಕೆಲವರು ಅಭಿಪ್ರಾಯಪಡುತ್ತಾರೆ. ಇದರ ಕಾರ್ಯ ಏನೇ ಇರಲಿ ಇದರ ಉತ್ಪತ್ತಿ ಕಾರ್ಡೇಟುಗಳ ವಿಕಾಸದಲ್ಲಿನ ಒಂದು ಮಹತ್ತ್ವಪೂರ್ಣ ಘಟನೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಕಾರ್ಡೇಟುಗಳ ಇನ್ನೊಂದು ವಿಶಿಷ್ಟ ಲಕ್ಷಣವಾದ ಕಿವಿರು ರಂಧ್ರಗಳು ಅನ್ನನಾಳ ಅಗ್ರಭಾಗವಾದ ಗಂಟಲಿನ (ಫ್ಯಾರಿಂಕ್ಸ್) ಅಕ್ಕಪಕ್ಕಗಳಲ್ಲಿವೆ. ಎಲ್ಲ ಕಾರ್ಡೇಟುಗಳ ಭ್ರೂಣಾವಸ್ಥೆಯಲ್ಲಿ ಕಾಣಿಸಿಕೊಳ್ಳುವ ಇವು ಹೆಮಿಕಾರ್ಡೇಟ, ಟ್ಯೂನಿಕೇಟ, ಸಿಫ್ಯಾಲೋಕಾರ್ಡೇಟ, ಮತ್ತು ಮೀನುಗಳಲ್ಲೆಲ್ಲ ಪ್ರೌಢಾವಸ್ಥೆಯಲ್ಲೂ ಇವೆ. ಜಲಶ್ವಸನ ಕ್ರಿಯೆಗೆ ಇವು ಅತ್ಯಗತ್ಯ. ದ್ವಿಚರಿಗಳಲ್ಲಿ ಡಿಂಭಾವಸ್ಥೆಯಲ್ಲಿ ಮಾತ್ರ ಇದ್ದು ಪ್ರೌಢಾವಸ್ಥೆಯಲ್ಲಿ ಶ್ವಾಸಕೋಶಗಳಿಂದ ಸ್ಥಾನಪಲ್ಲಟಗೊಳ್ಳುತ್ತವೆ. ಉಳಿದೆಲ್ಲ ಕಾರ್ಡೇಟುಗಳಲ್ಲಿ ಭ್ರೂಣಾವಸ್ಥೆಯ ಪ್ರಥಮ ಹಂತಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ, ಆಗಲೂ ಇವು ಅನುಪಯುಕ್ತವಾಗಿವೆ.

ಕಾರ್ಡೇಟುಗಳ ಉಗಮ ಹೇಗಾಯಿತೆಂಬ ಪ್ರಶ್ನೆ ಕ್ಲಿಷ್ಟ. ಇದು ಅನೇಕ ವಿಕಾಸ ತಜ್ಞರ ಗಮನ ಸೆಳೆದಿದೆ. ಇವು ಒಂದಿಲ್ಲೊಂದು ಅಕಶೇರುಕ ಗುಂಪಿನಿಂದ ಹುಟ್ಟಿರಬಹುದೆಂದು ವಾದಿಸಬಹುದಾದರೂ ಈ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ಈವರೆಗೂ ದೊರೆತಿಲ್ಲ. ಅನೆಲಿಡ, ನೆಮೆರ್ಟಿನಿಯ, ಆರ್ಥ್ರೋಪೋಡ ಮತ್ತು ಎಕಿನೋಡರ್ಮೇಟ ಹೀಗೆ ಈ ನಾಲ್ಕು ಗುಂಪಿನ ಪ್ರಾಣಿಗಳಿಂದ ಬೇರೆಬೇರೆಯಾಗಿ ಕಾರ್ಡೇಟುಗಳು ವಿಕಾಸವಾಗಿವೆಯೆಂದು ನಾಲ್ಕು ವಾದಗಳಿವೆ. ಇಂಥ ವಾದಗಳಲ್ಲಿ ಎರಡು ಮಾತ್ರ ಬಹುಪಾಲು ತಜ್ಞರಿಂದ ಮಾನ್ಯವಾಗಿರುವುದರಿಂದ ಗಮನಾರ್ಹವಾಗಿವೆ. 1. ವಿಲ್ಲೀ ಎಂಬುವನ ಶಾಸ್ತ್ರೀಯವಾದ (1891). ಇವನ ವಾದದ ಪ್ರಕಾರ ಮೂಲ ಕಾರ್ಡೇಟುಗಳು ಈಗಿನ ಅಸಿಡಿಯನ್ ಡಿಂಭಗಳಂಥ ಪ್ರಾಣಿಗಳಿಂದಾಗಿರದೆ ಈಗಿನ ಪ್ರೌಢಾವಸ್ಥೆಯ ಅಸಿಡಿಯನುಗಳನ್ನು ಹೋಲುತ್ತಿದ್ದ ಪ್ರಾಚೀನ ಪ್ರಾಣಿಗಳಿಂದ ಉದ್ಭವಿಸಿದುವು. 2. ಗಾರ್ಸ್ಟಾಂಗನ ಡಿಂಭವಿಕಾಸವಾದ (1928). ಕಾರ್ಡೇಟುಗಳ ಉಗಮ ಈಗಿನ ಅಸಿಡಿಯನ್ ಡಿಂಭಗಳಂಥ ಪ್ರಾಣಿಗಳಿಂದಾಗಿರದೆ ಈಗಿನ ಪ್ರೌಢಾವಸ್ಥೆಯ ಅಸಿಡಿಯನುಗಳನ್ನು ಹೋಲುತ್ತಿದ್ದ ಡಿಂಭಗಳನ್ನುಳ್ಳ ಅಚರ ಪ್ರಾಣಿಗಳಿಂದ ಆಗಿದೆಯೆಂದು ಇವನ ವಾದ. ಈ ಡಿಂಭ ಈಗಿನ ಎಕಿನೋಡರ್ಮ್‌ಗಳ

ಡೈಪ್ಲೂರುಲ ಡಿಂಭದಂತೆ ಇದ್ದಿತೆಂದೂ ಅದರ ವಿವಿಧ ಭಾಗಗಳಿಂದ ನರಹುರಿ, ನೋಟೋಕಾರ್ಡ್ ಮತ್ತು ಕಿವಿರು ರಂಧ್ರಗಳು ಉದ್ಭವವಾದುವೆಂದು ಈ ವಾದದ ಮೂಲನಂಬಿಕೆ. ಬೆರಿಲ್ ಎಂಬಾತ ಈ ವಾದವನ್ನು ಭಾಗಶಃ ಅನುಮೋದಿಸುತ್ತ ಡೈಪ್ಲೂರುಲ ಡಿಂಭವೇ ನೇರವಾಗಿ ಕಾರ್ಡೇಟುಗಳ ಉತ್ಪತ್ತಿಗೆ ಕಾರಣವಾಗಲಿಲ್ಲವೆಂದೂ ಕೆಲವು ವಿಶಿಷ್ಟ ಕಾರಣಗಳ ಪರಿಣಾಮವಾಗಿ ಇಂಥ ಡಿಂಭ ಅಸಿಡಿಯನ್‌ಗಳಲ್ಲಿ ಉದ್ಭವವಾಗಿ ಅಲ್ಲಿಂದ ಉಳಿದ ಕಾರ್ಡೇಟುಗಳು ಜನಿಸಿದುವೆಂದೂ ವಿವರಣೆಯಿತ್ತಿದ್ದಾನೆ.

ಕಾರ್ಡೇಟ ವಿಭಾಗದಲ್ಲಿ ನಾಲ್ಕು ಪ್ರಮುಖ ಉಪವಿಭಾಗಗಳಿವೆ:

ಅ) ಹೆಮಿಕಾರ್ಡೇಟ–ಟಂಗ್‌ವರ್ಮ್ಸ್ ಮತ್ತು ಅಕಾರ್ನ್ ವರ್ಮ್ಸ್

ಆ) ಯೂರೊಕಾರ್ಡೇಟ ಅಥವಾ ಟ್ಯೂನಿಕೇಟ–ಟ್ಯೂನಿಕೇಟ್ಸ್ ಮತ್ತು ಅಸಿಡಿಯನ್ಸ್

ಇ) ಸಿಫ್ಯಾಲೊಕಾರ್ಡೇಟ–ಆಂಫಿಯಾಕ್ಸಸ್, ಲ್ಯಾನ್ಸೆಲೆಟ್ಸ್

ಈ) ವರ್ಟಿಬ್ರೇಟ ಅಥವಾ ಕ್ರೇನಿಯೇಟ–ಸೈಕ್ಲೊಸ್ಟೋಮೇಟುಗಳು, ಮೀನುಗಳು, ದ್ವಿಚರಿಗಳು, ಸರೀಸೃಪಗಳು, ಪಕ್ಷಿಗಳು ಮತ್ತು ಸಸ್ತನಿಗಳು. **(ನೋಡಿ– ಕಶೇರುಕ)** (ಬಿ.ವೈ.ಎಂ.ಜಿ.)

**ಕಾರ್ಡೈಟ್ :** ಒಂದು ಕೆಳದರ್ಜೆಯ ಸ್ಫೋಟಕ. ಇದನ್ನು ಸ್ಫೋಟಿಸಿದಾಗ ಹೆಚ್ಚಿನ ಹೊಗೆ ಕಂಡುಬರುವುದಿಲ್ಲ. ಇದರಲ್ಲಿ ಉಚ್ಚ ದರ್ಜೆ ಸ್ಫೋಟಕದಲ್ಲಿ ಇರಬಹುದಾದಂಥ ಕೆಲವು ರಾಸಾಯನಿಕ ವಸ್ತುಗಳಾದ ಗನ್ ಕಾಟನ್, ನೈಟ್ರೋಗ್ಲಿಸರಿನ್ ಇವೆ. ಸಾಮಾನ್ಯವಾಗಿ ಬೆಂಕಿ ತಗುಲಿಸುವುದರಿಂದ ಈ ಸ್ಫೋಟಕವನ್ನು ಆಸ್ಫೋಟಿಸಬಹುದು.

ಕಾರ್ಡೈಟ್ ತೋಟಬತ್ತಿ (ಕಾರ್ಡೈಟ್ ಫ್ಯೂಸ್) : ಇದು ಹತ್ತಿಯಿಂದ ಮಾಡಿದ ದಾರ. ಇದರ ಸುತ್ತಲೂ ಕಾರ್ಡೈಟ್ ಮಿಶ್ರಣವನ್ನು ಲೇಪಿಸಿ ತರುವಾಯ ನೇಯ್ದ ಹೊದಿಕೆಯನ್ನು (ಟೆಂಟೈಟ್ ರ‍್ಯಾಪ್ಪಿಂಗ್ಸ್) ಹೊದಿಸಲಾಗುವುದು. ಈ ತೋಟಬತ್ತಿಯನ್ನು ಹೊತ್ತಿಸಿದಾಗ ಯಾವ ರೀತಿಯ ಹೊಗೆಯೂ ಕಾಣುವುದಿಲ್ಲ. ಹೆಚ್ಚಿನ ಕಿಡಿ ಸಹ ಸಿಡಿಯುವುದಿಲ್ಲ. ಆದ್ದರಿಂದ ಇದನ್ನು ಹೊಗೆಯಿಲ್ಲದ ತೋಟಬತ್ತಿಯೆಂದು ಕರೆಯುವುದುಂಟು. ಇದರ ಉರಿಯುವ ದರ ಪ್ರತಿ ಗಜಕ್ಕೆ 90 ರಿಂದ 110 ಸೆಕೆಂಡ್‌ಗಳು. (ಟಿ.ಟಿ.)

**ಕಾರ್ಡೋವ :** ಸ್ಪೇನಿನ ಆಂಡಲೂಷಿಯದ ಒಂದು ಪ್ರಾಂತ್ಯ ಮತ್ತು ಮುಖ್ಯ ನಗರ. ಕಾರ್ಡೋವ ನಗರ ದಕ್ಷಿಣ ಇಳಿಜಾರಿನ ಪ್ರದೇಶದಲ್ಲಿ, ಗ್ವಾಡಲ್ ಕಿವರ್ ನದಿಯ ಬಲ ದಂಡೆಯ ಮೇಲೆ ಇದೆ. ವಿಸ್ತೀರ್ಣ 1252 ಚ.ಕಿಮೀ ಜನಸಂಖ್ಯೆ 321164 (2005). ಈ ನಗರದ ಮಧ್ಯ ಮತ್ತು ಪಶ್ಚಿಮ ಭಾಗಗಳಲ್ಲಿ ಕಿರಿದಾದ ರಸ್ತೆಗಳೂ ಮೂರಿಷ್ ಶೈಲಿಯ



ಕಾರ್ಡೋವ ಕತೀಡ್ರಲಿನ ಪಶ್ಚಿಮದ ಗೋಡೆ

ಕಟ್ಟಡಗಳೂ ಇವೆ. ಉತ್ತರ ದಕ್ಷಿಣ ಭಾಗಗಳಲ್ಲಿ ರೋಮನರು ನಿರ್ಮಿಸಿದ ಕಟ್ಟಡಗಳ ಅಡಿಪಾಯಗಳು ಉಳಿದಿವೆ. ಹಾಳು ಬಿದ್ದ ಗೋಪುರಗಳು, ಹೆಬ್ಬಾಗಿಲುಗಳು ಮತ್ತು ಪಟ್ಟಣವನ್ನು ಸುತ್ತುವರಿದಿದ್ದ ಕೋಟೆ ಗೋಡೆಯ ಕೆಲವು ಭಾಗಗಳು ಉಳಿದಿವೆ. ಪಟ್ಟಣದ ಹಿಂಬದಿಯಲ್ಲಿರುವ ಬೆಟ್ಟದ ಮೇಲೆ ಆಲಿವ್ ಮತ್ತು ಕಿತ್ತಳೆ ಹಣ್ಣುಗಳ ತೋಟಗಳನ್ನೂ ಪಶ್ಚಿಮದ ಗೋಡೆಯ ಹಿಂಬದಿಗೆ ಉದ್ಯಾನಗಳನ್ನೂ ಬೆಳೆಸಿದ್ದಾರೆ. ಹದಿನಾರು ಕಮಾನುಗಳುಳ್ಳ ರೋಮನ್ ತಳಹದಿಯ ಮೇಲೆ ಕಟ್ಟಿರುವ ಮೂರಿಷ್ ಸೇತುವೆಯಿಂದ ಕಾರ್ಡೋವಕ್ಕೂ ನದಿಯ ಆಚೆಯ ಪ್ರದೇಶಕ್ಕೂ ಸಂಪರ್ಕ ಏರ್ಪಟ್ಟಿದೆ. ಸೇತುವೆಯ ದಕ್ಷಿಣ ತುದಿಯಲ್ಲಿ ಲಾಕಲಹೊರ್ರ ಗೋಪುರವೂ ಉತ್ತರದಲ್ಲಿ ಹಾಳುಬಿದ್ದಿರುವ ಊರುಬಾಗಿಲೂ ನಗರಾಧಿದೇವತೆ ಆರ್ಕೇಂಜೆಲ್ ರಾಫೆಲನ ಪ್ರತಿಮೆಯೂ ಇವೆ. ಆಲ್ಕಜಾರ್ ಎಂಬ ಹಿಂದಿನ ಅರಮನೆ ಇರುವುದು ಸೇತುವೆಯ ಪಶ್ಚಿಮಕ್ಕೆ. ಅರಬ್ ಕಲೀಫರು ತಮ್ಮ ನಿವಾಸವಾಗಿ ಮಾರ್ಪಡಿಸಿಕೊಂಡಿದ್ದ ರೋಮನರ ನಾಗರಿಕ ಮತ್ತು ಸೈನಿಕರ ಕಟ್ಟಡಗಳಿರುವುದು ಈ ಭಾಗದಲ್ಲಿ. ಹಳೆಯ ಆಲ್ಕಜಾರ್ ಆವರಣದಲ್ಲಿ ಅರಸರ ಅಂಗರಕ್ಷಕರು ವಾಸಿಸುತ್ತಿದ್ದ ಕಟ್ಟಡಗಳು ಈಗ ಧಾರ್ಮಿಕ ನಿವಾಸಗಳು. ಧಾರ್ಮಿಕ ಚರ್ಚೆಗಳಿಗಾಗಿ ಮೀಸಲಾಗಿದ್ದ ಮಂದಿರ ಇಂದು ಜೀರ್ಣಸ್ಥಿತಿಯಲ್ಲಿದೆ. ಅದರ ಒಂದು ಭಾಗ ಈಗ ಬಂದಿಖಾನೆ. ನದಿಯ ದಂಡೆಯ ಮೇಲಿರುವ ಆ ನಿವೇಶನದಲ್ಲಿ ಉದ್ಯಾನವನ, ಬಿಷಪರ ವಾಸಗೃಹ, ಮತ್ತು ಕ್ರೈಸ್ತ ಧರ್ಮವಿದ್ಯಾಲಯಗಳು, ಪುರಭವನ, ಸೇಂಟ್ ಹಿಪೊಲಿಟೊ ಮತ್ತು ಸೇಂಟ್ ನಿಕೊಲಾಸ್ ಡಿ. ಲಾವಿಲ್ಲ ಚರ್ಚುಗಳು, ಪುರಭವನ, ವೈದ್ಯಶಾಲೆಗಳು ಸಂಗೀತಗೃಹ, ಪ್ರಾಕ್ತನ ಮತ್ತು ಕಲಾವಸ್ತು ಸಂಗ್ರಹಾಲಯಗಳು ಇವೆ. ಇಲ್ಲಿರುವ ಕಾಲೇಜುಗಳು ಮತ್ತು ಶಾಲೆಗಳ ಪೈಕಿ 1590ರಲ್ಲಿ ಕಾರ್ಡೋವದ ಬಿಷಪ್ ಪಾಚಿಕೊ ಸ್ಥಾಪಿಸಿದ ಸ್ತ್ರೀ ಮಹಿಳಾ ವಿದ್ಯಾಲಯವೂ ಒಂದು. ಇದು ಪದವಿ ಪ್ರಧಾನಮಾಡುವ ಅಧಿಕಾರ ಪಡೆದಿದೆ.

ಕಾರ್ಡೋವದ ಮೂರಿಷ್ ಮತ್ತು ಕ್ರೈಸ್ತ ಕಟ್ಟಡಗಳನ್ನೆಲ್ಲ ಮೀರಿಸಿದ್ದು ಅಲ್ಲಿಯ ಮಸೀದಿ. ಮೊದಲಿಗೆ ಅದು 1236ರಲ್ಲಿ ಪ್ರತಿಷ್ಠಾಪಿಸಿದ ಮೇರಿಯ ಆರಾಧನಾ ಮಂದಿರವಾಗಿತ್ತು. 1ನೆಯ ಅಬ್ದ್–ಅಲ್–ರಹಮಾನ್ ರೋಮನ್ ದೇವಸ್ಥಾನ ಮತ್ತು ವಿಸಿಗಾತ್ಸರ ಚರ್ಚಿನ ಅಡಿಪಾಯದ ಮೇಲೆ ಇದನ್ನು ಕಟ್ಟಿದ. ತನ್ನ ರಾಜಧಾನಿಯನ್ನು ಪೂರ್ವ ದೇಶಗಳ ಪವಿತ್ರ ಸ್ಥಳಗಳನ್ನು ಮೀರಿಸುವ ಧಾರ್ಮಿಕ ಕೇಂದ್ರವನ್ನಾಗಿ ಮಾಡುವ ಆಸೆ ಈತನಿಗೆ ಇತ್ತು. ಬೆಳೆಯುತ್ತಿದ್ದ ಜನಸಂಖ್ಯೆಯ ಅನುಕೂಲಕ್ಕಾಗಿ 2ನೆಯ ಅಬ್ದ್–ಅಲ್–ರಹಮಾನ್ ಮತ್ತು 2ನೆಯ ಅಲ್–ಹಕಂ ಈ ಕಟ್ಟಡವನ್ನು ವಿಸ್ತರಿಸಿದರು. ಕಲೀಫ 2ನೆಯ ಹಿಸಾಮನ ಮುಖ್ಯಮಂತ್ರಿ ಅಲ್–ಮನ್‌ಸುರ್ ಆ ಪವಿತ್ರ ಸ್ಥಳವನ್ನು ಇನ್ನೂ ವಿಸ್ತರಿಸಿ ಕೆಲವು ಬದಲಾವಣೆ ಮಾಡಿದ. ಇದು ಜೀಕಾ ಅಥವಾ ಶುದ್ಧೀಕರಣ ಮಂದಿರವೆಂದು ಪರಿಗಣಿತವಾಗಿ, ಮೆಕ್ಕದ ಕಾಬವನ್ನು ಬಿಟ್ಟರೆ ಇದೇ ಅತಿ ದೊಡ್ಡ ಮುಸ್ಲಿಂ ಪವಿತ್ರ ಮಂದಿರವಾಯಿತು. ಕಟ್ಟಡ ಚತುಷ್ಕೋಣಾಕೃತಿಯಲ್ಲಿ 590' ಉದ್ದವೂ 425' ಅಗಲವೂ ಇದ್ದು, ರೋಮಿನ ಸೇಂಟ್ ಪೀಟರ್ ಚರ್ಚ್‌ಗಿಂತ ಸ್ವಲ್ಪ ಕಿರಿದಾಗಿದೆ. ದಕ್ಷಿಣ ಭಾಗದ ಸಭಾಭವನದಲ್ಲಿ ಪಾರ್ಫೆರಿ, ಜಾಸ್ಪರ್ ಮತ್ತು ವಿವಿಧ ಬಣ್ಣಗಳ ಅಮೃತಶಿಲೆಗಳಿಂದ ಕಟ್ಟಿರುವ, ಅನೇಕ ಕಂಬಗಳಿಂದ ಕೂಡಿದ ಭಾಗಗಳಿವೆ. ಈ ಮಹಾಕಟ್ಟಡಕ್ಕೆ ಬೇಕಾಗಿದ್ದ ವಸ್ತುಗಳು ಅನೇಕ ಪುರಾತನ ಕಟ್ಟಡಗಳಿಂದಲೂ ವಿವಿಧ ಪ್ರಾಂತ್ಯಗಳಿಂದಲೂ ಸರಬರಾಜಾಗಿದ್ದುವು. ಬಿಜ಼ಾಂಟಿನ್ ಚಕ್ರವರ್ತಿ 4ನೆಯ ಲಿಯೋ 1ನೆಯ ಅಬ್ದ್–ಅಲ್–ರಹಮಾನನಿಗೆ ಕಳಿಸಿದ ಕೊಡುಗೆಯೊಂದಿಗೆ ಒಳ್ಳೆಯ ಶಿಲ್ಪಿಗಳನ್ನೂ ಕಳಿಸಿದ್ದ. ಒಟ್ಟು 850 ಕಂಬಗಳಿಂದ ಕೂಡಿದ ಈ ಕಟ್ಟಡದಲ್ಲಿ ಸಮಾನ ಎತ್ತರದ (3.6 ಮೀ) ಮೂರಿಷ್ ಕಮಾನುಗಳಿವೆ. 16ನೆಯ ಶತಮಾನದಲ್ಲಿ ಶಿಲುಬೆಯಾಕಾರದ ಪ್ರಾರ್ಥನಾ ಸಾಲುಗಳನ್ನು ಮಂದಿರದಲ್ಲಿ ರಚಿಸಿದಾಗ ಅದರ ಮೂರಿಷ್ ಶೈಲಿ ಹಾಳಾಯಿತು. ಮಸೀದಿಯ ಗೋಪುರದ ಬದಲು 90.9 ಮೀ ಎತ್ತರದ ಕ್ರೈಸ್ತಮಂದಿರದ ಕರೆಗಂಟೆಯ ಗೋಪುರ ಬಂತು. ಇಲ್ಲಿಯ ಕಮಾನೊಂದನ್ನು ಕೀಳುತ್ತಿದ್ದಾಗ ಪ್ರಾಚೀನ ಮೂರಿಷ್ ಶೈಲಿಯ ಕೆತ್ತನೆ ಮತ್ತು ಚಿತ್ರಕಲೆಯಿದ್ದ, ಸ್ವಲ್ಪವೂ ಕೆಡದಿದ್ದ ಮರದ ವಸ್ತುವೊಂದು ಪತ್ತೆಯಾಯಿತು. ಪ್ರಾರ್ಥನ ಮಂದಿರ 3ನೆಯ ಮಿಹ್ರಬ್ ಅಥವಾ ಗೂಡು ಈ ಕಟ್ಟಡದಲ್ಲೇ ಅಪೂರ್ವವಾದದ್ದು. ಇದನ್ನು ಒಂದೇ ಅಮೃತಶಿಲೆಯಿಂದ ಕಟ್ಟಲಾಗಿದೆ. ಇದು ಬಿಜ಼ಾಂಟಿನ್ ಶೈಲಿಯಲ್ಲಿದೆ.

ಮೂರ್ ಜನರ ಕಾಲದಲ್ಲಿ ಈ ನಗರ ಬೆಳ್ಳಿ, ರೇಷ್ಮೆ ಕಸೂತಿ ಕೆಲಸ ಮತ್ತು ವಿಶಿಷ್ಟ ರೀತಿಯ ಚರ್ಮಗೆಲಸಗಳಿಗೆ ಪ್ರಸಿದ್ಧವಾಗಿತ್ತು, ಈಗಲೂ ಚಿನ್ನಬೆಳ್ಳಿಗಳ ಸೂಕ್ಷ್ಮ ಕೆಲಸ ಇಲ್ಲಿಯ ವೈಶಿಷ್ಟ್ಯ. ಚರ್ಮದ ಕೈಗಾರಿಕೆ ಅವನತಿ ಹೊಂದಿತು. ಕಾರ್ಡೋವದ ಆಧುನಿಕ ಕೈಗಾರಿಕೆಗಳಲ್ಲಿ ಮದ್ಯಗಳ ತಯಾರಿಕೆ ಮತ್ತು ನೇಯ್ಗೆ ಕೆಲಸ ಮುಖ್ಯವಾದವು. ಕಾರ್ಡೋವಕ್ಕೆ ಸಮೀಪದಲ್ಲಿರುವ ಗಣಿಗಳಲ್ಲಿ ತಾಮ್ರ ದೊರೆಯುತ್ತದೆ. ಚಿನ್ನ, ಬೆಳ್ಳಿ, ಕಲಾಬತು, ಎಣ್ಣೆ, ಒರಟು ಬಟ್ಟೆ ಇವು ವ್ಯಾಪಾರದ ಮುಖ್ಯವಸ್ತುಗಳು. ಪ್ರವಾಸೋದ್ಯಮ ಮತ್ತೊಂದು ಆದಾಯ ತರುವ ಮಾರ್ಗ.

**ಚರಿತ್ರೆ :** ಮೊದಲಿಗೆ ಕಾರ್ಡೋವ ಕಾರ್ಥೇಜಿನವರಿಗೆ ಸೇರಿತ್ತು. ಮಾರ್ಕಸ್ ಮಾರ್ಸೆಲಸ್ ಪ್ರ.ಶ.ಪೂ. 152ರಲ್ಲಿ ಇದನ್ನು ಆಕ್ರಮಿಸಿದಾಗ ಸ್ಪೇನಿನಲ್ಲಿ ಇದೇ ರೋಮನರ ಮೊದಲನೆಯ ವಸಾಹತಾಯಿತು. ಪ್ರ.ಶ.ಪೂ. 45ರಲ್ಲಿ ನಡೆದ ಮುಂಡ ಯುದ್ಧದ ಅನಂತರ ಜೂಲಿಯಸ್ ಸೀಸರ್ ಇಲ್ಲಿಯ 20,000 ಪ್ರಜೆಗಳನ್ನು ಕೊಂದ. ಪಾಂಪೆಯ ಮಕ್ಕಳಿಗೆ ಇವರು ಸಹಾಯ ಮಾಡಿದರೆಂಬುದೇ ಕಾರಣ. ಈ ನಗರ ಆಗಸ್ಟಸ್ ಕಾಲದಲ್ಲಿ ಪೌರಾಡಳಿತಕ್ಕೊಳಪಟ್ಟು ಬೆಟಿಕ ಪ್ರಾಂತ್ಯದ ರಾಜಧಾನಿಯಾಗಿ ಪ್ರಾಮುಖ್ಯ ಹೊಂದಿತೆಂದು ಪ್ರ.ಶ.ಪೂ. 1ನೆಯ ಶತಮಾನದ ಅಂತ್ಯ ಭಾಗದಲ್ಲಿದ್ದ ಸ್ಟ್ರಾಬೋ ಎಂಬ ಇತಿಹಾಸಕಾರ ಹೇಳಿದ್ದಾನೆ. 6ರಿಂದ 8ನೆಯ ಶತಮಾನದವರೆಗೆ ಆಳಿದ ವಿಸಿಗಾತ್ಸರ ಕಾಲದಲ್ಲಿ ಕಾರ್ಡೋವ ಪ್ರಸಿದ್ಧವಾಯಿತು. 711ರಲ್ಲಿ ಮೂರ್ ಜನರ ದಾಳಿಗೆ ತುತ್ತಾಗಿ ನಾಶಹೊಂದಿತು. 756 ರಲ್ಲಿ ಇದು 1ನೆಯ ಅಬ್ದ್–ಅಲ್–ರಹಮಾನನ ರಾಜಧಾನಿಯಾದಾಗ ಮತ್ತೆ ಇದರ ಉಚ್ಛ್ರಾಯಕಾಲ ಆರಂಭವಾಯಿತೆನ್ನಬಹುದು. ಉಮಾಯದ್ ಕಲೀಫರ ಆಡಳಿತ ಕಾಲದಲ್ಲಿ

ಹೊಸ ಹೊಸ ಅರಮನೆಗಳೂ ಮಸೀದಿಗಳೂ ನಿರ್ಮಾಣವಾಗಿ ಪಟ್ಟಣದ ವಿಸ್ತಾರ ಇಮ್ಮಡಿಸಿತು. ಇದರ ಕೀರ್ತಿ ಪ್ರತಿಷ್ಠೆಗಳು ಮತ್ತೆ ಶಿಖರ ಮುಟ್ಟಿದ್ದು 10ನೆಯ ಶತಮಾನದ ಮಧ್ಯಭಾಗದಲ್ಲಿ, ಮೂರನೆಯ ಅಬ್ದ್–ಅಲ್–ರಹಮಾನನ ಕಾಲದಲ್ಲಿ. 1010ರಲ್ಲಿ ರಾಜ್ಯಾಧಿಕಾರಕ್ಕಾಗಿ ನಡೆದ ತಿಕ್ಕಾಟದ ಫಲವಾಗಿ ಕಾರ್ಡೋವ ಅಭಿವೃದ್ಧಿ ಕುಂಠಿತವಾಯಿತು. ಕ್ಯಾಸ್ಟಿಲೆಯ 3ನೆಯ ಫರ್ಡಿನೆಂಡ್ 1236ರಲ್ಲಿ ಕಾರ್ಡೋವವನ್ನು ಸುಲಭವಾಗಿ ಆಕ್ರಮಿಸಿಕೊಂಡ. ಮೂರಿಷ್ ಆಡಳಿತ ತಪ್ಪಿ ಸ್ಪ್ಯಾನಿಷ್ ಆಡಳಿತ ಬಂದರೂ ಕಾರ್ಡೋವದ ಕ್ಷೀಣದೆಶೆ ಕೊನೆಗೊಳ್ಳಲಿಲ್ಲ. 1808ರಲ್ಲಿ ಫ್ರೆಂಚರು ನಡೆಸಿದ ಲೂಟಿ ಮತ್ತು ದಾಳಿಯಿಂದ ಅದಕ್ಕೆ ಚೇತರಿಸಿಕೊಳ್ಳಲಾಗದಷ್ಟು ಪೆಟ್ಟು ಬಿತ್ತು. 1936–39ರಲ್ಲಿ ನಡೆದ ಅಂತರ್ಯುದ್ಧದಲ್ಲಿ ಕಾರ್ಡೋವವನ್ನು ಜನರಲ್ ಫ್ರಾನ್ಸಿಸ್ಕೊ ಫ್ರಾಂಕೋ ಬಹಾಂಡೆಯ ರಾಷ್ಟ್ರೀಯ ಸೈನ್ಯ ವಶಮಾಡಿಕೊಂಡಿತು.

ವಾಗ್ಮಿ ಮಾರ್ಕಸ್ ಆಗ್ನಿಯಸ್ ಸೆನೆಕ, ಈತನ ಪ್ರಸಿದ್ಧ ಮಗ ಲೂಸಿಯನ್ (ಪ್ರ.ಶ.ಪೂ. 4–ಪ್ರ.ಶ.ಪೂ. 65), ಕವಿ ಲುಕಾನ್ (ಪ್ರ.ಶ.39–65) ತತ್ತ್ವಶಾಸ್ತ್ರಜ್ಞರಾದ ಅವರೋಸ್ (1126–98) ಮತ್ತು ಮೈಮಂಡಿಸ್ (1135–1204), ಕಲೆಗಾರ ಪಾಬ್ಲೊ ಡಿ ಸೆಸ್ಪಿಡಸ್ (1538–1608) ಇವರೆಲ್ಲ ಕಾರ್ಡೋವದಲ್ಲಿ ಜನ್ಮತಾಳಿದ ಪ್ರತಿಭಾವಂತರು. ನೇಪಲ್ಸನ್ನು ಜಯಿಸಿದ ಸೇನಾನಾಯಕ ಗೊಂಜಲೊ ಫರ್‌ನಾಂಡಿಜ್ ಡಿ ಹುಟ್ಟಿದ್ದು ಕಾರ್ಡೋವದ ಬಳಿಯ ಮಾಂಟಿಲ್ಲ ನಗರದಲ್ಲಿ.

ಕಾರ್ಡೋವ ಪ್ರಾಂತ್ಯ ಆಂಡಲೂಸಿಯ ಪ್ರದೇಶದ ಒಂದು ಭಾಗ. ಇದರ ಜನಸಂಖ್ಯೆ 7,98,437 (2005); ವಿಸ್ತೀರ್ಣ 13792 ಚ.ಕಿಮೀ ಗ್ವಾಡಲ್‌ಕಿವರ್ ನದಿ ಈ ಪ್ರಾಂತ್ಯದ ನಡುವೆ ಪೂರ್ವ–ಈಶಾನ್ಯದಿಂದ ಪಶ್ಚಿಮ–ವಾಯುವ್ಯ ದಿಕ್ಕಿನಲ್ಲಿ ಹರಿಯುತ್ತದೆ. ನದಿಯ ಉತ್ತರಕ್ಕಿರುವುದು ಸಿಯರ ಮೊರೆನ ಪರ್ವತ ಪ್ರದೇಶ. ಇಲ್ಲಿ ಹೆಚ್ಚು ಜನವಸತಿ ಇಲ್ಲ. ಚಳಿಗಾಲದಲ್ಲಿ ಕುರಿಗಳಿಗೆ ಒಳ್ಳೆಯ ಮೇವು ದೊರೆಯುತ್ತದೆ. ಕಲ್ಲಿದ್ದಲು, ಬೆಳ್ಳಿ, ಸೀಸ ಮತ್ತು ಸತು ಇಲ್ಲಿಯ ಖನಿಜಗಳು. ಗ್ವಾಡಲ್‌ಕಿವರ್ ನದಿಯ ದಕ್ಷಿಣಕ್ಕಿರುವ ಲಾ ಕಾಮಪಿನ ಮೈದಾನ ಫಲವತ್ತಾದ್ದು. ಇದು ಕೃಷಿಗೂ ದನ–ಕುದುರೆಗಳ ಮೇವಿಗೂ ಉಪಯುಕ್ತ. ಉತ್ತಮ ದ್ರಾಕ್ಷಿ ತೋಟಗಳೂ ಆಲಿವ್ ಮರದ ತೋಪುಗಳೂ ಇವೆ. ರ್‍ಯೂಟ್‌ನಲ್ಲಿ ಉಪ್ಪಿನ ಗಣಿಯಿದೆ. ಇದು ಸಂಪದ್ಭರಿತ ಪ್ರದೇಶವಾದ್ದರಿಂದ ಇದರ ಜನಸಾಂದ್ರತೆಯೂ ಹೆಚ್ಚು. ಕಾರ್ಡೋವದ್ದು ವೈಪರೀತ್ಯದ ವಾಯುಗುಣ. ಬೇಸಗೆಯಲ್ಲಿ ಮಳೆ. ಪರ್ವತಗಳ ಮೇಲೆ ತಿಂಗಳುಗಟ್ಟಲೆ ಮಂಜು ಮುಸುಕಿರುತ್ತದೆ. ಕಾರ್ಡೋವದ ಕೆಲವು ಮುಖ್ಯನಗರಗಳು ಇವು ಪ್ಯೂಂಟಿ–ಜೆನಿಲ್, ಲುಸೆನ, ಪ್ರಗೊ ಡಿ ಕಾರ್ಡೋವ, ಮಾಂಟಿಲ್ಲ, ಕಾಬ್ರ, ಪಲ್ಮ ಡೆಲ್ ರೆಯೊ, ಮತ್ತು ರ್‍ಯೂಟ್, ಮಡ್ರಿಡ್ ಮತ್ತು ಇತರ ಮುಖ್ಯ ನಗರಗಳೊಡನೆ ಸಂಬಂಧ ಕಲ್ಪಿಸುವ ರೈಲುಮಾರ್ಗಗಳು ಕಾರ್ಡೋವದ ಮೂಲಕ ಹಾದುಹೋಗುತ್ತವೆ. (ಬಿ.ಎಸ್.ಎಚ್.)

**ಕಾರ್ತಿಕ :** ಚೈತ್ರ ಶುಕ್ಲ ಪ್ರಥಮಾತಿಥಿಯ ದಿವಸದಿಂದ ಪ್ರಾರಂಭಿಸಿ ಗಣನೆ ಮಾಡುವ ಹನ್ನೆರಡು ಚಾಂದ್ರಮಾನ ಮಾಸಗಳಲ್ಲಿ ಎಂಟನೆಯದು. ಈ ತಿಂಗಳಿನ ಮೊದಲಿನಲ್ಲಿ ಸೂರ್ಯ ತುಲಾರಾಶಿಯಲ್ಲಿದ್ದು ಕೊನೆಯ ವೇಳೆಗೆ ವೃಶ್ಚಿಕರಾಶಿಯಗೆ ಸೇರಿರುತ್ತದೆ. ಅನೇಕ ವರ್ಷಗಳಿಗೊಮ್ಮೆ ಮೊದಲಿನ ಒಂದೆರಡು ದಿನಗಳ ವರೆಗೆ ತುಲಾರಾಶಿಯಲ್ಲೂ ಕೊನೆಯ ಒಂದೆರಡು ದಿನಗಳ ಕಾಲ ವೃಶ್ಚಿಕರಾಶಿಯಲ್ಲೂ ಸೂರ್ಯ ಇರುವ ಸಂಭವವುಂಟು ಹೀಗೆ ಕಾರ್ತಿಕಮಾಸದಲ್ಲಿ ಸೂರ್ಯ ಮೂರು ರಾಶಿಗಳಲ್ಲೂ ಸಂಚರಿಸಿದಾಗ ಈ ತಿಂಗಳನ್ನು ಕ್ಷಯಮಾಸವೆಂದು ಕರೆಯುತ್ತಾರೆ. ಈ ಕ್ಷಯಮಾಸ 9 ಅಥವಾ 141 ವರ್ಷಗಳಿಗೊಮ್ಮೆ ಅಥವಾ ಈ ಎರಡು ಸಂಖ್ಯೆಗಳ ಆವೃತ್ತಿ ಸಂಖ್ಯೆಯ ವರ್ಷಗಳಿಗೊಮ್ಮೆ ಸಂಭವಿಸುತ್ತದೆ.

*ಕಾರ್ತಿಕ್ಯಾದಿಷ್ಟುಸಂಯೋಗೇ ಕೃತ್ತಿಕಾದಿ ದ್ವಯಂ ದ್ವಯಂ ।*
*ಅಂತ್ಯೋಪಾಂತ್ಯೌ ಪಂಚಮಶ್ಚ ತ್ರಿಧಾ ಮಾಸತ್ರಯಂ ಸ್ಮೃತಂ ॥*

ಎಂದು ಸೂರ್ಯಸಿದ್ಧಾಂತದಲ್ಲಿ ತಿಳಿಸಿರುವಂತೆ ಚಾಂದ್ರಮಾನ ಮಾಸದ ಹುಣ್ಣಿಮೆಯ ದಿನ ಕೃತ್ತಿಕೆ ಅಥವಾ ರೋಹಿಣಿ ನಕ್ಷತ್ರವಿದ್ದರೆ ಆ ತಿಂಗಳು ಕಾರ್ತಿಕಮಾಸವಾಗುತ್ತದೆ. ಶರದೃತುವಿನಲ್ಲಿ ಇದು ಎರಡನೆಯ ತಿಂಗಳು. ಇದಕ್ಕೆ ಬಾಹುಲ, ಊರ್ಜ, ಕೌಮುದ ಎಂಬ ಪರ್ಯಾಯನಾಮಗಳೂ ಉಂಟು.

ಮೇಷಮಾಸ ಮೊದಲುಮಾಡಿ ಗಣನೆ ಮಾಡುವ ಸೌರಮಾನದಲ್ಲೂ ಎಂಟನೆಯದಾದ ವೃಶ್ಚಿಕಮಾಸವನ್ನು ಕಾರ್ತಿಕಮಾಸವೆಂದು ಕರೆಯುತ್ತಾರೆ. ತಮಿಳಿನಲ್ಲಿ ಇದಕ್ಕೆ ಕಾರ್ತಿಹೈ ಎಂದು ಹೆಸರು.

ವಿಷ್ಣು ಮತ್ತು ಶಿವಾಲಯಗಳಲ್ಲಿ ದೀಪೋತ್ಸವ ನಡೆಸುವುದು ಕಾರ್ತಿಕಮಾಸದ ಒಂದು ವೈಶಿಷ್ಟ್ಯ.

*ತ್ರಿಣೇತ್ರಂ ಚಾರುಜಟಿಲಂ ಚಾರುಚಂದ್ರಾರ್ಧಶೇಖರಂ ।*
*ಕೈಲಾಸ ಶಿಖರಾರೂಢಮೂರ್ಜಮಾಸಮುಪಾಸ್ಮಹೆ ॥*

ಎಂದು ಶ್ರೀತತ್ತ್ವನಿಧಿಯಲ್ಲಿ ತಿಳಿಸಿರುವಂತೆ ಕೈಲಾಸಶಿಖರಾರೂಢನಾದ ಈಶ್ವರನ ಸ್ವರೂಪವೇ ಕಾರ್ತಿಕ ಮಾಸದ ಸ್ವರೂಪವಾಗಿದೆ.

ಈ ತಿಂಗಳಿನಲ್ಲಿ ಹುಟ್ಟಿದವ ಸತ್ಕಾರ್ಯಗಳನ್ನು ಮಾಡುವವನೂ ವಾಗ್ವಿಲಾಸಿಯೂ ಧನಿಕನೂ ಸತ್ಕಾವ್ಯಗಳನ್ನು ರಚಿಸುವವನೂ ವ್ಯಾಪಾರಶೀಲನೂ ಆಗುತ್ತಾನೆ.

ಕಾರ್ತಿಕ ಮಾಸದಲ್ಲಿ ಕೊಡುವ ಸುವರ್ಣ ಮೊದಲಾದ ದಾನಗಳು ಅನಂತ ಪುಣ್ಯಫಲಗಳನ್ನು ಕೊಡುತ್ತವೆ. ಈ ತಿಂಗಳಿನಲ್ಲಿ ಸಂಭವಿಸುವ ಗ್ರಹಣಕಾಲದಲ್ಲಿ ಗಂಗಾ ಯಮುನಾನದಿಗಳ ಸಂಗಮದಲ್ಲಿ ಸ್ನಾನ ಅತ್ಯಂತ ಶ್ರೇಷ್ಠ. ತಲಕಾಡು ಸ್ಥಳಪುರಾಣದಲ್ಲಿ ತಿಳಿಸಿರುವಂತೆ ಕಾರ್ತಿಕಮಾಸದ ಅಮಾವಾಸ್ಯೆಯ ದಿನ ಸೋಮವಾರವಾಗಿ ಸೂರ್ಯ ವೃಶ್ಚಿಕರಾಶಿಯಲ್ಲಿದ್ದರೆ ಆ ದಿವಸ ತಲಕಾಡಿನಲ್ಲಿ ಪಂಚಲಿಂಗದರ್ಶನ ಜಾತ್ರೆ ನಡೆಯುತ್ತದೆ. ಕಾರ್ತಿಕಮಾಸ ಪೂರ್ತಿ ಪ್ರತಿನಿತ್ಯವೂ ಮಹಾನದಿಯಲ್ಲಿ ಪ್ರಾತಃಕಾಲ ಸ್ನಾನ ಮಾಡುವುದರಿಂದ ಮಹಾಪಾತಕಗಳು ನಾಶವಾಗುತ್ತವೆ. ವನದಲ್ಲಿ ಧಾತ್ರೀ (ನೆಲ್ಲಿಯ) ಮರದ ಸಮೀಪದಲ್ಲಿ ವಿಷ್ಣುವನ್ನು ಪೂಜಿಸಿ ಹೋಮ, ಭೋಜನ ಮೊದಲಾದವನ್ನು ಮಾಡುವುದು (ಧಾತ್ರೀಹವನ) ಈ ತಿಂಗಳಿನಲ್ಲೇ. ಮಾಂಸಭಕ್ಷಣ ಮತ್ತು ಪರಾನ್ನಭೋಜನ ಈ ಮಾಸದಲ್ಲಿ ನಿಷಿದ್ಧವಾಗಿವೆ.

ಈ ಮಾಸದ ಶುಕ್ಲ ಪಕ್ಷ ಪ್ರಥಮಾ ತಿಥಿಯ ದಿವಸದಲ್ಲಿ ಅಭ್ಯಂಗಸ್ನಾನ, ಹೊಸ ಬಟ್ಟೆಯನ್ನುಡುವುದು, ಬಲೀಂದ್ರಪೂಜೆ, ದೀಪೋತ್ಸವ, ಗೋಕ್ರೀಡನ, ಗೋವರ್ಧನ ಪೂಜೆ, ಮಾರ್ಗಪಾಲೀಬಂಧನ, ದ್ಯೂತ – ಇವು ವಿಹಿತವಾಗಿವೆ. ಕೆಲವು ಜನಾಂಗಕ್ಕೆ ಈ ದಿವಸ ವರ್ಷ ಪ್ರಾರಂಭದ ದಿನ. ಅವರು ಹೊಸ ಲೆಕ್ಕವನ್ನು ಇಂದಿನಿಂದ ಪ್ರಾರಂಭಿಸುತ್ತಾರೆ. ಈ ದಿವಸವೇ ದೀಪಾವಳಿ.

ಶುಕ್ಲ ದ್ವಿತೀಯ ತಿಥಿಯ ದಿವಸಕ್ಕೆ ಯಮದ್ವಿತೀಯಾ ಎಂದು ಹೆಸರು. ಅಂದು ವ್ಯಕ್ತಿ ಸ್ವಗೃಹದಲ್ಲಿ ಮನೆಯಲ್ಲಿ ಊಟ ಮಾಡದೆ ಸಹೋದರಿಯರು ಬಡಿಸಿದುದನ್ನು ಉಣ್ಣಬೇಕು. ಇದರಿಂದ ಧನ ಧಾನ್ಯ ಸೌಖ್ಯಗಳು ವೃದ್ಧಿಸುತ್ತವೆ. ಸಹೋದರಿಯರಿಗೆ ಸೌಮಂಗಲ್ಯವೂ ಭ್ರಾತೃಸೌಖ್ಯವೂ ಲಭಿಸುತ್ತವೆ. ಈ ದಿವಸದಲ್ಲಿ ಯಮುನಾ ನದೀಸ್ನಾನವೂ ಯಮುನಾ ಪೂಜೆಯೂ ಶಾಸ್ತ್ರದಲ್ಲಿ ವಿಹಿತವಾಗಿವೆ.

ಕಾರ್ತಿಕ ಶುಕ್ಲ ಏಕಾದಶಿ ದಿವಸ ಪ್ರಾರಂಭಿಸಿ ಐದು ದಿನಗಳ ಕಾಲ ಭೀಷ್ಮಪಂಚಕ ವ್ರತವನ್ನು ಮಾಡುತ್ತಾರೆ. ವಿಷ್ಣುದೀಕ್ಷೆ ಮತ್ತು ಶಿವದೀಕ್ಷೆಗೆ ಈ ದಿವಸ ಶ್ರೇಷ್ಠವಾದುದು. ಈ ಏಕಾದಶಿಗೆ ಉತ್ಥಾನೈಕಾದಶೀ ಎಂದೂ ದ್ವಾದಶಿಗೆ ಉತ್ಥಾನದ್ವಾದಶೀ ಎಂದೂ ಹೆಸರು. ಆಷಾಢ ಶುಕ್ಲ ಏಕಾದಶಿಯಂದು ಶಯನೋತ್ಸವವಾದ ವಿಷ್ಣುವಿಗೆ ಈ ದಿವಸ ಪ್ರಬೋಧೋತ್ಸವ ನಡೆಯುತ್ತದೆ. ತುಲಸೀವಿವಾಹಕ್ಕೂ ಇದೇ ಕಾಲ. ಶುಕ್ಲ ದ್ವಾದಶೀ ದಿವಸದಲ್ಲಿ ಪ್ರಾರಂಭಿಸಿದ ಚಾತುರ್ಮಾಸ್ಯವ್ರತ ಇಂದಿಗೆ ಮುಕ್ತಾಯವಾಗುತ್ತದೆ. ಕಾರ್ತಿಕ ಶುಕ್ಲ ಚತುರ್ದಶಿಗೆ ವೈಕುಂಠ ಚತುರ್ದಶಿ ಎಂದು ಹೆಸರು. ಇದರಲ್ಲಿ ವಿಷ್ಣು ಮತ್ತು ಶಿವಪೂಜೆಗಳು ವಿಹಿತವಾಗಿವೆ. ಈ ತಿಂಗಳ ಕೃಷ್ಣಪಕ್ಷದ ಅಷ್ಟಮಿಗೆ ಕಾಲಾಷ್ಟಮಿ ಎಂದು ಹೆಸರು. ಕಾಲಭೈರವಪೂಜೆ ಅಂದಿನ ವಿಶೇಷ.

ಕಾರ್ತಿಕ ಶುಕ್ಲ ಪ್ರಥಮಾ ತಿಥಿಯ ದಿವಸ ಬುಧವಾರವಾದರೆ ಮುಂದೆ ಬರುವ ಮಳೆ ಮಧ್ಯಮವಾಗಿರುತ್ತದೆ. ಶುಕ್ಲ ದ್ವಿತೀಯ ತೃತೀಯಾ ದಿವಸಗಳಲ್ಲಿ ಮಳೆಯ ಲಕ್ಷಣ ಕಂಡುಬಂದು ಮಳೆ ಬೀಳದಿದ್ದರೆ ಅದರ ಮುಂದಿನ ವರ್ಷದಲ್ಲಿ ಹೆಚ್ಚಾಗಿ ಮಳೆ ಬೀಳುತ್ತದೆ. ಶುಕ್ಲ ಏಕಾದಶಿ ದಿವಸ ಮೋಡ ಕಂಡು ಬಂದರೆ ಆಷಾಢಮಾಸದಲ್ಲಿ ಖಂಡಿತ ಮಳೆ ಬೀಳುತ್ತದೆ. ಈ ತಿಂಗಳಿನಲ್ಲಿ ಚಂದ್ರ, ಸೂರ್ಯರ ಗ್ರಹಣವಾದರೆ ಭೂಕಂಪನ ಉಲ್ಕಾಪಾತಾದಿ ದುರ್ನಿಮಿತ್ತಗಳು ಕಾಣಿಸಿಕೊಳ್ಳುತ್ತವೆ. ಕಾರ್ತಿಕಮಾಸದ ಎಲ್ಲ ಸೋಮವಾರಗಳಲ್ಲೂ ಶಿವದೇವಾಯಲಗಳಲ್ಲಿ ದೀಪೋತ್ಸವವನ್ನು ತಪ್ಪದೆ ವಿಶೇಷವಾಗಿ ಆಚರಿಸುತ್ತಾರೆ. (ಎಸ್.ಎನ್.ಕೆ.)

**ಕಾರ್ತಿಕೇಯ :** ಪಾರ್ವತೀಪುತ್ರನಾದ ಕುಮಾರಸ್ವಾಮಿ. ಷಣ್ಮುಖನೆಂಬ ಹೆಸರೂ ಇದೆ. ಕೃತ್ತಿಕೆಯರು ಇವನ ಸಾಕುತಾಯಿಯರು. ಇವನ ಜನ್ಮವಿಚಾರದಲ್ಲಿ ಅನೇಕ ಕಥೆಗಳಿವೆ. ಮಹಾಭಾರತದ ವನಪರ್ವದಲ್ಲಿನ ಕಾರ್ತಿಕೇಯಸ್ತವ, ಇವನಿಗೆ ಐವತ್ತೊಂದು ಹೆಸರುಗಳನ್ನು ಸೂಚಿಸುತ್ತದೆ. ಈಶ್ವರನ ಅಗ್ನಿತತ್ತ್ವದಿಂದ ಸ್ಕಂದನಾಗಿ ಜನಿಸಿ ಆರು ಜನ ಮಾತೆಯರ ಹಾಲು ಕುಡಿದು ಷಾಣ್ಮುತುರನಾಗಿ ಶರವಣದಲ್ಲಿ ಬೆಳೆದವನಿವನು. ಶಕ್ತಿಧರನಾಗಿ ದೇವಸೈನಕ್ಕೆ ಅಧಿಪತಿಯಾಗಿ ಅವರಿಗಾಗಿ ರಾಕ್ಷಸ ಸಂಹಾರ ಮಾಡಿದ. ಕ್ರೌಂಚಪರ್ವತ ಧಾರಣ ಮಾಡಿದ. ನವಿಲು ಈತನ ವಾಹನ.

ದ್ರಾವಿಡ ದೇವತೆಗಳಲ್ಲಿ ಕುಮಾರಸ್ವಾಮಿಗೆ ಕಂದ, ಮುರುಗ, ಕುರುಂಜಿಯಾಂಡವನ್, ಸುಬ್ರಹ್ಮಣ್ಯ ಮುಂತಾದ ಹೆಸರುಗಳಿದ್ದು ಅತ್ಯುಚ್ಚಸ್ಥಾನ, ಪೂಜೆ ಸಲ್ಲುತ್ತದೆ. ಭಕ್ತಿಪಂಥಿಗಳಾದ ಆಳ್ವಾರುಗಳೂ ಇತರರೂ ತಮ್ಮ ಅನೇಕ ಹಾಡುಗಳಲ್ಲಿ ಮುರುಗ ಸ್ವಾಮಿಯನ್ನು ವಿಪುಲವಾಗಿ ಕೊಂಡಾಡಿದ್ದಾರೆ. ಸ್ಕಾಂದಪುರಾಣ, ಶಿವಮಹಾಪುರಾಣ, ಕಾಳಿದಾಸನ ಕುಮಾರಸಂಭವಗಳು ಈ ದೇವತೆಯ ಮಹಿಮಾವಿಶೇಷವನ್ನು ಸಾರುತ್ತವೆ. (ಸಿ.ಜಿ.ಪಿ.)

**ಕಾರ್ಥೇಜ್ :** ಪ್ರಾಚೀನ ಪ್ರಸಿದ್ಧ ನಗರಗಳಲ್ಲೊಂದು. ಇದನ್ನು ಪ್ರ.ಶ.ಪೂ. 814ರಲ್ಲಿ ಫಿನೀಷಿಯನರು ವ್ಯಾಪಾರ ಸೌಕರ್ಯಕ್ಕಾಗಿ ಆಫ್ರಿಕದ ಉತ್ತರ ತೀರದಲ್ಲಿ ಸ್ಥಾಪಿಸಿದರು. ಟ್ಯೂನಿಸ್ ನಗರದ ನೆರೆಯಲ್ಲಿರುವ ಕಾರ್ಥೇಜಿನಲ್ಲಿ ಬಂದರು ನಿರ್ಮಾಣಕ್ಕೆ ಅನುಕೂಲಕರವಾದ ಸನ್ನಿವೇಶವೂ ವ್ಯವಸಾಯೋಪಯುಕ್ತವಾದ ಭೂಮಿಯೂ ಇರುವುದು ಒಂದು ವೈಶಿಷ್ಟ್ಯ. ಫಿನೀಷಿಯನ್ ರಾಜ್ಯ ಸ್ವತಂತ್ರವಾಗಿದ್ದಾಗ ಕಾರ್ಥೇಜ್ ಅದರ ಅಧೀನದಲ್ಲಿತ್ತು. ಆ ರಾಜ್ಯ ಪರ್ಷಿಯಕ್ಕೆ ಸೇರಿದ ಮೇಲೆ ಕಾರ್ಥೇಜ್ ಸ್ವತಂತ್ರವಾಗಿ ಬಹುಬೇಗ ತನ್ನ ರಾಜ್ಯವನ್ನು ವಿಸ್ತರಿಸಿತು. ಪ್ರ.ಶ.ಪೂ. 550ರಲ್ಲಿ ಮಲ್‍ಚೂನನ ನೇತೃತ್ವದಲ್ಲಿ ಪಶ್ಚಿಮ ಸಿಸಿಲಿ, ಸಾರ್ಡಿನಿಯಗಳನ್ನು ಗೆದ್ದರೂ ಅನಂತರ ಸಾರ್ಡಿನಿಯದಲ್ಲಿ ಕಾರ್ಥೇಜಿಯನರು ಸೋತರು. ತರುವಾಯ ಮ್ಯಾಗೋನ ನೇತೃತ್ವದಲ್ಲಿ ಸಾರ್ಡಿನಿಯವನ್ನೂ ಗ್ರೀಕರಿಂದ ಬಾಲೇರಿಕ್ ದ್ವೀಪಗಳನ್ನೂ ಗೆದ್ದರು. ಮೈನಾರ್ಕ, ಮೆಚಾರ್ಕ ದ್ವೀಪಗಳೂ ಇವರ ವಶದಲ್ಲಿದ್ದುವು. ಆ ಕಾಲದಲ್ಲಿ ಐಬೀರಿಯ ಪರ್ಯಾಯದ್ವೀಪಕ್ಕೂ ಅವರ

ರೋಮನ್ನರ ಕ್ರೀಡಾಂಗಣ, ಕಾರ್ಥೇಜ್

ಅಧಿಕಾರ ವಿಸ್ತೃತವಾಯಿತು. ಟ್ಯುನಿಷಿಯ ಮತ್ತು ಆಲ್ಜೀರಿಯ ಪ್ರದೇಶಗಳ ಬಹುಭಾಗಗಳು ಅವರ ಅಧೀನಕ್ಕೆ ಬಂದುವು. ಪ್ರ.ಶ.ಪೂ. 460ರಲ್ಲಿ ಹ್ಯಾನ್ನೋನ ನೇತೃತ್ವದಲ್ಲಿ ಅವರ ನೌಕಾಸೈನ್ಯ ಪಶ್ಚಿಮ ಆಫ್ರಿಕ ತೀರಕ್ಕೆ ಹೋದಾಗ, ಅಲ್ಲಿಯ ಬಹುಭಾಗ ಕಾರ್ಥೇಜಿನ ಪ್ರಭಾವಕ್ಕೊಳಗಾಗಿತ್ತು. ಅವರು ಒರಾನ್ ಮತ್ತು ಟ್ಯಾಂಜಿಯರ್ ನಡುವಣ ತೀರಪ್ರದೇಶದಲ್ಲಿ ಅನೇಕ ವಸಾಹತುಗಳನ್ನು ಸ್ಥಾಪಿಸಿದರು. ಪ್ರ.ಶ.ಪೂ. 409ರಿಂದ 100 ವರ್ಷಗಳ ಕಾಲ ಗ್ರೀಕರೊಂದಿಗೆ ಸಿಸಿಲಿಯ ಸ್ವಾಮ್ಯಕ್ಕಾಗಿ ಹೋರಾಡುತ್ತಿದ್ದ ಕಾರ್ಥೇಜಿಯನರಿಂದ ಸೆಲಿನಸ್ ಮತ್ತು ಹಿಮೆರಾಗಳು ನಾಶವಾದುವು. ಪ್ರ.ಶ.ಪೂ. 406ರಲ್ಲಿ ಹ್ಯಾನಿಬಾಲ್ ಮತ್ತು ಹ್ಯಾಮಿಲ್ಕಾರರ ನಾಯಕತ್ವದಲ್ಲಿ ಅಗ್ರಿಗೆಂಟಮ್, ಗೆಲ ಮತ್ತು ಕ್ಯಮರಿನಾಗಳನ್ನು ವಶಪಡಿಸಿಕೊಂಡು, ಸಿರಕ್ಯೂಸಿನ ದೊರೆ ಡಯೊನಿಸಿಸನೊಂದಿಗೆ ಇವರು ಕಾದಿದರು. ಈ ಹೋರಾಟಗಳು ಪ್ರ.ಶ.ಪೂ. 311ರ ವರೆಗೂ ನಡೆದು ಕೊನೆಗೆ ಕಾರ್ಥೇಜಿಯನರು ವಿಜಯಿಗಳಾದರೂ ಪ್ರ.ಶ.ಪೂ. 277ರಲ್ಲಿ ಪೈರ್‍ಹಸ್‍ನೊಂದಿಗೆ ನಡೆದ ಘರ್ಷಣೆಗಳ ಫಲವಾಗಿ ಸಿಸಿಲಿಯ ಮೇಲೆ ಪೂರ್ಣ ಸ್ವಾಮ್ಯ ಸ್ಥಾಪಿಸಲು ಸಾಧ್ಯವಾಗಲಿಲ್ಲ. ಕಾರ್ಥೇಜ್ ಎಷ್ಟರಮಟ್ಟಿಗೆ ಪ್ರಾಮುಖ್ಯ ಗಳಿಸಿಕೊಂಡಿತೆಂದರೆ, ಪಶ್ಚಿಮ ಮೆಡಿಟರೇನಿಯನ್ ಸಮುದ್ರವನ್ನು ಕಾರ್ಥೇಜಿನ ಸರೋವರವೆಂದೇ ಜನ ಕರೆಯುತ್ತಿದ್ದರು. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ವಾಣಿಜ್ಯ ಮತ್ತು ಸೈನಿಕ ಶಕ್ತಿಯಿಂದ ಮುಂದುವರಿದ ಕಾರ್ಥೇಜ್ ಇಟಲಿಯಲ್ಲಿ ಅಗ್ರಸ್ಥಾನ ಪಡೆದಿದ್ದ ರೋಮಿನ ಅಭ್ಯುದಯವನ್ನು ಪ್ರತಿಭಟಿಸಿತು. ರಾಜ್ಯಾಕ್ರಮಣನೀತಿಯನ್ನು ಮುಂದುವರಿಸಿ ಇಟಲಿಯೆಲ್ಲವನ್ನೂ ಕಬಳಿಸಿದ ರೋಂ, ಕಾರ್ಥೇಜಿನ ವಶದಲ್ಲಿದ್ದ ಸಿಸಿಲಿ, ಸಾರ್ಡಿನಿಯ ಮತ್ತು ಕಾರ್ಸಿಕ ಪ್ರದೇಶಗಳನ್ನೂ ವಶಪಡಿಸಿಕೊಳ್ಳಲು ಹಾತೊರೆಯಿತು. ರೋಮಿನ ಈ ವಿಸ್ತರಣಾಕಾಂಕ್ಷೆಗೆ ಕಾರ್ಥೇಜ್ ಅಡ್ಡ ನಿಂತಿತ್ತು. ಕಾರ್ಥೇಜ್ ರಾಜ್ಯದ ಶಕ್ತಿ ಕುಂದುವವರೆಗೂ ರೋಂ ಸಾಮ್ರಾಜ್ಯದ ಉತ್ಕರ್ಷ ಸಾಧ್ಯವಿಲ್ಲವೆಂಬುದು ಖಚಿತವಾಯಿತು. ಪರಿಣಾಮವಾಗಿ ಉಭಯ ಪಕ್ಷಗಳಿಗೂ ಯುದ್ಧ ಅನಿವಾರ್ಯವಾಯಿತು.

ರೋಮನರು ವೀರರು, ಯುದ್ಧ ಕೌಶಲವನ್ನೂ ರಾಜಕೀಯ ನಿಪುಣತೆಯನ್ನೂ ಹೊಂದಿದ್ದವರು. ಕಾರ್ಥೇಜಿನವರು ವ್ಯಾಪಾರಿಗಳು. ಉತ್ಸಾಹಪರತೆ ಮತ್ತು ಐಶ್ವರ್ಯದಲ್ಲಿ ಕಾರ್ಥೇಜ್ ಅಗ್ರಸ್ಥಾನ ಪಡೆದಿತ್ತು. ಸಮುದ್ರವ್ಯಾಪಾರವೇ ಕಾರ್ಥೇಜಿನ ಐಶ್ವರ್ಯಕ್ಕೆ ತಳಹದಿ. ಅವರ ಹಡಗುಗಳು ಭಾರತದಿಂದ ಐರ್ಲೆಂಡಿನವರೆಗೂ ವ್ಯಾಪಾರ ನಡೆಸುತ್ತಿದ್ದುವು. ಕಾರ್ಥೇಜ್ ನೌಕಾಬಲವನ್ನೂ ಸೈನ್ಯವನ್ನೂ ಹೊಂದಿತ್ತು. ವಾಣಿಜ್ಯೋದ್ಯಮಿಗಳೇ ಸರ್ಕಾರ ನಡೆಸುತ್ತಿದ್ದುದರಿಂದ ಅವರು ಜನರಿಗೆ ಯಾವ ರಾಜಕೀಯ ಹಕ್ಕುಗಳನ್ನೂ ಕೊಟ್ಟಿರಲಿಲ್ಲ. ಕಾರ್ಥೇಜಿನ ಸೈನ್ಯದಲ್ಲಿದ್ದವರು ವೇತನಸ್ಥ ಯೋಧರು; ಸೈನಿಕ ವೃತ್ತಿಯವರು. ಐಶ್ವರ್ಯವಂತರಾದ ಕಾರ್ಥೇಜಿನವರು ತಮಗಾಗಿ ಹೋರಾಡಲು ಹಣ ಕೊಟ್ಟು ಪಾಶ್ಚಾತ್ಯರನ್ನು ಸೈನ್ಯಕ್ಕೂ ಸಿಬ್ಬಂದಿಗೂ ನೇಮಿಸಿಕೊಂಡಿದ್ದರು. ಕಾರ್ಥೇಜ್ ಪ್ರಾಚೀನ ವಿಶ್ವ ನಗರಗಳಲ್ಲೆಲ್ಲ ಅತ್ಯಂತ ಸಂಪದ್ಭರಿತವಾದ ರಾಜ್ಯವಾಗಿತ್ತು. ವೈಜ್ಞಾನಿಕ ರೀತಿಯಿಂದ ವ್ಯವಸಾಯ ಮಾಡುತ್ತಿದ್ದುದರಿಂದಲೂ ಪೂರ್ವ-ಪಶ್ಚಿಮಗಳ ನಡುವೆ ನಡೆಯುತ್ತಿದ್ದ ವ್ಯಾಪಾರದ ಸ್ವಾಮ್ಯವನ್ನಿಟ್ಟುಕೊಂಡಿದ್ದರಿಂದಲೂ ಅದು ಅಷ್ಟು ಪ್ರಬಲ ರಾಜ್ಯವಾಗಿ ಬೆಳೆಯುವುದಕ್ಕೆ ಅವಕಾಶವಾಯಿತುಎಂದು ಇತಿಹಾಸಕಾರ ಪೊಲಿಬಿಯಸ್ ಹೇಳಿದ್ದಾನೆ.

ಇಂಥ ರಾಜ್ಯವನ್ನು ಗೆಲ್ಲಲು ರೋಮನರು ಮೂರು ಯುದ್ಧಗಳನ್ನು ಮಾಡಬೇಕಾಯಿತು. ಇವು ಪ್ಯೂನಿಕ್ ಯುದ್ಧಗಳೆಂದು ಹೆಸರಾಗಿವೆ. ಬಾರ್ಕ ಕುಲಕ್ಕೆ ಸೇರಿದ ವೀರಾಗ್ರಣಿಗಳಾದ ಹ್ಯಾಮಿಲ್ಕರ್ ಬಾರ್ಕ, ಅವನ ಅಳಿಯ ಹ್ಯಾಸಡ್ರುಬಾಲ್ ಮತ್ತು ಮಗ ಹ್ಯಾನಿಬಾಲ್- ಇವರು ಕಾರ್ಥೇಜಿನ ಪರವಾಗಿ ರೋಂ ವಿರುದ್ಧ ಯುದ್ಧಮಾಡಿ ಅಸಹಾಯಶೂರರೆಂದು ಶಾಶ್ವತ ಕೀರ್ತಿ ಗಳಿಸಿದರು.

**ಒಂದನೆಯ ಪ್ಯೂನಿಕ್ ಯುದ್ಧ :** ಪ್ರ.ಶ.ಪೂ. 264ರಿಂದ 241ರ ವರೆಗೆ ನಡೆಯಿತು. ಮೆಡಿಟರೇನಿಯನ್ ಪ್ರದೇಶದಲ್ಲಿ ಕಾರ್ಥೇಜ್ ಯುದ್ಧ ಚಟುವಟಿಕೆಗಳನ್ನು ಪ್ರಾರಂಭಿಸಿದುದು ರೋಮನರಿಗೆ ಆತಂಕವನ್ನುಂಟುಮಾಡಿತು. ತಮಗೂ ಅಪಾಯವಿರುವುದನ್ನು ಕಂಡು ಅವರು ಎಚ್ಚೆತ್ತರು. ವ್ಯಾಪಾರ ಹಾಗೂ ಯೋಧರಿಗೆ ಹೆಸರುಪಡೆದಿದ್ದ ಸಿಸಿಲಿ ದ್ವೀಪವನ್ನು ವಶಪಡಿಸಿಕೊಳ್ಳುವ ರೋಮನರ ಉದ್ದೇಶ ಈ ಯುದ್ಧಕ್ಕೆ ನಾಂದಿಯಾಯಿತು. 23 ವರ್ಷಕಾಲ ನಡೆದ ಈ ಯುದ್ಧದಲ್ಲಿ ರೋಮನರು ಏಗೇಟ್ಸ್ ದ್ವೀಪಗಳಲ್ಲಿ ಪ್ರ.ಶ.ಪೂ. 241ರಲ್ಲಿ ಅಂತಿಮ ವಿಜಯ ಗಳಿಸಿದರು. ಸೋತು ನಿರಾಶರಾದ ಕಾರ್ಥೇಜಿನವರು ತಮ್ಮ ಸೈನ್ಯವನ್ನು ವಿಸರ್ಜಿಸಬೇಕೆಂದಾಗ ಸೈನಿಕರು ದಂಗೆಯೆದ್ದು ಲೂಟಿ ಮಾಡಿ, ಕಾರ್ಥೇಜ್ ನಗರವನ್ನೇ ಮುತ್ತಿದರು. ಹ್ಯಾಮಿಲ್ಕರ್ ಬಾರ್ಕ ಅವರನ್ನು ಸದೆಬಡಿದು ನಗರವನ್ನುಳಿಸಿದ. ಅದೇ ವರ್ಷ ಕಾರ್ಥೇಜಿಯನರು ರೋಮನನೊಡನೆ ಒಪ್ಪಂದಮಾಡಿಕೊಂಡು ಸಿಸಿಲಿಯನ್ನು ಬಿಟ್ಟುಕೊಟ್ಟುದಲ್ಲದೆ ರೋಮನರಿಗೆ ಯುದ್ಧಪರಿಹಾರವನ್ನು ಕೊಡಬೇಕಾಯಿತು. ಕೆಲವು ವರ್ಷಗಳ ಅನಂತರ ರೋಮನರು ಸಿಸಿಲಿಯ ಜೊತೆಗೆ ಸಾರ್ಡಿನಿಯ ಮತ್ತು ಕಾರ್ಸಿಕ ದ್ವೀಪಗಳನ್ನು ವಶಪಡಿಸಿಕೊಂಡು ತಮ್ಮ ಅಧಿಕಾರವನ್ನು ಮತ್ತೆ ಸ್ಥಾಪಿಸಿದರು. ಅನಂತರ ಪ್ರ.ಶ.ಪೂ. 237ರ ಸುಮಾರಿನಲ್ಲಿ ಕಾರ್ಥೇಜ್ ಸ್ಪೇನಿನ ಆಕ್ರಮಣ ಪ್ರಾರಂಭಿಸಿತು. ಪ್ರ.ಶ.ಪೂ. 228ರಲ್ಲಿ ಹ್ಯಾಮಿಲ್ಕರನ ಮರಣದವರೆಗೂ ಆಕ್ರಮಣ ಕಾರ್ಯ ಮುಂದುವರಿಯಿತು. ಅವನ ಅಳಿಯ ಹ್ಯಾಸಡ್ರುಬಾಲ್ ರೋಮಿನೊಂದಿಗೆ ಸಂಧಿ ಮಾಡಿಕೊಂಡು ಎಬ್ರೋ ನದಿಯೇ ಎರಡು ರಾಜ್ಯಗಳ ನಡುವಣ ಮೇರೆಯೆಂದು ನಿರ್ಧರಿಸಿದ. ಅನಂತರ ಹ್ಯಾಮಿಲ್ಕರನ ಮಗ ಹ್ಯಾನಿಬಾಲ್ ಅಧಿಕಾರಕ್ಕೆ ಬಂದ. ಆತ ಎಬ್ರೋವನ್ನು ದಾಟಿ ಗಾಲ್ ದೇಶದ ಮಾರ್ಗವಾಗಿ ಇಟಲಿಗೆ ನುಗ್ಗಿದುದೇ ಎರಡನೆಯ ಪ್ಯೂನಿಕ್ ಯುದ್ಧಕ್ಕೆ ಕಾರಣವಾಯಿತು.

**ಎರಡನೆಯ ಪ್ಯೂನಿಕ್ ಯುದ್ಧ :** ಪ್ರ.ಶ.ಪೂ. 218-201 ವರೆಗೆ ನಡೆಯಿತು. ಹ್ಯಾನಿಬಾಲ್ ಯುದ್ಧವೆಂದೂ ಕರೆಯುವುದುಂಟು. ಹ್ಯಾನಿಬಾಲ್ ಪರಾಕ್ರಮಿ. ಮೆಡಿಟರೇನಿಯನ್ ಪ್ರದೇಶದಲ್ಲಿ ಕಾರ್ಥೇಜಿನ ಕೀರ್ತಿಪತಾಕೆಯನ್ನು ಎತ್ತಿಹಿಡಿಯುವುದು ಅವನ ಜೀವನಾಕಾಂಕ್ಷೆ. ಅವನ ಆಕ್ರಮಣ ನೀತಿ ರೋಮನರನ್ನು ತಲ್ಲಣಗೊಳಿಸಿತ್ತು. ಹ್ಯಾನಿಬಾಲ್ ತನ್ನ ತಂದೆ ಹ್ಯಾಮಿಲ್ಕರ್ ಬಾರ್ಕನೊಡನೆ ಹೋಗಿ ಸ್ಪೇನಿನಲ್ಲಿ ಅಧಿಕಾರ ಸ್ಥಾಪಿಸಿದ. ಇಟಲಿಯನ್ನು ವಶಪಡಿಸಿಕೊಳ್ಳಲು ಗುಟ್ಟಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದ. ಪ್ರ.ಶ.ಪೂ. 219ರಲ್ಲಿ ಆತ ಸೆಗುಂಟಂಗೆ ಮುತ್ತಿಗೆ ಹಾಕಿದ. ರೋಮನರು ಸ್ಪೇನ್ ಮತ್ತು ಆಫ್ರಿಕಗಳಲ್ಲಿ ಯುದ್ಧಸಿದ್ಧತೆ ಮಾಡಿಕೊಳ್ಳುತ್ತಿದ್ದಾಗ ಹ್ಯಾನಿಬಾಲ್ ಪ್ರಬಲಸೈನ್ಯದೊಡನೆ ಇಟಲಿಗೆ ನುಗ್ಗಿದ. ಕೂಡಲೆ ಕಾರ್ನಿಲಿಯಸ್ ಸಿಪಿಯೋ ಎಂಬ ಕಾನ್ಸಲ್ ಭಾರಿ ಸೈನ್ಯದೊಂದಿಗೆ ಉತ್ತರ ಇಟಲಿಯಲ್ಲಿ ಹ್ಯಾನಿಬಾಲನನ್ನು ಎದುರಿಸಿದ. ಹ್ಯಾನಿಬಾಲ್ ತನ್ನ ಅಸಾಧಾರಣ ಶಕ್ತಿಸಾಮರ್ಥ್ಯಗಳಿಂದ ಟ್ಯೂರಿನ್ ನಗರವನ್ನು ಗೆದ್ದು ಪೋ ನದಿಯ ಮೂಲಕ ನಡೆದು, ಪ್ರ.ಶ.ಪೂ. 217ರಲ್ಲಿ ಟಿಸಿನಸ್ ನದಿಯ ಪಕ್ಕದಲ್ಲಿ ಸಿಪಿಯೋ ವಿರುದ್ಧ ಯುದ್ಧಮಾಡಿ ಗೆದ್ದ. ಟ್ರೆಬಿಯಾ ನದೀ ದಡದಲ್ಲಿ ನಡೆದ ಮತ್ತೊಂದು ಯುದ್ಧದಲ್ಲೂ ಜಯ ಗಳಿಸಿದ. ಆದರೂ ರೋಮನರು ಪೂರ್ಣವಾಗಿ ಸೋತಿರಲಿಲ್ಲ. ಯುದ್ಧ ಮುಂದುವರಿಯಿತು. ಟ್ರಾಸಿಮನೋ ಕದನದಲ್ಲಿ ಪುನಃ ರೋಮನರು ಸೋತರು. ರೋಮನರು ಫೇಬಿಯಸ್ ಮ್ಯಾಕ್ಸಿಮಸನ ನೇತೃತ್ವದಲ್ಲಿ ಕಿರುಕುಳ ಯುದ್ಧ ಪ್ರಾರಂಭಿಸಿದರು. ಸಂಚಾರಮಾರ್ಗಗಳನ್ನು

ನಾಶಪಡಿಸಿ ಶತ್ರುಗಳಿಗೆ ನೀರು ಆಹಾರ ಸಿಕ್ಕದಂತೆ ಕ್ರಮ ಕೈಕೊಂಡರು. ಆದರೂ ಶೌರ್ಯ ಸಾಹಸಗಳಿಂದ ಹ್ಯಾನಿಬಾಲ್ ಹೋರಾಡಿ ಪ್ರ.ಶ.ಪೂ. 216ರಲ್ಲಿ ಕ್ಯಾನೇ ಕದನದಲ್ಲಿ ರೋಮನರನ್ನು ಪೂರ್ಣವಾಗಿ ಸೋಲಿಸಿದ. ರೋಮನರು ಧೃತಿಗೆಡದೆ ಹೋರಾಡಿ ಪ್ರ.ಶ.ಪೂ. 212ರಲ್ಲಿ ಸಿರಕ್ಯೂಸನ್ನು ಹಿಡಿದರು. ಸಿಸಿಲಿ, ಸಾರ್ಡಿನಿಯ ಮತ್ತು ಅಪೋಲಿಯ ರೋಮನರ ವಶವಾದುವು. ಪಬ್ಲಿಯಸನ ಮಗ 24 ವಯಸ್ಸಿನ ಕರ್ನಿಲಿಯಸ್ ಸಿಪಿಯೋ ರಾಷ್ಟ್ರದ ರಕ್ಷಣೆಗೆ ಅನುವಾದ. ಪ್ರ.ಶ.ಪೂ. 207ರಲ್ಲಿ ಮೆಟರಾಸ್ ನದಿಯ ಬಳಿಯಲ್ಲಿ ನಡೆದ ಯುದ್ಧದಲ್ಲಿ ಹ್ಯಾನಿಬಾಲ್ ಸೋತು ಬ್ರೂಟಿಯಂಗೆ ಓಡಿದಾಗ ಕಾರ್ಥೇಜಿನ ಸೈನ್ಯದ ಒಂದು ಭಾಗ ನಾಶವಾಯಿತು. ಪ್ರ.ಶ.ಪೂ. 206ರಲ್ಲಿ ಸಿಪಿಯೋ ಕಾರ್ಥೇಜಿಯನರನ್ನು ಸ್ಪೇನಿನಿಂದ ಓಡಿಸಿದ. ಸ್ಪೇನ್ ರೋಮಿಗೆ ಸೇರಿತು. ಸಿಪಿಯೋ ಆಫ್ರಿಕದ ಮೇಲೆ ದಂಡೆತ್ತಿಹೋಗಿ ಪ್ರ.ಶ.ಪೂ. 202ರಲ್ಲಿ ನಡೆದ ಝಾಮ ಕದನದಲ್ಲಿ ಪೂರ್ಣ ಜಯಗಳಿಸಿದ. ಪ್ರ.ಶ.ಪೂ. 201ರಲ್ಲಿ ಉಭಯ ಪಕ್ಷಗಳಲ್ಲಿ ನಡೆದ ಶಾಂತಿ ಒಪ್ಪಂದದ ಪ್ರಕಾರ ಕಾರ್ಥೇಜ್ ರೋಮನರಿಗೆ ಯುದ್ಧದ ಖರ್ಚನ್ನು ಕೊಡಬೇಕಾಗಿತ್ತಲ್ಲದೆ ತನ್ನ ವಶದಲ್ಲಿದ್ದ ಹೊರಗಿನ ಪ್ರದೇಶಗಳನ್ನೆಲ್ಲ ರೋಮಿಗೆ ಒಪ್ಪಿಸಬೇಕಾಗಿತ್ತು. ರೋಮಿನ ಒಪ್ಪಿಗೆಯಿಲ್ಲದೆ ಯುದ್ಧಕಾರ್ಯದಲ್ಲಿ ತೊಡಗುವುದಿಲ್ಲವೆಂದು ಕಾರ್ಥೇಜ್ ಒಪ್ಪಿಕೊಂಡಿತು. ರೋಮನರ ಅಧಿಕಾರ ಮೆಡಿಟರೇನಿಯನ್ ಪ್ರದೇಶಕ್ಕೆ ಹರಡಿತು. ಸಿಪಿಯೋ ಹೆಸರು ಅಮರವಾಯಿತು. ತನ್ನ ಆಫ್ರಿಕ ಪ್ರದೇಶಗಳನ್ನೂ ನೌಕಾಬಲವನ್ನೂ ಕಳೆದುಕೊಂಡರೂ ಕಾರ್ಥೇಜ್ ಕ್ಷಿಪ್ರವಾಗಿ ಪುನಃ ಚೇತರಿಸಿಕೊಂಡಿತು. ಈಜಿಪ್ಟಿನ ಟಾಲೆಮಿ ದೊರೆಗಳ ಸಹಾಯದಿಂದ ಹ್ಯಾನಿಬಾಲ್ ತನ್ನ ಸೈನ್ಯಬಲದಲ್ಲಿ ಗಜಸೈನ್ಯವನ್ನು ಬಲಗೊಳಿಸಿದ. ಈ ಮಧ್ಯೆ ನ್ಯೂಮಿಡಿಯದ ದೊರೆ ಮಸಿನಿಸ್ಸ ಕಾರ್ಥೇಜಿನ ಕೆಲಭಾಗವನ್ನು ವಶಪಡಿಸಿಕೊಂಡಾಗ ಮಧ್ಯಸ್ಥಿಕೆಗೆ ಬಂದ ರೋಮನ್ ಸೆನ್ಸಾರ್ ಕ್ಯಾಟೋ ಕಾರ್ಥೇಜಿನ ಉತ್ಕರ್ಷವನ್ನು ಕಂಡು, ಅದನ್ನು ನಾಶಪಡಿಸುವವರೆಗೂ ರೋಮಿಗೆ ಉಳಿಗಾಲವಿಲ್ಲವೆಂದು ತನ್ನವರನ್ನು ಎಚ್ಚರಿಸಿದ. ಈ ಮಧ್ಯೆ ರೋಮನರ ವಿಷಯದಲ್ಲಿ ನಿರಾಶರಾದ ಕಾರ್ಥೇಜಿಯನ್ ಜನ ನ್ಯೂಮಿಡಿಯದ ಸೈನ್ಯವನ್ನು ಸೋಲಿಸಿ ಓಡಿಸಿದರು. ರೋಮ್ ಕಾರ್ಥೇಜಿನ ಮೇಲೆ ಯುದ್ಧ ಸಾರಿತು.

**ಮೂರನೆಯ ಪ್ಯೂನಿಕ್ ಯುದ್ಧ:** ಪ್ರ.ಶ.ಪೂ. 149 ರಿಂದ 146ರ ವರೆಗೆ ನಡೆಯಿತು. ಕಾರ್ಥೇಜ್ ತನ್ನ ಸ್ವಾತಂತ್ರ್ಯ ರಕ್ಷಣೆಗಾಗಿ ವೀರಾವೇಶದಿಂದ ಶತ್ರುವಿನ ವಿರುದ್ಧ ಹೋರಾಡಿದರೂ ಸೋಲನ್ನು ಅಪ್ಪಬೇಕಾಯಿತು. ರೋಮನರು ಕಾರ್ಥೇಜನ್ನು ಪೂರ್ಣವಾಗಿ ನೆಲಸಮಮಾಡಿದರು; ಅಲ್ಲಿ ಸಿಕ್ಕಿದ ಜನರನ್ನೆಲ್ಲ ಗುಲಾಮರನ್ನಾಗಿ ಮಾಡಿಕೊಂಡರು. ರೋಂ ಸಾಮ್ರಾಜ್ಯದ ಬಲವನ್ನೆದುರಿಸಬಲ್ಲವರು ಯಾರೂ ಉಳಿಯಲಿಲ್ಲ **(ನೋಡಿ- ರೋಮನ್-ಸಾಮ್ರಾಜ್ಯ)**.

*

**ಕಾರ್ಡೋಗಲು :** ಆಹಾರದಲ್ಲಿ ಬಿ ವಿಟಮಿನ್ನಿನ ಪ್ರಮುಖ ಅಂಶವಾದ ನಿಕೋಟಿನಿಕ್ ಆಮ್ಲದ ಕೊರತೆಯಿಂದ ತೋರಿಬರುವ ಒಂದು ಬಗೆಯ ಚರ್ಮವ್ಯಾಧಿ (ಪೆಲ್ಲಗ್ರ). ಈ ಕಾಯಿಲೆಯಲ್ಲಿ ಚರ್ಮ ಮತ್ತು ಲೋಳೆಪೊರೆಯ ಉರಿ, ಭೇದಿ ಮತ್ತು ಮಾನಸಿಕ ಬದಲಾವಣೆಗಳು ತೋರಿಬರುವುವಲ್ಲದೇ ಚರ್ಮ ದಪ್ಪನಾಗಿ ಒಣಗಿ ಒರಟಾಗುತ್ತದೆ. ಅಂತೆಯೇ ಈ ವ್ಯಾಧಿಗೆ ಕಾರ್ಡೋಗಲು ಎಂಬ ಹೆಸರು ಬಂದಿದೆ. ಈ ರೋಗದ ವಿವರಣೆಯನ್ನು ಸ್ಪೇನಿನ ವೈದ್ಯ ಕಾಸಲ್ ನೀಡಿದ (1730); ಮುಂದೆ ಇಟಲಿಯ ವೈದ್ಯ ಪ್ರಪೋಲಿ ಇದಕ್ಕೆ ಪೆಲ್ಲಗ್ರ ಎಂಬ ಹೆಸರನ್ನಿತ್ತ (1771). ಈ ರೋಗ ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರಚಲಿತವಿದೆ; ಸಾಧಾರಣವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚು. ಬಡತನದಲ್ಲಿ ಜೀವನ ನಡೆಸುತ್ತ ನ್ಯೂನ ಆಹಾರ ಸೇವನೆ ಮಾಡುವ ರೈತಾಪಿ ಜನಗಳಲ್ಲಿ ಈ ರೋಗ ಸಾಮಾನ್ಯ. ಮುಸುಕಿನ ಜೋಳ ಇಲ್ಲವೆ ಬಿಳಿ ಜೋಳ ಅವರ ಪ್ರಮುಖ ಆಹಾರ. ಅದರಲ್ಲಿ ಸಸಾರಜನಕ ವಸ್ತುಗಳ ಕೊರತೆ ಉಂಟು. ಮುಸುಕಿನ ಜೋಳದಲ್ಲಿ ನಿಕೋಟಿನಿಕ್ ಆಮ್ಲದ ಪ್ರಮಾಣ ಹೆಚ್ಚಿದ್ದರೂ ಅದು ದೇಹದ ಉಪಯೋಗಕ್ಕೆ ಬಾರದ ರೀತಿಯಲ್ಲಿದೆ. ಬಿಳಿ ಜೋಳದಲ್ಲಿ ಅಮೈನೋ ಆಮ್ಲ (ಲೂಸಿನ್) ಹೆಚ್ಚು ಪ್ರಮಾಣದಲ್ಲಿದ್ದು ಅದು ಟ್ರಿಪ್ಟೋಫೇನ್ ನಿಕೋಟಿನಿಕ್ ಆಮ್ಲದ ತಯಾರಿಕೆಗೆ ಅಡ್ಡಿಯನ್ನುಂಟುಮಾಡಿ ಕಾರ್ಡೋಗಲಿನ ಗುಣಲಕ್ಷಣಗಳ ಬೆಳೆವಣಿಗೆಗೆ ಅನುಮಾಡಿಕೊಡುತ್ತದೆ. ನಿಕೋಟಿನಿಕ್ ಆಮ್ಲ ಮತ್ತು ಸಾರಜನಕ ವಸ್ತುಗಳ ಸೇವನೆ ಈ ರೋಗವನ್ನು ತಡೆಗಟ್ಟುವಲ್ಲಿ ಸಹಾಯಕಾರಿ. ಈ ರೋಗ ದೀರ್ಘಾವಧಿ ಕಾಲ ಇರಬಲ್ಲುದು. ಬುದ್ಧಿಮಾಂದ್ಯ, ಭೇದಿ, ಕೆಂಪಡರಿದ ಚರ್ಮ ತೋರಿಬರುತ್ತವೆ. ಪ್ರಾರಂಭದ ದಿಶೆಯಲ್ಲಿ ಚರ್ಮ ಕೆಂಪಡರಿ ಉರಿಯನ್ನುಂಟುಮಾಡುವುದು. ದಿನಗಳೆದಂತೆ ಚರ್ಮ ಒರಟಾಗುತ್ತದೆ. ಈ ಬದಲಾವಣೆಗಳು ಸೂರ್ಯಪ್ರಕಾಶಕ್ಕೆ ಈಡಾಗುವ ಚರ್ಮದ ಪ್ರದೇಶಗಳಾದ ಕೈ ಮತ್ತು ಪಾದದ ಮೇಲ್ಭಾಗ, ಮುಂಗೈ, ಮುಂಗಾಲು, ಕಣ್ಣಿನ ಕೆಳಗಿನ ಮುಖದ ಪಾತರಗಿತ್ತಿಯ ಪ್ರದೇಶ ಮತ್ತು ಕುತ್ತಿಗೆಯ ಚರ್ಮ ಇಲ್ಲಿ ಹೆಚ್ಚು. ಅಲ್ಲಿ ಚರ್ಮ ಕೆಂಪಡರಿ ಉಬ್ಬಿ ತುರಿಕೆಯನ್ನುಂಟುಮಾಡುತ್ತದೆ. ದಿನಕಳೆದಂತೆ ಚರ್ಮ ಒಣಗಿ ಒರಟಾಗಿ ಒಡೆದು ಕಂದು ಇಲ್ಲವೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಇವುಗಳಲ್ಲದೆ ಬಾಯಲ್ಲಿ ಮುಗುಳು, ಹುಣ್ಣು ತೋರಿಬಂದು ಕಾರ ತಿನ್ನಲು ಆಗುವುದಿಲ್ಲ. ನಾಲಗೆ ಹಸಿ ಮಾಂಸದಂತೆ ಕೆಂಪಾಗುತ್ತದೆ. ರೋಗಿ ಶೀಘ್ರಕೋಪಿಯಾಗಬಹುದು, ಚಿತ್ತಸ್ಥೈರ್ಯ ಕಳೆದುಕೊಂಡು ಹುಚ್ಚುಹುಚ್ಚಾಗಿ ಮಾತಾಡಬಹುದು.

ನಿಕೊಟಿನೇಮೈಡನ್ನು 100 ಮಿಲಿಗ್ರಾಂನಂತೆ ದಿನದಲ್ಲಿ ನಾಲ್ಕು ಬಾರಿ ಸೇವಿಸುವುದರಿಂದ ರೋಗ ಗುಣಮುಖವಾಗುವುದು. ಈ ಔಷಧಿ ಜಠರದಿಂದ ಬೇಗ ಹೀರಲ್ಪಡುವುದು. ಇದರೊಂದಿಗೆ ಆಹಾರದಲ್ಲಿ ಸಸಾರಜನಕ ಪದಾರ್ಥಗಳ (ಪ್ರೋಟೀನುಗಳು) ಸೇವನೆಯೂ ಅಗತ್ಯ. ಇದರಿಂದಾಗಿ ಚರ್ಮದ ಉರಿ, ಭೇದಿ ಮೊದಲಾದ ಬೇನೆಗಳು ತೀವ್ರ ಮಣಿಯುವುವು. ಮಾನಸಿಕ ಪರಿಸ್ಥಿತಿ ನಿಧಾನಗತಿಯಲ್ಲಿ ಉತ್ತಮಗೊಳ್ಳುವುದು. (ಪಿ.ಎಸ್.ಎಸ್.)

**ಕಾರ್ಡೋವಾ :** ಅರ್ಜೆಂಟೀನದ ಒಂದು ನಗರ ಮತ್ತು ಅದೇ ಹೆಸರಿನ ಪ್ರಾಂತ್ಯದ ಮುಖ್ಯಪಟ್ಟಣ. ಜನಸಂಖ್ಯೆ 1272334 (2005). ಸಮುದ್ರ ಮಟ್ಟಕ್ಕಿಂತ 436 ಮೀ ಎತ್ತರದಲ್ಲಿದೆ. ಜೆರೊನಿಮೊ ಲೂಯಿ ಡಿ ಕಾಬ್ರೆರ 1613ರಲ್ಲಿ ಇದನ್ನು ಸ್ಥಾಪಿಸಿದ. ಜೆಸುಯಿಟರು 1613ರಲ್ಲಿ ಇಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಅಂದಿನಿಂದ ಇದು ದಕ್ಷಿಣ ಅಮೆರಿಕದ ಸಾಂಸ್ಕೃತಿಕ ಕೇಂದ್ರವಾಯಿತು. ರೊಸಾರಿಯೊ ಮತ್ತು ಕಾರ್ಡೋವಾಗಳ ನಡುವೆ ಕಾರ್ಡೋವಾದ ಅಧ್ಯಕ್ಷ ಡೊಮಿಂಗೋ ಮಿಯೆಂಟೊ ರೈಲುಹಾದಿ ಹಾಕಿಸಿ ವ್ಯಾಪಾರಾಭಿವೃದ್ಧಿಗೆ ಅನುಕೂಲ ಮಾಡಿದ. 1955ರಲ್ಲಿ ಕಾರ್ಡೋವಾವನ್ನು ಜನರಲ್ ಎಡ್ವರ್ಡೊ ಲೊನಾರ್‌ಡಿ ವಶಪಡಿಸಿಕೊಂಡ. ಅರ್ಜೆಂಟೀನದ ಅಧ್ಯಕ್ಷ ವಾನ್ ಪೆರಾನನನ್ನು ಪದಚ್ಯುತನನ್ನಾಗಿ ಮಾಡಿದ. ಹಳೆಯ ನಗರದಲ್ಲಿ ಹಿಂದಿನ ವೈಸ್‌ರಾಯಿಯ ಅರಮನೆಯೂ ಜೆಸುಯಿಟರ ಹಳೆಯ ಚರ್ಚೂ ಇವೆ. ಪ್ಲಾಝಾ ಸಾನ್ ಮಾರ್ಟಿನ್ ಅರ್ಜೆಂಟೀನದ ಸ್ವಾತಂತ್ರ್ಯ ಸ್ಮಾರಕ, ಹೊಸ ನಗರ ಚೌಕಾಕಾರದಲ್ಲಿ ನಿರ್ಮಿತವಾಗಿದೆ. ಇಲ್ಲಿ ಗಣಿ ಉದ್ಯಮದ ತಾಂತ್ರಿಕ ಶಾಲೆ, ಕೃಷಿ ಕಾಲೇಜು, ಖಗೋಳ ವೀಕ್ಷಣಾಲಯ ಮತ್ತು ಕಾರ್ಖಾನೆಗಳು ಇವೆ. ರಿಯೊಪ್ರಿಮಿರೊ ನದಿಗೆ ಅಡ್ಡಲಾಗಿ ಕಟ್ಟಲಾದ ಡಿಕ್ ಸಾನ್ ರಾಕ್ ಕಟ್ಟೆಯ ಜಲಾಶಯದಿಂದ ನಗರಕ್ಕೆ ನೀರಿನ ಸರಬರಾಯಿ ಆಗುತ್ತದೆ. ಇದು ದಕ್ಷಿಣ ಅಮೆರಿಕದಲ್ಲಿ ಅತಿ ದೊಡ್ಡದಾದ ಕಟ್ಟೆ; ನೀರಾವರಿ ಸೌಲಭ್ಯದ ಜೊತೆಗೆ ಕಾರ್ಖಾನೆಗಳಿಗೆ ಅಗತ್ಯವಾದ ವಿದ್ಯುತ್ತನ್ನೂ ಒದಗಿಸುತ್ತಿದೆ. ಕಾರ್ಡೋವಾದಿಂದ ಇತರ ಮುಖ್ಯ ಸ್ಥಳಗಳಿಗೆ ರಸ್ತೆ, ರೈಲ್ವೆ ಮತ್ತು ವಿಮಾನ ಸಂಪರ್ಕಗಳಿವೆ.

ಕಾರ್ಡೋವಾ ಪ್ರಾಂತ್ಯದ ವಿಸ್ತೀರ್ಣ 165321 ಚ.ಕಿಮೀ ಜನಸಂಖ್ಯೆ 3066801 (2001). ಇದು ಅರ್ಜೆಂಟೀನದ ಮಧ್ಯಪ್ರಾಂತ್ಯ. ಬೊಲಿವಿಯ ಮತ್ತು ಚಿಲಿಯೊಡನೆ ಇದರ ವ್ಯಾಪಾರ ಅಭಿವೃದ್ಧಿಯಾದಂತೆ 16ನೆಯ ಶತಮಾನದಲ್ಲಿ ಕಾರ್ಡೋವಾ ಅಸ್ತಿತ್ವಕ್ಕೆ ಬಂತು. 1852-62ರಲ್ಲಿ ಬ್ಯೂನಸ್ ಐರಿಸಿನ ಆಳ್ವಿಕೆಗೆ ಎದುರಾಗಿ ಅರ್ಜೆಂಟೀನ ಒಕ್ಕೂಟಕ್ಕೆ ಇದು ಬೆಂಬಲವಿತ್ತಿತು. ಸಮುದ್ರಮಟ್ಟಕ್ಕಿಂತ 2867 ಮೀ ಎತ್ತರವಿರುವ ಸಿರಾಸ್ ಡಿ ಕಾರ್ಡೋವಾ ಪರ್ವತವೇ ಇದರ ಪಶ್ಚಿಮದ ಎಲ್ಲೆ. ಪಂಚನದಿಗಳು ಈ ಪರ್ವತದಲ್ಲಿ ಹುಟ್ಟಿ ಪೂರ್ವದ ಕಡೆಯ ಇಳಿಜಾರಿನಲ್ಲಿ ಹರಿಯುತ್ತವೆ. ಸಹ್ಯವಾದ ಚಳಿಗಾಲವೂ ಶಾಖದಿಂದ ಕೂಡಿದ ಬೇಸಗೆಯೂ ಕಾಣಬರುತ್ತವೆ. ನವೆಂಬರ್ ಮತ್ತು ಫೆಬ್ರವರಿ ತಿಂಗಳುಗಳ ನಡುವೆ ಮಳೆ ಬೀಳುತ್ತದೆ. ಅರಣ್ಯಗಳಿಂದಲೂ ಹುಲ್ಲುಗಾವಲಿನಿಂದಲೂ ಕೂಡಿರುವ ಈ ಪ್ರದೇಶ ಪ್ರವಾಸಿಗರ ಆಕರ್ಷಣೆ. ಗೋದಿ, ಬಾರ್ಲಿ, ಓಟ್ಸ್, ಆಲ್ಫಾಲ್ಫ ಇಲ್ಲಿಯ ಮುಖ್ಯ ಬೆಳೆಗಳು. ಪಶುಪಾಲನೆಯೂ ಮುಖ್ಯ ಕಸಬಾಗಿದೆ. ಸುಣ್ಣಕಲ್ಲು, ಗ್ರಾಫೈಟ್, ಅಭ್ರಕ ಮತ್ತು ಬೆರಿಲಿಯಂ ಸಿಗುತ್ತವೆ. ಕಾರ್ಡೋವಾ, ರಿಯೋಕಾಟ ಮತ್ತು ವಿಲಮರಿಯಾ ಮುಖ್ಯ ಕೈಗಾರಿಕಾ ಕೇಂದ್ರಗಳು. ಆಲ್ಟಾ ಗ್ರೇಸಿಯಾ ಕೊಸ್ಕಿನ್, ಲ ಕಂಬ್ರೆ, ಕಪಿಲ ಡೆಲ್ ಮಾಂಟೆ ಮತ್ತು ಲ ಫಾಲ್ಡ ಮುಖ್ಯ ಪ್ರವಾಸಿ ಕೇಂದ್ರಗಳು. (ಬಿ.ಎಸ್.ಎಚ್.)

**ಕಾರ್ನ್‌ಫೋರ್ಡ್, ಫ್ರಾನ್ಸಸ್ ಕ್ರಾಫ್ಟ್ :** 1886-1960. ಕವಯಿತ್ರಿ. ಚಾರ್ಲ್ಸ್ ಡಾರ್ವಿನ್ನನ ಮೊಮ್ಮಗಳು. ತಾಯಿ ಇಂಗ್ಲೆಂಡಿನ ನ್ಯೂನ್‌ಹ್ಯಾಂನಲ್ಲಿ ಅಧ್ಯಾಪಕಿಯಾಗಿದ್ದಳು. 1908ರಲ್ಲಿ ಈಕೆ ಕೇಂಬ್ರಿಜ್‌ನ ಪ್ರಾಚೀನ ತತ್ತ್ವಶಾಸ್ತ್ರದ ಪ್ರಾಧ್ಯಾಪಕ ಕಾರ್ನ್‌ಫೋರ್ಡ್‌ನನ್ನು ವಿವಾಹವಾದಳು. ಡೆತ್ ಅಂಡ್ ದಿ ಪ್ರಿನ್ಸ್, ಎ ಮೊರಾಲಿಟಿ (1912) ಎಂಬ ಗ್ರಂಥ ಈಕೆಯ ಮೊದಲ ಪ್ರಕಟಣೆ. ಸ್ಪ್ರಿಂಗ್ ಮಾರ್ನಿಂಗ್ (1915), ಆಟಮ್ ಮಿಡ್‌ನೈಟ್ (1923), ಡಿಫರೆಂಟ್ ಡೇಸ್ (1928), ಮೌಂಟನ್ಸ್ ಅಂಡ್ ಮೋಲ್‌ಹಿಲ್ಸ್ (1934) ಈಕೆಯ ಕವನ ಸಂಗ್ರಹಗಳು. 1959ರಲ್ಲಿ ಪದ್ಯರಚನೆಗಾಗಿ ಈಕೆಗೆ ಚಕ್ರವರ್ತಿನಿಯ ಪದಕ ದೊರಕಿತು. (ಎನ್.ಎಸ್.ಎಲ್.)

**ಕಾರ್ನ್‌ಬರ್ಗ್, ಆರ್ಥರ್ :** 1918-. ಅಮೆರಿಕನ್ ಜೀವರಸಾಯನ ವಿಜ್ಞಾನಿ. ಜೀವಿಗಳ ಆನುವಂಶಿಕ ಗುಣಲಕ್ಷಣಗಳ ಆವಾಸಸ್ಥಾನವಾಗಿರುವ ಮತ್ತು ಪ್ರತಿಯೊಂದು ಜೀವಕೋಶದ ನ್ಯೂಕ್ಲಿಯಸ್ಸಿನಲ್ಲೂ ಇರುವ ಡಿ ಆಕ್ಸಿರೈಬೊನ್ಯೂಕ್ಲೆಯಿಕ್ ಆಮ್ಲ (ಡಿಎನ್‌ಎ) ಜೀವಕೋಶದ ವಿದಳನ ಕಾಲದಲ್ಲಿ ದ್ವಿಗುಣಿತವಾಗಲು ನೆರವು ನೀಡುವ ಡಿಎನ್‌ಎ

ಪಾಲಿಮೆರೇಸ್ ಎಂಬ ಎಂಜೈಮನ್ನು ಕಂಡುಹಿಡಿದಿದ್ದಕ್ಕಾಗಿ (1956) ಸೆವಿರೊ ಒಚಾವಾ (**ನೋಡಿ– ಒಚಾವಾ, ಸೆವಿರೋ**) ಎಂಬಾತನೊಂದಿಗೆ ಶರೀರ ವಿಜ್ಞಾನ ಮತ್ತು ವೈದ್ಯಶಾಸ್ತ್ರದ ನೊಬೆಲ್ ಬಹುಮಾನವನ್ನು ಪಡೆದ (1959). ಅದೇ ಎಂಜೈಮಿನ ಸಹಾಯದಿಂದ ಜೀವಕೋಶದ ಹೊರಗೆ ನೈಸರ್ಗಿಕ ಡಿಎನ್‌ಎ ಒಂದನ್ನು ಅಚ್ಚಾಗಿ ಉಪಯೋಗಿಸಿಕೊಂಡು ಕೃತಕ ಡಿಎನ್‌ಎ ತಯಾರಿಸಿ ಹಾಗೆ ತಯಾರಿಸಿದ ಡಿಎನ್‌ಎ ಎಲ್ಲ ರೀತಿಯಲ್ಲಿಯೂ ನೈಸರ್ಗಿಕ ಡಿಎನ್‌ಎಯಂತೆಯೇ ವರ್ತಿಸುವುದನ್ನು ತೋರಿಸಿ (1968) ಇತಿಹಾಸ ಪ್ರಸಿದ್ಧನಾದ.

ಕಾರ್ನ್‌ಬರ್ಗ್ 1918ರ ಮಾರ್ಚ್ 3ರಂದು ಬ್ರೂಕ್‌ಲಿನ್ನಿನಲ್ಲಿ ಜನಿಸಿದ. ಈತ ಸ್ನಾತಕಶಿಕ್ಷಣವನ್ನು ಪಡೆದದ್ದು ನ್ಯೂಯಾರ್ಕ್ ನಗರದ ಸಿಟಿ ಕಾಲೇಜಿನಲ್ಲಿ. ಪ್ರಧಾನ ಐಚ್ಛಿಕ ವಿಷಯಗಳು ಜೀವವಿಜ್ಞಾನ ಮತ್ತು ರಸಾಯನವಿಜ್ಞಾನಗಳು. 1937ರಲ್ಲಿ ಬಿ.ಎಸ್.ಸಿ. ಡಿಗ್ರಿ ಪಡೆದ ತರುವಾಯ ರಾಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ವೈದ್ಯಶಾಸ್ತ್ರವನ್ನು ಅಭ್ಯಸಿಸಿ 1941ರಲ್ಲಿ ಎಮ್.ಡಿ. ಡಿಗ್ರಿಯನ್ನು ಪಡೆದ. ಅದೇ ವಿಶ್ವವಿದ್ಯಾಲಯಕ್ಕೆ ಸೇರಿದ ಸ್ಟ್ರಾಂಗ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ವೃತ್ತಿ ತರಬೇತಿಯನ್ನು ಮುಗಿಸಿ ಕೆಲಕಾಲ ಅಮೆರಿಕ ಸಂಯುಕ್ತಸಂಸ್ಥಾನದ ಕರಾವಳಿ ಬೇಹುಗಾರ ಪಡೆಯಲ್ಲಿ ಲೆಫ್ಟಿನೆಂಟ್ ಆಗಿ ಕೆಲಸ ಮಾಡಿದ. 1942 ರಿಂದ 1953ರವರೆಗೆ ಸಾರ್ವಜನಿಕ ಆರೋಗ್ಯ ಇಲಾಖೆಯ ಸೇವೆಯಲ್ಲಿದ್ದಾಗ ಕೊನೆಯ ಆರು ವರ್ಷಕಾಲ ಬೆತೆಸ್ಡದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಥೈಟಿಸ್ ಅಂಡ್ ಮೆಟಬಾಲಿಕ್ ಡಿಸೀಸಸ್ ಸಂಸ್ಥೆಯಲ್ಲಿ ಕಿಣ್ವ ವಿಭಾಗದ ಮುಖ್ಯಸ್ಥನಾಗಿದ್ದ. 1953ರಿಂದ 1959ರವರೆಗೆ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಯಲ್ಲಿ ಸೂಕ್ಷ್ಮ ಜೀವವಿಜ್ಞಾನದ ಪ್ರಾಧ್ಯಾಪಕನೂ ಆ ವಿಭಾಗದ ಮುಖ್ಯಸ್ಥನೂ ಆಗಿ ಸೇವೆ ಸಲ್ಲಿಸಿದ.

ಒಂದು ಬಗೆಯ ಬ್ಯಾಕ್ಟೀರಿಯದ ಡಿಎನ್‌ಎಯನ್ನು ಇನ್ನೊಂದು ಬಗೆಯ ಬ್ಯಾಕ್ಟೀರಿಯಕ್ಕೆ ವರ್ಗಾಯಿಸಿದಾಗ ಮೊದಲನೆಯದರ ಆನುವಂಶಿಕ ಗುಣಲಕ್ಷಣಗಳು ಎರಡನೆಯದರ ಆನುವಂಶಿಕ ಗುಣಲಕ್ಷಣಗಳೊಂದಿಗೆ ಸೇರಿಕೊಂಡು ಬಿಡುವುವೆಂದು ಒ. ಟಿ. ಅವೆರಿ ಮತ್ತು ಸಹಸಂಶೋಧಕರು ತೋರಿಸಿಕೊಟ್ಟಾಗ (1944) ಡಿಎನ್‌ಎಯೇ ಆನುವಂಶಿಕ ಗುಣಲಕ್ಷಣಗಳ ಆವಾಸಸ್ಥಾನವೆಂಬುದು ರುಜುವಾತಾಯಿತು. ಈ ಅಭಿಪ್ರಾಯ ಸ್ಥಿರಪಡಲು ಮುಖ್ಯ ಕಾರಣರಾದವರು ಎ. ಡಿ. ಹರ್ಷಿ ಮತ್ತು ಎಚ್. ಬಿ. ಚೇಸ್‌ರವರು. ಬ್ಯಾಕ್ಟೀರಿಯಗಳ ಮೇಲೆ ದಾಳಿ ಮಾಡುವ ವೈರಸ್‌ಗಳು ತಮ್ಮ ಪ್ರೋಟೀನ್ ಹೊದಿಕೆಯನ್ನು ಕಳಚಿ ಹಾಕಿ
ϕ×174 ನ್ಯೂಕ್ಲಿಯಿಕ್ ಆಮ್ಲವನ್ನು ಬ್ಯಾಕ್ಟೀರಿಯದ ಕೋಶದೊಳಕ್ಕೆ ಸೇರಿಸುವುವೆಂದೂ ಸ್ವಲ್ಪಕಾಲದ ಮೇಲೆ ಪ್ರೋಟೀನ್ ಹೊದಿಕೆಯನ್ನೂ ನಿರ್ಮಿಸಿಕೊಂಡಿರುವ ಹೊಸ ವೈರಸ್ ಕಣಗಳು ಹೆಚ್ಚು ಸಂಖ್ಯೆಯಲ್ಲಿ ಕೋಶವನ್ನು ಭೇದಿಸಿಕೊಂಡು ಹೊರಬರುವುವೆಂದೂ ಅವರು ತೋರಿಸಿದರು (1953). ಸರಿಸುಮಾರು ಅದೇ ಕಾಲಕ್ಕೆ ವಾಟ್ಸನ್ ಮತ್ತು ಕ್ರಿಕ್‌ರವರು ಡಿಎನ್‌ಎಯ ಜೋಡಿಎಳೆ ರಚನೆಯನ್ನು ಪ್ರತಿಪಾದಿಸಿ, ಅದರ ಎರಡು ಎಳೆಗಳು ಪರಸ್ಪರ ಪೂರಕವಾದುವೆಂದೂ ಎಳೆಗಳ ಉದ್ದಕ್ಕೂ ಪುನರಾವರ್ತಿಸುವ ನಾಲ್ಕು ಬೇರೆ ಬೇರೆ ನ್ಯೂಕ್ಲಿಯೊಟೈಡುಗಳ ಅನುಕ್ರಮವೇ ನಿರ್ದಿಷ್ಟ ಜೀನಿನ ವೈಶಿಷ್ಟ್ಯ ಎಂದೂ ಕೋಶ ವಿದಳನವಾಗುವಾಗ ಎರಡು ಎಳೆಗಳು ಬೇರೆ ಬೇರೆಯಾಗಿ, ಒಂದೊಂದು ಎಳೆಯೂ ತನಗೆ ಪೂರಕವಾದ ಇನ್ನೊಂದು ಎಳೆಯನ್ನು ತಯಾರಿಸಿಕೊಳ್ಳುವುದರಿಂದ ಎರಡು ಡಿಎನ್‌ಎ ಅಣುಗಳು ಉದ್ಭವಿಸುವುವೆಂದೂ ಪ್ರತಿಪಾದಿಸಿದರು. ಡಿಎನ್‌ಎ ಹೀಗೆ ಸಂಶ್ಲೇಷಿತವಾಗುವ ಬಗೆಯನ್ನು ವಿಶದೀಕರಿಸುವ ಪ್ರಯತ್ನಕ್ಕೆ ಕಾರ್ನ್‌ಬರ್ಗ್ ಕೈಹಾಕಿದ.

ಕಾರ್ನ್‌ಬರ್ಗ್ ಬೆತೆಸ್ಡದಲ್ಲಿದ್ದಾಗ ಡೈಫಾಸ್ಫೊಪಿರಿಡಿನ್ ನ್ಯೂಕ್ಲಿಯೊಟೈಡ್ (ಡಿಪಿಎನ್) ಮತ್ತು ಫ್ಲಾವಿನ್ ಅಡೆನೀನ್ ಡೈನ್ಯೂಕ್ಲಿಯೊಟೈಡ್ (ಎಫ್‌ಎಡಿ) ಎಂಬ ಎರಡು ಕೊ ಎಂಜೈಮುಗಳ ಜೈವಿಕ ಸಂಶ್ಲೇಷಣೆಯ ಕ್ರಿಯಾವಿನ್ಯಾಸವನ್ನು ವಿಶದೀಕರಿಸಿದ್ದ. ಈ ಸಂಶ್ಲೇಷಣೆಯಲ್ಲಿ ಮೂರು ಫಾಸ್ಫಾರಿಕಾಮ್ಲ ಶೇಷಗಳಿರುವ ನ್ಯೂಕ್ಲಿಯೊಸೈಡ್ ಟ್ರೈಫಾಸ್ಫೇಟುಗಳು ಪಾಲ್ಗೊಳ್ಳುವುವೆಂದು ತಿಳಿದುಬಂದದ್ದರಿಂದ ಆತ ಡಿಎನ್‌ಎ ಸಂಶ್ಲೇಷಣೆಗೆ ಅಗತ್ಯವಾದ ಪೂರ್ವಗಾಮಿ ನ್ಯೂಕ್ಲಿಯೊಟೈಡುಗಳನ್ನು ಟ್ರೈಫಾಸ್ಫೇಟ್ ರೂಪದಲ್ಲಿ ತೆಗೆದುಕೊಂಡು ಜೊತೆಗೆ ಶಕ್ತಿ ಪೂರೈಕೆಗಾಗಿ ಎಟಿಪಿಯನ್ನು ಸೇರಿಸಿ ಎಷೆರಿಕೀಯ ಕೋಲೈ ಬ್ಯಾಕ್ಟೀರಿಯದ ಸಾರದೊಂದಿಗೆ ಬೆರೆಸಿ ಸೂಕ್ತ ಉಷ್ಣತೆಯಲ್ಲಿ ಸಾಕಷ್ಟು ಕಾಲ ಬಿಟ್ಟ. ಇಷೆರಿಕೀಯ ಕೋಲೈ ಸಾರದಲ್ಲಿ ಡಿಎನ್‌ಎ ಸಂಶ್ಲೇಷಣೆಗೆ ನೆರವಾಗುವ ಎಂಜೈಮ್ ಇರುವುದಾದರೆ ಅದರ ಸಹಾಯದಿಂದ ನ್ಯೂಕ್ಲಿಯೊಸೈಡ್ ಟ್ರೈಫಾಸ್ಫೇಟ್ ಅಣುಗಳು ಸೇರಿಕೊಂಡು ಡಿಎನ್‌ಎ ಸಂಶ್ಲೇಷಣೆ ನಡೆಯುವುದೆಂದು ಅವನು ನಿರೀಕ್ಷಿಸಿದ. ಈ ನಿರೀಕ್ಷೆ ಫಲಿಸಿದೆಯೇ ಎಂದು ನೋಡುವುದಕ್ಕಾಗಿ ನ್ಯೂಕ್ಲಿಯೊಸೈಡ್ ಟ್ರೈಫಾಸ್ಫೇಟ್ ಅಣುಗಳಲ್ಲಿ ವಿಕಿರಣಶೀಲ ಪರಮಾಣುಗಳನ್ನು ಸೇರಿಸಿದ್ದ. ಅನಂತರ ಪರೀಕ್ಷಿಸಲಾಗಿ ಡಿಎನ್‌ಎಯಲ್ಲಿ ವಿಕಿರಣಶೀಲ ಪರಮಾಣುಗಳು ಅತ್ಯಲ್ಪ ಪ್ರಮಾಣದಲ್ಲಿ ಸೇರಿಕೊಂಡಿದ್ದುದು ಕಂಡು ಬಂದಿತು. ಎಷೆರಿಕೀಯ ಕೋಲೈಸಾರದಲ್ಲಿ ಡಿಎನ್‌ಎ ಸಂಶ್ಲೇಷಣೆಯ ಎಂಜೈಮು ಇತರ ಸಹಸ್ರಾರು ಕಿಣ್ವಗಳೊಡನೆ ಬೆರೆತುಕೊಂಡು ಅಲ್ಪ ಪ್ರಮಾಣದಲ್ಲಿರುವುದೇ ಇದಕ್ಕೆ ಕಾರಣವಿರಬೇಕೆಂದು ಯೋಚಿಸಿ ಆ ಎಂಜೈಮಿನ ಶುದ್ಧೀಕರಣ ಪ್ರಯತ್ನವನ್ನು ಕೈಗೊಂಡು 1956ರ ಹೊತ್ತಿಗೆ ಕೇವಲ ಅರ್ಧ ಗ್ರಾಮಿನಷ್ಟು ಶುದ್ಧ ಎಂಜೈಮನ್ನು ಪಡೆದ. ಅದಕ್ಕೆ ಡಿಎನ್‌ಎ ಪಾಲಿಮೆರೇಸ್ ಎಂದು ನಾಮಕರಣವಾಯಿತು. ಅದರಿಂದ ಡಿಎನ್‌ಎ ಸಂಶ್ಲೇಷಿತವಾಗುವುದೆಂಬುದನ್ನೂ ಖಚಿತಪಡಿಸಿದ. ಅಲ್ಲಿಂದೀಚೆಗೆ ಡಿಎನ್‌ಎ ಪಾಲಿಮೆರೇಸನ್ನು ಇತರ ಆಕರಗಳಲ್ಲಿಯೂ ಗುರುತಿಸಲಾಗಿದೆ.

ಆ ಕಿಣ್ವದ ಸಹಾಯದಿಂದ ಕೃತಕವಾಗಿ ತಯಾರಿಸಿದ ಡಿಎನ್‌ಎ ಎಲ್ಲ ರೀತಿಯಲ್ಲಿಯೂ ಅಚ್ಚಾಗಿ ಬಳಸಿದ ಡಿಎನ್‌ಎ ಯಂತೆಯೇ ಇರುವುದೇ ಎಂದು ಪರೀಕ್ಷಿಸಲು ತನ್ನದೇ ಆದ ವಿಧಾನಗಳನ್ನು ಆತ ನಿರ್ಮಿಸಿಕೊಂಡು ಪರೀಕ್ಷಿಸಿದ. ಆದರೆ ಅಂತಿಮವಾಗಿ ಅದರ ಅನನ್ಯತೆಯನ್ನು ಸ್ಥಿರಪಡಿಸಲು ಅದರ ಜೈವಿಕ ಕಾರ್ಯಚಟುವಟಿಕೆಯನ್ನೇ ಪರಿಶೀಲಿಸಬೇಕಷ್ಟೆ? ಅದಕ್ಕಾಗಿ ಬಹು ಸರಳವಾದ ಒಂದು ಡಿಎನ್‌ಎಯನ್ನು ಆರಿಸಬೇಕಾಯಿತು.

ಎಂಬ ಒಂದು ಬಗೆಯ ವೈರಸಿನಲ್ಲಿರುವ ಡಿಎನ್‌ಎ ಯನ್ನು ಇದಕ್ಕಾಗಿ ಆರಿಸಿಕೊಂಡ. ಅದನ್ನು ಅಚ್ಚಾಗಿ ಬಳಸಿಕೊಂಡು ಡಿಎನ್‌ಎ ಪಾಲಿಮೆರೇಸ್ ನೆರವಿನಿಂದ ಅದರ ನಿಷ್ಕೃಷ್ಟ ಪ್ರತಿಯನ್ನು ಕೃತಕವಾಗಿ ಸಂಶ್ಲೇಷಿಸಿ (1968) ಜೈವಿಕ ಕಾರ್ಯಚಟುವಟಿಕೆಯಲ್ಲಿ ಅದಕ್ಕೂ ನೈಸರ್ಗಿಕ ಡಿಎನ್‌ಎಗೂ ಯಾವ ಭೇದವೂ ಇಲ್ಲವೆಂದು ತೋರಿಸಿಕೊಟ್ಟಿದ್ದಾನೆ. ಜೀವದ ಪ್ರಧಾನ ಕುರುಹು ಎನ್ನಬಹುದಾದ ಡಿಎನ್‌ಎಯನ್ನು ಜೀವಿಯ ಶರೀರದ ಹೊರಗಡೆ ನಿರ್ಜೀವ ವಾತಾವರಣದಲ್ಲಿ ಕೃತಕವಾಗಿ ನಿರ್ಮಿಸಿದ ಕೀರ್ತಿ ಕಾರ್ನ್‌ಬರ್ಗ್‌ನಿಗೆ ಸಲ್ಲುವುದು. (ಜೆ.ಆರ್.ಎಲ್.)

**ಕಾರ್ನ್‌ವಾಲಿಸ್, ಲಾರ್ಡ್ :** 1738–1805. ಪ್ರಥಮ ಮಾರ್ಕ್ವಿಸ್ ಬ್ರಿಟಿಷ್ ದಂಡನಾಯಕ ಮತ್ತು ಆಡಳಿತಗಾರ. 1786 ರಿಂದ 1793ರ ವರೆಗೆ ಭಾರತದ ಗವರ್ನರ್–

ಜನರಲ್ ಆಗಿದ್ದ. ಲಂಡನಿನಲ್ಲಿ 1738ರ ಡಿಸೆಂಬರ್ 31ರಂದು ಪ್ರಥಮ ಅರ್ಲ್ ಕಾರ್ನ್‌ವಾಲಿಸನ ಹಿರಿಯ ಮಗನಾಗಿ ಜನಿಸಿದ. 1757ರಲ್ಲಿ ಸೈನ್ಯವನ್ನು ಸೇರಿ ಜರ್ಮನಿಯಲ್ಲಿ ಏಳು ವರ್ಷಗಳ ಯುದ್ಧದಲ್ಲಿ ಭಾಗವಹಿಸಿದ. 1765ರ ಅನಂತರ ಕೆಲಕಾಲ ರಾಜಕಾರಣಕ್ಕಿಳಿದು ವಸಾಹತುಗಳ ತೆರಿಗೆಯ ನೀತಿಯನ್ನು ವಿರೋಧಿಸುತ್ತಿದ್ದ. 1776ರಲ್ಲಿ ಮೇಜರ್ ಜನರಲ್ ಹುದ್ದೆಯನ್ನು ವಹಿಸಿಕೊಂಡು ಅಮೆರಿಕಕ್ಕೆ ತೆರಳಿದ. ಮರುವರ್ಷವೇ ಅಲ್ಲಿಯ ಸೈನ್ಯದ ಉಪಮುಖ್ಯಾಧಿಕಾರಿಯ ಪದವಿ ದೊರಕಿತು. ಅಮೆರಿಕದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳಲ್ಲಿ ಶ್ರೇಷ್ಠನಾಗಿದ್ದು 1780–81ರಲ್ಲಿ ದಕ್ಷಿಣ ಭಾಗದಲ್ಲಿ ಗಮನಾರ್ಹ ಜಯಗಳಿಸಿದರೂ 1781ರ ಅಕ್ಟೋಬರಿನಲ್ಲಿ ಯಾರ್ಕ್‌ಟೌನ್ ಕದನದಲ್ಲಿ ಶರಣಾಗತನಾಗಬೇಕಾಯಿತು. ಇದರಿಂದಾಗಿ ಅಮೆರಿಕದಲ್ಲಿ ಬ್ರಿಟಿಷರ ಅಧಿಕಾರ ಕೊನೆಗೊಳ್ಳುವಂತಾಯಿತು.

ಉತ್ತಮ ಆಡಳಿತಗಾರ ಮತ್ತು ದಕ್ಷಯೋಧನೆಂದು ಹೆಸರಾಗಿದ್ದುದರಿಂದ ಇವನನ್ನು 1786ರಲ್ಲಿ ಭಾರತದ ಬ್ರಿಟಿಷ್ ಗವರ್ನರ್–ಜನರಲ್ ಆಗಿ ನೇಮಿಸಲಾಯಿತು. ಉತ್ತಮ ಅಧಿಕಾರಿಗಳ ಸಹಾಯದಿಂದ ಭಾರತದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿ, ರಾಜ್ಯಾಡಳಿತವನ್ನೀತ ಉತ್ತಮಗೊಳಿಸಿದ. ಇತರರ ಪ್ರಯತ್ನಗಳ ಫಲವಾಗಿ ಇವನ ಕಾಲದಲ್ಲಿ ಸುಧಾರಣೆಗಳು ಜಾರಿಗೆ ಬಂದರೂ ಅವನ್ನು ಸುವ್ಯವಸ್ಥಿತ ರೀತಿಯಲ್ಲಿ ಕಾರ್ಯಗತಗೊಳಿಸಿದುದು ಇವನ ದಕ್ಷತೆಯನ್ನು ಸೂಚಿಸುತ್ತದೆ. ಬಂಗಾಳದ ಖಾಯಂ ಗುತ್ತಾ ಪದ್ಧತಿ (ಪರ್ಮನೆಂಟ್ ಲ್ಯಾಂಡ್ ರೆವೆನ್ಯೂ ಸೆಟ್ಲ್‌ಮೆಂಟ್) ಮತ್ತು ಭೂಕಂದಾಯ ಆಡಳಿತ ಸುಧಾರಣೆಗಳು ಕಟುಟೀಕೆಯನ್ನು ಎದುರಿಸಬೇಕಾಯಿತು. ಆದರೆ ಈತ ದೇಶೀಯ ಮತ್ತು ಬ್ರಿಟಿಷ್ ಆಡಳಿತವರ್ಗಗಳ ನಡುವಣ ಅಂತರಗಳನ್ನು ನಿವಾರಿಸಿ ಅವರಲ್ಲಿ ಸಮತೆಯನ್ನುಂಟುಮಾಡಲು ಪ್ರಯತ್ನಿಸಿದ. ಬ್ರಿಟಿಷ್ ಅಧಿಕಾರಿಗಳು ಆಡಳಿತದಲ್ಲಿ ವ್ಯಾಪಾರೀ ಮನೋಭಾವವನ್ನು ತೋರುತ್ತಿದ್ದುದು ಇದರಿಂದ ಕೊನೆಗೊಳ್ಳುವಂತಾಯಿತು. ನ್ಯಾಯಾಡಳಿತದಲ್ಲೂ ಹಲವಾರು ಸುಧಾರಣೆಗಳನ್ನು ತಂದ. ಇದಕ್ಕಾಗಿ ಹಿಂದೂ ನ್ಯಾಯಶಾಸ್ತ್ರ ಗ್ರಂಥಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿಸಿದನಲ್ಲದೆ ಪೋಲೀಸ್ ದಳವನ್ನು ಏರ್ಪಡಿಸಿದ.

3ನೆಯ ಮೈಸೂರು ಯುದ್ಧ ನಡೆದದ್ದು ಇವನ ಕಾಲದಲ್ಲಿ. 1790ರಲ್ಲಿ ಮೈಸೂರಿನ ಟಿಪ್ಪುಸುಲ್ತಾನ್ ಬ್ರಿಟಿಷರ ಸ್ನೇಹವನ್ನು ಸಂಪಾದಿಸಿದ್ದ. ತಿರುವಾಂಕೂರು ರಾಜ್ಯವನ್ನು ಮುತ್ತಿದುದರಿಂದ ಕಾರ್ನ್‌ವಾಲಿಸ್ ಮರಾಠರ ಮತ್ತು ಹೈದರಾಬಾದಿನ ನಿಜಾಮನ ಸಹಾಯದಿಂದ ಮೈಸೂರಿನ ಮೇಲೆ ದಂಡೆತ್ತಿಹೋಗಿ ಟಿಪ್ಪುವಿನ ರಾಜಧಾನಿಯಾಗಿದ್ದ

ಶ್ರೀರಂಗಪಟ್ಟಣವನ್ನು ಮುತ್ತಲಾಗಿ, ಟಿಪ್ಪು ಶರಣಾಗತನಾಗಿ ಬ್ರಿಟಿಷರ ಷರತ್ತುಗಳಿಗೆ ಒಪ್ಪಿಕೊಂಡ. ಬ್ರಿಟಿಷ್ ಚಕ್ರವರ್ತಿ ಕಾರ್ನ್‌ವಾಲಿಸನ ಕಾರ್ಯವನ್ನು ಮೆಚ್ಚಿಕೊಂಡ. ಈತ ಲಂಡನಿಗೆ ಮರಳಿದಾಗ 1793ರಲ್ಲಿ ಇವನಿಗೆ ಮಾರ್ಕ್ವಿಸ್ ಎಂಬ ಬಿರುದನ್ನು ನೀಡಲಾಯಿತು ಮತ್ತು ಸಚಿವಮಂಡಳಿಯ ದರ್ಜೆಯಲ್ಲಿ ಮಾಸ್ಟರ್–ಜನರಲ್ ಆಫ್ ಆರ್ಡ್‌ನೆನ್ಸ್ ಹುದ್ದೆಗೆ ನೇಮಿಸಲಾಯಿತು. ಈತ 1798ರಿಂದ 1801ರ ವರೆಗೆ ಐರ್ಲೆಂಡಿನಲ್ಲಿ ರಾಜಪ್ರತಿನಿಧಿಯಾಗಿ (ವೈಸ್‌ರಾಯ್) ಕೆಲಸಮಾಡಿದ. 1798ರಲ್ಲಿ ಅಲ್ಲಿ ನಡೆದ ದಂಗೆಯನ್ನು ಯಶಸ್ವಿಯಾಗಿ ಅಡಗಿಸಿದ. ಪ್ರಧಾನಮಂತ್ರಿ ವಿಲಿಯಂ ಪಿಟ್ಟನ ಏಕತಾನೀತಿಗೆ ಬೆಂಬಲ ನೀಡಿ, ಕೆಥೊಲಿಕ್ ಮತ್ತು ಆರೆಂಜ್ ಜನರ ಬೆಂಬಲದಿಂದ ಅದನ್ನು ಕಾರ್ಯಗತಗೊಳಿಸಿದ. 3ನೆಯ ಜಾರ್ಜ್ ದೊರೆ ಕೆಥೊಲಿಕರಿಗೆ ಮತೀಯ ಸ್ವಾತಂತ್ರ್ಯ ನೀಡಲು ನಿರಾಕರಿಸಿದಾಗ ಈತ 1801ರಲ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಿದ. ಏಮಿಯನ್ ಶಾಂತಿ ಸಂಧಾನಕ್ಕೆ ಬ್ರಿಟನಿನ ಮುಖ್ಯ ಸಂಧಾನಕಾರನಾಗಿ ಇವನು ನೇಮಕವಾದ್ದು ಅದೇ ವರ್ಷದಲ್ಲಿ.

1805ರಲ್ಲಿ ಮರಳಿ ಭಾರತದ ಗೌರ್ನರ್–ಜನರಲ್ ಆಗಿ ನೇಮಕವಾದಾಗ ಮನಸ್ಸಿಲ್ಲದಿದ್ದರೂ ಈತ ಭಾರತಕ್ಕೆ ಮರಳಿ ಅದೇ ವರ್ಷದ ಅಕ್ಟೋಬರ್ 5ರಂದು ಘಾಜೀಪುರದಲ್ಲಿ ನಿಧನನಾದ. ಅಲ್ಲಿ ಇವನ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ. (ಎಂ.ಎಸ್.ಬಿ.)

**ಕಾರ್ನಾಕ್ [1] :** ಫ್ರಾನ್ಸಿನ ವಾಯವ್ಯ ಭಾಗದಲ್ಲಿ ಬ್ರಿಟನಿ ಪ್ರಾಂತ್ಯದ ದಕ್ಷಿಣ ಕರಾವಳಿಯಲ್ಲಿರುವ ಒಂದು ಗ್ರಾಮ. ಇದರ ಬಳಿ ಯುರೋಪಿನಲ್ಲೇ ಅತಿ ದೊಡ್ಡದಾದ ಬೃಹತ್‌ಶಿಲಾಸಮಾಧಿಗಳ ಸ್ತೋಮವಿದೆ. ಈ ಸಮಾಧಿಗಳಲ್ಲಿ ಕಂಡುಬರುವ ವಾಸ್ತುವಿಧಾನ, ಅವಶೇಷಗಳು ಮತ್ತು ಅವುಗಳಲ್ಲಿರುವ ರೇಖಾಚಿತ್ರಗಳು ಸ್ಪೇನ್ ಮತ್ತು ಪೋರ್ಚುಗಲ್ಲುಗಳನ್ನೊಳಗೊಂಡ ಪಶ್ಚಿಮ ಮೆಡಿಟರೇನಿಯನ್ ಸಂಸ್ಕೃತಿಗಳೊಡನೆ ಇದ್ದ ಸಂಪರ್ಕವನ್ನು ಸೂಚಿಸುತ್ತವೆ. ಈ ಸಮಾಧಿಗಳ ನಿರ್ಮಾಪಕರು ಬಹುಶಃ ಆ ಪ್ರದೇಶದಿಂದ ಬಂದವರಾಗಿದ್ದಿರಬಹುದು. ಪಶ್ಚಿಮ ಬ್ರಿಟನ್ ಮತ್ತು ಐರ್ಲೆಂಡ್‌ಗಳಲ್ಲಿಯ ಸಮಾಧಿಗಳನ್ನೂ ಇದು ಅನೇಕ ಅಂಶಗಳಲ್ಲಿ ಹೋಲುತ್ತದೆ. ಇಲ್ಲಿ ಉದ್ದವಾದ ಮಣ್ಣಿನ ದಿಬ್ಬಗಳು, ಶಿಲಾವರ್ತುಲಗಳು ಕಲ್ಲುಪಂಕ್ತಿಗಳು ಮುಂತಾದ ವಿವಿಧ ರೀತಿಯ ಸಮಾಧಿಗಳು ಇದ್ದರೂ ಇಲ್ಲಿಯ ಕಲ್ಲು ಪಂಕ್ತಿಗಳ ಸಮೂಹ ಮಾತ್ರ ತತ್ಕಾಲೀನ ವಿಶ್ವದ ಆಶ್ಚರ್ಯಗಳಲ್ಲಿ ಒಂದು

ಬೃಹತ್ ಶಿಲಾಸಮಾಧಿಗಳು, ಕಾರ್ನಾಕ್

ಎಂದು ಪರಿಗಣಿತವಾಗಿದೆ. ಇದರಲ್ಲಿ ಮುಖ್ಯವಾದವು 3,000 ನೆಟ್ಟಕಲ್ಲುಗಳನ್ನೊಳಗೊಂಡು 2 ವರೆ ಮೈಲಿ ಉದ್ದದವರೆಗೆ ನೈರುತ್ಯ ಈಶಾನ್ಯ ನೇರದಲ್ಲಿ ಹಬ್ಬಿದ್ದು, ಮೆನೆಕ್, ಕೆರ್ಮಾರಿಯೋ ಮತ್ತು ಕೆರ್ಲೆಸ್ಕಾಂಟ್‌ಗಳೆಂಬ ಮೂರು ಉಪಗುಂಪುಗಳಲ್ಲಿವೆ. ನೈರುತ್ಯ ಕೊನೆಯಲ್ಲಿರುವ ಮೆನೆಕ್ 108 ಗಜ ಅಗಲದಲ್ಲಿ ಹನ್ನೊಂದು ಸಮಾನಾಂತರ ಪಂಕ್ತಿಗಳಾಗಿ 1,264 ಗಜಗಳ ವರೆಗೆ ಹಬ್ಬಿದೆ. ಈ ಸಾಲುಗಳಲ್ಲಿ ಒಟ್ಟು 1,099 ಕಲ್ಲುಗಳಿರುವುವಲ್ಲದೆ ಈ ಗುಂಪಿನ ಪಶ್ಚಿಮಕ್ಕೆ 70 ಕಲ್ಲುಗಳ ವೃತ್ತವೂ ಉಂಟು. ಮೆನೆಕ್ ಗುಂಪಿನ ಅತಿ ಎತ್ತರದ ಕಲ್ಲು 3 ಅಡಿ ಇದ್ದರೆ, ಚಿಕ್ಕದು 2 ಅಡಿ ಮಾತ್ರ. ಕೆರ್ಮಾರಿಯೋ ಮೆನೆಕ್‌ನ ಈಶಾನ್ಯ ಕೊನೆಯಿಂದ 368 ಗಜಗಳ ಅನಂತರ ಪ್ರಾರಂಭವಾಗಿ ಅದೇ ನೇರದ 108 ಗಜ ಅಗಲದಲ್ಲಿ ಹತ್ತುಪಂಕ್ತಿಗಳಲ್ಲಿ 1,213 ಗಜಗಳ ವರೆಗೆ ಹರಡಿದೆ. ಇದರಲ್ಲಿ ಒಟ್ಟು 1,029 ಕಲ್ಲುಗಳಿವೆ. ಮುಂದೆ 433 ಗಜಗಳ ಅನಂತರ ಕೆರ್ಲೆಸ್ಕಾಂಟ್ ಗುಂಪು ಪ್ರಾರಂಭವಾಗುತ್ತದೆ. ಇದರಲ್ಲಿ 555 ಕಲ್ಲುಗಳು 150 ಗಜ ಅಗಲದಲ್ಲಿ 953 ಗಜಗಳ ವರೆಗೆ 13 ಸಮಾನಾಂತರ ಪಂಕ್ತಿಗಳಲ್ಲಿವೆ. ಇದರ ಪಶ್ಚಿಮದಲ್ಲಿ ಗುಂಡುಮೂಲೆಗಳಿರುವ ಚೌಕದಂತೆ 39 ಕಲ್ಲುಗಳನ್ನು ನೆಟ್ಟಿರುವ ಒಂದು ಸಮಾಧಿಯಿದೆ. ಕೆರ್ಲೆಸ್ಕಾಂಟಿನ ಉತ್ತರಕ್ಕೆ ಉದ್ದನೆಯ ಒಂದು ಮಣ್ಣುದಿಬ್ಬದ ಸಮಾಧಿಯೂ ಇದೆ. ಇವಲ್ಲದೆ ಇತರ ಕಲ್ಲು ಪಂಕ್ತಿಗಳ ಅವಶೇಷಗಳೂ ಆ ಪ್ರದೇಶದಲ್ಲಿವೆ. ಇವೆಲ್ಲ ಶಿಲಾವರ್ತುಲಗಳಲ್ಲಿ ಪರ್ಯವಸಾನ ಹೊಂದುತ್ತವೆ. ಇವುಗಳಲ್ಲಿ ಮುಖ್ಯವಾದ ಕೆರ್ಜೆಹೊ ಗುಂಪಿನಲ್ಲಿ ಇರುವ ಕಲ್ಲುಗಳ ಸಂಖ್ಯೆ 1,129. ಈ ಕಲ್ಲು ಪಂಕ್ತಿಗಳಿಗೂ ಪಕ್ಕದಲ್ಲಿರುವ ವಿವಿಧ ರೀತಿಯ ಸಮಾಧಿಗಳಿಗೂ ಏನು ಸಂಬಂಧವಿತ್ತೆಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲವಾದರೂ ಆ ಕಾಲದ ಜನ ಯಾವುದೋ ಧಾರ್ಮಿಕ ವಿಧಿಗೆ ಅನುಸಾರವಾಗಿ ಪಂಕ್ತಿಗಳ ಮಧ್ಯೆ, ಪಕ್ಕದಲ್ಲಿರುವ ಸಮಾಧಿಗಳೆಡೆಗೆ, ಮೆರವಣಿಗೆ ಹೋಗುತ್ತಿದ್ದಿರಬೇಕೆಂದು ಊಹೆ. ಇವು ಪ್ರ.ಶ.ಪೂ. 2ನೆಯ ಸಹಸ್ರಮಾನದ ಆದಿಭಾಗದಲ್ಲಿ ರಚಿತವಾದವು. ಆದರೆ ಇಲ್ಲಿರುವ ಮಣ್ಣುದಿಬ್ಬ ಸಮಾಧಿಗಳು ಆ ಸಹಸ್ರಮಾನದ ಅಂತ್ಯಕ್ಕೆ ಸೇರುತ್ತವೆ. (ಎಸ್.ಎನ್.)

**ಕಾರ್ನಾಕ್ [2] :** ಪ್ರಾಚೀನ ಈಜಿಪ್ಟ್ ಸಾಮ್ರಾಜ್ಯ ಕಾಲದ ದೇವಾಲಯಗಳಿರುವ ಗ್ರಾಮ. ದಕ್ಷಿಣ ಈಜಿಪ್ಟಿನಲ್ಲಿ ನೈಲ್ ನದಿಯ ದಂಡೆಯಲ್ಲಿರುವ ಈ ಗ್ರಾಮ ಹಿಂದೆ ಈಜಿಪ್ಟಿನ ರಾಜಧಾನಿಯಾಗಿದ್ದ ಥೀಬ್ಸ್ ಪಟ್ಟಣದ ಭಾಗವಾಗಿತ್ತು. ಇದರ ಪೂರ್ವದ ಹೆಸರು ಇಪೆಕ್–ಇಸುತ್–ವಿಶೇಷ ಸ್ಥಳ. ಇಲ್ಲಿಯ ಎಲ್ಲ ಕಟ್ಟಡಗಳೂ ಸು. 7,800 ಅಡಿಗಳಿಗೂ ಹೆಚ್ಚು ಸುತ್ತಳತೆಯ ಪ್ರಾಕಾರದೊಳಗಿವೆ. ಪ್ರಾಕಾರದೊಳಗೆ ಉತ್ತರ ಭಾಗದಲ್ಲಿ ಪ್ರಾಚೀನ ಈಜಿಪ್ಟಿನ ಯುದ್ಧದೇವತೆ ಖೊನ್ಸುನ ದೇವಾಲಯವೂ ದಕ್ಷಿಣದಲ್ಲಿ ಮುಟ್ ದೇವತೆಯ ಮಂದಿರವೂ ಇದ್ದುವು. ಮಧ್ಯದಲ್ಲಿರುವ ಈಜಿಪ್ಟಿನ ರಾಷ್ಟ್ರದೇವತೆ ಅಮುನ್–ರೇ ದೇವಾಲಯ ಇಲ್ಲಿಯ ಮುಖ್ಯ ಕಟ್ಟಡ. ಬೃಹದಾಕಾರದ ಮಹಾದ್ವಾರಗಳು, ಹಜಾರಗಳು, ಸ್ತಂಭಗಳು, ಭಿತ್ತಿಗಳು ಮತ್ತು ಶಿಲ್ಪಗಳನ್ನೊಳಗೊಂಡ ಈ ಗುಡಿ ಪ್ರಪಂಚದ ಅತ್ಯಂತ ದೊಡ್ಡ ದೇವಾಲಯಗಳಲ್ಲೊಂದೆಂದು ಪರಿಗಣಿತವಾಗಿದೆ.

ಈ ದೇವಾಲಯ ಒಂದು ಕಾಲದಲ್ಲಿ ಕಟ್ಟಿ ಮುಗಿಸಿದ್ದಲ್ಲ. ಈಜಿಪ್ಟಿನ 11ನೆಯ ರಾಜವಂಶದ ಕಾಲದಲ್ಲಿ (ಪ್ರ.ಶ.ಪೂ. ಸು. 2000) ಅಮುನ್ ದೇವತೆಯ ಒಂದು ಚಿಕ್ಕ ದೇವಾಲಯ ಮಾತ್ರ ಇಲ್ಲಿತ್ತು. ಅನಂತರ ಪ್ರಸಕ್ತಶಕದ ಆರಂಭದವರೆಗೂ ಬೇರೆ ಬೇರೆ ಕಾಲಗಳಲ್ಲಿ ಅನೇಕ ಸೇರ್ಪಡೆಗಳಾಗಿ, ಅದು ಈಗಿನ ಬೃಹದಾಕಾರವನ್ನು ತಾಳಿದೆ. ಈ ಸೇರ್ಪಡಿಗಳಲ್ಲಿ ಬಹಳ ಮುಖ್ಯವಾದುದು ಪ್ರ.ಶ.ಪೂ. 14ನೆಯ ಶತಮಾನದಲ್ಲಿ ಕಟ್ಟಿದ ಮಧ್ಯದ ಹಜಾರ. ಇದು ಪ್ರಾಚೀನ ವಾಸ್ತುಕಲೆಯ ಆಶ್ಚರ್ಯಗಳಲ್ಲಿ ಒಂದು ಎಂದು ಹೆಸರುಗಳಿಸಿದೆ. ಸು. 5800 ಚ.ಅ. ವಿಸ್ತಾರವಿರುವ ಈ ಹಜಾರದಲ್ಲಿ ಸಾಲಿಗೆ ಏಳರಂತೆ 140 ದೈತ್ಯಾಕಾರದ ಕಂಬಗಳಿವೆ. ಮಧ್ಯದ ಎರಡು ಸಾಲಿನ ಕಂಬಗಳು ಒಂದೊಂದೂ 78[1] ಎತ್ತರವಿವೆ. ಇವು ಇತರ ಕಂಬಗಳಿಗಿಂತ ಸ್ವಲ್ಪ ಹೆಚ್ಚು ಎತ್ತರವಿದ್ದು, ಮಧ್ಯದ ಮಾಡನ್ನು ಮೇಲೆ ಎತ್ತಿ ಹಜಾರದ ಒಳಗೆ ಸುಲಭವಾಗಿ ಗಾಳಿಬೆಳಕು ಬರುವಂತೆ ಅನುವು ಮಾಡಿವೆ. ಒಳಗಿನ ಕಂಬಗಳ ಮೇಲೆಲ್ಲಾ ಸುಂದರ ಶಿಲ್ಪಗಳಿವೆ. ಈ ಹಜಾರದ ಹೊರಗೋಡೆಯ ಮೇಲೆ ಸೇಟಿ ದೊರೆಯ ಪ್ಯಾಲಸ್ಟೀನ್ ವಿಜಯ ಮುಂತಾದ ಅನೇಕ ಚಾರಿತ್ರಿಕ ಘಟನೆಗಳನ್ನು ಕೆತ್ತಲಾಗಿದೆ. ಪ್ರಾಯಶಃ ಫಾರೋ ತಹಾರ್ಕೊ (ಪ್ರ.ಶ.ಪೂ. 7ನೆಯ ಶತಮಾನ) ಕಟ್ಟಿದ ಮೊದಲನೆಯ ಮಹಾದ್ವಾರ 370' ಎತ್ತರದ ಬೃಹತ್ ಕಟ್ಟಡ. ಪ್ರ.ಶ.ಪೂ. 14ನೆಯ ಶತಮಾನದಲ್ಲಿ 3ನೆಯ ಥಟ್ಮೋಸ್ ಕಟ್ಟಿಸಿದ ಒಂದು ಸಣ್ಣಗುಡಿಯಲ್ಲಿ ಆ ದೊರೆಯ ದಂಡಯಾತ್ರೆಗಳನ್ನೆಲ್ಲ ಕೆತ್ತಲಾಗಿದೆ. ಅದರ ಒಂದು ಗೋಡೆಯ ಮೇಲೆ, ಅವನು ಏಷ್ಯದಿಂದ ತಂದ ವಿಚಿತ್ರ ಸಸ್ಯಗಳು ಮತ್ತು ಪ್ರಾಣಿಗಳನ್ನೆಲ್ಲ ಸಾಲುಸಾಲಾಗಿ ಉಬ್ಬು ಶಿಲ್ಪದಲ್ಲಿ ಕೆತ್ತಿಸಿದ್ದಾನೆ. (ಎಸ್.ಎನ್.)

**ಕಾರ್ನಾಡು, ಸದಾಶಿವರಾವ್:** 1881–1937. ದಕ್ಷಿಣ ಕನ್ನಡ ಜಿಲ್ಲೆಯ ಒಬ್ಬ ಪ್ರಮುಖ ನ್ಯಾಯವಾದಿ, ಸಮಾಜಸೇವಕ, ಸ್ವಾತಂತ್ರ್ಯ ಹೋರಾಟಗಾರ. 1891ರಲ್ಲಿ ಮಂಗಳೂರಿನಲ್ಲಿ ಜನಿಸಿದರು. ತಂದೆ ಕಾರ್ನಾಡು ರಾಮಚಂದ್ರರಾವ್ ಮಂಗಳೂರಿನ ಪ್ರಮುಖ ವಕೀಲರು; ಸದ್ಗುಣಿಯೆಂದೂ ಸ್ವತಂತ್ರ ಧೋರಣೆಯುಳ್ಳ ಸತ್ಯನಿಷ್ಠರೆಂದೂ ಪ್ರಸಿದ್ಧರಾಗಿದ್ದರು. ತಾಯಿ ರಾಧಾಬಾಯಿ. ಸದಾಶಿವರಾಯರು ಮಂಗಳೂರಿನಲ್ಲೇ ಪ್ರಾರಂಭಿಕ ಶಿಕ್ಷಣ ಪಡೆದರು. ಮುಂದೆ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಪದವೀಧರರಾದರು. ಮುಂಬಯಿಯಲ್ಲಿ ನ್ಯಾಯಶಾಸ್ತ್ರ ಪದವಿಗಳಿಸಿ ಮಂಗಳೂರಿನಲ್ಲಿ 1906ರಲ್ಲಿ ವಕೀಲಿಯನ್ನಾರಂಭಿಸಿದರು.

ಇವರು ಬಲು ಬೇಗ ವೃತ್ತಿಜೀವನದಲ್ಲಿ ಯಶಸ್ಸು ಗಳಿಸಿದರಾದರೂ ಇವರ ಮನಸ್ಸು ದೇಶದ ಉನ್ನತಿಗಾಗಿ ಸದಾ ತುಡಿಯುತ್ತಿತ್ತು. ಸ್ತ್ರೀಯರ ಪ್ರಗತಿಗಾಗಿ ಮಹಿಳಾ ಸಭಾ ಎಂಬಸಂಸ್ಥೆಯೊಂದನ್ನು ಪ್ರಾರಂಭಿಸಿದರು. ಇವರೂ ಇವರ ಪತ್ನಿ ಶಾಂತಾಬಾಯಿ ಯವರೂ ಆ ಸಂಸ್ಥೆಯ ಆಶ್ರಯದಲ್ಲಿ ಮಹಿಳೆಯರಿಗೆ ಉಪಯುಕ್ತವಾದ ಕೆಲಸಗಳನ್ನು ಕಲಿಸಿಕೊಡುತ್ತಿದ್ದರು. ದೇಶದಲ್ಲಿ ಸ್ವಾತಂತ್ರ್ಯಚಳವಳಿ ತೀವ್ರವಾದಾಗ ಯುವಕರಿಗೆ ರಾಷ್ಟ್ರೀಯ ಶಿಕ್ಷಣವನ್ನು ನೀಡುವತ್ತ ಇವರ ಮನಸ್ಸು ಹರಿಯಿತು. ಇವರು ತಿಲಕ್ ವಿದ್ಯಾಲಯ ಎಂಬ ರಾಷ್ಟ್ರೀಯ ವಿದ್ಯಾಶಾಲೆ ಯನ್ನಾರಂಭಿಸಿದರು. ಹಿಂದಿಯ ಜೊತೆಗೆ ಅಲ್ಲಿ ನೂಲುವುದು, ನೇಯುವುದು ಮುಂತಾದ ಉಪಯುಕ್ತ ಕೈಕಸಬುಗಳನ್ನೂ ಬೋಧಿಸಲಾಗುತ್ತಿತ್ತು.

ರಚನಾತ್ಮಕ ಕಾರ್ಯಗಳಲ್ಲೆ ಅಲ್ಲದೆ ಇವರು ಸ್ವಾತಂತ್ರ್ಯ ಚಳುವಳಿಯಲ್ಲೂ ನೇರವಾಗಿ ಭಾಗವಹಿಸಿದರು. ಗಾಂಧೀಜಿ ಸತ್ಯಾಗ್ರಹ ಚಳವಳಿಯನ್ನಾರಂಭಿಸಿದಾಗ ಕರ್ನಾಟಕದಲ್ಲಿ ಅದರ ಪ್ರತಿಜ್ಞೆಗೆ ಸಹಿಹಾಕಿದವರಲ್ಲಿ ಇವರು ಮೊದಲಿಗರು. ಇವರು ಆ ಚಳವಳಿಯಲ್ಲಿ ಧುಮುಕಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ಸು ಬಲಗೊಂಡಿತು. ದಕ್ಷ ಹಾಗೂ ನಿಷ್ಠಾವಿವಂತ ಸತ್ಯಾಗ್ರಹಿಗಳ ತರಬೇತಿಗಾಗಿ ಇವರು ಧಾರಾಳವಾಗಿ ಹಣ ಸುರಿದರು.

ಹಲವು ವರ್ಷಗಳ ಕಾಲ ಇವರು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರೂ ಆಗಿದ್ದರಲ್ಲದೆ 1931–34ರಲ್ಲಿ ಅದರ ಅಧ್ಯಕ್ಷರೂ ಆಗಿದ್ದರು. ಇವರ ಖ್ಯಾತಿ ಅಖಿಲಭಾರತ ಮಟ್ಟಕ್ಕೂ ಏರಿತು. ಇವರು ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾದರು.

ಮಹಾತ್ಮ ಗಾಂಧೀಯವರ ಅಚ್ಚುಮೆಚ್ಚಿನ ಅನುಯಾಯಿ ಗಳಲ್ಲೊಬ್ಬರಾಗಿದ್ದ ಇವರು ಗಾಂಧೀಯವರು ಆರಂಭಿಸಿದ ಉಪ್ಪಿನ ಸತ್ಯಾಗ್ರಹ ಸಮಯದಲ್ಲಿ ವೈಯಕ್ತಿಕ ಸತ್ಯಾಗ್ರಹಿಯಾಗಿ ದಸ್ತಗಿರಿಯಾಗಿ ಕಾರಾಗೃಹವಾಸವನ್ನನುಭವಿಸಿದರು. 1937ರಲ್ಲಿ ಫೈಜ್‌ಪುರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದಾಗ ಇವರ ಆರೋಗ್ಯ ಕೆಟ್ಟಿತು. 1937 ಜನವರಿ 9ರಂದು ಮುಂಬಯಿಯಲ್ಲಿ ನಿಧನರಾದರು.

ಇವರು ಐಶ್ವರ್ಯವಂತರ ಮನೆತನದಲ್ಲಿ ಹುಟ್ಟಿ ಬೆಳೆದವರಾದರೂ ದೀನದಲಿತರ ಬಗ್ಗೆ ಸದಾ ಅನುಕಂಪ ಹೊಂದಿದ್ದರು. ಅವರ ಉದ್ಧಾರಕ್ಕಾಗಿ ಬಹಳ ಶ್ರಮಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಜಸುಧಾರಕರ ದೊಡ್ಡ ಪಡೆಯನ್ನೇ ಕಟ್ಟಿದ್ದರು. ಮಹಿಳೆಯರ ಪ್ರಗತಿಗಾಗಿಯೂ ರಾಷ್ಟ್ರೀಯ ಶಿಕ್ಷಣಕ್ಕಾಗಿಯೂ ಇವರು ಕಟ್ಟಿದ ಸಂಸ್ಥೆಗಳು ತುಂಬ ಯಶಸ್ವಿಯಾಗಿ ಕೆಲಸ ಮಾಡಿದುವು. ಹರಿಜನೋದ್ಧಾರ ಕಾರ್ಯದಲ್ಲಿ ಇವರು ಕೊನೆಯವರೆಗೂ ನಿರತರಾಗಿದ್ದರು. ಇವರು ಕೆನರಾ ಸಾರಸ್ವತ ಸಂಘದ ಅಧ್ಯಕ್ಷರೂ ಆಗಿದ್ದರು (1924–25).

ಇವರು ಸರಸಿ, ಸರಳ ಜೀವಿ. ಮಹಾತ್ಮ ಗಾಂಧೀಯವರಿಗೆ ಇವರಲ್ಲಿ ತುಂಬ ವಿಶ್ವಾಸವಿತ್ತು. ಬೆಂಗಳೂರಿನಲ್ಲಿ ಸೇರಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅರವತ್ತೈದನೆಯ ಅಧಿವೇಶನದ (1960) ಸ್ಥಳಕ್ಕೆ ಸದಾಶಿವನಗರ ಎಂದು ಹೆಸರಿಡಲಾಗಿತ್ತು. ಈಗ ಬೆಂಗಳೂರಿನಲ್ಲಿ ಇವರ ಹೆಸರಿನ ಒಂದು ಬಡಾವಣೆ ಇದೆ. (ಎಚ್.ಎಸ್.ಕೆ.)

**ಕಾರ್ನೇಗಿ, ಆಂಡ್ರ್ಯೂ :** 1835–1919. ಅಮೆರಿಕೆಯ ಕೈಗಾರಿಕೋದ್ಯಮಿ ಮತ್ತು ದಾನಿ. ಶಿಕ್ಷಣ ಮತ್ತು ಸಂಶೋಧನೆಗಳಿಗಾಗಿ ಅನೇಕಾನೇಕ ದತ್ತಿ ಮತ್ತು ಸಂಸ್ಥೆಗಳನ್ನು ಸ್ಥಾಪಿಸಿದವ. ಗಾಸ್ಪೆಲ್ ಆಫ್ ವೆಲ್ತ್ (1889) ಎಂಬ ತನ್ನ ಪ್ರಬಂಧವೊಂದರಲ್ಲಿ ಈತ ಶ್ರೀಮಂತನ ಜೀವನದಲ್ಲಿನ ಎರಡು ಸಂದಿಗ್ಧ ಅವಧಿಗಳನ್ನು ಹೀಗೆ ಬಣ್ಣಿಸಿದ್ದಾನೆ. ಮೊದಲನೆಯದು ಐಶ್ವರ್ಯವನ್ನು ಸಂಪಾದಿಸುವುದು. ಎರಡನೆಯದು ಗಳಿಸಿದ ಐಶ್ವರ್ಯವನ್ನು ಜನಸಾಮಾನ್ಯರ ಕಲ್ಯಾಣಕ್ಕಾಗಿ ಸದ್ವಿನಿಯೋಗ ಮಾಡುವುದು. ಈ ತತ್ತ್ವವನ್ನು ಜೀವನದಲ್ಲಿ ಸ್ವಯಂ ಅನುಷ್ಠಾನಕ್ಕೆ ತಂದವನೀತ. ಹುಟ್ಟಿದ್ದು ಸ್ಕಾಟ್ಲೆಂಡಿನ ಡನ್ಫರ್ಮ್‌ಲಿನ್‌ನಲ್ಲಿ. ತಂದೆ ನಡೆಸುತ್ತಿದ್ದ ಕೈಮಗ್ಗದ ವ್ಯಾಪಾರ ಕುಸಿದು ಬಿದ್ದುದರಿಂದ ಇಡೀ ಕುಟುಂಬವೇ 1848ರಲ್ಲಿ ಅಮೆರಿಕೆಗೆ ಬಂದು ಅಲಘನಿ ನಗರದಲ್ಲಿ ನೆಲಸಿತು. ಕಾರ್ನೇಗಿ ಅಲ್ಲಿ ಗಿರಣಿ ಕಾರ್ಖಾನೆಯಲ್ಲಿ ದಾರ ಸುತ್ತುವ ಹುಡುಗನಾಗಿ ಸೇರಿಕೊಂಡ. ಸಂಪಾದನೆ ವಾರಕ್ಕೆ 1.20 ಡಾಲರ್. ಅನಂತರ ವ್ಯಾಪಾರಿಯೊಬ್ಬನ ಬಳಿ ಗುಮಾಸ್ತನಾದ. ಪಿಟ್ಸ್‌ಬರ್ಗ್‌ನಲ್ಲಿ ತಂತಿ ಸುದ್ದಿಗಾರ ಹುಡುಗನಾಗಿ ಕೆಲಕಾಲ ಕಳೆದು ಅಲ್ಲಿಯೇ ಚಾಲಕ ಹುದ್ದೆಗೆ ತೇರ್ಗಡೆ ಹೊಂದಿದ. ಏತನ್ಮಧ್ಯೆ ಹೆಚ್ಚಿನ ಸಂಪಾದನೆಗಾಗಿ ವೃತ್ತಪತ್ರಿಕೆಯ ಸುದ್ದಿಗಾರನಾಗಿ ಕೆಲಸ ಮಾಡತೊಡಗಿದ. ಅನಂತರ ಪೆನ್ಸಿಲ್ ವೇನಿಯ ರೇಲ್‌ರೋಡಿನ ಅಧಿಕಾರ ವರ್ಗಕ್ಕೆ ಸೇರಿ ಟೆಲಿಗ್ರಾಫಿಕ್ ಟ್ರೇನ್ ಡಿಸ್ಪ್ಯಾಚರ್ ಆಗಿ ಕೆಲಸ ನಿರ್ವಹಿಸಿದ. ಅಲ್ಲಿಯೇ ಜನರಲ್ ಸೂಪರಿಂಟೆಂಡೆಂಟ್ ಆಗಿದ್ದ ಕರ್ನಲ್ ಥಾಮಸ್ ಎ. ಸ್ಕಾಟನ ಕಾರ್ಯದರ್ಶಿಯಾದ. ಅದೇ ವೇಳೆ ವುಡ್‌ರಫ್ ಕಂಪೆನಿಯ 1/8 ಭಾಗದ ಪಾಲುದಾರನಾದ. ಅಷ್ಟರಲ್ಲಿ ಅಂತರ್ಯುದ್ಧ ತಲೆದೋರಿ ಸ್ಕಾಟ್ ಯುದ್ಧಖಾತೆಯ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡ ಮೇಲೆ ಕಾರ್ನೇಗಿ ಈಶಾನ್ಯ ಭಾಗದ ಸೈನ್ಯ ಹಾಗೂ ದೂರವಾಣಿ ಮಾರ್ಗವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. 1862ರಲ್ಲಿ ಮರದಿಂದ ಕಟ್ಟಿದ ಸೇತುವೆಗಳು ಪ್ರಯೋಜನಕ್ಕೆ ಬರಲಾರವೆಂದು ತಿಳಿದ ಮೇಲೆ ಕಾರ್ನೇಗಿ ಕಬ್ಬಿಣದ ಸೇತುವೆಗಳನ್ನು ಕಟ್ಟಲು ಸಿದ್ಧತೆ ಮಾಡಿಕೊಂಡ. ಇದರ ಫಲವೆಂಬಂತೆ ಪ್ರಥಮವಾಗಿ ಒಹಾಯೊ ನದಿಗೆ ಕಬ್ಬಿಣದ ಸೇತುವೆ ಹಾಕಿದ. ಸೇತುವೆ ಕಾಮಗಾರಿಕೆಗಾಗಿ ಹೆಚ್ಚಿನ ಕಬ್ಬಿಣವನ್ನು ಪಡೆಯಲು ಕಬ್ಬಿಣ ವ್ಯಾಪಾರಕ್ಕೆ ಇಳಿದು ಯೂನಿಯನ್ ಐರನ್ ಮಿಲ್ಸ್‌ನ ಸಂಸ್ಥಾಪಕನಾದ. 1868ರಲ್ಲಿ ಅದು ಅಮೆರಿಕೆಯ ಪ್ರಥಮ ಉಕ್ಕಿನ ಕಾರ್ಖಾನೆಯಾಯಿತು. ಅಲ್ಲಿಂದ 1888ರ ವೇಳೆಗೆ ಈತನ ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆ ನಾಲ್ಕೂ ನಿಟ್ಟಿನಲ್ಲಿ ಬಡಾಯಿಸಿತು. ಉತ್ಸಾಹಿತನಾದ ಕಾರ್ನೇಗಿ ಅನೇಕ ಕಂಪನಿಗಳನ್ನು ತೆರೆದ. 1899ರಲ್ಲಿ ಈ ಎಲ್ಲ ಕಂಪನಿಗಳನ್ನೂ ಒಂದುಗೂಡಿಸಿ ಕಾರ್ನೇಗಿ ಉಕ್ಕಿನ ಕಂಪನಿ ಎಂದು ಹೆಸರಿಟ್ಟ. 1901ರಲ್ಲಿ ಈ ವ್ಯವಹಾರದಿಂದ ನಿವೃತ್ತನಾಗಿ ಅಮೆರಿಕೆಯ ಉಕ್ಕಿನ ಮಂಡಳಿಗೆ ತನ್ನ ಕಂಪನಿಯನ್ನು 50,00,00,000 ಡಾಲರುಗಳಿಗೆ ಮಾರಿದ. ತನ್ನ ಉಳಿದ ಕಾಲವನ್ನು ದಾನಕಾರ್ಯಗಳಿಗಾಗಿ ವ್ಯಯಮಾಡಿದ. ಪ್ರಪಂಚಾದ್ಯಂತ ಗ್ರಂಥಾಲಯಗಳನ್ನು ನಿರ್ಮಿಸುವುದಲ್ಲದೆ ಇನ್ನೂ ಅನೇಕ ಉಪಯುಕ್ತ ಕಾರ್ಯಗಳನ್ನು ಮಾಡಿದ. ಈತ ಮಾಡಿದ ದಾನದ ಮೊತ್ತ 35 ದಶಕೋಟಿ ಡಾಲರ್‌ಗಳಿಗೆ ಕಡಿಮೆಯಿಲ್ಲವೆಂದು ಹೇಳಲಾಗುತ್ತಿದೆ. ಕಾರ್ನೇಗಿಗೆ ಅನೇಕ ರಾಷ್ಟ್ರಗಳಿಂದ ಗೌರವ ದೊರಕಿತು. ಈತ ಬರೆದ ಗ್ರಂಥಗಳೆಂದರೆ ಟ್ರಯಂಫೆಂಟ್ ಡೆಮಾಕ್ರಸಿ (1886), ದಿ ಗಾಸ್ಪೆಲ್ ಆಫ್ ವೆಲ್ತ್ (1900), ದಿ ಎಂಪೈರ್ ಆಫ್ ಬಿಸಿನೆಸ್ (1902), ಪ್ರಾಬ್ಲಮ್ಸ್ ಆಫ್ ಟುಡೆ (1909). ಲೆನಾಕ್ಸ್‌ನಲ್ಲಿ 1919ರಲ್ಲಿ ಈತ ನಿಧನನಾದ. (ಪಿ.ಜಿ.)

**ಕಾರ್ನೇಗಿ, ಡೇಲ್ :** 1885–1955. ಅಮೆರಿಕದ ಜನಪ್ರಿಯ ಲೇಖಕ ಮತ್ತು ಭಾಷಣಕಾರ. ತಂದೆ ಜೇಮ್ಸ್ ವಿಲಿಯಂ ಕಾರ್ನೇಗಿ. ತಾಯಿ ಅಮಂದ ಎಲಿಜಬೆತ್ (ಹಾರ್ಬಿಸನ್). ಡೇಲ್ ಈ ದಂಪತಿಗಳ ಎರಡನೆಯ ಮಗ. ನದಿಯೊಂದರ ದಂಡೆಯ ಮೇಲೆ ಹೊಲದ ಮನೆಯಲ್ಲಿ ಜೀವಿಸುತ್ತಿದ್ದ ಕಾರ್ನೇಗಿ ಕುಟುಂಬದ ಪೈರೆಲ್ಲ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದುದರಿಂದ ಜೇಮ್ಸ್ ಕಾರ್ನೇಗಿಗೆ ಬಡತನ ತಪ್ಪಲಿಲ್ಲ. ಕೆಲವು ಕಾಲಾನಂತರ ಆತ ಆ ಗ್ರಾಮ ಬಿಟ್ಟು ವಾರೆನ್ಸ್‌ಬರ್ಗ್ ನಗರಕ್ಕೆ ಹೋಗಿ ನೆಲಸಿದ. ಎಲಿಜಬೆತ್ ಕಾರ್ನೇಗಿ ಮೆಥಾಡಿಸ್ಟ್ ಧರ್ಮಪಂಥದವಳಾದ್ದರಿಂದ ತನ್ನ ಮಕ್ಕಳು–ಕ್ಲಿಫ್ ಮತ್ತು ಡೇಲ್–ಇಬ್ಬರೂ ಪಾದ್ರಿಗಳಾಗಬೇಕೆಂದು ಹಂಬಲಿಸುತ್ತಿದ್ದಳು.

ಡೇಲ್ ಕಾರ್ನೇಗಿ 1904ರಿಂದ 1908ರ ವರೆಗೆ ವಾರೆನ್ಸ್‌ಬರ್ಗ್ ನಗರದ ಶಿಕ್ಷಕರ ಕಾಲೇಜಿನಲ್ಲಿ ವ್ಯಾಸಂಗ ಮಾಡಿ, ಅಲೆಯನ್ಸ್ ನಗರದ (ನೆಬ್ರಾಸ್ಕ) ಇಂಟರ್ ನ್ಯಾಷನಲ್ ಕರೆಸ್ಪಾಂಡೆನ್ಸ್ ಸ್ಕೂಲ್ ಎಂಬ ಅಂಚೆ ಶಿಕ್ಷಣ ಶಾಲೆಯ ಶಿಕ್ಷಣ ಸಾಹಿತ್ಯದ ಮಾರಾಟಗಾರನಾಗಿ ಕೆಲಸ ಮಾಡಿದ. ತರುವಾಯ ಓಮಾಹೆ ನಗರಕ್ಕೆ ಹೋಗಿ ಆರ್‌ಮೊರ್ ಅಂಡ್ ಕಂಪನಿಯ ಮಾರಾಟಗಾರನಾಗಿ ಸೇರಿದ. 1911ರ ಹೊತ್ತಿಗೆ ಅವನಲ್ಲಿ 500 ಡಾಲರುಗಳಷ್ಟು ಹಣ ಕೂಡಿರಲು, ಭಾಷಣ ಕಲೆಯ ಬಗ್ಗೆ ಶಿಕ್ಷಣ ಪಡೆಯಲು ನಿರ್ಧರಿಸಿ ನ್ಯೂಯಾರ್ಕ್ ಪಟ್ಟಣಕ್ಕೆ ಪ್ರಯಾಣ ಬೆಳೆಸಿದ. ರೈಲಿನಲ್ಲಿ ಪ್ರಯಾಣಿಕನೊಬ್ಬನ ಸಲಹೆಯಲ್ಲಿ ಭರವಸೆ ಇಟ್ಟು ನ್ಯೂಯಾರ್ಕ್ ಪಟ್ಟಣ ಸೇರಿದೊಡನೆಯೇ ಅಮೆರಿಕನ್ ಅಕೆಡಮಿ ಆಫ್ ಡ್ರಮೆಟಿಕ್ ಆರ್ಟ್ಸ್ ಎಂಬ ಅಭಿನಯ ಶಿಕ್ಷಣಶಾಲೆಯನ್ನು ಸೇರಿದ. ನಾಟಕರಂಗ ತನ್ನ ಕ್ಷೇತ್ರವಲ್ಲವೆಂದು ಖಾತರಿಯಾದ ಮೇಲೆ ನ್ಯೂಯಾರ್ಕ್ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಶಾಲೆಯನ್ನು ಸೇರಿದ (1914). ವ್ಯಾಸಂಗ ಕಾಲದಲ್ಲೇ ನ್ಯೂಯಾರ್ಕಿನ ವೈ.ಎಂ.ಸಿ.ಎ. ಸಂಸ್ಥೆಯಲ್ಲಿ ಭಾಷಣಕಲೆಯ ಶಿಕ್ಷಕನಾಗಿ ಕೆಲಸಮಾಡಿ, ತರುವಾಯ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮವನ್ನು ಅಭ್ಯಾಸ ಮಾಡಿದ. ವರ್ಲ್ಡ್ ಔಟ್‌ಲುಕ್, ಅಮೆರಿಕನ್ ಮ್ಯಾಗಜೈನ್, ಇಲಸ್ಟ್ರೇಟೆಡ್ ವರ್ಲ್ಡ್ ಪಿಕ್ಟೋರಿಯಲ್ ರೆವ್ಯು, ರೊಟೇರಿಯನ್, ಸ್ಕೊಲಾಸ್ಟಿಕ್ ಮೊದಲಾದ ಅಮೆರಿಕದ ಪತ್ರಿಕೆಗಳಿಗೆ ಬರೆದ. ವೈ. ಎಂ. ಸಿ. ಎ. ಸಂಸ್ಥೆಯಲ್ಲಿ ಪಾಠ ಹೇಳುವುದು, ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದು–ಇವುಗಳಿಂದ ಸಂಪಾದನೆ ತಿಂಗಳಿಗೆ 500 ಡಾಲರುಗಳಿಗೆ ಏರಿತು. ಟೈಮ್ಸ್ ಚೌಕದಲ್ಲಿ ತನ್ನ ಅಂಚೆ–ಶಿಕ್ಷಣದ ಕಚೇರಿಯನ್ನು ತೆರೆದು, ಭಾಷಣಕಲೆಯ ಸಂಬಂಧವಾದ ಶಿಕ್ಷಣ ವಿಧಾನಗಳನ್ನು ರೂಪಿಸಿ, ದೇಶದಾದ್ಯಂತ ಹರಡಿದ್ದ ತನ್ನ ಶಿಷ್ಯವರ್ಗಕ್ಕೆ ಶಾಸ್ತ್ರೀಯವಾಗಿ ಪಾಠ ಹೇಳಲು ಲಘು ಗ್ರಂಥಗಳನ್ನು ಬರೆದ.

1919–20 ಮತ್ತು 1920–21–ಈ ಎರಡು ವರ್ಷ ಕಾಲ ವಿವಿಧ ವಿಷಯಗಳನ್ನು ಕುರಿತು ಭಾಷಣ ಮಾಡುತ್ತ ದೇಶ ಪರ್ಯಟನ ಮಾಡಿ ಬಂದ. 1925ರಲ್ಲಿ ರಾಯಲ್ ಜಿಯೊಗ್ರಾಫಿಕಲ್ ಸೊಸೈಟಿಯ ಸದಸ್ಯನಾಗಿ ನೇಮಕವಾದ. 1921ರಲ್ಲಿ ಫ್ರಾನ್ಸ್ ದೇಶದ ಶ್ರೀಮಂತಳೊಬ್ಬಳನ್ನು ಮದುವೆಯಾದ. ಅವರಿಬ್ಬರೂ ಕೆಲವು ವರ್ಷ ಪ್ರವಾಸ ಮಾಡಿ ಕೊನೆಗೆ ನ್ಯೂಯಾರ್ಕ್ ಬಳಿಯ ಫಾರೆಸ್ಟ್ ಹಿಲ್ಸ್ ಭಾಗದಲ್ಲಿ ನೆಲಸಿದರು.

ಪ್ರವಾಸಾನಂತರ ಡೇಲ್ ಕಾರ್ನೇಗಿ ತನ್ನ ಶಿಕ್ಷಣಶಾಲೆಯನ್ನು ಮತ್ತೆ ಪ್ರಾರಂಭಿಸಿ ತನ್ನ ಲೇಖನಗಳನ್ನು ಮತ್ತು ಲಘು ಗ್ರಂಥಗಳನ್ನು ಸಂಘಟಿಸಿ ಗ್ರಂಥರೂಪಕ್ಕೆ ತಂದ. ಪ್ರಕಟವಾದ ಇವನ ಗ್ರಂಥಗಳು ಇವು: ಪಬ್ಲಿಕ್ ಸ್ಪೀಕಿಂಗ್, ಎ ಪ್ರ್ಯಾಕ್ಟಿಕಲ್ ಕೋರ್ಸ್ ಫಾರ್ ಬಿಸಿನೆಸ್ ಮೆನ್ (1926), ಪಬ್ಲಿಕ್ ಸ್ಪೀಕಿಂಗ್ ಅಂಡ್ ಇನ್‌ಫ್ಲೂಯೆನ್ಸಿಂಗ್ ಮೆನ್ ಇನ್ ಬಿಸಿನೆಸ್ (1931), ಲಿಂಕನ್, ದಿ ಅನ್‌ನೋನ್ (1932).

ಈ ಗ್ರಂಥಗಳ ಯಶಸ್ಸಿನಿಂದ ಉತ್ತೇಜಿತನಾಗಿ ಡೇಲ್, ಪ್ರಸಿದ್ಧ ಪುರುಷರ ಬಗ್ಗೆ ಗ್ರಂಥವೊಂದನ್ನು ಸಿದ್ಧಪಡಿಸಲು ಸಂಶೋಧಕರನ್ನು ನೇಮಿಸಿ, ಮಹಾ ವ್ಯಕ್ತಿಗಳನ್ನು ಸ್ವತಃ ನೋಡಿ ವಿಷಯ ಸಂಗ್ರಹಿಸಲು ಪ್ರವಾಸ ಹೊರಟ. ಈ ಸಾಹಸ ಪ್ರಯತ್ನದಿಂದ ಲಿಟ್ಲ್ ನೋನ್ ಫ್ಯಾಕ್ಟ್ಸ್ ಅಬೌಟ್ ವೆಲ್‌ನೋನ್ ಪೀಪಲ್ ಎಂಬ ಗ್ರಂಥ ಪ್ರಕಟವಾಯಿತು(1934). ಈ ಗ್ರಂಥ ಇವನ ರೇಡಿಯೋ ಕಾರ್ಯಕ್ರಮಗಳಿಗೆ ಆಧಾರವಾಗಿ, ಜನಪ್ರಿಯವಾಯಿತು.

ತರುವಾಯ ಈತನ ಮತ್ತೊಂದು ಗ್ರಂಥ ಫೈವ್ ಮಿನಿಟ್ ಬಯಾಗ್ರಫಿ ಹೊರಬಂತು (1937).

ಡೇಲ್ ಕಾರ್ನೇಗಿಯ ರೇಡಿಯೋ ಕಾರ್ಯಕ್ರಮಗಳಲ್ಲಿ ಪ್ರಖ್ಯಾತವಾದವು ಇವು; ಮಾಲ್ವೆಕ್ಸ್ ಅವರ್ (1933–35); ಗೆಟಿಂಗ್ ಅಹೆಡ್ (1937–38); ಹೌ ಟು ವಿನ್ ಫ್ರೆಂಡ್ಸ್ ಅಂಡ್ ಇನ್‌ಫ್ಲೂಯೆನ್ಸ್ ದೆಂ (1939); ಹೌ ಟು ಗೆಟ್ ಅಹೆಡ್ (1941); ಮತ್ತು ಲಿಟ್ಲ್ ನೋನ್ ಫ್ಯಾಕ್ಟ್ಸ್ ಅಬೌಟ್ ವೆಲ್‌ನೋನ್ ಪೀಪಲ್ (1940–45).

ಡೇಲ್ ಕಾರ್ನೇಗಿಯ ಗ್ರಂಥ ಹೌ ಟು ವಿನ್ ಫ್ರೆಂಡ್ಸ್ ಅಂಡ್ ಇನ್‌ಫ್ಲೂಯೆನ್ಸ್ ಪೀಪಲ್. ಕೇವಲ 6 ತಿಂಗಳಲ್ಲಿ ಇವನಿಗೆ 125,000 ಡಾಲರುಗಳ ಸಂಭಾವನೆ ಸಂಪಾದಿಸಿಕೊಟ್ಟಿತು. ಅದರ ಪ್ರಕಾಶಕರಾದ ಸೈಮನ್ ಅಂಡ್ ಷುಸ್ಟರ್ ಸಂಸ್ಥೆಯ ಪ್ರಕಾರ, 1954ರ ಹೊತ್ತಿಗೆ ಈ ಗ್ರಂಥದ 1,300,000 ಪ್ರತಿಗಳು ಮಾರಾಟವಾಗಿ ಗ್ರಂಥ 35 ಭಾಷೆಗಳಿಗೆ ಭಾಷಾಂತರವಾಯಿತು. ಇವನ ಕ್ಯಾಪ್ಸೂಲ್ ಕ್ರೀಚ್‌ಮೆಂಟ್ಸ್ 71 ದೈನಂದಿನ ಪತ್ರಿಕೆಗಳಲ್ಲಿ ಪ್ರಕಟವಾದುವು. ಹೌ ಟು ಸ್ಟಾಪ್ ವರೀಯಿಂಗ್ ಅಂಡ್ ಸ್ಟಾರ್ಟ್ ಲಿವಿಂಗ್ ಎಂಬ ಇವನ ಮತ್ತೊಂದು ಗ್ರಂಥ 1948ರಲ್ಲಿ ಪ್ರಕಟವಾಯಿತು. ರೀಡರ್ಸ್ ಡೈಜೆಸ್ಟ್ ಪತ್ರಿಕೆ 1948 ಮತ್ತು 1949ರಲ್ಲಿ ಅದರ ಕೆಲವು ಅಧ್ಯಾಯಗಳ ಸಂಗ್ರಹವನ್ನು ಪ್ರಕಟಿಸಿತು.

ಡೇಲ್ ಕಾರ್ನೇಗಿ ತನ್ನ ಶಿಕ್ಷಣ ಸಂಸ್ಥೆಯನ್ನು ಕಾರ್ನೇಗಿ ಇನ್‌ಸ್ಟಿಟ್ಯೂಟ್ ಫಾರ್ ಎಫೆಕ್ಟೀವ್ ಸ್ಪೀಕಿಂಗ್ ಅಂಡ್ ಹ್ಯೂಮನ್ ರಿಲೇಷನ್ಸ್ ಎಂದು ಪುನರ್ವ್ಯವಸ್ಥೆಗೊಳಿಸಿ ತನ್ನ ಶಿಷ್ಯವರ್ಗದಿಂದಲೇ ಶಿಕ್ಷಕರನ್ನೂ ಹಾಗೂ ಪ್ರಾದೇಶಿಕ ಮೇಲ್ವಿಚಾರರನ್ನೂ ನೇಮಿಸಿದ. ಇವನ ಸಂಸ್ಥೆ ಅಮೆರಿಕ, ಕೆನಡ, ಯುರೋಪ್ ಮತ್ತು ದಕ್ಷಿಣ ಅಮೆರಿಕಗಳಲ್ಲಿ 300 ಶಿಕ್ಷಣ ಕೇಂದ್ರಗಳನ್ನು ಹೊಂದಿತ್ತು. ಈತ 5 ನವೆಂಬರ್ 1944ರಲ್ಲಿ ಎರಡನೆಯ ಬಾರಿ ವಿವಾಹವಾದ. ಎರಡನೆಯ ಹೆಂಡತಿ ಡೊರೊಥಿರೀಡರ್ ಪ್ರೈಸ್ ಪತಿಯ ಉದ್ಯಮದಲ್ಲಿ ನೆರವಾಗಿ, ಮಹಿಳಾ ವಿಭಾಗದ ಉಪಾಧ್ಯಕ್ಷಿಣಿಯಾಗಿದ್ದು, ಹೌ ಟು ಹೆಲ್ಪ್ ಯುವರ್ ಹಸ್ಬೆಂಡ್ ಟು ಗೆಟ್ ಅಹೆಡ್ ಎಂಬ ಗ್ರಂಥವನ್ನು ಪ್ರಕಟಿಸಿದಳು. (ವಿ.ಜಿ.ಕೆ.)

**ಕಾರ್ನೇ, ಪ್ಯೇರ್ :** 1606–1682. ಪಾಶ್ಚಾತ್ಯ ರುದ್ರ (ಗಂಭೀರ) ನಾಟಕಕಾರರಲ್ಲಿ ಪ್ರಖ್ಯಾತನಾದ ಒಬ್ಬ ಫ್ರೆಂಚ್ ನಾಟಕಕಾರ. ಈತ ರೂವೆನ್ ನಗರದಲ್ಲಿ ಬ್ಯಾರಿಸ್ಟರ್ ಒಬ್ಬನ ಮಗನಾಗಿ ಹುಟ್ಟಿ ಜೆಸುಯಿಟ್ ಶಾಲೆಯಲ್ಲಿ ಶಿಕ್ಷಣ ಪಡೆದು ಲ್ಯಾಟಿನ್ ಭಾಷೆಯಲ್ಲಿ ಪದ್ಯರಚನೆಗಾಗಿ ಬಹುಮಾನಗಳನ್ನು ಗಳಿಸಿದ. ತಂದೆಯಂತೆಯೇ ನ್ಯಾಯಶಾಸ್ತ್ರ ಓದಿ ಇಪ್ಪತ್ತು ವರ್ಷ ವಕೀಲಿ ವೃತ್ತಿಯಲ್ಲಿದ್ದ; ಸರ್ಕಾರದ ಮುಖ್ಯ ವಕೀಲನಾಗಿಯೂ (ಅಟಾರ್ನಿ ಜನರಲ್) ಕೆಲಸಮಾಡಿದ. ಚರ್ಚ್ ವಾರ್ಡನ್ ಆಗಿ ಕೆಲಸಮಾಡಿ ತನ್ನ ಪ್ರದೇಶದ ಲೆಕ್ಕಪತ್ರವನ್ನು ನೋಡಿಕೊಳ್ಳುತ್ತಿದ್ದ. ಈತನ ವೃತ್ತಿ ವಕೀಲಿಯಾದರೂ ಒಲವೆಲ್ಲ ರಂಗಭೂಮಿಯ ಕಡೆಗೇ ಇತ್ತು.

ತಾರುಣ್ಯದ ಪ್ರೇಮಪ್ರಕರಣವನ್ನು ಕುರಿತು ಮೆಲೈಟ್ (1630) ಎಂಬ ನಾಟಕವನ್ನು ಬರೆದ. ಫ್ರಾನ್ಸಿನ ದೊರೆ 13ನೆಯ ಲೂಯಿಯ ಆಸ್ಥಾನದ ವ್ಯಕ್ತಿಗಳನ್ನು ಕುರಿತು ಮಿಡೀ (1635) ಎಂಬ ನಾಟಕವನ್ನು ರಚಿಸಿದ. ಇದರಲ್ಲಿ ತಾರುಣ್ಯ, ಪ್ರೇಮಗಳ ಸಂಘರ್ಷಣೆಯಿದೆ. ಸ್ಪ್ಯಾನಿಷ್ ನಾಟಕಕಾರ ಕಾಸ್ಟ್ರೋವಿನ ನಾಟಕವನ್ನು ಆಧರಿಸಿ 1637ರಲ್ಲಿ ಲ ಸಿಡ್ ನಾಟಕವನ್ನು ಬರೆದ. ತ್ಯಾಗದಲ್ಲಿ ಕೊನೆಗೊಳ್ಳುವ ಪ್ರೇಮಿಗಳ ಕಥೆ ಇದು. ಸ್ಕುದೇರಿ ಎಂಬ ಬರೆಹಗಾರ ಈ ನಾಟಕದ ಬಗ್ಗೆ ದೊಡ್ಡ ವಿವಾದವನ್ನೆಬ್ಬಿಸಿ ಇದು ಸ್ಪ್ಯಾನಿಷ್ ನಾಟಕದ ಕೃತಿಚೌರ್ಯವೆಂದೂ ನಾಟಕಗಳಲ್ಲಿ ಪಾಲಿಸಬೇಕಾದ ಸ್ಥಳ, ಕಾಲ, ಘಟನೆಗಳ ಐಕ್ಯತೆಯನ್ನು ಭಂಗಗೊಳಿಸಿರುವ ಕೃತಿಯೆಂದೂ ಬೊಬ್ಬೆಯಿಟ್ಟ. ಕಡೆಗೆ ಫ್ರೆಂಚ್ ಸಾಹಿತ್ಯ ಪರಿಷತ್ತಿಗೆ ದೂರುಕೊಟ್ಟ. ಸ್ಕುದೇರಿಗೆ ಜಯವಾಯಿತು. ಆದರೂ ಕಾರ್ನೇ ಧೃತಿಗೆಡಲಿಲ್ಲ.

1640–42ರ ಅವಧಿಯಲ್ಲಿ ರೋಮನ್ ಚಾರಿತ್ರಿಕ ವ್ಯಕ್ತಿಗಳನ್ನಾಧರಿಸಿ ಹೊರೇಸ್, ಸಿನ್ನ, ಪೊಲ್ಯೂಕ್ಟ್ ಎಂಬ ನಾಟಕಗಳನ್ನು ರಚಿಸಿದ. ಹೊರೇಸ್ ನಾಟಕದಲ್ಲಿ ಪ್ರೇಮ, ದೇಶಪ್ರೇಮಗಳ ನಡುವಣ ತಿಕ್ಕಾಟವಿದೆ. ಹೊರೇಸ್ ಉತ್ಕೃಷ್ಟ ದೇಶಪ್ರೇಮಿ. ಈತನ ತಂಗಿಯನ್ನು ಪ್ರೀತಿಸಿದ ಕ್ಯೂರಿಯಾಟಿ ಎಂಬಾತ ಹೊರೇಸನ ದೇಶಪ್ರೇಮವನ್ನು ಹಳಿದುದೇ ಕಾರಣವಾಗಿ ಇಬ್ಬರ ನಡುವೆ ಯುದ್ಧನಡೆದು ಅದರಲ್ಲಿ ಕ್ಯೂರಿಯಾಟಿ ಸಾಯುತ್ತಾನೆ. ಇಂಥ ವಿದ್ರೋಹಿಯ ಪ್ರೇಮಿಯೆಂದು ಹೊರೇಸನ ತಂಗಿಯೂ ಕೊಲ್ಲಲ್ಪಡುತ್ತಾಳೆ. ಸಿನ್ನ ನಾಟಕದಲ್ಲಿ ರಾಜಕೀಯದಲ್ಲಿ ನಡೆಯುವ ಉಚ್ಚ ನೀಚ ಕಾರ್ಯಗಳ ಔಚಿತ್ಯದ ಪ್ರಶ್ನೆಯಿದೆ. ಆಗಸ್ಟಸ್ ಸೀಸರ್ ತನ್ನನ್ನು ಕೊಲ್ಲಲು ಬಂದ ಸಂಚುಕಾರರ ಮೇಲೆ ಸೇಡುತೀರಿಸಿಕೊಳ್ಳುವುದೋ ಅಥವಾ ಉದಾರಭಾವದಿಂದ ಅವರನ್ನು ಕ್ಷಮಿಸುವುದೋ ಎಂದು ಅನಿಶ್ಚಿತತೆಯ ಮನಸ್ಸಿನ ತೂಗುಯ್ಯಾಲೆಯಲ್ಲಿ ತೊಳಲುತ್ತಾನೆ. ಪೊಲ್ಯೂಕ್ಟ್ ನಾಟಕದಲ್ಲಿ ವ್ಯಕ್ತಿನಿಷ್ಠೆ ಹಾಗೂ ಧರ್ಮನಿಷ್ಠೆಗಳ ನಡುವಣ ಸಂಘರ್ಷಣೆ ಚಿತ್ರಿತವಾಗಿದೆ. ಪೊಲ್ಯೂಕ್ಟ್ ಕ್ರೈಸ್ತ. ಆತನ ಹೆಂಡತಿ ಕ್ರೈಸ್ತಳಲ್ಲ. ತನ್ನ ಧರ್ಮನಿಷ್ಠೆಯ ಹಾದಿಯಲ್ಲಿ ಬಂದ ಇತರರನ್ನೂ ಆಕೆ ಗೆಲ್ಲುತ್ತಾಳೆ. 1643ರಲ್ಲಿ ಪ್ರಕಟವಾದ ಪಾಂಪೆಯ ಮರಣ ಎಂಬ ನಾಟಕದಲ್ಲಿ ರೋಮನ್ ದೊರೆ ಪಾಂಪೆಯ ಧೃತಿಯನ್ನು ಕವಿ ಉತ್ಕಟವಾಗಿ ಚಿತ್ರಿಸಿದ್ದಾನೆ. ಲೆಮಂತೂರ್ ಎಂಬುದು 1644ರಲ್ಲಿ ಬರೆದ ಹರ್ಷನಾಟಕ. ಪ್ರೇಮಸಾಹಸಗಳ ಪ್ರವೃತ್ತಿಯುಳ್ಳ ದೊರಾಂತೆ ಮಹಾ ಸುಳ್ಳುಗಾರ. ಆತನ ಸುಳ್ಳಿನ ಸರಪಣಿಯನ್ನು ಹಗುರವಾಗಿ ಉಲ್ಲಾಸಪೂರಿತವಾಗಿ ಉಚಿತಶೈಲಿಯಲ್ಲಿ ಕವಿ ಚಿತ್ರಿಸಿದ್ದಾನೆ.

1645ರಲ್ಲಿ ಪ್ರಕಟವಾದ ರೋದೋಗುನೆ ಎಂಬುದು ಕ್ಲಿಯೋಪಾತ್ರಳನ್ನು ಕುರಿತ ನಾಟಕ. ರೋದೋಗುನೆ ಕ್ಲಿಯೋಪಾತ್ರಳ ಪ್ರತಿಸ್ಪರ್ಧಿ. ಕ್ಲಿಯೋಪಾತ್ರಳ ಮಗ ಆಕೆಯನ್ನು ಪ್ರೇಮಿಸುತ್ತಾನೆ. ತ್ಯಾಗದಲ್ಲಿ ಅದು ಕೊನೆಯಾಗುತ್ತದೆ.

ನಿಕೋಮೈಡ್ (1650) ವ್ಯಂಗ್ಯೋಕ್ತಿಯ ನಾಟಕ. ಆಂದ್ರೋಮೆಡ ಸಂಗೀತಕ್ಕೆ ಅಳವಡಿಸಿದ, ಆಡಂಬರದ ದೃಶ್ಯಗಳುಳ್ಳ ನಾಟಕ. ಈದಿಪೆ (1659) ಮಹಾಕಾವ್ಯದ ವೀರನನ್ನು ಅಪಾರ್ಥಮಾಡಿಕೊಂಡು ಬರೆದ ಕೃತಿ. ಓಥನ್, ಪುಲ್ವೇರಿ, ಸೆರ್‌ತೋರಿಯಸ್– ಈ ಮೂರೂ ಶಬ್ದಾಡಂಬರದ ನಾಟಕಗಳು.

ಈ ಕವಿಯ ನಾಟಕದ ಪಾತ್ರಗಳು ನಿಜಜೀವನದ ಪ್ರತಿಬಿಂಬವಾಗಿವೆ. ಅಪೂರ್ವವಾದುದನ್ನೇ ಈತ ಅರಸುತ್ತಿದ್ದ. ಪರಿಸರದ ಅವಗಡಗಳನ್ನು ಮನೋದಾರ್ಢ್ಯದಿಂದ ಗೆಲ್ಲಬಹುದೆಂಬ ತತ್ತ್ವಕ್ಕೆ ಇವನಲ್ಲಿ ಅನೇಕ ನಿದರ್ಶನಗಳು ಸಿಗುತ್ತವೆ.

ಈತನ ನಾಟಕಗಳಲ್ಲಿ ಧೀರೋದಾತ್ತತೆಯ ಪರಿಸರಣವಿದೆ. ಕರ್ತವ್ಯದ ನಾನಾ ರೂಪಗಳಲ್ಲಿ ಆತ್ಮಸಂಯಮ ಎಲ್ಲ ಗುಣಗಳ ಸಾರವೆಂಬುದಿಲ್ಲಿ ಪ್ರಕಟಗೊಂಡಿದೆ. ಗೌರವ, ನಿಷ್ಠೆ, ನಂಬಿಕೆಯಂಥ ಉತ್ತಮ ಆದರ್ಶಗಳು, ಪಾತಿವ್ರತ್ಯದ ಹಿರಿಮೆ, ಸ್ವಹಿತಕ್ಕಲ್ಲದೆ ದೇಶಹಿತಕ್ಕಾಗಿ ನಡೆಸುವ ಹೋರಾಟ–ಈ ಮುಂತಾದವು ಇವನ ನಾಟಕಗಳಲ್ಲಿ ಕಂಡುಬರುವ ಆದರ್ಶಗಳು.

ಕಾರ್ನೇಯ ಹರ್ಷನಾಟಕಗಳಲ್ಲಿ ವಿಮರ್ಶಾತ್ಮಕ ಪ್ರವೃತ್ತಿಗಿಂತ ಸಂತೋಷಕ್ಕೇ ಪ್ರಾಧಾನ್ಯ. ಮಾನವ ಪ್ರವೃತ್ತಿಯ ಸಹಜ ದೌರ್ಬಲ್ಯಗಳು, ವೈಪರೀತ್ಯಗಳನ್ನು ಇಲ್ಲಿ ಕಾಣಬಹುದು. ಗಂಭೀರಪ್ರವೃತ್ತಿಯ ಹರ್ಷನಾಟಕ (ಟ್ರಾಜಿಕ್ ಕಾಮೆಡಿ) ಈತನ ಮಾಧ್ಯಮವಾಗಲು ಈತನ ಸಾಹಸಪ್ರವೃತ್ತಿಯೇ ಕಾರಣ. ಸಾಮಾಜಿಕ ತರ್ಕವೇ ಈತನ ಆರಾಧ್ಯದೇವತೆ. ಯುರೋಪಿನ ನವೋದಯಕ್ಕೆ ಇದೇ ಫ್ರೆಂಚರ ಕಾಣಿಕೆ. ಹೊರೇಸ್, ಸಿನ್ನ, ಪೊಲ್ಯೂಕ್ಟ್ ಒಂದೊಂದೂ ಕಾಲಾತೀತವಾದ ವಿಶ್ವವ್ಯಾಪಿಯಾದ ದೇಶಪ್ರೇಮ, ಉನ್ನತ ಆದರ್ಶ, ತ್ಯಾಗಮಯ ಜೀವನಗಳ ಪ್ರತೀಕಗಳು.

ಜಿತೇಂದ್ರಿಯತ್ವವೇ ಕಾರ್ನೇ ಬೋಧಿಸುವ ತತ್ತ್ವ. ಮನೋನಿಶ್ಚಯದಿಂದ ವಿಧಿಯನ್ನು ಗೆಲ್ಲಲು ಮಾನವ ಸ್ವತಂತ್ರ. ಅವನು ಸೃಜಿಸಿದ ಕೆಲವು ವ್ಯಕ್ತಿಗಳು ಜಿತೇಂದ್ರಿಯರಾಗಿ ನಿರ್ಲಿಪ್ತಭಾವದಿಂದಿದ್ದು, ಸಾವನ್ನು ಸಹ ನಗುಮುಖದಿಂದ ಸ್ವಾಗತಿಸುತ್ತಾರೆ.

ಫ್ರೆಂಚ್ ಜನಾಂಗದ ನೈತಿಕ ಸ್ವರೂಪದ ನಿತ್ಯತತ್ತ್ವಗಳನ್ನು ಕಾರ್ನೇ ತನ್ನ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾನೆ. ರಾಷ್ಟ್ರೀಯ ದುರಂತದ ಸಂದರ್ಭಗಳಲ್ಲಿ ಫ್ರೆಂಚರು ಸ್ಫೂರ್ತಿಗಾಗಿ ಈತನನ್ನು ಓದುತ್ತಾರೆ. (ಟಿ.ವಿ.ಎಸ್.)

**ಕಾರ್ನೊಟೈಟ್:** ಜಲಾಂಶದಿಂದ ಕೂಡಿದ ಪೊಟ್ಯಾಸಿಯಂ, ಯುರೇನಿಯಂ, ಆಕ್ಸಿಜನ್ನುಗಳನ್ನು ಒಳಗೊಂಡಿರುವ ಖನಿಜ. ರಾಸಾಯನಿಕ ಸೂತ್ರ $K_2(UO_2)_2(VO_4)_2.nH_2O$. ಇದರಲ್ಲಿ ಶೇ. 62 ಯುರೇನಿಯಂ ಆಕ್ಸೈಡ್ ಇದೆ. ನಿಂಬೆ ಹಳದಿ ಅಥವಾ ಹಸುರು ಮಿಶ್ರವಾದ ಹಳದಿ ಬಣ್ಣದ, ಮಣ್ಣು ಅಥವಾ ಮುತ್ತಿನ ಹೊಳಪುಳ್ಳ ಈ ಖನಿಜ ಮಾನೋಕ್ಲಿನಿಕ್ ಗಣದ ಹರಳುಗಳಾಗಿ ರೂಪುಗೊಳ್ಳುತ್ತದೆ. ಅವ್ಯವಸ್ಥಿತ ಅಥವಾ ಸೂಕ್ಷ್ಮ ಹರಳುಗುಚ್ಛಗಳ ಸ್ವರೂಪದಲ್ಲಿರಬಹುದು. ಇದರ ಸಾಪೇಕ್ಷ ಸಾಂದ್ರತೆ 4.7. ಅಂತರ್ಜಲ ಸಂಪರ್ಕದಿಂದ ರೂಪಾಂತರಗೊಂಡ ಯುರೇನಿಯಂ ಮತ್ತು ವೆನೆಡಿಯಂಗಳ ಮೂಲ ಅದಿರುಗಳೇ ಕಾರ್ನೊಟೈಟಿನ ಉತ್ಪತ್ತಿಗೆ ಕಾರಣವೆಂದು ಪರಿಗಣಿಸಲಾಗಿದೆ. ದಕ್ಷಿಣ ಆಸ್ಟ್ರೇಲಿಯಾದ ರೇಡಿಯಂ ಹಿಲ್ ಪ್ರದೇಶದಲ್ಲಿ ಮೂಲಖನಿಜವಾದ ಡೆವಿಟೈಟಿನ ರೂಪಾಂತರದಿಂದ ಕಾರ್ನೊಟೈಟ್ ಉತ್ಪನ್ನವಾಗಿದೆ.

ಅಮೆರಿಕದ ಕಾಲರಾಡೋ ಪ್ರಸ್ಥಭೂಮಿಯ ಜ್ಯುರಾಸಿಕ್ ಮತ್ತು ಟ್ರಯಾಸಿಕ್ ವ್ಯೆಯೋಮಿಂಗ್ ರಾಜ್ಯದ ಪಂಪ್‌ಕಿನ್ ಬ್ಯೂಟ್ಸ್ ಪ್ರದೇಶದ ಇಯೋಸೀನ್ ಮತ್ತು ಅಲಿಗೋಸೀನ್ ಯುಗಗಳ ಮರಳುಶಿಲೆಗಳಲ್ಲಿ ಸಸ್ಯಾವಶೇಷಗಳ ಜೊತೆಯಲ್ಲಿ ಕಾರ್ನೊಟೈಟ್ ಹೇರಳವಾಗಿ ದೊರೆಯುತ್ತದೆ. (ಸಿ.ಎಸ್.ಎನ್.ಆರ್.)

**ಕಾರ್ನೊಸೀನ್ :** ಬೀಟಾ ಅಲನೀನ್ ಎಂಬ ಅಪೂರ್ವದ ಅಮೈನೊ ಆಮ್ಲ ಮತ್ತು ಹಿಸ್ಟಿಡೀನ್ ಎಂಬ ಅಮೈನೊ ಆಮ್ಲ ಸೇರಿ ಆಗಿರುವ ರಸಾಯನ ವಸ್ತು. ಇದರ ಅಣು ರಚನೆಯನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

ಇದು ಎಲ್ಲ ರೀತಿಯ ಕಶೇರುಕ ಪ್ರಾಣಿಗಳ ಮಾಂಸಖಂಡಗಳಲ್ಲಿ ಸಾವಿರದಲ್ಲಿ ಸುಮಾರು ಮೂರು ಭಾಗದಷ್ಟು ಇರುವುದು. ಇದರೊಂದಿಗೆ ಅನ್‌ಸರೀಸ್ ಎಂಬುದೂ

ಇರುತ್ತದೆ. ಅಸ್ಥಿಸ್ನಾಯುಗಳಲ್ಲಿ ಕಡಿಮೆ. ಹಾವಿನ ಮಾಂಸಖಂಡದಲ್ಲಿರುವ ಓಫಿಡೀನ್ ಎಂಬುದು ಕಾರ್ನೊಸೀನಿನಿಂದಾದುದು. ಚುಚ್ಚುಮದ್ದಿನಂತೆ ಈ ರಾಸಾಯನಿಕವನ್ನು



ಕೊಟ್ಟಾಗ ರಕ್ತದ ಒತ್ತಡವನ್ನು ಸ್ವಲ್ಪ ಕಡಿಮೆಮಾಡುವ ಶಕ್ತಿ ಇದಕ್ಕೆ ಇದೆಯೆಂದು ತಿಳಿದಿದೆ. ಇದರ ಅಣುವನ್ನು ಒಡೆದು ಹಿಸ್ಟಡೀನ್ ಅಮೈನೋ ಆಮ್ಲವನ್ನು ಬಿಡುಗಡೆ ಮಾಡುವ ಎನ್‌ಜೈಮ್ ಮೂತ್ರಜನಕಾಂಗದಲ್ಲಿದೆ.

(ಎ.ಎಸ್.ಆರ್.)

**ಕಾರ್ನೋ ಚಕ್ರ :** ಉಷ್ಣಗತಿವಿಜ್ಞಾನದಲ್ಲಿ ಪ್ರಚಲಿತವಿರುವ ಒಂದು ಆದರ್ಶ ಚಕ್ರ (ಕಾರ್ನೋ ಸೈಕಲ್). ವಾಸ್ತವಿಕ ಚಕ್ರಗಳನ್ನು ತುಲನೆ ಮಾಡಲು ಇದೊಂದು ಶಿಷ್ಟಮಾನಕ. ನಿಕೊಲಾಸ್ ಲಿಯೊನಾರ್ಡ್ ಸಾಡಿ ಕಾರ್ನೋ ಎಂಬ ಫ್ರೆಂಚ್ ವಿಜ್ಞಾನಿ ಇದನ್ನು 1824ರಲ್ಲಿ ಪ್ರಥಮವಾಗಿ ಮುಂದಿಟ್ಟ. ಅವನ ಹೆಸರಿನಿಂದಲೇ ಇದು ಪ್ರಖ್ಯಾತವಾಗಿದೆ.




ಚಿತ್ರ 1

$$E = \frac{W}{Q_1} = \frac{Q_1}{}$$

ಉಷ್ಣವನ್ನು ಉಪಯೋಗಿಸಿ ಎಂಜಿನುಗಳನ್ನು ನಡೆಸಬಹುದೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಎಂಜಿನು ದಕ್ಷತೆಯನ್ನು (ಎಫಿಶಿಯನ್ಸಿ) ಹೆಚ್ಚಿಸಲು ಪ್ರಯತ್ನಗಳು ನಡೆದಿವೆ. ಇಂಥ ಎಂಜಿನುಗಳ ಗರಿಷ್ಠ ದಕ್ಷತೆಯೆಷ್ಟು ಎಂಬುದನ್ನು ವಿವೇಚಿಸುವಾಗ ಕಾರ್ನೋ ಒಂದು ಆದರ್ಶ ಉಷ್ಣ ಎಂಜಿನನ್ನು ಕಲ್ಪಿಸಿಕೊಂಡ. ಇದಕ್ಕೆ ಕಾರ್ನೋ ಎಂಜಿನ್ ಎಂದು ಹೆಸರು. ಇದರ ರೇಖಾಚಿತ್ರವನ್ನು ಚಿತ್ರ 1ರಲ್ಲಿ ತೋರಿಸಿದೆ.

ಇದರ ಪ್ರಧಾನಾಂಶಗಳ ವಿವರವಿಷ್ಟು: ಪರಿಪೂರ್ಣ ಅವಾಹಕ ವಸ್ತುವಿನಿಂದ ರಚಿಸಿದ ಒಂದು ಕೊಳವೆ; ಇದರ ತಳಮಾತ್ರ ಪರಿಪೂರ್ಣ ವಾಹಕದಿಂದ ರಚಿತವಾಗಿದೆ; ಕೊಳವೆಯಲ್ಲಿ ಪರಿಪೂರ್ಣ ಅವಾಹಕದಿಂದ ಮಾಡಲ್ಪಟ್ಟ ಒಂದು ಕೊಂತ (ಪಿಸ್ಟನ್) ಘರ್ಷಣರಹಿತವಾಗಿ ಚಲಿಸಬಲ್ಲುದು; ಕೊಂತದ ಮೇಲೆ ತೂಕಗಳನ್ನಿಡಬಹುದು. ಕಾರ್ನೋ ಚಕ್ರದ ಕ್ರಿಯಾತಂತ್ರವನ್ನು ಮುಂದೆ ವಿವರಿಸಿದೆ. ಕೊಳವೆಯಲ್ಲಿ ನಿರ್ದಿಷ್ಟ ರಾಶಿ ಇರುವ ಮತ್ತು ಕಾರ್ಯವೆಸಗಬಲ್ಲ ಒಂದು ವಸ್ತುವನ್ನು ಒಂದು ಅನಿಲವನ್ನು ತೆಗೆದುಕೊಂಡಿದೆ. $S_1$ ಒಂದು ಬಿಸಿಯಾದ ವಸ್ತು. ಇದು ಒಂದು ನಿರ್ದಿಷ್ಟ ಉಷ್ಣತೆಯಲ್ಲಿದೆಯೆಂದೂ ಇದರಿಂದ ಎಷ್ಟು ಉಷ್ಣವನ್ನು ಬೇಕಾದರೂ ಉಷ್ಣತೆಯ ಮಟ್ಟ ಇಳಿಯದ ತೆರದಲ್ಲಿ, ಪಡೆಯಬಹುದೆಂದೂ ಭಾವಿಸುತ್ತೇವೆ. $S_1$ರ ಹೆಸರು (ಉಷ್ಣದ) ಆಕರ. ಇದರ ಉಷ್ಣತೆ $T_1^0$ ಕೆಲ್ವಿನ್ ಆಗಿರಲಿ. $S_2$ ಒಂದು ಪರಿಪೂರ್ಣ ಅವಾಹಕದಿಂದ ಮಾಡಲ್ಪಟ್ಟ ಪೀಠ. $S_3$ ಒಂದು ತಣ್ಣಗಿರುವ




ಚಿತ್ರ 2

ವಸ್ತು. ಇದು ತನ್ನ ಉಷ್ಣತೆ ಒಂದೇ ಮಟ್ಟದಲ್ಲಿರುವಂತೆ ಎಷ್ಟು ಉಷ್ಣವನ್ನು ಬೇಕಾದರೂ ಹೀರಿಕೊಳ್ಳಬಲ್ಲುದು. $S_3$ಕ್ಕೆ ತೊಟ್ಟಿ (ಸಿಂಕ್) ಎಂದು ಹೆಸರು. ಇದರ ಉಷ್ಣತೆ $T_2^0$ ಆಗಿರಲಿ. $T_1$ ಮತ್ತು $T_2$ ವ್ಯತ್ಯಾಸ ಅತ್ಯಲ್ಪವೆಂದು ಭಾವಿಸೋಣ. ಕೊಳವೆಯಲ್ಲಿರುವ ಅನಿಲ ಕೆಳಗೆ ವಿವರಿಸಿರುವ ನಾಲ್ಕು ಪ್ರಕ್ರಿಯೆಗಳ ಮೂಲಕ ಆವರ್ತಿಸಿ ಪ್ರಾರಂಭದ ಸ್ಥಿತಿಗೆ ಮರಳುತ್ತದೆ. ಇದೇ ಕಾರ್ನೋ ಚಕ್ರ. ಇದನ್ನು ರೇಖೀಯವಾಗಿ ಚಿತ್ರ 2ರಲ್ಲಿ ತೋರಿಸಿದೆ. ಪ್ರಾರಂಭದಲ್ಲಿ ಅನಿಲದ ಸ್ಥಿತಿಯನ್ನು ಚಿತ್ರ 2ರ A ಬಿಂದು ತೋರಿಸುತ್ತದೆ. ಈಗ ಕೊಳವೆಯನ್ನು ಆಕರದ ($S_1$) ಮೇಲಿಟ್ಟು ಕೊಂತದ ಮೇಲಿನ ಭಾಗವನ್ನು ಸ್ವಲ್ಪಸ್ವಲ್ಪವಾಗಿ ಮತ್ತು ನಿಧಾನವಾಗಿ ತೆಗೆದರೆ ಅನಿಲಕ್ಕೆ ಆಕರದಿಂದ ಉಷ್ಣ ಹರಿದು ಸಮೋಷ್ಣತೆಯಲ್ಲಿ (ಐಸೋಥರ್ಮಲ್) ಅದು ಹಿಗ್ಗುತ್ತದೆ. ಇದನ್ನು ಚಿತ್ರ AB ರೇಖೆ ತೋರಿಸುತ್ತದೆ.

ಅನಿಲದ ಈಗಿನ ಸ್ಥಿತಿಯನ್ನು B ಬಿಂದು ಪ್ರತಿನಿಧಿಸುತ್ತದೆ. ಈಗ ಕೊಳವೆಯನ್ನು ಅವಾಹಕ ಪೀಠ $S_2$ರ ಮೇಲಿಟ್ಟು ಕೊಂತದ ಮೇಇನ ತೂಕಗಳನ್ನು ನಿಧಾನವಾಗಿ ಕಡಿಮೆ ಮಾಡಿದರೆ ಕೊಳವೆಯ ಒಳಕ್ಕಾಗಲಿ ಹೊರಕ್ಕಾಗಲಿ ಉಷ್ಣ ಹರಿಯುವುದಿಲ್ಲವಾದ್ದರಿಂದ ಅನಿಲ ಉಷ್ಣ ಅಪಾರಕವಾಗಿ (ಏಡಿಯಾಬೆಟಿಕ್) ಹಿಗ್ಗುತ್ತದೆ. ಹೀಗಾಗುವಾಗ ಇದರ ಉಷ್ಣತೆ ತಗ್ಗುತ್ತದೆ. $T_2^0$Aಯನ್ನು ತಲುಪುವವರೆಗೂ ಅನಿಲವನ್ನು ಹಿಗ್ಗಲು ಬಿಡೋಣ. ಈ ಹಿಗ್ಗುವಿಕೆಯನ್ನು ಚಿತ್ರ–2ರ BC ರೇಖೆ ತೋರಿಸುತ್ತದೆ ಮತ್ತು ಅನಿಲದ ಈಗಿನ ಸ್ಥಿತಿಯನ್ನು ಆ ಬಿಂದು ಪ್ರತಿನಿಧಿಸುತ್ತದೆ. ಅನಂತರ ಕೊಳವೆಯನ್ನು ತೊಟ್ಟಿಯ ಮೇಲಿಟ್ಟು ಕೊಂತದ ಮೇಲೆ ನಿಧಾನವಾಗಿ ಭಾರಗಳನ್ನಿಟ್ಟು ಅನಿಲ ಈ ಬಿಂದು ತೋರಿಸುವ ಸ್ಥಿತಿಗೆ ಸಮೋಷ್ಣತೆಯಲ್ಲಿ ಕುಗ್ಗುವಂತೆ ಮಾಡೋಣ. CD ರೇಖೆ $T_2$ ಉಷ್ಣತೆಯಲ್ಲಿ ಅನಿಲದ ಸಮೋಷ್ಣತಾ ಕುಗ್ಗುವಿಕೆಯನ್ನು ತೋರಿಸುತ್ತದೆ. ಈ ಕ್ರಿಯೆಯಲ್ಲಿ ಅನಿಲದ ಮೇಲೆ ಹೊರಗಿನಿಂದ ಕಾರ್ಯ ಮಾಡುವುದರಿಂದ ಅನಿಲ ಒಂದಷ್ಟು ಉಷ್ಣವನ್ನು ತೊಟ್ಟಿಗೆ ಬಿಟ್ಟುಕೊಡುತ್ತದೆ. ತರುವಾಯ ಕೊಳವೆಯನ್ನು $S_2$ ಪೀಠದ ಮೇಲಿಟ್ಟು ಉಷ್ಣ ಅಪಾರಕವಾಗಿ ಅನಿಲ ಕುಗ್ಗುವಂತೆ ನಿಧಾನವಾಗಿ ಭಾರಗಳನ್ನಿಟ್ಟರೆ ಅದರ ಉಷ್ಣತೆ ಅಧಿಕಗೊಂಡು ಪುನಃ ಮೊದಲಿನ ಸ್ಥಿತಿಗೆ ಹಿಂತಿರುಗುತ್ತದೆ. ಈ ಕ್ರಿಯೆಯಲ್ಲಿಯೂ ಅನಿಲದ ಮೇಲೆ ಹೊರಗಿನಿಂದ ಕಾರ್ಯವನ್ನು ಮಾಡಬೇಕಾಗುತ್ತದೆ. ಇಲ್ಲಿಗೆ ನಾಲ್ಕು ನಿರ್ದಿಷ್ಟ ಘಟ್ಟಗಳ ಒಂದು ಚಕ್ರ ಪೂರ್ತಿಯಾಯಿತು. ಈಗ ABCD ಆಕೃತಿಯ ಕ್ಷೇತ್ರಫಲ ಅನಿಲ ಕೊಂತದ ಮೇಲೆ ಮಾಡುವ ನಿವ್ವಳ ಕಾರ್ಯವನ್ನು ತೋರಿಸುತ್ತದೆ. ಚಕ್ರದ ಅವಧಿಯಲ್ಲಿ ಅನಿಲ ಆಕರದಿಂದ ಹೀರಿಕೊಂಡ ಉಷ್ಣ $Q_1$ ಮತ್ತು ತೊಟ್ಟಿಗೆ ಬಿಟ್ಟುಕೊಟ್ಟ ಉಷ್ಣ $Q_2$ ಆಗಿರಲಿ. ಅಂದರೆ ಅನಿಲ ಹೀರಿಕೊಂಡ ನಿವ್ವಳ ಉಷ್ಣ $Q_1$-$Q_2$. ಅನಿಲದ ಅಂತಿಮ ಸ್ಥಿತಿ ಪ್ರಾರಂಭಸ್ಥಿತಿಯೇ ಆದ್ದರಿಂದ ಅದರ ಆಂತರಿಕ ಶಕ್ತಿಯಲ್ಲಿ ವ್ಯತ್ಯಾಸವಾಗಿಲ್ಲ. ಆದ್ದರಿಂದ

W- $Q_1$-$Q_2$

ಯಂತ್ರದ ದಕ್ಷತೆ Eಯನ್ನು ಹೀಗೆ ಬರೆಯಬಹುದು:

ಈಗ, $\frac{Q_2}{Q_1} = \frac{T_2}{T_1}$ ಎಂದು ತೋರಿಸಬಹುದು. ಆದ್ದರಿಂದ $E = 1 - \frac{T_2}{T_1}$ (ಇಲ್ಲಿ

ಒಂದು ಮಾತನ್ನು ಹೇಳಬೇಕಾಗುತ್ತದೆ. ಕಾರ್ನೋ ತನ್ನ ವಾದವನ್ನು ಮೊದಲು ಪ್ರತಿಪಾದಿಸಿದಾಗ ಉಷ್ಣತೆಯನ್ನು ಸೆಂಟಿಗ್ರೇಡ್ ಮಾನಕದಲ್ಲಿ ತೆಗೆದುಕೊಂಡಿದ್ದ. ಆದ್ದರಿಂದ ಆಗ ದೊರೆತ ದಕ್ಷತಾ ಸಮೀಕರಣದ ರೂಪ ಬೇರೆ ಆಗಿತ್ತು.) ಅಂದರೆ ಕಾರ್ನೋ ಚಕ್ರದ ದಕ್ಷತೆ ಅನಿಲದ (ಕಾರ್ಯವೆಸಗುವ) ಗುಣಗಳನ್ನವಲಂಬಿಸದೆ ಆಕರ ಮತ್ತು ತೊಟ್ಟಿಗಳ ಉಷ್ಣತೆಗಳನ್ನು ಮಾತ್ರ ಅವಲಂಬಿಸಿದೆ ಎಂದಾಯಿತು. E=1 ಆಗಬೇಕಾದರೆ, ಅಂದರೆ ಎಂಜಿನ್ನಿನ ದಕ್ಷತೆ ಶೇ. 100 ಆಗಿರಬೇಕಾದರೆ $T_2$=0 ಆಗಿರಬೇಕು. ಅಂದರೆ ಕನಿಷ್ಠ ಉಷ್ಣತೆ $0^0$A ಆಗಬೇಕೆಂದಾಗುತ್ತದೆ. ಆದರೆ $0^0$A ಯಲ್ಲಿರುವ ಯಾವ ವಸ್ತುವೂ ಪ್ರಕೃತಿಯಲ್ಲಿ ಸಿಗುವುದಿಲ್ಲ. ಆದ್ದರಿಂದ E=1 ಆಗಿರುವಂಥ ಎಂಜಿನ್ನು ಸಾಧ್ಯವಿಲ್ಲವೆಂದು ತಿಳಿಯುತ್ತದೆ.

ಈ ಪರಿಶೀಲನೆಯಿಂದ ಪ್ರತಿಯೊಂದು ಉಷ್ಣ ಎಂಜಿನ್ನು ಪಾಲಿಸಲೇಬೇಕಾದ ಉಷ್ಣಗತಿವಿಜ್ಞಾನದ ಎರಡನೆಯ ನಿಯಮ ತಿಳಿಯಬರುತ್ತದೆ. ಕೆಲ್ವಿನ್ ಎಂಬುವನು ಈ ನಿಯಮವನ್ನು ನಿರೂಪಿಸಿರುವ ರೀತಿ ಹೀಗಿದೆ: ವಸ್ತುವಿನ ಯಾವುದಾದರೂ ಒಂದು ಭಾಗವನ್ನು ಅದರ ಸುತ್ತಲಿರುವ ಅತ್ಯಂತ ಶೈತ್ಯಕಾಯದ ಉಷ್ಣತೆಗಿಂತ ಕೆಳಗಿನ ಉಷ್ಣತೆಗೆ ಶೈತ್ಯಗೊಳಿಸಿ ಅದರಿಂದ ಯಾಂತ್ರಿಕ ಪರಿಣಾಮವನ್ನು (ಕಾರ್ಯವನ್ನು) ಪಡೆಯುವುದು ನಿರ್ಜೀವ ವಸ್ತುಕಾರಕಕ್ಕೆ ಅಸಾಧ್ಯ. ಇದೇ ನಿಯಮವನ್ನು ಪ್ಲಾಂಕ್ ಎಂಬುವನು ನಿರೂಪಿಸಿರುವ ರೀತಿ ಹೀಗಿದೆ: ಪೂರ್ಣ ಚಕ್ರದಲ್ಲಿ ಕರ್ಯ ಮಾಡುವ, ಒಂದು ಉಷ್ಣ ಆಕರದಿಂದ ಉಷ್ಣವನ್ನು ಗ್ರಹಿಸಿ ಅದನು ಬೇರೆ ಯಾವ ಪರಿಣಾಮವೂ ಇಲ್ಲದಂತೆ ಸಂಪೂರ್ಣವಾಗಿ ಕಾರ್ಯಕ್ಕೆ ಪರಿವರ್ತಿಸುವ ಎಂಜಿನ್ನನ್ನು ನಿರ್ಮಿಸುವುದು ಅಸಾಧ್ಯ. ಅತಿ ಹೆಚ್ಚಿನ ದಕ್ಷತೆ ಇರುವ ಕಾರ್ನೋ ಆದರ್ಶ ಆಕರದಿಂದ ಪಡೆದ ಉಷ್ಣವನ್ನು ಭಾಗಶಃ ಕಾರ್ಯಕ್ಕೆ ಪರಿವರ್ತಿಸಿ ಮಿಕ್ಕದ್ದನ್ನು ತೊಟ್ಟಿಗೆ ವಿಸರ್ಜಿಸುತ್ತದೆ. ಆದ್ದರಿಂದ ಉಷ್ಣ ಭಾಗಶಃ ಮಾತ್ರ ಕಾರ್ಯವಾಗಿ ಪರಿವರ್ತನೆಗೊಂಡು ಅದರ ಶೇಷ ಭಾಗ ತೊಟ್ಟಿಯನ್ನು ಸೇರಿ ಅದರಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಪ್ಲಾಂಕನು ಅಸಾಧ್ಯವೆಂದು ನಿರೂಪಿಸಿರುವ ಯಂತ್ರದ ಹೆಸರು ಎರಡನೆ ಬಗೆಯ ಸಂತತ ಚಾಲನಯಂತ್ರ (ಪರ್ಪೆಚುಯಲ್ ಮೋಷನ್ ಆಫ್ ದಿ ಸೆಕೆಂಡ್ ಕೈಂಡ್). ಇಂಥ ಯಂತ್ರದ ನಿರ್ಮಾಣ ಸಾಧ್ಯವಾಗುವುದಾದರೆ ಅದಕ್ಕೆ ಭೂಮಿ, ಸಾಗರ ಅಥವಾ ವಾಯುಮಂಡಲ ಇವುಗಳಲ್ಲಿ ಯಾವುದಾದರೂ ಒಂದರಿಂದ ಉಷ್ಣವನ್ನು ಒದಗಿಸಿ ಆ ಯಂತ್ರದಿಂದ ಸತತವಾಗಿ ಕಾರ್ಯವನ್ನು ಮಾಡಿಸಬಹುದು. ಯಾವ ಬಗೆಯ ಇಂಧನವನ್ನೂ ಒದಗಿಸಬೇಕಾಗುವುದಿಲ್ಲ. ಇಂಥ ಯಂತ್ರವನ್ನು ಯಾರೂ ನಿರ್ಮಿಸಿಲ್ಲ. ಮುಂದೆ ನಿರ್ಮಿಸಬಹುದಾದ ಸಾಧ್ಯತೆಯೇ ಇಲ್ಲ ಎನ್ನುವುದು ಎರಡನೆಯ ನಿಯಮದ ಸಾರಾಂಶ.

ಕಾರ್ನೋ ಎಂಜಿನ್ನನ್ನು ವಿಪರ್ಯಯ ಕಾರ್ಯ. ಕ್ಲಾಸಿಯಸ್‌ನ ಉಷ್ಣಗತಿವಿಜ್ಞಾನದ ಎರಡನೆಯ ನಿಯಮದ ನಿರೂಪಣೆ: ಕಾರ್ನೋ ಎಂಜಿನ್ನಿನ ಕ್ರಿಯಾವಸ್ತು (ಅನಿಲ) ಚಿತ್ರ 2ರಲ್ಲಿ ತೋರಿಸಿರುವ ಚಕ್ರೀ ಬದಲಾವಣೆಗಳನ್ನು ADCBA ಎಂಬ ವಿಪರ್ಯಯ ಚಕ್ರದ DC ಪ್ರತಿರೂಪಿಸಿರುವ $T_2$ ಉಷ್ಣತೆಯಲ್ಲಿ ನಡೆಯುವ ಸಮೋಷ್ಣತಾ ಸಂಕೋಚನೆಯಲ್ಲಿ ಕ್ರಿಯಾವಸ್ತುವಿನ ಮೇಲೆ ಕಾರ್ಯ ನಡೆದು ವಸ್ತು ಉಷ್ಣದ ಆಕರಕ್ಕೆ $Q_1$ ಉಷ್ಣವನ್ನು ವಿಸರ್ಜಿಸುತ್ತದೆ. ಒಟ್ಟು ಚಕ್ರೀಯ ಪರಿವರ್ತನೆಯಲ್ಲಿ ವಸ್ತುವಿನ ಮೇಲೆ ADCBAಕ್ಷೇತ್ರಫಲ ಪ್ರತಿರೂಪಿಸಿರುವ ಕಾರ್ಯ ನಡೆಸಲ್ಪಡುವುದರಿಂದ ವಸ್ತು ಕಡಿಮೆ ಉಷ್ಣ $Q_2$ನ್ನು ತೊಟ್ಟಿಯಿಂದ ಪಡೆದು ಅದಕ್ಕಿಂತ ಹೆಚ್ಚಾದ ಉಷ್ಣ $Q_1$ನ್ನು ಉಷ್ಣದ ಆಕರಕ್ಕೆ ಕೊಡುವುದು ಸಾಧ್ಯವಾಗುತ್ತದೆ. ಬಾಹ್ಯ ಕಾರ್ಯ $Q_1$-$Q_2$ = ಕ್ಷೇತ್ರಫಲ ADCBA ಎನ್ನುವುದನ್ನು ಒದಗಿಸದೇ ಇದ್ದ ಪಕ್ಷದಲ್ಲಿ ಉಷ್ಣವನ್ನು ಕಡಿಮೆ ಉಷ್ಣತೆಯ ಕಾಯದಿಂದ ಹೆಚ್ಚಿನ ಉಷ್ಣತೆಯ ಕಾಯಕ್ಕೆ ಸಾಗಿಸುವುದು ಅಸಾಧ್ಯ. ಅಂದರೆ ಉಷ್ಣ ತನ್ನಷ್ಟಕ್ಕೆ ತಾನೇ ಒಂದು ತಣ್ಣಗಿರುವ ಕಾಯದಿಂದ ಬೆಚ್ಚಗಿರುವ ಕಾಯಕ್ಕೆ ಹೋಗಲಾರದು. ಹಾಗೆ ಆಗಬೇಕಾದರೆ ಶೈತ್ಯೋತ್ಪಾದಕ ಯಂತ್ರಗಳಲ್ಲಿ ನಡೆಯುವಂತೆ ಬಾಹ್ಯ ಕಾರಕದಿಂದ ಎಂಜಿನ್ನಿನ ಮೇಲೆ ಯಾವುದಾದರೂ ಒಂದು ಬಗೆಯ ಕಾರ್ಯ ನಡೆಯುವುದು ಆವಶ್ಯಕ.

ವಿಪರ್ಯಯ ಉಷ್ಣ ಎಂಜಿನ್ನುಗಳ ದಕ್ಷತೆ, ಕಾರ್ನೋ ಪ್ರಮೇಯ: ಎರಡು ದತ್ತ ಉಷ್ಣತೆಗಳ ನಡುವೆ ಕಾರ್ಯ ಮಾಡುವ ಇನ್ನಾವ ಎಂಜಿನ್ನೂ ಒಂದು ವಿಪರ್ಯಯ ಎಂಜಿನ್ನಿಗಿಂತ ಹೆಚ್ಚು ದಕ್ಷತೆಯನ್ನು ಪಡೆದಿರುವುದು ಅಸಾಧ್ಯ. ಈ ಪ್ರಮೇಯವನ್ನು ಸಾಧಿಸುವುದಕ್ಕೆ ಒಂದೇ ಉಷ್ಣತೆಗಳ ನಡುವೆ ಕಾರ್ಯ ಮಾಡುವ A ಎಂಬ ವಿಪರ್ಯಯ ಉಷ್ಣ ಎಂಜಿನ್ ಹಾಗೂ ಅದಕ್ಕಿಂತ ಹೆಚ್ಚಿನ ದಕ್ಷತೆಯ B ಎಂಬ ಉಷ್ಣ ಎಂಜಿನ್ ಇವೆ ಎಂದು ಭಾವಿಸೋಣ. ಇವುಗಳಲ್ಲಿ ಪ್ರತಿಯೊಂದು ಒಂದೇ ದಿಕ್ಕಿನಲ್ಲಿ ಕೆಲಸ ಮಾಡುವಾಗ ಉಷ್ಣದ ಆಕರದಿಂದ ಉಷ್ಣವನ್ನು ಗ್ರಹಿಸಲಿ.

A ಎಂಜಿನ್ $W_A$ ಕಾರ್ಯವನ್ನೂ $W_B$ ಕಾರ್ಯವನ್ನೂ ಒದಗಿಸಲಿ.

ನಾವು ಭಾವಿಸಿಕೊಂಡಿರುವ ಪ್ರಕಾರ Bಯ ದಕ್ಷತೆ $\frac{W_B}{Q}$ Aಯ ದಕ್ಷತೆ $\frac{W_A}{Q}$ ಅಧಿಕ. ಆದ್ದರಿಂದ $W_B$>$W_A$ ಇದು ಆಗುತ್ತದೆ.

Bಯು Aಯನ್ನು ವಿರುದ್ಧ ದಿಕ್ಕಿನಲ್ಲಿ ನಡೆಸುವಂತೆ ಎರಡು ಎಂಜಿನ್ನುಗಳನ್ನೂ ಜೋಡಿಸಿ ಅವು ಒಂದೇ ಆಕರ ಮತ್ತು ತೊಟ್ಟಿಗಳನ್ನು ಉಪಯೋಗಿಸುವಂತೆ ಮಾಡೋಣ. ಆಗ ಆಕರಕ್ಕೆ A ಸಾಗಿಸುವ ಉಷ್ಣ B ಗ್ರಹಿಸುವ ಉಷ್ಣಕ್ಕೆ ಸಮವಾಗಿ ಆಕರದಲ್ಲಿ ಯಾವ



ಚಿತ್ರ 3

ಬದಲಾವಣೆಯೂ ಉಂಟಾಗುವುದಿಲ್ಲ. B ಒದಗಿಸುವ ಕಾರ್ಯ $W_B$ಯಲ್ಲಿ $W_A$ ಕಾರ್ಯ A ಎಂಜಿನನ್ನು ವಿರುದ್ಧ ದಿಕ್ಕಿನಲ್ಲಿ ನಡೆಸುವುದಕ್ಕೆ ವಿನಿಯೋಗವಾದ ಅನಂತರ $W_B$-$W_A$ ಕಾರ್ಯ ಬೇರೆ ಯಾವುದಾದರೂ ಉದ್ದೇಶಕ್ಕೆ ಒದಗುತ್ತದೆ. ತೊಟ್ಟಿ Q-$W_B$ ಉಷ್ಣವನ್ನು B ಎಂಜಿನ್ನಿಂದ ಪಡೆದು ಅದಕ್ಕಿಂತ ಹೆಚ್ಚಾದ ಉಷ್ಣ Q-$W_A$ ಎನ್ನುವುದು A ಎಂಜಿನ್ನಿಗೆ ಒದಗಿಸುವುದರಿಂದ ತೊಟಿಯ ಉಷ್ಣ ನಷ್ಟ $W_B$-$W_A$ ಆಗುತ್ತದೆ. ಆದ್ದರಿಂದ ಈ ಸಂಯುಕ್ತ ಯಂತ್ರ ತೊಟ್ಟಿಯಿಂದ $W_B$-$W_A$ಯಷ್ಟು ಉಷ್ಣವನ್ನು ಪಡೆದು ಅದನ್ನು ಪೂರ್ಣವಾಗಿ ಕಾರ್ಯಕ್ಕೆ ಪರಿವರ್ತಿಸಿ ಚಕ್ರೀಯವಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಇದು ಎರಡನೆಯ ಬಗೆಯ ಸ್ವಯಂಚಾಲಿತ ಯಂತ್ರವಾಗುತ್ತದೆ. ಉಷ್ಣಗತಿವಿಜ್ಞಾನದ ಎರಡನೆಯ ನಿಯಮದ ಪ್ಲಾಂಕನ ನಿರೂಪಣೆಯ ಪ್ರಕಾರ ಇಂಥ ಯಂತ್ರದ ನಿರ್ಮಾಣ ಅಸಾಧ್ಯ. B ಎಂಜಿನ್ನಿಗೆ A ಎಂಜಿನ್ನಿಗಿಂತ ಹೆಚ್ಚು ದಕ್ಷತೆ ಇದೆ ಎಂಬ ಭಾವನೆ ತಪ್ಪು ಎಂದು ಇದರಿಂದ ತಿಳಿದುಬರುತ್ತದೆ. ಯಾವ ಇತರ ಎಂಜಿನ್ನೂ ವಿಪರ್ಯಯ ಎಂಜಿನ್ನಿಗಿಂತ ಹೆಚ್ಚಿನ ದಕ್ಷತೆ ಪಡೆದಿರುವುದು ಅಸಾಧ್ಯ ಎಂದು ಹೀಗೆ ನಿಷ್ಕರ್ಷಿಸಬಹುದು.

ಈ ಫಲಿತಾಂಶದಿಂದ ನೇರವಾಗಿ ಲಭಿಸುವ ಅನುಮಿತದ ಪ್ರಕಾರ ಒಂದೇ ಉಷ್ಣತಾದ್ವಯಗಳಲ್ಲಿ ಕಾರ್ಯ ಮಾಡುವ ಎಲ್ಲ ವಿಪರ್ಯಯ ಉಷ್ಣ ಎಂಜಿನ್ನುಗಳೂ ಸಮದಕ್ಷತೆ ಉಳ್ಳವಾಗಿರುತ್ತವೆ. ಆದಕಾರಣ ಒಂದು ಸಂಪೂರ್ಣ ವಿಪರ್ಯಯ ಎಂಜಿನ್ನಿನ ದಕ್ಷತೆ ಅದರಲ್ಲಿ ಉಪಯೋಗಿಸುವ ಕ್ರಿಯಾವಸ್ತುವನ್ನು ಅವಲಂಬಿಸದೆ ಉಷ್ಣದ ಆಕರ ಮತ್ತು ತೊಟ್ಟಿಗಳ ಉಷ್ಣತೆಗಳನ್ನು ಮಾತ್ರ ಅವಲಂಬಿಸಿರುತ್ತದೆ. (ಎಚ್.ಎಸ್.ವಿ.;ಕೆ.ಜಿ.)

**ಕಾರ್ನೋ, ನಿಕೊಲಾಸ್ ಲಿಯೊನಾರ್ಡ್ ಸಾಡಿ :** 1796–1832. ಫ್ರಾನ್ಸಿನ ಭೌತವಿಜ್ಞಾನಿ. ಪ್ಯಾರಿಸಿನಲ್ಲಿ 1 ಜೂನ್ 1796 ರಂದು ಜನಿಸಿದ. ಈಕೊಲ್ ಪಾಲಿಟೆಕ್ನಿಕಿನಲ್ಲಿ ವ್ಯಾಸಂಗಮಾಡಿ 1814ರಲ್ಲಿ ಮಿಲಿಟರಿ ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿದ. ಆ ಗುಂಪಿನ ಕ್ಯಾಪ್ಟನ್ ಆಗಿ 1827ರಲ್ಲಿ ಬಡ್ತಿ ಬಂದರೂ ಮರುವರ್ಷವೇ ಈತ ಮಿಲಿಟರಿ ಹುದ್ದೆ ತ್ಯಜಿಸಿದ. 24 ಆಗಸ್ಟ್, 1832ರಲ್ಲಿ ಈತ ನಿಧನನಾದ.

ತನ್ನ ಸಂಶೋಧನೆಗಳೆಲ್ಲವನ್ನೂ ಒಂದೇ ಒಂದು ಪುಸ್ತಕದಲ್ಲಿ ಕಾರ್ನೋ ಬರೆದು ಇಟ್ಟಿದ್ದಾನೆ. ಉಷ್ಣ ಎಂಜಿನ್‌ಗಳ ವಿಷಯದಲ್ಲಿ ಕಾರ್ನೋ ನಡೆಸಿದ ಸಂಶೋಧನೆಗಳನ್ನು ಒಳಗೊಂಡಿರುವ ಈ ಅತ್ಯಮೂಲ್ಯ ಗ್ರಂಥವನ್ನು ಈತ ಬರೆದದ್ದು 1824ರಲ್ಲಿ. ಆದರೆ ಇದರ ಮೌಲ್ಯ ಈತ ಗತಿಸಿದ ಸುಮಾರು 26 ವರ್ಷಗಳ ಅನಂತರ ಎಂದರೆ 1848–49ರಲ್ಲಿ ಆಸಕ್ತರಿಗೆ ತಿಳಿಯಿತು. ಕೆಲ್ವಿನ್ ತೋರಿಸಿಕೊಡುವವರೆಗೂ ವಿಜ್ಞಾನಿಗಳ ಗಮನಕ್ಕೆ ಬಂದಿರಲಿಲ್ಲ. ಅದೃಷ್ಟವಶಾತ್ ಈತನ ಕೈಬರೆಹವನ್ನು ಜೋಪಾನವಾಗಿಟ್ಟದ್ದರಿಂದ ಇದರ ಪ್ರಕಟಣೆ ಸಾಧ್ಯವಾಯಿತು. ಈ ಗ್ರಂಥವೊಂದರಿಂದಲೇ ಕಾರ್ನೋನನ್ನು ಸುಪ್ರಸಿದ್ಧ ಭೌತವಿಜ್ಞಾನಿಗಳ ಗುಂಪಿಗೆ ಸೇರಿಸಬಹುದು.

ಈತನ ಬರೆಹದಿಂದ ಉಷ್ಣದ ನಿಜಸ್ವರೂಪದ ಬಗ್ಗೆ ಕಾರ್ನೋ ಆಳವಾಗಿ ಅಧ್ಯಯನ ನಡೆಸಿದ್ದು ತಿಳಿಯುತ್ತದೆ. ನಾವು ಈಗ ಆಧುನಿಕವೆಂದು ಉಪಯೋಗಿಸುತ್ತಿರುವ ಉತ್ತಮ ಪ್ರಯೋಗಗಳ ಪ್ರಯತ್ನಗಳನ್ನು ಆಗಲೇ ಇವನು ಉಷ್ಣದ ಯಾಂತ್ರಿಕ ಸಮಾನವನ್ನು ಕಂಡುಹಿಡಿಯಲು ಮಾಡಿದ್ದ. ಉದಾಹರಣೆಗೆ ಜೌಲ್ ಮತ್ತು ಕೆಲ್ವಿನ್‌ರವರ ಪ್ರಸಿದ್ಧ ಸರಂಧ್ರಪ್ಲಗ್ ಪ್ರಯೋಗದ ಪ್ರಯತ್ನ

ಮುಂತಾದುವುಗಳೂ ಅಲ್ಲಿದ್ದುವು. ಕಾರ್ನೋ ನೀಡಿರುವ ಉಷ್ಣ ಎಂಜಿನ್ ಪ್ರಮೇಯ ಹೀಗಿದೆ: ಯಾವ ಉಷ್ಣ ಎಂಜಿನ್ನೂ ಅದೇ ಉಷ್ಣತೆಗಳ ನಡುವೆ ಕ್ರಿಯಾಶೀಲವಾಗಿರುವ ವಿಪರ್ಯಶೀಲ ಎಂಜಿನ್‍ಗಿಂತ ದಕ್ಷತರವಾಗಿರಲಾರದು. ಆದ್ದರಿಂದ ವಿಪರ್ಯಶೀಲ (ರಿವರ್ಸಿಬಲ್) ಎಂಜಿನ್‍ನ ದಕ್ಷತೆ ಕ್ರಿಯಾನಿರತ ಪದಾರ್ಥವನ್ನು ಅವಲಂಬಿಸಿಲ್ಲ. ಬದಲು, ಅದು ವರ್ತಿಸುತ್ತಿರುವ ಉಷ್ಣತಾಮಿತಿಗಳನ್ನು ಮಾತ್ರ ಅವಲಂಬಿಸಿದೆ. ಇದು ಉಷ್ಣಗತಿ ವಿಜ್ಞಾನದ ಅಡಿಗಲ್ಲಾಗಿದೆ. (ಪಿ.ವಿ.)

**ಕಾರ್ಪೆಂಟರ್, ಎಡ್ವರ್ಡ್ :** 1844–1929. ಇಂಗ್ಲಿಷ್ ಲೇಖಕ, ಸಮಾಜ ಸುಧಾರಕ, ಹಳ್ಳಿಯ ಸರಳ ಬದುಕಿನ ಪ್ರತಿಪಾದಕ. ಸಸೆಕ್ಸಿನ ಬ್ರೈಟನಿನಲ್ಲಿ 1844ರ ಆಗಸ್ಟ್ 29ರಂದು ಹುಟ್ಟಿದ. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ಈತ ತನ್ನ ಕಾಲದ ಸಾಮಾಜಿಕ ಹಾಗೂ ಮತೀಯ ಭಾವನೆಗಳನ್ನು ವಿರೋಧಿಸಿದ. ಆಗ ಹೊಸದಾಗಿ ಪ್ರಾರಂಭವಾದ ವಿಶ್ವವಿದ್ಯಾಲಯ ವಿಸ್ತರಣ ಚಳವಳಿಯಲ್ಲಿ ಉಪನ್ಯಾಸಕನಾದ. ವಾಲ್ಟ್ ವ್ಹಿಟ್‍ಮನನ ಪದ್ಯಗಳಿಂದ ಬಹಳಮಟ್ಟಿಗೆ ಪ್ರಭಾವಿತನಾಗಿದ್ದು ಅದರಿಂದ ತನ್ನ ಬಾಳಿನ ಗತಿಯನ್ನೇ ಬದಲಾಯಿಸಿಕೊಂಡಿದ್ದ ಕಾರ್ಪೆಂಟರನಿಗೆ ಅಲ್ಲಿ ಕವಿ ವ್ಹಿಟ್‍ಮನನ ಪರಿಚಯವಾಯಿತು. ವ್ಹಿಟ್‍ಮನನ ಕಾವ್ಯ ಮಾರ್ಗವನ್ನು ಈತನೂ ಅನುಸರಿಸಿ ಟುವರ್ಡ್ ಡೆಮಾಕ್ರಸಿ ಎಂಬ ಉದ್ದನೆಯ ಪದ್ಯ ರಚಿಸಿದ. 1883ರಲ್ಲಿ ಡರ್ಬಿಷೈರ್ ಹತ್ತಿರ ಸ್ವಲ್ಪ ಜಮೀನನ್ನು ಕೊಂಡು ಅಲ್ಲಿ 1922ರ ವರೆಗೆ ವಾಸಿಸುತ್ತಿದ್ದ. ಈ ಕಾಲದಲ್ಲಿ ಇವನಿಗೆ ಕೂಲಿಕಾರರೊಡನೆ ಅತ್ಯಂತ ನಿಕಟ ಸಂಬಂಧ ಬೆಳೆಯಿತು.

ಕಾರ್ಪೆಂಟರ್ ಸಮಾಜವಾದಿಯಾಗಿದ್ದ. ವಿಲಿಯಂ ಮಾರಿಸನ ತತ್ತ್ವಗಳಲ್ಲಿ ಇವನಿಗೆ ನಂಬಿಕೆಯಿತ್ತು. ರಾಜಕೀಯ ಕ್ರಾಂತಿಗಿಂತ ಸಮಾಜ ಸುಧಾರಣೆಯನ್ನೆ ಇವನು ಬೋಧಿಸಿದ. ಗ್ರಾಮಗಳಲ್ಲಿ ಪ್ರಚಲಿತವಾಗಿದ್ದ ಕುಶಲಕಲೆಗಳನ್ನು ಪುನರುದ್ಧರಿಸುವುದು ಇವನ ಉದ್ದೇಶವಾಗಿತ್ತು. ಇಂಗ್ಲೆಂಡ್ಸ್ ಐಡಿಯಲ್ (1887), ಸಿವಿಲಿಸೇಷನ್: ಇಟ್ಸ್ ಕಾಸ್ ಅಂಡ್ ಕ್ಯೂರ್ (1889) ಎಂಬ ಇವನ ಪ್ರಬಂಧಗಳು ಪ್ರಖ್ಯಾತವಾದುವಲ್ಲದೆ ಇವನಿಗೆ ಅನೇಕ ಅಭಿಮಾನಿಗಳನ್ನು ಸಂಪಾದಿಸಿಕೊಟ್ಟುವು. ಕಲೆ ಮತ್ತು ಜೀವನವನ್ನು ಕುರಿತು ಈತ ಎರಡು ಕೃತಿಗಳನ್ನು ರಚಿಸಿದ. ಹ್ಯಾವ್‍ಲಾಕ್ ಎಲಿಸನ ಪ್ರಭಾವದ ಫಲವಾಗಿ ಗಂಡು–ಹೆಣ್ಣುಗಳ ಸಂಬಂಧದ ಬಗ್ಗೆಯೂ ಕೃತಿರಚನೆ ಮಾಡಿದ. ಇವೆಲ್ಲ ಹಲವು ಭಾಷೆಗಳಿಗೆ ಅನುವಾದವಾಗಿವೆ. ಈತ 28 ಜೂನ್ 1929ರಂದು ನಿಧನ ಹೊಂದಿದ. (ಎಸ್.ಕೆ.ಎಸ್.)

**ಕಾರ್ಪೊರೇಷನ್ :** ಒಂದು ಸಮಾನ ಬಂಡವಾಳ ನಿಧಿಗೆ ಅಥವಾ ಸ್ಕಂಧಕ್ಕೆ ಹಣ ಸಲ್ಲಿಸಿ, ಅದನ್ನು ಒಂದು ವ್ಯವಹಾರದಲ್ಲಿ ತೊಡಗಿಸಿ, ಅದರ ಫಲವಾದ ಲಾಭವನ್ನು ಹಂಚಿಕೊಳ್ಳುವ ಜನರ ಸಂಘ. ಬ್ರಿಟನ್ ಅಥವಾ ಭಾರತದಲ್ಲಿ ಪರಿಮಿತ ಹೊಣೆ ಕಂಪನಿ ಎಂದು ಕರೆಯುವ ಸಂಸ್ಥಾಪ್ರರೂಪವೇ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕಾರ್ಪೊರೇಷನ್ ಎನಿಸಿಕೊಳ್ಳುತ್ತದೆ. ಅಲ್ಲಿಯ ಸಂವೃತ (ಕ್ಲೋಸ್) ಕಾರ್ಪೊರೇಷನ್ ಬಹಳಮಟ್ಟಿಗೆ ಖಾಸಗಿ ಕಂಪನಿಯ ಲಕ್ಷಣಗಳನ್ನೇ ಉಳ್ಳದ್ದಾಗಿದೆ. ಕಂಪನಿ, ಕಾರ್ಪೊರೇಷನ್–ಇವು ರೂಢಿಯಲ್ಲಿ ಪರ್ಯಾಯ ಶಬ್ದಗಳಾಗಿವೆ. **(ನೋಡಿ- ಕಂಪನಿ)**

ನಿರಂತರವಾದ ಉತ್ತರಾಧಿಕಾರದ ಅನುಪೂರ್ವಿ, ಸಾಮಾನ್ಯ ಮುದ್ರೆ, ಆಸ್ತಿಯ ಒಡೆತನದ ಹಕ್ಕು, ಷೇರುಗಳಿದ್ದರೆ ಅವುಗಳ ವರ್ಗಾವಣೆಯ ಅವಕಾಶ, ಷೇರುಗಳ ಅಂಕಿತ ಮೌಲ್ಯಕ್ಕೆ ಅಥವಾ ಸದಸ್ಯರು ನೀಡಿದ ಖಾತರಿಯ ಮೊಬಲಗಿಗೆ ಪರಿಮಿತವಾದ ಹೊಣೆ ಅಥವಾ ಅಮಿತ ಹೊಣೆ–ಹೀಗೆ ಕಂಪನಿಯ ಲಕ್ಷಣಗಳೆಲ್ಲ ಕಾರ್ಪೊರೇಷನಿಗೆ ಇರಬಹುದು.

ಲಾಭದ ಉದ್ದೇಶದಿಂದ ವ್ಯವಹಾರ ನಡೆಸುವ ಎಲ್ಲ ಸಂಯುಕ್ತ ಬಂಡವಾಳ ಕಂಪನಿಗಳೂ ಕಾರ್ಪೊರೇಷನ್‍ಗಳೇ ಆದರೂ ಭಾರತದಲ್ಲಿ ಕಾರ್ಪೊರೇಷನ್ ಎಂದು ಕರೆಯುವ ಎಲ್ಲ ಸಂಸ್ಥೆಗಳೂ ಕಂಪನಿಗಳಲ್ಲ. ಅವು ವ್ಯಾಪಾರದಲ್ಲೇ ನಿರತವಾಗಬೇಕಾದುದಿಲ್ಲ. ಸಹಕಾರ ಸಂಘಗಳೂ ಜನೋಪಯೋಗಿ ಸಂಸ್ಥೆಗಳೂ ಕಾರ್ಪೊರೇಷನ್‍ಗಳೆನಿಸಿಕೊಳ್ಳುತ್ತವೆ. ಇವುಗಳ ಉದ್ದೇಶಗಳು ಸಂಯುಕ್ತ ಬಂಡವಾಳ ಕಂಪನಿಗಳ ಉದ್ದೇಶಗಳಿಗಿಂತ ಭಿನ್ನವಾದವು. ಧರ್ಮಾರ್ಥ ಸಂಸ್ಥೆಗಳೂ ವ್ಯಾಪಾರ ಸಂಘಗಳೂ ವಾಣಿಜ್ಯ ಸಂಘಗಳೂ ಕಾರ್ಪೊರೇಷನ್‍ಗಳು. ಇವೆಲ್ಲ ಲಾಭ ಸಂಪಾದಿಸದ ಸಂಸ್ಥೆಗಳು. ಸಾಮಾನ್ಯವಾಗಿ ಇವುಗಳ ಸದಸ್ಯರ ಹೊಣೆ ಅವರು ನೀಡುವ ಖಾತರಿಗೆ ಸೀಮಿತವಾಗಿರುತ್ತದೆ. ಸರ್ಕಾರಿ ಉದ್ಯಮಗಳನ್ನು ಅಥವಾ ಲೋಕೋಪಯೋಗಿ ಉದ್ಯಮಗಳನ್ನು ಅವಕ್ಕಾಗಿಯೇ ಜಾರಿಗೆ ತರಲಾದ ವಿಶಿಷ್ಟ ಕಾಯಿದೆಗಳ ಅಸ್ತಿಭಾರದ ಮೇಲೆ ಸ್ವಯಂ ಆಡಳಿತ ಸಂಸ್ಥೆಗಳಾಗಿ ಸ್ಥಾಪಿಸಿ ಅವಕ್ಕೆ ಪ್ರತ್ಯೇಕ ಕಾನೂನು ವ್ಯಕ್ತಿತ್ವ ದೊರಕಿಸಿಕೊಟ್ಟಾಗ ಅವು ಸಾರ್ವಜನಿಕ ಕಾರ್ಪೊರೇಷನ್ ಎನಿಸಿಕೊಳ್ಳುತ್ತವೆ. ದೊಡ್ಡ ನಗರಗಳ ಪೌರಸಭೆಗಳಿಗೆ ಕಾರ್ಪೊರೇಷನ್ ಎಂಬ ಹೆಸರಿರುತ್ತದೆ. ಅವು ಕಾರ್ಪೊರೇಷನ್ನಿನ ಮುಖ್ಯ ಲಕ್ಷಣಗಳನ್ನೆಲ್ಲ ಪಡೆದಿರುವುದುಂಟು. ಎಂದರೆ ಕಾನೂನು ವ್ಯಕ್ತಿತ್ವ, ನಿರಂತರವಾದ ಅನುಪೂರ್ವಿ, ಸಾಮಾನ್ಯ ಮುದ್ರೆ, ಆಸ್ತಿಯ ಒಡೆತನದ ಹಕ್ಕು, ಎಲ್ಲವೂ ಅದಕ್ಕಿರುತ್ತವೆ.

ಕಾಯಿದೆಯ ಮೂಲಕವೋ ಸನ್ನದಿನ ಮೂಲಕವೋ ಸರ್ಕಾರ ನೀಡಿದ ಪ್ರಮಾಣ ಪತ್ರದ ಮೂಲಕವೋ ಕಾರ್ಪೊರೇಷನಿನ ರಚನೆಯಾಗಿರುತ್ತದೆ. ಕೈಗಾರಿಕಾ ಕ್ರಾಂತಿಗೆ ಪೂರ್ವದಲ್ಲೂ ಕಾರ್ಪೊರೇಷನ್‍ಗಳಿದ್ದುವೆಂಬುದು ನಿಸ್ಸಂಶಯ. ಮಧ್ಯಯುಗದಲ್ಲಿದ್ದ ವೃತ್ತಿಸಂಘಗಳು ತಮ್ಮ ಸಾಂಘಿಕ ವ್ಯಕ್ತಿತ್ವಕ್ಕೆ ದೊರೆಯ ಮನ್ನಣೆಗಳಿಸಿದ್ದುವು. ಆದರೂ ಕಾರ್ಪೊರೇಷನ್ ಪ್ರರೂಪಕ್ಕೆ ಪ್ರಾಮುಖ್ಯ ಬಂದದ್ದು ಕೈಗಾರಿಕಾ ಕ್ರಾಂತಿಯಾದ ಮೇಲೆಯೇ. ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುವುದಕ್ಕೋ ವ್ಯಾಪಾರ ಮಾಡುವುದಕ್ಕೋ ಅಗತ್ಯವಾದ ಅಗಾಧ ಬಂಡವಾಳವನ್ನು ರೂಢಿಸಿಕೊಳ್ಳಲು ಇವು ಸಾಧಕವಾದುವು.

ಕಾರ್ಪೊರೇಷನ್‍ಗಳಲ್ಲಿ ಅಧಿಕ ಸಂಖ್ಯಾತವಾದವು ವ್ಯವಹಾರಕ್ಷೇತ್ರದ ಸಂಯುಕ್ತ ಬಂಡವಾಳ ಕಂಪನಿಗಳು. ವ್ಯಾಪಾರ ಹಾಗೂ ಉತ್ಪಾದನೆಗಾಗಿ ಕಾರ್ಪೊರೇಷನ್ ಮಾದರಿಯ ಸಂಸ್ಥೆಗಳನ್ನು ರಚಿಸಿರುವುದು ಸಂಪೂರ್ಣ ವರವಾಗಿ ಪರಿಣಮಿಸಿಲ್ಲ. ಈ ರಚನೆಯ ಹಿಂದೆಯೇ ಅನೇಕ ಸಮಸ್ಯೆಗಳೂ ಉದ್ಭವಿಸಿವೆ. ಕಾರ್ಪೊರೇಷನ್ನಿನ ಅತ್ಯಂತ ದೊಡ್ಡ ನ್ಯೂನತೆಯೆಂದರೆ ಅದರ ಅವೈಯಕ್ತಿಕ ಕಾರ್ಯವಿಧಾನ ಹಾಗೂ ದೃಷ್ಟಿ. ಅದನ್ನು ನಡೆಸುವ ಸಲುವಾಗಿ ಆಯ್ಕೆ ಹೊಂದಿದ ನಿರ್ದೇಶಕರೂ ನೇಮಕವಾದ ಅಧಿಕಾರಿಗಳೂ ಕಾರ್ಮಿಕರ ವಿಚಾರದಲ್ಲಿಯಾಗಲಿ, ಗ್ರಾಹಕರ ವಿಚಾರವಾಗಿಯಾಗಲಿ ನ್ಯಾಯವಾದ ಧೋರಣೆ ತಳೆದಿರದ ಸಂಭವವುಂಟು. ಇದರಿಂದ ಕಾರ್ಪೊರೇಷನಿನ ಒಡೆತನಕ್ಕೂ (ಎಂದರೆ ಷೇರುದಾರರಿಗೂ) ಕಾರ್ಪೊರೇಷನಿನ ನಿಯಂತ್ರಣಕ್ಕೂ (ಎಂದರೆ ನಿರ್ದೇಶಕರಿಗೂ) ಭಿನ್ನತೆ ಏರ್ಪಡಿಸಬಹುದು. ಕಾರ್ಮಿಕರ ಅತಿಯಾದ ದುಡಿತ, ಗ್ರಾಹಕರ ಶೋಷಣೆ, ಏಕಸ್ವಾಮ್ಯಗಳ ಬೆಳವಣಿಗೆ, ಆರ್ಥಿಕ ಶಕ್ತಿಯ ಕೇಂದ್ರೀಕರಣ, ಅಲ್ಪಸಂಖ್ಯೆಯ ದೊಡ್ಡ ಷೇರುದಾರರಿಗೂ ಬಹುಸಂಖ್ಯೆಯ ಸಣ್ಣ ಷೇರುದಾರರಿಗೂ ಭಿನ್ನತೆ–ಇವು ಕಾರ್ಪೊರೇಷನ್ ವ್ಯವಸ್ಥೆಯ ಕೆಲವು ಸಮಸ್ಯೆಗಳು. ಆರ್ಥಿಕ ಸ್ವಾತಂತ್ರ್ಯ, ಸಮತೆ ಹಾಗೂ ಸೋದರತ್ವಗಳು ಇಲ್ಲದವರೆಗೂ ರಾಜಕೀಯ ಸ್ವಾತಂತ್ರ್ಯ, ಸಮತೆ ಹಾಗೂ ಬಂಧುತ್ವಗಳು ಇರುವುದು ಸಾಧ್ಯವಿಲ್ಲವೆಂಬ ತತ್ತ್ವವನ್ನು ಇದು ಸಿದ್ಧಪಡಿಸುತ್ತದೆ; ಆಧುನಿಕ ಯುಗದಲ್ಲಿ ಕಾರ್ಪೊರೇಷನ್‍ಗಳನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಬೇಕೆಂಬುದರ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಮಹಾತ್ಮಾ ಗಾಂಧಿಯವರು ಬೃಹತ್‍ಪ್ರಮಾಣದ ಕಾರ್ಪೊರೇಷನ್ ಪ್ರರೂಪದ ದೊಡ್ಡ ಕೈಗಾರಿಕೆಯನ್ನು ಜನಹಿತದ ನ್ಯಾಸವೆಂದೂ ದೊಡ್ಡ ಉದ್ಯಮಪತಿಗಳನ್ನು ಜನಗಳ ನ್ಯಾಸಧಾರಿಗಳೆಂದೂ ಪರಿಗಣಿಸಿದ್ದರು. ಕಾರ್ಮಿಕರ ಬಾಳ್ವೆಗೆ ಅವಶ್ಯವಾದಷ್ಟು ವೇತನ ನೀಡಿಕೆ, ಗ್ರಾಹಕರಿಗೆ ಒಳ್ಳೆಯ ಹಾಗೂ ಕಡಿಮೆ ಬೆಲೆಯ ಪದಾರ್ಥ ಸರಬರಾಜು, ಷೇರುದಾರರು ಹೂಡಿರುವ ಬಂಡವಾಳಕ್ಕೆ ನ್ಯಾಯವಾದ ವರಮಾನದ ಹಂಚಿಕೆ, ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯ ಪಾವತಿ–ಇವು ಬೃಹತ್ ಕೈಗಾರಿಕೆಯ ಕರ್ತವ್ಯಗಳೆಂದು ಗಾಂಧೀಜಿ ಹೇಳಿದ್ದಾರೆ. (ಜಿ.ಕೆ.ಐ.)

**ಕಾರ್ಪೊರೇಷನ್ ತೆರಿಗೆ :** ಸಂಯುಕ್ತ ಬಂಡವಾಳ ಸಂಸ್ಥೆಗಳ–ಎಂದರೆ ಕಂಪನಿಗಳ ಅಥವಾ ಕಾರ್ಪೊರೇಷನ್‍ಗಳ–ವ್ಯಾಪಾರ ಮೌಲ್ಯ ಅಥವಾ ಬಂಡವಾಳ ಮೌಲ್ಯ, ವರಮಾನ ಇವುಗಳ ಆಧಾರದ ಮೇಲೆ ತೆರಿಗೆ ವಿಧಿಸುವುದೇ ಸಾಮಾನ್ಯವಾಗಿರುವುದರಿಂದ ಇದನ್ನು ಕಾರ್ಪೊರೇಷನ್ ವರಮಾನ ತೆರಿಗೆ ಎನ್ನಬಹುದು. ಭಾರತದಲ್ಲಿ ಕಾರ್ಪೊರೇಷನ್ ತೆರಿಗೆಯನ್ನು ಹಿಂದೆ ಅಧಿಕರ ಅಥವಾ ಮೇಲ್ತೆರಿಗೆ (ಸೂಪರ್ ಟ್ಯಾಕ್ಸ್) ಎಂದು ಕರೆಯಲಾಗಿತ್ತು. ಭಾರತದ ಸಂವಿಧಾನದಲ್ಲಿ ಇದನ್ನು ಕಾರ್ಪೊರೇಷನ್ ತೆರಿಗೆ ಎಂದು ಕರೆಯಲಾಗಿದೆ. 366(6) ನೆಯ ಅನುಚ್ಛೇದದಲ್ಲಿ ಇದನ್ನು ಕಂಪನಿಗಳ ವರಮಾನಗಳ ಮೇಲೆ ವಿಧಿಸಲಾಗುವ ತೆರಿಗೆಯೆಂದೇ ಹೇಳಲಾಗಿದೆ.

ಕಾರ್ಪೊರೇಷನ್ ತೆರಿಗೆ ವಿಧಿಸಲು ಹಲವಾರು ರೀತಿಯ ಸಮರ್ಥನೆಗಳನ್ನು ಅರ್ಥಶಾಸ್ತ್ರಜ್ಞರು ಕೊಟ್ಟಿದ್ದಾರೆ. ವ್ಯಕ್ತಿಗಳಂತೆಯೇ ಕಂಪನಿಗಳೂ ವರಮಾನ ಪಡೆಯುತ್ತವೆ. ವ್ಯಕ್ತಿಗಳಿಗೆ ಅನ್ವಯಿಸುವ ಸಾಮಾನ್ಯ ವರಮಾನಗಳು ತೆರಿಗೆ ಇವಕ್ಕೆ ಅನ್ವಯಿಸುವುದಿಲ್ಲ. ವ್ಯಕ್ತಿಗಳಿಗೆ ವರ್ಗಾಯಿಸಿದ ವರಮಾನಗಳು ತೆರಿಗೆ ತಪ್ಪಿಸಿಕೊಳ್ಳುತ್ತವೆ. ಕಾರ್ಪೊರೇಷನ್ ತೆರಿಗೆ ಹೀಗಾಗದಂತೆ ತಡೆಯುತ್ತದೆ. ಕಂಪನಿಯ ಷೇರುದಾರರ ಪರಿಮಿತ ಹೊಣೆ, ಷೇರು ವರ್ಗಾವಣೆ ಸೌಕರ್ಯ, ಅವಿಚ್ಛಿನ್ನ ಕಾನೂನು ವ್ಯಕ್ತಿಯಾಗಿ ಕಂಪನಿಯ ಪರಿಗಣನೆ ಇತ್ಯಾದಿ ವಿಶೇಷ ಸೌಕರ್ಯಗಳನ್ನು ಸರ್ಕಾರ ಅವಕ್ಕೆ ದೊರಕಿಸುವುದರಿಂದ ಅವುಗಳಿಂದ ತೆರಿಗೆ ಪಡೆಯುವುದು ನ್ಯಾಯ ಎಂಬುದು ಹಕ್ಕುಬಾಧ್ಯತೆ ಸಿದ್ಧಾಂತದ (ಪ್ರಿವಿಲೇಜಸ್ ಥಿಯೊರಿ) ಪ್ರತಿಪಾದಕರ ಅಭಿಪ್ರಾಯ. ಕಂಪನಿಗಳ ಉದ್ಯಮಗಳಿಗೆ ಅಗತ್ಯವಾದ ತಾಂತ್ರಿಕ ಹಾಗೂ ಇತರ ಬಗೆಯ ಸಿಬ್ಬಂದಿಯ ಶಿಕ್ಷಣ ಹಾಗೂ ತರಬೇತಿಗಾಗಿ ಸರ್ಕಾರ ಅಗಾಧವಾಗಿ ವೆಚ್ಚ ಮಾಡುತ್ತದೆ. ಇದಕ್ಕಾಗಿ ಕಂಪನಿಗಳ ಮೇಲೆ ತೆರಿಗೆ ವಿಧಿಸುವುದು ಸರಿ ಎಂಬುದು ಒಂದು ವಾದ. ಈ ಸಂಸ್ಥೆಗಳು ಸ್ಥಾಪಿಸುವ ಭಾರಿ ಕೈಗಾರಿಕೆಗಳಿಂದ ನಗರಗಳಲ್ಲಿ ವಿಶೇಷ ಸಮಸ್ಯೆಗಳು ಉದ್ಭವವಾಗುತ್ತದೆ. ಕೊಳಚೆ ನಿರ್ಮೂಲನ, ಜನಾರೋಗ್ಯ ರಕ್ಷಣೆ, ನಗರ ನಿರ್ಮಲೀಕರಣ ಇವು ಇಂಥ ಕೆಲವು ಕ್ರಮಗಳು. ಇವಕ್ಕೆಲ್ಲ ಮೂಲತಃ ಆ ಸಂಸ್ಥೆಗಳೇ ಕಾರಣವಾಗುವುದರಿಂದ ಸರ್ಕಾರ ಅವುಗಳಿಂದ ತೆರಿಗೆ ಪಡೆಯುವುದು ಸಾಧುವಾದುದೆಂಬುದು ಕೆಲವರ ವಾದ.

ಸಂಯುಕ್ತ ಬಂಡವಾಳ ಸಂಸ್ಥೆಗಳು ಬೃಹತ್‍ಗಾತ್ರದವಾದುದ್ದರಿಂದ ಆರ್ಥಿಕಾಧಿಕಾರ ಅವುಗಳಲ್ಲಿ ಕೇಂದ್ರೀಕೃತವಾಗುವ ಪ್ರವೃತ್ತಿ ಇರುತ್ತದೆ. ಇದರಿಂದ ಸಾಮಾಜಿಕ ಆರ್ಥಿಕ ಅಸಮತೆ ಹೆಚ್ಚಾಗಬಹುದು. ಈ ಪ್ರವೃತ್ತಿಯನ್ನು ತಡೆಗಟ್ಟಲು ಕಾರ್ಪೊರೇಷನ್ ತೆರಿಗೆ ಸ್ವಲ್ಪಮಟ್ಟಿಗೆ ಸಹಾಯಕ ಎಂಬುದು ಸಾಮಾಜಿಕ ರಾಜಕೀಯ ಸಿದ್ಧಾಂತ ಪ್ರತಿಪಾದಕರ ವಾದಸರಣಿ. ತೆರಿಗೆಯ ಒಂದು ಸಾಮಾನ್ಯ ಸಿದ್ಧಾಂತವಾದ ಸಲ್ಲಿಕೆ ಶಕ್ತಿ ಸಿದ್ಧಾಂತ ಮತ್ತು ತೆರಿಗೆ ನಿಯಮಗಳಾದ ಅನುಕೂಲಸಿಂಧು ಮತ್ತು ಸೌಕರ್ಯಗಳ ಆಧಾರದ ಮೇಲೂ ಕಾರ್ಪೊರೇಷನ್ ತೆರಿಗೆಯನ್ನು ಸಮರ್ಥಿಸುವುದುಂಟು. ವ್ಯವಸ್ಥಿತ ಸಂಸ್ಥೆಗಳಾದ ಕಾರ್ಪೊರೇಷನ್‍ಗಳು ಆರ್ಥಿಕ ಹಾಗೂ ಲಾಭಗಳಿಕೆ ಶಕ್ತಿಯುಳ್ಳ ಕಾನೂನು ವ್ಯಕ್ತಿಗಳಾಗಿರುವುದರಿಂದ ಇತರ ವ್ಯಕ್ತಿಗಳಂತೆಯೇ ಇವೂ ತಮ್ಮ ತೆರಿಗೆ ಸಲ್ಲಿಕೆ ಸಾಮರ್ಥ್ಯಕ್ಕೆ ಅನುಗುಣವಾಗಿ ಸರ್ಕಾರಕ್ಕೆ ತೆರಿಗೆ ನೀಡುವುದು ಸೂಕ್ತ ಎಂದು ಹೇಳಲಾಗಿದೆ. ಆಧುನಿಕ ಸರ್ಕಾರಗಳ ಖರ್ಚು ಹೆಚ್ಚಾದಂತೆ ಅದಕ್ಕಾಗಿ ಆದಾಯವನ್ನೂ ದೊರಕಿಸಿಕೊಳ್ಳುವುದರಲ್ಲಿ ತೆರಿಗೆಯ ಪಾತ್ರ ಅತಿ ಮುಖ್ಯವಾಗಿದೆ; ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಗಳಲ್ಲಿ ಆರ್ಥಿಕಾಭಿವೃದ್ಧಿಗೆ ಹಣ ಒದಗಿಸಲೂ ತೆರಿಗೆಯ ವರಮಾನವನ್ನು ಬಳಸಲಾಗುತ್ತದೆ. ಈ ಸಂದರ್ಭದಲ್ಲಿ ತೆರಿಗೆ ರಚನೆಯಲ್ಲಿ ಕಾರ್ಪೊರೇಷನ್ ತೆರಿಗೆಗೆ ಸ್ಥಾನ ಕೊಡುವುದು ಆವಶ್ಯಕ ಹಾಗೂ ಅನುಕೂಲಕರವೆಂದು ಹೇಳಲಾಗಿದೆ.

ಹೀಗೆ ಕಾರ್ಪೊರೇಷನ್ ತೆರಿಗೆಗೆ ಸೈದ್ಧಾಂತಿಕ ಆಧಾರ ನೀಡುವ ಅನೇಕ ಪ್ರಯತ್ನಗಳನ್ನು ಅರ್ಥಶಾಸ್ತ್ರಜ್ಞರು ನಡೆಸಿದ್ದಾರೆ. ಈ ಒಂದೊಂದೂ ಒಂದೊಂದು ರೀತಿಯ ಅಪವಾದಕ್ಕೆ ಒಳಗಾಗಬಹುದಾದರೂ ವಿವಿಧ ದೃಷ್ಟಿಗಳಿಂದ ಕಾರ್ಪೊರೇಷನ್ ತೆರಿಗೆಗೆ ಸಮರ್ಥನೆ ನೀಡಬಹುದೆಂಬ ಅಂಶವನ್ನು ಇವು ವ್ಯಕ್ತಪಡಿಸುತ್ತವೆ.

ಕಾರ್ಪೊರೇಷನ್‍ಗಳ ಮೇಲೆ ತೆರಿಗೆ ವಿಧಿಸುವುದು ನ್ಯಾಯ ಸಮ್ಮತವೆಂದು ಒಪ್ಪಿದ ಮೇಲೆ ತೆರಿಗೆ ವಿಧಿಸುವ ಕ್ರಮ ಕುರಿತು ಮುಖ್ಯ ಪ್ರಶ್ನೆ ಏಳುತ್ತದೆ. ಸಾಮಾನ್ಯ ವರಮಾನ ತೆರಿಗೆಗೆ ಅನ್ವಯಿಸುವ ನಿಯಮಗಳನ್ನೇ ಕಾರ್ಪೊರೇಷನ್ ತೆರಿಗೆಗೆ ಅನ್ವಯಿಸಲಾಗುವುದಿಲ್ಲ. ಸಾಮಾನ್ಯ ವರಮಾನ ತೆರಿಗೆಯಲ್ಲಿ ದರಗಳು ಪ್ರಗಾಮಿ ತತ್ತ್ವವನ್ನು (ಪ್ರೋಗ್ರೆಸಿವ್ ಪ್ರಿನ್ಸಿಪಲ್) ಅನುಸರಿಸಿವೆ. ಅಂದರೆ, ವರಮಾನದ ಮೊತ್ತ ಹೆಚ್ಚಿದಂತೆ ತೆರಿಗೆಯ ದರವೂ ಹೆಚ್ಚುತ್ತದೆ. ಆದರೆ, ಈ ನಿಯಮ ಕಾರ್ಪೊರೇಷನ್ ತೆರಿಗೆಗೆ ಹೊಂದುವುದಿಲ್ಲ. ಭಾರಿ ಸಂಸ್ಥೆಗಳು ಸಣ್ಣ ಸಂಸ್ಥೆಗಳ ಮೇಲೆ ಹೆಚ್ಚು ಮೊತ್ತದ ಲಾಭ ಗಳಿಸಬಹುದು. ಈ ಆಧಾರದ ಮೇಲೆ ಸಣ್ಣ ಸಂಸ್ಥೆಗಳ ಮೇಲೆ ವಿಧಿಸಲಾಗುವ ದರಕ್ಕಿಂತ ಹೆಚ್ಚು ದರದ ತೆರಿಗೆಯನ್ನು ಭಾರಿ ಸಂಸ್ಥೆಗಳ ಮೇಲೆ ವಿಧಿಸುವುದು ತೆರಿಗೆ ನ್ಯಾಯ ಸಿದ್ಧಾಂತಕ್ಕೆ ಅನುಗುಣವಾಗಿರುವುದಿಲ್ಲ. ಏಕೆಂದರೆ, ಭಾರಿ ಸಂಸ್ಥೆಯ ಲಾಭದ ಮೊತ್ತ ಹೆಚ್ಚಾಗಿದ್ದರೂ ಅದರ ಬಂಡವಾಳದ ಮೊತ್ತವೂ ಹೆಚ್ಚಾಗಿರುವುದೆಂಬ ಅಂಶವನ್ನು ಮರೆಯುವಂತಿಲ್ಲ. ಒಂದು ವೇಳೆ ಈ ಹೆಚ್ಚುವರಿ ದರಗಳ ತತ್ತ್ವವನ್ನು ಅನ್ವಯಿಸುವುದಾದರೆ ಭಾರಿ ಸಂಸ್ಥೆಗಳನ್ನು ಸಣ್ಣ ಸಣ್ಣ ಸಂಸ್ಥೆಗಳಾಗಿ ಮಾಡುವ ಪ್ರವೃತ್ತಿಗೆ ಪ್ರಚೋದನೆ ನೀಡಿದಂತಾಗುತ್ತದೆ. ಆದ್ದರಿಂದ, ಕಾರ್ಪೊರೇಷನ್ ಮೇಲೆ ತೆರಿಗೆ ವಿಧಿಸಲು ಪ್ರತ್ಯೇಕ ತತ್ತ್ವ ಆವಶ್ಯಕ. ತೆರಿಗೆಯ ದರಗಳು ಕಾಲಕಾಲಕ್ಕೆ ಬದಲಾಯಿಸಬಹುದಾದರೂ ಸಾಮಾನ್ಯವಾಗಿ ದರಗಳ ರಚನೆಯಲ್ಲಿ ಹೆಚ್ಚು ಹಂತಗಳಿರುವುದಿಲ್ಲ. ಕಾರ್ಪೊರೇಷನ್‍ಗಳ ಬೆಳವಣಿಗೆ, ಆರ್ಥಿಕಾಭಿವೃದ್ಧಿಯಲ್ಲಿ ಇವುಗಳ ಪಾತ್ರ – ಈ ದೃಷ್ಟಿಯಿಂದ ವಿವಿಧ ರೀತಿಯ ವಿನಾಯಿತಿಗಳನ್ನು ಕಾರ್ಪೊರೇಷನ್ ತೆರಿಗೆ ರಚನೆ ಒಳಗೊಳ್ಳುತ್ತದೆ. ಉದಾಹರಣೆಗೆ, ಭಾರತದಲ್ಲಿ ಹೊಸದಾಗಿ ಸ್ಥಾಪಿಸಲಾಗುವ ಕೈಗಾರಿಕಾ ಕಂಪನಿಗಳಿಗೆ ತೆರಿಗೆ ಮಾಫಿ ಮಾಡಲಾಗಿದೆ. ಕೆಲವು ಬಗೆಯ ಅಭಿವೃದ್ಧಿಗಳಿಗಾಗಿ ಶೋಧಿಯನ್ನೂ ರಾಷ್ಟ್ರೀಯ ತಾಂತ್ರಿಕ ಜ್ಞಾನವನ್ನು ಉತ್ತೇಜಿಸುವ ಸಲುವಾಗಿ ಕೆಲವು ರೀತಿಯ ವಿನಾಯಿತಿಗಳನ್ನೂ ನೀಡಲಾಗಿದೆ. ಅಂದಮೇಲೆ, ತೆರಿಗೆಯ ಪರಿಣಾಮಗಳು ಒಟ್ಟಿನಲ್ಲಿ ಸಾರ್ಥಕವಾಗುವ ರೀತಿಯಲ್ಲಿ ಅದನ್ನು ವಿಧಿಸಬೇಕೆಂಬುದೇ ಸರ್ಕಾರ ಅನುಸರಿಸಬೇಕಾದ ಸಾಮಾನ್ಯ ನೀತಿ ಎಂದು ಹೇಳಬಹುದಾಗಿದೆ.

ತೆರಿಗೆಯ ಸಾಧಕ ಬಾಧಕಗಳನ್ನು ಪರಿಗಣಿಸುವಾಗ, ತೆರಿಗೆಯ ಆಪಾತ (ಇನ್ಸಿಡೆನ್ಸ್), ಕಂಪನಿಗಳ ಬೆಳವಣಿಗೆಯ ಮೇಲೆ ಆಗುವ ಪರಿಣಾಮ, ತೆರಿಗೆಯಿಂದ ಸರ್ಕಾರಕ್ಕೆ ಬರುವ ಆದಾಯ ಮುಂತಾದ ಅಂಶಗಳನ್ನು ವಿಮರ್ಶಿಸಬೇಕು. ಕಾರ್ಪೊರೇಷನ್ ತೆರಿಗೆಭಾರ ಇತರರಿಗೆ ಪೂರ್ತಿಯಾಗಿ ಅಥವಾ ಭಾಗಶಃ ವರ್ಗವಾಗಬಹುದೆಂಬ ಒಂದು ಅಭಿಪ್ರಾಯ ಇದೆಯಾದರೂ ಸಾಮಾನ್ಯವಾಗಿ ಹಾಗೆ ಆಗುವುದಿಲ್ಲವೆಂಬುದು ಹೆಚ್ಚು ವ್ಯಾಪಕವಾಗಿ ವ್ಯಕ್ತವಾಗಿರುವ ಅಭಿಪ್ರಾಯ. ಹೆಚ್ಚು ಬೆಲೆಯ ಮೂಲಕ ಅನುಭೋಗಿಗಳಿಗೂ ಕಡಿಮೆ ಲಾಭಾಂಶದ ಮೂಲಕ ಷೇರುದಾರರಿಗೂ ಕಡಿಮೆ ಕೂಲಿದರದ ಮೂಲಕ ಕಾರ್ಮಿಕರಿಗೂ ಕಾರ್ಪೊರೇಷನ್‍ಗಳು ತಮ್ಮ ವರಮಾನದ ಮೇಲೆ ವಿಧಿಸಲಾಗುವ ತೆರಿಗೆಯನ್ನು ವರ್ಗಾಯಿಸುವುದು ಕಷ್ಟವಾದುದರಿಂದ ತೆರಿಗೆ ಭಾರ ಅವುಗಳ ಮೇಲೆಯೇ ಬೀಳುವುದೆಂದು ಹೇಳಬಹುದು. ಇದರ ಪರಿಣಾಮವಾಗಿ ಅವು ತಮ್ಮೊಡನೆ ಇಟ್ಟುಕೊಳ್ಳುವ ಲಾಭದ ಮೊತ್ತ ಕಡಿಮೆಯಾಗಿ ಅವುಗಳ ಆಂತರಿಕ ಬಂಡವಾಳ ವಿಸ್ತರಣೆಯ ಬಲ ಕುಗ್ಗಿದಂತಾಗುತ್ತದೆ. ಹೀಗೆ ಕಾರ್ಪೊರೇಷನ್‍ಗಳ ಆಂತರಿಕ ಹಣಬಲ ಕಡಿಮೆಯಾಗುವುದರಿಂದ ಈ ತೆರಿಗೆ ಕೈಗಾರಿಕಾ ಬಂಡವಾಳದ ವ್ಯಯಕ್ಕೆ ಕಾರಣವಾಗುವುದೇ ಎಂಬುದು ತೆರಿಗೆಯ ವಿಧಾನವನ್ನವಲಂಬಿಸಿದೆ. ತೆರಿಗೆ ವಿಧಿಸುವ ಉದ್ದೇಶದಿಂದ ಸಂಸ್ಥೆಯ ಒಟ್ಟು ವರಮಾನದಲ್ಲಿ ಬಂಡವಾಳ ಸವೆತದ ವೆಚ್ಚವನ್ನು ಕಳೆಯುವಾಗ ಯಂತ್ರ ಹಾಗೂ ಯಂತ್ರೋಪಕರಣಗಳ ಪುನಃಸ್ಥಾಪನೆಗೆ ತಗಲಬಹುದಾದ ಮೊಬಲಗನ್ನೂ ಗಣನೆಗೆ ತೆಗೆದುಕೊಂಡು ಅದನ್ನು ಕಳೆಯುವ ಏರ್ಪಾಡು ಇರುವುದಾದರೆ ಕಾರ್ಪೊರೇಷನ್ ತೆರಿಗೆಯಿಂದ ಕೈಗಾರಿಕಾ ಬಂಡವಾಳ ವ್ಯಯವಾಗುವ ಕಾರಣವಿರುವುದಿಲ್ಲ. ತೆರಿಗೆ ವಿಧಿಸದೆ ಆ ಹಣವನ್ನು ಸಂಸ್ಥೆಯಲ್ಲೇ ಇರಗೊಟ್ಟಿದ್ದರೆ ಅದು ವಿನಿಯೋಜನೆಯ (ಇನ್ವೆಸ್ಟ್‍ಮೆಂಟ್) ವಿಸ್ತರಣೆಗೆ ಒದಗಿ ಬರುತ್ತಿತ್ತೆಂದೂ ಇದನ್ನು ತೆರಿಗೆಯ ರೂಪದಲ್ಲಿ ಸರ್ಕಾರ ಪಡೆಯುವುದರಿಂದ ಅದಕ್ಕೆ ಅಡ್ಡಿಯಾಗುತ್ತಿದೆಯೆಂದೂ ವಾದಿಸಲಾಗಿದೆ. ಆದರೆ ಇತರ ತೆರಿಗೆಗಳಂತೆ ಕಾರ್ಪೊರೇಷನ್ ತೆರಿಗೆಯೂ ಸರ್ಕಾರದ ಒಟ್ಟು ಖರ್ಚಿಗೆ ಹಣ ಒದಗಿಸಲು ಸಹಾಯಕವಾಗಬೇಕೆಂಬುದಾಗಿ ನಿರೀಕ್ಷಿಸುವುದು ಅಸಹಜವಲ್ಲ. ತೆರಿಗೆಯ ರೂಪದಲ್ಲಿ ವಸೂಲಿಯಾದ ಹಣದ ಒಂದು ಭಾಗ–ಮುಖ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ–ಸರ್ಕಾರಿ ವಲಯದ ಉದ್ಯಮಗಳಲ್ಲಿ ವಿನಿಯೋಜನೆಗೆ ಒದಗಿಬರುವುದೆಂಬ ಅಂಶವೂ ಗಮನಾರ್ಹ. ಕಾರ್ಪೊರೇಷನ್ ವಲಯಕ್ಕೆ ಆದಾಯ ದೊರಕುವಂತೆ, ಸಮಾಜದಲ್ಲಿಯ ವರಮಾನಗಳ ಅಂತರ ತಗ್ಗುವಂತೆ, ಸರ್ಕಾರಕ್ಕೆ ಆದಾಯ ದೊರಕುವಂತೆ ಕಾರ್ಪೊರೇಷನ್ ತೆರಿಗೆಯನ್ನು ರೂಪಿಸಿದರೆ ಅದರಿಂದ ದುಷ್ಪರಿಣಾಮಗಳನ್ನು ನಿವಾರಿಸಿ, ದೇಶದ ಅರ್ಥ ವ್ಯವಸ್ಥೆಗೆ ಅನುಕೂಲವಾಗುವಂತೆ ಮಾಡುವುದು ವಿವೇಕಪೂರಿತ ಹಣಕಾಸು ನೀತಿಯೆನಿಸಿಕೊಳ್ಳುತ್ತದೆ.

ಆರ್ಥಿಕಾಭಿವೃದ್ಧಿಯೊಡನೆ ಕಾರ್ಪೊರೇಷನ್‍ಗಳೂ ಬೆಳೆಯುವುದರಿಂದ ಕಾರ್ಪೊರೇಷನ್ ತೆರಿಗೆಯ ವರಮಾನವೂ ಸಾಮಾನ್ಯವಾಗಿ ಆರ್ಥಿಕಾಭಿವೃದ್ಧಿಯೊಡನೆ ಹೆಚ್ಚುತ್ತ ಹೋಗುತ್ತದೆ. 1950ರ ದಶಕದ ವಾರ್ಷಿಕ ಸರಾಸರಿ ಲೆಕ್ಕದ ಪ್ರಕಾರ ಕಾರ್ಪೊರೇಷನ್ ತೆರಿಗೆಯಿಂದ ಸರ್ಕಾರಕ್ಕೆ ಸಂದಾಯವಾದ ಹಣ ಅಮೆರಿಕ, ಬ್ರಿಟನ್ ಇತ್ಯಾದಿ ಮುಂದುವರಿದ ದೇಶಗಳಲ್ಲಿ ಅವುಗಳ ರಾಷ್ಟ್ರೀಯ ವರಮಾನದ ಸುಮಾರು ಶೇಕಡ 5ರಷ್ಟಿತ್ತು. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಇದು ಶೇಕಡ 1ಕ್ಕೂ ಕಡಿಮೆಯಾಗಿತ್ತು. ಭಾರತದಲ್ಲಿ ಕಾರ್ಪೊರೇಷನ್ ತೆರಿಗೆಯ ಪ್ರಾಮುಖ್ಯ ಬೆಳೆಯುತ್ತಿದೆಯೆಂಬುದನ್ನು ಇದರಿಂದ ಸರ್ಕಾರಕ್ಕೆ ಸಂದಾಯವಾಗುತ್ತಿರುವ ಆದಾಯದಿಂದ ತಿಳಿಯಬಹುದು. 1937–38ರಲ್ಲಿ ಸರ್ಕಾರಕ್ಕೆ ಕೇವಲ ಸುಮಾರು ರೂ 2ಕೋಟಿ ವರಮಾನ ತರುತ್ತಿದ್ದ ಕಾರ್ಪೊರೇಷನ್ ತೆರಿಗೆ 1950ರ ದಶಕದಲ್ಲಿ ಸರಾಸರಿಯಲ್ಲಿ ವರ್ಷವೊಂದಕ್ಕೆ ರೂ 56 ಕೋಟಿಯನ್ನೂ 1961–66ರಲ್ಲಿ ರೂ 248 ಕೋಟಿಯನ್ನೂ 1966–70ರಲ್ಲಿ ವರ್ಷಕ್ಕೆ ಸುಮಾರು ರೂ 320 ಕೋಟಿಯನ್ನೂ–ಎಂದರೆ, ತೆರಿಗೆ ರೂಪದ ಒಟ್ಟು ವಾರ್ಷಿಕಾದಾಯದ ಸುಮಾರು ಶೇ. 14ರಷ್ಟನ್ನು–ದೊರಕಿಸಿಕೊಟ್ಟಿದೆ. ಸರ್ಕಾರದ ಅಭಿವೃದ್ಧಿ ಯೋಜನೆಗಳಿಗೆ ಬಂಡವಾಳವನ್ನು ಒದಗಿಸುವುದರಲ್ಲಿ ತೆರಿಗೆಯ ಪಾತ್ರವೂ ಮುಖ್ಯವಾಗಿರುವ ಇಂದು ಕಾರ್ಪೊರೇಷನ್ ತೆರಿಗೆ ಸಲ್ಲಿಸುತ್ತಿರುವ ಹಣಭಾಗ ಗಣನೀಯವಾದ್ದು. (ಎ.ಪಿ.ಎಸ್.)

**ವಿವಿಧ ದೇಶಗಳಲ್ಲಿ :** ಕಾರ್ಪೊರೇಷನ್ ತೆರಿಗೆಯನ್ನು ಮೊಟ್ಟಮೊದಲನೆಯ ಬಾರಿಗೆ 1840ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಪೆನ್ಸಿಲ್ವೇನಿಯ ರಾಜ್ಯದಲ್ಲಿ ಬಂಡವಾಳ–ಸ್ಕಂಧ ತೆರಿಗೆಯ ರೂಪದಲ್ಲಿ ಹಾಕಲಾಯಿತು. ಮುಂದೆ ಸಂಯುಕ್ತ ಸಂಸ್ಥಾನದ ಅನೇಕ ರಾಜ್ಯಗಳು ಪೆನ್ಸಿಲ್ವೇನಿಯವನ್ನು ಅನುಸರಿಸಿದುವು. 1920ರಲ್ಲಿ ಶೇ.10ರಷ್ಟಿದ್ದ ಈ ತೆರಿಗೆಯನ್ನು ಸರ್ಕಾರಗಳು ಕ್ರಮಕ್ರಮವಾಗಿ ಹೆಚ್ಚಿಸುತ್ತ ಬಂದಿವೆ. ಪ್ರತಿಯೊಬ್ಬ ಷೇರುದಾರನೂ ಕಂಪನಿಯಿಂದ ಲಾಭಾಂಶವನ್ನು ಪಡೆದಾಗ ಅ ಲಾಭಾಂಶದ ಮೇಲೂ ತೆರಿಗೆಯನ್ನು ಹಾಕ್ಕಿ ತನ್ನ ಆದಾಯವನ್ನು ಹೆಚ್ಚಿಸಿಕೊಂಡಿತು. ಇದಲ್ಲದೆ. ಕಂಪನಿ ಹಂಚದೆ ತನ್ನಲ್ಲಿಯೇ ಉಳಿಸಿಕೊಂಡ ಲಾಭಾಂಶದ ಮೇಲೂ ತೆರಿಗೆಯನ್ನು ಹಾಕಲು ಪ್ರಯತ್ನಪಟ್ಟಿತು.

ಬ್ರಿಟನಿನಲ್ಲಿ ಕಾರ್ಪೊರೇಷನ್ ತೆರಿಗೆಯನ್ನು ನಿಗದಿಪಡಿಸಿದ ಒಂದು ದರದಲ್ಲಿ ಹಾಕಲಾಗುವುದು. ಆದರೆ ಕಂಪನಿಯ ಷೇರುದಾರರು ಲಾಭಾಂಶ ರೂಪದಲ್ಲಿ ಪಡೆದ ಭಾಗದ ಮೇಲೆ ತೆರಿಗೆ ಕೊಡಬೇಕಾಗಿಲ್ಲ.

ಕಾರ್ಪೊರೇಷನ್ ತೆರಿಗೆಗೆ ಸಂಬಂಧಿಸಿದಂತೆ ಪ್ರತಿಯೊಂದು ರಾಷ್ಟ್ರವೂ ಎದುರಿಸಬೇಕಾದ ಪ್ರಶ್ನೆಗಳಲ್ಲಿ ಈ ತೆರಿಗೆಯನ್ನು ಕುರಿತದ್ದೂ ಒಂದು. ಪ್ರತಿಯೊಂದು ಕಂಪನಿಯೂ ತನ್ನ ಲಾಭಾಂಶದ ಮೇಲೆ ಒಂದು ನಿರ್ದಿಷ್ಟ ದರದಲ್ಲಿ ತೆರಿಗೆಯನ್ನು ಕೊಟ್ಟ ಮೇಲೆ ಮತ್ತು ತನ್ನ ಷೇರುದಾರರಿಗೆ ಲಾಭಾಂಶವನ್ನು ಹಂಚಿದಾಗ ಅವರು ಈ ವರಮಾನದ ಮೇಲೆ ಮತ್ತೆ ತೆರಿಗೆ ಕೊಡಬೇಕೇ ಎಂಬುದು ಪರಿಗಣಿಸಬೇಕಾದ ಪ್ರಶ್ನೆ. ಷೇರುದಾರರು ಕಂಪನಿಯ ಮಾಲೀಕರು. ಆದ್ದರಿಂದ ಅವರ ಪಾಲಿನ ಮೇಲೆ ಮತ್ತೆ ತೆರಿಗೆ ಹಾಕುವುದೆಂದರೆ ಒಂದೇ ವರಮಾನದ ಮೇಲೆ ಎರಡನೆಯ ಸಾರಿ ತೆರಿಗೆ ಹಾಕಿದಂತೆ. ಬ್ರಿಟನಿನಲ್ಲಿ ಷೇರುದಾರರು ತಮಗೆ ಬಂದ ಶಿಷ್ಟ ಲಾಭಾಂಶದ ಮೇಲೆ ತೆರಿಗೆ

ಕೊಡಬೇಕಾಗಿಲ್ಲ. ಕೆನಡ ಮತ್ತು ಅಮೆರಿಕಗಳು ಈ ದಿಕ್ಕಿನಲ್ಲಿ ಅನೇಕ ರಿಯಾಯಿತಿಗಳನ್ನು ತೋರಿಸುತ್ತ ಬಂದಿವೆ. ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ಬರತಕ್ಕ ಲಾಭದ ಪಾಲಿನ ಮೇಲೆ ಸಹ ಅನೇಕ ಸರ್ಕಾರಗಳು ತೆರಿಗೆ ಹಾಕುವ ಪದ್ಧತಿ ಇಟ್ಟುಕೊಂಡಿವೆ. ಸ್ವೀಡನ್ ಈ ಕ್ರಮ ಅನುಸರಿಸುವುದಿಲ್ಲ. ಫ್ರಾನ್ಸ್ ದೇಶ ಹೀಗೆ ಬಂದ ವರಮಾನದಲ್ಲಿ ಶೇ. 95ರಷ್ಟನ್ನೂ ಅಮೆರಿಕ ಸಂಯುಕ್ತಸಂಸ್ಥಾನ ಶೇ. 85ರಷ್ಟನ್ನೂ ತೆರಿಗೆ ವಿಧಿಸುವಂಥ ವರಮಾನವೆಂದೇ ಪರಿಗಣಿಸುವುದಿಲ್ಲ. ಭಾರತದಲ್ಲಿ ಅಂಥ ವರಮಾನದಲ್ಲಿ ಶೇ. 40 ರಷ್ಟರ ಮೇಲೆ ತೆರಿಗೆ ಹಾಕಲಾಗುತ್ತದೆ.

ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಕಾರ್ಪೊರೇಷನ್ ತೆರಿಗೆಯನ್ನು ಒಂದೇ ನಿರ್ದಿಷ್ಟ ದರದಲ್ಲಿ ಹಾಕಲಾಗುತ್ತದೆ. ವಿಶ್ವದ ಸುಮಾರು 150 ರಾಷ್ಟ್ರಗಳ ಪೈಕಿ 143 ರಾಷ್ಟ್ರಗಳಲ್ಲಿ ತೆರಿಗೆಯ ದರ ಶೇ. 50ಕ್ಕಿಂತ ಹೆಚ್ಚಿಲ್ಲ.

ಕಾರ್ಪೊರೇಷನ್ ತೆರಿಗೆಯ ದರಕ್ಕಿಂತ ವ್ಯಕ್ತಿ ವರಮಾನ ತೆರಿಗೆಯ ದರ ಅಧಿಕವಾಗಿದ್ದಾಗ ವ್ಯಕ್ತಿಗಳು ತೆರಿಗೆ ತಪ್ಪಿಸಿಕೊಳ್ಳಲು ಅವಕಾಶವುಂಟು. ಕಂಪನಿ ತನ್ನ ಷೇರುದಾದರಲ್ಲಿ ಹಂಚಬಹುದಾದ ಲಾಭವನ್ನೆಲ್ಲ ಹಂಚದೆ, ಅದನ್ನು ಸಂಚಿತ ನಿಧಿಗೆ ವರ್ಗಾಯಿಸುತ್ತ ಹೋಗಬಹುದು. ಇದರಿಂದ ತಾತ್ಕಾಲಿಕವಾಗಿ ಷೇರುದಾರರ ವರವಾನ ಕಡಿಮೆಯಾಗುವುದಾದರೂ ಮುಂದೆ ಅವರು ಬೇರೊಂದು ರೂಪದಲ್ಲಿ ಆ ಲಾಭವನ್ನು ಪಡೆಯಬಹುದು. ಈ ರೀತಿ ತೆರಿಗೆ ತಪ್ಪಿಸಿಕೊಳ್ಳದಂತೆ ತಡೆಗಟ್ಟುವ ಉದ್ದೇಶದಿಂದ ಕೂಡಿಬಂದ ಲಾಭದ ಮೇಲೂ ತೆರಿಗೆಗೆ ಅನೇಕ ರಾಷ್ಟ್ರಗಳು ಮುಂದಾಗಿವೆ. ಅದರಲ್ಲಿ ಭಾರತವೂ ಒಂದು.

ಅಂತಾರಾಷ್ಟ್ರೀಯ ವ್ಯಾಪ್ತಿಯುಳ್ಳ ಕಂಪನಿಗಳು ಯಾವ ಯಾವ ದೇಶಗಳಲ್ಲಿ ಎಷ್ಟೆಷ್ಟು ಲಾಭಗಳಿಸುತ್ತವೆಯೋ ಅಷ್ಟಷ್ಟರ ಮೇಲೆ ಮಾತ್ರವೇ ಆಯಾ ದೇಶಗಳ ಸರ್ಕಾರಗಳಿಗೆ ತೆರಿಗೆ ಕೊಡಬೇಕೆಂಬ ತತ್ತ್ವಕ್ಕೆ ಅನೇಕ ರಾಷ್ಟ್ರಗಳು ಮನ್ನಣೆ ನೀಡಿವೆ. (ಕೆ.ಜಿ.ಆರ್.)

**ಕಾರ್ಪೊರೇಷನ್ ಬ್ಯಾಂಕ್ :** ಕರ್ನಾಟಕದ ಹಿಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಹಳೆಯ ಬ್ಯಾಂಕಿಂಗ್ ಸಂಸ್ಥೆಯಾಗಿರುವ ಹಾಗೂ ಭಾರತದ ಅತ್ಯಂತ ಹಳೆಯ ಬ್ಯಾಂಕುಗಳಲ್ಲೊಂದಾಗಿರುವ ಕಾರ್ಪೊರೇಷನ್ ಬ್ಯಾಂಕ್, 1906ರಲ್ಲಿ ಉಡುಪಿಯಲ್ಲಿ ಸ್ಥಾಪಿಸಲ್ಪಟ್ಟಿತು. ಆ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನ ಅನಂತರದ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದ ಉಡುಪಿಯಲ್ಲಿ ಯಾವುದೇ ಬ್ಯಾಂಕಿಂಗ್ ಸೌಲಭ್ಯವಿಲ್ಲದೆ ಇಂತಹ ಒಂದು ಬ್ಯಾಂಕ್ ಸ್ಥಾಪನೆಯ ಆವಶ್ಯಕತೆಯು ಬಹಳವಾಗಿದ್ದಿತು. ಸ್ಥಳೀಯ ಬ್ಯಾಂಕಿಂಗ್ ವ್ಯವಸ್ಥೆಯು ಹೆಚ್ಚಾಗಿ ಕೆಲವು ಶ್ರೀಮಂತ ಖಾಸಗಿ ವ್ಯಕ್ತಿಗಳ ಕೈಯಲ್ಲಿದ್ದು ಜನಸಾಮಾನ್ಯರಿಗೆ ಅವರ ಕಪಿಮುಷ್ಟಿಯಿಂದ ಬಿಡುಗಡೆ ಒದಗಿಸಲು ಏನನ್ನಾದರೂ ಮಾಡಬೇಕಿತ್ತು. ಜಿಲ್ಲೆಯಲ್ಲಿ ಸ್ಥಾಪಿತವಾದ ಆಧುನಿಕ ಬ್ಯಾಂಕಿನ ಪ್ರಥಮ ಶಾಖೆಯೆಂದರೆ ಮುಖ್ಯವಾಗಿ ತೋಟಗಾರಿಕಾ ಉತ್ಪನ್ನಗಳ ರಫ್ತು ವ್ಯವಹಾರದಲ್ಲಿ ತೊಡಗಿದ್ದ ಕೆಲವು ಬ್ರಿಟಿಷ್ ಸಂಸ್ಥೆಗಳ ವ್ಯಾಪಾರದ ಅಗತ್ಯಗಳನ್ನು ಪೂರೈಸಲು 1868ರಲ್ಲಿ ಮಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟ ಮೂರು ಪ್ರೆಸಿಡೆನ್ಸಿ ಬ್ಯಾಂಕುಗಳಲ್ಲೊಂದಾಗಿದ್ದ ಬ್ಯಾಂಕ್ ಆಫ್ ಮದ್ರಾಸ್‌ನ ಶಾಖೆಯಾಗಿದ್ದಿತು. ಉಡುಪಿಯಲ್ಲಿ ಬ್ಯಾಂಕಿಂಗ್ ನಡೆಸಲು ಹದಿನೈದು ದಿನಗಳಿಗೊಂದಾವರ್ತಿ ಈ ಬ್ಯಾಂಕಿನ ಏಜೆಂಟ್ ಕರಾವಳಿ ಮಾರ್ಗವಾಗಿ ಮಂಗಳೂರಿನಿಂದ ಉಡುಪಿಗೆ ಬರಬೇಕಾದರೆ ನಾಲ್ಕು ನದಿಗಳನ್ನು ದಾಟಬೇಕಾಗಿತ್ತು. ಹಣದ ರವಾನೆಯನ್ನು ಕೇವಲ ಅಂಚೆ ಮಾಧ್ಯಮದ ಮೂಲಕವೇ ಮಾಡಬೇಕಿತ್ತು. ಈ ಕೊರತೆಗಳನ್ನು ನಿವಾರಿಸಲು ಮತ್ತು ಜಿಲ್ಲೆಗೆ ಹಾಗೂ ವಿಶೇಷವಾಗಿ ಉಡುಪಿಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಲು ಖಾನ್ ಬಹಾದುರ್ ಹಾಜಿ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬ್ ಬಹಾದೂರ್‌ರವರ ನೇತೃತ್ವದಲ್ಲಿ ಉದಾರ ಮನೋಭಾವದ ಜನೋಪಕಾರಿ ಸಧ್ಗೃಹಸ್ಥರ ಗುಂಪೊಂದು ಈ ಸಂಸ್ಥೆಯನ್ನು ಆರಂಭಿಸುವ ಸಾಹಸ ಮಾಡಿತು. ಅವರಿಗೆ ಸ್ಫೂರ್ತಿ ನೀಡಿದ್ದು 19ನೆಯ ಫೆಬ್ರವರಿ 1906ರಂದು ಸ್ಥಾಪಕರು ಸಾರ್ವಜನಿಕರಿಗೆ ಮಾಡಿದ ಮನವಿಯಲ್ಲಿ ನಿರೂಪಿಸಿದಂತಹ ಸ್ವದೇಶೀಯತೆಯ ಕೆಚ್ಚು. ಕಾರ್ಪೊರೇಷನ್ ಬ್ಯಾಂಕಿನ ಸ್ಥಾಪಕ ಅಧ್ಯಕ್ಷರಾದ ಖಾನ್ ಬಹಾದುರ್ ಹಾಜಿ ಅಬ್ದುಲ್ಲ ಹಾಜಿ ಸಾಹೇಬ್ ಬಹಾದೂರ್‌ರವರು ದಖನಿ ಮುಸ್ಲಿಮರಾಗಿದ್ದು, ಅವರ ಕುಟುಂಬದವರು ದಖನ್ ಪ್ರದೇಶದಿಂದ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಗೆ ವಲಸೆ ಬಂದವರಾಗಿದ್ದರು. ಅವರ ಕುಟುಂಬದವರು ದಕ್ಷಿಣ ಕನ್ನಡದಲ್ಲಿ ಕಾರ್ಕಳ ಮತ್ತು ಉಡುಪಿಗಳಲ್ಲಿ ವಿಶಾಲವಾದ ಕೃಷಿಭೂಮಿಯ ಮಾಲಿಕತ್ವವನ್ನು ಹೊಂದಿದ್ದರೆಂದು ದಾಖಲೆಗಳು ಹೇಳುತ್ತವೆ. ಅಬ್ದುಲ್ಲ ಸಾಹೇಬರು ಓರ್ವ ವ್ಯಾಪಾರಿಯೂ ಆಗಿದ್ದು ಸಂಪೂರ್ಣ ಮದ್ರಾಸ್ ಪ್ರಾಂತ್ಯದಲ್ಲಿ ವಿಮ್‌ಕೊ ಬೆಂಕಿಪೆಟ್ಟಿಗೆಗಳ ಏಕೈಕ ವಿತರಣಾದಾರರಾಗಿದ್ದರು. ಅವರು ಒಣ ಹಣ್ಣುಹಂಪಲುಗಳ ವ್ಯಾಪಾರವನ್ನು ಮಾಡುತ್ತಿದ್ದರು. ಅವರು ಸ್ಥಳೀಯರ ಆವಶ್ಯಕತೆಗಳನ್ನು ಪೂರೈಸುವಂತಹ ಒಂದು ಹಣಕಾಸು ಸಂಸ್ಥೆಯನ್ನು ಹುಟ್ಟುಹಾಕುವ ಪ್ರಕ್ರಿಯೆಗೆ ಚಾಲನೆ ನೀಡಿ 1906ರಲ್ಲಿ 'ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಉಡುಪಿ) ಲಿಮಿಟೆಡ್' ಅನ್ನು ಸ್ಥಾಪಿಸಿದರು. ಮುಂದೆ ಇದು ಕಾರ್ಪೊರೇಷನ್ ಬ್ಯಾಂಕ್ ಎಂದು ಪುನರ್ನಾಮಕರಣಗೊಂಡಿತು. ಹಾಜಿ ಅಬ್ದುಲ್ಲರವರು ಎಸ್.ಎಸ್.ಎಲ್.ಸಿ.ಯ ತನಕ ಕಲಿತಿದ್ದರೆಂದು ಪ್ರತೀತಿ. ಸಾಕಷ್ಟು ಓದಿಕೊಂಡಿದ್ದ ಅವರು, ಜಿಲ್ಲೆಯ ಅಭಿವೃದ್ಧಿಯಲ್ಲಿ ಆಳವಾದ ಆಸಕ್ತಿಯನ್ನು ಹೊಂದಿ ಅದರಲ್ಲಿ ಸಕ್ರಿಯರಾಗಿದ್ದರು. ಮತ್ತು ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದರು. ಅವರು 1929ರ ತನಕ ಕಾರ್ಪೊರೇಷನ್ ಬ್ಯಾಂಕಿನ ಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 12 ಆಗಸ್ಟ್ 1935ರಂದು ಕೇವಲ 53 ವರ್ಷ ವಯಸ್ಸಿನಲ್ಲಿ ಅವರು ಕೊನೆಯುಸಿರೆಳೆದರು.

ರೂ. 5,000/–ದ ಆರಂಭಿಕ ಬಂಡವಾಳ ಮತ್ತು ಪ್ರಥಮ ದಿನಾಂತ್ಯಕ್ಕೆ 38 ರೂ. 13 ಆಣೆ ಮತ್ತು 2 ಪೈಸೆಗಳ ವ್ಯವಹಾರದೊಡನೆ "ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಉಡುಪಿ) ಲಿಮಿಟೆಡ್" ಒಂದು ಸಣ್ಣ ನಿಧಿಯ ರೂಪದಲ್ಲಿ ಕಾರ್ಯಾಚರಣೆ ಆರಂಭಿಸಿತು. ಆರಂಭದ ಪ್ರಥಮ ದಶಕಾಂತ್ಯಕ್ಕೆ ಬ್ಯಾಂಕಿನ ಈರ್ವರು ಸ್ಥಾಪಕ ನಿರ್ದೇಶಕರಾದ ಸುಜೀರ್ ಆನಂದರಾವ್ ಮತ್ತು ಬೈಂದೂರ್ ನಾರಾಯಣರಾವ್‌ರವರ ಅವಿಶ್ರಾಂತ ಪ್ರಯತ್ನಗಳ ಫಲಸ್ವರೂಪವಾಗಿ ಸಂಗ್ರಹಿತವಾದ 396 ಶಾಶ್ವತ ಷೇರುಗಳು ಬ್ಯಾಂಕಿಂಗ್‌ಗೆ ಸದೃಢವಾದ ಅಡಿಪಾಯವನ್ನೊದಗಿಸಿದವು.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿ., ನ ಸ್ಥಾಪನೆಯು ಸಹಕಾರಿ ಬ್ಯಾಂಕ್‌ಗೆ ವಹಿವಾಟಿಗೆ ಮತ್ತು ಜಿಲ್ಲೆಯ ಇತರೆಡೆಗಳಲ್ಲಿ ವ್ಯವಸ್ಥಿತ ಬ್ಯಾಂಕಿಂಗ್‌ಗೆ ಉತ್ತೇಜನ ನೀಡಿದ್ದಂತೂ ನಿಜ. 1909 ಮತ್ತು 1917ರ ಮಧ್ಯಾವಧಿಯಲ್ಲಿ ಆರು ಸಹಕಾರಿ ಬ್ಯಾಂಕುಗಳು ಅಸ್ತಿತ್ವಕ್ಕೆ ಬಂದವು ಮತ್ತು ಒಂದನೆಯ ಮಹಾಯುದ್ಧಾನಂತರದ (1914–18) ಮೊದಲನೆಯ ದಶಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಸುಮಾರು ಎಂಟು ಬ್ಯಾಂಕುಗಳಿಗೆ ಜನ್ಮ ನೀಡಿತು. ಎರಡು ಮಹಾಯುದ್ಧಗಳು, ಆರ್ಥಿಕ ಕುಸಿತ ಮತ್ತು ತೀವ್ರ ಸ್ಪರ್ಧೆಯ ನಡುವೆಯೂ ಈ ಬ್ಯಾಂಕು ಉಳಿದುಕೊಂಡದ್ದೇ ಅಲ್ಲದೆ ತೃಪ್ತಿಕರವಾದ ಪ್ರಗತಿಯನ್ನೂ ಸಾಧಿಸಿದುದು ಸ್ತುತ್ಯರ್ಹ.

ಉಡುಪಿಯಲ್ಲಿ ಬೇರುಬಿಟ್ಟ ಈ ಬ್ಯಾಂಕ್, ತನ್ನ ಪ್ರಥಮ ಶಾಖೆಯನ್ನು 1923ರಲ್ಲಿ ಕುಂದಾಪುರದಲ್ಲಿ ತೆರೆಯಿತು. ಬ್ಯಾಂಕಿನ ಎರಡನೆಯ ಶಾಖೆಯು ಮಂಗಳೂರಿನ ರಥಬೀದಿಯಲ್ಲಿ 1926ರಲ್ಲಿ ತೆರೆಯಲ್ಪಟ್ಟಿತು. 1934ರಲ್ಲಿ ಮಡಿಕೇರಿಯಲ್ಲಿ ತನ್ನ ಏಳನೆಯ ಶಾಖೆಯನ್ನು ಆರಂಭಿಸುವ ಮೂಲಕ ಬ್ಯಾಂಕು ಕೊಡಗು ಜಿಲ್ಲೆಯಲ್ಲಿ ಕಾಲೂರಿತು. 1936ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ 1934ನೆಯ ನಿಬಂಧನೆಯ ಎರಡನೆಯ ಅನುಬಂಧದಲ್ಲಿ ಸೇರಿಸಲ್ಪಟ್ಟಿತು. 1939ರಲ್ಲಿ ಬ್ಯಾಂಕಿನ ಹೆಸರನ್ನು 'ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಉಡುಪಿ) ಲಿಮಿಟೆಡ್' ನಿಂದ 'ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿ.,' ಎಂದು ಬದಲಾಯಿಸಲಾಯಿತು.

1945ರಲ್ಲಿ ಬ್ಯಾಂಕಿನ ಒಟ್ಟು ಶಾಖೆಗಳ ಸಂಖ್ಯೆ 28ಕ್ಕೇರಿದಾಗ, ಬ್ಯಾಂಕು ಪ್ರಾದೇಶಿಕ ಬ್ಯಾಂಕಾಗಿ ಪರಿವರ್ತಿತವಾಯಿತು. 1954ರಲ್ಲಿ ದೇಶದಲ್ಲಿಯೇ ಮೂರನೆಯ ಬ್ಯಾಂಕಾಗಿ ಇದು ಒಂದು ಅನುಸೂಚಿತ ಬ್ಯಾಂಕ್ ಎಂದು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪರವಾನಗಿಯನ್ನು ಪಡೆದುಕೊಂಡಿತು. 1961ರಲ್ಲಿ 'ಬ್ಯಾಂಕ್ ಆಫ್ ಸಿಟಿಜನ್ಸ್, ಬೆಳಗಾಂ' ಅನ್ನು ತನ್ನೊಳಗೆ ಸೇರಿಸಿಕೊಂಡಿತು. ಅದೇ ವರ್ಷ ಬ್ಯಾಂಕಿನ ಆಡಳಿತ ಕಛೇರಿಯು ಉಡುಪಿಯಿಂದ ಮಂಗಳೂರಿಗೆ ವರ್ಗಾಯಿಸಲ್ಪಟ್ಟಿತು.

1972ರಲ್ಲಿ ಎರಡನೆಯ ಸಲ ಬ್ಯಾಂಕಿನ ಹೆಸರನ್ನು 'ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್' ಎಂದು ಪರಿವರ್ತಿಸಲಾಯಿತು. 1973ರಲ್ಲಿ ಬ್ಯಾಂಕು ವಿದೇಶೀ ವಿನಿಮಯ ವ್ಯವಹಾರದ ಕ್ಷೇತ್ರವನ್ನು ಪ್ರವೇಶಿಸಿತು. 1976ರಲ್ಲಿ ಬ್ಯಾಂಕು ತನ್ನ ಅಮೃತ ಮಹೋತ್ಸವವನ್ನು ಆಚರಿಸಿತು. ಮತ್ತು ಈ ಸಂದರ್ಭದಲ್ಲಿ ಅದರ ನೂತನ ಆಡಳಿತ ಕಛೇರಿಯು ಮಂಗಳೂರಿನ ಪಾಂಡೇಶ್ವರದಲ್ಲಿ ಉದ್ಘಾಟನೆಗೊಂಡಿತು. 1980ರಲ್ಲಿ ಖಾಸಗಿ ವಲಯದ ಇತರ 5 ಬ್ಯಾಂಕುಗಳೊಂದಿಗೆ ಈ ಬ್ಯಾಂಕು ರಾಷ್ಟ್ರೀಕೃತವಾಯಿತು.

ರಾಷ್ಟ್ರೀಕರಣದ ನಂತರ ಬ್ಯಾಂಕು ತ್ವರಿತಗತಿಯಲ್ಲಿ ಬೆಳೆಯಿತು ಮತ್ತು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿತು. ತಂತ್ರಜ್ಞಾನವನ್ನು ಮೊದಲಾಗಿ ಅಳವಡಿಸಿದ ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲೊಂದಾಗಿ 1989ರಷ್ಟು ಹಿಂದೆಯೇ ತನ್ನ ಸಾಂಸ್ಥಿಕ ಕಛೇರಿಯಲ್ಲಿ ಸ್ಥಳೀಯ ಸಂಪರ್ಕ ಜಾಲ(ಲ್ಯಾನ್)ವನ್ನು ಅಳವಡಿಸಿದ ಅಗ್ಗಳಿಕೆ ಈ ಬ್ಯಾಂಕಿನದು. ಅತ್ಯಾಧುನಿಕ ತಂತ್ರಜ್ಞಾನದಲ್ಲಿ ತ್ವರಿತ ಮುನ್ನಡೆಯನ್ನು ಸಾಧಿಸಲು ಇದು ದಾರಿಯಾಯಿತು. ಈ ಅವಧಿಯುದ್ದಕ್ಕೂ ಕಾರ್ಪೊರೇಷನ್ ಬ್ಯಾಂಕ್ "ಸರ್ವೇ ಜನಾಃ ಸುಖಿನೋ ಭವಂತು" ಎಂಬ ತನ್ನ ಧ್ಯೇಯವಾಕ್ಯಕ್ಕೆ ನಿಷ್ಠವಾಗಿಯೇ ನಡೆದುಕೊಂಡಿತು. ಸ್ಥಾಪನೆಯಾದಂದಿನಿಂದ 99 ವರ್ಷಗಳ ದೀರ್ಘಾವಧಿಯಲ್ಲಿ ನಿರಂತರವಾಗಿ ಲಾಭಾಂಶವನ್ನು ನೀಡುತ್ತಾ ಬಂದಿರುವುದು ಬ್ಯಾಂಕಿನ ಒಂದು ಸಾಧನೆಯಾಗಿದೆ. ಇಂದು ತನ್ನ ಅತ್ಯಾಧುನಿಕ ತಂತ್ರಜ್ಞಾನ – ಆಧಾರಿತ ಉತ್ಪನ್ನಗಳು ಮತ್ತು ಸೇವೆಗಳು ಹಾಗೂ ದೇಶಾದ್ಯಂತ ಹಬ್ಬಿರುವ ಶಾಖೆಗಳು ಮತ್ತು ಎಟಿಎಂಗಳಿಂದ ಕಾರ್ಪೊರೇಷನ್ ಬ್ಯಾಂಕ್ ದೇಶದ ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲಿ ಮಹತ್ತ್ವಪೂರ್ಣ ಸ್ಥಾನವನ್ನು ಪಡೆದಿದೆ.

ಹಣಕಾಸು ಕ್ಷೇತ್ರದಲ್ಲಿ ಕಾರ್ಪೊರೇಷನ್ ಬ್ಯಾಂಕ್ ಉತ್ತುಂಗ ಸಾಧನೆಯನ್ನು ಮೆರೆಯುತ್ತ ತ್ವರಿತಗತಿಯಲ್ಲಿ ಮನ್ನಡೆಯುತ್ತಿದೆ.

- ಡಿಸೆಂಬರ್ 2004ರಲ್ಲಿ ರೂ. 40,541 ಕೋಟಿಗಳಷ್ಟಿದ್ದ ಬ್ಯಾಂಕಿನ ಒಟ್ಟು ವ್ಯವಹಾರವು 31 ಡಿಸೆಂಬರ್ 2005ರಂದು ರೂ. 51,787 ಕೋಟಿಗಳಿಗೇರಿ 27.7 ಶೇಕಡ ಹೆಚ್ಚಳವನ್ನು ಸಾಧಿಸಿತು.
- 31 ಡಿಸೆಂಬರ್ 2004ರಂದು ರೂ. 24,175 ಕೋಟಿಗಳಷ್ಟಿದ್ದ ಬ್ಯಾಂಕಿನ ಒಟ್ಟು ಠೇವಣಿಗಳು ರೂ. 29,702 ಕೋಟಿಗಳಿಗೇರಿ 22.86 ಶೇಕಡ ವೃದ್ಧಿ ದಾಖಲಿಸಿದವು.
- 31.12.2004ರಂದು ರೂ. 16,366 ಕೋಟಿಗಳಷ್ಟಿದ್ದ ಮುಂಗಡಗಳು 31.12.2005ರಂದು ರೂ. 22,084 ಕೋಟಿಗಳಷ್ಟಾಗಿ 34.9 ಶೇಕಡದಷ್ಟು ಗಮನಾರ್ಹ ಪ್ರಗತಿಯನ್ನು ದಾಖಲಿಸಿದವು.
- ಆದ್ಯತಾ ರಂಗಗಳ ಸಾಲಗಳು ಮಾರ್ಚ್ 2005ರ ಮಟ್ಟದಲ್ಲಿ 20 ಶೇಕಡ ಹೆಚ್ಚಳವನ್ನು ದಾಖಲಿಸಿ ರೂ. 7792 ಕೋಟಿಗಳಷ್ಟಾದವು. ಡಿಸೆಂಬರ್ 2005ರ ಕೊನೆಯ ಶುಕ್ರವಾರದಂದು ಆದ್ಯತಾ ರಂಗಗಳಿಗೆ ನೀಡಿದ ಸಲಗಳು ನಿವ್ವಳ ಮುಂಗಡಗಳ 42.32 ಶೇಕಡದಷ್ಟಾಗಿದ್ದವು. ಪ್ರಸಕ್ತ ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳುಗಳಲ್ಲಿ ಕೃಷಿಗೆ ನೀಡಿದ ಸಾಲುಗಳು 32 ಶೇಕಡದಷ್ಟು ವೃದ್ಧಿಸಿದರೆ, ಸಣ್ಣ ಕೈಗಾರಿಕೆಗಳಿಗೆ ನೀಡಿದ ಸಾಲಗಳು 26 ಶೇಕಡದಷ್ಟು ಹೆಚ್ಚಳ ಸಾಧಿಸಿದವು.
- ಬಂಡವಾಳ ಪರ್ಯಾಪ್ತತೆಯ ಅನುಪಾತವು ಡಿಸೆಂಬರ್ 2004ರಲ್ಲಿ 20.27 ಶೇಕಡದಷ್ಟಿದ್ದದ್ದು 31 ಮಾರ್ಚ್ 2005ರಂದು 16.23 ಶೇಕಡದಷ್ಟಾಗಿ 31 ಡಿಸೆಂಬರ್ 2005ರಂದು 14.91 ಶೇಕಡದ ತೃಪ್ತಿಕರ ಮಟ್ಟವನ್ನು ತಲಪಿತು.
- 31 ಡಿಸೆಂಬರ್ 2004ರಂದು 4.45 ಶೇಕಡದಷ್ಟಿದ್ದ ಒಟ್ಟು ಅನುತ್ಪಾದಕ ಆಸ್ತಿಗಳು 3.02 ಶೇಕಡದಷ್ಟು ಇಳಿದರೆ, 31.12.2004ರಂದು 1.49 ಶೇಕಡದಷ್ಟಿದ್ದ ನಿವ್ವಳ ಅನುತ್ಪಾದಕ ಆಸ್ತಿಗಳು 31.12.2005ರಂದು 0.80 ಶೇಕಡಕ್ಕೆ ಜಾರಿತು. 31.12.2005ರಂದು ಮುಕ್ತಾಯಗೊಂಡ ಒಂಬತ್ತು ತಿಂಗಳುಗಳ ಅವಧಿಗೆ ರೂ. 153 ಕೋಟಿಗಳನ್ನು ಅನುತ್ಪಾದಕ ಆಸ್ತಿಗಳಿಂದಾಗಿ ತೆಗೆದಿರಿಸಲಾಗಿದ್ದರೆ, ಅದರ ಹಿಂದಿನ ವರ್ಷ ಅಷ್ಟೇ ಅವಧಿಗೆ ರೂ. 78 ಕೋಟಿಗಳನ್ನು ತೆಗೆದಿರಿಸಲಾಗಿತ್ತು.

**ಠೇವಣಿ ಸೌಲಭ್ಯಗಳು**

**ಉಳಿತಾಯ ಖಾತೆ :** ಕಾರ್ಪೊರೇಷನ್ ಬ್ಯಾಂಕಿನಲ್ಲಿ ಒಂದು ಉಳಿತಾಯ ಖಾತೆ ತೆರೆದರೆ ಕಾರ್ಪ್ ಕನ್ವೀನಿಯನ್ಸ್ ಇಂಟರ್‌ನ್ಯಾಷನಲ್ ಡೆಬಿಟ್/ಎ.ಟಿ.ಎಂ. ಕಾರ್ಡು ದೊರೆಯುತ್ತದೆ. ಉಚಿತವಾಗಿ ಇಂಟರ್‌ನೆಟ್ ಮೂಲಕ ನಿಮ್ಮ ಖಾತೆಯಲ್ಲಿ ವ್ಯವಹರಿಸುವ ಸೌಲಭ್ಯ, ಟೆಲಿಫೋನ್‌ನಲ್ಲಿ ದಿನದ ಯಾವ ಸಂದರ್ಭದಲ್ಲೂ ಖಾತೆಯ ಬಗ್ಗೆ ವಿವರಗಳನ್ನು ಪಡೆಯಲು ಕಾರ್ಪ್ ಡಯಲ್ ಸೌಲಭ್ಯವೂ ದೊರೆಯುತ್ತದೆ. ಕಾರ್ಪ್ ಕನ್ವೀನಿಯನ್ಸ್ ಕಾರ್ಡ್ ಹೊಂದುವುದೊಂದಿಗೆ ನಿಮಗೆ ವೈಯುಕ್ತಿಕ ಅಪಘಾತ ವಿಮೆಯ 1 ಲಕ್ಷದ ವ್ಯಾಪ್ತಿ ದೊರೆಯುವುದಲ್ಲದೆ, ಕಾರ್ಪ್ ಬ್ಯಾಂಕಿನ ಉಳಿತಾಯ ಖಾತೆಯ ಪ್ರತಿ ಗ್ರಾಹಕರಿಗೂ 1 ಲಕ್ಷ ರೂ.ಗಳ ವ್ಯಾಪ್ತಿಯುಳ್ಳ ಕನಿಷ್ಠ ಪ್ರೀಮಿಯಂ ಉಳ್ಳ ವಿಶಿಷ್ಟ ಜೀವ ವಿಮಾ ಪಾಲಿಸಿಯ ಲಾಭವೂ ದೊರೆಯುತ್ತದೆ.

**ಸಾಲಸೌಲಭ್ಯಗಳು**

**ಕಾಪ್ ಹೋಮ್ (ಕಾರ್ಪ್ ಜೀವನ ಗೃಹ ರಕ್ಷಾ ಸಹಿತ) :** ಹೊಸಮನೆ ಕಟ್ಟಲು, ಹಳೆಯದನ್ನು ನವೀಕರಿಸಲು, ವಿಸ್ತರಿಸಲು, ಬ್ಯಾಂಕಿಂಗ್ ಕ್ಷೇತ್ರದಲ್ಲೇ ಅತ್ಯುತ್ತಮವಾದ ಕೊಡುಗೆ. ಈ ಗೃಹಸಾಲ ಯೋಜನೆಯಲ್ಲಿ ಸರಳ, ಸುಲಭ, ಕಾರ್ಪ್ ಜೀವನ ಗೃಹ ರಕ್ಷಾ ಎಂಬ ಏಕ ಕಂತಿನ ಗುಂಪು ಜೀವ ವಿಮಾ ಸೌಲಭ್ಯವೂ ದೊರೆಯುತ್ತದೆ.

**ಕಾರ್ಪ್ ಫ್ಲೆಕ್ಸಿ :** ಸಮಾನ ಕಂತುಗಳ ಬದಲು ಸಣ್ಣ ಕಂತುಗಳಿಂದ ಪ್ರಾರಂಭವಾಗಿ ಉತ್ತರೋತ್ತರ ಅಧಿಕಗೊಳ್ಳುವ ಕಂತುಗಳ ಗೃಹಸಾಲ. **ಕಾರ್ಪ್ ಮೊಬೈಲ್ :** ಸ್ಪರ್ಧಾತ್ಮಕ ಬಡ್ಡಿದರ, ಕಡಿಮೆ ಮೊತ್ತದ ಕಂತುಗಳ ವ್ಯವಸ್ಥೆಯುಳ್ಳ ಅತ್ಯುತ್ತಮವಾದ ವಾಹನ (ದ್ವಿಚಕ್ರ, ಚತುಶ್ಚಕ್ರ) ಸಾಲ ಯೋಜನೆ.

**ಕಾರ್ಪ್ ಪ್ರೊಫೆಷನಲ್ :** ವೃತ್ತಿನಿರತ ವೈದ್ಯ/ಎಂಜಿನಿಯರ್/ವಕೀಲರಿಗಾಗಿ ಹೊಸ ಕ್ಲಿನಿಕ್, ಚಿಕಿತ್ಸಾಲಯ, ಕಛೇರಿ ಹೊಂದಲು ಸುಲಭ ದರಗಳ ಸಾಲ ಯೋಜನೆ.

**ಕಾರ್ಪ್ ಮೆಡಿಟೆಕ್ :** ವೈದ್ಯಕೀಯ ಬಳಕೆಗಾಗಿ ಹಾರ್ಡ್‌ವೇರ್ ಸಾಫ್ಟ್‌ವೇರ್ ಸಹಿತ, ಆಧುನಿಕ ಪರಿಕರಗಳ ಖರೀದಿಗೆ ಸಾಲಯೋಜನೆ.

**ಕಾರ್ಪ್ ವಿದ್ಯಾ :** ವಿದ್ಯಾರ್ಥಿಗಳಿಗೆ ದೇಶದೊಳಗೆ ಅಥವಾ ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಸಾಲ ಸೌಲಭ್ಯ, ಶುಲ್ಕ, ಪುಸ್ತಕ, ಉಪಕರಣ, ಕಂಪ್ಯೂಟರ್, ಅಧ್ಯಯನ ಸಾಮಗ್ರಿ, ಪ್ರೊಜೆಕ್ಟ್ ವೆಚ್ಚ ಮತ್ತು ಪ್ರಯಾಣ ಖರ್ಚುಗಳಿಗೆ ನೆರವು. ಭಾರತದಲ್ಲಿ 7.5 ಲಕ್ಷ ಮತ್ತು ದೇಶದ ಹೊರಗೆ ಅಧ್ಯಯನಕ್ಕೆ 15 ಲಕ್ಷಗಳ ವರೆಗಿನ ಮಿತಿ.

**ಕಾರ್ಪ್ ವ್ಯಾಪಾರ :** ವ್ಯಾಪಾರಿ ಸ್ನೇಹಿ, ಅಲ್ಪಾವಧಿ ವಹಿವಾಟು ಸಾಲ.

**ಕಾರ್ಪ್ ಮಹಿಳಾ ಗೋಲ್ಡ್ :** ಉದ್ಯೋಗಸ್ಥ ಯಾ ಉದ್ಯೋಗಸ್ಥರಲ್ಲದ ಮಹಿಳೆಯರಿಗಾಗಿ ಚಿನ್ನ ಆಭರಣ ಕೊಳ್ಳಲು ಸಾಲ.

**ಕಾರ್ಪ್ ಪರ್ಸನಲ್ :** ವೈಯುಕ್ತಿಕ ಅಗತ್ಯಗಳಿಗಾಗಿ ಒಂದು ಸ್ನೇಹಶೀಲ ಸಾಲ ಯೋಜನೆ. ಭದ್ರತೆ ಅಗತ್ಯವಿಲ್ಲ.

**ಕಾರ್ಪ್ ಮೋರ್ಗೇಜ್ :** ಆಸ್ತಿ ಅಡವಿನ ಸಾಲ, ವೈಯುಕ್ತಿಕ ಹಣದ ಅಗತ್ಯಗಳಿಗಾಗಿ.

**ಕಾರ್ಪ್ ರೆಂಟಲ್ :** ಮುಂದೆ ವಸೂಲಾಗಲಿರುವ ಬಾಡಿಗೆಗಳ ಮೇಲೆ ಸರಳ ಸಾಲ ಯೋಜನೆ.

**ಬ್ಯಾಂಕ್–ವಿಮಾ ವ್ಯವಸ್ಥೆ**

**ಕಾರ್ಪ್ ಜೀವನ ರಕ್ಷಾ :** ಠೇವಣಿ ಮತ್ತು ಸೇವಿಂಗ್ಸ್ ಬ್ಯಾಂಕ್ ಖಾತೆದಾರರಿಗಾಗಿ, ಕಡಿಮೆ ಮೊತ್ತದ ಕಂತಿನಲ್ಲಿ ರೂ. 1 ಲಕ್ಷದ ಜೀವ ವಿಮಾ ಯೋಜನೆ.

**ಕಾರ್ಪ್ ಜೀವನ ಗೃಹ ರಕ್ಷಾ :** ಗೃಹಸಾಲಗಳ ಬಾಕಿ ಇರುವ ಮೊತ್ತದ ಮೇಲೆ ಕಡಿಮೆ ಮೊತ್ತದ ಕಂತಿನಲ್ಲಿ ಎಲ್.ಐ.ಸಿ. ಯ ಜೀವ ವಿಮಾ ರಕ್ಷಣೆ.

ಬ್ಯಾಂಕು, ಎಲ್‌ಐಸಿ ಮತ್ತು ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪನಿಗಳ ವಿಮಾ ಯೋಜನೆಗಳಿಗೆ ಸಮಗ್ರ ಕಾರ್ಪೊರೇಟ್ ಪ್ರತಿನಿಧಿ (ಏಜೆಂಟ್) ಆಗಿದೆ. *

**ಗ್ರಾಮೀಣಾಭಿವೃದ್ಧಿಗೆ ಕಾರ್ಪೊರೇಷನ್ ಬ್ಯಾಂಕಿನ ಕೊಡುಗೆ :** ಮಂಗಳೂರಿನಲ್ಲಿ ತನ್ನ ಪ್ರಧಾನ ಕಾರ್ಯಾಲಯವನ್ನು ಹೊಂದಿರುವ, ದೇಶದ ಒಂದು ಪ್ರಮುಖ ಸಾರ್ವಜನಿಕ ರಂಗದ ಬ್ಯಾಂಕ್ ಆಗಿರುವ ಕಾರ್ಪೊರೇಷನ್ ಬ್ಯಾಂಕ್ 2006ರ ವೇಳೆಗೆ ನೂರು ವರ್ಷಗಳ ತನ್ನ ಅಸ್ತಿತ್ವವನ್ನು ಆಚರಿಸಲು ತನ್ನ ಶತಮಾನೋತ್ಸವದ ವರ್ಷದಲ್ಲಿ ಕೆಲವು ವಿಶಿಷ್ಟ ಯೋಜನೆಗಳನ್ನು ಹಮ್ಮಿಕೊಂಡಿತ್ತು. ತನ್ನ ಸಾಮಾಜಿಕ ಕಳಕಳಿ ಹಾಗೂ ಸಕ್ರಿಯ ಸಮಾಜ ಕಲ್ಯಾಣ ಚಟುವಟಿಕೆಗಳಿಗೆ ಖ್ಯಾತವಾಗಿರುವ ಬ್ಯಾಂಕ್, ಗ್ರಾಮೀಣ ಪ್ರದೇಶಗಳಲ್ಲಿ 25 ಗ್ರಂಥಾಲಯಗಳನ್ನು ಆರಂಭಿಸುವ ತನ್ನ ಯೋಜನೆಯ ಪ್ರಥಮ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಪ್ರಥಮ ಹಂತದಲ್ಲಿ ಗ್ರಂಥಾಲಯ ಸ್ಥಾಪನೆಗೆ ಗುರುತಿಸಲ್ಪಟ್ಟಿರುವ 25 ಗ್ರಾಮೀಣ ಪ್ರದೇಶಗಳಲ್ಲಿ 15 ಕರ್ನಾಟಕದಲ್ಲಿದ್ದರೆ, 7 ಮತ್ತು 3 ಅನುಕ್ರಮವಾಗಿ ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿವೆ.

ಈ ಗ್ರಂಥಾಲಯಗಳನ್ನು ಸ್ಥಳಾವಕಾಶ ಹಾಗೂ ಇತರ ಕನಿಷ್ಠ ಮೂಲಭೂತ ಸೌಕರ್ಯಗಳ ಲಭ್ಯತೆಗೆ ಅನುಗುಣವಾಗಿ ಗ್ರಾಮ ಪಂಚಾಯತ್‌ಗಳಲ್ಲಿ ಅಥವಾ ಊರ ಶಾಲೆಗಳಲ್ಲಿ ಆರಂಭಿಸಲಾಗಿದೆ. ಯೋಜನೆಯ ಅಂಗವಾಗಿ ಬ್ಯಾಂಕು ಪ್ರತಿಯೊಂದು ಗ್ರಂಥಾಲಯಕ್ಕೆ ಸಾಕಷ್ಟು ಪುಸ್ತಕಗಳನ್ನೂ, ಅವುಗಳನ್ನಿಡಲು ಬೀರುಗಳನ್ನೂ ಒದಗಿಸುತ್ತದೆ. ಮುಂದೆ ವರ್ಷಂಪ್ರತಿ ಈ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ನೀಡಲಾಗುವುದು.

ಗ್ರಂಥಾಲಯಗಳನ್ನು ಪ್ರಾಯೋಜಿಸುವ ಬ್ಯಾಂಕಿನ ಯೋಜನೆಗೆ ಸ್ಥಳೀಯ ಆಡಳಿತ/ಜನರು ಸಕಾರಾತ್ಮಕವಾಗಿ ಸ್ಪಂದಿಸಿದ್ದು ಸ್ಥಳೀಯರು ಈ ಸೌಲಭ್ಯದ ಗರಿಷ್ಠ ಲಾಭ ಪಡೆಯುವುದು ನಿಶ್ಚಿತ. ಗ್ರಂಥಾಲಯವನ್ನು ಸ್ಥಾಪಿಸುವ ಗ್ರಾಮ ಪಂಚಾಯತ್ ಅಥವಾ ಶಾಲೆಗಳಲ್ಲಿ ಅದಕ್ಕೆ ತಕ್ಕಂತೆ ಅಗತ್ಯವಾದ ಸ್ಥಳ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಲ್ಲದೆ ಗ್ರಂಥಾಲಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ವ್ಯವಸ್ಥೆಯನ್ನು ಮಾಡುವುದಾಗಿ ಗ್ರಾಮ ಪಂಚಾಯತ್‌ಗಳು/ಶಾಲೆಗಳು ತಾವಾಗಿ ಒಪ್ಪಿಕೊಂಡಿವೆ.

ಗುರುತಿಸಲ್ಪಟ್ಟಿರುವ ಈ 25 ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕು ಕೈಗೊಂಡಿರುವ ಶತಮನೋತ್ಸವದ ಇನ್ನೊಂದು ಯೋಜನೆಯೆಂದರೆ ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತರಾದ ಅರ್ಹ 100 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳ ನೀಡಿಕೆ. ಈ ಯೋಜನೆಯಡಿ 2004–05ನೆಯ ಸಾಲಿನ 10ನೆಯ ತರಗತಿಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು ಅದೇ ವರ್ಷ ಪಿ.ಯು.ಸಿ/ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ಮತ್ತು ಅರ್ಹತೆಗೆ ನಿಗದಿಪಡಿಸಿರುವ ಎಲ್ಲ ನಿಬಂಧನೆಗಳನ್ನು ಪೂರೈಸಿದ 100 ವಿದ್ಯಾರ್ಥಿಗಳಿಗೆ ಕಾರ್ಪ್‌ಬ್ಯಾಂಕ್ ಶತಮಾನೋತ್ಸವ ವಿದ್ಯಾರ್ಥಿವೇತನಗಳನ್ನು ವ್ಯವಸ್ಥೆ ಮಾಡಿದೆ.

ದುರ್ಬಲ ವರ್ಗದವರು ಹಾಗೂ ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಪಡೆಯುವುದನ್ನು ಉತ್ತೇಜಿಸುವಂತೆ ಈ ಯೋಜನೆಯ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಯಿತು. ಅದರಂತೆ 100 ವಿದ್ಯಾರ್ಥಿಗಳಲ್ಲಿ ಕಡಿಮೆ ಪಕ್ಷ 25 ವಿದ್ಯಾರ್ಥಿಗಳು ಹುಡುಗಿಯರು ಹಾಗೂ 25 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ/ವರ್ಗಗಳಿಗೆ ಸೇರಿದವರಾಗಿರುವಂತೆ ಕಾಳಜಿ ವಹಿಸಲಾಗಿದೆ.

ವರ್ಷದಿಂದ ವರ್ಷಕ್ಕೆ ಬ್ಯಾಂಕು ಶಿಕ್ಷಣಕ್ಕೆ ನೀಡುತ್ತ ಬಂದಿರುವ ಒತ್ತಾಸೆಯೇ ಈ ಎರಡೂ ಯೋಜನೆಗಳು ರೂಪಿಸಲ್ಪಡುವಂತೆ ಮಾಡಿದ ಚಾಲನ ಶಕ್ತಿ. ಈ ಯೋಜನೆಗಳ ಮೂಲಕ ಗ್ರಾಮೀಣ ಪ್ರದೇಶಗಳನ್ನು ಮುಖ್ಯವಾಹಿನಿಗೆ ತರುವಲ್ಲಿ ಬ್ಯಾಂಕು ತನ್ನ ಪಾಲಿನ ಕೊಡುಗೆಯನ್ನು ನೀಡುತ್ತಿದೆ. (ಜಿ.ಎನ್.ಎಸ್.)

**ಕಾರ್ಬಜೋಲ್ (ಡೈಬೆನ್‌ಜೋ ಪಿರೋಲ್) :** ಹರಳಾಕೃತಿಯ ಬಿಳಿಯ ವಸ್ತು. ರಸಾಯನ ಸೂತ್ರ $C_{12}H_9N$. ಅಣುರಚನೆ ಮುಂದೆ ತೋರಿಸಿದೆ.

ಕರಗುವ ಬಿಂದು 238° ಸೆಂ. ಪ್ರಬಲ ಸಲ್ಫ್ಯೂರಿಕ್ ಆಮ್ಲದಲ್ಲಿ ಕರಗಿ ಹಳದಿ ಬಣ್ಣವನ್ನು ಕೊಡುತ್ತದೆ. ಉತ್ಕರ್ಷಣ ಕಾರಿಗಳೊಡನೆ ಹಳದಿ ಬಣ್ಣ ಹಸುರು ಬಣ್ಣಕ್ಕೆ ತಿರುಗುತ್ತದೆ. ಕಾರ್ಬಜೋಲ್ ಕೆಂಪು ಬಣ್ಣದ ಪಿಕ್‌ರೇಟನ್ನು ಕೊಡುತ್ತದೆ. ಇದರ ಕರುಗುವ ಬಿಂದು 182°–186° ಸೆಂ.



ಚಿತ್ರ 1

ಕಾರ್ಬಜೋಲ್ ಡಾಮರಿನ ಆಂತ್ರಸೀನ್ ಅಂಶದಲ್ಲಿ ದೊರೆಯುತ್ತದೆ. ಡಾಮರಿನ ಆಂತ್ರಸೀನ್ ಭಾಗವನ್ನು ತಣಿಸಿದಾಗ ಆಂತ್ರಸೀನ್, ಫಿನಾಂತ್ರೀನ್ ಮತ್ತು ಕಾರ್ಬಜೋಲುಗಳ ಮಿಶ್ರಣ ಬೇರ್ಪಡುತ್ತದೆ. ಈ ಮಿಶ್ರಣವನ್ನು ಕಾಸ್ಟಿಕ್ ಪೊಟಾಷ್‌ನೊಡನೆ ಕರಗಿಸಿದಾಗ ಕಾರ್ಬಜೋಲ್ ಪೊಟಾಸಿಯಂ ಕಾರ್ಬಜೋಲೇಟ್ ಲವಣವಾಗಿ ಮಾರ್ಪಡುತ್ತದೆ. ಈಗ ಆಂತ್ರಸೀನ್ ಮತ್ತು ಫಿನಾಂತ್ರೀನುಗಳನ್ನು ಬಟ್ಟಿ ಇಳಿಸಿ ಅಥವಾ ಲೀನಕಾರಿ ನ್ಯಾಪ್ತ ಅಥವಾ ಪಿರಿಡೀನುಗಳಲ್ಲಿ ಸಂಸ್ಕರಿಸಿತೆಗೆಯಬಹುದು.



ಚಿತ್ರ 2

ಕಾರ್ಬಜೋಲೇಟ್ ಲವಣದ ಜಲವಿಶ್ಲೇಷಣೆಯಿಂದ ಅಶುದ್ಧ ಕಾರ್ಬಜೋಲ್ ದೊರೆಯುತ್ತದೆ. ಇದನ್ನು ಸ್ಫಟಿಕೀಕರಣ ಅಥವಾ ಉತ್ಪತನದಿಂದ ಶುದ್ಧಗೊಳಿಸಲಾಗುವುದು. 2,2'–ಡೈಅಮೈನೊಡೈಫೀನೈಲನ್ನು ಫಾಸ್ಫಾರಿಕ್ ಆಮ್ಲದೊಡನೆ ಕಾಯಿಸಿ ಕಾರ್ಬಜೋಲನ್ನು ಸಂಶ್ಲೇಷಿಸಲಾಗುವುದು.

ಬಣ್ಣಗಳ ತಯಾರಿಕೆಯಲ್ಲಿ ಕಾರ್ಬಜೋಲಿಗೆ ಸ್ವಲ್ಪ ಪ್ರಾಮುಖ್ಯವಿದೆ. ಇದರಿಂದ ಅಮೂಲ್ಯವಾದ ಹೈಡ್ರಾನ್ ನೀಲಿ–ಆರ್ ಬಣ್ಣವನ್ನು ತಯಾರಿಸಲಾಗುವುದು. ಇದೊಂದು ತೊಟ್ಟಿ ಬಣ್ಣ. ಇದರ ಇಂಡಿಗೊ ಬಣ್ಣ ನೀಲಿಗಿಂತ ದೃಢ. ಆದರೆ ಇದು ಇದೇ ವರ್ಗದ ಆಂತ್ರಕ್ವಿನೋನ್ ಬಣ್ಣಗಳ ಮಟ್ಟಕ್ಕೆ ಬರುವುದಿಲ್ಲ. (ಎಲ್.ಎ.ಆರ್.)

**ಕಾರ್ಬನ್ – 14 ಕಾಲನಿರ್ಣಯ :** ಪ್ರಾಕ್ತನ ಅವಶೇಷಗಳಲ್ಲಿನ ಸಾವಯವ ಪದಾರ್ಥಗಳಲ್ಲಿ ಕಂಡುಬರುವ ವಿಕಿರಣಕ್ರಿಯೆಯನ್ನು ಅಳೆದು ಕಾಲನಿರ್ಣಯಮಾಡುವ ಒಂದು ವಿಧಾನ. ಇದರ ನೆರವಿನಿಂದ ಪ್ರಾಕ್ತನಶಾಸ್ತ್ರಜ್ಞರು ಬೇರೆ ವಿಧಾನಗಳಿಂದ ಕಾಲ ನಿರ್ಧಾರ ಮಾಡಲಾಗಿದ್ದ ಅವಶೇಷಗಳ ಕಾಲವನ್ನು ಪರೀಕ್ಷಿಸಿ, ಅದರ ಉಪಯುಕ್ತತೆಯನ್ನು ದೃಢಪಡಿಸಿಕೊಂಡರು. ಅನಂತರ ವಾದಗ್ರಸ್ತವಾಗಿದ್ದ ಹಲವಾರು ಅವಶೇಷಗಳ ಸಂಸ್ಕೃತಿಗಳ ಕಾಲನಿರ್ಣಯಕ್ಕೆ ಈ ವಿಧಾನವನ್ನು ಬಳಸಲಾಯಿತು. ಫ್ರಾನ್ಸಿನ ಲಾಸ್ಕೋ ಗುಹೆಗಳಲ್ಲಿ ಅಂತ್ಯಶಿಲಾಯುಗ ಸಂಸ್ಕೃತಿಗಳ ಮಾನವ ನಿರ್ಮಿಸಿದ್ದ ವರ್ಣಚಿತ್ರಗಳ ಕಾಲದ ವಿಷಯವಾಗಿ ಬಹಳಷ್ಟು ಭಿನ್ನಭಿಪ್ರಾಯಗಳಿದ್ದುವು. ಆ ಗುಹೆಗಳಲ್ಲಿ ವರ್ಣಚಿತ್ರಗಳೊಂದಿಗೆ ದೊರಕಿದ ಇದ್ದಲು ತುಂಡುಗಳನ್ನು ಈ ವಿಧಾನದಿಂದ ಪರೀಕ್ಷಿಸಿ ಲಿಬ್ಬಿ ಆ ವರ್ಣಚಿತ್ರಗಳ ಕಾಲ ಸು. 15,516 ವರ್ಷಗಳೆಂದು ನಿರ್ಧರಿಸಿದ. ಭಾರತದ ಹರಪ್ಪ ನಾಗರಿಕತೆ, ನವಶಿಲಾಯುಗದ ಸಂಸ್ಕೃತಿಗಳ ಕಾಲವನ್ನು ಈ ವಿಧಾನದಿಂದ ನಿರ್ಧರಿಸಲಾಗಿದೆ. ಕಾರ್ಬನ್–14 ವಿಧಾನದ ರೀತ್ಯಾ ಪಂಜಾಬ್, ಸಿಂಧ್ ಪ್ರಾಂತಗಳಲ್ಲಿ ಹರಪ್ಪ, ನಾಗರಿಕತೆ ಪ್ರ.ಶ.ಪೂ. 2300ರಿಂದ 1700ರ ವರೆಗೆ ನೆಲೆಸಿದ್ದರೆ ನವಶಿಲಾಯುಗ ಸಂಸ್ಕೃತಿಗಳು ಕಾಶ್ಮೀರ ಪ್ರದೇಶದಲ್ಲಿ ಪ್ರ.ಶ.ಪೂ. 2400ರಿಂದ 1200ರ ವರೆಗೂ ದಕ್ಷಿಣ ಭಾರತದಲ್ಲಿ ಪ್ರ.ಶ.ಪೂ. 2300ರಿಂದ 1000ರ ವರೆಗೂ ಇದ್ದುವೆಂದು ತಿಳಿದುಬರುತ್ತದೆ. ಭಾರತದ ಇತರ ಪ್ರಾಗ್ಚಾರಿತ್ರಿಕ ಸಂಸ್ಕೃತಿಗಳಿಗೂ ಈ ವಿಧಾನದ ರೀತ್ಯಾ ಕಾಲನಿರ್ಧಾದ ಮಾಡಲಾಗಿದೆ.

ಕಾರ್ಬನ್–14 ಕಾಲನಿರ್ಣಯ ವಿಧಾನದಲ್ಲಿ ಕೆಲವು ಕುಂದು ಕೊರತೆಗಳೂ ಇವೆ. ಪ್ರಯೋಗ ಶಾಲೆಯಲ್ಲಿ ಪ್ರಾಕ್ತನ ಸಾವಯವ ವಸ್ತುಗಳಲ್ಲಿನ ಕಾರ್ಬನ್–14ರ ಪ್ರಮಾಣವನ್ನು ಅಳೆಯುತ್ತಿರುವಾಗ ಆಧುನಿಕ ಕಾಲದ ಕಾರ್ಬನ್ನಿನ ಪ್ರಭಾವ ಅದರ ಮೇಲೆ ಕಂಡುಬರುತ್ತದೆ. ಇದನ್ನು ತಡೆಯಲು ವಿಜ್ಞಾನಿಗಳು ಈ ಯಂತ್ರದ ಸುತ್ತ ಉಕ್ಕಿನ ರಕ್ಷಣಾ ಕವಚವನ್ನು ಒದಗಿಸುತ್ತಾರೆ. ಈಚೆಗೆ ಇತರ ಕ್ರಮಗಳನ್ನೂ ಕೈಗೊಳ್ಳುತ್ತಿರುವುದಾಗಿ ತಿಳಿದುಬಂದಿವೆ. ಎಲ್ಲ ರೀತಿಯ ವಸ್ತುಗಳಲ್ಲೂ ಕಾರ್ಬನ್–14 ಒಂದೇ ಪ್ರಮಾಣದಲ್ಲಿರುತ್ತದೆಯೇ ಎಂಬ ಸಮಸ್ಯೆ ಈಚೆಗೆ ವಿಜ್ಞಾನಿಗಳನ್ನು ಕಾಡಿದೆ. ಲಿಬ್ಬಿ ಇದು ಒಂದೇ ಪ್ರಮಾಣದಲ್ಲಿದೆ ಎಂದು ಒಪ್ಪಿಕೊಂಡಿದ್ದರೂ ಈಚೆಗೆ ಮಿನಿಸೋಟ ವಿಶ್ವವಿದ್ಯಾಲಯದ ಎ.ಓ. ನೈಯರ್ ಇದು ಸರಿಯಲ್ಲವೆಂದು ತೋರಿಸಿದ್ದಾರೆ. ಕಾರ್ಬನ್–14 ಕಪ್ಪೆಚಿಪ್ಪು, ಶಂಖ ಮುಂತಾದ ಪದಾರ್ಥಗಳಲ್ಲಿ ಮರದಲ್ಲಿರುವುದಕ್ಕಿಂತ ಹೆಚ್ಚಾಗಿರುತ್ತದೆಂದೂ ಹೇಳಲಾಗಿದೆ. ಪ್ರಾಕ್ತನ ಸಾವಯವ ಪದಾರ್ಥಗಳು ಭೂ ಪದರಗಳಲ್ಲಿದ್ದಾಗ ಮಣ್ಣಿನಲ್ಲಿರುವ ಆಮ್ಲಗಳು (ಹ್ಯೂಮಿಕ್ ಆಸಿಡ್ಸ್) ಅವುಗಳೊಂದಿಗೆ ಸೇರುವ ಸಾಧ್ಯತೆಯಿದೆ. ಆದ್ದರಿಂದ ಈಚಿನ ಕಾರ್ಬನ್ ಪ್ರಾಕ್ತನ ವಸ್ತುಗಳಲ್ಲಿನ ಕಾರ್ಬನ್ನಿನೊಂದಿಗೆ ಬೆರೆತುಹೋಗಿ ಕಾಲನಿರ್ಣಯದಲ್ಲಿ ಏರುಪೇರಾಗುತ್ತದೆ. ವಿಜ್ಞಾನಿಗಳು ಈ ಸಾಧ್ಯತೆಯ ವಿರುದ್ಧವೂ ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಪ್ರಯೋಗಶಾಲೆಗೆ ಪ್ರಾಕ್ತನ ಸಾವಯವ ವಸ್ತುಗಳನ್ನು ಕಳಿಸುವಾಗ ಸೂಕ್ತ ಜಾಗ್ರತೆ ವಹಿಸದಿದ್ದರೆ ಕಾಲನಿರ್ಣಯ ಮಾಡಲು ಸಾಧ್ಯವಿಲ್ಲ. ಈಗಿನ ವಾತಾವರಣದಲ್ಲಿರುವ ಕಾರ್ಬನ್ ಪ್ರಾಕ್ತನ ವಸ್ತುಗಳೊಂದಿಗೆ ಸೇರದಂತೆ ಕ್ರಮಕೈಗೊಳ್ಳಬೇಕು.

ಈ ಹಲವು ಅಡಚಣೆಗಳನ್ನು ಹೋಗಲಾಡಿಸಿ, ಪ್ರಯೋಗ ವಿಧಾನಗಳನ್ನು ಉತ್ತಮಗೊಳಿಸಲು ವಿಜ್ಞಾನಿಗಳು ಇನ್ನೂ ಶ್ರಮಿಸುತ್ತಿದ್ದಾರೆ. ಈ ದಿಶೆಯಲ್ಲಿ ಜೆ. ವಿ. ಪಿ. ಲಾಂಗ್ ಎಂಬಾತನ ಪ್ರಯತ್ನ ಗಮನಾರ್ಹ. ಪ್ರಾಕ್ತನಶಾಸ್ತ್ರದಲ್ಲಿ ಬಳಕೆಯಲ್ಲಿರುವ ಕಾಲನಿರ್ಣಯ ಪದ್ಧತಿಗಳಲ್ಲಿ ಕಾರ್ಬನ್–14 ಕಾಲನಿರ್ಣಯ ವಿಧಾನ ಅತ್ಯಂತ ಪ್ರಯೋಜನಕಾರಿ (**ನೋಡಿ– ಕಾಲನಿರ್ಣಯ ವಿಧಾನಗಳು**). (ಎಸ್.ಎಂ.)

**ಕಾರ್ಬನಿಫೆರಸ್ ಸ್ತೋಮ :** ಉತ್ತರ ಪೇಲಿಯೋಜೋಯಿಕ್ ಕಲ್ಲುಗಳು ಮತ್ತು ಕಾಲದ ಒಂದು ಪ್ರಮುಖ ವಿಭಾಗ. ಇಂಗ್ಲೆಂಡಿನಲ್ಲಿ ಕಲ್ಲಿದ್ದಲನ್ನು ಒಳಗೊಂಡ ಸ್ತರಗಳನ್ನು ಕಲ್ಲಿದ್ದಲು ಸ್ತರಗಳು ಎಂದು ಬಹಳ ಕಾಲದವರೆಗೆ ಕರೆಯುತ್ತಿದ್ದರು. ಕೋನಿಬೇರ್ ಮತ್ತು ಫಿಲಿಪ್ಸ್ ಎಂಬುವರು ಹಳೆ ಕೆಂಪು ಮರಳು ಶಿಲೆಗಳ ಸಮೇತ ಕಲ್ಲಿದ್ದಲು ಸ್ತರಗಳನ್ನು ಒಳಗೊಂಡ ಶಿಲಾರಾಶಿಗೆ ಕಾರ್ಬನಿಫೆರಸ್ ಸ್ತೋಮಗಳು ಎಂಬ ಹೆಸರನ್ನು ಕೊಟ್ಟರು (1822). ಆದರೆ 1839ರಲ್ಲಿ ಹಳೆ ಕೆಂಪು ಮರಳು ಶಿಲೆಗಳನ್ನು ಕಾರ್ಬನಿಫೆರಸ್ ಸ್ತೋಮಗಳಲ್ಲಿ ಕಲ್ಲಿದ್ದಲು ಶೇಖರಗೊಂಡಿದ್ದರೂ ಪ್ರಪಂಚದ ಎಲ್ಲ ಮುಖ್ಯ ಕಲ್ಲಿದ್ದಲು ಗಣಿಗಳಿಗೂ ಕಾರ್ಬನಿಫೆರಸ್ ಸ್ತೋಮಗಳಿಗೇ ಸೀಮಿತಗೊಂಡಿವೆ. ಆದ್ದರಿಂದಲೇ ಕಾರ್ಬನಿಫೆರಸ್ ಮತ್ತು ಪರ್ಮಿಯನ್ ಶಿಲಾಸ್ತೋಮಗಳನ್ನು ಒಟ್ಟು ಸೇರಿಸಿ ವಾಗನ್ ಎಂಬಾತ ಅಂತ್ರ ಕೊಲಿಥಿಕ್ ಸ್ತೋಮಗಳು ಎಂದು ಕರೆದಿದ್ದಾನೆ. ವಾಸ್ತವವಾಗಿ ಕಾರ್ಬನಿಫೆರಸ್ ಮತ್ತು ಪರ್ಮಿಯನ್ ಸ್ತೋಮಗಳ ಮಧ್ಯೆ ಎರಡಕ್ಕೂ ಸೇರಿದ ಮಧ್ಯಕಾಲದ ಪದರಗಳು ಇವೆ. ಈ ಪದರುಗಳನ್ನು ಪರ್ಮೊಕಾರ್ಬನಿಫೆರಸ್ ಪದರಗಳೆಂದು ಕರೆದಿರುವುದೇ ಈ ಎರಡು ಸ್ತೋಮಗಳನ್ನು ನಿಖರವಾಗಿ ಬೇರ್ಪಡಿಸಲು ಆಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದೇ ರೀತಿ ಡೆವೋನಿಯನ್ ಕಾರ್ಬನಿಫೆರಸ್ ಮಧ್ಯೆಯೂ ಅನುರೂಪತೆ ಕಂಡುಬರುವುದಿಲ್ಲ.

ಇಂಗ್ಲೆಂಡಿನಲ್ಲಿ ಕಾರ್ಬನಿಫೆರಸ್ ಸ್ತೋಮಗಳನ್ನು ಪರ್ವತ ಸುಣ್ಣಶಿಲೆ, ಮಿಲ್‌ಸ್ಟೋನ್‌ಗ್ರಿಟ್ ಮತ್ತು ಕಲ್ಲಿದ್ದಲು ಸ್ತರಗಳೆಂದು ಮೂರು ಭಾಗಗಳಾಗಿ ವಿಭಜಿಸಿರುತ್ತಾರೆ. ಈ ಸ್ತೋಮ ಕಾರ್ಬನಿಫೆರಸ್ ಯುಗದ ಪೂರ್ಣಕಾಲವನ್ನು ಪ್ರತಿಫಲಿಸುವುದಿಲ್ಲ. ಪಶ್ಚಿಮ ಯುರೋಪ್, ರಷ್ಯ ಮತ್ತು ಭಾರತ ದೇಶಗಳಲ್ಲಿ ಇಂಗ್ಲೆಂಡಿನ ಕಲ್ಲಿದ್ದಲು ಸ್ತರಗಳಿಗಿಂತ ಕಿರಿಯ ವಯಸ್ಸಿನ ಶಿಲೆಗಳಿವೆ. ಈ ಪ್ರದೇಶಗಳಲ್ಲಿಯೂ ಶಿಲಾಸ್ತೋಮಗಳನ್ನು ಕೆಳ, ಮಧ್ಯ ಮತ್ತು ಮೇಲಣ ಎಂದು ಮೂರು ಭಾಗಗಳನ್ನಾಗಿ ವಿಭಜಿಸಿರುತ್ತಾರೆ. ಇಂಗ್ಲೆಂಡಿನ ಕಾರ್ಬನಿಫೆರಸ್ ಸ್ತೋಮಗಳು ಈ ಪ್ರದೇಶಗಳ ಕೆಳ ಮತ್ತು ಮಧ್ಯಭಾಗಗಳಿಗೆ ಸರಿದೂಗುತ್ತವೆ. ಉತ್ತರ ಅಮೆರಿಕದಲ್ಲಿ ಈ ಕಾಲದ ಶಿಲಾರಾಶಿಯನ್ನು ಮಿಸ್ಸಿಸ್ಸಿಪಿಯನ್ ಸ್ತೋಮ ಮತ್ತು ಪೆನ್ಸಿಲ್ವೇನಿಯನ್ ಸ್ತೋಮ ಎಂದು ಎರಡು ಬೇರೆ ಸ್ತೋಮಗಳನ್ನಾಗಿಯೇ ಪರಿಗಣಿಸಿರುತ್ತಾರೆ. ಇವು ಕ್ರಮವಾಗಿ ಯೂರೋಪು ಮತ್ತು ರಷ್ಯದ ಕೆಳ ಮತ್ತು ಮಧ್ಯ ಭಾಗಗಳಿಗೆ ಸರಿದೂಗುತ್ತವೆ. ಏಷ್ಯ

(ಭಾರತ) ಮತ್ತು ಆಸ್ಟ್ರೇಲಿಯಗಳಲ್ಲಿ ಕಾರ್ಬನಿಫೆರಸ್ ಮತ್ತು ಪರ್ಮಿಯನ್ ಸ್ತೋಮಗಳ ಮಧ್ಯೆ ಮಧ್ಯವರ್ತಿ ಪದರಗಳೂ ಇವೆ. ಇವಕ್ಕೆ ಪರ್ಮೊಕಾರ್ಬನಿಫೆರಸ್ ಪದರಗಳೆನ್ನುವರು.

ಭಾರತದಲ್ಲಿ ಕಾರ್ಬನಿಫೆರಸ್ ಶಿಲೆಗಳು ಸ್ಪಿಟಿ ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಮರ್ತ್‌ಬೆಣಚುಶಿಲೆಯ ಮೇಲೆ ನಿಕ್ಷೇಪಗೊಂಡಿವೆ. ಈ ಸ್ತೋಮಗಳನ್ನು ಕನವಾರ ಸ್ತೋಮ ಎನ್ನುವರು. ಇದರ ದಪ್ಪ ಸುಮಾರು 1218.8 ಮೀ. ಈ ಸ್ತೋಮವನ್ನು ಕೆಳ ಮತ್ತು ಮೇಲಣ ಭಾಗಗಳಾಗಿ ವಿಭಜಿಸುತ್ತಾರೆ. ಕೆಳಭಾಗ ಸ್ಪಿಟಿ ಪ್ರದೇಶದ ಲಿಪಾಕ್ ನದಿ ಕಣಿವೆಯಲ್ಲಿ ಚೆನ್ನಾಗಿ ಹೊರಗೆ ಕಂಡಿರುವುದರಿಂದ ಇದನ್ನು ಲಿಪಾಕ್ ಶಿಲಾಶ್ರೇಣಿಗಳೆನ್ನುವರು. ಇದರಲ್ಲಿ ಸುಣ್ಣಶಿಲೆ ಮತ್ತು ಜೇಡುಶಿಲೆಗಳಿವೆ. ಮೇಲಣ ಭಾಗದಲ್ಲಿ ಬೆಣಚುಶಿಲೆ ಮತ್ತು ಜೇಡುಶಿಲೆಗಳೇ ಹೆಚ್ಚು. ಇವನ್ನು ಪೊಶ್ರೇಣಿ ಎನ್ನುವರು. ಇವುಗಳಲ್ಲಿ ಬ್ರಯೋಜೋವ ಗುಂಪಿನ ಫೆನೆಸ್ಟೆಲ್ಲಾ ಮತ್ತು ಪ್ರೋಟೊರೆಟಿಪೊರ ಪ್ರಾಣಿಗಳ ಅವಶೇಷಗಳು ವಿಶೇಷವಾಗಿವೆ. ಕಾಶ್ಮೀರದಲ್ಲಿ ಈ ಕಾಲದ ಶಿಲೆಗಳನ್ನು ಸಿರಿಂಗಥೀರಿಸ್ ಸುಣ್ಣಶಿಲೆ ಮತ್ತು ಫೆನೆಸ್ಟೆಲ್ಲಾ ಜೇಡುಶಿಲೆ ಎಂಬ ಎರಡು ಭಾಗಗಳಾಗಿ ವಿಭಜಿಸಲಾಗಿದೆ. ಇವು ಕ್ರಮವಾಗಿ ಲಿಪಾಕ್ ಮತ್ತು ಪೊಶ್ರೇಣಿಗಳಿಗೆ ಸರಿದೂಗುತ್ತವೆ.

ಕಾರ್ಬನಿಫೆರಸ್ ಯುಗದ ಅಂತ್ಯಕಾಲದಲ್ಲಿ ಪ್ರಪಂಚದ ಅನೇಕ ಕಡೆಗಳಲ್ಲಿ ಮಹತ್ತರ ಬದಲಾವಣೆಗಳಾದುವು. ನೆಲಜಲಗಳ ಪುನರ್‌ವರ್ಗೀಕರಣವಾಯಿತು. ಈ ಕಾರ್ಯಕ್ಕೆ ಸಂಬಂಧಿಸಿದಂತೆ ಪರ್ವತ ಕಾರ್ಯಾಚರಣೆ ನಡೆಯಿತು. ಆಗ ಉದಯಿಸಿದ ಪರ್ವತಗಳಲ್ಲಿ ಹರ್ಸಿನಿಯನ್ ಪರ್ವತ ಮುಖ್ಯವಾದುದು. ಆದ್ದರಿಂದ ಈ ಪರ್ವತ ಕಾರ್ಯವನ್ನು ಹರ್ಸಿನಿಯನ್ ಪ್ರಳಯವೆಂದು ಕರೆಯುತ್ತೇವೆ. ಇದರ ತರುವಾಯ ಪ್ರಪಂಚದ ನೆಲವೆಲ್ಲ ಎರಡು ಖಂಡಗಳಾಗಿತ್ತು. ಇವೆರಡರ ಮಧ್ಯೆ ಹೆಚ್ಚು ಕಡಿಮೆ ಭೂಮಧ್ಯ ಭಾಗದಲ್ಲಿ ಒಂದು ಸಾಗರವಿತ್ತು. ಇದಕ್ಕೆ ಟೆತಿಸ್ ಸಾಗರ ಎಂದು ಹೆಸರು. ಟೆತಿಸ್ ಸಾಗರಕ್ಕೆ ಉತ್ತರದಲ್ಲಿದ್ದ ಖಂಡ ಯೂರೇಷ್ಯ, ಗ್ರೀನ್‌ಲೆಂಡ್ ಮತ್ತು ಉತ್ತರ ಅಮೆರಿಕಗಳಿಂದ ಕೂಡಿತ್ತು. ಇದಕ್ಕೆ ಅಂಗಾರ ಖಂಡ ಅಥವಾ ಯೂರೇಷ್ಯನ್ ಖಂಡ ಎಂದು ಹೆಸರು. ದಕ್ಷಿಣ ಖಂಡ ಆಫ್ರಿಕ, ದಕ್ಷಿಣ ಅಮೆರಿಕ, ಭಾರತ ಪರ್ಯಾಯದ್ವೀಪಭಾಗ, ಆಸ್ಟ್ರೇಲಿಯ ಮತ್ತು ಅಂಟಾರ್ಟಿಕ್‌ಗಳನ್ನು ಒಳಗೊಂಡಿತ್ತು. ಈ ಖಂಡಕ್ಕೆ ಗೊಂಡವಾನಖಂಡ ಎಂದು ಹೆಸರು. ಪರ್ಮೊಕಾರ್ಬನಿಫೆರಸ್ ಕಾಲದಲ್ಲಿ ಗೊಂಡವಾನಖಂಡದಲ್ಲಿ ತೀವ್ರ ಶೀತವಾಯುಗುಣವಿತ್ತು. ಈ ಖಂಡದ ಬಹುಭಾಗ ನೀರ್ಗಲ್ಲು ನದಿಗಳಿಂದ ಆವರಿಸಲ್ಪಟ್ಟಿತು. ಭಾರತ ಪರ್ಯಾಯ ದ್ವೀಪದ ತಾಲ್ಚೀರ್, ಸಾಲ್ಟ್‌ರೇಂಜ್, ಕಾಶ್ಮೀರದ ಹಜಾರಾ, ಘರ್‌ವಾಲ್ ಮತ್ತು ಸಿಮ್ಲ ಮುಂತಾದ ಕಡೆಗಳಲ್ಲಿ ನೀರ್ಗಲ್ಲುನದಿಯ ಕಾರ್ಯದ ಗುರುತುಗಳಿಂದ ಕೂಡಿದ ಗುಂಡು ಶಿಲಾನಿಕ್ಷೇಪವಾಗಿದೆ.

ಸಾಲ್ಟ್‌ರೇಂಜ್ ಪ್ರದೇಶದಲ್ಲಿ ಕೇಂಬ್ರಿಯನ್ ಯುಗದ ತರುವಾಯ ಶಿಲಾನಿಕ್ಷೇಪ ಕಾರ್ಯ ನಿಂತು ಮತ್ತೆ ಈ ಗುಂಡುಶಿಲೆಯಿಂದ ಆರಂಭವಾಗಿದೆ. 115' ದಪ್ಪದ ಈ ಗುಂಡುಶಿಲೆಯಲ್ಲಿ ಹಳದಿ, ಹಸುರು ಮತ್ತು ಬಿಳಿ ಚುಕ್ಕೆಗಳುಳ್ಳ ಮರಳುಶಿಲೆ ಇದೆ. ಇದರ ತಳದಲ್ಲಿ ಯೂರಿಡೆಸ್ಮ ಎಂಬ ಪ್ರಾಣಿಯ ಅವಶೇಷಗಳಿವೆ. ಚುಕ್ಕೆ ಮರಳುಶಿಲೆಗಳು ರಷ್ಯದ ಯುರೆಲಿಯನ್ ಶಿಲಾಶ್ರೇಣಿಗೆ ಸಮದೂಗುವುದು. ಪ್ರಪಂಚದ ವಿವಿಧ ಪ್ರದೇಶಗಳ ಕಾರ್ಬನಿಫೆರಸ್ ಸ್ತೋಮಗಳ ಸಮತೋಲನಪಟ್ಟಿ ಈ ರೀತಿ ಇದೆ.

ಸೇರಿಸಬಹುದು. ಆದರೆ ಅವು ಈಗಿರುವ ಜೀವಂತ ಸಂಬಂಧಿಗಳಿಗಿಂತ ಬಹು ದೊಡ್ಡವು. ವಾಸ್ತವವಾಗಿ ಅವು ಆಯಾ ವರ್ಗಗಳ ದೈತ್ಯಗಳೆಂದೇ ಹೇಳಬಹುದು. ಕಾರ್ಬನಿಫೆರಸ್ ಯುಗದ ಗಣ್ಯಸಸ್ಯಗಳೆಂದರೆ ಕೆಲಮೈಟಿಸ್, ಲೆಪಿಡೊಡೆಂಡ್ರಾನ್ ಮತ್ತು ಸಿಜಿಲೇರಿಯಗಳು. ಕೆಲಮೈಟಿಸ್ ಕಾಂಡದಲ್ಲಿ ಗೆಣ್ಣುಗಳೂ ಗೆಣ್ಣಿನ ಮಧ್ಯಭಾಗದಲ್ಲಿ ದಿಂಡುಗಳೂ ಇವೆ. ಅದರ ಎಲೆಗಳು ಒಂದೊಂದು ಪ್ರಕಾರದಲ್ಲಿಯೂ ಒಂದೊಂದು ರೀತಿ ಇವೆ. ಅವನ್ನು ಅನ್ಯುರೇರಿಯ ಅಸ್ಟೆರೊಫಿಲ್ಲೈಟಿಸ್ ಇತ್ಯಾದಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದೆ. ಲೆಪಿಡೊಡೆಂಡ್ರಾನ್ ಮತ್ತು ಸಿಜಿಲೇರಿಯಗಳು ಬಹು ಎತ್ತರವಾದ ಗಿಡಗಳಾಗಿದ್ದುವು. ಅವುಗಳ ಕಾಂಡಗಳ ಮೇಲೆಲ್ಲ ಎಲೆಗಳ ತೊಟ್ಟಿನ ಗುರುತುಗಳಿವೆ. ಈ ಎರಡು ಗಿಡಗಳ ಬೇರುಗಳು ಒಂದೇ ರೀತಿಯಾಗಿವೆ. ಅವುಗಳಿಗೆ ಸ್ಟಿಗ್ಮೇರಿಯ ಎಂದು ಹೆಸರು. ಕಾರ್ಬನಿಫೆರಸ್ ಕಾಲದ ಫರ್ನ್‌ಗಳು ಗಾತ್ರ, ಹೊರರೂಪ, ಎಲೆಗಳು ಸುರುಳಿ ಸುತ್ತಿರುವ ರೀತಿ ಮತ್ತು ಲೈಂಗಿಕಾಂಗಗಳೇ ಮೊದಲಾದ ಅನೇಕ ವಿಚಾರಗಳಲ್ಲಿ ಜೀವಂತ ಫರ್ನ್‌ಗಳನ್ನು ಹೋಲುತ್ತವೆ. ಆದರೆ ಕೆಲವು ಫರ್ನ್‌ಗಳು ಬೀಜಬಿಡುವ ಜಾತಿಯವುಗಳಾಗಿವೆ. ಇವುಗಳಿಗೆ ಟೆರಿಡೊಸ್ಪರ್ಮ್‌ಗಳೇ ಹೆಚ್ಚಾಗಿದ್ದುವೆಂದು ಹೇಳಬಹುದು. ರ್‍ಯಾಕಾಪ್ಟರಿಸ್, ಸೈಕ್ಲಾಪ್ಟರಿಸ್, ಓಡಂಟಾಪ್ಟರಿಸ್, ನ್ಯೂರಾಪ್ಟರಿಸ್, ಸ್ಫಿನಾಪ್ಟರಿಸ್, ಪೆಕಾಪ್ಟರಿಸ್ ಮತ್ತು ಅಲಿತಾಟೆರಿಸ್ಗಳು ಮುಖ್ಯ ಟೆರಿಡೊಸ್ಪರ್ಮ್‌ಗಳು, ಪಿಟಸ್ ಮತ್ತು ಡ್ಯಾಡೊಕ್ಸೈಲಾನ್‌ಗಳು ಫರ್ನ್‌ಮರಗಳು. ಈ ಕಾಲದ ಮತ್ತೊಂದು ವಿಶಿಷ್ಟ ಸಸ್ಯವೆಂದರೆ ಕಾರ್ಡೈಟಿಸ್. ಇದರಲ್ಲಿ ಸೈಕ್ಯಾಡ್ ಮತ್ತು ಕೋನಿಫೆರಗಳೆರಡರ ಲಕ್ಷಣಗಳೂ ಇವೆ. ಇದರ ಎಲೆಗಳಲ್ಲಿ ಸಮಾಂತರ ಪತ್ರನರಗಳಿವೆ.

ವಿವಿಧ ವರ್ಗಗಳಿಗೆ ಸೇರಿದ ಸಾಗರವಾಸಿ ಜೀವಿಗಳು ಹೇರಳವಾಗಿದ್ದುವು. ಆಗ ಪೊರಮಿನಿಫೆರಗಳು ಎಷ್ಟು ಹೆಚ್ಚಾಗಿದ್ದುವೆಂದರೆ ಅವುಗಳ ಅವಶೇಷರಾಶಿಗಳಿಂದಲೇ ಕೆಲವು ಸುಣ್ಣಶಿಲೆಗಳ ಸಂಚಯನವಾಗಿದೆ. ಇವುಗಳಲ್ಲಿ ಬ್ರಿಟನ್ ಮತ್ತು ಬೆಲ್ಜಿಯಂಗಳಲ್ಲಿ ಸಕ್ಕಮೈನ ಸುಣ್ಣಶಿಲೆ ಮತ್ತು ವಾಲ್ವುಲೈನ ಸುಣ್ಣಶಿಲೆಯೂ ಮುಖ್ಯವಾದವು. ಇವಲ್ಲದೆ ಲ್ಯಾಜಿನ, ನೋಡೋಸೇರಿಯ ಎಂಡೊತ್ಥೈರ ಟೆಕ್ಸುಟುಲೇರಿಯ ಮತ್ತು ಸ್ಕ್ವಾಗೆರೈನಗಳು ಈ ಕಾಲದ ಪೊರಮಿನಿಫೆರಗಳಲ್ಲಿ ಮುಖ್ಯವಾದವು.

ಈ ಕಾಲದಲ್ಲಿ ರೂಗೋಸ ಮತ್ತು ಟ್ಯಾಬುಲೇಟ ಎಂಬ ಎರಡು ಹವಳಶಾಖೆಗಳು ಇದ್ದುವು. ಸಿರಿಂಗಪೋರ ಮತ್ತು ಫೇವೊಸೈಟಸ್‌ಗಳೆರಡೇ ಮುಖ್ಯ ಟ್ಯಾಬುಲೇಟ ಹವಳಗಳಾದರೂ ಅವು ರೂಗೋಸ ಹವಳಗಳಿಂತಲೂ ಹೆಚ್ಚು ಸಂಖ್ಯೆಯಲ್ಲಿದ್ದುವು. ಝುಫ್ರೆಂಟಸ್, ಸಯತೋಫಿಲ್ಲಂ, ಆಲೊಫೊಲ್ಲಂ, ಲಿತೊಸ್ಟ್ರೋಷನ್ ಮತ್ತು ಲ್ಯಾನ್ಸ್‌ಡೇಲಿಯಗಳು ಮುಖ್ಯವಾದ ರೂಗೋಸ ಹವಳಗಳು. ಕೊನೆಯ ಎರಡು ಹವಳಗಳ ಉದಯ ಭೂ ಇತಿಹಾಸದಲ್ಲಿ ಗಮನ ಸೆಳೆಯುವ ಅಂಶವಾಗಿದೆ. ಕಾರ್ಬನಿಫೆರಸ್ ಸ್ತೋಮವನ್ನು ಶಿಲಾಪಾದಗಳನ್ನಾಗಿ ವಿಭಜಿಸಲು ಹವಳಗಳು ಸಹಕಾರಿಯಾಗಿವೆ.

ಬ್ರೇಕಿಯೋಪೋಡಗಳು ಸಹ ಆ ಕಾಲದಲ್ಲಿ ಹೇರಳವಾಗಿಯೇ ಇದ್ದುವು. ಅತಿಯಾಗಿ ಉಬ್ಬಿದ ಕೆಳ ಮತ್ತು ಅಷ್ಟೇ ಗುಳಿಬಿದ್ದ ಮೇಲ್ಚಿಪ್ಪು ಹೊಂದಿದ ಪ್ರೊಡಕ್ಟಸ್ ಈ ಕಾಲದ ವಿಶಿಷ್ಟ ಬ್ರೇಕಿಯೋಪೋಡವಾಗಿತ್ತಲ್ಲದೆ ಅದಕ್ಕೆ ವಿಶಾಲ ಭೌಗೋಳಿಕ ವ್ಯಾಪ್ತಿ ಸಹ ಇತ್ತು. ಸ್ಪಿರಿಫೆರ, ಸಿರಿಂಗೊತೀರಿಸ್, ಕಾನೆಟಸ್, ಡಿಯಾಲಾಸ್ಮ ಮತ್ತು ಲಿಂಗ್ಯುಲಗಳು

| ಫ್ರಾನ್ಸ್ ಮತ್ತು ಶ್ರೇಣಿಗಳು | ಬೆಲ್ಜಿಯಂ | ಬ್ರಿಟನ್ | ಅಮೆರಿಕ ಸಂಯುಕ್ತ ಸಂಸ್ಥಾನ | ರಷ್ಯ | ಭಾರತ |
|---|---|---|---|---|---|
| ಯುರೇಲಿಯನ್ (ಮೇಲ್ಭಾಗ) | ಸ್ಟೆಫೇನಿಯನ್ | | | ಯುರೇಲಿಯನ್ | ಆಲಿವ್ ಜೇಡುಶಿಲೆ ಚುಕ್ಕೆ ಮರುಳುಶಿಲೆ ನೀರ್ಗಲ್ಲು ಗಂಡುಶಿಲೆ |
| ಮಸ್ಕೊವಿಯನ್ | ವೆಸ್ಟ್‌ಫಾಲಿಯನ್ (ಮಧ್ಯಭಾಗ) | ಕಲಿದ್ದಲು ನಮೂರಿಯನ್ | ಪೆನ್ಸಿಲ್ವೇನಿಯನ್ ಸ್ತರಗಳು ಮಿಲ್ ಸ್ಟೋನ್‌ಗ್ರಿಟ್ | ಮಾಸ್ಕೊವಿಯನ್ | ಪೊಶ್ರೇಣಿ ಪೆನೆಸ್ಟೆಲ್ಲಾ ಜೇಡುಶಿಲೆ ತಾಬುಪಾದ |
| ಡೈನಾಂಟಯನ್ (ಕೆಳಭಾಗ) | ಡೈನಾಂಟಿಯನ್ | ಪರ್ವತಸುಣ್ಣಶಿಲೆ ಅಪೊನಿಯನ್ | ಮಿಸ್ಸಿಸಿಪಿಯನ್ | ಕಲ್ಮ್ | ಲಿಪಾಕ್‌ಶ್ರೇಣಿ ಮತ್ತು ಸಿರಿಂಗಥೀರಸ್ ಸುಣ್ಣಶಿಲೆ |

ಕಾರ್ಬನಿಫೆರಸ್ ಸ್ತೋಮಗಳಲ್ಲಿ ಸಸ್ಯಾವಶೇಷಗಳು ಹೇರಳವಾಗಿವೆ. ಈ ಸಸ್ಯವರ್ಗ ಪ್ರಪಂಚದ ಮುಕ್ಕಾಲುಭಾಗದ ಕಲ್ಲಿದ್ದಲಿನ ಆಕರವಾಗಿರುವುದರಿಂದ (ಈಗಿನ ಸಸ್ಯವರ್ಗವನ್ನುಳಿದು) ಸಸ್ಯವರ್ಗದ ವಿಚಾರವಾಗಿ ಗೊತ್ತಿಲ್ಲದಿರುವುದರಿಂದ ಎಲ್ಲರ ಗಮನವನ್ನೂ ಸೆಳೆಯುತ್ತದೆ. ಈ ಕಾಲದ ಅನೇಕ ಸಸ್ಯಗಳನ್ನು ಈಗಿನ ಜಾತಿಗಳಿಗೆ

ಹೇರಳವಾಗಿದ್ದುವು. ಎಕಿನಾಯಿಡ್‌ಗಳು ಸಿಡಾರಿಸ್‌ನ ಸಾದಾ ಪ್ರಕಾರಗಳಿಂದ ಪ್ರತಿನಿಧಿತವಾಗಿದ್ದುವು. ಕ್ರೈನಾಯಿಡ್‌ಗಳಿಗೆ ಅಸಾಧಾರಣವಾಗಿ ಅಧಿಕವಾಗಿದ್ದುದನ್ನು ಅವುಗಳ ಅವಶೇಷಗಳಿಂದ ಸಂಚಯನಗೊಂಡ ಸುಣ್ಣಶಿಲೆಗಳೂ ವ್ಯಕ್ತಪಡಿಸುತ್ತವೆ. ಬ್ಲಾಸ್ಟಾಯಿಡ್‌ಗಳು ವಿಕಾಸದ ಉನ್ನತ ಶಿಖರವನ್ನು ಮುಟ್ಟಿದ್ದುವು. ಪೆಂಟ್ರಿಮೈಟಿಸ್ ಮತ್ತು ಕೊಡಾಸ್ಟರ್

ಅವುಗಳಲ್ಲಿ ಮುಖ್ಯವಾದುದು. ಬೆಲೆರಪಾನ್, ಯೋರಿಡೆಸ್ಮಗಳು ಈ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದ ಶಂಖಗಳು. (ಡಿ.ಆರ್.)

**ಕಾರ್ಬೀನುಗಳು :** ಡೈಆಜ಼ೊ ಮೀಥೇನ್ ಎಂಬ ಸಂಯುಕ್ತವನ್ನು ಹೆಚ್ಚು ಬಿಸಿ ಮಾಡಲಾಗಿ ನೈಟ್ರೋಜನ್ ಮತ್ತು ಪ್ರಬಲ ಪ್ರತಿಕ್ರಿಯಾಪೂರಿತ ಎರಡು ಪ್ರಭೇದಗಳು ಸಿಕ್ಕುತ್ತವೆ. ಇವುಗಳ ಪೈಕಿ ಒಂದರ ಹೆಸರು ಮೆಥಿಲೀನ್ ಮತ್ತೊಂದು ಹೆಸರು ಕಾರ್ಬೀನ್, ಇವೆರಡರ ಅಣುಸೂತ್ರವೂ $CH_2$, ಆದರೆ ಮೆಥಿಲೀನಿನಲ್ಲಿರುವ ಎರಡು ಎಲೆಕ್ಟ್ರಾನುಗಳು ಜೋಡಿ ಆಗಿರುವುದಿಲ್ಲ (ಇದಕ್ಕೆ ಟ್ರಿಪ್ಲೆಟ್ ಸ್ಥಿತಿ ಎಂದು ಹೆಸರು); ಕಾರ್ಬೀನಿನಲ್ಲಿರುವ ಎರಡು ಎಲೆಕ್ಟ್ರಾನುಗಳು ಜೋಡಿಯಾಗಿರುತ್ತವೆ. ಅಲ್ಲದೆ ಒಂದು ಎಲೆಕ್ಟ್ರಾನ್ ಕಕ್ಷೆ ಖಾಲಿ ಇರುತ್ತದೆ (ಇದಕ್ಕೆ ಸಿಂಗ್ಲೆಟ್ ಸ್ಥಿತಿ ಎಂದು ಹೆಸರು). ಬಹುಶಃ ಮೊದಲು ಸಿಕ್ಕುವಂಥ ಪದಾರ್ಥವಾದ ಕಾರ್ಬೀನಿನಲ್ಲಿ ಹೆಚ್ಚಿನ ಸ್ಥಿರತ್ವ ಇರುವುದಿಲ್ಲ; ಅಲ್ಲದೆ ಕಾರ್ಬೀನು ಬಹಳ ಹೊತ್ತಿನ ಅನಂತರ ನಿಧಾನವಾಗಿ ಮೆಥಿಲೀನ್ ಆಗಿ ಪರಿವರ್ತನೆಗೊಳ್ಳುತ್ತದೆ.

$$CH_2N_2 \xrightarrow[\text{ಉಷ್ಣತೆ}]{\text{ಅಧಿಕ}} + N_a + \overset{C}{\underset{H}{|}} - H \rightarrow H - C - H$$

ಡೈಅಜ಼ೊ ಮೀಥೇನ್ ಕಾರ್ಬೀನ್ ಮೆಥಿಲೀನ್

ಕಾರ್ಬೀನುಗಳಲ್ಲಿ ಹೆಚ್ಚಿನ ಸ್ಥಿರತ್ವವಿಲ್ಲದಿರುವುದರಿಂದ ಅವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಆದರೆ ಅವುಗಳ ಇರುವಿಕೆಯನ್ನು ರೋಹಿತದಿಂದ ನೋಡಬಹುದು. ಕಾರ್ಬೀನುಗಳು ಪ್ರತಿಕ್ರಿಯಾಪೂರಿತವಾಗಿರುವುದರಿಂದ ಎಷ್ಟೋ ಪ್ರತಿಕ್ರಿಯೆಗಳಲ್ಲಿ ಅವು ಮಧ್ಯವರ್ತಿಗಳಾಗಿರುವುದನ್ನು ಕಾಣಬಹುದು.

ದ್ವಿಬಂಧಕ್ಕೆ ಕೂಡಿಕೊಳ್ಳುವಿಕೆ: ಸಿಸ್ ಬ್ಯುಟೀನ್ ಅಥವಾ ಟ್ರಾನ್ಸ್ ಬ್ಯುಟೀನನ್ನು ಡೈಆಜ಼ೋಮೀಥೇನಿನ ಜೊತೆಗೆ ಕ್ಯುಪ್ರಸ್ ಕ್ಲೋರೈಡನ್ನು $Cu_2Cl_2$ ಅನ್ಯಪರಿಣಾಮಕಾರಿಯಾಗಿ ಉಪಯೋಗಿಸಿ ಪ್ರತಿಕ್ರಿಯೆಗೆ ಒಳಪಡಿಸಲಾಗಿ ಬರುವ ಕಾರ್ಬೀನು ದ್ವಿಬಂಧಕ್ಕೆ ಕೂಡಿಕೊಂಡು ಚಕ್ರಾಕಾರದ ಸಂಯುಕ್ತಗಳು ಕೆಳಗೆ ತೋರಿಸಿದಂತೆ ಆಗುತ್ತವೆ.

**ಸ್ಯಾಲಿಸಿಲಾಲ್ಡಿಹೈಡ್ ತಯಾರಿಕೆ :** ಪ್ರಬಲ ಕ್ಷಾರಯುಕ್ತ ಫೀನಾಲನ್ನು $C_6H_5OH$ ಕ್ಲೋರೋಫಾರ್ಮಿನ ಜೊತೆ ಪ್ರತಿಕ್ರಿಯೆಗೆ ಒಳಪಡಿಸುವುದರಿಂದ ಒಂದು CHO ಗುಂಪು




ಫೀನಾಲಿನ OH ಗುಂಪಿಗೆ ಸಂಬಂಧಿಸಿದಂತೆ ಆರ್ಥೋ ಸ್ಥಾನದಲ್ಲಿ ಸೇರಿಕೊಳ್ಳುತ್ತದೆ; ಮತ್ತು ಸಾಲಿಸಿಲಾಲ್ಡಿಹೈಡು ತಯಾರಾಗುತ್ತದೆ. ಮೊದಲು ಕ್ಲೋರೊಫಾರ್ಮ್ ಕ್ಷಾರದ




ಸಂಗಡ ಪ್ರತಿಕ್ರಿಯೆ ಹೊಂದಿ ಮಧ್ಯವರ್ತಿಯಾದ ಕಾರ್ಬೀನ್–ಡೈ–ಕ್ಲೋರೈಡ್ ತಯಾರಾಗುತ್ತದೆ.

ಕಾರ್ಬೀನ್ ಡೈ ಕ್ಲೋರೈಡು ಫೀನಾಲಿಗೆ ಕೂಡಿಕೊಂಡು ಕೆಳಗೆ ತೋರಿಸಿದಂತೆ ಸ್ಯಾಲಿ ಸಿಲಾಲ್ಡಿಹೈಡ್ ತಯಾರಾಗುತ್ತದೆ.

ಈಥೈಲ್ ಫಾರ್ಮೇಟ್ ತಯಾರಿಕೆ: ಸೋಡಿಯಂ ಈಥೊಕ್ಸೈಡು ಕ್ಲೋರೋಫಾರ್ಮಿನೊಂದಿಗೆ ಪ್ರತಿಕ್ರಿಯೆಗೆ ಒಳಪಡುವುದರಿಂದ ಈಥೈಲ್ ಫಾರ್ಮೇಟ್ ತಯಾರಾಗುತ್ತದೆ.




$$CHCl_3 + 3C_2H_5ONa \rightarrow HC\left(OC_2H_5\right)_3 + 3NaCl$$

ಮೊದಲು ಋಣವಿದ್ಯುದ್ವಾಹಿ ಈಥೊಕ್ಸೈಡ್ ಕಣ ಕ್ಲೋರೋಫಾರ್ಮಿನಿಂದ ಒಂದು ಪ್ರೋಟಾನನ್ನು ಬೇರ್ಪಡಿಸುವುದರಿಂದ ಕಾರ್ಬೀನ್ ಡೈಕ್ಲೋರೈಡ್ ಮಧ್ಯವರ್ತಿಯಾಗಿ ತಯಾರಾಗುತ್ತದೆ. (ಋಣ ವಿದ್ಯುದ್ವಾಹಿಗಳಾದ ಮೂರು ಕ್ಲೋರಿನ್ ಪರಮಾಣುಗಳ ಸಹಾಯದಿಂದ ಈ ಪ್ರತಿಕ್ರಿಯೆ ಆಗುತ್ತದೆ.)

$$CHCl_3 + C_2H_5O(-) \rightarrow (-) : CCl_3 + C_2H_5OH$$
$$(-)$$

$$:CCl_3 \rightarrow \underset{Cl}{\ddot{C}} - Cl + Cl(-)$$

ಕಾರ್ಬೀನ್–ಡೈ–ಕ್ಲೋರೈಡ್ ಮುಂದೆ ಕೆಳಗೆ ತೋರಿಸಿದಂತೆ ಪ್ರತಿಕ್ರಿಯೆ ಹೊಂದಿ ಈಥೈಲ್ ಫಾರ್ಮೇಟ್ ತಯಾರಾಗುತ್ತದೆ.

$$:CCl_2 + 3\left[C_2H_5O^-\right] \rightarrow [C_2H_5O](-)C : +2Cl(-)$$
$$[C_2H_2O](-)C + C_2H_5OH \rightarrow [C_2H_5O]CH + C_2H_2O(-)$$




ಚಕ್ರಾಕಾರದ ಪ್ರೋಪೀನುಗಳು: ಕಾರ್ಬೀನುಗಳು ಅಸಿಟಲೀನ್‌ಗಳ ಸಂಗಡ ಪ್ರತಿಕ್ರಿಯೆ ಹೊಂದಿ ಚಕ್ರಾಕಾರದ ಪ್ರೋಪೀನುಗಳು ಕೆಳಗೆ ತೋರಿಸಿದಂತೆ ಆಗುತ್ತವೆ.

**ಅಲ್ಲೀನ್‌ಗಳ ತಯಾರಿಕೆ:** ಡೈಬ್ರೋಮೋ ಕಾರ್ಬೀನು ದ್ವಿಬಂಧಕ್ಕೆ ಕೂಡಿಕೊಂಡು ಬರುವ ಸಂಯುಕ್ತವನ್ನು ಮೆಗ್ನೀಸಿಯಂನೊಂದಿಗೆ ಈಥರ್ ಮಾಧ್ಯಮದಲ್ಲಿ ಪ್ರತಿಕ್ರಿಯೆಗೆ ಒಳಪಡುಸುವುದರಿಂದ ಬರುವ ಸಂಯುಕ್ತವೇ ಅಲ್ಲೀನು.




ಮೊದಲಾದ ಪ್ರಮುಖ ಸಂಯುಕ್ತಗಳನ್ನು ತಯಾರಿಸುವುದರಲ್ಲಿ ಕಾರ್ಬೀನುಗಳ ಉಪಯೋಗ ಉಂಟು. (ಎಲ್.ಡಿ.ಎಂ.)

**ಕಾರ್ಬೆಟ್, ಜಿಮ್ :** 1875–1955. ಭಾರತದಲ್ಲಿ ನೆಲಸಿದ್ದ ಪ್ರಸಿದ್ಧ ಇಂಗ್ಲಿಷ್ ಬೇಟೆಗಾರ. ಈತ ಪ್ರಸಿದ್ಧ. ಈತನ ಹುಟ್ಟೂರು ಕಾಲಧುಂಗಿ. ಇದು ಕುಮಾಂವ್ ಬೆಟ್ಟಗಳ ಸಾಲಿನಲ್ಲಿ ಉತ್ತಮ ಆರೋಗ್ಯಧಾಮವಾದ ನೈನಿತಾಲಿಗೆ 32 ಕಿಮೀ ದೂರದಲ್ಲಿದೆ. ಕಾಲಧುಂಗಿಯಲ್ಲಿ ಈತನಿಗೆ ಅನೇಕ ಎಕರೆ ಜಮೀನಿತ್ತು. ಅಲ್ಲದೆ ಈತ ಮೊಕಾಮ್ಮೆ ಘಾಟ್ ರೈಲುನಿಲ್ದಾಣದಲ್ಲಿ ಇಪ್ಪತ್ತೊಂದು ವರ್ಷಗಳ ಕಾಲ ಸಾಮಾನು ಸಾಗಿಸುವ ಕಂಟ್ರಾಕ್ಟರ್ ಉದ್ಯೋಗದಲ್ಲಿದ್ದುದಲ್ಲದೆ ಎರಡನೆಯ ಮಹಾಯುದ್ಧದಲ್ಲಿ ಕಂಟ್ರಾಕ್ಟ್ ಕೆಲಸವನ್ನು ಆಳುಗಳಿಗೆ ವಹಿಸಿ ನಾಲ್ಕು ವರ್ಷ ಸೈನ್ಯದಲ್ಲಿದ್ದು ಯುದ್ಧಭೂಮಿಗೂ ಹೋಗಿಬಂದ.

ಜಿಮ್ ಕಾರ್ಬೆಟ್ ತನ್ನ ಜೀವಿತದ ಬಹುಕಾಲವನ್ನು ಹಿಮಾಲಯ ಪರ್ವತದ ಶ್ರೇಣಿಯ ದಕ್ಷಿಣದ ಬೆಟ್ಟಗಳ ಸಾಲಿನಲ್ಲಿ ಕಳೆದ. ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೇ ನೆಲಸಿದ್ದ ಈತನಿಗೆ ಕಾಡಿನ ಸೊಬಗು, ಕಾಡಿನ ರಹಸ್ಯ, ವನ್ಯಜಂತುಗಳ ಸ್ವಭಾವ, ಕಾಡಿನಲ್ಲಿ ಕಷ್ಟಕಾರ್ಪಣ್ಯಗಳನ್ನು ಅನುಭವಿಸುವ ಬಡಜನ–ಇವೆಲ್ಲದರ ಸೂಕ್ಷ್ಮವಾದ ಅನುಭವವಿತ್ತು. ಕುಮಾಂವ್ ಬೆಟ್ಟಗಳ ಸಾಲಿನಲ್ಲಿದ್ದ ಅನೇಕ ನರಭಕ್ಷಕ, ಗೋಭಕ್ಷಕ ಹುಲಿಚಿರತೆಗಳನ್ನು ಕೊಂದು ಸಂತ್ರಸ್ತ ಜನರಿಗೆ ಉಪಕಾರವನ್ನೂ ಬಡಜನರಿಗೆ ಅನೇಕ ರೀತಿಯಲ್ಲಿ ಯಥೋಚಿತವಾದ ಸಹಾಯವನ್ನೂ ಈತ ಮಾಡಿದ. ದೀನದಲಿತರ ಬಗ್ಗೆ ಈತನಿಗಿದ್ದ ಪ್ರೀತಿ ಔದಾರ್ಯಗಳು ಮೆಚ್ಚುವಂಥವು.

ಕುಮಾಂವ್ ನರಭಕ್ಷಕಗಳು (ಮ್ಯಾನ್ ಈಟರ್ಸ್ ಆಫ್ ಕುಮಾಂವ್), ರುದ್ರಪ್ರಯಾಗದ ನರಭಕ್ಷಕ ಚಿರತೆ, ದೇವಾಲಯದ ಹುಲಿ ಮತ್ತು ಇನ್ನಷ್ಟು ಕುಮಾಂವ್ ನರಭಕ್ಷಕಗಳು, ನನ್ನ ಭಾರತ (ಮೈ ಇಂಡಿಯ), ಕಾಡಿನ ಚರಿತ್ರೆ–ಈ ಪುಸ್ತಕಗಳನ್ನು ಕಾರ್ಬೆಟ್ ಬರೆದಿದ್ದಾನೆ–ಈ ಗ್ರಂಥಗಳಲ್ಲಿ ತಾನು ಮಾಡಿದ ನರಭಕ್ಷಕ ಹುಲಿಚಿರತೆಗಳ ಬೇಟೆಯ ಕಥೆಗಳನ್ನು ಕಾರ್ಬೆಟ್ ಹೃದಯಂಗಮವಾಗಿ ರೋಚಕವಾಗಿ ವಿವರಿಸಿದ್ದಾನೆ. ಹುಲಿಚಿರತೆಗಳ ಹಾವಳಿ, ಅವನ್ನು ಕೊಲ್ಲಲು ಮಾಡಿದ ಸಾಹಸಗಳು, ಕೆಲವು ಸಲ ತಾನು ಕೊಂದ ದೇಹದ ಬಳಿಗೆ ಮತ್ತೆ ಬಾರದ ದುಷ್ಟಪ್ರಾಣಿಯನ್ನು ಅರಸುತ್ತ ಪಟ್ಟಪಾಡು, ತೋರಿದ ಧೈರ್ಯೋತ್ಸಾಹಗಳು–ಸ್ವಾನುಭವಪೂರ್ಣವಾಗಿದ್ದು ರೋಮಾಂಚಕಾರಿಯಾಗಿವೆ. ಈ ಗ್ರಂಥಗಳಲ್ಲಿ ಲೇಖಕನ ಅರಣ್ಯಜಗತ್ತಿನ ಪೂರ್ಣ ಪರಿಚಯವನ್ನೂ ಹವ್ಯಾಸ ಆಸಕ್ತಿಗಳನ್ನೂ ಕಾಣಬಹುದಾಗಿದೆ. ಕಾಡಿನಲ್ಲಿ ಅಲೆಯುವುದು, ಮೃಗಪಕ್ಷಿಗಳ ಮರ್ಜಿ ಸ್ವಭಾವಗಳನ್ನು ಅಭ್ಯಸಿಸುವುದು, ಅವುಗಳ ಕೂಗು ಗರ್ಜನೆಗಳನ್ನು ಅನುಕರಿಸುವುದು ಕಾರ್ಬೆಟ್ಟನಿಗೆ ಬಾಲ್ಯದಿಂದಲೂ ಹವ್ಯಾಸವಾಗಿತ್ತು. ಮೃಗಯಾ ಸಾಹಿತ್ಯದಲ್ಲಿ ಕಾರ್ಬೆಟ್ಟನದು ಎತ್ತಿದ ಕೈ. ಅಲ್ಲದೆ ಮೃಗಯಾ ಸಾಹಿತ್ಯವನ್ನು ನಿಜವಾದ ಸಾಹಿತ್ಯದ ಮಟ್ಟಕ್ಕೆ ಏರಿಸಿದ ಕೀರ್ತಿ ಇವನದಾಗಿದೆ.

ನನ್ನ ಭಾರತ ಎಂಬ ಗ್ರಂಥದಲ್ಲಿ ಬಡ ಭಾರತೀಯರ ಸತ್ಯ, ನಿಷ್ಠೆ, ಸರಳತನ, ಕಷ್ಟದ ದುಡಿಮೆಗಳನ್ನೂ ತನ್ನ ಹವ್ಯಾಸ ಉದ್ಯೋಗಗಳನ್ನೂ ಲೇಖಕ ಕಥೆಗಳಾಗಿ ಬಣ್ಣಿಸಿದ್ದಾನೆ. ಕಾಡಿನ ಚರಿತ್ರೆ ಎಂಬ ಪುಸ್ತಕದಲ್ಲಿ ತನ್ನ ಬಾಲ್ಯ, ಬಾಲ್ಯದಲ್ಲಿ ಮಾಡಿದ ಷಿಕಾರಿ ಮೊದಲಾದ ಜೀವನಾನುಭವಗಳನ್ನು ತಿಳಿಸಿದ್ದಾನೆ. ಜಿಮ್ ಕಾರ್ಬೆಟ್ ಬೇಟೆಗಾರ ಮಾತ್ರವಲ್ಲದೆ ಸಮಾಜಸುಧಾರಕನೂ ಬಡವರ ಬಂಧುವೂ ಆಗಿದ್ದನೆಂಬುದು ತಿಳಿಯುತ್ತದೆ. ತನ್ನ ವಿಶಿಷ್ಟ ಗುಣಗಳಿಂದ ಈತ ಕುಮಾಂವ್ ಬೆಟ್ಟಗಳ ಸಾಲಿನ ಹಳ್ಳಿಗರಿಗೆಲ್ಲ ಪರಿಚಿತನಾಗಿದ್ದಂತೆ ತನ್ನ ಗ್ರಂಥಗಳ ಮೂಲಕ ಜಗತ್ತಿನ ಮೃಗಯಾ ಸಾಹಿತ್ಯದ ಓದುಗರಿಗೆಲ್ಲ ಪರಿಚಿತನಾಗಿದ್ದಾನೆ.

ಕುಮಾಂವ್ ನರಭಕ್ಷಕಗಳು ಎಂಬ ಈತನ ಪುಸ್ತಕದ ಆಧಾರದ ಮೇಲೆ ರಮ್ಯ ವರ್ಣ ರಂಜಿತ ಚಲನಚಿತ್ರವೊಂದು ತಯಾರಾಗಿದೆ. (ಎಸ್.ಕೆ.ಆರ್.ಎ.)

**ಕಾರ್ಬೆಟ್, ರಿಚರ್ಡ್ :** 1582–1635. ಆಂಗ್ಲಕವಿ ಮತ್ತು ಪಾದ್ರಿಮಾಲಿಯೊಬ್ಬನ ಮಗ. ವಿದ್ಯಾಭ್ಯಾಸ ವೆಸ್ಟ್ ಮಿನಿಸ್ಟರ್ ಶಾಲೆ ಮತು ಆಕ್ಸ್‌ಫರ್ಡ್‌ಗಳಲ್ಲಿ. ತನ್ನ 37ನೆಯ ವಯಸ್ಸಿನಲ್ಲಿ ಚರ್ಚಿನ ಡೀನ್ ಆಗಿ ನೇಮಕಗೊಂಡ. ಅನಂತರ ನಾರ್‌ವಿಚ್ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ ಬಿಷಪ್ ಪದವಿಗೇರಿದ. 1647ರಲ್ಲಿ ಸರ್ಟನ್ ಎಲಿಗೆಂಟ್ ಪೊಯಮ್ಸ್ ಎಂಬ ಕವನ ಸಂಕಲನವೊಂದನ್ನು ಪ್ರಕಟಿಸಿದ. ಈ ಕವನಗಳು ಈತನ ಉಲ್ಲಾಸಕರ ಗುಣವನ್ನು ಪ್ರತಿಬಿಂಬಿಸುತ್ತವೆ. (ಎನ್.ಎಸ್.ಎಲ್.)

**ಕಾರ್ಬೈಡುಗಳು :** ಇಂಗಾಲವು ಲೋಹಗಳೊಡನೆ ಮತ್ತು ತನಗಿಂತ ಹೆಚ್ಚು ಲೋಹ ಗುಣಗಳಿರುವ ಧಾತುಗಳೊಡನೆ ಸೇರಿ ಉಂಟಾದ ಸಂಯುಕ್ತಗಳು. ಉಕ್ಕಿಗೆ ಗಡುಸುತನವನ್ನು ಕೊಡುವ ಕಬ್ಬಿಣದ ಕಾರ್ಬೈಡ್, ವಜ್ರದ ಕಾಠಿನ್ಯಕ್ಕೆ ಸಮನಾಗಿರುವ ಸಿಲಿಕಾನ್ ಕಾರ್ಬೈಡ್, ಅತ್ಯಂತ ಗಡುಸುತನದ ಯಂತ್ರ ಮತ್ತು ಯಂತ್ರಭಾಗಗಳ ತಯಾರಿಕೆಗೆ ಬೇಕಾಗುವ ಟಂಗ್‌ಸ್ಟನ್ ಕಾರ್ಬೈಡ್, ಅಸಿಟಲೀನಿನ ತಯಾರಿಕೆಗೆ ಬೇಕಾಗುವ ಕ್ಯಾಲ್ಸಿಯಂ ಕಾರ್ಬೈಡ್,—ಇವೆಲ್ಲವೂ ಈ ಗುಂಪಿಗೆ ಸೇರಿದವು. ಸಾಧಾರಣವಾಗಿ ಲೋಹದ ಅಥವಾ ಅದರ ಆಕ್ಸೈಡಿನ ಪುಡಿಯೊಂದಿಗೆ ಇಂಗಾಲವನ್ನು ಬೆರೆಸಿ ಹೆಚ್ಚು ಉಷ್ಣತೆಗೆ ಒಳಪಡಿಸುವುದರಿಂದ ಈ ರಸಾಯನ ವಸ್ತುಗಳನ್ನು ತಯಾರಿಸುತ್ತಾರೆ. ಅತಿ ಹೆಚ್ಚು ಉಷ್ಣತೆಯನ್ನು ತಡೆದಿಟ್ಟುಕೊಳ್ಳುವ ಮಫಲ್ ಒಲೆಯನ್ನು ಇವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಅಸಿಟಲೀನನ್ನು ಅಮೋನಿಯದಲ್ಲಿ ಕರಗಿದ ಲೋಹ ದ್ರಾವಣದಲ್ಲಿ ಹಾಯಿಸಿ ಅನಂತರ ಮತ್ತೆ ಕಾಸುವುದು ಇನ್ನೊಂದು ಮಾರ್ಗ, ಸೋಡಿಯಂ ಕಾರ್ಬೈಡಿನ ತಯಾರಿಕೆ ಇದಕ್ಕೆ ಉದಾಹರಣೆ. ಲೋಹದ ಉಪ್ಪುಗಳ ದ್ರಾವಣಗಳ ಮೂಲಕ ಅಸಿಟಲೀನನ್ನು ಹಾಯಿಸಿ ತಾಮ್ರ, ಬೆಳ್ಳಿ, ಬಂಗಾರ, ಕ್ಯಾಡ್ಮಿಯಂ ಮತ್ತು ಪಾದರಸಗಳ ಕಾರ್ಬೈಡುಗಳನ್ನು ತಯಾರಿಸುತ್ತಾರೆ. ಟಂಗ್‌ಸ್ಟನ್ ಲೋಹದ ಪುಡಿ ಮತ್ತು ಇದ್ದಲಿನ ಪುಡಿಯನ್ನು ಗ್ರಾಫೈಟಿನ ಮೂಸೆಯಲ್ಲಿ 1,400° ಸೆಂ. ವರೆಗೂ ಕಾಸುವುದರಿಂದ ಈ ಲೋಹದ ಕಾರ್ಬೈಡು ತಯಾರಾಗುವುದು. ಟ್ಯಾನ್ಟಲಂ ಕಾರ್ಬೈಡನ್ನು ತಯಾರಿಸಲು ಅದರ ಆಕ್ಸೈಡನ್ನು ಇಂಗಾಲದೊಂದಿಗೆ 2,000° ಸೆಂ. ವರೆಗೂ ಕಾಯಿಸಬೇಕು. ಕ್ಯಾಲ್ಸಿಯಂ ಕಾರ್ಬೈಡಿನ ತಯಾರಿಕೆಯೂ ಹೀಗೆಯೇ. ಅದರ ಆಕ್ಸೈಡು ಅಥವಾ ಕಾರ್ಬೊನೇಟನ್ನು ಇಂಗಾಲದೊಂದಿಗೆ ಬೆರೆಸಿ ವಿದ್ಯುತ್ ಒಲೆಯಲ್ಲಿ ಕಾಯಿಸಿ ಅದು ದ್ರವರೂಪದಲ್ಲಿ ಇರುವಾಗಲೇ ಬಗ್ಗಿಸಿಕೊಳ್ಳುತ್ತಾರೆ. ಉಳಿದೆಲ್ಲ ಕಾರ್ಬೈಡುಗಳ ತಯಾರಿಕೆಗೆ ಅವುಗಳ ಕರಗುವ ಬಿಂದುವಿಗಿಂತ ಕಡಿಮೆ ಉಷ್ಣತೆ ಸಾಕು. ಆದರೆ ಕ್ಯಾಲ್ಸಿಯಂ ಕಾರ್ಬೈಡು ಉಳಿದವುಗಳಂತಲ್ಲ.

ಸಾಮಾನ್ಯವಾಗಿ ಕಾರ್ಬೈಡುಗಳು ಬಹಳ ಗಡುಸು ಮತ್ತು ಬಹು ಬೇಗನೆ ಒಡೆಯುವ ಹರಳುಗಳು. ಸಿಲಿಕಾನ್ ಮತ್ತು ಬೋರಾನ್ ಕಾರ್ಬೈಡುಗಳು ವಜ್ರದಷ್ಟು ಗಡಸು. ಕ್ರೋಮಿಯಂ ಕಾರ್ಬೈಡ್ ಗೋಮೇಧಿಕ (ಟೊಪಾಜ಼್) ಮೇಲೆ ಗೀರು ಹಾಕುವಷ್ಟು ಗಡುಸು. ಇವುಗಳ ಕರಗುವ ಬಿಂದುಗಳು ಬಲು ಹೆಚ್ಚು. ಟ್ಯಾನ್ಟಲಂ ಕಾರ್ಬೈಡಿನ ಕರಗುವ ಬಿಂದು 4,150° ಸೆಂ. ನಮಗೆ ಗೊತ್ತಿರುವ ವಸ್ತುಗಳಲ್ಲಿ ಅತಿ ಹೆಚ್ಚಿನ ಕರಗುವ ಬಿಂದು ಇರುವ ರಾಸಾಯನಿಕ ವಸ್ತು ಇದೇ. ಈ ಕಾರ್ಬೈಡುಗಳ ಬಣ್ಣವೂ ವಿವಿಧ ರೀತಿಯವು. ಸಾಧಾರಣವಾಗಿ ಬೂದಿಯ ಬಣ್ಣ ಇದ್ದರೂ ಕ್ಯಾಲ್ಸಿಯಂ ಕಾರ್ಬೈಡು ಬಣ್ಣರಹಿತ ಹರಳು. ಅಲ್ಯೂಮಿನಿಯಂ ಕಾರ್ಬೈಡ್ ಅಚ್ಚ ಹಳದಿ. ಟಾನ್ಟಲಂ ಕಾರ್ಬೈಡ್ ಕಂದು ಬಣ್ಣ. ಸಿಲಿಕಾನ್ ಕಾರ್ಬೈಡಿಗೆ ಹೊಳೆಯುವ ತೆಳು ಹಸುರಿನಿಂದ ಹಿಡಿದು ಪಚ್ಚೆಯ ನೀಲದವರೆಗಿನ ಬಣ್ಣವಿದೆ.

ರಸಾಯನ ಗುಣಗಳ ದೃಷ್ಟಿಯಲ್ಲಿಯೂ ಇವುಗಳ ಗುಣ ವ್ಯತ್ಯಾಸ ಬಲು ಹೆಚ್ಚು. ಕೆಲವಂತೂ ಸಾಧಾರಣ ಪರಿಸ್ಥಿತಿಯಲ್ಲಿಯೂ ಸ್ಫೋಟಕಗಳು. ಆದರೆ ಕೆಲವು ಬಿಳಿಯ ಉಷ್ಣದಲ್ಲಿಯೂ ಸ್ಥಿರವಾಗಿರಬಲ್ಲವು. ಕ್ಯಾಲ್ಸಿಯಂ ಕಾರ್ಬೈಡನ್ನು ಒಡೆದು ಅಸಿಟಲೀನನ್ನು ಬಿಡುಗಡೆ ಮಾಡಲು ಬರೀ ನೀರು ಸಾಕು. ಕಬ್ಬಿಣದ ಕಾರ್ಬೈಡು ಹೈಡ್ರೋಕಾರ್ಬನುಗಳನ್ನು ಕೊಡಲು ದುರ್ಬಲ ಆಮ್ಲಗಳು ಬೇಕು. ಆದರೆ ಟ್ಯಾನ್ಟಲಂ ಕಾರ್ಬೈಡನ್ನು ಎಂಥ ಶಕ್ತಿಯುತ ಆಮ್ಲಗಳೂ ಏನೂ ಮಾಡಲಾರವು. ಹೈಡ್ರೋಫ್ಲೋರಿಕ್ ಆಮ್ಲ ಮತ್ತು ನೈಟ್ರಿಕ್ ಆಮ್ಲ ಎರಡೂ ಸೇರಿದಾಗ ಮಾತ್ರ ಎದುರಿಸಬಲ್ಲವು. ಸಿಲಿಕಾನ್ ಕಾರ್ಬೈಡಂತೂ ಇನ್ನೂ ಸ್ಥಿರ; ಅದನ್ನು 600° ಸೆಂ. ಉಷ್ಣತೆಯಲ್ಲಿಯೂ ಉತ್ಕರ್ಷಣ ಮಾಡಲು ಅಸಾಧ್ಯ. (ಎ.ಎಸ್.ಆರ್.)

**ಕಾರ್ಬೊನೇಟುಗಳು :** ಕಾರ್ಬಾನಿಕಾಮ್ಲದ ($H_2CO_3$) ಲವಣಗಳು. ಕಾರ್ಬಾನಿಕಾಮ್ಲ ದ್ವಿಪ್ರತ್ಯಾಮ್ಲೀಯ ಆಮ್ಲವಾಗಿರುವುದರಿಂದ ನಾರ್ಮಲ್ ಕಾರ್ಬಾನೇಟುಗಳು (ಉದಾ: ಸೋಡಿಯಂ ಕಾರ್ಬೊನೇಟು, $Na_2CO_3$) ಮತ್ತು ಆಮ್ಲೀಯ ಕಾರ್ಬೊನೇಟು ಅಥವಾ ಬೈಕಾರ್ಬೊನೇಟುಗಳು (ಉದಾ: ಸೋಡಿಯಂ ಬೈಕಾರ್ಬೊನೇಟು, $NaHCO_3$) ಎಂದು ಎರಡು ಶ್ರೇಣಿಯ ಲವಣಗಳನ್ನು ಕೊಡುತ್ತದೆ. ಸೋಡಿಯಂ, ಕ್ಯಾಲ್ಸಿಯಂ

ಮತ್ತು ಮೆಗ್ನೀಸಿಯಂ ಕಾರ್ಬೊನೇಟುಗಳು ಕೈಗಾರಿಕಾ ರಾಸಾಯನಿಕಗಳಾಗಿ ಪ್ರಾಮುಖ್ಯ ಪಡೆದಿವೆ. ಇವು ಮತ್ತು ಇತರ ಲೋಹಗಳ ಕಾರ್ಬೊನೇಟುಗಳನ್ನು ವಿವಿಧ ಲೋಹಗಳ ಕೆಳಗೆ ವಿವರಿಸಲಾಗಿದೆ. ಆರ್ಗ್ಯಾನಿಕ್ ಕಾರ್ಬೊನೇಟುಗಳು ಕಾರ್ಬಾನಿಕಾಮ್ಲ ಮತ್ತು ಆರ್ಥೋಕಾರ್ಬೊನಿಕಾಮ್ಲದ ಎಸ್ಟರುಗಳು.

ಲೋಹಗಳ ಕಾರ್ಬೊನೇಟುಗಳು: ಅಲ್ಯೂಮಿನಿಯಂ ಮತ್ತು ಕ್ರೋಮಿಯಂ ವಿನಾ ಎಲ್ಲ ಲೋಹಗಳೂ ಕಾರ್ಬೊನೇಟುಗಳನ್ನು ಕೊಡುತ್ತವೆ. ಆದರೆ ಇತ್ತೀಚೆಗೆ ಅಲ್ಯೂಮಿನಿಯಂ ಮತ್ತು ಕ್ರೋಮಿಯಂ ಕಾರ್ಬೊನೇಟುಗಳನ್ನೂ ತಯಾರಿಸಿರುವುದಾಗಿ ವರದಿಯಾಗಿದೆ. ಕ್ಷಾರ ಲೋಹಗಳು (ಆಲ್ಕಲಿ ಮೆಟಲ್ಸ್) ಕಾರ್ಬೊನೇಟು ($M_2CO_3$) ಮತ್ತು ಬೈಕಾರ್ಬೊನೇಟುಗಳೆರಡನ್ನೂ ($MHCO_3$) ಕೊಡುತ್ತವೆ. ಬಿಸ್ಮತ್, ಕಾಪರ್ ಮತ್ತು ಮೆಗ್ನೀಸಿಯಂಗಳು ಪ್ರತ್ಯಾಮ್ಲೀಯ ಕಾರ್ಬೊನೇಟುಗಳನ್ನು ಮಾತ್ರ ಕೊಡುತ್ತವೆ. ಅನೇಕ ಕಾರ್ಬೊನೇಟುಗಳು ಖನಿಜಗಳ ರೂಪದಲ್ಲಿ ಪ್ರಕೃತಿಯಲ್ಲಿ ಹೇರಳವಾಗಿ ಸಿಗುವುವು. ಸುಣ್ಣಕಲ್ಲು, ಅಮೃತಶಿಲೆ, ಸಮುದ್ರ ಪ್ರಾಣಿಗಳ ಚಿಪ್ಪುಗಳು, ಹವಳ ಇವೆಲ್ಲ ಕಾಲ್ಸಿಯಂ ಕಾರ್ಬೊನೇಟುಗಳು. ಕ್ಯಾಲ್ಸೈಟು ಶುದ್ಧವಾದ ಕ್ಯಾಲ್ಸಿಯಂ ಕರ್ಬೊನೇಟು. ಮ್ಯಾಲಕೈಟು ಮತ್ತು ಅಝುರೈಟುಗಳೆರಡೂ ಪ್ರತ್ಯಾಮ್ಲೀಯ ಕಾಪರ್ ಕಾರ್ಬೊನೇಟುಗಳು [$Cu_2CO_3(OH_2)$]. ಮ್ಯಾಗ್ನಸೈಟ್ ಖನಿಜ ಮೆಗ್ನೀಸಿಯಂ ಕಾರ್ಬೊನೇಟ್ ($MgCO_3$). ಡಾಲಮೈಟು ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಕಾರ್ಬೊನೇಟುಗಳಿಂದಾದ ಯುಗ್ಮಲವಣ ($CaCO_3.MgCO_3$). ವಿದರೈಟು ಬೇರಿಯಂ ಕಾರ್ಬೊನೇಟ್ ($BaCO_3$). ಸ್ಟ್ರಾನ್ಷಿಯೊನೈಟ್ ಖನಿಜ ಸ್ಟ್ರಾನ್ಷಿಯಂ ಕಾರ್ಬೊನೇಟ್ ($SrCO_3$). ಸತುವಿನ ಕರ್ಬೊನೇಟಾದ ಕ್ಯಾಲಮಿನ್ ($ZnCO_3$) ಸೀಸದ ಕಾರ್ಬೊನೇಟ್ ($PbCO_3$) ಆದ ಸೆರುಸೈಟ್ ಮತ್ತು ಫೆರಸ್ ಕಾರ್ಬೊನೇಟ್ ($FeCO_3$) ಆದ ಸಿಡರೈಟ್ ಇವು ಇತರ ಮುಖ್ಯ ಕಾರ್ಬೊನೇಟ್ ಖನಿಜಗಳು. ಇವು ಪ್ರಕೃತಿಯ ಜಲಮೂಲಗಳಲ್ಲಿ ಕಾರ್ಬಾನಿಕಾಮ್ಲದ ರೂಪದಲ್ಲಿಯೂ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಬೈಕಾರ್ಬೊನೇಟುಗಳಾಗಿಯೂ ರಕ್ತದಲ್ಲಿ ಸೋಡಿಯಂ ಹೈಡ್ರೊಜನ್ ಕಾರ್ಬೊನೇಟಾಗಿಯೂ ಇವೆ. ಟ್ರೋನಾ ಎಂದು ಕರೆಯುವ ಸೋಡಿಯಂ ಸೆಸ್ಕ್ವಿ ಕಾರ್ಬೊನೇಟ್ ($Na_2CO_3, NaHCO_3 2H_2O$) ಆಫ್ರಿಕಾದ ಸರೋವರಗಳ ನಿಕ್ಷೇಪದಲ್ಲಿ ದೊರೆಯುತ್ತದೆ.

ಲೋಹಗಳ ಹೈಡ್ರಾಕ್ಸೈಡಿನ ಕ್ಷಾರ ದ್ರಾವಣದ ಮುಖಾಂತರ ಇಂಗಾಲದ ಡೈ ಆಕ್ಸೈಡನ್ನು ಪರ್ಯಾಪ್ತತೆವರೆಗೂ ಹಾಯಿಸುವುದರಿಂದ ಕ್ಷಾರಲೋಹಗಳ ಬೈಕಾರ್ಬೊನೇಟುಗಳನ್ನು ತಯಾರಿಸಬಹುದು. $MOH+CO_2=MHCO_3$. ಈ ಬೈಕಾರ್ಬೊನೇಟುಗಳನ್ನು ಕಾಯಿಸಿದಾಗ ನಾರ್ಮಲ್ ಕಾರ್ಬೊನೇಟುಗಳ ಉತ್ಪತ್ತಿಯಾಗುತ್ತವೆ. ನೀರು ಮತ್ತು ಇಂಗಾಲದ ಡೈ ಆಕ್ಸೈಡ್ ಬಿಡುಗಡೆ ಹೊಂದುವುವು.

$$2MHCO_3 = M_2CO_3 + H_2O + CO_2$$

ಲೋಹಗಳ ಕಾರ್ಬೊನೇಟುಗಳು ನೀರಿನಲ್ಲಿ ಸಾಮಾನ್ಯವಾಗಿ ಅದ್ರಾವ್ಯ. ಆದರೆ ಕ್ಷಾರಲೋಹಗಳ ಕಾರ್ಬೊನೇಟುಗಳು ಮತ್ತು ಥ್ಯಾಲಿಯಂ ಕಾರ್ಬೊನೇಟ್ ಮಾತ್ರ ಇದಕ್ಕೆ ಮುಖ್ಯ ಅಪವಾದಗಳು. ಆದ್ದರಿಂದ ಸೋಡಿಯಂ ಕಾರ್ಬೊನೇಟಿನ ದ್ರಾವಣವನ್ನು ಸಾಂದ್ರಲೋಹಗಳ ಯಾವುದಾದರೊಂದು ಲವಣದ ದ್ರಾವಣಕ್ಕೆ ಹಾಕಿದರೆ ಲೋಹದ ಕಾರ್ಬೊನೇಟ್ ಒತ್ತರಿಸುವುದು.

ಲೋಹಗಳ ಅನೇಕ ಕಾರ್ಬೊನೇಟುಗಳು ಬಿಳಿಯ ಘನಪದಾರ್ಥಗಳು. ಕೆಲವು ಕಾರ್ಬೊನೇಟುಗಳು ಸಂಬಂಧಪಟ್ಟ ಲೋಹದ ವಿಶಿಷ್ಟ ಬಣ್ಣವನ್ನೇ ಪಡೆದಿರುತ್ತವೆ. ಉದಾ: ಕಾಪರ್ ಕಾರ್ಬೊನೇಟು ನೀಲಿ ಅಥವಾ ಹಸುರು, ನಿಕ್ಕಲ್ ಕಾರ್ಬೊನೇಟ್ ಹಸಿರಾಗಿದೆ. ಕ್ಷಾರಲೋಹಗಳ ಕಾರ್ಬೊನೇಟುಗಳು ನೀರಿನಲ್ಲಿ ವಿಲೀನವಾಗುವುವು. ಆದರೆ ಕಾರ್ಬೊನಿಕಾಮ್ಲ ಸ್ವಲ್ಪ ಅಯಾನೀಕರಿಸುವುದರಿಂದ ಈ ಕಾರ್ಬೊನೇಟುಗಳು ನೀರಿನಲ್ಲಿ ಜಲವಿಶ್ಲೇಷಿಸಿ (ಹೈಡ್ರೊಲೈಸ್) ಫಲಿತ ದ್ರಾವಣ ಹೆಚ್ಚು ಕ್ಷಾರೀಯವಾಗಿರುವುದು. ಬೈಕಾರ್ಬೊನೇಟ್‌ಗಳು ಜಲವಿಶ್ಲೇಷಿಸುವುದು ಬಹಳ ಕಡಿಮೆ ಕಾರ್ಬೊನೇಟುಗಳ ದ್ರಾವಣಗಳ ಮುಖಾಂತರ ಹೆಚ್ಚು ಇಂಗಾಲದ ಡೈ ಆಕ್ಸೈಡನ್ನು ಹಾಯಿಸಿದಾಗ ಅವು ಬೈಕಾರ್ಬೊನೇಟುಗಳಾಗಿ ಪರಿವರ್ತಿಸುವುವು. ಇವು ಹೆಚ್ಚು ದ್ರಾವ್ಯ. ತಾತ್ಕಾಲಿಕ ಗಡಸು ನೀರು ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ ಬೈಕಾರ್ಬೊನೇಟುಗಳನ್ನು ದ್ರವರೂಪದಲ್ಲಿ ಪಡೆದಿರುತ್ತದೆ. ಇವನ್ನು ಕಾಯಿಸಿದಾಗ ಕಡಿಮೆ ಲೀನವಾಗುವ ಕಾರ್ಬೊನೇಟುಗಳಾಗಿ ಒತ್ತರಿಸುತ್ತವೆ. ಟೀ ಕೆಟಲ್‌ಗಳ ಮತ್ತು ಬಾಯ್ಲರ್ ಪೈಪುಗಳ ಮೇಲೆ ನಾವು ಆಗಿಂದಾಗ್ಗೆ ಕಾಣುವ ಬಿಳಿಯ ಒತ್ತರವಾದರೂ ಈ ರೀತಿಯಲ್ಲಿ ಒತ್ತರಿಸಿದ ಬೈಕಾರ್ಬೊನೇಟುಗಳೇ ಆಗಿವೆ. ಆಮ್ಲಗಳು ಎಲ್ಲ ಮಾಮೂಲಿ ಕಾರ್ಬೊನೇಟುಗಳಿಂದಲೂ ಬೈಕಾರ್ಬೊನೇಟುಗಳಿಂದಲೂ ಇಂಗಾಲದ ಡೈಆಕ್ಸೈಡನ್ನು ಬಿಡುಗಡೆ ಮಾಡುವುವು. ಈ ಅನಿಲವನ್ನು ತಿಳಿಸುಣ್ಣದ ನೀರಿನ ಮೂಲಕ ಹಾಯಿಸಿದಾಗ ಅದು ಹಾಲಿನಂತಾಗುವುದು. ಈ ಪ್ರಯೋಗವನ್ನು ಕಾರ್ಬೊನೇಟ್ ಮತ್ತು ಬೈಕಾರ್ಬೊನೇಟುಗಳ ಪರೀಕ್ಷಾ ಪ್ರಯೋಗವಾಗಿ ಉಪಯೋಗಿಸುತ್ತಾರೆ.

ಕ್ಷಾರಲೋಹಗಳ ಕಾರ್ಬೊನೇಟುಗಳ ವಿನಾ ಉಳಿದ ಕಾರ್ಬೊನೇಟುಗಳನ್ನು ಕಾಯಿಸಿದರೆ ಅವು ವಿಭಜಿಸಿ (ಡೀಕಂಪೋಸ್) ಲೋಹದ ಆಕ್ಸೈಡ್ ಮತ್ತು ಇಂಗಾಲದ ಡೈ ಆಕ್ಸೈಡನ್ನು ಕೊಡುತ್ತವೆ. ಕಾರ್ಬೊನೇಟುಗಳು ಉಷ್ಣವಿಭಜನಾ ವೇಗ ಉಷ್ಣತೆಗೆ ಅನುಗುಣವಾಗಿದೆ. ಕೆಲವು ಕಾರ್ಬೊನೇಟುಗಳ ಕಡಿಮೆ ಉಷ್ಣತೆಯಲ್ಲಿಯೇ ವಿಭಜಿಸುತ್ತವೆ. ಉದಾ: ಸಿಲ್ವರ್ ಕಾರ್ಬೊನೇಟ್ $200°$ ಸೆಂ. ಉಷ್ಣತೆಯಲ್ಲಿ ವಿಭಜಿಸಿ ಸಿಲ್ವರನ್ನು ಕೊಡುವುದು; ಮತ್ತೆ ಕೆಲವು ಕಾರ್ಬೊನೇಟುಗಳ ವಿಭಜನೆ ಹೆಚ್ಚು ಉಷ್ಣತೆಯಲ್ಲಿ ತೀವ್ರವಾಗಿರುವುದು. ಉದಾ: ಕ್ಯಾಲ್ಸಿಯಂ ಕಾರ್ಬೊನೇಟ್ $880°$ ಸೆಂ. ಉಷ್ಣತೆಯಲ್ಲಿ ವಿಭಜಿಸುವುದು. ಆದರೆ ಕ್ಷಾರಲೋಹಗಳ ಕಾರ್ಬೊನೇಟುಗಳು ತೀವ್ರ ವಿಭಜನೆ ಹೊಂದುವ ಮೊದಲೇ ದ್ರವಗಳಾಗವುವು. ಪ್ರತಿಯೊಂದು ಉಷ್ಣತೆಯಲ್ಲಿಯೂ ಇಂಗಾಲದ ಡೈ ಆಕ್ಸೈಡಿನ ಒತ್ತಡ ಒಂದು ನಿಯತ ಪ್ರಮಾಣವನ್ನು ಮುಟ್ಟಿದ ಕೂಡಲೆ ವಿಭಜನೆ ನಿಂತು ಸಮಸ್ಥಿತಿಯ ವ್ಯೂಹ ಉಂಟಾಗುವುದು. ಈ ಒತ್ತಡವನ್ನೇ ಕಾರ್ಬೊನೇಟಿನ ಸಮಸ್ಥಿತಿಯ ವಿಭಜನಾ ಒತ್ತಡವೆಂದು ಕರೆಯುತ್ತಾರೆ. ಇದು ಉಷ್ಣತೆ ಹೆಚ್ಚಿದಂತೆಲ್ಲ ಹೆಚ್ಚುವುದು. ಒಂದು ನಿರ್ದಿಷ್ಟ ಉಷ್ಣತೆಯಲ್ಲಿ ಈ ಒತ್ತಡ ಪ್ರಕೃತಿಯಲ್ಲಿ ದೊರೆಯುವ ವಿವಿಧ ಕಾರ್ಬೊನೇಟುಗಳಿಗೆ ಬೇರೆಬೇರೆಯಾಗಿರುವುದು. ಉಷ್ಣಶಾಸ್ತ್ರದ ಪ್ರತಿಷ್ಠಾನವನ್ನು ಅವಲಂಬಿಸಿ $MCO_3$ ಕಾರ್ಬೊನೇಟನ್ನು ತೆಗೆದುಕೊಂಡು ಉಷ್ಣವಿಭಜನೆಯನ್ನು ತೋರಿಸಬಹುದು.

$$MCO_3 \text{ (ಘನ)} \rightarrow MO \text{ (ಘನ)} + CO_2 \text{ (ಅನಿಲ)}$$

ವಿವಿಧ ಕಾರ್ಬೊನೇಟುಗಳಿಗೆ (ಅನಿಲ) ತಮ್ಮದೇ ಆದ ಸಮಸ್ಥಿತಿಯ ವಿಭಜನಾ ಉಷ್ಣತೆಯಿದೆ. ಮೆಗ್ನೀಸಿಯಂ, ಕ್ಯಾಲ್ಸಿಯಂ ಸ್ಟ್ರಾನ್ಷಿಯಂ ಮತ್ತು ಬೇರಿಯಂ ಕಾರ್ಬೊನೇಟುಗಳ ಸಮಸ್ಥಿತಿಯ ವಿಭಜನಾ ಉಷ್ಣತೆಯ ಕಾಟಯಾನಿನ ಪರಮಾಣು ಸಂಖ್ಯೆ ಅಥವಾ ಕ್ಯಾಟಯಾನಿನ ತ್ರಿಜ್ಯಕ್ಕೆ ಅನುಗುಣವಾಗಿದೆ. ವಿಭಜನೆ ಕಾರ್ಬೊನೇಟಿನ ಮೇಲ್ಮೈಯಿಂದ ಪ್ರಾರಂಭಿಸಿ ಒಳಗಡೆಗೆ ನಡೆದಿರುತ್ತದೆ. ನೀರಿನ ಹಬೆ ಮತ್ತು ಅಮೋನಿಯ ಅನಿಲಗಳ ಸಂಪರ್ಕದಲ್ಲಿ ಕಾರ್ಬೊನೇಟುಗಳ ಉಷ್ಣವಿಭಜನೆ ವರ್ಧಿಸುತ್ತದೆ.

ಪಟ್ಟಿ 1

ಕಾರ್ಬೊನೇಟುಗಳ ವಿಶ್ಲೇಷಣಾ ಒತ್ತಡ ಮತ್ತು ಉಷ್ಣತೆಗಳು

| ಕಾರ್ಬೊನೇಟ್ ವಿಶ್ಲೇಷಣಾ | ಒತ್ತಡ mm.Hg | ವಿಶ್ಲೇಷಣಾ ಉಷ್ಣತೆ °ಸೆಂ. |
|---|---|---|
| $Li_2CO_3$ | 50 | 880 |
| $Na_2CO_3$ | 50 | 1220 |
| $K_2CO_3$ | 50 | 1150 |
| $Rb_2CO_3$ | 50 | 1150 |
| $Cs_2CO_3$ | 50 | 1050 |
| $MgCO_3$ | 760 | 230 |
| $CaCO_3$ | 760 | 820 |
| $SrCO_3$ | 760 | 1130 |
| $BaCO_3$ | 760 | 1300 |
| $FeCO_3$ | 760 | 400 |
| $MnCO_3$ | 760 | 330 |
| $PbCO_3$ | 760 | 350 |
| $Ag_2CO_3$ | 760 | 275 |

ಕಾರ್ಬೊನೇಟುಗಳನ್ನು ಅಯಾನಿಕ ಸಂಯುಕ್ತಗಳೆಂದು ವರ್ಗೀಕರಿಸಬಹುದು. ಕಾರ್ಬೊನೇಟು ಅಯಾನು ಸಮತಲೀಯವಾಗಿರುವದರಿಂದಲೂ ಮೂರೂ C-O ದೂರಗಳೂ ಸಮವಾಗಿರುವುದರಿಂದಲೂ ಮೂರು C-O ಸ್ಥಾನಗಳೊಳಗೇ ದ್ವಿಬಂಧ ಅನುರಣನ(ರೆಸೊನೆನ್ಸ್) ಇದೆ ಎಂದು ನಂಬಲಾಗಿದೆ.

ಕಾರ್ಬೊನೇಟುಗಳು ಕೈಗಾರಿಕೆಗಳಲ್ಲಿ ವಿಶೇಷ ಪ್ರಾಮುಖ್ಯ ಪಡೆದಿವೆ. ಅದುರುಗಳಿಂದ ಲೋಹಗಳ ತಯಾರಿಕೆಯಲ್ಲೂ ಪಿಂಗಾಣಿ ಕೈಗಾರಿಕೆಗಳಲ್ಲೂ ಇವುಗಳ ಪ್ರಮಾಣ ಬೃಹತ್ಪ್ರಮಾಣದಲ್ಲಿದೆ. ಸುಟ್ಟ ಸುಣ್ಣವನ್ನು ತಯಾರಿಸಲು ಅಗಾಧವಾಗಿ ಸುಣ್ಣಕಲ್ಲನ್ನು ನೋಡಿ ತೆಗೆಯುವರು. ಇದನ್ನು ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯಲ್ಲಿ ಅಭಿವಾಹ(ಫ್ಲಕ್ಸ್) ಆಗಿಯೂ ಶುದ್ಧಿ ಮಾಡುವ ಉದ್ದೇಶಗಳಿಗಾಗಿಯೂ ಹೇರಳವಾಗಿ ಉಪಯೋಗಿಸುತ್ತಾರೆ. ಸಾಲ್ವೆ ವಿಧಾನದಿಂದ ಸೋಡಿಯಂ ಕಾರ್ಬೊನೇಟು ಮತ್ತು ಬೈ ಕಾರ್ಬೊನೇಟುಗಳನ್ನು ಉತ್ಪಾದಿಸುವಾಗ ಬೇಕಾಗುವ ಇಂಗಾಲದ ಡೈಆಕ್ಸೈಡಿನ ಆಕರವಾಗಿ ಸುಣ್ಣಕಲ್ಲನ್ನು ಬಳಸುತ್ತಾರೆ. ಅಂದರೆ ಹೇರಳವಾಗಿ ದೊರಕುವ ಸುಣ್ಣಕಲ್ಲನ್ನು ವಿಭಜಿಸಿದಾಗ ಬರುವ $CaO$ ಮತ್ತು $CO_2$ ಎರಡೂ ಸಂಯುಕ್ತಗಳು ಎಷ್ಟು ಮುಖ್ಯವಸ್ತುಗಳೆಂದು ವೇದ್ಯವಾಗುವುದು. ಸಮುದ್ರದ ಪ್ರಾಣಿಗಳ ಚಿಪ್ಪುಗಳಲ್ಲಿರುವ ಕ್ಯಾಲ್ಸಿಯಂ ಕಾರ್ಬೊನೇಟನಿಂದ ಪಡೆಯುವ ಕ್ಯಾಲ್ಸಿಯಂ ಆಕ್ಸೈಡನ್ನು ಸಮುದ್ರದ ನೀರಿನಿಂದ ಮೆಗ್ನೀಸಿಯಂ ಪಡೆಯಲು ಬಳಸುತ್ತಾರೆ. ಡಾಲಮೈಟು

ಮತ್ತು ಮ್ಯಾಗ್ನಸೈಟುಗಳನ್ನು ಮೆಗ್ನೀಸಿಯಂ ಆಕ್ಸೈಡಿನ ಆಕರವಾಗಿ ರಿಫ್ರ್ಯಾಕ್ಟರಿಗಳನ್ನು ಉತ್ಪಾದಿಸುವುದಕ್ಕೆ ಅಳವಡಿಸುತ್ತಾರೆ. ಸೋಡಿಯಂ ಕಾರ್ಬೋನೇಟು ಅಥವಾ ಸೋಡಾ ಬೂದಿ ಕೈಗಾರಿಕೆಯ ಮೂಲ ರಸಾಯನಿಕಗಳಲ್ಲೊಂದು. ಪ್ರಾಚೀನ ಈಜಿಪ್ಟಿನ ರಾಜವಂಶಸ್ಥರ ಸಮಾಧಿಗಳಲ್ಲಿ ಕಾಣಬರುವ ಗಾಜಿನ ಮಣಿಗಳು ಮತ್ತು ಒಡವೆಗಳನ್ನು ತಯಾರಿಸಲು ಬಹುಶಃ ಸೋಡಿಯಂ ಕಾರ್ಬೋನೇಟನ್ನು ಉಪಯೋಗಿಸಿರಬೇಕು. ಗಡಸು ನೀರನ್ನು ಮೆದು ಮಾಡಲು ಇದನ್ನು ಉಪಯೋಗಿಸುತ್ತಾರೆ. ಗಾಜು ಮತ್ತು ಸಂಶ್ಲೇಷಿತ ಡಿಟರ್ಜೆಂಟುಗಳ ಉತ್ಪಾದನೆಯಲ್ಲಿ ವಿಶೇಷವಾಗಿ ಇದನ್ನು ಬಳಸುತ್ತಾರೆ. ಕಾಗದದ ಮತ್ತು ಚರ್ಮ ಹದ ಮಾಡುವ ಕೈಗಾರಿಕೆಗಳಲ್ಲಿಯೂ ಎನ್ಯಾಮಲ್ ತಯಾರಿಕೆಯಲ್ಲಿಯೂ ಪೆಟ್ರೋಲಿಯಂ ಉದ್ಯಮಗಳಲ್ಲಿಯೂ ಸೋಡಿಯಂ ಕಾರ್ಬೋನೇಟು ಉಪಯುಕ್ತ ವಸ್ತು. ಸೋಡಿಯಂ ಬೈಕಾರ್ಬೋನೇಟನ್ನು ಬೇಕಿಂಗ್ ಪೌಡರ್ (ಒದಗು ಪುಡಿ) ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸಫೇದು ಅಥವಾ ಪ್ರತ್ಯಾಮ್ಲೀಯ ಸೀಸದ ಕಾರ್ಬೋನೇಟು ಬಿಳಿಯ ಬಣ್ಣಗಳ ಪೈಕಿ ಅತ್ಯಂತ ಒಳ್ಳೆಯದು.

**ಆರ್ಗ್ಯಾನಿಕ್ ಕಾರ್ಬೋನೇಟುಗಳು** : ಇವು ಕಾರ್ಬಾನಿಕಾಮ್ಲದ ($H_2CO_3$) ಮತ್ತು ಅಜ್ಞಾತ ಆರ್ಥೋ ಕಾರ್ಬೋನಿಕಾಮ್ಲದ [$C(OH)_4$] ಎಸ್ಟರುಗಳು. ಪೊಟ್ಯಾಸಿಯಂ ಈಥಾಕ್ಸೈಡಿನ ಆಲ್ಕೊಹಾಲ್ ದ್ರಾವಣದ ಮೂಲಕ ಇಂಗಾಲದ ಡೈಆಕ್ಸೈಡನ್ನು ಹಾಯಿಸಿ ಪೊಟ್ಯಾಸಿಯಂ ಈಥೈಲ್ ಕಾರ್ಬೋನೇಟನ್ನು $KO.CO.OC_2.H_5$ ಪಡೆಯಬಹುದು. ಇದು ಅಷ್ಟೊಂದು ಸ್ಥಿರವಾದುದಲ್ಲ. ನೀರಿನೊಂದಿಗೆ ವಿಭಜಿಸಿ ಆಲ್ಕೊಹಾಲ್ ಮತ್ತು ಪೊಟ್ಯಾಸಿಯಂ ಕಾರ್ಬೋನೇಟಾಗುವುದು. ಆಲ್ಕೈಲ್ ಹ್ಯಾಲೈಡುಗಳ ಮೇಲೆ ಬೆಳ್ಳಿಯ ಕಾರ್ಬೋನೇಟು ವರ್ತಿಸುವುದರಿಂದ ಅಥವಾ ಕ್ಲೋರೋ ಕಾರ್ಬೋನಿಕ್ ಎಸ್ಟರುಗಳ ಮೇಲೆ ಆಲ್ಕೊಹಾಲ್ ವರ್ತಿಸುವುದರಿಂದ ನಾರ್ಮಲ್ ಎಸ್ಟರುಗಳನ್ನು ತಯಾರಿಸಬಹುದು. ಇವು ಬಣ್ಣವಿಲ್ಲದ, ಸುವಾಸನೆಯ ದ್ರವಗಳು. ನೀರಿನಲ್ಲಿ ವಿಲೀನವಾಗುವುವು. ಎಸ್ಟರಿನ ಎಲ್ಲ ಗುಣಗಳನ್ನು ಪಡೆದಿವೆ.

ಪಟ್ಟಿ 2

ಆರ್ಗ್ಯಾನಿಕ್ ಕಾರ್ಬೋನೇಟುಗಳು

| ಕಾರ್ಬೋನೇಟ್ | ಸೂತ್ರ | ಕುದಿಯುವ ಉಷ್ಣತೆ $^0$ಸೆಂ. |
|---|---|---|
| ಡೈಈಥೈಲ್ ಕಾರ್ಬೋನೇಟ್ | $(C_2H_5O)_2CO$ | 126 |
| ಡೈಮಿಥೈಲ್ ಕಾರ್ಬೋನೇಟ್ | $(CH_3O)_2CO$ | 90 |
| ಮಿಥೈಲ್ ಈಥೈಲ್ ಕಾರ್ಬೋನೇಟ್ | $(CH_3O)\,CO(OC_2H_5)$ | 109 |
| ಡೈಪ್ರೊಪೈಲ್ ಕಾರ್ಬೋನೇಟ್ | $(C_3H_7O)_2CO$ | 168 |
| ಟೆಟ್ರ ಈಥೈಲ್ ಕಾರ್ಬೋನೇಟ್ | $(C_2H_5O)_4CO$ | 158 |

**ಪರ್‌ಕಾರ್ಬೋನೇಟುಗಳು** : ಇವುಗಳ ವಿಂಗಡಣೆಯನ್ನು ಹೀಗೆ ಮಾಡಲು ಪ್ರಯತ್ನಿಸಲಾಗಿದೆ : 1. ಹೈಡ್ರೋಜನ್ ಪರಾಕ್ಸೈಡಿನ ಸಂಯುಕ್ತಗಳಾಗಿ ಸ್ಫಟಿಕೀಕರಿಸಿದ ಕಾರ್ಬೋನೇಟುಗಳು ಮಾತ್ರ ; 2. ಪರ್‌ಮಾನೋ ಕಾರ್ಬೋನೇಟುಗಳು ; 3. ಪರ್ ಡೈಕಾರ್ಬೋನೇಟುಗಳು. ಬೇರಿಯಂ ಪರ್‌ಕಾರ್ಬೋನೇಟು $BaCo_4$, ಬಿಳಿಯ ಘನ. ಸಾಕಷ್ಟು ಸ್ಥಿರವಾದದ್ದು. ಆಮ್ಲಗಳೊಡನೆ ವರ್ತಿಸಿ ಹೈಡ್ರೋಜನ್ ಪರಾಕ್ಸೈಡನ್ನು ಕೊಡುವುದು. ಬೇರಿಯಂ ಪರಾಕ್ಸೈಡನ್ನು ನೀರಿನಲ್ಲಿ ಕಲಸಿ ತೆಳ್ಳನೆಯ ಹಿಟ್ಟಿನ ಸರಿಯಂತೆ ಮಾಡಿ, ಅದರ ಮೂಲಕ ಹೆಚ್ಚು ಇಂಗಾಲದ ಡೈಆಕ್ಸೈಡನ್ನು ಹಾಯಿಸಿ, ಬೇರಿಯಂ ಪರ್‌ಕಾರ್ಬೋನೇಟನ್ನು ಪಡೆಯಬಹುದು. $K_2C_2O_6$ ಸೂತ್ರ ಪಡೆದಿರುವ ಎರಡು ಪೊಟ್ಯಾಸಿಯಂ ಪರ್‌ಕಾರ್ಬೋನೇಟುಗಳಿವೆ. ಪೊಟ್ಯಾಸಿಯಂ ಕಾರ್ಬೋನೇಟಿನ ಪ್ರಬಲ ದ್ರಾವಣವನ್ನು — 20°ಸೆಂ. ನಲ್ಲಿ ವಿದ್ಯುದ್ವಿಶ್ಲೇಷಿಸಿ ಪೊಟ್ಯಾಸಿಯಂ ಅಯೋಡೈಡಿನಿಂದ ಆಮ್ಲಜನಕವನ್ನು ಕಳೆದುಕೊಳ್ಳದೆ ಅಯೋಡೀನನ್ನು ಬಿಡುಗಡೆ ಮಾಡುತ್ತದೆ. ಇಂಗಾಲದ ಡೈಆಕ್ಸೈಡ್ ಪೊಟ್ಯಾಸಿಯಂ ಪರಾಕ್ಸೈಡಿನೊಡನೆ ವರ್ತಿಸಿ ಕೊಡುವ ಪರ್‌ಕಾರ್ಬೋನೇಟು, ಪೊಟ್ಯಾಸಿಯಂ ಅಯೋಡೈಡಿನಿಂದ, ತನ್ನಲ್ಲಿರುವ ಆಮ್ಲಜನಕದ ಸ್ವಲ್ಪ ಭಾಗವನ್ನು ಕಳೆದುಕೊಂಡು, ಅಯೋಡೀನನ್ನು ಬಿಡುಗಡೆ ಮಾಡುತ್ತದೆ. ಸೋಡಿಯಂ ಪರಾಕ್ಸೈಡಿನೊಂದಿಗೆ ಇಂಗಾಲದ ಡೈಆಕ್ಸೈಡ್ ವರ್ತಿಸಿ $Na_2C_2O_6, Na_2CO_4, Na_2CO_5, NaHCO_4$ ಸೂತ್ರಗಳಿರುವ ಪರ್‌ಕಾರ್ಬೋನೇಟುಗಳಾಗುತ್ತವೆ.

ಪರ್‌ಕಾರ್ಬೋನೇಟುಗಳನ್ನು ಚಲುವೆಕಾರಿಗಳಾಗಿ (ಬ್ಲೀಚಿಂಗ್ ಏಜೆಂಟ್ಸ್) ಮುಖ್ಯವಾಗಿ ಉಪಯೋಗಿಸುತ್ತಾರೆ. ಫೋಟೋಗ್ರಫಿಯಲ್ಲಿ ಹೆಚ್ಚಾಗಿರುವ ಹೈಪೋವನ್ನು ಹೋಗಲಾಡಿಸಲು ಪೊಟ್ಯಾಸಿಯಂ ಪರ್‌ಕಾರ್ಬೋನೇಟನ್ನು ಹೈಪೋನಿರೋಧಕವಾಗಿ ಬಳಸುತ್ತಾರೆ. (ಪಿ.ಜಿ.ಆರ್.)

**ಕಾರ್ಬೋಮೈಸಿನ್** : ಸ್ಟ್ರೆಪ್ಟೊಮೈಸಿಸ್ ಹಾಲ್‌ಸ್ಟೆಡಿಯಿಂದ ಉತ್ಪತ್ತಿಯಾಗುವ ಜೀವಿನಿರೋಧಕ (ಆಂಟಿಬಯಾಟಿಕ್) ವಸ್ತು. ಮ್ಯಾಗ್ನಾಮೈಸಿನ್ ಪರ್ಯಾಯನಾಮ. ಮೊದಲಬಾರಿಗೆ 1953ರಲ್ಲಿ ಇದನ್ನು ಪ್ರತ್ಯೇಕಿಸಿದರು. ಇದು ನಿರ್ವರ್ಣ ಪದಾರ್ಥ. ಇದರ ಕರಗುವ ಬಿಂದು 212°–214° ಸೆಂ. ರಾಸಾಯನಿಕ ಸೂತ್ರ $C_{42}H_{67}O_{16}N$. ಇದು ಮ್ಯಾಕ್ರೊಲೈಡ್ ಗುಂಪಿಗೆ ಸೇರಿದ (ಮ್ಯಾಕ್ರೊಸೈಕ್ಲಿಕ್ ಲ್ಯಾಕ್ಟೋಸ್) ಜೀವಿವಿರೋಧಕ. ಮುಖ್ಯವಾಗಿ ಇದಕ್ಕೆ ಗ್ರಾಮ್‌ಪಾಸಿಟಿವ್ ಬ್ಯಾಕ್ಟೀರಿಯಗಳ (ಸ್ಟ್ರೆಪ್ಟೋಕಾಕಸ್, ಸ್ಟ್ಯಾಫಿಲೋಕಾಕಸ್ ಬ್ಯಾಸಿಲೈ) ಮೇಲೆ ಕ್ರಿಯಾಶಕ್ತಿ ಉಂಟು. ಪ್ರಾಯಶಃ ಅವುಗಳಲ್ಲಿನ ರೈಬೋಸೋಮುಗಳಿಗೆ ಇದು ಅಂಟಿಕೊಂಡು ಅವುಗಳ ಪ್ರೋಟೀನ್ ಸಂಶ್ಲೇಷಣೆಯನ್ನು ತಡೆಗಟ್ಟುವುದೇ ಈ ಕ್ರಿಯಾಶಕ್ತಿಗೆ ಕಾರಣವಿರಬಹುದು. ಕಾರ್ಬೋಮೈಸಿನ್–ಬಿ ಇದಕ್ಕೆ ಹತ್ತಿರ ಸಂಬಂಧವುಳ್ಳ ಜೀವಿನಿರೋಧಕ. ಆದರೆ ಇದರಲ್ಲಿ ಎಥಿಲೀನ್ ಆಕ್ಸೈಡ್ ರಚನೆ ಇರುವುದಿಲ್ಲ. ಇದರ ಕರಗುವ ಬಿಂದು 141°–144°ಸೆಂ. (ಎಂ.ಆರ್.ಆರ್.)

**ಕಾರ್ಬೋನಿಯಂ ಅಯಾನ್** : ಆಲ್ಕೇನುಗಳು, ಆಲ್ಕೊಹಾಲ್‌ಗಳು ಮತ್ತು ಆಲ್ಕೈಲ್ ಹಾಲೈಡ್ ಮುಂತಾದವುಗಳ ರಾಸಾಯನಿಕ ಕ್ರಿಯೆಗಳನ್ನು ಅಧ್ಯಯಿಸಲು ಅಭಿಗ್ರಹಿಸಿಕೊಳ್ಳಲಾಗಿರುವ ತಟಸ್ಥ ಕಣ. ಕಾರ್ಬೋನಿಯಂ ಅಯಾನಿನಲ್ಲಿ ಇತರ ಪರಮಾಣುಗಳ ಗುಂಪಿದೆ; ಕಾರ್ಬನ್ ಪರಮಾಣುವಿಗೆ ಮಾತ್ರ ಆರು ಎಲೆಕ್ಟ್ರಾನುಗಳಿವೆ;



ಚಿತ್ರ 1

ಅದು ಧನ ವಿದ್ಯುದಂಶವನ್ನು ಹೊಂದಿದೆ. ಇದು ಸ್ಥಿರಸ್ಥಿತಿ ಹೊಂದಲು ಕಾರ್ಬನ್ ಪರಮಾಣುವಿನ ಸುತ್ತಲೂ ಅಷ್ಟಕ ಎಲೆಕ್ಟ್ರಾನುಗಳ ಗುಂಪು ಆಗಬೇಕಾಗಿರುವುದರಿಂದ ಕಾರ್ಬೋನಿಯಂ ಅಯಾನಿಗೆ ಮುಕ್ತ ರ್‍ಯಾಡಿಕಲ್ಲುಗಳ ತರಹವೇ ಅತಿ ರಾಸಾಯನಿಕ ಕ್ರಿಯಾಪಟುತ್ವ ಉಂಟು. ಕಾರ್ಬೋನಿಯಂ ಅಯಾನುಗಳನ್ನು ಹಲವಾರು ವಿಧವಾಗಿ ವಿಂಗಡಿಸಬಹುದು. ಅವನ್ನು ಈ ಕೆಳಕಂಡಂತೆ ತೋರಿಸಬಹುದು.

ಆಲ್ಕೈಲ್ ಕಾರ್ಬೋನಿಯಂ ಅಯಾನುಗಳನ್ನು ಪ್ರತ್ಯೇಕಿಸಿ ಅಧ್ಯಯನ ಮಾಡಿಲ್ಲವಾದರೂ ಇತರ ಸ್ಥಿರವಾದ ಕಾರ್ಬೋನಿಯಂ ಅಯಾನುಗಳನ್ನು ಭೌತ ಹಾಗೂ ರಾಸಾಯನಿಕ ವಿಧಾನಗಳಿಂದ ಪರೀಕ್ಷಿಸಲಾಗಿದೆ. ಕಾರ್ಬೋನಿಯಂ ಅಯಾನ್ ತತ್ತ್ವದ ಉಪಯೋಗವನ್ನು



ಚಿತ್ರ 2

ಆಲ್ಕೊಹಾಲುಗಳ ನಿರ್ಜಲೀಕರಣ ಕ್ರಿಯೆಯನ್ನು ಉದಾಹರಣೆಯಾಗಿ ತೆಗೆದುಕೊಂಡು ವಿವರಿಸಬಹುದು.

ಕಾರ್ಬೋನಿಯಂ ಅಯಾನಿನ ಭದ್ರತೆ ಅದರಲ್ಲಿರುವ ಧನವಿದ್ಯುದಂಶ ಕಾರ್ಬನ್ ಪರಮಾಣು ಒಂದರ ಮೇಲೆಯೇ ಕೇಂದ್ರೀಕೃತವಾಗಿದೆಯೇ ಅಥವಾ ಇತರ

ಪರಮಾಣುಗಳಿಗೂ ಪ್ರಸಾರವಾಗಿದೆಯೇ ಎನ್ನುವುದರ ಮೇಲೆ ಅವಲಂಬಿಸಿದೆ. ಧನ ವಿದ್ಯುದಂಶ ಪ್ರಸಾರವಾದಂತೆಲ್ಲ ಕಾರ್ಬೋನಿಯಂ ಅಯಾನಿನ ಭದ್ರತೆ ಹೆಚ್ಚುತ್ತದೆ. ಇದನ್ನು ಈ ಕೆಳಕಂಡ ಉದಾಹರಣೆಗಳಿಂದ ವಿವರಿಸಬಹುದು.




ಇಲ್ಲಿ R ಅಂದರೆ ಆಲ್ಕೈಲ್ ಗುಂಪುಗಳು ($CH_3$,$C_2H_5$ ಮುಂತಾದವು) ಮೀಥೈಲ್ ಕಾರ್ಬೋನಿಯಂ ಅಯಾನಿನಲ್ಲಿರುವ ಹೈಡ್ರೋಜನ್ ಪರಮಾಣುಗಳಿಗಿಂತಲೂ ಹೆಚ್ಚಿನ ಎಲೆಕ್ಟ್ರಾನ್‌ದ್ವೇಷಿಗಳೆಂದು ಭೌತ ಹಾಗೂ ರಾಸಾಯನಿಕ ಸಾಕ್ಷ್ಯಗಳಿಂದ ತಿಳಿದುಬಂದಿದೆ. ಇವು ಎಲೆಕ್ಟ್ರಾನುಗಳನ್ನು ಕಾರ್ಬನ್ ಪರಮಾಣುವಿನ ಕಡೆ ನೂಕಿ ಅವುಗಳ ಮೇಲಿನ ವಿದ್ಯುದಂಶವನ್ನು ಕಡಿಮೆಮಾಡಲು ಪ್ರಯತ್ನಿಸುತ್ತವೆ. ಇದರಿಂದ ಈ ಆಲ್ಕೈಲ್ ಗುಂಪುಗಳಲ್ಲೂ ಸ್ವಲ್ಪಮಟ್ಟಿಗೆ ಧನವಿದ್ಯುದಂಶ ಪ್ರಸಾರವಾದಂತೆ ತೋರುತ್ತದೆ. ಆದ್ದರಿಂದ ಆಲ್ಕೈಲ್ ಗುಂಪುಗಳು ಹೆಚ್ಚಾಗಿದ್ದಷ್ಟೂ ಕಾರ್ಬೋನಿಯಂ ಅಯಾನಿನ ಧನವಿದ್ಯುದಂಶ ಪ್ರಸಾರವಾಗಿ ಅಯಾನಿನ ಭದ್ರತೆ ಹೆಚ್ಚುತ್ತದೆ. ಆದ್ದರಿಂದ ಈ ಮೇಲ್ಕಂಡ ಉದಾಹರಣೆಗಳಲ್ಲಿ ಕಾರ್ಬೋನಿಯಂ ಅಯಾನಿನ ಭದ್ರತೆಯನ್ನು ಈ ರೀತಿ ತೋರಿಸಬಹುದು :

ತೃತೀಯ ಅಯಾನ್ >ದ್ವಿತೀಯ ಅಯಾನ್> ಪ್ರಥಮ ಅಯಾನ್> ಮೀಥೈಲ್ ಕಾರ್ಬೋನಿಯಂ ಅಯಾನ್

ಆದ್ದರಿಂದ ಕಾರ್ಬೋನಿಯಂ ಅಯಾನಿನ ಭದ್ರತೆ ಅದರಲ್ಲಿರುವ ಎಲೆಕ್ಟ್ರಾನ್‌ದ್ವೇಷಿ ಅಥವಾ ಎಲೆಕ್ಟ್ರಾನ್‌ಪ್ರೇಮಿ ಗುಂಪುಗಳನ್ನು ಅವಲಂಬಿಸಿದೆ.

ಕಾರ್ಬೋನಿಯಂ ಅಯಾನಿನ ಭದ್ರತೆ ಹೆಚ್ಚಿದಷ್ಟೂ ರಾಸಾಯನಿಕ ಕ್ರಿಯೆಯಲ್ಲಿ ಅದರ ಉತ್ಪತ್ತಿಯ ವೇಗವೂ ಹೆಚ್ಚಿರುತ್ತದೆ. ಇದರ ವಿವರಣೆಯನ್ನು ಆಲ್ಕೋಹಾಲುಗಳ ನಿರ್ಜಲೀಕರಣ (ಡೀಹೈಡ್ರೇಷನ್) ಕ್ರಿಯೆಯಿಂದಲೇ ಕೊಡಬಹುದು. ಪ್ರೋಟಾನಿನ್ನೊಳಗೊಂಡ (ಪ್ರೋಟಾನೇಟೆಡ್) ಆಲ್ಕೋಹಾಲ್ $ROH_2$+ನಲ್ಲಿ C-O ಬಂಧ ಮುರಿದು ಕಾರ್ಬೋನಿಯಂ ಅಯಾನ್ ಉತ್ಪತ್ತಿಯಾದಾಗ ಧನವಿದ್ಯುದಂಶ $ROH_2$+ನಲ್ಲಿ ಆಕ್ಸಿಜನ್ ಪರಮಾಣುವಿನಲ್ಲೂ ಉತ್ಪನ್ನದಲ್ಲಿ ಆಕ್ಸಿಜನ್ ಪರಾಮಾಣುವಿನಲ್ಲೂ ಕೇಂದ್ರೀಕೃತವಾಗಿರುತ್ತದೆ. ಆದರೆ ಸಂಕ್ರಮಣ ಸ್ಥಿತಿಯಲ್ಲಿ (ಟ್ರಾನ್ಸಿಷನ್ ಸ್ಟೇಟ್) ಎಲೆಕ್ಟ್ರಾನ್ ಜೋಡಿ ಆಕ್ಸಿಜನ್ ಪರಮಾಣುವಿನ ಜೊತೆಯಲ್ಲಿರುತ್ತದೆ. ಆಗ ಕಾರ್ಬನ್ ಮತ್ತು ಆಕ್ಸಿಜನ್ ಪರಮಾಣುಗಳ ನಡುವೆ ಧನವಿದ್ಯುದಂಶ ವಿಭಾಗವಾಗುತ್ತದೆ.

ಆದ್ದರಿಂದ $ROH_2$+ನಲ್ಲಿ ಎಲೆಕ್ಟ್ರಾನ್ ದ್ವೇಷಿ ಗುಂಪುಗಳಿದ್ದರೆ ಅವು ಸಂಕ್ರಮಣ ಸ್ಥಿತಿಯಲ್ಲಿ ಕಾರ್ಬನ್ ಪರಮಾಣುವಿನ ಮೇಲಿರುವ ಧನವಿದ್ಯುದಂಶವನ್ನು ಪ್ರಸಾರ ಮಾಡಿ




ಎಲೆಕ್ಟ್ರಾನು ಜೋಡಿ ಆಕ್ಸಿಜನ್ ಪರಮಾಣುವಿನ ಜೊತೆಯಲ್ಲಿರಲು ಸಹಾಯ ಮಾಡುತ್ತವೆ. ಇದರಿಂದ ಸಂಕ್ರಮಣಸ್ಥಿತಿ ಭದ್ರವಾಗಿ ರಾಸಾಯನಿಕ ಕ್ರಿಯೆಗೆ ಅಂದರೆ ಕಾರ್ಬೋನಿಯಂ ಅಯಾನಿನ ಉತ್ಪತ್ತಿಗೆ ಬೇಕಾದ ಕ್ರಿಯಾಪಟುತ್ವ (ಆ್ಯಕ್ಟಿವೇಷನ್) ಶಕ್ತಿ ಉತ್ಪನ್ನವಾಗುತ್ತದೆ. ಆಗ ಕಾರ್ಬೋನಿಯಂ ಅಯಾನಿನ ಉತ್ಪತ್ತಿಯ ವೇಗ ಹೆಚ್ಚುತ್ತದೆ. (ಡಿ.ಎಸ್.ಎಂ.)

**ಕಾರ್ಬೋಹೈಡ್ರೇಟುಗಳು :** ಪಾಲಿಹೈಡ್ರಾಕ್ಸಿ ಆಲ್ಡಿಹೈಡುಗಳು ಇಲ್ಲವೆ ಪಾಲಿಹೈಡ್ರಾಕ್ಸಿ ಕೀಟೋನುಗಳು. ಜಲವಿಶ್ಲೇಷಣೆಗೆ ಒಳಪಡಿಸಿದಾಗ ಮೇಲಿನ ಎರಡು ಸಂಯುಕ್ತಗಳಲ್ಲಿ ಯಾವುದೇ ಒಂದನ್ನು ನೀಡುವ ವಸ್ತುಗಳಿಗೂ ಇದೇ ಹೆಸರಿದೆ. ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ದೃಷ್ಟಿಗಳಿಂದ ಕಾರ್ಬೋಹೈಡ್ರೇಟುಗಳು ಪ್ರಾಮುಖ್ಯವಾದವೂ ಹೌದು, ಕುತೂಹಲಕರವಾದವೂ ಹೌದು. ಆಹಾರ ಪದಾರ್ಥಗಳ ರೂಪದಲ್ಲಿ ಅವು ಮನುಷ್ಯರಿಗೂ ಪ್ರಾಣಿಗಳಿಗೂ ವಿಪುಲಶಕ್ತಿಯ ಆಕರಗಳು. ಅಲ್ಲದೆ ಅವು ಭೂಮಿಯ ಗತಕಾಲದಲ್ಲಿ ಹುದುಗಿಹೋಗಿ ಪರಿವರ್ತನೆಗೊಂಡು ಕಲ್ಲಿದ್ದಲು ಹಾಗೂ ಪೀಟ್ ರೂಪ ತಳೆದು ಪುನಃ ಶಕ್ತಿಯ ಮೂಲಗಳಾಗಿವೆ. ಸಸ್ಯಕೋಶದಲ್ಲಿ ದೊರೆಯುವ ಸ್ಟಾರ್ಚ್ ಮತ್ತು ಪ್ರಾಣಿಗಳ ಅಂಗಾಂಶಗಳಲ್ಲಿ ದೊರೆಯುವ ಗ್ಲೈಕೊಜನ್–ಇವು ಕಾರ್ಬೋಹೈಡ್ರೇಟುಗಳ ಪ್ರಮುಖ ನಿಧಿಗಳು. ಇವೆರಡೂ ಡಿ–ಗ್ಲೂಕೋಸಿನ ಬಹ್ವಂಗಿಗಳು (ಪಾಲಿಮರ್ಸ್). ಸ್ತನಿಗಳಲ್ಲಿ ಗ್ಲೈಕೋಲಿಪೊಪ್ರೋಟೀನುಗಳು–ಲಿಪಿಡ್‌ಗಳಿಗೆ ಬದ್ಧವಾಗಿರುವ ಗ್ಲೈಕೋಪ್ರೋಟೀನುಗಳು–ಕೋಶದ ಪೊರೆಗಳ ಬೃಹತ್ ಆವಶ್ಯಕ ರಚನಾತ್ಮಕ ಭಾಗಗಳಾಗಿಯೂ ಕೋಶದ ಕಣದಂಥ (ವಿವಿಕ್ತ) ಅಂಗಕಗಳಾಗಿಯೂ (ಆರ್ಗನೆಲ್ಸ್) ಪ್ರಮುಖವಾಗಿವೆ. ಬಹುಶರ್ಕರ–ಪ್ರೋಟೀನ್ ಸಂಬದ್ಧಗಳು ನಿರೋಧಕಗಳ ಉತ್ಪತ್ತಿಯಲ್ಲಿ ನಿರೋಧಜನಕಗಳಾಗಿ ಪಾತ್ರ ವಹಿಸುವ ಸಾಮರ್ಥ್ಯ ಪಡೆದಿವೆ. ಬಹುಶರ್ಕರಗಳು ದೇಹದಲ್ಲಿ ಬಾಹ್ಯಕೋಶಿಕ (ಪಾಚಕ) ಆಧಾರ ವಸ್ತುಗಳ ಪ್ರಮುಖ ಭಾಗಗಳಾಗಿಯೂ ಇವೆ.

ದ್ಯುತಿಸಂಶ್ಲೇಷಣ ಸಾಮರ್ಥ್ಯವುಳ್ಳ ಕೆಲವು ಸೂಕ್ಷ್ಮಾಣುಗಳ ಹೊರತು ಮಿಕ್ಕೆಲ್ಲ ಜೀವಿಗಳು ಹಸಿರು ಸಸ್ಯಗಳಲ್ಲಿ ಮೊದಲೇ ಶೇಖರವಾಗುವ ಕಾರ್ಬೊಹೈಡ್ರೇಟುಗಳಿಂದ ಶಕ್ತಿಯನ್ನು ಪಡೆಯುತ್ತವೆ. ಈ ರೀತಿಯಲ್ಲಿ ಮಾನವರಿಗೆ ಮತ್ತು ಪ್ರಾಣಿಗಳಿಗೆ ಕಾರ್ಬೋಹೈಡ್ರೇಟುಗಳು ಆಹಾರರೂಪದಲ್ಲಿ ಅತ್ಯಂತ ಮುಖ್ಯವಾಗಿವೆ. ಆಹಾರದ ರೂಪದಲ್ಲಿ ದೇಹಕ್ಕೆ ತೆಗೆದುಕೊಂಡ ಕಾರ್ಬೋಹೈಡ್ರೇಟುಗಳು ಅನ್ನನಾಳದಲ್ಲಿ ಡಯಾಸ್ಟೇಟಿಕ್ ಕಿಣ್ವಗಳಿಂದ ಗ್ಲೂಕೋಸ್ ಆಗಿ ವಿಭಜನೆಗೊಳ್ಳುತ್ತವೆ. ಈ ಗ್ಲೂಕೋಸ್ ಸಣ್ಣ ಕರುಳಿನಿಂದ ಹೀರಲ್ಪಟ್ಟು ಅನಂತರ ಗ್ಲೈಕೊಜನ್ ಆಗಿ ಪರಿವರ್ತನೆಯಾಗುತ್ತದೆ. ಇದು ಹೆಚ್ಚಾಗಿ ಪಿತ್ತಜನಕಾಂಗ, ಸ್ವಲ್ಪಮಟ್ಟಿಗೆ ಸ್ನಾಯುಗಳಲ್ಲಿ ಶೇಖರವಾಗುತ್ತದೆ. ಜೀವಿಗೆ ಶಕ್ತಿಯನ್ನು ಒದಗಿಸಲೋಸ್ಕರ ಗ್ಲೈಕೋಜನ್ ಗ್ಲೂಕೋಸ್ ಆಗಿ ಅಪಚಯಗೊಳ್ಳುತ್ತದೆ. ಅಂತಿಮವಾಗಿ ಕ್ಲಿಷ್ಟ ಹಂತಗಳ ಮೂಲಕ ನೀರು ಮತ್ತು ಇಂಗಾಲದ ಡೈಆಕ್ಸೈಡ್ ಆಗಿ ಉತ್ಕರ್ಷಿತಗೊಳ್ಳುತ್ತವೆ.

**ಚಯಾಪಚಯ :** ಗ್ಲೂಕೋಸಿನ ಅಪಚಯ ಗ್ಲೈಕಾಲಿಸಿಸ್‌ನೊಂದಿಗೆ (ಶರ್ಕರ ವಿಶ್ಲೇಷಣ) ಆರಂಭವಾಗುತ್ತದೆ. ಗ್ಲೈಕಾಲಿಸಿಸ್ ಗಾಳಿಯ ಅಭಾವದಲ್ಲಿ ನಡೆಯುವ ಕ್ರಿಯೆ. ಇದು ಗ್ಲೂಕೋಸ್ ವಿಭಜನೆ ಹೊಂದಿ ವಸ್ತುವಾದ ಪೈರುವಿಕ್ ಆಮ್ಲವನ್ನು ಉತ್ಪತ್ತಿಮಾಡುವ ಒಂದು ಮಾರ್ಗ (ಇದು ಎಂಬ್ಡೆನ್–ಮೆಯರಾಫ್ ಮಾರ್ಗವೆಂದು ಪರಿಚಿತವಾಗಿದೆ). ಈ ಒಡೆಯುವಿಕೆ ಸುಮಾರು ಹನ್ನೆರಡು ಹಂತಗಳಲ್ಲಿ ನಡೆಯುತ್ತದೆ. ಕ್ರೇಬ್ ವರ್ತುಲದಲ್ಲಿ (ಪೈರೂವಿಕ್ ಆಮ್ಲದ ಮೂಲಕ) ಗ್ಲೂಕೋಸ್ ವಿಭಜನೆಗೊಳ್ಳಲು ಸಹಾಯಮಾಡುತ್ತದೆ. ಕ್ರೇಬ್ ವರ್ತುಲ ಯಾವ ಯಾವ ಜೀವಿಗಳಲ್ಲಿ ನಡೆಯುತ್ತದೋ ಆ ಜೀವಿಗಳಲ್ಲೆಲ್ಲ ಗ್ಲೈಕಾಲಿಸಿಸ್ಸಿನ ಕಿಣ್ವಗಳು ಇವೆ. ಕಾರ್ಬೋಹೈಡ್ರೇಟ್ ಚಯಾಪಚಯದ ಒಂದು ಭಾಗವಾದ ಹೆಕ್ಸೋಸ್ ಮಾನೋಫಾಸ್ಫೇಟ್ ಪಾರ್ಶ್ವವಾಹಿಪಥ (ಷಂಟ್) ಎಂದು ಪರಿಚಿತವಾಗಿರುವ ಮತ್ತೊಂದು ಅಭಿಕ್ರಿಯೆಯಲ್ಲಿ ಜೀವಿಯಲ್ಲಿ ಇಂಗಾಲದ ಗ್ಲೂಕೋಸು ಇಂಗಾಲದ (ಪೆಂಟೋಸ್) ಶರ್ಕರವಾಗಿ ವಿದಳನಗೊಳ್ಳುತ್ತದೆ ಮತ್ತು ಒಂದು ಇಂಗಾಲದ ಪರಮಾಣು ಇಂಗಾಲದ ಡೈ ಆಕ್ಸೈಡ್ ಆಗಿ ಪರಿವರ್ತನೆಗೊಳ್ಳುತ್ತದೆ. (ಗ್ಲೂಕೋಸ್‌ನ ನೇರ ಉತ್ಕರ್ಷಣ ಕ್ರಿಯೆ). ಈ ರೀತಿ ಉತ್ಪತ್ತಿಯಾಗುವುದು ರೈಬೋಸ್ ಅಥವಾ ಸರಿಯಾಗಿ ಹೇಳಬೇಕಾದರೆ ರೈಬೋಸ್ ಫಾಸ್ಫೇಟ್. ಇದು ತನ್ನ ಸರದಿಯಲ್ಲಿ ತನ್ನದೇ ಆದ ಚಯಾಪಚಯಕ್ರಿಯೆಗಳ ಮೂಲಕ ಹಾದು ಗ್ಲೈಕಾಲಿಟಿಕ್ ಮಾರ್ಗಕ್ಕೆ ಸಂಬಂಧಪಟ್ಟ ಒಂದು ಮಧ್ಯವರ್ತಿಯನ್ನು ಉತ್ಪತ್ತಿಮಾಡುತ್ತದೆ ಮತ್ತು ಈ ರೀತಿಯಲ್ಲಿ ಚಕ್ರ ಸಂಪೂರ್ಣಗೊಳ್ಳುತ್ತದೆ. ಜೀವಿಯ ಕೋಶದ ನ್ಯೂಕ್ಲಿಯೆಕ್ ಆಮ್ಲಗಳ ಒಂದು ಅತಿಮುಖ್ಯ ಘಟಕ ರೈಬೋಸ್.

ಗ್ಲೈಕಾಲಿಸಿಸಿನಿಂದ ಒಮ್ಮೆ ಉತ್ಪತ್ತಿಯಾದ ಪೈರುವೇಟ್ ಜೀವಿಯ ಅಥವಾ ಮತ್ತಷ್ಟು ನಿಖರವಾಗಿ ಹೇಳಬೇಕೆಂದರೆ ಆ ಜೀವಿಯಲ್ಲಿರುವ ಕಿಣ್ವಕ್ಕೆ ಅನುಗುಣವಾಗಿ ವಿವಿಧ ರೀತಿಯಲ್ಲಿ ಚಯಾಪಚಯಗೊಳ್ಳುತ್ತದೆ. ಈ ರೀತಿಯಲ್ಲಿ ಸಂಕುಚನಶೀಲ ಸ್ನಾಯುಗಳಲ್ಲಿರುವ ಕಿಣ್ವ ಪೈರುವೇಟ್ ಲ್ಯಾಕ್ಟಿಕ್ ಆಮ್ಲವಾಗಿ ಅಪಕರ್ಷಣವಾಗುವ ಕ್ರಿಯೆಯನ್ನು ವರ್ಧಿಸುತ್ತದೆ. ಗಾಳಿಯ ಅಭಾವದಲ್ಲಿ ಚಯಾಪಚಯದಲ್ಲಿ ಪ್ರವೇಶಿಸುವ ಗ್ಲೈಕೊಜನ್ನಿನ ಪ್ರತಿಯೊಂದು ಗ್ಲೈಕೊಸಿಲ್ ಮಾನಕ್ಕೆ ಎರಡು ಲ್ಯಾಕ್ಟೇಟ್ ಅಣುಗಳು ಸ್ನಾಯುವಿನಲ್ಲಿ ಉತ್ಪತ್ತಿಯಾಗುತ್ತವೆ.

ಯೀಸ್ಟಿನಲ್ಲಿರುವ ಕಿಣ್ವವ್ಯವಸ್ಥೆ (ಪೈರೂವಿಕ್ ಡೀ ಕಾರ್ಬೊಕ್ಸಿಲೇಸ್) ಪೈರೂವೇಟ್ ಅಸಿಟಾಲ್ಡಿಹೈಡ್ ಮತ್ತು $CO_2$ ಆಗಿ ಡೀಕಾರ್ಬಾಕ್ಸಿಲೇಷನ್ ಆಗುವುದನ್ನು ವೇಗವರ್ಧನಗೊಳಿಸುತ್ತದೆ. ಆಲ್ಕೋಹಾಲಿನ ಹುದುಗುವಿಕೆಯ ಕೊನೆಯ ಘಟ್ಟದಲ್ಲಿ ಅಸಿಟಾಲ್ಡಿಹೈಡ್ ಇನ್ನೊಂದು ಕಿಣ್ವ ವ್ಯವಸ್ಥೆಯಿಂದ (ಆಲ್ಕೋಹಾಲಿನ ಡೀಹೈಡ್ರೊಜಿನೇಸ್ ಮತ್ತು ಸಹಘಟಕಗಳು) ಎಥನಾಲ್ ಆಗಿ ಅಪಕರ್ಷಣಗೊಳ್ಳುತ್ತದೆ. ಹೀಗೆ ಆಲ್ಕೋಹಾಲಿನ ಹುದುಗುವಿಕೆಯ ಪ್ರಕ್ರಿಯೆಯಲ್ಲಿ ಉಪಯೋಗಿಸಲ್ಪಟ್ಟ ಪ್ರತಿ 1 ಮೋಲ್ ಗ್ಲೂಕೋಸಿಗೆ 2 ಮೋಲ್ ಎಥನಾಲ್ ಹಾಗೂ 2 ಮೋಲ್ $CO_2$ ಗಳು ಉತ್ಪಾದನೆಗೊಳ್ಳುತ್ತದೆ.

ಗಾಳಿಯ ಅಭಾವದಲ್ಲಿ ನಡೆಯುವ ಮೇಲೆ ವಿವರಿಸಲಾದ ಕಾರ್ಬೋಹೈಡ್ರೇಟ್ ಚಯಾಪಚಯದಲ್ಲಿ ಆಕ್ಸಿಜನ್ನಿನ ಆವಶ್ಯಕತೆಯಿಲ್ಲ. ಗ್ಲೈಕಾಲಿಸಿಸಿನ ಮಧ್ಯವರ್ತಿ ಹಂತಗಳಲ್ಲಿ

ಒಂದಾದ ಟ್ರಯೋಸ್ ಫಾಸ್ಫೇಟಿನ ಉತ್ಕರ್ಷಣದಲ್ಲಿ ಎನ್ಎಡಿ ಒಂದು ಮುಖ್ಯ ಉತ್ಕರ್ಷಣಕಾರಿ. ಇದು ಟ್ರಯೋಸ್ ಫಾಸ್ಫೇಟಿನಿಂದ ಎಲೆಕ್ಟ್ರಾನುಗಳನ್ನು ಸ್ವೀಕರಿಸುತ್ತದೆ ಮತ್ತು ಕ್ರಿಯೆಯಲ್ಲಿ ಪಾತ್ರವಹಿಸುವ ಅಂಗಾಂಶಕ್ಕನುಗುಣವಾಗಿ ಎಲೆಕ್ಟ್ರಾನನ್ನು ಅಸಿಟಾಲ್ಡಿಹೈಡ್ ಅಥವಾ ಪೈರುವೇಟಿಗೆ ವರ್ಗಾಯಿಸುತ್ತದೆ.

ಹೀಗೆ ಶಕ್ತಿಯ ಮೂಲಕ್ಕೆ ಸರಳವಾದ ಶರ್ಕರ ಅಣು ಮುಖ್ಯ ಕಾರಣ. ಪೈರುವಿಕ್ ಆಮ್ಲ, ಅಸಿಟೈಲ್ $CO_4$ ,ಕ್ರೇಬ್‌ನ ಸಿಟ್ರಿಕ್ ಆಮ್ಲವರ್ತುಲ ಇವುಗಳ ಮೂಲಕ ಕೋಶ ಗ್ಲೂಕೋಸನ್ನು ಅಂತಿಮವಾಗಿ $CO_2$ ಮತ್ತು $H_2O$ ಆಗಿ ಉತ್ಕರ್ಷಿಸುವ ಕ್ರಿಯೆಯನ್ನು –ಇದು ಉಸಿರಾಟದ ಪ್ರಕ್ರಿಯೆ –ಈಕೆಳಗಿನಂತೆ ನಿರೂಪಿಸಬಹುದು.

$$C_6H_{12} + 6O_2 \leftrightarrows 6Co_2 + 6H_20\ F^1 = -680,000 \text{ ಕೆಲೊರಿಗಳು} (1)$$

ಪೈರುವೇಟಿನಿಂದ ಉತ್ಪತ್ತಿಯಾಗುವ ಅಸಿಟೈಲ್ $Co_A$ ಅಕ್ಸಾಲ್‌ಅಸಿಟಿಕ್ ಆಮ್ಲದೊಡನೆ ಸಂಘನನವಾಗಿ ಸಿಟ್ರಿಕ್ ಆಮ್ಲವನ್ನು ನೀಡುತ್ತದೆ. ಸಿಟ್ರೇಟಿನ ವಿಭಜನೆಯಿಂದ ಈ ಕೆಳಗಿನ ಸಂಯುಕ್ತಗಳು ಅನುಕ್ರಮವಾಗಿ ಉತ್ಪತ್ತಿಯಾಗುತ್ತವೆ. ಸಿಸ್–ಅಕೋನಿಟೇಟ್, ಐಸೊ–ಸಿಟ್ರೇಟ್, ಅಕ್ಸಾಲೋಸಕ್ಸಿನೇಟ್ a-ಕೀಟೋ ಗ್ಲುಟರೇಟ್, ಸಕ್ಸಿನೇಟ್, ಫ್ಯೂಮರೇಟ್ ಮತ್ತು ಮ್ಯಾಲೇಟ್. ಕಡೆಯ ಹಂತದಲ್ಲಿ ಅಕ್ಸಾಲ್ ಅಸಿಟೇಟನ್ನು ಪುನರುತ್ಪತ್ತಿ ಮಾಡಲು ಮ್ಯಾಲೇಟ್ ಮತ್ತೆ ವಿಭಜನೆಗೊಳ್ಳುತ್ತದೆ. ಈ ರೀತಿಯಲ್ಲಿ ಸಂಯುಕ್ತ ಮತ್ತೊಂದು ಹೊಸ ಪೈರುವೇಟ್ ಅಣುವಿನಿಂದ ಕ್ರಿಯೆಯನ್ನು ಆರಂಭಿಸುವುದು. ವರ್ತುಲದ ಪ್ರತಿಯೊಂದು ಸುತ್ತಿನಲ್ಲಿ ಉತ್ಪತ್ತಿಯಾಗುವ ಮಧ್ಯವರ್ತಿಗಳಲ್ಲಿ ಒಂದಾದ ಅಕ್ಸಾಲ್ ಅಸಿಟೇಟ್ ನೂತನ ಅಸಿಟಿಕ್ ಆಮ್ಲದ ಉತ್ಪನ್ನವನ್ನು ಸ್ವೀಕರಿಸುವುದರ ಮೂಲಕ ಸಕ್ಕರೆಯಿಂದ ಬರುವ ಪೈರುವೇಟ್ ಮತ್ತು $CO_2$ ಆಗಿ ಎಲ್ಲ ಸಕ್ಕರೆಯಲ್ಲಿ ಬಳಕೆಯಾಗುವವರೆಗೆ ಪರಿವರ್ತನೆಯಾಗುತ್ತದೆ. ಪ್ರಾಣಿ ಮತ್ತು ಸಸ್ಯ ವರ್ಗಗಳಲ್ಲೂ ಹೆಚ್ಚಿನ ಸೂಕ್ಷ್ಮಜೀವಿಗಳಲ್ಲೂ ಕ್ರೆಬ್ ಚಕ್ರಕ್ರಿಯೆಯಿರುತ್ತದೆಂಬುದಾಗಿ ಪ್ರದರ್ಶಿಸಲಾಗಿದೆ.

ಈ ಕ್ರಿಯೆ (ಶಕ್ತಿಯ ಉತ್ಪತ್ತಿಗೆ ಅವಕಾಶ ಮಾಡುವ) ಉತ್ಕರ್ಷಣ ಸಾಮರ್ಥ್ಯವಿರುವ, ಕೋಶದ ಮೈಟೊಕಾಂಡ್ರಿಯ ಅಥವಾ ದೊಡ್ಡ ಕಣದೊಂದಿಗೆ ಸಂಪರ್ಕವನ್ನು ಹೊಂದಿದೆ. ಕ್ರೇಬ್ ವರ್ತುಲದ ಮಧ್ಯವರ್ತಿಗಳಾದ ಕ್ರಿಯಾಧರಗಳನ್ನು ಉತ್ಕರ್ಷಣಗೊಳಿಸುವ ಸಾಮರ್ಥ್ಯವನ್ನು ಮೈಟೊಕಾಂಡ್ರಿಯ ಮಾತ್ರ ಪ್ರದರ್ಶಿಸಬಲ್ಲದು. ಕೋಶನ್ಯೂಕ್ಲಿಯೈ (ಆನುವಂಶಿಕ ದ್ವಿಗುಣವೃತ್ತಿ ಸಾಂಕೇತಿಕ ವಸ್ತುವನ್ನು ಹೊಂದಿರುವ) ಮತ್ತು ಮೈಕ್ರೊಸೋಮ್‌ಗಳಿಗೆ (ಪ್ರೋಟೀನ್ ಸಂಶ್ಲೇಷಣೆಯಲ್ಲಿ ಪಾತ್ರವಹಿಸುವ) ಕ್ರೇಬ್ ವರ್ತುಲದ ಉತ್ಕರ್ಷಣಗಳನ್ನು ವೃದ್ಧಿಸುವ ಶಕ್ತಿಯಿಲ್ಲ.

ವರ್ತುಲವನ್ನು ಪ್ರವೇಶಿಸುವ ಪ್ರತಿಯೊಂದು ಪೈರೂವಿಕ್ ಆಮ್ಲದ ಅಣುವಿಗೆ ಸುಮಾರು 30,0000 ಕೆಲೊರಿಗಳಷ್ಟು (300 ಕಿಲೋ ಕೆಲೋರಿಗಳು) ಶಕ್ತಿ ಉತ್ಪತ್ತಿಯಾಗುತ್ತವೆ. ಒಂದು ಗ್ಲೂಕೋಸ್ ಅಣುವಿನಿಂದ ಎರಡು ಪೈರೂವಿಕ್ ಆಮ್ಲಅಣುಗಳು ಉತ್ಪತ್ತಿಯಾಗುತ್ತದೆ. ಎಂದರೆ ಪ್ರತಿಯೊಂದು ಗ್ಲೂಕೊಸ್ ಅಣುವಿನಿಂದ 550,000 ಕೆಲೊರಿಗಳಷ್ಟು ಶಕ್ತಿ ಉತ್ಪತ್ತಿಯಾಗುತ್ತದೆ ಎಂದಾಯಿತು. ಇದು ಗ್ಲೂಕೋಸ್ ಅಣುವಿನಲ್ಲಿ ದೊರೆಯುವ ಒಟ್ಟು ಶಕ್ತಿಯ ಶೇಕಡ 80 ಭಾಗ.

ಕಾರ್ಬೋಹೈಡ್ರೇಟ್ ಅಥವಾ ಇತರ ಆಹಾರಗಳ ಉತ್ಕರ್ಷಣದಿಂದ ಯಾವ ರೀತಿಯಲ್ಲಿ ಕೋಶ ಶಕ್ತಿಯನ್ನು ಶೇಖರಿಸಿಕೋಳ್ಳುತ್ತದೆ ಎಂಬುದರ ಕ್ರಿಯಾವಿನ್ಯಾಸ ಬಹುಕ್ಲಿಷ್ಟವಾದದ್ದು ಮತ್ತು ಮುಖ್ಯವಾಗಿ ಎಟಿಪಿ ಎಂಬ ನಿರ್ದಿಷ್ಟ ಸಂಯುಕ್ತವೊಂದು ರಾಸಾಯನಿಕ ಕ್ರಿಯೆಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಈ ಸಂಯುಕ್ತದ ಅಂತ್ಯದ ಎರಡು ಫಾಸ್ಫೇಟ್ ಗುಂಪುಗಳಲ್ಲಿ ಹೆಚ್ಚಿನ ಶಕ್ತಿಯಿರುತ್ತದೆ. ಇದು ಆಹಾರ ಪದಾರ್ಥಗಳು ಉತ್ಕರ್ಷಣಗೊಳ್ಳುವಾಗ ಉತ್ಪತ್ತಿಯಾಗುತ್ತದೆ. ಇವು ಶಕ್ತಿಯ ಭಂಡಾರಗಳು. ಈ ಶಕ್ತಿ ಯಾಂತ್ರಿಕ ಕಾರ್ಯ, ನರಪ್ರೇಷಣ (ನರ್ವ್ ಟ್ರಾನ್ಸ್‌ಮಿಷನ್) ಅಥವಾ ಜೀವಕೋಶ ಹಾಗೂ ಜೀವಿಗೆ ಸಂಬಂಧಿಸಿದ ರಾಸಾಯನಿಕ ಕ್ರಿಯೆಗಳಿಗೆ ಅವಶ್ಯವಾದ ಶಕ್ತಿಯ ಮೂಲ. ಎಟಿಪಿ ಶಕ್ತಿಯ ಮೂಲವಾಗಿ ಬಳಸಲ್ಪಟ್ಟಾಗ ಪ್ರತಿಯೊಂದು ವೈಯಕ್ತಿಕ ಅಣುವಿಗೂ 8,000–9,000ಕೆಲೊರಿಗಳ ರೀತ್ಯ ಶಕ್ತಿಯನ್ನು ಒದಗಿಸುತ್ತದೆ. ಈ ವೇಳೆಯಲ್ಲಿ ಅದು ತನ್ನ ಅಂತ್ಯದ ಒಂದು ಫಾಸ್ಫೇಟ್ ಗುಂಪನ್ನು ಕಳೆದುಕೊಂಡು ಎಟಿಪಿ ಆಗುತ್ತದೆ. ಇನ್ನಷ್ಟು ಆಹಾರ ಸಾಮಗ್ರಿಗಳ ಉತ್ಕರ್ಷಣದ ಮೂಲಕ ಎಟಿಪಿ ಮತ್ತು ಫಾಸ್ಫೇಟುಗಳಿಂದ ಎಟಿಪಿ ಸಂಶ್ಲೇಷಣೆ ಆಗುತ್ತದೆ. ಜೀವವಿಧಾನದಲ್ಲಿ ಶಕ್ತಿಯನ್ನು ಉಪಯೋಗಿಸಿಕೊಳ್ಳುವ ಈ ಕುಶಲ ವಿಧಾನಕ್ಕೆ ಕಾರಣವಾಗಿರುವ ಕಿಣ್ವಗಳಲ್ಲಿ ಅಧಿಕ ಸಂಖ್ಯೆಯವು ಮೈಟೊಕಾಂಡ್ರಿಯದಲ್ಲಿ ಸ್ಥಾನೀಕೃತವಾಗಿವೆ.

ಪ್ರಾಣಿಯ ಜೀವನದ ಸಂರಕ್ಷಣೆಗೆ ಕಾರ್ಬೋಹೈಡ್ರೇಟಿನ ಪ್ರಾಮುಖ್ಯ ಕಾರ್ಬೋಹೈಡ್ರೇಟನ್ನು ತಿನ್ನುವುದನ್ನು ಮಿತಿಗೊಳಿಸಿದಾಗ ಅಥವಾ ಕಾರ್ಬೋಹೈಡ್ರೇಟ್ ಚಯಾಪಚಯದಲ್ಲಿ ಕ್ಷೋಭೆಯುಂಟಾದಾಗ ತಿಳಿದುಬರುತ್ತದೆ. ಕಾರ್ಬೋಹೈಡ್ರೇಟಿನ ಕೊರತೆಯಿಂದ ಪ್ರಾಣಿ ಬಡಕಲಾಗಿ ಕ್ಷೀಣವಾಗುತ್ತದೆ. ಶಕ್ತಿಯ ಆವಶ್ಯಕತೆಗಳಿಗಾಗಿ ಬಳಸುವುದರಿಂದ ಪ್ರೋಟೀನ್ ಶೇಖರಣೆಯಲ್ಲಿ ಕೊರತೆಯುಂಟಾದರೆ ಕಾರ್ಬೋಹೈಡ್ರೇಟ್ ಚಯಾಪಚಯದಲ್ಲಿ ಕ್ಷೋಭೆಯುಂಟಾದಾಗ ಅದು ಸಿಹಿಮೂತ್ರ (ಇನ್ಸುಲಿನ್ನಿನ ಕೊರತೆ), ವಾನ್ ಜೀರ್ಕ್ಸ್ ಖಾಯಿಲೆ ಅಥವಾ ಗ್ಲೈಕೊಜನ್ ಶೇಖರಣಾ ಖಾಯಿಲೆ (ಕಿಣ್ವದ ಅಭಾವದಿಂದ ಪಿತ್ತಜನಕಾಂಗದಲ್ಲಿ ಗ್ಲೈಕೊಜನಿನ ಹೆಚ್ಚಿನ ಶೇಖರಣೆ), ಗ್ಯಾಲೆಕ್ಟೋಸೆಮಿಯಾ (ಕಿಣ್ವದ ಅಭಾವದಿಂದ ಉಂಟಾಗುವ ಮತ್ತೊಂದು ಖಾಯಿಲೆ) ಇತ್ಯಾದಿ ವಿವಿಧ ರೂಪಗಳಲ್ಲಿ ವ್ಯಕ್ತವಾಗುತ್ತದೆ.

**ದ್ಯುತಿಸಂಶ್ಲೇಷಣೆ :** ಪ್ರಾಣಿಜೀವನದ ಉಳಿವಿಗೆ ಆವಶ್ಯಕವಾದ ಕಾರ್ಬೋಹೈಡ್ರೇಟುಗಳನ್ನು ಪ್ರಾಣಿಕೋಶಗಳು ಸಂಶ್ಲೇಷಿಸಿಕೊಳ್ಳಲಾರವು ಮತ್ತು ಪೂರ್ವಭಾವಿಯಾಗಿ ಸಂಶ್ಲೇಷಿತರೂಪದಲ್ಲಿ ಇವನ್ನು ಹೊರಗಿನಿಂದ ಸರಬರಾಜು ಮಾಡಬೇಕು. ಸಸ್ಯಗಳು ಇವನ್ನು ಸಂಶ್ಲೇಷಿಸುವುದರಿಂದ ದ್ಯುತಿಸಂಶ್ಲೇಷಣೆಯ ಮೂಲಕ ಸಸ್ಯಗಳಿಂದ ನಡೆಯುವ ಕಾರ್ಬೋಹೈಡ್ರೇಟುಗಳ ಸಂಶ್ಲೇಷಣೆಯ ಕ್ರಿಯಾವಿಧಿ ಅತಿಮುಖ್ಯವಾದದ್ದು. ಕಾರ್ಯತಃ ದ್ಯುತಿಸಂಶ್ಲೇಷಣೆ ಉಸಿರಾಟದ ಕ್ರಿಯೆಗೆ ಹಿಮ್ಮೊಗವಾದ (ರಿವರ್ಸಲ್) ಕ್ರಿಯೆ. ಎಂದರೆ ಶಕ್ತಿಯ ವ್ಯಯದಿಂದ ಇಂಗಾಲದ ಡೈಆಕ್ಸೈಡ್ ಮತ್ತು ನೀರಿನಿಂದ ಕಾರ್ಬೋಹೈಡ್ರೇಟಿನ ತಯಾರಿಕೆ [ಸಮೀಕರಣ (1)ರ ತಿರುಗುಮುರುಗ ರೂಪ]. ದ್ಯುತಿಸಂಶ್ಲೇಷಣೆ ಎಂಬ ಪದವೇ ಸೂಚಿಸುವಂತೆ ಶಕ್ತಿ ಸೂರ್ಯನ ಬೆಳಕಿನಿಂದ ದೊರೆಯುತ್ತದೆ. ಸೂರ್ಯನಿಂದ ದೊರೆಯುವ ಬೆಳಕಿನ ಶಕ್ತಿಯ ಹೀರುವಿಕೆ ಮತ್ತು ಅಂತಿಮವಾಗಿ ರಾಸಾಯನಿಕ ಶಕ್ತಿಯನ್ನಾಗಿ ಪರಿವರ್ತಿಸಲು ಮುಖ್ಯವಾದ ಸಂಯುಕ್ತಗಳೆಂದರೆ ಎಲೆಯಲ್ಲಿರುವ ಹಸಿರು ವರ್ಣದ್ರವ್ಯಗಳು ಹರಿತ್ತುಗಳಾದ ಎ ಮತ್ತು ಬಿ ಹಾಗೂ ಕೆರೊಟಾನಾಯ್ಡುಗಳು. ಈ ವರ್ಣದ್ರವ್ಯಗಳು ಹರಿತ್ತಣು ಅಥವಾ ಕ್ಲೋರೋಪ್ಲಾಸ್ಟಿನಲ್ಲೇ ಪ್ರೋಟೀನ್ ಅಥವಾ ಲಿಪೊಪ್ರೋಟೀನ್ ಸಂಕೀರ್ಣಗಳ ರೂಪದಲ್ಲಿ ದೊರೆಯುತ್ತವೆ. ದ್ಯುತಿಸಂಶ್ಲೇಷಣ ಕ್ರಿಯೆಯಿಂದ ಕಾರ್ಬೋಹೈಡ್ರೇಟುಗಳ ಉಂಟಾಗುವಿಕೆಯನ್ನು ಶಕ್ತಿಯನ್ನು ಅಪೇಕ್ಷಿಸುವ ಉತ್ಕರ್ಷಣ ಅಪಕರ್ಷಣ ಕ್ರಿಯೆಯೆಂದು ಹೇಳಬಹುದು. ಅಪಕರ್ಷಣಕಾರಿಯಾದ ನೀರು ಆಕ್ಸಿಜನ್ನಾಗಿ ಉತ್ಕರ್ಷಣಗೊಳ್ಳುತ್ತದೆ. ಉತ್ಕರ್ಷಣಕಾರಿಯಾದ $CO_2$,C($H_2O$) ನಿಂದ ಪ್ರತಿನಿಧಿತವಾಗುವ ಕಾರ್ಬೋಹೈಡ್ರೇಟ್ ಮಟ್ಟಕ್ಕೆ ಅಪಕರ್ಷಿಸಲ್ಪಡುತ್ತದೆ.

**ವರ್ಗೀಕರಣ :** ಕಾರ್ಬೋಹೈಡ್ರೇಟುಗಳನ್ನು ಏಕಶರ್ಕರಗಳು (ಮಾನೋಸಾಕ್ಕರೈಡ್ಸ್), ಲಘುಶರ್ಕರಗಳು (ಆಲಿಗೋಸಾಕ್ಕರಾರೈಡ್ಸ್) ಮತ್ತು ಬಹು ಶರ್ಕರಗಳು (ಪಾಲಿಸಾಕ್ಕರೈಡ್ಸ್) ಎಂದು ಮೂರು ಪ್ರಮುಖ ಗುಂಪುಗಳಾಗಿ ವರ್ಗೀಕರಿಸಬಹುದು.

**ಏಕಶರ್ಕರಗಳು :** ಇವು ಸರಳ ಶರ್ಕರಗಳು ; ಸಾಮಾನ್ಯವಾದ ಪರಿಸ್ಥಿತಿಗಳಲ್ಲಿ ಜಲವಿಶ್ಲೇಷಣೆಯಿಂದ ಅಲ್ಪತರ ಮಾನಗಳಿಗೆ ಪರಿವರ್ತನೆಯಾಗುವುದಿಲ್ಲ. ಇವುಗಳಲ್ಲಿ ಹೆಚ್ಚಿನವು ಶಾಖೆಯಿಲ್ಲದವು ಮತ್ತು ಇವನ್ನು ನೇರ ಸರಣಿಯ ಪಾಲಿಹೈಡ್ರಾಕ್ಸಿ ಆಲ್ಡಿಹೈಡುಗಳು (ಆಲ್ಡೋಸುಗಳು) ಅಥವಾ ಕೀಟೋನುಗಳು (ಕೀಟೋಸುಗಳು) ಎಂದು ವಿವರಿಸಬಹುದು. ಆಲ್ಡೋಸುಗಳಲ್ಲಿ ಉದಾಹರಣೆಗಾಗಿ ಗ್ಲೂಕೋಸನ್ನು $CHO\text{-}(CHOH)_4\text{-}CH_2OH$ ಎಂಬ ಸೂತ್ರದಿಂದ ಹೇಳಿದಾಗ ಕಾರ್ಬೊನಿಲ್ ಪುಂಜ C-1ದಲ್ಲಿದ್ದರೆ, ಕೀಟೋಸುಗಳಲ್ಲಿ ಸರಣಿಯಲ್ಲಿ ಇರುತ್ತದೆ. ಉಳಿದ ಐದು ಇಂಗಾಲ ಪರಮಾಣುಗಳಿಗೆ ಹೈಡ್ರಾಕ್ಸಿಲ್ ಪುಂಜ ಬದ್ಧವಾಗಿರುತ್ತದೆ. ಸಾಮಾನ್ಯವಾಗಿ ಅವು ಆರು (ಪೈರನೋಸ್) ಅಥವಾ ಐದು (ಫ್ಯುರನೋಸ್) ಸಂಖ್ಯಾವಲಯಗಳಲ್ಲಿ ದೊರೆತರೂ ಅವುಗಳಲ್ಲಿ ಹೆಚ್ಚಿನ ಗುಣಗಳು ವಿವೃತಸರಣಿ (ಓಪನ್‌ಚೈನ್) ರಚನೆಯುಳ್ಳ ವಸ್ತುಗಳ ಗುಣಗಳಿಗೆ ಸರಿ ಹೊಂದುತ್ತದೆ. ಟ್ರಯೋಸುಗಳು (3), ಟೆಟ್ರೋಸುಗಳು (4), ಪೆಂಟೋಸುಗಳು (5), ಹೆಕ್ಸೋಸುಗಳು (6) ಇತ್ಯಾದಿ ನಾನೋಸುಗಳು (9) ವರೆಗೆ ಅವನ್ನು ಅವುಗಳಲ್ಲಿರುವ ಇಂಗಾಲ ಪರಮಾಣುಗಳ ಸಂಖ್ಯೆಗೆ ಅನುಗುಣವಾಗಿ ವರ್ಗೀಕರಿಸಲಾಗಿದೆ. ಸುಮಾರು ಇಪ್ಪತ್ತು ಏಕಶರ್ಕರಗಳು ಪ್ರಕೃತಿಯಲ್ಲಿ ದೊರೆಯುತ್ತವೆ. ಇವುಗಳಲ್ಲಿ ಮುಖ್ಯವಾದವು ಹೆಕ್ಸೋಸುಗಳು, ವಿಶೇಷವಾಗಿ ಗ್ಲೂಕೋಸ್, ಫ್ರಕ್ಟೋಸ್ ಮತ್ತು ಗ್ಯಾಲಕ್ಟೋಸ್, ಪೆಂಟೋಸುಗಳ ಗುಂಪಿಗೆ ಅರ್ಯಾಬಿನೋಸ್ ಸ್ಕೈಲೋಸ್ ಮತ್ತು ರೈಬೋಸ್‌ಗಳು ಸೇರಿವೆ. ಡಿ–ರೈಬೋಸ್ ಮತ್ತು 2–ಡಿ ಆಕ್ಸಿರೈಬೋಸ್ ಇವು ಸಕಲ ಜೀವಕೋಶಗಳಲ್ಲಿಯೂ ದೊರೆಯುವ ಎರಡು ವಿಧದ ನ್ಯೂಕ್ಲಿಯಕ್ ಆಮ್ಲದ (ಡಿಎನ್‌ಎ ಮತ್ತು ಆರ್‌ಎನ್‌ಎ) ಪ್ರಮುಖ ಅಂಶಗಳು. ರೈಬೋಸ್ ಸಹ ಅನೇಕ ಸಹಕಿಣ್ವಗಳ ಘಟಕ. ಮಧ್ಯವರ್ತಿ ಚಯಾಪಚಯದಲ್ಲಿ ಭಾಗವಹಿಸುವ ಮತ್ತೊಂದು ಪೆಂಟೋಸ್ ಎಂದರೆ ಸ್ಕೈಲ್ಯುಲೋಸ್ (ಫಾಸ್ಫೇಟ್ ಎಸ್ಟರ್ ರೂಪದಲ್ಲಿ). ಏಕಶರ್ಕರಗಳ ಚಯಾಪಚಯದಲ್ಲಿ ಡೈಹೈಡ್ರಾಕ್ಸಿಅಸಿಟೋನ್ ಎಂಬ ಒಂದು ಟ್ರಯೋಸ್ ಫಾಸ್ಫೇಟು ಗುಂಪನ್ನೊಳಗೊಂಡ ವ್ಯುತ್ಪನ್ನದ ರೂಪದಲ್ಲಿರುತ್ತದೆ. ಚಯಾಪಚಯದಲ್ಲಿ ಮುಖ್ಯವಾದ ಹೆಪ್ಟೋಸ್ ಎಂದರೆ ಸೀಡೋಹೆಪ್ಟ್ಯುಲೋಸ್. ಇದು ಪ್ರಕೃತಿಯಲ್ಲಿ ಅಸಂಯೋಜಿತ ರೂಪದಲ್ಲಿಯೂ ಮಾನೋ ಹಾಗೂ ಡೈಫಾಸ್ಫೇಟುಗಳ ರೂಪದಲ್ಲಿಯೂ ದೊರೆಯುತ್ತದೆ. ಕೆಲವು ಸಸ್ಯಗಳು (ಸೀಡಂ ಜಾತಿಯವು)ಮತ್ತು ಕೆಲವು ಗ್ರಾಮ್–ನೆಗೆಟಿವ್ ಜೀವಾಣುಗಳು ಸ್ವಾಭಾವಿಕ ಮೂಲಗಳು.

**ಆಕ್ಟೋಸ್ :** ಡಿ–ಗ್ಲೈಕೋ–ಡಿ –ಮ್ಯಾನೋ ಆಕ್ಟ್ಯುಲೋಸ್ ಒಂದೇ ಈವರೆಗೆ ಪ್ರತ್ಯೇಕಗೊಳಿಸಲಾಗಿರುವ ಆಕ್ಟೋಸು. ಇದನ್ನು ಅವಕ್ಯಾಡೊ ಪಿಯರ್‌ನಿಂದ (ಒಂದು ಜಾತಿಯ ಹಣ್ಣು) ಡಿ–ಸೀಡೊಹೆಪ್ಟ್ಯುಲೋಸಿನೊಂದಿಗೆ ಪಡೆಯಲಾಗಿದೆ.

**ನಾನೋಸ್ :** ಇದು ಇದರ ವ್ಯುತ್ಪನ್ನ ನ್ಯೂರಾಮಿನಿಕ್ ಆಮ್ಲದ ರೂಪದಲ್ಲಿ ಇರುವುದಾಗಿ ತಿಳಿದುಬಂದಿದೆ. ನ್ಯೂರಾಮಿನಿಕ್ ಆಮ್ಲ ಗ್ಯಾಂಗ್ಲಿಯೋಸೈಡುಗಳಲ್ಲಿ (ಮಿದುಳಿನ ತೈಲಗಳಲ್ಲಿ) ಇರುತ್ತದೆ.

**ಡಿಆಕ್ಸಿ ಶರ್ಕರಗಳು :** ಕೆಲವು ಸಂದರ್ಭಗಳಲ್ಲಿ ಒಂದು ಅಥವಾ ಹೆಚ್ಚು ಹೈಡ್ರಾಕ್ಸಿಲ್ ಗುಂಪು ಜಲಜನಕ ಪರಮಾಣುಗಳ ಅಥವಾ ಮಿಥೈಲ್ ಗುಂಪಿನಿಂದ ಪ್ರತಿಸ್ಥಾಪಿತವಾಗುತ್ತವೆ. ಮತ್ತು ತತ್ಪರಿಣಾಮವಾಗಿ ಉಂಟಾಗುವ ಸಂಯುಕ್ತವೇ ಡಿಆಕ್ಸಿ ಶರ್ಕರ , 2–ಆಕ್ಸಿ–ಡಿ–ರೈಬೋಸ್ ಡಿಆಕ್ಸಿ ರೈಬೋನ್ಯೂಕ್ಲಿಯಿಕ್ ಆಮ್ಲದ (ಡಿಎನ್‌ಎ) ಶರ್ಕರ, ಎಲ್–ರ್‍ಯಾಮ್ನೋಸ್ (6–ಡಿಆಕ್ಸಿ–ಎಲ್–ಮ್ಯಾನೋಸ್ ; ಎಲ್ ಮ್ಯಾನೋಮಿಥೈಲೋಸ್) ಮತ್ತು ಎಲ್–ಫ್ಯುಕೋಸ್ (6–ಡಿಆಕ್ಸಿ–ಎಲ್ ಗ್ಯಾಲಕ್ಟೋಸ್; ಎಲ್ ಗ್ಯಾಲಕ್ಟೋ ಮಿಥೈಲೋಸ್) ಇವು ಸಾಮಾನ್ಯ ಉದಾಹರಣೆಗಳು. ಎಲ್–ಫ್ಯೂಕೋಸನ್ನು ಸಸ್ಯಗಳ ಗ್ಲೈಕೊಸೈಡುಗಳಲ್ಲಿ ಮತ್ತು ಹರಿತ್ತು ಶೈವಲಗಳ ಗೋಂದಿನ ಸೋರುವಿಕೆಯ ಪಾಲಿಶರ್ಕರಗಳಲ್ಲಿ ನೋಡಬಹುದು. ಮನುಷ್ಯರ ಹಾಲಿನ ಲಘುಶರ್ಕರಗಳಲ್ಲಿ ರಕ್ತವರ್ಗ ವಸ್ತುಗಳ ಬಹುಶರ್ಕರಗಳಲ್ಲಿ ಮತು ಅನೇಕ ಗ್ಲೈಕೊಪ್ರೋಟೀನುಗಳಲ್ಲಿ ಸಹ ಅದು ದೊರೆಯುತ್ತದೆ. ಕಂದು ಶೈವಲದ ಬಹುಶರ್ಕರಗಳಲ್ಲಿನ ಶರ್ಕರದ ಅಂಶ ಫ್ಯೂಕಾಯ್ಡಿನ್. ಬಹುಶರ್ಕರದಲ್ಲಿರುವ ಅಂಶ ಇದೊಂದೇ. ಸ್ಟ್ರೆಪ್ಟೊಮೈಸಿನ್‌ನ ಒಂದು ಶಾಖೀಯ ಡಿಆಕ್ಸಿ ಶರ್ಕರ. ಅನೇಕ ಶಾಖೀಯ ಶರ್ಕರಗಳು ಪ್ರಕೃತಿಯಲ್ಲಿರುವುದಾಗಿ ತಿಳಿದುಬಂದಿದೆ.

**ವ್ಯುತ್ಪನ್ನಗಳು :** ಓಸಜೋನುಗಳು ಮತ್ತು ಓಸಾಟ್ರಯಜೋಲುಗಳು: ಫೀನೈಲ್ ಹೈಡ್ರಜೀನಿನೊಡನೆ ಮಾನೋಸ್ಯಾಕರೈಡುಗಳ ಕ್ರಿಯೆ ಆರ್ಗ್ಯಾನಿಕ್ ರಸಾಯನಶಾಸ್ತ್ರದ ಕ್ರಿಯೆಗಳಲ್ಲಿ ಶ್ರೇಷ್ಠವಾದ ಒಂದು ರಾಸಾಯನಿಕ ಕ್ರಿಯೆ. ದೀರ್ಘಕಾಲದ ಕಾಸುವಿಕೆಯಿಂದ ಫೀನೈಲ್ ಹೈಡ್ರಜೀನಿನ ಮೂರು ಅಣುಗಳು ಆಲ್ಡೋಸ್ ಅಥವಾ ಕೀಟೋಸಿನೊಡನೆ ಕ್ರಿಯೆ ಹೊಂದಿ ಓಸಜೋನ್ ಉತ್ಪತ್ತಿಯಾಗುತ್ತದೆ. ಪ್ರತಿಯೊಂದು ಕೀಟೋಸ್ ಸಹ ರಚನಾತ್ಮಕವಾಗಿ ಸಂಬಂಧವಿರುವ ಎರಡು ಆಲ್ಡೋಸುಗಳಿಂದ ಪಡೆಯುವಂಥ ಓಸಜೋನನ್ನು ನೀಡುತ್ತದೆ. ಶರ್ಕರಗಳ ಲಕ್ಷಣ ಮತ್ತು ಪತ್ತೆಯಲ್ಲಿ ಓಸಜೋನುಗಳು ಅತ್ಯಂತ ಶ್ರೇಷ್ಠವಾದ ಸ್ಫಟಿಕೀಯ ವ್ಯುತ್ಪನ್ನಗಳು. ಆದರೆ ಕಾಪರ್ ಸಲ್ಫೇಟಿನಿಂದ ಓಸಜೋನನ್ನು ಉತ್ಕರ್ಷಿಸಿ ಪಡೆದ ಓಸಾಟ್ರಯಜೋಲುಗಳು ಸ್ಥಿರವಾಗಿರುವುದರಿಂದಲೂ ಶುದ್ಧರೂಪದಲ್ಲಿ ಪಡೆಯಬಹುದಾದ್ದರಿಂದಲೂ ದ್ರಾವಣದಲ್ಲಿ ನಿರ್ವರ್ಣವಾಗಿದ್ದು ದ್ಯುತಿಭ್ರಮಣೆಯನ್ನು ಸುಲಭವಾಗಿ ಅಳೆಯಬಹುದಾದ್ದರಿಂದಲೂ ಅವುಗಳ ತಯಾರಿಕೆಯ ಕಡೆಗೆ ಒಲವು ಹೆಚ್ಚು.

**ಎಸ್ಟರುಗಳು :** ಶರ್ಕರಗಳಲ್ಲಿ ಮತ್ತು ಅವುಗಳ ವ್ಯುತ್ಪನ್ನಗಳಲ್ಲಿರುವ ಹೈಡ್ರಾಕ್ಸಿಲ್ ಪುಂಜವನ್ನು ಬಹು ಸುಲಭವಾಗಿ ಫಾಸ್ಫೇಟ್ ಮತ್ತು ಸಲ್ಫೇಟ್‌ಗಳಿಂದ ಎಸ್ಟರೀಕರಿಸಬಹುದು. ಫಾಸ್ಫೇಟ್ ಎಸ್ಟರುಗಳು, ಮುಕ್ತ ಶಕ್ತಿಯ ಶೇಖರಣೆ ಮತ್ತು ಬಿಡುಗಡೆಯ ಚಯಾಪಚಯಗಳಲ್ಲಿ ಹಾಗೂ ವೇಗವರ್ಧನೆಯಲ್ಲಿ ಭಾಗವಹಿಸುವುದರಿಂದ ಜೈವಿಕ ಕ್ರಿಯೆಗಳಲ್ಲಿ ವ್ಯಾಪಕವಾದ ಪ್ರಾಮುಖ್ಯವನ್ನು ಪಡೆದಿವೆ. ಕೋರಿ ಎಸ್ಟರ್ ಎಂದು ಪರಿಚಿತವಾಗಿರುವ ಗ್ಲೂಕೋಸ್ ಫಾಸ್ಫೇಟಿಗೆ ಪ್ರಾಣಿಯ ದೇಹದಲ್ಲಿನ ಚಯಾಪಚಯದಲ್ಲಿ ಪ್ರಮುಖವಾದ ಪಾತ್ರವೊಂದಿದೆ.

**ಶರ್ಕರ ಈಥರುಗಳು :** ಮೆಥಾಕ್ಸಿಲ್ ಗುಂಪನ್ನು ಜೊತೆಗೂಡಿಸುವುದರ ಮೂಲಕ ಈಥರೀಕರಣ (ಮೆಥಿಲೇಷನ್) ಏಕಶರ್ಕರಗಳು ಮತ್ತು ಅವುಗಳ ಸಂಕೀರ್ಣ ಪಾಲಿಮರಿಕ್ ವ್ಯುತ್ಪನ್ನಗಳ ರಚನೆಯ ಸ್ಪಷ್ಟೀಕರಣದಲ್ಲಿ ಒಂದು ಮುಖ್ಯ ಹಂತ.

**ಏಕಶರ್ಕರಗಳ ಗುಣಗಳು :** ಅಪಕರ್ಷಕ ಗುಣಧರ್ಮಗಳು : ಅಣುವಿನಲ್ಲಿರುವ ಮುಕ್ತ ಅಥವಾ ವಿಭವಮುಕ್ತ ಆಲ್ಡಿಹೈಡ್ ಅಥವಾ ಕೀಟೋನ್ ಗುಂಪಿನಿಂದಾಗಿ ಏಕಶರ್ಕರಗಳು ಲೋಹ ಅಯಾನುಗಳನ್ನು, ಅದರಲ್ಲಿಯೂ ವಿಶೇಷವಾಗಿ ಪ್ರತ್ಯಾಮ್ಲ ದ್ರಾವಣಗಳಲ್ಲಿ ತಾಮ್ರ ಅಥವಾ ಬೆಳ್ಳಿಯನ್ನು ಅಪಕರ್ಷಿಸಬಲ್ಲವು. ಅಪಕರ್ಷಣ ಶರ್ಕರಗಳನ್ನು ಪತ್ತೆಹಚ್ಚುವುದರಲ್ಲಿ ಅತ್ಯಂತ ಸಾಮಾನ್ಯವಾದ ಅಭಿಕರ್ಮಕವೆಂದರೆ (ರೀ ಏಜೆಂಟ್) ಫೆಹಲಿಂಗ್‌ನ ದ್ರಾವಣ. ಈ ಅಭಿಕರ್ಮಕದಲ್ಲಿ $Cu^{2+}$ ಎಂಬುದರ ಕ್ಲಿಷ್ಟರೂಪ ಟಾರ್ಟ್ರೇಟ್ ದ್ರಾವಣ ರೂಪದಲ್ಲಿ ಉಳಿದಿರುತ್ತದೆ. ಶರ್ಕರದಲ್ಲಿರುವ ಆಲ್ಡಿಹೈಡ್ ಗುಂಪನ್ನು ಸುಮಾರಾದ ಉತ್ಕರ್ಷಣಕಾರಿಗಳನ್ನು ಉಪಯೋಗಿಸಿ ಮಾನೋ ಕಾರ್ಬಾಕ್ಸಿಲಿಕ್ ಆಮ್ಲಕ್ಕೂ ಪ್ರಬಲ ಉತ್ಕರ್ಷಣಕಾರಿಗಳನ್ನು (ನೈಟ್ರಿಕ್ ಆಮ್ಲದಂಥ) ಉಪಯೋಗಿಸಿ ಡೈಕಾರ್ಬಾಕ್ಸಿಲಿಕ್ ಆಮ್ಲಗಳಿಗೂ ಉತ್ಕರ್ಷಿಸಬಹುದು. ಇವೇ ಪರಿಸ್ಥಿತಿಗಳಲ್ಲಿ ಪೆಂಟೋಸುಗಳು ಪರ್‌ಫ್ಯುರಾಲುಗಳನ್ನು ನೀಡುತ್ತವೆ.

**ಪರಿವರ್ತಿ(ಮ್ಯಾಟರೊಟೇಶನ್) :** ಸಾಮಾನ್ಯ ಗ್ಲೂಕೋಸನ್ನು ನೀರಿನಲ್ಲಿ ವಿಲೀನಗೊಳಿಸಿದಾಗ ಆರಂಭ ವಿಶಿಷ್ಟ ದ್ಯುತಿಭ್ರಮಣ $[\alpha]+111^{\circ}$ ಕ್ರಮೇಣ ಇದರ ಅರ್ಧಕ್ಕೆ ಅಂದರೆ +52.5°ಗೆ ಇಳಿಯುತ್ತದೆ. ಇದಕ್ಕೆ ಗ್ಯಾಲಕ್ಟೋಸ್, ಮ್ಯಾಲ್ಟೋಸ್ ಮತ್ತು ಲ್ಯಾಕ್ಟೋಸುಗಳು ಹೊರತಾಗಿವೆ. ಗ್ಲೂಕೋಸ್ ಹತ್ತು ರೂಪಗಳಲ್ಲಿ ದೊರೆಯುವುದೇ ಇದರ ಕಾರಣ. ಇದು ಅಣುವಿನ ಮೊದಲನೇ ಇಂಗಾಲ ಅಣುವಿನ ಸುತ್ತಲ ವಿನ್ಯಾಸದಿಂದ ಸಾಧ್ಯವಾಗಿದೆ.

**ಅಧಿಅವಯವಗಳು (ಎಪಿಮರುಗಳು) :** ಶರ್ಕರ ಆಮ್ಲಗಳಂಥ ಎರಡು ಶರ್ಕರಗಳು ಅಥವಾ ಅವುಗಳ ವ್ಯುತ್ಪನ್ನಗಳ ರಚನೆಯಲ್ಲಿ ಅಪಕರ್ಷಣಕಾರಿ ಗುಂಪಿನ ಪಕ್ಕದಲ್ಲಿರುವ ಇಂಗಾಲ ಅಣುವಿನ ವಿನ್ಯಾಸದಲ್ಲಿ ಮಾತ್ರ ಬದಲಾದಾಗ ಅದನ್ನು ಅಧಿಅವಯವಗಳೆಂದು ಹೇಳುತ್ತೇವೆ. ಈ ರೀತಿಯಲ್ಲಿ ಗ್ಲೂಕೋಸ್, ಫ್ರಕ್ಟೋಸ್ ಮತ್ತು ಮಾನೋಸುಗಳು ಅಧಿಅವಯವಗಳಾದ ಹೆಕ್ಸೋಸುಗಳು. ಸುಣ್ಣದ ತಿಳಿನೀರಿನಿಂದ ಗ್ಲೂಕೋಸನ್ನು ಸ್ವಲ್ಪಮಟ್ಟಿಗೆ (ದುರ್ಬಲವಾಗಿ) ಕ್ಷಾರಗೊಳಿಸಿದಾಗ ಈ ಅಧಿಅವಯವಗಳ ನಡುವೆ ಒಂದು ಸಮತೋಲನವುಂಟಾಗುತ್ತದೆ (ಲೋರಿಡಿ ಬ್ರೂನ್ ರೂಪಾಂತರ).

**ಅಮೈನೋ ಶರ್ಕರಗಳು :** ರಕ್ತವರ್ಗ ವಸ್ತುಗಳು ಮತ್ತು ಗ್ಲೈಕೋಪ್ರೋಟೀನುಗಳನ್ನು ಒಳಗೊಂಡ ಬಹುಶರ್ಕರಗಳನ್ನು ಜಲವಿಚ್ಛೇದನೆ ಮಾಡಿದಾಗ ಪಡೆಯುವ ಏಕಶರ್ಕರಗಳಲ್ಲಿ ಹೈಡ್ರಾಕ್ಸಿಲ್ ಪುಂಜ ಅಮೈನೋ ರ್‍ಯಾಡಿಕಲ್ ಒಂದರಿಂದ ಪ್ರತಿಸ್ಥಾಪಿತವಾಗಿರುವುದು ಕಂಡುಬರುತ್ತದೆ. ಆ ರೀತಿಯ ವಸ್ತುಗಳಲ್ಲಿ ಸಾಮಾನ್ಯವಾದ ಘಟಕಗಳಲ್ಲಿ 2–ಅಮೈನೋ–2–ಡಿಆಕ್ಸಿ–ಡಿ ಗ್ಲೂಕೋಸ್ (ಡಿ–ಗ್ಲೂಕೋಸಮೀನ್) ಒಂದು. ಡಿ–ಗ್ಲೂಕಾನಿಕ್ ಆಮ್ಲ ಮತ್ತು ಡಿ–ಗ್ಲೂಕೋಸಮೀನ್ ಮಾನಗಳ ಪ್ರತ್ಯಾವರ್ತಿಯಿಂದ ಉಂಟಾದ ಬಹ್ವಂಗಿ ಹೈಲ್–ಯುರಾನಿಕ್ ಆಮ್ಲದಲ್ಲಿ ಶರ್ಕರ ಅಣುಗಳ ಅಮೈನೋ ಗುಂಪುಗಳಲ್ಲಿ ಅಸಿಟೈಲ್ ಅಂಶಗಳಿವೆ. ಪ್ರಾಣಿಗಳ ಕೋಶಾಂಗಗಳಲ್ಲಿ ವ್ಯಾಪಕವಾಗಿ ಹರಡಿರುವ ಮತ್ತು ಪ್ರಬಲವಾದ ರಕ್ತದ ಸಂಘನನವಿರೋಧಿ (ಆ್ಯಂ–ಎಂಟಿಕೋಯಾಗ್ಯುಲೆಂಟ್), ಲಕ್ಷಣ ಇರುವ ಮತ್ತು ಗ್ಲೂಕರಾನಿಕ್ ಆಮ್ಲ ಮತ್ತು ಡಿ–ಗ್ಲೂಕೋಸಮೀನ್‌ಗಳಿಂದ ರೂಪಿತವಾಗಿರುವ ಹೆಪರಿನ್ನಿನಲ್ಲಿ ಶರ್ಕರ ಓ–ಮತ್ತು–ಎನ್ ಸಲ್ಫೇಟು ಗುಂಪುಗಳನ್ನು ಹೊಂದಿದೆ. ಹೆಕ್ಸೋಸಮೀನುಗಳಾದ ಕೈಟೋಮೀನ್ (ಡಿ–ಗ್ಲೂಕೋಸಮೀನ್) ಮತ್ತು ಕಾಂಡ್ರೂಸಮೀನುಗಳು (ಡಿ–ಗ್ಯಾಲಕ್ಟೋಸ ಸಮೀನ್) ಕ್ರಸ್ಟೇಶಿಯಾ ಮತ್ತು ಬೂಜುಗಳ ಕಂಕಾಲ ಪ್ರಕೃತಿ ಉತ್ಪನ್ನಗಳ ರಚನಕಾರಕ ವಸ್ತುಗಳು. ಇವುಗಳ ಪೈಕಿ ಮೊದಲನೆಯದು ಅಮೈನೋ ಬಹುಶರ್ಕರವಾದ ಕಾಯಿಟಿನಿನಲ್ಲಿ, ಮ್ಯೂಕೋಪ್ರೋಟೀನುಗಳಲ್ಲಿ ಮತ್ತು ಮ್ಯೂಕೋಪಾಲಿ ಶರ್ಕರಗಳಲ್ಲಿದ್ದರೆ, ಎರಡನೆಯದು ಶರ್ಕರ ಮೃದ್ವಸ್ಥಿ ಮತ್ತು ಕಂಡರಗಳ ಕಾಯಿಂಡ್ರಾಯಿಟ್ನ ಸಲ್ಫ್ಯೂರಿಕ್ ಆಮ್ಲದಲ್ಲಿ ದೊರೆಯುತ್ತದೆ. ಕಾಯಿಟಿನಿನಲ್ಲಿ ಹೆಕ್ಸೋಸಮಿನ್ ಒಂದು ಸರಪಳಿಯಂತೆ ಸೇರಿಸಲ್ಪಟ್ಟಿದೆ. ಹಯಲ್ಯುರಾನಿಕ್ ಆಮ್ಲದ ಸಲ್ಫೇಟ್ (ಕಣ್ಣಿನ ಕಾರ್ನಿಯದಿಂದ) ಮತ್ತು ಓವೋಮ್ಯುಕಾಯಿಡ್ ಎಂದು ಪರಿಚಿತವಾಗಿರುವ ತತ್ತಿಯ ಒಂದಾದ (ಅಂಡಶ್ವೇತ) ಮ್ಯೂಕೋಬಹುಶರ್ಕರಗಳ ಮುಂತಾದ ಸ್ವಾಭಾವಿಕ ವಸ್ತುಗಳಲ್ಲಿರುವಂತೆಯೇ ಇದರಲ್ಲೂ ಅಮೈನೋ ಪುಂಜ ಅಸಿಟೈಲ್ ಪುಂಜಕ್ಕೆ ಸಾಗಿಸಲ್ಪಟ್ಟಿದೆ. ಹೈಡ್ರೊಕ್ಲೋರಿಕ್ ಆಮ್ಲದೊಡನೆ ಕಾಯಿಟಿನನ್ನು ಜಲವಿಶ್ಲೇಷಣೆಗೊಳಮಾಡಿದಾಗ ಕಾಯಿಟೋಸಮೀನ್ ಹೈಡ್ರೊಕ್ಲೋರೈಡ್ ಉತ್ಪತ್ತಿಯಾಗುತ್ತದೆ. ಸಮುದ್ರದ ನಳ್ಳಿ ಮತ್ತು ಏಡಿಯ ಶಿಲೆಗಳಿಂದ ಅಮೈನೋಬಹುಶರ್ಕರವಾದ ಕಾಯಿಟಿನನ್ನು ಕ್ಯಾಲ್ಸಿಯಂ ಕಾರ್ಬೊನೇಟನ್ನು ಖನಿಜ ಆಮ್ಲಗಳಲ್ಲಿ ವಿಲೀನಗೊಳಿಸಿದ ಮೇಲೂ ಪ್ರೋಟೀನುಗಳನ್ನು ಬೇರ್ಪಡಿಸಿದ ಮೇಲೂ ಚರ್ಮದಂತಿರುವ ವಸ್ತುವಿನಿಂದ ಬೇರ್ಪಡಿಸಬಹುದು. ಈ ಬೆರ್ಪಡಿಸಿದ ವಸ್ತು (ಕಾಯಿಟಿನ್) ವರ್ಣರಹಿತ ಅಸ್ಫಟಿಕ ರೂಪದಲ್ಲಿ ಇದ್ದು ನೀರು, ದುರ್ಬಲ ಖನಿಜಾಮ್ಲಗಳು ಮತ್ತು ಕ್ಷಾರಗಳಲ್ಲಿ (ಸೆಲ್ಯೂಲೋಸ್‌ನಂತೆ) ಲೀನವಾಗುವುದಿಲ್ಲ ಮತ್ತು ಶ್ವೀಷರನ ಅಭಿಕರ್ಮಕದಲ್ಲೂ ಲೀನವಾಗುವುದಿಲ್ಲ.

**ಶರ್ಕರಾಮ್ಲಗಳು :** ಗ್ಲೂಕೋಸ್ ಇಂಗಾಲವನ್ನು ಕಳೆದುಕೊಳ್ಳದೆ ಸುಲಭದಲ್ಲಿ ಆಮ್ಲವಾಗಿ ಉತ್ಕರ್ಷಿತಗೊಳ್ಳುತ್ತದೆ. ರಾಸಾಯನಿಕವಾಗಿ ವಿದ್ಯುಚ್ಛೇದನೆಯಿಂದಾಗಲೀ ಕಿಣ್ವಗಳ ಮೂಲಕವಾಗಲೀ (ಗ್ಲೂಕೋಸ್ ಆಕ್ಸಿಡೇಸ್) ಇಂಗಾಲ–1 ಆಲ್ಡಿಹೈಡಿಕ್ ಪುಂಜವನ್ನು ಉತ್ಕರ್ಷಿಸಿದಾಗ ಗ್ಲೂಕಾನಿಕ್ ಆಮ್ಲವುಂಟಾಗುತ್ತದೆ. ಇದು ಆಮ್ಲದಂತೆ ಮುಖ್ಯವಾಗಿದೆ. ಫೆರೆಸ್ ಗ್ಲೂಕೋನೇಟನ್ನು ಕಬ್ಬಿಣ ಕೊರತೆ ರಕ್ತಕ್ಷೀಣತೆಯಲ್ಲಿಯೂ ಕ್ಯಾಲ್ಸಿಯಂ ಗ್ಲೂಕೋನೇಟನ್ನು ಕ್ಯಾಲ್ಸಿಯಂ ಕೊರತೆಯಲ್ಲಿಯೂ ನೀಡುವರು. ಆಲ್ಡೋಸುಗಳಲ್ಲಿ ಅಂತ್ಯದಲ್ಲಿರುವ (C–6)$CH_2OH$ ಗುಂಪನ್ನು COOH ಗೆ ಉತ್ಕರ್ಷಿಸುವುದರಿಂದ ಯೂರಾನಿಕ್ ಆಮ್ಲವನ್ನು ಪಡೆಯುವರು. ಪ್ರಕೃತಿಯಲ್ಲಿ ಇವು ಗ್ಲೂಕೊಸೈಡ್ ಬಂಧದಲ್ಲಿ ಮಾತ್ರ ದೊರೆಯುವುದಾಗಿ ಕಂಡುಬಂದಿದೆ. ಹೀಗೆ ಗ್ಲೈಕೊಜನ್ ಮತ್ತು ಗ್ಲೈಕೊಪ್ರೋಟಿನುಗಳನ್ನು ಬಿಟ್ಟು ಉಳಿದ ಎಲ್ಲ ಬಹುಶರ್ಕರಗಳಲ್ಲಿ ಡಿ–ಗ್ಲೂಕಯುರಾನಿಕ್ ಆಮ್ಲ ಸಾಮಾನ್ಯ ಘಟಕವಾಗಿದೆ (ಪಾಲಿಯುರಾನೈಡುಗಳು, ಮ್ಯುಕೋಬಹುಶರ್ಕರಗಳು). ಪ್ರಾಣಿಗಳು ವಿಷಪದಾರ್ಥಗಳಾದ ಫೀನಾಲ್‌ಗಳು, ಸ್ಟೀರಾಲ್‌ಗಳು ಮತ್ತು ಆರೋಮ್ಯಾಟಿಕ್ ಕಾರ್ಬಾಕ್ಸಿಲಿಕ್ ಆಮ್ಲಗಳನ್ನು ಗ್ಲೈಕೊಸೈಡುಗಳನ್ನಾಗಿ ಪರಿವರ್ತಿಸಿ ಮೂತ್ರದಲ್ಲಿ ಹೊರಹಾಕುವ ಕ್ರಿಯೆಯಲ್ಲಿ ಗ್ಲೂಕ್‌ಯೂರೋನಿಕ್ ಆಮ್ಲವನ್ನು ಬಳಸಿಕೊಳ್ಳುತ್ತವೆ. ಗಮನಾರ್ಹವಾಗಿ ಸಂಯುಕ್ತವಾಗಿ ದೊರೆಯುವ ಇತರ ಯುರಾನಿಕ್ ಆಮ್ಲಗಳೆಂದರೆ ಪೆಕ್ಟಿನ್ನಿನಲ್ಲಿ ವಿಶೇಷವಾಗಿ ದೊರೆಯುವ ಡಿ–ಗ್ಯಾಲಕ್ಟುರಾನಿಕ್ ಆಮ್ಲ, ಡಿ–ಮ್ಯಾನ್‌ಯುರಾನಿಕ್ ಆಮ್ಲ (ಪ್ರಧಾನ

ಘಟಕ) ಮತ್ತು ಎಲ್–ಗುಲುರಾನಿಕ್ ಆಮ್ಲಗಳು. ಇವು ವಿವಿಧ ಪ್ರಮಾಣಗಳಲ್ಲಿ ದೊರೆಯುತ್ತವೆ. ಆಲ್ಜಿನಿಕ್ ಆಮ್ಲದಲ್ಲಿ (ಕಂದು ಸಮುದ್ರದ ಜೊಂಡಿನಲ್ಲಿ ಮತ್ತು ಪ್ರಾಣಿಗಳ ಬಹುಶರ್ಕರಗಳಲ್ಲಿ ಎಲ್.ಇಡ್ಯುರಾನಿಕ್ ಆಮ್ಲ ಕಾಯಿಂಡ್ರೇಟಿನ ಸಲ್ಫೇಟ್ (ಬಿ–ಹೆಪರಿನ್). ಎಲ್–ಅಸ್ಕಾರ್ಬಿಕ್ ಆಮ್ಲದ (ಸಿ ವಿಟಮಿನ್) ಜೀವ ಸಂಶ್ಲೇಷಣೆಯಲ್ಲಿ ಡಿ–ಗ್ಲೂಕುರಾನಿಕ್ ಆಮ್ಲ ಒಂದು ಪುರೋವರ್ತಿ (ಪ್ರಿಕರ್ಸರ್).

**ಗ್ಲೂಕೊಸೈಡುಗಳು :** ಏಕಶರ್ಕರಗಳ ಅತ್ಯಂತ ಪ್ರಮುಖ ಗುಣಗಳಲ್ಲಿ ಒಂದು ಗ್ಲೂಕೊಸೈಡುಗಳನ್ನು ಅಥವಾ ಅಸಿಟಾಲುಗಳನ್ನು ಉತ್ಪತ್ತಿಮಾಡುವ ಸಾಮರ್ಥ್ಯ. ಈ ರೀತಿಯಲ್ಲಿ ಅಜಲ ಮಿಥೆನಾಲ್‌ನಲ್ಲಿರುವ ಡಿ–ಗ್ಲೂಕೋಸಿಗೆ ಶುಷ್ಕಹೈಡ್ರೊಜನ್ ಕ್ಲೋರೈಡ್ ಅನಿಲವನ್ನು ಹಾಯಿಸಿದಾಗ α–ಮತ್ತು β–ಮೀಥೈಲ್ ಡಿಗ್ಲೂಕೋಸೈಡುಗಳು ರೂಪಿತವಾಗುತ್ತವೆ. ಇವು ಆಮ್ಲ ದ್ರಾವಣಗಳಲ್ಲಿ ಗ್ಲೂಕೋಸ್ ಮತ್ತು ಮೀಥೈಲ್ ಆಲ್ಕೊಹಾಲ್‌ಗಳಿಗೆ ಜಲವಿಶ್ಲೇಷಣೆಯಾಗುತ್ತವೆ. ಫಿನಾಲುಗಳು ಮತ್ತು ಆಲಿಸೈಕ್ಲಿಕ್ ಆಲ್ಕೊಹಾಲುಗಳಿಂದ ವ್ಯುತ್ಪನ್ನವಾದ ಸ್ವಾಭಾವಿಕ ಗ್ಲೂಕೊಸೈಡುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕೃತಿಮೂಲಗಳಿಂದ ಪಡೆದು ವಿಚ್ಛಿನ್ನಗೊಳಿಸಿ ಅವುಗಳ ಅಧ್ಯಯನ ನಡೆಸಲಾಗಿದೆ. ಗ್ಲೈಕೊಸೈಡಿನ ಶರ್ಕರದ ಅರ್ಧಭಾಗ ಗ್ಲೈಕೊಸಿಲ್ ಅಂಶ ಎಂಬುದಾಗಿಯೂ ಮತ್ತು ಅಶರ್ಕರಭಾಗವನ್ನು ಸಾಮಾನ್ಯವಾಗಿ ಅಗ್ಲೈಕಾನ್ ಎಂಬುದಾಗಿ ಕರೆಯುತ್ತಾರೆ. ಮುಕ್ತಶರ್ಕರಗಳೊಡನೆ ಹೋಲಿಸಿದಲ್ಲಿ ಆಲ್ಕೈಲ್ ಗ್ಲೈಕೊಸೈಡುಗಳು ಅಪಕರ್ಷಣಕಾರಿಗಳು ಮತ್ತು ಪ್ರತ್ಯಾಮ್ಲಗಳಲ್ಲಿ ಸ್ಥಿರವಾಗಿರುತ್ತವೆಯಾದರೂ ಸಾರರಿಕ್ತ ಆಮ್ಲಗಳಿಂದ ಮೂಲಶರ್ಕರ ಮತ್ತು ಆಲ್ಕೊಹಾಲುಗಳಾಗಿ ಜಲವಿಚ್ಛೇದನೆಯಾಗುತ್ತದೆ.

ಗಂಧಕದ ಗ್ಲೂಕೊಸೈಡುಗಳು ಸಾಸುವೆ ಎಣ್ಣೆಯಂಥ ಪ್ರಕೃತಿಯ ಉತ್ಪನ್ನಗಳಲ್ಲಿಯೂ ದೊರೆಯುತ್ತವೆ. ಕಪ್ಪುಸಾಸುವೆಯಲ್ಲಿ ಸಿನಿಗ್ರಿನ್ ಮತ್ತು ಬಿಳಿಯ ಸಾಸುವೆಯಲ್ಲಿ ಸಿನಾಲ್ಬಿನ್ ಇವೆ. ಇವುಗಳಲ್ಲಿ ಗ್ಲೈಕೊಸೈಡ್ ಬಂಧ ಗಂಧಕದ ಮೂಲಕವಾಗಿವೆ.

ಪ್ರಕೃತಿಯಲ್ಲಿನ ಗ್ಲೂಕೊಸೈಡುಗಳಲ್ಲಿ ಲಘುಶರ್ಕರಗಳು ಸೇರಿದಂತೆ ಇತರ ಶರ್ಕರ ಅಂಶವಿದ್ದರೂ ಡಿ–ಗ್ಲೂಕೋಸ್ ಸರ್ವಸಾಧಾರಣವಾದ ಶರ್ಕರ.

ಪ್ರಾಣಿಗಳ ಗ್ಲೈಕೊಸೈಡುಗಳಿಗೆ ಉದಾಹರಣೆಗಳೆಂದರೆ ಸೆರೆಬ್ರೊಸೈಡುಗಳು ಮತ್ತು ಗ್ಯಾಂಗ್ಲಿಯೊಸೈಡುಗಳು. ಕೋಶನ್ಯೂಕ್ಲಿಯೋ ಪ್ರೋಟಿನುಗಳ ಘಟಕಗಳಾದ ನ್ಯೂಕ್ಲಿಯೆಕ್ ಆಮ್ಲಗಳು, ಪಿರಿಮಿಡೀನುಗಳು ಅಥವಾ ಪ್ಯೂರಿನುಗಳ ನೈಟ್ರೊಜನ್ ಗ್ಲೈಕೊಸೈಡುಗಳಿಂದ ಕೂಡಿದ್ದು ಡಿ–ರೈಬೋಸ್ ಅಥವಾ ಡಿ–ಆಕ್ಸಿರೈಬೋಸಿನೊಂದಿಗೆ ಬಂಧನಕ್ಕೊಳಗಾಗಿರುತ್ತವೆ. ತನ್ನ ಸರದಿಯಲ್ಲಿ ಇದು ಎಸ್ಟರ್ ಫಾಸ್ಫೇಟ್ ಗುಂಪುಗಳ ಮೂಲಕ ಇತರ ಅವಶಿಷ್ಟಗಳೊಡನೆ ಬಂಧನಕ್ಕೊಳಗಾಗಿರುತ್ತವೆ. ಇವಲ್ಲದೆ ಶಕ್ತಿ ವರ್ಗಾವಣೆಯಲ್ಲಿ ಹೆಚ್ಚು ನಿರತವಾಗಿರುವ ಅಡಿನೊಸಿನ್ ಡೈ ಮತ್ತು ಟ್ರೈಫಾಸ್ಫೇಟುಗಳು (ಎ.ಡಿ.ಪಿ ಮತ್ತು ಎ.ಟಿ.ಪಿ) ಮತು ಯುರಿಡಿನ್–ಡೈಫಾಸ್ಫೇಟ್ ಗ್ಲೂಕೋಸ್ (ಯು.ಡಿ.ಪಿ.ಜಿ) ಮುಂತಾದ ಸಹಕಿಣ್ವಗಳು ಕೂಡ ಸಾರಜನಕ ಗ್ಲೈಕೊಸೈಡುಗಳು.

ಸ್ಯಾಪೂನಿನ್ ಎಂಬ ಹೆಸರಿನ ಗ್ಲೈಕೊಸೈಡುಗಳು ಒಂದು ದೊಡ್ಡ ಗುಂಪಿದೆ. ಈ ಗುಂಪಿನವನ್ನು ನೀರಿನೊಡನೆ ಬೆರೆಸಿದಾಗ ಅವು ಸಾಬೂನಿನಂಥ ನೊರೆಯನ್ನು ನೀಡುತ್ತವೆ. ಇವು ಹೆಚ್ಚು ವಿಷಯುಕ್ತವಾದವು. ಮೀನು ಮುಂತಾದ ಶೀತರಕ್ತ ಪ್ರಾಣಿಗಳಿಗೆ ಇವು ಬಹು ಅಲ್ಪ ಪ್ರಮಾಣದಲ್ಲಿಯೂ ಘಾತಕಕಾರಿಗಳು. ಕೆಂಪುರಕ್ತದ ಪ್ರಾಣಿಗಳಲ್ಲಿ ಸೆಪೊನಿನ್ ಕೆಂಪುರಕ್ತ ಕಣಗಳ ವಿಚ್ಛಿದ್ರವನ್ನುಂಟುಮಾಡುತ್ತದೆ. ಸ್ಯಾಪೊನಿನುಗಳ ಜಲವಿಶ್ಲೇಷಣದಿಂದ ಪಡೆದ ಅಗ್ಲೈಕೋನುಗಳನ್ನು ಸ್ಯಾಪೊಜಿನಿನುಗಳೆನ್ನುವರು. ಸಬ್ಬಸಿಗೆ ಸೊಪ್ಪಿನ ಬೇರಿನಿಂದ ಪಡೆದ ಸ್ಯಾಪೊನಿನ್ ಜಲವಿಶ್ಲೇಷಣೆಗೊಂಡಾಗ ರ್ಹಾಮ್ನೋಸ್ ಮತ್ತು ಗ್ಲೂಕೋಸುಗಳನ್ನು ನೀಡುತ್ತದೆ ಮತ್ತು ಸ್ಟಿರಾಲ್ ವ್ಯುತ್ಪನ್ನಗಳಲ್ಲೊಂದಾದ ಫಿನಾಂಥ್ರಿನ್ ಅಗ್ಲೈಕೋನ್‌ಗಳನ್ನು ಸ್ಯಾಪೊಜಿನಿನ್ ನೀಡುತ್ತದೆ. ಡಿಜಿಟಾನಿನ್ ಈ ಗುಂಪಿಗೆ ಸೇರಿದುದಾಗಿದೆ, ಕೆಲವು ಗ್ಲೈಕೊಸೈಡುಗಳು ಸ್ಟಿರಾಲ್‌ಗಳಿಗೆ ಸಂಬಂಧಪಟ್ಟಿವೆ ಮತ್ತು ಡಿಜಿಟಾಲಿಸ್ ಮತ್ತು ಸ್ಟ್ರೊಫ್ಯಾಂತಸ್ ಜಾತಿಯಿಂದ ಪಡೆದುವಾಗಿದ್ದು ಇವು ಹೃದಯ ಸ್ನಾಯುಗಳು ಉತ್ತೇಜಿತಗೊಳಿಸುವ ಔಷಧಿಗಳಂತೆ ಪ್ರಯೋಜನಕಾರಿಯಾಗಿವೆ. ಈ ಶರ್ಕರಗಳಲ್ಲಿರುವುದು ಸಾಮಾನ್ಯವಾಗಿ ಡಿ–ಆಕ್ಸಿಶರ್ಕರಗಳೆಂಬುದು ಗಮನಾರ್ಹವಾದ ವಿಷಯ.

**ಶರ್ಕರ ಆಲ್ಕೊಹಾಲುಗಳು :** ಎಲ್ಲ ಅಪಕರ್ಷಣಕಾರಿ ಶರ್ಕರಗಳನ್ನು ಅಪಕರ್ಷಣಗೊಳಿಸಿ ಪಾಲಿಹೈಡ್ರಿಕ್ ಆಲ್ಕೊಹಾಲುಗಳಾಗಿ ವರ್ತಿಸಬಹುದಾದರೂ ಈ ಗುಂಪಿಗೆ ಸೇರಿದ ಅನೇಕವು ಪ್ರಕೃತಿಯಲ್ಲಿ ದೊರೆಯುತ್ರವೆ. ಗ್ಲಿಸರಾಲ್ ಪರಿಚಿತವಾಗಿರುವ ಒಂದು ಟ್ರೈಹೈಡ್ರಿಕ್ ಆಲ್ಕೊಹಾಲ್. ಇದು ತೈಲಾಮ್ಲಗಳೊಡನೆ ಸಂಯೋಗ ಹೊಂದಿ ಗ್ಲಿಸರೈಡುಗಳ (ಕೊಬ್ಬುಗಳ) ರೂಪದಲ್ಲಿ ದೊರೆಯುತ್ತದೆ. ಕೊಬ್ಬನ್ನು ಸಾಬೂನೀಕರಣಗೊಳಿಸಿದಾಗ ಗ್ಲಿಸರಾಲ್ ಬಿಡುಗಡೆಯಾಗುತ್ತದೆ ; ಮತ್ತು ಈ ರೀತಿಯಲ್ಲಿ ಇದು ಸಾಬೂನಿನ ಕೈಗಾರಿಕೆಯಲ್ಲಿ ಉಪೋತ್ಪನ್ನವಾಗಿ ದೊರೆಯುತ್ತದೆ. ಟೆಟ್ರಾಹೈಡ್ರಿಕ್ ಆಲ್ಕೊಹಾಲ್ ಆದ ಎರಥ್ರಿಟಾಲ್ ಆಲ್ಗೆ (ಶೈವಲ) ಶಿಲೀಂಧ್ರ ಮತ್ತು ಶೈವಾಕಗಳಲ್ಲಿ (ಲಿಚನ್ಸ್) ದೊರೆಯುತ್ತದೆ. ಪ್ರಕೃತಿಯಲ್ಲಿ ದೊರೆತಿರುವ ನಾಲ್ಕು ಟ್ರೈಹೈಡ್ರಿಕ್ ಆಲ್ಕೊಹಾಲ್‌ಗಳಲ್ಲಿ ಡಿ–ಮ್ಯಾನಿಟಾಲ್, ಡಿ–ಸಾರ್ಬಿಟಾಲ್ ಮತ್ತು ಡಲ್ಸಿಟಾಲ್ ಪ್ರಮುಖವಾಗಿವೆ. ಆಷ್ ಮರದ ಮನ್ನಾದಲ್ಲಿ ಮತ್ತು ಇತರ ಅನೇಕ ಸಸ್ಯಗಳಲ್ಲಿ ಮ್ಯಾನಿಟಾಲ್ ದೊರೆಯುತ್ತದೆ. ಇದು ಸಮುದ್ರದ ಕಂದುಜೊಂಡಿನಲ್ಲಿ ವಿಶೇಷವಾಗಿ ಉಂಟು. ಲ್ಯಾಮಿನೇರಿಯಾ ಡಿಜಿಟಾಟಾದ ಶುಷ್ಕ ತೂಕದ 37% ಭಾಗಕ್ಕೂ ಹೆಚ್ಚು ಭಾಗ ಸಿಕ್ಕುವುದಾಗಿ ವರದಿಯಾಗಿದೆ. ಈ ಪರಿಮಾಣ ವರ್ಷದ ಋತುಗಳೊಡನೆ ಬದಲಾಗುತ್ತದೆ. ಸುಕ್ರೋಸನ್ನು ಒತ್ತಡದಲ್ಲಿ ಹೈಡ್ರೊಜನೀಕರಣಗೊಳಿಸಿದಾಗ ಸಾರ್ಬಿಟಾಲಿನೊಡನೆ ಮ್ಯಾನಿಟಾಲ್ ಉತ್ಪತ್ತಿಯಾಗುತ್ತದೆ. ಇತರ ಪಾಲಿಹೈಡ್ರಿಕ್ ಆಲ್ಕೊಹಾಲುಗಳಂತೆ ಬೋರಿಕ್ ಆಮ್ಲದ್ರಾವಣದ ಆಮ್ಲೀಯತೆಯನ್ನು ಮ್ಯಾನಿಟಾಲ್ ಹೆಚ್ಚಿಸುತ್ತದೆ ಮತ್ತು ಇದರ ದ್ರಾವಣದ ಅತಿಕಡಿಮೆ ಪ್ರಮಾಣದ ವಿಶಿಷ್ಟ ಭ್ರಮಣಾಂಕವನ್ನೂ ಬೋರೇಟುಗಳನ್ನೂ ಆರ್ಸಿನೇಟುಗಳನ್ನೂ ಸೇರಿಸುವುದರ ಮೂಲಕ ಹೆಚ್ಚಿಸಬಹುದು. ಆಮ್ಲಗಳೊಡನೆ ಮ್ಯಾನಿಟಾಲ್ ಎಸ್ಟರುಗಳನ್ನು ನೀಡುತ್ತದೆ ; ಮ್ಯಾನಿಟಾಲ್ ಹೆಕ್ಸಾನೈಟ್ರೇಟ್ ಒಂದು ಆಸ್ಫೋಟಕ ವಸ್ತು.

**ಸಾರ್ಬಿಟಾಲ್ :** ಇದೊಂದು ಮುಖ್ಯ ಪಾಲಿಹೈಡ್ರಿಕ್ ಆಲ್ಕೊಹಾಲ್ ; ಇದು ಡಿ–ಗ್ಲೂಕೋಸ್‌ಗೆ ಸಂಬಂಧಿಸಿದೆ; ಅನೇಕ ಹಣ್ಣುಗಳಲ್ಲಿ ಸ್ವಲ್ಪ ಪ್ರಮಾಣದ ಸಾರ್ಬೋಸಿನೊಂದಿಗೆ (ಕೀಟೋಹೆಕ್ಸೊಸ್)ಪ್ರಕೃತಿಯಲ್ಲಿ ದೊರೆಯುತ್ತದೆ. ಇದನ್ನು ವಾಣಿಜ್ಯಕ್ಕಾಗಿ ಡಿ–ಗ್ಲೂಕೋಸನ್ನು ವಿದ್ಯುತ್ ವಿಶ್ಲೇಷಿಸಿ ಅಪಕರ್ಷಣೆ ಅಥವಾ ಉತ್ಪ್ರೇರಕೀಯ ಹೈಡ್ರೊಜನೀಕರಣದಿಂದ ತಯಾರಿಸುವರು ; ಈ ವಸ್ತುವಿಗೆ ಇರುವ ಪ್ರಮುಖ ಉಪಯೋಗವೆಂದರೆ ಅಸ್ಕಾರ್ಬಿಕ್ ಆಮ್ಲ (ಸಿ ವಿಟಮನ್) ತಯಾರಿಕೆಯಲ್ಲಿ ಮಧ್ಯವರ್ತಿಯಾದ ಎಲ್–ಸಾರ್ಬೋಸ್ ತಯಾರಿಕೆ.

**ಡಲ್ಸಿಟಾಲ್:** ಇದು ಒಂದು ಡಿ–ಗ್ಯಾಲಕ್ಟೋಸಿನ ಅಪಕರ್ಷಣ ಉತ್ಪನ್ನ. ಇದಕ್ಕೆ ಜೀವಾಣುವಿಜ್ಞಾನದಲ್ಲಿ ಉಪಯೋಗ ಉಂಟು.

**ಇನೊಸಿಟಾಲುಗಳು :** ಇವು ಹೆಕ್ಸಾಹೈಡ್ರೊಸೈಕ್ಲೋ ಹೆಕ್ಸೇನುಗಳು. ಇವು ಸಿಹಿಯಾಗಿವೆ. ನೀರಿನಲ್ಲಿ ಲೀನವಾಗುವುವು ಹಾಗೂ ಅಪಕರ್ಷಣಕಾರಿಗಳಲ್ಲ ಬಯೋಸ್–I ಎಂದು ಪರಿಚಿತವಾಗಿರುವ ಮೆಸೊ–ಇನೊಸಿಟಾಲ್. ಬಯೊಟಿನ್‌ನೊಡನೆ (ಬಯೋಸ್–II) ಸೇರಿದಾಗ ಯೀಸ್ಟ್ ಉತ್ಪಾದನೆಗೆ ಪ್ರೇರಕವಾಗುವ (ಉತ್ತೇಜಕಕಾರಿ) ವೃದ್ಧಿತತ್ತ್ವ. ಫೈಟಿಕ್ ಆಮ್ಲ ಅಥವಾ ಫೈಟಿನ್ ಎಂಬ ಸಂಯುಕ್ತ ವಸ್ತು ಮೆಸೊ–ಇನೊಸಿಟಾಲ್ ಹೆಕ್ಸಾಫಾಸ್ಫೇಟ್. ಪೆಂಟಹೈಡ್ರಾಕ್ಸಿ ಸೈಕ್ಲೊಹೆಕ್ಸೇನುಗಳು ಸಹ ಸಸ್ಯಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಚೆನ್ನಾಗಿ ಪರಿಚಿತವಾಗಿರುವುದು ಡಿ–ಕ್ವೆರ್ಸಿಟಾಲ್.

**ಲಘುಶರ್ಕರಗಳು :** ಲಘುಶರ್ಕರಗಳ ಗುಂಪಿಗೆ ಹೆಚ್ಚಿನ ಸಂಖ್ಯೆಯ ಬಹುಶರ್ಕರಗಳು ಸೇರಿವೆ. ಪ್ರತಿಯೊಂದು ಗುಂಪಿಗೆ ಕೆಲವು ಏಕಶರ್ಕರಮಾನಗಳು ಸೇರಿವೆ (ಗ್ರೀಕ್ : ಅಲಿಗೊ ಎಂದರೆ ಕೆಲವು). ಇದನ್ನು ಆಮ್ಲೀಯ ಜಲವಿಶ್ಲೇಷಣೆಕ್ಕೊಳಪಡಿಸಿದಾಗ ಕೇವಲ ಸರಳ ಶರ್ಕರಗಳು ಅಥವಾ ಅವುಗಳ ವ್ಯುತ್ಪನ್ನಗಳು ದೊರೆಯುತ್ತವೆ. ಲಘುಶರ್ಕರಗಳು ನೀರಿನ (n–1) ಅಣುಗಳ ನಷ್ಟದಿಂದ ರೂಪಿತವಾಗುವ ಗ್ಲೈಕೋಸೈಡಿಕ್ ಬಂಧನಗಳಿಂದ ಬದ್ಧವಾದ ಏಕಶರ್ಕರಗಳ ಅಂಶವನ್ನೊಳಗೊಂಡಿವೆ. ಪ್ರತಿ ಮೋಲಿನಲ್ಲಿರುವ ಏಕಶರ್ಕರಗಳ ಸಂಖ್ಯೆಯ ಆಧಾರದ ಮೇಲೆ ಶರ್ಕರಗಳನ್ನು ದ್ವಿಶರ್ಕರಗಳು, ತ್ರಿಶರ್ಕರಗಳು, ಚತುಶ್ಯರ್ಕರಗಳು ಮತ್ತು ಪಂಚಶರ್ಕರಗಳೆಂದು ವರ್ಗೀಕರಿಸಬಹುದು. ತಿಳಿದಿರುವ ಹೆಚ್ಚಿನ ಸಂಖ್ಯೆಯ ಲಘುಶರ್ಕರಗಳು ಪ್ರಕೃತಿಯಲ್ಲಿ ದೊರೆಯುವ ವಸ್ತುಗಳಾಗಿವೆ ಇಲ್ಲವೆ ಭಾಗಶಃ ಜಲವಿಶ್ಲೇಷಣೆಯ ವ್ಯುತ್ಪನ್ನಗಳಾಗಿವೆ ಅಥವಾ ಟ್ರಾನ್ಸ್ ಗ್ಲೈಕೊಲೈಸೇಷನ್ ರಾಸಾಯನಿಕ ಕ್ರಿಯೆಗಳ ವ್ಯುತ್ಪನ್ನಗಳು ಅಥವಾ ಬಹುಶರ್ಕರಗಳು.

**ದ್ವಿಶರ್ಕರಗಳು :** ಒಂದು ದ್ವಿಶರ್ಕರದಲ್ಲಿ ಒಂದು ಏಕಶರ್ಕರ ಅದರ ಹೆಮಿಅಸಿಟೈಲ್ ಹೈಡ್ರಾಕ್ಸಿಲ್ ಮತ್ತು ಇನ್ನೊಂದು ಶರ್ಕರದ ಹೈಡ್ರಾಕ್ಸಿಲ್ ನಡುವೆ ಏರ್ಪಡುವ ಒಂದು ಆಕ್ಸಿಜನ್ ಬಂಧದ ಮೂಲಕ ಜೊತೆಗೂಡಿಸಲ್ಪಟ್ಟಿದೆ. ಲ್ಯಾಕ್ಟೋಸಿನಲ್ಲಿರುವಂತೆ ಎರಡನೆ ಹೈಡ್ರಾಕ್ಸಿಲ್ ಆಲ್ಕೊಹಾಲಿಕ್ ಹೈಡ್ರಾಕ್ಸಿಲ್ ಆದರೆ ದ್ವಿಶರ್ಕರದಲ್ಲಿ ಒಂದು ಅಪಕರ್ಷಣಕಾರಿ ಪುಂಜ ಉಳಿಯುತ್ತದೆ. ಸುಕ್ರೋಸ್ ಅಥವಾ ಟ್ರೆಹಲೋಸಿನಲ್ಲಿರುವಂತೆ ಎರಡೂ ಏಕಶರ್ಕರಗಳ ಹೆಮಿಅಸಿಟಾಲ್ ಹೆಡ್ರಾಕ್ಸಿಲ್‌ಗಳು ಗ್ಲೈಕೊಸೈಡಿಕ್ ಬಂಧನಕ್ಕೆ ಉಪಯೋಗಿಸಲ್ಪಟ್ಟರೆ, ತತ್ಪರಿಣಾಮವಾಗಿ ದೊರೆಯುವ ದ್ವಿಶರ್ಕರದಲ್ಲಿ ಅಪಕರ್ಷಣಾಕಾರಿ ಪುಂಜ ಇರುವುದಿಲ್ಲ. ಈ ವ್ಯತ್ಯಾಸದಿಂದಲೇ ದ್ವಿಶರ್ಕರಗಳನ್ನು (ಹಾಗೂ ಇತರ ಲಘುಶರ್ಕರಗಳನ್ನು) ಅಪಕರ್ಷಣಕಾರಿ ಮತ್ತು ಅಪಕರ್ಷಣಕಾರಿಯಲ್ಲದ ಶರ್ಕರಗಳು ಎಂದು ವರ್ಗೀಕರಿಸಬಹುದು. ಅಪಕರ್ಷಣಕಾರಿ ಲಘುಶರ್ಕರಗಳು ಸರಳ ಶರ್ಕರಗಳ ಅನೇಕ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತವೆ. ಲಘುಶರ್ಕರದ ಘಟಕಗಳಾದ ಏಕಶರ್ಕರದ ಘಟಕಗಳು ಲ್ಯಾಕ್ಟೋಸ್ (ಡಿ–ಗ್ಲೂಕೋಸ್ ಮತ್ತು ಡಿ–ಗ್ಯಾಲಕ್ಟೊಸ್ ) ಮತ್ತು ಸುಕ್ರೋಸಿನಲ್ಲಿರುವಂತೆ (ಡಿ–ಗ್ಲೂಕೋಸ್ ಮತ್ತು ಎಲ್–ಫ್ರಕ್ಟೋಸ್) ಬೇರೆಯಾಗಿರಬಹುದು ಅಥವಾ ಡಿ–

ಗ್ಲೂಕೋಸಿನ ಎರಡು ಅಣುಗಳನ್ನು ಹೊಂದಿರುವ ಟ್ರೆಹಲೋಸ್ ಮತ್ತು ಮಾಲ್ಟೋಸುಗಳಂತೆ ಒಂದೇ ಆಗಿರಬಹುದು.

ಸುಕ್ರೋಸ್ (ಕಬ್ಬಿನ ಸಕ್ಕರೆ) ದ್ವಿಶರ್ಕರ ಸಸ್ಯವರ್ಗದಲ್ಲಿ ವ್ಯಾಪಕವಾಗಿ ದೊರೆಯುತ್ತದೆ. ಅದರಲ್ಲಿಯೂ ಬೀಟ್‌ರೂಟ್ ಮತ್ತು ಕಬ್ಬಿನಲ್ಲಿ ವಿಶೇಷವಾಗಿ ದೊರೆಯುವುದರಿಂದ ಇವು ಫ್ರಕ್ಟೋಸುಗಳ ಘಟಕ ಶರ್ಕರಗಳಾಗಿದ್ದು ಗ್ಲೂಕೋಸಿನ (ಆಲ್ಡಿಹೈಡಿಕ್ ಗುಂಪು) ಮತ್ತು ಫ್ರಕ್ಟೋಸಿನೊಡನೆ (ಕೀಟೋಗುಂಪು) ಬಂಧನಕ್ಕೊಳಗಾಗಿರುವುದರಿಂದ ಇದು ಅಪಕರ್ಷಣಕಾರಿಯಲ್ಲದ ಶರ್ಕರವಾಗಿದೆ. ಫ್ರಕ್ಟೋಫ್ಯೂರನೋಸ್ ವಲಯವನ್ನು ಉಳ್ಳ ಸುಕ್ರೋಸ್ ಆಮ್ಲಗಳಲ್ಲಿ ವಿಶೇಷವಾಗಿ ಅಸ್ಥಿರವಾಗಿರುವುದರಿಂದ ಬಹು ಸುಲಭವಾಗಿ ಜಲವಿಶ್ಲೇಷಣೆಗೊಳಾಗುತ್ತವೆ. ಗ್ಲುಕೋಸ್ ಮತ್ತು ಫ್ರಕ್ಟೋಸುಗಳು ಸಮಪ್ರಮಾಣದಲ್ಲಿರುವ ಮಿಶ್ರಣವನ್ನು ಕೊಡುವಂತೆ ಸುಕ್ರೋಸ್ ಜಲವಿಭಜನೆಗೊಳಗಾಗುವುದನ್ನು ವಿಪರ್ಯಯ (ಇನ್ವರ್ಷನ್) ಎಂದು ಕರೆಯುವರು. ಏಕೆಂದರೆ ಫ್ರಕ್ಟೋಸಿನ ಹೆಚ್ಚಿನ ಮಟ್ಟದ ಅಪ್ರದಕ್ಷಿಣ ಹೆಚ್ಚಿನ ಮಟ್ಟದ ಅಪ್ರದಕ್ಷಿಣ ದ್ಯುತಿಭ್ರಮಣ (ಆಪ್ಟಿಕಲ್ ರೊಟೇಷನ್) ಪ್ರದಕ್ಷಿಣದಿಂದ ಅಪ್ರದಕ್ಷಿಣಕ್ಕೆ ಬದಲಾಗುತ್ತದೆ. ತತ್ಪರಿಣಾಮವಾಗಿ ದೊರೆಯುವ ಮಿಶ್ರಣವನ್ನು ವಿಪರ್ಯಯಸ್ಥಶರ್ಕರವೆನ್ನುವರು (ಇನ್ವರ್ಟ್ ಶುಗರ್). ಜೇನಿನಲ್ಲಿನ ಶರ್ಕರದಲ್ಲಿರುವ ಹೆಚ್ಚಿನ ಪ್ರಮಾಣದ ಶರ್ಕರ ವಿಪರ್ಯಯಸ್ಥಶರ್ಕರ. ಫ್ರಕ್ಟೋಸಿನಿಂದ ಸುಕ್ರೋಸ್ ಮತ್ತು ಗ್ಲೂಕೋಸಿಗೆ ಸಿಹಿ ಕ್ರಮವಾಗಿ ಕಡಿಮೆಯಾಗುತ್ತದೆ.

ಸಣ್ಣಗೋದಿ, ಎರ್ಗಟ್, ಶಿಲೀಂಧ್ರ, ಸಣ್ಣ ಅಣಬೆಗಳು, ಈಸ್ಟ್ ಮತ್ತು ಸೆಲೆಜಿನೆಲ್ಲಾ ಲೆಪಿಡೊಫಿಲ್ಲ ಎಂಬ ಪುನರ್ಜೀವಿತ ಸಸ್ಯಗಳಲ್ಲಿ ಟ್ರೆಹಲೋಸ್ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತದೆ. ಕೆಲವು ಕೀಟಗಳಲ್ಲಿ ಇದು ರಕ್ತದ ಪ್ರಧಾನಶರ್ಕರವಾಗಿದೆ ಮತ್ತು ಮೈಕೊ ಬ್ಯಾಕ್ಟೀರಿಯಂ ಟ್ಯುಬರ್‌ಕ್ಯುಲಾಸಿಸಿನಿಂದ ವ್ಯುತ್ಪನ್ನಗೊಳಿಸಿದ ಹೆಚ್ಚು ವಿಷಯುಕ್ತ ತೈಲದಲ್ಲಿ ಇರುತ್ತದೆ. ಇದು ಒಂದು ಅಪಕರ್ಷಣಕಾರಿಯಲ್ಲದ ಶರ್ಕರ. ಇದರಲ್ಲಿ ಎರಡು ಗ್ಲೂಕೋಸ್ ಮಾನಗಳ $C_1$ಇಂಗಾಲಗಳು ಬಂಧಿತವಾಗಿವೆ.

ಸುಕ್ರೋಸ್ ಬಿಟ್ಟರೆ ತ್ರಿಶರ್ಕರವಾದ ರ್‍ಯಾಫಿನೋಸ್ ಸಸ್ಯವರ್ಗದಲ್ಲಿ ಹೆಚ್ಚಾಗಿ ಹರಡಿರುವ ಲಘುಶರ್ಕರವೆಂದು ಕಾಣುತ್ತದೆ. ಇದು ಬೀಟ್‌ರೂಟುಗಳಲ್ಲಿ ಮುಕ್ತ ಸ್ಥಿತಿಯಲ್ಲಿ ಅತ್ಯಲ್ಪ ಪ್ರಮಾಣ ದೊರೆಯುತ್ತದೆಯಾದರೂ (0.05%) ಸುಕ್ರೋಸಿನ ತಯಾರಿಕೆಯಲ್ಲಿ ಮಾತ್ರದ್ರಾವಣದಲ್ಲಿ ಶೇಖರವಾಗುತ್ತದೆ.

**ಹಾಲಿನ ಲಘುಶರ್ಕರಗಳು :** ಹಾಲಿನ ಲಘುಶರ್ಕರಗಳಲ್ಲಿ ಅತ್ಯಂತ ಪ್ರಮುಖವಾದುದು ಸುಮಾರು ಶೇ.5 ಭಾಗದವರೆಗೆ ದೊರೆಯುವ ಲ್ಯಾಕ್ಟೋಸ್. ಇದು ಒಂದು β–1–4–ಗ್ಲೂಕೋಸ್ ಬಂಧ ಇರುವ ಅಪಕರ್ಷಣಕಾರಿ ಶರ್ಕರ.

**ವ್ಯುತ್ಪನ್ನ ದ್ವಿಶರ್ಕರಗಳು :** ಪರಿಚಯವಾಗಿರುವ ಅನೇಕ ದ್ವಿಶರ್ಕರಗಳನ್ನು ಉನ್ನತತರ ಲಘು ಅಥವಾ ಬಹುಶರ್ಕರವನ್ನು ನಿಯಂತ್ರಿತ ಆಮ್ಲ ಅಥವಾ ಕಿಣ್ವಗಳಿಂದ ಜಲವಿಶ್ಲೇಷಣೆಗೆ ಒಳಮಾಡುವುದರ ಮೂಲಕ ಪಡೆಯಬಹುದು. ಸೆಲ್ಲೊಬಯೋಸ್ ಎಂಬುದು ಸೆಲ್ಯುಲೋಸಿನ ಪುನರಾವರ್ತನೀಯ ಮೂಲ ಘಟಕ. ಅದು ಮೂಲ ಬಹುಶರ್ಕರವನ್ನು ನಿಯಂತ್ರಿತ ಜಲವಿಶ್ಲೇಷಣೆಗೆ ಒಳಮಾಡಿದಾಗ ಬಿಡುಗಡೆಯಾಗುತ್ತದೆ. ಅದು ಮುಕ್ತ ಸ್ಥಿತಿಯಲ್ಲಿ ದೊರೆಯುವಂತೆ ಕಂಡುಬರುವುದಿಲ್ಲ. ಅದು ಒಂದು β–1–4–ಗ್ಲೂಕೊ ಸೈಡಿಕ್ ಬಂಧ ಇರುವ ಮತ್ತು ಅಪಕರ್ಷಣಕಾರಿ ಶರ್ಕರ. ಸ್ಟಾರ್ಚನ್ನು β– ಅಮೈಲೇಸಿನೊಡನೆ ಕ್ರಿಯೆಗೆ ಒಳಮಾಡುವುದರ ಮೂಲಕ ಮಾಲ್ಟೋಸನ್ನು (∝–1–4–ಗ್ಲೂಕೊ ಸೈಡಿಕ್ ಬಂಧ ಇರುವ ಮತ್ತು ಅಪಕರ್ಷಣಕಾರಿ ದ್ವಿಶರ್ಕರ) ಪಡೆಯಬಹುದು. ಐಸೊಮಾಲ್ಟೋಸ್ ಎಂಬುದು ಅಮೈಲೊ ಪೆಕ್ಟಿನ್ ಗ್ಲೈಕೊಜನ್ ಮತ್ತು ವಿಶೇಷವಾಗಿ ಕೆಲವು ಸೂಕ್ಷ್ಮಾಣು ಡೆಕ್ಸ್‌ಟ್ರಾನ್‌ಗಳ ಘಟಕ. ನೈಜಿರೋಸ್ (α–1–3–ಬಂಧನ) ಎಂಬುದು ಸ್ಟಾರ್ಚ್ ಮತ್ತು ಗ್ಲೂಕೊಜನ್ನಿನ ಭಾಗಶಃ ಜಲವಿಶ್ಲೇಷಣೆಯಿಂದ ದೊರೆಯುತ್ತದೆ. ರ್‍ಯಾಫಿನೋಸಿನ ಸಂಪೂರ್ಣ ಆಮ್ಲೀಯ ಜಲವಿಶ್ಲೇಷಣೆಯಿಂದ ತಲಾ ಒಂದು ಅಣು ಡಿ–ಗ್ಲೂಕೋಸ್ ದೊರೆತರೂ ಸಾರರಿಕ್ತ ಆಮ್ಲಜಲವಿಶ್ಲೇಷಣೆಗೆ ಅಥವಾ ಯೀಸ್ಟ್ ಇನ್ವರ್ಟೇಸಿನೊಡನೆ ಕ್ರಿಯೆಗೊಳಗಾದಾಗ ಡಿ–ಫ್ರಕ್ಟೋಸಿನ ಡಿ–ಫ್ರಕ್ಟೋಸ್ ಒಂದು ಅಣು ಮತ್ತು ದ್ವಿಶತಕದ ಮೆಲಿಬಯೋಸ್ ದೊರೆಯುತ್ತವೆ. ಬಾದಾಮಿಯ ಎಮಲ್ಸಿನ್ ರ್‍ಯಾಫಿನೋಸನ್ನು ಸಕ್ಕರೆ ಮತ್ತು ಡಿ–ಗ್ಯಾಲೆಕ್ಟೋಸುಗಳಿಗೆ ಜೀರ್ಣಗೊಳಿಸುತ್ತದೆ. ಜಂಟಿಯೊಬಯೋಸ್ (1–6 ಬಂಧನದ ಅಪಕರ್ಷಣಕಾರಿ ಶರ್ಕರ), ಅಮಿಗ್ಡಲಿನ್ ಮತ್ತು ಕ್ರೋಸಿನ್‌ಗಳಂಥ (ಕೇಸರಿಯ ವರ್ಣದ್ರವ್ಯ) ಹೆಚ್ಚಿನ ಸಂಖ್ಯೆಯ ಗ್ಲೈಕೊಸೈಡುಗಳ ಶರ್ಕರ ಘಟಕವಾಗಿದೆ. ಇದನ್ನು ಸ್ಟಾರ್ಚ್ ಜಲವಿಚ್ಛೇದಿತಗಳಲ್ಲಿ ಪರಾವರ್ತನ (ರಿವರ್ಷನ್) ಉತ್ಪನ್ನವಾಗಿ ಪಡೆಯಬಹುದು. ಅಲ್ಲದೇ ಹಳದಿ ಜೆಂಟಿಯನ್ನಿನಿಂದ ಪಡೆದ ತ್ರಿಶರ್ಕರ ಜೆಂಟಿಯಾನೋಸ್ ಇನ್ವರ್ಟೇಸಿನ ಕ್ರಿಯೆಗೊಳಗಾದಾಗ ಸಹ ಪಡೆಯಬಹುದು. ಸ್ವಾಭಾವಿಕ ಗೋಂದುಗಳು ಹಾಗೂ ಗೋಂದಿನ ದ್ರಾವಣಗಳು ಭಾಗಶಃ ಜಲವಿಶ್ಲೇಷಿತಗಳು ಅನೇಕ ದ್ವಿಶರ್ಕರಗಳ ಅತ್ಯಂತ ಸಾಮಾನ್ಯ ಮೂಲಗಳು.

ಶರ್ಕರ ಮಾನಗಳ ವರ್ಗಾವಣೆಯ ಕ್ರಿಯೆಯಿಂದ ದ್ವಿ ಮತ್ತು ಲಘುಶರ್ಕರಗಳು ಉಂಟಾಗುವುದು ಮತ್ತೊಂದು ವಿಧಾನ. ಈ ಕ್ರಿಯೆ ಜಲವಿಶ್ಲೇಷಣ ಕಿಣ್ವವೊಂದರ ಮೂಲಕ ನಡೆಯುತ್ತದೆ ಮತ್ತು ಅದೇ ಶರ್ಕರದ ಮತ್ತೊಂದು ವರ್ಗಾಯಿತ ಮಾನವನ್ನು ಸ್ವೀಕರಿಸುತ್ತದೆ. ಈ ರೀತಿಯಲ್ಲಿ ಮಾಲ್ಟೋಸ್ ಬೂಜಿನ ಕಿಣ್ವವೊಂದರಿಂದ ಜಲವಿಶ್ಲೇಷಣೆಗೊಳಗಾದಾಗ ಕೊನೆಯ ಪಕ್ಷ ನಾಲ್ಕು ಲಘುಶರ್ಕರಗಳು ಉತ್ಪತ್ತಿಯಾಗುತ್ತವೆ. ಕಬ್ಬಿನ ಸಕ್ಕರೆಯನ್ನು ಜೇನಿನ ಇನ್ವರ್ಟೇಸನ್ನು ಉಪಯೋಗಿಸಿ ಜಲವಿಶ್ಲೇಷಣೆಗೆ ಒಳಪಡಿಸಿದಾಗ ಮಧ್ಯವರ್ತಿಗಳಾಗಿ ಆರು ಲಘುಶರ್ಕರಗಳು ಉತ್ಪತ್ತಿಯಾಗುತ್ತವೆ. ಇವುಗಳಲ್ಲಿ ಐದು ಶರ್ಕರಗಳು ಸುಕ್ರೋಸ್‌ನ ಜಲೀಯ ವಿಶ್ಲೇಷಣದಿಂದ ಪಡೆದ ಶರ್ಕರಗಳಿಂದ ಭಿನ್ನವಾಗಿರುತ್ತವೆ. ಯೀಸ್ಟ್ ಮತ್ತು ಬೂಜಿನ ಇನ್ವರ್ಟೇಸುಗಳ ಸಹಾಯದಿಂದ ಎಂಟು ಲಘುಶರ್ಕರಗಳನ್ನು ಪಡೆಯಬಹುದು. ಇವೆಲ್ಲವೂ ಅಂತಿಮವಾಗಿ ಕಿಣ್ವಗಳಿಂದ ಜಲವಿಶ್ಲೇಷಣೆಗೊಳಗಾಗಿ ಗ್ಲೂಕೋಸ್ ಮತ್ತು ಫ್ರಕ್ಟೋಸುಗಳನ್ನು ಬಿಡುಗಡೆಮಾಡುತ್ತವೆ. ಈ ಲಘು ಶರ್ಕರಗಳ ಪೈಕಿ ನಾಲ್ಕು ದ್ವಿಶರ್ಕರಗಳು, ಮೂರು ತ್ರಿಶರ್ಕರಗಳು ಮತ್ತು ಒಂದು ಚತುಶ್ಶರ್ಕರ. ಅಂತೆಯೇ ಅಗೇವಿನ ಕಾಂಡದ ಕಿಣ್ವ ಸುಕ್ರೋಸ್‌ನಿಂದ ಪ್ರಾರಂಭಿಸಿ ಒಂದು ಗ್ಲೂಕೋಸ್‌ಮಾನ ಮತ್ತು ಫ್ರಕ್ಟೋಸಿನ ಒಂದು ಸರಣಿಯುಳ್ಳ ಲಘು ಶರ್ಕರಗಳ ಮಾಲೆಯನ್ನು ಉಂಟುಮಾಡುತ್ತದೆ. *

**ಬಹುಶರ್ಕರಗಳು:** ಜೀವಂತ ಅಂಗಾಂಶಗಳಲ್ಲಿನ ಕಾರ್ಬೋಹೈಡ್ರೇಟ್ ಪ್ರಮಾಣ ಮುಖ್ಯವಾಗಿ ಬಹುಶರ್ಕರಗಳ ರೂಪದಲ್ಲಿರುತ್ತದೆ. ಅವು ಹೆಚ್ಚಾಗಿ ಮೃದು ಜೀವ ಅಂಗಾಂಶಗಳ ಸಮೂಹದ ಮೇಲೆ ದೃಢತೆಯನ್ನು ಉಂಟುಮಾಡುವ ಕಂಕಾಲ ಘಟಕಗಳಾಗಿ ಅಥವಾ ಆವಶ್ಯಬಿದ್ದಾಗ ಸುಲಭವಾಗಿ ಚಯಾಪಚಯಗೊಳ್ಳಬಲ್ಲ ಶರ್ಕರಗಳಿಗೆ ಪರಿವರ್ತನೆಗೊಳ್ಳಬಲ್ಲ ಶೇಖರಿತ ಆಹಾರಮೂಲಗಳಂತೆ ಕಾರ್ಯ ನಿರ್ವಹಿಸುತ್ತವೆ. ಏಕಶರ್ಕರಗಳು ನೀರನ್ನು ಕಳೆದುಕೊಂಡು ಬಹುಸಂಖ್ಯೆಯಲ್ಲಿ ಸಂಘನಿಸಿ ನೀಳವಾದ ಅಥವಾ ಶಾಖೀಯ ಸರಣಿಗಳನ್ನು ರಚಿಸುವುದರಿಂದ ಬಹು ಶರ್ಕರಗಳು ಉತ್ಪತ್ತಿಯಾಗುತ್ತವೆ ಎಂದು ಪರಿಗಣಿಸಬಹುದು. ಸಾಮಾನ್ಯವಾಗಿ ಅಂಶಗಳು ಒಂದು ನಿಯತ ಪುನರಾವರ್ತ ಯೋಜನೆಗೆ ಅನುಗುಣವಾಗಿ ಬಂಧಗೊಂಡಿರುತ್ತವೆ ಮತ್ತು ವೈಯಕ್ತಿಕ ಅಣುಗಳ ಸರಣಿಗಳ ಉದ್ದದಲ್ಲಿ ವ್ಯತ್ಯಾಸವಿರುತ್ತದೆ. ರಾಸಾಯನಿಕವಾಗಿ ಸಮಾಂಗವಾದ ಬಹುಶರ್ಕರ ಒಂದೇ ವಿಧದಲ್ಲಿ ರೂಪಿತವಾದ ಆದರೆ ವಿವಿಧ ಅಣುಗಾತ್ರದ ಮತ್ತು ಬಹು ಸಜಾತ ಶ್ರೇಣಿಯನ್ನು ಕೊಡುವ ಬೃಹದಣುಗಳ ಮಿಶ್ರಣ.

ಈ ರೀತಿ ಬಹುಶರ್ಕರಗಳಲ್ಲಿ ಉದಾಹರಣೆಗೆ (ಸೆಲ್ಯುಲೋಸ್, ಸ್ಟಾರ್ಚ್, ಗ್ಲೈಕೋಜನ್) ಸಾಮಾನ್ಯವಾಗಿ ಒಂದೇ ರಚನಾತ್ಮಕ ಏಕಶರ್ಕರವಿರುತ್ತದೆ. ಆಲ್ಡೋಸ್ ಮತ್ತು ಕೀಟೋಸುಗಳ ಜೊತೆಗೆ ಪುನರಾವರ್ತನೆಗೊಳ್ಳುವ ಇತರ ಮಾನಗಳೆಂದರೆ ಯುರಾನಿಕ್ ಆಮ್ಲಗಳು ಮತ್ತು ಅಮೈನೋಶರ್ಕರಗಳು. ಯುರಾನಿಕ್ ಆಮ್ಲ ಅಂಶಗಳಿಂದ ರೂಪಿತವಾದ ಬಹುಶರ್ಕರಗಳನ್ನು ಬಹುಯುರಾನೈಡುಗಳೆನ್ನುವರು. ಅನೇಕ ಸಮಾಂಶಿ ಮಾನೋಸ್ಯಾಕರೈಡ್ ಶರ್ಕರಗಳ ಪೈಕಿ ಕೇವಲ ಕೆಲವು ಮಾತ್ರ ಬಹುಶರ್ಕರಗಳ ರಚನಾತ್ಮಕ ಮಾನಗಳು. ಬಹುಶರ್ಕರಗಳಲ್ಲಿ ಡಿ–ಗ್ಲೂಕೋಸ್, ಡಿ–ಗ್ಯಾಲಕ್ಟೋಸ್, ಡಿ–ಮ್ಯಾನೋಸ್ ತಮ್ಮು ಡಿ–ಫ್ರಕ್ಟೋಸ್ ಮುಂತಾದ ಹೆಕ್ಸೋಸುಗಳು ಸಾಮಾನ್ಯವಾಗಿ ಇರುತ್ತವೆ. ಎಲ್–ಅರ್‍ಯಾಬಿನೋಸ್ ಪೆಂಟೋಸುಗಳು ಸಾಮಾನ್ಯವಾಗಿ ದೊರೆಯುತ್ತವೆ. ಆದರೆ ಡಿ–ಅರ್‍ಯಾಬಿನೋಸ್ ಪೆಂಟೋಸ್ ದೊರೆಯುವುದು ವಿರಳ. ಅಮೈನೋಶರ್ಕರಗಳಾದ 2–ಅಮೈನೋ–2–ಡಿಆಕ್ಸಿ–ಡಿ ಗ್ಯಾಲಕ್ಟೋಸುಗಳು ಪ್ರಾಣಿಗಳ ಅಂಗಾಂಶಗಳಲ್ಲಿನ ಬಹುಶರ್ಕರಗಳಲ್ಲಿ ವ್ಯಾಪಕವಾಗಿ ಹರಡಿಕೊಂಡಿವೆ. ಉಳಿದವು ವಿರಳ. ಡಿ–ಗ್ಲುಕ್‌ಯುರಾನಿಕ್, ಡಿ–ಗ್ಯಾಲಕ್ಟ್‌ಯುರಾನಿಕ್, ಡಿ–ಮ್ಯಾನ್ ಯುರಾನಿಕ್ ಮತ್ತು ಎಲ್–ಗುಲುರಾನಿಕ್ ಆಮ್ಲಗಳಾದ ಈ ನಾಲ್ಕು ಯುರಾನಿಕ್ ಆಮ್ಲಗಳು ಸಾಮಾನ್ಯವಾಗಿ ದೊರೆಯುತ್ತವೆ. ಎರಡು ಡಿ–ಆಕ್ಸಿ ಶರ್ಕರಗಳಾದ ಎಲ್–ಫ್ಯುಕೋಸ್ ಮತ್ತು ಎಲ್–ರ್‍ಯಾಮ್ನೋಸ್‌ಗಳು ಈ ಪಟ್ಟಿಯನ್ನು ಪೂರ್ಣಗೊಳಿಸುತ್ತವೆ. ಇತರ ಶರ್ಕರಗಳು ಕೆಲವು ಬಹುಶರ್ಕರಗಳಲ್ಲಿ ದೊರೆತರೂ ಅವು ವಿರಳ.

ಲಘುಶರ್ಕರಗಳಿಗೂ ಬಹುಶರ್ಕರಗಳಿಗೂ ನಡುವೆ ಅತಿಸೂಕ್ಷ್ಮವಾದ ವ್ಯತ್ಯಾಸವನ್ನು ಮಾಡಲಾಗುವುದಿಲ್ಲ. ಅವುಗಳ ವಿನ್ಯಾಸಗಳು ಒಂದೇ ತೆರನಾಗಿವೆ ಮತ್ತು ಸಂಯುಕ್ತವಾಗಿರುವ ಶರ್ಕರಗಳ ಸಂಖ್ಯೆ ಹೆಚ್ಚಿದಂತೆ ಲಘುಶರ್ಕರಗಳು ಬಹುಶರ್ಕರಗಳಾಗುತ್ತವೆ. ಸಾಮಾನ್ಯವಾಗಿ ಬಹುಶರ್ಕರಗಳಲ್ಲಿ ಬಹುಳೀಕರಣ ಹೆಚ್ಚಿನ ಮಟ್ಟದಲ್ಲಿದೆ ಮತ್ತು ಕೆಲವು ಸಂದರ್ಭಗಳಲ್ಲಿ ಈ ಸಂಖ್ಯೆ ಅನೇಕ ಸಾವಿರಗಳವರೆಗೂ ತಲುಪಬಹುದು. ಇವು ಪೋಷಕ ಅಥವಾ ರಚನಾ ಕಾರ್ಯವನ್ನು ನಿರ್ವಹಿಸುತ್ತವೆ.

ಶೇಖರ ಆಹಾರ ಬಹುಶರ್ಕರಗಳು. ಗ್ಲೈಕೊಜನ್ನುಗಳು: ಇವು ಶೇಖರವಾಗಿರುವ ಆಹಾರರೂಪಿ ಬಹುಶರ್ಕರಗಳು. ಇವು ಪ್ರಾಣಿವರ್ಗಗಳಲ್ಲಿ, ಅಕಶೇರುಕಗಳಲ್ಲಿ, ಕೆಲವು ಜೀವಾಣುಗಳಲ್ಲಿ ಮತ್ತು ಯೀಸ್ಟುಗಳಲ್ಲಿ ದೊರೆಯುತ್ತವೆ. ಬಹುಶರ್ಕರಗಳು ಯಕೃತ್ತಿನ ಶರ್ಕರಗಳಲ್ಲಿ ಹೆಚ್ಚಾಗಿ ಸಾಂದ್ರೀಕೃತವಾಗಿವೆ. ಸ್ನಾಯು ಅಂಗಾಂಶಗಳಲ್ಲಿಯೂ

ಗ್ಲೈಕೋಜನ್ನುಗಳಲ್ಲಿಯೂ ಹೆಚ್ಚಾಗಿವೆ. ಇವು ಹರಳಿನಂತಿಲ್ಲದ ಚೂರ್ಣಗಳು. ಇವು ತೀವ್ರಪ್ರದಕ್ಷಿಣಾವರ್ತಿಗಳು. ಇವನ್ನು ಡಿ–ಗ್ಲೂಕೋಸ್ ಆಗಿ ಪರಿಣಾಮಾತ್ಮಕವಾಗಿ ಪರಿವರ್ತಿಸಬಹುದು. ಗ್ಲೈಕೋಜನ್ ರಾಸಾಯನಿಕ ವಿನ್ಯಾಸದಲ್ಲಿ ಅಮೈಲೊ ಪೆಕ್ಟಿನ್ನಿನಂತೆ ಕಂಡುಬಂದರೂ ಹೆಚ್ಚು ಶಾಖೆಗಳನ್ನು ಒಳಗೊಂಡಿದೆ. ಅಯೊಡೀನಿನೊಡನೆ ಗ್ಲೈಕೋಜನ್ ಕೆಂಪುಮಿಶ್ರಿತ ಕಂದುಬಣ್ಣದ ದಾಗನ್ನು ಬಿಡುತ್ತದೆ.

**ಸ್ಟಾರ್ಚ್:** ಸ್ಟಾರ್ಚುಗಳು ಸಸ್ಯಗಳ ಶೇಖರಿತ ಆಹಾರರೂಪಿ ಬಹುಶರ್ಕರಗಳು. ಸಸ್ಯಗಳು ಸ್ಟಾರ್ಚನ್ನು ಸ್ಟಾರ್ಚ್ ಕಣಗಳಲ್ಲಿ ಶೇಖರಿಸುತ್ತವೆ. ಆ ರೀತಿಯ ಶೇಖರಣೆಗಳು ಬೇರಿನ ಅಂಗಾಂಶಗಳಲ್ಲಿ (ಬೇರಿನ ತರಕಾರಿಗಳು, ಗೆಡ್ಡೆಗಳು), ಕಾಂಡಗಳಲ್ಲಿ ಅಥವಾ ಎಲೆಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತವೆ. ಬೀಜಗಳಲ್ಲಿ, ವಿಶೇಷವಾಗಿ ಧಾನ್ಯಗಳ ಕಾಳುಗಳಲ್ಲಿ (ಸುಮಾರು ಶೇ.80) ಸ್ಟಾರ್ಚಿನ ಅತಿ ಹೆಚ್ಚಿನ ಸಾಂದ್ರೀಕರಣವನ್ನು ಕಾಣಬಹುದು. ಸ್ಟಾರ್ಚಿನಲ್ಲಿ ಅಮೈಲೋಸ್ ಮತ್ತು ಅಮೈಲೊಪೆಕ್ಟಿನುಗಳೆಂಬ ಎರಡು ಘಟಕಗಳಿವೆ. ಸ್ಟಾರ್ಚಿನಲ್ಲಿ ಸಾಮಾನ್ಯವಾಗಿ ಶೇ.25 ಭಾಗ ಅಮೈಲೋಸ್ ಮತ್ತು ಶೇ.75 ಅಮೈಲೊಪೆಕ್ಟಿನ್ ಇರುವುದಾದರೂ ಮೇಣದ ತರಹೆಯ ಅಥವಾ ಗ್ಲುಟಿನ್‌ಯುಕ್ತ ಪಿಷ್ಟಗಳಲ್ಲಿ ಬಹು ಸ್ವಲ್ಪ ಅಮೈಲೋಸ್ ಇರುತ್ತದೆ.

**ಅಮೈಲೋಸ್:** ಅಮೈಲೇಸ್ ಕಿಣ್ವದಿಂದ ಅಮೈಲೋಸನ್ನು ಜಲವಿಶ್ಲೇಷಣೆಗೊಳ ಮಾಡಿದಾಗ ಮಾಲ್ಟೋಸ್ ಪ್ರಧಾನ ಉತ್ಪನ್ನವಾಗಿ ದೊರೆಯುತ್ತದೆ. ಸಂಪೂರ್ಣ ಆಮ್ಲೀಯ ಜಲವಿಶ್ಲೇಷಣದಿಂದ ಡಿ–ಗ್ಲೂಕೋಸ್ ಮಾತ್ರ ದೊರೆಯುತ್ತದೆ. ನೀಳ –aಡಿ–(1–4) ಬದ್ಧವಾಗಿರುವ ಗ್ಲೂಕಾನ್‌ವಿನ್ಯಾಸ ಅಮೈಲೋಸಿನ ವೈಶಿಷ್ಟ್ಯ. ಜಲೀಯ ದ್ರಾವಣಗಳಲ್ಲಿ ಅಮೈಲೋಸ್ ಬಹುಶೀಘ್ರವಾಗಿ ಅಣ್ವಿಕ ಸಂಗುಣನ (ಮಾಲಿಕ್ಯುಲರ್ ಅಸೋಸಿಯೇಷನ್) ಹೊಂದುವ ಪ್ರವೃತ್ತಿಯನ್ನು ತೋರುವುದರಿಂದ ಬಹುಶರ್ಕರ ಸ್ವಯಮೇವ ಒತ್ತರಿಸಲು ಕಾರಣವಾಗುತ್ತದೆ. ರಿಟ್ರೊಗ್ರೇಡೇಷನ್ ಎಂದು ಹೆಸರಿಸಲಾಗಿರುವ ಈ ಗುಣ ಉಪಯೋಗಕಾರಿಯಾದುದಲ್ಲ. ಅಮೈಲೋಸ್ ದ್ರಾವಣಗಳ ಭೌತ ಅಳತೆಗಳನ್ನು ಮಾಡುವಾಗ ಇದು ತೊಂದರೆಯನ್ನುಂಟುಮಾಡುತ್ತದೆ. ಅಮೈಲೋಸ್ ಅಯೊಡೀನಿನೊಂದಿಗೆ ನೀಲಿಬಣ್ಣವನ್ನು ಕೊಡುತ್ತದೆ.

**ಅಮೈಲೊಪೆಕ್ಟಿನ್:** ಇದು a–1–4 ಬಂಧನದ ಗ್ಲೂಕೋಸ್ ಶ್ರೇಣಿಗಳು ಒಂದಕ್ಕೊಂದು a–1–6 ಬಂಧನಗಳಿಂದ ಸೇರಿಸಲ್ಪಟ್ಟಿರುವ ಒಂದು ಶಾಖೀಯ ಬಹುಶರ್ಕರ. ದ್ರಾವಣಗಳಲ್ಲಿ ಅಮೈಲೋಪೆಕ್ಟಿನ್ನಿನ ರಿಟ್ರೊಗ್ರೇಡೇಷನ್ ನಿಧಾನ. ಈ ಗುಣದಿಂದಾಗಿ ಅಮೈಲೋಪೆಕ್ಟಿನ್ ಅಮೈಲೋಸಿನಿಂದ ಬೇರೆಯಾಗುತ್ತದೆ. ಸ್ಟಾರ್ಚ್‌ಕೋಶಗಳ ಸೆಟ್ಟಿಂಗ್ ಮತ್ತು ಬ್ರೆಡ್ಡಿನ ಉಬ್ಬುವಿಕೆಗಳು ಅಮೈಲೋಪೆಕ್ಟಿನ್ನಿನ ಬೇರ್ಪಡಿಕೆಯಿಂದಾದುದಾಗಿದೆ. ಇದು ಅಯೊಡೀನಿನೊಡನೆ ಕೆನ್ನೀಲಿಬಣ್ಣವನ್ನು ಕೊಡುತ್ತದೆ.

**ಉಪಾಂತರಿತ (ಮಾಡಿಫೈಡ್) ಸ್ಟಾರ್ಚುಗಳು (ಡೆಕ್‌ಸ್ಟ್ರಿನ್ಸ್):** ಸ್ಟಾರ್ಚುಗಳನ್ನು ಒಂಟಿಯಾಗಿ ಇಲ್ಲವೇ ಸಂಯುಕ್ತವಾಗಿ ಕಾಯಿಸುವುದು, ಆಮ್ಲಗಳು, ಕಿಣ್ವಗಳು ಅಥವಾ ಉತ್ಕರ್ಷಣಕಾರಿಗಳೊಡನೆ ಜೀರ್ಣಗೊಳಿಸುವುದರಿಂದ ಇವನ್ನು ಪಡೆಯಬಹುದು. ಇವನ್ನು ವಾಣಿಜ್ಯರಂಗದಲ್ಲಿ ಅಂಟುಗಳು ಮತ್ತು ಸಜ್ಜಿಕಾರಕಗಳಾಗಿ ಬಳಸುವರು. ಮಾಲ್ಟ್‌ಡಯಾಸ್ಟಿಟಿಕ್ ಕಿಣ್ವದಿಂದ ಜೀರ್ಣಗೊಳಿಸುವುದರಿಂದ ಸ್ಟಾರ್ಚ್ ಜೀರ್ಣಗೊಂಡು (ಡಿಗ್ರೇಡೇಷನ್) ವಿಲೀನವಾಗಬಲ್ಲ ಸ್ಟಾರ್ಚ್ ಆಗುತ್ತದೆ. ಕೆಲವು ಕಿಣ್ವಗಳು (ದ್ರವೀಕರಿಸುವ) ಸ್ಟಾರ್ಚ್ ದ್ರಾವಣದ ಶ್ಯಾನತೆ (ವಿಸ್ಕಾಸಿಟಿ) ಕಡಿಮೆಯಾಗುವಂತೆ ಸ್ಟಾರ್ಚನ್ನು ಜೀರ್ಣಗೊಳ್ಳುವಂತೆ ಮಾಡುತ್ತವೆ. ಪ್ರಾಣಿಗಳಲ್ಲಿ ಆಹಾರದ ಪಿಷ್ಟಗಳು ಲಾಲಾರಸದ ಅಮೈಲೇಸ್ (ಟೈಲಿನ್) ಮತ್ತು ಮೇದೋಜೀರಕದ ಅಮೈಲೇಸ್‌ಗಳಿಂದ ಜೀರ್ಣವಾಗುತ್ತದೆ. ಔದ್ಯೋಗಿಕವಾಗಿ ಡಿ–ಗ್ಲೂಕೋಸನ್ನು ಸ್ಟಾರ್ಚಿನ ಸಂಪೂರ್ಣ ಆಮ್ಲೀಯ ಜಲವಿಶ್ಲೇಷಣದಿಂದ ತಯಾರಿಸುವರು. ಸ್ಟಾರ್ಚಿನ ನೈಟ್ರೇಟನ್ನು ಸ್ಫೋಟಕವಸ್ತುವಾಗಿ ಉಪಯೋಗಿಸುವರು.

**ಬಹುಫ್ರಕ್ಟೊಸಾನುಗಳು:** ಸುಪರಿಚಿತವಾಗಿರುವ ಉದಾಹರಣೆಯೆಂದರೆ ಇನ್ಸುಲಿನ್. ಇದು ಶೇಖರಗೊಂಡ ಕಾರ್ಬೊಹೈಡ್ರೇಟ್. ಅನೇಕ ಸಸ್ಯಗಳ ಗೆಡ್ಡೆಗಳು, ಅದರಲ್ಲಿಯೂ ವಿಶೇಷವಾಗಿ ಜೆರೂಸಲೆಮ್ ಆರ್ಟಿಚೋಕುಗಳ ಗಡ್ಡೆ, ಡೇಲಿಯ, ಡೆಂಡಿಲಿನ್ ಮತ್ತು ಚಿಕೊರಿಗಳಲ್ಲಿ ವಿಶೇಷವಾಗಿ ಶೇಖರವಾಗಿರುತ್ತದೆ. ಇದರಲ್ಲಿ 2–1 ಬಂಧನದಿಂದ ಸೇರಿಸಲ್ಪಟ್ಟ 35–ಡಿಫ್ರಕ್ಟೊಫ್ಯುರೋನೋಸ್ ಮಾನಗಳಿದ್ದು ಅಪಕರ್ಷಣಕಾರಿ ಅಂತ್ಯದಲ್ಲಿ ಸುಕ್ರೋಸ್ ರೀತಿಯ ಬಂಧನವುಳ್ಳ ಡಿ–ಗ್ಲೂಕೋಸ್ ಮಾನವಿರುತ್ತದೆ. ಅಗೇವ್ (ಕತ್ತಾಳೆ) ಸಸ್ಯದ ಕಾಂಡದಲ್ಲಿ ಪಾಲಿಫ್ರಕ್ಟೊಸಾನುಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಶೇಖರಗೊಂಡಿರುತ್ತವೆ ಎಂಬುದಾಗಿ ಈಚಿಗೆ ಕಂಡುಹಿಡಿಯಲಾಗಿದೆ. ಇದನ್ನು ಜಲವಿಶ್ಲೇಷಣೆಗೊಳಮಾಡುವುದರಿಂದ ಫ್ರಕ್ಟೋಸನ್ನು ಪಡೆಯಬಹುದು. ಇದರ ಸಂಘಟನೆಯನ್ನು ಸಹ ನಿರ್ಧರಿಸಲಾಗಿದೆ.

**ರಚನಾತ್ಮಕ ಕಾರ್ಬೋಹೈಡ್ರೇಟುಗಳು:** ಇವು ಪ್ರಾಣಿಗಳ ಸಂಯೋಜಕ ಅಂಗಾಂಶಗಳಲ್ಲಿವೆ. ಇವನ್ನು ಕಾರ್ಬೊಹೈಡ್ರೇಟು ಅಣುಗಳು ಗಣನೀಯ ಪ್ರಮಾಣದಲ್ಲಿ ಜೀರ್ಣವಾಗದಂತೆ ಪ್ರೋಟೀನುಗಳಿಂದ ಮುಕ್ತವಾದ ಶುದ್ಧ ಬಹುಶರ್ಕರಗಳಾಗಿ ಪಡೆಯಬಹುದು. ಇವುಗಳ ವಿಶಿಷ್ಟ ರಾಸಾಯನಿಕ ಲಕ್ಷಣವೆಂದರೆ ಅಮೈನೋ ಆಮ್ಲ ಮತ್ತು ಗ್ಲುಕ್‌ಯುರಾನಿಕ್ ಆಮ್ಲಗಳ ಮಾನಗಳು ಪರ್ಯಾಯವಾಗಿರುವುದು ಮತ್ತು ಕೆಲವಲ್ಲಿ ಸಲ್ಫೇಟ್ ಪುಂಜವಿರುವುದರಿಂದ ಅವುಗಳ ಆಮ್ಲೀಯತೆ ಹೆಚ್ಚು.

ಮಾನವ ಹಾಗೂ ಪ್ರಾಣಿಗಳಲ್ಲಿ ಅಮೈನೋ ಬಹುಶರ್ಕರಗಳಲ್ಲಿ ಅನೇಕವು ಪ್ರೋಟೀನಿನೊಡನೆ ಜೊತೆಗೂಡಿವೆ. ಈ ಮ್ಯುಕೋ ಪ್ರೋಟೀನುಗಳಲ್ಲಿ ಬಹುಶರ್ಕರದ ಅಂಶ ಅಧಿಕವಾಗಿದ್ದರೆ, ಈ ಸಂಮಿಶ್ರಗಳ ಶ್ಯಾನತೆ ಹೆಚ್ಚಾಗಿರುತ್ತದೆ. ಇಂಥವನ್ನು ಮ್ಯೂಸಿನುಗಳು ಅಥವಾ ಮ್ಯುಕಾಯಿಡುಗಳೆಂದು ಕರೆಯುವರು. ಕಾರ್ಬೋಹೈಡ್ರೇಟಿನ ಅಂಶ ಕಡಿಮೆ ಇದ್ದರೆ ಅವನ್ನು ಗ್ಲೈಕೊ–ಪ್ರೋಟೀನುಗಳೆಂದು ಕರೆಯುವರು.

ಉನ್ನತಮಟ್ಟದ ಪ್ರಾಣಿಗಳಲ್ಲಿ ರಚನಾತ್ಮಕ ಕಾರ್ಬೋಹೈಡ್ರೇಟಿಗೆ ಒಂದು ಉದಾಹರಣೆಯೆಂದರೆ ಮ್ಯುಕೊ ಬಹುಶರ್ಕರವಾದ ಹಯಾಲ್‌ಯುರಾನಿಕ್ ಆಮ್ಲ. ಅದು ವಿವಿಧ ಪ್ರಮಾಣಗಳಲ್ಲಿ ದೊರೆಯುತ್ತದೆ. ಅನೇಕ ಸಂಯೋಜಕ ಅಂಗಾಂಶಗಳ ಮೂಲವಸ್ತುಗಳಲ್ಲಿ ಶುಷ್ಕ ತೂಕದ ಶೇ.5 ಭಾಗದವರೆವಿಗೆ ನಾಭಿನಾಳಗಳು, ಸಾಂದ್ರ ದ್ರವ, ಸಂಧಿದ್ರವಗಳು ಮತ್ತು ಚರ್ಮ ಇವುಗಳಲ್ಲಿ ಹೆಚ್ಚು ಸಾಂದ್ರೀಕರಣಗೊಂಡಿರುತ್ತವೆ. ಇದು ಪ್ರಮುಖ ಜೈವಿಕ ಪಾತ್ರವನ್ನು ವಹಿಸುತ್ತದೆ. ಅಂಗಾಂಶಗಳಲ್ಲಿ ಅಥವಾ ದ್ರವಗಳಲ್ಲಿ ಈ ಬಹುಶರ್ಕರಗಳು ಮುಕ್ತ ಸ್ಥಿತಿಯಲ್ಲಿವೆ. ಇಲ್ಲವೆ ಪ್ರೋಟೀನುಗಳೊಡನೆ ಬಹು ಸಡಿಲವಾಗಿ ಸಂಯೋಗ ಹೊಂದಿದ್ದು (ಗ್ಲೈಕೋ ಪ್ರೋಟೀನುಗಳು) ಅತಿಹೆಚ್ಚಿನ ಶ್ಯಾನತೆಯುಳ್ಳ ದ್ರಾವಣಗಳನ್ನುಂಟುಮಾಡುತ್ತವೆ. ರೋಗದ ಸೋಂಕಿನ ಪ್ರತಿರೋಧಕ್ಕೆ ಪ್ರಾಯಶಃ ಈ ಗುಣ ಭಾಗಶಃ ಕಾರಣವಾಗಿರಬಹುದು. ಹಯಾಲ್‌ಯುರಾನಿಕ್–ಆಮ್ಲ ಕೋಶಗಳ ನಡುವಿನ ಅವಕಾಶಗಳಲ್ಲಿ ನೀರನ್ನು ಬಂಧಿಸುತ್ತದೆ ಮತ್ತು ಸಂಧಿಗಳಲ್ಲಿ ಕೀಲೆಣ್ಣೆಯಂತೆ ಕಾರ್ಯ ನಿರ್ವಹಿಸುತ್ತವೆ. ಅದರ ಜಲಸಂಯೋಜನ ಪ್ರಮಾಣ ಹೆಚ್ಚಾಗಿರುವುದರಿಂದ ಅಣುಗಳ ನಡುವಿನ ಆಕರ್ಷಣೆ ಹೆಚ್ಚಾಗಿರುತ್ತದೆ ಮತ್ತು ಇದರಿಂದಾಗಿ ಕೋಶಗಳ ನಡುವಿನ ಪ್ರದೇಶದಲ್ಲಿ ನೀರಿನ ಚಲನೆಗೆ ಅಡಚಣೆಯನ್ನುಂಟುಮಾಡುತ್ತವೆ. ಇದರ ಪರಿಣಾಮವಾಗಿ ಒತ್ತಡಕ್ಕೆ ವಿರೋಧ ಹೆಚ್ಚುತ್ತದೆ. ಇದರಲ್ಲಿ ಡಿ–ಗ್ಲೂಕ್‌ಯುರಾನಿಕ್ ಆಮ್ಲ ಮತ್ತು ಎನ್–ಅಸಿಟೈಲ್–ಡಿ–ಗ್ಲೂಕೋಸಮೀನುಗಳ ಮಾನಗಳು ಪುನರಾವೃತ್ತಿಯಾಗುತ್ತವೆ. ಮ್ಯುಕೊಬಹುಶರ್ಕರಗಳಲ್ಲಿ, ಎನ್–ಅಸಿಟೈಲ್–ಡಿ–ಗ್ಲೂಕೋಸಮೀನಿನ 6ನೆಯ ಇಂಗಾಲದ ಸ್ಥಾನದಲ್ಲಿ ಸಲ್ಫೇಟ್ ಎಸ್ಟರ್ ಪುಂಜ ಸೇರಿರಬಹುದು. ಕಾಂಡ್ರಾಯ್‌ಟಿನುಗಳು ಎಂದು ಪರಿಚಿತವಾಗಿರುವ ಈ ಬಹ್ವಂಗಿಗಳು ಮೃದ್ವಸ್ಥಿಗಳು, ಕಂಡರಗಳು ಮತ್ತು ಚರ್ಮದಲ್ಲಿ ದೊರೆಯುತ್ತವೆ.

**ಸೆಲ್ಯುಲೋಸ್:** ಇದು ಅತಿ ಹೆಚ್ಚಾಗಿ ದೊರೆಯುವ ಬಹುಶರ್ಕರ ಮತ್ತು ಮೇಲ್ವರ್ಗದ ಸಸ್ಯಗಳ ಪ್ರಧಾನ ಘಟಕ. ಸೆಲ್ಯುಲೋಸಿನಿಂದ ಮಾನವ ಅನೇಕ ಉಪಯೋಗಗಳನ್ನು ಪಡೆಯುತ್ತಿದ್ದಾನೆ. ಪ್ರಕೃತಿಯಲ್ಲಿ ದೊರೆಯುವ ಅತ್ಯಂತ ಶುದ್ಧವಾದ ಸೆಲ್ಯುಲೋಸ್ ಹತ್ತಿಯ ಗಿಡದ ಬೀಜದ ಕೂದಲುಗಳಲ್ಲಿದ್ದು ಶೇ. 98 ಭಾಗ ಶುದ್ಧವಾಗಿರುತ್ತದೆ. ಮರದಿಂದ ಪಡೆಯುವ ವಾಣಿಜ್ಯ ಸೆಲ್ಯುಲೋಸನ್ನು ಪ್ರಧಾನವಾಗಿ ಕಾಗದದ ತಯಾರಿಕೆ ಮತ್ತು ಅಲ್ಪ ಪ್ರಮಾಣದಲ್ಲಿ ರೆಯಾನಿನ ತಯಾರಿಕೆಯಲ್ಲಿ ಉಪಯೋಗಿಸುವರು. ಅನೇಕ ಸಸ್ಯಗಳ ಉತ್ತಮ ಎಳೆಗಳಲ್ಲಿ ಸೆಲ್ಯುಲೋಸ್ ಹೆಚ್ಚಾಗಿದೆ. ಅಗಸೆ ನಾರು, ಸೆಣಬು, ಕಿತ್ತಾನಾರು ಮತ್ತು ರ್‍ಯಾಮಿ ಮುಂತಾದುವುಗಳ ಎಳೆಗಳು ಹಗ್ಗ ಮತ್ತು ವಸ್ತ್ರ ತಯಾರಿಕೆಯಲ್ಲಿ ಪ್ರಮುಖವಾಗಿವೆ. ಸಿಸಾಲ್ ಮತ್ತು ಮನಿಲಾ ಮುಂತಾದ ಸಸ್ಯಗಳ ಎಳೆಗಳಲ್ಲಿ ಸೆಲ್ಯುಲೋಸ್ ಹೆಚ್ಚಾಗಿದೆ. ಅವನ್ನು ನಾರಿನಂತೆಯೇ ಉಪಯೋಗಿಸುತ್ತಾರೆ. ಆಮ್ಲಗಳಿಂದ ಸಂಪೂರ್ಣ ಜಲವಿಶ್ಲೇಷಣೆ ಡಿ–ಗ್ಲೂಕೋಸನ್ನು ನೀಡಿದರೆ ಭಾಗಶಃ ಜಲವಿಶ್ಲೇಷಣೆ ಸೆಲ್ಲೊಬಯೋಸನ್ನು ನೀಡುತ್ತದೆ. ಸೆಲ್ಯುಲೋಸ್ ಒಂದು ನೀಳ ಬಹುಶರ್ಕರ. ಇದರಲ್ಲಿ â–1–4 ಬಂಧನದ ಗ್ಲೂಕೋಸ್ ಮಾನಗಳಿವೆ.

ಹೆಚ್ಚಿನ ಸಂಖ್ಯೆಯ ಮೇಲ್ಮಟ್ಟದ ಪ್ರಾಣಿಗಳು ಸೆಲ್ಯುಲೋಸನ್ನು ಚಯಾಪಚಯಗೊಳಿಸಲಾರವು. ಆದರೆ ಸಸ್ಯಾಹಾರಿ ಕಶೇರುಕಗಳ ಕರುಳಿನಲ್ಲಿ ಸೆಲ್ಯುಲೋಸನ್ನು ಒಡೆಯಬಲ್ಲ ಅವಾಯುಜೀವ (ಅನ್‌ಏರೋಬಿಕ್) ಬ್ಯಾಕ್ಟೀರಿಯಗಳು ಈ ರೀತಿಯಲ್ಲಿ ಸೆಲ್ಯುಲೋಸನ್ನು ಅಪ್ರತ್ಯಕ್ಷವಾಗಿ ಉಪಯೋಗಿಸಿಕೊಳ್ಳಬಲ್ಲುವು. ಆಕ್ಟಿನೋಮೈಸಿನ್ ಜಾತಿಯವು ಮಣ್ಣಿನಲ್ಲಿರುವ ಸೆಲ್ಯುಲೋಸ್ ಗಾಳಿಯ ಇರವಿನಲ್ಲಿ ಜೀರ್ಣವಾಗಲು ಕಾರಣವಾಗಿವೆಯಾದರೂ ಅನೇಕ ಬೂಜಗಳು ಮರವನ್ನು ಕೊರೆದು ಅದರಲ್ಲಿರುವ ಸೆಲ್ಯುಲೋಸನ್ನು ಚಯಾಪಚಯಗೊಳಿಸುತ್ತವೆ.

ವಿಸ್ಕೋಸ್ ರೇಯಾನನ್ನು ಸೋಡಾಸೆಲ್ಯುಲೋಸ್ ಮತ್ತು ಇಂಗಾಲದ ಡೈ ಸಲ್ಫೈಡಿನಿಂದ ಉತ್ಪತ್ತಿಯಾಗುವ ಸೆಲ್ಯುಲೋಸ್ ಕ್ಸ್ಯಾಂಥೇಟ್ ದ್ರಾವಣವನ್ನು ದುರ್ಬಲ ಆಮ್ಲದೊಳಕ್ಕೆ ದಬ್ಬುವುದರಿಂದ ತಯಾರಿಸುವರು. ದುರ್ಬಲ ಆಮ್ಲ ಸೆಲ್ಯುಲೋಸ್ ಕ್ಸ್ಯಾಂಥೇಟನ್ನು ವಿಭಜನೆಗೊಳಿಸುತ್ತದೆ. ಅಲ್ಲದೆ ನೇಯ್ಗೆಗೆ ಅನುಕೂಲಕರವಾದ ರೀತಿಯಲ್ಲಿ ಸೆಲ್ಯುಲೋಸ್ ಪುನಃ ಒತ್ತರಿಸುತ್ತದೆ. ಸೆಲ್ಯುಲೋಸ್ ಅಸಿಟೇಟ್ ದ್ರಾವಣವನ್ನು ಸಣ್ಣ ರಂಧ್ರದ ಮೂಲಕ

ಹೊರತಳ್ಳುವುದರ ಮೂಲಕ ಅಸಿಟೇಟ್ ರೇಯಾನನ್ನು ತಯಾರಿಸುವರು. ವಿಲೇಯಕ ಆವಿಯಾಗಿ ಹೋಗಿ ಸೆಲ್ಯುಲೋಸ್ ಅಸಿಟೇಟ್ ನಾರು ಹಿಂದುಳಿಯುತ್ತದೆ. ಸೆಲ್ಯುಲೋಸ್ ಅಸಿಟೇಟನ್ನು ಪ್ಲಾಸ್ಟಿಕ್ ತಯಾರಿಕೆ, ಡಯಾಲಿಸಿಸ್ ನಳಿಕೆಗಳು ಮತ್ತು ವರ್ಣಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸೆಲ್ಯುಲೋಸ್ ನೈಟ್ರೇಟನ್ನು (ನೈಟ್ರೋ ಸೆಲ್ಯುಲೋಸ್, ಗನ್‌ಕಾಟನ್) ಸ್ಫೋಟಕಗಳಾಗಿ ಉಪಯೋಗಿಸುವರು. ಸೆಲ್ಯುಲೋಸಿನ ಈಥರುಗಳನ್ನು ರಕ್ಷಣಾ ಕಲಿಲಗಳಾಗಿ ಮತ್ತು ಅಪಮಾರ್ಜಕಗಳಾಗಿ (ಡಿಟರ್ಜೆಂಟ್ಸ್) ಉಪಯೋಗಿಸುವರು.

ಸೆಲ್ಯುಲೋಸ್ ಅನೇಕ ದ್ರಾವಕಗಳಲ್ಲಿ ವಿಲೀನವಾಗುವುದಿಲ್ಲ. ಪ್ರಬಲ ಖನಿಜ ಆಮ್ಲಗಳು ಇದನ್ನು ಬಹು ಶೀಘ್ರವಾಗಿ ಅವಬಹ್ವಂಗೀಕರಿಸುತ್ತವೆ. ಇದು ಕ್ಯುಪ್ರ ಮೋನಿಯಂ ಹೈಡ್ರಾಕ್ಸೈಡಿನ ದ್ರಾವಣಗಳಲ್ಲಿ ವಿಲೀನವಾಗುತ್ತದೆ. ಈ ದ್ರಾವಣವನ್ನು ಆಮ್ಲೀಕರಣಗೊಳಿಸಿ ಇದನ್ನು ಪುನಃ ಪಡೆಯಬಹುದು. ಕ್ಯುಪ್ರಮೋನಿಯಂ ರೇಯಾನನ್ನು ಈ ರೀತಿ ತಯಾರಿಸುವರು. ಪ್ರಕೃತಿದತ್ತವಾದ ಸೆಲ್ಯುಲೋಸನ್ನು ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣ ಉಬ್ಬುವಂತೆ ಮಾಡುತ್ತದೆ. ಇದೇ ಮರ್ಸಿರೀಕರಣ (ಮರ್ಸರೈಸೇಷನ್) ವಿಧಾನದ ಆಧಾರತತ್ತ್ವ. ಹತ್ತಿಯನ್ನು ಸೋಡಿಯಂ ಹೈಡ್ರಾಕ್ಸೈಡಿನೊಡನೆ ಒತ್ತಡದಲ್ಲಿ ಕ್ರಿಯೆಗೆ ಒಳಮಾಡುವುದು. ತತ್ಪರಿಣಾಮವಾಗಿ ಉಂಟಾಗುವ ಮರ್ಸರೀಕರಣಗೊಂಡ ಹತ್ತಿ ಸುಧಾರಿತ ಲಕ್ಷಣವನ್ನು ಪಡೆದಿದ್ದು ವರ್ಣಗಳನ್ನು ಸುಲಭವಾಗಿ ಸ್ವೀಕರಿಸಬಲ್ಲುದು.

ಪೆಕ್ಟಿನುಗಳು ಎಲ್ಲ ಸಸ್ಯ ಅಂಗಾಂಶಗಳಲ್ಲಿಯೂ ದೊರೆಯುವ ಬಹುಯುರೊನೈಡುಗಳು. ಇವು ಅನೇಕ ವೇಳೆ, ಉದಾಹರಣೆಗೆ ಹುಳಿಹಣ್ಣುಗಳ (ಸಿಟ್ರಸ್ ಹಣ್ಣುಗಳ) ಆಲ್ಬೆಡೋದಂತೆ. ಶುಷ್ಕತೂಕದ 1/3 ಭಾಗದಷ್ಟೇ ಇರಬಹುದು. ರಸವತ್ತಾದ ಮತ್ತು ಶೀಘ್ರವಾಗಿ ಬೆಳೆಯುವ ಸಸ್ಯ ಅಂಗಾಂಶಗಳಲ್ಲಿ ಕಾಂಡಗಳು ಮತ್ತು ಮರದ ಅಂಗಾಂಶಗಳಿಗಿಂತ ಪೆಕ್ಟಿನಿನ ಪ್ರಮಾಣ ಹೆಚ್ಚು. ಕೋಶನ್ಯೂಕ್ಲಿಯಸ್ ವಿಭಜನೆಯಾಗಲು ಆರಂಭವಾದಾಗ ಸಸ್ಯಗಳಲ್ಲಿ ಅವುಗಳ ಸಂಶ್ಲೇಷಣೆ ನಡೆಯುವಂತೆ ಕಾಣುತ್ತದೆ. ಅವು ಕಂಡುಬರುವ ಜಾಗಗಳು ಅವು ರಚನಾಕಾರಿ ವಸ್ತುಗಳೆಂದು ಸೂಚಿಸುತ್ತವೆ. ರಸವತ್ತಾದ ಸಸ್ಯ ಅಂಗಾಂಶಗಳಿಗೆ ವಿಶಿಷ್ಟವಾದ ಬಿಗುತನವನ್ನು ಇವು ಕೊಡುತ್ತವೆ. ಅಲ್ಲದೆ ಇನ್ನಷ್ಟು ಬಲಿತ ಅಂಗಾಂಶಗಳಲ್ಲಿ ಇವು ಸೆಲ್ಯುಲೋಸ್ ಮತ್ತು ಲಿಗ್ನಿನ್ ವಹಿಸುವ ಪಾತ್ರವನ್ನು ವಹಿಸುತ್ತವೆ. ಇವಕ್ಕೆ ನೀರನ್ನು ಹಿಡಿದಿಡುವ ಗುಣವಿರುವುದರಿಂದ ಸಸ್ಯಗಳ ಜಲಶೇಖರಣೆಯ ಸಾಮರ್ಥ್ಯಕ್ಕೆ ಕಾರಣವಾಗಿವೆ. ಇವು ಜಟಿಲ ಬೃಹದಣ್ವಿಕ ಬಹುಗ್ಯಾಲಕ್ಟ್ ಯುರಾನಿಕ್ ಆಮ್ಲಗಳು. ಅವುಗಳಲ್ಲಿನ ಕಾರ್ಬಾಕ್ಸಿಲ್ ಪುಂಜ (ಮಿಥಾಕ್ಸಿಲ್‌ನ ತಾತ್ತ್ವಿಕ ಗರಿಷ್ಠಮಿತಿ ಶೇ.16.33) ಮಿಥೈಲ್ ಗುಂಪಿನಿಂದ ವಿವಿಧ ಪ್ರಮಾಣಗಳಲ್ಲಿ ಎಸ್ಟರೀಕರಣಕ್ಕೊಳಗಾಗಿದ್ದು ಭಾಗಶಃ ಇಲ್ಲವೇ ಸಂಪೂರ್ಣವಾಗಿ ಒಂದು ಅಥವಾ ಹೆಚ್ಚು ಸಂಖ್ಯೆಯ ಪ್ರತ್ಯಾಮ್ಲಗಳಿಂದ ತಟಸ್ಥೀಕರಣಗೊಳ್ಳುತ್ತದೆ. ಬೀಟ್ ಸಕ್ಕರೆಯಲ್ಲಿರುವಂತೆ ಅಸಿಟೈಲ್ ಗುಂಪು ಕೆಲವು ಪೆಕ್ಟಿನುಗಳಲ್ಲಿರುತ್ತದೆ. ತಯಾರಿಸಿದ ಕೆಲವು ಪೆಕ್ಟಿನ್‌ಗಳಲ್ಲಿ ಕೆಲವು ಗ್ಯಾಲಕ್ಟೋಸ್ ಮತ್ತು ಅರಾಬಿನೋಸ್ ಮಾನಗಳು ಸಾಮಾನ್ಯವಾಗಿ ದೊರೆಯುತ್ತವೆ. ಮುಕ್ತ ಆಮ್ಲ (ಪೆಕ್ಟಿಕ್ ಆಮ್ಲಗಳು ಅಥವಾ ಪಾಲಿಗ್ಯಾಲಾಕ್ಟು ರೋನಿಕ್ ಆಮ್ಲಗಳು) ಮತ್ತು ಪೆಕ್ಟೇಟುಗಳು ಉದಾಹರಣೆಗೆ ಕ್ಯಾಲ್ಸಿಯಂ ಪೆಕ್ಟೇಟ್ ಕುದಿಯುವ ನೀರಿನಲ್ಲಿಯೂ ವಿಲೀನವಾಗುವುದಿಲ್ಲ.

ಪ್ರೋಟೋಪೆಕ್ಟಿನ್ ಸಸ್ಯಗಳ ನೀರಿನಲ್ಲಿ ಲೀನವಾಗದ ಮೂಲ ಬಹುಯೂರೊನೈಡ್. ಇದು ಪೆಕ್ಟಿನಿನ ಪುರೋವರ್ತಿಯೆಂದು ಊಹಿಸಲಾಗಿದೆ. ಅದು ಸೆಲ್ಯುಲೋಸ್‌ಗಳೊಡನೆ ಕೂಡಿದ ಬಹುಗ್ಯಾಲಾಕ್ಯುರೋನಿಕ್ ಆಮ್ಲಗಳ ಕ್ಲಿಷ್ಟ ಮಾದರಿ. ಪೆಕ್ಟಿನ್‌ಗಳಿಗೆ ಆಮ್ಲಗಳ ಮತ್ತು ಶೇ.50 ಹೆಚ್ಚಿನ ಶರ್ಕರದ ಇರವಿನಲ್ಲಿ ಜೆಲ್‌ಗಳನ್ನುಂಟುಮಾಡುವ (ಜೆಲ್ಲಿಗಳ) ಸಾಮರ್ಥ್ಯವಿದೆ. ಕಡಿಮೆ ಎಸ್ಟರ್ ಪ್ರಮಾಣದಲ್ಲಿ ಪೆಕ್ಟಿನುಗಳಿಗೆ ಅಲ್ಪಪ್ರಮಾಣದ ಬಹುವೆಲೆಂಟ್ ಅಯಾನ್‌ಗಳ (ಸಾಮಾನ್ಯವಾಗಿ ಕ್ಯಾಲ್ಸಿಯಂ) ಇರವಿನಲ್ಲಿ ಶರ್ಕರಗಳಿಲ್ಲದಿರುವಾಗಲೂ ಜೆಲ್‌ಗಳನ್ನುಂಟುಮಾಡುವ ಸಾಮರ್ಥ್ಯ ಉಂಟು. ಔದ್ಯೋಗಿಕ ಪೆಕ್ಟಿನ್ ಜಲಶ್ವೇತವರ್ಣವುಳ್ಳ ಪುಡಿಯಾಗಿದ್ದು ಬಿಸಿನೀರಿನಲ್ಲಿ ಶೇ.2–3ರ ವರೆಗೆ ವಿಲೀನವಾಗಬಲ್ಲದು. ಕೆಲವು ಪೆಕ್ಟಿನುಗಳು ಪೆಕ್ಟಿನ್ ಕಾನ್‌ಸೆಂಟ್ರೇಟುಗಳ (ಲಿಕ್ವಿಡ್ ಪೆಕ್ಟಿನ್‌ಗಳು) ರೂಪದಲ್ಲಿ ಮಾರುಕಟ್ಟೆಯಲ್ಲಿ ದೊರೆಯುತ್ತವೆ. ತಯಾರಿಸಿದ ಈ ಪೆಕ್ಟಿನುಗಳು ಫಲರಕ್ಷಕಗಳ ತಯಾರಿಯಲ್ಲಿ, ಮರ್ಮಲೇಡುಗಳು, ಹಣ್ಣಿನ ಪಾಕಗಳ ಮತ್ತು ಮುರಬ್ಬ ತಯಾರಿಕೆಯಲ್ಲಿ ಉಪಯೋಗವಾಗುತ್ತವೆ. ಆಹಾರ ತಯಾರಿಕರಿಗೆ ಒದಗಿಸುವ ಪೆಕ್ಟಿನ್‌ಗಳು ಜೆಲ್ಲಿ ಮಟ್ಟಕ್ಕೆ ಬರುವಂತೆ ಗ್ಲೂಕೋಸನ್ನು ಸೇರಿಸಿ ಶಿಷ್ಟೀಕರಿಸಲಾಗುತ್ತದೆ. ಈ ಮೌಲ್ಯ ಎಚ್ಚರಿಕೆಯಿಂದ ಶಿಷ್ಟೀಕರಿಸಿದ ಪರಿಸ್ಥಿತಿಯಲ್ಲಿ ಒಂದು ಭಾಗ (ಶುಷ್ಕ) ಪೆಕ್ಟಿನ್ ತೃಪ್ತಿಕರವಾದ ಜೆಲ್ಲಿಯನ್ನು ಕೊಡಲು ಸೇರಿಸಬೇಕಾದ ಸಕ್ಕರೆಯ ಪ್ರಮಾಣವನ್ನು ಸೂಚಿಸುತ್ತದೆ.

**ಸಸ್ಯಗಳ ಇತರ ಬಹುಶರ್ಕರಗಳು:** ಇವುಗಳಲ್ಲಿ ಸಮುದ್ರದ ಕಂದು ಪಾಚಿ ಗುಂಪಿಗೆ ಸೇರಿದ ಲ್ಯಾಮಿನೇರಿನ್, ಐಸ್‌ಲ್ಯಾಂಡ್‌ಮಾಸ್‌ನ ಲಿಚೆನಾನ್, ಅನೇಕ ಕೆಂಪು ಆಲ್ಗೆಗಳಲ್ಲಿನ ಫ್ಲಾರಿಡಾನ್ ಸ್ಟಾರ್ಚ್, ಐವರಿ ಕಾಯಿಯಿಂದ ಬಂದ ಮ್ಯಾನಾನ್ ಹಾಗೂ ಪೆಕ್ಟಿಕ್ ವಸ್ತುಗಳಲ್ಲಿನ ಗ್ಯಾಲಕ್ಟಾನುಗಳು, ಸಮುದ್ರದ ಪಾಚಿಯಿಂದ ಅಗರ್‌ಗಳು, ಐಸಿಂಗ್ ಮತ್ತು ಕ್ಯಾಂಡೀಗಳ ತಯಾರಿಕೆಯಲ್ಲಿ ಜೆಲ್ಲುಮಾಡುವ ವಸ್ತುವಾಗಿ ಹಾಗೂ ಬ್ರೆಡ್ ಹಾಗೂ ಸಿಹಿವಸ್ತುಗಳ ತಯಾರಿಕೆಯಲ್ಲಿ ಕ್ಸೈಲಾನುಗಳೆಂದು ಪರಿಚಿತವಾಗಿರುವ ಕ್ಸೈಲೋಸ್ ಹೊಂದಿರುವ ಬಹುಶರ್ಕರಗಳು ಸೇರಿವೆ. ಸಾಮಾನ್ಯವಾಗಿ ಸಮುದ್ರದ ಪಾಚಿಯ ಬಹುಶರ್ಕರದಲ್ಲಿ ಗಂಧಕ, ಈಥರ್‌ಬಂಧ ರೂಪದಲ್ಲಿರುವ ($>CHO.SO_2O-$) ಸಲ್ಫೇಟ್ ಗುಂಪಿನಂತೆ ಇರುತ್ತದೆ. ಇದು S.39 ಆಲ್ಗೆಗಳಲ್ಲಿ ಲವಣಗಳ ರೂಪದಲ್ಲಿ ದೊರೆಯುತ್ತದೆ. ಈ ಬಹುಶರ್ಕರಗಳ ಭೌತ ಗುಣ ಕೇಟಯಾನುಗಳು ಏಕಸಂಯೋಗ (ಮೋನೊವೇಲೆಂಟ್) ಅಥವಾ ದ್ವಿಸಂಯೋಗ (ಡೈವೇಲೆಂಟ್) ಶಕ್ತಿಯನ್ನು ಹೊಂದಿದೆಯೆಂಬುದರ ಮೇಲೆ ವ್ಯತ್ಯಾಸ ಹೊಂದುತ್ತವೆ. ಹೀಗೆ ಕ್ಯಾರಗೀನ್ ಬಹುಶರ್ಕರದ ಎಥೀರಿಯಲ್ ಬಹುಸಲ್ಫೇಟುಗಳಲ್ಲಿ (ಕ್ಯಾರಾಜೀನಿನ್ ಎಂದು ಕರೆಯಲ್ಪಡುವ) ಸುಮಾರು 8% ಭಾಗ ಗಂಧಕವಿರುತ್ತದೆ; ಮತ್ತು ಹೆಚ್ಚಾಗಿ ಸೋಡಿಯಂ, ಪೊಟಾಸಿಯಂ, ಮೆಗ್ನೀಸಿಯಂ ಮತ್ತು ಕ್ಯಾಲ್ಸಿಯಂ ಲವಣಗಳ ಮಿಶ್ರಣಗಳಾಗಿವೆ. ಏಕಸಂಯೋಗಿ ಅಯಾನುಗಳೆಲ್ಲವನ್ನೂ ಕ್ಯಾಲ್ಸಿಯಂನಿಂದ ಪ್ರತಿಸ್ಥಾಪಿಸಿದಾಗ ಬಹುಶರ್ಕರ ಜೆಲ್ಲನ್ನು ಕೊಡುತ್ತದೆ. ಆದರೆ ಸೋಡಿಯಂ ಮತ್ತು ಪೊಟ್ಯಾಸಿಯಂ ಲವಣಗಳು ನೀರಿನಲ್ಲಿ ಶ್ಯಾನೀಯ ದ್ರಾವಣವನ್ನು ನೀಡುತ್ತವೆ.

ಗ್ಯಾಲಕ್ಟೋಮನ್ನಾನುಗಳು ಅನೇಕ ದ್ವಿದಳ (ಉದಾ: ಲೆಗ್ಯುಮಿನಸ್) ಬೀಜಗಳಿಗೆ ವಿಶಿಷ್ಟವಾಗಿವೆ. ಮ್ಯುಸಿಲೇಜುಗಳಂತಿರುವ ಶಾಖೀಯವಾದ ಮತ್ತು ಸರಣಿಯಂತಿರುವ ಈ ಬಹುಶರ್ಕರಗಳು ಆಹಾರಶೇಖರ ವಸ್ತುಗಳಾಗಿ ಕಾರ್ಯನಿರ್ವಹಿಸುತ್ತವೆ. ಗ್ವಾರ್ ಬೀಜಗಳ ಮತ್ತು ಕೈರಬ್ ಮರದ ಬೀಜಗಳಿಂದ ಪಡೆದ ಗ್ಯಾಲಕ್ಟೋಮನ್ನಾನುಗಳನ್ನು ಔದ್ಯೋಗಿಕವಾಗಿ ವಸ್ತ್ರಗಳ ಸಜ್ಜೀಕಾರಕಗಳನ್ನಾಗಿ ಕಾಗದ ತಯಾರಿಕೆಯಲ್ಲಿ, ಆಹಾರ ಪದಾರ್ಥಗಳನ್ನು ದೃಢಮಾಡುವ ವಸ್ತುಗಳನ್ನಾಗಿ ಉಪಯೋಗಿಸುವರು. ಮರಗಳ ತೊಗಟೆಗಳಿಗೆ ಉಂಟಾದ ಕಚ್ಚುಗಳಿಂದ (ವಿಶೇಷವಾಗಿ ದ್ವಿದಳ ವರ್ಗಕ್ಕೆ ಸೇರಿದ ಸಸ್ಯಗಳು) ಹೊರಹೊರಡುವ ಸಸ್ಯಗಳ ಗೋಂದು ಘನರೂಪದಲ್ಲಿ ಹೊರಡುತ್ತದೆ. ಅರ್ಯಾಬಿಕ್ ಮತ್ತು ಟ್ರಾಗಾಕಾಂತ್ ಗೋಂದುಗಳು ಅಂಟುಗಳಾಗಿ, ರಕ್ಷಣಕಾರಿ ಕಲಿಲಗಳಾಗಿ, ಆಹಾರವಸ್ತುಗಳನ್ನು ಗಟ್ಟಿಗೊಳಿಸುವುದರಲ್ಲಿ ಬಳಕೆಯಲ್ಲಿವೆ. ಇವುಗಳಿಗೆ ಔಷಧಿಗಳು, ಶಾಯಿ ಮತ್ತು ಜಲವರ್ಣಗಳ ತಯಾರಿಕೆಯಲ್ಲಿ ಉಪಯೋಗ ಉಂಟು. ಅರ್ಯಾಬಿಕ್ ಗೋಂದು (ಕ್ಯಾಲ್ಸಿಯಂ, ಮೆಗ್ನೀಸಿಯಂ ಮತ್ತು ಪೊಟ್ಯಾಸಿಯಂ ಅಯಾನುಗಳಿಂದಾದ) ಅರ್ಯಾಬಿಕ್ ಆಮ್ಲದ ಲವಣ. ಅರ್ಯಾಬಿಕ್ ಆಮ್ಲದ ಸಂಪೂರ್ಣ ಜಲವಿಶ್ಲೇಷಣೆ ಎಲ್. ಅರಾಬಿನೋಸ್ತ ಎಲ್–ರ್‍ಯಾಮ್ನೋಸ್, ಡಿ–ಗ್ಲೂಕೋಸ್ ಮತ್ತು ಡಿ–ಗ್ಲೂಕ್‌ಯುರಾನಿಕ್ ಆಮ್ಲವನ್ನು ಸುಮಾರು 3:1:3:1 ಪ್ರಮಾಣದಲ್ಲಿ ಅಕೆಷಿಯ ಕಪ್ಪು ಗೋಂದಾದ ಪ್ಯಾಟಲ್ ಗೋಂದಿನಲ್ಲಿ ಅರ್ಯಾಬಿಕ್ ನೀಡುತ್ತದೆ. ಗೋಂದಿನ ನಾಲ್ಕು ಘಟಕಗಳೇ 6:1:5:1ರ ಪ್ರಮಾಣದಲ್ಲಿ ಇರುತ್ತವೆ.

**ವಿಶ್ಲೇಷಣೆ:** ಗುಣಾತ್ಮಕ: ಕಾರ್ಬೋಹೈಡ್ರೇಟುಗಳು ಸಾರ ಗಂಧಕಾಮ್ಲ ಮತ್ತು ಎಲ್–ನ್ಯಾಫ್ತಾಲ್‌ನೊಡನೆ ಕೆನ್ನೀಲಿ ಬಣ್ಣವನ್ನು ನೀಡುತ್ತವೆ (ಮೋಲಿಷ್ ಪರೀಕ್ಷೆ). ಕೀಟೋಸುಗಳನ್ನು ರಿಸೋರ್ಸಿನಾಲ್‌ನೊಡನೆ ಕಾಯಿಸಿದಾಗ ಕೆಂಪು ಬಣ್ಣ ಉಂಟಾಗುತ್ತದೆ (ಸೆಲಿವನೋಫ್ ಪರೀಕ್ಷೆ). ಕ್ರೊಮಾಟೊಗ್ರಾಫಿ ವಿಧಾನದಿಂದ ಶರ್ಕರಗಳನ್ನು ಕಂಡುಹಿಡಿಯುವುದು ಉತ್ತಮ. ಅಭಿವೃದ್ಧಿಗೊಳಿಸಿ ತರುವಾಯ ಕಾಗದವನ್ನು ಒಣಗಿಸಬೇಕು ಮತ್ತು ಅನಂತರ ಕಾಗದವನ್ನು ಅನಿಲಿನ್ ಥಾಲೇಟ್ ಅಥವಾ ಬೆಂಜಿಡಿನ್–ಟ್ರೈಕ್ಲೋರೋ ಅಸಿಟಿಕ್ ಆಮ್ಲ ಅಥವಾ ಅಮೋನಿಯಂಯುತ ಸಿಲ್ವರ್ ನೈಟ್ರೇಟುಗಳಿಂದ ತುಂತುರು ಹನಿಗಳ ರೂಪದಲ್ಲಿ ಚಿಮುಕಿಸಿದಾಗ ಸಂಮಿಶ್ರಣದಲ್ಲಿಟ್ಟು ಬೇರ್ಪಟ್ಟ ಶರ್ಕರಗಳಿರುವ ಅಂತ್ಯಸ್ಥಾನಗಳಲ್ಲಿ ವೈಶಿಷ್ಟ್ಯವಾದ ವರ್ಣಗಳು (ಸಿಲ್ವರ್ ಅಭಿಕರ್ಮಕಗಳೊಡನೆ ಕಪ್ಪುಬಣ್ಣ) ಕಂಡುಬರುತ್ತವೆ. ಒಂದು ಶರ್ಕರದ ಇರವನ್ನು ಬೋರೇಟ್ ಅಥವಾ ಇತರ ಬಫರುಗಳಲ್ಲಿ ಅಯಾನೋಫೆರೋಗ್ರಾಮನ್ನು ಮಾಡಿ ದೃಢಪಡಿಸಬಹುದು. ಈ ಎರಡು ವಿಧಾನಗಳಿಂದ ಡಿ ಮತ್ತು ಎಲ್ ಗ್ಲೂಕೋಸುಗಳ ನಡುವೆ ವ್ಯತ್ಯಾಸವನ್ನು ತಿಳಿಯಲಾಗುವುದಿಲ್ಲ. ಪೂರ್ಣವಾಗಿ ಗುರುತಿಸಲು ಸಾಮಾನ್ಯವಾಗಿ ಅದರ ವಿಶಿಷ್ಟ ಸ್ಫಟಿಕರೂಪೀ ವ್ಯುತ್ಪನ್ನವೊಂದರ ಗುಣಗಳನ್ನು ಅಧ್ಯಯನ ಮಾಡಲಾಗುವುದು.

ಹಿಸ್ಟೋಕೆಮಿಕಲ್ ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ಬಳಸುವ ಮತ್ತೊಂದು ಪರೀಕ್ಷಾ ವಿಧಾನವೆಂದರೆ ಪರ್‌ಅಯೋಡಿಕ್ ಆಮ್ಲ–ಷಿಫ್ ಪರೀಕ್ಷೆ. ಈ ಪರೀಕ್ಷೆಗೆ ಪರ್‌ಅಯಾಡಿಕ್ ಆಮ್ಲಕ್ಕೆ ಶರ್ಕರಗಳ ಪಕ್ಕಪಕ್ಕದಲ್ಲಿರುವ ಎರಡು ಸಿಸ್ ಹೈಡ್ರಾಕ್ಸಿಲ್ ಗುಂಪುಗಳನ್ನು ಉತ್ಕರ್ಷಣಗೊಳಿಸುವ ಸಾಮರ್ಥ್ಯವಿದೆಯೆಂಬ ಗುಣ ಆಧಾರ. ಈ ಎರಡರ ನಡುವಣ C-C ಬಂಧನ ವಿದಳನ ಹೊಂದುತ್ತದೆ. ತತ್ಪರಿಣಾಮವಾಗಿ ಉಂಟಾಗುವ ಆಲ್ಡಿಹೈಡ್ ಫುಕ್ಸಿನ್–ಸಲ್ಫ್ಯೂರಸ್ ಆಮ್ಲದೊಂದಿಗೆ ಕೆಂಪುವರ್ಣವನ್ನು ನೀಡುತ್ತದೆ (ಷಿಫನ ಅಭಿಕರ್ಮಕ). ಎಲ್ ಗ್ಲೈಕಾಲುಗಳನ್ನು ಬಹು ಸುಲಭವಾಗಿ ಉತ್ಕರ್ಷಣಗೊಳಿಸಿ ದ್ವಿತೀಯ ಆಲ್ಕೊಹಾಲ್ ಅಂಶದಿಂದ ಫಾರ್ಮಾಲ್ಡಿಹೈಡನ್ನೂ ಉತ್ಪತ್ತಿಮಾಡುವ ಪರ್‌ಅಯಾಡಿಕ್ ಆಮ್ಲದ ವಿಶೇಷ ಗುಣ ಕಾರ್ಬೋಹೈಡ್ರೇಟುಗಳ ರಚನಾಧ್ಯಯನಕ್ಕೆ ಸುಲಭಸಾಧನವಾಗಿದೆ.

ಮೂತ್ರ ಮತ್ತು ಇತರ ದ್ರವಗಳಲ್ಲಿ ಗ್ಲೂಕೋಸನ್ನು ಪತ್ತೆಹಚ್ಚುವ ಕಾರ್ಯ ಗ್ಲೂಕೋಸ್ ಆಕ್ಸಿಡೇಸ್ ಕಿಣ್ವ ಮತ್ತು O- ಟೊಲ್ಯುಡೀನಿನ ಮಿಶ್ರಣದಲ್ಲಿ ಅದ್ದಿದ ಶೋಧಕ ಕಾಗದದಿಂದ ಸುಲಭವಾಗಿದೆ. ಆಕ್ಸಿಡೇಸ್‌ನಿಂದ ಗ್ಲೂಕೋಸ್‌ನ ಉತ್ಕರ್ಷಣ $H_2O_2$ನ ಉತ್ಪತ್ತಿಯಲ್ಲಿ ಅಂತ್ಯಗೊಳ್ಳುತ್ತದೆ. ಇದು O-ಟೊಲ್ಯುಡೀನಿನೊಡನೆ ದಟ್ಟವಾದ ನೀಲಿವರ್ಣವನ್ನು ನೀಡುತ್ತದೆ. ಈ ಕ್ರಿಯೆ ಗ್ಲೂಕೋಸಿಗೆ ವಿಶಿಷ್ಟವಾದುದು. ಏಕೆಂದರೆ ಇತರ ಯಾವುದೇ ಶರ್ಕರ ಗ್ಲೂಕೋಸ್ ಆಕ್ಸಿಡೇಸ್‌ನಿಂದ ಉತ್ಕರ್ಷಣಗೊಳ್ಳುವುದಿಲ್ಲ.

ಪ್ರತ್ಯಾಮ್ಲಗಳೊಡನೆ ಕ್ರಿಯೆಗೊಳಮಾಡಿದ ಅನಂತರ ಹೆಕ್ಸೊಸಮೀನಗಳು ಡೈ ಮೀಥೈಲ್ ಅಮೈನೊಬೆನ್ಸಾಲ್ಡಿಹೈಡಿನೊಂದಿಗೆ ತನ್ನದೇ ಆದ ವೈಶಿಷ್ಟ್ಯಪೂರ್ಣ ವರ್ಣಗಳನ್ನು ನೀಡುತ್ತವೆ.

**ಪರಿಮಾಣಾತ್ಮಕ:** ಸರಳಶರ್ಕರಗಳು ತಾಮ್ರದ ಲವಣವನ್ನು $Cu_2O$ ಆಗಿ ಅಕರ್ಷಿಸಬಲ್ಲವು. $Cu_2O$ವನ್ನು ಅನೇಕ ವಿಧಾನಗಳಿಂದ ನಿರ್ಧರಿಸಬಹುದು. ಶರ್ಕರಗಳು ಫೆರ್ರಿ ಸಯನೈಡ್ ಅಯಾನನ್ನು ಅಪಕರ್ಷಿಸಬಲ್ಲವು. ಇವೆರಡು ಗುಣಗಳ ಮೇಲೆ ಬಹುತೇಕ ಪರಿಮಾಣಾತ್ಮಕ ವಿಧಾನಗಳು ಆಧರಿತವಾಗಿದೆ. ಕ್ರೊಮಾಟೊ ಗ್ರಾಫುಗಳಲ್ಲಿ ಅಭಿವೃದ್ಧಿಗೊಳಿಸಿದ ವರ್ಣಗಳನ್ನು ನಿಷ್ಕಾಸಿಸಿ ಫೊಟೋಮೆಟ್ರಿಕ್ ವಿಧಾನದಿಂದ ನಿರ್ಧಾರಗೊಳಿಸುವುದು ಅತ್ಯುತ್ತಮ ವಿಧಾನ. ಜೈವಿಕ ವಿಶ್ಲೇಷಣೆಯಲ್ಲಿ $^{14}C$ ಯನ್ನು ಪತ್ತೆ ಹಚ್ಚುವ ವಿಧಾನ ವ್ಯಾಪಕವಾಗಿದೆ. ಯೂರೋನಿಕ್ ಆಮ್ಲಗಳನ್ನು ಕ್ರೊಮಾಟೊಗ್ರಾಫಿಕ್ ವಿಧಾನದಿಂದ ನಿರ್ಧರಿಸಬಹುದು. 12% HC1 ಆಮ್ಲದೊಡನೆ ಒಂದು ಮೋಲ್ ಯೂರೋನಿಕ್ ಆಮ್ಲವನ್ನು ಕಾಯಿಸಿದಾಗ 1 ಮೋಲ್ $CO_2$ ಹೊರಬೀಳುವ ಕ್ರಿಯೆ ಪರಿಮಾಣಾತ್ಮಕ ನಿರ್ಧಾರಕ್ಕೆ ಧಾರ. ಇದರಂತೆಯೇ ಯೂರೋನಿಕ್ ಆಮ್ಲಗಳು ಪ್ರಬಲ ಖನಿಜ ಆಮ್ಲಗಳ ಇರವಿನಲ್ಲಿ ಫೀನಾಲಿಕ್ ವಸ್ತುಗಳೊಡನೆ (ಉದಾ: ಫ್ಲೋರೋಗ್ಲುಸಿನಾಲ್) ಕೊಡುವ ವಿಶಿಷ್ಟ ವರ್ಣಕ್ರಿಯೆಗಳೂ ಸಹ ಪರಿಮಾಣಾತ್ಮಕ ನಿರ್ಧಾರಕ್ಕೆ ಉಪಯುಕ್ತವಾಗಿವೆ. (ಎಂ.ಎಸ್‌ಆರ್‌ಐ.)

**ಕಾರ್ಬ್ಯುರೇಟರ್ :** ವಿದ್ಯುತ್ ಕಿಡಿಯಿಂದ ಇಂಧನವನ್ನು ಹೊತ್ತಿಸುವ ಏರ್ಪಾಡುಳ್ಳ ಅಂತರ್ದಹನ ಎಂಜಿನ್ನುಗಳಲ್ಲಿ ಸಿಲಿಂಡರಿನೊಳಕ್ಕೆ ತೈಲೇಂಧನ ಬಾಷ್ಪಶೀಲವನ್ನು ಹಬೆಯನ್ನು ಅಗತ್ಯ ಪ್ರಮಾಣದ ಗಾಳಿಯನ್ನೂ ಉತ್ತಮ ದಹನ ಶೀಲ ಮಿಶ್ರಣವಾಗುವಂತೆ ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸುವ ಸಾಧನ. ಬದಲಾಗುತ್ತಿರಬಹುದಾದ ಎಂಜಿನ್ನಿನ ವೇಗ ಮತ್ತು ಅದು ಹೊರುತ್ತಿರುವ ತೂಕಕ್ಕೆ ಅನುಗುಣವಾಗಿ ಮಿಶ್ರಣದ ಪ್ರಮಾಣವೂ ವ್ಯತ್ಯಾಸವಾಗಿ ಎಲ್ಲ ಸಂದರ್ಭಗಳಲ್ಲೂ ಕ್ಷಿಪ್ರವಾಗಿ ಹೊತ್ತಿಕೊಳ್ಳುವ ಸ್ಫೋಟಕ ಲಕ್ಷಣವನ್ನು ಅದು ಪಡೆದಿರಬೇಕಾಗುತ್ತದೆ. ಅಲ್ಲದೆ ಎಂಜಿನ್ನು ಉತ್ಪಾದಿಸುವ ಸಾಮರ್ಥ್ಯದ ಪ್ರಮಾಣವೂ ಕಾರ್ಬ್ಯುರೇಟರಿನ ಹಿಡಿತದಲ್ಲಿರುತ್ತದೆ.

ಎಂಜಿನ್ನಿಗೆ ಸೇರಿದಂತೆ ಸೂಕ್ತಸ್ಥಳದಲ್ಲಿ ತೋರಿಸಿರುವ ಸರಳ ರಚನೆಯ ಒಂದು ಕಾರ್ಬ್ಯುರೇಟರಿನ ಚಿತ್ರದ ಸಹಾಯದಿಂದ ಅದರ ರಚನೆ ಹಾಗೂ ಕಾರ್ಯವನ್ನು ತಿಳಿದುಕೊಳ್ಳಬಹುದಾಗಿದೆ. ಎತ್ತರದ ಮಟ್ಟದಲ್ಲಿರುವ ಪೆಟ್ರೋಲ್ ಟ್ಯಾಂಕಿನಿಂದ ಸರಬರಾಜು ನಾಳದ ಮೂಲಕ ತೇಲು ಕಕ್ಷದ (ಫ್ಲೋಟ್ ಚೇಂಬರ್) ಕೆಳಗಡೆಯ ರಂಧ್ರದಿಂದ ಅದರ ಒಳಕ್ಕೆ ಪೆಟ್ರೋಲು ನುಗ್ಗುತ್ತದೆ. ಕೋಷ್ಠದೊಳಗಿರುವ ಒಂದು ತೇಲು ಬುರುಡೆ, ಒಳಗೆ ಬಂದ ಪೆಟ್ರೋಲಿನ ಮಟ್ಟಕ್ಕನುಗುಣವಾಗಿ ಮೇಲಕ್ಕೇರಿ ಅಥವಾ ಕೆಳಕ್ಕಿಳಿದು, ತನ್ನ ಮೇಲೆ ಆಸರೆಯಾಗಿರುವ ಮಂಡಿಕೀಲಿನ ತೂಕಗಳ ಸಹಾಯದಿಂದ ಕವಾಟದ ಸೂಜಿಯನ್ನು ರಂಧ್ರದ ಒಳಕ್ಕೆ ತಳ್ಳಿ ಅಥವಾ ಹಿಂದಕ್ಕೆ ಎಳೆದುಕೊಂಡು, ಪೆಟ್ರೋಲಿನ ಹರಿವನ್ನು ನಿಯಂತ್ರಿಸಿ ಕೋಷ್ಠದ ಒಳಗೆ ಯಾವಾಗಲೂ ಒಂದು ಸಮಮಟ್ಟದಲ್ಲಿ ಪೆಟ್ರೋಲು ಇರುವಂತೆ ಕಾಯ್ದುಕೊಳ್ಳುತ್ತದೆ. ಈ ಕೋಷ್ಠದಿಂದ ಹೊರಟ ಒಂದು ಜೆಟ್‌ನಾಳಕ್ಕೆ ಪೆಟ್ರೋಲು ಹರಿದು ಅದರ ಸೂಸುಬಾಯಿಯ ತುದಿಯ ಕೊಂಚವೇ ಕೆಳಗಿನ ಮಟ್ಟಕ್ಕೆ ಬಂದು ನಿಂತಿರುತ್ತದೆ. ಎಂಜಿನ್ನಿನ ಸಿಲಿಂಡರಿನೊಳಕ್ಕೆ ಗಾಳಿಯನ್ನು ಎಳೆದುಕೊಳ್ಳುವ ಕೊಳವೆಯ ನಡುವಿನ ಪ್ರದೇಶದಲ್ಲಿ ಈ ಜೆಟ್‌ನಾಳವಿದ್ದು ಇದರ ಸುತ್ತಲೂ ಕೊಳವೆಯ ಒಳಭಾಗ ಉಬ್ಬಿರುವಂತೆ ಮಾಡಿರುತ್ತದೆ.

ಎಂಜಿನ್ನಿನ ಚೋಷಣ ಘಾತದ (ಸಕ್ಷನ್ ಸ್ಟ್ರೋಕ್) ಸಮಯದಲ್ಲಿ ಸಿಲಿಂಡರಿನೊಳಗಣ ಆಡುಬೆಣೆ ಕೆಳಕ್ಕಿಳಿಯುತ್ತಿದ್ದು ಒಳಗೆ ನಿರ್ವಾತ ಅಥವಾ ಅಲ್ಪವಾತ ಸ್ಥಿತಿಯೇರ್ಪಟ್ಟು, ತೆರೆದಿರುವ ಸೆಳೆತದ ಕವಾಟದ ಮೂಲಕ ಹೊರಗಿನ ಗಾಳಿಯನ್ನು ಈ ಕೊಳವೆಯಿಂದ ಎಳೆದುಕೊಳ್ಳುವಾಗ ಪೆಟ್ರೋಲ್ ಜೆಟ್ಟಿನ ಸುತ್ತಲಿನ ಸಂಕುಚಿತ (ಚೋಕ್) ಮಾರ್ಗದಲ್ಲಿ ಗಾಳಿ ಹರಿದು ಬರುತ್ತಿರುವಾಗ ಅದರ ವೇಗ ಹೆಚ್ಚಿ ಸ್ಥಳೀಯವಾಗಿ ಒತ್ತಡ ಕಡಿಮೆಯಾಗುತ್ತದೆ. ಇದರಿಂದಾಗಿ ಸೂಸುಬಾಯಿಯ ಮೂಲಕ ಪೆಟ್ರೋಲ್ ಉಕ್ಕಿ ಹೊರಬರುತ್ತದೆ. ಹಾಗೆಯೇ ಕೊಂಚ ಭಾಗ ಆವಿಯಾಗಿ ಮೋಡದಂತೆ ಗಾಳಿಯೊಡನೆ ಬೆರೆತುಕೊಂಡು ಸಿಲಿಂಡರಿನೊಳಕ್ಕೆ ಪ್ರವೇಶಿಸುತ್ತದೆ. ಈ ಮಾರ್ಗದಲ್ಲಿ ಮತ್ತು ಸಿಲಿಂಡರಿನೊಳಕ್ಕೆ ಸೇರುವಾಗ ಸುತ್ತುವರಿದ ಬಿಸಿ ಪ್ರದೇಶದಿಂದಾಗಿ ಪೆಟ್ರೋಲ್ ಪೂರ್ತಿ ಆವಿಯಾಗಿ ಗಾಳಿಯೊಡನೆ ಸ್ಫೋಟಕ ಮಿಶ್ರಣವಾಗುತ್ತದೆ.

ಈ ಮಿಶ್ರಣ ಹೋಗುವ ಕೊಳವೆ ಮಾರ್ಗದಲ್ಲಿ ಒಂದು ನಿಯಂತ್ರಕ ಕವಾಟವಿದ್ದು (ಥ್ರಾಟಲ್ ವಾಲ್ವ್) ಅದರ ಚಾಲನೆಯಿಂದ ಒಳಹೋಗುವ ಮಿಶ್ರಣದ ಒಟ್ಟು ಪ್ರಮಾಣವನ್ನು




**ಚಿತ್ರ 1 ಎಂಜಿನ್ನಿಗೆ ಸೇರಿದಂತೆ ಇರುವ ಕಾರ್ಬ್ಯುರೇಟರ್ : 1 ಪೆಟ್ರೋಲ್ ಟ್ಯಾಂಕು, 2 ಪೆಟ್ರೋಲನ್ನು ಒದಗಿಸುವ ನಾಳ, 3. ಕಾರ್ಬ್ಯುರೇಟರ್, 4 ಗಾಳಿಯ ಒಳ ಪ್ರವೇಶ, 5 ಜೆಟ್‌ನಾಳ, 6 ಎಂಜಿನ್ ಥ್ರಾಟಲ್, 7. ಪ್ರವೇಶ ಕವಾಟ, 8 ಒಳ ಕೋಷ್ಟ, 9 ನುಕು ಸರಳು, 10 ತೂಗು ಪಟ್ಟೆ, 11 ನಿಷ್ಕಾಸ ಕವಾಟ, 12 ಶಬ್ದರೋಧಕ, 13 ನಿಷ್ಕಾಸ, 14 ಕಿಡಿಬೆಣೆ, 15 ತಂಪುಮಾಡುವ ಸಲಕರಣೆಗಳು, 16 ಉಚ್ಚಕರ್ಷಣ ತಂತಿ, 17 ಸಿಲಿಂಡರ್, 18 ಕೊಂತ, 19 ಮ್ಯಾಗ್ನೆಟೊ, 20 ಗಿಯರ್ ನಿಷ್ಕಾಸ ಚಾಚುಭಾಗ, 21 ಕ್ರ್ಯಾಂಕ್ ಪೆಟ್ಟಿಗೆ, 22 ವಕ್ರದಂಡ, 23 ನಡುವಿನ ಚಾಚುಭಾಗ, 24 ಉರುಳಿ, 25 ಕ್ರ್ಯಾಂಕ್, 26 ಕೂಡುಸರಳು, 27 ಎಣ್ಣೆಕುಳಿ**

ಹೆಚ್ಚು ಕಡಿಮೆ ಮಾಡಬಹುದಾಗಿದೆ. ಹೀಗೆ ಎಂಜಿನ್ನಿನ ಉತ್ಪಾದಿತ ಸಾಮರ್ಥ್ಯ ನಿಯಂತ್ರಿಸುವ ಈ ಕವಾಟ, ಮೋಟಾರು ಬಂಡಿಯ ಎಂಜಿನ್ನಿನ ಚಾಲಕನ ವೇಗೋತ್ಕರ್ಷಕ ಜೋಡಣೆಯ (ಏಕ್ಸಲರೇಟರ್) ಮೂಲಕ ಆಡಿಸುವಂತಿರುತದೆ ಅಥವಾ ಸ್ಥಿರ ಎಂಜಿನ್ನಿನಲ್ಲಾದರೆ ವೇಗ ನಿಯಂತ್ರಕದ ಹಿಡಿತದಲ್ಲಿರುತ್ತದೆ.

ಈಗ ಸ್ಫೋಟಕ ಮಿಶ್ರಣದ ಆಂತರಿಕ ಪ್ರಮಾಣ ಮತ್ತು ಅದರ ನಿರ್ಧಾರಕ ಲಕ್ಷಣಗಳನ್ನು ವಿವೇಚಿಸಬಹುದಾಗಿದೆ. ಇಂಥ ಎಂಜಿನ್ನಿನಲ್ಲಿ ಪೆಟ್ರೋಲೇ ಅಲ್ಲದೆ ಸಮಾನ ಲಕ್ಷಣಗಳುಳ್ಳ ಆಲ್ಕೊಹಾಲ್, ಬೆನ್ಸಾಲ್, ಸೀಮೆಎಣ್ಣೆ ಇಂಥ ಇತರ ಇಂಧನಗಳನ್ನು ಬಳಸಬಹುದಾದರೂ ಪೆಟ್ರೋಲನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ರಾಸಾಯನಿಕ ರೀತ್ಯಾ ಅದು ಸರಿಯಾದ ಸ್ಫೋಟಕ ಮಿಶ್ರಣವಾಗಬೇಕಾದರೆ, ಇಂಧನ ಹಾಗೂ ಗಾಳಿಯ ಪರಸ್ಪರ ಪ್ರಮಾಣ ತೂಕದ ರೀತಿಯಲ್ಲಿ ಸುಮಾರು 1ಕ್ಕೆ 15ರಷ್ಟಿರಬೇಕಾಗುತ್ತದೆ. 1ಕ್ಕೆ ಸುಮಾರು 8ರಷ್ಟುಳ್ಳ ಸಮೃದ್ಧ ಮಿಶ್ರಣದಿಂದ ಹಿಡಿದು ಒಂದಕ್ಕೆ ಸುಮಾರು 20ರಷ್ಟಿರುವ ತೆಳುವಾದ ಪ್ರಮಾಣದವರೆಗೂ ಅದಕ್ಕೆ ಸ್ಫೋಟಕ ಗುಣವಿರುವುದಾದರೂ ಬಳಕೆಯಲ್ಲಿ ಎಂಜಿನ್ನನ್ನು ತಣ್ಣಗೆ ನಿಂತ ಸ್ಥಿತಿಯಿಂದ ತೊಡಗಿಸಬೇಕಾದರೆ ಮತ್ತು ನಿಧಾನವಾಗಿ ಓಡಿಸುತ್ತಿರುವಾಗ ಸುಮಾರು 1:12 ರ ಪ್ರಮಾಣವೂ ವೇಗವಾಗಿ ಓಡಿಸುತ್ತಿದ್ದಾಗ ಮಿತವ್ಯಯದ ಅಗತ್ಯಕ್ಕೆ 1:17ರ ಪ್ರಮಾಣವೂ ಅಧಿಕ ಸಾಮರ್ಥ್ಯದ ಆವಶ್ಯಕತೆ ಇದ್ದಾಗ ಮತ್ತೆ 1:12ರ ಸಮೃದ್ಧ ಪ್ರಮಾಣವೂ ಇರಬೇಕಾಗುತ್ತದೆ. ಈ ಕಾರ್ಯವನ್ನು ಸಾಧಿಸುವ ಶಾಣ ಕಾರ್ಬ್ಯುರೇಟರ್‌ಗೆ ಇರಬೇಕು.

ಹಿಂದೆ ವಿವರಿಸಿದ ಸರಳರಚನೆಯ ಕಾರ್ಬ್ಯುರೇಟರ್ ಒಂದೇ ವೇಗದಲ್ಲಿ ಓಡುತ್ತಿರುವ ಸ್ಥಿರ ಎಂಜಿನ್ನಿಗೆ ಮಾತ್ರ ಸರಿಹೊಂದುವುದಾಗಿದ್ದು ಇತರ ಸಂದರ್ಭಗಳಲ್ಲಿ ಮೇಲೆ ಸೂಚಿಸಿದ ರೀತಿಯಲ್ಲಿ ನಿರ್ವಹಿಸುವುದರ ಬದಲು ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸುವುದನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಚೋಕ್ ನಾಳದಲ್ಲಿನ ಗಾಳಿಯ ವೇಗಕ್ಕೂ ಪೆಟ್ರೋಲಿನ ಉಕ್ಕುವಿಕೆಯನ್ನು ಪ್ರಚೋದಿಸುವ ಒತ್ತಡ ಇಳಿತಕ್ಕೂ ಇರುವ ಪರಸ್ಪರ ಸಂಬಂಧ.

ನಿಯಂತ್ರಕ ಕವಾಟವನ್ನು ತೆರೆದಂತೆಲ್ಲ ಒಳ ಹೋಗುವ ಗಾಳಿಯ ಪ್ರಮಾಣ ಹೆಚ್ಚುತ್ತದೆ. ಪೆಟ್ರೋಲಿನ ಉಕ್ಕುವಿಕೆ ಈ ಹೆಚ್ಚಳಕ್ಕೆ ಸಮಾನ ರೀತಿಯಾಗಿರುವುದರ ಬದಲು ಸುಮಾರು ಅದರ ವರ್ಗಪ್ರಮಾಣಕ್ಕೆ ಅನುಗುಣವಾಗುವುದರಿಂದ ಒಂದು ಗೊತ್ತಾದ ವೇಗದಲ್ಲಿ ಸರಿಪ್ರಮಾಣದ ಮಿಶ್ರಣವನ್ನು ಒದಗಿಸುವ ಕಾರ್ಬ್ಯುರೇಟರ್, ಎಂಜಿನ್ನಿನ ವೇಗ ಹೆಚ್ಚಿದ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಪೆಟ್ರೋಲನ್ನು ಒದಗಿಸಿ ಅತಿ ಸಮೃದ್ಧ ಮಿಶ್ರಣವನ್ನೂ ತೊಡಗಿಸುವಂಥ ಕಡಿಮೆ ವೇಗದ ಸಂದರ್ಭದಲ್ಲಿ ಅತಿ ಕಡಿಮೆ ಪೆಟ್ರೋಲನ್ನು ಉಕ್ಕಿಸಿ ಬಹಳ ತೆಳುವಾದ ಮಿಶ್ರಣವನ್ನೂ ಕೊಡುತ್ತದೆ.

ಎಲ್ಲ ಆಧುನಿಕ ಕಾರ್ಬ್ಯುರೇಟರುಗಳೂ ಈ ಮಾನ್ಯತೆಯನ್ನು ಒಂದಲ್ಲ ಒಂದು ರೀತಿ ಸರಿಪಡಿಸುವ ಪ್ರಯತ್ನಗಳಾಗಿರುವಂತೆ ಅಷ್ಟೇ ವೈವಿಧ್ಯದಿಂದಲೂ ಕೂಡಿವೆ. ಇದೇ ಅಲ್ಲದೆ ಸರಳ ಕಾರ್ಬ್ಯುರೇಟರಿನ ಇನ್ನೂ ಕೆಲವು ನ್ಯೂನತೆಗಳೆಂದರೆ ಸ್ವಲ್ಪ ತರೆದಿರುವ ನಿಯಂತ್ರಕ ಕವಾಟವನ್ನು ತತ್‌ಕ್ಷಣವೇ ಪೂರ್ತಿ ತೆರೆದು ಎಂಜಿನ್ನನ್ನು ತ್ವರಿತಗೊಳಿಸಲು ಯತ್ನಿಸಿದಾಗ, ದ್ರವದ ಜಡತ್ವದಿಂದಾಗಿ ಆ ಕ್ಷಣಕ್ಕೇ ಅಗತ್ಯವಾದ ಅಧಿಕ ಪ್ರಮಾಣದಲ್ಲಿ ಪೆಟ್ರೋಲ್ ಬರದಿರುವುದು; ಚಳಿಗಾಲದಲ್ಲಿ ಒಂದು ನಿರ್ದಿಷ್ಟ ವೇಗಕ್ಕೆ ಸರಿಹೊಂದಿಸಿ ಇಟ್ಟಿರುವ ಕಾರ್ಬ್ಯುರೇಟರ್ ಬೇಸಗೆಯಲ್ಲಿ ಅದೇ ವೇಗಕ್ಕೆ ಸಮೃದ್ಧ ಮಿಶ್ರಣವನ್ನು ಕೊಡುವುದು; ಭೂಮಟ್ಟದಿಂದ ಎತ್ತರಕ್ಕೆ ಹೋದಂತೆ ವಾಯುವಿನ ಒತ್ತಡ ಕಡಿಮೆಯಾದಾಗ ಗಾಳಿ ತೆಳುವಾದಂತೆ ಮಿಶ್ರಣ ಅತಿ ಸಮೃದ್ಧವಾಗಿ ಎಂಜಿನ್ನಿನ ಬಲ ಕ್ಷೀಣಗೊಳ್ಳುವುದರ ಜೊತೆಗೆ ಇಂಧನ ದುಂದು ವ್ಯರ್ಥವಾಗುವುದು (ಪರ್ವತ ಪ್ರದೇಶದ ಮೋಟಾರು ಯಾನ ಹಾಗೂ ವಿಮಾನ ಯಾನದಲ್ಲಿ ಇದು ಮುಖ್ಯವಾಗಿ ಗಮನಾರ್ಹವಾದದ್ದು). ಕಾರ್ಬ್ಯುರೇಟರ್ ಇಂಥ ಎಲ್ಲ ಸಂದರ್ಭಗಳಲ್ಲೂ ಸರಿಯಾಗಿ ಕಾರ್ಯ ನಿರ್ವಹಿಸುವಂತಿದ್ದು ಅಗತ್ಯವಾದ ಹೊಂದಾಣಿಕೆ ಸಜ್ಜುಗಳು ಸರಳ ರಚನೆಯವಾಗಿ ವಿವಿಧ ಭಾಗಗಳು ದೃಢವಾಗಿಯೂ ಸುಗಮ್ಯವಾಗಿಯೂ ದುರಸ್ತಾಗಿಡಲು ಸುಲಭವಾಗಿಯೂ ಇರಬೇಕಾಗುತ್ತದೆ.

ಪೆಟ್ರೋಲ್ ಜೆಟ್ಟಿನ ಸೂಸುಬಾಯಿಯಲ್ಲಿ ಒಂದು ಸೂಜಿ ಕವಾಟವನ್ನಿಡುವುದರಿಂದ ಮತ್ತು ಅಥವಾ ಎಂಜಿನ್ನಿನ ಗಾಳಿ ಸೆಳೆಯುವ ನಳಿಕೆಯ ಹೊರದ್ವಾರದಲ್ಲಿ ಹೆಚ್ಚು ಕಡಿಮೆ ಮಾಡಬಹುದಾದ ಕಂಡಿಯನ್ನಿಡುವುದರಿಂದ ವಿವಿಧ ಸಂದರ್ಭಗಳಿಗೆ ಮಿಶ್ರಣವನ್ನು ಸರಿಹೊಂದಿಸುವ ಏರ್ಪಾಡು ಪೂರ್ತಿ ತೃಪ್ತಿದಾಯಕವಲ್ಲದಿದ್ದರೂ ಅತಿ ಸುಲಭವಾಗಿದ್ದು, ಕೆಲವು ಸ್ಥಿರ ಎಂಜಿನ್ನುಗಳಲ್ಲೂ (ಸೂಕ್ತ ತಂತಿ ಹಿಡಿಕೆಗಳೊಡನೆ) ಮೋಟಾರ್ ಸೈಕಲ್ಲಿನಂಥ ಸಾಮಾನ್ಯ ಸಾಮರ್ಥ್ಯದ ಎಂಜಿನ್ನುಗಳಲ್ಲೂ ಬಳಕೆಯಲ್ಲಿವೆ.

ಕುಳಿ ಮಾದರಿಯ (ವೆಲ್ ಟೈಪ್, ಅಂತರ್ಗತ ಜೆಟ್ ಉಳ್ಳ (ಸಬ್‌ಮರ್ಜ್ಡ್ ಜೆಟ್) ಕಾರ್ಬ್ಯುರೇಟರ್ ಒಂದರ ತತ್ತ್ವಶಃ ನಿರೂಪಣೆಯನ್ನು–ಅದರ ಸರಳ ಚಿತ್ರದೊಡನೆ (ಚಿತ್ರ




**ಚಿತ್ರ 2 ಕುಳಿ ಮಾದರಿಯ ಕಾರ್ಬ್ಯುರೇಟರ್ : 1 ಮಂದ ನಡೆಯಿಂದ ಸಾಗಲು ನಾಳ, 2 ಥ್ರಾಟಿಲ್, 3, 4 ಜೆಟ್‌ಕೊಳವೆಗಳು, 5 ಫ್ಲೋಟ್ ಮಂದಿರ, 6 ಕಂಡಿ, 7 ಕುಳಿ**

2) ಪರಿಶೀಲಿಸುವುದರಿಂದ–ರಚನೆಯಲ್ಲಿ ಅಳವಡಿಸುತ್ತಿರುವ ಮಾರ್ಪಾಡುಗಳನ್ನು ಸೂಚಕವಾಗಿ ತಿಳಿಯಬಹುದು. ಇಲ್ಲಿ ಸರಳ ಕಾರ್ಬ್ಯುರೇಟರಿನ ಪ್ರಧಾನ ಜೆಟ್ಟಿನ ಜೊತೆಗೆ ಪ್ರತ್ಯೇಕವಾಗಿ ಅಥವಾ ಸಮಾನ ಕೇಂದ್ರಕವಾಗಿ ಪರಿಹಾರಕ ಜೆಟ್ ಒಂದನ್ನು ಉಪಯೋಗಿಸಿದೆ. ಇದಕ್ಕೆ ಇಂಧನದ ಸರಬಾರಾಜು ವಾಯುಮಂಡಲಕ್ಕೆ ತೆರೆದಿರುವ ಒಂದು ಕುಳಿಯಿಂದ (ಈ ಕುಳಿಗೆ ಪೆಟ್ರೋಲ್ ಬರುವುದು ತೇಲು ಕಕ್ಷದಿಂದ) ಒಂದು ಸಣ್ಣ ರಂಧ್ರದ ಮೂಲಕ ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ. ನಿಗದಿಯಾದ ವೇಗದಲ್ಲಿ ಎಂಜಿನ್ನು ಓಡುತ್ತಿರುವಾಗ ಈ ಎರಡೂ ಜೆಟ್‌ಗಳಿಂದ ಒದಗುವ ಪೆಟ್ರೋಲು ಚೋಕ್ ನಳಿಕೆಯ ಗಾಳಿಯೊಡನೆ ಬೆರೆತು ಸರಿಮಿಶ್ರಣವನ್ನು ಕೊಡುತ್ತದೆ. ಈಗ ಹಿಸುಕುಕವಾಟವನ್ನು ತೆರೆಯುವುದರಿಂದ ಚೋಕ್ ನಳಿಗೆಯಲ್ಲಿ ಹಾಯುವ ಗಾಳಿಯ ವೇಗ ಹೆಚ್ಚಾಯಿತೆನ್ನಿ. ಹಿಂದೆ ತಿಳಿಸಿರುವಂತೆ ಪ್ರಧಾನ ಜೆಟ್ಟಿನಲ್ಲಿ ಪೆಟ್ರೋಲ್ ಸುಮಾರು ವರ್ಗ ಪ್ರಮಾಣದಲ್ಲಿ ಹೆಚ್ಚಾಗುವುದರಿಂದ ಮಿಶ್ರಣವನ್ನು ಸಮೃದ್ಧಗೊಳಿಸುತ್ತದೆ. ಅದೇ ಸಮಯದಲ್ಲಿ ಪರಿಹಾರಕ ಜೆಟ್ಟಿನ ಮೇಲೂ ಸೆಳೆತ ಹೆಚ್ಚಾಗುವುದಾದರೂ ಅದಕ್ಕೆ ಕುಳಿಯಲ್ಲಿ ಒದಗುತ್ತಿರುವ ಪೆಟ್ರೋಲ್ ನಿರ್ದಿಷ್ಟ ಪ್ರಮಾಣದಲ್ಲಿ ಪ್ರಾಪ್ತವಾಗದ್ದರಿಂದ ಅದರ ಸರಬರಾಜು ಕ್ಷೀಣಿಸುತ್ತದೆ. ಈ ರೀತಿ ಅದು ಪರಿಹಾರಕವಾಗಿ ವರ್ತಿಸಿ ಹೆಚ್ಚಿದ ವೇಗದಲ್ಲಿ ಒಟ್ಟು ಮಿಶ್ರಣ ಸಮೃದ್ಧವಾಗದೆ ಸರಿ ಪ್ರಮಾಣದಲ್ಲಿರುವಂತೆ ಮಾಡುತ್ತದೆ. ವೇಗ ಇನ್ನೂ ಹೆಚ್ಚಿದಾಗ ಪರಿಹಾರಕ ಜೆಟ್ಟು ಪೆಟ್ರೋಲಿನ ಬದಲು ಅಗತ್ಯವಾದ ಹೆಚ್ಚಿನ ಗಾಳಿಯನ್ನೇ ಸೇರಿಸಲೂಬಹುದು. ಇದಲ್ಲದೆ ಕುಳಿಯಿಂದ ಹೊರಟ ಇನ್ನೊಂದು ಉಪನಳಿಗೆ ನಿಯಂತ್ರಕ ಕವಾಟದ ಮುಚ್ಚಿದ ಸ್ಥಾನದ ಸ್ವಲ್ಪ ಮೇಲ್ಮಟ್ಟದಲ್ಲಿ ಎಂಜಿನ್ನಿನ ಪ್ರವೇಶ ನಳಿಗೆಗೆ ಸೇರಿರುವುದನ್ನು ಕಾಣಬಹುದು. ಎಂಜಿನ್ನನ್ನು ತೊಡಗಿಸುವಾಗ ಮತ್ತು ತೂಕರಹಿತವಾಗಿ ಎಂಜಿನ್ನು ನಿಧಾನವಾಗಿ ಓಡುವಾಗ ಇದು ಉಪಯೋಗಕ್ಕೆ ಬರುತ್ತದೆ. ಇಂಥ ಸಂದರ್ಭದಲ್ಲಿ ನಿಯಂತ್ರಕ ಕವಾಟ ಹೆಚ್ಚು ಕಡಿಮೆ ಮುಚ್ಚಿದಂತೆಯೇ ಇದ್ದು ಚೋಕ್ ನಳಿಗೆಯಲ್ಲಿನ ಕ್ಷೀಣವಾಗಿರುವ ಗಾಳಿಯ ವೇಗ ಪ್ರಧಾನ ಜೆಟ್ಟಿನಿಂದಾಗಲೀ ಪರಿಹಾರಕ ಜೆಟ್ಟಿನಿಂದಾಗಲೀ ಇಂಧನವನ್ನು ಸೆಳೆಯಲು ಅಸಮರ್ಥವಾಗಿರುತ್ತದೆ. ಆದರೆ ಚಿಕ್ಕದಾದ ಈ ಉಪನಾಳದಲ್ಲಿ ಸೆಳೆತ ಸಾಕಷ್ಟಿದ್ದು ತುಂಬಿದ ಕುಳಿಯಿಂದ ಅಗತ್ಯ ಪ್ರಮಾಣದ ಪೆಟ್ರೋಲನ್ನು ಸೆಳೆದುಕೊಂಡು ಸೂಕ್ತವಾದ ಸಮೃದ್ಧ ಮಿಶ್ರಣವನ್ನು ಒದಗಿಸಲು ಇದು ಸಮರ್ಥವಾಗುತ್ತದೆ. ನಿಯಂತ್ರಕ ಕವಾಟ ಕ್ರಮೇಣ ತೆರೆದಂತೆ ತಾನಾಗಿಯೇ ಇದರ ಕಾರ್ಯ ನಿಂತುಹೋಗುತ್ತದೆ.

ಮೋಟಾರು ಎಂಜಿನ್ನಿನ ಕಾರ್ಬ್ಯುರೇಟರುಗಳಲ್ಲಿ ಕ್ಷಿಪ್ರ ವೇಗವೃದ್ಧಿಗೆ ಒಂದು ತ್ವರಿತ ಪಂಪು (ಆಕ್ಸಲರೇಷನ್ ಪಂಪ್) ವಿಮಾನ ಎಂಜಿನ್ನಿನ ಕಾರ್ಬ್ಯುರೇಟರುಗಳಲ್ಲಿ ಔನ್ನತ್ಯಕ್ಕೆ ಅನುಗುಣವಾಗಿ ಮಿಶ್ರಣವನ್ನು ನಿಯಂತ್ರಿಸುವ ಏರ್ಪಾಡು, ಏರುತಗ್ಗಿನ ಗುಡ್ಡ ಪ್ರದೇಶಗಳಲ್ಲಿ ಓಡಾಡುವ ವಾಹನದ ಎಂಜಿನ್ನುಗಳಲ್ಲಿ ಪಕ್ಕದಲ್ಲಿ ಪ್ರತ್ಯೇಕವಾಗಿರುವ ಬದಲು ಜೆಟ್ಟಿನ ನಳಿಗೆಯ ಸಕೇಂದ್ರಿಯವಾಗಿರುವ ವಲಯಾಕಾರದ ತೇಲುಕಕ್ಷ, ಇವನ್ನು ಕಾರ್ಬ್ಯುರೇಟರಿನ ಇತರ ಮಾರ್ಪಾಡುಗಳಲ್ಲಿ ಹೆಸರಿಸಬಹುದು.

ವಿಮಾನದ ಹಾಗೂ ಚಳಿ ಪ್ರದೇಶಗಳಲ್ಲಿನ ಎಂಜಿನ್ ಕಾರ್ಬ್ಯುರೇಟರುಗಳು ಎದುರಿಸಬೇಕಾದ ಇನ್ನೊಂದು ಸಮಸ್ಯೆಯೆಂದರೆ ಹಿಮಗಟ್ಟುವಿಕೆ (ಐಸಿಂಗ್). ಪೆಟ್ರೋಲ್ ದ್ರವ ಎಂಜಿನ್ನಿನ ಪ್ರವೇಶ ನಳಿಗೆಯಲ್ಲಿ ಆವಿಯಾಗಿ ಪರಿವರ್ತಿತವಾದಾಗ ಸ್ಥಳೀಯವಾಗಿ ತಂಪನ್ನುಂಟುಮಾಡುತ್ತದೆಯಷ್ಟೆ. ವಾತಾವರಣದ ಉಷ್ಣತೆ ಸಾಕಷ್ಟು ಕಡಿಮೆಯಿರುವಾಗ ಇದರ ದೆಸೆಯಿಂದ ಗಾಳಿಯಲ್ಲಿರುವ ತೇವ ಹೆಪ್ಪುಗಟ್ಟಿ ಕವಾಟಗಳ ಬಳಿ ತಡೆಯಾಗಿ ತೊಂದರೆಯುಂಟುಮಾಡುವ ಸಂಭವವಿರುತ್ತದೆ. ನಿಯಂತ್ರಕ ಕವಾಟ ಭಾಗಶಃ ತೆರೆದಿರುವಾಗ ಗಾಳಿ ವಿಸ್ತರಿಸುವುದರಿಂದಲೂ ಇಂಥ ತಂಪು ಉಂಟಾಗುತ್ತದೆ. ಪ್ರವೇಶ ನಳಿಗೆಯನ್ನು ಬೆಚ್ಚಗಿಡುವುದರಿಂದಲೂ ಇಂಧನಕ್ಕೆ ಕೆಲವು ಹಿಮವಿರೋಧಿ ರಾಸಾಯನಿಕಗಳನ್ನು ಬೆರಸುವುದರಿಂದಲೂ ಅಂತಃಕ್ಷೇಪಣ ಕಾರ್ಬ್ಯುರೇಟರುಗಳ ಬಳಕೆಯಿಂದಲೂ ಇದಕ್ಕೆ ಪರಿಹಾರ ಕಂಡುಕೊಳ್ಳಲಾಗಿದೆ. (ಕೆ.ವಿ.ಎಸ್.)

**ಕಾರ್ಮಿಕ ಆವರ್ತ :** ಒಂದು ನಿಶ್ಚಿತ ಕಾಲಾವಧಿಯಲ್ಲಿ ಒಂದು ಕೈಗಾರಿಕಾ ಸಂಸ್ಥೆಯಲ್ಲಿ ಕಾರ್ಮಿಕರು ಹೊಸದಾಗಿ ಸೇರುವುದರಿಂದ ಮತ್ತು ಮೊದಲೇ ಸೇರಿದ್ದವರಲ್ಲಿ ಕೆಲವರು ಬಿಟ್ಟುಹೋಗುವುದರಿಂದ ಸಂಸ್ಥೆಯ ಒಟ್ಟು ಕಾರ್ಮಿಕ ಬಲದಲ್ಲಿ ಉಂಟಾಗುವ ಬದಲಾವಣೆ (ಲೇಬರ್ ಟರ್ನೋವರ್). ಯಾವುದಾದರೂ ಕಾರಣದಿಂದ ಕಾರ್ಮಿಕರು ಒಂದು ಸಂಸ್ಥೆಯನ್ನು ಬಿಟ್ಟು ಬೇರೆ ಸಂಸ್ಥೆಗಳನ್ನು ಸೇರುವುದು ಸಾಮಾನ್ಯ. ಆ ಸಂಸ್ಥೆ ಯಥಾ ಕ್ರಮದಲ್ಲಿ ಹೊಸಬರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿರುತ್ತದೆ. ಬಿಟ್ಟು ಹೋದವರ ಸ್ಥಳದಲ್ಲಿ ಇತರರ ನೇಮಕವಾಗುತ್ತಿರುತ್ತದೆ. ಒಂದು ನಿಶ್ಚಿತ ಅವಧಿಯಲ್ಲಿ ಸಂಸ್ಥೆಯಲ್ಲಿದ್ದ ಕಾರ್ಮಿಕರ ಸರಾಸರಿ ಸಂಖ್ಯೆಗೂ ಆ ಅವಧಿಯಲ್ಲಿ ಮೇಲ್ಕಂಡ ರೀತಿಯಲ್ಲಿ ಆದ ಬದಲಾವಣೆಗಳಿಗೂ ಇರುವ ಸಂಬಂಧವನ್ನು ಅಳೆಯುವ ಪ್ರಯತ್ನ ನಡೆದಿದೆ. ಈ ಸಂಬಂಧವಾಗಿ ಪರಿಗಣನೆಗೆ ಬರತಕ್ಕ ಅಂಶಗಳು ಮೂರು: ಕಾರ್ಮಿಕರ ಸೇರ್ಪಡೆ (ಅಕ್ಸೆಷನ್), ಬೇರ್ಪಡೆ (ಸೆಪರೇಷನ್) ಮತ್ತು ಬಿಟ್ಟವರ ಸ್ಥಾನದಲ್ಲಿ ಮಾಡಿಕೊಳ್ಳಲಾದ ನೇಮಕ ಅಥವಾ ಪ್ರತಿಸ್ಥಾಪನೆ (ರೀಪ್ಲೇಸ್‌ಮೆಂಟ್). ಕಾರ್ಮಿಕರ ಬೇರ್ಪಡೆ ಅನೇಕ ಬಗೆಗಳಲ್ಲಿ ಸಂಭವಿಸುತ್ತದೆ. ರಾಜೀನಾಮೆ, ವಜಾ, ತಾತ್ಕಾಲಿಕ ವಿಸರ್ಜನೆ (ಲೇ ಆಫ್), ನಿವೃತ್ತಿ, ಸಾವು–ಇವೇ ಮುಂತಾದ ಕಾರಣಗಳಿಂದ ಕಾರ್ಮಿಕರು ಸಂಸ್ಥೆಯಿಂದ ಹೊರಹೋಗಬಹುದು. ಹೀಗೆ ಸಂಸ್ಥೆಯನ್ನು ಬಿಟ್ಟ ಕಾರ್ಮಿಕರ ಸ್ಥಾನಗಳಲ್ಲಿ ಹೊಸ ಕಾರ್ಮಿಕರು ನೇಮಿಸಲ್ಪಡುತ್ತಾರೆ ಅಥವಾ ಹಳೆಯ ಕಾರ್ಮಿಕರಲ್ಲೇ ಕೆಲವರು

ಪುನರ್‌ನೇಮಿಸಲ್ಪಡಬಹುದು. ಇದು ಕಾರ್ಮಿಕರ ಪ್ರತಿಸ್ಥಾಪನೆ ಮೇಲೆ ನಮೂದಿಸಿರುವ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಆವರ್ತ ದರವನ್ನು ಮೂರು ರೀತಿಯಾಗಿ ಅಳೆಯಬಹುದು. ಒಂದು ನಿಶ್ಚಿತ ಅವಧಿಯಲ್ಲಿ ಸಂಸ್ಥೆಯಲ್ಲಿದ್ದ ಕಾರ್ಮಿಕರ ಸರಾಸರಿ ಸಂಖ್ಯೆಗೂ ಸೇರ್ಪಡೆಯಾದ ಸಂಖ್ಯೆಗೂ ಇರುವ ಶೇಕಡ ಪ್ರಮಾಣವನ್ನು ಕಂಡುಹಿಡಿಯುವುದು ಒಂದು ಬಗೆ. ಅದು ಹೀಗೆ :

ಕಾರ್ಮಿಕ ಆವರ್ತ ದರ (ಸೇರ್ಪಡೆ) $= \frac{A \times 100}{E}$

(A: ಸೇರ್ಪಡೆಗಳ ಸಂಖ್ಯೆ: E: ಕಾರ್ಮಿಕರ ಸರಾಸರಿ ಸಂಖ್ಯೆ)

ಕಾರ್ಮಿಕರ ಸರಾಸರಿ ಸಂಖ್ಯೆಗೂ ಬೇರ್ಪಡೆಗಳ ಸಂಖ್ಯೆಗೂ ಇರುವ ಶೇಕಡ ಪ್ರಮಾಣ ಹೀಗೆ:

ಕಾರ್ಮಿಕ ಆವರ್ತ ದರ (ಬೇರ್ಪಡೆ) $= \frac{S \times 100}{E}$

(S: ಬೇರ್ಪಡೆಗಳ ಸಂಖ್ಯೆ)

ಬಿಟ್ಟವರ ಸ್ಥಾನದಲ್ಲಿ ಮಾಡಿಕೊಳ್ಳಲಾದ ನೇಮಕಗಳ ಸೂಚ್ಯಂಕವಿದು :

ಕಾರ್ಮಿಕ ಆವರ್ತ ದರ (ಪ್ರತಿಸ್ಥಾಪನ) $= \frac{R \times 100}{E}$

(R: ಪ್ರತಿಸ್ಥಾಪನಗಳ ಸಂಖ್ಯೆ)

ಕಾರ್ಮಿಕ ಆವರ್ತಕ್ಕೂ ಕಾರ್ಮಿಕ ಚಲನಕ್ಕೂ (ಮೊಬಿಲಿಟಿ) ಸಂಬಂಧವುಂಟು. ಕಾರ್ಮಿಕರ ಚಲನದಲ್ಲಿ ವ್ಯತ್ಯಾಸ ಉಂಟಾದಾಗ ಕಾರ್ಮಿಕ ಆವರ್ತದಲ್ಲಿ ಅದೇ ಬಗೆಯ ವ್ಯತ್ಯಾಸ ಉಂಟಾದರೂ ಇವೆರಡರ ವ್ಯತ್ಯಾಸ ದರಗಳೂ ಒಂದೇ ಆಗಿರಬೇಕಾಗಿಲ್ಲ. ಕಾರ್ಮಿಕರು ಒಂದು ಸಂಸ್ಥೆಯನ್ನು ಬಿಟ್ಟು ಮತ್ತೊಂದು ಸಂಸ್ಥೆಗೆ ಹೋಗುವುದನ್ನು, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೊಸ ಉದ್ಯೋಗಾನ್ವೇಷಣೆಗಾಗಿ ಹೋಗುವುದನ್ನು ಮತ್ತು ಆ ಚಲನೆಯ ಸುಲಭತೆಯನ್ನು ಸೂಚಿಸಿದರೆ ಕಾರ್ಮಿಕ ಆವರ್ತ ದರ ಒಂದು ಉದ್ಯಮದಲ್ಲಾಗುವ ಸೇರ್ಪಡೆ, ಬೇರ್ಪಡೆ ಮತ್ತು ಪುನಸ್ಥಾಪನೆಗಳನ್ನು ಸೂಚಿಸುತ್ತದೆ. ಕಾರ್ಮಿಕ ಚಲನ ಅನೇಕ ವೇಳೆ ಅಪೇಕ್ಷಣೀಯ, ಅದು ಚಲನಾತ್ಮಕ ಸಮಾಜದಲ್ಲಿ ಅಗತ್ಯ. ಅದು ದೇಶದ ಕಾರ್ಮಿಕ ಸಂಪತ್ತಿನ ಸೂಕ್ತ ವಿತರಣೆಗೆ ಸಹಾಯಕ.

ಕಾರ್ಮಿಕ ಆವರ್ತ ದರ ಯಾವುದಾದರೊಂದು ಕೈಗಾರಿಕಾ ಸಂಸ್ಥೆಯಲ್ಲಿಯ ಶ್ರಮ ಬಲದ ಅಸ್ಥಿರತೆಯನ್ನು ಸೂಚಿಸಿದರೂ ಅದೇ ಮುಖ್ಯ ಕಾರಣವಲ್ಲ. ಶ್ರಮಬಲದ ಅಸ್ಥಿರತೆಗೆ ಕಾರ್ಮಿಕ ಆವರ್ತಪ್ರಮಾಣವೇ ಅಲ್ಲದೆ ಕಾರ್ಮಿಕರ ಗೈರುಹಾಜರಿ ಹಾಗೂ ಕಾರ್ಮಿಕರ ವಲಸೆ ಮುಂತಾದ ಕಾರಣಗಳೂ ಉಂಟು. ಆದ್ದರಿಂದ ಕಾರ್ಮಿಕ ಆವರ್ತದ ಅರ್ಥವ್ಯಾಪ್ತಿ ಶ್ರಮಬಲದ ಅಸ್ಥಿರತೆಯ ಅರ್ಥವ್ಯಾಪ್ತಿಗಿಂತ ಸಂಕುಚಿತವಾದ್ದು.

ಕಾರ್ಮಿಕ ಆವರ್ತ ಉದ್ಯಮಿಗಳಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಆ ದರ ಹೆಚ್ಚಿದಂತೆಲ್ಲ ಉತ್ಪಾದನ ವೆಚ್ಚ ಅಧಿಕವಾಗುತ್ತ ಹೋಗುವುದೇ ಈ ಸಮಸ್ಯೆಗೆ ಕಾರಣ. ಕುಶಲತೆಯನ್ನು ಪಡೆದ ಹಾಗೂ ತರಬೇತಿ ಹೊಂದಿದ ಕಾರ್ಮಿಕರು ಸಂಸ್ಥೆಯನ್ನು ಬಿಟ್ಟುಹೋದಾಗ ತೆರವಾದ ಸ್ಥಾನಗಳಲ್ಲಿ ಹೊಸ ಕಾರ್ಮಿಕರನ್ನು ನೇಮಿಸಿಕೊಳ್ಳುವಾಗ ಅವರಿಗೆ ಕೊಡಬೇಕಾದ ತರಬೇತಿ ವೆಚ್ಚ, ಹೊಸದಾಗಿ ಸೇರಿಸಿಕೊಳ್ಳಲಾದ ಕಾರ್ಮಿಕರ ಅನನುಭವಿ ಕೆಲಸದಿಂದ ವ್ಯರ್ಥವಾಗುವ ಸಾಮಗ್ರಿಗಳ ವೆಚ್ಚ, ಇವೇ ಮುಂತಾದವುಗಳಿಂದ ಉತ್ಪಾದನ ವೆಚ್ಚ ಏರುವುದರಿಂದ ಆ ಲಾಭದ ಪ್ರಮಾಣವೂ ಕಡಿಮೆಯಾಗುವುದಲ್ಲದೆ ಮಾರುಕಟ್ಟೆಯಲ್ಲಿ ಇತರ ಸಂಸ್ಥೆಗಳೊಡನೆ ಪೈಪೋಟಿ ಮಾಡುವ ಸಾಮರ್ಥ್ಯ ಕುಗ್ಗುತ್ತದೆ. ಇದೇ ರೀತಿ ಅಧಿಕ ಕಾರ್ಮಿಕ ಆವರ್ತ ದರದ ಏರಿಕೆಯಿಂದ ಕಾರ್ಮಿಕರು ತೊಂದರೆಗೀಡಾಗುತ್ತಾರೆ. ಅದರಿಂದ ಕಾರ್ಮಿಕರ ಕಾರ್ಯದಕ್ಷತೆ ಕುಗ್ಗುವುದೇ ಅಲ್ಲದೆ ಅವರಿಗೆ ದೀರ್ಘ ಕಾಲಾವಧಿಯ ಸೇವೆಗೆ ಸಿಗುವ ಸೌಲಭ್ಯಗಳು, ಅಂದರೆ ವಿರಾಮವೇತನ, ಉಪದಾನ ಇತ್ಯಾದಿಗಳು, ಸಾಕಷ್ಟು ಪ್ರಮಾಣದಲ್ಲಿ ಸಿಗದೆ ಅವರು ತೊಂದರೆ ಅನುಭವಿಸುತ್ತಾರೆ. ಅಷ್ಟೇ ಅಲ್ಲದೆ ಕಾರ್ಮಿಕರು ಆಗಾಗ್ಗೆ ಸಂಸ್ಥೆಯಿಂದ ಸಂಸ್ಥೆಗೆ ಅಲೆದಾಡುತ್ತಿದ್ದರೆ ಅವರ ಸಂಘಟನೆಗೆ ಧಕ್ಕೆಯುಂಟಾಗಬಹುದು. ಆದ್ದರಿಂದಲೇ ಕಾರ್ಮಿಕ ಆವರ್ತ ದರದ ಆಧಿಕ್ಯ ಅನಪೇಕ್ಷಣೀಯ. ಆದರೆ ಕೆಲವು ವೇಳೆ ಮಿತ ಪ್ರಮಾಣದಲ್ಲಿ ಕಾರ್ಮಿಕ ಆವರ್ತ ಅಪೇಕ್ಷಣೀಯವಾಗಿದೆ. ಯಾವ ಸಂಸ್ಥೆಯಲ್ಲಿ ಹಳೆಯ ಕಾರ್ಮಿಕರು ಹೋಗಿ ಹೊಸ ರಕ್ತ ಮತ್ತು ಹುರುಪುಳ್ಳ ತರುಣ ಉತ್ಸಾಹೀ ಕಾರ್ಮಿಕರು ಆವಶ್ಯಕವಾಗಿದ್ದಾರೋ ಅಂಥ ಸಂಸ್ಥೆಗಳಲ್ಲಿ ಕ್ರಮಬದ್ಧವಾದ ಹಿತಮಿತವಾದ ಕಾರ್ಮಿಕ ಆವರ್ತ ಅವಶ್ಯವೆನಿಸುತ್ತದೆ. ಆದರೂ ಅದರ ಅಧಿಕ್ಯವಂತೂ ಹಾನಿಕರ.

ಕಾರ್ಮಿಕ ಆವರ್ತವನ್ನು ಆದಷ್ಟು ಕಡಿಮೆ ಮಾಡಲು ಪ್ರಪಂಚದ ಕೈಗಾರಿಕಾ ರಾಷ್ಟ್ರಗಳೆಲ್ಲವುಗಳಲ್ಲಿಯೂ ಉದ್ಯಮಿಗಳು ಪ್ರಯತ್ನಿಸಿದ್ದಾರೆ. ಈ ಉದ್ದೇಶದಿಂದಲೇ ಹಲವಾರು ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ತರುಣ ಕಾರ್ಮಿಕರಿಗೆ ಅವರವರ ಅಭಿರುಚಿ ಮತ್ತು ಯೋಗ್ಯತೆಗಳಿಗೆ ಹೊಂದಿಕೊಳ್ಳುವಂಥ ಕೆಲಸಗಳಲ್ಲಿ ತರಬೇತಿ ಕೊಡಲು ತರಬೇತಿ ಶಾಲೆಗಳು ಸ್ಥಾಪಿತವಾಗಿವೆ. ಕಾರ್ಮಿಕರ ಬಲವನ್ನು ಸ್ಥಿರಪಡಿಸಲು ಸಹಾಯಕವಾಗುವಂತೆ ಸಿಬ್ಬಂದಿ ನೀತಿಗಳನ್ನು ಮಾರ್ಪಡಿಸಲಾಗಿದೆ. ಆರ್ಥಿಕ ಹಿಂಜರಿತಗಳ ಕಾಲದಲ್ಲಿ ಎಲ್ಲರಿಗೂ ಸಮಾನ ಉದ್ಯೋಗಾವಕಾಶಗಳನ್ನು ಒದಗಿಸುವುದಕ್ಕಾಗಿ ಹಾಗೂ ಅನುಭವ ಮತ್ತು ತರಬೇತಿ ಪಡೆದ ದುಡಿಮೆಗಾರರು ಸಂಸ್ಥೆಯನ್ನು ಬಿಟ್ಟು ಹೊರಗೆ ಹೋಗದಿರುವಂತೆ ಮಾಡುವುದಕ್ಕಾಗಿ ಕೆಲವೇ ಕಾರ್ಮಿಕರನ್ನು ಇಟ್ಟುಕೊಂಡು ಅವರಿಗೆ ಉದ್ಯೋಗಗಳನ್ನು ಒದಗಿಸುವ ಬದಲು ಪ್ರಸ್ತುತ ಇರುವ ಎಲ್ಲ ಉದ್ಯೋಗಗಳೂ ಎಲ್ಲರಿಗೂ ಹಂಚಿಕೆಯಾಗುವಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇಷ್ಟೇ ಅಲ್ಲದೆ ಜ್ಯೇಷ್ಠತೆ (ಸೀನಿಯಾರಿಟಿ), ವಿಶ್ರಾಂತಿ ವೇತನ, ವಾರ್ಷಿಕವೇತನದ ಭರವಸೆ, ಬಡ್ತಿ ಇತ್ಯಾದಿ ಎಲ್ಲ ಆಕರ್ಷಕ ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನೂ ಒದಗಿಸುವುದರ ಮೂಲಕ ಕಾರ್ಮಿಕ ಆವರ್ತವನ್ನು ಕಡಿಮೆ ಮಾಡಲು ಪ್ರಯತ್ನಗಳು ಸಾಗಿವೆ.

ಭಾರತದಲ್ಲಿಯೂ ಕಾರ್ಮಿಕ ಆವರ್ತವನ್ನು ಕಡಿಮೆ ಮಾಡಲು ಮೇಲೆ ಹೇಳಿರುವ ಅನೇಕ ಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿದೆಯಾದರೂ ಈ ಸಮಸ್ಯೆಯ ಗಾತ್ರವೆಷ್ಟೆಂಬುದನ್ನು ಸರಿಯಾಗಿ ಅಂದಾಜು ಮಾಡುವುದಕ್ಕಾಗುವುದಿಲ್ಲ. ಸಮಸ್ಯೆಗೆ ಸಂಬಂಧಿಸಿದ ಅಂಕಿಅಂಶಗಳ ಕೊರತೆಯೇ ಈ ಪರಿಸ್ಥಿತಿಗೆ ಕಾರಣ. ಆದರೂ ಕೆಲವು ನಂಬಲರ್ಹವಾದ ಮೂಲಗಳು ಒದಗಿಸುತ್ತಿರುವ ಅಂಕಿಅಂಶಗಳ ಪ್ರಕಾರ ಜವಳಿ ಮತ್ತು ಸೆಣಬು ಕೈಗಾರಿಕೆಗಳಲ್ಲಿಯ ಆವರ್ತ ದರ ಹೆಚ್ಚಿನದು. ಭಾರತದಲ್ಲಿ ಕಾರ್ಮಿಕ ಆವರ್ತಪ್ರಮಾಣ ಪಾಶ್ಚಾತ್ಯ ಕೈಗಾರಿಕಾ ದೇಶಗಳಲ್ಲಿರುವಷ್ಟು ಹೆಚ್ಚಿನ ಮಟ್ಟದಲ್ಲಿಲ್ಲವೆಂದು ಹೇಳಬಹುದು. ಭಾರತದಲ್ಲಿ ನಿರುದ್ಯೋಗ ಅಪೂರ್ಣೋದ್ಯೋಗಗಳು ಅಗಾಧವಾಗಿರುವುದರಿಂದ ಕಾರ್ಮಿಕರು ಸಾಮಾನ್ಯವಾಗಿ ತಮ್ಮ ಉದ್ಯೋಗಗಳಿಗೆ ಅಂಟಿಕೊಳ್ಳುವ ಪ್ರವೃತ್ತಿ ತೋರುತ್ತಾರೆ. (ಎಸ್.ಎನ್.ಎ.)

**ಕಾರ್ಮಿಕ ಇಲಾಖೆ :** ಒಂದು ರಾಷ್ಟ್ರದ ಕಾರ್ಮಿಕ ವರ್ಗದ ಹಿತರಕ್ಷಣೆ ಮತ್ತು ಕಲ್ಯಾಣ ಸಾಧನೆಯ ಉದ್ದೇಶದಿಂದ ಸ್ಥಾಪಿತವಾದ ಸರ್ಕಾರಿ ಇಲಾಖೆ (ಡಿಪಾರ್ಟ್‌ಮೆಂಟ್ ಆಫ್ ಲೇಬರ್). ಕಾರ್ಮಿಕರ ಕಲ್ಯಾಣಭಿವೃದ್ಧಿ, ಅವರ ಕೆಲಸದ ಸ್ಥಿತಿಗಳ ಸುಧಾರಣೆ, ದುಡಿಯಬಲ್ಲವರಿಗೆಲ್ಲ ಲಾಭದಾಯಕವಾದ ಉದ್ಯೋಗಾವಕಾಶಗಳ ಕಲ್ಪನೆ–ಮುಂತಾದ ಉದ್ದೇಶಗಳಿಗಾಗಿ 1913ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಕಾರ್ಮಿಕ ಇಲಾಖೆಯನ್ನು ಸ್ಥಾಪಿಸಲಾಯಿತು. ಈ ಇಲಾಖೆ ಅನೇಕ ವಿಭಾಗಗಳ ಸಹಾಯದಿಂದ ತನ್ನ ಕೆಲಸವನ್ನು ನಿರ್ವಹಿಸುತ್ತದೆ. ಕಾರ್ಮಿಕ ಶಿಕ್ಷಣ, ಕಾರ್ಮಿಕ–ಮಾಲೀಕ ಸೌಹಾರ್ದ, ಕಾರ್ಮಿಕರಿಗೆ ಉತ್ತಮ ಉದ್ಯೋಗಾವಕಾಶಗಳ ಕಲ್ಪನೆ, ಅವರ ಸ್ಥಿತಿ ಸುಧಾರಣೆ, ಸ್ತ್ರೀಕಾರ್ಮಿಕರ ಯೋಗಕ್ಷೇಮ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಇದೇ ಕಾರ್ಯಪ್ರವೃತ್ತವಾಗಿದೆ. ಇದರಲ್ಲಿ ಕಾರ್ಮಿಕ ಅಂಕಿಅಂಶ ವಿಭಾಗ (ಬ್ಯೂರೊ ಆಫ್ ಲೇಬರ್ ಸ್ಟ್ಯಾಟಿಸ್ಟಿಕ್ಸ್) ಒಂದು. ಇದು ದೇಶದಲ್ಲಿಯ ಉದ್ಯೋಗಾವಕಾಶಗಳು ಮಾನವಶಕ್ತಿ, ಉತ್ಪಾದನಾಸಾಮರ್ಥ್ಯ, ಕೂಲಿ, ಗಳಿಕೆ, ಕೈಗಾರಿಕಾಸಂಬಂಧ, ಜನಜೀವನ ಮಟ್ಟ ಮುಂತಾದ ವಿಷಯಗಳನ್ನು ವಿಶೇಷ ಹೊತ್ತಿಗೆಗಳಲ್ಲೂ ಮಂತ್ಲಿ ಲೇಬರ್ ರಿವ್ಯೂ ಎಂಬ ತನ್ನ ಮಾಸಪತ್ರಿಕೆಯಲ್ಲೂ ಪ್ರಕಟಿಸುತ್ತದೆ. ಬ್ರಿಟನಿನಲ್ಲೂ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿರುವಂತೆ ಕಾರ್ಮಿಕ ಇಲಾಖೆಯುಂಟು. ನಿರುದ್ಯೋಗ, ವ್ಯಾಧಿ, ವಸತಿ, ಮುಪ್ಪು, ದುಡಿಮೆಯ ಕಾಲದಲ್ಲಿ ಅಪಘಾತ ಸಂಭವ ಮುಂತಾದ ಸಮಸ್ಯೆಗಳನ್ನು ಬಗೆಹರಿಸಿ ಆ ಮೂಲಕ ಕಾರ್ಮಿಕರ ಕಲ್ಯಾಣವನ್ನು ಸಾಧಿಸಬೇಕೆಂಬ ಉದ್ದೇಶದಿಂದ ಕೆಲಸ ಮಾಡುತ್ತಿದೆ. ಎರಡನೆಯ ಮಹಾಯುದ್ಧಾನಂತರ ಕಾಲದಲ್ಲಿ ವಿಲಿಯಂ ಬೆವರಿಜನ ಸಾಮಾಜಿಕ ವಿಮಾಯೋಜನೆಯನ್ನು ಸರ್ಕಾರ ಸ್ವೀಕರಿಸಿ ಜಾರಿಗೆ ತಂದದ್ದು ಈ ಇಲಾಖೆಯ ಮಹತ್ತ್ವದ ಸಾಧನೆಗಳಲ್ಲೊಂದು. ಪ್ರತಿಯೊಬ್ಬ ಪ್ರಜೆಯನ್ನೂ ತೊಟ್ಟಿಲಿನಿಂದ ಗೋರಿಯವರೆಗೆ ರಕ್ಷಿಸುವುದು ಸರ್ಕಾರದ ಹೊಣೆ. ಬ್ರಿಟನಿನಲ್ಲಿ ಕಾರ್ಮಿಕ ಇಲಾಖೆ ಅಲ್ಲಿಯ ಸಮಾಜಸೇವಾ ಸಚಿವಾಲಯದ ವ್ಯಾಪ್ತಿಗೆ ಒಳಪಟ್ಟಿದೆ.

ಭಾರತದಲ್ಲೂ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಮಟ್ಟದಲ್ಲಿ ಪ್ರತ್ಯೇಕ ಕಾರ್ಮಿಕ ಇಲಾಖೆಗಳು ಕೆಲಸ ಮಾಡುತ್ತಿವೆ. ಈ ಬಗೆಯ ವ್ಯವಸ್ಥೆಗೆ ಭಾರತದ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಾರ್ಮಿಕ ಕಾನೂನುಗಳನ್ನು ರೂಪಿಸುವ ಮತ್ತು ಅವುಗಳ ಆಡಳಿತವನ್ನು ನಿರ್ವಹಿಸುವ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ನಡುವೆ ಹಂಚಿಕೆಯಾಗಿದೆ. ಕಾರ್ಮಿಕರಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೆಲವು ಕೇಂದ್ರದ ಹೊಣೆಯಾದರೆ ಇನ್ನು ಕೆಲವು ರಾಜ್ಯ ಸರ್ಕಾರಗಳ ಹೊಣೆ; ಉಳಿದವು ರಾಜ್ಯಕೇಂದ್ರ ಸರ್ಕಾರಗಳೆರಡಕ್ಕೂ ಅನ್ವಯಿಸುವ ಸಹಗಾಮಿ ಪಟ್ಟಿಯಲ್ಲಿವೆ.

**ಕೇಂದ್ರ ಕಾರ್ಮಿಕ ಇಲಾಖೆ :** ಕೇಂದ್ರ ಕಾರ್ಮಿಕ ಇಲಾಖೆಯ ವಿಭಾಗಗಳು ಇವು : 1 ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, 2 ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶನಾಲಯ, 3 ಕಾರ್ಮಿಕ ವಿಭಾಗದ (ಬ್ಯೂರೊ) ನಿರ್ದೇಶಕರ

ಕಚೇರಿ, 4 ಮುಖ್ಯ ಕಾರ್ಮಿಕ ಕಮಿಷನರ್ ಕಚೇರಿ. 5 ಕಲ್ಲಿದ್ದಲು ಗಣಿ ಕಮಿಷನರ್ ಕಚೇರಿ, 6 ಕಲ್ಲಿದ್ದಲು ಗಣಿ ಕಾರ್ಮಿಕ ಭವಿಷ್ಯನಿಧಿ ಕಮಿಷನರ್ ಕಚೇರಿ, 7 ಅಭ್ರಕ ಗಣಿ ಕಾರ್ಮಿಕ ಕಲ್ಯಾಣಭಿವೃದ್ಧಿ ಕಮಿಷನರ್ ಕಚೇರಿ, 8 ಗಣಿಗಳ ಮುಖ್ಯ ನಿರೀಕ್ಷಕರ (ಇನ್‍ಸ್ಪೆಕ್ಟರ್) ಕಚೇರಿ, 9 ಕಾರ್ಖಾನೆಗಳ ಮುಖ್ಯ ಸಲಹೆಗಾರರ ಕಚೇರಿ, 10 ವಲಸಿಗ ಕಾರ್ಮಿಕ ನಿಯಂತ್ರಣಾಧಿಕಾರಿ ಕಚೇರಿ, 11 ನೌಕರರ ರಾಜ್ಯವಿಮಾ ಸಂಸ್ಥೆಯ ಡೈರೆಕ್ಟರ್ ಜನರಲ್ ಕಚೇರಿ ಮತ್ತು 12 ಕೇಂದ್ರ ಭವಿಷ್ಯನಿಧಿ ಕಮಿಷನರ್ ಕಚೇರಿ.

ಕೇಂದ್ರ ಕಾರ್ಮಿಕ ಇಲಾಖೆಯ ವಿವಿಧ ಭಾಗಗಳಲ್ಲಿ ಕಾರ್ಮಿಕ ಉದ್ಯೋಗ ಸಚಿವಾಲಯವೇ ಮುಖ್ಯವಾದ್ದು. ಇತರ ಕಚೇರಿಗಳೆಲ್ಲವೂ ಅದರ ಅಧೀನದಲ್ಲಿ ಅವವಕ್ಕೆ ನಿಗದಿಯಾದ ಕೆಲಸ ಮಾಡುವ ವಿಭಾಗಗಳಾಗಿವೆ.

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಸಂಪುಟ ದರ್ಜೆಯ ಕೇಂದ್ರ ಕಾರ್ಮಿಕ ಸಚಿವನ ನೇತೃತ್ವದಲ್ಲಿ ಕೆಲಸ ಮಾಡುತ್ತದೆ. ಕಾರ್ಮಿಕ ಕಾರ್ಯದರ್ಶಿ ಈ ಸಚಿವನಿಗೆ ಸಲಹೆಗಾರನಾಗಿರುತ್ತಾನೆ. ದೇಶದ ಆರ್ಥಿಕ ನೀತಿಯನ್ನು ರೂಪಿಸುವುದರಲ್ಲಿ ನೆರವಾಗುವುದು, ಕಾರ್ಮಿಕ-ಮಾಲೀಕ ಸಹಕಾರವನ್ನೇರ್ಪಡಿಸುವುದು, ಉತ್ತಮ ಕೈಗಾರಿಕಾ ಸಂಬಂಧವನ್ನೇರ್ಪಡಿಸುವುದು, ಹೆಚ್ಚು ಉತ್ಪಾದನೆಗೆ ಪ್ರೋತ್ಸಾಹ ನೀಡುವುದು, ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರುವುದು, ಕಾರ್ಮಿಕರ ಕಲ್ಯಾಣಾಭಿವೃದ್ಧಿಗೆ ಪ್ರೋತ್ಸಾಹ ನೀಡುವುದು-ಮೊದಲಾದ ಕಾರ್ಯಗಳನ್ನು ಈ ಸಚಿವಾಲಯ ನಿರ್ವಹಿಸುತ್ತದೆ. ಜೊತೆಗೆ ಇದು ತ್ರಿಪಕ್ಷ ಕಾರ್ಮಿಕ ಸಮ್ಮೇಳನಗಳು ಮತ್ತು ಸಮಿತಿಗಳ ಕಾರ್ಯಾಗಾರವಾಗಿ ಕೆಲಸ ಮಾಡುತ್ತದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾರತ ಭಾಗವಹಿಸುವುದು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಮೂಲಕವೇ.

ದೇಶಾದ್ಯಂತ ಹರಡಿರುವ ಉದ್ಯೋಗ ವಿನಿಮಯ ಸಂಸ್ಥೆಗಳ ಮತ್ತು ತರಬೇತಿ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಹೊಂದಾವಣೆ ಏರ್ಪಡಿಸುವ ಜವಾಬ್ದಾರಿ, ಉದ್ಯೋಗ ಮತ್ತು ಶಿಕ್ಷಣ ತರಬೇತಿ ಮಹಾ ನಿರ್ದೇಶನಾಲಯದ್ದು. ಅಂಕಿಅಂಶಗಳ ಸಂಗ್ರಹಣೆ ಮತ್ತು ಕಾರ್ಮಿಕ ವಿಷಯಗಳಲ್ಲಿ ಸಂಶೋಧನೆ-ಇವು ಕಾರ್ಮಿಕ ವಿಭಾಗದ ಹೊಣೆ. ಹೀಗೆ ಸಂಗ್ರಹಿಸಿದ ಅಂಕಿಅಂಶಗಳ ಮತ್ತು ನಡೆಸಿದ ಸಂಶೋಧನೆಗಳ ಆಧಾರದ ಮೇಲೆ ಸರ್ಕಾರ ತನ್ನ ಕಾರ್ಮಿಕನೀತಿಯನ್ನು ರೂಪಿಸುತ್ತದೆ. ಇಂಡಿಯನ್ ಲೇಬರ್ ಜರ್ನಲ್ ಈ ವಿಚಾರವನ್ನು ಕುರಿತ ಅಧಿಕೃತ ಮಾಸಿಕ. ಇಷ್ಟೇ ಅಲ್ಲದೆ ಕಾರ್ಖಾನೆಗಳ ಕಾನೂನು, ಕನಿಷ್ಠವೇತನಗಳ ಕಾನೂನು, ಭಾರತೀಯ ಕಾರ್ಮಿಕ ಸಂಘಗಳ ಕಾನೂನು-ಮುಂತಾದವುಗಳ ಜಾರಿಗೆ ಸಂಬಂಧಿಸಿದಂತೆ ಕಾರ್ಯಪ್ರಗತಿಯನ್ನು ಕುರಿತ ವರದಿಯೂ ಕಾರ್ಮಿಕ ವರ್ಗಕ್ಕೆ ಸಹಾಯಕವಾಗುವಂಥ ಕೆಲವು ಸಣ್ಣ ಹೊತ್ತಿಗೆಗಳೂ ಪ್ರಕಟವಾಗುತ್ತವೆ. ಪಂಚವಾರ್ಷಿಕ ಯೋಜನೆಗಳಿಗೆ ಬೇಕಾಗುವ ಅಂಕಿಅಂಶಗಳನ್ನು ಸಂಗ್ರಹಿಸುವುದೂ ಈ ವಿಭಾಗದ ಕಾರ್ಯಭಾರ. ಪ್ರಧಾನ ಕಾರ್ಮಿಕ ಕಮಿಷನರರ ಕಚೇರಿ ಕೇಂದ್ರ ಸರ್ಕಾರಕ್ಕೆ ಸೇರಿದ ಉದ್ಯಮಗಳಲ್ಲಿ ಕಾರ್ಮಿಕ ಮತ್ತು ಮಾಲೀಕವರ್ಗಗಳ ಮಧ್ಯೆ ಒಳ್ಳೆಯ ಬಾಂಧವ್ಯವನ್ನು ಕುದುರಿಸುವ ಹೊಣೆ ಹೊತ್ತಿದೆ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರಿದ ಗಣಿಗಳಲ್ಲಿ, ತೈಲಾಗಾರಗಳಲ್ಲಿ, ವಿಮಾಸಂಸ್ಥೆಯಲ್ಲಿ, ಮುಖ್ಯ ಬಂದರುಗಳಲ್ಲಿ ಹಾಗೂ ದೊಡ್ಡದೊಡ್ಡ ಕಾರ್ಖಾನೆಗಳಲ್ಲಿ ಉದ್ಭವಿಸುವ ಕಾರ್ಮಿಕ ವಿವಾದಗಳನ್ನು ತಡೆಗಟ್ಟುವುದು ಮತ್ತು ಬಗೆಹರಿಸುವುದು, ಈ ವಿವಾದಗಳಿಗೆ ಸಂಬಂಧಿಸಿದ ತೀರ್ಪುಗಳನ್ನು ಜಾರಿಗೆ ತರುವುದು, ಕಾರ್ಮಿಕ ಕಾಯಿದೆಗಳ ನಿರ್ವಹಣೆ, ದೇಶದಲ್ಲಿರುವ ನಾಲ್ಕು ಕೇಂದ್ರ ಕಾರ್ಮಿಕ ಸಂಘಗಳ ಸದಸ್ಯಬಲವನ್ನು ಪರೀಕ್ಷಿಸಿ ಅತಿ ಹೆಚ್ಚಿನ ಸದಸ್ಯಬಲವನ್ನು ಹೊಂದಿರುವ ಸಂಸ್ಥೆಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವುದು, ಕೇಂದ್ರ ಸರ್ಕಾರದ ಉದ್ಯಮಗಳಲ್ಲಿಯ ಕಾರ್ಮಿಕರ ಕಲ್ಯಾಣಸಾಧನೆಗಾಗಿ ಕ್ರಮಗಳನ್ನು ಕಾರ್ಯಗತಗೊಳಿಸುವುದು. ಕೇಂದ್ರ ಕಾರ್ಮಿಕ ಸಚಿವರಿಗೆ ಕಾರ್ಮಿಕ ಸಮಸ್ಯೆಗಳ ಬಗ್ಗೆ ಸಲಹೆ ಮಾಡುವುದು-ಇವೇ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತದೆ. ನೌಕರರ ರಾಜ್ಯವಿಮಾ ಸಂಸ್ಥೆ 1948ರಲ್ಲಿ ಅಸ್ತಿತ್ವಕ್ಕೆ ಬಂತು. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಈ ವಿಮೆಗೆ ಕಂತುಗಳನ್ನು ಕಟ್ಟುವ ಕಾರ್ಮಿಕರಿಗೆ ಈ ಸಂಸ್ಥೆ ನಾಲ್ಕು ಬಗೆಯ ಸೌಲಭ್ಯಗಳನ್ನು ಒದಗಿಸುತ್ತವೆ. ವ್ಯಾಧಿ, ಪ್ರಸೂತಿ, ವಿಕಲಾಂಗ ಮತ್ತು ಅವಲಂಬನ ಸ್ಥಿತಿಯಲ್ಲಿ ಪರಿಹಾರಗಳನ್ನು ನೀಡುತ್ತದೆ. ಕೇಂದ್ರ ಸರ್ಕಾರ ಈಚೆಗೆ ಇದರ ಕಾರ್ಯಕ್ಷೇತ್ರವನ್ನು ವಿಶಾಲಗೊಳಿಸುತ್ತಿದೆ. ಉದ್ಯೋಗಿಗಳ ಭವಿಷ್ಯನಿಧಿ ಕಾಯಿದೆಯನ್ನು (1952) ನಿರ್ವಹಿಸುವುದು ಕೇಂದ್ರ ಭವಿಷ್ಯನಿಧಿ ಕಮಿಷನರ ಕಾರ್ಯಭಾರ. ಈತ ದೇಶದಲ್ಲಿರುವ ಇಪ್ಪತ್ತು ಪ್ರಾದೇಶಿಕ ಭವಿಷ್ಯನಿಧಿ ಕಮಿಷನರುಗಳ ಸಹಾಯದಿಂದ ಕೆಲಸ ನಿರ್ವಹಿಸುತ್ತಾನೆ.

**ರಾಜ್ಯ ಕಾರ್ಮಿಕ ಇಲಾಖೆ:** ಭಾರತದ ಪ್ರತಿಯೊಂದು ರಾಜ್ಯಸರ್ಕಾರದಲ್ಲೂ ಒಂದು ಪ್ರತ್ಯೇಕ ಕಾರ್ಮಿಕ ಇಲಾಖೆಯಿದೆ. ಪ್ರತಿಯೊಂದು ರಾಜ್ಯ ಕಾರ್ಮಿಕ ಇಲಾಖೆಯೂ ತನ್ನ ರಾಜ್ಯದಲ್ಲಿಯ ಕಾರ್ಮಿಕ ಕಾನೂನುಗಳನ್ನು ಕಾರ್ಯಗತಮಾಡುವ ಮತ್ತು ಅವನ್ನು ನಿರ್ವಹಿಸುವ ಜವಾಬ್ದಾರಿ ಹೊತ್ತಿದೆ. ಸಂಪುಟ ದರ್ಜೆಯ ಒಬ್ಬ ಸಚಿವ ಇದಕ್ಕೆ ಅಧಿಪತಿ. ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಈತನಿಗೆ ಸಲಹೆಗಾರ. ಕಾರ್ಮಿಕ ಕಾಯಿದೆಗಳ ಅನ್ವಯದ ಮತ್ತು ಕಾರ್ಮಿಕ ಕಲ್ಯಾಣ ಸಾಧನೆಯ ಕಾರ್ಯಗಳನ್ನು ನಿರ್ವಹಿಸಲು ನೇಮಕವಾಗಿರುವ ಅಧಿಕಾರಿಯೇ ಕಾರ್ಮಿಕ ಕಮಿಷನರ್. ಈತನಿಗೆ ಸಹಾಯಕರಾಗಿ ಡೆಪ್ಯುಟಿ ಕಾರ್ಮಿಕ ಕಮಿಷನರ್, ಅನೇಕ ಸಹಾಯಕ ಕಾರ್ಮಿಕ ಕಮಿಷನರುಗಳು ಮತ್ತು ಕಾರ್ಮಿಕ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಅನೇಕ ರಾಜ್ಯಗಳಲ್ಲಿ ಕಾರ್ಖಾನೆಗಳ ಪ್ರಧಾನ ನಿರೀಕ್ಷಕ ಮತ್ತು ಬಾಯಿಲರುಗಳ ಪ್ರಧಾನ ನಿರೀಕ್ಷಕ-ಇವರು ಕ್ರಮವಾಗಿ ಕಾರ್ಖಾನೆಗಳ ಕಾಯಿದೆ (1948) ಮತ್ತು ಬಾಯಿಲರುಗಳ ಕಾಯಿದೆ (1923) ಇವುಗಳ ಆಡಳಿತ ನಿರ್ವಹಿಸುತ್ತಾರೆ. ಕೆಲವು ರಾಜ್ಯಗಳಲ್ಲಿ ರಾಜ್ಯ ಕಾರ್ಮಿಕ ಕಮಿಷನರೇ ರಾಜ್ಯದ ಕಾರ್ಮಿಕ ಸಂಘಗಳ ರಿಜಿಸ್ಟ್ರಾರ್ ಆಗಿ ಕೆಲಸ ಮಾಡುತ್ತಾನೆ. ರಾಜ್ಯದ ಕಾರ್ಮಿಕ ವಿಷಯಗಳ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸುವ ಕೆಲಸವನ್ನು ಕಮಿಷನರ ಕಚೇರಿಯೇ ನೋಡಿಕೊಳ್ಳುತ್ತದೆ.

ಮೈಸೂರು ರಾಜ್ಯದಲ್ಲಿ ಕಾರ್ಮಿಕ ಸಚಿವರ ಕೈಕೆಳಗೆ ಕಾರ್ಮಿಕ ಕಾರ್ಯದರ್ಶಿ, ಕಾರ್ಮಿಕ ಕಮಿಷನರ್, ಡೆಪ್ಯುಟಿ ಕಾರ್ಮಿಕ ಕಮಿಷನರ್, ಅನೇಕ ಮಂದಿ ಅಸಿಸ್ಟೆಂಟ್ ಕಮಿಷನರುಗಳು ಮತ್ತು ಕಾರ್ಮಿಕ ಅಧಿಕಾರಿಗಳುಂಟು. ಉದ್ಯಮಗಳಲ್ಲಿ ಕಾರ್ಮಿಕರ ಮತ್ತು ಮಾಲೀಕರ ಮಧ್ಯೆ ಉದ್ಭವಿಸುವ ವಿವಾದಗಳಲ್ಲಿ ಇವರು ಕೈಗಾರಿಕಾ ವಿವಾದ ಕಾಯಿದೆ (1947) ಮತ್ತು ಅದರ ತಿದ್ದುಪಡಿ ಕಾಯಿದೆಗಳ ಪ್ರಕಾರ ಸಮನ್ವಯಾಧಿಕಾರಿಗಳಾಗಿಯೂ (ಕಾನ್ಸಿಲಿಯೇಷನ್ ಆಫೀಸರ್ಸ್) ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಕಾರ್ಮಿಕ ಕಮಿಷನರೇ ರಾಜ್ಯದ ಪ್ರಧಾನ ಬಾಯಿಲರ್ ನಿರೀಕ್ಷಕನಾಗಿಯೂ ರಾಜ್ಯದ ಕಾರ್ಮಿಕ ಸಂಘಗಳ ರಿಜಿಸ್ಟ್ರಾರ್ ಆಗಿಯೂ ಕೆಲಸ ಮಾಡುತ್ತಾನೆ. (ಎಸ್.ಎನ್.ಎ.)

**ಕಾರ್ಮಿಕ ಕಲ್ಯಾಣ :** ಕಾರ್ಮಿಕ ಕಲ್ಯಾಣದ ನಿಖರವಾದ ವ್ಯಾಖ್ಯೆ ನೀಡುವುದು ಸುಲಭವಲ್ಲ. ಒಂದು ದೇಶದ ಆಚಾರ, ವ್ಯವಹಾರ, ಸಾಮಾಜಿಕ ಸಂಸ್ಥೆಗಳು, ಕೈಗಾರಿಕಾ ಹಾಗೂ ಆರ್ಥಿಕ ಅಭಿವೃದ್ಧಿಯ ಹಂತ-ಇವುಗಳಿಗೆ ಅನುಗುಣವಾಗಿ ಕಾರ್ಮಿಕ ಕಲ್ಯಾಣದ ಪರಿಕಲ್ಪನೆ ವ್ಯತ್ಯಾಸವಾಗುತ್ತದೆ. ಕಾರ್ಮಿಕರ ಉದ್ಯೋಗ ಪರಿಸ್ಥಿತಿಗಳನ್ನು ಉತ್ತಮಪಡಿಸುವ ಸೌಲಭ್ಯಗಳನ್ನು ಒದಗಿಸುವ ಎಲ್ಲ ಯೋಜನೆಗಳೂ ಕಾರ್ಮಿಕ ಕಲ್ಯಾಣ ಕಾರ್ಯಗಳೆಂಬುದು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ನೀಡಿರುವ ವ್ಯಾಖ್ಯೆ. ಆಂತರಿಕ ಮತ್ತು ಬಾಹ್ಯ ಎಂದು ಎರಡು ಗುಂಪುಗಳಾಗಿ ಇವನ್ನು ವಿಂಗಡಿಸಲಾಗಿದೆ. ಶೌಚಗೃಹ, ಶಿಶುವಿಹಾರ, ವಿಶ್ರಾಂತಿಗೃಹ ಮತ್ತು ಉಪಾಹಾರ ಮಂದಿರಗಳು, ಕುಡಿಯುವ ನೀರು, ಆರೋಗ್ಯ ಮತ್ತು ಸುರಕ್ಷಣೆ, ಸಮವಸ್ತ್ರ ಹಾಗೂ ರಕ್ಷಕ ವಸ್ತ್ರಗಳು-ಇವು ಆಂತರಿಕ ಸೌಲಭ್ಯಗಳು. ಉಪಾದಾನ (ಗ್ರಾಚುಯಿಟಿ) ನಿವೃತ್ತಿ ವೇತನ, ಭವಿಷ್ಯ ನಿಧಿ, ಸಹಾಯ ನಿಧಿ, ಚಿಕಿತ್ಸೆ, ವಸತಿ ಮತ್ತು ಶಿಕ್ಷಣದ ಸೌಕರ್ಯಗಳು, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಪುಸ್ತಕ ಭಂಡಾರ ಮೊದಲಾದವು ಬಾಹ್ಯ ಸೌಲಭ್ಯಗಳು.

ಇವುಗಳಲ್ಲಿ ಕೆಲವು ಸೌಲಭ್ಯಗಳನ್ನು ಸರ್ಕಾರ, ಕಾರ್ಮಿಕ ಸಂಘಗಳು ಹಾಗೂ ಲೋಕೋಪಯೋಗಿ ಸಂಸ್ಥೆಗಳು ಒದಗಿಸಿದರೂ ಕಾರ್ಮಿಕ ಕಲ್ಯಾಣದ ಅಧಿಕಪಾಲಿನ ಹೊರೆಯನ್ನು ಉದ್ಯಮಿಗಳೇ ವಹಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಉದ್ಯಮಿಗಳು ಮಾಡಬೇಕಾದ ವೆಚ್ಚ ಕಡಿಮೆಯೇನಲ್ಲ. ಆದರೆ ಈ ವೆಚ್ಚ ವ್ಯರ್ಥವಲ್ಲ. ಈ ಸೌಲಭ್ಯಗಳನ್ನು ನೀಡುವುದರಿಂದ ಕಾರ್ಮಿಕರ ನಿಷ್ಠೆ ಗಳಿಸುವುದು ಸಾಧ್ಯ-ಎಂಬುದು ಈ ವೆಚ್ಚ ಭರಿಸಲು ಉದ್ಯಮಿಗಳು ಮುಂದೆ ಬರಲು ಒಂದು ಕಾರಣ. ಈ ಸೌಲಭ್ಯಗಳನ್ನು ನೀಡುವುದರಿಂದ ಕಾರ್ಮಿಕರ ಕಲ್ಯಾಣದ ಯೋಜನೆಗಳಿಗೆ ಇದಕ್ಕೂ ವಿಶಾಲವಾದ ಉದ್ದೇಶವೂ ಉಂಟು. ಕಾರ್ಮಿಕ ಕಲ್ಯಾಣ ಸಾಧನೆ ಸಮಾಜ ಕಲ್ಯಾಣದ ಒಂದು ಅಂಗ. ಸರ್ಕಾರವಾಗಲಿ ಉದ್ಯಮಿಗಳಾಗಲಿ ಕಾರ್ಮಿಕ ಕಲ್ಯಾಣವನ್ನು ಸಮಾಜಕಲ್ಯಾಣದ ಹಿನ್ನೆಲೆಯಲ್ಲಿ ನೋಡುವುದು ಅವಶ್ಯ. ಕಾರ್ಮಿಕರ ನಿಷ್ಠೆಯ ಸಂಪಾದನೆ ಮತ್ತು ಕಾರ್ಯದಕ್ಷತೆಯ ಅಭಿವೃದ್ಧಿ ಸಾಧನೆ-ಇವು ತತ್ಕ್ಷಣದ ಫಲಗಳಷ್ಟೆ.

ಭಾರತದಲ್ಲಿ ಕಾರ್ಮಿಕ ಕಲ್ಯಾಣ ಕಾರ್ಯಗಳನ್ನು ಕೈಕೊಳ್ಳುವುದು ಅತ್ಯಂತ ಆವಶ್ಯಕವಾಗಿದೆ. ಭಾರತೀಯ ಕಾರ್ಮಿಕರ ಬಡತನ ಅಧಿಕವಾಗಿವುದರಿಂದ ಅನುಕೂಲಸ್ಥ ದೇಶಗಳಲ್ಲಿ ಬೇಡವೆನಿಸಬಹುದಾದ ಅನೇಕ ಸೌಲಭ್ಯಗಳನ್ನು ಇಲ್ಲಿ ಒದಗಿಸುವುದು ಅನಿವಾರ್ಯವಗುತ್ತದೆ. ಅಲ್ಲದೆ ಈಗ ಭಾರತ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಪರಿವರ್ತನೆ ಹೊಂದುತ್ತಿರುವ ಸ್ಥಿತಿಯಲ್ಲಿದೆ. ಗ್ರಾಮೀಣ ಹಾಗೂ ಕೃಷಿ ಆಧಾರಿತ ಸಮಾಜ ಈಗ ನಗರೀಕೃತ ಹಾಗೂ ಕೈಗಾರಿಕಾಧಾರಿತ ಸಮಾಜವಾಗಿ ಪರಿವರ್ತನೆಗೊಳ್ಳುತ್ತಿದೆ. ಈ ಕಾಲದಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದ ಕಾರ್ಮಿಕರು ಸುಲಭವಾಗಿ ಕೈಗಾರಿಕೆಯ ನೂತನ ಜೀವನಕ್ಕೆ ಹೊಂದಿಕೊಳ್ಳುವಂತೆ ಅನುಕೂಲಪಡಿಸುವ ದೃಷ್ಟಿಯಿಂದ ಸಾಕಷ್ಟು ಕ್ಷೇಮಾಭ್ಯುದಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಆವಶ್ಯಕ.

ಈ ಆವಶ್ಯಕತೆಯನ್ನು ಅರಿತ ಕೆಲವು ಪ್ರಗತಿಪರ ಹಾಗೂ ವಿವೇಕಿ ಉದ್ಯಮಿಗಳು ಸ್ವಪ್ರೇರಣೆಯಿಂದ ತಮ್ಮ ಕಾರ್ಖಾನೆಗಳಲ್ಲಿ ಕೆಲವು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಎರಡನೆಯ ಮಹಾಯುದ್ಧ ಪೂರ್ವದಲ್ಲಿಯೇ ಒದಗಿಸಿದ್ದರು. ಈ ಸೌಲಭ್ಯಗಳು ವ್ಯಾಪಕವಾಗಿಲ್ಲದಿದ್ದುದರಿಂದ ಸರ್ಕಾರ ನಡುವೆ ಪ್ರವೇಶಿಸಬೇಕಾಯಿತು. ಸರ್ಕಾರದ ರಕ್ಷಾ

ಕೈಗಾರಿಕೆಗಳಲ್ಲಿ ಅನೇಕ ಸೌಲಭ್ಯಗಳನ್ನು ಒದಗಿಸಿತು. ಇದರ ಜೊತೆಗೆ, ಎಲ್ಲ ಉದ್ಯಮಗಳಲ್ಲೂ ಅನೇಕ ಕಾರ್ಮಿಕ ಕಲ್ಯಾಣ ಸೌಕರ್ಯಗಳನ್ನು ಒದಗಿಸಲು ಕಾಯಿದೆ ಮಾಡಿತು. ಉದ್ಯಮಿಗಳೇ ಸ್ವಪ್ರೇರಣೆಯಿಂದ ಒದಗಿಸುವ ಸೌಲಭ್ಯಗಳು ಮತ್ತು ಕಾಯಿದೆಯನ್ವಯ ಒದಗಿಸುವ ಸೌಲಭ್ಯಗಳು ಎಂದು ಇವನ್ನು ಎರಡು ಬಗೆಯಾಗಿ ವಿಂಗಡಿಸಬಹುದು.

1948 ರ ಕಾರ್ಖಾನೆಗಳ ಕಾಯಿದೆಯ ಪ್ರಕಾರ ಪ್ರತಿಯೊಬ್ಬ ನೇಮಕದಾರನೂ ತನ್ನ ಉದ್ಯೋಗಿಗಳಿಗೆ ಕಡ್ಡಾಯವಾಗಿ ಒದಗಿಸಬೇಕಾದ ಸೌಲಭ್ಯಗಳಿವು: ಕುಡಿಯಲು ತಂಪಾದ ಹಾಗೂ ಚೊಕ್ಕಟವಾದ ನೀರು, ಶೌಚಗೃಹ, 250ಕ್ಕೆ ಕಡಿಮೆಯಿಲ್ಲದಷ್ಟು ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲೂ ಉಪಾಹಾರ ಮಂದಿರ, 50ಕ್ಕೆ ಕಡಿಮೆಯಿಲ್ಲದಷ್ಟು ಮಹಿಳಾ ಕೆಲಸಗಾರರಿರುವ ಪ್ರತಿ ಕಾರ್ಖಾನೆಯಲ್ಲೂ ಶಿಶುವಿಹಾರ, ಕನಿಷ್ಠ 150 ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲೂ ವಿಶ್ರಾಂತಿ ಹಾಗೂ ಉಪಾಹಾರ ಕೋಣೆಗಳು. ಸುರಕ್ಷಣೆ ಹಾಗೂ ಆರೋಗ್ಯದ ವಿಷಯದಲ್ಲೂ ಈ ಕಾಯಿದೆ ಅನೇಕ ಕಟ್ಟುಪಾಡುಗಳನ್ನು ಮಾಡಿದೆ. ಆವಿ, ಹೊಗೆ, ದೂಳು ಮೊದಲಾದವು ಹೊರಗೆ ಹೋಗುವಂತೆ ಸರಿಯಾದ ವ್ಯವಸ್ಥೆ ಪ್ರತಿ 150 ಕಾರ್ಮಿಕರಿಗೆ ಒಂದರಂತೆ ಪ್ರಥಮ ಚಿಕಿತ್ಸೆ ಪೆಟ್ಟಿಗೆ, 500 ಕೆಲಸಗಾರರಿರುವ ಪ್ರತಿ ಕಾರ್ಖಾನೆಯಲ್ಲೂ ರುಗ್ಣ ವಾಹನ (ಆಂಬ್ಯುಲೆನ್ಸ್)–ಇವು ಇರಬೇಕು. ಅಲ್ಲದೆ ಆಕಸ್ಮಿಕಗಳನ್ನು ತಡೆಗಟ್ಟುವ ದೃಷ್ಟಿಯಿಂದ ಯಂತ್ರಗಳಿಗೆ ಬೇಲಿ ಅಥವಾ ಕಟಕಟೆ ಏರ್ಪಡಿಸಬೇಕು. ಕಾರ್ಮಿಕರಿಗೆ ಸುರಕ್ಷಣೆಯ ವಸ್ತ್ರಗಳು, ಪಾದರಕ್ಷೆಗಳು, ಕನ್ನಡಕಗಳು ಮೊದಲಾದವನ್ನು ಒದಗಿಸುವಂತೆಯೂ ಕಟ್ಟುಪಾಡುಗಳನ್ನು ಮಾಡಲಾಗಿದೆ.

ಕಾರ್ಖಾನೆಗಳ ಕಾಯಿದೆಗೆ ಸದೃಶವಾದ ಕಾಯಿದೆಗಳನ್ನು ಗಣಿ, ಪ್ಲಾಂಟೇಶಷನ್ ಹಾಗೂ ಬಂದರು ಕಾರ್ಮಿಕರಿಗೂ ತರಲಾಯಿತು. 1952ರ ಗಣಿ ಕಾಯಿದೆ, 1951ರ ಪ್ಲಾಂಟೇಷನ್ ಕಾಯಿದೆ, ಭಾರತೀಯ ವ್ಯಾಪಾರಿ ನೌಕೆ ಕಾಯಿದೆ–ಇವನ್ನು ಕಾರ್ಖಾನೆಗಳ ಕಾಯಿದೆಯಲ್ಲಿಯ ಕಾರ್ಮಿಕ ಕಲ್ಯಾಣ ಕಟ್ಟುಪಾಡುಗಳನ್ನು ಕ್ರಮವಾಗಿ ಈ ಕೈಗಾರಿಕೆಗಳಿಗೂ ಅನ್ವಯಿಸುವ ಉದ್ದೇಶದಿಂದ ಜಾರಿಗೆ ತರಲಾಯಿತು. ಕಲ್ಲಿದ್ದಲು ಮತ್ತು ಅಭ್ರಕ ಗಣಿ ಕಲ್ಯಾಣ ನಿಧಿಯ ಕಾಯಿದೆ ಮತ್ತು ಕಬ್ಬಿಣದ ಅದಿರು ಕಾರ್ಮಿಕರ ಕಲ್ಯಾಣ ಮೇಲ್ತೆರಿಗೆ ಕಾಯಿದೆಗಳನ್ನೂ ಈ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದಲೇ ಜಾರಿಗೆ ತರಲಾಗಿದೆ. ಇಲ್ಲಿ ಉತ್ಪನ್ನದ ಮೇಲೆ ಮೇಲ್ತೆರಿಗೆ ಹಾಕಿ ಅದರಿಂದ ಬಂದ ಮೊಬಲಗಿನಿಂದ ಕಾರ್ಮಿಕರಿಗೆ ಸೌಲಭ್ಯಗಳನ್ನೊದಗಿಸುತ್ತದೆ.

ಕಾರ್ಮಿಕರ ಅನಿಶ್ಚಿತತೆಯ ಪರಿಸ್ಥಿತಿಗಳನ್ನೆದುರಿಸಲು ನೆರವಾಗುವ ಸೌಲಭ್ಯಗಳನ್ನೊದಗಿಸುವ ಸಲುವಾಗಿ 1948ರ ಕಾರ್ಮಿಕರ ರಾಜ್ಯವಿಮಾ ಕಾಯಿದೆಯನ್ನು ಜಾರಿಗೆ ತರಲಾಯಿತು. ಉದ್ಯೋಗದಾತ, ಸರ್ಕಾರ ಮತ್ತು ಉದ್ಯೋಗಿಗಳಿಂದ ಪಡೆದ ಅಂಶ ದಾನಗಳಿಂದ ರಚಿಸಿದ ನಿಧಿಯಿಂದ ಈ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ವಿಮಾ ಯೋಜನೆಗೆ ಒಳಪಟ್ಟ ಕಾರ್ಮಿಕರು ಐದು ಬಗೆಯ ಸೌಲಭ್ಯಗಳನ್ನು ಪಡೆಯುತ್ತಾರೆ. 1 ಕಾಯಿಲೆಗಾಗಿ ಒಂದು ವರ್ಷದಲ್ಲಿ 28 ದಿನಗಳ ವರೆಗೆ ವೇತನ ಸಹಿತ ರಜ 2 ಕಾರ್ಮಿಕ ಹಾಗೂ ಅವನ ಕುಟುಂಬದ ಸದಸ್ಯರಿಗೆ ಉಚಿತ ಚಿಕಿತ್ಸೆ 3 ಮಹಿಳಾಕಾರ್ಮಿಕರಿಗೆ ಪ್ರಸೂತಿಯ ಕಾಲದಲ್ಲಿ ನಗದಿನ ನೆರವು, 4 ವಿಕಲಾಂಗ, ಉದ್ಯೋಗಹಾನಿ ಮತ್ತು ಕಾಯಿಲೆಗಳ ಸಮಯದಲ್ಲಿ ಕಾರ್ಮಿಕನಿಗೆ ನೆರವು ಮತ್ತು 5 ಮರಣಿಸಿದ ಕಾರ್ಮಿಕನ ಆಶ್ರಿತರಿಗೆ ಅವಲಂಬಿ ನೆರವು. 1952ರ ಕಾರ್ಮಿಕರ ಭವಿಷ್ಯ ನಿಧಿ ಕಾಯಿದೆ ಇನ್ನೊಂದು ಮುಖ್ಯ ಕಾನೂನು.

ಕಾಯಿದೆಗೊಳಪಡದ ಸೌಲಭ್ಯಗಳನ್ನೂ ಉದ್ಯೋಗದಾತರು ಒದಗಿಸುವುದುಂಟು. ಇವುಗಳಲ್ಲಿ ಮುಖ್ಯವಾದವು ಚಿಕಿತ್ಸೆ, ಶಿಕ್ಷಣ ಮತ್ತು ಮನೋರಂಜನೆ. ಕಾರ್ಮಿಕರ ರಾಜ್ಯವಿಮಾ ವ್ಯವಸ್ಥೆಯ ಪ್ರಕಾರ ಚಿಕಿತ್ಸೆಯ ಸೌಲಭ್ಯ ನೀಡಿದ್ದರೂ ಕೆಲವು ಉದ್ಯಮಗಳಲ್ಲಿ ಪ್ರತ್ಯೇಕವಾದ ಆಸ್ಪತ್ರೆಗಳಿರುತ್ತವೆ. ಭವಿಷ್ಯ ನಿಧಿಯ ಜೊತೆಗೆ ಹಲವು ಉದ್ಯಮಗಳಲ್ಲಿ ಕಾರ್ಮಿಕರಿಗೆ ಪ್ರೋತ್ಸಾಹಕ ದ್ರವ್ಯ ನೀಡುವುದೂ ಉಂಟು. ಕಾರ್ಮಿಕ ನಿವೃತ್ತಿ ಹೊಂದಿದಾಗ ಪ್ರತಿವರ್ಷದ ಸೇವೆಗೂ ಆತನ ವೇತನದ ಆಧಾರದ ಮೇಲೆ ಇಷ್ಟು ಎಂದು ಹಣವನ್ನು ಪ್ರೋತ್ಸಾಹಕ ದ್ರವ್ಯದ ರೂಪದಲ್ಲಿ ಕೊಡುವ ಪದ್ಧತಿ ಅನೇಕ ಕಾರ್ಖಾನೆಗಳಲ್ಲಿ ಕಂಡುಬರುತ್ತದೆ. ಕಾರ್ಮಿಕರ ಮಕ್ಕಳ ಶಿಕ್ಷಣದ ವಿಷಯದಲ್ಲಿ ಅನೇಕ ಉದ್ಯಮಗಳು ಉದಾರವಾಗಿ ಸಹಾಯ ನೀಡುತ್ತಿವೆ. ಕೆಲವು ಉದ್ಯಮಗಳಲ್ಲಿ ಪ್ರತ್ಯೇಕ ಶಾಲೆಗಳಿವೆ. ಇನ್ನು ಕೆಲವು ಉದ್ಯಮಗಳಲ್ಲಿ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಅವಶ್ಯವಾದ ಪುಸ್ತಕ, ಸಾರಿಗೆ ಸೌಲಭ್ಯ ಹಾಗೂ ವಿದ್ಯಾರ್ಥಿವೇತನಗಳನ್ನು ಒದಗಿಸುವುದುಂಟು. ಮನೋರಂಜನೆಯ ಸೌಲಭ್ಯಗಳನ್ನು ಕೂಡ ಏರ್ಪಡಿಸಲಾಗುತ್ತಿದೆ.

ವಸತಿ ಸೌಲಭ್ಯ ಒದಗಿಸುವುದು ಸರ್ಕಾರದ ಕರ್ತವ್ಯವಾದರೂ ಅನೇಕ ಉದ್ಯೋಗದಾತರು ಅನುದಾನದ ಪ್ರಯೋಜನ ಪಡೆದು ಕಾರ್ಮಿಕರಿಗೆ ವಸತಿ ಏರ್ಪಡಿಸಿದ್ದಾರೆ. ಇದರ ಜೊತೆಗೆ, ಕಾರ್ಮಿಕರು ವಾಸಸ್ಥಾನದಿಂದ ಕಾರ್ಖಾನೆಗೆ ಹೋಗಿ ಬರಲು ಅನುಕೂಲವಾಗುವಂತೆ ಸಾರಿಗೆ ವ್ಯವಸ್ಥೆಯೂ ಅನೇಕ ಕಾರ್ಖಾನೆಗಳಲ್ಲಿವೆ. ಬೆಲೆಗಳ ತೀವ್ರ ಏರಿಕೆಯ ಕಾಲದಲ್ಲಿ ಕಾರ್ಮಿಕರಿಗೆ ಅವಶ್ಯವಾದ ಪದಾರ್ಥಗಳನ್ನು ನ್ಯಾಯಬೆಲೆಗಳಲ್ಲಿ ದೊರಕಿಸಲು ಅನುವಾಗುವಂತೆ ಬಳಕೆದಾರ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಉತ್ತೇಜನ ಕೊಟ್ಟಿರುವುದಲ್ಲದೆ, ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲೂ ವ್ಯವಸ್ಥೆ ಮಾಡಿರುತ್ತಾರೆ. ಇದಕ್ಕೆ ಅಗತ್ಯವಾದ ಬಂಡವಾಳ, ಕಟ್ಟಡ ಹಾಗೂ ಕಾರ್ಯನಿರ್ವಹಣೆಯ ಸೌಲಭ್ಯಗಳನ್ನು ಉದ್ಯಮ ಒದಗಿಸುತ್ತದೆ.

ಕಾರ್ಮಿಕ ಕಲ್ಯಾಣ ಸಾಧನೆಯಲ್ಲಿ ಉದ್ಯಮಗಳು ವಿಶೇಷ ಆಸ್ಥೆ ವಹಿಸಿರುವುವಾದರೂ ಈ ಬಗ್ಗೆ ರಾಷ್ಟ್ರೀಯ ಕಾರ್ಮಿಕ ಆಯೋಗ ನಡೆಸಿದ ಅಧ್ಯಯನದಿಂದ ಕೆಲವು ಅಪ್ರಿಯ ಸಂಗತಿಗಳು ಹೊರಬಿದ್ದಿವೆ. ಕಾರ್ಮಿಕರಿಗೆ ಕಾಯಿದೆಯ ಪ್ರಕಾರ ಒದಗಿಸಬೇಕಾದ ಸೌಲಭ್ಯಗಳನ್ನು ತೃಪ್ತಿಕರವಾಗಿ ಒದಗಿಸಲಾಗುತ್ತಿಲ್ಲವೆಂಬುದನ್ನೂ ಸಣ್ಣ ಕಾರ್ಖಾನೆಗಳಲ್ಲಂತೂ ಈ ಸೌಲಭ್ಯಗಳು ತೀರ ಕಡಿಮೆ ಎಂಬುದನ್ನೂ ಈ ಅಧ್ಯಯನ ಸ್ಪಷ್ಟಪಡಿಸಿದೆ. ಕಾರ್ಮಿಕ ಕಲ್ಯಾಣ ಕಾರ್ಯದ ಅಧಿಕವೆಚ್ಚ ಈ ಅಸಮರ್ಪಕತೆಗೆ ಒಂದು ಕಾರಣ. ಅನೇಕ ಕಾರ್ಖಾನೆಗಳು ಇದರ ಹೊರೆಯನ್ನು ವಹಿಸಲಾರದೆ ಅಥವಾ ವಹಿಸಲೊಲ್ಲದೆ ಕಾಯಿದೆಯ ಕಟ್ಟುಪಾಡುಗಳಿಂದ ತಪ್ಪಿಸಿಕೊಳ್ಳಲು ಯತ್ನಿಸುವುದು ಕಂಡುಬಂದಿದೆ.

ವಾಸ್ತವವಾಗಿ ಕಾರ್ಮಿಕ ಕಲ್ಯಾಣ ಸಾಧನೆಯ ಹೊಣೆ ಉದ್ಯೋಗದಾತರರು ಮಾತ್ರವಲ್ಲವೆಂದು ಹೇಳಲಾಗಿದೆ. ಅವರ ಜೊತೆಗೆ ಸರ್ಕಾರ ಹಾಗೂ ಕಾರ್ಮಿಕ ಸಂಘಗಳೂ ಈ ಹೊಣೆಯನ್ನು ವಹಿಸಿಕೊಳ್ಳಬೇಕು. ಪಾಶ್ಚಾತ್ಯ ದೇಶಗಳಲ್ಲಿ ಕೆಲವು ಸ್ವಪ್ರೇರಣೆಯ ಸಂಸ್ಥೆಗಳೂ ಈ ಕಾರ್ಯ ಕೈಗೊಳ್ಳುತ್ತಿವೆ. ಭಾರತದಲ್ಲಿ ಸರ್ಕಾರ ಈ ವಿಷಯದಲ್ಲಿ ಆಸ್ಥೆ ವಹಿಸಿದೆ. ಪ್ರತಿ ರಾಜ್ಯ ಸರ್ಕಾರವೂ ಅನೇಕ ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿ, ಅವರಿಗೆ ಚಿಕಿತ್ಸೆ, ಶಿಕ್ಷಣ, ಮನರಂಜನೆ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿದೆ. ಆದರೂ ಸರ್ಕಾರ ಇನ್ನೂ ಹೆಚ್ಚಿನ ಪಾತ್ರ ವಹಿಸಬೇಕಾಗುತ್ತದೆ. ಸರ್ಕಾರ ಹೊಸ ಹೊಸ ಕಲ್ಯಾಣ ಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಲ್ಲದೆ, ಉದ್ಯೋಗದಾತರನ್ನೂ ಈ ನಿಟ್ಟಿನಲ್ಲಿ ಪ್ರೋತ್ಸಾಹಿಸಿ ಸೂಕ್ತ ಸಹಾಯ ದ್ರವ್ಯ ಕೊಟ್ಟು ಇವನ್ನು ಬೆಳೆಸಬೇಕು. ಹಾಗೆಯೆ ಕಾರ್ಮಿಕ ಸಂಘಗಳೂ ಈ ವಿಷಯದಲ್ಲಿ ಹಿರಿಯ ಪಾತ್ರ ವಹಿಸಬಹುದು. ಅಹಮದಾಬಾದ್ ಹತ್ತಿ ಗಿರಣಿ ಕಾರ್ಮಿಕರ ಸಂಘ, ರೈಲ್ವೆ ಕಾರ್ಮಿಕರ ಸಂಘ ಹಾಗೂ ಕಾನ್ಪುರದ ಮಜ್ದೂರ್ ಸಭಾ–ಇವು ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿವೆ. ಆದರೆ ಉಳಿದ ಅನೇಕ ಕಾರ್ಮಿಕ ಸಂಘಗಳು ಈ ವಿಷಯದಲ್ಲಿ ಹೆಚ್ಚಿನ ಆಸ್ಥೆ ವಹಿಸಿಲ್ಲ. ಇವು ಕೇವಲ ಮುಷ್ಕರ ಮಂಡಳಿಗಳಂತೆ ಕೆಲಸ ಮಾಡುತ್ತಿರುವುದೇ ಹೊರತು ಕಾರ್ಮಿಕರ ಕಲ್ಯಾಣದ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಲ್ಲವೆಂಬುದು ಒಂದು ಟೀಕೆ. ಇವುಗಳ ಹಣದ ಕೊರತೆಯೂ ಈ ಬಗೆಯ ಸೌಲಭ್ಯದ ಆವಶ್ಯಕತೆಯ ಬಗ್ಗೆ ಅಜ್ಞಾನವೂ ಇವುಗಳ ಅನಾವಸ್ಥೆಗೆ ಇತರ ಕಾರಣಗಳು.
(ಎ.ಬಿ.ಎ.)

**ಕಾರ್ಮಿಕ ಕಾನೂನುಗಳು :** ಇತರರ ಅಧೀನದಲ್ಲಿ, ಎಂದರೆ ತಮ್ಮ ನೇಮಕದಾರರ, ಉದ್ಯೋಗದಾತರ, ಧಣಿಗಳ ಅಥವಾ ಯಜಮಾನರ ಕೈಕೆಳಗೆ, ದುಡಿಯುವ ಜನರ ಕೆಲಸಕ್ಕೆ ಸಂಬಧಿಸಿದಂತೆ ರಚಿತವಾದ ಎಲ್ಲ ಕಾರ್ಮಿಕ ಕಾನೂನುಗಳು (ಲೇಬರ್ ಲಾಸ್). ಇವನ್ನು ಕೈಗಾರಿಕಾ ಕಾನೂನುಗಳು ಅಥವಾ ಕೈಗಾರಿಕಾ ನ್ಯಾಯವೆಂದೂ ಕರೆಯುವುದುಂಟು. ಆದರೆ ಕೈಗಾರಿಕೋದ್ಯಮಗಳಲ್ಲಿ ದುಡಿಯುವವರು ಮಾತ್ರವೇ ಈ ಕಾನೂನುಗಳ ಪರಿಮಿತಿಯೊಳಕ್ಕೆ ಬರುವುದಿಲ್ಲವಾದ್ದರಿಂದ ಇವನ್ನು ಕಾರ್ಮಿಕ ಕಾನೂನುಗಳು ಎಂದು ಕರೆಯುವುದೇ ಸೂಕ್ತ. ಉದ್ಯೋಗದಾತನಿಗೂ ಅವನ ಅಧೀನದಲ್ಲಿ ಕೆಲಸ ಮಾಡುವವನಿಗೂ ಏರ್ಪಡುವ ಸಂಬಂಧವನ್ನು ಕಾನೂನಿನ ನಿಯಂತ್ರಣಕ್ಕೆ ಒಳಪಡಿಸುವುದು ಅವಶ್ಯ. ಯಜಮಾನ–ಕಾರ್ಮಿಕರ ನಡುವಣ ಸಂಬಂಧ ವಾಸ್ತವವಾಗಿರಲಿ ಅಥವಾ ಮುಂದೆ ಉದ್ಭವಿಸುವಂಥದಾಗಿರಲಿ, ಕಾರ್ಮಿಕನ ದುಡಿಮೆ ದೈಹಿಕವಾದ್ದಾಗಿರಲಿ, ಮಾನಸಿಕವಾದ್ದಾಗಿರಲಿ–ಇಂಥ ಎಲ್ಲ ಸಂದರ್ಭಗಳಿಗೂ ಕಾರ್ಮಿಕ ಕಾನೂನುಗಳು ಅನ್ವಯಿಸುತ್ತವೆ. ಕೆಲಸಗಾರ ನೇಮಕದಾರನಿಗೆ ಅಧೀನನೇ ಅಲ್ಲವೇ–ಎಂಬುದೇ ಪರಿಗಣಿಸಬೇಕಾದ ಅಂಶ. ಸ್ವತಂತ್ರವಾಗಿ ದುಡಿಯುವವನಿಗೆ ಕಾರ್ಮಿಕ ಕಾನೂನುಗಳು ಅನ್ವಯಿಸುವುದಿಲ್ಲ. ಆದರೆ ಅಧೀನವರ್ತಿ ಕೆಲಸಗಾರ ಯಾರು, ಸ್ವತಂತ್ರ ಗುತ್ತಿಗೆದಾರ ಯಾರು–ಎಂಬುದನ್ನು ನಿರ್ಣಯಿಸುವುದು ಸುಲಭವಲ್ಲ. ವೃತ್ತಿಪರಿಣತರ ದುಡಿಮೆಯ ಲಕ್ಷಣವನ್ನು ಕೂಡ ಅನೇಕ ವೇಳೆ ಖಚಿತವಾಗಿ ನಿರ್ಣಯಿಸುವುದು ಕಷ್ಟ . ಕೆಲಸಗಾರನ ಕೆಲಸದ ವಿಧಾನ, ಗುಣ ಮತ್ತು ಪರಿಮಾಣಗಳ ಮೇಲೆ ಯಜಮಾನನ ಹತೋಟಿ ಇರುವೆಡೆಗಳೆಲ್ಲ ಕಾರ್ಮಿಕ ಕಾನೂನುಗಳ ವ್ಯಾಪ್ತಿಗೆ ಒಳಪಡುತ್ತವೆ. ಈ ವ್ಯಾಪಕವಾದ ಅರ್ಥದಲ್ಲಿ ಪರಿಗಣಿಸಿದಾಗ, ಕಾರ್ಮಿಕರ ಸಂಘಟನೆ, ನಿರುದ್ಯೋಗ ನಿವಾರಣೆ, ಕೈಗಾರಿಕಾ ಸಂಬಂಧಗಳು, ಮುಷ್ಕರಗಳು, ಕಾರ್ಖಾನೆಗಳ ಬೀಗಮುದ್ರೆ–ಮುಂತಾದವಕ್ಕೆ ಸಂಬಂಧಿಸಿದ ಕಾನೂನುಗಳನ್ನೂ ಈ ಶೀರ್ಷಿಕೆಯ ಅಡಿಯಲ್ಲೇ ಪರಿಶೀಲಿಸಬೇಕಾಗುತ್ತದೆ. ಅವನ್ನೆಲ್ಲ ಪ್ರಸ್ತುತ ಲೇಖನ ಒಳಗೊಂಡಿಲ್ಲ. ಆ ವಿಶಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಲೇಖನಗಳಿವೆ. ಕಾರ್ಮಿಕರ ಕೆಲಸಕ್ಕೆ ಸಂಬಂಧಿಸಿದ ಸಾಮಾನ್ಯ ಕಾನೂನುಗಳನ್ನು ಇಲ್ಲಿ ವಿವೇಚಿಸಲಾಗಿದೆ. ದೇಶದ ಉತ್ಪಾದನ ಕಾರ್ಯದಲ್ಲಿ ನಿರತರಾದ ಮಾಲೀಕರೂ ಕಾರ್ಮಿಕರೂ

ಸಹವರ್ತಿಸಿ ನಡೆಯುವಂತೆ ಮಾಡುವುದು ಸರ್ಕಾರದ ಕರ್ತವ್ಯ. ಈ ಉದ್ದೇಶದಿಂದಲೇ ಕಾರ್ಮಿಕ ಕಾನೂನುಗಳು ಜಾರಿಗೆ ಬಂದಿವೆ. ನಿಷ್ಪಕ್ಷದೃಷ್ಟಿ, ನೀತಿಪಾಲನೆ, ಅಂತರರಾಷ್ಟ್ರೀಯ ಏಕರೂಪತೆ, ಜನತೆಯ ಆರ್ಥಿಕ ಆಡಳಿತ-ಇವು ಕಾರ್ಮಿಕ ಕಾನೂನುಗಳಿಗೆ ಆಧಾರಭೂತವಾದ ತತ್ತ್ವಗಳು.

**ಕಾರ್ಖಾನೆಗಳ ಕಾಯಿದೆ:** ಕಾರ್ಮಿಕ ಕಾನೂನುಗಳ ಪೈಕಿ ಅತ್ಯಂತ ಹಳೆಯವು ಬಹುಸಂಖ್ಯೆಯವೂ ಆದಂಥವು ಕಾರ್ಖಾನೆಗಳಲ್ಲಿಯ ಉದ್ಯೋಗಗಳಿಗೆ ಸಂಬಂಧಿಸಿದವು. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಕೈಗಾರಿಕಾಕರಣದ ಯುಗದಲ್ಲಿ ಕಾರ್ಖಾನೆಗಳ ಸಂಖ್ಯೆ ಬಹು ಶೀಘ್ರವಾಗಿ ವರ್ಧಿಸುತ್ತಿದೆ. ಅವುಗಳಲ್ಲಿಯ ಉದ್ಯೋಗದ ಸ್ಥಿತಿಗಳನ್ನು ಕ್ರಮಗೊಳಿಸುವುದು ಅಗತ್ಯವೆಂದು ಸರ್ಕಾರ ಪರಿಗಣಿಸಿದೆ. 1881ರಲ್ಲಿ ಜಾರಿಗೆ ಬಂದ ಭಾರತೀಯ ಕಾರ್ಖಾನೆಗಳ ಕಾಯಿದೆ ಅತ್ಯಂತ ಪ್ರಾಚೀನವಾದದ್ದು. ಭಾರತದ ಪ್ರಥಮ ಕೈಗಾರಿಕೋದ್ಯಮಗಳಾದ ಹತ್ತಿಗಿರಣಿಗಳಲ್ಲಿಯ ಉದ್ಯೋಗ ಸ್ಥಿತಿಗಳನ್ನು ಕ್ರಮಗೊಳಿಸುವ ಉದ್ದೇಶದಿಂದ ಈ ಕಾಯಿದೆಯನ್ನು ಜಾರಿಗೆ ತರಲಾಯಿತು. ಇದರ ಅನಂತರ ಅನೇಕ ಕಾಯಿದೆಗಳು ಬಂದು ಮೊದಲನೆಯ ಕಾಯಿದೆಯ ಉದ್ದೇಶಗಳನ್ನು ಮುಂದುವರಿಸಿದುವು. 1948ರಲ್ಲಿ ಜಾರಿಗೆ ಬಂದ ಕಾರ್ಖಾನೆಗಳ ಕಾಯಿದೆ ಅತ್ಯಂತ ವ್ಯಾಪಕವಾಗಿವೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಆರೋಗ್ಯ, ಸಂರಕ್ಷಣೆ, ಕಲ್ಯಾಣ, ವಯಸ್ಕರ ಕೆಲಸದ ಅವಧಿ, ಕಿರಿಯರ ನೇಮಕ, ಕೂಲಿಸಹಿತ ರಜಾ ನೀಡಿಕೆ ಮುಂತಾದ ನಾನಾ ವಿಚಾರಗಳನ್ನು ಕುರಿತ ನಿಬಂಧನೆಗಳಿವೆ. ಇವನ್ನು ಅನುಸರಿಸುವ ಸಲುವಾಗಿ ಪ್ರತಿಯೊಂದು ಕಾರ್ಖಾನೆಯ ಒಡೆಯ, ಅನುಭವದಾರ, ವ್ಯವಸ್ಥಾಪಕ ಮುಂತಾದವರ ಹೊಣೆಯನ್ನು ನಿರ್ಧರಿಸಲಾಗಿದೆ. ಈ ಹೊಣೆ ನಿರ್ವಹಿಸದಿರುವುದು ದಂಡಾರ್ಹ ಅಪರಾಧ.

**ಕಾರ್ಖಾನೆಗಳಲ್ಲಿ ಎರಡು ವಿಧ:** ವಿದ್ಯುತ್ ಅಥವಾ ಬೇರಾವ ನಿರ್ಜೀವಿ ಶಕ್ತಿಯ ನೆರವಿನಿಂದ ಉತ್ಪಾದನೆಯ ಕಾರ್ಯ ನಡೆಸುವುದು ಒಂದು ವಿಧವಾದರೆ, ಅಂಥ ಯಾವ ನಿರ್ಜೀವಿ ಶಕ್ತಿಯ ನೆರವೂ ಇಲ್ಲದೆ ಉತ್ಪಾದನೆಯ ಕಾರ್ಯ ನಡೆಸುವುದು ಇನ್ನೊಂದು ವಿಧ. 10 ಅಥವಾ ಅದಕ್ಕಿಂತ ಹೆಚ್ಚು ಮಂದಿ ಉದ್ಯೋಗಿಗಳನ್ನುಳ್ಳ ಮೊದಲನೆಯ ಬಗೆಯ ಕಾರ್ಖಾನೆಯೂ 20 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ನೇಮಿಸಿಕೊಂಡಿರುವ ಎರಡನೆಯ ಬಗೆಯ ಕಾರ್ಖಾನೆಯೂ ಈ ಕಾಯಿದೆಯ ವ್ಯಾಪ್ತಿಯೊಳಕ್ಕೆ ಬರುತ್ತವೆ. ಅನುಕ್ರಮವಾಗಿ ಇಷ್ಟು ಕನಿಷ್ಠ ಸಂಖ್ಯೆಗಳನ್ನು ಹೊಂದಿರದ ಉತ್ಪಾದನಾಲಯಗಳು ಈ ಕಾಯಿದೆಯ ವ್ಯಾಖ್ಯೆಯ ಪ್ರಕಾರ ಕಾರ್ಖಾನೆಗಳೆನಿಸಿಕೊಳ್ಳುವುದಿಲ್ಲ. ಗಣಿ, ರೈಲ್ವೆ ರನಿಂಗ್ ಷೆಡ್ ಇವು ಈ ಕಾಯಿದೆಗೆ ಒಳಪಡುವುದಿಲ್ಲ. ಇವುಗಳ ಕಾರ್ಮಿಕರಿಗೆ ಪ್ರತ್ಯೇಕ ಕಾಯಿದೆಗಳಿವೆ. ಕಾರ್ಖಾನೆಯಲ್ಲಿಯ ರದ್ದಿ, ದೂಳು, ಹೊಗೆ ಮುಂತಾದವುಗಳ ಉಚ್ಚಾಟನೆಗೆ ಕ್ರಮ ಕೈಕೊಳ್ಳಬೇಕು. ಗಾಳಿ ಬೆಳಕುಗಳಿಗೆ ಅವಕಾಶವಿರಬೇಕು. ಕಾರ್ಖಾನೆಯ ಶಾಖ ಹಿತಕರವಾದ ಮಟ್ಟದಲ್ಲಿರಬೇಕು. ಅತಿ ಶೈತ್ಯ ಇರಬಾರದು. ಕಾರ್ಮಿಕನ ಆರೋಗ್ಯಕ್ಕೆ ಬಾಧಕವುಂಟಾಗಬಾರದು. ಅಧಿಕ ಸಂದಣಿಯನ್ನೂ ನಿಷೇಧಿಸಲಾಗಿದೆ. ಕಾರ್ಮಿಕರಿಗೆ ಕುಡಿಯುವ ನೀರನ್ನೊದಗಿಸುವುದೂ ನೈರ್ಮಲ್ಯ ಸಾಧನೆಯೂ ಮುಖ್ಯವೇ. ಅಪಾಯಕಾರಿ ಯಂತ್ರಗಳ ಸುತ್ತ ಬೇಲಿ ಅಥವಾ ಕಟಕಟೆ ನಿರ್ಮಿಸಬೇಕು. ಅಂಥ ಯಂತ್ರಗಳನ್ನು ನಡೆಸಲು ಮಕ್ಕಳನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಕಾರ್ಮಿಕರಿಗಾಗಿ ವಿಶ್ರಾಂತಿಗೃಹ, ಪ್ರಥಮ ಚಿಕಿತ್ಸೆ, ಉಪಾಹಾರ ಮಂದಿರ, ಹೆಂಗಸರು ಮಕ್ಕಳಿಗಾಗಿ ಪ್ರತ್ಯೇಕ ಕೋಣೆಗಳು-ಇಂಥ ಸೌಲಭ್ಯಗಳನ್ನೂ ಕಲ್ಪಿಸುವುದು ಅವಶ್ಯ. ಕಾರ್ಮಿಕರ ದುಡಿಮೆಯ ಕಾಲವನ್ನು ನಿಗದಿ ಮಾಡಲಾಗಿದೆ. 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆಗಳಲ್ಲಿ ನೇಮಿಸಿಕೊಳ್ಳುವಂತಿಲ್ಲ.

**ಕಾರ್ಮಿಕರ ನಷ್ಟ ಪರಿಹಾರ ಕಾಯಿದೆ:** ಕಾರ್ಮಿಕನಿಗೆ ತೊಂದರೆಯಾಗದಂತೆ, ನೆಮ್ಮದಿ ಭಂಗವಾಗದಂತೆ, ಅವನ ಆರೋಗ್ಯ ಕೆಡದಂತೆ ನೋಡಿಕೊಳ್ಳುವುದು ಕಾರ್ಖಾನೆ ಕಾಯಿದೆಯ ಮತ್ತು ಅಂಥ ಇತರ ಕಾಯಿದೆಗಳ ಉದ್ದೇಶ. ಕಾರ್ಮಿಕರ ದುಡಿಮೆಯ ಸಮಯದಲ್ಲಿ ಸಂಭವಿಸಬಹುದಾದ ಕ್ಷತಿ ಅಥವಾ ಸಾವಿಗೆ ಸೂಕ್ತ ಪರಿಹಾರ ನೀಡುವ ಕಾಯಿದೆ 1923ಕ್ಕೆ ಹಿಂದೆ ಭಾರತದಲ್ಲಿ ಇರಲಿಲ್ಲ. ನೊಂದ ಕಾರ್ಮಿಕರು ಪರಿಹಾರಕ್ಕಾಗಿ ನ್ಯಾಯಾಲಯಗಳಿಗೆ ಹೋಗಲು ಅವರಿಗೆ ಆರ್ಥಿಕ ಶಕ್ತಿಯಿರಲಿಲ್ಲ. ಈ ತೊಂದರೆಯ ನಿವಾರಣೆಗಾಗಿ 1923ರಲ್ಲಿ ಕಾರ್ಮಿಕರ ನಷ್ಟ ಪರಿಹಾರ ಕಾಯಿದೆ ಅಂಗೀಕೃತವಾಗಿ ಮರುವರ್ಷದಿಂದ ಜಾರಿಗೆ ಬಂತು. 400 ರೂ.ಗಳಿಗೆ ಮೀರದ ಮಾಸಿಕ ಕೂಲಿ ಪಡೆಯುವ ಪ್ರತಿಯೊಬ್ಬ ಕಾರ್ಮಿಕನಿಗೂ ಇದು ಅನ್ವಯವಾಗುತ್ತದೆ. ಉದ್ಯೋಗದ ಫಲವಾಗಿ ಮತ್ತು ಆ ಕಾಲದಲ್ಲಿ ಸಂಭವಿಸುವ ವೈಯಕ್ತಿಕ ಕ್ಷತಿಗೆ (ಇಂಜುರಿ) ಮತ್ತು ಆ ಕ್ಷತಿಯಿಂದಾದ ಪ್ರಾಣನಷ್ಟಕ್ಕೆ ನೇಮಕದಾರ ನೀಡಬೇಕಾದ ಪರಿಹಾರದ ದರಗಳನ್ನು ನಿಷ್ಕರ್ಷಿಸಲಾಗಿದೆ. ಕಾರ್ಮಿಕ ಪರಿಹಾರವನ್ನು ಇತ್ಯರ್ಥ ಮಾಡುವುದಕ್ಕಾಗಿ ಪ್ರತಿಯೊಂದು ರಾಜ್ಯ ಸರ್ಕಾರವೂ ಒಬ್ಬ ಕಮಿಷನರನ್ನು ನೇಮಿಸಬೇಕು. ಈ ಕಾಯಿದೆಯ ಅಡಿಯಲ್ಲಿ ಪರಿಹಾರ ಪಡೆಯಲಿಚ್ಛಿಸಿದ ಕಾರ್ಮಿಕನಿಗೆ ಸಿವಿಲ್ ನ್ಯಾಯಾಲಯದಲ್ಲಿ ತನ್ನ ನೇಮಕದಾರನ ವಿರುದ್ಧ ದಾವ ಹೂಡಲೂ ಅವಕಾಶವುಂಟು. ಕಾರ್ಮಿಕ ಪರಿಹಾರ ಕಾಯಿದೆಯನ್ವಯ ಹೆಚ್ಚು ಶೀಘ್ರವಾಗಿ ಪರಿಹಾರ ದೊರಕಿಸಿಕೊಳ್ಳುವುದು ಸಾಧ್ಯ. ಅಲ್ಲದೆ ಈ ಕಾಯಿದೆಯ ವ್ಯಾಪ್ತಿ ಹೆಚ್ಚು ವಿಶಾಲ. ನೇಮಕದಾರನೇ ಕಾರ್ಮಿಕನ ಕ್ಷತಿ ಅಥವಾ ಸಾವಿಗೆ ಕಾರಣನಲ್ಲದಿದ್ದಾಗಲೂ ಪರಿಹಾರ ಪಡೆಯಬಹುದು. ಕೆಲಸದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕಾರ್ಮಿಕ ಹೋಗುತ್ತಿದ್ದಾಗ ಅಪರಿಚಿತನೊಬ್ಬನಿಂದ ಕೊಲೆ ಆದಾಗಲೂ ನೇಮಕದಾರ ಪರಿಹಾರ ನೀಡಬೇಕಾಗಿ ಬಂದ ಘಟನೆಯ ದಾಖಲೆಯಿದೆ. ಸಾಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಇದು ಸಾಧ್ಯವಾಗದು.

**ಕೂಲಿ ಪಾವತಿ ಕಾಯಿದೆ (1936):** ಕಾರ್ಖಾನೆಗಳ ಅಥವಾ ರೈಲ್ವೆಗಳ ಉದ್ಯೋಗಿಗಳಿಗೆ ಕೂಲಿ ಪಾವತಿ ಮಾಡಬೇಕಾದ ಸಮಯ ಮತ್ತು ವಿಧಾನಗಳನ್ನು ನಿಬಂಧಿಸುವುದು ಇದರ ಉದ್ದೇಶ. ಇತರ ಕೈಗಾರಿಕ ಉದ್ಯೋಗಿಗಳಿಗೂ (ಎಸ್ಟಾಬ್ಲಿಷ್‌ಮೆಂಟ್ಸ್) ಇದನ್ನು ಅನ್ವಯಿಸಲು ರಾಜ್ಯ ಸರ್ಕಾರಗಳಿಗೆ ಅವಕಾಶವುಂಟು. ಟ್ರಾಮ್‌ವೇ, ಮೋಟಾರ್ ಸಾರಿಗೆ, ಬಂದರು, ಗಣಿ, ಪ್ಲಾಂಟೇಷನ್, ಕಾರ್ಯಗಾರ ಮುಂತಾದವೆಲ್ಲ ಕೈಗಾರಿಕಾ ಉದ್ಯೋಗ ವಲಯದ ವ್ಯಾಖ್ಯೆಯೊಳಗೆ ಬರುತ್ತವೆ. ಆ ಅವಧಿ ಒಂದು ತಿಂಗಳಿಗಿಂತ ಅಧಿಕವಾಗಿರಬಾರದು. 1,000 ಜನಕ್ಕಿಂತ ಕಡಿಮೆ ಉದ್ಯೋಗಿಗಳಿರುವ ಪ್ರತಿಯೊಂದು ಸ್ಥಾಪನವೂ ಕೂಲಿ ಅವಧಿಯ ಕೊನೆಯ ದಿನ ಕಳೆದ ಏಳು ದಿನಗಳೊಳಗೆ ಅವರಿಗೆ ಕೂಲಿ ಪಾವತಿ ಮಾಡಬೇಕು. ಉದ್ಯೋಗಿಗಳ ಸಂಖ್ಯೆ ಇದಕಿಂತ ಹೆಚ್ಚಾಗಿದ್ದಲ್ಲಿ ಮೇಲೆ ಹೇಳಿದ ಅವಧಿಯ ಅನಂತರ ಹತ್ತು ದಿನಗಳೊಳಗಾಗಿ ಪಾವತಿ ಮಾಡಬೇಕು. ಯಾವ ಉದ್ಯೋಗಿಯನ್ನಾದರೂ ಕೆಲಸದಿಂದ ತೆಗೆದು ಹಾಕಿದಾಗ, ಅವನಿಗೆ ಸಲ್ಲಬೇಕಾದ ಕೂಲಿಯನ್ನು ಆ ದಿನದಿಂದ ಎರಡನೆಯ ಕೆಲಸದ ದಿನ ಮುಗಿಯುವುದರೊಳಗೆ ಪಾವತಿ ಮಾಡಬೇಕು. ಉದ್ಯೋಗಿಗೆ ಸಲ್ಲಬೇಕಾದ ಕೂಲಿಯ ಮೊಬಲಗಿನಿಂದ ಕಾಯಿದೆಯಲ್ಲಿ ಅಧಿಕಾರ ನೀಡಲಾದವಕ್ಕಲ್ಲದೆ ಬೇರಾವುದಕ್ಕೂ ಹಣವನ್ನು ಕಳೆಯಬಾರದು. ಕೂಲಿ ಪಾವತಿ ಕಾಯಿದೆಯ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಬಂಧನೆಗಳ ಸಾರಾಂಶವನ್ನು ಪ್ರತಿಯೊಬ್ಬ ನೇಮಕದಾರನೂ ಇಂಗ್ಲಿಷಿನಲ್ಲೂ ಅಲ್ಲಿ ಕೆಲಸಮಾಡುವವರಲ್ಲಿ ಬಹು ಸಂಖ್ಯಾತರಾದವರ ಬಾಷೆಯಲ್ಲೂ ಕಾರ್ಖಾನೆಯ ಪ್ರಕಟನೆ ಹಲಗೆಯ ಮೇಲೆ ಪ್ರದರ್ಶಿಸಬೇಕು.

**ಕನಿಷ್ಠ ಕೂಲಿ ಕಾಯಿದೆ (1948)** : ವಿವಿಧ ಉದ್ಯೋಗಗಳಲ್ಲಿ ಪಾವತಿ ಮಾಡಬೇಕಾದ ಕನಿಷ್ಠ ಕೂಲಿಯನ್ನು ನಿಗದಿ ಮಾಡಲು ಈ ಕಾಯಿದೆಯಿಂದ ರಾಜ್ಯ ಸರ್ಕಾರಗಳಿಗೆ ಅಧಿಕಾರ ದತ್ತವಾಗಿದೆ. ಇದು ಅಧಿಕಾರ ಮಾತ್ರವೇ ಅಲ್ಲ, ಅವುಗಳ ಕರ್ತವ್ಯ. ನಿಗದಿಯಾದ ಕನಿಷ್ಠ ಕೂಲಿಗಿಂತ ಕಡಿಮೆ ಕೊಡುವ ಯಜಮಾನ ದಂಡಾರ್ಹ ಅಪರಾಧ ಮಾಡಿದಂತೆ. ಅವನಿಗೆ ಸಜಾ ಅಥವಾ ಜುಲ್ಮಾನೆಯನ್ನು-ಅಥವಾ-ಎರಡನ್ನೂ ವಿಧಿಸಬಹುದು.

**ಉದ್ಯೋಗಿಗಳ ರಾಜ್ಯ ವಿಮಾ ಕಾಯಿದೆ (1948)** : ಉದ್ಯೋಗಿಗಳ ಕಾಯಿಲೆ, ಪ್ರಸೂತಿ, ಅಂಗಹಾನಿ, ಅವಲಂಬಿಗಳು, ವೈದ್ಯಕೀಯ ಪರಿಕ್ಷಣ-ಮುಂತಾದವಕ್ಕಾಗಿ ಸೌಲಭ್ಯ ನೀಡುವುದು ಈ ಕಾಯಿದೆಯ ಉದ್ದೇಶ. ಇದಕ್ಕಾಗಿ ನಿರ್ಮಿಸಲಾಗಿರುವ ಉದ್ಯೋಗಿಗಳ ರಾಜ್ಯ ವಿಮಾ ನಿಧಿಗೆ ಸರ್ಕಾರವೂ ಯಜಮಾನರೂ ಉದ್ಯೋಗಿಗಳೂ ಅಂಶದಾನ (ಕಾಂಟ್ರಿಬ್ಯೂಷನ್) ನೀಡಬೇಕು. ಉದ್ಯೋಗಿಯ ಅಂಶದಾನವನ್ನು ಅವನಿಗೆ ಕೊಡಬೇಕಾದ ಕೂಲಿಯಿಂದ ಕಳೆದು ನಿಧಿಗೆ ಕಟ್ಟಲಾಗುತ್ತದೆ. ಈ ಕಾರ್ಯಭಾರ ನಿರ್ವಹಿಸುವುದಕ್ಕಾಗಿ ಉದ್ಯೋಗಿಗಳ ರಾಜ್ಯ ವಿಮಾ ಕಾರ್ಪೋರೇಷನ್ ಸ್ಥಾಪಿತವಾಗಿದೆ. ಕೇಂದ್ರ, ರಾಜ್ಯ ಸರ್ಕಾರಗಳ, ನೇಮಕದಾರರ, ಉದ್ಯೋಗಿಗಳ ಮತ್ತು ವೈದ್ಯ ವೃತ್ತಿ ನಿರತರ ಪ್ರತಿನಿಧಿಗಳು ಇದರ ಸದಸ್ಯರು.

**ಉದ್ಯೋಗಿಗಳ ಭವಿಷ್ಯ ನಿಧಿಗಳ ಕಾಯಿದೆ (1952):** ಯಾವುದೇ ಸ್ಥಾಪನದ ಉದ್ಯೋಗಿಗಳಿಗಾಗಿ ಭವಿಷ್ಯ ನಿಧಿ (ಪ್ರಾವಿಡೆಂಟ್ ಫಂಡ್) ಸ್ಥಾಪಿಸಿ, ಅದಕ್ಕೆ ಉದ್ಯೋಗಿಯ ಕೂಲಿಯ ಮೊಬಲಗಿಗೆ ಅನುಗುಣವಾಗಿ ನೇಮಕದಾರ ಮತ್ತು ಉದ್ಯೋಗಿ ಇವರಿಬ್ಬರಿಂದಲೂ ಅಂಶದಾನ ಪಡೆದು, ಉದ್ಯೋಗಿ ನಿವೃತ್ತನಾದಾಗ ಅದನ್ನು ಅವನಿಗೆ ಬಡ್ಡಿಯೊಂದಿಗೆ ವಾಪಸು ಕೊಡುವ ವ್ಯವಸ್ಥೆ ಮಾಡುವುದು ಈ ಕಾಯಿದೆಯ ಉದ್ದೇಶ.

**ಕೈಗಾರಿಕಾ ವಿವಾದಗಳ ಕಾಯಿದೆ (1947):** ನೇಮಕದಾರರಿಗೂ ಉದ್ಯೋಗಿಗಳಿಗೂ ನಡುವೆ ವಿವಾದ ಉದ್ಭವಿಸದಂತೆ ತಡೆಯುವುದೂ ಒಂದು ವೇಳೆ ಉದ್ಭವಿಸಿದರೆ ಅದನ್ನು ಇತ್ಯರ್ಥಪಡಿಸುವುದು ಈ ಕಾಯಿದೆಯ ಉದ್ದೇಶ. ಈ ಕಾಯಿದೆಗೆ ಆಗಾಗ್ಗೆ ಸೂಕ್ತ ತಿದ್ದುಪಡಿಗಳನ್ನು ಜಾರಿಗೆ ತರಲಾಗಿದೆ. ನಿಗದಿ ಮಾಡಲಾದ ಕನಿಷ್ಠ ಸಂಖ್ಯೆಗಿಂತ ಕಡಿಮೆ ಉದ್ಯೋಗಿಗಳಿಲ್ಲದ ಪ್ರತಿಯೊಂದು ಕೈಗಾರಿಕಾ ಸ್ಥಾಪನದಲ್ಲೂ ಕಾರ್ಮಿಕರ ಸಮಿತಿಯೊಂದನ್ನು ರಚಿಸಬೇಕು. ನೇಮಕದಾರ, ಕಾರ್ಮಿಕರು-ಎರಡೂ ಪಕ್ಷಗಳ ಸಮಸಮ ಪ್ರತಿನಿಧಿಗಳಿರುವ ಈ ಸಮಿತಿಯ ಮುಖ್ಯ ಉದ್ದೇಶವೆಂದರೆ ಉದ್ಯೋಗಿಗಳ ಮತ್ತು ನೇಮಕದಾರರ ನಡುವೆ ಸಾಮರಸ್ಯ ಸ್ಥಾಪನೆ. ಕಾರ್ಮಿಕರಿಗೆ ಸಂಬಂಧಿಸಿದ ಎಲ್ಲ ವಿಚಾರಗಳ ಬಗ್ಗೆಯೂ ಅಭಿಪ್ರಾಯ ವ್ಯಕ್ತಪಡಿಸಲು ಮತ್ತು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಸಮಿತಿ ಪ್ರಯತ್ನಿಸುತ್ತದೆ.

ಯಾವ ವಿಚಾರದಲ್ಲಾದರೂ ವಿವಾದ ಉದ್ಭವಿಸಿದ ಸಂದರ್ಭದಲ್ಲಿ ಎರಡೂ ಪಕ್ಷಗಳ ನಡುವೆ ಸಂಧಾನ ನಡಸಿ ರಾಜಿ ಮಾಡಿಸಲು ಸಂಧಾನಾಧಿಕಾರಿಗಳನ್ನು ನೇಮಿಸಲು ಸರ್ಕಾರಕ್ಕೆ ಅಧಿಕಾರವುಂಟು. ಅವರಿಂದ ವಿವಾದ ಇತ್ಯರ್ಥವಾಗದಿದ್ದರೆ ಸರ್ಕಾರ ಅನುಸರಿಸಬಹುದಾದ ಕ್ರಮಗಳು ಇವು : 1 ರಾಜಿ ಮಂಡಳಿಯೊಂದಕ್ಕೆ ವಿವಾದದ ಸಲ್ಲಿಕೆ; 2 ವಿವಾದಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ವಿಚಾರಣೆ ನಡೆಸಿ ವರದಿ ಒಪ್ಪಿಸಲು ವಿಚಾರಣಾಲಯಕ್ಕೆ ಅದರ ಸಲ್ಲಿಕೆ; 3 ಕೆಲಸಗಾರರ ವಜಾ, ಅವರಿಗೆ ನೀಡಲಾಗಿದ್ದ ಸೌಲಭ್ಯಗಳ ರದ್ದು, ಮುಷ್ಕರ, ಬೀಗಮುದ್ರೆ ಮುಂತಾದ ವಿಚಾರಗಳಿಗೆ ಸಂಬಂಧಿಸಿದ್ದಂತೆ ಉದ್ಭವಿಸುವ ವಿವಾದಗಳನ್ನು ವಿಚಾರಣೆಗಾಗಿ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸುವುದು ; 4 ವಿವಾದದ ಬಗ್ಗೆ ನ್ಯಾಯ ನಿರ್ಣಯ (ಅಡ್ಜುಡಿಕೇಷನ್) ನೀಡಲು ನ್ಯಾಯಪೀಠವೊಂದಕ್ಕೆ ಅದನ್ನು ಒಪ್ಪಿಸುವುದು. ವಿವಾದಕ್ಕೆ ಸಂಬಂಧಿಸಿದ ಪಕ್ಷಗಳು ತಮ್ಮ ವ್ಯಾಜ್ಯವನ್ನು ಪಂಚಾಯಿತಿಗೆ ಒಪ್ಪಿಸಬಹುದು. ಮೇಲೆ ಹೇಳಿದ ನಾನಾ ಪ್ರಾಧಿಕಾರಗಳ (ಅಥಾರಿಟೀಸ್) ರಚನೆ, ಅವುಗಳ ಕಾರ್ಯಭಾರ, ಕರ್ತವ್ಯ–ಇವನ್ನೆಲ್ಲ ಕಾಯಿದೆಯಲ್ಲಿ ವಿವರಿಸಲಾಗಿದೆ. ಕಾನೂನಿಗೆ ವಿರೋಧವಾದ ರೀತಿಯಲ್ಲಿ ಮುಷ್ಕರ ಅಥವಾ ಕಾರ್ಖಾನೆಯ ಬೀಗಮುದ್ರೆಗೆ ಕಾರಣರಾದವರು ಕಾಯಿದೆಯ ಪ್ರಕಾರ ಶಿಕ್ಷಾರ್ಹರು. ಕೇಂದ್ರ ಸರ್ಕಾರದ ಸೂಚನೆಯಂತೆ ನೇಮಕದಾರರ ಮತ್ತು ಉದ್ಯೋಗಿಗಳ ಅಖಿಲಭಾರತ ಸಂಸ್ಥೆಗಳು ಕೈಗಾರಿಕೆಯಲ್ಲಿ ಶಿಸ್ತಿಗೆ ಸಂಬಂಧಿಸಿದಂತೆ ನೀತಿ ಸಂಹಿತೆಯೊಂದನ್ನು ರಚಿಸಿಕೊಂಡಿವೆ.

ಕಾರ್ಮಿಕರ ಹಿತರಕ್ಷಣೆಗಾಗಿ ಇನ್ನೂ ಅನೇಕ ಕಾಯಿದೆಗಳು ಜಾರಿಯಲ್ಲಿದೆ. ಮಹಿಳಾ ಉದ್ಯೋಗಿಗಳಿಗೆ ಪ್ರಸೂತಿಯ ಕಾಲದಲ್ಲಿ ಸಂಬಳ ಸಹಿತ ರಜಾ ನೀಡಿಕೆ, ಹಡಗು ಕಟ್ಟೆಗಳಲ್ಲಿ ಕೆಲಸ ಮಾಡುವವರ ಉದ್ಯೋಗ ನಿಯಂತ್ರಣ, ವ್ಯಾಪಾರ ನೌಕೆಗಳ ಕಲಾಪಗಳಿಗೆ ಸಂಬಂಧಿಸಿದಂತೆ ನಿಬಂಧನೆಗಳ ರಚನೆ–ಮುಂತಾದ ವಿಶಿಷ್ಟೋದ್ದೇಶಗಳಿಗಾಗಿಯೂ ಕಾಯಿದೆಗಳು ಜಾರಿಯಲ್ಲಿದೆ. (ಬಿ.ವಿ.ಬಿ; ಆರ್.ಕೆ.; ಜಿ.ಬಿ.ಕೆ.)

**ಕಾರ್ಮಿಕ ದಿನ :** ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಕಾರ್ಮಿಕ ಸಂಘಗಳು ಮತ್ತು ಸಮಾಜವಾದಿ ಪಕ್ಷಗಳು ಮುಖ್ಯವಾಗಿ ಆಚರಿಸುವ ಸಂಭ್ರಮದ ಸಾರ್ವಜನಿಕ ಉತ್ಸವ ದಿನ (ಲೇಬರ ಡೇ). ಕಾರ್ಮಿಕರ ಮೆರವಣಿಗೆ, ಪ್ರದರ್ಶನ, ಸಭೆ–ಇವು ಆ ದಿನದ ವಿಶೇಷಗಳು.

ಬಹುತೇಕ ರಾಷ್ಟ್ರಗಳಲ್ಲಿ ಕಾರ್ಮಿಕ ದಿನವನ್ನು ಮೇ ತಿಂಗಳ ಮೊದಲ ದಿನದಂದು ಆಚರಿಸಲಾಗುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಕೆನಡಗಳಲ್ಲಿ ಅಂದು ಈ ದಿನವನ್ನಾಚರಿಸುವುದಿಲ್ಲ. ಇಟಲಿಯಲ್ಲಿ ಮೇ ದಿನಾಚರಣೆಯನ್ನು ನಿಷೇಧಿಸಲಾಗಿತ್ತಲ್ಲದೆ, ಅದರ ಬದಲು ರೋಮಿನ ಸ್ಥಾಪನೆಯ ದಿನವನ್ನಾಚರಿಸುವ ಏರ್ಪಾಡು ಮಾಡಲಾಗಿತ್ತು. ಸೋವಿಯತ್ ದೇಶದಲ್ಲಿ ಮೇ 1 ಸಾರ್ವಜನಿಕ ರಜಾ ದಿನ.

ಹಳೆಯ ಮೇ ದಿನಾಚರಣೆಯೂ ಕಾರ್ಮಿಕ ದಿನವೂ ಒಂದೇ ಎಂಬುದು ಅನೇಕ ಸಮಾಜವಾದಿ ಲೇಖಕರ ಅಭಿಪ್ರಾಯ. ಆದರೆ ಅದು ಬೇರೆ, ಕಾರ್ಮಿಕ ದಿನ ಬೇರೆ–ಎಂದೂ ವಾದಿಸಲಾಗಿದೆ. ಕಾರ್ಮಿಕ ಪ್ರಭುತ್ವದ ಶುಭಯುಗದ ಉದಯದ ಕುರುಹಾಗಿ ಮೇ 1ರಂದು ಉತ್ಸವಾಚರಣೆ ಮಾಡಬೇಕೆಂದು ರಾಬರ್ಟ್ ಓವೆನ್ ಸೂಚಿಸಿದ್ದ. ಆದರೆ ವಾಸ್ತವವಾಗಿ 1889ಕ್ಕಿಂತ ಮುಂಚೆ ಮೇ ದಿನಾಚರಣೆ ಮಾಡಿದ್ದಕ್ಕೆ ಆಧಾರಗಳು ದೊರಕುವುದಿಲ್ಲ. ಆ ವರ್ಷ ಪ್ಯಾರಿಸಿನಲ್ಲಿ ಸಮಾವೇಶ ಗೊಂಡಿದ್ದ ಸಮಾಜವಾದಿ ಅಂತಾರಾಷ್ಟ್ರೀಯದ ಪ್ರಥಮ ಅಧಿವೇಶನದಲ್ಲಿ ಮೇ 1ನೆಯ ದಿನಾಂಕವನ್ನು (ಅದು ವಾರದ ಯಾವ ದಿನವೇ ಬರಲಿ) ವಾರ್ಷಿಕ ಅಂತಾರಾಷ್ಟ್ರೀಯ ಉತ್ಸವದಿನವೆಂದು ಆಚರಿಸಬೇಕೆಂದು ನಿರ್ಧರಿಸಲಾಯಿತು. ಮೇ 1ರಂದು ಸಾರ್ವಜನಿಕ ರಜಾದಿನವೆಂದು ಘೋಷಿಸಬೇಕೆಂದು ಒತ್ತಾಯಪಡಿಸಲು ನೇರ ಕ್ರಮ ಕೈಗೊಳ್ಳಬೇಕೆಂದೂ ನಿರ್ಣಯಿಸಲಾಯಿತು.

1890ರ ದಶಕದಿಂದ ಯುರೋಪಿನ ಅನೇಕ ರಾಷ್ಟ್ರಗಳಲ್ಲಿ ಮೇ ತಿಂಗಳ 1ರಂದು ಕಾರ್ಮಿಕ ದಿನವನ್ನಾಚರಿಸಲಾಗುತ್ತಿದೆ. ಅಂದು ಸಾಮಾನ್ಯವಾಗಿ ಕಾರ್ಮಿಕ ರಜಾದಿನ, ಸೋವಿಯತ್ ದೇಶವೇ ಮುಂತಾದ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಈ ದಿನಾಚರಣೆ ವಿಶಿಷ್ಟವಾದ್ದು. ಮಾಸ್ಕೋದಲ್ಲಿ ನಡೆಯುವ ಮೇ ದಿನದ ಉತ್ಸವ–ಕವಾಯಿತು ವಿಶ್ವವಿಖ್ಯಾತವಾದ್ದು. ಬ್ರಿಟನಿನಲ್ಲಿ ಕಾರ್ಮಿಕ ದಿನವನ್ನು ಮೇ ದಿನದ ಅನಂತರದ ಪ್ರಥಮ ಭಾನುವಾರದಂದು ಆಚರಿಸುವುದು ಸಾಮಾನ್ಯ. ಲಂಡನಿನಲ್ಲಿ ಹೈಡ್ ಪಾರ್ಕಿನಲ್ಲಿ ಉತ್ಸವಸಭೆ ಸೇರುವುದು ಹಿಂದಿನಿಂದ ಬಂದಿರುವ ಸಂಪ್ರದಾಯ. ಬ್ರಿಟನಿನಲ್ಲಿ ಕಾರ್ಮಿಕ ದಿನವನ್ನು ಪ್ರಥಮ ಬಾರಿಗೆ ಆಚರಿಸಿದ್ದು 1892ರಲ್ಲಿ.

ಭಾರತದಲ್ಲಿ ಮೇ ದಿನವೇ ಕಾರ್ಮಿಕ ದಿನ. 20ನೆಯ ಶತಮಾನದ ಎರಡನೆಯ ದಶಕದ ದ್ವಿತೀಯಾರ್ಧದಲ್ಲಿ–ಕಾರ್ಮಿಕ ಸಂಘ ಚಳವಳಿಯ ಪ್ರಭಾವ ಹೆಚ್ಚಿದಾಗಿನಿಂದ–ಇದರ ಆಚರಣೆ ಆರಂಭವಾಯಿತು. ಮೇ ದಿನಾಚರಣೆಯಲ್ಲಿ ಭಾಗವಹಿಸಿದ ಮೊಟ್ಟಮೊದಲಿನ ಭಾರತೀಯ ಕಾರ್ಮಿಕರು ಇಂಗ್ಲೆಂಡಿನಲ್ಲಿದ್ದ ಭಾರತೀಯ ನಾವಿಕರು. ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂಬ ಘೋಷಣೆಯನ್ನೊಳಗೊಂಡ ಪ್ರದರ್ಶನಚಿತ್ರಗಳನ್ನು ಹಿಡಿದು ಮೆರವಣಿಗೆಯಲ್ಲಿ ಅವರು ಹೈಡ್ ಪಾರ್ಕಿನ ಮೇ ದಿನದ ಉತ್ಸವಸಭೆಗೆ ಹೋದರು (1925). ಭಾರತದಲ್ಲಿ 1927 ರಿಂದೀಚೆಗೆ ಪ್ರತಿವರ್ಷವೂ ಕಾರ್ಮಿಕರು ಈ ದಿನವನ್ನಾಚರಿಸುತ್ತಿದ್ದಾರೆ. ಭಾರತದಲ್ಲಿ ಈ ಉತ್ಸವದಲ್ಲಿ ಭಾಗವಹಿಸುವವರು ಕಾರ್ಮಿಕ ಸಂಘಗಳವರು, ಸಮಾಜವಾದಿಗಳು ಮತ್ತು ಕೆಲವು ಬುದ್ಧಿ ಜೀವಿಗಳು ಮಾತ್ರ. 1927ರಲ್ಲಿ ಮುಂಬಯಿಯಲ್ಲಿ ನಡೆದ ಉತ್ಸವದಲ್ಲಿ ಅನೇಕ ಕಾರ್ಮಿಕ ಮುಖಂಡರು ಭಾಗವಹಿಸಿದ್ದರು. ಅದೇ ವರ್ಷ ಕಲ್ಕತ್ತದಲ್ಲಿ ಬಂಗಾಳ ಪ್ರದೇಶ ಕಾರ್ಮಿಕ ಸಂಘ ಕಾಂಗ್ರೆಸ್ ಮೇ ದಿನವನ್ನಾಚರಿಸಿದಾಗ ಪೋಲೀಸರು ಅನೇಕ ನಿರ್ಬಂಧಕಾಜ್ಞೆಗಳನ್ನು ವಿಧಿಸಿದರೆಂದು ತಿಳಿದು ಬರುತ್ತದೆ. 1928 ರಿಂದ 1934ರ ವರೆಗೆ ಆ ಉತ್ಸವಾಚರಣೆಯ ದಿನದಂದು ದಿನಾಚರಣೆಯ ಕಾರ್ಮಿಕರ ಅನೇಕ ಮುಷ್ಕರಗಳು ನಡೆದುವು. ಎರಡನೆಯ ಮಹಾಯುದ್ಧಾನಂತರ ಆ ದಿನವನ್ನು ಹೆಚ್ಚು ವ್ಯಾಪಕವಾಗಿ ಆಚರಿಸಲು ಪ್ರಾರಂಭವಾಯಿತು. ಕಾರ್ಮಿಕರೂ ಕಾರ್ಮಿಕ ಸಂಘಗಳೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸತೊಡಗಿದವು. 1969ರಲ್ಲಿ ಭಾರತ ರಾಷ್ಟ್ರೀಯ ಕಾರ್ಮಿಕ ಸಂಘಗಳ ಕಾಂಗ್ರೆಸ್ ಒಂದನ್ನು ಬಿಟ್ಟು ಉಳಿದೆಲ್ಲ ಕಾರ್ಮಿಕ ಸಂಘಗಳೂ ಒಟ್ಟಾಗಿ, ತಮ್ಮ ಹಕ್ಕುಗಳನ್ನು ಸಾಧಿಸಲು ಭಾರಿ ಮೆರವಣಿಗೆಯಲ್ಲಿ ಪಾರ್ಲಿಮೆಂಟ್ ಭವನದ ಬಳಿಗೆ ಮೆರವಣಿಗೆಯಲ್ಲಿ ಹೋಗಿ ಪ್ರದರ್ಶನ ನಡೆಸಿದುವು.

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಸೆಪ್ಟೆಂಬರ್ ಮೊದಲನೆಯ ಸೋಮವಾರದಂದು ಕಾರ್ಮಿಕ ದಿನವನ್ನಾಚರಿಸಲಾಗುತ್ತದೆ. ಆ ದಿನವನ್ನಾಚರಿಸಬೇಕೆಂಬ ಚಳವಳಿಯನ್ನು ಅಲ್ಲಿ ಪ್ರಾರಂಭಿಸಿದವರು ನೈಟ್ಸ್ ಆಫ್ ಲೇಬರ್ ಎಂಬ ಕಾರ್ಮಿಕ ಸಂಘಗಳವರು. 1882, 1883 ಮತ್ತು 1884ರಲ್ಲಿ ಅವರು ಕಾರ್ಮಿಕ ದಿನದಂದು ನ್ಯೂಯಾರ್ಕ್ ನಗರದಲ್ಲಿ ಪ್ರದರ್ಶನ ನಡೆಸಿದರು. ಪ್ರತಿವರ್ಷದ ಸೆಪ್ಟೆಂಬರ್ ಮೊದಲನೆಯ ಸೋಮವಾರವನ್ನು ಕಾರ್ಮಿಕ ದಿನವೆಂದು ಪರಿಗಣಿಸಬೇಕೆಂದೂ ಅಂದು ರಜಾ ಘೋಷಿಸಬೇಕೆಂದೂ ಅವರು 1884ರಲ್ಲಿ ನಿರ್ಣಯ ಮಾಡಿದರು. ಈ ಚಳವಳಿಗೆ ರಾಷ್ಟ್ರದ ಎಲ್ಲ ಕಾರ್ಮಿಕ ಸಂಘಗಳು ಬೆಂಬಲ ದೊರಕಿತು. ಮೊಟ್ಟಮೊದಲು ಕಾಲೊರಾಡೂ ರಾಜ್ಯ ಆ ದಿನವನ್ನು ಕಾರ್ಮಿಕ ದಿನವೆಂದು ಮಾನ್ಯ ಮಾಡಲು 1887ರ ಮಾರ್ಚಿ 15ರಂದು ಕಾಯಿದೆಯೊಂದನ್ನು ಅನುಮೋದಿಸಿತು. ಇದೇ ಕ್ರಮವನ್ನು ಇತರ ಕೆಲವು ರಾಜ್ಯಗಳೂ ಅನುಸರಿಸಿದುವು (ನ್ಯೂಯಾರ್ಕ್, ನ್ಯೂ ಜರ್ಸಿ, ಮೆಸಾಚುಸೆಟ್ಸ್). ಅಮೆರಿಕಾದ್ಯಂತ ಅಂದು ರಜಾ ದಿನವೆಂದು ಘೋಷಿಸುವ ವಿಧೇಯಕಕ್ಕೆ ಅಮೆರಿಕದ ಕಾಂಗ್ರೆಸ್ 1894ರ ಜೂನ್ 28ರಂದು ಒಪ್ಪಿಗೆ ನೀಡಿತು. ಇದನ್ನು ಕಾರ್ಯರೂಪಕ್ಕೆ ತರಲು ಎಲ್ಲ ರಾಜ್ಯಗಳೂ ಸಮ್ಮತಿಸಿ, ಆ ಪ್ರಕಾರ ಅಗತ್ಯವಾದ ಕಾಯಿದೆ ಮಾಡಿದುವು. ಕೆನಡದಲ್ಲಿ ಬಹುತೇಕ ಪ್ರಾಂತ್ಯಗಳಲ್ಲಿ ಕಾರ್ಮಿಕ ದಿನಾಚರಣೆಗೆ ಕಾನೂನು ರಚಿಸಲಾಗಿದೆ. ಕಾನೂನಿಲ್ಲದ ಪ್ರಾಂತ್ಯಗಳಲ್ಲಿ ಆಯಾ ಗವರ್ನರುಗಳು ಆ ಬಗ್ಗೆ ಘೋಷಣೆ ನೀಡುತ್ತಾರೆ. ಅಮೆರಿಕ ಕೆನಡಗಳಲ್ಲಿ ಎಲ್ಲ ವರ್ಗಗಳ ಜನರೂ ಅದನ್ನು ಆಚರಿಸುತ್ತಾರೆ. ಅಂದು ಬಹುತೇಕ ಎಲ್ಲ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯನ್ನೂ ಮುಚ್ಚಲಾಗುತ್ತದೆ. ಸಭೆ, ವನಭೋಜನ, ಪ್ರದರ್ಶನ, ಮೆರವಣಿಗೆ, ಭಾಷಣ, ಕ್ರೀಡೆಗಳು–ಇವು ಅಂದು ಸಾಮಾನ್ಯ. (ಎಸ್.ಎನ್.ಎ.)

**ಕಾರ್ಮಿಕ ಸಂಘ :** ಕೂಲಿಗಾರರ ಅಥವಾ ಸಂಬಳಗಾರರ ಸಂಘ (ಟ್ರೇಡ್ ಯೂನಿಯನ್: ಲೇಬರ್ ಯೂನಿಯನ್). ಔದ್ಯೋಗಿಕ ಹಿತಸಾಧನೆ ಅಥವಾ ರಕ್ಷಣೆಗಾಗಿ ಸಾಮೂಹಿಕ ಪ್ರಯತ್ನವೇ ಇದರ ಮುಖ್ಯೋದ್ದೇಶ. ಕೈಗಾರಿಕೆಯಲ್ಲಿ ಮುನ್ನಡೆದ, ಮುನ್ನಡೆಯುತ್ತಿರುವ ಎಲ್ಲ ರಾಷ್ಟ್ರಗಳಲ್ಲೂ ವಿವಿಧ ಉದ್ಯಮಗಳಿಗೆ ಅಥವಾ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ಸಂಘಗಳಿವೆ.

ಕಾರ್ಮಿಕ ಸಂಘ ಕೂಲಿಗಾರರ ನಿತ್ಯಕೂಟ. ಕಾರ್ಮಿಕರ ಜೀವನಸ್ಥಿತಿ ರಕ್ಷಣೆ ಮತ್ತು ಪ್ರಗತಿ ಈ ಕೂಟದ ಉದ್ದೇಶ–ಎಂದು ಸಿಡ್ನಿ ಮತ್ತು ಬೀಟ್ರೈಸ್ ವೆಬ್ ಹೇಳುತ್ತಾರೆ. ಒಂದು ಇಲ್ಲವೆ ಹೆಚ್ಚು ಕೈಗಾರಿಕೆಗಳಲ್ಲಿ ನಿರತರಾದ ಕಾರ್ಮಿಕರ ಕೂಟವೇ ಕಾರ್ಮಿಕರ ಸಂಘ. ಈ ಕೂಟ ಕಾರ್ಮಿಕರ ದೈನಂದಿನ ದುಡಿತದಲ್ಲಿ ಅವರ ಆರ್ಥಿಕ ಆಸಕ್ತಿಗಳನ್ನು ರಕ್ಷಿಸಬೇಕು ಮತ್ತು ವೃದ್ಧಿಗೊಳಿಸಬೇಕು–ಎಂಬುದು ಜಿ.ಡಿ.ಎಚ್.ಕೋಲ್‌ನ ಮತ. ಕಾರ್ಮಿಕ ಸಂಘ ಉದ್ಯೋಗಿಗಳ ಕೂಡಿ ಮುಖ್ಯವಾಗಿ ಇದು ತನ್ನ ಸದಸ್ಯರ ಉದ್ಯೋಗ ಸ್ಥಿತಿಗತಿಗಳನ್ನು ಕಾಪಾಡಬೇಕು ಇಲ್ಲವೇ ಸುಧಾರಿಸಬೇಕು ಎಂದು ಆರ್.ಎ. ಲೆಸ್ಟರ್ ಹೇಳುತ್ತಾನೆ. ಕಾರ್ಮಿಕ ಸಂಘ ಕಾರ್ಮಿಕ ಸ್ವಯಮಾಡಳಿತ ಸಂಘ. ಶ್ರಮದ ಬಿಕರಿ ಮತ್ತು ಅದರ ಉತ್ಪಾದನೆ ಇವುಗಳಿಗಾಗಿ ಮಾತ್ರ ಕಾರ್ಮಿಕರು ತಮ್ಮ ಸಂಬಂಧವನ್ನು ಉದ್ಯೋಗದಾತರೊಡನೆ ಇಟ್ಟು ಕೊಂಡಿರುತ್ತಾರೆ. ತಮ್ಮ ಸದಸ್ಯರ ಸಾಮೂಹಿಕ ಕೊಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸುವಷ್ಟರ ಮಟ್ಟಿಗೆ ಮಾತ್ರ ಈ ಕೂಟಗಳು ಉದ್ಯೋಗದಾತರನ್ನು ಅವಲಂಬಿಸಿದೆ ಎಂದು ಕನಿಸನ್ ಹೇಳುತ್ತಾನೆ.

ಕಾರ್ಮಿಕರಿಗೆ ಸಮಾಜದಲ್ಲಿ ಸ್ಥಾನಮಾನ ದೊರಕಿಸಿಕೊಟ್ಟು, ಅದರ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವುದರ ಜೊತೆಗೆ, ದೇಶದ ಕಲ್ಯಾಣವನ್ನು ಸಾಧಿಸುವುದೇ ಕಾರ್ಮಿಕ

ಸಂಘಗಳ ಪರಮ ಗುರಿ. ಕೈಗಾರಿಕಾ ವ್ಯವಸ್ಥಾಪಕರ ನಿರಂಕುಶ ಪ್ರಭುತ್ವವನ್ನು ಹತ್ತಿಕ್ಕಿ, ಕೈಗಾರಿಕಾ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಕಾರ್ಮಿಕ ಸಂಘಗಳು ಹೆಣಗಬೇಕು–ಎಂದು ವಾದಿಸಲಾಗಿದೆ.

**ಕಾರ್ಮಿಕ ಸಂಘಗಳ ರಚನೆ :** ಕಾರ್ಮಿಕ ಸಂಘಗಳ ರಚನೆ ಆಯಾ ದೇಶಗಳ ಪರಿಸ್ಥಿತಿಗೆ ಅನುಗುಣವಾಗಿರುತ್ತದೆ. ಕಾರ್ಮಿಕ ಸಂಘಗಳು ಮುಖ್ಯವಾಗಿ ಸಾಮಾಜಿಕ–ಆರ್ಥಿಕ ಸಂಘಟನೆಗಳು. ತಮ್ಮ ಹಿತಾಸಕ್ತಿಗಳಿಗೆ ವ್ಯತಿರಿಕ್ತವಾದ ಸಂಘಟನೆಗಳನ್ನು ಎದುರಿಸಲೂ ಅವುಗಳಿಂದ ರಕ್ಷಣೆ ಪಡೆಯಲೂ ಇತರ ಸಮಾನ ಸಾಮಾಜಿಕ ಸಂಘಗಳೊಡನೆ ನಗರ, ಪ್ರದೇಶ, ಪ್ರಾಂತ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ಸಂಬಂಧ ಸಂಘಟನೆ ಏರ್ಪಡಿಸಿಕೊಳ್ಳಬೇಕಾಗುತ್ತದೆ. ಎಲ್ಲ ಕಾರ್ಮಿಕರ ಪರವಾಗಿ ಅಧಿಕಾರಯುತವಾಗಿ ಮಾತಾಡಬಲ್ಲ ಸಂಘಟನೆ–ಏಕಸ್ವಾಮ್ಯ–ಇದರ ಅಂತಿಮಗುರಿ. ರಾಷ್ಟ್ರಮಟ್ಟದ ಸಂಸ್ಥೆಗಳು ಸೇರಿ ಅಂತರರಾಷ್ಟ್ರೀಯ ಸಂಘಗಳನ್ನೂ ರಚಿಸಿಕೊಳ್ಳಬಹುದು. ಹೀಗೆ ಆಡಳಿತದ ನಾನಾ ಮಟ್ಟಗಳಲ್ಲಿ ಸಲಹೆ ನೀಡುವುದೂ ಸಂಧಾನ ನಡೆಸುವುದೂ ಸೂಕ್ತಕಾರ್ಯಾಚರಣೆ ನಡೆಸುವುದೂ ಕಾರ್ಮಿಕ ಸಂಘ ವ್ಯವಸ್ಥೆಯ ಕಾರ್ಯಭಾರ.

**ಕಾರ್ಮಿಕ ಸಂಘಗಳ ಕಲಾಪಗಳು :** 1 ಚಳವಳಿ : ಕಾರ್ಮಿಕರಿಗೆ ತಕ್ಕ ಕೂಲಿ ದೊರಕಿಸಿಕೊಡುವುದು; ಕಾರ್ಮಿಕರು ಉತ್ತಮ ರೀತಿಯಲ್ಲಿ ಕೆಲಸ ಮಾಡಲು ಬೇಕಾಗುವ ಉತ್ತಮ ವಾತಾವರಣವನ್ನು ಉದ್ಯೋಗದಾತರು ಕಲ್ಪಿಸಿಕೊಡುವಂತೆ ಮಾಡುವುದು; ಕಾರ್ಮಿಕರಿಗೆ ನ್ಯಾಯಯುತ ದುಡಿತದ ಅವಧಿಯನ್ನು ಇತ್ಯರ್ಥಗೊಳಿಸುವುದು; ಕಾರ್ಮಿಕರನ್ನು ಉದ್ಯೋಗದಾತರು ಯೋಗ್ಯರೀತಿಯಲ್ಲಿ ನಡೆಯಿಸಿಕೊಳ್ಳುವಂತೆ ಮಾಡುವುದು – ಇವಕ್ಕಾಗಿ ಕಾರ್ಮಿಕ ಸಂಘಗಳು ಮುಷ್ಕರ, ಬಹಿಷ್ಕಾರ, ಸಾಮೂಹಿಕ ಚೌಕಾಸಿ, ಸಮಾಲೋಚನೆ ಮಧ್ಯಸ್ಥಿಕೆ ಮುಂತಾದ ಕ್ರಮಕೈಗೊಳ್ಳುತ್ತವೆ. 2 ಭ್ರಾತೃತ್ವ ಕಲಾಪಗಳು : ತಮ್ಮ ಸದಸ್ಯರಿಂದ ಸಂಗ್ರಹಿಸಿದ, ನಿಧಿಯನ್ನು ಕಾರ್ಮಿಕ ಸಂಘಗಳು ಕಾರ್ಮಿಕರ ಸಹಾಯಾರ್ಥ ಬಳಸಿಕೊಳ್ಳುತ್ತವೆ. ಕಾರ್ಮಿಕರು ಬೇನೆಬಿದ್ದಾಗ ಅಥವಾ ಆಕಸ್ಮಿಕಕ್ಕೆ ಒಳಗಾದಾಗ ಧನಸಹಾಯ ನೀಡಲಾಗುತ್ತದೆ. ಔದ್ಯೋಗಿಕ ವಿವಾದಗಳಿಂದ ಸಂಭವಿಸಬಹುದಾದ ನಿರುದ್ಯೋಗ, ಮುಷ್ಕರ ಮತ್ತು ಬಹಿಷ್ಕಾರಗಳ ಸಮಯದಲ್ಲೂ ಕಾರ್ಮಿಕರಿಗೆ ಈ ನಿಧಿಯಿಂದ ಸಹಾಯ ನೀಡಲಾಗುತ್ತದೆ. ಕಾರ್ಮಿಕರಲ್ಲಿ ಸೌಹಾರ್ದ, ಸಹಕಾರ ಮತ್ತು ಅನ್ಯೋನ್ಯತೆಯ ಭಾವನೆಗಳನ್ನು ಬೆಳೆಸುವ ಮತ್ತು ಕಾರ್ಮಿಕರ ಆತ್ಮಗೌರವದ ಹಕ್ಕುಬಾಧ್ಯತೆ ಮತ್ತು ಕರ್ತವ್ಯ ಪ್ರಜ್ಞೆಯನ್ನು ಜಾಗ್ರತಗೊಳಿಸುವ ಪ್ರಯತ್ನಗಳನ್ನು ಕಾರ್ಮಿಕ ಸಂಘಗಳು ಕೈಗೊಳ್ಳುತ್ತವೆ. ಇವು ಕಾರ್ಮಿಕ ಶಾಲೆಗಳಿದ್ದಂತೆ. ಇಲ್ಲಿ ಸ್ವಾಭಿಮಾನ, ಸ್ವಾವಲಂಬನ ಮತ್ತು ಒಗ್ಗಟ್ಟುಗಳ ಪ್ರಥಮ ಪಾಠಗಳನ್ನು ಕಾರ್ಮಿಕರು ಕಲಿಯುತ್ತಾರೆ. ಕಾರ್ಮಿಕರಿಗಾಗಿ ಶಿಕ್ಷಣ ಮತ್ತು ಸಂಸ್ಕೃತಿ ಪ್ರಸಾರಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗುತ್ತದೆ. ಕಾರ್ಮಿಕರಿಗಾಗಿ ಮತ್ತು ಮಕ್ಕಳಿಗಾಗಿ ಶಾಲೆ ಕಾಲೇಜುಗಳನ್ನು ನಡೆಸುವುದು; ಆಟಪಾಟಗಳ ಸೌಲಭ್ಯಗಳನ್ನು ಒದಗಿಸುವುದು; ಮನೋರಂಜನೆ ಸೌಲಭ್ಯಗಳನ್ನು ಒದಗಿಸುವುದು; ಉತ್ತಮ ವಸತಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು–ಮುಂತಾದ ಕಾರ್ಮಿಕ ಕಲ್ಯಾಣಕಾರ್ಯಗಳನ್ನು ಇವು ಕೈಗೊಳ್ಳುತ್ತವೆ. ಕಾರ್ಮಿಕರಿಗೆ ಅಗತ್ಯವಾದ ಕಾನೂನಿನ ಸೌಲಭ್ಯಗಳನ್ನು ಕೂಡ ಕೆಲವು ಸಂಘಗಳು ಒದಗಿಸುತ್ತವೆ. ಕಾರ್ಮಿಕರಿಗಾಗಿ ನಿಯತಕಾಲಿಕ ಪತ್ರಿಕೆಗಳನ್ನು ಕೆಲವು ಕಾರ್ಮಿಕ ಸಂಘಗಳು ನಡೆಸುತ್ತಿವೆ. 3 ರಾಜಕೀಯ ಚಟುವಟಿಕೆಗಳು: ಅನೇಕ ಕಾರ್ಮಿಕ ಸಂಘಗಳು ಇಂದು ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿವೆ. ರಾಷ್ಟ್ರದ ಆಡಳಿತದ ಮೇಲೆ ಪ್ರಭಾವಬೀರಬೇಕೆಂದೂ ಸಾಧ್ಯವಾದರೆ ಅದನ್ನು ವಶಪಡಿಸಿಕೊಳ್ಳಬೇಕೆಂದೂ ಇವು ಬಯಸುತ್ತವೆ. ಹಲವು ದೇಶಗಳಲ್ಲಿ ಕಾರ್ಮಿಕರನ್ನು ಪ್ರತಿನಿಧಿಸುವ ಪ್ರಬಲ ರಾಜಕೀಯ ಪಕ್ಷಗಳು ಹುಟ್ಟಿಕೊಂಡಿವೆ. ಇಂಗ್ಲೆಂಡಿನ ಕಾರ್ಮಿಕ ಪಕ್ಷ ಅನೇಕ ಸಲ ಅಧಿಕಾರಕ್ಕೆ ಬಂದಿದೆ. ಭಾರತದಲ್ಲಿ ಕಾರ್ಮಿಕ ಸಂಘಗಳ ಇಂಥ ಕಲಾಪಗಳು ತುಂಬ ಮಹತ್ತ್ವದವು. 4 ಸಂಘಟನೆ ಕಲಾಪಗಳು : ಕಾರ್ಮಿಕ ಸಂಘಗಳ ಕಲಾಪಗಳು ಇಂದು ಬದಲಾಗುತ್ತಿವೆ: ಕಾರ್ಮಿಕ ಸಂಘಗಳ ಸಂಘಟನೆ, ಕಾರ್ಮಿಕರ ಶಿಸ್ತಿನ ಸಂವರ್ಧನೆ ಮತ್ತು ಯೋಜನೆಗಳನ್ನು ಪೂರ್ಣಗೊಳಿಸುವುದು; ಕಾರ್ಮಿಕರ ವಾಸ್ತವಿಕ ಮತ್ತು ಸಾಂಸ್ಕೃತಿಕ ಮಟ್ಟಗಳ ಸುಧಾರಣೆ ಮತ್ತು ಯೋಜನೆಗಳ ವಿವಿಧ ಗುರಿಗಳನ್ನು ಸಾಧಿಸಲು ವ್ಯವಸ್ಥಾಪಕ ಮಂಡಲಿಗಳ ಮೇಲೆ ಪರ್ಯವೇಕ್ಷಣೆ; ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ ಮತ್ತು ತಾಂತ್ರಿಕ ಅಧ್ಯಯನಗಳ ಸಂಘಟನೆ; ಸಾಂಸ್ಕೃತಿಕ ಚಟುವಟಿಕೆಗಳನ್ನೂ ಕ್ರೀಡೆಗಳನ್ನೂ ಸಂಘಟಿಸುವುದು; ಕಾರ್ಮಿಕ ಸಂಘಗಳಿಗೆ ಸದಸ್ಯರನ್ನು ನೋಂದಾಯಿಸುವುದು; ನಿಧಿ ಕೂಡಿಸುವುದು. 5 ಪ್ರಚಾರ ಮತ್ತು ಶೈಕ್ಷಣಿಕ ಕಲಾಪಗಳು: ಸ್ವದೇಶಾಭಿಮಾನ ಹೆಚ್ಚಿಸಲು ಮತ್ತು ಅಂತರರಾಷ್ಟ್ರೀಯ ದೃಷ್ಟಿ ಬೆಳೆಸಲು ಪ್ರಚಾರ ಕಾರ್ಯಕ್ರಮಗಳನ್ನು ಸಂಘಟಿಸುವುದು; ಕೃಷಿಕರ ಕುಟುಂಬಗಳಿಗೆ ಭೇಟಿಕೊಡಲು ಮತ್ತು ಗ್ರಾಮೀಣ ಪುನರ್‌ರಚನೆಯನ್ನು ಅಭ್ಯಸಿಸಲು ಕಾರ್ಮಿಕರ ನಿಯೋಗಗಳನ್ನು ಸಂಘಟಿಸುವುದು; ಕಾರ್ಮಿಕರಿಗೆ ಓದಲು, ಬರೆಯಲು ಮತ್ತು ಭಾಷಣ ಮಾಡಲು ಕಲಿಸುವುದು; ಅವರಿಗೆ ಸದ್ಯದ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಜ್ಞಾನ ಮಾಡಿಕೊಡುವುದು; ಉದ್ಯೋಗ ದಕ್ಷತೆಯನ್ನು ಹೆಚ್ಚಿಸಲು ಶಿಕ್ಷಣ ನೀಡುವುದು; ಕಾರ್ಮಿಕರ ಪ್ರಗತಿಗಾಗಿ ಕ್ಲಬ್ಬುಗಳನ್ನು ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ನಡೆಯಿಸುವುದು. 6 ಉತ್ಪಾದನ ಕಲಾಪಗಳು: ಸಮಾಜವಾದಿ ಸಮಾಜದಲ್ಲಿ ಉತ್ಪಾದನೆಯೊಂದೇ ಅಂತಿಮ ಗುರಿಯಲ್ಲ. ಜನರ ವಾಸ್ತವಿಕ ಮತ್ತು ಸಾಂಸ್ಕೃತಿಕ ಮಟ್ಟಗಳನ್ನು ಹೆಚ್ಚಿಸುವುದೂ ಅಗತ್ಯ. ಇದರಲ್ಲಿ ಕಾರ್ಮಿಕರ ಸಾಮೂಹಿಕ ಜಾಣತನ ಮತ್ತು ದಕ್ಷತೆಗಳ ಪ್ರದರ್ಶನವಾಗುತ್ತದೆ. ಆದರ್ಶ ಮತ್ತು ಪ್ರಾಜ್ಞ ಕಾರ್ಮಿಕ ವರ್ಗವನ್ನು ಇದು ಹುಟ್ಟಿಸುತ್ತದೆ. ಇದು ಉದ್ದಿಮೆಗಳಲ್ಲಿ ಉತ್ಪಾದನೆಯ ಗುರಿಗಳನ್ನು ನಿರ್ಧರಿಸುತ್ತದೆ. ಉತ್ಪಾದನೆ ಹೆಚ್ಚಿದಾಗ ರಾಷ್ಟ್ರೀಯ ವರಮಾನವೂ ಹೆಚ್ಚುತ್ತದೆ. ಕಾರ್ಮಿಕರಿಗೂ ಹೆಚ್ಚಿನ ವೇತನಗಳು ಲಭ್ಯವಾಗುತ್ತದೆ. 7 ಕಾರ್ಮಿಕರ ರಕ್ಷಣೆಯ ಕಲಾಪಗಳು: ಕಾರ್ಮಿಕರ ರಕ್ಷಣೆ, ಆರೋಗ್ಯ ಮತ್ತು ಭದ್ರತೆ ಸಾಧಿಸುವುದಕ್ಕಾಗಿ ಇದು ಕಾರ್ಮಿಕರ ರಕ್ಷಣೆಯ ಇಲಾಖೆಗಳನ್ನು ಯೋಜಿಸುತ್ತದೆ. 8 ಕಾರ್ಮಿಕರಿಗಾಗಿ ವಿಮಾಯೋಜನೆ: ಮುಪ್ಪು, ಕಾಯಿಲೆ, ವಿಕಲಾಂಗ ಮುಂತಾದ ಸಂದರ್ಭಗಳಲ್ಲಿ ಕಾರ್ಮಿಕರಿಗೆ ಸಹಾಯ ನೀಡಲು ಯೋಜನೆಗಳನ್ನು ಜಾರಿಗೆ ತರುವಂತೆ ಮಾಡುವುದೂ ಅವುಗಳ ನಿರ್ವಹಣೆಯಲ್ಲಿ ಭಾಗವಹಿಸುವುದೂ ಕಾರ್ಮಿಕ ಸಂಘಗಳ ಹೊಣೆಯಾಗಿದೆ. 9 ಮಹಿಳಾ ಕಾರ್ಮಿಕರ ಕಲ್ಯಾಣ ಸಾಧನೆ: ಕಾರ್ಮಿಕ ಸಂಘಗಳ ವಿವಿಧ ಮಟ್ಟಗಳಲ್ಲಿ ರಕ್ಷಣೆ ಮತ್ತು ಭದ್ರತೆ, ಸ್ತ್ರೀ ಕಾರ್ಮಿಕ ಸಮಸ್ಯೆಗಳ ನಿವಾರಣೆಗಾಗಿ ಸಹಾಯ, ಸ್ತ್ರೀ ಕಾರ್ಮಿಕರ ಶಿಕ್ಷಣ–ಇವು ಸ್ತ್ರೀ ವಿಭಾಗದ ಕಲಾಪಗಳು. 10 ಕಾರ್ಮಿಕರ ಅವಲಂಬಿತರಿಗೆ ನೆರವು: ಕಾರ್ಮಿಕ ಸಂಘಗಳು ಕಾರ್ಮಿಕರ ಕುಟುಂಬಗಳಿಗೂ ಸಹಾಯ ನೀಡುತ್ತಿವೆ. ರಾಜಕೀಯ, ಸಾಂಸ್ಕೃತಿಕ ವಿಚಾರಗಳು, ಪ್ರಸೂತಿ ವಿಜ್ಞಾನ–ಇವೇ ಮುಂತಾದ ವಿಷಯಗಳ ಮೇಲೆ ಕಾರ್ಮಿಕ ಸಂಘಗಳು ಚರ್ಚಾಗೋಷ್ಠಿಗಳನ್ನು ಮತ್ತು ಇತರ ಕಾರ್ಯಕ್ರಮಗಳನ್ನು ಏರ್ಪಡಿಸುತ್ತವೆ. ಕಾರ್ಮಿಕರ ಹೆಂಡದಿರಿಗೆ ಶಿಕ್ಷಣ ನೀಡುವುದೂ ಉದ್ಯೋಗಗಳಲ್ಲಿ ತರಬೇತಿ ದೊರಕಿಸುವುದೂ, ಅವರಿಗೂ ಉದ್ಯೋಗಾವಕಾಶಗಳನ್ನು ಒದಗಿಸುವುದೂ ಕಾರ್ಮಿಕ ಸಂಘಗಳ ಜವಾಬ್ದಾರಿ. ಕಾರ್ಮಿಕರ ಮಕ್ಕಳಿಗಾಗಿ ಬಾಲವಾಡಿಗಳನ್ನು ತೆರೆದು ನಡೆಸಲು ಕಾರ್ಮಿಕ ಸಂಘಗಳು ಸಹಾಯ ನೀಡುತ್ತಿವೆ. 11 ಹಣಕಾಸು: ಸದಸ್ಯರ ಚಂದಾ, ಕ್ರೀಡೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಹಣ ಸಂಪಾದನೆ, ಕೈಗಾರಿಕಾ ವ್ಯವಸ್ಥಾಪಕ ಮಂಡಲಿಗಳಿಂದ ದೇಣಿಗೆ–ಮುಂತಾದ ರೀತಿಯಲ್ಲಿ ಕಾರ್ಮಿಕ ಸಂಘಗಳು ಹಣ ಕೂಡಿಸುತ್ತವೆ. 12 ಜನೋಪಯೋಗಿ ಕಲಾಪಗಳು: ಕಾರ್ಮಿಕ ಸಂಘಗಳು ಇಂದು ಸಾಮಾನ್ಯ ಜನರ ಉಪಯೋಗಕ್ಕಾಗಿಯೂ ಅನೇಕ ಉದ್ಯಮಗಳನ್ನು ಸಂಘಟಿಸುತ್ತಿವೆ.

ಮೇಲೆ ವಿವರಿಸಿದ ಕಲಾಪಗಳೆಲ್ಲ ಕಾರ್ಮಿಕರಿಗೆ ತುಂಬ ಪ್ರಯೋಜನಕಾರಿಯಾಗಿವೆ. ಸಂಘ ಸಾಮೂಹಿಕವಾಗಿ ಚರ್ಚಿಸಿ ಬಂದ ನಿರ್ಣಯಗಳಿಗೆ ಕಾರ್ಮಿಕರೆಲ್ಲರೂ ಸಮಾನವಾಗಿ ವಿಧೇಯರಾಗಿರುತ್ತಾರೆ, ಅವನ್ನು ಗೌರವಿಸುತ್ತಾರೆ. ಕಾರ್ಮಿಕ ಸಂಘಗಳು ಅಯೋಗ್ಯ ಉದ್ಯೋಗದಾತರನ್ನು ಹೊರಗೆ ಹಾಕಿ, ಬಲವಾದ ಅಡಿಪಾಯಗಳ ಮೇಲೆ ಉದ್ದಿಮೆಗಳು ನಿಲ್ಲುವಂತೆ ಪ್ರಯತ್ನಿಸುತ್ತಿವೆ. ಕೆಲವು ಸಂಘಗಳ ಕಲಾಪಗಳಲ್ಲಿ ಕೆಲವು ದೋಷಗಳಿವೆ. ಸಮಾಜಘಾತಕ ಮತ್ತು ದೇಶದ್ರೋಹಿ ಚಟುವಟಿಕೆಗಳನ್ನು ಒಮ್ಮೊಮ್ಮೆ ಇವು ಪ್ರೋತ್ಸಾಹಿಸುತ್ತವೆ. ತಮ್ಮ ಸದಸ್ಯರಿಗೆಲ್ಲ ಏಕರೂಪದ ಕೂಲಿ ದೊರಕಬೇಕೆಂದು ಒತ್ತಾಯಿಸುವುದರಿಂದ ಅಧಿಕ ಕೂಲಿಗಳು ದೊರಕದಂತಾಗಬಹುದು. ಇವು ನಿಧಾನಗತಿ ಧೋರಣೆಗಳನ್ನು ಪ್ರಚೋದಿಸಿ ಅವು ಕಾರ್ಯರೂಪಕ್ಕೆ ತರುವಂತೆ ಬಲವಂತ ಮಾಡಿ, ರಾಷ್ಟ್ರೀಯ ವರಮಾನ ತಗ್ಗುವಂತೆ ಮಾಡಬಹುದು. ಕೆಲವು ಸಲ ಅಲ್ಪಕಾರಣಗಳಿಗಾಗಿ ಇವು ಮುಷ್ಕರ ಘೋಷಿಸುವ ಸಾಧ್ಯತೆಗಳಿವೆ. ಇಂಥ ಕ್ರಮಗಳು ದೇಶಕ್ಕೆ ಹಾನಿಕಾರಕ. ಇವು ಕೆಲವು ಸಲ ಕೃತಕವಾಗಿ ಕಾರ್ಮಿಕರ ಅಭಾವ ಪರಿಸ್ಥಿಯನ್ನೇರ್ಪಡಿಸಬಹುದು. ತಮ್ಮ ಸದಸ್ಯರಿಗಷ್ಟೆ ಉದ್ಯೋಗ ನೀಡಬೇಕೆಂದು ಹಠಹಿಡಿಯಬಹುದು. ಈ ನಾನಾ ಕಾರಣಗಳಿಂದ ಕಾರ್ಮಿಕ ಸಂಘಚಳವಳಿಯನ್ನು ವಿರೋಧಿಸಿರುವವರೂ ಉಂಟು.

**ಸಾಮೂಹಿಕ ಚೌಕಾಸಿ :** ಈ ಪರಿಕಲ್ಪನೆಯನ್ನು ಮೊಟ್ಟಮೊದಲು ಬಳಸಿದವರು ವೆಬ್ ದಂಪತಿಗಳು. ವೇತನಗಳನ್ನು ಮತ್ತು ಉದ್ಯೋಗದ ಷರತ್ತುಗಳನ್ನು ನಿರ್ಧರಿಸಿಕೊಳ್ಳುವುದು ಈ ಕ್ರಮದ ಉದ್ದೇಶ. ಪರಸ್ಪರ ಪೂರಕ ಮತ್ತು ವಿರುದ್ಧ ಆಸಕ್ತಿಗಳಿರುವ ಎರಡು ಪಕ್ಷಗಳ ನಡುವಿನ ಸಂಧಾನವೇ ಸಾಮೂಹಿಕ ಚೌಕಾಸಿ. ಕೈಗಾರಿಕಾ ಸಮಾಜದಲ್ಲಿ ಕಾರ್ಮಿಕರ ಮತ್ತು ಉದ್ಯೋಗದಾತರ ಅಗತ್ಯಗಳನ್ನು ಮತ್ತು ಉದ್ದೇಶಗಳನ್ನು ಪೂರೈಸುವ ವಿಧಾನವಿದು. ಪ್ರಜಾಪ್ರಭುತ್ವ ತತ್ತ್ವವೂ ವಿಧಾನವೂ ಉದ್ಯಮಕ್ಕೂ ಅನ್ವಯಿಸುವಂತೆ ಇದು ಮಾಡುತ್ತದೆ. ಸಾಮೂಹಿಕ ಚೌಕಾಸಿಯ ನೈಜತೆಯನ್ನು ಉಭಯಪಕ್ಷಗಳೂ ಎಷ್ಟರಮಟ್ಟಿಗೆ ಅರ್ಥಮಾಡಿಕೊಳ್ಳುತ್ತವೆ ಎಂಬ ಅಂಶವನ್ನು ಸಾಮೂಹಿಕ ಚೌಕಾಸಿ ಅವಲಂಬಿಸಿದೆ. ಇದು ಕಾರ್ಮಿಕರಿಗೆ ಮತ್ತು ಉದ್ಯೋಗದಾತರಿಗೆ ಪ್ರಯೋಜನಕಾರಿ. ವೇತನಗಳ ಮತ್ತು ಉದ್ಯೋಗದ ಷರತ್ತುಗಳ ಬಗ್ಗೆ ಸಾಮೂಹಿಕ ಒಡಂಬಡಿಕೆಗೆ ಬರುವಾಗ, ಪರಸ್ಪರ ವಿರುದ್ಧದ ಹಿತಗಳನ್ನು ಇಟ್ಟುಕೊಂಡಿದ್ದ ಕಾರ್ಮಿಕ ಸಂಘಗಳು ಮತ್ತು ಉದ್ಯೋಗದಾತರ

ಸಂಘಗಳು ಒಟ್ಟುಗೂಡಿ ಸಮಾಲೋಚಿಸಬೇಕು. ಲಿಖಿತ ಒಪ್ಪಂದಗಳನ್ನು ವಿವರಿಸುವ, ಅನ್ವಯಿಸುವ ಮತ್ತು ಕಾರ್ಯಗತಗೊಳಿಸುವ ವಿಧಾನಗಳನ್ನು ಕುರಿತು ಯೋಚಿಸಬೇಕು. ಸಮಸ್ಯೆಯನ್ನು ಇತ್ಯರ್ಥಗೊಳಿಸುವುದರಲ್ಲಿ ಕಾರ್ಮಿಕ ಸಂಘಗಳು ಮತ್ತು ಉದ್ಯೋಗದಾತರ ಸಂಘಗಳು ಸಕ್ರಿಯವಾಗಿ ಭಾಗವಹಿಸಿವೆ ಎಂಬ ಪ್ರಜ್ಞೆ ಎರಡೂ ಪಕ್ಷಗಳಿಗೆ ಸಾಮೂಹಿಕ ಚೌಕಾಸಿಯಿಂದ ಉದ್ಭವವಾಗಬೇಕು. ಸಾಮೂಹಿಕ ಚೌಕಾಸಿಯ ಮುಖಾಂತರ ಕಾರ್ಮಿಕ ಸಂಘಗಳು ಆರ್ಥಿಕ ಮತ್ತು ಆರ್ಥಿಕೇತರ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುತ್ತಿವೆ. ಕೂಲಿ, ದುಡಿತದ ಅವಧಿ, ಕೆಲಸದ ಷರತ್ತುಗಳು ಮತ್ತು ಇತರ ಪ್ರಯೋಜನಗಳನ್ನು ಸಾಧಿಸುವುದು ಆರ್ಥಿಕ ಉದ್ದೇಶ. ಕಾರ್ಮಿಕ ಸಂಘಗಳ ಭದ್ರತೆ, ಕಾರ್ಮಿಕರ ಭದ್ರತೆ ಮತ್ತು ವ್ಯವಸ್ಥಾಪಕ ಮಂಡಳಿಗಳ ರಕ್ಷಣೆ–ಇವು ಆರ್ಥಿಕೇತರ ಉದ್ದೇಶಗಳು. ಸಾಮೂಹಿಕ ಚೌಕಾಸಿಯ ಮೂಲಕ ವ್ಯವಸ್ಥಾಪಕ ಪಾತ್ರವನ್ನು ಸಾಧಿಸಬಯಸುವ ಉದ್ದೇಶಗಳಿವು : ಉದ್ಯಮವನ್ನು ನಿಯಂತ್ರಿಸುವುದು; ಉದ್ಯೋಗದ ದಕ್ಷತೆಯನ್ನು ಹೆಚ್ಚಿಸಿ, ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸುವುದು; ಉತ್ಪಾದಿಸಿದ ಸರಕುಗಳಿಗೆ ಯೋಗ್ಯಪೇಟೆಯ ಅನ್ವೇಷಣೆ, ಉದ್ಯಮಗಳ ರಕ್ಷಣೆ ಮತ್ತು ಭದ್ರತೆ; ಉದ್ಯೋಗದಾತರ ರಕ್ಷಣೆ ಮತ್ತು ಭದ್ರತೆ.

ಸಾಮೂಹಿಕ ಚೌಕಾಸಿಯಲ್ಲಿ ಎರಡು ವಿಧ: 1 ಒಂದು ಇಲ್ಲವೆ ಹಲವು ಉದ್ಯಮಗಳ ಉದ್ಯೋಗದಾತರೊಡನೆ ನಡೆಸುವ ಸಾಮೂಹಿಕ ಚೌಕಾಸಿ. 2 ಸಾಂಘಿಕ ಸಾಮೂಹಿಕ ಚೌಕಾಸಿ. ಇದರಲ್ಲಿ ಉದ್ಯೋಗದಾತರ ಅನೇಕ ಸಂಘಗಳು ಸೇರಿರುತ್ತವೆ. ಸಾಂಘಿಕ ಸಾಮೂಹಿಕ ಚೌಕಾಸಿಯು ನಗರವ್ಯಾಪಿ, ಪ್ರದೇಶವ್ಯಾಪಿ ಇಲ್ಲವೆ ರಾಷ್ಟ್ರವ್ಯಾಪಿಯಾಗಿರಬಹುದು ಸಾಮೂಹಿಕ ಚೌಕಾಸಿ ವಿಫಲವಾದಾಗ ಮಧ್ಯಸ್ಥಿಕೆ ಅನಿವಾರ್ಯವಾಗುತ್ತದೆ.

**ಕಾರ್ಮಿಕ ಸಂಘಗಳ ಬೆಳೆವಣಿಗೆ:** ಇಂಗ್ಲೆಂಡಿನಲ್ಲಿ: ಕಾರ್ಮಿಕ ಸಂಘ ಚಳವಳಿ ವಿಶ್ವವ್ಯಾಪಿಯಾದ್ದು. ರಾಜಕೀಯ ಸಾಮಾಜಿಕ ತತ್ತ್ವಜ್ಞಾನಿಗಳು ಇಂದಿನ ಔದ್ಯೋಗಿಕ ಸಮಾಜದಲ್ಲಿ ಕಾರ್ಮಿಕ ಸಂಘಗಳ ಮಹತ್ತ್ವವನ್ನು ಗುರುತಿಸಿದ್ದಾರೆ. ಇಂಗ್ಲೆಂಡಿನ ಕಾರ್ಮಿಕ ಸಂಘ ಚಳವಳಿ ಕೈಗಾರಿಕಾ ಕ್ರಾಂತಿಯ ಶಿಶು. ಮಧ್ಯಯುಗದಲ್ಲಿದ್ದ ಕೈ ಕಸಬುದಾರರ ಸಂಘಗಳು ಆಧುನಿಕ ಕಾರ್ಮಿಕ ಸಂಘಗಳಿಂದ ಭಿನ್ನವಾದವು. ಅವು ಉದ್ಯೋಗದಾತರ ಮತ್ತು ಉದ್ಯೋಗಿಗಳ ಸ್ಥಾನಿಕ ಸಂಘಗಳು. ಕಾರ್ಮಿಕ ಸಂಘಗಳು ಕಾರ್ಮಿಕರ ಸಂಘಟನೆಗಳು. ಇವು ಧಾರ್ಮಿಕ ಮತ್ತು ಲೋಕಸೇವಾಕಾರ್ಯಗಳನ್ನು ಮಾಡುವುದಿಲ್ಲ. ಇವನ್ನು ಇಂದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಸಂಘಟಿಸಲಾಗುತ್ತಿದೆ.

ಹದಿನೆಂಟನೆಯ ಶತಮಾನದಿಂದೀಚೆಗಿನ ಬೆಳೆವಣಿಗೆಯಾಗಿರುವ ಕೈಗಾರಿಕೀಕರಣ ಮತ್ತು ಕಾರ್ಖಾನೆ ಪದ್ಧತಿ ಕಾರ್ಮಿಕ ಸಂಘಗಳ ಹುಟ್ಟಿಗೆ ಕಾರಣವಾಯಿತು. ಇಂದಿನ ಕಾರ್ಮಿಕ ಸಂಘ ವ್ಯವಸ್ಥೆ ಬಹುಕಾಲದ ಸಾಮಾಜಿಕ ಹೋರಾಟದ ಹಿನ್ನೆಲೆಯಲ್ಲಿ ಬೆಳೆದುಬಂದಿದೆ. ಕಾರ್ಮಿಕರನ್ನು ಉದ್ಯೋಗದಾತರು ಶೋಷಣೆ ಮಾಡುತ್ತಿದ್ದರು. ಕಾರ್ಮಿಕರ ಒಕ್ಕೂಟಗಳನ್ನು ನ್ಯಾಯಬಾಹಿರ ಎಂದು ಸಾರಲಾಗಿತ್ತು. ಕಾರ್ಮಿಕರ ಸಂಘಟನೆಗೆ ಪ್ರಯತ್ನಿಸುವವರನ್ನು ನಿರ್ದಯವಾಗಿ ದಂಡಿಸಲಾಗುತ್ತಿತ್ತು. ಕಾರ್ಮಿಕರ ಸಂಘಟನೆ ಕ್ರಾಂತಿಗೆ ದಾರಿ ಮಾಡಿಕೊಟ್ಟೀತೆಂಬ ಹೆದರಿಕೆ ಇಂಗ್ಲೆಂಡಿನ ಆಡಳಿತವರ್ಗಕ್ಕೆ ಇತ್ತು. ಆದ್ದರಿಂದ ಪಾರ್ಲಿಮೆಂಟು ಕಾರ್ಮಿಕ ಸಂಘಗಳಿಗೆ ಪ್ರತಿಕೂಲವಾಗಿತ್ತು. ಇಂಥ ಕೂಟಗಳ ಬಗ್ಗೆ 1799–1800ರಲ್ಲಿ ಜಾರಿಗೆ ತಂದ ಕಾಯಿದೆಗಳು ಹೆಚ್ಚು ಕಠಿಣವಾಗಿದ್ದವು. ಇದರ ಪರಿಣಾಮವಾಗಿ ಕಾರ್ಮಿಕರ ಗುಪ್ತಸಂಘಗಳು ಹುಟ್ಟಿಕೊಂಡುವು. ಉದ್ಯೋಗದಾತರೊಡನೆ ಕಾರ್ಮಿಕರು ಬಹಿರಂಗವಾಗಿ ತಮ್ಮ ಸಮಸ್ಯೆಗಳನ್ನು ಚರ್ಚಿಸುವಂತಿರಲಿಲ್ಲ, ಸಮಾಲೋಚಿಸುವಂತಿರಲಿಲ್ಲ ಮತ್ತು ಶಾಂತಿಯುತ ಇತ್ಯರ್ಥಗಳಿಗೆ ಅವಕಾಶವಿರಲಿಲ್ಲ. ಆದ್ದರಿಂದ ಮುಷ್ಕರಗಳು, ಹಿಂಸಾಕೃತ್ಯಗಳು ಮತ್ತು ಯಂತ್ರೋಪಕರಣಗಳ ನಾಶ ಅಲ್ಲಲ್ಲಿ ಸಂಭವಿಸಿತು. ಸ್ನೇಹಸಂಘಗಳು ಅಸ್ತಿತ್ವಕ್ಕೆ ಬಂದದ್ದು ಇದೇ ಸಮಯದಲ್ಲಿ. ಇವು ಕಾರ್ಮಿಕರಿಗೆ ಅವರ ಕಷ್ಟಕಾಲದಲ್ಲಿ ನೆರವಾದವು.

ಕೂಟನಿರ್ಬಂಧಕ ಕಾಯಿದೆಗಳು ಹಲವು ವರ್ಷಗಳವರೆಗೆ ಜಾರಿಯಲ್ಲಿದ್ದವು. ಇವುಗಳ ವಿರುದ್ಧ ನಡೆಸಿದ ಹೋರಾಟದ ಫಲವಾಗಿ 1824ರಲ್ಲಿ ಕಾಯಿದೆಯೊಂದು ಜಾರಿಗೆ ಬಂತು. ಕಾರ್ಮಿಕರು ತಮ್ಮ ಕೂಲಿ ಮತ್ತು ಕೆಲಸದ ಅವಧಿ ಬಗ್ಗೆ ಉದ್ಯೋಗದಾತರೊಡನೆ ಸಮಾಲೋಚಿಸಲು ಈ ಕಾಯಿದೆಯಿಂದ ಅವಕಾಶ ದೊರಕಿತು. ಇದು ಅತೃಪ್ತಿ ಅಸಮಾಧಾನಗಳಿಗೆ ಎಡೆಮಾಡಿಕೊಟ್ಟಿತು. ಮುಷ್ಕರಗಳು ಹಬ್ಬಿದವು. ಶಾಂತಿಭಂಗದ ಪರಿಸ್ಥಿತಿ ಉಂಟಾಯಿತು. ಆದ್ದರಿಂದ ಈ ಕಾಯಿದೆಯ ತಿದ್ದುಪಡಿ ಮಾಡಿ 1825ರಲ್ಲಿ ಇನ್ನೊಂದು ಕಾಯಿದೆಯನ್ನು ಜಾರಿಗೆ ತರುವುದು ಅನಿವಾರ್ಯವಾಯಿತು. 1824ರ ಅನಂತರ ಕಾರ್ಮಿಕ ಸಂಘಗಳ ಮತ್ತು ಅವುಗಳ ಸದಸ್ಯರ ಸಂಖ್ಯೆಗಳು ಬೆಳೆದವು. 1834ರಲ್ಲಿ ರಾಬರ್ಟ್ ಓವೆನ್ ಮತ್ತು ಅವನ ಅನುಯಾಯಿಗಳು ಸುಮಾರು ಹತ್ತು ಲಕ್ಷ ಕಾರ್ಮಿಕರಿಂದ ಕೂಡಿದ ರಾಷ್ಟ್ರೀಯ ಮಟ್ಟದ ಕಾರ್ಮಿಕ ಮಹಾಸಂಘವೊಂದನ್ನು ಕಟ್ಟಿದರು (ಗ್ರ್ಯಾಂಡ್‌ನ್ಯಾಷನಲ್ ಕನ್ಸಾಲಿಡೇಟೆಡ್ ಟ್ರೇಡ್ ಯೂನಿಯನ್). ಆರ್ಥಿಕ ಪುನರ್ರಚನೆಯೇ ಇದರ ಗುರಿಯಾಗಿತ್ತು. ಆದರೆ ಇದು ತನ್ನ ಗುರಿಯನ್ನು ಸಾಧಿಸದೆ ಕೊನೆಗೊಂಡಿತು. ಇದರಿಂದ ಕಾರ್ಮಿಕರಿಗೆ ಕಾರ್ಮಿಕ ಸಂಘಗಳಲ್ಲಿದ್ದ ವಿಶ್ವಾಸ ನಷ್ಟವಾಯಿತು. ಕೆಲವು ವರ್ಷಗಳವರೆಗೆ ಅವರು ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ತೋರಿಸಿದರು. ಕಾಯಿದೆಯ ಮೂಲಕ ಕಾರ್ಮಿಕ ಹಿತರಕ್ಷಣೆಯಾಗಬೇಕೆಂಬ ಚಾರ್ಟಿಸ್ಟ್ ಆಂದೋಲನವನ್ನು ಆವರು ಬೆಂಬಲಿಸಿದರು. ಅದು ಕೂಡ ಯಶಸ್ವಿಯಾಗಲಿಲ್ಲ. 1843ರಿಂದ ಕಾರ್ಮಿಕರ ಸಂಘಟನೆಯ ಕಾರ್ಯ ಪ್ರಾರಂಭವಾಯಿತು. 1851ರಲ್ಲಿ ಎಂಜಿನಿಯರುಗಳ ಸಮೇಕಿತ ಸಂಘವನ್ನು ಸ್ಥಾಪಿಸಲಾಯಿತು. ಕೆಲ ಕಾಲದ ಅನಂತರ ಇದೇ ಬಗೆಯ ಇನ್ನೂ ಕೆಲವು ವಿಧಾನಗಳಲ್ಲಿ ಸಮೇಕಿತ ಸಂಘಗಳನ್ನು ಸ್ಥಾಪಿಸಲಾಯಿತು. ಈ ಕಾಲದ ಕಾರ್ಮಿಕ ಸಂಘಗಳು ತಮ್ಮ ಸದಸ್ಯರಿಗೆ ಹೆಚ್ಚಿನ ಪ್ರಯೋಜನಗಳನ್ನು ಒದಗಿಸಿಕೊಡುತ್ತಿದ್ದವು. ಈ ಅವಧಿಯಲ್ಲಿ ದಕ್ಷ ಕಾರ್ಮಿಕ ಸಂಘಗಳು ಹುಟ್ಟಿಕೊಂಡವು. ಆದರೆ ಸಾಮಾನ್ಯ ಕಾರ್ಮಿಕರ ಹಿತಗಳ ಕಡೆಗೆ ಗಮನ ಹರಿಯಲಿಲ್ಲ.

1869 ರಿಂದ ಉದ್ಯೋಗದಾತರು ತಮ್ಮ ಸಂಘಗಳನ್ನು ಕಟ್ಟಿಕೊಂಡು ಕಾರ್ಮಿಕ ಸಂಘಗಳ ವಿನಾಶಕ್ಕಾಗಿ ತುಂಬ ಪ್ರಯತ್ನಿಸಿದರು. ಇದರಿಂದ ಇಂಗ್ಲೆಂಡಿನಲ್ಲಿ ಆಗಾಗ ಹಿಂಸೆ, ಹಾಹಾಕಾರ ಮತ್ತು ಮುಷ್ಕರಗಳು ತಲೆದೋರಿದವು. ಆದ್ದರಿಂದ ಕಾರ್ಮಿಕ ಸಂಘಗಳ ಕಾರ್ಯನಿರ್ವಹಣೆಯ ಬಗ್ಗೆ ವಿಚಾರಣೆ ನಡೆಸಲು 1867 ರಲ್ಲಿ ಆಯೋಗವೊಂದನ್ನು ನೇಮಿಸಲಾಯಿತು. 1871ರಲ್ಲಿ ಕಾರ್ಮಿಕ ಸಂಘಗಳ ಕಾಯಿದೆಯನ್ನು ಜಾರಿಗೆ ತಂದದ್ದು ಈ ಆಯೋಗದ ವರದಿಯ ಫಲ. ಇದರಿಂದ ಕಾರ್ಮಿಕ ಸಂಘಗಳ ಬೆಳೆವಣಿಗೆಗೆ ತುಂಬ ಪ್ರೋತ್ಸಾಹ ದೊರಕಿತು. ಆನೇಕ ಕಾರ್ಮಿಕ ಸಂಘಗಳು ಹುಟ್ಟಿಕೊಂಡವು. 1874ರಲ್ಲಿ ಇಂಗ್ಲೆಂಡಿನಲ್ಲಿ ಸಂಭವಿಸಿದ ಕೈಗಾರಿಕಾ ಮುಗ್ಗಟ್ಟಿನ ಫಲವಾಗಿ ಸಣ್ಣಪುಟ್ಟ ಕಾರ್ಮಿಕ ಸಂಘಗಳು ಮಾಯವಾದವು. ಕಾರ್ಮಿಕ ಮುಷ್ಕರಗಳು ಅಯಶಸ್ವಿಯಾದವು. ಆದರೂ ಕಾರ್ಮಿಕ ಸಂಘಗಳ ಬೆಳೆವಣಿಗೆ ಕುಂದಲಿಲ್ಲ. 1890ರಲ್ಲಿ ರೈಲ್ವೆ ಕಾರ್ಮಿಕರು ಸಮೇಕಿತ ಸಂಘವನ್ನು ಕಟ್ಟಿಕೊಂಡರು. ಕಾರ್ಮಿಕರ ಸ್ಥಿತಿಗತಿ ಸುಧಾರಣೆಗಾಗಿ 1893ರಲ್ಲಿ ಸ್ಥಾಪಿಸಲಾದ ಸ್ವತಂತ್ರ ಕಾರ್ಮಿಕ ಪಕ್ಷ 1906ರಲ್ಲಿ ಅಧಿಕೃತ ಕಾರ್ಮಿಕ ಪಕ್ಷವಾಗಿ ರೂಪುಗೊಂಡಿತು. ಕಾರ್ಮಿಕ ಹಿತರಕ್ಷಣೆಗೆ ಅವರ ಪಕ್ಷದ ಸರ್ಕಾರ ಸ್ಥಾಪನೆಯಾಗಬೇಕೆಂಬ ವಾದಕ್ಕೆ ಪುರಸ್ಕಾರ ದೊರಕಿತು. ಅದು ಅನೇಕ ಸಾರಿ ಸರ್ಕಾರದಲ್ಲಿ ಅಧಿಕಾರ ನಡೆಸಿದೆ. ಕಾರ್ಮಿಕ ಸಂಘಗಳು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿ ಸಾಮಾಜಿಕ ಹಿತರಕ್ಷಣೆ ಕಾಯಿದೆಗಳನ್ನು ಜಾರಿಗೆ ತರುವುದರಲ್ಲಿ ಹೆಚ್ಚು ಯಶಸ್ಸುಗಳಿಸಿವೆ.

1900ರಲ್ಲಿ ಟಾಫ್ ವೇಲ್ ರೈಲ್ವೆ ಕಂಪನಿಯ ಕಾರ್ಮಿಕರು ಮುಷ್ಕರ ಹೂಡಿದರು ಇದು ರೈಲ್ವೆ ಕಂಪನಿಗೆ ತುಂಬ ಹಾನಿಯನ್ನುಂಟುಮಾಡಿತು. ಇದನ್ನು ತುಂಬಿಕೊಡಲು ರೈಲ್ವೆ ಕಂಪನಿ ರೈಲ್ವೆ ಕಾರ್ಮಿಕರ ಸಮೇಕಿತ ಸಂಘದ ಮೇಲೆ ಕ್ರಮತೆಗೆದುಕೊಂಡಿತು. ರೈಲ್ವೆ ಕಂಪನಿಗಾದ ಹಾನಿಯನ್ನು ರೈಲ್ವೆ ಕಾರ್ಮಿಕರು ತುಂಬಿಕೊಡಬೇಕೆಂದು ನ್ಯಾಯಾಲಯ ತೀರ್ಪು ನೀಡಿತು. ಕಾರ್ಮಿಕ ಸಂಘಗಳ ಬೆಳೆವಣಿಗೆಗೆ ಇದರಿಂದ ಆದ ಆಘಾತ ಅಗಾಧ. ನ್ಯಾಯಾಲಯದ ವ್ಯಾಜ್ಯಗಳಿಗೂ ಮುಷ್ಕರಗಳಿಂದುಂಟಾದ ಹಾನಿಯನ್ನು ತುಂಬಿಕೊಡಲೂ ಸಂಘಗಳು ನಿಧಿಯನ್ನು ಪೋಲುಮಾಡಲಾಗುತ್ತಿವೆ ಎಂಬ ಭಾವನೆ ಕಾರ್ಮಿಕರಲ್ಲಿ ಮೂಡಿತು. ಕಾರ್ಮಿಕ ಸಂಘಗಳು ಕಾರ್ಮಿಕರ ಪಕ್ಷವನ್ನು ಬೆಂಬಲಿಸಲು ತಮ್ಮ ಸದಸ್ಯರಿಂದ ನಿಧಿಯನ್ನು ಕೂಡಿಸಬಾರದೆಂದು ಹೇಳಲಾಯಿತು. ಇದರಿಂದ ಕಾರ್ಮಿಕ ಪಕ್ಷದ ಅಸ್ತಿತ್ವವನ್ನೇ ಪ್ರಶ್ನಿಸುವಂತಾಯಿತು. 1906 ರವರೆಗೆ ಮುಷ್ಕರದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು ಒಂದು ದಂಡಾರ್ಹ ಅಪರಾಧವೆಂದು ಪರಿಗಣಿಸಲಾಗಿತ್ತು. ಮುಷ್ಕರವನ್ನು ಪ್ರಚೋದಿಸಿದ ಕಾರ್ಮಿಕ ಮುಖಂಡರನ್ನು ಪಿತೂರಿ ಆರೋಪದ ಮೇಲೆ ಮೊಕದ್ದಮೆ ಹೂಡುವುದರ ಜೊತೆಗೆ, ಕರ್ಮಿಕ ಮತ್ತು ಮಾಲಿಕರ ನಡುವಿನ ಒಪ್ಪಂದವನ್ನು ಮುರಿಯು ಪ್ರಯತ್ನವೆಂದು ಪರಿಗಣಿಸಿ ಅವರು ಪರಿಹಾರ ಕಟ್ಟಿಕೊಡಬೇಕೆಂದು ಕೋರ್ಟ್ ಆದೇಶಿಸಿದ ಪ್ರಕರಣಗಳು (ಕ್ವೀನ್– Vs – ಲೀಥಮ್ – 1901, ಟ್ಯಾಫ್‌ವೇಲ್ ರೈಲ್ವೇ ಕಂಪನಿ – Vs – ಅಮೂಲ್ಗಮೇಟೆಡ್ ಸೊಸೈಟಿ ಆಫ್ ರೈಲ್ವೆ ಸರ್ವೆಂಟ್ಸ್ – 1901) ಇಂಗ್ಲೆಂಡಿನ ಕಾರ್ಮಿಕರನ್ನು ರೊಚ್ಚಿಗೆಬ್ಬಿಸಿದವು. ಕಾರ್ಮಿಕ ಸಂಘಗಳು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದೂ ಅದಕ್ಕಾಗಿ ಹಣ ಕೂಡಿಸುವುದೂ ಕಾನೂನು ಬದ್ಧವೆಂದು ಸಾರಲಾಗಿದ್ದು 1913ರ ಕಾರ್ಮಿಕ ಸಂಘಗಳ ಕಾಯಿದೆಯಲ್ಲಿ. ಕಾರ್ಮಿಕಸಂಘ ಚಳವಳಿಯ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು.

ಒಂದನೆಯ ಮಹಾಯುದ್ಧದ ಅನಂತರ ಇಂಗ್ಲೆಂಡಿನಲ್ಲಿ ಆರ್ಥಿಕ ಮುಗ್ಗಟ್ಟು ಸಂಭವಿಸಿತು. ವೇತನಗಳು ಇಳಿದವು. ಮುಷ್ಕರಗಳು ತಲೆದೋರಿದವು. 1919ರ ರೈಲ್ವೆ ಕಾರ್ಮಿಕರ ಮುಷ್ಕರದಲ್ಲಿ ಕಾರ್ಮಿಕರೇ ಜಯಶಾಲಿಗಳಾದರು. ಲಂಡನ್ನಿನ ನೌಕಾ ಕಾರ್ಮಿಕರ ಮುಷ್ಕರವನ್ನು ಸಂಘಟಿಸಿದಾತ ಪ್ರಮುಖ ಕಾರ್ಮಿಕ ಮುಂದಾಳು ಅರ್ನೆಸ್ಟ್ ಬೆವಾನ್. ಇದರಲ್ಲೂ ಕಾರ್ಮಿಕರಿಗೆ ಜಯ ದೊರಕಿತು. ಸಾರ್ವತ್ರಿಕ ಮುಷ್ಕರ ಕಾರಣ, ಇದನ್ನು ಕಾರ್ಮಿಕರ ಪಕ್ಷವೂ ಕಾರ್ಮಿಕರೂ ತೀವ್ರವಾಗಿ ವಿರೋಧಿಸಿದರು. ಆದರೆ 1929ರಲ್ಲಿ ಅಧಿಕಾರಕ್ಕೆ ಬಂದ ಕಾರ್ಮಿಕರ ಪಕ್ಷ ಈ ಕಾಯಿದೆಯನ್ನು ಬದಲಿಸಲು ಪ್ರಯತ್ನಿಸಲಿಲ್ಲ.

1946ರಲ್ಲಿ ಜಾರಿಗೆ ಬಂದ ಕಾರ್ಮಿಕ ವಿವಾದಗಳ ಮತ್ತು ಕಾರ್ಮಿಕ ಸಂಘಗಳ ಕಾಯಿದೆಯಿಂದ ಪರಿಸ್ಥಿತಿ ಸುಧಾರಿಸಿತು.

1946ರ ಅನಂತರ ಕಾರ್ಮಿಕ ಸಂಘಗಳ ಶಕ್ತಿ ಹೆಚ್ಚುತ್ತಿದೆ. ಕಾರ್ಮಿಕ ಹಿತರಕ್ಷಣೆ ಮತ್ತು ಕಲ್ಯಾಣಸಾಧನೆಗಾಗಿ ಇವು ಅನೇಕ ಚಟುವಟಿಕೆಗಳಲ್ಲಿ ನಿರತವಾಗಿವೆ. ಉದ್ಯಮ, ಕೃಷಿ ಮತ್ತು ಸಾರ್ವಜನಿಕ ಸೇವೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಸಂಘಟಿಸುವ ಕೆಲಸ ಸಾಗುತ್ತಿದೆ. ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಕಾರ್ಮಿಕ ಸಂಘಗಳ ಒಟ್ಟು ಸದಸ್ಯರ ಸಂಖ್ಯೆ ಶೇ. 25ರಷ್ಟು ಹೆಚ್ಚಿತು.

ಎರಡನೆಯ ಮಹಾಯುದ್ಧಾರಂಭದ ಕಾಲದಿಂದ ಕಾರ್ಮಿಕ ಸಂಘಗಳ ಸಂಖ್ಯೆ ಇಳಿಯಲಾರಂಭಿಸಿತು. ಕಾರ್ಮಿಕ ಸಂಘಗಳ ಅಂಗರಚನೆಯಲ್ಲಿ ಬದಲಾವಣೆ, ಕಾರ್ಮಿಕ ಸಂಘಗಳ ವಿಲೀನೀಕರಣ, ವೇತನ ಸಮಾಲೋಚನೆಗಳ ಕೇಂದ್ರೀಕರಣ, ಕೈಗಾರಿಕಾ ಒಡೆತನದ ಕೇಂದ್ರೀಕರಣ, ಉತ್ಪಾದನೆಯ ವಿಧಾನಗಳಲ್ಲಿ ಬದಲಾವಣೆ–ಇವು ಸಂಘಗಳ ಸಂಖ್ಯೆ ಕಡಿಮೆಯಾಗಲು ಕಾರಣ.

ಇಂಗ್ಲೆಂಡಿನಲ್ಲಿ ಕಾರ್ಮಿಕ ಸಂಘಗಳ ಒಕ್ಕೂಟಗಳನ್ನು ಸ್ಥಾಪಿಸುವ ಪ್ರಯತ್ನಗಳೂ ನಡೆದಿವೆ. ಕಾರ್ಮಿಕ ಸಂಘಗಳ ಕಾಂಗ್ರೆಸ್ ಸ್ಥಾಪನೆಯಾಗಿದ್ದು 1868 ರಲ್ಲಿ. ಇದು ಕಾರ್ಮಿಕರ ಮಹಾಸಭೆ, ದೇಶದ ಕಾರ್ಮಿಕ ಆಂದೋಲನದ ಕೇಂದ್ರ ಬಿಂದು. ಇದರ ಮಹಾ ಪರಿಷತ್ತನ್ನು 1921 ರಲ್ಲಿ ಸ್ಥಾಪಿಸಲಾಯಿತು. ಕಾರ್ಮಿಕ ಸಂಘಗಳ ಕಾಂಗ್ರೆಸ್ಸಿನಲ್ಲಿ 186ಕ್ಕೂ ಹೆಚ್ಚು ಕಾರ್ಮಿಕ ಸಂಘಗಳಿವೆ. ಇವುಗಳಲ್ಲಿ 18 ದೊಡ್ಡವು. ಸದಸ್ಯರ ಸಂಖ್ಯೆ 85 ಲಕ್ಷಕ್ಕೂ ಹೆಚ್ಚು. ಈ ಎಲ್ಲ ಸಂಘಗಳಲ್ಲಿ ಅತಿ ದೊಡ್ಡ ಕಾರ್ಮಿಕ ಸಂಘಗಳು ಎರಡು: 1 ಸಾರಿಗೆ ಮತ್ತು ಸಾಮಾನ್ಯ ದುಡಿಮೆಗಾರರ ಸಂಘ (ಟ್ರಾನ್ಸ್‌ಪೋರ್ಟ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್) ಮತ್ತು 2 ಸಾಮಾನ್ಯ ಮತ್ತು ಪೌರಸಭಾ ಕೆಲಸಗಾರರ ಸಂಘ (ಜನರಲ್ ಅಂಡ್ ಮುನಿಸಿಪಲ್ ವರ್ಕರ್ಸ್ ಯೂನಿಯನ್). ಕಾರ್ಮಿಕ ಸಂಘ ಸದಸ್ಯರಲ್ಲಿ ಮೂರನೆಯ ಒಂದು ಭಾಗ ಮಹಿಳೆಯರಿದ್ದಾರೆ.

ಪ್ರತಿಯೊಂದು ಕಾರ್ಮಿಕ ಸಂಘವೂ ಸ್ವತಂತ್ರ. ಅದಕ್ಕೆ ತನ್ನದೇ ಆದ ಅಂಗರಚನೆಯುಂಟು. ಪ್ರತಿಯೊಂದು ಸ್ಥಳೀಯ ಸಂಘವೂ ತನ್ನ ಅಧಿಕಾರಿಗಳನ್ನು ಚುನಾಯಿಸುತ್ತದೆ; ಸಮಿತಿಗಳನ್ನು ರೂಪಿಸುತ್ತದೆ. ಆ ಸ್ಥಳಕ್ಕೆ ಸೀಮಿತವಾದ ಎಲ್ಲ ವಿಷಯಗಳನ್ನು ಕುರಿತು ಯೋಚಿಸುತ್ತದೆ. ಹೆಚ್ಚಿನ ವ್ಯಾಪ್ತಿಯುಳ್ಳ ವಿಷಯಗಳನ್ನು ಕುರಿತು ಜಿಲ್ಲಾಮಟ್ಟದ ಇಲ್ಲವೆ ರಾಷ್ಟ್ರೀಯ ಮಟ್ಟದ ಕಾರ್ಮಿಕ ಸಂಘಗಳು ಚರ್ಚಿಸುತ್ತಿವೆ. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಪುರುಷ ಕಾರ್ಮಿಕರೇ ಕಾರ್ಮಿಕ ಸಂಘಟಕರಾಗಿದ್ದಾರೆ.

ಇಂಗ್ಲೆಂಡಿನಲ್ಲಿ ಕಾರ್ಮಿಕ ಸಂಘಗಳು ಕಾರ್ಮಿಕರ ಜೀವನ ಸ್ಥಿತಿ ಸುಧಾರಣೆ ಮತ್ತು ಪ್ರಗತಿಗಳಿಗಷ್ಟೇ ಸೀಮಿತವಾಗಿಲ್ಲ. ಅವು ಕೈಗಾರಿಕಾ ಸಂಬಂಧಗಳನ್ನು ರೂಪಿಸಲು ಸಹಾಯಮಾಡಿವೆ. ಕಾರ್ಮಿಕರ ವಿವಾದಗಳನ್ನು ಕಡಿಮೆಮಾಡಿವೆ. ವೇತನ ಸಮಾಲೋಚನೆಗಳನ್ನು ನಡೆಸುವ ಮತ್ತು ದೇಶದಲ್ಲಿ ಉದ್ಯೋಗ ಸ್ಥಿತಿಗಳನ್ನು ರೂಪಿಸುವ ಸಂಸ್ಥೆಗಳಾಗಿವೆ. ರಾಷ್ಟ್ರೀಯ ಆರೋಗ್ಯ ವಿಮಾ ಕಾನೂನು, ಕಾರ್ಮಿಕರ ರಾಷ್ಟ್ರೀಯ ಆರೋಗ್ಯ ವಿಮಾ ಕಾನೂನು, ಕಾರ್ಮಿಕರ ಶೈಕ್ಷಣಿಕ ಸಂಸ್ಥೆಗಳು ಮತ್ತು ಕಾರ್ಮಿಕರ ಕಾಲೇಜುಗಳು, ರಾಷ್ಟ್ರೀಯ ಮಂಡಳಿಗಳು–ಇವು ಕಾರ್ಮಿಕರಿಗೆ ಅರ್ಥಶಾಸ್ತ್ರ, ಸಾರಿಗೆ, ಸಮಾಜವಿಜ್ಞಾನ, ಅಂಚೆ ಮತ್ತು ತೆರಪಿನ ಶಿಕ್ಷಣ, ಸಾಂಸ್ಕೃತಿಕ ವಿಷಯಗಳು ಮತ್ತು ಕಾರ್ಮಿಕ ಸಂಘ ಶಿಕ್ಷಣಗಳನ್ನು ಸಂಘಟಿಸಿವೆ. ಇವು ಕಾರ್ಮಿಕರ ವಾಸ್ತವಿಕ, ಬೌದ್ಧಿಕ ಮತ್ತು ಸಾಂಸ್ಕೃತಿಕ ಮಟ್ಟಗಳನ್ನು ಹೆಚ್ಚಿಸಿವೆ ಮತ್ತು ಇವುಗಳ ಮಹತ್ತ್ವದ ಮನವರಿಕೆ ಮಾಡಿಕೊಟ್ಟಿವೆ. ಕಾರ್ಮಿಕರಿಗೆ ಶಿಕ್ಷಣ ನೀಡುವುದರ ಮೂಲಕ ಪುರುಷ ಮತ್ತು ಸ್ತ್ರೀ ಕಾರ್ಮಿಕರಿಗೆ ಸ್ವಾಭಿಮಾನ ಮತ್ತು ದೇಶಾಭಿಮಾನಿಗಳ ನೆಲೆಬೆಲೆಗಳ ನೈಜಕಲ್ಪನೆ ನೀಡಲಾಗುತ್ತದೆ. ಅಂತರರಾಷ್ಟ್ರೀಯ ಸಂಘಟನೆಗಳಿಂದ ಕಾರ್ಮಿಕರಿಗೆ ಅಂತರರಾಷ್ಟ್ರೀಯ ಮಟ್ಟದ ಕಾರ್ಮಿಕರ ಆವಶ್ಯಕತೆಗಳನ್ನು ಪೂರೈಸಲು ಪ್ರಯತ್ನಿಸಲಾಗಿದೆ. ಆರ್ಥಿಕ ಸಾಮಾಜಿಕ ವಿಚಾರಗಳು, ದೇಶದ ರಕ್ಷಣೆ ಮುಂತಾದ ವಿಚಾರಗಳಲ್ಲಿ ಸರ್ಕಾರವು ಕಾರ್ಮಿಕ ಸಂಘಗಳ ಸಲಹೆ ಪಡೆಯುತ್ತದೆ.

ಅಮೆರಿಕದಲ್ಲಿ 18ನೆಯ ಶತಮಾನದ ಕೊನೆಯ ಭಾಗದಲ್ಲಿ ಕುಶಲಕರ್ಮಿಗಳ ಸಂಘಗಳು ಹುಟ್ಟಿಕೊಂಡವು. ಅವು ಕಾರ್ಮಿಕರ ವೇತನ ಮತ್ತು ದುಡಿತದ ಅವಧಿಗಳ ಬೇಡಿಕೆಗಳನ್ನು ಮುಂದಿಟ್ಟುವು. ಈ ಬೇಡಿಕೆಗಳ ಪೂರೈಕೆಯಾಗದಿದ್ದಾಗ ಅವು ಮುಷ್ಕರ ಮತ್ತು ಬಹಿಷ್ಕಾರಗಳನ್ನು ಹಾಕುತ್ತಿದ್ದವು. ಆದರೆ ಈ ಸಂಘಗಳ ಕಾರ್ಮಿಕರಿಗೆ ವೇತನಪ್ರಜ್ಞೆ ಇರಲಿಲ್ಲ. ಆದ್ದರಿಂದ ಈ ಕಾಲದ ಕಾರ್ಮಿಕ ಸಂಘಗಳನ್ನು ಸ್ನೇಹ–ಸಂಘಗಳೆಂದು ಕರೆಯಬಹುದು.

1820ರ ಅನಂತರವೇ ಅಮೆರಿಕದಲ್ಲಿ ಕಾರ್ಮಿಕ ಸಂಘಗಳ ನಿಜವಾದ ಆಂದೋಲನ ಪ್ರಾರಂಭವಾದದ್ದು. ಕುಶಲಕರ್ಮಿಗಳ ಕೆಲಸ ನಷ್ಟ, ದೊಡ್ಡ ಕಾರ್ಖಾನೆಗಳ ಏಳಿಗೆ, ನಗರ ಕೇಂದ್ರಗಳಲ್ಲಿ ಹೆಚ್ಚುತ್ತಿರುವ ಕಾರ್ಮಿಕ ಕೇಂದ್ರೀಕರಣ ಮತ್ತು ಸಾರಿಗೆ ಸಂಪರ್ಕಗಳ ಬೆಳವಣಿಗೆ–ಇವು ವೇತನವನ್ನೇ ಪ್ರಮುಖ ಅಂಗವನ್ನಾಗಿಟ್ಟುಕೊಂಡ ಕಾರ್ಮಿಕ ಸಂಘಗಳ ಬೆಳವಣಿಗೆಗೆ ಅವಕಾಶ ನೀಡಿದವು. ಆಗಾಗ ಹುಟ್ಟಿಕೊಂಡ ಕೈಗಾರಿಕಾ ಮುಗ್ಗಟ್ಟುಗಳು ಮತ್ತು ವೇತನ ದರಗಳಲ್ಲಿ ಉಂಟಾದ ಏರಿಳಿತಗಳು ಕಾರ್ಮಿಕರಲ್ಲಿ ಅತೃಪ್ತಿಯನ್ನು ಹುಟ್ಟಿಸಿದವು. ತಾವು ಬಂಡವಾಳಶಾಹಿಯ ಯಜ್ಞಪಶುಗಳೆಂಬ ಭಾವನೆ ಕಾರ್ಮಿಕರಲ್ಲಿ ಹುಟ್ಟಿತು. ಸಾಮಾಜಿಕ ಸಮಾನತೆ ಮತ್ತು ಮಾನವೀಯ ಹಕ್ಕುಗಳ ನೈಜಕಲ್ಪನೆ ಅವರಿಗೆ ಆದದ್ದು ಆ ಸಂದರ್ಭದಲ್ಲಿ. ಮತದಾನ ಮಾಡುವ ಹಕ್ಕು ಕಾರ್ಮಿಕರಿಗೆ ದೊರಕಿದ ನಂತರ ಅವರು ತಂತಮ್ಮ ಸಂಕಷ್ಟಗಳ ನಿವಾರಣೆಗೆ ಪ್ರಯತ್ನಿಸುತ್ತಿದ್ದರು. ಸ್ಥಾನಿಕ ಕಾರ್ಮಿಕ ಸಂಘಗಳು ಅಧಿಕ ಸಂಖ್ಯೆಯಲ್ಲಿ ಬೆಳೆದವು. ಇವು ಮುಷ್ಕರ ನಿಧಿಗಳನ್ನು ಕೂಡಿಸುತ್ತಿದ್ದವು. ಮುಷ್ಕರಗಳನ್ನು ಬೆಂಬಲಿಸುತ್ತಿದ್ದವು. ಚಮ್ಮಾರರು, ಮುದ್ರಣಕಾರರು, ಬಡಗಿಗಳು ಮತ್ತು ನೇಕಾರರು ಅನೇಕ ಕಾರ್ಮಿಕ ಸಂಘಗಳನ್ನು ಸಂಘಟಿಸಿದರು. ಮುಂದೆ ರಾಷ್ಟ್ರೀಯ ಕಾರ್ಮಿಕ ಸಂಘವನ್ನು ಸ್ಥಾಪಿಸಿದವರು ಇವರೇ. ಈ ಸಂಘದ ಮೂಲಕ ಕಾರ್ಮಿಕರು ತಮ್ಮ ಕೂಲಿ ಮತ್ತು ಕೆಲಸದ ಅವಧಿಯಲ್ಲಿ ಸುಧಾರಣೆಯನ್ನು ಮಾಡಿಕೊಂಡರಲ್ಲದೆ, ವಿಶಾಲ ಸಾಮಾಜಿಕ ಸುಧಾರಣೆಗಳ ವಿರುದ್ಧ ಬಂಡೆದ್ದರು. 1837ರಲ್ಲಿ ಉಂಟಾದ ವಿಪ್ಲವಗಳನ್ನು ಕಾರ್ಮಿಕ ಸಂಘಗಳು ಎದುರಿಸುವುದು ತುಂಬ ಕಷ್ಟವಾಗಿದ್ದರೂ, ಕೆಲವು ಕಾರ್ಮಿಕ ಸಂಘಗಳು ಇವುಗಳಿಂದ ಚೇತರಿಸಿಕೊಂಡವು.

1861–65ರಲ್ಲಿ ಅಮೆರಿಕದಲ್ಲಿ ಸಂಭವಿಸಿದ ಅಂತರ್ಯುದ್ಧದಿಂದಾಗಿ ಕಾರ್ಮಿಕ ಸಂಘಗಳ ಚಟುವಟಿಕೆಗಳ ಪುನಶ್ಚೇತನಕ್ಕೆ ಪ್ರೋತ್ಸಾಹ ದೊರಕಿತು. ಏರುತ್ತಿದ್ದ ಜೀವನ ವೆಚ್ಚಕ್ಕೆ ಅನುಗುಣವಾಗಿ ಕಾರ್ಮಿಕರಿಗೆ ವೇತನ ಸಿಗುತ್ತಿರಲಿಲ್ಲ. 1863–66ರಲ್ಲಿ ಹೆಚ್ಚಿನ ವೇತನಗಳಿಗಾಗಿ ಹೋರಾಡಲು ಅನೇಕ ಕಾರ್ಮಿಕ ಸಂಘಗಳು ಹುಟ್ಟಿಕೊಂಡುವು. ರೈಲ್ವೆ ಕಾರ್ಮಿಕರು ಮತ್ತು ಎಂಜಿನಿಯರಿಂಗ್ ಕೈಗಾರಿಕೆಯ ಕಾರ್ಮಿಕರು ರಾಷ್ಟ್ರಮಟ್ಟದ ಕಾರ್ಮಿಕ ಸಂಘಗಳನ್ನು ಕಟ್ಟಿದರು. 1870ರಲ್ಲಿ ಸುಮಾರು 32 ರಾಷ್ಟ್ರೀಯ ಕಾರ್ಮಿಕ ಸಂಘಗಳಿದ್ದವು. ಪ್ರತಿಯೊಂದು ದೊಡ್ಡ ಪಟ್ಟಣದಲ್ಲೂ ಕಾರ್ಮಿಕರ ಸಭೆ, ಅಚ್ಚುಕೂಟ ಮತ್ತು ಗ್ರಂಥಾಲಯಗಳಿದ್ದವು. ಕಾರ್ಮಿಕ ಸಭೆಗಳ ಮಾದರಿಯಲ್ಲಿ ರಾಷ್ಟ್ರೀಯ ಕಾರ್ಮಿಕ ಸಂಘವನ್ನು 1866ರಲ್ಲಿ ಸ್ಥಾಪಿಸಲಾಯಿತು. 1870ರಲ್ಲಿ ಇತರ ರಾಷ್ಟ್ರೀಯ ಕಾರ್ಮಿಕ ಸಂಘಗಳು ಇದರಿಂದ ದೂರ ಸರಿಯಲಾರಂಭಿಸಿದವು. 1872ರಲ್ಲಿ ಈ ಸಂಘ ಕುಸಿದುಬಿತ್ತು. ಅನಂತರ ಕೆಲಕಾಲ ಗುಪ್ತ ಸಂಘಗಳು ಹುಟ್ಟಿಕೊಂಡವು. 1869ರಲ್ಲಿ ನೈಟ್ಸ್ ಆಫ್ ಲೇಬರ್ ಎಂಬ ಕಾರ್ಮಿಕ ಸಂಘ ಹುಟ್ಟಿಕೊಂಡಿತು. ದಿನಕ್ಕೆ ಎಂಟು ಗಂಟೆ ದುಡಿತ, ಉತ್ಪಾದಕರ ಸಹಕಾರ ಸಂಘಗಳ ಸ್ಥಾಪನೆ, ಹಣದ ವಿಕಸನಕ್ಕೆ ಉತ್ತೇಜನ, ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳದಿರುವುದು, ಕಡ್ಡಾಯದ ಮಧ್ಯಸ್ಥಿಕೆಯನ್ನು ಪ್ರೋತ್ಸಾಹಿಸುವುದು, ವರಮಾನ ಮತ್ತು ವಾರಸುದಾರ ತೆರಿಗೆಗಳನ್ನು ಬಳಕೆಗೆ ತರುವುದು, ಪ್ರೌಢ ಶಿಕ್ಷಣಯೋಜನೆಯನ್ನು ಫಲಪ್ರದಗೊಳಿಸುವುದು–ಇವೇ ಮೊದಲಾದವು ಈ ಸಂಘದ ಉದ್ದೇಶಗಳು. 1880ರ ಅವಧಿಯಲ್ಲಿ ಇದೊಂದು ದೊಡ್ಡ ಆಂದೋಲನವಾಗಿ ರೂಪುಗೊಂಡಿತು. ಈ ಸಂಘವು ಸಾಮೂಹಿಕ ಚೌಕಾಸಿಯನ್ನು ಆರಂಭಿಸಿತು. ಮುಷ್ಕರ ಮತ್ತು ಬಹಿಷ್ಕಾರಗಳಿಗೆ ಪ್ರೋತ್ಸಾಹ ದೊರಕಿತು. ಸಾಮಾನ್ಯ ಮತ್ತು ಅರೆಕುಶಲ ಕಾರ್ಮಿಕರು, ಸಣ್ಣ ಪಟ್ಟಣಗಳ ವರ್ತಕರು, ಯಂತ್ರ ಕೆಲಸಗಾರರು ಮತ್ತು ಕೃಷಿಕರು ಈ ಸಂಘದ ಸದಸ್ಯರಾದರು.

ವಿವಿಧ ಹಿತಾಸಕ್ತಿಗಳಿದ್ದ ನಾನಾ ಬಗೆಯ ಕಾರ್ಮಿಕರು ಈ ಸಂಘದ ಸದಸ್ಯರಾದುದರಿಂದ ಇದರಲ್ಲಿ ಸಂಘರ್ಷ ಅನಿವಾರ್ಯವಾಯಿತು. ಇದರಿಂದಾಗಿ ನೈಟ್ಸ್ ಸದಸ್ಯರಲ್ಲಿ ಒಡಕು ಹುಟ್ಟಿತು. ಅಯಶಸ್ವಿ ಮುಷ್ಕರಗಳು ಈ ಸಂಘದ ವರ್ಚಸ್ಸನ್ನು ಕುಗ್ಗಿಸಿದವು. ಕ್ರಮೇಣ ನೈಟ್ಸರಲ್ಲಿದ್ದ ಕುಶಲಕರ್ಮಿಗಳ ಹಿತಾಸಕ್ತಿಗಳನ್ನು ಕಡೆಗಣಿಸಲಾಯಿತು. ಅವರ ಸಂಘಗಳು ಚದರಿಹೋದವು. ಇವನ್ನೆಲ್ಲ ಮತ್ತೆ ಒಟ್ಟುಗೂಡಿಸುವ ಉದ್ದೇಶದಿಂದ ಸಂಘಟಿತ ವೃತ್ತಿ ಮತ್ತು ಕಾರ್ಮಿಕ ಸಂಘಗಳ ಮಹಾಸಂಘ (ಫೆಡರೇಷನ್ ಆಫ್ ಆರ್ಗನೈಸ್ಡ್ ಟ್ರೇಡ್ಸ್ ಅಂಡ್ ಲೇಬರ್ ಯೂನಿಯನ್ಸ್) ಸ್ಥಾಪನೆಯಾಯಿತು. 1886ರಲ್ಲಿ ಸ್ಥಾಪಿತವಾದ ಅಮೆರಿಕನ್ ಕಾರ್ಮಿಕ ಮಹಾಸಂಘದೊಂದಿಗೆ ಅದು ವಿಲೀನಗೊಂಡಿತು. ಆರ್ಥಿಕ ಮತ್ತು ರಾಜಕೀಯ ಚಟುವಟಿಕೆಗಳಿಗೂ ಸಾಮೂಹಿಕ ಚೌಕಾಸಿಗೂ ಮಹತ್ತ್ವ ನೀಡುವ ಈ ಮಹಾಸಂಘ ಕ್ರಮಕ್ರಮವಾಗಿ ಪ್ರಾಬಲ್ಯ ಗಳಿಸಿತು. ದಿನಕ್ಕೆ ಎಂಟು ಗಂಟೆಗಳ ದುಡಿಮೆಯ ಬೇಡಿಕೆ ಇಟ್ಟು ಮಾಲಿಕರು ಒಪ್ಪದಿದ್ದಲ್ಲಿ ಸಾರ್ವತ್ರಿಕ ಮುಷ್ಕರ ನಡೆಸಬೇಕೆಂದು ಮಹಾಸಂಘ ತೀರ್ಮಾನಿಸಿತು. ಮುಷ್ಕರ ನಡೆದಲ್ಲಿ ಅದನ್ನು ಹತ್ತಿಕ್ಕಲು ಮಾಲಿಕರು ಸಿದ್ಧತೆ ನಡೆಸಿದ್ದರು. ಮೇ 1, 1886ರಂದು ಅಮೆರಿಕಾದ್ಯಂತ ಕಮಿಕರು ಶಾಂತಿಯುತವಾಗಿ ಮುಷ್ಕರ ನಡೆಸಿ, ತಮ್ಮ ಬಲವನ್ನು ಪ್ರದರ್ಶಿಸಿದರು. ಸುಮಾರು ಐದು ಲಕ್ಷ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು. ಇದರಿಂದಾಗಿ ಕಾಮಿಕ ಸಂಘಗಳು ಸಮಾಜದ ಪರ್ಯಾಯ ಶಕ್ತಿಗಳಾಗುವ ಸೂಚನೆ ಪ್ರಕಟವಾಯಿತು. ಮೇ 3, 1886ರಂದು ಉದ್ಯೋಗಪತಿಗಳು, ಮುಷ್ಕರದಲ್ಲಿ ಭಾಗವಹಿಸಿದ್ದರೆಂಬ ಆರೋಪದ ಮೇಲೆ ಹಲವಾರು ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದರು. ಇದನ್ನು ಪ್ರತಿಭಟಿಸಿದ ಕಾರ್ಮಿಕರ ಮೇಲೆ ಪೋಲೀಸರು ಗುಂಡು ಹಾರಿಸಿದ

ಕಾರಣ, ನಾಲ್ಕು ಕಾರ್ಮಿಕರು ಮೃತರಾದರು. ನೂರಾರು ಕಾರ್ಮಿಕರು ಗಾಯಗೊಂಡರು. ನಂತರ ಕ್ರಿಮಿನಲ್ ಮೊಕದ್ದಮೆ ಹೂಡಿ, 1887ರಲ್ಲಿ ಮುಷ್ಕರದ ಪ್ರಚೋದನೆಯ ಆರೋಪದ ಮೇಲೆ ನಾಯಕರಾಗಿದ್ದ ಆಲ್ಬರ್ಟ್ ಪಾರ್ಸನ್ಸ್, ಸ್ಪೈಸ್ ಹಾಗೂ ಮತ್ತಿಬ್ಬರನ್ನು ಗಲ್ಲಿಗೇರಿಸಲಾಯಿತು. ಈ ಘಟನೆಗಳೊಂದಿಗೆ ಮೇ 1, 1886 ಹೋರಾಟದ ದಿನವಾಗಿ ಚರಿತ್ರೆಯಲ್ಲಿ ದಾಖಲಾಗಿ ಮೇ 1ನೇ ತಾರೀಖನ್ನು ಅಂತರರಾಷ್ಟ್ರೀಯ ಕಾರ್ಮಿಕ ದಿನವನ್ನಾಗಿ ಆಚರಿಸುವಂತಾಯಿತು. ಇದನ್ನು ಹತ್ತಿಕ್ಕಲು ಉದ್ಯೋಗದಾತರ ಕೂಟಗಳು ವಿಶ್ವಪ್ರಯತ್ನಮಾಡಿದವು. ಇದನ್ನು ಎದುರಿಸಲು ಮಹಾಸಂಘಕ್ಕೆ ಸಾಧ್ಯವಾಗಲಿಲ್ಲ. ತೀವ್ರವಾದಿಗಳಿಂದ ಪ್ರಚೋದಿತವಾದ ಬೇಜವಾಬ್ದಾರಿಯ ಮುಷ್ಕರಗಳೇ ಉದ್ಯೋಗದಾತರಿಗೆ ಕಾರ್ಮಿಕ ಸಂಘಗಳ ಬಗ್ಗೆ ಕಠಿಣ ಕ್ರಮಗಳನ್ನು ಅನುಷ್ಠಾನಕ್ಕೆ ತರಲು ಅವಕಾಶ ಮಾಡಿಕೊಟ್ಟವು ಎಂದು ಮಹಾಸಂಘ ಅಭಿಪ್ರಾಯಪಟ್ಟಿತು. ಮಹಾಸಂಘದಲ್ಲಿದ್ದ ಉಗ್ರಗಾಮಿಗಳು ಒಂದಾಗಿ ವಿಶ್ವ ಕೈಗಾರಿಕಾ ಕಾರ್ಮಿಕರ ಕೂಟವನ್ನು (ಇಂಡಸ್ಟ್ರೀಯಲ್ ವರ್ಕರ್ಸ್ ಆಫ್ ದಿ ವರ್ಲ್ಡ್) ಕಟ್ಟಿದರು. ಕಾರ್ಮಿಕರ ನೇತೃತ್ವದ ಸಮಾಜವಾದದ ಸ್ಥಾಪನೆಯೇ ಇದರ ಗುರಿಯಾಗಿತ್ತು. ಇದು ಸಂಘಟಿಸಿದ ಅನೇಕ ಮುಷ್ಕರಗಳು ಯಶಸ್ವಿಯಾದವು. ಒಂದನೆಯ ಮಹಾಯುದ್ಧಕ್ಕೆ ತುಂಬ ವಿರೋಧಿಯಾಗಿದ್ದ ಈ ಸಂಘದ ಅನೇಕ ಮುಖಂಡರನ್ನು ಬಂಧಿಸಿ ಎರಡರಿಂದ ಇಪ್ಪತ್ತು ವರ್ಷಗಳವರೆಗಿನ ಸೆರೆವಾಸ ಶಿಕ್ಷೆ ವಿಧಿಸಲಾಯಿತು. ಸಂಘದ ಮುಖಂಡರಲ್ಲಿ ಹಲವರು ಅಮೆರಿಕದಲ್ಲಿ ಹೊಸದಾಗಿ ಸ್ಥಾಪಿಸಲಾದ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದರು.

ಒಂದನೆಯ ಮಹಾಯುದ್ಧಾನಂತರ ಉದ್ಯೋಗಿಗಳು ಮತ್ತು ಉದ್ಯೋಗದಾತರ ನಡುವೆ ಸಂಘರ್ಷಗಳು ಪ್ರಾರಂಭವಾದವು. ಹೆಚ್ಚುತ್ತಿದ್ದ ಜೀವನ ವೆಚ್ಚ ಇದಕ್ಕೆ ಕಾರಣ. ವೇತನಗಳನ್ನು ಏರಿಸಬೇಕೆಂಬುದಾಗಿ ಕಾರ್ಮಿಕ ಸಂಘಗಳು ಉದ್ಯೋಗದಾತರನ್ನು ಒತ್ತಾಯಿಸಿದವು. ಉದ್ಯೋಗದಾತರು ಈ ಬೇಡಿಕೆಗಳನ್ನು ನಿರಾಕರಿಸಿದರು. ಇದರಿಂದ 1919ರಲ್ಲಿ ಬಹಳ ನಿಷ್ಠುರವಾದ ಕಾರ್ಮಿಕ ವಿವಾದಗಳು ಹುಟ್ಟಿದವು. ಸಾಮಾಜಿಕ ಶಾಂತಿಭಂಗ, ಕಾನೂನುಭಂಗ ಇವು ಸಾಮಾನ್ಯವಾದವು. ಅಧ್ಯಕ್ಷ ವಿಲ್ಸನ್ ಕಾರ್ಮಿಕರ ಮತ್ತು ಉದ್ಯೋಗದಾತರ ಪ್ರತಿನಿಧಿಗಳ ಸಮ್ಮೇಳನವನ್ನು ಕರೆಯುವುದು ಅನಿವಾರ್ಯವಾಯಿತು. ಆದರೆ ಇದರಿಂದ ಕಾರ್ಮಿಕರ ಮತ್ತು ಉದ್ಯೋಗದಾತರ ಸಂಘರ್ಷ ಕಡಿಮೆಯಾಗಲಿಲ್ಲ. ಉದ್ಯೋಗದಾತರು ಅನೇಕ ಬಲಿಷ್ಠ ಸಂಘಟನೆಗಳನ್ನು ರಚಿಸಿದರು. ತಯಾರಿಕೆಗಾರರ ಸಂಘಗಳು, ವ್ಯಾಪಾರ ಮಂಡಲಿಗಳು, ವಾಣಿಜ್ಯ ಕೋಷ್ಠಗಳು, ಬ್ಯಾಂಕರುಗಳ ಸಂಘಗಳು, ನಾಗರಿಕ ಕೂಟಗಳು ಮತ್ತು ಕೃಷಿಕರ ಸಂಘಗಳು ಇವೆಲ್ಲ ಒಟ್ಟಾಗಿ ಕಾರ್ಯಯೋಜನೆಯ ಒಂದು ಕರಡನ್ನು ತಯಾರಿಸಿದವು. ಕಾರ್ಮಿಕರನ್ನು ಸಂಘಟನೆಯ ಗೀಳಿನಿಂದ ವಿಮೋಚನೆಗೊಳಿಸುವುದು ಇದರ ಮುಖ್ಯೋದ್ದೇಶ. ಮುಕ್ತ ಅಂಗಡಿ (ಓಪನ್ ಷಾಪ್) ಸಂಘಟನೆಗಳನ್ನು ಪ್ರತಿಯೊಂದು ಕಾರ್ಖಾನೆಯಲ್ಲೂ ಸ್ಥಾಪಿಸಲು ಉದ್ಯೋಗದಾತರು ಪ್ರೋತ್ಸಾಹವಿತ್ತರು. ಅಂಗಡಿ ಸಂಘಟನೆಗಳನ್ನು ಕಾರ್ಯಗತ ಮಾಡುವುದರ ಜೊತೆಗೆ ಗುಮಾನಿಗೆ ಒಳಗಾದ ಕಾರ್ಮಿಕ ಪಟ್ಟಿಗಳನ್ನು ತಯಾರಿಸಲು ಗುಪ್ತಚಾರರಿಗೂ ಮುಷ್ಕರ ಮುರಿಯುವವರೆಗೂ ಹೇರಳ ಧನಸಹಾಯ ನೀಡಲಾಯಿತು. ಪ್ರತಿ ಸಂಘಟನೆಯ ಮತ್ತು ವಿಪರೀತ ಕೂಲಿ ಕಡಿತಗಳ ಫಲವಾಗಿ ಕಾರ್ಮಿಕ ಸಂಘಗಳ ಸದಸ್ಯರ ಸಂಖ್ಯೆ ಇಮ್ಮಡಿಸಿತು. ಅನೇಕ ಕಾರ್ಮಿಕ ಸಂಘಗಳು ಉದ್ಯೋಗದಾತರ ವ್ಯವಸ್ಥಾಪಕ ಮಂಡಳಿಗಳೊಡನೆ ಸಹಕರಿಸಲು ಸಮ್ಮತಿಸಿದವು. ಇದರಿಂದ ಕಾರ್ಮಿಕರ ಮತ್ತು ಉದ್ಯೋಗದಾತರ ಪ್ರತಿನಿಧಿಗಳು ಪರಸ್ಪರರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಹುಡುಕುವ ನಿರ್ಣಯಕ್ಕೆ ಬರಲು ಸಾಧ್ಯವಾಯಿತು. ಆಗ ಅಂಗೀಕೃತವಾದ ಅಂಶಗಳು ಎರಡು: ಕೂಲಿ ಹೆಚ್ಚಿಸಲು ಕಾರ್ಮಿಕರ ಕಾರ್ಯದಕ್ಷತೆಯೇ ಆಧಾರ ಎಂಬುದು ಒಂದು. ಉದ್ಯೋಗದಾತರು ಕಾರ್ಮಿಕ ಸಂಘಟನೆಗೆ ದಾರಿ ಮಾಡಿಕೊಡಬೇಕು ಎಂಬುದು ಇನ್ನೊಂದು.

ಮಹಾ ಆರ್ಥಿಕ ಮುಗ್ಗಟ್ಟಿನಿಂದ (1929–33) ಅಮೆರಿಕದ ಕಾರ್ಮಿಕ ಸಂಘಟನೆಗೆ ಪ್ರಾಮುಖ್ಯ ಬಂದಿತು. ಭೀಕರ ನಿರುದ್ಯೋಗ, ಕೂಲಿ ಕಡಿತ ಮತ್ತು ಇತರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಮತ್ತು ತಮ್ಮ ಹಕ್ಕುಗಳನ್ನು ಚಲಾಯಿಸಲು ತಮ್ಮಲ್ಲಿ ಒಗ್ಗಟ್ಟು ಅವಶ್ಯ ಎಂಬುದು ಕಾರ್ಮಿಕರಿಗೆ ಮನವರಿಕೆಯಾಯಿತು. ಅಧ್ಯಕ್ಷ ರೂಸ್‌ವೆಲ್ಟನ ಹೊಸ ಧೋರಣೆಯ (ನ್ಯೂ ಡೀಲ್) ಸರ್ಕಾರ ಕಾರ್ಮಿಕರ ಸಂಘಟನೆಗೆ ತುಂಬ ಪ್ರೋತ್ಸಾಹವಿತ್ತಿತು. 1933ರ ರಾಷ್ಟ್ರೀಯ ಕೈಗಾರಿಕಾ ಪುನಶ್ಚೇತನ ಕಾಯಿದೆ (ನ್ಯಾಷನಲ್ ಇಂಡಸ್ಟ್ರಿಯಲ್ ರಿಕವರಿ ಆಕ್ಟ್) ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಅವಕಾಶ ನೀಡಿತು. ಕಾರ್ಮಿಕ ಸಂಘಗಳನ್ನು ವೃತ್ತಿಗೆ ಅನುಗುಣವಾಗಿ ಸಂಘಟಿಸಬೇಕೋ ಕಾರ್ಖಾನೆಗಳಿಗೆ ಅನುಗುಣವಾಗಿ ಸಂಘಟಿಸಬೇಕೋ ಎನ್ನುವುದೇ ಸಮಸ್ಯೆಯಾಗಿ ಉಳಿದಿತ್ತು. 1880ರಿಂದ 1930ರವರೆಗೆ ಕಾರ್ಮಿಕ ಆಂದೋಲನದಲ್ಲಿ ತುಂಬ ಪ್ರಭಾವಶಾಲಿಯಾಗಿದ್ದ ಮತ್ತು ಜನಪ್ರಿಯವಾಗಿದ್ದ ಅಮೆರಿಕನ್ ಕಾರ್ಮಿಕ ಮಹಾಸಂಘವನ್ನು ವೃತ್ತಿಗಳಿಗೆ ಅನುಗುಣವಾಗಿ ಸಂಘಟಿಸಲಾಗಿತ್ತು. ಆದರೆ ಆ ಪದ್ಧತಿಯೇ ದೇಶದಾದ್ಯಂತ ಹಬ್ಬಿರಲಿಲ್ಲ. ಕೈಗಾರಿಕಾ ಕಾರ್ಮಿಕ ಸಂಘಗಳು ಗಣಿ ಕಾರ್ಮಿಕರ ಸಂಘಗಳಿಗೆ ಮಾತ್ರ ಸೀಮಿತವಾಗಿದ್ದವು. ಅವು ಕುಶಲಕರ್ಮಿಗಳ ಉಗ್ರಸಂಘಟನೆಯ ಕಾಲದಲ್ಲಿ ಚೇತರಿಸಿಕೊಂಡಿದ್ದವು. ಮತ್ತು ಹೊಸ ವ್ಯವಹಾರ ಆಡಳಿತದ ಅವಧಿಯಲ್ಲಿ ಮಹತ್ತ್ವ ಪಡೆದವು. ಇದರಿಂದಾಗಿ ಈ ಎರಡು ವಿಭಾಗಗಳ ನಡುವೆ ಘರ್ಷಣೆ ಅನಿವಾರ್ಯವಾಯಿತು.

1938ರಲ್ಲಿ ರಾಷ್ಟ್ರೀಯ ಕಾರ್ಮಿಕ ಸಂಘಗಳೂ ನಗರ ಮತ್ತು ರಾಜ್ಯ ಸಂಸ್ಥೆಗಳೂ ರೂಪಿಸಿದ ಸಮಿತಿಯೇ ಕೈಗಾರಿಕಾ ಸಂಘಟನೆಗಳ ಕಾಂಗ್ರೆಸ್ಸನ್ನು (ಕಾಂಗ್ರೆಸ್ ಆಫ್ ಇಂಡಸ್ಟ್ರಿಯಲ್ ಆರ್ಗನೈಸೇಷನ್ಸ್) ಸ್ಥಾಪಿಸಿತು. ದೊಡ್ಡ ಕಾರ್ಖಾನೆಗಳ ಕಾರ್ಮಿಕ ಸಂಘಟನೆಯಲ್ಲಿ ಇದು ಮಹತ್ತ್ವದ ಪಾತ್ರ ವಹಿಸಿತು. ಕಾರ್ಮಿಕ ಮಹಾಸಂಘಕ್ಕೂ ಕಾರ್ಮಿಕ ಸಂಘಟನೆಗಳ ಕಾಂಗ್ರೆಸ್ಸಿಗೂ ನಡುವೆ ಏರ್ಪಟ್ಟ ಸ್ಪರ್ಧೆ ಹಾನಿಕರವೆನಿಸಿದರೂ ಕ್ರಮೇಣ ಸಂಘ ಚಳುವಳಿ ವಿಸ್ತರಿಸಿತು.

ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಜೀವನ ವೆಚ್ಚ ಹೆಚ್ಚಿದಂತೆ ಕಾರ್ಮಿಕರ ಕೊರತೆಯೂ ಏರಿತು. ಸಂಘಟಿತ ಕ್ರಮಕ್ಕೆ ಸರ್ಕಾರದ ಸಹಾನುಭೂತಿ ದೊರಕಿತಲ್ಲದೆ ಯುದ್ಧಕಾರ್ಯದಲ್ಲಿ ಕಾರ್ಮಿಕ ಧುರೀಣರು ಮಹತ್ತ್ವದ ಸ್ಥಾನಗಳನ್ನು ಪಡೆದಿದ್ದರು. ಉದ್ಯೋಗದಾತರಲ್ಲಿ ವಿರೋಧ ಮನೋಭಾವ ಇರಲಿಲ್ಲ. ಯುದ್ಧದ ಪರಿಣಾಮವಾಗಿ ಅಂತಃಕಲಹಗಳು ಕರಗಿಹೋದವು. ಈ ಕಾರಣಗಳಿಂದಾಗಿ ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಕಾರ್ಮಿಕ ಸಂಘಟನೆಗೆ ಪ್ರೋತ್ಸಾಹ ದೊರಕಿತು. ಯದ್ಧದ ಅವಧಿಯಲ್ಲಿ ಕಾರ್ಮಿಕರು ಮುಷ್ಕರ ಹೂಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ಆದರೆ 1943, 1944, 1945ರಲ್ಲಿ ಸ್ವಲ್ಪ ಕಾಲ ಕೆಲಸ ನಿಲ್ಲಿಸುವ ಅನೇಕ ಪ್ರಸಂಗಗಳು ತಲೆದೋರಿದ್ದವು.

1946ರಿಂದ ಈಚೆಗೆ ಕಾರ್ಮಿಕ ಚಳುವಳಿಯಲ್ಲಿ ಗಮನಿಸಬೇಕಾದ ಅಂಶಗಳಿವು: 1 ಸದಸ್ಯತ್ವದಲ್ಲಿ ಸ್ಥಿರತೆ 2 ಸಂಘಟಿತ ಕ್ರಮಕ್ಕೆ ಸಾರ್ವಜನಿಕ ಬೆಂಬಲದ ಅಭಾವ. 3 ಸಂಘಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ಸರ್ಕಾರದ ನೀತಿ.

ಯುದ್ಧ ಮುಗಿದ ಕೂಡಲೇ ಔದ್ಯೋಗಿಕ ಸಂಬಂಧಗಳ ಕ್ಷೇತ್ರದಲ್ಲಿ ಉದ್ಯೋಗದಾತರು ಮತ್ತು ಉದ್ಯೋಗಿಗಳು ಯುದ್ಧಕಾಲದ ನಿಯಂತ್ರಣಗಳನ್ನು ತೆಗೆದುಹಾಕಬೇಕೆಂದು ಒತ್ತಾಯಿಸಿದರು. ಸಾಮೂಹಿಕ ಚೌಕಾಸಿ ಶಿಥಿಲಗೊಂಡು, ವ್ಯವಸ್ಥಾಪಕ ಮಂಡಳಿಗಳಲ್ಲಿ ಪುನಃ ಪರಿವರ್ತನೆ ಕಂಡುಬಂದದ್ದರಿಂದ, ಮುಷ್ಕರಗಳು ಹುಟ್ಟಿದವು. ಇದರಿಂದ ಕಾಂಗ್ರೆಸಿನಲ್ಲಿ ಮತ್ತು ಸಾರ್ವಜನಿಕ ಅಭಿಪ್ರಾಯಗಳ ಸಂಗ್ರಹಣೆಗಳಲ್ಲಿ, ಕಾರ್ಮಿಕ ಸಂಘಗಳ ಬಗ್ಗೆ ಕೆಟ್ಟ ಅಭಿಪ್ರಾಯಗಳಿಗೆ ಅಭಿವ್ಯಕ್ತಿ ದೊರಕಿತು. 1946ರ ಮಹಾಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷ ಅಧಿಕಾರಕ್ಕೆ ಬಂತು. ಇದು ಸಂಘಗಳ ಮತ್ತು ಅವುಗಳ ಮುಖಂಡರ ಅಧಿಕಾರಗಳನ್ನು ಕುಂಠಿತಗೊಳಿಸಲು ಪ್ರಯತ್ನಿಸಿತು. ಕಾರ್ಮಿಕ ಸಂಘಗಳನ್ನು ನಿಶ್ಚೇತನಗೊಳಿಸಬೇಕೆಂಬ ಕೆಲವರ ಒತ್ತಾಯದ ಫಲವಾಗಿ ಬಂದದ್ದೇ ಟಾಫ್–ಹಾರ್ಟೆ ಕಾಯಿದೆ (1947). ಇದು ಕಾರ್ಮಿಕ ಸಂಘ ಚಳವಳಿಯ ವರ್ಚಸ್ಸನ್ನು ಕ್ಷೀಣಗೊಳಿಸಿತು. ಆಂತರಿಕ ಸಂಘರ್ಷ ಬೆಳೆಯಿತು. 1939 ಮತ್ತು 1949ರ ಅವಧಿಯಲ್ಲಿ ಕೈಗಾರಿಕಾ ಸಂಘಟನೆಗಳ ಕಾಂಗ್ರೆಸ್ಸಿನ ಹನ್ನೊಂದು ಕಾರ್ಮಿಕ ಸಂಘಗಳು ಕಮ್ಯುನಿಸ್ಟ್ ಪ್ರಭಾವಕ್ಕೆ ಒಳಗಾಗಿದ್ದವು. 1948ರಲ್ಲಿ ಈ ಸಂಘಗಳು ಮಾರ್ಷಲ್ ಯೋಜನೆಯನ್ನು ವಿರೋಧಿಸಿದವು. ಕಮ್ಯೂನಿಸ್ಟರಿಗೆ ಯಾವುದೇ ಕಾರ್ಯನಿರ್ವಾಹಕ ಅಧಿಕಾರವನ್ನು ಕೊಡದಂತೆ ಕಾಂಗ್ರೆಸಿನ ಅಂಗರಚನೆಯನ್ನು ಬದಲಿಸಿದ್ದು 1949ರಲ್ಲಿ. ಅಮೆರಿಕದ ಕಾರ್ಮಿಕ ಮಹಾಸಂಘವೂ ಕೈಗಾರಿಕಾ ಸಂಘಟನೆಗಳ ಕಾಂಗ್ರೆಸೂ ಒಂದಾದವು.

ಲಂಚಗುಳಿತನ, ಸಂಘಗಳ ಮುಂದಾಳುಗಳು ಸ್ವಪ್ರಯೋಜನಕ್ಕಾಗಿ ಸಂಘಗಳ ನಿಧಿಗಳನ್ನು ದುರುಪಯೋಗಪಡಿಸಿಕೊಳ್ಳುವುದು, ವಿಶ್ವಾಸದ್ರೋಹ, ಕಾರ್ಯಾಲಯಗಳಲ್ಲಿಯ ಅಕ್ರಮ ಇವೆಲ್ಲ ತನಿಖೆಗೆ ಒಳಗಾಗಿ, ಕಾರ್ಮಿಕ ಸಂಘಗಳ ಸುಧಾರಣೆಗಾಗಿ ನೀತಿ ಸಂಹಿತೆಯನ್ನು ಜಾರಿಗೆ ತಂದದ್ದು 1957ರ ಮಹಾಸಾಧನೆ. ಕಾರ್ಮಿಕ ಸಂಘಗಳ ನಾಯಕರ ಲಂಚಗುಳಿತನ, ಜಗಳಗಂಟಿ ಸ್ವಭಾವ, ನಂಬಿಕೆದ್ರೋಹ, ಛಲ–ಇವನ್ನು ನಿರ್ಮೂಲಮಾಡುವ ಉದ್ದೇಶದಿಂದ 1959ರಲ್ಲಿ ಒಂದು ಕಾಯಿದೆ ಜಾರಿಗೆ ಬಂತು.

ಅಮೆರಿಕದ ಕಾರ್ಮಿಕ ಆಂದೋಲನದ 180 ವರ್ಷಗಳ ಇತಿಹಾಸದಲ್ಲಿ 1836 ರಿಂದ 1890ರ ವರೆಗಿನ ಅವಧಿಯಲ್ಲಿ ಕಾರ್ಮಿಕ ಸಂಘಗಳ ಸದಸ್ಯತ್ವದಲ್ಲಿ ತುಂಬ ಏರಿಳಿತಗಳು ಕಾಣಬರುತ್ತವೆ. ಇದಕ್ಕೆ ಆ ಅವಧಿಯ ರಾಜಕೀಯ, ಆರ್ಥಿಕ, ಧಾರ್ಮಿಕ ಸ್ಥಿತ್ಯಂತರಗಳ ಈ ಅವಧಿಯ ಸದಸ್ಯತ್ವದ ಪ್ರಭಾವ ಬೀರಿವೆ. 1930ರಿಂದ ಕೈಗಾರಿಕಾ ಕಾರ್ಮಿಕ ಸಂಘ ಚಳುವಳಿ ಮಹತ್ತ್ವ ಪಡೆಯಿತು. ಇದರಿಂದ 1930 ರಿಂದ 1960ರವರೆಗೆ ಕಾರ್ಮಿಕ ಸಂಘಗಳ ಸದಸ್ಯತ್ವದ ಬೆಳವಣಿಗೆ ತುಂಬ ತೀವ್ರಗತಿಯಿಂದ ಆದದ್ದು ಕಂಡುಬರುತ್ತದೆ.

1958ರಲ್ಲಿ ಅಮೆರಿಕದಲ್ಲಿ 186 ರಾಷ್ಟ್ರೀಯ ಸಂಘಗಳು ಇದ್ದವು. ಅಮೆರಿಕದಲ್ಲಿರುವ ಹತ್ತು ಅತಿ ದೊಡ್ಡ ರಾಷ್ಟ್ರೀಯ ಕಾರ್ಮಿಕ ಸಂಘಗಳ ಹೆಸರುಗಳನ್ನೂ ಆವರಣಗಳೊಳಗೆ

ಅವುಗಳ ಸದಸ್ಯ ಸಂಖ್ಯೆಯನ್ನೂ ಮುಂದೆ ಕೊಟ್ಟಿದೆ: ಇಂಟರ್ ನ್ಯಾಷನಲ್ ಬ್ರದರ್‌ಹುಡ್ ಆಫ್ ಟೀಮ್‌ಸ್ಟರ್ಸ್ (14,18,446), ಯುನೈಟೆಡ್ ಆಟೋಮೊಬೈಲ್ ವರ್ಕರ್ಸ್ (10,27,000), ಇಂಟರ್‌ನ್ಯಾಷನಲ್ ಅಸೋಸಿಯೇಷನ್ಸ್ ಆಫ್ ಮಶೀನಿಸ್ಟ್ಸ್ (9,92,689), ಯನೈಟೆಡ್ ಸ್ಟೀಲ್ ವರ್ಕರ್ಸ್ ಆಫ್ ಅಮೆರಿಕ (9,60,000), ಬ್ರದರ್‌ಹುಡ್ ಆಫ್ ಕಾರ್ಪೆಂಟರ್ಸ್ ಎಂಡ್ ಜಾಯಿನರ್ಸ್ (8,35,000) ಇಂಟರ್‌ನ್ಯಾಷನಲ್ ಬ್ರದರ್‌ಹುಡ್ ಆಫ್ ಎಲೆಕ್ಟ್ರಿಕ್ ವರ್ಕರ್ಸ್ (7,50,000), ಯುನೈಟೆಡ್ ಮೈನ್ ವರ್ಕರ್ಸ್ (6,00,000). ಕ್ಯಾರಿಯರ್ಸ್ ಎಂಡ್ ಕಾಮನ್ ಲೇಬರ್ಸ್ (4,76,508), ಇಂಟರ್‌ನ್ಯಾಷನಲ್ ಲೇಡಿಸ್ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್ (4,42,901), ಹೋಟೆಲ್ ಅಂಡ್ ರೆಸ್ಟೋರಂಟ್ ವರ್ಕರ್ಸ್ (4,36,315). ಈಗ ಈ ಅಂಕೆಸಂಖ್ಯೆ ದುಪ್ಪಟ್ಟು ಹೆಚ್ಚಾಗಿದೆ.

ಅಮೆರಿಕದ ಅರ್ಥ ವ್ಯವಸ್ಥೆಯ ಬೇರೆಬೇರೆ ವಲಯಗಳಲ್ಲಿ ಕಾರ್ಮಿಕಸಂಘ ಚಳುವಳಿಯ ಪ್ರಭಾವ ಏಕರೀತಿಯದಲ್ಲ. ಕಟ್ಟಡ, ಕಲ್ಲಿದ್ದಲ ಗಣಿ ಮತ್ತು ಲೋಹದ ಗಣಿ ಮತ್ತು ತಯಾರಿಕೆ ಇವುಗಳ, ಸಾರಿಗೆ ಮತ್ತು ಸಾರ್ವಜನಿಕ ಸೇವೆಗಳ ಅತಿ ಹೆಚ್ಚು ಕಾರ್ಮಿಕರು ಕಾರ್ಮಿಕ ಸಂಘಗಳ ಸದಸ್ಯರಾಗಿದ್ದರು. ಕಾರ್ಮಿಕ ಸಂಘಗಳ ಒಟ್ಟು ಸದಸ್ಯತ್ವದಲ್ಲಿ ಇವರ ಸಂಖ್ಯೆ ಸೇಕಡ 80ರಷ್ಟು, ತಯಾರಿಕೆ ಕೈಗಾರಿಕೆಗಳಲ್ಲಿ ದುಡಿಯುವ ಸೇಕಡ 40ರಷ್ಟು ಕಾರ್ಮಿಕರು ಕಾರ್ಮಿಕರ ಸಂಘಗಳ ಸದಸ್ಯರಾಗಿದ್ದರು. ಸೇವೆ ಮತ್ತು ವಿತರಣೆ ಉದ್ಯಮಗಳಲ್ಲಿರುವ ಕಾರ್ಮಿಕರ ಸಂಘಟನೆ ದುರ್ಬಲಗೊಂಡಿದೆ. ಕಾರ್ಮಿಕ ಸಂಘಟನೆಯಲ್ಲಿ ಪ್ರಾದೇಶಿಕ ವೈವಿಧ್ಯವು ಗಮನಾರ್ಹ. 1947–61ರ ಅವಧಿಯಲ್ಲಿ ಸಂಘಟಿತ ವಲಯಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆ ತಗ್ಗಿತು. ಗಣಿ, ಸಾರಿಗೆ, ತಯಾರಿಕೆ ಮತ್ತು ಸಾರ್ವಜನಿಕ ಸೇವೆ–ಇವುಗಳ ಉದ್ಯೋಗ ತಗ್ಗಿತು. ಇತ್ತೀಚೆಗೆ ಕಾರ್ಮಿಕ ಸದಸ್ಯತ್ವ ಸ್ಥಿರಗೊಂಡಿದೆ. ಅಮೆರಿಕದಲ್ಲಾದ ವೈಜ್ಞಾನಿಕ ಮತ್ತು ತಾಂತ್ರಿಕ ಮುನ್ನಡೆಯಿಂದಾಗಿ ಉದ್ಯಮಗಳಲ್ಲಿ ಕಾರ್ಮಿಕರ ಸಂಖ್ಯೆ ಕಡಿಮೆಯಾಯಿತು. ಇದರಿಂದ ಕಾರ್ಮಿಕ ಸಂಘಗಳ ಸದಸ್ಯರ ಸಂಖ್ಯೆಯೂ ಇಳಿಯಿತು.

**ಸೋವಿಯತ್ ದೇಶ :** 1880ರ ದಶಕದಲ್ಲಿ ರಷ್ಯದ ಪ್ರಮುಖ ನಗರಗಳಲ್ಲಿ ಕಾರ್ಮಿಕ ಸಂಘಗಳು ಸ್ಥಾಪಿತಗೊಂಡು ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದವು. 1890ರ ದಶಕದಲ್ಲಿ ಕಾರ್ಮಿಕ ಹೋರಾಟಗಳು ತೀವ್ರಗೊಂಡವು. ಜ಼ಾರ್ ಆಳ್ವಿಕೆ ಈ ಹೋರಾಟಗಳನ್ನು ಅಮಾನುಷವಾಗಿ ಹತ್ತಿಕ್ಕಲು ಪ್ರಯತ್ನಿಸಿತು. 1905ರ ಕ್ರಾಂತಿಯಲ್ಲಿ ಕಾರ್ಮಿಕ ವರ್ಗ ಪ್ರಮುಖ ಪಾತ್ರ ವಹಿಸಿದವು. 1917ರ ಅನಂತರ ವೃತ್ತಿಗೆ ಅನುಗುಣವಾಗಿ ಕಾರ್ಮಿಕರನ್ನು ಸಂಘಟಿಸಲಾಯಿತು. ಬಾಲ್ಷೆವಿಕ್ ಸರ್ಕಾರ ವಾಸ್ತವದಲ್ಲಿ ಕಾರ್ಮಿಕರದೇ. ಅದು ಕಾರ್ಮಿಕರ ಸರ್ವಾಧಿಕಾರ. ಉತ್ಪಾದನ ಸಾಧನಗಳ ರಾಷ್ಟ್ರೀಕರಣದಿಂದಾಗಿ ಮಾಲೀಕ–ಕಾರ್ಮಿಕ ಎಂಬ ಭೇದ ತಾತ್ತ್ವಿಕವಾಗಿ ಮರೆಯಾಯಿತು. ಉತ್ಪಾದನೆ, ಕಾರ್ಮಿಕರ ಕಲ್ಯಾಣ, ಕಾರ್ಮಿಕ ನೀತಿ ಸಂಹಿತೆ, ಕಾರ್ಖಾನೆಯ ನಿರ್ವಹಣೆ–ಇಂಥ ನಾನಾ ವಿಚಾರಗಳಲ್ಲಿ ಕಾರ್ಮಿಕರು ಆಸಕ್ತಿ ವಹಿಸಿದರು. ಸಮಾಜವಾದಿ ವ್ಯವಸ್ಥೆಯಡಿ ಕಾರ್ಮಿಕ ಸಂಘಗಳ ಮಹತ್ವ ಹೆಚ್ಚಿತು.

ಸೋವಿಯತ್ ದೇಶದಲ್ಲಿ 1905–17ರ ಅವಧಿಯಲ್ಲಿ ಕಾರ್ಮಿಕ ಆಂದೋಲನ ನಿಖರವಾಗಿ ಪ್ರಾರಂಭವಾಯಿತೆನ್ನಬೇಕು. 1917ರ ಅನಂತರ ಕಾರ್ಮಿಕರು ಬಹಿರಂಗವಾಗಿ ಕಾರ್ಮಿಕ ಸಂಘಗಳಿಗೆ ಸೇರಿಕೊಳ್ಳುತ್ತಿದ್ದರು. ಮೂಲತಃ ಕಾರ್ಮಿಕ ಸಂಘಗಳ ಕಲಾಪಗಳು ಕಾರ್ಮಿಕರ ಜೀವನೋಪಾಯ, ಸ್ಥಿತಿಗತಿಗಳ ಪಾಲನೆ ಮತ್ತು ಪ್ರಗತಿ–ಇವಕ್ಕೆ ನೇಮಿತವಾಗಿದ್ದವು. 1928ರಲ್ಲಿ ಸಮಾಜವಾದಕ್ಕೆ ಒಗ್ಗುವ ರೀತಿಯಲ್ಲಿ ಕಾರ್ಮಿಕ ಸಂಘ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಯಿತು. ಅಂದಿನಿಂದ ಸೋವಿಯತ್ ಕಾರ್ಮಿಕ ಸಂಘಗಳು ಕಾರ್ಮಿಕರ ಜೀವನ ಸ್ಥಿತಿಗತಿಗಳ ಪಾಲನೆ ಮತ್ತು ಪ್ರಗತಿ ಸಾಧನೆಯ ಜೊತೆಗೆ ಕಾರ್ಮಿಕರಲ್ಲಿ ಶಿಸ್ತನ್ನು ಸ್ವೀಕರಿಸಲು ಮತ್ತು ರಾಷ್ಟ್ರೀಯ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರಕ್ಕೆ ಸಹಾಯ ನೀಡುತ್ತಿದ್ದವು. 1957ರಲ್ಲಿ ಸೋವಿಯತ್ ಕಾರ್ಮಿಕ ಸಂಘಗಳು ಚಿನ್ನದ ಹಬ್ಬ ಆಚರಿಸಿದವು. 5,00,00,000 ಕಾರ್ಮಿಕರ ಪೈಕಿ 4,70,00,000 ಕಾರ್ಮಿಕರು ಸಂಘಗಳ ಸದಸ್ಯರಾಗಿದ್ದರು. ಉದ್ಯಮಕ್ಕೆ ಅನುಗುಣವಾಗಿ ಇಲ್ಲಿ ಕಾರ್ಮಿಕ ಸಂಘಗಳನ್ನು ಸಂಘಟಿಸಲಾಯಿತು. ಸ್ಥಾನಿಕ ಮಟ್ಟದಲ್ಲಿ ಸ್ಥಾನಿಕ ಇಲ್ಲವೆ ಕಾರ್ಖಾನೆ ಸಮಿತಿ ಇತ್ತು. ಇದರ ಸದಸ್ಯರನ್ನು ಉತ್ಪಾದಕ ಇಲ್ಲವೆ ಆಡಳಿತ ಅಂಗಗಳು ಚುನಾಯಿಸುತ್ತಿದ್ದವು. ಪ್ರತಿಯೊಂದು ಸ್ಥಾನಿಕ ಸಮಿತಿಯೂ ಜಿಲ್ಲಾಮಟ್ಟದ ಕಾರ್ಮಿಕ ಸಂಘಕ್ಕೆ ತನ್ನ ಪ್ರತಿನಿಧಿಗಳನ್ನು ಕಳಿಸುವ ಹಕ್ಕು ಪಡೆದಿತ್ತು. ಜಿಲ್ಲಾಮಟ್ಟದ ಕಾರ್ಮಿಕ ಸಂಘವು ತನ್ನ ಪ್ರತಿನಿಧಿಗಳನ್ನು ಪ್ರಾಂತೀಯ ಕಾರ್ಮಿಕ ಸಂಘಕ್ಕೆ ಚುನಾಯಿಸಿ ಕಳಿಸುತ್ತಿತ್ತು. ಪ್ರಾಂತ್ಯಮಟ್ಟದ ಕಾರ್ಮಿಕ ಸಂಘ ರಾಷ್ಟ್ರೀಯ ಕಾರ್ಮಿಕ ಸಂಘಕ್ಕೆ ತನ್ನ ಪ್ರತಿನಿಧಿಗಳನ್ನು ಚುನಾಯಿಸಿ ಕಳಿಸುತ್ತಿತ್ತು. ಅಖಿಲ ಕಾರ್ಮಿಕ ಸಂಘಗಳ ಪರಿಷತ್ತಿನಿಂದ ರೂಪಿತವಾದ್ದು ಪರಮೋನ್ನತ ಸಾಮಾನ್ಯ ಸಭೆ.

ಸೋವಿಯತ್ ಕಾರ್ಮಿಕ ಆಂದೋಲನವನ್ನು ವಿಶ್ವ ಕಾರ್ಮಿಕ ಸಂಘಗಳ ಸಂಯುಕ್ತ ಸಂಘಕ್ಕೆ ಸಂಬಂಧೀಕರಿಸಲಾಗಿದೆ.

**ಭಾರತ :** ಇತರ ಕೈಗಾರಿಕಾ ದೇಶಗಳಲ್ಲಿದ್ದಂತೆ ಭಾರತದಲ್ಲೂ ಕಾರ್ಮಿಕ ಸಂಘ ಚಳವಳಿ ಕಾರ್ಖಾನೆ ಪದ್ಧತಿಯ ಪರಿಣಾಮ ಆಧುನಿಕ ಕೈಗಾರಿಕೆಗಳು ಭಾರತದಲ್ಲಿ ಪ್ರಾರಂಭವಾದದ್ದು 1850–60ರ ದಶಕದಲ್ಲಿ. ಬ್ರಿಟಿಷ್ ಆಳ್ವಿಕೆಯಿಂದ ಬೆಂಬಲ ಪಡೆದ ಆಧುನಿಕ ಯಾಂತ್ರೀಕೃತ ಉದ್ಯಮಗಳು ಉತ್ತಮ ದರ್ಜೆಯ ತುಂಬ ಅಗ್ಗದ ಸರಕುಗಳನ್ನು ಸರಬರಾಜು ಮಾಡಿ, ಭಾರತದ ಕುಶಲಕರ್ಮಿಗಳು ತಯಾರಿಸುತ್ತಿದ್ದ ವಸ್ತುಗಳಿಗೆ ಪೇಟೆಯಲ್ಲಿ ಬಲವಾದ ಪೆಟ್ಟುಕೊಟ್ಟವು. ಯೂರೋಪಿನ ಕೈಗಾರಿಕಾ ಕ್ರಾಂತಿ ಕೂಡ ಗುಡಿಕೈಗಾರಿಕೆಗಳನ್ನು ನಾಶಮಾಡಿ, ಕುಶಲಕರ್ಮಿಗಳನ್ನು ಉದ್ಯೋಗಹೀನಗೊಳಿಸಿತು. ಆದರೆ ಈ ಕಾರ್ಮಿಕರು ನೇರವಾಗಿ ಕಾರ್ಖಾನೆ ಸೇರಿದರು. ಆದರೆ ಭಾರತದ ಕುಶಲ ಕರ್ಮಿಗಳು ಕೈಗಾರಿಕರಣದೊಡನೆಯೇ ಹಳ್ಳಿಗಳಿಗೆ ಹಿಂದಿರುಗಿ ವ್ಯವಸಾಯ ಕ್ಷೇತ್ರದಲ್ಲಿ ತೊಡಗಿಸಿಕೊಂಡರು. ಹೀಗಾಗಿ ಕಾರ್ಮಿಕವರ್ಗಕ್ಕೆ ಬಂದ ಕೆಲಸಗಾರರು ನೇರವಾಗಿ ಗ್ರಾಮೀಣ ಪ್ರದೇಶದ ಅನೇಕ ಮೂಢನಂಬಿಕೆಗಳು ಇತ್ಯಾದಿಗಳನ್ನು ಹೊತ್ತು ತಂದರು. ಈ ಕಾರಣದಿಂದಾಗಿ ಭಾರತ ಕಾರ್ಮಿಕ ವರ್ಗದ ಪ್ರಜ್ಞೆ ಯೂರೋಪಿನ ಕಾರ್ಮಿಕವರ್ಗದ ಪ್ರಜ್ಞೆಗಿಂತ ಭಿನ್ನವಾಗಿದ್ದನ್ನು ಕಾಣಬಹುದು. ಆಧುನಿಕ ಕಾರ್ಖಾನೆ ಪದ್ಧತಿಯ ಉತ್ಪಾದನೆ ಅನೇಕ ಅನಿಷ್ಟಗಳಿಗೆ ತವರುಮನೆಯಾಗಿತ್ತು. ಈ ಅನಿಷ್ಟಗಳನ್ನು ಕಡಿಮೆ ಮಾಡಲು ಕಾರ್ಮಿಕ ಸಂಘಗಳು ಹುಟ್ಟಿದ್ದವು. ಈ ನಿಟ್ಟಿನಲ್ಲಿ ಸ್ವಾರ್ಥ ಮತ್ತು ನಿಸ್ವಾರ್ಥಪರ ಪ್ರಯತ್ನಗಳು ನಡೆದವು: ಒಂದು ಕಡೆ ಭಾರತದ ಕಾರ್ಖಾನೆಗಳಲ್ಲಿ ಸ್ತ್ರೀ ಮತ್ತು ಬಾಲ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದನ್ನು ನಿಗ್ರಹಿಸಬೇಕೆಂದು ಲ್ಯಾಂಕಷೈರ್ ಉದ್ಯಮಿಗಳು ಪ್ರತಿಪಾದಿಸಿದರು. ಭಾರತದ ಗಿರಣಿಗಳು ತುಂಬಾ ಅಗ್ಗದ ದರದಲ್ಲಿ ಬಟ್ಟೆ ತಯಾರಿಸಿ ಮಾರುವ ಸಾಮರ್ಥ್ಯವನ್ನು ಪಡೆದಾವು ಎಂಬುದು ಅವರ ಅಂಜಿಕೆ. ಅವರಿಗೆ ಬ್ರಿಟಿಷ್ ಅಧಿಕಾರಿಗಳ ಸಂಪೂರ್ಣ ಬೆಂಬಲವಿತ್ತು. ಭಾರತೀಯ ನಾಯಕರನೇಕರು ಕಾರ್ಮಿಕರ ಹಿತರಕ್ಷಣೆಗಾಗಿ ಚಳವಳಿ ಹೂಡಿದ್ದು ಕಾರ್ಮಿಕ ಸಂಘಟನೆಗೆ ಇನ್ನೊಂದು ಕಾರಣ. ಇದು ನಿಸ್ವಾರ್ಥ ಪ್ರಯತ್ನ.

ಭಾರತದ ಕಾರ್ಮಿಕ ಆಂದೋಲನ 1875ರಲ್ಲಿ ಹುಟ್ಟಿತು ಎಂದು ಹೇಳಲಾಗಿದೆ. ಪ್ರಥಮ ಮುಂಬಯಿ ಕಾರ್ಖಾನೆ ಕಮಿಷನ್ (1875), ಕಾರ್ಖಾನೆ ಕಾಯಿದೆ (1881) ಮೀಡ್ ಕಿಂಗರ ಅನ್ವೇಷಣೆ (1882), ದ್ವಿತೀಯ ಮುಂಬಯಿ ಕಾರ್ಖಾನೆ ಕಮಿಷನ್ (1884), ಮುಂಬಯಿಯಲ್ಲಿ ಸಂಘಟಿಸಲಾದ ಕಾರ್ಮಿಕ ಸಭೆ (1884), 17,000 ಕಾರ್ಮಿಕರು ಸಹಿ ಹಾಕಿ ಸರ್ಕಾರಕ್ಕೆ ಕೊಟ್ಟ ವಿಜ್ಞಾಪನಾ ಪತ್ರ (1890) – ಇವೆಲ್ಲ ಮಹತ್ತ್ವದ ಘಟನೆಗಳು. ಇವೆಲ್ಲ ಶೈಶವಾವಸ್ಥೆಯಲ್ಲಿದ್ದ ಕಾರ್ಮಿಕ ಆಂದೋಲನವನ್ನು ಘೋಷಿಸಿದವು. 1890ರಲ್ಲಿ ಲೋಕಾಂಡೆ ಸ್ಥಾಪಿಸಿದ ಮುಂಬಯಿ ಗಿರಣಿ ಕೆಲಸಗಾರರ ಸಂಘವೇ–ಭಾರತದ ಪ್ರಥಮ ಕಾರ್ಮಿಕ ಸಂಘಟನೆ. ಅನಂತರ ಭಾರತ–ಬರ್ಮ ರೈಲ್ವೇ ಕಾರ್ಮಿಕರ ಸಮೇಕಿತ ಸಂಘ (1897), ಕಲ್ಕತ್ತದ ಮುದ್ರಕರ ಸಂಘ (1903), ಮುಂಬಯಿ ಅಂಚೆ ಸಂಘ (1907), ಕಾಮಾಗಾರ ಹಿತವರ್ಧಕ ಸಭಾ (1909) ಮತ್ತು ಸಮಾಜ ಸೇವಾ ಸಂಘ (1910)– ಇವು ಹುಟ್ಟಿಕೊಂಡುವು.

1890–1918ರ ಅವಧಿಯಲ್ಲಿ ಸಮಾಜ ಕಲ್ಯಾಣದ ಮೆರುಗನ್ನು ಭಾರತದ ಕಾರ್ಮಿಕ ಆಂದೋಲನಕ್ಕೆ ಕೊಡಲಾಗಿತ್ತು. ವಿಚಾರಣೆ, ವಿಜ್ಞಾಪನ ಪತ್ರ, ನಿವೇದನ, ಕಾಯಿದೆ, ಸಮ್ಮೇಳನ, ಅಧಿವೇಶನ, ಆಯೋಗಗಳು – ಮೊದಲಾದ ಸಂವಿಧಾನಾತ್ಮಕ ಮತ್ತು ಮಂದಗಾಮಿ ವಿಧಾನಗಳು ಆಗ ಸರ್ವೇಸಾಮಾನ್ಯ. ಆ ಕಾಲದಲ್ಲಿ ಕಾರ್ಮಿಕ ಸಂಘಗಳು ತುಂಬ ಸಡಿಲವಾಗಿದ್ದವು. ಇವನ್ನು ಕಾರ್ಮಿಕ ಮುಂದಾಳುಗಳ ಸಂಘಟನೆಗಳೆಂದರೆ ಹೆಚ್ಚು ಒಪ್ಪುತ್ತದೆ. ಮೂಲತಃ ಕಾರ್ಮಿಕ ಮುಂದಾಳುಗಳು ಸಮಾಜ ಸುಧಾರಕರು. ಇವರು ಮಂದಗಾಮಿ ರಾಜಕೀಯ ಚಟುವಟಿಕೆಗಳಿಗೆ ಸೇರಿದವರು; ಭಾರತದಲ್ಲಿ ಸಮಾಜಕಲ್ಯಾಣ ಕ್ರಮಗಳನ್ನು ಕಾರ್ಯಗತ ಮಾಡುವುದರಿಂದಲೇ ಕಾರ್ಮಿಕರ ಪ್ರಗತಿ ಸಾಧ್ಯ ಎಂದು ತಿಳಿದವರು. ಉಗ್ರವಾದರಾಹಿತ್ಯ, ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅಜ್ಞಾನ, ವರ್ಗಪ್ರಜ್ಞೆಯ ಅಜ್ಞಾನ, ಅತಿಯಾದ ವರ್ಗಪ್ರಜ್ಞೆಯಿಂದ ಸಂಭವಿಸಿದ ವರ್ಗ ಸಂಘರ್ಷ, ಸಾಮಾಜಿಕ ಕಲ್ಯಾಣ ಆಂದೋಲನದಲ್ಲಿ ಜಾತೀಯತೆ – ಇವು ಆ ಕಾಲದ ಕಾರ್ಮಿಕ ಆಂದೋಲನದ ವಿಶಿಷ್ಟ ಲಕ್ಷಣಗಳು. ದುಡಿತದ ದೀರ್ಘಕಾಲಾವಧಿ, ಕಡಿಮೆ ರಜಾ ದಿನಗಳು, ವೇತನಗಳ ಅನಿಯತ ಪಾವತಿ, ಗಿರಣಿಯ ವ್ಯವಸ್ಥಾಪಕರ ಅಸಾಮರ್ಥ್ಯ, ಅನಾರೋಗ್ಯಕರ ಕಾರ್ಮಿಕ ವಸತಿಗಳು ಮತ್ತು ಕಾರ್ಖಾನೆಗಳು ಇವು ಆ ಕಾಲದ ಕಾರ್ಮಿಕ ಸಮಸ್ಯೆಗಳು.

1918–24ರ ಅವಧಿಯಲ್ಲಿ ಕಾರ್ಮಿಕರನ್ನು ಸಂಘಟಿಸುವುದು ಸ್ವಲ್ಪ ಮಟ್ಟಿಗೆ ಸಾಧ್ಯವಾಯಿತು. ಉದ್ಯೋಗದ ಮತ್ತು ಉದ್ಯೋಗಸ್ಥರ ಅಸಂತೋಷಕರ ಸ್ಥಿತಿಗಳಿಗೆ ಪ್ರಚಾರ ನೀಡುವ, ಕಾರ್ಮಿಕರ ಎಲ್ಲ ಸಮಸ್ಯೆಗಳಿಗೆ ಪರಿಹಾರವಿದೆ ಎಂದು ತೋರಿಸುವ, ಪ್ರಯತ್ನಗಳನ್ನು ಕಾರ್ಮಿಕ ಆಂದೋಲನ ಕೈಗೊಂಡಿತು. ಕಾರ್ಮಿಕ ಸಂಘಟನೆಗೆ ಅಗತ್ಯವಾದ ವಾತಾವರಣವನ್ನು ಅದು ನಿರ್ಮಿಸಿತು. ಒಂದನೆಯ ಮಹಾಯುದ್ಧದ ಫಲವಾದ ಸಾಮಾಜಿಕ,

ರಾಜಕೀಯ ಮತ್ತು ಆರ್ಥಿಕ ವಾತಾವರಣಗಳು ಕಾರ್ಮಿಕ ಸಂಘ ಚಳವಳಿಗೆ ಸಹಾಯಕವಾದವು. ಹೊಸ ಸಾಮಾಜಿಕ ಸ್ಥಿತಿ, ಬೆಲೆ ಮತ್ತು ಲಾಭಗಳ ಜೊತೆ ಹೊಂದಾಣಿಕೆಯಿಲ್ಲದ್ದರಿಂದ ಹುಟ್ಟಿದ ತೀಕ್ಷ್ಣ ಮತ್ತು ತೀವ್ರ ಕೈಗಾರಿಕಾ ಸಂಘರ್ಷಗಳು: ರಾಜಕೀಯ ಆಕಾಂಕ್ಷೆಗಳು ಮತ್ತು ಸ್ವಾತಂತ್ರ್ಯ ಹೋರಾಟದ ಚಳವಳಿಗಳು – ಈ ಮೂರೂ ಕಾರಣಗಳಿಂದಾಗಿ ಕಾರ್ಮಿಕ ಸಂಘಟನೆ ಬೆಳೆಯಿತು. ಕಾರ್ಮಿಕ ಆಂದೋಲನ ತೀವ್ರವಾಯಿತು. ಚಳವಳಿಗೆ ಅಗತ್ಯವಾದ ಉತ್ಸಾಹಶೀಲ ದಕ್ಷ ನಾಯಕತ್ವ ಒದಗಿ ಬಂತು. ರಷ್ಯದ ಕ್ರಾಂತಿ, ಸ್ವಾತಂತ್ರ್ಯ ಚಳವಳಿ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಮತ್ತು 1920ರಲ್ಲಿ ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸ್ಸಿನ ಸ್ಥಾಪನೆ – ಇವು ಕಾರ್ಮಿಕ ಸಂಘಟನೆ ಸುಲಭವಾಗಿ ಮತ್ತು ತೀವ್ರವಾಗಿ ಬೆಳೆಯಲು ಅನುವಾದವು. 1919ರಲ್ಲಿ ಮದ್ರಾಸು, ಮುಂಬಯಿ ಮತ್ತಿತರ ಕಡೆಗಳಲ್ಲಿ ಮುಷ್ಕರಗಳು ಸಂಭವಿಸಿದವು. 1920 ಮತ್ತು 1921ರಲ್ಲಿ ನಡೆದ ಮುಷ್ಕರಗಳ ಸಂಖ್ಯೆ ಕ್ರಮವಾಗಿ 200 ಮತ್ತು 278. 1922ರ ಅನಂತರ ಇವು ಕಡಿಮೆಯಾದವು.

ಕೈಗಾರಿಕಾ ಸಂಘರ್ಷದಿಂದ, ಆರ್ಥಿಕ ಅತೃಪ್ತಿಯಿಂದ ಮತ್ತು ರಾಜಕೀಯ ವ್ಯಾಘ್ಯಾತದಿಂದ ಹುಟ್ಟಿಕೊಂಡ ಕಾರ್ಮಿಕ ಆಂದೋಲನ 1924–1934ರ ದಶಕದಲ್ಲಿ ಉಗ್ರಧೋರಣೆ ಅನುಸರಿಸಿತು. ಈ ಅವಧಿಯಲ್ಲಿ ಕೆಲವು ಹಿಂಸಾತ್ಮಕ ಮತ್ತು ದೀರ್ಘ ಮುಷ್ಕರಗಳೂ ಸಂಭವಿಸಿದವು. ಕ್ರಾಂತಿಕಾರಿ ರಾಜಕೀಯ ಪಕ್ಷಗಳ ಬೆಂಬಲವೂ ಚಳವಳಿಯ ತೀವ್ರತೆಗೆ ಕಾರಣ. ರಾಜಕೀಯ ಧೋರಣೆಗಳಿಗೆ ಸಂಬಂಧಿಸಿದಂತೆ ಅಖಿಲಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸ್ಸಿನಲ್ಲಿ ಒಡಕು ಹುಟ್ಟಿದ್ದು ಆಗಲೇ. 1929ರಲ್ಲಿ ಈ ಒಡಕು ಸ್ಪಷ್ಟವಾಯಿತು. ತೀವ್ರವಾದಿಗಳಲ್ಲದ ನಾಯಕರ ನೇತೃತ್ವದಲ್ಲಿ ಆಗ ರೂಪುಗೊಂಡ ಅಖಿಲಭಾರತ ಸಂಘದ ಹೆಸರು ರಾಷ್ಟ್ರೀಯ ಕಾರ್ಮಿಕ ಸಂಘಗಳ ಮಹಾಸಂಘ. 1924–29ರಲ್ಲಿ ಮುಂಬಯಿ, ಕಾನ್‌ಪುರ, ಷೋಲಾಪುರ ಮತ್ತು ಜಮಷೆಡ್‌ಪುರಗಳಲ್ಲಿ ಭಾರಿ ಮುಷ್ಕರಗಳು ಸಂಭವಿಸಿದವು. 1929ರಲ್ಲಿ ನೇಮಕವಾದ ವಿಚಾರಣಾ ಆಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು 1931ರಲ್ಲಿ. ಕಮ್ಯುನಿಸ್ಟ್ ಮುಖಂಡರು ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸನ್ನು ಕಟ್ಟಿದರು. ಕಮ್ಯುನಿಷ್ಟ್ ಕಾರ್ಮಿಕ ಸಂಘಟಕರನ್ನು ಸರ್ಕಾರ ಕಾನ್‌ಪುರ ಮತ್ತು ಮೀರತ್‌ಗಳಲ್ಲಿ ವಿಚಾರಣೆಗಳಿಗೆ ಗುರಿಮಾಡಿತು. ಭಾರತ ಸರ್ಕಾರ ಕಮ್ಯುನಿಷ್ಟ್ ಪಕ್ಷವನ್ನು ನ್ಯಾಯಬಾಹಿರ ಸಂಘವೆಂದು ಸಾರಿದ್ದು 1934ರಲ್ಲಿ. ಆ ವೇಳೆಗೆ ತೀವ್ರ ಆರ್ಥಿಕ ಮುಗ್ಗಟ್ಟಿನ ಫಲವಾಗಿ ಸಂಭವಿಸಿದ್ದ ನಿರುದ್ಯೋಗ, ಕೂಲಿಗಳ ಉಳಿತಾಯ–ಇವನ್ನು ಕಾರ್ಮಿಕ ಸಂಘಗಳು ವಿರೋಧಿಸಿದವು. ಮುಂಬಯಿ, ನಾಗಪುರ ಮುಂತಾದ ಕಡೆ ಸಾರ್ವತ್ರಿಕ ಮುಷ್ಕರಗಳು ಸಂಭವಿಸಿದವು.

1935ರ ಭಾರತ ಸರ್ಕಾರ ಕಾಯಿದೆಯ ಪ್ರಕಾರ ಶಾಸನ ಸಭೆ ಚುನಾವಣೆಗಳಿಗೆ ಕಾರ್ಮಿಕರ ಪ್ರತಿನಿಧಿಗಳು ಸ್ಪರ್ಧಿಸುವ ಅವಕಾಶ ಲಭ್ಯವಾದುದರಿಂದ ಕಾರ್ಮಿಕರಲ್ಲಿ ಐಕ್ಯಮತ ಹೆಚ್ಚಲು ಕಾರಣವಾಯಿತು. 1935ರಲ್ಲಿ 101 ಇದ್ದ ಕಾರ್ಮಿಕ ಸಂಘಗಳ ಸಂಖ್ಯೆ 1939ರಲ್ಲಿ 189ಕ್ಕೆ ಏರಿತು. 1934ರಲ್ಲಿ ಸಂಭವಿಸಿದ ಮುಷ್ಕರಗಳ ಸಂಖ್ಯೆ 159. 1937ರಲ್ಲಿ 379 ಮತ್ತು 1938ರಲ್ಲಿ 399 ಮುಷ್ಕರಗಳು ಸಂಭವಿಸಿದವು. 1939ರಲ್ಲಿ ದಿಗ್‌ಬೋಯಿ ಎಣ್ಣೆ ಕ್ಷೇತ್ರಗಳಲ್ಲಿ ನಡೆದ ಮುಷ್ಕರ ವೈಸ್‌ರಾಯ್ ಮತ್ತು ಗವರ್ನರುಗಳ ಮಧ್ಯಸ್ಥಿಕೆಯಿಂದಾಗಿ ಇತ್ಯರ್ಥವಾಯಿತು. ಮಂದಗಾಮಿ ಕಾರ್ಮಿಕ ಸಂಘ ಚಳವಳಿ ಹುಟ್ಟಿದ್ದು 1934–39ರ ಕಾಲಾವಧಿಯಲ್ಲಿ. 1929–30ರ ಸಾರ್ವತ್ರಿಕ ಮುಷ್ಕರಗಳ ಅಪಯಶಸ್ಸು, ಅನುಭವಿ ಉಗ್ರಗಾಮಿ ಮುಂದಾಳುಗಳ ಸೆರೆ, ರಾಷ್ಟ್ರೀಯವಾದದ ಉದಯ ಮತ್ತು ಉತ್ಸಾಹಿ ಮತ್ತು ಸಮರ್ಥ ಮಂದಗಾಮಿ ಕಾರ್ಮಿಕ ಮುಂದಾಳುಗಳ ಉದ್ಭವ – ಇವು ಅಖಿಲ ಭಾರತ ಮಟ್ಟದಲ್ಲಿ ಉಗ್ರಗಾಮಿ ಕಾರ್ಮಿಕ ಸಂಘ ಚಳವಳಿಯ ಪತನಕ್ಕೆ ಕಾರಣವಾದವು. ಆದರೆ ಕೈಗಾರಿಕಾ ಕೇಂದ್ರಗಳಲ್ಲಿ ಕಮ್ಯೂನಿಷ್ಟ್ ಕಾರ್ಮಿಕ ಸಂಘಗಳ ಮಹತ್ವ ಕುಂದಲಿಲ್ಲ. 1934–44ರ ದಶಕದಲ್ಲಿ ಕಾರ್ಮಿಕ ಸಂಘಗಳಲ್ಲಿ ಒಡಕು ಹುಟ್ಟಿತು. ಇದರಿಂದ ಅನೇಕ ಕಾರ್ಮಿಕರು ಸಂಘ ಚಟುವಟಿಕೆಗಳಿಂದ ದೂರ ಉಳಿದರು. ಆದರೆ ಆಗಾಗ ಕೈಗಾರಿಕಾ ಸಂಘರ್ಷಗಳು ತಲೆದೋರುತ್ತಿದ್ದವು. ಇದಕ್ಕೆ ಕಾರಣಗಳು ಎರಡು : ಒಂದು ವೇತನಗಳ ಇಳಿತ ಎರಡು ತಾಂತ್ರಿಕ ನಿರುದ್ಯೋಗದ ಫಲವಾದ ಆರ್ಥಿಕ ಮತ್ತು ಸಾಮಾಜಿಕ ವಾತಾವರಣ.

ಎರಡನೆಯ ಮಹಾಯುದ್ಧಕಾಲದ ಫಲವಾದ ಏರುಬೆಲೆಗಳು ಮತ್ತು ಲಾಭಗಳು, ಇದೇ ಪ್ರಮಾಣದಲ್ಲಿ ಹೆಚ್ಚಾಗದ ವೇತನಗಳು, ಕಾರ್ಮಿಕರಿಗೆ ಹೆಚ್ಚು ಬೇಡಿಕೆ ಮತ್ತು ಯುದ್ಧಕಾಲದ ಇತರ ಸಮಸ್ಯೆಗಳು ಭಾರತದಲ್ಲಿ ಕಾರ್ಮಿಕ ಸಂಘ ಚಳುವಳಿಯನ್ನು ಪ್ರೋತ್ಸಾಹಿಸಿದವು. ಈ ಕಾಲಾವಧಿಯಲ್ಲಿ ಅನೇಕ ಕಾರ್ಮಿಕ ಸಂಘಗಳು ಸ್ಥಾಪಿತವಾದವು. ಕಾರ್ಮಿಕರ ಬೇಡಿಕೆಗಳು ಪೂರೈಸದಾಗ ಮುಷ್ಕರಗಳು ಸಂಭವಿಸಿದವು. 1940ರಲ್ಲಿ ರಾಷ್ಟ್ರೀಯ ಕಾರ್ಮಿಕ ಸಂಘಗಳ ಸಂಯುಕ್ತ ಸಂಘ ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸಿನಲ್ಲಿ ಲೀನವಾಯಿತು. ಆದರೆ ಇದು ಬಹು ಕಾಲ ಬಾಳಲಿಲ್ಲ. 1941ರಲ್ಲಿ ಸ್ಥಾಪಿತವಾದ್ದು ಭಾರತೀಯ ಕಾರ್ಮಿಕರ ಸಂಯುಕ್ತ ಸಂಘ ಯುದ್ಧಕಾರ್ಯದಲ್ಲಿ ಸರ್ಕಾರಕ್ಕೆ ಬೆಂಬಲ ನೀಡಬೇಕೆಂಬುದು ಇದರ ಧೋರಣೆ. 1942ರಲ್ಲಿ ಕಾಂಗ್ರೆಸಿನ ನಾಯಕರು ಸೆರೆಮನೆ ಸೇರಿದರು. 1946ರಲ್ಲಿ ಭಾರತೀಯ ಕಾರ್ಮಿಕ ಸಂಘಗಳು, ಕಾಂಗ್ರೆಸಿನ ನಾಯಕರು ತಮ್ಮ ತಮ್ಮ ಸಂಘವೇ ಭಾರತಾದ್ಯಂತ ಕಾರ್ಮಿಕರನ್ನು ಪ್ರತಿನಿಧಿಸುತ್ತದೆಂದೂ ಅದು ಅಖಿಲಭಾರತ ಸಂಘವೆಂದೂ ವಾದಿಸಿದರು. ಭಾರತೀಯ ಕಾರ್ಮಿಕರ ನಿಜವಾದ ಪ್ರತಿನಿಧಿ ತಾನೆಂಬುದು ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸಿನ ವಾದ. ಈ ವಾದವನ್ನು ಕೇಂದ್ರ ಸರ್ಕಾರದ ಪ್ರಮುಖ ಕಾರ್ಮಿಕ ಅಧಿಕಾರಿಗೆ ಒಪ್ಪಿಸಲಾಯಿತು. ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸೇ ಬಹು ಮಂದಿ ಕಾರ್ಮಿಕರ ಪ್ರಾತಿನಿಧ್ಯ ಹೊಂದಿದ್ದೆಂಬುದು ಅಧಿಕಾರಿಯ ತೀರ್ಪಾಗಿತ್ತು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಹುಟ್ಟಿಕೊಂಡ ಅನೇಕ ರಾಜಕೀಯ ಪಕ್ಷಗಳು ತಮ್ಮದೇ ಆದ ಕೇಂದ್ರ ಕಾರ್ಮಿಕ ಸಂಘಗಳನ್ನು ಕಟ್ಟಿಕೊಂಡಿವೆ.

ಭಾರತದಲ್ಲಿ ಕಾರ್ಮಿಕ ಸಂಘಗಳ ಸಂಖ್ಯೆ ಹೆಚ್ಚುತ್ತಿದೆ. ಸದಸ್ಯತ್ವ ಬೆಳೆಯುತ್ತಿದೆ. ಸರಾಸರಿ ಸದಸ್ಯತ್ವದ ಸಂಖ್ಯೆ ಇಳಿಯುತ್ತಿದೆ. ಇತ್ತೀಚೆಗೆ ಮಹಿಳಾ ಕಾರ್ಮಿಕ ಸಂಘಟಕರ ಸಂಖ್ಯೆ ಹೆಚ್ಚುತ್ತಿದೆ. ನೋಂದಣಿಯಾದ ಅನೇಕ ಕಾರ್ಮಿಕ ಸಂಘಗಳು ಆದಾಯದ ವಿವರಣಗಳನ್ನು (ರಿಟರ್ನ್ಸ್) ಒಪ್ಪಿಸುತ್ತಿಲ್ಲ. ಯುದ್ಧೋತ್ತರ ಮತ್ತು ಸ್ವಾತಂತ್ರ್ಯಾನಂತರ ಕಾಲದಲ್ಲಿ ಮತ್ತು ಆರ್ಥಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದ ಅನಂತರ, ಭಾರತದಲ್ಲಿ ಕಾರ್ಮಿಕ ಸಂಘ ಚಟುವಟಿಕೆಗಳು ಹೆಚ್ಚುತ್ತಿವೆ. ಇದಕ್ಕೆ ಕಾರಣಗಳಿವು : 1. ದಿನೇ ದಿನೇ ಏರುತ್ತಿರುವ ಧಾರಣೆ ಮತ್ತು ಜೀವನ ವೆಚ್ಚಗಳಿಂದಾಗಿ ಹದಗೆಡುತ್ತಿರುವ ಕಾರ್ಮಿಕರ ಆರ್ಥಿಕ ಪರಿಸ್ಥಿತಿ. 2. ದೇಶದ ರಾಜಕೀಯ ಬೆಳವಣಿಗೆ–ಬೇರೆ ಬೇರೆ ರಾಜಕೀಯ ಪಕ್ಷಗಳು ಕಾರ್ಮಿಕರ ಮೇಲೆ ಪ್ರಭಾವ ಬೀರಲು ಹವಣಿಸುತ್ತಿವೆ ಮತ್ತು ಕಾರ್ಮಿಕ ಆಂದೋಲನದಲ್ಲಿ ಬೇರೂರಲು ಪ್ರಯತ್ನಿಸುತ್ತಿವೆ. 3. ಕಾರ್ಮಿಕ ಸಂಘಟಕರಿಗೆ ದೊರಕುತ್ತಿರುವ ಹೆಚ್ಚಿನ ಸ್ವಾತಂತ್ರ್ಯ. 4. ಕಾರ್ಮಿಕರಿಗೆ ಈಗ ಕಿರುಕುಳದ ಭಯವಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯ ಅನಂತರ ಸಮಾಜವಾದಿ ಸಮಾಜ ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ದೊರಕಿರುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂಥ ಸಮಾಜ ನಿರ್ಮಾಣ ಕಾರ್ಯದಲ್ಲಿ ಕಾರ್ಮಿಕ ಸಂಘಗಳ ಮಹತ್ತ್ವಪೂರ್ಣ ಪಾತ್ರವನ್ನು ಗುರುತಿಸುವುದು ಅನಿವಾರ್ಯವಾಗಿದೆ. 5. ಸರ್ಕಾರದ ಕೈಗಾರಿಕಾ ಸಂಬಂಧಗಳ ನೀತಿ ಧೋರಣೆಗಳು.

ಪಶ್ಚಿಮ ಬಂಗಾಳ, ಕೇರಳ, ಮಹಾರಾಷ್ಟ್ರ, ತಮಿಳುನಾಡು ಮತ್ತು ಉತ್ತರ ಪ್ರದೇಶ ಕರ್ನಾಟಕ– ಈ ರಾಜ್ಯಗಳು ಕಾರ್ಮಿಕ ಸಂಘ ಚಳವಳಿಯಲ್ಲಿ ತುಂಬ ಮುಂದಿವೆ. ಪ್ಲಾಂಟೇಷನ್‌ಗಳು, ಕಲ್ಲಿದ್ದಲು ಗಣಿಗಳು, ಆಹಾರ ಉದ್ಯಮಗಳು, ಬಟ್ಟೆಯ ಗಿರಣಿಗಳು, ಮುದ್ರಣಾಲಯಗಳು, ರಾಸಾಯನಿಕಗಳು ಲೋಕೋಪಯೋಗಿ ಸೇವೆಗಳು ಮತ್ತು ವಾಣಿಜ್ಯ– ಇವೆಲ್ಲ ಸಂಘಟಿತ ಉದ್ಯಮಗಳು. ಇವುಗಳ ಸಂಘಟನೆಗಳಲ್ಲಿ ವೈವಿಧ್ಯವೂ ಪ್ರತ್ಯೇಕತೆಯೂ ಕಾಣಬರುತ್ತವೆ.

ಭಾರತದ ನಾಲ್ಕು ಕೇಂದ್ರ ಕಾರ್ಮಿಕ ಸಂಘಗಳಿವು : ಅಖಿಲ ಭಾರತ ಕಾಂಗ್ರೆಸ್ 1947ರಲ್ಲಿ ಭಾರತ ರಾಷ್ಟ್ರೀಯ ಕಾರ್ಮಿಕ ಸಂಘಗಳ ಕಾಂಗ್ರೆಸನ್ನು ಸ್ಥಾಪಿಸಿತು (ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್). ಇದರ ಉದ್ದೇಶಗಳು : 1. ಸದಸ್ಯರ ಸರ್ವಾಂಗೀಣ ಪ್ರಗತಿಯ ದಾರಿಯಲ್ಲಿರುವ ತೊಂದರೆಗಳ ನಿವಾರಣೆಗೆ ಕ್ರಮಬದ್ಧ ಸಮಾಜದ ರಚನೆ. 2. ಎಲ್ಲ ಬಗೆಯ ಕಾರ್ಮಿಕರ ಪರಿಣಾಮಕಾರಿ ಮತ್ತು ಸಂಪೂರ್ಣ ಸಂಘಟನೆಯ ಸಾಧನೆ, 3. ದುಡಿತದ ಮತ್ತು ಜೀವನದ ಸ್ಥಿತಿಗತಿಗಳ ತೀವ್ರ ಸುಧಾರಣೆ, 4. ಉದ್ಯಮಗಳಲ್ಲಿ ಮತ್ತು ಸಮಾಜದಲ್ಲಿ ಕಾರ್ಮಿಕರ ಸ್ಥಾನಮಾನಗಳ ಉತ್ತಮಿಕೆ, 5. ಕೆಲಸವನ್ನು ನಿಲ್ಲಿಸದೆ, ಸಮಾಲೋಚನೆ ಸಮನ್ವಯ ಮಧ್ಯಸ್ಥಿಕೆ ಮತ್ತು ತೀರ್ಪು – ಈ ಸಾಧನೆಗಳಿಂದ ಕಾರ್ಮಿಕರ ಕೊರಗುಗಳನ್ನು ದೂರೀಕರಿಸುವುದು, 6. ಉದ್ಯಮ ಮತ್ತು ದೇಶದ ಬಗ್ಗೆ ಕಾರ್ಮಿಕರಲ್ಲಿ ಕರ್ತವ್ಯದೃಷ್ಟಿಯನ್ನೂ ಹೊಣೆಗಾರಿಕೆಯನ್ನೂ ಹುಟ್ಟಿಹಾಕುವುದು, 7. ಕಾರ್ಮಿಕರ ಕಾರ್ಯದಕ್ಷತೆ ಮತ್ತು ಶಿಸ್ತುಗಳ ಮಟ್ಟವನ್ನು ಹೆಚ್ಚಿಸುವುದು, 8. ಸಾಮಾಜಿಕ, ರಾಜಕೀಯ, ಆರ್ಥಿಕ ಶೋಷಣೆ ಮತ್ತು ಅಸಮಾನತೆಗಳನ್ನು ಹೋಗಲಾಡಿಸಿ, ಕಾರ್ಮಿಕರ ಮಾನವೀಯ ವ್ಯಕ್ತಿತ್ವದ ಬೆಳವಣಿಗೆಯನ್ನು ಸಾಧಿಸುವುದು, 9. ಆರ್ಥಿಕ ಚಟುವಟಿಕೆಗಳಲ್ಲಿ ಹುದುಗಿದ್ದ ಲಾಭದಾಶೆಯನ್ನು ಕಡಿಮೆ ಮಾಡಿ, ಸಾಮಾಜಿಕ ಗಳಿಕೆಯನ್ನು ಹೆಚ್ಚಿಸುವುದು. ಈ ಉದ್ದೇಶಗಳ ಸಾಧನೆಗಾಗಿ ಉದ್ಯಮಗಳನ್ನು ರಾಷ್ಟ್ರೀಯ ಒಡೆತನ ಮತ್ತು ಹತೋಟಿಯಲ್ಲಿಡಬೇಕೆಂದು ಇದು ಬಯಸುತ್ತದೆ. ಉದ್ಯಮಗಳ ಆಡಳಿತಗಳಲ್ಲಿ ಮತ್ತು ಹತೋಟಿಯಲ್ಲಿ ಕಾರ್ಮಿಕರು ಭಾಗವಹಿಸಬೇಕೆಂದು ಈ ಸಂಘಟನೆ ಒತ್ತಾಯಿಸುತ್ತದೆ. ಈ ಬದಲಾವಣೆಗಳನ್ನು ಕಾರ್ಯಗತ ಮಾಡಲು ಉಗ್ರವಾದಿ ವಿಧಾನಗಳನ್ನು ಅನುಸರಿಸಬೇಕೆಂದು ಇದು ಬಯಸುವುದಿಲ್ಲ.

ಇದು ಕಾರ್ಮಿಕರ ಮಹತ್ತ್ವದ ಮತ್ತು ಪ್ರತಿನಿಧಿಭೂತ ಸಂಸ್ಥೆ. ಇದು ದೇಶ–ವಿದೇಶಗಳಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಕಾರ್ಮಿಕರನ್ನು ಪ್ರತಿನಿಧಿಸುತ್ತದೆ. ಉದ್ಯಮ ಮೂಲವಾದ ರಾಷ್ಟ್ರೀಯ ಸಂಯುಕ್ತ ಸಂಘಗಳನ್ನು ಇದು ಪ್ರೋತ್ಸಾಹಿಸುತ್ತದೆ. ವೈಯಕ್ತಿಕ ಕಾರ್ಮಿಕ ಸಂಘಗಳೆಲ್ಲ ಈ ಸಂಯುಕ್ತ ಸಂಘಗಳ ಅಧಿಕಾರ ಕಕ್ಷೆಯಲ್ಲಿ ಬರುತ್ತವೆ. ಪ್ರಾಂತೀಯ ಮಟ್ಟದ ಸಂಯುಕ್ತ ಸಂಘಗಳ ರಚನೆಗೆ ಇದರ ಪ್ರೋತ್ಸಾಹವುಂಟು.

ಇದು ಒಂದು ಪತ್ರಿಕೆಯನ್ನೂ ಹೊರಡಿಸುತ್ತದೆ. ಇದರ ಅಂಗಸಂಸ್ಥೆಗಳೂ ತಮ್ಮದೇ ಆದ ಪತ್ರಿಕೆಗಳನ್ನು ಪ್ರಕಟಿಸುತ್ತಿವೆ. ಈ ಸಂಸ್ಥೆ ಅಂತಾರಾಷ್ಟ್ರೀಯ ಸಂಘಟನೆಯ ಜೊತೆಗೆ ನಿಕಟ ಸಂಬಂಧವನ್ನಿಟ್ಟುಕೊಂಡಿದೆ.

ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸನ್ನು (ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್) 1920ರಲ್ಲಿ ಸ್ಥಾಪಿಸಲಾಯಿತು. ಇದು ಕಮ್ಯುನಿಸ್ಟರ ಪ್ರಭಾವಕ್ಕೆ ಒಳಪಟ್ಟಿದೆ. ಇದರ ಉದ್ದೇಶಗಳಿವು : 1. ಭಾರತದಲ್ಲಿ ಸಮಾಜವಾದಿ ರಾಜ್ಯದ ಸ್ಥಾಪನೆ, 2. ಉತ್ಪಾದನೆ, ವಿತರಣೆ ಮತ್ತು ವಿನಿಮಯಗಳ ಸಾಮಾಜೀಕರಣ ಮತ್ತು ರಾಷ್ಟ್ರೀಕರಣ, 3. ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಉತ್ತಮಗೊಳಿಸುವುದು, 4. ಕಾರ್ಮಿಕರ ಉದ್ಯೋಗಗಳ ಸಂಬಂಧವಾಗಿ ಅವರ ಆಸಕ್ತಿಗಳನ್ನು, ಹಕ್ಕುಗಳನ್ನು ಮತ್ತು ಸೌಕರ್ಯಗಳನ್ನು ಉತ್ತೇಜಿಸುವುದು, ರಕ್ಷಿಸುವುದು ಮತ್ತು ಸಂವರ್ಧನೆ ಮಾಡುವುದು, 5. ಕಾರ್ಮಿಕರಿಗೆ ವಾಕ್ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ, ಸಭೆ ಸೇರುವ ಮತ್ತು ಕರೆಯುವ ಸ್ವಾತಂತ್ರ್ಯ, ಸಂಘಗಳನ್ನು ಕಟ್ಟುವ ಸ್ವಾತಂತ್ರ್ಯ, ಮುಷ್ಕರ ಹೂಡುವ ಸ್ವಾತಂತ್ರ್ಯ, ದುಡಿಮೆಯ ಮತ್ತು ಪಾಲನೆಯ ಸ್ವಾತಂತ್ರ್ಯ, 6. ಸಂಸ್ಥೆಯ ಅಧಿಕಾರದ ಕಕ್ಷೆಯಲ್ಲಿ ಬರುವ ಕಾರ್ಮಿಕ ಸಂಘಗಳ ಚಟುವಟಿಕೆಗಳನ್ನು ಸಮಾನಾಧೀಕರಿಸುವ ಸ್ವಾತಂತ್ರ್ಯ, 7. ಜಾತಿ, ಪಂಥ, ಪಂಗಡ, ಧರ್ಮ, ವಂಶ – ಇವೇ ಮೊದಲಾದವುಗಳ ಆಧಾರದ ಮೇಲೆ ದೊರಕುವ ರಾಜಕೀಯ ಇಲ್ಲವೆ ಆರ್ಥಿಕ ಸೌಲಭ್ಯಗಳ ರದ್ದು.

ಸಮಾಜವಾದದ ಮೇಲೆ ಆಧಾರಿತವಾದ ರಾಜ್ಯದಲ್ಲಿ ಶ್ರಮ ಮತ್ತು ಬಂಡವಾಳ–ಇವುಗಳಲ್ಲಿ ಸಮನ್ವಯ ಅಸಾಧ್ಯವಾದುದರಿಂದ, ವರ್ಗ ಹೋರಾಟದ ಸಾಧನವೇ ಕಾರ್ಮಿಕ ಸಂಘ ಎಂದು ಇದರ ಗ್ರಹಿಕೆ. ಸಮಾಜವಾದದ ಉದ್ದೇಶದ ಸಾಧನೆಗಾಗಿ ಉಗ್ರವಾದ ನೀತಿ ಧೋರಣೆಗಳನ್ನು ಅನುಷ್ಠಾನಕ್ಕೆ ತರಲೇಬೇಕೆಂದು ಈ ಸಂಘಟನೆ ಹೇಳುತ್ತದೆ. ಭಾರತ ರಾಷ್ಟ್ರೀಯ ಕಾರ್ಮಿಕ ಸಂಘಗಳ ಕಾಂಗ್ರೆಸಿನ ಪ್ರಭಾವ ಮತ್ತು ಪ್ರಾಬಲ್ಯ ಹೆಚ್ಚುತ್ತಿದ್ದಂತೆ, ಇದರ ಪ್ರಭಾವ ಇಳಿಯಹತ್ತಿದೆ. ಪಶ್ಚಿಮ ಬಂಗಾಳ, ಕೇರಳ, ಮಹಾರಾಷ್ಟ್ರ ಮತ್ತು ಆಂಧ್ರ ಈ ರಾಜ್ಯಗಳಲ್ಲಿ ಇದು ಹೆಚ್ಚು ಪ್ರಭಾವಶಾಲಿ.

**ಹಿಂದ್ ಮಜ್ದೂರ್ ಸಭಾ :** ಸಮಾಜವಾದಿಗಳು ಇದನ್ನು 1948ರಲ್ಲಿ ಕಟ್ಟಿದರು. ಇದರ ಉದ್ದೇಶಗಳು : 1. ಎಲ್ಲ ಕಾರ್ಮಿಕರಿಗೂ ಜೀವನಕ್ಕೆ ಅಗತ್ಯವಾದ ವೇತನ, 2. ಪ್ರತಿಯೊಬ್ಬ ನಾಗರಿಕನಿಗೂ ಕೆಲಸದ ಖಾತರಿ, 3. ಯಥೋಚಿತ ವಿಶ್ರಾಂತಿ ಮತ್ತು ರಜಾಕಾಲದ ಸಂಬಳ, 4. ಸಂಪೂರ್ಣ ಸಾಮಾಜಿಕ ಭದ್ರತೆಯ ಕ್ರಮಗಳ ಅನುಷ್ಠಾನ, 5. ಉಚಿತ ವೈದ್ಯ ಸೌಲಭ್ಯ, 6. ತಕ್ಕ ಮತ್ತು ಯೋಗ್ಯ ವಸತಿ ಸೌಕರ್ಯ, 7. ಉಚಿತ ಮತ್ತು ಕಡ್ಡಾಯ ಶಿಕ್ಷಣ ಮತ್ತು ಸಂದರ್ಭೋಚಿತ ಮಾರ್ಗದರ್ಶನ, 8. ಸಾಮೂಹಿಕ ಚೌಕಾಸಿಯ ಹಕ್ಕನ್ನು ಪರಿಣಾಮಕಾರಿಯಾಗಿ ಗುರುತಿಸುವುದು, 9. ಪ್ರಜಾಸಮಾಜವಾದಿ ಸಮಾಜದ ಸ್ಥಾಪನೆಗಾಗಿ ಕಾರ್ಮಿಕ ಸಂಘಟನೆಯನ್ನು ಬೆಳೆಸುವುದು, 10. ಸಹಕಾರ ಸಂಘಗಳ ರಚನೆ ಮತ್ತು ಕಾರ್ಮಿಕ ಶಿಕ್ಷಣದ ಪ್ರಗತಿ, 11. ಈ ಉದ್ದೇಶಗಳನ್ನಿಟ್ಟುಕೊಂಡ ಇತರ ಸಂಘಟನೆಗಳೊಂದಿಗೆ ಸಹಕರಿಸುವುದು, 12. ಸಂಯುಕ್ತ ಸಂಘಗಳನ್ನು ಮತ್ತು ಕಾರ್ಮಿಕರ ರಾಷ್ಟ್ರೀಯ ಸಂಘಗಳನ್ನು ಸ್ಥಾಪಿಸುವುದು. ಇದು ಹಿಂದ್ ಮಜ್ದೂರ್ ಪತ್ರಿಕೆಯನ್ನು ನಡೆಸುತ್ತಿದೆ. ಇದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಂಯೋಜನೆಯ ಅಧಿಕಾರದ ಕಕ್ಷೆಗೆ ಒಳಪಟ್ಟಿದೆ.

**ಕಾರ್ಮಿಕ ಸಂಘಗಳ ಕಾನೂನು :** ಭಾರತದಲ್ಲಿ ಕಾರ್ಮಿಕ ಸಂಘಗಳ ಕಾಯಿದೆಯನ್ನು ತರಲು ಪ್ರಯತ್ನಿಸಿದ ಮೊಟ್ಟಮೊದಲ ವ್ಯಕ್ತಿ ಎನ್.ಎಂ. ಜೋಶಿ. ಈ ಪ್ರಯತ್ನದಿಂದಾಗಿ 1926ರಲ್ಲಿ ಭಾರತದ ಕಾರ್ಮಿಕ ಸಂಘಗಳ ಕಾಯಿದೆ ಅಂಗೀಕೃತವಾಯಿತು. ಇದರ ಮುಖ್ಯಾಂಶಗಳಿವು : 1 ಏಳಕ್ಕಿಂತ ಕಡಿಮೆಯಿಲ್ಲದ ಸದಸ್ಯರು ಕೂಡಿ ಕಾರ್ಮಿಕ ಸಂಘದ ನೋಂದಾವಣೆಗೆ ಅರ್ಜಿ ಸಲ್ಲಿಸಬಹುದು. ಆದರೆ ಇಂಥ ಕಾರ್ಮಿಕ ಸಂಘಕ್ಕೆ ಅದರದೇ ಆದ ಅಂಗ ರಚನೆಯಿರಬೇಕು. ಅದು ಸದಸ್ಯರ ಯಾದಿಯನ್ನು ಇಟ್ಟಿರಬೇಕು. ಯೋಗ್ಯ ಲೆಕ್ಕಪತ್ರಗಳನ್ನು ಇಟ್ಟಿರಬೇಕು. ಈ ಕಾಯಿದೆಯ ಪ್ರಮುಖ ಅಂಶವೆಂದರೆ, ಹೊರಗಿನಿಂದ ನಾಯಕತ್ವ ಪಡೆಯುವ ಅವಕಾಶ ಕಾರ್ಮಿಕರಿಗೆ ದೊರೆತದ್ದು ಭಾರತದಂತಹ ವಸಾಹತು ದೇಶದಲ್ಲಿ ಸ್ವಾತಂತ್ರ್ಯ ಚಳವಳಿಯ ಜೊತೆಗೆ ಕಾರ್ಮಿಕ ಚಳವಳಿ ಬೆಳೆದದ್ದರಿಂದಾಗಿ ಅನೇಕ ರಾಜಕೀಯ ಮುಖಂಡರು ಕಾರ್ಮಿಕ ಮುಖಂಡರೂ ಆಗಿದ್ದರು. ಜವಹರಲಾಲ್ ನೆಹರು, ಗಾಂಧೀಜಿ, ಎನ್ ಎಮ್ ಜೋಶಿ, ವಿ ವಿ ಗಿರಿ, ಲಾಲಾ ಲಜಪತರಾಯ್, ಎಸ್ ಎ ಡಾಂಗೆ ಈ ಪಟ್ಟಿಯಲ್ಲಿನ ಕೆಲವು ಪ್ರಮುಖರು. ಹೊರಗಿನ ನಾಯಕತ್ವದ ಪರಂಪರೆ ಕಾರ್ಮಿಕ ಸಂಘಟನೆಗಳಲ್ಲಿ ಇಂದಿಗೂ ಮುಂದುವರೆದಿದೆ. ಕಾಮಿಕ ಕಾಯಿದೆಗಳ ಪರಿಚಯದ ಅಭಾವ, ನಿರಕ್ಷರತೆ, ಮಾಲಿಕರನ್ನು ಎದುರಿಸುವಲ್ಲಿ ಹಿಂಜರಿತ ಇತ್ಯಾದಿ ಕಾರಣಗಳಿಂದಾಗಿ ಹೊರಗಿನ ನಾಯಕತ್ವವನ್ನು ಕಾರ್ಮಿಕರು ಬಯಸುವುದು ಸಹಜ. ಈ ವ್ಯವಸ್ಥೆಯನ್ನು ಹಲವಾರು ಮಾಲಿಕರು ಒಪ್ಪಿಕೊಂಡು ಕೈಗಾರಿಕಾ ಬಾಂಧವ್ಯವನ್ನು ಸಾಧಿಸಿದ್ದಾರೆ.

2. ನೋಂದಾಯಿತವಾದ ಕಾರ್ಮಿಕ ಸಂಘಗಳಿಗೆ ಕಾನೂನುಬದ್ಧ ರಕ್ಷಣೆ ದೊರಕುತ್ತದೆ. 3 ಕಾರ್ಮಿಕ ಸಂಘಗಳ ಸಂವರ್ಧನೆಗೆ ಅಗತ್ಯವಾದ ಅನೇಕ ಸೌಲಭ್ಯಗಳನ್ನು ಒದಗಿಸಬೇಕೆಂಬುದೂ ಕಾಯಿದೆಯ ಆದೇಶ. 1948ರಲ್ಲಿ ಈ ಕಾಯಿದೆಯನ್ನು ತಿದ್ದುಪಡಿ ಮಾಡಲಾಯಿತು. ಕಾರ್ಮಿಕ ಸಂಘಗಳಿಗೆ ಉದ್ಯೋಗದಾತರು ಮನ್ನಣೆ ನೀಡಬೇಕಾದ್ದು ಕಡ್ಡಾಯ. ಕಾರ್ಮಿಕರಲ್ಲದವರು ಸಂಘದ ಸದಸ್ಯರಾಗಿರಬಾರದು. ಆ ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆಲ್ಲ ಪ್ರವೇಶ ಇರಬೇಕು. ಮುಷ್ಕರಕ್ಕೆ ಕರೆಕೊಡುವ ಬಗ್ಗೆ ಸೂಕ್ತ ನಿಬಂಧನೆಗಳಿರಬೇಕು. ಸಂಘದ ಕಾರ್ಯಕಾರಿ ಸಮಿತಿ ಆರು ತಿಂಗಳುಗಳಿಗೊಮ್ಮೆಯಾದರು ಸಭೆ ಸೇರಬೇಕು. ಇವು ತಿದ್ದುಪಡಿ ಕಾಯಿದೆಯ ಮುಖ್ಯಾಂಶಗಳು.

ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಕಾರ್ಮಿಕರ ಹಿತಗಳನ್ನು ರಕ್ಷಿಸುವ ಅನೇಕ ಕಾಯಿದೆಗಳನ್ನು ಜಾರಿಗೆ ತರಲಾಯಿತು. ಸ್ವಾತಂತ್ರ್ಯ ಸಿಕ್ಕಿದ ಅನಂತರವೂ ಅನೇಕ ಕಾಯಿದೆಗಳನ್ನು ಜಾರಿಗೆ ತರಲಾಯಿತು. ಹಾಗೆಯೇ ಅನೇಕ ಕಾಯಿದೆಗಳು ಜಾರಿಗೆ ಬಂದಿವೆ. ಇವು ಕಾರ್ಮಿಕರ ಸಂಘಟನೆಗೆ ತುಂಬ ಉತ್ತೇಜನ ಕೊಟ್ಟವು.

ಭಾರತದಲ್ಲಿ ಕಾರ್ಮಿಕ ಸಂಘಗಳ ಕೆಲವು ನ್ಯೂನತೆಗಳು ಇವು: 1. ಹೊರಗಿನವರ ಪ್ರಭಾವ, 2. ರಾಜಕೀಯ ಸಂಘಟನೆ, 3. ಕಾರ್ಮಿಕ ಸಂಘಗಳಲ್ಲಿ ಸಂಖ್ಯಾಬಾಹುಳ್ಯ ಮತ್ತು ಸ್ಪರ್ಧೆ, 4. ಕಲ್ಯಾಣ ಕಾರ್ಯಕ್ರಮಗಳ ಕೊರತೆ, 5. ಸಾಮೂಹಿಕ ಚೌಕಾಸಿಯ ದೌರ್ಬಲ್ಯ, 6. ಹಣದ ಅಭಾವ, 7. ಸದಸ್ಯತ್ವದ ಅವ್ಯವಸ್ಥೆ, 8. ಸಡಿಲವಾದ ಸಂಘಟನೆ, 9. ಔದ್ಯೋಗಿಕ ಸಂಬಂಧಗಳ ವಿಷಯದಲ್ಲಿ ಸರ್ಕಾರದ ಮೇಲೆ ಹೆಚ್ಚಾಗಿ ಅವಲಂಬನೆ. ಈ ತೊಡಕುಗಳಿಗೆ ಮುಖ್ಯ ಕಾರಣಗಳೆಂದರೆ ಕಾರ್ಮಿಕರ ಅಜ್ಞಾನ ಮತ್ತು ದಾರಿದ್ರ್ಯ. ಭಾರತದ ಕಾರ್ಮಿಕ ಸಂಘಗಳ ದಕ್ಷ ಕಾರ್ಯಾಚರಣೆಯ ಅವಶ್ಯಕತೆಗಳಿವು: 1. ಗುಮಾಸ್ತರ ಮತ್ತು ಲೆಕ್ಕ ಇಡುವವರ ಆವಶ್ಯಕತೆ, 2. ದಾಖಲೆಗಳನ್ನು ಇಡುವ ಅವಶ್ಯಕತೆ, 3. ಹೊಸ ಹೊಸ ಸದಸ್ಯರ ನೋಂದಾವಣೆ, 4. ಅಭ್ಯರ್ಥನ ಪತ್ರಗಳ ತಯಾರಿಕೆ, 5. ಕಾರ್ಮಿಕ ನ್ಯಾಯಾಲಯಗಳಲ್ಲಿ ಹೋರಾಟ, 6. ಇತರ ತಾಂತ್ರಿಕ ಅಂಶಗಳು. ಇವೆಲ್ಲ ಅಶಿಕ್ಷಿತ ಕಾರ್ಮಿಕನಿಗೆ ತಿಳಿಯುವುದಿಲ್ಲ. ಆದ್ದರಿಂದ ಕಾರ್ಮಿಕ ಸಂಘಗಳ ಆಡಳಿತಗಾರ ಹೊರಗಿನವರ ನೆರವನ್ನು ಪಡೆಯಲೇಬೇಕಾಗುತ್ತದೆ. ಇದರಿಂದ ಕಾರ್ಮಿಕ ಸಂಘಗಳಲ್ಲಿ ಹೊರಗಿನವರ ಸಮಸ್ಯೆ ಉದ್ಭವಿಸುತ್ತದೆ. ಭಾರತದ ಕಾರ್ಮಿಕ ಸಂಘಗಳ ಆಂದೋಲನ ಒಂದನೆಯ ಮಹಾಯುದ್ಧ ನಿರ್ಮಿಸಿದ ಆರ್ಥಿಕ ಅತೃಪ್ತಿಯ ಹಿನ್ನೆಲೆಯಲ್ಲಿ ಹುಟ್ಟಿದರೂ ಸ್ವಾತಂತ್ರ್ಯ ಚಳವಳಿಯ ಮುಂದಾಳುಗಳು ಇದನ್ನು ಮುಂದುವರಿಸಿದರು ಹಾಗೂ ಅಭಿವೃದ್ಧಿಗೊಳಿಸಿದರು. ಕಾರ್ಮಿಕ ಸಂಘಗಳ ಹಣದ ಕೊರತೆಯಿಂದಾಗಿ ಪೂರ್ಣಕಾಲದ ಸಿಬ್ಬಂದಿಗಳನ್ನು ನೇಮಿಸುವುದು ಅಸಾಧ್ಯವಾಯಿತು. ಕಿರುಕುಳ ಮತ್ತು ದಂಡನೆಗಳ ಹೆದರಿಕೆ ಮತ್ತು ಉದ್ಯೋಗದಾತರೊಡನೆ ಸಂಘಗಳ ಸಮಸ್ಯೆಗಳನ್ನು ಯೋಗ್ಯರೀತಿಯಲ್ಲಿ ಚರ್ಚಿಸುವ, ಸಮಾಲೋಚಿಸುವ ಮತ್ತು ಇತ್ಯರ್ಥಗೊಳಿಸುವ ಮನಸ್ಸಿಲ್ಲದಿರುವುದು–ಇವುಗಳಿಂದಾಗಿ ಕಾರ್ಮಿಕರಿಗೆ ತಾವು ಮುಖಂಡತ್ವಕ್ಕೆ ಏರುವ ಅವಕಾಶ ದೊರಕಲಿಲ್ಲ. ಆದ್ದರಿಂದ ಹೊರಗಿನವರೇ ಕಾರ್ಮಿಕ ಸಂಘಗಳ ನಾಯಕತ್ವವನ್ನು ವಹಿಸಬೇಕಾಯಿತು. ಇವರೇ ಕಾರ್ಮಿಕ ಸಂಘಗಳ ಬೆಳೆವಣಿಗೆ ಮತ್ತು ದೋಷಗಳಿಗೆ ಕಾರಣರಾದರು. ಕಾರ್ಮಿಕ ಸಂಘಗಳ ಮತ್ತು ಅವುಗಳ ಕಾರ್ಮಿಕ ಸದಸ್ಯರ ರಾಜಕೀಯ ದೃಷ್ಟಿ ಕೋನಗಳಲ್ಲಿ ಭಿನ್ನತೆಯಿದೆ. ಸ್ಪರ್ಧಾತ್ಮಕವಾದ ಅನೇಕ ಕಾರ್ಮಿಕ ಸಂಘಗಳ ಹುಟ್ಟಿಗೆ ಇದೇ ಕಾರಣ. ಒಂದೇ ಕಾರ್ಖಾನೆಯಲ್ಲಿ ಅನೇಕ ಸಣ್ಣ ಮತ್ತು ನಿಷ್ಪ್ರಯೋಜಕ ಕಾರ್ಮಿಕ ಸಂಘಗಳನ್ನು ಕಾಣಬಹುದು. ಇದರಿಂದ ಕಾರ್ಮಿಕ ಸಂಘಗಳಲ್ಲಿ ಪ್ರತಿಸ್ಪರ್ಧೆ ಮತ್ತು ಅಂತಃಕಲಹಗಳು ಹುಟ್ಟುತ್ತಿವೆ. ಸಾಮಾಜಿಕ ಚೌಕಾಸಿ ಮತ್ತು ಭರವಸೆಯ ಮಹತ್ವವನ್ನು ಕಾರ್ಮಿಕರು ಇನ್ನೂ ಸರಿಯಾಗಿ ಅರಿತಿಲ್ಲ. ದುರ್ಬಲ ಸಂಘಗಳು ಔದ್ಯೋಗಿಕ ಸಂಬಂಧಗಳ ವಿಷಯದಲ್ಲಿ ಹೆಚ್ಚಾಗಿ ಸರ್ಕಾರವನ್ನೇ ಅವಲಂಬಿಸುವುದು ಅನಿವಾರ್ಯವಾಗಿದೆ.

**ಕಾರ್ಮಿಕ ಸಂಘಗಳು ಮತ್ತು ವೇತನಗಳು:** ಕಾರ್ಮಿಕರಿಗೆ ಉತ್ತಮ ಕೂಲಿ ಸಿಗುವಂತೆ ಮಾಡುವುದು ಕಾರ್ಮಿಕ ಸಂಘಗಳ ಮುಖ್ಯ ಉದ್ದೇಶಗಳಲ್ಲೊಂದು. ಕಾರ್ಮಿಕರ ಸಾಮೂಹಿಕ ಚೌಕಾಸಿ ಶಕ್ತಿಯನ್ನು ಸುಧಾರಿಸಿ, ಕಾರ್ಮಿಕ ಸಂಘಗಳು ಕಾರ್ಮಿಕರ ಕೂಲಿ ಹೆಚ್ಚುವಂತೆ ಮಾಡುತ್ತಿವೆ. ಕೂಲಿಯ ವಿಷಯದಲ್ಲಿ ಕಾರ್ಮಿಕ ಸಂಘಗಳ ಪಾತ್ರ ಮತ್ತು ಪ್ರಯೋಜನವನ್ನು ಕುರಿತು ಪ್ರಮುಖ ಅಭಿಜಾತ ಅರ್ಥಶಾಸ್ತ್ರಜ್ಞರು ತುಂಬ ತೀಕ್ಷ್ಣವಾಗಿ ವಾದಿಸಿದ್ದಾರೆ. ಕಾರ್ಮಿಕರಿಗೆ ಹೆಚ್ಚು ಕೂಲಿ ನೀಡುವುದರಿಂದ, ಉದ್ಯಮಗಳ ಲಾಭ ತಗ್ಗುವುದರಿಂದ ಅವು ಉತ್ಪಾದನೆ ತಗ್ಗಿಸುತ್ತವೆ. ಇದರಿಂದ ಕಾರ್ಮಿಕರಿಗೆ ಬೇಡಿಕೆ ತಗ್ಗುತ್ತದೆ. ನಿರುದ್ಯೋಗ ಇಲ್ಲವೇ ಕೂಲಿಯ ಇಳಿತಾಯ–ಇದು ಕಾರ್ಮಿಕರು ಎದುರಿಸಬೇಕಾಗಿ ಬರುವ ಉಭಯ ಸಂಕಟ. ಆದ್ದರಿಂದ ಕೂಲಿ ಶಾಶ್ವತವಾಗಿ ಇರುವಂತೆ ಕಾರ್ಮಿಕ ಸಂಘಗಳು ಮಾಡಲಾರವೆಂಬುದು ಪ್ರಾಚೀನ ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಆದರೆ ಈ ಮಾತಿನಲ್ಲಿ ಸತ್ಯಾಂಶವಿಲ್ಲ. ಸಾಮೂಹಿಕ ಚೌಕಾಸಿಯ ವಿಧಾನದಿಂದ ಮಾಲಿಕ – ಕಾರ್ಮಿಕ ಹೀಗೆ

ಉಭಯ ಪಕ್ಷಗಳ ಹಿತಗಳನ್ನೂ ಸಾಧಿಸಬಹುದು. ಕಾರ್ಮಿಕರ ಸೀಮಾಂತ ಉತ್ಪಾದಕತೆಯನ್ನು ಹೆಚ್ಚಿಸುವುದರಿಂದ, ಉದ್ಯಮದ ಆಧುನಿಕ ಸಲಕರಣೆಗಳನ್ನು ಮತ್ತು ಸಂಘಟನೆಗಳನ್ನು ಉಪಯೋಗಿಸುವುದರಿಂದ ಕಾರ್ಮಿಕರಲ್ಲಿ ಧೈರ್ಯ, ಸ್ಥೈರ್ಯ, ಪ್ರಾಮಾಣಿಕತೆ, ಶಿಕ್ಷಣ ಮತ್ತು ತರಬೇತಿ–ಇವು ವರ್ಧಿಸುವ ಹಾಗೆ ಮಾಡುವುದರಿಂದ, ಕಾರ್ಮಿಕರ ಸರಬರಾಜನ್ನು ನಿಯಂತ್ರಣಗೊಳಿಸುವುದರಿಂದ, ಕಾರ್ಮಿಕರ ಕಾರ್ಯದಕ್ಷತೆಯನ್ನು ಹೆಚ್ಚಿಸುವುದರಿಂದ ಉದ್ಯಮದ ಲಾಭದ ಇಳಿತಾಯವನ್ನು ತಡೆಗಟ್ಟಬಹುದು.

**ಅಂತಾರಾಷ್ಟ್ರೀಯ ಸಂಘಟನೆ:** ವಿವಿಧ ರಾಷ್ಟ್ರಗಳ ದೊಡ್ಡ ಕಾರ್ಮಿಕ ಸಂಘಟನೆಗಳು ಸಡಿಲವಾದ ಅಂತರರಾಷ್ಟ್ರೀಯ ಸಂಘಗಳ ಮೂಲಕ ಪರಸ್ಪರ ಸಹವರ್ತನೆ ಸಾಧಿಸಲು ಯತ್ನಿಸುತ್ತಿವೆ. 1901ರಲ್ಲಿ ಸ್ಥಾಪಿತವಾದ ಕಾರ್ಮಿಕ ಸಂಘಗಳ ಅಂತರರಾಷ್ಟ್ರೀಯ ಮಹಾಸಂಘ (ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್), 1939ರಲ್ಲಿ ಅಂತ್ಯ ಹೊಂದಿತು. 1945ರಲ್ಲಿ ಲಂಡನಿನಲ್ಲಿ ಕಾರ್ಮಿಕ ಸಂಘಗಳ ಜಾಗತಿಕ ಮಹಾಸಂಘ (ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್) ಸ್ಥಾಪಿಸಲಾಯಿತು. ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರ ಕಾರ್ಮಿಕ ಸಂಘಗಳ ನಡುವಣ ಭಿನ್ನಾಭಿಪ್ರಾಯಕ್ಕೆ ಈ ಸಂಘ ತುತ್ತಾಯಿತು. 1949ರಲ್ಲಿ ಲಂಡನ್ನಿನಲ್ಲಿ ಸ್ಥಾಪಿತವಾದ ಕಾರ್ಮಿಕಸಂಘಗಳ ಮಹಾಸಂಘ ಕಮ್ಯೂನಿಸ್ಟೇತರ ಸಂಘಗಳ ಸಂಘಟನೆ (ಇಂಟರ್‌ನ್ಯಾಷನಲ್ ಕಾನ್ಫೆಡರೇಷನ್ ಆಫ್ ಫ್ರೀ ಟ್ರೇಡ್ ಯೂನಿಯನ್ಸ್). (ಡಿ.ಎಸ್.ಆರ್.)

**ಕಾರ್ಮಿಕ ಸಂಘಟನೆ ಮತ್ತು ಕಲ್ಯಾಣ :** ಭಾರತದಲ್ಲಿ ಕಾರ್ಮಿಕ ಸಂಘಟನೆ ಪ್ರಾರಂಭವಾದದ್ದು ಬಹಳ ವಿಳಂಬವಾಗಿ. ಕರ್ನಾಟಕ ರಾಜ್ಯದಲ್ಲೂ ಅದು ಪ್ರಾರಂಭವಾದದ್ದು ತಡವಾಗಿಯೇ. ಇಂದು ಸಂಘಟನೆ ಹಾಗೂ ಕಲ್ಯಾಣಕಾರ್ಯಗಳು ಬಿರುಸಿನಿಂದ ನಡೆಯುತ್ತಿವೆ. ಒಳ್ಳೆಯ ತಳಹದಿಯ ಮೇಲೆ ವ್ಯವಸ್ಥಿತವಾಗುತ್ತಿವೆ. ಕಳೆದ ಶತಮಾನದಿಂದ ಏಳ್ಗೆಗೊಳ್ಳುತ್ತಿರುವ ಈ ಚಟುವಟಿಕೆಯ ಇತಿವೃತ್ತ ಮತ್ತು ಅದರ ಇಂದಿನ ಸ್ಥಿತಿಗಳು ಕರ್ನಾಟಕದ ಆರ್ಥಿಕತೆಯ ಅಧ್ಯಯನದ ಒಂದು ಮುಖ್ಯಾಂಗವಾಗಿದೆ. ಇದಕ್ಕೆ ಸಂಬಂಧಿಸಿದ ವಿಷಯಗಳ ಸಮೀಕ್ಷೆಯನ್ನು ಈ ಲೇಖನದಲ್ಲಿ ಇತಿಹಾಸ, ಬೆಳವಣಿಗೆ, ಆರ್ಥಿಕ ಸ್ಥಿತಿಗತಿ, ರಚನೆ ಮತ್ತು ಆಡಳಿತ, ಕಾರ್ಮಿಕ ಕಲ್ಯಾಣ ಎಂಬ ವಿಭಾಗಗಳಲ್ಲಿ ವಿಂಗಡಿಸಿಕೊಡಲಾಗಿದೆ.

**ಇತಿಹಾಸ:** ಕರ್ನಾಟಕದಲ್ಲಿ 1920ರವರೆಗೂ ಯಾವ ಕಾರ್ಮಿಕ ಸಂಘಗಳೂ ಸ್ಥಾಪನೆಗೊಂಡಿರಲಿಲ್ಲ. 1884ರಲ್ಲಿ ಮೊತ್ತಮೊದಲು ಬೆಂಗಳೂರಿನಲ್ಲಿ ಒಂದು ದೊಡ್ಡ ಹತ್ತಿಬಟ್ಟೆ ಗಿರಣಿ ಸ್ಥಾಪಿತವಾದರೂ ಅಲ್ಲಿ ಕಾರ್ಮಿಕ ಸಂಘಟನೆಯ ಚಟುವಟಿಕೆಗಳೇ ಇರಲಿಲ್ಲ. 1920ರಲ್ಲಿ ಕಾರ್ಮಿಕರ ಒಂದು ದುರ್ಬಲ ಪ್ರತಿಕ್ರಿಯೆ ರೂಪುಗೊಂಡಿತು. ಇದೂ ಒಂದು ಸುಸಂಘಟಿತ ಚಟುವಟಿಕೆಯ ರೂಪವನ್ನೇನೂ ತಳೆಯಲಿಲ್ಲ. ಅದು ಉದ್ಯಮಿಗಳ ವಿರುದ್ಧ ಕೇವಲ ತಾತ್ಕಾಲಿಕ ಪ್ರತಿಭಟನೆಯಾಗಿತ್ತು. ಕರ್ನಾಟಕದ ವಿಳಂಬಿತ ಕೈಗಾರಿಕೀಕರಣ ಪ್ರಾರಂಭ ಕಾಲದಲ್ಲಿ ಕಾರ್ಮಿಕರ ಪೂರೈಕೆಯಲ್ಲಿ ವಿರಳತೆಯಿದ್ದುದರಿಂದ ಉದ್ಯಮಶೀಲರು ಅವರಿಗೆ ಬೇಕಾದ ಎಲ್ಲ ಅನುಕೂಲಗಳನ್ನೂ ಒದಗಿಸಲು ತಯಾರಿದ್ದರು. ಕಾರ್ಮಿಕರಲ್ಲಿ ಭಾಷೆ, ವ್ಯವಹಾರ, ನಡವಳಿಕೆ ಇತ್ಯಾದಿಗಳಲ್ಲಿ ವಿಭಿನ್ನತೆಯಿತ್ತು. ಕಾರ್ಮಿಕರ ಸಂಘಟನೆಗೆ ಅನುಕೂಲಕರವಾದ ಕಾನೂನುಗಳಿರಲಿಲ್ಲ, ಆದ್ದರಿಂದ ಸಂಘಟನೆ ಬೆಳೆಯಲಿಲ್ಲ. 1926ರಲ್ಲಿ ಕೇಂದ್ರದ ಕಾರ್ಮಿಕ ಸಂಘಗಳ ಕಾನೂನು ಜಾರಿಗೆ ಬಂತು. ಸುಮಾರು ಆ ಕಾಲದಲ್ಲಿ ಕರ್ನಾಟಕದಲ್ಲೂ ಕಾರ್ಮಿಕ ಸಂಘಟನೆಯ ಪ್ರಯತ್ನಗಳು ನಡೆದವು. 1926 ರಿಂದ 1942ರವರೆಗೆ ಅನೇಕ ಜವಳಿ ಗಿರಣಿಗಳಲ್ಲಿ ಕಾರ್ಮಿಕ ಸಂಘಗಳು ದಿವಂಗತ ಕೆ.ಟಿ.ಭಾಷ್ಯಂ ಅವರಂತಹ ರಾಜಕೀಯ ಮುಂದಾಳುಗಳ ಪ್ರಯತ್ನದ ಫಲವಾಗಿ ಅಸ್ತಿತ್ವಕ್ಕೆ ಬಂದುವು. ಆದರೆ ಈ ಸಂಘಗಳೆಲ್ಲವೂ 1924ರವರೆಗೆ ಕಾನೂನಿನ ಬೆಂಬಲವಿಲ್ಲದೆ ಸಮಾಜಸೇವಾ ಸಂಸ್ಥೆಗಳಂತೆ ಕೆಲಸ ಮಾಡುತ್ತಿದ್ದು ಸಹಕಾರ ಸಂಘಗಳ ಕಾನೂನಿನ ವ್ಯಾಪ್ತಿಯಲ್ಲಿ ನೋಂದಣಿಯಾದ ಸಂಸ್ಥೆಗಳಾಗಿದ್ದುವು. 1942ರಲ್ಲಿ ಮೈಸೂರು ರಾಜ್ಯದ ಕಾರ್ಮಿಕ ಸಂಘಗಳ ನಿಬಂಧನೆಗಳು ಎಂಬ ಹೆಸರಿನಲ್ಲಿ ರಾಜ್ಯಕ್ಕೆ ಅನ್ವಯಿಸಿದ 1926ರ ಕೇಂದ್ರದ ಕಾರ್ಮಿಕ ಸಂಘಗಳ ಕಾನೂನಿಂದ ಕರ್ನಾಟಕದಲ್ಲಿ ಕಾರ್ಮಿಕರ ಸಂಘಗಳ ಬೆಳವಣಿಗೆಗೆ ಅಂಕುರಾರ್ಪಣವಾಯಿತು. ಹಿಂದಿದ್ದ ಸಂಸ್ಥೆಗಳು ಕಾರ್ಮಿಕ ಸಂಘಗಳಾದುವು.

ಕರ್ನಾಟಕದ ಕಾರ್ಮಿಕ ಸಂಘಗಳು ಎರಡು ಮಹಾಯುದ್ಧಗಳ ಮಧ್ಯಂತರದಲ್ಲಿ ತಮ್ಮ ಸದಸ್ಯರುಗಳ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಹಾಗೂ ತಮಗೆ ಕಾನೂನಿನ ಮಾನ್ಯತೆಯನ್ನು ಪಡೆದುಕೊಳ್ಳುವುದಕ್ಕೆ ಚಳುವಳಿಗಳನ್ನು ನಡೆಸಿದವು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಹಾಗೂ ಅದು ಮುಕ್ತಾಯವಾದ ತರುವಾಯ ರಾಜ್ಯದಲ್ಲಿನ ಕೈಗಾರಿಕಾ ಸಂಸ್ಥೆಗಳು ರಾಷ್ಟ್ರದ ಇತರ ಪ್ರಾಂತ್ಯಗಳ ಸಂಸ್ಥೆಗಳಂತೆ ಅಧಿಕ ಲಾಭ ಗಳಿಸಿದರೂ ಅವುಗಳ ಮಾಲೀಕರು ತಮ್ಮ ಕಾರ್ಮಿಕರಿಗೆ ಹೆಚ್ಚಿನ ವೇತನವನ್ನಾಗಲೀ ಬೋನಸ್ಸನ್ನಾಗಲೀ ಕೊಡಲು ನಿರಾಕರಿಸಿದುದು ಮತ್ತು ಇದೇ ಕಾಲದಲ್ಲಿ ಪದಾರ್ಥಗಳ ಬೆಲೆಗಳು ತೀವ್ರವಾಗಿ ಏರಿ ಕಾರ್ಮಿಕರ ಸ್ಥಿತಿಗತಿಗಳು ಹದಗೆಟ್ಟುದು ಮುಂತಾದ ಕಾರಣಗಳಿಂದ ಅಸಮಾಧಾನಗೊಂಡ ರಾಜ್ಯದ ಕಾರ್ಮಿಕರು 1920ರಲ್ಲಿ ಒಟ್ಟುಗೂಡಿ ಮುಷ್ಕರ ಪ್ರಾರಂಭಿಸಿದರು. ಬೆಂಗಳೂರಿನ ಬಿನ್ನಿಮಿಲ್ ಕೆಲಸಗಾರರಿಗೇ ಆಡಳಿತದವರು ಬೋನಸ್ಸನ್ನು ಕೊಡಲು ನಿರಾಕರಿಸಿದುದರಿಂದ ಭಾಷ್ಯಂರವರ ನೇತೃತ್ವದಲ್ಲಿ ಅವರು ಒಂದು ಮುಷ್ಕರ ಪ್ರಾರಂಭಿಸಿದರು. ಇದರಿಂದ ಬೆಂಗಳೂರಿನ ಇತರ ಮುಖ್ಯ ಜವಳಿ ಗಿರಣಿಗಳಲ್ಲೂ ಮಿನರ್ವ ಮಿಲ್ ಮತ್ತು ಕೃಷ್ಣ ಮಿಲ್‌ಗಳಲ್ಲೂ ಕಾರ್ಮಿಕ ಸಂಘಗಳು ಪ್ರಾರಂಭವಾದುವು. ರಾಜ್ಯದ ಜವಳಿ ಗಿರಣಿ ಕಾರ್ಮಿಕರೆಲ್ಲರೂ ಒಟ್ಟುಗೂಡಿ ತಮ್ಮದೇ ಆದ ಒಂದು ಪ್ರಬಲ ಕಾರ್ಮಿಕ ಸಂಘವನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯಕ್ಕೆ ಮನ್ನಣೆ ದೊರಕಿದಂತಾಯಿತು.

ಆದರೂ 1926 ರಿಂದ 1942ರವರೆಗಿನ ಕಾಲ ಕರ್ನಾಟಕದ ಕಾರ್ಮಿಕ ಸಂಘಟನೆಯ ದೃಷ್ಟಿಯಿಂದ ಬಲು ತ್ರಾಸದಾಯಕ ಕಾಲವಾಗಿತ್ತೆಂದೇ ಹೇಳಬೇಕು. ಈ ಕಾಲದಲ್ಲಿ ಕೈಗಾರಿಕಾ ಹಿಂಜರಿತ ಉಂಟಾಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕರ ಉಚ್ಚಾಟನೆ ವ್ಯಾಪಕವಾಗಿ ಪ್ರಾರಂಭವಾಯಿತು. ಇದರಿಂದ ಕೈಗಾರಿಕಾ ಮುಷ್ಕರಗಳು ಮತ್ತು ಬೀಗಮುದ್ರೆಗಳು ಪ್ರಾರಂಭವಾದುವಲ್ಲದೆ, ಕಾರ್ಮಿಕರಿಗೆ ಹಿಂಜರಿತದ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೇಡಿಕೆಯಿರಲಿಲ್ಲವಾಗಿ ಮುಷ್ಕರಗಳಲ್ಲಿ ಕಾರ್ಮಿಕರು ಅಪಜಯಗಳಿಸಬೇಕಾಯಿತು. ಈ ಕಾರಣದಿಂದ ಕೈಗಾರಿಕೆಯ ಮಟ್ಟದಲ್ಲಿ ಕಾರ್ಮಿಕರ ಪ್ರಬಲ ಸಂಘಟನೆಯ ಆವಶ್ಯಕತೆಯ ತೀವ್ರತೆಯ ಅರಿವಾಗಿ ಬೆಂಗಳೂರು ಜವಳಿ ಕಾರ್ಮಿಕರ ಸಂಘ 1929 ರಲ್ಲಿ ಕೆ.ಟಿ. ಭಾಷ್ಯಂ ಅವರ ನಾಯಕತ್ವದಲ್ಲಿ ಸ್ಥಾಪಿಸಲ್ಪಟ್ಟಿತು. ಕ್ರಮೇಣ ಈ ಸಂಘ ಪ್ರಬಲವಾಯಿತು. ಸರ್ಕಾರದ ಗಮನವನ್ನು ಸೆಳೆಯಿತು. ಈ ಸಂಘದ ಬೆಂಬಲದಿಂದ ಬಿನ್ನಿ ಮಿಲ್ ಮತ್ತು ಮಿನರ್ವ ಮಿಲ್ ಕಾರ್ಮಿಕರು ಬೇರೆ ಬೇರೆಯಾಗಿ ಮುಷ್ಕರಗಳನ್ನು ಹೂಡಿ ಜಯಗಳಿಸಿದರು. ಈ ಎರಡು ಮುಷ್ಕರಗಳಲ್ಲೂ ಮೊದಲು ಕಾರ್ಮಿಕರ ಮುಂದಾಳುಗಳನ್ನು ದಸ್ತಗಿರಿ ಮಾಡಿ ಮುಷ್ಕರಗಳನ್ನು ನಿಷ್ಕ್ರಿಯಗೊಳಿಸಲು ಸರ್ಕಾರ ಪ್ರಯತ್ನಿಸಿತಾದರೂ ಅಂತಿಮವಾಗಿ ಕಾರ್ಮಿಕರೇ ಜಯಗಳಿಸಿದರು. ಹೀಗೆ ಬೆಂಗಳೂರು ಜವಳಿ ಗಿರಣಿ ಕಾರ್ಮಿಕರ ಸಂಘದ ಚಟುವಟಿಕೆಗಳು ಗಮನಾರ್ಹವಾಗಿ ಬೆಳೆದುದರಿಂದ ಸರ್ಕಾರ ಇದರ ಪ್ರಭಾವವನ್ನು ಮೊಟಕುಗೊಳಿಸಲು ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕೆಂಬ ಅಂಶವನ್ನು ಮನಗಂಡು 1940ರಲ್ಲಿ ಕಾರ್ಮಿಕರ ಸಂಘಗಳಿಗೆ ಮಾನ್ಯತೆಯನ್ನು ಕೊಡುವುದರ ಬಗ್ಗೆ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿಯನ್ನು ಏರ್ಪಡಿಸುವುದರ ಬಗ್ಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡಬೇಕೆಂದು ಕೋರಿ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯ ಸಲಹೆಗಳಿಗನುಗುಣವಾಗಿ 1942ರಲ್ಲಿ ಮೈಸೂರು ಕಾರ್ಮಿಕರ ಸಂಘ ನಿಬಂಧನ ಎಂಬ ಕಾನೂನನ್ನು ಜಾರಿಗೆ ತಂದಿತು. ಈ ಕಾನೂನಿನ ಪ್ರಕಾರ, ಕೈಗಾರಿಕಾ ಮಟ್ಟದಲ್ಲಿ ಕಾರ್ಮಿಕರ ಸಂಘಸ್ಥಾಪನೆ ಬಹಿಷ್ಕರಿಸಲು ಕೈಗಾರಿಕಾಘಟಕದ ಮಟ್ಟದಲ್ಲಿ ಕಾರ್ಮಿಕ ಸಂಘ ಸ್ಥಾಪಿಸಲ್ಪಡುವುದಕ್ಕೆ ಪ್ರೋತ್ಸಾಹವನ್ನು ನೀಡಿತು. ಹೀಗೆ ಘಟಕಗಳ ಮಟ್ಟದಲ್ಲಿ ಸ್ಥಾಪಿಸಲ್ಪಟ್ಟ ಕಾರ್ಮಿಕ ಸಂಘಗಳು ನೋಂದಾವಣೆ ಮಾಡಿಸಿಕೊಳ್ಳಬೇಕೆಂಬ ನಿಯಮವನ್ನು ಜಾರಿಗೆತರಲಾಯಿತು.

1942ರ ಮೈಸೂರು ಕಾರ್ಮಿಕರ ಸಂಘಗಳ ನಿಬಂಧನೆ ಜಾರಿಗೆ ಬಂದುದರಿಂದ ಕಾರ್ಮಿಕ ಸಂಘಗಳ ಮೇಲೆ ಅನೇಕ ಅನಪೇಕ್ಷಣೀಯ ಪರಿಣಾಮಗಳುಂಟಾದುವು. ಕೈಗಾರಿಕಾಮಟ್ಟದಲ್ಲಿ ಸ್ಥಾಪಿತವಾದ ಬೆಂಗಳೂರು ಜವಳಿ ಕೈಗಾರಿಕೆಯ ಕಾರ್ಮಿಕರ ಸಂಘ ಅವಸಾನಕ್ಕೀಡಾಯಿತು. ಈ ಕಾರಣದಿಂದಲೇ ಮುಷ್ಕರಗಳಲ್ಲಿ ಕಾರ್ಮಿಕರು ಅಪಜಯವನ್ನನುಭವಿಸಬೇಕಾಯಿತು. ಕಾರ್ಮಿಕರಲ್ಲಿ ಒಡಕುಂಟಾಯಿತು. ಅವರ ಸಂಘಟನಾಶಕ್ತಿ ದುರ್ಬಲಗೊಂಡಿತು. ಆದರೆ ಕೈಗಾರಿಕಾಘಟಕಗಳ ಮಟ್ಟದಲ್ಲಿ ಕಾರ್ಮಿಕರ ಸಂಘಗಳು ಹೆಚ್ಚು ಪ್ರಮಾಣದಲ್ಲಿ ಸ್ಥಾಪಿತವಾದುವು. ಉದಾಹರಣೆಗೆ ಕೋಲಾರದ ಚಿನ್ನದಗಣಿ ಹಾಗೂ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳು ಸ್ಥಾಪಿತವಾದುವು. ಆದರೆ ರಾಜ್ಯದಲ್ಲಿ ಜವಳಿ ಅಂದು ಬಹುಮುಖ್ಯ ಕೈಗಾರಿಕೆಯಾಗಿದ್ದುದರಿಂದ ಆ ಕೈಗಾರಿಕೆಯ ಘಟಕಗಳಲ್ಲೂ ಕಾರ್ಮಿಕ ಸಂಘಗಳು ಹೆಚ್ಚಿನ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂದುವು. ಎರಡನೆಯ ಮಹಾಯುದ್ಧದಿಂದೀಚೆಗೆ, ಅದರಲ್ಲೂ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಎಂಜಿನಿಯರಿಂಗ್ ಕೈಗಾರಿಕೆ ಅಭಿವೃದ್ಧಿಗೊಂಡು ಆ ಕೈಗಾರಿಕೆಯ ಘಟಕಗಳಲ್ಲಿ ಕಾರ್ಮಿಕ ಸಂಘಟನೆಯ ಚಟುವಟಿಕೆಗಳು ಪ್ರಾರಂಭವಾದುವು. ಉದಾಹರಣೆಗೆ ಮೈಕೋ, ರೆಮ್ಕೋ, ಸರ್ಕಾರಿ ವಿದ್ಯುತ್ ಕಾರ್ಖಾನೆ, ಕೇಂದ್ರ ಸರ್ಕಾರದ ವತಿಯಿಂದ ಸ್ಥಾಪಿಸಲ್ಪಟ್ಟ ಹಿಂದೂಸ್ತಾನ್ ಏರೋನಾಟಿಕ್ಸ್, ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಇತ್ಯಾದಿ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳು ಸ್ಥಾಪಿತವಾದುವು.

ಹೀಗೆ ಘಟಕಗಳ ಮಟ್ಟದಲ್ಲಿ ಬೆಳೆದ ಕಾರ್ಮಿಕ ಸಂಘಗಳಲ್ಲಿ ಜವಳಿ ಕೈಗಾರಿಕೆಯಲ್ಲಿನ ಕಾರ್ಮಿಕ ಸಂಘಗಳಂಥ ಮೊದಲು ಅಭಿವೃದ್ಧಿಗೆ ಬಂದ, ಕಾರ್ಮಿಕ ಸಂಘಗಳ ಚಟುವಟಿಕೆಗಳಿಗೆ ರಾಜಕೀಯ ಧುರೀಣರು ಮಾರ್ಗದರ್ಶನ ನೀಡುತ್ತಿದ್ದರು. ಎಂಜಿನಿಯರಿಂಗ್ ಕೈಗಾರಿಕೆಯ ಘಟಕಗಳ ಕಾರ್ಮಿಕ ಸಂಘಗಳಿಗೆ ಪ್ರಾರಂಭದಲ್ಲಿ ಕಾರ್ಮಿಕರೇ ಮುಂದಾಳತ್ವ ವಹಿಸಿದ್ದರು. ಆದರೆ ಈ ಮುಂದಾಳುಗಳು ಕೊನೆಗೆ ಉದ್ಯಮಿಗಳ ವ್ಯಗ್ರದೃಷ್ಟಿಗೆ ಬಿದ್ದು ತೊಂದರೆಗೀಡಾದ್ದರಿಂದ ಮುಂದೆ ಈ ಘಟಕಗಳಲ್ಲೂ ಹೊರಗಿನವರ

ನಾಯಕತ್ವ ಬೇರೂರಿತ್ತು. ಇದರಿಂದ ಕಾರ್ಮಿಕ ಸಂಘಗಳಲ್ಲಿಯೇ ತಾತ್ತ್ವಿಕ ಭೇದಭಾವ, ನಿರ್ದಿಷ್ಟ ರಾಜಕೀಯ ಪಕ್ಷಗಳತ್ತ ಒಲವು ಉಂಟಾಗಿ ಅವುಗಳಲ್ಲಿ ಪರಸ್ಪರ ವೈಮನಸ್ಸಿಗೆ ಕಾರಣವಾಯಿತು. ಇದರಿಂದ ಸಂಘಟನೆಗೆ ತೊಡಕುಂಟಾಯಿತು.

ರಾಜ್ಯದಲ್ಲಿ ಕಾರ್ಮಿಕ ಸಂಘಗಳು ಮತ್ತು ಅವುಗಳ ಸದಸ್ಯರುಗಳ ಸಂಖ್ಯೆ ಉದ್ದಕ್ಕೂ ಅಧಿಕಗೊಳ್ಳುತ್ತಿದೆ. ಇದರಿಂದ ಕರ್ನಾಟಕದ ಕಾರ್ಮಿಕ ಸಂಘಟನೆ ಸಾಂಖ್ಯಿಕವಾಗಿ ಪ್ರಗತಿಯನ್ನು ಹೊಂದಿದೆಯೆಂದು ಹೇಳಬಹುದು. ಸಾಂಖ್ಯಿಕ ಪ್ರಗತಿಯೊಂದೇ ಕಾರ್ಮಿಕ ಸಂಘಟನೆಯ ಬಲದ ಸೂಚಕವೇನಲ್ಲ. ಕಾರ್ಮಿಕ ಉದ್ಯೋಗಿಗಳ ಸಂಖ್ಯೆಗೂ ಮತ್ತು ಕಾರ್ಮಿಕ ಸಂಘಗಳ ಸದಸ್ಯರ ಸಂಖ್ಯೆಗೂ ಇರುವ ಸಂಬಂಧ ಕುರಿತ ಅಂಕಿಗಳ ಅಭಾವ ಇದೆ. ವರದಿ ನೀಡುತ್ತಿರುವ ಕಾರ್ಮಿಕ ಸಂಘಗಳ ಸಂಖ್ಯೆ ಮತ್ತು ಅವುಗಳ ಸದಸ್ಯತ್ವ ಸುಮಾರು 1970ರವರೆಗೆ ಹೆಚ್ಚಾಗುತ್ತಿದ್ದರೂ ಸರಾಸರಿ ಸದಸ್ಯತ್ವ ಕಡಿಮೆಯಾಗುತ್ತಿತ್ತು. ಈಚೆಗೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ.

ಭಾರತದ ಇತರ ರಾಜ್ಯಗಳಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಕಾರ್ಮಿಕ ಸಂಘಟನೆಯಲ್ಲಿ ಅನೇಕ ಸಮಸ್ಯೆಗಳು ಕಾಣುತ್ತವೆ. ಮುಖ್ಯವಾಗಿ ಕಾರ್ಮಿಕ ಸಂಘಗಳ ಸಂಖ್ಯಾಬಾಹುಳ್ಯ, ಅವುಗಳಲ್ಲಿನ ಪರಸ್ಪರ ದ್ವೇಷ ಮತ್ತು ಸ್ಪರ್ಧೆ, ಹೊರಗಿನವರ ನಾಯಕತ್ವ, ಕಾರ್ಮಿಕ ಸಂಘಗಳಿಗೆ ರಾಜಕೀಯದಲ್ಲಿನ ಆಸಕ್ತಿ, ಇದರಿಂದ ಉಂಟಾದ ರಾಜಕೀಯ ಪಕ್ಷಗಳೊಡನೆ ಕಾರ್ಮಿಕ ತಾತ್ತ್ವಿಕ ಸಂಬಂಧ, ದುರ್ಬಲ ಆರ್ಥಿಕ ಸ್ಥಿತಿ ಮುಂತಾದ ಸಮಸ್ಯೆಗಳು ರಾಜ್ಯದಲ್ಲಿನ ಕಾರ್ಮಿಕ ಸಂಘಗಳನ್ನು ದುರ್ಬಲಗೊಳಿಸಿವೆ.

ರಾಜ್ಯದಲ್ಲಿ ಕಾರ್ಮಿಕ ಸಂಘಗಳು ಸಾಮಾನ್ಯವಾಗಿ ಕೈಗಾರಿಕಾವಾರು ಸಂಘಗಳಾಗಿರುತ್ತವೆ. ಆಯಾ ಉದ್ಯಮಘಟಕದಲ್ಲಿ ಕೆಲಸ ಮಾಡುವ ಎಲ್ಲ ವಿಧವಾದ ಕಾರ್ಮಿಕರೂ ಕುಶಲ ಕೆಲಸಗಾರರೂ ಅರೆಕುಶಲರೂ ಹಾಗೂ ಕುಶಲರಲ್ಲದ ಸಾಮಾನ್ಯ ಕೆಲಸಗಾರರೂ – ಈ ಸಂಘಗಳ ಸದಸ್ಯರಾಗಿರುತ್ತಾರೆ. ಉದಾಹರಣೆಗಾಗಿ ಎಚ್.ಎಂ.ಟಿ. ಕಾರ್ಮಿಕರ ಸಂಘ, ಮೈಕೋ ಕೆಲಸಗಾರರ ಸಂಘ ಇಂಥ ಕಾರ್ಮಿಕ ಸಂಘಗಳ ಜೊತೆಗೆ ವೃತ್ತಿ ಸಂಘಗಳೂ ಇವೆ. ಉದಾ: ಕರಣಿಕರ ಸಂಘ, ಕರ್ನಾಟಕ ರಾಜ್ಯ ಸಾರಿಗೆ ನೌಕರರ ಸಂಘ ಐ.ಟಿ.ಐ. ಡ್ರೈವರುಗಳ ಸಂಘ ಇತ್ಯಾದಿ. ಇವು ಒಂದೊಂದು ವೃತ್ತಿಗೆ ಸೇರಿದ ಕಾರ್ಮಿಕ ಸಂಘಗಳಾಗಿರುತ್ತವೆ. ಇವು ರಾಜ್ಯದಲ್ಲಿ ವಿರಳ.

**ರಚನೆ ಮತ್ತು ಆಡಳಿತ:** ಕಾರ್ಮಿಕ ಸಂಘಗಳ ರಚನೆ ಭಾರತದ ಇತರ ರಾಜ್ಯಗಳಲ್ಲಿರುವಂತೆ ಒಂದು ಪಿರಮಿಡ್ಡಿನ ಆಕಾರ ಹೊಂದಿದೆ. ಉದ್ಯಮ ಘಟಕಗಳಲ್ಲಿನ ಕಾರ್ಮಿಕ ಸಂಘಗಳು ಕೆಳ ಅಂತಸ್ತಿನ ಸಂಘಗಳು. ಅವುಗಳು ಪ್ರಾಥಮಿಕ ಸಂಘಗಳು. ಇದರ ಮೇಲಿನ ಅಂತಸ್ತಿನಲ್ಲಿ ರಾಜ್ಯಮಟ್ಟದ ಕಾರ್ಮಿಕ ಸಂಘಗಳಿವೆ. ಈ ಸಂಘಗಳು ಪರಸ್ಪರ ಸಂಬಂಧ ಕಲ್ಪಿಸುತ್ತವೆ. ಇವಲ್ಲದೆ ಕೆಲವು ಮಧ್ಯಮ ಮಟ್ಟದ ಜಿಲ್ಲಾವಾರು ಕಾರ್ಮಿಕ ಸಂಘಗಳೂ ಇವೆ (ಉದಾಹರಣೆಗೆ ಬೆಂಗಳೂರು ಜಿಲ್ಲೆಯ ಆಟೋಮೊಬೈಲ್ ಕೆಲಸಗಾರರ ಸಂಘ). ಇವು ಸ್ವತಂತ್ರ ಸಂಸ್ಥೆಗಳಾಗಿವೆ. ಇವು ಯಾವ ಸಂಯುಕ್ತ ರಚನೆಯ ಭಾಗವೂ ಆಗಿರುವುದಿಲ್ಲ. ಯಾವ ಕೇಂದ್ರ ಸಂಯುಕ್ತ ಸಂಘಗಳ ಜೊತೆಯಲ್ಲಿಯೂ ಸಂಬಂಧವಿಟ್ಟು ಕೊಂಡಿರುವುದಿಲ್ಲ. ಇನ್ನೂ ಕೆಲವು ಸ್ವತಂತ್ರ ಸಂಘಗಳಿವೆ. ಅವು ಯಾವ ಕೇಂದ್ರ ಅಥವಾ ರಾಷ್ಟ್ರೀಯ ಸಂಯುಕ್ತ ಕಾರ್ಮಿಕ ಸಂಘಗಳಿಗೂ ಸೇರಿರುವುದಿಲ್ಲ.

ಕರ್ನಾಟಕದಲ್ಲಿ ಅನೇಕ ಕಾರ್ಮಿಕ ಸಂಘಗಳು ವಿವಿಧ ರಾಷ್ಟ್ರೀಯ ಸಂಯುಕ್ತ ಸಂಘಗಳ ಜೊತೆ ಸಂಬಂಧ ಇಟ್ಟುಕೊಂಡಿವೆ. ರಾಜ್ಯದ ಕಾರ್ಮಿಕ ಸಂಘಗಳ ಸಂಖ್ಯೆಯಲ್ಲಿ ಹೆಚ್ಚು ಭಾಗ ಯಾವ ಕೇಂದ್ರ ಸಂಯುಕ್ತ ಸಂಘಕ್ಕೂ ಸೇರದೆ ಅಥವಾ ಸಂಬಂಧವಿಟ್ಟುಕೊಳ್ಳದೆ ಸ್ವತಂತ್ರ ಸಂಸ್ಥೆಗಳಾಗಿ ಉಳಿದಿವೆ. ಆದರೆ ಕೇಂದ್ರ ಸಂಯುಕ್ತ ಸಂಘಗಳ ಜೊತೆ ಸಂಬಂಧವಿಟ್ಟುಕೊಂಡಿರುವ ಸಂಘಗಳ ಸದಸ್ಯರೇ ಅಧಿಕವಾಗಿದ್ದಾರೆ.

ಭಾರತ ರಾಷ್ಟ್ರೀಯ ಕಾರ್ಮಿಕ ಸಂಘಗಳ ಒಕ್ಕೂಟ ಕಾಂಗ್ರೆಸ್ ಪಕ್ಷದ ಬೆಂಬಲವನ್ನು ಹೊಂದಿದ್ದರೆ ಅಖಿಲ ಭಾರತ ಕಾರ್ಮಿಕರ ಸಂಘಗಳು ಕಾಂಗ್ರೆಸ್ (ಐಟಿಯುಸಿ) ಕಮ್ಯೂನಿಸ್ಟ್ ಪಕ್ಷದ ಒಲವನ್ನು ಹೊಂದಿದೆ. ಅದೇ ರೀತಿ ಹಿಂದ್ ಮಜ್‌ದೂರ್ ಸಭಾ ಮತ್ತು ಸಂಯುಕ್ತ ಕಾರ್ಮಿಕ ಸಂಘಗಳ ಕಾಂಗ್ರೆಸ್ (ಯುನೈಟೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್) ಕ್ರಮವಾಗಿ ಸಮಾಜವಾದಿ ಪಕ್ಷ ಮತ್ತು ವಾಮಪಂಥೀಯರ ಪಕ್ಷದ ಬೆಂಬಲವನ್ನು ಪಡೆದಿವೆ. ಇತ್ತೀಚೆಗೆ ಮಾರ್ಕ್ಸಿಸ್ಟ್ ಪಕ್ಷದ ಬೆಂಬಲವನ್ನು ಪಡೆದಿರುವ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಎಂಬ ಕೇಂದ್ರ ಸಂಯುಕ್ತ ಸಂಘವೂ ಬೆಳೆಯುತ್ತಿದೆ. 1980ರಲ್ಲಿ 1636 ಕಾರ್ಮಿಕ ಸಂಘಗಳಿದ್ದರೆ, 1999ರಲ್ಲಿ ಇವುಗಳ ಸಂಖ್ಯೆ 3905. ಇದು ಬೆಳೆಯುತ್ತಿರುವ ಕಾರ್ಮಿಕ ಸಂಘಟನೆಯ ಜಾಲಕ್ಕೂ ಮತ್ತು ಉದ್ಯೋಗಗಳ ಹೆಚ್ಚಳಕ್ಕೂ ಸಾಕ್ಷಿ.

ಕರ್ನಾಟಕ ರಾಜ್ಯದ ಕಾರ್ಮಿಕ ಸಂಘಗಳು ಕಾರ್ಮಿಕ ಸಂಘದ ಎಲ್ಲ ಸಾಮಾನ್ಯ ಕಾರ್ಯಗಳನ್ನೂ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆ. ಉದಾಹರಣೆಗೆ, ಅವು ತಮ್ಮ ತಮ್ಮ ಸದಸ್ಯರುಗಳ ಹಿತಸಾಧನೆಗೋಸ್ಕರ ಮಾಲೀಕರೊಡನೆ ಕಾರ್ಮಿಕರ ವೇತನ, ಬೋನಸ್ಸು, ಉದ್ಯೋಗ ಮುಂತಾದವುಗಳನ್ನು ಉತ್ತಮಪಡಿಸಲು ಹೋರಾಟ ನಡೆಸುತ್ತವೆ. ಅನಿವಾರ್ಯವಾದರೆ ಮುಷ್ಕರಗಳನ್ನೂ ಘೇರಾವೊಗಳನ್ನೂ ಹೂಡಲು ಹಿಂಜರಿದಿಲ್ಲ. ಸಾರ್ವಜನಿಕ ಹಾಗೂ ಖಾಸಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕ ಸಂಘಗಳು ತಮ್ಮ ಮಾಲೀಕರನ್ನು ಒಳ್ಳೆಯ ಕೈಗಾರಿಕಾ ಸಂಬಂಧವೇರ್ಪಡಿಸುವ ದೃಷ್ಟಿಯಿಂದ ತಮ್ಮೊಡನೆ ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳುವಂತೆ ಒತ್ತಾಯಪಡಿಸಿ ಜಯಗಳಿಸಿವೆ. ಇದರಿಂದ ಉದ್ಯಮ ಘಟಕಗಳಲ್ಲಿ ಸಾಧ್ಯವಾದಮಟ್ಟಿಗೂ ಒಳ್ಳೆಯ ಕೈಗಾರಿಕಾ ಬಾಂಧವ್ಯವೇರ್ಪಡುವುದು ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ಒಂದೆರಡು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳು ಮಾನ್ಯತೆಯನ್ನು ಸಂಪಾದಿಸಲು ಅದುವರೆವಿಗೂ ಅನುಸರಿಸುತ್ತಿದ್ದ ಸದಸ್ಯರ ಸಂಖ್ಯಾಬಲವನ್ನು ಅವಲೋಕಿಸುವ ಪದ್ಧತಿಯನ್ನು ಕೈಬಿಟ್ಟು ಗುಪ್ತ ಮತದಾನ ಪದ್ಧತಿಯನ್ನು ಅನುಸರಿಸುವಂತೆ ಮಾಲೀಕರನ್ನು ಒತ್ತಾಯಪಡಿಸಿ ಜಯಗಳಿಸಿರುವುದು ಕರ್ನಾಟಕ ರಾಜ್ಯದ ಕಾರ್ಮಿಕರ ಬಲಯುತ ಸಂಘಟನೆಯ ಪ್ರತೀಕವಾಗಿದೆ. ಕರ್ನಾಟಕದ ಕೆಲವು ಭಾರಿ ಉದ್ಯಮಸಂಸ್ಥೆಗಳ ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವ ಯೋಜನೆಯ ಅಂಗವಾಗಿ ಜಂಟಿ ಆಡಳಿತ ಸಮಿತಿಯನ್ನು ಸ್ಥಾಪಿಸುವ ಪ್ರಯತ್ನಗಳೂ ನಡೆದಿವೆ. ಕೊನೆಯದಾಗಿ ಸರ್ಕಾರ ಮತ್ತು ಉದ್ಯಮಿಗಳ ಜೊತೆಗೆ ಕಾರ್ಮಿಕ ಸಂಘಗಳೂ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣಾಭಿವೃದ್ಧಿ ಸೌಲಭ್ಯಗಳನ್ನು ಒದಗಿಸಲು ನೆರವಾಗುತ್ತಿವೆ.

ಕರ್ನಾಟಕ ಕಾರ್ಮಿಕ ಸಂಘಗಳು ಭಾರತದ ಇತರ ರಾಜ್ಯಗಳಲ್ಲಿರುವ ಕಾರ್ಮಿಕ ಸಂಘಗಳಷ್ಟೇ ಸಬಲವಾಗಿವೆಯೆಂದು ಹೇಳಬಹುದು. ಕರ್ನಾಟಕದಲ್ಲಿ ಭಾರತದ ಇತರ ಭಾಗಗಳಲ್ಲಿರುವಂತೆ ಕಾರ್ಮಿಕ ಸಂಘಗಳು ರಾಜಕೀಯ ಪಕ್ಷಗಳ ಜೊತೆ ಸಂಬಂಧವನ್ನಿಟ್ಟುಕೊಂಡಿವೆ. ಈ ರಾಜಕೀಯ ಪಕ್ಷಗಳ ಧುರೀಣರು ಕಾರ್ಮಿಕ ಸಂಘಗಳಿಗೆ ನಾಯಕತ್ವವನ್ನು ಒದಗಿಸಿರುತ್ತಾರೆ. ಇದರಿಂದ ಕಾರ್ಮಿಕ ಸಂಘಗಳು ರಾಜಕೀಯ ಪಕ್ಷಗಳ ಸಂಪೂರ್ಣ ಬೆಂಬಲವನ್ನು ಪಡೆದಂತಾಗಿ ಬಲಯುತ ಹಾಗೂ ಒತ್ತಡ ಹೇರಬಲ್ಲ ಶಕ್ತಿ ಸಮುದಾಯಗಳಾಗಿವೆ.

ಎರಡನೆಯದಾಗಿ, ರಾಜ್ಯದಲ್ಲಿ ಕಾರ್ಮಿಕ ಸಂಘಗಳು ಕೆಲವೇ ಅನುಕೂಲಕರವಾದ ಬಿಂದುಗಳಲ್ಲಿ ಕೇಂದ್ರೀಕೃತವಾಗಿವೆ. ಉದಾಹರಣೆಗಾಗಿ, ಕಾರ್ಮಿಕ ಸಂಘಗಳು ಕೆಲವು ಅತಿಮುಖ್ಯವಾದ ಸಂಸ್ಥೆಗಳಲ್ಲಿ ಅಂದರೆ ಸರ್ವಜನೋಪಯೋಗಿ ಸಂಸ್ಥೆಗಳು, ದೇಶ ಸಂರಕ್ಷಣೆಗೆ ಸಂಬಂಧಿಸಿದ ಕೈಗಾರಿಕಾ ಸಂಸ್ಥೆಗಳು, ಆರ್ಥಿಕ ಬೆಳವಣಿಗೆಗೆ ಬೇಕಾಗುವ ಮೂಲ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕಾ ಘಟಕಗಳು ಇತ್ಯಾದಿಗಳಲ್ಲಿ ಕೇಂದ್ರೀಕೃತವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕರು ಮುಷ್ಕರಗಳನ್ನೇನಾದರೂ ಹೂಡಿ ಉತ್ಪಾದನೆ ತಡೆಗಟ್ಟಲು ಪ್ರಯತ್ನಿಸಿದರೆ ರಾಷ್ಟ್ರದ ಹಾಗೂ ರಾಜ್ಯದ ಆರ್ಥಿಕ ಬೆಳವಣಿಗೆಗೆ ಮತ್ತು ಸಾರ್ವಜನಿಕರ ಸೇವಾ ಸೌಲಭ್ಯಗಳಿಗೆ ಧಕ್ಕೆ ಒದಗುವುದರಿಂದ ಸರ್ಕಾರವೇ ಆಗಲಿ ಮಾಲೀಕರೇ ಆಗಲಿ ಈ ಕಾರ್ಮಿಕ ಸಂಘಗಳನ್ನು ಕಡೆಗಣಿಸುವಂತಿಲ್ಲದಂತಾಗಿದೆ. 1991ರಿಂದ ಈಚೆಗೆ ದೇಶದಲ್ಲಿ ತೀವ್ರವಾಗಿ ಜಾರಿಗೆ ಬಂದ ಆರ್ಥಿಕ ಉದಾರೀಕರಣ ಹಾಗೂ ಸರ್ಕಾರಿ ವಲಯದ ಉದ್ಯಮಗಳ ಖಾಸಗೀಕರಣದ ನೀತಿಯಿಂದಾಗಿ ಕಾರ್ಮಿಕರ ಕಾನೂನುಗಳನ್ನು ಪುನರ್ವಿಮರ್ಶಿಸಲಾಗುತ್ತಿವೆ. ಈ ಪ್ರವೃತ್ತಿಯ ವಿರುದ್ಧ ಕಾರ್ಮಿಕರು ಹೋರಾಟದಲ್ಲಿ ತೊಡಗಿದ್ದಾರೆ.

**ಕಾರ್ಮಿಕ ಕಲ್ಯಾಣ:** ಕಾರ್ಮಿಕ ಕಲ್ಯಾಣ ವಿಶಾಲವಾದ ಅರ್ಥದಲ್ಲಿ ಕಾರ್ಮಿಕರ ಕಲ್ಯಾಣಾಭಿವೃದ್ಧಿಗೋಸ್ಕರ ಸರ್ಕಾರ, ಉದ್ಯಮಶೀಲರು ಮತ್ತು ಕಾರ್ಮಿಕ ಸಂಘಗಳು ಹಾಗೂ ಹಲವು ದಾನಶೀಲ ಸಂಸ್ಥೆಗಳು ಕೈಗೊಳ್ಳುವ ಕಾನೂನುಬದ್ಧವಾದ ಹಾಗೂ ಸ್ವಯಂಪ್ರೇರಿತ ಕಾರ್ಯಕ್ರಮಗಳನ್ನೊಳಗೊಂಡಿರುತ್ತವೆ. ಈ ಕಾರ್ಯಕ್ರಮಗಳು ಕಾರ್ಮಿಕರ ಕಾರ್ಯದಕ್ಷತೆಯನ್ನು ಮತ್ತು ಅವರ ಜೀವನದ ಸ್ಥಿತಿಗಳನ್ನು ಉತ್ತಮಗೊಳಿಸುವ ಕ್ರಮಗಳಷ್ಟೇ ಆಗಿರದೆ ಸಾಮಾಜಿಕ ಭದ್ರತಾಕ್ರಮಗಳಾಗಿವೆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸೌಕರ್ಯಗಳನ್ನು ಮತ್ತು ಕಾರ್ಮಿಕರಿಗೆ ವಸತಿಸೌಕರ್ಯಗಳನ್ನು ಒದಗಿಸಿಕೊಡುವ ಕಾರ್ಯಕ್ರಮಗಳೂ ಆಗಿರುತ್ತವೆ. ಈ ಕಾರ್ಯಕ್ರಮಗಳೆಲ್ಲವನ್ನೂ ಅಂತಾರಾಷ್ಟ್ರೀಯ ಕಾರ್ಮಿಕ ಸಂಘವೂ ಅನುಮೋದಿಸಿ ವಿಶ್ವದ ಪ್ರತಿಯೊಂದು ಕೈಗಾರಿಕಾ ರಾಷ್ಟ್ರದಲ್ಲೂ ಅವುಗಳನ್ನು ಜಾರಿಗೆ ತರುವಂತೆ ಪ್ರೋತ್ಸಾಹಿಸುತ್ತಿದೆ.

ಬಡತನ ಅಧಿಕವಾಗಿರುವ ಮತ್ತು ಕಲ್ಯಾಣ ರಾಜ್ಯ ಸ್ಥಾಪನೆಯನ್ನು ಗುರಿಯಾಗಿಟ್ಟುಕೊಂಡಿರುವ ಭಾರತದಲ್ಲೂ ಈ ಎಲ್ಲ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳು ಜಾರಿಗೆ ಬಂದಿವೆ.

ಕರ್ನಾಟಕದಲ್ಲಿ, ಎರಡನೆಯ ಮಹಾಯುದ್ಧದ ಪೂರ್ವದಲ್ಲಿಯೇ ಕೆಲವು ಪ್ರಗತಿಪರ ಹಾಗೂ ವಿವೇಕಿ ಉದ್ದಿಮೆದಾರರು ಸ್ವಪ್ರೇರಣೆಯಿಂದಲೆ ತಮ್ಮ ಕಾರ್ಖಾನೆಗಳಲ್ಲಿ ಕೆಲವು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಈ ಸೌಲಭ್ಯಗಳು ಸಾಕಷ್ಟು ವ್ಯಾಪಕವಾಗಿಲ್ಲದಿದ್ದುದರಿಂದಲೂ ಕಾರ್ಮಿಕರ ಸಂಘಗಳು ಇವುಗಳನ್ನು ಕೈಗೊಳ್ಳಲು

ಸಾಮರ್ಥ್ಯ ಹೊಂದಿಲ್ಲದಿದ್ದುದರಿಂದಲೂ ಸರ್ಕಾರ ಮಧ್ಯೆ ಪ್ರವೇಶಿಸಬೇಕಾಯಿತು. ಅದರಂತೆ ಕೇಂದ್ರದ 1948ರ ಕಾರ್ಖಾನೆಯ ಕಾನೂನಿನ ಅನ್ವಯ ರಾಜ್ಯದಲ್ಲಿ 1950ರಿಂದ ಪ್ರತಿಯೊಬ್ಬ ಉದ್ದಿಮೆದಾರನೂ ಅನೇಕ ಸೌಲಭ್ಯಗಳನ್ನು ತನ್ನ ಕಾರ್ಖಾನೆಯಲ್ಲಿ ನೇಮಿತರಾಗಿರುವ ಕಾರ್ಮಿಕರಿಗೆ ಕಡ್ಡಾಯವಾಗಿ ಒದಗಿಸಬೇಕಾಯಿತು. ಈ ಸೌಲಭ್ಯಗಳು ಯಾವುವೆಂದರೆ ಕುಡಿಯಲು ತಂಪಾದ ಹಾಗೂ ಶುದ್ಧವಾದ ನೀರು, ಶೌಚಗೃಹ, 250ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಪ್ರತಿಯೊಂದರಲ್ಲೂ ಉಪಾಹಾರಮಂದಿರ, 50ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರಿರುವ ಪ್ರತಿಯೊಂದು ಕಾರ್ಖಾನೆಯಲ್ಲಿಯೂ ಶಿಶುವಿಹಾರ, ವಿಶ್ರಾಂತಿಗೃಹ, 150ಕ್ಕೂ ಹೆಚ್ಚು ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲಿಯೂ ಉಪಾಹಾರ ಕೋಣೆಗಳು ಇತ್ಯಾದಿ. ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ದೊಡ್ಡ ಕಾರ್ಖಾನೆಗಳಲ್ಲಿಯೂ ಆವಿ, ಹೊಗೆ ಮತ್ತು ದೂಳು ಹೊರಗೆ ಹೋಗುವಂತೆ ಸರಿಯಾದ ವ್ಯವಸ್ಥೆ, ಆಕಸ್ಮಿಕಗಳನ್ನು ತಡೆಗಟ್ಟುವ ದೃಷ್ಟಿಯಿಂದ ಯಂತ್ರಗಳಿಗೆ ಬೇಲಿ ಅಥವಾ ಕಟಕಟೆಯನ್ನು ಕಟ್ಟಿಸುವುದು, ಕಾರ್ಮಿಕರುಗಳಿಗೆ ಸುರಕ್ಷತೆಯ ವಸ್ತ್ರಗಳು, ಪಾದರಕ್ಷೆಗಳು ಮತ್ತು ಕನ್ನಡಕಗಳು ಮೊದಲಾದುವುಗಳನ್ನು ಒದಗಿಸುವುದು ಇತ್ಯಾದಿ ಸೌಲಭ್ಯಗಳೆಲ್ಲವೂ ಕಡ್ಡಾಯವಾಗಿ ಜಾರಿಗೆ ಬಂದುವು. ಕಾರ್ಖಾನೆಗಳ ಕಾಯಿದೆಗೆ ಅನುಗುಣವಾದ ನಿಯಮಗಳನ್ನು ಗಣಿ, ಪ್ಲಾಂಟೇಷನ್ ಮತ್ತು ಬಂದರುಗಳ ಕಾರ್ಮಿಕರುಗಳ ಕಲ್ಯಾಣದ ದೃಷ್ಟಿಯಿಂದ ರಾಜ್ಯದಲ್ಲಿ ಜಾರಿಗೆ ತರಲಾಯಿತು.

ಕಾರ್ಮಿಕರ ಅನಿಶ್ಚಿತತೆಯ ಪರಿಸ್ಥಿತಿಗಳನ್ನು ಎದುರಿಸಲು ನೆರವಾಗುವ ಸೌಲಭ್ಯಗಳನ್ನೊದಗಿಸುವ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ರಾಜ್ಯ ಸರ್ಕಾರ ನೌಕರರ ರಾಜ್ಯ ವಿಮಾಯೋಜನೆಯನ್ನು ಜಾರಿಗೆ ತಂದಿತು. 1958ರಲ್ಲಿ ಬೆಂಗಳೂರಿನಲ್ಲೂ 1960ರಲ್ಲಿ ಹುಬ್ಬಳ್ಳಿಯಲ್ಲೂ 1961ರಲ್ಲಿ ದಾಂಡೇಲಿಯಲ್ಲೂ ಈ ಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರಿಗೆ ಅನ್ವಯಿಸಲಾಯಿತು. ಉದ್ಯೋಗದಾತ, ಸರ್ಕಾರ ಮತ್ತು ಕಾರ್ಮಿಕರಿಂದ ಪಡೆದ ಅಂಶದಾನಗಳಿಂದ ರಚಿಸಿದ ನಿಧಿಯಿಂದ ಈ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ವಿಮಾ ಯೋಜನೆಗೆ ಒಳಪಟ್ಟು ರಾಜ್ಯದ ಕಾರ್ಮಿಕರು ಐದು ಬಗೆಯ ಸೌಲಭ್ಯಗಳನ್ನು ಇದರಿಂದ ಪಡೆಯುತ್ತಾರೆ. ಅಸ್ವಸ್ಥತಾ ಪರಿಹಾರ, ಪ್ರಸೂತಿ ಪರಿಹಾರ, ಕೆಲಸದಲ್ಲಿ ನಿರತರಾದಾಗ ಆದ ಅಂಗವಿಕಲತೆ, ಉದ್ಯೋಗಹಾನಿ ಮತ್ತು ಕಾಯಿಲೆಗಳ ಕಾಲದಲ್ಲಿ ಕಾರ್ಮಿಕರಿಗೆ ನೆರವು, ಉಚಿತ ವೈದ್ಯಕೀಯ ಚಿಕಿತ್ಸೆ ಮತ್ತು ಮರಣಹೊಂದಿದ ಕಾರ್ಮಿಕನ ಅವಲಂಬಿತರಿಗೆ ಪರಿಹಾರ – ಇವೇ ಈ ಐದು ಸೌಲಭ್ಯಗಳು. ರಾಜ್ಯದ ಎಲ್ಲ ಕೈಗಾರಿಕಾ ಕಾರ್ಮಿಕರುಗಳನ್ನು ಈ ಯೋಜನೆಯ ವ್ಯಾಪ್ತಿಗೊಳಪಡಿಸುವುದೇ ರಾಜ್ಯಸರ್ಕಾರದ ಗುರಿಯಾಯಿತು.

ಕಾಯಿದೆಗೊಳಪಡದ ಸೌಲಭ್ಯಗಳನ್ನೂ ಹಲವು ಉದ್ಯೋಗದಾತರು ಒದಗಿಸುತ್ತಿದ್ದಾರೆ. ಇವುಗಳಲ್ಲಿ ಮುಖ್ಯವಾದುವು ಉಚಿತ ವೈದ್ಯಕೀಯ ಚಿಕಿತ್ಸೆ, ಶಿಕ್ಷಣ ಮತ್ತು ಮನರಂಜನೆ. ನೌಕರರ ರಾಜ್ಯ ವಿಮಾ ವ್ಯವಸ್ಥೆಯ ಪ್ರಕಾರ ಚಿಕಿತ್ಸೆಯ ಸೌಲಭ್ಯವಿದ್ದರೂ ಕೆಲವು ಉದ್ಯಮಗಳು ತಮ್ಮವರೇ ಆದ ವೈದ್ಯರನ್ನು ನಿಯಮಿಸಿರುವುದುಂಟು. ಕಾರ್ಮಿಕರ ಮಕ್ಕಳ ಶಿಕ್ಷಣದ ವಿಷಯದಲ್ಲಿ ಅನೇಕ ಉದ್ಯಮಗಳು ಉದಾರವಾಗಿ ಧನಸಹಾಯ ನೀಡುತ್ತಿವೆ ಮತ್ತು ಕೆಲವು ಉದ್ಯಮಗಳು ತಮ್ಮವೇ ಆದ ಶಾಲೆಗಳನ್ನು ನಡೆಸುತ್ತಿವೆ. ಕಾರ್ಖಾನೆಗಳ ಪರಿಸರದಲ್ಲೇ ಕಾರ್ಮಿಕರಿಗೆ ವಸತಿಸೌಲಭ್ಯವನ್ನು ಒದಗಿಸಿಕೊಡುವುದರಲ್ಲಿ ಕೆಲವು ಉದ್ದಿಮೆದಾರರು ಸರ್ಕಾರಕ್ಕಿಂತ ಹೆಚ್ಚು ಉತ್ತಮವಾದ ಪಾತ್ರವನ್ನು ವಹಿಸಿದ್ದಾರೆ. ಬೆಂಗಳೂರಿನಲ್ಲಿ ಮತ್ತು ಇತರ ದೊಡ್ಡ ನಗರಗಳಲ್ಲಿ ಕಾರ್ಮಿಕರು ವಾಸಸ್ಥಾನದಿಂದ ಕಾರ್ಖಾನೆಗೆ ಹೋಗಿಬರಲು ಅನುಕೂಲವಾಗುವಂತೆ ಸಾರಿಗೆ ವ್ಯವಸ್ಥೆಯನ್ನು ಅನೇಕ ಕಾರ್ಖಾನೆಗಳು ಏರ್ಪಡಿಸಿವೆ. ಬೆಲೆಗಳ ತೀವ್ರ ಏರಿಕೆಯ ಕಾಲದಲ್ಲಿ ಕಾರ್ಮಿಕರಿಗೆ ಅವಶ್ಯವಾದ ಪದಾರ್ಥಗಳನ್ನು ನ್ಯಾಯ ಬೆಲೆಗಳಲ್ಲಿ ದೊರಕಿಸಲು ಅನುಕೂಲವಾಗುವಂತೆ ಬಳಕೆದಾರರ ಸಂಸ್ಥೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಿರುವುದಲ್ಲದೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದೆ. ಇದಕ್ಕೆ ಅಗತ್ಯವಾದ ಬಂಡವಾಳ, ಕಟ್ಟಡ ಹಾಗೂ ಕಾರ್ಯನಿರ್ವಹಣೆಯ ಸೌಲಭ್ಯಗಳನ್ನು ಉದ್ದಿಮೆದಾರರು ಒದಗಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣ ಸಾಧನೆಗಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದ ಒಂದು ನಿರ್ದಿಷ್ಟ ಹಣದ ಮೊತ್ತವನ್ನು ರಾಜ್ಯ ಸರ್ಕಾರ ಖರ್ಚು ಮಾಡುತ್ತಿದೆ. ಕಾರ್ಮಿಕ ಕಲ್ಯಾಣ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ. ರಾಜ್ಯದಲ್ಲಿ ಕಾರ್ಮಿಕರಿಗೆ ಹಲವು ವಾಚನಾಲಯಗಳು, ಮನರಂಜನಾ ಸೌಲಭ್ಯಗಳು, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಸೌಕರ್ಯಗಳು, ಮಹಿಳೆಯರಿಗಾಗಿ ಹೊಲಿಗೆ ತರಬೇತಿ ಕೇಂದ್ರಗಳು, ಉದ್ಯೋಗ ವಿನಿಮಯ ಕೇಂದ್ರಗಳು, ಶಾಲೆ ಬಿಡುವ ಯುವಕರು ಅವರವರ ಅಭಿರುಚಿ ಆಸಕ್ತಿಗಳಿಗೆ ಅನುಗುಣವಾಗಿ ಉದ್ಯೋಗಗಳನ್ನು ಆರಿಸಿಕೊಳ್ಳಲು ನೆರವಾಗಲು ವೃತ್ತಿಪೂರ್ವ ಮಾರ್ಗದರ್ಶನ ಘಟಕಗಳು – ಇವೇ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಇವುಗಳ ಜೊತೆಗೆ ಇನ್ನೂ ಅನೇಕ ಖಾಸಗಿ ಉದ್ಯಮಗಳಿಂದ ನಿರ್ದೇಶಿತವಾದ ಕಾರ್ಮಿಕ ಕಲ್ಯಾಣ ಕೇಂದ್ರಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಕಾರ್ಮಿಕ ಕಲ್ಯಾಣವನ್ನು ಸಾಧಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಕಾರ್ಮಿಕ ಇಲಾಖೆಯನ್ನು ಸ್ಥಾಪಿಸಿದೆ. ಅದು ಕಾರ್ಮಿಕ ಕಮಿಷನರ್‌ರ ನೇತೃತ್ವದಲ್ಲಿದ್ದು 11 ವಿಭಾಗ ಕಚೇರಿಗಳನ್ನು ಹೊಂದಿದೆ, 99 ಉಪ ವಿಭಾಗ ಕಚೇರಿಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕು ಮಟ್ಟದಲ್ಲಿ 164 ವೃತ್ತ ಕಚೇರಿಗಳಿವೆ. ಈ ಇಲಾಖೆಯ ಮುಖ್ಯ ಕಾರ್ಯಗಳೆಂದರೆ: 1 ಮುಷ್ಕರಗಳು ಆಗದಂತೆ ತಡೆಯುವುದು; ಕಾರ್ಮಿಕರು ಮತ್ತು ಒಡೆತನದ ನಡುವೆ ಉದ್ಭವಿಸುವ ಕೈಗಾರಿಕಾ ವಿವಾದಗಳನ್ನು ಸಂಧಾನದ ಮೂಲಕ ಬಗೆಹರಿಸುವುದು. 2 ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿದ ಕಾರ್ಮಿಕ ಕಾನೂನುಗಳು ಜಾರಿಯಾಗುವಂತೆ ನೋಡಿಕೊಳ್ಳುವುದು. 3 ಕನಿಷ್ಠ ವೇತನವನ್ನು ನಿಗದಿಗೊಳಿಸಿ ಅದು ಕಾರ್ಯಗತವಾಗುವಂತೆ ಮಾಡುವುದು. 4 ಕಾರ್ಮಿಕ ಕಲ್ಯಾಣ ಮಂಡಳಿಯ ಕೇಂದ್ರಗಳ ಮೂಲಕ ಕಾರ್ಮಿಕರ ಶಿಕ್ಷಣ ಅವರ ಮಕ್ಕಳ ಪೋಷಣೆ ಬಗ್ಗೆ ನಿಗಾ ಇಡುವುದು. 5 ವಿವಿಧ ವೇತನ ಮಂಡಳಿಗಳ ಶಿಫಾರಸುಗಳು ಜಾರಿಯಾಗುವಂತೆ ಮಾಡುವುದು. 6 ವಿವಿಧ ಕಾರ್ಮಿಕ ಕಲ್ಯಾಣ ಶಾಸನಗಳ ಪ್ರಯೋಜನ ಕಾರ್ಮಿಕರಿಗೆ ದೊರೆಯುವಂತೆ ಮಾಡುವುದು. 7 ವ್ಯವಸಾಯ ಮತ್ತಿತರ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ಲಭ್ಯವಾಗುವಂತೆ ಖಾತರಿಪಡಿಸುವುದು. ರಾಜ್ಯದಲ್ಲಿ 9 ಇ.ಎಸ್.ಐ. ಆಸ್ಪತ್ರೆಗಳು, 129 ಚಿಕಿತ್ಸಾಲಯಗಳು, 9 ಆಯುರ್ವೇದ ಕೇಂದ್ರಗಳು ಕಾರ್ಮಿಕರ ಆರೋಗ್ಯ ಕ್ಷೇಮಕ್ಕಾಗಿ ಸ್ಥಾಪಿತವಾಗಿವೆ (1998–99). (ಎಸ್.ಎನ್.ಎ.)

**ಕಾರ್ಮೈಕೇಲ್, ಗ್ರೇಸ್ ಎಲಿಜûಬೆತ್ ಜೆನ್ನಿಂಗ್ಸ್ :** 1867–1904. ಆಸ್ಟ್ರೇಲಿಯದ ವಿಕ್ಟೋರಿಯ ಪ್ರಾಂತ್ಯದ ಮೊದಲ ಕವಯಿತ್ರಿ. ಜೆ. ಸಿ. ಎಂಬ ಸಂಕ್ಷಿಪ್ತಾಭಿಧಾನದಿಂದ ಪ್ರಸಿದ್ಧಳಾಗಿದ್ದಾಳೆ. ಹುಟ್ಟಿದ್ದು ಬಲ್ಲಾರಟ್‌ನಲ್ಲಿ. ಮೆಲ್ಬೋರ್ನ್‌ನಲ್ಲಿ ಶಿಕ್ಷಣ ಪಡೆದರೂ ಗ್ರಾಮಾಂತರ ಪ್ರದೇಶದಲ್ಲಿ ಬೆಳೆದ ಈಕೆ ಸ್ವಾಭಾವಿಕವಾಗಿಯೇ ಅಲ್ಲಿಯ ಜೀವನದಲ್ಲಿ ಆಸಕ್ತಿ ವಹಿಸಿದ್ದಳು.

1888ರಲ್ಲಿ ಮೆಲ್ಬೋರ್ನ್ ಮಕ್ಕಳ ಆಸ್ಪತ್ರೆಯಲ್ಲಿ ದಾದಿಯ ತರಬೇತಿಗಾಗಿ ಸೇರಿದ ಈಕೆ ಆ ಅನುಭವಗಳ ಚಿತ್ರವನ್ನು ಹಾಸ್ಪಿಟಲ್ ಚಿಲ್ಡ್ರನ್ (1891) ಎಂಬ ಗ್ರಂಥದಲ್ಲಿ ಕೊಟ್ಟಿದ್ದಾಳೆ. ಗೀಲಾಂಗ್‌ನಲ್ಲಿ ಕೆಲಸಕ್ಕೆ ಸೇರಿದ ಈಕೆ ಅಲ್ಲಿಯೇ ಫ್ರಾನ್ಸಿಸ್ ಮುಲ್ಲರ್‌ನನ್ನು ವಿವಾಹವಾದಳು. ಆಸ್ಟ್ರೇಲೇಶಿಯನ್ ಪತ್ರಿಕೆಗೆ ಪದ್ಯಗಳನ್ನು ಬರೆಯುತ್ತಿದ್ದು 1895ರಲ್ಲಿ ಒಂದು ಕವನ ಸಂಕಲನವನ್ನು ಪ್ರಕಟಿಸಿದಳು. ಕೆಲಕಾಲ ದಕ್ಷಿಣ ಆಸ್ಟ್ರೇಲಿಯದಲ್ಲಿದ್ದು ಅನಂತರ ಲಂಡನ್ನಿಗೆ ಹೋಗಿ ತನ್ನ 37ನೆಯ ವಯಸ್ಸಿನಲ್ಲಿ ಅಸುನೀಗಿದಳು. ಆಗ ಈಕೆ ಬಹು ಬಡತನದಲ್ಲಿದ್ದಳು. ಈಕೆಯ ಅಭಿಮಾನಿಗಳು ಕೆಲವರು ಇವಳ ಮೂರು ಮಕ್ಕಳನ್ನು ಆಸ್ಟ್ರೇಲಿಯಕ್ಕೆ ಕರೆತಂದರು. ವಿಕ್ಟೋರಿಯ ಪ್ರಾಂತ್ಯದ ಮೊದಲ ಕವಯಿತ್ರಿಯಾಗಿ ಜನಮೆಚ್ಚುವಂತೆ ಪದ್ಯಗಳನ್ನು ಬರೆದ ಈಕೆಯ ನೆನಪಿಗಾಗಿ ಜನ್ಮಸ್ಥಳವಾದ ಬಲ್ಲಾರಟ್ ಹಾಗೂ ವಾಸಸ್ಥಳವಾದ ಆರ್ಬೋರ್ಟ್ ಪ್ರದೇಶಗಳಲ್ಲಿ ಫಲಕಗಳನ್ನು ಸ್ಥಾಪಿಸಲಾಗಿದೆ. ಲಂಡನ್ನಿನಲ್ಲಿ ಈಕೆಯ ಗೋರಿಯ ಮೇಲಿರುವ ಫಲಕದಲ್ಲಿ ಅಕೇಸಿಯ ಮರದ ಕೊಂಬೆಯ ಚಿತ್ರ ಹಾಗೂ ಆಕೆಯ ಪದ್ಯವೊಂದರ ಸಾಲುಗಳನ್ನು ಕೆತ್ತಲಾಗಿದೆ. (ಟಿ.ವಿ.ಎಸ್.)

**ಕಾರ್ಯಕಾರಣಭಾವ :** ಎಲ್ಲ ಘಟನೆಗಳ ಆಗುಹೋಗಿಗೂ ಒಂದು ಕಾರಣ ಇರಲೇಬೇಕೆಂಬ ನಿಯಮಕ್ಕೆ ಈ ಹೆಸರಿದೆ (ಕಾಸ್ಯಾಲಿಟಿ). ಕಾರಣವಿಲ್ಲದೆ ಕಾರ್ಯ ಇಲ್ಲವೆನ್ನುವುದು ತಾತ್ತ್ವಿಕವೂ ಹೌದು, ವೈಜ್ಞಾನಿಕವೂ ಹೌದು. ಇದನ್ನು ಲ್ಯಾಟಿನ್ ಭಾಷೆಯಲ್ಲಿ ಎಕ್ಸ್ ನಿಹಿಲೊ ನಿಹಿಲ್ ಫಿಟ್ ಎನ್ನುತ್ತಾರೆ. ಎಂದರೆ ಶೂನ್ಯದಿಂದ ಶೂನ್ಯವಲ್ಲದೆ ಬೇರೇನೂ ಬರಲಾರದು ಎಂದು. ಈ ಕಾರ್ಯಕಾರಣಗಳ ಬಂಧಸೂತ್ರ ಎಲ್ಲ ರೀತಿಯ ಆಕಸ್ಮಿಕತ್ವವಾದವನ್ನೂ (ಆಕ್ಸಿಡೆಂಟಲಿಸಂ) ಅಹೇತುಕವಾದವನ್ನೂ (ನಾನ್ ಕಾಸ್ಯಾಲಿಟಿ) ನಿರಾಕರಿಸುತ್ತದೆ. ಕಾರ್ಯಕಾರಣಗಳ ಅನ್ವಯ ಬಾಹ್ಯ ವಿಶ್ವದ ಒಂದು ನಿಶ್ಚಿತ ಲಕ್ಷಣವನ್ನು ಸೂಚಿಸುವುದೊಂದೇ ಅಲ್ಲದೆ, ಆಂತರಿಕವೆನಿಸುವ ಜ್ಞಾನಸಂವರ್ಧನೆಗೂ ಮಾರ್ಗವನ್ನು ಹಾಕಿಕೊಡುತ್ತದೆ. ಖಚಿತವಾದ ಜ್ಞಾನ ಸಮುದಾಯವೆನಿಸಿಕೊಳ್ಳುವ ಎಲ್ಲ ಶಾಸ್ತ್ರಗಳ ತಳಹದಿ ಎಂಬಂತೆ ಇರುವುದೇ ಈ ವಿಶ್ಲೇಷಣಾತ್ಮಕ, ಸಮನ್ವಯಾತ್ಮಕ ಕಾರ್ಯಕಾರಣಗಳ ಅನ್ವಯ.

ಈ ಕಾರ್ಯಕಾರಣಗಳು ಕೇವಲ ಭೌತಿಕವೇ, ಸ್ವಾಭಾವಿಕವೇ ಅಥವಾ ಕಾರಣವೆನ್ನುವುದು ಅಭೌತಿಕ ಅಥವಾ ಅಧ್ಯಾತ್ಮಿಕವಾಗಿರಬಹುದೇ, ಎನ್ನುವ ಜಿಜ್ಞಾಸೆಯನ್ನನುಸರಿಸಿ ಭೌತಿಕವಾದ ಮತ್ತು ಆಧ್ಯಾತ್ಮಿಕವಾದಗಳು ಹುಟ್ಟುತ್ತವೆ. ಸಾಮಾನ್ಯವಾಗಿ ವಿಜ್ಞಾನ ತರ್ಕದ ಬಲದಿಂದ, ಪ್ರತ್ಯಕ್ಷ ಪ್ರಮಾಣದ ಮೇಲೆ ಎಲ್ಲ ಘಟನೆಗಳನ್ನೂ ಭೌತಿಕ ಅಥವಾ ಪ್ರಾಕೃತಿಕವೆಂದು ನಿರ್ಣಯಿಸಲು ತೊಡಗುತ್ತದೆ. ಈ ದೃಷ್ಟಿಯಿಂದ ಕಾರಣ–ಕಾರ್ಯಗಳೆರಡೂ ಭೌತಿಕ ಪ್ರವೃತ್ತಿಗಳೆನಿಸಿಕೊಳ್ಳುತ್ತವೆ. ಇಲ್ಲಿ ಎಲ್ಲವೂ ನಿರ್ಧರಿಸಲ್ಪಡುವಂಥವಾಗಿದ್ದು ಭೌತ–ಸಾಪೇಕ್ಷವಾಗಿರುತ್ತವೆ. ಆದರೆ ಅಭೌತಕಲ್ಪನೆಗಳಲ್ಲಿ ಇವುಗಳ ವಿಶ್ಲೇಷಣೆಯೇ ಬೇರೆಯಾಗಿರಬಹುದು. ಹೇಗೆಂದರೆ ಕಾರಣವೆನ್ನುವುದು

ಅಭೌತಿಕವಾಗಿದ್ದು ಇಂದ್ರಿಯಾತೀತವಾಗಿ, ತರ್ಕ ಅಥವಾ ಅನುಮಾನಕ್ಕೂ ಸಿಗದ ಆತ್ಮಾನುಭವಕ್ಕೆ ವೇದ್ಯವಾಗುವಂಥದು ಎನ್ನುವುದನ್ನು ತತ್ತ್ವಶಾಸ್ತ್ರದ ಒಂದು ಭಾಗವಾದ ಚಿತ್ತ್ರಧಾನವಾದವೂ (ಐಡಿಯಾಲಿಸಂ) ಹಾಗೂ ಮತ್ತೊಂದು ಭಾಗವಾದ ದೈವವಿಜ್ಞಾನವೂ (ಥಿಯಿಸಂ) ಅಂಗೀಕರಿಸುತ್ತವೆ. ಇಲ್ಲಿ ಕಾರ್ಯವೆನ್ನುವುದು ಭೌತವಾಗಿದ್ದು ಕಾರಣವೆನ್ನುವುದು ಅಭೌತವಾಗಿರಬಹುದು. ಕಾರ್ಯ ಸಾಪೇಕ್ಷವಾಗಿದ್ದು ಕಾರಣ ನಿರಪೇಕ್ಷವಾಗಿರಬಹುದು. ಕಾರ್ಯಕಾರಣಗಳ ಸಂಬಂಧದಲ್ಲಿ ವಿಜ್ಞಾನಕ್ಕೂ ತತ್ತ್ವಶಾಸ್ತ್ರಕ್ಕೂ ಇರುವ ವ್ಯತ್ಯಾಸಗಳನ್ನು ಇಲ್ಲಿ ಗಮನಿಸಬಹುದು.

ಏನೇ ಇರಲಿ, ವಿಶಾಲದೃಷ್ಟಿಯಲ್ಲಿ ಕಾರ್ಯಕಾರಣಗಳ ಸಂಬಂಧ ಸಮಸ್ತ ವಿಶ್ವ, ಎಂದರೆ, ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ವರ್ಗಗಳನ್ನು ಒಂದು ರಚನೆಯಲ್ಲಿ ಕೂಡಿಸುವ ಪ್ರಯತ್ನಗಳನ್ನು ಸೂಚಿಸುತ್ತದೆ. ಈ ಸಂಬಂಧದ ವಿಚಾರದಲ್ಲಿ ಪಾಶ್ಚಾತ್ಯ ಮತ್ತು ಪೌರಸ್ತ್ಯ ದೇಶಗಳಲ್ಲೂ ವಿಪುಲವಾದ ವಿಚಾರಸಾಹಿತ್ಯ ಬೆಳೆದಿದೆ.

ಪ್ರ.ಶ.ಪೂ. ಮೂರನೆಯ ಶತಮಾನದಲ್ಲಿದ್ದ ಗ್ರೀಕ್ ತತ್ತ್ವಜ್ಞನಾದ ಅರಿಸ್ಟಾಟಲ್ ಕಾರಣ ಎನ್ನುವುದನ್ನು ವಿಶ್ಲೇಷಿಸಿ, ಅದು ನಾಲ್ಕು ಬಗೆಯಲ್ಲಿರಬಹುದು ಎಂದು ಹೇಳಿದ್ದಾನೆ: 1 ಭೌತಿಕ ಅಥವಾ ಉಪಾದಾನ (ಮೆಟೀರಿಯಲ್), 2 ನಿಮಿತ್ತ (ಎಫಿಷಿಯೆಂಟ್), 3 ರೂಪವಿಶೇಷ (ಫಾರ್ಮಲ್) ಮತ್ತು 4 ಧ್ಯೇಯ ಅಥವಾ ಅಂತಿಮ (ಫೈನಲ್). ಮೊದಲನೆಯದು, ಈ ಕಾರ್ಯಕ್ಕೆ ಅನುವುಮಾಡಿಕೊಡುವ ಮಾಧ್ಯಮವನ್ನು (ಕಲ್ಲು, ಮಣ್ಣು, ಮರ, ಲೋಹ ಇತ್ಯಾದಿ), ಎರಡನೆಯದು ಈ ಮಾಧ್ಯಮವನ್ನು ರೂಪಿಸುವ ಚೈತನ್ಯ ಅಥವಾ ಮಾನವನನ್ನು (ಕಮ್ಮಾರ, ಕಲ್ಲುಕುಟಿಕ, ಶಿಲ್ಪಿ, ಕಲಾವಿದ ಇತ್ಯಾದಿ) ಮೂರನೆಯದು ವಸ್ತು ಅಥವಾ ಘಟಕ ಯಾವ ರೂಪವನ್ನು ತಾಳಿ ಯಾವುದೋ ನಾಮದಿಂದ ವಿಶಿಷ್ಟವಾಗಿ ಗುರುತಿಸಲ್ಪಡುತ್ತದೋ ಅಂಥವನ್ನು (ಬೆಂಚು, ಕುರ್ಚಿ, ಶಿಲ್ಪ, ಒಡವೆ ಇತ್ಯಾದಿ), ನಾಲ್ಕನೆಯದು ಎಲ್ಲದರ ಹಿಂದೆ ಅಡಗಿರುವ ಉದ್ದೇಶ ಅಥವಾ ಧ್ಯೇಯಗಳನ್ನು ಸೂಚಿಸುತ್ತವೆ. ಅರಿಸ್ಟಾಟಲನ ಹಿಂದಿನ ವಿಚಾರವಂತರು ಈ ನಾಲ್ಕರಲ್ಲಿ ಯಾವುದೋ ಒಂದೊಂದನ್ನು ಮಾತ್ರ ಪರಿಗಣಿಸಿದ್ದರೆ, ಈತ ಕಾರಣವೆಂಬುದರ ಪೂರ್ಣ ಅರ್ಥಕ್ಕೆ ಇವೆಲ್ಲ ಸಹಾಯ ಮಾಡುತ್ತವೆಂದು ವಿಶದಪಡಿಸುತ್ತಾನೆ. ಪ್ರತಿಯೊಂದು ವಸ್ತುವಿಗೂ (ಆಬ್ಜಕ್ಟ್, ಇವೆಂಟ್) ಈ ನಾಲ್ಕು ಅಂಶಗಳಿರುವುದನ್ನು ನಾವು ಗಮನಿಸಬಹುದು. ವಿಜ್ಞಾನಿಗಳಿಗೂ ತಾತ್ತ್ವಿಕರಿಗೂ ಇರುವ ವಿಚಾರಭೇದ ಕಾರ್ಯ ಅಥವಾ ಕಾರಣವೆಂಬುದರ ಸ್ವಭಾವವೇನೆಂಬುದನ್ನು ಕುರಿತುದೇ ಆಗಿದೆ.

ಕಾರಣವೆನ್ನುವುದನ್ನು ಒಂದು ಕಾರ್ಯಕ್ಕೆ ಎಡೆಮಾಡಿಕೊಡುವ ಒಂದು ಶಕ್ತಿ (ಪೊಟೆನ್ಸಿ, ಎನರ್ಜಿ) ಎಂದೆನಿಸಿಕೊಂಡರೆ, ಈ ಶಕ್ತಿಯ ರೂಪಾಂತರವೇ ಕಾರ್ಯವಾಗುತ್ತದೆ ಎನ್ನಬಹುದು. ಇವೆರಡರ ಸಂಬಂಧ ನಿಕಟ ಮತ್ತು ಅನ್ಯೋನ್ಯ (ಇಂಟಿಮೇಟ್), ಅಗತ್ಯ, ಸಮೀಪ ಆಗಿದ್ದರೆ ಮಾತ್ರ ಕಾರಣದಿಂದ ಕಾರ್ಯವೆನ್ನುವುದು ಸಿದ್ಧಿಸುತ್ತದೆ. ಇಲ್ಲಿ ಕಾರ್ಯವೆನ್ನುವುದರ ಪೂರ್ವಭಾವಿ (ಆಂಟೆಸಿಡೆಂಟ್) ಸ್ಥಿತಿಯಾಗಿರಬೇಕಲ್ಲದೆ, ತದನಂತರದ ಸ್ಥಿತಿಯಾಗಿರುವುದಿಲ್ಲ. ಇದು ಕಾಲದ (ಟೆಂಪೊರಲ್) ಪೂರ್ವಭಾವವೋ ತಾರ್ಕಿಕವಾದ ಪೂರ್ವಭಾವವೋ ಎನ್ನುವುದರಲ್ಲಿ ಜಿಜ್ಞಾಸೆಯಿದೆ. ಕಾಲದ ವಿಚಾರದಲ್ಲಿ ಕಾರಣ ಪೂರ್ವಸ್ಥಿತಿ ಎನ್ನುವುದಾದರೆ, ಅವೆರಡರ ಅಂತರ ಎಷ್ಟೆಂಬ ಪ್ರಶ್ನೆ ಏಳುತ್ತದೆ. ಈ ಅಂತರ ಕಡಿಮೆಯಾದಷ್ಟೂ ಕಾರ್ಯಕಾರಣ ಸಂಬಂಧ ಖಚಿತಗೊಳ್ಳುವುದೊಂದೇ ಅಲ್ಲದೆ ಅವೆರಡಕ್ಕೂ ಯಾವ ರೀತಿಯ ಭಿನ್ನತೆಯೂ ಇಲ್ಲವೆಂದಾಗುತ್ತದೆ. ಅದು ಏಕೈಕವಾಗಿದ್ದು ವಸ್ತು, ಘಟನೆ ಇತ್ಯಾದಿಗಳನ್ನು ನೋಡುವ ದೃಷ್ಟಿಭೇದದಿಂದ ಅವು ಬೇರೆಯೆಂದು ತೋರುವುವಲ್ಲದೆ ವಸ್ತುತಃ ಅವುಗಳಿಗೆ ಅಂತರವಿಲ್ಲವೆಂದಾಗುತ್ತದೆ. ದೃಷ್ಟಿಭೇದದಿಂದ ನಾಮ ಬೇರೆ ಎಂದಾಗುತ್ತದೆ. ಈ ರೀತಿಯ ವಿಚಾರವಾದದಲ್ಲಿ ಕಾಲ ಮತ್ತು ವಸ್ತು ಅಥವಾ ದೇಶ ಇವುಗಳ ಪ್ರತ್ಯೇಕತೆ ನಾಶವಾಗಿ ಅದ್ವೈತದಲ್ಲಿ ಪರ್ಯವಸಾನವಾಗುತ್ತದೆ. ಈ ದೃಷ್ಟಿಯಲ್ಲಿ ಅಡಗಿರಬಹುದಾದ ದೊಡ್ಡ ತತ್ತ್ವವೇ ಆಧುನಿಕ ಕಾಲದಲ್ಲಿ ಐನ್‌ಸ್ಟೀನ್ ಎಂಬ ವಿಜ್ಞಾನಿ ಪ್ರತಿಪಾದಿಸಿರುವ ಸಾಪೇಕ್ಷತಾವಾದದಲ್ಲಿ ಬರುವ ವಸ್ತುವೆನ್ನುವುದು ಕಾಲ–ದೇಶಗಳ ನಿರಂತರ ಪ್ರವಾಹದಲ್ಲಿ ಒದಗುವ ಒಂದು ಸನ್ನಿವೇಶ (ಇವೆಂಟ್) ಎನ್ನುವ ಕಲ್ಪನೆಯಲ್ಲಿ ಅಭಿವ್ಯಕ್ತಗೊಂಡಂತೆ ತೋರುತ್ತದೆ.

ಕಾರ್ಯಕಾರಣಗಳ ಅಂತರ ಕಾಲದ ದೃಷ್ಟಿಯಿಂದ ಹೆಚ್ಚಿದಷ್ಟೂ ನಿರ್ದಿಷ್ಟವಾದ ಕಾರ್ಯಕ್ಕೆ ನಿರ್ದಿಷ್ಟವಾದ ಕಾರಣವಾವುದು ಎನ್ನುವುದನ್ನು ಸೂಚಿಸುವುದು ಕಷ್ಟವಾಗುತ್ತದೆ. ಆದ್ದರಿಂದಲೇ ಇವೆರಡರ ಮಧ್ಯೆ ಕಾಲದ ಅಂತರವೇ ಇಲ್ಲವೆನ್ನುವಂತೆ ಸಮೀಪದ ಲಕ್ಷಣವನ್ನು (ಇಮ್ಮೀಡಿಯಸಿ) ಹೇಳಿದೆ. ಅಲ್ಲದೆ, ಕಾರಣವೆನ್ನುವುದು ಅನೇಕ ಅಂಶಗಳ (ಕಂಡಿಷನ್ಸ್) ಸಮುದಾಯವಾಗಿದ್ದು, ಕಾರ್ಯದ ಸಿದ್ಧಿಗೆ ಸಾಮೀಪ್ಯ ಹೊಂದಿದ್ದರೂ ಅಗತ್ಯ ಮತ್ತು ನಿಕಟ (ನೆಸಸರಿ ಮತ್ತು ಎಸೆನ್ಷಿಯಲ್) ಸಂಬಂಧವನ್ನು ಪಡೆಯದೆ ಇರಬಹುದು. ಆದ್ದರಿಂದ ಕಾರ್ಯಕಾರಣಸಂಬಂಧವನ್ನು ನಿಕಟ, ಅಗತ್ಯ, ಸಮೀಪ ಎನ್ನುವ ಲಕ್ಷಣಗಳಿಂದ ನಿರ್ದೇಶಿಸಿದೆ. ಕಾರಣ ಕಾರ್ಯಗಳ ಮಧ್ಯದಲ್ಲಿನ ಕಾಲದ ಅಂಶಗಳನ್ನು ಗುರುತಿಸಲು ಸಾಧ್ಯವಾಗದಷ್ಟು ಅವುಗಳ ಸಂಬಂಧ ಹತ್ತಿರವಿರುವುದರಿಂದ ಕಾರಣ ಕಾರ್ಯದ ಪೂರ್ವಸ್ಥಿತಿ ಎನ್ನುವುದನ್ನು ತರ್ಕಪ್ರಕ್ರಿಯೆ ಎಂದೇ ಗುರುತಿಸಬೇಕು. ಎಂದರೆ ಕಾರಣವೆನ್ನುವುದು ತಾರ್ಕಿಕವಾಗಿ ಕಾರ್ಯದ ಹಿನ್ನಲೆಯೆಂದೇ ಹೇಳಬೇಕಲ್ಲದೆ ಅನಂತರದ ಸ್ಥಿತಿ ಎಂದು ಹೇಳಲು ಸಾಧ್ಯವಿಲ್ಲ.

ಆದರೆ ಇಲ್ಲೊಂದು ಪ್ರಶ್ನೆ ಉದ್ಭವವಾಗುತ್ತದೆ. ಅರಿಸ್ಟಾಟಲ್ ಹೇಳುವ ಅಂತಿಮ ಕಾರಣ (ಫೈನಲ್ ಕಾಸ್) ಎನ್ನುವಂಥದು ಯಾವುದೋ ಧ್ಯೇಯ ಅಥವಾ ಆದರ್ಶವನ್ನೂ ರೂಪಗೊಳಿಸುತ್ತದೆ ಎನ್ನುವ ಮಾತು. ಈ ವಿಶೇಷ ಸಾಮಾನ್ಯವಾದ ದೃಷ್ಟಿರೂಪದ ಭೌತಿಕ ಘಟಕಗಳಿಗೆ ಅನ್ವಯವಾಗುವುದಾದರೆ ಅರ್ಥ ಸ್ಪಷ್ಟವಾಗಬಲ್ಲುದು. ಹೇಗೆಂದರೆ, ಮಣ್ಣಿನ ಮಡಕೆ ನೀರು ತುಂಬುವ ಉದ್ದೇಶದಿಂದ ರೂಪಗೊಂಡಿರುತ್ತದೆ–ಎಂದರೆ ಸರಿ. ಆದರೆ ಇದೇ ಆದರ್ಶ–ಕಾರಣವನ್ನು ಇಡೀ ವಿಶ್ವಕ್ಕೆ ಅಥವಾ ಸಮಷ್ಟಿಗೆ ಅನ್ವಯಗೊಳಿಸುವಾಗ ಪ್ರಶ್ನೆ ಕಠಿಣವಾಗುತ್ತದೆ. ಅಲ್ಲದೆ ಅರಿಸ್ಟಾಟಲನ ತತ್ತ್ವದ ಪ್ರಕಾರ ಅಣು ಅಥವಾ ಬ್ರಹ್ಮಾಂಡದ ಆದರ್ಶಕಾರಣ ದೇವರೇ ಎಂದು. ಎಂದರೆ ಈ ದೇವರೆಂಬ ಸ್ಥಿತಿ ಪ್ರತಿಯೊಂದು ಘಟಕದ ಭವಿಷ್ಯ ಎಂದಾಯಿತು. ಈ ಭವಿಷ್ಯವೆನ್ನುವುದು ಕಾಲದ ದೃಷ್ಟಿಯಿಂದ ಭವಿಷ್ಯವೋ ತಾತ್ತ್ವಿಕವಾಗಿ ಎನ್ನುವ ಜಿಜ್ಞಾಸೆ ಬರುತ್ತದೆ. ಕಾಲದ ದೃಷ್ಟಿಯಿಂದ ಯಾವ ಕಾರಣವೂ ಭವಿಷ್ಯವಾದಲ್ಲಿ ಕಾರ್ಯಕ್ಕೆ ಎಡೆಕೊಡಲಾರದೆಂದು ಮೇಲೆ ನೋಡಿದ್ದೇವೆ. ಅದು ತಾರ್ಕಿಕವಾಗಿ ಪ್ರಾಕ್‌ಸ್ಥಿತಿ ಎಂದು ತೀರ್ಮಾನಿಸಿದ್ದೇವೆ. ಇಲ್ಲೊಂದು ಜಿಜ್ಞಾಸಾಪರವಾದ ಸಂದರ್ಭ ಏರ್ಪಡುತ್ತದೆ. ತಾರ್ಕಿಕವಾದ ಪ್ರಾಕ್‌ಸ್ಥಿತಿಗೂ ತಾತ್ತ್ವಿಕವಾದ ಭವಿಷ್ಯಸ್ಥಿತಿಗೂ ಹೇಗೆ ಸಾಮಂಜಸ್ಯ ಏರ್ಪಟ್ಟೀತು? ಇಲ್ಲಿ ವಿಚಾರವಂತರ ಮುಂದೆ ಎದ್ದು ನಿಲ್ಲುವ ಸಂದಿಗ್ಧ ಹೀಗಿದೆ : ತಾರ್ಕಿಕವಾದದ್ದು ತಾತ್ತ್ವಿಕವಲ್ಲ, ತಾತ್ತ್ವಿಕವಾದದ್ದು ತಾರ್ಕಿಕವಲ್ಲ; ಈ ಪ್ರಶ್ನೆಯ ಇತ್ಯರ್ಥ ಇಲ್ಲಿ ಅನುಚಿತ.

ಮತ್ತೊಂದು ಪ್ರಶ್ನೆ. ಯಾವುದೋ ಧ್ಯೇಯ ಅಥವಾ ಆದರ್ಶ ಎಲ್ಲವನ್ನೂ ರೂಪಗೊಳಿಸುತ್ತದೆ ಎನ್ನುವಾಗ, ಈ ಆದರ್ಶ ಭವಿಷ್ಯದಲ್ಲಿದ್ದುಕೊಂಡು ಘಟಕಗಳನ್ನು ರೂಪಿಸುವಂಥದೋ ಅಥವಾ ಭೂತವಾಗಿದ್ದುಕೊಂಡು ರೂಪಗಳನ್ನು ಹೊರಚೆಲ್ಲುವಂತಹುದೋ ಎನ್ನುವುದಕ್ಕೆ ಉತ್ತರ ಹೇಳಬೇಕಾಗುತ್ತದೆ. ಈ ಎರಡನೆಯ ವೃತ್ತಿ ಮಾನಸಿಕವಾಗಿ ಅಥವಾ ತಾರ್ಕಿಕವಾಗಿ ಅಷ್ಟು ತೊಡಕು ಕೊಡುವುದಿಲ್ಲ. ಇದು ವಿಕಾಸವಾದಕ್ಕೆ ಅನುಗುಣವಾಗಿಯೇ ಇದ್ದು ಕಾರ್ಯವೆನ್ನುವುದು ಕಾರಣವೆನ್ನುವುದರ ವಿಕಾಸ, ರೂಪ ಮತ್ತು ಈ ವಿಕಾಸದ ರೂಪರೇಷಗಳು ಕಾಲಾನುವರ್ತಿಯಾಗಿ, ಅಂಶಾನುವರ್ತಿಯಾಗಿ ತಿದ್ದಿಕೊಂಡು ಹೋಗುತ್ತಲೇ ಇರುತ್ತದೆ–ಎನ್ನುವವರ ವಾದಕ್ಕೆ ಸರಿಹೊಂದುತ್ತದೆ. ಸಾಮಾನ್ಯ ಮಾನವನ ಬುದ್ಧಿಗೆ ಸಮಂಜಸವಾಗಿ ತೋರುವ ವಿವರಣೆ ಇದು. ಆದರೆ ತೊಡಕು ಬರುವುದು ಮೊದಲನೆಯದರ ವಿಚಾರವಾಗಿ. ಭವಿಷ್ಯ ಎಂದರೆ, ಈಗ ಇಲ್ಲದಿರುವುದು ಎಂದರ್ಥ. ಎಂದರೆ ಅದರ ಇರುವಿಕೆಯೇ ಮುಂದೆ ಆಗುವ, ಆಗಬಹುದಾದ ಘಟನೆ. ಎಂದರೆ ಅದು ಸಂಭೂತವೆನಿಸುವ ಒಂದು ಸ್ಥಿತಿ. ಅಂಥ ತಂತ್ರ ಕಾಲಗರ್ಭದಲ್ಲಿದ್ದರೆ ಮಾತ್ರ, ಹಿಂದಿನಿಂದ ಕಾರ್ಯಗಳೆನ್ನುವುದನ್ನು ಮುಂದೆ ಮುಂದೆ ನೂಕಬಲ್ಲದ್ದಾಗಿರುತ್ತದೆ. ಯಾವಾಗ ಅದಕ್ಕೆ ಸಂಭೂತವಾದದ್ದು ಎನ್ನಲಾಗುತ್ತದೋ ಆಗ ಅಂಥ ಸ್ಥಿತಿ ಕಾಲಗರ್ಭದಲ್ಲಿ ಇಲ್ಲದ, ಕಾಲಕ್ಕೆ ಅತೀತವಾದ ಒಂದು ಅಕಾಲಿಕವಾದ (ಸೂಪ್ರ–ಟೆಂಪೊರಲ್) ಒಂದು ಪರಿಸ್ಥಿತಿ. ಇಂಥ ಸ್ಥಿತಿ ಅಥವಾ ವಸ್ತು ಇರಬಹುದಾದರೆ ಅದು ಬುದ್ಧ್ಯತೀತವಾದ, ಅಭೌತಿಕವಾದ ಸ್ಥಿತಿಯೇ ಆಗಿರಬೇಕು. ಅದು ಅಧಿಭೌತಿಕವಾಗದಿರುವುದರಿಂದ ಅದನ್ನು ಆಧ್ಯಾತ್ಮವೆಂದೇ ಕರೆಯಬೇಕು. ಈ ಆಧ್ಯಾತ್ಮಿಕವಾದ ಆದರ್ಶ ಅಥವಾ ಧ್ಯೇಯ ಕಾಲದ ಪರಿಮಿತಿಗೆ ಸಿಗದೆ ಕಾಲದ ಪರಿಮಿತಿಯಲ್ಲಿರಬಹುದಾದ ಎಲ್ಲ ಕಾರ್ಯ–ಕಾರಣಗಳನ್ನೂ ನಿಯೋಜಿಸಿಕೊಂಡು ತನ್ನ ಕಡೆಗೆ ಎಳೆದುಕೊಳ್ಳುತ್ತದೆ. ಈ ಅಭೌತಿಕ, ಅಲೌಕಿಕ, ಅಕಾಲಿಕ ಸ್ಥಿತಿಯ ಸೆಳೆತ ಅಸ್ವಾಭಾವಿಕವಾದದ್ದು ಎಂದರೂ ಪ್ರಪಂಚದ ರಚನೆ, ನಿಮಿಷ ನಿಮಿಷದ ಚಲನೆ ಇದರ ಚಲನೆಯನ್ನೇ ಅನುಸರಿಸದ ಒಂದು ವೃತ್ತಿ ಎಂದರಿವಾಗುತ್ತದೆ. ಪ್ರಪಂಚದ ಗತಿಯಲ್ಲಿ ಈ ಹಿನ್ನಲೆ ಅಥವಾ ಮುನ್ನೆಲೆ ನಮಗೆ ಕಾಣಲೇಬೇಕು. ಆದ್ದರಿಂದ ಈ 'ಕಾಲದಲ್ಲಿ ಇಲ್ಲದ' 'ಕಾಲವನ್ನು ಮೀರಿದ' ಸ್ಥಿತಿ ಅಪ್ರಾಕೃತಿಕವಾದರೂ ಅತಾತ್ತ್ವಿಕವೆಂದು ಕಂಡುಬರುವುದಿಲ್ಲ. ವಸ್ತುಸ್ಥಿತಿಯನ್ನು ಖಂಡ ಖಂಡವಾಗಿ ತಿಳಿಯುವ ದೃಷ್ಟಿಗೆ ಈ ಅಂತಿಮ ಕಾರಣ ಎನ್ನುವುದರ ಅರ್ಥವೂ ಆಗುವುದಿಲ್ಲ; ಅದರ ಸ್ವಭಾವದ ಲಕ್ಷಣವೂ ತಿಳಿಯುವುದಿಲ್ಲ. ವಿಶ್ವದ ಅಥವಾ ಅದಕ್ಕೂ ಮೂಲಭೂತವಾದ ಇರುವಿಕೆ ಎನ್ನುವುದರ ಪೂರ್ಣ ದೃಷ್ಟಿಗೆ ಕಾರ್ಯ–ಕಾರಣಗಳ ಸಂಬಂಧ ಕೇವಲ ದೇಶ–ಕಾಲಗಳಿಗೆ ಮಾತ್ರ ಸೀಮಿತವಾದದ್ದೆಂದು ಕಾಣದೆ, ನಿಗೂಢವಾದ ಸತ್ವದ ರಚನೆಯಲ್ಲಿ ಅಡಗಿರುವ, ಅದರ ಪರಿಧಿಯಲ್ಲಿ ಆಗಬಹುದಾದ, ಪರಿವರ್ತಿತಗೊಳ್ಳುವ, ಸಂಭಾವ್ಯವಾದ ಅನುವರ್ತನ ಎಂದು ಗೋಚರಿಸುತ್ತದೆ. ಅಂತಿಮ ಕಾರಣ ಎನ್ನುವ ಪ್ರಕ್ರಿಯೆಯನ್ನು ಕೊಟ್ಟ ಅರಿಸ್ಟಾಟಲನ ಸಿದ್ಧಾಂತದಲ್ಲಿ, ಇಷ್ಟೆಲ್ಲ ಅರ್ಥ ಇತ್ತೇ ಇಲ್ಲವೇ ಎನ್ನುವ ಪ್ರಶ್ನೆ ಬೇರೆ. ಆದರೆ ಅದರ ವಿವರಣೆ ಈ ರೀತಿ ಸ್ಫುಟಗೊಳ್ಳುತ್ತದೆ. ಭಾರತೀಯ ವೇದಾಂತ ದೃಷ್ಟಿಯಲ್ಲಿ

ನಿಸ್ಸಂದೇಹವಾಗಿ ಈ ಅಂತಿಮ ಕಾರಣ ಎನ್ನುವಂಥದು ಸತ್, ಚಿತ್, ಆನಂದ ಎಂಬ ಪದಗಳಿಂದ ನಿರ್ವಚಿಸುವ ಪರಬ್ರಹ್ಮ ವಸ್ತು. ಕಾರ್ಯ ಕಾರಣಗಳಾಗಿ ತೋರುವ ಭೂತ, ಭವತ್, ಭವಿಷ್ಯತ್ ವಸ್ತುಗಳಿಗೂ ಆ ಪರಬ್ರಹ್ಮ ವಸ್ತುಬುನಾದಿ; ತ್ರಿಕಾಲಾತೀತವಾದ, ಅನಾದಿ ಮತ್ತು ಅನಂತವಾದ ಭೂಮ ತತ್ತ್ವ (ಇನ್‌ಫಿನಿಟಿ).

ಈಗ ಮತ್ತೊಂದು ವಿಚಾರ. ಹೇಗೆ ಕಾರಣವೆಂಬ ಶಕ್ತಿ ಕಾರ್ಯವೆಂಬುದರಲ್ಲಿ ಪರ್ಯವಸಾನವಾಗುತ್ತದೆ ಅಥವಾ ಕಾರ್ಯವಾಗಿ ಪರಿವರ್ತನೆಗೊಳ್ಳುತ್ತದೆ ಎನ್ನುವುದರಲ್ಲಿ ಅವೆರಡರ ನಿಕಟ ಸಂಬಂಧವನ್ನು ಗ್ರಹಿಸಬಹುದೋ ಹಾಗೆಯೇ ಅವೆರಡರ ನಡುವೆ ಇರುವ ಶಕ್ತಿ ಪ್ರಮಾಣದಲ್ಲಿ ಸಾಮ್ಯವಿದೆ ಎನ್ನಬಹುದು. ಎಂದರೆ ಕಾರ್ಯ ರೂಪಗೊಳ್ಳಲು ಆವಶ್ಯಕವಾಗುವ ಶಕ್ತಿಯ ನಿಕ್ಷೇಪ ಕಾರಣವಾಗಿದ್ದು, ಅದಕ್ಕೆ ಪ್ರಮಾಣ ಪಟ್ಟಷ್ಟೇ ಕಾರ್ಯವೆನ್ನುವುದು ಕಾರ್ಯಗತವಾಗುತ್ತದೆ. ಎಂದರೆ, ಕಾರಣ–ಕಾರ್ಯಗಳ ನಡುವೆ ಇರುವ ಶಕ್ತಿಯ ಪ್ರಮಾಣ ಸರಿಸಮಾನವಾಗಿರುತ್ತದೆ. ಕಾರಣದ ಶಕ್ತಿ ಹೆಚ್ಚಿದ್ದು, ಕಾರ್ಯದಲ್ಲಿ ಅದು ಪರ್ಯವಸಾನವಾಗುವಾಗ ಶಕ್ತಿ ವ್ಯಯವಾಗದೆ, ಕಾರ್ಯರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಹಾಗೆಯೇ ಕಾರಣದ ಶಕ್ತಿ ಕಡಿಮೆಯಾಗಿದ್ದು ಕಾರ್ಯ ರೂಪಕ್ಕೆ ಬಂದಾಗ ಅದು ವರ್ಧಿಸುವುದಿಲ್ಲ. ಕಾರಣ–ಕಾರ್ಯಗಳ ಈ ಅನ್ಯೋನ್ಯ ಶಕ್ತಿ ಪ್ರಮಾಣದಲ್ಲಿ ನಿಕಟ ತೂಕಕ್ಕೆ ಶಕ್ತಿ–ಸಂಗ್ರಹ ಎನ್ನುತ್ತಾರೆ. ಇದನ್ನೇ ಒಂದು ನಿಯಮರೂಪದಲ್ಲಿ ಹೇಳುವಾಗ ಶಕ್ತಿ–ಸಂಗ್ರಹ–ನಿಯಮ ಎನ್ನುತ್ತಾರೆ. ಈ ನಿಯಮದ ಪ್ರಕಾರ ಕಾರಣ ಕಾರ್ಯಗಳ ಪ್ರಮಾಣದಲ್ಲಿ ಯಾವ ಅಂತರವೂ ಇರುವುದಿಲ್ಲ.

ಒಂದು ಕಾರ್ಯಕ್ಕೆ ಅನೇಕ ಕಾರಣಗಳು ಇರಬಹುದೇ ಎನ್ನುವುದು ಮತ್ತೊಂದು ಪ್ರಶ್ನೆ. ಇದು ನಿಜವಾದಲ್ಲಿ ಕಾರಣಗಳನ್ನು ನಿರ್ದಿಷ್ಟವಾಗಿ ಹುಡುಕಲು ಸಾಧ್ಯವಾಗುವುದಿಲ್ಲ. ಅಲ್ಲದೆ, ವಿಜ್ಞಾನದೃಷ್ಟಿಯಿಂದ, ಭೌತಿಕ ಕ್ಷೇತ್ರಕ್ಕೆ ಸಾಪೇಕ್ಷವಾದಂತೆ, ಸರಿಯೂ ಆಗಲಾರದು. ಒಂದು ಸಂದರ್ಭದಲ್ಲಿ A ಎನ್ನುವುದು B ಎನ್ನುವ ಕಾರ್ಯಕ್ಕೆ ಎಡೆಮಾಡಿಕೊಟ್ಟರೆ, ಅದೇ B ಮತ್ತೊಮ್ಮೆ C ಇಂದ ಇಲ್ಲವೆ D ಇಂದ ಉತ್ಪನ್ನವಾಗುವುದೆಂದರೆ ಕಾರ್ಯಾಕಾರಣಗಳ ಸಂಬಂಧದ ವಿಚಾರದಲ್ಲಿ ನಿಶ್ಚಿತಜ್ಞಾನಕ್ಕೆ ಸಾಧ್ಯವೇ ಇರುವುದಿಲ್ಲ. ಉದಾಹರಣೆಗೆ ಎಳ್ಳಿನಿಂದ ಎಣ್ಣೆ ತೆಗೆದಿದ್ದಾರೆ, ಮಣ್ಣಿನಿಂದಲೂ ತೆಗೆಯಬಹುದು–ಎಂದಾಗುತ್ತದೆ. ಹೀಗಾಗಲು ಭೌತಪ್ರಪಂಚದಲ್ಲಿ ಸಾಧ್ಯವಿಲ್ಲ. ಒಂದು ಕಾರ್ಯಕ್ಕೆ ಒಂದೇ ಕಾರಣ, ಒಂದು ಕಾರಣ ಸರ್ವದಾ ಒಂದೇ ಕಾರ್ಯದಲ್ಲಿ ಪರ್ಯವಸಾನಗೊಳ್ಳುತ್ತದೆ ಎನ್ನುವುದು ಕಾರ್ಯ–ಕಾರಣ ಸಂಬಂಧದಲ್ಲಿ ಮತ್ತೊಂದು ಸಾರ್ವತ್ರಿಕ ನಿಯಮ. ಪ್ರಕೃತಿ ಯಾವುದೋ ರೀತಿಯಲ್ಲಿ ನಿಯಮಬದ್ಧವಾಗಿದ್ದುಕೊಂಡು ಏಕಪ್ರಕಾರವಾಗಿಯೇ ನಡೆಯುತ್ತಿರುವ ವಸ್ತುವಿಶೇಷ ಅಥವಾ ಕ್ರಿಯಾವಿಶೇಷ. ಈ ನಿಯಮಕ್ಕೆ ಪ್ರಕೃತಿಯ ಏಕರೂಪತಾ ನಿಯಮ ಎಂದು ಕರೆಯುತ್ತಾರೆ. ಎಲ್ಲ ಕಾರ್ಯಕ್ಕೂ ನಿಶ್ಚಿತವಾದ ಕಾರಣವೊಂದಿದೆ ಎನ್ನುವ ಕಾರಣಸಾಪೇಕ್ಷ ನಿಯಮ ಮತ್ತು ಮೇಲೆ ಹೇಳಿದ ಪ್ರಕೃತಿಯ ಏಕರೂಪತಾ ನಿಯಮ–ಈ ಎರಡು ನಿಯಮಗಳನ್ನು ಆಧರಿಸಿ ಪ್ರಕೃತಿಯ ಘಟನೆಗಳ ವಿಚಾರದಲ್ಲಿ ವಿಜ್ಞಾನ ಭವಿಷ್ಯವನ್ನು ನುಡಿಯಬಲ್ಲದು. ಪ್ರಕೃತಿವಿಜ್ಞಾನ ಅಥವಾ ಭೌತವಿಜ್ಞಾನ ಕ್ಷೇತ್ರವನ್ನು ಬಿಟ್ಟು ಸಾಮಾಜಿಕ ಕ್ಷೇತ್ರದಲ್ಲಿಯಾದರೋ ಒಂದು ಕಾರ್ಯಕ್ಕೆ ವಿವಿಧ ಕಾರಣಗಳು ಇರಬಹುದೇನೋ ಎನ್ನುವ ಸಂಶಯಬರುತ್ತದೆ. ಈ ಕ್ಷೇತ್ರದಲ್ಲಿ, ಕಾರ್ಯ–ಕಾರಣಗಳ ಪರಿವೃತ್ತಕ್ಕೆ ಅವಕಾಶವಿರಬಹುದು. ಇದನ್ನೇ ಅನ್ಯೋನ್ಯ ಕಾರಣತಾವಾದ (ರೆಸಿಪ್ರೋಸಿಟಿ ಆಫ್ ಕಾಸೇಷನ್) ಎಂದು ಹೇಳುತ್ತಾರೆ. ಉದಾಹರಣೆಗೆ, ಬಡತನ ಚೌರ್ಯಕ್ಕೆ, ಚೌರ್ಯ ಬಡತನಕ್ಕೆ; ಮದ್ಯಪಾನ ಬಡತನಕ್ಕೆ, ಬಡತನ ಮದ್ಯಪಾನಕ್ಕೆ ಎಡೆಕೊಡುವಂತೆ. ಆದ್ದರಿಂದ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಸಾಮಾಜಿಕ ಕ್ಷೇತ್ರದಲ್ಲಿ ವಿಜ್ಞಾನಕ್ಷೇತ್ರದಲ್ಲಿ ಕಂಡು ಬರುವಷ್ಟು ಖಚಿತ ಜ್ಞಾನ ಸಿಗುವುದು ಕಷ್ಟ.

ಡೇವಿಡ್ ಹ್ಯೂಂ ಎಂಬ ತಾತ್ತ್ವಿಕ, ಕಾರಣ ಸಾಪೇಕ್ಷನಿಯಮಕ್ಕೆ ಸಂಬಂಧಪಟ್ಟಂತೆ ಎತ್ತಿರುವ ವಿಮರ್ಶೆಯನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಕಾರಣ–ಕಾರ್ಯಗಳ ನಡುವೆ ಯಾವ ಅಗತ್ಯವಾದ ಸಂಬಂಧವೂ ಇಲ್ಲ ಅಥವಾ ಅದನ್ನು ನಾವು ಗಮನಿಸಲಾರೆವು ಎಂದು ಆತನ ವಾದ. ಪ್ರಕೃತಿಯ ಏಕರೂಪತೆಗೆ, ಪ್ರಕೃತಿಯಲ್ಲಿನ ಕಾರ್ಯಕಾರಣಗಳ ಅನುವರ್ತನೆಗೆ ನಮಗೆ ಸಿಗುವ ಸುಳಿವು ಘಟನೆಗಳೆರಡರ ನಡುವೆ ಇರಬಹುದಾದ ನಿಕಟ ಅನುಸರಣೆ ಮಾತ್ರ. ಅವುಗಳ ಅನ್ಯೋನ್ಯ ಅನುಸರಣೆ (ಯೂನಿಫಾರಂ ಸೀಕ್ವೆನ್ಸ್) ಮಾತ್ರದಿಂದ ಅವುಗಳ ಅಗತ್ಯ ಸಂಬಂಧಸೂತ್ರ ಸಿದ್ಧಿಸುವುದಿಲ್ಲ–ಎನ್ನುತ್ತಾನೆ ಅವನು. ಅನೇಕರಿಗೆ ಹ್ಯೂಮನ ವಾದ. ಆಕರ್ಷಕವಾಗಿ ಕಂಡರೂ ಆತನ ವಿಚಾರದೃಷ್ಟಿ ಸೀಮಿತವಾದದ್ದೆಂಬುದನ್ನು ನಾವು ಗಮನಿಸಲೇಬೇಕು. ಆತನ ಪ್ರಕಾರ ಘಟನೆಗಳೆರಡರ ಆಂತರಿಕ ಸಂಬಂಧ ನಮಗೆ ಭೌತಿಕವಾಗಿ ಕಾಣುವಂತಿಲ್ಲ. ಆದ್ದರಿಂದ ಕಾಣುವಂಥ ಅನುಸರಣೆ ಮಾತ್ರ ಮುಖ್ಯ. ಈ ವಾದ ಎಲ್ಲವನ್ನೂ ಭೌತಿಕವಾಗಿ ಪ್ರತ್ಯಕ್ಷ ಪ್ರಮಾಣದ ಆಧಾರದ ಮೇಲೆಯೇ ನಿರ್ಧರಿಸುವಂತಿದೆ. ಅನೇಕ ವಿಚಾರಗಳಲ್ಲಿ ಈ ತೆರನಾದ ಭೌತಿಕ ಸಾಕ್ಷಿಗಳು ಸಿಗುವಂತಿರುವುದಿಲ್ಲ. ಸೂಕ್ಷ್ಮಪ್ರಕೃತಿಯ ಅವಸ್ಥಾಂತರಗಳೆಲ್ಲ ನಮ್ಮ ಸ್ಥೂಲದೃಷ್ಟಿಗೆ ಗೋಚರಿಸಲೇಬೇಕು ಎನ್ನುವ ತತ್ತ್ವಪ್ರಣಾಳಿಕೆ ಕೇವಲ ಮಿತವಾದದ್ದೆಂದು ಮಾತ್ರ ಇಲ್ಲಿ ಹೇಳಿ, ಹ್ಯೂಮನ ಸಿದ್ಧಾಂತ ಸಾರ್ವತ್ರಿಕವಾಗಿ ಅನ್ವಯವಾಗಲಾರದು ಎಂದು ತೀರ್ಮಾನಿಸಬಹುದು.

ಅಣುಯುಗವೆನ್ನಲಾದ 20ನೆಯ ಶತಮಾನದಲ್ಲಿ ಕಾರಣ–ಕಾರ್ಯಗಳ ಸಿದ್ಧಾಂತಕ್ಕೆ ಸಂಬಂಧಪಟ್ಟಂತೆ ಮತ್ತೊಂದು ಹೊಸ ತರ್ಕ ಎದ್ದಿದೆ. ಎಂದರೆ ಅಣುಗರ್ಭದಲ್ಲಿ ಯಾವ ಕಾರಣ–ಕಾರ್ಯಗಳ ನಿಚ್ಚಳ ವ್ಯವಹಾರವೂ ಇರುವ ಹಾಗಿಲ್ಲ. ಕಾರಣ ಯಾವ ಕಾರಣ–ಕಾರ್ಯಗಳ ನಿಚ್ಚಳ ವ್ಯವಹಾರವೂ ಇರುವ ಹಾಗಿಲ್ಲ. ಕಾರಣವೆನ್ನುವುದು ಇಲ್ಲವೇ ಇಲ್ಲವೆಂಬಂತೆ ಅಣ್ವಂಶಗಳೆಂಬ ಎಲೆಕ್ಟ್ರಾನುಗಳು ವ್ಯವಹರಿಸುತ್ತವೆ. ಎಂದರೆ ಯಾವುದೋ ಅನಿಶ್ಚಿತತೆ ಅಲ್ಲಿ ಅಡಗಿರುವಂತೆ ತೋರುತ್ತದೆ. ಯಾದೃಚ್ಛತೆಯ ಅಥವಾ ಅಹೇತು ಪರಿಕಲ್ಪನೆಯ ಸತ್ಯತೆ ಇಲ್ಲಿ ಕಾಣುತ್ತದೆ. ಈ ಭಾವಗಳನ್ನು ಷ್ರೊಡಿಂಗರ್ ಎಂಬ ವಿಜ್ಞಾನಿ ಈ ರೀತಿ ವ್ಯಕ್ತಪಡಿಸಿದ್ದಾನೆ: ಅತ್ಯಂತ ಸೂಕ್ಷ್ಮವಾದ ಅಣ್ವಂಶಗಳು ಯಾವ ಒಂದು ನಿರ್ದಿಷ್ಟ ಪ್ರಕೃತಿನಿಯಮವನ್ನೂ ಅನುಸರಿಸದೆ ಸ್ವತಂತ್ರವಾಗಿ ವ್ಯವಹಾರಮಾಡುವಂತೆ ತೋರುತ್ತವೆ. ನಿಯಮಾವಳಿಗಳೆಲ್ಲ ಬೃಹತ್ ಪ್ರಮಾಣ ವಸ್ತುಗಳಿಗೆ ಮಾತ್ರ ಅನ್ವಯವಾಗುತ್ತದಲ್ಲದೆ, ಅಣುಪ್ರಮಾಣಕ್ಕಲ್ಲ. ಷ್ರೊಡಿಂಗರನ ಈ ಮಾತುಗಳು ಅಣ್ವಂಶವಾದ ಎಲೆಕ್ಟ್ರಾನಿನ ವರ್ತನೆಯನ್ನು ಕುರಿತದ್ದು. ಎಂದರೆ ಒಂದು ಅಣು ಎರಡು ರೀತಿಯ ವರ್ತನೆಯನ್ನು ಹೊಂದಿರುತ್ತದೆ–ಸಂಗ್ರಹಣ ಮತ್ತು ಸಂಪ್ರಸರಣ. ಒಂದೊಂದು ಅಣುವಿನ ಅಸ್ತಿತ್ವವನ್ನೂ ಈ ಎರಡು ಪ್ರವೃತ್ತಿಗಳ ಮೂಲಕವೇ ಊಹಿಸಬೇಕಾಗುತ್ತದೆ. ಅಣುಶಕ್ತಿಯನ್ನು ಸಂಗ್ರಹಣ ಮಾಡುವಾಗ ಅಣುಕೇಂದ್ರದ ಸುತ್ತ ಪರಿಭ್ರಮಣ ಮಾಡುವ ಎಲೆಕ್ಟ್ರಾನು ಒಳಪಥದಿಂದ ಹೊರಪಥಕ್ಕೆ ನೆಗೆಯುತ್ತದೆ. ಈ ನೆಗೆತಗಳಿಗೆ ಒಂದು ವಿಶಿಷ್ಟವಾದ ಗುಣವಿದೆ. ಏನೆಂದರೆ ಒಂದು ಪಥದಿಂದ ಇನ್ನೊಂದು ಪಥದಲ್ಲಿ ಕಾಣಿಸಿಕೊಳ್ಳುವಾಗ ಮಧ್ಯಂತರದ ಪ್ರದೇಶದಲ್ಲಿ ಹಾಯುವುದು ಕಾಣುವುದೇ ಇಲ್ಲ. ಮೊದಲಿದ್ದ ಪಥದಲ್ಲದು ಶೂನ್ಯಗೊಂಡು ಹೊಸ ಪಥದಲ್ಲಿ ಕಾಣಿಸಿಕೊಳ್ಳುತ್ತದೆ. ಇಷ್ಟೇ ಅಲ್ಲದೆ ಈ ನೆಗೆತಗಳು ಯಾವಾಗ ಮತ್ತು ಏಕೆ ಆಗುತ್ತವೆಂದು ನಿರ್ಧರಿಸಲು ಸಾಧ್ಯವಿಲ್ಲ. ವಿಜ್ಞಾನ ಈಗ ಮುಂದುವರಿದ ಪರಿಸ್ಥಿತಿಯಲ್ಲಿ ಈ ಪ್ರವೃತ್ತಿಗಳು ಕಾರಣರಹಿತವಾಗಿಯೇ ಆಗುತ್ತವೆಂದು ತೀರ್ಮಾನಿಸಬಹುದು. ಇದೊಂದು ಅಹೇತುಕವಾದ ಪ್ರಕೃತಿ ವೃತ್ತಿ. ಮತ್ತೊಂದು ನಿದರ್ಶನ ಹೇಸನ್‌ಬರ್ಗ್ ಎಂಬ ವಿಜ್ಞಾನಿ ಹೇಳುವ ಅನಿಶ್ಚಿತತಾಸೂತ್ರದಲ್ಲಿ ವ್ಯಕ್ತವಾಗುತ್ತದೆ. ಇದರ ಪ್ರಕಾರ ಒಂದು ಎಲೆಕ್ಟ್ರಾನಿನ ಪರಿಭ್ರಮಣಕ್ಷೇತ್ರದಲ್ಲಿ ಅದರ ನೆಲೆಯನ್ನು ನಿರ್ಧರಿಸಿದರೆ ಅದರ ವೇಗ ಅನಿರ್ದಿಷ್ಟವಾಗಿರುತ್ತದೆ. ಅದರ ವೇಗ ನಿರ್ಧಾರವಾದಲ್ಲಿ ಅದರ ನೆಲೆಯೇ ಗೊತ್ತಾಗುವುದಿಲ್ಲ. ಹೀಗಿರುವಲ್ಲಿ ಪ್ರಕೃತಿಯ ಅತ್ಯಂತ ಸೂಕ್ಷ್ಮಸ್ಥಿತಿಯಲ್ಲಿ ಅನಿಶ್ಚಿತತೆ, ಅಹೇತುಕತೆ, ಇದೃಚ್ಛತೆಗಳೇ ಇರುವಂತೆ ತೋರುತ್ತದೆ. ಇದು ವಿಜ್ಞಾನ ಕ್ಷೇತ್ರದಲ್ಲಿ ಈಗಿರುವ ಅಭಿಪ್ರಾಯ.

ಈ ವಿಚಾರವನ್ನು ಗಮನಿಸಿದಲ್ಲಿ ಈ ಮೊದಲು ಪ್ರಸ್ತಾಪ ಮಾಡಿರುವ ನಿಯಮಬದ್ಧತೆಗೂ ಇಲ್ಲಿನ ನಿಯಮರಾಹಿತ್ಯಕ್ಕೂ ಹೊಂದಾಣಿಕೆ ಬರುವ ಹಾಗೆಯೇ ಇಲ್ಲ. ಇದರ ಸಮಾಧಾನ ಏನೆಂದು ವಿಚಾರಿಸಬೇಕಾಗಿದೆ. ಕಾರ್ಯಕಾರಣಗಳ ವಿಚಾರ, ಸಾಮಾನ್ಯ ಸೂತ್ರಗಳು ನಮ್ಮ ಅನುಭವದ ಯಾವುದೋ ಕ್ಷೇತ್ರಕ್ಕೆ ಮಾತ್ರ ಸಾಪೇಕ್ಷ. ಪ್ರಕೃತಿಯ ಸೂಕ್ಷ್ಮಸ್ಥಿತಿಯಲ್ಲಿ ಕಂಡುಬರುವ ಅನಿಶ್ಚಿತತೆ ನಮ್ಮ ಬುದ್ಧಿಯ ಮಿತಿಯನ್ನು ಅಳೆಯವುದೆಂದೂ ಆ ಬುದ್ಧಿ ಬೆಳೆದಂತೆಲ್ಲ ಯಂತ್ರೋಪಕರಣಗಳು ಸೂಕ್ಷ್ಮವಾದಂತೆಲ್ಲ ಅನಿಶ್ಚಿತತೆ ಹೋಗಿ ಅಲ್ಲಿಯೂ ಒಂದು ನಿಯಮಬದ್ಧತೆ ಇರುವುದೆಂಬ ಅರಿವು ಉಂಟಾಗುವುದೆಂದೋ ಅಥವಾ ಕಾರ್ಯ–ಕಾರಣಗಳಿಗೆ ಅತೀತವಾದ ಒಂದು ಸ್ಥಿತಿ ಇರುವುದೆಂದೋ ತಿಳಿಯಬೇಕಾಗುತ್ತದೆ. ಇದು ಭಾರತೀಯ ವಿಚಾರ ದೃಷ್ಟಿಗೆ ಹತ್ತಿರಬರುವಂತಿದೆ. ವ್ಯಾವಹಾರಿಕ ನೆಲೆಯಲ್ಲಿ ವಿಜ್ಞಾನ ನಿಷ್ಠೆ ನಿಯಮಗಳನ್ನು ಹುಡುಕಬಹುದು, ಸಾಧಿಸಬಹುದು. ಆದರೆ ಅವ್ಯಾವಹಾರಿಕ ಕ್ಷೇತ್ರವೆಂಬ ಪಾರಮಾರ್ಥಿಕ ನೆಲೆಯಲ್ಲಿ ಈ ಕಾರ್ಯ ಕಾರಣಗಳು ಅನ್ವಯವಾಗಲಾರವು. ಪ್ರಕೃತಿ ಸ್ಥೂಲದೆಶೆಯನ್ನು ಬಿಟ್ಟು ಸೂಕ್ಷ್ಮದೆಶೆಯತ್ತ ತೆರಳಿದಂತೆಲ್ಲ ಅವ್ಯಾವಹಾರಿಕವಾಗಿ ಪಾರಮಾರ್ಥಿಕದ ಛಾಯೆಯಲ್ಲಿ ನುಸುಳಿಕೊಳ್ಳುವುದೆನ್ನುವುದು ಸತ್ಯವಾದಲ್ಲಿ ಅಣುಗರ್ಭದ ನಿಯಮ ಭೂಮದ ನಿಯಮವೇ ಆದೀತು. ಇಲ್ಲಿ ವಿಜ್ಞಾನಿಯ ವಿಶ್ಲೇಷಣ ದೃಷ್ಟಿಗಿಂತ ಅನುಭಾವಿಯ ತಾದಾತ್ಮ್ಯವೇ ಸತ್ಯಪ್ರತಿಷ್ಠಾನಕ್ಕೆ ಸಹಾಯಕವಾದೀತು.

ಭಾರತೀಯ ದರ್ಶನಗಳಲ್ಲಿ ಕಾರ್ಯಕಾರಣಗಳ ಸಂಬಂಧದಲ್ಲಿ ವಿಪುಲವಾದ ಜಿಜ್ಞಾಸೆ ನಡೆದಿದೆಯೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಪಾಶ್ಚಾತ್ಯ ವಿಜ್ಞಾನಿಗಳ ಲೌಕಿಕದೃಷ್ಟಿಯಂತೆಯೇ ಇಲ್ಲಿಯೂ ಕಾರ್ಯವೆಂದರೇನು, ಕಾರಣವೆಂದರೇನು, ಅವುಗಳ ನಿರ್ವಚನವೇನು, ಅವುಗಳ ಪರಸ್ಪರ ಸಂಬಂಧವೇನು ಎನ್ನುವ ವಿಚಾರದಲ್ಲಿ ಬಹಳ ವಿನಿಮಯ ನಡೆದಿದೆ. ನ್ಯಾಯದರ್ಶನದಲ್ಲಿ ಬರುವ ಪ್ರಕ್ರಿಯೆಗಳು–ಉಪಾದಾನಕಾರಣ, ನಿಮಿತ್ತ ಕಾರಣ, ಸಮುದಾಯ ಅಸಮವಾಯಿ ಕಾರಣಗಳು, ನಿಯತಪೂರ್ವವೃತ್ತಿ, ಅನ್ಯಥಾಸಿದ್ಧಿತ್ವ ಇತ್ಯಾದಿಗಳು ಪಾಶ್ಚಾತ್ಯ ತತ್ತ್ವವೇತ್ತನಾದ ಜೆ. ಎಸ್. ಮಿಲ್ಲನ ವಾದಸರಣಿಯಂತೆ ಕಂಡುಬರುತ್ತವೆ. ನೈಯ್ಯಾಯಿಕರು ಹೇಳುವ ಅಸತ್ಕಾರ್ಯವಾದ ಅಥವಾ

ಆರಂಭವಾದಂತೆಯೇ ಇತರ ದರ್ಶನಗಳಲ್ಲೂ ಕಾರ್ಯ ಕಾರಣಗಳ ಜಿಜ್ಞಾಸೆ ಇದೆ. ಬೌದ್ಧರು ಅಸತ್ಕಾರಣವಾದವನ್ನು ಎತ್ತಿ ಹಿಡಿದರೆ, ಸಾಂಖ್ಯರು ಸತ್ಕಾರ್ಯವಾದವನ್ನು ಎತ್ತಿ ಹಿಡಿಯುತ್ತಾರೆ. ಅದ್ವೈತಿಗಳು ಸತ್ಕಾರಣವಾದವನ್ನು ಹೇಳುತ್ತಾರೆ. ಮೊದಲು ಮೂರು ವಾದಗಳು ವ್ಯಾವಹಾರಿಕ ಕ್ಷೇತ್ರದಲ್ಲಿ ಒಂದೊಂದು ಅಂಶವನ್ನು ಎತ್ತಿಹಿಡಿಯುವುದಾದರೆ ಕೊನೆಯದು ಪಾರಮಾರ್ಥಿಕವಾದ ಪರಿಹಾರವನ್ನು ನೀಡುತ್ತದೆ. ಭಾರತೀಯ ವೇದಾಂತದ ದೃಷ್ಟಿಯಲ್ಲಿ ಪಾರಮಾರ್ಥಿಕವೇ ಸತ್ಯವಾದದ್ದರಿಂದ ಕಾರ್ಯಕಾರಣಗಳ ಸಂಬಂಧ ಅಲ್ಲಿ ಹೇಗೆ ಅಸಂಗತವಾಗುತ್ತದೆ ಎಂದು ಅದ್ವೈತ ಹೇಳುತ್ತದೆ.

ಉಪನಿಷತ್ ವೇದಾಂತದ ಪ್ರಕಾರ ಬ್ರಹ್ಮತತ್ತ್ವವೇ ಸಮಸ್ತ ವಿಶ್ವದ ಕಾರಣ ಮತ್ತು ಮೂಲ. ಅದು ಕಾರಣವೇ ಹೊರತು ಕಾರ್ಯ ಎಂದಿಗೂ ಅಲ್ಲ. ಅದನ್ನು ಅಕಾರಣವಾದ ಕಾರಣ ಎನ್ನುತ್ತಾರೆ. 'ಅರಿಸ್ಟಾಟಲನ ಅನ್‌ಮೂವ್ಡ್ ಮುವರ್' ಎನ್ನುವುದರ ತಾತ್ಪರ್ಯ ಇದು. ತಾನು ಅಚಲವಾಗಿ ಎಲ್ಲದರ ಚಲನೆಗೂ ಪ್ರೇರಕವಾದ ವಸ್ತು. ಇದು ಆಧ್ಯಾತ್ಮಿಕವಾದ ಕಾರಣ. ಇದನ್ನು ಪ್ರತಿಪಾದಿಸುವುದರಲ್ಲೇ ಭಾರತೀಯರ ದೃಷ್ಟಿ ವಿಶಿಷ್ಟವಾಗಿದೆ. ಅಂತಿಮ ಕಾರಣ ಎನ್ನುವುದು ಆಧ್ಯಾತ್ಮಿಕವೆನ್ನುವ ಭಾರತೀಯರ ವಿಚಾರ ದೃಷ್ಟಿ, ಪಾಶ್ಚಾತ್ಯ ವಿಜ್ಞಾನ ದೃಷ್ಟಿಗೆ ಹೊಂದಿಕೊಳ್ಳದೆ ಇರಬಹುದು. ಆದರೆ ಲೌಕಿಕ ಕ್ಷೇತ್ರದಲ್ಲಿ ಭಾರತೀಯರ ವಿಚಾರ ವಿಜ್ಞಾನ, ತರ್ಕಗಳ ಹಾದಿಯಲ್ಲೇ ನಡೆದಿದೆ ಎನ್ನುವುದನ್ನು ಮರೆಯಬಾರದು. ಅರಿಸ್ಟಾಟಲ್, ಹ್ಯೂಂ, ಮಿಲ್ ಮುಂತಾದವರ ತರ್ಕಗಳ ವಿಸ್ತೃತ ಮಾತುಗಳ ಛಾಯೆ ಇಲ್ಲೂ ಕಂಡುಬರುತ್ತದೆ. ಆದರೆ ಆಧ್ಯಾತ್ಮದ ನಿರಂತರ ಆಸರೆಯಲ್ಲಿಯೇ ಎಲ್ಲವೂ ನಿಂತಿದೆ ಎನ್ನುವ ಅನುಭಾವದ ಪರಂಪರೆ ಭಾರತೀಯರದು. ಈ ದೃಷ್ಟಿಯಲ್ಲಿ ಈ ಆಧ್ಯಾತ್ಮ-ಕಾರಣ-ವಸ್ತುವನ್ನು ಮೂರ್ತರೂಪದ ಭಗವಂತನೆಂದರೂ ಒಂದೇ ಅಮೂರ್ತರೂಪದ ಬ್ರಹ್ಮನೆಂದರೂ ಒಂದೇ, ಪ್ರಾಪಂಚಿಕ, ಪ್ರಾಕೃತಿಕ ವ್ಯವಹಾರಿಕ ಕಾರ್ಯ ಅಥವಾ ಘಟನೆಗಳನ್ನು ಈ ಆಧ್ಯಾತ್ಮದ ಮೂಲದೊಂದಿಗೆ ಸಂಬಂಧಗೊಳಿಸುವ ಭಾರತೀಯರ ಉದ್ದೇಶ ಸಾಮಾನ್ಯ ವೈಜ್ಞಾನಿಕ 'ಕಾರ್ಯ-ಕಾರಣ' ಸಂಬಂಧ ನಿರ್ದೇಶನಗಳಿಗಿಂತ ವಿಶಿಷ್ಟವಾಗಿದ್ದು, ಸೃಷ್ಟಿ, ಸ್ಥಿತಿ ಅಲ್ಲದೆ ಲಯಗಳನ್ನೂ 'ದೈವಾಂಶ'ಗಳೆಂದು ಹೇಳಿ ಅವನ್ನು ಉದಾತ್ತೀಕರಿಸುವ ಆತ್ಮದ ಹಂಬಲವನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ಈ ಆಧ್ಯಾತ್ಮಿಕ ಕಾರಣವೆನ್ನುವ ಬ್ರಹ್ಮವಸ್ತುವನ್ನು ಕಾರ್ಯಕಾರಣಗಳ ಸಾಪೇಕ್ಷತಾ ನಿರ್ಬಂಧದಿಂದ ಹೊರತಾದ ತತ್ತ್ವವೆಂದೂ ಅದು ನಿರಪೇಕ್ಷವಾದ ಕಾರಣವಸ್ತುವೆಂದು ತೋರಿಸಿರುವುದು ತತ್ತ್ವಾನುಭೂತಿಯ ಅತ್ಯುನ್ನತ ಸಾಧನೆಯೆಂದೂ ಪ್ರತಿಪಾದಿಸಿರುವುದನ್ನು ನಾವು ಗಮನಿಸಬೇಕು. (ಕೆ.ಬಿ.ಆರ್.)

**ಕಾರ್ಯಕಾರಣ ಶಾಸ್ತ್ರ :** ಗ್ರೀಕಿನಲ್ಲಿ ಈ ಶಾಸ್ತ್ರವನ್ನು ಈಟಿಯಾಲೊಜಿ ಎಂದು ಕರೆಯಲಾಗಿದೆ. ಈಟಿಯಾ ಎಂದರೆ ಕಾರಣ; ಲಾಗಾಸ್ ಎಂದರೆ ಶಾಸ್ತ್ರ. ಈಟಿಯಾಲಜಿ ಎಂದರೆ ಸಾಮಾನ್ಯವಾಗಿ ಕಾರಣವೆನ್ನುವುದರ ವಿವೇಚನೆಗೆ ಸಂಬಂಧಪಟ್ಟ ಶಾಸ್ತ್ರ ಎಂದಾಗುತ್ತದೆ.

ಆದರೆ ತತ್ತ್ವಶಾಸ್ತ್ರದಲ್ಲಾಗಲೀ ವಿಜ್ಞಾನದಲ್ಲಾಗಲೀ ಕಾರ್ಯಕಾರಣಗಳ ವಿವೇಚನೆಯನ್ನು ಈಟಿಯಾಲೊಜಿ ಎಂದು ಕರೆಯದೆ ಕಾರ್ಯಕಾರಣ ವಿಧಾನ (ಕಾಸ್ಯಾಲಿಟಿ; ಕಾಸೇಷನ್) ಎಂದು ಕರೆಯುತ್ತಾರೆ. ಈಟಿಯಾಲಜಿ ಎನ್ನುವುದು ಮೇಲಿನ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿರದೆ ವೈದ್ಯಕೀಯ ಕ್ಷೇತ್ರದಲ್ಲಿ ಮಾತ್ರ ಬಳಸಲ್ಪಟ್ಟು ರೋಗಗಳ ಹುಟ್ಟು, ಅದರ ವಿಶ್ಲೇಷಣೆ, ಅದರ ನಿವಾರಣೆಗಳಿಗೆ ಮಾತ್ರ ಅನ್ವಯಿಸುತ್ತದೆ. ಆ ಶಾಸ್ತ್ರದ ರೀತ್ಯ ಇದನ್ನು ವ್ಯಾಧಿಕಾರಣವಿಜ್ಞಾನ, ರೋಗನಿದಾನ ಎನ್ನಬಹುದು. (ಕೆ.ಬಿ.ಆರ್.)

**ಕಾರ್ಯಕಾರಿತ್ವ :** ವಿಜ್ಞಾನದ ಭಾಷೆಯಲ್ಲಿನ ಅನಿಶ್ಚಯಾರ್ಥವನ್ನು (ಆಂಬಿಗ್ಯುಟಿ) ತೆಗೆದುಹಾಕಿ, ಅದನ್ನು ಸ್ಪಷ್ಟೀಕರಿಸುವ ಉದ್ದೇಶಕ್ಕಾಗಿ ಪ್ರಾರಂಭವಾದ ಒಂದು ಆಂದೋಳನವಿದು (ಆಪರೇಷನಿಸಂ). ಯಾವುದಾದರೂ ಪದ ಅಥವಾ ತರ್ಕವಾಕ್ಯವನ್ನು ನಿಜವಾಗಿ ವೈಜ್ಞಾನಿಕವೆಂಬುದಾಗಿ ಪರಿಗಣಿಸುವುದಕ್ಕೆ ಪೂರ್ವಭಾವಿಯಾಗಿ, ಆವಶ್ಯಕವಾಗಿ ಪೂರ್ಣಗೊಳ್ಳಬೇಕಾಗಿರುವ ಕೆಲವು ನಿಯಮಗಳನ್ನು ವಿಧಿಸುವುದೇ ಕಾರ್ಯಕಾರಿತ್ವದ ಉದ್ದೇಶ.

ಜರ್ಮನಿಯ ತತ್ತ್ವಜ್ಞಾನಿಯಾದ ಲೈಬ್ನಿಟ್ಸ್‌ನ ಚಿಂತನೆಯಲ್ಲಿ ಕಾರ್ಯಕಾರಿತ್ವದ ಉಗಮವನ್ನು ಕಾಣಬಹುದು. ಎಲ್ಲ ವಿಜ್ಞಾನಗಳಿಗೂ ಅನ್ವಯವಾಗಬಲ್ಲಂಥ ಸರ್ವವ್ಯಾಪಿ ಭಾಷೆಯೊಂದು ಇರಬೇಕೆಂಬುದು ಆತನ ಸೂಚನೆಯಾಗಿತ್ತು. ಇದು ಸುಮಾರು ಮುನ್ನೂರು ವರ್ಷಗಳ ಹಿಂದಿನ ಸಲಹೆ. ಹತ್ತೊಂಬತ್ತನೆಯ ಶತಮಾನದ ತಾತ್ತ್ವಿಕ ಆಂದೋಳನಗಳಾದ ಫಲಪ್ರಮಾಣವಾದ (ಪ್ರಾಗ್ಮ್ಯಾಟಿಸಂ), ಆಗಸ್ಟ ಕಾಂತನ ಪ್ರತ್ಯಕ್ಷ ಪ್ರಮಾಣವಾದ (ಪಾಸಿಟಿವಿಸಂ) ಮತ್ತು ಬ್ರಿಟಿಷ್ ಅನುಭವೈಕವಾದ (ಎಂಪಿರಿಸಿಸಂ) ಮೊದಲಾದವು ಆಧುನಿಕ ಕಾರ್ಯಕಾರಿತ್ವದ ಬೆಳೆವಣಿಗೆಗೆ ನೆರವಾದವು. ಅನುಬಂಧನದ (ಕಂಡಿಷನಿಂಗ್) ಮೇಲೆ, ರಷ್ಯದಲ್ಲಿ, ಪಾವ್‌ಲಫ್ ಮಾಡಿದ ಕಾರ್ಯದಿಂದ ಪ್ರಾರಂಭವಾದ ವರ್ತನಾತ್ಮಕ ಸಂಶೋಧನೆಗಳು, ಕಾರ್ಯಕಾರಿತ್ವಕ್ಕೆ ಹೆಚ್ಚಿನ ಪರಿಪೋಷಕಳಾದವು. ವಾಸ್ತವಿಕತೆಯ ಸಂಜ್ಞಾನ ಯೋಗ್ಯವಾದ ವಸ್ತುವನ್ನು ಪರೀಕ್ಷಿಸಲು ಸಾಧ್ಯ ಮತ್ತು ವಾಸ್ತವಿಕ ಪರಿಣಾಮಗಳಿಗೆ ಅದು ಸಂಬಂಧಿಸಿದೆ- ಎಂದು ಮೇಲೆ ಹೆಸರಿಸಲಾದ ತತ್ತ್ವಶಾಸ್ತ್ರ ಪಂಥಗಳು ಒತ್ತಿ ಹೇಳಿದುವು. ಇದರಿಂದಾಗಿ ಊಹಾಪೋಹ ಮತ್ತು ಆಧ್ಯಾತ್ಮಶಾಸ್ತ್ರಗಳಿಗೆ (ಮೆಟಫಿಸಿಕ್ಸ್) ಪ್ರಬಲ ಪ್ರತಿಕ್ರಿಯೆ ರೂಪಗೊಂಡಿತಲ್ಲದೆ, ಘಟನೆಗಳ ಪ್ರತ್ಯಕ್ಷ ಹಾಗೂ ಪರೀಕ್ಷಾತ್ಮಕ ವೀಕ್ಷಣೆಗೆ ಪ್ರಾಮುಖ್ಯ ಬಂತು. ಈ ರೀತಿಯಲ್ಲಿ, ವಾಸ್ತವಿಕತೆಯ ಪ್ರಮುಖ ಒರೆಗಲ್ಲು ಅದರ ನಿಜತ್ವ (ವ್ಯಾಲಿಡಿಟಿ) ವಾಗಿರುತ್ತದೆಂದು ಪ್ರತಿಪಾದಿಸಿದ ಬರ್ಟ್ರೆಂಡ್ ರಸೆಲ್, ವಿಟ್‌ಜೆನ್‌ಸ್ಟೀನ್ ಮತ್ತು ಇತರರ ಪ್ರಭಾವಕ್ಕೆ ಒಳಗಾಗಿ, ಇಪ್ಪತ್ತನೆಯ ಶತಮಾನದ ತಾರ್ಕಿಕ ಪ್ರತ್ಯಕ್ಷಪ್ರಮಾಣವಾದ ಉದಯಕ್ಕೆ ಕಾರಣವಾದ ಆಂದೋಳನದ ಸ್ವಾಭಾವಿಕ ಪರಿಣಾಮವೇ ಕಾರ್ಯಕಾರಿತ್ವ ಎಂದು ಪರಿಗಣಿಸಬಹುದು.

ಭೌತವಿಜ್ಞಾನಿಯಾದ ಬ್ರಿಡ್ಜ್‌ಮನ್ 1927ರಲ್ಲಿ ಕಾರ್ಯಕಾರಿತ್ವ ತತ್ತ್ವವನ್ನು ಸ್ಪಷ್ಟವಾಗಿ ರೂಪಿಸಿದ್ದಾನೆ. ಈ ತತ್ತ್ವ ವೈಜ್ಞಾನಿಕ ಕಲ್ಪಿತಭಾವಗಳ (ಕಾನ್ಸೆಪ್ಟ್ಸ್) ಅರ್ಥಕ್ಕೆ ಸಂಬಂಧಿಸಿದೆ. ಕಲ್ಪಿತಭಾವವೊಂದರಲ್ಲಿರಬಹುದಾದ ಎಲ್ಲ ವಿಧವಾದ ಅಸಮರ್ಪಕ ಅರ್ಥಛಾಯೆಗಳನ್ನೂ ತೆಗೆದು ಹಾಕುವ ತಾರ್ಕಿಕ ವಿಧಾನವನ್ನು ಇದು ಒದಗಿಸುತ್ತದೆ. ವೈಜ್ಞಾನಿಕ ವೀಕ್ಷಣೆಯ ಆಧಾರದ ಮೇಲೆ ನಿಜವಾಗಿ ನೆಲಸಿರದ ಯಾವುದೇ ಕಲ್ಪಿತಭಾವವನ್ನಾಗಲೀ ಅದು ನಿರಾಕರಿಸುತ್ತದೆ. ಒಂದು ನಿರ್ದಿಷ್ಟ ಘಟನೆಯ ವೀಕ್ಷಣೆ ಮತ್ತು ಅಳತೆಗಳಿಗೆ ಬೇಕಾಗಿರುವ ಕಾರ್ಯಾಚರಣೆಗಳಿಗೆ (ಆಪರೇಷನ್ಸ್) ಕಲ್ಪಿತ ಭಾವವೊಂದರ ಅರ್ಥ ಸೀಮಿತವಾಗಿರುತ್ತದೆ ಎಂಬುದೇ ಕಾರ್ಯಕಾರಿತ್ವ ತತ್ತ್ವ. ಕಾರ್ಯಾಚರಣೆಗಳು ಎಂಬ ಪದದಲ್ಲಿ, ಘಟನೆಯೊಂದನ್ನು ವೀಕ್ಷಿಸಲು ಆವಶ್ಯಕವಾಗಿ ಬೇಕಾಗುವ ಹಸ್ತಾದಿ ಪ್ರಯೋಗ ಮತ್ತು ಗಣನೆಯ ವಿಧಾನಗಳೂ ಘಟನೆಗೆ ಸಂಬಂಧಿಸಿದಂತೆ, ವಿಜ್ಞಾನಿ ಕೊಡುವ ಪೂರ್ವಾಪರ ಹೇಳಿಕೆಗಳ ನಡುವೆ ಉಪಯೋಗಿಸಲಾಗುವ ತಾರ್ಕಿಕ ಮತ್ತು ಗಣನಾತ್ಮಕ ಹಂತಗಳೂ ಅಂತರ್ಗತವಾಗುತ್ತವೆ. ವೀಕ್ಷಣೆಯಲ್ಲಿರುವ ಕಾರ್ಯಾಚರಣೆಗಳ ನಿಷ್ಠುರವಾದ ವಿವರಣೆಯನ್ನು ಅವಲಂಬಿಸಿರುವ ವೈಜ್ಞಾನಿಕ ಕಲ್ಪಿತಭಾವಗಳ ಲಕ್ಷಣ ನಿರೂಪಣೆಗಳನ್ನು ಕಾರ್ಯಕಾರಿಲಕ್ಷಣ ನಿರೂಪಣೆಗಳು ಎಂದು ಕರೆಯಲಾಗಿದೆ. ವಿಜ್ಞಾನವನ್ನು ನಿಜವಾದ ವಸ್ತು ನಿಷ್ಠವಿದ್ಯೆಯನ್ನಾಗಿ ಮಾಡುವುದೇ ಅಂಥ ಲಕ್ಷಣನಿರೂಪಣೆಗಳ ಆಶಯ.

ಕಾರ್ಯಕಾರಿತ್ವ ಲಕ್ಷಣನಿರೂಪಣೆಗಳ ಸ್ವಭಾವವನ್ನು ಕೆಲವು ಉದಾಹರಣೆಗಳು ಸ್ಪಷ್ಟಪಡಿಸಬಲ್ಲವು. ಯಾವ ಕಾರ್ಯಾಚರಣೆಗಳಿಂದ ಒಂದು ವಸ್ತು ಅಳತೆ ಮಾಡಲ್ಪಟ್ಟು, ನಿಗದಿ ಮಾಡಲ್ಪಟ್ಟಿತೋ ಅವುಗಳ ಮೂಲಕವೇ ಆ ವಸ್ತುವಿನ ಉದ್ದದ ಲಕ್ಷಣ ನಿರೂಪಣೆಯನ್ನು ಕೊಡಬಹುದು. ಗಡಿಯಾರಗಳ ಅಥವಾ ಇತರ ಕಾಲಮಾಪನ ಕಾರ್ಯಾಚರಣೆಗಳ ಆಧಾರದ ಮೇಲೆ ಕಾಲದ ಲಕ್ಷಣ ನಿರೂಪಣೆಯನ್ನು ಕೊಡಬಹುದು. ಮನೋವಿಜ್ಞಾನದಿಂದ ದೃಷ್ಟಾಂತಗಳನ್ನು ತೆಗೆದು ಹೇಳುವುದಾದರೆ, ಈ ಕೆಳಗಿನವುಗಳನ್ನು ಪರಿಗಣಿಸಬಹುದು. ಸ್ಮರಣಾಪ್ರಾಪ್ತಾಂಕ (ರಿಕಾಲ್ ಸ್ಕೋರ್) ಅಥವಾ ಮರುಕಲಿಕೆಯ ಪ್ರಾಪ್ತಾಂಕದಲ್ಲಿ ಆಗುವ ಗಳಿಕೆಯ (ಸೇವಿಂಗ್) ಆಧಾರದ ಮೇಲೆ ಧಾರಣಕ್ರಿಯೆಯ ಲಕ್ಷಣ ನಿರೂಪಣೆಯನ್ನೂ ಪರೀಕ್ಷಾರ್ಥಿಯ ದೈಹಿಕ ವಯಸ್ಸು ಮತ್ತು ಮಾನಸಿಕ ವಯಸ್ಸನ್ನು ನಿರ್ಧರಿಸುವಾಗಿನ ಮತ್ತು ಬುದ್ಧಿಶಕ್ತಿಲಬ್ಧವನ್ನು ಗಣಿಸುವಾಗಿನ ಕಾರ್ಯಾಚರಣೆಗಳ ಆಧಾರದ ಮೇಲೆ ಬುದ್ಧಿಶಕ್ತಿಯ ಲಕ್ಷಣ ನಿರೂಪಣೆಯನ್ನೂ ಕೊಡಬಹುದು. ವಿಜ್ಞಾನದ ಮೂಲಭೂತ ಗುಣಗಳಾದ ಮಿತ (ಕಾರಣ) ನ್ಯಾಯ (ಪಾರ್ಸಿಮೊನಿ) ಮತ್ತು ವಸ್ತುನಿಷ್ಠತೆಗಳನ್ನು ಕಾದಿಡುವುದೇ ಕಾರ್ಯಕಾರಿತ್ವ ಲಕ್ಷಣನಿರೂಪಣೆಗಳ ಹಿನ್ನೆಲೆಯಲ್ಲಿರುವ ತತ್ತ್ವ. ಈ ಎರಡು ಕಲ್ಪಿತ ಭಾವಗಳನ್ನು ಮುಂದೆ ವಿವರಿಸಲಾಗಿದೆ.

ಒಂದು ಕಡೆ ಸೈದ್ಧಾಂತಿಕರು ಮತ್ತೊಂದು ಕಡೆ ಪ್ರಯೋಗಕರ್ತರು-ಇವರಿಬ್ಬರ ನಡುವಣ ಅಂತರವನ್ನು ಸೇರಿಸುವ ಕಾರ್ಯದಲ್ಲಿ ಕಾರ್ಯಕಾರಿತ್ವ ಒಂದು ಅಪೇಕ್ಷಿತ ಒರೆಗಲ್ಲು ಎಂದು ಸಾಮಾನ್ಯವಾಗಿ ಹೇಳಲಾಗಿದೆ. ಹೀಗಿದ್ದಾಗ್ಯೂ ಮಾನವನ ವರ್ತನೆ ಹಾಗೂ ಮಾನವನ ಅನುಭವಗಳನ್ನು ಅರ್ಥ ಮಾಡಿಕೊಳ್ಳುವ, ನಿಯಂತ್ರಿಸುವ ಮತ್ತು ಅವುಗಳ ಭವಿಷ್ಯವನ್ನು ನುಡಿಯುವ ಉದ್ದೇಶವುಳ್ಳ ತಮ್ಮ ವಿಜ್ಞಾನದ ಮೂಲಪ್ರವೃತ್ತಿಯನ್ನು ಮನೋವಿಜ್ಞಾನಿಗಳು ಕಡೆಗಣಿಸಲು ಸಾಧ್ಯವಿಲ್ಲ. ವರ್ತನೆ ಕಾರ್ಯಕಾರಿತ್ವ ಪ್ರತಿಪಾದನೆಗೆ ಒಳಗಾಗಬಹುದಾದರೂ ಅನುಭವ ಎಲ್ಲ ಸಂದರ್ಭಗಳಲ್ಲೂ ಅಂಥ ಪರೀಕ್ಷಣೆಗೆ ಸಿಲುಕದಿರಬಹುದು. ಪ್ರಕೃತಿಯ ಸಮಸ್ತವೂ ಭೌತಿಕವಾದುದಲ್ಲ ಅಥವಾ ಭೌತವಸ್ತುವಿಗೆ ಸಂಬಂಧಿಸಿದುದಲ್ಲ. ಜೀವದ ಸ್ವಲ್ಪ ಭಾಗ ಭೌತವಸ್ತುವಾದರೆ, ಅದರಲ್ಲಿ ಬಹುಭಾಗ ಭೌತವಸ್ತುವಲ್ಲ. ಮಾನವನ ವರ್ತನೆ ಮತ್ತು ಅನುಭವಗಳ ಭೌತಿಕ ಅಂಶಗಳ ಅಧ್ಯಯನದಲ್ಲಿ, ಮನೋವಿಜ್ಞಾನಿ ತೊಡಗಿರಬೇಕಾದರೆ ಕಾರ್ಯಕಾರಿತ್ವಕ್ಕೆ ಪ್ರಾಶಸ್ತ್ಯ ಕೊಡುವುದು ಅಗತ್ಯವಾಗಬಹುದು. ಆದರೆ ಪ್ರೇರಣೆಗಳು, ಮೌಲ್ಯಗಳು, ಧ್ಯೇಯಗಳು, ಇಚ್ಛೆಗಳು, ಆಲೋಚನೆಗಳು, ಮನೋಪ್ರತಿಮೆಗಳು, ಅಭಿವೃತ್ತಿಗಳು, ಮನೋಬಲಗಳು, ಭ್ರಾಂತಿಗಳು, ಚಿತ್ತಪೀಡೆಗಳು -ಇಂಥ ಸಂಗತಿಗಳ ವಿಚಾರವಾಗಿ ವ್ಯವಹರಿಸುತ್ತಿರುವಾಗ, ಕಾರ್ಯಕಾರಿತ್ವ ತತ್ತ್ವ ಸದಾಕಾಲವೂ ಅನ್ವಯವಾಗುವ ಸಾಧ್ಯತೆ ಇಲ್ಲದಿರಬಹುದು.

ವಾಸ್ತವವಾಗಿ, ತಮ್ಮ ಪದಗಳು ಮತ್ತು ತರ್ಕವಾಕ್ಯಗಳನ್ನು ಕಾರ್ಯಕಾರಿತ್ವದ ಚೌಕಟ್ಟಿಗೆ ನಿಖರವಾಗಿ ಸೀಮಿತಗೊಳಿಸುವ ಕಾರ್ಯದಲ್ಲಿ ಕಾರ್ಯಕಾರಿತ್ವವಾದಿಗಳೇ ಯಶಸ್ಸುಗಳಿಸಿಲ್ಲ.

ಮನೋವಿಜ್ಞಾನದಲ್ಲಿ ಕಾರ್ಯಕಾರಿತ್ವವನ್ನು ಆಚರಣೆಗೆ ತರುತ್ತಿರುವ ಪ್ರಮುಖರಲ್ಲೊಬ್ಬನಾದ ಟೋಲ್‍ಮನ್, ಉದ್ದೇಶದ ವಿಚಾರವಾಗಿ ಪ್ರಸ್ತಾಪಿಸಿ ತನ್ನ ಪರೀಕ್ಷೆಗೊಳಗಾದ ಇಲಿಗಳಿಗೆ ಇಚ್ಛೆ ಇದೆ ಎಂದು ಊಹಿಸುತ್ತಾನೆ. ಆದರೆ ಕಾರ್ಯಕಾರಿತ್ವದ ದೃಷ್ಟಿಯಿಂದ ಅಂಥ ಪದಗಳನ್ನು ಉಪಯೋಗಿಸುವುದಕ್ಕೆ ಆತನಿಗೆ ಅಧಿಕಾರವಿಲ್ಲ. ಮತ್ತೊಬ್ಬ ಮನೋವಿಜ್ಞಾನಿಯಾದ, ಸ್ಟೀವನ್ಸ್ ತನ್ನ ಸಂಶೋಧನಾ ಪ್ರಬಂಧವಾದ ಮನೋವಿಜ್ಞಾನ ಮತ್ತು ವಿಜ್ಞಾನದ ವಿಜ್ಞಾನದಲ್ಲಿ, (1939) ವಿಪರೀತ ಕಾರ್ಯಕಾರಿತ್ವದಲ್ಲಿನ ದೋಷಗಳನ್ನು ಹೊರಗೆಡಹಿದ್ದಾನೆ.

ಕಾರ್ಯಕಾರಿತ್ವದ ಪ್ರಮುಖ ಉದ್ದೇಶಗಳು ವೀಕ್ಷಣೆ, ವಸ್ತುನಿಷ್ಠತೆ, ಸರಳತೆ ಮತ್ತು ಅಭಿವ್ಯಕ್ತಿ ಸಾಧ್ಯತೆಗಳೆಂಬುದು ಇಷ್ಟರಿಂದಲೇ ವೇದ್ಯವಾಗಿರಬಹುದು. ಇವನ್ನು ಸ್ವಲ್ಪ ಪರೀಕ್ಷಿಸುವುದು ಅಗತ್ಯ. ಭೌತವಿಜ್ಞಾನದಲ್ಲಿಯೂ ವೀಕ್ಷಣೆಗೆ ಒಳಗಾಗಿರುವ ಘಟನೆ ವೀಕ್ಷಣೆಯನ್ನು ನಡೆಸುವುದರಲ್ಲಿ ನಿಷ್ಕೃಷ್ಟವಾದ ಕಾರ್ಯಾಚರಣೆಗಳನ್ನು ಉಪಯೋಗಿಸಿದಾಗ್ಯೂ ವೀಕ್ಷಣಾ ಪ್ರಕ್ರಿಯೆಯಲ್ಲಿ ಬದಲಾವಣೆ ಹೊಂದುತ್ತದೆಂಬುದು ಎಲ್ಲರೂ ತಿಳಿದಿರುವ ಸತ್ಯಸಂಗತಿ. ಹೀಗಿರುವುದರಿಂದ, ಚಲಿಸುತ್ತಿರುವ ಎಲೆಕ್ಟ್ರಾನನ್ನು ಅಳೆಯಲು ಸಾಧ್ಯವಾಗುವಂತೆ ಅದನ್ನು ಪ್ರಖರವಾದ ಬೆಳಕಿನಿಂದ ಬೆಳಗಿಸಬೇಕು. ಆದರೆ ಈ ಬೆಳಕಿನ ಕಿರಣ ಎಲೆಕ್ಟ್ರಾನ್ ಚಲನಮಾರ್ಗದಲ್ಲಿ ಅಡ್ಡಿಯನ್ನುಂಟು ಮಾಡುವುದಲ್ಲದೆ, ಬೆಳಕಿನ ತೀಕ್ಷ್ಣತೆ ಅಧಿಕವಾದಂತೆಲ್ಲ ಎಲೆಕ್ಟ್ರಾನ್ ಚಲನಮಾರ್ಗದಲ್ಲಿ ಅಡಚಣೆ ಅಧಿಕವಾಗುತ್ತದೆ. ಈ ಪ್ರಕ್ರಿಯೆ ಮಾನಸಿಕ ಘಟನೆಗಳ ವೀಕ್ಷಣೆಯಲ್ಲಿ ಹೆಚ್ಚು ಜಟಿಲವಾಗುವುದಲ್ಲದೆ, ಅಡಚಣೆಯೂ ಅಧಿಕವಾಗುತ್ತದೆ ವೀಕ್ಷಣಾಪ್ರಕ್ರಿಯೆಯಲ್ಲಿ ಅಂತರ್ಗತವಾಗಿರುವ ದೋಷಗಳನ್ನು, ಮನೋವಿಜ್ಞಾನಿ ಸಂಪೂರ್ಣವಾಗಿ ಹೋಗಲಾಡಿಸಲಾರ. ಸಂಜ್ಞಾನ, ಪ್ರೇರಣೆ, ಸೃಜನಾತ್ಮಕತೆ, ಅಭಿವೃತ್ತಿಗಳು, ಮೌಲ್ಯಗಳು ಮತ್ತು ಅಭಿರುಚಿಗಳು, ಇಚ್ಛೆ, ಒಳನೋಟ, ಆಲೋಚನೆ ಮತ್ತು ನಿರ್ಣಯಗಳಂಥ ಘಟನೆಗಳ ಅಧ್ಯಯನದಲ್ಲಿ ತೊಡಗಿರುವಾಗಲಂತೂ ಅದು ಅತಿ ಕಷ್ಟ. ಆದರೆ ವೀಕ್ಷಣೆಯಲ್ಲಿ ಉಂಟಾಗಬಹುದಾದ ಅಂಥ ಪಕ್ಷಪಾತಗಳು ಮತ್ತು ದೋಷಗಳ ಸ್ವಭಾವ ಮತ್ತು ವ್ಯಾಪಕತೆಗಳನ್ನು ಗುರುತಿಸುವ ಆಶಯವನ್ನು ಆತ ಹೊಂದಿರಬಹುದು. ವೀಕ್ಷಣಾತ್ಮಕ ಸಿದ್ಧಾಂತದಿಂದ, ಮೂಲಭೂತವಾಗಿ ಉದ್ಭವಿಸಿರುವ, ವಿಪರೀತ ಕಾರ್ಯಕಾರಿತ್ವದ ಮಿತಿಯನ್ನು ತೋರಿಸಲು ಇದು ಸಹಕಾರಿಯಾಗುತ್ತದೆ.

ವೀಕ್ಷಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸತ್ಯವಾಗಿರುವ ವಿಷಯ ಹೆಚ್ಚು ಕಡಿಮೆ ವಸ್ತುನಿಷ್ಠತೆಯ ವಿಚಾರದಲ್ಲೂ ಸತ್ಯವೆನಿಸುತ್ತದೆ. ಆಲ್ಪೋರ್ಟನ ಥಿಯೊರೀಸ್ ಆಫ್ ಪರ್ಸೆಪ್ಷನ್ ಅಂಡ್ ಕಾನ್ಸೆಪ್ಟ್ ಆಫ್ ಸ್ಟ್ರಕ್ಚರ್ (1954) ಎಂಬ ಪುಸ್ತಕದಲ್ಲಿ ವಸ್ತುನಿಷ್ಠತೆಯ ಮೂರು ಪ್ರಮಾಣಗಳನ್ನು ಹೆಸರಿಸಲಾಗಿದೆ: (1) ವೀಕ್ಷಣೆಯ ವಸ್ತುನಿಷ್ಠತೆ, (11) ಸಂಬಂಧ ಮತ್ತು ಕಾಣ್ಕೆ, (111) ವೀಕ್ಷಕ–ಒಪ್ಪಂದ. ವೀಕ್ಷಿಸಲಾದ ಅಥವಾ ವಿವರಿಸಲಾದ ಘಟನೆಯಲ್ಲಿ, ವೀಕ್ಷಕ ಎಷ್ಟು ಕಡಿಮೆ ಪ್ರಮಾಣದಲ್ಲಿ ಒಳಗಾಗಿರುತ್ತಾನೋ ಅಷ್ಟೂ ವಸ್ತುನಿಷ್ಠತೆ ಅಧಿಕವಾಗಿರುತ್ತದೆ. ಅಧ್ಯಯನಕ್ಕೆ ಒಳಗಾಗಿರುವ ವಿಷಯದ ವೀಕ್ಷಣೆ ಮತ್ತು ದಾಖಲೆ ಇತರ ವೀಕ್ಷಕರ ಪರಿಶೀಲನೆಗೂ ಭೌತಿಕವಾಗಿ ಒಳಪಡುವಂತಿರಬೇಕು. ಇದರಿಂದ ವಸ್ತುನಿಷ್ಠತೆ ಹೆಚ್ಚುತ್ತದೆ. ಮೂರನೆಯ ಪ್ರಮಾಣ ವಾದ ವೀಕ್ಷಕ–ಒಪ್ಪಂದ ಕಾರ್ಯಕಾರಿತ್ವದ ನಿಷ್ಕೃಷ್ಟ ನಿಯಮಗಳನ್ನು ಅವಲಂಬಿಸಿದೆ. ಒಬ್ಬನ ಪರಿಶೀಲನೆಯನ್ನು ಇತರರೂ ಪ್ರಾಯೋಗಿಕವಾಗಿ ನೋಡಿ ಪರೀಕ್ಷಿಸುವಂತಿರಬೇಕು. ಪುನಃ ಪ್ರಯೋಗಗಳಿಗೆ ಅವಕಾಶವಿರುವಂತೆ ವೀಕ್ಷಣೆ ಸಾಕಷ್ಟು ಬಹಿರಂಗವಾಗಿರಬೇಕು. ವಸ್ತುನಿಷ್ಠತೆಯ ಈ ಮೂರು ವಿಧವಾದ ಪ್ರಮಾಣಗಳೂ ಪರಸ್ಪರಾವಲಂಬಿಗಳಾಗಿವೆ. ಅವುಗಳಲ್ಲಿ ಎರಡನೆಯದು ಮೂಲಭೂತವಾದುದು. ಅದು ಹೇಗೇ ಇರಲಿ, ಈ ಮೂರೂ ಆಶಯಗಳನ್ನು ಸಾಧಿಸುವ ಗುರಿ ಮನೋವಿಜ್ಞಾನದಲ್ಲಿರಬೇಕು. ಭೌತವಿಜ್ಞಾನದಲ್ಲಿ ಅದು ಸಾಧ್ಯವಿರುವಷ್ಟೇ ನಿಷ್ಠುರತೆಯಿಂದ, ಇಲ್ಲಿಯೂ ಅದನ್ನು ಅನ್ವಯಿಸಲು ನಾವು ಎಂದೆಂದೂ ನಿರೀಕ್ಷಿಸಲಾಗದು.

ವಿಜ್ಞಾನದ ಭಾಷೆ ಮತ್ತು ಸಿದ್ಧಾಂತಗಳಲ್ಲಿ, ಸರಳತೆ ಮತ್ತು ಸಂಪರ್ಕಶೀಲತೆಗಳು ಬಹು ಹಿಂದಿನಿಂದ ರೂಢಿಯಲ್ಲಿರುವ ಧ್ಯೇಯಗಳು. ವಿಜ್ಞಾನದ ಮೂರು ಮೂಲ ನಂಬಿಕೆಗಳಲ್ಲಿ ಎರಡನೆಯದರಿಂದ, ಸರಳತಾ ತತ್ತ್ವ ಮೂಲಭೂತವಾಗಿ ಉದ್ಭವಿಸುತ್ತದೆ. ಆ ನಂಬಿಕೆಗಳು ಹೀಗಿವೆ: 1 ಪ್ರಕೃತಿ ಸುಸಂಗತವಾಗಿದೆ (ಕನ್ಸಿಸ್ಟೆಂಟ್) 2 ಪ್ರಕೃತಿಯ ಮೂಲತತ್ತ್ವಗಳು ಅನಂತವಾಗಿರದೆ ಮಿತವಾಗಿವೆ ಅಥವಾ ಯಾವುದೋ ಒಂದು ಕ್ರಮದಲ್ಲಿ ಒಂದುಗೂಡಿವೆ ಮತ್ತು 3 ವ್ಯಾಪಕವಾದ ನೈಜತತ್ತ್ವಗಳ ಹಿನ್ನೆಲೆಯಲ್ಲಿ ಯಾವುದೋ ಒಂದು ವ್ಯವಸ್ಥೆಯಿದೆ. ಸರಳತೆಯ ನೆಪದಲ್ಲಿ, ಪ್ರಕೃತಿಯ ಮತ್ತು ಜೀವನದ ಜಟಿಲ ಸಮಸ್ಯೆಗಳನ್ನು ವಿಜ್ಞಾನ ಕಡೆಗಣಿಸಲು ಸಾಧ್ಯವೆಂಬುದು ಇದರ ಅರ್ಥವಲ್ಲ. ಹೊರನೋಟಕ್ಕೆ ಪರಸ್ಪರ ಸಂಬಂಧವಿಲ್ಲದಂತೆ ತೋರುವ ಘಟನೆಗಳನ್ನು ಒಂದುಗೂಡಿಸುವ ಉಚ್ಚರೀತಿಯ ಅಮೂರ್ತಭಾವನೆಗಳು ಮತ್ತು ಸಾಮಾನ್ಯೀಕರಣಗಳನ್ನು ಕಂಡುಹಿಡಿಯಲು ಎಲ್ಲ ವಿಜ್ಞಾನಿಗಳಿಗೂ ಇರುವ ಭರವಸೆಯನ್ನು ಈ ತತ್ತ್ವ ಪ್ರತಿಪಾದಿಸುತ್ತದೆ. ವಿಜ್ಞಾನದ ಕಲ್ಪಿತಭಾವಗಳ ಮತ್ತು ತರ್ಕ ವಾಕ್ಯಗಳ ಭಾಷೆಯ ಉಪಯೋಗದಲ್ಲಿ ಹಿತ ಮಿತ ಇರಬೇಕೆಂಬುದು ಸರಳತೆಯ ಮತ್ತೊಂದು ಅರ್ಥ. ಈ ಎರಡು ಅರ್ಥಗಳಿಗೂ ಪರಸ್ಪರ ಸಂಬಂಧವಿದೆ. ಕೊನೆಯಪಕ್ಷ, ಕಾರ್ಯಕಾರಿತ್ವಕ ಲಕ್ಷಣ ನಿರೂಪಣೆಗಳಿರಬೇಕೆಂಬ ತನ್ನ ಒತ್ತಾಯದಿಂದಲಾದರೂ ವಿಜ್ಞಾನ ಭಾಷೆಯಲ್ಲಿರಬಹುದಾದ ಎಲ್ಲ ಅನಿಶ್ಚಯಾರ್ಥವನ್ನೂ ತೆಗೆದು ಹಾಕುವುದರ ಮೂಲಕ ಸರಳತೆಯನ್ನು ಸಾಧಿಸಲು ಸಾಧ್ಯವಾಗಬಹುದೆಂಬುದೇ ಕಾರ್ಯಕಾರಿತ್ವವಾದಿಯ ಭರವಸೆ.

ಸ್ಪಷ್ಟತೆ ಎಲ್ಲ ವಿಜ್ಞಾನದ ಮುಖ್ಯ ಲಕ್ಷಣಗಳಲ್ಲೊಂದು. ಆದರೆ ಕಾರ್ಯಕಾರಿತ್ವ ಲಕ್ಷಣನಿರೂಪಣೆಗಳ ಮೂಲಕ ಸಾಧಿಸುವ, ಕಾರ್ಯಕಾರಿತ್ವಜ್ಞನ ಪ್ರಕಟ ರೀತಿಯೊಂದೇ ವಿಜ್ಞಾನಕ್ಕೆ ತೆರೆದಿರುವ ಮಾರ್ಗವಲ್ಲ. ಈ ರೀತಿಯಲ್ಲಿ ಲಕ್ಷಣ ನಿರೂಪಣೆಗೆ ಒಳಗಾಗದಿರುವ ಅನೇಕ ಪದಗಳು ಮನೋವಿಜ್ಞಾನದಲ್ಲಿ ಅಂಗೀಕೃತ ಸ್ಥಾನ ಪಡೆದಿವೆ. ಪರಂಪರೆಯಾದ ಉಪಸಮಗಳ (ಸಕ್ಸಸಿವ್ ಅಪ್ರೋಕ್ಸಿಮೇಷನ್ಸ್) ಮೂಲಕ ವೈಜ್ಞಾನಿಕ ಸತ್ಯದತ್ತ ನಮ್ಮನ್ನು ಕೊಂಡೊಯ್ಯಬಲ್ಲ ಉಪಯುಕ್ತ ಪದಗಳು ಅವು. ಸತ್ಯವೆಂಬುದು ಕಾರ್ಯಕಾರಿತ್ವ ತರ್ಕವಾಕ್ಯಗಳ ಪರ್ಯಾಯ ಪದವಲ್ಲ. ಐನ್‍ಸ್ಟೀನನ ಸಾಪೇಕ್ಷವಾದದ ಪ್ರಾರಂಭಿಕ ಕಲ್ಪಿತ ಭಾವನೆ ಮುಂದೆ ಕಾರ್ಯಾಚರಣೆಗಳಿಗೆ ಒಳಪಡುವಂತಾದರೂ ನಿಷ್ಕೃಷ್ಟವಾಗಿ ಕಾರ್ಯಕಾರಿತ್ವ ಪದಗಳಿಂದ ಕೂಡಿರಲಿಲ್ಲ.

ಮನೋವೈಜ್ಞಾನಿಕ ಸಿದ್ಧಾಂತದ ಇಂದಿನ ಅವಸ್ಥೆಯಲ್ಲಿ ಕಟ್ಟುನಿಟ್ಟಾದ ಕಾರ್ಯಕಾರಿತ್ವವನ್ನು ಆಚರಣೆಗೆ ತರಲು ನಮಗೆ ಸಾಧ್ಯವಿಲ್ಲ. ಆದ್ದರಿಂದ ಪ್ರಾಕಲ್ಪಿತ ರೂಪಣಗಳು (ಹೈಪೊತೆಟಿಕಲ್ ಕಾನ್ಸೆಪ್ಟ್ಸ್) ಮತ್ತು ಮಧ್ಯವರ್ತಿ ಪರಿವರ್ತ್ಯಗಳು (ಇಂಟರ್‌ವೀನಿಂಗ್ ವೇರಿಯಬಲ್ಸ್) ಕಾರ್ಯಕಾರಿ ಲಕ್ಷಣ ನಿರೂಪಣೆಗಳಷ್ಟೆ ಬೆಲೆ ಬಾಳಬಲ್ಲವು. ಕಾರ್ಯಕಾರಿತ್ವ ಹೆಚ್ಚಿದರೆ ಮನೋವಿಜ್ಞಾನದ ವಿಶ್ವಾಸನೀಯತೆಯ ಒರೆಗಲ್ಲುಗಳನ್ನು ಒದಗಿಸಬಲ್ಲುದೇ ಹೊರತು ಅದರ ನಿಜತ್ವದ ಒರೆಗಲ್ಲುಗಳನ್ನು ಅವಶ್ಯವಾಗಿ ಒದಗಿಸಲಾರದು.

ಮನೋವಿಜ್ಞಾನವನ್ನು ಗೊಂದಲ ಪರಿಸ್ಥಿತಿ ಮತ್ತು ವ್ಯಕ್ತಿನಿಷ್ಠೆಗಳಿಂದ ಬಿಡುಗಡೆ ಮಾಡುವುದರ ಮೂಲಕ ಕಾರ್ಯಕಾರಿತ್ವ ಅದರ ಮೇಲೆ ಔಪಚಾರಿಕ ಪ್ರಭಾವವನ್ನು ಬೀರಿದೆ ಎಂದು ನಿರ್ಧಾರವಾಗಿ ಹೇಳಬಹುದು. ಆದರೆ ಮನೋವಿಜ್ಞಾನದ ಮೂಲ ಪ್ರಕೃತಿಯನ್ನು ಮನಸ್ಸಿನಲ್ಲಿಡದೆ, ಅಧಿಕವಾದ ಮತಾಂಧತೆಯಿಂದ ಅದನ್ನು ಮುಂದುವರಿಸಿದ್ದೇ ಆದರೆ ಅದರಿಂದ ಅಪಾಯಗಳು ಉಂಟು. (ಎಸ್.ಬಿ.ಎಲ್.ಬಿ.)

**ಕಾರ್ಯಪ್ಪ, ಕೆ.ಎಂ. :** 1899–1993. ಸ್ವತಂತ್ರ ಭಾರತ ಸೈನ್ಯದ ಪ್ರಥಮ ಭಾರತೀಯ ಕಮಾಂಡರ್–ಇನ್–ಚೀಫ್. ತಂದೆ ಕೊಡಂದೆರ ಮಾದಪ್ಪನವರು, ತಾಯಿ ಕಾವೇರಿ, ಜನನ ಕೊಡಗು ಜಿಲ್ಲೆಯಲ್ಲಿ 1899ನೆಯ ಜನವರಿ 28ರಂದು. ವಿದ್ಯಾಭ್ಯಾಸ ನಡೆದದ್ದು ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಮತ್ತು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ. ಸೈನ್ಯದಲ್ಲಿ ಸೇವೆ ಸಲ್ಲಿಸಲು ಆಕರ್ಷಿತರಾದ ಕಾರ್ಯಪ್ಪನವರಿಗೆ ಸೈನ್ಯದ ಕಮಿಷನ್ ದೊರೆತಾಗ ಆ ಹಿರಿಮೆ ಗಳಿಸಿದ ಪ್ರಥಮ ಭಾರತೀಯರು ಇವರೇ ಆಗಿದ್ದರು (ಡಿಸೆಂಬರ್ 1919). ಸೈನ್ಯದ ಶಿಕ್ಷಣಾನಂತರ ಮೊದಲು 2/88 ಕರ್ನಾಟಕ ರೆಜಿಮೆಂಟ್ ಅನಂತರ 2–125ನೆಯ ನೇಪಿಯರ್ ರೈಫಲ್ಸ್ ದಳದಲ್ಲಿ ಅಡ್ಜುಟೆಂಟ್ ಆಗಿ (1920–22) ಕೆಲಸ ಮಾಡಿದರು. 1920–22ರಲ್ಲಿ ಮೆಸಪೊಟೇಮಿಯ (ಈಗಿನ ಇರಾನ್) ದಳ, 1922–23ರಲ್ಲಿ 37 ಡೋಗ್ರಾ ಮತ್ತು 1923–42ರಲ್ಲಿ 1–7ನೆಯ ರಾಜಪುತ್ರ ದಳಗಳಲ್ಲಿದ್ದರು. ವಿವಿಧ ದೇಶಗಳಲ್ಲಿನ ಸೈನ್ಯಧಿಕಾರಿಗಳ ಶಿಕ್ಷಣವಿಧಾನ, ಜೀವನಕ್ರಮ ಮುಂತಾದವನ್ನು ಅಭ್ಯಸಿಸುವ ಉದ್ದೇಶದಿಂದ ಕಾರ್ಯಪ್ಪನವರು ಸ್ವತಃ ಪ್ರಪಂಚ ಪರ್ಯಟನೆಯನ್ನು 1925ರಲ್ಲಿ ಕೈಗೊಂಡರು. ಆಗ ಇವರು ಚೀನ, ಜಪಾನ್, ಸಂಯುಕ್ತರಾಷ್ಟ್ರ, ಕೆನಡ, ಗ್ರೇಟ್‌ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್ಲೆಂಡ್, ಇಟಲಿ ಮುಂತಾದ ದೇಶಗಳನ್ನು ಸಂದರ್ಶಿಸಿದರು. 1922–30ರ ಅವಧಿಯಲ್ಲಿ ಅನೇಕ ಸಲ ವಜೀರಿಸ್ತಾನದಲ್ಲಿ (ವಾಯವ್ಯಗಡಿ ಪ್ರಾಂತ್ಯ) ಸೇವೆಸಲ್ಲಿಸಿದ್ದರು. ಕ್ವೆಟ್ಟ ಸ್ಟಾಫ್ ಕಾಲೇಜಿನಲ್ಲಿ ಪ್ರೌಢಸೈನ್ಯ ಶಿಕ್ಷಣ ಪಡೆಯಲು ಪ್ರವೇಶಿಸಿದ (1933) ಪ್ರಥಮ ಭಾರತೀಯರು ಇವರೇ. ಸಿಂಗಪುರದ ನೌಕೆ ಹಾಗೂ ವಿಮಾನ ನೆಲೆಗಳ ಪರೀಕ್ಷಾ ಸಂದರ್ಶನ ನಡೆಸಿದ್ದು 1935ರಲ್ಲಿ. ಎರಡನೆಯ ಮಹಾಯುದ್ಧದಲ್ಲಿ 19ನೆಯ ಇಂಡಿಯನ್ ಡಿವಿಷನ್ ಪಡೆಯೊಡನೆ ಸೇವೆ ಸಲ್ಲಿಸುತ್ತ ಇರಾಕ್, ಸಿರಿಯ ಮತ್ತು ಇರಾನುಗಳಲ್ಲಿ ಯುದ್ಧರಂಗ ಪ್ರವೇಶ ಮಾಡಿದರು. 7ನೆಯ

ರಾಜಪುತ್ರ ರೆಜಿಮೆಂಟಿನ ಮೆಷೀನ್‌ಗನ್ ಪಡೆಯನ್ನು ರಚಿಸುವ ಹೊಣೆ ಕಾರ್ಯಪ್ಪನವರದ್ದಾಗಿತ್ತು (1942). 1943–44ರಲ್ಲಿ ಇವರು ಮೊದಲು ಈಸ್ಟ್ರರ್ನ್‌ಕಮಾಂಡ್ ಆ ಮೇಲೆ 26ನೆಯ ಡಿವಿಷನ್ನಿನ ಅಸಿಸ್ಟಂಟ್ ಕ್ವಾರ್ಟರ್ ಮಾಸ್ಟರ್ ಜನರಲ್ ಆಗಿದ್ದರು. ಅದೇ ಅವಧಿಯಲ್ಲಿ ಬರ್ಮ ಯುದ್ಧದಲ್ಲಿ ಅರಕಾನ್ ರಂಗ ಪ್ರವೇಶಮಾಡಿ ಯುದ್ಧತಂತ್ರ ನಿರ್ದೇಶನ ಮಾಡಿದರು. ಸೈನ್ಯ ಪುನರ್ವ್ಯವಸ್ಥಾ ಸಮಿತಿಯ (ಆರ್ಮಿ ರೀಆರ್ಗನೈಸೇಷನ್ ಕಮಿಟಿ) ಸದಸ್ಯರಾಗಿ 1944ರಲ್ಲಿ ನೇಮಕಗೊಂಡರು. ಮತ್ತು ಅದೇ ವೇಳೆ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಕೆನಡಗಳ ಪರ್ಯಟನೆ ಕೈಗೊಂಡು ವೆಸ್ಟ್‌ಪಾಯಿಂಟ್ ಎಂಬಲ್ಲಿನ ಮಿಲಿಟರಿ ಅಕೆಡಮಿಯನ್ನು ಸಂದರ್ಶಿಸಿದರು. ಫ್ರಾಂಟಿಯರ್ ಬ್ರಿಗೇಡ್ ಗ್ರೂಪ್ ಎಂಬ ಸೈನ್ಯವಿಭಾಗದ ಅಧಿಪತಿಯಾಗಿ ಕಾರ್ಯಪ್ಪನವರು ನೇಮಕಗೊಂಡದ್ದು 1946ರಲ್ಲಿ. 1947ರಲ್ಲಿ ಇಂಪೀರಿಯಲ್ ಡಿಫೆನ್ಸ್ ಕಾಲೇಜಿನಲ್ಲಿ ಉನ್ನತ ಸೈನ್ಯ ಶಿಕ್ಷಣ ಪಡೆಯಲು ಆಯ್ಕೆಗೊಂಡರು. ಭಾರತ ಸ್ವತಂತ್ರ ರಾಷ್ಟ್ರವಾದ ವರ್ಷ ಇವರಿಗೆ ಹೊಸ ಹೊಣೆಗಾರಿಕೆಗಳು ಕಾದಿದ್ದುವು. ಸೈನ್ಯಬಲಗಳ ಪುನರ್ಘಟನಾ ಸಮಿತಿಯ (ಆರ್ಮ್ಡ್ ಫೋರ್ಸಸ್ ರೀಕಾನ್ಸ್ಟಿಟ್ಯೂಷನ್ ಕಮಿಟಿ) ಸದಸ್ಯತ್ವ ಜೂನ್ 1947ರಲ್ಲೂ ಮೇಜರ್ ಜನರಲ್ ಎಂಬ ದರ್ಜೆ ಸಮೇತ ಚೀಫ್ ಆಫ್ ದಿ ಜನರಲ್ ಸ್ಟಾಫ್ ಎಂಬ ಹುದ್ದೆ ಮುಂದಿನ ಆಗಸ್ಟ್ 15ರಲ್ಲೂ ಕಾರ್ಯಪ್ಪನವರಿಗೆ ಪ್ರಾಪ್ತವಾದುವು.  ಭಾರತ ಪೂರ್ವಸೇನಾವಲಯದ (ಈಸ್ಟರ್ನ್‌ಕಮಾಂಡ್) ಜನರಲ್–ಆಫೀಸರ್–ಕಮಾಂಡಿಂಗ್–ಇನ್–ಚೀಫ್, ಪಶ್ಚಿಮ ಸೇನಾವಲಯದ ಜಿ–ಓ–ಸಿ–ಇನ್–ಸಿ. ಕಾಶ್ಮೀರಯುದ್ಧದ (1948) ಪ್ರಥಮ ನಾಯಕ, ಜನರಲ್ ಎಂಬ ಅತ್ಯುನ್ನತ ದರ್ಜೆ ಸಮೇತ ಸೈನ್ಯದ ವರಿಷ್ಠಾಧಿಕಾರಿ (ಜನವರಿ 15, 1949). ಸೈನ್ಯದ ವರಿಷ್ಠಾಧಿಕಾರಿಯಾಗಿ ಜನರಲ್ ಕಾರ್ಯಪ್ಪನವರು ಸೇವೆ ಸಲ್ಲಿಸಿದ್ದು ಜನವರಿ 15, 1953ರ ವರಗೆ. ಈ ನಾಲ್ಕು ವರ್ಷಗಳ ಅವಧಿ ದೇಶದ ಇತಿಹಾಸದಲ್ಲಿ ಹೇಗೋ ಹಾಗೆ ಸೈನ್ಯದ ಇತಿಹಾಸದಲ್ಲೂ ಒಂದು ಪರ್ವಕಾಲ. ಅದುವರೆಗೆ ಆಳರಸರ ಪಡೆಗಳಾಗಿದ್ದಂಥ ಸೈನ್ಯ ಸ್ವತಂತ್ರ ಭಾರತದ ಹೆಮ್ಮೆಯ ಪ್ರತೀಕವಾಗಿ ಮಾರ್ಪಟ್ಟದ್ದು, ಸೈನಿಕರ ಶಿಕ್ಷಣ ಜೀವನಕ್ರಮ ಆರ್ಥಿಕ ಸವಲತ್ತು ಸೇವಾವಧಿ ಮುಂತಾದ ಸಮಸ್ತ ಹಾಸುಹೊಕ್ಕುಗಳಲ್ಲಿಯೂ ಗಮನಾರ್ಹ ಸುಧಾರಣೆಗಳಾದದ್ದು, ರಾಷ್ಟ್ರದ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಸಮರ್ಥವಾದ ರಕ್ಷಣಾ ವ್ಯವಸ್ಥೆಯ ರಚನೆಯ ನಾಂದಿಯಾದದ್ದು ಜನರಲ್ ಕಾರ್ಯಪ್ಪನವರ ಹಿರಿತನದಲ್ಲಿ. ರಾಷ್ಟ್ರಕ್ಕೆ ಸೈನ್ಯದ ಶಿಸ್ತಿನ ಮತ್ತು ಸುಭದ್ರತೆಯ ಪ್ರತೀಕವೂ ಸೈನಿಕರಿಗೆ ಸಹಾನುಭೂತಿಪರ ದಕ್ಷತೆಯ ಪ್ರತೀಕವೂ ಆಗಿದ್ದ ಜನರಲ್ ಕಾರ್ಯಪ್ಪನವರ ಸೇವೆ ಸ್ವತಂತ್ರ ಭಾರತದ ಸೈನ್ಯಕ್ಕೆ ಒಂದು ಹೊಸ ಪರಂಪರೆಯನ್ನು ಒದಗಿಸಿತು.

1953ರ ಜುಲೈ ತಿಂಗಳಿನಲ್ಲಿ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡುಗಳಿಗೆ ಭಾರತದ ಹೈ ಕಮಿಷನರ್ ಆಗಿ ಜನರಲ್ ಕಾರ್ಯಪ್ಪನವರು ನೇಮಕಗೊಡರು. ಏಪ್ರಿಲ್ 1956ರವರೆಗೂ ರಾಯಭಾರಿಯ ಈ ಹೊಸ ಹುದ್ದೆಯಲ್ಲಿ ಸಮರ್ಥವಾಗಿ ಸೇವೆ ಸಲ್ಲಿಸಿದರು. ಅಲ್ಲಿಂದೀಚೆಗೆ ಕಾರ್ಯಪ್ಪನವರು ತಮ್ಮ ಸಮಸ್ತ ಕಾಲವನ್ನೂ ಸಾರ್ವಜನಿಕ ಕಾರ್ಯಗಳಿಗೋಸ್ಕರ ಮುಡುಪಾಗಿಟ್ಟು ನಿರಂತರ ಕ್ರಿಯಾಶೀಲರಾಗಿದ್ದರು. ಇವರ ಗೌರವ ನಿರ್ದೇಶನ ಲಭಿಸುತ್ತಿದ್ದ ಕೆಲವು ಸಂಘ ಸಂಸ್ಥೆಗಳ ವಿವರ ಹೀಗಿದೆ: ಕೆಲವು ವರ್ಷ ಯೋಜನಾ ಆಯೋಗದ ರಾಷ್ಟ್ರೀಯ ಸಹಕಾರ ಸಲಹಾ ಸಮಿತಿಯ (ನ್ಯಾಷನಲ್ ಅಡ್ವೈಸರಿ ಕಮಿಟಿ ಆನ್ ಪ್ಲಾನಿಂಗ್) ಸದಸ್ಯ ; ಅಖಿಲ ಭಾರತ ಮಾಜಿಯೋಧರ ಸಂಘದ (ಆಲ್ ಇಂಡಿಯಾ ಎಕ್ಸ್ ಸರ್ವಿಸ್ ಮ್ಯಾನ್ಸ್ ಲೀಗ್) ಅಧ್ಯಕ್ಷ ; ಅಖಿಲ ಭಾರತ ಕ್ರೀಡಾ ಸಂಸ್ಥೆಯ (ಆಲ್ ಇಂಡಿಯಾ ಕೌನ್ಸಿಲ್ ಆಫ್ ಸ್ಪೋರ್ಟ್) ಅಧ್ಯಕ್ಷ, ಇತ್ಯಾದಿ. ತಮ್ಮ ಕೊನೆಗಾಲದವರೆಗೂ ಇವರು ಸಕ್ರಿಯವಾಗಿದ್ದರು. ಶ್ರೀಯುತರು ತಮ್ಮ ಸ್ವಂತ ರಾಜ್ಯವಾದ ಕರ್ನಾಟಕದಲ್ಲಿ ಮನೆ ಮಾತಾಗಿದ್ದಾರೆ. ಕೊಡಗಿನ ಈ ಹೆಮ್ಮೆಯ ಪುತ್ರ 1993 ಮೇ 15ರಂದು ನಿಧನರಾದರು. ಈ ಧೀರ ಭಾರತಪುತ್ರನ ನೆನಪಿಗಾಗಿ ಅನೇಕ ಸ್ಮಾರಕಗಳು ತಲೆ ಎತ್ತಿವೆ. (ಎ.ಎನ್.ಎಸ್.ಎಂ.)

**ಕಾರ್ಯಾಂಗ :** ಒಂದು ರಾಜಕೀಯ ವ್ಯವಸ್ಥೆಯ ಅಂಗಗಳಲ್ಲೊಂದು (ಎಕ್ಸಿಕ್ಯೂಟಿವ್). ಸರ್ಕಾರದ ಅಧಿಕಾರಗಳು ಸಾಮಾನ್ಯವಾಗಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಎಂಬ ಮೂರು ವಿಭಾಗಗಳಲ್ಲಿ ವಿಂಗಡವಾಗಿರುತ್ತವೆ. ಮೂರು ಪರಸ್ಪರವಾಗಿ ಬಹಳಮಟ್ಟಿಗೆ ಸ್ವತಂತ್ರವಾಗಿರುತ್ತವೆ. ಆಳ್ವಿಕೆಗೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸುವುದು ಶಾಸಕಾಂಗದ ಕಾರ್ಯಭಾರ, ನ್ಯಾಯಾಂಗ ಕಾನೂನುಗಳನ್ನು ಅರ್ಥೈಸುತ್ತದೆ, ಅನ್ವಯಿಸುತ್ತದೆ. ಇವನ್ನು ಜಾರಿಗೆ ತರುವುದು ಅಥವಾ ಇವು ಕಾರ್ಯಗತವಾಗುವಂತೆ ಮಾಡುವುದು ಕಾರ್ಯಾಂಗದ ಹೊಣೆ, ರಾಯಭಾರ ಪ್ರಾತಿನಿಧ್ಯ, ಸಶಸ್ತ್ರ ಪಡೆಗಳ ಮಹಾದಂಡನಾಯಕತ್ವ, ಕಾನೂನುಗಳ ಜಾರಿಯ ಮೇಲ್ವಿಚಾರಣೆ, ಅಧಿಕಾರಿಗಳ ನೇಮಕ ಇವೆಲ್ಲ ಕಾರ್ಯಾಂಗದ ಅಧಿಕಾರಗಳು. ಶಾಸನಾಕಾರ್ಯವನ್ನು ತೊಡಗಿಸುವುದು, ವಿಧಾನ ಮಂಡಲವನ್ನು (ಲೆಜಿಸ್ಲೇಚರ್) ವಿಸರ್ಜಿಸುವುದು ಮುಂತಾದವುಗಳ ಬಗ್ಗೆ ಆಯಾದೇಶಗಳ ಸಂವಿಧಾನಗಳಲ್ಲಿ ಮಾಡಿರುವ ವಿಧಿಗಳಿಗೆ ಅನುಗುಣವಾಗಿ ಹೆಚ್ಚು ಅಥವಾ ಕಡಿಮೆ ಅಧಿಕಾರಗಳು ಕಾರ್ಯಾಂಗ ಮುಖ್ಯನಿಗೆ ಇರುತ್ತವೆ. ಫ್ರಾನ್ಸ್ ಜರ್ಮನಿ ಮತ್ತು ಅಮೆರಿಕಗಳಲ್ಲಿ ಕಾರ್ಯಾಪಾಲಿಕಾಧಿಕಾರಗಳು (ಎಕ್ಸಿಕ್ಯೂಟಿವ್ ಪವರ್ಸ್) ಅಧ್ಯಕ್ಷನಲ್ಲೂ ಬ್ರಿಟನ್ನಿನಲ್ಲಿ ದೊರೆಯಲ್ಲೂ (ಅಥವಾ ರಾಣಿ) ನಿಹಿತವಾಗಿರುತ್ತವೆ. ಭಾರತದಲ್ಲಿ ಇವು ನೆಲಸಿರುವುದು ರಾಷ್ಟ್ರಪತಿಯಲ್ಲಿ. ರಾಷ್ಟ್ರಪತಿ ನೇರವಾಗಿ ಅಥವಾ ತನಗೆ ಅಧೀನರಾದ ಪದಾಧಿಕಾರಿಗಳ ಮೂಲಕ ಇವನ್ನು ಚಲಾಯಿಸುತ್ತಾನೆ. ರಾಜ (ರಾಣಿ), ಅಧ್ಯಕ್ಷ, ಅಥವಾ ರಾಷ್ಟ್ರಪತಿಯಾದಾತ ತನ್ನ ಅಧೀನದಲ್ಲಿ ಕಾರ್ಯಾನಿರ್ವಾಹಕ ಮಂಡಲ ಅಥವಾ ಮಂತ್ರಿ ಮಂಡಲವನ್ನು ರಚಿಸಬಹುದು. ಆಡಳಿತ ನಿರ್ವಹಣೆ ಇದರ ಹೊಣೆ.

ರಾಜ್ಯದ ಆಡಳಿತಾಂಗ ಕಾರ್ಯಾಂಗಗಳೆರಡೂ ಒಂದೇ ಎಂಬಂತೆನಿಸಿದರೂ ಇವೆರಡರ ಕಾರ್ಯಾಭಾರಗಳನ್ನೂ ಪ್ರತ್ಯೇಕಿಸುವುದು ಸಾಧ್ಯ ಮತ್ತು ಅವಶ್ಯ. ಸರ್ಕಾರ ಸುಗುಮವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದು ಕಾರ್ಯಾಂಗದ ಹೊಣೆ.

ಕಾರ್ಯಾಂಗಗಳನ್ನು ನಾನಾ ಬಗೆಯಾಗಿ ವಿಂಗಡಿಸಬಹುದು. ಅವು ಆನುವಂಶಿಕ ಅಥವಾ ಚುನಾಯಿತವಾಗಿರಬಹುದು. ಇಂಗ್ಲೆಂಡಿನ ದೇಶದ ರಾಜ ಅಥವಾ ರಾಣಿ ಆನುವಂಶಿಕ ಕಾರ್ಯಾಂಗಕ್ಕೆ ನಿದರ್ಶನ ಜನಗಳಿಂದ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಚುನಾವಣೆಯಾಗಿದ್ದಲ್ಲಿ ಅದು ಚುನಾಯಿತ ಕಾರ್ಯಾಂಗವಾಗುತ್ತದೆ. ಚುನಾಯಿತ ಕಾರ್ಯಾಂಗ ಗೊತ್ತಾದ ಅವಧಿಯವರೆಗೆ ಮಾತ್ರ ಅಧಿಕಾರದಲ್ಲಿರುತ್ತದೆ. ಈಗಿನ ಪ್ರಜಾಪ್ರಭುತ್ವ ಯುಗದಲ್ಲಿ ಚುನಾಯಿತ ಕಾರ್ಯಾಂಗ ಬಹು ಜನಾದರಣೀಯವಾಗಿದೆ. ಅಮೆರಿಕ, ಫ್ರಾನ್ಸ್ ಮತ್ತು ಭಾರತಗಳ ಕಾರ್ಯಾಂಗಗಳು ಈ ಗುಂಪಿಗೆ ಸೇರಿವೆ.

ಕಾರ್ಯಾಂಗಗಳನ್ನು ಏಕವ್ಯಕ್ತಿ ಮತ್ತು ಬಹುವ್ಯಕ್ತಿ ಕಾರ್ಯಾಂಗಗಳೆಂದೂ ವಿಂಗಡಿಸುವುದು ಸಾಧ್ಯ. ಕಾರ್ಯಾಂಗದ ಅಧಿಕಾರ ಒಬ್ಬ ವ್ಯಕ್ತಿಯಲ್ಲಿ ನಿಹಿತವಾಗಿದ್ದರೆ ಅದು ಏಕವ್ಯಕ್ತಿ ಕಾರ್ಯಾಂಗ, ಏಕವ್ಯಕ್ತಿ ಕಾರ್ಯಾಂಗದಲ್ಲಿ ಮತಭೇದಕ್ಕೆ ಕಾರಣವಿಲ್ಲ. ಅಂತಿಮ ತೀರ್ಮಾನ ಒಬ್ಬ ವ್ಯಕ್ತಿಯದು. ಅಧಿಕಾರ ಅವನಲ್ಲೇ ಇರುತ್ತದೆ. ಕ್ಷಿಪ್ರವಾಗಿ ತೀರ್ಮಾನ ತೆಗೆದುಕೊಂಡು ಕೆಲಸ ಮಾಡುವುದಕ್ಕೆ ಇದರಿಂದ ಅನುಕೂಲ. ಇದರಿಂದ ಕಾರ್ಯಾಂಗ ಭದ್ರತೆಯೂ ಸಾಧ್ಯ. ಅಮೆರಿಕದ ಅಧ್ಯಕ್ಷತೆ ಏಕವ್ಯಕ್ತಿ ಕಾರ್ಯಾಂಗಕ್ಕೆ ಉದಾಹರಣೆ. ಕೆಲವು ವ್ಯಕ್ತಿಗಳಲ್ಲಿ ಅಥವಾ ಒಂದು ಸಂಸ್ಥೆಯಲ್ಲಿ ಅಧಿಕಾರವಿದ್ದರೆ ಅದು ಬಹುವ್ಯಕ್ತಿ ಕಾರ್ಯಾಂಗ. ಸ್ವಿಟ್ಜರ್ಲೆಂಡಿನಲ್ಲಿ ಕಾರ್ಯನಿರ್ವಾಹಕ ಪರಿಷತ್ತು (ಎಕ್ಸಿಕ್ಯೂಟಿವ್ ಕೌನ್ಸಿಲ್) ಬಹುವ್ಯಕ್ತಿ ಕಾರ್ಯಾಂಗವಾಗಿ ಕೆಲಸ ಮಾಡುತ್ತಿದೆ. ಸಂಯುಕ್ತ ಪರಿಷತ್ತು (ಫೆಡರಲ್ ಕೌನ್ಸಿಲ್) ಎಂದು ಅದರ ಅಭಿಧಾನ. ಈ ವ್ಯವಸ್ಥೆಯಲ್ಲಿ ಕೆಲವು ಸಂದರ್ಭಗಳಲ್ಲಿ ಕಾರ್ಯಾಂಗದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಬಂದು ಸರ್ಕಾರ ಸುಗಮವಾಗಿ ಕೆಲಸ ಮಾಡಲು ಅಡಚಣೆಯಾಗುವ ಸಂಭವವುಂಟು.

ಕಾರ್ಯಾಂಗಗಳನ್ನು ನಾಮಮಾತ್ರ ಮತ್ತು ವಾಸ್ತವ ಕಾರ್ಯಾಂಗ ಎಂದು ವಿಂಗಡಿಸುವುದು ಇನ್ನೊಂದು ವಿಧಾನ. ಕಾರ್ಯಾಂಗಮುಖ್ಯ ಹೆಸರಿಗೆ ಮಾತ್ರ ಮುಖ್ಯನಾಗಿದ್ದರೆ ಅಂಥದು ನಾಮಮಾತ್ರ ಕಾರ್ಯಾಂಗ. ಕಾರ್ಯಾಂಗದ ಹೆಸರಿನಲ್ಲಿ ಅದರ ಅಧಿಕಾರವನ್ನು ಬೇರೆ ಅಂಗ ನಡೆಸುತ್ತಿರುತ್ತದೆ. ಅದೇ ನಿಜವಾದ ಅಥವಾ ವಾಸ್ತವ ಕಾರ್ಯಾಂಗವಾಗುತ್ತದೆ. ಇಂಗ್ಲೆಂಡ್ ದೇಶದಲ್ಲಿ ದೊರೆತನ ಅಥವಾ ರಾಜತ್ವ (ಕ್ರೌನ್) ನಾಮಮಾತ್ರ ಕಾರ್ಯಾಂಗ. ಸಚಿವಮಂಡಲ (ಕೌನ್ಸಿಲ್ ಆಫ್ ಮಿನಿಸ್ಟರ್) ಅಥವಾ ಸಂಪುಟ (ಕ್ಯಾಬಿನೆಟ್) ವಾಸ್ತವ ಕಾರ್ಯಾಂಗ. ಅಲ್ಲಿ ಸಚಿವ ಮಂಡಲಿ ದೊರೆಯ ಹೆಸರಿನಲ್ಲಿ ಕೆಲಸ ಮಾಡುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ರಾಷ್ಟ್ರಮುಖ್ಯನೂ ವಾಸ್ತವ ಅಧಿಕಾರಿಯೂ ಹೌದು. ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ನಾಮಮಾತ್ರ ಮುಖ್ಯಸ್ಥರಿದ್ದರೆ ಎಲ್ಲ ವಿಚಾರಗಳಿಗೂ ವಾಸ್ತವ ಕಾರ್ಯಾಂಗವೇ ಹೊಣೆಯಾಗಿರುತ್ತದೆ.

ಸಂಸದೀಯ (ಪಾರ್ಲಿಮೆಂಟರಿ) ಮತ್ತು ಅಸಂಸದೀಯ (ನಾನ್ ಪಾರ್ಲಿಮೆಂಟರಿ) ಕಾರ್ಯಾಂಗ–ಎಂಬುದು ಇನ್ನೊಂದು ರೀತಿಯ ವಿಂಗಡಣೆ. ಕಾರ್ಯಾಂಗ ನೇರವಾಗಿ ಅಥವಾ ಪ್ರತ್ಯಕ್ಷವಾಗಿ ಶಾಸಕಾಂಗದಿಂದ ಆಯ್ಕೆಯಾಗಿದ್ದರೆ ಅದು ಸಂಸದೀಯ. ಎಲ್ಲಿಯವರೆಗೆ ಇದು ಶಾಸಕಾಂಗದ ವಿಶ್ವಾಸ ಗಳಿಸಿಕೊಂಡಿರುವುದೋ ಅಲ್ಲಿಯುವರೆಗೆ ಅಧಿಕಾರದಲ್ಲಿರುತ್ತದೆ. ಈ ಪದ್ಧತಿಯಲ್ಲಿ ಮಂತ್ರಿಮಂಡಲ ಅಥವಾ ಸಂಪುಟ ಅಧಿಕಾರ ನಡೆಸುತ್ತಿರುತ್ತದೆ. ಇದು ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವಣ ಕೊಂಡಿ. ಇದು ಶಾಸಕಾಂಗಕ್ಕೆ, ಅದರ ಮೂಲಕ ಪ್ರಜೆಗಳಿಗೆ, ಹೊಣೆ. ಮಂತ್ರಿಗಳು ವಿಧಾನಮಂಡಲ ಅಥವಾ ಸಂಸತ್ತಿನ ಸದಸ್ಯರಾಗಿರುತ್ತಾರೆ: ಅದರ ಕಲಾಪಗಳಲ್ಲಿ ಭಾಗವಹಿಸುತ್ತಾರೆ. ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಅದಕ್ಕೆ ಅವರು ಜವಾಬ್ದಾರರಾಗಿರುತ್ತಾರೆ. ಮಂತ್ರಿಮಂಡಲ ಪ್ರಧಾನಮಂತ್ರಿ ಅಥವಾ ಮುಖ್ಯಮಂತ್ರಿಯ ಮೇಲ್ವಿಚಾರಣೆಗೆ ಒಳಪಟ್ಟು, ಅವನ ನಾಯಕತ್ವದಲ್ಲಿ ಕೆಲಸ ಮಾಡುತ್ತದೆ. ಅದನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿ ಅವನದು. ಆದ್ದರಿಂದ ಸಂಸದೀಯ ಕಾರ್ಯಾಂಗದಲ್ಲಿ ಪ್ರಧಾನ ಮಂತ್ರಿಯ ಸ್ಥಾನ ಮಹತ್ತರವಾದದ್ದು. ಆದರೆ ಇದನ್ನು ಪದಚ್ಯುತಿಗೊಳಿಸುವುದು ಬಹು ಸುಲಭ. ಆದ್ದರಿಂದ ಸರ್ಕಾರದಲ್ಲಿ ಇದರ ಮುಂದುವರಿಕೆ ಅನಿಶ್ಚಿತತೆಯಿಂದ ಕೂಡಿರುವುದುಂಟು.

ರಾಜಕೀಯ ಪಕ್ಷಗಳ ಕೈವಾಡಕ್ಕೆ ಅವಕಾಶವಿರುತ್ತದೆ. ಇಂಗ್ಲೆಂಡ್, ಫ್ರಾನ್ಸ್ ಮತ್ತು ಭಾರತದ ಮಂತ್ರಿಮಂಡಲಗಳು ಇದಕ್ಕೆ ನಿದರ್ಶನಗಳು. ಕಾರ್ಯಾಂಗದ ಆಯ್ಕೆ ನೇರವಾಗಿ ಶಾಸಕಾಂಗದಿಂದ ಆಗದಿದ್ದರೆ ಅದು ಅಸಂಸದೀಯ ಕಾರ್ಯಾಂಗ. ಇದರಲ್ಲಿ ಅಧ್ಯಕ್ಷಸ್ಥಾನ ಮುಖ್ಯವಾದ್ದು. ಅಧ್ಯಕ್ಷೀಯ ಕಾರ್ಯಾಂಗವೆಂದು ಇದನ್ನು ಕರೆಯಲಾಗುತ್ತದೆ. ಅಧ್ಯಕ್ಷ ಸಾಮಾನ್ಯವಾಗಿ ಒಂದು ಗೊತ್ತಾದ ಕಾಲದವರೆಗೂ ಅಧಿಕಾರದಲ್ಲಿರುತ್ತಾನೆ. ಆದ್ದರಿಂದ ಇದು ಸ್ಥಿರ (ಫಿಕ್ಸೆಡ್) ಕಾರ್ಯಾಂಗ. ಅಧ್ಯಕ್ಷನ ಅಧಿಕಾರಾವಧಿ ಸಂವಿಧಾನದಲ್ಲಿ ನಿರೂಪಿತವಾಗಿರುತ್ತದೆ. ಇದರಲ್ಲಿ ಅಧ್ಯಕ್ಷ ಶಾಸನಸಭೆಯ ಸದಸ್ಯನಾಗಿರಬೇಕಾಗಿಲ್ಲ. ಶಾಸನಸಭೆ ಅಧ್ಯಕ್ಷನ ಮೇಲೆ ನೇರವಾದ ಹತೋಟಿ ಹೊಂದಿರುವುದಿಲ್ಲ. ಆದ್ದರಿಂದ ಅಧ್ಯಕ್ಷನ ಅಧಿಕಾರಾವಧಿ ಶಾಸಕಾಂಗದ ಇಚ್ಛೆಗೆ ಅನುಗುಣವಾಗಿರಬೇಕಾದ ಆವಶ್ಯಕತೆಯಿಲ್ಲ. ಅಮೆರಿಕದ ಅಧ್ಯಕ್ಷತೆ ಇದಕ್ಕೆ ಉದಾಹರಣೆ.

ಈಗಿನ ಕಾಲದಲ್ಲಿ ಸಾಮಾನ್ಯವಾಗಿ ಎಲ್ಲ ಪ್ರಜಾಪ್ರಭುತ್ವಗಳಲ್ಲೂ ಕಾರ್ಯಾಂಗದ ಅಧಿಕಾರ ಹೆಚ್ಚುತ್ತಿದೆ. ಕೆಲವು ಸಂದರ್ಭಗಳಲ್ಲಿ ಅದು ಶಾಸಕಾಂಗದ ಅಧಿಕಾರವನ್ನು ವಹಿಸಿಕೊಳ್ಳುತ್ತದೆ. ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಪ್ರಜಾಭಿಪ್ರಾಯವನ್ನು ಪ್ರತಿನಿಧಿಸುವ ಅಂಗವಾಗಿದ್ದು, ದೇಶದ ಎಲ್ಲ ಚಟುವಟಿಕೆಗಳ ಮೇಲೆ ಅದರ ಪ್ರಭಾವ ಬೀರುವ ಹಾಗಿದ್ದರೂ ಕಾರ್ಯಾಂಗ ಅದನ್ನು ಕೆಲವು ಸಾರಿ ನಿಸ್ತೇಜವನ್ನಾಗಿ ಮಾಡುತ್ತದೆ. ಕಾರ್ಯಾಂಗದ ಕರ್ತವ್ಯಗಳನ್ನು ರಾಜಕೀಯ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಎರಡು ವಿಧಗಳಾಗಿ ವಿಂಗಡಿಸಬಹುದು. ಸರ್ಕಾರದ ಇತರ ಅಂಗಗಳೊಡನೆ ಕಾರ್ಯಾಂಗ ಇಟ್ಟುಕೊಂಡಿರುವ ಸಂಬಂಧ, ಸರ್ಕಾರದ ಸಾಮಾನ್ಯ ನೀತಿ ಇವಕ್ಕೆ ಸಂಬಂಧಿಸಿದ ಪ್ರಶ್ನೆಗಳ ನಿರ್ಧಾರ–ಇವನ್ನು ಕಾರ್ಯಾಂಗಕ್ಕೆ ಸೇರಿಸಬಹುದು. ದೇಶದ ಆಡಳಿತದ ಎಲ್ಲ ವಿಚಾರಗಳೂ ಆಡಳಿತಾಂಗಕ್ಕೆ ಸೇರುತ್ತವೆ. ವಿದೇಶಾಂಗನೀತಿ, ರಕ್ಷಣೆ, ಕಾನೂನುರಚನೆ, ನ್ಯಾಯನಿರ್ವಹಣೆ, ಆಡಳಿತ ಮತ್ತು ಹಣಕಾಸು ಇವೆಲ್ಲ ಕರ್ತವ್ಯಗಳ ನಿರ್ವಹಣೆಯೂ ಸರಿಯಾಗಿ ಆಗಬೇಕಾದರೆ ಕಾರ್ಯಾಂಗದ ನಾಯಕತ್ವ ದಕ್ಷವಾದ್ದಾಗಿರಬೇಕು. (ಎಂ.ಕೆ.ಆರ್.)

**ಕಾರ್ಲ್ ಫಿಷರ್ ಅಭಿಕರ್ಮಕ :** ನೀರನ್ನು ಗಾತ್ರ ವಿಶ್ಲೇಷಣ ಕ್ರಮದಿಂದ (ಟೈಟ್ರಿಮೆಟ್ರಿಕ್) ನಿರ್ಧರಿಸಲು ಬಳಸುವ ದ್ರಾವಣ (ಕಾರ್ಲ್‌ಫಿಷರ್ ರೀ ಏಜೆಂಟ್). ಇದರ ಸಂಕ್ಷೇಪ ರೂಪ KFR. ಇದನ್ನು ಅಯೋಡೀನ್, ಗಂಧಕದ ಡೈಆಕ್ಸೈಡ್, ಪಿರಿಡೀನ್ ಮತ್ತು ಮೆಥನಾಲ್ ಎಂಬ ನಾಲ್ಕು ಪದಾರ್ಥಗಳಿಂದ ತಯಾರಿಸಲಾಗುವುದು. ನೀರಿರುವಾಗ ರಾಸಾಯನಿಕ ಕ್ರಿಯೆ ನಡೆಯುವ ಹಂತಗಳು ಎರಡು:

$$H_2O + I_2 + SO_2 + 3C_5H_5N \rightarrow 2C_5H_5N.HI + C_5H_5N.SO_3$$

$$C_5H_5N.SO_3 + CH_3OH \rightarrow C_6H_5N.HSO_4CH_3$$

KFR ಅಸ್ಥಿರವಾದದ್ದು. ಈ ಗುಣದಿಂದಾಗಿ ಇದರ ಪ್ರಬಲತೆ ಕಡಿಮೆ ಆಗುತ್ತದೆ. ಆದ್ದರಿಂದ ಆಗಿಂದಾಗ್ಗೆ ಈ ಅಭಿಕರ್ಮಕದ ಪ್ರಬಲತೆಯನ್ನು ನಿರ್ಧರಿಸಬೇಕಾಗುವುದು. ಇದಕ್ಕಾಗಿ ಸೋಡಿಯಂ ಟಾರ್ಟ್ರೇಟ್ ಡೈ ಹೈಡ್ರೇಟ್‌ನಂಥ ಜಲಸಂಯುಕ್ತ ವಸ್ತು, ನೀರು ಅಥವಾ ನಿರ್ದಿಷ್ಟ ಪ್ರಮಾಣದಲ್ಲಿ ನೀರನ್ನೊಳಗೊಂಡ ಮೆಥನಾಲ್ ಇವನ್ನು ಬಳಸಬಹುದು. KFR ಅನುಮಾಪನದಲ್ಲಿ ಕ್ರಿಯಾಂತ್ಯವನ್ನು ಕಣ್ಣಿನಿಂದಾಗಲಿ ವಿದ್ಯುನ್ಮಾಪನ ವಿಧಾನದಿಂದಾಗಲಿ ಗುರುತಿಸಬಹುದು. ಮೊದಲನೆಯ ವಿಧಾನದಲ್ಲಿ ಈ ಅಭಿಕರ್ಮಕವೇ ಸೂಚಕವಾಗಿ ಕೆಲಸ ಮಾಡುವುದು. ನೀರು ಇರುವವರೆಗೂ ಅಯೊಡೀನಿನ ಬಣ್ಣ ಹೋಗುವುದು. ಅಯೋಡೀನಿನ ಬಣ್ಣ ಮೊದಲು ಯಾವಾಗ ಕಾಣುವುದೋ ಆಗ ಕ್ರಿಯಾಂತ್ಯ. ಈ ವಿಧಾನದಿಂದ 0.1 ಮಿಲಿಗ್ರಾಂನಷ್ಟು ಕಡಿಮೆ ಪ್ರಮಾಣದಲ್ಲಿ ನೀರನ್ನು ಪತ್ತೆ ಹಚ್ಚಬಹುದು. ವಿದ್ಯುನ್ಮಾಪನ ವಿಧಾನಗಳಿಂದ ಇನ್ನೂ ಕಡಿಮೆ ಪ್ರಮಾಣದಲ್ಲಿ ಅಂದರೆ 0.02 ಮಿಲಿಗ್ರಾಂನಷ್ಟು ಕಂಡುಹಿಡಿಯಬಹುದು. KFRನ್ನು ಪ್ರಬಲತೆ ಕೆಡದಂತೆ ಇಡಲು ಅನೇಕ ವಿಧಾನಗಳಿವೆ. ಗಂಧಕದ ಡೈಆಕ್ಸೈಡ್ ಇಲ್ಲದಿದ್ದರೆ ಈ ಮಿಶ್ರಣ ನಿಷ್ಕ್ರಿಯವಾಗುತ್ತದೆ. ಆದ್ದರಿಂದ ಅಯೋಡೀನ್, ಪಿರಿಡೀನ್ ಮತ್ತು ಮೆಥನಾಲ್ ದ್ರಾವಣಗಳನ್ನು ಬೇರೆ ಬೇರೆಯಾಗಿಟ್ಟುಕೊಂಡು ಯಾವಾಗ ಬೇಕೋ ಆಗ ಗಂಧಕದ ಡೈಆಕ್ಸೈಡನ್ನು ಬೆರೆಸಬಹುದು. ದ್ರವ, ಘನವಸ್ತು ಮತ್ತು ಅನಿಲಗಳಲ್ಲಿರುವ ನೀರಿನ ಪ್ರಮಾಣವನ್ನು ಶೀಘ್ರವಾಗಿ ಕಂಡುಹಿಡಿಯಲು KFR ಅನ್ನು ಬಳಸಬಹುದು. (ಎನ್.ಎಸ್.ಕೆ.)

**ಕಾರ್ಲೆ :** ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯಲ್ಲಿರುವ ಒಂದು ಐತಿಹಾಸಿಕ ಸ್ಥಳ. ಇಲ್ಲಿರುವ ಚೈತ್ಯಾಲಯ ಇಡೀ ಭಾರತದಲ್ಲಿಯ ಬೌದ್ಧ ಚೈತ್ಯಾಲಯಗಳಲ್ಲಿ ಅತಿ ದೊಡ್ಡದು ಮತ್ತು ಸುಂದರವಾದುದು. ಪ್ರ.ಶ. 1ನೆಯ ಮತ್ತು ಪ್ರ.ಶ.ಪೂ. 1ನೆಯಶತಮಾನಗಳ ನಡುವಣ ಕಾಲದ ಈ ಚೈತ್ಯಾಲಯ ಮೊದಲು ಹೀನಯಾನ ಪಂಥಕ್ಕೆ ಸೇರಿದ್ದು ಅನಂತರ ಸು. 6ನೆಯ ಶತಮಾನದಲ್ಲಿ ಮಹಾಯಾನ ಪಂಥಕ್ಕೆ ಪರಿವರ್ತಿತವಾಯಿತು. ಇದನ್ನು ಬೃಹದಾಕಾರದ ಏಕಶಿಲೆಯಲ್ಲಿ ಕಡೆಯಲಾಗಿದ್ದರೂ ಹಿಂದೆ ಪ್ರಚಲಿತವಿದ್ದ ಮರದ ವಾಸ್ತುಕಲೆಯ ರೀತಿಯಲ್ಲಿ ಮುನ್‌ಚಾಚಿದ ತೊಲೆಗಳನ್ನು ಕಲ್ಲಿನಲ್ಲಿ ಬಿಡಿಸಿದೆ. ಇದು ಮರದ ಕಟ್ಟಡಗಳ ಮಾದರಿಯಲ್ಲಿದೆ. ಪಶ್ಚಿಮಭಾರತದ ಬಂಡೆಗಳಲ್ಲಿ ಕೊರೆದ ಗುಹೆಗಳಲ್ಲಿ ಮೊದಲ ಕಾಲದ ಗುಂಪಿಗೆ ಭಾಜ, ಕೊಂಡಾನೆ, ಪಿತಲ್‌ಖೋರ, ಬೆಡ್ಸ ಮುಂತಾದವೂ ಅನಂತರ ಕಾಲದಕ್ಕೆ ನಾಸಿಕ್ ಮತ್ತು ಕಾರ್ಲೆ ಇವೂ ಸೇರಿವೆ. ಇವುಗಳಲ್ಲಿ ಕೊನೆಯದು



ಗುಹಾಂತರ ದೇವಾಲಯ, ಕಾರ್ಲೆ

ಕನ್ಹೇರಿಯ ಗುಹೆ. ಈ ಬೌದ್ಧಗುಹೆಗಳಲ್ಲಿ ಅತ್ಯಂತ ದೊಡ್ಡದು ಕಾರ್ಲೆಯ ಚೈತ್ಯಮಂದಿರ. ಇವೆಲ್ಲವೂ ಗಜಪೃಷ್ಠಾಕೃತಿಯ ಗುಹಾಮಂದಿರಗಳು. ಇದು 37.5 ಮೀ ಉದ್ದ 14 ಮೀ



ಗುಹಾಂತರ ದೇವಾಲಯದೊಳಗಿನ ಶಿಲ್ಪಗಳು

ಅಗಲ ಮತ್ತು 13.6 ಮೀ ಎತ್ತರವಿದೆ. ಇದರ ಮುಖಮಂಟಪ ಎರಡು ಅಂತಸ್ತುಳ್ಳದ್ದಾಗಿದೆ. ಮೊದಲ ಅಂತಸ್ತಿನಲ್ಲಿ ಪ್ರವೇಶದ್ವಾರವೂ ಮೇಲಂತಸ್ತಿನಲ್ಲಿ ಗಾಳಿಬೆಳಕುಗಳಿಗಾಗಿ ಒಂದು ದೊಡ್ಡ ಲಾಳಾಕೃತಿಯ ಕಿಟಕಿಯೂ ಇವೆ. ಹಜಾರದಲ್ಲಿ ಎರಡು ಸಾಲಿನಲ್ಲಿ 37 ಕಂಬಗಳಿದ್ದು ಮಧ್ಯದ ಅಂಕಣವನ್ನು ಸುತ್ತಿನ ಪ್ರದಕ್ಷಿಣಾ ಪಥದಿಂದ ಬೇರ್ಪಡಿಸುತ್ತದೆ. ಈ ಕಂಬಗಳ ತಳಭಾಗ ಕುಂಭಾಕಾರದಲ್ಲಿದೆ. ಇದಕ್ಕೆ 8 ಮುಖಗಳಿವೆ. ಇವುಗಳ ಮೇಲೆ ಪದ್ಮಪುಷ್ಪದ ಆಕಾರದ ಬೋದಿಗೆ, ಅವುಗಳ ಮೇಲೆ ತಲೆಕೆಳಗಾದ ಗುಮ್ಮಟ ಮತ್ತು ಗುಮ್ಮಟಗಳ ಮೇಲೆ ಸ್ತ್ರೀ ಪುರುಷ ಸವಾರೊಂದೊಡಗೂಡಿದ ಸುಂದರವಾದ ಆನೆಗಳು ಇವೆ. ಇವುಗಳ

ಮೇಲಿನ ಶಿಲ್ಪಗಳೂ ಉತ್ತಮವಾಗಿವೆ. ಈ ಚೈತ್ಯಕ್ಕೆ ಮೂರು ಪ್ರವೇಶದ್ವಾರಗಳಿವೆ. ಮುಖ್ಯಪ್ರವೇಶದ್ವಾರದ ಬದಿಯ ಗೋಡೆಗಳ ಮೇಲಿನ ಶಿಲ್ಪಗಳು ಕಲಾಪೂರ್ಣವಾದವು. ಇವನ್ನು ಬನವಾಸಿಯ ಭೂತಪಾಲಸೆಟ್ಟಿ ಕೊರೆಯಿಸಿದ್ದಾನೆ. ಇದರ ಮಧ್ಯ ಅಂಕಣದ ಕೊನೆಯಲ್ಲಿ ಬಂಡೆಗಲ್ಲಿನಲ್ಲಿ ಕೊರೆದ ಒಂದು ಸೂಪ್ತವಿದೆ. ಸೂಪ್ತದ ತಲೆಯ ಮೇಲಿರುವ ಅದೇ ಕಾಲದ ಮರದ ಛತ್ರಿ ಇನ್ನೂ ಉಳಿದುಬಂದಿದೆ.

ಈ ಗುಹಾಂತರ್ದೇವಾಲಯದ ಮುಂದೆ ಈಗ ಒಂದು ದೊಡ್ಡ ಸ್ತಂಭವಿದೆ. ಅದರ ಮೇಲೆ ಅಗ್ನಿಮಿತ್ರನೆಂಬವನು ಇದನ್ನು ಮಾಡಿಸಿದನೆಂಬ ಉಲ್ಲೇಖವಿದೆ. ಆ ಸ್ತಂಭ ಅಶೋಕನ ಸ್ತಂಭಗಳ ಮಾದರಿಯಲ್ಲಿದೆ. ಅದಕ್ಕೆ 16 ಮುಖಗಳೂ ಬೋದಿಗೆಯ ಮೇಲೆ 4 ಸಿಂಹಗಳ ಶಿಲ್ಪಗಳೂ ಇವೆ. (ಎ.ಎಂ.ಎ.; ಬಿ.ಕೆ.ಜಿ.)

**ಕಾರ್ಲೈಲ್, ಥಾಮಸ್ :** 1795–1881. ಇಂಗ್ಲಿಷ್ ಗದ್ಯ ಸಾಹಿತಿ. ಸಾರ್ಟರ್ ರಿಸಾರ್ಟಸ್, ಫ್ರೆಂಚ್ ರೆವಲ್ಯೂಷನ್ ಮೊದಲಾದ ಗ್ರಂಥಗಳ ಕರ್ತೃ. ತನ್ನ ಕಾಲದ ಲೇಖಕರ ಮೇಲೆ ಹೆಚ್ಚಿನ ಪ್ರಭಾವ ಬೀರಿದವ. ಹದಿನೈದನೆಯ ವಯಸ್ಸಿನಲ್ಲಿ ಎಡಿನ್‌ಬರೊ

ವಿಶ್ವವಿದ್ಯಾನಿಲಯವನ್ನು ಸೇರಿದನಾದರೂ ಪದವೀಧರನಾಗಲಿಲ್ಲ. 1826ರಲ್ಲಿ ಜೇನ್ ವೆಲ್ಷಳನ್ನು ಮದುವೆಯಾದ. ಸತ್ತ್ವಶಾಲಿಯಾದ ವ್ಯಕ್ತಿತ್ವವನ್ನುಳ್ಳ ಈಕೆ ಈತನ ಕಷ್ಟ, ನಿರಾಶೆಗಳ ದಿನಗಳಲ್ಲಿ ಧೈರ್ಯ ವನ್ನಿತ್ತಳು. ಈಕೆಯ ಮರಣಾ ನಂತರ (1866) ಗಣನೀಯ ವಾದುದೇನನ್ನೂ ಕಾರ್ಲೈಲ್ ಬರೆಯಲಿಲ್ಲ. ಬಹು ವರ್ಷ ಬಡತನವನ್ನು ಅನುಭವಿಸಿ, ಉಪಾಧ್ಯಾಯ ವೃತ್ತಿಯನ್ನೂ ಕೈಗೊಂಡಿದ್ದು ಅನಂತರ ಕಾರ್ಲೈಲ್ ಸಾಹಿತ್ಯದತ್ತ ತಿರುಗಿದ. ಅನಾರೋಗ್ಯ, ವಿಷಣ್ಣತೆಗಳು ಈತನನ್ನು ಜೀವನದ ಉದ್ದಕ್ಕೂ ಕಾಡಿದವು. ಯಶಸ್ಸು ಕಾರ್ಲೈಲನಿಗೆ ತಡವಾಗಿ–1865 ರಿಂದಾಚೆ–ಬಂದಿತು. ಚೆಲ್ಸಿಯಲ್ಲಿ ವಾಸಿಸುತ್ತಿದ್ದ ಇವನನ್ನು ಜನರು 'ದ ಸೇಜ್ ಆಫ್ ಚೆಲ್ಸಿ' ಎಂದು ಕರೆದರು. ಆದರೂ ಕಡೆಯ ವರ್ಷಗಳನ್ನು ಈತ ಏಕಾಂತದಲ್ಲಿ ಕಳೆದ.

1820–21ರ ಹೊತ್ತಿಗೆ ಕಾರ್ಲೈಲನ ಗಮನ ಜರ್ಮನ್ ಸಾಹಿತ್ಯದತ್ತ ಹೊರಳಿತು. ಗಯಟೆಯ ಫೌಸ್ಟ್ ಮೇಲಿನ ಪ್ರಬಂಧ ಮತ್ತು ಷಿಲರ್‌ನ ಜೀವನಚರಿತ್ರೆ ಇವು ಕಾರ್ಲೈಲನ ಪ್ರಾರಂಭದ ಕೃತಿಗಳು. ಗಯಟೆಯಲ್ಲಿ ಇವನಿಗೆ ಅಸಾಧಾರಣ ಮೆಚ್ಚಿಕೆಯಿತ್ತು. ಜರ್ಮನ್ ಸಸ್ಯಶಾಸ್ತ್ರದ ಅಭ್ಯಾಸದಿಂದ ಭಾರತೀಯ ಚಿಂತನೆಯ ಪರಿಚಯವೂ ಆಯಿತು.

ಕಾರ್ಲೈಲನದು ಅಸಾಧಾರಣ ವ್ಯಕ್ತಿತ್ವ. ಸ್ವಭಾವತಃ ಯೋಚನಾಪರನೂ ನೈತಿಕ ಶ್ರದ್ಧೆಯುಳ್ಳವನೂ ಆದ ಈತ ಜೀವನದಲ್ಲಿ ಹಲವು ಕಷ್ಟಗಳನ್ನೂ ಸೋಲನ್ನೂ ಕಂಡ. ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ಎದುರಾದ ಶೂನ್ಯವನ್ನೂ ದಿಗ್ಭ್ರಮೆಯನ್ನೂ ಎದುರಿಸಿದ. ತನ್ನದೇ ಆದ ದರ್ಶನವನ್ನು ಸಾಧಿಸಿದ. ಗಡಸೂ ಶಕ್ತಿಯುತವೂ ಆದ ಈತನ ವ್ಯಕ್ತಿತ್ವ ಈತನ ಬರೆವಣಿಗೆಯಲ್ಲೆಲ್ಲ ಅಭಿವ್ಯಕ್ತವಾಗಿದೆ.

ಕಾರ್ಲೈಲನ ಸಾಹಿತ್ಯ ವೈವಿಧ್ಯಪೂರ್ಣವಾದುದು. ಸಾಹಿತ್ಯ ವಿಮರ್ಶೆಯಿಂದ ಈತನ ಗಣನೀಯ ಸಾಹಿತ್ಯಸೃಷ್ಟಿ ಪ್ರಾರಂಭವಾಯಿತು. ಈತನಿಗೆ ಉತ್ತಮ ವಿಮರ್ಶಕನ ಸೂಕ್ಷ್ಮ ಪರಿಜ್ಞಾನ ಉಂಟು. ಸ್ಕಾಟ್‌ಲೆಂಡಿನ ಬರೆಹಗಾರರಾದ ಬರ್ನ್ಸ್ ಮತ್ತು ಸರ್ ವಾಲ್ಟರ್ ಸ್ಕಾಟರನ್ನು ಕುರಿತ ಈತನ ವಿಮರ್ಶೆ ಹೊಸಬೆಳಕು ಚೆಲ್ಲುವಂಥದು. ಪಾಸ್ಟ್ ಅಂಡ್ ಪ್ರೆಸೆಂಟ್ (1843) ಎಂಬ ಕೃತಿಯಲ್ಲಿ ಈತನ ಮಧ್ಯಯುಗದ ದೃಷ್ಟಿ ಎದ್ದುಕಾಣುತ್ತದೆ. ಆದರೆ ವಿಕ್ಟೋರಿಯ ಯುಗದ ಈತನ ಟೀಕೆ ರಸ್ಕಿನ್ ಮುಂತಾದ ಹಲವರ ಮೇಲೆ ಪ್ರಭಾವವನ್ನು ಬೀರಿತು.

ಸಾರ್ಟರ್ ರಿಸಾರ್ಟಸ್ ಎಂಬ ಈತನ ಕೃತಿಯನ್ನು ಯಾವ ಗುಂಪಿಗೆ ಸೇರಿಸುವುದೂ ಕಷ್ಟ. ಫ್ರೆಂಚ್ ರೆವಲ್ಯೂಷನ್ (1837), ಫ್ರೆಡರಿಕ್ ದಿ ಗ್ರೇಟ್, ಹೀರೋಸ್ ಅಂಡ್ ಹೀರೊ ವರ್ಷಿಪ್ (1841)–ಇವು ಕಾರ್ಲೈಲನ ಇತರ ಗಣ್ಯಕೃತಿಗಳು. ಬರಿಯ ದೈಹಿಕಶಕ್ತಿಯನ್ನು ಆಧರಿಸಿದ ಹಿರಿಮೆಗೂ ಆಧ್ಯಾತ್ಮಿಕ ಮತ್ತು ಕಲಾಶಕ್ತಿಯನ್ನು ಆಧರಿಸಿದ ಹಿರಿಮೆಗೂ ಭೇದವನ್ನು ಕಾರ್ಲೈಲ್ ಸ್ಪಷ್ಟವಾಗಿ ಗುರುತಿಸದಿರುವುದರಿಂದ, ಪ್ರಶಂಸೆಗೆ ಸಲ್ಲದ ವ್ಯಕ್ತಿಗಳು ಮತ್ತು ಕೃತಿಗಳು ಈತನ ಹೊಗಳಿಕೆಗೆ ಪಾತ್ರವಾಗಿವೆ. ಈ ಪ್ರವೃತ್ತಿ ಇರುವುದರಿಂದಲೇ ಕ್ರಾಮ್‌ವೆಲ್ ಮತ್ತು ಫ್ರೆಡರಿಕರನ್ನು ಕಾರ್ಲೈಲ್ ಆದರ್ಶ ವ್ಯಕ್ತಿಗಳೆನ್ನುತ್ತಾನೆ. ಫ್ರೆಂಚ್ ರೆವಲ್ಯೂಷನ್ ಎಂಬ ಉದ್ಗ್ರಂಥದಲ್ಲಿ ಕ್ರಾಂತಿಯ ವಾಸ್ತವಿಕ ಅಂಶಗಳಿಗಿಂತ ಅದರ ಐತಿಹ್ಯಕ್ಕೆ ಹೆಚ್ಚು ಪ್ರಾಧಾನ್ಯ ಬಂದಿದೆ. ಆದರೂ ಕ್ರಾಂತಿಯ ಅನೇಕ ಮುಖ್ಯ ಘಟನಾವಳಿಗಳ ಹೃದಯಸ್ಪರ್ಶಿ ಚಿತ್ರಗಳು, ಅಧಿಕಾರಿಗಳ ದಬ್ಬಾಳಿಕೆ, ಅದನ್ನೆದುರಿಸಿದ ಜನನಾಯಕರ ಧೈರ್ಯ ಸಾಹಸಗಳು–ಇವುಗಳ ವರ್ಣನೆಗಳು ಮೈನವಿರೇಳುವಂತೆ ಚಿತ್ರಿತವಾಗಿವೆ. ಇಡೀ ಕೃತಿಯಲ್ಲಿ ಜ್ವಾಲಾಮುಖಿಯ ಶಕ್ತಿಯುಂಟು. ತನ್ನ ಹೃದಯದಿಂದ ಜ್ವಾಲೆಯಂತಹ ಈ ಕೃತಿ ಹೊಮ್ಮಿತೆಂದು ಕಾರ್ಲೈಲ್ ತನ್ನ ಹೆಂಡತಿಗೆ ಹೇಳಿದನಂತೆ. ಆಲಿವರ್ ಕ್ರಾಮ್‌ವೆಲ್‌ನ ಪತ್ರಗಳು ಮತ್ತು ಭಾಷಣಗಳು (1845) ಎಂಬುದು ಕಾರ್ಲೈಲ್‌ನ ಬಹು ಯಶಸ್ವಿಯಾದ ಚಾರಿತ್ರಿಕ ಕೃತಿ. ಇಲ್ಲಿ ಬರುವ ಕ್ರಾಮ್‌ವೆಲ್ಲನ ಚಿತ್ರ ಅಸಾಧಾರಣವಾದುದು, ಜೀವಂತವಾದುದು. ಎಡಿನ್‌ಬರೊ ಭಾಷಣ (1866) ಎಂಬ ಕೃತಿ ಇಂದಿಗೂ ಸ್ಫೂರ್ತಿದಾಯಕವಾಗಿದೆ.

ಕಾರ್ಲೈಲ್ ಯಾವ ರಾಜಕೀಯ ಪಂಗಡಕ್ಕೂ ಸೇರಿದವನಲ್ಲ. ಜರ್ಮನ್ ಸಾಹಿತ್ಯವನ್ನು ಒಲಿದಿದ್ದ ಗಯಟೆಯನ್ನು ತನ್ನ ಗುರುವೆಂದು ಭಾವಿಸಿದ್ದರೂ ಕಾರ್ಲೈಲನದು ಸ್ವತಂತ್ರ ವಿಚಾರವೃತ್ತಿ, ಸ್ವತಂತ್ರ ವ್ಯಕ್ತಿತ್ವ. ಮನಶ್ಶಾಂತಿಯ ಅನ್ವೇಷಣೆಯಲ್ಲಿ ತೊಳಲಿ ಕೊನೆಗೆ ಫಲದ ನಿರೀಕ್ಷಣೆ ಇಲ್ಲದ ಕರ್ಮವೇ ಶಾಂತಿಯ ಸಾಧನ ಎಂದು ಕಂಡು ಕೊಂಡವನೀತ. ಗೀತೆ ಬೋಧಿಸಿದ ಪಾಠವೇ–ಫಲವನ್ನು ಬೇಡದ ಶ್ರದ್ಧಾವಂತ ಕಾಯಕವೇ–ಇವನ ಜೀವನ ಮಂತ್ರ. ಆರ್ಥಿಕ ಮತ್ತು ವೈಜ್ಞಾನಿಕ ಪ್ರಗತಿ, ಬ್ರಿಟಿಷ್ ಸಾಮ್ರಾಜ್ಯದ ಅಭಿವೃದ್ಧಿಗಳಿಗೆ ಹೆಸರಾದ ಯುಗದಲ್ಲಿ ಕಾರ್ಲೈಲ್ ಬೌದ್ಧಿಕ ಶಕ್ತಿಯನ್ನು ಅಲ್ಲಗಳೆದ; ಕ್ರಿಯಾಶೀಲತೆ, ತ್ಯಾಗ, ಕಾಯಕಗಳನ್ನು ಬೋಧಿಸಿದ; ಅವತಾರ ಪುರುಷರಲ್ಲಿ ತನಗಿದ್ದ ನಂಬಿಕೆಯನ್ನು ಸಮರ್ಥಿಸಿದ. ವಿಜ್ಞಾನ ಮತ್ತು ಪ್ರಜಾಪ್ರಭುತ್ವಗಳ ಹುಲು ವಿಗ್ರಹಗಳನ್ನು ಜರೆದ. ಸಾಹಿತಿಯಾಗಿ ಕಾರ್ಲೈಲ್ ಅಸಾಧಾರಣ ವೈಯಕ್ತಿಕ ಶೈಲಿಯನ್ನು ಸಾಧಿಸಿದ. ಈತನ ಭಾಷೆ ಲಲಿತವಾಗಿ ಹರಿಯದು. ತಡೆದು ತಡೆದು ಅದು ಸಾಗುತ್ತದೆ. ಆದರದು ಆವೇಶಪೂರ್ಣ, ಕ್ಲಿಷ್ಟ. ಆರ್ನಲ್ಡನಂಥ ಪ್ರಾಚೀನಮನೋಧರ್ಮದ ವಿಮರ್ಶಕನಿಗೆ ಒಪ್ಪಿಗೆಯಾಗದ ಶೈಲಿಯಾಗಿದ್ದರೂ ಸತ್ತ್ವಪೂರ್ಣ, ಪುಳುಕಿತಗೊಳಿಸಬಲ್ಲದ್ದು, ಸ್ಫೂರ್ತಿನೀಡಬಲ್ಲದ್ದು. ಈತನ ಶೈಲಿ ಸ್ಕಾಟ್ ಜನರಿಗೆ ಸಹಜವಾದ ದೃಢತನದ ಪ್ರತೀಕವಷ್ಟೆ. ಈತ ಏನನ್ನು ವರ್ಣಿಸಿದರೂ ಅದು ಕಣ್ಣ ಮುಂದೆ ನಡೆದಷ್ಟು ಸುಸ್ಪಷ್ಟವಾಗಿರುತ್ತದೆ, ರೋಮಾಂಚಕಾರಿಯಾಗುತ್ತದೆ. ಅತಿ ಶ್ರದ್ಧಾವಂತವೂ ಸೂಕ್ಷ್ಮವೂ ಆಗಿದ್ದು ಪ್ರಪಂಚವನ್ನೇ ಮಾರ್ಪಡಿಸಿ ಉದ್ಧರಿಸಲು ಹಂಬಲಿಸುವ ಮಹಾಪ್ರವಾದಿಯ ಚೇತನ–ಕಾರ್ಲೈಲನದು.

ಒಂದು ಕಾಲದಲ್ಲಿ ಪ್ರಸಿದ್ಧವಾಗಿದ್ದ ಹೀರೋಸ್ ಅಂಡ್ ಹೀರೊವರ್ಷಿಪ್ ಕೃತಿಯಲ್ಲಿ ಕಾರ್ಲೈಲ್, ಇತಿಹಾಸವು ವೀರರ ಕಥೆ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುತ್ತಾನೆ. (ಇಲ್ಲಿ ವೀರರೆಂದರೆ ದೈಹಿಕ ಶಕ್ತಿ ಅಥವಾ ಕೆಚ್ಚನ್ನು ಮೆರೆಯುವವರಲ್ಲ ಇವರು ವಿಭೂತಿಪುರುಷರು. ಜನ್ಮಸಹಜವಾದ ಅಸಾಧಾರಣ ಶಕ್ತಿಯಿಂದ ಸಮುದಾಯದ ಬದುಕನ್ನು ರೂಪಿಸಬಲ್ಲವನು ವೀರ.) ವೀರನು ರಾಜನಾಗಬಹುದು, ಧರ್ಮಾಧಿಕಾರಿಯಾಗಿರಬಹುದು, ಪ್ರವಾದಿಯಾಗಿರ ಬಹುದು, ಕವಿಯಾಗಿರಬಹುದು. ಕಾರ್ಲೈಲನಿಗೆ ಪ್ರಜಾಪ್ರಭುತ್ವದಲ್ಲಿ ಮತ್ತು ಸರ್ವಸಮಾನತೆಯಲ್ಲಿ ನಂಬಿಕೆ ಇರಲಿಲ್ಲ.

ಕಾರ್ಲೈಲನ ಪ್ರಮುಖ ಕೃತಿ ಸಾರ್ಟರ್ ರಿಸಾರ್ಟಸ್ ಮೊದಲಿಗೆ ಫ್ರೇಸರ್ಸ್ ಮ್ಯಾಗಜೀನ್ ಎಂಬ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಜರ್ಮನ್ ತತ್ತ್ವಶಾಸ್ತ್ರದ, ಅದರಲ್ಲೂ ಮುಖ್ಯವಾಗಿ ಜೀನ ಪಾಲ್ ರಿಕ್ಟರನ ಪ್ರಭಾವ ಇದರಲ್ಲಿ ಸ್ಪಷ್ಟ. 'ದರ್ಜಿಗೆ ತೇಪೆ' ಎಂದು ಪುಸ್ತಕದ ಹೆಸರಿನ ಅರ್ಥ. ಇದರಲ್ಲಿ ಎರಡು ಭಾಗಗಳುಂಟು. ಕಾಲ್ಪನಿಕ ವ್ಯಕ್ತಿಯಾದ ಪ್ರೊಫೆಸರ್ ಟ್ಯೂಫೆಲ್ಸ್‌ಡ್ರಾಕ್‌ನ ಅಭಿಪ್ರಾಯಗಳನ್ನು ಆಧರಿಸಿದ ಬಟ್ಟೆಗಳ ವೇದಾಂತ ಒಂದು. ಮಾನವ ಸಮಾಜದ ಎಲ್ಲ ಸಂಕೇತಗಳೂ ಸಂಸ್ಥೆಗಳೂ ಮನುಷ್ಯನ ಉಡುಪಿನಂತೆ ಮತ್ತೆ ಮಾರ್ಪಾಡಿಗೆ ಒಳಪಡುತ್ತವೆ ಎನ್ನುವ ಸಿದ್ಧಾಂತವನ್ನು ಮುಟ್ಟುತ್ತಾನೆ, ಕಾರ್ಲೈಲ್. ಎರಡನೆಯ ಭಾಗ ಟ್ಯೂಫೆಲ್ಸ್‌ಡ್ರಾಕನ ಜೀವನಚರಿತ್ರೆ. ಇದು ಬಹುಮಟ್ಟಿಗೆ ಕಾರ್ಲೈಲ್‌ನ ಆತ್ಮವೃತ್ತ. ಟ್ಯೂಫೆಲ್ಸ್‌ಡ್ರಾಕನಿಗೆ ವಿವೇಕೋದಯವಾದ ಅನುಭವ ತನಗೆ 1821ರ ಜೂನ್ ತಿಂಗಳಿನ ಒಂದು ಮಧ್ಯಾಹ್ನ ಆಯಿತೆಂದು ಕಾರ್ಲೈಲ್ ಹೇಳಿದ್ದಾನೆ. ದಿ ಎವರ್ ಲಾಸ್ಟಿಂಗ್ ನೊ, ದಿ ಸೆಂಟರ್ ಆಫ್ ಇನ್‌ಡಿಫರೆನ್ಸ್ ಎಂಬ ಅಧ್ಯಾಯಗಳಲ್ಲಿ ಕಾರ್ಲೈಲ್ ತನ್ನ ಆಧ್ಯಾತ್ಮಿಕ ಆಂದೋಳನ, ದಿಗ್ಭ್ರಮೆ ಮತ್ತು ನಿರಾಸೆಗಳನ್ನು ಚಿತ್ರಿಸುತ್ತಾನೆ. ದಿ ಎವರ್ ಲಾಸ್ಟಿಂಗ್ ನೋ ನಲ್ಲಿ ಮನುಷ್ಯನ ಅಶಾಂತಿಗೆ ಮೂಲ ಅವನ ಫಲದ ಬಯಕೆಯೆಂಬುದನ್ನೂ ಯಾವ ನಿರೀಕ್ಷೆಯೂ ಇಲ್ಲದ ನಿಷ್ಕಾಮಕರ್ಮದಿಂದ ಮನುಷ್ಯ ಪ್ರಪಂಚವನ್ನೇ ಗೆಲ್ಲಬಹುದೆಂಬುದನ್ನೂ ವಿವರಿಸಿದ್ದಾನೆ. 'ಏನನ್ನೂ ನಿರೀಕ್ಷಿಸಬೇಡ, ಆಗ ಜಗತ್ತೇ ನಿನ್ನ ಪಾದದಡಿಯಲ್ಲಿ ಇರುತ್ತದೆ.' ಎನ್ನುವುದು ನಾಯಕನಾದ ಪ್ರೊಫೆಸರ್ ಕಂಡುಕೊಳ್ಳುವ ಸತ್ಯ. ಈ ಕೃತಿಯಲ್ಲಿ ವಾಲ್ಟೇರ್ ಮತ್ತು ಗಿಬನ್ನರಂಥ ಸಂಶಯವಾದಿಗಳ (ಸ್ಕೆಪ್ಟಿಕ್ಸ್) ಪ್ರಭಾವ ಕಾಣುತ್ತದೆ. ಭಾರತೀಯ ದರ್ಶನವೂ ಜರ್ಮನಿಯ ಮೂಲಕ ವರ್ಡ್ಸ್‌ವರ್ತ್, ಷೆಲ್ಲಿ, ಕಾರ್ಲೈಲ್ ಮೊದಲಾದ ಇಂಗ್ಲಿಷ್ ಸಾಹಿತಿಗಳಿಗೆ ಪರಿಚಯವಾಗಿತ್ತು. ಕಾರ್ಲೈಲನ ದರ್ಶನ ಭಗವದ್ಗೀತೆಯ ಉಪದೇಶಕ್ಕೆ ಎಷ್ಟು ಸಮೀಪ ಎನ್ನುವುದು ಆಶ್ಚರ್ಯಕರ.

ಸಾರ್ಟರ್ ಓದಲು ಕ್ಲಿಷ್ಟವಾದ ಕೃತಿ. ಕಾರ್ಲೈಲ್ ಆರಿಸಿದ ಜರ್ಮನ್ ಪ್ರೊಫೆಸರನ ಕೃತಿ ಮತ್ತು ಬಾಳಿನ ಹಂದರ ಗ್ರಂಥದ ಕ್ಲಿಷ್ಟತೆಯನ್ನು ಇನ್ನೂ ಹೆಚ್ಚಿಸಿವೆ. ಶೈಲಿಯ ವೈಚಿತ್ರ್ಯವೂ ಒಂದು ಅಡ್ಡಿ ಎನ್ನಿಸಬಹುದು. ಆದರೆ ಸಾರ್ಟರ್ ಕ್ರಿಯಾತ್ಮಕ ಕಲ್ಪನೆಯ ಅದ್ಭುತ ಸೃಷ್ಟಿ. ಇದರ ಆಧ್ಯಾತ್ಮಿಕ ಮತ್ತು ಆಂತರಿಕ ಪ್ರಾಮಾಣಿಕತೆ, ವಿಶಿಷ್ಟವಾದ ಹಾಸ್ಯ, ಕಲ್ಪನಾತ್ಮಕ ಕಲ್ಪನೆಯ ದರ್ಶನ ಓದುಗರ ಶ್ರಮವನ್ನು ಸಾರ್ಥಕಗೊಳಿಸುತ್ತವೆ. (ಎಸ್.ವಿ.ಡಿ.; ಎಲ್.ಎಸ್.ಎಸ್.)

**ಕಾಲ್ಯುಡೊವೈಕ :** ಸೈಕ್ಲಾಂತೇಸೀ ಕುಟುಂಬಕ್ಕೆ ಸೇರಿದ ಒಂದು ಬಹು ವಾರ್ಷಿಕ ಸಸ್ಯಜಾತಿ. ಸ್ಪೇನ್ ದೇಶದ ದೊರೆ ನಾಲ್ಕನೆಯ ಚಾರಲ್ಸ್ ಮತ್ತು ಅವನ ರಾಣಿ ಲೂಯಿಸ

ಇವರ ಜ್ಞಾಪಕಾರ್ಥವಾಗಿ ಇದಕ್ಕೆ ಈ ಹೆಸರನ್ನು ಕೊಡಲಾಗಿದೆ. ಬೀಸಣಿಗೆಯಂತೆ ಕಾಣುವ ಸುಂದರವಾದ ಎಲೆಗಳಿರುವುದರಿಂದ ಇದನ್ನು ಉದ್ಯಾನಗಳಲ್ಲಿ, ಮನೆಗಳಲ್ಲಿ ಅಲಂಕಾರ ಸಸ್ಯವಾಗಿ ಬೆಳೆಸುತ್ತಾರೆ. ಈ ಜಾತಿಗೆ ಸೈಕ್ಲಾಂತಸ್ ಎಂಬ ಹೆಸರೂ ಇದೆ. ಇದರಲ್ಲಿ ಸುಮಾರು 40 ಪ್ರಭೇದಗಳಿವೆ. ಎಲ್ಲವೂ ಮೂಲತಃ ಅಮೆರಿಕದ ಉಷ್ಣಪ್ರದೇಶಗಳ ನಿವಾಸಿಗಳು. ಉದ್ಯಾನಪ್ರಾಮುಖ್ಯವನ್ನು ಪಡೆದಿರುವುದರಿಂದ ಬೇರೆ ಬೇರೆ ದೇಶಗಳಲ್ಲೂ ಬೆಳೆಸುತ್ತಿದ್ದಾರೆ. ಎಲ್ಲ ಪ್ರಭೇದಗಳೂ ಮೂಲಿಕೆ (ಹರ್ಬ್) ಸಸ್ಯಗಳು. ಬಹುಪಾಲು ಪ್ರಭೇದಗಳಲ್ಲಿ ಕಾಂಡ ಇಲ್ಲವೇ ಇಲ್ಲ ಎನ್ನುವಷ್ಟು ಕ್ಷೀಣವಾಗಿದೆ. ಇನ್ನು ಕೆಲವಲ್ಲಿ ನೆಲದೊಳಗೇ ಹರಡಿ ಬೆಳೆಯುವ ಸಣ್ಣ ಕಾಂಡವಿದೆ. ಎಲೆಗಳು ದೊಡ್ಡಗಾತ್ರದವು. ಕೆಲವು ಪ್ರಭೇದಗಳಲ್ಲಿ ಎಲೆಗಳಿಗೆ ಬಲು ಉದ್ದವಾದ ತೊಟ್ಟಿವೆ. ಹೂಗಳು ಭಿನ್ನಲಿಂಗಿಗಳು. ಗಂಡು ಹೆಣ್ಣು ಹೂಗಳೆರಡೂ ತಾಳಗುಚ್ಛ ಮಾದರಿಯ ಒಂದೇ ಹೂಗೊಂಚಲಿನಲ್ಲಿವೆ. ಇದರ ಸುತ್ತ 4 ಭಾಗಗಳುಳ್ಳ ತಾಳಗುಚ್ಛ ಕವಚ ಅಥವಾ ಉಪಪತ್ರ (ಸ್ಪೇದ್) ಇದೆ. ಗಂಡುಹೂವಿನಲ್ಲಿ ಹಲವಾರು ಪುಷ್ಪಪತ್ರಗಳೂ ಅಸಂಖ್ಯ ಕೇಸರಗಳೂ ಇವೆ. ಹೆಣ್ಣುಹೂವಿನಲ್ಲಿ 4 ಪುಷ್ಪಪತ್ರಗಳೂ 4 ಕೋಣೆಗಳುಳ್ಳ ಉಚ್ಚಸ್ಥಾನದ ಅಂಡಾಶಯವೂ 4 ಬರಡು ಕೇಸರಗಳೂ ಇವೆ. ಅಂಡಕಗಳು ಅಸಂಖ್ಯ. ಫಲ ಬೆರಿ ಮಾದರಿಯದು. ಉದ್ಯಾನ ಪ್ರಾಮುಖ್ಯವನ್ನು ಪಡೆದಿರುವ ಪ್ರಭೇದಗಳು ಇವು : 1 ಕಾ. ಪಾಮೇಟ: 2'–5' ಉದ್ದದ ಎಲೆಗಳುಳ್ಳ ಈ ಪ್ರಭೇದ ಬಹಳ ಜನಪ್ರಿಯವಾದುದು. ಎಳೆಯದಿದ್ದಾಗ ದೊಡ್ಡ ಮೇಜುಗಳ ಮೇಲೂ ಅಲಂಕಾರಕ್ಕಾಗಿ ಇಡಬಹುದು. ಇದರ ಎಲೆಗಳಿಂದ ಪನಾಮ ಹ್ಯಾಟುಗಳನ್ನು ಮಾಡುತ್ತಾರೆ. ಎಲೆಗಳ ಉದ್ದ 2'–3'. ಎಳೆಯದಾಗಿರುವಾಗ ಎಲೆ ಏಕವಾಗಿದ್ದರೂ ದೊಡ್ಡದಾದಂತೆ ಎರಡು ಭಾಗಗಳಾಗಿ ಸೀಳುತ್ತದೆ 3 ಕಾ.ಡ್ರೂಡಿಯೈ : ಎಲ್ಲ ಪ್ರಭೇದಗಳಿಗಿಂತಲೂ ಹೆಚ್ಚು ಆಕರ್ಷಕವಾದುದು. ಇದು ಸುಮಾರು 4' ಎತ್ತರಕ್ಕೆ ಬೆಳೆಯುತ್ತದೆ.

ಕಾಲ್ಯುಡೊವೈಕವನ್ನು ಬೀಜಗಳಿಂದ ಸುಲಭವಾಗಿ ಬೆಳೆಸಬಹುದು. ಮರಳು ಮಿಶ್ರಿತ ಗೋಡುಮಣ್ಣಿನಲ್ಲಿದು ಚೆನ್ನಾಗಿ ಬೆಳೆಯುತ್ತದೆ. ಬೀಜ ಮೊಳೆಯಲು ಆರ್ದ್ರತೆ ಮತ್ತು ಉಷ್ಣ ಅಗತ್ಯ. (ಡಿ.ಎಂ.)

**ಕಾರ್ವಿಡೀ :** ಕಾಗೆಗಳ ಕುಟುಂಬ. ಪಕ್ಷಿವರ್ಗದ ಪ್ಯಾಸೆರಿ ಫಾರ್ಮೀಸ್ ಗಣಕ್ಕೆ ಸೇರಿದೆ. ಈ ಕುಟುಂಬದ ಪ್ರಮುಖ ಹಕ್ಕಿಗಳೆಂದರೆ ಕಾಗೆಗಳು ಮತ್ತು ಜೇ ಎನ್ನುವ ಪಕ್ಷಿಗಳು. ಇದರಲ್ಲಿ ಸುಮಾರು ನೂರು ಪ್ರಭೇದಗಳಿವೆ. ಪ್ಯಾಸೆರಿಫಾರ್ಮೀಸ್ ಗಣದಲ್ಲೆ ಬಹಳ ದೊಡ್ಡ ಗಾತ್ರದ ಹಕ್ಕಿಗಳು ಈ ಕುಟುಂಬದಲ್ಲಿವೆ. ಇವು 7"–27" ಉದ್ದ ಇರುತ್ತವೆ: ಮೈ ಬಣ್ಣ ಕಪ್ಪು ಅಥವಾ ಕಪ್ಪು ಮತ್ತು ಬಿಳುಪು ಮಿಶ್ರಿತವಾದುದು. ಜೇಗಳಿಗೆ ಮಾತ್ರ ಪ್ರಕಾಶಮಾನವಾದ ನೀಲಿ, ಹಸುರು, ಹಳದಿ, ಕಡು ಕೆಂಪು ಅಥವಾ ಬೂದಿಬಣ್ಣದ ಗರಿಗಳಿವೆ. ಕೆಲವು ಹಕ್ಕಿಗಳಿಗೆ ರೆಕ್ಕೆ ಮತ್ತು ಬಾಲದಲ್ಲಿ ಪಟ್ಟೆಗಳಿವೆ. ಕೆಲವಕ್ಕೆ ತಲೆಯ ಮೇಲೆ ಶಿಖೆಗಳಿವೆ. ಬಹಳ ಉದ್ದವಾದ ಬಾಲದ ಗರಿಗಳು ಕೆಲವು ಜಾತಿಗಳಲ್ಲಿ ಉಂಟು. ಈ ಕುಟುಂಬದ ಪ್ರಧಾನ ಲಕ್ಷಣವಾಗಿ ರೆಕ್ಕೆಯಲ್ಲಿ 10 ಅಥವಾ 12 ದ್ವಿತೀಯ ಗರಿಗಳಿವೆ. ಕೊಕ್ಕು ಬಹಳ ಬಲವಾಗಿದ್ದು ಮಾಂಸವನ್ನು ಸಿಗಿಯಲು ಅನುಕೂಲವಾಗಿದೆ. ಈ ಕುಟುಂಬದ ಹಕ್ಕಿಗಳು ಚೆನ್ನಾಗಿ ಹಾರ ಬಲ್ಲವು; ಹಾರುತ್ತಲೇ ಆಹಾರವನ್ನು ಬೇಟೆಯಾಡಬಲ್ಲವು. ಸ್ವಾಭಾವಿಕವಾಗಿ ಲಿಂಗ ದ್ವಿರೂಪತೆ ಕಾಣಬರುವುದಿಲ್ಲ. ಹೆಣ್ಣುಗಂಡುಗಳೆರಡೂ ಹೆಚ್ಚುಕಡಿಮೆ ಒಂದೇ ರೀತಿಯಾಗಿವೆ. ನ್ಯೂಜಿಲೆಂಡ್ ಮತ್ತು ಕೆಲವು ಸಾಗರದ್ವೀಪಗಳ ವಿನಾ ಈ ಹಕ್ಕಿಗಳು ಪ್ರಪಂಚಾದ್ಯಂತ ಹರಡಿವೆ. ಬಹುಪಾಲು ಪ್ರಭೇದಗಳು ವಲಸೆಹೋಗವು. ಹೋಗುವಂಥವು ಸಾಮಾನ್ಯವಾಗಿ ಹಗಲಿನಲ್ಲಿ ಹಾಗೆ ಮಾಡುತ್ತವೆ.

ಇವು ಸರ್ವಭಕ್ಷಕಗಳು. ದ್ವಿಚರಿಗಳೇ ಮುಂತಾದ ಎಲ್ಲ ರೀತಿಯ ಪುಟ್ಟ ಪ್ರಾಣಿಗಳನ್ನೂ ಸಸ್ಯಾಹಾರವನ್ನೂ ತಿನ್ನುತ್ತವೆ. ಕೆಲವು ಪ್ರಭೇದಗಳು ಆಹಾರ ಹೇರಳವಾಗಿ ದೊರಕುವಾಗ ಕೂಡಿಟ್ಟಿದ್ದು ಅಭಾವ ತೋರಿದಾಗ ಉಪಯೋಗಿಸುತ್ತವೆ. ಅನೇಕ ಹಕ್ಕಿಗಳು ಆಹಾರಕ್ಕಾಗಿ ತಮ್ಮಲ್ಲಿಯೇ ಕಾದಾಡಿದರೂ ಕಾಗೆಗಳು ಮಾತ್ರ ಆಹಾರವನ್ನು ಕಂಡಾಗ ಇತರ ಸಹಚರರನ್ನು ಆಹ್ವಾನಿಸುತ್ತವೆ.

ಇವು ಸ್ವಾಭಾವಿಕವಾಗಿ ಗುಂಪುಜೀವಿಗಳು. ಧೈರ್ಯಶಾಲಿಗಳು. ನಿರ್ಭೀತಿಯಿಂದ ಮುನ್ನುಗ್ಗುತ್ತವೆ. ಕೆಲವೊಮ್ಮೆ ಮಾಂಸಾಹಾರಿ ಪಕ್ಷಿಗಳನ್ನು ಕೂಡ (ಹದ್ದು, ಗಿಡಗ) ಎದುರಿಸಿ ಹೋರಾಡುತ್ತವೆ. ಇವುಗಳ ಧ್ವನಿ ಸಾಮಾನ್ಯವಾಗಿ ಕರ್ಕಶ ಮತ್ತು ಜೋರು. ಕೆಲವು ಮಾತ್ರ ಮಧುರವಾದ ಶಬ್ದವನ್ನು ಮಾಡುವುದಲ್ಲದೆ ಹಾಡುವುದೂ ಉಂಟು.

ಮರಗಿಡಗಳಲ್ಲಿ ಅಥವಾ ಪ್ರಪಾತಗಳ ಬಳಿ ಕಡ್ಡಿಗಳಿಂದ ಒರಟಾದ ಗೂಡುಗಳನ್ನು ಕಟ್ಟುತ್ತವೆ. ಗೂಡು ಕಟ್ಟುವುದರಲ್ಲಿ ಗಂಡುಹೆಣ್ಣುಗಳೆರಡೂ ಭಾಗವಹಿಸುತ್ತವೆ. ಒಮ್ಮೆಗೆ 3–10 ಮೊಟ್ಟೆಗಳನ್ನಿಡುತ್ತವೆ. ಮರಿಗಳು ಬೇಗ ಹೊರಬರುತ್ತವೆ (ನಿಡಿ ಕ್ಯುಲಸ್). ಮರಿಗಳ ಪೋಷಣೆಯನ್ನು ತಾಯಿತಂದೆ ಪಕ್ಷಿಗಳೆರಡೂ ನಿರ್ವಹಿಸುತ್ತವೆ. (ಎಚ್.ಎಚ್.ಎಸ್.)

**ಕಾರ್ಷಾಪಣ :** ಪ್ರಾಚೀನ ಭಾರತದಲ್ಲಿ ಚಲಾವಣೆಯಲ್ಲಿದ್ದ ನಾಣ್ಯ. ಕರ್ಷ ಎಂಬ ಪದದಿಂದ ಬಂದದ್ದು. 80 ರತಿಯ ಅಥವಾ 1.83 ಗ್ರೇನ್‍ಗಳ ತೂಕ ಒಂದು ಕರ್ಷ. ಅದನ್ನು ಅನಂತರಕಾಲದಲ್ಲಿ ಪುರಾಣವೆಂದೂ ಕರೆಯುತ್ತಿದ್ದುದುಂಟು. ಕಾರ್ಷಾಪಣಗಳ ಮೇಲೆ ಮುದ್ರಿತವಾದ ಹಲವಾರು ಗುರುತುಗಳು ಸಿಕ್ಕುವುದರಿಂದ ಇವನ್ನು ಮುದ್ರಾಂಕಿತ ನಾಣ್ಯಗಳು (ಪಂಚ್‍ಮಾರ್ಕ್ಡ್ ಕಾಯಿನ್ಸ್) ಎಂದು ಕರೆಯಲಾಗಿದೆ. ಇವನ್ನು ಚಿನ್ನ, ಬೆಳ್ಳಿ ಅಥವಾ ತಾಮ್ರದಲ್ಲಿ ಮಾಡಲಾಗುತ್ತಿತ್ತು. (ಪಿ.ಬಿ.ಡಿ.)

**ಕಾರ್ಸಿಕ :** ಪಶ್ಚಿಮ ಮೆಡಿಟರೇನಿಯನ್ ಸಮುದ್ರದ ಒಂದು ದ್ವೀಪ. ಫ್ರಾನ್ಸಿಗೆ ಸೇರಿದೆ. ಫ್ರಾನ್ಸಿನ ಮುಖ್ಯ ಭೂಪ್ರದೇಶದಿಂದ ಇಲ್ಲಿಗೆ 168 ಕಿಮೀ ದೂರ. ಇಟಲಿಗೆ ಇದು 80 ಕಿಮೀ ದೂರದಲ್ಲಿದೆ. ದಕ್ಷಿಣದಲ್ಲಿರುವ ಸಾರ್ಡಿನಿಯ ದ್ವೀಪಕ್ಕೂ ಕಾರ್ಸಿಕಕ್ಕೂ ನಡುವೆ ಬೊನಿಫಾಚೊ ಜಲಸಂಧಿಯಿದೆ. ಇದು ಮೆಡಿಟರೇನಿಯನ್ ಸಮುದ್ರದ ದೊಡ್ಡ ದ್ವೀಪಗಳಲ್ಲಿ ಮೂರನೆಯದು. ಉ.ಅ.41° 31'–ಉ.ಅ. 40° ಮತ್ತು ಪೂ.ರೇ. 80° 30'–ಪೂ.ರೇ. 90° 30' ನಡುವೆ, ಸ್ಥೂಲವಾಗಿ ಅಂಡಾಕೃತಿಯಲ್ಲಿರುವ ಕಾರ್ಸಿಕ ದ್ವೀಪದ ವಿಸ್ತೀರ್ಣ 8720 ಚ.ಕಿಮೀ ಜನಸಂಖ್ಯೆ 275000 (2006).

ಇಲ್ಲಿಯ ಜನರ ಭಾಷೆ ಇಟಾಲಿಯನ್; ಇಟಲಿಯೊಂದಿಗೆ ಅವರ ಸಾಂಸ್ಕøತಿಕ ಸಂಬಂಧವೂ ಇದೆ. ಅವರು ಸಂಪ್ರದಾಯಪ್ರಿಯರು. ದ್ವೀಪವಾಸಿಗಳಾದರೂ ನುರಿತ ನಾವಿಕರಲ್ಲ; ಅರಣ್ಯಗಳಲ್ಲೇ ಮುಖ್ಯವಾಗಿ ಅವರ ವಾಸ.

ಕಾರ್ಸಿಕ ಗುಡ್ಡಗಾಡುಪ್ರದೇಶ. ಹೆಚ್ಚಾಗಿ ಗ್ರಾನುಲೈಟ್‍ನಂಥ ಸ್ಫಟಿಕ ಶಿಲೆಗಳನ್ನು ಒಳಗೊಂಡಿದೆ. ಸಿಂಟೊ 2596 ಮೀ ಮತ್ತು ರೂಟಾ 2608 ಮೀ. ಇವು ಅತ್ಯಂತ ಎತ್ತರದ ಶಿಖರಗಳು. ನದೀ ಕಣಿವೆಗಳು ಇಕ್ಕಟ್ಟಾಗಿಯೂ ಆಳವಾಗಿಯೂ ಇವೆ. ಪಶ್ಚಿಮ ಕರಾವಳಿಗಿಂತ ಪೂರ್ವ ಕರಾವಳಿ ಹೆಚ್ಚು ಇಕ್ಕಟ್ಟು. ವಾಯುಗುಣ ಮೆಡಿಟರೇನಿಯನ್ ಮಾದರಿ. ಸಮುದ್ರಮಟ್ಟ ಪ್ರದೇಶದಲ್ಲಿ ಬೇಸಗೆಯ ಸರಾಸರಿ ಉಷ್ಣತೆ 21.10–23.8 ಸೆಂ. ಚಳಿಗಾಲವೂ ತಕ್ಕಮಟ್ಟಿಗೆ ಬೆಚ್ಚಗಿರುತ್ತದೆ. ಕಣಿವೆಗಳು ಮುಳ್ಳು ಪೊದೆಗಳಿಂದ ತುಂಬಿವೆ. ಅರಣ್ಯಗಳಲ್ಲಿ ಚೆಸ್ಟ್‍ಟ್ ಮರ ಹೇರಳ. ನೆಲ ಹೆಚ್ಚು ಫಲವತ್ತಾಗಿಲ್ಲ.

ಇಕ್ಕಟ್ಟಾದ ಕರಾವಳಿ ಬಯಲಿಗೆ ಮಾತ್ರ ಕೃಷಿ ಸೀಮಿತವಾಗಿದೆ. ಶೇ. 2ರಷ್ಟು ಭೂಮಿಯಲ್ಲಿ ಮಾತ್ರ ಸಾಗುವಳಿ ನಡೆದಿದೆ. ಇಲ್ಲಿಯ ಕಾಲುಭಾಗ ನೆಲ ದನಕರುಗಳ

ಮೇವಿಗೆ ಅನುಕೂಲಕರ. ಗೋದಿ. ಜೋಳ, ದ್ರಾಕ್ಷಿ ಮತ್ತು ಆಲಿವ್ ಮುಖ್ಯ ಬೆಳೆಗಳು. ಇಲ್ಲಿ ಸುಮಾರು 4000 ಕಿಮೀ ಉದ್ದದ ರಸ್ತೆಗಳಿವೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದ 2016 ಕಿಮೀ ಪ್ರವಾಸೋದ್ಯಮ ಬೆಳೆಯುತ್ತಿದೆ. ಆಲಿವ್ ಮದ್ಯ ಮತ್ತು ಮರಮಟ್ಟು ಮುಖ್ಯ ನಿರ್ಯಾತ ವಸ್ತುಗಳು.

ಅಜಾಕಿಯೋ ರಾಜಧಾನಿ. ಜನಸಂಖ್ಯೆ 52880 (2000) ಬಸ್ತಿಯಾ ಮುಖ್ಯ ಬಂದರು. ಇದು ಕಾರ್ಸಿಕದ ಅತ್ಯಂತ ದೊಡ್ಡ ನಗರ.

**ಇತಿಹಾಸ :** ನವ ಶಿಲಾಯುಗದವರೆಗೂ ಕಾರ್ಸಿಕದಲ್ಲಿ ಮನುಷ್ಯ ವಾಸ ಮಾಡುತ್ತಿರಲಿಲ್ಲ. ಪ್ರ.ಶ.ಪೂ. 564ರಲ್ಲಿ ಅಯಾನಿಯದ ಫೋಪೀಯನರು ಇಲ್ಲಿ ಬೀಡು ಬಿಟ್ಟಿದ್ದರು. ಕಾರ್ಥೇಜಿನಿಯನ್ ಮತ್ತು ಎಟ್ರುಸ್ಕನ್ ನೌಕಾಪಡೆಗಳಿಂದ ಇವರು ಪ್ರ.ಶ.ಪೂ. 353ರಲ್ಲಿ ಪರಾಜಿತರಾಗಿ ಇಲ್ಲಿಂದ ಕಾಲ್ತೆಗೆದರು. ಅನಂತರ ಇದು ಕ್ರಮವಾಗಿ ಎಟ್ರುಸ್ಕನ್ ಮತ್ತು ಕಾರ್ಥೇಜಿನಿಯನ್ ಆಕ್ರಮಣಕ್ಕೆ ಒಳಪಟ್ಟಿತ್ತು. ಕಾರ್ಸಿಕ ದ್ವೀಪವನ್ನು ಪ್ರ.ಶ.ಪೂ. 259ರಲ್ಲಿ ಕಾರ್ನಿಲಿಯಸ್ ಸ್ಕಿಪಿಯೋ ಗೆದ್ದ. ಆದರೆ ರೋಮನರು ಇದನ್ನು ವಾಸ್ತವವಾಗಿ ಆಕ್ರಮಿಸಿಕೊಂಡಿದ್ದು ಪ್ಯೂನಿಕ್ ಯುದ್ಧದ ಅನಂತರವೇ. ಪ್ರ.ಶ.ಪೂ. 231ರಲ್ಲಿ ಕಾರ್ಸಿಕದ ನಿವಾಸಿಗಳು ಪರಾಕ್ರಮಣದ ವಿರುದ್ಧ ದಂಗೆಯೆದ್ದರು. ಅದನ್ನು ಅಡಗಿಸಲಾಯಿತು. ರೋಮನ್ ಚಕ್ರಾಧಿಪತ್ಯದಲ್ಲಿ ಗಡಿಪಾರು ಶಿಕ್ಷೆಗೆ ಒಳಗಾದವರನ್ನು ಇಲ್ಲಿಗೆ ಕಳುಹಿಸಲಾಗುತ್ತಿತ್ತು. ಪ್ರ.ಶ.ಪೂ. ಸು. 4–65ರ ವರೆಗೆ ಬದುಕಿದ್ದ ರೋಮನ್ ದಾರ್ಶನಿಕ ಸೈನಿಕ ದೇಶಭ್ರಷ್ಟನಾದಾಗ ಇಲ್ಲಿದ್ದ. ಪ್ರ.ಶ. 5ನೆಯ ಶತಮಾನದಲ್ಲಿ ವ್ಯಾಂಡಲರೂ ಗೋಥರೂ ಕಾರ್ಸಿಕ ದ್ವೀಪಕ್ಕಾಗಿ ಬಡಿದಾಡಿದರು. ಅಂತಿಮವಾಗಿ ಇದು ವ್ಯಾಂಡಲರ ವಶಕ್ಕೆ ಬಂತು. ಆದರೆ ಬಿಜಾಂಟಿನರು 533ರಲ್ಲಿ ಇದನ್ನು ಆಕ್ರಮಿಸಿಕೊಂಡರು.

ಸಾರಸೆನರು ಕಾರ್ಸಿಕದ ಮೇಲೆ 713ರಲ್ಲಿ ಏರಿಬಂದು ಇದರ ಒಂದು ಭಾಗವನ್ನು 10ನೆಯ ಶತಮಾನದವರೆಗೂ ಆಳಿದರು. ಟಸ್ಕನಿಯ ಕಾಂಟ್ ಬೂನಿಫೇಸ್ ಇದನ್ನು ಪಶ್ಚಿಮ ರೋಮನ್ ಸಾಮ್ರಾಜ್ಯಕ್ಕೆ ಮತ್ತೆ ಗೆದ್ದುಕೊಳ್ಳಲು 9ನೆಯ ಶತಮಾನದಲ್ಲಿ ಪ್ರಯತ್ನಿಸಿ, ಇಲ್ಲೊಂದು ಕೋಟೆ ಕಟ್ಟಿದ. ಬೊನಿಫಾಚೊ ನಗರ ಇಲ್ಲಿ ಸ್ಥಾಪಿತವಾಯಿತು. ಈ ಕಾಲದಲ್ಲಿ ದ್ವೀಪದ ಆಂತರಿಕ ಅಧಿಕಾರ ಇದ್ದದ್ದು ಸ್ಥಳೀಯ ಪ್ರಭುಗಳ ಕೈಯಲ್ಲಿ. ಪೋಪ್ ಇದರ ಮೇಲೆ ಹಕ್ಕು ಸ್ಥಾಪಿಸಿದ್ದು 1077ರಲ್ಲಿ. 1453ರಲ್ಲಿ ಇದು ಜಿನೊವದ ಅಧಿಕಾರಕ್ಕೆ ಒಳಪಟ್ಟಿತು. ಫ್ರಾನ್ಸಿನ 2ನೆಯ ಹೆನ್ರಿ 1553ರಲ್ಲಿ ಕಾರ್ಸಿಕವನ್ನು ಗೆದ್ದ. 1558ರಲ್ಲಿ ಮತ್ತೆ ಇದನ್ನು ಜಿನೊವಕ್ಕೆ ವರ್ಗಾಯಿಸಲಾಯಿತು. ಫ್ರೆಂಚರ ಅಧೀನದಲ್ಲಿ ಕಾರ್ಸಿಕನರಿಗೆ ಲಭ್ಯವಾಗಿದ್ದ ಸ್ವಯಮಾಡಳಿತ ನಷ್ಟವಾಯಿತು. ಜಿನೊವದ ನೀತಿಗೆಟ್ಟ ದಬ್ಬಾಳಿಕೆಯಿಂದ ಕಾರ್ಸಿಕನರು ರೊಚ್ಚಿಗೆದ್ದರು. 1729ರಲ್ಲಿ ಎದ್ದ ದಂಗೆಯನ್ನು ಜಿನೊವರು ಆಸ್ಟ್ರಿಯನ್ ನೆರವಿನಿಂದ ದಂಗೆಯನ್ನು ಹತ್ತಿಕ್ಕಿದರು. ಜಿನೊವ 1768ರಲ್ಲಿ ಕಾರ್ಸಿಕವನ್ನು ಫ್ರಾನ್ಸಿಗೆ ಮಾರಿತು. ಫ್ರೆಂಚರ ಗವರ್ನರಾಗಿದ್ದ ಪವೊಲಿ ಇದನ್ನು ಇಂಗ್ಲೆಂಡಿಗೆ ಒಪ್ಪಿಸಿದ (1794–96). ಫ್ರೆಂಚ್ ಚಕ್ರವರ್ತಿ 1ನೆಯ ನೆಪೋಲಿಯನ್ ಬೊನಪಾರ್ಟೆ ಕಾರ್ಸಿಕದಲ್ಲಿ ಹುಟ್ಟಿದವ. ನೆಪೋಲಿಯನ್ ಕಾರ್ಸಿಕವನ್ನು ಇಂಗ್ಲೆಂಡಿನಿಂದ ಗೆದ್ದುಕೊಂಡ. ಕಾರ್ಸಿಕದ ಮೇಲೆ ಫ್ರೆಂಚ್ ಆಡಳಿತ 1815ರಲ್ಲಿ ಸ್ಥಿರವಾಯಿತು. ಕಾರ್ಸಿಕನ್–ಫ್ರೆಂಚ್ ಸಂಬಂಧ ಬಿಗಿಯಾಗಲು ಬೊನಪಾರ್ಟೆ ವಂಶ ಕಾರಣ. ಕಾರ್ಸಿಕವನ್ನು ತನ್ನದನ್ನಾಗಿ ಮಾಡಿಕೊಳ್ಳಲು ಫ್ಯಾಸಿಸ್ಟ್ ಇಟಲಿ ನಡೆಸಿದ ಪ್ರಯತ್ನ ಸಫಲವಾಗಲಿಲ್ಲ. ಎರಡನೆಯ ಮಹಾಯುದ್ಧ ಕಾಲದಲ್ಲಿ ಸ್ವಲ್ಪಕಾಲ ಇದು ಜರ್ಮನ್–ಇಟಾಲಿಯನ್ ಪಡೆಯ ವಶದಲ್ಲಿತ್ತು. (ಎನ್.ಬಿ.ಕೆ.ಆರ್.)

**ಕಾಲ**[1] **:** ಕಾಲ ಎಂಬುದು ಮಾನವನ ಅನುಭವಗಳ ಸರಣಿಯನ್ನು ಸಕ್ರಮವಾಗಿ ಪೋಣಿಸುವ ಒಂದು ತಂತು. ಭಾಷೆಯ ಮಾಧ್ಯಮದಲ್ಲಿ ನಾವು ಬಳಸುವ ಹಿಂದು ಮುಂದು, ಈಗ ಆಮೇಲೆ, ಮೊದಲು ಅನಂತರ, ಇದರಿಂದ ಅದರಿಂದ–ಮುಂತಾದ ಮಾತುಗಳು ಕಾಲವನ್ನು ಸೂಚಿಸುವ ಸ್ಥೂಲರೂಪಗಳು. ಮಾನವನ ಪ್ರಜ್ಞೆ ಮತ್ತು ಆಲೋಚನೆಗೆ ಬೇಕಾದ ಅತ್ಯಂತ ಮೂಲಭೂತವೂ ಅತಿಸೂಕ್ಷ್ಮವೂ ಆದ ಕಾಲವನ್ನು ವರ್ತಮಾನ, ಭೂತ ಮತ್ತು ಭವಿಷ್ಯತ್ತುಗಳೆಂಬ ಮೈಲಿಗಲ್ಲುಗಳಿಂದ ನಾವು ಗುರುತಿಸುತ್ತೇವೆ. ವರ್ತಮಾನ ಕಾಲಪುರುಷನ ಕೇಂದ್ರಬಿಂದುವೆನಿಸಿದರೆ ಭೂತ ಭವಿಷ್ಯತ್ತುಗಳೇ ಅತನ ದೀರ್ಘ ಬಾಹುಗಳು. ಭವಿಷ್ಯತ್ ಕಾಲ ವರ್ತಮಾನದ ಮೂಲಕವೇ ಭೂತಕಾಲಕ್ಕೆ ಜಾರುತ್ತದಾದ್ದರಿಂದ ಮಾನವ ಸದಾ ವರ್ತಮಾನಕ್ಕೆ ಸಾಕ್ಷಿಯಾಗಿ ನಿಂತಿದ್ದಾನೆ. ವರ್ತಮಾನವನ್ನು ಪ್ರತ್ಯಕ್ಷದರ್ಶನದಿಂದ ತಿಳಿಯಬಲ್ಲ ಮಾನವ ಭೂತ ಭವಿಷ್ಯಗಳನ್ನರಿಯಲು ಶಬ್ದ (ಟೆಸ್ಟಿಮೊನಿ), ಅನುಮಾನ (ಇನ್‌ಫರೆನ್ಸ್) ಮುಂತಾದ ಪ್ರಮಾಣಗಳನ್ನು ಆಶ್ರಯಿಸುತ್ತಾನೆ.

ಸೃಷ್ಟಿಯಲ್ಲಿ ಕಾಲದಷ್ಟೇ ಸರ್ವವ್ಯಾಪ್ತಿಯುಳ್ಳ ಮತ್ತೊಂದು ತತ್ತ್ವವೂ ಇದೆ. ಅದೇ ದೇಶ ಇಲ್ಲವೆ ಆಕಾಶ. ವಿಶ್ವದ ಆಗುಹೋಗುಗಳು ಕಾಲದೇಶಗಳ ನಿಯತಿಯ ಚೌಕಟ್ಟಿಗೆ ಒಳಪಟ್ಟೇ ನಡೆಯುತ್ತವೆ. ಕಾಲದೇಶಗಳು ಹಾಸುಹೊಕ್ಕಾಗಿ ಜಗತ್ತಿನ ಸರ್ವವ್ಯಾಪಾರವನ್ನೂ ನಿಯಂತ್ರಿಸುವುದರಿಂದ ಪ್ರಜ್ಞಾಶೀಲವಾದ ಮಾನವ ಇವುಗಳ ಅಸ್ತಿತ್ವ ಮತ್ತು ಹಿರಿಮೆಯನ್ನು ಅಲಕ್ಷಿಸುವುದು ಸಾಧ್ಯವಿಲ್ಲದ ಮಾತು. ಜಗತ್ತನ್ನು ಸೂಕ್ಷ್ಮವಾಗಿ ಅವಲೋಕಿಸುವ ವಿಜ್ಞಾನಿ, ಹಾಗೂ ಅದರ ತಾತ್ತ್ವಿಕ ಚಿಂತನೆಯಲ್ಲಿ ತೊಡಗಿರುವ ದಾರ್ಶನಿಕ–ಇವರು ಕಾಲದೇಶಗಳ ಮೂಲಸ್ವರೂಪವೇನೆಂಬುದರ ವಿಚಾರದಲ್ಲಿ ಆಳವಾಗಿ ಆಲೋಚಿಸಿದ್ದಾರೆ.

**ಕಾಲದ ಪ್ರಮಾಣ:** ವಿಜ್ಞಾನಿಯ ವಿಶ್ಲೇಷಣೆಯ ಪ್ರಕಾರ ಕಾಲಕ್ಕೆ ಒಂದೇ ಒಂದು ಆಯಾಮವೂ (ಡೈಮೆನ್ಷನ್) ದೇಶಕ್ಕೆ ಮೂರು ಆಯಾಮಗಳೂ ಇವೆ. ಅವಿಚ್ಛಿನ್ನ ಅಥವಾ ಸಂತತ ಗಮನ ಒಂದೇ ಕಾಲಕ್ಕಿರುವ ಆಯಾಮ. ದೇಶಕ್ಕೆ ಉದ್ದ, ಅಗಲ ಮತ್ತು ದಪ್ಪ ಇಲ್ಲವೇ ಎತ್ತರ ಎಂಬ ಮೂರು ಆಯಾಮಗಳುಂಟು.

ನಾವು ನಮ್ಮ ನಿತ್ಯಜೀವನದ ವ್ಯವಹಾರದಲ್ಲಿ ಕ್ಷಣಗಳನ್ನು ಕಾಲದ ಮೂಲಧಾತುಗಳೆಂದು ಪರಿಗಣಿಸುತ್ತೇವೆ. ಕಾಲವು ಸದಾ ನಮ್ಮ ಅನುಭವಗಳೊಡನೆ ಮೈಗೂಡಿ ಬರುವುದರಿಂದ ನಮ್ಮ ಅನುಭವಗಳಿಗಿಂತ ಹೊರತಾದ ಕಾಲದ ಸ್ವರೂಪವೇನಿರಬಹುದೆಂಬುದು ಬಹು ಗಹನವಾದ ಪ್ರಶ್ನೆ. ಈ ಸಮಸ್ಯೆ ಎಷ್ಟು ದೂರದವರೆಗೆ ಹೋಗಬಲ್ಲದೆಂದರೆ ವಸ್ತುಗಳು ಮತ್ತು ಘಟನೆಗಳಿಗೆ ಹೊರತಾಗಿ ತಾನೇ ತಾನಾಗಿ ಕಾಲವೆಂಬುದೊಂದು ಇರಲು ಸಾಧ್ಯವೇ ಎಂಬ ಶಂಕೆ ಮೂಡುವಂತಾಗಿದೆ. ನಮ್ಮ ಅರಿವಿನ ಕ್ಷಣಗಳು ಒಂದಲ್ಲ ಒಂದು ಅನುಭವವನ್ನು ಹೊತ್ತು ಬರುವುದರಿಂದ ಅನುಭವರಹಿತವಾದ ಕಾಲವೆಂಬುದು ಒಂದು ರೀತಿಯಲ್ಲಿ ಶೂನ್ಯವೇ ಸರಿ.

ಎರಡು ಘಟನೆಗಳ ನಡುವಿನ ಓಟದ ಅಂತರವನ್ನು ಗುರುತಿಸಲು ಕಾಲದ ಪ್ರಜ್ಞೆ ಬೇಕಾಗುವುದಾದರೂ ಈ ಅಂತರದ ಕಾಲ ಮಾತ್ರ ಶೂನ್ಯವಾಗಿರುವುದಿಲ್ಲ. ಅದು ವಿವಿಧ ರೂಪದ ಘಟನೆಗಳನ್ನು ಮೈವೆತ್ತೇ ಬರುತ್ತದೆ. ಮಗುವಿನ ಹುಟ್ಟಿನಿಂದ ಮುಪ್ಪಿನವರೆಗಿನ ಬೆಳವಣಿಗೆಯನ್ನು ಕಾಲಮಾಪನದಿಂದ ಗುರುತಿಸುತ್ತೇವೆ ನಿಜ. ಆದರೆ ಆ ವ್ಯಕ್ತಿಯ ಜೀವಿತಕಾಲದ ಪ್ರತಿಕ್ಷಣವೂ ಒಂದಲ್ಲ ಒಂದು ಘಟನೆಯಿಂದ ಜೀವಂತವಾಗಿರುತ್ತದೆ. ಹಾಗಿಲ್ಲವಾದರೆ ಅದರ ಅಸ್ತಿತ್ವವನ್ನೇ ನಾವು ಗುರುತಿಸಲಾರೆವು.

ಸೃಷ್ಟಿ ಸ್ಥಿತಿ ಲಯಾತ್ಮಕವಾದ ಈ ಕಾಲದ ಲೀಲೆಗೆ ಬೇಕಾದ ರಂಗಭೂಮಿ ದೇಶದಿಂದ ಲಭಿಸುತ್ತದೆ. ಆದರೆ ದೇಶಕ್ಕಿಂತ ಕಾಲ ಹೆಚ್ಚು ಸೂಕ್ಷ್ಮವೂ ಮತ್ತು ವ್ಯಾಪಕವೂ ಆದದ್ದೆಂದರೆ ತಪ್ಪಾಗುವುದಿಲ್ಲ. ನಮ್ಮ ಬೌದ್ಧಿಕ ಕ್ರಿಯೆಗೂ ಕಾಲ ಬೇಕಾಗುತ್ತದೆ. ಆದರೆ ಅದಕ್ಕೆ ದೇಶದ ಅವಲಂಬನೆ ಇರುವುದಿಲ್ಲ.

ವಾಸ್ತವ ಜಗತ್ತಿನ ವಸ್ತುಸ್ಥಿತಿಯೊಂದಿಗೆ ಹೆಣೆದುಕೊಂಡು ಸ್ಥೂಲರೂಪದಲ್ಲಿ ಕಾಣಬರುವ ಕಾಲ ಸೂಕ್ಷ್ಮಶರೀರಿಯಾಗಿದ್ದು ಕಾರಣಕಾರ್ಯಸ್ವರೂಪದಲ್ಲಿ ಜಗದ್ವ್ಯಾಪಿಯಾಗಿದೆ. ಕಾರ್ಯಕಾರಣ ನಿಯಮದ ವಿಚಾರದಲ್ಲಿ ಆಳವಾಗಿ ಅವಲೋಕಿಸಿದ ಜಾನ್ ಸ್ಟೂಅರ್ಟ್ ಮಿಲ್ ಕಾರಣ ಕಾರ್ಯಪೂರ್ವದಲ್ಲಿ (ಆಂಟಿಸಿಡೆಂಟ್) ಕಾರ್ಯಕ್ಕೆ ಹಿನ್ನೆಲೆಯಾಗಿ, ಅದಕ್ಕೆ ಇಂಬುಗೊಟ್ಟಂತಿರುತ್ತದೆ–ಎಂದಿದ್ದಾನೆ. ಅಂದರೆ ಕಾರಣದ ಅನಂತರವೇ ಕಾರ್ಯ. ಈ ಕಾಲದ ಕ್ರಮಗತಿಯನ್ನು ಮೀರುವುದು ಸೃಷ್ಟಿಯ ಸ್ವರೂಪದಲ್ಲಿಲ್ಲ.

**ಕಾಲದ ನೆಲೆ:** ಕಾಲ ಎಲ್ಲಿಂದ ಮೂಡಿಬರುತ್ತದೆ ಅಥವಾ ಅದರ ನೆಲೆ ಯಾವುದು ಎಂಬುದಕ್ಕೆ ಮೂರು ರೀತಿಯ ವಿವರಣೆಗಳು ದೊರೆಯುತ್ತವೆ. ಕಾಲ ಸ್ವತಂತ್ರವಾದ ಹಾಗೂ ವಸ್ತುಗಳಿಗಿಂತ ಭಿನ್ನವಾದ ಒಂದು ವಾಸ್ತವಿಕ ತತ್ತ್ವ; ಅದು ಜಗತ್ತಿಗೆ ಆಧಾರಭೂತವಾಗಿ ವಿಶ್ವದ ಅಸ್ತಿತ್ವವನ್ನು ತನ್ನಲ್ಲಿ ಒಳಗೊಂಡು ಇರುವಂಥ ಮೂಲವಸ್ತು ಎಂಬುದು ಐಸಾಕ್ ನ್ಯೂಟನ್ನನ ಸಿದ್ಧಾಂತ. ಇದಕ್ಕಿಂತಲೂ ಭಿನ್ನವಾದ ಕಾಲದ ವಿವರಣೆಯೊಂದು ಲೈಬನಿಟ್ಸ್ ಮತ್ತು ಐನ್‌ಸ್ಟೈನರಲ್ಲಿ ಕಾಣುತ್ತದೆ. ಕಾಲವೆಂಬುದು ವಸ್ತುಗಳ ಪರಸ್ಪರ ಸಂಬಂಧದಿಂದ ಮಾತ್ರ ಸ್ಫುರಿಸುವ ಪ್ರಜ್ಞೆ, ಏಕೆಂದರೆ ಕೇವಲ ಒಂದೇ ಒಂದು ವಸ್ತುವಿದ್ದು, ಅದರೊಂದಿಗೆ ಹೋಲಿಸಲು ಬೇರೊಂದು ವಸ್ತುವಿಲ್ಲದಿದ್ದಾಗ ಕಾಲದ ಕಲ್ಪನೆಗೆ ಜಾಗವೇ ಇರುವುದಿಲ್ಲ. ಆದ್ದರಿಂದ ಕಾಲವೆಂಬುದು ವಾಸ್ತವಿಕ ಜಗತ್ತಿನ ತುಲನಾತ್ಮಕ ಪ್ರಜ್ಞೆಯಿಂದ ಜನಿಸುವ ಒಂದು ವಿಶ್ವಧರ್ಮ ಎಂಬುದು ಇವರ ನಂಬಿಕೆ. ಈ ಎರಡು ವಾದಗಳ ಜೊತೆಗೆ ಇಮಾನ್ಯುಅಲ್ ಕಾಂಟನಿಂದ ದೊರೆತ ಮತ್ತೊಂದು ವಿವರಣೆಯೂ ಉಂಟು. ಕಾಲ–ದೇಶಗಳು ವಸ್ತುಗಳಿಗೆ ಸೇರಿದ ಧರ್ಮಗಳಲ್ಲವೆಂದೂ ಅವು ಮಾನವನ ಪ್ರಜ್ಞೆಗೆ ಇಲ್ಲವೆ ಅರಿವಿಗೆ ಸೇರಿದ ತತ್ತ್ವಗಳೆಂದೂ ಈತ ನಂಬುತ್ತಾನೆ. ದೃಶ್ಯ ಜಗತ್ತಿನಲ್ಲಿ ಕಾಣುವ ಕಾಲದ ಕಲ್ಪನೆ ಆ ಜಗತ್ತನ್ನು ಗುರುತಿಸುವ ಮಾನವನ ಐಂದ್ರಿಕ ಪ್ರಜ್ಞೆಗೆ ಸೇರಿದ್ದು. ಇದು ಮಾನವನ ಐಂದ್ರಿಕ ಪ್ರಜ್ಞೆಯ ವಸ್ತುಗಳಿಗೆ ತೊಡಿಸುವ ಒಂದು ಮುಖವಾಡ. ಕಾಲದೇಶಗಳ ಮುಖವಾಡಗಳಿಲ್ಲದ ವಸ್ತುವಿನ ರೂಪರೇಖೆಗಳೇನೆಂಬ ಅರಿವು ಮಾನವನ ಐಂದ್ರಿಕ ಪ್ರಜ್ಞೆಗೆ ಸಾಧ್ಯವಿಲ್ಲವಾದ್ದರಿಂದ ಕಾಲದೇಶಗಳು ಮಾನವನ ಐಂದ್ರಿಕ ಪ್ರಜ್ಞೆ ಮತ್ತು ತಿಳಿವಿಗೆ ಸೇರಿದಂತಿರುವ ಧರ್ಮಗಳೆಂದೂ ಈ ಧರ್ಮಗಳು ವಸ್ತುತಃ ಬಾಹ್ಯ ಜಗತ್ತಿನಲ್ಲಿಲ್ಲವೆಂಬ ವಿನೂತನವೂ ಕ್ರಾಂತಿಕಾರವೂ ಆದ ಸಿದ್ಧಾಂತವನ್ನು ಕಾಂಟ್ ರೂಪಿಸಿದ್ದಾನೆ.

**ಕಾಲದ ಕೊನೆ ಮೊದಲುಗಳು :** ಕಣ್ಣಿಗೆ ಕಾಣದಿದ್ದರೂ ಬಾಳಿನ ಅಂತರಂಗ ಬಹಿರಂಗಗಳನ್ನೆಲ್ಲ ವ್ಯಾಪಿಸಿರುವ ಈ ಕಾಲ ಸಾಂತವೋ ಅನಂತವೋ ಇದಕ್ಕೆ ಕೊನೆ ಮೊದಲೆಂಬುದೇನಾದರೂ ಉಂಟೇ ಎಂಬುದನ್ನು ಕುರಿತು ಸಾಕಷ್ಟು ಚಿಂತನೆ ನಡೆದಿದೆ. ಇದಕ್ಕೆ ಹೊಂದಿದಂತೆ ಮತ್ತೊಂದು ಸಮಸ್ಯೆಯೂ ಇದೆ. ಅದೇನೆಂದರೆ ಕಾಲ

ಅಖಂಡಾತ್ಮಕವಾದದ್ದೋ ಇಲ್ಲವೆ ಖಂಡತ್ವಕ್ಕೊಳಗಾದದ್ದೋ ಎಂಬುದು. ಕಾಲ ಅಖಂಡವಾಗಿದ್ದು, ಅದರಲ್ಲಿ ಅಂಶರೂಪವಾದ ಬಿರುಕುಗಳೇನೂ ಇಲ್ಲವೆಂಬುದಾದರೆ ಆಗ ಅದಕ್ಕೆ ಆದಿ ಅಂತ್ಯಗಳು ಸಾಧ್ಯವಿಲ್ಲವಾಗುತ್ತವೆ. ಕಾಲದಲ್ಲಿ ಮೂಡಿಬರುವ ಆಗುಹೋಗುಗಳು ಬಿಡಿಬಿಡಿಯಾಗಿರಬಲ್ಲವಲ್ಲದೆ ಕಾಲ ಮಾತ್ರ ಏಕಮುಖವಾದ ನಿತ್ಯ ಪ್ರವಾಹವೆನಿಸುತ್ತದೆ. ಈ ಪ್ರವಾಹ ಮೊದಲಾಯಿತೆನ್ನುವುದಾದರೆ ಅದಕ್ಕೆ ಹಿಂದೆ ಮತ್ತೊಂದು ಕಾಲವಿರಬೇಕೆಂಬ ಕೊನೆ ಇಲ್ಲದ ಪ್ರತಿಗಮನಕ್ಕೆಡೆಗೊಡುತ್ತದೆ (ಇನ್‌ಫಿನೆಟ್ ರಿಗ್ರೆಸ್). ಹಾಗೆ ನೋಡಿದರೆ, ಅಖಂಡತ್ವದ ಗರ್ಭದಲ್ಲಿಯೇ ಅನಾದಿತ್ವವೂ ಇರುವುದರಿಂದ ಕಾಲದ ಅಖಂಡತ್ವವನ್ನು ಒಪ್ಪಿದ ಮೇಲೆ ಅದರ ಅನಾದಿತ್ವವನ್ನು ಒಪ್ಪುವುದು ಸುಲಭವಾಗುತ್ತದೆ; ಅಷ್ಟೇ ಏಕೆ, ಆದಿ ಇಲ್ಲದ ಕಾಲ ಅಂತ್ಯವಿಲ್ಲದ್ದೂ ಅಹುದು. ಹೀಗೆ ಕಾಲದ ಅಖಂಡತ್ವದಿಂದ ಕಾಲ ಶಾಶ್ವತವೆನ್ನುವ ಸಿದ್ಧಾಂತಕ್ಕೆ ಬಂದು ನಿಲ್ಲುತ್ತೇವೆ. ಕಾಲ ಸತ್ಯವಾದದ್ದು ಎಂದು ನಂಬುವ ಆದರ್ಶವಾದಿಗಳ ಕ್ರಮವೇ ಬೇರೆ.

ಕಾಲ ಅನಿತ್ಯವಾದದ್ದೆಂದು ನಂಬಿದ ದಾರ್ಶನಿಕರು ಕಾಲಕ್ಕೆ ಅತೀತವಾದ, ಕಾಲದೇಶಗಳಿಂದ ಮುಕ್ತವಾದ, ನಿತ್ಯಸತ್ಯ ಒಂದರ ಹಿನ್ನೆಲೆಯಲ್ಲಿ ಕಾಲದ ಅನಿತ್ಯತೆ ಮತ್ತು ಸಖಂಡತೆಯನ್ನು ಸ್ಥಾಪಿಸುತ್ತಾರೆ. ಪಾಶ್ಚಾತ್ಯ ದರ್ಶನದಲ್ಲಿ ಪ್ಲೇಟೊ ಈ ಪ್ರಯತ್ನವನ್ನು ವ್ಯವಸ್ಥಿತ ರೀತಿಯಲ್ಲಿ ತನ್ನ ಆದರ್ಶಗಳ ವಾದದಲ್ಲಿ (ಥಿಯೊರಿ ಆಫ್ ಐಡಿಯಾಸ್) ಮಾಡಿದ್ದಾನೆ. ಸ್ಥೂಲಜಗತ್ತಿನ ಎಲ್ಲ ವಸ್ತುಗಳಿಗೂ ಮೂಲರೂಪವಾಗಿ ಸ್ವಯಂಪೂರ್ಣವೂ ಕಾಲಾತೀತವೂ ಆದ ಆದರ್ಶ (ಐಡಿಯಲ್) ರೂಪ ಬಂದಿದೆಯೆಂಬುದು ಪ್ಲೇಟೊನ ಸಿದ್ಧಾಂತ. ಕಾಲದೇಶಗಳಿಗೊಳಪಟ್ಟ ಸ್ಥೂಲಜಗತ್ತು ಕಾಲಾತೀತವಾದ ಆದರ್ಶಗಳ ಪ್ರತಿಬಿಂಬ ಇಲ್ಲವೆ ಅಪೂರ್ಣ ಅನುಕರಣೆಯೆಂದು ಆತ ವಿವರಿಸುತ್ತಾನೆ. ಇದೇ ಕ್ರಮದಲ್ಲಿ ಸ್ಪಿನೋಜ಼ನ ಮೂಲಧಾತುವಿನ (ಸಬ್‌ಸ್ಟೆನ್ಸ್) ಕಲ್ಪನೆಯೂ ಕಾಲಾತೀತವಾದ ಸತ್ಯದ ಸಹಾಯದಿಂದ ಕಾಲಕ್ಕಧೀನವಾದ ವಿಶ್ವದ ವಿವರಣೆಗೆ ಮಾಡಿದ ಮತ್ತೊಂದು ಪ್ರಯತ್ನ. ಪ್ಲೇಟೊವಿನ ಆದರ್ಶಗಳಾಗಲಿ ಸ್ಪಿನೋಜ಼ನ ಮೂಲಧಾತುವೇ ಆಗಲಿ ಅವು ಕಾಲದಿಂದ ಮುಕ್ತವಾಗಿದ್ದು ಕಾಲಕ್ಕಧೀನವಾದ ವಾಸ್ತವಿಕ ಜಗತ್ತಿಗೆ ಹೇಗೆ ಕಾರಣವಾಗಬಲ್ಲವೆಂಬುದು ಬಿಡಿಸಲಾರದ ಒಗಟಿನಂತಿದೆ.

ಭಾರತೀಯ ದರ್ಶನದಲ್ಲಿ ಕಾಲದ ಕಲ್ಪನೆ: ಭಾರತೀಯ ದಾರ್ಶನಿಕರಲ್ಲಿ ಜಗತ್ತನ್ನು ಅನಿತ್ಯವೆಂದು ಗಣಿಸಿದ ಉಪನಿಷತ್‌ಕಾರರು ಬ್ರಹ್ಮನ ನಿತ್ಯತ್ವವನ್ನು ಪೂರ್ಣವಾಗಿ ಮನಗಂಡಿದ್ದರು. ಸೃಷ್ಟಿಸ್ಥಿತಿಲಯಗಳಿಗಧೀನವಾದ ವಿಶ್ವವ್ಯಾಪಾರ ನಿತ್ಯಸ್ವರೂಪಿಯಾದ ಬ್ರಹ್ಮನನ್ನು ಆಧರಿಸಿ ನಡೆಯುವ ಒಂದು ಲೀಲೆ. ಬ್ರಹ್ಮ ಅಖಂಡ ಮತ್ತು ನಿತ್ಯನೆನಿಸಿದ್ದರಿಂದ ಕಾಲ ಅನಿತ್ಯವೆನಿಸಿತು. ನಿತ್ಯಮುಕ್ತನಾದ ಬ್ರಹ್ಮ ಹೇಗೋ, ಲೀಲೆಗೆಂತಲೋ ಮಾಯೆಗೆಂತಲೋ, ಅಂತೂ ಕಾಲದ ಅನಿತ್ಯತೆಗೆ ಮೈಒಡ್ಡಿದಾಗ ಜೀವಭಾರವನ್ನು ತಳೆಯುತ್ತಾನೆ. ಅವಿನಾಶಿಯಾದ ಆತ್ಮ ಕಾಲದ ಪಾಶಕ್ಕೊಳಗಾಗಿರುವವರೆಗೂ ಜನನ ಮರಣದ ಭವಚಕ್ರಕ್ಕೆ ಸಿಕ್ಕಿ ಸಾಕ್ಷೀಭೂತನಾಗಿರುತ್ತಾನೆ. ಈ ಭವಬಂಧನವನ್ನು ಗೆದ್ದು ತನ್ನ ಸಹಜತೆಯನ್ನು ಗಳಿಸುವ ಸ್ಥಿತಿಯನ್ನೇ ಮುಕ್ತಿ ಇಲ್ಲವೆ ಬಿಡುಗಡೆ ಎನ್ನುವುದು. ಅಂದರೆ ಕಾಲಕ್ಕಧೀನವಾಗುವುದೇ ಬಂಧನ, ಕಾಲದಿಂದ ಬಿಡುಗಡೆ ಹೊಂದುವುದೇ ಮುಕ್ತಿ.

ಆಸ್ತಿಕ ಧರ್ಮದಲ್ಲಿ ಮಾತ್ರವೇ ಅಲ್ಲದೆ, ಭಾರತೀಯರಲ್ಲಿ ನಾಸ್ತಿಕ ಧರ್ಮಗಳೆನಿಸಿದ ಬೌದ್ಧ ಮತ್ತು ಜೈನಧರ್ಮಗಳಲ್ಲಿಯೂ ಕಾಲಕ್ಕೆ ಬಹು ಮಹತ್ತ್ವದ ಸ್ಥಾನ ದೊರೆತಿದೆ. ಅದನ್ನು ಕುರಿತು ಆಳವಾದ ಚಿಂತನೆ ಈ ಧರ್ಮಗಳಲ್ಲಿ ಕಾಣಬರುತ್ತದೆ. ಬೌದ್ಧ ಸಿದ್ಧಾಂತಕ್ಕೆ ಅವರು ಕ್ಷಣಿಕವಾದ ಒಂದು ಕೀಲಿಕೈ ಇದ್ದಂತೆ. ಈ ಕ್ಷಣಿಕವಾದವನ್ನು ಒಪ್ಪದಿದ್ದವರು ಬೌದ್ಧಧರ್ಮದ ಇನ್ನುಳಿದ ತತ್ತ್ವಗಳಾದ ಅನಾತ್ಮವಾದ, ನಿರೀಶ್ವರವಾದಗಳನ್ನು ಮನ್ನಿಸುವುದು ದುಸ್ತರವಾಗುತ್ತದೆ. ಕ್ಷಣಕ್ಷಣಗಳ ನಿತ್ಯಪ್ರವಾಹದಿಂದಾಗಿ ಕರ್ಮ ಇಲ್ಲವೇ ಸಂಸ್ಕಾರ ಸಂಘಾತಗೊಂಡು ಹೆಪ್ಪುಗಟ್ಟುತ್ತದೆ. ಹಾಗೆಯೇ ಹಿಂದೆಂದೂ ಇಲ್ಲದ ಆತ್ಮಭಾವ ಮೂಡಿ ಏಕತೆಯ ಭ್ರಾಂತಿಗೆ ಎಡೆಕೊಡುತ್ತದೆ. ಅಂದಿನಿಂದಲೇ ಜೀವಿಯ ತೊಳಲಾಟ ಮೊದಲಾಯಿತು. ಕೊನೆಗೊಮ್ಮೆ ಈ ಭಾವಕರಗಿ ಶೂನ್ಯಗೊಳ್ಳುವುದೂ ಕ್ಷಣಸ್ವರೂಪಿಯಾದ ಕಾಲವಿನ್ಯಾಸಕ್ಕೊಳಪಟ್ಟೇ. ಜೀವಿ ಶೂನ್ಯತೆಯಲ್ಲಿ ನಿರ್ವಾಣಗೊಂಡಮೇಲೂ ಕಾಲಗತಿ ಎಂದಿನಂತೆ ನಡೆದೇ ಇರುತ್ತದೆ. ಅಂದಮೇಲೆ ಕ್ಷಣಸ್ವರೂಪಿಯಾದ ಕಾಲ ಜೀವನಿಗಿಂತಲೂ ಶಾಶ್ವತವಾಗಿ ನಿಲ್ಲುವಂತೆ ಕಾಣುತ್ತದೆ.

ಜೈನಧರ್ಮದಲ್ಲಿಯೂ ಕಾಲಕ್ಕೆ ಮಹತ್ತರವಾದ ಸ್ಥಾನ ಉಂಟು. ಏಕೆಂದರೆ ಅವರ ಮೂಲದ್ರವ್ಯಗಳಲ್ಲಿ ಒಂದಾದ ಅಜೀವದಲ್ಲಿ ಕಾಲ ಒಂದು ಮೂಲಧಾತು. ಜಡಪ್ರಪಂಚಕ್ಕೆ ಕಾರಣರೂಪವಾದ ಪುದ್ಗಲಪರಿಣಾಮ ಕಾಲಗತಿಗೊಳಪಟ್ಟು ನಡೆಯುತ್ತದೆ. ಇವರ ಕಲ್ಪನೆಯಂತೆ ಕಾಲ ವರ್ತುಲಾಕಾರದಲ್ಲಿ ಚಲಿಸುವಂತಿದ್ದು ಅದರಲ್ಲಿ ಊರ್ಧ್ವಗತಿ ಮತ್ತು ಅಧೋಗತಿಗಳೆಂಬ ಎರಡು ರೀತಿಯ ಚಲನೆಗಳಿವೆ. ಕಾಲದ ಊರ್ಧ್ವಗತಿಯನ್ನು ಉತ್ಸರ್ಪಿಣಿಯಲ್ಲಿಯೂ ನಡೆಯುತ್ತದೆಂದು ತಿಳಿಯುತ್ತಾರೆ. ಮುಕ್ತ ಜೀವರಾದ ತೀರ್ಥಂಕರರು ಈ ಕಾಲವರ್ತುಲದಿಂದ ಮುಕ್ತರಾಗಿ ಅಲೋಕಾಕಾಶದಲ್ಲಿ ರಂಜಿಸುತ್ತಾರೆಂಬ ಜೈನರ ಸಿದ್ಧಾಂತ ಕಾಲಾತೀತ ಸ್ಥಿತಿಯೊಂದರ ಕಲ್ಪನೆಗೆ ಇಂಬುಗೊಡುತ್ತದೆ.

**ಇತಿಹಾಸ ಮತ್ತು ಕಾಲ:** ವಿಜ್ಞಾನಿಗಳು, ದಾರ್ಶನಿಕರು ಮಾತ್ರವೇ ಅಲ್ಲದೆ ಇತಿಹಾಸಜ್ಞರೂ ಕಾಲದ ವಿಚಾರದಲ್ಲಿ ಮನಸ್ಸನ್ನು ಹರಿಯಬಿಟ್ಟಿದ್ದಾರೆ. ಇತಿಹಾಸವೆಲ್ಲವೂ ಗತಕಾಲದ ಮರುನೆನಪು ಎಂಬುದಾದ್ದರಿಂದ ಕಾಲದಿಂದಾಗಿಯೇ ಇತಿಹಾಸ ಸಾಧ್ಯವಾಯಿತು. ಕಾಲ ಓಡಿದಂತೆಲ್ಲ ಅದರಲ್ಲಿನ ಘಟನೆಗಳು ಮಸುಕಾಗುತ್ತವೆ. ಏಕೆಂದರೆ ಅವು ಕಾಲದ ಪದರದಲ್ಲಿ ಮುಚ್ಚಿಹೋಗುತ್ತವೆ. ಈ ಇತಿಹಾಸದ ಗಮನವೂ ಒಂದು ದಾರ್ಶನಿಕ ನಿಯಮಕ್ಕೊಳಪಟ್ಟಂತೆ ನಡೆಯುತ್ತದೆಂಬುದನ್ನು ಗುರುತಿಸಿದವ ಹೆಗೆಲ್ ಮಹಾಶಯ. ಇವನ ವಾದಾತ್ಮವಿಕಾಸವಾದ (ಡಯಲೆಕ್ಟಿಕಲ್ ಎವಲ್ಯೂಷನ್) ಇತಿಹಾಸಗತಿಯಲ್ಲಿ, ಸಿದ್ಧಾಂತ (ಥೀಸಿಸ್) ಪ್ರತಿಸಿದ್ಧಾಂತ (ಆಂಟಿಥೀಸಿಸ್) ಮತ್ತು ಸಮನ್ವಯ (ಸಿಂಥೆಸಿಸ್) ಎಂಬ ಮೂರು ಹೆಜ್ಜೆಗಳನ್ನು ಗುರುತಿಸುತ್ತದೆ. ಇತಿಹಾಸದ ಚಲನೆಯಲ್ಲಿ ಈ ಧರ್ಮಸದಾ ಕಾಣಬರುವುದರಿಂದ ಇದೇ ಇತಿಹಾಸದ ಅನುಕ್ರಮ. ಈ ಕ್ರಮದಲ್ಲಿಯೇ ಭೂತಕಾಲ ವರ್ತಮಾನವನ್ನೂ ವರ್ತಮಾನ ಭವಿಷ್ಯದ ಗರ್ಭವನ್ನೂ ಹೋಗುತ್ತದೆ. ಇತಿಹಾಸದ ಈ ಕ್ರಮಗತಿ ಕಾಲಕ್ಕೊಂದು ಸೇತುವೆ ಇದ್ದಂತಿದೆ.

ಅಂತೂ ಕಾಲಕ್ಕಧೀನವಾದ ಮಾನವಪ್ರಜ್ಞೆ ಕಾಲದ ಮೂಲವನ್ನೇ ಕುರಿತು ಚಿಂತಿಸಹೊರಟಾಗ ಈ ರೀತಿಯ ವೈವಿಧ್ಯಪೂರ್ಣವಾದ ವಿವರಣೆಗಳನ್ನು ಸೃಷ್ಟಿಸಿದೆ. ಅಷ್ಟೇ ಅಲ್ಲದೆ ತ್ರಿಕಾಲಾಬಾಧಿತವಾದ ಈ ಕಾಲದ ವಿರಾಡ್ ರೂಪವನ್ನು ಕಂಡ ಕವಿ, ಸಂತರನೇಕರು ಮೂಕವಿಸ್ಮಿತರಾಗಿರುವುದೂ ಉಂಟು. ಇದು ಭಾವುಕರಿಂದ ದೊರೆತ ಕಾಲದ ವಿವರಣೆಯೋ ಎಂಬಂತಿದೆ. (ಎ.ಎಲ್.ಎಸ್.)

**ಕಾಲ$^2$** : ಘಟನೆಗಳನ್ನು ಕುರಿತ ಒಂದು ಆಧಾರ ಪರಿಕಲ್ಪನೆ (ಟೈಂ). ಎರಡು ಘಟನೆಗಳ ನಡುವಿನ ಅಂತರವೇ ಕಾಲ ಎನ್ನುವುದುಂಟು. ಒಬ್ಬ ಮನುಷ್ಯ ಭೂಮಿಯಲ್ಲಿ ಬಾಳಿದುದು ಎಷ್ಟು ಸತ್ಯವೋ ಕಾಲದಲ್ಲಿ ಬಾಳಿದುದೂ ಅಷ್ಟೇ ಸತ್ಯ. ಅವನು ಹುಟ್ಟಿದ್ದು ಸತ್ತದ್ದು ಇಲ್ಲಿ ಎರಡು ಘಟನೆಗಳು. ಇವುಗಳ ನಡುವಿನ ಅಂತರ ಅವನು ಬಾಳಿದ ಕಾಲ. ಕಾಲವನ್ನು ತಿಳಿಯುವಂತೆ ವಿವರಿಸಿ ಹೇಳಬಹುದು. ಆದರೆ ನಿಖರವಾಗಿ ವ್ಯಾಖ್ಯಿಸುವುದು ಸಾಧ್ಯವಾಗಿಲ್ಲ. ಕಾರಣವೆಂದರೆ ಕಾಲದ ಪ್ರಜ್ಞೆ ದೂರ ಹಾಗೂ ಚಲನೆಗಳಲ್ಲಿ ಅವಿಭಾಜ್ಯವಾಗಿ ಎರಕಗೊಂಡಿದೆ. ಈ ಪ್ರಜ್ಞೆ ಮನುಷ್ಯನಿಗೆ ಮೂಡಿರುವುದು (ಅಂತಿಮವಾಗಿ) ಆಕಾಶದಲ್ಲಿ ಭೂಮಿಯ ಚಲನೆಯಿಂದ. ಅರಿಸ್ಟಾಟಲನ ಮಾತಿನಲ್ಲಿ 'ನಾವು ಚಲನೆಯನ್ನು ಗುರುತಿಸಿದಾಗ ಮಾತ್ರವೇ ಕಾಲವನ್ನು ಅರಿಯುತ್ತೇವೆ. ಆದರೆ ಚಲನೆಯನ್ನು ಕಾಲದಿಂದ ಅಳೆಯುತ್ತೇವೆ ಮಾತ್ರವಲ್ಲ ಕಾಲವನ್ನೂ ಚಲನೆಯಿಂದ ಅಳೆಯುತ್ತೇವೆ. ಏಕೆಂದರೆ ಅವು ಒಂದನ್ನೊಂದು ವ್ಯಾಖ್ಯಿಸುತ್ತವೆ.' ಹೀಗಾಗಿ ಕಾಲವೆಂಬುದು ವ್ಯಾಖ್ಯೆಗೆ ಸಿಕ್ಕದೇ ಜಾರುತ್ತದೆ.

ಮನುಷ್ಯನಿಗೆ ಕಾಲದ ಪ್ರಜ್ಞೆ ಬರಲು ಅಂತಿಮವಾದ ಕಾರಣ ಭೂಮಿಯ ದ್ವಿವಿಧ ಚಲನೆಗಳು–ಒಂದು, ಸ್ವಂತಾಕ್ಷದ ಸುತ್ತ ಆವರ್ತನೆ; ಎರಡು, ಸೂರ್ಯನ ಸುತ್ತ ಪರಿಭ್ರಮಣೆ. ಇವುಗಳ ಪರಿಣಾಮವಾಗಿ ಅಗಾಧ ದೂರಗಳಲ್ಲಿರುವ ಸ್ಥಿರ ನಕ್ಷತ್ರಗಳ ಹಿನ್ನೆಲೆಯಲ್ಲಿ ಸೂರ್ಯ, ಚಂದ್ರ, ಗ್ರಹಗಳ ಚಲನೆ, ಒಂದು ಸಂಕೀರ್ಣ ರೂಪದಲ್ಲಿ ಭಾಸವಾಗುತ್ತದೆ. ಇಲ್ಲಿ ಗ್ರಹಗಳಿಗೂ ಚಂದ್ರನಿಗೂ ಸ್ವತಂತ್ರ ಚಲನೆಗಳೂ ಉಂಟು. ಇದು ಹೇಗೂ ಇರಲಿ, ಮನುಷ್ಯನ ದೃಷ್ಟಿಯಿಂದ ನಕ್ಷತ್ರ ಚಿತ್ರಗಳೆಂಬ ಸ್ಥಿರ ಹಿನ್ನೆಲೆಯಲ್ಲಿ ಸೂರ್ಯನನ್ನು ಕುರಿತಂತೆ ಕಾಲದ ಪ್ರಜ್ಞೆ ಮೂಡುತ್ತದೆ. ಆದರೆ ವಾಸ್ತವಿಕವಾಗಿ ವಿಶ್ವದಲ್ಲಿ ಸ್ಥಿರವಾದದ್ದು ಯಾವುದೂ ಇಲ್ಲ–ನಮ್ಮ ನೆಲ ಸ್ಥಿರವೆಂದು ಭಾವಿಸಿದರೆ ಭೂಮಿ ಚಲಿಸುತ್ತಿದೆ; ಸೂರ್ಯ ಸ್ಥಿರವೆಂದು ಭಾವಿಸಿದರೆ ಇಡೀ ಸೌರವ್ಯೂಹ ಸಮೇತ ಸೂರ್ಯ ಆಕಾಶಗಂಗೆಯಲ್ಲಿ ಚಲಿಸುತ್ತಿದೆ; ಆಕಾಶಗಂಗೆಗೆ ಪ್ರತ್ಯೇಕವಾದ ಒಂದು ಚಲನೆಯೇ ಇದೆ; ಇತ್ಯಾದಿ. ಹೀಗೆ ಚಲನಸ್ಥಿತಿಯಲ್ಲಿರುವ ವಿಶ್ವದಲ್ಲಿ ಸ್ಥಿರವಾದ ಹಿನ್ನೆಲೆಯೇ ದೊರೆಯದೇ ಕಾಲವೆಂಬ ಶಬ್ದವನ್ನು ಸರಿಯಾಗಿ ವ್ಯಾಖ್ಯಿಸಲು ಸಾಧ್ಯವಾಗುವುದಿಲ್ಲ. ಆದರೂ ಮನುಷ್ಯನ ಜೀವನದೃಷ್ಟಿಯಿಂದ ಇದಕ್ಕೆ ಒಂದು ಅರ್ಥವನ್ನು ಕೊಡಬಹುದಷ್ಟೆ.

ಪ್ರಚಲಿತ ಭಾವನೆಗಳನ್ನು ವಿಶ್ಲೇಷಿಸಿ ಒಂದು ಸ್ಪಷ್ಟ ವಿವರಣೆಯನ್ನು ಐಸಾಕ್ ನ್ಯೂಟನ್ (1642–1727) ನೀಡಿದ ಆತನ ಗ್ರಂಥ ಪ್ರಿನ್ಸಿಪಿಯಾದಲ್ಲಿ ಅವನು ಬರೆದ ಮಾತು ಹೀಗಿವೆ : 1 ನಿರಪೇಕ್ಷ, ಶುದ್ಧ ಮತ್ತು ಗಣಿತೀಯ ಕಾಲ ತನ್ನಷ್ಟಕ್ಕೇ ಹಾಗೂ ತನ್ನ ಸ್ವಭಾವದಿಂದಲೇ ಬಾಹ್ಯಕಾರಕ ಯಾವುದಕ್ಕೂ ಸಂಬಂಧವಿಲ್ಲದೆ ಸ್ಥಿರಗತಿಯಿಂದ ಪ್ರವಹಿಸುವುದು ; 2 ನಿರಪೇಕ್ಷ ಆಕಾಶ ಅದರ ಸ್ವಭಾವದಲ್ಲಿಯೇ ಬಾಹ್ಯಕಾರಕ ಯಾವುದಕ್ಕೂ ಸಂಬಂಧವಿಲ್ಲದೇ ಸದಾ ಒಂದೇ ಪ್ರಕಾರವಾಗಿಯೂ ಅಚಲವಾಗಿಯೂ ಇರುತ್ತದೆ. ಹೀಗೆ ನ್ಯೂಟನ್ನನ ಪ್ರಕಾರ ಕಾಲ ಒಂದು ಸ್ವತಂತ್ರ ಪ್ರವಾಹ, ಆಕಾಶ ಒಂದು ಸ್ಥಿರ ಪ್ರದೇಶ. ಇಂಥ ಆಕಾಶದಲ್ಲಿ ವಸ್ತುಗಳು ಸ್ಥಳಾಕ್ರಮಣ ಮಾಡಿವೆ; ಅವುಗಳ ಚಲನೆಯನ್ನು ತಿಳಿಯಲು ಕಾಲ ಸಹಾಯಕಾರಿ. ನ್ಯೂಟನ್ನನ ಅಂಗೀಕೃತ ಭಾವನೆಗಳ ಸಾರಾಂಶ ಹೀಗಿದೆ : 1 ಕ್ಷಣಕಾಲ ಸಂಭವಿಸುವ ಹಾಗೂ ಆಕಾಶದಲ್ಲಿ ಭಿನ್ನ ಸ್ಥಾನಗಳಲ್ಲಿ ನೆಲೆಗೊಳಿಸಬಹುದಾದ

ಎರಡು ಘಟನೆಗಳುಗೊತ್ತಿರುವಾಗ ಅವುಗಳ ಪೈಕಿ ಯಾವುದು ಮೊದಲು ಘಟಿಸಿದ್ದು (ಕಾಲದಲ್ಲಿ) ಅಥವಾ ಅವೆರಡೂ ಏಕಕಾಲಿಕವೇ ಎಂಬುದರ ವಿಚಾರದಲ್ಲಿ ಎಲ್ಲ ವೀಕ್ಷಕರಲ್ಲೂ ಒಮ್ಮತವಿರುತ್ತದೆ. 2 ಆ ಘಟನೆಗಳು ಏಕಕಾಲಿಕಗಳಲ್ಲದಿದ್ದರೆ ಅವುಗಳ ನಡುವಿನ ಕಾಲಾಂತರ ಎಲ್ಲ ಸಮರ್ಥ ವೀಕ್ಷಕರೂ ಒಪ್ಪಿರುವಂಥ ಒಂದು ನಿರಪೇಕ್ಷ ಪರಿಮಾಣ. 3 ಎರಡು ಏಕಕಾಲಿಕ ಘಟನೆಗಳ ನಡುವಿನ ಆಕಾಶಾಂತರ ಎಲ್ಲ ಸಮರ್ಥ ವೀಕ್ಷಕರೂ ಒಪ್ಪಿರುವಂಥ ಒಂದು ನಿರಪೇಕ್ಷ ಪರಿಮಾಣ. ಈ ಅಂಗೀಕೃತ ಭಾವನೆಗಳ ಪೈಕಿ ಮೊದಲನೆಯದು ನಾಗರಿಕ ವ್ಯವಹಾರಗಳ ದೃಷ್ಟಿಯಿಂದಲೂ ವಿಜ್ಞಾನದ ಸ್ಥೂಲ ಹಾಗೂ ದೈನಂದಿನ ಪ್ರಯೋಗಗಳ ದೃಷ್ಟಿಯಿಂದಲೂ ಅನುಭವಗಮ್ಯವಾಗಿದೆ. ಮಾತ್ರವಲ್ಲ, ಲಭ್ಯ ಫಲಿತಾಂಶಗಳ ಹಿನ್ನೆಲೆಯಲ್ಲಿ ಸಮರ್ಪಕವಾದ ವಿವರಣೆಯೂ ಆಗಿದೆ. ಇದನ್ನು ಒಪ್ಪಿಕೊಂಡ ಒಡನೆ ಉಳಿದೆರಡು ಅದನ್ನು ಹೊಂದಿಕೊಂಡು ಸಂಗತ ಆಗುತ್ತವೆ. ಮೊದಲನೆಯ ಅಂಗೀಕೃತ ಭಾವನೆಯಲ್ಲಿ ಅಂತರ್ಗತವಾಗಿರುವ ಒಂದು ಅಂಶ ಉಂಟು–ಭಿನ್ನ ಸ್ಥಳಗಳಲ್ಲಿ ನಡೆಯುವ ಎರಡು ಘಟನೆಗಳು ಏಕಕಾಲಿಕವೇ ಅಲ್ಲವೇ ಎಂದು ನಿರ್ಧರಿಸಬೇಕಾದರೆ ಅವುಗಳ ನಡುವೆ ಸಂಕೇತಗಳನ್ನು ತತ್‌ಕ್ಷಣವೇ ರವಾನಿಸಬಲ್ಲ ಒಂದು ವ್ಯವಸ್ಥೆ ಇರಬೇಕು. ಅಂದರೆ, ಸಾಂತ ದೂರಗಳನ್ನು ತತ್‌ಕ್ಷಣವೇ ಗಮಿಸಬಲ್ಲ ಸಂಕೇತಗಳು ಅವಶ್ಯವೆಂದಾಯಿತು. ಭೌತವಿಶ್ವದಲ್ಲಿ ಇಂಥ ಒಂದು ವ್ಯವಸ್ಥೆ ಇರುವುದು ಅಸಾಧ್ಯವೆಂಬುದನ್ನು ಈ ಶತಮಾನದ ಆದಿಯಲ್ಲಿ ಪ್ರಕಟಗೊಂಡ ಆಲ್ಬರ್ಟ್ ಐನ್‌ಸ್ಟೈನನ ಸಾಪೇಕ್ಷತಾ ಸಿದ್ಧಾಂತದಲ್ಲಿ ಸಾಧಿಸಲಾಗಿದೆ. ಬೆಳಕಿನ ವೇಗವನ್ನು ಮೀರಬಲ್ಲ ಯಾವ ವೇಗವೂ ವಿಶ್ವದಲ್ಲಿ ಇಲ್ಲ. ಆದ್ದರಿಂದ ನಿರಪೇಕ್ಷ ಕಾಲ ಎಂಬ ನ್ಯೂಟನ್ ಪರಿಕಲ್ಪನೆಗೆ ಇಂದು ಭೌತವಾಗಿ ಯಾವ ಅಸ್ತಿತ್ವವೂ ಇಲ್ಲ.

ಐನ್‌ಸ್ಟೈನನ ಪ್ರಕಾರ ಆಕಾಶ ಮತ್ತು ಕಾಲ, ಈ ವರೆಗೆ ಭಾವಿಸಿದಂತಲ್ಲದೇ ಪರಸ್ಪರ ಅತಿ ನಿಕಟವಾಗಿ ಅವಿಚ್ಛಿನ್ನವಾಗಿ ಹೆಣೆದುಕೊಂಡಿವೆ; ಮತ್ತು ಕೆಲವು ಪರಿಮಿತಿಗಳ ಒಳಗೆ ಆಕಾಶದ ಭಾವನೆಯಿಂದಲೂ ಮತ್ತು ವಿಪರ್ಯಾಯವಾಗಿಯೂ ಪ್ರತಿಸ್ಥಾಪಿಸಬಹುದು. ಈ ಹೇಳಿಕೆಯನ್ನು ಸ್ಪಷ್ಟಪಡಿಸಲು ಒಂದು ಉದಾಹರಣೆಯನ್ನು ಪರಿಶೀಲಿಸೋಣ. ನೇರವಾದ ಒಂದು ಮಾರ್ಗವಿದೆಯೆಂದೂ ಅದರ ಒಂದು ಅಂಚಿನಲ್ಲಿ ಒಬ್ಬ ವೀಕ್ಷಕ ನಿಂತಿರುವನೆಂದೂ ಭಾವಿಸೋಣ. ಮಾರ್ಗದ ಮೇಲೆ ಧಾವಿಸುವ ಮೋಟಾರ್ ಕಾರಿನ ಒಳಗಿರುವ ಪ್ರಯಾಣಿಕರ ಚಲನವಲನ ಈತನಿಗೆ ಕಾಣಿಸುವಂಥ ಏರ್ಪಾಡು ಮಾಡಲಾಗಿದೆಯೆಂದೂ ತಿಳಿಯೋಣ. ಕಾರು ಒಂದನೆಯ ಕಿಮೀ ಕಲ್ಲಿನ ಸಮೀಪ ಬರುವಾಗ ಒಬ್ಬ ಪ್ರಯಾಣಿಕ ಬಾಳೆಹಣ್ಣನ್ನು ತಿನ್ನಲು ಆರಂಭಿಸಿದ ಮತ್ತು ಎರಡನೆಯ ಕಿಮೀ ಕಲ್ಲಿನ ಸಮೀಪ ಬರುವಾಗ ಬೆಂಕಿಕಡ್ಡಿ ಗೀರಿ ಸಿಗರೇಟ್ ಹೊತ್ತಿಸಲು ತೊಡಗಿದ ಎಂದು ಭಾವಿಸೋಣ. ಈ ಎರಡು ಘಟನೆಗಳು ಕಾರಿನ ಒಳಗಿದ್ದ ಓರ್ವ ಸಹಪ್ರಯಾಣಿಕನ ದೃಷ್ಟಿಯಲ್ಲಿ ಒಂದೇ ಸ್ಥಳದಲ್ಲಿ (ಅವನ ಚೌಕಟ್ಟು ಕಾರು ಎಂದು ನೆನಪಿನಲ್ಲಿಡಬೇಕು) ಜರುಗಿವೆ. ಆದರೆ ಮಾರ್ಗದ ಅಂಚಿನಲ್ಲಿ (ಕಾರಿನ ಪ್ರಮಾಣದಿಂದ ಪ್ರತ್ಯೇಕವಾಗಿ) ನಿಂತಿದ್ದ ವೀಕ್ಷಕನ ದೃಷ್ಟಿಯಲ್ಲಿ ಅವು ಮಾರ್ಗದ ಭಿನ್ನ ಸ್ಥಳಗಳಲ್ಲಿ–ಅವುಗಳ ನಡುವಿನ ಅಂತರ ಒಂದು ಕಿಮೀ– ನಡೆದಿವೆ. ಆದ್ದರಿಂದ ಒಂದು ಚಲಿಸುವ ವ್ಯವಸ್ಥೆಯೊಳಗಿನ (ಇಲ್ಲಿ ಕಾರು) ಒಂದೇ ಸ್ಥಳದಲ್ಲಿ ಆದರೆ ಭಿನ್ನ ಕಾಲಗಳಲ್ಲಿ ಸಂಭವಿಸುವ ಘಟನೆಗಳನ್ನು ನಿಂತಿರುವ ಓರ್ವ ವೀಕ್ಷಕ ಭಿನ್ನ ಸ್ಥಳಗಳಲ್ಲಿ ನಡೆದಿವೆ ಎಂದು ಪರಿಗಣಿಸುತ್ತಾನೆ. ಈಗ ಐನ್‌ಸ್ಟೈನನ ತರ್ಕಸರಣಿಯನ್ನು ಅನುಸರಿಸಿ ಮೇಲಿನ ವಾಕ್ಯದಲ್ಲಿ 'ಸ್ಥಳ' ಇರುವಲ್ಲಿ 'ಕಾಲ'ವನ್ನು ಮತ್ತು ವಿಪರ್ಯಾಯವಾಗಿ ಆದೇಶಿಸೋಣ. ಆಗ ಅದು ಹೀಗಾಗುತ್ತದೆ. ಒಂದು ಚಲಿಸುವ ವ್ಯವಸ್ಥೆಯೊಳಗೆ ಏಕಕಾಲದಲ್ಲಿ ಆದರೆ ಭಿನ್ನ ಸ್ಥಳಗಳಲ್ಲಿ ಸಂಭವಿಸುವ ಘಟನೆಗಳನ್ನು ನಿಂತಿರುವ ಓರ್ವ ವೀಕ್ಷಕ ಭಿನ್ನ ಕಾಲಗಳಲ್ಲಿ ನಡೆದಿವೆ ಎಂದು ಪರಿಗಣಿಸುತ್ತಾನೆ. ಈ ಉದಾಹರಣೆಯ ಸಾರಾಂಶವಿಷ್ಟು–ಆಕಾಶವನ್ನು ಬಿಟ್ಟು ಕಾಲವೆಂಬ ಒಂದು ನಿರಪೇಕ್ಷ ಭಾವನೆಗೆ ಅಸ್ತಿತ್ವವಿಲ್ಲ.

ವಿಶ್ವ ಉದ್ದ ಅಗಲ ಎತ್ತರ ಎಂಬ ಮೂರು ಆಯಾಮಗಳ ಆಕಾಶವನ್ನೂ ಕಾಲ ನಾಲ್ಕನೆಯ ಆಯಾಮವನ್ನೂ ಒಳಗೊಂಡಿರುವ ಆಕಾಶ–ಕಾಲ ಅವಿಚ್ಛಿನ್ನತೆ (ಸ್ಪೇಸ್–ಟೈಂ ಕಂಟಿನ್ಯುಯಂ) ಎಂದು ಐನ್‌ಸ್ಟೈನನ ವಾದ. ಇದೊಂದು ಕೇವಲ ಗಣಿತ ಪರಿಕಲ್ಪನೆಯಲ್ಲ. ಈ ಪರಿಕಲ್ಪನೆ ವಿಶ್ವದ ವಿದ್ಯಮಾನಗಳಿಗೆ ಸಮರ್ಥ ಸಾಧನೆಗಳನ್ನು ನೀಡಬಲ್ಲುದಾದ್ದರಿಂದ ಸೈದ್ಧಾಂತಿಕವಾಗಿ ಇದು ಎಷ್ಟು ಭದ್ರವಾಗಿದೆಯೋ ಪ್ರಾಯೋಗಿಕವಾಗಿದೆಯೋ ಅಷ್ಟೇ ಭದ್ರವಾಗಿದೆ. ಆಕಾಶಾಂತರಗಳನ್ನು ಕಾಲಾಂತರಗಳಾಗಿ ಮತ್ತು ವಿಪರ್ಯವಾಗಿ ಪರಿವರ್ತಿಸಲು ಒಂದು ಸರಳ ಜ್ಯಾಮಿತೀಯ ವಿಧಾನವನ್ನು ಜರ್ಮನಿಯ ಗಣಿತಜ್ಞ ಎಚ್. ಮಿಂಕೊವ್ಸ್ಕಿ ಸೂಚಿಸಿದ. ಆಕಾಶ ಮೂರು ಆಯಾಮಗಳನ್ನು ಒಳಗೊಂಡಿರುವುದು ಸರಿಯಷ್ಟೆ. ಕಾಲವನ್ನು ನಾಲ್ಕನೆಯ ಆಯಾಮವೆಂದು ಮಿಂಕೊವ್ಸ್ಕಿ ಭಾವಿಸಿದ. ಈ ಭಾವನೆಯ ಪ್ರಕಾರ ಒಂದು ಘಟನೆಗೆ ನಾಲ್ಕು ನಿರ್ದೇಶಕಗಳಿವೆ. (x, y, z) ಇವು ಆಕಾಶ ನಿರ್ದೇಶಕಗಳು; ಎಂದರೆ ಆಘಟನೆ ಯಾವ ಸ್ಥಳದಲ್ಲಿ ಜರುಗಿದೆ ಎಂಬುದರ ಸೂಚಕಗಳು. ನಾಲ್ಕನೆಯದು ಕಾಲಸೂಚಕ t ಈಗ ಆಕಾಶಸೂಚಕಗಳನ್ನು ಅಡಿ, ಸೆಂಮೀ. ಮುಂತಾದ ದೂರಮಾನಗಳಿಂದ ಅಳೆಯುತ್ತಾರೆ; t ಯನ್ನಾದರೂ ಗಂಟೆ, ಮಿನಿಟ್, ಸೆಕೆಂಡ್ ಮುಂತಾದ ಕಾಲಮಾನಗಳಲ್ಲಿ. ಇವೆರಡು ಭಿನ್ನ ಮಾನಗಳನ್ನು ಸಂಬಂಧಿಸಲು ವಿಶ್ವದಲ್ಲಿ ಸ್ಥಿರ (ಹಾಗೂ ಗರಿಷ್ಠ) ವೇಗವಾದ ಬೆಳಕಿನ ವೇಗವನ್ನು (ಇದನ್ನು c ಎಂಬ ಸಂಕೇತದಿಂದ ಸೂಚಿಸುವುದು ವಾಡಿಕೆ) ಪರಿವರ್ತಕವಾಗಿ ಮಿಂಕೊವ್ಸ್ಕಿ ಬಳಸಿಕೊಂಡ. ಆದ್ದರಿಂದ ಈ ಹೊಸ ಆಕಾಶ–ಕಾಲ ಜ್ಯಾಮಿತಿಯಲ್ಲಿ ಒಂದು ಘಟನೆಯ ನಿರ್ದೇಶಕಗಳು ನಾಲ್ಕು x, y, z ಮತ್ತು ict. ಇಲ್ಲಿ $i = \sqrt{-1}$ ಇವೆಲ್ಲ ನಿರ್ದೇಶಕಗಳೂ ಒಂದೇ ಮಾನಗಳಿವೆ. ಆದ್ದರಿಂದ A ಮತ್ತು B ಎರಡು ಭಿನ್ನ ಘಟನೆಗಳಾಗಿದ್ದು ಅವುಗಳ ನಿರ್ದೇಶಕ ಚತುಷ್ಟಯಗಳು ಅನುಕ್ರಮವಾಗಿ ($x_1, y_1, z_1, ict_1$) ಮತ್ತು ($x_2, y_2, z_2, ict_2$) ಆಗಿದ್ದರೆ ಆಗ ಆ ಘಟನೆಗಳ ನಡುವಿನ ಆಕಾಶ–ಕಾಲಾಂತರದ ವರ್ಗ

$$(x_1 - x_2)^2 + (y_1 - y_2)^2 + (z_1 - z_2)^2 + (ict_1 - ict_2)^2 =$$

$$(x_1 - x_2)^2 + (y_1 - y_2)^2 + (z_1 - z_2)^2 - c^2 (t_1 - t_2)^2$$

ಆಗುತ್ತದೆ.

ಕಾಲವನ್ನು ಕುರಿತು ನಮ್ಮಲ್ಲಿರುವ 'ಈಗ, ಮೊದಲು, ತರುವಾಯ' ಮುಂತಾದ ಅಭ್ಯಾಸರೂಢ ಪರಿಕಲ್ಪನೆಗಳಿಗೆ ನಿರಂತರ ಚಲನಶೀಲ ವಿಶ್ವದಲ್ಲಿ ಯಾವ ಅರ್ಥವೂ ಇಲ್ಲ. ಉದಾಹರಣೆಗೆ ಲುಬ್ಧಕ ನಕ್ಷತ್ರವನ್ನು ಪರಿಶೀಲಿಸಬಹುದು. ಗರಿಷ್ಠ ಕಾಂತಿಯ ದೃಷ್ಟಿಯಿಂದ ಆಕಾಶದ ಸಮಸ್ತ ನಕ್ಷತ್ರಗಳಲ್ಲಿಯೂ ಸೂರ್ಯನಾದ ಮೇಲೆ, ಇದಕ್ಕೇ ಅಗ್ರತಾಂಬೂಲ. ಭೂಮಿಯಿಂದ ಇದರ ದೂರ ಸುಮಾರು 9 ಜ್ಯೋತಿರ್ವರ್ಷಗಳು (ಎಂದರೆ ಸೆಕೆಂಡಿಗೆ ಸುಮಾರು 1,86,300 ಮೈಲಿಗಳ ವೇಗದಿಂದ ಚಲಿಸುವ ಬೆಳಕಿನ ಕಿರಣ 9 ವರ್ಷಗಳ ಕಾಲ ಗಮಿಸುವ ದೂರ; ವಿಶ್ವದಲ್ಲಿ ಬೆಳಕಿನ ವೇಗವನ್ನು ಮೀರುವ ಯಾವ ವೇಗವೂ ಇಲ್ಲ ಎಂಬುದನ್ನು ನೆನಪಿನಲ್ಲಿಡಬೇಕು). ಈ ರಾತ್ರಿ ನಾವು ನೋಡುವ ಲುಬ್ಧಕ ವಾಸ್ತವಿಕವಾಗಿ ಈಗ ಅಲ್ಲಿದೆಯೇ ಇಲ್ಲವೇ ನಮಗೆ ತಿಳಿಯದು, ತಿಳಿಯಲು ಯಾವ ಉಪಕರಣವೂ ಇಲ್ಲ. ಈಗ ನಾವು ನೋಡುತ್ತಿರುವುದು 9 ವರ್ಷಗಳ ಹಿಂದೆ ಅಲ್ಲಿ ಇದ್ದ ಲುಬ್ಧಕವನ್ನು. ಆದ್ದರಿಂದ ಕಾಲದ ರೂಢಮೂಲ ಪರಿಕಲ್ಪನೆಗಳಿಂದ – ಅವು ದೈನಂದಿನ ಅಥವಾ ಭೂಮ್ಯಾಧರಿತ ವ್ಯವಹಾರಗಳಲ್ಲಿ ಎಷ್ಟೇ ಸಾಧುವಾದರೂ – ವಿಮುಕ್ತರಾಗದೇ ವಿಶ್ವದ ವಿದ್ಯಮಾನಗಳಿಗೆ ಸಂಗತ ಅರ್ಥ ನೀಡಲು ನಮಗೆ ಸಾಧ್ಯವಾಗದು. ಇಲ್ಲಿ ಆಕಾಶ–ಕಾಲ ಅವಿಚ್ಛಿನ್ನತೆ ಸಮರ್ಪಕವಾದ ಆಧಾರವನ್ನು ಒದಗಿಸಿದೆ. *

**ಕಾಲಂ, ಪಾಡ್ರಿಕ್ :** 1881-1972. ಐರಿಷ್ ಕವಿ ಮತ್ತು ನಾಟಕಕಾರ. ಹುಟ್ಟಿದ್ದು ಐರ್ಲೆಂಡಿನ ಲಾಂಗ್‌ಫೋರ್ಡ್‌ನಲ್ಲಿ. ಸ್ಥಳೀಯ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಡಬ್ಲಿನ್‌ಗೆ ಹೋಗಿ ರೈಲ್ವೆ ಕಚೇರಿಯೊಂದರಲ್ಲಿ ಗುಮಾಸ್ತನಾದ. ಯೇಟ್ಸ್, ಜಾರ್ಜ್ ವಿಲಿಯಂ ರಸೆಲ್, ಸಿಂಜ್ ಮತ್ತು ಲೇಡಿ ಗ್ರೆಗರಿ ಇವರನ್ನೊಳಗೊಂಡ ಐರಿಷ್ ಸಾಹಿತ್ಯ ಪುನರುಜ್ಜೀವನ ಲೇಖಕರ ಗುಂಪಿಗೆ ಸೇರಿದ. ಇವನು ಡಬ್ಲಿನಿನಲ್ಲಿ ಸ್ಥಾಪಿಸಿದ ಅಟ್ಟೆ ಥಿಯೋಡರ್ ಎನ್ನುವ ರಂಗಮಂದಿರವು ಐರ್ಲೆಂಡಿನ ನವೋದಯದಲ್ಲಿ ದೊಡ್ಡ ಪಾತ್ರವನ್ನು ವಹಿಸಿತು. ದಿ ಲ್ಯಾಂಡ್ (1905) ಎಂಬ ನಾಟಕ ಐರಿಷ್ ರಂಗಭೂಮಿಯ ಮೇಲೆ ಬಂದು ಗೌರವ ತಂದಿತು. ದಿ ಫಿಡ್ಲರ್ಸ್ ಹೌಸ್ (1907), ಥಾಮಸ್ ಮಸ್ಕೆರಿ (1910), ದಿ ಡೆಸರ್ಟ್ (1912), ಬಲೂನ್ (1929) ಇವು ಈತನ ಇತರ ನಾಟಕಗಳು. ಜೇಮ್ಸ್ ಸ್ಟೀಫನ್ಸ್ ಮತ್ತು ಥಾಮಸ್ ಮೆಕ್‌ಡೊನಾ ಇವರ ಜೊತೆಗೂಡಿ ಐರಿಷ್ ರಿವ್ಯೂ ಪತ್ರಿಕೆ ಸ್ಥಾಪಿಸಿ ಕೆಲಕಾಲ ಅದರ ಸಂಪಾದಕನಾಗಿಯೂ ಕೆಲಸ ಮಾಡಿದ. 1914ರಲ್ಲಿ ಅಮೆರಿಕಕ್ಕೆ ತೆರಳಿ ಕನೆಕ್ಟಿಕಟ್‌ನಲ್ಲಿ ನೆಲಸಿದ. 1923ರಲ್ಲಿ ಹವಾಯಿ ಸರ್ಕಾರದ ಆದೇಶದಿಂದ ಅಲ್ಲಿಗೆ ಹೋಗಿ ಆ ಜನರ ಜಾನಪದವನ್ನು ಅಭ್ಯಸಿಸಿ ಎರಡು ಹೊತ್ತಗೆಗಳನ್ನು ಹೊರತಂದ. 1939 ರಿಂದ ನ್ಯೂಯಾರ್ಕಿನಲ್ಲಿ ನೆಲೆಸಿದ. ವೈಲ್ಡ್ ಅರ್ತ್ (1907), ಡ್ರಮ್ಯಾಟಿಕ್ ಲೆಜೆಂಡ್ಸ್ (1922), ದಿ ಸ್ಟೋರಿ ಆಫ್ ಲೋರಿ ಮೇನ್ (1937) ಈತನ ಮುಖ್ಯ ಕಾವ್ಯಕೃತಿಗಳು. ಕ್ಯಾಸಲ್ ಕಾನ್‌ಕರ್ ಎಂಬ ಒಂದು ಕಾದಂಬರಿಯನ್ನಲ್ಲದೆ ಮಕ್ಕಳಿಗಾಗಿ ಅನೇಕ ಗ್ರಂಥಗಳನ್ನು ಈತ ರಚಿಸಿದ್ದಾನೆ. 1952ರಲ್ಲಿ ಅಮೆರಿಕನ್ ಅಕಾಡೆಮಿ ಆಫ್ ಪೊಯೆಟ್ಸ್ ಗೌರವವನ್ನೂ 1953ರಲ್ಲಿ ಗ್ರೆಗರಿ ಪದಕವಾದ ಐರಿಷ್ ಅಕಾಡೆಮಿ ಆಫ್ ಲೆಟರ್ಸ್‌ನ ಗ್ರೆಗರಿ ಪದಕವನ್ನೂ ಈತ ಗಳಿಸಿದ. (ಎನ್.ಎಸ್.ಎಲ್.)

**ಕಾಲಕಲಿ :** ಒಬ್ಬ ಅಸುರ. ವಿರೋಚನನ ಮಗ, ಬಲಿಚಕ್ರವರ್ತಿಯ ಅಣ್ಣ. ದೇವತೆಗಳಿಗೆ ಹೆದರಿದ ಈತ ನಂದಗೋಕುಲದಲ್ಲಿ ಬೇಲದ ಮರದ ರೂಪದಲ್ಲಿ ವೇಷಾಂತರಗೊಂಡಿದ್ದ. ಆ ಮರದ ಹಣ್ಣುಗಳು ಬಹಳ ದುರ್ಗಂಧಯುಕ್ತವಾಗಿ ನಾರುತ್ತಿದ್ದುವು. ಅವನ್ನು ತಿಂದ ಗೋಕುಲದವರು ನಾನಾ ಬಗೆಯ ರೋಗಗಳಿಂದ ನರಳುತ್ತಿದ್ದು ಪರಿಹಾರ ಕಾಣದೆ ಪರಿತಪಿಸುತ್ತಿದ್ದರು. ಈ ರಹಸ್ಯವನ್ನರಿತ ಬಲರಾಮ ಮತ್ತು ಶ್ರೀಕೃಷ್ಣರು ಆ ಮರವನ್ನು ಕಡಿದು ಹಾಕಿ ತನ್ಮೂಲಕ ಆ ರಾಕ್ಷಸನನ್ನು ಕೊಂದರು. (ಕೆ.ಎಸ್.ವಿ.)

**ಕಾಲಕವೃಕ್ಷೀಯ :** ಒಬ್ಬ ಋಷಿ. ಮಹಾಭಾರತದ ಪ್ರಕಾರ ಈತ ಒಮ್ಮೆ ಒಂದು ಪಕ್ಷಿಯನ್ನು ಪಂಜರದಲ್ಲಿಟ್ಟುಕೊಂಡು ಬಂದು ಕೋಸಲದೇಶದ ಕ್ಷೇಮದರ್ಶಿ ಎಂಬ ರಾಜನಿಗೆ ಕೊಟ್ಟ. ಆ ರಾಜ ಸರಿಯಾದ ಸಚಿವರನ್ನು ಪಡೆಯದೆ ರಾಜ್ಯವನ್ನು ಕಳೆದುಕೊಳ್ಳುವುದರಲ್ಲಿದ್ದ. ಋಷಿ ಕೊಟ್ಟ ಪಕ್ಷಿ ತ್ರಿಕಾಲವನ್ನು ಹೇಳಬಲ್ಲಂಥದು. ಅದರ ಮುಖೇನ ಮಂತ್ರಿ ಮುಂತಾದವರ ದೋಷಗಳನ್ನು ರಾಜ ತಿಳಿದುಕೊಂಡು ಜಾಗೃತನಾಗಿರಲೆಂದು ಋಷಿಯ ಆಶಯವಾಗಿತ್ತು. ಈ ರಹಸ್ಯವನ್ನರಿತ ಅರಮನೆಯ ಸೇವಕರು ಆ ಪಕ್ಷಿಯಿಂದ ತಮ್ಮ ಕುತಂತ್ರಗಳು ಬಯಲಾಗುವುವೆಂದು ಭಾವಿಸಿ ಅದನ್ನು ಕೊಂದರು. ಕೊನೆಗೆ ರಾಜ ತನ್ನವರೇ ಒಡ್ಡಿದ ಮೋಸಕ್ಕೆ ಸಿಲುಕಿ ರಾಜ್ಯವನ್ನು ಕಳೆದುಕೊಂಡ. ಅನಂತರ ಕಾಲಕವೃಕ್ಷೀಯ ರಾಜನ ಹತ್ತಿರ ಬಂದು ರಾಜನೀತಿಯನ್ನು ಉಪದೇಶಿಸಿ ಪುನಃ ರಾಜ್ಯವನ್ನು ಪಡೆಯುವ ಉಪಾಯವನ್ನು ಹೇಳಿದ. (ಕೆ.ಎಸ್.ವಿ.)

**ಕಾಲಗಣನೆ, ಭಾರತೀಯ :** ಸುಸಂಗತವಾದ ಐತಿಹಾಸಿಕ ನಿರೂಪಣೆಗೆ ಆಧಾರವಾದ್ದು ಕಾಲಗಣನೆ. ಕ್ರಮಬದ್ಧವಾದ ಸಾರ್ವತ್ರಿಕ ಕಾಲಗಣನೆಯ ಪದ್ಧತಿ ಪ್ರಾಚೀನ ಭಾರತದಲ್ಲಿ ರೂಢಿಯಲ್ಲಿ ಇತ್ತೆನ್ನಲು ಸಾಕಷ್ಟು ಆಧಾರಗಳಿಲ್ಲ. ಪ್ರಾಚೀನ ವೇದಸಾಹಿತ್ಯದ ಅನಂತರ ಮಹಾಭಾರತಾದಿ ಇತಿಹಾಸ ಮತ್ತು ಪುರಾಣಗಳಲ್ಲಿ ಮನ್ವಂತರ ಮತ್ತು ಯುಗಗಳಿಗೆ ಸಂಬಂಧಿಸಿದ ಕೆಲವು ಕಾಲಪರಿಮಾಣಗಳು ಉಕ್ತವಾಗಿವೆ. ಬ್ರಹ್ಮನ ಒಂದು ದಿನ ಒಂದು ಕಲ್ಪಕ್ಕೆ ಸಮಾನ. ಒಂದು ಕಲ್ಪವೆಂದರೆ ಹದಿನಾಲ್ಕು ಮನ್ವಂತರಗಳು ಮತ್ತು ಆರು ಮಹಾಯುಗಗಳು ಅಥವಾ ಒಂದು ಸಾವಿರ ಮಹಾಯುಗಗಳು. ಹೀಗೆ ಒಂದು ಕಲ್ಪವೆಂದರೆ 4,32,00,00,000 ವರ್ಷಗಳು. ಒಂದು ಮಹಾಯುಗದಲ್ಲಿ ಕೃತ, ತ್ರೇತಾ, ದ್ವಾಪರ, ಕಲಿ–ಈ ನಾಲ್ಕು ಯುಗಗಳು ಸೇರಿರುತ್ತವೆ. ಕಲಿಯುಗದ ವರ್ಷಗಳು 4,32,000 ಎಂದೂ ಅದರ ಹಿಂದಿನ ಯುಗಗಳಲ್ಲಿ ಕ್ರಮಶಃ ಅಧಿಕಾಧಿಕ ವರ್ಷಗಳಿರುತ್ತವೆಯೆಂದೂ ವಿವರಿಸಲಾಗಿದೆ. ಇಂಥ ಸಾಂಪ್ರದಾಯಿಕ ನಿರೂಪಣೆಯಲ್ಲಿ ಐತಿಹಾಸಿಕತೆ ಇರುವುದಿಲ್ಲ.

ಭಾರತೀಯ ಪ್ರಾಚೀನ ಜ್ಯೋತಿಷಿಗಳು ಮಹಾಭಾರತ ಯುದ್ಧ ದ್ವಾಪರಯುಗದ ಅಂತ್ಯದಲ್ಲಿ ಮತ್ತು ಕಲಿಯುಗದ ಆರಂಭದಲ್ಲಿ ಸಂಭವಿಸಿತು ಎಂದು ಹೇಳಿದ್ದಾರೆ. ಈ ಘಟನೆಯಿಂದ ಕಲಿಯುಗ ಸಂವತ್ ಅಥವಾ ಯುಧಿಷ್ಠಿರ ಸಂವತ್ ಎಂಬ ಕಾಲಗಣನೆ ಪ್ರಾರಂಭವಾಗುತ್ತದೆ. ಸಂವತ್ ಎಂಬುದು ಸಂವತ್ಸರದ ಸಂಕ್ಷಿಪ್ತ ರೂಪ. ಕಲಿಯುಗದ ಆರಂಭ ಪ್ರ.ಶ.ಪೂ. 3102ರಲ್ಲಿ ಎಂದು ಹೇಳಲಾಗಿದೆ. ಇದೇ ಆರ್ಯಭಟ್ಟನ ಪ್ರಕಾರ ಮಹಾಭಾರತ ಯುದ್ಧದ ಕಾಲ. ವರಾಹಮಿಹಿರ, ಕಲ್ಹಣ–ಇವರ ರೀತ್ಯಾ ಈ ಯುದ್ಧದ ಕಾಲ ಕಲಿಯುಗ ಸಂವತ್‌ನ 653 ಅಥವಾ ಪ್ರ.ಶ.ಪೂ. 2449. ಪರ್ಗಿಟರ್ ಎಂಬ ವಿದ್ವಾಂಸ ಪುರಾಣಗಳಲ್ಲಿ ಹೇಳಿದ ಅರಸರ ಪೀಳಿಗೆಗಳನ್ನು ಲೆಕ್ಕಮಾಡಿ ಭಾರತ ಯುದ್ಧದ ಕಾಲ ಪ್ರ.ಶ.ಪೂ. 950 ಎಂದು ಪ್ರತಿಪಾದಿಸಿದ. ಇಂಥ ಹೇಳಿಕೆಗಳನ್ನು ಇನ್ನೊಂದು ರೀತಿಯಲ್ಲಿ ಗುಣಿಸಿ ಈ ಕಾಲ ಪ್ರ.ಶ.ಪೂ. 1392 ಎಂದು ಮತ್ತೆ ಕೆಲವರು ವಾದಿಸಿದ್ದಾರೆ. ಈ ವಿಷಯವನ್ನು ಕೂಲಂಕಷವಾಗಿ ಮತ್ತು ಆಧುನಿಕ ಪದ್ಧತಿಯಂತೆ ಅನ್ವೇಷಿಸಿ, ಪ್ರಾಚೀನ ಭಾರತೀಯರಿಗೆ ಐತಿಹಾಸಿಕ ಕಾಲಜ್ಞಾನ ಇರಲಿಲ್ಲವೆಂದು ಆಧುನಿಕ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಮೌರ್ಯ ಸಾಮ್ರಾಜ್ಯ ಸ್ಥಾಪನೆಯಂಥ ಪ್ರಮುಖ ಐತಿಹಾಸಿಕ ಘಟನೆಯ ಕಾಲವನ್ನು ಆನುಷಂಗಿಕ ಆಧಾರಗಳಿಂದ ನಿರ್ಧರಿಸಬೇಕಾಗಿದೆ. ಇಂಥ ಆಧಾರಗಳಲ್ಲಿ ಅಲೆಕ್ಸಾಂಡರನ ದಂಡಯಾತ್ರೆ ಮುಖ್ಯವಾದ್ದು. ಅಶೋಕ ಚಕ್ರವರ್ತಿ ತನ್ನ ಶಾಸನಗಳಲ್ಲಿ ಅಲ್ಲಲ್ಲಿ ತನ್ನ ರಾಜ್ಯಾಭಿಷೇಕದ ಸಂವತ್ಸರವನ್ನು ಮಾತ್ರ ನಿರ್ದೇಶಿಸಿದ್ದಾನೆ. ಅವುಗಳಲ್ಲಿ ಕ್ರಮಬದ್ಧ ಕಾಲಗಣನೆಯ ಸೂಚನೆಯಿಲ್ಲ.

ಅನಂತರ ಕಾಲದಲ್ಲಿ ಕೆಲವು ಕಾಲಗಣನೆಗಳು ಪರಿಮಿತ ಪ್ರದೇಶಗಳಲ್ಲಿ ಮತ್ತು ವಲಯಗಳಲ್ಲಿ ಪ್ರಚಾರಕ್ಕೆ ಬಂದರೂ ಸಾರ್ವತ್ರಿಕವಾಗದೆ ಕೆಲಕಾಲಾನಂತರ ಮೂಲೆಗುಂಪಾದವು. ಅವುಗಳಿಂದ ಐತಿಹಾಸಿಕ ಕಾಲನಿರ್ಧಾರಕ್ಕೆ ಅಂಶತಃ ಮಾತ್ರ ಸಹಾಯ ದೊರಕಿದೆ. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ವಿವೇಚಿಸಲಾಗಿದೆ.

**ಸಪ್ತರ್ಷಿ ಸಂವತ್:** ಇದಕ್ಕೆ ಲೌಕಿಕ ಸಂವತ್, ಶಾಸ್ತ್ರ ಸಂವತ್ ಮುಂತಾದ ಹೆಸರುಗಳಿವೆ. ಸಪ್ತರ್ಷಿ ಗ್ರಹಮಂಡಲ ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದೊಂದು ನಕ್ಷತ್ರ ಸ್ಥಾನದಲ್ಲೂ ನೂರು ವರ್ಷ ನಿಲ್ಲುತ್ತ, 2,700 ವರ್ಷಗಳಲ್ಲಿ ತನ್ನ ಪರ್ಯಟನವನ್ನು ಪೂರ್ತಿಗೊಳಿಸುತ್ತದೆ ಎಂಬುದೇ ಇದರ ಆಧಾರ. ನೂರರ ಅಂಕವನ್ನು ತಳ್ಳಿಹಾಕಿ ಮುಂದಿನ ಮಿಕ್ಕ ಸಂಖ್ಯೆಯಿಂದ ಈ ಕಾಲಗಣನೆಯನ್ನು ನಿರ್ದೇಶಿಸುವ ಕ್ರಮವನ್ನು ಇದರಲ್ಲಿ ಅನುಸರಿಸುತ್ತಾರೆ. ಪಂಜಾಬ್, ಕಾಶ್ಮೀರ ಪ್ರದೇಶಗಳಲ್ಲಿ ಈ ಕಾಲಗಣನೆ ಪ್ರಚಾರದಲ್ಲಿ ಇತ್ತು.

**ವೀರನಿರ್ವಾಣ ಸಂವತ್ :** ಜೈನಧರ್ಮೀಯ ಜೈನಧರ್ಮ ಸ್ಥಾಪಕ ವರ್ಧಮಾನ ಮಹಾವೀರನ ನಿಧನದಿಂದ ಕಾಲಗಣನೆ ಮಾಡುತ್ತಾರೆ. ಪ್ರ.ಶ.ಪೂ. 527ರಿಂದ ಆರಂಭವಾದ ಇದಕ್ಕೆ ಜಿನಕಾಲ ಅಥವಾ ವೀರನಿರ್ವಾಣ ಸಂವತ್ ಎಂದು ಹೆಸರು. ಪ್ರ.ಶ.ಪೂ. 11ನೆಯ ಶತಮಾನದಿಂದ ಈ ಕಾಲಗಣನೆ ಪದ್ಧತಿ ರೂಢಿಯಲ್ಲಿದ್ದಂತೆ ತಿಳಿದುಬರುತ್ತದೆ. ಇದರ ವಿಷಯವಾಗಿ ಜೈನವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಮಹಾವೀರನ ಮರಣ ಸಂಭವಿಸಿದ್ದು ಪ್ರ.ಶ. ಪೂ. 468ರಲ್ಲಿ ಎಂಬ ವಾದವುಂಟು.

**ಬುದ್ಧನಿರ್ವಾಣ ಸಂವತ್ :** ಬುದ್ಧನ ನಿಧನದಿಂದ ಇದು ಪ್ರಾರಂಭವಾಗುತ್ತದೆ. ಈ ವಿಚಾರದಲ್ಲೂ ಒಮ್ಮತವಿಲ್ಲ. ಚೀನದ ಸಂಪ್ರದಾಯದಂತೆ ಈ ಘಟನೆ ಪ್ರ.ಶ.ಪೂ. 486ರಲ್ಲಿ ಸಂಭವಿಸಿತು. ಸಿಂಹಳ, ಬ್ರಹ್ಮದೇಶ, ಸೈಯಾಂ ದೇಶಗಳಲ್ಲಿ ನಡೆದು ಬಂದ ಸಂಪ್ರದಾಯದಂತೆ ಇದು ಪ್ರ.ಶ.ಪೂ. 544ರಲ್ಲಿ ಸಂಭವಿಸಿತು. ಈಚಿನ ಸಂಶೋಧನೆಗಳಿಂದ ಪ್ರ.ಶ.ಪೂ. 483ರಲ್ಲಿ ಗೌತಮಬುದ್ಧ ನಿಧನ ಹೊಂದಿದನೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಬೌದ್ಧಧರ್ಮದ ಪ್ರಭಾವ ಮತ್ತು ಪ್ರಸಾರದ ಮೂಲಕ ಈ ಕಾಲಗಣನೆ ಹೆಚ್ಚು ಕಾಲ ಹೆಚ್ಚು ವ್ಯಾಪಕವಾಗಿತ್ತು.

**ಕಳಚುರಿ ಅಥವಾ ಚೇದಿ ಸಂವತ್ :** ಇದು ಪಶ್ಚಿಮ ಭಾಗದಲ್ಲಿ ಕೆಲಕಾಲ ಬಳಕೆಯಲ್ಲಿತ್ತು. ಇದರ ಆರಂಭದ ವರ್ಷ ಪ್ರ.ಶ.ಪೂ. 249. ತ್ರೈಕೂಟಕರು ಶಕರ ಆಳಿಕೆಯಿಂದ ಸ್ವಾತಂತ್ರ್ಯ ಪಡೆದುದರ ಸ್ಮರಣಾರ್ಥವಾಗಿ ಈ ಕಾಲಗಣನೆಯನ್ನು ಪ್ರಾರಂಭಿಸಿದರೆಂದು ಊಹಿಸಲಾಗಿದೆ.

**ಗುಪ್ತ ಅಥವಾ ವಲ್ಲಭೀ ಸಂವತ್ :** ಇದು ಪ್ರ.ಶ.ಪೂ. 319ರಲ್ಲಿ ಗುಪ್ತ ಸಾಮ್ರಾಜ್ಯ ಸ್ಥಾಪಕ ಒಂದನೆಯ ಚಂದ್ರಗುಪ್ತನ ಆಳ್ವಿಕೆಯ ಮೊದಲ ವರ್ಷದಿಂದ ಆರಂಭವಾಯಿತು. ಮೊದಲಿಗೆ ಗುಪ್ತಸಂವತ್ ಎಂದು ಹೆಸರಾಗಿದ್ದು, ಗುಪ್ತರ ಆಧಿಪತ್ಯ ಮುಗಿದ ಬಳಿಕ ಅವರ ಮಾಂಡಲಿಕರಾದ ಮೈತ್ರಕರು ಈ ಎಣಿಕೆಯನ್ನು ಮುಂದುವರಿಸಿದ್ದರಿಂದಲೂ ಅವರು ಕಾಠಿಯಾವಾಡದ ವಲ್ಲಭೀನಗರಿಯಲ್ಲಿ ಆಳುತ್ತಿದ್ದುದರಿಂದಲೂ ಇದಕ್ಕೆ ವಲ್ಲಭೀ ಸಂವತ್ ಎಂಬ ಹೆಸರೂ ಬಂತು. ಈ ಸಂವತ್ ಗುಪ್ತ ಸಾಮ್ರಾಜ್ಯದ ಮೂಲಕ ಅಸ್ಸಾಂ, ಬಂಗಾಳ, ಒರಿಸ್ಸ ಪ್ರದೇಶಗಳಲ್ಲಿ ರೂಢಿಯಲ್ಲಿತ್ತು. 13ನೆಯ ಶತಮಾನದವರೆಗೆ ಇದನ್ನು ಬಳಸುತ್ತಿದ್ದಂತೆ ತಿಳಿದುಬಂದಿದೆ.

**ಗಂಗ ಅಥವಾ ಗಾಂಗೇಯ ಸಂವತ್ :** ಕಳಿಂಗ ಅಥವಾ ಒರಿಸ್ಸದಲ್ಲಿ ಆಳಿದ ಪೂರ್ವ ಗಂಗರು ಈ ಕಾಲಗಣನೆಯನ್ನು ತಮ್ಮ ಶಾಸನಗಳಲ್ಲಿ ಉಪಯೋಗಿಸಿದರು. ಇದು 5ನೆಯ ಶತಮಾನದಿಂದ 11ನೆಯ ಶತಮಾನದವರೆಗೆ ಪ್ರಚಾರದಲ್ಲಿತ್ತು.

**ಹರ್ಷ ಸಂವತ್:** ಕನೌಜಿನ ಹರ್ಷವರ್ಧನನ ಆಳ್ವಿಕೆಯಿಂದ ಪ್ರಾರಂಭವಾದ ಈ ಪದ್ಧತಿ 2 ಶತಮಾನಗಳ ಕಾಲ ಆತನ ಸಾಮ್ರಾಜ್ಯದ ಕೆಲವು ಪ್ರದೇಶಗಳಲ್ಲಿ ಪ್ರಚಲಿತವಾಗಿತ್ತು. ಇದರ ಆರಂಭ ವರ್ಷ ಪ್ರ.ಶ.ಪೂ. 606.

**ಚಾಳುಕ್ಯ ವಿಕ್ರಮ ಕಾಲ :** ಕಲ್ಯಾಣ ಚಾಳುಕ್ಯ ವಂಶದ 6ನೆಯ ವಿಕ್ರಮಾದಿತ್ಯ ತನ್ನ ರಾಜ್ಯಾರೋಹಣದಿಂದ (1076–77) ಈ ಕಾಲಗಣನೆಯನ್ನು ಪ್ರಾರಂಭಿಸಿದ. ಆ ವರೆಗೆ ಪ್ರಚಲಿತವಿದ್ದ ಶಕರಾಜರ ಕಾಲಗಣನೆಯನ್ನು ತೊಡೆದುಹಾಕಿದುದಾಗಿ ಆತ ಶಾಸನಗಳಲ್ಲಿ ಘೋಷಿಸಿದ್ದಾನೆ. ಆದರೆ ಈ ಕಾಲಗಣನೆ ಸಾರ್ವತ್ರಿಕ ಮನ್ನಣೆ ಪಡೆಯಲಿಲ್ಲ, ಕನ್ನಡ ನಾಡಿನಲ್ಲಿಯೇ ಬಹುಕಾಲ ಪ್ರಚಾರಗೊಳ್ಳಲಿಲ್ಲ.

**ಲಕ್ಷ್ಮಣಸೇನ ಸಂವತ್ :** ಬಂಗಾಲ ಮತ್ತು ಬಿಹಾರ ಪ್ರದೇಶದಲ್ಲಿ ಕರ್ನಾಟಕದಿಂದ ವಲಸೆ ಹೋದ ವಂಶದವನಾದ ಲಕ್ಷ್ಮಣಸೇನನ ಆಳ್ವಿಕೆಯ ಆರಂಭದಿಂದ (1179) ಈ ಕಾಲಗಣನೆ ಪ್ರಚಲಿತವಾಗಿ, ಅವನ ಅನಂತರದಲ್ಲೂ ಪ್ರಾದೇಶಿಕವಾಗಿ ಬಹುಕಾಲ ಮುಂದುವರಿಯಿತು. ಇದು ಈಗಲೂ ಉತ್ತರ ಬಿಹಾರದಲ್ಲಿ ಕೆಲವೆಡೆ ಬಳಕೆಯಲ್ಲಿದೆ.

**ರಾಜ್ಯಾಭಿಷೇಕ ಶಕ :** ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ತನ್ನ ರಾಜ್ಯಾರೋಹಣ ಕಾಲದಿಂದ 1634ರಲ್ಲಿ ಇದನ್ನು ಪ್ರಾರಂಭಿಸಿದ. ಇದರ ಸಂಕ್ಷಿಪ್ತರೂಪ ರಾಜಶಕ. ಇದು ಸ್ವಲ್ಪಕಾಲ ಮಾತ್ರ ಬಳಕೆಯಲ್ಲಿತ್ತು.

**ಹಿಜರೀ :** ಇದರ ಎಣಿಕೆ ಮಹಮ್ಮದ್ ಪೈಗಂಬರ್ ಮೆಕ್ಕದಿಂದ ಮದಿನಕ್ಕೆ ಪ್ರಯಾಣಮಾಡಿದ ಕಾಲದಿಂದ, 622ರಿಂದ ಆರಂಭವಾಗುತ್ತದೆ. ಇದು ಶುದ್ಧ ಚಾಂದ್ರಮಾನದ ಗಣನೆಯಾಗಿದೆ. ಇದರ ವರ್ಷ ಸೌರಮಾನದ ವರ್ಷಕ್ಕಿಂತ ಸುಮಾರು ಹನ್ನೊಂದು ದಿನಗಳಷ್ಟು ಕಡಿಮೆ. ಇದರಲ್ಲಿ ಮುಹರ್ರಮ್, ಸಫರ್ ಮೊದಲಾದ ಅರಬ್ಬೀ ಹೆಸರಿನ ಹನ್ನೆರಡು ಮಾಸಗಳೂ ಇವೆ. ಹೈದರಾಬಾದ್ ಸಂಸ್ಥಾನದ ವಿಲೀನೀಕರಣವಾಗುವವರೆಗೆ ಅಲ್ಲಿ ಉಪಯೋಗದಲ್ಲಿತ್ತು.

**ಫಸಲಿ :** ಮೊಗಲ್ ಚಕ್ರವರ್ತಿ ಅಕ್ಬರ್ ಚಾಂದ್ರಸೌರಮಾನಗಳೆರಡಕ್ಕೂ ಹೊಂದಿಕೆಯಾಗುವಂಥ ಫಸಲಿ ಎಂಬ ಕಾಲಗಣನೆಯನ್ನು 1563ರಲ್ಲಿ ಪ್ರಾರಂಭಿಸಿದ. ಈ ಹೆಸರಿನ ಮೂಲ ಫಸಲ್–ಭೂಮಿಯ ಫಸಲು, ಬೆಳೆ.

ಪ್ರಾಚೀನ ಕಾಲದಲ್ಲಿ ಪ್ರಚಲಿತವಾಗಿ ಅತ್ರುಟಿತ ಪರಂಪರೆಯಿಂದ ವರ್ತಮಾನ ಕಾಲದವರೆಗೆ ಬಳಕೆಯಾಗುತ್ತಿರುವ ಕೆಲವು ಮುಖ್ಯ ಗಣನೆಗಳನ್ನು ಮುಂದೆ ವಿವರಿಸಲಾಗಿದೆ:

**ಬೃಹಸ್ಪತಿ ಸಂವತ್ಸರ ಚಕ್ರ :** ಈ ಹೆಸರಿನ ಚಕ್ರದಲ್ಲಿ ಅರುವತ್ತು ಸಂವತ್ಸರಗಳಿವೆ. ಈ ಚಕ್ರ ಒಂದು ಸುತ್ತನ್ನು ಮುಗಿಸಿದ ಬಳಿಕ ಮತ್ತೆ ಅದೇ ಕ್ರಮದಿಂದ ಆರಂಭವಾಗುತ್ತದೆ. ಆ ಸಂವತ್ಸರಗಳ ಹೆಸರುಗಳು ಇಂತಿವೆ: 1 ಪ್ರಭವ, 2 ವಿಭವ, 3 ಶುಕ್ಲ, 4 ಪ್ರಮೋದ

(ಪ್ರಮೋದೂತ), 5 ಪ್ರಜೋತ್ಪತ್ತಿ, 6 ಆಂಗಿರಸ, 7 ಶ್ರೀಮುಖ 8 ಭಾವ, 9 ಯುವ, 10 ಧಾತು, 11 ಈಶ್ವರ, 12 ಬಹುಧಾನ್ಯ, 13 ಪ್ರಮಾಥಿ, 14 ವಿಕ್ರಮ, 15 ವೃಷ (ವಿಷು), 16 ಚಿತ್ರಭಾನು, 17 ಸುಭಾನು, 18 ತಾರಣ, 19 ಪಾರ್ಥಿವ, 20 ವ್ಯಯ, 21 ಸರ್ವಜಿತ್, 22 ಸರ್ವಧಾರಿ, 23 ವಿರೋಧಿ, 24 ವಿಕೃತಿ, 25 ಖರ, 26 ನಂದನ, 27 ವಿಜಯ, 28 ಜಯ, 29 ಮನ್ಮಥ, 30 ದುರ್ಮುಖಿ, 31 ಹೇಮಲಂಬ (ಹೇಮಲಂಬಿ), 32 ವಿಲಂಬಿ, 33 ವಿಕಾರಿ, 34 ಶಾರ್ವರಿ, 35 ಪ್ಲವ, 36 ಶುಭಕೃತ್ (ಶೋಭಕೃತ್), 37 ಶೋಭನ, 38 ಕ್ರೋಧಿ, 39 ವಿಶ್ವಾವಸು, 40 ಪರಾಭವ, 41 ಪ್ಲವಂಗ, 42 ಕೀಲಕ, 43 ಸೌಮ್ಯ, 44 ಸಾಧಾರಣ, 45 ವಿರೋಧಕೃತ್, 46 ಪರಿಧಾವಿ, 47 ಪ್ರಮಾದಿ (ಪ್ರಮಾಥಿ), 48 ಆನಂದ, 49 ರಾಕ್ಷಸ, 50 ನಲ (ಅನಲ), 51 ಪಿಂಗಲ, 52 ಕಾಲಯುಕ್ತ, 53 ಸಿದ್ಧಾರ್ಥಿ (ಸಿದ್ಧಾರ್ಥ), 54 ರೌದ್ರ, 55 ದುರ್ಮತಿ, 56 ದುಂದುಭಿ, 57 ರುಧಿರೋದ್ಗಾರಿ, 58 ರಕ್ತಾಕ್ಷ (ರಕ್ತಾಕ್ಷಿ), 59 ಕ್ರೋಧನ, 60 ಕ್ಷಯ (ಅಕ್ಷಯ).

ದಕ್ಷಿಣ ಭಾರತದಲ್ಲಿ ಈ ಚಕ್ರ ಪ್ರಭವ ಸಂವತ್ಸರದಿಂದ ಆರಂಭವಾದರೆ ಉತ್ತರ ಭಾರತದಲ್ಲಿ ಇದರ ಕ್ರಮ ಭಿನ್ನವಾಗಿದೆ. ಕಲಿಯುಗದ ಸಂವತ್, ಶಕ ಸಂವತ್ ಮೊದಲಾದ ಗಣನೆಗಳೊಂದಿಗೆ ಈ ಎಣಿಕೆ ಹೊಂದಿಕೊಂಡು ಬರುತ್ತದೆ. ವರಾಹಮಿಹಿರ ಕಲಿಯುಗದ ಆರಂಭ ವರ್ಷವನ್ನು ಈ ಚಕ್ರದ ವಿಜಯ ಸಂವತ್ಸರಕ್ಕೆ ಸಮೀಕರಿಸಿದ್ದಾನೆ. ಇನ್ನೊಬ್ಬ ಗ್ರಂಥಕಾರ ಅದನ್ನು ಪ್ರಭವ ಸಂವತ್ಸರಕ್ಕೆ ಜೊತೆಗೂಡಿಸಿದ್ದಾನೆ. ಈ ಸಂವತ್ಸರಗಳ ಪರಿಮಿತಿ ಚಾಂದ್ರ-ಸೌರಮಾನ ವರ್ಷಗಳ ಪರಿಮಿತಿಗೆ ಸಮನಾಗಿದೆ. ಉತ್ತರ ಭಾರತದ ಶಾಸನಾದಿ ಅಭಿಲೇಖನಗಳಲ್ಲಿ ಈ ಸಂವತ್ಸರಗಳ ಬಳಕೆ ಹೆಚ್ಚಿಲ್ಲ. ದಕ್ಷಿಣ ಭಾರತದಲ್ಲಿ ಮಾತ್ರ ಇದು ಹೆಚ್ಚು ವ್ಯಾಪಕವಾಗಿದೆ. ಈ ಚಕ್ರದ ವಿಜಯ ಸಂವತ್ಸರದ ಪ್ರಥಮ ನಿರ್ದೇಶ 3ನೆಯ ಶತಮಾನದ ಇಕ್ಷ್ವಾಕು ವಂಶದ ವೀರಪುರುಷ ದತ್ತರಾಜನ ಶಾಸನದಲ್ಲಿ ದೊರೆತಿದೆ. ಇದರಿಂದ ಅದಕ್ಕೂ ಪೂರ್ವದಿಂದ ಈ ಸಂವತ್ಸರ ಚಕ್ರ ಪ್ರಚಾರಕ್ಕೆ ಬಂದಿತ್ತು ಎಂದು ಭಾವಿಸಬಹುದು.

**ವಿಕ್ರಮ ಸಂವತ್** : ದಕ್ಷಿಣ ಭಾರತಕ್ಕಿಂತ ಉತ್ತರ ಭಾರತದಲ್ಲಿ ಇದರ ಬಳಕೆ ವಿಶೇಷವಾಗಿದೆ. ಇದರ ಆರಂಭ ವರ್ಷ ಪ್ರ.ಶ.ಪೂ. 57. ಈ ಸಂವತ್ಸರದ ಎಣಿಕೆಯನ್ನು ದಕ್ಷಿಣದಲ್ಲಿ ಕಾರ್ತಿಕ ಮಾಸದಿಂದ, ಉತ್ತರದಲ್ಲಿ ಚೈತ್ರಮಾಸದಿಂದ ಪ್ರಾರಂಭಿಸುವರು. ಇದರ ಮಾಸಗಳು ಪೌರ್ಣಿಮಾಂತ. ಈ ಕಾಲಗಣನೆಯನ್ನು ಎಲ್ಲಿ, ಯಾರು ಆರಂಭಿಸಿದರು, ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಇದೆ. ಉಜ್ಜಯಿನಿಯ ವಿಕ್ರಮಾದಿತ್ಯ ಪರಕೀಯ ಶಕರನ್ನು ಸೋಲಿಸಿದುದರ ಸ್ಮಾರಕವಾಗಿ ಈ ಗಣನೆಯನ್ನು ಪ್ರಾರಂಭಿಸಿದನೆಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಆದರೆ ಇದಕ್ಕೆ ಇತಿಹಾಸದ ಆಧಾರವಿಲ್ಲ. ಪ್ರ.ಶ.ಪೂ. 1ನೆಯ ಶತಮಾನದಲ್ಲಿ ವಿಕ್ರಮಾದಿತ್ಯ ಆಳುತ್ತಿದ್ದುದಕ್ಕೆ ಆಧಾರವಿಲ್ಲ. ಇದು ಮೊದಲು ಕೃತಸಂವತ್ ಎಂದೂ ಅನಂತರ ಮಾಲವ ಸಂವತ್ ಎಂದೂ ಹೆಸರಾಗಿದ್ದು ಬಳಿಕ ಎಂಟನೆಯ ಶತಮಾನದಲ್ಲಿ ವಿಕ್ರಮಸಂವತ್ ಎಂದು ಹೆಸರು ಪಡೆದಂತೆ ಕಾಣುತ್ತದೆ. ಕೃತಪದದ ಮೂಲ ಸಂದಿಗ್ಧವಾಗಿದೆ, ಇದು ಒಬ್ಬ ನಾಯಕನಿರಬಹುದು. ಮಾಲವರು ಪುರಾತನ ಕಾಲದ ಒಂದು ಗಣರಾಜ್ಯಕ್ಕೆ ಸೇರಿದ್ದವರು. ಗುಪ್ತ ಚಕ್ರವರ್ತಿ ಇಮ್ಮಡಿ ಚಂದ್ರಗುಪ್ತ ವಿಕ್ರಮಾದಿತ್ಯ ಐದನೆಯ ಶತಮಾನದಲ್ಲಿ ಶಕರನ್ನು ಮಾಳವದಿಂದ ಓಡಿಸಿದ ಮೇಲೆ ಬಹು ಪ್ರಖ್ಯಾತಿ ಪಡೆದ. ಕಾಲಾಂತರದಲ್ಲಿ ಮಾಲವ ಸಂವತ್ ಎಂಬ ಕಾಲಗಣನೆಯೊಂದಿಗೆ ವಿಕ್ರಮಾದಿತ್ಯನ ಹೆಸರನ್ನು ಸಂಯೋಗಗೊಳಿಸಿದುದರ ಫಲವಾಗಿ ಈ ವಿಕ್ರಮ ಸಂವತ್ 8-9ನೆಯ ಶತಮಾನದಿಂದೀಚೆಗೆ ಸರ್ವತ್ರ ಪ್ರಸಾರ ಹೊಂದಿ ಮನ್ನಣೆ ಪಡೆಯಿತು. ಆದರೂ ಇದರ ಮೂಲ ಇನ್ನೂ ಸಮಸ್ಯೆಯಾಗಿದೆ. ಪ್ರ.ಶ.ಪೂ. ಒಂದನೆಯ ಶತಮಾನದಲ್ಲಿ ಪೊನೋನೆಸ್ ಪೂರ್ವ ಇರಾನ್ ಪ್ರದೇಶದಲ್ಲಿ ರಾಜಾಧಿರಾಜನೆಂಬ ಬಿರುದಿನೊಂದಿಗೆ ಸ್ವತಂತ್ರ ರಾಜ್ಯ ಸ್ಥಾಪಿಸಿದುದಾಗಿ ಈತನ ನಾಣ್ಯಗಳಿಂದ ವ್ಯಕ್ತವಾಗುತ್ತದೆ. ಈತನ ಆಳ್ವಿಕೆ ಈ ಕಾಲಗಣನೆಗೆ ನಾಂದಿಯಾಗಿರಬಹುದು. ಇವನ ಮಾಂಡಲಿಕರಾದ ಶಕರು, ಸಿಂಧ್-ಪಂಜಾಬಿನಲ್ಲಿ ನೆಲಸಿದ್ದ ಮಾಲವ ಜನಾಂಗದವರು ಈ ಗಣನೆಯನ್ನು ಬಳಸುತ್ತ, ರಾಜಸ್ತಾನ, ಮಧ್ಯಭಾರತ ಪ್ರದೇಶಗಳಿಗೆ ಸ್ಥಳಾಂತರ ಹೊಂದಿ ಈ ಸಂವತ್ತಿನ ಪ್ರಚಾರಕ್ಕೆ ಸಹಾಯಕರಾಗಿರಬಹುದು.

**ಶಕ ಸಂವತ್** : ಇದು ದಕ್ಷಿಣ ಭಾರತದಲ್ಲಿ ಸಾರ್ವತ್ರಿಕವಾಗಿ ಪ್ರ.ಶ.ಪೂ. 78ರಿಂದ ಪ್ರಚಾರದಲ್ಲಿದ್ದ ಕಾಲಗಣನೆ. ಇದನ್ನು ಬೃಹಸ್ಪತಿ ಚಕ್ರದ ಪ್ರಭವಾದಿ ಸಂವತ್ಸರಗಳಿಗೆ ಹೊಂದಿಸಿ ಚೈತ್ರ ಶುಕ್ಲ ಪ್ರತಿಪದೆಯಿಂದ (ಯುಗಾದಿ) ಎಣಿಸುತ್ತಾರೆ. ಕುಷಾಣ ವಂಶದ ಒಂದನೆಯ ಕನಿಷ್ಕ ಪ್ರ.ಶ.ಪೂ. 78ರಿಂದ 102ರ ವರೆಗೆ ಆಳಿದನೆಂಬುದು ಬಹುಮತಾಭಿಪ್ರಾಯ. ಕನಿಷ್ಕನ ಆಳ್ವಿಕೆಯ ಎಣಿಕೆಯ ವರ್ಷವನ್ನು ಆತನ ಸಾಮಂತರು, ಪಶ್ಚಿಮ ಭಾರತ ಪ್ರದೇಶದಲ್ಲಿ ಅಧೀನ ಅಧಿಕಾರಿಗಳಾಗಿದ್ದ ಶಕಕುಲದ ಕ್ಷತ್ರಪರು ಮುಂದುವರಿಸಿದರು. ಈ ಗಣನೆ ಶಾಸನಗಳಲ್ಲಿ ಸಂವತ್ ಎಂಬ ನಿರ್ದೇಶನದಿಂದ ಒಂದರಿಂದ 4ನೆಯ ಶತಮಾನದ ವರೆಗೆ ಪ್ರಚಾರದಲ್ಲಿದ್ದಂತೆ ಕಂಡುಬರುತ್ತದೆ. ಮುಂದೆ ಇದನ್ನು ಶಕ 380 ಎಂದು ಸಿಂಹಸೂರಿಯ ಲೋಕವಿಭಾಗ ಗ್ರಂಥದಲ್ಲಿ ಮೊದಲ ಬಾರಿಗೆ ಉಲ್ಲೇಖಿಸಿದೆ. ಅನಂತರ ಬಾದಾಮಿಯ ಚಳುಕ್ಯವಂಶದ ಒಂದನೆಯ ಪುಲಕೇಶಿಯ ಬಾದಾಮಿ ಶಾಸನದಲ್ಲಿ ಶಕ ವರ್ಷ 465 ಎಂದಿದೆ. ಇಮ್ಮಡಿ ಪುಲಕೇಶಿ ಐಹೊಳೆ ಶಾಸನದಲ್ಲಿ ಶಕವರ್ಷ 556ರ ಸ್ಪಷ್ಟ ನಿರ್ದೇಶವಿದೆ. ಉಜ್ಜಯಿನಿಯಲ್ಲಿ ಆರನೆಯ ಶತಮಾನದ ವರಾಹಮಿಹಿರ 427 ಎಂಬ ಶಕಕಾಲವನ್ನು ನಿರೂಪಿಸಿದ್ದಾನೆ. ಗುಜರಾತ್, ಕಾಠಿಯಾವಾಡ ಮೊದಲಾದ ಶಕ ಅರಸರ ಅಧೀನದ ಪ್ರದೇಶಗಳಲ್ಲಿ ಪೋಷಣೆ ಪಡೆದ ಜೈನ ಪಂಡಿತರ ಮೂಲಕ ಪಶ್ಚಿಮ ಭಾರತದಿಂದ ಈ ಕಾಲಗಣನೆ ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಪ್ರಚಾರ ಹೊಂದಿರಬೇಕು.

ಈ ಪಂಡಿತರಿಗೆ ಮತ್ತು ಮುಂದಿನವರಿಗೆ ಪರಕೀಯ ಶಾಸಕರಾದ ಕುಷಾಣ, ಪಾರ್ಥಿಯನ್, ಶಕ ಮುಂತಾದ ಭಿನ್ನ ಜಾತಿ ಪಂಗಡಗಳ ವ್ಯತ್ಯಾಸ ಪರಿಜ್ಞಾನವಿರಲಿಲ್ಲವಾದುದರಿಂದ ಅವರೆಲ್ಲರನ್ನೂ ಶಕರು ಎಂಬ ಸಾಮಾನ್ಯ ಹೆಸರಿನಿಂದ ನಿರ್ದೇಶಿಸಿದರು. 6ನೆಯ ಶತಮಾನದಿಂದೀಚೆಗೆ ಆಳಿದ ಕನ್ನಡ ನಾಡಿನ ಚಳುಕ್ಯ ಮೊದಲಾದ ಅರಸರ ಶಾಸನಗಳಲ್ಲಿ ಇದನ್ನು ಶಕವರ್ಷ, ಶಕನೃಪವರ್ಷ, ಶಕನೃಪರಾಜ್ಯಾಭಿಷೇಕ, ಸಂವತ್ಸರ ಮುಂತಾದ ಪದಗಳಿಂದ ಹೆಸರಿಸಿದೆ. ಆದರೆ 12ನೆಯ ಶತಮಾನದ ಹೊತ್ತಿಗೆ ಇದು ಶಾಲಿವಾಹನ ಸ್ಥಾಪಿಸಿದ ಕಾಲಗಣನೆ ಎಂಬ ವಿಚಾರ ರೂಢಿಗೆ ಬಂದುದರಿಂದ ಶಾಲಿವಾಹನ ಶಕ ಎಂಬ ಹೊಸ ಹೆಸರು ಪ್ರಚಲಿತವಾಯಿತು. ಶಾಲಿವಾಹನ ಪದ ಸಾತವಾಹನದ ರೂಪಾಂತರ. ಸಾತವಾಹನ ಅರಸರಲ್ಲಿ ಗೌತಮೀಪುತ್ರ ಸಾತಕರ್ಣಿ, ಎರಡನೆಯ ಶತಮಾನದಲ್ಲಿ ಶಕರನ್ನು ಸೋಲಿಸಿ ಶಕಧ್ವಂಸಕ ಎಂದು ಪ್ರಸಿದ್ಧಿಪಡೆದ. ಈ ಘಟನೆಯ ಅಸ್ಫುಟ ಪ್ರಭಾವ ಈ ಗಣನೆಯ ಮೇಲೆ ಮೂಡಿರಬೇಕು. ಕ್ರಮೇಣ ಶಕ ಎಂದರೆ ಕಾಲಗಣನೆ ಎಂಬ ಸಾಮಾನ್ಯ ಅರ್ಥ ರೂಢಿಗೆ ಬಂತು. ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಶಕಸಂವತ್ತಿಗೆ ಪ್ರಾಧಾನ್ಯ ದೊರಕಿತು. ಕರ್ನಾಟಕದಿಂದ ಬಂಗಾಳಕ್ಕೆ ಹೋಗಿ ರಾಜ್ಯಸ್ಥಾಪನೆ ಮಾಡಿದ ಸೇನವಂಶದ ಅರಸರು ಈ ಕಾಲಗಣನೆಯನ್ನು ಅಲ್ಲಿ ಪ್ರಚುರಪಡಿಸಿದರು. ಅದೇ ವಿಧದಲ್ಲಿ ಉತ್ತರ ಬಿಹಾರದಲ್ಲಿ ಆಳಿದ ಕರ್ನಾಟಕದ ನಾನ್ಯದೇವನ ವಂಶದ ರಾಜರು ಈ ಗಣನೆಯನ್ನು ಆ ಭಾಗದಲ್ಲಿ ಪ್ರಸ್ತುತ ಪಡಿಸಿದರು. ಬಂಗಾಳ, ಬಿಹಾರಗಳಿಂದ ಇದು ಮುಂದೆ ನೇಪಾಳ ಮತ್ತು ಅಸ್ಸಾಂವರೆಗೂ ಹರಡಿತು.

**ನೇವಾರಿ ಸಂವತ್** : ಇದು ನೇಪಾಳದಲ್ಲಿ ಪ್ರಚಾರದಲ್ಲಿದ್ದ ಕಾಲಗಣನೆ; ಇದರ ಆರಂಭ ವರ್ಷ 879; ಇದರ ಸ್ಥಾಪಕ ಜಯದೇವಮಲ್ಲರಾಜ. ಇದಕ್ಕೂ ಮುಂಚೆ ಅಲ್ಲಿ ಶಕಸಂವತ್ ಬಳಕೆಯಲ್ಲಿತ್ತು. 18ನೆಯ ಶತಮಾನದಲ್ಲಿ ಗೋರಖನಾಥ ಅಲ್ಲಿಗೆ ಹೋದಂದಿನಿಂದ ಪುನಃ ರೂಢಿಗೆ ಬಂತು.

**ಕೊಲ್ಲಂ ವರ್ಷ** : ಇದರ ಸಂಸ್ಕೃತ ಹೆಸರು ಕೊಲಂಬ ಸಂವತ್. ಕೊಲ್ಲಂ (ಈಗಿನ ಕ್ವಿಲಾನ್) ಪಟ್ಟಣದಲ್ಲಿ ಸಂಭವಿಸಿದ ಘಟನೆಯೊಂದು ಇದಕ್ಕೆ ಮೂಲವಿರಬೇಕು. ಇದರ ಪ್ರಾರಂಭ 1144-45ರಲ್ಲಿ. ಕೇರಳ ರಾಜ್ಯದಲ್ಲಿ ಮತ್ತು ನೆರೆಯ ತಮಿಳುನಾಡಿನ ತಿರುನೆಲ್‌ವೇಲಿ, ಕನ್ಯಾಕುಮಾರಿ ಪ್ರದೇಶಗಳಲ್ಲಿ ಇದು ಪ್ರಚಾರದಲ್ಲಿದೆ. ಇದರ ಮಾಸಗಳನ್ನು ಮೇಷಾದಿರಾಶಿಗಳಿಂದ ಗಣಿಸುತ್ತಾರೆ. ವರ್ಷಾರಂಭ ಕೆಲವೆಡೆ ಕನ್ಯಾರಾಶಿಯಿಂದ, ಕೆಲವೆಡೆ ಸಿಂಹರಾಶಿಯಿಂದ ಆಗುತ್ತದೆ.

**ಕ್ರಿಸ್ತಶಕ** : ಯೇಸು ಕ್ರಿಸ್ತ ಹುಟ್ಟಿದ ವರ್ಷದಿಂದ ಇದರ ಎಣಿಕೆ ಆರಂಭವಾಗುತ್ತದೆ. ರೋಮಿನ ಡೈಯೊನಿಸಿಯಸ್ ಎಗ್ಸಿಗ್ಯುಮಸ್ 532ರಲ್ಲಿ ಇದನ್ನು ಪ್ರಸ್ತುತಗೊಳಿಸಿದ. 1582ರಲ್ಲಿ 13ನೆಯ ಗ್ರೆಗರಿಯಿಂದ (ಪೋಪ್) ಇದು ಪರಿಷ್ಕೃತವಾಯಿತು. ಬ್ರಿಟಿಷರ ಪ್ರಭುತ್ವದೊಂದಿಗೆ ಈ ಗಣನೆ ಭಾರತದಲ್ಲಿ ಪ್ರಚಲಿತವಾಗಿ ಸಾರ್ವತ್ರಿಕ ಮನ್ನಣೆ ಪಡೆಯಿತು.

**ಸ್ವತಂತ್ರ ಭಾರತದ ರಾಷ್ಟ್ರೀಯ ಸಂವತ್** : 1947ರಲ್ಲಿ ಭಾರತ ಸ್ವತಂತ್ರವಾದರೂ ರಾಜಕೀಯ ವ್ಯವಹಾರಗಳಲ್ಲಿ ಕ್ರಿಸ್ತಶಕದ ಉಪಯೋಗ ಮುಂದುವರಿಯಿತು. ಸ್ವತಂತ್ರ ಭಾರತಕ್ಕೆ ತನ್ನದೇ ಆದ ರಾಷ್ಟ್ರೀಯ ಕಾಲಗಣನೆಬೇಕೆಂಬ ಉದ್ದೇಶದಿಂದ 1952ರಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ 1955ರಲ್ಲಿ ಸಲ್ಲಿಸಿದ ವರದಿಯ ಪ್ರಕಾರ ಭಾರತ ಸರ್ಕಾರ ಕ್ರಿಸ್ತಶಕದ ಜೊತೆಗೆ ಭಾರತದ ರಾಷ್ಟ್ರೀಯ ಪಂಚಾಂಗವನ್ನೂ ಪ್ರಸ್ತುತಗೊಳಿಸಿತು. ಭಾರತದ ಈ ಹೊಸ ಕಾಲ ಗಣನೆಯ ಪದ್ಧತಿ 1957ರ ಮಾರ್ಚ್ 22ರಂದು (ಶಕ 1879, ಚೈತ್ರ ಶುಕ್ಲ ಪ್ರತಿಪದೆ) ಆಚರಣೆಗೆ ಬಂತು. ಒಂದು ವರ್ಷದಲ್ಲಿ ಚೈತ್ರಾದಿ ಹನ್ನೆರಡು ತಿಂಗಳುಗಳೂ ಇವುಗಳಲ್ಲಿ ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ ಈ ಐದು ತಿಂಗಳುಗಳಲ್ಲಿ ಒಂದೊಂದಕ್ಕೆ 31ದಿನಗಳೂ ಇರುತ್ತವೆ. ಉಳಿದ ಏಳು ತಿಂಗಳುಗಳಲ್ಲಿ 30 ದಿನಗಳು. ಪ್ರತಿ ನಾಲ್ಕನೆಯ ವರ್ಷವನ್ನು ಅಧಿಕ ದಿನದ ವರ್ಷವೆಂದು (ಲೀಪ್ ಇಯರ್) ಗಣಿಸಲಾಗುತ್ತದೆ. ಆ ವರ್ಷದಲ್ಲಿ ಚೈತ್ರದಲ್ಲಿ 31 ದಿನಗಳಿರುತ್ತವೆ.

(ಜಿ.ಎಸ್.ಡಿ.; ಪಿ.ಡಿ.)

**ಕಾಲಜನ್ :** ಸ್ಕ್ಲೆರೋಪ್ರೋಟೀನ್ಸ್ ಅಥವಾ ಆಲ್ಬ ಮಿನಾಯ್ಡ್ಸ್ ವರ್ಗಕ್ಕೆ ಸೇರಿದ ಪ್ರೋಟೀನ್. ಇದು ವಿಶಿಷ್ಟವಾಗಿ ಕಶೇರುಕಗಳ ಕಂಡರ (ಟೆಂಡನ್), ಮೃದು ಮೂಳೆ, ಮೂಳೆ ಮತ್ತು ಚರ್ಮದಲ್ಲಿ ನೀಳ ಎಳೆಯ ರೂಪದಲ್ಲಿ ಶೇಖರವಾಗಿರುತ್ತದೆ. ನೀಳ ಎಳೆಯಂತಿರುವುದರಿಂದ ಇದು ದೇಹಭಾಗಗಳ ರಚನೆಗೆ ಅನುಕೂಲವಾಗಿದೆ. ರಾಸಾಯನಿಕ ನೀರಿನಲ್ಲಿ ಮತ್ತು ಉಪ್ಪಿನ ದ್ರಾವಣದಲ್ಲಿ ಕಾಲಜನ್ ವಿಲೀನವಾಗುವುದಿಲ್ಲ. ದುರ್ಬಲ ಆಮ್ಲ ಮತ್ತು ಕ್ಷಾರಗಳಲ್ಲಿ ಊದಿಕೊಳ್ಳುತ್ತದೆ. ಆದರೆ ವಿಲೀನವಾಗುವಂತೆ ಕಂಡಿಲ್ಲ. ನೀರಿನಲ್ಲಿ ಲಘುವಾಗಿ ಕುದಿಸುವುದರಿಂದ, ಹೆಚ್ಚು ಒತ್ತಡದ ನೀರಾವಿಯಿಂದ ಅಥವಾ ದುರ್ಬಲ ಆಮ್ಲಗಳೊಡನೆ ಕುದಿಸುವುದರಿಂದ ಜಲವಿಶ್ಲೇಷಣೆಗೊಳಪಡಿಸಿದರೆ ಜಿಲಾಟಿನ್ ಎಂಬ ಮತ್ತೊಂದು ಪ್ರೋಟೀನ್ ಆಗಿ ಪರಿವರ್ತನೆಗೊಳ್ಳುತ್ತದೆ.

ಕಾಲಜನಿನಲ್ಲಿ ಹೈಡ್ರಾಕ್ಸಿ ಅಮೈನೋ ಆಮ್ಲ ಹೈಡ್ರಾಕ್ಸಿ ಪ್ರೋಟೀನಿನ ಅಂಶ ನೂರಕ್ಕೆ 13.5±0.24 ಈ ವಿಶಿಷ್ಟತೆ ಪ್ರಾಣಿಗಳ ಅಂಗಾಂಗಗಳ ಕಾಲಜನ್ ಪ್ರಮಾಣ ವಿಶ್ಲೇಷಣ ವಿಧಾನವೊಂದರ ಆಧಾರವಾಗಿದೆ. ಕಾಲಜನ್ ಮುಖ್ಯವಾಗಿ ಜಿಲಾಟಿನ್ ತಯಾರಿಕೆಯಲ್ಲಿ ಉಪಯೋಗವಾಗುವುದು. (ಎಲ್.ಎ.ಆರ್.)

**ಕಾಲಜ್ಞಾನ ವಚನಗಳು :** ತ್ರಿಕಾಲ ಜ್ಞಾನಿಗಳಾದ ಶಿವಶರಣರೇ ಮೊದಲಾದವರು ಭವಿಷ್ಯವನ್ನು ಕುರಿತು ಹಾಡಿದ ವಚನಗಳಿವು. ಇಂಥದೇ ವಿಷಯ ಪುರಾಣಗಳಲ್ಲಿ, ದಾಸರ ಪದಗಳಲ್ಲಿ ಬಂದಿರುವುದೂ ಉಂಟು. ಸಿದ್ಧಿ ಪತಂಜಲಿ ಋಷಿಗಳು ತಮ್ಮ ಯೋಗದರ್ಶನದ ವಿಭೂತಿ ಪಾದದಲ್ಲಿ ಇದರ ಬಗ್ಗೆ ತಿಳಿಸಿದ್ದಾರೆ.

ಧರ್ಮ, ಲಕ್ಷಣ, ಅವಸ್ಥಾ-ಈ ಪರಿಣಾಮಗಳಲ್ಲಿ ಸಂಯಮ ಮಾಡುವುದರಿಂದ ಕ್ರಮವಾಗಿ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲದ ಜ್ಞಾನವಾಗುವುದು ಎಂದು ಅವರ ಮತ. ಅಂಥ ತ್ರಿಕಾಲಜ್ಞಾನಿಗಳು ಭರತಖಂಡದ ಭವಿಷ್ಯವನ್ನು ಕುರಿತು ಅಪಾರವಾಗಿ ಹೇಳಿದ್ದಾರೆ. ಭಾರತದ ದೇಶಗಳನ್ನು ಕುರಿತು, ಅಲ್ಲಿಯ ದೊರೆ ಮತ್ತು ಪಾಳೆಯಗಾರರ ದೆಸೆಯಿಂದ ಸಾಮಾನ್ಯರಿಗೆ ಆಗಬಹುದಾದ ಕಷ್ಟನಷ್ಟಗಳ ಕುರುಹುಗಳನ್ನು ಎಲ್ಲ ಕಾಲಜ್ಞಾನಿಗಳೂ ವಿಶದಪಡಿಸಿದ್ದಾರೆ. ಕಾಲಜ್ಞಾನ ವಚನಗಳನ್ನು ಬೋಧಿಸಿರುವ ಶರಣರೆಲ್ಲ 12ನೆಯ ಶತಮಾನದಿಂದ ಈಚಿನವರು. ಅನಂತರ ಬಂದವರು ಪದ, ಪದ್ಯ, ಲಾವಣಿಗಳ ರೂಪದಲ್ಲಿ ಹಿಂದಿನವರನ್ನು ಅನುಕರಣೆ ಮಾಡಿ ಕಾಲಜ್ಞಾನವನ್ನು ತಿಳಿಸಿದ್ದಾರೆ. ಮುಸಲ್ಮಾನರ ಆಡಳಿತದಿಂದ ಆಗಬಹುದಾದ ತೊಂದರೆಗಳು; ಜಾತಿ, ನೀತಿ, ಧರ್ಮಗಳನ್ನು ಬಿಟ್ಟು ಜನ ಅನೀತಿವಂತರಾಗುವುದು; ಒಟ್ಟಾರೆ ಕಲಿಯುಗದ ಮಹಿಮೆಯ ವಿವಿಧ ಮುಖಗಳು ಈ ವಚನಗಳಲ್ಲಿ ಬಂದಿವೆ. ಈ ವಚನಗಳು ಮತ್ತೊಂದು ದೃಷ್ಟಿಯಿಂದಲೂ ಮಹತ್ತ್ವಪೂರ್ಣವಾದುವು. ಅಂದಿನ ವೀರಶೈವರ ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳನ್ನು ತಿಳಿಯಲು ಇವು ಬಹುಮಟ್ಟಿಗೆ ಅನುಕೂಲವಾಗಿವೆ. ಒಟ್ಟಾರೆ ಕರ್ನಾಟಕ ಇತಿಹಾಸದ ಅನೇಕ ಸಂಗತಿಗಳು ಇಲ್ಲಿ ಬಂದಿವೆ. ಕಳಚುರಿಗಳು, ವಿಜಯನಗರದ ರಾಜರು, ಬಿಜಾಪುರದ ಬಾದಶಹರು, ಮರಾಠರು, ಮೊಗಲರು ಇಕ್ಕೇರಿ ಅರಸರು ಅಲ್ಲದೆ ಅನೇಕ ಪಾಳೆಯಗಾರರ ಉಲ್ಲೇಖಗಳು ಇಲ್ಲಿ ಬಂದಿರುವುದರಿಂದ ಇತಿಹಾಸ ಸಂಶೋಧಕರಿಗೆ ಇವು ಉಪಯುಕ್ತವಾಗಿವೆ. ಕಾಲಜ್ಞಾನದ ಎಷ್ಟೋ ಸಂಗತಿಗಳು ಸತ್ಯವಾಗಿ ಪರಿಣಮಿಸಿವೆ ಎನ್ನಲಿಕ್ಕೆ ಒಂದೆರಡು ವಚನಗಳನ್ನು ನೋಡಬಹುದು.

ರಥವ ನಡೆಸುವ ಯಂತ್ರ, ಕಥೆಯ ಪೇಳುವ ಯಂತ್ರ
ಪಥಿಕ ಜನರನ್ನು ಒಯ್ಯುವ ಯಂತ್ರ
ಕಥೆಯನೇನೆಂಬೆ ನಂಜೇಶ
ನೆಲದ ಮೇಲಿನ ರಥವು, ಜಲದ ಮೇಲಿನ ರಥವು
ಬಲವಾದ ರಥವು-ಗಗನದೊಳು ನಡೆಯುವ
ಫಲವನೇನೆಂಬೆ ನಂಜೇಶ.

ಇಂಥ ವಚನಗಳಲ್ಲಿ ಪ್ರಕ್ಷಿಪ್ತವೆಷ್ಟೆಂಬುದನ್ನು ಹೇಳುವುದು ಕಷ್ಟ. ಬಸವೇಶ, ಚನ್ನಬಸವಣ್ಣ, ಪ್ರಭುದೇವರು, ಕಲ್ಯಾಣಮ್ಮ, ಕೂಗಿನಮಾರಿತಂದೆ, ಘಟ್ಟಿವಾಳಯ್ಯ, ರುದ್ರಮುನಿತಂದೆ, ಸಿದ್ಧರಾಮೇಶ್ವರ, ನೀಲಮ್ಮ, ಎಮ್ಮೆ ಬಸವಣ್ಣ, ಕರಸ್ಥಲದ ನಾಗಲಿಂಗಯ್ಯ, ನಂಜೇಶ ಮುಂತಾದ ಶರಣರು ಕಾಲಜ್ಞಾನ ವಚನಗಳನ್ನು ಹಾಡಿದ್ದಾರೆ.

ಉದಾಹರಣೆಗೆ ಪ್ರಭುದೇವರದು ಎನ್ನಲಾದ ಒಂದು ವಚನದ ಭಾಗವನ್ನು ನೋಡಬಹುದು.

"ಪಂಚಾಶತ್ ಕೋಟಿ ಭೂಮಂಡಲದ ಮಧ್ಯದಲ್ಲಿ ಪೃಥ್ವಿಗೆ ಕೈಲಾಸಮಪ್ಪ ಶ್ರೀ ಶೈಲದ ಮಲ್ಲಿಕಾರ್ಜುನ ದೇವರ ಮೂಡಲ ಬಾಗಿಲು ಮುಚ್ಚೀತು. ಮನುಷ್ಯರ ರಕ್ತಬಿದ್ದೀತು. ಸುರೆಯ ಗಡಿಗೆ ಮಾರೀತು. ವೇಶ್ಯೆಯರ ಗುಡಿಸಲು ಕಟ್ಟೀತು. ಅಲ್ಲಿ ನಾನಾವಿಕಾರಂಗಳಾದಾವು. ಎಪ್ಪತ್ತೇಳು ದುರ್ಗದವರು ಅಪವರ್ಗವಾದಾರು. ವಿರೂಪಾಕ್ಷ ಕೆಟ್ಟು ಮೂವತ್ತೆರಡು ಕೊಟ್ಟವಾದಾವು. ಮನ್ಮಥಕೊಂಡ ಹೂಳೀತು. ತುರುಕರ ಬಲವೆದ್ದೀತು. ಶಂಭು ತ್ರಿಪುರಾಂತಕ ದೇವರ ಮುಂದಣ ಅನುಭವ ಮಂಟಪದಲ್ಲಿ ಕಪಿಲೆಯ ಬಾಣಸವ ಮಾಡ್ಯಾರು. ನಂದಿ ಕುಂಭ ಮುರಿದಾರು. ಅಲ್ಲಿ ಗೋರಿಯನಿಕ್ಕಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಕುದುರೆ ಕುಮ್ಮಟದಲ್ಲಿ ಮಡಿದೀತು. ಆ ಬಲ ಆರಾದೀತು. ಆರು ಮೂರಾದೀತು. ಮೂರು ಎರಡಾದೀತು. ಎರಡು ಒಂದಾದೀತು, ಒಂದು ರಾಮೇಶ್ವರಕ್ಕೆ ನಡೆದೀತು. ಆ ಬಲ ಉತ್ತರ ಮಧ್ಯದಲ್ಲಿ ಅಳಿದೀತು. ಶಿವಸಮಯ ಕೆಟ್ಟೀತು. ಹಿರಿಯರ ಹಿರಿಯತನವಳಿದೀತು. ಭಕ್ತರು ಜಂಗಮರ ಕೈಸೇವೆಯ ಮಾಡಿಸಿಕೊಂಡಾರು. ನಿಜಭಕ್ತಿಯ ಮರೆತಾರು. ದಾಕ್ಷಿಣ್ಯ ಭಕ್ತಿಯ ಮಾಡ್ಯಾರು. ಕ್ರಿಯೆಗಳು ಬಿಟ್ಟಾರು. ಅನೇಕ ನೇಮಂಗಳಂ ಮಾಡ್ಯಾರು. ಪ್ರಸಾದವಂ ಮರೆತಾರು. ವಂಚನೆ, ಪಂತಿ ಭೇದವ ಮಾಡ್ಯಾರು. ಮನೆಯ ಹಿರಿಯರ ಮರೆತಾರು. ಕುಲದ ಹಿರಿಯರ ಪೂಜೆಯ ಮಾಡ್ಯಾರು. ಜಂಗಮರ ನಿಂದ್ಯವಂ ಮಾಡ್ಯಾರು. ಮತ್ತೆ ಜಂಗಮದ ಪ್ರಸಾದವಂ ಕೊಂಡಾರು. ಭಸಿತ ರುದ್ರಾಕ್ಷಿಯಂ ತೊಟ್ಟಾರು. ವಿಷಯಂಗಳೊಳಗೆ ಮುಳುಗಾಡ್ಯಾರು. ಹದಿನೆಂಟು ಜಾತಿ ಒಂದಾಗಿ ಉಂಡಾರು. ಕುಲಕ್ಕೆ ಹೋರಾಡ್ಯಾರು. ಅನೃತವ ನುಡಿದಾರು. ಅನೃತಕ್ಕೆ ಗುದ್ದಾಡ್ಯಾರು".

ಪೂರ್ಣ ಕಾವಿಯನ್ನು ಧರಿಸಿ ಭಸ್ಮಲೇಪನ ಮಾಡಿಕೊಂಡು ಕೈಯಲೊಂದು ಶುಭ್ರ ಲಾಟೀನನ್ನು ಹಿಡಿದು ಕಾಲಜ್ಞಾನ ವಚನಗಳನ್ನು ಹಾಡುತ್ತ ಬರುವ ಜಂಗಮರನ್ನು ಇಂದಿಗೂ ನೋಡಬಹುದು. ಉತ್ತರ ಕರ್ನಾಟಕದಲ್ಲಿ ಈ ದೃಶ್ಯ ಸರ್ವಸಾಮಾನ್ಯ. ದಕ್ಷಿಣದಲ್ಲೂ ಆಗಾಗ ಇಂಥವರನ್ನು ನೋಡಬಹುದು. *

**ಕಾಲಟಿ :** ಅದ್ವೈತ ತತ್ತ್ವಶಾಸ್ತ್ರ ಪ್ರತಿಪಾದಕ ಭಗವಾನ್ ಶಂಕರಾಚಾರ್ಯರ ಜನ್ಮಸ್ಥಳ. ಕಾಲಡಿಯೆಂದೂ ಕರೆಯುತ್ತಾರೆ. ಕೇರಳ ರಾಜ್ಯದಲ್ಲಿ ಕೊಚ್ಚಿನ್ ಶೋರನೂರು ರೈಲ್ವೆ ಮಾರ್ಗದಲ್ಲಿರುವ ಆಳ್ವಾಯ್ ರೈಲ್ವೆ ನಿಲ್ದಾಣದಿಂದ ಈ ಗ್ರಾಮ ಸು. 8 ಕಿಮೀ ದೂರದಲ್ಲಿ, ಪೆರಿಯಾರ್ ನದಿಯ ದಡದ ಮೇಲಿದೆ. ಇಲ್ಲಿ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿರುವ ಶ್ರೀಕೃಷ್ಣ, ಶಾರದಾಂಬ ಮತ್ತು ಶ್ರೀಶಂಕರ ದೇವಾಲಯಗಳಿವೆ. ಆದಿ ಶಂಕರರ ತಾಯಿ ಆರ್ಯಾಂಬ ಅವರ ಸಮಾಧಿಯಿದೆ. ಇಲ್ಲಿ ಶಂಕರ ಜಯಂತಿಯಂದು ದೊಡ್ಡ ಜಾತ್ರೆ ನಡೆಯುತ್ತದೆ. ವಡಕ್ಕಿ ನಾದರ್ ದೇವಾಲಯದ ಬಳಿಯಲ್ಲಿ ಶೃಂಗೇರಿ ಮಠದವರು ಸಂಸ್ಕೃತ ಕಾಲೇಜು ಒಂದನ್ನು ಸ್ಥಾಪಿಸಿದ್ದಾರೆ. ಯಾತ್ರಾರ್ಥಿಗಳಾಗಿ ಬಂದವರು ತಂಗಲು ಅನೇಕ ಧರ್ಮ ಶಾಲೆಗಳಿವೆ. (ಬಿ.ಎಸ್.ಪಿ.; ಎಸ್.ಎಚ್.ಐ.)

**ಕಾಲನಿರ್ಣಯ ವಿಧಾನಗಳು :** ಗತಕಾಲ ಬಿಟ್ಟಿರುವ ಗುರುತುಗಳ ವೈಜ್ಞಾನಿಕ ಅಭ್ಯಾಸದಿಂದ ಕಾಲವನ್ನು ನಿರ್ಣಯಿಸುವ ಕೆಲವು ವಿಧಾನಗಳನ್ನು ಇಲ್ಲಿ ಚರ್ಚಿಸಿದೆ (ಡೇಟಿಂಗ್ ಮೆಥಡ್ಸ್). ಇವುಗಳಲ್ಲಿ ಅಂತರ್ಗತವಾಗಿರುವ ತತ್ತ್ವವಿಷ್ಟು: ಬದಲಾವಣೆಗೂ ಕಾಲಕ್ಕೂ ಒಂದು ನಿರ್ದಿಷ್ಟ ಸಂಬಂಧವಿದೆ. ವಿಜ್ಞಾನದ ವಿವಿಧ ಭಾಗಗಳ ನೆರವಿನಿಂದ ಆ ಸಂಬಂಧವನ್ನು ಪ್ರತ್ಯೇಕವಾಗಿ ತಿಳಿಯುವುದು ಸಾಧ್ಯವಾಗಿದೆ. ಬದಲಾವಣೆಯ ಮೊತ್ತ ತಿಳಿದಿದ್ದರೆ ಈ ಸಂಬಂಧವನ್ನು ಅದಕ್ಕೆ ಅನ್ವಯಿಸುವುದರ ಮೂಲಕ ಪರೋಕ್ಷವಾಗಿ ಕಾಲವನ್ನು ನಿರ್ಧರಿಸಬಹುದು. ಮುಂದೆ ಬರೆದಿರುವ ಹಲವಾರು ವಿಧಾನಗಳು ಈ ತತ್ತ್ವದ ಪ್ರಾಯೋಗಿಕ ನಿದರ್ಶನಗಳು.

**ಭೂಮಿಯ ವಯಸ್ಸು:** ಭೂಮಿಯ ಆರಂಭದ ದಿವಸಗಳಲ್ಲಿ ಸಾಗರಗಳು ರೂಪುಗೊಳ್ಳುತ್ತಿದ್ದಂದು ಅವುಗಳ ನೀರು ಸಿಹಿಯಾಗಿಯೇ ಇತ್ತು. ಹಲವಾರು ವರ್ಷಗಳ ಪರ್ಯಂತ ನಿರಂತರವಾಗಿ ಸುರಿದ ಮಳೆಯ ನೀರು ನೆಲದ ಕೊರಕಲುಗಳಲ್ಲಿ, ತಗ್ಗುಗಳಲ್ಲಿ, ಬಿರುಕುಗಳಲ್ಲಿ, ಸಂಗ್ರಹಿತವಾಗಿ ಸಾಗರಗಳು ಆದವು. ಅಂದಿನ ಸಾಗರಗಳ ನೀರು ಸಿಹಿಯಾಗಿದ್ದುದಕ್ಕೆ ಆಧಾರಗಳು ಉಂಟು. ಮುಂದೆ ಸಮುದ್ರಗಳ ನೀರು ಕಾದು ಆವಿಯಾಗಿ ಮೋಡವಾಗಿ ಎಲ್ಲೆಲ್ಲೋ ಮಳೆಸುರಿದು, ಆ ನೀರು ನೆಲದ ಮೇಲೆ ಹರಿದು ಸಮುದ್ರಗಳನ್ನು ಸೇರುವ ನೀರಿನ ನಿರಂತರ ಚಕ್ರದ ಆವರ್ತನೆ ಪ್ರಾರಂಭವಾಯಿತು. ನದಿಗಳ ಈ ಪ್ರವಾಹದಲ್ಲಿ ನೆಲದ ಲವಣಾಂಶಗಳು ನೀರಿನಲ್ಲಿ ಕರಗಿ ಸಾಗರಗರ್ಭವನ್ನು ಸೇರಿದುವು. ಆದ್ದರಿಂದ ಇಂದು ಸಾಗರಗಳಲ್ಲಿ ಸಂಗ್ರಹಿತವಾಗಿರುವ ಲವಣಮೊತ್ತವನ್ನೂ ನದಿಗಳಿಂದ ಸಾಗರಗಳಿಗೆ ಸಾಗಣೆಯಾಗಿರುವ ಲವಣದ ವಾರ್ಷಿಕ ದರವನ್ನೂ ತಿಳಿಯುವುದು ಸಾಧ್ಯವಾದರೆ, ಸಾಗರಗಳ ನೀರು ಹಿಂದೆ ಎಂದು ಸಿಹಿಯಾಗಿತ್ತು ಎಂದು ಸುಲಭವಾಗಿ ಗಣಿಸಬಹುದು. ಸಮುದ್ರಗಳಲ್ಲಿ ಇಂದು ಇರುವ ನೀರಿನ ಘನಗಾತ್ರ ಸುಮಾರು 1,500,000,000 ಘನ ಕಿಮಿ. ಅದರಲ್ಲಿ ಕರಗಿರುವ ಲವಣದ ಪ್ರಮಾಣ ಸುಮಾರು ಶೇ. 3ರಷ್ಟು. ಈ ಲವಣದ ತೂಕ $4 \times 10^{16}$ ಟನ್ನುಗಳಿಗಿಂತಲೂ ಹೆಚ್ಚು. ಭೂವಿಜ್ಞಾನಿಗಳ ಅಂದಾಜಿನ ಮೇರೆಗೆ ನದಿಗಳು ಸಾಗರಗಳಿಗೆ ಪ್ರತಿವರ್ಷವೂ ಕೊಂಡೊಯ್ಯುತ್ತಿರುವ ಲವಣ ಪ್ರವಾಹದ ದರ ಸರಿಸುಮಾರಾಗಿ ಏಕ ಪ್ರಕಾರವಾಗಿತ್ತೆಂದು ಭಾವಿಸಿದರೆ ಸಿಹಿನೀರಿನ ಸಾಗರಗಳ ಉಗಮವಾದದ್ದು ಸುಮಾರು $10^8$ ವರ್ಷಗಳ ಹಿಂದೆ ಎಂದು ಗಣನೆಯಿಂದ ತಿಳಿಯುತ್ತದೆ. ಆ ಘಟನೆಗಿಂತಲೂ ಎಷ್ಟೊ ಮೊದಲೇ ಭೂಮಿಯ ಜನನವಾಗಿರಬೇಕಾದದ್ದು ಸಹಜವಷ್ಟೆ

ಆದ್ದರಿಂದ ಭೂಮಿಯ ಹುಟ್ಟು $10^8$ ವರ್ಷಗಳಿಗಿಂತಲೂ ಹಿಂದೆ ಆಗಿದೆ ಎಂದು ಒಂದು ನಿರ್ಣಯಕ್ಕೆ ಈ ವಿಧಾನದಿಂದ ಬರಬಹುದು.

**ಪ್ರಾಚೀನ ಕಲ್ಲುಗಳ ಸೂಕ್ಷ್ಮ ಪರೀಕ್ಷೆ:** ಪ್ರಥಮತಃ ಕುದಿಯುವ ದ್ರವರೂಪದಲ್ಲಿದ್ದ ಭೂಮಿ ವಿಸರಣೆಯಿಂದ ಕ್ರಮೇಣ ಉಷ್ಣವನ್ನು ಕಳೆದುಕೊಂಡು ಹೆಪ್ಪುಗಟ್ಟಲು ಆರಂಭಿಸಿದಾಗ ಗಟ್ಟಿಯಾದ ಹೊರ ತೊಗಟೆರೂಪ ತಳೆಯಿತು. ಆ ಅವಧಿಯಲ್ಲಿ ಬಂಡೆಗಳು ಸಹ ಉಂಟಾದುವು. ಈ ಶಿಲೆಗಳಲ್ಲಿ ಒಂದು ವಿಧವಾದ ನೈಸರ್ಗಿಕ ಗಡಿಯಾರ ಹುದುಗಿದೆ. ವಿಕಿರಣಶೀಲ (ರೇಡಿಯೋ ಆಕ್ಟಿವ್) ಧಾತುಗಳೇ ಈ ಗಡಿಯಾರಗಳು. ಯುರೇನಿಯಂ ಮತ್ತು ಥೋರಿಯಂ ಎಂಬ ವಿಕಿರಣಶೀಲ ಧಾತುಗಳ ಅತಿ ಸೂಕ್ಷ್ಮ ಪರಿಮಾಣಗಳನ್ನು ಭೂಗರ್ಭದಿಂದ, ಹಲವಾರು ಸಲ ಸಮುದ್ರ ತಳದಿಂದ, ಪಡೆದ ವಿವಿಧ ಶಿಲೆಗಳಲ್ಲಿ ಗುರುತಿಸಲಾಗಿದೆ. ಈ ಧಾತುಗಳು ನೈಸರ್ಗಿಕವಾಗಿ ಕ್ಷಯಿಸುತ್ತವೆ. ಗೊತ್ತಿರುವ ಪರಿಮಾಣದ ಯುರೇನಿಯಂ ವಿಕಿರಣಕ್ರಿಯೆಯಿಂದ ಕ್ಷಯಿಸಿ ಮೂಲತೂಕದ ಅರ್ಧಕ್ಕೆ ಇಳಿಯಲು ಬೇಕಾಗುವ ಅವಧಿ $4.5x10^9$ ವರ್ಷಗಳು; ಥೋರಿಯಂಗೆ ಇದು $13.9x10^9$ ವರ್ಷಗಳು. ಈ ಅವಧಿಗೆ ವಿಕಿರಣಶೀಲ ಧಾತುವಿನ ಅರ್ಧಾಯು ಎಂದು ಹೆಸರು. ಅಂದರೆ ಒಂದು ಗ್ರಾಂ ಯುರೇನಿಯಂನ ತೂಕ $4.5x10^9$ ವರ್ಷಗಳ ಅನಂತರ ½ ಗ್ರಾಂ ಆಗುವುದೆಂದು ಇದರ ಅರ್ಥ. ಪುನಃ $4.51x10^9$ ವರ್ಷಗಳು ಕಳೆದಾಗ ಉಳಿಯುವ ಯುರೇನಿಯಂ ½ ಗ್ರಾಂ ನ ಅರ್ಧ ಭಾಗ ಅಂದರೆ ¼ ಗ್ರಾಂ. ಉಳಿದುದೆಲ್ಲ ಕ್ರಮೇಣ ಸೀಸವಾಗಿ ಮಾರ್ಪಾಡಾಗುವುದು. ಇದೇ ರೀತಿ $13.9x10^9$ ವರ್ಷಗಳಾದ ಮೇಲೆ ಥೋರಿಯಂ ಧಾತುವಿನ ತೂಕ ಮೊದಲಿನ ತೂಕದ ಅರ್ಧದಷ್ಟೂ ಇನ್ನೊಂದಾವರ್ತಿ $13.9x10^9$ ವರ್ಷಗಳು ಕಳೆದರೆ ಮೊದಲಿನ ತೂಕದ ಕಾಲು ಭಾಗದಷ್ಟೂ ಮೂಲಧಾತು ಉಳಿಯುವುದು. ವಿಕಿರಣಗೊಂಡ ಪರಮಾಣುಗಳು ಕ್ರಮೇಣ ಸೀಸದ ಪರಮಾಣುಗಳಾಗಿ ಪರಿವರ್ತನೆ ಹೊಂದುತ್ತವೆ. ಹೀಗಾಗುವುದರಿಂದ ಯುರೇನಿಯಂ–ಸೀಸ ಅಥವಾ ಥೋರಿಯಂ–ಸೀಸ ಇವುಗಳ ಪ್ರಮಾಣ ಗತಿಸಿದ ಕಾಲವನ್ನು ಅವಲಂಬಿಸಿರುತ್ತದೆ. ಕಾಲ ಹೆಚ್ಚಿದಂತೆಲ್ಲ ಯುರೇನಿಯಂ ಅಥವಾ ಥೋರಿಯಂಗಳ ಪರಿಮಾಣ ಕಡಿಮೆಯಾಗಿ ಸೀಸದ ಪರಿಮಾಣ ಹೆಚ್ಚುತ್ತ ಹೋಗುವುದು. ಆದ್ದರಿಂದ ಯುರೇನಿಯಂ–ಸೀಸ, ಅಥವಾ ಥೋರಿಯಂ–ಸೀಸ ಇವುಗಳ ಪ್ರಮಾಣವನ್ನು ಶಿಲೆಗಳಲ್ಲಿ ಕಂಡುಹಿಡಿದರೆ ಅವುಗಳ ಕಾಲವನ್ನು ಪರೋಕ್ಷವಾಗಿ ಕಂಡುಹಿಡಿಯಬಹುದು. ಈ ರೀತಿ ಮಾಡಿದ ಲೆಕ್ಕಾಚಾರಗಳಿಂದ ಭೂಮಿಯ ವಯಸ್ಸು 5,000,000,000 ವರ್ಷಗಳೆಂದು ಅಂದಾಜಾಗಿದೆ. ಅಲ್ಲದೆ, ವಿವಿಧ ಶಿಲೆಗಳಲ್ಲಿ ಈ ಪ್ರಮಾಣಗಳನ್ನು ಕಂಡುಹಿಡಿದರೆ, ಈ ಶಿಲೆಗಳು ಉತ್ಪತ್ತಿಯದ ಕಾಲ ಮತ್ತು ಭೂಗರ್ಭಶಾಸ್ತ್ರದ ಯುಗ ಇವನ್ನು ಕರಾರುವಾಕ್ಕಾಗಿ ಗೊತ್ತು ಮಾಡಬಹುದು.

$$^{14}{}_{6}C \rightarrow {}^{14}{}_{7}N + e$$

**ರುಬಿಡಿಯಂ–ಸ್ಟ್ರಾಂಷಿಯಂ ವಿಧಾನ:** ಪುರಾತನ ಶಿಲೆಗಳಲ್ಲಿ ರುಬಿಡಿಯಂ ಧಾತು ಸೇರಿಕೊಂಡಿದ್ದರೆ ಅದು ಕ್ಷಯಿಸಿ ಸ್ಟ್ರಾಂಷಿಯಂ ಆಗಿ ಪರಿವರ್ತನೆಗೊಳ್ಳುವುದು. ರುಬಿಡಿಯಂನ ಅರ್ಧಾಯು $5.8x10^{10}$ ವರ್ಷಗಳು. ಶಿಲೆಯಲ್ಲಿ ರುಬಿಡಿಯಂ–ಸ್ಟ್ರಾಂಷಿಯಂಗಳ ಪ್ರಮಾಣವನ್ನು ಕಂಡುಹಿಡಿದು, ಮೇಲೆ ತಿಳಿಸಿರುವ ರೀತಿಯಲ್ಲಿ, ಆ ಶಿಲೆಯ ವಯಸ್ಸನ್ನು ಕಂಡುಹಿಡಿಯಬಹುದು. ಈ ವಿಧಾನದಲ್ಲಿ, ಯುರೇನಿಯಂ–ಸೀಸದ ವಿಧಾನಕ್ಕಿಂತ, ಹೆಚ್ಚು ಅನುಕೂಲತೆ ಉಂಟು. ಯುರೇನಿಯಂ ಶ್ರೇಣಿಯಲ್ಲಿ ವಿವಿಧ ಧಾತುಗಳು ವಿಕಿರಣ ಕ್ರಿಯೆಗಳಿಂದ ಉತ್ಪನ್ನವಾಗಿ ಅಂತಿಮವಾಗಿ ಯುರೇನಿಯಂ ಸೀಸವಾಗಿ ಪರಿವರ್ತನೆಗೊಳ್ಳುವುವು. ಆ ಶ್ರೇಣಿಯಲ್ಲಿ ರೇಡಾನ್ ಎಂಬ ಅನಿಲವೂ ಉತ್ಪನ್ನವಾಗಿ ಶಿಲೆಯಿಂದ ಕೊಂಚ ಭಾಗ ವಿಸರಿತವಾಗಿ ಹೊರಕ್ಕೆ ಬಂದಿರಬಹುದು. ಹೀಗಾಗುವುದರಿಂದ ಆ ಶಿಲೆಯ ವಯಸ್ಸನ್ನು ಲೆಕ್ಕಾಚಾರ ಮಾಡಿದಾಗ ಸ್ವಲ್ಪ ಕಡಿಮೆಯಾಗಿ ಬಿಡುತ್ತದೆ. ರುಬಿಡಿಯಂ ವಿಕಿರಣಕ್ರಿಯೆಯಿಂದ ನೇರವಾಗಿ ಸ್ಟ್ರಾಂಷಿಯಂ ಮಾತ್ರ ಉತ್ಪನ್ನವಾಗುವುದರಿಂದ, ಈ ವಿಧಾನದಿಂದ ಗಣಿಸಿದ ಶಿಲೆಯ ವಯಸ್ಸು ಹೆಚ್ಚು ನಿಷ್ಕೃಷ್ಟವಾಗಿ ಗೊತ್ತಾಗುತ್ತದೆ. ಈ ವಿಧಾನದಲ್ಲಿ ಮುಖ್ಯ ತೊಂದರೆ ಏನೆಂದರೆ ಶಿಲೆಗಳಲ್ಲಿ ದೊರಕುವ ಸ್ಟ್ರಾಂಷಿಯಂ ಪರಿಮಾಣ ಅತ್ಯಲ್ಪ. ಇದನ್ನು ಅಳತೆಮಾಡುವುದು ಅತ್ಯಂತ ಪ್ರಯಾಸಕರವಾದದ್ದು.

**ವಿಕಿರಣಶೀಲ ಕಾರ್ಬನ್ನಿನಿಂದ ಕಾಲ ನಿರ್ಣಯ:** ವಿಶ್ವಕಿರಣಗಳು (ಕಾಸ್ಮಿಕ್ ರೇಸ್) ಅಂತರಿಕ್ಷದಲ್ಲಿ ಉತ್ಪನ್ನವಾಗಿ ಭೂಮಿಯ ಮೇಲಿರುವ ವಾಯುಮಂಡಲವನ್ನು ಅಪ್ಪಳಿಸುತ್ತವೆ. ಇವುಗಳಲ್ಲಿ ಅತಿ ಹೆಚ್ಚು ಶಕ್ತಿ ಇರುವುದರಿಂದ ವಾಯುಮಂಡಲದಲ್ಲಿ ಇವು ಸಾಕಷ್ಟು ಬದಲಾವಣೆಗಳನ್ನು ಮಾಡುತ್ತವೆ. ವಾಯುಮಂಡಲದ ಮೇಲ್ಭಾಗದಲ್ಲಿ ನ್ಯೂಟ್ರಾನುಗಳಿರುವುದು ಗೊತ್ತಾಗಿದೆ. ಇವು ಪ್ರಾಥಮಿಕ ವಿಶ್ವಕಿರಣಗಳಿಂದ ಉತ್ಪನ್ನವಾದ ದ್ವಿತೀಯಕ ಕಣಗಳು. ವಾಯುಮಂಡಲದಲ್ಲಿ ಆಕ್ಸಿಜನ್ ಮತ್ತು ನೈಟ್ರೊಜನ್ ಪರಮಾಣುಗಳು ಅಧಿಕ ಸಂಖ್ಯೆಯಲ್ಲಿವೆ. ಆಕ್ಸಿಜನ್ ಪರಮಾಣುಗಳು ನ್ಯೂಟ್ರಾನುಗಳೊಡನೆ ಪ್ರತಿಕ್ರಿಯೆ ನಡೆಸುವುದರಲ್ಲಿ ಜಡವಾಗಿರುತ್ತವೆ. ಆದರೆ ನೈಟ್ರೊಜನ್ ಪರಮಾಣುಗಳು ನ್ಯೂಟ್ರಾನ್‌ಗಳೊಡನೆ ಪ್ರತಿಕ್ರಿಯೆಯಿಂದ ವಿಕಿರಣಶೀಲ ಕಾರ್ಬನ್ನಾಗಿ ಪರಿವರ್ತನೆಗೊಳ್ಳುತ್ತವೆ.

$$^{14}_{7}N + {}^{1}_{0}n \qquad 14*_{6}C + {}_{1}^{1}H$$

ಈ ರೀತಿಯಲ್ಲಿ ಉತ್ಪನ್ನವಾದ ಕಾರ್ಬನ್ನಿನ ಪರಮಾಣು ಆಕ್ಸಿಜನ್ ಸಂಯೋಗದಿಂದ ಕಾರ್ಬನ್ ಡೈಆಕ್ಸೈಡ್ ಆಗಿ ಪರಿವರ್ತನೆ ಹೊಂದಿದರೂ ವಿಕಿರಣಶೀಲವಾಗಿಯೇ ಇರುತ್ತದೆ. ವಾಯುಮಂಡಲದ ಮೇಲ್ಭಾಗದಿಂದ ಭೂಮಿಯ ಕಡೆಗೆ ಇಳಿದು ಬರುವಾಗ ಮರ, ಗಿಡ, ಬಳ್ಳಿಗಳಿಂದ ದ್ಯುತಿಸಂಶ್ಲೇಷಣದ ಮೂಲಕ ಈ ಅಣುಗಳು ಅವಶೋಷಿತವಾಗಿ ಬಿಡುತ್ತವೆ. ಪ್ರಾಣಿಗಳು ಗಿಡಗಳ ಎಲೆ, ಬಳ್ಳಿ, ಸೊಪ್ಪುಗಳನ್ನು ಆಹಾರವಾಗಿ ತಿಂದಾಗ ಅವುಗಳ ದೇಹದಲ್ಲಿ $14*_6C$ ಸೇರಿ ಹೋಗುವುದು. ಹಸಿರು ತರಕಾರಿ, ಪ್ರಾಣಿಗಳ ಮಾಂಸ ಇವನ್ನು ಮನುಷ್ಯ ಸೇವಿಸಿದಾಗ ಅವನ ಅಂಗಗಳಲ್ಲಿಯೂ ಈ ಪರಮಾಣುಗಳು ಪ್ರವೇಶಿಸುತ್ತವೆ. ಹೀಗಾಗಿ ಬದುಕಿರುವ ಜೀವಿಗಳಲ್ಲೆಲ್ಲ $14*_6C$ ಪರಮಾಣುಗಳು ಸೇರಿಕೊಂಡಿರುತ್ತವೆ. ಈ ಜೀವ ಪದಾರ್ಥಗಳು ಉಸಿರಾಡುವಾಗ ಈ ಪರಮಾಣುಗಳ ಕೊಂಚ ಭಾಗವನ್ನು ನೈಟ್ರೊಜನ್ನಾಗಿ ಮಾರ್ಪಡಿಸಿ ವಾಯುಮಂಡಲಕ್ಕೆ ಹಿಂತಿರುಗಿಸುತ್ತವೆ.

ಈ ಸಸ್ಯ–ಪ್ರಾಣಿ–ಕಾರ್ಬನ್–ನೈಟ್ರೊಜನ್ ಚಕ್ರ ಕಾರ್ಯದ ಪರಿಣಾಮವಾಗಿ ಸಮಸ್ಥಿತಿಯಲ್ಲಿ ಪ್ರತಿಯೊಂದು ಜೀವವಸ್ತುವಿನಲ್ಲೂ ನಿರ್ದಿಷ್ಟವಾದ $14^6*C$ ಸಮಸ್ಥಾನಿಯ ಪರಿಮಾಣ ಯಾವಾಗಲೂ ಇರುತ್ತದೆ.

ಒಂದು ಮರವನ್ನು ಕತ್ತರಿಸಿಹಾಕಿದರೆ ಅಥವಾ ತಾನಾಗಿಯೇ ಅದು ಉರುಳಿಕೊಂಡರೆ, ಅದಕ್ಕೆ $14*_6C$ ಪೂರೈಕೆ ಸಂಪೂರ್ಣವಾಗಿ ನಿಂತುಹೋಗುತ್ತದೆ. ಕಾಲ ಕಳೆದಂತೆಲ್ಲ ಅದರಲ್ಲಿರುವ $14*_6C$ ಅಂಶ ಕಡಿಮೆಯಾಗುತ್ತ ಹೋಗುತ್ತದೆ.

$14*_6C$ ಅರ್ಧಾಯು ಸುಮಾರು 5,600 ವರ್ಷಗಳೆಂದು ಗೊತ್ತಾಗಿದೆ. ಅರ್ಧಾಯು ಇಷ್ಟೊಂದು ಹೆಚ್ಚಾಗಿರುವುದರಿಂದ, $14_6{}^*C$ ಕ್ಷಯ ಅನೇಕ ಕೋಟಿ ವರ್ಷಗಳವರೆಗೂ ವ್ಯಾಪಿತವಾಗಿರುತ್ತದೆ. ಹೀಗಾಗುವುದರಿಂದ ಅತಿ ಪುರಾತನವಾದ ಮರದ ಚೂರು, ಇದ್ದಲು, ಬೀಜ ಇತ್ಯಾದಿಗಳ ಕಾಲ ನಿರ್ಣಯವನ್ನು ಅವುಗಳಲ್ಲಿರುವ $14*_6C$ ಪರಿಮಾಣವನ್ನು ಕಂಡುಹಿಡಿದರೆ, ಕರಾರುವಾಕ್ಕಾಗಿ ಮಾಡಬಹುದು.

ಈ ರೀತಿಯ ವ್ಯಾಸಂಗಗಳನ್ನು ಅಮೆರಿಕದ ವಿಜ್ಞಾನಿ ಲಿಬ್ಬಿ ಪ್ರಾರಂಭಿಸಿದ. ಪುರಾತನ ವಸ್ತುಗಳಲ್ಲಿರುವ $14*_6C$ ಪರಿಮಾಣ ಅತ್ಯಲ್ಪ. ಇದನ್ನು ನಿಷ್ಕೃಷ್ಟವಾಗಿ ಅಳೆಯಲು ಬಹು ಸೂಕ್ಷ್ಮವಾದ ಉಪಕರಣಗಳು ಆವಶ್ಯಕ. ಲಿಬ್ಬಿ ಈ ಅಳತೆಗಳನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ, ಸಂದೇಹಕ್ಕೆ ಆಸ್ಪದವಿಲ್ಲದಂತೆ, ಮಾಡಿದ್ದಾನೆ. ಈ ಕ್ರಮದಲ್ಲಿ ಕಾಲನಿರ್ಣಯ ಮಾಡುವಾಗ ವಿಶ್ವಕಿರಣಗಳ ತೀಕ್ಷ್ಣತೆ ಕಡೇ ಪಕ್ಷ 20,000 ವರ್ಷಗಳಿಂದಲೂ ಒಂದೇ ಸಮನಾಗಿದೆಯೆಂದು ಕಲ್ಪಿಸಿಕೊಂಡಿದೆ. ಹೀಗೆ ಪ್ರಾಚೀನ ವಸ್ತುಗಳಲ್ಲಿರುವ $14^*{}_6C$ ಮತ್ತು ಬದುಕಿರುವ ವಸ್ತುಗಳಲ್ಲಿರುವ $14^*{}_6C$ ಇವುಗಳ ಪ್ರಮಾಣದಿಂದ ಆ ವಸ್ತುವಿನ ವಯಸ್ಸನ್ನು ನಿರ್ಧರಿಸಬಹುದು. ಲಿಬ್ಬಿ ನಡೆಸಿದ ಸಂಶೋಧನೆಗಳಲ್ಲಿ ಭೂಗರ್ಭಶಾಸ್ತ್ರ ಮತ್ತು ಪ್ರಾಕ್ತನ ಶಾಸ್ತ್ರಗಳಿಗೆ ಮುಖ್ಯವಾದವುಗಳೆಂದು ಪರಿಗಣಿಸಲ್ಪಟ್ಟಿರುವ ಕೆಲವು ವಸ್ತುಗಳ ಕಾಲವನ್ನು ಕೊಟ್ಟಿದೆ.

| | ವಯಸ್ಸು (ವರ್ಷಗಳಲ್ಲಿ) |
|---|---|
| ಈಜಿಪ್ಟಿನಲ್ಲಿರುವ ಹೆಮಾಕನ ಗೋರಿಯಲ್ಲಿದ್ದ ಮರ | 4883±450 |
| ಡೆನ್ಮಾರ್ಕಿನಿಂದ ಪಡೆದ ಮರದ ಚೂರು | 7583±380 |
| ಟೆಕ್ಸಾಸಿನಿಂದ ಪಡೆದ ಕಾಡು ಕೋಣದ ಮೂಳೆ | 9883±350 |
| ಮಂಚೂರಿಯದ ಫಲವತ್ತಾದ ಕಮಲ ಬೀಜಗಳು | 1040±210 |

ಇತ್ಯಾದಿ.

ಈ ಕ್ರಮವನ್ನು ಅನುಸರಿಸಿ, ವಿಗ್ರಹ, ಚಿತ್ರ ಇವುಗಳ ಪ್ರಾಚೀನತೆಯನ್ನು ಕಂಡುಹಿಡಿಯಲು ಸಾಧ್ಯವಾಗಿದೆ. ಈ ವಿಧಾನಕ್ಕೆ ಕಾರ್ಬನ್–14 ಅಥವಾ ಇಂಗಾಲ–14 ಕಾಲನಿರ್ಣಯ ವಿಧಾನವೆಂದು ಹೆಸರು.

**ಟ್ರೈಟಿಯಂನಿಂದ ಕಾಲನಿರ್ಣಯ:** ವಿಶ್ವಕಿರಣದಿಂದ ಉತ್ಪನ್ನವಾದ ನ್ಯೂಟ್ರಾನುಗಳು ವಾಯುಮಂಡಲದ ಮೇಲ್ಭಾಗದಲ್ಲಿ ನೈಟ್ರೊಜನ್ ಪರಮಾಣುಗಳೊಡನೆ ಪ್ರತಿಕ್ರಿಯೆ ನಡೆಸಿ ಟ್ರೈಟಿಯಂ ಎಂಬ ಹೈಡ್ರೊಜನ್ನಿನ ಸಮಸ್ಥಾನಿಯನ್ನೂ ಉತ್ಪನ್ನ ಮಾಡಬಲ್ಲವು:

$$^{14}_{7}N + {}^{1}_{0}n \rightarrow {}^{12}_{6}C + {}^{3^*}_{1}H$$

ಮಳೆಯ ಜೊತೆಯಲ್ಲಿ ಈ ಸಮಸ್ಥಾನಿ ಭೂಮಿಯ ಮೇಲೆ ಬೀಳುತ್ತದೆ. ಟ್ರೈಟಿಯಂನ ಅರ್ಧಾಯು ಕೇವಲ 12.5 ವರ್ಷಗಳು. ಆದ್ದರಿಂದ ಇತ್ತೀಚಿನ ವಸ್ತುಗಳಿಗೆ ಮಾತ್ರ ಕಾಲ ನಿರ್ಣಯವನ್ನು ಟ್ರೈಟಿಯಂನಿಂದ ಮಾಡಬಹುದು. ವಿವಿಧ ಅಕ್ಷಾಂಶಗಳಲ್ಲಿ ಮಳೆ ಬೀಳುವ ಪ್ರಮಾಣ ಏಕರೂಪವಾಗಿಲ್ಲವಾದ್ದರಿಂದ ಟ್ರೈಟಿಯಂ ಪರಿಮಾಣ ವ್ಯತ್ಯಾಸವಾಗುವುದು.

ಈ ಪರಿಮಾಣವೂ ಅತ್ಯಲ್ಪ. ಇದನ್ನು ಅಳತೆ ಮಾಡಲು ಅತಿಸೂಕ್ಷ್ಮ ಉಪಕರಣಗಳು ಬೇಕು.

ಈ ರೀತಿಯಾದ ಅನೇಕ ತೊಡಕುಗಳಿದ್ದರೂ ಲಿಬ್ಬಿ ಮತ್ತು ಆತನ ಸಹೋದ್ಯೋಗಿಗಳು ಅನೇಕ ಸಂಶೋಧನೆಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಇವುಗಳಿಂದ ಕೆಲವು ಸ್ವಾರಸ್ಯವಾದ ಸಂಗತಿಗಳೂ ಹೊರಬಿದ್ದಿವೆ. ಉದಾಹರಣೆಗೆ, ಸಮುದ್ರದಿಂದ ಮೇಲಕ್ಕೆ ಬಂದ ಆವಿ ಮಳೆಯಾಗಿ ಕೆಳಕ್ಕೆ ಬೀಳುವ ಅವಧಿಯಲ್ಲಿ ಎಷ್ಟು ಕಾಲ ವಾಯುಮಂಡಲದಲ್ಲಿ ಇತ್ತು ಎನ್ನುವುದನ್ನು ಮಳೆಯಲ್ಲಿ ಟ್ರೈಟಿಯಂ ಪ್ರಮಾಣವನ್ನು ಅಳತೆ ಮಾಡಿ ಕಂಡುಹಿಡಿದಿದ್ದಾರೆ. ಇವರ ಅಂದಾಜಿನ ಪ್ರಕಾರ ಈ ಅಂತರ ಒಂಬತ್ತು ದಿವಸಗಳು. ಇದೇ ರೀತಿ ಭೂಗರ್ಭದಲ್ಲಿರುವ ನೀರು ಎಷ್ಟು ಕಾಲದಿಂದ ಅಲ್ಲಿ ಕೂಡಿಡಲ್ಪಟ್ಟಿದೆ ಎಂದು ಗೊತ್ತುಮಾಡಬಹುದು. ಹೀಗೆ ಟ್ರೈಟಿಯಂನಿಂದ ಕಾಲನಿರ್ಣಯ ವಿಧಾನ ಹವಾ ವಿಜ್ಞಾನಕ್ಕೂ ನೀರಿನ ಪೂರೈಕೆಯ ಸಮಸ್ಯೆಗಳಿಗೂ ಅತ್ಯಂತ ಸಹಾಯಕವಾಗಬಹುದೆಂದು ಭಾವಿಸಲಾಗಿದೆ.

ಉಲ್ಕೆಯಿಂದ ಸೌರವ್ಯೂಹದ ಆರಂಭಕಾಲದ ನಿರ್ಣಯ: ಅಮೆರಿಕದ ಉತ್ತರ ಡಕೋಟದ ಹತ್ತಿರ ಸುಮಾರು 51 ವರ್ಷಗಳ ಹಿಂದೆ ಒಂದು ಉಲ್ಕಾಪಾತವಾಯಿತು. ಈ ಉಲ್ಕೆಯಲ್ಲಿ ಕ್ಸೆನಾನ್ ಎಂಬ ಅನಿಲ ಇರುವುದು ಪತ್ತೆಯಾಯಿತು. ಈ ಅನಿಲದ ಪರಮಾಣುತೂಕ 129, ಕ್ಸೆನಾನ್ ಪರಮಾಣುವಿನ ಸಮಸ್ಥಾನೀಯ. ಆದರೆ ಭೂಮಿಯಲ್ಲಿ ದೊರಕುವ ಕ್ಸೆನಾನ್ ಅನಿಲವನ್ನು ಅಧ್ಯಯನಮಾಡಿ, ಗೊತ್ತು ಮಾಡಿದ್ದ ತೂಕದ ಸಮಸ್ಥಾನೀಯ ಸಂಖ್ಯೆಗಿಂತ, ಈ ಉಲ್ಕೆಯಲ್ಲಿ ಇದು ಹೆಚ್ಚಿನ ಸಂಖ್ಯೆಯಲ್ಲಿರುವುದು ಗೋಚರವಾಯಿತು. ಹೀಗಾಗಲು ಉಲ್ಕೆಯಲ್ಲಿದ್ದ ಅಯೊಡೀನ್ –129 ವಿಕಿರಣಕ್ಷಯದಿಂದ ಕ್ಸೆನಾನಿಗೆ ಪರಿವರ್ತನೆಯಾಗಿರಬೇಕೆಂದು ವಿಜ್ಞಾನಿಗಳು ಕಲ್ಪಿಸಿಕೊಂಡರು. ಅಯೊಡೀನ್–129 ಧಾತುಸೌರವ್ಯೂಹ ಉದ್ಭವವಾದ ಕಾಲದಲ್ಲಿಯೇ ಇತರ ಧಾತುಗಳ ಜೊತೆಯಲ್ಲಿ ಉತ್ಪತ್ತಿಯಾಗಿರಬೇಕು. ಸೌರವ್ಯೂಹ ಉದ್ಭವವಾದ ಮೇಲೆ ಪ್ರತಿ 170 ಲಕ್ಷ ವರ್ಷಗಳ ಅಂತರದಲ್ಲಿ ಉತ್ಪನ್ನವಾಗಿದ್ದ ಅಯೊಡೀನ್–129ರ ಅರ್ಧದಷ್ಟು ಕ್ಸೆನಾನ್–129 ಆಗಿ ಪರಿವರ್ತನೆಯಾಗುತ್ತದೆ. ಈ ರೀತಿ ಅಯೊಡೀನ್–129ರ ಪರಿಮಾಣ ಕಡಿಮೆಯಾಗುತ್ತ ಹೋಗಿ, ಸುಮಾರು 46,000 ಲಕ್ಷ ವರ್ಷಗಳಾದ ಮೇಲೆ ಸೌರವ್ಯೂಹದಿಂದಲೇ ಅಳಿಸಿ ಹೋಗಿರುವ ಇಂದಿನ ಪರಿಸ್ಥಿತಿ ಉಂಟಾಗಿದೆ. ಉಲ್ಕೆಯಲ್ಲಿ ಅಲ್ಪಪ್ರಮಾಣದಲ್ಲಿ ಅಯೊಡೀನ್–129 ಇರುವುದರಿಂದ ಇದನ್ನು ಅಳತೆಮಾಡಿ ಉಲ್ಕೆ ಸೌರವ್ಯೂಹ ಉದ್ಭವವಾದ 3,500 ಲಕ್ಷ ವರ್ಷಗಳ ಅನಂತರ ರೂಪಗೊಂಡಿರಬೇಕೆಂದು ಕಲ್ಪಿಸಿಕೊಂಡಿದ್ದಾರೆ. ಹೀಗಾಗಿ ಸೌರವ್ಯೂಹ ಉದ್ಭವವಾಗಿ 49,500 ಲಕ್ಷ ವರ್ಷಗಳಾಗಿರಬೇಕೆಂದು ಅಂದಾಜು ಮಾಡಲಾಗಿದೆ.

ವಿಕಿರಣಶೀಲ ಧಾತುಗಳು ಗಡಿಯಾರಗಳಂತೆ ಉಪಯೋಗಿಸಲ್ಪಟ್ಟು ಲಕ್ಷಾಂತರ ವರ್ಷಗಳ ಹಿಂದೆ ನಡೆದ ಘಟನೆಗಳ ಕಾಲವನ್ನು ನಿಷ್ಕೃಷ್ಟವಾಗಿ ಅಳೆಯಲು ಹೀಗೆ ಸಹಕಾರಿಯಾಗಿವೆ.

**ಪ್ರಾಕ್ತನಶಾಸ್ತ್ರದಲ್ಲಿ ಉಪಯೋಗಗಳು:** ಒಂದು ಐತಿಹಾಸಿಕ ವಸ್ತು ಅಥವಾ ಘಟನೆ ಯಾವ ಕಾಲಕ್ಕೆ ಸೇರುತ್ತದೆಂಬುದರ ನಿರ್ಧಾರವನ್ನು ಪ್ರಾಕ್ತನಶಾಸ್ತ್ರದಲ್ಲಿ ಮಾಡಬೇಕಾಗುತ್ತದೆ. ಮಾನವನ ಇತಿಹಾಸ ಮತ್ತು ಸಂಸ್ಕೃತಿಗಳ ಬೆಳೆವಣಿಗೆಗಳನ್ನು ಅಭ್ಯಸಿಸುವಾಗ ಅವಕ್ಕೆ ಆಧಾರವಾಗಿ ದೊರಕಿರುವ ಅವಶೇಷಗಳ ಕಾಲಗಳನ್ನು ನಿರ್ದೇಶಿಸಿ ಆಯಾ ಕಾಲಗಳಲ್ಲಿ ಅವನು ಸಾಧಿಸಿದ್ದ ಮುನ್ನಡೆಯ ಹಂತಗಳನ್ನು ನಿರ್ಧರಿಸಬೇಕಾಗುವುದು. ಕಾಲನಿರ್ಣಯ ವಿಧಾನಗಳನ್ನು ವಿದ್ವಾಂಸರು ಖಚಿತ ಮತ್ತು ಸಂಬಂಧಸೂಚಕವೆಂದು ಎರಡು ಭಾಗ ಮಾಡಿದ್ದಾರೆ.

**ಖಚಿತ ಕಾಲನಿರ್ಣಯ ಪದ್ಧತಿ:** ಇದರಲ್ಲಿ ವಿವಿಧ ವಸ್ತುಗಳ ಕಾಲವನ್ನು ಯಾವುದಾದರೊಂದು ನಿರ್ಧಾರವಾದ ಘಟನೆ ಅಥವಾ ಶಕಕಾಲಕ್ಕೆ ನಿರ್ದೇಶಿಸಿ, ಆ ವಸ್ತುವಿಗೆ ಎಷ್ಟು ವರ್ಷಗಳಾಗಿವೆಯೆಂದು ಹೇಳುತ್ತಾರೆ. ಕಾಲನಿರ್ಣಯ ಮಾಡಬೇಕಾದ ಅವಶೇಷಗಳೊಡನೆ ಅದೇ ಕಾಲದ ನಾಣ್ಯ ಮತ್ತು ಶಾಸನಗಳೂ ಆ ಕಾಲದವೇ ಎಂದು ನಿರ್ಧರಿಸಲಾದ ಇತರ ವಸ್ತುಗಳೂ ದೊರಕಿದಾಗ ಕಾಲನಿರ್ಣಯ ಸುಲಭವಾಗುತ್ತದೆ. ಆದರೆ ಇತಿಹಾಸಪೂರ್ವ ಯುಗದಲ್ಲಿ ಈ ರೀತಿಯ ನಿರ್ಧಾರ ಕಾಲದ ಘಟನೆ ಅಥವಾ ವಸ್ತುಗಳು ಪ್ರ.ಶ.ಪೂ. 5000ಕ್ಕೂ ಮೊದಲಿನ ಕಾಲಕ್ಕೆ ಸಂಬಂಧಿಸಿದಂತೆ ಯಾವುದೂ ದೊರಕುವುದಿಲ್ಲ. ಇತ್ತೀಚಿನ ಹಲವಾರು ವೈಜ್ಞಾನಿಕ ಸಂಶೋಧನೆಗಳು ಖಚಿತ ಕಾಲನಿರ್ಣಯಕ್ಕೆ ಸಹಾಯಕವಾಗಿವೆ. ಅಂಥ ಕಾಲನಿರ್ಣಯ ಪದ್ಧತಿಗಳಲ್ಲಿ ಮುಖ್ಯವಾದ ಕೆಲವನ್ನು ಸ್ಥೂಲವಾಗಿ ಇಲ್ಲಿ ಸೂಚಿಸಬಹುದು. ಮರದ ಕಾಂಡಗಳಲ್ಲಿ ವರ್ಷೇ ವರ್ಷೇ ರೂಪುಗೊಳ್ಳುವ ವರ್ತುಲಗಳು ಹವಾಪರಿಸ್ಥಿತಿಗೆ ಹೊಂದಿಕೊಂಡಿದ್ದು, ಪ್ರತಿ 11 ವರ್ಷಗಳಿಗೆ ಒಂದೊಂದು ಗುಂಪಾಗಿ ಮರುಕಳಿಸುತ್ತವೆ. ದೊರಕಿದ ಅವಶೇಷಗಳಲ್ಲಿರುವ ಮರಗಳ ವರ್ತುಲಗಳ ಸಂಖ್ಯೆ ಮತ್ತು ರೀತಿಗಳನ್ನು ಪರೀಕ್ಷಿಸಿ, ಆ ಮರಗಳು ಯಾವ ಕಾಲದವೆಂದು ಹೇಳಬಹುದು. ಹೀಗೆ ಕಾಲವನ್ನು ಸುಮಾರು 3,000 ವರ್ಷಗಳ ಹಿಂದಿನವರೆಗೂ ನಿರ್ಧರಿಸಬಹುದು. ಈ ಪದ್ಧತಿಗೆ ವೃಕ್ಷವರ್ತುಲ ವಿಶ್ಲೇಷಣ (ಟ್ರೀ ರಿಂಗ್ ಅನಾಲಿಸಿಸ್) ಪದ್ಧತಿಯೆಂದು ಅಥವಾ ವೃಕ್ಷ ಕಾಲನಿರ್ಣಯ ಶಾಸ್ತ್ರ (ಡೆಂಡ್ರೊ ಕ್ರೊನಾಲಜಿ) ಎಂದು ಹೆಸರು. ಜಾಯಿನರನ ಖಗೋಳಶಾಸ್ತ್ರಪದ್ಧತಿಯ ರೀತ್ಯಾ ಪ್ಲಿಸ್ಟೋಸೀನ್ ಯುಗ ಸು. 10 ಲಕ್ಷ ವರ್ಷಗಳಷ್ಟು ಹಳೆಯದೆಂದು ತಿಳಿದುಬಂದಿದೆ. ಭೂಮಿಯ ವಿವಿಧ ಪದರಗಳಿಗೂ ಅವುಗಳಲ್ಲಿನ ಅವಶೇಷಗಳಿಗೂ ಈ ಪದ್ಧತಿಯಿಂದ ಕಾಲ ನಿರ್ದೇಶ ಮಾಡಲಾಗಿದೆ.

**ಸಂಬಂಧಸೂಚಕ ಕಾಲನಿರ್ಣಯ ಪದ್ಧತಿ:** ಇದರಲ್ಲಿ ಒಂದು ಅವಶೇಷದ ಕಾಲವನ್ನು ಮತ್ತೊಂದು ವಸ್ತುವಿನ ಕಾಲಕ್ಕೆ ಸಂಬಂಧಿಸಿದಂತೆ, ನಿರ್ದೇಶಿಸುತ್ತಾರೆ. ಹಳೆಯ ಅವಶೇಷಗಳು ಭೂಮಿಯ ಕೆಳಗಿನ ಪದರಗಳಲ್ಲೂ ಅನಂತರಕಾಲದ ವಸ್ತುಗಳು ಅವುಗಳ ಮೇಲಣ ಪದರಗಳಲ್ಲೂ ಇತ್ತೀಚಿನ ವಸ್ತುಗಳು ಎಲ್ಲಕ್ಕಿಂತ ಮೇಲ್ಪದರದಲ್ಲೂ ಇರುವುದರಿಂದ ಅವುಗಳ ಸಂಬಂಧಸೂಚಕ ಕಾಲವನ್ನು ನಿರ್ಧರಿಸಬಹುದು. ಪ್ಲೀಸ್ಟೊಸೀನ್ ಯುಗದ ಸಸ್ಯ, ಪ್ರಾಣಿ ಮತ್ತು ಮಾನವರ ಕ್ರಮಾಗತ ಬೆಳೆವಣಿಗೆಯ ಘಟ್ಟಗಳನ್ನು ನಿರ್ಧರಿಸಿ ಯಾವುವು ಹಳೆಯವೆಂಬುದನ್ನು ನಿರ್ಧರಿಸಬಹುದು. ವಸ್ತುಗಳ ಆಕಾರವನ್ನೂ ಮಾಡುವ ವಿಧಾನಗಳನ್ನೂ ಪರಸ್ಪರ ಹೋಲಿಸುವುದರಿಂದ ಸಂಬಂಧಸೂಚಕ ಕಾಲನಿರ್ಣಯ ಸಾಧ್ಯವಾಗುತ್ತದೆ. ವಿವಿಧ ಪ್ರದೇಶಗಳ ಸಂಸ್ಕೃತಿಗಳ ಮುಖ್ಯ ಲಕ್ಷಣಗಳನ್ನು ಪಟ್ಟಿಮಾಡಿಕೊಂಡು ಆ ಲಕ್ಷಣಗಳುಳ್ಳ ಇತರ ಸಂಸ್ಕೃತಿಗಳ ಸಂಬಂಧ ಮತ್ತು ಕಾಲಗಳನ್ನು ತಿಳಿಯಬಹುದು. ಯಾವ ಸಂಸ್ಕೃತಿಯಿಂದ ಯಾವ ಸಂಸ್ಕೃತಿ ಪ್ರಭಾವಿತವಾಗಿದೆಯೆಂದು ಕಂಡುಹಿಡಿಯಬಹುದು. ಒಂದೇ ವಾತಾವರಣ ಅಥವಾ ಪ್ರದೇಶದಲ್ಲಿ ದೊರಕಿದ ಮೂಳೆಗಳಲ್ಲಿರುವ ಫ್ಲೋರಿನ್ನನ್ನು ಅಳೆದು ನೋಡುವುದರಿಂದ ಅವೆಲ್ಲ ಸಮಕಾಲೀನವೇ ಅಥವಾ ಬೇರೆ ಬೇರೆ ಕಾಲಗಳಿಗೆ ಸೇರಿದವೇ ಎಂಬುದನ್ನು ತೀರ್ಮಾನಿಸಬಹುದು. ಈ ರೀತಿಯಲ್ಲಿ ಹಲವಾರು ವಿಧಾನಗಳಿಂದ ಪ್ರಾಕ್ತನಶಾಸ್ತ್ರದಲ್ಲಿ ಖಚಿತ ಅಥವಾ ಸಂಬಂಧಸೂಚಕ ಕಾಲನಿರ್ಣಯ ಮಾಡಲಾಗುತ್ತದೆ. (ಬಿ.ಕೆ.ಜಿ.)

**ಕಾಲನೇಮಿ :** ರಾವಣನ ಸೋದರಮಾವ ಮಾರೀಚನ ಮಗ. ರಾಮ ರಾವಣರ ಯುದ್ಧದಲ್ಲಿ ಲಕ್ಷ್ಮಣ ಅಷ್ಟಘಂಟಾ ಶಕ್ತಿಯಿಂದ ಮೂರ್ಛಿತನಾದಾಗ ವಾನರ ವೈದ್ಯ ಸುಷೇಣ ಸಂಜೀವನಿಲತೆಯನ್ನು ತರಲು ಹನುಮಂತನನ್ನು ಚಂದ್ರದ್ರೋಣ ಪರ್ವತಕ್ಕೆ ಕಳಿಸಿದ. ಇದನ್ನು ತಿಳಿದ ರಾವಣ ಕಾಲನೇಮಿಯನ್ನು ಕರೆದು ಹೇಗಾದರೂ ಹನುಮಂತನಿಗೆ ವಿಘ್ನವನ್ನುಂಟುಮಾಡೆಂದು ಹೇಳಿದ. ಕಾಲನೇಮಿ ಹನುಮಂತನಿಗಿಂತ ಮೊದಲೇ ಅಲ್ಲಿಗೆ ಹೋಗಿ ಪರ್ಣಕುಟೀರವೊಂದರಲ್ಲಿ ತಪಸ್ವಿ ವೇಷದಲ್ಲಿ ಕುಳಿತಿದ್ದ. ಹನುಮಂತ ಹೋದಾಗ ಅವನನ್ನು ಕರೆದು ದಣಿವಾರಿಸಿಕೊಂಡು ಹೋಗೆಂದು ಒತ್ತಾಯ ಮಾಡಿದ. ಹನುಮಂತ ಅಲ್ಲಿಯ ಕೊಳದಲ್ಲಿ ಕೈಕಾಲು ತೊಳೆಯಲು ಹೋದಾಗ ಅಲ್ಲಿದ್ದ ಮೊಸಳೆಯೊಂದು ಅವನನ್ನು ಹಿಡಿಯಿತು. ಹನುಮಂತ ಅದನ್ನು ಕೊಂದಾಗ ಶಾಪವಿಮುಕ್ತನಾದ ಗಂಧರ್ವನೊಬ್ಬ ಹೊರಬಂದು ಕಾಲನೇಮಿಯ ಸಮಾಚಾರವನ್ನು ತಿಳಿಸಿ ಹೋದ. ಅನಂತರ ಹನುಮಂತ ಕಾಲನೇಮಿಯನ್ನು ಕೊಂದು ಸಂಜೀವನೀ ಲತೆ ಕಾಣದೆ ಇಡೀ ಪರ್ವತವನ್ನೇ ಹೊತ್ತು ಸುಷೇಣನಲ್ಲಿಗೆ ಹೋದ.

ಇದೇ ಹೆಸರಿನ ಮತ್ತೊಬ್ಬ ರಾಕ್ಷಸನಿದ್ದಾನೆ. ದಿತಿಪುತ್ರನಾದ ವಜ್ರಾಂಗನ ಮಕ್ಕಳಾದ ಮಯ, ತಾರಕಾಸುರ, ವಿರೋಚನ, ಹಯಗ್ರೀವ, ಪ್ರಲಂಬ ಮುಂತಾದವರು ವಿಷ್ಣುವಿನಿಂದ ಹತರಾದಾಗ ಶತಮುಖನಾದ ಈ ಕಾಲನೇಮಿ ತನ್ನ ಅತಿಕಾಯದಿಂದ ದೇವತೆಗಳ ಎದುರಾಗಿ ಅವರನ್ನು ಸೋಲಿಸಿ ಇಂದ್ರ ಪಟ್ಟವನ್ನೇರಿದ. ಇಡೀ ದೇವತೆಗಳೆಲ್ಲ ಈತನ ಹೊಗಳುಭಟ್ಟರಾದರೂ ವೇದ, ಧರ್ಮ, ಸತ್ಯ, ಕ್ಷಮಾ, ಲಕ್ಷ್ಮೀ–ಈ ಐದೂ ಕಾಲನೇಮಿಯ ವಿಚಾರದಲ್ಲಿ ಅಸಡ್ಡೆಯಿಂದಿದ್ದುವು. ಇವುಗಳಿಗೆ ಆಶ್ರಯದಾತನಾದ ವಿಷ್ಣುವನ್ನೇ ಸಂಹರಿಸಬೇಕೆಂದು ಕಾಲನೇಮಿ ವೈಕುಂಠಕ್ಕೆ ಹೋದಾಗ ಅವನ ನೂರು ಮುಖಗಳು ವಿಷ್ಣುವಿನ ಚಕ್ರಾಯುಧದಿಂದ ಉರುಳಿದವು. ಈ ವೃತ್ತಾಂತ ಮತ್ಸ್ಯಪುರಾಣ, ಮಹಾಭಾರತ ಹರಿವಂಶಗಳಲ್ಲಿ ಬರುತ್ತದೆ. (ಬಿ.ಎಚ್.ಎಸ್.)

**ಕಾಲಪರಿಮಿತಿ ಕಾಯಿದೆ, 1963 :** ಭಾರತೀಯ ಕಾಲಪರಿಮಿತಿ ಕಾಯಿದೆ, 1963 ಭಾರತೀಯ ಕರಾರು ಕಾಯಿದೆ, 1872 ರ ಎಲ್ಲ ದಾಖಲೆ ಪತ್ರಗಳ ಜೀವಾವಧಿ, ಪ್ರಾಮುಖ್ಯತೆ, ಕಾನೂನಿನ ಸ್ಥಿತಿಗತಿಗಳ ಬಗ್ಗೆ ವಿಶದವಾಗಿ ವಿವರಿಸುತ್ತದೆ. 1963ರಲ್ಲಿ ಕಾಲಪರಿಮಿತಿ ಕಾಯಿದೆಯು ಜಾರಿಗೆ ಬಂದಿತು. ಇದು ಎಲ್ಲ ವ್ಯವಹಾರಗಳ, ಒಡಂಬಡಿಕೆ–ಕರಾರುಗಳ, ದಾಖಲೆ ಪತ್ರಗಳ, ಕರಾರು ಪತ್ರಗಳ ವಿಧಿಬದ್ಧತೆಯ ಬಗ್ಗೆ ಈ ಕಾಯಿದೆಯು ನಿಖರವಾಗಿ ಹೇಳುತ್ತದೆ.

ಕಾಲಪರಿಮಿತಿ ಕಾಯಿದೆ, 1963 ಒಟ್ಟಾರೆ 31 ಅಧಿನಿಯಮಗಳಿದ್ದು ಅವುಗಳನ್ನು ಐದು ಭಾಗಗಳಾಗಿ ಮಾಡಲಾಗಿದೆ. ಈ ಕಾಯಿದೆಯು 1974 ರಲ್ಲಿ ಪರಿಷ್ಕತಗೊಂಡಿತು.

1. ಪೀಠಿಕೆ
2. ದಾವೆಗಳು, ಕೋರಿಕೆಗಳು, ಅಭ್ಯರ್ಥನ ಪತ್ರಗಳ ಕಾಲಮಿತಿ.
3. ಕಾಲ ಪರಿಮಿತಿಯ ಗಣನೆಯ ವಿಧಿ, ವಿಧಾನಗಳು.
4. ಮಾಲೀಕತ್ವದ ಸ್ವಾಮ್ಯವನ್ನು ಅರ್ಜಿಸುವುದು.
5. ಇತರ ವಿಷಯಗಳು.

**(1) ಪೀಠಿಕೆ :** ಪೀಠಿಕೆಯಲ್ಲಿ ಈ ಕಾಯಿದೆಯ ಪೂರ್ಣ ಹೆಸರು ಮತ್ತು ದೇಶದಲ್ಲಿನ ಅದರ ವ್ಯಾಪ್ತಿಯ ವಿವರವನ್ನು ನೀಡಿದೆ. ಅನಂತರ ಈ ಕಾಯಿದೆಯಲ್ಲಿ ಉಪಯೋಗಿಸಿರುವ ಎಲ್ಲ ಪ್ರಮುಖ ಪದಗಳಿಗೆ ವ್ಯಾಖ್ಯೆಯನ್ನು ನೀಡಲಾಗಿದೆ.

**(2) ದಾವೆಗಳು, ಕೋರಿಕೆಗಳು, ಅಭ್ಯರ್ಥನ ಪತ್ರಗಳ ಕಾಲಮಿತಿ :** ಈ ಅಧ್ಯಾಯದಲ್ಲಿ ಯಾವುದೇ ದಾವೆಗಳನ್ನು ಹಾಕುವ ವ್ಯಕ್ತಿಯ, ವ್ಯಕ್ತಿಗಳ, ಅವರ ವಾರಸುದಾರರು ಅಥವಾ ಪ್ರತಿನಿಧಿಗಳಿಗೆ ಸಿಗುವ ವಿವಿಧ ಸಂದರ್ಭದಲ್ಲಿನ ವಿವಿಧ ಕಾಲ ಪರಿಮಿತಿಯ ಸಂಭಾವ್ಯಗಳನ್ನು ಕಾಯಿದೆಯು ವಿವರವಾಗಿ ತೆರೆದಿಟ್ಟಿದೆ. ಅಧಿನಿಯಮ 3 ರಿಂದ 11 ರವರೆಗೆ ಈ ಅಧ್ಯಾಯದಲ್ಲಿ ವಿವರಣೆಗಳು ಇವೆ.

**(3) ಕಾಲ ಪರಿಮಿತಿಯ ಗಣನೆಯ ವಿಧಿ, ವಿಧಾನಗಳು :** ಈ ಅಧ್ಯಾಯವು ಅಧಿನಿಯಮ 12 ರಿಂದ 24 ರವರೆಗೆ ವ್ಯಾಪಿಸಿದೆ. ಕಾಲಾವಧಿಯನ್ನು ಲೆಕ್ಕಹಾಕುವ ಪ್ರಕ್ರಿಯೆಯಲ್ಲಿ ಬರುವ ಹಲವಾರು ವಿಭಿನ್ನ ಸಂದರ್ಭಗಳಲ್ಲಿ ಕಾಲ ಪರಿಮಿತಿಯನ್ನು ಹೇಗೆ ಗಣನೆಗೆ ತಂದುಕೊಂಡು ಲೆಕ್ಕ ಹಾಕಬೇಕು ಎಂಬುದನ್ನು ವಿವರವಾಗಿ ವ್ಯಾಖ್ಯಾನಿಸಿದೆ.

**(4) ಮಾಲೀಕತ್ವದ ಸ್ವಾಮ್ಯವನ್ನು ಅರ್ಜಿಸುವುದು :** ಈ ಅಧ್ಯಾಯದಲ್ಲಿ ಅಧಿನಿಯಮ 25, 26 ಮತ್ತು 27 ಸೇರ್ಪಡೆಯಾಗಿವೆ. ವ್ಯಕ್ತಿಯ, ವ್ಯಕ್ತಿಗಳ ಅಥವಾ ಒಂದು ಸಂಸ್ಥೆಯು ಒಂದು ಆಸ್ತಿಯ ಮೇಲಣ ಸ್ವಾಮ್ಯವನ್ನು ಅನುಭೋಗಿಸುತ್ತಿರುವ ಕಾಲ, ಹಕ್ಕು ಮೊದಲಾದವುಗಳನ್ನು ವಿಶ್ಲೇಷಿಸಿ ಅದನ್ನು ಕಾಲಾವಧಿಯೊಳಗೆ ಪರಿಶೀಲಿಸಿ ಹಕ್ಕು ಊರ್ಜಿತವೋ, ಅನೂರ್ಜಿತವೋ ಎಂಬುದನ್ನು ವ್ಯಾಖ್ಯಾನಿಸುತ್ತದೆ. ಸರ್ಕಾರಕ್ಕೆ 30 ವರ್ಷ, ಇತರರಿಗೆ 20 ವರ್ಷಗಳ ಅನುಭೋಗದ ಕಾಲಮಿತಿಯಿರುವಾಗ ಅದರ ಅನಂತರದ ದಾವೆಯು ಊರ್ಜಿತವಾಗದೆ ಅವರದೇ ಆಗುವುದೆಂಬುದನ್ನು ವ್ಯಾಖ್ಯಾನಿಸಿದೆ.

**(5) ಇತರ ವಿಷಯಗಳು :** ಅಧಿನಿಯಮ 28 ರಿಂದ 31 ರವರೆಗೆ ವ್ಯಾಪಿಸಿದೆ. ಇದರಲ್ಲಿ ಇತರ ವಿಷಯಗಳನ್ನು ವಿವರಿಸಿದೆ. ಅಲ್ಲದೆ ಈ ಕಾಯಿದೆಯು ಬರುವ ಮುಂಚೆ ಇದ್ದ ಭಾರತೀಯ ಕಾಲಪರಿಮಿತಿ ಕಾಯಿದೆ, 1908 ರ ಅನ್ವಯವಾಗಿರುವ ನಿರ್ಣಯ ಬಗ್ಗೆ ಈ ಕಾಯಿದೆಯಿಂದ ದ್ವಂದ್ವವಾಗದೆ ಹೇಗೆ ಅರ್ಥೈಸಿಕೊಳ್ಳಬೇಕೆಂಬುದನ್ನು ವಿವರಿಸಿದೆ.

**ಕಾಲ ಪರಿಮಿತಿ ಕಾಯಿದೆ, 1963 ಹಾಗೂ ಬ್ಯಾಂಕಿನ ವಿವಿಧ ದಾಖಲೆಗಳ ಕಾಲಾವಧಿ :** ವಿವಿಧ ದಾಖಲೆಗಳ ಕಾಲಾವಧಿ, ಅವುಗಳ ಪ್ರಾಮುಖ್ಯತೆಯ ಬದ್ಧತೆಯ ಕಾಲ ಮಿತಿ ಮೊದಲಾದವುಗಳನ್ನು ಈ ಕಾಯಿದೆಯು ವಿಸ್ತಾರವಾಗಿ ವಿವರಿಸಿದೆ. ಅವುಗಳಲ್ಲಿ ಮುಖ್ಯವಾದವುಗಳು ಹೀಗಿವೆ :

1. ಚಾಲ್ತಿ ಖಾತೆಗಳಾದ ನಗದು, ಉದರಿ, ಮೀರೆಳೆತ ಸಾಲದ ಖಾತೆಗಳಿಗೆ ಕ್ಲೇಟನ್ನಿನ ಸಿದ್ಧಾಂತವು ಅನ್ವಯವಾಗುವುದು. ಈ ಖಾತೆಗಳಲ್ಲಿನ ಮೊದಲ ಜಮೆಯು ಮೊದಲ ಖರ್ಚನ್ನು ತೀರಿಸುವುದು.

2.ಈ ಚಾಲ್ತಿ ಖಾತೆಗಳಲ್ಲಿ ಗ್ರಾಹಕ ಸಾಲಗಾರನು ಮಾಡಿದ ಕೊನೆಯ ಜಮೆಯ ದಿನದಿಂದ ಕಾಲ ಪರಿಮಿತಿ ಗಣನೆಗೆ ಬರುವುದು. ಅಂದಿನಿಂದ ಮೂರು ವರ್ಷಗಳೊಳಗೆ ವಸೂಲಿ ಮಾಡಬೇಕು ಅಥವಾ ಕರಾರು ಪತ್ರಗಳು, ದಾಖಲೆಗಳು ಮತ್ತೆ ನವೀಕರಿಸಬೇಕು. ಆಗ ಮತ್ತೆ ಮೂರು ವರ್ಷಗಳ ಕಾಲಾವಧಿ ದೊರಕುತ್ತದೆ.

3. ಸಾವಧಿ ಸಾಲಗಳಿಗೆ ಕಾಲ ಪರಿಮಿತಿಯ ಲೆಕ್ಕವು ಬೇರೆ ರೀತಿಯಾಗಿರುತ್ತದೆ. ಕಡೆಯ ಸಾಲದ ಕಂತು ಪಾವತಿ ಮಾಡಬೇಕಾದ ದಿನದಿಂದ ಈ ಕಾಲ ಪರಿಮಿತಿಯು ಪ್ರಾರಂಭವಾಗುತ್ತದೆ. ಇದು ಎಲ್ಲ ಕಂತುಗಳಿಗೂ ಅನ್ವಯವಾಗುತ್ತದೆ.

4.ಸಾಮಾನ್ಯವಾಗಿ ಪ್ರತಿಯೊಂದು ಸಾಲದ ವಸೂಲಿಗೆ, ಅದರ ದಾಖಲೆ ಪತ್ರಗಳಿಗೆ ಮೂರು ವರ್ಷದ ಕಾಲಾವಧಿ ಇರುತ್ತದೆ. ಅಷ್ಟರಲ್ಲಿ ಸಾಲವು ವಸೂಲಿಯಾಗಬೇಕು. ಅಥವಾ ವಸೂಲಿ ಪ್ರಕ್ರಿಯೆಯು ಪ್ರಾರಂಭವಾಗಬೇಕು. ಇಲ್ಲವೇ ದಾಖಲೆಗಳ ಕರಾರುಗಳ ನವೀಕರಣವಾಗಿ ಸಾಲಗಾರನಿಂದ ಸಹಿಯಾಗಬೇಕು.

5.ಬೇರೆ ಖಾತೆಗಳಲ್ಲಿ ಬ್ಯಾಂಕು ಮರುಪಾವತಿ ಬೇಡಿಕೆ ಸಲ್ಲಿಸುವ ದಿನದಿಂದ ಮೂರು ವರ್ಷದ ಕಾಲ ಪರಿಮಿತಿ ಇರುತ್ತದೆ. ಅಷ್ಟರೊಳಗೆ ವಸೂಲಿ ಪ್ರಕ್ರಿಯೆಯು ಪ್ರಾರಂಭವಾಗಬೇಕು.

6. ಪರಸ್ಪರರ ಒಡಂಬಡಿಕೆ/ಕರಾರುಗಳ ಒಪ್ಪಂದದ ಕಾಗದ ಪತ್ರಗಳು ಮೂರು ವರ್ಷಗಳಿಗೊಮ್ಮೆ ನವೀಕರಿಸಬೇಕು. ಮೂರು ವರ್ಷಾನಂತರ ಆ ಕಾಗದ ಪತ್ರಗಳು ಶಾಸನಬದ್ಧತೆಯನ್ನು ಕಳೆದುಕೊಂಡು ದಾವೆಗೆ ಆಧಾರವಾಗುವುದಿಲ್ಲ. ನ್ಯಾಯಾಲಯವು ನಂತರದ ಕಾಗದ ಪತ್ರಗಳನ್ನು ಪುರಸ್ಕರಿಸುವುದಿಲ್ಲ.

7.ಆದುದರಿಂದ ಬ್ಯಾಂಕುಗಳು ಅಥವ ಎಲ್ಲ ಸಾಲದಾತರು ಮೂರು ವರ್ಷಗಳೊಳಗೆ ಪ್ರಸ್ತುತ ಇರುವ ಸಾಲದ ಶಿಲ್ಕು, ಬಡ್ಡಿ ಮೊದಲಾದವುಗಳ ಬಗ್ಗೆ ಒಪ್ಪಿದ ಲಿಖಿತ ಪತ್ರವನ್ನು ತಮ್ಮ ಸಾಲಗಾರನಿಂದ ತೆಗೆದುಕೊಳ್ಳಬೇಕು. ಆಗ ಅದು ಮತ್ತೆ ಮೂರು ವರ್ಷಗಳವರೆಗೆ ಎಲ್ಲವನ್ನು ಜೀವಂತವಾಗಿಡುತ್ತದೆ. ಇದನ್ನು ಸಾಲೊಪ್ಪಿಗೆ ಪತ್ರ ಎನ್ನುತ್ತಾರೆ.

8.ಸಾವಧಿ ಠೇವಣಿಗಳ ಬಗ್ಗೆ ಹೇಳುವುದಾದರೆ, ಕಾಲ ಪರಿಮಿತಿಯು ಠೇವಣಿದಾರನು ಅದರ ಮರುಪಾವತಿಗಾಗಿ ಬೇಡಿಕೆ ಸಲ್ಲಿಸಿದ ದಿನದಿಂದ ಪ್ರಾರಂಭವಾಗುತ್ತದೆ. ಅಂದಿನಿಂದ ಮೂರು ವರ್ಷದೊಳಗೆ ಠೇವಣಿದಾರನು ತನ್ನ ಠೇವಣಿಯ ಹಣದ ಮರುಪಾವತಿಗೆ ದಾವೆ ಸಲ್ಲಿಸಬಹುದು.

9.ಬ್ಯಾಂಕ್ ಖಾತರಿ ಪತ್ರಗಳ ಅವಧಿ ಮುಗಿದ ದಿನದಿಂದ ಮೂರು ವರ್ಷಗಳೊಳಗಿನ ಕಾಲ ಪರಿಮಿತಿಯೊಳಗೆ ಪಾವತಿಗೆ ಬೇಡಿಕೆ ಸಲ್ಲಿಸಿ ಬಾರದಿದ್ದಲ್ಲಿ ಕ್ರಮ ತೆಗೆದುಕೊಳ್ಳಬಹುದು.

10. ನ್ಯಾಯಾಲಯವು ನೀಡಿದ ತೀರ್ಪಿನಾಧಾರದಿಂದ ವಸೂಲಿಗೆ ನ್ಯಾಯಬದ್ಧವಾಗಿ ಕ್ರಮ ಜರುಗಿಸಬಹುದು. ಆದರೆ ತೀರ್ಪಿನಾದೇಶದ ದಿನದಿಂದ 12 ವರ್ಷಗಳೊಳಗೆ ಕ್ರಮ ಜರುಗಿಸದಿದ್ದರೆ ಆ ತೀರ್ಪು ನಂತರ ಅನೂರ್ಜಿತವಾಗುತ್ತದೆ. ಅಮೇಲೆ ಸಾಲ ವಸೂಲಿಗೆ ಮತ್ತೆ ನ್ಯಾಯಾಲಯದಲ್ಲಿ ದಾವೆ ಹೂಡಬೇಕಾಗುತ್ತದೆ. *

**ಕಾಲಭೈರವ :** ಶಿವನ ಪಂಚವಿಂಶತಿ ಲೀಲೆಗಳಲ್ಲಿ ಒಂದು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ತಾನೇ ಒಡೆಯ, ತನಗಿಂತ ಅಧಿಕರು ಯಾರೂ ಇಲ್ಲವೆಂದು ಬ್ರಹ್ಮ ಒಮ್ಮೆ ಅಹಂಕಾರ ಪಡುತ್ತಿರುವಾಗ ವಿಷ್ಣು ಮೊದಲಾದವರ ಅಪೇಕ್ಷೆಯಂತೆ ವೇದಗಳು ಶಿವನೇ ನಿತ್ಯಕರ್ತೃವೆಂದೂ ಸರ್ವತಂತ್ರಸ್ವತಂತ್ರನೆಂದೂ ಶಿವಾಧಿಕ್ಯವನ್ನು ಸ್ಥಾಪಿಸಿದುವು. ಆದರೂ ಬ್ರಹ್ಮ ಒಪ್ಪಲಿಲ್ಲ. ಆಗ ಪಂಚ ವದನನಾದ ಪರಮೇಶ್ವರ ಅಲ್ಲಿ ಮೂರ್ತಿಭವಿಸಿದ. ಬ್ರಹ್ಮ ತನ್ನ ನಾಲ್ಕು ಮುಖಗಳ ಜೊತೆಗೆ ಮತ್ತೊಂದು ಮುಖವನ್ನು ಕಲ್ಪಿಸಿಕೊಂಡು ಶಿವನಿಗಿಂತ ತಾನೇನು ಕಡಿಮೆಯೆಂದು ವಿಜೃಂಭಿಸಿದ. ಬ್ರಹ್ಮನ ಗರ್ವದ ಮಾತುಗಳನ್ನು ಕೇಳಿದ ಶಿವ ಕಾಲಭೈರವನ ಆಕಾರವನ್ನು ತಳೆದು ಅಹಂಕರಿಸಿ ನುಡಿದ ಅವನ ತಲೆಯನ್ನು ತನ್ನ ಉಗುರು ಕೊನೆಯಿಂದ ಚಿವುಟಿದ. ಅದೇ ಕಾಲಭೈರವ ಲೀಲೆ ಯೆಂದು ಪ್ರಸಿದ್ಧವಾಯಿತು. ಮುಂದೆ ಭೈರವ ಅಜಕಪಾಲವನ್ನು ಹಿಡಿದು ಗರ್ವಿತರ ರಕ್ತದಿಂದ ಅದನ್ನು ತೃಪ್ತಿಪಡಿಸುವುದಾಗಿ ನುಡಿದು ಭಿಕ್ಷೆಗೆ ಹೊರಟ. ವೈಕುಂಠಕ್ಕೆ ಬಂದಾಗ ವಿಷ್ಣು ಚಕ್ರದಿಂದ ತನ್ನ ಹಣೆಯನ್ನು ಸೀಳಿಕೊಂಡು ಸುರಿದ ರಕ್ತದಿಂದ ಕಪಾಲವನ್ನು ತೃಪ್ತಿಪಡಿಸಲು ಪ್ರಯತ್ನಿಸಿದ. ಅದೆಲ್ಲವನ್ನೂ ಪಾತ್ರೆ ಇಂಗಿಸಿತು. ವಿಷ್ಣು ನಿಸ್ತ್ರಾಣನಾಗಿ ಕೆಳಕ್ಕೆ ಉರುಳಿದ. ಅನಂತರ ಶಿವನ ಕೃಪಾಮೃತದೃಷ್ಟಿಯಿಂದ ಎಚ್ಚೆತ್ತು ಶಿವನನ್ನು ಸ್ತುತಿಸಿದ. ಹೀಗೆ ಶಿವ ಇಂದ್ರಾದಿ ದೇವತೆಗಳಿಗೆಲ್ಲ ವಿವೇಕವನ್ನು ಕರುಣಿಸಿದ. ಕಾಲಭೈರವಲೀಲೆ ಮತ್ತು ಭಿಕ್ಷಾಟನೆ ಲೀಲೆಗಳ ಆಧಾರದ ಮೇಲೆ ಕಾಪಾಲಿಕ ಶೈವಮತಪ್ರವೃತ್ತವಾಗಿದೆ. ಶಿವಾಗಮಗಳು ಮತ್ತು ಶಿವಪುರಾಣಗಳಲ್ಲಿ ಈ ಲೀಲೆಯ ವರ್ಣನೆಗಳಿವೆ. (ಎಂ.ಜಿ.ಎನ್.)

ಕಾಲಭೈರವ : ದೇಶೇಶ್ವರ ದೇವಾಲಯ, ಮೂಗೂರು

**ಕಾಲಮಾಪನ :** ಅನವರತ ಗತಿಶೀಲವಾಗಿರುವ ಕಾಲವನ್ನು (ವೇಳೆ, ಸಮಯ) ಅಳೆಯುವ ಪ್ರಕ್ರಿಯೆ (ಮೆಶರ್‌ಮೆಂಟ್ ಆಫ್ ಟೈಮ್), ಘಟನೆಗಳ ನಡುವಿನ ಅವಧಿಯೇ ಕಾಲ. ನಿನ್ನಿನ ಸೂರ್ಯೋದಯ (ಅಥವಾ ಚಂದ್ರೋದಯ) ಒಂದು ಘಟನೆ, 20 ದಿನದ್ದು ಇನ್ನೊಂದು ಘಟನೆ. ಇವೆರಡರ ನಡುವೆ ಏನೋ ಒಂದು ಸಂದು ಕಳೆದು ಅಥವಾ ಹರಿದು ಹೋದ ಅನುಭವ ಎಲ್ಲರಿಗೂ ಆಗುತ್ತದೆ. ಹೀಗೆ ಸಂದು ಹೋದುದೇ ಕಾಲ. ಇದನ್ನ ಅಳೆಯಲು ನಮಗೆ ಸುಲಭವಾಗಿ ಒದಗುವ ಗಗನ ಗಡಿಯಾರಗಳು ಸೂರ್ಯ ಮತ್ತು ಚಂದ್ರ. ಆದರೆ ಇವನ್ನು ಆಧರಿಸಿ ಕಾಲಮಾಪನ ಮಾಡಿದರೆ ಬೇಗನೆ

ನಮ್ಮ ಬದುಕಿನ ಹಳಿ ತಪ್ಪುತ್ತದೆ. ಏಕೆಂದರೆ ಇವು ಸ್ತೀಮಿತವಾಗಿರುವುದಿಲ್ಲ. ಅಂದ ಮಾತ್ರಕ್ಕೆ ಇವನ್ನು ಹೊರತುಪಡಿಸಿ ಕಾಲಮಾಪನೆಗೆ ಉಪಕರಣ ಅಥವಾ ಗಣಿತ ತಂತ್ರಗಳನ್ನು ರೂಪಿಸಿದ್ದಾರೆ ಇಲ್ಲಿಯೂ ವ್ಯತ್ಯಾಸಗಳು ತಲೆದೋರದಿರವು. ಈ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸಿ ಸೂರ್ಯನ ಚಲನೆಗೆ ಹೊಂದುವಂತೆ ಯಾಂತ್ರಿಕ ವಿಧಾನಗಳನ್ನು ಅಳವಡಿಸುವುದು ಹೇಗೆಂಬ ಸವಾಲಿಗೆ ಉತ್ತರವಾಗಿ ನೆರಳುಗಡಿಯಾರ, ಜಲಗಡಿಯಾರ, ಮರಳುಗಡಿಯಾರ ಮುಂತಾದ ಆದಿಮ ಉಪಕರಣಗಳು ವಿಧಾನಗಳನ್ನು ಅಳವಡಿಸುವುದು ಮೈದಾಳಿದವು. ಇಂಥ ಮೂಲಭೂತ ಚಿಂತನೆ ಮತ್ತು ಪ್ರಯೋಗಗಳ ಫಲವಾಗಿ ಕಾಲಮಾಪನೆಗೆ ಯಾಂತ್ರಿಕ ಗಡಿಯಾರದ ಅನ್ವೇಷಣೆಯಾಯಿತು.




**ಚಿತ್ರ 1. O–ವೀಕ್ಷಕ; P–ಉತ್ತರ ಧ್ರುವ; P'–ದಕ್ಷಿಣ ಧ್ರುವ; PYRΩ–ವಿಷುವದ್ವೃತ್ತ; ∠LyR=ω,ಕ್ರಾಂತಿವೃತ್ತ; ವಿಷವದ್ವೃತ್ತಕ್ಕೆ ಕ್ರಾಂತಿವೃತ್ತದ ಬಾಗು.**

**ವರ್ಷ:** ಸ್ಥಿರನಕ್ಷತ್ರಗಳನ್ನು ಕುರಿತು ಭೂಮಿ ಸೂರ್ಯನಿಗೆ ಒಂದು ಪರಿಭ್ರಮಣೆಯನ್ನು ಮುಗಿಸಲು ಬೇಕಾಗುವ ಅವಧಿ. ಭೂಮಿವಾಸಿಗಳಾದ ನಮಗೆ ಈ ಚಲನೆಯ ಅರಿವು (ಆವರ್ತನ ಚಲನೆಯ ಅರಿವಿನಂತೆಯೇ)




**ಚಿತ್ರ 2, O–ವೀಕ್ಷಕ; P–ಉತ್ತರಧ್ರುವ; REQW–ವಿಷುವದ್ವೃತ್ತ; y ಬಿಂದು ಇದರ ಮೇಲಿದೆ: SENW–ವೀಕ್ಷಕನ ಕ್ಷಿತಿಜ; ಇದರಿಂದ ಕೆಳಗೆ ಅವನಿಗೆ ಕಾಣಿಸದು. N–ಉತ್ತರ ಬಿಂದು; W–ಪಶ್ಚಿಮ ಬಿಂದು; S–ದಕ್ಷಿಣ ಬಿಂದು; E–ಪೂರ್ವ ಬಿಂದು, Z ವೀಕ್ಷಕನ ಖಮಧ್ಯ, ಅತ್ಯುನ್ನತ ಬಿಂದು; NPZSZ'–ವೀಕ್ಷಕನ ಮಧ್ಯಾಹ್ನ ವೃತ್ತ. ಇದು ಆಕಾಶವನ್ನು ಎರಡು ಸಮಭಾಗಗಳಾಗಿ ವಿಭಾಗಿಸುತ್ತದೆ. E(ಪೂರ್ವಬಿಂದು) ಇರುವ ಅರ್ಧ: ಪೂರ್ವಾರ್ಧಗೋಳ, W(ಪಶ್ಚಿಮ ಬಿಂದು) ಇರುವ ಅರ್ಧ. ಪಶ್ಚಿಮಾರ್ಧಗೋಳ. AB–σ ಎಂಬ ನಕ್ಷತ್ರದ ದೈನಂದಿನ ಪಥ. ಭೂಮಿಯ ಆವರ್ತನೆಯ ಪರಿಣಾಮವಾಗಿ ಆಕಾಶಗೋಳ ಪೂರ್ವ–ಪಶ್ಚಿಮ ದಿಶೆಯಲ್ಲಿ PP' ಅಕ್ಷದ ಸುತ್ತ ಆವರ್ತಿಸಿದಂತೆ ಭಾಸವಾಗುತ್ತದೆ. ಆದ್ದರಿಂದ ಪ್ರತಿಯೊಂದು ಆಕಾಶಕಾಯವೂ PP' ಅಕ್ಷದ ಸುತ್ತ ಪೂರ್ವಪಶ್ಚಿಮ ದಿಶೆಯಲ್ಲಿ ವೃತ್ತಪಥದ ಮೇಲೆ ಚಲಿಸುತ್ತದೆ. ಆದ್ದರಿಂದ ವಿಷುವದ್ವೃತ್ತದ ಮೇಲಿರುವ y ಬಿಂದು ಪೂರ್ವ–ಪಶ್ಚಿಮ ದಿಶೆಯಲ್ಲಿ ವಿಷುವದ್ವೃತ್ತದ ಮೇಲೆಯೇ ಚಲಿಸುತ್ತದೆ. σ ನಕ್ಷತ್ರದ ದೈನಂದಿನ ಪಥ AB ವಿಷುವದ್ವೃತ್ತಕ್ಕೆ ಸಮಾಂತರವಾಗಿದೆ. ZPy ಕೋನ y ಬಿಂದುವಿನ ಹೋರಾಕೋನ. ZPσ ಕೋನ σ ನಕ್ಷತ್ರದ ಹೋರಾಕೋನ, Q ಬಿಂದುವಿನಲ್ಲಿ yವೂ A ಬಿಂದುವಿನಲ್ಲಿ σ ವೂ ಮಧ್ಯಾಹ್ನ ವೃತ್ತವನ್ನು ಪಶ್ಚಿಮದಿಂದ ಪೂರ್ವಕ್ಕೆ ದಾಟುತ್ತವೆ. E,C ಬಿಂದುಗಳಲ್ಲಿ ಅವು ಉದಯಿಸುತ್ತವೆ. R,B ಬಿಂದುಗಳಲ್ಲಿ ಅವು ಮಧ್ಯಾಹ್ನ ವೃತ್ತವನ್ನು ಪೂರ್ವದಿಂದ ಪಶ್ಚಿಮಕ್ಕೆ ದಾಟುತ್ತವೆ. W, ಆ ಬಿಂದುಗಳಲ್ಲಿ ಅವು ಮುಳುಗುತ್ತವೆ. ಆದ್ದರಿಂದ y ಬಿಂದು ವೀಕ್ಷಕನಿಗೆ ಕಾಣುತ್ತಿರುವ ಕಾಲ 2x ∠ZPE=$18^0$ಗಳನ್ನು ಆವರ್ತಿಸಲು ಭೂಮಿ ತೆಗೆದುಕೊಳ್ಳುವ ಕಾಲ. ಇದು 12ಗಂಟೆಗಳು, ಆದ್ದರಿಂದ y ಬಿಂದು ಮುಳುಗಿರುವ ಕಾಲವೂ 12ಗಂಟೆಗಳು. σ ನಕ್ಷತ್ರ ವೀಕ್ಷಕನಿಗೆ ಕಾಣುತ್ತಿರುವ ಕಾಲ 2 × ZPC=2h/15 ಗಂಟೆಗಳು ಇಲ್ಲಿ ∠ZPC=$h^o$.**

ಆಗುವುದು ಪರೋಕ್ಷವಾಗಿ. ಆವರ್ತನೆಯ ಪರಿಣಾಮವಾಗಿ ಆಕಾಶಕಾಯಗಳೆಲ್ಲವೂ ನಿರಂತರವಾಗಿ ಮೂಡು–ಪಡುವಲು ದಿಶೆಯ ಚಲನೆಯಲ್ಲಿರುವಂತೆ ಎಂದರೆ ಆಕಾಶಗೋಳ ಪೂರ್ವ–ಪಶ್ಚಿಮ ದಿಶೆಯಲ್ಲಿ ಆವರ್ತಿಸುತ್ತಿರುವಂತೆ ಭಾಸವಾಗುತ್ತದೆ.

ಪರಿಭ್ರಮಣೆಯ ಪರಿಣಾಮವಾಗಿ ಸೂರ್ಯ ಸ್ಥಿರನಕ್ಷತ್ರಗಳ ಹಿನ್ನೆಲೆಯಲ್ಲಿ ಭೂಮಿಯ ಸುತ್ತ ಪಶ್ಚಿಮದಿಂದ ಪೂರ್ವಕ್ಕೆ ಸಂಚರಿಸುತ್ತಿರುವಂತೆ ತೋರುತ್ತದೆ. ಯಾವುದೇ ನಕ್ಷತ್ರವನ್ನು




**ಚಿತ್ರ 3. S–ಸೂರ್ಯ; $E_1$-$E_6$–ಸೂರ್ಯನ ಸುತ್ತಲಿನ ಕಕ್ಷೆಯಲ್ಲಿ ಭೂಮಿಯ ವಿವಿಧ ಸ್ಥಾನಗಳು. ಪ್ರತಿಯೊಂದು ಸ್ಥಾನದಲ್ಲಿಯೂ ಭೂಮ್ಯಕ್ಷದ ದಿಶೆ ಒಂದೇ ಆಗಿದೆ ಎಂಬುದನ್ನು ಗಮನಿಸಬೇಕು. ಭೂಮಿಯ ಆವರ್ತನ ದಿಶೆಯೂ ಪರಿಭ್ರಮಣ ದಿಶೆಯೂ ಒಂದೇ ಆಗಿದೆ. P–ಸೂರ್ಯ ನೀಚ ಬಿಂದು; A–ಸೂರ್ಯೋಚ್ಚ ಬಿಂದು.**

ಕುರಿತಂತೆ ದಿವಸದಿಂದ ದಿವಸಕ್ಕೆ ಸೂರ್ಯನ ಉದಯಾಸ್ತಗಳಲ್ಲಿನ ತಡವಾಗುವಿಕೆಯ ಕಾರಣ ಇದೇ.




**ಚಿತ್ರ 4. ಸೂರ್ಯನ (S) ಸುತ್ತ ಭೂಮಿಯ (E) ವಾಸ್ತವಿಕ ಕಕ್ಷೆ ದೀರ್ಘವೃತ್ರ (C) ಇದರ ತಲವನ್ನು ವಿಸ್ತರಿಸಿದಾಗ ಅದು ಆಕಾಶಗೋಳವನ್ನು ಭೇದಿಸುವ ಮಹಾವೃತ್ತ ಕಾಂತಿವೃತ್ತ (C'). ಭೂಮಿಯ ಮೇಲಿರುವ ವೀಕ್ಷಕನಿಗೆ ಭೂಮಿ $E_1$ ರಿಂದ $E_7$ರ ವರೆಗೆ ಕ್ರಮಾಗತವಾಗಿ ಸಾಗಿದಂತೆ ಸೂರ್ಯ ಕ್ರಾಂತಿವೃತ್ತದ ಮೇಲೆ $S_1$ ರಿಂದ $S_7$ರ ವರೆಗೆ ಕ್ರಮಾಗತವಾಗಿ ಭೂಮಿಯಷ್ಟೇ ಕೋನವೇಗದಿಂದ ಚಲಿಸಿದಂತೆ ತೋರುತ್ತದೆ. ಆದ್ದರಿಂದ ಗಣಿತದ ಗಣನೆಗಳಲ್ಲಿ ಭೂಮಿಯನ್ನು ಸ್ಥಿರಬಿಂದುವನ್ನಾಗಿಯೂ ಸೂರ್ಯನನ್ನು ಸಾಪೇಕ್ಷ ಕಕ್ಷಾವೇಗದಿಂದ ಭೂಮಿಯ ಸುತ್ತ ಸಾಪೇಕ್ಷ ಕಕ್ಷೆಯ ಮೇಲೆ ಪರಿಭ್ರಮಿಸುವಂತೆಯೂ ಭಾವಿಸುತ್ತಾರೆ.**

ದಿವಸದಿಂದ ದಿವಸಕ್ಕೆ ಸೂರ್ಯನ ಉದಯಾಸ್ತಗಳಲ್ಲಿನ ತಡವಾಗುವಿಕೆಯ ಕಾರಣ ಇದೆ. ಒಂದು ವರ್ಷದ ಅವಧಿಯಲ್ಲಿ ಭೂಮಿ ತನ್ನ ಅಕ್ಷದ ಸುತ್ತ 365,2422 ಸಲ ಆವರ್ತಿಸಿರುತ್ತದೆ. ಆದ್ದರಿಂದ 1 ವರ್ಷ = 365,2422 ಆವರ್ತನೆಗಳು (ಸ್ಥೂಲವಾಗಿ ಇವನ್ನು ದಿವಸಗಳೆನ್ನುವುದುಂಟು. ವಿವರಣೆ ಮುಂದೆ ಬರೆದಿದೆ) ಎಂಬ ನೈಸರ್ಗಿಕ ಸಂಬಂಧ ಲಭಿಸುವುದು.

ಕಾಲಮಾಪನದಲ್ಲಿ ಎದುರಾಗುವ ಸಮಸ್ಯೆಗಳು: ನೈಸರ್ಗಿಕ ಕಾಲಘಟಕಗಳಾದ ಸೌರದಿವಸ, ನಾಕ್ಷತ್ರಿಕ ದಿವಸವಾಗಲೀ ವರ್ಷವಾಗಲೀ ವ್ಯಾವಹಾರಿಕವಾಗಿ ಉಪಯುಕ್ತಗಳಲ್ಲ. ಇನ್ನು ಒಂದು ವರ್ಷದಲ್ಲಿರುವ ಆವರ್ತನೆಗಳ ಸಂಖ್ಯೆ ಪೂರ್ಣಾಂಕವಲ್ಲ. ಇದರಿಂದ ವರ್ಷಾರಂಭ, ವರ್ಷದ ಕೊನೆ ಸಾಕಷ್ಟು ಗೊಂದಲವನ್ನು ಉಂಟು ಮಾಡಬಲ್ಲವು. ಸೂರ್ಯನ (ತೋರ್ಕೆಯ) ದೈನಂದಿನ ಪಥಗಳು ಸ್ಥಿರವಾಗಿಲ್ಲ. ಅಲ್ಲದೆ ಭೂಮಿಯ ಸುತ್ತು ಸೂರ್ಯನ (ತೋರ್ಕೆಯ) ಚಲನೆಯಲ್ಲಿ ಕಕ್ಷಾವೇಗ ಏಕಪ್ರಕಾರವಾಗಿಲ್ಲ. ಇವೆಲ್ಲ

ಸಮಸ್ಯೆಗಳನ್ನು ಲಭ್ಯ ನೈಸರ್ಗಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಯುಕ್ತವಾಗಿ ಪರಿಹರಿಸಿ ವ್ಯಾವಹಾರಿಕವಾಗಿಯೂ ನೈಸರ್ಗಿಕವಾಗಿಯೂ ತೀರ ಭಿನ್ನವಲ್ಲದಂಥ ಕಾಲಮಾಪನ ವ್ಯವಸ್ಥೆಯನ್ನು ಗಣಿತಜ್ಞರು ಒದಗಿಸಿದ್ದಾರೆ. ಈ ವಿಧಿಗೆ ಕಾಲಸಂಸ್ಕಾರವೆಂದು ಹೆಸರು. ಕಾಲಸಂಸ್ಕಾರದ ಸೂಕ್ಷ್ಮವನ್ನು ತಿಳಿಯುವ ಮೊದಲು ಭೂಮಿಯ ಚಲನೆಯ ಕೆಲವು ವಿವರಗಳನ್ನು ಅರಿತಿರಬೇಕು.

**ಆವರ್ತನೆ, ಪರಿಭ್ರಮಣೆ:** ಆವರ್ತನ ಚಲನೆಯಲ್ಲಿ ಭೂಮಿ ಅಕ್ಷ ಸದಾ ಒಂದೇ ದಿಶೆಗೆ ಅಭಿಮುಖವಾಗಿರುವುದು. ಎಂದರೆ, ಯಾವುದೇ ಎರಡು ಸಂದರ್ಭಗಳಲ್ಲಿ ಭೂಮಿಯ ಆವರ್ತನಾಕ್ಷಗಳನ್ನು ರೇಖಿಸಿದರೆ ಅವು ಸಮಾಂತರವಾಗಿರುತ್ತವೆ. ಭೂಮಿ ಸೂರ್ಯನನ್ನು ಪರಿಭ್ರಮಿಸುವಾಗ ಸೂರ್ಯ ಮತ್ತು ಭೂಮಿ ಕೇಂದ್ರಗಳನ್ನು ಜೋಡಿಸುವ ರೇಖೆ (ಎಂದರೆ ಭೂಕಕ್ಷೆಯ ತ್ರಿಜ್ಯ) ಒಂದು ಸಮತಲದ ಮೇಲೆ ಚಲಿಸುತ್ತಿರುವುದು.




**ಚಿತ್ರ 5. ಭೂಮಿ E ಸ್ಥಿರವಾಗಿದೆ. ಅದನ್ನು ಕುರಿತು ಸೂರ್ಯನ ಸಾಪೇಕ್ಷಕಕ್ಷೆ ದೀರ್ಘವೃತ್ತ C.P' ಭೂಮಿನೀಚ ಬಿಂದು, A' ಭೂಮ್ಯುಚ್ಚ ಬಿಂದು. ಸೂರ್ಯ $S_1, S_2, S_3, S_4$, ಮುಂತಾದ ಸ್ಥಾನಗಳಲ್ಲಿ ಸಂಚರಿಸುವಾಗ ತೋರ್ಕೆಗೆ ಕ್ರಾಂತಿವೃತ್ತ C ಮೇಲಿನ $S_1, S_2, S_3, S_4$ ಮುಂತಾದ ಸ್ಥಾನಗಳಲ್ಲಿ ಸಂಚರಿಸುವಂತೆ ಭಾಸವಾಗುತ್ತದೆ.**

ಈ ಸಮತಲವನ್ನು ವಿಸ್ತರಿಸಿದರೆ ಅದು ಆಕಾಶಗೋಳವನ್ನು ಒಂದು ಮಹಾವೃತ್ತದಲ್ಲಿ ಛೇದಿಸುತ್ತದೆ. ಇದರ ಹೆಸರು ಕ್ರಾಂತಿವೃತ್ತ. ಭೂಮಿಯ ಮೇಲಿನ ನಮಗೆ ಸೂರ್ಯ ಈ ಕ್ರಾಂತಿವೃತ್ತದ ಮೇಲೆ ಭೂಮಿಯ ಸುತ್ತ ಪರಿಭ್ರಮಿಸುವಂತೆಯೂ ಒಂದು ವರ್ಷದಲ್ಲಿ ಒಂದು ಪರಿಭ್ರಮಣೆಯನ್ನು ಮುಗಿಸುವಂತೆಯೂ ಭಾಸವಾಗುತ್ತದೆ. ಆದ್ದರಿಂದ ಕ್ರಾಂತಿವೃತ್ತವನ್ನು ಸೂರ್ಯನ ಕಕ್ಷೆ ಎಂದು ಹೇಳುವುದುಂಟು. ಭೂಮಿಯ ಕಕ್ಷೆ ಒಂದು ದೀರ್ಘವೃತ್ತ. ಇದರ ಉತ್ಕೇಂದ್ರತೆ ಸುಮಾರು 1/60. ಇದನ್ನು e ಎಂದು ಸಂಕೇತಿಸುವುದು ವಾಡಿಕೆ. ಈ ದೀರ್ಘವೃತ್ತದ ಒಂದು ನಾಭಿ ಸೂರ್ಯನ ಸ್ಥಾನ. ಇದರಿಂದಾಗಿ ಸೂರ್ಯ–ಭೂಮಿ ದೂರ ಸದಾ ವ್ಯತ್ಯಾಸವಾಗುತ್ತಲೇ ಇರುವುದು. ಚಿತ್ರ 4ರಲ್ಲಿ S ಸೂರ್ಯ. P ಸೂರ್ಯನಿಗೆ ಅತಿ ಸಮೀಪ ಬಿಂದು. ಇದಕ್ಕೆ ಸೂರ್ಯನೀಚಬಿಂದುವೆಂದು ಹೆಸರು. A ಸೂರ್ಯನಿಗೆ ಅತಿ ದೂರ ಬಿಂದು. ಇದಕ್ಕೆ ಸೂರ್ಯೋಚ್ಚ ಬಿಂದುವೆಂದು ಹೆಸರು. ಭೂಮಿ ಸುಮಾರಾಗಿ ಜನವರಿ 3ರಂದು Pಗೂ ಜುಲೈ 3ರಂದು Aಗೂ ಬಂದಿರುತ್ತದೆ. ಅದರ ಕಕ್ಷಾವೇಗ Pಯಲ್ಲಿ ಗರಿಷ್ಠ. Pಯಿಂದ Aವರೆಗೆ ಕಡಿಮೆಯಾಗುತ್ತ ಹೋಗಿ Aಯಲ್ಲಿ ಕನಿಷ್ಠವಾಗುತ್ತದೆ. Aಯಿಂದ Pವರೆಗೆ ಏರುತ್ತ ಹೋಗಿ Pಯಲ್ಲಿ ಪುನಃ ಗರಿಷ್ಠವಾಗುತ್ತದೆ. ಭೂಮಿಯ ಅಕ್ಷ ಕ್ರಾಂತಿವೃತ್ತದ ತಲಕ್ಕೆ ಸುಮಾರು $66^0$ 33' ಗಳಷ್ಟು ವಾಲಿಕೊಂಡಿದೆ. ಈಗ, ಭೂಮಧ್ಯರೇಖೆಯ ತಲವನ್ನು ವಿಸ್ತರಿಸಿದಾಗ ಅದು ಆಕಾಶಗೋಳವನ್ನು ವಿಷುವದ್ವೃತ್ತದಲ್ಲಿ ಛೇದಿಸುವುದು ಸರಿಯಷ್ಟೆ ಆದ್ದರಿಂದ ವಿಷುವದ್ವೃತ್ತ ಮತ್ತು ಕ್ರಾಂತಿವೃತ್ತಗಳ ನಡುವಿನ ಬಾಗು $90^o–66^o$ 33=23 $^o$ 27' (ಸರಿ ಸುಮಾರಾಗಿ). ಇದನ್ನು ω ಎಂದು ಸಂಕೇತಿಸುವುದು ವಾಡಿಕೆ. $e$ ಯ (ಎಂದರೆ ಭೂಮಿ ಕಕ್ಷೆಯ ಉತ್ಕೇಂದ್ರತೆ) ಕಾರಣವಾಗಿ ಭೂಮಿಯ ಕಕ್ಷೆ ವೃತ್ತರೂಪದಲ್ಲಿಲ್ಲ. $e$ ಯ ಪರಿಣಾಮವಾಗಿ ಭೂಮಿಯ ಕಕ್ಷಾವೇಗದಲ್ಲಿ, ಆದ್ದರಿಂದ ಸೂರ್ಯನ ಸಾಪೇಕ್ಷ ಕಕ್ಷಾವೇಗದಲ್ಲಿ, ಏಕಸಮಾನತೆ ಇಲ್ಲ. ω ದ ಅಂದರೆ (ಎಂದರೆ ಕ್ರಾಂತಿ ಮತ್ತು ವಿಷುವದ್ವೃತ್ತಗಳ ನಡುವಿನ ಬಾಗು) ಕಾರಣವಾಗಿ ಭೂಮಿಯ ಕಕ್ಷೆ, ಆದ್ದರಿಂದ ಸೂರ್ಯನ ಸಾಪೇಕ್ಷ ಕಕ್ಷೆಯಾದ ಕ್ರಾಂತಿವೃತ್ತ, ವಿಷುವದ್ವೃತ್ತದಿಂದ ಭಿನ್ನವಾಗಿದೆ. ω ದ ಪರಿಣಾಮವಾಗಿ ಸೂರ್ಯ ಒಂದು ವರ್ಷದಲ್ಲಿ ವಿಷುವದ್ವೃತ್ತದ ಉಭಯ ಪಾರ್ಶ್ವಗಳಿಗೂ ω ಕೋನದಷ್ಟು ಆಂದೋಳಿಸುವುದು. $e$ ಮತ್ತು ω ಎಂಬ ಇವೆರಡು ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಾಲಸಂಸ್ಕಾರವನ್ನು ಬಳಕೆಗೆ ತರಲಾಗಿದೆ.

**ದೃಷ್ಟಸೌರದಿವಸ:** ಸೂರ್ಯ ದೈನಂದಿನ ಪಥದ ಉನ್ನತ ಸ್ಥಾನವಾದ ಗೆ ಬಂದಾಗ (ಚಿತ್ರ 6) 0ನಲ್ಲಿರುವ ವೀಕ್ಷಕನಿಗೆ ದೃಷ್ಟ ಸೌರದಿವಸದ ಮಧ್ಯಾಹ್ನ. ಅವನತ ಸ್ಥಾನಕ್ಕೆ (A)ಬಂದಾಗ ದೃಷ್ಟ ಸೌರದಿವಸದ ಮಧ್ಯರಾತ್ರಿ. ಇಂಥ ಇರಡು ಕ್ರಮಾಗತ ದೃಷ್ಟಸೌರಮಧ್ಯಾಹ್ನ ಅಥವಾ ದೃಷ್ಟಸೌರಮಧ್ಯರಾತ್ರಿ ಇವುಗಳ ನಡುವಣ ಅವಧಿಗೆ ಒಂದು ದೃಷ್ಟಸೌರದಿವಸ ಎಂದು ಹೆಸರು. ಈ ಅವಧಿಯನ್ನು 24 ಗಂಟೆಗಳಾಗಿಯೂ ಪ್ರತಿಯೊಂದು ಗಂಟೆಯನ್ನು 60 ಮಿನಿಟುಗಳಾಗಿಯೂ ಪ್ರತಿಯೊಂದು ಮಿನಿಟನ್ನು 60 ಸೆಕೆಂಡುಗಳಾಗಿಯೂ ವಿಭಾಗಿಸಲಾಗಿದೆ.




**ಚಿತ್ರ 6. AB–ಸೂರ್ಯನ ದೈನಂದಿನ ಪಥ; $\Theta_1$–ಪೂರ್ವಾಕಾಶದಲ್ಲಿ ಸೂರ್ಯನ ಒಂದು ಸ್ಥಾನ. ಆಗ ಸೂರ್ಯನ ಒಂದು ಸ್ಥಾನ. ಆಗ ಸೂರ್ಯನ ಹೋರಾಕೋನ $Zn\Theta_1–h_1$ ಪೂರ್ವ ಅಥವಾ– $h_1$. $ZP\Theta_2=h_2$ ಪಶ್ಚಿಮಾಕಾಶದಲ್ಲಿ ಸೂರ್ಯನ ಒಂದು ಸ್ಥಾನ. ಆಗ ಸೂರ್ಯನ ಹೋರಾಕೋನ ಪಶ್ಚಿಮ ಅಥವಾ + $h_2$.**

ದೃಷ್ಟಸೌರ ಮಧ್ಯರಾತ್ರಿಯಲ್ಲಿ ದೃಷ್ಟಸೌರಕಾಲ 0 ಗಂಟೆ. ಈ ಮಧ್ಯರಾತ್ರಿಯಿಂದ ದೃಷ್ಟಸೌರಕಾಲವನ್ನು ಅಳೆಯುತ್ತಾರೆ. ಯಾವ ವೇಳೆಯಲ್ಲಾದರೂ ದೃಷ್ಟ ಸೌರಕಾಲ =12 ಗಂಟೆಗಳು + ಸೂರ್ಯನ ಹೋರಾಕೋನ. ಪೂರ್ವಕ್ಕೆ ಅಳೆದ ಹೋರಾಕೋನ ಋಣಕೋನ, ಪಶ್ಚಿಮಕ್ಕೆ ಅಳೆದ ಹೋರಾಕೋನ ಧನಕೋನ. ಚಿತ್ರ 6ರಲ್ಲಿ ಸೂರ್ಯ $_1$ ರಲ್ಲಿರುವಾಗ ದೃಷ್ಟ ಸೌರಕಾಲ 12 ಗಂ.–$h_1$; ಸೂರ್ಯ $0_2$ ರಲ್ಲಿರುವಾಗ ದೃಷ್ಟ ಸೌರಕಾಲ 12 ಗಂ+$h_1$ ಹೋರಾಕೋನ hನ್ನು ಡಿಗ್ರಿಯಲ್ಲಿ ಅಳೆಯುವುದು ವಾಡಿಕೆ. ಇದನ್ನು ಗಂಟೆಗೆ ಪರಿವರ್ತಿಸಲು $15^o$=1 ಗಂ. ಎಂದು ಪರಿಗಣಿಸಬೇಕು. ಆದ್ದರಿಂದ $h^o$=h/15 ಗಂ. ಆಗುತ್ತದೆ.

ಚಿತ್ರ 7ರಲ್ಲಿ $E_1$ ಭೂಮಿಯ ಒಂದು ಸ್ಥಾನ. ಅದರ ಮೇಲಿರುವ A ಎಂಬ ಸ್ಥಳದಲ್ಲಿರುವ ವೀಕ್ಷಕನಿಗೆ ಸೂರ್ಯ ಮಧ್ಯಾಹ್ನ ವೃತ್ತದ ಮೇಲೆ, ಎಂದರೆ ಉನ್ನತ ಸ್ಥಾನದಲ್ಲಿ ಇದೆ. ಭೂಮಿ ತನ್ನ ಅಕ್ಷದ ಸುತ್ತ ಒಂದು ಆವರ್ತನೆ ಮುಗಿಸುವಾಗ ಪುನಃ A ಯ ಮಧ್ಯಾಹ್ನ ವೃತ್ತದ ಮೇಲೆ ಸೂರ್ಯ ಬರಬೇಕು. ಆದರೆ ಇದೇ ಅವಧಿಯಲ್ಲಿ ಭೂಮಿ $E_2$ ಸ್ಥಾನಕ್ಕೆ ಚಲಿಸಿರುವುದರಿಂದ ಸೂರ್ಯ A ಯ ಮಧ್ಯಾಹ್ನವೃತ್ತದ ಮೇಲೆ ಬರಲು ಇನ್ನಷ್ಟು ಸುತ್ತು, ಎಂದರೆ $AE_2B$ ಕೋನದಷ್ಟು, ಆವರ್ತಿಸಬೇಕು. ಇದರಿಂದಲೇ ದಿವಸದಿಂದ ದಿವಸಕ್ಕೆ ಸೂರ್ಯೋದಯಾಸ್ತಗಳಲ್ಲಿ ತಡವಾಗುವುದು.

ಸೂರ್ಯನ ದೃಷ್ಟಪಥಕ್ಕೆ ಸಂಬಂಧಿಸಿದಂತೆ ಇದೇ ವಿಷಯವನ್ನು ಹೀಗೆ ವಿವರಿಸಬಹುದು. ಸೂರ್ಯ ಒಂದು ದಿವಸದ ದೃಷ್ಟ ಸೌರಮಧ್ಯಾಹ್ನದ ಸಮಯದಲ್ಲಿ ತನ್ನ ದೈನಂದಿನ ಪಥದ ಉನ್ನತ ಸ್ಥಾನದ ಮೇಲಿರುತ್ತಾನೆ.

ಭೂಮಿ ತನ್ನ ಅಕ್ಷದ ಸುತ್ತಲೂ ಒಂದು ಸುತ್ತು ಸುತ್ತುವುದರೊಳಗೆ ಸೂರ್ಯ ಕ್ರಾಂತಿವೃತ್ತದ ಮೇಲೆ ಸುಮಾರು $1^o$ ಪೂರ್ವಕ್ಕೆ ಹೋಗಿರುವುದರಿಂದ ಸೂರ್ಯ

ಪುನಃ ಅದೇ ಉನ್ನತ ಸ್ಥಾನಕ್ಕೆ ಬರಲು ಈ $1^{o}$ ಮೂಲಕ ಹೋಗುವಷ್ಟು, ಎಂದರೆ ಇನ್ನೂ ಸುಮಾರು ನಾಲ್ಕು ಮಿನಿಟುಗಳಷ್ಟು ಹೆಚ್ಚು ಕಾಲ, ಹಿಡಿಯುವುದು. ಆದ್ದರಿಂದ ದೃಷ್ಟಸೌರದಿವಸದ ಅವಧಿ ನಾಕ್ಷತ್ರಿಕ ದಿವಸದ ಅವಧಿಗಿಂತ ಸ್ವಲ್ಪ ಹೆಚ್ಚು.




**ಚಿತ್ರ 7. $E_1$,$E_2$–ಸೂರ್ಯನ ಸುತ್ತಲಿನ ಕಕ್ಷೆಯ ಮೇಲೆ 24 ಗಂಟೆಗಳ ಅಂತರದಲ್ಲಿ ಭೂಮಿಯ ಎರಡು ಸ್ಥಾನಗಳು. 8–ಸೂರ್ಯ. $NE_1$ ಭೂಮ್ಯಕ್ಷ; ಇದರ ವಿನ್ಯಾಸ ಬದಲಾಗುವುದಿಲ್ಲ. A ಯಲ್ಲಿರುವ ವೀಕ್ಷಕನಿಗೆ $E_1$ ಸ್ಥಾನದಲ್ಲಿ ಸೂರ್ಯ ಉನ್ನತ ಸ್ಥಾನಕ್ಕೆ ಬಂದಿರುತ್ತದೆ– ಆದರೆ 24 ಗಂಟೆಗಳ–ಅಂದರೆ ಭೂಮಿಯ ಒಂದು ಆವರ್ತನೆಯ– ತರುವಾಯ ಸೂರ್ಯ ಯ (ಸ್ಥಾನದಲ್ಲಿ) ಉನ್ನತ ಸ್ಥಾನದಲ್ಲಿ ಇರುವುದಿಲ್ಲ, ಬದಲು Bಯ ಉನ್ನತ ಸ್ಥಾನದಲ್ಲಿರುವುದೆಂದು ನೋಡಬಹುದು. ಸೂರ್ಯ Aಯ ಉನ್ನತಸ್ಥಾನಕ್ಕೆ ಬರಲು ಭೂಮಿ $AE_2B$ ಕೋನದಷ್ಟು ಆವರ್ತಿಸಬೇಕು.**

ದೃಷ್ಟಸೌರದಿವಸ=ನಾಕ್ಷತ್ರಿಕ ದಿವಸ+ಒಂದು ದಿವಸದಲ್ಲಿ ಸೂರ್ಯನ ವಿಷುವದಂಶದಲ್ಲಿ ಆಗುವ ಆಧಿಕ್ಯ. ಈಗ, ಭೂಮಿ ಕೆಪ್ಲರನ ನಿಯಮಗಳಿಗೆ ಅನುಸಾರವಾಗಿ ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವುದರಿಂದ ನೀಚಬಿಂದು Pಯಲ್ಲಿ (ಚಿತ್ರ 4) ಅದರ ಕಕ್ಷಾವೇಗ ಗರಿಷ್ಠವಾಗಿಯೂ ಉಚ್ಚ ಬಿಂದು Aಯಲ್ಲಿ ಅದರ ಕಕ್ಷಾವೇಗ ಕನಿಷ್ಠವಾಗಿಯೂ ಇರುವುದು. ಅಲ್ಲದೆ ಕ್ರಾಂತಿವೃತ್ತ ವಿಷುವದ್ವೃತ್ತಕ್ಕೆ w ಕೋನದಷ್ಟು ಬಾಗಿರುವುದರಿಂದ ಒಂದು ದಿವಸದಲ್ಲಿ ಸೂರ್ಯನ ವಿಷುವದಂಶದಲ್ಲಿ ಆಗುವ ಹೆಚ್ಚುವರಿ ವರ್ಷದ ಎಲ್ಲ ದಿವಸಗಳಲ್ಲಿಯೂ ಏಕಸಮನಾಗಿರುವುದಿಲ್ಲ. ಆದ್ದರಿಂದ ಒಂದು ವರ್ಷದಲ್ಲಿ ದೃಷ್ಟ ಸೌರದಿವಸದ ಅವಧಿ ನಿಯತವಾಗಿರದೆ ವ್ಯತ್ಯಾಸವಾಗುತ್ತ ಹೋಗುವುದು. ಈ ಕಾರಣದಿಂದ ದೃಷ್ಟ ಸೌರಕಾಲವನ್ನು ಯಾವ ಗಡಿಯಾರವೂ ತೋರಿಸಲಾರದು. ಇದಕ್ಕಾಗಿ ನೆರಳು ಗಡಿಯಾರ ಅಥವಾ ಛಾಯಾಯಂತ್ರವನ್ನು ಉಪಯೋಗಿಸಬೇಕು.

**ಮಾಧ್ಯಸೌರ ದಿವಸ:** ಈ ಅನಿಯತತೆಯನ್ನು ಅಳೆಯಲು ಹಾಗೂ ನಾಗರೀಕ ವ್ಯವಹಾರಗಳಿಗೆ ಒಂದು ಸುಭದ್ರ ಕಾಲಮಾಪನ ವಿಧಾನವನ್ನು ನೀಡಲು ಎರಡು ಕಾಲ್ಪನಿಕ ಸೂರ್ಯರನ್ನು ಊಹಿಸಿಕೊಳ್ಳಲಾಗಿದೆ. ವಾಸ್ತವಿಕ ಸೂರ್ಯನನ್ನು S ಎಂದು ಕರೆಯೋಣ. ಇದು ನಿಶ್ಚಲ ಭೂಮಿ Eಯನ್ನು ಕುರಿತಂತೆ ಒಂದು ದೀರ್ಘ ವೃತ್ತ ಕಕ್ಷೆಯ ಮೇಲೆ ಪರಿಭ್ರಮಿಸುತ್ತಿದೆ (ಇದು ಸಾಪೇಕ್ಷ ಚಲನೆ, ಗಣಿತದ ಸೌಕರ್ಯಕ್ಕೋಸ್ಕರ ಹೀಗೆ ಭಾವಿಸಲಾಗಿದೆಯಷ್ಟೆ.) ಭೂಮಿ E ಈ ದೀರ್ಘಾವೃತ್ತದ ಒಂದು ನಾಭಿಯಲ್ಲಿದೆ. ಒಂದು ಪರಿಭ್ರಮಣೆಯ ಅವಧಿ ಒಂದು ವರ್ಷ. ಈ ವಾರ್ಷಿಕ ಪರಿಭ್ರಮಣೆಯ ಕಾಲದಲ್ಲಿ ಸೂರ್ಯನ ಚಲನೆ ಕೆಪ್ಲರನ ಎರಡನೆಯ ನಿಯಮಾನುಸಾರ ನಡೆಯುತ್ತದೆ. ಎಂದರೆ, ಸಲೆ ವೇಗ ನಿಯತವಾಗಿರುತ್ತದೆ (**ನೋಡಿ–ಕೆಪ್ಲರನ ನಿಯಮಗಳು**).

ಆದ್ದರಿಂದ ಸೂರ್ಯ ಭೂಮಿಗೆ ಅತಿ ಸಮೀಪವಾಗಿರುವಾಗ (P' ಭೂಮಿ ನೀಚಬಿಂದು) ಗರಿಷ್ಠ ಕಕ್ಷಾವೇಗದಿಂದಲೂ ಭೂಮಿಗೆ ಅತಿ ದೂರವಾಗಿರುವಾಗ (A' ಭೂಮ್ಯುಚ್ಚಬಿಂದು) ಕನಿಷ್ಠ ಕಕ್ಷಾವೇಗದಿಂದಲೂ ಚಲಿಸುತ್ತದೆ. ಇದರ ಪರಿಣಾಮವಾಗಿ $S$ ನ ಕೋನವೇಗ (∠SEP' ವೃದ್ಧಿಸುವ ದರ) ಅನಿಯತವಾಗಿರುವುದು.

ಈಗ, S ಅದರ ಕಕ್ಷೆಯಲ್ಲಿ $P^{1}$ಗೆ (ಚಿತ್ರ 8) ಎಂದರೆ ಭೂಮಿ ನೀಚಬಿಂದುವಿಗೆ ಬಂದಾಗ $S_1$ ಎಂಬ ಕಾಲ್ಪನಿಕ ಸೂರ್ಯ S ನೊಡನೆ $P^{1}$ ನಿಂದ ಹೊರಟು Sನ ಚಲನೆಯ ದಿಕ್ಕಿನಲ್ಲಿ ಚಲಿಸುವುದೆಂದು ಭಾವಿಸುತ್ತೇವೆ. S'ನ ಕೋನವೇಗ S ನ ಕೋನವೇಗದ ಸರಾಸರಿಯಷ್ಟು (ಎಂದರೆ ದಿವಸಕ್ಕೆ $360^{o}/365.25$ ಯಷ್ಟು ಸುಮಾರಾಗಿ) $S_1$ನ ಹೆಸರು ಗತಿ ಮಾಧ್ಯ ಸೂರ್ಯ, ಸಂಕ್ಷೇಪವಾಗಿ ಗತಿಸೂರ್ಯ. P'ನಿಂದ A' ವರೆಗೆ S ಮೊದಲೂ $S_1$ ತರುವಾಯವೂ, ಆದರೆ ಪರಸ್ಪರ ಬಲು ಸಮೀಪವಾಗಿ, ಇರುತ್ತವೆ. $P^{1}$ನಲ್ಲಿ ಅವು ಪುನಃ ಐಕ್ಯವಾಗುತ್ತವೆ. ಹೀಗೆ ಗತಿಸೂರ್ಯ $S_1$ ಮತ್ತು ವಾಸ್ತವಿಕ ಸೂರ್ಯ




**ಚಿತ್ರ 8. ವಾಸ್ತವಿಕ ಸೂರ್ಯ S ಜನವರಿ 3ರ ಸುಮಾರಿಗೆ ಬಂದಾಗ ಅದರೊಡನೆ ಗತಿಸೂರ್ಯ $S_1$ ಅಲ್ಲಿಂದ ಹೊರಡುತ್ತದೆ Sನ ಸಲೆವೇಗ ನಿಯತ; $S_1$ರ ಕೋನವೇಗ ನಿಯತ, ಎರಡೂ P' ಯಿಂದ ಹೊರಟು 6 ತಿಂಗಳುಗಳ P'ಯಲ್ಲಿ ಐಕ್ಯವಾಗುತ್ತವೆ. P; ಯಿಂದ A' ವರೆಗೆ S ಮೊದಲು $SS_1$ ಅದರ ಹಿಂದೆಯೂ A'ಯಿಂದ P' ವರೆಗೆ $S_1$ (ಇಲ್ಲಿ $S_1$' ಎಂದು ತೋರಿಸಿದೆ) ಮೊದಲು S (ಇಲ್ಲಿ S' ಎಂದು ತೋರಿಸಿದೆ) ಅದರ ಹಿಂದೆಯೂ ಇವೆ.**

S ಕ್ರಾಂತಿವೃತ್ತದ ಮೇಲೆ ವರ್ಷದಲ್ಲಿ ಎರಡು ಸಲ ಐಕ್ಯವಾಗುತ್ತ ಮಿಕ್ಕ ಕಾಲಗಳಲ್ಲಿ ಒಂದರ ಸಮೀಪ ಇನ್ನೊಂದರಂತೆ ನಿರಂತರವಾಗಿ ಚಲಿಸುತ್ತಿರುತ್ತವೆ. ಈಗ ಗತಿಸೂರ್ಯ ವಿಷುವದ್ವೃತ್ತವನ್ನು γ ಬಿಂದುವಿನಲ್ಲಿ ಉತ್ತರಿಸುವಾಗ ಅದರ ಪಡಿನೆರಳೊಂದು ಅಲ್ಲಿಂದ ಹೊರಟು ಅದೇ ಕೋನವೇಗದಿಂದ ಅದೇ ದಿಶೆಯಲ್ಲಿ ಆದರೆ ವಿಷುವದ್ವೃತ್ತದ ಮೇಲೆ ಚಲಿಸಲು ಆರಂಭಿಸುವುದೆಂದು ಭಾವಿಸುತ್ತೇವೆ.

ಈ ಎರಡನೆಯ ಕಾಲ್ಪನಿಕ ಸೂರ್ಯನ ಹೆಸರು ಜ್ಯೋತಿಷಮಾಧ್ಯಸೂರ್ಯ, ಸಂಕ್ಷೇಪವಾಗಿ ಮಾಧ್ಯಸೂರ್ಯ. ಇದನ್ನು $S_2$ ಎಂದು ಸಂಕೇತಿಸುತ್ತೇವೆ. $S_2$ರ ಕೋನ

**ಚಿತ್ರ 9. ಗತಿಸೂರ್ಯ $S_1$ ಕ್ರಾಂತಿವೃತ್ತದ ಮೇಲೆ ಚಲಿಸುತ್ತಿದೆ. ಅದು *y* ಬಿಂದುವನ್ನು ದಾಟುವಾಗ ಮಧ್ಯಸೂರ್ಯ $S_2$ ಅದರೊಡನೆ ಅಲ್ಲಿಂದ ಹೊರಟು ಅದೇ ನಿಯತಕೋನ ವೇಗದಿಂದ ವಿಷುವದ್ವೃತ್ತದ ಮೇಲೆ ಚಲಿಸಲು ತೊಡಗುತ್ತದೆ. $yS_1=yS_2$, S ಆದ್ದರಿಂದ ವಾಸ್ತವಿಕ ಸೂರ್ಯ.**

ವೇಗ $S_1$ ರ ಕೋನವೇಗದಷ್ಟೇ ಇರುವುದರಿಂದ $S_2$ ಸಹ ಏಕರೀತಿ ಕೋನವೇಗದಿಂದ ಚಲಿಸುತ್ತಿದೆ ಎಂದಾಯಿತು. ಆದ್ದರಿಂದ ಮಾಧ್ಯಸೂರ್ಯ $S_2$ ನ್ನು ನಾವು ವ್ಯಾಖ್ಯಿಸಿರುವ ಬಗೆ ಹೀಗಿದೆ: ಅದು ವಿಷುವದ್ವೃತ್ತದ ಮೇಲೆ ಸಂಚರಿಸುತ್ತದೆ; ಅದರ ಕೋನವೇಗ ನಿಯತವಾಗಿದೆ; ಹಾಗೂ ಇದು ವಾಸ್ತವಿಕ ಸೂರ್ಯನ ವಾರ್ಷಿಕ ಸರಾಸರಿ ಕೋನವೇಗಕ್ಕೆ ಸಮಾನವಾಗಿದೆ; ಅದು ಗತಿಸೂರ್ಯ $S_1$ ರೊಡನೆ γ ಬಿಂದುವಿನಿಂದ ಚಲಿಸಲು ತೊಡಗುವುದರಿಂದ ಬಿಂದುವಿನಲ್ಲಿ ಅವೆರಡೂ ಪುನಃ ಐಕ್ಯವಾಗುತ್ತವೆ; γ ಬಿಂದುವಿನಲ್ಲಿ ಗತಿಸೂರ್ಯ $S_1$ ಮತ್ತು ಮಾಧ್ಯಸೂರ್ಯ $S_2$ ಇರುವಾಗ ವಾಸ್ತವಿಕಸೂರ್ಯ S

ಕ್ರಾಂತಿವೃತ್ತದ ಮೇಲೆ ಸ್ವಲ್ಪ ಮುಂದೆಯೂ ಬಿಂದುವಿನಲ್ಲಿ $S_1$ $S_2$ ಇರುವಾಗ S ಕಾಂತಿವೃತ್ತದ ಮೇಲೆ ಸ್ವಲ್ಪ ಹಿಂದೆಯೂ ಇರುವುದು. ಆದ್ದರಿಂದ ಮಾಧ್ಯಸೂರ್ಯ ವಾಸ್ತವಿಕಸೂರ್ಯನಿಗಿಂತ ತೀರ ಭಿನ್ನವಾದ ಅಥವಾ ಸ್ವತಂತ್ರವಾದ ಕಲ್ಪನೆಯಲ್ಲ. ಮಾಧ್ಯಸೂರ್ಯನ ಚಲನೆ ಏಕರೀತಿ ಕೋನವೇಗದಿಂದ ವಿಷುವದ್ವೃತ್ತದ ಮೇಲೆ ಆಗುತ್ತಿರುವುದರಿಂದ ಭೂಮಿಯ ಮೇಲಿನ ಯಾವುದೇ ಸ್ಥಳದಲ್ಲಿ ಇದರ ದೈನಂದಿನ ಚಲನೆ ನಿಯತಗತಿಯಲ್ಲಿರುವುದು. ಮಾಧ್ಯಸೂರ್ಯ $S_2$ ಗಡಿಯಾರದ ಪ್ರಕಾರ ಬೆಳಗ್ಗೆ 6 ಗಂಟೆಗೆ ಮೂಡಿ ಮಧ್ಯಾಹ್ನ 12 ಗಂಟೆಗೆ ಉನ್ನತ ಸ್ಥಾನಕ್ಕೆ ಬಂದು ಸಂಜೆ 6 ಗಂಟೆಗೆ ಕಂತುವುದೆಂದು ಭಾವಿಸುತ್ತೇವೆ. ಮಾಧ್ಯಸೂರ್ಯ ಉನ್ನತಸ್ಥಾನಕ್ಕೆ ಬಂದಾಗ ಮಾಧ್ಯಸೌರ ಮಧ್ಯಾಹ್ನ, ಅವನತಸ್ಥಾನಕ್ಕೆ ಬಂದಾಗ ಮಾಧ್ಯಸೌರ ಮಧ್ಯರಾತ್ರಿ. ಎರಡು ಅನುಕ್ರಮ ಮಾಧ್ಯಸೌರ ಮಧ್ಯರಾತ್ರಿಗಳ ನಡುವೆ ಇರುವ ಅವಧಿಯೇ ಒಂದು ಮಾಧ್ಯಸೌರದಿವಸ. ಮಾಧ್ಯಸೌರಕಾಲವನ್ನು ಮಾಧ್ಯಸೌರ ದಿವಸದ ಮಧ್ಯರಾತ್ರಿಯಿಂದ ಅಳೆಯುವರು. ಮಾಧ್ಯಸೌರ ದಿವಸವನ್ನು ಸಹ 24 ಗಂಟೆಗಳಾಗಿಯೂ ಪ್ರತಿಯೊಂದು ಗಂಟೆಯನ್ನು 60 ಮಿನಿಟುಗಳಾಗಿಯೂ ಪ್ರತಿಯೊಂದು ಮಿನಿಟನ್ನು 60 ಸೆಕೆಂಡುಗಳಾಗಿಯೂ ವಿಭಾಗಿಸಿರುವರು. ಮಾಧ್ಯಸೌರ ಮಧ್ಯರಾತ್ರಿಯಲ್ಲಿ ಮಾಧ್ಯಸೌರಕಾಲ 0 ಗಂಟೆ. ಮಾಧ್ಯಸೌರ ಮಧ್ಯಾಹ್ನದಲ್ಲಿ ಈ ಕಾಲ 12 ಗಂಟೆ. ಒಂದು ಸ್ಥಳದಲ್ಲಿ ಒಂದು ಸಮಯದಲ್ಲಿ ಮಾಧ್ಯಸೌರಕಾಲ 12 ಗಂಟೆ + ಮಾಧ್ಯಸೂರ್ಯನ ಹೋರಾಕೋನ (ಯುಕ್ತ ಚಿಹ್ನೆಯೊಡನೆ).

ಪ್ರಪಂಚದಾದ್ಯಂತ ಅನುಸರಿಸುತ್ತಿರುವುದು ಮಾಧ್ಯಸೌರಕಾಲವನ್ನೇ. ಮಾಧ್ಯ ಸೂರ್ಯನ ವೇಗ ಏಕರೀತಿ ಆಗಿರುವುದರಿಂದ ಗಡಿಯಾರಗಳು ಮಾಧ್ಯಸೌರ ಕಾಲವನ್ನು ತೋರಿಸಬಲ್ಲವು. ಮಾಧ್ಯಸೌರ ಕಾಲವನ್ನು ಅಳೆಯಲು ಎರಡು ಕ್ರಮಗಳನ್ನು ಅನುಸರಿಸುತ್ತಾರೆ. ಒಂದು ಕ್ರಮದಲ್ಲಿ ದಿವಸವನ್ನು 12 ಗಂಟೆಗಳ ಎರಡು ಭಾಗಗಳಾಗಿ ವಿಭಾಗಿಸಿ ಮಧ್ಯರಾತ್ರಿಯಿಂದ ಮುಂದಿನ ಮಧ್ಯಾಹ್ನದವರೆಗೆ ಅಳೆಯುತ್ತಾರೆ. ಅನಂತರ ಮಧ್ಯಾಹ್ನದಿಂದ ಪುನಃ 1, 2, 3 ಇತ್ಯಾದಿ ಗಂಟೆಗಳನ್ನು ಎಣಿಸುತ್ತ ಬಂದಾಗ ಮುಂದಿನ ಮಧ್ಯರಾತ್ರಿಯಲ್ಲಿ ಪುನಃ ಮಾಧ್ಯ ಸೌರಕಾಲ 12 ಗಂಟೆ ಆಗುವುದು. ನಮ್ಮ ದೈನಂದಿನ ಕಾರ್ಯಕಲಾಪಗಳಿಗೆ ಈ ಕ್ರಮವನ್ನು ಅನುಸರಿಸುತ್ತೇವೆ. ಆದರೆ ರೈಲು, ವಿಮಾನ, ನೌಕಾಯಾನಗಳಲ್ಲೂ ಖಗೋಳಶಾಸ್ತ್ರವೀಕ್ಷಣೆಗಳಲ್ಲೂ ಮಾಧ್ಯ ಸೌರರಾತ್ರಿಯಿಂದ ಮುಂದಿನ ಮಾಧ್ಯಸೌರರಾತ್ರಿಯವರೆಗೆ (0 ಗಂಟೆಯಿಂದ 24 ಗಂಟೆಗಳವರೆಗೆ) ಅಳೆಯುವ ಪದ್ಧತಿ ರೂಢಿಯಲ್ಲಿ ಉಂಟು.

**ಕಾಲಸಂಸ್ಕಾರ :** ದೃಷ್ಟ ಸೌರಕಾಲಕ್ಕೂ ಮಾಧ್ಯಸೌರಕಾಲಕ್ಕೂ ಇರುವ ಅಂತರದ ಹೆಸರು. ಎಂದರೆ ವಾಸ್ತವಿಕ ಸೂರ್ಯ S ಸೂಚಿಸುವ ಕಾಲಕ್ಕೂ ಮಾಧ್ಯಸೂರ್ಯ $S_2$ಸೂಚಿಸುವ ಕಾಲಕ್ಕೂ ಇರುವ ಅಲ್ಪಾಂತರವೇ ಕಾಲಸಂಸ್ಕಾರ. ಇದು ಒಂದು ತಿದ್ದುಪಡಿ; $S_2$ನ್ನು ಕಲ್ಪಿಸಿಕೊಂಡುದರಿಂದ ಲಭಿಸುವ ಕಾಲವನ್ನು S ಪ್ರಕಾರ ದೊರೆಯುವ ಕಾಲಕ್ಕೆ ಹೊಂದಾಣಿಕೆ ಮಾಡಲು ಸೇರಿಸಬೇಕಾದ ಒಂದು ಪುಟ್ಟ ಅಂಶ ಎಂಬುದನ್ನು ಗಮನಿಸಬೇಕು. ಕಾಲಸಂಸ್ಕಾರವನ್ನು E ಎಂಬ ಸಂಕೇತದಿಂದ ಸೂಚಿಸಿ ಈ ಕೆಳಗಿನಂತೆ ಬರೆಯುತ್ತೇವೆ.

E= ಕಾಲಸಂಸ್ಕಾರ=(ದೃಷ್ಟಸೌರಕಾಲ)–(ಮಾಧ್ಯಸೌರಕಾಲ)
=(ವಾಸ್ತವಿಕ ಸೂರ್ಯ $S_2$ರ ಹೋರಾಕೋನ)
–(ಮಾಧ್ಯ ಸೂರ್ಯ S ನ ಹೋರಾಕೋನ)
$=(t-\alpha)-(t-l)$
$=l-\alpha$

ಇಲ್ಲಿ t=ನಾಕ್ಷತ್ರಿಕ ಕಾಲ, α=Sನ ಶುದ್ಧಾರೋಹಣ, l=$S_2$ರ ಶುದ್ಧಾರೋಹಣ.,

ಕಾಲಸಂಸ್ಕಾರ Eಯನ್ನು ಈ ಕೆಳಗಿನಂತೆ ಬರೆದು ಮುಂದಿನ ಅಭ್ಯಾಸ ಮಾಡುವುದು ವಾಡಿಕೆ: $E=l-\alpha=(l- + -\alpha) = E_1+E_2$ ಇಲ್ಲಿ $E_1=1-p$ $E_2=p-\alpha$, p=ವಾಸ್ತವಿಕ ಸೂರ್ಯ Sನ ರೇಖಾಂಶ. ಅಲ್ಲದೆ l=$S_2$ರ ಶುದ್ಧಾರೋಹಣ = ಗತಿ ಸೂರ್ಯ $S_1$ರ ರೇಖಾಂಶ $\gamma S_1$ ಎಂಬುದನ್ನು ಗಮನಿಸಬೇಕು.

ಭೂಮಿ ಕಕ್ಷೆ (ಆದ್ದರಿಂದ ಸೂರ್ಯನ ಸಾಪೇಕ್ಷ ಕಕ್ಷೆ) ವೃತ್ತವಾಗಿದ್ದರೆ, ಎಂದರೆ ಅದರ ವಾಸ್ತವಿಕ ಕಕ್ಷೆಯಾದ ದೀರ್ಘವೃತ್ತದ ಉತ್ಕೇಂದ್ರತೆ ಶೂನ್ಯವಾಗಿದ್ದರೆ (e=0 ಆಗಿದ್ದರೆ), ಆಗ S ಮತ್ತು $S_1$ (ಗತಿಸೂರ್ಯ) ಇವೆರಡರ ಕೋನವೇಗಗಳೂ ಸಮವಾಗುತ್ತಿದ್ದವು. ತತ್ಪರಿಣಾಮವಾಗಿ ಅವುಗಳಲ್ಲಿ ಭಿನ್ನತೆಯೇ ಉಳಿಯದೆ S ಮತ್ತು $S_1$ ಕ್ರಾಂತಿವೃತ್ತದ ಮೇಲೆಯೇ ಐಕ್ಯವಾಗಿ ಏಕರೀತಿ ಕೋನವೇಗದಿಂದ ಸಂಚರಿಸುತ್ತಿದ್ದುವು. ಆಗ l=θ ಆಗಿ $E_1=0$ ಆಗುತ್ತಿತ್ತು. ಆದ್ದರಿಂದ $E_1$ರ ಅಸ್ತಿತ್ವದ ಕಾರಣ ಉತ್ಕೇಂದ್ರತೆ e ಎಂದು ವಿದಿತವಾಗುವುದು. ಕ್ರಾಂತಿವೃತ್ತವೂ ವಿಷುವದ್ವೃತ್ತವೂ ಐಕ್ಯವಾಗಿದ್ದರೆ, ಎಂದರೆ ಅವುಗಳ ನಡುವಿನ ಬಾಗು ω=0 ಆಗಿದ್ದರೆ, ಆಗ ವಾಸ್ತವಿಕ ಸೂರ್ಯನ ರೇಖಾಂಶ pಗೂ ಶುದ್ಧಾರೋಹಣ αಕ್ಕೂ ವ್ಯತ್ಯಾಸ ಉಳಿಯುತ್ತಿರಲಿಲ್ಲ; ಎಂದರೆ, ಆಗ p=a ಆಗಿ $E_2=0$ ಆಗುತ್ತಿತ್ತು. ಆದ್ದರಿಂದ $E_2$ರ ಅಸ್ತಿತ್ವದ ಕಾರಣ ಬಾಗು w ಎಂದು ವಿದಿತವಾಗುವುದು. ಹೀಗೆ ಕಾಲಸಂಸ್ಕಾರ Eಯಲ್ಲಿ ಎರಡು ಸ್ಪಷ್ಟ ಅಂಶಗಳಿವೆ: ಒಂದು $E_1$, ಇದು ಉತ್ಕೇಂದ್ರತೆಯ ಪರಿಣಾಮವಾಗಿ ತಲೆದೋರಿರುವ ಕಾಲಸಂಸ್ಕಾರ; ಎರಡು $E_2$ ಇದು ಬಾಗುವಿನ ಪರಿಣಾಮವಾಗಿ ತಲೆದೋರಿರುವ ಕಾಲಸಂಸ್ಕಾರ.

e ಮತ್ತು ωಗಳ ಸರಿಸುಮಾರು ಬೆಲೆ ಅನುಕ್ರಮವಾಗಿ 1/60, $20^0$ 27' ಇವು ಕಾಲಗಣನೆಯ ದೃಷ್ಟಿಯಿಂದ ಚಿಕ್ಕ ಬೆಲೆಗಳು. ಆದ್ದರಿಂದ ಅವುಗಳ ಸಮಗ್ರ ಪರಿಣಾಮ, ಎಂದರೆ ಕಾಲಸಂಸ್ಕಾರ, ಬಲು ಚಿಕ್ಕದಾಗಿರುವುದು. L,αಗಳು ಅಥವಾ $1-\Theta$, $\Theta-\alpha$ ಗಳು ನಿರಂತರವಾಗಿ ಬದಲಾಗುತ್ತಿರುವುದರಿಂದ Eಯ ಬೆಲೆಯಲ್ಲಿಯೂ ನಿರಂತರ ಬದಲಾವಣೆ ತಲೆದೋರುವುದು. ಸಾಮಾನ್ಯವಾಗಿ ದೃಷ್ಟ ಸೌರಮಧ್ಯಾಹ್ನಕ್ಕೂ (Sನ್ನು ಕುರಿತಂತೆ) ಮಾಧ್ಯಸೌರ ಮಧ್ಯಾಹ್ನಕ್ಕೂ ($S_2$ನ್ನು ಕುರಿತಂತೆ) ವಿಶೇಷ ಅಂತರವಿರುವುದಿಲ್ಲ. ಎರಡೂ ಸರಿಸುಮಾರಾಗಿ 12 ಗಂಟೆಗೇ ಸಂಭವಿಸುತ್ತವೆ. ವರ್ಷದಲ್ಲಿ ನಾಲ್ಕು ಬಾರಿ ಎಂದರೆ ಏಪ್ರಿಲ್ 16, ಜೂನ್ 14, ಸೆಪ್ಟೆಂಬರ್ 2 ಮತ್ತು ಡಿಸೆಂಬರ್ 5 ಈ ನಾಲ್ಕು ದಿವಸಗಳಲ್ಲಿ ಕಾಲಸಂಸ್ಕಾರದ ಬೆಲೆ ಶೂನ್ಯವಾಗುವುದು (D ದಿವಸಗಳಲ್ಲಿ E=0) ಆದ್ದರಿಂದ ಆ ನಾಲ್ಕು ದಿವಸಗಳಂದು ದೃಷ್ಟಸೌರಮಧ್ಯಾಹ್ನ ಮತ್ತು ಮಾಧ್ಯಸೌರಮಧ್ಯಾಹ್ನ ಎರಡೂ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಸಂಭವಿಸುತ್ತವೆ. ವರ್ಷದ ಉಳಿದ ದಿವಸಗಳಲ್ಲಿ ಕಾಲಸಂಸ್ಕಾರ ಬೆಲೆ –14.25 ಮಿನಿಟುಗಳಿಂದ ತೊಡಗಿ +16.25 ಮಿನಿಟುಗಳವರೆಗೆ ವ್ಯತ್ಯಾಸವಾಗುತ್ತ ಹೋಗುವುದು. ಆದ್ದರಿಂದ ಕೆಲವು ದಿವಸ ದೃಷ್ಟಸೌರಮಧ್ಯಾಹ್ನ ಗಡಿಯಾರದ 12 ಗಂಟೆಗೆ ಮುಂಚೆಯೇ ಆಗುವುದು (ಗಡಿಯಾರ ತೋರಿಸುವುದು ಮಾಧ್ಯ ಕಾಲವನ್ನು). ಚಿತ್ರ 10ರಲ್ಲಿ ಕಾಲಸಂಸ್ಕಾರದ ಏರಿಳಿತಗಳ ಗ್ರಾಫನ್ನು ತೋರಿಸಿದೆ. ಚಿತ್ರ 10ರಲ್ಲಿ ಕಾಲಸಂಸ್ಕಾರದ ಏರಿಳಿತಗಳ ಗ್ರಾಫ್‌ನಲ್ಲಿ ತೋರಿಸಿದೆ.




**ಚಿತ್ರ 10. ಕಾಲಸಂಸ್ಕಾರದ ಬೆಲೆಗಳಲ್ಲಿನ ಏರಿಳಿತಗಳನ್ನು (ಮಿನಿಟುಗಳಲ್ಲಿ) ಸೂಚಿಸುವ ನಕ್ಷೆ: ವರ್ಷದಲ್ಲಿ ಏಪ್ರಿಲ್ 16, ಜೂನ್ 14, ಸೆಪ್ಟಂಬರ್ 2 ಮತ್ತು ಡಿಸೆಂಬರ್ 5 – ಈ ನಾಲ್ಕು ದಿವಸಗಳಲ್ಲಿ ಕಾಲಸಂಸ್ಕಾರದ ಬೆಲೆ ಶೂನ್ಯ. ಯನ್ನು ದಪ್ಪನೆಯ ರೇಖೆಯೂ $E_1$ನ್ನು ತೆಳುರೇಖೆಯೂ $E_2$ನ್ನು ಚುಕ್ಕಿ ರೇಖೆಯೂ ಸೂಚಿಸುತ್ತವೆ.**

ಅದು ಮಾಸಾಕ್ಷವನ್ನು (x–ಅಕ್ಷ) ಛೇದಿಸುವ ನಾಲ್ಕು ಬಿಂದುಗಳ ದಿವಸಗಳಂದು E=0. ಮುಂದಿನ ಪಟ್ಟಿಯಲ್ಲಿ ಒಂದು ವರ್ಷದಲ್ಲಿ ಪ್ರತಿ ತಿಂಗಳ ಆದಿಯಲ್ಲಿಯೂ ದೃಷ್ಟಸೌರ ಕಾಲ ಸ್ಥಳೀಯ ಮಾಧ್ಯಸೌರ ಕಾಲಕ್ಕಿಂತ ಹಿಂದಿದೆಯೇ ಎಂಬುದನ್ನು ಕೊಟ್ಟಿದೆ.

| ತಿಂಗಳು | –ಹಿಂದೆ +ಮುಂದೆ | ತಿಂಗಳು | –ಹಿಂದೆ +ಮುಂದೆ |
|---|---|---|---|
| ಜನವರಿ 1 | – 3 ಮಿ. 8 ಸೆ. | ಜುಲೈ 1 | –3 ಮಿ. 30 ಸೆ. |
| ಫೆಬ್ರವರಿ 1 | –13 ಮಿ. 32 ಸೆ. | ಆಗಸ್ಟ್ 1 | –6 ಮಿ. 18 ಸೆ. |
| ಮಾರ್ಚ್ 1 | –12 ಮಿ. 40 ಸೆ. | ಸೆಪ್ಟೆಂಬರ್ 1 | +0 ಮಿ. 20 ಸೆ. |
| ಏಪ್ರಿಲ್ 1 | – 4 ಮಿ. 16 ಸೆ. | ಅಕ್ಟೋಬರ್ 1 | +9 ಮಿ. 57 ಸೆ. |
| ಮೇ 1 | + 2 ಮಿ. 48 ಸೆ. | ನವೆಂಬರ್ 1 | +16 ಮಿ. 20 ಸೆ. |
| ಜೂನ್ 1 | + 2 ಮಿ. 28 ಸೆ. | ಡಿಸೆಂಬರ್ 1 | +11 ಮಿ. 21 ಸೆ. |

ಗಡಿಯಾರಗಳನ್ನು ಮಾಧ್ಯಸೂರ್ಯ $S_2$ ನ್ನು ಕುರಿತಂತೆ ಅಳವಡಿಸಿರುತ್ತಾರೆ. ನಮ್ಮ ವ್ಯಾಖ್ಯೆಯ ಪ್ರಕಾರ ಈ ಕಾಲ್ಪನಿಕ ಸೂರ್ಯ ವರ್ಷವಿಡೀ 0000 ಗಂಟೆಗೆ ಅವನತ

ಸ್ಥಾನದಿಂದ (ಮಧ್ಯರಾತ್ರಿ) ಹೊರಟು 0600 ಗಂಟೆಗಳಿಗೆ ಸರಿಯಾಗಿ ಉದಯಿಸಿ (ಹಗಲಿನ ಆರಂಭ) 1200 ಗಂಟೆಗಳಿಗೆ ಸರಿಯಾಗಿ ಉನ್ನತ ಸ್ಥಾನವನ್ನು (ಮಧ್ಯಾಹ್ನ) ತಲುಪಿ 1800 ಗಂಟೆಗಳಿಗೆ ಸರಿಯಾಗಿ ಮುಳುಗಿ (ಹಗಲಿನ ಅಂತ್ಯ ರಾತ್ರಿಯ ಆರಂಭ) 2400 ಗಂಟೆಗಳಿಗೆ ಸರಿಯಾಗಿ ಪುನಃ ಅವನತ ಸ್ಥಾನವನ್ನು ತಲುಪುತ್ತದೆ. ಮಾಧ್ಯ ಸೂರ್ಯನನ್ನು ಅನುಸರಿಸಿ ಅಳೆಯುವ ಕಾಲವೇ ಮಾಧ್ಯ ಸೌರಕಾಲ (ಮೀನ್ ಸೋಲಾರ್ ಟೈಂ). ಇದರ ಪ್ರಕಾರ ವಾಸ್ತವಿಕ ಸೂರ್ಯನ(S) ಉದಯಾಸ್ತಕಾಲಗಳನ್ನು ಹೇಳುತ್ತಾರೆ. ನಾಗರಿಕ ವ್ಯವಹಾರಗಳನ್ನು ಮಾಧ್ಯಸೌರಕಾಲಾನುಸಾರವಾಗಿ ನಡೆಸುತ್ತಾರೆ. ಇದರಿಂದ ಸರ್ವತ್ರ ಏಕರೂಪತೆ ಬಂದಿದೆ.

**ವಿಶ್ವಕಾಲ ಅಥವಾ ಗ್ರೀನ್‌ವಿಚ್ ಮಾಧ್ಯಸೌರಕಾಲ** ಗ್ರೀನ್‌ವಿಚ್‌ನ ಮಧ್ಯಾಹ್ನ ವೃತ್ತಕ್ಕೆ ಸಂಬಂಧಿಸಿದ ಮಾಧ್ಯಸೌರಕಾಲದ ಹೆಸರು. ಎಂದರೆ, ಮಾಧ್ಯಸೌರ್ಯ ಗ್ರೀನ್‌ವಿಚ್ ಮಧ್ಯಾಹ್ನ ವೃತ್ತವನ್ನು ಎರಡು ಸಲ ಕ್ರಮಾಗತವಾಗಿ ಒಂದೇ ದಿಶೆಯಲ್ಲಿ ಉತ್ತರಿಸುವ ಘಟನೆಗಳ ನಡುವಿನ ಅಂತರ. ಬಾರಿಬಾರಿಗೂ ನಕ್ಷತ್ರಗಳಿಗೆ ಸಂಬಂಧಿಸಿದಂತೆ ಭೂ ಆವರ್ತನಾವಧಿಯನ್ನು ಗ್ರೀನ್‌ವಿಚ್‌ನಲ್ಲಿ ನೋಡಿ ವಿಶ್ವಕಾಲವನ್ನು ನಿರ್ಧರಿಸುತ್ತಿರುವರು. ಭೂಮಿಯ ಕಕ್ಷಾವೇಗ ಏಕರೀತಿಯಾಗಿ ಇರುವುದಿಲ್ಲವಾದ್ದರಿಂದ, ಭೂಮಿ ತನ್ನ ಅಕ್ಷದ ಸುತ್ತ ತಿರುಗುವ ವೇಗವನ್ನು ಕರಾರುವಾಕ್ಕಾಗಿ ಕಂಡುಹಿಡಿಯುವುದು ಕಷ್ಟ. ಆದ್ದರಿಂದ ಖಗೋಳಶಾಸ್ತ್ರಕ್ಕೆ ಅವಶ್ಯವಾದ ಅಂಕಿಅಂಶಗಳನ್ನು ಪ್ರಕಟಿಸುವ ನಾಟಿಕಲ್ ಆಲ್‌ಮನ್ಯಾಕ್(ಒಂದು ರೀತಿಯಲ್ಲಿ ಇದು ಸಹ ಪಂಚಾಂಗವೇ) ಎಫಿಮರಿಸ್ ಕಾಲವನ್ನು ಅನುಸರಿಸುವವರು.

**ಎಫಿಮರಿಸ್ ಕಾಲ:** ಎಫಿಮರಿಸ್ ಕಾಲದಲ್ಲಿ ಒಂದು ಸೌರವರ್ಷದ ಅವಧಿಯನ್ನು 31,556,925,9747ನಿಂದ ಭಾಗಿಸಿದಾಗ ಬರುವ ಕಾಲವೇ ಮೂಲಮಾನವಾಗಿದೆ. 1900ನೆಯ ಇಸವಿಯಲ್ಲಿ, ಆ ವರ್ಷದಲ್ಲಿದ್ದ ಸೆಕೆಂಡುಗಳ ಸಂಖ್ಯೆ 31,556,925.9747 ಆಗಿತ್ತು. 1960ರಲ್ಲಿ ಈ ಕಾಲ ವಿಶ್ವಕಾಲಕ್ಕಿಂತ 35 ಸೆಕೆಂಡುಗಳಷ್ಟು ಮುಂದೆ ಇತ್ತು.

**ಸ್ಥಳೀಯ ಕಾಲ:** ಭೂಮಿಯ ಮೇಲೆ ಯಾವ ಸ್ಥಳದಲ್ಲಿಯಾದರೂ ಭೂಮಿ ತನ್ನ ಅಕ್ಷದ ಸುತ್ತ ಒಂದು ಸುತ್ತು ಒಡನೆ 24 ಗಂಟೆಗಳ ಅವಧಿಯ ಒಂದು ದಿವಸ ಮುಗಿಯುವುದು. 24 ಗಂಟೆಗಳಲ್ಲಿ ಭೂಮಿ $360^0$ ಗಳ ಮೂಲಕ ಆವರ್ತಿಸುವುದರಿಂದ ಒಂದು ಗಂಟೆಗೆ ಭೂಮಿ $15^0$ಗಳ ಮೂಲಕ ಆವರ್ತಿಸುವುದು. ಆದ್ದರಿಂದ ರೇಖಾಂಶಗಳಲ್ಲಿ $15^0$ ವ್ಯತ್ಯಾಸವಿರುವ ಎರಡು ಸ್ಥಳಗಳಲ್ಲಿ ಸೂರ್ಯವೀಕ್ಷಕನ ಮಧ್ಯಾಹ್ನ ವೃತ್ತಕ್ಕೆ ಬರುವ ಕಾಲಗಳಲ್ಲಿ 1 ಗಂಟೆಯ ಅಂತರವಿರುವುದು. ಒಂದು ಸ್ಥಳದ ಸ್ಥಳೀಯ ಕಾಲ ನಮಗೆ ತಿಳಿದಿದ್ದರೆ ಸ್ಥಳದ ಸ್ಥಳೀಯ ಕಾಲವನ್ನು ನಿರ್ಧರಿಸಲು ಈ ಕ್ರಮವನ್ನು ಅನುಸರಿಸಬಹುದು. A ಎಂಬ ಸ್ಥಳದ ಪೂರ್ವಕ್ಕೆ B ಎಂಬ ಸ್ಥಳವಿದೆ ಎನ್ನೋಣ.

ಆಗ, Bಸ್ಥಳೀಯ ಕಾಲ=[A ಯ ಸ್ಥಳೀಯ ಕಾಲ]

[A ಮತ್ತು B ಗಳ ರೇಖಾಂಶಗಳ ವ್ಯತ್ಯಾಸ]

\+ ಗಂಟೆಗಳು 15

B ಯು A ಯ ಪಶ್ಚಿಮಕ್ಕಿದ್ದರೆ ಆಗ

B ಯ ಸ್ಥಳೀಯ ಕಾಲ=[A ಯ ಸ್ಥಳೀಯ ಕಾಲ]

[A ಮತ್ತು B ಗಳ ರೇಖಾಂಶಗಳ ವ್ಯತ್ಯಾಸ]
15

ವಿಲೋಮವಾಗಿ A ಮತ್ತು ಗಳ ಸ್ಥಳೀಯ ಕಾಲ ವ್ಯತ್ಯಾಸ ತಿಳಿದಿದ್ದಾಗ, ಗಂಟೆಗಳಲ್ಲಿರುವ ಈ ವ್ಯತ್ಯಾಸವನ್ನು $15^0$ ಯಿಂದ ರೇಖಾಂಶಗಳ ವ್ಯತ್ಯಾಸಗಳು ಗೊತ್ತಾಗುತ್ತವೆ. ಉದಾಹರಣೆಗೆ, $60^0$ ಪ. ರೇಖಾಂಶವಿರುವ ಒಂದು ಸ್ಥಳದಲ್ಲಿ ಸ್ಥಳೀಯ ಕಾಲ 9 ಗಂಟೆ ಎನ್ನೋಣ.ಈಗ ಗ್ರೀನ್‌ವಿಚ್ ಮಾಧ್ಯಸೌರಕಾಲ ಅಥವಾ ವಿಶ್ವಕಾಲ 13 ಗಂಟೆಗಳು. ಈ ಎರಡು ಸ್ಥಳಗಳ ಸ್ಥಳೀಯ ಕಾಲಗಳ ವ್ಯತ್ಯಾಸ 4 ಗಂಟೆ ಇದನ್ನು $15^0$ ಯಿಂದ ಗುಣಿಸಿದಾಗ, $15^0$ಥ4=$60^0$, ಈ ಸ್ಥಳದಲ್ಲಿ ರೇಖಾಂಶಗಳ ವ್ಯತ್ಯಾಸ.

**ವಲಯಕಾಲ:** ನಾವು ಭೂಮಿಯ ಮೇಲೆ ಪೂರ್ವದ ಕಡೆಗಾಗಲಿ ಪಶ್ಚಿಮದ ಕಡೆಗಾಗಲಿ ಪ್ರಯಾಣಮಾಡುತ್ತಿರುವಾಗ ಸ್ಥಳೀಯ ಕಾಲ ಬದಲಾಯಿಸುತ್ತ ಹೋಗುವುದರಿಂದ ನಮ್ಮ ಗಡಿಯಾರವನ್ನು ಪುನಃ ಪುನಃ ಸರಿಪಡಿಸಬೇಕಾದ ಸಂದರ್ಭ ಬರುತ್ತದೆ. ಇದಕ್ಕೋಸ್ಕರ ಭೂಮಿಯನ್ನು 24 ವಲಯಗಳಾಗಿ ವಿಭಾಗಿಸಿ ಇಂಥ ಒಂದೊಂದು ವಲಯದಲ್ಲಿ ಸ್ಥಳೀಯ ಕಾಲ ಗ್ರೀನ್‌ವಿಚ್ ಕಾಲಕ್ಕಿಂತ ಅಷ್ಟು ಮುಂದೆ (ಪೂರ್ವ) ಅಥವಾ ಅಷ್ಟು ಹಿಂದೆ (ಪಶ್ಚಿಮ) ಇರಬೇಕಂದು ನಿಗದಿಗೊಳಿಸಿದ್ದಾರೆ. **(ನೋಡಿ– ಅಂತಾರಾಷ್ಟ್ರೀಯ ದಿನಾಂಕ ರೇಖೆ)**

**ಶಿಷ್ಟಕಾಲ:** ವಲಯಕಾಲಗಳಲ್ಲಿ ಸ್ಥಳೀಯ ಸೌಕರ್ಯಕೋಸ್ಕರ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿ ಆಯಾ ದೇಶ ಅನುಸರಿಸುವ ಕಾಲಕ್ಕೆ ಈ ಹೆಸರಿದೆ. ಉದಾಹರಣೆಗೆ ಉತ್ತರ ಅಮೆರಿಕದಲ್ಲಿ $75^0$, $90^0$, $105^0$, $120^0$ ಪ. ರೇಖಾಂಶಗಳಿಗೆ ಸಂಬಂಧಿಸಿದಂತೆ ನಾಲ್ಕು ಶಿಷ್ಟಕಾಲಗಳನ್ನು ಅನುಸರಿಸುತ್ತಾರೆ **(ನೋಡಿ– ಗಡಿಯಾರ ತಾರೀಕುಪಟ್ಟಿ)**. (ಎಲ್.ಎಸ್.ಪಿ.)

**ಕಾಲಮಿತಿ ಕಾನೂನು :** ಒಂದು ಸ್ವತ್ತಿನ ಹಕ್ಕುದಾರ ದಾವ ಹೂಡಿ ತನ್ನ ಹಕ್ಕನ್ನು ಸ್ಥಾಪಿಸಿಕೊಳ್ಳಲು ಪರಿನಿಯಮಾನುಗುಣವಾಗಿ ಇರತಕ್ಕ ಕಾಲದ ಅವಧಿ ನಿರ್ಣಯಿಸುವ ಕಾನೂನು(ಲಾ ಆಫ್ ಲಿಮಿಟೇಷನ್).

ಸ್ವತ್ತಿಗೆ ಸಂಬಂಧಿಸಿದ ಹಕ್ಕುಗಳು ಒಡೆತನದಿಂದ ಇಲ್ಲವೆ ಅನುಭವದಿಂದ ಹುಟ್ಟುತ್ತವೆ. ಕಾನೂನಿನ ಪ್ರಕಾರ ಎಲ್ಲ ಸ್ವತ್ತೂ ಒಡೆತನಕ್ಕೆ ಒಳಪಟ್ಟಿರಬೇಕು. ಒಡೆತನವಿಲ್ಲದ ಸ್ವತ್ತು ಇರುವುದಕ್ಕೆ ಕಾಯಿದೆಯಲ್ಲಿ ಅವಕಾಶವಿಲ್ಲ. ಒಡೆಯನಿಗೆ ಅಥವಾ ಮಾಲೀಕನಿಗೆ ಸ್ವತ್ತನ್ನು ಅನುಭವಿಸುವ ಹಕ್ಕು ಇದ್ದಾಗ್ಯೂ ಅವನೇ ಸ್ವತ್ತನ್ನು ಅನುಭವಿಸಬೇಕೆಂಬ ನಿಯಮವಿಲ್ಲ. ಒಡೆತನದ ಅಥವಾ ಮಾಲೀಕತ್ವದ ಹಕ್ಕುಗಳು ಕಾಯಿದೆಯಿಂದ ಪ್ರಾಪ್ತವಾಗುತ್ತವೆ. ಆದರೆ ಅನುಭವದ ಹಕ್ಕುಗಳು ಪ್ರತ್ಯಕ್ಷ ಅನುಭವ ಅಥವಾ ಸ್ವಾಧೀನದ ಪರಿಸ್ಥಿತಿಯಿಂದ ಹುಟ್ಟುತ್ತವೆ. ಒಬ್ಬ ಮಾಲೀಕನ ಸ್ವತ್ತು ಬೇರೆಯವರ ಸ್ವಾಧೀನಾನುಭವದಲ್ಲಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯ. ಸಾಧಾರಣವಾಗಿ ಮಾಲೀಕನಿಂದ ಅಧಿಕಾರ ಪಡೆದವರು ಅಥವಾ ಅವನ ಸಮ್ಮತಿಯಿಂದ ಬೇರೆಯವರು ಅವನ ಸ್ವತ್ತನ್ನು ಅನುಭವಿಸುವುದಕ್ಕೆ ಅವಕಾಶವಿದೆ. ಇದೇ ರೀತಿ ಮಾಲೀಕನ ಹಕ್ಕುಗಳನ್ನು ಕಡೆಗಣಿಸಿ ತಾನೇ ಮಾಲೀಕನೆಂದು ಬಹಿರಂಗವಾಗಿ ಪ್ರತಿಪಾದಿಸುತ್ತ ಆಸ್ತಿಯನ್ನು ಅನುಭವಿಸುವುದು ಕಂಡುಬರುತ್ತದೆ. ಮಾಲೀಕನ ಅನುಮತಿಯ ಪ್ರಕಾರ ಸ್ವತ್ತನ್ನು ಬೇರೆ ಅನುಭವಿಸಿದರೆ ಇದರಿಂದ ಮಾಲೀಕನ ಹಕ್ಕುಗಳಿಗೆ ಯಾವ ತೊಂದರೆಯೂ ಉಂಟಾಗದು. ಕೇವಲ ಅನುಭವದಿಂದ ಮಾಲೀಕನ ವಿರುದ್ಧ ಯಾವ ಹಕ್ಕುಗಳೂ ಪ್ರಾಪ್ತವಾಗಲಾರವು. ಆದರೆ ಮಾಲೀಕನ ಹಕ್ಕುಗಳನ್ನು ಬಹಿರಂಗವಾಗಿ ಅಲ್ಲಗಳೆದು ಬೇರೆಯವರು ಅನುಭವಿಸಿದರೆ ಇದರಿಂದ ಮಾಲೀಕನ ಹಕ್ಕುಗಳು ನಷ್ಟವಾಗುತ್ತವೆ: ಮತ್ತು ವಿರುದ್ಧ ಸ್ವಾಧೀನ ಅಥವಾ ಅನುಭವದಿಂದ ಹಕ್ಕುಗಳು ಹುಟ್ಟುತ್ತವೆ.

ಎಲ್ಲ ನಾಗರಿಕ ದೇಶಗಳಲ್ಲೂ ಜನರು ತಮ್ಮ ಒಡೆತನದ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಲು ಕಾಲಪರಿಮಿತಿ ಇಲ್ಲವೆ ಮುದ್ದತ್ತನ್ನು ಕಾನೂನಿನಿಂದ ನಿಯಂತ್ರಿಸಲಾಗಿದೆ. ಆ ಕಾಲಪರಿಮಿತಿಯಲ್ಲಿ ಇವನ್ನು ಸ್ಥಾಪಿಸಲು ಕ್ರಮತೆಗೆದುಕೊಳ್ಳದೆ ಇದ್ದಲ್ಲಿ ಇಂಥ ಹಕ್ಕುಗಳನ್ನು ಆ ಅವಧಿಯ ಅನಂತರ ಸ್ಥಾಪಿಸಿಕೊಳ್ಳುವುದಕ್ಕೆ ಕಾಯಿದೆಯ ಆತಂಕವಿದೆ. ಮುದ್ದತಿ ಕಾಯಿದೆ ಯಾವುದೇ ಹಕ್ಕುಗಳನ್ನೂ ನಿರ್ಮಾಣ ಮಾಡುವುದಿಲ್ಲ ಮತ್ತು ಅಸ್ತಿತ್ವಕ್ಕೆ ತರುವುದಿಲ್ಲ. ಹಕ್ಕುಗಳನ್ನೂ ಸ್ಥಾಪನೆ ಮಾಡಿಕೊಳ್ಳುವ ವಿಧಾನ ಅಥವಾ ಚಿಕಿತ್ಸಕ ಮಾರ್ಗಗಳಿಗೆ ಮಾತ್ರ ಈ ಕಾಯಿದೆ ಸಂಬಂಧ ಪಟ್ಟಿರುವುದರಿಂದ ಮೂಲ ಒಡೆತನದ ಹಕ್ಕುಗಳ ಇರುವಿಕೆಗೆ ಇದು ಸಂಬಂಧಪಡುವುದಿಲ್ಲ. ಅಸ್ತಿತ್ವದಲ್ಲಿರುವ ಹಕ್ಕುಗಳನ್ನು ಪ್ರತಿಪಾದನೆ ಮಾಡುವುದಕ್ಕೆ ಮಾತ್ರ ಕಾಲಪರಿಮಿತಿ ಅನ್ವಯಿಸುತ್ತದೆ. ಮುದ್ದತಿ ಕಾಯಿದೆಯ ಪ್ರಯೋಜನವನ್ನು ಪಡೆಯಬೇಕಾದರೆ ಹಕ್ಕುಗಳ ಪ್ರತಿಪಾದನೆಯನ್ನು ಕಾಲಾವಧಿಯೊಳಗಾಗಿ ಮಾಡಬೇಕಾಗುತ್ತದೆ.

ಒಬ್ಬನ ಒಡೆತನದಲ್ಲಿರುವ ಸ್ವತ್ತು ಅನಧಿಕಾರ ಅಥವಾ ಗೈರ್‌ಹಕ್ಕಿನಿಂದ ಬೇರೆಯವರ ಸ್ವಾಧೀನಾನುಭವಕ್ಕೊಳಗಾದರೆ ಮಾಲೀಕ ತನ್ನ ಹಕ್ಕುಗಳನ್ನು ಕಾಲಪರಿಮಿತಿಯೊಳಗಾಗಿ ಸ್ಥಾಪಿಸಿಕೊಳ್ಳಬೇಕು. ಅದರ ಅನಂತರ ಈ ಹಕ್ಕುಗಳನ್ನು ಸ್ಥಾಪಿಸಿಕೊಳ್ಳುವ ಹಕ್ಕು ನಷ್ಟವಾಗುತ್ತದೆ. ಇದರ ಪರಿಣಾಮವಾಗಿ ಅನಧಿಕಾರದಿಂದ ಪರರ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡು ಅನುಭವಿಸುವವನಿಗೆ ಕಾಲಾವಧಿಯ ಅನಂತರ ಕೇವಲ ಅನುಭವ ಮಾತ್ರದಿಂದಲೇ ಒಡೆತನದ ಹಕ್ಕು ಪ್ರಾಪ್ತವಾಗುತ್ತದೆ.

**ದೀರ್ಘಾನುಭವ ಅಥವಾ ವಹಿವಾಟು ಹಕ್ಕು:** ದೀರ್ಘಾನುಭವವನ್ನು ವಿದ್ವಾಂಸರು ಸಾಮಾನ್ಯವಾಗಿ ಎರಡು ವಿಧವಾಗಿ ಪರಿಗಣಿಸಿದ್ದಾರೆ: 1 ಸಕ್ರಿಯ ಅಥವಾ ಹಕ್ಕುಗಳನ್ನು ಪಡೆಯುವ ಅನುಭವ ಮತ್ತು 2 ನಿಷ್ಕ್ರಿಯ ಅಥವಾ ಹಕ್ಕುಗಳನ್ನು ಕಳೆದುಕೊಳ್ಳುವ ಅನುಭವ ಸಕ್ರಿಯ ಅನುಭವದಿಂದ ಹಕ್ಕುಗಳು ಊರ್ಜಿತವಾಗುತ್ತವೆ. ನಿಷ್ಕ್ರಿಯ ಅನುಭವದಿಂದ ಹಕ್ಕುಗಳು ಕಾಲಪರಿಮಿತಿಯ ಅನಂತರ ನಷ್ಟವಾಗುತ್ತವೆ. ಕಾಲಮಿತಿ ಹೀಗೆ ಎರಡು ವಿರುದ್ಧ ಪರಿಣಾಮಗಳನ್ನು ಉಂಟುಮಾಡುತ್ತದೆ. ಯಾವ ಸ್ವತ್ತಿನ ಸಂಬಂಧವಾದ ಪರಸ್ವಾಧೀನಾನುಭವದಿಂದ ಒಡೆಯನ ಹಕ್ಕುಗಳು ನಷ್ಟವಾಗುತ್ತವೆಯೋ ಅದೇ ಯೋಗದಿಂದ ಆಸ್ತಿಯನ್ನು ಧಾರಣ ಮಾಡುವ ಅನುಭವದಿಂದ ಅಂತಹವನಿಗೆ ಹಕ್ಕುಗಳು ಪ್ರಾಪ್ತವಾಗುತ್ತದೆ.

ದೀರ್ಘಾನುಭವದ ಹಕ್ಕುಗಳು ಕೇವಲ ವಸ್ತುವಿಷಯು ಹಕ್ಕುಗಳಿಗೆ ನಿಯಮಿತವಾಗಿರುವುದಿಲ್ಲ: ಇವು ಋಣಾನುಸಂಬಂಧದ ಹಕ್ಕುಗಳು ಅಥವಾ ಸಾಂಪ್ರದಾಯಿಕ ಹಕ್ಕುಗಳಿಗೂ ಅನ್ವಯಿಸುತ್ತದೆ. ಖಚಿತ ಅಥವಾ ಸಕ್ರಿಯ ಹಕ್ಕುಗಳು ಕೇವಲ ಸ್ವತ್ತಿನ ಸ್ವಾಧೀನಾನುಭವಕ್ಕೆ ಮಾತ್ರ ಅನ್ವಯಿಸುತ್ತವೆ. ಇಂಥ ಹಕ್ಕಗಳನ್ನು ಸಮಾಜದ ವಿರುದ್ಧ ಪ್ರತಿಪಾದಿಸಬಹುದು. ಆದರೆ ವ್ಯಕ್ತಿಯ ವಿರುದ್ಧ ಪ್ರತಿಪಾದಿತವಾಗುವ ಹಕ್ಕುಗಳು ಅವುಗಳ ಅನುಭವದಿಂದ ಅಥವಾ ಪ್ರಯೋಗದಿಂದ ನಾಶವಾಗುತ್ತವೆ. ಇದಕ್ಕೆ ಕಾರಣ ಇಂಥ ಹಕ್ಕುಗಳು ದೀರ್ಘಾವಧಿ ಅಥವಾ ಪ್ರಾಚೀನಾನುಭವದಿಂದ ವೃದ್ಧಿಯಾಗಲಾರವು. ವ್ಯಕ್ತಿ

ಸಂಬಂಧಿ ಹಕ್ಕುಗಳನ್ನೂ ಕಾಲಪರಿಮಿತಿಗೆ ಹೊಂದಿಸಿರುವುದರಿಂದ ಆ ಅವಧಿಯ ಅನಂತರ ನಾಶವಾಗುತ್ತದೆ.

ನಿಷ್ಕ್ರಿಯಾನುಭವ (1) ಪೂರ್ಣ ಮತ್ತು (2) ಅಪೂರ್ಣವೆಂದು ಎರಡು ವಿಧ. ಇದರಲ್ಲಿಯ ಅಪೂರ್ಣ ಹಕ್ಕು ಸಾಮಾನ್ಯವಾಗಿ ಹಕ್ಕು ಪ್ರತಿಪಾದನೆಯ ಕಾಲಾವಧಿಯೆಂದೂ ಪೂರ್ಣ ಹಕ್ಕು ಪ್ರಾಚೀನಾನುಭವ ಅಥವಾ ಸಕ್ರಿಯ ಅನುಭವವೆಂದೂ ಪರಿಗಣಿತವಾಗಿವೆ. ಪೂರ್ಣ ನಿಷ್ಕ್ರಿಯಾನುಭವದಿಂದ ಇರುವ ಹಕ್ಕುಗಳು ನಷ್ಟವಾಗುತ್ತವೆ. ಆದರೆ ಅಪೂರ್ಣ ನಿಷ್ಕ್ರಿಯಾನುಭವದಿಂದ ಇರುವ ಹಕ್ಕುಗಳನ್ನು ಸಾಧಿಸುವ ಪ್ರಾಯೋಗಿಕ ಹಕ್ಕು ಅಥವಾ ಚಿಕಿತ್ಸಕ ಹಕ್ಕು ಮಾತ್ರ ನಷ್ಟವಾಗುತ್ತದೆ. ಆದರೆ ಮೂಲ ಹಕ್ಕು ಸಜೀವವಿರುವುದರಿಂದ ಅದನ್ನು ಬೇರೆ ಮಾರ್ಗಗಳಿಂದ ಉಳಿಸಿಕೊಳ್ಳಲು ಅವಕಾಶವಿದೆ. ಅವಧಿ ಮೀರಿದ ಸಾಲವನ್ನು ವಸೂಲು ಮಾಡಲು ಕಾಯಿದೆಯಿಂದ ಅವಕಾಶವಿಲ್ಲ. ನ್ಯಾಯಾಲಯಗಳು ಈ ಹಕ್ಕನ್ನು ಮಾನ್ಯ ಮಾಡುವುದಿಲ್ಲ. ಹೀಗಿದ್ದಾಗ್ಯೂ ಅಂಥ ಸಾಲವನ್ನು ಕೊಡುವುದಾಗಿ ಸಾಲಗಾರ ಒಪ್ಪಿಕೊಂಡಲ್ಲಿ ಮೂಲಹಕ್ಕನ್ನು ಸ್ಥಾಪಿಸಲು ಇದ್ದ ಕಾನೂನಿನ ಆತಂಕ ದೂರವಾದಂತಾಗುತ್ತದೆ.

ಕಾಲಾತಿಕ್ರಮಣದಿಂದ ಇರುವ ಹಕ್ಕುಗಳನ್ನು ಪ್ರತಿಪಾದಿಸುವುದಕ್ಕೆ ಆತಂಕವುಂಟು. ಅನಾದಿ ಅಥವಾ ದೀರ್ಘಾನುಭವದಿಂದ ಅಪೂರ್ಣವಾಗಿದ್ದ ಹಕ್ಕು ಪೂರ್ಣತೆ ಪಡೆಯುತ್ತದೆ. ಕಾಲಪರಿಮಿತಿ ಕಾಯಿದೆಯ ಪ್ರಕಾರ ಇನ್ನೊಬ್ಬನ ದೀರ್ಘಾನುಭವದಿಂದ ಅನುಭವಹೀನ ಒಡೆಯನಲ್ಲಿರುವ ಹಕ್ಕುಗಳು ನಾಶವಾಗುವುದಲ್ಲದೆ ಅಂಥ ಹಕ್ಕುಗಳನ್ನು ಅನುಭವದಾರನಿಗೆ ವರ್ಗಾಯಿಸುತ್ತದೆ ಮತ್ತು ಅಂಥ ಅನುಭವದಾರ ಈ ಹಕ್ಕುಗಳನ್ನು ಸಾರ್ವಜನಿಕರ ವಿರುದ್ಧ ಸಹ ಗಳಿಸಿಕೊಳ್ಳುತ್ತಾನೆ. ಇಲ್ಲಿ ಅನುಭವವೆಂದರೆ ಲಾಭಾನುಭವ. ಎಲ್ಲಿ ದೀರ್ಘಾನುಭವದಿಂದ ಅಪೂರ್ಣಹಕ್ಕುಗಳೂ ಪೂರ್ಣತೆಯನ್ನು ಪಡೆಯುತ್ತವೆಯೋ ಅಲ್ಲಿ ಮಾತ್ರ ಒಡೆತನದ ಹಕ್ಕುಗಳು ನಷ್ಟವಾಗುತ್ತವೆ. ಭಾರತದ ಕಾಲಮಿತಿ ಕಾಯಿದೆಯ 28ನೆಯ ಕಲಮಿನ ಪ್ರಕಾರ ಅದರಲ್ಲಿ ನಿರೂಪಿಸಿರುವ ಹಕ್ಕುಗಳನ್ನು ವಿನಾಯಿಸಿ ಉಳಿದ ಯಾವ ಹಕ್ಕುಗಳೂ ದೀರ್ಘಾವಧಿಯ ಅನುಭವದಿಂದ ನಷ್ಟವಾಗುವುದಿಲ್ಲ. ಆದರೆ ಕಾಲ ಮಿತಿಯ ಅನಂತರ ಅಂಥ ಹಕ್ಕುಗಳನ್ನು ಪ್ರತಿಪಾದಿಸುವುದಕ್ಕೆ ಮಾತ್ರ ಆತಂಕವುಂಟಾಗುತ್ತದೆ.

ದೀರ್ಘಾನುಭವ ಮೂಲಹಕ್ಕುಗಳ ಅಸ್ತಿತ್ವಕ್ಕೆ ಸಂಬಂಧಪಟ್ಟದ್ದು. ಕಾಲಮಿತಿಯ ಆತಂಕ ಕೇವಲ ವೈಯಕ್ತಿಕ ಹಕ್ಕುಗಳನ್ನು ನ್ಯಾಯಮಂದಿರಗಳಲ್ಲಿ ಸ್ಥಾಪಿಸುವ ಸಲುವಾಗಿ ಮಾಡಿರುವುದರಿಂದ ಇದು ಮೂಲಹಕ್ಕುಗಳ ಸ್ಥಾಪನೆಗೆ ಸಹಾಯಕ. ದೀರ್ಘಾನುಭವ ಸಕ್ರಿಯ; ಕಾಲಾವಧಿ ನಿಷ್ಕ್ರಿಯ.

**ಹಿಂದೂ ಕಾಯಿದೆ:** ಹಿಂದೂ ಧರ್ಮಶಾಸ್ತ್ರದಲ್ಲಿ ಸಾಲವನ್ನು ವಸೂಲು ಮಾಡಲು ಕಾಲಮಿತಿಯಿರಲಿಲ್ಲ. ಪಿತೃಋಣ ತೀರಿಸುವುದು ಪುತ್ರರ ಧಾರ್ಮಿಕ ಕರ್ತವ್ಯವೆಂದು ಪರಿಗಣಿಸಲಾಗಿತ್ತು. ಹಿಂದೂ ಧರ್ಮಶಾಸ್ತ್ರಜ್ಞರು ಪರರ ಆಸ್ತಿಯನ್ನು ಅನಧಿಕಾರದಿಂದ ಅಥವಾ ವಿನಾ ಹಕ್ಕಿನಿಂದ ಅಪಹರಿಸುವುದನ್ನು ವಿರೋಧಿಸಿದರು. ಆದರೆ ಕಾಲಾನುಕ್ರಮದಲ್ಲಿ ಅವಿರತ ದೀರ್ಘಾನುಭವದಿಂದ ಸ್ಥಾವರ ಆಸ್ತಿಯ ಸಂಬಂಧಿ ಹಕ್ಕುಗಳನ್ನು ಗಳಿಸಿಕೊಳ್ಳಲು ಹಿಂದೂ ಸಮಾಜ ಅನುಕೂಲ ಮನೋಭಾವ ತಳೆದಂತೆ ವ್ಯಕ್ತವಾಗುತ್ತದೆ. ಮನು, ಯಾಜ್ಞವಲ್ಕ್ಯ, ಗೌತಮ, ವಸಿಷ್ಠ, ನಾರದ ಮೊದಲಾದ ಧರ್ಮಶಾಸ್ತ್ರಜ್ಞರು ಸ್ಥಾವರ ಆಸ್ತಿಯ ಸಂಬಂಧದಲ್ಲಿ 20 ವರ್ಷ ಹಾಗೂ ಚರ ಆಸ್ತಿಯ ಸಂಬಂಧಿ 10 ವರ್ಷಗಳ ಕಾಲಮಿತಿಯನ್ನು ನಿರೂಪಿಸಿದಂತೆ ಕಂಡುಬರುತ್ತದೆ.

**ರೋಮನರ ಕಾಯಿದೆ:** ರೋಮನರ ಕಾಯಿದೆ ಹಿಂದಿನಿಂದಲೂ ಕಾಲಮಿತಿಯ ಆತಂಕ ಹಾಗೂ ದೀರ್ಘಾನುಭವದ ಹಕ್ಕುಗಳನ್ನು ಮಾನ್ಯ ಮಾಡಿದ್ದುದು ಕಂಡುಬರುತ್ತದೆ. 25ನೆಯ ಥಿಯೊಡೋಸಿಯಸ್ ಸಮ್ರಾಟ 142ರಲ್ಲಿ ಕಾಲಮಿತಿ ಕಾಯಿದೆಯನ್ನು ಜಾರಿಗೆ ತಂದದ್ದು ಕಂಡುಬರುತ್ತದೆ.

**ಇಂಗ್ಲಿಷ್ ಕಾಯಿದೆ:** ಇಂಗ್ಲೆಂಡಿನ ಸಂಪ್ರದಾಯ ನ್ಯಾಯದ (ಕಾಮನ್ ಲಾ) ಪ್ರಕಾರ ಎಲ್ಲ ವ್ಯವಹಾರಗಳಿಗೂ ಕಾಲಪರಿಮಿತಿಯ ಆತಂಕವಿದ್ದುದು ಕಂಡುಬರುತ್ತದೆ. 1834ಕ್ಕೆ ಪೂರ್ವದಿಂದಲೂ ಅವಧಿ ಮೀರಿದ ಹಕ್ಕುಗಳ ಪ್ರತಿಪಾದನೆಯನ್ನು ನಿರಾಕರಿಸಲಾಗಿತ್ತು. ದೀರ್ಘಾನುಭವದಿಂದ ಹಕ್ಕುಗಳು ಪ್ರಾಪ್ತವಾಗುವುವೆಂಬ ತತ್ತ್ವವನ್ನು ಅನುಮೋದಿಸಲಾಗಿದೆ.

**ಭಾರತದ ಕಾಲಮಿತಿ ಕಾಯಿದೆ:** ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಛಿದ್ರವಾಗಿದ್ದ ಕಾನೂನುಗಳನ್ನು ಕೋಡೀಕರಿಸಿ ಏಕರೂಪತೆಯ ಕಾಯಿದೆಯೊಂದನ್ನು ರಚಿಸಲು 1841ರಲ್ಲಿ ಕಾಲಮಿತಿ ವಿಧೇಯಕದ ಕರಡನ್ನು ಸಿದ್ಧಗೊಳಿಸಲಾಯಿತು. ಅದು 1859ರಲ್ಲಿ ಕಾಯಿದೆಯಾಯಿತು. 1871ರಲ್ಲಿ ಅದು ರದ್ದಾಗಿ ಹೊಸ ಕಾಯಿದೆಯನ್ನು ಜಾರಿಗೆ ತರಲಾಯಿತು. 1877ರಲ್ಲಿ ಇದಕ್ಕೆ ತಿದ್ದುಪಡಿಯಾಯಿತು. ಅನಂತರ 1908ರಲ್ಲಿ ಸರ್ಕಾರ ಈ ಕಾಯಿದೆಯನ್ನು ರದ್ದುಪಡಿಸಿ ಹೊಸ ಕಾಯಿದೆಯನ್ನು ಜಾರಿಗೆ ತಂದಿತು. ಇದು ಅನಂತರ 30ಕ್ಕಿಂತ ಹೆಚ್ಚು ತಿದ್ದುಪಡಿಗಳಿಗೆ ಒಳಗಾಗಿ ಈಗ ಜಾರಿಯಲ್ಲಿದೆ.

ಕಾಲಾತೀತವಾಗಿ ನಷ್ಟವಾಗಿರುವ ಹಕ್ಕುಗಳನ್ನು ಸ್ಥಾಪಿಸುವುದಕ್ಕೆ ಆತಂಕ, ಈ ಯೋಗದಿಂದ ಸ್ವಾಧೀನದಾರನಿಗೆ ಪ್ರಾಪ್ತವಾಗಿರುವ ಹಕ್ಕುಗಳಿಗೆ ಮಾನ್ಯತೆನೀಡಿ ಅದನ್ನು ಊರ್ಜಿತಗೊಳಿಸಿ ಸಮಾಜದಲ್ಲಿ ಶಾಂತಿ ಮತ್ತು ನಿಶ್ಚಿತಭಾವವನ್ನುಂಟುಮಾಡುವುದು ಮತ್ತು ಕಾಲತೀತ ಬೇಡಿಕೆಗಳನ್ನು ನಷ್ಟಗೊಳಿಸುವುದು–ಇವು ಈ ಕಾಯಿದೆಯ ಮುಖ್ಯ ಧ್ಯೇಯಗಳು. ಆದ್ದರಿಂದ ಇದನ್ನು ಶಾಂತಿ ಸಮಾಧಾನದ ಘಟನಾತ್ಮಕ ಕಾಯಿದೆಯೆಂದು ಪರಿಗಣಿಸಲಾಗಿದೆ.

ಬಹಳ ಕಾಲದ ಮೇಲೆ ಹಕ್ಕುಗಳನ್ನು ಸ್ಥಾಪಿಸಲು ಅವಶ್ಯವಾದ ಪುರಾವೆ ನಾಶವಾಗಿರುವ ಸಂಭವವಿರುವುದರಿಂದ ಅಂಥ ಹಕ್ಕುಗಳನ್ನು ಸ್ಥಾಪಿಸುವುದಕ್ಕೆ ಅವಕಾಶವಿರಬಾರದೆಂಬುದು ಎಲ್ಲ ಕಾಲಮಿತಿ ಕಾಯಿದೆಗಳ ಧೋರಣೆಯಾಗಿದೆ. ಯಾವ ಹಕ್ಕುಗಳನ್ನು ನಿಯಮಿತ ಕಾಲದಲ್ಲಿ ಸ್ಥಾಪಿಸುವುದಿಲ್ಲವೋ ಅಂಥ ಹಕ್ಕುಗಳನ್ನು ನಿರಾಕರಿಸಬೇಕಾದ್ದು ನ್ಯಾಯಸಮ್ಮತ. ಹೀಗಾಗದಿದ್ದಲ್ಲಿ ಕಾಲಾತೀತ ಹಕ್ಕುಗಳನ್ನು ಅಥವಾ ಸುಳ್ಳು ಹಕ್ಕುಗಳನ್ನು ಮೋಸಗಾರರು ಸ್ಥಾಪಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಂತಾಗಿ ಅಂಥ ಹಕ್ಕುಗಳನ್ನು ಅವ್ಯಾಹತವಾಗಿ ದೀರ್ಘಕಾಲದಿಂದ ಅನುಭವಿಸುತ್ತಿರುವವರಿಗೆ ಅಡಚಣೆ ಮತ್ತು ಅನಿಶ್ಚಿತ ಪರಿಸ್ಥಿತಿಯನ್ನುಂಟುಮಾಡಿದಂತಾಗುತ್ತದೆ. ಈ ಹಕ್ಕುಗಳ ಸಂಬಂಧವಾಗಿ ಸಾಕ್ಷಿಗಳ ಅಭಾವವಿರುವುದರಿಂದಲೂ ಇತರ ಪುರಾವೆ ನಾಶವಾಗಿರುವ ಸಂಭವವಿರುವುದರಿಂದಲೂ ಸಾಕಷ್ಟು ಪುರಾವೆಯನ್ನು ಒದಗಿಸುವುದು ಅಸಾಧ್ಯ ಅಥವಾ ಅಸಂಭವವಾಗುತ್ತದೆ. ಕಾಲಮಿತಿ ಕಾಯಿದೆ ಸಮಾಜದ ಹಿತದ ಸಲುವಾಗಿ ಇರುವುದರಿಂದ ಯಾವ ಮನುಷ್ಯ ತನ್ನ ಹಕ್ಕುಗಳ ವಿಷಯದಲ್ಲಿ ಅಜಾಗರೂಕನಾಗಿರುತ್ತಾನೆಯೋ ಅಂಥ ಮನುಷ್ಯನಿಗೆ ಕಾಯಿದೆಯ ಸಹಾಯ ಪಡೆಯುವ ಹಕ್ಕು ಇರುವುದಿಲ್ಲ. ಯಾವ ಮನುಷ್ಯ ಜಾಗೃತನಾಗಿರುತ್ತಾನೋ, ಸಕಾಲದಲ್ಲಿ ತಕ್ಕ ಹಕ್ಕುಗಳನ್ನು ಪ್ರತಿಪಾದಿಸುತ್ತಾನೋ ಅಂಥವನಿಗೆ ಮಾತ್ರ ಕಾಲಮಿತಿ ಕಾಯಿದೆ ಸಹಾಯಕವಾಗುತ್ತದೆ. ಕಾಯಿದೆಯ ಈ ಧೋರಣೆ ನ್ಯಾಯದೃಷ್ಟಿಯಿಂದ ಮತ್ತು ಸಮಾಜದ ಹಿತ ಮತ್ತು ಅಭ್ಯುದಯದ ದೃಷ್ಟಿಯಿಂದ ಸೂಕ್ತವಾಗಿದೆ.

ಪ್ರಾಚೀನಾನುಭವ ಅಥವಾ ಸಾಂಪ್ರದಾಯಿಕ ಹಕ್ಕುಗಳ ರಕ್ಷಣೆ ಸಮಾಜದ ಹಿತ ದೃಷ್ಟಿಯಿಂದ ಮಹತ್ತ್ವದ ವಿಷಯ. ಕಾಲಮಿತಿ ಕಾಯಿದೆಯಿಂದ ಕಾಲಮಿತಿಯನ್ನು ನಿರ್ಣಯಿಸುವುದರಿಂದ ಎಲ್ಲ ಹಕ್ಕುಗಳೂ ಕಾಲಮಿತಿಗೆ ಒಳಪಟ್ಟು ಅವನ್ನು ಶಾಂತವಾಗಿ ಮತ್ತು ಸುಗಮವಾಗಿ ಅನುಭವಿಸಲು ಅವಕಾಶ ಉಂಟಾಗುತ್ತದೆ. ಇದರಿಂದ ಸಮಾಜದಲ್ಲಿ ಶಾಂತಿ ಸಮಾಧಾನಗಳೂ ವೈಯಕ್ತಿಕವಾಗಿ ನಿಶ್ಚಿತ ಪರಿಸ್ಥಿತಿಯೂ ಉಂಟಾಗುತ್ತದೆ. ಇದರಿಂದ ಕಾರ್ಯತತ್ಪರತೆಗೆ ಪುರಸ್ಕಾರವೂ ಸೋಮಾರಿತನ, ಅಜಾಗ್ರತೆ ಅಥವಾ ಆಲಸಿಕೆಗೆ ದಂಡನೆ ಅಥವಾ ನಷ್ಟವೂ ಆದಂತಾಗುತ್ತದೆ.

ಕಾಲಮಿತಿಯ ಕಾನೂನು ಹಕ್ಕುಗಳನ್ನು ನಿರ್ಮಾಣ ಮಾಡುವುದಿಲ್ಲ; ಇದು ಕೇವಲ ಪರಿಹಾರ ಅಥವಾ ಚಿಕಿತ್ಸೆಯನ್ನು ಪ್ರತಿಬಂಧಿಸುತ್ತದೆ. ಕಾಲಮಿತಿಯಿಂದ ನ್ಯಾಯಾಲಯದಲ್ಲಿ ಪರಿಹಾರ ಮಾರ್ಗ ನಷ್ಟವಾಗುತ್ತದೆ. ಚಿಕಿತ್ಸೆಯ ಪ್ರತಿಬಂಧದಿಂದ ಮೂಲ ಹಕ್ಕುಗಳು ನಾಶವಾಗುವುದಿಲ್ಲ ಮತ್ತು ಅದನ್ನು ಇತರ ಮಾರ್ಗಗಳಿಂದ ಸಮರ್ಥಿಸಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಪ್ರತಿಪಾದಿಸುವ ಹಕ್ಕುಗಳು ಜೀವಂತವಿದ್ದಲ್ಲಿ ಮಾತ್ರ ಪ್ರತಿಪಾದನೆಗೆ ಸಹಾಯಕವಾಗುವ ಹಕ್ಕುಗಳ ಆವಶ್ಯಕತೆಯಿರುತ್ತದೆ. ಈ ತತ್ತ್ವದ ಪ್ರಕಾರ ಕಾಲಮಿತಿಯೊಳಗಾಗಿ ಹಕ್ಕುಗಳನ್ನು ಸಮರ್ಥಿಸಬೇಕೆಂಬ ನಿಯಮವಿರುವುದಿಲ್ಲ. ಆದರೆ ಕಾಲಮಿತಿ ಮೀರಿದ ಅನಂತರ ಅಂಥ ಹಕ್ಕುಗಳನ್ನು ಸಮರ್ಥಿಸುವುದಕ್ಕೆ ಆತಂಕವಿರುತ್ತದೆ. ಆದರೆ ಮೂಲಹಕ್ಕುಗಳು ನಾಶವಾಗುವುದಿಲ್ಲ. ಸಾಲವನ್ನು ವಸೂಲು ಮಾಡುವ ಹಕ್ಕು ಕಾಲಮಿತಿ ಕಾಯಿದೆಯ ಪ್ರಕಾರ ಅವಧಿ ಮೀರಿದ್ದಾಗಿರುವುದಾದರೂ ಆಸ್ತಿಯ ಆಧಾರ ಅಥವಾ ಅಡಮಾನದ ಮೇಲಿಂದ ಆ ಸಾಲವನ್ನು ವಸೂಲು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇದೇ ರೀತಿ ಕಾಲಮಿತಿಯಿಂದ ಬಾಹಿರವಾದ ಸಾಲದ ಹಣವನ್ನು ಸಾಲಗಾರ ಪಾವತಿ ಮಾಡಿದಲ್ಲಿ ಅದರ ಅನಂತರ ಆ ಸಾಲ ಕಾಲಮಿತಿಬಾಹಿರವಾಗಿದೆಯೆಂಬ ಕಾರಣದಿಂದ ಪರತ ಪಡೆಯಲು ಅವಕಾಶವಿರುವುದಿಲ್ಲ. ಈ ತತ್ತ್ವದ ಪ್ರಕಾರ ವಸೂಲು ಮಾಡುವ ಹಕ್ಕು ಮಾತ್ರ ನಷ್ಟವಾಗಿರುತ್ತದೆ. ಇದನ್ನೆ ವಿಮೋಚನಾ ಹಕ್ಕು ಅಥವಾ ಮುಕ್ತ ಮಾಡುವ ಹಕ್ಕು ಎಂದು ಕರೆಯಲಾಗಿದೆ. ಕಾಲಮಿತಿ ಕಾಯಿದೆ ವಾದಿ ಪರಿಹಾರ ಪಡೆಯುವುದಕ್ಕೆ ಅಥವಾ ಚಿಕಿತ್ಸೆಯ ಹಕ್ಕಿಗೆ ಅನ್ವಯಿಸುತ್ತದೆ. ಆದರೆ ವಾದಿ ಬೇಡುವ ಪರಿಹಾರದ ವಿರುದ್ಧ ತನ್ನ ಹಕ್ಕುಗಳ ರಕ್ಷಣೆಗಾಗಿ ಪ್ರತಿವಾದಿ ಆಧರಿಸುವ ಹಕ್ಕುಗಳಿಗೆ ಅನ್ವಯಿಸುವುದಿಲ್ಲ. ಜೀವಂತವಿರುವ ಹಕ್ಕುಗಳನ್ನು ವಾದಿಯಾಗಿ ಪ್ರತಿಪಾದಿಸುವುದಕ್ಕೆ ನಿಯಮಿತ ಕಾಲಾನಂತರ ಆತಂಕವಿದ್ದಾಗ್ಯೂ ಅದಕ್ಕೆ ಉತ್ತರರೂಪವಾಗಿ ಪ್ರತಿವಾದಿ ಆಧರಿಸುವ ಹಕ್ಕುಗಳ ಪ್ರತಿಪಾದನೆಗೆ ಕಾಲಮಿತಿ ಕಾಯಿದೆಯ ಆತಂಕವಿರುವುದಿಲ್ಲ. ಮುದ್ದತಿ ಕಾಯಿದೆ ಮೂಲ ಹಕ್ಕುಗಳು ಅಸ್ತಿತ್ವಕ್ಕೆ ಸಂಬಂಧಿಸಿದ್ದಲ್ಲ, ಇದು ಕೇವಲ ಇರುವ ಹಕ್ಕುಗಳನ್ನು ಸ್ಥಾಪಿಸಿ ಕೊಳ್ಳುವ ಸಹಾಯಕ ವ್ಯವಹಾರಕ್ಕೆ ಸಂಬಂಧಿಸಿದೆ. ಆದ್ದರಿಂದ ಯಾವ ನ್ಯಾಯಾಲಯದಲ್ಲಿ ವ್ಯವಹಾರ ನಡೆಸಲಾಗುತ್ತದೆಯೋ ಅದೇ ನ್ಯಾಯಾಲಯದಲ್ಲಿ ದಾವ ಮಾಡುವ ಕಾಲದಲ್ಲಿ ಅಥವಾ ಹಕ್ಕುಗಳನ್ನು ಪ್ರತಿಪಾದಿಸುವ ಕಾಲದಲ್ಲಿ ಜಾರಿಯಲ್ಲಿರುವ ಕಾಯಿದೆಯನ್ನೇ ಅವಲಂಬಿಸುತ್ತದೆ. ಮುದ್ದತಿ ಕಾಯಿದೆಯನ್ನು ಅಸ್ತಿತ್ವದ್ದೆಂದೂ ಮತ್ತು

ಪರಿಹಾರಕ ಅಥವಾ ಚಿಕಿತ್ಸಕ ಎಂದೂ ಎರಡು ರೀತಿಯಲ್ಲಿ ಪರಿಗಣಿಸಲಾಗಿದೆ. ಇದು ಮೂಲ ಹಕ್ಕುಗಳ ಇರುವಿಕೆಗೆ ಅಥವಾ ವಿನಾಶಕ್ಕೆ ಸಂಬಂಧಪಟ್ಟಮಟ್ಟಿಗೆ ಅಸ್ತಿತ್ವದ್ದೆಂತಲೂ ಪರಿಹಾರಕ್ಕೆ ಸಂಬಂಧಪಟ್ಟಮಟ್ಟಿಗೆ ಚಿಕಿತ್ಸಕವೆಂತಲೂ ಪರಿಗಣಿಸಲಾಗಿದೆ. ಕಾಲಮಿತಿ ಕಾಯಿದೆಯ ತಕರಾರು ಅನೀತಿಪರವಾದ್ದು ಅಥವಾ ಅವಮರ್ಯಾದೆಯ ತಕರಾರೆಂದು ಹೇಳಲಾಗುವುದಿಲ್ಲ. ಇಂಥ ತಕರಾರು ನ್ಯಾಯಸಮ್ಮತವಾದ್ದೆಂದೂ ಇದರ ಲಾಭವನ್ನು ಪಡೆಯುವ ಅವಕಾಶ ಧಾರ್ಮಿಕವಾದ್ದೆಂದೂ ಪರಿಗಣಿಸಲಾಗಿದೆ. ಮುದ್ದತಿ ತಕರಾರನ್ನು ಕೇವಲ ತಾಂತ್ರಿಕ ಅಥವಾ ಲಾಕ್ಷಣಿಕ ತಕರಾರೆಂದು ಪರಿಗಣಿಸಲಾಗದು. ಈ ತಕರಾರು ನ್ಯಾಯದೃಷ್ಟಿಯಿಂದ ಅವಶ್ಯವಿದ್ದು ಇದರ ಲಾಭ ಪಡೆಯುವುದು ಯೋಗ್ಯ ಮತ್ತು ಧರ್ಮಸಮ್ಮತ. ಇಂಥ ತಕರಾರು ವೈಯಕ್ತಿಕ ನಿಂದಾತ್ಮಕವೂ ಅಲ್ಲ. ನ್ಯಾಯಾಲಯಗಳು ಇಂಥ ತಕರಾರುಗಳು ನೀತಿಪರವಾದವು ಅಥವಾ ಧರ್ಮಶೀಲವಾದವು ಎಂದು ನಿರ್ಣಯಿಸುವ ಕಾರಣವಿಲ್ಲ. ಆದರೆ ಇವು ನ್ಯಾಯದೃಷ್ಟಿಯಿಂದ ಹುಟ್ಟಿದವೇ ಎಂಬುದನ್ನು ಮಾತ್ರ ವಿಚಾರಿಸಬೇಕಾಗುತ್ತದೆ.

ಅಸ್ತಿತ್ವದಲ್ಲಿರುವ ಹಕ್ಕುಗಳ ಅಜ್ಞಾನದಿಂದ ಅಥವಾ ತಪ್ಪು ತಿಳಿವಳಿಕೆಯಿಂದ ಕಾಲಾವಧಿಯ ಪರಿಮಿತಿಯನ್ನು ಹೆಚ್ಚಿಸಲು ಬರುವುದಿಲ್ಲ. ವ್ಯಾಜ್ಯ ಕಾರಣ ಉಂಟಾದ ಅನಂತರ ಕೇವಲ ಅಜ್ಞಾನದಿಂದ ಕಾಯಿದೆಯ ಪ್ರಕಾರ ಮುಂದುವರಿಯುವ ಕಾಲಮಿತಿ ನಿಲ್ಲುವುದಿಲ್ಲ. ಕಾಲಮಿತಿಯ ಪ್ರಾರಂಭವನ್ನು ಕಾಯಿದೆಯಿಂದ ನಿರ್ಣಯಿಸಿರುವುದರಿಂದ ಕಾಲಮಿತಿಯ ಪ್ರಾರಂಭವನ್ನು ತಡೆಗಟ್ಟಲು ವ್ಯಕ್ತಿಗಳಿಗೆ ಅಧಿಕಾರವಿಲ್ಲ. ಹಕ್ಕುಗಳನ್ನು ಪ್ರತಿಪಾದಿಸುವುದಕ್ಕಾಗಿ ಕಾಲಮಿತಿಯನ್ನು ನಿರ್ದೇಶಿಸಿರುವುದರಿಂದ ಆ ಕಾಲಮಿತಿಯನ್ನು ಕಕ್ಷಿಗಳು ತಮ್ಮ ಸಮ್ಮತಿಯಿಂದ ಬದಲಾಯಿಸುವುದಾಗಲಿ ಕಡೆಗಣಿಸುವುದಾಗಲಿ ಸಾಧ್ಯವಿಲ್ಲ. ವ್ಯಕ್ತಿಗಳಾಗಲಿ ನ್ಯಾಯಸ್ಥಾನಗಳಾಗಲಿ ಕಾಲಮಿತಿ ಕಾಯಿದೆಯನ್ನು ನಿರಾಕರಿಸಲಿಕ್ಕಾಗಲಿ ಅತಿಕ್ರಮಿಸುವುದಕ್ಕಾಗಲಿ ಸಾಧ್ಯವಿಲ್ಲ. ಕಾಲಮಿತಿ ಕಾಯಿದೆ ಶ್ರೀಮಂತ, ಬಡವ, ಶಕ್ತಿವಂತ, ಶಕ್ತಿಹೀನ, ಜಾಣ, ದಡ್ಡ ಎಂದು ಭೇದ ಭಾವ ಮಾಡುವುದಿಲ್ಲ. ಅನಾರೋಗ್ಯ ಮುಂತಾದ ಕಾರಣಗಳಿಂದ ಹಕ್ಕುಗಳನ್ನು ಪ್ರತಿಪಾದಿಸಲಾಗಲಿಲ್ಲವೆಂಬ ವಾದದಿಂದ ಕಾಯಿದೆಯ ನಿಯಮಗಳನ್ನು ಕಡೆಗಣಿಸಲಾಗದು. ಶಾಸನಾಂಕಿತವಾದ ಕಾಲಾವಧಿಯನ್ನು ಅಥವಾ ಕಾಲಾವಧಿ ಪ್ರಾರಂಭವಾಗುವುದನ್ನು ಪಕ್ಷಕಾರರ ಸಮ್ಮತಿಯಿಂದ ಬದಲು ಮಾಡಲು ಅಥವಾ ಹೆಚ್ಚಿಸಲು ಬರುವುದಿಲ್ಲ. ಆದರೆ ಮೋಸದಿಂದ ಅಥವಾ ವಂಚನೆಯಿಂದ ಹಕ್ಕುಗಳ ಪ್ರತಿಪಾದನೆಗೆ ಅಡಚಣೆ ಉಂಟಾಗಿದ್ದಲ್ಲಿ ಕಾಲಾತೀತ ಆತಂಕದ ಬಾಧೆಯನ್ನು ತಪ್ಪಿಸಲು ಅವಕಾಶವಿದೆ.

**ವಿರುದ್ಧ ಕಬ್ಜಾ ಅಥವಾ ಪ್ರತಿಕೂಲಾನುಭವ :** ಅನಧಿಕಾರದಿಂದ ಒಡೆತನದ ಹಕ್ಕಿನ ವಿರುದ್ಧವಾಗಿ ಬಹಿರಂಗವಾಗಿ ಒಡೆತನ ಹಕ್ಕುಗಳನ್ನು ಅಲ್ಲಗಳೆದು ಅವನಿಗೆ ತಿಳಿಯುವಂತೆ ಮಾಲ್ಕಿ ಹಕ್ಕುಗಳನ್ನು ಪ್ರತಿಪಾದಿಸುತ್ತ ಆಸ್ತಿಯನ್ನು ಅನುಭವಿಸಿದರೆ ನಿಯಮಿತ ಕಾಲಾನಂತರ ಒಡೆಯನ ಹಕ್ಕುಗಳನ್ನು ಪ್ರತಿಪಾದಿಸುವ ಚಿಕಿತ್ಸೆಗೆ ಆತಂಕವುಂಟಾಗುವುದರಿಂದ, ಅನುಭವಿಸುವವನ ಹಕ್ಕುಗಳು ಪಕ್ವವಾಗುತ್ತವೆ. ಯಾವುದೇ ಆಸ್ತಿಯ ಮಾಲೀಕ ತನ್ನ ಆಸ್ತಿಯ ಸಂಬಂಧವಾಗಿ ವಿರುದ್ಧ ಕಬ್ಜಾದಿಂದ ಹಕ್ಕುಗಳನ್ನು ಹೇಳಲಿಕ್ಕೆ ಅವಕಾಶವಿಲ್ಲ. ವಿರುದ್ಧ ಕಬ್ಜಾದ ಹಕ್ಕು ಒಡೆತನದ ಹಕ್ಕಿಗೆ ವಿರುದ್ಧವಾಗಿದ್ದು ಒಡೆತನದ ಹಕ್ಕು ಅಸ್ತಿತ್ವದಲ್ಲಿರುವವರೆಗೂ ಅವನಿಗೆ ವಿರುದ್ಧ ಕಬ್ಜಾದಿಂದ ಅದೇ ಆಸ್ತಿಯ ಸಂಬಂಧದ ಹಕ್ಕುಗಳು ಪ್ರಾಪ್ತವಾಗಲಾರವು. ಒಡೆಯನ ಹಕ್ಕುಗಳಿಗೆ ಒಳಪಡಿಸಿ ಅಥವಾ ಅವನ ಸಮ್ಮತಿಯಿಂದ ಎಷ್ಟು ಕಾಲ ಅನುಭವಿಸಿದಾಗ್ಯೂ ಅಂಥ ಅನುಭವ ಪ್ರತಿಕೂಲಾನುಭವವೆನಿಸುವುದಿಲ್ಲ; ಮತ್ತು ಮಾಲೀಕನ ಹಕ್ಕುಗಳು ನಷ್ಟವಾಗುವುದಿಲ್ಲ.

ವಿರುದ್ಧ ಕಬ್ಜಾದ ಹಕ್ಕುಗಳು ಆಸ್ತಿಯ ಅನಧಿಕಾರದ ಅನುಭವದಿಂದ ಮಾತ್ರ ಪ್ರಾಪ್ತವಾಗುವುದರಿಂದ, ಆಸ್ತಿಯ ಪ್ರತ್ಯಕ್ಷ ಕಬ್ಜಾ ಅಥವಾ ಅನುಭವ ಇಲ್ಲದಿದ್ದಲ್ಲಿ ಈ ಹಕ್ಕು ಪ್ರಾಪ್ತವಾಗಲಾರದು. ಅನಧಿಕಾರದಿಂದ ಅಥವಾ ಗೈರ್‌ಹಕ್ಕಿನಿಂದ ಆಸ್ತಿಯ ಕಬ್ಜಾ ಪಡೆದ ವೇಳೆಯಿಂದ ಮೂಲ ಮಾಲೀಕ ಹಕ್ಕುಗಳನ್ನು ಕಡೆಗಣಿಸಿದ್ದು ಅನಧಿಕಾರದಿಂದ ಮಾಲ್ಕಿ ಹಕ್ಕುಗಳನ್ನು ಚಲಾಯಿಸುತ್ತಿರುವುದರಿಂದ ವಿರುದ್ಧ ಕಬ್ಜಾದ ಹಕ್ಕು ಪ್ರಾರಂಭವಾಗುತ್ತದೆ. ಇಂಥ ಅನಧಿಕಾರದ ಹಕ್ಕು ನಿರ್ಣಾಯಿಕ ಕಾಲಮಿತಿಯವರೆಗೆ ಅವ್ಯಾಹತವಾಗಿ ಅನುಭವಿಸಿದಲ್ಲಿ ಅಂಥ ಹಕ್ಕು ಪಕ್ವವಾಗಿ ಒಡೆತನದ ಹಕ್ಕು ಪ್ರಾಪ್ತವಾದಂತೆ ಆಗುತ್ತದೆ. ವಿರುದ್ಧ ಕಬ್ಜಾದಿಂದ ಒಡೆತನದ ಹಕ್ಕುಗಳು ಪ್ರಾಪ್ತವಾಗಬೇಕಾದರೆ ಮುದ್ದತಿಕಾಯಿದೆಯ ಕಾಲಪರಿಮಿತಿ ಮೀರುವವರೆಗೆ ಅವ್ಯಾಹತವಾಗಿ ಅನಧಿಕಾರದಿಂದ ಆಸ್ತಿಯನ್ನು ಅನುಭವಿಸಬೇಕು. ಈ ಅನುಭವ ವ್ಯಕ್ತ ರೀತಿಯಲ್ಲಿ ಅದರ ಮಾಲೀಕನ ಹಕ್ಕುಗಳನ್ನು ಅವನಿಗೆ ತಿಳಿಯುವಂತೆ ಅಲ್ಲಗಳೆದಂತೆ ಇರಬೇಕು. ಮತ್ತು ಆಸ್ತಿಯ ಕಬ್ಜಾ ಅಥವಾ ಅನುಭವ ಕಾಲಮಿತಿಯೊಳಗಾಗಿ ಕೊನೆಗೊಳ್ಳಬಾರದು. ಅನಧಿಕಾರದಿಂದ ಕಬ್ಜಾದಲ್ಲಿರುವವನ ಹಕ್ಕುಗಳು ಕೇವಲ ಕಬ್ಜಾದ ಪರಿಸ್ಥಿತಿಯಿಂದ ಪ್ರಾಪ್ತವಾಗಿದ್ದು ಅದು ಕಾಲಮಿತಿ ಕಾಯಿದೆ ಪ್ರಕಾರ ಪಕ್ವವಾಗುವುದರ ಒಳಗಾಗಿ ಅವನ ಕಬ್ಜಾ ತಪ್ಪಿದಲ್ಲಿ ಅಲ್ಲಿಯವರೆಗಿದ್ದ ಕಬ್ಜಾದ ಹಕ್ಕುಗಳು ನಷ್ಟವಾಗಿ ಪ್ರತಿಬಂಧಿತವಾಗಿದ್ದ ಒಡೆತನದ ಹಕ್ಕುಗಳು ಮುಕ್ತವಾಗುತ್ತವೆ. ಇದರಿಂದ ಮಾಲೀಕನ ಹಕ್ಕುಗಳು ಪುನಃ ಸ್ಥಾಪಿತವಾದಂತಾಗುತ್ತದೆ. ವಿರುದ್ಧ ಕಬ್ಜಾದಿಂದ ಹಕ್ಕು ಹೇಳುವವನು ಕಾಲಮಿತಿಯಲ್ಲಿ ಕಬ್ಜಾ ಕಳೆದುಕೊಳ್ಳುವುದರಿಂದ ಅಪೂರ್ಣವಾಗಿದ್ದ ಹಕ್ಕು ನಷ್ಟವಾಗುತ್ತದೆ.

**ವಿರುದ್ಧ ಕಬ್ಜಾ ಅಥವಾ ಅನುಭವ ಎರಡು ಕಾರಣಗಳಿಂದ ಉಂಟಾಗುತ್ತದೆ :** 1 ಪ್ರತ್ಯಕ್ಷ ಕಬ್ಜಾ ಅಥವಾ ಅನುಭವ, 2 ಮನೋನಿಶ್ಚಯ. ಅನಧಿಕಾರದಿಂದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡರೆ ಆ ಆಸ್ತಿಯನ್ನು ತನ್ನ ಒಡೆತನದ ಹಕ್ಕಿನಿಂದ ಇಲ್ಲವೆ ಮೂಲ ಒಡೆಯನ ವಿರುದ್ಧ ತನ್ನ ಹಕ್ಕನ್ನು ಸ್ಥಾಪಿಸಿಕೊಳ್ಳುವ ಮನೋಧೋರಣೆಯಿಲ್ಲದಿದ್ದಲ್ಲಿ ಅಂಥ ಕಬ್ಜಾದಿಂದ ವಿರುದ್ಧ ಕಬ್ಜಾದ ಹಕ್ಕುಗಳು ಪ್ರಾಪ್ತವಾಗಲಾರವು. ಬೇರೆಯವರ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಾಗ ಅದನ್ನು ಅದರ ಮಾಲೀಕನ ವಿರುದ್ಧ ತನ್ನ ಹಕ್ಕುಗಳನ್ನು ಸ್ಥಾಪಿಸಿಕೊಳ್ಳವ ಉದ್ದೇಶದಿಂದ ಮಾಡಿದ್ದರೆ ಮಾತ್ರ ವಿರುದ್ಧ ಕಬ್ಜಾದ ಹಕ್ಕು ಪ್ರಾಪ್ತವಾಗುತ್ತದೆ. ಒಂದು ಮನೆಯ ಮಾಲೀಕನ ಆಳುಗಳು ಅಥವಾ ಇತರರು ಆ ಮನೆಯ ಪ್ರತ್ಯಕ್ಷ ಅನುಭವದಲ್ಲಿರುವುದು ಸಾಧ್ಯ. ಅವನ ಮನೆ ಒಂದೂರಿನಲ್ಲಿದ್ದು ಆತ ಬೇರೆ ಊರಿನಲ್ಲಿದ್ದಲ್ಲಿ ಅವನ ಆಳುಗಳು ಅಥವಾ ಅವನಿಂದ ಅಧಿಕಾರ ಪಡೆದವರು ಅಥವಾ ಅನುಮತಿ ಪಡೆದವರು ಪ್ರತ್ಯಕ್ಷ ಕಬ್ಜಾದಲ್ಲಿ ಇದ್ದಾಗ್ಯು ಅವರಿಗೆ ಆತನ ವಿರುದ್ಧ ಯಾವ ಹಕ್ಕುಗಳೂ ಪ್ರಾಪ್ತವಾಗಲಾರವು. ಅವರ ಪ್ರತ್ಯಕ್ಷ ಅನುಭವ ಅವನ ಪರೋಕ್ಷ ಅನುಭವವೆಂದು ತಿಳಿಯಲಾಗುವುದು. ಅವನ ಆಳುಗಳು ಅಥವಾ ಅವನ ಅನುಮತಿ ಪಡೆದವರು ಪ್ರತ್ಯಕ್ಷ ಕಬ್ಜಾದಲ್ಲಿದ್ದಾಗ್ಯೂ ಅವರು ಎಲ್ಲಿಯವರೆಗೆ ಅವನ ಹಕ್ಕುಗಳನ್ನು ಕಡೆಗಣಿಸುವುದಿಲ್ಲವೋ ಅಲ್ಲಿಯವರೆಗೆ ಅವರಿಗೆ ಯಾವ ಹಕ್ಕುಗಳೂ ಪ್ರಾಪ್ತವಾಗಲಾರವು. ವಿರುದ್ಧ ಹಕ್ಕುಗಳನ್ನು ಸಾಧಿಸುವ ಮನೋಭಾವವಿಲ್ಲದಿದ್ದಲ್ಲಿ ಪ್ರತ್ಯಕ್ಷ ಅನುಭವದಿಂದ ಯಾವ ಹಕ್ಕುಗಳು ಪ್ರಾಪ್ತವಾಗಲಾರವು. ಕಬ್ಜಾ ತೆಗೆದುಕೊಳ್ಳುವ ಕಾಲದಲ್ಲಿ ವಿರುದ್ಧ ಮನೋಭಾವವಿರುವ ಕಾರಣವಿಲ್ಲ. ಕಬ್ಜಾ ತೆಗೆದುಕೊಳ್ಳುವ ಕಾಲಕ್ಕೆ ವಿರೋಧ ಮನೋಭಾವವಿಲ್ಲದಿದ್ದಾಗ್ಯೂ ಮುಂದೆ ಆ ಮನೋಭಾವವನ್ನು ಅಳವಡಿಸಿಕೊಂಡರೆ ಆಗ ವಿರುದ್ಧ ಕಬ್ಜಾದ ಹಕ್ಕು ಪ್ರಾಪ್ತವಾಗುತ್ತದೆ. ಒಬ್ಬನ ಜಮೀನನ್ನು ಗುತ್ತಿಗೆ ಕೊಡುವ ಕರಾರಿನಿಂದ ಪ್ರತ್ಯಕ್ಷ ಕಬ್ಜಾದಲ್ಲಿಟ್ಟುಕೊಂಡಲ್ಲಿ ಎಲ್ಲಿಯವರೆಗೆ ಗುತ್ತಿಗೆ ಕೊಡುವ ಕರಾರು ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯವರೆಗೆ, ಆಮೇಲೆ ಸಹ ಎಲ್ಲಿಯವರೆಗೆ ಗುತ್ತಿಗೆ ಕೊಡಬೇಕೆಂಬ ಮನೋಭಾವ ರೈತನಲ್ಲಿರುತ್ತದೆಯೋ ಅಲ್ಲಿಯವರೆಗೆ, ವಿರುದ್ಧ ಕಬ್ಜಾದ ಹಕ್ಕುಗಳು ಪ್ರಾಪ್ತವಾಗುವುದಿಲ್ಲ. ಆದರೆ ಗುತ್ತಿಗೆಯ ಕರಾರು ತೀರಿದ ಅನಂತರ ರೈತ ತನ್ನ ಮನೋಭಾವವನ್ನು ಬದಲಾಯಿಸಿ ತಾನು ಆ ಆಸ್ತಿಯ ಮಾಲೀಕನಂತೆ ಮೂಲ ಮಾಲೀಕನ ಹಕ್ಕುಗಳನ್ನು ಅಲ್ಲಗಳೆದು ಬಹಿರಂಗವಾಗಿ ಅನುಭವಿಸತೊಡಗಿದರೆ ಆ ಕ್ಷಣದಿಂದ ವಿರುದ್ಧ ಕಬ್ಜಾದ ಹಕ್ಕು ಪ್ರಾರಂಭವಾಗುತ್ತದೆ. ಹೀಗೆ ಪ್ರಾರಂಭವಾದ ಹಕ್ಕನ್ನು ಅವ್ಯಾಹತವಾಗಿ ಬಹಿರಂಗವಾಗಿ ಮಾಲೀಕನಿಗೆ ತಿಳಿಯುವಂತೆ ಕಾಲಮಿತಿಯವರೆಗೆ ಅನುಭವಿಸಿದರೆ ಅಂಥ ಅಪೂರ್ಣವಾಗಿದ್ದ ಹಕ್ಕು ಪೂರ್ಣವಾಗಿ ಪಕ್ವವಾಗುತ್ತದೆ.

ಸಾಧಾರಣವಾಗಿ ಹಕ್ಕಿಲ್ಲದವರು ಬೇರೆಯವರ ಆಸ್ತಿಯನ್ನು ತಾತ್ಕಾಲಿಕ ಉದ್ದೇಶಗಳಿಂದ ಅನುಭವಿಸುವುದು ಕಂಡುಬರುತ್ತದೆ. ಇಂಥ ಅನುಭವದಿಂದ ಯಾವ ಹಕ್ಕುಗಳೂ ಪ್ರಾಪ್ತವಾಗಲಾರವು. ಅದೇ ಪ್ರಕಾರ ಕೆಲವೊಂದು ತಾತ್ಪೂರ್ತಿಕ ಕೆಲಸಗಳಿಗೆ ಅಥವಾ ಅನುಕೂಲಗಳಿಗೆ ಬೇರೆಯವರ ಆಸ್ತಿಯನ್ನು ಉಪಯೋಗಿಸಿದರೆ ಅಥವಾ ಅನುಭವಿಸಿದರೆ ಇದರಿಂದ ವಿರುದ್ಧ ಕಬ್ಜಾದ ಹಕ್ಕುಗಳು ಪ್ರಾಪ್ತವಾಗಲಾರವು. ಬೇರೆಯವರ ಜಮೀನಿನಲ್ಲಿ ಗೊಬ್ಬರ ಅಥವಾ ತಿಪ್ಪೆ ಹಾಕುವುದು, ಕಟ್ಟಿಗೆಕಲ್ಲು ಅಥವಾ ಹುಲ್ಲು ಇವುಗಳನ್ನು ಒಟ್ಟುವುದು ಅಥವಾ ಗುಡ್ಡೆ ಹಾಕುವುದು, ವಾಹನಗಳನ್ನು ನಿಲ್ಲಿಸುವುದು, ದನಕರುಗಳನ್ನು ಕಟ್ಟುವುದು, ಹಂಗಾಮಿ ಅಥವಾ ತಾತ್ಕಾಲಿಕವಾಗಿ ಬೇಲಿ ಅಥವಾ ಮುಳ್ಳು ಹಾಕುವುದು ಅಥವಾ ಗುಡಿಸಲು, ಚಪ್ಪರ ಹಾಕುವುದು ಇಂಥ ಅನುಭವ ಸಾಧಾರಣವಾಗಿ ಎಲ್ಲ ಕಡೆಯೂ ಕಂಡುಬರುತ್ತದೆ. ಇಂಥ ಅನುಭವ ಅಥವಾ ಉಪಯೋಗವನ್ನು ಕಾಯಿದೆ ದೃಷ್ಟಿಯಿಂದ ಕಬ್ಜಾ ಎಂದು ಪರಿಗಣಿಸಲಾಗುವುದಿಲ್ಲ. ಇಂಥ ಅನುಭವ ಅಥವಾ ಉಪಯೋಗದಿಂದ ಕಬ್ಜಾದ ಹಕ್ಕುಗಳಾಗಲಿ, ವಿರುದ್ಧ ಕಬ್ಜಾದ ಹಕ್ಕುಗಳಾಗಲಿ ಪ್ರಾಪ್ತವಾಗಲಾರವು.

ಯಾವ ರೀತಿಯ ಅನುಭವ ಅಥವಾ ಉಪಯೋಗದಿಂದ ವಿರುದ್ಧ ಕಬ್ಜಾದ ಹಕ್ಕುಗಳು ಪ್ರಾಪ್ತವಾಗುತ್ತವೆಯೆಂದು ಹೇಳಲು ಬರುವಂತಿಲ್ಲ. ವಿರುದ್ಧ ಹಕ್ಕುಗಳನ್ನು ಸ್ಥಾಪಿಸುವುದಕ್ಕೆ ಅಥವಾ ಪ್ರತ್ಯಕ್ಷ ಕಬ್ಜಾದ ಹಕ್ಕುಗಳು ಪ್ರಾಪ್ತವಾಗಿವೆಯೆಂದು ತಿಳಿಯುವುದಕ್ಕೆ ಸಾಧಾರಣವಾಗಿ ಆ ಆಸ್ತಿಯ ಸ್ವರೂಪ ಮತ್ತು ಮನೋಭಾವ ವ್ಯಕ್ತಮಾಡಿರುವ ರೀತಿಯಿಂದ ಮಾತ್ರ ತಿಳಿಯಲು ಸಾಧ್ಯ. ಆಸ್ತಿಯ ಅನುಭವವನ್ನು ಅದರ ಪರಿಸ್ಥಿತಿ, ಸ್ವಭಾವ, ಇರುವ ಸ್ಥಳ ಮತ್ತು ಅದು ಸಾಧಾರಣವಾಗಿ ಉಪಯೋಗವಾಗತಕ್ಕ ಕೆಲಸ ಮತ್ತು ರೀತಿ, ಇವುಗಳಿಂದ ಮಾತ್ರ ತಿಳಿಯಬೇಕು.

ವ್ಯಕ್ತಿಗಳ ವಿರುದ್ಧವಾಗಿಯಲ್ಲದೆ ಸಂಸ್ಥೆಗಳ ಮತ್ತು ಸರಕಾರದ ವಿರುದ್ಧ ಸಹ ಅನುಭವದ ಹಕ್ಕುಗಳನ್ನು ಪ್ರತಿಪಾದಿಸುವುದಕ್ಕೆ ಅವಕಾಶವಿದೆ. ಪ್ರತ್ಯಕ್ಷ ಅನುಭವದಲ್ಲಿರುವವನ ಮಾನಸಿಕ

ಭಾವನೆಯಿಂದಲೂ ಆ ಮಾನಸಿಕ ಭಾವನೆ ಕಾರ್ಯಗತವಾದ ರೀತಿಯಿಂದಲೂ ಅದನ್ನು ತಿಳಿಯಬೇಕು. ಕೆಲವು ವೇಳೆ ಅವನ ಮಾನಸಿಕ ಭಾವನೆಗಳ ಸಂಬಂಧವಾಗಿ ನಿರ್ಣಾಯಕ ಉತ್ತರ ಬರುವುದು ಸಾಧ್ಯವಿಲ್ಲದಿದ್ದಲ್ಲಿ ಅವನು ಯಾವ ರೀತಿ ತನ್ನ ಮಾನಸಿಕ ಧ್ಯೇಯವನ್ನು ಆಸ್ತಿಯ ಅನುಭವದಲ್ಲಿ ಅಳವಡಿಸುತ್ತಾನೆಯೋ ಅದರಿಂದ ನಿರ್ಣಯಿಸಬೇಕಾಗುತ್ತದೆ.

ವಿರುದ್ಧ ಕಬ್ಜಾದ ಹಕ್ಕುಗಳು ಕೇವಲ ಪ್ರತ್ಯಕ್ಷ ಸ್ವಾಧೀನಾನುಭವದಿಂದಲೇ ಪ್ರಾರಂಭವಾಗುತ್ತವೆಯೆಂದು ತಿಳಿಯಬಾರದು. ವಿರುದ್ಧ ಕಬ್ಜಾದ ಹಕ್ಕುಗಳನ್ನು ತಮ್ಮ ಪ್ರತಿನಿಧಿಗಳಿಂದ, ಕಾರ್ಯದರ್ಶಿಗಳಿಂದ, ತಮ್ಮ ಅನುಮತಿಯಿಂದ ಆಸ್ತಿಯನ್ನು ಅನುಭವಿಸುವವರಿಂದ ಸಹ ಗಳಿಸುವುದಕ್ಕೆ ಅವಕಾಶವಿದೆ. ಏಕೆಂದರೆ, ಮಾಲೀಕನ ಅನುಮತಿಯಿಂದ ಸ್ವಾಧೀನಾನುಭವದಲ್ಲಿರುವ ಆಸ್ತಿಯ ಸಂಬಂಧವಾಗಿ ಪ್ರಾಚೀನಾನುಭವದಿಂದಾಗಲೀ ವಿರುದ್ಧ ಕಬ್ಜಾದಿಂದಾಗಲೀ ಮಾಲೀಕನ ವಿರುದ್ಧ ಹಕ್ಕುಗಳು ಪ್ರಾಪ್ತವಾಗಲಾರವು.

ಸಾಧಾರಣವಾಗಿ ಮೂಲ ಮಾಲೀಕನಿಗೆ ಪ್ರತ್ಯಕ್ಷ ಅನುಭವದಾರ ತನಗೆ ವಿರುದ್ಧವಾಗಿ ಹಕ್ಕುಗಳನ್ನು ಪ್ರತಿಪಾದಿಸುತ್ತಿರುವವನೆಂಬ ಸಂಗತಿ ತಿಳಿದಿರಬೇಕು. ಹಾಗೆ ತಿಳಿಯದಿದ್ದಲ್ಲಿ ವಿರುದ್ಧ ಕಬ್ಜಾದ ವಹಿವಾಟು ಬಹಿರಂಗವಾಗಿರಬೇಕು. ಈ ರೀತಿ ಬಹಿರಂಗವಾಗಿ ಅನುಭವಿಸಿದರೆ ಮಾಲೀಕನಿಗೆ ಈ ವಿರುದ್ಧ ಹಕ್ಕು ಪ್ರತಿಪಾದನೆ ತಿಳಿದಿದೆಯೆಂದು ಪರಿಗಣಿಸಲಾಗುವುದು. ಇದೇ ರೀತಿ ಮಾಲೀಕನಿಗೆ ತಿಳಿಯದಿದ್ದರೂ ಅವನ ಪ್ರತಿನಿಧಿಗಳಿಗೆ ತಿಳಿದಿದ್ದಲ್ಲಿ ಅಂಥ ತಿಳುವಳಿಕೆ ಮೂಲ ಮಾಲೀಕನಿಗೆ ಇದೆ ಎಂದು ಪರಿಗಣಿಸಲಾಗುವುದು.

ವಿರುದ್ಧ ಕಬ್ಜಾದ ಹಕ್ಕು ಸ್ವಾಧೀನಾನುಭವದಲ್ಲಿರುವ ಸ್ವತ್ತಿಗೆ ಮಾತ್ರ ಪರಿಮಿತವಾಗಿರುತ್ತದೆ. ಒಂದು ಸ್ವತ್ತಿನ ಸ್ವಾಧೀನಾನುಭವದಿಂದ ಅನುಭವವಿಲ್ಲದ ಅಥವಾ ಕಬ್ಜಾ ಇಲ್ಲದೆ ಬೇರೆ ಆಸ್ತಿಗಳ ಸಂಬಂಧವಾಗಿ ಸಹ ವಿರುದ್ಧ ಕಬ್ಜಾದ ಹಕ್ಕು ಪ್ರಾಪ್ತವಾಗಿದೆಯೆಂದು ತಿಳಿಯಲಾಗದು. ಆದರೆ ಒಂದೇ ಅಖಂಡ ಆಸ್ತಿಯಿದ್ದಲ್ಲಿ ಅದರ ಯಾವುದೇ ಭಾಗ ವಿರುದ್ಧ ಅನುಭವಕ್ಕೆ ಒಳಗಾಗಿದ್ದು ಇತರ ಭಾಗಗಳ ಸಂಬಂಧವಾಗಿ ಮಾಲೀಕ ತನ್ನ ಹಕ್ಕುಗಳನ್ನು ಅನುಭವಿಸದಿದ್ದಲ್ಲಿ ಪೂರ್ಣ ಆಸ್ತಿಯ ಸಂಬಂಧವಾಗಿ ವಿರುದ್ಧ ಅನುಭವದ ಹಕ್ಕು ಪ್ರಾಪ್ತವಾಗಿದೆಯೆಂದು ತಿಳಿಯಬಹುದು.

ಅಗ್ರಾಹ್ಯವಾದ ಅಥವಾ ಅಯೋಗ್ಯವಾದ ಅಥವಾ ಕಾಯಿದೆಗೆ ವಿರುದ್ಧವಿರುವ ವ್ಯವಹಾರ ಅಥವಾ ಕಾಗದಪತ್ರಗಳಿಂದ ಪ್ರಾಪ್ತವಾದ ಹಕ್ಕುಗಳು ವ್ಯವಹಾರವಾಗುವ ಕಾಲದಲ್ಲೇ ನ್ಯಾಯಬಾಹಿರವಿರುವುದರಿಂದ ಕಾಯಿದೆಯಿಂದ ರಕ್ಷಿತವಾಗುವ ಹಕ್ಕುಗಳು ಉದ್ಭವಿಸುವುದಿಲ್ಲ. ಏಕೆಂದರೆ ಇಂಥ ವ್ಯವಹಾರದ ಪರಿಣಾಮವಾಗಿ ದೊರೆತ ಅನುಭವದಿಂದ ಕೇವಲ ವಿರುದ್ಧಾನುಭವದ ಹಕ್ಕು ಮಾತ್ರ ಪ್ರಾಪ್ತವಾಗುತ್ತದೆ. ಇಂಥ ಅನುಭವವನ್ನು ಅವ್ಯಾಹತವಾಗಿ ಕಾಲಮಿತಿ ಕಳೆಯುವವರೆಗೆ ಅನುಭವಿಸಿದಲ್ಲಿ ವಿರುದ್ಧಾನುಭವದಿಂದ ಪೂರ್ವದ ಮಾಲೀಕನ ಹಕ್ಕುಗಳು ನಷ್ಟವಾಗಿ ಅನುಭವದಾರನಿಗೆ ವಿರುದ್ಧವಾದ ಹಕ್ಕುಗಳು ಪ್ರಾಪ್ತವಾಗುತ್ತವೆ. ನ್ಯಾಯವಾಗಿ ಅಥವಾ ಅನ್ಯಾಯವಾಗಿ ತಾನೇ ಮಾಲೀಕನೆಂಬ ತಪ್ಪು ತಿಳಿವಳಿಕೆಯಿಂದ ಅಥವಾ ಬೇರೊಬ್ಬ ಮಾಲೀಕನೆಂದು ತಿಳಿದೂ ತನ್ನ ಮಾಲೀಕತನದ ಹಕ್ಕನ್ನು ಮಾಲೀಕನ ವಿರುದ್ಧ ಸ್ಥಾಪಿಸುವ ಉದ್ದೇಶದಿಂದ, ತಾನೇ ಮಾಲೀಕನೆಂದು ಪ್ರತಿಪಾದಿಸಿದರೆ ಅವನಿಗೆ ವಿರುದ್ಧ ಕಬ್ಜಾದ ಹಕ್ಕುಗಳು ಪ್ರಾಪ್ತವಾಗುತ್ತವೆ. ಈ ಹಕ್ಕು ನ್ಯಾಯಾನುಸಾರವಾಗಿ ಆರಂಭವಾಗದಿದ್ದರೂ ನಿರ್ದಿಷ್ಟ ವೇಳೆಯಲ್ಲಿ ಈ ಹಕ್ಕನ್ನು ಅಲ್ಲಗಳೆಯದಿದ್ದಲ್ಲಿ ಅದು ಕಾಲಾವಧಿಯ ಅನಂತರ ಪೂರ್ಣ ಮಾಲ್ಕಿಹಕ್ಕಿಗೆ ಪರಿವರ್ತನೆಯಾಗುತ್ತದೆ.

(ಎಂ.ಕೆ.ಎಸ್.ಡಬ್ಲ್ಯೂ.)

**ಕಾಲಮೇಘ** : ಅಕ್ಯಾಂತೇಸೀ ಕುಟುಂಬಕ್ಕೆ ಸೇರಿದ ಆಂಡ್ರೊಗ್ರಾಫಿಸ್ ಪ್ಯಾನಿಕ್ಯುಲೇಟ ಎನ್ನಲಾಗುವ ಸಸ್ಯ. ಇದಕ್ಕೆ ನೆಲಬೇರು ಎಂಬ ಹೆಸರೂ ಇದೆ. ಭಾರತದ ಮೈದಾನ ಪ್ರದೇಶಗಳಲ್ಲೆಲ್ಲ ಇದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದು ಊರ್ಧ್ವಾಭಿಗಾಮಿಯಾಗಿ ಬೆಳೆಯುವ ಏಕವಾರ್ಷಿಕ ಮೂಲಿಕೆ ಸಸ್ಯ. ಎಲೆಗಳು ಸರಳವಾಗಿದ್ದು ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಅವುಗಳ ಅಂಚು ಅಖಂಡ. ಹೂಗಳು ಅಂತ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗಳಲ್ಲಿ ಚಿಕ್ಕ ಗಾತ್ರದ ಬ್ರಾಕ್ಟ್ ಮತ್ತು ಬ್ರಾಕ್ಟಿಯೋಲುಗಳು ಇವೆ. ಪುಷ್ಪ ಪಾತ್ರೆ ಐದು ಪುಷ್ಪಗಳನ್ನೊಳಗೊಂಡಿದೆ. ಪುಷ್ಪದಳಗಳು 5. ಪರಸ್ಪರ ಕೂಡಿ ಕೊಂಡಿದ್ದು ಕೊಳವೆಯಾಕಾರದ ಪುಷ್ಪದಳ ವಲಯವಾಗಿದೆ. ಈ ವಲಯದ ಮುಂಭಾಗ ಮಾತ್ರ 2 ತುಟಿಗಳಾಗಿ ವಿಭಾಗವಾಗಿದೆ. ಕೇಸರಗಳು ಎರಡು. ಕೇಸರ ದಂಡ ಕೆಳಗಡೆ ಮತ್ತು ಮಧ್ಯದಲ್ಲಿ ಅಗಲವಾಗಿದೆ. ಪರಾಗಕೋಶದಲ್ಲಿ ಎರಡು ಕೋಣೆಗಳಿವೆ. ಪರಾಗಕೋಶದ ಕೆಳಗಡೆ ಬಿಳಿ ಕೂದಲಿನ ಗಡ್ಡದಂಥ ರಚನೆಗಳಿವೆ. ಅಂಡಾಶಯ ಉಚ್ಚಸ್ಥಾನದ್ದು; ಎರಡು ಕೋಣೆಗಳನ್ನೊಳಗೊಂಡಿದ್ದು ಪ್ರತಿಯೊಂದರಲ್ಲಿ 2–6 ಅಂಡಕಗಳಿವೆ. ಫಲ ಸಂಪುಟ ಮಾದರಿಯದು. ಕಾಯಿಯ ಒಳಗೆ ಬೀಜ ಪ್ರಸಾರಕ್ಕೆ ಸಹಾಯಕವಾಗುವ ರೆಟಿನ್ಯಾಕುಲ ಎಂಬ ರಚನೆಗಳಿವೆ.

ಕಾಲಮೇಘ ಔಷಧೀಯದೃಷ್ಟಿಯಿಂದ ಪ್ರಮುಖವಾಗಿದೆ. ರುಚಿ ಕಹಿ, ಎಲೆಗಳಿಂದ ದೊರೆಯುವ ಹೊಸ ರಸವನ್ನು ಏಲಕ್ಕಿ, ಲವಂಗ, ದಾಲ್ಚಿನ್ನಿಗಳೊಂದಿಗೆ ಸೇರಿಸಿ ಒಣಗಿಸಿ ಗುಳಿಗೆಗಳಾಗಿ ಮಾಡಿ ಚಿಕ್ಕ ಮಕ್ಕಳ ಹೊಟ್ಟೆನೋವಿಗೆ ಔಷಧಿಯಾಗಿ ಕೊಡುತ್ತಾರೆ. ಒಣಗಿಸಿದ ಕಾಂಡ ಮತ್ತು ಬೇರುಗಳಿಂದ ದೊರೆಯುವ ರಸ ಅಪಚನ ರೋಗ ಮತ್ತು ಇನ್‌ಫ್ಲುಯೆಂಜ಼ ಚಿಕಿತ್ಸೆಗಳಲ್ಲಿ ಉಪಯೋಗವಾಗುತ್ತದೆ. ಇದಕ್ಕೆ ಜ್ವರವನ್ನು ತಗ್ಗಿಸುವ ಗುಣವೂ ಇದೆ. ಆಮಶಂಕೆ ಮತ್ತು ಮಲೇರಿಯ ರೋಗ ಚಿಕಿತ್ಸೆಗಳಲ್ಲೂ ಈ ಸಸ್ಯದ ಪಾತ್ರ ಹಿರಿದು.

(ಪಿ.ಕೆ.ಆರ್.ಜಿ.)

**ಕಾಲಯವನ** : ಗರ್ಗಮಹರ್ಷಿಯ ಮಗ. ಕಪ್ಪಾಗಿದ್ದುದರಿಂದ ಈ ಹೆಸರಾಯಿತು. ಯಾದವರ ಪುರೋಹಿತನಾದ ಗರ್ಗಮುನಿ ನಿಷ್ಠಾವಂತ ಬ್ರಹ್ಮಚಾರಿ. ಕೆಲವು ಯಾದವರು ಇವನನ್ನು ಹೇಡಿ ಎಂದು ಅಪಮಾನ ಮಾಡಿದ್ದರಿಂದ ಸಿಟ್ಟುಗೊಂಡ ಮುನಿ ಯಾದವರನ್ನು ಧ್ವಂಸಮಾಡತಕ್ಕ ಒಬ್ಬ ಮಗ ಬೇಕೆಂದು ತನ್ನ ತಪೋಬಲದಿಂದ ಶಿವನನ್ನು ಬೇಡಿ ಕಾಲಯವನನ್ನು ಪಡೆದ. ಯಾದವರ ಶತ್ರುವಾದ ಯವನ ದೇಶದ ರಾಜ ಮಗುವಾಗಿದ್ದ ಕಾಲಯವನನ್ನು ತೆಗೆದುಕೊಂಡು ಹೋಗಿ ಸಾಕಿದ. ಸದಾ ಯಾದವರನ್ನು ಕಾಡುತ್ತಿದ್ದ ಈತನ ಮರಣ ಯಾದವರಿಂದ ಅಸಂಭವವೆಂಬ ರಹಸ್ಯ ಕೃಷ್ಣನಿಗೆ ತಿಳಿದಿತ್ತು. ಕೃಷ್ಣ ಇವನನ್ನು ಕೊಲ್ಲಲು ಒಂದು ಉಪಾಯ ಹೂಡಿದ. ಒಂದು ಸಲ ಇವನಿಗೆ ತಾನು ಸೋತವನಂತೆ ನಟಿಸಿ ಕೃಷ್ಣ ತಪ್ಪಿಸಿಕೊಂಡ ಓಡಿದ. ಕಾಲಯವನ ಕೃಷ್ಣನನ್ನು ಹಿಂಬಾಲಿಸಿ ಹೋದ. ದೇವಾಸುರ ಯುದ್ಧದಲ್ಲಿ ದೇವತೆಗೆ ಸಹಾಯ ಮಾಡಿದ ಮುಚುಕುಂದ ಚಕ್ರವರ್ತಿ ವಿಶ್ರಾಂತಿಯನ್ನು ಅಪೇಕ್ಷಿಸಿ ಯಾರೇ ಆಗಲಿ ತನ್ನ ನಿದ್ರೆಗೆ ಭಂಗ ತಂದವರು ಕೂಡಲೆ ಭಸ್ಮವಾಗಲೆಂಬ ವರ ಪಡೆದು ಗವಿಯೊಂದರಲ್ಲಿ ಮಲಗಿ ನಿದ್ರಿಸುತ್ತಿದ್ದ. ಕೃಷ್ಣ ಆ ಗವಿಯೊಳಗಡೆ ಹೋಗಿ ಅವಿತುಕೊಂಡ. ಹಿಂಬಾಲಿಸಿ ಬಂದ ಕಾಲಯವನ ಕತ್ತಲಲ್ಲಿ ಮಲಗಿದ್ದ ಮುಚುಕುಂದನನ್ನೇ ಕೃಷ್ಣನೆಂದು ಭ್ರಮಿಸಿ ಅವನನ್ನು ಕಾಲಿಂದ ಒದ್ದ. ನಿದ್ರಾಭಂಗದಿಂದ ಎಚ್ಚೆತ್ತ ಮುಚುಕುಂದನ ದೃಷ್ಟಿಪಾತದಿಂದ ಕಾಲಯವನ ಭಸ್ಮವಾದ. ಈ ವೃತ್ತಾಂತ ಹರಿವಂಶ, ವಿಷ್ಣುಪುರಾಣಗಳಲ್ಲಿ ಬಂದಿದೆ.

(ಕೆ.ಎಸ್.ವಿ.)

**ಕಾಲಯಶಸ್** : ಬೌದ್ಧಧರ್ಮಪ್ರಚಾರಕ್ಕಾಗಿ 5 ನೆಯ ಶತಮಾನದಲ್ಲಿ ಭಾರತದಿಂದ ಚೀನಕ್ಕೆ ಹೋದ ಬೌದ್ಧ ಭಿಕ್ಷು. ಇವನ ಹೆಸರನ್ನು ಚೀನೀಗೆ ಲಿಪ್ಯಂತರಗೊಳಿಸಿದರೆ ಅದು ಕಿಯಾಂಗ್–ಲಿಯಾಂಗ್–ಯೇ–ಷೇ ಎಂದಾಗುತ್ತದೆ. ಚೀನಿ ಭಾಷೆಯಲ್ಲಿ ಇವನ ಹೆಸರು ಷೇ–ಚೆಂಗ್. ಈತ ಬೌದ್ಧ ಧರ್ಮವನ್ನಾಶ್ರಯಿಸಿ ಅದರ ಪ್ರಚಾರಕ್ಕೆ ತನ್ನ ಜೀವಿತಕಾಲವನ್ನು ಮುಡಿಪಾಗಿಟ್ಟಿದ್ದ. ಅಭಿಧರ್ಮ, ವಿನಯ ಮತ್ತು ತ್ರಿಪಿಟಕಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದು ಅಭಿಧರ್ಮ ವಿಷಯದಲ್ಲಿ ಪೂರ್ಣ ಪಾಂಡಿತ್ಯ ಹೊಂದಿದ್ದ. ಬಹಳ ಕಷ್ಟಸಾಧ್ಯವಾದ ಮರಳ್ಗಾಡುಗಳ ಮಾರ್ಗವಾಗಿ ಪ್ರಯಾಣ ಮಾಡಿ 424 ರ ಸುಮಾರಿನಲ್ಲಿ ಯುವಾಷ್–ಕಿಯಾರವನ್ನು ತಲಪಿ ವೆನ್ ಚಕ್ರವರ್ತಿಯ ಅಪ್ಪಣೆಯ ಮೇರೆಗೆ ನಿರ್ಮಿತವಾದ ಹೊನಾನ್ ವಿಹಾರದಲ್ಲಿ ನೆಲಸಿದ. ತನ್ನ ಧರ್ಮಕ್ಕೆ ಸಂಬಂಧಿಸಿದ ಹಸ್ತಪ್ರತಿಗಳ ಶೇಖರಣೆ ಮತ್ತು ಬೌದ್ಧ ಧರ್ಮ ಪ್ರಚಾರಗಳಿಗಾಗಿ ದೇಶ ಪರ್ಯಟನ ಕಾರ್ಯದಲ್ಲಿ ನಿರತನಾದ. ಈತ ಚೀನೀ ಭಾಷೆಗೆ ಅನುವಾದಿಸಿದ ಭೈಷಜ್ಯಸೂತ್ರ ಮತ್ತು ಅಮಿತಾಯುರ್ಧ್ಯಾನ ಸೂತ್ರವೆಂಬ ಎರಡು ಗ್ರಂಥಗಳು ದೊರಕಿವೆ. ತನ್ನ 60 ನೆಯ ವಯಸ್ಸಿನಲ್ಲಿ (444) ಈತ ಮರಣಹೊಂದಿದ.

(ಬಿ.ಕೆ.ಜಿ.)

**ಕಾಲರ** : ವಿಬ್ರಿಯೋ ಕಾಲರೆ ಎಂಬ ಏಕಾಣುಜೀವಿಗಳ ಸೋಂಕಿನಿಂದ ವಿಪರೀತ ಭೇದಿ, ವಾಂತಿ, ನೀರು ಕಳೆತ, ಸ್ನಾಯುಗಳ ಸೆಳೆತ, ಮೂತ್ರ ಕಟ್ಟುವಿಕೆ ಇವೇ ಮುಂತಾದ ಲಕ್ಷಣಗಳ ಮೂಲಕ ಪ್ರಕಟವಾಗುವ ತೀವ್ರ ಸಾಂಕ್ರಾಮಿಕ ರೋಗ. ವಾಂತಿಭೇದಿ ಕಾಯಿಲೆ ಎಂದೂ ಕರೆಯುವುದುಂಟು. ರೋಗಿಗಳು ವಿಸರ್ಜಿಸಿದ ಮಲದಲ್ಲಿ ಕಾಲರ ರೋಗಾಣುಗಳನ್ನು ಕಂಡುದಾಗಿ ಫಿಲಿಕ್ಸ್ ಪುಶೆ ವರದಿಮಾಡಿದ (1949). ಆದರೂ 1883ರ ವರೆಗೆ ಈ ಏಕಾಣುಜೀವಿಗಳನ್ನು ಪ್ರತ್ಯೇಕಿಸಿ ಅವುಗಳ ಅಧ್ಯಯನ ನಡೆಸಲು ಸಾಧ್ಯವಾಗಲಿಲ್ಲ. ಕಾಲರ ರೋಗಕ್ಕೆ ವಿಬ್ರಿಯೋ ಕಾಲರೆ ಜೀವಿಗಳೇ ಕಾರಣವೆಂದು ಕಂಡುಹಿಡಿದು ದೃಢಪಡಿಸಿದ ಕೀರ್ತಿ ಜರ್ಮನ್ ಏಕಾಣುಜೀವಿಪರಿತ ರಾಬರ್ಟ್ ಕಾಕ್ ಎಂಬಾತನಿಗೆ ಸಲ್ಲತಕ್ಕದ್ದು (**ನೋಡಿ– ಕಾಕ್, ರಾಬರ್ಟ್**). ರೋಗ ಕೆಲವು ವೇಳೆ ಅತ್ಯುಗ್ರ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಕೆಲವು ವೇಳೆ ಅತಿ ಸೌಮ್ಯವಾಗಿಯೂ ಇರಬಹುದು. ಆಶ್ರಯದಾತನ ದೇಹವನ್ನು ರೋಗಾಣು ಹೊಕ್ಕು ಕೆಲವೇ ಗಂಟೆಗಳಿಂದ ಹಿಡಿದು 5 ದಿವಸಗಳೊಳಗಾಗಿ ರೋಗಲಕ್ಷಣಗಳನ್ನು ಪ್ರಕಟಿಸುತ್ತದೆ. ಧಾರಾಕಾರವಾಗಿ ಭೇದಿ ಮತ್ತು ವಾಂತಿಗಳಿಂದ ಪೀಡಿತನಾದ ರೋಗಿಯ ದೇಹದಿಂದ ನೀರು ವಿಸರ್ಜಿಸಲ್ಪಟ್ಟು ಜಾಗ್ರತೆ ಬತ್ತಿ ಬಾಡುತ್ತಾನೆ. ಕಣ್ಣುಗಳು ತೋಪಾಳ ಬಿದ್ದು ಕಾಂತಿಹೀನವಾಗುತ್ತವೆ. ನಾಲಗೆ ಒಣಗುತ್ತದೆ. ಮಾಂಸಖಂಡಗಳ ಬಿಗಿತ (ಕ್ರ್ಯಾಂಪ್ಸ್) ಪ್ರಾರಂಭವಾಗಿ ಮೂತ್ರ ವಿಸರ್ಜನೆ ನಿಂತುಹೋಗಿ ರೋಗಿಯ ಸ್ಥಿತಿ ಚಿಂತಾಜನಕವಾಗುತ್ತದೆ. ಚಿಕಿತ್ಸೆ ಗೊಳಪಡದ ರೋಗಿಗಳಲ್ಲಿ ಶೇ. 50 ಕ್ಕೂ ಅಧಿಕ ಸಂಖ್ಯೆಯಲ್ಲಿ ಮರಣಗಳು

ಆಗುತ್ತವೆ. ಈ ರೋಗದ ನೆಲೆವೀಡು ಆರತ ಮತ್ತು ಪಾಕಿಸ್ತಾನ್. ರೋಗ ವರ್ಷದುದ್ದಕ್ಕೂ ಕಾಣಿಸಿಕೊಳ್ಳುವ ಜಾಗಗಳಿವೆ. ಅಥವಾ ರೋಗ ಆಗಾಗ್ಗೆ ಪಿಡುಗು (ಎಪಿಡಮಿಕ್ಸ್) ರೂಪದಲ್ಲಿಯೂ ಹಬ್ಬುತ್ತದೆ.

ಕಾಲರ ರೋಗ ಪ್ರಾಚೀನ ಕಾಲದಿಂದಲೂ ಮಾನವ ಕೋಟಿಯನ್ನು ಕಾಡಿಸುತ್ತಿದೆ ಎಂಬುದಕ್ಕೆ ಆಧಾರಗಳಿವೆ. ಪ್ರ.ಶ.ಪೂ. 7ನೆಯ ಶತಮಾನದಲ್ಲಿ ಬರೆದದ್ದೆಂದು ನಂಬಲಾದ ಆರ್ಯುವೇದದ ಸುಶ್ರುತ ಸಂಹಿತೆಯಲಿಲ ವಿಶುಚಕ ಎಂಬ ಶಿರೋನಾಮೆಯಲ್ಲಿ ಈ ರೋಗದ ಸಂಪೂರ್ಣ ವರ್ಣನೆ ಇದೆ. ರೋಗ ನೆಲಸಿ ಕಾಣಿಸಿಕೊಳ್ಳಲು ಮುಖ್ಯವಾಗಿ ಮೂರು ಅಂಶಗಳು ಅತ್ಯಾವಶ್ಯಕ. ಗಾಳಿಯಲ್ಲಿ ತೇವಾಂಶ ಮತ್ತು ಉಷ್ಣಾಂಶ ಅಧಿಕವಾಗಿದ್ದು ನೀರು ಯಥೇಚ್ಛವಾಗಿರುವ ನದಿಯ ಮುಖಜ ಭೂಮಿಗಳೇ ಕಾಲರ ಸೋಂಕಿನ ತೌರು. 1871ರಿಂದ 1923ರ ವರೆಗೆ ಒಟ್ಟು ಆರು ಖಂಡಾಂತರ ವ್ಯಾಪನೆಗಳನ್ನು (ಪ್ಯಾಂಡೆಮಿಕ್ಸ್) ಗುರುತಿಸಬಹುದು. ಗಂಗಾನದಿಯ ಮುಖಜ ಭೂಮಿಯಾದ ಪಶ್ಚಿಮ ಬಂಗಾಳ ಮತ್ತು ಪಶ್ಚಿಮ ಪಾಕಿಸ್ತಾನ ಪ್ರದೇಶಗಳೇ ಈ ಆರು ಖಂಡಾಂತರ ಪಿಡುಗುಗಳಿಗೂ ಜನ್ಮಸ್ಥಾನ. ಕಾಲರ ಸೋಂಕಿಗೆ ಇಂದೂ ಈ ಪ್ರದೇಶಗಳೇ ಜನ್ಮಸ್ಥಾನಗಳೆಂದು ಹೇಳಬಹುದು. ಈ ಸ್ಥಳಗಳಿಂದ ಸೋಂಕು ಭೂ ಜಲಮಾರ್ಗಗಳ ಮುಖೇನ ಪ್ರಪಂಚದ ಇತರ ಪ್ರದೇಶಗಳಿಗೆ ಹರಡಿತು. 1923ರಿಂದ 1958ರೊಳಗೆ ಸೋಂಕು ಆಫ್ಘಾನಿಸ್ತಾನದಿಂದಾಚೆಗೆ ಅಷ್ಟಾಗಿ ಹರಡಲಿಲ್ಲವೆಂದು ಹೇಳಬಹುದು. ರೋಗದ ಸೋಂಕು ಈಜಿಪ್ಟ್ ಮತ್ತು ಸಿರಿಯ ದೇಶಗಳಲ್ಲಿ 1947–48ರಲ್ಲಿ ಅಲ್ಲಲ್ಲೆ ಕಾಣಿಸಿಕೊಂಡಿತು.

ಸಾಚ ಕಾಲರ (ಟ್ರೂ ಕಾಲರ) ರೋಗಕ್ಕೆ ಮೊಟ್ಟ ಮೊದಲಿನಿಂದಲೂ ರಕ್ತ ಕಣ ವರ್ಣದ್ರವ್ಯವನ್ನು ಸ್ರವಿಸಲಾರದ (ನಾನ್‌ಹೆಮೊಲಿಟಿಕ್) ಪಂಗಡಕ್ಕೆ ಸೇರಿದ ಕಾಲರ ರೋಗಾಣಗಳೇ ಕಾರಣ ಎಂದು ನಿರ್ಧರಿಸಲಾಗಿತ್ತು. ಈ ರೋಗಾಣುಗಳಿಗೆ ಅಂಗೀಕೃತ ಕಾಲರ ರೋಗಾಣುಗಳೆಂದು (ಕ್ಲಾಸಿಕಲ್ ಕಾಲರ ವಿಬ್ರಿಯೋಸ್) ಹೆಸರು. ಆದರೆ 1905ರಲ್ಲಿ ರೋಗದಿಂದ ಮಡಿದ ಕೆಲವು ಮೆಕ್ಕ ಯಾತ್ರಿಕರ ಶವಪರೀಕ್ಷೆ ಎಲ್‌ಟಾರ್ ಎಂಬಲ್ಲಿ ಸ್ಥಾಪಿಸಿದ್ದ ಕ್ವಾರನ್‌ಟೆನ್ ಠಾಣ್ಯದಲ್ಲಿ ನಡೆಸಿದಾಗ ಅದುವರೆಗೂ ಕಾಲರ ರೋಗದ ಸೋಂಕುಂಟುಮಾಡುವುದಿಲ್ಲವೆಂಬುದಾಗಿ ನಂಬಲಾಗಿದ್ದ ವಿಬ್ರಿಯೋಗಳ ಪಾತ್ರ ಬೆಳಕಿಗೆ ಬಂದಿತು. ಈ ಅಂಗೀಕೃತವಾಗದ ಹಾಗೂ ಕಾಲರ ರೋಗದ ಸೋಂಕುಂಟುಮಾಡಬಲ್ಲ ರೋಗಾಣುಗಳಿಗೆ ಎಲ್‌ಟಾರ್ ವಿಬ್ರಿಯೋ ಎಂದು ನಾಮಕರಣ ಮಾಡಲಾಯಿತು. ಇಂಡೋನೇಷ್ಯದ ಸುಲಾವೇಶಿ ದ್ವೀಪದ 1937ರ ಉಪದ್ರವಕ್ಕೆ ಎಲ್‌ಟಾರ್ ವಿಬ್ರಿಯೋಗಳೇ ಕಾರಣ. ಎರಡನೆಯ ಮಹಾಯುದ್ಧದ ಅನಂತರವೂ ಇಂಡೋನೇಷ್ಯದ ಅನೇಕ ಪ್ರದೇಶಗಳಲ್ಲಿ ಕಾಣಿಸಿಕೊಂಡ ಕಾಲರ ರೋಗಕ್ಕೆ ಎಲ್‌ಟಾರ್‌ಗಳೇ ಕಾರಣವೆಂದು ತಿಳಿಯಿತು. ಈ ಸ್ಥಳಗಳಲ್ಲಿ ಬಹುಕಾಲದಿಂದಲೂ ಕಾಲರ ರೋಗ ಇದ್ದರೂ ರೋಗಕ್ಕೆ ಆಗ ಅಂಗೀಕೃತ ವಿಬ್ರಿಯೋಗಳೇ ಕಾರಣವಾಗಿದ್ದುವು.

1961ರಲ್ಲಿ ಏಷ್ಯ ಖಂಡದ ಅನೇಕ ಪ್ರದೇಶಗಳಲ್ಲಿ ಪ್ರಾರಂಬವಾದ ಕಾಲರ ಎಲ್‌ಟಾರ್ ವಿಬ್ರಿಯೋಗಗಳಿಂದ ಎಂಬುದು ಖಚಿತವಾಯಿತು. ಇಲ್ಲಿಂದ ಜಪಾನ್ ದೇಶಕ್ಕೂ ಸೋಂಕು ಹರಡಿತು. ಆದರೆ ಆ ದೇಶದಲ್ಲಿ ಸೋಂಕು ನೆಲಸಲಿಲ್ಲ. 1964ರಲ್ಲಿ ಕಲ್ಕತ್ತ ನಗರದಲ್ಲಿ ರೋಗ ಕಾಣಿಸಿಕೊಂಡಿತು. ರೋಗಿಗಳ ಮಲಪರೀಕ್ಷೆ ನಡೆಸಿದಾಗ ಕೆಲವರಲ್ಲಿ ಅಂಗೀಕೃತವಾದ ವಿಬ್ರಿಯೋಗಳೂ ಮತ್ತೆ ಕೆಲವರಲ್ಲಿ ಎಲ್‌ಟಾರ್ ವಿಬ್ರಿಯೋಗಳೂ ಕಾರಣವೆಂದು ತಿಳಿದು ಬಂದಿತು. ಯಾವ ರೋಗಾಣುವಿನಿಂದ ಪ್ರಚೋದಿತವಾದರೂ ರೋಗಲಕ್ಷಣಗಳಲ್ಲಿ ಯಾವ ವ್ಯತ್ಯಾಸವೂ ಕಂಡುಬರಲಿಲ್ಲ. ಕೇರಳ, ಪಂಜಾಬ್ ರಾಜ್ಯಗಳಲ್ಲಿ ಕಾಲರ ಸೋಂಕಿರಲಿಲ್ಲ. ಈ ಸ್ಥಳಗಳಲ್ಲಿಯೂ ಕಾಲರ ಪ್ರಾರಂಭವಾಯಿತು. ಹಾಗೂ ರೋಗಕ್ಕೆ ಎಲ್‌ಟಾರ್ ವಿಬ್ರಿಯೋಗಳೇ ಕಾರಣವೆಂಬುದು ನಿರ್ಧರವಾಯಿತು. 1965–66ರ ಹೊತ್ತಿಗೆ ಭಾರತ ದೇಶದ ನೆರೆನಾಡುಗಳಾದ ನೇಪಾಳ, ಆಫ್ಘಾನಿಸ್ತಾನ, ಪಶ್ಚಿಮ ಪಾಕಿಸ್ತಾನಗಳಲ್ಲೂ ಎಲ್‌ಟಾರ್ ಕಾಲರ ಹರಡಿತು. ಅಲ್ಲಿಂದ ಇರಾನ್, ಇರಾಕ್, ಉಜ್ಬೆಕಿಸ್ತಾನಗಳಲ್ಲಿ ಕಾಣಿಸಿಕೊಂಡಿತು. 1967ರಲ್ಲಿ ಹೊಸ ಜಾಗಗಳಲ್ಲಿ ಎಲ್‌ಟಾರ್ ಕಾಲರ ವರದಿಯಾಗಿಲ್ಲ. 1968ರಲ್ಲಿ ಪಶ್ಚಿಮ ಪಾಕಿಸ್ತಾನದಲ್ಲಿ ಕಂಡ ಉಪದ್ರವ ಅಂಗೀಕೃತ ವಿಬ್ರಿಯೋಗಳಿಂದ ಪ್ರಾರಂಭವಾದ್ದು. 1970ರಲ್ಲಿ ರಷ್ಯ ದೇಶದ ಒಂದು ಪ್ರದೇಶದಲ್ಲಿ ಕಾಲರ ಸಾಂಕ್ರಾಮಿಕ ತಲೆದೋರಿದೆ ಎಂದು ವರದಿಯಾಗಿತ್ತು. 1970ರಲ್ಲಿ ಬಂದ ವೃತ್ತಾಂತ ಪತ್ರಿಕೆಗಳ ವರದಿಯ ಪ್ರಕಾರ ಢಾಕ ಪ್ರದೇಶದಲ್ಲಿ ಸಮುದ್ರದ ಅಲೆಗಳ ಅಸಾಧಾರಣ ಏರುಬ್ಬರದಿಂದ ಅಸಂಖ್ಯಾತ ಜನಗಳು ಅಸು ನೀಗಿರುವುದಲ್ಲದೆ ಆ ಪ್ರದೇಶದಲ್ಲಿ ಕಾಲರ ಉಪದ್ರವ ಭಯಂಕರ ರೂಪದಲ್ಲಿ ತಲೆದೋರಿತ್ತು.

ಭಾರತದಲ್ಲಿ ವರ್ಷದುದ್ದಕ್ಕೂ ಸೋಂಕನ್ನು ಬಿತ್ತುವ ನೆಲೆವೀಡುಗಳು ಐದು. 1. ಪಶ್ಚಿಮ ಬಂಗಾಳದಲ್ಲಿ ಗಂಗಾನದಿ ಮುಖಜಭೂಮಿ ಪ್ರದೇಶ. ಈ ಪ್ರದೇಶಕ್ಕೆ ಸಾಚಾ ಕಾಲರದ ತೌರುಮನೆ ಎಂದು ಕರೆಯುವುದೂ ಉಂಟು. 2. ಬಿಹಾರ ಮತ್ತು ಉತ್ತರ ಪ್ರದೇಶಗಳ ಒಳನಾಡಿನ ಜಲಾನಯನ ಪ್ರದೇಶಗಳು ಅಂದರೆ ಗಂಗಾ ಮತ್ತು ಅದನ್ನು ಸೇರುವ ಕೋಸೀ, ಗಂಡಕೀ, ಸೋನ, ಗೋಗ್ರಾ ಮತ್ತು ಗೋಮತಿ ನದಿಗಳ ಮುಖಜಭೂಮಿ. 3. ಒರಿಸ್ಸ ಪ್ರಾಂತ್ಯದಲ್ಲಿ ಮಹಾನದಿ ಮುಖಜಭೂಮಿ ಪ್ರದೇಶ. 4. ಆಂಧ್ರದ ಗೋದಾವರಿ ಮತ್ತು ಕೃಷ್ಣಾನದಿಗಳ ಮುಖಜಭೂಮಿ ಪ್ರದೇಶಗಳು. 5. ತಮಿಳುನಾಡು ರಾಜ್ಯದಲ್ಲಿನ ಕಾವೇರಿ ಮುಖಜಭೂಮಿ ಪ್ರದೇಶ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಕಾಲರ ಸೋಂಕು ನೆಲೆಸಿರಲಿಲ್ಲ. ಇತ್ತೀಚೆಗೆ ಈ ರಾಜ್ಯಗಳೂ ಸೋಂಕು ನೆಲೆಸಿರುವ ಸ್ಥಳಗಳೆಂದು ಪರಿಗಣಿಸಿಲಾಗಿದೆ.

ಇದೀಗ ನಡೆಸಿದ ಸಮೀಕ್ಷೆಯ ಪರಿಣಾಮವಾಗಿ ರೋಗದ ಜನ್ಮಸ್ಥಾನ ತಾತ್ಕಾಲಿಕವಾಗಿಯಾದರೂ ಪಶ್ಚಿಮ ಬಂಗಾಳದಿಂದ ತಮಿಳು ನಾಡಿಗೆ ಬದಲಾವಣೆಯಾಗಿದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಇಲ್ಲಿಂದ ಎಲ್‌ಟಾರ್ ಕಾಲರ ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಗೆ ಪ್ರಸರಿಸಿದೆ. ಜನಸಾಂದ್ರತೆ ಅತ್ಯಧಿಕವಿರುವ ಸ್ಥಳಗಳು, ತಗ್ಗು ಪ್ರದೇಶಗಳು, ನದಿಗಳು ಹರಿಯುವೆಡೆ ಮತ್ತು ವಾಯುವಿನಲ್ಲಿ ಅಧಿಕ ತೇವಾಂಶ ವಿರುವ ಸ್ಥಿತಿ ರೋಗದ ಸೋಂಕು ಖಾಯಂ ಆಗಿ ನೆಲಸುವ ಪ್ರದೇಶಗಳು.

**ಕಾಲರ ರೋಗಾಣು:** (ಕಾಲರ ವಿಬ್ರಿಯೋಗಳು) ವಿಬ್ರಿಯೋಗಳಲ್ಲಿ ಎರಡು ಗುಂಪುಗಳು. ಕಾಲರ ವಿಬ್ರಿಯೋ ಹಾಗೂ ಅವುಗಳಂತಿರುವುವು ಒಂದು ಗುಂಪು. ರೋಗಕ್ಕೆ ಕಾರಣವಲ್ಲದ ವಿಬ್ರಿಯೋಗಳು ಮತ್ತೊಂದು ಗುಂಪು. ಮೊದಲಿನ ಗುಂಪಿಗೆ ಸೇರಿದ ವಿಬ್ರಿಯೋಗಳ ವಿಚಾರ ಪರಿಶೀಲಿಸೋಣ. ವಿಬ್ರಿಯೋ ಏಕಾಣು ಜೀವಿಗಳು. ಇವು ಗ್ರಾಮ್ ವರ್ಣ ವರ್ಜಿಸುತ್ತವೆ (ಗ್ರಾಮ್ ನೆಗೆಟಿವ್). ಆಕಾರದಲ್ಲಿ ಅರ್ಧವಿರಾಮದಂತೆ, ಚಟುವಟಿಕೆಯಿಂದ ಚಲಿಸಲು ಅವುಗಳಿಗೆ ಸಾಧ್ಯ. ಪ್ರಯೋಗ ಶಾಲೆಗಳಲ್ಲಿ ಸುಲಭವಾಗಿ ಬೆಳಸಬಹುದು. ಪೆಪ್‌ಟೋನ್ ನೀರಿನಲ್ಲಿ ಅಥವಾ ಇನ್ನೂ ಕೆಲವು ಆಹಾರ ಸಾಮಗ್ರಿ ಮಾಧ್ಯಮಗಳಲ್ಲಿ (ಮೀಡಿಯ) 37°ಸೆಂ. ಉಷ್ಣತೆ ಮತ್ತು 7.4–9.6 ಪಿ.ಎಚ್. ಆಮ್ಲತೆಯಲ್ಲಿ ಬೆಳಸಬಹುದು. ಕೆಲವು ಸಕ್ಕರೆ ದ್ರವಗಳಲ್ಲಿ ಹುದುಗೆಬ್ಬಿಸುವ ಶಕ್ತಿ ಇವಕ್ಕೆ ಇದೆ. ಈ ಸಾಮರ್ಥ್ಯವನ್ನಾಧಾರವಾಗಿಟ್ಟುಕೊಂಡು ಈ ವಿಬ್ರಿಯೋಗಳ ವಿಂಗಡಣೆ ಸಾಧ್ಯ. ಹೈಬರ್ಗ್ ಎಂಬಾತ ಈ ಆಧಾರದ ಮೇಲೆ ವಿಬ್ರಿಯೋಗಳನ್ನು ಆರು ಗುಂಪುಗಳಾಗಿ ವಿಂಗಡಿಸಿದ್ದಾನೆ. ಮ್ಯಾನೋಸ್ ಮತ್ತು ಸುಕ್ರೋಸ್‌ಗಳಲ್ಲಿ ಹುದುಗೆಬ್ಬಿಸುವ ಹಾಗೂ ಅರಾಬಿನೋಸ್‌ನಲ್ಲಿ ಹುದುಗೆಬ್ಬಿಸಲಾಗದ ವಿಬ್ರಿಯೋಗಳೇ ಸಾಚಾ ಕಾಲರ ರೋಗಾಣುಗಳೆಂದು ಅಂಗೀಕೃತವಾಗಿವೆ. ಇವು ಹೈಬರ್ಗ್‌ನ 1ನೆಯ ಗುಂಪಿಗೆ ಸೇರಿದವುಗಳು.

ರಕ್ತದ್ರವ (ಸೀರಂ) ಪ್ರತಿಕ್ರಿಯೆಯಿಂದಲೂ ವರ್ಗೀಕರಣ ಸಾಧ್ಯ. ಗಾರ್ಡನರ್ ಮತ್ತು ವೆಂಕಟರಾಮನ್ ಎನ್ನುವವರು ಈ ಪ್ರತಿಕ್ರಿಯೆಯ ಆಧಾರದ ಮೇಲೆ ವಿಬ್ರಿಯೋಗಳನ್ನು ವರ್ಗೀಕರಿಸಿದ್ದಾರೆ. ಇವುಗಳಲ್ಲಿ H ಮತ್ತು O ಎಂಬ ಎರಡು ವಿಧದ ಪ್ರತಿವಿಷಜನಕಗಳು (ಆಂಟಿಜೆನ್ಸ್) ಇವೆ. H ಅಧಿಕ ಉಷ್ಣತೆಗಳಲ್ಲಿ ನಾಶವಾಗುತ್ತವೆ. ವಿಬ್ರಿಯೋಗಳಲ್ಲಿ A ಮತ್ತು B ಎಂಬ ಎರಡು ಗುಂಪುಗಳನ್ನು ಮಾಡಿದ್ದಾರೆ. O ಪ್ರತಿ ವಿಷಜನಕವನ್ನು ಹೊಂದಿದ A ಗುಂಪಿನ ರೋಗಾಣುಗಳನ್ನು ಆರು ಒಳಗುಂಪುಗಳಾಗಿ ವಿಂಗಡಿಸಲಾಗಿದೆ. ಸಾಚಾಕಾಲರ ರೋಗಾಣುಗಳು ಅಂದರೆ ಅಧಿಕೃತ ರೋಗಾಣುಗಳು O ಗುಂಪಿನ Iನೆಯ ಒಳಗುಂಪಿಗೆ ಸೇರಿದವು. ಈ ರೋಗಾಣುಗಳು ರಕ್ತ ಕಣಗಳೊಂದಿಗೆ ಬೆರೆತಾಗ ಕಣಗಳ ಕೋಶ ಪೊರೆ ಒಡೆದು ವರ್ಣಸ್ರಾವವಾಗುವುದಿಲ್ಲ. ಅಂದರೆ ಇವು ನಾನ್‌ಹೆಮೊಲಿಟಿಕ್ ಪಂಗಡಕ್ಕೆ ಸೇರಿದವು. ಈ ರೋಗಾಣುಗಳಲ್ಲೇ ಇನಾಬ, ಒಗಾವ ಮತ್ತು ಹಿಕೋಜಿಮ ಎಂಬ ಮೂರು ಜಾತಿ ವಿಬ್ರಿಯೋಗಳನ್ನು ಗುರುತಿಸಬಹುದು. O ಗುಂಪಿನ ಉಳಿದ ಐದು (II ರಿಂದ VI) ಒಳಗುಂಪಿನ ವಿಬ್ರಿಯೋಗಳಿಗೆ ಪ್ಯಾರ ಕಾಲರ ಅಥವಾ ಕಾಲರ ರೋಗಾಣುಗಳಂತಿರುವ ವಿಬ್ರಿಯೋಗಳೆಂದು ಹೆಸರು.

ಏಕಾಣುಜೀವ ಭಕ್ಷಕ ಅಥವಾ ಫಾಜ್ ಸೂಕ್ಷ್ಮಾಣುಗಳ (ಬ್ಯಾಕ್ಟೀರಿಯೋಫಾಜ್ ಒಂದು ವಿಧದ ವೈರಸ್ ಎಂದು ನಂಬಲಾದ) ಮೇಲೆ ಉಂಟಾಗುವ ಪರಿಣಾಮವನ್ನು ಗಮನಿಸಿ ಅದರ ಆಧಾರದ ಮೇಲೆ ಮುಖರ್ಜಿಯವರು ವಿಬ್ರಿಯೋಗಳನ್ನು ಐದು ವಿಧವಾಗಿ ವಿಂಗಡಿಸಿದ್ದಾರೆ. ಅಂಗೀಕೃತವಾದ ಕಾಲರ ರೋಗಾಣುಗಳು IV ನೆಯ ಗುಂಪಿನ ಫಾಜ್ ಸೂಕ್ಷ್ಮಾಣುಗಳಿಂದ ನಾಶ ಹೊಂದುತ್ತವೆ. ಆದರೆ ಎಲ್‌ಟಾರ್ ಗುಂಪಿಗೆ ಸೇರಿದ ವಿಬ್ರಿಯೋಗಗಳ ಮೇಲೆ ಯಾವ ಪರಿಣಾಮವೂ ಇಲ್ಲ. ಎಲ್‌ಟಾರ್ ಗುಂಪಿಗೆ ಸೇರಿದ ವಿಬ್ರಿಯೋಗಳ ಮೇಲೆ ಯಾವ ಪರಿಣಾಮವೂ ಇಲ್ಲ. ಎಲ್‌ಟಾರ್ ವಿಬ್ರಿಯೋಗಳನ್ನು ಸಾಧಾರಣವಾಗಿ ಕುರಿ ಅಥವಾ ಮೇಕೆಗಳ ರಕ್ತಕಣಗಳೊಂದಿಗೆ ಬೆರೆಸಿದಾಗ ವರ್ಣದ್ರವ್ಯವನ್ನು ಹೊರ ಸ್ರವಿಸುತ್ತವೆ. (ಹ್ಯಾಮೊಲಿಟಿಕ್) ಮತ್ತು IV ನೆಯ ಗುಂಪಿನ ಫಾಜ್ ಸೂಕ್ಷ್ಮಾಣುಗಳನ್ನು ಮತ್ತು ಪಾಲಿಮಿಕ್ಸಿನ್‌ಗಳನ್ನು ನಿಗ್ರಹಿಸುತ್ತವೆ. ಕೋಳಿಗಳ ರಕ್ತ ಕಣಗಳೊಂದಿಗೆ ಬೆರೆತರೆ ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡುತ್ತವೆ. ಅಸಿಟೈಲ್ ಮಿಥೈಲ್ ಕಾರ್ಬಿನಾಲನ್ನು

ಉತ್ಪತ್ತಿ ಮಾಡುತ್ತವೆ (ವಿ.ಪಿ. ಪಾಸಿಟಿವ್). ಅಂಗೀಕೃತ ಕಾಲರ ರೋಗಾಣುಗಳೊಂದಿಗೆ ದೇಹದ ಹೊರಗಡೆ ಮಿಶ್ರ ಮಾಡಿದ ಕೆಲವೇ ಗಂಟೆಗಳಲ್ಲಿ ಅವನ್ನು ನಾಶಪಡಿಸುತ್ತವೆ.

ಕಾಲರ ವಿಬ್ರಿಯೋಗಳು 56° ಸೆಂ. ಉಷ್ಣತೆಯಲ್ಲಿ 30 ಮಿನಿಟುಗಳ ಸಂಪರ್ಕ ಕಾಲದಲ್ಲಿ ಪೂರ್ಣ ನಾಶ ಹೊಂದುತ್ತವೆ. ಕುದಿಸಿದ ನೀರು, ಬೇಯಿಸಿದ ಆಹಾರ ಪದಾರ್ಥಗಳಲ್ಲಿ ಅವು ಉಳಿಯಲಾರವು. ಮಂಜುಗೆಡ್ಡೆಗಳಲ್ಲಿ 4–6ವಾರಗಳ ವರೆಗೆ ಜೀವಂತವಾಗಿರಬಲ್ಲವು. ಸೂರ್ಯನ ಬೆಳಕು ಹಾಗೂ ತೇವ ಈ ಜೀವಾಣುಗಳು ಉಳಿವಿಗೆ ಅವಶ್ಯಕ; ಇವುಗಳ ಅಭಾವದಲ್ಲಿ ಕೆಲವೇ ಗಂಟೆಗಳಲ್ಲಿ ನಾಶವಾಗುತ್ತವೆ. ಟಾರ್ ಕ್ರಿಮಿನಾಶಕಗಳಿಂದ ಅಥವಾ ಚಲುವೆಪುಡಿಯ ಪರಿಣಾಮದಿಂದ ಸುಲಭವಾಗಿ ನಿರ್ನಾಮವಾಗುತ್ತವೆ. ಎಲ್‌ಟಾರ್ ವಿಬ್ರಿಯೋಗಳು ಅಂಗೀಕೃತ ಕಾಲರ ವಿಬ್ರಿಯೋಗಳಿಗಿಂತ ಹೆಚ್ಚು ನಿಗ್ರಹಣ ಶಕ್ತಿ ಪಡೆದಿವೆ.

ಕಾಲರ ರೋಗಾಣುಗಳು ಮನುಷ್ಯರ ದೇಹದಿಂದ ವಾಂತಿಭೇದಿಗಳಲ್ಲಿ ವಿಸರ್ಜಿತವಾಗುತ್ತವೆ. ಪ್ರತಿ ರೋಗಿಗೂ ಕಡೇ ಪಕ್ಷ ಹತ್ತು ಮಂದಿ ರೋಗಲಕ್ಷಣಗಳಿಲ್ಲದವರಿರುತ್ತಾರೆಂದು ಅಂದಾಜು ಮಾಡಿದ್ದಾರೆ. ಈ ಹತ್ತು ಮಂದಿ ರೋಗಾಣುಗಳುಳ್ಳವರು ಇತರರಿಗೆ ಸೋಂಕನ್ನು ಅಂಟಿಸಬಲ್ಲ ವಾಹಕರು. ರೋಗಾಣುವಾಹಕರಲ್ಲಿ ಮೂರು ವಿಧ: ರೋಗಲಕ್ಷಣಗಳಿನ್ನೂ ಹೊರಬೀಳದವರು (ಇಂಕುವೇಟರಿ ಕ್ಯಾರಿಯರ್ಸ್), ರೋಗದಿಂದ ಹಿಂದೆ ನರಳಿ ಚೇತರಿಸಿಕೊಳ್ಳುತ್ತಿರುವವರು (ಕನ್‌ವಾಲಸೆಂಟ್ ಕ್ಯಾರಿಯರ್ಸ್) ಹಾಗೂ ರೋಗದಿಂದಲೂ ನರಳಸೆ ರೋಗಾಣುಗಳನ್ನು ಹೊತ್ತು ಸಾಗಿಸುವವರು (ಹೆಲ್ದಿ ಕ್ಯಾರಯರ್ಸ್).

ರೋಗದ ನೆಲೆಗಳಲ್ಲಿ ರೋಗಾಣು ವಾಹಕರ ವ್ಯಾಪನೆ ಅಂದಾಜು ಮಾಡಲಾಗಿದೆ. ರೋಗಿಯ ಸಂಪರ್ಕ ಹೊಂದಿದವರಲ್ಲಿ ಶೇ. 1.5 ವಾಹಕರು, ರೋಗಿಯ ಕುಟುಂಬದವರಲ್ಲಿ ಶೇ. 4–20 ವಾಹಕರು ಇರುವರೆಂದು ನಂಬಲಾಗಿದೆ. ಈ ವಾಹಕರು 5 ದಿವಸಗಳಿಂದ



3 ವಾರಗಳಿಗೂ ಹೆಚ್ಚು ಅವಧಿ ರೋಗಾಣುಗಳು ವಿಸರ್ಜಿಸಲಾಗುತ್ತಿದ್ದರೆ ಅವರನ್ನು ಯಾವತ್ತೂ ವಿಸರ್ಜಿಸುವ ವಾಹಕರನ್ನೆ ಬಹುದು. ರೋಗಾಣು ವಾಹಕರ ಸಂಖ್ಯೆ ಎಲ್‌ಟಾರ್ ರೋಗಾಣು ಹೊಂದಿದವರಲ್ಲಿ ಅಧಿಕ. ಇವರಲ್ಲಿ 7 ವರ್ಷಗಲ ವರೆಗೆ ವಿಸರ್ಜಿಸುವವರೂ ಇದ್ದಾರೆಂದು ತಿಳಿದು ಬಂದಿದೆ. ಈ ರೋಗ ಒಂದು ಸ್ಥಳದಲ್ಲಿ ಶಾಶ್ವತವಾಗಿ ನೆಲಸುವುದಕ್ಕೂ ಅಥವಾ ಆಗಾಗ್ಗೆ ಪಿಡುಗು ರೂಪದಲ್ಲಿ ಕಾಣಿಸಿಕೊಳ್ಳುವುದಕ್ಕೂ ರೋಗವಾಹಕರೇ ಕಾರಣವೆಂಬುದು ಇದೀಗ ಸ್ಪಷ್ಟವಾಗಿದೆ. ರೋಗಾಣುವಾಹಕರನ್ನು ಮಲಮೂತ್ರಗಳ ಪರೀಕ್ಷೆಗಳಿಂದ ಕಂಡುಹಿಡಿಯಬಹುದು. ಕಾಲರ ರೋಗಕ್ಕೆ ಸಂಬಂಧಿಸಿದಂತೆ ಎರಡು ವಿಧದ ಪ್ರತಿವಿಷಜನಕಗಳಿವೆ. (ಅಂಟಿಜನ್ಸ್). ಒಂದು ರೋಗಾಣು; ಮತ್ತೊಂದು, ಅದರಿಂದ ಉತ್ಪತ್ತಿಯಾಗುವ ಎಂಟೆರೋಟಾಕ್ಸಿನ್ ಎಂಬ ವಿಷ. ಈ ಎರಡು ವಿಧದ ಪ್ರತಿವಿಷ ಜನಕಗಳೂ ದೇಹದಲ್ಲಿ ಪ್ರತ್ಯೇಕ ಪ್ರತಿವಿಷವಸ್ತುಗಳನ್ನು (ಆಂಟಿಬಾಡೀಸ್) ಪ್ರಚೋದಿಸುತ್ತವೆ. ಎಂಟೆರೋಟಾಕ್ಸಿನ್ ವಿಷವೇ ರೋಗಿಯಲ್ಲಿ ಕಾಣುವ ಗುಣಲಕ್ಷಣಗಳಿಗೆ ಕಾರಣ.

ಒಂದು ಸ್ಥಳದಲ್ಲಿ ಕಾಲರ ರೋಗ ಮೊದಲಿನಿಂದಲೂ ಇಲ್ಲದೆ ಇದ್ದಕ್ಕಿದ್ದಂತೆ ಬಂದರೆ ರೋಗ ಎಲ್ಲ ವಯಸ್ಸಿನವರಲ್ಲೂ ಕಾಣುತ್ತವೆ. ಆದರೆ ರೋಗನೆಲೆಗಳಲ್ಲಿ ಅಧಿಕವಾಗಿ ನರಳುವವರು ಮಕ್ಕಳು. ವಯಸ್ಸಾದಂತೆ ರೋಗನೆಲೆಗಳಲ್ಲಿ ಸೋಂಕಿನ ಸಂಪರ್ಕದಿಂದ ನಿರೋಧಶಕ್ತಿ ಬೆಳೆಯಲವಕಾಶವಿದೆ. ಗರ್ಭಿಣಿಯರಲ್ಲಿ ರೋಗ ಸಾಮಾನ್ಯವಾಗಿ ಉಗ್ರ ರೂಪ ತಾಳುತ್ತದೆ. ಕಾಲರ ರೋಗದ ಹಾವಳಿ ವರ್ಷದುದ್ದಕ್ಕೂ ಇರುವುದು ಕಡಿಮೆ. ಭಾರತದಲ್ಲಿ ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಉಪದ್ರವ ಅತಿ ಕಡಿಮೆ. ಅತಿ ಹೆಚ್ಚಿನ ಕಾಲ ಆಗಸ್ಟ್ ತಿಂಗಳು. ಮೇ ತಿಂಗಳಿನಿಂದ ಅಕ್ಟೋಬರ್ ವರೆಗೆ ಶೇ. 65ರಷ್ಟು ರೋಗ ಕಾಣಿಸಿಕೊಳ್ಳುತ್ತದೆ. ಕರ್ನಾಟಕ ರಾಜ್ಯದಲ್ಲಿ ರೋಗದ ಉಪದ್ರವ ವರ್ಷಕ್ಕೆ ಎರಡು ಬಾರಿ– ಆಗಸ್ಟ್ ಹಾಗೂ ನವೆಂಬರ್–ಡಿಸೆಂಬರ್ ತಿಂಗಳುಗಳಲ್ಲಿ.

ಕಾಲರ ಬಗ್ಗೆ ದೀರ್ಘ ಸಂಶೋಧನೆ ಮತ್ತು ಕೂಲಂಕಷ ಅಧ್ಯಯನ ನಡೆಸಿದ (1928) ರೋಜರ್ಸ್, ಪ್ರಸಾದ್ ಮತ್ತಿತರರು (1967) ರೋಗ ಘಟನೆಗೂ ಅದರ ವ್ಯಾಪನೆಗೂ ಮತ್ತು ಹವಾ ಸ್ಥಿತಿಗಳಿಗೂ ನಿಕಟ ಸಂಬಂಧವಿದೆ ಎಂದು ಪ್ರತಿಪಾದಿಸಿದರು. ಸ್ಥಳದ ಉಷ್ಣತೆ 80° – 90° ಫ್ಯಾ. ಗಾಳಿಯಲ್ಲಿ ಅಡಕವಾಗಿರುವ ತೇವಾಂಶ ಶೇ. 55–75, ಹಾಗೂ ಆವಿ ಒತ್ತಡ 200–300 ಮಿಲಿಬಾರ್‌ಗಳಷ್ಟಿದ್ದರೆ ರೋಗಘಟನೆ ಗರಿಷ್ಠಮಿತಿಯನ್ನು ಮುಟ್ಟಿ ಸೋಂಕು ಭರದಿಂದ ಹರಡುತ್ತದೆ ಎಂದು ನಿರೂಪಿಸಿದರು. ಮತ್ತೆ ಕೆಲವರು ಈ ರೀತಿಯ ನಿಕಟಸಂಬಂಧವನ್ನು ಒಪ್ಪುವುದಿಲ್ಲ ಸಕಾಲದಲ್ಲಿ ಮಳೆ ಬಾರದಿದ್ದರೆ ನೀರಿನ ಅಭಾವದಿಂದ ಜನರು ದೊರಕುವ ಮಲಿನ ನೀರನ್ನೇ ಕುಡಿಯಲುಪಯೋಗಿಸಬೇಕಾಗುವುದು. ಇದರಿಂದ ಸೋಂಕು ಅಂಟುವುದು ಆಶ್ಚರ್ಯವೇನಲ್ಲ.

ರೋಗಿಯ ಅಥವಾ ರೋಗಾಣುವಾಹಕನ ಮಲ ಮತ್ತು ವಾಂತಿಯಲ್ಲಿ ವಿಸರ್ಜಿಸಲ್ಪಡುವ ವಿಬ್ರಿಯೋಗಳ ಪ್ರಮಾಣ ಅಗಾಧ. ಒಂದು ಘನ ಸೆಂಟಿಮೀಟರ್ ಮಲದಲ್ಲಿ ಸುಮಾರು 107–109 ವಿಬ್ರಿಯೋಗಳು ಹೊರಬೀಳುತ್ತವೆಂದು ಅಂದಾಜು ಮಾಡಲಾಗಿದೆ. ಒಬ್ಬ ರೋಗಿ ಸರಾಸರಿ 10–20 ಲೀಟರ್‌ಗಳಷ್ಟು ಮಲವನ್ನು ವಿಸರ್ಜಿಸುತ್ತಾನೆಂದರೆ– ವಿಬ್ರಿಯೋಗಳ ಸಂಖ್ಯೆ ಎಷ್ಟೆಂಬುದನ್ನು ಊಹಿಸುವುದಕ್ಕೂ ಕಷ್ಟಸಾಧ್ಯ. ರೋಗಾಣುವಾಹಕರು ವಿಸರ್ಜಿಸುವ ವಿಬ್ರಿಯೋಗಳ ಸಂಖ್ಯೆ ಅತಿ ಕಷ್ಟಸಾಧ್ಯ. ರೋಗಾಣುವಾಹಕರು ವಿಸರ್ಜಿಸುವ ವಿಬ್ರಿಯೋಗಗಳ ಸಂಖ್ಯೆ ಅತಿ ಕಡಿಮೆ ಆದ್ದರಿಂದಲೇ ರೋಗಾಣುವಾಹಕರನ್ನು ಕಂಡುಹಿಡಿಯುವುದು ಸುಲಭವಲ್ಲ. ರೋಗಿಯಿಂದ ಮತ್ತೊಬ್ಬನಿಗೆ ರೋಗ ಹರಡುವುದಕ್ಕೆ ನಿರ್ದಿಷ್ಟ ಕಾಲಮಿತಿ ಇದೆ. ರೋಗ 3–7 ದಿವಸಗಳಿರುತ್ತದೆ. ಈ ಕಾಲದಲ್ಲಿ ಮತ್ತು ಚೇತರಿಸಿಕೊಳ್ಳುವ ಕಾಲ ಎಂದರೆ ಮುಂದೆ 7 ರಿಂದ 10 ದಿವಸಗಳ ವರೆಗೆ ಹಾಗೂ ಕೆಲವರು 2 ವಾರಗಳ ವರೆಗೆ ವಿಬ್ರಿಯೋಗಳನ್ನು ವಿಸರ್ಜಿಸಿ ಸೋಂಕಂಟಿಸಬಲ್ಲರು. ಇವರಲ್ಲಿ ಕೆಲವರು ಶಾಶ್ವತವಾಗಿ ರೋಗಾಣುವಾಹಕರಾಗುತ್ತಾರೆ.

ರೋಗಿ ಅಥವಾ ರೋಗಾಣುವಾಹಕರಿಂದ ಸೋಂಕು ಮತ್ತೊಬ್ಬರಿಗೆ ಹಾಯುವ ಮಾರ್ಗಗಳನ್ನು ಮತ್ತು ಹೀಗೆ ಹಾಯಲು ಯೋಗ್ಯ ಸಂದರ್ಭಗಳಾವುವು ಎಂಬುದನ್ನು ವಿಚಾರ ಮಾಡುವುದಗತ್ಯ. ಕೆಳಗಿನ ಚಿತ್ರದಲ್ಲಿ ಅವನ್ನು ಸಂಕೇತಿಸಿದೆ.

ಮಲಿನವಾದ ಕುಡಿಯುವ ನೀರು, ರೋಗಾಣುಗಳೊಂದಿಗೆ ಸಂಪರ್ಕ ಪಡೆದ ಮತ್ತು ಅನಂತರ ತೊಳೆದುಕೊಳ್ಳದ ಕೈಗಳು, ಸೋಂಕುಳ್ಳ ಹೇಸಿಗೆಯ ಮೇಲೆ ಕೂತ ನೊಣಗಳು ಹಾಗೂ ರೋಗಿಯ ಮಲದಿಂದ ಮಲಿನವಾದ ಭೂಮಿಯ ದೂಳು ನಾವು ಸೇವಿಸುವ ಆಹಾರ, ಕಾಯಿಪಲ್ಲೆ (ಹಸಿಯಾಗಿ ತಿನ್ನುವ) ಹಾಗೂ ಪಾನೀಯಗಳ ಮೂಲಕ ಅಥವಾ ನೇರವಾಗಿ ಸೋಂಕನ್ನು ರೋಗವಿಲ್ಲದ ವ್ಯಕ್ತಿಗೆ ಅಂಟಿಸಬಹುದು. ಸೋಂಕಂಟಿದ ಕೆಲವೇ ಗಂಟೆಗಳಿಂದ ಹಿಡಿದು 5 ದಿವಸಗಳೊಳಗೆ ವ್ಯಕ್ತಿ ರೋಗದಿಂದ ಹಾಸಿಗೆ ಹಿಡಿಯುತ್ತಾನೆ. ಈ ಮಾರ್ಗದಲ್ಲಿ ಸೋಂಕು ಹರಡಲು ನಮ್ಮ ಬಾಹ್ಯ ಪರಿಸರ, ನಡವಳಿಕೆ, ಸಂಪ್ರದಾಯ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಸಹಾಯಕವಾಗುತ್ತವೆ. ಇವುಗಳ ಪಾತ್ರಗಳನ್ನು ನಾವು ಕಡೆಗಣಿಸುವಂತಿಲ್ಲ.

**ನೀರು:** ರೋಗಾಣುಗಳಿಂದ ಮಲಿನವಾದ ನೀರು ರೋಗ ಹರಡುವುದರಲ್ಲಿ ಅತಿ ಮುಖ್ಯ ಪಾತ್ರ ವಹಿಸುತ್ತದೆ. ಕೆರೆ, ಕೊಳ ಮತ್ತು ನದಿಗಳ ನೀರಿನಲ್ಲಿ ರೋಗಿಯ ಮಲಿನ ಬಟ್ಟೆಗಳನ್ನೊಗೆಯುವುದು, ರೋಗಾಣುವಾಹಕ ಹಾಸಿಗೆ ಮಾಡಿದ ಅನಂತರ ಈ ನೀರುಗಳಲ್ಲಿ ಶುದ್ಧಿ ಮಾಡಿಕೊಳ್ಳುವುದು ಇತ್ಯಾದಿ ಭಾರತದ ಹಳ್ಳಿಗಳಲ್ಲಿ, ಊರುಗಳಲ್ಲಿ ಸಾಮಾನ್ಯ. ಈ ಪ್ರದೇಶಗಳಲ್ಲಿ ಕುಡಿಯುವ ನೀರನ್ನೇ ಕುಡಿಯಲೂ ಉಪಯೋಗಿಸಿ ರೋಗ ತಂದುಕೊಂಡು ಸೋಂಕನ್ನು ಹರಡುತ್ತಾರೆ. ನದಿ, ಕಾಲುವೆ, ಬಾವಿ, ಕೆರೆ, ಕಟ್ಟೆ ಮತ್ತು ಕೋಳಗಳನ್ನು ಸಾಂಪ್ರದಾಯಿಕವಾಗಿ ಮಲಿನ ಮಾಡುವ ಅಭ್ಯಾಸವನ್ನು ಜನರು ಬಿಡಬೇಕು.

**ಮಲವಿಸರ್ಜನೆ:** ಭಾರತದಲ್ಲಿ ಶೇ. 80 ಭಾಗ ಜನರು ಹಳ್ಳಿಯವರು. ಈ ಹಳ್ಳಿಗಳಲ್ಲಿ ಜನರು ಇಂದಿಗೂ ಶೌಚಕ್ಕಾಗಿ ಬಯಲಿಗೆ ಹೋಗುವುದೇ ರೂಢಿ. ಇದರಿಂದ ಭೂಮಿಯ ಮೇಲೆ ಹರಿಯುವ ನೀರು ಹಾಗೂ ನೊಣಗಳು ಮಲಿನಗೊಳ್ಳುವುದು ಸುಲಭ. ಕಕ್ಕಸುಗಳು ಈ ಕೊರತೆಯನ್ನು ಹೋಗಲಾಡಿಸುತ್ತವೆ. ಅಷ್ಟೇ ಅಲ್ಲದೆ ಶೌಚವಾದ ಅನಂತರ ವೈಯಕ್ತಿಕ ಶುಭ್ರತೆಗೆ ಗಮನ ಕೊಡುವುದಗತ್ಯ. ಸೋಂಕಿನೊಂದಿಗೆ ಸಂಪರ್ಕ ಹೊಂದಿದ ಕೈಗಳನ್ನು ಸಾಬೂನು ನೀರು ಹಾಕಿ ತೊಳೆದಲ್ಲಿ ಸೋಂಕು ಹಾಯುವ ಭಯವಿಲ್ಲ.

**ಶವಗಳು:** ರೋಗ ವ್ಯಾಪಕವಾಗಿ ಹರಡಿದಾಗ ಸತ್ತವರ ಸಂಖ್ಯೆ ಮಿತಿ ಮೀರಿ ಅನೇಕ ವೇಳೆ ಸೂಕ್ತ ರೀತಿಯಲ್ಲಿ ಶವಸಂಸ್ಕಾರ ಮಾಡಲು ಅಸಾಧ್ಯವಾಗಿ ಅವನ್ನು ನದಿಗಳಿಗೆ ಎಸೆಯುವುದು ಉಂಟು. ಇದರಿಂದಲೂ ನದಿಗಳು ಮಲಿನಗೊಂಡು ಅದು ಹರಿವೆಡೆಗಳಲ್ಲೆಲ್ಲ ಸೋಂಕು ಅಂಟಲು ಅವಕಾಶವಾಗುತ್ತದೆ.

ಜಾತ್ರೆಗಳು, ರಥೋತ್ಸವ ಇತ್ಯಾದಿಯ ಜನಸಂದಣಿ: ಭಾರತದಲ್ಲಿ ವರ್ಷದುದ್ದಕ್ಕೂ ಒಂದಲ್ಲ ಒಂದೆಡೆಯಲ್ಲಿ ಜಾತ್ರೆ ರಥೋತ್ಸವಗಳಿದ್ದೇ ಇರುತ್ತವೆ. ಈ ಸಮಾರಂಭಗಳಲ್ಲಿ ಸಾವಿರಾರು ಜನ ಜಾನುವಾರುಗಳು ಗುಂಪುಗೂಡಿ ಜನಸಾಂದ್ರತೆ ಇದ್ದಕ್ಕಿದ್ದಂತೆ ಏರುತ್ತದೆ.

ಈ ಸ್ಥಳಗಳಲ್ಲಿ ಮಿತಿಮೀರುವ ಜನಸಂದಣಿಗೆ ತಕ್ಕಂತೆ ಕುಡಿಯುವ ನೀರಿನ ಸೌಲಭ್ಯ, ಕಸಕಡ್ಡಿ ಹೇಸಿಗೆಗಳ ವಿಲೇವಾರಿ, ಸ್ಥಳನೈರ್ಮಲ್ಯ, ಮತ್ತು ಆಹಾರ ಪಾನೀಯಗಳ ಮೇಲೆ ಸೂಕ್ತ ನಿಯಂತ್ರಣ ಕಾರ್ಯಕ್ರಮಗಳನ್ನು ಒದಗಿಸುವುದು ಕಷ್ಟ. ಜೊತೆಗೆ ಅಲ್ಲಿ ಸೇರುವ ಜನಗಳ ನಾಗರಿಕ ನೀತಿ ಕಟ್ಟು ಕಟ್ಟಳೆಗಳು ಅಷ್ಟು ಉಚ್ಚಮಟ್ಟದವಲ್ಲ. ಇದರಿಂದಾಗಿ ಈ ಜನಸಂದಣಿಗಳು ಕಾಲರ ರೋಗದ ಜನ್ಮಸ್ಥಳಗಳಾಗುವುದೇ ಅಲ್ಲದೆ ಸೋಂಕು ಹರಡುವ ಉಗ್ರಾಣಗಳೂ ಆಗುತ್ತವೆ. ಹರಿದ್ವಾರದಲ್ಲಿ ನಡೆಯುವ ಕುಂಭಮೇಳ ಹಾಗೂ ಪುರಿಯ ರಥೋತ್ಸವ ಸೋಂಕು ಹರಡುವ ಕೇಂದ್ರಗಳು. ಈ ಕೇಂದ್ರಗಳಿಂದ ಮತ್ತು ಈ ರೀತಿಯ ಇತರ ಕೇಂದ್ರಗಳಿಂದ ಸೋಂಕು ಭೂ ಮತ್ತು ಜನಮಾರ್ಗಗಳಲ್ಲಿ ಅತಿಜಾಗ್ರತೆ ಹರಡುತ್ತದೆ.

ನೊಣಗಳು: ಸಾಮಾನ್ಯವಾಗಿ ಕಾಲರ ರೋಗ ಪ್ರಾರಂಭವಾಗುವ ಕಾಲದಲ್ಲಿ ನೊಣಗಳೂ ಹೇರಳವಾಗಿರುತ್ತವೆ. ಸೋಂಕುಳ್ಳ ಹೇಸಿಗೆ ಮೇಲೆ ನೊಣಗಳು ಕೂಡುತ್ತವೆ. ಈ ನೊಣಗಳೇ ಆಹಾರ ಪಾನೀಯಗಳ ಮೇಲೆ ಹಾರಿ ಬಂದು ಕೂಡುತ್ತವೆ. ಸೋಂಕು ಈ ಆಹಾರ ಪಾನೀಯಗಳನ್ನು ಸೇವಿಸುವ ವ್ಯಕ್ತಿಗೆ ಹಾಯುತ್ತದೆ. ಸೋಂಕು ಹರಡುವ ಕಾರ್ಯದಲ್ಲಿ ನೊಣಗಳ ಪಾತ್ರ ಅತಿಮುಖ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಪರಿಸರವನ್ನು ಸಾಧ್ಯವಾದಷ್ಟು ಶುದ್ಧವಾಗಿಟ್ಟು ಕೊಳ್ಳುವುದೊಳ್ಳೆಯದು.

ಆಮ್ಲ ಗುಣವುಳ್ಳ ಆಹಾರಗಳಲ್ಲಿ ಅಂದರೆ ಮಜ್ಜಿಗೆ, ಮೊಸರು, ನಿಂಬೆಹಣ್ಣಿನ ಪಾನಕಗಳಲ್ಲಿ ಕಾಲರ ರೋಗಾಣುಗಳು ಬಾಳಲಾರವು. ನಮ್ಮ ಜಠರ ರಸವೂ ಆಮ್ಲೀಯ ಗುಣ ಹೊಂದಿರುವುದರಿಂದ ರೋಗಾಣುಗಳು ಸುಲಭವಾಗಿ ಆಮ್ಲೀಯತೆಯನ್ನು ನಿಗ್ರಹಿಸಿ ಬದುಕಿ ಸೋಂಕಂಟಿಸುವುದು ಸುಲಭವಲ್ಲ.

ಕಾಲರ ಬಡಬಗ್ಗರ ರೋಗ. ನರಳುವವರಲ್ಲಿ, ಸಾಯುವವರಲ್ಲಿ ಇವರ ಸಂಖ್ಯೆಯೇ ಅಧಿಕ. ಕಾರಣ ಬಡಬಗ್ಗರು ವಾಸಿಸುವ ಸ್ಥಳ ಕೊಳಚೆ ಪ್ರದೇಶ. ಮನೆಗಳಲ್ಲಿ ಹತ್ತಾರು ಜನರಿರುತ್ತಾರಾಗಿ ಸ್ಥಳಸಂಕೋಚ ಅಧಿಕ. ಸಂಪರ್ಕಾವಕಾಶ ತೀರ ಹೆಚ್ಚು. ಕುಡಿಯುವ ನೀರಿನ ಮತ್ತು ಶೌಚಕೂಪಗಳ ಸೌಲಭ್ಯಗಳಿರುವುದು ವಿರಳ. ಚರಂಡಿ ವ್ಯವಸ್ಥೆ ಇಲ್ಲವೇ ಇಲ್ಲವೆಂದು ಹೇಳಬಹುದು. ತಿಪ್ಪೆಗುಂಡಿ ತೀರ ಹತ್ತಿರ. ಇವುಗಳ ಜೊತೆಗೆ ಆಹಾರ ಕೊರತೆಯಿಂದಾಗಿ ರೋಗ ನಿಗ್ರಹ ಶಕ್ತಿ ತೀರ ಕೆಳಮಟ್ಟದಲ್ಲಿರುತ್ತದೆ. ಈ ಸಂದರ್ಭಗಳಲ್ಲಿ ಸೋಂಕು ರೋಗಗಳು ತಾಂಡವಾಡುವುದರಲ್ಲಿ ಆಶ್ಚರ್ಯವೇನಿಲ್ಲ.

ರೋಗ ನಿಯಂತ್ರಣ. ಸಾರ್ವಜನಿಕರಿಗೆ ಅನ್ವಯಿಸುವ ಕ್ರಮಗಳು: ಕುಡಿಯುವ ನೀರನ್ನು ಶೋಧಿಸಿ ಕ್ರಿಮಿನಾಶಕಗಳನ್ನುಪಯೋಗಿಸಿ ರೋಗಾಣುಗಳು ಇಲ್ಲದಂತೆ ನೋಡಿಕೊಳ್ಳಬೇಕು. ಮಲ ಮೂತ್ರಾದಿ ಹೇಸಿಗೆಗಳನ್ನು ಅಪಾಯವಿಲ್ಲದಂತೆ, ನೊಣಗಳಿಗೆ ಸಿಗದಂತೆ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡುವ ಕ್ರಮಗಳನ್ನನುಸರಿಸಬೇಕು. ನೊಣಗಳ ಉತ್ಪತ್ತಿಗೆ ಅವಕಾಶವಿಲ್ಲದಂತೆ ನಗರ ಹಾಗೂ ಗ್ರಾಮ ನೈರ್ಮಲ್ಯದ ಕಡೆ ಸಾಕಷ್ಟು ಗಮನ ಕೊಡುವುದರ ಜೊತೆಗೆ ಕೀಟನಾಶಕಗಳನ್ನು ಸಿಂಪಡಿಸಿ ನೊಣಗಳನ್ನು ನಾಶ ಮಾಡುವ ಕ್ರಮಗಳನ್ನು ಕೈಗೊಳ್ಳಬೇಕು. ಹೊಟೆಲ್ ಮತ್ತಿತರ ಆಹಾರ ಪಾನೀಯ ಮಾರುವ ಸಾರ್ವಜನಿಕ ಸ್ಥಳಗಳ ಮೇಲೆ ಸೂಕ್ತ ರೀತಿಯ ಹತೋಟಿಯಿರಬೇಕು. ದಾರಿಬದಿಯ ದೂಳಿಗೆದುರಾಗಿ ತಿಂಡಿ ತಿನಸನ್ನು ಹಣ್ಣು ತರಕಾರಿಗಳ್ನು ಇಟ್ಟು ಮಾರುವುದನ್ನೂ ಹಳಸಿದ, ಕೊಳೆತ ಇಲ್ಲವೆ ಕತ್ತರಿಸಿ ಇಟ್ಟ ಪದಾರ್ಥಗಳ ವಿತರಣೆಯನ್ನೂ ನಿಷೇಧಿಸಬೇಕು. ರೋಗದ ವಿಚಾರದಲ್ಲಿ ಸಾರ್ವಜನಿಕರಿಗೆ ಸಾಕಷ್ಟು ತಿಳಿವಳಿಕೆ ಕೊಡಬೇಕು.

ರೋಗಿ ಮತ್ತು ರೋಗಿಯೊಂದಿಗೆ ಸಂಪರ್ಕ ಹೊಮದಿದವರ ಹಾಗೂ ಪರಿಸರಕ್ಕೆ ಅನ್ವಯಿಸುವ ಕ್ರಮಗಳು: ಸೋಂಕಿನ ಅರಿವಾದೊಡನೆ ಅಥವಾ ಸೋಂಕಿರಬಹುದೆಂದು ಅನುಮಾನ ಬಂದ ತತ್‌ಕ್ಷಣ ಜನಾರೋಗ್ಯ ಇಲಾಖೆಗೆ ಅಥವಾ ಇಲಾಖೆಯ ಸ್ಥಳೀಯ ಅಧಿಕಾರಿಯ ಗಮನಕ್ಕೆ ಅದನ್ನು ತರುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ರೋಗಿಯ ಹಾಗೂ ಅವನ ವಿಸರ್ಜನೆಗಳ ಸಂಪರ್ಕ ತಗಲಲು ಅವಕಾಶವಿಲ್ಲದಂತೆ ರೋಗಿಯನ್ನು ಆಸ್ಪತ್ರೆಯಲ್ಲಿ ಅಥವಾ ಇತರೆಡೆಗಳಲ್ಲಿ ಪ್ರತ್ಯೇಕಿಸಿಡ ಬೇಕು. ಮಲ ಅಥವಾ ವಾಂತಿಯನ್ನು ಸೂಕ್ತ ರೀತಿಯಲ್ಲಿ ಸಂಗ್ರಹಿಸಿ ಸಂಶೋಧನಾಲಯಕ್ಕೆ ಕಳುಹಿಸಿ ಕಾಲರ ರೋಗವೆಂಬುದನ್ನು ಖಚಿತ ಮಾಡಿಕೊಳ್ಳಬೇಕು. ಗಂಧಕೀಯ ಅಥವಾ ಜೀವವಿರೋಧಕಗಳಿಂದ ಚಿಕಿತ್ಸೆಗೊಳಪಡಿಸುವ ಮೊದಲೇ ಈ ಕೆಲಸ ನಡೆದರೊಳ್ಳೆಯದು. ಇಲ್ಲದಿದ್ದಲ್ಲಿ ಈ ಔಷಧಗಳ ಪ್ರಭಾವದಿಂದ ರೋಗಾಣುಗಳು ನಾಶವಾಗಿರಲು ಸಾಧ್ಯ. ರೋಗಿಗೆ ಸೋಂಕು ಹೇಗೆ ಮತ್ತು ಎಲ್ಲಿಂದ ಅಂಟಿರಬಹುದೆಂಬುದನ್ನು ನಿರ್ಧರಿಸಲು ತತ್‌ಕ್ಷಣ ತನಿಖೆಗೆ ಏರ್ಪಾಡು ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ರೋಗಿಯ ಮಲ, ವಾಂತಿ ಇತ್ಯಾದಿ ವಿಸರ್ಜನೆಗಳನ್ನೂ ಮಲಿನವಾದ ಬಟ್ಟೆಬರೆ, ಪಾತ್ರೆ ಇತ್ಯಾದಿ ವಸ್ತುಗಳನ್ನೂ ಕುದಿಯುವ ನೀರಿನಲ್ಲಿ ಹಾಕಿ ಅನಂತರ ಕ್ರಿಮಿನಾಶಕದಲ್ಲಿ ಅದ್ದಿ ಶುದ್ಧಿ ಮಾಡಬೇಕು. ರೋಗಿ ಸತ್ತರೆ ಅಥವಾ ಆಸ್ಪತ್ರೆಗೆ ಸಾಗಿಸಲ್ಪಟ್ಟರೆ ಕೊಠಡಿಯನ್ನು ತಿಕ್ಕಿ ತೊಳೆದು ಗೋಡೆಗಳಿಗೆ ಸುಣ್ಣ ಹಚ್ಚಿ ಗಾಳಿ ಬೆಳಕು ಆಡಲು ಬಿಟ್ಟು ಕ್ರಿಮಿನಾಶಕವನ್ನು ಸಿಂಪಡಿಸಿ ಅನಂತರ ಉಪಯೋಗಿಸಬೇಕು.

ರೋಗಿಯ ಕುಟುಂಬದವರಿಗೂ ರೋಗಿಯೊಂದಿಗೆ ಸಂಪರ್ಕ ಹೊಂದಿದವರಿಗೂ ಸಾರ್ವಜನಿಕರಿಗೂ ತತ್‌ಕ್ಷಣ ಕಾಲರನಿರೋಧಕ ಚುಚ್ಚುಮದ್ದನ್ನು ಹಾಕಲು ಏರ್ಪಾಡು ಮಾಡಬೇಕು. ನಾಶಪಡಿಸಿದ ರೋಗಾಣುಗಳನ್ನು ಸೂಕ್ತ ರೀತಿಯಲ್ಲಿ ಸಂಸ್ಕರಿಸಿ ಚುಚ್ಚುಮದ್ದನ್ನು ತಯಾರಿಸುತ್ತಾರೆ. ಈ ಪ್ರತಿವಿಷಜನಕ ದೇಹದಲ್ಲಿ ಸುಮಾರು ಒಂದು ವಾರದ ಅವಧಿಯಲ್ಲಿ ಕಾಲರ ರೋಗ ಪ್ರತಿವಿಷವಸ್ತುವನ್ನು ಪ್ರಚೋದಿಸುತ್ತದೆ. ಹೀಗೆ ಮಾಡಿದಲ್ಲಿ ವ್ಯಕ್ತಿಗೆ ಸುಮಾರು 3 ರಿಂದ 6 ತಿಂಗಳ ವರೆಗೂ ರೋಗನಿರೋಧ ಶಕ್ತಿ ಇರಬಲ್ಲದೆಂಬುದಾಗಿ ನಂಬಲಾಗಿದೆ. ಚುಚ್ಚುಮದ್ದು ಕೇವಲ ತಾತ್ಕಲಿಕ ಹಾಗೂ ಅಲ್ಪಮಟ್ಟದ ನಿರೋಧಶಕ್ತಿಯನ್ನು ಕೊಡಬಲ್ಲದೆಂಬುದು ಪ್ರಯೋಗಗಳಿಂದ ಖಚಿತವಾಗಿದೆ. ಪ್ರಸ್ತುತದಲ್ಲಿ ಉಪಯೋಗಿಸಲಾಗುತ್ತಿರುವ ಚುಚ್ಚುಮದ್ದು 30%–50%ರಷ್ಟು 6 ತಿಂಗಳುಗಳ ವರೆಗೆ ರಕ್ಷಣೆ ಕೊಡಬಲ್ಲದು. ಅಂಗೀಕೃತವಾದ ಕಾಲರ ರೋಗಾಣುಗಳಿಂದ ತಯಾರಾದ ಚುಚ್ಚು ಮದ್ದಿನಿಂದ ಎಲ್‌ಟಾರ್ ಕಾಲರಕ್ಕೂ ರಕ್ಷಣೆ ಇದೆ. ಆದರೆ ಎಲ್‌ಟಾರ್ ರೋಗಾಣುಗಳಿಂದ ತಯಾರಾದ ಚುಚ್ಚುಮದ್ದು, ಅಂಗೀಕೃತ ಕಾಲರ ರೋಗಾನುಗಳ ರೋಗಕ್ಕೆ ರಕ್ಷಣೆ ಕೊಡುತ್ತದೋ ಇಲ್ಲವೊ ಎಂಬುದು ಇಲ್ಲಿ ಇನ್ನೂ ನಿರ್ಧರವಾಗಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಕಾಲರ ರೋಗನಿಯಂತ್ರಣದಲ್ಲಿ ಚುಚ್ಚುಮದ್ದು ಇತರ ಕಾರ್ಯಕ್ರಮಗಳಿಗೆ ಕೇವಲ ಒಂದು ಅನುಬಂಧವಷ್ಟೆ. ಜನಸಂಖ್ಯೆ ಅಧಿಕವಾಗಿರುವ ಪಟ್ಟಣ ಊರುಗಳಲ್ಲಿ ರೋಗ ತಗುಲಿದವರು ಗಮನಕ್ಕೆ ಬಾರದಿರಬಹುದು. ರೋಗ ತಗುಲಿದವರನ್ನು ಪತ್ತೆ ಮಾಡಲು ಸೂಕ್ತ ವ್ಯವಸ್ಥೆ ಅಗತ್ಯ. ರೋಗಿಗಳ ಚಿಕಿತ್ಸೆಗೆ ತತ್‌ಕ್ಷಣ ಏರ್ಪಾಡು ಮಾಡಬೇಕು. ರೋಗಿಯ ಕರುಳುಗಳಲ್ಲಿ ಕಾಲರ ರೋಗಾಣುಗಳು ಹೆಚ್ಚುತ್ತವೆ. ಹೀಗಾದ ಮೇಲೆ ರೋಗಿಯ ಜೀವಕ್ಕೆ ಬಲು ಅಪಾಯ.

ಚಿಕಿತ್ಸೆಯ ಮುಖ್ಯ ಉದ್ದೇಶ, ಮೊಟ್ಟ ಮೊದಲು ದೇಹದಿಂದ ಹರಿದು ಹೋಗಿರುವ ನೀರು, ಲವಣ ಮತ್ತು ವಿದ್ಯುದ್ವಿಶ್ಲೇಷ್ಯಗಳನ್ನು ಸೂಕ್ತ ರೀತಿಯಲ್ಲಿ ಅಳವಡಿಸಿಕೊಂಡು ರೋಗಿಯ ರಕ್ತನಾಳದ ಮೂಲಕ ದೇಹಕ್ಕೆ ಅವನ್ನು ಭರ್ತಿ ಮಾಡುವುದು. ಮೊದಮೊದಲಲ್ಲಿ ದ್ರವಭರ್ತಿ ತ್ವರಿತವಾಗಿ ನಡೆದು ರೋಗಿ ಉತ್ತಮಗೊಂಡಂತೆಲ್ಲ ನಿಧಾನವಾಗಬೇಕು. ಉಪಯೋಗಿಸುವ ದ್ರವಗಳೂ ಚುಚ್ಚುಮದ್ದಿನ ಸಲಕರಣೆಗಳೂ ನಿಷ್ಕಳಂಕವಾಗಿ ಕ್ರಿಮಿಶುದ್ಧವಾಗಿರಬೇಕು; ಪೈರೋಜನ್ ರಹಿತವಾಗಿರಬೇಕು. ಬಳಸುವ ದ್ರವಗಳು ಸಾಮಾನ್ಯವಾಗಿ ಎರಡು ವಿಧ. ಒಂದು ಐಸೋಟಾನಿಕ್ ಲವಣದ್ರವ; ಮತ್ತೊಂದು 1/6 ಮೋಲಾರ್ ಸೋಡಿಯಂ ಲ್ಯಾಕ್ಟೇಟ್ ದ್ರವ ಅಥವಾ ಐಸೊಟಾನಿಕ್ ಸೋಡಾಬೈ–ಕಾರ್ಬನೇಟ್ ಲವಣದ್ರವ.

ಎರಡನೆಯದಾಗಿ ರೋಗಾಣುಗಳ ಸಂಖ್ಯೆ ಹಾಗೂ ಅವುಗಳ ಪ್ರಭಾವವನ್ನು ಹತೋಟಿಗೆ ತರಲು ಟೆಟ್ರಾಸೈಕ್ಲಿನ್ ಜೀವನಿರೋಧಕ ಔಷಧಿಯನ್ನು (ಇಲ್ಲದಿದ್ದರೆ ಕ್ಲೋರ್ಯಾಂಫೆನಿಕಾಲ್ ಅಥವಾ ಫ್ಯೂರಾಜೋಲಿಡಿನ್ ಔಷಧ) ನಿಗದಿ ಮಾಡಿರುವ ಪ್ರಮಾಣಗಳಲ್ಲಿ ಕೊಡಬೇಕು. ದ್ರವ ಭರ್ತಿ ಪ್ರಾರಂಭ ಮಾಡಿದ 3–4 ಗಂಟೆಗಳ ಅನಂತರ, 6 ಗಂಟೆಗಳಿಗೊಂದಾವರ್ತಿ 500ಮಿಲಿಗ್ರಾಂ ಟೆಟ್ರಾಸೈಕ್ಲಿನನ್ನು 48 ಗಂಟೆಗಳು ಕಳೆಯುವ ವರೆಗೆ ಕೊಡಬೇಕು. ಎರಡೇ ದಿನಗಳಲ್ಲಿ ಈ ಜೀವಿರೋಧಕ ಪದೇ ಪದೇ ಆಗುವ ಭೇದಿಯನ್ನು 100ಕ್ಕೆ 50 ಭಾಗ ಕಡಿಮೆ ಮಾಡುವುದಲ್ಲದೆ 20 ರಿಂದ 30 ಲೀಟರಿನಷ್ಟು ಆಗುತ್ತಿದ್ದ ಮಲವಿಸರ್ಜನೆಯನ್ನು ರೋಗಿಗೆ ಕೇವಲ 6–8 ಲೀಟರಿಗೆ ಇಳಿಸುತ್ತದೆ. ಕ್ರಮೇಣ ಮಲದಲ್ಲಿ ವಿಬ್ರಿಯೋಗಳ ಸಂಖ್ಯೆ ಕಡಿಮೆಯಾಗಿ ಬಿಡುತ್ತದೆ. ಇದರಿಂದ ರಕ್ತನಾಳದ ಮೂಲಕ ಭರ್ತಿ ಮಾಡಬೇಕಾದ ದ್ರವ ಪ್ರಮಾಣವನ್ನು ಶೇ. 60ರಷ್ಟು ಕಡಿಮೆ ಮಾಡಲು ಸಾಧ್ಯವಾಗುತ್ತದೆ.

ದ್ರವ ಭರ್ತಿ ಮತ್ತು ಟೆಟ್ರಸೈಕ್ಲಿನ್ ಅಷ್ಟೇ ಅಲ್ಲದೆ ಮೂತ್ರ ಬಂಧನವಾಗಿಲ್ಲದವರಿಗೆ ಸಿಟ್ರೇಟ್ ಪೊಟಾಸಿಯಂ ಲವಣವನ್ನು (ಪೊಟಾಸಿಯಂ ಸಿಟ್ರೇಟ್ 188ಗ್ರಾಂ, ಸಿಟ್ರಿಕ್ ಆಮ್ಲ 94 ಗ್ರಾಂ ಮತ್ತು ಪೊಟಾಸಿಯಂ ಕ್ಲೋರೈಡ್ 47 ಗ್ರಾಂ) ಕುಡಿಯುವ ನೀರಿನೊಂದಿಗೆ ಕೊಡಬೇಕು. ರೋಗಿ ಒಂದು ಲೀಟರ್ ಮಲ ವಿಸರ್ಜಿಸಿದರೆ 1.75ಗ್ರಾಂ ಸಿಟ್ರೇಟ್ ಪೊಟಾಸಿಯಂ ಲವಣ ಕೊಡಬೇಕು.

ರೋಗಿಗೆ ಪ್ರಯೋಜನವಾಗುವ ಅಥವಾ ನಿಷೇಧ ಮಾಡಬಹುದಾದ ಚಿಕಿತ್ಸೆಗಳು ಕೆಲವಿವೆ. ರೋಗಿಯ ಸ್ಥಿತಿ ಕುಸಿಯುತ್ತಿರುವಾಗ ಅಡ್ರಿನಲಿನ್, ಕೊರಮಿನ್ ಮುಂತಾದ ಚೈತನ್ಯೋತ್ತೇಜಕ ಔಷಧಗಳಿಂದ ಪ್ರಯೋಜನವಿಲ್ಲ. ಇದರಿಮದ ರೋಗಿಗೆ ಕೆಡುಕಾದರೂ ಆಗಬಹುದು. ಕಾರ್ಟಿಕೋಸ್ಟೀರಾಯಿಡ್ ಔಷಧದಿಂದಲೂ ರೋಗಿ ಪ್ರಯೋಜನ ಪಡೆಯಲಾರ. ರೋಗಿ ನೀಲಿ ವರ್ಣಕ್ಕೆ ತಿರುಗಿದರೆ ಅದು ದೇಹದಲ್ಲಿ ಚಲಿಸುವ ರಕ್ತದ ದ್ರವಮೊತ್ತ ಕಡಿಮೆಯಾಗಿರುವುದರಿಂದ. ಆಮ್ಲಜನಕವನ್ನು ಉಸಿರಾಡಲು ಕೊಡುವುದರಿಂದ ಈ ಸ್ಥಿತಿಯಲ್ಲಿ ಬದಲಾವಣೆಯಾಗಲಾರದು. ಕೊಲಾಯಿಡ್ ಪ್ಲಾಸ್ಮ ಎಕ್ಸ್‌ಪ್ಯಾಂಡರ್ಸ್ ಅಥವಾ ಗ್ಲೂಕೋಸ್ ದ್ರವ ತುಂಬುವುದರಿಂದ ವಿದ್ಯುದ್ವಿಶ್ಲೇಷ್ಯದ ಕೊರತೆ ನಿವಾರಿಸಲು ಸಾಧ್ಯವಿಲ್ಲ. ರಕ್ತದ್ರವದ ಆಮ್ಲತೆ ಇದ್ದಾಗ ರೋಗಿ ಬೇಗ ಬೇಗ ಉಸಿರಾಡಲು

ಪ್ರಾರಂಭಿಸಬಹುದು ಅಥವಾ ಒಂದೇ ಸಮನೆ ವಾಂತಿ ಮಾಡಬಹುದು. ಕ್ಷಾರ ದ್ರವವನ್ನು ರಕ್ತನಾಳಗಳ ಮೂಲಕ ತುಂಬಬೇಕು. ಆಮ್ಲಜನಕವನ್ನು ಉಸಿರಾಡಲು ಕೊಡುವುದರಿಂದಾಗಲೀ ವಾಂತಿ ನಿಲ್ಲಿಸುವ ಔಷಧಗಳನ್ನು ಕೊಡುವುದರಿಂದಾಗಲೀ ರೋಗಿಗೆ ಪ್ರಯೋಜನವಾಗಲಾರದು. ಕಡೆಯದಾಗಿ, ಟೆಟ್ರಾಸೈಕ್ಲಿನ್ ಜೀವಿರೋಧಕವನ್ನು ರೋಗಿಯ ಚಿಕಿತ್ಸೆಗೆ ಉಪಯೋಗಿಸುವುದೊಂದೇ ಅಲ್ಲದೆ, ಸೋಂಕು ಸಂಪರ್ಕ ಹೊಂದಿದವರಿಗೆ ರೋಗ ಬಾರದಿರಲು ಮುಂಜಾಗ್ರತೆ ಕ್ರಮವಾಗಿಯೂ ಉಪಯೋಗಿಸಲಾಗುತ್ತದೆ. ಈ ಕ್ರಮ ಬಹಳ ಯಶಸ್ವಿಯಾಗಿದೆ.

ಕಾಲರ ಪಿಡುಗುರೂಪದಲ್ಲಿ ಹರಡಿದಾಗ ಮೇಲೆ ತಿಳಿಸಿರುವ ಕ್ರಮಗಳೆಲ್ಲವನ್ನೂ ಅತಿ ತ್ವರಿತದಿಂದ ಆಚರಣೆಗೆ ತರಬೇಕು.

ಅಂತರರಾಷ್ಟ್ರೀಯ ಕ್ರಮಗಳು: ಅಂತರ ರಾಷ್ಟ್ರೀಯ ಸೋಂಕು/ ಹತೋಟಿ ಕಾಯಿದೆಗೆ ಅನುಗುಣವಾಗಿ 6 ರೋಗಗಳನ್ನು (ಕಾಲರ, ಪ್ಲೇಗ್, ಕಲ್ಲಡಾರ, ಮರು ಕಳಿಸುವ ಜ್ವರ, ಸಿಡುಬು ಮತ್ತು ಹಳದಿ ಜ್ವರ – ಇವುಗಳಲ್ಲಿ ಕಲ್ಲಡಾರ ಹಾಗೂ ಮರುಕಳಿಸುವ ಜ್ವರಗಳನ್ನು ಪಟ್ಟಿಯಿಂದ 1917ನೆಯ ಜನವರಿ ತಿಂಗಳಿಂದ ತೊಡೆದು ಹಾಕಲಾಗಿದೆ) ಪಟ್ಟಿಮಾಡಲಾಗಿದೆ. ಕಾಲರ ಸೋಂಕು ಪ್ರಪಂಚದ ಯಾವ ಮೂಲೆಯಲ್ಲಿ ಕಂಡು ಬಂದರೂ ತತ್‌ಕ್ಷಣ ವಿಶ್ವ ಆರೋಗ್ಯ ಸಂಸ್ಥೆಗೆ, ನೆರೆಹೊರೆಯ ಸರ್ಕಾರಗಳಿಗೆ, ರಾಜ್ಯಗಳಿಗೆ ತಂತಿಯ ಮೂಲಕ ಸುದ್ದಿ ಮುಟ್ಟಿಸಬೇಕು. ಅಂತರರಾಷ್ಟ್ರೀಯ ಕಾಲರ ನಿರೋಧನಿಯಮಗಳನ್ನು ಸೋಂಕು ಅಂಟಿದ ಅಥವಾ ಸೋಂಕು ಅಂಟಿದೆ ಎಂದು ಅನುಮಾನಾಸ್ಪದವಾದ ಹಡಗು, ವಿಮಾನ, ಪ್ರಯಾಣಿಕರು, ಅವರ ಸಾಮಾನು ಸರಂಜಾಮುಗಳಿಗೆ ಜಾರಿ ಮಾಡಬೇಕು. ಭಾರತ ಪಾಕಿಸ್ತಾನ ಮತ್ತಿತರ ಕಾಲರ ಸೋಂಕುಳ್ಳ ರಾಷ್ಟ್ರಗಳಿಂದ ಪರರಾಷ್ಟ್ರಗಳಿಗೆ ಪ್ರಯಾಣ ಮಾಡುವ ಮುನ್ನ ಪ್ರಯಾಣಿಕರು ಕಾಲರ ಚುಚ್ಚುಮದ್ದನ್ನು ನಿಯಮಗಳಿಗನುಸಾರವಾಗಿ ಹಾಕಿಸಿಕೊಂಡು, ಪ್ರಮಾಣ ಪತ್ರವನ್ನು ಪಡೆಯಬೇಕು.

ವೈದ್ಯವಿಜ್ಞಾನ ವಿಸ್ಮಯಕಾರಕ ಪ್ರಗತಿ ಸಾಧಿಸಿದ್ದರೂ ಭಾರತದಲ್ಲಿ ಕಾಲರ ರೋಗ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. (ಆರ್.ಎಸ್.ವಿ.;ಎಸ್.ಪಿ.ಎ)

**ಕಾಲರ್ಡ್ :** ಪಾಶ್ಚಾತ್ಯ ದೇಶಗಳ ಸೊಪ್ಪು ತರಕಾರಿ; ಹಸಿಯಾಗಿ ಇಲ್ಲವೆ ಬೇಯಿಸಿ ತಿನ್ನುತ್ತಾರೆ. ಕ್ರೂಸಿಫೆರಿ ಕುಟುಂಬಕ್ಕೆ ಸೇರಿದೆ. ವೈಜ್ಞಾನಿಕ ನಾಮ ಬ್ರಾಸಿಕ ಓಲರೇಶಿಯ ವೆರೈಟಿ ಏಸಿಫ್ಯಾಲ. ಭಾರತದಲ್ಲಿ ಇದರ ಉಪಯೋಗ ಬಹಳ ಕಡಿಮೆ. ಇದು ಸುಮಾರು ಸು. 61 ಸೆಂಮೀ – 121 ಸೆಂಮೀ ಎತ್ತರಕ್ಕೆ ಬೆಳೆವ ಬಹುವಾರ್ಷಿಕ ಮೂಲಿಕೆ ಸಸ್ಯ. ಕಾಂಡ ಪಕ್ಕರೆಂಬೆಗಳಿಲ್ಲದೆ ನೇರವಾಗಿ ಬೆಳೆಯುತ್ತದೆ. ತುದಿಯಲ್ಲಿ ಎಲೆಗಳು ಗುಲಾಬಿಯ ದಳಗಳಂತೆ ಜೋಡಣೆಗೊಂಡಿವೆ. ಎಲೆಗಳು ದಪ್ಪ ಹಾಗೂ ರಸಭರಿತ ; ನಯವಾಗಿಯೂ ಇವೆ. ತೊಟ್ಟು ಚಿಕ್ಕದು. ಕೆಲವು ಸಸ್ಯದ ಎಲೆಗಳು ಕಡುಗೆಂಪು. (ಎನ್.ಆರ್.ಆರ್.)

**ಕಾಲಲೇಖಿ ಮತ್ತು ಕಾಲಮಾಪಿ :** ಒಂದು ಘಟನೆಯ ಸಂಭವಕಾಲವನ್ನು ಖಚಿತವಾಗಿ ಬರೆದಿಡಲು ಅಥವಾ ಗುರುತು ಮಾಡಲು ಬಳಸುವ ಉಪಕರಣ ಕಾಲಲೇಖಿ (ಕ್ರೋನೋಗ್ರಾಫ್). ವಿಶೇಷವಾಗಿ ಸಮುದ್ರನೌಕೆಗಳಲ್ಲಿ ಕಾಲವನ್ನು ನಿಷ್ಕೃಷ್ಟವಾಗಿ ಅಳೆಯಲು ಬಳಸುವ ಬಲು ದೊಡ್ಡ ಮತ್ತು ಸುಭದ್ರವಾಗಿ ರಚಿಸಲಾಗಿರುವ ಗಡಿಯಾರ ಕಾಲಮಾಪಿ (ಕ್ರೋನೋ ಮೀಟರ್), ಯಾವುದೇ ಸೂಕ್ಷ್ಮ ಗಡಿಯಾರವನ್ನೂ ಕಾಲಮಾಪಿ ಎಂದೇ ರೂಢಿಯಲ್ಲಿ ಕರೆಯುವುದುಂಟು.

ಕ್ರಮಾಗತವಾಗಿ ಸಂಭವಿಸುವ ಎರಡು ಘಟನೆಗಳ ಕಾಲಗಳ ಅಂತರವನ್ನು ನಿಖರವಾಗಿ ನಕ್ಷೆಯ ಮೂಲಕ ಕಾಲಲೇಖಿ ತೋರಿಸುತ್ತದೆ. ವಸ್ತುಗಳ ಚಲನದರವನ್ನು ಇದರ ನೆರವಿನಿಂದ ನಿಖರವಾಗಿ ಅಳೆಯಬಹುದು. ಕೆಲವು ಕಾಲಮಾಪಿಗಳು ಮಿನಿಟು, ಸೆಕೆಂಡು ಅಥವಾ ಅದರ ಭಾಗಾಂಶಗಳನ್ನು ತೋರಿಸಬಲ್ಲುವು; ಮತ್ತೆ ಕೆಲವು ದಿವಸ, ತಿಂಗಳು, ವರ್ಷ ಮತ್ತು ಚಂದ್ರನ ವಿವಿಧ ಅವಸ್ಥೆಗಳನ್ನು ಸೂಚಿಸಬಲ್ಲುವು. ಕಾಲಮಾಪಿ ಗಡಿಯಾರದಂತೆ ಜರುಗಿದ ಕಾಲದ ಸರಾಸರಿಯನ್ನು ಸೂಚಿಸುವುದರ ಜೊತೆಗೆ ಇನ್ನೂ ಅನೇಕ ಕಾರ್ಯಗಳನ್ನು ಮಾಡಬಲ್ಲದು.

ಆಟದ ಮೈದಾನದಲ್ಲಿ ಯಾವುದಾದರೂ ಆಟ ಜರುಗುವ ಕಾಲ ಅಥವಾ ಓಟಗಾರ ಓಡಿದ ಕಾಲ ಇವನ್ನು ಅಳೆಯುವ ಉಪಯೋಗಿಸುವ ನಿಲ್ಲಡಿಯಾರ (ಸ್ಟಾಪ್‌ವಾಚ್) ಕಾಲಮಾಪಿಯ ಒಂದು ವಿಧ. ವಿಮಾನ ಒಂದು ನಿಲ್ದಾಣದಿಂದ ಹೊರಟು ಮುಂದಿನ ನಿಲ್ದಾಣವನ್ನು ತಲುಪುವವರೆಗಿನ ಅಂದರೆ ಅದು ಹಾರಾಡಿದ ಕಾಲವನ್ನು ಅಳೆಯಲು ವಿಮಾನ ಚಾಲಕ ಇಂಥ ಒಂದು ನಿಲ್ಲಡಿಯಾರವನ್ನು ಬಳಸುತ್ತಾನೆ. ವಿಮಾನ ಹೊರಟಾಗ ಇದರ ಗುಂಡಿ ಒತ್ತಿದರೆ ಕಾಲಮಾಪನ ಆರಂಭವಾಗುತ್ತದೆ. ಗುರಿ ತಲುಪಿದೊಡನೆ ಮನಃ ಗುಂಡಿ ಒತ್ತಿದಾಗ ಗಡಿಯಾರ ನಿಲ್ಲುವುದು. ಇವೆರಡು ಗುರುತುಗಳ ಅಂತರವೇ ವಿಮಾನ ಹಾರಿದ ಕಾಲ.

ವಿಮಾನ ಚಲಿಸುವಾಗ ಭೂಮಿಗೆ ಹೋಲಿಸಿದಂತೆ ಅದರ ಚಲನದರವನ್ನು ಕಂಡುಹಿಡಿಯಲು ಚಾಲಕರು ಕಾಲಮಾಪಿಯನ್ನು ಉಪಯೋಗಿಸುವರು. ಗೊತ್ತಾದ ಎರಡು ಸ್ಥಳಗಳಿಗಿರುವ ದೂರವನ್ನು ಚಲಿಸಲು ತೆಗೆದುಕೊಂಡ ಕಾಲವನ್ನು ಅಳತೆ ಮಾಡಿ ವಿಮಾನದ ಚಲನದರ ಎಷ್ಟೆಂದು ತಿಳಿಯಬಹುದು. ಅಂದರೆ ಕಾಲ ಮತ್ತು ದೂರ ಗೊತ್ತಿದ್ದರೆ ಚಲನದರ ತಿಳಿಯಬಹುದು. ಅಥವಾ ಚಲನದರ ಮತ್ತು ದೂರಗಳನ್ನು ಅಳೆದು ಕಾಲವನ್ನು ತಿಳಿಯಬಹುದು.

ವೈದ್ಯರು ರೋಗಿಯ ನಾಡಿಮಿಡಿತದ ಅವಧಿಯನ್ನು ಕಣ್ಣಿಂದ ನೋಡುವುದರಿಂದಲೇ ತಿಳಿಯಬಲ್ಲ ಮತ್ತೊಂದು ರೀತಿಯ ಕಾಲಮಾಪಿ ಇದೆ. ಮೊಟ್ಟ ಮೊದಲಿಗೆ 1680 ರಲ್ಲಿ ಡೇನಿಯಲ್ ಕ್ವಾರೆ ಎಂಬ ಇಂಗ್ಲಿಷ್ ವಿಜ್ಞಾನಿ ಕಾಲಮಾಪಿಯನ್ನು ನಿರ್ಮಿಸಿದ. ಇದು ಒಂದು ಸನ್ನೆಯನ್ನು ತಳ್ಳುವುದರಿಂದ ಗಂಟೆಗೆ ಒಮ್ಮೆ ಶಬ್ದವಮಾಡುತ್ತಿತ್ತು. ಇದರ ಆಧುನಿಕ ಮಾರ್ಪಾಡೇ ನಮ್ಮ ಅಲಾರಂ ಗಡಿಯಾರ.



ನಿಲ್ಲಡಿಯಾರ

ಕಾಲಮಾಪಿಗಳಲ್ಲಿರುವ ಹಲವಾರು ವಿಧಗಳನ್ನು ಈ ಕೆಳಕಂಡ ತತ್ವಗಳನ್ನು ಅನುಸರಿಸಿ ರಚಿಸಲಾಗಿದೆ :

1. ಹೆಚ್ಚು ಉದ್ದದ ಕಾಲಗಳನ್ನು, ಸೌರವ್ಯೂಹದಲ್ಲಿ ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಗ್ರಹಗಳು ಅವುಗಳ ಅಕ್ಷದ ಸುತ್ತ ಆವರ್ತಿಸಲು ತೆಗೆದುಕೊಳ್ಳುವ ಕಾಲದಿಂದ ತಿಳಿಯಬಹುದು. ಈ ದೃಷ್ಟಿಯಲ್ಲಿ ಭೂಮಿಯೇ ಒಂದು ಕಾಲಮಾಪಿ.

2. ಭೂಮಿಯ ಗುರುತ್ವ ವೇಗೋತ್ಕರ್ಷದಿಂದ ನಿಯಂತ್ರಿಸಲ್ಪಟ್ಟ ಆಂದೋಳನಗಳನ್ನು ಉಂಟುಮಾಡುವ ಸಾಧನಗಳನ್ನು ಕಾಲಮಾಪಿಗಳನ್ನಾಗಿ ಉಪಯೋಗಿಸಬಹುದು. ಉದಾಹರಣೆಗೆ (i)ಲೋಲಕಗಳು, (ii)ನೀರುಗಡಿಯಾರಗಳು, (iii) ಮರಾತನ ಮರುಳು ಗಡಿಯಾರಗಳು.

3. ವಸ್ತುಗಳ ಸ್ಥಿತಿಸ್ಥಾಪಕತ್ವ ಗುಣಗಳನ್ನು ಅನುಸರಿಸಿ ಆಂದೋಳನಗೊಳ್ಳುವ ಸಾಧನಗಳಿಂದಲೂ ಕಾಲಮಾಪಿಗಳನ್ನು ನಿರ್ಮಿಸಬಹುದು. ಉದಾಹರಣೆಗೆ (i) ಆಂದೋಲಿಸುವ ಪೀಪಿಗಳು, (ii) ಶ್ರುತಿಕವಲುಗಳು, (iii) ಕ್ವಾರ್ಟ್ಸ್‌ಸ್ಫಟಿಕಗಳ ಆಂದೋಳನ. (iv) ಕೈಗಡಿಯಾರ ನಿಲ್ಲಡಿಯಾರಗಳಲ್ಲಿ ಉಪಯೋಗಿಸುವ ಸಮತೋಲನ ಚಕ್ರಗಳು.

4 ವಿದ್ಯುತ್ ಸಂಗ್ರಾಹಕದಲ್ಲಿರುವ (ಕಂಡೆನ್ಸರ್) ವಿದ್ಯುದಂಶ ಕಡಿಮೆಯಾಗುತ್ತಿರುವುದರ ಮತ್ತು ರೋಧ, ಸಂಗ್ರಾಹಕ ಹಾಗೂ ವಿದ್ಯುತ್ ಚೋದಕ (ಇಂಡಕ್ಟರ್) ಜೊತೆ ಸೇರಿರುವ ವಿದ್ಯುನ್ಮಂಡಲದ ವಿದ್ಯುತ್ ಅನುರಣನ ಆಂದೋಳನಗಳನ್ನು ಉಪಯೋಗಿಸಿಕೊಂಡು ಪ್ರಯೋಗಶಾಲೆಯಲ್ಲಿ ಅತಿಕಡಿಮೆ ಕಾಲದ ಅಂತರಗಳನ್ನು ಅಳೆಯಲು ಸಾಧ್ಯ. ಇವು ವಿದ್ಯುತ್ ಕಾಲಮಾಪಿಗಳು.

5 ಅಣು ಅಥವಾ ಪರಮಾಣುಗಳ ಆಂದೋಳನಗಳ ಮೇಲೆ ಅಳವಡಿಸಿ ರಚಿಸಿರುವ ಪರಮಾಣು ಕಾಲಮಾಪಿಗಳಿವೆ. ಇವುಗಳಿಗೆ ಪರಮಾಣು ಗಡಿಯಾರಗಳೆಂದು ಹೆಸರು.

6 ರೇಡಿಯೋ ಅಲೆಗಳನ್ನು ಕುಳಿ ಅನುರಣಕಗಳಲ್ಲಿ (ಕ್ಯಾವಿಟಿ ರೆಸೋನೇಟರ್ಸ್) ಅತ್ತಿಂದಿತ್ತ ಚಲಿಸುವಂತೆ ಮಾಡಿದರೆ ಅನುರಣಕದಿಂದ ಯಾವುದೋ ಒಂದು ನಿರ್ದಿಷ್ಟ ಆವರ್ತಾಂಕದಲ್ಲಿ ವಿದ್ಯುತ್ಕಾಂತ ಶಕ್ತಿ ಹೊರಹೊಮ್ಮುವುದು. ಇದನ್ನು ಉಪಯೋಗಿಸಿಕೊಂಡು ಅಲ್ಪಕಾಲಾಂತರಗಳನ್ನು ಅಳೆಯಬಹುದು. ಬೆಳಕಿನ ವೇಗಕ್ಕೂ ಯಾವುದಾದರೂ ತಂತಿಯಲ್ಲಿನ ವಿದ್ಯುತ್ಪ್ರವಾಹದ ವೇಗಕ್ಕೂ ಇರುವ ವ್ಯತ್ಯಾಸವನ್ನು ಉಪಯೋಗಿಸಿ ಅತ್ಯಂತ ಅಲ್ಪಕಾಲಗಳನ್ನು ಅಳೆಯಬಹುದು. ಅಷ್ಟೇ ಅಲ್ಲದೆ ಬೇರೆ ಬೇರೆ ಉದ್ದದ ಎರಡು ತಂತಿಗಳ ಮೂಲಕ ವಿದ್ಯುತ್ಪ್ರವಾಹ ಹರಿಯಲು ತೆಗೆದುಕೊಂಡ ಕಾಲಗಳ ಅಂತರಗಳಿಂದಲೂ ಅತ್ಯಂತ ಅಲ್ಪಕಾಲಗಳನ್ನು ಅಳಯಬಹುದು. ಇವೆಲ್ಲವುಗಳಿಗೂ ಎಲೆಕ್ಟ್ರಾನಿಕ್ ಕಾಲಮಾಪಿಗಳೆಂದು ಹೆಸರು.

7 ಒಂದು ವಸ್ತುವಿನ ಆವರ್ತನದರವನ್ನು ಕಾಲದ ಅಂತರ ತಿಳಿಯಲು ಉಪಯೋಗಿಸಬಹುದು. ಆವರ್ತಿಸುತ್ತಿರುವ ಒಂದು ವಸ್ತುವಿನ ಮೇಲೆ ಕನ್ನಡಿಯೊಂದನ್ನು

ಜೋಡಿಸಿಟ್ಟು ಅದು ಒಂದು ನಿರ್ದಿಷ್ಟ ಸ್ಥಾನಕ್ಕೆ ಬಂದಾಗ ಮಾತ್ರ ಬೆಳಕಿನ ಕಿರಣ ಪ್ರತಿಫಲಿಸುವಂತೆ ಏರ್ಪಡಿಸಿರುತ್ತಾರೆ. ಪ್ರತಿಫಲಿತ ಬೆಳಕು ಒಂದು ದ್ಯುತಿವಿದ್ಯುತ್ ಕೋಶದ ಮೇಲೆ ಕೇಂದ್ರೀಕೃತವಾಗುವಂತೆ ಮಾಡಿದರೆ ಅದರಿಂದ ವಿದ್ಯುತ್ ಸ್ಪಂದನ ಉತ್ಪತ್ತಿಯಾಗುವುದು. ಈ ಸ್ಪಂದನಗಳ ಕಾಲಾಂತರ ವಸ್ತುವಿನ ಆವರ್ತನದರವನ್ನು ಅವಲಂಬಿಸಿರುವುದು. ಅತ್ಯಲ್ಪಕಾಲಮಾಪಿಗಳನ್ನು ಈ ಪ್ರಕಾರ ರಚಿಸಬಹುದು.

ವೇಗ ಕಾಲಲೇಖಿ; ಗೊತ್ತಾದ ಎರಡು ಸ್ಥಳಗಳನ್ನು ಹಾದುಹೋಗುತ್ತಿರುವ ವಸ್ತುವಿನ ಚಲನದರವನ್ನು ಅಳೆಯಲು ಉಪಯೋಗಿಸುವ ಉಪಕರಣ (ವೆಲಾಸಿಟಿ ಕ್ರೋನೋಗ್ರಾಫ್). ಚಲಿಸುತ್ತಿರುವ ಮೋಟಾರು ಗಾಡಿಗಳ ವೇಗವನ್ನು ಅಳೆಯಲು ಪೊಲೀಸಿನವರು ಇಂಥ ಒಂದು ಸಾಧನ ಬಳಸುವರು. ಗಾಳಿತುಂಬಿದ ಕೊಳವೆಯನ್ನು ರಸ್ತೆಗೆ ಅಡ್ಡಲಾಗಿ ಇಟ್ಟಿರುತ್ತಾರೆ. ಒಂದು ವಾಹನ ಅದರ ಮೇಲೆ ಚಲಿಸಿದಾಗ ಗಾಳಿತುಂಬಿದ ಕೊಳವೆಯಲ್ಲಿ ಉತ್ಪತ್ತಿಯಾದ ಹೆಚ್ಚು ಒತ್ತಡದಿಂದ ಒಂದು ಗಡಿಯಾರ ಪ್ರಾರಂಭವಾಗಿ ವಾಹನ ಅದನ್ನು ಬಿಟ್ಟ ಕೂಡಲೆ ಒತ್ತಡ ಕಡಿಮೆಯಾಗಿ ಗಡಿಯಾರ ನಿಲ್ಲುತ್ತದೆ. ಇಂಥ ಕಾಲಲೇಖಿಗಳಿಂದ ವಾಹನಗಳ ವೇಗಗಳನ್ನು ನಿರ್ಧರಿಸುತ್ತಾರೆ. (ಪಿ.ವಿ.)

**ಕಾಲಸರಣಿ :** ಕಾಲಕಾಲಕ್ಕೆ ದೊರೆಯುವ ಆರ್ಥಿಕ ಮತ್ತು ಅನ್ಯಚರಗಳ ಅವೇಕ್ಷಣೆಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿ ತನ್ಮೂಲಕ ಆ ಚರಗಳ ಭವಿಷ್ಯದ ಬೆಲೆಗಳನ್ನು ಅಂದಾಜು ಮಾಡುವಲ್ಲಿ ಬಳಸುವ ಅವೇಕ್ಷಣೆಗಳ ಶ್ರೇಣಿ (ಟೈಂ ಸೀರಿಸ್). ಪ್ರಸಕ್ತ ಚರಗಳು ಕಾಲಕ್ರಮೇಣ ಯಾವ ರೀತಿ ಬದಲಾವಣೆ ಹೊಂದುತ್ತವೆ ಎಂದು ಕಾಲಸರಣಿ ನಿರೂಪಿಸುವುದು. ಮುನ್–ಅಂದಾಜು ಮಾಡುವುದೇ ಕಾಲಸರಣಿಯ ವಿಶ್ಲೇಷಣದ ಮುಖ್ಯ ಉದ್ದೇಶವೆನ್ನಬಹುದು.

ಕಾಲಸರಣಿಯ ಚಲನವಲನಗಳು, ಏರಿಳಿತಗಳು ವಿವಿಧ ಕಾರಣಗಳಿಂದ ಉತ್ಪನ್ನವಾಗುತ್ತವೆ. ಇವುಗಳಲ್ಲಿ ಕೆಲವು ಆರ್ಥಿಕ, ಕೆಲವು ಪ್ರಾಕೃತಿಕ, ಕೆಲವು ಸಾಮಾಜಿಕ ಮತ್ತೆ ಕೆಲವು ಧಾರ್ಮಿಕವಾಗಿರಬಹುದು. ಇವುಗಳಲ್ಲಿ ಕೆಲವೊಂದು ಕಾಲಶ್ರೇಣಿಯ ನೀಳ್ಗಾಲದ ಪ್ರಗತಿಯ ಮೇಲೆ ಪರಿಣಾಮವನ್ನು ಬೀರಿದರೆ ಮತ್ತೆ ಕೆಲವು ಅಲ್ಪಾವಧಿಯ ಬದಲಾವಣೆಗಳನ್ನುಂಟುಮಾಡುತ್ತವೆ. ಕಾಲಸರಣಿಯಲ್ಲಿ ವಿವಿಧ ಪ್ರಕಾರದ ಬದಲಾವಣೆಗಳೂ ಮಾರ್ಪಾಡುಗಳೂ ಅಡಗಿವೆ. ಈ ಬದಲಾವಣೆಗಳನ್ನು ವರ್ಗೀಕರಣಮಾಡಿ ವಿಂಗಡಿಸಿ ಪ್ರತಿಯೊಂದರ ಲಕ್ಷಣಧರ್ಮಗಳನ್ನು ನಿರ್ಧರಿಸಿ ಅವನ್ನು ಪ್ರತ್ಯೇಕಿಸುವ ವಿಧಾನಕ್ಕೆ ಕಾಲಸರಣಿಯ ವಿಘಟನೆ ಅಥವಾ ವಿಶ್ಲೇಷಣೆ ಎನ್ನುತ್ತೇವೆ.

**ಕಾಲಶ್ರೇಣಿಯ ಘಟಕಗಳು :** ಕಾಲಸರಣಿ ನಾಲ್ಕು ವಿಭಿನ್ನ ಘಟಕಗಳನ್ನು ಒಳಗೊಂಡಿರುತ್ತದೆ ; 1 ನೀಳ್ಗಾಲದ ಅಥವಾ ದೀರ್ಘಕಾಲದ ಪ್ರವೃತ್ತಿ (ಸೆಕ್ಯುಲರ್ ಟ್ರೆಂಡ್) *T*; 2 ಪರ್ವಕಾಲಿಕ ಬದಲಾವಣೆಗಳು ಅಥವಾ ಪಾರ್ವಣ ಚಲನೆಗಳು (ಸೀಸನಲ್ ವೇರಿಯೇಷನ್ಸ್) *S* ; 3 ವಾಣಿಜ್ಯ ಚಕ್ರ (ಸೀಸನಲ್ ಸೈಕಲ್) ಅಥವಾ ಚಕ್ರೀಯ ತೊನೆದಾಟ C; 4 ಕ್ರಮರಹಿತ ಮಾರ್ಪಾಡುಗಳು ಅಥವಾ ಅವ್ಯವಸ್ಥಿತ ಏಳುಬೀಳುಗಳು I. ಇವುಗಳಲ್ಲಿ ಯಾವುದಾದರೂ ಒಂದು ಘಟಕಾಂಗವನ್ನು ಪರಿಶೀಲಿಸಿದಾಗ ಅಥವಾ ಯಾವುದಾದರೂ ಘಟಕಾಂಗವನ್ನು ವರ್ಜಿಸಬೇಕಾದಾಗ ಪ್ರಸಕ್ತ ಕಾಲಸರಣಿಯನ್ನು ವಿಘಟಿಸಬೇಕಾಗುವುದು. ಇದನ್ನು ಸಾಧಿಸಲು ಘಟಕಾಂಗಗಳ ಯಾವುದಾದರೂ ಸೂಕ್ತವಾದ ಪರಸ್ಪರ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕಾಗುವುದು.

ಕಾಲಸರಣಿಯ ಅವೇಕ್ಷಣೆಗಳು ಕಾಲಾನುಸರಣಿಯಾಗಿರುವುದು. ಚರದ ಒಂದು ಕಾಲದ ಬೆಲೆ ಮುಂದಿನ ಕಾಲದ ಬೆಲೆಯ ಮೇಲೆ ಪರಿಣಾಮವನ್ನು ಬೀರುವುದು. ಸಂಖ್ಯಾಕಲನದ ಭಾಷೆಯಲ್ಲಿ ಹೇಳುವುದಾದರೆ ಅವು ಯಾದೃಚ್ಛಿಕ ಚರಗಳಾಗಿರದೆ (ರ‍್ಯಾಂಡಂ ವೇರಿಯಬಲ್ಸ್) ಕಾಲಾನುಕ್ರಮವಾದ ಸ್ವಸಹಸಂಬಂಧ (ಆಟೋಕಾರಿಲೇಷನ್) ಇರುವ ಚರಗಳಾಗಿವೆ. ಇಲ್ಲಿ ಅವೇಕ್ಷಣೆಗಳ ಆನುಪೂರ್ವಿ ಗಮನಾರ್ಹವಾದ ಮತ್ತು ಸಾರಗರ್ಭಿತವಾದ ಸಂಗತಿ.

**ಕಾಲಸರಣಿಯ ಗಣಿತ ಪಡಿಕಟ್ಟು (ಮ್ಯಾಥ್‌ಮ್ಯಾಟಿಕಲ್ ಮೋಡಲ್) :** ಮೇಲೆ ನಮೂದಿಸಿರುವ ನಾಲ್ಕು ಘಟಕಾಂಘಗಳೂ ಸಂಕಲನಾತ್ಮಕವಾಗಿ (ಅಡಿಟಿವ್) ಅಥವಾ ಗುಣಾತ್ಮಕವಾಗಿ (ಮಲ್ಟಿಪ್ಲಿಕೇಟಿವ್) ಒಟ್ಟು ಸೇರಿ ಕಾಲಸರಣಿಯಾಗಿ ಪರಿಣಮಿಸುತ್ತವೆ. ದೀರ್ಘಕಾಲ ಪ್ರವೃತ್ತಿ, ಪಾರ್ವಣ ವಿಚಲನೆ ಮತ್ತು ವಾಣಿಜ್ಯ ಚಕ್ರಗಳು ಸಾಧಾರಣವಾಗಿ ಕಾಲಚರದ ಸ್ತಿಮಿತ ಉತ್ಪನ್ನ (ಸ್ಟೇಬಲ್ ಫಂಕ್ಷನ್ ಆಫ್ ಟೈಂ) ಆಗಿರುವುವೆಂದು ಅನುಭವದಿಂದ ತಿಳಿದುಬರುತ್ತದೆ. ನಾಲ್ಕನೆಯ ಘಟಕಾಂಗವಾದ ಅವ್ಯವಸ್ಥಿತ ಏಳು ಬೀಳುಗಳಿಗೆ ಈ ಗುಣವಿರುವುದಿಲ್ಲ.

ಸಂಕಲನಾತ್ಮಕ ಪ್ರತಿಕೃತಿ ಅಥವಾ ಪಡಿಕಟ್ಟಿನ ಮೇರೆಗೆ ಕಾಲಸರಣಿಯ ಅಂಕಿಅಂಶಗಳು ಉಪರ್ಯುಕ್ತ ನಾಲ್ಕು ಘಟಕಾಂಗಗಳ ಸಂಕಲಿತ ಫಲವಾಗಿರುವುದೆಂದು ಪರಿಗಣಿಸುತ್ತೇವೆ. ಕಾಲಸರಣಿಯ ದತ್ತಾಂಶವನ್ನು ಅಥವಾ ವೇಕ್ಷಣೆಯನ್ನು Y ಎಂದು ಸೂಚಿಸಿದರೆ ಈ ಸಂಕಲನಾತ್ಮಕ ಪಡಿಕಟ್ಟಿನ ಮೇರೆಗೆ ಇದನ್ನು

$$Y = T + S + C + I$$

ಎಂಬ ಸಮೀಕರಣದ ಮೂಲಕ ನಿರೂಪಿಸಬಹುದು,

ಇದೇ ದತ್ತಾಂಶವನ್ನು ಗುಣಾತ್ಮಕ ಪಡಿಕಟ್ಟಿನ ಪ್ರಕಾರ

$$Y = T X C X S X I$$

ಎಂಬ ಸಮೀಕರಣದ ಮೂಲಕ ನಿರೂಪಿಸಲಾಗುವುದು. ಘಟಕಾಂಗಗಳು ಸಂಭವ ಸ್ವತಂತ್ರ (ಸ್ಟೋಕೇಸ್ಟಿಕ್ ಇಂಡಿಪೆಂಡೆಂಟ್) ಚರಗಳಾಗಿದ್ದರೆ ಮಾತ್ರ ಸಂಕಲನಾತ್ಮಕ ಪಡಿಕಟ್ಟನ್ನು ಬಳಸುವುದು ಸಾಧುವಾಗುವುದು. ಅವುಗಳ ಪರಸ್ಪರ ಅಂತರಕ್ರಿಯೆ (ಇಂಟರ‍್ಯಾಕ್ಷನ್) ಏನಾದರೂ ಇದ್ದರೆ ಆ ಸಂದರ್ಭಕ್ಕೆ ಈ ಪಡಿಕಟ್ಟು ಹೊಂದುವುದಿಲ್ಲ. ಗುಣನಾತ್ಮಕ ಪಡಿಕಟ್ಟಿನಲ್ಲಿ ಘಟಕಾಂಗಗಳ ಅನ್ಯೋನ್ಯಾವಲಂಬಿ (ಮ್ಯೂಚುಅಲಿ ಡಿಪೆಂಡೆಂಟ್) ಪರಿಣಾಮವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಪಾರ್ವಣ ಚಲನೆಯೂ ವಾಣಿಜ್ಯಚಕ್ರ ದೀರ್ಘಕಾಲವೂ ಪ್ರವೃತ್ತಿಯ ಉತ್ಪನ್ನಗಳಾಗಿರುವುವು. ಪ್ರವೃತ್ತಿಯ ಪರಿಮಾಣ ಹೆಚ್ಚಿದಾಗ ಪಾರ್ವಣ ಚಲನೆಯೂ ಹೆಚ್ಚುವುದು. ಆದರೆ ಇವುಗಳ ನಿಷ್ಪತ್ತಿ ಸ್ಥಿರವಾಗಿರುವುದು. ಹೀಗೆಯೇ ಪ್ರವೃತ್ತಿಯ ಬೆಲೆಗಳು ಹೆಚ್ಚಾದಾಗ ಚಕ್ರೀಯ ತೊನೆದಾಟ ಹೆಚ್ಚುವುದು. ಕಾಲಸರಣಿಯಲ್ಲಿ ಈ ವಿಧವಾದ ಪರಿಸ್ಥಿತಿ ಸಾಧಾರಣವಾಗಿ ಕಂಡುಬರುವುದರಿಂದ ಗುಣನಾತ್ಮಕ ಪಡಿಕಟ್ಟನ್ನೇ ಆಧಾರಸಂಬಂಧವನ್ನಾಗಿಟ್ಟುಕೊಂಡು ಕಾಲಸರಣಿಯ ವಿಶ್ಲೇಷಣವನ್ನು ನಡೆಸುವುದು ಹೆಚ್ಚು ರೂಢಿ.

ಭಾರತ ದೇಶದಲ್ಲಿ 1951 ರಿಂದ 1958 ರವರೆಗೆ ಪ್ರತಿ ತಿಂಗಳಲ್ಲೂ ಉತ್ಪಾದನೆಯಾದ ಹತ್ತಿ ನೂಲಿನ ಪ್ರಮಾಣವನ್ನು (ಕೋಷ್ಟಕ–1) ಅವೇಕ್ಷಣವಾಗಿಟ್ಟುಕೊಂಡು ಕಾಲಸರಣಿಯ ನಕ್ಷೆಯನ್ನು 1ನೇ ಚಿತ್ರದಲ್ಲಿ ತೋರಿಸಿದೆ ಇದರಿಂದ ಕಾಲಸರಣಿಯ ಸ್ವರೂಪ ಸ್ವಲ್ಪಮಟ್ಟಿಗೆ ಮನವರಿಕೆಯಾಗುವುದು.

ಈಗ ಕಾಲಸರಣಿಯ ಪ್ರತಿಯೊಂದು ಘಟಕಾಂಗವನ್ನೂ ತೆಗೆದುಕೊಂಡು ಅದರ ಲಕ್ಷಣಾಧರ್ಮಗಳು ಯಾವುವು ಮತ್ತು ಅದನ್ನು ಪ್ರತ್ಯೇಕಿಸುವ ಬಗೆ ಹೇಗೆ ಎಂಬುದನ್ನು ಕುರಿತು ವಿಚಾರಮಾಡಬಹುದು.

ಕೋಷ್ಟಕ – 1

ಭಾರತ ದೇಶದಲ್ಲಿ ಹತ್ತಿ ನೂಲಿನ ಉತ್ಪತ್ತಿ: 1951 – 1958 (ಲಕ್ಷ ಪೌಂಡುಗಳು)

| ತಿಂಗಳು | 1951 | 1952 | 1953 | 1954 | 1955 | 1956 | 1957 | 1958 |
|---|---|---|---|---|---|---|---|---|
| ಜನವರಿ | 1107 | 1288 | 1384 | 1360 | 1392 | 1412 | 1581 | 1449 |
| ಫೆಬ್ರವರಿ | 1004 | 1145 | 1228 | 1205 | 1247 | 1253 | 1404 | 1314 |
| ಮಾರ್ಚ | 1056 | 1158 | 1244 | 1265 | 1331 | 1420 | 1390 | 1382 |
| ಏಪ್ರಿಲ್ | 1069 | 1201 | 1259 | 1327 | 1380 | 1387 | 1476 | 1398 |
| ಮೇ | 1133 | 1302 | 1399 | 1389 | 1460 | 1454 | 1558 | 1482 |
| ಜೂನ್ | 1062 | 1170 | 1306 | 1281 | 1352 | 1371 | 1455 | 1382 |
| ಜುಲೈ | 1007 | 1129 | 1259 | 1233 | 1298 | 1303 | 1424 | 1331 |
| ಆಗಸ್ಟ್ | 991 | 1119 | 1211 | 1201 | 1265 | 1270 | 1388 | 1300 |
| ಸೆಪ್ಟೆಂಬರ್ | 1107 | 1242 | 1362 | 1338 | 1413 | 1439 | 1526 | 1449 |
| ಅಕ್ಟೋಬರ್ | 1120 | 1267 | 1352 | 1339 | 1419 | 1452 | 1543 | 1466 |
| ನವೆಂಬರ್ | 1150 | 1278 | 1380 | 1405 | 1478 | 1501 | 1585 | 1500 |
| ಡಿಸೆಂಬರ್ | 1070 | 1172 | 1164 | 1269 | 1401 | 1449 | 1477 | 1396 |

ದೀರ್ಘಕಾಲ ಪ್ರವೃತ್ತಿ (ಸೆಕ್ಯುಲರ್ ಟ್ರೆಂಡ್): ನೀಳ್ಗಾಲದ ಬೆಳವಣಿಗೆಯೇ ದೀರ್ಘಕಾಲದ ಪ್ರವೃತ್ತಿ ಎನಿಸುವುದು. ಇದು ಹಲವು ಬಗೆಯಾಗಿರುವುದು; ಸರಳ ರೇಖೀಯ, ಪರಾವೃತ್ತೀಯ ಅಥವಾ ಘಾತೀಯ ಉತ್ಪನ್ನ (ಎಕ್ಸ್‌ಪೊಟೆನ್ಷಿಯಲ್ ಫಂಕ್ಷನ್) ಆಗಿರಬಹುದು. ರೇಖೀಯ ಪ್ರವೃತ್ತಿಯನ್ನು ಮೊದಲು ಪರಿಶೀಲಿಸಬಹುದು.

ಆರ್ಥಿಕ ಕಾಲಸರಣಿಯಲ್ಲಿ ಕಾಲಮಾನ ಒಂದು ವರ್ಷವಿರಬಹುದು ಅಥವಾ ಒಂದು ತಿಂಗಳಿರಬಹುದು, ಕೆಲವು ಸಂದರ್ಭಗಳಲ್ಲಿ ವರ್ಷಪಾದ ಅಂದರೆ ಕಾಲು ವರ್ಷವಾಗಿರಬಹುದು, ಒಂದು ವಾರವಾಗಿರಬಹುದು ಅಥವಾ ಒಂದು ದಿವಸವಾಗಿರಬಹುದು. ಇದಕ್ಕಿಂತ ಕಡಿಮೆಯ ಮಾನವೂ ಇರಬಹುದು. ಕಾಲಚರವನ್ನು x ಎಂದೂ ಕ್ರಮಾಗತವಾದ ಅವೇಕ್ಷಣೆಗಳನ್ನು Y ಎಂದೂ, ಸೂಚಿಸಿದರೆ

$$y=a + bx$$

ಎಂಬ ಸಂಬಂಧವನ್ನೇ ದೀರ್ಘಕಾಲಪ್ರವೃತ್ತಿ ಎಂದು ಹೇಳುತ್ತೇವೆ. ಇಲ್ಲಿ *b* ಎಂಬುದು ನೀಳ್ಗಾಲದ ಬೆಳವಣಿಗೆಯ ರೇಖೆಯ ಓಟ (ಸ್ಲೋಪ್) ಆಗಿದೆ.

ದೀರ್ಘಕಾಲ ಪ್ರವೃತ್ತಿಯನ್ನು ಕಂಡುಹಿಡಿಯಬೇಕಾದರೆ ಅವೇಕ್ಷಣಗಳ ಸಹಾಯದಿಂದ a ಮತ್ತು b ಈ ಅಚರ ರಾಶಿಗಳ ಬೆಲೆಗಳನ್ನು ಅಂದರೆ ಪ್ರವೃತ್ತಿ ರೇಖೆಯ ಓಟ ಮತ್ತು y ಅಕ್ಷದ ಮೇಲಿನ ಛೇದ ಇವೆರಡನ್ನೂ ಕಂಡುಹಿಡಿಯಬೇಕು. ನಕ್ಷೆಯಲ್ಲಿ ಅವೇಕ್ಷಣ ಬಿಂದುಗಳನ್ನು ಗುರುತಿಸಿ ಅವುಗಳ ಮೂಲಕ ಒಂದು ರೇಖೆಯನ್ನು ಹಾಯಿಸಬೇಕು.

ಅವೇಕ್ಷಣೆಗಳಿಗೆ ಹಾಳಿತವಾಗಿ ಒಪ್ಪುವಂತೆ ಸರಳರೇಖೆಯನ್ನು ಪೋರ್ದಿಸಲು ಕೆಳಕಂಡ ಐದು ವಿಧಾನಗಳಿವೆ. 1 ಸ್ವತಂತ್ರ ಕೈಕರಣ ವಿಧಾನ (ಫ್ರೀ ಹ್ಯಾಂಡ್ ಮೆಥಡ್). 2 ಆಯ್ದ ಬಿಂದುಗಳ ವಿಧಾನ. 3 ಸಮಾರ್ಧ–ಸರಾಸರಿ ವಿಧಾನ. 4 ಸಂಚಾರಿ–ಸರಾಸರಿ ವಿಧಾನ. 5 ಕನಿಷ್ಠತಮ ವರ್ಗವಿಧಾನ. ಈ ಐದು ವಿಧಾನಗಳನ್ನೂ ಕ್ರಮವಾಗಿ ಈ ಮುಂದೆ ಪರಿಶೀಲಿಸಿದೆ.

**1 ಸ್ವತಂತ್ರ ಕೈಕರಣ ವಿಧಾನ :** ಇದನ್ನು ಗ್ರಾಫ್ ವಿಧಾನ ಎಂದೂ ಹೇಳುವರು. ಚೌಕುಳಿ ಕಾಗದದ ಮೇಲೆ ದತ್ತಾಂಶಗಳನ್ನು ಅಂಕನ ಮಾಡಿ ದೊರಕುವ ಬಿಂದುಗಳನ್ನು ವೀಕ್ಷಿಸಿ ಪರಿಶೋಧಕ ತನಗೆ ಸೂಕ್ತವೆಂದು ತೋರುವ ಪ್ರಕಾರ ಬಿಂದುಗಳ ಹತ್ತಿರ ಸಮಂಜಸವಾಗಿ ಹಾಯ್ದು ಹೋಗುವಂಥ ರೇಖೆಯನ್ನು ಎಳೆಯಬೇಕು. ಈ ರೇಖೆಯನ್ನು ಎಳೆದ ಮೇಲೆ ಇದರ ಸಮೀಕರಣವನ್ನು ಸುಲಭವಾಗಿ ನಿರ್ಧರಿಸಬಹುದು. ಈ ವಿಧಾನ ಪರಿಶೋಧಕನ ಸ್ವಂತ ಅಭಿಪ್ರಾಯವನ್ನು ಅವಲಂಬಿಸಿರುವುದು. ಆದ್ದರಿಂದ ಬೇರೆ ಬೇರೆಯವರು ಬೇರೆ ಬೇರೆ ರೇಖೆಗಳನ್ನೆಳೆಯುವ ಸಂಭವವಿದೆ. ವೈಯಕ್ತಿಕ ದೃಷ್ಟಿಯಿಂದ ಲಭಿಸುವ ಈ ಫಲಗಳು ಅಷ್ಟು ಖಾತರಿಯಾಗಿರುವುದಿಲ್ಲ. ಇದೇ ಈ ವಿಧಾನದಲ್ಲಿನ ದೋಷ. ಬಹಳ ಸ್ಥೂಲವಾಗಿ ಅಂದಾಜು ಮಾಡಲು ಮಾತ್ರ ಇದನ್ನು ಬಳಸುತ್ತೇವೆ. ಹೊಸಬರು, ಕಲಿಕೆಯವರು ಈ ವಿಧಾನವನ್ನು ಬಳಸುವುದು ತರವಲ್ಲ.

**2 ಆಯ್ದ ಬಿಂದುಗಳ ವಿಧಾನ:** ಕಾಲಸರಣಿಯ ಪ್ರಗತಿಯನ್ನು ಪ್ರತಿನಿಧಿಸುವಂಥ ಯಾವುದಾದರೂ ಎರಡು ಬಿಂದುಗಳನ್ನು ತೆಗೆದುಕೊಂಡು ಅವುಗಳ ಮೂಲಕ ಹಾದುಹೋಗುವಂತೆ ಎಳೆದ ರೇಖೆ ದೀರ್ಘಕಾಲ ಪ್ರವೃತ್ತಿಯ ರೇಖೆಯಾಗುವುದು. ಸಾಮಾನ್ಯವಾಗಿ ಕಾಲಸರಣಿಯ ಮುಂದುಗಡೆಯ ಒಂದು ಬಿಂದುವನ್ನೂ ತರುವಾಯದ ಬಿಂದುಗಳಲ್ಲಿ ಒಂದನ್ನೂ ತೆಗೆದುಕೊಳ್ಳುವುದು ರೂಢಿ.

ಭಾರತದಲ್ಲಿ 1953 ರಿಂದ 1962 ರ ವರೆಗಿನ ಹತ್ತಿನೂಲಿನ ಉತ್ಪತ್ತಿಯ ಅಂಕಿಅಂಶಗಳನ್ನು (ಕೋಷ್ಟಕ 2) ತೆಗೆದುಕೊಂಡು ಈ ವಿಧಾನವನ್ನು ಅನ್ವಯಿಸೋಣ.

ಕೋಷ್ಟಕ– 2

ಭಾರತ ದೇಶದ ಹತ್ತಿ ನೂಲಿನ ಉತ್ಪತ್ತಿ : 1953–1962

| ವರ್ಷ | ಉತ್ಪತ್ತಿ ಲಕ್ಷ ಪೌಂಡುಗಳು | ಆಗಣಿಸಿದ ಪ್ರವೃತ್ತಿ ಬೆಲೆ | | |
|---|---|---|---|---|
| | | 1ನೆಯ ಸಮೀಕರಣ | 2ನೆಯ ಸಮೀಕರಣ | ಸಮಾರ್ಧ ಸರಾಸರಿ |
| 1 | 2 | 3 | 4 | 5 |
| 1953 | 1296 | 1260.6 | 1296.0 | 1319.7 |
| 1954 | 1301 | 1301.0 | 1327.4 | 1344.0 |
| 1955 | 1370 | 1341.4 | 1358.9 | 1368.4 |
| 1956 | 1392 | 1381.8 | 1390.3 | 1392.8 |
| 1957 | 1483 | 1422.3 | 1421.8 | 1417.1 |
| 1958 | 1404 | 1462.7 | 1453.2 | 1441.5 |
| 1959 | 1436 | 1503.1 | 1484.7 | 1465.8 |
| 1960 | 1448 | 1543.6 | 1516.1 | 1490.2 |
| 1961 | 1584 | 1584.0 | 1547.6 | 1514.6 |
| 1962 | 1579 | 1624.4 | 1579.0 | 1531.9 |

1954 ಮತ್ತು 1961 ಇಸವಿಗಳನ್ನು ಆಯ್ದುಕೊಂಡರೆ, ವಾಂಛಿತ ಪ್ರವೃತ್ತಿರೇಖೆಯ ಓಟ (1584–1301) ÷7 = 40.4 ಆಗುವುದು. ಪ್ರವೃತ್ತಿರೇಖೆಯ ಸಮೀಕರಣ $y = 1260.6-40.4x$ ಎಂದಾಗುವುದು. ಇದರಲ್ಲಿನ $x$ನ್ನು 1953 ರಿಂದ ಅಳೆಯತಕ್ಕದ್ದು. ಈ ಸಮೀಕರಣದ ಮೇರೆಗೆ ಆಯಾ ವರ್ಷಗಳ ಪ್ರವೃತ್ತಿ ಬೆಲೆಗಳನ್ನು ಲೆಕ್ಕ ಹಾಕಿ 2ನೆಯ ಕೋಷ್ಟಕ 3ನೆಯನ ನೀಟಸಾಲಿನಲ್ಲಿ ಕೊಟ್ಟಿದೆ.

1953 ಮತ್ತು 1962 ಇಸವಿಗಳನ್ನು ಆಯ್ದುಕೊಂಡು ಲೆಕ್ಕ ಮಾಡಿದರೆ ಪ್ರವೃತ್ತಿರೇಖೆಯ ಓಟ (1579–1296) ÷ 9 = 31.4 ಆಗುವುದು. ಮತ್ತು ಪ್ರವೃತ್ತಿರೇಖೆಯ ಸಮೀಕರಣ $y= 1296+ 31.4x$ ಎಂದಾಗುವುದು. ಈ ಸಮೀಕರಣಕ್ಕೆ ಅನುಸಾರವಾಗಿ ದೊರೆತ y ಬೆಲೆಗಳನ್ನು ಕೋಷ್ಟಕದ 4ನೆಯ ನೀಟಸಾಲಿನಲ್ಲಿ ಕೊಟ್ಟಿದೆ. ಈ ಎರಡು ಕ್ರಮಗಳಿಂದ ದೊರೆತ ಅಂದಾಜಿನ ಬೆಲೆಗಳಲ್ಲಿ ಹೆಚ್ಚು ವ್ಯತ್ಯಾಸಗಳಿವೆ. ಮೊದಲನೆಯದರ ಪ್ರಕಾರ ವಾರ್ಷಿಕ ಪ್ರವೃತ್ತಿ 40.4 ಇರುವುದು. ಆದರೆ ಎರಡನೆಯದರ ವಾರ್ಷಿಕ ಪ್ರವೃತ್ತಿ 31.4 ಇರುವುದು. ಆಯ್ದುಕೊಂಡ ವರ್ಷಗಳ ವ್ಯತ್ಯಾಸದಿಂದ ಇಷ್ಟು ಹೆಚ್ಚುಕಡಿಮೆಯಾಗುವ ಸಂಭವವಿರುವುದರಿಂದ ಈ ವಿಧಾನ ಅಷ್ಟು ಸಮರ್ಪಕವಾದುದಲ್ಲ. ಸ್ವತಂತ್ರ ಕೈಕರಣ ವಿಧಾನಕ್ಕಿಂತ ಇದು ಉತ್ತಮ ವಿಧಾನವಾದರೂ ಬಿಂದುಗಳ ಆಯ್ಕೆಯಲ್ಲಿ ಸ್ವಂತ ಅಭಿಪ್ರಾಯಾಧೀನವಾದ ನಿರ್ಣಯ ಬೆರೆತಿರುವುದರಿಂದ ಈ ವಿಧಾನ ದೋಷರಹಿತವಾದುದಲ್ಲ.

**3. ಸಮಾರ್ಧ–ಸರಾಸರಿ ವಿಧಾನ:** ದತ್ತ ಕಾಲಸರಣಿಯನ್ನು ಎರಡು ಸಮಾರ್ಧ ಖಂಡಗಳಾಗಿ ವಿಂಗಡಿಸಿ ಪ್ರತಿಖಂಡದ ಅವೇಕ್ಷಣೆಗಳ ಸರಾಸರಿಯನ್ನು ಕಂಡುಹಿಡಿಯಬೇಕು. ಇವನ್ನು ಆಯಾಖಂಡದ ಮಧ್ಯಕಾಲಕ್ಕೆ ಸಂವಾದಿಯಾದ ಆಯ್ಕೆ ಬಿಂದುಗಳೆಂದು ಪರಿಗಣಿಸಿ ಮೇಲೆ ಹೇಳಿದ ವಿಧಾನವನ್ನು ಅನುಸರಿಸಿ ಪ್ರವೃತ್ತಿರೇಖೆಯನ್ನು ಗೊತ್ತು ಹಚ್ಚಬಹುದು. ಉದಾಹರಣೆಗೆ, ಮೇಲೆ ಕೊಟ್ಟಿರುವ ಹತ್ತಿನೂಲಿನ ಉತ್ಪತ್ತಿಯ ಕೋಷ್ಟಕವನ್ನು ಪರಿಶೀಲಿಸಬಹುದು. ಮೊದಲನೆಯ ಐದು ವರ್ಷಗಳ ಸರಾಸರಿ ಉತ್ಪತ್ತಿ 1368.4 ಲಕ್ಷ ಪೌಂಡುಗಳು; ಎರಡನೆಯ ಐದು ವರ್ಷಗಳ ಸರಾಸರಿ ಉತ್ಪತ್ತಿ 1490.2 ಲಕ್ಷ ಪೌಂಡುಗಳು, ಇವನ್ನು ಅನುಕ್ರಮವಾಗಿ 1955 ನೆಯ ಮತ್ತು 1960ನೆಯ ಇಸವಿಗಳ ಉತ್ಪತ್ತಿ ಎಂದು ಭಾವಿಸಿದರೆ ಪ್ರವೃತ್ತಿರೇಖೆಯ ಓಟ (1490.2–1368.4) ÷ 5, ಅಥವಾ 24.36 ಆಗುವುದು. ಅದ್ದರಿಂದ $y= 1368.4+24.36x$ ಎಂಬುದು ಪ್ರವೃತ್ತಿರೇಖೆಯ ಸಮೀಕರಣವಾಗುವುದು. ಇಲ್ಲಿ $x$ನ್ನು 1955 ರಿಂದ ಅಳೆಯತಕ್ಕದ್ದು. ಕಾಲವನ್ನು ಅಳೆಯಲು 1953ನ್ನು ಮೂಲಬಿಂದುವನ್ನಾಗಿಟ್ಟುಕೊಂಡರೆ ಪ್ರವೃತ್ತಿರೇಖೆಯ ಸಮೀಕರಣ $y =1319{\cdot}68 + 24.36x$ ಎಂದಾಗುವುದು. ಈ ಸಮೀಕರಣದ ಸಹಾಯದಿಂದ ಪ್ರತಿಯೊಂದು ವರ್ಷದ ಪ್ರವೃತ್ತಿಬೆಲೆಯನ್ನೂ ಕಂಡುಹಿಡಿಯಬಹುದು. ಹಾಗೆ ಲೆಕ್ಕ ಮಾಡಿಬಂದ ಬೆಲೆಗಳನ್ನು 2ನೆಯ ಕೋಷ್ಟಕದ 5ನೆಯ ನೀಟಸಾಲಿನಲ್ಲಿ ತೋರಿಸಿದೆ. ಈ ಸಮೀಕರಣವನ್ನು ಉಪಯೋಗಿಸಿ 1963 ರಲ್ಲಿ ಆಗಬಹುದಾದ ಹತ್ತಿನೂಲಿನ ಉತ್ಪತ್ತಿಯನ್ನು ಅಂದಾಜು ಮಾಡಬಹುದು. ಈ ಅಂದಾಜು 1563.3 ಲಕ್ಷ ಪೌಂಡುಗಳು ಆಗುವುದು.

ದತ್ತಕಾಲಸರಣಿಯಲ್ಲಿ ಜನಸಂಖ್ಯೆಯ ಅವೇಕ್ಷಣೆಗಳಿದ್ದರೆ ಮಧ್ಯದ ಅವೇಕ್ಷಣೆಯನ್ನು ಯಾವ ರೀತಿ ನಿಕಾಲೆ ಮಾಡುವುದು ಎಂಬ ಪ್ರಶ್ನೆ ಏಳುವುದು. ಇದನ್ನು ಬಗೆಹರಿಸಲು ಮೂರು ದಾರಿಗಳಿವೆ. (i) ಮಧ್ಯದ ಅವೇಕ್ಷಣದ ಬೆಲೆಯ ಅರ್ಧವನ್ನು ಪ್ರತಿಖಂಡಕ್ಕೂ ಸೇರಿಸಿಕೊಳ್ಳುವುದು; (ii) ಮಧ್ಯದ ಆವೇಕ್ಷಣದ ಬೆಲೆಯನ್ನು ಪೂರ್ತ ಪ್ರತಿಖಂಡಕ್ಕೂ ಸೇರಿಸುವುದು; (iii) ಮಧ್ಯದ ಅವೇಕ್ಷಣದ ಬೆಲೆಯನ್ನು ಬಿಟ್ಟೇಬಿಡುವುದು.

**ವಿಶೇಷ ಸೂಚನೆ:** ದೀರ್ಘಕಾಲ ಪ್ರವೃತ್ತಿ ಸರಳರೇಖೆಯಲ್ಲದೆ ವಕ್ರರೇಖೆ ಯಾಗಿದ್ದಾಗ ಅದನ್ನು ನಿಶ್ಚಯಪಡಿಸಲು ಎಷ್ಟು ಪ್ರಾಚಲಗಳು (ಪ್ಯರಾಮೀಟರ್ಸ್) ಇರುವುವೋ ಅಷ್ಟು ಸಮಖಂಡಗಳನ್ನಾಗಿ ಕಾಲಸರಣಿಯ ಅವೇಕ್ಷಣಗಳನ್ನು ವಿಂಗಡಿಸಿಕೊಳ್ಳಬೇಕು. ಉದಾಹರಣೆಗೆ ಪ್ರವೃತ್ತಿ ಪರವಲಯವಾದರೆ ಇದಕ್ಕೆ ಮೂರು ಪ್ರಾಚಲಗಳು ಇರುವುದು. ಆದ್ದರಿಂದ ಅವೇಕ್ಷಣೆಗಳನ್ನು ಮೂರು ಸಮಪಾಲಾಗಿ ವಿಂಗಡಿಸಿಕೊಳ್ಳಬೇಕಲ್ಲದೆ ಪ್ರತಿಖಂಡದ ಅವೇಕ್ಷಣೆಗಳ ಸರಾಸರಿಯನ್ನು ಕಂಡುಹಿಡಿಯಬೇಕು. ಈ ಮೂರು ಬಿಂದುಗಳ ಮೂಲಕ ಹಾದುಹೋಗುವ ವಕ್ರರೇಖೆಯನ್ನು ಈಗ ಕಂಡುಹಿಡಿಯಬಹುದು.

**4. ಸಂಚಾರಿ–ಸರಾಸರಿ ವಿಧಾನ :** ದತ್ತ ಕಾಲಸರಣಿಯಿಂದ ನಿರ್ದಿಷ್ಟ ಉದ್ದದ ಕ್ರಮಾಗತ ಖಂಡಗಳ ಸರಾಸರಿಯನ್ನು ಕಂಡುಹಿಡಿದು ಅವುಗಳಿಂದಾದ ಮತ್ತೊಂದು ಸರಣಿಯನ್ನು ಸಾಧಿಸಿಕೊಳ್ಳುತ್ತೇವೆ. ಈ ವಿಧಾನಕ್ಕೆ ಸಂಚಾರಿ–ಸರಾಸರಿ ವಿಧಾನವೆಂದು ಹೆಸರು. ಭಾರತದೇಶದ ಹತ್ತಿನೂಲಿನ ಉತ್ಪತ್ತಿಯ ಸರಣಿಯನ್ನೇ ತೆಗೆದುಕೊಳ್ಳೋಣ. ಒಂದು ಅವೇಕ್ಷಣದ ಜೊತೆಗೆ ಅದರ ಹಿಂದಿನ ಮತ್ತು ಮುಂದಿನ ಅವೇಕ್ಷಣಗಳನ್ನು ಕೂಡಿಸಿ ಆ ಮೂರು ಅವೇಕ್ಷಣಗಳ ಸರಾಸರಿಯನು ಕಂಡುಹಿಡಿದು ನಡುವಣ ಕಾಲಬಿಂದುವಿಗೆ ಸಂವಾದಿಯಾಗಿ ಬರೆಯಬೇಕು. ಇದನ್ನೇ ಸಂಚಾರಿ–ಸರಾಸರಿ ಪ್ರವೃತ್ತಿ ಬೆಲೆ ಎನ್ನುವುದು. ಮುಮ್ಮಡಿ ಸಂಚಾರಿ–ಸರಾಸರಿ ಪ್ರವೃತ್ತಿ ಬೆಲೆಗಳನ್ನು 3ನೆಯ ಕೋಷ್ಟಕದ 4ನೆಯ ನೀಟಸಾಲಿನಲ್ಲಿ ತೋರಿಸಿದೆ.

ಕೋಷ್ಟಕ–3
ಭಾರತ ದೇಶದ ಹತ್ತಿನೂಲಿನ ಉತ್ಪತ್ತಿ : 1953–1962
ಸಂಚಾರಿ–ಸರಾಸರಿ ಪ್ರವೃತ್ತಿ ಬೆಲೆಗಳ ಗಣನೆ

| ಉತ್ಪತ್ತಿ ವರ್ಷ | ಮುಮ್ಮಡಿ ಲಕ್ಷ ಪೌಂ. | ಮುಮ್ಮಡಿ ಮೊತ್ತ | ನಾಲ್ಮಡಿ ಸರಾಸರಿ | ನಾಲ್ಮಡಿ ಮೊತ್ತ | ಮಧ್ಯಕೃತ ಸರಾಸರಿ | ನಾಲ್ಮಡಿ ಸರಾಸರಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1953 | 1296 | ... | ... | ... | ... | ... |
| 1954 | 1301 | 3967 | 1323.2 | 5359 | 1339.8 | ... |
| 1955 | 1370 | 4063 | 1354.3 | 5546 | 1386.5 | 1363 |
| 1956 | 1392 | 4245 | 1415.0 | 5649 | 1412.2 | 1399 |
| 1957 | 1483 | 4279 | 1426.3 | 5715 | 1428.7 | 1420 |
| 1958 | 1404 | 4323 | 1441.0 | 5771 | 1442.8 | 1436 |
| 1959 | 1436 | 4288 | 1429.3 | 5872 | 1468.0 | 1455 |
| 1960 | 1448 | 4468 | 1489.3 | 6047 | 1511.7 | 1490 |
| 1961 | 1584 | 4611 | 1537.0 | ... | ... | ... |
| 1962 | 1579 | ... | ... | ... | ... | ... |

ಮೂರು ಅವೇಕ್ಷಣೆಗಳ ಸರಾಸರಿಯನ್ನು ಕಂಡುಹಿಡಿಯುವ ಬದಲು ನಾಲ್ಕು ಐದು, ಆರು, ಮುಂತಾದ ಅವೇಕ್ಷಣೆಗಳ ಸರಾಸರಿಗಳನ್ನು ಕಂಡುಹಿಡಿಯಬಹುದು. ಹೆಚ್ಚಿನ ಅವೇಕ್ಷಣೆಗಳ ಸರಾಸರಿಯನ್ನು ತೆಗೆದುಕೊಂಡರೆ ಕಾಲಸರಣಿಯಲ್ಲಿನ ಏರುಪೇರುಗಳು ಕಡಿಮೆಯಾಗಿ ಪ್ರವೃತ್ತಿರೇಖೆ ಹೆಚ್ಚು ನುಣುಪಾಗುವುದು. ಕಾಲಸರಣಿ ಆವರ್ತಕ (ಪೀರಿಯಾಡಿಕ್) ಆಗಿದ್ದರೆ ಆವರ್ತದ ನೀಳದಷ್ಟು ಖಂಡದ ಸಂಚಾರಿ–ಸರಾಸರಿಯನ್ನು ಗಣನೆ ಮಾಡುತ್ತ ಹೋದಲ್ಲಿ ತಿದ್ದಿದ ಅಥವಾ ಸಂಸ್ಕರಿಸಿದ ಶ್ರೇಣಿ ರೇಖೀಯವಾಗಿರುವುದು. ಆದರೆ ಆವರ್ತದ ಉದ್ದ ಖಚಿತವಾಗಿ ಗೊತ್ತಿರುವುದಿಲ್ಲ, ಏಕರೂಪವಾಗಿರುವುದಿಲ್ಲ. ಸಿದ್ಧಿಯವರೆಗೆ ಸಾಧನೆ (ಟ್ರಯಲ್ ಅಂಡ್ ಎರರ್) ಕ್ರಮದಿಂದ ಆವರ್ತದ ಉದ್ದವನ್ನು ತಿಳಿಯಬೇಕಾಗುವುದು.

ನಾಲ್ಕು, ಆರು ಮುಂತಾದ ಸಮಸಂಖ್ಯೆಗಳಲ್ಲಿ ಅವೇಕ್ಷಣಗಳನ್ನು ತೆಗೆದುಕೊಂಡು ಸಂಚಾರಿ–ಸರಾಸರಿಯನ್ನು ಕಂಡುಹಿಡಿಯುವಾಗ ಒಂದು ತೊಡಕು ಏರ್ಪಡುವುದು. 1953 ರಿಂದ ನಾಲ್ಕು ವರ್ಷಗಳ ಸಂಚಾರಿ–ಸರಾಸರಿಯನ್ನು 3 ನೆಯ ಕೋಷ್ಟಕದ 6ನೆಯ ನೀಳಸಾಲಿನಲ್ಲಿ ಬರೆದಿದೆ. ಸರಾಸರಿಯ ಬೆಲೆ 1339.8 ಇದು ನಾಲ್ಕು ವರ್ಷದ ಅವಧಿಯ ಮಧ್ಯಭಾಗಕ್ಕೆ ಸಂವಾದಿಯಾದ ಬೆಲೆಯಾಗುವುದು. ಈ ಮಧ್ಯಭಾಗ ಈಗ 1954 ನೆಯ ಇಸವಿಯ ಕೊನೆ ಮತ್ತು 1953ನೆಯ ಇಸವಿ ಪ್ರಾರಂಭವಾಗುವುದು. ಆದರೆ ಇತರ ಬೆಲೆಗಳೆಲ್ಲವೂ ವರ್ಷದ ನಡುವಿಗೆ ಸಂವಾದಿಯಾಗಿರುವುದರಿಂದ ಸರಾಸರಿಯೂ ಅದೇ ರೀತಿಯಾಗಿ ವರ್ಷದ ಮಧ್ಯಕ್ಕೆ ಅನ್ವಯಿಸಬೇಕು. ಇದನ್ನು ಸಾಧಿಸಲು ಕ್ರಮಾಗತವಾದ ಎರಡು ನಾಲ್ಮಡಿ ಸರಾಸರಿಗಳನ್ನು ತೆಗೆದುಕೊಂಡು ಇವುಗಳ ಸರಾಸರಿಯನ್ನು ಕಂಡುಹಿಡಿಯಬೇಕು. ಈ ಬೆಲೆ ಮುಂದಿನ ವರ್ಷದ ಮಧ್ಯವರ್ತಿ ಬೆಲೆಯಾಗುವುದು. ಮೇಲಿನ ಕೋಷ್ಟಕದಲ್ಲಿ 1339.8 ಬೆಲೆ 1954 ರ ಅಂತ್ಯಕ್ಕೂ 1386.5 ಬೆಲೆ 1955ರ ಅಂತ್ಯಕ್ಕೂ ಅನ್ವಯಿಸುವುದರಿಂದ ಇವುಗಳ ಸರಾಸರಿ ಬೆಲೆ 1363.15 (ಅಥವಾ ದಶಾಂಶವನ್ನು ಬಿಟ್ಟು ಪೂರ್ಣ ಸಂಖ್ಯೆಯಲ್ಲಿ 1363) 1955 ನೆಯ ಇಸವಿಯ ಮಧ್ಯಕ್ಕೆ ಸಂವಾದಿಯಾಗುವುದು. ಹೀಗೆ ದೊರೆತ ಬೆಲೆಗೆ ಮಧ್ಯಕೃತ ನಾಲ್ಮಡಿ ಸರಾಸರಿಗಳನ್ನು ಕೋಷ್ಟಕದ 7ನೆಯ ನೀಟಸಾಲಿನಲ್ಲಿ ತೋರಿಸಿದೆ.

ಸಂಚಾರಿ–ಸರಾಸರಿಯನ್ನು ಬಳಸಿ ಪ್ರವೃತ್ತಿಬೆಲೆಗಳನ್ನು ಗಣಿಸುವುದರಲ್ಲಿ ಕೆಲವು ಕೊರತೆಗಳಿವೆ. ಮೊದಲನೆಯದಾಗಿ ಕಾಲಸರಣಿಯ ಎರಡು ತುದಿಗಳಲ್ಲೂ ಕೆಲವು ವರ್ಷಗಳ ಗಣನೆಯನ್ನು ಕಳೆದುಕೊಳ್ಳಬೇಕಾಗುವುದು. ಅಂದರೆ, ಅವುಗಳಿಗೆ ಸಂವಾದಿಯಾದ ಸರಾಸರಿ ಬೆಲೆಗಳು ಸಿಗಲಾರವು. 3ನೆಯ ಕೋಷ್ಟಕದ 7ನೆಯ ನೀಟಸಾಲಿನ ಮೊದಲ ಎರಡು ಸಾಲುಗಳೂ ಕೊನೆಯ ಎರಡು ಸಾಲುಗಳೂ ಖಾಲಿಯಾಗಿರುವುದನ್ನು ಗಮನಿಸಬಹುದು. ಎರಡನೆಯದಾಗಿ, ಸಂಚಾರಿ–ಸರಾಸರಿಯನ್ನು ಯಾವ ಗಣಿತ ಉತ್ಪನ್ನದ ಮೂಲಕವೂ ನಿರೂಪಿಸಲಾಗುವುದಿಲ್ಲ. ಆದ್ದರಿಂದ ಇದನ್ನು ಮುಂದಿನ ವರ್ಷಗಳಿಗೆ ಪ್ರಕ್ಷೇಪಿಸಲು (ಪ್ರೊಜೆಕ್ಟ್) ಸಾಧ್ಯವಿಲ್ಲ. ಇದು ಸಂಚಾರಿ–ಸರಾಸರಿ ವಿಧಾನದ ಭಾರಿ ಕೊರತೆಯೇ ಆಗುವುದು. ಆದಾಗ್ಯೂ ಸಾಂಪ್ರದಾಯಿಕವಾಗಿ ಇದನ್ನು ಬಳಸಲಾಗುವುದು ಮತ್ತು ಇದರಿಂದ ಕಾಲಸರಣಿಯ ಚಲನವಲನಗಳ ಪರಿಚಯವಾಗುವುದು. ಅಲ್ಲದೆ, ಪಾರ್ವಣಚಲನೆಗಳನ್ನು ವಿಶ್ಲೇಷಿಸಲು ಈ ವಿಧಾನ ಉಪಯುಕ್ತವಾಗಿರುವುದು.

**5 ಕನಿಷ್ಠತಮ ವರ್ಗವಿಧಾನ :** ಮೇಲೆ ಹೇಳಿದ ವಿಧಾನಗಳಲ್ಲಿ ಒಂದಲ್ಲ ಒಂದು ಬಗೆಯ ದೋಷ ಇದ್ದೇ ಇರುವುದೆಂಬುದನ್ನು ವಿದಿತಪಡಿಸಲಾಗಿದೆ. ನಿರ್ದುಷ್ಟ ಕ್ರಮದಲ್ಲಿ ಪ್ರವೃತ್ತಿರೇಖೆಯನ್ನು ಖಚಿತವಾಗಿ ನಿರ್ಧರಿಸಬೇಕಾದರೆ ಬೀಜಗಣಿತಕ್ರಮವನ್ನು ಪ್ರಯೋಗಿಸಬೇಕು. ಇದರಿಂದ ಸಿದ್ಧಿಸುವ ಫಲ ವ್ಯಕ್ತಿಗತವಾಗಿಲ್ಲದೆ ವಸ್ತುನಿಷ್ಠವಾಗಿರುವುದು. ದತ್ತ ಅವೇಕ್ಷಣೆಗಳಿಗೆ ಉಪಯುಕ್ತವಾದ ಸರಳರೇಖೆಯನ್ನು ಹಾಳತವಾಗಿ ಪೊರ್ದಿಸಲು (ಟು ಫಿಟ್) ಕನಿಷ್ಠತಮ ವರ್ಗವಿಧಾನವನ್ನು (ಮೆಥಡ್ ಆಫ್ ಲೀಸ್ಟ್ ಸ್ಕ್ವೇರ್ಸ್) ಬಳಸುತ್ತೇವೆ. ಇದರಲ್ಲಿನ a ಮತ್ತು b ಎರಡು ಪ್ರಾಚಲಗಳು. ದತ್ತ ಅವೇಕ್ಷಣೆಗಳ ಸಹಾಯದಿಂದ ಈ ಪ್ರಾಚಲಗಳ ಬೆಲೆಗಳನ್ನು ಕಂಡು ಹಿಡಿಯಬೇಕು. ಇವುಗಳ ವಾಸ್ತವಿಕ ಬೆಲೆಗಳು ತಿಳಿದಿದ್ದರೂ ಮೇಲಿನ ಸಮೀಕರಣದಲ್ಲಿ x,y ಚರಗಳ ಅವೇಕ್ಷಣದ ಬೆಲೆಗಳನ್ನು ಆದೇಶಿಸಿದರೆ ಈ ಸಾಮ್ಯ ಹೊಂದಿಕೆಯಾಗಲಾರದು. ಏಕೆಂದರೆ ಅಳತೆಯಲ್ಲಾಗತಕ್ಕ ಪ್ರಮಾದಗಳಿಂದ ಅಥವಾ ಯಾದೃಚ್ಛಿಕವಾಗಿ ಸಂಭವಿಸುವ ಕಾರಣಗಳಿಂದ y ಬೆಲೆಗಳಲ್ಲಿ ಏರುಪೇರಾಗುವ ಸಾಧ್ಯತೆ ಇದೆ. ಹೀಗಾಗಿ $(a+bx)$ ನ ಬೆಲೆ y ಗೆ ಸಮವಾಗಿರುವುದಿಲ್ಲ. ವ್ಯತ್ಯಾಸ $y-(a+bx)$, ಇದನ್ನು ವಿಭ್ರಮವೆಂದೂ ಹೇಳುವುದುಂಟು. ವಿಭ್ರಮಗಳ ವರ್ಗಗಳ ಮೊತ್ತ ಕನಿಷ್ಠತಮವಾಗುವಂತೆ a,b ಗಳನ್ನು ಗೊತ್ತುಪಡಿಸಬೇಕು ಎಂಬುದೇ ಕನಿಷ್ಠತಮ ವರ್ಗ ಸಿದ್ಧಾಂತ. ಇದರ ಮೇರೆಗೆ a ಮತ್ತು b ಗಳ ಬೆಲೆಗಳನ್ನು ಕಂಡುಹಿಡಿಯಲು ಉಪಲಬ್ಧವಾಗುವ ಸಮೀಕರಣಗಳಿಗೆ ಪ್ರಸಾಮಾನ್ಯ (ನಾರ್ಮಲ್) ಸಮೀಕರಣಗಳೆಂದು ಹೆಸರು. ಅವು ಇಂತಿರುವುವು:

$$\Sigma y = \Sigma a + \Sigma bx$$

ಮತ್ತು $$\Sigma xy = a\Sigma x + b\,\Sigma x^2$$

ಮಾರ್ಕಾಫ್ ಪ್ರಮೇಯ ಎಂಬ ಸಂಖ್ಯಾಕಲನಶಾಸ್ತ್ರದ ಒಂದು ಪ್ರಮೇಯದ ಮೇರೆಗೆ ಕನಿಷ್ಠತಮ ವರ್ಗವಿಧಾನದಂತೆ ಪೊರ್ದಿಸಿದ ರೇಖೆ ಅತ್ಯುತ್ತಮ ಪೊರ್ದಿಕೆ ಆಗುವುದು; ಅಂದರೆ a,b ಪ್ರಾಚಲಗಳ ಅಂದಾಜುಗಳು ಅತ್ಯುತ್ತಮ ರೇಖೆಯ ಅಪ್ರನಮಿನ ಅಂದಾಜುಗಳು (ಬೆಸ್ಟ್ ಲೀನಿಯರ್ ಅನ್‌ಬಯಸ್ಡ್ ಎಸ್ಟಿಮೇಟ್ಸ್).

ಕಾಲಮಾನದ ಮೂಲಬಿಂದುವನ್ನು ಅವೇಕ್ಷಿತ ಕಾಲಸರಣಿಯ ಮಧ್ಯಕ್ಕೆ ವರ್ಗಾಯಿಸಿದರೆ ಪ್ರಸಾಮಾನ್ಯ ಸಮಿಕರಣಗಳನ್ನು ಅತಿಸುಲಭವಾಗಿ ಬಿಡಿಸಬಹುದು. ಏಕೆಂದರೆ ಕಾಲಸರಣಿಯ ಕಾಲಮಾನಗಳು ಅಥವಾ ಅವಧಿಗಳು (ಪೀರಿಯಡ್ಸ್) ಎಣಿಕೆಯಲ್ಲಿ ಸಮವಾಗಿರುವುವಲ್ಲದೆ ಮಾನಗಳು ಕ್ರಮಾಗತ ಸಂಖ್ಯೆಗಳಾಗಿರುವುವು; ಪೂರ್ವಾರ್ಧದಲ್ಲಿ ಋಣಸಂಖ್ಯೆಗಳಾಗಿಯೂ ಉತ್ತರಾರ್ಧದಲ್ಲಿ ಧನಸಂಖ್ಯೆಗಳಾಗಿಯೂ ಇರುವುವು. ಇದರಿಂದ $\Sigma x$-0 ಆಗುವುದು. ಹೀಗಾಗಿ ಪ್ರಸಾಮಾನ್ಯ ಸಮೀಕರಣಗಳು $\Sigma y=na$ ಮತ್ತು $\Sigma xy=b\Sigma x^2$ ಎಂಬ ಸುಲಭರೂಪವನ್ನು ತಾಳುವುವು. ಇಲ್ಲಿ n=ಅವೇಕ್ಷಣಗಳ ಸಂಖ್ಯೆ. ಈ ಸಮೀಕರಣಗಳಿಂದ a,b ಗಳ ಬೆಲೆಗಳನ್ನು ನೇರವಾಗಿ ಕಂಡುಹಿಡಿಯಬಹುದು.

ಭಾರತದೇಶದಲ್ಲಿ ಉತ್ಪತಿಯಾದ ಸಿಮೆಂಟಿನ ಬಗ್ಗೆ ಅಂಕಿಅಂಶಗಳನ್ನು 4ನೆಯ ಕೋಷ್ಟಕದಲ್ಲಿ ಕೊಟ್ಟಿದೆ. ಅವುಗಳ ಆಧಾರದ ಮೇಲೆ ಅವಕ್ಕೆ ಹಾಳತವಾದ ಸರಳ ರೇಖೆಯನ್ನು ಪೊರ್ದಿಸುವ ಕ್ರಮದ ನ್ಯಾಸವನ್ನು ಕೋಷ್ಟಕದಲ್ಲಿ ತೋರಿಸಿದೆ. ಕಾಲವನ್ನು ಅಳೆಯಲು 1958ನ್ನು ಮೂಲಬಿಂದುವನ್ನಾಗಿ ಆರಿಸಿಕೊಂಡಿದೆ. 2ನೆಯ ನೀಟಸಾಲಿನಿಂದ $\Sigma y$ =569 ಮತ್ತು ನಾಲ್ಕನೆಯ ನೀಟಸಾಲಿನಿಂದ $\Sigma xy$ =349.

ಕೋಷ್ಟಕ–4
ಭಾರತದೇಶದ ಸಿಮೆಂಟಿನ ಉತ್ಪತ್ತಿ : ಪ್ರವೃತ್ತಿರೇಖೆಗಳ ಗಣನೆ

| ವರ್ಷ $x$ | ಉತ್ಪತ್ತಿ ಲಕ್ಷ ಟನ್, y | $x$-1958 = X | Xy | ಪ್ರವೃತ್ತಿ ಬೆಲೆ | $X^2y$ | ಪರವಲಯ ಪ್ರವೃತ್ತಿ ಬೆಲೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1954 ... | 44 | –4 | –176 | 39.94 | 704 | 41.81 |
| 1955 ... | 45 | –3 | –135 | 45.76 | 405 | 46.23 |
| 1956 ... | 49 | –2 | –98 | 51.58 | 196 | 51.05 |

| | | | | | | |
|---|---|---|---|---|---|---|
| 1957 ... | 56 | –1 | –56 | 57.40 | 56 | 56.27 |
| 1958 ... | 61 | 0 | 0 | 63.22 | 0 | 61.89 |
| 1959 ... | 68 | 1 | 68 | 69.04 | 68 | 67.91 |
| 1960 ... | 78 | 2 | 156 | 74.86 | 312 | 74.33 |
| 1961 ... | 82 | 3 | 246 | 80.68 | 738 | 81.15 |
| 1962 ... | 86 | 4 | 344 | 86.50 | 1376 | 88.37 |
| ಮೊತ್ತ ... | 569 | 0 | 349 | 568.98 | 3855 | 569.01 |

ಪ್ರಸಾಮಾನ್ಯ ಸಮೀಕರಣಗಳು : 9a=569 ಮತ್ತು 60b=349 ಸಮೀಕರಣಗಳನ್ನು ಬಿಡಿಸಲು a=63.22; b=5.82 ಸರಳರೇಖೆಯನ್ನು y=63.22+5.82X ಎಂದು ನಿರೂಪಿಸಬಹುದು. 1914ನ್ನು ಮೂಲಬಿಂದುವಾಗಿಟ್ಟುಕೊಂಡು ಅಳೆದ ಕಾಲಮಾನವನ್ನು




$\log y = \log a + x \log b$ $Y = A + Bx$

ಚಿತ್ರ 2. ಭಾರತದಲ್ಲಿ ಸಿಮೆಂಟಿನ ಉತ್ಪತ್ತಿ

X ವರ್ಷಗಳೆಂದು ಗಣನೆಮಾಡತಕ್ಕದ್ದು. ಈ ಸಮೀಕರಣದ Xನ ಬೆಲೆಯನ್ನು ಆದೇಶಿಸಿದಾಗ ದೊರೆವ ಬೆಲೆಗೆ yಯ ಪ್ರವೃತ್ತಿ ಬೆಲೆ ಎಂದು ಹೆಸರು. ಪ್ರವೃತ್ತಿ ಬೆಲೆಗಳನ್ನು 5ನೆಯ ಶ್ರೇಣಿಸಾಲಿನಲ್ಲಿ ತೋರಿಸಿದೆ. 2ನೆಯ ಗ್ರಾಫಿನಲ್ಲಿ ದತ್ತಬಿಂದುಗಳನ್ನು ಸೇರಿಸುವ ನಕ್ಷೆಯನ್ನು ಪೊರ್ದಿಸಿದ ರೇಖೆಯನ್ನು ತೋರಿಸಿದೆ. ಕೋಷ್ಟಕದಲ್ಲಿ ಕೊಟ್ಟಿರುವ ಪ್ರವೃತ್ತಿ ಬೆಲೆಗಳಿಗೂ (ನೀಟಸಾಲು 5) ಮತ್ತು 3ನೆಯ ನೀಟಸಾಲಿನ ಅವೇಕ್ಷಣೆ ಬೆಲೆಗಳಿಗೂ ಇರುವ ನಿಕಟತೆಯನ್ನು ಗಮನಿಸಬೇಕು. ಈ ಪ್ರವೃತ್ತಿ ರೇಖೆಯ ಸಹಾಯದಿಂದ ಮುಂದಿನ ವರ್ಷಗಳ ಉತ್ಪತ್ತಿಯನ್ನು ಅಂದಾಜು ಮಾಡಬಹುದು.

ವಕ್ರರೇಖೀಯ ಪ್ರವೃತ್ತಿಗಳು: ಕನಿಷ್ಠತಮ ವರ್ಗವಿಧಾನದಿಂದ ವಕ್ರರೇಖೀಯ ಪ್ರವೃತ್ತಿಗಳನ್ನು ನಿರ್ಧರಿಸಬಹುದು. ಇವುಗಳಲ್ಲಿ ಪರವಲಯ ಮತ್ತು ಘಾತೀಯ ರೇಖೆಗಳು ಮುಖ್ಯವಾದವು. ಭಾರತ ದೇಶದ ಸಿಮೆಂಟಿನ ಉತ್ಪತ್ತಿಯ ಅಂಕಿ ಅಂಶಗಳಿಗೆ (ಕೋಷ್ಟಕ–4) $y= a+ bx+cx^2$ ಎಂಬ ಪರವಲಯವನ್ನು ಪೊರ್ದಿಸಲು 4ನೆಯ ಕೋಷ್ಟಕದಲ್ಲಿ $x^2y$ ಎಂಬ ಮತ್ತೊಂದು ನೀಟಸಾಲನ್ನು ಸೇರಿಸಬೇಕು. ಈಗ ಪ್ರಸಾಮಾನ್ಯ ಸಮೀಕರಣಗಳು 3 ಇವೆ. ಅವು

$$\Sigma a+ b\Sigma x+c\Sigma x^2 = \Sigma y$$
$$a\Sigma x+ b\Sigma x^2 + c\Sigma x^3 =\Sigma xy$$
$$a \Sigma x^2+ b\Sigma x^3+ c\Sigma x^4 \Sigma x^2 y$$

ಈ ಮೂರು ಸಮೀಕರಣಗಳನ್ನೂ ಬಿಡಿಸಿ a,b,c ಪ್ರಾಚಲಗಳ ಬೆಲೆಗಳನ್ನು ನಿಶ್ಚಯಪಡಿಸಬಹುದು. X ನ ಮೂಲ ಬಿಂದುವನ್ನು ಮಧ್ಯದ ಅಂತರಕ್ಕೆ ಸರಿಯಾಗಿ ತೆಗೆದುಕೊಂಡಿರುವುದರಿಂದ $\Sigma x=0, \Sigma x^3=0$; ಮತ್ತು $\Sigma x^2 =60$, $\Sigma x^4 =708$. ಈ ಬೆಲೆಗಳನ್ನು ಆದೇಶಿಸಲು ಪ್ರಸಾಮಾನ್ಯ ಸಮೀಕರಣಗಳು ಈ ರೂಪವನ್ನು ತಾಳುತ್ತವೆ:

9a+60 c=569

60 b=349

60a+708c=3855

ರೇಖೀಯ ಪ್ರವೃತ್ತಿಯನ್ನು ಕಂಡುಹಿಡಿಯಲು ಬಳಸಿದ ಅದೇ ಸರಳ ಸಮೀಕರಣದಿಂದ (60 b=349) bಯನ್ನು ಕಂಡುಹಿಡಿಯುತ್ತೇವೆ. ಆದ್ದರಿಂದ bಯ ಬೆಲೆಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಉಳಿದ ಎರಡು ಏಕಕಾಲಿಕ ಸಮೀಕರಣಗಳಿಂದ a,c ಗಳ ಬೆಲೆಗಳನ್ನು ಕಂಡುಹಿಡಿಯಬಹುದು. ಪರವಲಯ ಪ್ರವೃತ್ತಿ ರೇಖೆಯ ಸಮೀಕರಣ $y=61.89+5.82 X+0.2 x^2$ ಎಂದಾಗುವುದು (1958ರಿಂದ Xನ್ನು ಅಳೆಯತಕ್ಕದ್ದು). ಈ ಸಮೀಕರಣದ ಸಹಾಯದಿಂದ ಲೆಕ್ಕಮಾಡಿದ y ಬೆಲೆಗಳನ್ನು ಅಂದರೆ ಪ್ರವೃತ್ತಿ ಬೆಲೆಗಳನ್ನು 4ನೆಯ ಕೋಷ್ಟಕದ 7ನೆಯ ನೀಟ ಸಾಲಿನಲ್ಲಿ ಕೊಟ್ಟಿದೆ. ಈ ಬೆಲೆಗಳನ್ನು ಚೌಕುಳಿಯ ಕಾಗದದಲ್ಲಿ ಅಂಕಿತ ಮಾಡಿ ದೊರೆತ ಬಿಂದುಗಳ ಮೂಲಕ ಎಳೆದ ಪರವಲಯ ದತ್ತ ಬಿಂದುಗಳಿಗೆ ಹೆಚ್ಚು ಒತ್ತಾಗಿ ಹಾದು ಹೋಗುವುದನ್ನು ಕಾಣಬಹುದು. (ಚಿತ್ರ–2).

ಬೆಳವಣಿಗೆಯ ರೇಖೆಗಳು (ಗ್ರೋತ್ ಕರ್ವ್ಸ್): ಕೆಲವೇ ಸಂದರ್ಭಗಳಲ್ಲಿ ಬೆಳವಣಿಗೆಯ ಸ್ಥಿತಿಯಲ್ಲಿರುವ ಒಂದು ಸಮಷ್ಟಿಗೆ ಸೇರಿದ ಚರಗಳು ಘಾತ ಪ್ರಮಾಣದಲ್ಲಿ ಹೆಚ್ಚುತ್ತ ಹೋಗುವುವು. ಆಗ ಕಾಲಾಧೀನ (ಟೈಂ ಡಿಪೆಂಡೆಂಟ್) ಚರಕ್ಕೂ ಕಾಲಚರಕ್ಕೂ (ಟೈಂ ವೇರಿಯಬಲ್) ಇರುವ ಸಂಬಂಧವನ್ನು $y= ab^x$ ಎಂಬ ಸಮೀಕರಣದಿಂದ ನಿರೂಪಿಸಬಹುದು. ದತ್ತ ಅಪೇಕ್ಷಣೆಗಳಿಗೆ ಈ ಘಾತೀಯ ರೇಖೆಯನ್ನು ಪೊರ್ದಿಸಲು ಲಘು ಗಣಕವನ್ನು ಬಳಸುತ್ತೇವೆ. ಇಂಥ ಸಂದರ್ಭದಲ್ಲಿ ಅರ್ಧ ಲಘುಗಣಕದ ಚೌಕಳಿಕಾಗದದ ಮೇಲೆ ದತ್ತಾಂಕಗಳನ್ನು ಗುರುತಿಸಿದರೆ ಅವು ಸುಮಾರಾಗಿ ಸರಳ ರೇಖೆಯ ಮೇಲೆ ಬೀಳುವುದನ್ನು ಕಾಣಬಹುದು. ಲಘುಗಣಕವನ್ನು ತೆಗೆದಾಗ ಮೇಲೆ ಹೇಳಿದ ಸಮೀಕರಣ ಎಂದಾಗುವುದು. ಈಗ ಮತ್ತು ಎಂದು ಆದೇಶಿಸಿ ಇದನ್ನು ಎಂಬ ರೂಪಕ್ಕೆ ತರಬಹುದು. ಕನಿಷ್ಠತಮ ವರ್ಗತತ್ತ್ವದ ಆಧಾರದ ಮೇಲೆ A ಮತ್ತು B ಪ್ರಾಚಲಗಳನ್ನು ಗಣನೆ ಮಾಡಬಹುದು. ಅನಂತರ a, b ಗಳ ಬೆಲೆಗಳನ್ನೂ ಸುಲಭವಾಗಿ ಕಂಡುಹಿಡಿಯಬಹುದು.

**ಪಾರ್ವಣ ಚಲನೆಗಳು:** ಅನೇಕ ಸಂದರ್ಭಗಳಿಗೆ ತಕ್ಕಂತೆ ಆರ್ಥಿಕ, ಸಾಮಾಜಿಕ ಅಥವಾ ಪ್ರಾಕೃತಿಕ ಚರಗಳು ಬದಲಾಗುತ್ತವೆ. ಕೆಲವು ವೇಳೆ ಕಾಲಸರಣಿಯ ಬೆಲೆಗಳು ತಿಂಗಳು ತಿಂಗಳಿಗೆ ಬದಲಾಗುವುವು ಮತ್ತು ಕ್ಲುಪ್ತವಾದ ಕೆಲವು ತಿಂಗಳುಗಳಲ್ಲಿ ಹೆಚ್ಚಾಗಿಯೂ ಮತ್ತೆ ಕೆಲವು ತಿಂಗಳಲ್ಲಿ ಕಡಿಮೆಯಾಗಿಯೂ ಇರುವುವು. ಉದಾಹರಣೆಗೆ, ದಿನಸಿಗಳ ಬೆಲೆಗಳು ಸುಗ್ಗಿಯಲ್ಲಿ ಕಡಿಮೆಯಾಗುತ್ತವೆ, ಇತರ ಸಮಯಗಳಲ್ಲಿ ಹೆಚ್ಚಾಗಿರುತ್ತವೆ. ಹಬ್ಬ ಹರಿದಿನಗಳಲ್ಲಿ ಹೂ ತರಕಾರಿಗಳ ಬೆಲೆ ತುಟ್ಟಿಯಾಗಿರುತ್ತದೆ. ರೈಲು ಪ್ರಯಾಣದ ವಿಷಯದಲ್ಲಿ ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ಪ್ರಯಾಣಿಕರ ಸಂಖ್ಯೆ ಅತ್ಯಧಿಕವಾಗಿರುತ್ತದೆ. ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಬಹಳ ಕಡಿಮೆಯಾಗಿರುತ್ತದೆ. ಮಕ್ಕಳ ಜನನದ ಲೆಕ್ಕವನ್ನು ಪರಿಶೀಲಿಸಿದರೆ ಈ ತೆರನಾದ ಅನಾಗದೃಶ್ಯ ಘಟನೆ ಗೋಚರವಾಗುವುದು. ಜೂನ್ ತಿಂಗಳಲ್ಲಿ ಹುಟ್ಟುವ ಮಕ್ಕಳ ಸಂಖ್ಯೆ ಅತ್ಯಧಿಕವಾಗಿರುವುದು. ಎರಡನೆಯದಾಗಿ ಅಕ್ಟೋಬರ್ ತಿಂಗಳಲ್ಲಿ ಹುಟ್ಟುವ ಮಕ್ಕಳ ಸಂಖ್ಯೆಗೆ ಎರಡನೆಯ ಸ್ಥಾನ. ಎಲ್ಲಕ್ಕಿಂತ ಕಡಿಮೆ ಮಕ್ಕಳು ಹುಟ್ಟುವ ತಿಂಗಳೆಂದರೆ ಜನವರಿ. ಈ ವಿಧವಾಗಿ ಪರ್ವ ಪರ್ವಕ್ಕೂ ಆಗುವ ಬದಲಾವಣೆಗೆ ಅಥವಾ ಏರಿಳಿತಕ್ಕೆ ಪಾರ್ವಣ ವಿಚಲನೆ ಎಂದು ಹೆಸರು. ಹೀಗೆ ಬದಲಾವಣೆ ಆಗುವ ಚರಗಳನ್ನು ಕುರಿತು ಯಾವ ಋತುವಿನಲ್ಲಿ ಅದು ಹೆಚ್ಚಾಗುವುದು ಮತ್ತು ಎಷ್ಟು ಹೆಚ್ಚಾಗುವುದು ಎಂಬುದನ್ನು ತಿಳಿಯುವುದು ಅವಶ್ಯವಾಗುತ್ತದೆ. ಎಲ್ಲ ಪರ್ವಗಳ ಸರಾಸರಿ ಬೆಲೆಗಿಂತ ಒಂದು ವಿಶಿಷ್ಟ ಪರ್ವದಲ್ಲಿ ಎಷ್ಟು ಪ್ರತಿಶತ ಹೆಚ್ಚು ಅಥವಾ ಕಡಿಮೆಯಾಗಿರುವುದು ಎಂಬುದನ್ನು ಸೂಚಿಸುವ ಸಂಖ್ಯೆಗೆ ಪಾರ್ವಣಸೂಚ್ಯಂಕ (ಸೀಸನಲ್ ಇಂಡೆಕ್ಸ್) ಎಂದು ಹೆಸರು. ಸಾಮಾನ್ಯವಾಗಿ ತಿಂಗಳುಗಳನ್ನೇ ಪರ್ವಗಳಾಗಿ ತೆಗದುಕೊಂಡು ಮಾಹಿತಿಗಳನ್ನು ವಿಶ್ಲೇಷಣೆ ಮಾಡುವುದು ಹೆಚ್ಚು ರೂಢಿ. ಕೆಲವು ಸಂದರ್ಭಗಳಲ್ಲಿ ವರ್ಷಪಾದವನ್ನು ತೆಗೆದುಕೊಳ್ಳುವುದೂ ಉಂಟು.

**ಪಾರ್ವಣ ವಿಚಲನೆಗಳನ್ನು ಪಡೆಯುವ ಕರಣ ಪದ್ಧತಿ:** ನೀಳ್ಗಾಲ ಪ್ರವೃತ್ತಿ, ಪಾರ್ವಣಚಲನೆ ಮೊದಲಾದವುಗಳೆಲ್ಲ ಸಮ್ಮಿಳಿತವಾಗಿ ಕಾಲಸರಣಿಯ ಬೆಲೆಗಳು ಮೂಡುತ್ತವೆಯಾದ್ದರಿಂದ, ಪಾರ್ವಣಚಲನೆಯನ್ನು ಮಾತ್ರ ಕಂಡುಹಿಡಿಯಬೇಕಾದರೆ ಪ್ರವೃತ್ತಿಯ ಪರಿಣಾಮವನ್ನು ಕಳೆದುಹಾಕಬೇಕು. ಆದ್ದರಿಂದ ಹಲವು ವರ್ಷಗಳವರೆಗೆ

ಪ್ರತಿತಿಂಗಳಿಗೂ ಕಾಲಸರಣಿಯ ಅವೇಕ್ಷಣೆಗಳು ಬೇಕಾಗುವುವು. ಸುಮಾರು ಹತ್ತು ವರ್ಷಗಳ ಮಾಹಿತಿಗಳು ಬೇಕಾಗಬಹುದು. ಅಂದರೆ 120 ಮಾಹೆಯಾನ ಅವೇಕ್ಷಣೆಗಳು. ಅಷ್ಟು ಉದ್ದವಾದ ಸರಣಿಯನ್ನು ವಿಶ್ಲೇಷಣೆ ಮಾಡುವ ಕ್ರಮವನ್ನು ಇಲ್ಲಿ ಕೊಡುವುದಿಲ್ಲ. ವರ್ಷಕ್ಕೆ ನಾಲ್ಕು ಪಾದಗಳಂತೆ ಶೇಖರಣೆ ಮಾಡಿದ ಕಾಲಸರಣಿಯ ಬೆಲೆಗಳ ಉದಾಹರಣೆಯನ್ನು ತೆಗೆದುಕೊಂಡು ಪಾರ್ವಣಚಲನೆಯ ವಿಶ್ಲೇಷಣ ಕ್ರಮವನ್ನು ವಿಶದಪಡಿಸಲಾಗುತ್ತದೆ.

ಒಂದು ಖಾಸಗೀ ವಾಣಿಜ್ಯ ಸಂಸ್ಥೆಯ ಪ್ರತಿ ವರ್ಷಪಾದದ ಮಾರಾಟದ ಮೊಬಲಗನ್ನು 5ನೆಯ ಕೋಷ್ಟಕದಲ್ಲಿ ಕೊಟ್ಟಿದೆ.

ಕೋಷ್ಟಕ–5

ದಕ್ಷಿಣ ವಾಣಿಜ್ಯ ಸಂಸ್ಥೆಯ ಮಾರಾಟದ ಗೋಷ್ವಾರೆ ('000 ರೂ.ಗಳು)

| ವರ್ಷ | ಪಾದ | ಬಿಕರಿ | ನಾಲ್ಮಡಿ ಮೊತ್ತ | ನಾಲ್ಮಡಿ ಸರಾಸರಿ | ಮಧ್ಯಕೃತ ನಾಲ್ಮಡಿ ಸರಾಸರಿ | ಪ್ರವೃತ್ತಿಗೆ ನಿಷ್ಪತ್ತಿ | ಪ್ರವೃತ್ತಿಗೆ ಬೆಲೆ | 100 x ಬಿಕರಿ ಪ್ರವೃತ್ತಿ | ಋಣಿಕೆ ಬಂಧ |
|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 |
| 1954 | I | 1708 | . . . | . . . | . . . | . . . | 1576 | 108.3 | . . . |
| | II | 1360 | 6909 | 1727 | . . . | . . . | 1617 | 84.1 | 97.6 |
| | III | 1793 | 6740 | 1685 | 1706.0 | 105.2 | 1659 | 108.1 | 131.8 |
| | IV | 2048 | 6622 | 1656 | 1670.5 | 122.6 | 1700 | 120.5 | 114.2 |
| 1955 | I | 1539 | 6590 | 1648 | 1652.0 | 93.1 | 1742 | 88.4 | 75.1 |
| | II | 1242 | 6522 | 1631 | 1639.5 | 75.7 | 1783 | 69.7 | 80.7 |
| | III | 1761 | 6487 | 1622 | 1626.5 | 108.2 | 1825 | 96.4 | 141.8 |
| | IV | 1980 | 6565 | 1641 | 1631.5 | 121.3 | 1865 | 106.2 | 112.5 |
| 1956 | I | 1504 | 7012 | 1753 | 1697.0 | 88.6 | 1907 | 78.8 | 76.0 |
| | II | 1320 | 7710 | 1927 | 1840.5 | 71.7 | 1949 | 67.7 | 87.8 |
| | III | 2208 | 8380 | 2095 | 2011.5 | 109.7 | 1990 | 110.9 | 163.4 |
| | IV | 2678 | 8998 | 2249 | 2172.0 | 123.3 | 2032 | 131.8 | 121.4 |
| 1957 | I | 2174 | 9376 | 2344 | 2296.5 | 94.7 | 2073 | 104.9 | 81.3 |
| | II | 1938 | 9530 | 2382 | 2263.0 | 82.0 | 2115 | 91.6 | 89.2 |
| | III | 2590 | 9457 | 2364 | 2373.0 | 109.4 | 2156 | 119.9 | 133.7 |
| | IV | 2832 | 9182 | 2296 | 2330.0 | 121.5 | 2197 | 128.9 | 109.3 |
| 1958 | I | 2101 | 8901 | 2225 | 2260.0 | 93.0 | 2239 | 93.9 | 74.2 |
| | II | 1663 | 9719 | 2180 | 2002.5 | 83.1 | 2280 | 72.9 | 79.2 |
| | III | 2305 | . . . | . . . | . . . | . . . | 2322 | 99.2 | 138.2 |
| | IV | 2650 | . . . | . . . | . . . | . . . | 2363 | 112.1 | 115.0 |

ಹಿಂದಿನ ಪ್ರಕರಣಗಳಲ್ಲಿ ಹೇಳಿರುವಂತೆ ಮಧ್ಯಕೃತ ನಾಲ್ಮಡಿ ಸಂಚಾರಿ–ಸರಾಸರಿಯನ್ನು ಕಂಡುಹಿಡಿದು 5ನೆಯ ನೀಟಸಾಲಿನಲ್ಲಿ ತೋರಿಸಲಾಗಿದೆ. ಪ್ರವೃತ್ತಿ ಬೆಲೆಗಳನ್ನಾಗಿ ತೆಗೆದುಕೊಂಡು ಆಯಾ ತಿಂಗಳ ಅವೇಕ್ಷಣ ಬೆಲೆಯನ್ನು ಸಂಚಾರಿ–ಸರಾಸರಿಯ ನಿಷ್ಪತ್ತಿಯನ್ನಾಗಿ ಪರಿವರ್ತಿಸಿ 6ನೆಯ ನೀಟ ಸಾಲಿನಲ್ಲಿ ಕೊಟ್ಟಿದೆ. ಇದನ್ನು 100ರಿಂದ ಗುಣಿಸಿ ಬಂದ ಲಬ್ಧವನ್ನು ಇಲ್ಲಿ ಕೂಡಲಾಗಿದೆ. ಮೊದಲನೆಯ ವರ್ಷದ ಎರಡು ಪಾದಗಳ ಮತ್ತು ಕೊನೆಯ ವರ್ಷದ ಕಡೆಯ ಎರಡು ಪಾದಗಳ ನಿಷ್ಪತ್ತಿಗಳು ದೊರಕುವುದಿಲ್ಲವಾದ್ದರಿಂದ ಪ್ರತಿವರ್ಷ ಪಾದಕ್ಕೂ ಸಂಬಂಧಿಸಿದಂತೆ 4 ಪ್ರವೃತ್ತಿನಿಷ್ಪತ್ತಿಗಳು ಮಾತ್ರ ದೊರೆಯುವುವು. ಇವನ್ನು ಬೇರೆಯಾಗಿ ಪಟ್ಟಿಮಾಡಿ 6ನೆಯ ಕೋಷ್ಟಕದಲ್ಲಿ ತೋರಿಸಿದೆ. ಪ್ರತಿಪಾದದ ನಿಷ್ಪತ್ತಿಗಳ ಮೊತ್ತವನ್ನು 7ನೆಯ ನೀಟಸಾಲಿನಲ್ಲೂ ಸರಾಸರಿಯನ್ನು 8ನೇ ಸಾಲಿನಲ್ಲೂ ಕೊಟ್ಟಿದೆ. 8ನೆಯ ನೀಟಸಾಲಿನ ಸಂಖ್ಯೆಗಳೇ ಬೇಕಾದ ಪರ್ವಚಲನೆಯ ಸೂಚ್ಯಂಕಗಳು. ಈ ನಾಲ್ಕು ಸೂಚ್ಯಂಕಗಳ ಮೊತ್ತ 400 ಆಗಬೇಕು. ಆದರೆ ಯಥಾರ್ಥವಾಗಿ ಅವನ್ನು ಕೂಡಿದ ಮೊತ್ತ 400.8 ಇರುವುದರಿಂದ ಪ್ರತಿಯೊಂದರ ಬೆಲೆಯನ್ನೂ ಇದೇ 400: 400.8 ಪ್ರಮಾಣದಲ್ಲಿ ಕುಗ್ಗಿಸಬೇಕು; ಅಂದರೆ ಪ್ರತಿಯೊಂದನ್ನೂ 400; 400.8=0.998 ಎಂಬ ಗುಣಕದಿಂದ ಗುಣಿಸಬೇಕು.

ಕೋಷ್ಟಕ–6

ಪಾರ್ವಣ ಚಲನೆಯ ಗಣನೆ

| ಪಾದ ವರ್ಷ | 1954 | 1955 | 1956 | 1957 | 1958 | ಮೊತ್ತ | ಸರಾಸರಿ | ತಿದ್ದಿದ ಸರಾಸರಿ |
|---|---|---|---|---|---|---|---|---|
| I | – | 93.1 | 88.6 | 94.7 | 93.0 | 369.4 | 92.4 | 92.2 |
| II | – | 75.7 | 71.7 | 82.0 | 83.1 | 312.5 | 78.1 | 78.0 |
| III | 105.2 | 108.2 | 109.7 | 109.4 | – | 432.5 | 108.1 | 107.8 |
| IV | 122.6 | 121.3 | 123.3 | 123.3 | – | 488.7 | 122.2 | 122.0 |
| ಮೊತ್ತ | | | | | | | 400.8 | 400.0 |

ಹೀಗೆ ತಿದ್ದಿ ಬಂದ ಸರಾಸರಿಗಳನ್ನು ಕೋಷ್ಟಕದ 9ನೆಯ ನೀಟಸಾಲಿನಲ್ಲಿ ತೋರಿಸಿದೆ. ಇವೇ ಪಾರ್ವಣ ಚಲನೆಯ ವಾಂಛಿತಸ್ಯೂಂಕಗಳು.

**ಮತ್ತೊಂದು ವಿಧಾನ :** ವರ್ಷದ ಪಾದದ ಪ್ರವೃತ್ತಿ ಬೆಲೆಯನ್ನು ಕಂಡು ಹಿಡಿಯಲು ಸಂಚಾರಿ–ಸರಾಸರಿಯನ್ನು ಮೇಲೆ ಬಳಸಿದ್ದೇವೆ. ಇದಕ್ಕೆ ಬದಲು ವಾರ್ಷಿಕ ಅವೇಕ್ಷಣೆಗಳಿಗೆ ಒಂದು ಗಣಿತರೇಖೆಯನ್ನು ಪೊರ್ದಿಸಿ ಅದರ ಸಹಾಯದಿಂದ ಆಯಾ ವರ್ಷಪಾದದ ಬೆಲೆಯನ್ನು ಗಣಿಸಬಹುದು. ಪ್ರಸಕ್ತ ಉದಾಹರಣೆಯಲ್ಲಿ 5 ವಾರ್ಷಿಕ ಅವೇಕ್ಷಣೆಗಳ ಆಧಾರದ ಮೇಲೆ $y=a+bx$ ಎಂಬ ಸರಳರೇಖೆಯನ್ನು ಪೊರ್ದಿಸಿದರೆ $a=7,878$ ಮತ್ತು $b=662.8$ ಆಗುವುವು. ಅಂದರೆ ಸಮೀಕರಣ

ಎಂದಾಗುವುವು. 1956ರಿಂದ $x$ನ್ನು ವರ್ಷಗಳಲ್ಲಿ ಅಳೆಯತಕ್ಕದ್ದು. ವರ್ಷಪಾದಗಳಿಗೆ ಅನ್ವಯಿಸುವ ಸಮೀಕರಣ ಬೇಕಾದಲ್ಲಿ a ಯನ್ನು 4 ರಿಂದಲೂ bಯನ್ನು $4 \times 4 = 16$ರಿಂದಲೂ ಭಾಗಿಸಬೇಕು. ಹಾಗೆ ಪರಿವರ್ತಿಸಿದಾಗ ದೊರೆವ ಸಮೀಕರಣ ಹೀಗಿರುವುದು:

ಇಲ್ಲಿ $x$ನ್ನು ಅಳೆವ ಏಕಮಾನ ಒಂದು ವರ್ಷಪಾದ ಮತ್ತು ಅಳತೆಯ ಮೂಲ ಬಿಂದು 1956ರ ಮಧ್ಯಕಾಲ, ಅಂದರೆ ಜುಲೈ 1, 1956. y ಎಂಬುದು ವರ್ಷಪಾದದ ಬಿಕರಿಯ ಮೊಬಲಗು (ಲಕ್ಷ ರೂಪಾಯಿಗಳಲ್ಲಿ). y ಇಂಥ ಸಮೀಕರಣಗಳಲ್ಲಿ ಮೂಲ ಬಿಂದುವನ್ನು ವರ್ಷಪಾದದ ನಡುವಾಗುವಂತೆ ಇಟ್ಟುಕೊಳ್ಳುವುದು ರೂಢಿ. ಇದಕ್ಕೆ ಅನುಸಾರವಾಗಿ ಮೂಲವನ್ನು 1956ನೆಯ ಇಸವಿಯ ಮೂರನೇ ಪಾದ ಎಂದಿಟ್ಟುಕೊಳ್ಳಬಹುದು. ಅಂದರೆ ಅಳತೆಯ ಮೂಲವನ್ನು ವರ್ಷಪಾದದ ಅರ್ಧದಷ್ಟು ಮುಂದಕ್ಕೆ (ಬಲಕ್ಕೆ) ನೂಕಿದಂತಾಗುವುದು. ಆಗ ಪ್ರವೃತ್ತಿ ಸಮೀಕರಣ

$$y = 1969.5 + 41.625(x + \tfrac{1}{2})$$

ಎಂದಾಗುವುದು. ದಶಮಾಂಶದ ಒಂದು ಸ್ಥಾನಕ್ಕೆ ತಿದ್ದಿದರೆ ಅದು

ಎಂಬ ರೂಪವನ್ನು ತಾಳುವುದು (ಮೂಲ 1956ರ ಮೂರನೆಯ ಪಾದ; ಅಳತೆಯ ಏಕಮಾನ ವರ್ಷಪಾದ; y ವರ್ಷಪಾದದ ಬಿಕರಿ, ಲಕ್ಷ ರೂಪಾಯಿಗಳಲ್ಲಿ). ಈ ಸಮೀಕರಣದ

$y = 7878 + 662.8x$ $y = 1969.5 + 41.625x$ $y = 1970.3 + 41.6x$

ಸಹಾಯದಿಂದ 1954ರಿಂದ ಹಿಡಿದು 1958ರ ವರೆಗಿನ ಎಲ್ಲ ವರ್ಷ ಪಾದಗಳಿಗೂ ಆಗತಕ್ಕ ಬೆಲೆಗಳನ್ನು ಲೆಕ್ಕಹಾಕಿ ಕಂಡುಹಿಡಿಯಬಹುದು. ಈ ಬೆಲೆಗಳನ್ನು 5ನೆಯ ಕೋಷ್ಟಕದ 7ನೆಯ ನೀಟಸಾಲಿನಲ್ಲಿ ತೋರಿಸಿದೆ. ಪ್ರತಿ ವರ್ಷಪಾದದ ಮಾರಾಟದ ಮೊಬಲಗು ಮತ್ತು ಗಣಿಸಿದ ಪ್ರವೃತ್ತಿ ಬೆಲೆ ಇವುಗಳ ನಿಷ್ಪತ್ತಿಯನ್ನು 8ನೆಯ ನೀಟಸಾಲಿನಲ್ಲಿ (100 ರಿಂದ ಗುಣಿಸಿ) ತೋರಿಸಿದೆ.

ಹಿಂದಿನ ಪ್ರಕರಣಗಳಲ್ಲಿ ಹೇಳಿರುವ ರೀತಿಯಲ್ಲಿ 1, 2, 3, 4ನೆಯ ವರ್ಷಪಾದಗಳ ಸೂಚ್ಯಂಕಗಳು 94.8, 77.2, 106.9 ಮತ್ತು 119.9 ಆಗುವುವು. ಇವುಗಳ ಮೊತ್ತ 400 ಇರಬೇಕು. ಆದರೆ ಇವುಗಳ ಮೊತ್ತ ಯಥಾರ್ಥವಾಗಿ 398.8 ಇರುವುದು. ಆದ್ದರಿಂದ ಈ ಸೂಚ್ಯಂಕಗಳನ್ನು ಸಮಾನ ಪ್ರಮಾಣದಲ್ಲಿ ಹೆಚ್ಚಿಸಿ ಮೊತ್ತ 400 ಬರುವಂತೆ ಮಾಡಬಹುದು. ಅದರ ಫಲವಾಗಿ ಪಾರ್ವಣ ಚಲನೆಯ ಸೂಚ್ಯಂಕಗಳು 95.0, 77.0, 107.2 ಮತ್ತು 120.4 ಆಗುವುವು. ಮೇಲೆ ಹೇಳಿದ ಎರಡು ಬೇರೆ ಬೇರೆ ಕ್ರಮಗಳಿಂದ ದೊರೆವ ಪಾರ್ವಣ ಚಲನೆಯ ಸೂಚ್ಯಂಕಗಳು ಸಮಾನವಾಗಿರುವುದಿಲ್ಲ. ಆದಾಗ್ಯೂ ಅವುಗಳಲ್ಲಿ ಹೆಚ್ಚು ವ್ಯತ್ಯಾಸವಿರುವುದಿಲ್ಲ ಎಂಬುದನ್ನು ಗಮನಿಸಬೇಕು.

**ಕುಣಿಕೆಬಂಧಗಳ ವಿಧಾನ (ಮೆಥಡ್‌ಆಫ್ ಲಿಂಕ್ ರಿಲೆಟಿವ್):** ಪಾರ್ವಣ ಚಲನೆಗಳನ್ನು ಕುಣಿಕೆಬಂಧಗಳ ಸಹಾಯದಿಂದ ಕಂಡುಹಿಡಿಯುವ ವಿಧಾನವೊಂದಿದೆ. ಪ್ರತಿಯೊಂದು ಅವೇಕ್ಷಣೆಯನ್ನು ಅದರ ಹಿಂದಿನ ಅವಧಿಯ ಅಥವಾ ಪರ್ವದ ಅವೇಕ್ಷಣೆಯಿಂದ ಭಾಗಿಸಿ ಬಂದ ಲಬ್ಧಕ್ಕೆ ಕುಣಿಕೆಬಂಧ ಎಂದು ಹೆಸರು. ಇದನ್ನು ಸೇಕಡಾ ಕ್ರಮದಲ್ಲಿ ಬರೆಯುತ್ತೇವೆ; ಅಂದರೆ ಲಬ್ಧವನ್ನು 100ರಿಂದ ಗುಣಿಸುತ್ತೇವೆ. ಕುಣಿಕೆ ಬಂಧಗಳು ಪಾರ್ವಣಚಲನೆಯ ಕ್ರಮಾಗತ ಸೂಚ್ಯಂಕಗಳ ನಿಷ್ಪತ್ತಿಗಳಾಗಿರುವುವು. 5ನೆಯ ಕೋಷ್ಟಕದ 9ನೆಯ ನೀಟಸಾಲಿನಲ್ಲಿ ಕುಣಿಕೆಬಂಧಗಳ ಬೆಲೆಗಳನ್ನು ಕೊಟ್ಟಿದೆ. ಮೊದಲನೆಯ ವರ್ಷಪಾದಕ್ಕೆ ಸಂವಾದಿಯಾದ ಸ್ಥಾನ ಖಾಲಿಯಾಗಿರುವುದನ್ನು ಗಮನಿಸಬೇಕು. ಇದರಿಂದ ಇಡೀ ಕೋಷ್ಟಕದಲ್ಲಿ ಪ್ರಥಮ ಪಾದದ ಕುಣಿಕೆಬಂಧಗಳ ಒಟ್ಟು ಸಂಖ್ಯೆಯಲ್ಲಿ ಒಂದು ಕಡಿಮೆಯಾಗುವುದು, ಅಂದರೆ, ನಾಲ್ಕೇ ನಾಲ್ಕು ಇರುವುವು; ಉಳಿದ ಪ್ರತಿಪಾದದ ಕುಣಿಕೆಬಂಧಗಳು 5 ಇರುವುವು. ಇದರ ಹಿಂದಿನ ವರ್ಷ, ಅಂದರೆ, 1953ನೆಯ ಇಸವಿಯ ಕೊನೆಯ ಪಾದದ ಅವೇಕ್ಷಣೆಯನ್ನು ತಿಳಿದರೆ ಈ ಖಾಲಿಸ್ಥಾನವನ್ನು ಪೂರ್ತಿಗೊಳಿಸಬಹುದು. ಮೊದಲನೆಯ ಪಾದದ ಕುಣಿಕೆ ಬಂಧದ ನಾಲ್ಕು ಬೆಲೆಗಳ ಸರಾಸರಿಯನ್ನು $m_1$ ಎಂದು ಸೂಚಿಸೋಣ. ಹೀಗೆಯೇ ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಪಾದಗಳ ಕುಣಿಕೆ ಬಂಧಗಳ ಸರಾಸರಿಯನ್ನು ಅನುಕ್ರಮವಾಗಿ $m_2$, $m_3$, $m_4$ ಎಂದು ಸೂಚಿಸೋಣ. ಪಾರ್ವಣಚಲನೆಯ ಸೂಚ್ಯಂಕವನ್ನು ನಿರ್ದೇಶಿಸಲು ಕೆಳಕಂಡಂತೆ ಸರಪಣಿ ಸಂಬಂಧಗಳನ್ನು ಮೊದಲು ಕಂಡುಹಿಡಿಯಬೇಕು.

$$c_1=100,\ c_2=c_1\ m_2/100,\ c_3=c_2,\ m_3/100,\ c_4=c_3\ m_4/100$$

ಈ cಗಳಿಗೆ ಸರಪಳಿ ಸಂಬಂಧಗಳೆಂದು (ಚೇನ್ ರಿಲೆಟಿವ್ಸ್) ಹೆಸರು. ಕೊನೆಯದಾಗಿ $c_4\ m_1/100$ ಗುಣಲಬ್ಧವನ್ನು $c_1$ ಎಂದು ಸೂಚಿಸಿದರೆ ಇದರ ಬೆಲೆ 100 ಇರಬೇಕು. ಹಾಗಿಲ್ಲದಿದ್ದರೆ, ಮೇಲೆ ಹೇಳಿದ ಸರಪಳಿ ಸಂಬಂಧಗಳಿಗೆ ಇದರ ಬೆಲೆ 100 ಇರಬೇಕು. ಹಾಗಿಲ್ಲದಿದ್ದರೆ, ಮೇಲೆ ಹೇಳಿದ ಸರಪಳಿ ಸಂಬಂಧಗಳಿಗೆ ಒಂದು ಬಗೆಯ ಸಂಸ್ಕಾರವನ್ನು ಮಾಡಬೇಕು. ಪ್ರತಿ cಯ ಬೆಲೆಯನ್ನೂ ಗುಣೋತ್ತರ ನಿಷ್ಪತ್ತಿಯಲ್ಲಿ ಬದಲಾಯಿಸಿ ಈ ಸಾಮ್ಯ ಸರಿಹೋಗುವಂತೆ ಮಾಡಬೇಕು. ಅಂದರೆ $(c_1/c_1)=r^3$ ಎಂದು ಬರೆದು r ನ ಬೆಲೆಯನ್ನು ಕಂಡುಹಿಡಿದು ತರುವಾಯ $c_2, c_3$, $c_4$ಗಳನ್ನು ಅನುಕ್ರಮವಾಗಿ $r, r^2, r^3$ ಗಳಿಂದ ಗುಣಿಸಬೇಕು. ಈ ಉದಾಹರಣೆಯಲ್ಲಿ $c_1=107.8$ ಇರುವುದು (ಕೋಷ್ಟಕ 7).

ಕೋಷ್ಟಕ–7

ಪಾರ್ವಣಚಲನೆಯ ಗಣನೆ: ಕುಣಿಕೆ ಬಂಧಗಳ ವಿಧಾನ

| **ವರ್ಷ ಪಾದ** | **ಸರಾಸರಿ ಕುಣಿಕೆ ಸಂಬಂಧ** | **ಸರಪಳಿ ಸಂಬಂಧ** | **ತಿದ್ದಿದ ಸರಪಳಿ ಸಂಬಂಧ** | **ತಿದ್ದಿದ ಪಾರ್ವಣ ಸೂಚ್ಯಂಕ** |
|---|---|---|---|---|
| 1 | 2 | 3 | 4 | 5 |
| I | $m_1$ 76.6 | $c_1$ 100.0 | 100.0 | 92.5 |
| II | $m_2$ 86.9 | $c_2$ 86.9 | 84.7 | 78.3 |
| III | $m_3$ 141.9 | $c_3$ 123.3 | 117.2 | 108.4 |
| IV | $m_4$ 114.5 | $c_4$ 140.8 | 130.5 | 120.8 |
| ಮೊತ್ತ | 419.9 | $c_1$107.8 | 432.4 | 400.0 |

ಆದ್ದರಿಂದ $r^3=(c_1/c_1')$ = (100/107.8) = 0.9274 ; ಮತ್ತು r=0.9752, $r^2$=0.9510. ಮೇಲೆ ಕಾಣಿಸಿದ $c_2$, $c_3$, $c_4$ ಸರಪಳಿ ಸಂಬಂಧಗಳನ್ನು 7ನೆಯ ಕೋಷ್ಟಕದ 4ನೆಯ ನೀಟಸಾಲಿನಲ್ಲಿ ತೋರಿಸಿದೆ. ಇವು ವಾಂಛಿತಸೂಚ್ಯಂಕಗಳ ಸಾಪೇಕ್ಷ ಪ್ರಮಾಣಗಳು. ಇವುಗಳ ಮೊತ್ತ 400 ಆಗುವಂತೆ ಹಿಂದಿನ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಈ ಸೂಚ್ಯಂಕಗಳನ್ನು ಹೆಚ್ಚಿಸಿ ಮತ್ತೆ ಸಂಸ್ಕಾರಮಾಡಬೇಕು. ಹಾಗೆ ಪರಿಷ್ಕರಿಸಿದ ಅಂತಿಮ ಬೆಲೆಗಳನ್ನು ಕೋಷ್ಟಕದ 5ನೆಯ ನೀಟಸಾಲಿನಲ್ಲಿ ಕಾಣಿಸಿದೆ. 6ನೆಯ ಕೋಷ್ಟಕದ 9ನೆಯ ನೀಟಸಾಲಿನಲ್ಲಿ ಕೊಟ್ಟಿರುವ ಸೂಚ್ಯಂಕಗಳೊಡನೆ ಇವನ್ನು ಹೋಲಿಸಿ ನೋಡಿದರೆ ಎರಡು ಬೆಲೆಗಳೂ ನಿಕಟವಾಗಿವೆಯೆಂಬುದು ಮಂದಟ್ಟಾಗುವುದು.

**ವಾಣಿಜ್ಯ ಚಕ್ರಗಳು :** ಕಾಲಸರಣಿಯ ಅವೇಕ್ಷಣೆಗಳು ನಾಲ್ಕು ಘಟಕಾಂಗಗಳ ಸಮ್ಮಿಳನದಿಂದ ಲಭಿಸುತ್ತವೆಂದೂ ಸರಣಿಯನ್ನು $y = T \times S \times C \times I$ ಎಂಬ ಸಮೀಕರಣದಿಂದ ನಿರೂಪಿಸಬಹುದೆಂದೂ ಹಿಂದೆ ಹೇಳಿದೆ. ದೀರ್ಘಕಾಲಪ್ರವೃತ್ತಿ $T$ ಮತ್ತು ಪಾರ್ವಣಚಲನೆ $S$ ಇವನ್ನು ಬೇರ್ಪಡಿಸುವ ವಿಧಾನಗಳನ್ನೂ ಮೇಲೆ ವಿವರಿಸಿದ್ದಾಗಿದೆ. ಆ ಮೇರೆಗೆ $T$ ಮತ್ತು $S$ಗಳನ್ನು ಗೊತ್ತುಪಡಿಸಿದ ಮೇಲೆ ಪ್ರತಿ ಅವೇಕ್ಷಣೆಯನ್ನೂ ಅದಕ್ಕೆ ಸಂವಾದಿಯಾದ ಪ್ರವೃತ್ತಿ ಬೆಲೆಯಿಂದ ಭಾಗಿಸಿದರೆ $S \times C \times I$ ಘಟಕಗಳ ಸಂಪೃಕ್ತ ಬೆಲೆ ದೊರೆಯುವುದು. ಹೀಗೆ ಭಾಗಿಸುವ ಪರಿಕರ್ಮಕ್ಕೆ ನಿಷ್ಪ್ರವೃತ್ತೀಕರಣ (ಡಿಟ್ರೆಂಡಿಂಗ್) ಎಂದು ಹೆಸರು ಮತ್ತು ಇದರಿಂದ ದೊರೆತ ಲಬ್ಧಕ್ಕೆ ನಿಷ್ಪ್ರವೃತ್ತೀಕೃತ ಎಂದು ಹೆಸರು ಮತ್ತು ಈ ಬೆಲೆಗಳನ್ನು 8ನೆಯ ಕೋಷ್ಟಕದಲ್ಲಿ ಕೊಟ್ಟಿದೆ.

ಕೋಷ್ಟಕ–8

ಅವೇಕ್ಷಣೆಗಳ ನಿಷ್ಪ್ರವೃತ್ತೀಕರಣ ಮತ್ತು ವಿಪಾರ್ವಣಕರಣ

| **ವರ್ಷ ಮತ್ತು ಪಾದ** | | **ಮೂಲ ಅವೇಕ್ಷಣೆ** | **ಪ್ರವೃತ್ತಿ ಬೆಲೆ** | **ನಿಷ್ಪ್ರವೃತ್ತೀ ಕೃತ ಬೆಲೆ** | **ನಿಷ್ಪ್ರವೃತ್ತೀ ಕೃತ ವಿಪಾರ್ವಣ** | **12ಪಾದ ಸರಿ ಸರಾ ಮಧ್ಯಕೃತ** |
|---|---|---|---|---|---|---|
| **1** | | **2** | **3** | **4** | **5** | **6** |
| 1954 | I | 1708 | 1576 | 1.08 | 1.17 | |
| | II | 1360 | 1617 | 0.84 | 1.07 | |
| | III | 1793 | 1659 | 1.08 | 1.01 | |
| | IV | 2048 | 1700 | 1.21 | 1.00 | |

| ವರ್ಷ ಮತ್ತು ಪಾದ | | ಮೂಲ ಅವೇಕ್ಷಣೆ | ಪ್ರವೃತ್ತಿ ಬೆಲೆ | ನಿಷ್ಪ್ರವೃತ್ತೀಕೃತ ಬೆಲೆ | ನಿಷ್ಪ್ರವೃತ್ತೀಕೃತ ವಿಪಾರ್ವಣ | 12ಪಾದ ಸರಿ ಸರಾ ಮಧ್ಯಕೃತ |
|---|---|---|---|---|---|---|
| 1955 | I | 1539 | 1742 | 0.88 | 0.95 | |
| | II | 1242 | 1783 | 0.70 | 0.89 | |
| | III | 1761 | 1825 | 0.96 | 0.90 | 0.974 |
| | IV | 1980 | 1865 | 1.06 | 0.88 | 0.977 |
| 1956 | I | 1504 | 1907 | 0.79 | 0.85 | 0.985 |
| | II | 1320 | 1949 | 0.68 | 0.86 | 0.993 |
| | III | 2208 | 1990 | 1.11 | 1.04 | 0.999 |
| | IV | 2678 | 2032 | 1.32 | 1.09 | 1.002 |
| 1957 | I | 2174 | 2073 | 1.05 | 1.13 | 1.009 |
| | II | 1938 | 2115 | 0.92 | 1.17 | 1.018 |
| | III | 2590 | 2156 | 1.20 | 1.12 | – |
| | IV | 2832 | 2197 | 1.29 | 1.07 | – |
| 1958 | I | 2101 | 2239 | 0.94 | 1.02 | – |
| | II | 1663 | 2280 | 0.73 | 0.93 | – |
| | III | 2305 | 2322 | 0.99 | 0.93 | – |
| | IV | 2650 | 2363 | 1.12 | 0.93 | – |

ನಿಷ್ಪ್ರವೃತ್ತೀಕೃತ ಬೆಲೆಗಳನ್ನು ಆಯಾ ವರ್ಷಪಾದದ ಪಾರ್ವಣ ಸೂಚ್ಯಂಕಗಳಿಂದ ಮತ್ತೆ ಭಾಗಿಸಿದರೆ ಉಳಿಯುವುದು *C* ಮತ್ತು I ಇವುಗಳ ಸಂಪೃಕ್ತ ಬೆಲೆಗಳು. ಇವನ್ನು 8ನೆಯ ಕೋಷ್ಟಕದ 5ನೆಯ ನೀಟಸಾಲಿನಲ್ಲಿ ಕೊಟ್ಟಿದೆ. ಹೀಗೆ ಪಾರ್ವಣ ಚಲನೆಯ ಪರಿಣಾಮವನ್ನು ವಿಸರ್ಜಿಸುವ ಅಥವಾ ಮಾಡುವ ಪರಿಕರ್ಮಕ್ಕೆ ವಿಪಾರ್ವಣಕರಣ (ಡೀ–ಸೀಸ಼ನಲೈಸಿಂಗ್) ಎಂದು ಹೆಸರು. ನೀಳ್ಗಾಲದ ಪ್ರವೃತ್ತಿ ಮತ್ತು ಪಾರ್ವಣಚಲನೆಗಳ ವಿಶಿಷ್ಟ ಪರಿಣಾಮಗಳನ್ನು ಈ ರೀತಿ ನಿರಸನ ಮಾಡಿದ ಅನಂತರ ಉಳಿವ ಬೆಲೆಗಳು ಕೇವಲ ವಾಣಿಜ್ಯಚಕ್ರ ಮತ್ತು ಅವ್ಯವಸ್ಥಿತ ಏಳು ಬೀಳುಗಳ ಪರಿಣಾಮವಾಗಿ ಒದಗುವ ಬೆಲೆಗಳಾಗುವುವು. ಈ ಅವಶಿಷ್ಟಸರಣಿಯನ್ನು ಮತ್ತೆ ವಿಘಟನೆ ಮಾಡಿ *C*ಯನ್ನು ಪ್ರತ್ಯೇಕಿಸಿದರೆ ನಮ್ಮ ಉದ್ದೇಶ ಪೂರ್ತಿಯಾದಂತಾಗುವುದು. ಉದಾಹರಣೆಗೆ, ಈ ಉಳಿಕೆ ಬೆಲೆಗಳನ್ನು ಯಾವುದಾದರೊಂದು ವಿಧಾನದಲ್ಲಿ ಸುಸಮ (ಸ್ಮೂತ್) ಮಾಡಲಾಗಿ ಕ್ರಮರಹಿತ ಮಾರ್ಪಾಡಿನ ಘಟಕಾಂಗ *I* ವಿಸರ್ಜಿತವಾಗಿ ವಾಣಿಜ್ಯಚಕ್ರ *C* ಉಳಿಯುವುದು. ಹೀಗೆ ಉಳಿಯುವ ಅಂಶವನ್ನೇ ವಾಣಿಜ್ಯಚಕ್ರ ಅಥವಾ ಚಕ್ರೀಯ ತೊನೆದಾಟ ಎಂದು ತಿಳಿಯತಕ್ಕದ್ದು.

ಆಧುನಿಕ ಕಾಲಸರಣಿಯ ವಿಶ್ಲೇಷಣದಲ್ಲಿ ಈ ಉಳಿಕೆಯಂಶವನ್ನು ಆಂದೋಲನ ಎಂದು ಕರೆಯುವುದು ರೂಢಿ. ಚಕ್ರೀಯ ಏರುಪೇರನ್ನು ಆಂದೋಲನದ ಒಂದು ವಿಶಿಷ್ಟರೂಪವೆಂದು ಭಾವಿಸತಕ್ಕದ್ದು. ಚಕ್ರೀಯ ತೊನೆದಾಟವನ್ನು ನಿಯಮಿತ ಅಂಶವೆಂದು ಹೇಳವುದುಂಟು. ಇದಕ್ಕೆ ವಿಪರ್ಯಾಸವಾಗಿ Iಯನ್ನು ಅನಿಯಮಿತ ಅಂಶ ಅಥವಾ ಯದೃಚ್ಛಾಂಶ (ರ್‍ಯಾಂಡಂ ಕಾಂಪೊನೆಂಟ್) ಎಂದು ಕರೆಯುವುದು ಹೆಚ್ಚು ಉಪಯುಕ್ತವಾಗಿ ಕಂಡುಬರುತ್ತದೆ.

**ಸುಸುಮ ವಿಧಾನ (ಸ್ಮೂದಿಂಗ್):** ಕಾಲಸರಣಿಯ ಅವೇಕ್ಷಣೆಗಳಿಂದ *T* ಮತ್ತು *S* ಅಂಶಗಳನ್ನು ನಿರಸನ ಮಾಡಿದ ಮೇಲೆ ದೊರೆವ ಅವಶಿಷ್ಟ ಸರಣಿಯನ್ನು ಸುಸುಮ ಮಾಡಲು ಹಲವಾರು ಕ್ರಮಗಳಿವೆ. ಇವುಗಳಲ್ಲಿ ಒಂದಾದ ಸಂಚಾರಿ–ಸರಾಸರಿ ಕ್ರಮವನ್ನು ಹಿಂದೆಯೇ ವಿವರಿಸಿದ್ದೇವೆ. ಸರಾಸರಿ ತೆಗೆಯಬೇಕಾದ ಪದಸಂಖ್ಯೆ ಹೆಚ್ಚುತ್ತ ಹೋದಲ್ಲಿ ಸರಾಸರಿಗಳ ಉಪಲಬ್ಧಶ್ರೇಣಿ ಹೆಚ್ಚು ನುಣುಪಾಗುವುದು. ಮತ್ತು ಉದ್ದ ವಾಣಿಜ್ಯಚಕ್ರದ ಅವಧಿಗೆ ಸಮವಾಗಿದ್ದರೆ ಲಭಿಸುವ ಸರಾಸರಿ ಬೆಲೆಗಳು ಸರಳರೇಖೀಯವಾಗಿರುವುವು.

ನಿಷ್ಪ್ರವೃತ್ತೀಕೃತ ಮತ್ತು ವಿಪಾರ್ವಣಕೃತ ಬೆಲೆಗಳನ್ನು ಚೌಕಳಿ ಕಾಗದದಲ್ಲಿ ಅಂಕಿಸಿ ನಕ್ಷೆಯನ್ನು ಎಳೆದರೆ ಒಂದು ಆಂದೋಲಿತರೇಖೆ ಲಭಿಸುತ್ತದೆ (ಚಿತ್ರ 3). ಚಕ್ರದ ಅವಧಿ ಸುಮಾರು 10 ಅಥವಾ 12 ಇರಬಹುದೆಂದು ಗ್ರಾಫಿನ ಪರೀಕ್ಷಣದಿಂದ ಭಾಸವಾಗುತ್ತದೆ. 12 ಪಾದದ ಸಂಚಾರಿ–ಸರಾಸರಿಯನ್ನು ಮಧ್ಯಕೃತಮಾಡಿ 6ನೆಯ ನೀಟಸಾಲಿನಲ್ಲಿ ತೋರಿಸಿದೆ.

ಸಂಚಾರಿ–ಸರಾಸರಿಯ ಸಾಮಾನ್ಯೀಕರಿಸಿದ ವಿಧಾನವೊಂದಿದೆ. ಸಾಂತ ವಿಕಲನದ (ಫೈನೈಟ್ ಡಿಫರೆನ್ಸಸ್) ಸಮಾಕಲನ (ಸಮೇಷನ್) ವಿಧಾನದಿಂದಲೂ ಕಾಲಸರಣಿಯನ್ನು ಅಥವಾ ಅವಶಿಷ್ಟಸರಣಿಯನ್ನು ಸುಸಮ ಮಾಡಬಹುದು. ಈ ವಿಧಾನದಲ್ಲೂ ಸರಾಸರಿಯನ್ನೇ ಕಂಡುಹಿಡಿಯುತ್ತೇವೆ. ಅದರೆ ಎಲ್ಲ ಅವೇಕ್ಷಣೆಗಳಿಗೂ ಸಮಾನತೂಕ ಕೊಡುವುದಿಲ್ಲ. ತೂಕಗಳನ್ನು ಸೂಕ್ತರೀತಿಯಲ್ಲಿ ಬದಲಾಯಿಸುತ್ತೇವೆ. ಅವೇಕ್ಷಣೆಗಳನ್ನು $y_1$, $y_2$, $y_3$, ಎಂದು ಸೂಚಿಸಿದರೆ, $\frac{1}{4}(y_1+2y_2+y_3)$ ಎಂಬ ಉತ್ಪನ್ನದ ಬೆಲೆಯನ್ನು $y_2$ಕ್ಕೆ ಸಂವಾದಿಯಾಗಿ ಬರೆಯುತ್ತೇವೆ. $\frac{1}{4}(y_1+2y_2+y_4)$ ಇದು $y_3$ ಕ್ಕೆ ಸಂವಾದಿಯಾದ ಬೆಲೆಯಾಗುವುದು. ಈ ಉತ್ಪನ್ನವನ್ನು ಸಾಂಕೇತಿಕವಾಗಿ ¼[1, 2, 1] ಎಂದು ಸೂಚಿಸುತ್ತೇವೆ.



**ಚಿತ್ರ 3 ನಿಷ್ಪ್ರವೃತ್ತೀಕೃತ ಮತ್ತು ವಿಪಾರ್ವಣಕೃತ ಮಾರಾಟದ ಬೆಲೆಗಳು**

ಇಂಥ ಸಮಾಕಲನ ಸೂತ್ರಗಳಲ್ಲಿನ ತೂಕಗಳಲ್ಲಿ ಕೆಲವು ಋಣಸಂಖ್ಯೆಯಾಗಿಯೂ ಇರಬಹುದು. ಉದಾಹರಣೆಗೆ, (1/21) [–2, 3, 6, 7, 6, 3, –2] ಎಂಬ ಸರಳ ಸುಸಮ ಸಮಾಕಲನ ಸೂತ್ರದಲ್ಲಿ ಒಟ್ಟು 7 ಪದಗಳ ಸರಾಸರಿಯನ್ನು ಕಂಡುಹಿಡಿಯ ಬೇಕು. ಎರಡು ಪದಗಳ ತೂಕಗಳು ಋಣಸಂಖ್ಯೆಗಳಾಗಿವೆ. ಈ ಸೂತ್ರದ ಮೇರೆಗೆ ಸುಸಮ ಮಾಡಲಾದ *y*ಯ ಬೆಲೆಯನ್ನು ಹೀಗೆ ನಿರೂಪಿಸಬಹುದು:

ಇದು $y_4$ಕ್ಕೆ ಸಂವಾದಿಯಾದ ಬೆಲೆಯಾಗುವುದು. ಇದರಲ್ಲಿನ ಭಾಜಕ ತೂಕಗಳ ಬೀಜಮೊತ್ತಕ್ಕೆ ಸಮವಾಗಿರುವುದು.

ಅವಧಿಲೇಖಾ ವಿಶ್ಲೇಷಣೆ (ಪೀರಿಯಡೋಗ್ರಾಂ ಅನಾಲಿಸಿಸ್): ಅವೇಕ್ಷಣೆಗಳಿಂದ ಆರ್ಥಿಕಕಾಲ ಚಕ್ರದ ಅವಧಿಯನ್ನು ಕಂಡುಹಿಡಿಯುವ ಮತ್ತೊಂದು ಬಲವತ್ತರವಾದ ವಿಧಾನವೆಂದರೆ ಅವಧಿ ಲೇಖಾವಿಶ್ಲೇಷಣ ವಿಧಾನ. ಚಕ್ರೀಯ ತೊನೆದಾಟವನ್ನು ಆವರ್ತ ಉತ್ಪನ್ನದ (ಪೀರಿಯಾಡಿಕ್ ಫಂಕ್ಷನ್) ಪ್ರತೀಕವೆಂದು ಪರಿಗಣಿಸಿ C ಆವರ್ತ ಉತ್ಪನ್ನವನ್ನು ಫ಼ೂರಿಯರ್ ಶ್ರೇಣಿಯ ರೂಪದಲ್ಲಿ

$$y_r = a + cos\frac{2\pi r}{T} + B\,sin\frac{2\pi r}{T}$$

ಎಂದು ನಿರೂಪಿಸಬಹುದು. ಇಲ್ಲಿ *r* ಸ್ವತಂತ್ರ, ಚರ, ಪ್ರಸ್ತುತ ಕಾಲಚರವಾಗಿದೆ. $r$=1,2,3,....,$n$ ಕಾಲಮಾನಗಳಲ್ಲಿ *y*ಯ ಅವೇಕ್ಷಿತ ಬೆಲೆಗಳು ಅನುಕ್ರಮವಾಗಿ $y_1, y_2, y_3, \dots, y_n$ ಇರುವುವು. *T* ಎಂಬುದು ಚಕ್ರದ ಆವರ್ತಾವಧಿ (ಪೀರಿಯಡ್ ಆಫ್ ದಿ ಸೈಕಲ್).

ಪ್ರೌಢಗಣಿತದ ಸಿದ್ಧಾಂತದ ಮೇರೆಗೆ $z^2=1$ ಎಂಬ ಸಮೀಕರಣಕ್ಕೆ *T* ಮೂಲಗಳು ಇವೆ; ಮತ್ತು ಅವುಗಳ ಮೊತ್ತ ಸೊನ್ನೆ. ಈ ಸಮೀಕರಣದ ಮೂಲಗಳನ್ನು

$$cos\frac{2\pi r}{T} + i\,sin\frac{2\pi r}{T},\ r = 1, 2, ..., T$$

ಎಂದು ನಿರೂಪಿಸಬಹುದು. ಆದ್ದರಿಂದ

$$\sum_{r=1}^{T}\left(cos\frac{2\pi r}{T} + i\,sin\frac{2\pi r}{T}\right) = 0$$

ಇದರ ನೈಜಭಾಗ ಮತ್ತು ಕಾಲ್ಪನಿಕ ಭಾಗ ಇವನ್ನು ಪ್ರತ್ಯೇಕವಾಗಿ 0ಗೆ ಸಮೀಕರಿಸಲು,

$$\sum_{r=1}^{T} cos\frac{2\pi r}{T}\ 0 \text{ ಮತ್ತು } \sum_{r=1}^{T} sin\frac{2\pi r}{T} = 0 \text{ ಆಗುತ್ತವೆ.}$$

ಇದೇ ಪ್ರಕಾರವಾಗಿ

$$\sum cos^2\frac{2\pi r}{T} = \frac{T}{2},\ \sum sin^2\frac{2\pi r}{T} = \frac{T}{2}$$

$$\sum cos\frac{2\pi r}{T}\,sin\frac{2\pi r}{T} = 0$$

ಎಂದು ತೋರಿಸಬಹುದು, ಈ ಸಾಮ್ಯಗಳ ಸಹಾಯದಿಂದ *a, A* ಮತ್ತು *B* ಇವುಗಳ ಬೆಲೆಗಳನ್ನು ಕಂಡುಹಿಡಿಯಬಹುದು. ಹೇಗೆಂದರೆ

$$a = \frac{1}{T}\sum y_r \quad A = \frac{2}{T}\sum y_r, \, sin\,\frac{2\pi r}{T,}$$

$$B = \frac{2}{T}\sum y_r \, cos\,\frac{2\pi r}{T}$$

ಫೂರಿಯರ್ ಶ್ರೇಣಿಯನ್ನು ನಿರ್ಧರಿಸುವ ಈ ವಿಧದ ವಿಶ್ಲೇಷಣಕ್ಕೆ *T*ಯ ಬೆಲೆ ತಿಳಿದಿರಬೇಕು, ಆದರೆ ಇದರ ಬೆಲೆ ನಮಗೆ ತಿಳಿದಿರುವುದಿಲ್ಲ. ಅದನ್ನು ಕಂಡು ಹಿಡಿಯುವುದೇ ನಾವು ಬಿಡಿಸಬೇಕಾದ ಸಮಸ್ಯೆಯಾಗಿದೆ. ಪ್ರಾಪ್ತಿ ಪರ್ಯಂತ ಯತ್ನದ ಕ್ರಮದಲ್ಲಿ ಹಲವು ಪರೀಕ್ಷಣ ಬೆಲೆಗಳನ್ನು *T*ಗೆ ಕೊಟ್ಟು, *a, A* ಮತ್ತು *B*ಯ ಬೆಲೆಗಳನ್ನು ನಿರ್ಧರಿಸಬೇಕು. $S^2=A^2+B^2$ಎಂದು ಬರೆದರೆ, *S*ಗೆ ಚಕ್ರದ ತೀವ್ರತೆ (ಇಂಟೆನ್ಸಿಟಿ) ಎಂದು ಹೆಸರು. ಕ್ಷಿತಿಜೀಯಾಕ್ಷದಲ್ಲಿ ಅವರ್ತದ ಅವಧಿಯನ್ನೂ ಊರ್ಧ್ವಾಕ್ಷದಲ್ಲಿ $S^2$ದ ಬೆಲೆಯನ್ನೂ ತೆಗೆದುಕೊಂಡು ಬರೆದ ನಕ್ಷೆಗೆ ಅವಧಿಗ್ರಾಫ್ (ಪೀರಿಯಡೋಗ್ರಾಂ) ಎಂದು ಹೆಸರು.

ವಾಸ್ತವಿಕ ಅವರ್ತ ಅವಧಿ λಇದ್ದು, ಪರೀಕ್ಷಣ ಅವಧಿ μ ಇದ್ದರೆ, λ=μ ಇದ್ದಾಗ ಆರ್ಥಿಕಚಕ್ರದ ತೀವ್ರತೆ ಗರಿಷ್ಠತಮವಾಗಿರುವುದು. ಆದ್ದರಿಂದ ಗ್ರಾಫಿನ ಸಹಾಯದಿಂದ $S^2$ದ ಗರಿಷ್ಠತಮ ಬೆಲೆಗೆ ಸಂವಾದಿಯಾದ ಕಾಲಾವಧಿಯನ್ನು ಆರಿಸಿಕೊಳ್ಳಬೇಕು. ಇದೇ ವಾಂಛಿತ ಆವರ್ತಾವಧಿ. ಇದಕ್ಕೆ ಉಪಯುಕ್ತವಾದ *A, B* ಮತ್ತು *a*ಗಳ ಬೆಲೆಗಳನ್ನು ಮೊದಲೇ ಲೆಕ್ಕಹಾಕಿಟ್ಟಿದ್ದೇವಾದ್ದರಿಂದ ಆರ್ಥಿಕ ಚಕ್ರದ ಪೂರ್ಣವಿವರಗಳನ್ನು ವಿಶ್ಲೇಷಣೆಯಿಂದ ನಿರ್ಧರಿಸಿದಂತಾಯಿತು. ಈ ವಿಧಾನಕ್ಕೆ ಷೂಸ್ಟರನ ಅವಧಿಲೇಖಾವಿಶ್ಲೇಷಣೆ ಎಂದು ಹೆಸರು.



ಚಿತ್ರ 4

ದತ್ತ ಅವೇಕ್ಷಣೆಗಳಿಂದ ನೀಳ್ಗಾಲದ ಪ್ರವೃತ್ತಿ ಮತ್ತು ಪಾರ್ವಣ ಚಲನೆಗಳನ್ನು ಈ ಮೊದಲೇ ನಿರಸನ ಮಾಡಿದ್ದೇವೆ. ಈಗ ಚಕ್ರೀಯ ಪರಿಣಾಮವನ್ನೂ ಗೊತ್ತುಪಡಿಸಿ ಕಳೆದುಹಾಕಿದರೆ ಉಳಿಯುವುದು ಅನಿಯಮಿತ ಮಾರ್ಪಾಡುಗಳು ಅಥವಾ ಯದೃಚ್ಛಾತದ್ವಾ ಅಡ್ಡಾದಿಡ್ಡಿ ಪಲ್ಲಟಗಳು. ಹೀಗೆ ನಾಲ್ಕು ಬಗೆಯ ಘಟಕಾಂಗಗಳನ್ನೂ ಬೇರ್ಪಡಿಸಿ ಕಾಲಸರಣಿಯ ವಿಶ್ಲೇಷಣೆಯನ್ನು ಪೂರ್ತಿಯಾಗಿ ಮಾಡಲಾಗುವುದು. (ಎಂ.ವಿ.ಜೆ.)

**ಕಾಲಾಂಕ :** ನರ, ಸ್ನಾಯುಗಳ ತೆರನ ಒಂದು ಅಂಗಾಂಶವನ್ನು ಚುರುಕೇಳಿಸಲು ಒಂದು ವಿದ್ಯುತ್ತು ಚೋದನೆಗೆ ಹಿಡಿಯುವ ಮಿಲಿಸೆಕೆಂಡುಗಳಲ್ಲಿ ಗುರುತಿಸುವ ಕಾಲಾವಧಿ (ಕ್ರೊನಾಕ್ಸೀ). ಚೋದನೆಗೆ ಈಡಾದಷ್ಟೂ ಒಂದು ನರ ಇಲ್ಲವೇ ಸ್ನಾಯುವಿನ ಕಾಲಾಂಕ ಮೊಟಕಾಗಿರುವುದು. ಒಂದು ಊತಕದ ಮೂಲಕ ಸಾಕಷ್ಟು ಹೊತ್ತು ಹರಿಸಿದರೆ ಅದನ್ನು ಚೋದಿಸಬಲ್ಲ ತೀರ ನಿರ್ಬಲವಾದ ವಿದ್ಯುತ್ತಿನ ಶಕ್ತಿಗೆ ವಿದ್ಯುನ್ಮೂಲಬಲ (ರಿಯೊಬೇಸ್) ಎಂದಿದೆ. ಇದಕ್ಕಿಂತಲೂ ನಿರ್ಬಲವಾದ ವಿದ್ಯುತ್ತನ್ನು ಎಷ್ಟೇ ಹೊತ್ತು ಹರಿಸಿದರೂ ಅಂಗಾಂಶವನ್ನು ಚೋದಿಸಲಾರದು. ಸಾಮಾನ್ಯವಾಗಿ ಕಾಲಾಂಕವನ್ನು ಅಳೆವಾಗ ವಿದ್ಯುತ್ ಚೋದನೆಯ ಶಕ್ತಿ ವಿದ್ಯುನ್ಮೂಲಬಲದ ಎರಡರಷ್ಟಿರುತ್ತದೆ. ಒಂದು ಚೋದನೆ ಪರಿಣಾಮಕಾರಿಯೆಂದು ನಿರ್ಧರಿಸಲು ವಿದ್ಯುತ್ತಿನ ಶಕ್ತಿಯೊಂದಿಗೆ ಊತಕದ ಮೂಲಕ ವಿದ್ಯುತ್ತು ಸಾಗುತ್ತಿರುವ ಕಾಲಾವಧಿಯನ್ನು ಗಣಿಸಲೇಬೇಕಾಗುವುದು. ಚೋದಿಸಲು ಬಳಸುವ ವಿದ್ಯುತ್ತಿನ ಶಕ್ತಿ ತೀವ್ರವಾಗಿದ್ದರೆ, ತುಸು ಹೊತ್ತಿನಲ್ಲೇ ಪ್ರತಿಕ್ರಿಯೆ ಹುಟ್ಟಿಸುತ್ತದೆ. ಆದರೆ ಶಕ್ತಿಯನ್ನು ಇಳಿಸಿದಂತೆಲ್ಲ ಚೋದಿಸುವ ಹೊತ್ತೂ ನೀಳವಾಗುವುದು. ಅಂಗಾಂಶಗಳ ಉದ್ರಿಕ್ತಸ್ಥಿತಿಗಳನ್ನು ಹೋಲಿಸಲು ಕಾಲಾಂಕಗಳಿಂದ ಅನುಕೂಲವಿದೆ. ಉದಾಹರಣೆಗೆ ಎಲುಗಟ್ಟಿನ (ಸ್ಕೆಲಿಟಲ್) ಸ್ನಾಯುವಿನದಕ್ಕಿಂತಲೂ ಒಂದು ನರತಂತುವಿನ ಕಾಲಾಂಕ ಚಿಕ್ಕದಾಗಿರುತ್ತದೆ. ನರದ ಮೂಲಕ ಸಾಗುವ ಆವೇಗದ (ಇಂಪಲ್ಸ್) ವೇಗವನ್ನು ಮೊದಲು ಅಂದಾಜು ಹಾಕಿದವ ಹೆಲ್ಮ್‌ಹೋಲ್ಟ್ಸ್ (1850). ಕ್ರೊನಾಕ್ಸೀ (ಕಾಲಾಂಕ) ಹೆಸರಿಗೆ ಕಾರಣನಾದವ ಫ್ರಾನ್ಸಿನ ವಿಜ್ಞಾನಿ ಲೂಯಿ ಲಾಪಿಕ್ (1909). (ಡಿ.ಎಸ್.ಎಸ್.)

**ಕಾಲಾನುಗುಣ ವೇತನ ಪದ್ಧತಿ :** ವೇತನಪಾವತಿಯ ವಿಧಾನಗಳಲ್ಲೊಂದು (ಟೈಂ ವೇಜ್ ಸಿಸ್ಟಂ), ಉದ್ಯೋಗಿ ಕೆಲಸಮಾಡಿದ ಕಾಲದ ಆಧಾರದ ಮೇಲೆ ಅವನಿಗೆ ವೇತನ ಪಾವತಿ ಮಾಡುಲಾಗುತ್ತದೆ.

ಕಾಲಾನುಗುಣ ವೇತನ ಪದ್ಧತಿ ಅತ್ಯಂತ ಪ್ರಾಚೀನ ವೇತನ ಪಾವತಿ ಪದ್ಧತಿಗಳಲ್ಲೊಂದು. ವೇತನ ದರವನ್ನು ಗಂಟೆಗೆ, ದಿನಕ್ಕೆ, ವಾರಕ್ಕೆ, ಪಕ್ಷಕ್ಕೆ ಅಥವಾ ತಿಂಗಳಿಗೆ ಇಷ್ಟು ಎಂದು, ಒಂದೊಂದು ಮಟ್ಟದ ಕೆಲಸಕ್ಕೆ ಒಂದೊಂದು ದರವನ್ನು, ನಿಗದಿಮಾಡಲಾಗುತ್ತದೆ. ದಿನದ ಕೊನೆಯಲ್ಲೋ ವಾರ, ಪಕ್ಷ ಅಥವಾ ತಿಂಗಳ ಕೊನೆಯಲ್ಲೋ ಉದ್ಯೋಗಿ ಮತ್ತು ಉದ್ಯೋಗದಾತರ ಪರಸ್ಪರ ಒಪ್ಪಂದದ ಪ್ರಕಾರ ವೇತನವನ್ನು ಪಾವತಿ ಮಾಡುವುದು ರೂಢಿ. ಕೂಲಿಯ ಅವಧಿ ಒಂದು ತಿಂಗಳಿಗಿಂತ ಹೆಚ್ಚಾಗಿರಕೂಡದೆಂದು 1936ರ ಭಾರತೀಯ ಕೂಲಿ ಪಾವತಿ ಕಾಯಿದೆಯಲ್ಲಿ ವಿಧಿಸಲಾಗಿದೆ.

ಕಾಲಾನುಗುಣ ವೇತನ ಪದ್ಧತಿಯಲ್ಲಿ ಅನೇಕ ಅನುಕೂಲಗಳುಂಟು. ಇದರ ಅತ್ಯಂತ ಮುಖ್ಯ ಅನುಕೂಲವೆಂದರೆ ಸರಳತೆ. ಒಂದು ಕೆಲಸಮಾಡಲು ಒಬ್ಬ ಉದ್ಯಮಿ ವಿನಿಯೋಗಿಸಿದ ಕಾಲವನ್ನು ಸುಲಭವಾಗಿ ಅಳತೆಮಾಡಬಹುದು. ಒಂದು ಕೆಲಸಕ್ಕೆ ಎಷ್ಟು ಕಾಲ ಬೇಕಾಯಿತು ಎಂಬುದರ ಆಧಾರದ ಮೇಲೆ ವೇತನ ಪಾವತಿ ಮಾಡುವುದು ನ್ಯಾಯವಾದ್ದೆಂಬುದು ಹಿಂದಿನಿಂದ ಬಂದ ಭಾವನೆ. ಮಾನವನ ದುಡಿಮೆ ಯಾವಾಗಲೂ ಒಂದೇ ದಕ್ಷತೆಯ ಮಟ್ಟದಲ್ಲಿರುವುದಿಲ್ಲ. ಅನಾರೋಗ್ಯ, ಆಕಸ್ಮಿಕ, ಆಯಾಸ ಮುಂತಾದ ಕಾರಣಗಳಿಂದ ಅವನ ಉತ್ಪಾದನ ಸಾಮರ್ಥ್ಯ ಕೆಲವು ಸಾರಿ ಕಡಿಮೆಯಾಗುವುದುಂಟು. ಆಗಲೂ ಅವನ ಕೆಲಸದ ಕಾಲದ ಪ್ರಕಾರ ಕೂಲಿ ಪಾವತಿ ಮಾಡುವುದರಿಂದ ಅವನಿಗೆ ಆರ್ಥಿಕ ಭದ್ರತೆ ದೊರಕಿಸಿಕೊಟ್ಟಂತಾಗುತ್ತದೆ. ಅವನಿಗೆ ಬರುವ ವರಮಾನ ಎಷ್ಟೆಂಬುದು ಗೊತ್ತಿರುವುದರಿಂದ ಕೆಲಸಗಾರ ಅದಕ್ಕೆ ತಕ್ಕಂತೆ ತನ್ನ ಖರ್ಚುಗಳನ್ನು ಹೊಂದಿಸಿಕೊಳ್ಳಬಲ್ಲ. ಕಾಲಾನುಗುಣ ವೇತನದಿಂದ ಕೆಲಸದ ಗುಣಮಟ್ಟ ಹೆಚ್ಚಬಹುದು. ಕೆಲಸದ ಪರಿಮಾಣಕ್ಕೆ ಅನುಗುಣವಾಗಿ ವೇತನ ಪಾವತಿ ಮಾಡುವಾಗ ಅವನು ಗುಣದ ಕಡೆಗೆ ಹೆಚ್ಚಿನ ಲಕ್ಷ್ಯಕೊಡಲಾಗುವುದಿಲ್ಲ. ಹಾಗೆ ಮಾಡಿದರೆ ಕೆಲಸದ ವೇಗ ಕಡಿಮೆಯಾಗುತ್ತದೆ. ಉತ್ಪಾದನೆ ಕಡಿಮೆಯಾಗುವುದರಿಂದ ಅವನಿಗೆ ಕೂಲಿಯೂ ತಗ್ಗುತ್ತದೆ. ಇಲ್ಲಿ ಆ ಭಯ ಇಲ್ಲ. ಬೇಗೆ ಕೆಲಸ ಮುಗಿಯಬೇಕೆಂಬ ಆತುರ ಇರುವುದಿಲ್ಲವಾದ್ದರಿಂದ ಯಂತ್ರವನ್ನು ಅಡ್ಡಾದಿಡ್ಡಿ ಬಳಸಿ ಅದನ್ನು ಕೆಡಿಸುವ ಸಂಭವ ಕಡಿಮೆ. ಪರೋಕ್ಷವಾಗಿ ಇದು ಉದ್ಯೋಗದಾತನಿಗೆ ಲಾಭಕರ. ಯಂತ್ರಸಲಕರಣೆಗಳ ಸಂರಕ್ಷಣೆಗೆ ಹೆಚ್ಚಿನ ಉಸ್ತುವಾರಿ ಅವಶ್ಯವಾಗುವುದಿಲ್ಲ. ಇದರ ಲೆಕ್ಕಾಚಾರ ನೇರವೂ ಸರಳವೂ ಆದ್ದರಿಂದ ಕಾರ್ಮಿಕ ಸಂಘಗಳಿಗೆ ಈ ಪದ್ಧತಿಯಲ್ಲೇ ಹೆಚ್ಚಿನ ಒಲವುಂಟು. ಒಂದು ದರದ ವೇತನ ಪಡೆಯುವ ಕಾರ್ಮಿಕರೆಲ್ಲ ಒಂದು ಎಂಬ ಭಾವನೆ ಬೆಳೆಸುವದರಿಂದ ಕಾರ್ಮಿಕರ ಒಗ್ಗಟ್ಟು ಸಾಧಿಸುತ್ತದೆ. ಸಾಮೂಹಿಕ ಚೌಕಾಸಿಗೂ ಇದು ಅನುಕೂಲಕರ. ತರಬೇತಿ ಹೊಂದಿದ ಕುಶಲ ಕಾರ್ಮಿಕರಿಗೆ ಸದಾ ಕಾಲವೂ ಕೈತುಂಬ ಕೆಲಸ ಇಲ್ಲದಿದ್ದರೂ ಕೆಲಸದ ಪ್ರಾಮುಖ್ಯದ ದೃಷ್ಟಿಯಿಂದ ಅವರನ್ನು ಇಟ್ಟುಕೊಳ್ಳುವುದು ಈ ಪದ್ಧತಿಯಿಂದ ಸಾಧ್ಯವಾಗುತ್ತದೆ. ಇಂಥವರ ಕೆಲಸವನ್ನು ಯಾವಾಗಲೂ ಪರಿಮಾಣ ದೃಷ್ಟಿಯಿಂದ ಅಳೆಯುವುದು ಸಾಧ್ಯವಿಲ್ಲ. ಯಂತ್ರ ಮುಂತಾದ ಸ್ಥಿರ ಆಸ್ತಿಯನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳಲಿ, ಬಿಡಲಿ, ಅದನ್ನು ದುರಸ್ತಿ ಸ್ಥಿತಿಯಲ್ಲಿಟ್ಟುಕೊಳ್ಳಲು ವೆಚ್ಚ ಮಾಡುವುದು ಅವಶ್ಯವಾಗುವಂತೆ, ದೀರ್ಘಕಾಲಿಕ ದೃಷ್ಟಿಯಿಂದ ಇವರಿಗೆ ವೇತನ ಪಾವತಿ ಮಾಡಲಾಗುತ್ತದೆ. ಮಾಡಿದ ಕೆಲಸಕ್ಕೆ ಅನುಗುಣವಾಗಿ ಇಂಥವರಿಗೆ ವೇತನ ಪಾವತಿ ಮಾಡವುದಾದರೆ ಇವರು ಕೆಲಸ ಕಡಿಮೆಯಿದ್ದಾಗ ಉದ್ಯಮವನ್ನು ಬಿಟ್ಟು ಬೇರೆಡೆಗೆ ಹೋಗಬಹುದು. ಕುಶಲರೂ ದಕ್ಷರೂ ತರಬೇತಿ ಹೊಂದಿದವರೂ ಆದ ಉದ್ಯೋಗಿಗಳನ್ನು ಸಂಸ್ಥೆಯಲ್ಲೇ ಉಳಿಸಿಕೊಳ್ಳಲು ಈ ಪದ್ಧತಿ ಸಹಾಯಕವಾಗುತ್ತದೆ. ಕಾರ್ಯನಿರ್ವಾಹಕರ ಬುದ್ಧಿಪ್ರಧಾನವಾದ ಅನೇಕ ಕೆಲಸಗಳನ್ನು ಅಳೆಯುವುದು ಸಾಧ್ಯವಿಲ್ಲ. ಇವರ ಕೆಲಸಗಳು ಪೂರ್ವನಿಶ್ಚಿತ ಪರಿಮಾಣಗಳಿಗೆ ಬದ್ಧವಾಗಿ ಮನರಾವರ್ತಿಸುವಂಥವಲ್ಲ. ಶಿಷ್ಟಮಾಪನಕ್ಕೊಳಪಡದ ಅಥವಾ ಎಣಿಸಲಾಗದ ಕೆಲಸಗಳಿಗೆಲ್ಲ ಕಾಲಾನುಗುಣ ವೇತನ ಪಾವತಿಯೇ ಅತ್ಯಂತ ಸಮರ್ಪಕವಾದ್ದು. ಒಂದು ಕೆಲಸದ ಸ್ವರೂಪ ಮತ್ತು ಆವಶ್ಯಕತೆಗಳನ್ನೆಲ್ಲ ಪರಿಗಣಿಸಿ, ಇವಕ್ಕೆ ಸಂಬಂಧಿಸಿದಂತೆ ಕೆಲಸಗಾರನ ನಿರ್ವಹಣೆಯ ಸಾಮರ್ಥ್ಯವೆಷ್ಟೆಂಬುದನ್ನು ನಿರ್ಣಯಿಸಿ, ಅದಕ್ಕೆ ಬೇಕಾಗುವ ಕಾಲಕ್ಕೆ ಅನುಗುಣವಾಗಿ ವೇತನ ನಿರ್ಧರಿಸುವುದಾದರೆ ಅದು ಸಮರ್ಪಕವಾಗಿರುತ್ತದೆ. ಒಂದೊಂದು ಮಟ್ಟದ ಕೆಲಸಕ್ಕೂ ಒಂದೊಂದು ದರದಲ್ಲಿ ವೇತನ ನಿಗದಿ ಮಾಡುಬಹುದು. ಅದಕ್ಷತೆಯೇ ಆ ಮಟ್ಟದ ಕನಿಷ್ಠ ಸೀಮೆ. ಅದಕ್ಕಿಂತ ಕೆಳಗಿನ ಸಾಮರ್ಥ್ಯವಿರುವ ಕೆಲಸಗಾರ ಆ ಮಟ್ಟದ ದರದಲ್ಲಿ ಕೂಲಿ ಪಡೆಯಲಾರ. ಆ ಮಟ್ಟದ ಗರಿಷ್ಠ ಸೀಮೆಯನ್ನು ಮೀರಿದ ದಕ್ಷತೆ ಉಳ್ಳವನು ವೇತನ ಬಡತಿಗೆ ಅರ್ಹ.

ಕಾಲಾನುಗುಣ ವೇತನದ ಪ್ರತಿಕೂಲಗಳೂ ಹಲವುಂಟು: ಒಂದೊಂದು ಘಟ್ಟದಲ್ಲೂ ಕೆಲಸಮಾಡುವ ಎಲ್ಲ ಕೆಲಸಗಾರರಿಗೂ ಒಂದೇ ದರದಲ್ಲಿ ವೇತನ ನೀಡುವುದರಿಂದ ಅನೇಕ ವೇಳೆ ಅನ್ಯಾಯವಾಗುವುದುಂಟು. ಪ್ರಾಮಾಣಿಕನಿಗೂ ಅಪ್ರಾಮಾಣಿಕನಿಗೂ ಒಂದೇ

ವೇತನ ದೊರಕುತ್ತದೆ. ಮಾಡುವ ಕೆಲಸಕ್ಕಿಂತ ಕೆಲಸದ ಸಮಯದಲ್ಲಿ ಆ ಸ್ಥಳದಲ್ಲಿ ಕಾರ್ಮಿಕನ ಹಾಜರಿಯೇ ಮುಖ್ಯ-ಎಂಬ ಧೋರಣೆ ಬೆಳೆಯುತ್ತದೆ. ಒಮ್ಮೆ ಒಂದು ವೇತನದ ದರ ನಿರ್ಧಾರವಾಯಿತೆಂದರೆ ಆ ದರವೇ ದೀರ್ಘಕಾಲ ಮುಂದುವರಿಯುವ ಪ್ರವೃತ್ತಿ ತೋರಿಸುತ್ತದೆ. ಅದನ್ನು ಬದಲಾಯಿಸಲು ಹೆಚ್ಚು ಪ್ರಯತ್ನ ಅವಶ್ಯವಾಗಬಹುದು. ಈ ಕಾರಣದಿಂದ ಕಾಲಾನುಗುಣ ವೇತನ ಕೆಲಸಗಾರನ ದುಡಿಮೆಯ ದಕ್ಷತೆಯ ಮಟ್ಟವನ್ನು ತಗ್ಗಿಸುವ ಅಪಾಯವುಂಟು. ದಕ್ಷ-ಅದಕ್ಷರಿಬ್ಬರಿಗೂ ಒಳ್ಳೆಯ ಮತ್ತು ಕೆಟ್ಟ ಕಾರ್ಮಿಕರಿಬ್ಬರಿಗೂ ಒಂದೇ ದರದ ವೇತನ ದೊರಕುವುದರಿಂದ ಅದಕ್ಷ ಕಾರ್ಮಿಕನಿಗೆ ಅಥವಾ ಕೆಟ್ಟ ಕಾರ್ಮಿಕನಿಗೆ ಅವನ ಯೋಗ್ಯತೆಗಿಂತ ಹೆಚ್ಚಿನ ಕೂಲಿ ಕೊಟ್ಟಂತಾಗುತ್ತದೆ. ಒಂದು ನಿಗದಿಯಾದ ಕೆಲಸಕ್ಕೆಂದು ಕಾರ್ಮಿಕರನ್ನು ನೇಮಕಮಾಡಿಕೊಂಡಿದ್ದಾಗ ಕಾಲಾನುಗುಣ ವೇತನ ಪಾವತಿಯಿಂದ ನಷ್ಟವಾಗುವ ಸಂಭವವೇ ಹೆಚ್ಚು. ಕೆಲಸವನ್ನು ನಿಧಾನ ಮಾಡಿದಷ್ಟೂ ಉದ್ಯೋಗದಲ್ಲಿ ಮುಂದುವರಿಯುವುದು ಸಾಧ್ಯವಾದ್ದರಿಂದ ಉದ್ಯೋಗಿಗಳು ಕೆಲಸವನ್ನು ಹಿಗ್ಗಿಸುವ ಪ್ರಯತ್ನದಲ್ಲಿ ನಿರತರಾಗಬಹುದು. ಒಂದು ಅವಧಿಯಲ್ಲಿ ಇಷ್ಟು ಕೆಲಸ ಮಾಡಲೇಬೇಕೆಂಬ ಒತ್ತಾಯವಿಲ್ಲದ್ದರಿಂದ ಕಾಲಾನುಗುಣ ವೇತನ ಪದ್ಧತಿಯಲ್ಲಿ ಕಾರ್ಮಿಕರು ಆಲಸಿಗಳಾಗುವ ಅಪಾಯವುಂಟು. ಇದನ್ನು ತಪ್ಪಿಸಲು ಅವರ ಮೇಲೆ ಉಸ್ತುವಾರಿ ಅತ್ಯವಶ್ಯ. ಮಾಡಬೇಕಾದ ಕೆಲಸ, ಅದರ ವಿಧಾನ ಇವುಗಳ ಬಗ್ಗೆ ಪದೇ ಪದೇ ಕೆಲಸಗಾರರಿಗೆ ಸೂಚನೆ ನೀಡಬೇಕಾಗುವುದರಿಂದ ಉದ್ಯೋಗಿಗಳಲ್ಲಿ ಪ್ರಾಮಾಣಿಕರೂ ದಕ್ಷರೂ ಆದವರ ಮೇಲೆ ಮಾನಸಿಕವಾಗಿ ಕೆಟ್ಟ ಪರಿಣಾಮ ಆಗುತ್ತದೆ. ಅವರ ಕರ್ತೃತ್ವಶಕ್ತಿ ನಾಶವಾಗುತ್ತದೆ. ಒಂದು ನಿರ್ದಿಷ್ಟವಾದ ಕಾಲದಲ್ಲಿ ನಿರ್ದಿಷ್ಟವಾದ ಕೆಲಸ ಆಗಿಯೇ ತೀರುವುದೆಂಬ ಭರವಸೆ ಇಲ್ಲವಾದಾಗ, ಕೆಲಸಗಾರರು ಉದ್ದೇಶಪೂರ್ವಕವಾಗಿ ನಿಧಾನಮಾಡುವುದನ್ನು ತಡೆಯಲು ಯಾವ ಉಪಾಯವೂ ಇಲ್ಲದಾಗ, ಉತ್ಪಾದನೆಯ ಘಟ್ಟದ ವೆಚ್ಚ ಏರುತ್ತದೆ. ಕೆಲಸಗಾರರ ವೈಯಕ್ತಿಕ ತರತಮಗಳನ್ನು ಕಡೆಗಣಿಸಿ ಅವರನ್ನೆಲ್ಲ ಏಕರೀತಿಯಲ್ಲಿ ಕಾಣುವುದರಿಂದ ಮಾಲೀಕ-ಕಾರ್ಮಿಕ ವಿರಸಗಳಿಗೂ ಘರ್ಷಣೆಗಳಿಗೂ ಅವಕಾಶ ಏರ್ಪಡುತ್ತದೆ.

ಕಾರ್ಮಿಕರಂತೆ ಉದ್ಯಮಿಗಳೂ ಕಾಲಾನುಗುಣ ವ್ಯವಸ್ಥೆಗೆ ಅನೇಕ ವೇಳೆ ಆದ್ಯತೆ ನೀಡಲು ಒಂದು ಮುಖ್ಯ ಕಾರಣವಿದೆ. ಮಾರುಕಟ್ಟೆಯನ್ನು ವಿಸ್ತರಿಸಬೇಕಾದರೆ ಅವುಗಳ ಗುಣವನ್ನು ವೃದ್ಧಿ ಪಡಿಸುವುದಲ್ಲದೆ ಹೊಸ ಹೊಸ ನಮೂನೆಗಳನ್ನು ತಯಾರು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಉತ್ಪಾದನ ಕ್ರಮಗಳನ್ನು ಆಗಾಗ ಬದಲಾಯಿಸ ಬೇಕಾಗುತ್ತದೆ. ಹಾಗೆ ಮಾಡಿದಾಗ ಉತ್ಪಾದನೆಯೂ ಹೆಚ್ಚುವುದು ಸಹಜ. ಉತ್ಪಾದನಾ ಸುಗುಣವೇತನ ಪಡೆಯುವವರು ಆಗ ಅಧಿಕ ಉತ್ಪಾದನೆಗೆ ಅನುಗುಣವಾಗಿ ಹೆಚ್ಚು ವೇತನಬೇಕೆಂದು ಕೇಳುವುದು ಸಹಜ. ಹೆಚ್ಚುವೇತನ ಕೊಡದಿದ್ದಲ್ಲಿ ಇಂಥ ತಕರಾರಿಗೆ ಅವಕಾಶವಿರುವುದಿಲ್ಲ. ಉತ್ಪಾದನೆಯ ಏರಿಳಿತಗಳಿಗೆ ಅನುಗುಣವಾಗಿ ವೇತನ ಏರಿಳಿಸಬೇಕೆಂಬ ಒಪ್ಪಂದ ಇರುವುದಿಲ್ಲ. ಅಲ್ಲದೆ ಈ ಮಧ್ಯೆ ಉದ್ಯಮಿಗಳು ಕೆಲಸದ ವಿಶ್ಲೇಷಣೆ ಮತ್ತು ಕೆಲಸದ ಮೌಲ್ಯ ನಿರ್ಣಯ ಕ್ರಮಗಳ ಸಹಾಯದಿಂದ ಒಂದು ಸ್ಥಿರವಾದ ಕೆಲಸದ ರಚನಾಕ್ರಮವನ್ನು ವೃದ್ಧಿಪಡಿಸಿ ಪ್ರತಿಕಾರ್ಮಿಕನ ಕೆಲಸದ ಹೊರೆ ಇಷ್ಟು ಎಂಬುದರ ವಿಷಯವಾಗಿ ಕಾರ್ಮಿಕ ಸಂಘಗಳೊಡನೆ ಒಪ್ಪಂದಕ್ಕೆ ಬಂದು ಆ ಒಪ್ಪಿಗೆಯ ಮೇರೆಗೆ ಕಾರ್ಮಿಕರು ತಮ್ಮ ಪಾಲಿಗೆ ಬಂದ ಕೆಲಸದ ಹೊರೆಯ ಪ್ರಕಾರ ಕೆಲಸ ಮಾಡಿಕೊಂಡು ಹೋಗುವ ಹಾಗೆ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಈ ಕಾರಣದಿಂದ ಕೆಲಸದ ವಿಷಯದಲ್ಲಿ ಬಲವಾದ ಶಿಸ್ತನ್ನು ಕಾರ್ಮಿಕರ ಮೇಲೆ ಹೇರಿದರೂ ಕೈಗಾರಿಕಾ ಸಂಬಂಧ ಹದಗೆಡುವುದಕ್ಕೆ ಅವಕಾಶವಿರುವುದಿಲ್ಲವೆಂಬುದಾಗಿ ಭಾವಿಸಲಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ, ಮುಖ್ಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಮೇಲಿನ ಕಾರಣಗಳಿಂದ ಈಚೀಚೆಗೆ ಕಾಲಾನುಗುಣ ವೇತನ ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತಿದೆ. ಕಾಲಾನುಗುಣವೇತನ ಬಳಕೆಯಲ್ಲಿರುವ ಕಾರ್ಖಾನೆಗಳಲ್ಲಿ ವೇತನ ಒಂದು ಗಂಟೆಗೆ ಇಷ್ಟು ಎಂದು ನಿಗದಿಯಾಗಿರುತ್ತದೆ. ಸರ್ಕಾರದ ಕನಿಷ್ಠ ಮೇರೆಗೆ ನಿಗದಿ ಮಾಡಿದೆ. ಸಂಯುಕ್ತಸಂಸ್ಥಾನದಲ್ಲಿ ಸುಮಾರು ಶೇ. 70 ಕಾರ್ಮಿಕರು ಕಾಲಾನುಗಣವೇತನದವರು. ಇತರ ದೇಶಗಳಲ್ಲಿ ಇವರ ಸಂಖ್ಯೆ ಕಡಿಮೆ: ಇಂಗ್ಲೆಂಡಿನಲ್ಲಿ ಶೇ.60, ಯುರೋಪಿನಲ್ಲಿ ಶೇ.40-50 ಮತ್ತು ರಷ್ಯದಲ್ಲಿ ಕೇವಲ ಶೇ.25.

ಕಾರ್ಮಿಕರ ವೇತನದ ಮೊತ್ತ ಕಾರ್ಖಾನೆಯ ಒಟ್ಟು ವೆಚ್ಚದ ಪ್ರಧಾನ ಭಾಗವಾಗಿರದ ಕೈಗಾರಿಕೆಗಳಲ್ಲಿ ಕಾಲಾನುಗಣ ವೇತನ ಹೆಚ್ಚಾಗಿ ಜಾರಿಯಲ್ಲಿದೆ. ಎಂದರೆ ಇಲ್ಲಿ ತಾಂತ್ರಿಕ ಮಟ್ಟ ತೀರ ಹೆಚ್ಚಿನದು. ಕಾರ್ಖಾನೆಗಳ ಗಾತ್ರವೂ ದೊಡ್ಡದಾಗಿರುತ್ತದೆ. ಸಂಯುಕ್ತಸಂಸ್ಥಾನದಲ್ಲಿ ಈ ಅಂಶಗಳು ಕಂಡುಬರುವುದರಿಂದ ಅಲ್ಲಿ ಕಾಲಾನುಗುಣವೇತನ ಪಡೆಯುವ ಕಾರ್ಮಿಕರು ಹೆಚ್ಚಿನ ಪ್ರಮಾಣದಲ್ಲಿರುವುದು ಸ್ವಾಭಾವಿಕ. ಈ ವ್ಯವಸ್ಥೆ ಜಾರಿಗೆ ಬರಲು ತಾಂತ್ರಿಕ ಮಟ್ಟ ಮುಖ್ಯವಾದರೂ ಸಂಪ್ರದಾಯ, ವ್ಯಕ್ತಿಗತ ಉತ್ಪನ್ನವನ್ನಳೆಯುವ ಅನುಕೂಲತೆ ಮತ್ತಿತರ ಅಂಶಗಳು ಬಹಳಮಟ್ಟಿಗೆ ಇದಕ್ಕೆ ಕಾರಣವಾಗುತ್ತವೆ.

ಈ ಅಂಶಗಳ ಪಾತ್ರವನ್ನು ಭಾರತದ ಉದ್ಯಮಗಳಲ್ಲಿಯ ವೇತನ ಪಾವತಿಯ ಅನುಭವದಿಂದ ವಿವರಿಸಬಹುದು. ಭಾರತದಲ್ಲಿ ಮೊದಲು ಸ್ಥಾಪಿತವಾದ ಕಾರ್ಖಾನೆಗಳು ಜವಳಿ ಗಿರಣಿಗಳು. ಇವುಗಳಲ್ಲಿ ನೂಲುವ ಮತ್ತು ನೇಯುವ ಕಾರ್ಯದ ವ್ಯಕ್ತಿಗತ ಉತ್ಪನ್ನವನ್ನಳೆಯಲು ಸಾಧ್ಯವಿರುವ ಕೆಲಸಗಳಿದ್ದುದರಿಂದ ಮೊದಲು ಉತ್ಪನ್ನಾನುಗುಣ ವೇತನವನ್ನು ಜಾರಿಗೆ ತರಲಾಯಿತು. ಇದಕ್ಕೆ ಮತ್ತೊಂದು ಕಾರಣವೆಂದರೆ ಮೊದಮೊದಲು ಗಿರಣಿ ಮಾಲೀಕರು ಉಸ್ತುವಾರಿ ಖರ್ಚನ್ನು ಉಳಿತಾಯ ಮಾಡುವುದಕ್ಕಾಗಿ ಉತ್ಪನ್ನಕಾರ್ಯವನ್ನು ಗುತ್ತಿಗೆಯ ಮೇರೆಗೆ ಮೇಸ್ತ್ರಿಗಳು ಕೊಟ್ಟು ಉತ್ಪನ್ನದ ಪ್ರತಿ ಅಂಶಕ್ಕೆ ಕಮಿಷನ್ ಗೊತ್ತುಮಾಡಿದರು. ಮೇಸ್ತ್ರಿಗಳು ಕಾರ್ಮಿಕರಿಗೂ ಇದೇ ರೀತಿ ವೇತನವನ್ನು ಗೊತ್ತುಪಡಿಸಿದರು. ಮೇಸ್ತ್ರಿಗಳ ಈ ವ್ಯವಸ್ಥೆ ಈಗ ಜಾರಿಯಲ್ಲಿಲ್ಲದಿದ್ದರೂ ಬಟ್ಟೆ ಕಾರ್ಖಾನೆಗಳಲ್ಲಿ ಇಂದಿಗೂ ಉತ್ಪನ್ನಾನುಗುಣ ವೇತನವೇ ಬಹಳಮಟ್ಟಿಗೆ ಜಾರಿಯಲ್ಲಿದೆ. ಆದರೆ ಕಾಲಕ್ರಮೇಣ ಹೊಸ ಹೊಸ ಕೈಗಾರಿಕೆಗಳಾದ ಎಂಜಿನಿಯರಿಂಗ್, ರೈಲು, ವಿಮಾನ, ಹಡಗು, ಮೋಟಾರು, ಸಿಮೆಂಟ್, ಗಾಜು, ಕಾಗದ, ಸಕ್ಕರೆ, ರಸಾಯನವಸ್ತು ಮುಂತಾದ ಕೈಗಾರಿಕೆಗಳು ಸ್ಥಾಪಿತವಾದುವು. ಈ ಕಾರ್ಖಾನೆಗಳಲ್ಲಿ ವ್ಯಕ್ತಿಗತ ಉತ್ಪನ್ನವನ್ನಳೆಯಲು ಅನುಕೂಲವಿರುವ ಕೆಲಸಗಳು ತೀರ ಕಡಿಮೆಯಾದ್ದರಿಂದ ಇಲ್ಲಿ ಉತ್ಪನ್ನವನ್ನು ಗುಣ ವೇತನಕ್ಕಿಂತ ಹೆಚ್ಚಾಗಿ ಕಾಲಾನುಗುಣ ವೇತನವನ್ನು ಜಾರಿಗೆ ತರಲಾಯಿತು. ಭಾರತದಲ್ಲಿ ಕಾಲಾನುಗುಣ ಇಲ್ಲವೆ ಉತ್ಪನ್ನಾನುಗುಣ ವೇತನದ ಪ್ರಾಮುಖ್ಯ ಆಯಾ ಕೈಗಾರಿಕೆಯ ಸ್ವರೂಪಕ್ಕೆ ಅನುಗುಣವಾಗಿರುತ್ತದೆ.

ವ್ಯಕ್ತಿಗತ ಉತ್ಪನ್ನವನ್ನಳೆಯಲು ದುಸ್ಸಾಧ್ಯವಾದ ಎಂಜಿನಿಯರಿಂಗ್ ಮತ್ತಿತರ ಹೊಸ ಕೈಗಾರಿಕೆಗಳಲ್ಲಿ ಕಾಲಾನುಗುಣ ವೇತನ ಹೆಚ್ಚು ಮುಖ್ಯವಾಗಿರುವುದು ಮೇಲಣ ಅಂಕಿಗಳಿಂದ ವ್ಯಕ್ತವಾಗುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿರುವಂತೆ ಭಾರತದಲ್ಲೂ ಕಾಲಾನುಗುಣ ವೇತನ ಗಂಟೆಗಳ ಆಧಾರದ ಮೇಲೆ ಇಲ್ಲವೆ ದಿನದ ಅಥವಾ ತಿಂಗಳ ಮೇರೆಗೆ ಇದೆ. ಗಂಟೆಯ ಅವಧಿಯ ಮೇರೆಗೆ ವೇತನ ನಿಗದಿಯಾಗಿರುವುದು ವಿರಳ. ಉದಾಹರಣೆಗೆ ಬೆಂಗಳೂರಿನಲ್ಲಿರುವ ಮೋಟಾರ್ ಇಂಡಸ್ಟ್ರೀಸ್ ಕಂಪನಿಯಲ್ಲಿ ಕಾರ್ಮಿಕರ ವೇತನ ಗಂಟೆಗಳ ಆಧಾರದ ಮೇಲೆ ನಿಗದಿಯಾಗಿದ್ದು ತಿಂಗಳಿಗೊಂದಾವರ್ತಿ ಬಟವಾಡೆಯಾಗುತ್ತದೆ.

ಕಾಲಾನುಗುಣ ವೇತನವನ್ನು ಕಾರ್ಮಿಕ ಸಂಘಗಳೂ ಹಲವು ವೇಳೆ ಉದ್ಯಮಿಗಳೂ ಪುರಸ್ಕರಿಸಿದ್ದರೂ ಹಲವು ತಜ್ಞರಿಂದ ಈ ವ್ಯವಸ್ಥೆಗೆ ಒಳ್ಳೆಯ ಪುರಸ್ಕಾರ ದೊರೆತಿಲ್ಲ. ಉತ್ಪನ್ನವನ್ನು ಹೆಚ್ಚಿಸುವುದೇ ಭಾರತದ ಯೋಜನೆಗಳ ಸದ್ಯದ ಗುರಿಯಾಗಿರುವಾಗ ಉತ್ಪನ್ನವನ್ನು ಹೆಚ್ಚಿಸುವಂಥ ಪ್ರೇರಣೆ ಇಲ್ಲದಿರುವ ಈ ವ್ಯವಸ್ಥೆ ಭಾರತದ ಕೈಗಾರಿಕೆಗಳಲ್ಲಿ ಮುಂದುವರಿಯುವುದು ಸೂಕ್ತವಲ್ಲ ಎಂದು ಅವರ ಅಭಿಪ್ರಾಯ. ಈ ವಾದವನ್ನು ಭಾರತ ಸರ್ಕಾರ ಒಪ್ಪಿಕೊಂಡು ಯೋಜನೆಯಲ್ಲಿ ಅಧಿಕೋತ್ಪಾದನೆಗೆ ಪ್ರಾಶಸ್ತ್ಯ ಕೊಡುವ ಉದ್ದೇಶದಿಂದ ತನ್ನ ವೇತನ ನೀತಿಯಲ್ಲಿ ಕಾಲಾನು ಗುಣವೇತನಕ್ಕಿಂತ ಉತ್ಪನ್ನಾನುಗುಣವೇತನಕ್ಕೆ ಪ್ರಾಶಸ್ತ್ಯ ಕೊಟ್ಟಿರುವುದಲ್ಲದೆ ಪ್ರತಿ ಉದ್ಯಮಕ್ಕೂ ನೇಮಕ ಮಾಡಲಾಗುವ ವೇತನ ಬೋರ್ಡುಗಳಿಗೆ ಒಂದು ಸಮರ್ಪಕವಾದ ಉತ್ಪನ್ನಾನುಗುಣ ವೇತನ ವ್ಯವಸ್ಥೆಯನ್ನು ಸೂಚಿಸುವಂತೆ ಕೇಳಿಕೊಳ್ಳುತ್ತಿದೆ. ಈ ಕಾರಣದಿಂದ ಈಗೀಗ ಅನೇಕ ಉದ್ಯಮಗಳಲ್ಲಿ ಉತ್ಪನ್ನಾನುಗುಣ ವೇತನ ವ್ಯವಸ್ಥೆ ಹೆಚ್ಚು ಪ್ರಾಮುಖ್ಯ ಗಳಿಸುತ್ತಿದೆ.

ಆದರೆ ಉತ್ಪನ್ನಾನುಗುಣ ವೇತನ ಪದ್ಧತಿಯಲ್ಲಿ ಕಾರ್ಮಿಕರ ಹಿತಾಸಕ್ತಿಗೆ ಧಕ್ಕೆ ಬರಬಹುದಾದುದರಿಂದ ಕಾರ್ಮಿಕ ಸಂಘಗಳ ವಿರೋಧವನ್ನೆದುರಿಸಬೇಕಾಗಿ ಕಾಲಕ್ರಮದಲ್ಲಾದರೂ ಕಾಲಾನುಗುಣ ವೇತನ ಪದ್ಧತಿಯನ್ನನುಸರಿಸಬೇಕಾಗಬಹುದು. ಅಲ್ಲದೆ ಕಾಲಾನುಗುಣ ವೇತನ ಕ್ರಮದಲ್ಲಿ ಕೂಡ ಬೋನಸ್ ಮುಂತಾದ ಪ್ರೋತ್ಸಾಹ ನೀಡುವ ಕ್ರಮಗಳನ್ನನುಸರಿಸಿ ಅಧಿಕ ಉತ್ಪಾದನೆಯನ್ನು ಪಡೆಯುವ ಅವಕಾಶವಿದೆ. ವಾಸ್ತವವಾಗಿ ಎಷ್ಟೋ ಉದ್ಯಮಗಳಲ್ಲಿ ಕಾಲಾನುಗುಣ ವೇತನದ ಜೊತೆಗೆ ಬೋನಸ್ ಕೊಡುವ ಪದ್ಧತಿಯನ್ನನುಸರಿಸಲಾಗುತ್ತಿದೆ. (ಎ.ಬಿ.ಎ.)

**ಕಾಲಾಹಂಡಿ :** ಭಾರತದ ಒರಿಸ್ಸ ರಾಜ್ಯದ ಒಂದು ಜಿಲ್ಲೆ. ಹಳೆಯ ಸಂಬಲ್‍ಪುರ್ ಜಿಲ್ಲೆಯ ನವಪಾರ ಉಪ ವಿಭಾಗವನ್ನು ಆಗಿನ ಕಾಲಾಹಂಡಿ ಸಂಸ್ಥಾನಕ್ಕೆ ಸೇರಿಸಿ ಈ ಜಿಲ್ಲೆಯನ್ನು 1949ರಲ್ಲಿ ರಚಿಸಲಾಯಿತು. ವಿಸ್ತೀರ್ಣ 8365 ಕಿಮೀ. ಜನಸಂಖ್ಯೆ 1,334,372 (2001).

ಕಾಲಾಹಂಡಿ ಜಿಲ್ಲೆಯಿಡೀ ಸಾಮಾನ್ಯವಾಗಿ ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶ. ಪಶ್ಚಿಮದಲ್ಲಿ ಭವಾನಿ ಪಟ್ಟಣದಿಂದ ಜುನಗಡದವರೆಗೂ ಅಲ್ಲಿಂದ ದಕ್ಷಿಣಕ್ಕೆ ಕೊರಾಪುಟ್ ಜಿಲ್ಲೆಯ ಗಡಿಯವರೆಗೂ ಇರುವ ನೆಲ ಫಲವತ್ತಾದ ಮೈದಾನ. ಗೋದಾವರಿಯ ಉಪನದಿಯಾದ ಇಂದ್ರಾವತಿ, ಮಹಾನದಿಯ ಉಪನದಿಯಾದ ತೇಲ್-ಇವು ಈ ಜಿಲ್ಲೆಯಲ್ಲಿ ಹರಿಯುತ್ತವೆ. ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವಿದೆ. ಬತ್ತ, ಗೋದಿ, ದ್ವಿದಳ ಧಾನ್ಯಗಳು ಮತ್ತು ಹೊಗೆಸೊಪ್ಪು ಮುಖ್ಯ ಬೆಳೆಗಳು. ಈ ಜಿಲ್ಲೆಯಲ್ಲಿರುವ ಹಳ್ಳಿಗಳ ಸಂಖ್ಯೆ 3,028.

ಇವು ಸಾಮಾನ್ಯವಾಗಿ ದೊಡ್ಡವಾಗಿದ್ದು ಅಭಿವೃದ್ಧಿ ಸ್ಥಿತಿಯಲ್ಲಿವೆ. ಇಲ್ಲಿನ ನವಪಾರದ ಕಾಡುಗಳಲ್ಲಿ ಅನೇಕ ಉಪಯುಕ್ತ ಮರಗಳುಂಟು. ಜಿಲ್ಲೆಯಲ್ಲಿ ಮ್ಯಾಂಗನೀಸ್, ಗ್ರಾಫೈಟ್ ನಿಕ್ಷೇಪಗಳು ಹೇರಳವಾಗಿವೆ; ಅವನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ರಾಯ್‍ಪುರ–ವಿಜಯನಗರದ ರೈಲುಮಾರ್ಗ ಕಾಲಾಹಂಡಿ ಜಿಲ್ಲೆಯ ಉತ್ತರದಲ್ಲಿ ಹಾದು ಹೋಗುತ್ತದೆ. ಜಿಲ್ಲೆಯ ಆಡಳಿತಕೇಂದ್ರ ಭವಾನಿ ಪಟ್ನ 61,671 (2001). ಹಿಂದಿನ ಸಂಸ್ಥಾನದ ಮಹಾರಾಜನ ಅರಮನೆ ಇಲ್ಲಿದೆ. ಈ ಜಿಲ್ಲೆಯಲ್ಲಿರುವ ಬೇಲ್ಖಂಡಿ ಪುರಾತತ್ವ ಪ್ರಾಮುಖ್ಯವುಳ್ಳ ಸ್ಥಳ. ಗುಡಹಂಡಿಯ ಗುಹೆಯಲ್ಲಿರುವ ಚಿತ್ರಗಳು ಇತಿಹಾಸಪೂರ್ವ ಕಾಲದವೆಂದು ಊಹಿಸಲಾಗಿದೆ. ಇವನ್ನು ಕೆಂಪು ಕಪ್ಪು ಬಣ್ಣಗಳಲ್ಲಿ ಬರೆಯಲಾಗಿದೆ. (ಎಂ.ಎ.ಎಚ್.)

**ಕಾಲಿ :** ಕೊಲಂಬಿಯದ ಮುಖ್ಯ ನಗರಗಳಲ್ಲಿ ಒಂದು. ವ್ಯಾಲೆ ಡೆಲ್ ಕೌಕ ವಿಭಾಗದ ರಾಜಧಾನಿ. ಕೊಲಂಬಿಯದಲ್ಲೇ ಅತ್ಯಂತ ಸಂಪದ್ಯುಕ್ತ ಕೃಷಿ ಪ್ರದೇಶವಾದ ಕೌಕ ಕಣಿವೆಯ ಪಶ್ಚಿಮಭಾಗದಲ್ಲಿ ಸಮುದ್ರಮಟ್ಟದಿಂದ 1014 ಮೀ ಎತ್ತರದಲ್ಲಿದೆ. ಕೌಲಿ ನದಿಯ ಎಡಪಾರ್ಶ್ವದ ಉಪನದಿಗಳಲ್ಲೊಂದಾದ ರಯೋ ಕೌಲಿ ಈ ನಗರದ ನಡುವೆ ಹರಿಯುತ್ತದೆ. ನಗರದ ಜನಸಂಖ್ಯೆ 250000 (2011). ನೀಗ್ರೋಗಳೂ ನೀಗ್ರೋ–ಕಾಕೇಷಿಯನ್ ಮಿಶ್ರಿತವಾದ ಮ್ಯುಲಾಟೋ ಜನರೂ ಬಹುಸಂಖ್ಯೆಯಲ್ಲಿದ್ದಾರೆ.

ಕಾಲಿ ನಗರ ಕೊಲಂಬಿಯದಲ್ಲಿ ಅತ್ಯಂತ ವೇಗಕ್ಕೆ ಬೆಳೆಯುತ್ತಿರುವ ನಗರಗಳಲ್ಲೊಂದು. ಆಧುನಿಕತೆ ಅದರ ಮುಖ್ಯಲಕ್ಷಣ. ಕಾಲಿ ನಗರದ ಸುತ್ತಣ ಪ್ರದೇಶದ ಕೃಷಿಕೈಗಾರಿಕೆ ಅಭಿವೃದ್ಧಿಗಾಗಿ ಇಪ್ಪತ್ತು ವರ್ಷಗಳ ಅವಧಿಯ ವಿವಿದೋದ್ದೇಶ ಯೋಜನೆಯೊಂದು ರೂಪಿತವಾಗಿದೆ. ಅದರ ಕೇಂದ್ರ ಕಚೇರಿ ಕಾಲಿಯಲ್ಲಿದೆ. ಕೊಲಂಬಿಯದ ಅತ್ಯಂತ ಮುಖ್ಯ ಕಲ್ಲಿದ್ದಲು ಗಣಿಪ್ರದೇಶವಾದ ಯುಂಬೋ ಇರುವುದು ಕಾಲಿಯ ಬಳಿ. ಕಾಲಿಯ ಪಶ್ಚಿಮಕ್ಕೆ 161 ಕಿಮೀ ದೂರದಲ್ಲಿ ಪೆಸಿಫಿಕ್ ತೀರದ ಬಂದರಾದ ಬ್ಯಾನಾವೆಂಟೂರಕ್ಕೂ ಕಾಲಿಗೂ ರೈಲ್ವೆ ಮತ್ತು ರಸ್ತೆ ಸಂಪರ್ಕವುಂಟು. ಕೊಲಂಬಿಯದ ಮುಖ್ಯ ಉತ್ಪನ್ನವಾದ ಕಾಫಿಯನ್ನು ಕಾಲಿಯ ಮೂಲಕ ಬ್ವಾನಾವೆಂಟೂರಕ್ಕೆ ಕಳುಹಿಸುತ್ತಾರೆ. ಪನಾಮಕ್ಕೂ ಎಕ್ವಡಾರಿನ ಕೀಟೊಗೂ ನಡುವೆ ಹಾರುವ ವಿಮಾನಗಳು ಕಾಲಿಯಲ್ಲಿ ತಂಗಿ ಸಾಗುತ್ತವೆ. ಕಾಲಿ ನಗರದ ಸ್ಥಾಪಕ (1536) ಸೆಬಾಸ್ಟಿಯನ್ ಡಿ ಬೆಲಾಲ್ಕಾಜಾರ್. ಆದರೆ ರೇವುಪಟ್ಟಣವಲ್ಲವಾದ್ದರಿಂದ ಬಹುಕಾಲ ಇದು ಆರ್ಥಿಕವಾಗಿ ಅಭಿವೃದ್ಧಿ ಹೊಂದಲಿಲ್ಲ. ಇದು ಒಂದು ಮುಖ್ಯ ಕೈಗಾರಿಕಾಕೇಂದ್ರ, ಅನೇಕ ವಿದೇಶಿ ಉತ್ಪಾದನ ಸಂಸ್ಥೆಗಳ ಶಾಖೆಗಳು ಇಲ್ಲಿವೆ. ಕೌಕ ಕಣಿವೆಯಲ್ಲಿ ಕೃಷಿ ಬಹಳಮಟ್ಟಿಗೆ ಅಬಿವೃದ್ಧಿ ಹೊಂದಿದೆ. ಪಶುಪಾಲನೆ ಮತ್ತು ಕಬ್ಬು ಬೆಳೆಗಳೇ ಪ್ರಧಾನವಾಗಿದ್ದ ಈ ಪ್ರದೇಶದಲ್ಲಿ ಸಾಂದ್ರ ಬೇಸಾಯ ವಿಧಾನಗಳನ್ನು ಜಾರಿಗೆ ತರಲಾಗಿದೆ. ವಿವಿಧೋತ್ಪನ್ನ ಕೃಷಿ ಪದ್ಧತಿ ಏರ್ಪಡುತ್ತಿದೆ. (ಬಿ.ಎಸ್.ಎಚ್.)

**ಕಾಲಿಂಜರ್ :** ಉತ್ತರ ಪ್ರದೇಶದ ಬಾಂದಾ ಜಿಲ್ಲೆಯಲ್ಲಿರುವ ಒಂದು ಐತಿಹಾಸಿಕ ಸ್ಥಳ. ಇಲ್ಲಿರುವ ಕೋಟೆ ಪ್ರಾಚೀನವಾದ್ದು. 10ನೆಯ ಶತಮಾನದಲ್ಲಿ ಕನೌಜಿನ ರಾಜರ ಸಾಮಂತನಾಗಿದ್ದ ಚಾಂಡೆಲ ರಾಜ ಯಶೋವರ್ಮ ಕಾಲಿಂಜರ್ ಕೋಟೆಯನ್ನು ಗೆದ್ದುಕೊಂಡು ಸ್ವತಂತ್ರನಾದ. ಚಾಂಡೆಲರು ಕಾಲಿಂಜರ್ ನಗರದಲ್ಲಿ ಸುಂದರವಾದ ದೇವಸ್ಥಾನಗಳನ್ನೂ ಸರೋವರಗಳನ್ನೂ ಕಟ್ಟಿಸಿದರು. ಘಸ್ನಿ ಮಹಮ್ಮದ್ ಕಾಲಿಂಜರ್ ಕೋಟೆಯನ್ನು ಮುತ್ತಿ, 1023 ರಲ್ಲಿ ಚಾಂಡೆಲ ರಾಜ ಗಂಡನನ್ನು ಸೋಲಿಸಿ, ಪ್ರಬಲವಾದ ಕೋಟೆಯನ್ನು ವಶಪಡಿಸಿಕೊಂಡ. ಮಹಮ್ಮದ್ ಘೋರಿ 1203ರಲ್ಲಿ ಕೋಟೆಯನ್ನು ಪುನಃ ಗೆದ್ದು ಉತ್ತರ ಭಾರತದಲ್ಲಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿದ. ತರುವಾಯ ರಜಪೂತರ ವಶವಾದ ಕೋಟೆಯನ್ನು ಸೂರ್ ವಂಶದ ಶೇರ್ ಷಾ 1545ರಲ್ಲಿ ಗೆದ್ದುಕೊಂಡರೂ ಕದನದಲ್ಲಿ ಆತ ಮೃತನಾದುದರಿಂದ ಮತ್ತೆ ಅದು ರಜಪೂತರ ವಶವಾಯಿತು. ಮೊಗಲ್ ಚಕ್ರವರ್ತಿ ಹುಮಾಯೂನ್ ಕಾಲಿಂಜರದ ಕೋಟೆಯನ್ನು ಮುತ್ತಿದನಾದರೂ ವಶಪಡಿಸಿಕೊಳ್ಳಲಾರದೆ ಕೊನೆಗೆ ರಜಪೂತರೊಡನೆ ಸಂಧಿ ಮಾಡಿಕೊಳ್ಳಬೇಕಾಯಿತು. 1569ರಲ್ಲಿ ಅಕ್ಬರ್ ಅದನ್ನು ಗೆದ್ದುಕೊಂಡ. ಮೊಗಲ್ ಸಾಮ್ರಾಜ್ಯದ ಪತನಾನಂತರ ಅದು ಬ್ರಿಟಿಷರ ವಶಕ್ಕೆ ಹೋಗಿತ್ತು. (ಬಿ.ಎಸ್.ಕೆ.)

**ಕಾಲಿನ್, ಹೈನ್‍ರೀಕ್ ಜೋಸೆಫ್ ಫಾನ್ :** 1772–1811. ಆಸ್ಟ್ರಿಯದ ನಾಟಕಕಾರ, ಕವಿ. 1795ರಲ್ಲಿ ಸರ್ಕಾರಿ ಕೆಲಸಕ್ಕೆ ಸೇರಿ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿದ.

ಈತನ ನಾಟಕಗಳು, ಗೀತೆಗಳು ದೇಶಾಭಿಮಾನದಿಂದ ಪ್ರೇರಿತವಾದುವು. ಪ್ರಾರಂಭದ ನಾಟಕಗಳಲ್ಲಿ ಕಾಣಬರುವುದು ಫ್ರೆಂಚ್ ಅಭಿಜಾತಸಾಹಿತ್ಯದ ಮನೋಧರ್ಮ. ಬರಬರುತ್ತ ಇವನ ಒಲವು ಜರ್ಮನ್ ರಮ್ಯ ಸಾಹಿತ್ಯದ ಕಡೆ ತಿರುಗಿತು. ಇದನ್ನು ಈತನ ಪ್ರಸಿದ್ಧ ನಾಟಕ ಕೊರಿಯಾಲಾನ್‍ನಲ್ಲಿ (1804) ಕಾಣಬಹುದು. ಇದಕ್ಕೆ ಆರಂಭಮೇಳವನ್ನು ಪ್ರಸಿದ್ಧ ಸಂಗೀತಗಾರ ಬೇಥೋವನ್ ರಚಿಸಿದ್ದಾನೆ.

ನೆಪೋಲಿಯನನಿಂದ ಆಸ್ಟ್ರಿಯಕ್ಕೆ ಆಕ್ರಮಣದ ಅಪಾಯವಿದ್ದಾಗ ಅವನಿಗೆ ವಿರುದ್ಧವಾಗಿ ಅನೇಕ ಗೀತಗಳನ್ನೂ ಲಾವಣಿಗಳನ್ನೂ ಕಾಲಿನ್ ರಚನೆಮಾಡಿದ. (ಎಲ್.ಎಸ್.ಎಸ್.)

**ಕಾಲಿನ್ಸ್, ಜಾನ್ :** 1742–1808. ನಟ ಹಾಗೂ ಕವಿ. ಇಂಗ್ಲೆಂಡಿನ ಪಶ್ಚಿಮ ತೀರದ ಬಾತ್ ಎಂಬ ಸಣ್ಣ ಊರಲ್ಲಿ ಹುಟ್ಟಿದ. ದರ್ಜಿಯ ಮಗನಾದ ಈತ ಕೆಲಕಾಲ ಹೆಂಗಸರ ಉಡುಪುಗಳನ್ನು ತಯಾರಿಸುತ್ತಿದ್ದ. ಅಭಿನಯದಲ್ಲಿ ಪ್ರತಿಭೆಯಿದ್ದುದರಿಂದ ಹಾಸ್ಯ ಪಾತ್ರಗಳನ್ನು ವಹಿಸಿ ರಂಗದ ಮೇಲೆ ಮೆಚ್ಚುಗೆ ಗಳಿಸಿದ್ದೂ ಉಂಟು. 1804ರಲ್ಲಿ ಪದ್ಯಸಂಗ್ರಹವೊಂದನ್ನು ಪ್ರಕಟಿಸಿದ. ಪಾಲ್‍ಗ್ರೇವ್‍ನ ಗೋಲ್ಡನ್ ಟ್ರೆಷರಿ ಎಂಬ ಪದ್ಯಸಂಕಲನದಲ್ಲಿ ಈತನ ಪದ್ಯವೊಂದಿದೆ. ಲಂಡನ್, ಡಬ್ಲಿನ್ ಮುಂತಾದ ಸ್ಥಳಗಳಲ್ಲಿ ಅಭಿನಯಿಸುತ್ತಿದ್ದ. ದುಃಖಾಂತ, ಸುಖಾಂತ ನಾಟಕಗಳಿಲ್ಲಿ ಮುದುಕರ ಪಾತ್ರದಿಂದ ಹಿಡಿದು ಹಳ್ಳಿಯ ಹುಡುಗರ ಪಾತ್ರಗಳವರೆಗೆ ವಿವಿಧ ಪಾತ್ರಗಳನ್ನು ಈತ ನಿರ್ವಹಿಸುತ್ತಿದ್ದ. ತಾನೇ ರಚಿಸಿದ ಭಾವಗೀತೆಗಳನ್ನು ಅಭಿನಯಪೂರ್ಣವಾಗಿ, ಇಂಪಾಗಿ ಹಾಡುತ್ತಿದ್ದುದೇ ಈತನ ವೈಶಿಷ್ಟ್ಯ. ಕಥೆ, ಸಂಗೀತ, ಅಭಿನಯಗಳ ಕಲಸುಮೇಲೋಗರದಂತಿದ್ದ ಒಂದೇ ರೀತಿಯ ಮನೋರಂಜನೆ ಕಾರ್ಯಕ್ರಮವನ್ನು ನಾನಾ ಊರುಗಳಲ್ಲಿ ಬೇರೆ ಬೇರೆ ಹೆಸರಿನಿಂದ ಈತ ನೀಡುತ್ತಿದ್ದನಂತೆ. (ಟಿ.ಎ.ಎಸ್.)

**ಕಾಲಿನ್ಸ್, ಮೈಕಲ್ :** 1890–1922, ಐರ್ಲೆಂಡಿನ ರಾಜಕೀಯ ಧುರೀಣ. ಕಾರ್ಕ್‍ನ ಕ್ಲೊನಾಕಿಲ್ಟಿಯದ ಹತ್ತಿರದ ಕಾರ್ಕ್ ಎಂಬಲ್ಲಿ ರೈತ ಮನೆತನವೊಂದರಲ್ಲಿ ಹುಟ್ಟಿದ. 1906–16ರ ವರೆಗೆ ಲಂಡನ್ನಿನಲ್ಲಿ ಅಂಚೆಯ ಗುಮಾಸ್ತನಾಗಿಯೂ ಕೆಲಕಾಲ ಸಲಹೆ ವಕೀಲನ ಕಚೇರಿಯಲ್ಲೂ ಕೆಲಸ ಮಾಡಿದ. ಐರಿಷ್ ಸ್ವಾತಂತ್ರ್ಯ ಸ್ವಯಂಸೇವಕ ಪಡೆಯಲ್ಲಿ ಸೇರಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ಭಾಗವಹಿಸಿದ. ಆಗ ಬ್ರಿಟಿಷರು ಈತನನ್ನು ಬಂಧಿಸಿ ಸೆರೆಯಲ್ಲಿಟ್ಟು 1917ರಲ್ಲಿ ಬಿಡುಗಡೆ ಮಾಡಿದರು. 1918ರಲ್ಲಿ ವೆಸ್ಟ್ ಕಾರ್ಕ್ ಲೋಕಸಭಾ ಸದಸ್ಯನಾಗಿ ಚುನಾಯಿತನಾದ. ಅನಂತರ ಸ್ವಾತಂತ್ರ್ಯ ಚಳವಳಿಯ ನೇತಾರರಲ್ಲಿ ಒಬ್ಬನಾದ. ಪ್ರಮುಖವ್ಯಕ್ತಿಗಳೆಲ್ಲ ಜೈಲು ಸೇರಿದ್ದಾಗ ಕಾಲಿನ್ಸ್ ಸಮರ್ಥ ಗೂಢಚಾರರೆನಿಸಿದ್ದ ಐರಿಷ್ ಸ್ವಾತಂತ್ರ್ಯ ಪಡೆಯವರ ನಾಯಕನಾಗಿ ದೇಶದ ಅರ್ಥ ಮತ್ತು ಗೃಹಖಾತೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡ. ನಿರ್ದಿಷ್ಟವಾದ ಸುದ್ದಿಗಳು ಪಡೆದು ಸಮಯೋಚಿತವಾಗಿ ನಡೆಯುತ್ತಿದ್ದುದೇ ಕಾಲಿನ್ಸನ ಕ್ರಾಂತಿಕಾರಕ ಜಯಕ್ಕೆ ಕಾರಣವಾಯಿತು. ಲಿಂಕನ್ ಜೈಲಿನಲ್ಲಿದ್ದ ಸ್ವಾತಂತ್ರ್ಯ ಸಂಗ್ರಾಮದ ನಾಯಕ ಎಮನ್ ಡ ವಲೆರನ ಬಿಡುಗಡೆಗೆ ಈತ ಕಾರಣನಾದ. ಈ ವರ್ತನೆ ಬ್ರಿಟಿಷ್ ಸರ್ಕಾರದ ಕಣ್ಣನ್ನು ಕೆಂಪಾಗಿಸಿತು. ಕಾಲಿನ್ಸನನ್ನು ಹಿಡಿದು ಕೊಟ್ಟವರಿಗೆ 10,000 ಪೌಂಡುಗಳ ಬಹುಮಾನ ನೀಡುವುದಾಗಿ ಬ್ರಿಟಿಷ್ ಸರ್ಕಾರದ ಘೋಷಿಸಿತು. ಆದರೂ ಈತ ಡಬ್ಲಿನ್ನಿನ ಬೀದಿಗಳಲ್ಲಿ ಸೈಕಲ್ ಮೇಲೆ ಧೈರ್ಯವಾಗಿ ತಿರುಗುತ್ತಿದ್ದ.

ಕೆಲವು ಕಾರಣಗಳಿಂದಾಗಿ ಎಮನ್ ಡ ವಲೆರ ಬ್ರಿಟಿಷರಿಂದ ಐರ್ಲೆಂಡಿನ ಸ್ವಾತಂತ್ರ್ಯ ಗಳಿಸಲು ಅಸಮರ್ಥನಾದ. ಆಗ ಕಾಲಿನ್ಸ್ ಬ್ರಿಟಿಷರೊಂದಿಗೆ ಸಂಧಾನ ನಡೆಸಿದ ಕಾರಣವಾಗಿ ಕೆಲವೊಂದು ಒಪ್ಪಂದಗಳ ಮೇಲೆ ದಕ್ಷಿಣ ಐರ್ಲೆಂಡ್ ಸ್ವಾತಂತ್ರ್ಯ ಪಡೆಯಿತು. ಈ ಒಪ್ಪಂದಕ್ಕೆ ವಲೆರನ ವಿರೋಧವಿತ್ತು. ಕಾಲಿನ್ಸ್ ತಾತ್ಕಾಲಿಕ ಸರ್ಕಾರದ ಅಧ್ಯಕ್ಷನಾದ. ಐರ್ಲೆಂಡಿನ ಉಗ್ರಗಾಮಿಗಳು ಕಾಲಿನ್ಸ್‍ನ ಈ ಮುತ್ಸದ್ದಿತನವನ್ನು ಒಪ್ಪದೆ ದೇಶಾದ್ಯಂತ ಒಳಯುದ್ಧ ಆರಂಭಿಸಿದರು. 1922ರ ಆಗಸ್ಟ್ ತಿಂಗಳಲ್ಲಿ ಪ್ರಯಾಣ ಮಾಡುತ್ತಿದ್ದ ಕಾಲಿನ್ಸ್‍ನನ್ನು ಉಗ್ರಪಕ್ಷದ ಶತ್ರುವರ್ಗದವರು ಸ್ಕಿಬೆರೀನೆ ಮತ್ತು ಕಾರ್ಕ್ ನಗರಗಳ ಮಧ್ಯೆ ಹೊಂಚುಹಾಕಿ ಕಾದಿದ್ದು ಗುಂಡಿಕ್ಕಿ ಕೊಂದರು. *

**ಕಾಲಿನ್ಸ್, ವಿಲಿಯಂ :** 1721–59. ಆಂಗ್ಲ ಕವಿ. ವಿಂಚೆಸ್ಟರ್, ಆಕ್ಸ್‍ಫರ್ಡ್‍ಗಳಲ್ಲಿ ಓದಿ ಲೇಖಕನಾಗಿ ಜೀವನ ಮಾಡಲು ಲಂಡನ್ನಿಗೆ ಬಂದು ಜಾನ್ಸನ್ ಮತ್ತು ಥಾಮ್ಸನ್ನರ ಸ್ನೇಹ ಗಳಿಸಿದ. ಪ್ರಾರಂಭದಲ್ಲಿ ತುಂಬ ಆರ್ಥಿಕ ತೊಂದರೆಯಿದ್ದರೂ ಮುಂದೆ ಚಿಕ್ಕಪ್ಪನ ಆಸ್ತಿ ದೊರಕಿತು. ಪರ್ಷಿಯನ್ ಎಕ್ಲಾಗ್ಸ್ ಎಂಬ ಹೊತ್ತಗೆ ಈತ ವಿದ್ಯಾರ್ಥಿಯಾಗಿದ್ದಾಗಲೆ ಪ್ರಚುರಗೊಂಡಿತು. ಇದು ಉತ್ತಮ ಕೃತಿಯಲ್ಲವೆಂದು ಕವಿ ತಾನೇ ಹೇಳಿಕೊಂಡಿದ್ದಾನೆ. ಕಾಲಿನ್ಸ್ ಬರೆದದ್ದು ಸ್ವಲ್ಪವಾದರೂ ಬರೆದುದರಲ್ಲಿ ಬಹುಭಾಗ ಅತ್ಯುತ್ತಮ ಸಾಹಿತ್ಯವೆನಿಸಿದೆ. ಪ್ರಗಾಥಗಳಿಂದ ಇವನ ಹೆಸರು ಚಿರಸ್ಥಾಯಿಯಾಗಿದೆ. ಟು ಈವಿನಿಂಗ್ ಮತ್ತು ಡರ್ಜ್ ಇನ್ ಸಿಂಬೆಲೈನ್ ಎಂಬೆರಡು ಪ್ರಗಾಥಗಳು ಉಲ್ಲೇಖಾರ್ಹವಾದುವು. ಈತನ ಮರಣಾನಂತರ ಅಚ್ಚುಕಂಡ ಓಡ್ ಆನ್ ದಿ ಪಾಪ್ಯುಲರ್ ಸೂಪರ್‌ಸ್ಟಿಷನ್ಸ್ ಆಫ್ ದಿ ಹೈಲೆಂಡ್ ಎಂಬ

ಪ್ರಾಥವಂತೂ ಅನಂತರ ಬಂದ ರಮ್ಯಯುಗದ ಮುನ್ಸೂಚಕವಾಗಿದೆಯೆಂದು ವಿಮರ್ಶಕರ ಮತ. ಇದರಲ್ಲಿ ಬಹು ಸುಂದರವಾದ ಅನೇಕ ಭಾಗಗಳಿವೆ. ಆದರೆ ಕವಿ ಬದುಕಿದ್ದಂದು

ಅವನ ಕೃತಿಗಳಿಂದ ಅವನಿಗೆ ಸಾಕಷ್ಟು ಖ್ಯಾತಿ ಸಿಗಲಿಲ್ಲ. ದಿ ಬೆಲ್ ಆಫ್ ಆರೇಗಾನ್ ಎಂಬ ಇವನ ಕಟ್ಟಕಡೆಯ ಕವನವೊಂದು ನಷ್ಟವಾಗಿ ಹೋಗಿದೆ. ಅಸಾಧಾರಣ ಕಲ್ಪನೆ ಮತ್ತು ಕೋಮಲತೆ ಇವನ ಕಾವ್ಯದ ವೈಶಿಷ್ಟ್ಯ. ಕಾಲಿನ್ಸನ ರಚನೆಗಳಲ್ಲೆಲ್ಲ ಸೂಕ್ಷ್ಮ ಖೇದದ ಧ್ವನಿಯೊಂದು ವ್ಯಾಪಿಸಿದೆ. ತನ್ನ ಪ್ರಗಾಥಗಳು ಹೆಚ್ಚು ಯಶಸ್ಸುಗಳಿಸಲಿಲ್ಲವೆಂಬ ಚಿಂತೆ ಕವಿಯ ತಲೆ ಸೇರಿ ಅವನಲ್ಲಿ ತೀವ್ರವಾದ ಮಾನಸಿಕ ರೋಗಕ್ಕೆ ಕಾರಣವಾಯಿತು (1753). ಚಿಕಿತ್ಸೆಗಾಗಿ ಕವಿ ಫ್ರಾನ್ಸಿಗೆ ಹೋದ. ಹಿಂತಿರುಗಿದ ಮೇಲೆ ಕಾಯಿಲೆ ಉಲ್ಬಣಗೊಂಡಿತು. ಬುದ್ಧಿ ಮುಂಕಾಯಿತು. ಈತ ಹೇಗೆ ಅನಾಮಿಕನಾಗಿ ಸತ್ತನೆಂದರೆ ಅಂದು ಯಾವ ಪತ್ರಿಕೆಯೂ ಇವನ ಮರಣವಾರ್ತೆಯನ್ನು ಅಚ್ಚು ಮಾಡಲಿಲ್ಲವಂತೆ.

ಕಾಲಿನ್ಸನ ಕವನಗಳಲ್ಲಿ, 'ಪರ್ಸಾನಿಫಿಕೇಷನ್', ಅಮೂರ್ತತೆಗಳು, ಉಪದೇಶಿಸುವ ಪ್ರವೃತ್ತಿ ಇವು ಕಾಣುತ್ತವೆ. ಇವು 'ನಿಯೊಕ್ಲ್ಯಾಸಿಕ್' ಕಾವ್ಯದ ಲಕ್ಷಣಗಳು. ಆದರೆ ನಿಸರ್ಗದ ಪ್ರೀತಿ, ನಿಗೂಢತೆಯ ಅರಿವು ಇವು ಮುಂದಿನ ಕಾವ್ಯದ ಸೂಚನೆಗಳು. (ಎನ್.ಎಸ್.ಎಲ್.)

**ಕಾಲಿನ್ಸ್, ವಿಲಿಯಂ ವಿಲ್ಕಿ :** 1824–89. ಇಂಗ್ಲಿಷ್ ಕಾದಂಬರಿಕಾರ. ಕಲಾವಿದನೊಬ್ಬನ ಮಗ, ಹುಟ್ಟಿದ್ದು ಲಂಡನ್ನಿನಲ್ಲಿ. ವಿದ್ಯಾಭ್ಯಾಸ ಖಾಸಗಿಯಾಗಿ ನಡೆಯಿತು. ಇಟಲಿಯಲ್ಲಿ ಸ್ವಲ್ಪ ಕಾಲ ಕಳೆದು

ಅನಂತರ 1851ರಲ್ಲಿ ವಕೀಲನಾದ. 1848ರಲ್ಲಿ ತನ್ನ ತಂದೆಯ ಜೀವನಚರಿತೆಯನ್ನು ಬರೆದ. 1850ರಲ್ಲಿ ಆಂಟೊನಿನಾ ಎಂಬ ಮೊದಲ ಕಾದಂಬರಿಯನ್ನು ಪ್ರಕಟಿಸಿದ. 1851ರಲ್ಲಿ ಚಾರ್ಲ್ಸ್ ಡಿಕನ್ಸನ ಸ್ನೇಹ ಬೆಳೆಸಿ ಆತನ ಅನೇಕ ಬರೆಹಗಳಲ್ಲಿ ಪಾಲುಗೊಂಡ. ದಿ ವುಮನ್ ಇನ್ ವೈಟ್ ನಿಗೂಢತೆಯ ಕಾದಂಬರಿ (1860) ಮತ್ತು ದಿ ಮೂನ್‌ಸ್ಟೋನ್ (1868) ಉತ್ತಮ ಪತ್ತೇದಾರಿ ಕಾದಂಬರಿ. ಹೈಡ್ ಅಂಡ್ ಸೀಕ್ (1854), ನೋ ನೇಮ್ (1862), ಅರ್ಮಡೇಲ್ (1866) ಇವು ಈತನ ಇತರ ಕಾದಂಬರಿಗಳು.

ಕಾಲಿನ್ಸ್ ಇಂಗ್ಲಿಷ್ ಸಾಹಿತ್ಯದಲ್ಲಿ ಪತ್ತೇದಾರಿ ಕಥಾಸಾಹಿತ್ಯದ ಜನಕ ಎನ್ನಬಹುದು. ಇವನ ದಿ ಮೂನ್ ಸ್ಟೋನ್ ಇಂಗ್ಲೆಂಡಿನ ಮೊದಲನೆಯ ಪತ್ತೇದಾರಿ ಕಾದಂಬರಿ, ಇದನ್ನು ಟಿ.ಎಸ್. ಎಲಿಯಟ್ 'ಪತ್ತೇದಾರಿ ಕಾದಂಬರಿಗಳಲ್ಲಿ ಮೊದಲನೆಯದು ಅತಿ ದೀರ್ಘವಾದದ್ದು ಮತ್ತು ಅತ್ಯುತ್ತಮವಾದದ್ದು' ಎಂದು ವರ್ಣಿಸಿದ. ಕಾಲಿನ್ಸ್ ಕಥಾ ವಸ್ತುವನ್ನು ಬಹು ಎಚ್ಚರಿಕೆಯಿಂದ ಕಟ್ಟುತ್ತಾನೆ. ಪ್ರತಿಯೊಂದು ವಿವರಕ್ಕೂ ಗಮನಕೊಡುತ್ತಾನೆ. ನಮ್ಮ ಆಸಕ್ತಿಯನ್ನು ಗೆಲ್ಲುವ ಪಾತ್ರಗಳನ್ನು ಸೃಷ್ಟಿ ಮಾಡುತ್ತಾನೆ. ವಾಲ್ಟರ್ ಆ್ಯಲೆನ್ ಎನ್ನುವ ವಿಮರ್ಶಕ, ಇವನು ಯಾಂತ್ರಿಕ ಕಥಾವಸ್ತು ಮತ್ತು ಪಾತ್ರಗಳ ಇವುಗಳ ನಡುವೆ ಸಮತೋಲನವನ್ನು ಸಾಧಿಸುತ್ತಾನೆ ಎಂದಿದ್ದಾನೆ. (ಎಚ್.ವಿ.ಎಸ್.)

**ಕಾಲಿಬಂಗನ್ :** ವಾಯವ್ಯ ರಾಜಸ್ತಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಘಗ್ಗರ್ ನದಿಯ ಎಡದಂಡೆಯ ಮೇಲಿರುವ ಒಂದು ಗ್ರಾಮ. ಇಲ್ಲಿರುವ ಪುರಾತನ ಅವಶೇಷಗಳಿಂದ ಪ್ರಸಿದ್ಧವಾಗಿದೆ. ಇದು ಸುಪ್ರಸಿದ್ಧ ಪ್ರಾಕ್ತನ ನೆಲೆ. ಹರಪ್ಪದ ಆಗ್ನೇಯ ದಿಕ್ಕಿನಲ್ಲಿ 192 ಕಿಮೀ ದೂರದಲ್ಲಿದೆ. ಘಗ್ಗರ್ ವೇದಕಾಲದಲ್ಲಿ ಪವಿತ್ರವೆಂದೆಣಿಸಿದ್ದ ಸರಸ್ವತಿ ನದಿಯೇ ಇರಬಹುದೆಂಬುದು ವಿದ್ವಾಂಸರ ಊಹೆ. ಈಗ ಈ ಪ್ರದೇಶ ಥಾರ್ ಮರುಭೂಮಿಯ ಭಾಗವಾಗಿದೆ. ನದಿಯಲ್ಲಿ ಎಂದೋ ಅಪರೂಪವಾಗಿ ಮಾತ್ರ ನೀರು ಬರುತ್ತದೆ. 1961–62ರಲ್ಲಿ ಭಾರತ ಸರ್ಕಾರದ ಪುರಾತತ್ತ್ವ ಇಲಾಖೆ ಇಲ್ಲಿಯ ಪ್ರಾಚೀನ ನೆಲೆಯಲ್ಲಿ ನಡೆಸಿದ ಉತ್ಖನನದಿಂದಾಗಿ ಹರಪ್ಪ ನಾಗರಿಕತೆಯ, ಅದಕ್ಕೂ ಮೊದಲಿನ ಮತ್ತೊಂದು ಸಂಸ್ಕೃತಿಯ ಅವಶೇಷಗಳು ಗೋಚರವಾಗಿವೆ.

ಇಲ್ಲಿಯ ಪ್ರಾಗ್‌ಹರಪ್ಪ ಸಂಸ್ಕೃತಿಯ ನೆಲೆಯ ವಿಸ್ತೀರ್ಣ 280×180 ಚ.ಮೀ ಇದರ ಸುತ್ತಲೂ ಕೋಟೆಗೋಡೆಗಳಿದ್ದುವು. ಒಳಗಿದ್ದ ಮನೆಗಳೆಲ್ಲ ಹಸಿ ಇಟ್ಟಿಗೆಯವು. ಇಲ್ಲಿಯ ಇಟ್ಟಿಗೆಗಳೂ ಕಟ್ಟಡಗಳ ರಚನಾವಿನ್ಯಾಸವೂ ಹರಪ್ಪ ಸಂಸ್ಕತಿಯಲ್ಲಿ ಕಂಡು ಬಂದಿರುವದಕ್ಕಿಂತ ಬೇರೆ ರೀತಿಯವು. ಆ ಕಾಲದಲ್ಲಿ ಬಳಕೆಯಲ್ಲಿದ್ದ ಮಣ್ಣಿನ ಪಾತ್ರೆಗಳು ಕೂಡ ಹರಪ್ಪದವಕ್ಕಿಂತ ಭಿನ್ನ ಪ್ರಕಾರದವಾಗಿದ್ದುವು. ಇವು ಈ ಎರಡು ಸಂಸ್ಕೃತಿಗಳ ಭೇದವನ್ನು ಸ್ಪಷ್ಟಗೊಳಿಸುತ್ತವೆ. ಆದರೆ ಈ ಸಂಸ್ಕೃತಿಯ ಸ್ತರಗಳಲ್ಲಿ ದೊರಕಿರುವ ಅಗೇಟ್, ಚಾಲ್ಸೆಡನಿ ಮುಂತಾದ ಕಲ್ಲುಗಳ ಚಿಕ್ಕ ತೆಳು ಚಕ್ಕೆಯ ಚಾಕುಗಳು, ಶಂಖದ ಬಳೆಗಳು, ಸುಟ್ಟ ಮಣ್ಣಿನ ಆಟದ ಗಾಡಿಯ ಚಕ್ರಗಳು, ಗೂಳಿಯ ಬೊಂಬೆಗಳು ಮತ್ತು ಬಳೆಗಳು, ತಾಮ್ರದ ಕೊಡಲಿಗಳು ಮತ್ತು ಬಳೆಗಳು, ಇಲ್ಲಿಯ ವಾಸ್ತುಕಲೆ–ಇವುಗಳಿಂದಾಗಿ ಈ ಸಂಸ್ಕೃತಿ ಹರಪ್ಪ ಸಂಸ್ಕೃತಿಗೆ ಹತ್ತಿರವಾಗಿತ್ತೆಂದು ತೋರುತ್ತದೆ. ಪ್ರ.ಶ.ಪೂ. ಸು. 2500ಕ್ಕೆ ಪ್ರಾರಂಭವಾದ ಈ ಸಂಸ್ಕೃತಿ ಪ್ರ.ಶ.ಪೂ. 2300ರ ಸುಮಾರಿನಲ್ಲಿ ಪ್ರಾಯಶಃ ಭೂಕಂಪದಿಂದ ಕೊನೆಗೊಂಡಿತು.

ಅನತಿಕಾಲದಲ್ಲಿ ಹರಪ್ಪ ಸಂಸ್ಕೃತಿಯ ಜನರು ಇದೇ ಪ್ರದೇಶದಲ್ಲಿ ನೆಲೆಸಿದರು. ಹರಪ್ಪ ಸಂಸ್ಕೃತಿಯ ಪಟ್ಟಣದಲ್ಲಿ ಎರಡು ಭಾಗಗಳಿದ್ದುವು. ಪಶ್ಚಿಮದಲ್ಲಿ ಕೋಟೆ ಮತ್ತು ಅದರಿಂದ 40 ಮೀ ಪೂರ್ವಕ್ಕೆ ಕೆಳಪಟ್ಟಣ. ಕೋಟೆ ಹಿಂದಿನ ಪ್ರಾಗ್ ಹರಪ್ಪ ಸಂಸ್ಕೃತಿಯ ಅವಶೇಷಗಳಿದ್ದ ದಿಬ್ಬದ ಮೇಲೆ ಎತ್ತರದಲ್ಲಿತ್ತು. ವಿನ್ಯಾಸದಲ್ಲಿ ಸಮಾಂತರಚತುರ್ಭುಜವಾಗಿದ್ದ (ಪ್ಯಾರಲೆಲೋಗ್ರಾಮ್) ಕೋಟೆಗೋಡೆ 3–7 ಮೀ ದಪ್ಪವಾಗಿತ್ತು. ಅದರಲ್ಲಿ ಅಲ್ಲಲ್ಲಿ ಚೌಕಾಕಾರದ ಬುರುಜುಗಳೂ ಉತ್ತರ ಮತ್ತು ದಕ್ಷಿಣಭಾಗಗಳಲ್ಲಿ ದ್ವಾರಗಳೂ ಇದ್ದುವು. ಒಳಪ್ರದೇಶ ಪೂರ್ವ–ಪಶ್ಚಿಮವಾಗಿ ಹಬ್ಬಿದ ಗೋಡೆಯೊಂದರಿಂದ ಸುಮಾರು ಸಮವಿಸ್ತೀರ್ಣದ ವಜ್ರಾಕಾರದ (ರಾಂಬಾಯಿಡ್) ಎರಡು ಭಾಗಗಳಲ್ಲಿ ವಿಭಾಗವಾಗಿತ್ತು. ದಕ್ಷಿಣಭಾಗದಲ್ಲಿ ಇಟ್ಟಿಗೆಯಲ್ಲಿ ಕಟ್ಟಿದ ಆರು ಕಟ್ಟೆಗಳಿವೆ. ಒಂದು ಕಟ್ಟೆಯ ಮೇಲೆ ಬಾವಿ, ಅಗ್ನಿಕುಂಡ ಮತ್ತು ಇಟ್ಟಿಗೆಯ ಗೋಡೆಯುಳ್ಳ ತೊಟ್ಟಿ, ತೊಟ್ಟಿಯೊಳಗೆ ದನದ ಮೂಳೆ ಮತ್ತು ಜಿಂಕೆಯ ಕೊಂಬುಗಳಿದ್ದುವು. ಇನ್ನೊಂದು ಕಟ್ಟೆಯ ಮೇಲೆ ಸಾಲಾಗಿ ಆಯ ಅಥವಾ ಅಂಡಾಕಾರದ ಏಳು ಅಗ್ನಿಕುಂಡಗಳಲ್ಲಿ ಬೂದಿ ಇದ್ದಲು ಮತ್ತು ವೃತ್ತಾಕಾರದ ಮಣ್ಣಿನ ಫಲಕಗಳು ದೊರೆಕಿವೆ. ಈ ಕುಂಡಗಳು ಪ್ರಾಯಶಃ ಯಾವುದೋ ಧಾರ್ಮಿಕ ಆಚರಣೆಗೆ ಸಂಬಂಧಿಸಿರಬೇಕೆಂದೂ ಇಲ್ಲಿ ಸಿಕ್ಕಿರುವ ಪ್ರಾಣಿಗಳ ಅವಶೇಷಗಳು ಯಜ್ಞಗಳಲ್ಲಿ ಬಲಿಯಾದ ಪ್ರಾಣಿಗಳವೆಂದೂ ಊಹಿಸಲಾಗಿದೆ. ಇದೇ ರೀತಿಯ ಕುಂಡಗಳು ಕೆಳನಗರದ ಅನೇಕ ಮನೆಗಳಲ್ಲಿ ಅವಕ್ಕೇ ಮೀಸಲಾದ ಕೋಣೆಗಳಲ್ಲಿ ಕಂಡುಬಂದಿವೆ. ಕೋಟೆಯ ಉತ್ತರಾರ್ಧದಲ್ಲಿ ರಸ್ತೆಗಳ ಇಕ್ಕೆಲದಲ್ಲೂ ಅಚ್ಚುಕಟ್ಟಾಗಿ ಕಟ್ಟಿದ ದೊಡ್ಡ ಮನೆಗಳಿದ್ದುವು. ಇವು ಅಂದಿನ ಸಮಾಜದ ಪ್ರತಿಷ್ಠಿತರ ಗೃಹಗಳಾಗಿದ್ದಿರಬೇಕು.

ಕೆಳನಗರದ ಅಗಲ ಪೂರ್ವ–ಪಶ್ಚಿಮವಾಗಿ 230ಮೀ. ಇದರ ಉದ್ದ ಇನ್ನೂ ನಿಖರವಾಗಿ ಗೊತ್ತಿಲ್ಲ. ಇದರ ಸುತ್ತಲೂ ಒಂದು ಪೌಳಿ ಗೋಡೆಯಿತ್ತು. ಪೇಟೆಯ ಇಡೀ ಪ್ರದೇಶ ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣವಾಗಿ ಹಬ್ಬಿ ಸಮಕೋನದಲ್ಲಿ ಸಂಧಿಸಿದ ಮುಖ್ಯರಸ್ತೆಗಳಿಂದ ಚದುರಂಗದ ಹಾಸಿನಂತೆ ಹಲವು ಚೌಕಿಗಳಾಗಿ ವಿಭಜಿತವಾಗಿದ್ದುವು. ಒಂದೊಂದು ಚೌಕದಲ್ಲೂ ಹಲವುಮನೆಗಳೂ ನಡುವೆ ಅನೇಕ ಉಪಬೀದಿಗಳೂ ಇದ್ದು ಒಟ್ಟು ನಗರದ ವಿನ್ಯಾಸ ಸುಂದರವಾಗಿತ್ತು. ಇಲ್ಲಿಯ ಹಾದಿಗಳ ಅಗಲ 1.80 ಮೀ ಅಥವಾ ಅದರ ಗುಣಕಗಳು ಹರಪ್ಪ ಮತ್ತು ಮೊಹೆಂಜೋದಾರೋ ಪಟ್ಟಣಗಳಲ್ಲಿದ್ದಂತೆ, ಇಲ್ಲಿ ರಸ್ತೆಗಳಿಗೆ ಮೋರಿಗಳಿಲ್ಲದಿದ್ದುದು ಒಂದು ವಿಶೇಷ. ಆದರೆ ಮನೆಗಳಲ್ಲಿ ನಾಜೂಕಾಗಿ ಕಟ್ಟಲಾಗಿದ್ದ ಬಚ್ಚಲುಗಳಿಂದ ಕೊಳೆಚೆ ನೀರೆಲ್ಲ ಮನೆಯ ಹೊರಭಾಗದಲ್ಲಿಟ್ಟಿದ್ದ ದೊಡ್ಡ ಭಾಂಡಗಳಿಗೆ ಬೀಳುವಂತೆ ಮಾಡುವ ವ್ಯವಸ್ಥೆಯಿತ್ತು. ಇಲ್ಲಿಯ ಮನೆಗಳು ಆಯಾಕಾರದವು. ಅವು ಕನಿಷ್ಠ ಎರಡು ಬೀದಿಗಳಿಗೆ ಸೇರಿದಂತಿರುತ್ತಿದ್ದುವು. ಕೆಲವು ಕಡೆಗಳಲ್ಲಿ ಇಟ್ಟಿಗೆಯ ದೊಡ್ಡ ಮೆಟ್ಟಿಲುಗಳಿರುವುದರಿಂದ ಆ ಮನೆಗಳಿಗೆ ಮಹಡಿಗಳೂ ಇದ್ದಿರಬಹುದು. ಮನೆಯ ಮಧ್ಯದ ಅಂಗಳದ ಸುತ್ತ ಮೂರುಕಡೆ ಆರು ಅಥವಾ ಏಳು ಕೋಣೆಗಳಲ್ಲದೆ ಒಂದು ಬಾವಿಯೂ ಇರುತ್ತಿತ್ತು. ಉಪಯೋಗ ದೃಷ್ಟಿಯಿಂದ ಇದು ವ್ಯವಸ್ಥಿತವಾಗಿತ್ತು. ಗೋಡೆಗಳಿಗೆ ಮಣ್ಣಿನ ಗಿಲಾವು ಮಾಡಲಾಗಿತ್ತು. ಕೆಲವೆಡೆ ನೆಲಕ್ಕೆ ಹಾಸಿದ್ದ ಚಿತ್ರಿತ ಹಂಚುಗಳು ಕಂಡುಬಂದಿವೆ. ಹರಪ್ಪ ಸಂಸ್ಕೃತಿಯ ವೈಶಿಷ್ಟ್ಯಗಳಾದ ಉತ್ತಮವಾಗಿ ಚಿತ್ರಿತವಾದ ಮಡಕೆಗಳು, ಚರ್ಟ್‌ಕಲ್ಲಿನ ಚಕ್ಕೆ, ಚಾಕುಗಳು, ಅನೇಕ ರೀತಿಯ ಮಣಿಗಳು, ಸುಟ್ಟ ಮಣ್ಣಿನ ಆಟದ ಗಾಡಿಗಳು, ಹಕ್ಕಿ ಮತ್ತು ಪ್ರಾಣಿಗಳು, ಬೊಂಬೆಗಳು, ಕಲ್ಲಿನ ಚೌಕಕಾರದ ತೂಕದ ಬಟ್ಟುಗಳು, ಚಿತ್ರ ಮತ್ತು ಲಿಪಿಯಿರುವ ಸುಂದರ ಶಿಲಾಮುದ್ರೆಗಳು ಮುಂತಾದವುಗಳು ಇಲ್ಲೂ ದೊರಕಿವೆ.

ಕೋಟೆಯಿಂದ ಈಶಾನ್ಯಕ್ಕೆ 300 ಮೀ ದೂರದಲ್ಲಿ ಶ್ಮಶಾನವಿತ್ತು. ಇಲ್ಲಿ ಮೂರು ರೀತಿಯ ಸಮಾಧಿಗಳು ಕಂಡುಬಂದಿವೆ. ಉತ್ತರ–ದಕ್ಷಿಣವಾಗಿ ತೋಡಿದ ಉದ್ದವಾದ ಹಳ್ಳದಲ್ಲಿ ಹೆಣದ ತಲೆ ಉತ್ತರಕ್ಕಿರುವಂತೆ ಇದ್ದು, ಅದರ ಸುತ್ತಲೂ ಮಡಕೆಗಳನ್ನಿಟ್ಟಿದ್ದುದು ಸಾಮಾನ್ಯ. ಇನ್ನೆರಡು ರೀತಿಯ ಸಮಾಧಿಗಳಲ್ಲಿ ಶಾರೀರಿಕ ಅವಶೇಷಗಳೇನೂ ಇಲ್ಲ. ದುಂಡು ಅಥವಾ ಅಂಡಾಕಾರದ ಹಳ್ಳದಲ್ಲಿ ಮಧ್ಯೆ ಒಂದು ದೊಡ್ಡ ಭಾಂಡವನ್ನಿಟ್ಟು ಸುತ್ತಲೂ ಸಣ್ಣ ಮಡಕೆಗಳನ್ನು ಜೋಡಿಸಲಾಗಿರುವುದು ಒಂದು ರೀತಿ. ಇನ್ನೊಂದು ಬಗೆಯ ಸಮಾಧಿಯಲ್ಲಿ ಮಡಕೆಗಳಷ್ಟನ್ನೇ ಮೇಲಿನ ರೀತಿಯ ಹಳ್ಳಗಳಲ್ಲಿ ಪೇರಿಸಲಾಗಿದೆ. ಸಮಾಧಿಗಳಲ್ಲಿ ಇಟ್ಟಿರುವ ಮಡಕೆಗಳಲ್ಲಿ ಮೃತರಿಗಾಗಿ ಅರ್ಪಿಸಲಾಗಿದ್ದ ಆಹಾರ–ಪಾನೀಯಗಳಿದ್ದಿರಬೇಕು.

ಕಾಲಿಬಂಗನ್ ಹರಪ್ಪ ಸಂಸ್ಕೃತಿಯ ಪಟ್ಟಣ. ಪ್ರ.ಶ.ಪೂ. 2300ರಲ್ಲಿ ಹುಟ್ಟಿ ಪ್ರ.ಶ.ಪೂ. ಸು. 1800ರ ಹೊತ್ತಿಗೆ ನಶಿಸಿರಬೇಕೆಂದು ವೈಜ್ಞಾನಿಕ ಆಧಾರಗಳಿಂದ ತಿಳಿದುಬಂದಿದೆ. ಈ ಪಟ್ಟಣದ ನಾಶಕ್ಕೆ ಕಾರಣ ಗೊತ್ತಿಲ್ಲ. ಪ್ರಾಯಶಃ ಸಮೀಪದ ನದಿ ಬತ್ತುತ್ತ ಬಂದು, ಸುತ್ತಲ ಪ್ರದೇಶದಲ್ಲಿ ಬೇಸಾಯ ಕಡಿಮೆಯಾಗಿ ನಗರದ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗದಿದ್ದುದರಿಂದ, ಇಲ್ಲಿಯ ಜನ ಬೇರೆಡೆಗೆ ವಲಸೆ ಹೋಗಿರಬೇಕೆಂದು ಊಹಿಸಲಾಗಿದೆ. (ಎಸ್.ಎನ್.)

**ಕಾಲಿಯ :** ರಮಣಕ ದ್ವೀಪದಲ್ಲಿ ವಾಸವಾಗಿದ್ದ ಒಂದು ಸರ್ಪ. ಕದ್ರೂ ಕಶ್ಯಪರ ಮಗ. ಗರುಡ ಸಾಮೂಹಿಕವಾಗಿ ಸರ್ಪಗಳನ್ನು ಕೊಲ್ಲುತ್ತಿದ್ದಾಗ ಸರದಿಯಂತೆ ಒಂದೊಂದನ್ನು ಕಳಿಸಿಕೊಡಲು ಸರ್ಪಗಳು ಒಪ್ಪಂದ ಮಾಡಿಕೊಂಡಿದ್ದವು. ಕಾಲಿಯ ತನ್ನ ಸರದಿ ಬಂದಾಗ ಗರುಡನಿಗೆ ಆಹಾರವಾಗಲು ನಿರಾಕರಿಸಿದ. ಕಾಳಿಂದೀ ಮಡುವಿನ ಹತ್ತಿರ ಗರುಡ ಸುಳಿದರೆ ಅವನ ತಲೆ ಒಡೆಯುವುದೆಂದು ಸೌಭರಿ ಮುನಿಯಶಾಪ ವಿದ್ದುದನ್ನು ಅರಿತ ಕಾಲಿಯ ತಲೆತಪ್ಪಿಸಿ ಕೊಂಡು ಆ ಮಡು ಸೇರಿದ. ಸರ್ಪನ ವಿಷಜ್ವಾಲೆಯಿಂದ ಆ ಮಡುವೆಲ್ಲ ವಿಷಮಯವಾಗಿ ಅಲ್ಲಿನ ಜಲಚರಗಳೆಲ್ಲ ಸಾಯತೊಡಗಿದವು. ಇದನ್ನು ತಿಳಿದ ಬಲರಾಮಕೃಷ್ಣರು ಅಲ್ಲಿಗೆ ಹೋದರು. ಕೃಷ್ಣ ಮಡುವಿನಲ್ಲಿ ಆಡುತ್ತಿದ್ದ ಸರ್ಪದ ಬಾಲವನ್ನು ಹಿಡಿದು ಅದರ ಹೆಡೆಯನ್ನು ತುಳಿಯತೊಡಗಿದ. ಅಷ್ಟರಲ್ಲಿ ಕಾಲಿಯನ ಪತ್ನಿಯರಾದ ನಾಗಕನ್ಯೆಯರು ಕೃಷ್ಣನಲ್ಲಿಗೆ ಬಂದು ಪತಿಭಿಕ್ಷೆ ಬೇಡಲಾಗಿ ಕೃಷ್ಣ ಅವರಿಗೆ ಅಭಯವಿತ್ತು ಕಾಲಿಯನಿಗಿದ್ದ ಗರುಡ ಭಯ ತಪ್ಪಿಸಿ ಅವನನ್ನು ಪಾತಾಳಕ್ಕೆ ಕಳುಹಿಸಿದ. (ಬಿ.ಎಚ್.ಎಸ್.)

ಕಾಲಿಯ ಮರ್ದನ ಕೃಷ್ಣ : ದಕ್ಷಿಣ ಭಾರತದ ಒಂದು ಕಂಚಿನ ಶಿಲ್ಪ

**ಕಾಲು, ಬಾಯಿ ಜ್ವರ :** ದನ, ಎಮ್ಮೆ, ಕುರಿ, ಆಡು, ಹಂದಿ ಮುಂತಾದ ಜಾನುವಾರುಗಳಿಗೆ ಬರುವ ಜ್ವರದೋಪಾದಿಯ ತೀವ್ರ ಬೇನೆ. ಬಾಯಿಯಲ್ಲಿ, ಪಾದದಲ್ಲಿ ಕೆಚ್ಚಲಿನ ಚರ್ಮದ ಮೇಲೆ, ಮೊಲೆತೊಟ್ಟಿನ ಮೇಲೆ ಗುಳ್ಳೆಗಳು ಸಿಡಿಯುವುದು ಈ ರೋಗದ ಲಕ್ಷಣ. ಪ್ರಪಂಚದ ಎಲ್ಲ ದೇಶಗಳಲ್ಲೂ ಈ ಬೇನೆ ಕಾಣಬರುತ್ತದೆ. ಆಫ್ರಿಕದಲ್ಲಿ, ಏಷ್ಯದ ಎಲ್ಲ ಭಾಗಗಳಲ್ಲಿ ಅದರಲ್ಲೂ ಭಾರತದಲ್ಲಿ ಇದು ಯಾವಾಗಲೂ ಇರುತ್ತದೆ. ಸಾಕಿದ ಪ್ರಾಣಿಗಳಿಗೂ ಸಸ್ಯಹಾರಿಗಳಾದ ಜಿಂಕೆ, ಸಾರಂಗ, ಕಾಡೆಮ್ಮೆ ಮುಂತಾದ ಪ್ರಾಣಿಗಳಿಗೂ ಇದು ಬರುತ್ತದೆ. ವಯಸ್ಕ ಪ್ರಾಣಿಗಳು ಈ ಬೇನೆಗೆ ತುರ್ತಾಗಿ ಚೇತರಿಸಿಕೊಳ್ಳಬಲ್ಲವು. ವಯಸ್ಸಿಗೆ ಬರದ ಪ್ರಾಣಿಗಳಲ್ಲಿ ಶೇ. 85ರಷ್ಟು ಸಾಯುತ್ತವೆ. ಸಣ್ಣಕರುಗಳು, ಆಡು, ಹಂದಿ, ಕುರಿಮರಿಗಳು–ಇವುಗಳಲ್ಲಿ ಈ ರೋಗ ಉಲ್ಬಣರೂಪದಲ್ಲಿ ತೋರಿಬರುತ್ತದೆ. ಒಂದು ರೀತಿಯ ವೈರಸ್‌ಗಳು (ಅತಿಸೂಕ್ಷ್ಮಾಣು ಜೀವಿಗಳು) ಈ ರೋಗಕ್ಕೆ ಕಾರಕ. ಕ್ರಿಮಿಯ ಗಾತ್ರ ಒಂದು ಇಂಚಿನ 25ದಶಲಕ್ಷದಲ್ಲಿ ಒಂದು ಭಾಗ. ಇದರಲ್ಲಿ 7 ಜಾತಿಗಳಿವೆ. ಪ್ರತಿ ಜಾತಿಯಲ್ಲೂ ಹಲವಾರು ಉಪಜಾತಿಗಳಿವೆ. O, A, C ಎಂಬ ಹೆಸರಿನ ವೈರಸುಗಳು ಪ್ರಪಂಚದ ಎಲ್ಲ ಕಡೆಗಳಲ್ಲೂ ಇವೆ. ಏಷ್ಯ, ಸ್ಯಾಟ್/1, ಸ್ಯಾಟ್/2 ಮತ್ತು ಸ್ಯಾಟ್/ 3 ಎಂಬ ವೈರಸುಗಳು ಏಷ್ಯ ಮತ್ತು ಆಫ್ರಿಕದಲ್ಲಿ ಮಾತ್ರ ಕಾಣಬರುತ್ತವೆ. ಇವೆಲ್ಲ ವೈರಸುಗಳಿಂದಲೂ ಬರುವ ರೋಗ ಚಿಹ್ನೆ ಒಂದೇ. ಆದರೆ ಸೋಂಕು ತಡೆಕ್ರಮಗಳು ಒಂದೊಂದಕ್ಕೂ ಬೇರೆ. ಒಂದು ಜಾತಿಯ ವೈರಸಿನಿಂದ ಜ್ವರ ಬಂದಮೇಲೆ ಮತ್ತೊಂದರಿಂದ ಜ್ವರ ಬರುವುದಿಲ್ಲ ಎಂದೇನೂ ಇಲ್ಲ.

ಬಾಯಿ, ಕಾಲುಗಳ ಮೇಲೆ ತೋರಿರುವ ಗುಳ್ಳೆಗಳಲ್ಲಿ ರೋಗಕಾರಕ ವೈರಸ್ ಇರುತ್ತದೆ. ಗುಳ್ಳೆಗಳು ಒಡೆದು ಕೀವು ಹೊರಕ್ಕೆ ಬಂದಾಗ ಅದರಲ್ಲಿರುವ ವೈರಸ್‌ಗಳು ಪ್ರಸರಣಗೊಳ್ಳುತ್ತವೆ. ವ್ಯಾಧಿಗ್ರಸ್ತ ಪ್ರಾಣಿಗಳು ಗುಳ್ಳೆಯ ಕಾರಣದಿಂದ ಹೆಚ್ಚು ಜೊಲ್ಲು ಸುರಿಸುತ್ತವೆ. ಜೊಲ್ಲಿನಲ್ಲೂ ವೈರಸ್ ಇರುತ್ತದೆ. ರೋಗ ಹರಡುವುದಕ್ಕೆ ಜೊಲ್ಲು ಮುಖ್ಯ ಕಾರಣ. ಹಾಗೆಯೇ ಮೂತ್ರ, ಸಗಣಿ, ಕಾಲಿನಿಂದ ಸೋರಿದ ಕೀವು ಸಹ ರೋಗ ಹರಡುವುದಕ್ಕೆ ಕಾರಕಗಳು. ರೋಗ ತಗುಲಿದ ಪ್ರಾಣಿಯೊಡನೆ ಸಂಪರ್ಕಗೊಂಡ ವಸ್ತುಗಳ ಮೂಲಕ ವೈರಸ್ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿ ರೋಗ ಹರಡುತ್ತದೆ. ಆಹಾರ ಪಾತ್ರೆಗಳು, ನೀರಿನ ಖಾನೆ, ಗೋದಣಿಗೆ, ಕೊಯ್ದು ಒಣಗಿಸಿದ ಹುಲ್ಲು, ಹಾಲು ಮತ್ತು ಹಾಲಿನ ಪದಾರ್ಥಗಳು, ಚರ್ಮ, ಕೊಟ್ಟಿಗೆ ಗೊಬ್ಬರ, ದೊಡ್ಡಿ, ದನಕೂಡುವ ರೈಲುಗಾಡಿ, ದನಕಾಯುವವರು ಮತ್ತು ಅವರ ಬಟ್ಟೆಗಳು–ಇವೆಲ್ಲವೂ ರೋಗಾಣುಗಳು ಹರಡಲು ಸಹಾಯಕಗಳು. ರೋಗಬಂದ ಪ್ರಾಣಿಗಳನ್ನು ಚಿಕಿತ್ಸೆಮಾಡುವ ಜನ ಸಾಕಷ್ಟು ಜಾಗರೂಕತೆ ವಹಿಸಿ, ಕೈಕಾಲುಗಳನ್ನು ಸೋಂಕು ಕಳೆಯುವಂತೆ ಶುದ್ಧಮಾಡಿಕೊಳ್ಳದಿದ್ದಲ್ಲಿ ಅವರೇ ರೋಗ ಹರಡುವುದಕ್ಕೆ ಕಾರಣರಾಗಬಹುದು. ಪಿತ್ತಕೋಶ ಮತ್ತು ಮೂತ್ರಕೋಶದಲ್ಲಿರಬಹುದಾದ ಈ ವೈರಸ್ ಶೀತಳ ಪರಿಸ್ಥಿತಿಯಲ್ಲೂ 4–5 ತಿಂಗಳ ಕಾಲ ಬದುಕಬಲ್ಲದು. ವೈರಸ್ ಸೋಂಕು ಆದಮೇಲೆ ರೋಗದ ಚಿಹ್ನೆ ಕಾಣಲು 1–15 ದಿವಸಗಳ ಅವಧಿ ಬೇಕು. ಸಾಧಾರಣವಾಗಿ 2–6 ದಿವಸಗಳ ಅವಧಿಯಲ್ಲಿ ರೋಗ ಕಾಣಿಸಿಕೊಳ್ಳತ್ತದೆ. ರೋಗದ ಸೋಂಕು ಆಹಾರದಮೂಲಕ ಉಚ್ಛ್ವಾಸ ಮತ್ತು ಗಾಯದ ಮೂಲಕ ಪ್ರಾಣಿ ದೇಹವನ್ನು ಸೇರುತ್ತದೆ.

**ಚಿಹ್ನೆಗಳು ಮತ್ತು ಗುಳ್ಳೆಗಳು:** ಸೋಂಕು ತಗುಲಿದ ಪ್ರಾಣಿಗೆ ಮಂಕು ಬಡಿಯುತ್ತದೆ. ಅದು ಆಹಾರವನ್ನು ನಿರಾಕರಿಸುತ್ತದೆ. $104^0$-$105^0$ ಫ್ಯಾ. ಜ್ವರ ಬರುತ್ತದೆ. ಕಾಲಿನಲ್ಲೂ ಬಾಯಿಯಲ್ಲೂ ಗುಳ್ಳೆಗಳು ಕಾಣಿಸಿಕೊಳ್ಳುವವರೆಗೂ ಅದು ಇಳಿಯುವುದಿಲ್ಲ. ಜೊಲ್ಲುವೃದ್ಧಿಯಾಗಿ ಬಾಯಿಯಿಂದ ದಾರದಂತೆ ಇಳಿಬೀಳುತ್ತದೆ. ಪ್ರಾಣಿ ನಾಲಗೆಯನ್ನು ಬಾಯಿಯಿಂದ ಹೊರಚಾಚುತ್ತದೆ. ಗುಳ್ಳೆಗಳು ಹೊಪ್ಪಳೆಯಾಗಿ ಒಡೆದು ಗಾಯಗಳಾಗುತ್ತವೆ. ಹುಣ್ಣುಗಳು ಕೆನ್ನೆಯ ಒಳಭಾಗದಲ್ಲಿ ನಾಲಗೆ ಮೇಲೆ ವಸಡಿನಲ್ಲಿ ಉಂಟುಗಾತ್ತವೆ. ಒಡೆದ ಗಾಯದಿಂದ ಹುಲುಹಳದಿ ಬಣ್ಣದ ಕೀವು ಹೊರಬರುತ್ತದೆ. ಒಂದೆರಡು ವಾರಗಳಲ್ಲಿ ಹುಣ್ಣು ವಾಸಿಯಾಗುತ್ತದೆ. ಗುಳ್ಳೆಗಳ ನೋವಿನಿಂದ ಪ್ರಾಣಿಗಳು ಗಟ್ಟಿಯಾದ ಆಹಾರವನ್ನು ತಿನ್ನಲಾರವು. ದ್ರವ ಅಥವಾ ಮೆದು ಆಹಾರವನ್ನು ತೆಗೆದುಕೊಳ್ಳುವುದು ಸಾಧ್ಯ. ಬಾಯಿಯಲ್ಲಿ ಗುಳ್ಳೆಗಳು ಮೊದಲು ಕಾಣ್ಣಿಸಿಕೊಳ್ಳುತ್ತವೆ. ಅದಾದ 4–5 ದಿವಸಗಳ ಮೇಲೆ ಕಾಲಿನಲ್ಲಿ ಗುಳ್ಳೆಗಳು ಏಳುತ್ತವೆ. ಕಾಲಿನಲ್ಲಿ ಹೊಪ್ಪಳೆಗಳು ಉಗುರಿನ ಮಧ್ಯೆ ಗೊರಸು ಚರ್ಮ ಸಂಧಿಸುವೆಡೆ ತಲೆದೋರುವುವು. ದನ ಕುಂಟುವುದಕ್ಕೆ ಪ್ರಾರಂಭಿಸುತ್ತದೆ. ಕಾಲನ್ನು ಆಗಾಗ ಝಾಡಿಸುತ್ತದೆ.

ಕುರಿ, ಹಂದಿಗಳಲ್ಲಿ ಬಾಯಿಗಿಂತ, ಕಾಲಿನ ಮೇಲಿನ ಗುಳ್ಳೆಗಳೇ ಸಾಮಾನ್ಯ. ಹಸು, ಹೆಣ್ಣುಕುರಿ, ಹೆಣ್ಣುಹಂದಿ ಮುಂತಾದ ಕರೆಯುವ ಪ್ರಾಣಿಗಳಲ್ಲಿ ಗುಳ್ಳೆಗಳು ಮೊಲೆತೊಟ್ಟಿನ ಕೆಚ್ಚಲು ಚರ್ಮದ ಮೇಲೆ ಕಾಣಿಸಿಕೊಳ್ಳುತ್ತವೆ. ಗುಳ್ಳೆಗಳು ಒಣಗಿದರೂ ರೋಗ ಪೂರ್ಣ ಶಮನವಾಗಲು 2–3 ವಾರಗಳೇ ಬೇಕು. ಮಂದೆಗಳಲ್ಲಿ ಅವುಗಳ ಗಾತ್ರ ದನಗಳ ಸಂಪರ್ಕಕ್ಕನುಗುಣವಾಗಿ 1–1½ ತಿಂಗಳ ಕಾಲ ರೋಗ ಉಳಿಯುವುದು ಸಾಧ್ಯ.

ವಯಸ್ಕ ಪ್ರಾಣಿಗಳಲ್ಲಿ ಈ ರೋಗದಿಂದ ಸಾವು ಶೇ.1–5ರಷ್ಟು ಕಡಿಮೆಯಾದರೂ ಕುಂಟು, ಹಾಲು ಕ್ಷೀಣಿಸುವುದು, ಚರ್ಮ ಒರಟಾಗುವುದು, ಮಂಕು ಕವಿಯುವಿಕೆ, ಗೊರಸು ಮೆತವಾಗುವುದು ಮುಂತಾದ ತೊಂದರೆಗಳಿಂದ ನಷ್ಟ ಅನಿವಾರ್ಯ.

ಒಂದು ಜಾತಿಯ ಕಾಲು ಬಾಯಿ ಜ್ವರದಿಂದ ದನ ಉಳಿದರೆ ಮತ್ತೊಂದು ಜಾತಿಯ ಕಾಲು, ಬಾಯಿ ಸೋಂಕಿನೆದುರು ನಿರೋಧಶಕ್ತಿ ಏನೂ ಇರಲಾರದು. ವಿವಿಧ ಜಾತಿಯ ಕಾಲು, ಬಾಯಿ ಜ್ವರದ ಸೋಂಕು ನಿವಾರಣೆಗೆ ಲಸಿಕೆಗಳು ಇವೆ. ಆದರೆ ಇವುಗಳ ಸೋಂಕು ತಡೆಯುವ ಶಕ್ತಿ ಕೇವಲ ಆರೇ ತಿಂಗಳು. ಅಮೆರಿಕ, ಬ್ರಿಟನ್, ಕೆನಡ, ನಾರ್ವೆ, ಐರ್ಲೆಂಡ್ ಮುಂತಾದ ದೇಶಗಳಲ್ಲಿ ರೋಗ ಸ್ಥಳೀಯವಾಗಿರುವುದು. ಅಂಥ ಸಂದರ್ಭಗಳಲ್ಲಿ ಮಾಲೀಕರಿಗೆ ಪರಿಹಾರ ಕೊಟ್ಟು ಸೋಂಕು ತಗುಲಿದ ದನಗಳನ್ನು ಕೊಂದು ರೋಗ ತಡೆಗಟ್ಟುವುದು ಸಾಧ್ಯ. ಮುಖ್ಯವಾಗಿ ನೇರ ಅಥವಾ ಪರೋಕ್ಷ ಸಂಪರ್ಕ ತಪ್ಪಿಸಿ ರೋಗ ಹರಡುವುದನ್ನು ತಡೆಯುತ್ತಾರೆ. ಬ್ರಿಟನ್ನಿನಲ್ಲಿ ಸಾಂಕ್ರಾಮಿಕ ರೋಗಗಳ ಕಾನೂನು ಪಟ್ಟಿಯಲ್ಲಿ ಕಾಲು, ಬಾಯಿ ಜ್ವರ ಸೇರಿದೆ. ಅಮೆರಿಕದಲ್ಲಿ ಈ ಜ್ವರದ ಉಪದ್ರವವನ್ನು ಪೂರ್ಣವಾಗಿ ತೊಡೆದು ಹಾಕಿರುತ್ತಾರೆ. ರೋಗವಿರುವ ದೇಶಗಳಿಂದ ದನ, ಕುರಿ, ಹಂದಿ ಇವುಗಳ ಆಮದು ನಿಷಿದ್ಧ. ಕಾಲು ಬಾಯಿ ಜ್ವರ ವ್ಯಾಧಿ ಚಿಕಿತ್ಸೆಯಲ್ಲಿ ಸ್ವಲ್ಪ ಮತ್ತು ಜೀವಿ ವಿರೋಧನ ಔಷಧಿಗಳು ಉಪಸೋಂಕುಗಳಿಂದ ಕ್ಲಿಷ್ಟವಾಗುವುದನ್ನು ತಪ್ಪಿಸಲಷ್ಟೇ ಸಹಕಾರಿ. ಬಾಯಿ

ತೊಳೆಯುವ ಪೂತಿನಾಶಕ ದ್ರವಗಳಿಂದ, ಇಲ್ಲವೇ ಕಾಲಿಗೆ ಕಟ್ಟುವಂಥ ಔಷಧಿಗಳಿಂದ ಜ್ವರಕ್ಕೆ ಚಿಕಿತ್ಸೆಮಾಡಬಹುದು.

ದನ, ಹಂದಿ ಮುಂತಾದುವುಗಳಿಗೆ ವಿಸಿಕ್ಯುಲರ್ ಸ್ಟೊಮೆಟಿಸ್ ಎಂಬ ಬಾಯಿ ಹುಣ್ಣು ಬರುತ್ತದೆ. ಇದರ ಲಕ್ಷಣಗಳು ಕಾಲು, ಬಾಯಿಜ್ವರದ ಹಾಗೇ ಇರುತ್ತವೆ. ಕುದುರೆಗಳಿಗೂ ಈ ರೋಗ ಬರುತ್ತದೆ. ಬಾಯಿಯಲ್ಲಿ ಮಾತ್ರ ಗುಳ್ಳೆಗಳು ಕಾಣಿಸುತ್ತವೆ. ಆದರೆ ರೋಗ ಅಷ್ಟು ಹರಡುವುದಿಲ್ಲ. ದೊಡ್ಡರೋಗ ಬಂದಾಗ ದನಗಳಲ್ಲಿ ಬಾಯಿಯಲ್ಲಿ ಕಾಣುವ ಗುಳ್ಳೆಗಳೂ ಸ್ವಲ್ಪ ಮಟ್ಟಿಗೆ ಕಾಲು, ಬಾಯಿ ಜ್ವರದ ಗುಳ್ಳೆಗಳನ್ನು ಹೋಲುತ್ತವೆ. ಆದರೆ ದೊಡ್ಡರೋಗದ ಗುಳ್ಳೆಗಳು ಸಣ್ಣಗಿರುತ್ತವೆ. ಒತ್ತಾಗಿರುವುದಿಲ್ಲ. ಜೊಲ್ಲು ಉದ್ದವಾಗಿ ದಾರದೋಪಾದಿಯಲ್ಲಿರುವುದಿಲ್ಲ. ಉಗ್ರ ನೆಗಡಿ ಜ್ವರದ ಕೆಲಹಂತಗಳಲ್ಲಿ ಕಾಲು ಬಾಯಿ ಜ್ವರದ ಲಕ್ಷಣ ಕಾಣಬರುತ್ತದೆ. ಒಂದನ್ನು ಇನ್ನೊಂದು ಎಂದು ತಪ್ಪು ತಿಳಿದುಕೊಳ್ಳುವ ಸಂಭವ ಉಂಟು. ಉಗ್ರ ನೆಗಡಿಜ್ವರ ಅಲ್ಲಲ್ಲಿ ಕಾಣಿಸಿಕೊಳ್ಳುತ್ತದೆ. ಮಂದೆಯಲ್ಲಿ ಹರಡುವುದಿಲ್ಲ. ಕಣ್ಣು ಮತ್ತು ಮೂಗಿನಿಂದ ನೀರು ಸುರಿಯುತ್ತದೆ. ಕಾಲು, ಬಾಯಿ ಜ್ವರದಲ್ಲಿ ಹೀಗಾಗುವುದಿಲ್ಲ. (ಎಸ್.ಎಂ.ಒ.)

**ಕಾಲೇಜು :** ಕೊಲೀಜಿಯಂ ಎಂಬುದರಿಂದ ಬಂದಿರುವ ಪದ. ರೋಮನ್ ನ್ಯಾಯಶಾಸ್ತ್ರದ ಪ್ರಕಾರ ಒಂದೇ ರೀತಿಯ ಕರ್ತವ್ಯಗಳ ನಿರ್ವಹಣೆಗಾಗಿ ಸ್ಥಾಪಿತವಾಗಿರುವ ಸಹೋದ್ಯೋಗಿಗಳ ಸಂಸ್ಥೆಗೆ ಕೊಲೀಜಿಯಂ ಎಂದು ಹೆಸರು. ಈಗ ಇಂಥ ಸಂಸ್ಥೆಯನ್ನು ಕಾರ್ಪೊರೇಷನ್ ಎನ್ನುತ್ತೇವೆ. ಮಧ್ಯ ಯುಗಗಳಲ್ಲಿ ವಾಣಿಜ್ಯ ವ್ಯವಹಾರಗಳಲ್ಲಿ ಯುರೋಪಿನಲ್ಲಿ ಅಸ್ತಿತ್ವದಲ್ಲಿದ್ದ ಸಂಘಟಿತ ಸಂಸ್ಥೆ; ರಾಜ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಪರಿಗಣಿತವಾಗುವ ಚುನಾವಣೆಯ ಒಂದು ಸೀಮಿತ ಕ್ಷೇತ್ರ (ಎಲೆಕ್ಟೋರಲ್ ಕಾಲೇಜು); ಕ್ರೈಸ್ತ ಮತಕ್ಕೆ ಸಂಬಂಧಿಸಿದ ಒಂದು ಮಂಡಲಿ; ಉನ್ನತ ಬೋಧನೆಯಲ್ಲಿ ನಿರತವಾಗಿರುವ ಕ್ರೈಸ್ತಮತಗಳ ಸಂಘ-ಹೀಗೆ ಈ ಪದ ಅನೇಕಾರ್ಥದಲ್ಲಿ ಬಳಕೆಯಲ್ಲಿದೆ. ಈ ಕೊನೆಯ ಅರ್ಥವನ್ನೇ ಅವಲಂಬಿಸಿ ಈಚೆಗೆ ಈ ಪದವನ್ನು ಉನ್ನತ ಶಿಕ್ಷಣಕ್ಕಾಗಿ ಸ್ಥಾಪಿಸಿರುವ ವಿದ್ಯಾ ಸಂಸ್ಥೆಗಳಿಗೆ ಬಳಸಲಾಗುತ್ತದೆ. ಸೆಕೆಂಡರಿ ಹಂತಕ್ಕೂ ಮೇಲ್ಪಟ್ಟ ಸಾಂಸ್ಕೃತಿಕ ಶಿಕ್ಷಣಕ್ಕಾಗಿ ಸ್ಥಾಪಿಸಿರುವ ವಿದ್ಯಾ ಸಂಸ್ಥೆಗಳಿಗೆ ಈ ಹೆಸರನ್ನು ಬಳಸುವುದು ಸಾಮಾನ್ಯವಾಗಿದ್ದರೂ ಇತರ ಶಿಕ್ಷಣ ಸಂಸ್ಥೆಗಳಿಗೂ ಇದನ್ನು ಬಳಸುತ್ತಿರುವುದು ಕಂಡುಬರುತ್ತದೆ. ಇಂಗ್ಲೆಂಡಿನ ಈಟನ್ ಮತ್ತು ವಿಂಚೆಸ್ಟರ್ ನಗರಗಳಲ್ಲಿರುವ ಸೆಕೆಂಡರಿ ಹಂತದ ಶಾಲೆಗಳನ್ನು (ಪಬ್ಲಿಕ್ ಸ್ಕೂಲ್ಸ್) ಈಟನ್ ಕಾಲೇಜು, ವಿಂಚೆಸ್ಟರ್ ಕಾಲೇಜು ಎಂದೇ ಕರೆಯಲಾಗುತ್ತದೆ. ದೇವತಾಶಾಸ್ತ್ರ, ಅಧ್ಯಾಪಕರ ವೃತ್ತಿಶಿಕ್ಷಣಕ್ಕಾಗಿ ರೂಪಿಸಿರುವ ಶಿಕ್ಷಣ ಸಂಸ್ಥೆಗಳಿಗೂ ಇದೇ ಹೆಸರಿದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಸೆಕೆಂಡರಿ ಶಿಕ್ಷಣವನ್ನು ನೀಡಿ ಪದವಿಯನ್ನು ಕೊಡುವ ಶಿಕ್ಷಣ ಸಂಸ್ಥೆಗಳಿಗೂ ವಿಶ್ವವಿದ್ಯಾಲಯದ ಪದವಿ ಮಟ್ಟದ ಶಿಕ್ಷಣವೀಯುವ ಒಂದು ಘಟಕಕ್ಕೂ ಎರಡು ವರ್ಷದ ಶಿಕ್ಷಣದ, ಆದರೆ ಪದವಿಪರೀಕ್ಷೆಗೆ ಸಿದ್ಧಪಡಿಸುವ ಶಿಕ್ಷಣ ಸಂಸ್ಥೆಗೂ ಜೂನಿಯರ್ ಕಾಲೇಜುಗಳೆಂಬ ಹೆಸರು ರೂಢಿಯಲ್ಲಿದೆ.

ಭಾರತದಲ್ಲಿ ಸಾಮಾನ್ಯವಾಗಿ ಕಾಲೇಜು ಎಂಬ ಹೆಸರನ್ನು ಪ್ರಥಮ ಪದವಿಮಟ್ಟದ ಶಿಕ್ಷಣವನ್ನು ನೀಡುವ ವಿಶ್ವವಿದ್ಯಾಲಯ ಘಟಕ (ಕಾನ್ಸ್ಟಿಟ್ಯೂಯೆಂಟ್ ಕಾಲೇಜು) ಅಥವಾ ಅಂಗೀಕೃತವಾಗಿರುವ (ಅಫಿಲಿಯೇಟೆಡ್) ಉನ್ನತ ಕಲೆ ಅಥವಾ ವಿಜ್ಞಾನ ಶಾಸ್ತ್ರದ 3-4 ವರ್ಷಕಾಲದ ಶಿಕ್ಷಣಕ್ಕಾಗಿ ಏರ್ಪಟ್ಟಿರುವ ವಿದ್ಯಾಲಯಗಳಿಗೆ ಬಳಸುವುದುಂಟು. ಜೊತೆಗೆ ಸೆಕೆಂಡರಿ ಹಂತದ ಅನಂತರದ ಎರಡು ವರ್ಷದ ಉನ್ನತ ಶಿಕ್ಷಣಕ್ಕಾಗಿ ಏರ್ಪಟ್ಟಿರುವ ಜೂನಿಯರ್ ಕಾಲೇಜುಗಳಿಗೂ ಅಧ್ಯಾಪಕರ ಶಿಕ್ಷಣ, ವ್ಯವಸಾಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ವಾಣಿಜ್ಯ ಶಿಕ್ಷಣ-ಇತ್ಯಾದಿ ವೃತ್ತಿಶಿಕ್ಷಣದ ಸಂಸ್ಥೆಗಳಿಗೂ ಬಳಸುವುದಂಟು. ಸ್ನಾತಕೋತ್ತರ ಶಿಕ್ಷಣವೀಯುವ ಸಂಸ್ಥೆಗಳಿಗೂ ಈ ಹೆಸರಿನ ಬಳಕೆಯುಂಟು. ಆದರೆ ಸಾಮಾನ್ಯವಾಗಿ ಪದವಿಯನ್ನು ನೀಡುವ ಅಧಿಕಾರ ಅವಕ್ಕಿರುವುದಿಲ್ಲ. ಈಚೆಗೆ ದೇಶದ ಕೆಲವು ಉತ್ತಮ ರೀತಿಯ ಕಾಲೇಜುಗಳಿಗೆ ಪ್ರಾಯೋಗಿಕವಾಗಿ ಅ ಅಧಿಕಾರವನ್ನು ಕೊಡಬಹುದೆಂಬ ಅಭಿಪ್ರಾಯ ಬೆಳೆಯುತ್ತಿದೆ. (ಎಸ್.ಬಿ.ಕೆ.)

**ಕಾಲೇಜು ಶಿಕ್ಷಣ :** ಉನ್ನತ ಪ್ರೌಢಶಾಲೆಯ (ಹೈಯರ್ ಸೆಕೆಂಡರಿ ಸ್ಕೂಲ್) ಅನಂತರದ ಶಿಕ್ಷಣ; ಸಾಮಾನ್ಯವಾಗಿ ಸಾಂಸ್ಕೃತಿಕ ಶಿಕ್ಷಣಕ್ಕೆ ಮಾತ್ರ ಈ ಹೆಸರನ್ನು ಬಳಸುವುದು ಸಂಪ್ರದಾಯವಾಗಿದ್ದರೂ ಈಚೆಗೆ ಆ ಮಟ್ಟದ ವೃತ್ತಿ ಮತ್ತು ತಾಂತ್ರಿಕ ಶಿಕ್ಷಣಕ್ಕೂ ಬಳಸಲಾಗುತ್ತಿದೆ; ಸ್ನಾತಕೋತ್ತರ ಶಿಕ್ಷಣಕ್ಕೂ ಇದೇ ಹೆಸರಿದೆ. ಉನ್ನತ ಶಿಕ್ಷಣದ ಅಥವಾ ವಿಶ್ವವಿದ್ಯಾಲಯದ ಶಿಕ್ಷಣದ ಪ್ರಥಮ ಪದವಿಯ ಶಿಕ್ಷಣ ಇದರ ಮೊದಲ ಹಂತ; ಇದರ ಎರಡನೆಯ ಹಂತವೇ ಸ್ನಾತಕೋತ್ತರ ಶಿಕ್ಷಣ (ಡಾಕ್ಟೊರೇಟ್ ಮತ್ತು ಸಂಶೋಧನೆಯ ಭಾಗವನ್ನು ಒಳಗೊಂಡಂತೆ); ವಿಶ್ವವಿದ್ಯಾಲಯದ ಅಂಗಸಂಸ್ಥೆಯಲ್ಲಿ ವ್ಯವಸ್ಥೆಗೊಳಿಸಿರುವ ಯಾವುದೇ ರೀತಿಯ ಶಿಕ್ಷಣಕ್ಕೂ ಇದನ್ನು ಬಳಸುವುದೂ ಉಂಟು; ಸ್ವಯಮಾಧಿಕಾರ ಹೊಂದಿರುವ ವಿಶ್ವವಿದ್ಯಾಲಯದ ಯಾವುದೇ ಸಂಸ್ಥೆಯೊಂದು ವ್ಯವಸ್ಥೆಗೊಳಿಸಿರುವ ಶಿಕ್ಷಣವಿದು.

ಸಾಮಾನ್ಯವಾಗಿ ಕಾಲೇಜು ಶಿಕ್ಷಣ 18ನೆಯ ವರ್ಷದಿಂದ ಆರಂಭವಾಗುತ್ತದೆ. ಅದುವರೆಗೆ 5 ವರ್ಷ ವಯಸ್ಸಿನಿಂದ 11-12 ವರ್ಷಗಳ ಪೂರ್ವಭಾವಿ ಶಿಕ್ಷಣ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದೊರಕಿರುತ್ತದೆ. ಪ್ರಾಚೀನ ಭಾರತದಲ್ಲಿ 16-18ನೆಯ ವಯಸ್ಸಿನ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಶಿಕ್ಷಣವೀಯುತ್ತಿದ್ದ ಉನ್ನತ ಶಿಕ್ಷಣ ಸಂಸ್ಥೆಗಳೆಲ್ಲ ಕಾಲೇಜು ಮಟ್ಟದ ಶಿಕ್ಷಣವೀಯುತ್ತಿದ್ದುವೆಂದು ಭಾವಿಸುವುದುಂಟು. ಆ ಶಿಕ್ಷಣ 6-8 ವರ್ಷಗಳ ಕಾಲಾವಧಿಯ ವರೆಗೆ ನಡೆಯುತ್ತಿತ್ತು. ಇಂದು ವಿಶ್ವವಿದ್ಯಾಲಯದ ಇಡೀ ಶಿಕ್ಷಣಕ್ಕೆ ಈ ಹೆಸರನ್ನು ಬಳಸುವಾಗ ಈ ಕಾಲವಧಿ ಒಪ್ಪುವಂತೆಯೇ ಇರುವುದು ಸ್ಪಷ್ಟವಾಗುತ್ತದೆ.

**ಕಾಲೇಜು ಶಿಕ್ಷಣದ ಉದ್ದೇಶ:** ವಿಶ್ವವಿದ್ಯಾಲಯದ ಅಥವಾ ಉನ್ನತ ಶಿಕ್ಷಣದ ಉದ್ದೇಶವೇ ಕಾಲೇಜು ಶಿಕ್ಷಣದ ಉದ್ದೇಶವೂ ಆಗಿದೆ. ಜ್ಞಾನ ಸಂಸ್ಕೃತಿಗಳ ಪರಿಚಯ, ವಿವೇಚನೆ ಮತ್ತು ಸಂವರ್ಧನ ಇವೆಲ್ಲವನ್ನೂ ಅದು ಒಳಗೊಂಡಿದೆ. ಈ ಮೂರು ಉದ್ದೇಶಗಳಲ್ಲಿ ಕೇವಲ ಪ್ರಥಮ ಪದವಿಗೇ ಮೀಸಲಾಗಿರುವ ಕಾಲೇಜು ಶಿಕ್ಷಣದಲ್ಲಿ ಕೊನೆಯೆರಡು ಉದ್ದೇಶಗಳು ಪ್ರಧಾನವೆನಿಸುತ್ತವೆ. ಕಾಲೇಜಿಗೆ ಬರುವ ವೇಳೆಗೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿವೇಚಿಸುವ ಶಕ್ತಿ ಪಡೆದಿರುವುದರಿಂದ ಅಲ್ಲಿ ಬೋಧಿಸಿದ ಅಂಶಗಳನ್ನು ಕುರಿತು ಸ್ವಂತ ಅಭಿಪ್ರಾಯವನ್ನು ರೂಪಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ವಿಷಯವನ್ನು ಗ್ರಹಿಸುವುದು ಸಾಧ್ಯ. ಸ್ನಾತಕೋತ್ತರ ಶಿಕ್ಷಣಕ್ಕೆ ಇದು ಅಗತ್ಯವೆನಿಸುವ ಪೂರ್ವ ಸಿದ್ಧತೆ. ಇದರ ಆಧಾರದ ಮೇಲೆ ಜ್ಞಾನ ಸಂಸ್ಕೃತಿಗಳ ಸಂವರ್ಧನಕ್ಕೆ ನೆರವಾಗುವಂತೆ ಅಲ್ಲಿ ಸಂಶೋಧನೆ ನಡೆಸುವುದು ಸಾಧ್ಯವಾಗುತ್ತದೆ.

**ಪ್ರವೇಶ ನಿಯಮಗಳು:** ಎಲ್ಲ ದೇಶಗಳಲ್ಲೂ ಕಾಲೇಜು ಶಿಕ್ಷಣದ ಪ್ರವೇಶನಿಯಮಗಳು ಏಕರೀತಿಯಾಗಿಲ್ಲ. ಒಂದು ದೇಶದ ಎಲ್ಲ ಕಾಲೇಜುಗಳೂ ಒಂದೇ ರೀತಿಯ ನಿಯಮಗಳನ್ನು ರೂಪಿಸಿಲ್ಲ. ಅಮೆರಿಕದ ಸಂಯುಕ್ತ ಸಂಸ್ಥಾನದ ಬೇರೆ ಬೇರೆ ರಾಜ್ಯಗಳ ಬೇರೆ ಬೇರೆ ಕಾಲೇಜುಗಳಲ್ಲಿ ಈ ನಿಯಮಗಳು ಹೆಚ್ಚು ವೈವಿಧ್ಯವನ್ನು ತೋರುತ್ತವೆ. ಯುರೋಪು, ಇಂಗ್ಲೆಂಡು ಮತ್ತು ಭಾರತದ ಕಾಲೇಜುಗಳಲ್ಲೂ ವ್ಯತ್ಯಾಸಗಳಿದ್ದರೂ ಅಷ್ಟು ವೈಪರೀತ್ಯ ಕಂಡುಬರುವುದಿಲ್ಲ. ಸಾಮಾನ್ಯವಾಗಿ ಕಾಲೇಜು ಶಿಕ್ಷಣಕ್ಕೆ ವಿದ್ಯಾರ್ಥಿಯೊಬ್ಬ 11-12 ವರ್ಷಗಳ ವರೆಗೆ ಆಗಲೆ ಶಾಲಾಶಿಕ್ಷಣ ಪಡೆದಿರಬೇಕು. ಎಂದರೆ ಮಾತೃಭಾಷೆ, ರಾಷ್ಟ್ರಭಾಷೆ, ವ್ಯಾವಹಾರಿಕ ಭಾಷೆ, ಗಣಿತ, ಸಮಾಜಪಾಠ, ವಿಜ್ಞಾನ ಮತ್ತು ಕೆಲವು ವೇಳೆ ಆಯ್ದ ವಿಷಯ- ಇವುಗಳಲ್ಲಿ ಶಿಕ್ಷಣ ಪಡೆದಿದ್ದು ಅಂಗೀಕೃತ ಸೆಕೆಂಡರಿ ಶಿಕ್ಷಣ ಅಥವಾ ಪ್ರಿ-ಯೂನಿವರ್ಸಿಟಿ ಅಥವಾ ಇಂಟರ್‌ಮಿಡಿಯೆಟ್ ಪರೀಕ್ಷಾ ಮಂಡಲಿ ನಡೆಸುವ ಪ್ರಿ-ಯೂನಿವರ್ಸಿಟಿ ಅಥವಾ ಹೈಯರ್ ಸೆಕೆಂಡರಿ ಶಾಲೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು. ಅಮೆರಿಕದ ಕೆಲವು ಕಾಲೇಜುಗಳು ವಿದ್ಯಾರ್ಥಿಗೆ 18 ವರ್ಷ ವಯಸ್ಸಾಗಿದ್ದು ಆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರದಿದ್ದರೂ ಆತ ಕಾಲೇಜಿನ ಶಿಕ್ಷಣಕ್ಕೆ ಯೋಗ್ಯನಾಗಿರುವನೆಂದು ನಿರ್ಧರವಾದರೆ, ಅವನಿಗೆ ಪ್ರವೇಶಾವಕಾಶವನ್ನು ನೀಡುವುದುಂಟು.

ಶಿಕ್ಷಣಾಭಿವೃದ್ಧಿಗೆ ಸಂಬಂಧಿಸಿದಂತೆ ಮೇಲೆ ಸೂಚಿಸಿದ ನಿಯಮಗಳಂತೆ ಇತರ ನಿಯಮಗಳನ್ನೂ ರೂಪಿಸಿರುವುದುಂಟು. ಸೆಕೆಂಡರಿ ಶಾಲಾಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದುಕೊಂಡಿರುವ ಅಂಶಗಳ ಬಗ್ಗೆ ಕನಿಷ್ಠ ಶೇಕಡಾ ಪ್ರಮಾಣವನ್ನು ಸಮಗ್ರ ಅಥವಾ ಕೆಲವು ವಿಷಯಗಳಲ್ಲಿ ಮಾತ್ರ ಗೊತ್ತುಮಾಡಿರಬಹುದು. ಉದಾ: ಕೆಲವು ತಾಂತ್ರಿಕ ಅಥವಾ ವೈದ್ಯಕೀಯ ಕಾಲೇಜುಗಳು ಆಯ್ದುಕೊಂಡು ವಿಷಯಗಳಲ್ಲಿ ಕನಿಷ್ಠ ಪಕ್ಷ ಶೇ. 45 ಅಂಕಗಳನ್ನು ಪಡೆದಿರಬೇಕೆಂದು ಪ್ರವೇಶನಿಯಮ ಮಾಡಿರುವುದುಂಟು, ಕೆಲವು ವೃತ್ತಿಶಿಕ್ಷಣದ ಕಾಲೇಜುಗಳು ನಿರ್ದಿಷ್ಟ ವಿಷಯಗಳನ್ನು ಅಧ್ಯಯನ ಮಾಡಿರುವವರನ್ನು ಮಾತ್ರ ಸೇರಿಸಿಕೊಳ್ಳುವುವು. ಉದಾ: ವೈದ್ಯಕೀಯ ಕಾಲೇಜು ಶಿಕ್ಷಣಕ್ಕೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಇತ್ಯಾದಿ ವಿಜ್ಞಾನ ಶಿಸ್ತುಗಳನ್ನು ಅಭ್ಯಾಸ ಮಾಡಿರುವುದುಂಟು. ಇತರ ಕೆಲವು ಕಾಲೇಜುಗಳು ವಿದ್ಯಾರ್ಥಿಗಳ ಗುಣಶೀಲಗಳಿಗೂ ಮಹತ್ತ್ವ ಕೊಟ್ಟು ಪ್ರವೇಶಾವಕಾಶದ ನಿಯಮಗಳನ್ನು ರೂಪಿಸುವುದುಂಟು: ಅದಕ್ಕಾಗಿ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯ ವಿದ್ಯಾರ್ಥಿಯ ಗುಣ, ವ್ಯಕ್ತಿತ್ವ, ಶಿಕ್ಷಣ ಕಾರ್ಯಗಳಲ್ಲೂ ಆಟಪಾಠಗಳಲ್ಲೂ ತಳೆದಿರುವ ಆಸಕ್ತಿ ಇತ್ಯಾದಿ ಅಂಶಗಳ ಬಗ್ಗೆ ಕೊಟ್ಟಿರುವ ಯೋಗ್ಯತಾಪತ್ರವನ್ನು ಪರಿಗಣನೆಗೆ ತೆಗೆದುಕೊಳ್ಳುವುದುಂಟು. ಇನ್ನು ಕೆಲವು ಕಾಲೇಜುಗಳು ಸೆಕೆಂಡರಿ ಶಾಲಾಪರೀಕ್ಷೆಯ ಜೊತೆಗೆ ತಮ್ಮವೇ ಆದ ಪ್ರವೇಶ ಪರೀಕ್ಷೆಗಳನ್ನೂ ನಡೆಸಿ ಅದರಲ್ಲಿ ವಿದ್ಯಾರ್ಥಿ ಪಡೆಯುವ ಫಲಿತಾಂಶವನ್ನು ಆಧಾರ ಮಾಡಿಕೊಳ್ಳುವುದುಂಟು. ಕೆಲವು ವೇಳೆ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅವರ ಅಭಿರುಚಿ, ವ್ಯಕ್ತಿತ್ವ, ದೈಹಿಕ ಸ್ವರೂಪ, ಸಂವೇಗ ಜೀವನ (ಭಾವಜೀವನ) ಇತ್ಯಾದಿಗಳನ್ನು ಪರಿಶೀಲಿಸುವುದೂ ಉಂಟು. ಅದಕ್ಕಾಗಿ ಅಭಿರುಚಿ ಪರೀಕ್ಷಣ (ಆಪ್ಟಿಟ್ಯೂಡ್ ಟೆಸ್ಟ್), ಬುದ್ಧಿ ಪರೀಕ್ಷಣ, ಆಸಕ್ತಿ ಪರೀಕ್ಷಣ, ವ್ಯಕ್ತಿತ್ವ ಪರೀಕ್ಷಣ-ಇತ್ಯಾದಿ ಅಳತೆಯ ಸಾಧನಗಳನ್ನು ಬಳಸುವುದು ಅಮೆರಿಕದಲ್ಲಿ ಹೆಚ್ಚು.

ಭಾರತದಲ್ಲಿ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಆಚರಣೆಗೆ ಬಂದ ಮೇಲೆ ಸೆಕೆಂಡರಿ ಶಿಕ್ಷಣ ಅಗಾಧವಾಗಿ ಬೆಳೆದಿದೆ. ಇದರ ಫಲವಾಗಿ ವರ್ಷಂಪ್ರತಿ ಕಾಲೇಜು ಶಿಕ್ಷಣಕ್ಕಾಗಿ ಬರತಕ್ಕವರ ಸಂಖ್ಯೆ 8–10 ಪಾಲು ಹೆಚ್ಚಿದೆ. ಇದರಿಂದ ಅವರೆಲ್ಲರಿಗೂ ಅವಕಾಶ ಕಲ್ಪಿಸುವುದು ಅಸಾಧ್ಯವಾಗಿ ಪ್ರತಿಯೊಂದು ಕಾಲೇಜು ವಿದ್ಯಾರ್ಥಿಗಳನ್ನು ಆಯ್ದುಕೊಳ್ಳುವುದು ಅನಿವಾರ್ಯವಾಗುತ್ತಿದೆ. ಹಾಗೆ ಮಾಡುವಾಗ ಬಹುಮಟ್ಟಿಗೆ ಹೈಯರ್ ಸೆಕೆಂಡರಿ, ಪ್ರಿ–ಯೂನಿವರ್ಸಿಟಿ ಅಥವಾ ಇಂಟರ್‌ಮಿಡಿಯಟ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಪ್ರಮಾಣ ಆಧಾರವಾಗುತ್ತಿದೆ. ಅಷ್ಟಾಗಿ ಅಂಕಗಳನ್ನು ಪಡೆಯದವರನ್ನು ಅಧಿಕ ತಲೆಗಂದಾಯ ವಸೂಲು ಮಾಡಿ ಪ್ರವೇಶಾವಕಾಶ ಕೊಡುವ ಸಂಪ್ರದಾಯವೂ ಕೆಲವು ಖಾಸಗಿ ಕಾಲೇಜುಗಳಲ್ಲಿ ತಲೆಹಾಕಿಕೊಂಡಿದೆ. ಗಿರಿಜನ ಹರಿಜನರಿಗಾಗಿ ಪ್ರವೇಶ ನಿಯಮಗಳನ್ನು ಸಡಿಲ ಮಾಡಿರುವುದುಂಟು.

ಅಮೆರಿಕ, ಭಾರತ ಮುಂತಾದೆಡೆಗಳಲ್ಲಿ ಸೆಕೆಂಡರಿ ಹಂತದ ಕೊನೆಯ ಎರಡು ತರಗತಿಗಳನ್ನು ಪ್ರತ್ಯೇಕಗೊಳಿಸಿ ಜೂನಿಯರ್ ಕಾಲೇಜುಗಳೆಂದು ಕರೆದಿರುವರು. ಅಲ್ಲಿ ಕಾಲೇಜೆಂಬ ಹೆಸರಿದ್ದರೂ ಅದು ಕಾಲೇಜು ಶಿಕ್ಷಣವಲ್ಲ; ಅದು ಪ್ರೌಢಶಾಲಾ ಶಿಕ್ಷಣ ಮುಂದುವರಿಸಿದ ಶಿಕ್ಷಣ ಮಾತ್ರ. ಇದು ತನಕ ಭಾರತದ ಅನೇಕ ಕಡೆಗಳಲ್ಲಿ ಜೂನಿಯರ್ ಕಾಲೇಜಿನ ಮೊದಲ ವರ್ಷದ ಶಿಕ್ಷಣ ಸೆಕೆಂಡರಿ ಶಾಲೆಗೂ ಎರಡನೆಯ ವರ್ಷದ ಶಿಕ್ಷಣ ವಿಶ್ವವಿದ್ಯಾಲಯಕ್ಕೂ ಸೇರಿತ್ತು. ಈಗ ಜೂನಿಯರ್ ಕಾಲೇಜುಗಳ ಆಡಳಿತಕ್ಕಾಗಿ ಪ್ರಿ–ಯೂನಿವರ್ಸಿಟಿ ಬೋರ್ಡ್ ಎಂಬ ಪ್ರತ್ಯೇಕ ಸಂಸ್ಥೆಯನ್ನು ಆರಂಭಿಸಲಾಗಿದೆ.

**ಕಾಲೇಜುಗಳ ವೈವಿಧ್ಯ:** ಪಠ್ಯಕ್ರಮ ಮತ್ತು ಉದ್ದೇಶಗಳನ್ನನುಸರಿಸಿ ಕಾಲೇಜುಗಳನ್ನು ಸಾಂಸ್ಕೃತಿಕ ಶಿಕ್ಷಣದ ಕಾಲೇಜುಗಳನ್ನು ಮಾನವಿಕ ವಿಷಯಗಳ ಕಾಲೇಜು, ವಿಜ್ಞಾನ ಶಾಸ್ತ್ರದ ಕಾಲೇಜು, ವಾಣಿಜ್ಯಶಾಸ್ತ್ರದ ಕಾಲೇಜು, ಲಲಿತ ಕಲಾ ಕಾಲೇಜು, ಎಂದು ನಾಲ್ಕು ವಿಧಗಳನ್ನಾಗಿ ಗುರುತಿಸಬಹುದು. ತಾಂತ್ರಿಕ ಶಿಕ್ಷಣದ ಕಾಲೇಜುಗಳೇ ಬೇರೆ; ವೃತ್ತಿಶಿಕ್ಷಣದ ಕಾಲೇಜುಗಳೇ ಬೇರೆ. ತಾಂತ್ರಿಕ ಶಿಕ್ಷಣದ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಮತ್ತು ಔದ್ಯೋಗಿಕ ವಿಜ್ಞಾನದ ಕಾಲೇಜುಗಳೇ ಬೇರೆ; ವೃತ್ತಿ ಶಿಕ್ಷಣದ ಕಾಲೇಜುಗಳೇ ಬೇರೆ. ವೈದ್ಯ, ವ್ಯವಸಾಯ, ಪಶುವೈದ್ಯ, ನ್ಯಾಯಶಾಸ್ತ್ರ ಇತ್ಯಾದಿ ವೃತ್ತಿಗಳಲ್ಲಿ ಶಿಕ್ಷಣವೀಯುವ ಸಂಸ್ಥೆಗಳು ವೃತ್ತಿಶಿಕ್ಷಣಕ್ಕೆ ಸೇರುತ್ತವೆ. ಅಧ್ಯಾಪಕರ ವೃತ್ತಿಶಿಕ್ಷಣದ ಕಾಲೇಜುಗಳು ವಿಶಿಷ್ಟ ರೀತಿಯವಾಗಿದ್ದು ಅಧ್ಯಾಪಕರ ವೃತ್ತಿಶಿಕ್ಷಣಕ್ಕೆ ಮೀಸಲಾಗಿವೆ.

ಆಡಳಿತ ದೃಷ್ಟಿಯಿಂದ ಕಾಲೇಜು ಶಿಕ್ಷಣ ಮೂರು ಮುಖ್ಯ ಕ್ಷೇತ್ರಗಳಿಗೆ ಹಂಚಿಹೋಗಿದೆ. ವಿಶ್ವವಿದ್ಯಾಲಯ ಮತ್ತು ಅದರ ಆಂಗಿಕ (ಕಾನ್ಸ್ಟಿಟ್ಯೂಯೆಂಟ್) ಕಾಲೇಜುಗಳಲ್ಲೂ ಸರ್ಕಾರದ, ಸ್ಥಳೀಯ ಸರ್ಕಾರಗಳ ಮತ್ತು ಖಾಸಗಿ ಸಂಸ್ಥೆಗಳ ಅಂಗೀಕೃತ (ಅಫಿಲಿಯೇಟೆಡ್) ಕಾಲೇಜುಗಳಲ್ಲೂ ಆ ಶಿಕ್ಷಣ ಹರಡಿದೆ. ಯುದ್ಧಪೂರ್ವದಲ್ಲಿ ಖಾಸಗಿ ಕಾಲೇಜುಗಳಿಗೆ ಅನುದಾನ ಅಷ್ಟಾಗಿ ಇರಲಿಲ್ಲವಾಗಿ ಅವುಗಳ ಸಂಖ್ಯೆಯೂ ಕಡಿಮೆಯಾಗಿತ್ತು. ಈಚೆಗೆ ಅವಕ್ಕೆ ಹೆಚ್ಚು ಉದಾರವಾಗಿ ಧನಸಹಾಯ ದೊರಕುವಂತಾಗಿ ಆ ಕ್ಷೇತ್ರ ಬಹುವಾಗಿ ವಿಸ್ತರಿಸಿದೆ. ಶಿಕ್ಷಣದ ಅಂತಸ್ತನ್ನು ಆಧರಿಸಿ ಪರಿಗಣಿಸಿದಾಗ ಕಾಲೇಜು ಶಿಕ್ಷಣದಲ್ಲಿ ಎರಡು ಹಂತಗಳಿವೆ. ಮೊದಲ ಹಂತದಲ್ಲಿ ಪದವಿಯ ಸ್ನಾತಕಪೂರ್ವ ಶಿಕ್ಷಣ (ಅಂಡರ್ ಗ್ರಾಜುಯೇಟ್) ಮತ್ತು ಸ್ನಾತಕೋತ್ತರ ಶಿಕ್ಷಣ (ಪೋಸ್ಟ್ ಗ್ರಾಜುಯೇಟ್). ಎರಡನೆಯ ಹಂತದಲ್ಲಿ ಎಂ.ಎ., ಎಂ.ಎಸ್‌ಸಿ., ಎಂ.ಕಾಂ., ಎಂ.ಇ., ಎಂ.ಎಲ್., ಇತ್ಯಾದಿ ಮಾಸ್ಟರ್ ಪದವಿಯ ಶಿಕ್ಷಣವೂ ಡಾಕ್ಟರ್ ಪದವಿಯ ಶಿಕ್ಷಣವೂ ಇತರ ಉನ್ನತ ಸಂಶೋಧನೆಯ ಶಿಕ್ಷಣವೂ ಸೇರಿವೆ. ಬಹುಮಟ್ಟಿಗೆ ಸ್ನಾತಕೋತ್ತರ ಶಿಕ್ಷಣ ವಿಶ್ವವಿದ್ಯಾಲಯದ ಬೇರೆ ಬೇರೆ ವಿಭಾಗಗಳಲ್ಲಿ ಅಥವಾ ಆಂಗಿಕ ಸಂಸ್ಥೆಗಳಲ್ಲಿ ಇದ್ದು, ಅದರ ನೇರ ಆಡಳಿತದಲ್ಲಿ ನಡೆಯುತ್ತದೆ. ಎಲ್ಲೊ ಕೆಲವು ಅಂಗೀಕೃತ ಕಾಲೇಜುಗಳಲ್ಲೂ ಸ್ನಾತಕೋತ್ತರ ಶಿಕ್ಷಣದ ವ್ಯವಸ್ಥೆಯುಂಟು. ಮುಂದೆ ನೂತನವಾಗಿ ವಿಶ್ವವಿದ್ಯಾಲಯವೊಂದನ್ನು ಆರಂಭಿಸಬೇಕಾಗಿರುವ ಸ್ಥಳದಲ್ಲೂ ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ಪೂರ್ವಭಾವಿಯಾಗಿ ಆರಂಭಿಸುವುದುಂಟು.

ಕೆಲವು ಶಿಕ್ಷಣಸಂಸ್ಥೆಗಳು ಕಾಲೇಜು ಎಂಬ ಹೆಸರನ್ನು ಹೊಂದಿಲ್ಲವಾದರೂ ಕಾಲೇಜು ಹಂತದ ಶಿಕ್ಷಣವನ್ನು ವ್ಯವಸ್ಥೆಗೊಳಿಸಿರುತ್ತವೆ. ಉದಾ: ಸ್ಕೂಲ್ ಆಫ್ ಮೆಡಿಸನ್, ಸ್ಕೂಲ್ ಆಫ್ ಮೈನಿಂಗ್, ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್–ಇತ್ಯಾದಿ.

**ಭಾರತದಲ್ಲಿ ಕಾಲೇಜು ಶಿಕ್ಷಣ :** ಪ್ರಾಚೀನ ಭಾರತದಲ್ಲಿ ಕಾಲೇಜು ಮಟ್ಟದ ಶಿಕ್ಷಣ ತುಂಬ ಅಭಿವೃದ್ಧಿ ಸ್ಥಿತಿಯಲ್ಲಿತ್ತು. ವೇದಗಳ ಆರಂಭ ಕಾಲದಲ್ಲಿ ಮೊದಲಾದ ಆ ಶಿಕ್ಷಣ ಮಧ್ಯಯುಗಗಳ ವರೆಗೂ ನಡೆದುಕೊಡು ಬಂದು ಮುಸಲ್ಮಾನರ ದಾಳಿಗೆ ಸಿಕ್ಕು ನಾಮಾವಶೇಷವಾಯಿತು. ಅಳಿದುಳಿದುಕೊಂಡಿದ್ದ ಕೆಲವು ಕಾಲೇಜುಗಳು 19ನೆಯ ಶತಮಾನದ ಮಧ್ಯಕಾಲದಲ್ಲಿ ಇಂಗ್ಲಿಷ್ ಶಿಕ್ಷಣ ಪದ್ಧತಿ ಆರಂಭವಾದಂತೆ ಕೊನೆಗೊಂಡುವು. ಬಂಗಾಳ, ಬಿಹಾರಗಳಲ್ಲಿ ಇನ್ನೂ ಉಳಿದುಕೊಂಡು ಬಂದಿರುವ ಕೆಲವು ತೋಲ್ ಎಂಬ ಸಂಸ್ಕೃತ ಶಿಕ್ಷಣಸಂಸ್ಥೆಗಳೂ ಮದ್ರಸಾ ಎಂಬ ಮುಸಲ್ಮಾನರ ಸಂಸ್ಥೆಗಳೂ ಸಂಸ್ಕೃತ ಮಹಾಪಾಠಶಾಲೆಗಳೂ ಇಂದಿಗೂ ಅವನ್ನು ನೆನಪಿಗೆ ತರುವಂತೆ ನಡೆಸಿಕೊಂಡು ಬರುತ್ತಿವೆ. ಪ್ರ.ಶ.ಪೂ. 7ನೆಯ ಶತಮಾನಕ್ಕೂ ಹಿಂದೆ ಆರಂಭವಾಗಿದ್ದ ತಕ್ಷಶಿಲೆಯ ವಿಶ್ವವಿದ್ಯಾಲಯ ಇಲ್ಲಿನ ಪ್ರಾಚೀನತಮ ಉನ್ನತ ಶಿಕ್ಷಣ ಸಂಸ್ಥೆ. ಮೊದಮೊದಲು ಇದು ಬ್ರಾಹ್ಮಣ (ಹಿಂದೂ) ವಿದ್ಯಾಕೇಂದ್ರವಾಗಿದ್ದರೂ ಪ್ರ.ಶ.ಪೂ. 2ನೆಯ ಶತಮಾನದ ವೇಳೆಗೆ ಬೌದ್ಧವಿಶ್ವವಿದ್ಯಾಲಯವಾಯಿತು. ಇಲ್ಲಿ ವೇದ, 18 ಕಲೆ (ವೃತ್ತಿ) ಅಥವಾ ಸಿಪಾಗಳನ್ನು ಕಲಿಸುತ್ತಿದ್ದರು. ಹದಿನೆಂಟು ಕಲೆಗಳಲ್ಲಿ ವೈದ್ಯ, ಧನುರ್ವಿದ್ಯೆ, ಸರ್ಪವಿದ್ಯೆ, ವ್ಯವಸಾಯ, ಮಂತ್ರಗಾರಿಕೆ ಇತ್ಯಾದಿ ವೃತ್ತಿಶಿಕ್ಷಣವೂ ಜೋತಿಷ್ಯ, ಖಗೋಳವಿಜ್ಞಾನ, ಲೆಕ್ಕಗಾರಿಕೆ, ವಾಣಿಜ್ಯ ಇತ್ಯಾದಿಗಳೂ ಸೇರಿದ್ದುವು. ಜೊತೆಗೆ ವ್ಯಾಕರಣ, ತರ್ಕ, ಕಾವ್ಯಮೀಮಾಂಸೆ, ಪುರಾಣ ಇವೂ ಸೇರಿಕೊಂಡಿದ್ದುವು. ಅನಂತರ ಆರಂಭವಾದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಾಶಿ, ನಳಂದ, ವಲಭಿ (ವಾಲಾ), ವಿಕ್ರಮಶಿಲ, ಧನ್ಯಕಟಕ ಮುಂತಾದವು ಖ್ಯಾತಿ ಪಡೆದಿದ್ದುವು. ಕರ್ನಾಟಕದಲ್ಲಿ ದೇವಸ್ಥಾನದ ಅಥವಾ ಮಠಗಳ ಅಂಗವಾಗಿ ಕಾಲೇಜು ಮಟ್ಟದ ಶಿಕ್ಷಣ ವ್ಯವಸ್ಥೆಗೊಂಡಿತ್ತು. ಅಂಥ ಕಾಲೇಜುಗಳಲ್ಲಿ ಸಾಲೊಟಗಿ, ಹೆಬ್ಬಾಳು (ಧಾರವಾಡ ಜಿಲ್ಲೆ), ಭುಜವೇಶ್ವರ ದೇವಾಲಯ, ಚಿತ್ರದುರ್ಗ ಜಿಲ್ಲೆಯ ಜಟಂಗ ರಾಮೇಶ್ವರ ದೇವಾಲಯ, ಬಿಜಾಪುರ, ತಾವರೆಗೆರೆ, ಮನಗೋಳಿ, ಬೆಳಗಾಂವಿಯ ದಕ್ಷಿಣೇಶ್ವರ ದೇವಾಲಯ, ತಾಳಗುಂದದ ಪ್ರಣವೇಶ್ವರ ದೇವಾಲಯ ಮುಂತಾದೆಡೆಗಳಲ್ಲಿ ಅಂಥ ಕಾಲೇಜು ಶಿಕ್ಷಣಕ್ಕೆ ವ್ಯವಸ್ಥೆ ಮಾಡಿತ್ತು. ಬಹುಮಟ್ಟಿಗೆ ಅವೆಲ್ಲ ಸಂಸ್ಕೃತ ಪಾಠಶಾಲೆಗಳು. ಆ ಕಾಲದಲ್ಲಿ ಅಗ್ರಹಾರಗಳೂ (ಬ್ರಾಹ್ಮಣರ ವಸತಿಗಳು) ಬ್ರಹ್ಮಪುರಿಗಳೂ (ನಗರದ ಬ್ರಾಹ್ಮಣರು ವಾಸಿಸುತ್ತಿದ್ದ ಭಾಗಗಳು) ಉನ್ನತ ಶಿಕ್ಷಣದ ಕ್ಷೇತ್ರಗಳಾಗಿದ್ದುವು. ಅವುಗಳಲ್ಲಿ ಕಾಡಿಯೂರು, ಸರ್ವಜ್ಞಪುರ (ಅರಸೀಕೆರೆ) ಮುಂತಾದುವನ್ನು ಉಲ್ಲೇಖಿಸಬಹುದು **(ನೋಡಿ– ಕರ್ನಾಟಕದಲ್ಲಿ ಶಿಕ್ಷಣ)**.

**ಆಧುನಿಕ ಭಾರತದಲ್ಲಿ ಕಾಲೇಜು ಶಿಕ್ಷಣ:** 19ನೆಯ ಶತಮಾನದ ಮಧ್ಯಕಾಲದಿಂದ ಭಾರತದಲ್ಲಿ ಇಂದಿನ ರೀತಿಯ ಕಾಲೇಜು ಶಿಕ್ಷಣ ಆರಂಭವಾಯಿತು. ಆ ಶತಮಾನದ ಮಧ್ಯಕಾಲದ ವೇಳೆಗೆ ಸೆಕೆಂಡರಿ ಶಾಲೆಗಳು ಹೆಚ್ಚಿ ಕಾಲೇಜಿನ ಅಗತ್ಯ ಹೆಚ್ಚಿತು. ಅನಂತರ ಇಂಗ್ಲಿಷ್ ಆಡಳಿತ ಅದಕ್ಕೆ ನೀಡಿದ ಪ್ರೋತ್ಸಾಹದಿಂದ ನೂತನ ಮಾದರಿಯ ಕಾಲೇಜುಗಳು ಅಧಿಕ ಸಂಖ್ಯೆಯಲ್ಲಿ ಹೆಚ್ಚಿದುವು. ಸ್ವಾತಂತ್ರ್ಯಾನಂತರ ಕಾಲೇಜು ಶಿಕ್ಷಣ ನೂರಾರು ಪಾಲು ವಿಸ್ತರಿಸಿತು. ಸದ್ಯದಲ್ಲಿ ಆ ಶಿಕ್ಷಣ ದೇಶಾದ್ಯಂತ ಇರುವ 3,297 ಕಾಲೇಜುಗಳಲ್ಲೂ 9 ಪರಿಗಣಿತ ವಿಶ್ವವಿದ್ಯಾಲಯಗಳಲ್ಲೂ 10 ರಾಷ್ಟ್ರೀಯ ಪ್ರಾಮುಖ್ಯ ಪಡೆದ ಸಂಸ್ಥೆಗಳಲ್ಲೂ ನಡೆಯುತ್ತಿದೆ. ಈ ಕಾಲೇಜುಗಳಲ್ಲಿ 185 ವಿಶ್ವವಿದ್ಯಾಲಯದ ಆಂಗಿಕ ಕಾಲೇಜುಗಳೂ; ಮಿಕ್ಕ 3112 ಅಂಗೀಕೃತ ಕಾಲೇಜುಗಳು. ಅವುಗಳಲ್ಲಿ ಶೇ. 5.4 ರಷ್ಟು ಕಾಲೇಜುಗಳು; ಮಾತ್ರ 1947ರ ಹಿಂದೆ ಆರಂಭವಾಗಿದ್ದುವು. ಮಿಕ್ಕ ಕಾಲೇಜುಗಳು ಅನಂತರ ಆರಂಭವಾದುವು.

ವರ್ಲ್ಡ್ ಬ್ಯಾಂಕ್ ವರದಿಯ ಪ್ರಕಾರ ಭಾರತದಲ್ಲಿ 7,40,000 ಶಾಲೆಗಳಿವೆ; 3.6 ಮಿಲಿಯನ್ ಪೂರ್ಣಕಾಲಿಕ ಉಪಾಧ್ಯಾಯರಿದ್ದಾರೆ; 175ಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳು ಸ್ನಾತಕೋತ್ತರ ಶಿಕ್ಷಣ ನೀಡುತ್ತವೆ; ಮತ್ತು ಈ ವಿಶ್ವವಿದ್ಯಾಲಯಕ್ಕೆ ಸೇರಿದ ಸು. 6,000 ಕಾಲೇಜುಗಳಿವೆ. (ಎನ್.ಎಸ್.ವಿ.)

**ಕಾಲೇವಾಲಾ :** ಫಿನ್ಲೆಂಡಿನ ಜನಪದ ಮಹಾಕಾವ್ಯ. ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಕವಿಗಳಿಂದ ರಚಿತವಾಗಿವೆಯೆಂದು ಹೇಳಲಾಗಿದೆ. ಹಂಚಿಹೋಗಿದ್ದ ಇತರ ಹಾಡುಗಳನ್ನೆಲ್ಲ ಟೊಪೀಲಿಯಸ್ ಎಂಬಾತ 1822ರಲ್ಲಿ ಮೊಟ್ಟಮೊದಲಿಗೆ ಒಂದೆಡೆ ಕಲೆಹಾಕಿದ.

ಪ್ರಪಂಚದ ಜಾನಪದ ಕ್ಷೇತ್ರದಲ್ಲಿ ಫಿನ್ಲೆಂಡ್ ತನ್ನ ಸಮೃದ್ಧವಾದ ಜಾನಪದ ಸಂಗ್ರಹ ಹಾಗೂ ಅದರ ವೈಜ್ಞಾನಿಕ ಅಧ್ಯಯನದ ಬಲದಿಂದ ತೀರ ವಿಶಿಷ್ಟವಾದ ಸ್ಥಾನವನ್ನು ಗಳಿಸಿಕೊಂಡಿದೆ. ಈ ದೇಶದಲ್ಲಿ 16ನೆಯ ಶತಮಾನದಲ್ಲಿ ಆರಂಭವಾದ ಜಾನಪದ ಸಂಗ್ರಹಕಾರ್ಯ ಲೋನಾರ್ಟ್ ಎಲಿಯಾಸ್, ಜೂಲಿಯಸ್ ಕ್ರಾನ್, ಕಾರ್ಲ್‌ಕ್ರಾನ್ ಮತ್ತು ಆಂಟಿ ಆರ್ನೆ ಮೊದಲಾದ ವಿದ್ವಾಂಸರ ಸತತ ಪರಿಶ್ರಮದ ಕಾರಣದಿಂದ ಉನ್ನತ ಮಟ್ಟವನ್ನು ಮುಟ್ಟಿತು. ಫಿನ್ಲೆಂಡಿನ ಸಾಹಿತ್ಯದ ಬಹುಭಾಗ ಜನಪದ ಸಾಹಿತ್ಯವೇ ಆಗಿದೆ. ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದ ಫಿನ್ಲೆಂಡಿನ ಜಾನಪದಕ್ಕೆ ಕಾಲೇವಾಲ ಎಂಬ ಮಹಾಕಾವ್ಯ ಕೋಡು ಮೂಡಿಸಿದೆ. ಟೊಪೀಲಿಯಸನ ಅನಂತರ ಹೆಚ್ಚು ಪ್ರಾಮಾಣಿಕವಾಗಿ ಇದರ ಹಾಡುಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂಪಾದಿಸಿ, ಇದಕ್ಕೆ ಒಂದು ಮಹಾಕಾವ್ಯದ ಆಕಾರವನ್ನು ತಂದುಕೊಟ್ಟ (1835) ಕೀರ್ತಿ ಎಲಿಯಾಸ್ ಲೋನಾರ್ಟ್ ಎಂಬ ವಿದ್ವಾಂಸನಿಗೆ ಸಲ್ಲುತ್ತದೆ. ಸಮಗ್ರ ಕಾಲೇವಾಲಾದಲ್ಲಿ 50 ಅಧ್ಯಾಯಗಳಿವೆ. ಭಾರತಕ್ಕೆ ರಾಮಾಯಣ, ಮಹಾಭಾರತ, ಗ್ರೀಸಿಗೆ ಇಲಿಯಡ್, ಒಡಿಸ್ಸಿಗಳಿದ್ದಂತೆ ಫಿನ್ಲೆಂಡಿಗೆ ಕಾಲೇವಾಲಾ.

ಕಾಲೇವಾಲಾ ಎಂಬ ಹೆಸರು ಕಾಲೇವಾ ಎಂಬ ಪದದಿಂದ ಬಂದಿದೆ. ಕಾಲೇವಾ ಎಂಬುದು ಫಿನ್ಲೆಂಡಿನ ಎಲ್ಲ ವೀರರಿಗೂ ಮೂಲಪುರುಷನಾಗಿರುವ ವ್ಯಕ್ತಿಯ ಹೆಸರು. ಈ ಕಾವ್ಯದಲ್ಲಿ ಈತ ಯಾವ ಪಾತ್ರವನ್ನೂ ವಹಿಸುವುದಿಲ್ಲ. ಆದರೆ ಈ ಕೃತಿಯಲ್ಲಿ ನಡೆಯುವ ಎಲ್ಲ ಬಗೆಯ ಧೈರ್ಯ, ಶೌರ್ಯಯುತ ಕಾರ್ಯಗಳಿಗೆಲ್ಲ ಈತ ಸ್ಫೂರ್ತಿಶಕ್ತಿಯಾಗಿದ್ದಾನೆ. ಈ ಕೃತಿಯ ಪ್ರಮುಖ ಪಾತ್ರಗಳಾದ ವೆನ್ನಾಮೆನನ್, ಇಲ್ ಮೇರಿನೆನ್ ಮತ್ತು ಲೆಮ್ಮಿನ್‌ಕೈನೆನ್ ಈ ಮೂವರು ಒಂದು ಅರ್ಥದಲ್ಲಿ ಈತನ ಮಕ್ಕಳೆಂದೇ ತಿಳಿಯಲು ಆಧಾರಗಳಿವೆ. ಸ್ವದೇಶಪ್ರೇಮ ಪ್ರಮುಖವಾಗಿರುವ ಈ ಕೃತಿಯಲ್ಲಿನ ಕಾಲೇವಾಲಾ ಅಂದರೆ ವೀರರ ನಾಡು, ಅದು ಫಿನ್ಲೆಂಡ್ ದೇಶವೇ ಎಂಬುದರಲ್ಲಿ ಸಂಶಯವಿಲ್ಲ. ಈ ದೇಶವನ್ನು ಎದುರಿಸಿ ಯುದ್ಧಮಾಡಿದ ಪಹಜೋಲಾ ಎಂಬ ದೇಶ ಫಿನ್ಲೆಂಡಿನ ಉತ್ತರ ದಿಕ್ಕಿನಲ್ಲಿರುವ ಲ್ಯಾಂಪ್‌ಲ್ಯಾಂಡ್ ಅಥವಾ ಅದಕ್ಕೂ ಉತ್ತರದಲ್ಲಿರುವ ಒಂದು ದ್ವೀಪ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಎರಡು ದೇಶಗಳ ವೀರರ ನಡುವೆ ನಡೆಯುವ ಯುದ್ಧ ಅದಕ್ಕೆ ಕಾರಣ, ಅದಕ್ಕೆ ಪೂರಕವಾದ ಘಟನೆಗಳು ಮತ್ತು ಪಾತ್ರಗಳು, ಆ ಪಾತ್ರಗಳ ವೈಯಕ್ತಿಕ ಚರಿತ್ರೆ– ಈ ಎಲ್ಲ ಅಂಶಗಳು ಈ ಮಹಾಕಾವ್ಯದ ವಸ್ತುವನ್ನು ರೂಪಿಸಿವೆ. ಕಾಲೇವಾಲಾ ಮತ್ತು ಪಹಜೋಲಾ ದೇಶಗಳ ನಡುವಣ ಸಂಘರ್ಷ ಕ್ರಮವಾಗಿ ಬೆಳಕು ಹಾಗೂ ಕತ್ತಲೆಗಳ ಸಂಘರ್ಷವನ್ನು ಆ ಮೂಲಕ ಒಳ್ಳೆಯದು ಮತ್ತು ಕೆಟ್ಟದರ ಸಂಘರ್ಷವನ್ನು ಸಂಕೇತಿಸುತ್ತದೆ. ಕೊನೆಯಲ್ಲಿ ಕಾಲೇವಾಲಾ ದೇಶಕ್ಕೆ ಜಯವಾಗುವುದು ಸತ್ಯಮೇವ ಜಯತೇ ಎಂಬ ಸೂತ್ರವನ್ನು ಎತ್ತಿ ಹಿಡಿಯುತ್ತದೆ. ಈ ದೃಷ್ಟಿಯಿಂದ ಈ ಮಹಾಕಾವ್ಯ ನೀತಿಬೋಧಕವೂ ಹೌದು ಎಂದು ಹೇಳಬಹುದು.

ಕಥಾಸಂವಿಧಾನದ ದೃಷ್ಟಿಯಿಂದ ನೋಡಿದಾಗ ಕಾಲೇವಾಲ ಮೂರು ಬಗೆಯ ಹಾಡುಗಳಿಂದ ಕೂಡಿರುವುದು ಕಂಡುಬರುತ್ತದೆ. 1 ಸ್ಯಾಂಪೋಗೆ ಸಂಬಂಧಿಸಿದ ಹಾಡುಗಳು, 2 ಪಾತ್ರಗಳ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಹಾಡುಗಳು 3 ಮಂತ್ರಮಾಟಗಳಿಗೆ, ಕಾಲ್ಪನಿಕ ಸಂಗತಿಗಳಿಗೆ ಸಂಬಂಧಿಸಿದ ಹಾಡುಗಳು. ಈ ಹಾಡುಗಳಲ್ಲಿ ಅಡಕವಾಗಿರುವ ಕಥಾಚಕ್ರದಲ್ಲಿ ಸ್ಯಾಂಪೋಗೆ ಸಂಬಂಧಿಸಿದ ಹಾಡುಗಳು ಈ ಮಹಾಕಾವ್ಯದ ಕೇಂದ್ರವಸ್ತು ಎಂದು ಹೇಳಬಹುದು. ಈ ಕೃತಿಗೆ ಒಂದು ಆಕಾರ ಬಂದಿರಲು ಕಾರಣ ಸ್ಯಾಂಪೋ; ಇಲ್ಲದಿದ್ದರೆ ಇಲ್ಲಿನ ಹಾಡುಗಳೆಲ್ಲ ನಾಲ್ಕಾರು ವೀರರಿಗೆ ಸಂಬಂಧಿಸಿದ ಕಥಾಚಕ್ರಗಳಾಗಿ ಸಿಡಿದುಹೋಗುತ್ತಿದ್ದವು. ಎಲ್ಲ ಹಾಡುಗಳನ್ನೂ ಕೇಂದ್ರೀಕರಿಸಿ, ಕಥೆಗೆ ಏಕಸೂತ್ರತೆ ಬರುವಂತೆ ಮಾಡಿದ ವಸ್ತು ಸ್ಯಾಂಪೋ. ಜನ ಬೇಡಿದಾಗ, ಅವರು ಬೇಡಿದಷ್ಟು ಆಹಾರ ಧಾನ್ಯಗಳನ್ನು, ಉಪ್ಪನ್ನು, ಚಿನ್ನವನ್ನು ಕೊಟ್ಟು ದೇಶವನ್ನು ಸುಭಿಕ್ಷವಾಗಿ ಇಡುವ ಮಾಂತ್ರಿಕ ಯಂತ್ರವೇ ಸ್ಯಾಂಪೋ. ಇದು ಆ ದೇಶದ ಏಳಿಗೆಯ ಸಂಕೇತ. ಇದನ್ನು ಆದಿ ಕಮ್ಮಾರನಾದ ಇಲ್‌ಮೇರಿನೆನ್ ಬಹಳ ಶ್ರಮದಿಂದ ಹಾಗೂ ದೈವದತ್ತಶಕ್ತಿಯಿಂದ ಪಹಜೋಲಾದ ರಾಣಿ ಲೌಹಿಯ ಮಗಳನ್ನು ತನ್ನ ಅಣ್ಣ ವೆನ್ನಾಮೆನನ್‌ಗೆ ಮದುವೆ ಮಾಡಿಸುವ ಉದ್ದೇಶಕ್ಕಾಗಿ, ಪಹಜೋಲಾದಲ್ಲಿ ರಚಿಸುವುದು; ಲೌಹಿ ಇದನ್ನು ಮೋಸದಿಂದ ಬಚ್ಚಿಟ್ಟು ವೆನ್ನಾಮೆನನ್‌ಗೆ ಮೋಸ ಮಾಡುವುದು; ಅವಳ ಮೇಲೆ ಕೋಪಗೊಂಡ ವೆನ್ನಾಮೆನನ್, ಇಲ್‌ಮೇರಿನನ್ ಮತ್ತು ಲೆಮ್ಮಿನ್ ಕೈನೆನ್ ಈ ಮೂವರು ಸಹೋದರರೂ ಸ್ಯಾಂಪೋವನ್ನು ತರಲು ಪಹಜೋಲಾಕ್ಕೆ ಹೋಗಿ ಅಲ್ಲಿ ಭಯಂಕರವಾಗಿ ಯುದ್ಧ ಮಾಡುವುದು; ಸ್ಯಾಂಪೋ ಚೂರುಚೂರಾಗಿ ಒಡೆದುಹೋಗಿ ಕಾಲೇವಾಲಾದ ವೀರರಿಗೆ ಅನೇಕ ಚೂರುಗಳು ದೊರೆತು ಅವರು ವಿಜಯಿಗಳಾಗುವುದು: ಹೀಗಾಗಿ ಪಹಜೋಲಾದವರಿಗೆ ಸೋಲಾಗುವುದು; ಕೊನೆಯಲ್ಲಿ ತನ್ನ ದೇಶಕ್ಕಾಗಿ ಇಷ್ಟೆಲ್ಲ ಶ್ರಮಪಟ್ಟರೂ ಕಾಲೇವಾಲಾದ ಜನರ ಕಲ್ಪನೆಯಲ್ಲಿ ವರ್ಜಿನ್ ಮೇರಿ ಎನಿಸಿದ್ದ ಮರ್ಜಟ್ಟಾ ಎಂಬುವಳಿಗೆ ಅವಳು ಕನ್ಯೆಯಾಗಿದ್ದಾಗಲೇ ಹುಟ್ಟಿದ ಮಗ ಕರೇಲಿಯಾದ ರಾಜನಾದ್ದರಿಂದ ನಿರಾಶನಾದ ವೆನ್ನಾಮೆನನ್ ಕಾಲೇವಾಲಾವನ್ನು ತೊರೆದು ಹೋಗುವುದು–ಈ ಪ್ರಮುಖ ಘಟನೆಗಳು ಈ ಮಹಾಕಾವ್ಯದಲ್ಲಿ ನಡೆಯುತ್ತವೆ. ಇದರ ಜೊತೆಗೆ ವೆನ್ನಾಮೆನನ್, ಇಲ್‌ಮೇರಿನೆನ್, ಲೆಮ್ಮಿನ್ ಕೈನೆನ್, ಕುಲ್ಲೆರ್ವೋ, ಯೌಕಾಹೈನೆನ್, ಲೌಹಿ ಮೊದಲಾದವರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ, ಅವರ ಸಾಹಸ ಕಾರ್ಯಗಳಿಗೆ ಸಂಬಂಧಿಸಿದ ಕಥೆಗಳೂ ಸೇರಿಕೊಂಡಿವೆ. ಮಂತ್ರ, ಮಾಟ, ಯುದ್ಧಗಳ ವರ್ಣನೆಯಲ್ಲಿ ಫಿನ್ಲೆಂಡಿನ ಜನಪದ ಸಂಪ್ರದಾಯಗಳು ಹಾಗೂ ನಂಬಿಕೆಗಳು ಸ್ಪಷ್ಟವಾಗಿ ತಿಳಿಯುತ್ತವೆ. ಕಾಲೇವಾಲಾ ಅದ್ಭುತ ರಮ್ಯ ಕಥೆಗಳಿಂದ ತುಂಬಿದೆ. ಪುರಾಣಗಳು ಮತ್ತು ಐತಿಹ್ಯಗಳು ಈ ಕಾವ್ಯದಲ್ಲಿ ವಿಶೇಷವಾಗಿ ದೊರೆಯುತ್ತವೆ.

ಇಂಥ ಜನಪದ ಮಹಾಕಾವ್ಯ, ಪರಕೀಯರ ಸತತವಾದ ದಬ್ಬಾಳಿಕೆಯಲ್ಲಿದ್ದ ಫಿನ್ಲೆಂಡಿನ ಜನರಲ್ಲಿ ಧೈರ್ಯ ಹಾಗೂ ಆತ್ಮ ವಿಶ್ವಾಸವನ್ನು ತುಂಬಿ ತಾವು ಸ್ವತಂತ್ರರಾಗಬೇಕೆಂಬ ಹೆಬ್ಬಯಕೆಯನ್ನು ತಂದುಕೊಟ್ಟಿತು ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ ಲೋನಾರ್ಟ್ ಎಲಿಯಾಸನಿಗೆ ಅಭೂತಪೂರ್ವವಾದ ಜನಪ್ರಿಯತೆ, ಪ್ರೀತಿ, ಗೌರವಗಳು ದೊರೆತವು. ತಾನು ಸಂಪಾದಿಸಿದ ಕಾಲೇವಾಲಾ ಮಹಾಕಾವ್ಯಕ್ಕೆ 1835 ಫೆಬ್ರವರಿ 28ರಂದು ಈತ ಮುನ್ನುಡಿ ಬರೆದ. ಪ್ರತಿವರ್ಷವೂ ಈ ದಿನವನ್ನು ಇಂದಿಗೂ ರಾಷ್ಟ್ರೀಯ ರಜಾದಿನವೆಂದು ಘೋಷಿಸಿ, ರಾಷ್ಟ್ರೀಯ ಹಬ್ಬವನ್ನು ಆಚರಿಸಲಾಗುತ್ತಿದೆ. ಅಂದಿನಿಂದ ಇಂದಿನವರೆಗೆ ಕಾಲೇವಾಲಾ ಇಂಗ್ಲಿಷ್, ಜರ್ಮನ್, ಇಟಾಲಿಯನ್, ಫ್ರೆಂಚ್, ಹಂಗೇರಿಯನ್, ರೂಮೇನಿಯನ್, ಜಪಾನೀ ಮೊದಲಾದ ಇಪ್ಪತ್ತು ಪ್ರಮುಖ ಭಾಷೆಗಳಿಗೆ ಭಾಷಾಂತರವಾಗಿದೆ. ಶ್ರೇಷ್ಠ ಜಾನಪದ ವಿದ್ವಾಂಸರಾದ ಜೂಲಿಯಸ್ ಕ್ರಾನ್, ಕಾರ್ಲೆಕ್ರಾನ್ ಮೊದಲಾದವರು ಈ ಕೃತಿಯ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಕನ್ನಡದ ಕಡುಗಲಿ ಕುಮಾರರಾಮನಿಗೆ ಸಂಬಂಧಿಸಿದಂತೆ ಕರ್ನಾಟಕದಾದ್ಯಂತ ಜನರ ಬಾಯಲ್ಲಿರುವ ಹಾಡುಗಳನ್ನು ಸಂಗ್ರಹಿಸಿ, ಸಂಪಾದಿಸಿ ಕನ್ನಡದಲ್ಲಿ ಒಂದು ಜನಪದ ಮಹಾಕಾವ್ಯವನ್ನು ನೀಡುವ ಪ್ರಯತ್ನ ಮಾಡುವವರಿಗೆ ಕಾಲೇವಾಲಾ ಉತ್ತಮ ಮಾರ್ಗದರ್ಶಿಯಾಗಬಲ್ಲುದು. (ಟಿ.ಎನ್.ಎಸ್.ಎನ್.)

**ಕಾಲೊಟೈಪ್ ಮುದ್ರಣ** : ಸಮತಲ ತಳಹದಿಯ ಮುದ್ರಣಕ್ಕೆ ಸೇರಿದ ಒಂದು ವಿಧಾನ. ಇದರಲ್ಲಿ ಶಿಲಾಮುದ್ರಣ ಮತ್ತು ಛಾಯಾಗ್ರಹಣವನ್ನು ಉಪಯೋಗಿಸಿಕೊಂಡು ಬಹಳ ಉತ್ಕೃಷ್ಟವಾದ ಚಿತ್ರಗಳನ್ನೂ ಕಲಾಕೃತಿಗಳನ್ನೂ ಮುದ್ರಿಸುತ್ತಾರೆ. ಕಾಲೊಟೈಪ್ ಮುದ್ರಣವನ್ನು ಮೊಟ್ಟಮೊದಲು ಫ್ರಾನ್ಸ್ ದೇಶದಲ್ಲಿ ಟಿ. ಡು. ಮೊಟೀ ಮತ್ತು ಸಿ.ಆರ್. ಮಾರಿಚಾಲ್ ಎಂಬುವರು 1865ರಲ್ಲಿ ಪ್ರಾರಂಭಿಸಿದರು. ಅರ್ನೆಸ್ಟ್ ಎಡ್ವರ್ಡ್ಸ್ ಎಂಬಾತ ಅಮೆರಿಕದಲ್ಲಿ 1872ರಲ್ಲಿ ಪ್ರಾರಂಭಿಸಿದ.

ಕಾಲೊಟೈಪ್ ವಿಧಾನದಲ್ಲಿ ಮುದ್ರಣ ಮಾಡಬೇಕಾದ ಚಿತ್ರ ಅಥವಾ ಬೇರೆ ವಸ್ತುವಿನ ಋಣಚಿತ್ರವನ್ನು ಸಾಧಾರಣ ರೀತಿಯಲ್ಲಿ ತಯಾರಿಸಿ ಅದರಲ್ಲಿರುವ ನ್ಯೂನಾತಿರೇಕಗಳನ್ನು ತಿದ್ದಿ ಇಟ್ಟುಕೊಳ್ಳಬೇಕು. ಅರ್ಧ ಇಂಚು ದಪ್ಪವಿರುವ ಒಂದು ಗಾಜಿನ ಹಲಗೆಯನ್ನು ಚೆನ್ನಾಗಿ ತೊಳೆದು ಅದರ ಮೇಲೆ ಭದ್ರವಾಗಿ ಅಂಟಿಕೊಳ್ಳುವ ಒಂದು ದ್ರವವನ್ನು ಲೇಪಿಸಿ ಒಲೆಯ ಮೇಲೆ ಒಣಗಿಸಬೇಕು. ಇದರ ಮೇಲೆ ಜೆಲೆಟಿನ್, ನೀರು ಮತ್ತು ಬೈಕ್ರೋಮೇಟ್ ಸೇರಿಸಿದ ದ್ರಾವಣವನ್ನು ಹರಿಬಿಟ್ಟು ಅದು ಹಲಗೆಯ ಮೇಲೆಲ್ಲ ಒಂದೇ ಸಮವಾಗಿರುವ ಹಾಗೆ ನೋಡಿಕೊಂಡು ಒಲೆಯ ಮೇಲೆ ಕಾಯಿಸಿ ಆರಿಸಬೇಕು. ಆಗ ಅದು ಪ್ರಕಾಶ ಸಂವೇದಕ (ಲೈಟ್ ಸೆನ್ಸಿಟಿವ್) ಸ್ವಭಾವವನ್ನು ಹೊಂದುತ್ತದೆ. ಇದನ್ನು ಕತ್ತಲೆಯಲ್ಲಿ ಕಪ್ಪು ಕಾಗದ ಅಥವಾ ಬಟ್ಟೆಯಲ್ಲಿ ಸರಿಯಾಗಿ ಮುಚ್ಚಿಡಬೇಕು. ಹೀಗೆ ತಯಾರಿಸಿದ ಗಾಜಿನ ಹಲಗೆಯ ಮೇಲೆ ಛಾಯಾಗ್ರಹಣ ಋಣಫಲಕವನ್ನು ಇಟ್ಟು ತೀಕ್ಷ್ಣವಾದ ಕಿರಣಗಳು ಅದರ ಮೇಲೆ ಪ್ರವಹಿಸುವಂತೆ ಬಿಡಬೇಕು. ಋಣಫಲಕದಲ್ಲಿ ಎಲ್ಲೆಲ್ಲಿ ಕಪ್ಪು, ಬಿಳುಪು ಸಮ್ಮಿಶ್ರವಾಗಿಯೋ ಅಲ್ಲಿ ಕಿರಣಗಳು ಅರ್ಧಂಬರ್ಧ ಪ್ರವೇಶಿಸಿ ಜೆಲೆಟಿನ್ನನ್ನು ಅಲ್ಪಸ್ವಲ್ಪ ಗಟ್ಟಿ ಮಾಡುತ್ತವೆ. ಮತ್ತು ಋಣಫಲಕದಲ್ಲಿ ಎಲ್ಲೆಲ್ಲಿ ಬಿಳುಪು ಹೆಚ್ಚಾಗಿದೆಯೋ ಅಲ್ಲಿ ಕಿರಣಗಳು ಪೂರ್ಣವಾಗಿ ಪ್ರವೇಶಿಸಿ ಜೆಲೆಟನ್ನಿನ ಮೇಲೆ ಪ್ರಭಾವ ಬೀರಿ ಅದನ್ನು ಚೆನ್ನಾಗಿ ಗಟ್ಟಿಮಾಡುತ್ತವೆ. ಈ ಉಪವಿಧಾನಕ್ಕೆ ಬೆಳಕಿಗೆ ಒಡ್ಡುವುದು ಎಂದು ಹೆಸರು. ಇದಾದ ಮೇಲೆ ಗಾಜಿನ ಹಲಗೆಯನ್ನು ನೀರಿನಲ್ಲಿ ಚೆನ್ನಾಗಿ ತೊಳೆಯುವುದರಿಂದ ಗಟ್ಟಿಯಾಗದೆ ಇರುವ ಜಿಲೆಟಿನ್ ವಸ್ತುವೆಲ್ಲ ಕರಗಿಹೋಗಿ ಗಟ್ಟಿಯಾಗಿರುವ ಮತ್ತು ಅರ್ಧ ಗಟ್ಟಿಯಾಗಿರುವ ಜೆಲೆಟಿನ್ ಮಾತ್ರ ಉಳಿದುಕೊಳ್ಳುತ್ತದೆ. ಇದು ಬತ್ತಿದ ಕೆರೆಯಂಗಳದಲ್ಲಿ ಕೆಲವು ಕಡೆ ಆಳವಾದ ಕೆಲಕಡೆ ಆಳವಿಲ್ಲದ ಹಳ್ಳಗಳೂ ಇನ್ನೂ ಕೆಲವು ಕಡೆ ಮಟ್ಟದ ನೆಲವಿರುವ ಹಾಗೆ ಕಾಣುತ್ತದೆ. ಇದನ್ನು ಮುದ್ರಣ ಫಲಕವನ್ನಾಗಿ ಉಪಯೋಗಿಸುತ್ತಾರೆ.

ಈ ತರಹೆಯ ಮುದ್ರಣ ಫಲಕವನ್ನು ಮುದ್ರಣ ಯಂತ್ರಕ್ಕೆ ಜೋಡಿಸಿ ಇದರ ಮೇಲೆ ಮಸಿಲೇಪನ ಉರುಳೆಗಳಿಂದ ಇದಕ್ಕೆ ಸರಿಯಾಗಿ ವಿಶೇಷವಾಗಿ ತಯಾರಿಸಿದ ಮಸಿಯನ್ನು ಲೇಪಿಸಿದಾಗ ಮಸಿ ಆಳವಾದ ಹಳ್ಳಗಳಿರುವ ಪ್ರದೇಶಗಳಲ್ಲಿ ಹೆಚ್ಚಾಗಿಯೂ ಆಳವಿಲ್ಲದ ಪ್ರದೇಶಗಳಲ್ಲಿ ಸ್ವಲ್ಪವಾಗಿಯೂ ಮಟ್ಟ ಪ್ರದೇಶಗಳಲ್ಲಿ ಅತಿ ವಿರಳವಾಗಿಯೂ ಉಳಿಯುತ್ತದೆ. ಇದರ ಮೇಲೆ ಕಾಗದದ ಹಾಳೆಯನ್ನಿಟ್ಟು ಒತ್ತಡ ಉರುಳೆಯಿಂದ ಒತ್ತಿದರೆ ಗಾಜಿನ ಪ್ಲೇಟಿನ ಮೇಲಿರುವ ಮಸಿ ಕಾಗದದ ಮೇಲೆ ಬಂದು ಛಾಯಾಗ್ರಹಣ ಮಾಡಿದ ಚಿತ್ರ ಅಥವಾ ವಸ್ತು ಮುದ್ರಿಸಲ್ಪಡುತ್ತದೆ. ಇದರಲ್ಲಿ ಚಿತ್ರ ಅತಿ ಸೂಕ್ಷ್ಮವಾಗಿರುವ ಹಲವು ಗಾತ್ರದ ಚುಕ್ಕೆಗಳಿಂದ ಕೂಡಿರದೆ ಅಖಂಡವಾದ ಒಂದೇ ಛಾಯೆಯಿಂದ ಕೂಡಿರುತ್ತದೆ. ಮತ್ತು ಚಿತ್ರ ಬಹಳ ಸ್ವಾಭಾವಿಕವಾಗಿ ಕಾಣುತ್ತದೆ. ಈ ವಿಧಾನದಿಂದ ಬಹುವರ್ಣದ ಚಿತ್ರಗಳನ್ನು ಸಹ ಮುದ್ರಿಸಬಹುದು. ಆದರೆ ಇದರಿಂದ ಗಂಟೆಗೆ 200 ಪ್ರತಿಗಳನ್ನು ಮಾತ್ರ ಮುದ್ರಿಸಬಹುದು.

1940ರಿಂದ ಈಚೆಗೆ ಗಾಜಿನ ಹಲಗೆಯ ಬದಲಾಗಿ, ತೆಳುವಾದ ಲೋಹದ ತಗಡುಗಳ ಮೇಲೆ ಮುದ್ರಣ ಫಲಕವನ್ನು ತಯಾರಿಸಿ ಅದರಿಂದ ಕಾಲೊಟೈಪ್ ಮುದ್ರಣ ಮಾಡಿ ಹೆಚ್ಚು ಪ್ರತಿಗಳನ್ನು ಮುದ್ರಿಸಬಹುದಿತ್ತು. ತಂತ್ರಾಂಶ ಮುದ್ರಣ ತಂತ್ರಜ್ಞಾನ ರೂಢಿಗೆ ಬಂದ ಮೇಲೆ ಈ ವಿಧಾನ ಮರೆಯಾಗಿದೆ. (ಡಿ.ಎಸ್.ಜಿ.)

**ಕಾಲೊರಾಡೋ** : ಅಮೆರಿಕ ಸಂಯುಕ್ತ ಸಂಸ್ಥಾನದ 38ನೆಯ ರಾಜ್ಯ. ಅಮೆರಿಕ ಸ್ವಾತಂತ್ರ್ಯ ಘೋಷಿಸಿಕೊಂಡು 100 ವರ್ಷಗಳು ಆಗಿದ್ದಾಗ ಆ ಒಕ್ಕೂಟವನ್ನು ಸೇರಿಕೊಂಡದ್ದರಿಂದ ಇದಕ್ಕೆ ಶತಾಬ್ದಿ ರಾಜ್ಯವೆಂದು ಹೆಸರು ಬಂದಿದೆ. ವಿಸ್ತೀರ್ಣದ ದೃಷ್ಟಿಯಲ್ಲಿ ಇದು ಒಕ್ಕೂಟದ 8ನೇಯ ರಾಜ್ಯ. ಸಮುದ್ರ ಮಟ್ಟದಿಂದ 2061 ಮೀ.

ಎತ್ತರದಲ್ಲಿರುವ ಈ ರಾಜ್ಯ ಈ ದೇಶದಲ್ಲಿ ಅತ್ಯುನ್ನತವಾದ್ದು, ಉತ್ತರದಲ್ಲಿ ವ್ಯೋಮಿಂಗ್ ಮತ್ತು ನೆಬ್ರಾಸ್ಕ, ಪೂರ್ವದಲ್ಲಿ ನೆಬ್ರಾಸ್ಕ ಮತ್ತು ಕ್ಯಾನ್ಸಾಸ್, ದಕ್ಷಿಣದಲ್ಲಿ ಓಕ್ಲಹೋಮ ಮತ್ತು




ನ್ಯೂ ಮೆಕ್ಸಿಕೋ, ಪಶ್ಚಿಮದಲ್ಲಿ ಯೂಟಾ–ಇವು ಇದರ ಮೇರೆಗಳು. ವಿಸ್ತೀರ್ಣ 269837 ಚ.ಕಿಮೀ. ಜನಸಂಖ್ಯೆ 51,16,796 (2011). ರಾಜಧಾನಿ ಡೆನ್ವರ್. ಜನಸಂಖ್ಯೆ 554,636 (2000). (ಸಿ.ಎಂ.)

ಭೌಗೋಳಿಕವಾಗಿ ಕಾಲೊರಾಡೋದಲ್ಲಿ ಮೂರು ಪ್ರತ್ಯೇಕ ವಿಭಾಗಗಳಿವೆ. ಪೂರ್ವದ ಮೈದಾನಪ್ರದೇಶ, ರಾಕಿ ಪರ್ವತಗಳನ್ನೊಳಗೊಂಡ ಮಧ್ಯಪರ್ವತ ಪ್ರದೇಶ ಮತ್ತು ಕಣಿವೆ, ಪ್ರಸ್ಥಭೂಮಿಗಳ ಪಶ್ಚಿಮಭಾಗ. ರಾಜ್ಯದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 2061 ಮೀ. ಅತ್ಯುನ್ನತ ಶಿಖರ ಎಲ್ಬರ್ಟ್ (4373 ಮೀ). 4242 ಮೀ ಗಿಂತ ಎತ್ತರದ 55 ಶಿಖರಗಳನ್ನು ಗುರುತಿಸಿ ಹೆಸರಿಸಲಾಗಿದೆ. ಇಲ್ಲಿಯ ಮುಖ್ಯ ನದಿಗಳು ಇವು: ಕಾಲೊರಾಡೋ–ರಾಕೀ ಪರ್ವತಗಳಲ್ಲಿ ಹುಟ್ಟಿ ಮುಖ್ಯ ಉಪನದಿಯೊಡನೆ ಸೇರಿ ಪ್ರಾಂತ್ಯದ ಪಶ್ಚಿಮ ಭಾಗದಲ್ಲಿ ಹರಿದು ಪೆಸಿಫಿಕ್ ಸಾಗರವನ್ನು ಸೇರುತ್ತದೆ. ರೀಯೊಗ್ರಾಂಡ್ ನದಿ ದಕ್ಷಿಣ–ಮಧ್ಯಭಾಗಗಳಲ್ಲಿ ಪ್ರವಹಿಸುತ್ತದೆ; ಅರ್ಕಾನ್ಸ್ ಆಗ್ನೇಯ ಭಾಗದಲ್ಲಿ ಹರಿಯುತ್ತದೆ; ಕೊನೆಯದಾಗಿ ದಕ್ಷಿಣ ಮತ್ತು ಉತ್ತರ ಪ್ಲ್ಯಾಟ್ ನದಿಗಳು ನೈಋತ್ಯ ಭಾಗದಲ್ಲಿ ಪ್ರವಹಿಸುತ್ತವೆ. ಇಲ್ಲಿಯ ವಾಯುಗುಣ ವೈವಿಧ್ಯಪೂರ್ಣವಾದ್ದು. ಅತಿ ಹೆಚ್ಚಿನ ಉಷ್ಣತೆ 46.1$^{o}$ ಸೆ, ಕನಿಷ್ಠ ಉಷ್ಣತೆ 12.2$^{o}$ ಸೆ. ವಿವಿಧ ಪ್ರದೇಶಗಳಲ್ಲಿ ವಾಯುಗುಣದಲ್ಲಿ ಬಹಳ ಹೆಚ್ಚಿನ ಅಂತರಗಳಿರುತ್ತವೆ. ವಾರ್ಷಿಕ ಸರಾಸರಿ ಮಳೆ 325 ಸೆಂ.ಮೀ. ಸ್ಯಾನ್ ಲೂಯಿ ಕಣಿವೆ ಪ್ರದೇಶದಲ್ಲಿ 14 ಸೆಂಮೀಗಿಂತಲೂ ಕಡಿಮೆಯಾದರೆ ವಾಯವ್ಯ ಭಾಗದಲ್ಲಿ 54 ಸೆಂಮೀ ಮಳೆ ಬೀಳುತ್ತವೆ. ಗೆನಿಸನ್ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಹಿಮ ಬೀಳುತ್ತವೆ. ಇಲ್ಲಿ ಬೀಳುವ ವಾರ್ಷಿಕ ಸರಾಸರಿ ಹಿಮಪಾತ 38'. ಬೇಸಿಗೆಯಲ್ಲಿ ವಾಯುಗುಣ ಹಿತಕರವಾಗಿರುತ್ತದೆ. ಕಾಲೊರಾಡೋದ ಮಣ್ಣು ಬಹಳ ಫಲವತ್ತಾದ್ದು. ಹೆಚ್ಚು ಭಾಗ ಅರಣ್ಯ. ಇಡೀ ಸಂಯುಕ್ತ ಸಂಸ್ಥಾನದ ಶೇ.8 ಅರಣ್ಯಗಳು ಇಲ್ಲಿವೆ. ವರ್ಷಂಪ್ರತಿ 60,00,000 ಜನ ಇಲ್ಲಿಯ ಅರಣ್ಯಗಳನ್ನು ಸಂದರ್ಶಿಸುತ್ತಾರೆ. ಇಲ್ಲಿ ಸರ್ಕಾರದ 11 ರಕ್ಷಿತಾರಣ್ಯಗಳಿವೆ. ಅನೇಕ ರೀತಿಯ ಉಪಯುಕ್ತ ಮರಗಳು ಇಲ್ಲಿ ಬೆಳೆಯುತ್ತವೆ. ರಾಜ್ಯದ ಅರ್ಧಕ್ಕೂ ಹೆಚ್ಚು ಭಾಗ ಹುಲ್ಲುಗಾವಲು.

ಎತ್ತರಕ್ಕನುಸಾರವಾಗಿ ಇಲ್ಲಿ ಸಸ್ಯಸಂಪತ್ತಿನಲ್ಲಿ ವೈವಿಧ್ಯವುಂಟು. ಸಸ್ಯಸಂಪತ್ತಿನ ಆಧಾರದ ಮೇಲೆ ಐದು ಭಾಗಗಳನ್ನು ಗುರುತಿಸಬಹುದು: 1818 ಮೀ ಎತ್ತರದ ವರೆಗಿನ ಅಲ್ಪ ಮಳೆಯಾಗುವ ಪ್ರದೇಶ. 1818–2424 ಮೀ ಎತ್ತರದ ಪ್ರದೇಶ, 2424–3030 ಮೀ ಎತ್ತರದ ಗುಡ್ಡಗಾಡು ಪ್ರದೇಶ, 3030–3485 ಮೀ ವರೆಗಿನ ಬೆಟ್ಟ ಪ್ರದೇಶ ಮತ್ತು 3485 ಮೀ ಗೂ ಎತ್ತರದ ಪರ್ವತ ಪ್ರದೇಶ. ಈ ವಿಭಾಗಗಳ ಸಸ್ಯಗಳಲ್ಲಿ ವೈವಿಧ್ಯವೂ ಕಂಡುಬರುತ್ತದೆ.

ಇಲ್ಲಿಯ ಮೈದಾನ ಮತ್ತು ಅರಣ್ಯಗಳಲ್ಲಿ ಕಾಡೆಮ್ಮೆಗಳೂ ಜಿಂಕೆಗಳೂ ಹೇರಳವಾಗಿದ್ದುವು. ಈಗ ಜಿಂಕೆಗಳು ಮಾತ್ರ ಅಲ್ಪಸಂಖ್ಯೆಯಲ್ಲಿ ಉಳಿದುಕೊಂಡಿವೆ. ಪರ್ವತ ಪ್ರದೇಶಗಳಲ್ಲಿ ಸಿಂಹ ಮತ್ತು ಕರಡಿಗಳು ಈಗಲೂ ಅಲ್ಪಸಂಖ್ಯೆಯಲ್ಲಿ ಉಳಿದುಕೊಂಡಿವೆ. ಕರಿ ಕರಡಿ, ಕಂದುಬಣ್ಣದ ಕರಡಿ, ಮೊಂಡುಬಾಲದ ಬೆಕ್ಕು, ಕೆಂಪು ತೋಳ, ಬೀವರ್ ಮತ್ತು ಕಾಡುಹಂದಿಗಳು ಅಧಿಕವಾಗಿ ವಾಸಿಸುತ್ತವೆ. ರಾಷ್ಟ್ರೀಯ ಪಕ್ಷಿಯೆಂದು ಪರಿಗಣಿತವಾಗಿರುವ ಲಾರ್ಕ್‌ಬಂಟಿಂಗ್, ರಾಬಿನ್, ಮೈದಾನದ ಲಾರ್ಕ್ ಅಥವಾ ಬಾನಾಡಿ, ಮ್ಯಾಗ್‌ಪೈ ಮುಂತಾದ ಅನೇಕ ಜಾತಿಯ ಹಕ್ಕಿಗಳೂ ಗೂಬೆ, ಡೇಗೆ ಮುಂತಾದ ದುಷ್ಟಪಕ್ಷಿಗಳೂ ಹಲವು ಬಗೆಯ ಹದ್ದುಗಳೂ ಇಲ್ಲಿ ಕಾಣಬರುತ್ತವೆ. ಒಳಭಾಗದ ಸರೋವರಗಳಲ್ಲೂ ನದಿಗಳಲ್ಲೂ ಅನೇಕ ಜಾತಿಗಳ ಮೀನುಗಳಿವೆ. ಇಲ್ಲಿ ಉರಗ ಜಾತಿಗಳು ವಿರಳ: ಆಮೆ, ಹಾವು, ಹಲ್ಲಿಗಳು ಇವುಗಳಲ್ಲಿ ಮುಖ್ಯವಾದವು.

ಕಾಲೊರಾಡೋದಲ್ಲಿ ಅಮೂಲ್ಯವಾದ ಮತ್ತು ಕೈಗಾರಿಕೆಗೆ ಉಪಯುಕ್ತವಾದ ಖನಿಜಸಂಪತ್ತು ಹೇರಳವಾಗಿದೆ. ಸು. 250 ಬಗೆಯ ಉಪಯುಕ್ತ ಖನಿಜಗಳನ್ನು ಅಗೆದು

**ರಾಯಲ್ ಕಮರಿಗೆ ಅಡ್ಡಲಾಗಿ ಅರ್ಕಾನ್ಸಾ ನದಿಯ ಮೇಲೆ 1053' ಎತ್ತರದಲ್ಲಿರುವ ಸೇತುವೆ. ಉದ್ದ 880' ವಿಶ್ವದಲ್ಲೇ ಅತ್ಯುನ್ನತ ತೂಗು ಸೇತುವೆಯಿದು.**

ತೆಗೆಯುತ್ತಾರೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಸಿಕ್ಕುವ ಮೊಲಿಬ್ಡೆನಮ್ ಖನಿಜದ ಅಧಿಕಾಂಶ ದೊರಕುವುದು ಇಲ್ಲಿ. ಯುರೇನಿಯಂ, ರೇಡಿಯಂ, ಟಂಗ್‌ಸ್ಟನ್, ಚಿನ್ನ, ಸೀಸ, ತವರ, ಬೆಳ್ಳಿ, ಸತು ಮುಂತಾದ ಅನೇಕ ಲೋಹಗಳು ಹೆಚ್ಚಾಗಿ ಉತ್ಪತ್ತಿಯಾಗುತ್ತವೆ. ಕಲ್ಲಿದ್ದಲು ಮತ್ತು ತೈಲಗಳ ವಿಚಾರದಲ್ಲಿ ಇಡೀ ರಾಷ್ಟ್ರಕ್ಕೆ ಇದು ಪ್ರಥಮ. ಚಿನ್ನ–ಬೆಳ್ಳಿಗಳ ಆಸೆಯಿಂದ ಜನ ಇಲ್ಲಿಗೆ ಮೊದಮೊದಲು ವಲಸೆ ಬರಲಾರಂಭಿಸಿದರು. 1859ರಲ್ಲಿ ಚಿನ್ನದ ನಿಕ್ಷೇಪವನ್ನು ಪತ್ತೆಹಚ್ಚಲಾಯಿತು. 1900ರ ವೇಳೆಗೆ 2,80,00,000 ಡಾಲರ್ ಮೌಲ್ಯದ ಚಿನ್ನ ಉತ್ಪತ್ತಿಯಾಗುತ್ತಿತ್ತು. ಡೆನ್ವರ್ ಬಳಿಯ ಕಣಿವೆಗಳು ಮತ್ತು ಕ್ರಿಪಲ್ ಕ್ರೀಕ್‌ಗಳಲ್ಲಿ ಪ್ರಮುಖ ಚಿನ್ನದ ನಿಕ್ಷೇಪಗಳಿವೆ. ಲೀಡ್ ಎಲ್, ಔರೆ, ಸಿಲ್ವರ್‌ಟನ್, ಕ್ರೀಡ್ ಮುಂತಾದವು ಬೆಳ್ಳಿ ಉತ್ಪಾದನ ಕೇಂದ್ರಗಳು. 1892ರಲ್ಲಿ 2,30,00,000 ಡಾಲರ್ ಮೌಲ್ಯದ ಬೆಳ್ಳಿಯನ್ನು ಉತ್ಪಾದಿಸಲಾಗಿತ್ತು. ಕ್ಯಾನನ್ ನಗರದ ಬಳಿ 1862ರಲ್ಲಿ ತೈಲ ಉತ್ಪಾದನೆ ಆರಂಭವಾಯಿತು. ರ‍್ಯಾಂಗ್ಲೀಯಲ್ಲಿ 1946ರಿಂದೀಚೆಗೆ ತೈಲೋತ್ಪಾದನೆ ಯಾಗುತ್ತಿದೆ. ಡೆನ್ವರ್–ಜ್ಯೂಲೆಸ್‌ಬರ್ಗ್ ಮತ್ತು ಸಾನ್‌ವಾನ್ ಇತರ ಪ್ರಮುಖ ತೈಲೋತ್ಪಾದನ ನೆಲೆಗಳು.

ನೀರಾವರಿ ಕೆಲಸಗಳು ಸಾಕಷ್ಟು ನಡೆದಿವೆ. ಸು. 1860 ರಿಂದ ಈ ದಿಕ್ಕಿನಲ್ಲಿ ಪ್ರಯತ್ನಗಳು ನಡೆದುವು. ಈಗ ಲಕ್ಷಾಂತರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯವುಂಟು. ಸಕ್ಕರೆ ಬೀಟ್ ಬೆಳೆ ನೀರಾವರಿ ಬೆಳೆಗಳಲ್ಲಿ ಮುಖ್ಯವಾದ್ದು. ನೀರಾವರಿ ಕೆಲಸಗಳಿಗಾಗಿ ರಾಜ್ಯವನ್ನು ಏಳು ವಲಯಗಳಾಗಿ ವಿಭಾಗಿಸಲಾಗಿದೆ. ಈಚೆಗೆ 7–8 ಕೇಂದ್ರಗಳಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಿದ್ದರೂ ಅಷ್ಟೇನೂ ಹೆಚ್ಚಿಲ್ಲ. ಕೈಗಾರಿಕೋದ್ಯಮಗಳಲ್ಲಿ ಗಣಿಗಾರಿಕೆಗೆ ಪ್ರಥಮಸ್ಥಾನ. ಗಣಿ ಉದ್ಯಮಕ್ಕೆ ಬೇಕಾದ ಯಂತ್ರಸಾಮಗ್ರಿಗಳನ್ನೂ ತಯಾರಿಸಲಾಗುತ್ತಿದೆ. ಪ್ಯೂಬ್ಲೋ ನಗರದಲ್ಲಿರುವ ಕಾಲೊರಾಡೋ ಇಂಧನ ಮತ್ತು ಕಬ್ಬಿಣ ಸಂಸ್ಥೆ ದೇಶದ ಪಶ್ಚಿಮ ಭಾಗದಲ್ಲಿ ಅತ್ಯಂತ ಬೃಹತ್ ಉದ್ಯಮ. ಡೆನ್ವರ್‌ನಲ್ಲಿ ರಬ್ಬರ್ ಉತ್ಪಾದನೆಯಾಗುತ್ತದೆ. ಮಾಂಸ ಸಂವೇಷ್ಟನ ತಯಾರಿಕೆ, ಒಣಹಣ್ಣುಗಳನ್ನು ಡಬ್ಬಗಳಲ್ಲಿ ತುಂಬಿ ವ್ಯಾಪಾರಕ್ಕೆ ಸಿದ್ಧಗೊಳಿಸುವುದು–ಇವು ಇತರ ಪ್ರಮುಖ ಕೈಗಾರಿಕೆಗಳು. ರಾಜಧಾನಿ ಡೆನ್ವರ್ ಈ ರಾಜ್ಯದ ಪ್ರಮುಖ ಕೈಗಾರಿಕಾ ಕೇಂದ್ರ.

ಬೆಟ್ಟಗುಡ್ಡಗಳ ಈ ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ಕಷ್ಟಸಾಧ್ಯ. ಅನೇಕ ಪ್ರಯೋಗಗಳಾದ ಮೇಲೆ 1870–80ರಿಂದ ಈಚೆಗೆ ಕೆಲವು ರಾಷ್ಟ್ರೀಯ ರೈಲುಮಾರ್ಗಗಳನ್ನು ನಿರ್ಮಿಸಲಾಗಿದೆ. ಇವು ಕೆಲವು ಖಾಸಗಿ ಸಂಸ್ಥೆಗಳಿಗೆ ಸೇರಿವೆ. ಡೆನ್ವರ್–ರೀಯೊಗ್ರಾಂಡ್, ಡೆನ್ವರ್–ಸಾಲ್ಟ್‌ಲೇಕ್, ಯೂನಿಯನ್–ಪೆಸಿಫಿಕ್ ಇವು ಪ್ರಮುಖ ಸಂಸ್ಥೆಗಳಾಗಿವೆ. 1914ರಲ್ಲಿದ್ದ ರೈಲುಮಾರ್ಗದ ಉದ್ದ 9182 ಕಿಮೀ 20ನೆಯ ಶತಮಾನದ ಮಧ್ಯಕಾಲದಲ್ಲಿದ್ದದ್ದು 6080 ಕಿಮೀ ಮಾತ್ರ. ಇದಲ್ಲದೆ 19,200 ಕಿಮೀ ರಾಷ್ಟ್ರೀಯ ಹೆದ್ದಾರಿಗಳೂ 9,600 ಕಿಮೀ ಸ್ಥಳೀಯ ರಸ್ತೆಗಳೂ ನಿರ್ಮಿತವಾಗಿವೆ. ಮೋಟರು ವಾಹನಗಳ ಇಂಧನ ಮತ್ತು ರಸ್ತೆನಿರ್ಮಾಣದ ಸಂಬಂಧವಾದ ತೆರಿಗೆಗಳಿಂದ ಈ ಶತಮಾನದ ಮಧ್ಯಭಾಗದಲ್ಲಿ 6,00,00,000 ಡಾಲರುಗಳ ವರಮಾನವಿತ್ತು. 1926ರಲ್ಲಿ ವಿಮಾನಸಾರಿಗೆ ಬಂತು, ಡೆನ್ವರ್ ಪ್ರಮುಖ ವಿಮಾನ ನಿಲ್ದಾಣ; ರಾಷ್ಟ್ರದಲ್ಲಿ ಏಳನೆಯದು. ಏಳು ಪ್ರಮುಖ ಸಂಸ್ಥೆಗಳ ವಿಮಾನಗಳು ಇಲ್ಲಿಗೆ ಬರುತ್ತವೆ.

1860ರಲ್ಲಿ ಸಂಯುಕ್ತಸಂಸ್ಥಾನಗಳೊಡನೆ ಸೇರುವ ಮುನ್ನ ಕಾಲೊರಾಡೋದ ಜನಸಂಖ್ಯೆ 34,251 ಇದ್ದು, ಅದರಲ್ಲಿ ಶೇ. 86.1ರಷ್ಟು ಮಂದಿ ಗ್ರಾಮಪ್ರದೇಶಗಳಲ್ಲಿ

ಕಾಲೊರಾಡೋದ ಸಾಮಾನ್ಯ ಭೂದೃಶ್ಯ. ಕಾಲೊರಾಡೋ ಸ್ಪ್ರಿಂಗ್ಸ್ ಬಳಿಯ ದೇವವನದ ಒಂದು ಭಾಗವಿದು. ಬಂಡೆಗಳು 300'ಗಿಂತಲೂ ಎತ್ತರವಾಗಿವೆ.

ವಾಸಿಸುತ್ತಿದ್ದರು. ಸು. 1880ರಲ್ಲಿ ಇದು ಐದರಷ್ಟು ಹೆಚ್ಚಿತು. ಆಗಿನ ಜನಸಂಖ್ಯೆ 5,39,700 (ಶೇ.51.7 ಗ್ರಾಮಸ್ಥರು). 1960ರಲ್ಲಿ ಒಟ್ಟು ಜನಸಂಖ್ಯೆ 17,53,947. ಶೇ.73.7ರಷ್ಟು ಮಂದಿ ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಕಾಲೊರಾಡೋವಿನ ಜನತೆಯಲ್ಲಿ ವಿಶೇಷವಾಗಿ ಸ್ಥಳೀಯರೇ ಹೆಚ್ಚು. ವಲಸೆಗಾರರು ಬಹಳ ಕಡಿಮೆ. ನೀಗ್ರೋ ಜನಸಂಖ್ಯೆ ಶೇ.1ರಷ್ಟು ಮಾತ್ರ. ಇತ್ತೀಚಿನ ಜನಸಂಖ್ಯೆ : 4301261 (2000).

**ವಿದ್ಯಾಭ್ಯಾಸ:** ಈ ರಾಜ್ಯದಲ್ಲಿ ಮೊಟ್ಟಮೊದಲಿಗೆ ಡೆನ್ವರಿನ ಬಾಡಿಗೆ ಕಟ್ಟಡದಲ್ಲಿ ಜೆ. ಗೋಲ್ಡ್‌ರಿಕ್ 1859ರಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಿದ. 1860ರಲ್ಲಿ ಅದಕ್ಕಾಗಿ ಒಂದು ಮರದ ಮನೆಯನ್ನು ನಿರ್ಮಿಸಲಾಯಿತು. 1862ರಲ್ಲಿ ವಿದ್ಯಾಶುಲ್ಕ ವಿಧಿಸಿ ಶಾಲೆಗಳನ್ನು ನಡೆಸಲಾರಂಭಿಸಿದರು. ಡೆನ್ವರಿನಲ್ಲಿರುವ ಆಪರ್ಚುನಿಟಿ ಶಾಲೆ ರಾಷ್ಟ್ರದಲ್ಲೆಲ್ಲ ಪ್ರಸಿದ್ಧವಾದ್ದು. 20ನೆಯ ಶತಮಾನದಲ್ಲಿ ಇಲ್ಲಿ 7 ಸರ್ಕಾರಿ ವಿಶ್ವವಿದ್ಯಾಲಯಗಳೂ ಕಾಲೇಜುಗಳೂ ಆರಂಭವಾದುವು. ಇವಲ್ಲದೆ 7 ಖಾಸಗಿ ಶಿಕ್ಷಣಕೇಂದ್ರಗಳೂ 6 ಸಾರ್ವಜನಿಕ ಸಹಾಯ ಪಡೆಯುವ ವಿದ್ಯಾಕೇಂದ್ರಗಳೂ ಇವೆ. ಬೌಲ್ಡರ್‌ನ ಕಾಲೊರಾಡೋ ವಿಶ್ವವಿದ್ಯಾಲಯ (1877), ಕಾಲೊರಾಡೋ ಸರ್ಕಾರಿ ವ್ಯವಸಾಯ ವಿಶ್ವವಿದ್ಯಾಲಯ, ಫೋರ್ಟ್ ಲೂಯಿ ಕೃಷಿ ಮತ್ತು ತಾಂತ್ರಿಕ ಕಾಲೇಜು, ಡೆನ್ವರಿನ ಕಾಲೊರಾಡೋ ಮಹಿಳಾ ಕಾಲೇಜು ಮುಖ್ಯವಾದವು.

**ಇತಿಹಾಸ:** ಕಾಲೊರಾಡೋ ಪ್ರದೇಶ ಹಂತಹಂತವಾಗಿ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿತು. ಆರ್ಕಾನ್ಸ ನದಿಯ ಉತ್ತರದ ಪ್ರದೇಶವನ್ನು 1803ರಲ್ಲಿ ಕೊಳ್ಳಲಾಯಿತು. 1819ರಲ್ಲಿ ಸ್ಪೇನಿನೊಂದಿಗೆ ಮಾಡಿಕೊಂಡ ಒಪ್ಪಂದದ ರೀತ್ಯಾ ಅದರ ಪಶ್ಚಿಮ ಗಡಿಯನ್ನು ನಿಷ್ಕರ್ಷಿಸಲಾಯಿತು. 1845ರಲ್ಲಿ ಟೆಕ್ಸಾಸ್ ಸಂಯುಕ್ತ ಸಂಸ್ಥಾನಕ್ಕೆ ಸೇರಿದಾಗ ಅದರ

ಕಾಲೊರಾಡೋದ ದೇವವನದಲ್ಲಿರುವ, ಸಮತೂಕದಲ್ಲಿ ನಿಂತ ಬೃಹತ್ ಬಂಡೆ

ಪಶ್ಚಿಮಗಡಿಯಲ್ಲಿ ಹೆಚ್ಚು ಪ್ರದೇಶ ಸೇರಿತು. ರೀಯೋಗ್ರಾಂಡ್ ಪಶ್ಚಿಮದ ಪ್ರದೇಶ 1848ರಲ್ಲಿ ಮೆಕ್ಸಿಕೋ ಸ್ವತಂತ್ರವಾದಾಗ ಅಮೆರಿಕಕ್ಕೆ ಸಿಕ್ಕಿತು.

ಬಿಳಿಯ ವಲಸೆಗಾರರ ಪ್ರವೇಶವಾಗುವ ಮೊದಲು ಕಾಲೊರಾಡೋವಿನ ನೈಋತ್ಯ ಭಾಗದಲ್ಲಿ ಪ್ಯೂಬ್ಲೋ ಇಂಡಿಯನರು ವಾಸಿಸುತ್ತಿದ್ದರು. ಪ್ರ.ಶ.ಪೂ. 500ರಲ್ಲಿ ಆ ಜನರ ಸಾಮೂಹಿಕ ವಸತಿಗಳ ಪ್ರೇಕ್ಷಣೀಯ ಅವಶೇಷಗಳನ್ನು ಮೆಸಾವೆರ್ಡೆ ರಾಷ್ಟ್ರೀಯ ಉದ್ಯಾನದಲ್ಲಿ ಈಗಲೂ ರಕ್ಷಿಸಿಡಲಾಗಿದೆ. ಬಿಳಿಯರು ಮೆಕ್ಸಿಕೋ ಪ್ರದೇಶಕ್ಕೆ ಬಂದಾಗ ಇಂಡಿಯನರ ಅಲೆಮಾರಿ ತಂಡಗಳು ಇಲ್ಲಿದ್ದುವು. ಇವರಲ್ಲಿ ಷೀಯೆನ್, ಅರಾಪಹೋ ಮತ್ತು ಯೂಟೆ ಪಂಗಡದವರು ಪ್ರಮುಖರು.

ಪ್ರಸಿದ್ಧವಾದ ಸಿಬೋಲಾದ ಏಳು ನಗರಗಳನ್ನು ಹುಡುಕುತ್ತ ಫ್ರಾನಿಸ್ಕೊ ಡಿ ಕಾರಾನಡೊ 1540–42ರಲ್ಲಿ ಕ್ಯಾನ್ಸಾಸ್ ವರೆಗೂ ಪರ್ಯಟನೆ ಮಾಡಿದಂತೆ ತಿಳಿದುಬರುತ್ತದೆ. ಅವನ ಪ್ರಯತ್ನ ವಿಫಲವಾದ್ದರಿಂದ ಕೆಲಕಾಲ ಅನ್ವೇಷಣಕಾರ್ಯ ಮಂದಗಾಮಿಯಾಗಿತ್ತು. 1598ರಲ್ಲಿ ವಾಸ್ ಡಿ ಒನಾಟೆ ನ್ಯೂ ಮೆಕ್ಸಿಕೋದಲ್ಲಿ ವಸಾಹತು ಸ್ಥಾಪಿಸಿದಾಗ ಪುನಃ ಬಿಳಿಯರು ಇಲ್ಲಿಗೆ ಬರಲಾರಂಭಿಸಿದರು. 1796ರಲ್ಲಿ ವಾಸ್ ಡಿ ಉಲಿಬರ್‍ರಿ ಇಂಡಿಯನರನ್ನು ಅಟ್ಟಿಸಿಕೊಂಡು ಕಾಲೊರಾಡೋದ ಉತ್ತರ ಭಾಗಗಳಿಗೆ ಬಂದು, ಆ ಪ್ರದೇಶವನ್ನು ಸ್ಪೇನಿಗೆ ಸೇರಿಸಿಕೊಂಡ, ಉತ್ತರ ಕ್ಯಾಲಿಫೋರ್ನಿಯಕ್ಕೆ ಹೊಸ ಮಾರ್ಗ ಕಂಡುಹಿಡಿಯುವುದರಲ್ಲಿ ತೊಡಗಿದ್ದ ಒಂದು ತಂಡ 1777ರಲ್ಲಿ ಪಶ್ಚಿಮ ಕಾಲೊರಾಡೋ ಪ್ರದೇಶವನ್ನು ಅನ್ವೇಷಿಸಿತು. 1803ರಲ್ಲಿ ಅಮೆರಿಕದ ಜೇಮ್ಸ್ ಪರ್ಸೆಲ್ ತುಪ್ಪುಳ ವ್ಯಾಪಾರಕ್ಕಾಗಿ ಈ ಪ್ರದೇಶವನ್ನು ಪ್ರವೇಶಿಸಿದ. ಮೇಜರ್ ಲಾಂಗ್ ಸರ್ಕಾರದ ನಿಯೋಗವೊಂದರ ನಾಯಕನಾಗಿ 1820ರಲ್ಲಿ ಪ್ಲ್ಯಾಟ್ ನದಿ ಪ್ರದೇಶವನ್ನೂ ರಾಕೀ ಪರ್ವತಪ್ರದೇಶವನ್ನೂ ಶೋಧಿಸಿ ಆ ಪ್ರದೇಶವನ್ನು ಅಮೆರಿಕದ ದೊಡ್ಡ ಮರಳ್ಗಾಡೆಂದು ವರ್ಣಿಸಿದ. ಇನ್ನೂ ಕೆಲವು ಸರ್ಕಾರಿ ನಿಯೋಗಗಳು ಆ ಪ್ರದೇಶದ ಪರಿಶೋಧನೆ ನಡೆಸಿದುವು. ಆದರೆ ವ್ಯಾಪಾರಗಳ ಮತ್ತು ಲೋಹಾನ್ವೇಷಕರ ತಂಡಗಳು ಇಡೀ ಪ್ರದೇಶವನ್ನು ಸುತ್ತಾಡಿ ಅದನ್ನು ವಸತಿಗೆ ಯೋಗ್ಯವಾಗುವಂತೆ ಮಾಡಿದುವು. 1858ರಲ್ಲಿ ಚಿನ್ನದ ಗಣಿ ಉದ್ಯಮ ಪ್ರಾರಂಭವಾದಾಗ ಕಾಲೊರಾಡೋ ಪ್ರಸಿದ್ಧಿ ಪಡೆಯಿತು. ಮಿಸಿಸಿಪಿ ನದಿಯಾಚೆಯ ಇಡೀ ಪ್ರದೇಶವನ್ನು ಕ್ರಮೇಣ ಆರು ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಯಿತು. 1830ರ ದಶಕದಲ್ಲಿ ನಾಲ್ಕು ವ್ಯಾಪಾರ ಕೋಠಿಗಳನ್ನು ಆ ಪ್ರದೇಶದಲ್ಲಿ ನಿರ್ಮಿಸಲಾಯಿತು. ಇವೇ ಕಾಲೊರಾಡೋದಲ್ಲಿ ಬಿಳಿಯರ ಪ್ರಥಮ ವಸಾಹತುಗಳು. 1846–47ರಲ್ಲಿ ಮಾರ್ಮನರು ಪ್ಯೂಬ್ಲೋದಲ್ಲಿ ತಾತ್ಕಾಲಿಕವಾಗಿ ನೆಲಸಿದರು. 1842–43 ಮತ್ತು 1845ರಲ್ಲಿ

ಫ್ರಮಾಂಟ್ ಈ ಪ್ರದೇಶದಲ್ಲಿ ಸಂಚರಿಸಿ, ಇಲ್ಲಿಯ ಸ್ಥಿತಿಗಳನ್ನು ಯಥಾವತ್ತಾಗಿ ತಿಳಿಸಿದ. ಆ ಕಾಲದಲ್ಲಿ ಮೆಕ್ಸಿಕೋದ ಟಾವೊಸ್ ನಗರ ವ್ಯಾಪಾರಕೇಂದ್ರವಾಗಿತ್ತು. ಅನಂತರ ಬಿಳಿಯರಿಗೆ ಇಲ್ಲಿ ಭೂಸ್ವಾಮ್ಯ ನೀಡಲಾಯಿತು.

ಪೈಕ್ ಶಿಖರ

1858ರಲ್ಲಿ ಜಾರ್ಜಿಯದ ಗ್ರೀನ್ ರಸೆಲನ ನೇತೃತ್ವದಲ್ಲಿ ಚಿನ್ನದ ಶೋಧನೆಗಾಗಿ ಒಂದು ಕಂಪನಿ ಇಲ್ಲಿಗೆ ಬಂತು. ಇನ್ನೂ ಹಲವರು ಚಿನ್ನವನ್ನು ಹುಡುಕುತ್ತ ಇಲ್ಲಿಗೆ ಬಂದರು. 1859 ಮೇ 6ರಂದು ಜಾನ್ ಎಚ್. ಗ್ರೆಗೊರಿ ಚಿನ್ನದ ಅದಿರು ಇದ್ದ ಪ್ರದೇಶವನ್ನು ಕಂಡುಹಿಡಿದ. 1860–62ರ ಮಧ್ಯೆ ಹೆಚ್ಚು ಸಂಖ್ಯೆಯಲ್ಲಿ ವಲಸೆಗಾರರು ಬರಲಾರಂಭಿಸಿದರು. 1859ರಲ್ಲಿ ಡೆನ್ವರ್, ಬ್ಲ್ಯಾಕ್ ಹಾಕ್, ಗೋಲ್ಡನ್, ಸೆಂಟ್ರಲ್ ಸಿಟಿ, ಮೌಂಟ್ ವರ್ನನ್ ಮತ್ತು ನೆವಾಡ ವಿಲೆ ನಗರಗಳ ಸ್ಥಾಪನೆಯಾಯಿತು.

1858ರಲ್ಲಿ ಪೂರ್ವ ಕಾಲೊರಾಡೋ ಮತ್ತು ಕ್ಯಾನ್ಸಾಸ್‌ನ ಕೆಲವು ಭಾಗಗಳನ್ನೊಳಗೊಂಡ ಅರಾಪಹೋ ವಿಭಾಗ ಏರ್ಪಟ್ಟಿತು. ಆ ಪ್ರದೇಶದ ಪ್ರತಿನಿಧಿಯೊಬ್ಬ ಕಾಲೊರಾಡೋವನ್ನು ಪ್ರತ್ಯೇಕ ಪ್ರದೇಶವೆಂದು ಪರಿಗಣಿಸಬೇಕೆಂದು ವಾದಿಸಲು ಅಮೆರಿಕನ್ ಕಾಂಗ್ರೆಸಿಗೆ ತೆರಳಿದ. ಕಾಲೊರಾಡೋ ರಾಜ್ಯಸ್ಥಾಪನೆಯಾಗಬೇಕೆಂದು ಚಳವಳಿ ಪ್ರಾರಂಭವಾಯಿತು. ಆದರೆ ಇದಕ್ಕೆ ರಚಿಸಲಾದ ಸಂವಿಧಾನವನ್ನು ಜನ ತಿರಸ್ಕರಿಸಿದರು. ಪ್ರಾದೇಶಿಕ ಸರ್ಕಾರ ಸಂವಿಧಾನವನ್ನು ಅವರು ಅನಂತರ ಸ್ವೀಕರಿಸಿದರು. ಉ.ಅ. $37^0$–$43^0$ ಮತ್ತು ಪೂ.ರೇ. $102^0$–$110^0$ ನಡುವಣ ಈ ಪ್ರದೇಶವನ್ನು ಜೆಫರ್ಸನ್ ಎಂದು ಹೆಸರಿಸಲಾಯಿತು.

ಅನಂತರ ಸ್ಥಳೀಯ ಗಣಿ ಉದ್ಯಮಗಳ ಮಾಲೀಕರ ಸಂಘ, ಜನತೆ ಸಂಘಗಳು ಮುಂತಾದ ಸಂಸ್ಥೆಗಳ ಒತ್ತಡದ ಪರಿಣಾಮವಾಗಿ 1861 ಫೆಬ್ರವರಿ 28ರಂದು ಕಾಲೊರಾಡೋ ಪ್ರದೇಶವನ್ನು ಅಮೆರಿಕನ್ ಕಾಂಗ್ರೆಸ್ ಸ್ಥಾಪಿಸಿತು. ವಿಲಿಯಂ ಗಿಲ್ಪಿನ್ ಮೊದಲ ಗವರ್ನರ್. ಇದನ್ನು 17 ಜಿಲ್ಲೆಗಳನ್ನಾಗಿ ವಿಭಾಗಿಸಲಾಯಿತು. ಮೊದಲ ರಾಜಧಾನಿ ಕಾಲೊರಾಡೋ ನಗರ. 1862ರಲ್ಲಿ ಆ ಗೌರವ ಗೋಲ್ಡನ್‌ಗೆ ಲಭ್ಯವಾಯಿತು. 1867ರಲ್ಲಿ ಡೆನ್ವರ್ ತಾತ್ಕಾಲಿಕ ರಾಜಧಾನಿಯಾಯಿತು. ಜನಮತಗಣನೆಯ ಅನಂತರ 1881ರಲ್ಲಿ ಅದನ್ನೇ ಶಾಶ್ವತವಾದ ರಾಜಧಾನಿಯೆಂದು ಪರಿಗಣಿಸಲಾಯಿತು. ಜನಸಂಖ್ಯೆ: 566974 (2006).

1860ರ ದಶಕದಲ್ಲಿ ಕಾಲೊರಾಡೋದ ಅಭಿವೃದ್ಧಿ ನಿಧಾನವಾಗಿತ್ತು. ಅಮೆರಿಕದ ಅಂತರ್ಯುದ್ಧ, ಅನಂತರ ಟೆಕ್ಸಾಸ್ ಹೋರಾಟ, 1864–70ರ ನಡುವೆ ದೇಶೀಯ ಇಂಡಿಯನರೊಡನೆ ಕಲಹ–ಇವು ಅಭಿವೃದ್ಧಿಯನ್ನು ಕುಂಠಿತಗೊಳಿಸಿದುವು. ಕೇಂದ್ರೀಯ ಪಡೆಗಳು 1864ರಲ್ಲಿ ಇಂಡಿಯನರ ಮೇಲೆ ಭೀಕರ ದಾಳಿ ನಡೆಸಿದುವು. ಸ್ಯಾಂಡ್ ಕ್ರೀಕ್ ಕಗ್ಗೊಲೆಯೆಂದು ಇದು ಕುಖ್ಯಾತಿ ಪಡೆದಿದೆ. ಕಾಲೊರಾಡೋ ಇತಿಹಾಸದಲ್ಲಿ ಇದೊಂದು ಕಪ್ಪು ಅಧ್ಯಾಯ. 1870ರ ದಶಕದಲ್ಲಿ ಇಂಡಿಯನರನ್ನು ಬಗ್ಗು ಬಡಿದು, ಹೊಸವಿಧಾನಗಳಿಂದ ಗಣಿ ಉದ್ಯಮವನ್ನು ಲಾಭದಾಯಕವನ್ನಾಗಿ ಮಾಡಿ, ರೈಲುಮಾರ್ಗಗಳನ್ನು ಸ್ಥಾಪಿಸಿ ಕೃಷಿ ಪದ್ಧತಿಯನ್ನು ಸುಧಾರಿಸಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಲಾಯಿತು. ಕಾಲೊರಾಡೋವನ್ನು ಅಮೆರಿಕ ಸಂಯುಕ್ತಸಂಸ್ಥಾನದ ಒಕ್ಕೂಟಕ್ಕೆ ಸೇರಿಸುವ ಕರಡು ಮಸೂದೆಯನ್ನು 1867ರಲ್ಲಿ ರಿಪಬ್ಲಿಕನ್ ಪಕ್ಷ ತಯಾರಿಸಿದರೂ ಆಗಿನ ಅಧ್ಯಕ್ಷ ಆಂಡ್ರ್ಯೂ ಜಾಕ್ಸನ್ ಅದನ್ನು ತಳ್ಳಿಹಾಕಿದ. ಅನಂತರ ಕಾಂಗ್ರೆಸ್ಸಿನ ಅನುಮತಿ ಪಡೆದು 1875–76ರಲ್ಲಿ ಜನತೆಗೆ ಒಪ್ಪಿಗೆಯಾಗುವ ಸಂವಿಧಾನವನ್ನು ರೂಪಿಸಿ, 1876 ಜುಲೈ 1ರಂದು ಅದನ್ನು ಜಾರಿಗೆ ತರಲಾಯಿತು. ಆಗಸ್ಟ್ 1ರಂದು ರಾಜ್ಯವನ್ನು ಒಕ್ಕೂಟಕ್ಕೆ ಸೇರಿಸಿಕೊಂಡುದಾಗಿ ಘೋಷಿಸಲಾಯಿತು.

ಅನಂತರ ಕಾಲದಲ್ಲಿ ರಾಜ್ಯದ ಇತಿಹಾಸ ಗಣಿ ಉದ್ಯಮದ ಇತಿಹಾಸದೊಂದಿಗೆ ಸೇರಿ ಹೋಗುತ್ತದೆ. 1893ರಲ್ಲಿ ಬೆಳ್ಳಿಯ ನಾಣ್ಯಪದ್ಧತಿಯನ್ನು ರದ್ದು ಪಡಿಸಲಾಗಿ ಅಶಾಂತಿಯೇರ್ಪಟ್ಟಿತು. ಆದರೆ 1891ರಲ್ಲಿ ಕ್ರಿಪಲ್ ಕ್ರೀಕ್ ಪ್ರದೇಶದಲ್ಲಿ ಚಿನ್ನದ ಶೋಧನೆಯಾದ್ದರಿಂದ ರಾಜ್ಯ ಪುನಃ ಪ್ರಗತಿ ಪಥದಲ್ಲಿ ಮುನ್ನಡೆಯಲು ಸಾಧ್ಯವಾಯಿತು. ಆ ಸುಮಾರಿನಲ್ಲಿ ಕೈಗಾರಿಕಾರಂಗದಲ್ಲೂ ಅಶಾಂತಿಯೇರ್ಪಟ್ಟಿತು. ಮಾಲೀಕ–ಕಾರ್ಮಿಕ ವಿರಸ ಉಗ್ರವಾಗಿತ್ತು. ರಾಜಕೀಯ ರಂಗದಲ್ಲಿ ಇದರ ದೆಸೆಯಿಂದ ಪಾಪ್ಯು ಲಿಸ್ಟ್–ಡೆಮೊಕ್ರಾಟಿಕ್ ಸಂಯುಕ್ತ ಪಕ್ಷ ಪ್ರಾಬಲ್ಯಗಳಿಸಿ ಮೂರು ಚುನಾವಣೆಗಳಲ್ಲಿ ಜಯಗಳಿಸಿತು. 20ನೆಯ ಶತಮಾನದ ಮೊದಲರ್ಧ ಭಾಗದಲ್ಲಿ ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳು ಸಮಸಮವಾಗಿ ಪ್ರಾಬಲ್ಯ ಗಳಿಸಿದುವು. 1899ರಲ್ಲಿ ಅಲ್ಲಿಯ ಜನ ನೀರಾವರಿಯ ಸಹಾಯದಿಂದ ಸಕ್ಕರೆಬೀಟ್ ಬೆಳೆಯಲು ಆರಂಭಿಸಿದರು. ಅದು ಪ್ರಮುಖ ಬೆಳೆಯಾಯಿತು. ಅನಂತರ ಕಾಲದಲ್ಲಿ ಮೋಟರ್ ವಾಹನಗಳು ಹೆಚ್ಚು ಬಳಕೆಗೆ ಬಂದುದರಿಂದ ಸಾಮಾಜಿಕ–ಆರ್ಥಿಕ ರಂಗಗಳಲ್ಲಿ ಅನೇಕ ಬದಲಾವಣೆಗಳಾದುವು. ಕಾರ್ಖಾನೆಗಳ ಉತ್ಪನ್ನ, ವ್ಯಾಪಾರ ಮತ್ತು ವೃತ್ತಿಗಳು ಬಹುಮುಖವಾಗಿ ಬೆಳೆದುವು. 20ನೆಯ ಶತಮಾನದ ಮಧ್ಯ ಭಾಗದಲ್ಲಿ ಅಭಿವೃದ್ಧಿಯ ಫಲವಾಗಿ ಜನತೆಯ ಮತ್ತು ಸರ್ಕಾರದ ಸಂಪನ್ಮೂಲಗಳು ಬಹುಪಾಲು ಹೆಚ್ಚಿದುವು.

**ಆಡಳಿತ :** 1876ರ ಕಾಲೊರಾಡೋ ಸಂವಿಧಾನದ ಪ್ರಕಾರ ಸರ್ಕಾರದಲ್ಲಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳೆಂಬ ಮೂರು ವಿಭಾಗಗಳಿವೆ. ಗವರ್ನರ್, ಲೆಫ್ಟಿನೆಂಟ್ ಗವರ್ನರ್, ಸೆಕ್ರೆಟರಿ ಆಫ್ ಸ್ಟೇಟ್, ಕೋಶಾಧಿಕಾರಿ, ಲೆಕ್ಕಶೋಧಕ ಮತ್ತು ಅಟಾರ್ನಿ ಜನರಲ್ ಇವರು ಕಾರ್ಯಾಂಗದ ಪ್ರಮುಖ ಅಧಿಕಾರಿಗಳು. ಎರಡು ವರ್ಷಕ್ಕೊಮ್ಮೆ ಚುನಾಯಿತರಾಗುತ್ತಿದ್ದ ಇವರ ಅಧಿಕಾರಾವಧಿಯನ್ನು 1959ರ ಸಂವಿಧಾನ ತಿದ್ದುಪಡಿಯ ರೀತ್ಯಾ ನಾಲ್ಕು ವರ್ಷಗಳಿಗೆ ಏರಿಸಲಾಗಿದೆ. ವಿದ್ಯಾಶಾಖೆಯ ಮೇಲ್ವಿಚಾರಕರೂ ಮೊದಲು ಚುನಾಯಿತ ಅಧಿಕಾರಿಯಾಗಿದ್ದರು. ಆದರೆ 1948ರ ಸಂವಿಧಾನ ತಿದ್ದುಪಡಿಯ ಪ್ರಕಾರ ಐವರು ಚುನಾಯಿತ ಸದಸ್ಯರ ಸಮಿತಿಯೊಂದು ರಾಜಕೀಯದಲ್ಲಿ ಆಸಕ್ತಿಯಿಲ್ಲದ ವ್ಯಕ್ತಿಯೊಬ್ಬನನ್ನು ಆ ಹುದ್ದೆಗೆ ನೇಮಿಸುತ್ತದೆ.

ಶಾಸಕಾಂಗದಲ್ಲಿ ಎರಡು ಸಭೆಗಳಿವೆ–35 ಮಂದಿ ಸದಸ್ಯರಿಂದ ಕೂಡಿದ 'ಸೆನೆಟ್' ಮತ್ತು 65 ಸದಸ್ಯರ ಪ್ರಜಾಪ್ರತಿನಿಧಿಸಭೆ. 1951ರ ವರೆಗೆ 2 ವರ್ಷಗಳಿಗೊಮ್ಮೆ ಸಂಧಿಸುತ್ತಿದ್ದ ಶಾಸನಸಭೆ ಅನಂತರ ವರ್ಷಕ್ಕೊಮ್ಮೆ ಸಂಧಿಸಲಾರಂಭಿಸಿತು. ಮಹಿಳೆಯರಿಗೆ ಮತದಾನವನ್ನು 1893ರಲ್ಲಿ ನೀಡಲಾಯಿತು. 1910ರಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಿ ಪ್ರಜೆಗಳು ಸ್ವತಃ ಅಥವಾ ಜನಾಭಿಪ್ರಾಯ ಸಂಗ್ರಹಕಾಲದಲ್ಲಿ ಪ್ರಮುಖ ರಾಜಕೀಯ ವಿಚಾರಗಳಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸೌಲಭ್ಯ ನೀಡಲಾಯಿತು.

ನ್ಯಾಯಾಂಗದಲ್ಲಿ 7 ಮಂದಿ ನ್ಯಾಯಾಧೀಶರಿರುವ ಸರ್ವೋನ್ನತ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯಗಳು ಮತ್ತು ನ್ಯಾಯಪತಿಗಳ ಕೋರ್ಟುಗಳು ಇವೆ. ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರನ್ನು ಒಂದೊಂದು ಬಾರಿಗೆ ಕೆಲವರಂತೆ ಚುನಾಯಿಸಲಾಗುತ್ತದೆ. ಅವರ ಅಧಿಕಾರಾವಧಿ 10 ವರ್ಷಗಳು.

*

**ಕಾಲೊರಾಡೋ ನದಿ :** ಅಮೆರಿಕದ ವ್ಯೋಮಿಂಗ್, ಕಾಲೊರಾಡೋ ಮತ್ತು ಯೂಟಾ ಪರ್ವತಗಳಲ್ಲಿ ಉಪನದಿಗಳೊಂದಿಗೆ ಉಗಮಿಸಿ 2304 ಕಿಮೀ ಪ್ರವಹಿಸಿ ಕ್ಯಾಲಿಫೋರ್ನಿಯ ಕೊಲ್ಲಿಯನ್ನು ಸೇರುವ ನದಿ. ಇದರ 631960 ಕಿಮೀ ಗಳ ಜಲಾನಯನ ಪ್ರದೇಶ ವ್ಯೋಮಿಂಗ್, ಕ್ಯಾಲೋರಾಡೋ, ಯೂಟಾ, ನ್ಯೂ ಮೆಕ್ಸಿಕೋ, ನೆವಾಡ, ಆರಿಜೋನ ಮತ್ತು ಕ್ಯಾಲಿಫೋರ್ನಿಯ ಪ್ರದೇಶಗಳಲ್ಲಿ ಹರಡಿದೆ. ಪ್ರವಾಹ ಕಡಿಮೆಯಿದ್ದಾಗ ಒಂದು ಸೆಕೆಂಡಿಗೆ 3,000 ಘನ ಅಡಿ ನೀರು ಹರಿದರೆ, ಹೆಚ್ಚಿನ ಪ್ರವಾಹವಿದ್ದಾಗ ಇದರ ಘನ ಗಾತ್ರ 2,00,000 ಘನ ಅಡಿಗಳು. ಇದು ತನ್ನ ಮುಖಜಭೂಮಿಯಲ್ಲಿ ವರ್ಷಕ್ಕೆ ಅಧಿಕ ಪ್ರಮಾಣದಲ್ಲಿ ಮೆಕ್ಕಲು ಮಣ್ಣನ್ನು ತಂದು ಹರಡುತ್ತದೆ.

ಕಾಲೊರಾಡೋ ನದೀ ಬಯಲಿನಲ್ಲಿ ಮೊದಲಿಗೆ ಪ್ಯೂಬ್ಲೋ ಜನ ವಾಸಿಸುತ್ತಿದ್ದರು. ಬಂಡೆಗಲ್ಲುಗಳ ಮೇಲೆ ಉಳಿದು ಬಂದಿರುವ ಹೀರೊಗ್ಲಿಫಿಕ್ ಸಾಂಕೇತಿಕ ಬರೆಹಗಳು, ಅವರ ನೀರಾವರಿ ಪದ್ಧತಿ ಮತ್ತು ಅವರ ನಿವಾಸಗಳು–ಇವುಗಳ ಅವಶೇಷಗಳು ಮಾತ್ರ ಈಗ ಅಲ್ಲಿವೆ. ಸ್ಪ್ಯಾನಿಷ್ ಪಾದ್ರಿಗಳು ಸ್ಥಾಪಿಸಿದ್ದ ಕೇಂದ್ರಗಳ ಅವಶೇಷಗಳೂ ಅಲ್ಲಲ್ಲಿ ಕಾಣಬರುತ್ತವೆ. ಈ ನದಿಯ ಇಕ್ಕೆಲಗಳಲ್ಲೂ ಪ್ರಕೃತಿ ಸೌಂದರ್ಯ ಅವರ್ಣನೀಯವಾಗಿ ಶೋಭಿಸುತ್ತದೆ.

ಆಳವಾದ ಪಾತ್ರದಲ್ಲಿ 1,600 ಕಿಮೀಗಳುದ್ದ ಹರಿಯುವ ಈ ನದಿಗೆ ಎರಡು ಕಡೆಗಳಿಂದಲೂ ಅನೇಕ ಉಪನದಿಗಳು ಬಂದು ಸೇರುತ್ತವೆ. ಉಪನದಿಗಳ ಸಂಗಮಸ್ಥಾನದಲ್ಲಿ ಸಮತಟ್ಟಾದ ಭೂಪ್ರದೇಶವಿರುವುದರಿಂದ, ಆಳವಾದ ನದೀಪಾತ್ರ ಹಲವು ಭಾಗಗಳಾಗಿ ಒಡೆದಿದೆ. ಈ ಉಪನದಿಗಳಿಗೂ ಆಳವಾದ ಪಾತ್ರಗಳುಂಟು. ಈ ಪಾತ್ರಗಳ ಪಾರ್ಶ್ವಗಳಲ್ಲಿ ಮತ್ತು ತಳಭಾಗದಲ್ಲಿ ಬಣ್ಣಬಣ್ಣದ ಶಿಲೆಗಳು ತುಂಬಿ ಮನೋಹರ ದೃಶ್ಯಗಳನ್ನೊದಗಿಸುತ್ತವೆ. ಇದರ ಬಳಿ ಕ್ಯಾಲಿಫೋರ್ನಿಯ ಪ್ರದೇಶದ ಸಾಲ್ಟನ್‌ಬೇಸಿನ್ ಬಳಿ ಕಾಲೊರಾಡೋ

ಮರುಭೂಮಿಯಿದೆ. ಇದು ಕ್ಯಾಲಿಫೋರ್ನಿಯ ಕೊಲ್ಲಿಯಿಂದ ವಾಯವ್ಯಕ್ಕೆ 240 ಕಿಮೀಗಳ ದೂರ ಪ್ರಸರಿಸಿದೆ. ಈ ಕೊಲ್ಲಿ ಪ್ರಾಚೀನ ಕಾಲದಲ್ಲಿ ಇನ್ನೂ ದೊಡ್ಡದಾಗಿತ್ತು. ಕ್ರಮೇಣ ನದಿ ಹೊತ್ತು ತಂದ ಮೆಕ್ಕಲು ಮಣ್ಣಿನಿಂದ ಒಂದು ದೊಡ್ಡ ಕಟ್ಟೆ ಏರ್ಪಟ್ಟು ಸಮುದ್ರದ ಸ್ವಲ್ಪ ಭಾಗ ಬೇರ್ಪಟ್ಟಿತ್ತು. ಈ ಕಟ್ಟೆಯನ್ನು ನದಿ ಮತ್ತೆ ಕೊರೆದು ಸಮುದ್ರವನ್ನು ಪ್ರವೇಶಿಸಿತ್ತು. ಒಳಭಾಗದ ಈ ಪ್ರದೇಶ ಸಮುದ್ರಮಟ್ಟದಿಂದ 71 ಮೀ ಕೆಳಗಿದೆ. ಇದಕ್ಕೆ ಸಾಲ್ಟನ್ ಸಮುದ್ರವೆಂದು ಹೆಸರಾಗಿದೆ. ಇದರ ಜಲಾನಯನ ಪ್ರದೇಶದ ವಿಸ್ತೀರ್ಣ 777 ಚ.ಕಿಮೀ ಕಟ್ಟೆಯಲ್ಲಿ ಒಡಕುಂಟಾದರೆ ಇಡೀ ಇಂಪೀರಿಯರ್ ಕಣಿವೆ ನೀರಿನಲ್ಲಿ ಮುಳುಗಿ ಹೋಗುವ ಮತ್ತು ಪೆಸಿಫಿಕ್ ಸಾಗರದ ದಕ್ಷಿಣ ಹಾದಿ ಮುಚ್ಚಿಹೋಗುವ ಸಂಭವವಿದ್ದುದರಿಂದ ಸದರನ್ ಪೆಸಿಫಿಕ್ ಕಂಪೆನಿ 20,00,000 ಡಾಲರುಗಳ ವೆಚ್ಚದಲ್ಲಿ ರಕ್ಷಣೆ ಸೇತುವೆಗಳನ್ನು ನಿರ್ಮಿಸಿದೆ.

ಮೆಕ್ಸಿಕೋ ಮತ್ತು ಸಂಯುಕ್ತ ಸಂಸ್ಥಾನ ನಡುವೆ ಈ ನದಿ ನೀರಿನ ಬಳಕೆಯ ಬಗ್ಗೆ ಒಪ್ಪಂದ ಏರ್ಪಟ್ಟಿದೆ. ಈ ನದಿಯಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಧಾರಾಳವಾಗಿ ಅವಕಾಶವುಂಟು. 50,00,000 ಅಶ್ವಸಾಮರ್ಥ್ಯಗಳಿಗೂ ಹೆಚ್ಚಿದ ವಿದ್ಯುಚ್ಛಕ್ತಿಯನ್ನು ಈ ನದಿಯ ನೀರಿನಿಂದ ಉತ್ಪಾದಿಸುವ ಸಾಧ್ಯತೆಯಿದೆ. ನದಿಯಿಂದ ಬರುವ ಮಣ್ಣಿನಿಂದ ಉಂಟಾಗುವ ತೊಂದರೆಗಳನ್ನು ನಿವಾರಿಸಲು ಅಧಿಕ ಮೊತ್ತವನ್ನು ವ್ಯಯಿಸಬೇಕಾಗಿದೆ. ಈ ತೊಂದರೆಗಳನ್ನು ನಿವಾರಿಸಲು ಮೇಲ್ಪ್ರದೇಶದಲ್ಲಿ ಒಂದು ಅಣೆಕಟ್ಟನ್ನು ನಿರ್ಮಿಸಲು ಅಮೆರಿಕ ಸರ್ಕಾರ ಒಪ್ಪಿಗೆ ನೀಡಿದೆ. ಆದರೆ ವಿವಿಧ ಪ್ರಾಂತ್ಯಗಳ ನೀರಿನ ಹಕ್ಕಿನ ಬಗ್ಗೆ ವಿವಾದಗಳಿರುವುದರಿಂದ 1922ರಲ್ಲಿ ಕೇಂದ್ರ ಸರ್ಕಾರ ಒಂದು ಯೋಜನೆಯನ್ನು ತಯಾರಿಸಿ ಅದರಂತೆ ಕಾಲೊರಾಡೋ, ನ್ಯೂ ಮೆಕ್ಸಿಕೋ, ಯೂಟಾ ವ್ಯೋಮಿಂಗ್ ರಾಜ್ಯಗಳಿಗೆ ಮತ್ತು ಆರಿಜೋನ ಮತ್ತು ಕ್ಯಾಲಿಫೋರ್ನಿಯ ಮತ್ತು ನೆವಾಡಗಳಿಗೆ ಸಲ್ಲಬೇಕಾದ ನೀರಿನ ಬಗ್ಗೆ ಇತ್ಯರ್ಥ ಮಾಡಿತು. ಅಣೆಕಟ್ಟಿನ ನಿರ್ಮಾಣಕ್ಕೆ 1928ರಲ್ಲಿ ಅಧ್ಯಕ್ಷ ಹರ್ಬರ್ಟ್ ಹೂವರ್ ಆಜ್ಞೆ ನೀಡಿದ. 1936ರಲ್ಲಿ ಈ ಕಾರ್ಯ ಪೂರ್ಣಗೊಂಡಿತು. 330 ಮೀ ಎತ್ತರದ ಕಟ್ಟೆಯಲ್ಲಿ 44,00,000 ಘನ ಗಜಗಳಷ್ಟು ಕಾಂಕ್ರೀಟ್ ಬಳಸಲಾಗಿದೆ. 190 ಕಿಮೀ ಉದ್ದದ ಲೇಕ್ ಮೀಡ್ ಜಲಾಶಯದಲ್ಲಿ ಅಪಾರ ಪ್ರಮಾಣದ ನೀರು ನಿಲ್ಲುತ್ತದೆ: ಇಲ್ಲಿ ವಿದ್ಯುಜ್ಜನಕ ಕೇಂದ್ರದ ಉತ್ಪಾದನ ಶಕ್ತಿ 13,44,800 ಕಿವಾ. ಇದಕ್ಕೆ ಹೂವರ್ ಕಟ್ಟೆ ಎಂದು 1947ರಲ್ಲಿ ಅಧಿಕೃತವಾಗಿ ಹೆಸರಿಡಲಾಯಿತು. ಈ ಯೋಜನೆಯಿಂದ ನೀರಾವರಿ ಮತ್ತು ವಿದ್ಯುತ್ ಸೌಲಭ್ಯ ಹೆಚ್ಚು ದೊರಕುತ್ತಿರುವುರಿಂದ ಈ ಪ್ರದೇಶದಲ್ಲಿ ಜನಸಾಂದ್ರತೆ ಹೆಚ್ಚುತ್ತಿದೆ: ಆರ್ಥಿಕವಾಗಿ ಅಭಿವೃದ್ಧಿ ಸಾಧಿಸುತ್ತಿದೆ.

*

**ಕಾಲೊರಾಡೋ ಮರುಭೂಮಿ :** ಆಗ್ನೇಯ ಕ್ಯಾಲಿಫೋರ್ನಿಯ ವಾಯವ್ಯ ಮೆಕ್ಸಿಕೋಪ್ರದೇಶದಲ್ಲಿ ಕ್ಯಾಲಿಫೋರ್ನಿಯ ಕೊಲ್ಲಿಯ ದಕ್ಷಿಣ ಭಾಗದಲ್ಲಿರುವ ಬೆಂಗಾಡು ಪ್ರದೇಶ. ಇದರಲ್ಲಿ ಸಾಲ್ಟನ್ ಸಿರಿಕ್ ತಗ್ಗುನೆಲವೂ (ಸಮುದ್ರಮಟ್ಟದಿಂದ 78 ಮೀ. ಕೆಳಗಿದೆ) ಸೇರಿದೆ: ಉತ್ತರ ಮತ್ತು ಈಶಾನ್ಯ ದಿಕ್ಕುಗಳಲ್ಲಿರುವ ಮೊಹಾವೆ ಮರುಭೂಮಿಯಿಂದ ಇದನ್ನು ಸ್ಯಾನ್‌ಬರ್ನಡೀನೋ, ಕಾಟನ್‌ವುಡ್, ಚುಕಾವಾಲಾ ಮತ್ತು ಚಾಕೋಲೇಟ್ ಪರ್ವತಗಳು ಪ್ರತ್ಯೇಕಿಸಿವೆ. ಪಶ್ಚಿಮದಲ್ಲಿ ಪರ್ಯಾಯ ದ್ವೀಪ ಪರ್ವತಶ್ರೇಣಿ ಇದರ ಎಲ್ಲೆ. ಇದರ ಉದ್ದ 262 ಕಿಮೀ ಅಗಲ 157 ಕಿಮೀ ವಾಯವ್ಯ ಭಾಗದಲ್ಲಿ ಚಲಿಸುವ ಮರಳು ದಿಬ್ಬಗಳೂ ಪೂರ್ವಭಾಗದಲ್ಲಿ ಅಲ್ಗೊಡೋನ್ಸ್ ಮರಳು ದಿಬ್ಬಗಳೂ ಇವೆ. ಉಪ್ಪುನೀರಿನ ಸಾಲ್ಟನ್ ಸರೋವರವಿರುವುದು ಇದರ ಮಧ್ಯಭಾಗದಲ್ಲಿ . ಇದರ ಆಗ್ನೇಯ ದಿಕ್ಕಿನಲ್ಲಿರುವ ಇಂಪೀರಿಯಲ್ ಕಣಿವೆಯ ಮಣ್ಣು ಬಹಳ ಫಲವತ್ತಾಗಿದ್ದು ನೀರಾವರಿಗಾಗಿ ಕಾಲೊರಾಡೋ ನದಿಯ ನೀರನ್ನು ಕಾಲುವೆಗಳ ಮೂಲಕ ಇಲ್ಲಿಗೆ ಒಯ್ಯಲಾಗುತ್ತದೆ. ಇದಕ್ಕೆ ಕಾಲೊರಾಡೋ ಮರುಳ್ಗಾಡೆಂಬ ಹೆಸರು ಬಂದಿರುವುದು ಇದರಿಂದಾಗಿ.

ಇಲ್ಲಿ ಆಗುವ ಮಳೆಯ ವಾರ್ಷಿಕ ಸರಾಸರಿ 6–8 ಸೆಂಮೀ. ಮಳೆ ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುವುದುಂಟು. ಮೇ–ಸೆಪ್ಟೆಂಬರ್ ತಿಂಗಳುಗಳಲ್ಲಿ ಹಗಲಿನ ಉಷ್ಣತೆ 51$^{o}$ ಸೆಂ. ವರೆಗೂ ಏರುವುದುಂಟು. ಇಲ್ಲಿ ಸಾಧಾರಣವಾಗಿ ಬೆಳೆಯುವ ಸಸ್ಯಗಳೆಂದರೆ ಕ್ರಿಯಾಸೋಟ್ ಕುರುಚಲು ಪೊದೆ.

*

**ಕಾಲ್ಚಿಕಮ್ :** ಏಕದಳ ಸಸ್ಯಗಳ ಗುಂಪಿನ ಲಿಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಮೂಲಿಕೆ ಸಸ್ಯ. ಮೆಡೊ ಸ್ಯಾಫ್ರನ್, ಆಟಮ್‌ಕ್ರೊಕಸ್. ಸಂಸ್ಕೃತದಲ್ಲಿ ಹಿರಣ್ಯತುತ್ಥ ಎಂದೂ ಕನ್ನಡದಲ್ಲಿ ಕಣ್ಣುಕಾಡಿಗೆ ಗಿಡ ಎಂದೂ ಕರೆಯುತ್ತಾರೆ. ಈ ಜಾತಿಯಲ್ಲಿ ಸು. 85 ಪ್ರಭೇದಗಳಿವೆ. ಇದರಲ್ಲಿ ಬಹುಪಾಲು ಪ್ರಭೇದಗಳು ಯುರೋಪ್, ಪಶ್ಚಿಮ ಏಷ್ಯ ಮತ್ತು ಉತ್ತರ ಆಫ್ರಿಕಗಳಲ್ಲಿ ಬೆಳೆಯುತ್ತವೆ. ಈ ಪ್ರಭೇದಗಳಲ್ಲಿ ಮುಖ್ಯವಾದವು ಕಾಲ್ಚಿಕಮ್ ಆಟಮ್ನೇಲ್ ಮತ್ತು ಕಾ. ಲ್ಯೂಟಿಯಮ್. ಲ್ಯೂಟಿಯಮ್ ಪ್ರಭೇಧ ಪಶ್ಚಿಮ ಹಿಮಾಲಯದ 609 ಮೀ–2743 ಮೀ ಎತ್ತರದ ಪ್ರದೇಶಗಳಲ್ಲಿ ಕಾಡಿನ ಅಂಚುಗಳಲ್ಲೂ ಹುಲ್ಲುಗಾವಲುಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ. ಔಷಧ ಪ್ರಾಮುಖ್ಯ ಇರುವ ಜೀವಕೋಶಶಾಸ್ತ್ರ ಮತ್ತು ತಳಿಶಾಸ್ತ್ರದ ಕೆಲವು ಪ್ರಯೋಗಗಳಲ್ಲಿ ಬಳಸಲಾಗುವ ಕಾಲ್ಚಿಸೀನ್ ಎಂಬ ವಸ್ತುವನ್ನು ಇದರಿಂದ ಪಡೆಯಬಹುದಾದ್ದರಿಂದ ಈ ಗಿಡವನ್ನು ಬೆಳೆಸುವರು.

ಕಾಲ್ಚಿಕಮ್ ಗಿಡ ಬಲು ಚಿಕ್ಕದು. ಇದರ ಕಾಂಡ ಭೂಮಿಯಲ್ಲೇ ಹುದುಗಿಕೊಂಡಿರುವ ಗುಂಡಿಗಿನ ಗೆಡ್ಡೆಯಂತಿದೆ(ಕಾರಮ್). ಎಲೆಗಳು ಹುಲ್ಲಿನ ಎಸಳು ಮೇಲೆ ಜೋಡಣೆಯಾಗಿರಬಹುದು. ಅಲ್ಲದೆ ಇವು ಬಹಳ ಸ್ವಲ್ಪ ಕಾಲ ಮಾತ್ರ ಇರುತ್ತವೆ. ಮಾರ್ಚ್ ತಿಂಗಳಲ್ಲಿ ಹುಟ್ಟಿ ಜೂನ್ ಹೊತ್ತಿಗೆ ಬಿದ್ದು ಹೋಗುತ್ತವೆ, ವಸಂತಋತುವಿನಲ್ಲಿ ಭೂಗತ ಗೆಡ್ಡೆಯಿಂದ ಹೂಗೊಂಚಲು ಹೊರಕ್ಕೆ ಬರುತ್ತದೆ. ಹೂವಿನ ಪೆರಿಯಾಂತ್ ಭಾಗ ಬಹಳ ಉದ್ದವಾಗಿದ್ದು ನೆಲದ ಮೇಲೆ ಕಾಣಿಸುತ್ತದೆ. ಅಂಡಾಶಯವನ್ನೊಳಗೊಂಡ ಭಾಗ ಮಾತ್ರ ನೆಲದೊಳಗೇ ಹುದುಗಿರುತ್ತದೆ. ಪೆರಿಯಾಂತ್ 6 ಹಾಲೆಗಳುಳ್ಳದ್ದು, ಕೇಸರಿಗಳು 6, ಅಂಡಾಶಯದಲ್ಲಿ ಉಚ್ಚಸ್ಥಾನದ 3 ಕೋಣೆಗಳಿವೆ; ಒಳಗೆ ಹಲವಾರು ಅಂಡಕಗಳಿವೆ. ಫಲ ಸಂಪುಟಮಾದರಿಯದು. ಪರಾಗಸ್ಪರ್ಶ ಕ್ರಿಯೆ ಜೇನುನೊಣಗಳ ಸಹಕಾರದಿಂದ ನಡೆಯುತ್ತದೆ. ಅನಂತರ ಹೂವಿನ ತೊಟ್ಟು ಉದ್ದ ಬೆಳೆಯುವುದರಿಂದ ಕಾಯಿ ನೆಲದ ಮೇಲಕ್ಕೆ ಬರುತ್ತದೆ.

ಕಾಲ್ಚಿಕಮ್ ಸಸ್ಯವನ್ನು ಬೀಜಗಳ ಮುಖಾಂತರ ವೃದ್ಧಿಸುತ್ತಾರೆ. ಸಾಮಾನ್ಯವಾಗಿ ಮೇ ತಿಂಗಳ ಅನಂತರ ಪಾತಿಗಳಲ್ಲೂ ಪೆಟ್ಟಿಗೆಗಳಲ್ಲೂ ಬೀಜ ಬಿತ್ತಿ ಮೇಲೆಲ್ಲ ತೆಳುವಾಗಿ ಮಣ್ಣು ಮುಚ್ಚುತ್ತಾರೆ. ನೆರಳಿದ್ದರೆ ಮೊಳೆಯಲು ಅನುಕೂಲ. ಬೀಜ ಮೊಳೆಯಲು ಬಹಳ ಕಾಲ ಬೇಕು. ಒಂದು ವರ್ಷವಾದ ಮೇಲೆ ಸಸಿಗಳನ್ನು ಬೇರೆಡೆಗೆ ಸಾಗಿಸಿ ಒಂದು ಗಿಡದಿಂದ ಇನ್ನೊಂದಕ್ಕೆ 0.9144 ಮೀ ಅಂತರವಿರುವಂತೆ ನಾಟಿ ಮಾಡುತ್ತಾರೆ. ಗಿಡಗಳು ಎರಡು ವರ್ಷದವಾದ ಮೇಲೆ ಗೆಡ್ಡೆಗಳ ಸಂಗ್ರಹಣೆ ಆರಂಭವಾಗುತ್ತದೆ. ಸಂಗ್ರಹಣೆಯ ಕಾಲ ಸಾಮಾನ್ಯವಾಗಿ ಜೂನ್–ಜುಲೈ ತಿಂಗಳುಗಳು. ಗೆಡ್ಡೆಗಳು ಕಂದು ಅಥವಾ ಕಂದುಮಿಶ್ರಿತ ಬೂದು ಬಣ್ಣದವು. ಅವುಗಳ ಆಕಾರ ಶಂಕುವಿನಂತೆ ಇಲ್ಲವೆ ಅಂಡದಂತೆ; ಉದ್ದ 15–35 ಮಿಮೀ., ದಪ್ಪ 10–20 ಮಿಮೀ. ಗೆಡ್ಡೆಯ ಮೇಲೆಲ್ಲ ಅಸ್ಪಷ್ಟವಾದ ಇದರ ಒಳಭಾಗ ಬೆಳ್ಳಗಿದ್ದು ಪಿಷ್ಟದಿಂದ ಕೂಡಿದೆ. ಇದಕ್ಕೆ ವಾಸನೆಯಿಲ್ಲ: ಕಟುವಾದ ಹಾಗು ಕಹಿ ರುಚಿಯಿದೆ. ಗೆಡ್ಡೆಗಳನ್ನು ನೆಲದಿಂದ ತೆಗೆದ ಅನಂತರ ಮೇಲಿನ ಹುರುಪೆಯಂಥ ಭಾಗವನ್ನು ಹೆರೆದು ತೆಗೆದು ಅಡ್ಡಡ್ಡವಾಗಿ ಕತ್ತರಿಸಿ 65$^{o}$ ಸೆಂ.ಗೆ ಮೀರದ ಉಷ್ಣತೆಯಲ್ಲಿ ಒಣಗಿಸುತ್ತಾರೆ.

ಬಹಳ ಹಿಂದಿನಿಂದಲೂ ಔಷಧಪ್ರಾಮುಖ್ಯವಿರುವ ಇದರ ಗೆಡ್ಡೆಯನ್ನು ಜೀರ್ಣಕಾರಿ, ಸುಖವಿರೇಚಕ ಹಾಗೂ ದೇಹದ ಪೋಷಣವ್ಯಾಪಾರಗಳನ್ನು ಬದಲಾಯಿಸಿ ಅವನ್ನು ಆರೋಗ್ಯಸ್ಥಿತಿಗೆ ತರುವಂಥ ಔಷಧಿಯಾಗಿ ಬಳಸುತ್ತಿದ್ದಾರೆ. ಸಂಧಿವಾತದಲ್ಲೂ ಯಕೃತ್ ಮತ್ತು ಗುಲ್ಮಗಳ ಖಾಯಿಲೆಗಳಲ್ಲೂ ಇದರ ಉಪಯೋಗ ಇದೆ. ಗೆಡ್ಡೆಯ ಪುಡಿಯನ್ನು

ಕೇಸರಿ ಮತ್ತು ಮೊಟ್ಟೆಯ ಲೋಳೆಯೊಂದಿಗೆ ಸೇರಿಸಿ ಸಂಧಿವಾತದ ಬಾವುಗಳಿಗೆ ಹಚ್ಚುವುದುಂಟು. ಶುಂಠಿ ಮತ್ತು ಮೆಣಸುಗಳೊಂದಿಗೆ ಮಿಶ್ರಮಾಡಿ ಸೇವಿಸಿದರೆ ವಾಜೀಕರವೆಂದು ಹೇಳಿಕೆ. ಮೈಲುತುತ್ತದೊಂದಿಗೆ ಸೇರಿಸಿ ಅಂಜನ ಮಾಡುವುದೂ ಉಂಟು, ಇದಕ್ಕೆ ತುತ್ತಂಜನ ಎಂದು ಹೆಸರಿದೆ. ಬೀಜಗಳಿಗೂ ಗೆಡ್ಡೆಯ ಔಷಧೀಯ ಗುಣಗಳೇ ಇವೆ.

ಗೆಡ್ಡೆಯಲ್ಲಿ ಕಾಲ್ಚಿಸೀನ್ ಎಂಬ ಸಸ್ಯಕ್ಷಾರವಿದೆ (ಆಲ್ಕಲಾಯಿಡ್). ಇದನ್ನು ಗೆಡ್ಡೆಯಿಂದ ಬೇರ್ಪಡಿಸಿದಾಗ ಹಳದಿ ಬಣ್ಣದ ತೆಳುಹಲ್ಲೆ, ಹರಳು ಇಲ್ಲವೆ ಪುಡಿಯ ರೂಪ ತಾಳುತ್ತದೆ. ಇದಕ್ಕೆ ಅತಿ ಕಹಿ ರುಚಿಯಿದೆ. ನೀರಿನೊಂದಿಗೆ ಸೇರಿಸಿ ಕೊಂಚ ಬಿಸಿ ಮಾಡಿದಾಗ ಒಣಹುಲ್ಲಿನ ವಾಸನೆ ಬರುತ್ತದೆ. ಬಹಳ ವಿಷಪೂರಿತವಾದ ಈ ವಸ್ತುವನ್ನು ಸ್ವಲ್ಪ ಪ್ರಮಾಣದಲ್ಲಿ ಸೇವಿಸಿದರೂ ತೀಕ್ಷ್ಣವಾದ ವಾಂತಿ, ಭೇದಿ, ಕರುಳುಬೇನೆ ಉಂಟಾಗುತ್ತವೆ. ಚರ್ಮದ ಮೇಲೆ ಲೇಪಿಸಿದರೆ ರಕ್ತ ಸಂಚಯವಾಗಿ ನೋವುಂಟಾಗುತ್ತದೆ. ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ಕರುಳಿನಲ್ಲಿ ರಕ್ತಸ್ರಾವವಾಗಿ ಸಾವು ಸಂಭವಿಸುವುದುಂಟು. ಆದರೂ ಇದನ್ನು ಕೀಲುವಾತ ರೋಗದಲ್ಲಿ (ಗೌಟ್) ಲಘುಪ್ರಮಾಣದಲ್ಲಿ ಔಷಧಿಯಾಗಿ ಬಳಸುತ್ತಾರೆ. ಕೀಲುವಾತದ ಕೆಲವು ಚಿಹ್ನೆಗಳಾದ ಇಸಬು, ಶ್ವಾಸನಾಳಗಳ ಒಳಚರ್ಮದ ಊತ, ನರಗಳ ಉರಿಯೂತ ಮುಂತಾದುವನ್ನಿದು ಗುಣಪಡಿಸುತ್ತದೆ.

ಈಚೆಗೆ ಕಾಲ್ಚಿಸೀನ್ ತನ್ನ ಒಂದು ವಿಶಿಷ್ಟ ಗುಣದಿಂದಾಗಿ ಬಹಳ ಪ್ರಸಿದ್ಧಿಗೆ ಬಂದಿದೆ. ಪ್ರಾಣಿ ಹಾಗೂ ಸಸ್ಯಗಳ ಜೀವಕೋಶವಿಭಜನೆಯಲ್ಲಿ ಕದಿರು ಸಾಧನ (ಸ್ಪಿಂಡಲ್ ಆಪರೇಟಸ್) ರೂಪುಗೊಳ್ಳುವುದನ್ನು ತಡೆಯುವುದರ ಮುಖಾಂತರ ವಿಭಜನೆಯನ್ನು ಅಡ್ಡಿಪಡಿಸುವುದೇ ಇದರ ವಿಶೇಷ ಗುಣ. ಇದರಿಂದಾಗಿ ಜೀವಕೋಶಗಳಲ್ಲಿನ ಕ್ರೋಮೋಸೋಮುಗಳು ದ್ವಿಗುಣಿತವಾಗುತ್ತವೆ. ಇಂಥ ದ್ವಿಗುಣಿತ ಕ್ರೋಮೋಸೋಮುಗಳನ್ನುಳ್ಳ ಸಸ್ಯಗಳು ಸಹಜಸ್ಥಿತಿಯ ಉತ್ತಮಮಟ್ಟದ ಸಸ್ಯಗಳೆನಿಸಿಕೊಳ್ಳುತ್ತವೆ. ಇವನ್ನು ಬಹುಗುಣಿತ (ಪಾಲಿಪ್ಲಾಯ್ಡ್) ಸಸ್ಯಗಳೆನ್ನುತ್ತಾರೆ. ಕಾಲ್ಚಿಸೀನಿಗೆ ಈ ಶಕ್ತಿಯಿರುವುದರಿಂದ ಸಸ್ಯ ತಳಿಗಳನ್ನು ಈ ವಿಧಾನದ ಮೂಲಕ ಉತ್ತಮಪಡಿಸುವುದಕ್ಕೆಂದು ಬಳಸುತಾರೆ. ಕೆಲವು ಬಾರಿ ಅಡ್ಡತಳಿಯೆಬ್ಬಿಕೆ ಪ್ರಯೋಗಗಳಲ್ಲಿ ಬಂಜೆ ತಳಿಗಳು ಹುಟ್ಟಿದಾಗ ಅವುಗಳ ಕ್ರೋಮೋಸೋಮುಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವುದರ ಮೂಲಕ ಅವನ್ನು ಫಲದಂತೆ ಮಾಡುವುದಕ್ಕೂ ಇದನ್ನು ಬಳಸುತ್ತಾರೆ. (ಬಿ.ಪಿ.)

**ಕಾಲ್ಡೆರ:** ಜ್ವಾಲಾಮುಖಿಯಿಂದ ಪ್ರವಹಿಸಿದ ಲಾವಾ ಅಲ್ಲೇ ಘನೀಭವಿಸುವಾಗ ಉಂಟಾಗುವ ಮಹಾಕೂಪಸದೃಶ ತಗ್ಗು: ಅಥವಾ ಅತಿ ಭೀಕರ ಶಕ್ತಿಯಿಂದ ನೆಲ ಆಸ್ಫೋಟಿಸುವಾಗ ತಲೆದೋರುವ ಒಡಕು. ಅನೇಕ ಜ್ವಾಲಾಮುಖಿಗಳು ಉಕ್ಕುತ್ತಿರುವ ಲಾವಾ ಪ್ರವಾಹಗಳಿಂದ ದೊಡ್ಡದಾಗಿ ಬೆಳೆಯುತ್ತವೆ. ಕೆಲವೂಮ್ಮೆ ಪ್ರಚಂಡ ಸ್ಫೋಟನೆಗಳಿಂದ ಧ್ವಂಸವಾಗುತ್ತವೆ. ಅವುಗಳ ಕೋಡುಗಳು ಮಾತ್ರ ಕಿತ್ತು ಹೊರಬೀಳುತ್ತವೆ. ಅನೇಕವೇಳೆ ಜ್ವಾಲಾಮುಖಿಯ ಕೋಡುಗಳೊಡನೆ ಇತರ ಭಾಗಗಳು ಸಿಡಿದು ಎಗರುತ್ತವೆ. ಈ ರೀತಿ ಸಿಡಿತದಿಂದ ಉತ್ಪನ್ನವಾದ ತಗ್ಗೇ ಕಾಲ್ಡೆರ. ಈ ಮಹಾಕೂಪದ ಅಗಲ ಅನೇಕ ಕಿಮೀ ವರೆಗೂ ಇರುತ್ತದೆ. ಇವುಗಳ ಹೊರ ಮತ್ತು ಒಳಭಾಗ ಹೆಚ್ಚು ಕಡಿದಾಗಿರುತ್ತದೆ. ಒಳಭಾಗ ಜ್ವಾಲಾಮುಖಿಯ ಒಳರಚನೆಯನ್ನೂ ಬೆಳವಣಿಗೆಯನ್ನೂ ತೋರಿಸುತ್ತದೆ. ಕಾಲ್ಡೆರದ ಉದಾಹರಣೆಗಳಲ್ಲಿ ಈಸ್ಟ್ ಇಂಡೀಸ್ ದ್ವೀಪಗಳಲ್ಲಿರುವ ಕ್ರ್ಯಾಕಟೋವ ಅಲಾಸ್ಕದ ಮೌಂಟ್ ಕ್ಯಾಟ್ ಮೈ, ಜಪಾನಿನ ಬಂಡೈಸಾನ್ ಮತ್ತು ಇಟಲಿಯ ವಸೂವೀಯಸ್‌ಗಳು ಮುಖ್ಯವಾದವು. (ಎಂ.ಎಸ್.ಎಸ್.)

**ಕಾಲ್ಡೆರೋನ್, (ಡೇ ಲಾ ಬಾರ್ಕಾ) ಪೇಧ್ರೋ :** 1600–81. ಸ್ಪಾನಿಷ್ ನಾಟಕಕಾರ. ಸುಮಾರು 70 ಮತೀಯ ನಾಟಕಗಳನ್ನೂ ವಿವಿಧ ಬಗೆಯ 120ಕ್ಕೂ ಹೆಚ್ಚು ನಾಟಕಗಳನ್ನೂ ಬರೆದಿದ್ದಾನೆ. ಅನೇಕ ಇಂಗ್ಲಿಷ್ ನಾಟಕಕಾರರ ಮೇಲೆ ಈತನ ಪ್ರಭಾವ ಬಿದ್ದಿದೆ. ಇವನ ಆರು ನಾಟಕಗಳನ್ನು ಫಿಟ್ಸ್‌ಜೆರಾಲ್ಡ್ ಇಂಗ್ಲಿಷಿಗೆ ಅನುವಾದಿಸಿದ್ದಾನೆ. ಕೆಲವು ಕಾಲ ಜೆಸುಯಿಟ್ ವಿಶ್ವವಿದ್ಯಾಲಯದಲ್ಲಿ ಓದಿ, ಚರ್ಚಿನ ಪಾದ್ರಿ ವೃತ್ತಿಗೆ ಶಿಕ್ಷಣ ಪಡೆದು ಕೊನೆಗೆ ನಾಟಕರಂಗಕ್ಕೆ ಈತ ಬಂದ. ಲೋಪೆ ದೆ ವೇಗನ ಮೇಲ್ಪಂಕ್ತಿಯಲ್ಲಿ ಈತ ಬರೆದ ರಹಸ್ಯ ವರ್ತನೆ ಮತ್ತು ಕತ್ತಿವರಸೆಯ ಕಥೆಗಳು ಬರುಬರುತ್ತ ಬಾಹ್ಯರೂಪದಲ್ಲಿ ಹೆಚ್ಚು ಹೆಚ್ಚು ಅಚ್ಚುಕಟ್ಟಾದರೂ ಸ್ವಾರಸ್ಯ, ವೈವಿಧ್ಯದಲ್ಲಿ ಸಂಕುಚಿತವಾದುವು. ಇಲ್ಲಿ ಪ್ರಣಯ ಸಲ್ಲಾಪದ ನಿರೂಪಣೆ ಮತ್ತು ಪಾತ್ರ ಚಿತ್ರಣಗಳು ಸುಂದರವಾಗಿದ್ದರೂ ಕಥೆಯ ಚೌಕಟ್ಟು ಕೃತಕವೆನ್ನುವಷ್ಟು ಚಮತ್ಕಾರಯುತವಾಗಿದೆ. ಈ ನಾಟಕಗಳಲ್ಲಿ ಕಾಲ್ಡೆರೋನ್ ಲೌಕಿಕ ಮಾನ್ಯತೆ ಮತ್ತು ಸಹಜ ಅಸೂಯೆಗಳೇ ಪಾತ್ರಗಳ ನಡೆವಳಿಗೆ ಪ್ರಚೋದಕಾಂಶಗಳೆಂಬಂತೆ ತೋರಿಸಿದ್ದಾನೆ. ಈತನ ಎರಡನೆಯ ಬಗೆಯ ಕೃತಿಗಳು ಕಲ್ಪನಾಧಿಕ್ಯವನ್ನುಳ್ಳ ಕವನ ನಾಟಕಗಳು. ಜೀವನ ಸ್ವಪ್ನದಂತೆ ಭ್ರಾಂತಿಸ್ವರೂಪವಾದುದು ಎಂಬ ದೃಷ್ಟಿ ಇವುಗಳಲ್ಲಿ ಎದ್ದು ಕಾಣುತ್ತದೆ. ಜೀವನ ಒಂದು ಸ್ವಪ್ನ (ಇಂಗ್ಲಿಷ್ ಅನುವಾದ ಲೈಫ್ ಈಸ್ ಎ ಡ್ರೀಮ್) ಎಂಬ ನಾಟಕದಲ್ಲಿ ರೂಪಕಾರ್ಥವಿರುವುದಾದರೂ ಅಂಕಿತದಲ್ಲಿರುವಷ್ಟು ಅರ್ಥವನ್ನು ಬಿಟ್ಟರೆ, ಒಟ್ಟು ಕಥೆಯ ರೂಪಕಾರ್ಥ ಹೀಗೆ ಎಂದು ನಿರ್ಧರಿಸಲು ಬರುವುದಿಲ್ಲ. ಮೂರನೆಯ ವರ್ಗದ ಕೃತಿಗಳು ಅದ್ಭುತ ಕರುಣ ಭಯಾನಕ ರಸಪ್ರಧಾನವಾದ ನಾಟಕಗಳು; ಮತೀಯ ಕಥಾವಸ್ತುವುಳ್ಳವು; ಬಹಳ ಅನ್ವೇಜ ಘಟನಾವಳಿಯಿಂದ ಕೂಡಿದವು. ಬರುಬರುತ್ತ ಕಾಲ್ಡೆರೋನನ ಕೃತಿಗಳಲ್ಲಿ ಸಂಭವನೀಯತೆ ಮತ್ತು ನೈಜಚಿತ್ರಣ ಕಡಿಮೆಯಾಗಿ ಶಕುನಗಳು, ಪವಾಡಗಳು, ದೈವೀಶಕ್ತಿಯ ಪ್ರತ್ಯಕ್ಷ ಹಸ್ತಕ್ಷೇಪ, ಭವಿಷ್ಯವಾಣಿ ಮುಂತಾದ ಅಂಶಗಳಿಗೆ ಪ್ರಾಶಸ್ತ್ಯ ಹೆಚ್ಚಿತು. ಈ ಬಗೆಯ ಕಲ್ಪನೆಯನ್ನು ಬ್ಯಾರೋಕ್ ಎನ್ನುವರು. ಕೊನೆಗೆ ಕವಿ ಪಾದ್ರಿ ವೃತ್ತಿಯನ್ನು ಕೈಕೊಂಡು ಕ್ರೈಸ್ತಪರ್ವ ದಿನಗಳಲ್ಲಿ ಅಭಿನಯಿಸಲು ಗ್ರಾಮ ಸಂಸ್ಥೆಗಳಿಗೆ ಔಟೋಗಳನ್ನೂ ಅರಮನೆಯಲ್ಲಿ ಅಭಿನಯಿಸಲು ತಾರ್‌ತ್ವೇಲಾಗಳನ್ನೂ ಬರೆದುಕೊಟ್ಟ. ಕಾಲ್ಡೆರೋನನ ಶೈಲಿ ಲೋಪೆ ದೆ ವೇಗನ ಶೈಲಿಯಷ್ಟು ಭಾವಪೂರ್ಣವಾಗಿಯೂ ವೈವಿಧ್ಯಮಯವಾಗಿಯೂ ಇಲ್ಲ.

ಈತ ಸುವರ್ಣಯುಗದ ನಾಟಕಕಾರರಲ್ಲಿ ಕೊನೆಯವನು. ಜೀವನ ಒಂದು ಸ್ವಪ್ನ– ಎಂಬ ಈತನ ಕೃತಿ ಅತ್ಯುತ್ತಮವಾದುದೆಂದು ಪರಿಗಣಿತವಾಗಿದೆ. (ಎಂ.ಕೆ.ಕೆ.; ಕೆ.ಆರ್.ಜಿ.)

**ಕಾಲ್ಡ್‌ವೆಲ್, ಎರ್‌ಸ್ಕಿ ಪ್ರೆಸ್ಟನ್ :** 1903–1987. ಅಮೆರಿಕದ ಕಾದಂಬರಿಕಾರ. ಜಾರ್ಜಿಯಾದ ವೈಟ್‌ಓಕ್‌ನಲ್ಲಿ ಹುಟ್ಟಿದ. ತನ್ನ ಬಾಲ್ಯವನ್ನು ಹೆಚ್ಚಾಗಿ ದಕ್ಷಿಣಭಾಗದಲ್ಲಿ ಸುತ್ತಾಡಿ ಕಳೆದ. ಅಲ್ಲಿ ಕಂಡುಂಡ ಜೀವನಚಿತ್ರವೇ ಅವನ ಮುಂದಿನ ಬರವಣಿಗೆಯ ವಸ್ತುವಾಯಿತು. ಹತ್ತಿಬಿಡಿಸುವನಾಗಿ, ಅಡಿಗೆಯವನಾಗಿ ಕೊನೆಗೆ ಪತ್ರಿಕಾಪ್ರತಿನಿಧಿಯಾಗಿ ಕಾಲ ಕಳೆದು ಜೀವನವನ್ನು ಚೆನ್ನಾಗಿ ಈತ ಅರ್ಥ ಮಾಡಿಕೊಂಡಿದ್ದಾನೆ. ತನ್ನ ಟೊಬ್ಯಾಕೊ ರೋಡ್ (1932) ಕಾದಂಬರಿಯಿಂದ ಪ್ರಸಿದ್ಧನಾದ. ಗಾಡ್ಸ್ ಲಿಟ್ಲ್ ಏಕರ್ (1933) ಕಾದಂಬರಿಯಲ್ಲಿ ಕಾಣುವ ಉತ್ತಮ ಹಾಸ್ಯಪ್ರಜ್ಞೆ, ಸಾಮಾಜಿಕ ಭೇದಗಳ ಬಗ್ಗೆ ಉಗ್ರ ವಿರೋಧ, ಜನಜೀವನದ ವಾಸ್ತವಚಿತ್ರಣಗಳು ಸಾಮಾನ್ಯವಾಗಿ ಇವನ ಎಲ್ಲ ಕೃತಿಗಳಲ್ಲೂ ತೋರಿಬರುತ್ತವೆ. ಟ್ರಬಲ್ ಇನ್ ಜುಲೈ (1940), ಎ ಪ್ಲೇಸ್ ಕಾಲ್ಡ್ ಈಥರ್‌ವಿಲ್ (1949) ಎಂಬ ಕಾದಂಬರಿಗಳು ವರ್ಣಸಮಸ್ಯೆ ಕುರಿತಂಥವು. ಕಾಲ್ಡ್‌ವೆಲ್ ಸಣ್ಣಕಥೆಗಳಿಗೆ ಹೆಚ್ಚು ಪ್ರಸಿದ್ಧ. ಈತನ ಕೆಲವು ಕಥಾಸಂಗ್ರಹಗಳು ಪ್ರಕಟವಾಗಿವೆ. (ಎನ್.ಎಸ್.ಎಲ್.)

**ಕಾಲ್ಡ್‌ವೆಲ್, ರಾಬರ್ಟ್ :** 1814–91. ದ್ರಾವಿಡ ಭಾಷೆಗಳೆಲ್ಲ ಒಂದೇ ಮೂಲಕ್ಕೆ ಸೇರಿದವೆಂದು ತಿಳಿಸಿದವರಲ್ಲಿ ಪ್ರಮುಖನಾದವ; ಅವನ್ನು ಕುರಿತ ತುಲನಾತ್ಮಕ ವ್ಯಾಕರಣವೊಂದನ್ನು ಬರೆದಿದ್ದಾನೆ. ತಮಿಳು ನಾಡಿನಾದ್ಯಂತ ಕಾಲ್ಡ್‌ವೆಲ್ ಐಯ್ಯರ್ ಎಂದು



ಖ್ಯಾತನಾದ ಈತ ಹುಟ್ಟಿದ್ದು ಐರ್ಲೆಂಡಿನ ಗ್ಲ್ಯಾಡಿ ನದಿಯ ದಡದಲ್ಲಿರುವ ಹಳ್ಳಿಯೊಂದರಲ್ಲಿ. ಬಾಲ್ಯವನ್ನು ಸ್ಕಾಟ್‌ಲೆಂಡಿನ ಗ್ಲಾಸ್ಗೊ ನಗರದಲ್ಲಿ ಕಳೆದ. ಡಬ್ಲಿನ್ನಿನ ಕಲೆಯ ಕಾಲೇಜಿನಲ್ಲಿ ಚಿತ್ರಕಲೆ ಅಭ್ಯಾಸ ಮಾಡಿದ ತರುವಾಯ ಈತನನ್ನು ಕ್ರೈಸ್ತ ಪಾದ್ರಿಯಾಗಲು ಲಂಡನ್ನಿನ ರೆವರೆಂಡ್ ಸಂಘದ ಪ್ರತಿನಿಧಿಯಾಗಿ ಅಧ್ಯಯನಕ್ಕೆಂದು ಗ್ಲಾಸ್ಗೊ ಕಾಲೇಜಿಗೆ ಕಳುಹಿಸಲಾಯಿತು. ಪಾದ್ರಿಯಾಗಿ ನೇಮಕಗೊಂಡ ಮೇಲೆ ಕ್ರೈಸ್ತಧರ್ಮ ಪ್ರಸಾರಕ್ಕಾಗಿ ಈತ ಭಾರತಕ್ಕೆ ಬಂದ. ತಮಿಳು ನಾಡಿನ ಕಡೆಗೆ ಬಂದವ 1841ರವರೆಗೆ ಮದರಾಸಿನಲ್ಲಿಯೇ ಇದ್ದು ತಮಿಳನ್ನು ಕಲಿತ. ಅನಂತರ ಪೋಪ್, ಪವರ್ ಮತ್ತು ಆಂಡರ್ಸನ್ನರ ಸ್ನೇಹ ಬೆಳೆಸಿದ. ಕಾಲು ನಡಿಗೆಯಲ್ಲೆ, ತಮಿಳು ನಾಡಿನಾದ್ಯಂತ ಸಂಚರಿಸಿ ತಮಿಳುನಾಡು, ನುಡಿ, ಸಾಹಿತ್ಯಗಳ ನಿಕಟ ಪರಿಚಯ ಮಾಡಿಕೊಂಡ. ಆಗ ಈತನಿಗೆ ತಂಜಾವೂರಿನ ಮಾಯಾವರಮ್ ವೇದನಾಯಕಮ್ ಪಿಳ್ಳೆ ಮತ್ತು ನೀಲಗಿರಿಯ ರೆವರೆಂಡ್ ಸ್ಪೆನ್ಸರ್‌ರವರ ಸಖ್ಯ ದೊರೆಯಿತು. ತಿರುನೆಲ್ವೇಲಿಯ (ತಿನ್ನವೆಲ್ಲಿ) ಇಡಯನ್‌ಕುಡಿಯಲ್ಲಿ ಐವತ್ತು ವರ್ಷಗಳ ಕಾಲ ಇದ್ದು ಮತಪ್ರಚಾರಕನಾಗಿ ಸೇವೆಸಲ್ಲಿಸಿದ. ತಮಿಳಿನಲ್ಲಿ ಬರೆಯಲಾದ ಕ್ರೈಸ್ತಧರ್ಮದ ಪ್ರಾರ್ಥನಾ ಪುಸ್ತಕ ಪರಿಷ್ಕರಣ ಸಮಿತಿ ಮತ್ತು ಬೈಬಲ್ ಅನುವಾದ ಸಮಿತಿಯ ಸದಸ್ಯನಾಗಿಯೂ ಕೆಲಸ ಮಾಡಿದ. ಈತನಿಗೆ ತಮಿಳಿನ ಜೊತೆಗೆ ತೆಲುಗು ಮಲೆಯಾಳಂ ಮತ್ತು ಕನ್ನಡ ಭಾಷೆಗಳೂ ತಿಳಿದಿದ್ದುವು.

ದ್ರಾವಿಡ ಭಾಷೆಗಳ ಪರಿಚಯವಿದ್ದು ಅದರಲ್ಲೂ ತಮಿಳು ಭಾಷೆಯಲ್ಲಿ ವಿಶೇಷ ಪರಿಶ್ರಮವಿದ್ದ ಕಾಲ್ಡ್‌ವೆಲ್ ಎ ಕಂಪ್ಯಾರಿಟೇವ್ ಗ್ರಾಮರ್ ಆಫ್ ದಿ ಡ್ರವಿಡಿಯನ್ ಆರ್ ಸೌತ್ ಇಂಡಿಯನ್ ಫ್ಯಾಮಿಲಿ ಆಫ್ ಲ್ಯಾಂಗ್ವೇಜಸ್ (ದ್ರಾವಿಡ ಭಾಷೆಗಳ ತೌಲನಿಕ

ವ್ಯಾಕರಣ) ಮತ್ತು ತಿನ್ನವೆಲ್ಲಿಯ ಇತಿಹಾಸ ಎಂಬ ಗ್ರಂಥಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದಿದ್ದಾನೆ. ಇವುಗಳಲ್ಲಿ ಮೊದಲ ಪುಸ್ತಕ ದ್ರಾವಿಡ ಭಾಷಾ ವಿಜ್ಞಾನದ ಸಂಶೋಧಕರಿಗೆ ಆಕರಗ್ರಂಥವೆನಿಸಿದೆ. ಇದು 1856ರಲ್ಲಿ ಮೊದಲ ಪ್ರಕಟವಾಗಿ 1875ರಲ್ಲಿ ಪರಿಷ್ಕೃತಗೊಂಡು ಎರಡನೆಯ ಮುದ್ರಣವಾಗಿ ಹೊರಬಂತು. ಪ್ರತಿಗಳು ಮುಗಿದ ಕಾರಣ ಗ್ರಂಥ ನಾಲ್ಕನೆಯ ಮುದ್ರಣ ಕಂಡಿತು. ಈ ಗ್ರಂಥವನ್ನು ಮೊದಲಿಗೆ ಲಂಡನಿನ ರೂಡ್ಲೆಜ್ ಅಂಡ್ ಕೆಗನ್ ಪಾಲ್ ಲಿಮಿಟೆಡ್ ಸಂಸ್ಥೆಯವರೂ ಅನಂತರ ಮದ್ರಾಸು ವಿಶ್ವವಿದ್ಯಾನಿಲಯದವರೂ ಪ್ರಕಟಿಸಿದ್ದಾರೆ. ಮದ್ರಾಸು ವಿಶ್ವವಿದ್ಯಾನಿಲಯದ ಪ್ರಕಟಣೆಯನ್ನು ತಿದ್ದಿ ಸಂಪಾದಿಸಿದವರು ರೆವರೆಂಡ್ ಜೆ. ಎಲ್ ವ್ಯಾಟ್ ಮತ್ತು ಟಿ. ರಾಮಕೃಷ್ಣ ಪಿಳ್ಳೈ ಅವರು.

ಕಾಲ್ಡ್‌ವೆಲ್‌ನ ಈ ತೌಲನಿಕ ವ್ಯಾಕರಣ ದ್ರಾವಿಡ ಭಾಷಾವಿಜ್ಞಾನ ಕ್ಷೇತ್ರದ ಒಂದು ಮಹತ್ಸಾಧನೆ. ದ್ರಾವಿಡ ಭಾಷೆಗಳ ಸ್ವತಂತ್ರ ಅಸ್ತಿತ್ವದ ಕಲ್ಪನೆ ಇನ್ನೂ ಅಲ್ಲಲ್ಲಿ ಮೂಡುತ್ತಿದ್ದ ಕಾಲದಲ್ಲಿ ಆ ಭಾಷೆಗಳನ್ನು ಸ್ವತಂತ್ರ ಗುಂಪುಗಳೆಂದು ಖಚಿತವಾಗಿ ಸಾರಿ, ಇತರ ಯಾವ ಸಹಾಯವೂ ಇಲ್ಲದೆ ಪ್ರಥಮವಾಗಿ ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣವನ್ನು ಬರೆದದ್ದು ಈತನ ಪ್ರತಿಭೆ, ಪಾಂಡಿತ್ಯಗಳ ದ್ಯೋತಕವಾಗಿದೆ. ಭಾರತೀಯ ಭಾಷೆಗಳ ತೌಲನಿಕ ಅಧ್ಯಯನ ಆಗಿನ್ನೂ ಪ್ರಾರಂಭದೆಶೆಯಲ್ಲಿತ್ತು. ಭಾಷಾ ಪಂಡಿತರೆಲ್ಲರ ಗಮನ ಅತ್ತಕಡೆ ಇದ್ದ ಕಾಲದಲ್ಲಿ ಆ ವರ್ಗದಿಂದ ಬೇರೆಯಾದ, ದ್ರಾವಿಡ ವರ್ಗವೊಂದರ ಈ ಗುಂಪನ್ನು ತೆಗೆದುಕೊಂಡು ಕೆಲಸ ಮಾಡಿದ್ದು ಈತನ ಅದ್ಭುತ ಸಾಧನೆಯೆಂದೇ ಹೇಳಬೇಕು. ಇದು ದ್ರಾವಿಡ ಭಾಷೆಗಳ ಇತಿಹಾಸ ದೃಷ್ಟಿಯಿಂದ ಅಪೂರ್ವವೂ ಅಮೂಲ್ಯವೂ ಆದ ಗ್ರಂಥ. ಈತ ದ್ರಾವಿಡ ಭಾಷಾವಿಜ್ಞಾನದ ಅಸ್ತಿತ್ವಕ್ಕೆ ಭದ್ರವಾದ ಬುನಾದಿ ಹಾಕಿದ್ದಲ್ಲದೆ ಅದಕ್ಕೊಂದು ರೂಪ ಕೊಟ್ಟ. ದ್ರಾವಿಡ ಭಾಷೆಗಳ ವಿಷಯದಲ್ಲಿ ಈ ಹೊತ್ತಗೆ ಹೊಸ ವಿಚಾರ ವೇದಿಕೆಯೊಂದನ್ನು ನಿರ್ಮಿಸಿತು. 1856ರಲ್ಲಿ ಈತ ಪುಸ್ತಕವನ್ನು ಬರೆಯುವಾಗ ಸ್ಲಾವೋನಿಕ್ ಭಾಷೆಗಳ ಮೇಲೆ ಬರೆದ ಗಿಮ್ ಮತ್ತು ಬಾಪ್ ಬದುಕಿದ್ದರು. ಈ ಕಾಲಕ್ಕೆ ಭಾಷಾಶಾಸ್ತ್ರ ಒಂದು ಘಟ್ಟವನ್ನು ಮುಟ್ಟಿತ್ತು. ಬ್ರಗ್ಮನ್, ವರ್ನರ್ ಮುಂತಾದ ತರುಣ ವೈಯಾಕರಣಿಗಳು ಧ್ವನಿಸಾಮ್ಯಗಳ ಮೇಲೆ ಕೆಲಸ ಮಾಡಿ, ಕಾಲ ದೇಶ ಪರಿಸರಗಳ ದೃಷ್ಟಿಯಿಂದ ವಿಚಾರ ಮಾಡಿ ಧ್ವನಿತತ್ತ್ವಗಳಿಗೆ ಅಪವಾದಗಳೇ ಇಲ್ಲ ಎಂದರು. ಅಲ್ಲಿಗೆ ಭಾಷಾಶಾಸ್ತ್ರ ಒಂದು ನಿಶ್ಚಿತ ಘಟ್ಟವನ್ನು ಮುಟ್ಟಿತ್ತು ಎನ್ನಬೇಕು. ಭಾಷಾಶಾಸ್ತ್ರ ಸರ್ವಾಂಗೀಣವಾಗಿ ಬೆಳೆಯದ ಮುನ್ನವೇ ಕಾಲ್ಡ್‌ವೆಲ್ ಆ ಶಾಸ್ತ್ರದ ನಿಯಮಗಳೆಲ್ಲವನ್ನು ಪರಿಭಾವಿಸಿ ಕೆಲಸ ಮಾಡಿದ್ದು ನಿಜಕ್ಕೂ ಅದ್ಭುತವೇ ಸರಿ. ಜೂಲ್ಸ್ ಬ್ಲಾಕ್ ಈ ವ್ಯಾಕರಣದ ಮುಖ್ಯಾಂಶಗಳನ್ನು ಮೂಲಕ್ರಮವನ್ನು ಮುಕ್ತಕಂಠದಿಂದ ಹೊಗಳಿದ್ದಾನೆ.

ವ್ಯಾಕರಣದಂಥ ಜಟಿಲವಾದ ನೀರಸ ಶಾಸ್ತ್ರವನ್ನೂ ಕಾಲ್ಡ್‌ವೆಲ್ ರಮ್ಯವಾಗಿ ತಿಳಿಸುತ್ತಾನೆ; ತಾನು ಹೇಳುವುದನ್ನು ಸ್ಪಷ್ಟವಾಗಿ ಖಚಿತವಾಗಿ ಹೇಳುತ್ತಾನೆ. ಆದರೆ ಧ್ವನಿತತ್ತ್ವಗಳನ್ನು ಅಳವಡಿಸಿಕೊಳ್ಳದಿರುವುದೊಂದು ಇವನಲ್ಲಿರುವ ದೋಷ. ಬಹುಮಟ್ಟಿಗೆ ದ್ರಾವಿಡ ಭಾಷೆಗಳಿಂದಲೇ ಉದಾಹರಣೆಗಳನ್ನು ಕೊಟ್ಟರೂ ಬೇರೆ ಭಾಷೆಗಳೊಡನೆ ತುಲನೆ ಮಾಡುತ್ತಾನೆ. ಸಿಥಿಯನ್ ಅಥವಾ ಕುರೇನಿಯನ್ ಭಾಷಾ ಸಮುದಾಯವೊಂದನ್ನು ಪ್ರಸ್ತಾಪಿಸಿ ದ್ರಾವಿಡ ಭಾಷಾಸಮುದಾಯದ ಸಂಬಂಧವನ್ನು ಅದರೊಂದಿಗೆ ಜೋಡಿಸಿ ತೊಡಕಿಗೆ ಸಿಕ್ಕುತ್ತಾನೆ. ಸಿಥಿಯನ್ ಭಾಷಾ ಸಮುದಾಯವೊಂದನ್ನು ಪ್ರಸ್ತಾಪಿಸಿ ದ್ರಾವಿಡ ಭಾಷಾಸಮುದಾಯದ ಸಂಬಂಧವುಂಟೆಂದು ಹೇಳುತ್ತಾನೆ. ಆದರೆ ಆ ವಾದ ಅನುಪಾದೇಯವಾದುದು. ಈತನಿಗೆ ದೊರೆತ ಸಾಮಗ್ರಿ ಅಪೂರ್ಣವಾಗಿತ್ತು ಎಂಬುದನ್ನು ನಾವು ಮರೆಯಬಾರದು. ತಮಿಳು ಭಾಷೆಯಲ್ಲದೆ ಉಳಿದ ಭಾಷೆಗಳಲ್ಲಿ ಕಾಲ್ಡ್‌ವೆಲ್‌ಗೆ ಆಳವಾದ ಜ್ಞಾನವಿರಲಿಲ್ಲ. ಆದುದರಿಂದ ಗ್ರಾಂಥಿಕ ಭಾಷೆಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಕೆಲಸ ಮಾಡಿದ. ಈತನ ವಿಷಯ ಸಂಗ್ರಹಣೆ ಹಾಗೂ ಜೋಡಣೆ, ಕ್ರಮಬದ್ಧವಾದ ವಿಂಗಡಣೆ ಅನುಕರಣೀಯವಾದುದು. ಈತನಲ್ಲಿ ಪ್ರತಿಭೆ ಪಾಂಡಿತ್ಯಗಳೆರಡೂ ಸಮ ಪ್ರಮಾಣದಲ್ಲಿದ್ದುವು. ಆದುದರಿಂದ ದ್ರಾವಿಡ ಭಾಷೆಗಳು ಸಂಸ್ಕೃತ ಭಾಷೆಯಿಂದ ಬಂದವಲ್ಲವೆಂದು ಈತ ಒಂದು ನೂತನ ಶಕೆಯನ್ನೇ ನಿರ್ಮಿಸಿದ. ದೋಷಗಳು ಏನೇ ಇದ್ದರೂ ಇದೊಂದು ಉಪಾದೇಯ ಗ್ರಂಥ.

ಈ ಗ್ರಂಥದ ಜೊತೆಗೆ ತಮಿಳಿನಲ್ಲಿ ಕಾಲ್ಡ್‌ವೆಲ್ ಬೈಬಲ್ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ಪುಸ್ತಕಗಳನ್ನು ಬರೆದಿದ್ದಾನೆ. ಈತ ರಾಯಲ್ ಏಷ್ಯಾಟಿಕ್ ಸೊಸೈಟಿಯ ಮತ್ತು ಮದ್ರಾಸ್ ವಿಶ್ವವಿದ್ಯಾನಿಲಯದ ಸದಸ್ಯನಾಗಿದ್ದ. ಧರ್ಮ ಮತ್ತು ಸಾಹಿತ್ಯಗಳಲ್ಲಿ ಈತನಿಗಿದ್ದ ಪ್ರೌಢಿಮೆ, ಪಾಂಡಿತ್ಯಗಳನ್ನು ಮೆಚ್ಚಿ ಡರ್ಹ್ಯಾಮ್ ವಿಶ್ವವಿದ್ಯಾನಿಲಯ ಈತನಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನಿತ್ತು ಗೌರವಿಸಿತು. ಈತನ ವಿದ್ವತ್ತು ಹಾಗೂ ಸಾರ್ವಜನಿಕ ಸೇವೆಯನ್ನು ಮನಗಂಡು 1877ರಲ್ಲಿ ಈತನನ್ನು ತಿನ್ನವೆಲ್ಲಿಯ ಬಿಷಪ್ ಆಗಿ ನೇಮಕ ಮಾಡಲಾಯಿತು. ವಯಸ್ಸಿನ ಕಾರಣದಿಂದ 1891ರಲ್ಲಿ ಬಿಷಪ್ ವೃತ್ತಿಯಿಂದ ನಿವೃತ್ತನಾಗಿ ಕಾಲ್ಡ್‌ವೆಲ್ ಕೊಡೈಕೆನಾಲಿಗೆ ಹೋದ. ಅದೇ ವರ್ಷ ನಿಧನ ಹೊಂದಿದ. ಇಡಯನ್ ಕುಡಿಯಲ್ಲಿ ಈತನೇ ಕಟ್ಟಿಸಿದ ಚರ್ಚಿನಲ್ಲಿ ಈತನ ಸಮಾಧಿ ಇದೆ. (ಬಿ.ಎನ್.ಪಿ.)

**ಕಾಲ್ಬೇರ್ :** 1619–83. ಫ್ರಾನ್ಸಿನಲ್ಲಿ 17ನೆಯ ಶತಮಾನದಲ್ಲಿದ್ದ ಅತ್ಯಂತ ಮೇಧಾವಿ ಆಡಳಿತಗಾರ. ಚಕ್ರವರ್ತಿ 14ನೆಯ ಲೂಯಿಯ (1665–83) ಅರ್ಥಸಚಿವ. ಇವನ ಜನನ ರೀಮ್ಸ್‌ನಲ್ಲಿ. ರಕ್ಷಣಾ ಖಾತೆಯ ಮೈಕೇಲ್ ಟೇಲರನ ಕಚೇರಿಯಲ್ಲಿ ಕೆಲಸ ಆರಂಭಿಸಿ, ಮ್ಯಾಜ಼ರಿನನ ಸಚಿವನಾದ. 1661ರಲ್ಲಿ ಮ್ಯಾಜರಿನ್ ಮರಣ ಹೊಂದುವುದಕ್ಕೆ ಮುಂಚೆ ಕಾಲ್ಬೇರನನ್ನು ಅರ್ಥಶಾಖೆಯ ಮುಖ್ಯಾಧಿಕಾರಿಯ ಸ್ಥಾನಕ್ಕೆ ನೇಮಕಮಾಡುವಂತೆ ಚಕ್ರವರ್ತಿಯನ್ನು ಪ್ರಾರ್ಥಿಸಿದ. ಅದರಂತೆ 1665ರಲ್ಲಿ 14ನೆಯ ಲೂಯಿಯಿಂದ ಅರ್ಥಸಚಿವ ಹುದ್ದೆಗೆ ನೇಮಕವಾಗಿ, ಫ್ರಾನ್ಸಿನ ಅಂತರ್ಯುದ್ಧದಿಂದಲೂ ಲಂಚಗುಳಿತನದಿಂದಲೂ ದುರ್ಬಲ ಆಡಳಿತಗಳಿಂದಲೂ ಸಂಭವಿಸಿದ್ದ ಆರ್ಥಿಕ ಮುಗ್ಗಟ್ಟನ್ನು ನಿವಾರಿಸಲು ಅನೇಕ ಕ್ರಮಗಳನ್ನು ಕೈಗೊಂಡ. ಲಂಚಕೋರ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿದ್ದಲ್ಲದೆ, ಆರ್ಥಿಕ ಸುಧಾರಣೆಗಾಗಿ ಒಂದು ಸಮಿತಿಯನ್ನು ಸ್ಥಾಪಿಸಿ ತಾನೇ ಅದರ ಪ್ರಧಾನ ಕಾರ್ಯಕರ್ತನಾಗಿದ್ದ. ಸಾರ್ವಜನಿಕ ಸಾಲದ ಮೇಲೆ ಕೊಡುತ್ತಿದ್ದ ಬಡ್ಡಿಯ ದರವನ್ನು ಕಡಿಮೆಮಾಡಿ, ಅನಾವಶ್ಯಕವಾದ ರಿಯಾಯಿತಿಗಳನ್ನು ರದ್ದುಗೊಳಿಸಿ ತನ್ಮೂಲಕ ವೆಚ್ಚತಗ್ಗಿಸಿ ತೆರಿಗೆಯ ಹೊರೆಯನ್ನೂ ಕಡಿಮೆಮಾಡಿದ. ನೆದರ್‌ಲೆಂಡ್ಸ್‌ನೊಡನೆ ನಡೆದ ಯುದ್ಧದ (1672–78) ಫಲವಾಗಿ ಆರ್ಥಿಕ ಕ್ಷೇತ್ರದಲ್ಲಿ ದುಷ್ಪರಿಣಾಮಗಳು ಸಂಭವಿಸಿದ್ದುವಾದರೂ ಕಾಲ್ಬೇರ್ ಸತತವಾಗಿ 22 ವರ್ಷಗಳ ಕಾಲ ಶ್ರಮಿಸಿದ್ದರಿಂದ ಫ್ರಾನ್ಸಿನ ರಾಜಾದಾಯ ಮೂರು ಕೋಟಿ ಲೀವರ್‌ಗಳಷ್ಟು ಹೆಚ್ಚಿತು.

ಆಮದು ಸುಂಕ, ವಾಣಿಜ್ಯ ನಿಯಮಗಳು, ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟ ವ್ಯಾಪಾರ ವ್ಯವಸ್ಥೆ, ವಸಾಹತುಗಳ ಮೇಲೆ ಸಂಪೂರ್ಣ ಹತೋಟಿ, ಹಡಗು ಸಂಚಾರ ಕಾನೂನುಗಳು–ಇವು ಕಾಲ್ಬೇರನ ಆರ್ಥಿಕ ವಿಚಾರಗಳಲ್ಲಿ ಮುಖ್ಯವಾದವು. 1664ರಲ್ಲಿ ಫ್ರೆಂಚ್ ವೆಸ್ಟ್ ಮತ್ತು ಈಸ್ಟ್ ಇಂಡಿಯಾ ಕಂಪನಿಗಳ ಸ್ಥಾಪನೆಗೆ ಕಾರಣನಾದನಲ್ಲದೆ ದೇಶದ ವಾಣಿಜ್ಯ ಮತ್ತು ಹಡಗುಪಡೆಗಳ ಬೆಳೆವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದ. ರೋಚ್‌ಪೋರ್ಟ್ ಬಂದರನ್ನೂ ನೌಕಾದಳದ ತರಬೇತಿಗಾಗಿ ಶಾಲೆಗಳನ್ನೂ ಸ್ಥಾಪಿಸಿದ. ಅನೇಕ ರಸ್ತೆಗಳನ್ನೂ ನೀರಾವರಿ ವ್ಯವಸ್ಥೆಯನ್ನೂ ನಿರ್ಮಿಸಿದ. ಇಷ್ಟೆಲ್ಲ ಕೆಲಸಗಳ ನಡುವೆ ಕಾಲ್ಬೇರ್ ಕಲಾಸಾಹಿತ್ಯಗಳನ್ನು ಪ್ರೋತ್ಸಾಹಿಸಲು ಮರೆಯಲಿಲ್ಲ. ಫ್ರಾನ್ಸಿನ ವಿಜ್ಞಾನಸಂಸ್ಥೆ ಮತ್ತು ಕಲಾಶಾಲೆಗಳ ಸ್ಥಾಪನೆಯಾಯಿತು. ದೇಶದ ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳನ್ನು ಕ್ರೋಡೀಕರಿಸಿದ. ಒಟ್ಟಿನಲ್ಲಿ ಕಾಲ್ಬೇರ್ ಅವಿಶ್ರಾಂತವಾಗಿ ದುಡಿಯುತ್ತ ಅತ್ಯಂತ ಪ್ರಭಾವ ಶಾಲಿಯಾಗಿದ್ದ. ಇವನನ್ನು ಕಂಡರೆ ಕರುಬುವ ವ್ಯಕ್ತಿಗಳೂ ಆಸ್ಥಾನದಲ್ಲಿದ್ದರು. ಇದರಿಂದಾಗಿ ಕೊನೆಗೆ ಇವನಿಗೆ ರಾಜನ ಆಶ್ರಯ ತಪ್ಪಿತು. ಇವನು ಉತ್ತಮಪಡಿಸಿದ ಅರ್ಥವ್ಯವಸ್ಥೆ ಇವನ ಎದುರಿಗೇ ಕುಸಿದುಬಿತ್ತು. 1683ರಲ್ಲಿ ಈತ ಪ್ಯಾರಿಸಿನಲ್ಲಿ ನಿಧನಹೊಂದಿದ. (ಬಿ.ಎಸ್.ಎ.)

**ಕಾಲ್ಮಗ್ರಾಫ್ – ಸ್ಮಿರ್ನಾಫ್ ಪರೀಕ್ಷಣ :** ಇತ್ತೀಚೆಗೆ ರೂಪಿಸಲಾಗಿರುವ ಅಪ್ರಾಚಲ (ನಾನ್‌ಪ್ಯರಾಮೆಟ್ರಿಕ್) ಪರೀಕ್ಷಣಗಳಲ್ಲೊಂದು. ವಿಜ್ಞಾನದ ಮುನ್ನಡೆಯಲ್ಲಿ ಹಲವಾರು ಆಧಾರಕಲ್ಪನೆಗಳನ್ನು ಸೃಷ್ಟಿಸಿಕೊಳ್ಳುತ್ತೇವೆ ಹಾಗೂ ಅಡಿಗಡಿಗೆ ಪ್ರಯೋಗ ನಡೆಸಿ ಅವು ಆಧಾರಕಲ್ಪನೆಗೆ ಅನುಗುಣವಾಗಿವೆಯೇ ಅಥವಾ ತದ್ವಿರುದ್ಧವಾಗಿವೆಯೇ ಎಂದು ಪರೀಕ್ಷಿಸಬೇಕಾಗುವುದು. ಈ ವಿಧವಾದ ಪರೀಕ್ಷಣೆ ಸಂಖ್ಯಾಕಲನ ಪ್ರಯೋಗತಂತ್ರಕ್ಕೆ ಒಳಪಟ್ಟ ಸಂಗತಿ. ಸಂಭವ ಚರಗಳ ವಿತರಣೆಯ ಸ್ವರೂಪ ತಿಳಿದಿದ್ದಾಗ ಅದರ ಪ್ರಾಚಲಗಳನ್ನು ಅಂದಾಜುಮಾಡಿ ಪರೀಕ್ಷಣಗಳನ್ನು ನಡೆಸುತ್ತೇವೆ. ಉದಾಹರಣೆಗೆ ದತ್ತಸಾಂಖ್ಯಿಕವಿಶ್ವ (ಪಾಪ್ಯುಲೇಷನ್) ಪ್ರಸಾಮಾನ್ಯವಾದುದೆಂದು ತಿಳಿದಿದೆ ಎನ್ನೋಣ. ಇದರ ಪ್ರಾಚಲಗಳು $\mu$, $\delta^{-2}$ ಅಜ್ಞಾತವಾಗಿರಬಹುದು. $x_1, x_2, \ldots\ldots x_n$ ಎಂಬ $n$ ಗಾತ್ರದ ನಿದರ್ಶನದಿಂದ $\mu=m$ ಎಂಬ ಆಧಾರಕಲ್ಪನೆಯನ್ನು ಪರೀಕ್ಷಿಸಬೇಕಾದರೆ $x=\frac{1}{n}\sum x_i$ ಮತ್ತು $s^2 = \frac{1}{n}\sum (x_i-x)^2$ ಎಂದು ವ್ಯಾಖ್ಯೆಮಾಡಿ $t=\sqrt{n.}(x-\mu)/s$ ಎಂಬ ನಿದರ್ಶಜದಿಂದ (ಸ್ಟ್ಯಾಟಿಸ್ಟಿಕ್), t–ಪರೀಕ್ಷಣವನ್ನು ನಡೆಸುತ್ತೇವೆ. ಎರಡು ಪ್ರಸಾಮಾನ್ಯ ವಿಶ್ವಗಳಿಂದ $n_1, n_2$ ಗಾತ್ರದ ನಿದರ್ಶನಗಳನ್ನು ಆಯ್ದುಕೊಂಡರೆ ಈ ಅವೇಕ್ಷಣೆಗಳ ಆಧಾರದ ಮೇಲೆ ಎರಡೂ ವಿಶ್ವಗಳ ವಿಚಲನೆಗಳು (ವೇರಿಯನ್ಸಸ್) ಸಮವಾಗಿವೆಯೇ ಎಂದು ಪರೀಕ್ಷಿಸಲು ಸ್ನೆಡಕರನ F–ಪರೀಕ್ಷಣವನ್ನು ಬಳಸುತ್ತೇವೆ. ಕೆಲವು ಸಂದರ್ಭಗಳಲ್ಲಿ ಸಾಂಖ್ಯಿಕ ವಿಶ್ವದ ಸ್ವರೂಪ ತಿಳಿಯದಿರಬಹುದು. ಅಂಥ ಸ್ಥಿತಿಗೆ ಒಪ್ಪುವಂಥ ಕೆಲವು ಪರೀಕ್ಷಣಗಳನ್ನು ತಜ್ಞರು ಸಾದರಪಡಿಸಿರುವರು. ಇವಕ್ಕೆ ಅಪ್ರಾಚಲ ಪರೀಕ್ಷಣಗಳೆಂದು ಹೆಸರು. ಇವನ್ನು ವಿತರಣೆ–ಮುಕ್ತ (ಡಿಸ್ಟ್ರಿಬ್ಯೂಷನ್ ಫ್ರೀ) ಪರೀಕ್ಷಣಗಳೆಂದೂ ಹೇಳುವರು.

$x^2$ ಪರೀಕ್ಷಣ ಈ ಜಾತಿಗೆ ಸೇರಿದ್ದು ಎಂಬುದನ್ನು ಜ್ಞಾಪಕಕ್ಕೆ ತಂದುಕೊಳ್ಳಬಹುದು. ಅವೇಕ್ಷಿತ ವಿತರಣೆಗೂ ಆಧಾರಕಲ್ಪಿತ ವಿತರಣೆಗೂ ಇರುವ ಹೊಂದಿಕೆಯನ್ನು ಇದರಿಂದ

ಪರೀಕ್ಷಿಸಲಾಗುವುದು. ಇದಲ್ಲದೆ ಇತ್ತೀಚೆಗೆ ಕೆಲವು ಹೊಸ ಪರೀಕ್ಷಣಗಳನ್ನು ನಿರೂಪಿಸಿರುವರು. ಇವುಗಳಲ್ಲಿ ಕಾಲ್ಮಗ್ರಾಫ್–ಸ್ಮಿರ್ನಾಫ್ ಪರೀಕ್ಷಣ, ವಿಲ್ಕಾಕ್ಸನ್ ಸಚಿಹ್ನ–ಸ್ಥಾನಪರೀಕ್ಷಣ, ಮಾನ್–ವಿಟ್ನೆ ಪರೀಕ್ಷಣ ಮುಂತಾದುವು ಮುಖ್ಯವಾದವು.

**ಕಾಲ್ಮಗ್ರಾಫ್ ಪರೀಕ್ಷಣ:** ಸಾಮಾನ್ಯವಾಗಿ ಬಳಸಲಾಗುವ $x^2$ ಪರೀಕ್ಷಣದಲ್ಲಿ ಪ್ರತಿಯೊಂದು ವರ್ಗ ಅಥವಾ ಖಾನೆಯಲ್ಲಿನ ಆವೃತ್ತಿಸಂಖ್ಯೆಗಳನ್ನು ಲೆಕ್ಕಮಾಡಿ ಅವೇಕ್ಷಿತ ಆವೃತ್ತಿಸಂಖ್ಯೆಗಳೊಡನೆ ಹೋಲಿಸುತ್ತೇವೆ. ಕಾಲ್ಮಗ್ರಾಫ್ ಪರೀಕ್ಷಣದಲ್ಲಂತೂ ಸಮಾಕಲಿತ ವಿತರಣೆಗಳನ್ನು (ಕ್ಯುಮ್ಯುಲೇಟಿವ್ ಡಿಸ್ಟ್ರಿಬ್ಯೂಷನ್) ಪರಿಶೀಲಿಸಿ ಪರೀಕ್ಷಣ ನಡೆಸುತ್ತೇವೆ.

ಸಂಭವಚರ xನ ವಿತರಣೆಯ ಉತ್ಪನ್ನ $F(x)$ ಎಂದು ಆಧಾರ ಕಲ್ಪನೆ $H_0$ ನಮೂದಿಸುತ್ತದೆ ಎನ್ನೋಣ. n ಗಾತ್ರದ ನಿದರ್ಶನದಲ್ಲಿ ದತ್ತ xಗೆ ಅನುಗುಣವಾದ ಸಾಪೇಕ್ಷ ಸಮಾಕಲಿತ ಆವೃತ್ತಿಸಂಖ್ಯೆ $S_n(x)$ ಎಂದಿರಲಿ. ಅಂದರೆ x ಇರುವ ಅವೇಕ್ಷಣೆಗಳ ಸಂಖ್ಯೆ $k$ ಆದರೆ $S_n(x)=k/n$. ಆಧಾರ ಕಲ್ಪನೆ $H_0$ ಸತ್ಯವಾದ ಪಕ್ಷದಲ್ಲಿ $S_n(x)$ ಎನ್ನುವ ನಿದರ್ಶಜ $F(x)$ಗೆ ಉಪಸಮವಾಗಿರುವುದು. n ಹೆಚ್ಚಿದಂತೆಲ್ಲ ಈ ಉಪಸಾಮ್ಯ ಉತ್ತಮವಾಗುವುದು. ಬಲಿಷ್ಠ ಬೃಹತ್ಸಂಖ್ಯಾ ನಿಯಮದ (ಸ್ಟ್ರಾಂಗ್ ಲಾ ಆಫ್ ಲಾರ್ಜ್ ನಂಬರ್ಸ್) ಮೇರೆಗೆ ಸಂಭಾವ್ಯತೆ 1 ಇರುವಂತೆ $F(x)$ಗೆ $S_n(x)$ ಉಪಸರಿಸುವುದು. $S_n(x)$ ಮತ್ತು $F(x)$ ಇವುಗಳಿಗಿರುವ ಶುದ್ಧ ವಿಚಲನೆಯ ಉಚ್ಚತಮ ಬೆಲೆ $D_n$ನ್ನು ಪರೀಕ್ಷಣ ಉತ್ಪನ್ನವಾಗಿ ತೆಗೆದುಕೊಳ್ಳುತ್ತೇವೆ. ಅಂದರೆ

$$D_n = \sup_x | S_n(x) - F(x) |$$

ಇಲ್ಲಿ sup ಎಂಬುದು supremum (ಉಚ್ಚತಮ) ಎನ್ನುವುದರ ಹ್ರಸ್ವರೂಪ. ಇಲ್ಲಿ ವ್ಯಾಖ್ಯೆ ಮಾಡಿರುವ $D_n$ ಉತ್ಪನ್ನದ ವಿತರಣೆ $F(x)$ ನ ಸ್ವರೂಪವನ್ನು ಅವಲಂಬಿಸಿರುವುದಿಲ್ಲ; $F(x)$ ಅವಿಚ್ಛಿನ್ನವಾಗಿದ್ದರೆ ಸಾಕು. ಆದ ಕಾರಣ $F(x)$ ನ್ನು ಸರಳಾತಿಸರಳ ವಿತರಣೆಯನ್ನಾಗಿ ತೆಗೆದುಕೊಂಡು ಪರೀಕ್ಷಣವನ್ನು ನಡೆಸಬಹುದು. ಇದಕ್ಕೆ ಅನುಸಾರವಾಗಿ $F(x) = x$ $(0\le x\le 1)$ ಎಂದು ತೆಗೆದುಕೊಂಡರೆ ಪರೀಕ್ಷಣ ಸುಗಮವಾಗುವುದು. $P[\sup_x S_n(x) - F(x) | > D_n]=\alpha$ ಇರುವಂತೆ $\alpha=0.20$, $\alpha=0.10$, $1=0.05$ ಮತ್ತು $\alpha=0.01$ ಬೆಲೆಗಳಿಗೆ nನ ಹಲವು ಬೆಲೆಗಳಿಗೆ ಯುಕ್ತವಾದ $D_n$ ಬೆಲೆಗಳನ್ನು ಗಣಿಸಿ ಎಫ್. ಜೆ. ಮ್ಯಾಸೀ ಎಂಬಾತ ಕೋಷ್ಟಕವೊಂದನ್ನು ರಚಿಸಿರುವನು. ಅದರ ಸಹಾಯದಿಂದ ಈ ಪರೀಕ್ಷಣವನ್ನು ಪ್ರಯೋಗಿಸಬಹುದು.

$D_n$ ನ ಅನಂತಸ್ಪರ್ಶಕ (ಅಸಿಂಪ್ಟೋಟ್) ವಿತರಣೆಯನ್ನು ಪರಿಶೀಲಿಸಬಹುದು.

$\lambda>0$ ಆದರೆ $\lim P( \quad D_n \lambda) = L(\lambda)$

$\sum_{n=1}$

$n \qquad =2 \qquad (-1)^{n+1} \exp(-2n^2)\ \lambda^2$

ಎಂದು ಕಾಲ್ಮಗ್ರಾಫ್ ಸಾಧಿಸಿದ್ದಾನೆ. $L(\quad)= 1.36$ ಆದಾಗ $L(\lambda) = 0.05$ ಆಗುವುದು. ಅಂದರೆ 1.36 ಗಿಂತ ಹೆಚ್ಚಾಗಿರತಕ್ಕ ಅನಂತಸ್ಪರ್ಶಕೀಯ ಸಂಭಾವ್ಯತೆ 0.05 ಇರುವುದು.

ಕಾಲ್ಮಗ್ರಾಫ್ ಪರೀಕ್ಷಣ $x^{2-}$ ಪರೀಕ್ಷಣಕ್ಕಿಂತ ಪ್ರಾಯಶ: ಶಕ್ತಿಯುತವಾಗಿರುವುದು. ಆದರೆ ಆಧಾರಕಲ್ಪಿತ ವಿತರಣೆಯನ್ನೂ ಅವೇಕ್ಷಿತ ವಿತರಣೆಯನ್ನೂ xನ ವ್ಯಾಪ್ತಿಯ ಪೂರ್ತಿ ಹೋಲಿಸಲು ಸಾಧ್ಯವಿಲ್ಲ. ಅಲ್ಲದೆ ಅವಿಚ್ಛಿನ್ನ ಚರಗಳಿಗೆ ಕಾಲ್ಮಗ್ರಾಫ್ ಪರೀಕ್ಷಣವನ್ನು ಬಳಸಬಹುದೇ ಹೊರತು ವಿರತ ಚರಗಳಿಗೆ ಬಳಸಲಾಗುವುದಿಲ್ಲ. $X^{2-}$ ಪರೀಕ್ಷಣವನ್ನಾದರೋ ಈ ಸಂದರ್ಭದಲ್ಲೂ ಬಳಸಬಹುದು.

ವಿವಿಧ ಸಂಭವಮಟ್ಟಗಳಲ್ಲಿ nನ ಅವಧಿಕ ಬೆಲೆ (ಕ್ರಿಟಿಕಲ್ ವೇಲ್ಯೂ)
$P[\sup_x | S_n(x) - F(x) | > Dn] = a$ ಆಗುವ $D_n$ ಬೆಲೆಗಳು

| | a | | | |
|---|---|---|---|---|
| n | 0.20 | 0.10 | 0.05 | 0.01 |
| 5 | 0.446 | 0.510 | 0.565 | 0.669 |
| 7 | 0.381 | 0.438 | 0.486 | 0.577 |
| 9 | 0.339 | 0.388 | 0.432 | 0.514 |
| 11 | 0.307 | 0.352 | 0.391 | 0.468 |
| 13 | 0.284 | 0.325 | 0.361 | 0.433 |
| 15 | 0.266 | 0.304 | 0.338 | 0.404 |
| 20 | 0.231 | 0.264 | 0.294 | 0.356 |
| 25 | 0.21 | 0.24 | 0.27 | 0.32 |
| 30 | 0.19 | 0.22 | 0.24 | 0.29 |
| 35 | 0.18 | 0.21 | 0.23 | 0.27 |

ಎರಡು ನಿದರ್ಶನಗಳಿಗೆ ಅನ್ವಯಿಸುವ ಕಾಲ್ಮಗ್ರಾಫ್–ಸ್ಮಿರ್ನಾಫ್ ಪರೀಕ್ಷಣ: ಅವೇಕ್ಷಣಗಳ ಎರಡು ಗಣಗಳು (ಸೆಟ್ಸ್) ಹೊಂದಿಕೆಯಾಗಿವೆಯೇ ಎಂದು ನೋಡಲು ಈ ಪರೀಕ್ಷಣವನ್ನು ಸಾದರಪಡಿಸಲಾಗಿದೆ. $m$ ಮತ್ತು $n$ ಗಾತ್ರಗಳ ಎರಡು ನಿದರ್ಶನಗಳು ಒಂದೇ ವಿತರಣೆ ಉತ್ಪನ್ನದ ವಿಶ್ವದಿಂದ ಬಂದಿರುವುವೇ ಎಂಬುದನ್ನು ಪರೀಕ್ಷಿಸಬಹುದು. ಈ ಪರಿಸ್ಥಿತಿಯಲ್ಲಿ ಬಳಸಲಾಗುವ $D_{mn}$ ಎನ್ನುವ ಪರೀಕ್ಷಣದ ನಿದರ್ಶಜವನ್ನು ಹೀಗೆ ವ್ಯಾಖ್ಯಿಸುತ್ತೇವೆ: $D_{mn} = \sup_x/S_m(x) - S_n(x)1$. ಮೇಲಿನ ಪ್ರಕರಣಗಳಲ್ಲಿ ಸಂಕೇತಿಸಿರುವಂತೆ $S_m(x)$ಮತ್ತು $S_n(x)$ ಗಳು ಸಾಪೇಕ್ಷ ಸಮಾಕಲಿತ ಆವೃತ್ತಿಸಂಖ್ಯೆಗಳಾಗಿರುವುವು. $N=mn/(m+n)$ಆದರೆ ಮತ್ತು $m/n$ ಪರ್ಯಾಪ್ತವಾಗಿದ್ದರೆ $\lambda>0$ ಆದಾಗ

$$\lim_{m,n\to\infty} P\left(\sqrt{N.D_{mn}} \ge \lambda\right) - L\ (\lambda)\, 2\sum_{N=1}^{\infty}(-1)^{N+1}\exp\left(-2N^2\right)\ \lambda^2$$

ಎಂದು ಸಾಧಿಸಬಹುದು. $m=n$ ಇದ್ದಾಗ $D\le k/n$ ಇರುವಂತೆ D ಯ ಸಂಭಾವ್ಯತೆಯನ್ನು ಮ್ಯಾಸೇ ಪಟ್ಟಿಮಾಡಿದ್ದಾನೆ. ಅದನ್ನು ಬಳಸಿಕೊಂಡು ಈ ಪರೀಕ್ಷಣವನ್ನು ನಡೆಸಬಹುದು.

$m, n$ ಗಳ ಬೃಹತ್ ಬೆಲೆಗಳನ್ನು $\alpha$ ಸಾರ್ಥಕತಾ ಮಟ್ಟದಲ್ಲಿ ನೇತಿಕಲ್ಪನೆಯನ್ನು (ನಲ್ ಹೈಪಾಥಿಸಿಸ್) ತ್ಯಜಿಸತಕ್ಕ $\lambda$ದ ಬೆಲೆಗಳನ್ನು ಸ್ಮಿರ್ನಾಫ್ ಲೆಕ್ಕಮಾಡಿ ಕೊಟ್ಟಿದ್ದಾನೆ. ಅವು ಹೀಗಿವೆ:

| α | 0.10 | 0.05 | 0.025 | 0.01 | 0.005 | 0.001 |
|---|---|---|---|---|---|---|
| λ | 1.22 | 1.36 | 1.48 | 1.63 | 1.73 | 1.95 |

ಗಾತ್ರ 50 ಮತ್ತು 60 ಇರುವ ಎರಡು ನಿದರ್ಶನಗಳಲ್ಲಿ $S_m(x)$ ಮತ್ತು $S_n(x)$ ಎಂಬ ಸಮಾಕಲಿತ ಸಾಪೇಕ್ಷ ಆವೃತ್ತಿ ಉತ್ಪನ್ನಗಳನ್ನು ಲೆಕ್ಕಮಾಡಿ ಇವುಗಳ ಗರಿಷ್ಠತಮ ಶುದ್ಧ ವಿಚಲನೆಯನ್ನು ಕಂಡುಹಿಡಿಯೋಣ. ಅದರ ಬೆಲೆ 0.3 ಆಗಿರಲಿ. ಆಗ $\sqrt{N.D_{m',n}} = \sqrt{\frac{50\times 60}{110}}\times 0.3 = 1.566.$ ಇಷ್ಟು ದೊಡ್ಡ ಬೆಲೆಯನ್ನು ಪಡೆಯುವ ಸಂಭಾವ್ಯತೆ 0.025ಗಿಂತ ಕಡಿಮೆಯಾಗಿಯೂ 0.01ಕ್ಕಿಂತ ಹೆಚ್ಚಾಗಿಯೂ ಇರುವುದರಿಂದ 0.01 ಸಾರ್ಥಕತಾ ಮಟ್ಟದಲ್ಲಿ ನೇತಿಕಲ್ಪನೆಯನ್ನು ತ್ಯಜಿಸುವಂತಿಲ್ಲ. ಆದರೆ 0.05 ಮಟ್ಟದಲ್ಲಿ ನೇತಿಕಲ್ಪನೆಯನ್ನು ತ್ಯಜಿಸುವಂತಾಗಬಹುದು. ಈ ಪರಿಶೀಲನೆಗೊಳಗಾಗುವ ಸಂಭವಚರ ಅವಿಚ್ಛಿನ್ನವಾಗಿರಬೇಕೆಂಬುದನ್ನು ನೆನಪಿನಲ್ಲಿಡಬೇಕು.

$F(x)$ ಹೆಚ್ಚಾಗಿರುವ ಸಾಂಖ್ಯಿಕ ವಿಶ್ವದಿಂದ ಮೊದಲನೆಯ ನಿದರ್ಶನವನ್ನು ಆಯ್ದುಕೊಳ್ಳಲಾಗಿದೆ ಎಂಬುದು ಪರ್ಯಾಯಕಲ್ಪನೆಯಾದರೆ $S_m(x)$, $S_n(x)$ ಗಳ ವ್ಯತ್ಯಾಸದ ಶುದ್ಧ ಬೆಲೆಯನ್ನು ಲೆಕ್ಕಮಾಡದೆ ಯಥಾವತ್ತಾದ $S_m(x)$-$S_n(x)$ ವ್ಯತ್ಯಾಸವನ್ನು ಪರೀಕ್ಷಣಕ್ಕೆ ಬಳಸಬೇಕು. ಅಂದರೆ $D_{mn} = S_m(x)$-$S_n(x)$ ಎಂದು ತೆಗೆದುಕೊಂಡು ಲೆಕ್ಕಮಾಡಬೇಕು. (ಎಂ.ವಿ.ಜೆ.)

**ಕಾಲ್ಮೆಟ್, ಲಿಯಾನ್ ಚಾರಲ್ಸ್ ಆಲ್ಬರ್ಟ್ :** 1833–1933. ಫ್ರಾನ್ಸಿನ ಏಕಾಣುಜೀವಿವಿಜ್ಞಾನಿ. ಕ್ಷಯ ಹತ್ತದಿರುವಂತೆ ಮಕ್ಕಳಿಗೆ ಹಾಕುವ ಬಿ.ಸಿ.ಜಿ. ಲಸಿಕೆಯನ್ನು ತಯಾರಿಸಲು ಕಾರಣರಾದ ಇಬ್ಬರಲ್ಲಿ ಒಬ್ಬ. ಪ್ಯಾರಿಸ್ಸಿನಲ್ಲಿ ವೈದ್ಯಪದವೀಧರನಾದ (1886). ಹಾವು ಕಚ್ಚಿದವರ ಚಿಕಿತ್ಸೆಗಾಗಿ ಚುಚ್ಚುವ ಲಸಿಕೆಯನ್ನು ಈತ ತಯಾರಿಸಿದ್ದು 1897ರಲ್ಲಿ. ಈಗಲೂ ಅದು ಭಾರತದಲ್ಲಿ ಬಳಕೆಯಲ್ಲಿದೆ. ಕ್ಷಯಾಣುಸಾರದ (ಟ್ಯುಬರ್ಕ್ಯುಲಿನ್) ಪ್ರತಿಕ್ರಿಯೆಯನ್ನು ಕಣ್ಣಲ್ಲಿ ಹೇಗೆ ಗುರುತಿಸಬೇಕೆಂದು ವಿವರಿಸಿದ (1907). ಪ್ರಪಂಚದಲ್ಲಿ ಎಲ್ಲೆಲ್ಲೂ, ಅದರಲ್ಲೂ ಮುಂದುವರಿಯುತ್ತಿರುವ ನಾಡುಗಳಲ್ಲಿ, ಕ್ಷಯರೋಗವನ್ನು ತಡೆಗಟ್ಟಲು ಹಾಕುವ ಬಿ.ಸಿ.ಜಿ. ಲಸಿಕೆಯನ್ನು ಕೆಮಿಲ್ಲೆ ಗ್ವೆರಿನ್ನನೊಂದಿಗೆ ಸೇರಿ ಕಂಡುಹಿಡಿದ (1906). ಪ್ರಚಂಡ ವಿಷಕರ, ದನದ ಕ್ಷಯ ದಂಡಾಣುಜೀವಿಗಳನ್ನು (ಬೆಸಿಲ್ಲೈ) ಪಿತ್ತರಸ, ಆಲೂಗೆಡ್ಡೆ, ಗ್ಲಿಸರೀನಿನಲ್ಲಿ ಹಾಕಿ ತಳಿಯೆಬ್ಬಿಸಿದರೆ ವಿಷ ಕಳೆದು ಹಾನಿಮಾಡದಂತಾಗುತ್ತವೆಂದು ಕಂಡುಕೊಂಡ. ಇಷ್ಟಾದರೂ ಹೀಗೆ ವಿಷ ಕಳೆದುಕೊಂಡು ಸಾಧುವಾದ ರೋಗಾಣುಗಳಿಗೂ ಜನರ ಅಲ್ಲದೆ ದನಗಳ ಕ್ಷಯದ ಸೋಂಕು ಅಂಟುವುದನ್ನು ತಡೆಯುವ ಬಲ ಉಳಿದಿರುವುದನ್ನೂ ಗುರುತಿಸಿದ. ಈ ತಳಿಯ ಕ್ಷಯ ರೋಗಾಣುವಿಗೆ ಬೆಸಿಲಸ್ ಕಾಲ್ಮೆಟ್–ಗ್ವೆರಿನ್ (ಕಾಲ್ಮೆಟ್–ಗ್ವೆರಿನ್‌ರ ದಂಡಾಣುಜೀವಿ) ಎಂದು ಹೆಸರಾಯಿತು. ಇದೇ ಮೊಟಕಾಗಿ ಈಗ ಬಿ.ಸಿ.ಜಿ. ಆಗಿದೆ. ಹೀಗೆ ಜೀವವಿರುವ ಈ ಲಸಿಕೆ ಮೊಟ್ಟಮೊದಲು 1922ರಲ್ಲಿ ಮಕ್ಕಳ ಮೇಲೆ ಪ್ರಯೋಗವಾಯಿತು. ಈಗಿದು ಪ್ರಪಂಚದಲ್ಲಿ ಎಲ್ಲೆಲ್ಲೂ ಬಳಕೆಗೆ ಬಂದು ಎಲ್ಲ ತೆರನ ಕ್ಷಯರೋಗಗಳನ್ನು ಅಡಗಿಸುವುದರಲ್ಲಿ ಉತ್ತಮವಾದುದೆಂದು ಹೆಸರಾಗಿದೆ. ಚರ್ಮಕ್ಕೆ ಚುಚ್ಚುವ ಈ ಲಸಿಕೆಯನ್ನು ಹಾಕಿದ 4–6 ವಾರಗಳಲ್ಲಿ ವ್ಯಕ್ತಿಗೆ ಕ್ಷಯರೋಗ ತಡೆವ ಬಲ ಬರುವುದು. ಪ್ಯಾರಿಸ್ಸಿನ ಪ್ಯಾಶ್ಚರ್ ಸಂಸ್ಥೆಯ ನಿರ್ದೇಶಕನಾಗಿ ತಾನು ಕಂಡುಹಿಡಿದ ಈ ಮಹತ್ತರ ಶೋಧನೆಯನ್ನು ಕಾಲ್ಮೆಟ್ ದೃಢೀಕರಿಸಲು ಹಲವಾರು

ಪ್ರಕಟನೆ, ಪ್ರಬಂಧಗಳನ್ನು ಹೊರತಂದರೂ ಈ ಲಸಿಕೆಯ ಗುಣವನ್ನು ಪ್ರಪಂಚ ನಿಜವಾಗಿ ಪುರಸ್ಕರಿಸಿದ್ದು ಕಾಲ್ಮೆಟ್ ಸತ್ತಮೇಲೆ ಮಾತ್ರ. (ಡಿ.ಎಸ್.ಎಸ್.)

**ಕಾವಲು ಪಡೆ :** ರಾಷ್ಟ್ರದ ಗಡಿ ಹಾಗೂ ಇತರ ರಕ್ಷಣ ಕಾರ್ಯಗಳಲ್ಲಿ ನಿರತವಾಗಿರುವ ಸೇನೆ. ನೇರ ಯುದ್ಧದಲ್ಲಿ ದುಮುಕುವುದು ಕಾವಲುಪಡೆಗಳ ಹೊಣೆಯಲ್ಲ. ಗಡಿನಾಡಿನ ರಕ್ಷಕಸೈನ್ಯಗಳು ಶತ್ರುಗಳ ಅತಿಕ್ರಮಪ್ರವೇಶವನ್ನು ತಡೆಗಟ್ಟಿ, ಎತ್ತರವಾದ ಪಹರೆಗೋಪುರಗಳ ಮೇಲಿನಿಂದ ದುರ್ಬೀನು, ದೂರದರ್ಶಕ ಯಂತ್ರಗಳ ಮೂಲಕ ದಾಳಿಗಾರರು ಬರುವ ಸೂಚನೆಗಳನ್ನು ವೀಕ್ಷಿಸಿ ಅಧಿಕಾರಿಗಳಿಗೆ ತತ್‌ಕ್ಷಣ ದೂರವಾಣಿಯಲ್ಲಿ ತಿಳಿಸಿ ಬೇಕಾಗಿರುವ ಹೆಚ್ಚಿನ ಸೇನಾಬಲವನ್ನು ತರಿಸಿಕೊಳ್ಳುತ್ತವೆ. ವ್ಯೂಹಸ್ಥಳಗಳಲ್ಲಿರುವ ಕಣಿವೆಗಳಿಗೆ ಕಾವಲಿಲ್ಲದಿದ್ದರೆ ಅವನ್ನು ಶತ್ರುಗಳು ಆಕ್ರಮಿಸಿ ಅವಿತುಕೊಂಡು ಹೊಂಚುಹಾಕುತ್ತ ವಾಹನಗಳನ್ನೂ ಮನುಷ್ಯರನ್ನೂ ನಾಶಮಾಡಲು ಅವಕಾಶವಾಗುತ್ತದೆ. ಹಗೆಯುಳ್ಳ ಗೆರಿಲ್ಲಾ ದಳಗಳು ಸೇತುವೆ, ಅಣೆಕಟ್ಟು, ಜಲಾಶಯ, ರೈಲುಸಂಧಿ, ಆಯುಧಶಾಲೆ, ಯಂತ್ರೋಪಕರಣ, ಸೇನಾಕ್ಷೇತ್ರ, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ, ರೇವುಗಳನ್ನು ದಾಳಿ ಮಾಡುವುದರಿಂದ ಅವುಗಳ ರಕ್ಷಣೆಗಾಗಿ ಪಾಳೆಯವಿರುವ ಸೇನಾದಳಗಳನ್ನು ನಿಯಮಿಸಲಾಗುತ್ತದೆ. ದಂಡಿನ ಪಾಳ್ಯ, ಡಿಪೋ, ಉಗ್ರಾಣ, ಮಳಿಗೆ, ಮದ್ದುಗುಂಡು ಮತ್ತು ಬಂದೂಕು ಕ್ಷೇತ್ರಗಳು ಬಹುಮಟ್ಟಿಗೆ ಶತ್ರುಗಳ ಆಕ್ರಮಣಕ್ಕೆ ಗುರಿಯಾಗುವುದರಿಂದ ಅವುಗಳಿಗೆ ಕಾವಲುಪಡೆಗಳು ಅವಶ್ಯ. ರಕ್ಷಕಸೈನ್ಯವಿರುವ ಪಟ್ಟಣಗಳಲ್ಲಿ ಪುರದುರ್ಗಗಳೂ ಪಟ್ಟಣಕ್ಕೆಲ್ಲ ದೃಷ್ಟಿಪಥದಂತಿರುವ ಎತ್ತರವಾದ ವೀಕ್ಷಣಸ್ತೂಪಗಳೂ ಸ್ಥಾಪಿತವಾಗಿವೆ. ಗಿರಿದುರ್ಗ, ಕೋಟೆ, ಕಿಲ್ಲೆಗಳ ರಕ್ಷಣೆಗೆ ಬಲವಾದ ಕಾವಲು, ಭದ್ರತೆಗಳೂ ದುರ್ಗಪಾಲಕರು ಮತ್ತು ದುರ್ಗಾಧಿಪತಿಗಳ ಸುರಕ್ಷಿತ ನಿವಾಸಕ್ಕೆ ನೆಲಮಾಳಿಗೆ ಗೃಹಗಳೂ ವ್ಯವಸ್ಥೆಯಾಗಿವೆ. ದುರ್ಗರಕ್ಷಕರು ದಾಳಿಗಾರರಿಗೆ ಕಾಣಿಸಿಕೊಳ್ಳದಂತೆ ಮರೆಯಾದ ಆಶ್ರಯಗಳಲ್ಲಿ ಬಚ್ಚಿಟ್ಟುಕೊಂಡು ಆಕ್ರಮಣಕಾರರನ್ನು ವೀಕ್ಷಿಸಲೂ ರಕ್ಷಣಾವರಣದಿಂದ ದಾಳಿಗಾರರ ಮೇಲೆ ಶಸ್ತ್ರಾಸ್ತ್ರಗಳನ್ನೆಸೆಯಲೂ ಗುಂಡುಹಾರಿಸಲೂ ತಕ್ಕ ಏರ್ಪಾಡುಗಳಿವೆ. ಕಾವಲುಪಡೆ ಶತ್ರುಗಳ ಬಾಣವನ್ನು ನಿವಾರಿಸಿ ವೈರಿಗಳ ಮೇಲೆ ಶಸ್ತ್ರಗಳನ್ನು ಹಾರಿಸಲು ಸೌಕರ್ಯಗಳಿವೆ. (ಎಂ.ಜಿ.ಕೆ.ಎಂ.)

**ಕಾವಳ :** ಗಾಳಿಯ ತಾಪ ಇಬ್ಬನಿಬಿಂದುವನ್ನು ಮುಟ್ಟಿದಾಗ ಮತ್ತು ಅದಕ್ಕಿಂತ ಕೆಳಗೆ ಇಳಿದಾಗ ನೀರಿನ ಆವಿ ಘನೀಭವಿಸುವುದರಿಂದ ಉಂಟಾಗುವ ಮಂಜಿನ ಮುಸುಕು (ಫಾಗ್, ಹೇಝ್). ನೀರಿನ ಆವಿ ಘನೀಭವಿಸಲು ವಾತಾವರಣದಲ್ಲಿರುವ ಹೊಗೆಯ ಕಣಗಳು ಮತ್ತು ಸಮುದ್ರದ ತುಂತುರಿನ ಉಪ್ಪಿನ ಕಣಗಳು ನ್ಯೂಕ್ಲಿಯಗಳಾಗುತ್ತವೆ. ಕಾವಳದಲ್ಲಿ ನೀರಿನ ಹನಿಗಳ ಗಾತ್ರ 100μ ಗಳಿಗಿಂತ ಕಡಿಮೆಯಿರುತ್ತದೆ. ಮಳೆಯನ್ನು ತರುವ ಮೋಡಗಳಲ್ಲಿ ಈ ಹನಿಗಳ ಗಾತ್ರ 400–1000μ ಗಳಷ್ಟಿರುತ್ತದೆ. ಕಾವಳದಲ್ಲಿ 1 ಘನ ಸೆಂಮೀನಲ್ಲಿ ಸಾಮಾನ್ಯವಾಗಿ 100 ಹನಿಗಳಿಗಿಂತ ಹೆಚ್ಚಾಗಿರುವುದಿಲ್ಲ. 1 ಘನ ಮೀ ಕಾವಳದಲ್ಲಿರುವ ನೀರಿನ ತೂಕ 1/100 ಗ್ರಾಮಿಗಿಂತ ಹೆಚ್ಚಾಗಿರುವುದು ವಿರಳ. ಮಳೆ ಮೋಡಗಳಲ್ಲಾದರೆ 1 ಘನ ಮೀ ನಲ್ಲಿ 0.1–3 ಗ್ರಾಂ ನೀರಿರುತ್ತದೆ. ಮಳೆಯನ್ನು ತರದ ಮೋಡವೆಂದು ಕಾವಳವನ್ನು ಬಣ್ಣಿಸುವುದು ಇದಕ್ಕಾಗಿಯೇ.

**ವಿಕಿರಣ ಕಾವಳ (ರೇಡಿಯೇಷನ್ ಫಾಗ್):** ಮೋಡವಿಲ್ಲದ ರಾತ್ರಿವೇಳೆ ಭೂಮಿ ವಿಕಿರಣದಿಂದ ತಣ್ಣಗಾಗುತ್ತದೆ. ಅದಕ್ಕೆ ತಾಗಿರುವ ತೇವವುಳ್ಳ ಗಾಳಿಯ ತಾಪ ಇದರಿಂದಾಗಿ ಇಬ್ಬನಿ ಬಿಂದುಗಳಿಗಿಳಿದರೆ ವಿಕಿರಣ ಕಾವಳವುಂಟಾಗುತ್ತದೆ. ಮೇಲಿನ ಸ್ತರದ ಹನಿಗಳು ವಿಕಿರಣವನ್ನು ಮುಂದುವರಿಸುವುದರಿಂದ ಕಾವಳದ ತೀವ್ರತೆ ಮತ್ತು ಆಳ ಹೆಚ್ಚಾಗುತ್ತದೆ. ಗಾಳಿ ಗಂಟೆಗೆ 3.2 ಕಿಮೀಗಿಂತ ಹೆಚ್ಚಾದ ಮತ್ತು 12.8 ಕಿಮೀ ಗಿಂತ ಕಡಿಮೆಯಾದ ವೇಗದಲ್ಲಿ ಬೀಸುತ್ತಿದ್ದರೆ ಕಾವಳದ ಬೆಳವಣಿಗೆ ಹೆಚ್ಚುತ್ತದೆ. ಗಾಳಿ ಬೀಸುವ ವೇಗ 16 ಕಿಮೀಗಳಿಗಿಂತ ಹೆಚ್ಚಾದರೆ ಕಾವಳ ಚದರಿ ಹೋಗುತ್ತದೆ; ಮತ್ತು ಇದೇ ವೇಳೆಯಲ್ಲಿ ಸ್ತರಮೋಡಗಳು ಹುಟ್ಟಿಕೊಳ್ಳುತ್ತವೆ.

ಸಮುದ್ರ ಇಲ್ಲವೆ ಸರೋವರಗಳ ಮೇಲೆ ಹಾಯ್ದು ಅಧಿಕ ನೀರಿನ ಆವಿಯನ್ನು ಹೊತ್ತು ತರುವ ಗಾಳಿ ತಂಪಾದ ನೆಲದ ಮೇಲೆ ಬೀಸಿ ನಿಧಾನಗೊಂಡಾಗ ವಿಕಿರಣ ಕಾವಳವುಂಟಾಗುವ ಸಾಧ್ಯತೆ ಹೆಚ್ಚುತ್ತದೆ. ಇಂಥ ಕಾವಳ ಶರತ್ಕಾಲ ಮತ್ತು ಚಳಿಗಾಲಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಇದರ ತೀವ್ರತೆ ಸೂರ್ಯೋದಯವಾದ ತರುಣದಲ್ಲಿ ಒಂದು ಗರಿಷ್ಠ ಮಿತಿಯನ್ನು ಮುಟ್ಟುತ್ತದೆ. ಸೂರ್ಯನ ಉಷ್ಣದಿಂದ ಗಾಳಿಯಲ್ಲಿ ಮಂದ ಚಲನೆಯುಂಟಾಗಿ ಕಾವಳದ ತೀವ್ರತೆ ಬೆಳೆಯಲು ಅನುಕೂಲವಾದ ಪರಿಸ್ಥಿತಿಯುಂಟಾಗುವುದು. ಕಾವಳದ ಆಳ 152.5ಮೀ–304.8ಮೀಗಳಷ್ಟಿರುವುದು ಅಪೂರ್ವ ಘಟನೆಯೇನಲ್ಲ. ಹಗಲಿನ ಉಷ್ಣತೆ ಹೆಚ್ಚಾದಂತೆ ಕಾವಳ ಚದರಿಹೋಗುತ್ತದೆ. ಅಂದರೆ ನೀರಿನ ಹನಿಗಳು ಆವಿಯಾಗುತ್ತವೆ. ಮೇಲೆ ಸ್ತರ ಮೋಡಗಳಿದ್ದು (ಬೂದು ಅಥವಾ ಬಿಳಿ ಮೋಡದ ತೇಪೆ, ಹರವು ಅಥವಾ ಪದರ) ಮತ್ತೂ ಮೇಲೆ ತಾಪ ಹೆಚ್ಚುತ್ತ ಹೋಗುವ ಸನ್ನಿವೇಶವುಂಟಾದರೆ ಕಾವಳ ಹೆಚ್ಚು ದಟ್ಟವಾಗಿರುವುದಿಲ್ಲ ಮತ್ತು ಅದು ಹೆಚ್ಚು ಕಾಲ ನಿಲ್ಲುವುದೂ ಇಲ್ಲ. ಕಾರಣ ಈ ಕಾಲದಲ್ಲಿ ವಿಕಿರಣದಿಂದ ಭೂಮಿ ತಂಪಾಗುವ ರಾತ್ರಿ ಕಾಲ ಕಮ್ಮಿಯಾಗುತ್ತದೆ. ನೀರಿನ ಮೇಲೆ ವಿಕಿರಣ ಕಾವಳವುಂಟಾಗುವುದಿಲ್ಲ. ಕಾರಣ ನೀರಿನ ತಾಪಮಾನ ದೈನಂದಿನ ಏರಿಳಿತ ಅಷ್ಟು ಹೆಚ್ಚಾಗಿರುವುದಿಲ್ಲ.

**ಅಧಿವಹನ ಕಾವಳ (ಅಡ್ವೆಕ್ಷನ್ ಫಾಗ್):** ತೇವವುಳ್ಳ ಬಿಸಿಯಾದ ಗಾಳಿ ತಂಪಾದ ಭೂಮಿಯ ಮೇಲೆ ಇಲ್ಲವೆ ನೀರಿನ ಮೇಲೆ ಬೀಸುವಾಗ ಅಭಿವಹನ ಕಾವಳವುಂಟಾಗುತ್ತದೆ. ಶರತ್ಕಾಲದಲ್ಲಿ ಮತ್ತು ಚಳಿಗಾಲದಲ್ಲಿ ಸಮುದ್ರದ ಕಡೆಯಿಂದ ತೇವವುಳ್ಳ ಬಿಸಿಯಾದ ಗಾಳಿ ತಂಪಾದ ಭೂಮಿಯ ಮೇಲೆ ಬೀಸುತ್ತದೆ. ಭೂಮಿಯನ್ನು ಮುಟ್ಟಿದಾಗ ಈ ಗಾಳಿಯ ತಾಪಮಾನ ಅದರ ಇಬ್ಬನಿಬಿಂದುವನ್ನು ಮುಟ್ಟಿದರೆ ನೀರಿನ ಆವಿ ಘನೀಭವಿಸಿ ಕಾವಳವುಂಟಾಗುತ್ತದೆ. ಸಮುದ್ರ ಕಾವಳ ಬಹುಮುಖ್ಯವಾದ ಅಧಿವಹನ ಕಾವಳ. ವಸಂತಕಾಲದಲ್ಲಿ ಮತ್ತು ಬೇಸಗೆಯಲ್ಲಿ ಕಾದ ಭೂಮಿಯ ಮೇಲೆ ಹಾಯ್ದು ಸಮುದ್ರದ ಕಡೆಗೆ ಧಾವಿಸುವ ಗಾಳಿಯ ತಾಪಮಾನ ಕಡಿಮೆಯಾಗಿ ಅದರ ಇಬ್ಬನಿಬಿಂದುವನ್ನು ತಲುಪಿದಾಗ ಕಾವಳವುಂಟಾಗುತ್ತದೆ. ನವೋಸ್ಕೋಷಿಯ ಮತ್ತು ನ್ಯೂಫೌಂಡ್‌ಲೆಂಡ್ ತೀರದಲ್ಲಿ ಕಾಣಿಸಿಕೊಳ್ಳುವ ವಿಸ್ತಾರವಾದ ಕಾವಳದಂಡೆಗಳು ಅಧಿವಹನ ಕಾವಳದಿಂದಲೇ ಉಂಟಾದವು.

**ಇತರ ಕಾವಳಗಳು:** ವಿಕಿರಣ ಮತ್ತು ಅಧಿವಹನ ಕಾವಳಗಳಲ್ಲದೆ ಬೇರೆ ತೆರನಾದ ಕಾವಳಗಳೂ ಉಂಟು. ತೇವವುಳ್ಳ ಗಾಳಿ ಪರ್ವತಗಳನ್ನು ಏರುವಾಗ ಹಿಗ್ಗಿ ತಂಪಾಗುತ್ತದೆ. ಆಗ ಉಷ್ಣತೆ ಅದರ ಇಬ್ಬನಿಬಿಂದುವನ್ನು ಮುಟ್ಟಿದರೆ ಕಾವಳ ಕಾಣಿಸಿಕೊಳ್ಳುತ್ತದೆ. ಇಂಥ ಕಾವಳವನ್ನು ಎತ್ತರದ ಇಳಿಜಾರು ಕಾವಳವೆಂದು ಕರೆಯುತ್ತಾರೆ. ತಂಪಾದ ಗಾಳಿ ಬೆಚ್ಚಗಿರುವ ನೀರಿನ ಮೇಲೆ ಹಾಯುವಾಗ ಉಗಿ ಕಾವಳ (ಸ್ಟೀಮ್‌ಫಾಗ್) ವುಂಟಾಗುತ್ತದೆ. ತಂಪಾದ ಗಾಳಿಯನ್ನು ಸೇರಿದ ನೀರಿನ ಆವಿ ಮರುಕ್ಷಣದಲ್ಲೇ ಘನೀಭವಿಸುವುದರಿಂದ ಇದು ಸಂಭವಿಸುತ್ತದೆ. ಆರ್ಕ್‌ಟಿಕ್ ಸಮುದ್ರದ ಹೊಗೆ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಹಿಮಸ್ಫಟಿಕ ಉಗಿಕಾವಳ. ಶರತ್ಕಾಲದಲ್ಲಿ ಸರೋವರಗಳ ಮತ್ತು ನದಿಗಳ ಸಮೀಪ ಉಗಿಕಾವಳ ಕಾಣಿಸಿಕೊಳ್ಳುವುದುಂಟು. ಮಳೆಯ ಹನಿಗಳು ಗಾಳಿಯನ್ನು ಸಂತೃಪ್ತಗೊಳಿಸುವುದರಿಂದ ಉಂಟಾಗುವ ಕಾವಳವನ್ನು ಬೆಚ್ಚನೆ ಮುಂಚೂಣಿ ಕಾವಳವೆಂದು ಕರೆಯುತ್ತೇವೆ.

ಅಸ್ತಮ, ಬ್ರಾನ್ಕಾಯ್ಟಸ್, ನ್ಯೂಮೋನಿಯ ಮುಂತಾದ ಕಾಯಿಲೆಯಿಂದ ನರಳುವ ರೋಗಿಗಳ ಮೇಲೆ ಕಾವಳ ತೀವ್ರತರವಾದ ಪರಿಣಾಮವನ್ನುಂಟುಮಾಡುತ್ತದೆ. ಇಂಥ ಜನರು ಅದನ್ನು ನಿವಾರಿಸಿಕೊಳ್ಳಲು ಬೆಚ್ಚನೆ ಉಡುಪು ಧರಿಸಬೇಕು ಮತ್ತು ಬೆಚ್ಚನೆ ಜಾಗದಲ್ಲಿರಬೇಕು. ರೋಗಿಗಳ ಸಂರಕ್ಷಣೆಗಾಗಿ ಯಾವ ಸರ್ಕಾರವೂ ಕಾವಳವನ್ನು ಕೃತಕವಾಗಿ ಚದರಿಸಲು ಹಣ ಮತ್ತು ಕಾಲವನ್ನು ವ್ಯಯಮಾಡುವುದಿಲ್ಲ. ಕೃತಕವಾಗಿ ಕಾವಳವನ್ನು ಚದರಿಸಬೇಕಾದ ಉತ್ಕಟ ಪರಿಸ್ಥಿತಿ ಒದಗಿದುದು ಎರಡನೆ ಮಹಾಯುದ್ಧದ ಕಾಲದಲ್ಲಿ. ಆಗ ವಿಮಾನಗಳು ಯಾವ ನಿಲ್ದಾಣವೆಂದರಲ್ಲಿ ಇಳಿಯುವಂತಿರಲಿಲ್ಲ. ಅವು ಇಳಿಯಬೇಕಾದ ಕಡೆ ಓಡುದಾರಿಗಳು (ರನ್‌ವೇ) ಕಾವಳದಿಂದ ಮುಚ್ಚಿಹೋಗಿದ್ದರೆ ಕೃತಕವಾಗಿ ಕಾವಳವನ್ನು ಚದರಿಸದೆ ಬೇರೆ ಮಾರ್ಗವಿರಲಿಲ್ಲ. ಇಂಗ್ಲೆಂಡಿನಲ್ಲಿ ಓಡುದಾರಿಯ ಉದ್ದಕ್ಕೂ ಅನಿಲದೀಪಗಳನ್ನು ಸಾಲಾಗಿ ಉರಿಸಿ ಈ ಕೆಲಸ ಮಾಡಿದರು. ಕೆಲವೇ ಮಿನಿಟುಗಳಲ್ಲಿ 100ಮೀ ಗಳಷ್ಟು ಎತ್ತರದವರೆಗೆ ಕಾವಳವನ್ನು ಚದರಿಸಲು ಸಮರ್ಥವಾದ ವ್ಯವಸ್ಥೆಯನ್ನು ಸೈನಿಕರು ಆಗ ಮಾಡಿದ್ದರು. ರಾಸಾಯನಿಕ ವಿಧಾನಗಳಿಂದ ಕಾವಳವನ್ನು ಚದರಿಸುವುದೂ ಉಂಟು. ಗಾಳಿಯ ಚಲನೆಯಿಲ್ಲದಿದ್ದು, ಆಕಾಶ ನಿರ್ಮಲವಾಗಿದ್ದರೆ ಕಾವಳಕ್ಕೆ ಬದಲಾಗಿ ಇಬ್ಬನಿ (ಡ್ಯೂ) ಮೂಡುತ್ತದೆ.

**ಕಾವಳ ಸಂಜ್ಞೆಗಳು (ಫಾಗ್ ಸಿಗ್ನಲ್ಸ್):** ಕಾವಳದಲ್ಲಿ ಸಂಚರಿಸುವ ರೈಲುಗಾಡಿಗಳು, ಹಡಗುಗಳು ಮತ್ತು ವಿಮಾನಗಳಿಗೆ ಅಪಾಯದ ಮುನ್ನೆಚ್ಚರವನ್ನು ಕೊಡಲು ಉಪಯೋಗಿಸುವ ಶಬ್ದ, ಬೆಳಕು ಮತ್ತು ಎಲೆಕ್ಟ್ರಾನಿಕ್ ಸಾಧನಗಳು. ಕಾವಳದಲ್ಲಿ ಸಂಚರಿಸುವ ರೈಲುಗಳು ಒಂದಕ್ಕೊಂದು ಡಿಕ್ಕಿ ಹೊಡೆಯಬಹುದು. ಅಂಥ ಪ್ರಕರಣಗಳನ್ನು ತಪ್ಪಿಸಲು ಮದ್ದನ್ನು ಸಿಡಿಸಿಯೊ ಕಹಳೆಯನ್ನೂದಿಯೋ ಜಾಗಟೆಯನ್ನು ಬಾರಿಸಿಯೋ ಚಾಲಕರಿಗೆ ಎಚ್ಚರಿಕೆ ಕೊಡುತ್ತಾರೆ. ಹಡಗುಗಳು ಕಾವಳದಿಂದ ಮುಚ್ಚಿಕೊಂಡಿರುವ ಬಂಡೆ, ಕೋಡುಗಲ್ಲು ಮುಂತಾದವುಗಳಿಗೆ ಡಿಕ್ಕಿಹೊಡೆಯದಂತೆ ಮುನ್ನೆಚ್ಚರಿಸಲು ಗಂಟೆ ಬಾರಿಸುತ್ತಾರೆ. ಸೈರನ್ನನ್ನು ಕೂಗಿಸುತ್ತಾರೆ. ಕೊಂಬು ಊದುತ್ತಾರೆ. ಆದರೆ ಈ ಶಬ್ದ ಸಾಧನಗಳು ನಂಬಿಕೆಗೆ ಅಷ್ಟು ಅರ್ಹವಾದುವಲ್ಲ. ಕಾರಣ ಶಬ್ದ ಪ್ರಸಾರದ ಮೇಲೆ ಗಾಳಿ ಮತ್ತು ತಾಪಮಾನದ ವ್ಯತ್ಯಾಸ ಗಣನೀಯ ಪ್ರಭಾವವನ್ನು ಬೀರುತ್ತವೆ. ಶಬ್ದ ಒಂದು ಕ್ಷೇತ್ರದಲ್ಲಿ ಬಂದಿಯಾಗಲೂಬಹುದು. ಶಬ್ದದ ಅಲೆಗಳು ಸುಲಭವಾಗಿ ಬಾಗುವುದರಿಂದ ಅಪಾಯದ ದಿಕ್ಕೂ ಸರಿಯಾಗಿ ಗೊತ್ತಾಗುವುದಿಲ್ಲ. ನೀರಿನ ಮೂಲಕ ಕಳುಹಿಸುವ ಶಬ್ದದ ಅಲೆಗಳು ಇವೆಲ್ಲ ಪ್ರಭಾವಗಳಿಗೆ ಒಳಗಾಗುವುದು ಕಡಿಮೆ. ಸಂಜ್ಞೆಗಳನ್ನು ಹಡಗಿನ ಇಕ್ಕೆಲಗಳಲ್ಲಿರುವ ಧ್ವನಿಸಂಗ್ರಾಹಕಗಳು (ಸಾನಿಕ್ ಪಿಕ್‌ಅಪ್ಸ್) ಪತ್ತೆಮಾಡುತ್ತವೆ. ನೀರಿನಲ್ಲಿ ಅಪಾಯದ ಸೂಚನೆಯನ್ನು ರವಾನಿಸಲು ಮತ್ತು ಪತ್ತೆಹಚ್ಚಲು ಬೇಕಾದ ಉಪಕರಣಗಳನ್ನು ಹಡಗುಗಳು ಹೊಂದಿರುತ್ತವೆ.

ಕಾವಳದಿಂದ ಉಂಟಾಗುವ ಅಪಾಯಗಳನ್ನು ತಡೆಯಲು ಇತ್ತೀಚೆಗೆ ರೇಡಿಯೋ ಸಂಜ್ಞಾ ಪ್ರಸಾರಿಗಳನ್ನು (ರೇಡಿಯೋ ಬೀಕನ್ಸ್) ಮತ್ತು ರೇಡಿಯೋ ಕಂಪಾಸುಗಳನ್ನು ಉಪಯೋಗಿಸುತ್ತಿದ್ದಾರೆ. ರೇಡಿಯೋ ಸಂಜ್ಞಾ ಪ್ರಸಾರಿ ನೆಲೆ ರೇಡಿಯೋ ಮತ್ತು ಶಬ್ದದ ಸನ್ನೆಗಳನ್ನು ಒಟ್ಟಿಗೆ ಪ್ರಸಾರಿಸುತ್ತದೆ. ರೇಡಿಯೋ ಸಂಜ್ಞೆ ಮತ್ತು ಶಬ್ದಸಂಜ್ಞೆಗಳು ತಲುಪಿದ ಕಾಲಗಳ ಮಧ್ಯದ ಅವಧಿಯನ್ನು ಶಬ್ದದ ವೇಗದಿಂದ ಗುಣಿಸಿದರೆ ರೇಡಿಯೋ ನೆಲೆಗೂ ಹಡಗಿಗೂ ಇರುವ ದೂರ ಗೊತ್ತಾಗುತ್ತದೆ. ಇದರಿಂದ ನಾವಿಕರಿಗೆ ಅಪಾಯದ ಸಾಮೀಪ್ಯವನ್ನು ನಿವಾರಿಸಿಕೊಳ್ಳಲು ಅನುಕೂಲವಾಗುತ್ತದೆ. ರೇಡಿಯೋ ಉಪಕರಣಗಳು ಕಾವಳದ ತೀವ್ರತೆಯನ್ನು ಅನುಸರಿಸಿ ಸ್ವಯಂ ಪ್ರೇರಣೆಯಿಂದಲೆ ಎಚ್ಚರಿಕೆಯ ಸಂಜ್ಞೆಗಳನ್ನು ಪ್ರಸರಿಸುತ್ತವೆ. ಇವುಗಳ ಬಳಕೆಯಿಂದ ನೌಕಾಯಾನ ಹೆಚ್ಚು ಸುರಕ್ಷಿತವಾಗಿದೆ. (ಎಸ್.ಎ.ಎಚ್.)

**ಕಾವಾಲ್‌ಕಾಂಟೀ, ಜೋಡೋ :** 1255–1300. ಇಟಲಿಯ ಕವಿ. ಅತ್ಯುತ್ತಮ ಭಾವಗೀತೆಗಳನ್ನು ರಚಿಸಿದ್ದಾನೆ. ಹಲವಾರು ಪ್ರೇಮಗೀತೆಗಳನ್ನು ಬರೆದು, ತನ್ನ ತೀಕ್ಷ್ಣ ಬುದ್ಧಿಶಕ್ತಿಯಿಂದ ಸಮಕಾಲೀನ ಕವಿಯಾದ ಡಾಂಟೆಯ ಮೇಲೆ ಪರಿಣಾಮಕಾರಿಯಾದ ವರ್ಚಸ್ಸು ಬೀರಿದ್ದಾನೆ. ಮೊದಲು ಇವರಿಬ್ಬರಲ್ಲೂ ಗಾಢವಾದ ಸ್ನೇಹವಿದ್ದು ಕೊನೆಗೆ ಪರಸ್ಪರ ದ್ವೇಷ ಬೆಳೆಯಿತನ್ನಲಾಗಿದೆ. ವರ್ಣೀಯ ಕಲಹದಲ್ಲಿ ಗಡಿಪಾರಾಗಿದ್ದ ಈತನನ್ನು ಸಾಯುವ ಮುನ್ನ ತೀವ್ರ ಕಾಯಿಲೆಯಿದ್ದಾಗ ವಾಪಸ್ಸು ಕರೆಸಿಕೊಳ್ಳಲಾಯಿತು. ಫ್ಲಾರೆನ್ಸಿನ ಮಲರಿಯದಲ್ಲಿ ಈತ ಮರಣಹೊಂದಿದ. (ಎಚ್.ಕೆ.ಆರ್.)

**ಕಾವಿಕಲೆ :** ಕರ್ನಾಟಕದ ಸಾಂಪ್ರದಾಯಿಕ ಕಲೆಗಳಲ್ಲಿ ಒಂದು. ಜನಸಾಮಾನ್ಯರು ಹಬ್ಬ ಆಚರಣೆಗಳ ಸಂದರ್ಭದಲ್ಲಿ ಮನೆ, ಮಠ, ಮಾಡು, ದೇವಾಲಯಗಳ ಮೇಲ್ಛಾವಣಿ, ಗೋಡೆಗಳ ಒಳಬದಿ ಹಾಗೂ ಹೊರಬದಿಗಳಿಗೆ, ಕಾವಿಹಿಟ್ಟಿನಿಂದ ಸಿದ್ಧಪಡಿಸಿದ ಬಣ್ಣದಿಂದ ಚಿತ್ತಾರ ಬಿಡಿಸುವ ಒಂದು ಜನಪದಕಲೆ; ಪ್ರ.ಶ.ಪೂ.1500ರಲ್ಲಿ ಈಜಿಪ್ಟ್ ದೇಶದಲ್ಲಿ ಸತ್ತವರ ಸಮಾಧಿಗಳ ಮೇಲೆ (ಪಿರಮಿಡ್) ಕಾವಿಕಲೆಯ ಚಿತ್ರಗಳನ್ನು ರಚಿಸುತ್ತಿದ್ದರು. ಇದಲ್ಲದೆ ಎಟ್ರುಸ್ಕನ್ ಜನಾಂಗದವರು ತಮ್ಮ ಗುಹೆಗಳಲ್ಲಿ ಮೃತಪಟ್ಟವರ ನೆನಪಿಗಾಗಿ ಕಾವಿಬಣ್ಣದಿಂದ ಚಿತ್ರಬಿಡಿಸಿದರೆ, ಗ್ರೀಕ್ ಮತ್ತು ರೋಮನ್ನರು ತಮ್ಮ ಪಾತ್ರೆ–ಪರಡೆಗಳ ಮೇಲೆ ಪೌರಾಣಿಕ ಸನ್ನಿವೇಶದ ಚಿತ್ರಗಳನ್ನು ಕೆಂಬಣ್ಣದಿಂದಲೇ ಚಿತ್ರಿಸುತ್ತಿದ್ದರು. ಜರ್ಮನಿಯ ಸಂಶೋಧಕರಾದ ಗ್ರೀಟ್ಲಿಮಿಟರ್ ಭಾರತದಲ್ಲಿ ಗೋವದಲ್ಲಿ ಕಾವಿಕಲೆಯನ್ನು ಅಭ್ಯಸಿಸುವಾಗ, ಈ ಕಲೆ ಮೂಲತಃ ಇಟಲಿಯ ಗ್ರಾಫಿಕ್ (ರೇಖಾಚಿತ್ರ) ಕಲೆಯಾಗಿದ್ದು, ಪೋರ್ಚುಗೀಸರು ಭಾರತಕ್ಕೆ ಬಂದಾಗ ತಮ್ಮೊಡನೆ ಈ ಕಲೆಯನ್ನು ತಂದರು ಎಂದು ಅಭಿಪ್ರಾಯಪಟ್ಟಿದ್ದಾರೆ.

ಗೌಡ ಸಾರಸ್ವತರೆಂದು ಗುರುತಿಸಿಕೊಂಡಿರುವ ಕೊಂಕಣಿ ಭಾಷಿಕರು ಗೋವ ಮತ್ತು ಕರ್ನಾಟಕದ ಕರಾವಳಿಯಲ್ಲಿ ನೆಲೆಸಿದ್ದರು. ಇವರು ಕರಾವಳಿಯ ಜೀವನಕ್ಕೆ ಒಗ್ಗಿಕೊಂಡು ತಮ್ಮ ಪ್ರಾಂತೀಯ ದೈವಗಳಾದ ಶಾಂತದುರ್ಗ ಮಂಗೇಶ, ಮ್ಹಾಳಸಾ, ನಾಗೇಶ, ರಾಮನಾಥ, ರವಳನಾಥ, ದಾಮೋದರ, ನರಸಿಂಹ, ಸಪ್ತಕೋಟೇಶ್ವರ, ಮಹಾಮಾಯಿ –ಹೀಗೆ ದೇವಾಲಯಗಳನ್ನು ನಿರ್ಮಿಸಿ ತಮ್ಮ ಸಂಸ್ಕೃತಿ ಅಭಿರುಚಿಗೆ ತಕ್ಕಂತೆ ಈ ಮಂದಿರಗಳನ್ನು ಕಾವಿಚಿತ್ರಗಳಿಂದ ಅಲಂಕರಿಸಿದರು. ಕರಾವಳಿ ಪ್ರದೇಶಗಳನ್ನು ಆಳುತ್ತಿದ್ದ ರಾಜಮಾಂಡಲಿಕರು ಹೊನ್ನಾವರ, ಭಟ್ಕಳ, ಬಸರೂರು, ಬಾರಕೂರು, ಬ್ರಹ್ಮಾವರ, ಮೂಲ್ಕಿ, ಮಂಗಳೂರು, ಉಲ್ಲಾಳ ಮುಂತಾದ ಕಡೆ ಕೊಂಕಣಿಗರಿಗೆ ಆಶ್ರಯನೀಡಿ, ದೇವಾಲಯಗಳ ಸ್ಥಾಪನೆಗೆ ಕಾರಣರಾದರು. ದೇವಾಲಯ ನಿರ್ಮಾಣದ ಸಂದರ್ಭದಲ್ಲಿ ಗೋವೆಯ ಸ್ಥಾನಿಕರಾದ ಗಾರೆಗಾರರು, ಗುಡಿಗಾರರು, ಪರಿಣತ ಶಿಲ್ಪಿಗಳನ್ನೆಲ್ಲ ಕೊಂಕಣಿಗರು ವಿಶ್ವಾಸದಿಂದ ಬರಮಾಡಿಕೊಂಡು, ದೇವಾಲಯಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ದೇವಾಲಯಗಳ ಹೊರಗೋಡೆ ಹಾಗೂ ಒಳಗೋಡೆಗಳಲ್ಲಿ ಕುಸ್ತಿಪಟುಗಳು, ಕಾಳಗ, ಪ್ರಕೃತಿಯಲ್ಲಿನ ಪ್ರಾಣಿಪಕ್ಷಿಗಳು, ದ್ವಾರಪಾಲಕರು, ಕುಲದೇವತೆಗಳು ಮೊದಲಾದ ರೇಖಾಚಿತ್ರ ಹಾಗೂ ಜಾಮಿತಿ ಚಿತ್ರಗಳನ್ನು ರಚಿಸುತ್ತ ಬಂದರು. ಈ ಚಿತ್ರಗಳಲ್ಲಿ ಕರ್ನಾಟಕದ ಭಿತ್ತಿ ಚಿತ್ರಗಳ ಸಾಮ್ಯ ಹೊಂದಿದ್ದು ರಾಮಾಯಣ, ಮಹಾಭಾರತ, ಭಾಗವತಗಳ ಸಾಮಾಜಿಕ ಸನ್ನಿವೇಶಗಳನ್ನು ಒಳಗೊಂಡಿವೆ. ಮೈಸೂರು ಒಡೆಯರ ಆಡಳಿತದ ಕಾಲದಲ್ಲಿ ಕಾವಿಚಿತ್ರಗಳು ಅಲಂಕಾರ ಸ್ಥಾನ ಪಡೆದಿದ್ದುವು. ಉತ್ತರ ಕನ್ನಡ ಜಿಲ್ಲೆಯ ಕುಮಟ, ಕಾರವಾರ, ಅಂಕೋಲ ಹಾಗೂ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಕುಂದಾಪುರ, ಮಂಗಳೂರು ದೇವಾಲಯಗಳಲ್ಲಿ ಈ ಕಲೆ ಇನ್ನೂ ಜೀವಂತವಾಗಿದೆ.

ಹಳೆ ಮೈಸೂರು ಪ್ರಾಂತ್ಯದ ಹಳ್ಳಿಹಳ್ಳಿಯ ಮನೆ ಹಾಗೂ ಮಂದಿರಗಳಲ್ಲಿ ಈ ಕಾವಿಚಿತ್ರಗಳು ಅನೂಚಾನವಾಗಿ, ಹಬ್ಬ ಹರಿದಿನಗಳಲ್ಲಂತೂ ಹೊಸ ಬಣ್ಣ ತುಂಬುತ್ತಾರೆ. ಇನ್ನು ಈ ಪದ್ಧತಿ ಹಲಕೆಲವು ಮನೆಗಳಲ್ಲಿ ಇನ್ನೂ ಪ್ರಚಲಿತವಿದೆ. ಪ್ರಾಯಶಃ ಕರ್ನಾಟಕದ ಮೂಲೆ ಮೂಲೆಗಳಲ್ಲೂ ಇಂಥ ಈ ಕಾವಿಚಿತ್ರಗಳು ಮೈದಳೆದಿವೆ. (ಪಿ.ಜಿಬಿ.)

**ಕಾವಿಟ್ಟಿಗೆ :** ಅಧಿಕ ಉಷ್ಣತೆಯಲ್ಲಿ (1500º–1600ºಸೆ) ಕರಗದ ಲೋಹ ಮತ್ತು ಗಾಜಿನ ಕೈಗಾರಿಕೆಯಲ್ಲಿ ವಿಶೇಷ ಉಪಯೋಗದಲ್ಲಿರುವ ಇಟ್ಟಿಗೆ (ರಿಫ್ರಾಕ್ಟೊರಿ, ಫೈರ್‌ಬ್ರಿಕ್). ಇದನ್ನು ತಯಾರಿಸುವ ಮಣ್ಣಿನಲ್ಲಿ ಕೆಲವು ಖನಿಜಗಳಿರಬೇಕು. ಅವುಗಳಲ್ಲಿ ಮುಖ್ಯವಾದವು: 1. ಜಲ ಸಂಯುಕ್ತವಾದ ಅಲ್ಯೂಮಿನಿಯಂ ಸಿಲಿಕೇಟ್ 2. ಅಲ್ಯೂಮಿನಿಯಂ ಹೆಚ್ಚಾಗಿರುವ ಬಾಕ್ಸೈಟ್ ಮತ್ತು ಕಯನೈಟ್ 3. ಸಿಲಿಕದಿಂದ ಕೂಡಿರುವ ಮರಳು ಮತ್ತು ಹೆಚ್ಚಾಗಿರುವ ಕ್ವಾರ್ಟ್ಸೈಟ್ 4. ಮ್ಯಾಗ್ನಸೈಟ್ ಡಾಲೊಮೈಟ್ ಮುಂತಾದ ಮೆಗ್ನೀಸಿಯಂ ಇರುವ ಖನಿಜಗಳು, 5. ಕ್ರೋಮೈಟ್ 6. ಗ್ರಾಫೈಟ್ ಅಥವಾ ಕೋಕಿನ ರೂಪದಲ್ಲಿ ಇಂಗಾಲ 7. ಪರ್ಕ್ಲ್ಯಾಸೈಟ್ ಮೈಕ. ಇವಲ್ಲದೆ ಝಿರ್ಕೋನಿಯ ಥೋರಿಯ, ಬೆರಿಲಿಯ, ವೈಟೇನಿಯ ಮೊದಲಾದ ಚಿಲ್ಲರೆ ಖನಿಜಗಳೂ ಸೇರಿರುತ್ತವೆ. ಈ ರೀತಿ ತಯಾರಿಸಿದ ಉಷ್ಣನಿರೋಧ ಇಟ್ಟಿಗೆ.

ಸಾಧಾರಣವಾದ ಇಟ್ಟಿಗೆಗಳಲ್ಲಿ ಮಾಡುವ ಹಾಗೆ ಈ ಮಣ್ಣನ್ನು ಸಿದ್ಧಪಡಿಸಿದ ಮೇಲೆ ಅದರಿಂದ ಇಟ್ಟಿಗೆಗಳನ್ನು ಅವುಗಳ ಉಪಯೋಗಕ್ಕೆ ಅನುಸಾರವಾಗಿ ಎರಡು ಮೂರು ವಿಧಗಳಲ್ಲಿ ತಯಾರಿಸುತ್ತಾರೆ. ಆಮೇಲೆ ಇವನ್ನು ಕ್ಲುಪ್ತವಾದ ಉಷ್ಣತೆಯಲ್ಲಿ ಒಣಗಿಸುತ್ತಾರೆ. ಒಣಗಿದ ಇಟ್ಟಿಗೆಗಳನ್ನು ಎಣ್ಣೆ ಇಲ್ಲವೆ ಅನಿಲದಿಂದ ಉರಿಯುವ ಸುರಂಗದ ಒಲೆಗಳಲ್ಲಿ ಸುಡುತ್ತಾರೆ. ಮ್ಯಾಗ್ನಸೈಟ್, ಡಾಲೊರೈಟ್ ಮುಂತಾದ ಖನಿಜಗಳನ್ನು ಆವರ್ತಕವಾದ ಒಲೆಗಳಲ್ಲಿ ಮತ್ತೆ ಸುಡಬೇಕಾಗುತ್ತದೆ.

ಹೆಚ್ಚಿನ ಉಷ್ಣತೆಯನ್ನು ತಡೆಯಬೇಕಾದರೆ ಇಟ್ಟಿಗೆಗಳನ್ನು ಮಾಡುವಾಗ ಕಚ್ಚಾ ಸಾಮಗ್ರಿಗಳನ್ನು ವಿದ್ಯುತ್ತಿನ ಕುಲುಮೆಗಳಲ್ಲಿ ಕರಗಿಸಿ ವಿಶಿಷ್ಟವಾದ ಅಚ್ಚುಗಳಲ್ಲಿ ಎರಕ ಹೊಯ್ಯಬೇಕು, ಕರಗಿಸಿದ ಅಲ್ಯೂಮಿನ, ಮುಲ್ಲೈಟ್ ಮತ್ತು ಝಿರ್ಕೋನಿಯಾದ ಇಟ್ಟಿಗೆಗಳು ಏನನ್ನೂ ಹೀರುವುದಿಲ್ಲ. ಕರಗಿ ನೀರಾದ ಗಾಜನ್ನೂ ತಡೆದುಕೊಳ್ಳುತ್ತವೆ. ವಿದ್ಯುತ್ತಿನ ಕುಲುಮೆಗಳಲ್ಲಿ ಪೆಟ್ರೋಲಿಯಮ್, ಕೋಕ್ ಮತ್ತು ಮರಳಿನ ಪ್ರತಿಕ್ರಿಯೆಯಿಂದ ಸಿಲಿಕನ್ ಕಾರ್ಬೈಡ್ ಎಂಬ ಅಧಿಕೋಷ್ಣತೆಯನ್ನು ತಡೆಯುವ ಪದಾರ್ಥ ಬರುತ್ತದೆ. ಇದನ್ನು ಪುಡಿಮಾಡಿ ಬಂಧಿಸುವ ಸಾಮಗ್ರಿಯೊಂದಿಗೆ ಬೆರೆಸಿ ಅಚ್ಚುಗಳಲ್ಲಿ ಎರಕಹೊಯ್ದು ಸುರಂಗದ ಒಲೆಗಳಲ್ಲಿ ಸುಟ್ಟು ಕಾವಿಟ್ಟಿಗೆಗಳನ್ನು ತಯಾರಿಸುತ್ತಾರೆ.

ಒಳ್ಳೆಯ ಕಾವಿಟ್ಟಿಗೆಗಳಲ್ಲಿ ಕೆಳಗೆ ಕಂಡ ಗುಣಗಳಿರಬೇಕು: 1. ಕಾವನ್ನು ತಡೆಯಬೇಕು; 2. ಕರಗಿದ ಗಾಜು, ಲೋಹಗಳು, ಕಿಟ್ಟಗಳು ಮತ್ತು ಲವಣಗಳು ಅವನ್ನು ಕೊರೆಯಬಾರದು; 3. ಸಾಮಾನ್ಯ ಉಷ್ಣತೆಯಲ್ಲಿ ಬಲಿಷ್ಠವಾಗಿರಬೇಕು. ವಿಶೇಷ ಉಷ್ಣತೆಯಲ್ಲಿ, ತೂಕ ಬಿದ್ದಾಗ ವಿಕಾರವಾಗಬಾರದು; 4. ಸವೆದುಹೋಗಬಾರದು.

ಕಾವಿಟ್ಟಿಗೆಗಳನ್ನು ಮೂರು ಬಗೆಯಾಗಿ ವರ್ಗೀಕರಿಸಬಹುದು: 1. ಆಮ್ಲ, 2. ಕ್ಷಾರ, 3. ಎರಡೂ ಅಲ್ಲದ್ದು. ಸಿಲಿಕ ಇಟ್ಟಿಗೆ ಮೊದಲನೆಯ ವರ್ಗಕ್ಕೂ ಮ್ಯಾಗ್ನಸೈಟಿನ ಮಿಶ್ರಣದಿಂದ ಮಾಡಿದ ಇಟ್ಟಿಗೆಗಳಲ್ಲಿ ಎರಡು ಗುಣಗಳನ್ನು ಕಾಣಬಹುದು. ಎರಡೂ ಅಲ್ಲದ ನಮೂನೆ ಹೆಚ್ಚಾಗಿ ಬಳಕೆಯಲ್ಲಿಲ್ಲ. ಕಾವಿಟ್ಟಿಗೆಗಳು ಯಾವ ಉಷ್ಣತೆಯಲ್ಲಿ ಮೆತ್ತಗಾಗಿ ಆಕಾರವನ್ನು ಬದಲಾಯಿಸುತ್ತವೆ ಎಂಬುದು ಮುಖ್ಯ. ಸಾಮಾನ್ಯವಾದ ಇಟ್ಟಿಗೆಗಳು 1500º–1600º ಸೆಂ.ಗಳಲ್ಲಿಯೂ ಒಳ್ಳೆಯವು 1750º ಸೆಂ.ಗಳಲ್ಲಿಯೂ ದ್ರವನಗೊಳ್ಳುವುದಿಲ್ಲ. ಅಲ್ಯೂಮಿನಿಯಮ್ ಆಕ್ಸೈಡಿನ ಪ್ರಮಾಣ ಹೆಚ್ಚಿದಷ್ಟೂ ಹೆಚ್ಚು ಉಷ್ಣತೆಯನ್ನು ಇಟ್ಟಿಗೆಗಳು ತಡೆದುಕೊಳ್ಳುತ್ತವೆ. ಇನ್ನೂ ಹೆಚ್ಚಿನ ಉಷ್ಣತೆ ಇರುವ ಕಡೆ–ಇಂಗಾಲ ಮತ್ತು ಸಿಲಿಕನ್ ಕಾರ್ಬೈಡಿನ ಇಟ್ಟಿಗೆಗಳನ್ನು ಉಪಯೋಗಿಸಬೇಕು.

ಕರಗಿ ನೀರಾದ ಕಿಟ್ಟದ ಸಂಬಂಧದಲ್ಲಿರುವ ಕಾವಿಟ್ಟಿಗೆಗಳು ರಾಸಾಯನಿಕಗಳ ಪ್ರತಿಕ್ರಿಯೆಯನ್ನು ತಡೆಯುವಂತಿರಬೇಕು. ಕ್ಷಾರದ ತೆರೆದ ಒಲೆಯಲ್ಲಿ ಉಕ್ಕನ್ನು ಮಾಡುವ ಕ್ಷಾರದ ಕಾವಿಟ್ಟಿಗೆಗಳನ್ನು ಉಪಯೋಗಿಸುತ್ತಾರೆ. ಕಾವಿಟ್ಟಿಗೆಯು ಗೋಡೆಕಾವಿಗೆ ಸಿಕ್ಕಿದಾಗ ಅದರ ಮುಖದಿಂದ ಚಕ್ಕೆಗಳು ಏಳುವುದುಂಟು. ಕಾದಾಗ ಹಿಗ್ಗುವುದು ಕಡಿಮೆಯಾದರೆ ಚಕ್ಕೆಗಳು ಏಳುವ ಸಂಭವ ಕಡಿಮೆ.

ಕಬ್ಬಿಣದ ಮತ್ತು ಉಕ್ಕಿನ ಕೈಗಾರಿಕೆಯಲ್ಲಿ ಕಾವಿಟ್ಟಿಗೆಗಳನ್ನು ಊದುಕುಲುಮೆ ಬೆಸೆಮರ್ ಕುಲುಮೆ, ತೆರೆದ ಒಲೆಗಳು ಮತ್ತು ವಿದ್ಯುತ್ತಿನ ಕುಲುಮೆಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಾರೆ. ತೆರೆದ ಒಲೆಯಲ್ಲಿ ಮ್ಯಾಗ್ನಸೈಟ್, ಕ್ರೋಮ್ ಸಿಲಿಕ, ಬೆಂಕಿಯನ್ನು ತಡೆಯುವ ಮಣ್ಣು ಮತ್ತು ಅವಾಹಕ ಇಟ್ಟಿಗೆಗಳನ್ನು ಉಪಯೋಗಿಸುತ್ತಾರೆ. ಒಲೆಯ ಮುಂಭಾಗದ ಮತ್ತು ಹಿಂಭಾಗದ ಗೋಡೆಗಳ ಮಾಡನ್ನೂ ಸಿಲಿಕದ ಇಟ್ಟಿಗೆಗಳಿಂದ ಕಟ್ಟುತ್ತಾರೆ. ಸಿಲಿಕ ಮತ್ತು ಮ್ಯಾಗ್ನಸೈಟ್ ಇಟ್ಟಿಗೆಗಳು ಒಂದಕ್ಕೊಂದು ತಗಲಿದ್ದರೆ ಉಷ್ಣತೆ ಹೆಚ್ಚಿದಾಗ ರಾಸಾಯನಿಕ ಪ್ರತಿಕ್ರಿಯೆಯಿಂದ ಕರಗುವ ಸಂಭವವಿರುವುದರಿಂದ ಎರಡಕ್ಕೂ ನಡುವೆ ಒಂದು ವರಸೆ ಕ್ರೋಮ್ ಇಟ್ಟಿಗೆಯನ್ನಿಡುತ್ತಾರೆ. ಎರಕದ ಲೋಹದ ಕಾರ್ಖಾನೆಯಲ್ಲಿ ಎರಕದ ಕಬ್ಬಿಣ, ಕಬ್ಬಿಣದ ಚೂರುಪಾರು, ಸುಣ್ಣಕಲ್ಲು ಮತ್ತು ಉಕ್ಕನ್ನು ಸೇರಿಸಿ ಕರಗಿಸಬೇಕಾಗಿರುವುದರಿಂದ ಕ್ಯೂಪೋಲದ ಒಳಗಡೆ ಕಾವಿಟ್ಟಿಗೆಯ ಅಂಚನ್ನು ಕಟ್ಟಬೇಕು. ತಾಮ್ರ, ಸತು, ಸೀಸ, ನಿಕ್ಕಲ್ ಮತ್ತು ಅಲ್ಯೂಮಿನಿಯಮ್ ಲೋಹಗಳ ಕೈಗಾರಿಕೆಯಲ್ಲಿಯೂ ಕಾವಿಟ್ಟಿಗೆಯ ಉಪಯೋಗ ವಿಶೇಷವಾಗಿದೆ. ಗಾಜಿನ ತಯಾರಿಕೆಯಲ್ಲಂತೂ ಕಾವಿಟ್ಟಿಗೆಯನ್ನು ಬಿಟ್ಟರೆ ನಡೆಯುವುದೇ ಇಲ್ಲ. ಅದರ ತಯಾರಿಕೆಯಲ್ಲಿ ಬಳಸುವ ಸೋಡ–ಬೂದಿ, ಸೋಡಿಯಂ ಸಲ್ಫೇಟ್, ಸುಣ್ಣ ಮತ್ತು ಬೊರ್ಯಾಕ್ಸ್ ಇವು ಅತಿಯಾದ ಉಷ್ಣತೆಯಲ್ಲಿ ಸಾಮಾನ್ಯವಾದ ಕಾವಿಟ್ಟಿಗೆಗಳನ್ನೇ

ತಿಂದುಹಾಕುತ್ತವೆ. ಅದಕ್ಕಾಗಿ ಸಿಲಿಕ ಹೆಚ್ಚಾಗಿರುವ ವಿಶೇಷ ರೀತಿಯ ಇಟ್ಟಿಗೆ, ಕಯನೈಟ್ ಮತ್ತು ಕರಗಿಸಿದ ಅಲ್ಯುಮಿನದ ಇಟ್ಟಿಗೆಗಳಿಂದ ಗಾಜನ್ನು ಕರಗಿಸುವ ಕ್ಯಾಥೋಲಗಳಿಗೆ ಅಂಚುಗಳನ್ನು ಕಟ್ಟುತ್ತಾರೆ. ಸುಣ್ಣ ಮತ್ತು ಸಿಮೆಂಟಿನ ಒಲೆಗಳಲ್ಲಿ ಮ್ಯಾಗ್ನೆಸೈಟಿನ ಇಟ್ಟಿಗೆಗಳಿಂದ ಅಂಚುಗಳನ್ನು ಕಟ್ಟುತ್ತಾರೆ.

ಕಾವಿಟ್ಟಿಗೆಯ ಕೈಗಾರಿಕೆಯಲ್ಲಿ ಎಲ್ಲ ಉದ್ದೇಶಗಳಿಗೂ ಉಪಯೋಗವಾದ ನಮೂನೆಗಳಿಗೆ ಬದಲಾಗಿ ಒಂದೊಂದಕ್ಕೂ ಪ್ರತ್ಯೇಕವಾದ ಮಾದರಿಗಳು ತಯಾರಾಗುತ್ತವೆ. ಇದರ ಫಲವಾಗಿ ಕುಲುಮೆಗಳಲ್ಲಿ ಉಷ್ಣತೆ ಹೆಚ್ಚಿ ದಕ್ಷತೆ ಏರುತ್ತಿದೆ. ಮೇಲ್ಮಟದ ಕಾವಿಟ್ಟಿಗೆಗಳಿಗೆ ಉತ್ತೇಜನ ದೊರೆಯುತ್ತಿದೆ. ಪರಮಾಣು ಶಕ್ತಿಯಲ್ಲಿ ಉಪಯೋಗಿಸುವ ವಿದ್ಯುಜ್ಜನಕಗಳಲ್ಲಿ ವಿಶಿಷ್ಟವಾದ ಕಾವಿಟ್ಟಿಗೆಗಳು ಬೇಕಾಗುತ್ತವೆ. ಈ ಸಾಮಗ್ರಿಗಳು ಮಿತಿಮೀರಿದ ಉಷ್ಣತೆಯಲ್ಲಿ ಭೌತವಾಗಿಯೂ ರಾಸಾಯನಿಕವಾಗಿಯೂ ಭದ್ರವಾಗಿರಬೇಕು. ಈ ದಿಕ್ಕಿನಲ್ಲಿ ಹೊಸ ಸಂಶೋಧನೆಗಳು ಈಗಲೂ ನಡೆಯುತ್ತಿವೆ. (ಎಚ್.ಸಿ.ಕೆ.)

**ಕಾವಿಮಣ್ಣು :** ಕಬ್ಬಿಣದ ಹೈಡ್ರಸ್ ಆಕ್ಸೈಡುಗಳ (ಲೈಮೊನೈಟ್ ಹಿಮಟೈಟ್, ಅಪೂರ್ವವಾಗಿ ಮ್ಯಾಗ್ನಟೈಟ್) ಮತ್ತು ಜೇಡುಮಣ್ಣಿನ ಚೆನ್ನಾಗಿ ಕಲೆತ ಮಿಶ್ರಣ (ಓಕರ್). ಇದರಲ್ಲಿ ಕಬ್ಬಿಣದ ಆಕ್ಸೈಡ್ ಪರಿಶುದ್ಧ ಪ್ರಮಾಣ ಶೇ. 15–80 ವರೆಗೂ ಇರುತ್ತದೆ. ಸ್ವಾಭಾವಿಕ ಖನಿಜ ಬಣ್ಣಗಳಲ್ಲಿ ಕಬ್ಬಿಣದ ಹೈಡ್ರಸ್ ಆಕ್ಸೈಡ್ ಪರಿಶುದ್ಧವಾಗಿಯೋ ಅಥವಾ ಜೇಡುಮಣ್ಣಿನೊಂದಿಗೆ ಬೆರೆತು ಹೇರಳವಾಗಿ ದೊರಕುವುದು. ಕಾವಿಮಣ್ಣು ಎರಡನೆಯ ಜಾತಿಗೆ ಸೇರಿದುದು.

**ಆಕರ :** ನೀರಿನಿಂದ ಸಾಗಣೆಗೊಂಡು ಪ್ರಸರಿಸಿದ ಮಡ್ಡಿಯಿಂದ ಉತ್ಪತ್ತಿಯಾದ ನಿಕ್ಷೇಪವಾಗಿಯೂ ಕಬ್ಬಿಣದ ಅದುರುಗಳು, ಪದರಶಿಲೆ, ಸುಣ್ಣಶಿಲೆ ಇವುಗಳ ರಾಸಾಯನಿಕ ಶೈಥಿಲ್ಯದಿಂದ ಉಂಟಾದ ಸ್ಥಳೀಯ ಶೇಷವಸ್ತು ನಿಕ್ಷೇಪವಾಗಿಯೂ ಕಾವಿ ದೊರೆಯಬಹುದು. ರಾಸಾಯನಿಕ ವಸ್ತುಗಳ ಸಂಯೋಗದಿಂದ ಕಾವಿಮಣ್ಣು ಅನೇಕ ವರ್ಣಗಳಲ್ಲಿ ದೊರೆಯುತ್ತದೆ. ಬಣ್ಣದಲ್ಲಿ ನಾನಾ ಛಾಯೆಯ ಹಳದಿಯಲ್ಲಿಯೂ ಕಂದು ಕೆಂಪು ಬಣ್ಣಗಳಲ್ಲಿಯೂ ಇರುವುದು. ಕೆಲವು ವಿಧವಾದ ಕಾವಿಮಣ್ಣುಗಳು ಹಸುರಾಗಿ ಸಹ ಇರುವುದುಂಟು. ಹಳದಿ ಬಣ್ಣದ ಕಾವಿಮಣ್ಣನ್ನು ಗೋಪಿ ಎಂದೂ ಕಂದು ಬಣ್ಣದ್ದನ್ನು ಕಾವಿ ಎಂದೂ ಕರೆಯುವುದು ರೂಢಿ.

**ಉಪಯೋಗ:** ಕಾವಿಮಣ್ಣುಗಳನ್ನು ಅವು ದೊರೆಯುವ ವಿಧಾನದಲ್ಲಿಯಾಗಲೀ ಸಂಸ್ಕರಿಸಿದ ಮೇಲಾಗಲೀ ಬಣ್ಣ ಬಳಿಯುವುದಕ್ಕೂ ಜಲವರ್ಣ ಮತ್ತು ತೈಲವರ್ಣಗಳನ್ನು ತಯಾರಿಸುವುದಕ್ಕೂ ಉಪಯೋಗಿಸುತ್ತಾರೆ.

**ಹಳದಿ ಕಾವಿಮಣ್ಣು:** ಇದು ಮುಖ್ಯವಾಗಿ ಲೈಮೊನೈಟ್ ಮತ್ತು ಜೇಡು ಮಣ್ಣು ಕಲೆತ ಮಿಶ್ರಣ. ಇದನ್ನು ಕಾಯಿಸಿದಾಗ ಉಷ್ಣತೆಯ ಪ್ರಕಾರ ಕಂದು ಬಣ್ಣದ ವಿವಿಧ ಛಾಯೆಗಳು ಬರುತ್ತವೆ. ಅಲ್ಪಪ್ರಮಾಣದಲ್ಲಿ ಮ್ಯಾಂಗನೀಸ್ ಬೆರೆತಿದ್ದರೆ ಸೀಯನ್ನ ಎಂಬ ಹಳದಿ ಮಿಶ್ರಿತ ಕಂದು ಬಣ್ಣವಾಗುವುದು. ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಶೇ.10–25 ಭಾಗದಷ್ಟು ಮ್ಯಾಂಗನೀಸ್ ಆಕ್ಸೈಡ್ ಬೆರೆತಿದ್ದರೆ ಅಂಬರ್ ಎಂಬ ಕಂದು ಬಣ್ಣದ ಪದಾರ್ಥವಾಗುವುದು.

**ಕೆಂಪು ಕಾವಿಮಣ್ಣು:** ಇದರಲ್ಲಿ ಮುಖ್ಯವಾಗಿ ಕಬ್ಬಿಣದ ಕೆಂಪು ಆಕ್ಸೈಡ್ (ಹಿಮಟೈಟ್) ಮತ್ತು ಮಣ್ಣು ಪದಾರ್ಥಗಳು ವಿವಿಧ ಪ್ರಮಾಣದಲ್ಲಿ ಬೆರೆತಿರುತ್ತವೆ. ಬಣ್ಣದಲ್ಲಿ ಕೇಸರಿ ಬಣ್ಣದಿಂದ ರಕ್ತಕೆಂಪು ಮತ್ತು ಊದಾಕೆಂಪು ಬಣ್ಣಗಳವರೆಗೆ ವ್ಯತ್ಯಾಸವಾಗಬಹುದು.

**ಹಸುರು ಕಾವಿಮಣ್ಣು :** ಇದು ಮುಖ್ಯವಾಗಿ ಎಪಿಡೋಟ್ ಕ್ಲೋರೈಟ್ ಹಾರ್ನ್ ಬ್ಲೆಂಡ್ ಮುಂತಾದ ಕಬ್ಬಿಣ–ಮೆಗ್ನೀಸಿಯಂ–ಸಿಲಿಕೇಟ್ ಸಂಯೋಜಿತ ಖನಿಜಗಳ ರಾಸಾಯನಿಕ ಬದಲಾವಣೆ ಶೈಥಿಲ್ಯಗಳಿಂದ ಉಂಟಾಗುತ್ತದೆ.

ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿವಿಧ ಛಾಯೆಯ ಹಳದಿ ಮತ್ತು ಕಂದು ಬಣ್ಣದ ಕಾವಿಮಣ್ಣುಗಳು ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು ಮತ್ತು ಸುಣ್ಣಶಿಲೆಗಳೊಂದಿಗೆ ಮಿಶ್ರವಾಗಿ ಸಿಕ್ಕುತ್ತದೆ. ಹಸುರು ಬಣ್ಣದ ಕಾವಿಮಣ್ಣು ತುಮಕೂರು ಜಿಲ್ಲೆಯ ಗೊಲ್ಲಹಳ್ಳಿ ಪ್ರದೇಶದಲ್ಲಿ ಅಲ್ಪಪ್ರಮಾಣದಲ್ಲಿ ದೊರೆಯುವುದು. ಕೆಂಪು ಬಣ್ಣದ ಸ್ವಚ್ಛ ರೆಡ್ ಆಕ್ಸೈಡ್ (ಹಿಮಟೈಟ್) ಕಾವಿಯ ವಿಶಾಲ ನಿಕ್ಷೇಪಗಳು ಮತ್ತು ಕೆಂಪು ಕಾವಿಮಣ್ಣು ಹೇರಳವಾಗಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಂಡೂರು ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿ ಇದೆ. (ಜಿ.ಎಸ್.ಎ.)

**ಕಾವುಜೇಡು :** ಬೆಂಕಿಯ ಕಾವನ್ನು ತಡೆಯುವ ಮತ್ತು ಅಗ್ನಿಮಾಪಕ ಶಂಕು, (ಪೈರೊಮೆಟ್ರಿಕ್ ಕೋನ್) 19ಕ್ಕೂ ಹೆಚ್ಚು ಕಾವಿಗೂ ಮಾರ್ಪಾಡಾಗದೆ ಇರುವ ಜೇಡುಮಣ್ಣು (ಫೈರ್ ಕ್ಲೇ). ಕಾವುಜೇಡು ಮುಖ್ಯವಾಗಿ ಕೇಯೊಲಿ–ನೈಟ್ ಗುಂಪಿಗೆ ಸೇರಿದೆ. ರಾಸಾಯನಿಕವಾಗಿ ಇದು ಸುದ್ದೆಮಣ್ಣನ್ನು ಹೋಲುತ್ತದೆ. ಇದರಲ್ಲಿ ಶೇ.24–32 ಅಲ್ಯುಮಿನಾ ಶೇ.50–62 ಸಿಲಿಕಾ ಮತ್ತು ಶೇ. 9–12 ನೀರಿನ ಅಂಶ ಇದೆ. ಕ್ಯಾಲ್ಸಿಯಂ ಮೊದಲಾದ ಲೋಹಗಳ ಆಕ್ಸೈಡುಗಳು ಬೆರೆತಾಗ ಜೇಡಿಗೆ ಬಿಳಿ, ಕಂದು ಮತ್ತು ಕಪ್ಪು ಬಣ್ಣಗಳು ಬರುತ್ತವೆ. ಅಗ್ನಿನಿರೋಧಕವಾಗಿ ಮತ್ತು ಜಿಗಟಾಗಿರುವ ಕಾವುಜೇಡಿನಿಂದ ಕಾವಿಟ್ಟಿಗೆಗಳನ್ನು ತಯಾರು ಮಾಡಬಹುದು. ಅಧಿಕ ಉಷ್ಣತೆಗಳಲ್ಲಿ ಕರಗಿಹೋಗದೆ ಇರುವ ಗುಣದ ಮೇಲೆ ಕಾವುಜೇಡನ್ನು ಅಲ್ಪ ಮಧ್ಯಮ, ಉತ್ತಮ ಮತ್ತು ಅತ್ಯುತ್ತಮ ಸಾಮರ್ಥ್ಯ ಉಳ್ಳವುಗಳೆಂದು ವಿಭಾಗಿಸಬಹುದು.

ಕಾವುಜೇಡು ಸಾಮಾನ್ಯವಾಗಿ ಕಲ್ಲಿದ್ದಲು ಸ್ತರಗಳ ಜೊತೆಗೆ ಪದರಶಿಲೆಯಾಗಿ ಅಸ್ಸಾಂ, ಬಂಗಾಲ, ಬಿಹಾರ್, ಒರಿಸ್ಸ, ಮಧ್ಯಪ್ರದೇಶ ಮತ್ತು ಆಂಧ್ರಪ್ರದೇಶಗಳಲ್ಲಿ ಸಿಗುತ್ತದೆ. ಶೇಷನಿಕ್ಷೇಪಗಳಾಗಿ ಜೇಡು ಮಧ್ಯಪ್ರದೇಶದ ಜಬ್ಬಲ್‌ಪುರ ಜಿಲ್ಲೆಯಲ್ಲಿ ದೊರೆಯುತ್ತದೆ. ಜೂರಾಸಿಕ್ ಮರಳು ಶಿಲೆಗಳ ಕೆಳಗೆ ಇರುವ ಜೇಡು ಗುಜರಾತಿನಲ್ಲಿ ದೊರೆಯುತ್ತದೆ. ಆದರ್ಶ ಕಾವುಜೇಡು ಕರ್ನಾಟಕ ರಾಜ್ಯದಲ್ಲಿ ದೊರೆಯುವುದಿಲ್ಲ. ಪ್ರತಿವರ್ಷವೂ ಸರಾಸರಿ ನಾಲ್ಕು ಲಕ್ಷ ಟನ್ ಜೇಡು ಉತ್ಪನ್ನವಾಗುತ್ತಿದೆ. ಮುಖ್ಯವಾಗಿ ಈ ಜೇಡಿನಿಂದ ತಯಾರಾದ ಕಾವಿಟ್ಟಿಗೆಗಳನ್ನು ಕಬ್ಬಿಣ ಕರಗಿಸುವ ಊದುಕುಲುಮೆಗಳಲ್ಲಿ ಉಪಯೋಗಿಸುತ್ತಾರೆ. (ಎಂ.ಎಸ್.ಎಸ್.)

**ಕಾವೂರ್, ಡಿ ಕ್ಯಾಮಿಯೊ ಬೆನ್ಸೊ :** 1810–61. ಪೀಡ್ ಮಾಂಟ್ ರಾಜ್ಯದ ರಾಜನೀತಿಜ್ಞ ಮತ್ತು ಇಟಲಿಯ ಏಕೀಕರಣದ ಶಿಲ್ಪಿ. 1810ರಲ್ಲಿ ಟ್ಯೂರಿನ್‌ನಲ್ಲಿ ಶ್ರೀಮಂತ ಮನೆತನವೊಂದರಲ್ಲಿ ಜನಿಸಿ ಸೈನ್ಯ ಶಿಕ್ಷಣ ಪಡೆದು ಸೈನ್ಯದ ಯಾಂತ್ರಿಕ ವಿಭಾಗದಲ್ಲಿ ಸೇರಿದ. ಆದರೆ ತನ್ನ ಪ್ರಗತಿಪರ ಅಭಿಪ್ರಾಯಗಳಿಂದ ವರಿಷ್ಠರ ವಿರೋಧ ಗಳಿಸಿ 1831ರಲ್ಲಿ ಸೈನ್ಯದಿಂದ ಹೊರಬಂದು, ಮುಂದಿನ 15 ವರ್ಷಗಳನ್ನು ಲೇರಿಯಲ್ಲಿದ್ದ ತನ್ನ ತಂದೆಯ ಆಸ್ತಿಪಾಸ್ತಿಗಳ ವ್ಯವಸ್ಥೆಯಲ್ಲಿ ನಿರತನಾದ. ನೂತನ ಕೃಷಿ ವಿಧಾನಗಳಲ್ಲೂ ಪಶುಪಾಲನೆಯಲ್ಲೂ ಹೆಚ್ಚಿನ ಆಸಕ್ತಿ ವಹಿಸಿದ. ಆರ್ಥಿಕ ಮತ್ತು ಕೈಗಾರಿಕಾ ಪ್ರಗತಿಗೆ ಸಾಧಕವಾದ ಮತ್ತು ರಾಜನೀತಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಈತ ಅಭ್ಯಸಿಸಿದನಲ್ಲದೆ ಹಲವಾರು ಬಾರಿ ಇಂಗ್ಲೆಂಡ್ ಫ್ರಾನ್ಸ್‌ಗಳಿಗೆ ಭೇಟಿನೀಡಿ ಅಲ್ಲಿಯ ರಾಜ್ಯಪದ್ಧತಿಗಳನ್ನು ತಿಳಿದುಕೊಂಡ.

1842ರಲ್ಲಿ ಟ್ಯೂರಿನ್ ನಗರದಲ್ಲಿ ಒಂದು ವ್ಯವಸಾಯ ಸಂಘವನ್ನು ಕಾವೂರ್ ಸ್ಥಾಪಿಸಿದ. ಚಾರ್ಲ್ಸ್ ಆಲ್ಬರ್ಟ್ ದೊರೆ ಇದರ ಪೋಷಕ. ಇಟಲಿಯ ಏಕೀಕರಣವಾಗಬೇಕು. ವ್ಯಾಪಾರಾಭಿವೃದ್ಧಿಯಾಗಬೇಕು, ನೂತನ ರೈಲ್ವೆ ಮಾರ್ಗಗಳ ನಿರ್ಮಾಣಬೇಕು–ಎಂದು ಈತ ಮನವಿಗಳನ್ನು ಹೊರಡಿಸಿದ್ದು ಈ ಸಂಸ್ಥೆಯ ಮೂಲಕ. ಕ್ರೈಸ್ತಮಂಡಲಿಯ ಹತೋಟಿಯಿಂದ ವಿಮೋಚನೆಗೂ ವಾಕ್ ಸ್ವಾತಂತ್ರ್ಯಕ್ಕೂ ಹೋರಾಡಿದ. 1847ರಲ್ಲಿ ಈತ ಆರಂಭಿಸಿದ ರಿಸಾರ್ಜಿಮೆಂಟೊ ಪತ್ರಿಕೆ ಇವನ ರಾಜಕೀಯ ವಿಚಾರಗಳ ಪ್ರಚಾರಕ್ಕೆ ಮೀಸಲಾಯಿತು. ಪೀಡ್‌ಮಾಂಟನಲ್ಲಿ ಇಂಗ್ಲಿಷ್ ಸಂವಿಧಾನದವನ್ನು ಆಚರಣೆಗೆ ತರಬೇಕೆಂದು ಪತ್ರಿಕೆಯ ಮೂಲಕ ಪ್ರಚಾರಮಾಡಿದ. ಪತ್ರಿಕಾಸ್ವಾತಂತ್ರ್ಯದ ಸ್ಥಾಪನೆ ಮತ್ತು ನಿರಂಕುಶ ನ್ಯಾಯಮಂಡಳಿಗಳ ರದ್ದಿಗಾಗಿ ಇವನು ಬಹುವಾಗಿ ಶ್ರಮಿಸಿದ. 1848ರಲ್ಲಿ ಚಾರ್ಲ್ಸ್ ಆಲ್ಬರ್ಟ್ ಪೀಡ್‌ಮಾಂಟಿನಲ್ಲಿ ಹೊಸ ಸಂವಿಧಾನವನ್ನೂ ಪಾರ್ಲಿಮೆಂಟನ್ನೂ ಜಾರಿಗೆ ತಂದಾಗ ಕಾವೂರನಿಗೆ ಸಂತೋಷವಾಯಿತು.

ಪೀಡ್‌ಮಾಂಟಿನ ಪಾರ್ಲಿಮೆಂಟಿಗೆ ಟ್ಯೂರಿನ್ ನಗರದ ಸದಸ್ಯನಾಗಿ 1849ರ ಜೂನ್ ತಿಂಗಳಲ್ಲಿ ಕಾವೂರ್ ಆಯ್ಕೆ ಹೊಂದಿದ. ಆಗ ಉಗ್ರಗಾಮಿಗಳು ಜೋಸೆಫ್ ಮ್ಯಾಟ್‌ಜಿನಿಯ ನೇತೃತ್ವದಲ್ಲಿ ರಾಜಪ್ರಭುತ್ವವನ್ನು ವಿರೋಧಿಸುತ್ತಿದ್ದರು. ಕಾವೂರ್ ಇದನ್ನು ಖಂಡಿಸಿದನಲ್ಲದೆ ಆಸ್ಟ್ರಿಯದ ವಿರುದ್ಧ ಯುದ್ಧದಲ್ಲಿ ತೊಡಗಿದ್ದ ಚಾರ್ಲ್ಸ್ ಆಲ್ಬರ್ಟ್‌ಗೆ ಬೆಂಬಲ ನೀಡಿದ.

1850ರಲ್ಲಿ ಕಾವೂರನಿಗೆ ಪೀಡ್‌ಮಾಂಟಿನ ಮಂತ್ರಿಮಂಡಲದಲ್ಲಿ ಒಂದು ಸ್ಥಾನ ಲಭ್ಯವಾಯಿತು. ವಾಣಿಜ್ಯ ಮತ್ತು ವ್ಯವಸಾಯ ಖಾತೆಗಳನ್ನು ಇವನಿಗೆ ನೀಡಲಾಯಿತು. ಇವನ ಅಧಿಕಾರದ ಕಾಲದಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳೊಡನೆ ವಾಣಿಜ್ಯ ಒಪ್ಪಂದಗಳಾದುವು. ರೈಲು ಮಾರ್ಗಗಳನ್ನು ವಿಸ್ತರಿಸಲಾಯಿತು. 1854ರಲ್ಲಿ ಪೀಡ್‌ಮಾಂಟಿನ ಪ್ರಧಾನಮಂತ್ರಿಯಾಗಿ ನೇಮಕವಾಗಿ, ಸಾಯುವವರೆಗೂ (1862ರ ಸ್ಥಾನದಲ್ಲಿ ಮುಂದುವರಿದ, ನಡುವೆ ಕೆಲವು ವಾರಗಳ ವಿನಾ). ಪೀಡ್ ಮಾಂಟಿನ ಪ್ರಧಾನಮಂತ್ರಿಯಾಗಿದ್ದ ಕಾಲದಲ್ಲಿ ಈತ ದೊಡ್ಡ ರಾಜಕಾರಣಿ ಮತ್ತು ವ್ಯವಹಾರಪಟುವೆಂದು ಹೆಸರು ಗಳಿಸಿ, ಆಸ್ಟ್ರಿಯದ ದಬ್ಬಾಳಿಕೆಗೆ ಒಳಗಾಗಿದ್ದ ಇಟಲಿಯ ಏಕೀಕರಣವನ್ನೂ ಸ್ವಾತಂತ್ರ್ಯವನ್ನೂ ಸಾಧಿಸಿದ. ಈ ಉದ್ದೇಶ ಸಾಧನೆಗಾಗಿ ಆಸ್ಟ್ರಿಯವನ್ನು ಇಟಲಿಯಿಂದ ಹೊಡೆದೋಡಿಸುವುದು ಅನಿವಾರ್ಯವೆಂದೂ ಇದನ್ನು ಸಾಧಿಸಲು ಇಟಲಿಗೆ ಇತರ ಬಲಿಷ್ಠ ರಾಷ್ಟ್ರಗಳ ಬೆಂಬಲ ಅತ್ಯಂತ ಆವಶ್ಯಕವೆಂದೂ ಇವನು ತಿಳಿದಿದ್ದ. ಇದಕ್ಕೆ ವ್ಯವಸ್ಥಾಬದ್ಧ ಆಡಳಿತ ಮತ್ತು ಪ್ರಗತಿಶೀಲ ಪ್ರಭುವನ್ನು ಹೊಂದಿದ್ದ ಪೀಡ್‌ಮಾಂಟ್ ಇಟಲಿಯ ನೇತೃತ್ವ ವಹಿಸಬೇಕಾಗಿತ್ತು. ಪೀಡ್‌ಮಾಂಟಿನ ಕೈಗಾರಿಕೆ, ವಾಣಿಜ್ಯಗಳನ್ನು ಉತ್ತಮಗೊಳಿಸಿ, ಆಡಳಿತ ಪದ್ಧತಿಯನ್ನು ಸುಧಾರಿಸಿ, ಪ್ರಗತಿಪರ ರಾಜ್ಯವನ್ನಾಗಿ ಮಾಡಿ, ಇತರ ಪ್ರಾಂತ್ಯಗಳ ಜನ ಪೀಡ್‌ಮಾಂಟಿನ ಮುಂದಾಳುತನವನ್ನು ಅಪೇಕ್ಷಿಸುವಂತಾದುದಕ್ಕೆ ಕಾವೂರನ ಪ್ರಯತ್ನವೇ ಕಾರಣ.

ಆಸ್ಟ್ರಿಯದ ವಿರುದ್ಧ ಪೀಡ್‌ಮಾಂಟಿಗೆ ನೆರವು ನೀಡಬಹುದಾಗಿದ್ದ ಪ್ರಬಲರಾಷ್ಟ್ರಗಳೆಂದರೆ ಬ್ರಿಟನ್ ಮತ್ತು ಫ್ರಾನ್ಸ್, ಯುರೋಪಿನ ರಾಜಕೀಯದಲ್ಲಿ ಕೈಹಾಕಲು ಬ್ರಿಟನ್ನಿಗೆ ಆಸಕ್ತಿಯಿರಲಿಲ್ಲ.

ಆದ್ದರಿಂದ ಇಟಲಿಯ ಭವಿಷ್ಯ ಫ್ರಾನ್ಸನ್ನು ಅವಲಂಬಿಸಿದೆಯೆಂಬುದು ಕಾವೂರನ ತೀರ್ಮಾನವಾಗಿತ್ತು. ಫ್ರಾನ್ಸಿನ ಚಕ್ರವರ್ತಿ ಮೂರನೆಯ ನೆಪೋಲಿಯನ್ ಮಹತ್ವಾಕಾಂಕ್ಷಿಯೂ ಸಾಹಸಿಯೂ ಆಗಿದ್ದ. ಅವನ ಒಲವನ್ನು ಪಡೆಯುವುದೇ ಕಾವೂರನ ಧ್ಯೇಯವಾಯಿತು.

1855ರಲ್ಲಿ ಅಂಥ ಒಂದು ಅವಕಾಶ ಲಭಿಸಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ರಷ್ಯದ ವಿರುದ್ಧ ಕ್ರಿಮಿಯ ಯುದ್ಧದಲ್ಲಿ ತೊಡಗಿದ್ದವು. ಕಾವೂರ್ ತನ್ನ ಮಂಡಲಿಗೂ ತಿಳಿಸದೆ, ದೊರೆ ವಿಕ್ಟರ್ ಎಮಾನ್ಯುಯೆಲನ ಅನುಮತಿ ಪಡೆದು ಬೇಷರತ್ತಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಸಹಾಯಕ್ಕೆ ಪೀಡ್‌ಮಾಂಟ್ ಸೈನಿಕರನ್ನು ಕಳುಹಿಸಿಕೊಟ್ಟ. ಕ್ರಿಮಿಯ ಯುದ್ಧದಲ್ಲಿ ರಷ್ಯಕ್ಕೆ ಸೋಲುಂಟಾಯಿತು. 1856ರಲ್ಲಿ ಪ್ಯಾರಿಸಿನಲ್ಲಿ ನಡೆದ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಲು ಕಾವೂರನಿಗೆ ಆಹ್ವಾನ ಬಂತು. ಆ ಸದವಕಾಶವನ್ನುಪಯೋಗಿಸಿಕೊಂಡು ಕಾವೂರ್ ಇಟಲಿಯ ಭವಿಷ್ಯವನ್ನು ಕುರಿತು ಚರ್ಚಿಸಿದ. ಎರಡು ವರ್ಷಗಳ ಅನಂತರ ಕಾವೂರನಿಗೆ ಪ್ರತಿಫಲ ದೊರೆಯಿತು. ಮೂರನೆಯ ನೆಪೋಲಿಯನ್ ಮತ್ತು ಕಾವೂರ್ ಇವರು ಪ್ಲಾಂಬೆಯರ್ಸ್‌ನಲ್ಲಿ 1858 ಜುಲೈಯಲ್ಲಿ ಪರಸ್ಪರ ಸಂಧಿಸಿ ಈ ಬಗ್ಗೆ ಸಂಧಾನ ನಡೆಸಿದರು. ಇಟಲಿಯನ್ನು ಆಸ್ಟ್ರಿಯದ ಆಳ್ವಿಕೆ ಮತ್ತು ಪ್ರಭಾವದಿಂದ ಸಂಪೂರ್ಣವಾಗಿ ವಿಮೋಚನೆಗೊಳಿಸುವ ಉದ್ದೇಶದಿಂದ ಅದರ ವಿರುದ್ಧ ಯುದ್ಧ ಹೂಡಲು ರಹಸ್ಯ ಒಪ್ಪಂದಕ್ಕೆ ಬಂದರು. ಇಟಲಿಯಲ್ಲಿ ಆಸ್ಟ್ರಿಯದ ಆಳ್ವಿಕೆಗೆ ಒಳಗಾಗಿದ್ದ ಲಂಬಾರ್ಡಿ ಮತ್ತು ವೆನೀಷಿಯವನ್ನೂ ಪೋಪನ ರಾಜ್ಯದ ಒಂದು ಭಾಗವನ್ನೂ ಪೋಪನ ಅಧ್ಯಕ್ಷತೆಯಲ್ಲಿ ಒಂದುಗೂಡಿಸಬೇಕೆಂದೂ ನಿರ್ಣಯ ಮಾಡಲಾಯಿತು. ನೆಪೋಲಿಯನನ ಸಹಾಯಕ್ಕೆ ಪ್ರತಿಫಲವಾಗಿ ಸವಾಯ್ ಮತ್ತು ನೈಸ್ ಪ್ರದೇಶಗಳನ್ನು ಫ್ರಾನ್ಸಿಗೆ ಕೊಡಬೇಕಾಗಿತ್ತು. ಸೂಕ್ತ ಸಮಯದಲ್ಲಿ, ಆಸ್ಟ್ರಿಯದ ವಿರುದ್ಧ ನೆಪೋಲಿಯನ್ ಯುದ್ಧ ಪ್ರಾರಂಭಿಸುವುದಾಗಿಯೂ ಇದಕ್ಕಾಗಿ ನೆಪೋಲಿಯನ್ ಇನ್ನೂರು ಸಾವಿರ ಸೈನಿಕರನ್ನು ಒದಗಿಸಬೇಕೆಂದೂ ಪೀಡ್‌ಮಾಂಟ್ ರಾಜ್ಯ ನೂರು ಸಾವಿರ ಸೈನಿಕರನ್ನು ಒದಗಿಸಬೇಕೆಂದೂ ತೀರ್ಮಾನಿಸಲಾಯಿತು.

ಈ ಒಡಂಬಡಿಕೆಯಂತೆ ಪೀಡ್‌ಮಾಂಟ್ ಯುದ್ಧಸನ್ನದ್ಧವಾಗುತ್ತಿದ್ದಾಗ 1859 ಏಪ್ರಿಲ್ 23ರಂದು ಆಸ್ಟ್ರಿಯದಿಂದ ಅದಕ್ಕೆ ಎಚ್ಚರಿಕೆ ಬಂತು. 3 ದಿನಗಳೊಳಗೆ ಶಸ್ತ್ರತ್ಯಾಗ ಮಾಡದಿದ್ದರೆ ಯುದ್ಧ ಅನಿವಾರ್ಯವೆಂದು ಅದು ತಿಳಿಸಿತು. ಪೀಡ್‌ಮಾಂಟ್ ಆ ಬೆದರಿಕೆಗೆ ಸೊಪ್ಪುಹಾಕಲಿಲ್ಲ. ಏಪ್ರಿಲ್ 26ರಂದು ಯುದ್ಧ ಪ್ರಾರಂಭವಾಯಿತು. ಏಪ್ರಿಲ್ 29ರಂದು ನೆಪೋಲಿಯನ್ ಆಸ್ಟ್ರಿಯದ ವಿರುದ್ಧ ಯುದ್ಧ ಘೋಷಣೆ ಮಾಡಿದ. ಪೀಡ್‌ಮಾಂಟಿನ ಪಾರ್ಲಿಮೆಂಟ್ ದೊರೆ ವಿಕ್ಟರ್ ಎಮಾನ್ಯುಯೆಲನನ್ನು ಸರ್ವಾಧಿಕಾರಿಯಾಗಿ ನೇಮಿಸಿ ವಿಸರ್ಜನೆಗೊಂಡಿತು.

ಮಾಗೆಂಟ ಮತ್ತು ಸಾಲ್ಫೆರಿನೊ ಕದನಗಳಲ್ಲಿ ಆಸ್ಟ್ರಿಯ ಪರಾಭವಗೊಂಡಿತು. ನೆಪೋಲಿಯನ್ ಲಂಬಾರ್ಡಿಯನ್ನು ಆಕ್ರಮಿಸಿಕೊಂಡ. ಇಟಲಿಯಲ್ಲಿ ಆಸ್ಟ್ರಿಯದ ಅಧೀನದಲ್ಲಿ ವೆನೀಷಿಯ ಮಾತ್ರ ಉಳಿದಿತ್ತು. ಆದರೆ ನೆಪೋಲಿಯನ್ ಕಾವೂರನಿಗೆ ತಿಳಿಸದೆಯೇ ಯುದ್ಧ ನಿಲ್ಲಿಸಿ, ಆಸ್ಟ್ರಿಯದ ಚಕ್ರವರ್ತಿ ಫ್ರಾನ್ಸಿಸ್ ಜೋಸೆಫ್‌ನೊಡನೆ ವಿಲ್ಲ ಫ್ರಾಂಕ ಒಪ್ಪಂದ ಮಾಡಿಕೊಂಡ. ಇದರ ಮುಖ್ಯ ಷರತ್ತುಗಳಿವು: 1 ಆಸ್ಟ್ರಿಯದ ಅಧೀನದಲ್ಲಿ ವೆನೀಷಿಯ ಮಾತ್ರ ಉಳಿಯತಕ್ಕದ್ದು. 2 ಲಂಬಾರ್ಡಿ ಪೀಡ್ ಮಾಂಟಿಗೆ ಸೇರಬೇಕು. 3 ಇಟಲಿಯ ಉಳಿದ ರಾಜ್ಯಗಳ ಒಕ್ಕೂಟ ಸ್ಥಾಪನೆಯಾಗಬೇಕು.

ನೆಪೋಲಿಯನನ ಈ ಅನಿರೀಕ್ಷಿತ ನಡತೆಗೆ ಹಲವು ಕಾರಣಗಳಿದ್ದುವು. ಆಸ್ಟ್ರಿಯವನ್ನು ಸಂಪೂರ್ಣವಾಗಿ ಸೋಲಿಸಲು ಇದ್ದ ತೊಂದರೆಗಳು ಅವನಿಗೆ ಗೊತ್ತಿದ್ದವು. ಆವರೆಗಿನ ತನ್ನ ಜಯಗಳು ನಿರ್ಣಾಯಕವಲ್ಲವೆಂದೂ ಸಂಪದ್ಭರಿತ ದೇಶವಾದ ಆಸ್ಟ್ರಿಯದೊಂದಿಗೆ ದೀರ್ಘ ಹೋರಾಟಕ್ಕೆ ತಾನು ಮಾಡಿಕೊಂಡಿದ್ದ ಸಿದ್ಧತೆ ಸಾಲದೆಂದೂ ಅವನು ಮನಗಂಡಿದ್ದ. ಇದಲ್ಲದೆ ಆಸ್ಟ್ರಿಯದ ನೆರವಿಗೆ ರಷ್ಯ ಬರುವ ಸಾಧ್ಯತೆಯಿತ್ತು. ಇಟಲಿಯ ಏಕೀಕರಣವಾಗಿ ಅದು ಪ್ರಾಬಲ್ಯ ಗಳಿಸಿದರೆ, ಫ್ರಾನ್ಸ್ ದೇಶಕ್ಕೆ ಅಪಾಯ ಒದಗಬಹುದೆಂದೂ ಅವನು ಯೋಚಿಸಿದ.

ಒಪ್ಪಂದದ ಸುದ್ದಿ ಕಾವೂರನಿಗೆ ಸಿಡಿಲಿನೋಪಾದಿಯಲ್ಲಿ ಬಂತು. ಇದರಿಂದ ಇವನ ಆಶಾಭಂಗವಾಯಿತು. ಫ್ರಾನ್ಸಿನ ವಿರುದ್ಧ ತೀವ್ರಕ್ರಮ ತೆಗೆದುಕೊಳ್ಳಬೇಕೆಂದು ವಿಕ್ಟರ್ ಎಮಾನ್ಯುಯೆಲನಿಗೆ ಕಾವೂರ್ ಸೂಚಿಸಿದ. ಎಮಾನ್ಯುಯೆಲ್ ಒಪ್ಪಲಿಲ್ಲ. ಕಾವೂರ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸ್ವಿಟ್ಜರ್‌ಲೆಂಡಿಗೆ ತೆರಳಿದ.

ಆಸ್ಟ್ರಿಯದೊಡನೆ ಯುದ್ಧ ನಡೆಯುತ್ತಿದ್ದಾಗ ಇಟಲಿಯ ಪೋಪನ ರಾಜ್ಯಕ್ಕೆ ಸೇರಿದ್ದ ರೊಮಾನಾ, ಮೊಡೇನಾ, ಪಾರ್ಮ ಮತ್ತು ಟಸ್ಕನಿಗಳ ಜನ ಬಂಡಾಯವೆದ್ದು ನಿರಂಕುಶ ಪ್ರಭುತ್ವವನ್ನು ಅಂತ್ಯಗೊಳಿಸಿದರು; ತಾವು ಪೀಡ್‌ಮಾಂಟ್ ರಾಜ್ಯಕ್ಕೆ ಸೇರಬೇಕೆಂಬುದು ಅವರ ಅಭಿಮತವಾಗಿತ್ತು. ವಿಕ್ಟರ್ ಎಮಾನ್ಯುಯೆಲ್ ಇದಕ್ಕೆ ಒಪ್ಪಿದ. ಈ ಎಲ್ಲ ರಾಜ್ಯಗಳೂ ಸೇರಿದ ಸಂಯುಕ್ತ ಪಾರ್ಲಿಮೆಂಟಿನ ಪ್ರಥಮ ಅಧಿವೇಶನವನ್ನು 1860ರ ಏಪ್ರಿಲ್ 2ರಂದು ಟ್ಯೂರಿನ್ ನಗರದಲ್ಲಿ ಪ್ರಾರಂಭಿಸಿದ. ಹೀಗೆ ಇಟಲಿಯ ಏಕೀಕರಣ ಸಾಧಿಸಿತು. ಸವಾಯ್ ಮತ್ತು ನೈಸ್ ನಗರಗಳು ಫ್ರಾನ್ಸಿಗೆ ದೊರಕಿದುವು.

ಇಟಲಿಯ ನೇಪಲ್ಸಿನಲ್ಲಿ ರಾಜ್ಯವನ್ನಾಳುತ್ತಿದ್ದ ಎರಡನೆಯ ಫ್ರಾನ್ಸಿಸ್ ನಿರಂಕುಶ ಪ್ರಭುವಾಗಿದ್ದ. ನೇಪಲ್ಸಿನ ಆಡಳಿತಕ್ಕೆ ಸೇರಿದ ಸಿಸಿಲಿ ದ್ವೀಪವಾಸಿಗಳು 1869ರಲ್ಲಿ ದಂಗೆ ಎದ್ದಾಗ ಇಟಲಿಯ ದಳಪತಿ ಗಾರಿಬಾಲ್ಡಿ ಜನತೆಯ ಪರವಾಗಿ ತನ್ನ ಸ್ವಂತ ಪಡೆಯನ್ನು ತೆಗೆದುಕೊಂಡು ಹೋಗಿ ಫ್ರಾನ್ಸಿಸನನ್ನು ಸಿಸಿಲಿಯಲ್ಲಿ ಸೋಲಿಸಿ ನೇಪಲ್ಸ್ ನಗರವನ್ನು ವಶಪಡಿಸಿಕೊಂಡು ವಿಕ್ಟರ್ ಎಮಾನ್ಯುಯೆಲನ ಹೆಸರಿನಲ್ಲಿ ಸರ್ವಾಧಿಕಾರಿಯಾದ. ಪೋಪನ ರಕ್ಷಣೆಯಲ್ಲಿದ್ದ ಮತ್ತು ಫ್ರಾನ್ಸಿನ ರಕ್ಷಣೆ ಪಡೆದಿದ್ದ ರೋಮ್ ನಗರವನ್ನು ಮುತ್ತುವ ಸಿದ್ಧತೆ ನಡೆಸಿದ. ರೋಮಿಗೆ ಮುತ್ತಿಗೆ ಹಾಕಿದರೆ ಫ್ರಾನ್ಸಿನೊಡನೆ ಯುದ್ಧ ಅನಿವಾರ್ಯವಾಗುತ್ತಿತ್ತು. ಈ ಅಪಾಯವನ್ನು ತಪ್ಪಿಸಲು ಕಾವೂರ್ ಪುನಃ ಮುಖ್ಯಮಂತ್ರಿಯಾಗಿ, ಗಾರಿಬಾಲ್ಡಿಯಿಂದ ನೇತೃತ್ವ ವಹಿಸಿಕೊಂಡ. ರೋಮ್ ನಗರಕ್ಕೆ ಮಾತ್ರ ಮುತ್ತಿಗೆ ಹಾಕದೆ, ಪೋಪನ ಸೈನ್ಯವನ್ನು ಕ್ಯಾಸ್ಟಲ್‌ಫಿಡರ್ಡೊದಲ್ಲಿ ಸೋಲಿಸಿದ. ಅಂಬ್ರಿಯಾ ಪ್ರದೇಶ ಇಟಲಿಯ ವಶವಾಯಿತು. 1861 ಮಾರ್ಚ್ 17ರಂದು ಎರಡನೆಯ ವಿಕ್ಟರ್ ಎಮಾನ್ಯುಯೆಲನನ್ನು ಇಟಲಿಯ ಪ್ರಭುವೆಂದು ಘೋಷಿಸಲಾಯಿತು.

ಇಟಲಿಗೆ ರೋಮ್‌ನಗರ ರಾಜಧಾನಿಯಾಗಬೇಕೆಂಬುದೂ ಯುದ್ಧವಿಲ್ಲದೆ ಅದನ್ನು ವಶಪಡಿಸಿಕೊಳ್ಳಬೇಕೆಂಬುದೂ ಕಾವೂರನ ಆಶಯವಾಗಿತ್ತು. ಆದರೆ ಅದನ್ನು ಪೂರ್ಣಗೊಳಿಸುವ ಮೊದಲೇ 1861 ಜೂನ್ 6ರಂದು, ತನ್ನ ಐವತ್ತೊಂದನೆಯ ವಯಸ್ಸಿನಲ್ಲಿ ಮರಣ ಹೊಂದಿದ. 1870ರಲ್ಲಿ ರೋಮ್ ಇಟಲಿಯ ರಾಜಧಾನಿಯಾಯಿತು. ಇದಕ್ಕೆ ನಾಲ್ಕು ವರ್ಷಗಳ ಮೊದಲು ವೆನೀಷಿಯವನ್ನು ಆಸ್ಟ್ರಿಯದ ಆಳ್ವಿಕೆಯಿಂದ ವಿಮೋಚನೆಗೊಳಿಸಲಾಗಿತ್ತು. ಇಟಲಿಯ ಸ್ವಾತಂತ್ರ್ಯ ಮತ್ತು ಏಕೀಕರಣದ ಶಿಲ್ಪಿಯೆಂದು ಕಾವೂರನ ಹೆಸರು ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ. (ಎ.ವಿ.ವಿ.; ಎಚ್.ಆರ್.ಡಿ.)

**ಕಾವೇರಿಗೆಂಡೆ :** ಒಂದು ಮಧ್ಯಗಾತ್ರದ ಗೆಂಡೆ ಜಾತಿಯ ಮೀನು (ಕಾರ್ಪ್). ಕಾವೇರಿನದಿಯಲ್ಲಿ ಸಿಕ್ಕುವ ಸ್ಥಳೀಯ ಜಾತಿಯ ಮೀನಾದ್ದರಿಂದ ಇದಕ್ಕೆ ಈ ಹೆಸರಿದೆ. ಕೃಷ್ಣರಾಜಸಾಗರದಲ್ಲಿ ಸಾಕಿ ಬೆಳೆಸುವ ಮೀನು ಜಾತಿಗಳಲ್ಲಿ ಅತಿ ಮುಖ್ಯವಾದುದು. ಇದು ಕರ್ನಾಟಕ ರಾಜ್ಯದ ಬೇರೆ ನದಿಗಳಲ್ಲಿ ದೊರಕುವುದಿಲ್ಲ. ಇದರ ವೈಜ್ಞಾನಿಕ ನಾಮ ಬಾರ್ಬಸ್ ಡೂಬಿಯಸ್. ಇದಕ್ಕೆ ಮೊನಚಾದ ತಲೆ, ಕಿರಿದಾದ ಮೂತಿ ಅಥವಾ ವಸಡಿದೆ. ಬೆನ್ನಿನ ಈಜುರೆಕ್ಕೆಯಲ್ಲಿ ಅತಿದಪ್ಪವಾದ ಮುಳ್ಳು (ರೇ) ಇದೆ. ದೇಹದ ಬಣ್ಣ ಮತ್ತು ಮೇಲೆ ನಮೂದಿಸಿದ ಗುಣಗಳಿಂದ ತನ್ನ ವರ್ಗದ ಬೇರೆ ಮೀನುಗಳಿಂದ ಭಿನ್ನವಾಗಿದೆ. ಪೂರ್ಣ ಬೆಳೆದ ಮೀನು ಸು. 2' ಉದ್ದವಿರುತ್ತದೆ. ತೂಕ 4–5 ಕೆಜಿ ಇರುವುದುಂಟು.

ಈ ಮೀನು ಹಿಂಗಾರು ಮಳೆಯ ಕಾಲದಲ್ಲಿ ನದಿಗಳಲ್ಲಿ ವಂಶಾಭಿವೃದ್ಧಿ ಮಾಡುತ್ತದೆ. ಜನವರಿ ಮತ್ತು ಫೆಬ್ರವರಿಗಳಲ್ಲಿ ಸಣ್ಣ ಮರಿಗಳನ್ನು ಸಂಗ್ರಹಿಸಬಹುದು. ಚಿಕ್ಕ ಮರಿಗಳಿಗೆ ಅತಿ ಸೂಕ್ಷ್ಮಪ್ರಾಣಿಗಳು ಮತ್ತು ನೀರಿನ ಚಿಗಟಗಳು ಮುಖ್ಯ ಆಹಾರ. ಬೆರಳು ಗಾತ್ರಕ್ಕೆ ಬೆಳೆದಾಗ ನೊಣದ ಜಾತಿಗೆ ಸೇರಿದ ಕೀಟಗಳ ಡಿಂಭ, ನಾರುವಸ್ತು ಮತ್ತು ಮಣ್ಣನ್ನು ತಿನ್ನುತ್ತವೆ. ದೊಡ್ಡವಾದಾಗ ನೀರಿನಲ್ಲಿರುವ ಪಾಚಿಯೇ ಆಹಾರ. ಮರಿಗಳನ್ನು ಕೆರೆಗಳಲ್ಲೂ ಬೆಳೆಸಬಹುದು. ಕಾವೇರಿಗೆಂಡೆ ಉತ್ತಮವಾದ ಆಹಾರ ಮೀನೆಂದು ಹೆಸರಾಗಿದೆ. (ಬಿ.ಎನ್.)

**ಕಾವೇರಿನದಿ :** ಭಾರತದ ಪರ್ಯಾಯದ್ವೀಪೀಯ ಪ್ರದೇಶದ ಮುಖ್ಯ ನದಿಗಳಲ್ಲೊಂದು. ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯಲ್ಲಿ ಹುಟ್ಟಿ ತಮಿಳುನಾಡಿನಲ್ಲಿ ಹರಿದು ಬಂಗಾಲಕೊಲ್ಲಿ ಸೇರುತ್ತದೆ. ಉಗಮಸ್ಥಾನದಿಂದ ಸಂಗಮದವರೆಗೆ ಇದರ ಉದ್ದ 760 ಕಿಮೀ.

ಹಿಂದೂ ಪುರಾಣೋಕ್ತವಾದ ಏಳು ಪವಿತ್ರ ನದಿಗಳಲ್ಲಿ ಕಾವೇರಿಯೂ ಒಂದು. ದಕ್ಷಿಣ ಗಂಗಾ ಎಂದು ಇದರ ಪ್ರತೀತಿ. ತನ್ನಲ್ಲಿ ಮೀಯುವ ಅಸಂಖ್ಯಾತ ಯಾತ್ರಿಕರಿಂದ ಬಂದ ಪಾಪದ ಪರಿಹಾರಾರ್ಥವಾಗಿ ಗಂಗೆಯೇ ವರ್ಷಕ್ಕೊಮ್ಮೆ (ತುಲಾಸಂಕ್ರಮಣದಂದು) ಅಂತರ್ಗತಳಾಗಿ ಕಾವೇರಿಯ ಉಗಮಸ್ಥಾನದಲ್ಲಿ ಮೀಯುತ್ತಾಳೆಂಬುದು ಆ ಸುತ್ತಿನ ಜನರ ನಂಬಿಕೆ. ಕಾವೇರಿ ನದಿ ಹರಿಯುವ ಪ್ರದೇಶದ ಜನಕ್ಕೆ ಅದರಿಂದಾಗಿರುವ ಉಪಕಾರ ಅಪಾರ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಕೃಷಿ ಕೈಗಾರಿಕಾಭಿವೃದ್ಧಿಗೆ ಇದು ಬಹಳಮಟ್ಟಿಗೆ ಕಾರಣವಾಗಿದೆ. ಕಾವೇರಿ ಹರಿಯುವ ನಾಡು ಪವಿತ್ರಭೂಮಿಯೆಂದು ಪರಿಗಣಿತವಾಗಿರುವುದಕ್ಕೆ ತಲತಲಾಂತರದಿಂದ ಅದರಿಂದ ಲಭ್ಯವಾಗುತ್ತಿರುವ ಉಪಕಾರ ಮುಖ್ಯ ಕಾರಣ.

**ಉಗಮ, ಹರಿವು :** ಕೊಡಗು ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಗಳ ಬ್ರಹ್ಮಗಿರಿಯಲ್ಲಿ (ಉ. ಅ25º ಪೂ.ರೇ. 75º 34') (1347.5 ಮೀ.) ಕಾವೇರಿ ಉಗಮಿಸುತ್ತದೆ. ಈ ಸ್ಥಳಕ್ಕೆ ತಲಕಾವೇರಿಯೆಂದು ಹೆಸರು. ಗಿರಿಯ ನೆತ್ತಿಯ ಮೇಲೆ ಅರಬ್ಬೀ ಸಮುದ್ರಕ್ಕೆ ಹತ್ತಿರದಲ್ಲಿಯೇ ಹುಟ್ಟುವ ಈ ನದಿ ಅಡ್ಡ ಬಂದ ಪರ್ವತವನ್ನು ದಾಟಿ ಪೂರ್ವಾಭಿಮುಖವಾಗಿ ಹರಿಯುವುದು ಒಂದು ಸ್ವಾರಸ್ಯ. ಪಶ್ಚಿಮದತ್ತ ಜಾರಿದ್ದರೆ ಅದರ ನೀರು ನೆಟ್ಟಗೆ ಅರಬ್ಬೀ ಕಡಲನ್ನು

ಸೇರುತ್ತಿತ್ತು. ಪೂರ್ವದಲ್ಲಿ ಅದು ಈಗ ಹರಿಯುತ್ತಿರುವ ಪ್ರದೇಶ ಆಗ ಬಹುತೇಕ ಬರಡಾಗುತ್ತಿತ್ತು. ಘಟ್ಟದ ನೆತ್ತಿಗೆರೆಯ ಪಶ್ಚಿಮಕ್ಕಿರುವ ಪ್ರದೇಶದ ಒಂದು ಭಾಗದ ನೀರನ್ನೂ ಕಾವೇರಿ ಕೂಡಿಸಿಕೊಳ್ಳುತ್ತದೆ. ಜೂನ್–ಸೆಪ್ಟೆಂಬರಿನವರೆಗೆ ಕೊಡಗಿನಲ್ಲಿ ಸಮೃದ್ಧಿಯಾಗಿ ಬೀಳುವ ಮಳೆಯಿಂದಾಗಿ ಆ ಕಾಲದಲ್ಲಿ ಕಾವೇರಿ ತುಂಬಿ ಹರಿಯುತ್ತದೆ. ಘಟ್ಟದ ಬದಿಯ ಮೈದಾನಕ್ಕೂ ತಮಿಳುನಾಡಿನ ಬಯಲು ನೆಲಕ್ಕೂ ನೀರುಣಿಸುತ್ತದೆ.

ಉಗಮಸ್ಥಾನದಿಂದ ಸಿದ್ದಾಪುರದವರೆಗೆ ಆಗ್ನೇಯಾಭಿಮುಖವಾಗಿ ಹರಿಯುತ್ತ ಅಲ್ಲಿಂದ ಈಶಾನ್ಯದಿಕ್ಕಿನಲ್ಲಿ ಹರಿಯುವ ಕಾವೇರಿ, ಕೊಡಗಿನ ಅನೇಕ ಉಪನದಿಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಹುಟ್ಟುವೆಡೆಯಿಂದ 5 ಕಿಮೀ ಕೆಳಕ್ಕೆ ಭಾಗಮಂಡಲದಲ್ಲಿ ಕಾವೇರಿಯನ್ನು ಕೂಡಿಕೊಳ್ಳುವ ನದಿಯ ಹೆಸರು ಕನ್ನಿಕ. ಕೊಡಗಿನಲ್ಲಿ ದಕ್ಷಿಣ ಕಡೆಯಿಂದ ಕಾವೇರಿಗೆ ಬಂದು ಸೇರುವವು ಕಕ್ಕಬೆ ಹೊಳೆ, ಕಾಡನೂರು ಹೊಳೆ ಮತ್ತು ಸಮ್ಮೆ ಹೊಳೆ. ಮಡಿಕೇರಿ ಶ್ರೇಣಿಯ ದಕ್ಷಿಣದ ಜಲಾನಯನ ಪ್ರದೇಶದಿಂದ ಹರಿದುಬರುವ ಮುತ್ತಾರುಮುಡಿ ಹೊಳೆ ಕಾವೇರಿಯ ಉತ್ತರ ಪಾರ್ಶ್ವದಲ್ಲಿ ಅದನ್ನು ಸೇರಿಕೊಳ್ಳುತ್ತದೆ. ಈ ಭಾಗದಲ್ಲಿ ಕಾವೇರಿಯನ್ನು ಕೂಡಿಕೊಳ್ಳುವ ಇನ್ನೊಂದು ನದಿ ಚಿಕ್ಕ ಹೊಳೆ. ಕುಶಾಲನಗರಕ್ಕೆ ಉತ್ತರದಲ್ಲಿ ಕಾವೇರಿಯಲ್ಲಿ ಸಂಗಮಿಸುವ ಮುಖ್ಯ ನದಿಯೆಂದರೆ ಹಟ್ಟಿ ಅಥವಾ ಹಾರಂಗಿ. ಕಕ್ಕೆಹೊಳೆ, ಜೇರನಹೊಳೆ, ಹಟ್ಟಿಹೊಳೆ ಇವು ಹಾರಂಗಿಯನ್ನು ಸೇರುವ ಹೊಳೆಗಳು.

ಹುಟ್ಟುವೆಡೆಯಿಂದ ಘಟ್ಟದ ಇಳಿಜಾರಿನಲ್ಲಿ ವೇಗವಾಗಿ ಹರಿಯುವ ಕಾವೇರಿ ಕೇವಲ 8 ಕಿಮೀ ಸಾಗುವ ವೇಳೆಗೆ 450 ಮೀನಷ್ಟು ಔನ್ನತ್ಯವನ್ನು ಕಳೆದುಕೊಂಡಿರುತ್ತದೆ. ಭಾಗಮಂಡಲದಿಂದಲೇ ಅದಕ್ಕೆ ಪ್ರೌಢನದಿಯ ಲಕ್ಷಣಗಳೆಲ್ಲ ಪ್ರಾಪ್ತವಾಗಿರುತ್ತವೆ. ಅಡ್ಡಬರುವ ಬಂಡೆಗಳಲ್ಲಿ ಯಾವುದೂ ಅಭೇದ್ಯವಾದ ಅಡ್ಡಿಯಾಗಿ ಪರಿಣಮಿಸಿಲ್ಲ. ಪ್ರಾಚೀನ ನದಿಯ ಚಿಹ್ನೆಗಳೆಲ್ಲ ಕಾವೇರಿಗೂ ಉಂಟು. ಇದು ಹರಿಯುವ ಪಾತ್ರದ ಮೇಲ್ಮೈಗೆ ಈ ನದಿಯಷ್ಟು ವಯಸ್ಸಾಗಿಲ್ಲ. ಈಚೆಗೆ ಸಂಭವಿಸಿದ ಭೂ ಉತ್ಕರ್ಷದ ಪರಿಣಾಮವದು.

ಹಾರಂಗಿಯೊಡಗೂಡಿ ಮೈಸೂರು–ಕೊಡಗು ಜಿಲ್ಲೆಗಳ ಗಡಿಗುಂಟ ಸಾಗಿದ ತರುವಾಯ ಇದು ಹಾಸನ ಜಿಲ್ಲೆಯ ದಕ್ಷಿಣಾಗ್ರದಲ್ಲಿ ರಾಮನಾಥಪುರದ ಬಳಿ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಅಲ್ಲಿಂದಲೇ ಇದಕ್ಕೆ ಮೈಸೂರು ಜಿಲ್ಲೆಯತ್ತ ಗಮನ. ಅನತಿದೂರದಲ್ಲೇ ಸಾಲಿಗ್ರಾಮದ ಬಳಿಯ ಚುಂಚನಕಟ್ಟೆಯಲ್ಲಿ ಜಲಪಾತವಾಗಿ ಪರಿಣಮಿಸಿ, ವೇಗವನ್ನಿಷ್ಟು ಕಡಿಮೆಗೊಳಿಸಿಕೊಂಡು, ಕೃಷ್ಣರಾಜನಗರದ ಮಾರ್ಗವಾಗಿ ಮುಂದೆ ಸಾಗುವ ಕಾವೇರಿಯನ್ನು ಕನ್ನಂಬಾಡಿಯ ಬಳಿಯಲ್ಲಿ ಸಂಗಮಿಸುವ ಉಪನದಿಗಳು ಹೇಮಾವತಿ ಮತ್ತು ಲಕ್ಷ್ಮಣತೀರ್ಥ, ಇವೆರಡೂ ಅನುಕ್ರಮವಾಗಿ ಕಾವೇರಿಯ ಉತ್ತರದಕ್ಷಿಣ ಪ್ರದೇಶಗಳ ನೀರನ್ನು ಕೂಡಿಸಿಕೊಂಡು, ಮೊದಲನೆಯದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟಿ ಹಾಸನ ಜಿಲ್ಲೆಯಲ್ಲೂ ಎರಡನೆಯದು ಕೊಡಗು ಜಿಲ್ಲೆಯಲ್ಲಿ ಹುಟ್ಟಿ ಮೈಸೂರು ಜಿಲ್ಲೆಯಲ್ಲೂ ಹರಿದುಬರುತ್ತವೆ.

ಕನ್ನಂಬಾಡಿಯ ಬಳಿಯಲ್ಲಿ ಮಂಡ್ಯ ಜಿಲ್ಲೆ ಸೇರುವ ಕಾವೇರಿ ಆ ಜಿಲ್ಲೆಯ ದಕ್ಷಿಣಾಗ್ರದಲ್ಲೇ ಹರಿದು, ತನ್ನ ವೇಗವನ್ನು ಇನ್ನೂ ತಗ್ಗಿಸಿಕೊಂಡು, ಶ್ರೀರಂಗಪಟ್ಟಣದಲ್ಲಿ ಕವಲೊಡೆದು ಅದನ್ನೊಂದು ದ್ವೀಪವಾಗಿ ಪರಿವರ್ತಿಸಿ, ಮತ್ತೆ ಮೈಸೂರು ಜಿಲ್ಲೆಯ ಉತ್ತರದಂಚಿನಲ್ಲಿ ಸಾಗುತ್ತದೆ. ಬನ್ನೂರು, ಸೋಸಲೆಗಳನ್ನು ದಾಟಿದ ಮೇಲೆ ಸಿಕ್ಕುವುದು ತಿರುಮಕೂಡಲು ನರಸೀಪುರ. ಮೈಸೂರು ಜಿಲ್ಲೆಯ ದಕ್ಷಿಣದ ಕಡೆಯಿಂದ ಹರಿದು ಬರುವ ಕಪಿನಿ ನದಿ ಕಾವೇರಿಯನ್ನು ಸೇರುವುದು ಈ ಎಡೆಯಲ್ಲಿ.

ಮಂಡ್ಯ–ಮೈಸೂರು ಜಿಲ್ಲೆಗಳ ಗಡಿ ಮುಟ್ಟಿ ದಕ್ಷಿಣಕ್ಕೆ ತಿರುಗಿ ತಲಕಾಡನ್ನು ಎಡಕ್ಕೆ ಬಿಟ್ಟು ಮತ್ತೆ ಪೂರ್ವದತ್ತ ನೋಟ ಹರಿಯಿಸುವ ಕಾವೇರಿಯ ಈ ವರ್ತನೆಯಿಂದಾಗಿ ತಲಕಾಡಿನ ಸುತ್ತೆಲ್ಲ ಮರಳು ಹಾಯ್ದಿದೆ. ಪಾತ್ರದುದ್ದಕ್ಕೂ ತುಂಬಿ ತಂದ ಮರಳನ್ನೆಲ್ಲ ವಿಸರ್ಜಿಸಲು ಕಾವೇರಿಗೆ ಈ ತಿರುವು ಅತ್ಯಂತ ಅನುಕೂಲಕರ. ಬಲಗಡೆಯಿಂದ ಹರಿದು ಬರುವ ಸುವರ್ಣಾವತಿ ನದಿ ಸಂಗಮಿಸುವುದು ತಲಕಾಡಿನ ಬಳಿಯಲ್ಲೇ.

ಮತ್ತೆ ಕಾವೇರಿಯ ಗತಿ ಬದಲಾಗುತ್ತದೆ. ಉತ್ತರಾಭಿಮುಖವಾಗಿ ಹರಿದು, ಮಂಡ್ಯ ಜಿಲ್ಲೆಯ ಗಡಿಗೆ ಸೋಕಿ ನಡೆದು, ಶಿವಸಮುದ್ರ ಬಳಿಯಲ್ಲಿ ಕವಲೊಡೆದು, ಗಗನಚುಕ್ಕಿ ಭರಚುಕ್ಕಿಗಳಾಗಿ ಧುಮುಕಿ, ಮತ್ತೆ ಒಂದಾಗಿ ಸಾಗುತ್ತದೆ. ಇಲ್ಲಿ ಸಂಭವಿಸಿರುವುದು ಕಾವೇರಿಯ ಎರಡನೆಯ ದೊಡ್ಡ ದ್ವೀಪ.

ಕೇವಲ 80 ಕಿಮೀ ದೂರದಲ್ಲಿ 800 ಮೀನಷ್ಟು ಕೆಳಕ್ಕಿಳಿಯುವ ಕಾವೇರಿ ನದಿ ಅನಂತರ ಬೆಂಗಳೂರು ಜಿಲ್ಲೆಯ ದಕ್ಷಿಣ ಅಂಚನ್ನು ಸೋಕಿ ಹರಿಯುತ್ತದೆ. ಸಮುದ್ರಮಟ್ಟಕ್ಕಿಂತ ಸು. 750 ಮೀ ಎತ್ತರವಿರುವ ಮೈಸೂರು ಪ್ರಸ್ಥಭೂಮಿಯ ಫಲವತ್ತಾದ ಪ್ರದೇಶದಲ್ಲಿ ಹಾವಿನಂತೆ ಹರಿದು ಅಗಲ ಹೆಚ್ಚಿಸಿಕೊಂಡು ನಿಧಾನವಾಗಿ ಸಾಗಿದ ನದಿಯ ಸ್ವಭಾವವೇ ಶಿವನಸಮುದ್ರದಿಂದಾಚೆಗೆ ವ್ಯತ್ಯಾಸವಾಗುತ್ತದೆ. ಮೈಸೂರಿನ ಪ್ರಸ್ಥಭೂಮಿಯಿಂದ ತಮಿಳುನಾಡಿನ ತಗ್ಗುಬಯಲಿಗೆ ಹರಿಯುವಾಗ ಅದರ ವೇಗ ಅತಿ ಹೆಚ್ಚು. ಅದರ ಪ್ರವಾಹದ ಗಾತ್ರವನ್ನು ಧರಿಸುವಷ್ಟು ವಿಸ್ತಾರವಾದ ಪಾತ್ರವಿಲ್ಲದ್ದರಿಂದ ನದಿ ಅತ್ಯಂತ ರಭಸವಾಗಿ ಹರಿಯುತ್ತದೆ. ಗಟ್ಟಿಬಂಡೆಗಳು ಜೇಡಿಮಣ್ಣಿನ ಹೆಪ್ಪುಗಳಂತೆ ಸವೆದು ಚಪ್ಪಾಗಿವೆ. ಅಲ್ಲಿ ಸಂಭವಿಸಿರುವ 12–75 ಮೀ ಆಳದ ಹಲವಾರು ಗುಂಡಿಗಳು ನದಿಯ ಪ್ರತಾಪಕ್ಕೆ ನಿದರ್ಶನ. ಒಂದೆಡೆಯಲ್ಲಂತೂ ನದಿಯ ಪಾತ್ರ ಬಲು ಕಿರಿದು. ಹಿಂದೆ ಇದನ್ನು ಮೇಕೆ ದಾಟಬಹುದಾಗಿತ್ತಂತೆ. ಈಗ ಅದರ ಅಗಲ ಅಷ್ಟೊಂದು ಕಿರಿದಾಗಿಲ್ಲ. ಮೇಕೆದಾಟು ಎಂಬ ಹೆಸರಿನಿಂದಲೇ ಆ ಸ್ಥಳ ಪ್ರಸಿದ್ಧವಾಗಿದೆ.

ಎತ್ತರ ನೆಲದಿಂದ ತಗ್ಗಿಗೆ ಜಾರುವ ಕಾವೇರಿ ಈ ಎಡೆಯಲ್ಲಿ ಅನೇಕ ಸಣ್ಣಪುಟ್ಟ ಹೊಳೆ ತೊರೆಗಳನ್ನು ಕೂಡಿಸಿಕೊಳ್ಳುತ್ತದೆ. ಇವುಗಳ ಪೈಕಿ ಕಣ್ವ ಮತ್ತು ಅರ್ಕಾವತಿಗಳು ದೊಡ್ಡವು. ಇವು ಬೆಂಗಳೂರು ಜಿಲ್ಲೆಯ ಮೂಲಕ ಹರಿದುಬರುತ್ತವೆ. ಇತರ ಹೊಳೆಗಳ ಪಾತ್ರಗಳನ್ನು ಏರಿಸಿಕೊಂಡು, ಇಕ್ಕಟ್ಟನ್ನು ಆದಷ್ಟು ನಿವಾರಿಸಿಕೊಂಡು ಸಾಗುವ ನದಿಯ ಈ ಪಾತ್ರ ಇತ್ತೀಚಿನದು. ಆದ್ದರಿಂದ ಕ್ರಮಪ್ರಾಪ್ತವಾದ ಹಾದಿ ಏರ್ಪಡಿಸಿಕೊಳ್ಳಲು ನದಿಗೆ ಇನ್ನೂ ಸಾಧ್ಯವಾಗಿಲ್ಲ.

ಕಾವೇರಿಯಿಂದ ಮೈಸೂರಿಗೆ ಆಗಿರುವ ಉಪಕಾರ ಅಷ್ಟಿಷ್ಟಲ್ಲ. ಅದರ ಹರಿವಿನ ಉದ್ದಕ್ಕೂ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ನದಿಯ ಎರಡೂ ದಂಡೆಗಳಲ್ಲಿ ಮೆಟ್ಟಿಲು ಮೆಟ್ಟಿಲಾಗಿ ನೀರಾವರಿಯ ಸೌಲಭ್ಯ ಒದಗಿಸಿರುವ ಕಾಲುವೆಗಳ ಒಟ್ಟು ಉದ್ದ 1,900 ಕಿಮೀ. ಇಲ್ಲಿಯ ಅಣೆಕಟ್ಟುಗಳಲ್ಲಿ ಕೆಲವು ಅತ್ಯಂತ ಹಳೆಯವು. ಇವುಗಳಲ್ಲಿ ಕೆಲವು 1,000 ವರ್ಷಗಳ ಹಿಂದೆ ಕಟ್ಟಿದವು.

ಕನ್ನಂಬಾಡಿಯ ಬಳಿ ಕಟ್ಟಿರುವ ಕೃಷ್ಣರಾಜಸಾಗರ ಕಟ್ಟೆ ಈಚಿನದು. ನದಿಯ ಪಾತ್ರದಿಂದ 38 ಮೀ ಎತ್ತರವಿರುವ ಕಟ್ಟೆಯ ಉದ್ದ 1,996ಮೀ. ಜಲಾಶಯದಲ್ಲಿ ಶೇಖರಿಸಬಹುದಾದ ನೀರಿನ ಪರಿಮಾಣ 1,17,50,00,000 ಘನ ಮೀಟರುಗಳು. ಶಿವಸಮುದ್ರದ ಬಳಿಯ ವಿದ್ಯುತ್ಪಾದನ ಕೇಂದ್ರಕ್ಕೆ ವರ್ಷವಿಡೀ ನೀರು ಒದಗಿಸುವುದೂ ಮೈಸೂರು ಮಂಡ್ಯಗಳಲ್ಲಿ ಹೆಚ್ಚಿನ ನೀರಾವರಿ ಸೌಲಭ್ಯ ಕಲ್ಪಿಸುವುದೂ ಕೃಷ್ಣರಾಜಸಾಗರ ಕಟ್ಟೆಯ ನಿರ್ಮಾಣದ ಉದ್ದೇಶ.

ಶಿವಸಮುದ್ರದ ಬಳಿಯಲ್ಲಿ ನಿರ್ಮಿಸಲಾಗಿರುವ ವಿದ್ಯುತ್ಪಾದನ ಕೇಂದ್ರ (1902) ಇಡೀ ಏಷ್ಯದಲ್ಲೇ ಅತ್ಯಂತ ಹಳೆಯ ದೊಡ್ಡ ವಿದ್ಯುತ್‌ಕೇಂದ್ರ.

ಕರ್ನಾಟಕದ ಆಗ್ನೇಯದ ಅಂಚಿನ ಉದ್ದಕ್ಕೂ ಹರಿದು, ಹೊಗೇನಕಲ್ಲಿನ ಬಳಿ ಮತ್ತೆ ಧುಮುಕಿ, ಕೊನೆಗೆ ಕರ್ನಾಟಕವನ್ನು ಬೀಳ್ಕೊಂಡು ತಮಿಳುನಾಡಿಗೆ ತಿರುಗುವ ವೇಳೆಗೆ ನದಿಯ ದಿಕ್ಕು ಎರಡು ಬಾರಿ ಬದಲಾಗುತ್ತದೆ. ಹೊಗೇನಕಲ್ಲಿನ ಬಳಿ ದಕ್ಷಿಣಾಭಿಮುಖ ಮತ್ತು ಬೋಡಮಲ್ಲೈ ಬೆಟ್ಟದ ಬಳಿ ಪೂರ್ವಾಭಿಮುಖ. ಸ್ವಲ್ಪ ದೂರ ಹೀಗೆ ಸಾಗುವಲ್ಲಿ ಪುನಃ ಅದು ದಕ್ಷಿಣಕ್ಕೆ ಬಾಗುತ್ತದೆ.

ಪಾಲಾರಿನ ನೀರನ್ನೂ ಒಳಗೊಂಡು ಮುಂದುವರಿಯುವ ಕಾವೇರಿಗೆ ಮೆಟ್ಟೂರಿನ ಬಳಿಯಲ್ಲಿ ಒಂದು ಎತ್ತರದ ಕಟ್ಟೆ ಕಟ್ಟಲಾಗಿದೆ. 1606 ಮೀ ಉದ್ದ 53 ಮೀ ಎತ್ತರದ ಕಟ್ಟೆಯಿದು. ವಿದ್ಯುತ್ಪಾದನೆಯೂ ನೀರಾವರಿ ಸೌಲಭ್ಯ ಕಲ್ಪನೆಯೂ ಇದರ ಉದ್ದೇಶ. ಮೆಟ್ಟೂರು ಜಲಾಶಯದಿಂದಾಗಿ ತಂಜಾವೂರಿನ ಕಾವೇರಿಬಯಲಿಗೆ ನೀರು ಸರಬರಾಜಾಗುವ ಭರವಸೆ ಏರ್ಪಟ್ಟಿದೆ.

ಮೆಟ್ಟೂರಿನಿಂದ ಮುಂದೆ ಭವಾನಿಯವರೆಗೆ ದಕ್ಷಿಣ ದಿಕ್ಕಿನಲ್ಲಿ ಹರಿಯುವ ಕಾವೇರಿಗೆ ಆ ಎಡೆಯಲ್ಲಿ ಪಶ್ಚಿಮದಿಂದ ಹರಿದು ಬರುವ ಭವಾನಿ ನದಿ ಸಂಗಮಿಸುತ್ತದೆ. ಮತ್ತೆ ಪೂರ್ವಾಭಿಮುಖವಾಗಿ ಹರಿಯುವ ಕಾವೇರಿಯ ಚರ್ಯೆಯೇ ಮುಂದೆ ಬದಲಾಗುತ್ತದೆ. ಸಮುದ್ರ ಹತ್ತಿರವಾದಂತೆಲ್ಲ ಅದರದು ಗಂಭೀರ ಗಮನ, ಪಾತ್ರವೂ ವಿಸ್ತಾರ. ಅದರ ದಡದುದ್ದಕ್ಕೂ ಹಲವಾರು ಪಟ್ಟಣಗಳು ಮಾಲೆಯಾಗಿ ಹಬ್ಬಿವೆ. ಕೊಯಮತ್ತೂರಿನ ಆಲಂಬಾಡಿಯ ಬಳಿ ನದಿಯ ಪ್ರವಾಹದ ನಡುವೆ ಅಡ್ಡ ಬರುವ ಬಂಡೆಗೆ ತಾಕಿ ತುಂತುರು ಹನಿಗಳನ್ನು ನಿರಂತರವಾಗಿ ಚಿಮ್ಮಿಸುತ್ತದೆ. ತಿರುಚಿರಾಪಳ್ಳಿಯ ಪ್ರಸಿದ್ಧವಾದ ಬಂಡೆಯನ್ನು ದಾಟಿದ ಮೇಲೆ ಕಾವೇರಿ ಮತ್ತೆ ಕವಲೊಡೆಯುತ್ತದೆ. ಇದರಿಂದ ಸಂಭವಿಸಿರುವ ದ್ವೀಪವೇ ಶ್ರೀರಂಗಂ. ಎರಡು ಕವಲುಗಳೂ ತಿರುಚಿರಾಪಳ್ಳಿಯಿಂದ 16 ಕಿಮೀ ದೂರದಲ್ಲಿ ಮತ್ತೆ ಸೇರುತ್ತವೆ. ಮಹಾ ಅಣೆಕಟ್ಟೆಯ (ಗ್ರ್ಯಾಂಡ್ ಅಣಿಕಟ್) ನಿರ್ಮಾಣವಾಗಿರುವುದು ಈ ಸ್ಥಳದಲ್ಲಿ. ತಂಜಾವೂರು ಜಿಲ್ಲೆಯ ಮಹಾ ನೀರಾವರಿ ವ್ಯವಸ್ಥೆಗೆ ಇದೇ ಮೂಲ. ಇಲ್ಲಿಯದು ಭಾರತದಲ್ಲೇ ಅತ್ಯಂತ ಪ್ರಾಚೀನ ನೀರಾವರಿ ವ್ಯವಸ್ಥೆ (2ನೆಯ ಶತಮಾನ). ಕುಂಭಕೋಣಂ, ಮಯೂರಂ, ಶಿರ್ಕಾ ಮತ್ತು ನನ್ನಿಲಂ ತಾಲ್ಲೂಕುಗಳಿಗೂ ತಂಜಾವೂರು, ಮನ್ನಾರ್‌ಗುಡಿ, ತಿರುತ್ತುರೈಪುಂಡಿ ಮತ್ತು ನಾಗಪಟ್ಟಣಂ ತಾಲ್ಲೂಕುಗಳ ಭಾಗಗಳಿಗೂ ಕಾವೇರಿಯ ನೀರಾವರಿ ಸೌಲಭ್ಯ ಒದಗಿದೆ. ತಮಿಳುನಾಡಿನ ಬತ್ತದ ಕಣಜದ ಪ್ರದೇಶವಿದು.

ಮುಖಜಭೂಮಿಯ ಪ್ರದೇಶದಲ್ಲಿ ಕಾವೇರಿ ಎರಡು ಮುಖ್ಯ ಕವಲುಗಳಾಗಿ ಒಡೆಯುತ್ತದೆ. ಉತ್ತರದ್ದು ಕೊಲ್ಲಡಂ, ದಕ್ಷಿಣದ ಕವಲು ಕಾವೇರಿಯಂದೇ ಕರೆಸಿಕೊಳ್ಳುತ್ತದೆ. ತಂಜಾವೂರಿನ ಮುಖಜಭೂಮಿ ಪ್ರದೇಶದಲ್ಲಿ ನೀರಾವರಿಗೆ ಬಳಸಿಕೊಂಡು ಉಳಿದ ನೀರನ್ನು ಉತ್ತರದ ಶಾಖೆಯಾದ ಕೊಲ್ಲಡಂಗೆ ಬಿಡಲಾಗುತ್ತದೆ. ಈಶಾನ್ಯಾಭಿಮುಖವಾಗಿ

ಹರಿಯುವ ಈ ಕವಲು ಪೋರ್ಟೋನೋವೋ ಬಳಿ ಕಡಲು ಸೇರುತ್ತದೆ. ಕಾವೇರಿಯ ಎರಡು ಶಾಖೆಗಳು ಸಮುದ್ರದಲ್ಲಿ ಸಂಗಮವಾಗುವ ಮುನ್ನ ಹಲವಾರು ಕವಲುಗಳಾಗಿ



ಒಡೆದು ನೀರಾವರಿಯ ಬಲೆಯನ್ನೇ ಹೆಣೆದಿವೆ. ಇದರ ನೀರಿನ ಬಹುಭಾಗವನ್ನು ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಬೇರಾವ ನದಿಯನ್ನೂ ಇಷ್ಟೊಂದು ಸಮರ್ಪಕವಾಗಿ ನೀರಾವರಿಗೆ ಉಪಯೋಗಿಸಿಕೊಂಡಿಲ್ಲವೆಂದು ಹೇಳಲಾಗಿದೆ.

ಕೊಡಗಿನ ಪ್ರದೇಶದಲ್ಲಿ ಸಣ್ಣ ತೊರೆಯಾಗಿ ಉಗಮಹೊಂದಿ, ತಾರುಣ್ಯದ

ಮೆಟ್ಟೂರು ಅಣೆಕಟ್ಟು

ಆರಂಭದಿಂದಲೇ ಸುತ್ತಣ ಸೀಮೆಯ ಸಂಪತ್ತಿಗೆ ಕಾರಣವಾಗಿ, ಶಿವನಸಮುದ್ರದಲ್ಲಿ ಪರಿಧಿಯನ್ನು ಲಂಘಿಸುವಾಗ ವಿದ್ಯುತ್ತನ್ನು ಚಿಮ್ಮಿಸಿ, ತಮಿಳುನಾಡಿನಲ್ಲಿ ತುಂಬು ಚೆಲುವು ತಳೆದು ಸಮುದ್ರವನ್ನು ಸಂಗಮಿಸಿದ ಕಾವೇರಿಯ ಉಪಯುಕ್ತತೆಯಿಂದಾಗಿ ಅದನ್ನು ಜನರು ಪವಿತ್ರನದಿಯೆಂದು ಪೂಜಿಸುತ್ತಾರೆ.

**ಪುರಾಣಗಳಲ್ಲಿ** : ಕಾವೇರಿ ನದಿಯ ಉಗಮದ ಕತೆ ಅಗ್ನಿಪುರಾಣದಲ್ಲಿ ಬಂದಿದೆ. ಪೂರ್ವಕಾಲದಲ್ಲಿ ಕವೇರನೆಂಬ ಒಬ್ಬ ರಾಜ ಇದ್ದ. ಆತ ಬ್ರಹ್ಮನನ್ನು ಕುರಿತು ಕಠಿಣ ತಪಸ್ಸನ್ನಾಚರಿಸಿದ. ಬ್ರಹ್ಮ ಅವನಿಗೆ ಪ್ರತ್ಯಕ್ಷನಾಗಿ, ಅವನಿಗೆ ಮೋಕ್ಷವುಂಟಾಗಬೇಕಾದರೆ ಇನ್ನು ಸ್ವಲ್ಪ ಕಾಲ ಕಾಯಬೇಕೆಂದೂ ಅಷ್ಟರವರೆಗೆ ಆತ ಬ್ರಹ್ಮನ ಮಗಳಾದ ವಿಷ್ಣುಮಾಯೆಯನ್ನು ತನ್ನ ಮಗಳಾಗಿಟ್ಟುಕೊಂಡು ಸಲಹಬೇಕೆಂದೂ ಹೇಳಿದ. ಬ್ರಹ್ಮನ ಇಚ್ಛೆಯಂತೆ ಕವೇರ ರಾಜ ವಿಷ್ಣುಮಾಯೆಯನ್ನು ತನ್ನ ಅರಮನೆಯಲ್ಲಿ ಸಾಕಿದ. ವಿಷ್ಣುವಿನ ಅಂಶದವಳಾದ ವಿಷ್ಣುಮಾಯೆ ಬೆಳೆದು ದೊಡ್ಡವಳಾದ ಮೇಲೆ ತಪಸ್ಸು ಮಾಡಲು ಹಿಮಾಲಯ ಪರ್ವತಕ್ಕೆ ಹೋದಳು. ಆಗ ಕವೇರ ರಾಜನಿಗೆ ಮೋಕ್ಷ ಲಭ್ಯವಾಯಿತು. ವಿಷ್ಣುಮಾಯೆಯ ತಪಸ್ಸಿಗೆ ವಿಷ್ಣು ಸಂಪ್ರೀತನಾಗಿ ಅವಳಿಗೆ ಪ್ರತ್ಯಕ್ಷನಾದ. ಅವಳಿಂದ ಜನಕ್ಕೆ ಉಪಯೋಗವಾಗಬೇಕೆಂಬ ಉದ್ದೇಶದಿಂದ ಅವಳು ಎರಡು ರೂಪಗಳನ್ನು ತಳೆಯುವಂತೆ– ಒಂದು ರೂಪದಲ್ಲಿ ಅವಳು ಸಹ್ಯ ಪರ್ವತದಲ್ಲಿ ನದಿಯಾಗಿ ಹುಟ್ಟಿ ಹರಿಯುವಂತೆ ಮತ್ತು ಇನ್ನೊಂದು ರೂಪದಲ್ಲಿ ಲೋಪಾಮುದ್ರೆಯೆಂಬ ಹೆಸರು ತಳೆದು ಅಗಸ್ತ್ಯ ಋಷಿಯ ಪತ್ನಿಯಾಗುವಂತೆ–ವಿಷ್ಣು ಅವಳಿಗೆ ವರ ನೀಡಿದ. ವಿಷ್ಣುಮಾಯೆಗೆ ವಿಷ್ಣು ವರ ನೀಡಿದ ಸಮಯದಲ್ಲಿ ಅಗಸ್ತ್ಯ ಋಷಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡುತ್ತಿದ್ದ. ಬ್ರಹ್ಮ ಅಗಸ್ತ್ಯನಿಗೆ ಪ್ರತ್ಯಕ್ಷನಾಗಿ, ಲೋಪಾಮುದ್ರೆಯನ್ನು ವಿವಾಹವಾಗುವಂತೆ ಅವನಿಗೆ ಹೇಳಿದ. ಬ್ರಹ್ಮನ ಅಣತಿಯಂತೆ ಅಗಸ್ತ್ಯ ಲೋಪಾಮುದ್ರೆಯ ರೂಪ ತಳೆದಿದ್ದ ವಿಷ್ಣುಮಾಯೆಯಿದ್ದಲ್ಲಿಗೆ ಬಂದು ಆಕೆಯನ್ನು ವಿವಾಹವಾದ.

ತಿರುಚಿರಾಪಳ್ಳಿಯ ಬಳಿ ಕಲ್ಲಣೈಯಲ್ಲಿಯ ಕಾವೇರಿಯ ಪ್ರತಿಮೆ

ಅಗಸ್ತ್ಯ ಲೋಪಾಮುದ್ರೆಯನ್ನು ವಿವಾಹವಾದ ಸ್ವಲ್ಪ ಸಮಯದ ಅನಂತರ ಅವನಿಗೆ ದಕ್ಷಿಣ ಭಾರತದಲ್ಲಿ ನೀರಿನ ಕೊರತೆಯಿದೆಯೆಂದು ತಿಳಿಯಿತು. ಲೋಪಾಮುದ್ರೆ ನೀರಿನ ರೂಪ ತಾಳಿ ತನ್ನ ಕಮಂಡಲದಲ್ಲಿರುಂತೆ ಅಗಸ್ತ್ಯ ಕೇಳಿಕೊಂಡ. ಲೋಪಾಮುದ್ರೆ ಹಾಗೆಯೇ ಮಾಡಿದಳು. ಅಗಸ್ತ್ಯ ಕಮಂಡಲವನ್ನು ಹಿಡಿದುಕೊಂಡು ಸಹ್ಯಪರ್ವತಶ್ರೇಣಿಯ ಬ್ರಹ್ಮಗಿರಿಗೆ ಬಂದ.

ಬ್ರಹ್ಮ ಆ ಗಿರಿಯಲ್ಲಿ ವಿಷ್ಣುವನ್ನು ಕುರಿತು ತಪಸ್ಸು ಮಾಡುತ್ತಿದ್ದುದರಿಂದ ಅದಕ್ಕೆ ಬ್ರಹ್ಮಗಿರಿಯೆಂದು ಹೆಸರುಬಂದಿದೆ. ಈ ಸ್ಥಳದಲ್ಲಿ ವಿಷ್ಣು ಆಮಲಕ ಅಥವಾ ನೆಲ್ಲಿ ಮರದ ರೂಪ ತಳೆದಿದ್ದ. ಆಮಲಕ ಮರದ ರೂಪದಲ್ಲಿದ್ದ ವಿಷ್ಣುವನ್ನು ಪೂಜಿಸಲು ಕೈಲಾಸದಲ್ಲಿ ಹರಿಯುತ್ತಿದ್ದ ವಿರಜಾನದಿಯ ನೀರನ್ನು ಬ್ರಹ್ಮ ತನ್ನ ಶಂಖದಲ್ಲಿ ತಂದು ಅದನ್ನು ಆ ಮರಕ್ಕೆ ಎರೆಯುತ್ತಿದ್ದಾಗ ಅಗಸ್ತ್ಯ ಋಷಿ ಅಲ್ಲಿಗೆ ಬಂದು ತನ್ನ ಕಮಂಡಲವನ್ನು ಒಂದು ದೊಡ್ಡ ಚಪ್ಪಟೆ ಕಲ್ಲಿನ ಮೇಲಿಟ್ಟು ಸ್ನಾನಕ್ಕಾಗಿ ಸ್ವಲ್ಪ ದೂರ ಹೋದ. ಅದೇ ಸಮಯದಲ್ಲಿ ಬಿರುಗಾಳಿ ಬೀಸಿತು. ಕಲ್ಲಿನ ಮೇಲೆ ಇಟ್ಟಿದ್ದ ಕಮಂಡಲ ಮಗುಚಿಕೊಂಡಿತು. ಅದರಲ್ಲಿದ್ದ ನೀರು ಹರಿದು ವಿರಜಾ ನದಿಯ ನೀರನ್ನು ಸೇರಿಕೊಂಡು ಕಾವೇರಿ ತೀರ್ಥಕುಂಡಿಗೆಯಿಂದ ನದಿಯಾಗಿ ಹರಿಯಿತು. ನದಿಯಾಗಿ ಹರಿದ ಲೋಪಾಮುದ್ರೆ ವಿಷ್ಣುಮಾಯೆಯಾಗಿದ್ದಾಗ ಕವೇರ ಅವಳನ್ನು ಸಾಕಿದ್ದರಿಂದ ಈ ನದಿಗೆ ಕಾವೇರಿಯೆಂಬ ಹೆಸರು ಬಂತು.

ಸ್ಕಾಂದಪುರಾಣದಲ್ಲಿ ಕಾವೇರಿ ನದಿಯ ಹುಟ್ಟಿನ ಬಗ್ಗೆ ಎರಡು ಕಥೆಗಳುಂಟು. ಮೊದಲನೆಯ ಕಥೆ ಹೀಗಿದೆ: ಭಾರತದ ಮಧ್ಯದಲ್ಲಿರುವ ವಿಂಧ್ಯಪರ್ವತ ಒಮ್ಮೆ ಸೂರ್ಯನ ಎತ್ತರಕ್ಕೇರಬೇಕೆಂದು ಬಯಸಿ ಬೆಳೆಯುತ್ತ ಸಾಗಿತು; ಸೂರ್ಯನ ಮತ್ತು ನಕ್ಷತ್ರಗಳ ದಾರಿಗೆ ಅಡ್ಡ ಬಂದ. ಅವುಗಳಿಂದ ಬರುವ ಬೆಳಕಿಗೂ ಅಡಚಣೆಯುಂಟಾಯಿತು. ಈ

ಶ್ರೀರಂಗನಾಥ ದೇವಾಲಯ, ಶ್ರೀರಂಗಂ

ಬೆಳವಣಿಗೆಯನ್ನು ತಡೆಹಿಡಿದು ಅವನನ್ನು ತಗ್ಗಿಸಲು ದೇವತೆಗಳು ಅಗಸ್ತ್ಯನ ಸಹಾಯವನ್ನು ಕೋರಿದರು. ಅಗಸ್ತ್ಯ ಒಪ್ಪಿ, ಅದಕ್ಕೆ ಅವಶ್ಯವಿದ್ದ ಆಧ್ಯಾತ್ಮಿಕ ಶಕ್ತಿಯನ್ನು ತನಗೆ ಕೊಡುವಂತೆ ಈಶ್ವರನನ್ನು ಕುರಿತು ತಪಸ್ಸು ಮಾಡಿದ ಈಶ್ವರನ ಅನುಗ್ರಹ ಲಭ್ಯವಾಯಿತು. ಇಷ್ಟಬಂದಲ್ಲಿ ದೇವತಾರ್ಚನೆ ಮಾಡಲು ಅವನೊಡನೆ ನೀರು ಯಾವಾಗಲೂ ಇರುವಂತೆ ವರ ನೀಡಿ, ಅವನ ಕಮಂಡಲದಲ್ಲಿರುವಂತೆ ಕೈಲಾಸಪರ್ವತದಲ್ಲಿ ಹರಿಯುತ್ತಿದ್ದ ಕಾವೇರಿಗೆ ಆಜ್ಞಾಪಿಸಿದ. ಆಗ ಕಾವೇರಿ ನದಿ ಅಗಸ್ತ್ಯನ ಕಮಂಡಲವನ್ನು ಸೇರಿದಳು. ಅಗಸ್ತ್ಯ ಅದನ್ನು ಹಿಡಿದುಕೊಂಡು ಹಿಮಾಲಯ ಪ್ರದೇಶದಿಂದ ಭಾರತಕ್ಕೆ ಹೊರಟು ವಿಂಧ್ಯದ ಹತ್ತಿರ ಬಂದಾಗ ಆ ಪರ್ವತ ಅಗಸ್ತ್ಯನಿಗೆ ಭಕ್ತಿಯಿಂದ ಪೊಡಮಟ್ಟಿತು. ತಾನು ದಕ್ಷಿಣಭಾರತಕ್ಕೆ  ಶಾಂತ ಮನಸ್ಸಿನಿಂದ ಹೋಗಬೇಕಾಗಿರುವುದರಿಂದ ತಾನು ಹಿಂದಕ್ಕೆ ಬರುವವರೆಗೆ ವಿಂಧ್ಯ ಮೇಲಕ್ಕೇಳದೆ ನಮಸ್ಕಾರದ ಭಂಗಿಯಲ್ಲೇ ಇರಬೇಕೆಂದು ಅಗಸ್ತ್ಯ ಹೇಳಿ ದಕ್ಷಿಣಭಾರತಕ್ಕೆ ಹೋದ, ಅನಂತರ ಆತ ಉತ್ತರಭಾರತಕ್ಕೆ ಹಿಂದಿರುಗಲೇ ಇಲ್ಲ. ಈ ಕಾರಣದಿಂದ ವಿಂಧ್ಯ ಪರ್ವತ ಮಲಗಿದ ಸ್ಥಿತಿಯಲ್ಲೇ ಇದೆಯೆಂದು ಪುರಾಣದಲ್ಲಿ ಹೇಳಿದೆ. ಅಗಸ್ತ್ಯ ದಕ್ಷಿಣ ಭಾರತದಲ್ಲಿ ಸಹ್ಯ ಪರ್ವತದ ಬ್ರಹ್ಮಗಿರಿಗೆ ಬಂದು ಅಲ್ಲಿ ತಪಸ್ಸು ಮಾಡುತ್ತಿದ್ದ. ಆ ಸಮಯದಲ್ಲಿ ಸೂರಪದ್ಮನೆಂಬ ಒಬ್ಬ ಅಸುರ ತನ್ನ ತಪಶ್ಶಕ್ತಿಯಿಂದ ಅಲ್ಲಿ ಮಳೆ ಬೀಳುವುದನ್ನು ತಡೆ ಹಿಡಿದಿದ್ದ. ಇದರಿಂದ ಇಂದ್ರನಿಗೆ ಸಂಕಟವಾಯಿತು. ದಕ್ಷಿಣ ದೇಶದಲ್ಲಿ ಯಥೇಚ್ಛವಾಗಿ ನೀರಿರುವಂತೆ ಮಾಡಬೇಕೆಂದು ಗಣಪತಿಯನ್ನು ಪ್ರಾರ್ಥಿಸಿಕೊಂಡ. ಗಣಪತಿ ಕಾಗೆಯ ರೂಪವನ್ನು ತಾಳಿ ಬಂದು ಅಗಸ್ತ್ಯ ತನ್ನ ಪಕ್ಕದಲ್ಲಿ ಕಲ್ಲಿನ ಮೇಲೆ ಇಟ್ಟಿದ್ದ ಕಮಂಡಲವನ್ನು ಮಗುಚಿಹಾಕಿದ. ಅದರಲ್ಲಿದ್ದ ಕಾವೇರಿ ನದಿ ಕೂಡಲೇ ಅಲ್ಲಿಂದ ಹರಿಯತೊಡಗಿತು.

ಸ್ಕಾಂದಪುರಾಣದಲ್ಲಿರುವ ಎರಡನೆಯ ಕಥೆ ಹೀಗಿದೆ : ಮಕ್ಕಳಿಲ್ಲದ ತನಗೆ ಮಕ್ಕಳಾಗಬೇಕೆಂದು ಕವೇರ ಮುನಿ ಬ್ರಹ್ಮಗಿರಿಯಲ್ಲಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದ. ಆಗ ಬ್ರಹ್ಮ ಅವನ ತಪಸ್ಸಿಗೆ ಮೆಚ್ಚಿ ಅವನಿಗೆ ಪ್ರತ್ಯಕ್ಷನಾಗಿ ತನ್ನ ಸಾಕು ಮಗಳಾದ ಲೋಪಾಮುದ್ರೆಯನ್ನು ಅವನಿಗೆ ಕೊಟ್ಟ. ಅಂದಿನಿಂದ ಲೋಪಾಮುದ್ರೆ ಕವೇರನ ಮಗಳಾಗಿ ಕಾವೇರಿಯೆಂಬ ಹೆಸರು ಪಡೆದಳು. ಕಾವೇರಿ ತನ್ನ ಸಾಕು ತಂದೆಗೆ



ಭವಾನಿ–ಕಾವೇರಿ ಸಂಗಮ

ಮೋಕ್ಷವುಂಟಾಗಬೇಕೆಂದು ಇಚ್ಛಿಸಿ ತಾನು ನದಿಯಾಗಿ ಹರಿಯುವಂತೆ ಮತ್ತು ಆಗ ತನ್ನಲ್ಲಿ ಸ್ನಾನ ಮಾಡಿದವರು ತಮ್ಮ ಎಲ್ಲ ಪಾಪಗಳಿಂದ ಮುಕ್ತರಾಗುಂತೆ ವರವನ್ನು ಕೊಡಬೇಕೆಂದು ಬ್ರಹ್ಮಗಿರಿಯಲ್ಲಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದಳು. ಬ್ರಹ್ಮ ಅವಳ ತಪಸ್ಸಿಗೆ ಮೆಚ್ಚಿ ಅವಳು ಕೇಳಿದ ವರವನ್ನು ನೀಡಿದ.

ಅವಳು ಬ್ರಹ್ಮಗಿರಿಯಲ್ಲಿ ತಪಸ್ಸು ಮಾಡುತ್ತಿದ್ದಾಗ ಅಲ್ಲಿಗೆ ಅಗಸ್ತ್ಯ ಋಷಿ ಬಂದ. ಕಾವೇರಿಯ ತಪಸ್ಸು ಮುಗಿದ ಮೇಲೆ ಅವಳನ್ನು ಕಂಡು, ಅವಳು ತನ್ನ ಪತ್ನಿಯಾಗಬೇಕೆಂದು



ತ್ಯಾಗರಾಜರ ಸಮಾಧಿ, ತಿರುವೈಯಾರ್

ಕೇಳಿಕೊಂಡ. ಅವಳಿಗೆ ತಾನು ನದಿಯಾಗಿ ಹರಿದು ಜನರ ಪಾಪಗಳನ್ನು ಪರಿಹರಿಸಬೇಕೆಂಬ ಇಚ್ಛೆ ಪ್ರಬಲವಾಗಿದ್ದರೂ ಅಗಸ್ತ್ಯನ ಕೋರಿಕೆಯನ್ನು ನಿರಾಕರಿಸಲಾರದೆ ಒಂದು ಷರತ್ತಿನಿಂದ ಅವನನ್ನು ವಿವಾಹವಾಗಲು ಒಪ್ಪಿದಳು. ಮದುವೆಯಾದ ಮೇಲೆ ಎಂದೂ ಅವಳನ್ನು ಅಗಸ್ತ್ಯ ಒಂಟಿಯಾಗಿ ಬಿಟ್ಟಿರಕೂಡದೆಂದೂ ತಪ್ಪಿದಲ್ಲಿ ನದಿಯಾಗಿ ಹರಿದು ಹೋಗಲು

ಅವಳಿಗೆ ಸ್ವಾತಂತ್ರ್ಯ ಇರತಕ್ಕದ್ದೆಂದೂ ಷರತ್ತು ವಿಧಿಸಿದಳು. ಅಗಸ್ತ್ಯ ಒಪ್ಪಿ ಆಕೆಯನ್ನು ವಿವಾಹವಾದ. ನೀರಿನ ರೂಪದಲ್ಲಿ ಕಾವೇರಿಯಿದ್ದ ಕಮಂಡಲವನ್ನು ಅಗಸ್ತ್ಯ ಒಮ್ಮೆ ಶಿಷ್ಯರ ಕೈಯಲ್ಲಿ ಕೊಟ್ಟು ಕನ್ನಿಕಾನದಿಗೆ ಸಂಧ್ಯೋಪಾಸನೆಗೆ ಹೋಗಿದ್ದಾಗ, ಅಗಸ್ತ್ಯ ತನಗೆ

ಕಾವೇರಿಯ ಪ್ರತಿಮೆ, ಕೃಷ್ಣರಾಜಸಾಗರ

ಕೊಟ್ಟ ಮಾತಿಗೆ ತಪ್ಪಿದನೆಂದು ಕಾವೇರಿ ಕಮಂಡಲದಿಂದ ಬ್ರಹ್ಮಗಿರಿಯ ತೀರ್ಥಕುಂಡಿಗೆಗೆ ಜಿಗಿದು ಅಲ್ಲಿಂದ ನದಿಯಾಗಿ ಪ್ರವಹಿಸಿದಳು. ಆಗ ಅಗಸ್ತ್ಯನ ಶಿಷ್ಯರು ಅವಳು ನದಿಯಾಗಿ ಹರಿಯುವುದನ್ನು ತಡೆದರು. ಅವಳು ತೀರ್ಥಕುಂಡಿಗೆಯ ಮುಂದಿರುವ ತೀರ್ಥಕೊಳದ ಬಲಭಾಗದ ಇಳಿಜಾರಿನಲ್ಲಿ ಕಲ್ಲುಬಂಡೆಯ ಅಡಿಭಾಗದಲ್ಲಿ ಹರಿದು ಕೆಳಗೆ ಕಾಣಿಸಿಕೊಂಡಳು. ಅಲ್ಲಿಂದ ಭಾಗಮಂಡಲಕ್ಷೇತ್ರ ತಲಪಿದಾಗ ಮೊದಲನೆಯ ಉಪನದಿ ಕನ್ನಿಕ ಕಾವೇರಿಯನ್ನು ಸೇರಿಕೊಂಡಳು. ತನ್ನ ಪತ್ನಿ ತನಗೆ ತಿಳಿಸದೆ ನದಿಯಾಗಿ ಹರಿದುದಕ್ಕೆ ಅಗಸ್ತ್ಯನಿಗೆ ಕೋಪ ಬಂತು. ಅಷ್ಟರಲ್ಲಿ ಬ್ರಹ್ಮ ಅಗಸ್ತ್ಯನಲ್ಲಿಗೆ ಬಂದು ಅವನನ್ನು ಸಮಾಧಾನಪಡಿಸಿದ ಅನಂತರ ಅಗಸ್ತ್ಯ ನದಿಯಾಗಿ ಹರಿಯುತ್ತಿದ್ದ ಕಾವೇರಿಯನ್ನು ಬ್ರಹ್ಮಗಿರಿಯಿಂದ ಸು. 32 ಕಿಮೀಗಳ ದೂರದಲ್ಲಿರುವ ಬಲಮುರಿಯಲ್ಲಿ ಸಂಧಿಸಿ ಅವಳು ಮತ್ತೆ ತನ್ನ ಪತ್ನಿಯಾಗಿರುವಂತೆ ಕೇಳಿಕೊಂಡ. ಈಶ್ವರ ತನಗೆ ಕೊಟ್ಟ ವರದಂತೆ ಒಂದು ರೂಪದಲ್ಲಿ ಸ್ತ್ರೀಯಾಗಿದ್ದು ಅಗಸ್ತ್ಯನ ಪತ್ನಿಯಾಗಿರಲೂ ಇನ್ನೊಂದು ರೂಪದಲ್ಲಿ ನದಿಯಾಗಿ ಹರಿಯಲೂ ಕಾವೇರಿ ಒಪ್ಪಿದಳು. ಪೂರ್ವ ಸಮುದ್ರವನ್ನು ಸೇರುವವರೆಗೆ ದಾರಿಯಲ್ಲಿ ಕಾವೇರಿ ಯಾವ ಯಾವ ಸ್ಥಳಗಳ ಮತ್ತು ಕ್ಷೇತ್ರಗಳ ಮೂಲಕ ಹರಿದು ಹೋಗಬೇಕೆಂಬುದನ್ನು ಅಗಸ್ತ್ಯ ತಿಳಿಸಿದ. ಕಾವೇರಿ ದೇವತೆಯನ್ನು ಕೊಡಗರು ತಮ್ಮ ಕುಲದೇವತೆಯೆಂದು ನಂಬಿ ಪೂಜಿಸುತ್ತಾರೆ. ಕಾವೇರಿ ದೇವತೆಯ ವರದಿಂದ ಕೊಡಗಿನಲ್ಲಿ ವ್ಯವಸಾಯಕ್ಕೆ ಅಗತ್ಯವಾದ ಮಳೆಯಾಗುತ್ತದೆಂದೂ ಕೊಡಗಿನವರ ಮುಖ್ಯ ಆಹಾರಧಾನ್ಯವಾದ ಬತ್ತದ ಬೆಳೆ ಸಮೃದ್ಧವಾಗಿ ಬೆಳೆಯುತ್ತದೆಂದೂ ಕೊಡಗಿನ ಜನ ನಂಬಿದ್ದಾರೆ.

**ಕಾವೇರಿಯ ಕ್ಷೇತ್ರಗಳು** : ಉಗಮದಿಂದ ಸಂಗಮದವರೆಗೂ ಕಾವೇರಿಯ ದಂಡೆಯ ಮೇಲೆ ಅನೇಕ ಪುಣ್ಯಕ್ಷೇತ್ರಗಳಿವೆ. ಮೊಟ್ಟಮೊದಲನೆಯ ಸ್ಥಳ ತಲಕಾವೇರಿ ವರ್ಷವಿಡೀ ಕಾವೇರಿನದಿಯಲ್ಲಿ ಸ್ನಾನ ಮಾಡಿ ದೇವರಿಗೆ ಪೂಜೆ ಮಾಡಿಸುವುದು ಪುಣ್ಯಕರವೆಂದು ಜನರು ನಂಬಿದ್ದರೂ ತುಲಾಮಾಸದಲ್ಲಿ ಕಾವೇರಿ ಸ್ನಾನ ಮಾಡುವುದರಿಂದ ಹೆಚ್ಚು ಪುಣ್ಯವುಂಟಾಗುತ್ತದೆಂಬುದು ಜನರಿಗೆ ಪುರಾಣದಿಂದ ಪ್ರಾಪ್ತವಾದ ನಂಬಿಕೆ. ತುಲಾಸಂಕ್ರಮಣದ ದಿವಸ ಕಾವೇರಿ ತೀರ್ಥ ಆ ಮುಹೂರ್ತಕ್ಕೆ ಸರಿಯಾಗಿ ತೀರ್ಥ ಕುಂಡಿಗೆಯಲ್ಲಿ ಉಕ್ಕಿ ಹರಿಯುತ್ತದೆ. ಆ ಸಮಯಕ್ಕೆ ಸರಿಯಾಗಿ ತೀರ್ಥಕುಂಡಿಗೆಯ ಇಬ್ಬದಿಗಳಲ್ಲಿ ನಿಂತಿರುವ ಅರ್ಚಕರು ತಾಮ್ರದ ತಂಬಿಗೆಗಳಲ್ಲಿ ತೀರ್ಥಕುಂಡಿಗೆಯ ತೀರ್ಥವನ್ನು ತುಂಬಿಸಿಕೊಂಡು ಅದರ ಮುಂದಿನ ಕೊಳದಲ್ಲಿ ಸ್ನಾನ ಮಾಡಲು ಇಳಿದು ನಿಂತ ಜನರ ಸಮೂಹದ ಮೇಲೆ ಎರಚುತ್ತಾರೆ. ಅನಂತರ ಆ ದಿವಸ ಅಲ್ಲಿ ನೆರೆದ ಯಾತ್ರಿಕರೆಲ್ಲರೂ ತೀರ್ಥಸ್ನಾನ ಮಾಡುತ್ತಾರೆ. ಯಾತ್ರಾರ್ಥಿಗಳಿಂದ ವರ್ಷವಿಡೀ ಪಡೆದುಕೊಂಡ ಪಾಪವನ್ನು ತೊಳೆದುಕೊಳ್ಳಲು ಗಂಗೆಯೂ ಕಾವೇರಿಗೆ ಬಂದು ಆ ದಿನದಂದು ಮೀಯುವಳೆಂದು ಜನರ ನಂಬಿಕೆ. ಕೊಡಗಿನಲ್ಲಿ ಕಾವೇರಿಯ ದಂಡೆಯ ಮೇಲಣ ಇತರ ಪವಿತ್ರ ಕ್ಷೇತ್ರಗಳು ಭಾಗಮಂಡಲ, ಹರಿಶ್ಚಂದ್ರ, ಬಲಮುರಿ, ಗುಹೆ ಮತ್ತು ರಾಮಸ್ವಾಮಿ ಕಣಿವೆ. ಹಾಸನ ಜಿಲ್ಲೆಯ ರಾಮನಾಥಪುರ ಒಂದು ಪ್ರಸಿದ್ಧ ಯಾತ್ರಾಸ್ಥಳ. ಚುಂಚನಕಟ್ಟೆಯಲ್ಲಿ ಕಾವೇರಿಯ ಜಲಪಾತ ಪ್ರೇಕ್ಷಣೀಯ. ದಂಡೆಯ ಮೇಲಣ ಶ್ರೀರಾಮ ದೇವಸ್ಥಾನ ಪ್ರಸಿದ್ಧವಾಗಿದೆ. ಇಲ್ಲೂ ರಾಮನಾಥಪುರದಲ್ಲೂ ವರ್ಷಕ್ಕೊಮ್ಮೆ ಜಾತ್ರೆಗಳು ಜರಗುತ್ತವೆ. ಕೃಷ್ಣರಾಜಸಾಗರದ ಬೃಂದಾವನವಂತೂ ನಯನಮನೋಹರವಾದ್ದು. ಇಲ್ಲಿ ಕಟ್ಟೆಯ ಬದಿಗೆ ಕಾವೇರಿಯ ಪ್ರತಿಮೆಯನ್ನು ಪ್ರತಿಷ್ಠಿಸಲಾಗಿದೆ. ಶ್ರೀರಂಗಪಟ್ಟಣಕ್ಕೆ ಸ್ವಲ್ಪ ಮೇಲಕ್ಕಿರುವ ಪುಟ್ಟ ನಡುಗಡ್ಡೆ ಪಕ್ಷಿಗಳಿಗೆ ಪ್ರಸಿದ್ಧವಾಗಿದೆ. ರಂಗನತಿಟ್ಟು ಎಂದು ಪ್ರಸಿದ್ಧವಾದ ಇಲ್ಲಿಯ ಪಕ್ಷಿಧಾಮಕ್ಕೆ ವಿಶ್ವದ ನಾನಾ ಕಡೆಗಳಿಂದ ಬಗೆಬಗೆಯ ಪಕ್ಷಿಗಳು ವಲಸೆ ಬರುತ್ತವೆ.

ಶ್ರೀರಂಗಪಟ್ಟಣದ ಬಳಿ ಕವಲೊಡೆಯುವ ಕಾವೇರಿಯ ಒಂದು ಶಾಖೆ ಸ್ವಲ್ಪ ದೂರ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಈ ಕಾರಣದಿಂದಾಗಿ ಆ ಭಾಗ ಹಿಂದೂಗಳಿಗೆ ಪವಿತ್ರ. ಶುಭಾಕಾರ್ಯಗಳಿಗೂ ಶ್ರಾದ್ಧಾದಿಗಳಿಗೂ ಅದು ಹೇಳಿ ಮಾಡಿಸಿದಂತಿರುವ ಸ್ಥಳ. ಕಾವೇರಿಯ ಮೂರು ದೊಡ್ಡ ದ್ವೀಪಗಳ ಪೈಕಿ ಮೊದಲನೆಯದು ಶ್ರೀರಂಗಪಟ್ಟಣ. ಇಲ್ಲೂ ಎರಡನೆಯ ದ್ವೀಪವಾದ ಶಿವಸಮುದ್ರದಲ್ಲೂ ಮೂರನೆಯದಾದ ಶ್ರೀರಂಗಂನಲ್ಲೂ ರಂಗನಾಥನ ದೇವಾಲಯಗಳಿವೆ. ಇವು ಆದಿರಂಗ, ಮಧ್ಯರಂಗ ಮತ್ತು ಅಂತ್ಯರಂಗಗಳೆಂದು ಪ್ರಸಿದ್ಧ. ಶ್ರೀರಂಗಪಟ್ಟಣ ಇತಿಹಾಸಪ್ರಸಿದ್ಧವಾದ ಸ್ಥಳವೂ ಹೌದು. ತಲಕಾಡಿನ ಬಳಿಯಲ್ಲಿ ಮಾಧವಮಂತ್ರಿ ಅಣೆಕಟ್ಟೆ ಇದೆ. ಹೆದೆಯೇರಿಸಿದ ಬಿಲ್ಲಿನಂತೆ ಬಾಗಿ ಹರಿಯುವ ನದಿಗೆ ಇಲ್ಲೊಂದು ಮಡು ಏರ್ಪಟ್ಟಿದೆ. ಮಾಲಂಗಿ ಮಡುವೆಂದು ಇದು ಪ್ರಸಿದ್ಧವಾಗಿದೆ. ತಲಕಾಡು ಕೂಡ ಇತಿಹಾಸಪ್ರಸಿದ್ಧಿ ಪಡೆದ ಸ್ಥಳ. ಗಂಗರಸರು ಇಲ್ಲಿ ರಾಜ್ಯವಾಳಿದರು. ತಲಕಾಡಿನ ಪಂಚಲಿಂಗಗಳು ಹನ್ನೆರಡುವರ್ಷಗಳಿಗೊಮ್ಮೆ ಅಸಂಖ್ಯಾತ ಯಾತ್ರಿಕರನ್ನು ಆಕರ್ಷಿಸುತ್ತವೆ.



ಕಲ್ಲಣೈ

ಶ್ರೀರಂಗಂನಿಂದಾಚೆಗೆ ಕಲ್ಲಣೈಯಲ್ಲಿ ಚೋಳರಾಜ ಕರಿಕಾಲನ ಭವ್ಯಪ್ರತಿಮೆಯಿದೆ. ಕಾವೇರಿಯನ್ನು ನೀರಾವರಿಗೆ ಉಪಯೋಗಿಸಿಕೊಂಡ ಮೊದಲ ದೊರೆ ಈತ. ತಿರುಚ್ಚಿರಪ್ಪಳ್ಳಿ ಮತ್ತು ತಂಜಾವೂರು ಜಿಲ್ಲೆಗಳಲ್ಲಿ ಅಲ್ಲಲ್ಲಿ ಕಲ್ಲಿನಿಂದ ಕಾವೇರಿನದಿಗೆ ಅಣೆಕಟ್ಟು ಕಟ್ಟಿಸಿದ್ದ. ತಿರುಚ್ಚಿರಪ್ಪಳ್ಳಿಯ ಒರೈಯೂರಿನಿಂದ ಕಾವೇರಿ ಪೂಂಪಟ್ಟಿನಂಗೆ ತನ್ನ ರಾಜಧಾನಿ ಬದಲಾಯಿಸಿದ. ಅಲ್ಲಿಂದ ಮುಂದೆ ಸಿಕ್ಕುವ ಇನ್ನೊಂದು ಮುಖ್ಯಸ್ಥಳವೆಂದರೆ ಕುಂಭಕೋಣಂ. ಇಲ್ಲೂ ಹನ್ನೆರಡು ವರ್ಷಗಳಿಗೊಮ್ಮೆ ಜಾತ್ರೆ ನೆರೆಯುತ್ತದೆ.

ತಂಜಾವೂರಿನಿಂದೀಚೆಗೆ ಸಿಗುವ ಪವಿತ್ರ ಸ್ಥಳ ತಿರುವಾರೂರು, ಮಯೂರಂ ಇನ್ನೊಂದು. ತಿರುವೈಯಾರ್ ತ್ಯಾಗರಾಜರ ತಪೋಭೂಮಿ. ಅಲ್ಲಿ ಇವರ ಸಮಾಧಿಯಿದೆ, ಪ್ರತಿವರ್ಷವೂ ಇವರ ಪುಣ್ಯತಿಥಿಯಂದು ದಕ್ಷಿಣದೇಶದ ಸಂಗೀತಪ್ರೇಮಿಗಳು ಇಲ್ಲಿ ಸೇರಿ ತ್ಯಾಗರಾಜರನ್ನು ಆರಾಧಿಸುತ್ತಾರೆ. ಅನಂತರದ ಪವಿತ್ರಕ್ಷೇತ್ರ ಚಿದಂಬರಂ. ಇಲ್ಲಿ ಒಂದೇ ಗುಡಿಯಲ್ಲಿ ಶಿವ,

ವಿಷ್ಣು ಇಬ್ಬರಿಗೂ ಪೂಜೆ ಸಲ್ಲುತ್ತದೆ. ಕಾವೇರಿ ಕಡಲಲ್ಲಿ ಐಕ್ಯವಾಗುವ ಎಡೆಯೂ ಪವಿತ್ರವೇ. ಅದು ಸುಪ್ರಸಿದ್ಧವಾದ ಕಾವೇರಿ ಪೂಂಪಟ್ಟಿನಂ. (ಡಿ.ಎನ್.ಕೆ.; ಜಿ.ಕೆ.ಜಿ.)

**ಕಾವೇರಿ ಪೊಂಪಟ್ಟಿನಂ :** ತಮಿಳುನಾಡಿನ ಪೂರ್ವ ತೀರದಲ್ಲಿ ಕಾವೇರಿ ನದಿ ಸಮುದ್ರವನ್ನು ಸೇರುವೆಡೆಯಲ್ಲಿರುವ ಒಂದು ಹಳ್ಳಿ. ಚೋಳರ ಆಳ್ವಿಕೆಯ ಮೊದಲ ಕಾಲದಲ್ಲಿ ಇದೊಂದು ಮುಖ್ಯ ರೇವುಪಟ್ಟಣವಾಗಿತ್ತೆಂದು ತತ್ಕಾಲೀನ ಮತ್ತು ಈಚೆಗಿನ



ಕಾವೇರಿ ಪೂಂಪಟ್ಟಿನಂ–ಕಾವೇರಿ ನದಿ ಮತ್ತು ಸಮುದ್ರ ಸಂಗಮ

ಸಾಹಿತ್ಯದಿಂದಲೂ ವಿದೇಶೀಯರ ಬರೆವಣಿಗೆಗಳಿಂದಲೂ ತಿಳಿದುಬಂದಿದೆ. ಈ ಸ್ಥಳದಲ್ಲಿ ಗತಕಾಲದ ಅನೇಕ ದೇವಾಲಯಗಳೂ ಇನ್ನಿತರ ಅವಶೇಷಗಳೂ ಕಾಣಬರುತ್ತವೆ. ಇಲ್ಲಿ ಪ್ರ.ಶ.ಶಕದ ಆರಂಭಕಾಲಕ್ಕೆ ಸೇರಿದ ನಾಣ್ಯಗಳು ಮತ್ತು ಮಡಕೆ ಚೂರುಗಳು ದೊರಕಿದುದರಿಂದ ಪುರಾತತ್ತ್ವಜ್ಞರು ಭೂಶೋಧನೆ ನಡೆಸಿದರು. ದೋಣಿಗಳಲ್ಲಿ ಸರಕುಗಳನ್ನು ತುಂಬುವ ಮತ್ತು ಅವುಗಳಿಂದ ಇಳಿಸುವ ಸಲುವಾಗಿ ಪ್ರ.ಶ.ಪೂ. 3ನೆಯ ಶತಮಾನದ ಒಂದು ಬಂದರು ಕಟ್ಟೆ, ಕಾವೇರಿ ನದಿಯಿಂದ ನೀರನ್ನು ಸಂಗ್ರಹಿಸಲು ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ ಕೊಳ, ಬೌದ್ಧವಿಹಾರವೊಂದರಲ್ಲಿ 8' ಚದರದ ವರ್ಣಚಿತ್ರಗಳನ್ನುಳ್ಳ ಏಳು ಕೋಣೆಗಳ ಒಂದು ಭಾಗ, ಸುಟ್ಟ ಮಣ್ಣಿನ ಮತ್ತು ಸುಣ್ಣದ ಶಿಲ್ಪಗಳಿಂದ ಅಲಂಕೃತವಾದ ಕಂಚಿನ ಧ್ಯಾನಿ ಬುದ್ಧವಿಗ್ರಹ, ಬುದ್ಧಪದವಿರುವ ಶಿಲೆ–ಇವು ಇಲ್ಲಿ ಸಿಕ್ಕಿರುವ ಇತರ ಮುಖ್ಯ ಅವಶೇಷಗಳು. (ಬಿ.ಕೆ.ಜಿ.)

**ಕಾವ್ಯ :** ಕಾವ್ಯ ಉಗಮಗೊಂಡದ್ದು ಪ್ರಾಚೀನ ಕಾಲದ ಧಾರ್ಮಿಕ ವಿಧಿಗಳಲ್ಲಿ, ಮಂತ್ರಗಳಲ್ಲಿ ಹಾಗೂ ಜನಪದ ಸಾಹಿತ್ಯದಲ್ಲಿ ಎಂದು ತೋರುತ್ತದೆ. ವೇದ ಉಪನಿಷತ್ತುಗಳ ಕೆಲವು ಭಾಗಗಳು ಒಳ್ಳೆಯ ಕಾವ್ಯವಾಗಿವೆ. ಭರತಖಂಡದಲ್ಲಿ ಮಹಾಕಾವ್ಯ, ನಾಟಕಗಳಿಗೆ ಋಗ್ವೇದದ ಸಂವಾದ ಸೂಕ್ತಗಳೇ ಆಕರವೆಂದು ಹೇಳುತ್ತಾರೆ. ಕವಿ ಎಂಬ ಮಾತು ಉಪನಿಷತ್ತಿನಲ್ಲಿ ಗೋಚರಿಸುತ್ತದೆ (ಕವಿರ್ಮನೀಷೀ ಪರಿಭೂಃ ಸ್ವಯಂಭೂಃ). ಕವಿಯೂ ಪುರೋಹಿತನೂ ಮೊದಲು ಅಭಿನ್ನರಾಗಿದ್ದರು. ಧಾರ್ಮಿಕ ವಿಧಿಗಳಿಂದ ಕಾವ್ಯ ಬಿಡುಗಡೆಗೊಂಡು ಲೌಕಿಕವಾದುದು ಈಚೆಗೆ. ಆದರೆ ಧಾರ್ಮಿಕ ಹಾಗೂ ಮಾಂತ್ರಿಕ ಮಹತ್ತ್ವ ಪಡೆದಿದ್ದ ಕಾಲದಲ್ಲೂ ಅದು ಮನರಂಜನೆಯ ಸಾಧನವಾಗಿತ್ತು; ಲೌಕಿಕ ಪರಿಣಮಿಸಿದ ಮೇಲೂ ಅದು ಧಾರ್ಮಿಕ ಉದ್ದೇಶಗಳಿಗೆ ವಾಹಕವಾಗುವುದು ತಪ್ಪಲಿಲ್ಲ. ಕವಿ ಯಾವಾಗಲೂ ಋಷಿ, ದ್ರಷ್ಟಾರ ಎಂದೇ ಪರಿಗಣಿತನಾಗಿದ್ದಾನೆ. ಭಾರತೀಯ ದೃಷ್ಟಿಯಂತೂ ಕಲೆಗಾಗಿ ಕಲೆ ಎಂಬುದನ್ನೆಂದೂ ಒಪ್ಪಿಲ್ಲ ; ಧರ್ಮ ಮತ್ತು ಕಾವ್ಯಧರ್ಮಗಳ ಸಮನ್ವಯವನ್ನು ಅದು ಪುರಸ್ಕರಿಸುತ್ತದೆ.

ಕಾವ್ಯವೆಂದರೇನೆಂಬುದನ್ನು ಒಂದು ಮಾತಿನಲ್ಲಿ ಹೇಳುವುದು ಅಸಾಧ್ಯ. ಬದಲಾಗಿ, ಅದರ ಸ್ವರೂಪವನ್ನು ವಿವರಿಸಬಹುದು, ಅದರ ಉದ್ದೇಶ ಪ್ರಯೋಜನಗಳನ್ನು ಪಟ್ಟಿಹಾಕಬಹುದು, ಓದುಗನ ಮೇಲೆ ಅದು ಎಸಗುವ ಪರಿಣಾಮಗಳನ್ನು ಲೆಕ್ಕಿಸಬಹುದು, ಕಾವ್ಯವನ್ನು ಕುರಿತ ದೃಷ್ಟಿಯೂ ಕಾಲದೇಶಾನುಗುಣವಾಗಿ ಭಿನ್ನ ಭಿನ್ನವಾಗಿದ್ದು, ವಿವಿಧ ಲಕ್ಷಣ ವಾಕ್ಯಗಳಿಗೆ ಎಡೆಕೊಟ್ಟಿದೆ; ಅವುಗಳಲ್ಲಿ ಐಕಮತ್ಯವಿಲ್ಲ. ಭಾರತೀಯರಲ್ಲೂ ಪಾಶ್ಚಾತ್ಯರಲ್ಲೂ ಕಾವ್ಯದ ಬಗೆಗೆ ಸಾಕಷ್ಟು ಜಿಜ್ಞಾಸೆ ನಡೆದಿದೆ. ಭಾರತೀಯರು ಸಿದ್ಧಕಾವ್ಯವನ್ನು ಕುರಿತು ವಿಚಾರ ಮಾಡಿದರೆ, ಪಾಶ್ಚಾತ್ಯರು ಕವಿಯ ಮನೋವ್ಯಾಪಾರಗಳನ್ನೂ ವಿಶ್ಲೇಷಿಸಿದ್ದಾರೆ.

ಮನಸ್ಸಿನ ಭಾವಗಳನ್ನು ಲಯಬದ್ಧ ಭಾಷೆಯಲ್ಲಿ ಸುಮೂರ್ತವಾಗಿ ಅಭಿವ್ಯಕ್ತಿಗೊಳಿಸುವ ಕಲೆ ಎಂದು ಕಾವ್ಯದ ಲಕ್ಷಣವನ್ನು ಸ್ಥೂಲವಾಗಿ ಹೇಳಬಹುದು. ಪೌರಸ್ತ್ಯ ಹಾಗೂ ಪಾಶ್ಚಾತ್ಯ ಮೀಮಾಂಸಕರ ಅಭಿಪ್ರಾಯಗಳನ್ನು ಇಲ್ಲಿ ಗಮನಿಸುವುದು ಉಪಯುಕ್ತ.

**ಭಾರತೀಯ ಲಕ್ಷಣ ನಿರೂಪಣೆ :** ಶಬ್ದಾರ್ಥಗಳು ಕೂಡಿ ಕಾವ್ಯವೆಂದು ಭಾಮಹ, ಕಾವ್ಯದ ಶರೀರವೆಂದರೆ ಇಷ್ಟವಾದ ಅರ್ಥವನ್ನುಳ್ಳ ಪದಸಮೂಹ ಎಂದು ದಂಡಿ ಹೇಳುತ್ತಾರೆ. ವಾಮನ ಒಂದು ಕಡೆ ಕಾವ್ಯ ಅಲಂಕಾರದಿಂದ ಗ್ರಾಹ್ಯವಾಗುತ್ತದೆ, ಸೌಂದರ್ಯವೆ ಅಲಂಕಾರ ಎಂದೂ ಮತ್ತೊಂದು ಕಡೆ ರೀತಿಯೇ ಕಾವ್ಯದ ಆತ್ಮವೆಂದೂ ಹೇಳಿದ್ದಾನೆ. ವಕ್ರಕವಿವ್ಯಾಪಾರದಿಂದ ಕೂಡಿದ್ದೂ ಬಲ್ಲವರಿಗೆ ಆಹ್ಲಾದವನ್ನುಂಟುಮಾಡತಕ್ಕದ್ದೂ ಆದ ಬಂಧದಲ್ಲಿ ವ್ಯವಸ್ಥೆಗೊಂಡ ಶಬ್ದಾರ್ಥಗಳು ಒಟ್ಟಿಗೆ ಕಾವ್ಯ ಎಂದು ಕುಂತಕ, ಕಾವ್ಯದ ಆತ್ಮ ಧ್ವನಿ ಎಂದು ಆನಂದವರ್ಧನ, ರಸಾತ್ಮಕವಾದ ವಾಕ್ಯವೆ ಕಾವ್ಯವೆಂದು ವಿಶ್ವನಾಥ, ರಮಣೀಯಾರ್ಥವನ್ನು ಪ್ರತಿಪಾದಿಸುವ ಶಬ್ದವೆ ಕಾವ್ಯವೆಂದು ಜಗನ್ನಾಥ ಲಕ್ಷಣೀಕರಿಸಿದ್ದಾರೆ.

**ಪಾಶ್ಚಾತ್ಯ ಲಕ್ಷಣ ನಿರೂಪಣೆ :** ಶಕ್ತಭಾವಗಳ ಸಹಜ ಉಕ್ಕಿ ಹರಿಯುವಿಕೆ, ಎಲ್ಲ ಜ್ಞಾನದ ಉಸಿರು ಮತ್ತು ಸೂಕ್ಷ್ಮತರ ಚೈತನ್ಯವೇ ಕಾವ್ಯವೆಂದು ವರ್ಡ್ಸ್‌ವರ್ತ್ ; ಕಾವ್ಯವೆಂದರೆ ಬುದ್ಧಿಯ ನೆರವಿಗೆ ಕಲ್ಪನೆಯನ್ನು ಆಮಂತ್ರಿಸುವುದರ ಮೂಲಕ ಸಂತೋಷವನ್ನು ಸತ್ಯದೊಡನೆ ಕೂಡಿಸುವ ಕಲೆ ಎಂದು ಜಾನ್ಸನ್ ; ಕಾವ್ಯ ವಿಜ್ಞಾನ ಕೃತಿಗಳಿಗೆ ವಿರುದ್ಧವಾದ ರಚನಾ ಪ್ರಕಾರ, ಅದರ ಸದ್ಯದ ಗುರಿ ಸಂತೋಷವೇ ಹೊರತು ಸತ್ಯವಲ್ಲ, ಕಾವ್ಯವೆಂದರೆ ಅತ್ಯುತ್ತಮ ಕ್ರಮದಲ್ಲಿ ಜೋಡಣೆಗೊಂಡ ಅತ್ಯುತ್ತಮ ಶಬ್ದಗಳು ಎಂದು ಕೋಲ್‌ರಿಜ್; ಕಲ್ಪನೆಯ ಅಭಿವ್ಯಕ್ತಿಯೇ ಕಾವ್ಯ ಎಂದ ಷೆಲ್ಲಿ ; ಸತ್ಯ ಸೌಂದರ್ಯ ಶಕ್ತಿಗಳನ್ನು ಕುರಿತ ಆವೇಶದ ಉದ್ಗಾರವೇ ಕಾವ್ಯವೆಂದು ಲೇ ಹಂಟ್; ಜೀವನದ ವಿಮರ್ಶೆ, ಮಾನವ ಶಬ್ದಗಳು ಮುಟ್ಟಬಹುದಾದ ಅತ್ಯಂತ ಆನಂದಪ್ರದವೂ ಪರಿಪೂರ್ಣವೂ ಆದ ಅಭಿವ್ಯಕ್ತಿ ಪ್ರಕಾರ ಎಂದು ಮ್ಯಾಥ್ಯೂ ಆರ್ನಲ್ಡ್ ; ಯಾವುದರಲ್ಲಿ ಜ್ಞಾನ ಕೂಡಲೆ ಭಾವವಾಗಿ ಪರಿವರ್ತಿತವಾಗುತ್ತದೋ ಮತ್ತು ಜ್ಞಾನದ ಒಂದು ಹೊಸ ಅಂಗವಾಗಿ ಮಾರ್ಪೊಳೆಯುತ್ತದೋ ಅಂಥ ಆತ್ಮವನ್ನು ಪಡೆದಿರುವಿಕೆಯೇ ಕಾವ್ಯವೆಂದು ಜಾರ್ಜ್ ಎಲಿಯಟ್; ಉದಾತ್ತ ಭಾವಗಳಿಗೆ ಉದಾತ್ತ ಭೂಮಿಕೆಯನ್ನು ಕಲ್ಪನೆಯಿಂದ ಧ್ವನಿಸುವಿಕೆಯೇ ಕಾವ್ಯ ಎಂದು ರಸ್ಕಿನ್; ಬದುಕಿನ ಬಗೆಗೆ ವ್ಯಕ್ತಿಯ ಪ್ರತಿಕ್ರಿಯೆಗಳನ್ನು ದಾಖಲುಮಾಡುವ ಕರಾರುವಾಕ್ಕು ಉಪಕರಣವೇ ಕಾವ್ಯ ಎಂದು ಲೂಯಿ ಮೆಕ್ನೀಸ್–ಹೇಳುತ್ತಾರೆ.

ಲೌಕಿಕವಾದ ಭಾವ ಸಾಧಾರಣೀಕರಣಗೊಂಡು ರಸವಾಗಿ ಪರಿಣಮಿಸಿ ಆಸ್ವಾದನೀಯವಾಗುತ್ತದೆ ಎಂಬುದು ಭಾರತೀಯ ಆಲಂಕಾರಿಕರ ಮತ. ಈ ರಸಸಿದ್ಧಾಂತ ಅವರು ಜಗತ್ತಿಗೆ ಕೊಟ್ಟ ವಿಶಿಷ್ಟವಾದ ಕೊಡುಗೆ. ಪಾಶ್ಚಾತ್ಯರಲ್ಲಿ ಇದಕ್ಕೆ ಸಂವಾದಿಯಾದ ತತ್ತ್ವವಿಲ್ಲ, ಆದರೂ ಅರಿಸ್ಟಾಟಲನ ಕೆಥಾರ್ಸಿಸ್ ಸಿದ್ಧಾಂತ, ‘ (ಕಾವ್ಯವೆಂದರೆ) ಶಮ ಸ್ಥಿತಿಯಲ್ಲಿ ಸ್ಮೃತವಾದ ಭಾವಗಳು’ ಎಂಬ ವರ್ಡ್ಸ್‌ವರ್ತನ ಮಾತು, ಕಾವ್ಯ ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲ, ಅದರಿಂದ ಪಲಾಯನ ಎಂಬ ಟಿ.ಎಸ್. ಎಲಿಯಟ್ಟನ ಉಕ್ತಿ–ಇವು ಭಾರತೀಯ ರಸತತ್ತ್ವಕ್ಕೆ ನಿಕಟವಾಗಿವೆ

ಪ್ರತಿಭೆಯೇ ಕಾವ್ಯಕ್ಕೆ ಕಾರಣವೆಂದು ಭಾರತೀಯ ಆಲಂಕಾರಿಕರ ನಿರ್ಣಯ, ಕವಿತ್ವ ಬೀಜಂ ಪ್ರತಿಭಾನಂ ಎಂದಿದ್ದಾನೆ ವಾಮನ. ಹೊಸ ಹೊಸದನ್ನು ಉಲ್ಲೇಖಿಸುವ (ಅಥವಾ ಹೊಳೆಯಿಸುವ) ಪ್ರಜ್ಞೆಯೇ ಪ್ರತಿಭೆ, ಆ ಪ್ರತಿಭೆಯ ಉಸಿರಿನಿಂದ ಜೀವ ತುಂಬಿ ವರ್ಣಿಸಬಲ್ಲ ನಿಪುಣನೇ ಕವಿ, ಕವಿಕರ್ಮವೇ ಕಾವ್ಯ ಎಂಬುದು ಭಟ್ಟತೌತನ ವಿವರಣೆ. ಅಪೂರ್ವವಸ್ತು ನಿರ್ಮಾಣದ ಸಾಮರ್ಥ್ಯವುಳ್ಳದ್ದು ಎಂದು ಅಭಿನವಗುಪ್ತನೂ ಪ್ರತಿಭೆಯ ಲಕ್ಷಣ ಹೇಳಿದ್ದಾನೆ. ಕವಿ ಪ್ರತಿಭೆಯ ಬಲದಿಂದ, ಸಮಾಹಿತ ಚಿತ್ತವಾಗಿ ಹೊಸ ಹೊಸ ಭಾವಗಳನ್ನು, ಅರ್ಥಗಳನ್ನು ಕಾಣುತ್ತಾನೆ ; ಅವನಿಗೆ ಲೋಕ ವಸ್ತುಗಳು ತಮ್ಮ ರಹಸ್ಯವನ್ನು ಬಿಟ್ಟುಕೊಡುತ್ತವೆ; ಅವುಗಳ ಜೀವಾಳವೆ ಅವನಿಗೆ ವಶವಾಗುತ್ತದೆ. ಅದೇ ಪದಸಮೂಹ, ಅದೇ ಅರ್ಥಸಂಪತ್ತು–ಆದರೂ ಕಟ್ಟುವ ಕೌಶಲದಿಂದ ಕಾವ್ಯ ಹೊಸದಾಗುತ್ತದೆ ಎಂದಿದ್ದಾನೆ ಒಬ್ಬ ಆಲಂಕಾರಿಕ. ದಿನನಿತ್ಯದ ಸಾಮಾನ್ಯವಾದ ಮಾತು ಕಾವ್ಯದಲ್ಲಿ ಮಂತ್ರವಾಗುತ್ತದೆ. ಕವಿ ಪ್ರತಿಭೆಯ ವಿದ್ಯುತ್ತು ಅದರಲ್ಲಿ ಹರಿಯುವುದರಿಂದ, ವ್ಯುತ್ಪತ್ತಿ, ಅಭ್ಯಾಸ ಮುಂತಾದವು ಕವಿತೆಗೆ ಪರಿಕರಗಳು ಎಂದು ಹೇಳಲಾಗಿದೆ.

ಏನು ಬೇಕಾದರೂ ಕಾವ್ಯಕ್ಕೆ ವಸ್ತುವಾಗಬಲ್ಲುದು; ಕವಿ ಪ್ರತಿಭೆಯಿಂದು ಅದು ರಸಾನುಭವಕಾರಿಯಾಗುತ್ತದೆ. ರಮ್ಯ, ಅಸಹ್ಯ, ಉದಾರ, ನೀಚ, ಉಗ್ರ, ಪ್ರಸನ್ನ, ವಿಕೃತ–ಹೀಗೆ ವಸ್ತು ಯಾವುದಾದರೂ ಆಗಿರಲಿ, ಕಡೆಗೆ ವಸ್ತುವಲ್ಲದ್ದೆ ಆಗಿರಲಿ, ಕವಿಭಾವಕರ ಭಾವನೆಗೆ ವಿಷಯವಾದ ಮೇಲೆ ರಸಮಯವಾಗದ್ದು ಲೋಕದಲ್ಲಿ ಏನೊಂದೂ ಇಲ್ಲ–ಎಂದು ಧನಂಜಯನ ಹೇಳಿಕೆ.

ಅಪಾರವಾದ ಕಾವ್ಯಪ್ರಪಂಚದಲ್ಲಿ ಕವಿಯೇ ಬ್ರಹ್ಮ ; ತನಗೆ ರುಚಿಸಿದಂತೆ ಅವನು ವಿಶ್ವವನ್ನು ಪರಿವರ್ತಿಸುತ್ತಾನೆ–ಎಂದು ಕವಿಯ ಅಗ್ಗಳಿಕೆಯನ್ನು ಆನಂದವರ್ಧನ ಸಾರಿದ್ದಾನೆ. ಕಾವ್ಯ ನಿಯತಿಕೃತ ನಿಯಮರಹಿತವೂ ಆಹ್ಲಾದೈಕಮಯವೂ ಅನನ್ಯ ಪರತಂತ್ರವೂ ನವರಸರುಚಿರವೂ ಆದು ಎಂದು ಮಮ್ಮಟನ ಉಕ್ತಿ. ಕಾವ್ಯ ಪ್ರಪಂಚ ಸ್ವತಂತ್ರವಾದುದು, ಸಂಪೂರ್ಣವಾದುದು, ಸ್ವಯಮಧಿಕಾರವುಳ್ಳದ್ದು ಎಂಬ ಎ.ಸಿ. ಬ್ರಾಡ್ಲೆಯ ಮಾತು ಈ ಭಾರತೀಯ ದೃಷ್ಟಿಗೆ ಉಪಷ್ಟಂಭಕವಾಗಿದೆ. ಆದರೆ ಕಾವ್ಯಸತ್ಯ ಲೋಕಸತ್ಯಕ್ಕೆ ವಿರುದ್ಧವಾದುದು

ಎಂದು ಅರ್ಥವಲ್ಲ ; ನಿಯತಿಕೃತ ನಿಯಮರಹಿತ, ಅನನ್ಯ ಪರತಂತ್ರ ಎಂಬ ಮಾತುಗಳು ಕಾವ್ಯದ ಅಭಿವ್ಯಕ್ತಿ ವಿಧಾನವನ್ನು ಕುರಿತವು. ಕಾವ್ಯ ಚಿತ್ರಿಸುವುದು ಭಾವಸತ್ಯವನ್ನೆ ವಿನಾ ಬಾಹ್ಯಸತ್ಯವನ್ನಲ್ಲ. ಭಾವಸತ್ಯ ಪ್ರತಿಮಾವಿಧಾನದ ಮೂಲಕ ಮಾತ್ರವೆ ಅಭಿವ್ಯಕ್ತವಾಗಬಲ್ಲುದು. ಈ ವಿಧಾನ ಪ್ರತಿಕೃತಿವಿಧಾನದಂತಲ್ಲದೆ ನಿಯಮರಹಿತವಾಗುವುದು ಅನಿವಾರ್ಯ. ಅಂತೂ ಕಾವ್ಯಕ್ಕೂ ಲೋಕಕ್ಕೂ ಅಂತರ ಸಂಬಂಧ ಉಂಟೇ ಉಂಟು. ಲೋಕವನ್ನು ಕಟ್ಟಿಕೊಂಡೇ ಕಾವ್ಯ ಮೇಲೇರಬೇಕು. ಅದು ಸಂಭಾವ್ಯತೆ ಗಡಿಯನ್ನು ದಾಟ ಕೂಡದು. ಔಚಿತ್ಯತತ್ತ್ವ ಇಲ್ಲಿಗೆ ವಿಸ್ತರಿಸಿ, ಕವಿಕಲ್ಪನೆಯಲ್ಲಿ ಔಚಿತ್ಯವಿರಬೇಕೆಂದು ಹೇಳಬಹುದು. ಅಷ್ಟರ ಮಟ್ಟಿಗೆ ಕಾವ್ಯದಲ್ಲಿ ಬುದ್ಧಿಯ ಅಂಶ ಅವಶ್ಯ. ಬುದ್ಧಿ, ಭಾವಗಳ ವಿದ್ಯುದಾಲಿಂಗನವೇ ಪ್ರತಿಭೆ ಎಂಬ ಸೂಕ್ತಿ ಈ ದೃಷ್ಟಿಯಿಂದ ಅರ್ಥವತ್ತಾಗಿ ತೋರುತ್ತದೆ.

ಕಾವ್ಯ ದೃಷ್ಟಿಯೂ ಹೌದು, ಸೃಷ್ಟಿಯೂ ಹೌದು. ಬರಿಯ ದರ್ಶನದಿಂದಲೇ ಕವಿಪಟ್ಟ ಸಿಕ್ಕಲಾರದು; ವರ್ಣನವೂ ಅಷ್ಟೇ ಮುಖ್ಯ. 'ಋಷಿಯಲ್ಲದ ಕವಿಯಿಲ್ಲ : ದರ್ಶನವುಳ್ಳವನೇ ಋಷಿ' ಎಂದು ಹೇಳುವ ಭಟ್ಟತೌತ ' ತತ್ತ್ವದರ್ಶನವನ್ನು ಹೊಂದಿರುವಷ್ಟಕ್ಕೆ ಒಬ್ಬನಿಗೆ ಕವಿಯೆಂಬ ಹೆಸರು ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಆದರೆ ದರ್ಶನ ಮತ್ತು ವರ್ಣನ ಇವೆರಡೂ ಇದ್ದರೆ ಲೋಕದಲ್ಲಿ ಕವಿಯೆಂದು ಕರೆಯುವುದು' ಎಂದು ಅದಕ್ಕೆ ವಿವರಣೆ ನೀಡಿದ್ದಾನೆ. ಕಾವ್ಯಕ್ಕೆ ಪರಿಪೂರ್ಣತೆ ಬರುವುದು ಅದನ್ನು ಬರೆದು ಮುಗಿಸಿದಾಗಲೇ. ಕವಿತೆಯನ್ನು ಬರೆದಾಗುವ ತನಕ, ತಾನು ಏನನ್ನು ಬರೆಯುತ್ತಿದ್ದೇನೆಂಬುದು ಕವಿಗೆ ಪೂರ್ತಿ ಗೊತ್ತಿರುವುದಿಲ್ಲ ಎಂಬ ಸಿ.ಡೇ ಲೆವಿಸ್‌ನ ಮಾತುಗಳನ್ನು ನೆನೆಯಬಹುದು. ಕಾವ್ಯರಚನೆ ಪ್ರಜ್ಞಾಪೂರ್ವಕವಾದ ಕ್ರಿಯೆಯಲ್ಲ ಎಂಬುದನ್ನೂ ಇದು ಸೂಚಿಸುತ್ತದೆ. ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ ಎಂಬ ಮಾತಿನಲ್ಲಿ ಸುಪ್ತಮನಸ್ಸಿನ ಪ್ರೇರಣೆ ಪ್ರಚೋದನೆಗಳು ಧ್ವನಿತವಾಗಿವೆ. ಕಾವ್ಯ ಪೂರ್ಣವಾಗಿ ಅಪ್ರಜ್ಞಾಪೂರ್ವಕವಾದುದೂ ಅಲ್ಲ. ತಂತ್ರದ ವಿಷಯದಲ್ಲಿ ಕವಿ ತಕ್ಕಮಟ್ಟಿಗೆ ಎಚ್ಚರದಿಂದಲೇ ಇರಬೇಕಾಗುತ್ತದೆ. ಬುದ್ಧಿಯ ಕೆಲಸವೂ ಅಲ್ಲಿ ಉಂಟು. ಒಟ್ಟಿನಲ್ಲಿ ಕಾವ್ಯಸೃಷ್ಟಿಯೊಂದು ಬೌದ್ಧಿಕ ಕ್ರಿಯೆಯಲ್ಲ; ಸ್ಫೂರ್ತಿಯ ಪಾಲು ಅಲ್ಲಿ ವಿಶೇಷ.

ಕವಿಯ ಮನಸ್ಸಿನಲ್ಲಾದ ಅನುಭವನ್ನು ಕಾವ್ಯ ಯಥಾವತ್ತಾಗಿ ವಾಚಕನ ಮನಸ್ಸಿನಲ್ಲಿ ಮೂಡಿಸಬಲ್ಲುದೇ ಎಂಬುದೊಂದು ಪ್ರಶ್ನೆ. ವಾಚಕ ಪಡೆಯುವುದು ಸದೃಶಾನುಭವವನ್ನೇ ಹೊರತು ಅದೇ ಅನುಭವವನ್ನಲ್ಲ ಎಂದು ಹೇಳುತ್ತಾರೆ. ಕ್ಲೈವ್ ಸ್ಯಾನ್‌ಸಂ ಹೇಳುವುದು ಗಮನಾರ್ಹ : ಕಾವ್ಯವೆಂದರೆ ಶಬ್ದಗಳ ಲಯಬದ್ಧ ರೂಪ : ಲೇಖಕನ ಕಲ್ಪನಾತ್ಮಕ–ಭಾವನಾತ್ಮಕ–ಬೌದ್ಧಿಕ ಅನುಭವವನ್ನು ವ್ಯಕ್ತ ಪಡಿಸುವಂಥದು ಮತ್ತು ವಾಚಕನ ಅಥವಾ ಶ್ರಾವಕನ ಚಿತ್ತದಲ್ಲಿ ಸದೃಶಾನುಭವವೊಂದನ್ನು ಅದು ಸೃಜಿಸುವ ರೀತಿಯಲ್ಲಿ ವ್ಯಕ್ತಪಡಿಸುವಂಥದು.

ಕಾವ್ಯಪ್ರಯೋಜನಗಳು ಹಲವು. ಕಾವ್ಯ ಯಶಸ್ವಿಗಾಗಿ, ಧನಾರ್ಜನೆಗಾಗಿ, ವ್ಯವಹಾರ ಜ್ಞಾನಕ್ಕಾಗಿ, ಅಮಂಗಳ ನಿವಾರಣೆಗಾಗಿ, ತತ್ಕಾಲದಲ್ಲಿ ಪರಮಾನಂದ ಪಡೆಯುವುದಕ್ಕಾಗಿ, ಕಾಂತೆಯಂತೆ ಉಪದೇಶಿಸುವುದಕ್ಕಾಗಿ ಎಂದು ಮುಮ್ಮಟನ ಎಣಿಕೆ. ಆದರೆ ರಸಾನಂದವನ್ನು ಅವನು ಎಲ್ಲ ಪ್ರಯೋಜನಗಳಿಗೂ ಕಿರೀಟಪ್ರಾಯವಾದುದು (ಸಕಲ ಪ್ರಯೋಜನಮೌಲಿಭೂತ) ಎಂದಿದ್ದಾನೆ. ಪಾಶ್ಚಾತ್ಯರದೂ ಇದೇ ನಿಲವು. ಆನಂದ ಕಾವ್ಯದ ಏಕೈಕ ಗುರಿಯಲ್ಲದಿದ್ದರೂ ಪ್ರಧಾನವಾದ ಗುರಿ. ಕವಿತೆ ಆನಂದಗೊಳಿಸುತ್ತಲೇ ತಿಳಿವಳಿಕೆ ನೀಡುತ್ತದೆ–ಎಂದಿದ್ದಾನೆ, ಡ್ರೈಡನ್ : ಕಲ್ಪನೆ ನೈತಿಕ ಒಳ್ಳಿನ ಸಾಧನ ಎಂಬುದು ಷೆಲ್ಲಿಯ ಉಕ್ತಿ, ಶಿವೇತರಕ್ಷತಯೇ ಎಂಬುದಕ್ಕೆ ಕಾವ್ಯ ಸಂವಾದಿಯಾದುದು. ಆದರೂ ಕಾವ್ಯ ಪುರುಷಾರ್ಥ ಸಾಧಕವಾದುದು ಎಂಬ ದೃಷ್ಟಿ ವಿಶೇಷವಾಗಿ ಭಾರತೀಯರದು.

ಕಾವ್ಯಕ್ಕೆ ಛಂದಸ್ಸು ಎಷ್ಟರಮಟ್ಟಿಗೆ ಆವಶ್ಯಕ ಎಂಬುದು ಇನ್ನೊಂದು ಮೂಲಭೂತವಾದ ಪ್ರಶ್ನೆ. ಛಂದಸ್ಸಿಲ್ಲದೆ ಕಾವ್ಯವಿಲ್ಲ ಎಂದು ಕೆಲವರ ಮತ. ಛಂದೋಬದ್ಧ ರಚನೆ ಎಂದೇ ಜಾನ್ಸನ್ ಕಾವ್ಯದ ಲಕ್ಷಣ ಹೇಳುತ್ತಾನೆ. ಆದರೆ ಛಂದಸ್ಸೊಂದೇ ಕಾವ್ಯದ ಅಳತೆಗೋಲಲ್ಲ; ವಾಸ್ತವವಾಗಿ ಎಷ್ಟೋ ಛಂದೋಬದ್ಧ ರಚನೆಗಳು ಕಾವ್ಯವೆ ಅಲ್ಲ; ಪ್ರಾಚೀನ ಭಾರತದಲ್ಲಿ ಎಲ್ಲ ಶಾಸ್ತ್ರಗಳನ್ನೂ ಪದ್ಯರೂಪದಲ್ಲೆ ಬರೆದಿಡುತ್ತಿದ್ದರು, ನೆನಪಿಟ್ಟುಕೊಳ್ಳುವ ಸೌಕರ್ಯಕ್ಕಾಗಿ, ಛಂದಸ್ಸು ಕಾವ್ಯಕ್ಕೆ ಅನಿವಾರ್ಯವಲ್ಲದಿದ್ದರೂ ಅಪೇಕ್ಷಣೀಯ; ಅದು ಕಾವ್ಯಪರಿಪೂರ್ಣತೆಯ ಒಂದಂಗ. ನಿಯತವಾದ ಛಂದಸ್ಸಿಲ್ಲದಿದ್ದರೂ ಅನಿಯತವಾದ ಲಯ ಕವಿತೆಗಿರಬೇಕು, ಇದ್ದೇ ಇರುತ್ತದೆ; ಏಕೆಂದರೆ, ಭಾವಪೂರ್ಣವಾಗಿ ಏನ್ನನ್ನೆ ಹೇಳಿದರೂ ಅದು ಲಯಾನ್ವಿತವಾಗಿಯೆ ಹೊಮ್ಮುತ್ತದೆ. ಕನ್ನಡ ವಚನಗಳು, ಠಾಕೂರರ ಗೀತಾಂಜಲಿ, ವಾಲ್ಟ್ ವಿಟ್ಮನ್ನನ ಲೀವ್ಸ್ ಆಫ್ ಗ್ರಾಸ್ ಮೇಲುನೋಟಕ್ಕೆ ಗದ್ಯದಂತೆ ಭಾಸವಾದರೂ ಅವುಗಳಲ್ಲಿ ಲಯವಿದೆ. ಇಂದಿನ ಕವಿತೆಯಲ್ಲಿ ಮುಕ್ತ ಛಂದಸ್ಸು, ಆಡುಮಾತಿನ ಲಯ ಕಂಡುಬರುತ್ತದೆ. ಗದ್ಯವಾಗದಿರುವುದಕ್ಕಾಗಿಯೇ ಕವಿತೆ ನಿರಂತರವಾಗಿ ಯತ್ನಿಸಿದೆ, ಎಂದೊಬ್ಬ ವಿಮರ್ಶಕ ಹೇಳಿದ್ದಾನೆ. ಛಂದಸ್ಸಿನ ವಿಷಯದಲ್ಲಿ ಭಾರತೀಯ ದೃಷ್ಟಿ ಖಚಿತವಾದದ್ದು, ಛಂದಸ್ಸು ಅದು ಅನಿವಾರ್ಯವೆಂದು ಒಪ್ಪಿಲ್ಲ: ಕಾವ್ಯೇಷು ನಾಟಕಂ ರಮ್ಯಂ ಎಂಬ ಉಕ್ತಿಯನ್ನು ಸ್ಮರಿಸಬಹುದು. ಗದ್ಯಕಾವ್ಯ ಪದ್ಯಕಾವ್ಯಗಳೆರಡನ್ನೂ ಕಾವ್ಯವೆಂದು ಹಿಂದಿನವರು ಪರಿಗಣಿಸಿದ್ದರು. ನಾಟಕವನ್ನು ದೃಶ್ಯ ಕಾವ್ಯವೆಂದೂ ಉಳಿದುದನ್ನು ಶ್ರವ್ಯಕಾವ್ಯವೆಂದೂ ಕರೆಯುತ್ತಿದ್ದರು. ರಸಾತ್ಮಕವಾದುದೆಲ್ಲ ಅವರ ಪಾಲಿಗೆ ಕಾವ್ಯವಾಗಿತ್ತು. ಆದರೆ ಕಾದಂಬರಿಯಂಥ ಗದ್ಯಕಾವ್ಯಗಳಲ್ಲೂ ಲಯವನ್ನು ಗುರುತಿಸಬಹುದು. ಅಂತೂ ಲಯ ಕವಿತೆಗೆ ಮುಖ್ಯವಾದುದು. ಈ ದೃಷ್ಟಿಯಿಂದ, ಕಾವ್ಯವನ್ನು ಸಂಗೀತಾತ್ಮಕ ಆಲೋಚನೆ ಎಂದು ಕಾರ್ಲೈಲ್, ಸೌಂದರ್ಯದ ಲಯಬದ್ಧ ಸೃಷ್ಟಿ ಎಂದು ಪೋ ಕರೆದುದು ಉಚಿತವೇ ಆಗಿದೆ.

ಕಾವ್ಯವನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಾಸ ಮಾಡಲಾಗಿದೆ; ಆಯಾ ದೃಷ್ಟಿಗನುಸಾರವಾಗಿ ಬೇರೆ ಬೇರೆ ವಿಮರ್ಶವಿಧಾನಗಳು ರೂಪಗೊಂಡಿವೆ. ಇತಿಹಾಸದ ಹಿನ್ನೆಲೆಯಲ್ಲಿ, ಕವಿಯ ವೈಯಕ್ತಿಕ ಜೀವನದ ಹಿನ್ನೆಲೆಯಲ್ಲಿ ಕಾವ್ಯವನ್ನು ನೋಡುವ ಪ್ರಯತ್ನಗಳು ನಡೆದಿವೆ, ತಂತ್ರದ ದೃಷ್ಟಿಯಿಂದ–ಶೈಲಿ ಛಂದಸ್ಸು ಅಲಂಕಾರಗಳನ್ನು ಗಮನಿಸಿ–ಅದನ್ನು ವಿವೇಚಿಸುವುದುಂಟು. ಅದನ್ನೊಂದು ಸಾಮಾಜಿಕ ಸಂಗತಿಯನ್ನಾಗಿ ಪರಿಗಣಿಸಿದವರಿದ್ದಾರೆ. ಮನೋವೈಜ್ಞಾನಿಕ ದೃಷ್ಟಿ ಎಲ್ಲಕ್ಕಿಂತ ಮುಖ್ಯವಾದುದು; ಇಲ್ಲಿಯೂ ಎರಡು ಪಕ್ಷಗಳಿವೆ. ಕಾವ್ಯ ಕವಿಯ ವೈಯಕ್ತಿಕ ಜೀವನದ ಅಭಿವ್ಯಕ್ತಿ ಎಂಬುದು ಒಂದು ಸಿದ್ಧಾಂತ; ಫ್ರಾಯ್ಡ್ ಇದನ್ನು ಪ್ರತಿನಿಧಿಸುತ್ತಾನೆ. ಅದು ಸಮಷ್ಟಿಪ್ರಜ್ಞೆಯ ಅಭಿವ್ಯಕ್ತಿ ಎಂಬುದು ಮತ್ತೊಂದು ವಾದ; ಯೂಂಗ್ ಇದರ ಪ್ರತಿಪಾದಕ. ಅವನ ಪ್ರಕಾರ ಕಲೆಯಲ್ಲಿ ವೈಯಕ್ತಿಕತೆಯೊಂದು ಪಾಪ. ಉನ್ನತ ಕವಿತೆ ಮನುಕುಲದ ಬದುಕಿನಿಂದ ತನ್ನ ಶಕ್ತಿಯನ್ನು ಪಡೆದುಕೊಳ್ಳುತ್ತದೆ; ಅದನ್ನು ವೈಯಕ್ತಿಕಾಂಶಗಳಿಂದ ನಿಷ್ಪತ್ತಿಗೊಳಿಸಲು ಯತ್ನಿಸಿದರೆ ಅದರ ಅರ್ಥವನ್ನು ಪೂರ್ತಿ ಕಳೆದುಕೊಳ್ಳುತ್ತೇವೆ ಎಂದು ಯೂಂಗ್ ಹೇಳುತ್ತಾನೆ. ಸಾಹಿತ್ಯದಲ್ಲಿ ಕಂಡುಬರುವ ಆದಿಪ್ರತಿಮೆಗಳ ಮೇಲೆ ಅವನ ಸಮಷ್ಟಿಪ್ರಜ್ಞೆಯ ತತ್ತ್ವ ಬೆಳಕು ಚೆಲ್ಲುತ್ತದೆ. ಕಾವ್ಯ ಕವಿಯ ವೈಯಕ್ತಿಕ ಭಾವಗಳ ಅಭಿವ್ಯಕ್ತಿಯಾಗಿರಬಹುದು. ಆದರೆ ಅದು ಕೇವಲ ಖಾಸಗಿಯಾಗಿರದೆ ಸಾರ್ವತ್ರಿಕತೆಯನ್ನುಳ್ಳದ್ದಾಗಿರಬೇಕು.

ಕಾವ್ಯವನ್ನು ಮುಖ್ಯವಾಗಿ ಎರಡು ವಿಭಾಗ ಮಾಡುತ್ತಾರೆ : ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ (ನಾಟಕೀಯ ಎಂಬುದೊಂದನ್ನು ಎಲಿಯಟ್ ಸೇರಿಸುತ್ತಾನೆ) ಮಹಾಕಾವ್ಯ , ಕಥನ ಕವನ, ಲಾವಣಿ ರೊಮಾನ್ಸ್, ಇತಿವೃತ್ತ ಕವಿತೆ–ಮುಂತಾದ ಪ್ರಕಾರಗಳು ವಸ್ತುನಿಷ್ಠ ವಿಭಾಗದಲ್ಲಿ ಸೇರುತ್ತವೆ. ವ್ಯಕ್ತಿನಿಷ್ಠ ವಿಭಾಗ ಭಾವಗೀತೆಗಳ ಪ್ರಾಂತ ; ಇದರಲ್ಲಿ ಮತ್ತೆ ಪ್ರಗಾಥ, ಶೋಕಗೀತೆ, ಸಾನೆಟ್ ಮುಂತಾದ ಒಳ ಜಾತಿಗಳಿವೆ.

ಕಾವ್ಯಕ್ಷೇತ್ರಗಳಲ್ಲಿ ಕಾಲಕಾಲಕ್ಕೆ ಬೇರೆ ಬೇರೆ ಚಳವಳಿಗಳು ನಡೆದು ಪಂಥಗಳು ಹುಟ್ಟಿಕೊಂಡುದನ್ನು ನೋಡುತ್ತೇವೆ. ಪಾಶ್ಚಾತ್ಯರಲ್ಲಿ ಕ್ಲಾಸಿಕ್ ಕಾವ್ಯ, ರೊಮ್ಯಾಂಟಿಕ್ ಕಾವ್ಯ, ಮೆಟಫಿಸಿಕಲ್ ಕಾವ್ಯ, ಪ್ರತಿಮಾನಿಷ್ಠ ಕಾವ್ಯ, ಸಂಕೇತನಿಷ್ಠ ಕಾವ್ಯ, ಸರ್‌ರಿಯಲಿಸ್ಟಿಕ್ ಕಾವ್ಯ ಇತ್ಯಾದಿಯಾಗಿ ಹಲವು ಪ್ರಸ್ಥಾನಗಳಿವೆ. ಕನ್ನಡದಲ್ಲಿ ಈ ಶತಮಾನದಲ್ಲಿ ನವೋದಯ (ರೆನೆಸ಼ಾನ್ಸ್) ಕಾವ್ಯ ಹಾಗೂ ನವ್ಯಕಾವ್ಯ ಎಂಬ ಎರಡು ಘಟ್ಟದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು; ಇವುಗಳ ನಡುವಣ ಭೇದ ಗಮನಾರ್ಹವಾದುದು. ವಸ್ತುತಃ ಒಂದು ಪಂಥಕ್ಕೂ ಮತ್ತೊಂದಕ್ಕೂ ಇರುವ ವ್ಯತ್ಯಾಸ ಕಾವ್ಯದ ತಿರುಳಿಗೆ ಸಂಬಂಧಿಸಿದ್ದಲ್ಲ, ತಂತ್ರಕ್ಕೆ ಸಂಬಂಧಿಸಿದ್ದು. ಕಾವ್ಯದ ಆತ್ಮ ಯಾವಾಗಲೂ ಒಂದೇ; ಕಾಲ ಕಾಲಕ್ಕೆ ಹೊಸ ಹೊಸ ರೂಪ ತಳೆಯುತ್ತದೆ.

ಒಂದು ಕಾಲದಲ್ಲಿ ಕಾವ್ಯದ ಬಗ್ಗೆ ತೀವ್ರವಾದ ಆಕ್ಷೇಪಣೆಗಳಿದ್ದುದನ್ನು ನೆನೆಯಬೇಕು. ಕವಿಗಳು ಭಾವೋದ್ದೀಪನದ ಮೂಲಕ ದೌರ್ಬಲ್ಯವನ್ನುಂಟುಮಾಡುತ್ತಾರೆಂದೂ ಅವರನ್ನು ಆದರ್ಶರಾಜ್ಯದಿಂದ ಬಹಿಷ್ಕರಿಸಬೇಕೆಂದೂ ಗ್ರೀಕ್ ದಾರ್ಶನಿಕ ಪ್ಲೇಟೊ ಸಲಹೆ ಮಾಡಿದ್ದ. ಭರತಖಂಡದಲ್ಲೂ ಎಂದೋ ಒಮ್ಮೆ ಕಾವ್ಯಾಲಾಪವನ್ನು ಬಿಡತಕ್ಕದ್ದು ಎಂಬ ಘೋಷಣೆ ಮೊಳಗಿದಂತೆ ತೋರುತ್ತದೆ. ಅರಿಸ್ಟಾಟಲ್ ತನ್ನ ಕಾವ್ಯಮೀಮಾಂಸೆಯಲ್ಲಿ ಪ್ಲೇಟೂವಿನ ಆರೋಪಗಳಿಗೆ ಸಮರ್ಪಕವಾದ ಉತ್ತರವಿತ್ತು ಕಾವ್ಯವನ್ನು ಉಜ್ಜ್ವಲವಾಗಿ ಸಮರ್ಥಿಸಿದ್ದಾನೆ. ಕಾವ್ಯ ಇತಿಹಾಸಕ್ಕಿಂತ ಉನ್ನತವೂ ತಾತ್ತ್ವಿಕವೂ ಆದದ್ದು ಎಂಬ ಅವನ ಸೂತ್ರ ಪ್ರಸಿದ್ಧವಾಗಿದೆ. ಇತಿಹಾಸ ನಡೆದ ಸಂಗತಿಯನ್ನಷ್ಟೇ ಹೇಳುತ್ತದೆ, ಕಾವ್ಯ ನಡೆಯಬಹುದಾದ ಸಂಗತಿಯನ್ನು ಹೇಳುತ್ತದೆ. ಇತಿಹಾಸಕ್ಕಿರುವ ಕಾಲದೇಶಗಳ ಕಟ್ಟು ಕಾವ್ಯಕ್ಕಿಲ್ಲ; ಅದು ಇರುವುದನ್ನೂ ಮಾತ್ರವೇ ನಿರೂಪಿಸುವುದಿಲ್ಲ, ಇರಬೇಕಾದುದನ್ನೂ ನಿರೂಪಿಸುತ್ತದೆ. ಷೆಲ್ಲಿ ಕವಿಗಳನ್ನು ಜಗತ್ತಿನ ಅನಧಿಕೃತ ಶಾಸನಕರ್ತರೆಂದು ಕರೆದಿದ್ದಾನೆ.

ಎಷ್ಟೇ ವಿವರಣೆಗಳನ್ನು ಕೊಟ್ಟರೂ ಕಾವ್ಯದ ರಹಸ್ಯವನ್ನು ಪೂರ್ಣವಾಗಿ ಭೇದಿಸುವುದು, ಅದರ ಬಗ್ಗೆ ಕಡೆಯ ಮಾತು ಹೇಳುವುದು ಶಕ್ಯವಿಲ್ಲ. ಅದು ನಿಯಮಗಳಿಗೆ ನಿಲುಕದು. ಅದೊಂದು ಮೋಡಿ; ' ಅದೊಂದು ಚೈತನ್ಯ. ಅದೆಲ್ಲಿಂದ ಬರುತ್ತದ್ದೋ ನಾವರಿಯೆವು. ನಾವು ಅಪ್ಪಣೆ ಮಾಡಿದಾಗ ಅದು ನುಡಿಯದು ಅಥವಾ ನಮ್ಮ ಭಾಷೆಯಲ್ಲಿ ಉತ್ತರಿಸದು. ಅದು ನಮ್ಮ ಆಳಲ್ಲ, ಅರಸು' ಎಂಬ ಬ್ರಾಡ್ಲೆಯ ಮಾತು ಮಾರ್ಮಿಕವಾಗಿದೆ.

ಪದ್ಯಕ್ಕೂ ಕಾವ್ಯಕ್ಕೂ ಇರುವ ವ್ಯತ್ಯಾಸವನ್ನು ವಿಮರ್ಶಕರು ಬಹು ಹಿಂದೆಯೇ ಗುರುತಿಸಿದರು. ಛಂದೋಬದ್ಧ ರಚನೆ ಎಲ್ಲ ಕಾವ್ಯವಲ್ಲ. ಗದ್ಯ, ಕಾವ್ಯ ಎಂಬ ಎರಡು

ಮಾಧ್ಯಮಗಳಿವೆ; ಎರಡು ಮಾಧ್ಯಮಗಳಿರುವಾಗ ಅವುಗಳಲ್ಲಿ ವ್ಯತ್ಯಾಸಗಳಿರಲೇ ಬೇಕು. ಕಾವ್ಯವು ಸಾಧಿಸುವುದನ್ನು ಗದ್ಯವು ಸಾಧಿಸಲಾರದು. ಲಯವಿಲ್ಲದ ಕಾವ್ಯವಿಲ್ಲ, ಲಯಕ್ಕೆ ಒಂದು ಶಕ್ತಿ ಇದೆ, ಅದು ತನ್ನದೇ ಆದ ಜಗತ್ತನ್ನು ಸೃಷ್ಟಿಸುತ್ತದೆ. ಹೃದಯದ ಬಡಿತ, ಹಗಲು–ರಾತ್ರಿಗಳ ಕ್ರಮ, ಋತುಗಳ ಕ್ರಮ, ಎಲ್ಲ ಲಯಬದ್ಧ, ಲಯವು ಸೃಷ್ಟಿಯ ಹೃದಯದಲ್ಲಿದೆ, ಆದುದರಿಂದ ಅದಕ್ಕೆ ವಿಶಿಷ್ಟ ಶಕ್ತಿ ಎಂದು ಕೆಲವರು ವಿಮರ್ಶಕರ ಅಭಿಪ್ರಾಯ. ಲಯ, ಪ್ರತಿಮೆಗಳು, ವಿಶಿಷ್ಟ ರಚನೆ (ಕವನದ ರಚನೆಯು ಗದ್ಯದ ತರ್ಕಬದ್ಧ ರಚನೆಯಲ್ಲಿ)–ಇವುಗಳಿಂದಾಗಿ ಕಾವ್ಯವು ತನ್ನದೇ ಸುಸಂಬದ್ಧ ಜಗತ್ತನ್ನು ಸೃಷ್ಟಿಸುತ್ತದೆ. ಗದ್ಯವು ಅಭಿವ್ಯಕ್ತಿಗೊಳಿಸಲಾಗದ ಭಾವಸೂಕ್ಷ್ಮತೆಯನ್ನು, ಅನುಭವವನ್ನು ಕವನ ಅಭಿವ್ಯಕ್ತಿಗೊಳಿಸುತ್ತದೆ. ಕವನದಲ್ಲಿ ಶಬ್ದಗಳ ಕ್ರಮ ಮತ್ತು ನಾದಗಳೂ ಪರಿಣಾಮ ಬೀರುವುದರಲ್ಲಿ ಪಾತ್ರವಹಿಸುತ್ತವೆ. ಕವನದ ಲಯ, ಶಬ್ದಗಳು, ಅವುಗಳ ಜೋಡಣೆಯಿಂದ ಸೃಷ್ಟಿಯಾಗುವ ನಾದಭಾಗ (ಕವನವನ್ನು ಗಟ್ಟಿಯಾಗಿಯೇ ಓದಬೇಕು), ಪ್ರತಿಮೆಗಳು ಇವೆಲ್ಲ ಸೇರಿ, ಕವನದಲ್ಲಿ ಸಂಗ್ರಹಿಸಿ ಗದ್ಯದಲ್ಲಿ ಹೇಳಬಹುದಾದ ಸಾರಾಂಶಕ್ಕಿಂತ ತೀರ ಭಿನ್ನವಾದ, ಅದನ್ನು ಮೀರಿದ ಅನುಭವವನ್ನು ಕಟ್ಟಿಕೊಡುತ್ತವೆ, ಮಹಾಕಾವ್ಯವು ದೀರ್ಘವಾಗಿದ್ದು ಕಥೆಯನ್ನು ಹೇಳುವುದರಿಂದ ಅದರಲ್ಲಿ ಕಾದಂಬರಿಯ ಕೆಲವು ಲಕ್ಷಣಗಳು ಪ್ರಕಟವಾಗಬಹುದು. ಆದರೆ ಕಥನ ಕವನವನ್ನು ವಿಶಿಷ್ಟವಾಗಿ ಪರಿಗಣಿಸಿ ಉಳಿದ ಕಾವ್ಯದ ಬಗೆಗೆ ಮಾತನಾಡುವುದಾದರೆ, ಕಾವ್ಯವು ಗದ್ಯಕ್ಕೆ ಎಟುಕದ ಅನುಭವವನ್ನು ಸಮಗ್ರವಾಗಿ, ಅದರ ಸಂಕೀರ್ಣತೆಗೆ ಊನ ಬಾರದಂತೆ, ಕಟ್ಟಿಕೊಡುತ್ತದೆ. ಶಬ್ದಗಳು, ಅವುಗಳ ಜೋಡಣೆ, ನಾದ, ಲಯ, ಛಂದಸ್ಸು, ಪ್ರತಿಮೆಗಳು ಎಲ್ಲದರ ಮೂಲಕ ಅದು ಅನುಭವವನ್ನು ಪುನರ್‌ಸೃಷ್ಟಿ ಮಾಡುತ್ತದೆ. (ಸಿ.ಪಿ.ಕೆ.)

**ಕಾವ್ಯದ ಸುವರ್ಣಯುಗ :** ಆಂಗ್ಲ ಸಾಹಿತ್ಯ ಚರಿತ್ರೆಯಲ್ಲಿ 18ನೆಯ ಶತಮಾನದ ಕೊನೆಯಿಂದ 19ನೆಯ ಶತಮಾನದ ಕೊನೆಯವರೆಗೂ ಎಂದರೆ ಸು.120 ವರ್ಷಗಳ ಅವಧಿಯನ್ನು ಆಂಗ್ಲ ಸಾಹಿತ್ಯದ ಸುವರ್ಣಯುಗವೆನ್ನುತ್ತಾರೆ. ರಮ್ಯಸಾಹಿತ್ಯದಲ್ಲಿ ಅಮರರಾಗಿರುವ ವರ್ಡ್ಸ್‌ವರ್ತ್, ಕೋಲ್‌ರಿಜ್, ಬೈರನ್, ಷೆಲ್ಲಿ, ಕೀಟ್ಸ್ ಮೊದಲಾದವರ ಕೃತಿಗಳ ವಿಚಾರವನ್ನಿಲ್ಲಿ ಪ್ರಸ್ತಾಪಿಸಲಾಗಿದೆ.

18ನೆಯ ಶತಮಾನದಲ್ಲಿ ರಾಜಕೀಯ ಮತ್ತು ವಿಜ್ಞಾನದ ಬದಲಾವಣೆಗಳ ಪ್ರಭಾವ ಸಾಹಿತ್ಯಪ್ರಪಂಚದ ಮೇಲೂ ಸಾಕಷ್ಟು ಆಯಿತು. ಬೆನ್‌ತಮ್ ಮತ್ತು ಸ್ಟೂಅರ್ಟ್ ಮಿಲ್ ಅವರ ಬರೆವಣಿಗೆಗಳಿಂದ ಜನಜೀವನದಲ್ಲಿ ಅನೇಕ ರೀತಿಯ ಬದಲಾವಣೆಗಳು ಕಂಡುಬಂದುವು. ಸಾಹಿತ್ಯರಚನೆಯಲ್ಲಿಯೂ ತೀವ್ರವಾದ ಬದಲಾವಣೆಗಳಾದುವು. ಕವಿಗಳು ಹೊಸ ಹುರುಪಿನಿಂದ ಬರೆಯತೊಡಗಿದರು. ಈ ರೀತಿಯ ಬದಲಾವಣೆಗಳು ಒಂದೆರಡು ದಿನಗಳಲ್ಲಿ ಆದುವಲ್ಲ. ಫ್ರಾನ್ಸಿನ ಮಹಾಕ್ರಾಂತಿ ಜನಗಳ ಮನಸ್ಸಿನಲ್ಲಿ ಹೊಸ ಅಭಿಪ್ರಾಯಗಳನ್ನು ಮೂಡಿಸಿತ್ತು. ಜನಗಳ ದೃಷ್ಟಿಕೋನ ಬದಲಾಯಿಸಿತ್ತು. ಕಾವ್ಯವಸ್ತುಗಳು ಜನಜೀವನಕ್ಕೆ ತೀರ ನಿಕಟವರ್ತಿಯಾಗತೊಡಗಿದ್ದುವು. ರಾಜಮಹಾರಾಜರು, ದೇವರುಗಳು, ಸಾಧ್ಯವಾದಷ್ಟು ದೂರ ಸರಿದಿದ್ದರು. ನಗರ ಜೀವನದಿಂದ ಹಳ್ಳಿಗಾಡಿನ ಕಡೆಗೆ ಕವಿಗಳು ತಮ್ಮ ದೃಷ್ಟಿ ಹರಿಸಿದ್ದರು. ಈ ರೀತಿ ಮಾಡಿದುದರಿಂದ ಕಾವ್ಯಪ್ರಪಂಚಕ್ಕೂ ಜನ ಸಾಮಾನ್ಯರಿಗೂ ಸಂಬಂಧ ಕಲ್ಪನೆಯಾಯಿತು. ಸಾಹಿತ್ಯ ಸರ್ವತೋಮುಖವಾಗಿ ಬೆಳೆದು ಜನಜೀವನದ ಪ್ರತಿಬಿಂಬವಾಯಿತು. ಅಂದಿನ ಯುಗವನ್ನು ರಮ್ಯ (ರೊಮ್ಯಾಂಟಿಕ್) ಯುಗವೆಂದೂ ಕರೆಯುತ್ತಾರೆ. ಇದು ಆಂಗ್ಲಸಾಹಿತ್ಯದ ಕಾವ್ಯ ಸೃಷ್ಟಿಯಲ್ಲಿ ನಿಜಕ್ಕೂ ಸುವರ್ಣಯುಗ. ಕಾವ್ಯವಸ್ತುವನ್ನೇ ಅಲ್ಲ, ಕಾವ್ಯದ ಭಾಷೆಯನ್ನು ಬದಲಾಯಿಸಿ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮಾಡಿದ ಕೀರ್ತಿ ರಮ್ಯ ಕವಿಗಳಿಗೆ ಸೇರಿದ್ದು. ಅಭಿಜಾತ (ಕ್ಲಾಸಿಕಲ್) ಪದ್ಧತಿಯಲ್ಲಿದ್ದ ಕಾವ್ಯದ ಕಠಿಣಭಾಷೆ, ಗ್ರೀಕ್ ಪುರಾಣದ ಪ್ರಸ್ತಾಪಗಳು ಇಲ್ಲವಾದುವು. ಆದುದರಿಂದ ಸಾಹಿತ್ಯ ಸುಲಭವೂ ಆಯಿತು, ಪ್ರಿಯವೂ ಆಯಿತು. ಈ ರೀತಿಯಾದ ಸಾಧನೆ ಪ್ರಾರಂಭವಾಗಿದ್ದು 18ನೆಯ ಶತಮಾನದ ಕೊನೆಯ ಭಾಗದ ಕವಿಗಳಿಂದ; ಆದರೆ ಅದರ ಪೂರ್ಣ ಯಶಸ್ಸು ಗಳಿಸಿದವರು 19ನೆಯ ಶತಮಾನದ ಕವಿಗಳು. ಇಂಥ ಸಾಹಿತ್ಯ ಇಂಗ್ಲಿಷ್ ಕಾವ್ಯ ಸೃಷ್ಟಿಯಲ್ಲಿ ಹಿಂದೆ ಎಂದೂ ಇರಲಿಲ್ಲ. ಆದುದರಿಂದ ಈ ಸುವರ್ಣಯುಗದ ಕೀರ್ತಿ ಮತ್ತು ನೆನಪು ಸದಾ ಉಳಿದಿದೆ.

18ನೆಯ ಶತಮಾನದ ಕೊನೆಯ ಭಾಗದಲ್ಲಿ ಬಂದ ಥಾಮಸ್ ಕಾಲಿನ್ಸ್, ಗ್ರೇ ಮತ್ತು ರಾಬರ್ಟ್ ಬರ್ನ್ಸ್ ಒಂದು ಗುಂಪಿಗೆ ಸೇರಿದ ಕವಿಗಳು. ಇವರೆಲ್ಲರೂ ಸಾಧಾರಣವಾಗಿ ತಮ್ಮ ಕಾಲದ ಜನಜೀವನದ ಆಸೆ ಆಕಾಂಕ್ಷೆಗಳನ್ನು, ಸುಖದುಃಖಗಳನ್ನು ತಮ್ಮ ಕವನಗಳಲ್ಲಿ ತೋಡಿಕೊಂಡಿದ್ದಾರೆ. ಇವರು ಹಳೆಯ ಸಂಪ್ರದಾಯದ ಕಾವ್ಯವಸ್ತು, ಕಾವ್ಯದ ಭಾಷೆ ಮತ್ತು ಕಾವ್ಯದ ರೀತಿಯನ್ನು ಬದಲಾಯಿಸಿದರು. ಕಾವ್ಯಗಳ ಕಥಾನಾಯಕರಾದ್ದ, ರಾಜ ಮಹಾರಾಜ ಬದಲು ಕುರುಬ ಕಮ್ಮಾರರು ಇವರ ಕಥಾನಾಯಕರಾದರು. ಎ ಮ್ಯಾನ್ ಈಸ್ ಎ ಮ್ಯಾನ್ ಫಾರ್ ಆಲ್ ದಟ್– ಎಂಬ ಗೀತೆಯಲ್ಲಿ ಬರ್ನ್ಸ್ ಈ ವಿಷಯವನ್ನು ಚೆನ್ನಾಗಿ ನಿರೂಪಿಸಿದ್ದಾನೆ. ಮೈ ಲವ್ ಈಸ್ ಲೈಕ್ ಎ ರೆಡ್ ರೆಡ್ ರೋಸ್– ಎಂಬ ಕವನ ಜನಸಾಮಾನ್ಯನೊಬ್ಬ ತನ್ನ ಪ್ರಿಯತಮೆಯನ್ನು ಎಷ್ಟು ಮಮತೆಯಿಂದ ಬಣ್ಣಿಸಬಹುದು ಎಂಬುದನ್ನು ತೋರಿಸುತ್ತದೆ. ಥಾಮಸ್ ಗ್ರೇ ಬರೆದಿರುವ "ಎಲಿಜಿ" ಇಂಗ್ಲಿಷ್ ಭಾಷೆ ತಿಳಿದಿರುವ ಪ್ರತಿಯೊಬ್ಬರಿಗೂ ಪರಿಚಿತವಾದ ಕವನ, ಹಳ್ಳಿಯೊಂದರ ಶ್ಮಶಾನವನ್ನು ನೋಡುತ್ತ ಓಕ್ ಮರಕ್ಕೆ ಒರಗಿ ನಿಂತಾಗ ಕವಿಗೆ ಆ ಹಳ್ಳಿಯ ಪೂರ್ವಿಕರ ಜೀವನದ ಕಷ್ಟಸುಖಗಳು, ಆಸೆನಿರಾಸೆಗಳು ಮನಃಪಟಲದ ಮೇಲೆ ಮೂಡಿಬರುತ್ತವೆ. ಸಂಜೆಯ ವರ್ಣನೆಯಿಂದ ಪ್ರಾರಂಭವಾಗುವ ಈ ಕವನ ಹಳ್ಳಿಯ ಜನಜೀವನವನ್ನೇ ಚಿತ್ರಿಸುತ್ತ ಹೋಗುತ್ತದೆ. ಶ್ರೀಮಂತರ ಸೊಕ್ಕು ಸಾವಿನಡಿಯಲ್ಲಿ ಅಡಗುತ್ತದೆಯಾದರೂ ಗುಡಿಗೋಪುರಗಳನ್ನು ಕಟ್ಟಿ ಸಾವಿನಲ್ಲಿಯೂ ಮೆರೆಯುವ ಶ್ರೀಮಂತರ ಅಹಂಕಾರವನ್ನು ಕವಿ ಹಳಿಯುತ್ತಾನಲ್ಲದೆ ಬಡವರ ಕಷ್ಟಕ್ಕೆ ಕಣ್ಣೀರಿಡುತ್ತಾನೆ. ಶಕ್ತಿಸಾಮರ್ಥ್ಯ ಇದ್ದರೂ ಅವಕಾಶವಿಲ್ಲದ ಆ ಜನ ಮೂಕ ಮಿಲ್ಟನ್‌ಗಳು ಶಕ್ತಿಹೀನ ಹ್ಯಾಮ್‌ಡನ್‌ಗಳು, ಹೆಸರಿಲ್ಲದ ಕ್ರಾಮವೆಲ್‌ಗಳು ಆಗಿಹೋದರು–ಎಂಬ ಮಾತು ಬರುತ್ತದೆ. ಅನರ್ಘ್ಯ ರತ್ನಗಳು ಸಮುದ್ರದಡಿಯಲ್ಲಿ ಅಡಗಿ ಪ್ರಕಾಶಿಸುವಂತೆ ಕಾಡಿನಲ್ಲಿ ಅರಳಿ ಸುಗಂಧವನ್ನು ಅರಣ್ಯಪಾಲು ಮಾಡಿದ ವನಸುಮಗಳಂತೆ ಹಳ್ಳಿಯ ಜನರಜೀವನ ಬೆಳಕು ಕಾಣಲಿಲ್ಲ ಎಂಬ ಮರುಕ ಕವಿಗುಂಟಾಗಿ ಅದಕ್ಕವನು ಸಮಾಧಾನವನ್ನು ಹೇಳುತ್ತಾನೆ. ನಾವು ಶ್ರೀಮಂತರಾಗಿಲ್ಲದಿರುವುದರಿಂದ ಪಾಪ ಮಾಡುವುದು ಕಡಿಮೆ. ದೇವರು ನಮ್ಮ ಮೇಲೆ ಹೆಚ್ಚು ಕರುಣೆ ಇಡುತ್ತಾನೆ ಎಂಬ ಭಾವನೆಯನ್ನೂ ಮೂಡಿಸುತ್ತಾನೆ. ಥಾಮಸ್ ಗ್ರೇ ಬರೆದಿರುವ ಇತರ ಕವನಗಳು ಇದರಷ್ಟು ಭಾವಮಯವಾಗಿಲ್ಲ. ಅವು ಕವಿಯ ಚತುರತೆಯನ್ನು ಮಾತ್ರ ತೋರುತ್ತವೆ. ಈ ರೀತಿಯಾಗಿ ಇಂಗ್ಲಿಷ್ ಕವಿಗಳ ಕಾವ್ಯಸೃಷ್ಟಿ ಬದಲಾಗತೊಡಗಿತು. ಕಠಿಣಶಬ್ದಗಳ ಬಳಕೆ ಕಡಿಮೆಯಾಯಿತು. ಪುರಾಣ ಕಥೆಗಳ ಪ್ರಸ್ತಾಪ ದೂರವಾಯಿತು. ಕವಿಯ ಭಾವನೆ ಕಾವ್ಯವಸ್ತು ಮತ್ತು ಕಾವ್ಯದ ಭಾಷೆ ಜನಜೀವನಕ್ಕೆ ಹತ್ತಿರ ಹತ್ತಿರ ಬರತೊಡಗಿದವು. ಈ ರೀತಿ ಬೆಳೆದು ಬಂದ ಆಂಗ್ಲ ಕಾವ್ಯವೃಕ್ಷ ಕವಲೊಡೆದು ಫಲಭರಿತವಾಗತೊಡಗಿದ್ದು 19ನೆಯ ಶತಮಾನದಲ್ಲಿ. ಅತ್ಯಂತ ಪ್ರತಿಭಾನ್ವಿತ ಕವಿಗಳು ಕಾದಂಬರಿಕಾರರು, ದಾರ್ಶನಿಕರು ಸಾರಸ್ವತ ಪ್ರಪಂಚದಲ್ಲಿ ಬೆಳಗಲಾರಂಭಿಸಿದರು. ಜಾನ್ಸನ್‌ರಂಥ ಮಹಾಮಹಿಮರು ಗೋಲ್ಡ್‌ಸ್ಮಿತ್ ಮತ್ತು ಸ್ಕಾಟ್‌ರಂಥ ಕಾದಂಬರಿಕಾರರು ತಮ್ಮ ಕೃತಿಗಳಿಂದ ಜನಮನವನ್ನು ರಂಜಿಸಿದುದಲ್ಲದೆ ಮಾರ್ಗದರ್ಶಕರೂ ಆದರು. ಕಾವ್ಯದೃಷ್ಟಿಯಿಂದ ಇನ್ನೊಂದು ಗುಂಪು ಬಹಳ ಪ್ರಾಧಾನ್ಯಕ್ಕೆ ಬಂತು. ಕಾವ್ಯರಚನೆಯಲ್ಲಿನ ಸಂಪ್ರದಾಯವನ್ನು ವಿರೋಧಿಸಿ ವಾಸ್ತವಿಕ ಜೀವನದ ನಡೆನುಡಿಗಳನ್ನೇ ಅನುಸರಿಸಬೇಕೆಂದೂ ನಗರಜೀವನದ ಕೃತಕ ಭಾಷೆ ಮತ್ತು ಕೃತಕ ಬಾಳಿನಿಂದ ನೈಸರ್ಗಿಕ ಜೀವನಕ್ಕೆ ಹಿಂತಿರುಗಬೇಕೆಂದೂ ಕ್ರಾಂತಿ ಎಬ್ಬಿಸಿದ ಗುಂಪಿಗೆ ನಾಯಕನಾಗಿದ್ದವ ವಿಲಿಯಂ ವರ್ಡ್ಸ್‌ವರ್ತ್ (1770–1850).

ರಮ್ಯ ಸಾಹಿತ್ಯ ಚಳವಳಿ ಪ್ರಾರಂಭವಾಗಿದ್ದು ವರ್ಡ್ಸ್‌ವರ್ತ್‌ನ ನಾಯಕತ್ವದಲ್ಲಿ. ಸ್ನೇಹಿತ ಕೋಲ್‌ರಿಜ್‌ನ ಬೆಂಬಲ, ಮಾರ್ಗದರ್ಶನ ಎರಡೂ ವರ್ಡ್ಸ್‌ವರ್ತನಿಗೆ ದೊರೆತವು. ಇವರಿಬ್ಬರ ಸ್ನೇಹ ಮತ್ತು ಕಾವ್ಯಸೃಷ್ಟಿ ಕಾವ್ಯದ ಸುವರ್ಣಯುಗದ ಹೊಂಬಿಸಿಲು. ವರ್ಡ್ಸ್‌ವರ್ತ್ ಕಾವ್ಯಸೃಷ್ಟಿಗಿಂತ ಮುಂಚೆ ಗದ್ಯರೂಪದಲ್ಲಿ ತನ್ನ ಧ್ಯೇಯಗಳನ್ನೆಲ್ಲ ಪ್ರತಿಪಾದಿಸಿದ. ಕಾವ್ಯದ ಭಾಷೆ ಜನರಾಡುವ ಭಾಷೆಯಾಗಿರಬೇಕು. ಕಾವ್ಯವಸ್ತು ನಿತ್ಯಜೀವನದಲ್ಲಿ ಕಾಣುವ ಸತ್ಯವಾಗಿರಬೇಕು. ಕಾವ್ಯಗಳು ಬರೀ ಕಲ್ಪನಾಲೋಕದಲ್ಲಿ ತೇಲುತ್ತ ನಿತ್ಯಸತ್ಯಕ್ಕೆ ದೂರವಾಗಬಾರದು ಎಂಬ ಅನೇಕ ಧ್ಯೇಯಗಳನ್ನು ಆತ ಜನರ ಮುಂದಿಟ್ಟ, ಹೊಸದು ಬಂದರೆ ಅವನ್ನು ಜರಿಯುವುದು ತಡೆಗಟ್ಟುವುದು ಸಂಪ್ರದಾಯಬದ್ಧರ ಪದ್ಧತಿ. ಇಂಗ್ಲೆಂಡಿನಲ್ಲೂ ಹಾಗೇ ನಡೆಯಿತು. ಅವರ ಸವಾಲನ್ನು ಮೆಟ್ಟಿನಿಂತು, ತನ್ನ ಧ್ಯೇಯ ನಿಯಮಗಳಿಗೆ ಅನುಸಾರವಾಗಿ ವರ್ಡ್ಸ್‌ವರ್ತ್ ಮತ್ತು ಕೋಲ್‌ರಿಜ್ ಇಬ್ಬರೂ ಸೇರಿ 1798ರಲ್ಲಿ ಲಿರಿಕಲ್ ಬ್ಯಾಲಡ್ಸ್ ಎಂಬ ಪದ್ಯಸಂಗ್ರಹವನ್ನು ಪ್ರಕಟಿಸಿದರು. ಆ ಪುಸ್ತಕ ಸಾಹಿತ್ಯ ಪ್ರಪಂಚದಲ್ಲಿ ಬಿರುಗಾಳಿ ಎಬ್ಬಿಸಿತು. ವರ್ಡ್ಸ್‌ವರ್ತ್ ಪ್ರಕೃತಿ ಸಹಜವಾದ ವಸ್ತುಗಳನ್ನು ಕೋಲ್‌ರಿಜ್ ಜನಮನದಲ್ಲಿ ಅಚಲವಾಗಿ ಬೇರೂರಿರುವ ಅಲೌಕಿಕ ವಸ್ತುಗಳನ್ನು ತಮ್ಮ ಕವನಗಳಲ್ಲಿ ಬಳಸಿದ್ದರು. ಇದರಿಂದ ಓದುಗರಿಗೆ ಹೊಸ ರೀತಿಯ ಅನುಭವ ಆಯಿತು. ಅವರ ಕಾವ್ಯದ ಭಾಷೆಯೋ ಎಲ್ಲರೂ ಮನೆಯಲ್ಲಾಡುವ ಸರಳಶಬ್ದಗಳ ಜೋಡಣೆ; ಕಾವ್ಯ ವಸ್ತುಗಳಂತೂ ಸಹಜ, ಮನಮೋಹಕ. ಮೈಕೇಲನಂಥ ಒಬ್ಬ ಸಾಧಾರಣ ಕುರುಬನ ಮನೆಯ ನಡೆನುಡಿ ಆಸೆ–ಆಕಾಂಕ್ಷೆ ತನ್ನ ಪಿತ್ರಾರ್ಜಿತ ಭೂಮಿಯ ಮೇಲೆ ಅವನಿಗಿದ್ದ ಮಮತೆ, ಮಗ ಲ್ಯೂಕನ ಮೇಲಿನ ಮೋಹ–ಇವು ಯಾವ ಸಿರಿವಂತನ ಭಾವನೆಗಳಿಗೂ ಕಡಿಮೆಯಿರಲಿಲ್ಲ. ಲಂಡನ್ನಿಗೆ ಹೋದ ಮಗ ಮರಳಿ ಬರಲಿಲ್ಲವಲ್ಲ ಎಂಬ ಕೊರಗಿನಲ್ಲಿ, ಕುರಿದೊಡ್ಡಿ ಕಟ್ಟಬೇಕೆಂಬ ಆಸೆಯಿಂದ ಶೇಖರಿಸಿದ್ದ ಕಲ್ಲುಗಳಲ್ಲಿ ಒಂದನ್ನೂ ಎತ್ತಲಾರದಷ್ಟು ಮೈಕೇಲ್ ಶಕ್ತಿಹೀನನಾದ. ಅದೇ ದುಃಖದಲ್ಲಿ ಮಣ್ಣಿಗೆ ಮರಳಿದ. ಅವನ ಹೆಂಡತಿ ಇಸಬೆಲ್ ಗಂಡನನ್ನು ಕೆಲವು ವಾರಗಳಲ್ಲಿ ಸೇರಿಕೊಂಡಳು. ಅವರಿದ್ದ ಮನೆ, ಅವರ ಪಿತೃಗಳ ಭೂಮಿಗಳ ಮೇಲೆ ಯಾರೋ ಶ್ರೀಮಂತರ ಮನೆಯ ನೇಗಿಲ ಕುಳ ಉಳುತ್ತಿತ್ತು.

ಮೈಕೇಲನಂಥ ಒಬ್ಬ ಸಾಧಾರಣ ಮನುಷ್ಯನ ಜೀವನ ಜನರ ಮನಸ್ಸನ್ನು ಕಲಕಿತು. ಕವನದ ಭಾಷೆಯಂತೂ ಮೈಕೇಲನ ಭಾಷೆಯಷ್ಟೇ ಸರಳವಾಗಿದ್ದುದು ಗಮನಾರ್ಹ. ಜನಸಾಮಾನ್ಯರಿಗೆ ಮೈಕೇಲ್ ಷೇಕ್ಸ್‌ಪಿಯರರ ಹ್ಯಾಮ್ಲೆಟ್, ಕ್ಲಿಯೋಪಾತ್ರ, ಪ್ರಾಸ್ಪರೊಗಳಷ್ಟು ದೂರದವನಾಗಿರಲಿಲ್ಲ. ಆತ ಸ್ಪೆನ್ಸರ್‌ನ ರೆಡ್ ಕ್ರಾಸ್–ನೈಟ್‌ನಷ್ಟು ನಂಬಲಾಗದ ಸುಗುಣ ಸಂಪನ್ನನಲ್ಲ, ಮಿಲ್ಟನನ ಸೇಟನನಷ್ಟು ಮಹಾ ಶಕ್ತನಲ್ಲ. ಮೈಕೇಲ್ ನಮ್ಮವ; ಅಥವಾ ನಮ್ಮ ನೆರೆಯವ, ಇದೇ ರೀತಿ ವರ್ಡ್ಸ್‌ವರ್ತ್ ಚಿಕ್ಕ ಮಗು ಲೂಸಿಯ ಕತೆ ಹೇಳಿದ್ದಾನೆ. ಮಗನನ್ನು ಕಳೆದುಕೊಂಡ ಮಾರ್ಗರೇಟ್‌ಳ ದುಃಖವನ್ನು ಬಣ್ಣಿಸಿದ್ದಾನೆ. ಇವರೆಲ್ಲರೂ ಜನಸಾಮಾನ್ಯರೇ. ವರ್ಡ್ಸ್‌ವರ್ತ್ ಬರೀ ಕತೆಗಳನ್ನು ಹೇಳಿ ಜನ ಮೆಚ್ಚಿಸಿದವನಲ್ಲ. ಅತ್ಯಂತ ಗಾಢವಾಗಿ, ಮನಸ್ಸನ್ನು ಪರಮಾರ್ಥದ ಕಡೆಗೆ ಆತ ಎಳೆದಿದ್ದಾನೆ. ಅವನ ಟಿಂಟರ್ನ್ ಅಬೆ ಮತ್ತು ಇಮ್ಮಾರ್ಟ್ಯಾಲಿಟಿಯನ್ನು ಕುರಿತ ಕವನಗಳು ಈ ಗುಂಪಿಗೆ ಸೇರಿದುವು. ಲೌಕಿಕ ಆಕರ್ಷಣೆಯಿಂದ ಸರ್ವಸ್ವವನ್ನೂ ದೇಹ ಸುಖಕ್ಕೇ ಮೀಸಲಾಗಿಡುವುದರ ವಿರುದ್ಧ ಟೀಕೆಯನ್ನು ವರ್ಡ್ಸ್‌ವರ್ತ್ ತನ್ನ ವರ್ಲ್ಡ್ ಈಸ್ ಟೂ ಮಚ್ ವಿತ್ ಅಸ್ ಎಂಬ ಸಾನೆಟ್‌ನಲ್ಲಿ ಒದಗಿಸಿದ್ದಾನೆ. ಒಬ್ಬ ವ್ಯಕ್ತಿ ತನ್ನ ಸ್ವಾತಂತ್ರ್ಯಕ್ಕೆ ಮತ್ತು ಉದ್ಯೋಗ ಗೌರವಕ್ಕೆ ಎಷ್ಟರಮಟ್ಟಿಗೆ ಬೆಲೆ ಕೊಡಬಹುದು ಎಂಬುದನ್ನು ಒಬ್ಬ ಜಿಗಣೆ ಹಿಡಿಯುವ ಮುದುಕನಿಂದ ಹೇಳಿಸಿದ್ದಾನೆ. ವರ್ಡ್ಸ್‌ವರ್ತ್‌ನ ಗದ್ಯಲೇಖನಗಳು ಬಹಳ ವಿಚಾರಪ್ರಚೋದಕವಾಗಿವೆ. ಕವಿ ಏನಾದರೂ ಬೋಧಿಸಬೇಕು, ಸಾಹಿತ್ಯ ಕೆಲವು ಭಾಗದಲ್ಲಿಯಾದರೂ ನೀತಿಬೋಧಕವಾಗಿರಬೇಕು–ಎಂಬುದು ವರ್ಡ್ಸ್‌ವರ್ತ್‌ನ ನಂಬಿಕೆ. ಪ್ರಕೃತಿದೇವಿಯ ಹಿರಿಯ ಭಕ್ತನಾದ ಕವಿ ತನ್ನ ನೆಚ್ಚಿನ ಲೇಕ್ ಜಿಲ್ಲೆಯಲ್ಲಿ ರೈಲುಮಾರ್ಗವನ್ನು ಹಾಕುವುದರ ವಿರುದ್ಧ ಭಾರಿ ಸಾರ್ವಜನಿಕ ಪ್ರತಿಭಟನಾ ಸಭೆಯನ್ನೇ ನಡೆಸಿದ. ಪ್ರಕೃತಿಯ ನಿಕಟಸಂಬಂಧದಿಂದ ಮಾನವನ ಜೀವನ ಸುಗಮವೂ ಶ್ರೀಮಂತವೂ ಆಗುತ್ತದೆ ಎಂಬುದೇ ಈತನ ನಂಬಿಕೆ. ಪ್ರಕೃತಿಯೇ ಇವನ ಸ್ನೇಹಿತ, ಉಪದೇಶಕ ಮತ್ತು ದಾರಿತೋರುಗ–ಎಲ್ಲ, ಬಹುಮುಖ ಪ್ರತಿಭೆಯ ಈ ಕವಿಗೆ ಅಂದಿನ ಬ್ರಿಟಿಷ್ ಸರ್ಕಾರ ಕವಿಸಾರ್ವಭೌಮನೆಂಬ ಬಿರುದು ಕೊಟ್ಟು ವರ್ಷಾಶನವಿತ್ತು ಗೌರವಿಸಿತು.

ಇಂಗ್ಲಿಷ್ ಸಾಹಿತ್ಯದ, ಪದ್ಯಕಾವ್ಯಸಂಪತ್ತಿನ ದೃಷ್ಟಿಯಿಂದ ನೋಡಿದರೆ ವರ್ಡ್ಸ್‌ವರ್ತ್ ಮಹೋನ್ನತ ಕವಿ. ಅನೇಕ ಹೆಸರಾಂತ ವಿಮರ್ಶಕರು ಈತನನ್ನು ಅತ್ಯಂತ ದೊಡ್ಡ ಕವಿಯೆಂದು ಕೊಂಡಾಡಿದ್ದಾರೆ.

ಕೋಲ್‌ರಿಜ್ ಕವಿ (1772–1834) ವರ್ಡ್ಸ್‌ವರ್ತನ ಪ್ರತಿಭೆಯ ಇನ್ನೊಂದು ಮುಖವನ್ನು ಪ್ರತಿಬಿಂಬಿಸುತ್ತಾನೆ. ಕಲ್ಪನಾಶಕ್ತಿಯಲ್ಲಿ ಈತ ವರ್ಡ್ಸ್‌ವರ್ತನಿಗಿಂತ ಮಿಗಿಲಾದವ. ಅತಿಮಾನುಷ ವಿಷಯವನ್ನೇ ಮೂಲವಾಗಿಟ್ಟುಕೊಂಡು ಅತ್ಯಂತ ಸುಂದರವಾದ ಕವಿತೆಗಳನ್ನು ಈತ ಬರೆದಿದ್ದಾನೆ. ಕ್ರಿಸ್ಟಬೆಲ್ ಕವನದಲ್ಲಿ ಬರುವ ಜೆರಾಲ್ಡೀನ್ ಮೋಹಿನಿ ಮನುಷ್ಯರಷ್ಟೇ ಸಹಜ ಸ್ವಭಾವದವಳಂತೆ ನಟಿಸುತ್ತಾಳೆ. ದಿ ಏನ್ಷಂಟ್ ಮ್ಯಾರಿನರ್ ಎಂಬ ಸಾಕಷ್ಟು ದೊಡ್ಡ ಕವನದಲ್ಲಿ ಕವಿ ಪ್ರೇತಪ್ರಪಂಚದ ಅದ್ಭುತ ಶಕ್ತಿಗಳನ್ನು ಬಳಸಿ ನಿಜವೆಂಬುವಷ್ಟರ ಮಟ್ಟಿಗೆ ಕವನದ ಕಥೆ ಬೆಳೆಸಿದ್ದಾನೆ. ನಾವಿಕ ಕಥೆ ಹೇಳುತ್ತಿದ್ದರೆ ಆತ ನಾವಿಕನೊ ಅಥವಾ ಅವನ ಪ್ರೇತವೋ ಎಂಬ ಅನುಮಾನ ಬರುವುದು ಕವನದ ಕೊನೆಯಲ್ಲಿ. ಈ ಎರಡು ಕವನಗಳಲ್ಲಿಯೂ ನೀತಿಬೋಧೆಯಿದೆ. ಜನಪ್ರೀತಿಯೇ ದೇವರ ಕೃಪೆ ಎಂಬ ಅಭಿಪ್ರಾಯ ಮನದಲ್ಲಿ ಮೂಡುತ್ತದೆ. ಕುಬ್ಲಖಾನ್ ಕವಿತೆ ಕ್ರಿಸ್ಟಬೆಲ್‌ನಂತೆ ಅಪೂರ್ಣ. ಚೀನ ದೇಶದ ಖಾನ ಅರಮನೆ ಕಟ್ಟಿಸುತ್ತಿರುವ ವರ್ಣನೆ, ಅದರಲ್ಲಿ ಬರುವ ನೀರು ಸೂಸುತ್ತಿರುವ ಸಮುದ್ರದ ಅಲೆಗಳು, ನೀಲಿಯ ಆಕಾಶ ಮತ್ತು ಇತರ ಹಿನ್ನೆಲೆಗಳು ಕಲ್ಪನೆಯ ಕಟ್ಟಡಕ್ಕೆ ಮೆರಗು ಕೊಡುತ್ತವೆ. ಫ್ರಾಸ್ಟ್ ಎಟ್ ಮಿಡ್‌ನೈಟ್ ಕವಿತೆಯಲ್ಲಿ ತನ್ನ ಮಗುವನ್ನು ತೂಗಿ ಮಲಗಿಸುವಾಗ ಮಗುವಿನ ಮುಖದಲ್ಲಿ ಮಿನುಗುವ ನಗು, ಮಂದಹಾಸಗಳು ತುಂಬ ಸುಂದರವಾಗಿ ಚಿತ್ರಿತವಾಗಿವೆ. ಕವಿ ವಿಮರ್ಶಾಸಾಹಿತ್ಯಕ್ಕೆ ಉತ್ತಮ ಕೊಡುಗೆ ನೀಡಿದ್ದಾನೆ, ಬಯೊಗ್ರಾಫಿಯ ಲಿಟರೇರಿಯ ವಿಮರ್ಶಾ ಗ್ರಂಥಗಳಲ್ಲಿ ಅಮೂಲ್ಯವಾದುದು. ಅಲ್ಲದೆ ಕೋಲ್‌ರಿಜ್ ಷೇಕ್ಸ್‌ಪಿಯರ್‌ನ ಅನೇಕ ಪಾತ್ರಗಳ ಮೇಲೆ ಪಾಂಡಿತ್ಯಪೂರ್ಣ ವಿಮರ್ಶೆ ಬರೆದಿದ್ದಾನೆ. ಸಂಸಾರಜೀವನದಲ್ಲಿ ಸುಖವಿಲ್ಲದಿದ್ದರೂ ಸ್ನೇಹಿತರೊಂದಿಗೆ ಸಂತೋಷವಾಗಿದ್ದ ಕವಿಗೆ ಅಫೀಮು ಸೇವನೆಯ ಚಟವಿತ್ತು. ಅದರ ಸೇವನೆ ಅತಿಯಾಗಿ 1834ರಲ್ಲಿ ಈತ ಮರಣಹೊಂದಿದ.

ರಮ್ಯಕಾವ್ಯದ ಕ್ರಾಂತಿಯ ಹಿರಿಯ ನಾಯಕರಲ್ಲೊಬ್ಬನಾದ ಕೋಲ್‌ರಿಜ್‌ನ ಹೆಜ್ಜೆಯಲ್ಲಿ ನಡೆದು ಬಂದವರಲ್ಲಿ ಬೈರನ್ ಕವಿ ಮುಖ್ಯನಾದವ.

ಹುಟ್ಟಿನಿಂದಲೇ ಶ್ರೀಮಂತನಾದ ಬೈರನ್ (1788–1824) ಸ್ವಾತಂತ್ರ್ಯ ಪ್ರೇಮಗಳಿಗೆ ಹೆಸರಾದವ. ತನ್ನ ರಾಷ್ಟ್ರ ಸ್ವತಂತ್ರವಾಗಿದ್ದರೆ ಸಾಲದು, ಪ್ರಪಂಚದ ಎಲ್ಲ ರಾಷ್ಟ್ರಗಳೂ ಸ್ವತಂತ್ರವಾಗಿರಬೇಕೆಂಬ ಬಯಕೆ ಈತನದು. ಇಂಗ್ಲೆಂಡಿನ ಸರ್ಕಾರ ಇಂಥ ಕ್ರಾಂತಿಕಾರರಿಗೆ ಪ್ರೋತ್ಸಾಹ ಕೊಡುತ್ತಿರಲಿಲ್ಲ. ಅನೇಕ ವೇಳೆ ಬೈರನ್ ಯುರೋಪು ಖಂಡದ ಅನೇಕ ರಾಷ್ಟ್ರಗಳಲ್ಲಿ ಸಂಚರಿಸುತ್ತಿದ್ದ. ದೇಶಪ್ರೇಮಿಗಳ ಕತೆಗಳು ಇವನಿಗೆ ಪ್ರಿಯ. ಇವನ ಪ್ರಸಿದ್ಧ ಕವನಗಳಾದ ಡಾನ್‌ವಾನ್ ಮತ್ತು ಚೈಲ್ಡ್ ಹೆರಾಲ್ಡ್ ಕವಿಯ ಸಂಚಾರಗಳನ್ನೂ ಆ ಮೂಲಕ ಸ್ವಾತಂತ್ರ್ಯದ ಕತೆಯನ್ನೂ ಸಾರುತ್ತವೆ. ಡಾನ್‌ವಾನಿನಲ್ಲಿ ಬರುವ ಅನೇಕ ಹಾಡುಗಳಲ್ಲಿ ಖ್ಯಾತವಾದುದು ಐಲ್ಸ್ ಆಫ್ ಗ್ರೀಸ್ ಎಂಬುದು. ಪರ್ಷಿಯ ದೇಶದವರಿಗೆ ಸೋತಿದ್ದ ಗ್ರೀಕರನ್ನು ತನ್ನ ಈ ಪದ್ಯದಿಂದ ಹುರಿದುಂಬಿಸಿದ ಕೀರ್ತಿ ಬೈರನ್‌ನಿಗೆ ಸೇರಿದ್ದು. ತನ್ನ ಕವಿತೆಗಳಲ್ಲಿ ಕೆಲವು ಕಡೆ ವ್ಯಂಗ್ಯವನ್ನು ತೋರಿಸಿರುವುದರಿಂದ ಅವು ಚುರುಕು ಮುಟ್ಟಿಸುವಂತಿವೆ. ಪ್ರಿಸನರ್ ಆಫ್ ಷಿಲಾನ್ ಕವಿತೆಯಲ್ಲಿ ಇಟಲಿಯ ದೇಶಪ್ರೇಮಿಯೊಬ್ಬನ ಕತೆಯನ್ನು ಕವಿ ತುಂಬ ಹೃದಯಸ್ಪರ್ಶಿಯಾಗಿ ಹೇಳಿದ್ದಾನೆ. ತನ್ನ ಇಡೀ ಕುಟುಂಬವನ್ನೇ ದೇಶಸೇವೆಗೆ ಬಲಿಕೊಟ್ಟ ಬೋನಿವಾರ್ಡ್ ತನ್ನ ಚಿಕ್ಕ ತಮ್ಮನ ಮರಣ ಕಾಲದಲ್ಲಿ ಹೇಳಿದ ಅತ್ಯಂತ ಮಾರ್ಮಿಕವಾದ ಮಾತುಗಳಿವು: "ಐ ನೊ ನಾಟ್ ವೈ ಐ ಕುಡ್ ನಾಟ್ ಡೈ". ಈ ಕವಿತೆ ಅತ್ಯಂತ ಜನಪ್ರಿಯವಾಗಿದೆ. ಬೈರನ್ ತನ್ನ ಕವಿತೆಗಳಲ್ಲಿ ಹೇಳಿಕೊಂಡಿರುವ ಪ್ರಿಯವಸ್ತುಗಳಲ್ಲಿ ಸ್ವಾತಂತ್ರ್ಯ ಪ್ರೇಮವೇ ಮೊದಲನೆಯದು ಮತ್ತು ಕಡೆಯದು.

ಇದೇ ಕಾಲದ ಸುಪ್ರಸಿದ್ಧ ಕವಿಗಳಲ್ಲಿ ಜಾನ್ ಕೀಟ್ಸ್ (1795–1821) ಮುಖ್ಯನಾದವ. ಈತ ಬದುಕಿದ್ದು ಕೆಲವೇ ವರ್ಷಗಳಾದರೂ ಇವನ ಸಾಧನೆ ಅಪೂರ್ವವಾದುದು. ಗ್ರೀಕ್ ಕವಿ ಹೋಮರ್ ಮತ್ತು ಇಂಗ್ಲಿಷ್ ಕವಿ ಸ್ಪೆನ್ಸರ್–ಇವರು ಕೀಟ್ಸ್‌ನ ಕಾವ್ಯಗಳ ಮೇಲೆ ಅತ್ಯಂತ ಪ್ರಭಾವ ಬೀರಿದವರು. ಕೀಟ್ಸ್‌ನ ದೊಡ್ಡ ಕವಿತೆಗಳಲ್ಲಿ ಹೈಪರಿಯನ್ ಮುಖ್ಯವಾದದ್ದು. ಇದರಲ್ಲಿ ಕವಿ ಸ್ಪೆನ್ಸರನ ಪ್ರಭಾವಕ್ಕೆ ಎಷ್ಟರಮಟ್ಟಿಗೆ ಒಳಗಾಗಿದ್ದಾನೆಂಬುದನ್ನು ಕಾಣಬಹುದು. ಈವ್ ಆಫ್ ಸೇಂಟ್ ಆಗ್ನಸ್ ಇನ್ನೊಂದು ಸುಂದರ ಕವನ. ಈ ದೊಡ್ಡ ಕವನಗಳಿಗಿಂತ ಕೀಟ್ಸ್‌ನ ಕೀರ್ತಿ ಬೆಳಗಿಸಿದುವು ಅವನ ಆರು ಪ್ರಗಾಥಗಳು. ಅವುಗಳಲ್ಲಿ ಓಡ್ ಟು ಎ ನೈಟಿಂಗೇಲ್ ಮತ್ತು ಓಡ್ ಆನ್ ಎ ಗ್ರೀಸಿಯನ್ ಅರ್ನ್ ಪ್ರಸಿದ್ಧವಾದುವು. ಎ ಥಿಂಗ್ ಆಫ್ ಬ್ಯೂಟಿ ಈಸ್ ಎ ಜಾಯ್ ಫಾರ್ ಎವರ್– ಅಭಿಪ್ರಾಯವನ್ನು ಎಂಡಿಮಿಯಾನ್ ಕವನದಲ್ಲಿ ಸೂಚಿಸಿ ಅನಂತರ ನೈಟಿಂಗೇಲನ್ನು ಕುರಿತ ಕವನದಲ್ಲಾದನ್ನು ಕವಿ ಸವಿಸ್ತಾರವಾಗಿ ಬೆಳೆಸಿದ್ದಾನೆ. ಆ ಹಕ್ಕಿಯ ಮಧುರವಾದ ಹಾಡು ಮೈ ಮರೆಸುತ್ತದೆ. ಅನಾದಿಕಾಲದಿಂದಲೂ ಆ ಹಕ್ಕಿ ಅದೇ ರೀತಿ ಆನಂದದಿಂದ ಹಾಡುತ್ತಿದೆ. ಜನನ ಮರಣಗಳನ್ನದು ಮೀರಿ ನಿಂತಿದೆ, ಆ ಹಕ್ಕಿಯ ಹಾಡು. ಅದೊಂದು ಪಕ್ಷಿ ಹೋದರೂ ಅದೇ ಜಾತಿಯ ಇನ್ನೊಂದು ಪಕ್ಷಿ ಅದೇ ಹಾಡನ್ನು ಹಾಡುತ್ತದೆ. ಸುಂದರವಾದ ಆ ಹಾಡಿಗೆ ಮರಣವೆಲ್ಲಿಯದು? ಈ ರೀತಿಯಾಗಿ ಭಾವಿಸಿದ ಕವಿ ಸೌಂದರ್ಯ ಸಂತೋಷ ಪ್ರಚೋದಕ ಎಂಬ ತೀರ್ಮಾನಕ್ಕೆ ಬರುತ್ತಾನೆ. ಆದರೆ ಅದು ಎಂಥ ಸೌಂದರ್ಯ? ಮನಸ್ಸನ್ನು ಕೆರಳಿಸುವುದಿಲ್ಲ. ಮನಸ್ಸನ್ನು ಭೌತಿಕ ಪ್ರಪಂಚದಿಂದ ದೂರ ಮಾಡಿ ನಿರ್ಲಿಪ್ತತೆಯ ಕಡೆಗೆ ಎಳೆಯುವುದೇ ಸೌಂದರ್ಯದ ಲಕ್ಷಣ. ಅದು ಹಕ್ಕಿಯ ಹಾಡಾಗಬಹುದು; ಸಂಗೀತವಾಗಬಹುದು; ಶಿಲ್ಪವಾಗಬಹುದು. ಈ ರೀತಿಯ ಸೌಂದರ್ಯವನ್ನು ಕಾಣುವುದು ದೇಹಲಕ್ಷಣದಲ್ಲಿಲ್ಲ. ಮನಸ್ಸಿನ ಸುಂದರತೆ ಕಲಾರೂಪದಲ್ಲಿ ಹೊರಹೊಮ್ಮುವುದು. ಕೀಟ್ಸ್‌ನ ಇನ್ನೊಂದು ಗೀತೆ ಓಡ್ ಆನ್ ಎ ಗ್ರೀಸಿಯನ್ ಅರ್ನ್ ಕಲೆಯ ಅಮರತ್ವವನ್ನು ಸಾರುತ್ತದೆ. ಹಸಿರು ಮರದ ಕೆಳಗೆ ಯೌವನದ ಹೊಸಲಿನಲ್ಲಿರುವ ಇಬ್ಬರು ಪ್ರೇಮಿಗಳ ಚಿತ್ರ ಪಾತ್ರೆಯೊಂದರ ಮೇಲೆ ಕೆತ್ತಿದೆ. ಕೊಳಲೂದುತ್ತಿರುವ ಯುವಕ ತನ್ನ ಪ್ರಿಯತಮೆಯ ತುಟಿಗಳನ್ನು ಚುಂಬಿಸಲು ತೀರ ಹತ್ತಿರದಲ್ಲಿದ್ದಾನೆ. ಚುಂಬಿಸಿಲ್ಲ. ಕವಿ ತನ್ನ ಭಾವನೆಗಳನ್ನು ಹರಿಯಬಿಡುತ್ತಾನೆ. ಅವನ ಕೊಳಲಿನಲ್ಲಿ ಬರುವ ಸಂಗೀತ ಯಾವುದು? ನಿಮ್ಮ ಮನಸ್ಸಿಗೆ ಯಾವುದು ಪ್ರಿಯವೊ ಮಧುರವೊ ನೀವೇ ಕಲ್ಪಿಸಿಕೊಳ್ಳಬಹುದು. ನಾದ ಹರಡುತ್ತದೆ. ಅವನು ನುಡಿಸುತ್ತಲೆ ಇದ್ದಾನೆ. ಮರದ ಹಸಿರಾಗಲಿ ಪ್ರಿಯತಮೆಯ ಅರಳಿದ ತುಟಿಯಾಗಲಿ, ಯುವಕನ ಪ್ರೀತಿ, ಆತುರಗಳಾಗಲಿ ಕಡಿಮೆಯಾಗಿಲ್ಲ, ಹೀಗೆ ಇದೆ–ಸಾವಿರಾರು ವರ್ಷಗಳಿಂದ. ಮನುಷ್ಯ ಜನನ ಮರಣಕ್ಕೆ ಅಧೀನ. ಆದರೆ ಕಲೆ ಅಮರ, ಸುಂದರ. ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ ಎಂಬುದು ಕವಿಯ ನಂಬಿಕೆ. ಸತ್ಯ, ಸೌಂದರ್ಯ, ಶಿವ ಇವುಗಳನ್ನು ಕಾಣಬೇಕೆಂದರೆ ಆಧ್ಯಾತ್ಮಿಕ ಜ್ಞಾನ ಪರಿಪೂರ್ಣವಾಗಿರಬೇಕು. ಇಂಥ ಭಾವನೆಯನ್ನು ಕೀಟ್ಸ್ ತನ್ನ ಕವಿತೆಯಲ್ಲಿ ಸುಂದರವಾಗಿ ವರ್ಣಿಸಿದ್ದಾನೆ. ಪ್ರೇಮದ ನಿರಾಸೆಯಿಂದ ಒಂದು ಕಡೆ, ಕ್ಷಯರೋಗದಿಂದ ಇನ್ನೊಂದು ಕಡೆ ನರಳಿ ತನ್ನ ಇಪ್ಪತ್ತಾರನೆಯ ವಯಸ್ಸಿನಲ್ಲಿಯೇ ಗತಿಸಿದ ಜಾನ್ ಕೀಟ್ಸ್ ಅಲ್ಪಾಯುವಾದರೂ ತನ್ನ ಕೃತಿಗಳಿಂದ ಅಮರನಾಗಿದ್ದಾನೆ.

ಈ ಗುಂಪಿನ ಕವಿಗಳಲ್ಲಿ ಷೆಲ್ಲಿ (1792–1822) ವಿಶೇಷ ಸ್ಥಾನಗಳಿಸಿದ್ದಾನೆ. ಇವನೊಬ್ಬ ಕ್ರಾಂತಿ ಪುರುಷ. ಕೇಂಬ್ರಿಜ್ಜಿನಲ್ಲಿ ಈತ ಓದಿದ್ದು ವಿದ್ಯುಚ್ಛಕ್ತಿಯನ್ನು ಕುರಿತು. ಆದರೆ ಈತನ ಒಲವೆಲ್ಲ ಸಮಾಜದ ಸ್ಥಿತಿಗತಿಗಳ ಬಗ್ಗೆ. ಷೆಲ್ಲಿಗೆ ಇವು ಬೇಸರ ತಂದವು. ಕ್ರೈಸ್ತಧರ್ಮದ ನಡವಳಿಗಳನ್ನಂತೂ ತೀವ್ರವಾಗಿ ವಿರೋಧಿಸಿದ್ದರ ಫಲವಾಗಿ ವಿಶ್ವವಿದ್ಯಾಲಯ ಕವಿಯನ್ನು ಹೊರಹಾಕಿತು. ಬೈರನ್‌ನಂತೆ ಇವನಿಗೂ ಸ್ವಾತಂತ್ರ್ಯದ ಹುಚ್ಚು. ವ್ಯಕ್ತಿಸ್ವಾತಂತ್ರ್ಯಕ್ಕೆ ಬಹು ಹೋರಾಡಿದ ವ್ಯಕ್ತಿ ಷೆಲ್ಲಿ. ಒಂದು ರೀತಿಯಲ್ಲಿ ಅತಿಯಾದುದರಿಂದ ಜನರಿಗದು ಹಿಡಿಸಲಿಲ್ಲ. ಗುರು ಗಾಡ್ವಿನ್ನನ ತತ್ತ್ವಗಳು ಷೆಲ್ಲಿಗೆ ಅತ್ಯಂತ ಪ್ರಿಯವಾದುವು. ವಿಜ್ಞಾನದ ಮುನ್ನಡೆ ಈ

ಕವಿಯ ಮೇಲೆ ಹೆಚ್ಚು ಪರಿಣಾಮವುಂಟು ಮಾಡಿತ್ತು. ಈತನ ಬರವಣಿಗೆ ವೈವಿಧ್ಯಪೂರ್ಣವಾಗಿದೆ. ಇವನ ಕಾವ್ಯಸಮರ್ಥನೆ (ಡಿಫೆನ್ಸ್ ಆಫ್ ಪೊಯಟ್ರಿ) ಎಂಬ ಗದ್ಯಕೃತಿ ಅದ್ಭುತವಾದ ವಾದಗಳಿಂದ ಕೂಡಿದೆ. ಕಾವ್ಯದ ಮೇರೆ, ವಸ್ತು ಮತ್ತು ಕರ್ತವ್ಯಗಳ ಬಗೆಗೆ ಚೆನ್ನಾಗಿ ವಾದಿಸಿ ಕವಿಗಳನ್ನು "ಜಗತ್ತಿನ ಅನಧಿಕೃತ ಶಾಸನಕರ್ತರು" ಎಂದು ಕವಿ ಕರೆದಿದ್ದಾನೆ. ಪ್ರೊಮಿಥಿಯಸನನ್ನು ಕುರಿತ ಪದ್ಯನಾಟಕದಲ್ಲಿ, ಗ್ರೀಕ್ ಪುರಾಣದ ಹಿನ್ನೆಲೆಯಲ್ಲಿ, ತಾಳ್ಮೆ, ಸ್ಥೈರ್ಯ ಮತ್ತು ಅಚಲವಾದ ನಂಬಿಕೆಗಳಿಗೆ ಎಂದೂ ಸೋಲಿಲ್ಲ ಎಂಬುದನ್ನು ಪ್ರತಿಪಾದಿಸಿದ್ದಾನೆ. 'ಕ್ಲೌಡ್' ಎಂಬ ಕವನದಲ್ಲಿ ವಿಜ್ಞಾನದ ವಸ್ತುವನ್ನು ಕಾವ್ಯರೂಪಕ್ಕೆ ತಿರುಗಿಸಿ ಮೋಡವನ್ನು ಭೂಮಿ ಮತ್ತು ಸಾಗರಗಳ ಮಗುವಾಗಿಸಿದ್ದಾನೆ. ಪ್ರಕೃತಿ ನಶ್ವರವಲ್ಲ ಎಂಬ ನಂಬಿಕೆಯನ್ನು ಕವನ ರೂಪದಲ್ಲಿ ಸಾರಿದ್ದಾನೆ. "ಓಡ್ ಟು ದಿ ವೆಸ್ಟ್ ವಿಂಡ್" ಷೆಲ್ಲಿಯ ಪ್ರಸಿದ್ಧ ಕವನ. ಹಳೆಯದನ್ನೆಲ್ಲ ಕೊಚ್ಚಿಹಾಕಿ ಹೊಸ ಜೀವನವನ್ನು ಸೃಷ್ಟಿಸುತ್ತದೆ, ಪಶ್ಚಿಮದ ಬಿರುಗಾಳಿ. ಜೀವನದಲ್ಲಿ ತುಂಬ ನೋವನ್ನನುಭವಿಸಿದ ಈ ಕವಿಗೆ ಪಶ್ಚಿಮದ ಗಾಳಿಯಷ್ಟು ಶಕ್ತಿಯಿದ್ದಿದ್ದರೆ ತನ್ನ ಆಸೆಯಂತೆ ಇಡೀ ಪ್ರಪಂಚವನ್ನೇ ಬದಲಾಯಿಸುತ್ತಿದ್ದ. ಸೂಕ್ಷ್ಮಮತಿಗಳಾದವರು ಸಮಾಜದಲ್ಲಿ ಎಷ್ಟು ತೊಂದರೆಪಡುತ್ತಾರೆ, ಒಂಟಿಯಾಗುತ್ತಾರೆ ಎಂಬುದು "ಸೆನ್ಸಿಟಿವ್ ಪ್ಲ್ಯಾಂಟ್"ನಲ್ಲಿ ಚೆನ್ನಾಗಿ ಚಿತ್ರಿತವಾಗಿದೆ. ಷೆಲ್ಲಿಯ ಆಸೆಗಳೆಲ್ಲ ಕೈಗೆ ನಿಲುಕದಂಥವು. ಆದುದರಿಂದಲೇ ಮ್ಯಾಥ್ಯೂ ಆರ್ನಲ್ಡ್ ಈತನನ್ನು ಇನ್‌ಎಫೆಕ್ಚ್ಯುಅಲ್ ಏಂಜಲ್ ಎಂದು ಕರೆದಿದ್ದಾನೆ. ಸಾಧಿಸಲಿ, ಬಿಡಲಿ ಎಲ್ಲರಿಗೂ ಒಳ್ಳೆಯದನ್ನು ಮಾಡುವ ಆಸೆಪಡುವುದರಲ್ಲಿ ತಪ್ಪೇನು? ಇಂಥ ಉದಾತ್ತ ಕವಿ ತನ್ನ 30ನೆಯ ವಯಸ್ಸಿನಲ್ಲಿ, ಇಟಲಿ ದೇಶದ ಸರೋವರ ಒಂದರಲ್ಲಿ ದೋಣಿಯಲ್ಲಿ ವಿಹರಿಸುತ್ತಿದ್ದಾಗ ದೋಣಿ ಮುಳುಗಿ ಸತ್ತ. ಅವನ ಸಾವಿನೊಂದಿಗೆ ಇಂಗ್ಲಿಷ್ ಸಾಹಿತ್ಯದ ಸುವರ್ಣಯುಗವೂ ಅಂತ್ಯವಾಯಿತು.

ರಮ್ಯಯುಗವೇ ಕಾವ್ಯಸೃಷ್ಟಿಯ ದೃಷ್ಟಿಯಲ್ಲಿ ಸುವರ್ಣಯುಗ. ಆಗಿನ ಕಾಲದ ಕವಿಗಳು ಯೋಚಿಸಿದಷ್ಟು ದೀರ್ಘವಾಗಿ, ಆಳವಾಗಿ, ಬೇರೆ ಯಾರೂ ಚಿಂತನೆ ಮಾಡಿರಲಿಲ್ಲ. ಅವರ ವಿಚಾರಪೂರಿತ ಯೋಜನೆಗಳು–ಪ್ರಕೃತಿ, ಮನುಷ್ಯ, ಸಮಾಜ–ಎಲ್ಲವನ್ನು ಒಳಗೊಂಡಿದ್ದುವು. ಆ ಕಾಲದ ಜನರ ಆಸೆ ಆಕಾಂಕ್ಷೆಗಳನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಪ್ರತಿಯೊಬ್ಬ ಕವಿಯೂ ಚಿತ್ರಿಸಿದ್ದಾನೆ. ಅಲ್ಲಿನ ವೈವಿಧ್ಯ, ವಿಚಾರಪೂರ್ಣ ಚಿಂತನೆಗಳು ಸುಲಭ ಭಾಷೆಯಲ್ಲಿ ಮೂಡಿಬಂದಿವೆ. (ಎಂ.ಸಿ.ಎಚ್.)

**ಕಾವ್ಯದೋಷಗಳು** : ಕಾವ್ಯದೋಷಗಳ ಸಮೀಕ್ಷೆ ಸಂಸ್ಕೃತ ಅಲಂಕಾರ ಶಾಸ್ತ್ರದ ಪ್ರಧಾನವಿಷಯಗಳಲ್ಲಿ ಒಂದಾಗಿದೆ. ಭರತನಿಂದ ಭೋಜ, ವಿಶ್ವನಾಥರವರೆಗೆ ಪ್ರಾಯಃ ಪ್ರತಿಯೊಬ್ಬ ಲೇಖಕನೂ ಇದಕ್ಕಾಗಿ ತನ್ನ ಗ್ರಂಥದ ಒಂದೋ ಎರಡೋ ಅಧ್ಯಾಯಗಳನ್ನು ಮೀಸಲಾಗಿಟ್ಟಿರುವುದು ಕಂಡುಬರುತ್ತದೆ. ಸರ್ವಥಾಪದಮ ಪ್ಯೇಕಂ ನ ನಿಗಾದ್ಯಮವದ್ಯವತ್ (ಹೇಗೂ ದೋಷಯುಕ್ತವಾದ ಒಂದು ಪದವನ್ನೂ ಪ್ರಯೋಗಿಸಬಾರದು) ಎಂಬುದು ಅಲಂಕಾರಿಕರಲ್ಲಿ ಅತಿ ಪ್ರಾಚೀನನೆನಿಸಿರುವ ಭಾಮಹನ ಮತ. ಇದೇ ಅಂಶವನ್ನು ತದಲ್ಪಮಪಿನೋಪೇಕ್ಷ್ಯಂ ಕಾವ್ಯೇ ದುಷ್ಟಂ ಕಥಂಚನ (ಕಾವ್ಯದಲ್ಲಿ ಅತ್ಯಲ್ಪವಾದ ದೋಷವನ್ನೂ ಉಪೇಕ್ಷ ಮಾಡಬಾರದು) ಎಂದು ದಂಡಿಯೂ ಹೇಳಿದ್ದಾನೆ. ಕವಿಯಾಗದಿದ್ದಲ್ಲಿ ಅಧರ್ಮವಾಗಲೀ ವ್ಯಾಧಿ, ದಂಡನೆಗಳಾಗಲೀ ಸಲ್ಲುವುದಿಲ್ಲ, ಆದರೆ ಕುಕವಿತ್ವವೆಂಬುದು ಸಾವಿಗೇ ಸಮನಾದದ್ದು ಎಂದು ಹೇಳಿ ಭಾಮಹ ದೋಷಯುಕ್ತವಾದ ಕಾವ್ಯಗಳನ್ನು ರಚಿಸುವ ಕುಕವಿಗಳ ನಿಂದೆಯನ್ನು ಮಾಡಿದ್ದಾನೆ. ಇದಲ್ಲದೆ ಕಾವ್ಯವೆಂಬುದು ರಸಗರ್ಭಿತವಾಗಿದ್ದರೂ ಅಸುಂದರವಾಗಿದ್ದು ಸುಲಭವಾಗಿ ಅರ್ಥವಾಗದಿದ್ದರೆ ಎಳೆಯ ಬೇಲದ ಕಾಯಂತೆ ಹಿತಕರವಲ್ಲವೆಂದೂ ಹೇಳಿದ್ದಾನೆ. ಈಚಿನ ಕೆಲವು ವಿಮರ್ಶಕರೂ ಕಾವ್ಯದಲ್ಲಿ ದೋಷಗಳ ಅಭಾವಕ್ಕೆ ಇದೇ ರೀತಿಯ ಪ್ರಾಶಸ್ತ್ಯವನ್ನು ಕೊಟ್ಟು ಈ ಅಂಶವನ್ನು ಕಾವ್ಯಲಕ್ಷಣದ ಮೊದಲಲ್ಲೇ ಸೇರಿಸಿರುವುದೂ ಉಂಟು. ತದದೋಶೌಶಬ್ದಾರ್ಥೌ– ಇತ್ಯಾದಿಯಾದ ಮಮ್ಮಟನ ಕಾವ್ಯಲಕ್ಷಣವನ್ನು ಇಲ್ಲಿ ಗಮನಿಸಬಹುದು. ಹೀಗೆ ಕಾವ್ಯದೋಷಗಳ ಸಮೀಕ್ಷೆಗೆ ಮೊದಲಿನಿಂದಲೂ ವಿಶೇಷವಾದ ಪ್ರಾಶಸ್ತ್ಯ ದೊರಕಿದೆ.

ಮೊದಲಾಗಿ ನಾಟ್ಯಾಚಾರ್ಯ ಭರತ ತನ್ನ ನಾಟ್ಯಶಾಸ್ತ್ರದ ಹದಿನೇಳನೆಯ ಅಧ್ಯಾಯದಲ್ಲಿ ವಾಚಿಕಾಭಿನಯದ ಸ್ವರೂಪವನ್ನು ನಿರೂಪಿಸುತ್ತ 1. ಅಗೂಡ 2. ಅರ್ಥಾಂತರ 3. ಅರ್ಥಹೀನ 4. ಭಿನ್ನಾರ್ಥ 5. ಏಕಾರ್ಥ 6. ಅಭಿಪ್ಲುತಾರ್ಥ 7. ನ್ಯಾಯಾದಪೇತ (ನ್ಯಾಯವಿರಹಿತವಾದದ್ದು) 8. ವಿಷಮ 9. ವಿಸಂಧಿ ಮತ್ತು 10. ಶಬ್ದಚ್ಯುತ ಎಂಬ ಹತ್ತು ಕಾವ್ಯದೋಷಗಳನ್ನು ಹೆಸರಿಸಿ ಏತೇದೋಸಪಾಸ್ತು ವಿಜ್ಞೇಯಾಃ ಸೂರಿಭಿರ್ನಾಟಕಾಶ್ರಯಾಃ (ನಾಟಕಕ್ಕೆ ಸಂಬಂಧಿಸಿದ ಈ ದೋಷಗಳು ಪಂಡಿತರಿಂದ ತಿಳಿಯಲ್ಪಡಬೇಕು ಎಂದು ಹೇಳಿದ್ದಾನಲ್ಲದೆ ಈ ದೋಷಗಳ ಸ್ವರೂಪವನ್ನು ಸಂಗ್ರಹವಾಗಿ ತಿಳಿಸಿದ್ದಾನೆ. ಇವನಿಗೂ 5–6ನೆಯ ಶತಮಾನಗಳ ವೇಳೆಯಲ್ಲಿದ್ದ ಭಾಮಹನಿಗೂ ನಡುವಿನ ದೀರ್ಘಕಾಲದ ಅವಧಿಯಲ್ಲಿ ಅನೇಕ ವಿಷಯಗಳ ಮಥನವಾಗಿರಬೇಕೆಂದು ಊಹಿಸಬಹುದಾದರೂ ಅದಾವುದಕ್ಕೂ ಯಾವ ಗ್ರಂಥಾಧಾರವೂ ದೊರಕುವುದಿಲ್ಲ.

ಭಾಮಹನ ಕಾವ್ಯಾಲಂಕಾರದಲ್ಲಿ ಕಾವ್ಯದೋಷಗಳ ವಿಮರ್ಶೆ ವಿಸ್ತಾರವಾಗಿ ನಡೆದಿದೆ. ಮೊದಲನೆಯ ಅಧ್ಯಾಯದಲ್ಲಿ 1. ನೇಯಾರ್ಥ 2. ಕ್ಲಿಷ್ಟ 3. ಅನ್ಯಾರ್ಥ 4. ಅವಾಚಕ 5. ಅಯುಕ್ತಿಮತ್ 6. ಗೂಢಶಬ್ದಾಭಿಧಾನ 7. ಶ್ರುತಿದುಷ್ಟ 8. ಅರ್ಥದುಷ್ಟ 9. ಕಲ್ಪನಾದುಷ್ಟ 10. ಶ್ರುತಿಕಷ್ಟ ಎಂಬ ಹತ್ತು ದೋಷಗಳನ್ನೂ ಪುನಃ ನಾಲ್ಕನೆಯ ಅಧ್ಯಾಯದಲ್ಲಿ 1. ಅಪಾರ್ಥ 2. ವ್ಯರ್ಥ 3. ಏಕಾರ್ಥ 4. ಸಸಂಶಯ 5. ಅಪಕ್ರಮ 6. ಶಬ್ದಹೀನ 7. ಯತಿಭ್ರಷ್ಟ 8. ಭಿನ್ನವೃತ್ತ 9. ವಿಸಂಧಿ ಮತ್ತು 10. ದೇಶಕಾಲ ಕಲಾ ಲೋಕನ್ಯಾಯಾಗಮ ವಿರೋಧಿ ಎಂಬ ಇನ್ನು ಹತ್ತು ದೋಷಗಳನ್ನೂ ಉದಾಹರಣೆಗಳೊಡನೆ ವಿವರಿಸಲಾಗಿದೆ. ಇದಲ್ಲದೆ ಎರಡನೆಯ ಅಧ್ಯಾಯದಲ್ಲಿ ಉಪಮಾಲಂಕಾರದ ವಿಷಯ ಪ್ರಸಕ್ತವಾದಾಗ ತನಗಿಂತ ಹಿಂದಿನ ಮೇಧಾವಿಯಿಂದ (ಮೇಧಾವಿರುದ್ರ) ಹೇಳಲ್ಪಟ್ಟ ಏಳು ಉಪಮಾದೋಷಗಳನ್ನೂ ಭಾಮಹ ಉಲ್ಲೇಖಿಸಿದ್ದಾನೆ. ಹೀನತಾ, ಅಸಂಭವ, ಲಿಂಗಭೇದ, ವಚೋಭೇದ, ವಿಪರ್ಯಯ, ಉಪಮಾನಾಧಿಕತ್ವ ಮತ್ತು ಅಸಾದೃಶ್ಯ ಎಂಬ ಈ ಉಪಮಾದೋಷಗಳನ್ನು ವಿಮರ್ಶಿಸುವಾಗ ಯಾವ ಸಂದರ್ಭವಿಶೇಷಗಳಲ್ಲಿ ಈ ಕೆಲವು ದೋಷಗಳು ಸಂಭವಿಸುವುದಿಲ್ಲವೆಂಬುದನ್ನು ಮನಗಂಡು ಈ ಮಾತನ್ನು ಹೇಳಿದ್ದಾನೆ. ನ ಲಿಂಗ ವಚನೇ ಭಿನ್ನೇನ ಹೀನಾಧಿಕತಾಪಿ ವಾ। ಉಪಮಾದೂಷಣಾಯಾಲಂ ಯತ್ರೋದ್ವೇಗೋ ನ ಧೀಮತಾಂ (ಕೇವಲ ಉಪಮಾನ ಉಪಮೇಯ ವಸ್ತುಗಳ ಲಿಂಗಭೇದಗಳಾಗಲೀ ಉಪಮಾನದ ನ್ಯೂನತ್ವ ಅಧಿಕತ್ವವಾಗಲೀ ಸಹೃದಯರಿಗೆ ಜುಗುಪ್ಸೆಯನ್ನುಂಟುಮಾಡದಿದ್ದರೆ, ದೋಷವಾಗಲಾರದು).

ಹೀಗೆಯೇ ಉಪಮಾನ ಉಪಮೇಯ ವಸ್ತುಗಳಿಗೆ ಸಾಮ್ಯ ಎಷ್ಟಿರಬೇಕು ಹೇಗಿರಬೇಕು ಎಂಬ ಚರ್ಚೆಯೂ ನಡೆದಿದ್ದು ಅಂಥ ಸಾದೃಶ್ಯ ಸಹೃದಯರ ಅನುಭವಕ್ಕೆ ಗೋಚರವಾಗುವಷ್ಟಿದ್ದರೆ ಸಾಕೆಂದೂ ಎಲ್ಲ ಅಂಶಗಳಲ್ಲಿಯೂ ಪೂರ್ಣವಾದ ಸಾದೃಶ್ಯವನ್ನು ಅಪೇಕ್ಷಿಸಬಾರದೆಂದೂ ತಿಳಿಸಿದ್ದಾನೆ (ಸರ್ವಂ ಸರ್ವೇಣಸಾರೂಪ್ಯಂ ನಾಸ್ತಿಭಾವಸ್ಯ ಕಸ್ಯಚಿತ್). ಇದಲ್ಲದೆ ಆಗಿನ ಕಾಲದಲ್ಲಿ ದಿಙ್ನಾಗ, ವಸುಬಂಧು ಮೊದಲಾದವರು ತರ್ಕಶಾಸ್ತ್ರದಲ್ಲಿ ಸಾಧಿಸಿದ್ದ ಪ್ರಗತಿಯೂ ಭಾಮಹನ ಆಲಂಕಾರಿಕ ತತ್ತ್ವ ಮತ್ತು ಕಾವ್ಯದೋಷಸಮೀಕ್ಷೆಗಳ ಮೇಲೆ ಪ್ರಭಾವವನ್ನು ಬೀರದೆ ಇರಲಿಲ್ಲ. ಅಂತೆಯೇ ಕಲ್ಪನಾಸೌಧದಲ್ಲಿ ವಿಹರಿಸುವ ಕವಿವಾಣಿಯೂ ಕರ್ಕಶವಾದ ತಾರ್ಕಿಕನ್ಯಾಯಗಳ ಅಂಕುಶಕ್ಕೆ ಎಷ್ಟರಮಟ್ಟಿಗೆ ಅಧೀನವಾಗಿರಬೇಕಾಗುತ್ತದೆಂಬುದನ್ನೂ ಆದರೆ ಅದರ ಯಾವ ಇತಿಮಿತಿಗಳಿಗೂ ಇದು ಒಳಪಡುವುದಿಲ್ಲವೆಂಬುದನ್ನೂ ವಿವೇಚಿಸಲು ಈತ ಪ್ರಯತ್ನಿಸಿದ್ದಾನೆ. ಆರು ಬಗೆಯ ಪ್ರತಿಜ್ಞಾಹೀನ, ಮೂರು ಬಗೆಯ ಹೇತು ಹೀನ, ಮತ್ತು ದೃಷ್ಟಾಂತಹೀನ ಎಂಬ ತರ್ಕದೋಷಗಳನ್ನೂ ಉಲ್ಲೇಖಿಸಿ ಕಾವ್ಯದಲ್ಲಿ ಯಾವ ದೋಷಗಳನ್ನು ಪರಿಹರಿಸತಕ್ಕದ್ದೆಂಬುದನ್ನೂ ತಿಳಿದಿದ್ದಾನೆ. ಹೀಗೆ ಭಾಮಹನ ಸಮೀಕ್ಷೆ ಹಿಂದಿನ ಚರ್ಚೆಗಳ ಸಾರಾಂಶದಂತೆ ಗಮನಾರ್ಹವಾಗಿದೆ.

ಅನಂತರ ದಂಡಿ (ಭಾಮಹ, ದಂಡಿ – ಇವರ ಪೌರ್ವಾಪರ್ಯದ ಬಗ್ಗೆ ವಿವಾದವಿದೆ) ಭಾಮಹನಿಂದ ಹೇಳಲ್ಪಟ್ಟ ಅಪಾರ್ಥ, ವ್ಯರ್ಥ ಮೊದಲಾದ ಹತ್ತುದೋಷಗಳನ್ನು ಮಾತ್ರ ವಿವರಿಸಿ ಯಾವ ವಿಶೇಷ ಸಂದರ್ಭಗಳಲ್ಲಿ ಈ ಕೆಲವು ದೋಷಗಳು ಸಂಭವಿಸುವುದಿಲ್ಲವೆಂಬುದನ್ನು ತಿಳಿಸಿದ್ದಾನೆ.

ವಾಮನ (750–850) ತನ್ನ ಕಾವ್ಯಾಲಂಕಾರಸೂತ್ರವೃತ್ತಿಯಲ್ಲಿ ಈ ಬಗ್ಗೆ ಮತ್ತೊಂದು ಪ್ರಗತಿಪರ ಹೆಜ್ಜೆಯನ್ನಿಟ್ಟಿದ್ದಾನೆ. ಇವನ ಮತಾನುಸಾರ ಕಾವ್ಯದಲ್ಲಿ ಸೌಂದರ್ಯರೂಪವಾದ ಅಲಂಕಾರ ದೋಷಗಳ ಹಾನ (ತ್ಯಾಗ) ಮತ್ತು ಗುಣಗಳ ಆದಾನಗಳಿಂದ (ಅಂತರ್ಭಾವ) ಉಂಟಾಗುತ್ತವೆ. ದೋಷಗಳ ಲಕ್ಷಣವನ್ನು ಗುಣವಿಪರ್ಯಯಾತ್ಮಾನೋ ದೋಷಃ (ದೋಷಗಳು ಗುಣಗಳಿಗೆ ವಿರುದ್ಧವಾದವು) ಎಂಬುದಾಗಿ ಮೊಟ್ಟಮೊದಲಿಗೆ ನಿರೂಪಿಸಿರುವುದೂ ಗಮನಾರ್ಹವೆನಿಸಿದೆ. ವಾಮನ ಈ ಬಗೆಯ ದೋಷಗಳನ್ನು 1. ಪದದೋಷ 2. ಪದಾರ್ಥದೋಷ, 3. ವಾಕ್ಯದೋಷ ಮತ್ತು 4. ವಾಕ್ಯಾದೋಷ ಎಂದು ನಾಲ್ಕು ವಿಧವಾಗಿ ವಿಂಗಡಿಸಿ ಉದಾಹರಣೆಗಳ ಸಹಿತ ಪರಿಶೀಲಿಸಿದ್ದಾನೆ. ಈ ವಿಭಾಗಕ್ರಮವನ್ನೇ ಅರ್ವಾಚೀನರಾದ ಮಮ್ಮಟನೇ ಮೊದಲಾದವರು ಬಹುಮಟ್ಟಿಗೆ ಅಂಗೀಕರಿಸಿದ್ದಾರೆ. ವಾಮನನ ಮತಾನುಸಾರ ಅಸಾಧು, ಕಷ್ಟ, ಗ್ರಾಮ್ಯ, ಅಪಾರ್ಥ, ಅನರ್ಥಕ ಈ ಐದು ಪದದೋಷಗಳು. ಅನ್ಯಾರ್ಥ, ನೇಯಾರ್ಥ, ಗೂಢಾರ್ಥ, ಅಶ್ಲೀಲ, ಕ್ಲಿಷ್ಟ ಇವು ಪದಾರ್ಥದೋಷಗಳು. ಭಿನ್ನವೃತ್ತ, ಯತಿಭ್ರಷ್ಟ, ವಿಸಂಧಿ ಇವು ಮೂರು ವಾಕ್ಯದೋಷಗಳು. ವ್ಯರ್ಥ, ಏಕಾರ್ಥ, ಸಂದಿಗ್ಧ, ಅಯುಕ್ತ, ಅಪಕ್ರಮ, ಲೋಕವಿದ್ಯಾವಿರುದ್ಧ ಇವು ಆರು ವಾಕ್ಯಾರ್ಥದೋಷಗಳು. ಭಾಮಹ ದಂಡಿ ಇವರು ಹೇಳಿರುವ ಕೆಲವು ದೋಷಗಳಿಗೆ ಇಲ್ಲಿ ಬೇರೆ ಹೆಸರನ್ನು ಕೊಡಲಾಗಿದೆ. ಏಕಾರ್ಥವೆಂಬ ದೋಷವನ್ನು ವಿವರಿಸುವಾಗ ವಾಮನ ಧನುರ್ಜ್ಯಾ, ಕರಿಕಲಭ, ಕರ್ಣಾವತಂಸ ಮೊದಲಾದ ಕೆಲವು ಪ್ರಯೋಗಗಳು ಪುನರುಕ್ತಗಳಂತೆ ಕಂಡರೂ ಸಾಧುವಾದುವೆಂದು ಸಮರ್ಥಿಸಿ ಮಹಾಕವಿ ಪ್ರಯೋಗ ರೂಪವಾದ ರೂಢಿಗೆ ಗೌರವ ಕೊಟ್ಟಿದ್ದಾನೆ. ಹೀಗೆಯೇ ಇತರ ಕೆಲವು

ದೋಷಗಳ ವಿಚಾರದಲ್ಲಿಯೂ ಹಿಂದಿನ ವಿಮರ್ಶಕರಂತೆ ವ್ಯತಿರೇಕದ ನಿದರ್ಶನಗಳನ್ನು ಪ್ರದರ್ಶಿಸಿ ಕೂಲಂಕಷವಾದ ವಿಚಾರವನ್ನು ಮುಂದುವರಿಸಿದ್ದಾನೆ. ಎಲ್ಲಕ್ಕಿಂತ ಮಿಗಿಲಾದ ಈತ ದೋಷಗಳನ್ನು ಸ್ಥೂಲ ಮತ್ತು ಸೂಕ್ಷ್ಮ ಎಂದೂ ವಿಂಗಡಿಸಿ ಸ್ಥೂಲ ದೋಷಗಳ ಕಾವ್ಯದ ಸೌಂದರ್ಯಕ್ಕೇ ಹಾನಿಯನ್ನುಂಟು ಮಾಡುತ್ತವೆಯೆಂದೂ ಸೂಕ್ಷ್ಮದೋಷಗಳು ಅದಕ್ಕೆ ಧಕ್ಕೆ ತರದಂತೆ ಇರುತ್ತವೆಂದೂ ಹೇಳಿ ಮುಂದಿನ ವಿಮರ್ಶಕರು ಮಾಡಿರುವ ನಿತ್ಯ ಮತ್ತು ಅನಿತ್ಯ ದೋಷಗಳ ವಿಭಾಗ ವ್ಯವಸ್ಥೆಗೆ ಪೀಠಿಕೆಯನ್ನೂ ಹಾಕಿಕೊಟ್ಟಿದ್ದಾನೆ. ಕಡೆಯದಾಗಿ ಉಪಮಾಲಂಕಾರಕ್ಕೆ ಸಂಬಂಧಿಸಿದಂತೆ ಹಿಂದೆ ಭಾಮಹ ಹೇಳಿದ್ದ ಏಳು ದೋಷಗಳಲ್ಲಿ ವಿಪರ್ಯಯವನ್ನು ಹೀನತ್ವ ಮತ್ತು ಅಧಿಕತ್ವಗಳಲ್ಲಿ ಸೇರಿಸಿ ಆರು ದೋಷಗಳನ್ನು ಮಾತ್ರ ಅಂಗೀಕರಿಸುತ್ತಾನೆ.

ಅನಂತರ ರುದ್ರಟ (825–875) ತನ್ನ ಕಾವ್ಯಾಲಂಕಾರದಲ್ಲಿ ನಾಲ್ಕು ವಿಧವಾದ ಉಪಮಾದೋಷ ಆರು ವಿಧವಾದ ಪದದೋಷ ಮೂರು ವಾಕ್ಯದೋಷ ಒಂಬತ್ತು ಅರ್ಥಗತದೋಷ ಮತ್ತು ಗುಣಗಳ ಅಭಾವದಿಂದ ಉಂಟಾಗುವ ಆರು ದೋಷಗಳು ಹೀಗೆ ಒಟ್ಟು ಇಪ್ಪತ್ತೆಂಟು ಬಗೆಯ ಕಾವ್ಯದೋಷಗಳನ್ನು ಉದಾಹರಿಸಿದ್ದಾನೆ. ಇವುಗಳಲ್ಲಿ ಅಸಮರ್ಥದೇಶ್ಯ, ಸಂಕೀರ್ಣ, ಗರ್ಭಿತ, ಗತಾರ್ಥ ಮೊದಲಾದ ಹದಿನೈದು ದೋಷಗಳನ್ನು ಹಿಂದಿನವರು ಹೇಳದಿದ್ದರೂ ಈತನೇ ಪ್ರಥಮತಃ ಉಲ್ಲೇಖಿಸಿದ್ದಾನೆ. ಈ ದೋಷಗಳಲ್ಲಿ ಎರಡು ರಸ ಪ್ರತೀತಿಗೂ ಕೆಲವು ಇಡೀ ಪ್ರಬಂಧಕ್ಕೂ ಅನ್ವಯಿಸುವಂತಿವೆ.

855 ರಿಂದ 883ರ ಅವಧಿಯಲ್ಲಿ ಧ್ವನಿ ಸಿದ್ಧಾಂತವನ್ನು ಪ್ರತಿಪಾದಿಸಿದ ಆನಂದವರ್ಧನನ ದೋಷಸಮೀಕ್ಷೆ ಇನ್ನೂ ಪ್ರಗತಿಪರವಾಗಿದೆ. ಕಾವ್ಯದ ಆತ್ಮವೆನಿಸಿದ ರಸ ಅಥವಾ ರಸಧ್ವನಿಯ ದೃಷ್ಟಿಯಿಂದಲೇ ದೋಷತ್ವವನ್ನು ನಿರ್ಣಯಿಸಬೇಕೆಂಬುದು ಅವನ ಮುಖ್ಯವಾದ ಅಭಿಪ್ರಾಯ. ಹಿಂದಿನವರು ಹೇಳುತ್ತ ಬಂದಿರುವ ಶ್ರುತಿದುಷ್ಟವೇ ಮೊದಲಾದ ಕೆಲವು ದೋಷಗಳು ಎಲ್ಲ ಸಂದರ್ಭಗಳಲ್ಲಿಯೂ ದೋಷಗಳಾಗಿ ಪರಿಣಮಿಸುವುದಿಲ್ಲವಾದ ಕಾರಣ ಅಂಥವನ್ನು ಅನಿತ್ಯ ದೋಷಗಳೆಂದು ಪರಿಗಣಿಸಬೇಕು. ಇಂಥ ಕೆಲವು ಅನಿತ್ಯದೋಷಗಳು ಶೃಂಗಾರರಸದ ಪ್ರತೀತಿಗೆ ಬಾಧಕವಾಗಬಹುದೇ ಹೊರತು ವೀರ ರೌದ್ರಾದಿ ರಸಗಳ ವಿಷಯದಲ್ಲಿ ದೋಷವಾಗುವುದಿಲ್ಲವೆಂಬ ಅಂಶವನ್ನು ವ್ಯಕ್ತಪಡಿಸಿ, ಆನಂದವರ್ಧನ ತನ್ನ ಹೊಸ ಸೂತ್ರವನ್ನು ಸಮರ್ಥಿಸಿದ್ದಾನೆ. ಹೀಗೆಯೆ ಯಮಕ, ಅನುಪ್ರಾಸ ಮೊದಲಾದ ಕೆಲವು ಅಲಂಕಾರಗಳೂ ದೋಷವಾಗಿ ಪರಿಣಮಿಸಲು ಸಾಧ್ಯವೆಂದು ಆತನ ಮತ.

ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಂ
ಪ್ರಸಿದ್ಧೌಚಿತ್ಯಬಂಧಸ್ತು ರಸಸ್ಯೋಪನಿಷತ್ಪರಾ

ಎಂಬ ಈ ಸೂತ್ರಕ್ಕನುಸಾರವಾಗಿ ರಸಪ್ರತೀತಿಗೆ ಭಂಗ ತರುವ ಎಲ್ಲ ವಿಧವಾದ ಅನೌಚಿತ್ಯ ಪ್ರಸಂಗಗಳೂ ದೋಷಗಳೆನಿಸಿಕೊಳ್ಳುತ್ತವೆ.

ಯತ್ರ ವಿನೇಯಾನಾಂ ಪ್ರತೀತಿಖಂಡನಾನ ಜಾಯತೇ
ತಾದೃಗ್ವರ್ಣನೀಯಂ
ವಿರೋಧಿರಸಸಂಬಂಧಿ ವಿಭಾವಾದಿಪರಿಗ್ರಹಃ
ವಿಸ್ತರೇಣಾನ್ವಿತಸ್ಯಾಪಿ ವಸ್ತುನೋನ್ಯಸ್ಯ ವರ್ಣನಮ್
ಪರಿಪೋಷಂ ಗತಸ್ಯಾಪಿ ಪೌನಃ ಪುನ್ಯೇನದೀಪನಂ
ರಸಸ್ಯ ಸ್ಯಾದ್ವಿರೋಧಾಯ ವೃತ್ತ್ಯನೌಚಿತ್ಯಮೇವ ಚ

ಎಂಬ ದಿಗ್ದರ್ಶನಗಳು ಆನಂದವರ್ಧನನ ಔಚಿತ್ಯಜ್ಞಾನಕ್ಕೂ ರಸಾನುಭವ ಸಂಸ್ಕಾರಕ್ಕೂ ಸಾಕ್ಷಿಯೆನಿಸಿದೆ. ಈ ಅಭಿಪ್ರಾಯಕ್ಕನುಗುಣವಾಗಿ ಉದ್ದಿಷ್ಟವಾದ ಪ್ರಧಾನ ರಸಕ್ಕೆ ವಿರೋಧಿಯಾದ ಯಾವೊಂದು ಬೇರೆ ರಸದ ವಿಭಾವಾದಿಗಳ ಪ್ರತಿಪಾದನೆ, ಸಾಕಷ್ಟು ವಿಸ್ತಾರ ಹೊಂದಿದ ವಸ್ತುವಿನ ಮಧ್ಯೆ ಬೇರೆ ಪ್ರಸಂಗದ ಬೆಳವಣಿಗೆ ಮತ್ತು ಉಚಿತವಾದ ಪರಿಪೋಷವನ್ನು ಹೊಂದಿದ ರಸವನ್ನು ಮತ್ತೆ ಮತ್ತೆ ಉದ್ದೀಪನಗೊಳಿಸುವಿಕೆ ಮೊದಲಾದುವೆಲ್ಲ ಅನೌಚಿತ್ಯರೂಪವಾದ ದೋಷಗಳಾಗುತ್ತವೆಂದು ತಾತ್ಪರ್ಯ.

ಈಚಿನ ಧ್ವನಿಮತಾನುಯಾಯಿಗಳ ಪರಿಷ್ಕಾರದ ಪ್ರಕಾರ ದೋಷಗಳು ಕಾವ್ಯದ ಮಟ್ಟವನ್ನು ಕಡಿಮೆ ಮಾಡುತ್ತವೆ (ದೋಷಾಸ್ತಸ್ಯಾಪಕರ್ಷಕಾಃ). ಕಾವ್ಯವನ್ನು ಮನುಷ್ಯನಿಗೆ ಹೋಲಿಸಿದರೆ ರಸ ಆತ್ಮದಂತೆ ; ಶಬ್ದ ಮತ್ತು ಅರ್ಥಗಳು ಶರೀರದಂತೆ ; ಗುಣಗಳು ಶೌರ್ಯ, ಔದಾರ್ಯ, ಧೈರ್ಯಗಳಂತೆ ; ದೋಷಗಳು ಕುಂಟು, ಕುರುಡುಗಳಂತೆ; ಅಲಂಕಾರಗಳು ಬಳೆ, ಹಾರ, ಕುಂಡಲಾದಿ ಭೂಷಣಗಳಂತೆ–ಎಂದು ಒಂದು ರೀತಿಯ ಸ್ಥೂಲವಾದ ಮೌಲ್ಯಮಾಪನ ನಡೆದು ಬಂದಿದೆ. ಈ ತತ್ತ್ವವನ್ನನುಸರಿಸಿ 1050–1125ರಲ್ಲಿದ್ದ ಮಮ್ಮಟ ಕಾವ್ಯ ದೋಷಗಳ ವಿವೇಚನೆಯಲ್ಲಿ ಅಗ್ರಸ್ಥಾನವನ್ನು ಪಡೆದಿದ್ದಾನೆ. ಆದರೆ ಈತ ತನಗೆ ಹಿಂದೆ ಈ ವಿಷಯವನ್ನು ವಿಮರ್ಶಿಸಿದ್ದ ಆನಂದವರ್ಧನ, ಅಭಿನವಗುಪ್ತರಿಗೆ ಮಾತ್ರವಲ್ಲದೆ ಅನೇಕ ಅಂಶಗಳಲ್ಲಿ ವ್ಯಕ್ತಿವಿವೇಕಕಾರನಾದ ಮಹಿಮಾಭಟ್ಟನಿಗೂ (1020–60) ಋಣಿಯಾಗಿದ್ದಾನೆ. ಮಹಿಮಾಭಟ್ಟ ಧ್ವನಿವಾದಿಗಳ ಸಿದ್ಧಾಂತವನ್ನು ಖಂಡಿಸಿ ಧ್ವನಿಯೆಂಬುದೆಲ್ಲ ಕಾವ್ಯಾನುಮಿತಿಯ ಪ್ರಕಾರಗಳಲ್ಲಿ ಅಂತರ್ಭವಿಸುತ್ತದೆಯೆಂದು ತೋರಿಸಿಕೊಡಲು ಹೊರಟವನಾದರು ದೋಷಗಳ ವಿವೇಚನೆಯಲ್ಲಿ ಯುಕ್ತಿಯುಕ್ತವೂ ಸಹೃದಯ ಗ್ರಾಹ್ಯವೂ ಆದ ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾನೆ. ವಿವಕ್ಷಿತ ರಸಾದಿಪ್ರತೀತಿವಿಘ್ನವಿಧಾಯಿತ್ವಂ ನಾಮ ಸಾಮಾನ್ಯಲಕ್ಷಣಂ ಎಂದು ಮಹಿಮಾಭಟ್ಟ ಕಾವ್ಯದೋಷದ ಸಾಮಾನ್ಯಲಕ್ಷಣವನ್ನು ನಿರೂಪಿಸಿ, 1. ವಿಧೇಯಾವಿಮರ್ಶ 2. ಪ್ರಕ್ರಮ ಭೇದ 3. ಕ್ರಮಭೇದ 4. ಪುನರುಕ್ತ ಮತ್ತು 5. ವಾಚ್ಯಾವಚನ ಎಂಬ ಐದು ದೋಷಗಳನ್ನು ಮಾತ್ರ ಎತ್ತಿ ಹೇಳಿದ್ದರೂ ಅವನ ಉದಾಹರಣೆಗಳ ವಿಮರ್ಶೆ ವಿಸ್ತಾರವಾಗಿರುವುದಲ್ಲದೆ ಎಲ್ಲ ಮುಖ್ಯದೋಷಗಳೂ ಇಷ್ಟರಲ್ಲೇ ಒಳಗೊಂಡಿರುವಂತಿದೆ.

ತನಗೆ ಹಿಂದಿನ ವಿಮರ್ಶಕರ ಭಾವನೆ ಅಭಿಪ್ರಾಯಗಳನ್ನೆಲ್ಲ ಕ್ರೋಡೀಕರಿಸಿ ಸುವ್ಯವಸ್ಥಿತವಾದ ಸಾಹಿತ್ಯಶಾಸ್ತ್ರವನ್ನು ನಿರೂಪಿಸಲು ಹೊರಟ ಮಮ್ಮಟ ತನ್ನ ಕಾವ್ಯ ಪ್ರಕಾಶವೆಂಬ ಉದ್ಗ್ರಂಥದಲ್ಲಿ ದೋಷದ ಸಾಮಾನ್ಯ ಲಕ್ಷಣವನ್ನು ಮುಖ್ಯಾರ್ಥಹತಿಃ ಎಂಬುದಾಗಿ ನಿರೂಪಿಸಿದ್ದಾನೆ. ಈ ಲಕ್ಷಣವೇ ವಿಸ್ತಾರವಾದ ಟೀಕೆ ಟಿಪ್ಪಣಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ಮಮ್ಮಟನ ವಿಭಾಗ ವ್ಯವಸ್ಥೆಯ ಪ್ರಕಾರ 1. ಶ್ರುತಿಕಟ್ಟು 2. ಚ್ಯುತಸಂಸ್ಕೃತಿ 3. ಅಪ್ರಯುಕ್ತ 4. ಅಸಮರ್ಥ 5. ನಿಹತಾರ್ಥ 6. ಅನುಚಿತಾರ್ಥ 7. ನಿರರ್ಥಕ 8. ಅವಾಚಕ 9. (ಮೂರು ಬಗೆಯ) ಅಶ್ಲೀಲ 10. ಸಂದಿಗ್ಧ 11. ಅಪ್ರತೀಕ 12. ಗ್ರಾಮ್ಯ 13. ನೇಯಾರ್ಥ 14. ಕ್ಲಿಷ್ಟ 15. ಅವಿಮೃಷ್ಟವಿಧೇಯಾಂಶ 16. ವಿರುದ್ಧಮತಿಕೃತ್–ಈ ಹದಿನಾರು ಪದದೋಷಗಳು. ಇವುಗಳಲ್ಲಿ ಕೊನೆಯ ಮೂರು ಸಮಾನ ಪದಗಳಿಗೆ ಮಾತ್ರ ಸಂಬಂಧಿಸಿದುವು. ಚ್ಯುತಸಂಸ್ಕೃತಿ, ಅಸಮರ್ಥ, ನಿರರ್ಥಕ ಈ ಮೂರನ್ನು ಬಿಟ್ಟು ಉಳಿದ ದೋಷಗಳು ವಾಕ್ಯಗಳಿಗೂ ಅನ್ವಯಿಸುವುದರಿಂದ ವಾಕ್ಯದೋಷಗಳೂ ಆಗಲು ಸಾಧ್ಯ. ಕೆಲವು ದೋಷಗಳು ಪದಾಂಶಗಳಲ್ಲಿಯೂ ಕಂಡುಬರುತ್ತವೆ. ವಾಕ್ಯಗಳಲ್ಲಿ ಮಾತ್ರ ಉಂಟಾಗುವ ಇಪ್ಪತ್ತೊಂದು ದೋಷಗಳು ಈ ರೀತಿ ಇವೆ:

1. ಪ್ರತಿಕೂಲವರ್ಣ 2. ಉಪಹತವಿಸರ್ಗ 3. ಲುಪ್ತವಿಸರ್ಗ 4. ವಿಸಂಧಿ 5. ಹತವೃತ್ತ 6. ನ್ಯೂನಪದ 7. ಅಧಿಕಪದ 8. ಕಥಿತಪದ 9. ಪತತ್ಪ್ರಕರ್ಷ 10. ಸಮಾಪ್ತಪುನರಾತ್ತ 11. ಅರ್ಧಾಂತರೈಕವಾಚಕ 12. ಅಭವನ್ಮತಯೋಗ 13. ಅನಭಿಹಿತವಾಚ್ಯ 14. ಅಪದಸ್ಥಪದ 15. ಅಪದಸ್ಥಸಮಾಸ 16. ಸಂಕೀರ್ಣ 17. ಗರ್ಭಿತ 18. ಪ್ರಸಿದ್ಧಿಹತ 19. ಭಗ್ನಪ್ರಕ್ರಮ 20. ಅಕ್ರಮ 21. ಅಮತಪರಾರ್ಥ.

ಇವಲ್ಲದೆ ಮಮ್ಮಟ ಉದಾಹರಿಸಿರುವ ಇಪ್ಪತ್ತಮೂರು ಅರ್ಥದೋಷಗಳು ಈ ರೀತಿ ಇವೆ : 1. ಅಪುಷ್ಟ 2. ಕಷ್ಟ 3. ವ್ಯಾಹತ 4. ಪುನರುಕ್ತ 5. ದುಷ್ಕ್ರಮ 6. ಗ್ರಾಮ್ಯ 7. ಸಂದಿಗ್ಧ 8. ನಿರ್ಹೇತು 9. ಪ್ರಸಿದ್ಧಿ ವಿರುದ್ಧ 10. ವಿದ್ಯಾವಿರುದ್ಧ 11. ಅನವೀಕೃತ 12. ಸನಿಯಮಪರಿವೃತ್ತ 13. ಅನಿಯಮಪರಿವೃತ್ತ 14. ವಿಶೇಷಣಪರಿವೃತ್ತ 15. ಅವಿಶೇಷಣಪರಿವೃತ್ತ 16. ಸಾಕಾಂಕ್ಷ 17. ಅಪದಯುಕ್ತ 18. ಸಹಚರಭಿನ್ನ 19. ಪ್ರಕಾಶಿತವಿರುದ್ಧ 20. ವಿಧ್ಯಯುಕ್ತ 21. ಅನುವಾದಯುಕ್ತ 22. ತ್ಯಕ್ತಪುನಸ್ವೀಕೃತ 23. ಅಶ್ಲೀಲ.

ಕಡೆಯದಾಗಿ ಮಮ್ಮಟ ಹದಿಮೂರು ರಸದೋಷಗಳನ್ನೂ ಅನುಪ್ರಾಸ, ಯಮಕ, ಉಪಮಾ ಮೊದಲಾದ ಅಲಂಕಾರಗಳಿಗೆ ಸಂಬಂಧಿಸಿದ ಅನೇಕ ದೋಷಗಳನ್ನೂ ಉದಾಹರಣೆಗಳ ಸಹಿತ ವಿವರಿಸಿದ್ದಾನೆ. ಇಷ್ಟು ವಿಸ್ತಾರವೂ ಸೂಕ್ಷ್ಮವೂ ಆದ ಇವನ ದೋಷೋದ್ಭಾವನೆಯ ಅಂಕುಶಕ್ಕೆ ಮಹಾಕವಿಗಳೂ ಸಿಕ್ಕಿಬಿದ್ದಿದ್ದಾರೆ. ಇವನ ಸಂಯುಕ್ತಿಕ ಸಮರ್ಥನೆಯ ಬೆಳಕಿನಲ್ಲಿ ವೈಯಕ್ತಿಕ ದುರಾಗ್ರಹದ ಸೋಂಕಿಗೂ ಅವಕಾಶವಿಲ್ಲದಂತಾಗಿದೆ. ಈ ಒರೆಗಲ್ಲಿನ ಪರೀಕ್ಷೆ ಶುದ್ಧವಾದ ಚಿನ್ನವನ್ನೇ ಪತ್ತೆಮಾಡುತ್ತದೆಯೆಂಬುದೂ ನಿರ್ವಿವಾದ. ಆದರೆ ಇಂಥ ಚಿನ್ನ ಎಷ್ಟು ಸಿಕ್ಕೀತೋ ಹೇಳಲಸಾಧ್ಯ. ಇಂಥ ಉಜ್ಜ್ವಲವೂ ತೀಕ್ಷ್ಣವೂ ಆದ ಮಮ್ಮಟನ ದೋಷದೃಷ್ಟಿಗೆ ಔದಾರ್ಯವಿಲ್ಲದೆ ಇಲ್ಲ. ದೋಷಗಳಲ್ಲಿ ಕೆಲವು ನಿತ್ಯ ಕೆಲವು ಅನಿತ್ಯವೆಂಬುದನ್ನೂ ಕೆಲವು ಅಂತರಂಗದ ದೋಷಗಳಾದರೆ ಮತ್ತೆ ಕೆಲವು ಬಾಹ್ಯದೋಷಗಳೆಂಬ ವಿಚಾರವನ್ನೂ ಆತ ಅಂಗೀಕರಿಸಿದ್ದಾನೆ. ದೋಷವಾಗಬಹುದಾದ ಕೆಲವು ಅಂಶಗಳು ಯಾವ ವಿಶೇಷ ಸಂದರ್ಭಗಳಲ್ಲಿ ದೋಷಗಳಾಗುವುದಿಲ್ಲವೆಂಬುದನ್ನೂ ರಸದೋಷಗಳಿಗೆ ಗುರಿಯಾದ ಕೆಲವು ಪ್ರಸಂಗಗಳನ್ನೂ ಉದಾಹರಣೆಗಳ ಸಹಿತ ವ್ಯಕ್ತಗೊಳಿಸಿದ್ದಾನೆ. ಒಟ್ಟಿನಲ್ಲಿ ದೋಷಪ್ರಕರಣದ ಯಾವುದೇ ಅಂಶದಲ್ಲಿಯೂ ಮಮ್ಮಟನ ಅಭಿಪ್ರಾಯವೇ ಕೊನೆಯ ಮಾತೆನ್ನಿಸುವಷ್ಟು ಪ್ರಾಧಾನ್ಯಗಳಿಸಿದೆ.

ಪ್ರ.ಶ.1010–55ರ ಅವಧಿಯಲ್ಲಿದ್ದ ಭೋಜ ತನ್ನ ಶೃಂಗಾರಪ್ರಕಾಶ ಮತ್ತು ಸರಸ್ವತೀಕಂಠಾಭರಣ ಎಂಬ ಗ್ರಂಥಗಳಲ್ಲಿ ಹದಿನಾರು ಬಗೆಯ ಪದದೋಷ, ಅದೇ ಸಂಖ್ಯೆಯ ವಾಕ್ಯದೋಷ ಮತ್ತು ವಾಕ್ಯಾರ್ಥದೋಷಗಳನ್ನು ವಿಸ್ತಾರವಾಗಿ ಉದಾಹರಣೆಗಳ ಸಹಿತ ನಿರೂಪಿಸಿದ್ದಾನೆ.

ಕಡೆಯದಾಗಿ ಔಚಿತ್ಯವೇ ಕಾವ್ಯದ ಜೀವವೆಂಬ ನೂತನ ಸಿದ್ಧಾಂತವನ್ನು ಮಂಡಿಸಿದ ಕ್ಷೇಮೇಂದ್ರ (ಹನ್ನೊಂದನೆಯ ಶತಮಾನ) ದೋಷಗಳ ವಿಚಾರವಾಗಿ ಮನಗಂಡಿರುವ

ಅಂಶಗಳು ಗಮನಾರ್ಹವೆನಿಸಿದರೂ ದಂಡಿ, ಭಾಮಹ ಮೊದಲಾದ ಪ್ರಾಚೀನರು ಅವನ್ನು ಅರಿತಿರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ.

ಸನ್ನಿವೇಶವಿಶೇಷಾತ್ತು ದುರುಕ್ತಮಪಿ ಶೋಭತೇ
ಕಾಂತಾ ವಿಲೋಚನನ್ಯಸ್ತಂ ಮಲೀಮಸಮಿವಾಂಜನಮ್ (ಎಸ್.ವಿ.ಎಸ್.ಆರ್.)

**ಕಾವ್ಯನ್ಯಾಯ :** ಕವಿ ಉದ್ದೇಶಿಸಿರುವ ನ್ಯಾಯ ಆತನ ಕಾವ್ಯದಲ್ಲಿ ಪ್ರತಿಬಿಂಬಿತವಾಗಿರುತ್ತದೆ. ಕಾವ್ಯದ ಕಣ್ಣು ಕವಿಯ ದೃಷ್ಟಿಯಲ್ಲಿದೆ ಎಂಬ ಮಾತು ಸತ್ಯವಾದುದು. ಲೌಕಿಕ ನ್ಯಾಯಕ್ಕೂ ಕಾವ್ಯನಾಯಕ್ಕೂ ವ್ಯತ್ಯಾಸವಿದೆ. ಲೌಕಿಕವಾಗಿ ಯಾವತ್ತಿಗೂ ನ್ಯಾಯವೇ ದೊರಕುತ್ತದೆಂಬ ಭರವಸೆಯಿಲ್ಲ. ಆದರೆ ಕಾವ್ಯದಲ್ಲಿ ಹಾಗಲ್ಲ. ಕಾವ್ಯನ್ಯಾಯವೆಂಬ ಪದವನ್ನು ಒಂದೇ ಅರ್ಥದಲ್ಲಿ ತೆಗೆದುಕೊಳ್ಳುತ್ತಿದ್ದ ಶತಮಾನಗಳಿದ್ದುವು. ಬರುತ್ತ ಬರುತ್ತ ವಿಶೇಷಾರ್ಥಗಳು ಅದಕ್ಕೆ ಅಂಟತೊಡಗಿ ಈಗ ನಾಲ್ಕೈದು ವಿವಿಧ ಬಣ್ಣದ ಭಾವನೆಗಳು ಅದರ ಸುತ್ತ ಬೆಳೆದಿವೆ.

1. ಭವ್ಯಕಾವ್ಯ, ನಾಟಕ ಅಥವಾ ಕಾದಂಬರಿಯ ಕೊನೆಯಲ್ಲಿ ಪಾತ್ರಗಳಿಗೆ ಲಭಿಸುವ ಫಲ ಕಾವ್ಯನ್ಯಾಯಕ್ಕೆ ಒಳ್ಳೆಯ ನಿದರ್ಶನ. ಒಳ್ಳೆಯವಕ್ಕೆ ಸದ್ಗತಿಯೂ ಕೆಟ್ಟವಕ್ಕೆ ದುರ್ಗತಿಯೂ ಆದಲ್ಲಿ ಅದೇ ಸರಿಯಾದ ನ್ಯಾಯ. ಏರುಪೇರುಗಳಿಂದ ಕೂಡಿ ನಡೆಯುವ ಸಜ್ಜನ, ದುರ್ಜನರಲ್ಲಿ ಹೋರಾಟವೇ ಸಾಹಿತ್ಯದ ರಸಾವಿಷ್ಟ ಕಥಾವಸ್ತು. ಹೋರಾಟದ ಅಂತ್ಯದಲ್ಲಿ ಒಂದು ಕಡೆಗೆ ಜಯ ಇನ್ನೊಂದು ಕಡೆಗೆ ಅಪಜಯ ಆಗಲೇಬೇಕು. ಶಿಷ್ಟರಿಗೆ ಜಯವೂ ದುಷ್ಟರಿಗೆ ಅಪಜಯವೂ ಒದಗಿದರೆ ಅದು ಸರಿಯಾದ ನ್ಯಾಯವಿನಿಯೋಗ. ಅದರಿಂದ ಓದುಗರಿಗೂ ಪ್ರೇಕ್ಷಕರಿಗೂ ನೆಮ್ಮದಿ. ಪ್ರಪಂಚದ ಸಾಹಿತ್ಯ ಕೃತಿಗಳಲ್ಲಿ ಅನೇಕ ಭಾಗ ಈ ಸೂತ್ರಕ್ಕೆ ಸಲ್ಲುವ ಪರಿಣಾಮವನ್ನೇ ಪ್ರಕಟಿಸುತ್ತದೆ. ಇದು ಬಹುಕಾಲ ಸಾಹಿತ್ಯ ವಿಮರ್ಶೆಯಲ್ಲಿ ಅನುಲ್ಲಂಘ್ಯ ಸೂತ್ರವಾಗಿತ್ತು. ಇದನ್ನು ಮುರಿದನೆಂಬ ಅಪವಾದಕ್ಕೆ ಪಕ್ಕಾದ ಮಹಾ ಕವಿಯೆಂದರೆ ಷೇಕ್ಸ್‌ಪಿಯರ್.

ಆಗಿನ ವಿದ್ವಾಂಸರಲ್ಲಿ ಕೆಲವರೂ 19ನೆಯ ಶತಮಾನದ ವಿದ್ವಾಂಸರಲ್ಲಿ ಅನೇಕರೂ ಆ ಸೂತ್ರಕ್ಕೆ ಒಂದು ಅನುಬಂಧವನ್ನು ತಂದು ಸೇರಿಸಿದರು. ದುರುಳ ಪಾತ್ರಗಳ ವಿಚಾರದಲ್ಲಿ ಕಾವ್ಯನ್ಯಾಯವೇ ನ್ಯಾಯ, ಅದನ್ನಾರೂ ಪ್ರತಿಭಟಿಸುವಂತಿಲ್ಲ. ಆದರೆ ಹಲವು ಕೃತಿಗಳಲ್ಲಿ, ಅದರಲ್ಲೂ ರುದ್ರ (ಗಂಭೀರ) ನಾಟಕಗಳಲ್ಲಿ, ಸಾಧು ವ್ಯಕ್ತಿಗಳಿಗೆ ಸಂಕಟವೂ ಅಕಾಲ ಮರಣವೂ ಉಂಟಾಗುವುದರಲ್ಲಿ ಯಾವ ನ್ಯಾಯವೂ ಕಾಣದು. ಆದರೂ ಆ ಕೃತಿಗಳು ರಸಿಕ ಸಹೃದಯರ ಮೆಚ್ಚುಗೆ ಪಡೆಯುತ್ತವೆ. ಏತಕ್ಕೆಂದರೆ ಸರ್ವಾಂಗ ಸುಂದರವಾಗಿರುವುದರ ಜೊತೆಗೆ ಅವು ಓದುಗರಲ್ಲಿ ಕನಿಕರವನ್ನೂ ವಿಧಿನಿಯಮದಲ್ಲಿ ಭಯಭೀತಿಯನ್ನೂ ಕುದುರಿಸುತ್ತವೆ. ಕರುಣಾಜನಕವಾಗುತ್ತವೆ. ಆದ್ದರಿಂದ ಅದೂ ಒಂದು ವಿಧದ ಕಾವ್ಯನ್ಯಾಯವೇ ಆಗುತ್ತದೆ.

ಕಾವ್ಯ ಜೀವನದ ಪ್ರತಿಬಿಂಬ ಎಂಬ ಮಾತನ್ನು ಅಕ್ಷರಶಃ ಪಾಲಿಸುವ ಕವಿಗಳಲ್ಲಿ ಕೆಲವರು ಖಳನೇ ಗೆದ್ದುದನ್ನು, ಕಳ್ಳ ಪೊಲೀಸರಿಗೆ ಸಿಕ್ಕದೆ ಪಾರಾಗಿ ಸುಖವಾಗಿ ಬದುಕಿದುದನ್ನು, ಖೂನಿ ಮಾಡಿದವನೊಬ್ಬ, ನ್ಯಾಯಾಲಯದಲ್ಲಿ ವಕೀಲರ ನೆರವಿನಿಂದ ಶಿಕ್ಷೆಯಿಂದ ಪಾರಾದುದನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿರಬಹುದು. ಇಲ್ಲಿ ಕೂಡ ಕಾವ್ಯ ಉದ್ದೇಶಿಸಿರುವ ನ್ಯಾಯ ಗಮ್ಯವಾಗಿದೆ ಎಂದು ತಿಳಿಯತಕ್ಕದ್ದು.

2. ಕೆಲವು ಅರ್ವಾಚೀನರ ಮತದಂತೆ ಕಾವ್ಯನ್ಯಾಯ ಕೇವಲ ಯಾಂತ್ರಿಕ, ಕೃತಕ, ನೀರಸ; ಕೊಂಚಮಟ್ಟಿಗೆ ಹಾಸ್ಯಾಸ್ಪದ. ಒಳ್ಳೆಯವರಿಗೆ ಲಾಭ, ಕೆಡುಕರಿಗೆ ನಷ್ಟ–ಎಂದಾಗ ಕಾರ್ಯಗಳನ್ನೂ ಅವುಗಳ ಫಲಗಳನ್ನೂ ಸೇರಿನಿಂದ ಅಳೆಯಲಾಗುವುದಿಲ್ಲ ; ತಕ್ಕಡಿಯಲ್ಲಿಟ್ಟು ತೂಗಲಾಗುವುದಿಲ್ಲ. ಒಳ್ಳೆಯವರು ಪೂರ್ಣ ನಿರ್ದೋಷಿಗಳೂ ಕೆಟ್ಟವರು ಪೂರ್ಣ ಕೇಡಿಗರೂ ಆಗಲು ಸಾಧ್ಯವಿಲ್ಲ. ಯಾವ ಪಾತಕಕ್ಕೆ ಏನು ದಂಡನೆ, ಎಷ್ಟು ದಂಡ ಎನ್ನುವುದಕ್ಕೆ ಅಳತೆಗೋಲಾವುದು? ನ್ಯಾಯವೆಂಬ ಘನತತ್ತ್ವದಲ್ಲಿ ಹಲವಾರು ಸೂಕ್ಷ್ಮವೂ ಜಟಿಲವೂ ಆದ ವಿಚಾರಗಳು ಕುಳಿತಿವೆ. ತಲೆಗೆಲ್ಲ ಒಂದೇ ಮಂತ್ರ ಎಂದುಬಿಡುವ ಕಾವ್ಯನ್ಯಾಯ ನಿಜವಾದ ಅನ್ಯಾಯ ; ಆದ್ದರಿಂದ ಅದು ತಿರಸ್ಕರಣೀಯ.

3. ಇಹಲೋಕದ ಯಥಾರ್ಥ ಜೀವನದಲ್ಲಿ ನ್ಯಾಯ ನಮಗೆ ಎಂದಿಗೂ ಸಿಕ್ಕುವುದಿಲ್ಲ. ಅದನ್ನು ನೋಡಬೇಕಾದರೆ ಲೋಕೋತ್ತರವಾದ ಕಾವ್ಯಪ್ರಪಂಚಕ್ಕೆ ಹೋಗಬೇಕು. ಅಲ್ಲಿನ ಕಾರ್ಯಾವಳಿಯ ನಿಯೋಜನೆ ಆದರ್ಶ ಮಟ್ಟದಲ್ಲಿ ಏರ್ಪಾಡಾಗಿರುವುದರಿಂದ ಕಾವ್ಯನ್ಯಾಯ ವಸ್ತುಸ್ಥಿತಿಗೆ ವಿರುದ್ಧವಾದರೂ ಅಪೇಕ್ಷಣೀಯವಾದ ಆದರ್ಶ ನ್ಯಾಯವೇ ಆಗಿದೆ.

4. ನ್ಯಾಯ ಎಂಬ ಪದಕ್ಕೆ ಸಾಮಾನ್ಯ ಶಬ್ದಕೋಶದ ಸ್ಥೂಲಾರ್ಥವನ್ನು ಕೊಡಿಸುವುದು ತಪ್ಪಾಗುತ್ತದೆ; ಅದಕ್ಕೆ ಗಾಢವಾದ ಅರ್ಥವೂ ಒಂದುಂಟು. ಉದಾರಾರ್ಥವನ್ನು ಅದಕ್ಕೆ ಕೊಡಬೇಕು. ಕವಿ ಸೃಷ್ಟಿಸಿರುವ ಪಾತ್ರಗಳನ್ನು ನಿಯಂತ್ರಿಸಿರುವ ಅವುಗಳ ಕಾರ್ಯಾವಳಿಯ ಸಂವಿಧಾನವನ್ನೂ ಎರಡು ಮೂರು ದೃಷ್ಟಿಗಳಿಂದ ಕೂಲಂಕಷವಾಗಿ ಪರೀಶಿಲಿಸಬೇಕು. ಹಾಗೆ ಮಾಡಿದರೆ ಉತ್ತಮ ಕವಿ ಯಾವುದೋ ಉದಾತ್ತ ನಿಯಮದಂತೆ ನ್ಯಾಯವನ್ನು ಉತ್ಕೃಷ್ಟವಾಗಿ ಸಾಧಿಸಿದ್ದಾನೆಂಬುದು ವ್ಯಕ್ತವಾಗುತ್ತದೆ. ಕಷ್ಟ, ನೋವು, ಸಾವು, ಶಿಕ್ಷೆ, ರಕ್ಷೆ, ಬಹುಮಾನ–ಇತ್ಯಾದಿ ಪ್ರಾಪಂಚಿಕ ದ್ರವ್ಯಗಳನ್ನು ಮೀರಿದ, ಆದದ್ದೆಲ್ಲ ಸಮಂಜಸ, ಸಮರ್ಪಕ, ಗೆಲವು ಎಂಬ ಭಾವನೆಯನ್ನು ಮೂಡಿಸುವ ನ್ಯಾಯ ನಮ್ಮ ಹೃದಯಕ್ಕೆ ಹೊಳೆಯುತ್ತದೆ.

5. ಲೆಕ್ಕಾಚಾರದ ಕಾವ್ಯನ್ಯಾಯವನ್ನು ಅಕಾವ್ಯನ್ಯಾಯ, ಶುಷ್ಕನ್ಯಾಯ ಎಂದು ಕೆಲವರು ಹೇಳಿದರು. ಈಚೆಗೆ ಕಾವ್ಯನ್ಯಾಯ ತತ್ತ್ವವನ್ನು ಪದ್ಯಕಾವ್ಯಗಳಿಗೆ ಹೇಗೋ ಹಾಗೆ ಗದ್ಯ ಕಾವ್ಯಗಳಿಗೂ ಅನ್ವಯಿಸುತ್ತಾರೆ. ಭವ್ಯಕಾವ್ಯ, ರೂಪಕಗಳಂತೆಯೇ ಕಾದಂಬರಿಯಲ್ಲೂ ನ್ಯಾಯ ನಮಗೆ ಗೋಚರಿಸುತ್ತದೆ. ಕಾದಂಬರಿಯೇ ಏಕೆ ಎಲ್ಲ ಬಗೆಯ ಕತೆಯಲ್ಲೂ ನ್ಯಾಯವೇ ಚಾಲಕ ಶಕ್ತಿ. ಎಂದರೆ, ಆರಿಸಿಕೊಂಡ ಕಥಾವಿಷಯವನ್ನು ಮನವೊಪ್ಪುವಂತೆ ಸಾಹಿತಿ ನಿರೂಪಿಸಿದ್ದಾನೆ ಎಂಬುದು ಇಲ್ಲಿ ನ್ಯಾಯಸಾಧನೆಯ ಅರ್ಥ. (ಎಸ್.ವಿ.ಆರ್.)

**ಕಾವ್ಯ ಪ್ರಭೇದಗಳು :** ಸಂಸ್ಕೃತದಲ್ಲಿ ಕಾವ್ಯಗಳ ವರ್ಗೀಕರಣ ಕ್ರಮ ಬಹು ಹಿಂದಿನಿಂದ ರೂಢಿಯಲ್ಲಿದೆಯಾದರೂ ಅದು ಯಾವಾಗ ಪ್ರಾರಂಭವಾಗಿರಬಹುದೆಂದು ನಿರ್ಧರಿಸಲು ಆಧಾರ ಸಾಲದು. ಭರತನ ನಾಟ್ಯಶಾಸ್ತ್ರದಲ್ಲಿ (ಪ್ರಶ.ಪೂ 2ನೆಯ ಶತಮಾನದಿಂದ ಪ್ರ.ಶ. 2ನೆಯ ಶತಮಾನ) ಕಾವ್ಯಪರೀಕ್ಷೆಯ ಅಂಶಗಳು ನಾಟ್ಯಶಾಸ್ತ್ರದ ಅಂಗವಾಗಿ ಪಾಠ್ಯ ಅಥವಾ ವಾಚಿಕಾಭಿನಯದ ಪ್ರಕರಣದಲ್ಲಿ ಪ್ರಸಕ್ತವಾಗಿ ಸಂಸ್ಕೃತ, ಪ್ರಾಕೃತ ಎಂಬ ಎರಡು ಪ್ರಕಾರಗಳೂ ಮಾತ್ರ ಉಕ್ತವಾಗಿವೆ. ರೂಪಕದ ಹತ್ತು ಪ್ರಕಾರಗಳು ಲಕ್ಷಣೋದಾಹರಣೆಗಳ ಸಹಿತ ವಿಸ್ತಾರವಾಗಿ ವಿವೇಚಿಸಲ್ಪಟ್ಟಿವೆಯಾದರೂ ಕಾವ್ಯ ಸಾಮಾನ್ಯದ ವರ್ಗೀಕರಣ ಮಾತ್ರ ಸ್ಪಷ್ಟವಾಗಿ ಕಂಡುಬರುವುದಿಲ್ಲ.

ಕಾವ್ಯಲಕ್ಷಣವನ್ನು ನಿರೂಪಿಸುವ ಪ್ರಯತ್ನ ಬೆಳೆದಂತೆಲ್ಲ ಕಾಲಕಾಲಕ್ಕೆ ವಿಭಾಗ ಕ್ರಮದಲ್ಲಿಯೂ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಅಲಂಕಾರ ಶಾಸ್ತ್ರದ ಪ್ರಥಮ ಗ್ರಂಥಕಾರನೆಂದು ಭಾವಿಸಲಾಗಿರುವ ಭಾಮಹ (ಸು. 6ನೆಯ ಶತಮಾನ) ತನ್ನ ಕಾವ್ಯಾಲಂಕಾರದಲ್ಲಿ ನಾಲ್ಕೈದು ವಿಭಾಗ ವಿಧಾನಗಳನ್ನು ತಿಳಿಸುವುದರಿಂದ ಇವನ ಕಾಲಕ್ಕಾಗಲೇ ಈ ದಿಕ್ಕಿನಲ್ಲಿ ಹಲವಾರು ಪ್ರಯತ್ನಗಳು ನಡೆದಿದ್ದಿರಬೇಕೆಂದು ಊಹಿಸಬಹುದು. ಶಬ್ದಾರ್ಥೌ ಸಹಿತೌ ಕಾವ್ಯಂ ಗದ್ಯಂ ಪದ್ಯಂ ಚ ತದ್ವಿಧಾ ಎಂಬಲ್ಲಿ ಕಾವ್ಯವನ್ನು ಗದ್ಯ, ಪದ್ಯ ಎಂದು ಎರಡಾಗಿ ವಿಂಗಡಿಸಿದೆ. ಅದೇ ಶ್ಲೋಕದ ಉತ್ತರಾರ್ಧದಲ್ಲಿ ಭಾಷೆಯ ದೃಷ್ಟಿಯಿಂದ ಕಾವ್ಯವನ್ನು ಸಂಸ್ಕೃತ, ಪ್ರಾಕೃತ, ಅಪಭ್ರಂಶ ಎಂದು ಮೂರು ವಿಧವಾಗಿಯೂ ವಿಭಾಗಿಸಿದೆ. ಮುಂದೆ ಅದೇ ಗ್ರಂಥದಲ್ಲಿ ವಿಷಯದ ದೃಷ್ಟಿಯಿಂದ ವೃತ್ತಶಂಸಿ (ಹಿಂದೆ ನಡೆದದ್ದನ್ನು ತಿಳಿಸುವುದು), ದೇವಾದಿಚರಿತಶಂಸಿ (ದೇವತಾದಿಗಳ ಸಾಹಸವನ್ನು ತಿಳಿಸುವುದು), ಉತ್ಪಾದ್ಯವಸ್ತು (ಕಲ್ಪಿತವಾದ ವಸ್ತುವನ್ನುಳ್ಳದ್ದು) ಮತ್ತು ಕಲಾಶಾಸ್ತ್ರಾಶ್ರಯ (ಕಲೆ ಮತ್ತು ಶಾಸ್ತ್ರಗಳ ಆಧಾರದ ಮೇಲೆ ರಚಿತವಾದದ್ದು) ಎಂಬುದಾಗಿ ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ. ಪುನಃ ಕಾವ್ಯದ ಪ್ರಕಾರಕ್ಕನುಗುಣವಾಗಿ ಸರ್ಗಬಂಧ, ಅಭಿನೇಯಾರ್ಥ, ಆಖ್ಯಾಯಿಕಾ, ಕಥಾ, ಅನಿಬದ್ಧ ಎಂದು ಐದು ವಿಧವೆಂಬ ವಿಭಾಗಕ್ರಮವೂ ಕಂಡುಬರುತ್ತದೆ. ಕಾವ್ಯ ಭರತನ ದೃಷ್ಟಿಯಲ್ಲಿ ರೂಪಕದ ಅಂಗವಾದರೆ ಆಲಂಕಾರಿಕನಾದ ಭಾಮಹನ ದೃಷ್ಟಿಯಲ್ಲಿ ಅಭಿನಯಕ್ಕೆ ಯೋಗ್ಯವಾದ ನಾಟಕಾದಿಗಳು ಕಾವ್ಯಪ್ರಪಂಚದಲ್ಲಿ ಅಂತರ್ಭಾವ ಹೊಂದುತ್ತವೆ. ಆದರೂ ಅಭಿನೇಯಾರ್ಥವನ್ನು ನಾಟಕ, ದ್ವಿಪದೀ, ಶಮ್ಯಾ, ರಾಸಕ, ಸ್ಕಂಧಕ ಎಂದು ಐದು ವಿಧವಾಗಿ ವಿಂಗಡಿಸಿ ಅವುಗಳ ವಿವರಗಳು ಅನ್ಯರಿಂದ ಹೇಳಲ್ಪಟ್ಟಿವೆಯೆಂದು ತಿಳಿಸಿ ಭಾಮಹ ವಿರಮಿಸುತ್ತಾನೆ. ಸರ್ಗಬಂಧ (ಮಹಾಕಾವ್ಯ), ಕಥಾ, ಆಖ್ಯಾಯಿಕೆಗಳ ಲಕ್ಷಣವನ್ನು ತಿಳಿಸಿ ಅನಿಬದ್ಧಕಾವ್ಯಗಾಥಾ ಮತ್ತು ಶ್ಲೋಕ ಮಾತ್ರಗಳನ್ನುಳ್ಳದ್ದೆಂದು ತಿಳಿಸಿದೆ. ಇದಲ್ಲದೆ ಕಾವ್ಯಗಳಲ್ಲಿ ವೈದರ್ಭವೆಂಬುದು ಬೇರೊಂದಿದೆಯೆಂದೂ ಅದೇ ಅತ್ಯುತ್ತಮವೆಂದೂ ಹೇಳುವ ಪಂಡಿತರ ಅಭಿಪ್ರಾಯವನ್ನು ಉಲ್ಲೇಖಿಸಿ ಅದಕ್ಕೂ ಗೌಡೀಯವೆಂಬುದಕ್ಕೂ ಇರುವ ವ್ಯತ್ಯಾಸವನ್ನು 'ಗತಾನುಗತಿಕ ನ್ಯಾಯಾನ್ನಾನಾಖ್ಯೇಯಮಮೇಧಸಾಂ' (ಬುದ್ಧಿಯಿಲ್ಲದವರು ಒಬ್ಬರಂತೊಬ್ಬರು ಇಟ್ಟಿರುವ ಬೇರೆ ಬೇರೆ ಹೆಸರುಗಳು ಮಾತ್ರ)– ಎಂದು ಅಲ್ಲಗಳೆದಿದ್ದಾನೆ. ಪ್ರಸಂಗವಶಾತ್ ಈ ಮಾತೂ ಕಾವ್ಯ ವಿಭಾಗದ ಮತ್ತೊಂದು ಪ್ರಕಾರಕ್ಕೆ ಅನ್ವಯಿಸಿ ಹೇಳಿದಂತಿದೆ.

ದಂಡಿ ತನ್ನ ಕಾವ್ಯಾದರ್ಶದಲ್ಲಿ, ಕಾವ್ಯ ಗದ್ಯ, ಪದ್ಯ, ಮಿಶ್ರವೆಂಬ ಮೂರೇ ವಿಧಗಳನ್ನುಳ್ಳದ್ದೆಂದು ಹೇಳಿದ್ದಾನೆ. ಇವನಲ್ಲಿ ಮಿಶ್ರವೆಂಬುದು ಹೊಸದು. ಇದರಲ್ಲಿ ನಾಟಕಾದಿಗಳೂ ಚಂಪೂಕಾವ್ಯವೂ ಸೇರುತ್ತವೆ. ವೃತ್ತ ಮತ್ತು ಜಾತಿ ಎಂದು ಪದ್ಯ ಎರಡು ವಿಧ. ಮುಕ್ತಕ, ಕುಲಕ, ಕೋಶ ಸಂಘಾತ ಎಂಬ ಹೊಸ ಪ್ರಭೇದಗಳು ಸರ್ಗಬಂಧದ ಅಂಶಗಳೆಂದು ಪರಿಗಣಿಸಲ್ಪಟ್ಟಿವೆ. ಗದ್ಯಕೃತಿ ಕಥೆ, ಆಖ್ಯಾಯಿಕೆ ಎಂಬ ಎರಡು ಭೇದಗಳನ್ನುಳ್ಳದ್ದೆಂಬ (ಭಾಮಹ) ಅಭಿಪ್ರಾಯವನ್ನು ಅಲ್ಲಗಳೆದು ಇವೆರಡೂ ಒಂದೇ ಕಾವ್ಯದ ಎರಡು ಹೆಸರುಗಳೆಂದು ದಂಡಿ ಅಭಿಪ್ರಾಯಪಡುತ್ತಾನೆ. ಭಾಷೆಯ ದೃಷ್ಟಿಯಿಂದ ವಿಂಗಡಿಸುವಾಗಲೂ ಈತ ಭಾಮಹನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಮಿಶ್ರವೆಂಬ ನಾಲ್ಕನೆಯ ವಿಧವನ್ನು ಅಂಗೀಕರಿಸುತ್ತಾನೆ. ಪ್ರಾಕೃತ, ತತ್ಸಮ, ತದ್ಭವ, ದೇಶೀ ಮೊದಲಾಗಿ ಅನೇಕ ವಿಧವೆಂದು ಹೇಳಿ ಅವುಗಳಲ್ಲಿ ಮಹಾರಾಷ್ಟ್ರೀ ಅತ್ಯುತ್ತಮವೆಂದೂ ಗೌಡೀ ಮತ್ತು ಲಾಟೀಗಳು ಇತರ ಪ್ರಕಾರಗಳೆಂದೂ ಹೇಳುತ್ತಾನೆ. ಸರ್ಗಬಂಧಾದಿಗಳು ಸಂಸ್ಕೃತ

ಕಾವ್ಯಗಳೆಂದೂ ಸ್ಕಂಧಕವೇ ಮೊದಲಾದವು ಪ್ರಾಕೃತ ಕಾವ್ಯಗಳೆಂದೂ ಓಸರ ಮೊದಲಾದವು ಅಪಭ್ರಂಶ ಕಾವ್ಯಗಳೆಂದೂ ಹೇಳಲ್ಪಟ್ಟಿವೆ. ದೃಶ್ಯ (ಲಾಸ್ಯ, ಛಲಿತ, ಶಂಪ ಮೊದಲಾದವು) ಹೊರತು ಮಿಕ್ಕವೆಲ್ಲ ಶ್ರವ್ಯ ಎಂಬ ವಿಭಾಗವನ್ನೂ ಉಲ್ಲೇಖಿಸಿರುತ್ತಾನೆ. ಮಾತಿನ (ಅರ್ಥಾತ್ ಕಾವ್ಯದ) ಮಾರ್ಗಗಳು ಅನೇಕ ಸೂಕ್ಷ್ಮ ವಿಧಗಳನ್ನುಳ್ಳವೆಂದು ಹೇಳಿ (ಭಾಮಹ ಅಲ್ಲಗಳೆದಿದ್ದ) ವೈದರ್ಭ ಮತ್ತು ಗೌಡೀಯ ಮಾರ್ಗಗಳಿಗೆ ಇರುವ ವ್ಯತ್ಯಾಸವನ್ನು ಗುಣಗಳ ಆಧಾರದ ಮೇಲೆ ಸ್ಪಷ್ಟಗೊಳಿಸುತ್ತಾನೆ.

ಭಾಮಹನಂತೆ ವಾಮನನೂ ಗದ್ಯ, ಪದ್ಯ ಎಂಬ ದ್ವಿವಿಧ ವಿಭಾಗವನ್ನೇ ಅಂಗೀಕರಿಸಿರುತ್ತಾನೆ. ಗದ್ಯದ ವಿಚಾರದಲ್ಲಿ ಮಾತ್ರ ವೃತ್ತಗಂಧಿ , ಚೂರ್ಣ ಉತ್ಕಲಿಕಾಪ್ರಾಯ ಎಂಬ ಮೂರು ಹೊಸ ಅವಾಂತರ ಭೇದಗಳನ್ನು ಉದಾಹರಿಸಿದ್ದಾನೆ. ಪದ್ಯದ ಭಾಗಗಳನ್ನುಳ್ಳದ್ದು ವೃತ್ತಗಂಧಿ. ಸಮಾಸರಹಿತವಾದ ಲಲಿತ ಪದಗಳನ್ನುಳ್ಳದ್ದು ಚೂರ್ಣ. ಇದಕ್ಕೆ ವಿರುದ್ಧವಾಗಿ ದೀರ್ಘಸಮಾಸಗಳಿಂದಲೂ ಉದ್ಧಾತ ಪದಗಳಿಂದಲೂ ಕೂಡಿದ್ದು ಉತ್ಕಲಿಕಾಪ್ರಾಯ. ಕಾವ್ಯದಲ್ಲಿ ನಿಬದ್ಧ, ಅನಿಬದ್ಧ ಎಂದು ಎರಡು ವಿಧವೆಂದು ಮಾತ್ರ ಹೇಳಿ ಉಳಿದ ಭೇದಗಳು ಪ್ರಸಿದ್ಧವಾಗಿರುವ ಕಾರಣ ಲಕ್ಷಣವನ್ನು ಹೇಳಿಲ್ಲವೆನ್ನುತ್ತಾನೆ. ಸಂದರ್ಭ (ಪ್ರಬಂಧ)ಗಳಲ್ಲಿ ಹತ್ತು ರೂಪಗಳೇ ಅತ್ಯುತ್ತಮವೆಂದೂ ಅವುಗಳ ಮೂಲಕವೇ ಇತರ ಭೇದಗಳ ಕಲ್ಪನೆಯೆಂದೂ ಹೇಳಿ ಭರತನಲ್ಲಿ ಕಂಡುಬರುವ ರೂಪಕ ಪ್ರಾಧಾನ್ಯವನ್ನು ಪುಷ್ಟೀಕರಿಸುತ್ತಾನೆ. ಕಥೆ ಆಖ್ಯಾಯಿಕ ಮಹಾಕಾವ್ಯಾದಿಗಳ ಲಕ್ಷಣ ಹೃದಯಂಗಮವಲ್ಲವಾದುದರಿಂದ ಬಿಡಲಾಗಿದೆಯೆನ್ನುತ್ತಾನೆ.

ರುದ್ರಟ ತನ್ನ ಕಾವ್ಯಾಲಂಕಾರದಲ್ಲಿ ಕಾವ್ಯಪ್ರಬಂಧಗಳಲ್ಲಿ (ಭಾಮಹನಿಂದ ಸೂಚಿತವಾಗಿರುವಂತೆ) ಉತ್ಪಾದ್ಯ ಮತ್ತು ಅನುತ್ಪಾದ್ಯ ಎಂಬ ವಿಭಾಗವನ್ನು ಪ್ರಧಾನವಾಗಿ ನಿರೂಪಿಸಿ ಇವೆರಡೂ ಮಹತ್ ಮತ್ತು ಲಘು ಎಂಬ ಮತ್ತೆರಡು ವಿಧಗಳನ್ನು ಹೊಂದಿವೆಯೆನ್ನುತ್ತಾನೆ. ಮಹಾಕಾವ್ಯ, ಕಥೆ, ಆಖ್ಯಾಯಿಕೆಗಳ ಲಕ್ಷಣವನ್ನು ವಿಸ್ತಾರವಾಗಿ ನಿರೂಪಿಸಿ, ಕ್ಷುದ್ರ ಕಾವ್ಯಗಳ ಪೈಕಿ ಖಂಡಕಥೆ, ಪ್ರಶಸ್ತಿ, ಕುಲಕ, ನಾಟಕಾದಿಗಳ ವಿಷಯವನ್ನು ಸಂಗ್ರಹವಾಗಿ ನಿರೂಪಿಸುತ್ತಾನೆ. ಪ್ರಶಸ್ತಿ ಎಂಬ ಕಾವ್ಯಪ್ರಭೇದ ಇವನಿಂದ ಹೊಸದಾಗಿ ಲಕ್ಷಿತವಾಗಿದೆ. ಇದಲ್ಲದೆ ರುದ್ರಟ ತನ್ನ ಗ್ರಂಥದ ಐದನೆಯ ಅಧ್ಯಾಯದಲ್ಲಿ ಚಿತ್ರಕಾವ್ಯದ ಭೇದಗಳಾದ ಚಕ್ರ, ಖಡ್ಗ, ಮುಸಲ, ಧನುಸ್ಸು, ಶಕ್ತಿ, ಶೂಲ ಮೊದಲಾದ ಅನೇಕ ಬಂಧಗಳನ್ನೂ ಕ್ರೀಡಾಮಾತ್ರೋಪಯೋಗವೆಂದು ಹೇಳಲಾಗಿರುವ ಮಾತ್ರಾಚ್ಯುತಕ, ಬಿಂದುಚ್ಯುತಕ, ಪ್ರಹೇಲಿಕಾ, ಕರ್ತೃಗೂಢ, ಕ್ರಿಯಾಗೂಢ, ಪ್ರಶ್ನೋತ್ತರ– ಮೊದಲಾದ ಪ್ರಭೇದಗಳನ್ನೂ ತಿಳಿಸುತ್ತಾನೆ. ಇವನ ಕಾಲದ ವೇಳೆಗೆ ಈ ಬಗೆಯ ಕಾವ್ಯ ವಿಶೇಷವಾಗಿ ಹುಟ್ಟಿದ್ದಿರಬೇಕೆಂದು ತೋರುತ್ತದೆ. ಭಾರವಿ, ಮಾಘ ಮೊದಲಾದ ಪಂಡಿತ ಕವಿಗಳು ಇವುಗಳ ಮೂಲಕ ಪಾಂಡಿತ್ಯ ಪ್ರದರ್ಶನ ಮಾಡಿರುವುದು ಗಮನಾರ್ಹ.

ಅಗ್ನಿಪುರಾಣದ ಕಾವ್ಯಾದಿಲಕ್ಷಣ ಪ್ರಕರಣದಲ್ಲಿ ಕಾವ್ಯ ದಂಡಿಯ ಮತಾನುಸಾರವೇ ವಿಂಗಡಿಸಲ್ಪಟ್ಟಿದೆಯಾದರೂ ಗದ್ಯಕಾವ್ಯದ ವಿಷಯದಲ್ಲಿ ಕಥಾ, ಆಖ್ಯಾಯಿಕಾ, ಖಂಡಕಥಾ, ಪರಿಕಥಾ, ಕಥಾನಿಕಾ ಎಂಬ ಐದು (ಹೊಸ ಪ್ರಭೇದಗಳೂ ಸೇರಿ) ಭೇದಗಳನ್ನು ಹೇಳಲಾಗಿದೆ. ಪದ್ಯ ವೃತ್ತ, ಜಾತಿ ಎಂದು ಎರಡು ವಿಧವಾದರೂ ಮಹಾಕಾವ್ಯ, ಕಲಾಪ, ಪರ್ಯಾಯ ಬಂಧ, ವಿಶೇಷಕ, ಕುಲಕ ಮುಕ್ತಕ, ಕೋಷ–ಇವು ಪದ್ಯ ಕುಟುಂಬಕ್ಕೆ ಸೇರಿದುವೆಂದು ಹೇಳಲಾಗಿದೆ. ವಮಃ, ಪ್ರಕೀರ್ಣ ಎಂದು ಮಿಶ್ರ ಎರಡುವಿಧ. ಪ್ರಕೀರ್ಣದಲ್ಲಿ ಅಭಿನೇಯವಾದ ನಾಟಕಾದಿಗಳು ಬರುತ್ತವೆ.

ಒಂಬತ್ತನೆಯ ಶತಮಾನದಲ್ಲಿ ನೂತನವಾದ ಧ್ವನಿತತ್ತ್ವವನ್ನು ಪ್ರತಿಪಾದಿಸಿದ ಆನಂದವರ್ಧನನೂ ತನ್ನ ಧ್ವನ್ಯಾಲೋಕದ ಮೂರನೆಯ ಉದ್ಯೋತದಲ್ಲಿ ಲಘುಪದ್ಯಕಾವ್ಯದ ಮುಕ್ತಕ, ಸಂದಾನಿತಕ, ವಿಶೇಷಕ, ಕಲಾಪಕ ಮತ್ತು ಕುಲಕ ಎಂಬ ಭೇದಗಳನ್ನೂ ಗದ್ಯವಿಭಾಗದಲ್ಲಿ ಪರ್ಯಾಯಬಂಧ, ಪರಿಕಥಾ, ಖಂಡಕಥಾ ಮತ್ತು ಸಕಲ ಕಥಾ ಎಂಬ ಅವಾಂತರ ಭೇದಗಳನ್ನೂ ಹೆಸರಿಸಿ ಈಗಾಗಲೇ ಪರಿಚಿತವಾಗಿರುವ ಸರ್ಗಬಂಧ. ಅಭಿನೇಯಾರ್ಥ, ಆಖ್ಯಾಯಿಕಾ, ಕಥಾ ಎಂಬ ಭೇದಗಳನ್ನೂ ಉದಾಹರಿಸಿರುತ್ತಾನೆ. ಇದಲ್ಲದೆ ಇವನ ಧ್ವನಿತತ್ತ್ವದ ದೃಷ್ಟಿಯಿಂದ ಕಾವ್ಯಗಳ ವಿಭಾಗಕ್ರಮದಲ್ಲಿ ಮತ್ತೊಂದು ಗಮನಾರ್ಹವಾದ ಬದಲಾವಣೆಯಾಯಿತು. ಧ್ವನಿ ಶಬ್ದ ಧ್ವನ್ಯತೇ ಅಸ್ಮಿನ್ ಎಂಬ ವ್ಯುತ್ಪತ್ತಿಗೆ ಅನುಗುಣವಾಗಿ ಪ್ರಬಂಧ ವಿಶೇಷಕ್ಕೂ ನಿರ್ದೇಶಕವಾಯಿತು. ಧ್ವನಿಸಿದ್ಧಾಂತದ ನೂತನ ಮೌಲ್ಯಮಾಪನದಿಂದ ಕಾವ್ಯವನ್ನು ಧ್ವನಿಕಾವ್ಯ (ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥ ಪ್ರಧಾನವಾಗಿರುವುದು), ಗುಣೀಭೂತವ್ಯಂಗ್ಯ (ವ್ಯಂಗ್ಯ ವಾಚ್ಯದೊಡನೆ ಸಮ ಅಥವಾ ಕಡಿಮೆಯ ಪ್ರಾಧಾನ್ಯ ಹೊಂದಿರುವುದು), ಮತ್ತು ಚಿತ್ರಕಾವ್ಯ ಎಂದು ಮೂರು ವಿಧವಾಗಿ ವಿಂಗಡಿಸಲಾಯಿತು. ಧ್ವನಿಕಾವ್ಯ ಅತ್ಯುತ್ತಮವೆಂದೂ ಗುಣೀಭೂತವ್ಯಂಗ್ಯ ಕಾವ್ಯ ಮಧ್ಯಮವೆಂದೂ ಶಬ್ದಚಿತ್ರ, ಅರ್ಥಚಿತ್ರ ಎಂಬ ಭೇದಗಳನ್ನುಳ್ಳ ಚಿತ್ರಕಾವ್ಯ ಅಧಮವೆಂದೂ ನಿರ್ಣಯಿಸಲ್ಪಟ್ಟಿತು. ಈ ವಿಭಾಗಕ್ರಮವನ್ನು ಈಚಿನ ವಿಮರ್ಶಕನಾದ ಪಂಡಿತರಾಜ ಜಗನ್ನಾಥ ಪರಿಷ್ಕರಿಸಿ ಧ್ವನಿಕಾವ್ಯವನ್ನು ಉತ್ತಮೋತ್ತಮವೆಂದು ಕರೆದಿರುತ್ತಾನೆ. ವ್ಯಂಗ್ಯ ಅಪ್ರಧಾನವಾದರೂ ಎಲ್ಲಿ ಚಮತ್ಕಾರ ಕಾರಣವೋ ಅಂಥ ಕಾವ್ಯ ಉತ್ತಮ. (ಇದು ಕಾವ್ಯಪ್ರಕಾಶಕಾರ ಮಮ್ಮಟನ ಮತಾನುಸಾರ ಮಧ್ಯಮ). ವಾಚ್ಯ ಚಮತ್ಕಾರ ಪ್ರಧಾನವಾಗಿದ್ದರೂ ಬೇರೆಡೆಯಲ್ಲಿ ಅಪ್ರಧಾನವಾಗಿಯಾದರೂ ವ್ಯಂಗ್ಯ ಚಮತ್ಕಾರವಿದ್ದರೆ ಅದು ಮಧ್ಯಮ ಕಾವ್ಯ (ಇದು ಮಮ್ಮಟನ ಗುಣೀಭೂತವ್ಯಂಗ್ಯಕ್ಕೂ ಅರ್ಥಚಿತ್ರಕ್ಕೂ ಮಧ್ಯಸ್ಥವಾದ ವಿಭಾಗ). ಎಲ್ಲಿ ಅರ್ಥಚಮತ್ಕಾರದಿಂದ ಉಪಸ್ಕೃತವಾದ ಶಬ್ದಚಮತ್ಕಾರವಿರುವುದೋ ಅಂಥ ಕಾವ್ಯ ಅಧಮ. ಕೇವಲ ಶಬ್ದಚಿತ್ರವನ್ನು ಜಗನ್ನಾಥ ಅಧಮಾಧಮವೆಂದು ಹೇಳಿ ಅದನ್ನೂ ಕೆಲವರು ಕಾವ್ಯವೆಂದೊಪ್ಪಿದರೂ ತನಗೆ ಅದು ಅನಭಿಮತವೆಂದು ನಿರಾಕರಿಸುತ್ತಾನೆ. ಇದಲ್ಲದೆ ಅವಿವಕ್ಷಿತವಾಚ್ಯ, ವಿವಕ್ಷಿತಾನ್ಯಪರವಾಚ್ಯ ಮೊದಲಾದ ಧ್ವನಿಯ ಅನೇಕ (ಒಟ್ಟು 5355) ಭೇದಗಳಿಗೆ ತಕ್ಕಂತೆ ಕಾವ್ಯಪ್ರಭೇದಗಳೂ ಸಾಧ್ಯವೆಂದು ಊಹಿಸಬಹುದಾದರೂ ಆ ಭೇದಗಳೆಲ್ಲ ವ್ಯವಹಾರದಲ್ಲಿಲ್ಲ. ಕಾವ್ಯಪ್ರಬಂಧಗಳಿಗೂ ಅನ್ವಯಿಸುವಂತೆ ಕೆಲವು ಮುಖ್ಯ ಧ್ವನಿಭೇದಗಳು ಮಾತ್ರ ಧ್ವನಿಮತಾನುಯಾಯಿಗಳಿಂದ ಅಂಗೀಕರಿಸಲ್ಪಟ್ಟಿವೆ.

ರಾಜಶೇಖರನ ಕಾವ್ಯಮೀಮಾಂಸೆಯಲ್ಲಿ (880–920) ಈ ವಿಧವಾದ ಕಾವ್ಯವಿಭಾಗವಾವುದೂ ಕಂಡುಬರುವುದಿಲ್ಲವಾದರೂ ಮೂರನೆಯ ಅಧ್ಯಾಯದಲ್ಲಿ ವರ್ಣಿತವಾಗಿರುವ ಕಾವ್ಯಪುರುಷನ ಪ್ರವಾಸ ವೃತ್ತಾಂತವೂ ಐದನೆಯ ಅಧ್ಯಾಯದಲ್ಲಿ ನಿರೂಪಿತವಾಗಿರುವ ಕವಿ ಪ್ರಭೇದಗಳೂ ತದನುಗುಣವಾದ ಕಾವ್ಯಭೇದಗಳನ್ನು ಸೂಚಿಸುವಂತಿವೆ. ಆದರೆ ಇವು ಸಹ ವ್ಯವಹಾರದಲ್ಲಿಲ್ಲ.

ರಸಧ್ವನಿ ಸಿದ್ಧಾಂತದ ಪರಿಷ್ಕರಣದಲ್ಲಿ ತೊಡಗಿದ ಈಚಿನ ಆಲಂಕಾರಿಕರೂ ಪ್ರಾಚೀನ ಕಾವ್ಯವಿಭಾಗ ಕ್ರಮಗಳನ್ನು ವಿಮರ್ಶಿಸಿ ಲಕ್ಷಣೋದಾಹರಣೆಗಳ ಮೂಲಕ ಸ್ಪಷ್ಟಪಡಿಸಲು ಪ್ರಯತ್ನಿಸಿರುತ್ತಾರೆ.

ಹನ್ನೊಂದನೆಯ ಶತಮಾನದ ಆದಿಭಾಗಕ್ಕೆ ಸೇರಿದ ಭೋಜಮಹಾರಾಜ ತನ್ನ ವಿಸ್ತಾರವಾದ ಶೃಂಗಾರಪ್ರಕಾಶದ ಹನ್ನೊಂದನೆಯ ಅಧ್ಯಾಯದಲ್ಲಿ ಇಪ್ಪತ್ತ ನಾಲ್ಕು ಬಗೆಯ ಪ್ರೇಕ್ಷ್ಯಪ್ರಬಂಧಗಳನ್ನೂ ಅದೇ ರೀತಿ ಇಪ್ಪತ್ತನಾಲ್ಕು ಬಗೆಯ ಶ್ರವ್ಯಪ್ರಬಂಧಗಳನ್ನೂ ಹೆಸರಿಸಿ ಲಕ್ಷಣೋದಾಹರಣೆಗಳಿಂದ ವಿವರಿಸುತ್ತಾನೆ. ಪ್ರೇಕ್ಷ್ಯ ಪ್ರಬಂಧಗಳ ಪೈಕಿ ಹನ್ನೆರಡು ವಾಕ್ಯಾರ್ಥಾಭಿನಯದ ಭೇದಗಳೆಂದೂ ಉಳಿದ ಹನ್ನೆರಡು ಪದಾರ್ಥಾಭಿನಯದ ಭೇದಗಳೆಂದೂ ಹೇಳಲಾಗಿದೆ. ಶ್ರವ್ಯ ಕಾವ್ಯಗಳ ಪೈಕಿ ಉಪಾಖ್ಯಾನಮ್, ನಿದರ್ಶನಮ್, ಪ್ರವಲ್ಹಿಕಾ, ಮಂಥುಲ್ಲಿಕಾ (ಮತಲ್ಲಿಕಾ). ಮಣಿಕುಲ್ಯಾ, ಉಪಕಥಾ, ಬೃಹತ್ಕಥಾ, ಪರ್ವಬಂಧ, ಕಾಂಡಬಂಧ, ಆಶ್ವಾಸಕಬಂಧ, ಸಂಧಿಬಂಧ, ಸಂಹಿತಾ, ಸಾಹಿತ್ಯಪ್ರಕಾಶ ಮೊದಲಾದ ಭೇದಗಳನ್ನು ಭೋಜ ಹೊಸದಾಗಿ ಹೇಳುತ್ತಾನಲ್ಲದೆ ಹಿಂದಿನವರು ಹೇಳಿದ ಓಸರ, ಅಪಭ್ರಂಶಕಾವ್ಯ, ಅನಿಬದ್ಧ ಮುಕ್ತಕ, ಸಂದಾನಿತಕ ಮೊದಲಾದ ಭೇದಗಳನ್ನೂ ಎಂಟನೆಯ ಅಧ್ಯಾಯದಲ್ಲಿ ಹೇಳುತ್ತಾನಲ್ಲದೆ ಈ ವಿಧವಾದ ಕ್ಷುದ್ರ ಅಥವಾ ಖಂಡಕಾವ್ಯಗಳ ಪ್ರಭೇದಗಳ ಸಂಖ್ಯೆ ಈಚಿನ ಅಲಂಕಾರ ಗ್ರಂಥಗಳಲ್ಲಿ ಇನ್ನೂ ಹೆಚ್ಚಿದೆ.

ಹೇಮಚಂದ್ರ (1089–1173) ತನ್ನ ಕಾವ್ಯಾನುಶಾಸನವೆಂಬ ಉದ್ಗ್ರಂಥದಲ್ಲಿ ಕಾವ್ಯವನ್ನು ಪ್ರೇಕ್ಷ್ಯ ಮತ್ತು ಶ್ರವ್ಯ ಎಂದು ಎರಡಾಗಿ ವಿಂಗಡಿಸಿ ಪ್ರೇಕ್ಷ್ಯವನ್ನು ಪಾಠ್ಯ ಮತ್ತು ಗೇಯ (ಹಾಡಲು ಅರ್ಹವಾದದ್ದು) ಎಂದು ವಿಭಾಗಿಸಿದ್ದಾನೆ. ಭೋಜ ಹೇಳಿರುವ ಹನ್ನೆರಡು ವಾಕ್ಯಾರ್ಥಾಭಿನಯದ ಭೇದಗಳನ್ನು ಹೇಮಚಂದ್ರ ಪಾಠ್ಯದ ಭೇದಗಳನ್ನಾಗಿ ಗಮನಿಸಿರುತ್ತಾನೆ. ಆದರೆ ಗೇಯ ವಿಭಾಗದಲ್ಲಿ ಡೋಂಬಿಕ, ಶಿಂಗಕ, ರಾಮಾಕ್ರೀಡ, ಮೊದಲಾದ ಹೊಸ ಭೇದಗಳನ್ನೂ ಹೇಳಿರುತ್ತಾನೆ. ಶ್ರವ್ಯ ಕಾವ್ಯಗಳ ಪ್ರಸಿದ್ಧ ಭೇದಗಳು ಹಿಂದಿನಂತೆಯೇ ಇದ್ದರೂ ಲಕ್ಷಣಾದಿಗಳಲ್ಲಿ ಹೆಚ್ಚು ಪರಿಷ್ಕಾರವಿಲ್ಲಿ ಕಂಡುಬರುತ್ತದೆ.

ಈಚಿನ ಜೈನ ಆಲಂಕಾರಿಕರು ಹೇಳಿರುವ ಹಲವಾರು ಕಾವ್ಯ ಪ್ರಭೇದಗಳಲ್ಲಿ ಕೆಲವು ಗಮನಾರ್ಹವಾಗಿವೆ. ಉದ್ಯೋತನ ಸೂರಿ ತನ್ನ ಕುವಲಯ ಮಾಲಾ ಗ್ರಂಥದಲ್ಲಿ ಕಥೆಯನ್ನು ಪುರುಷಾರ್ಥಗಳಿಗನುಗುಣವಾಗಿ ಧರ್ಮಕಥಾ, ಅರ್ಥಕಥಾ, ಕಾಮಕಥಾ ಮತ್ತು ಸಂಕೀರ್ಣಕಥಾ ಎಂದು ನಾಲ್ಕು ವಿಧವಾಗಿ ವಿಂಗಡಿಸಿದ್ದಾನೆ. ಇದಲ್ಲದೆ ಉಲ್ಲಾಪಕಥಾ, ಪರಿಹಾಸಕಥಾ ವರಕಥಾ, ವಿಕಥಾ ಎಂಬ ಪ್ರಭೇದಗಳೂ ಉದಾಹರಿಸಲ್ಪಟ್ಟಿವೆ.

13–14ನೆಯ ಶತಮಾನದಲ್ಲಿದ್ದ ವಿದ್ಯಾನಾಥ ತನ್ನ ಪ್ರತಾಪರುದ್ರ ಯಶೋಭೂಷಣವೆಂಬ ಗ್ರಂಥದಲ್ಲಿ ಉದಾಹರಣ, ಚಕ್ರವಾಲಕ, ಭೋಗಾವಲೀ, ಬಿರುದಾವಲೀ ಮತ್ತು ತಾರಾವಲೀ ಎಂಬ ಕ್ಷುದ್ರ ಕಾವ್ಯಪ್ರಭೇದಗಳನ್ನು ಹೊಸದಾಗಿ ಹೇಳಿರುತ್ತಾನಲ್ಲದೆ ಧ್ವನಿ ಮತಾನುಸಾರವಾದ ವಿಭಾಗವನ್ನೂ ಉಲ್ಲೇಖಿಸಿರುತ್ತಾನೆ. ಸಾಹಿತ್ಯ ಕಲ್ಪದ್ರುಮವೆಂಬ ಈಚಿನ ಗ್ರಂಥದಲ್ಲಿ ನಾಟ್ಯಘೋಷಣಾ, ರಂಗಘೋಷಣಾ, ಜಯಘೋಷಣಾ ಮತ್ತು ತ್ಯಾಗಘೋಷಣಾ ಎಂಬ ಪ್ರಶಸ್ತಿ ಕಾವ್ಯದ ಪ್ರಭೇದಗಳು ಹೇಳಲ್ಪಟ್ಟಿವೆ. ಇಂಥ ಕೆಲವು ಪ್ರಶಸ್ತಿ ಗ್ರಂಥಗಳನ್ನೂ ಉಪಚಂಪೂ ಕಾವ್ಯಗಳೆಂದೂ ವಿಂಗಡಿಸಲಾಗಿದೆ.

ವಿಶ್ವನಾಥ (14ನೆಯ ಶತಮಾನ) ತನ್ನ ಸಾಹಿತ್ಯದರ್ಪಣವೆಂಬ ಉದ್ದಾಮ ಗ್ರಂಥದ ನಾಲ್ಕನೆಯ ಪರಿಚ್ಛೇದದಲ್ಲಿ ಧ್ವನಿಮತಾನುಸಾರವಾದ ಧ್ವನಿಯ ಐವತ್ತೊಂದು ಮುಖ್ಯ ಭೇದಗಳನ್ನೂ ಆರನೆಯ ಪರಿಚ್ಛೇದದಲ್ಲಿ ರೂಪಕ, ಉಪರೂಪಕ ಮತ್ತು ಶ್ರವ್ಯ ಕಾವ್ಯಗಳ

ಮುಖ್ಯ ಪ್ರಭೇದಗಳನ್ನೂ ಲಕ್ಷಣೋದಾಹರಣೆಗಳ ಸಹಿತ ಪರಿಷ್ಕರಿಸಿ, ಉಲ್ಲೇಖಿಸಿ, ಉಳಿದ ಭೇದಗಳು ಉದ್ದೇಶಮಾತ್ರ ಪ್ರಸಿದ್ಧವಾಗಿರುವುದರಿಂದ ಬಿಡಲ್ಪಟ್ಟಿವೆಯೆನ್ನುತ್ತಾನೆ. ಈತ ಬಿರುದ ಮತ್ತು ಕರಂಭಕವೆಂಬ ಚಂಪೂ ಕಾವ್ಯ ಪ್ರಭೇದಗಳನ್ನು ಹೊಸದಾಗಿ ಲಕ್ಷಿಸಿರುತ್ತಾನೆ. ಚಂಪೂಕಾವ್ಯ ರಾಜಸ್ತುತಿಯಾದರೆ ಬಿರುದವೆಂದೂ ವಿವಿಧ ಭಾಷೆಗಳಲ್ಲಿ ರಚಿತವಾಗಿದ್ದರೆ ಕರಂಭಕವೆಂದೂ ಕರೆಯಲ್ಪಟ್ಟಿದೆ.

ಕಾವ್ಯದ ಮುಖ್ಯ ವಿಭಾಗಗಳನ್ನು ನಿರೂಪಿಸುವುದರಲ್ಲಿ ಎರಡು ಮಾರ್ಗಗಳು ಕಂಡುಬರುತ್ತವೆ. ದಂಡಿಯಂತೆ ಕಾವ್ಯವನ್ನು ಗದ್ಯ, ಪದ್ಯ, ಮಿಶ್ರ ಎಂದು ಮೂರು ಬಗೆಯನ್ನಾಗಿ ವಿಂಗಡಿಸಿ ಮಿಶ್ರಭಾಗದಲ್ಲಿ ನಾಟಕ ಮತ್ತು ಚಂಪೂಕಾವ್ಯಗಳಿಗೆ ಅಂತರ್ಭಾವವನ್ನು ಹೇಳುವುದು ಒಂದು ವಿಧಾನವಾದರೆ, ಕಾವ್ಯಸಾಮಾನ್ಯವನ್ನು ದೃಶ್ಯ ಮತ್ತು ಶ್ರವ್ಯ ಎಂದು ಎರಡಾಗಿ ವಿಂಗಡಿಸಿ ಶ್ರವ್ಯವನ್ನು ಗದ್ಯ ಪದ್ಯ ಮಿಶ್ರ ಎಂದು ಮೂರು ಭಾಗವಾಗಿ ವಿಂಗಡಿಸುವುದು ಮತ್ತೊಂದು ಕ್ರಮವಾಗಿ ನಡೆದುಬಂದಿದೆ. ಈ ಅಂಶದಲ್ಲಿ, ಮಾತ್ರ ಆಲಂಕಾರಿಕರಲ್ಲಿ ಒಮ್ಮತ ಕಂಡುಬರುವುದಿಲ್ಲ. ಉಳಿದ ಪ್ರಕಾರಗಳನ್ನು ಮೇಲಿನಂತೆ ಚಿತ್ರಿಸಬಹುದು. ಲಕ್ಷಣೋದಾಹರಣೆಗಳ ವಿಷಯದಲ್ಲಿ ಕಾಲಕಾಲಕ್ಕೆ ಆಗಿರುವ ವ್ಯತ್ಯಾಸಗಳನ್ನು ಆಯಾ ಆಕರ ಗ್ರಂಥಗಳಿಂದ ತಿಳಿಯಬಹುದಾಗಿದೆ (**ನೋಡಿ– ಮಹಾಕಾವ್ಯ**). (ಎಸ್.ವಿ.ಎಸ್.ಆರ್.)

**ಕಾವ್ಯಪ್ರಯೋಜನ** : ಕಾವ್ಯವನ್ನು ರಚಿಸುವುದರಿಂದ ಕವಿಗಾಗಲೀ ರಚಿಸಿದ ಕಾವ್ಯಗಳನ್ನು ಓದುವುದರಿಂದ ಸಹೃದಯರಿಗಾಗಲೀ ಆಗುವ ಉಪಯೋಗವೇನು ಎಂಬ ಪ್ರಶ್ನೆಗೆ ಅನೇಕ ಲಾಕ್ಷಣಿಕರು ಅನೇಕ ಬಗೆಯಲ್ಲಿ ಉತ್ತರಿಸಿದ್ದಾರೆ.

ಭರತಮುನಿ ತನ್ನ ನಾಟ್ಯಶಾಸ್ತ್ರದಲ್ಲಿ ನಾಟ್ಯ ಪ್ರಯೋಜನವನ್ನು ಹೇಳುತ್ತ ಲೋಕದಲ್ಲಿ ನಾಟ್ಯವೆಂಬುದು ದುಃಖ, ಶ್ರಮ ಮತ್ತು ಶೋಕದಿಂದ ಬೇಸತ್ತ ಜನರಿಗೆ ವಿಶ್ರಾಮಜನಕವಾಗುತ್ತದೆ ಎಂದಿದ್ದಾನೆ.

ಸಾಧುಕಾವ್ಯ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಲ್ಲಿ ವೈಚಕ್ಷಣ್ಯವನ್ನೂ ಪ್ರೀತಿಯನ್ನೂ ಕೀರ್ತಿಯನ್ನೂ ಉಂಟುಮಾಡುತ್ತದೆ ಎಂಬುದು ಭಾಮಹ, ವಾಮನ ಮುಂತಾದವರ ಅಭಿಪ್ರಾಯ.

ಕಾವ್ಯಪ್ರಕಾಶಕಾರನಾದ ಮಮ್ಮಟ ಎಲ್ಲ ಆಲಂಕಾರಿಕರ ಅಭಿಪ್ರಾಯವನ್ನೂ ಕ್ರೋಡೀಕರಿಸಿ ಕಾವ್ಯ ಯಶಸ್ಸಿಗಾಗಿ, ಧನಾರ್ಜನೆಗಾಗಿ, ವ್ಯವಹಾರ ಜ್ಞಾನಕ್ಕಾಗಿ, ಅಮಂಗಳ ನಿವಾರಣೆಗಾಗಿ, ತತ್ಕಾಲದಲ್ಲೇ ಪರಮೋತ್ಕೃಷ್ಟವಾದ ಆನಂದಾನುಭವಕ್ಕಾಗಿ ಮತ್ತು ಕಾಂತೆಯಂತೆ ಉಪದೇಶಿಸುವುದಕ್ಕಾಗಿ–ಎಂದು ಹೇಳಿ ಕಾವ್ಯಸೃಷ್ಟಿಗೆ ಹೆಚ್ಚು ವ್ಯಾಪಕವಾದ ಪ್ರಯೋಜನವನ್ನೇ ಹೇಳಿದ್ದರೂ 'ರಸಾಸ್ವಾದನ ಕ್ಷಣದಲ್ಲಿಯೇ ಜನಿಸಿ, ಬೇರೆಲ್ಲವನ್ನೂ ಮರೆಸಿ ಬಿಡುವಂಥ ಪರನಿರ್ವೃತಿಯೇ–ಆನಂದವೇ–ಸಕಲ ಪ್ರಯೋಜನ ಮೂಲಭೂತವಾದುದು' ಎಂಬ ಅಂಶವನ್ನು ಒತ್ತಿ ಹೇಳಿದ್ದಾನೆ.

ಪಂಪ ತನ್ನ ಆದಿಪುರಾಣದ ಪೀಠಿಕಾ ಪ್ರಕರಣದಲ್ಲಿ ಹೇಳಿರುವ ಮಾತುಗಳು ಬಹಳ ಮಾರ್ಮಿಕವಾಗಿವೆ: ಕವಿತೆಯಲ್ಲಿ ಆಶೆಮಾಡುವುದರಿಂದ ಒದಗುವ ಫಲವೇನು? ಪೂಜೆಯೆ ? ಕೀರ್ತಿಯೆ? ಧನಕನಕಗಳೆ? ಇಂದ್ರಪೂಜೆ, ಲೋಕೋತ್ತರವಾದ ಕೀರ್ತಿ, ಮುಕ್ತಿಲಾಭ–ಇವು ಜಿನೇಂದ್ರನ ಗುಣಸ್ತುತಿಯಿಂದ ತಾವೆ ಒದಗುತ್ತವಾಗಿ ಬೇರೆಯವರು ಕೊಡುವುದೇನನ್ನು, ಮಾಡುವುದೇನನ್ನು! ಅವರಿಂದ ಆಗಬೇಕಾದುದಾದರೂ ಏನು!

ಕಾವ್ಯ ಸೃಷ್ಟಿಸಿದ ಕವಿಗೆ ಆನಂದ, ಯಶಸ್ಸುಗಳನ್ನೂ ಸಹೃದಯರಿಗೆ ಆನಂದ, ವ್ಯವಹಾರಜ್ಞಾನ ಮತ್ತು ಉಪದೇಶಾದಿಗಳನ್ನೂ ಒದಗಿಸುತ್ತದೆ. ಕಾವ್ಯಕಲೆಯ ಸದ್ಯಃ ಪ್ರಯೋಜನ ಕವಿ ಸಹೃದಯರಿಬ್ಬರಿಗೂ ಸೌಂದರ್ಯಾನುಭೂತಿಯಿಂದುಂಟಾಗುವ ಲೋಕೋತ್ತರವಾದ ಆನಂದ.

ಮೇಲಿನ ಕೆಲವು ಅಭಿಪ್ರಾಯಗಳನ್ನು ನೋಡಿದರೆ ಕಾವ್ಯಮೀಮಾಂಸಕರು ಪ್ರಯೋಜನ ಎಂಬ ಪದವನ್ನು ವಿಶಿಷ್ಟಾರ್ಥದಲ್ಲಿ ಬಳಸಿರುವಂತೆ ಕಾಣುತ್ತದೆ. ಇಲ್ಲಿನ ಪ್ರಯೋಜನ ವ್ಯಾವಹಾರಿಕ ದೃಷ್ಟಿಯದಲ್ಲ. ವ್ಯವಹಾರದಲ್ಲಿ ಮನುಷ್ಯ ಹಣದ ಆಸೆಯಿಂದ, ಯಶಸ್ಸಿನ ಆಸೆಯಿಂದ, ಬೇರಿನ್ನಾವುದೋ ಲಾಭದ ಆಸೆಯಿಂದ ಕೆಲಸ ಮಾಡುತ್ತಾನೆ. ಅಂಥ ಲಾಭ ಕಾವ್ಯರಚನೆಯಿಂದ ಕವಿಗಾಗಲೀ ಕಾವ್ಯವ್ಯಾಸಂಗದಿಂದ ಓದುಗರಿಗಾಗಲೀ ಲಭಿಸುವುದಿಲ್ಲವೆಂದು ಲಾಕ್ಷಣಿಕರ ಅಭಿಪ್ರಾಯ. ಬರೆದ ಕವಿಗೆ ದ್ರವ್ಯಲಾಭವಾಗಿರಬಹುದು; ದಾನದತ್ತಿಗಳು ದೊರಕಿರಬಹುದು; ಆನೆಯ ಮೇಲಿನ ಮೆರವಣಿಗೆಯ ಭಾಗ್ಯ ಸಿಕ್ಕಿರಬಹುದು. ಆದರೆ ಅದೇ ಕಾವ್ಯದ ಪ್ರಯೋಜನವಲ್ಲ. ಅಲ್ಲ ಎನ್ನುವುದನ್ನು ಪಂಪನ ಮಾತು ಚೆನ್ನಾಗಿ ಸಮರ್ಥಿಸುತ್ತದೆ. ಎಲ್ಲ ಕಲೆಗಳೂ ನಿಷ್ಪ್ರಯೋಜಕ–ಎಂಬ ಆಂಗ್ಲ ಸೂಕ್ತಿಯೊಂದಿದೆ. ಅದರ ಅರ್ಥವೂ ಇದೇ. ಕಾವ್ಯವೂ ಒಂದು ಕಲೆ. ಕಲೆಯಿಂದ ದೊರಕುವ ಪ್ರಯೋಜನ ಲೌಕಿಕ ಲಾಭವಲ್ಲ. ಅದು ಬರೆದವನಿಗೂ ಓದುವವನಿಗೂ ಒದಗಿಸುವುದು ಸಕಲ ಪ್ರಯೋಜನಗಳಿಗೂ ಮೂಲಭೂತವೆನಿಸಿರುವ ಆನಂದವನ್ನು. ಅದೇ ಅದರ ಪರಮ ಪ್ರಯೋಜನ. ಕಲೆಗಾಗಿ ಕಲೆ ಎಂಬ ಸೂಕ್ತಿಗೆ ಈ ರೀತಿಯ ವಿವರಣೆ ಕೊಟ್ಟರೆ ಚೆನ್ನಾದೀತು. ಕಾವ್ಯ ರಚನೆ ಮತ್ತು ಕಾವ್ಯವ್ಯಾಸಂಗದ ಹವ್ಯಾಸ ಇನ್ನೇನನ್ನಲ್ಲದಿದ್ದರೂ ಜನರ ದುಃಖವನ್ನು ನಿವಾರಿಸಿ ವಿಶ್ರಾಂತಿ, ವಿರಾಮಗಳನ್ನೊದಗಿಸುತ್ತದೆ. ಎಲ್ಲ ಹವ್ಯಾಸಗಳಿಗಿಂತ ಕಲೆಯ ಹವ್ಯಾಸ ಪರಿಣಾಮದ ದೃಷ್ಟಿಯಿಂದ ಉತ್ತಮವಾದುದು. ಭರತಮುನಿ ಈ ಮಾತನ್ನು ಹೇಳಿದ್ದಾನೆ. ಕಾವ್ಯದಲ್ಲಿನ ರಸವನ್ನು ಬ್ರಹ್ಮಾನಂದ ಸೋದರನೆಂದು ಕರೆದಿರುವವರು ಕಾವ್ಯದಿಂದ ಆಗಬಹುದಾದ ಅತ್ಯುನ್ನತ ಉಪಕಾರವನ್ನು ಹೆಸರಿಸಿದ್ದಾರೆ. (ಸಿ.ಜಿ.ಪಿ.)

**ಕಾವ್ಯಮಂಜರಿ** : ಒಂದು ಸಾಹಿತ್ಯದ, ಒಂದು ಕಾಲದ, ಒಂದು ಕಾವ್ಯ ಪ್ರಕಾರದ ಅಥವಾ ಒಬ್ಬ ಕವಿಯ ಅತ್ಯುತ್ತಮ ಹಾಗೂ ಅತ್ಯಂತ ಪ್ರಾತಿನಿಧಿಕ ಕವನಗಳ ಸಂಕಲನವೇ 'ಕಾವ್ಯಮಂಜರಿ' (ಆಂಥಾಲಜಿ). ಕಾವ್ಯಸೌರಭವನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಡುವ ಜನಪ್ರಿಯ ಸಾಧನಗಳಲ್ಲೊಂದು. ಜೊತೆಗೆ ಆ ಸಾಹಿತ್ಯದ ಗುಣ, ಪ್ರಮಾಣಗಳನ್ನು ಗುರುತಿಸಲು ಇದು ಸಹಾಯಕಾರಿಯೂ ಹೌದು. 'ಕಾವ್ಯಮಂಜರಿ' ಕಲ್ಪನೆ ಹೊಸದೇನಲ್ಲ. ಪ್ರ.ಶ.ಪೂ. ಒಂದನೆಯ ಶತಮಾನದ ಆದಿಭಾಗದಲ್ಲಿ ಮೆಲೀಗರ್ ರಚಿಸಿದ ಸೆಫ್ಟಾನೊ (ಗಾರ್ಲಂಡ್) ಎಂಬ ಕೃತಿ ಮುಂದಿನ ಕಾವ್ಯಮಂಜರಿಗಳಿಗೆ ಪ್ರೇರಕವಾಯಿತು. ಗ್ರೀಕ್‌ಸಾಹಿತ್ಯದಿಂದ (ಪ್ರ.ಶ.ಪೂ. 700.–ಪ್ರ.ಶ. 1000) ಆಯ್ದ ಸು. 4,500 ತುಣುಕುಗಳ ಸಂಕಲನವೊಂದಿದೆ. ಅದು ಪ್ರಪಂಚದ ಪ್ರಥಮ ಕಾವ್ಯಮಂಜರಿಯೆಂದು ಹೇಳುತ್ತಾರಾದರೂ ಅದಕ್ಕೂ ಹಿಂದೆ ಕನ್‌ಫೂಷಸ್ ಸಂಕಲನ ಮಾಡಿದುದೆನ್ನಲಾದ ಷಿ–ಕಿಂಗ್ ಎಂಬೊಂದು ಕಾವ್ಯಮಂಜರಿ ಇದ್ದುದ್ದಾಗಿ ತಿಳಿಯಬಂದಿದೆ. ಆಂಥಾಲಾಜಿ ಎಂಬ ಗ್ರೀಕ್ ಪದದ ಮೂಲಾರ್ಥ ಪುಷ್ಪಮಂಜರಿ ಎಂದು. ಇಲ್ಲೂ ಪುಷ್ಪವೆಂದರೆ ಸಾಹಿತ್ಯ, ಕಾವ್ಯ ಎಂದೇ ಸೂಚ್ಯರ್ಥ.

ಆಂಗ್ಲ ಭಾಷೆಯಲ್ಲಿ ಕಾವ್ಯಮಂಜರಿಗಳ ಬೆಳೆವಣಿಗೆ ಆರಂಭವಾದದ್ದು 19ನೆಯ ಶತಮಾನದಿಂದೀಚೆಗೆ. ಥಾಮಸ್ ಕ್ಯಾಂಪ್‌ಬೆಲ್‌ನ ಸ್ಪೆಸಿಮನ್ಸ್ ಆಫ್ ದಿ ಬ್ರಿಟಿಷ್ ಪೊಯೆಟ್ಸ್ 1819ರಲ್ಲಿ ಪ್ರಕಟವಾಯಿತು. ಎಫ್.ಟಿ.ಪಾಲ್ಗ್ರೆವನ ಗೋಲ್ಡನ್ ಟೆಷರಿ ಆಫ್ ಇಂಗ್ಲಿಷ್ ಸಾಂಗ್ಸ್ ಅಂಡ್ ಲಿರಿಕ್ಸ್ (1861) ಅತ್ಯಂತ ಶ್ರೇಷ್ಠ ಮತ್ತು ಜನಪ್ರಿಯ ಕಾವ್ಯಮಂಜರಿ; ಸಂಕಲನಕಾರರಿಗೆ ಒಂದು ಮಾದರಿಯೆಂದೇ ಹೇಳಬೇಕು. 1926ರಲ್ಲೂ 1965ರಲ್ಲೂ ಇನ್ನೂ ಹೆಚ್ಚಿನ ಕವನಗಳನ್ನು ಈ ಸಂಕಲನಕ್ಕೆ ಸೇರಿಸಲಾಗಿದೆ. ಆರ್ಥರ್ ಕ್ವಿಲರ್ ಕೂಚ್‌ನ ಆಕ್ಸ್‌ಫರ್ಡ್ ಬುಕ್ ಆಫ್ ಇಂಗ್ಲಿಷ್ ವರ್ಸ್ (1900) ಮತ್ತೊಂದು ಪ್ರಮುಖ ಮೈಲಿಗಲ್ಲು; ಹೆಚ್ಚು ವಿಸ್ತಾರವಾದ್ದರಿಂದ ಕಾವ್ಯಪ್ರಿಯರ ವಿಶೇಷ ಮೆಚ್ಚುಗೆಯನ್ನಿದು ಪಡೆದಿದೆ. ಅನಂತರದಕಾವ್ಯ ಮಂಜರಿಗಳಲ್ಲಿ ಹ್ಯಾರಿಯಟ್ ಮನ್ರೋ ಮತ್ತು ಎ.ಸಿ. ಹೆಂಡರ್‌ಸನ್ನರ ದಿ ನ್ಯೂ ಪೋಯೆಟ್ರಿ (1917) ನವ್ಯ ಕವಿತೆಯನ್ನೊಳಗೊಂಡಿರುವುದರಿಂದ ಐತಿಹಾಸಿಕವಾಗಿ ಮುಖ್ಯವಾದದ್ದು. ಆಯ್ಕೆಯ ಉತ್ತಮ ಅಭಿರುಚಿಗೆ ರಾಬರ್ಟ್ ಬ್ರಿಜಸ್‌ನ ದಿ ಸ್ಪಿರಿಟ್ ಆಫ್ ಮ್ಯಾನ್ (1916) ಒಳ್ಳೆಯ ನಿದರ್ಶನ. ಡಬ್ಲ್ಯೂ. ಪೀಕಾಕ್‌ನ ಐದು ಸಂಪುಟಗಳ ಇಂಗ್ಲಿಷ್ ವರ್ಸ್ (1928) ಆಂಗ್ಲಭಾಷೆಯ ದೊಡ್ಡ ಕಾವ್ಯಮಂಜರಿ. ಇತ್ತೀಚೆಗೆ ಬಂದ (1966) ಆಸ್ಕರ್ ವಿಲಿಯಮ್ಸ್‌ನ ಮಾಸ್ಟರ್ ಪೊಯಮ್ಸ್, ಪ್ರತಿಕವನದ ಮೇಲೂ ವಿಮರ್ಶಾ ಲೇಖನವಿರುವುದರಿಂದ ವೈಶಿಷ್ಟ್ಯ ಪೂರ್ಣವೆನಿಸಿದೆ.

ಅಮೆರಿಕೆಯಲ್ಲೂ ಕಾವ್ಯಮಂಜರಿಗಳು ವಿಪುಲವಾಗಿ ಪ್ರಕಟಗೊಂಡಿವೆ. ಅವುಗಳಲ್ಲಿ ಇ.ಸಿ.ಸ್ಟೆಡ್‌ಮನನ ಅಮೆರಿಕನ್ ಆಂಥಾಲಜಿ (1900), ಬ್ಲಿಸ್ ಕಾರ್ಮನನ ದಿ ಆಕ್ಸ್‌ಫರ್ಡ್ ಬುಕ್ ಆಫ್ ಅಮೆರಿಕನ್ ವರ್ಸ್ (1927), ಎಚ್.ಎಚ್. ಕ್ಲಾರ್ಕನ ಮೇಜರ್ ಅಮೆರಿಕನ್ ಪೊಯೆಟ್ಸ್ (1936)– ಇವು ಮುಖ್ಯವಾದುವು.

ಇಂಗ್ಲಿಷ್ ಸಾಹಿತ್ಯದಲ್ಲಿ ವಿವಿಧ ಮುಖಗಳಿಂದ ಕಾವ್ಯಸಂಗ್ರಹಗಳನ್ನು ಮಾಡಲಾಗಿದೆ. ಕಿರುಕವನಗಳು, ಕಥನಕವನಗಳು, ಐರಿಷ್ ಕವನಗಳು, ಕೆಲ್ಟಿಕ್ ಕವನಗಳು, ಧಾರ್ಮಿಕ ಅಥವಾ ಮತೀಯ ಕವನಗಳು, ಲಘುಕವನಗಳು, ಕ್ರೈಸ್ತ ಕವನಗಳು, ಸ್ಕಾಚ್ ಕವನಗಳು– ಹೀಗೆ ಅನೇಕ ಬಗೆಗಳನ್ನು ಚೆನ್ನಾಗಿ ಪ್ರತಿನಿಧಿಸುವ ಕಾವ್ಯಮಂಜರಿಗಳನ್ನು ಇಲ್ಲಿ ಕಾಣಬಹುದು. (ಕೆ.ಎಸ್.ಬಿ.ಜೆ.; ಬಿ.ಎಚ್.ಎಸ್.)

ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತ ಕಾವ್ಯಮಂಜರಿಗಳು ಕೆಲವಿವೆ. ಅವುಗಳಲ್ಲಿ ಮೊದಲನೆಯದು ಮಲ್ಲಿಕಾರ್ಜುನ ಪಂಡಿತನ ಸೂಕ್ತಿಸುಧಾರ್ಣವ. ಇದರಲ್ಲಿ ಅಷ್ಟಾದಶ ವರ್ಣನೆಗಳನ್ನು ಅಧ್ಯಾಯಗಳನ್ನಾಗಿ ಇಟ್ಟುಕೊಂಡು ಒಂದೊಂದು ಅಧ್ಯಾಯದಲ್ಲೂ ಪ್ರಸಿದ್ಧ ಕವಿಗಳ ಆಯ್ದ ಪದ್ಯಗಳನ್ನು ಕೊಡಲಾಗಿದೆ. ಉದಾಹರಿಸುವ ಪದ್ಯಗಳ ಆಕರಗಳನ್ನು ಸಂಪಾದಕ ಸೂಚಿಸಿಲ್ಲವಾಗಿ ಎಲ್ಲ ಪದ್ಯಗಳ ಕರ್ತೃಗಳನ್ನು ಈಗ ಗುರುತಿಸಲು ಸಾಧ್ಯವಾಗಿಲ್ಲ. ಎರಡನೆಯ ಸಂಕಲನ ಅಭಿನವವಾದಿ ವಿದ್ಯಾನಂದನ (ಸು. 1523) ಕಾವ್ಯಸಾರ. ಇದರಲ್ಲಿ 45 ಅಧ್ಯಾಯಗಳೂ 1,143 ಪದ್ಯಗಳೂ ಇವೆ. ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಈ ಎರಡು ಗ್ರಂಥಗಳಿಗೂ ಹೆಚ್ಚಿನ ಪ್ರಾಶಸ್ತ್ಯವಿದೆ. ಆರ್. ನರಸಿಂಹಾಚಾರ್ಯರ ಶಾಸನ ಪದ್ಯ ಮಂಜರಿಯಲ್ಲಿ ಅನೇಕಾನೇಕ ಕನ್ನಡ ಶಾಸನಗಳಿಂದ ಆಯ್ದ ಉತ್ತಮ ಪದ್ಯಗಳಿವೆ. ಈಚೆಗೆ ಬಂದ ಸಂಕಲನಗಳಲ್ಲಿ ಮುಖ್ಯವಾದುವು ಮೂರು : ಒಂದನೆಯದು ಡಿ.ಕೆ. ಭೀಮಸೇನರಾಯರು ಸಂಕಲಿಸಿದ ಹೂಮಾಲೆ. ಎರಡನೆಯದು ಪಿ. ಲಂಕೇಶ್ ಸಂಪಾದಿಸಿದ ಅಕ್ಷರ ಹೊಸ ಕಾವ್ಯ. ಮೂರನೆಯದು ರಂ. ಶ್ರೀ ಮುಗಳಿ ಸಂಪಾದಿಸಿರುವ ಕನ್ನಡ

ಕಾವ್ಯಸಂಚಯ. ಎರಡನೆಯದರಲ್ಲಿ ಹೊಸ ಕವಿಗಳ ಪ್ರಾತಿನಿಧಿಕ ಕವನಗಳಿವೆ. ಮೂರನೆಯದನ್ನು ನವದೆಹಲಿಯ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿದ್ದಾರೆ. *

**ಕಾವ್ಯ ಮಾತಾಡುವ ಚಿತ್ರ :** 'ಕಾವ್ಯ ಮಾತಾಡುವ ಚಿತ್ರ, ಚಿತ್ರ ನಿಶ್ಶಬ್ದ ಕಾವ್ಯ' ಎಂಬ ಈ ಗಾದೆ ಪ್ಲೂಟಾರ್ಕನ ಪ್ರಕಾರ ಪ್ರಾಚೀನ ಗ್ರೀಕರ ಸಿಮೋನಿಡಿಸನದು. ಎಲ್ಲ ಕಲೆಗಳ ಉದ್ದೇಶ ಒಂದೆಯೇ ಬೇರೆಬೇರೆಯೇ ಎಂಬ ಪ್ರಶ್ನೆಯನ್ನು ಈ ಗಾದೆ ಪ್ರಚೋದಿಸುತ್ತದಾಗಿ ಆ ವಿಷಯವನ್ನಿಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಾಚೀನಯುಗದಲ್ಲಿ ಲಲಿತಕಲೆ ಮತ್ತು ಉಪಯುಕ್ತಕಲೆ ಎಂಬ ವಿಂಗಡಣೆ ಇರಲಿಲ್ಲ. ಆಗ ಇದ್ದ ದರ್ಶನದಂತೆ ಪ್ರತಿಯೊಂದು ಕಲೆಗೂ ಯಾವುದೋ ಒಂದು ಪದಾರ್ಥವನ್ನು ನಿರ್ಮಿಸುವುದೋ ಅಥವಾ ತಯಾರಿಸುವುದೋ ಮುಖ್ಯ ಉದ್ದೇಶವಾಗಿತ್ತು. ಹೀಗಾಗಿ ಚಿತ್ರಕ್ಕೂ ಕವನಕ್ಕೂ ಸಾಮ್ಯವನ್ನು ತಂದಿಟ್ಟುದರಲ್ಲಿ ಏನೂ ಅಚ್ಚರಿಯಿಲ್ಲ. ಪ್ಲೇಟೊವಿನ ಹೇಳಿಕೆಯಂತೆ ಎರಡೂ ನಿತ್ಯಸತ್ಯದಿಂದ ಒಂದೆರಡು ಮಜಲಿನಷ್ಟು ದೂರವಾದವು. ಸಂಗೀತ ಮತ್ತು ಭಾಷಣ ಕಲೆಗಳಿಗೆ ಉನ್ನತ ಸ್ಥಾನವನ್ನು ಈಯಬೇಕು, ಏತಕ್ಕೆಂದರೆ ಅವು ಬರಿ ಹಸ್ತ ಕೌಶಲದಿಂದ ಆದುವಲ್ಲ, ಆಂತರಿಕ ಜ್ಞಾನದಿಂದ ಹುಟ್ಟಿಬಂದವು, ಅಲ್ಲದೆ, ಮೇಲಿನ ಆಗಸದಲ್ಲಿ ಗೋಳಕೋಶಗಾನ (ಮ್ಯೂಸಿಕ್ ಆಫ್ ದಿ ಸ್ಫಿಯರ್ಸ್) ದಿವ್ಯವಾಗಿ ನುಡಿಯುತ್ತಿದೆ ಎಂದು ಅಂದಿನ ದಾರ್ಶನಿಕರು ಬೋಧಿಸುತ್ತಿದ್ದರು; ಜನ ಅದನ್ನು ಕೇಳಿ ನಂಬುತ್ತಿದ್ದರು.

ಗ್ರೀಕರಿಂದ ಏನೇ ಆಗಿರಲಿ, ಕಾವ್ಯಕ್ಕೂ ಚಿತ್ರಕ್ಕೂ ಏರ್ಪಡಿಸಿದ ಹೋಲಿಕೆ ಗೃಹೀತತತ್ತ್ವದಂತೆ ಅಂಗೀಕೃತವಾಗುವುದಕ್ಕೆ ರೋಮನರ ಹೊರೇಸನೇ ಮುಖ್ಯ ಕಾರಣಕರ್ತ. ನಿಜವಾಗಿ ಆತ ಹೇಳಿದ್ದು ಇಷ್ಟೆ: 'ಚಿತ್ರಣ ಹೇಗಿದೆಯೊ ಕಾವ್ಯ ಹಾಗಿದೆ.' ಎಂದರೆ, ರಸಿಕರು ಚಿತ್ರವನ್ನು ವೀಕ್ಷಿಸುವಾಗ ಹೇಗೆ ದೂರದಲ್ಲಿ ನಿಂತು ಅದನ್ನು ನೋಡುವುದೇ ಅಲ್ಲದೆ ಹತ್ತಿರಕ್ಕೆ ನಡೆದು ಅದರ ವಿವರಗಳನ್ನು ಅವಲೋಕಿಸುತ್ತಾರೊ ಹಾಗೆ ಕಾವ್ಯದಲ್ಲೂ ಒಟ್ಟಿನ ಪರಿಣಾಮವೊಂದೇ ಗಮನಾರ್ಹವಾದ ಅಂಶವಲ್ಲ, ಬಿಡಿ ವಿವರಗಳೂ ಉಂಟು. ಕಾವ್ಯ ವಿಮರ್ಶೆಯಲ್ಲಿ ಅಧಿಕ ಶ್ರದ್ಧೆಗೆ ಆವಶ್ಯಕತೆ ಇದೆ ಎಂಬುದನ್ನು ಸ್ಥಾಪಿಸುವುದೇ ಹೊರೇಸನ ಅಭಿಲಾಷೆ.

ಮಧ್ಯ ಯುಗದಲ್ಲಿ ಮಠಾಧಿಕಾರಿಗಳು ಶಿಲ್ಪ, ಚಿತ್ರಣ, ವಾಸ್ತುಶಿಲ್ಪ ಮೂರಕ್ಕೂ ಸಾಹಿತ್ಯಿಕ ಯೋಜನೆಗಳನ್ನು ತಯಾರಿಸಿ ಕೊಡುತ್ತಿದ್ದರು. ಅವನ್ನು ಅನುಸರಿಸಿ ಆಯಾ ಕಲೆಗಾರರು ತಮ್ಮ ತಮ್ಮ ಕೃಷಿಯನ್ನು ಮಾಡಿ ಮುಗಿಸುತ್ತಿದ್ದರು.

ಹೊಸ ಹುಟ್ಟಿನ ಅವಧಿಯಲ್ಲಿ ಎದ್ದುಬಂದ ಗ್ರೀಕ್‌ಲ್ಯಾಟಿನ್ ಪಂಡಿತರು ಕಾವ್ಯ ಮತ್ತು ಚಿತ್ರಕಲೆ ಎರಡೂ ಪ್ರಚೋದನೆಗಳನ್ನು ಸ್ವೀಕರಿಸಿದರು; ಅಷ್ಟಕ್ಕೇ ತೃಪ್ತರಾಗಲಿಲ್ಲ. ಕಲೆಗಳ ಸಮನ್ವಯ–ಮುಖ್ಯವಾಗಿ ಕಾವ್ಯ ಚಿತ್ರಗಳ ಹೊಂದಾಣಿಕೆ–ಅವರ ಕಲಾ ಮೀಮಾಂಸೆಯಲ್ಲಿ ಗಾಢ ಸಿದ್ಧಾಂತವಾಯಿತು. ಕವಿಯಂತೆಯೇ ಚಿತ್ರಕಾರ ತನ್ನ ವಿಷಯ, ಭಾವ, ಭಾವನೆ, ಸಂವಿಧಾನ, ಅಲಂಕಾರ, ಕಲ್ಪನೆ–ಎಲ್ಲವನ್ನೂ ಸಿದ್ಧಪಡಿಸಿಕೊಂಡು ಬಣ್ಣಬಣ್ಣದ ರಚನೆಯನ್ನು ಎಸಗುತ್ತಾನೆ. ಕವಿಯೂ ಚಿತ್ರಕಾರನಂತೆ ನಕ್ಷೆ ನಕಾಶೆಗಳನ್ನು ಅಣಿಮಾಡಿಕೊಂಡು ರಂಗುರಂಗಾದ ಶಬ್ದಗಳನ್ನೂ ಬೆಡಗಿನ ಅಲಂಕಾರಗಳನ್ನೂ ಸಾಮರಸ್ಯ ಕೆಡದಂತೆ ಜೋಡಿಸಿ ಕಾವ್ಯ ಕಟ್ಟುತ್ತಾನೆ. ಈ ಬಗೆಯ ವಿವರಣೆಯನ್ನು 16ನೆಯ ಶತಮಾನದ ಮಧ್ಯದಿಂದ 18ನೆಯ ಶತಮಾನದ ಮಧ್ಯದವರೆಗೂ ಯುರೋಪು ಪೂರ್ತ ಯಾರೂ ಪ್ರಶ್ನಿಸಲಿಲ್ಲ. ಬಾಹ್ಯ ಪ್ರಕೃತಿಯ ದೃಶ್ಯಗಳನ್ನು ವರ್ಣಿಸುವ ಕಾವ್ಯ 18ನೆಯ ಶತಮಾನದಲ್ಲಿ ಬಹುವಾಗಿ ಬೆಳೆದು ಅದಕ್ಕೆ ಬೆಂಬಲ ಕೊಟ್ಟಿತು.

ಈ ಮಧ್ಯೆ ಚಿತ್ರಣಕಲೆಯ ರಸಾಸ್ವಾದಿಗಳಿಗೆ ತಮ್ಮ ಕಲೆ ಕೇವಲ ಕಸಬು ಎಂಬ ಅಪಖ್ಯಾತಿ ಇದ್ದುದು ಗೊತ್ತಿತ್ತು. ಕಾವ್ಯದೊಡನೆ ಅದನ್ನು ಸರಿಸಮನಾಗಿ ಕೂರಿಸಿದರೆ ಅದಕ್ಕೆ ಮೇಲಣ ಗದ್ದುಗೆ ದೊರಕಿಯೇ ದೊರಕುತ್ತದೆಯೆಂದು ಭಾವಿಸಿ, ಪ್ರಮಾಣ ಗ್ರಂಥಗಳಿಗಾಗಿ ಶ್ರಮಪಟ್ಟು ಹುಡುಕಾಡಿದರು. ಪುರಾತನ ಗ್ರಂಥ ಯಾವುದೂ ಅವರಿಗೆ ಲಭಿಸಲಿಲ್ಲ. ಹೊರೇಸನ ವಚನದಂಥ ಪುಟ್ಟ ಸಾಮತಿಗಳೇ ಅವರಿಗೆ ಸರ್ವಾಧಾರವಾದುವು, ಸಂತಸಕರವಾದುವು.

ಒಂದು ಕಲೆಗೆ ಇನ್ನೊಂದರ ಪರಿಭಾಷೆಯನ್ನು ಹೊಂದಿಸಲಾಶಿಸುವುದು ಮನುಷ್ಯನ ಮೂಲಧರ್ಮ. ಗಯಟೆಗೆ ವಾಸ್ತುಶಿಲ್ಪ 'ಕಲ್ಲಾದ ಗಾಯನ' ವಾದರೆ ಮಡಾಮ್ ಡ ಸ್ಟೀಲಳಿಗೆ–ವಿಶ್ವಾಕಾಶ 'ಒಂದು ರೀತಿ ಹೆಪ್ಪುಗಟ್ಟಿದ ಸಂಗೀತ'.

ಪ್ರತಿಭಾಯುಕ್ತ ವಿಮರ್ಶಕನಾದ ಲೆಸ್ಸಿಂಗಿಗೆ ಇದಾವುದೂ ಸರಿಬೀಳಲಿಲ್ಲ. ಕಾವ್ಯದ ಕೆಲಸ ಪ್ರಕೃತಿ ವರ್ಣನೆಯಲ್ಲ, ಮನುಷ್ಯನ ನಡೆನುಡಿಯನ್ನು ಭಾವಾಯುಕ್ತವಾಗಿ ನಿರೂಪಿಸುವುದು–ಎಂಬುದೇ ಅವನ ದೃಢ ನಿಶ್ಚಯ. ಒಂದರಂತೆ ಮತ್ತೊಂದು ತೋರಿಬಂದರೂ ಕಲೆಗಳ ಉದ್ದೇಶ ಬೇರೆ ಬೇರೆ, ಅವುಗಳ ವಿಷಯ ಸಾಮಗ್ರಿಗಳೂ ಬೇರೆ ಬೇರೆ–ಎಂದೂ ಆತ ದರ್ಪದಿಂದಲೂ ವೈದುಷ್ಯದಿಂದಲೂ ವಾದಿಸಿದ: ಕಲಾಚರ್ಚೆಯಲ್ಲಿ ಆವರಿಸಿಕೊಂಡಿದ್ದ ಅವ್ಯವಸ್ಥೆ ಅವನಿಂದ ಬಹುಮಟ್ಟಿಗೆ ನಿವಾರಿತವಾಯಿತು.

19ನೆಯ ಶತಮಾನದಲ್ಲೇ ಹೊರೇಸನ ಉಕ್ತಿಯನ್ನು ಲಕ್ಷ್ಯಾರ್ಹವೆಂದು ಭಾವಿಸಿದವರು ಅಪರೂಪ; 20ನೆಯ ಶತಮಾನದಲ್ಲಂತೂ ಅದಕ್ಕೆ ಯಾವ ಪುರಸ್ಕಾರವೂ ಇಲ್ಲ.

(ಎಸ್.ವಿ.ಆರ್.)

**ಕಾವ್ಯಮೀಮಾಂಸೆ :** ಕವಿ ಮತ್ತು ಕಾವ್ಯದ ಲಕ್ಷಣಗಳು, ಕಾವ್ಯಪ್ರಭೇದಗಳು, ಕಾವ್ಯಗಳಲ್ಲಿ ಅಲಂಕಾರ, ರೀತಿ, ರಸ, ಧ್ವನಿ ಮೊದಲಾದುವುಗಳ ಸ್ಥಾನ, ಕಾವ್ಯದ ವಸ್ತು ಮತ್ತು ಆತ್ಮಗಳ ಪರಿಶೀಲನ–ಇತ್ಯಾದಿಯಾಗಿ ಕಾವ್ಯವಿದ್ಯೆಗೆ ಸಂಬಂಧಿಸಿದ ವಿಷಯಗಳ ಶಾಸ್ತ್ರೀಯ ನಿರೂಪಣೆಯನ್ನು ಈ ಹೆಸರಿನಿಂದ ಕರೆಯುವುದಿದೆ. ಸಂಸ್ಕೃತದಲ್ಲಿ ಕಾವ್ಯಮೀಮಾಂಸೆ ಪ್ರಸಕ್ತಶಕದ ಆರಂಭದ ವೇಳೆಗೆ ಸ್ವತಂತ್ರ ಶಾಸ್ತ್ರವೆನಿಸುತ್ತಿದ್ದುದನ್ನು ರುದ್ರದಾಮನ ಶಿಲಾಲೇಖ, ಪತಂಜಲಿಯ ಮಹಾಭಾಷ್ಯ, ಭರತನ ನಾಟ್ಯಶಾಸ್ತ್ರ ಮುಂತಾದವು ಸೂಚಿಸುತ್ತವೆ. ಆದರೆ 5–6ನೆಯ ಶತಮಾನಗಳ ಹಿಂದಿನ ಕೃತಿಗಳು (ವರರುಚಿ, ರಾಮಶರ್ಮ, ಕಶ್ಯಪ ಇತ್ಯಾದಿ ಶಾಸ್ತ್ರಕಾರರವು) ಉಪಲಬ್ಧವಿಲ್ಲ. ಮೊದಲು ಸಿಕ್ಕುವ ಭಾಮಹನ ಕಾವ್ಯಾಲಂಕಾರ, ದಂಡಿಯ ಕಾವ್ಯಾದರ್ಶಗಳೇ ಅಲಂಕಾರ, ಗುಣ, ಮಾರ್ಗ, ದೋಷ, ರಸ ಮೊದಲಾದ ಪ್ರಕ್ರಿಯೆಗಳನ್ನು ಪ್ರಸ್ತಾಪಿಸುವುದರ ಜೊತೆಗೆ ಸ್ವನಿರ್ಮಿತ ಹಾಗೂ ಉದಾಹೃತ ಲಕ್ಷ್ಯಗಳನ್ನೂ ಹೇರಳವಾಗಿ ಒದಗಿಸುತ್ತವೆ. ಮುಂದೆ ವಾಮನ (ಸು. 800) ಕಾವ್ಯಾಲಂಕಾರ ಸೂತ್ರವೃತ್ತಿಯನ್ನು ಬರೆದು ಕಾವ್ಯದ ಆತ್ಮವೇನೆಂಬ ತಾತ್ತ್ವಿಕ ಚರ್ಚೆಗೆ ಜನಕನಾದ. ರೀತಿತತ್ತ್ವವನ್ನು ಸಾರಿದ. ಇವನ ಸಮಕಾಲೀನನಾದ ಉದ್ಭಟ ಭಾಮಹನ ವಿಚಾರಗಳಿಗೆ ಹೊಸ ವಿವರಣೆ ನೀಡಿದಂತೆ ನಾಟ್ಯಶಾಸ್ತ್ರದ ರಸಸಿದ್ಧಾಂತಕ್ಕೂ ವಿಶೇಷ ಗಮನವಿತ್ತು ಕಾವ್ಯಾಲಂಕಾರ ಸಂಗ್ರಹವನ್ನು ಬರೆದ. ರುದ್ರಟ (9ನೆಯ ಶತಮಾನ) ಪೂರ್ವ ಕೃತಿಗಳ ಸಾರವನ್ನೆಲ್ಲ ಪರಿಷ್ಕರಿಸಿದ್ದಲ್ಲದೆ ಗುಣಾಲಂಕಾರ, ರೀತಿ ರಸಗಳ ನಿರೂಪಣೆಯಲ್ಲಿ ಭೇದ ಪ್ರಭೇದಗಳನ್ನು ವಿಸ್ತರಿಸಿದ. ಇವರೆಲ್ಲ ಪ್ರಾಚೀನರು. ಕಾವ್ಯದ ನಾಯಕ ನಾಯಿಕೆಯರ ವಿಭೇದಗಳನ್ನು ವಿವರಿಸುವ ಶೃಂಗಾರತಿಲಕವೆಂಬ ರುದ್ರಭಟ್ಟನ ಕೃತಿಯೂ ಕೂಡ ಪ್ರಾಚೀನ ಪರಂಪರೆಗೇ ಸೇರುತ್ತದೆ.

ಈ ಪರಂಪರೆಯ ಸಿದ್ಧಾಂತವನ್ನು ಸ್ಪಷ್ಟಪಡಿಸಲು ಹತ್ತನೆಯ ಶತಮಾನದ ರಾಜಶೇಖರ ತನ್ನ ಕಾವ್ಯಮೀಮಾಂಸೆಯಲ್ಲಿ ಒಂದು ಸುಂದರ ಕಾವ್ಯ ಪುರುಷನ ಕಲ್ಪನೆಯನ್ನು ಪ್ರತಿಮಾ ವಿಧಾನದಿಂದ ನೀಡಿದ್ದಾನೆ. ಸರಸ್ವತಿಯ ಸುಕುಮಾರ ಕಂದನೇ ಕಾವ್ಯಪುರುಷ. ಅವನ ನಲ್ಲೆಯೇ ಸಾಹಿತ್ಯವಿದ್ಯೆ. ಅವರ ಪ್ರಣಯಲೀಲೆಯಲ್ಲಿಯೇ ಸಕಲ ಕಾವ್ಯ ಶೋಭಾಂಗಗಳೂ ಉದಯಿಸಿವೆ. ಶಬ್ದಾರ್ಥಗಳೇ ಅವನ ಶರೀರ, ಅವನ ಚೇತನದಲ್ಲಿ ಮಾಧುರ್ಯ, ಔದಾರ್ಯ, ಪ್ರಸಾದ ಮುಂತಾದ ಗುಣಗಳು ಮನೆಮಾಡಿವೆ. ಮಾತೆಲ್ಲ ಚಮತ್ಕಾರದಿಂದ ತುಂಬಿ ಅಲಂಕಾರವೆನಿಸಿದೆ. ಅವನ ಆತ್ಮವೇ ರಸ. ಛಂದಸ್ಸುಗಳೇ ಅವನ ಕೂದಲು. ಚತುರೋಕ್ತಿಗಳು ಅವನ ವಿನೋದಗಳು. ಅವನನ್ನೊಲಿಸಲು ಸಾಹಿತ್ಯವಿದ್ಯೆಯೆಂಬ ವಧು ಬಳಸುವ ಭಾವಭಂಗಿಗಳೇ ವೃತ್ತಿಗಳು : ಸವಿ ಲಲ್ಲೆಯೇ ರೀತಿ.

ಪ್ರಾಚೀನ ಲಕ್ಷಣಿಕರಿಗೆಲ್ಲ ಮಾನ್ಯವಾಗಿರುವ ಸಾಹಿತ್ಯತತ್ತ್ವವನ್ನು ಹೀಗೆ ಸಂಗ್ರಹಿಬಹುದು; ಸಾಹಿತ್ಯದ ಜೀವಾಳವೆಂದರೆ ಸೌಂದರ್ಯವೇ. ಕಾವ್ಯಸತ್ಯ ವಾಸ್ತವ ಸತ್ಯವಲ್ಲ, ಕಲ್ಪನಾಸತ್ಯ. ಧರ್ಮನೀತಿಗಳ ಬೋಧನೆ ಸಾಹಿತ್ಯಕ್ಕೆ ಆನುಷಂಗಿಕವೇ ವಿನಾ ಪ್ರಧಾನವಲ್ಲ. ಕವಿಯ ಕರ್ಮದ ವೈಶಿಷ್ಟ್ಯವಿರುವುದು ಅವನ ಪ್ರತಿಭೆಯಲ್ಲಿಯೆ. ಶಬ್ದದ ಶ್ರವ್ಯ ಹಾಗೂ ಅರ್ಥಬೋಧಕ ಅಂಶಗಳಲ್ಲಿ ಸೌಂದರ್ಯವನ್ನು ಸಾಧಿಸುವುದು ಅವನ ಗುರಿ. ಭಾಷೆಯ ಶಬ್ದಾರ್ಥಗಳೇ ಅವನ ಕಲಾಸಾಮಗ್ರಿ. ಈ ಸೌಂದರ್ಯದ ಪ್ರಕಾರಗಳೇ ಗುಣ ಮತ್ತು ಅಲಂಕಾರಗಳು. ಆದ್ದರಿಂದ ಆಡುನುಡಿ, ಶಾಸ್ತ್ರಭಾಷೆ ಇವುಗಳಿಂದ ಕಾವ್ಯವನ್ನು ಪ್ರತ್ಯೇಕಿಸುವ ಶೋಭಾದಾಯಕ ತತ್ತ್ವಗಳೇ ಗುಣಾಲಂಕಾರಗಳೆನ್ನಬಹುದಾಗಿದೆ.

ಭಾಷೆಯ ನುಡಿಗಳಲ್ಲಿಯೇ ಸ್ವರೂಪಸಿದ್ಧವಾದ ಕೆಲವಂಶಗಳು ಇರುತ್ತವೆ. ಲೀಲೆ, ವಿಲಾಸ, ಲಲನಾ ಮುಂತಾದ ಶಬ್ದಗಳು ಅದೇ ಅರ್ಥವನ್ನು ಹೇಳುವ ಕ್ರೀಡೆ, ವಿಭ್ರಮ, ಸ್ತ್ರೀ ಎಂಬ ಶಬ್ದಗಳಿಗಿಂತ ಕೋಮಲ ಹಾಗೂ ಮಧುರವೆನಿಸುತ್ತವೆ. ಸತಿಯ ತುರುಬು ಎನ್ನುವುದನ್ನು ಕಾಂತಾಕಚಪ್ರಚಯ ಎಂದೋ ಪ್ರಮದಾಕೇಶ ಪಾಶಪ್ರಪಂಚ ಎಂದೋ ಹೇಳಿದಾಗ ಅಲ್ಲಿನ ಓಜೋಗುಣ ಸ್ಪಷ್ಟವಾಗುತ್ತದೆ. ಕವಿಯ ಮಾತು ಸರಳವಾಗಿ ಅರ್ಥವಾಗುತ್ತಿರುವುದೇ ಪ್ರಸಾದಗುಣ. ಕೇಳುವಾಗ ಕಿವಿಯೇ ಗ್ರಹಿಸುವ ಶಬ್ದಗುಣಗಳಿವು. ಇವುಗಳಂತೆ ಕಾವ್ಯಾರ್ಥದಲ್ಲಿಯೂ ಗುಣಗಳುಂಟು. ಕಿರಿದರಲ್ಲಿ ಪಿರಿದರ್ಥವನ್ನು ಹೇಳುವಶ್ಲೇಷ; ಅದ್ಭುತ ವೃತ್ತಾಂತದಲ್ಲಡಗಿರುವ ಔದಾರ್ಯ ಅಥವಾ ಭವ್ಯತೆ; ಪ್ರಣಯ ನಿರೂಪಣೆಯಲ್ಲಿ ಮೂಡಿಬರುವ ಮಾಧುರ್ಯ ವೀರೋತ್ಸಾಹದ ಮಾತುಗಳಲ್ಲಿ ಕಿಡಿಯಾಡುವ ಕಾಂತಿ–ಇತ್ಯಾದಿ. ಹೀಗೆ ಶಬ್ದಾರ್ಥ ಗುಣಗಳನ್ನು ಅರಿತು ಬಳಸುವ ಶಕ್ತಿ ಕವಿಯ ಮನೋಧರ್ಮದಲ್ಲಿ ಸಹಜವಾಗಿ ಸೇರಿದಾಗ ಮಾತ್ರ ಉತ್ತಮ ಕವಿತೆಯಾಗುತ್ತದೆ. ಉದ್ದ ಸಮಾಸಗಳನ್ನು ಯಾವಾಗ ರಚಿಸಬೇಕು, ಯಾವಾಗ ಬಿಡಬೇಕು ಎಂದು ಮೊದಲಾಗಿ ಅವನ ಶೈಲಿಯನ್ನು ಅಥವಾ ರೀತಿಯನ್ನು ನಿರ್ಣಯಿಸುವ ಸೌಂದರ್ಯಾಂಶಗಳೇ ಗುಣಗಳು. ಸರಳ ನಿರಾಡಂಬರ ಶೈಲಿಗೆ ಮಾರುಹೋದ ಕಾಳಿದಾಸಾದಿಗಳದು ವೈದರ್ಭಿಯೆಂಬ ಒಂದು ರೀತಿ. ಅದೇ ಕೋರೈಸುವ ಆಡಂಬರಕ್ಕೆ ಮನಸೋತ ಬಾಣಾದಿಗಳದು ಗೌಡಿಯೆಂಬ ರೀತಿ. ಹೀಗೆ ಕವಿಶೈಲಿಯನ್ನು ನಿಯಮಿಸುವ ವಿಭಿನ್ನ ಸೌಂದರ್ಯಾಂಶಗಳೇ ಗುಣಗಳು. ಇವಕ್ಕೆ ತಮ್ಮದೇ ಆದ ವಿಷಯವಿರುವುದರಿಂದ ಇವನ್ನು ವ್ಯಾಕರಣಾದಿ ದೋಷಗಳ ಅಭಾವವೆಂದು

ಭ್ರಮಿಸಲಾಗದು. ಕವಿಪ್ರತಿಭೆಗೆ ಉಚಿತವಾದ ಸಂಸ್ಕಾರ ಬಲದಿಂದಲೇ ಗುಣಗಳು ಸಂಪನ್ನವಾಗುತ್ತವೆ. ಗುಣಗಳ ಅಸ್ತಿತ್ವದಿಂದಲೇ ಕವಿ ರಚನೆಗೆ ಕಾವ್ಯಸೌಂದರ್ಯ ಸಿದ್ಧಿಸುತ್ತದೆ. ಗುಣಹೀನ ಕವಿತೆ ಎಂದೂ ಸುಂದರ ಕವಿತೆಯೆನಿಸದು.

ಗುಣಕೃತವಾದ ಸೌಂದರ್ಯದ ಜೊತೆಗೆ ಕವಿನಿರ್ಮಿತವಾದ ಇನ್ನೊಂದು ರೀತಿಯ ಸೌಂದರ್ಯವನ್ನೂ ನೋಡುತ್ತೇವೆ. ಅವೇ ಅಲಂಕಾರಗಳು. ಇದ್ದ ಭಾಷಾ ಸಾಮಗ್ರಿಯನ್ನು ಔಚಿತ್ಯದಿಂದ ಕಲಾನ್ವಿತವಾಗಿ ಬಳಸುವುದೇ ಗುಣವಾದರೆ, ಒಂದು ಭಾಷೆಯ ಎಲ್ಲ ಕವಿಗಳಿಗೂ ಸಮಾನವಾಗಿ ಅನ್ವಯಿಸುವ ಸೌಂದರ್ಯತತ್ತ್ವ ಗುಣದ್ದಾದರೆ, ಪ್ರತ್ಯೇಕ ಕವಿಯೂ ತನ್ನ ತನ್ನ ವೈಶಿಷ್ಟ್ಯವನ್ನು ಪ್ರದರ್ಶಿಸಲು ಎಡೆಮಾಡುವ ಸೌಂದರ್ಯತತ್ತ್ವ ಅಲಂಕಾರವೆನಿಸುತ್ತದೆ. ವಿಶಿಷ್ಟಶಬ್ದಾರ್ಥಗಳ ಆಯ್ಕೆ ಗುಣಕೃತ ; ಆದರೆ ಅವುಗಳ ಪ್ರತಿಭಾಪೂರ್ಣ ಪ್ರತಿಪಾದನೆಯ ಪ್ರಕಾರಗಳೇ ಅಲಂಕಾರಗಳು. ಗುಣ ಸ್ವಭಾವಸಿದ್ಧ; ಅಲಂಕಾರ ಬುದ್ಧಿ ಲಭ್ಯ, ಕಲ್ಪನಾಗಮ್ಯ. ಒಂದನ್ನು ವರ್ಣಿಸುವಾಗ ಇನ್ನೊಂದರೊಡನೆ ಹೋಲಿಸಬಹುದು. ಅದು ಉಪಮೆ; ಇನ್ನೊಂದೇ ಅದೆಂದು ಆರೋಪಿಸಬಹುದು. ಅದು ರೂಪಕ. ಎಲ್ಲೂ ಇಲ್ಲದ ಮತ್ತೊಂದರ ಹಾಗಿದೆಯೆಂದು ಊಹಿಸಬಹುದು; ಅದು ಉತ್ಪ್ರೇಕ್ಷೆ. ಅಂಥ ಮತ್ತೊಂದರ ಕ್ರಿಯೆಯನ್ನು ಮಾತ್ರ ವರ್ಣಿಸಬಹುದು; ಅದು ಅತಿಶಯೋಕ್ತಿ. ಅಚೇತನದಲ್ಲಿ ಚೇತನಕ್ರಿಯೆಯನ್ನು ಅನ್ವಯಿಸಬಹುದು; ಅದು ಸಮಾಸೋಕ್ತಿ. ಅಪ್ರಕೃತದ ವರ್ಣನೆಯಿಂದಲೇ ಪ್ರಕೃತ ವಸ್ತುವನ್ನು ಸೂಚಿಸಬಹುದು; ಅದು ಅಪ್ರಸ್ತುತ ಪ್ರಶಂಸೆ. ಹೊಗಳುವ ಉದ್ದೇಶವನ್ನು ಮೇಲ್ನೋಟಕ್ಕೆ ಬೈಗುಳವೆನಿಸುವ ಉಕ್ತಿಯಿಂದ ಸಾಧಿಸಬಹುದು; ಅದು ವ್ಯಾಜಸ್ತುತಿ. ಒಂದನ್ನು ಇದೋ ಅದೋ ಮತ್ತೊಂದೋ ಎಂದು ಸಂದೇಹಿಸಬಹುದು; ಆಗದು ಸಂಶಯಲಾಂಕಾರ. ವಿಶೇಷಾಂಶವನ್ನು ಸಮರ್ಥಿಸಲು ಸಾಮಾನ್ಯ ತತ್ತ್ವವನ್ನು ಹೇಳಬಹುದು; ಆಗದು ಅರ್ಥಾಂತರನ್ಯಾಸ. ಕಾರಣವಿಲ್ಲದಿದ್ದರೂ ಕಾರ್ಯ ಸಂಭವಿಸಿತೆಂದಾಗ ಅದು ವಿಭಾವನೆ. ಕಾರಣವಿದ್ದರೂ ಕಾರ್ಯವಿಲ್ಲವೆಂದರೆ ವಿಶೇಷೋಕ್ತಿ. ಪರಸ್ಪರ ವಿರೋಧ ಕಾಣುವಂತೆ ಬಣ್ಣಿಸುವುದು ವಿರೋದಾಭಾಸ. ಹೀಗೆ ಒಂದಲ್ಲ, ಎರಡಲ್ಲ, ಕವಿಯ ಉಕ್ತಿಪ್ರಕಾರಗಳ ಒಂದೊಂದು ಪರಿಯು ಸೌಂದರ್ಯಾಂಶವಿದ್ದಾಗ ಅಲಂಕಾರವೇ ಸರಿ. ಅಲಂಕಾರಶಾಸ್ತ್ರದ ಇತಿಹಾಸವೆಲ್ಲ ಹೊಸಹೊಸ ಅಲಂಕಾರಗಳ ಪರಿಗಣನೆ, ಪ್ರಸಿದ್ಧ ಅಲಂಕಾರಗಳ ವಿಷಯ ಪರಿಷ್ಕಾರ ಇವುಗಳಿಂದಲೇ ತುಂಬಿಕೊಂಡಿವೆ. ಈ ದೃಷ್ಟಿಯಿಂದ ಕಾವ್ಯಸೌಂದರ್ಯ ವಿವೇಚನೆಯೆಂದರೆ ಅಲಂಕಾರಗಳ ಅನುಸಂಧಾನವೇ ಎಂದರೂ ಸಲ್ಲುತ್ತದೆ. ಇವೆಲ್ಲ ಅರ್ಥಾಲಂಕಾರಗಳು. ಶಬ್ದ ಯೋಜನೆಯಲ್ಲಿಯೂ ಬುದ್ಧಿಪೂರ್ವಕ ಹೊಮ್ಮಿದ ಪ್ರಾಸಾದಿಗಳು ಕಂಡಾಗ ಅವನ್ನು ಶಬ್ದಾಲಂಕಾರಗಳೆನ್ನುತ್ತೇವೆ. ಉದಾ: ವಾಣೀ ವಾಣೀವ ಪರಂ। ವೇಣೀ ವೇಣೀವ ಕೇವಲಂ ತಸ್ಯಾಃ ॥

9ನೆಯ ಶತಮಾನದಲ್ಲಿ ಧ್ವನ್ಯಾಲೋಕವೆಂಬ ಪ್ರಸ್ಥಾನ ಗ್ರಂಥವನ್ನು ರಚಿಸಿದ ಆನಂದವರ್ಧನ ಮೇಲಿನ ಗುಣಾಲಂಕಾರರೀತಿ ತತ್ತ್ವಗಳನ್ನು ಮತ್ತಷ್ಟು ಅಭ್ಯಂತರವಾದ ತಾತ್ತ್ವಿಕದೃಷ್ಟಿಯಿಂದ ವಿಮರ್ಶೆಗೆ ಗುರಿಮಾಡಿ ಅವುಗಳ ಗ್ರಾಹ್ಯತೆಗೆ ರಸತತ್ತ್ವದ ಪಾರಮ್ಯ ಮತ್ತು ಧ್ವನಿತತ್ತ್ವದ ಅನುಗ್ರಹ ಅಗತ್ಯವೆಂಬುದನ್ನು ಮನಗಾಣಿಸಿ ಧ್ವನಿಪ್ರತಿಷ್ಠಾಪನಪರಮಾಚರ್ಯನೆನಿಸಿದ. ಈ ಸಿದ್ಧಾಂತವನ್ನು ಅಭಿನವಗುಪ್ತ ತನ್ನ ಉಜ್ವಲ ರಚನೆಗಳಿಂದ ಸ್ವೀಕರಿಸಿದ. ಕಾಶ್ಮೀರಕರ ಈ ಹೊಸ ಸಿದ್ಧಾಂತವನ್ನು ಅಲಂಕಾರಶಾಸ್ತ್ರದಲ್ಲಿ ನವೀನ ಮತವೆನ್ನುತ್ತಾರೆ. ಸಂಸ್ಕೃತ ಲಾಕ್ಷಣೀಕರ ತತ್ತ್ವವಿವೇಚನೆಯ ಶಿಖರವೇ ರಸಧ್ವನಿ ಸಿದ್ಧಾಂತ.

ಹಿಂದಿನವರ ಗುಣಾಲಂಕಾರಾದಿಗಳೆಲ್ಲ ಕಾವ್ಯದ ಬಾಹ್ಯಶರೀರವನ್ನು ಮಾತ್ರ ವಿವರಿಸಿಯಾವೆಂಬುದು ಧ್ವನಿವಾದಿಗಳ ನಿರ್ಣಯ. ಅವು ಕೇವಲ ಕಾವ್ಯ ಸಾಮಗ್ರಿಗಳ ಪರೀಕ್ಷೆಗೆ ಮೀಸಲಾಗಿವೆ. ಆದರೆ ಸಂಗೀತ, ಚಿತ್ರ, ನಾಟ್ಯಗಳಂತೆ ಕಾವ್ಯವೂ ಒಂದು ಲಲಿತಕಲೆ. ಕಲೆಯ ಆಸ್ವಾದದಿಂದ ಬರುವ ಆನಂದಾನುಭವವೇ ರಸ. ಕವಿಯ ವರ್ಣನಾವಸ್ತುವಿನ ಆಯ್ಕೆ, ಯೋಜನೆ, ಪಾತ್ರಗಳ ರಚನೆ, ಜೀವನಾನುಭವದ ಪ್ರಕಟಣೆ– ಇವುಗಳನ್ನೆಲ್ಲ ಒಳಗೊಳ್ಳಲು ಸೂಕ್ಷ್ಮವಾದ ರಸಸಿದ್ಧಾಂತವೇ ಅಗತ್ಯ. ಆದುದರಿಂದ ರಸವೇ ಕಾವ್ಯದ ಆತ್ಮ. ರಸ ಸಹೃದಯನ ಆನಂದಾನುಭವ ಮಾತ್ರ. ಲೋಕಜೀವನದಲ್ಲಿ ಸುಖದುಃಖಗಳಿಗೆ ಮಾತ್ರ ಅವಕಾಶ, ವೈಯಕ್ತಿಕತೆ ಅನಿವಾರ್ಯವಾಗಿ ಇದ್ದೇ ಇರುವುದರಿಂದ. ಕಲಾಜಗತ್ತಿನಲ್ಲಿ ಈ ವೈಯಕ್ತಿಕತೆ ಅನಿವಾರ್ಯವಾಗಿ ಇದ್ದೇ ಇರುವುದರಿಂದ. ಕಲಾಜಗತ್ತಿನಲ್ಲಿ ಈ ವೈಯಕ್ತಿಕತೆ ತಾತ್ಕಾಲಿಕವಾಗಿ ಮರೆಯಾಗುತ್ತದೆ; ತಟಸ್ಥ ಪ್ರೇಕ್ಷಕನ ಮನೋವೃತ್ತಿ ಮೂಡುತ್ತದೆ; ಆಗ ದುಃಖದರ್ಶನದಿಂದಲೂ ಆಸ್ವಾದ ಪಡೆಯುವ ಲೋಕೋತ್ತರ ಅನುಭವವುಂಟಾಗುತ್ತದೆ. ಕಲೆಯ ಪಾತ್ರಗಳು ಸಾಧಾರಣೀಕರಣದ ಪ್ರಭಾವದಿಂದ ನಮ್ಮ ಕೇವಲ ರಸಸ್ವಾದಕ್ಕೆ ನಿಮಿತ್ತಗಳಾಗುತ್ತವೆ. ಇದು ಅಭಿನವಗುಪ್ತನ ವಿವರಣೆ.

ರಸದ ದೃಷ್ಟಿಯಿಂದ ಕವಿವ್ಯಾಪಾರವೆಲ್ಲ ಮಾನವನ ಚಿತ್ತವೃತ್ತಿಗಳ ಒಂದು ನಿಯೋಜಿತ ಪ್ರದರ್ಶನ ಮಾತ್ರ. ಅವಕ್ಕೆ ಪಾತ್ರಗಳೇ ಆಲಂಬನಗಳು; ಪ್ರಕೃತಿಯೇ ಉದ್ದೀಪಕ. ಎರಡೂ ಕಾರಣ ಅಥವಾ ವಿಭಾವಗಳಾದರೆ ಅವುಗಳ ಕಾರ್ಯಗಳೇ ಅನುಭಾವಗಳು. ಚಿತ್ತವೃತ್ತಿಗಳಲ್ಲಿ ಕೆಲವು ಸ್ಥಾಯಿಯೆನಿಸಬಲ್ಲವು ; ಮಿಕ್ಕವು ಸಂಚಾರಿಗಳು ಮಾತ್ರ. ಇವುಗಳೆಲ್ಲ ಒಂದು ಸುಸಂಬದ್ಧ ರೀತಿಯಲ್ಲಿ ಪರಸ್ಪರ ಕೂಡಿಕೊಂಡು ಪರಿಪುಷ್ಟಿಪಡೆದಾಗ ಸಹೃದಯನಿಗೆ ರಸಲ್ಲೋಸ ಒದಗುತ್ತದೆ.

ಕಾವ್ಯಶರೀರದ ಸೌಂದರ್ಯಾಂಗಗಳಾದ ಗುಣಾಲಂಕಾರಗಳಿಗೂ ಕಾವ್ಯಾತ್ಮವೆನಿಸುವ ರಸಾಂಗಗಳಿಗೂ ಸಂಬಂಧವೇನು ಎಂಬುದು ತತ್ತ್ವಶಾಸ್ತ್ರದ ಪ್ರಶ್ನೆ. ಇದಕ್ಕೆ ಧ್ವನಿಯೆಂಬ ಸಮರ್ಥಕ ಉತ್ತರ ಹೇಳಿದುದೇ ಆನಂದವರ್ಧನನ ಮೇಲ್ಮೆ. ಸಾಹಿತ್ಯದಲ್ಲಿ ಮೇಲ್ನೋಟದ ಅರ್ಥದ ಜೊತೆಗೇ ರಸಿಕರು ಮೆಚ್ಚಿ ತಲೆದೂಗುವ ಮತ್ತೊಂದು ಸೂಚ್ಯಾಂಶವೂ ಇದೆ. ಹೆಚ್ಚಾಗಿ ಚಿತ್ತವೃತ್ತಿವಿಶೇಷವೇ ಈ ಒಳ ಅರ್ಥ; ಒಮ್ಮೊಮ್ಮೆ ವಸ್ತು ಅಲಂಕಾರಗಳೂ ಸೂಚ್ಯವಾಗಬಹುದು. ಈ ಒಳ ಅರ್ಥ ಅರಸಿಕರ ಅರಿವಿಗೆಬಾರದು ; ರಸಿಕರಿಗೆ ಮಾತ್ರ ತಟ್ಟನೆ ತಿಳಿವಂಥದು. ರಸಾದಿಗಳ ಪ್ರಕಟಣೆಗೆ ಕವಿಗಿರುವ ಒಂದೇ ದಾರಿಯೆಂದರೆ ಸೂಚನೆ ಅಥವಾ ಧ್ವನಿ. ಇದು ಆಡುನುಡಿಯಲ್ಲಿ ಅಲ್ಪವಾಗಿ ಉಂಟು; ಶಾಸ್ತ್ರದಲ್ಲಿ ಅನಗತ್ಯ; ಕಾವ್ಯದಲ್ಲಿ ಇದರದೇ ಸಾಮ್ರಾಜ್ಯ, ಸೂಚ್ಯವಾಚ್ಯಕ್ಕಿಂತ ರಮಣೀಯತರವೆಂಬ ಹೊಸ ರಹಸ್ಯ ಈಗ ಎದ್ದು ಕಾಣುತ್ತದೆ. ಅಸಭ್ಯ, ಅಶ್ಲೀಲಾದಿ ದೋಷಗಳೂ ಸೂಚ್ಯವಾದಾಗ ನಿರ್ದಿಷ್ಟವೆನಿಸಿ ಗ್ರಾಹ್ಯವಾಗುತ್ತವೆ, ವಸ್ತುಧ್ವನಿಯಿಂದ. ದೀಪಕ, ಸಮಾಸೋಕ್ತಿ ಮುಂತಾದ ಅರ್ಥಾಲಂಕಾರಗಳಲ್ಲಿಯೂ ಉಪಮಾಲಂಕಾರ ಸೂಚ್ಯವಾಗಿರುವುದರಿಂದಲೇ ಸೌಂದರ್ಯಾಂಶ ಹೆಚ್ಚಾಗಿದೆ. ಹೀಗೆ ವಸ್ತು, ಅಲಂಕಾರ, ರಸ– ಇವು ಮೂರೂ ಕಾವ್ಯದಲ್ಲಿ ಧ್ವನಿಯ ಮೂರು ಅಂಶಗಳು.

ಈ ಧ್ವನಿತತ್ತ್ವದ ಪುರಸ್ಕಾರದಿಂದ ನಮಗಿಂದು ಪ್ರಾಯೋಗಿಕ ವಿಮರ್ಶೆಯೆನ್ನುವ ಸಾಹಿತ್ಯಭಾಗಕ್ಕೂ ಬಾಗಿಲು ತೆರೆದಂತಾಗುತ್ತದೆ. ಅಲಂಕಾರಗಳ ಬಳಕೆ, ಗುಣಗಳ ಯೋಜನೆ, ರೀತಿಗಳ ಆಯ್ಕೆ ಎಲ್ಲದರಲ್ಲಿಯೂ ರಸೌಚಿತ್ಯವಿದೆಯೇ ಎಂಬ ಪ್ರಶ್ನೆ ಬೆಲೆಕಟ್ಟಲು ನೆರವಾಗುತ್ತದೆ. ಎಲ್ಲಿ ರಸೌಚಿತ್ಯ ತಪ್ಪಿ ಅನೌಚಿತ್ಯಕ್ಕೆಯೆಡೆಯಾಗಿದ್ದರೂ ಅದು ದೋಷವೆಂದು ನಿರ್ಣಯಿಸಲು ಸಹಕಾರಿಯಾಗುತ್ತದೆ.

ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಆನಂದವರ್ಧನನಾದ ಮೇಲೆ ಬಂದವರಲ್ಲಿ ಮಮ್ಮಟ, ವಿಶ್ವನಾಥ, ಜಗನ್ನಾಥರಂತೆ ಅವನ ತತ್ತ್ವವನ್ನು ಶಿರಸಾ ಮಾನ್ಯಮಾಡುವ ಮಹನೀಯರೇ ಅಧಿಕ. ಭಾಷೆಗೆ ಧ್ವನಿಯೆಂಬ ತೃತೀಯ ವ್ಯಾಪಾರವಿಲ್ಲವೆಂದೂ ಅದು ಭಾವಕತ್ವ ಇಲ್ಲವೆ ಅನುಮಾನ ಇತ್ಯಾದಿಗಳಲ್ಲೇ ಅಡಕವಾಗುವುದೆಂದೂ ಧ್ವನಿ ಧ್ವಂಸಕ್ಕೆ ಹೊರಡುವ ಭಟ್ಟನಾಯಕ, ಮಹಿಮಭಟ್ಟ ಮುಂತಾದ ಧ್ವನಿವಿರೋಧಿಗಳು ಕೂಡ ರಸೌಚಿತ್ಯದ ಪಾರಮ್ಯವನ್ನೂ ರಸವೇ ಕಾವ್ಯದ ಆತ್ಮವೆಂಬ ಮೂಲಸಿದ್ಧಾಂತವನ್ನೂ ಮಾನ್ಯಮಾಡಿದ್ದಾರೆ. ವಿವರಿಸುವ ಪರಿಭಾಷೆ ಬೇರೆಯಾದರೂ ಒಳಗಿನ ತತ್ತ್ವ ಬೇರೆಯಲ್ಲ. ಕುಂತಕ ವಕ್ರೋಕ್ತಿಯ ಮಹಾವ್ಯಾಪ್ತಿಯಲ್ಲಿ ಧ್ವನಿಯನ್ನು ಅಳವಡಿಸಿದರೂ ಆನಂದವರ್ಧನನ ಅನುಯಾಯಿಯಂತೆಯೇ ಪ್ರಾಯೋಗಿಕ ವಿಮರ್ಶೆಗೆ ಹೆಚ್ಚು ಗಮನವಿತ್ತಿದ್ದಾನೆ.

ಹೀಗೆ ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಸಿದ್ಧಾಂತ ತಾತ್ತ್ವಿಕವಾಗಿರುವಷ್ಟೇ ಪ್ರಯೋಗಾನುಸಂಧಾನ ಮಾರ್ಮಿಕವಾಗಿಯೂ ಇದೆ. ಆದರೆ ವಿಮರ್ಶೆಯೇ ಒಂದು ಸ್ವತಂತ್ರ ಸಾಹಿತ್ಯ ಪ್ರಕಾರವೆಂಬ ಕಲ್ಪನೆ ಹಿಂದಿನವರಲ್ಲಿ ಮೂಡಿಬಾರದ ಕಾರಣ ಅವರು ಸ್ವತಂತ್ರ ಕವಿಕಾವ್ಯವಿಮರ್ಶೆಗಳನ್ನು ರಚಿಸಲಿಲ್ಲ. (ಕೆ.ಕೆ.)

**ಕಾವ್ಯ ರೂಪಕಗಳು :** ಪದ್ಯಶೈಲಿಯಲ್ಲಿ ರಚಿತವಾದ ನಾಟಕಗಳನ್ನು ಕಾವ್ಯರೂಪಕಗಳು (ಪೊಯಟಿಕ್ ಡ್ರಾಮಾಸ್) ಎನ್ನಲಾಗಿದೆ. ಇಲ್ಲಿ ಅವುಗಳ ಸ್ವರೂಪ, ಚರಿತ್ರೆ, ಅಗತ್ಯಗಳ ಬಗ್ಗೆ ವಿವರಗಳಿವೆ.

ನಾಟಕ ಯಶಸ್ವಿಯಾಗಬೇಕಾದರೆ ವಸ್ತುವಿನ್ಯಾಸ, ಪಾತ್ರಸೃಷ್ಟಿ, ನಟನಸಾಮರ್ಥ್ಯ ಎಷ್ಟು ಮುಖ್ಯವೋ ನಾಟಕದ ಮಾಧ್ಯಮವೂ ಅಷ್ಟೇ ಮುಖ್ಯವೆಂದು ರಸಜ್ಞರ ಅಭಿಪ್ರಾಯ. ದೇವತೆಗಳನ್ನು, ಉನ್ನತ ವ್ಯಕ್ತಿಗಳನ್ನು ಕುರಿತ, ಉದಾತ್ತ ವಸ್ತುಗಳನ್ನುಳ್ಳ ಮತ್ತು ಮೇಳ, ಗೀತ ನಾಟ್ಯಗಳನ್ನೊಳಗೊಂಡ ನಾಟಕ ಸ್ವಾಭಾವಿಕವಾಗಿ ಛಂದಸ್ಸಿನ ಲಯದಿಂದ ಕೂಡಿರುತ್ತದೆ. ಆಮೇಲೆ ನಾಟಕೀಯ ಅಂಶಗಳು ಹೆಚ್ಚಿ ಲೋಕಸಹಜವಾದ ಗದ್ಯ, ಛಂದಸ್ಸು ಮತ್ತು ಗದ್ಯಮಿಶ್ರಣ, ಕಡೆಗೆ ಲೋಕ ಸ್ವಭಾವ, ಮಾನವ ಸಮಾಜದ ಚಿತ್ರಣಗಳನ್ನೇ ಒಳಗೊಂಡಿರುವ ಆಧುನಿಕ ನಾಟಕಗಳಲ್ಲಿ ಛಂದಸ್ಸು ಅಸ್ವಾಭಾವಿಕವೆಂದು ತಿರಸ್ಕೃತವಾಗಿ ಬರಿಯ ಗದ್ಯಶೈಲಿ ಬಳಕೆಗೆ ಬಂದಿರುತ್ತದೆ. ಗ್ರೀಕ್ ನಾಟಕ ಬರಿಯ ಛಂದಸ್ಸೇ; ಸಂಸ್ಕೃತ ನಾಟಕ ಗದ್ಯದ ಹಾಸು, ಪದ್ಯದ ಹೊಕ್ಕು. ಇಂಗ್ಲಿಷ್ ನಾಟಕ ಮಿಶ್ರಣದಲ್ಲಿ ಆರಂಭವಾಗಿ ಬರಿಯ ಗದ್ಯಕ್ಕೆ ಇಳಿದು ಪುನಃ ಕಾವ್ಯಮಯವಾಗುತ್ತದೆ. ಆಗ ನಾಟಕಕ್ಕೂ ಕವಿತೆಗೂ ಸಂಬಂಧವಿರಬೇಕೇ ಬೇಡವೇ ಎಂಬ ಪ್ರಶ್ನೆಯೂ ಏಳುತ್ತದೆ.

ಪಾಶ್ಚಾತ್ಯ ನಾಟಕದ ಜಾಡೂ ಹೀಗೆಯೇ. ಮೊಟ್ಟಮೊದಲು ನಾಟಕದ ಮಾತು– ಗಂಭೀರನಾಟಕವೇ ಆಗಲಿ, ವೈನೋದಿಕವೇ ಆಗಲಿ–ಭಾವಗೀತೆಯ ರಾಗಗಳ ರೂಪದಲ್ಲಿದ್ದು, ಸಂಗೀತ ಪ್ರಧಾನವಾಗಿ ಪದಶೈಲಿಯ ಮಾತುಗಳಾಗಿ ವಿಕಾಸಹೊಂದಿ, ಕೊನೆಗೆ ಸಾಮಾನ್ಯ ಜನರ ಭಾಷೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿತು. ಈ ರೀತಿಯ ಪ್ರಯೋಗವನ್ನು

ನಾವು ಕ್ರಮವಾಗಿ ಈಸ್ಕಿಲಸ್, ಅರಿಸ್ಟೋಫೆನಿಸ್‌ರಿಂದ ಹಿಡಿದು ಮಿನಾಂಡರ್ ಮತ್ತು ಟೆರಿನ್ಸರವರೆಗೂ ಕಾಣಬಹುದು. ಮಧ್ಯಯುಗದಲ್ಲಿ ಹುಟ್ಟಿದ ಹೊಸ ನಾಟಕ ಬೆಳೆದ ರೀತಿಯೂ ಹೀಗೆಯೆ. ಪ್ರತಿಭಾವಂತರಾದ ನಾಟಕಕಾರರು ತೊಡಕಾದ ಪದ್ಯರೂಪದ ಸಂಭಾಷಣೆಯನ್ನು ಸುಲಭರೂಪಕ್ಕೆ ತಂದು ಅದನ್ನು ನಾಟಕಕ್ಕೆ ಜೋಡಿಸಿಕೊಂಡರು. ಅಂತ್ಯಪ್ರಾಸವುಳ್ಳ ದ್ವಿಪದಿಯ ಶೈಲಿ ಹೊಸಹುಟ್ಟಿನ ಕವಿಗಳ ಕೈಲಿ ಮಾರ್ಪಟ್ಟು ನಾಟಕದಲ್ಲಿ ಸರಳಗೆರೆಯಾಗಿ ಎಲಿಜ಼ಬೆತ್ ಕಾಲದ ಅನಂತರ ಅವನತಿ ಹೊಂದಿ ಕ್ರಮೇಣ ಗದ್ಯವಾಯಿತು. ಈ ಮೊದಲು ಗದ್ಯಶೈಲಿಯನ್ನು ವಿನೋದ ನಾಟಕಗಳಲ್ಲಿ ಸಹಜವಾದ ಮಾಧ್ಯಮವಾಗಿ ಉಪಯೋಗಿಸುತ್ತಿದ್ದು, ಅನಂತರ ಗಂಭೀರ ನಾಟಕಗಳಲ್ಲಿಯೂ ಪ್ರಯೋಗಿಸಿದರು. ವಿನೋದ ನಾಟಕಗಳಲ್ಲಿ ಪದಶೈಲಿಯನ್ನು ಉಪಯೋಗಿಸುತ್ತಿದ್ದುದು ಅತಿ ವಿರಳ. 19ನೆಯ ಶತಮಾನದ ಆದಿಯಲ್ಲಿ ಬಂದ ಜೇಮ್ಸ್ ಷೆರಿಡನ್ ನವಲ್ಸ್‌ನ ಅನಂತರ ಪದ್ಯಶೈಲಿಯ ವಿನೋದ ನಾಟಕ (ಪೊಯಟಿಕ್ ಕಾಮಿಡಿ) ಅವನತಿ ಹೊಂದಿತು.

ಪದ್ಯಶೈಲಿಯ ಗಂಭೀರನಾಟಕದ (ಪೊಯಟಿಕ್ ಟ್ರಾಜೆಡಿ) ಇತಿಹಾಸ ಇದಕ್ಕಿಂತ ಸ್ವಲ್ಪ ಭಿನ್ನವಾಗಿದೆ. 18 ಮತ್ತು 19ನೆಯ ಶತಮಾನಗಳಲ್ಲಿ ಸಾಮಾನ್ಯವಾಗಿ ಎಲ್ಲ ನಾಟಕಕಾರರೂ ಪದ್ಯಶೈಲಿಯನ್ನೇ ಮಾಧ್ಯಮವಾಗಿ ಉಪಯೋಗಿಸಿದರು. 18ನೆಯ ಶತಮಾನದಲ್ಲಿ ಗ್ರೀಕರ ಅಭಿಜಾತ (ಕ್ಲಾಸಿಕಲ್) ಸಂಪ್ರದಾಯವನ್ನು ತಪ್ಪುತಪ್ಪಾಗಿ ಅನುಕರಿಸಿ ಸರಳರಗಳೆಯಲ್ಲಿ ಅನೇಕ ನಾಟಕಗಳನ್ನು ಬರೆದರು. 19ನೆಯ ಶತಮಾನದಲ್ಲಿ ಹೊಸದಾಗಿ ಬಂದ ರಮ್ಯಯುಗದ ಕವಿಗಳು ಷೇಕ್ಸ್‌ಪಿಯರನ ಕಾವ್ಯ ಶೈಲಿಯನ್ನು ಅನುಸರಿಸಿದರು. ಆದರೆ ಈ ಎರಡು ಶತಮಾನದ ಕಾಲದಲ್ಲಿ ರಚಿತವಾದ ಯಾವ ನಾಟಕವೂ ರಂಗಭೂಮಿಯ ಹಾಗೂ ಕಲೆಯ ದೃಷ್ಟಿಯಿಂದ ಅಷ್ಟೊಂದು ಯಶಸ್ವಿಯಾಗಲಿಲ್ಲ. ಆದರೂ ಆ ಕಾಲದ ಸಾಹಿತಿಗಳ ನಾಟಕಕ್ಕೆ ಪದ್ಯಶೈಲಿಯೇ ಪರಿಣಾಮಕಾರಿಯಾದ, ಯುಕ್ತವಾದ ಶೈಲಿಯೆಂದು ಭಾವಿಸಿ, ಅಡಿಸನ್, ಜಾನ್ಸನ್, ವರ್ಡ್ಸ್‌ವರ್ತ್, ಷೆಲ್ಲಿ, ಬೈರನ್, ಟೆನಿಸನ್, ಬೌರಿಂಗ್ ಮತ್ತು ಸ್ಟೀಫನ್ ಫಿಲಿಪ್ಸ್ ಮುಂತಾದವರು ಕಾವ್ಯರೂಪಕಗಳನ್ನು ರಚಿಸಿದರು. ಇದೇ ಕಾಲದಲ್ಲಿ ಯುರೋಪಿನ ನಾನಾ ದೇಶಗಳಲ್ಲಿಯೂ ಈ ಅಭಿಪ್ರಾಯ ಹರಡಿತು. ಫ್ರಾನ್ಸಿನಲ್ಲಿ ರಾಸಿನ್ ಅಲೆಕ್ಸಾಂಡ್ರೈಸ್ ಆರು ಗಣಗಳ ಸಾಲಿನ ಶೈಲಿಯನ್ನು ನಾಟಕದಲ್ಲಿ ಎಷ್ಟು ಯಶಸ್ವಿಯಾಗಿ ಉಪಯೋಗಿಸಬಹುದೆಂದು ತೋರಿಸಿದ. ಅನಂತರ ಜರ್ಮನಿಯ ಗಯಟೆಯನ್ನು ಹೆಸರಿಸಬೇಕು. ಷಿಲ್ಲರ್ ತನ್ನ ರಮ್ಯ (ರೊಮ್ಯಾಂಟಿಕ್) ಐತಿಹಾಸಿಕ ನಾಟಕಗಳಲ್ಲಿ ಕಾವ್ಯಮಾಧ್ಯಮವನ್ನೇ ಬಳಸಿದ. ಇಟಲಿಯ ಆಲ್‌ಫೆರಿ ಗ್ರೀಕ್ ನಾಟಕದ ಸಂಪ್ರದಾಯವನ್ನು ತನ್ನ ಕಾವ್ಯರೂಪಗಳಲ್ಲಿ ಅನುಕರಿಸಿದ. ಸ್ಕಾಂಡಿನೇವಿಯದ ಇಬ್ಸನ್ ಮತ್ತು ಸ್ಟ್ರಿಂಡ್ ಬ್ಯಾರಿ ಮೊದಲು ಕಾವ್ಯರೂಪಕಗಳನ್ನು ರಚಿಸಿದರು.

ಈ ಪ್ರಯತ್ನಗಳಾವುವೂ ಷೇಕ್ಸ್‌ಪಿಯರನ ಕಾವ್ಯರೂಪಕಗಳಿಗೆ ಸರಿಸಮನಾಗಲಿಲ್ಲ. ಕಾವ್ಯರೂಪಕವನ್ನು ಉತ್ತುಂಗ ಶಿಖರಕ್ಕೇರಿಸಿದ ಷೇಕ್ಸಪಿಯರ್‌ನ ಸಾಧನೆಯನ್ನು ಇತರರ ಪ್ರಯೋಗಗಳೊಡನೆ ಹೋಲಿಸಿದಾಗ ಇಷ್ಟು ವಿಷಯ ಸ್ಪಷ್ಟವಾಗುತ್ತದೆ:

1. ನಾಟಕದಲ್ಲಿನ ಕೆಲವು ತೀವ್ರವಾದ, ಸೂಕ್ಷ್ಮವಾದ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಗದ್ಯಶೈಲಿ ಅಶಕ್ತವಾಗುತ್ತದೆ.

2. ಇಂಥ ಉದ್ದೇಶ ನೆರವೇರಲು, ವಿಭಾವನೆಯ, ಉನ್ನತವಾದ ಶೈಲಿ, ಅಂದರೆ ಕಾವ್ಯಶೈಲಿ ಅತ್ಯಗತ್ಯ. ಅಲ್ಲದೆ ನಾಟಕಗಳಲ್ಲಿ ಬಳಸುವ ಈ ಉನ್ನತ ಶೈಲಿ ಯಶಸ್ವಿಯಾಗಿ ನಾಟಕಕ್ಕೆ ಹೊಂದಿಕೊಳ್ಳಬೇಕಾದರೆ ಅದು ಆಯಾ ಕಾಲದ ಸಾಮಾನ್ಯ ಜನ ಆಡುವ ಮಾತಿನ ಶೈಲಿಗೆ ಸಂಬಂಧಿಸಿದಂತಿರಬೇಕು.

3. ಕೇವಲ ಪ್ರಾಚೀನ ನಾಟಕಗಳ ಶೈಲಿಯನ್ನು ಅನುಕರಿಸುವುದರಿಂದ ರಂಗಭೂಮಿಗೆ ಬೇಕಾದ ಇಂಥ ನಾಟಕಶೈಲಿಯನ್ನು ಸಾಧಿಸಿಕೊಳ್ಳಲು ಸಾಧ್ಯವಿಲ್ಲ.

4. ನಾಟಕದ ಸಂಭಾಷಣೆ ಮಾತ್ರ ಕಾವ್ಯಶೈಲಿಯಲ್ಲಿದ್ದರೆ ಅದು ಕಾವ್ಯರೂಪಕವಾಗುವುದಿಲ್ಲ. ಇಡೀ ನಾಟಕಗಳಲ್ಲಿ ವಿಭಾವನೆಯಿರಬೇಕು. ಕಾವ್ಯತ್ವವಿರಬೇಕು. ಷೇಕ್ಸ್‌ಪಿಯರ್‌ನ ಸರಳರಗಳೆಯ ಹಿರಿಯ ಲಕ್ಷಣವೆಂದರೆ ಅದು ಅವನ ಕಾಲದ ಮಾತಿನ ಶೈಲಿಯಿಂದ ವಿಭಿನ್ನವಾಗದೆ ಅದರೊಡನೆ ಛಂದೋಮಯವಾಗಿ ಹೊಂದಿಕೊಂಡಿರುವುದು. ರಮ್ಯ ಕವಿಗಳು, ಷೇಕ್ಸ್‌ಪಿಯರನ ಛಂದಸ್ಸನ್ನು ಅನುಕರಣೆ ಮಾಡಿದಾಗ ಅವರ ಶೈಲಿ ಶಿಥಿಲವಾಗಿ, ಮಾತುಗಳು ಜೊಳ್ಳಾಗಿ, ಸಪ್ಪೆಯಾಗಿ ತೋರಿದುವು. ತಮ್ಮ ತಮ್ಮ ಕಾಲದ ಜನರು ಆಡುವ ಮಾತಿನ ನಡೆಯನ್ನು ಬಿಟ್ಟು ಕೇವಲ ಅಂಧಾನುಕರಣೆಯ ಮಾರ್ಗವನ್ನು ಅನುಸರಿಸಿದಾಗ ಈ ಕವಿಗಳು ಮುಗ್ಗರಿಸಿದರು. ನಾಟಕದ ಮಾತಿನ ಶೈಲಿಗೂ ಆಯಾ ಕಾಲದ ಜನರಾಡುವ ಮಾತಿಗೂ ಇರುವ ನಿಕಟಸಂಬಂಧ ಇದರಿಂದ ವ್ಯಕ್ತವಾಗುವುದು.

ಇದನ್ನು ಚೆನ್ನಾಗಿ ಮನಗಂಡು ಈ ಕಾಲದ ಕವಿಗಳಲ್ಲಿ ಕೆಲವರು ಹೊಸರೀತಿಯಲ್ಲಿ ಕಾವ್ಯರೂಪಕಗಳನ್ನು ರಚಿಸಲು ಯತ್ನಿಸಿದ್ದಾರೆ. ಅವರಲ್ಲಿ ಕೆಲವರು ಎರಡು ರೀತಿಯ ತೊಡಕುಗಳಿಗೆ ಸಿಕ್ಕಿದ್ದಾರೆ. ನಾಟಕದ ಮಾತಿನ ಶೈಲಿ, ಜನರ ಮಾತನ್ನು ಹೋಲಬೇಕಾದರೆ ಅದು ಆಯಾ ಕಾಲದಲ್ಲಿ ಬಳಕೆಯಲ್ಲಿರುವ ಕಾವ್ಯರೂಪಗಳಿಗೆ (ಪೊಯಟಿಕ್ ಫಾರಂ) ಹೊಂದಿಕೊಳ್ಳುವಂತಿರಬೇಕು. ಷೇಕ್ಸ್‌ಪಿಯರ್ ಒಂದು ರೀತಿಯ ಅದೃಷ್ಟಶಾಲಿ. ಅವನ ಶೈಲಿಯಲ್ಲಿ ಆ ಕಾಲದ ಜನರ ಮಾತಿನ ಲಯದ ಪ್ರತಿಧ್ವನಿಯಿದೆ. ರಂಗಭೂಮಿಯ ಮೇಲೆ ನಟರ ಬಾಯಿಂದ ಹೊರಟ ಮಾತುಗಳು ಕೂಡಲೇ ಪ್ರೇಕ್ಷಕರ ಅಂತಃಕರಣವನ್ನು ಹೊಕ್ಕು, ಮಾತಿನ ಅರ್ಥ ತಾನಾಗಿ ಹೊಳೆಯಬೇಕು. ಹೀಗೆ ತನ್ನ ಹೊರ ಪೊರೆಯಲ್ಲಿನ ಅರ್ಥವನ್ನು ಸುಲಭವಾಗಿ ಮಿಂಚಿಸಬಲ್ಲ ಶಕ್ತಿ ಎಲಿಜ಼ಬೆತ್ ಕಾಲದ ಇಂಗ್ಲಿಷ್ ಭಾಷೆಯ ವಿಶಿಷ್ಟ ಗುಣವಾಗಿತ್ತು. ಆದ್ದರಿಂದ ಆ ಭಾಷೆಯನ್ನು ರಂಗಭೂಮಿಯ ಮಾಧ್ಯಮವಾಗಿ ಅಳವಡಿಸಿಕೊಳ್ಳಲು ಷೇಕ್ಸ್‌ಪಿಯರನಿಗೆ ಸುಲಭಸಾಧ್ಯವಾಯಿತು. ಆದರೆ ಇದು ಆಧುನಿಕ ಕವಿಗಳಿಗೆ, ನಾಟಕಕಾರರಿಗೆ ಎಟುಕದ ಸಮಸ್ಯೆಯಾಗಿದೆ. ಏಕೆಂದರೆ ಆಧುನಿಕ ಕಾವ್ಯ ಕ್ಲಿಷ್ಟವಾಗುತ್ತ ಬಂದು ಸಾಮಾನ್ಯ ಜನರಿಂದ ದೂರವಾಗುತ್ತಿದೆ. ಕಾವ್ಯರೂಪಗಳನ್ನು ರಚಿಸಬೇಕೆನ್ನುವ ನಾಟಕಕಾರ ಈಗಿನ ತನ್ನ ಕಾಲದ ಕಾವ್ಯದ ಕ್ಲಿಷ್ಟ ಶೈಲಿಯನ್ನು ಅನುಸರಿಸುವಂತಿಲ್ಲ; ತನ್ನ ಕಾಲದ ಜನರ ಮಾತಿನ ಶೈಲಿಯನ್ನೂ ಅನುಸರಿಸುವಂತಿಲ್ಲ: ಇದಕ್ಕೆ ಕಾರಣ, ಪ್ರಸ್ತುತ ಕಾಲದ ಸಾಮಾನ್ಯ ಜನರ ಮಾತು ವೈವಿಧ್ಯರಹಿತವಾಗಿದೆ, ಶುಷ್ಕವಾಗಿದೆ. ಅದರ ವೈವಿಧ್ಯರಾಹಿತ್ಯ ಬೇಸರ ತರುವಂಥದ್ದು. ಷೇಕ್ಸ್‌ಪಿಯರನ ಕಾಲದ ಜನರ ಮಾತಿನಲ್ಲಿದ್ದ ಅರ್ಥವೈಶಾಲ್ಯ, ಲಯ, ಗತಿ, ಅಲಂಕಾರ, ವೈವಿಧ್ಯ– ಯಂತ್ರಯುಗದ ಆಧುನಿಕ ಕಾಲದ ಜನರ ಮಾತಿನಲ್ಲಿಲ್ಲ. ಆದ್ದರಿಂದ ಆಧುನಿಕ ಕಾವ್ಯರೂಪಕಗಳನ್ನು ರಚಿಸಬೇಕೆನ್ನುವ ಕವಿಗೆ ಇದೊಂದು ಬಗೆಹರಿಯದ ಸಮಸ್ಯೆ.

ಇದಕ್ಕೆ ಪರಿಹಾರವನ್ನು ಹುಡುಕಲು ಅನೇಕ ನಾಟಕಕಾರರು ಪ್ರಯೋಗಗಳನ್ನು ಮಾಡಿದ್ದಾರೆ. ಈ ಶತಮಾನದ ಇಂಗ್ಲೆಂಡಿನಲ್ಲಿ ಈ ಪ್ರಯತ್ನಗಳು ಹೆಚ್ಚು ಯಶಸ್ವಿಯಾಗಿವೆ. ಅನೇಕ ವರ್ಷಗಳ ಕೃಷಿಯ ಫಲವಾಗಿ ಟಿ. ಎಸ್. ಎಲಿಯಟ್, ಡಬ್ಲ್ಯೂ. ಬಿ. ಯೇಟ್ಸ್, ಕ್ರಿಸ್ಟಫರ್ ಫ್ರೈ, ಕ್ರಿಸ್ಟಫರ್ ಇಷರ್‌ವುಡ್ ಮುಂತಾದ ನಾಟಕಕಾರ ಕವಿಗಳು ಹಲವಾರು ಕಾವ್ಯರೂಪಕಗಳನ್ನು ರಚಿಸಿ ಜನಮನ್ನಣೆ ಪಡೆದಿದ್ದಾರೆ. ಆದರೆ ಎಲಿಜ಼ಬೆತ್ ಕಾಲದ ನಾಟಕಕಾರರಿಗೆ ಸಿದ್ಧಿಸಿದ ಸರಳ ರಗಳೆಯಂಥ ಪ್ರಭಾವಶಾಲಿ ಕಾವ್ಯಮಾಧ್ಯಮವನ್ನು ಈ ಕಾಲದ ನಾಟಕಕಾರರು ಯಾರೂ ಇನ್ನೂ ಸಾಧಿಸಿಕೊಂಡಿಲ್ಲವೆಂದು ಹೇಳಬಹುದು. (ಎಚ್.ಕೆ.ಆರ್.)

ಕಾವ್ಯ ರೂಪಕ, ಪದ್ಯ ಮಾಧ್ಯಮದಲ್ಲಿ ರಚಿಸಿದ ನಾಟಕವಷ್ಟೇ ಅಲ್ಲ. ಅದು ಯಶಸ್ವಿಯಾಗಬೇಕಾದರೆ ಅದನ್ನು ರಚಿಸುವ ಮನಸ್ಸು ಕವಿ ಮನಸ್ಸಾಗಿರಬೇಕು. ಕಾವ್ಯದ ಪ್ರವೃತ್ತಿ ಎಂದರೆ ವಿವರಗಳ ಮೂಲಕ ತರ್ಕಾತೀತವಾದ, ತನ್ನದೇ ಆದ ವಿಶಿಷ್ಟ ಸ್ವರೂಪವಿರುವ ಸುಸಂಬದ್ಧ ಜಗತ್ತನ್ನು ಸೃಷ್ಟಿಸುವುದು. ಆದುದರಿಂದಲೇ ಕಾವ್ಯದ ಭಾಷೆ ಪ್ರತಿಮೆಗಳ ಭಾಷೆ ಪ್ರತಿಮೆಯು ಜಡಜಗತ್ತಿಗೂ 'ಇಮ್ಯಾಜಿನೇಷನ್'ನ ಜಗತ್ತಿಗೂ ಕಟ್ಟಿದ ಸೇತುವೆ. ಕಾವ್ಯವು ಲಯದ ಮೂಲಕ, ಪ್ರತಿಮೆಗಳ ಮೂಲಕ ಉದಾ: ಬೇಂದ್ರೆಯವರ ರಚನೆಯ ಮೂಲಕ ಕಣ್ಣ ಮುಂದಿರುವ ದೃಶ್ಯದ ಹಿಂದೆ ಒಂದು ಸುಸಂಬದ್ಧ ಜಗತ್ತಿನ ಇರುವಿಕೆಯನ್ನು ಸೂಚಿಸುತ್ತಿರುತ್ತದೆ. ಆದುದರಿಂದಲೇ ಅತ್ಯಂತ ದುಃಖವನ್ನು ವ್ಯಕ್ತಪಡಿಸುವ ಉದಾ: ಬೇಂದ್ರೆಯವರ ಒಳ್ಳೆಯ ಕವನವು ದುಃಖವನ್ನು ಸಹ್ಯ ಮಾಡುತ್ತದೆ. ಅಡಿಗರ 'ಮೋಹನ ಮುರಳಿ'ಯಲ್ಲಿ ಗದ್ಯ ಸಾರಾಂಶವು ನಮ್ಮ ಮೇಲೆ ಯಾವ ಪರಿಣಾಮವನ್ನುಂಟು ಮಾಡುತ್ತದೆ? ಷೇಕ್ಸ್‌ಪಿಯರನ 'ಆ್ಯಂಟನಿ ಅಂಡ್ ಕ್ಲಿಯೊ ಪಾತ್ರ' 'ಅಥೆಲೊ' ಮೊದಲಾದ ನಾಟಕಗಳಲ್ಲಿ ಯಾತನೆಯನ್ನು ಸಹ್ಯ ಮಾಡುವುದು, ಯಾತನೆಯು ಯಾತನೆಯಾಗಿಯೇ ಸಂವಹನವಾಗದಂತೆ ಮಾಡುವ ಹಲವು ಅಂಶಗಳಲ್ಲಿ ಅವುಗಳ ಕಾವ್ಯ ಒಂದು ಕನ್ನಡದಲ್ಲಿ ಕಾವ್ಯರೂಪಕ್ಕೆ ಒಳ್ಳೆಯ ಉದಾಹರಣೆ ಕುವೆಂಪು ಅವರ 'ಬೆರಳ್–ಗೆ–ಕೊರಳ್'. ನಮ್ಮ ಕಣ್ಣ ಮುಂದೆಯೇ ಭಯಂಕರ ಅನ್ಯಾಯ ನಡೆದು ಹೋಗುತ್ತದೆ. ಆದರೆ ನಾಟಕ ನಮ್ಮನ್ನು ಹತಾಶರನ್ನಾಗಿ ಬಿಡುವುದಿಲ್ಲ. ಇದಕ್ಕೆ ಏಕಲವ್ಯನ ಸ್ವಭಾವದಂತಹ ಕೆಲವು ಅಂಶಗಳು ಕಾರಣ. ಒಂದು ಮುಖ್ಯ ಕಾರಣ ನಾಟಕದ ಕಾವ್ಯ ಕಾವ್ಯವು ಸಹಜವಾಗಿ ವಿವರಗಳಾಚೆ ಒಂದು ಸುಸಂಬದ್ಧ ದರ್ಶನದತ್ತ ಸಾಗುತ್ತದೆ (ಸಾಹಿತ್ಯ ತಿಳಿಯದಿದ್ದರೂ ಸಂಗೀತ ವಾದ್ಯಗಳು ಮಾಡುವ ಪರಿಣಾಮದೊಂದಿಗೆ ಹೋಲಿಸಿ). ಇದರಿಂದಾಗಿ ನಾಟಕದಲ್ಲಿ ಅಂತರ್ಗವಾದ ದರ್ಶನವು ಇನ್ನೂ ಸ್ಥೂಲವಾಗಿ, ಪರಿಣಾಮಕಾರಿಯಾಗಿ ಪ್ರಕಟವಾಗುವುದು ಸಾಧ್ಯವಾಗುತ್ತದೆ. (ಎಚ್.ಕೆ.ಆರ್)

**ಕಾವ್ಯಲಕ್ಷಣ :** ಉದ್ದೇಶ ಲಕ್ಷಣ ಪರೀಕ್ಷೆ– ಇವು ಎಲ್ಲ ಪದಾರ್ಥಗಳ ಜ್ಞಾನಕ್ಕೂ ಸಾಮಾನ್ಯವಾದ ಕ್ರಮವೆಂದು ಅಂಗೀಕರಿಸಲ್ಪಟ್ಟಿದೆಯಾಗಿ ಅಲಂಕಾರಶಾಸ್ತ್ರದಲ್ಲಿ ಕಾವ್ಯದ ಉದ್ದೇಶ, ಕಾವ್ಯದ ಲಕ್ಷಣ ಮತ್ತು ಕಾವ್ಯದ ಪರೀಕ್ಷೆಗಳಿಗೆ ಸಂಬಂಧಿಸಿದ ವಿವರಗಳು ಬರುತ್ತವೆ. ಕಾವ್ಯದ ಉದ್ದೇಶಾದಿಗಳನ್ನು ಕಾವ್ಯಪ್ರಯೋಜನ ಮತ್ತು ಕಾವ್ಯಹೇತು ಎಂಬ ಲೇಖನಗಳಲ್ಲಿ ಪರಿಶೀಲಿಸಿದೆ. ಕಾವ್ಯಪರೀಕ್ಷೆಯ ವಿಷಯವನ್ನು ಕಾವ್ಯ ಎಂಬ ಲೇಖನದಲ್ಲಿಯೂ ಕಾವ್ಯಮೀಮಾಂಸೆ ಎಂಬ ಲೇಖನದಲ್ಲಿಯೂ ವಿವೇಚಿಸಿದೆ. ಇಲ್ಲಿ ಕಾವ್ಯಲಕ್ಷಣದ ಬಗೆಗಿನ ವಿವರಗಳಿವೆ. ಅಲಂಕಾರಶಾಸ್ತ್ರದ ಪ್ರಥಮ ಪ್ರವರ್ತಕನೆನಿಸಿರುವ ಭಾಮಹನಿಂದ ಹಿಡಿದು ಪ್ರಸಿದ್ಧ ಆಲಂಕಾರಿಕರಲ್ಲಿ ಕೊನೆಯವನೆನಿಸಿರುವ ಜಗನ್ನಾಥನವರೆಗೆ ಸು. 20 ಕಾವ್ಯಲಕ್ಷಣಗಳು ಸಿಕ್ಕುತ್ತವೆ. ಪ್ರತಿಯೊಬ್ಬ ಆಲಂಕಾರಿಕನೂ ಹಿಂದಿನ ಪರಂಪರೆಯನ್ನು

ಅನುಸರಿಸಿಯೋ ತನ್ನದೇ ಆದ ಮಾರ್ಗವನ್ನು ಹಿಡಿದೋ ಕಾವ್ಯಲಕ್ಷಣವನ್ನು ನಿರೂಪಿಸಿರುತ್ತಾನೆ. ಲಕ್ಷಣವೆಂಬುದು ದೂಷಣತ್ರಯ (ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವ) ರಹಿತವಾಗಿ ವ್ಯಾವರ್ತಕವೂ ವ್ಯಾವಹಾರಿಕವೂ ಆಗಿರಬೇಕೆಂದು ತರ್ಕಶಾಸ್ತ್ರದಲ್ಲಿ ನಿರ್ಣಯಿಸಲ್ಪಟ್ಟಿದೆ. ಈ ದೃಷ್ಟಿಯಿಂದ ಪ್ರಾಚೀನ ಆಲಂಕಾರಿಕರು ಕಾವ್ಯದ ವಿಚಾರದಲ್ಲಿ ಹೇಳಿರುವ ಕೆಲವು ಮಾತುಗಳು ಸ್ವರೂಪನಿರೂಪಕ ವಾಕ್ಯಗಳೋ ಇಲ್ಲದಿದ್ದರೆ ವಿಷಯದ ಪೂರ್ಣಜ್ಞಾನಕ್ಕೆ ಸಹಾಯಕವಲ್ಲದ ಕೇವಲ ಶಾಬ್ದ ವಿವರಣೆಯೋ (ಉದಾ: ಕವೇಃ ಕರ್ಮ ಕಾವ್ಯಂ) ಆಗುತ್ತವೆಯೋ ಹೊರತು ಖಚಿತವೂ ಪರಿಷ್ಕೃತವೂ ಆದ ಕಾವ್ಯಲಕ್ಷಣಗಳಾಗುವುದಿಲ್ಲ. ಪ್ರಾಯಃ 10–12ನೆಯ ಶತಮಾನದಿಂದೀಚೆಗೆ ಈ ಬಗ್ಗೆ ವಿಶೇಷವಾದ ಚರ್ಚೆ ಬೆಳೆದಿದೆಯೆನ್ನಬಹುದು.

ಕಾವ್ಯಲಕ್ಷಣಗಳನ್ನು ಮೂರು ರೀತಿ ವಿಂಗಡಿಸಬಹುದು. ಮೊದಲನೆಯದಾಗಿ ಪ್ರಸಿದ್ಧವಾದ ರಸ, ಅಲಂಕಾರ, ರೀತಿ, ಧ್ವನಿ, ವಕ್ರೋಕ್ತಿ ಎಂಬ ಐದು ಬಗೆಯಾಗಬಹುದು. ಎರಡನೆಯದಾಗಿ ಕವಿಶಿಕ್ಷೆಯ ದೃಷ್ಟಿಯಿಂದ ಅಥವಾ ವಿಮರ್ಶಕನ ಕಾವ್ಯಪರೀಕ್ಷೆಯ ದೃಷ್ಟಿಯಿಂದ ರಚಿಸಲ್ಪಟ್ಟ ಲಕ್ಷಣಗಳೆಂದು ಎರಡು ವಿಧವಾಗಿಯೂ ವಿಂಗಡಿಸಬಹುದು. ಮೂರನೆಯದಾಗಿ ಶಬ್ದಪ್ರಾಧಾನ್ಯ, ಅರ್ಥಪ್ರಾಧಾನ್ಯ ಅಥವಾ ಉಭಯಪ್ರಾಧಾನ್ಯಗಳನ್ನು ಅನುಸರಿಸಿ ಮೂರು ವಿಧವಾಗಿಯೂ ವಿಂಗಡಿಸಬಹುದು.

ಭಾಮಹ ಕಾವ್ಯಲಕ್ಷಣವನ್ನು 'ಶಬ್ದಾರ್ಥೌಸಹಿತೌಕಾವ್ಯಂ' ಎಂದು ಮಾತ್ರ ನಿರೂಪಿಸಿರುವನಾದರೂ ವಕ್ರೋಕ್ತಿಗರ್ಭಿತವಾದ ಅಲಂಕಾರಗಳಿಗೇ ಆತ ಪ್ರಾಶಸ್ತ್ಯವನ್ನು ಕೊಟ್ಟಿರುವುದರಿಂದ ಅಲಂಕೃತವಾದ ಶಬ್ದಾರ್ಥಗಳ ಸಹಭಾವವೇ ಕಾವ್ಯಲಕ್ಷಣವೆಂದು ತಾತ್ಪರ್ಯದಿಂದ ತಿಳಿಯಬಹುದಾಗಿದೆ. ದಂಡಿ ತನ್ನ ಕಾವ್ಯಾದರ್ಶದಲ್ಲಿ ಕಾವ್ಯಂತಾವದಿಷ್ಟಾರ್ಥವ್ಯವಚ್ಛಿನ್ನಾಪದಾವಲೀ ಎಂದು ಹೆಚ್ಚು ಪರಿಪೂರ್ಣವಾದ ಆದರೆ ಸ್ವಲ್ಪ ವಿವಾದಾಸ್ಪದವಾದ ಲಕ್ಷಣವನ್ನು ರಚಿಸಿದ್ದಾನೆ. ಇಷ್ಟವಾದ ಅರ್ಥದಿಂದ ಒಳಗೂಡಿರುವ ಪದಗಳ ಸಮೂಹವೇ ಕಾವ್ಯ ಎಂಬ ಈ ಲಕ್ಷಣದಲ್ಲಿ ಇಷ್ಟ ಎಂಬ ಶಬ್ದಕ್ಕೆ 'ಕವಿ ಹೇಳಬೇಕೆಂದಿರುವ' ಎಂದು ಅರ್ಥ ಮಾಡಲಾಗಿದೆ. ಇಷ್ಟ ಎಂದರೆ ಆಹ್ಲಾದಕರ, ರುಚಿಸುವ ಎಂದೂ ಅರ್ಥ ಮಾಡಬಹುದು. ಆದರೆ ತರುಣವಾಚಸ್ಪತಿಯೆಂಬ ವ್ಯಾಖ್ಯಾನಕಾರ ಕವಿವಿವಕ್ಷಿತ ಎಂದೇ ಅರ್ಥ ಮಾಡಿರುತ್ತಾನೆ. ಈ ಲಕ್ಷಣ ಪದಾವಲಿಯನ್ನೇ ಮುಖ ಪದಾರ್ಥವನ್ನಾಗಿ ಸ್ವೀಕರಿಸುವುದರಿಂದ, ಶಬ್ದಪ್ರಾಧಾನ್ಯವನ್ನು ಅಂಗೀಕರಿಸುವ ಲಕ್ಷಣಗಳ ಗುಂಪಿಗೆ ಸೇರುತ್ತದೆ.

ವಾಮನನ 'ರೀತಿರಾತ್ಮಾಕಾವ್ಯಸ್ಯ' ಎಂಬ ಲಕ್ಷಣ ಗುಣಗಳ ಮೂಲಕ ಧರ್ಮ ವೈಶಿಷ್ಟ್ಯವನ್ನು ಅಂಗೀಕರಿಸಿದರೂ ಭಾಮಹನ ಲಕ್ಷಣದಂತೆ ಕಾವ್ಯರಚನೆಯಲ್ಲಿ ಆಸಕ್ತನಾದ ಕವಿಯ ದೃಷ್ಟಿಯಿಂದ ರಚಿಸಲ್ಪಟ್ಟಿದೆಯಲ್ಲದೆ, ಮೊಟ್ಟಮೊದಲಿಗೆ ಆತ್ಮವೆಂಬ ಪದವನ್ನು ಬಳಸಿಕೊಂಡಿದೆ. ಇಲ್ಲಿ ರೀತಿ ಎಂಬುದನ್ನು ವಿಶಿಷ್ಟವಾದ ಪದರಚನೆಯೆಂದೂ ಆ ವಿಶೇಷವನ್ನು ಗುಣಾತ್ಮಕವೆಂದು ವಿವರಿಸಿ ಹತ್ತು ವಿಧವಾದ ಶಬ್ದ ಮತ್ತು ಅರ್ಥ ಗುಣಗಳನ್ನು ಲಕ್ಷಣೋದಾಹರಣೆಗಳ ಸಹಿತ ನಿರೂಪಿಸಲಾಗಿದೆ. ಆತ್ಮದ ವಿಷಯ ಪ್ರಸಕ್ತವಾದುದರಿಂದಲೇ ಕಾವ್ಯದ ಶರೀರವಾವುದೆಂಬ ಅಶಂಕೆ ಉದ್ಭವಿಸಿ ಶಬ್ದ ಮತ್ತು ಅರ್ಥಗಳೇ ಕಾವ್ಯದ ಶರೀರವೆಂದು ಅಂಗೀಕರಿಸಲ್ಪಟ್ಟಿತು. ಹೀಗೆ ಶಬ್ದಾರ್ಥ ಶರೀರವಾದ ಕಾವ್ಯ ಅಲಂಕಾರದ (ಸೌಂದರ್ಯ) ಕಾರಣದಿಂದಲೇ ಗ್ರಾಹ್ಯವಾಗುತ್ತದೆಯೆಂದೂ ಈ ದೋಷಗಳ ವರ್ಜನದಿಂದಲೂ ಗುಣಗಳ ಆದಾನದಿಂದಲೂ ಉಂಟಾಗುತ್ತದೆಯೆಂಬ ಅಂಶವೂ ವಾಮನನಿಗೆ ಸಮ್ಮತವಾಗಿದೆ.

ಧ್ವನಿಪ್ರಸ್ಥಾನವನ್ನು ಸ್ಥಾಪಿಸಿದ ಆನಂದವರ್ಧನ 'ಕಾವ್ಯಸ್ಯಾತ್ಮಾಧ್ವನಿಃ' ಎಂದು ಹಿಂದಿನವರಿಂದ ಹೇಳಲ್ಪಟ್ಟ ವಿಮರ್ಶಕ ಮೌಲ್ಯ ದೃಷ್ಟಿಯ ಲಕ್ಷಣವನ್ನಲ್ಲದೆ ಸಹೃದಯಹೃದಯಾಹ್ಲಾದಿಶಬ್ದಾರ್ಥಮಯತ್ವಮೇವ ಕಾವ್ಯಲಕ್ಷಣಂ– ಎಂಬ ಲಕ್ಷಣವನ್ನೂ ನಿರೂಪಿಸಿರುತ್ತಾನೆ. ಇವೆರೆಡರ ತಾತ್ಪರ್ಯದಿಂದ ಶಬ್ದಾರ್ಥ ಶರೀರವಾದ ಕಾವ್ಯ ಧ್ವನ್ಯಾತ್ಮಕವಾಗಿಯೂ ಸಹೃದಯ ಹೃದಯಾಹ್ಲಾದಕರವೂ ಆಗಿರಬೇಕೆಂಬುದು ಆನಂದವರ್ಧನನ ಆಶಯ. ಈ ಮತ ವ್ಯಂಗದ ಮೂಲಕ ಶಬ್ದಾರ್ಥಗಳ ವೈಶಿಷ್ಟ್ಯವನ್ನು ಕಾವ್ಯದ ಲಕ್ಷಣವನ್ನಾಗಿ ಅಂಗೀಕರಿಸುತ್ತದೆಯಲ್ಲದೆ ಸಹೃದಯಹೃದಯಾಹ್ಲಾದಕತ್ವವೆಂಬ ಒಂದು ಮುಖ್ಯವಾದ ಅಂಶವನ್ನು ಲಕ್ಷಣದಲ್ಲಿ ಸೇರಿಸುತ್ತದೆ.

ಇಲ್ಲಿಂದ ಮುಂದೆ ಕಾವ್ಯಲಕ್ಷಣದ ನಿರೂಪಣೆಯಲ್ಲಿ ಹೆಚ್ಚಿನ ನಿಷ್ಕರ್ಷವನ್ನು ಸಾಧಿಸುವ ಪ್ರಯತ್ನವೂ ತತ್ಸಂಬಂಧವಾದ ವಿವಾದಗಳೂ ಬೆಳೆದುಬಂದಿದೆ.

ಧ್ವನಿಮತವನ್ನು ಅಂಗೀಕರಿಸದ ಕುಂತಕ ವ್ಯಾಪಾರ (ಕ್ರಿಯೆ) ಮುಖೇನ ಎಂದರೆ ವಕ್ರತೆಯಿಂದೊಡಗೂಡಿದ ಶಬ್ದಾರ್ಥಗಳಿಗೆ ಕಾವ್ಯತ್ವವನ್ನು ಒಪ್ಪಿ ಈ ರೀತಿ ಲಕ್ಷಣವನ್ನು ಹೇಳಿರುತ್ತಾನೆ: ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರಶಾಲಿನಿ। ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣಿ. ಈ ಲಕ್ಷಣದಲ್ಲಿ ಪ್ರತಿಯೊಂದು ದಳಕ್ಕೂ ಪ್ರಯೋಜನವನ್ನು ಹೇಳುತ್ತ, ಹಿಂದೆ ಭಾಮಹಾದಿಗಳೂ ಹೇಳಿರುವ ಸಹಿತೌ ಎಂಬ ಶಬ್ದಕ್ಕೆ ಅಪೂರ್ವವಾದ ವಿವರಣೆಯನ್ನು ಕೊಡಲಾಗಿದೆ.

ಸಾಹಿತ್ಯಮನಯೋಃ ಶೋಭಾಶಾಲಿತಾಂ ಪ್ರತಿಕಾಪ್ಯಸೌ।
ಅನ್ಯೂನಾನತಿರಿಕ್ತತ್ವಮನೋಹಾರಿಣ್ಯವಸ್ಥಿತಿಃ॥

ಸೌಂದರ್ಯವನ್ನುಂಟುಮಾಡುವುದರಲ್ಲಿ ಶಬ್ದ ಮತ್ತು ಅರ್ಥಗಳ ನಡುವೆ ಯಾವುದೊಂದೂ ಕಡಿಮೆಯೂ ಯಾವುದೂ ಹೆಚ್ಚೂ ಆಗಿರದೆ ಮನೋಹರವಾಗುವಂತಿರುವುದೇ ಸಾಹಿತ್ಯ. ಈ ಅನ್ಯೂನಾತಿರಿಕ್ತತ್ವವನ್ನು ಹೀಗೆ ವಿವರಿಸಿದೆ: ಕೀದೃಶೀ ಅನ್ಯೂನಾತಿರಿಕ್ತತ್ವಮನೋಹಾರಿಣೀ ಪರಸ್ಪರ ಸ್ಪರ್ಧಿತ್ವರಮಣೀಯಾ.....ತತ್ರವಾಚಕಸ್ಯ ವಾಚಕಾಂತರೇಣ ವಾಚ್ಯಸ್ಯ ವಾಚ್ಯಾಂತರೇಣ ಸಾಹಿತ್ಯಮಭಿಪ್ರೇತಮ್. ಇದರಿಂದ ವಾಚಕವಾದ ಶಬ್ದವೂ ವಾಚ್ಯವಾದ ಅರ್ಥವೂ ಪರಸ್ಪರವಾಗಿಯೂ ಸಹೃದಯ ಹೃದಯಾಹ್ಲಾದವನ್ನುಂಟುಮಾಡುವುದರಲ್ಲಿ ಸ್ಪರ್ಧಿಸುವಂತೆಯೂ ಇರಬೇಕೆಂಬ ಅಮೂಲ್ಯವಾದ ಸಾಹಿತ್ಯದ ರಹಸ್ಯವನ್ನು ವಿವರಿಸಲಾಗಿದೆ. ಶಬ್ದ ಮತ್ತು ಅರ್ಥಗಳ ಪರಸ್ಪರ ಸಂಬಂಧವನ್ನು ಈ ರೀತಿ ಚರ್ಚಿಸಲಾಗಿದೆ:

'ಶಬ್ದಾರ್ಥೌ ಕಾವ್ಯಂ ವಾಚಕೋವಾಚ್ಯಂ ಚೇತಿದ್ವೌ ಸಮ್ಮಿಲಿತೌ ಕಾವ್ಯಂ। ದ್ವಾವೇಕಮಿತಿ ವಿಚಿತ್ರೈವೋಕ್ತಿ। ತೇನಯಕ್ಕೇಷಾಂ ಚಿನ್ಮತಂ ಕವಿಕೌಶಲಕಲ್ಪಿತ ಕಮನೀಯಾ ತಿಶಯಃ ಶಬ್ದ ಏವ ಕೇವಲಂ ಕಾವ್ಯಮಿತಿ ಕೇಷಾಂಚಿದ್ವಾಚ್ಯಮೇವ ರಚನಾವೈಚಿತ್ರ್ಯ ಚಮತ್ಕಾರಕಾರಿ ಕಾವ್ಯಮಿತಿ ಪಕ್ಷದ್ವಯಮಪಿ ನಿರಸ್ತಂ ಭವತಿ। ತಸ್ಮಾತ್ ದ್ವಯೋರಪಿ ಪ್ರತಿತಿಲಮಿವ ತೈಲಂ ತದ್ವಿದಾಹ್ಲಾದಕಾರಿತ್ವಂ ವರ್ತತೇ। ನ ಪುನರೇಕಸ್ಮಿನ್॥

ಹೀಗೆ ಶಬ್ದಾರ್ಥಗಳ ಸಮಪ್ರಾಧಾನ್ಯವಾದವನ್ನು (ರುದ್ರಟನ ಕಾವ್ಯಾಲಂಕಾರಕ್ಕೆ ವ್ಯಾಖ್ಯಾನವನ್ನು ರಚಿಸಿರುವ ನಮಿಸಾಧುವೂ ಇದೇ ವಾದವನ್ನು ಎತ್ತಿಹಿಡಿದಿದ್ದಾನೆ) ಅಂಗೀಕರಿಸಿ ಇಂಥ ಶಬ್ದ ಮತ್ತು ಅರ್ಥಗಳು ವಕ್ರ ಎಂದರೆ ಲೋಕೋತ್ತರವಾದ, ಕಾವ್ಯಜ್ಞರಿಗೆ ಆಹ್ಲಾದಕರವಾದ, ಸುಂದರವಾದ ಬಂಧದಲ್ಲಿ (ಪ್ರಬಂಧ) ಸ್ಥಾಪಿಸಲ್ಪಟ್ಟರುವುದೇ ಕಾವ್ಯವೆಂದು ಕುಂತಕನ ಮತ. ಈ ರೀತಿಯಾದ ಶಬ್ದಾರ್ಥೋಭಯ ಪ್ರಾಧಾನ್ಯ, ಸಹೃದಯ ಹೃದಯಾಹ್ಲಾದಕತ್ವ, ಲೋಕೋತ್ತರ ಚಮತ್ಕಾರಕಾರಿತ್ವ ಮೊದಲಾದ ಅಂಶಗಳನ್ನು ಈಚಿನ ಆಲಂಕಾರಿಕರಾದ ಭೋಜ, ವಿಶ್ವನಾಥ, ವಿದ್ಯಾನಾಥ ಮೊದಲಾದವರು ತತ್ತ್ವಶಃ ಒಪ್ಪಿದ್ದರೂ ಇವರಲ್ಲನೇಕರು ಧ್ವನಿಮತಾವಲಂಬಿಗಳಾಗಿ ಕಾವ್ಯಲಕ್ಷಣವನ್ನು ಬೇರೆ ಬೇರೆಯ ಶಬ್ದವಿಧಾನಗಳಿಂದ ರಚಿಸಿರುತ್ತಾರೆ.

ಅಲಂಕಾರಶಾಸ್ತ್ರದ ಪ್ರಕ್ರಿಯೆಗಳನ್ನೆಲ್ಲ ಕ್ರೋಡೀಕರಿಸಿ ಪರಿಷ್ಕರಿಸುವುದರಲ್ಲಿ ಪ್ರಧಾನನೆನಿಸಿರುವ ರಾಜಾನಕ ಮಮ್ಮಟನ ಕಾವ್ಯಲಕ್ಷಣ ಈ ರೀತಿ ರೂಪುಗೊಂಡಿದೆ: ತದದೋಷೌ (ಅದೋಷೌ ಎಂಬುದಕ್ಕೆ ಅಲ್ಪದೋಷವುಳ್ಳ ಎಂದೂ ಅರ್ಥ ಮಾಡಬಹುದು. ಆದುದರಿಂದ ಪ್ರಬಲವಾದ ದೋಷವಿರುವಲ್ಲಿ ಕಾವ್ಯತ್ವ ಸಲ್ಲದು). ಶಬ್ದಾರ್ಥೌ ಸಗುಣಾವನಲಂಕೃತೀ ಪುನಃ ಕ್ವಾಪಿ. ಈ ಲಕ್ಷಣದಲ್ಲಿ ಕಾವ್ಯಶರೀರಭೂತವಾದ ಶಬ್ದ ಮತ್ತು ಅರ್ಥಗಳು ದೋಷವರ್ಜಿತವಾಗಿರಬೇಕೆಂಬ ಅಂಶ ತದಲ್ಪ ಮಪಿ ನೋಪೇಕ್ಷ್ಯಂ ಕಾವ್ಯೇ ದುಷ್ಟಂ ಕಥಂಚನ ಎಂಬ ದಂಡಿಯ ವಚನಕ್ಕನುಸಾರವಾಗಿ ಸೇರಿಸಲ್ಪಟ್ಟಿದೆ. ಗುಣಗಳು ರಸದ ಧರ್ಮಗಳೆಂದು, ಧರ್ಮವೆಂದರೆ ಎಡೆಬಿಡದೆ ಇರುವ ಗುಣ ಅಂಗೀಕೃತವಾಗಿರುವುದರಿಂದ ಸಗುಣಾ ಎಂಬ ವಿಶೇಷನ ಕಾವ್ಯಕ್ಕೆ ರಸದ ಆವಶ್ಯಕತೆಯನ್ನು ಸೂಚಿಸುತ್ತದೆ. ಅನಲಂಕೃತೀ ಪುನಃ ಕ್ವಾಪಿ ಎಂಬ ಮಾತಿನಿಂದ ಸ್ಫುಟವಾದ ಅಲಂಕಾರವಿರುವ ಎಲ್ಲ ಸಂದರ್ಭಗಳಲ್ಲಿಯೂ ಕಾವ್ಯತ್ವ ಸಿದ್ಧವಾಗುವುದಲ್ಲದೆ ಅಸ್ಫುಟವಾದ ಅಲಂಕಾರವಿರುವ ಕೆಲವೆಡೆಗಳಲ್ಲಿಯೂ ಕಾವ್ಯತ್ವ ಬರಬಹುದು. ಮಮ್ಮಟ ಧ್ವನಿಮತಾನುಯಾಯಿಯಾದರೂ ಕಾವ್ಯ ಲಕ್ಷಣದಲ್ಲಿ ಧ್ವನಿಯ ಮಾತನ್ನೆತ್ತದೇ ಇರುವುದಕ್ಕೆ ಕಾರಣವನ್ನು ಸುಲಭವಾಗಿ ಊಹಿಸಬಹುದು. ರಸ ಸರ್ವದಾ ವ್ಯಂಗ್ಯವೇ ಆಗಿ ಧ್ವನಿಯ ಭೇದವಾಗಿರುವುದರಿಂದಲೂ ರಸಧರ್ಮಗಳಾದ ಗುಣಗಳು ಇರುವೆಡೆಗಳಲ್ಲೆಲ್ಲ ಧರ್ಮಿಯಾದ ರಸಧ್ವನಿಯ ಸದ್ಭಾವ ನಿಸ್ಸಂದಿಗ್ಧವಾಗಿರುವುದರಿಂದಲೂ ಧ್ವನಿಯನ್ನು ಕಾವ್ಯದ ಲಕ್ಷಣದಲ್ಲಿ ಸೇರಿಸಬೇಕಾಗಿಲ್ಲವೆಂದು ತಾತ್ಪರ್ಯ. ಇದಲ್ಲದೆ ವಸ್ತುಧ್ವನಿ ಮತ್ತು ಅಲಂಕಾರಧ್ವನಿಗಳು ರಸಧ್ವನಿಯಲ್ಲೇ ಪರ್ಯವಸಾನ ಹೊಂದುತ್ತವೆಂದೂ ಹೇಳಲಾಗಿದೆ. ಅಲಂಕಾರ ಮಾತ್ರ ವಾಚ್ಯವೂ ಆಗಿರಬಹುದು. ವ್ಯಂಗ್ಯವೂ ಆಗಿರಬಹುದು. ವ್ಯಂಗ್ಯವಾಗಿದ್ದಾಗ ಕಾವ್ಯಕ್ಕೆ ಉತ್ಕರ್ಷವುಂಟಾಗುವುದಾದರೂ ವಾಚ್ಯವಾಗಿದ್ದಾಗಲೂ ಮಮ್ಮಟನ ಕಾವ್ಯಲಕ್ಷಣ ಈಚಿನ ಅನೇಕರಿಗೆ ಉಪಾದೇಯವಾದರೂ ವಿಶ್ವನಾಥ ಮತ್ತು ಜಗನ್ನಾಥ–ಇವರಿಬ್ಬರ ಮಾರ್ಗ ಮಾತ್ರ ಬೇರೆಯಾಗಿದೆ.

ವಿಶ್ವನಾಥ ಮಮ್ಮಟನ ಲಕ್ಷಣದ ಪ್ರತಿಯೊಂದು ಅಂಶವನ್ನು ಖಂಡಿಸಿ ವಾಕ್ಯಂ ರಸಾತ್ಮಕಂ ಕಾವ್ಯಂ ಎಂಬ ಲಕ್ಷಣವನ್ನು ಮಂಡಿಸಿದ್ದಾನೆ. ಹುಳು ಹೊಡೆದಿರುವ ರತ್ನದ ದೋಷ ಅದರ ರತ್ನತ್ವಕ್ಕೆ ಹೇಗೆ ಬಾಧಕವಾಗುವುದಿಲ್ಲವೋ ಹಾಗೆ ದೋಷ ಕಾವ್ಯದ ಉತ್ಕರ್ಷಾಪಕರ್ಷಗಳಿಗೆ ಕಾರಣವಾಗುತ್ತದೆಯೇ ಹೊರತು ಕಾವ್ಯತ್ವಕ್ಕೆ ಕುಂದನ್ನು ತರಲಾರದೆಂದು ತಿಳಿದು ಈ ಅಂಶವನ್ನು ಕಾವ್ಯಲಕ್ಷಣದಲ್ಲಿ ಸೇರಿಸಬೇಕಾಗಿಲ್ಲ– ಇದು

ವಿಶ್ವನಾಥನ ಅಭಿಪ್ರಾಯ. ಇವನು ಸಹ ಧ್ವನಿಮತವನ್ನೊಪ್ಪಿದರೂ ರಸ ಧ್ವನಿಯನ್ನೇ ಪ್ರಧಾನವಾಗಿ ಕಾವ್ಯತ್ವಕ್ಕೆ ಕಾರಣವನ್ನಾಗಿ ಅಂಗೀಕರಿಸಿದ್ದಾನೆ. ಇವನ ಲಕ್ಷಣದಲ್ಲಿ ವಾಕ್ಯಂ ರಸಾತ್ಮಕಂ ಎಂದು ಹೇಳಿರುವುದರಿಂದ ಶಬ್ದಾರ್ಥಗಳ ಪ್ರಾಧಾನ್ಯದ ಪ್ರಶ್ನೆ ಏಳುವುದಿಲ್ಲ. ಕಾವ್ಯವನ್ನು ಮನುಷ್ಯನಿಗೆ ಹೋಲಿಸಿದರೆ ರಸ ಆತ್ಮವಿದ್ದಂತೆ, ಗುಣಗಳು ಶೌರ್ಯಾದಿಗಳಂತೆ, ದೋಷಗಳು ಕುಂಟುಕುರುಡುಗಳಿದ್ದಂತೆ, ರೀತಿಗಳು ಅವಯವಗಳ ಜೋಡಣೆಯಂತೆ, ಅಲಂಕಾರಿಗಳು ಬಳೆ, ಓಲೆ ಮೊದಲಾದವುಗಳಂತೆ –ಎಂಬುದೇ ವಿಶ್ವನಾಥನ ಅಭಿಪ್ರಾಯ. ಇವನ ಲಕ್ಷಣದ ಪ್ರಕಾರ ಕೇವಲ ಶಬ್ದ ಚಿತ್ರವನ್ನು ಹೊಂದಿರುವ ಪ್ರಬಂಧಗಳಿಗೆ ಕಾವ್ಯತ್ವ ಸಲ್ಲದು. ಜಗನ್ನಾಥನ ರಮಣೀ ಯಾರ್ಥಪ್ರತಿಪದಕಃ ಶಬ್ದಃ ಕಾವ್ಯಂ ಎಂಬ ಲಕ್ಷಣ ದಂಡಿಯ ಲಕ್ಷಣದಂತೆ ಶಬ್ದವನ್ನೇ ಮುಖಪದಾರ್ಥವನ್ನಾಗಿ ಸ್ವೀಕರಿಸಿದರೂ ರಮಣೀಯಾರ್ಥಪ್ರತಿಪಾದಕಃ ಎಂಬ ವಿಶೇಷಣದಿಂದ ಅರ್ಥದ ಪ್ರಾಧಾನ್ಯಕ್ಕೆ ಭಂಗ ಬರುವುದಿಲ್ಲವೆಂದು ಭಾವಿಸಬಹುದು. ಆದರೆ ಮಮ್ಮಟನ ದೃಷ್ಟಿಯಿಂದ ಇದು ಸರಿಯಲ್ಲ. ಶಬ್ದವೆಂಬ ಮುಖಪದಾರ್ಥಕ್ಕೆ ಅರ್ಥ ವಿಶೇಷಣವಾಗುವುದರಿಂದ ಅದಕ್ಕೆ ಕಾವ್ಯಶರೀರತ್ವ ಸಿದ್ಧವಾಗದು. ಸಮ ಪ್ರಾಧಾನ್ಯವೂ ಸಿಕ್ಕಿದಂತಾಗಲಿಲ್ಲ. ಅಲಂಕಾರವೆಂಬುದು ಶರೀರಕ್ಕೆ ಸಂಬಂಧಿಸಿದ್ದಾದ್ದರಿಂದ ಅರ್ಥವೂ ಶರೀರವೆಂದು ಒಪ್ಪಿದವರ ಮತಾನುಸಾರ ಅರ್ಥಾಲಂಕಾರಗಳಿಗೆ ಅಲಂಕಾರತ್ವ ಸಿದ್ಧಿಸದೆಂಬ ಆಕ್ಷೇಪಣೆಗೆ ಜಗನ್ನಾಥನ ಲಕ್ಷಣ ಒಳಗಾಗಿದೆ.

ಅಲಂಕಾರಕ್ಕೆ ಅಲಂಕಾರ್ಯವಾದ ಶರೀರವೊಂದು ಬೇಕೆಂದೂ ಅದು ಅರ್ಥಾಲಂಕಾರಗಳಿಗೆ ಅರ್ಥವೇ ಆಗಿರಬೇಕೆಂಬುದೂ ಮಮ್ಮಟಾದಿಗಳ ವಾದ. ಜಗನ್ನಾಥನ ಲಕ್ಷಣದಲ್ಲಿ ರಮಣೀಯ ಎಂಬ ವಿಶೇಷಣದಿಂದ ಸಹೃದಯಹೃದಯಾಹ್ಲಾದಕಾರಿತ್ವ ವನ್ನು ಸೇರಿಸಿದೆಯಲ್ಲದೆ ಶಾಸ್ತ್ರಾದಿಗಳ ವಿಷಯವನ್ನು ಪ್ರತ್ಯೇಕಿಸಿದಂತಾಗಿದೆ. ವ್ಯಂಗ್ಯ ಸರ್ವಥಾ ರಮಣೀಯಾರ್ಥಪ್ರತಿಪಾದಕವಾಗಿರುವುದರಿಂದ ಉತ್ತಮೋತ್ತಮವೆಂದೂ ವಾಚ್ಯ ರಮಣೀಯವಾಗಿರುವಲ್ಲಿ ಅಸ್ಫುಟ ವ್ಯಂಗ್ಯವೂ ಕಾವ್ಯತ್ವಕ್ಕೆ ಬಾಧಕವಲ್ಲವೆಂದೂ ತಾತ್ಪರ್ಯ.

ಉಳಿದ ಕಾವ್ಯಲಕ್ಷಣಗಳೆಲ್ಲ ಮೇಲ್ಕಂಡ ಪ್ರಧಾನವಾದ ಮತಗಳಲ್ಲಿ ಅಂತರ್ಭವಿಸುತ್ತವೆ. (ಎಸ್.ವಿ.ಎಸ್.ಆರ್.)

**ಕಾವ್ಯಹೇತು :** ಕಾವ್ಯದ ವ್ಯುತ್ಪತ್ತಿಗೆ ಮೂಲಭೂತವಾದ ಕಾರಣ. ಇದು ಅಪೂರ್ವ ವಸ್ತುರಚನಾ ಕ್ರಮವಾದ ಶಕ್ತಿ ಅಥವಾ ಪ್ರತಿಭೆ. ಪ್ರತಿಭೆಯ ಜೊತೆಗೆ ವ್ಯುತ್ಪತ್ತಿ ಮತ್ತು ಅಭ್ಯಾಸಗಳೂ ಕಾವ್ಯಹೇತುಗಳೆಂದು ಸಾಮನ್ಯವಾಗಿ ಎಲ್ಲ ಆಲಂಕಾರಿಕರ ಮತ.

ನೈಸರ್ಗಿಕವಾದ ಪ್ರತಿಭೆ, ನಿರ್ಮಲಶ್ರುತಿ ಎಂದರೆ ವೇದ ಮತ್ತು ಶಾಸ್ತ್ರಾದಿಗಳ ಪರಿಚಯದಿಂದ ಉಂಟಾದ ವ್ಯುತ್ಪತ್ತಿ ಮತ್ತು ಅಮಂದಾಭಿಯೋಗ (ಸತತ ಅಭ್ಯಾಸ) – ಇವು ಮೂರೂ ಕಾವ್ಯಸಂಪತ್ತಿಗೆ ಕಾರಣವೆಂದು ದಂಡಿಯ ಅಭಿಪ್ರಾಯ.

ಪ್ರತಿಭಾವಂತನಿಂದ ಕಾವ್ಯದ ಉತ್ಪತ್ತಿಯಾಗುತ್ತದೆ. ಶಬ್ದಾಭಿಧೇಯಜ್ಞರ ಶುಶ್ರೂಷೆಮಾಡಿ ಶಬ್ದಾರ್ಥಗಳನ್ನು ತಿಳಿದುಕೊಂಡು, ಇತರ ಕಾವ್ಯಪ್ರಬಂಧಗಳನ್ನು ಅಭ್ಯಸಿಸಿ ಕಾವ್ಯಕ್ರಿಯೆಗೆ ಕೈ ಹಾಕಬೇಕು–ಎಂದು ದಂಡಿಯ ಸಮಕಾಲೀನ ಭಾಮಹ ಹೇಳುತ್ತಾನೆ.

ಇವರಾದ ಮೇಲೆ ಬಂದ ರುದ್ರಟನ ಅಭಿಪ್ರಾಯವೂ ಇದೇ. ಅಲಂಕಾರ ಗ್ರಂಥಗಳಲ್ಲೇ ಹೆಚ್ಚು ಹೆಸರುವಾಸಿಯಾದ ಕಾವ್ಯ ಪ್ರಕಾಶದ ಕರ್ತೃ ಮಮ್ಮಟ ಶಕ್ತಿ, ನಿಪುಣತೆ (ಲೋಕ, ಶಾಸ್ತ್ರ, ಕಾವ್ಯಾದಿಗಳ ವಿಶೇಷ ಪರಿಚಯ–ವ್ಯುತ್ಪತ್ತಿ) ಮತ್ತು ಅಭ್ಯಾಸ–ಇವು ಮೂರು ಸೇರಿ ಕಾವ್ಯಹೇತು ಎನಿಸುತ್ತವೆ ಎನ್ನುತ್ತಾನೆ.

ಬೃಹದ್‌ಗ್ರಂಥಗಳ ಲೇಖಕನಾದ ಹೇಮಚಂದ್ರಸೂರಿ ಕಾವ್ಯಕ್ಕೆ ಪ್ರತಿಭೆಯೇ ಕಾರಣ, ವ್ಯುತ್ಪತ್ತಿ ಮತ್ತು ಅಭ್ಯಾಸಗಳು ಪ್ರತಿಭಾ ಸಂಸ್ಕಾರಕಾರಕಗಳು–ಎಂದಿದ್ದಾನೆ.

ಕನ್ನಡ ಅಲಂಕಾರ ಗ್ರಂಥಗಳಾದ ಕವಿರಾಜಮಾರ್ಗ ಮತ್ತು ಕಾವ್ಯಾವಲೋಕನಗಳೂ ಪ್ರತಿಭೆ, ಅಭ್ಯಾಸ, ವಿದ್ವತ್‌ಸೇವೆ, ಕಾವ್ಯಪರಿಚಯಗಳು ಕವಿತೆಗೆ ಕಾರಣಗಳೆಂದು ಹೇಳುತ್ತವೆ.

ಸಂಸ್ಕೃತದ ಇತರ ಆಲಂಕಾರಿಕರಾದ ವಾಮನ, ವಾಗ್ಭಟ, ರಾಜಶೇಖರ, ಜಗನ್ನಾಥ ಪಂಡಿತ–ಇವರು ಪ್ರತಿಭೆಯೊಂದೇ ಕಾವ್ಯಹೇತುವೆನ್ನುತ್ತಾರೆ.

ಮುಖ್ಯವಾಗಿ ಕವಿಸಹಜವಾದ ಪ್ರತಿಭೆಯೇ ಕಾವ್ಯಹೇತುವೆನಿಸಿದರೂ ಅಷ್ಟೇ ಸಾಲದು. ಲೋಕಾನುಭವ, ವಿದ್ಯಾರ್ಜನೆ, ವ್ಯುತ್ಪತ್ತಿ (ಬಗೆಬಗೆಯ ಶಾಸ್ತ್ರಗಳು, ಕಲೆಗಳು, ವಿದ್ಯೆಗಳು ಇವುಗಳ ಪರಿಚಯ) ಇವೂ ಬೇಕು. ವ್ಯಾಕರಣ, ಕೋಶ, ಛಂದಶ್ಶಾಸ್ತ್ರಗಳಲ್ಲಿ ಪಾಂಡಿತ್ಯ, ಪೂರ್ವಕವಿಗಳ ಸಂಪ್ರದಾಯ ಪರಿಚಯ ಮತ್ತು ಕಾವ್ಯ ಕಲೆಯ ಅಭ್ಯಾಸವೂ ಇದರೊಡನೆ ಸೇರಿ ಕವಿಪ್ರತಿಭೆ ಸಂಸ್ಕಾರ ಹೊಂದಿ ನಿಶಿತವಾಗಬೇಕು.

ಕವಿ ಎನ್ನುವ ಮಾತಿಗೆ ಪಂಡಿತ ಎಂಬ ಅರ್ಥವೂ ಇದೆ. ಕಾವ್ಯ ಕಲೆಗಳಲ್ಲೊಂದು ಎಂದೂ ಹೆಸರಾಗಿದೆ. ಆದ್ದರಿಂದ ಕಲೋಪಾಸಕನಿಗೆ ಹೇಗೋ ಹಾಗೆ ಕವಿಗೂ ತನ್ನ ಕಲೆಯಲ್ಲಿ ಪಾಂಡಿತ್ಯ, ಅಭ್ಯಾಸಗಳು ಇರಬೇಕಾದುದು ಸಹಜವೇ. ಆದರೆ ಕೇವಲ ಪಾಂಡಿತ್ಯ, ಅಭ್ಯಾಸಗಳಿಂದಲೇ ಉತ್ತಮ ಕಲೆ ಸೃಷ್ಟಿಯಾಗದು. ಅದಕ್ಕೆ ಪ್ರತಿಭೆಯ ಸಹಾಯ ಬೇಕೇ ಬೇಕು. (ಸಿ.ಜಿ.ಪಿ.)

**ಕಾವ್ಯೋನ್ಮಾದ :** ದೇವತೆ ಮೈದುಂಬಿ ಬಂದಾಗ ಸಾಮಾನ್ಯ ಮನುಷ್ಯನಿಗೆ ಎಂದಿಗೂ ಅತೀತವಾದ ಕಣಿವಾಕ್ಯಗಳನ್ನು ಪೂಜಾರಿ ನುಡಿಯುವಂತೆ ಕಾವ್ಯಾಭಿಮಾನ ದೇವತೆ ಮೈದುಂಬಿ ಬಂದಾಗ ಕವಿ ತನಗಸದಳವಾದ ಕಾವ್ಯವನ್ನು ಸೃಷ್ಟಿಸುತ್ತಾನೆ ಎಂಬ ನಂಬಿಕೆ ಇದ್ದ ಕಾಲದಲ್ಲಿ ಬಳಕೆಗೆ ಬಂದ ಪದವಿದು (ಫ್ಯೂರರ್ ಪೊಯಟಿಕ್ಸ್). ಮಹಾಕೃತಿಯೊಂದನ್ನು ರಚಿಸುವಾಗ ಕವಿಗೆ ಬರುವ ಪರವಶ ಪರಿಸ್ಥಿತಿಯನ್ನು ಕಾವ್ಯೋನ್ಮಾದವೆನ್ನಲಾಗಿದೆ. ಮಹೋನ್ನತ ಕವಿಗಳ ಹೇಳಿಕೆಗಳಲ್ಲಿ ಅಸಾಮಾನ್ಯ ಅರ್ಥಪುಷ್ಟಿ, ಭಾವತೀವ್ರತೆ, ಶಬ್ದಲಾವಣ್ಯಗಳು ಕಂಡುಬಂದಾಗಲಂತೂ ಈ ವಾದದಲ್ಲಿ ನಂಬುಗೆ ಪ್ರಬಲಗೊಳ್ಳುತ್ತದೆ. ಅಲ್ಲದೆ ಕಾವ್ಯಹೇತುವೆನಿಸಿದ ಪ್ರತಿಭೆ ದೈವದತ್ತವಾದುದು ಎಂಬ ಮಾತಿನಲ್ಲೂ ಇದೇ ಅರ್ಥ ಅಡಗಿರುವಂತೆ ತೋರುತ್ತದೆ. ಅಂದರೆ ಕಾವ್ಯ ನಿಜವಾಗಿ ಕವಿಯ ಕೃತಿಯಲ್ಲ. ಅದನ್ನು ನುಡಿಸಿದ ಶಕ್ತಿ ದೈವಿಕವಾದುದು. ನುಡಿದ ಕವಿ ಅದರ ವಾಹಕ ಮಾತ್ರ. 'ಇಲಿಯಡ್ ಕಾವ್ಯವನ್ನು ಉಸುರಿದವ ನಾನು, ಫೀಬಸ್ ಅಪೊಲೊ ಹೋಮರ್ ಅದನ್ನು ಬರೆದುಕೊಂಡ' ಎಂಬೊಂದು ನಾಟುನುಡಿ ಬಹುಕಾಲ ಪ್ರಚಾರದಲ್ಲಿತ್ತು. 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ' –ಎಂಬ ಕುಮಾರವ್ಯಾಸನ ಉಕ್ತಿ ಬಹು ಪ್ರಸಿದ್ಧವಾದುದೇ ಆಗಿದೆ.

ಅತ್ಯುತ್ಕೃಷ್ಟ ಸಾಹಿತ್ಯದಲ್ಲಿ ಮನುಷ್ಯಾತೀತವೆನ್ನಿಸಿಕೊಳ್ಳಬಹುದಾದಷ್ಟು ಸತ್ತ್ವವಿದೆ ಎಂಬುದಕ್ಕೆ ಮೇಲಿನ ಮಾತುಗಳು ಸಾಕ್ಷ್ಯ; ಅಂಥ ಹೇಳಿಕೆಯನ್ನು ಮಹಾಸಾಹಿತಿಯ ಶುದ್ಧ ನಮ್ರತೆಯ ಕುರುಹು ಎಂದು ಭಾವಿಸಬಹುದು. ಅತ್ಯಂತ ಘನತೆಯುಳ್ಳ ಪದಾರ್ಥಕ್ಕೂ ದೇವರಿಗೂ ಸಂಬಂಧ ಕಲ್ಪಿಸಿದರೆ ಒಳ್ಳೆಯದೇ ಹೊರತು ಕೇಡಲ್ಲ. ಆದರೆ ಕಾವ್ಯನಿರ್ಮಾಣದ ಇಡೀ ಕಾರ್ಯವನ್ನು ಭಗವಂತನಿಗೆ ಒಪ್ಪಿಸಿಕೊಟ್ಟು ತನ್ನ ಜವಾಬ್ದಾರಿಯಾಗಲೀ ಪುರುಷ ಸಾಹಸವಾಗಲೀ ಏನೇನೂ ಇಲ್ಲವೆಂದು ಕವಿ ನಟಿಸಿದರೆ ಮಾತ್ರ ಅಪಾಯ. (ಎಸ್.ವಿ.ಆರ್.)

**ಕಾಶಿ :** ಮೋಕ್ಷದಾಯಕಗಳೆಂದು ಪುರಾಣಪ್ರಸಿದ್ಧವಾಗಿರುವ ಏಳು ಭಾರತೀಯ ಯಾತ್ರಾಸ್ಥಳಗಳಲ್ಲೊಂದು. ಉತ್ತರ ಪ್ರದೇಶ ರಾಜ್ಯದ ವಾರಾಣಸಿ ಜಿಲ್ಲೆಯಲ್ಲಿ ಗಂಗಾನದಿ ತೀರದಲ್ಲಿದೆ. ವಿಸ್ತೀರ್ಣ 1550 ಚ.ಕಿಮೀ. ಜನಸಂಖ್ಯೆ 36,82,194 (2011). ತೀರ್ಥಸ್ಥಲೀ, ಕಾಶಿಕಾ, ಅವಿಮುಕ್ತಕ್ಷೇತ್ರ, ಆನಂದವನ, ಅಪುನರ್ಬವಭೂಮಿ, ರುದ್ರಾವಾಸ, ಮಹಾಸ್ಮಶಾನ ಎಂಬ ಹೆಸರುಗಳಿವೆ. ವಾರಾಣಸಿ (ಬನಾರಸ್) ಎಂಬುದು ಈಗಿನ ಅಧಿಕೃತ ಹೆಸರು. ಇಲ್ಲಿ ವಿಶ್ವೇಶ್ವರ, ಅನ್ನಪೂರ್ಣ, ಸರ್ವಮಂಗಳ, ಬಿಂದುಮಾಧವ, ಕಾಲಭೈರವ ಮುಂತಾದ 1,500 ದೇವಾಲಯಗಳಿವೆ. ವ್ಯಾಸ, ಮಣಿಕರ್ಣಿಕ, ಹನುಮಾನ್, ಹರಿಶ್ಚಂದ್ರ ಮುಂತಾದ ಅನೇಕ ಸ್ನಾನಘಟ್ಟಗಳಿವೆ. ಕಾಶೀಯಾತ್ರೆ ಹಿಂದಿನಿಂದಲೂ ಪ್ರಸಿದ್ಧವೆನಿಸಿದೆ. ಕಾಶಿಯಲ್ಲಿ ಅಸುನೀಗಿದವರಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆಂದು ನಂಬಿಕೆ.



ಶ್ಮಶಾನ, ಕಾಶಿ

ದಶಾಶ್ವಮೇಧವೆಂಬ ಸ್ಥಳದಲ್ಲಿ ಹಿಂದೆ ಬ್ರಹ್ಮ ಹತ್ತು ಕುದುರೆಗಳ ಯಾಗವನ್ನು ಮಾಡಿದನೆಂದೂ ಶಿವ ಈ ಪ್ರದೇಶಗಳಲ್ಲಿ ಅನೇಕ ಮಹಿಮೆಗಳನ್ನು ಮೆರೆದನೆಂದೂ ಐತಿಹ್ಯ.

ಪ್ರಮಥ ಗಣ ಪರಿವಾರದಲ್ಲಿ ಒಬ್ಬನಾದ ಕುಂಭ ನಿಕುಂಭನೆಂಬ ಬ್ರಾಹ್ಮಣನಿಗೆ ಕನಸಿನಲ್ಲಿ ಕಾಣಿಸಿಕೊಂಡು ಕಾಶಿಯಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಅದರಲ್ಲಿ ಶಿವನನ್ನು ಪ್ರತಿಷ್ಠೆ ಮಾಡಿ ಪೂಜಿಸುವಂತೆ ತಿಳಿಸಲು, ಆತ ಕಾಶೀರಾಜನಾದ ದಿವೋದಾಸನ ಮೂಲಕ ಒಂದು ಶಿವಾಲಯವನ್ನು ನಿರ್ಮಿಸಿ ಪೂಜೆ ನಡೆಯುವಂತೆ ಏರ್ಪಡಿಸಿದ. ಪರಮೇಶ್ವರನ ಪ್ರಭಾವದಿಂದ ಕ್ಷೇತ್ರ ಮಹಿಮೆ ಕ್ರಮೇಣ ವೃದ್ಧಿಹೊಂದಿತು.

ಮಾಹಾತ್ಮ್ಯದಲ್ಲಿ ತಿಳಿಸಿರುವಂತೆ ಐದು ಕ್ರೋಶ ಎಂದರೆ ಹದಿನೈದು ಹರಿದಾರಿ ವಿಸ್ತಾರವುಳ್ಳ ಈ ಕ್ಷೇತ್ರವನ್ನು ಜಲವಾಗಲೀ ಭೂಮಿಯಾಗಲೀ ಸ್ಪಷ್ಟವಾಗದಿರುವಾಗ ತನ್ನ ವಿಹಾರಕ್ಕಾಗಿ ಈಶ್ವರ ನಿರ್ಮಿಸಿಕೊಂಡಿರುತ್ತಾನೆ. ಪ್ರಲಯ ಕಾಲದಲ್ಲಿ ಈ ಕ್ಷೇತ್ರಕ್ಕೆ ನಾಶವಿಲ್ಲ. ಪಾಪದಿಂದ ವರ್ಜಿತವಾದುದರಿಂದ ಮತ್ತು ಸರ್ವಕಾಲದಲ್ಲೂ ಈಶ್ವರ ಇಲ್ಲೇ ನೆಲೆಸುವುದರಿಂದ ಈ ಕ್ಷೇತ್ರಕ್ಕೆ ಅವಿಮುಕ್ತ ಎಂಬ ಹೆಸರು ಬಂದಿದೆ. ವರಣಾ ಅಸಿ ಎಂಬ ಎರಡು ನದಿಗಳ ಮಧ್ಯದಲ್ಲಿ ಈ ಕ್ಷೇತ್ರವಿರುವುದರಿಂದ ಇದಕ್ಕೆ ವಾರಣಾಸಿ. ಎಂಬ ಹೆಸರು ಬಂದಿದೆ. ಅಸಿ ಎಂಬುದು ಇಡಾನಾಡಿ. ವರಣ ಎಂಬುದು ಪಿಂಗಲಾನಾಡಿ. ಈ ಎರಡು ನಾಡಿಗಳ ಮಧ್ಯದಲ್ಲಿ ನೆಲೆಸಿರುವುದು ಅವಿಮುಕ್ತ. ಅದೇ ಅತ್ಯುತ್ತಮವಾದ ಸುಷುಮ್ನಾನಾಡಿ. ಈ ಮೂರು ಸೇರುವುದೇ ವಾರಣಾಸಿ ಎಂದು ಜಾಬಾಲಿ ಮಹರ್ಷಿ ತನ್ನ ಶಿಷ್ಯನಾದ ಅರುಣಿಗೆ ಉಪದೇಶಿಸಿರುತ್ತಾನೆ. ಈ ಕ್ಷೇತ್ರದಲ್ಲಿ ಪ್ರಾಣ ಬಿಟ್ಟವರಿಗೆ ಪುನರ್ಜನ್ಮವಿರುವುದಿಲ್ಲ. ತೀರ್ಥಕ್ಷೇತ್ರಗಳಲ್ಲಿ ಉತ್ತಮವಾದ ಈ ನಗರ ಈಶ್ವರನಿಗೆ ಅತ್ಯಂತ ಪ್ರಿಯವಾದದ್ದಾಗಿದೆ. ಪೂರ್ವದಲ್ಲಿ ಮಧು ಕೈಟಭ ದೇಹದಿಂದ ಭೂಮಿ ದೋಷಗ್ರಸ್ತವಾಯಿತು. ಆದರೆ ಈಶ್ವರನ ಆಜ್ಞೆಯಿಂದ ಕಾಶಿಕ್ಷೇತ್ರ ಮಾತ್ರ ಆ ದೋಷವನ್ನು ಹೊಂದಲಿಲ್ಲ. ಇದು ಅತ್ಯಂತ ಪವಿತ್ರವಾದದ್ದು.

ಮಹಾಕಾವ್ಯಗಳ ಕಾಲದಲ್ಲಿ ಈ ಪಟ್ಟಣ ಕಾಶಿ ರಾಜಮನೆತನದವರ ರಾಜಧಾನಿಯಾದುದರಿಂದ ಇದಕ್ಕೆ ಕಾಶಿ ಎಂಬ ಹೆಸರೂ ಬಂತು. ಮಹಾಭಾರತದಲ್ಲಿ ಕಾಶಿ ರಾಜರ ಪ್ರಸ್ತಾಪವಿದೆ. ಕೃಷ್ಣ ಒಮ್ಮೆ ಕಾಶಿರಾಜನ ಮೇಲೆ ಯುದ್ಧಮಾಡಿ ನಗರವನ್ನು ನಾಶಮಾಡಿದನೆಂದು ಕಥೆ.

ಪಾಂಡವರನ್ನು ಸುಡುವ ಉದ್ದೇಶದಿಂದ ಕೌರವಾದಿಗಳು ಲಾಕ್ಷಾಗೃಹವನ್ನು ಕಟ್ಟಿದುದು ಕಾಶಿಯಲ್ಲಿಯೇ.

ಸುಲೋಚನೆಯ ವಿವಾಹಕಾಲದಲ್ಲಿ ಕಾಶಿಯ ರಾಜನಾದ ಆಕಂಪನ ಮೊಟ್ಟಮೊದಲಿಗೆ ಸ್ವಯಂವರ ಪದ್ಧತಿಯನ್ನು ರೂಢಿಗೆ ತಂದನೆಂದು ಕಥೆ.

ಪಾರ್ಶ್ವನಾಥನಿಗೆ ಗರ್ಭ, ಜನ್ಮ, ತಪಸ್ಸು, ಕೇವಲಜ್ಞಾನಗಳೆಂಬ ನಾಲ್ಕು ಕಲ್ಯಾಣಗಳು ಉಂಟಾದ ಸ್ಥಳವಾದುದರಿಂದ ಜೈನರಿಗೂ ಕಾಶಿ ಪವಿತ್ರವೆನಿಸಿದೆ. (ಎಸ್.ಎನ್.ಕೆ.;ಎಂ.ಸಿ.ಪಿ.)

**ಕಾಶೀನಾಥ್, ಕೆ. :** (1944–.) ಕಳೆದ ಕೆಲವು ವರ್ಷಗಳಿಂದ ಈಚೆಗೆ ಕರ್ನಾಟಕದಲ್ಲಿ ಮಾತ್ರವಲ್ಲ ರಾಷ್ಟ್ರದ ನಾನಾ ಭಾಗಗಳಲ್ಲಿ ಬೃಹದಾಕಾರದ ಸುಂದರವಾದ ದೇವಾಧಿದೇವತೆಗಳ ಮೂರ್ತಿಗಳು ಕಾಣಿಸಿಕೊಳ್ಳುತ್ತಿವೆ. ಗಾರೆ, ಸಿಮೆಂಟಿನ ಈ ಚೆಲುವಿನ ಶಿಲ್ಪಗಳ ಸೃಷ್ಟಿಕರ್ತ ಕೆ.ಕಾಶೀನಾಥ್. ಕರ್ನಾಟಕದ ಶಿವಮೊಗ್ಗದವರು. 1944 ಜನವರಿ 2ರಂದು ಶಿರಾಳಕೊಪ್ಪದಲ್ಲಿ ಜನಿಸಿದ ಇವರ ತಂದೆ ಕೃಷ್ಣರಾಯರು. ತಾಯಿ ಪಾರ್ವತಮ್ಮ. ಕಲೆ ವಂಶಪಾರಂಪರ್ಯವಾಗಿ ಬಂದಿದ್ದು, ತಾಯಿಯ ತಂದೆ ಪರಸಪ್ಪ–ಪರಶುರಾಮಪ್ಪ ಪ್ರಬುದ್ಧ ಶಿಲ್ಪಕಲಾ ಪ್ರವೀಣರು. ತಾತನ ಸಾನ್ನಿಧ್ಯದಲ್ಲಿ ಶಿಲೆ, ಲೋಹ, ಕಾಷ್ಠ ಹಾಗೂ ಮಣ್ಣಿನ ಕಲೆಯಲ್ಲಿ ಪರಿಣತಿ ಪಡೆದರು. ಮುತ್ತಜ್ಜ ಕೆ. ತಿಪ್ಪಾಜಪ್ಪ ಸಾಂಪ್ರದಾಯಿಕ ಚಿತ್ರಕಲಾ ಪ್ರವೀಣರು. ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿ ಅನೇಕ ಪಾರಿತೋಷಕ, ಪುರಸ್ಕಾರಗಳನ್ನು ಪಡೆದವರು. ಅವರು ರಚಿಸಿದ ಅಪೂರ್ವ ರೇಖಾಚಿತ್ರಗಳು ಕಾಶೀನಾಥರ ಕುಟುಂಬದ ಸಂಗ್ರಹದಲ್ಲಿವೆ (ಇತ್ತೀಚೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ತಿಪ್ಪಾಜಪ್ಪನವರ ರೇಖಾಚಿತ್ರಗಳ ಸಂಪುಟವನ್ನು ಪ್ರಕಟಿಸಿದೆ). ಮುತ್ತಜ್ಜನ ಕಲಾಕೃತಿಗಳಲ್ಲಿನ ಸೌಂದರ್ಯಾತಿಶಯತೆ ಹಾಗೂ ಮದರಾಸಿನಲ್ಲಿ ದೊರೆತ ಆಧುನಿಕ ಕಲಾ ವಿನ್ಯಾಸ ಪದ್ಧತಿ ತರಬೇತಿ ಕಾಶೀನಾಥರ ಕಲಾದೃಷ್ಟಿಯನ್ನು ಪರಿಪಕ್ವಗೊಳಿಸಿದವು.

ಶಿರಾಳಕೊಪ್ಪದ ಆರು ಅಡಿ ಎತ್ತರದ ಗಣೇಶ ಬಿಂಬ ಇವರ ಮೊದಲ ಕಲಾಕೃತಿ (1960). ಮರುವರ್ಷ ಶಿವಮೊಗ್ಗೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಖಮಂಟಪ ನಿರ್ಮಿಸಿ ನೈಜ ಅಳತೆಯ ದ್ವಾರಪಾಲಕ ಮೂರ್ತಿಗಳನ್ನು ತೈಲಚಿತ್ರ ಮಾಧ್ಯಮದಲ್ಲಿ ರಚಿಸಿದರು. 1963ರಲ್ಲಿ ಶಿವಮೊಗ್ಗದ ರಾಮಣ್ಣ ಶ್ರೇಷ್ಠಿ ಉದ್ಯಾನವನದಲ್ಲಿಯೇ ಆರಡಿ ಎತ್ತರದ ಗಣಪತಿ ಮೂರ್ತಿಯನ್ನು ಮಣ್ಣಿನಲ್ಲಿ ರಚಿಸಿದ್ದು, ಗಣೇಶನ ಹಬ್ಬದ ವೇಳೆಯಲ್ಲಿ ಪೂಜಿಸಿ ಅನಂತರ ವಿಸರ್ಜಿಸಲಾಯಿತು. ಆದರೂ ಅದರ ಗಾತ್ರ, ಕಸಬುಗಾರಿಕೆಗಳಿಂದಾಗಿ ಕಾಶೀನಾಥರಿಗೆ ಹೆಸರು ಕೀರ್ತಿಗಳನ್ನು ತಂದವು. ಬೃಹತ್ ಮೂರ್ತಿ ರಚನೆಗಳ ಬಗ್ಗೆ ಆತ್ಮವಿಶ್ವಾಸ ಬಂದಿತು.

ನಮ್ಮ ರಾಜ್ಯದ ಶಿಲ್ಪ ಕೆಲಸಕ್ಕೆ ತಮಿಳುನಾಡಿನ ಶಿಲ್ಪಿಗಳೇ ಬರಬೇಕೆ ಇಲ್ಲಿ ಯಾರೂ ಸಮರ್ಥರಿಲ್ಲವೇ, ಎಂಬ ಪ್ರಶ್ನೆ ಕಾಶೀನಾಥರ ಮನದಲ್ಲಿ ಮೂಡಿತು. ತಾವೇ ಯಾಕೆ ಸವಾಲಾಗಿ ಸ್ವೀಕರಿಸಬಾರದೆಂಬ ಯೋಚನೆ ಬಂತು; ಅಲ್ಲಿಗೇ ಹೋಗಿ ಅವರ ಪದ್ಧತಿ ಕಲಿಯಬೇಕೆಂಬ ಇಚ್ಛೆಯಿಂದ ಸು. 1966ರ ಸುಮಾರಿಗೆ ಮದರಾಸಿಗೆ ಹೋಗಿ ತಮ್ಮ ಬಂಧು ವೀರಪ್ಪಾಚಾರ್ಯರ ನೆರವಿನಿಂದ ಅಲ್ಲಿಯ ಶಿಲ್ಪಿಗಳು ಮಣ್ಣು, ಗಾರೆ, ಸಿಮೆಂಟು ಇತ್ಯಾದಿಗಳಿಂದ ಶಿಲ್ಪ ರಚನೆ ಮಾಡುವ ಕೌಶಲ್ಯ, ಪದ್ಧತಿ, ಶೈಲಿಗಳನ್ನು ಅಭ್ಯಸಿಸಿ ಬಂದರು. ಮಣ್ಣು ಗಾರೆಗಳಿಗಿಂತ ಸಿಮೆಂಟಿನಲ್ಲಿ ಕೃತಿ ರಚಿಸಬಾರದೇಕೆಂಬ ಕಾರಣದಿಂದ ಅದನ್ನೇ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಂಡರು.

ಕಾಶೀನಾಥರು ಮದರಾಸಿಗೆ ಹೋಗುವ ಮೊದಲೇ 1965ರಲ್ಲಿ ಹರಿಹರ ತಾಲ್ಲೂಕಿನ ಕುಮಾರನಹಳ್ಳಿಯ ರಂಗನಾಥ ದೇವಾಲಯದಲ್ಲಿ ದತ್ತಾತ್ರೇಯ ಮೂರ್ತಿ ಹಾಗೂ ಮಂಟಪಗಳನ್ನು ಸಿಮೆಂಟಿನಿಂದ ನಿರ್ಮಿಸಿದ್ದರಾದರೂ ಮದರಾಸಿನಿಂದ ಬಂದ ಮೇಲೆ 1967ರಲ್ಲಿ ಶಿಕಾರಿಪುರದ ದತ್ತಮಂದಿರಕ್ಕೆ ನಾಗರ ಶೈಲಿಯಲ್ಲಿ ಇಪ್ಪತ್ತು ಅಡಿಗಳಿಗೂ ಮಿಕ್ಕಿದ ಗೋಪುರ ನಿರ್ಮಾಣ ಅವರ ಮೊದಲ ಬೃಹತ್ ರಚನೆ. 1975ರಲ್ಲಿ ತುಮಕೂರು ಅಲ್ಲದೆ ದಕ್ಷಿಣ ಕನ್ನಡ, ಉಡುಪಿ ತಾಲ್ಲೂಕುಗಳಲ್ಲೂ ದೇವಾಲಯ ರಥ ಶಿಲ್ಪ ನಿರ್ಮಿಸಿದ್ದು ಆ ಪ್ರದೇಶದಲ್ಲಿಯೂ ಕಾಶೀನಾಥರ ಹೆಸರು ಪ್ರಸಿದ್ಧವಾಯಿತು.

ಮೂರ್ತಿಯ ಎತ್ತರ, ಭಾರದ ಲೆಕ್ಕಾಚಾರ ಅದಕ್ಕೆ ಅನುಗುಣವಾಗಿ ಭದ್ರವಾದ ತಳಪಾಯ ರಚನೆ, ಅದರ ಮೇಲೆ, ಶಿಲ್ಪಕ್ಕೆ ಅಗತ್ಯವಾದ ಕಬ್ಬಿಣದ ಕಂಬಿಗಳ ಹಂದರ ನಿರ್ಮಾಣ. ಸಿಮೆಂಟ್ ಗಾರೆಗಳ ಹೊದಿಕೆ, ಪ್ರಮಾಣಬದ್ಧ ಅಂಗರಚನೆ, ಜೀವಂತ ಕಳೆ ಹಿತಮಿತವಾದ ಆಭರಣಗಳ ಶೃಂಗಾರ. ನೈಜತೆ ತುಂಬುವ ವರ್ಣಲೇಪ. ಕಾಶಿನಾಥರ ಶಿಲ್ಪಗಳ ವೈಶಿಷ್ಟ್ಯ. ಬೆಂಗಳೂರಿನ ವಿಮಾನ ನಿಲ್ದಾಣದ ರಸ್ತೆಯಲ್ಲಿರುವ 65 ಅಡಿಗಳ ಎತ್ತರದ ಕೈಲಾಸ ಶಂಕರ, ಸಾಗರದಲ್ಲಿನ 100 ಅಡಿ ಎತ್ತರದ ಗೋಪುರವಿರುವ ರಥರೂಪದ ದೇವಾಲಯ ಅದರಲ್ಲಿನ ವೈವಿಧ್ಯಮಯ ಶಿಲ್ಪಸಂಗ್ರಹ ಅನನ್ಯವಾದುದು. ನೆಲಮಂಗಲದ ವಿಶ್ವಶಾಂತಿ ಆಶ್ರಮದಲ್ಲಿರುವ ವಿಷ್ಣುವಿನ ವಿಶ್ವರೂಪ, ಗೀತೋಪದೇಶ ಶಿಲ್ಪಗಳು ಕರ್ನಾಟಕದಲ್ಲಿನ ಕೆಲವು ಮನೋಜ್ಞ ಬೃಹತ್ ಶಿಲ್ಪಗಳು. ಕರ್ನಾಟಕವಲ್ಲದೆ, ಹಿಮಾಚಲದ ಸಿದ್ಧಬಾರಿಯಲ್ಲಿ 30 ಅಡಿ ಎತ್ತರದ ಆಂಜನೇಯ, ಅಹಮದಾಬಾದ್‌ನಲ್ಲಿ 60 ಅಡಿಗಳ ಪ್ರಸನ್ನಾಂಜನೇಯ, ಮಧ್ಯಪ್ರದೇಶದ ಚಿನ್ಮಯಾನಂದ ಆಶ್ರಮಕ್ಕೆ ಶ್ರೀರಾಮ ದೇವಾಲಯ ನಿರ್ಮಾಣ, ಆಂಧ್ರ ಪ್ರದೇಶದ ಪುಟ್ಟಪರ್ತಿಯ ಸಾಯಿಬಾಬಾ ಆಶ್ರಮಕ್ಕೆ ಹಲವಾರು ಗೋಪುರಗಳು, ಹೃಷಿಕೇಶದ ಕೈಲಾಸ ಆಶ್ರಮ, ದ್ವಾರಕಾ ಬಳಿಯ ನಾಗೇಶ್ವರ ದೇವಾಲಯದ ಶಿವಮೂರ್ತಿ ಇವರ ರಚನೆಯ ಶಿಲ್ಪಗಳಲ್ಲಿ ಕೆಲವು. ಅಂತೆಯೇ 1997ರಲ್ಲಿ ದ್ವಾರಕೆಯಲ್ಲಿ 65 ಅಡಿ ಎತ್ತರದ ಧ್ಯಾನಾಸಕ್ತ ಶಿವ ಹಾಗೂ ಬಿಡದಿ ಬಳಿಯ ಈಗಲ್‌ಟನ್ ಕಂಪನಿಯವರಿಗೆ ಸಪ್ತಾಶ್ವಗಳೊಂದಿಗೆ ರಥವೇರಿ ಬರುತ್ತಿರುವ ಸೂರ್ಯನ ಶಿಲ್ಪ ರಚಿಸಿದರು. ಸೂರ್ಯನ ಹಿಂದಿನ ಪ್ರಭಾಮಂಡಲವೇ 60 ಅಡಿ ವ್ಯಾಸವುಳ್ಳದ್ದೆಂದರೆ ಇಡೀ ಮೂರ್ತಿ, ರಥ ನಾಗಾಲೋಟದಲ್ಲಿರುವ ಕುದುರೆಗಳ ಒಟ್ಟು ಸಂಯೋಜನೆಯ ಬೃಹದಾಕಾರ ಕಲ್ಪನೆಗೂ ಮೀರಿದ್ದು. ಇವುಗಳಿಗೆಲ್ಲ ಕಲಶವಿಟ್ಟಂತೆ 2002ರಲ್ಲಿ ಉತ್ತರ ಕನ್ನಡದ ಮುರ್ಡೇಶ್ವರದಲ್ಲಿ 123 ಅಡಿ ಎತ್ತರದ ಧ್ಯಾನಸ್ಥ ಶಿವ ಮುಗಿಲು ಮುಟ್ಟುವಂತಿದೆ.

ಸಿಮೆಂಟ್ ಮಾಧ್ಯಮದಿಂದ ಜನಪ್ರಿಯವಾದರೂ ಕಾಶಿನಾಥ್ ಲೋಹ, ಶಿಲೆ, ಕಾಷ್ಠ ಶಿಲ್ಪಗಳಲ್ಲೂ ಪರಿಣಿತರು. ಚಾಮುಂಡೇಶ್ವರಿಯ ಶಿಲಾ ಶಿಲ್ಪ, ಗುರು ಕರಿಬಸವೇಶ್ವರ ಸ್ವಾಮಿ ಗದ್ದುಗೆಯ ಮರದ ರಥ, ಉಕ್ಕಡಗಾತ್ರಿಯ ಬೆಳ್ಳಿಯ ಮೂರ್ತಿ, ಅಮೆರಿಕೆಯ ವಾಷಿಂಗ್‌ಟನ್ ಚಿನ್ಮಯಾನಂದ ಆಶ್ರಮಕ್ಕೆ 9 ಅಡಿ ಎತ್ತರದ ಕಾಷ್ಠ ಮಂಟಪ, ಇವು ಕೆಲವು ಕಲಾಕೃತಿಗಳನ್ನು ಉಲ್ಲೇಖಿಸಬಹುದು. ಚಿನ್ನ ಬೆಳ್ಳಿ ಮೊದಲಾದ ಲೋಹ ಶಿಲ್ಪಗಳನ್ನೂ ರಚಿಸಿದ್ದಾರೆ. ಆದರೆ ದೇವಾಲಯಗಳ ಮತ್ತು ಬೃಹದ್ ಗಾತ್ರದ ದೇವಾತಾ ಮೂರ್ತಿಗಳು ಸೃಷ್ಟಿಕರ್ತರೆಂದೇ ಜನರು ಇವರನ್ನು ಗುರುತಿಸುತ್ತಾರೆ.

ಕಾಶೀನಾಥ್ ಈಚಿನ ವರ್ಷಗಳಲ್ಲಿ ಇನ್ನಿತರ ಶಿಲ್ಪಗಳನ್ನು ರಚಿಸುತ್ತಿರುವರಾದರೂ ಬೃಹದ್ ಶಿಲ್ಪಗಳ ರಚನೆಯನ್ನು ತಮ್ಮನಾದ ಕೆ. ಜ್ಞಾನೇಶ್ವರ ಹಾಗೂ ಮಕ್ಕಳಾದ ಶ್ರೀಧರಮೂರ್ತಿ, ನಾಗಭೂಷಣ ಅವರಿಗೆ ವಹಿಸಿದ್ದಾರೆ. ಮಗಳು ಶ್ರೀದೇವಿ ಸಹ ಆರ್ಕಿಟೆಕ್ಟ್ ಪದವಿಯನ್ನು ಪಡೆದಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಸಲ್ಲಿಸಿರುವ ಸೇವೆ ಅಮೂಲ್ಯ. ಸಾರ್ವಜನಿಕ ಸಂಘಸಂಸ್ಥೆಗಳು ನೀಡಿದ ಪ್ರಶಸ್ತಿ ಸನ್ಮಾನಗಳು ಅಸಂಖ್ಯ. 2000ನೇ ಸಾಲಿನ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿಯಲ್ಲದೆ, 2004ನೆಯ ಸಾಲಿನ ಕರ್ನಾಟಕದ ಜಕಣಾಚಾರಿ ಪ್ರಶಸ್ತಿಗೂ ಇವರು ಪಾತ್ರರಾಗಿದ್ದಾರೆ. *

**ಕಾಶೀನಾಥ ಶಾಸ್ತ್ರಿ :** 1825–1950. ಸ್ವಯಂ ಉಭಯಭಾಷಾ ವಿದ್ವಾಂಸರಾಗಿದ್ದು ಸು. 70ಕ್ಕೂ ಹೆಚ್ಚಿನ ಕನ್ನಡ–ಸಂಸ್ಕೃತ ಗ್ರಂಥಗಳ ಪ್ರಕಾಶಕರಾಗಿದ್ದು ಹೆಸರು ಗಳಿಸಿದ ಕನ್ನಡಿಗರು. ಧಾರವಾಡ ಜಿಲ್ಲೆ ಗದಗ ತಾಲ್ಲೂಕು ನಾರಾಯಣಪುರದಲ್ಲಿ ಹುಟ್ಟಿದರು; ನಾಗವ್ವ ಮತ್ತು ಸಿದ್ದಯ್ಯ ತಾಯಿ ತಂದೆಯರು. ಇವರು ಮೊದಲು ಅಬ್ಬಿಗೇರಿ ಸೊಲ್ಲಾಪುರಗಳ ಸಂಸ್ಕೃತ ಪಾಠಶಾಲೆಗಳಲ್ಲಿ ಅಭ್ಯಾಸ ಮಾಡಿ ತರುವಾಯ ವಾರಾಣಸಿಯಲ್ಲಿ ಕಾವ್ಯತೀರ್ಥ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ವಾಗ್ಮಿಗಳೂ ಪ್ರಬುದ್ಧ ಲೇಖಕರೂ ಆದ ಶಾಸ್ತ್ರಿಗಳು ಮೈಸೂರು ರಾಜಧಾನಿಯಲ್ಲಿ ಪಂಚಾಚಾರ್ಯ ಪ್ರಭಾ ಎಂಬ ವಾರಪತ್ರಿಕೆಯನ್ನು ಆರಂಭಿಸಿ (1923) ವೀರಶೈವ ಧರ್ಮದ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ಕಾಶೀನಾಥ ಗ್ರಂಥಮಾಲೆಯಲ್ಲಿ ನಂದಿಕೇಶ್ವರಕಾರಿಕಾ, ಶ್ರೀಕರಭಾಷ್ಯ (ಚತುಸ್ಸೂತ್ರೀ), ವೈದಿಕವಾಙ್ಮಯ ರಹಸ್ಯ, ಶೈವೋಪನಿಷತ್ಸಂಗ್ರಹ, ಶಿವಾದ್ವೈತ ಮಂಜರೀ–ಮುಂತಾದ ಸು. 70 ಗ್ರಂಥಗಳು

ಪ್ರಕಟವಾಗಿವೆ. ಇವರು ಸ್ಥಾಪಿಸಿದ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರಿನಲ್ಲಿ ಇಂದಿಗೂ ಅಸ್ತಿತ್ವದಲ್ಲಿದೆ. (ಎಂ.ಜಿ.ಎನ್.)

**ಕಾಶ್ಮೀರ** : ನೋಡಿ – ಜಮ್ಮು ಮತ್ತು ಕಾಶ್ಮೀರ

**ಕಾಶ್ಮೀರ ಶೈವದರ್ಶನ** : ಕಾಶ್ಮೀರ ಪ್ರ.ಶ.ಪೂರ್ವದಲ್ಲೇ ವಿದ್ಯಾವಂತರಿಗೂ ಧರ್ಮಕ್ಕೂ ಆಶ್ರಯವಾಗಿ ಶಾರದಾಪೀಠವೆಂದು ಹೆಸರು ಪಡೆದಿತ್ತು: ಅಶೋಕನ ಕಾಲದಿಂದಲೂ ಬೌದ್ಧಧರ್ಮಕ್ಕೆ ಆಶ್ರಯಸ್ಥಾನವಾಗಿತ್ತು. ಕನಿಷ್ಕ ಮೊದಲಾದ ರಾಜರಿಂದ ಪ್ರೋತ್ಸಾಹ ಹೊಂದಿದ ನಾಗಾರ್ಜುನ ಮೊದಲಾದ ಬೌದ್ಧಪಂಡಿತರಿಂದ ಬೌದ್ಧಮತ ತತ್ತ್ವಗಳು ಅಲ್ಲಿ ವಿಶೇಷ ಪ್ರಚಾರದಲ್ಲಿದ್ದುವು. ಪಾಣಿನೀಯ ವ್ಯಾಕರಣವೂ ಪತಂಜಲಿಯ ಮಹಾಭಾಷ್ಯವೂ ವಿಶೇಷವಾಗಿ ಅಲ್ಲಿ ಪ್ರಚಾರದಲ್ಲಿದ್ದುವು. ಸಾಂಖ್ಯರ ತತ್ತ್ವಗಳು ಶಾಕ್ತಾದ್ವೈತ ವಾದಗಳೂ ಹರಡಿದ್ದುವು. ಶಂಕರಾಚಾರ್ಯರು ಕಾಶ್ಮೀರಕ್ಕೆ ಹೋಗಿದಾಗಿನಿಂದ ಕೇವಲಾದ್ವೈತ ತತ್ತ್ವಕ್ಕೆ ಹೆಚ್ಚು ಮನ್ನಣೆ ದೊರೆಯಿತು. ಹೀಗೆ ಬಗೆಬಗೆಯ ದಾರ್ಶನಿಕ ಪಂಥಗಳಿಗೆ ಕೇಂದ್ರಸ್ಥಾನವಾಗಿದ್ದ ಕಾಶ್ಮೀರದಲ್ಲಿ 9ನೆಯ ಶತಮಾನದಲ್ಲಿ ಕಾಶ್ಮೀರ ಶೈವಧರ್ಮದ ಪುನರುತ್ಥಾನವಾಯಿತು. ಮುಂದೆ ಬೆಳೆದುಬಂದ ಶೈವ ಸಂಪ್ರದಾಯದಲ್ಲಿ ಮೇಲಿನ ಎಲ್ಲ ದೃಷ್ಟಿಗಳ ಸಮನ್ವಯವನ್ನೂ ಕಾಣಬಹುದು. ಮುಖ್ಯವಾಗಿ ಈ ಶೈವಧರ್ಮ ಅದ್ವೈತ ತತ್ತ್ವವನ್ನಾಧರಿಸಿದ್ದು ಇದು ಕೇವಲ ಯುಕ್ತಿವಾದವಲ್ಲ; ಬರೀ ಶಾಸ್ತ್ರಗ್ರಂಥಗಳನ್ನೇ ಆಶ್ರಯಿಸಿದುದಲ್ಲ ; ಇದಕ್ಕೆ 64 ಶೈವಾಗಮಗಳೇ ಮುಖ್ಯ ಆಧಾರ ಗ್ರಂಥಗಳು. ಇಷ್ಟಾದರೂ ಈ ಧರ್ಮ ಅನೇಕ ಸಾಧಕರ ಸಾಧನೆಯಿಂದುಂಟಾದ ಅನುಭವಸಿದ್ಧವಾದ ವಿಷಯಗಳಿಂದ ಕೂಡಿದ ಸಮನ್ವಯ ಪಂಥ. ಈ ಸಂಪ್ರದಾಯದಲ್ಲಿ ಯಜ್ಞಯಾಗಾದಿಗಳಿಗೆ ಸ್ಥಾನವಿಲ್ಲ. ಜಾತಿಭೇದಗಳ ನಿರ್ಬಂಧವಿಲ್ಲ. ಯಾರೂ ಬೇಕಾದರೂ ಈ ಧರ್ಮವನ್ನನುಸರಿಸಿ ಮೋಕ್ಷಮಾರ್ಗವನ್ನವಲಂಬಿಸಬಹುದು. ವಿಶ್ವಭ್ರಾತೃತ್ವವೇ ಇದರ ಗುರಿ.

ಈ ಶೈವಧರ್ಮವನ್ನು ಸ್ವತಂತ್ರವಾದವೆಂದು ಹೇಳುತ್ತಾರೆ. ಏಕೆಂದರೆ ಇಲ್ಲಿ ಪರಶಿವನಿಗೆ ಪೂರ್ಣ ಸ್ವಾತಂತ್ರ್ಯವಿದೆ. ಪತಿ, ಪಶು, ಪಾಶ ಎಂಬ ಮೂರು ತತ್ತ್ವಗಳನ್ನೊಳ ಗೊಂಡಿರುವುದರಿಂದಲೂ ಭೇದ, ಭೇದಾಭೇದ, ಅಭೇದ ದೃಷ್ಟಿಗಳನ್ನು ಸಮನ್ವಯ ಗೊಳಿಸಿರುವುದರಿಂದಲೂ ಈ ಧರ್ಮವನ್ನು ತ್ರಿಕಶಾಸ್ತ್ರವೆಂದೂ ಕರೆಯುತ್ತಾರೆ. ಶಿವ–ಶಕ್ತಿ ಪ್ರಸಾದದಿಂದ ರೂಪುಗೊಂಡು ವಿಶ್ವ ವ್ಯವಹರಿಸುತ್ತಿರುತ್ತದೆ. ಶಿವನ ಉನ್ಮೇಷದಿಂದ ವಿಶ್ವದ ಸೃಷ್ಟಿ ಮತ್ತು ವೈಭವವೆಲ್ಲ ನಡೆಯುತ್ತಿರುವುದರಿಂದ ಇದಕ್ಕೆ ಸ್ಕಂದಶಾಸ್ತ್ರವೆಂಬ ಹೆಸರು ಬಂತು. ಇದಕ್ಕೆ ಪ್ರತ್ಯಭಿಜ್ಞಾದರ್ಶನವೆಂಬ ಮತ್ತೊಂದು ಹೆಸರುಂಟು. ಜೀವಾತ್ಮ ತತ್ತ್ವತಃ ಸ್ವಯಂಪ್ರಕಾಶಮಾನನಾಗಿ ಶಿವನೇ ಆಗಿದ್ದಾನೆ. ಅಜ್ಞಾನದಿಂದ ಸ್ವರೂಪಜ್ಞಾನ ಇವನಿಗೆ ಇಲ್ಲದೆ ಹೋಗಿದೆ. ಆ ಶಿವನೇ ತಾನೆಂದು ಮಲಾವೃತನಾದ ಜೀವ ತನ್ನ ಸಹಜ ಸ್ವರೂಪವನ್ನು ಗುರುತಿಸುವುದೇ ಪ್ರತ್ಯಭಿಜ್ಞಾಶಾಸ್ತ್ರದ ಉದ್ದೇಶ.

ವಸುಗುಪ್ತನೆಂಬ ಸಿದ್ಧಪುರುಷ (825) ಮಹದೇವಗಿರಿಯಲ್ಲಿ ತನಗೆ ಗೋಚರವಾದ ಶಿವಸೂತ್ರಗಳನ್ನು ಸಂಗ್ರಹಿಸಿ ಶೈವಾಗಮಗಳನ್ನನುಸರಿಸಿ ಸೂತ್ರದ ತತ್ತ್ವಾರ್ಥಗಳನ್ನು ಶಿಷ್ಯರಿಗೆ ಉಪದೇಶ ಮಾಡಿದ. ಮುಖ್ಯವಾಗಿ ಪರತತ್ತ್ವ ಸಾಕ್ಷಾತ್ಕಾರಕ್ಕೆ ಅಧಿಕಾರ ಭೇದವನ್ನನುಸರಿಸಿ ಶಾಂಭವ, ಶಾಕ್ತ, ಆಣವ ಎಂಬ ಮೂರು ಸಾಧನ ಮಾರ್ಗಗಳನ್ನೀತ ತೋರಿಸಿದ್ದಾನೆ. ಈತನ ಶಿಷ್ಯ ಭಟ್ಟಕಲ್ಲಟ ಯುಕ್ತಿವಾದದಿಂದ ಶಿವಸೂತ್ರಗಳನ್ನು ಇತರ ಮತಗಳ ಅನುವಾದದೊಂದಿಗೆ ಸಮರ್ಥಿಸಿ ಸ್ಪಂದಕಾರಿಕೆಗಳನ್ನು ಬರೆದ. ಸೋಮಾನಂದ ಕ್ರಮಬದ್ಧವಾಗಿ ಕಾರಣವಾದವನ್ನು ಮುಂದಿಟ್ಟುಕೊಂಡು ಪರತತ್ತ್ವವನ್ನು ವಿಚಾರ ಮಾಡಿದ್ದಾನೆ. ಈತ ಭರ್ತೃಹರಿಯ ವಾಕ್ಯಪದೀಯದಲ್ಲಿ ಹೇಳಿರುವ ಪಶ್ಯಂತಿ ಮಾಧ್ಯಮಾ ವೈಖರಿ ಎಂಬ ವಾಗ್ದೇವಿಯ ಮೂರು ಭೇದಗಳಿಗಿಂತ ಇವೆಲ್ಲಕ್ಕೂ ಹಿನ್ನೆಲೆಯಾಗಿರುವ ಪರಾ ಎಂಬ ಮೂಲಸ್ವರೂಪವನ್ನು ಎತ್ತಿಹಿಡಿದಿದ್ದಾನೆ. ಸೋಮನಂದನ ಶಿಷ್ಯನಾದ ಉತ್ಪಲಚಾರ್ಯ ಈಶ್ವರಪ್ರತ್ಯಭಿಜ್ಞಾಕಾರಿಕೆಗಳನ್ನು ಬರೆದು ಶಿವಾದ್ವೈತ ತತ್ತ್ವಕ್ಕೆ ವಿರುದ್ಧವಾಗಿದ್ದ ಬೌದ್ಧರ ಆಕ್ಷೇಪಣೆಗಳನ್ನು ಎದುರಿಸಿದ. ಈತನ ಅನಂತರ ಬಂದ ಅಭಿನಗುಪ್ತ (960) ಸರ್ವಂಕಷ ಪ್ರಜ್ಞೆಯುಳ್ಳಾತ ; ಆಧ್ಯಾತ್ಮಿಕ ವಿಕಾಸವನ್ನು ಪಡೆದವ. ಈತ ಶೈವಾಗಮಗಳ ಮೇಲೆ ವ್ಯಾಖ್ಯಾನ ಬರೆದು ಸ್ವತಂತ್ರವಾಗಿ ತಂತ್ರಾಲೋಕವೆಂಬ ಉದ್ಗ್ರಂಥಗಳನ್ನು ರಚಿಸಿ ಅವುಗಳಲ್ಲಿ ಆಗಮಿಕವಾದ ಅನುಭವ, ದೈವವಾದ, ಸಂಸ್ಕಾರಗಳು, ಮಾನಸಿಕ ಮತ್ತು ದಾರ್ಶನಿಕ ವಿಷಯಗಳನ್ನು ವಿಶದೀಕರಿಸಿರುತ್ತಾನೆ. ಈತ ಆನಂದವರ್ಧನನ ಅಲಂಕಾರಶಾಸ್ತ್ರಕ್ಕೆ ಲೋಚನ ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಭರತನ ನಾಟ್ಯಶಾಸ್ತ್ರದ ಮೇಲೆ ಅಭಿನವಭಾರತಿ ಎಂಬ ವ್ಯಾಖ್ಯೆಯನ್ನು ಬರೆದು ನಾಟ್ಯದಲ್ಲಿ ರಸದ ಸ್ವರೂಪವೇನೆಂಬುದನ್ನು ನಿರೂಪಿಸಿದ್ದಾನೆ; ಕೊನೆಯದಾಗಿ ಉತ್ಪಲಾಚಾರ್ಯರ ಈಶ್ವರಪ್ರತ್ಯಭಿಜ್ಞಾಕಾರಿಕೆಗೆ ವ್ಯಾಖ್ಯಾನವನ್ನೂ ಟೀಕೆಯನ್ನೂ ಬರೆದಿದ್ದಾನೆ. ಈತನ ಶಿಷ್ಯನಾದ ಕ್ಷೇಮರಾಜ ಪ್ರತ್ಯಾಭಿಜ್ಞಾಹೃದಯ ಶಿವಸೂತ್ರವಿಮರ್ಶಿನಿ ಮೊದಲಾದ ಅನೇಕ ಗ್ರಂಥಗಳನ್ನು ಬರೆದು ಕಾಶ್ಮೀರ ಶೈವತತ್ತ್ವಗಳನ್ನು ವಿಶೇಷವಾಗಿ ಪ್ರಚಾರ ಮಾಡಿದ್ದಾನೆ.

**ಮಹೇಶ್ವರ–ವಿಶ್ವಚಿತ್ತ** : ಕಾಶ್ಮೀರ ಶೈವ ಸಿದ್ಧಾಂತದಲ್ಲಿ ವಿಶ್ವದ ಪ್ರವೃತ್ತಿಯನ್ನು ವಿಶದವಾಗಿ ಅರಿಯಲು ಎರಡು ಮುಖ್ಯ ವಿಷಯಗಳನ್ನು ತಿಳಿಯಬೇಕು. ಮೊದಲನೆಯದು ವಿಶ್ವಚಿತ್ತ; ಎರಡನೆಯದು ವ್ಯಕ್ತಿಯ ಮನಸ್ಸು. ವ್ಯಕ್ತಿಯ ಮನಸ್ಸು ವಿಶ್ವಚಿತ್ತದಿಂದ ಬೇರೆಯಲ್ಲ. ಅದು ಹೊರಗಿನ ಪದಾರ್ಥಗಳನ್ನು ಗ್ರಹಿಸುತ್ತದೆ; ಹಿಂದಿನ ಅನುಭವಗಳಿಂದುಂಟಾದ ಸಂಸ್ಕಾರಗಳ ಮೂಲಕ ಅವನ್ನು ತನ್ನಲ್ಲಿಟ್ಟುಕೊಳ್ಳುತ್ತದೆ. ಹಾಗೆಯೇ ಹಿಂದಿನ ವೃತ್ತಿಗಳಿಗೂ ಹೊರಗಿನಿಂದ ಬರುವ ವೃತ್ತಿಗಳಿಗೂ ಅದು ಆಶ್ರಯವಾಗಿದೆ. ಪ್ರತ್ಯಕ್ಷವಾಗಿ ನಾವು ಒಂದು ಪದಾರ್ಥವನ್ನು ಗ್ರಹಿಸುವುದೂ ಹಿಂದಿನ ವೃತ್ತಿಗಳನ್ನು ನೆನೆಯುವುದೂ ಮುಂದೆ ಬರುವುವುಗಳನ್ನು ಊಹಿಸುವುದೂ ಈ ಆಶ್ರಯದಲ್ಲಿಯೇ. ಹೊರಗಿನಿಂದ ಬರುವ ಪ್ರೇರಣಾತ್ಮಕವಾದ ಎಲ್ಲ ವೃತ್ತಿಗಳೂ ನಿರ್ಮಲವಾದ ಕನ್ನಡಿಯ ಮೇಲೆ ಇಟ್ಟ ಪದಾರ್ಥದಂತೆ ವಿಶದವಾಗಿ ತಿಳಿಯುತ್ತವೆ. ಕನ್ನಡಿಯ ದುಷ್ಟಾಂತದಲ್ಲಿ ನಾವು ಒಂದು ಅಂಶವನ್ನು ಗಮನಿಸಬೇಕು: ಕನ್ನಡಿ ಒಂದು ಪದಾರ್ಥವನ್ನು ಪ್ರತಿಬಿಂಬಿಸಿದರೆ ತನ್ನ ಅಸ್ತಿತ್ವವನ್ನೂ ನೈರ್ಮಲ್ಯವನ್ನೂ ಕಳೆದುಕೊಳ್ಳದೆ ಆ ಪದಾರ್ಥವನ್ನು ಸ್ವಚ್ಛವಾಗಿ ತೋರಿಸುತ್ತದೆ. ಆದರೆ ಕನ್ನಡಿ ಪ್ರತಿಬಿಂಬಿಸುವುದಕ್ಕೆ ಹೊರಗಿನ ಬೆಳಕು ಬೇಕು. ಮನಸ್ಸು ಸ್ವಯಂ ಪ್ರಕಾಶವಾಗಿರುವುದರಿಂದ ಹೊರಗಿನ ಬೆಳಕಿನ ಸಹಾಯವಿಲ್ಲದೆ ವೃತ್ತಿಗಳನ್ನು ಗ್ರಹಿಸಬಲ್ಲುದು, ಪ್ರಕಾಶಪಡಿಸಬಲ್ಲುದು, ಆ ವೃತ್ತಿಗಳಿಂದ ಬೇರೆಯಾಗಿರುವಂತೆಯೂ ಇರಬಲ್ಲುದು. ಆದುದರಿಂದ ಚಿತ್ತವೃತ್ತಿಯ ಈ ಗುಣವನ್ನು ಪ್ರಕಾಶ ಎನ್ನುತ್ತೇವೆ. ಇಷ್ಟೇ ಅಲ್ಲದೆ ಮನಸ್ಸಿಗೆ ಇನ್ನೊಂದು ಗುಣವುಂಟು. ಅದು ತನ್ನ ಅಸ್ತಿತ್ತ್ವವನ್ನೂ ನೈರ್ಮಲ್ಯವನ್ನೂ ತಿಳಿಯುವ ಸಾಮರ್ಥ್ಯವುಳ್ಳದ್ದಾಗಿದೆ. ಅದು ಸ್ವತಂತ್ರವಾಗಿ ಬೇರೆ ಬೇರೆ ವೃತ್ತಿಗಳನ್ನು ಸಮೀಕರಣ ಮಾಡಬಲ್ಲದು. ಹಾಗೆಯೇ ಬಂದ ವೃತ್ತಿಗಳನ್ನು ತನ್ನಲ್ಲಿ ಉಳಿಸಿಕೊಳ್ಳಬಲ್ಲದು. ಹೀಗೆ ನಿಲ್ಲಿಸಿಕೊಂಡಿರುವ ವೃತ್ತಿಗಳನ್ನು ಸಮಯ ಬಂದಾಗ ನೆನೆದು ಹಿಂದಿನ ಸ್ಥಿತಿಯನ್ನು ತಂದುಕೊಳ್ಳಬಲ್ಲದು. ವೃತ್ತಿಗಳನ್ನು ಸೇರಿಸಿ ಹೊಸದಾಗಿ ಒಂದು ಸೃಷ್ಟಿಯನ್ನದು ಮಾಡುತ್ತದೆ. ಮನಸ್ಸಿನ ಈ ಗುಣವನ್ನು ಪಾರಿಭಾಷಿಕವಾಗಿ ವಿಮರ್ಶೆ ಎನ್ನುತ್ತೇವೆ. ಇದು ಮಾನವನ ಮನಸ್ಸಿನ ವಿಶಿಷ್ಟ ಸ್ವರೂಪ. ಅವನ ಮನಸ್ಸು ಸ್ವಯಂಪ್ರಕಾಶವಾಗಿಯೂ ಚೈತನ್ಯಸ್ವರೂಪವಾಗಿಯೂ ಚೈತನ್ಯಾಶ್ರಯವಾಗಿಯೂ ಇದೆ.

ಕಾಶ್ಮೀರಶೈವ ಸಿದ್ಧಾಂತದಂತೆ ವಿಮರ್ಶೆ ಚೈತನ್ಯಸ್ವರೂಪವೂ ಚೈತನ್ಯರೂಪವೂ ಚೈತನ್ಯಾಶ್ರಯವೂ ಆಗಿದೆ. ಅದ್ವೈತ ವೇದಾಂತಿಗಳು ಹೇಳುವಂತೆ ಬ್ರಹ್ಮ ಶಾಂತ, ನಿಷ್ಕ್ರಿಯ ಮತ್ತು ನಿರ್ಗುಣ. ಹೀಗಿರುವುದರಿಂದ ಅಲ್ಲಿ ಯಾವ ಕ್ರಿಯೆಗೂ ವಿಮರ್ಶೆಗೂ ಅವಕಾಶವಿಲ್ಲ. ಬ್ರಹ್ಮ ಚಿನ್ಮಾತ್ರ. ಚೈತನ್ಯಕ್ಕಾಶ್ರಯವಾದರೆ ಕ್ರಿಯಾತ್ಮಕವಾಗುತ್ತದೆ. ಕ್ರಿಯಾತ್ಮಕವಾದರೆ ಶಾಂತಿಗೆ ಭಂಗ ಬರುತ್ತದೆ. ಬ್ರಹ್ಮ ನಿರ್ವಿಕಲ್ಪನಾಗಿರುವುದರಿಂದ ಚೈತನ್ಯಾಶ್ರಯನಲ್ಲ. ಶಿವಾದ್ವೈತ ಸಿದ್ಧಾಂತದಲ್ಲಾದರೋ ಪರತತ್ತ್ವ ಸ್ವಯಂ ಪ್ರಕಾಶ, ಚೈತನ್ಯಸ್ವರೂಪ ಮತ್ತು ಚೈತನ್ಯಾಶ್ರಯವಾಗಿದೆ. ಇಲ್ಲಿ ಅದ್ವೈತ ವೇದಾಂತಿಗಳಿಗೂ ಕಾಶ್ಮೀರ ಶೈವದವರಿಗೂ ಇರುವ ಭೇದವನ್ನು ಕಾಣಬಹುದು.

ವಿಶ್ವಚಿತ್ತ ಕ್ರಿಯಾತ್ಮಕವಾಗಿ ವಿಶ್ವದ ಎಲ್ಲ ವಿಷಯಗಳನ್ನು ಮುಂದುವರಿಸುತ್ತದೆ. ಅಧ್ಯಾತ್ಮ ದೃಷ್ಟಿಯಿಂದ ನೋಡಿದರೆ ಈ ವಿಶ್ವಚಿತ್ತ ಸ್ವಯಂಚೈತನ್ಯರೂಪಿಯಾಗಿ ಪರತತ್ತ್ವದ ಇಚ್ಛಾಶಕ್ತಿಯೇ ಆಗಿದೆ. ಇದು ಸ್ವತಂತ್ರವಾದ ಭಾವನಾ ಮತ್ತು ಕ್ರಿಯೆಯಿಂದ ಕೂಡಿದೆ. ಇದನ್ನೇ ಪಾರಿಭಾಷಿಕವಾಗಿ ಮಹೇಶ್ವರ ಎನ್ನುವುದು.

**ಪ್ರತ್ಯಾಭಿಜ್ಞಾ** : ಪರಶಿವ ವಿಶ್ವಸೃಷ್ಟಿಯನ್ನು ಮಾಡುವಾಗ ತನ್ನಲ್ಲಿರುವ ಅನಂತ ಶಕ್ತಿಗಳನ್ನು ಪ್ರಸಾರ ಮಾಡುತ್ತಾನೆ. ಆ ಶಕ್ತಿಗಳ ಪ್ರಸಾರ ಮಾಡುತ್ತಾನೆ. ಆ ಶಕ್ತಿಗಳ ಪ್ರಸಾರವೇ ಈ ವಿಶ್ವ. ಪರಶಿವನಿಗೆ ಜ್ಞಾನಶಕ್ತಿ ಕ್ರಿಯಾಶಕ್ತಿಗಳಿಗಿರುವಂತೆಯೇ ಸ್ಮೃತಿಶಕ್ತಿ ಅಪೋಹನ ಶಕ್ತಿಗಳೂ ಇವೆ. ಆ ಅಪೋಹನ ಶಕ್ತಿಯ ವಿಲಾಸವೇ ಈ ಸ್ಥೂಲ ಪ್ರಪಂಚ ಮತ್ತು ಜೀವ ಭಾವ. ಸರ್ವಶಕ್ತನಾಶದ ಪರಶಿವ ಸ್ಥೂಲ ಪ್ರಪಂಚವನ್ನೂ ಜೀವಭಾವವನ್ನೂ ತನ್ನ ಶಕ್ತಿ ಸಂಕೋಚದ (ಮಾಯಾ ವಿಮೋಚನೀಶಕ್ತಿ) ಮೂಲಕ ಹೊರಹೊಮ್ಮಿಸುತ್ತಾನೆ. ಮರಳಿ ತನ್ನ ದೃಕ್ಕ್ರಿಯಾಶಕ್ತಿಗಳ ಆವಿಷ್ಕರಣದಿಂದಲೇ ಸಹಜಾವಸ್ಥೆಯನ್ನು ಪಡೆಯುತ್ತಾನೆ. ಇದನ್ನು ಲೀಲೆ, ಮಾಯೆ, ಆಭಾಸ ಎನ್ನುವ ಪದಗಳಿಂದ ಬೇರೆ ಬೇರೆ ದೃಷ್ಟಿಯಿಂದ ವಿವೇಚಿಸುತ್ತಾರೆ. ಅಪೋಹನ ಶಕ್ತಿಯಿಂದುಂಟಾಗಿರುವ ಸಂಕೋಚವನ್ನು ತನ್ನ ಶಕ್ತಿಸ್ಫುರಣದಿಂದಲೇ ಗುರುತಿಸಿ ತನ್ನ ಸಹಜಾವಸ್ಥೆಯನ್ನು ಪಡೆಯುವಿಕೆಯೇ ಪ್ರತ್ಯಭಿಜ್ಞಾ ಎನ್ನಿಸುವುದು.

ನಚೇದಂತಃ ಕೃತಾನಂತೋ ವಿಶ್ವರೂಪೋ ಮಹೇಶ್ವರಃ
ಸ್ವಾದೇಕಃ ಚಿದ್ವಪುಃ ಜ್ಞಾನಸ್ಮೃತ್ಯಪೋಹನ ಶಕ್ತಿಮಾನ್
ಕಿಂತು ಮೋಹವಶಾದಸ್ಮಿನ್ ದೃಷ್ಟೇಪ್ಯನುಪಲಕ್ಷಿತೆ
ಶಕ್ತ್ಯಾವಿಷ್ಕರನೇಯಂ ಪ್ರತ್ಯಭಿಜ್ಞೋಪದಿಶ್ಯತೆ

(ಈಶ್ವರ ಪ್ರತ್ಯಾಭಿಜ್ಞಾ)

**ಪರತತ್ತ್ವ ವಿವೇಚನೆ:** ಪರಶಿವನನ್ನು ಪರಾಸಂವಿತ್ ಎಂದು ಕರೆಯುತ್ತಾರೆ. ಪರಶಿವನೇ ಮುಖ್ಯತತ್ತ್ವ. ಆತ ಸರ್ವಸ್ವತಂತ್ರ.. ಸರ್ವಕ್ಕೂ ಕಾರಣ. ತನ್ನ ಶಕ್ತಿಯ ಪ್ರಸಾರದಿಂದ

ಎಲ್ಲವನ್ನೂ ಸೃಷ್ಟಿಸುವವ. ಚಿದಾನಂದಘನ ತನ್ನ ಪ್ರಶಾಂತ ಸ್ಥಿತಿಯಲ್ಲಿ ವಿಶ್ವೋತ್ತೀರ್ಣ ಅಥವಾ ವಿಶ್ವಾತೀತನೆನಿಸಿಕೊಳ್ಳುತ್ತಾನೆ. ಹಾಗೆಯೇ ಚರಾಚರಾತ್ಮಕ ಪ್ರಪಂಚಕ್ಕೆ ಸರ್ವವಿಧಕಾರಣನಾಗಿ ವಿಶ್ವಾತ್ಮಕ ಅಥವಾ ವಿಶ್ವಮಯನಾಗಿದ್ದಾನೆ. ಆತ ಪ್ರಕಾಶ ವಿಮರ್ಶಮಯ. ಪ್ರಕಾಶವೆಂದರೆ ಭೇದವನ್ನಂಗೀಕರಿಸಿ ಪದಾರ್ಥರೂಪವಾಗಿ ವ್ಯಕ್ತವಾಗುವ ಶಕ್ತಿಪ್ರಸಾರ. ವಿಮರ್ಶವೆಂದರೆ ಭೇದಾಭೇದಗಳನ್ನು ತನ್ನಲ್ಲಿಯೇ ಸ್ಫುರಿಸಿಕೊಳ್ಳುವ ಸ್ವರೂಪ ಪರಾಮರ್ಶ. ನಿತ್ಯನಾದ ಪರಶಿವ ಸತ್, ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳಿಂದ ಕೂಡಿರುವನು. ಇವುಗಳಲ್ಲಿ ಸತ್ ಚಿತ್ ಆನಂದ ಇವುಗಳು ಸ್ವರೂಪಕ್ಕೆ ಸಂಬಂಧಪಟ್ಟವು; ಇಚ್ಛಾ ಜ್ಞಾನಕ್ರಿಯಾ ಶಕ್ತಿಗಳಿಂದ ಸೃಷ್ಟಿ ಸ್ಥಿತಿ ಪ್ರಳಯಗಳು ನಡೆಯುತ್ತವೆ. ಆ ಪರಶಿವನು ಸರ್ವಾಧಾರನಾಗಿಯೂ ಸರ್ವೇಶ್ವರನಾಗಿಯೂ ಸರ್ವವ್ಯಾಪಿಯಾಗಿಯೂ ವಿರಾಜಿಸುತ್ತಾನೆ.

ಪರಶಿವ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹ ಎಂಬ ಪಂಚಕೃತ್ಯಗಳನ್ನು ನಡೆಸುತ್ತಾನೆ. ತಿರೋಧಾನವೆಂದರೆ ತನ್ನ ನಿಜಸ್ವರೂಪವನ್ನು ಮರೆಯಿಸುವುದು. ಅನುಗ್ರಹವೆಂದರೆ ಈಶ್ವರನ ಕೃಪೆಯಿಂದ ಸ್ವರೂಪ ಜ್ಞಾನ ಪ್ರಾಪ್ತಿ. ಸರ್ವಶಕ್ತನಾದ ಶಿವ ತನ್ನಲ್ಲಿಯೇ ಸೂಕ್ಷ್ಮವಾಗಿ ಅಡಗಿದ್ದ ವಿಶ್ವವನ್ನು ಹೊರಹೊಮ್ಮಿಸುತ್ತಾನೆ. ಪರಶಿವನಿಗೆ ಜ್ಞಾನಶಕ್ತಿ ಕ್ರಿಯಾಶಕ್ತಿಗಳಿರುವಂತೆ ಸ್ಮೃತಿ ಆಪೋಹನ ಶಕ್ತಿಗಳೂ ಇವೆ. ಈ ಆಪೋಹನ ಶಕ್ತಿಯಿಂದ ಗ್ರಾಹ್ಯ ಗ್ರಾಹಕಗಳಾಗಿ ಆತ ವ್ಯಕ್ತಪಡಿಸಿಕೊಳ್ಳುತ್ತಾನೆ. ಗ್ರಾಹ್ಯವಾದದ್ದು ವಿಶ್ವ. ಗ್ರಾಹಕ ಜೀವಾತ್ಮ. ಪರಶಿವ ಶಕ್ತಿಸಂಕೋಚದಿಂದ (ಮಾಯಾವಿಮೋಹಿನೀಶಕ್ತಿ) ಜೀವಭಾವವನ್ನು ತಾಳುತ್ತಾನೆ. ಹೀಗೆ ಸಂಕೋಚನಗೋಳಿಸುವುವು ಪಂಚ ಕುಂಚುಕಗಳು ಮತ್ತು ಮೂರು ಮೂಲಗಳು. ಮರಳಿ ದೃಕ್ಕ್ರಿಯಾಶಕ್ತಿಗಳ ಆವಿಷ್ಕರಣದಿಂದ ಸಂಕೋಚನದಿಂದ ಬಿಡುಗಡೆ ಹೊಂದಿ ಸಹಜಾವಸ್ಥೆಯನ್ನು ಪಡೆಯುತ್ತಾನೆ. ಈ ರೀತಿ ಆ ಶಿವನೇ ನಾನು ಎಂಬ ಗುರಿಯನ್ನು ಸಾಧಿಸಲು ಸಹಾಯಮಾಡುವ ದರ್ಶನ ಪ್ರತ್ಯಭಿಜ್ಞಾ ದರ್ಶನ.

ವಿಶ್ವೋತ್ತೀರ್ಣನಾದ ಪರಶಿವ ತನ್ನ ಲೀಲೆಯಿಂದ ವಿಶ್ವಾತ್ಮಕನಾಗಿ ಪರಿಣಮಿಸುವಾಗ 36 ತತ್ತ್ವಗಳ ರೂಪವನ್ನು ತಾಳುವನು. ಅಂದರೆ ಈ ವಿಶ್ವ 36 ತತ್ತ್ವಗಳಿಂದ ಕೂಡಿದೆ. ಇದರಿಂದ ಸೃಷ್ಟಿಯ ಎಲ್ಲ ಭೇದಗಳೂ ಸತ್ಯವಾದವುಗಳಾಗಿವೆ. ಈ ತತ್ತ್ವಗಳು ಶುದ್ಧಾಧ್ವಗಳೆಂದೂ ಅಶುದ್ಧಾಧ್ವಗಳೆಂದೂ ಎರಡು ಬಗೆಯಾಗಿವೆ. ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧ ವಿದ್ಯಾ–ಇವು ಶುದ್ಧಾಧ್ವಗಳು. ಇವುಗಳಲ್ಲಿ ಶಿವತತ್ತ್ವ ಶುದ್ಧ ಚಿದ್ರೂಪವಾದದ್ದು. ಶಕ್ತಿತತ್ತ್ವದಲ್ಲಿ ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳ ಸ್ಫುರಣ. ಇನ್ನುಳಿದ ಸದಾಶಿವ, ಈಶ್ವರ, ಶುದ್ಧವಿದ್ಯಾತತ್ತ್ವಗಳಲ್ಲಿ ಗ್ರಾಹ್ಯ ಗ್ರಾಹಕಗಳ (ಅಹಂ ಇದಂ) ನಿಷ್ಪತ್ತಿ. ಅಶುದ್ಧಾಧ್ವಗಳಲ್ಲಿ ಮೊದಲನೆಯ ತತ್ತ್ವ ಮಾಯಾ. ಇದು ಕೆಳಗಿನ 20 ತತ್ತ್ವಗಳನ್ನೊಳಗೊಂಡಿರುತ್ತದೆ. ಇಲ್ಲಿ ಮಾಯೆಯೆಂಬುದಕ್ಕೆ ಮಿಥ್ಯೆಯೆಂಬರ್ಥವಲ್ಲ. ಮಾಯೆ ಎಂಬುದು ಪರಮೇಶ್ವರನ ಶಕ್ತಿ. ಇದು ಭೇದಜ್ಞಾನವನ್ನು ಹುಟ್ಟಿಸುತ್ತದೆ. ಇದರ ಪ್ರಭಾವದಿಂದಲೇ ಮೊದಲು ಸ್ವರೂಪಾಭಿನ್ನವಾಗಿದ್ದ ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು ಸಂಕೋಚವಾಗಿ ನಿಯತಿ, ಕಾಲ, ರಾಗ, ವಿದ್ಯಾ, ಕಲಾರೂಪದಿಂದ ಪಂಚಕಂಚುಕಗಳಾಗಿ ಪರಿಣಮಿಸುತ್ತವೆ. ಮಿಕ್ಕ 25 ತತ್ತ್ವಗಳು ಸಾಂಖ್ಯರು ಅಂಗೀಕರಿಸಿರುವವುಗಳೇ ಆಗಿವೆ. ಪುರುಷ ಈ ಕೆಳಗಿನ ವಿಭಾಗದಲ್ಲಿ ಮಾಯೆ ಮತ್ತು ಪಂಚಕಂಚುಕಗಳಿಂದ ಕೂಡಿದವನಾಗಿರುತ್ತಾನೆ. ಇವನಿಗೆ ಸತ್ತ್ವ ರಜಸ್ಸು ತಪಸ್ಸುಗಳ ಪ್ರಭಾವದಿಂದ ಕೂಡಿದ ಇಂದ್ರಿಯಗಳನ್ನು ಮತ್ತು ಅಂತಃಕರಣಗಳನ್ನು ಒದಗಿಸುವುದೇ ಪ್ರಕೃತಿ. ಪ್ರಕೃತಿಯಿಂದ ಕೆಳಗೆ ಮಹತ್ತು ಮತ್ತು ಅಂತಃಕರಣಗಳನ್ನು ಒದಗಿಸುವುದೇ ಪ್ರಕೃತಿ. ಪ್ರಕೃತಿಯಿಂದ ಕೆಳಗೆ ಮಹತ್ತು ಮತ್ತು ಅಹಂಕಾರ. ಅಧ್ಯವಸಾಯಕ್ಕೆ ಕಾರಣವಾಗಿರುವುದು ಮಹತ್ತು. ಅಹಂಕಾರ ತತ್ತ್ವದಿಂದ ಹುಟ್ಟುವ ತತ್ತ್ವಗಳೆಂದರೆ ಮನಸ್ಸು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಪಂಚತನ್ಮಾತ್ರಗಳು ಮತ್ತು ಪಂಚಭೂತಗಳು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು, ಪಂಚತನ್ಮಾತ್ರಗಳು ಮಾತ್ರ ಪಂಚಭೂತಗಳು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಮೂಲಕ ಉಂಟಾಗುವ ಎಲ್ಲ ಜ್ಞಾನಗಳಿಗೂ ಆಕರವಾಗಿರುವುದು ಮನಸ್ಸು. ಮಾಯೆ ಜೀವನಜ್ಞಾನ ಸಂಕೋಚಕ್ಕೆ ಸಾಕ್ಷಾತ್ಕಾರಣವಾಗಿಯೂ ದೇಹ ಇಂದ್ರಿಯಾದಿಗಳ ಮೂಲಕ ಪರಂಪರಾಕಾರಣವಾಗಿಯೂ ಇದೆ. ಈ ತತ್ತ್ವವಿಮರ್ಶನೆ ವ್ಯವಹಾರದಲ್ಲಿ ಶಾಂತಿಯನ್ನೂ ಆಂತರಂಗಿಕವಾಗಿ ಜ್ಞಾನವಿಕಾಸವನ್ನೂ ಉಂಟುಮಾಡುತ್ತದೆ.

**ಸಪ್ತಪ್ರಮಾತೃಗಳು:** ಈ ವಿಶ್ವವೆಲ್ಲ ಶಿವಾಭಿನ್ನವಾದದ್ದು. ಗ್ರಾಹ್ಯವರ್ಗವಾದ ವಿಶ್ವವನ್ನು 36 ತತ್ತ್ವಗಳಾಗಿ ವಿಭಾಗ ಮಾಡಿರುವ ಹಾಗೆ ಗ್ರಾಹಕವಾದ ಜೀವನನ್ನು ಸಪ್ತಪ್ರಮಾತೃಗಳೆಂದು ವಿಭಾಗಿಸಿರುತ್ತಾರೆ. ಪರಶಿವ ತನ್ನ ಅಖ್ಯಾತಿಯಿಂದ ಬದ್ಧಜೀವದಶೆಯನ್ನು ಪಡೆಯುವಾಗ ಶಿವ, ಮಂತ್ರ–ಮಹೇಶ್ವರ, ಮಂತ್ರೇಶ್ವರ ಮಂತ್ರ ವಿಜ್ಞಾನಾಕಲ, ಪ್ರಳಯಾಕಲ, ಸಕಲ ಎಂಬ ಏಳು ಅಂತಸ್ತುಗಳಾಗಿ ಅಭಿವ್ಯಕ್ತನಾಗಿದ್ದಾನೆ. ಇದು ಅವರೋಹಣಕ್ರಮ. ಬದ್ಧಜೀವ ಶಿವತ್ವವನ್ನು ಪಡೆಯುವುದಕ್ಕೆ ಆರೋಹಣ ಕ್ರಮದಿಂದ ಸ್ವಸ್ವರೂಪಾಭಿವ್ಯಕ್ತಿಯನ್ನು ಹೊಂದಬೇಕು. ಈ ಅವತರಣ ಕ್ರಮದಲ್ಲಿ ಮೊದಲನೆಯ ಪ್ರಮಾತೃ ಶಿವತತ್ತ್ವ. ಇದು ಪರಿಪೂರ್ಣ. ಇಲ್ಲಿ ಯಾವ ಮಲಗಳೂ ಇಲ್ಲ. ಎರಡನೆಯದಾದ ಮಂತ್ರ–ಮಹೇಶ್ವರ ದೆಸೆಯಲ್ಲಿ ಗ್ರಾಹ್ಯಗ್ರಾಹಕಗಳು ಅಸ್ಫುಟವಾಗಿರುವುವು. ಇಲ್ಲಿ ಸ್ವಾತಂತ್ರ್ಯವನ್ನು ಮರೆಯಿಸುವ ಆಣವಮಲ ಆರಂಭವಾಗುತ್ತದೆ. ಮೂರನೆಯ ಪ್ರಮಾತೃ ಮಂತ್ರೇಶ್ವರ. ಇಲ್ಲಿ ನಾನು, ಇದು (ಅಹಂ, ಇದಂ)–ಎಂಬ ಭೇದಭಾವ ರೂಪುಗೊಳ್ಳುತ್ತದೆ. ನಾಲ್ಕನೆಯ ಪ್ರಮಾತೃ ಮಂತ್ರ. ಇಲ್ಲಿ ಮೇಲಿನ ಎರಡಂಶಗಳಲ್ಲಿ ಇದು ಪ್ರಧಾನವಾಗಿರುತ್ತದೆ. ಇಲ್ಲಿಗೆ ಗ್ರಾಹ್ಯಗ್ರಾಹಕ ಭಾವ ಪರಿಪೂರ್ಣವಾಗಿರುತ್ತದೆ. ಐದನೆಯ ಪ್ರಮಾತೃ ವಿಜ್ಞಾನಾಕಲ. ಇಲ್ಲಿ ಜೀವಾತ್ಮರು ಪರಸ್ಪರ ಭಿನ್ನರೆಂದೂ ತಮ್ಮ ಸ್ವರೂಪಶಕ್ತಿ ಸಂಕೋಚವನ್ನು ಪಡೆದಿರುವುದೆಂದೂ ಅನುಭವಕ್ಕೆ ಬರುತ್ತದೆ. ಆರನೆಯ ಪ್ರಮಾತೃ ಪ್ರಳಯಾಕಲ. ಈ ಸ್ಥಿತಿಯಲ್ಲಿ ಜೀವಾತ್ಮ ಪಂಚಕಂಚುಕಗಳಿಗೆ ಒಳಗಾಗಿ ನಿಜಸ್ವರೂಪವನ್ನು ಮರೆತಿರುತ್ತಾನೆ. ಏಳನೆಯ ಪ್ರಮಾತೃ ಸಕಲ. ಲೋಕದಲ್ಲಿ ಬದುಕಿರುವ ಪ್ರಾಣಿಗಳೆಲ್ಲ ಸಕಲರು. ಈ ಸಪ್ತ ಪ್ರಮಾತೃ ಆಣವ ಮಾಯೀಯ ಕರ್ಮ ಮಲಗಳಿಂದಲೂ ಪ್ರಳಯಾಕಾಲ ಪ್ರಮಾತೃ ಆಣವ ಮಯೀಯ ಮಲಗಳಿಂದಲೂ ವಿಜ್ಞಾನಾಕಲ ಪ್ರಮಾತೃ ಆಣವ ಮಲದಿಂದಲೂ ಕೂಡಿರುವರು. ಉಳಿದ ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರರು ಸೂಕ್ಷ್ಮ ರೂಪದಿಂದ ಕೇವಲ ಆಣವಮಲ ಒಂದರಿಂದಲೇ ಇರುವರು. ಯಾವ ಮಾನವರಿಗೆ ಶಾಸ್ತ್ರಾಭ್ಯಾಸದಿಂದಲೂ ಆಧ್ಯಾತ್ಮವಿಕಾಸವೇರ್ಪಡುವುದೋ ಅವರಿಗೆ ಈ ಸಪ್ತ ಪ್ರಮಾತೃಗಳ ಸ್ಥಿತಿಗಳು ವಿಶದವಾಗಿ ಗೋಚರಿಸುತ್ತವೆ. ಅವರವರ ಈ ಸಪ್ತ ಪ್ರಮಾತೃಗಳ ಸ್ಥಿತಿಗಳು ವಿಶದವಾಗಿ ಗೋಚರಿಸುತ್ತವೆ. ಅವರವರ ಪರಿಪಾಕಕ್ಕನುಸಾರವಾಗಿ ಜೀವಾತ್ಮ ಏಳು ಮೆಟ್ಟಲುಗಳನ್ನು ದಾಟಿ ಪರಶಿವನೇ ಆಗುತ್ತಾನೆ.

ಜೀವಾತ್ಮ ತಾನು ಸ್ವತಂತ್ರನಾಗಿ ಚಿದ್ರೂಪಿಯಾಗಿದ್ದರೂ ಮೂರು ಮಲಗಳಿಂದಲೂ ಪಂಚಕಂಚುಕಗಳಿಂದಲೂ ಬಂಧಿಸಲ್ಪಟ್ಟವನಾಗಿ ಅಖ್ಯಾತಿಯಿಂದ ತನ್ನ ಸ್ವರೂಪವನ್ನು ಮರೆತಿದ್ದಾನೆ. ಮೊದಲನೆಯ ಆಣವ ಮಲದಿಂದ ತನ್ನ ಸ್ವಾತಂತ್ರ್ಯವನ್ನು ಮರೆತಿದ್ದಾನೆ. ಎರಡನೆಯ ಮಾಯೀಯ ಮಲದಿಂದ ಇವನ ಅನಂತಶಕ್ತಿಗಳು ಸಂಕುಚಿತವಾಗಿವೆ. ಮೂರನೆಯ ಕಾರ್ಮ ಮಲದಿಂದ ಶುಭಾ ಶುಭ ಕರ್ಮಗಳನ್ನಾಚರಿಸುತ್ತಾನೆ. ಇವುಗಳಿಂದ ಉಚ್ಚನೀಚ ಜನ್ಮಗಳನ್ನು ಪಡೆಯುತ್ತಾನೆ. ಹೀಗೆ ಶಕ್ತಿಸಂಕೋಚದಿಂದ ಬಂಧನಕ್ಕೆ ಒಳಗಾಗಿದ್ದಾನೆ. ಮರಳಿ ಶಕ್ತಿವಿಕಾಸವಾದರೆ ಸ್ವಸ್ವರೂಪಾವಿರ್ಭಾವವಾಗುತ್ತದೆ (ಶಕ್ತಿದರಿದ್ರಃ ಸಂಸಾರಿ ಶಕ್ತಿವಿಕಾಸೇ ಶಿವಃ). ಜೀವನಲ್ಲಿ ಶಿವತ್ವ ಸಿದ್ಧವಾಗಬೇಕಾದರೆ ಸಂಕೋಚ ನಿವೃತ್ತಿ ಮಾಡುವ ಸಾಧನಾಭ್ಯಾಸಗಳನ್ನು ಮಾಡಬೇಕಾಗುತ್ತದೆ. ಈ ಸಂಪ್ರದಾಯದಲ್ಲಿ ಬಂಧನದಿಂದ ಬಿಡುಗಡೆ ಹೊಂದುವುದಕ್ಕೆ ಮುಖ್ಯವಾಗಿ ನಾಲ್ಕು ಉಪಾಯಗಳನ್ನು ಸೂಚಿಸಿರುತ್ತಾರೆ.

**ಉಪಾಯಗಳು:** ಯಾವ ಸಾಧಕನಿಗೆ ತೀವ್ರ ಪರಿಪಾಕ ಉಂಟಾಗಿರುತ್ತದೆಯೋ ಅವನಿಗೆ ಗುರು 'ನೀನು ಶಿವನೇ ಆಗಿದ್ದೀಯೆ' ಎಂಬ ಉಪದೇಶ ಮಾಡಿದರೆ ಸಾಕು. ಒಡನೆಯೇ ಆತ ತನ್ನ ಸ್ವರೂಪವನ್ನು ಗುರುತಿಸುತ್ತಾನೆ. ಅನಂತರ ಆತ ಬದುಕಿದ್ದರೂ ಜೀವನ್ಮುಕ್ತನಾಗಿರುತ್ತಾನೆ. ಇದಕ್ಕೆ ಅನುಪಾಯವೆಂದು ಹೆಸರು. ಇಷ್ಟು ಪರಿಪಾಕವಿಲ್ಲದವರು ಎರಡನೆಯ ಅಂತಸ್ತಿನವರು. ಇವರಿಗೆ ಉಪದೇಶ ಮತ್ತು ಸಾಧನಾಭ್ಯಾಸಗಳು ಬೇಕು. ಇವರು ತಮ್ಮ ಭಾವನಾಬಲದಿಂದ 'ನಾನೇ ಶಿವ, ವಿಶ್ವವೆಲ್ಲ ನನ್ನಿಂದಲೇ ಹೊರಹೊಮ್ಮಿದೆ. ಈ ವಿಶ್ವ ನನ್ನಿಂದ ಬೇರೆಯಲ್ಲ' ಎಂಬ ಎಡೆಬಿಡದ ಭಾವನೆಯಿಂದ ಗ್ರಾಹ್ಯ ಗ್ರಾಹಕ ವಿಷಯಗಳಲ್ಲಿ ಅಭೇದ ವ್ಯಾಪ್ತಿಯನ್ನು ಹೊಂದಿ ಸಿದ್ಧಿಯನ್ನು ಪಡೆಯುತ್ತಾನೆ. ಇದಕ್ಕೆ ಶಾಂಭವೋಪಾಯವೆಂದು ಹೆಸರು. ಕೇವಲ ಭಾವನಾಬಲದಿಂದಲೇ ಮುಂದುವರಿಯಲು ಶಕ್ತಿಯಿಲ್ಲದವರು 36 ತತ್ತ್ವಗಳನ್ನು ಅನುಸಂಧಾನ ಮಾಡಬೇಕು. ಜಾಗ್ರತ್, ಸ್ವಪ್ನ, ಸುಷುಪ್ತಿ, ತುರಿಯಾ ಸ್ಥಿತಿಗಳನ್ನು ವಿವೇಚಿಸಬೇಕು. ಮಂತ್ರ ಜಪ ಧ್ಯಾನ ಮೊದಲಾದ ಸಾಧನಾಭ್ಯಾಸಗಳನ್ನು ನಡೆಸಬೇಕು. ಇದಕ್ಕೆ ಶಾಕ್ತೋಪಾಯವೆಂದು ಹೆಸರು. ಶಾಕ್ತೋಪಾಯವನ್ನು ಒಡನೆಯೇ ಅನುಸರಿಸಲು ಸಾಧ್ಯವಿಲ್ಲದವರು ನಾಲ್ಕನೆಯ ಅಂತಸ್ತಿನವರು. ಈ ಸಾಧಕರು ಆಸನ ಪ್ರಾಣಾಯಾಮಗಳಿಂದ ಶರೀರವನ್ನು ಸ್ಥಿರಪಡಿಸಿಕೊಳ್ಳಬೇಕು. ಪ್ರತ್ಯಾಹಾರ ಧಾರಣಗಳಿಂದ ಮನೋನಿಗ್ರಹವನ್ನು ಸಂಪಾದಿಸಬೇಕು. ಅನಂತರ ಶಾಕ್ತೋಪಾಯ ಕ್ರಮಗಳನ್ನೇ ಅನುಸರಿಸಿ ಕ್ರಮಕ್ರಮವಾಗಿ ಆಧ್ಯಾತ್ಮ ವಿಕಾಸವನ್ನು ಸಂಪಾದಿಸಬೇಕು. ಇದಕ್ಕೆ ಆಣವೋಪಾಯವೆಂದು ಹೆಸರು. ಅಧಿಕಾರಭೇದವನ್ನನುಸರಿಸಿ ಈ ನಾಲ್ಕು ಉಪಾಯಗಳನ್ನು ಶಾಸ್ತ್ರಜ್ಞರು ಸೂಚಿಸಿರುತ್ತಾರೆ.

**ಶಕ್ತಿಪಾತ ಅಥವಾ ಶಿವಾನುಗ್ರಹ:** ಜೀವಿಗಳ ಸುಖ ದುಃಖಗಳು ತಾರತಮ್ಯ ಭಾವಗಳಿಂದ ಕೂಡಿರುವ ಮಲ ಮತ್ತು ಕರ್ಮಗಳ ಫಲಸ್ವರೂಪಗಳು. ಶಿವ ಕರ್ಮಗಳ ಪರಿಮಿತಿಗನುಸಾರವಾಗಿ ಫಲಗಳನ್ನು ಕೊಡುತ್ತಾನೆ. ಜೀವರುಗಳಿಗನ್ವಯಿಸುವ ಸೃಷ್ಟಿ ಸ್ಥಿತಿ ಪ್ರಳಯಗಳು ಕರ್ಮಸಾಪೇಕ್ಷವಾಗಿ ನಡೆಯುತ್ತವೆ. ಅರ್ಹರಾಗಿ ಸಿದ್ಧತೆಯನ್ನು ಪಡೆದಿರುವವರಲ್ಲಿ ಪಂಚಕೃತ್ಯಗಳಲ್ಲೊಂದಾದ ಅನುಗ್ರಹವನ್ನು ಅಂದರೆ ಶಕ್ತಿಪಾತವನ್ನು ಶಿವ ವಿನಿಯೋಗಿಸುತ್ತಾನೆ. ಸಿದ್ಧತೆ ಕರ್ಮಾಚರಣೆಯಿಂದಾಗುತ್ತದೆ. ದೀಕ್ಷೆ, ಯೋಗ, ಜಪ ಧ್ಯಾನ ಮೊದಲಾದವು ಜ್ಞಾನವಿಕಾಸಕ್ಕೆ ಕಾರಣವಾದ ಕರ್ಮಗಳು. ದಾನ ಹೋಮ ಯಜ್ಞ ಮೊದಲಾದವು ಅಭ್ಯುದಯಕ್ಕೆ ಕಾರಣವಾಗಿರುವ ಕಾಮ್ಯಕರ್ಮಗಳು. ಈ ಎರಡು ಬಗೆಯ ಕರ್ಮರಾಶಿಗೂ

ಫಲಗಳನ್ನು ಕೊಡುವಾತ ಶಿವನೇ. ಜ್ಞಾನವಿಕಾಸವನ್ನುಂಟು ಮಾಡುವ ಕರ್ಮಗಳಿಗೆ ಸ್ವತಂತ್ರವಾಗಿ ಮಲ ಮತ್ತು ಕರ್ಮಗಳ ಅಪೇಕ್ಷೆಯಿಲ್ಲದೆ ಶಿವ ಫಲವನ್ನು ಕೊಡುತ್ತಾನೆ–ಇದೇ ಶಿವಾನುಗ್ರಹ ಅಥವಾ ಶಕ್ತಿಪಾತ. ಜ್ಞಾನವಿಕಾಸಕ್ಕೆ ಕಾರಣವಾಗಿರುವ ಕರ್ಮಾಚರಣೆಯಿಂದ ಪ್ರಾತಿಭಜ್ಞಾನ (ಸ್ವರೂಪಜ್ಞಾನ) ವಿಕಸಿಸುತ್ತದೆ. ಈ ಪ್ರಾತಿಭಜ್ಞಾನದಿಂದ ಈ ಬಂಧನ ತನ್ನ ಸ್ವರೂಪಕ್ಕೆ ಸೇರಿಲ್ಲವೆಂದು ವ್ಯಕ್ತಿ ತಿಳಿಯುತ್ತಾನೆ. ಆಗ ಶಿವನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಇಂಥ ಸತ್ಪಾತ್ರಕ್ಕೆ ಶಕ್ತಿಪಾತ ಉಂಟಾಗುತ್ತದೆ.

ಪ್ರತ್ಯಭಿಜ್ಞಾದರ್ಶನ ಕೇವಲ ಶಿವಾಗಮಗಳಿಂದ ಹೊರಹೊಮ್ಮಿರುವ ವಿಶಿಷ್ಟಮಾರ್ಗ. ಈ ಸಂಪ್ರದಾಯದಲ್ಲಿ ಪರಶಿವ ಒಬ್ಬನೇ ಪರತತ್ತ್ವವಾಗಿರುವುದರಿಂದ ಅದ್ವೈತ ದೃಷ್ಟಿ ಸ್ಥಿರವಾಗಿದೆ. ಪರಶಿವ ವಿಶ್ವಾತ್ಮಕನಾಗಿ ಜೀವಾತ್ಮ ಮತ್ತು ವಿಶ್ವ–ಈ ರೂಪಗಳಿಂದ ಅಭಿವ್ಯಕ್ತನಾಗಿರುವುದರಿಂದ ದ್ವೈತಭಾವನೆಯನ್ನು ಅಂಗೀಕರಿಸಲಾಗಿದೆ. ಸ್ವತಂತ್ರನಾಗಿ ವಿಶ್ವೋತ್ತೀರ್ಣವಾಗಿ ಅಭಿನ್ನವಾಗಿಯೂ ವಿಶ್ವಾತ್ಮಕವಾಗಿ ಅನೇಕ ಭೇದಗಳನ್ನು ಒಳಗೊಂಡಿರುವುದರಿಂದಲೂ ಇಲ್ಲಿ ಭೇದಾಭೇದ ದೃಷ್ಟಿ ಸತ್ಯವಾಗಿದೆ. ಕೊನೆಯದಾಗಿ ಎಲ್ಲವೂ ಪರಶಿವನಲ್ಲಿಯೇ ಲಯವಾಗುವುದರಿಂದ ಎಲ್ಲ ದೃಷ್ಟಿಗಳೂ ಇಲ್ಲಿ ಸಮನ್ವಯವಾಗಿವೆ. ಆತ್ಮಪ್ರಕಾಶಶಕ್ತಿ ಉನ್ಮೀಲನವಾಗುವುದಕ್ಕೆ ಪ್ರತ್ಯಭಿಜ್ಞಾನದರ್ಶನ ಒಂದು ಉತ್ತಮ ಸಾಧನವಾಗಿದೆ.

ಕಾಶ್ಮೀರ ಶೈವ ದರ್ಶನಕ್ಕೆ ಸಂಬಂಧಪಟ್ಟ ಸಾಹಿತ್ಯ ವಿಪುಲವಾಗಿದೆ. ಗುರುವಿನಿಂದ ಶಿಷ್ಯನಿಗೆ ಪರಂಪರೆಯಾಗಿ ಬಂದದ್ದು ಆಗಮಶಾಸ್ತ್ರ. ಆಗಮಕ್ಕೆ ಸೇರಿದ ಮುಖ್ಯವಾದ ತಂತ್ರಗಳೆಂದರೆ ಮಾಲಿನೀವಿಜಯ, ಸ್ವಚ್ಛಂದ, ಮೃಗೇಂದ್ರ, ಮಾತಂಗ, ನೇತ್ರ, ನೈಶ್ವಾನ ಸ್ವಯಂಭು, ರುದ್ರಯಾಮಳ (8ನೆಯ ಶತಮಾನ)–ಇವು ದ್ವೈತದ ಕಡೆ ಒಲವು ಇದ್ದುದರಿಂದ ಶಿವ ಇದನ್ನು ತಡೆಗಟ್ಟಲು ವಸುಗುಪ್ತನಿಗೆ ಶಿವ–ಸೂತ್ರಗಳನ್ನು ಪ್ರಕಾಶಪಡಿಸಿದ. ವಸುಗುಪ್ತ (850–900) ಶಿವಸೂತ್ರದ ವಿವರಣೆಯ ರೂಪದಲ್ಲಿ ಸ್ಪಂದಸೂತ್ರವನ್ನು ರಚಿಸಿದ. ಇವನ ಶಿಷ್ಯನಾದ ಕಲ್ಲಟ ಸ್ಪಂದಸೂತ್ರಗಳ ಮೇಲೆ ಒಂದು ವೃತ್ತಿಯನ್ನು ರಚಿಸಿದ. ಈತ ರಚಿಸಿದ ಭಾಷ್ಯಗಳಲ್ಲಿ ತತ್ತ್ವಾರ್ಥಚಿಂತಾಮಣಿ, ಮಧುವಾಹಿನಿಗಳು ಖಿಲವಾಗಿವೆ. ಭಾಸ್ಕರ ಬರೆದ ಶಿವಸೂತ್ರವಾರ್ತಿಕದಲ್ಲಿ ಕಲ್ಲಟನ ಭಾಷ್ಯ ಉಳಿದಿದೆ. ಸ್ಪಂದಭಾಗವನ್ನು ಬೆಳೆಸಿದವರಲ್ಲಿ ಮುಖ್ಯರಾದವರು ಇಬ್ಬರು: ಸ್ಪಂದಪ್ರದೀಪಿಕೆಯನ್ನು ಬರೆದ ಉತ್ಪಲವೈಷ್ಣವ ಮತ್ತು ಸ್ಪಂದವಿವೃತ್ತಿ, ಮಾತಂಗತಂತ್ರ ಮತ್ತು ಭಗವದ್ಗೀತೆಗಳ ಮೇಲೆ ಭಾಷ್ಯವನ್ನು ಬರೆದ ರಮಾಕಾಂತ (900–920). ಪ್ರತ್ಯಭಿಜ್ಞಾದರ್ಶನದ ಸ್ಥಾಪಕನಾದ ಸೋಮಾನಂದ (850–900) ಶಿವದೃಷ್ಟಿಯನ್ನು ರಚಿಸಿ ಅದರ ಮೇಲೆ ಒಂದು ವೃತ್ತಿಯನ್ನು ಬರೆದ. ಇವನ ಶಿಷ್ಯನಾದ ಉತ್ಪಲಾಚಾರ್ಯ ಪ್ರತ್ಯಭಿಜ್ಞಾಸೂತ್ರವನ್ನೂ ರಚಿಸಿದ. ಇವನ ಶಿಷ್ಯನಾದ ಉತ್ಪಲಾಚಾರ್ಯ ಪ್ರತುಭಿಜ್ಞಾಸೂತ್ರವನ್ನೂ ರಚಿಸಿದ. ಇವನ ಮಗ ಲಕ್ಷ್ಮಣನ (850–1000) ಶಿಷ್ಯನಾದ ಅಭಿನವಗುಪ್ತ (993–1015) ಮಾಲಿನೀ ವಿಜಯವಾರ್ತಿಕ, ಪರಾತ್ರಿಂಶಿಕಾ ಲಘುವೃತ್ತಿ, ತಂತ್ರಾಲೋಕ, ತಂತ್ರಸಾರ, ಪರಮಾರ್ಥಸಾರ–ಮುಂತಾದ ಗ್ರಂಥಗಳನ್ನು ರಚಿಸಿದ. ಇವನ ಶಿಷ್ಯನಾದ ವಿಮರ್ಶಿನಿ, ಪ್ರತ್ಯಭಿಜ್ಞಾಹೃದಯ, ಸ್ಪಂದಸಂದೋಹ, ಸ್ಪಂದ ನಿರ್ಣಯಗಳನ್ನು ರಚಿಸಿದ. ಇವನ ಶಿಷ್ಯನಾದ ಕ್ಷೇಮರಾಜ (11ನೆಯ ಶತಮಾನ) ಶಿವಸೂತ್ರ ವೃತ್ತಿ, ಶಿವಸೂತ್ರವಿಮರ್ಶಿನಿ, ಪ್ರತ್ಯಭಿಜ್ಞಾಹೃದಯ, ಸ್ಪಂದಸಂದೋಹ, ಸ್ಪಂದ ನಿರ್ಣಯಗಳನ್ನು ರಚಿಸಿದ. ಇವನ ಅನಂತರ ಯೋಗರಾಜ (12ನೆಯ ಶತಮಾನ) ಪರಮಾರ್ಥ ಸಾರಭಾಷ್ಯವನ್ನೂ ಜಯರಥ (18ನೆಯ ಶತಮಾನ) ತಂತ್ರಾಲೋಕಭಾಷ್ಯವನ್ನೂ ಶಿವೋಪಾಧ್ಯಾಯ (18ನೆಯ ಶತಮಾನ) ವಿಜ್ಞಾನ ಭೈರವ ತಂತ್ರಗಳನ್ನೂ ರಚಿಸಿದರು. ಈಚೆಗೆ ಇಂಗ್ಲಿಷಿನಲ್ಲಿ ಕರ್ಟ್ ಎಫ್. ಲೀಡೆಕರ್ ನ ಪ್ರತ್ಯಭಿಜ್ಞಾಹೃದಯ (1938) ಜೆ. ಸಿ. ಚಟರ್ಜಿಯವರ ಕಾಶ್ಮೀರೀ ಶೈವಧರ್ಮ (1914) ಮತ್ತು ಕೆ. ಸಿ. ಪಾಂಡೆ ಅವರ ಅಭಿನವಗುಪ್ತ (1935) ಎಂಬುವು ರಚಿತವಾಗಿವೆ. ಕನ್ನಡದಲ್ಲಿ ಜೆ. ರುದ್ರಪ್ಪನವರು ಪ್ರತ್ಯಭಿಜ್ಞಾಹೃದಯ ಕನ್ನಡ ಅನುವಾದ, ಕಾಶ್ಮೀರ ಶಿವಾದ್ವೈತ ಸಿದ್ಧಾಂತ ಸ್ವರೂಪ (1953), ಶಿವಸೂತ್ರಗಳ ಕನ್ನಡ ಅನುವಾದ ಮತ್ತು ಕಾಶ್ಮೀರ ಶೈವತತ್ತ್ವಗಳ ಪರಿಚಯ (1958) ಎಂಬ ಗ್ರಂಥಗಳನ್ನು ಪ್ರಕಟಿಸಿದ್ದಾರೆ. (ಜೆ.ಆರ್.)

**ಕಾಶ್ಮೀರೀ ಭಾಷೆ :** ಕಾಶ್ಮೀರ ರಾಜ್ಯದಲ್ಲಿ ಮತ್ತು ಜಮ್ಮು–ಕಾಶ್ಮೀರ ಪ್ರದೇಶದ ಸುತ್ತಮುತ್ತಣ ಭಾಗಗಳಲ್ಲಿ ಬಳಕೆಯಲ್ಲಿರುವ ಭಾಷೆ. ಜಮ್ಮು–ಕಾಶ್ಮೀರ ಪ್ರದೇಶ ಭಾರತದ ಉತ್ತರ ಗಡಿಯಲ್ಲಿದ್ದು ಅದರ ಗಡಿ ಆಫ್ಘಾನಿಸ್ತಾನ, ರಷ್ಯ ಮತ್ತು ಚೀನಗಳನ್ನು ಸ್ಪರ್ಶಿಸುತ್ತದೆ. ಇದರ ದಕ್ಷಿಣದಲ್ಲಿ ಪಂಜಾಬ್ ಮತ್ತು ಪೂರ್ವದಲ್ಲಿ ಟಿಬೆಟ್ ಇದೆ. ಭಾರತದ ಜನಸಂಖ್ಯೆಯ ಶೇಕಡ 0.81ರಷ್ಟು ಈ ಗಡಿ ಪ್ರದೇಶದಲ್ಲಿದೆ. ಕಾಶ್ಮೀರೀ ಮಾತಾಡುವ ಜನರು ಪಶ್ಚಿಮ ಪಾಕಿಸ್ತಾನದಲ್ಲಿಯೂ ಇದ್ದಾರೆ. ಆದರೆ ಅವರ ಸಂಖ್ಯೆ ತಿಳಿದಿಲ್ಲ. 1911 ಮತ್ತು 1961ನೆಯ ಇಸವಿಯ ಜನಗಣತಿಯ ಆಧಾರದ ಮೇಲೆ ಕಾಶ್ಮೀರಿ ಮಾತಾಡುವವರ ಸಂಖ್ಯೆ 1,195,902 ರಿಂದ 1,959,115ರ ವರೆಗೆ ಇರಬಹುದೆಂಬ ಅಂದಾಜು. 2001ರ ಜನಗಣತಿ ಪ್ರಕಾರ ಭಾರತಾದ್ಯಂತ ಈ ಭಾಷೆ ಮಾತನಾಡುವವರು ಸು. 5,527,698 ಮಂದಿ ಇದ್ದಾರೆ.

ಕಾಶ್ಮೀರದ ನಿವಾಸಿಗಳು ತಮ್ಮ ಭಾಷೆಯನ್ನು ಕಾಶುರ್ ಎಂದೂ ತಮ್ಮ ರಾಜ್ಯವನ್ನು ಕಶೀರ್ ಎಂದೂ ಕರೆಯುತ್ತಾರೆ. ಹಿಂದಿ, ಉರ್ದು ಮುಂತಾದ ಭಾರತೀಯ ಭಾಷೆಗಳಲ್ಲಿ ಕಾಶ್ಮೀರೀ ಅಥವಾ ಕಶ್ಮೀರೀ ಪದ ಉಪಯೋಗದಲ್ಲಿದೆ. ಆಂಗ್ಲಭಾಷೆಯಲ್ಲಿ ಇದನ್ನು ಕ್ಯಾಶ್‌ಮೀರಿ, ಕಶ್ಚೆಮಿರಿ ಮುಂತಾದ ರೀತಿಗಳಲ್ಲಿ ಬರೆಯುತ್ತಾರೆ.

**ಕಾಶ್ಮೀರೀ ಮತ್ತು ದಾರ್ಡಿಕ್ ಪರಿವಾರ:** 'ದರ್ದ' ಪದಕ್ಕೆ ತನ್ನದೇ ಇತಿಹಾಸವಿದೆ. ಪುರಾಣಗಳಲ್ಲಿ, ಕಲ್ಹಣನ ರಾಜತರಂಗಿಣಿಯಲ್ಲಿ ಇದರ ಬಗ್ಗೆ ಉಲ್ಲೇಖವಿದೆ. ಸಂಸ್ಕೃತದಲ್ಲಿ



ವರ್ಣಮಾಲೆ

ದರ್ದ ಪದದ ಅರ್ಥ ಪರ್ವತ ಎಂದು. ದರ್ದಿಸ್ತಾನದ ಹೆಚ್ಚಿನ ಪ್ರದೇಶಗಳು ಪರ್ವತಮಯವಾಗಿವೆ. ಗ್ರಿಯರ್ಸನ್ನನ ಭಾರತೀಯ ಭಾಷೆಗಳ ಸರ್ವೇಕ್ಷಣೆ ಮತ್ತು ಇತರ ಕೆಲವು ಗ್ರಂಥಗಳಲ್ಲಿ ದಾರ್ಡಿಕ್ ಭಾಷೆಗಳಿಗೆ 'ಪಿಶಾಚ ಭಾಷೆಗಳು' ಪದವನ್ನು ಉಪಯೋಗಿಸಿದೆ. ಈ ಸಂದರ್ಭದಲ್ಲಿ ಗ್ರಿಯರ್ಸನ್ನನ ಈ ಕೆಳಗಿನ ಮಾತುಗಳನ್ನು ಗಮನಿಸಬಹುದು: 'ಭಾರತದ ಪುರಾಣಗಳಲ್ಲಿ ಪಿಶಾಚ ನರಭಕ್ಷಕ ರಾಕ್ಷಸ ಎಂಬ ಅರ್ಥವನ್ನು ಸೂಚಿಸುತ್ತದೆ. ಆದರೆ ಈ ಭಾಷೆಯನ್ನಾಡುವ ಕೆಲವರು ಇದಕ್ಕೆ ಅಪವಾದ ಸ್ವರೂಪರಾಗಿದ್ದಾರೆ. ಇಷ್ಟಾದರೂ ಈ ಹೆಸರೇ ಹೆಚ್ಚು ಜನರಿಂದ ಸ್ವೀಕೃತವಾಗಿವೆ. ಈ ಸಂದರ್ಭದಲ್ಲಿ ಪಿಶಾಚ ಭಾಷೆ ಮಾತಾಡುವವರೆಲ್ಲ ಪಿಶಾಚಿಯ ಸಂತತಿಯವರಲ್ಲ ಎಂದು ಹೇಳಬೇಕಾಗುತ್ತದೆ'.

ದಾರ್ಡಿಕ್ ಪರಿವಾರವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು– ಕಾಫಿರ್ ವರ್ಗ, ಖೋವಾರ್ ವರ್ಗ ಮತ್ತು ದರ್ದ ವರ್ಗ. ಇವನ್ನು ಪುನಃ ಈ ರೀತಿಯಾಗಿ ವರ್ಗೀಕರಿಸಬಹುದು.

**ಕಾಫಿರ್ ವರ್ಗ:** 1 ಬಶ್‌ಗಲಿ (ಕತಿ) 2 ವೈ ಅಲಾ (ವೈ) 3 ವಸಿ ವೆರಿ (ವೆರೋನ್) 4 ಅಶ್‌ಕುಂದ್ 5 ಕಲಾಶಪಶ 6 ಗೊವಾರ್ ಬತಿ (ನರ್‌ಸಾತಿ) 7 ಪಶಯೀ (ಲಘುಮಾನಿ, ದೇಘಾನೀ) 8 ಬಶ್‌ಕರಿಕ್ 9 ತಿರಹಿ 10 ಪುಸುನ್ 11 ಗುಜರಿ 12 ವೈಗಲಿ 19 ಜೊಂಜಿಗಲಿ.

ಖೋವಾರ್ ವರ್ಗ 1 ಚಿತ್ರಲಿ 2 ಚತ್ರಾರೀ 3 ಅರ್‌ನಿಯ.

ದರ್ದ್ ವರ್ಗ 1 ಶಿನ 2 ಕಶ್ಮೀರಿ (ಕಶುರ್) ಕೋಹಿಸ್ತಾನೀ.

ದರ್ದ್ ಪರಿವಾರದಲ್ಲಿ ಕಶ್ಮೀರಿಯ ಸ್ಥಾನ ಮತ್ತು ಅದರ ಉತ್ಪತ್ತಿಯ ಬಗ್ಗೆ ಚರ್ಚೆ ನಡೆಯುತ್ತಿದ್ದು ವಿದ್ವಾಂಸರು ಇನ್ನೂ ಖಚಿತ ನಿರ್ಧಾರಕ್ಕೆ ಬಂದಿಲ್ಲ. ಇದರ ಬಗ್ಗೆ ವಾದವಿವಾದಗಳನ್ನು ಪ್ರಾರಂಭಿಸಿದ ಗಿಯರ್ಸನ್ ಭಾಷಾವಿಜ್ಞಾನದ ದೃಷ್ಟಿಯಿಂದ ಕಾಶ್ಮೀರೀ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆಯೆಂದೂ ತನ್ನ ರಚನೆಯಲ್ಲಿ ಅದು ದಾರ್ಡಿಕ್ ಪರಿವಾರದ ಲಕ್ಷಣಗಳನ್ನು ಅಳವಡಿಸಿಕೊಂಡಿದೆಯೆಂದೂ ಆದರೆ ಹಿಂದೀ, ಪಂಜಾಬೀ

ಮುಂತಾದ ಆರ್ಯ ಭಾಷೆಗಳ ವೈಶಿಷ್ಟ್ಯಗಳನ್ನೂ ಪಡೆದಿದೆಯೆಂದೂ ಅಭಿಪ್ರಾಯಪಡುತ್ತಾನೆ. ಚಟರ್ಜಿ ಅವರು ಈ ರೀತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. 'ಕಾಶ್ಮೀರೀ ಭಾಷೆ ತನ್ನ ಮೂಲಭೂತ ರಚನೆಯ ದೃಷ್ಟಿಯಿಂದ ಆರ್ಯಭಾಷೆಯ ದಾರ್ದಿಕ್ ವರ್ಗಕ್ಕೆ ಸೇರಿದೆ. ಪ್ರಾಯಶಃ ಪ್ರ.ಶ.ಪೂ. 1000 ಕ್ಕಿಂತಲೂ ಪೂರ್ವದಲ್ಲಿ ಭಾರತಕ್ಕೆ ಬಂದ ಆರ್ಯರ ಗುಂಪು ಋಗ್ವೇದದ ಭಾಷೆಯನ್ನು ಹೋಲುವ ಆಡುನುಡಿಯನ್ನು ಮಾತಾಡುತ್ತಿದ್ದಿರಬೇಕು. ಆ ಗುಂಪು ಕಾಶ್ಮೀರ ಮತ್ತು ಸುತ್ತಮುತ್ತಣ ಪರ್ವತ ಪ್ರದೇಶದಲ್ಲಿ ನೆಲೆಸಿರಬೇಕು. ವೇದಕಾಲದ ಅನಂತರ ಸಂಸ್ಕೃತ ಹಾಗೂ ಪ್ರಾಕೃತವನ್ನಾಡುವ ಆರ್ಯರು ಕಾಶ್ಮೀರದಲ್ಲಿ ಮತ್ತು ಹಿಮಾಲಯ ಪ್ರದೇಶದಲ್ಲಿ ಬಂದು ನೆಲಸಿರಬೇಕು. ಹೀಗಾಗಿ ಈ ದಾರ್ದಿಕ್ ಪರಿವಾರದ ಜನರ ಹಾಗೂ ಭಾಷೆಯ ಮೇಲೆ ಆರ್ಯರ ಮತ್ತು ಅವರ ಭಾಷೆಯ ಪ್ರಭಾವ ಎಷ್ಟರ ಮಟ್ಟಿಗೆ ಆಗಿದೆ ಎಂದರೆ ಈ ಕಾಶ್ಮೀರೀ ಭಾಷೆ ದಾರ್ದಿಕ್ ತಳಹದಿಯ ಮೇಲೆ ಕಟ್ಟಿದ ಆರ್ಯಭಾಷೆಯ ಶಿಖರ ಎನ್ನಬಹುದು'. ಚಟರ್ಜಿ ಅವರ ಈ ಅಭಿಪ್ರಾಯದ ಬಗ್ಗೆ ಬರೆಯುತ್ತ ಕಚ್ರು ಅವರು 'ಈ ಆರ್ಯ ಭಾಷೆಯ ಶಿಖರ ಎಂಬುದಕ್ಕೆ ಭಾಷಾವಿಜ್ಞಾನದ ದೃಷ್ಟಿಯಿಂದ ಸಾಧುವಾದ ಉತ್ತರ ಇನ್ನೂ ದೊರೆತಿಲ್ಲ. ಈ ದಿಶೆಯಲ್ಲಿ ಸಾಕಷ್ಟು ಸಂಶೋಧನೆ ನಡೆದಿಲ್ಲ' ಎನ್ನುತಾರೆ.

1911ರ ಕಾಶ್ಮೀರ ಜನಗಣತಿಯ ವರದಿ ಹೀಗಿದೆ–ಕಾಶ್ಮೀರಿ ಈವರೆಗೆ ಸಂಸ್ಕೃತ ಜನ್ಯವೆಂದು ಪರಿಗಣಿಸಲ್ಪಟ್ಟಿದ್ದರೂ ಹೊಸ ಮಾದರಿಯ ವರ್ಗೀಕರಣದಂತೆ ಶಿಣಖೋವಾರ್ ಭಾಷೆಗಳ ಜತೆಗಿದನ್ನು ಸೇರಿಸಲಾಗಿದೆ. ಅದರ ಸ್ಥಳೀಯ ಜನರ ಅಭಿಪ್ರಾಯದಂತೆ ಅದು ಸಂಸ್ಕೃತ ಜನ್ಯವೇ. ಕಾಶ್ಮೀರ ಇಸ್ಲಾಂ ರಾಜ್ಯವಾಗಿ ಪರಿವರ್ತನೆಯಾದಲ್ಲಿನವರೆಗೆ ಶಾಸ್ತ್ರವೇತ್ತರಾದ ಬ್ರಾಹ್ಮಣರಿಂದ ತುಂಬಿದ್ದುದರಿಂದ ಈ ವಾದ ಕೂಡ ವಿಚಾರಾರ್ಹ. ಈ ವಾದವನ್ನು ವಿರೋಧಿಸುತ್ತ ಗ್ರಿಯರ್ಸನ್ ಕಾಶ್ಮೀರಿ ಭಾಷೆಯ ಕೆಲವು ಲಕ್ಷಣಗಳನ್ನೂ ಕೊಟ್ಟು ಈ ವಾದವನ್ನು ವೈಜ್ಞಾನಿಕವಾಗಿ ವಿವೇಚಿಸಬೇಕೆಂದೂ ಉದ್ರೇಕದಿಂದ ಯೋಚಿಸಬಾರದೆಂದೂ ಹೇಳಿದ್ದಾನೆ (1915). ಶಿಣ–ಖೋವಾರ್ ವರ್ಗವನ್ನೊಳಗೊಂಡ ಪಿಶಾಚ ಭಾಷೆಗಳು ಭಾರತದ ಸಂಸ್ಕೃತ ಭಾಷೆ ಮತ್ತು ಪಶ್ಚಿಮದ ಇರಾನಿ ಭಾಷೆಗಳಿಗೆ ಮಧ್ಯವರ್ತಿಗಳಾಗಿವೆ. ಹೀಗಾಗಿ ಅವುಗಳಲ್ಲಿ ಸಂಸ್ಕೃತ ಮತ್ತು ಇರಾನಿ ಭಾಷೆಗಳಲ್ಲಿರುವ ಲಕ್ಷಣಗಳಿವೆ. ಅಲ್ಲದೆ ತಮ್ಮದೇ ವೈಶಿಷ್ಟ್ಯಗಳೂ ಅವುಗಳಲ್ಲಿವೆ. ಕೆಲವು ವಿಚಾರಗಳಲ್ಲಿ ಇವು ಇರಾನಿ ಭಾಷಾ ಪರಿವಾರವನ್ನು ಹೋಲುತ್ತವೆ. ಕಾಶ್ಮೀರೀ ಭಾಷೆ ಪಿಶಾಚ ಭಾಷೆಯ ಎಲ್ಲ ಲಕ್ಷಣಗಳನ್ನೂ ಪಿಶಾಚ ಮತ್ತು ಇರಾನಿ ಭಾಷೆಯ ಸಾಮಾನ್ಯ ಲಕ್ಷಣಗಳನ್ನೂ ಒಳಗೊಂಡಿದೆ. ಇದು ಗ್ರಿಯರ್ಸನ್ನನ ಅಭಿಪ್ರಾಯ.

ಗ್ರಿಯರ್ಸನ್ನನ ಮತದಂತೆ ಕಾಶ್ಮೀರಿ ಭಾಷೆಯನ್ನು ಆರ್ಯ ಭಾಷೆಗಳಿಂದ ಬೇರ್ಪಡಿಸುವ ಲಕ್ಷಣಗಳು ಇಂತಿವೆ.

1. ಸಘೋಷ ಮಹಾಪ್ರಾಣ ಸ್ಪರ್ಶಗಳ ಅಭಾವ
2. ಮೂರ್ಧನ್ಯ ಮತ್ತು ದಂತ್ಯ ಧ್ವನಿಗಳ ಪಲ್ಲಟ
3. ಸ್ವರ ಮತ್ತು ಅಂತಸ್ಥಗಳ ಪ್ರಭಾವದಿಂದ ವ್ಯಂಜನ ವ್ಯತ್ಯಯ
4. ಪದಾಂತ ಸ್ಪರ್ಶಗಳ ಮಹಾಪ್ರಾಣೀಕರಣ
5. ಪ್ರಾಕೃತದಿಂದ ಎರವಲು ಪಡೆದ ಶಬ್ದಗಳಲ್ಲಿ ಧ್ವನಿಪರಿವರ್ತನೆ ಆಗದಿರುವಿಕೆ
6. ಎರಡು ಸ್ವರಗಳ ಮಧ್ಯದಲ್ಲಿ ತ ಕಾರ ಲೋಪವಾಗದಿರುವಿಕೆ
7. ನ ಕಾರದ ಲೋಪ
8. ವ್ಯಂಜನಕ್ಕೆ ಪರವಾಗಿರುವ ರೇಫ ಲೋಪವಾಗದಿರುವುದು.
9. ಅನಿಶ್ಚಯ ಸೂಚಕವಾದ ಆ ಪ್ರತ್ಯಯ
10. ಪರಪ್ರತ್ಯಯಗಳ ಪ್ರಾಧಾನ್ಯ
11. ಪಿಶಾಚ ಭಾಷೆಯ ಸಂಖ್ಯಾವಾಚಕಗಳು
12. ನಿರ್ದೇಶಕ ಸರ್ವನಾಮದ ಮೂರು ರೀತಿಯ ಪ್ರಭೇದಗಳೂ
13. ಭೂತಕಾಲದಲ್ಲಿ ಮೂರು ರೀತಿಯ ಪ್ರಭೇದಗಳು
14. ವಿಶಿಷ್ಟವಾದ ಶಬ್ದಕ್ರಮ

ಕಾಶ್ಮೀರೀ ಶಬ್ದಭಂಡಾರದಲ್ಲಿ ಬೇಕಾದಷ್ಟು ಸಂಸ್ಕೃತ ಶಬ್ದಗಳಿರುವುದರಿಂದ ಅದನ್ನು ಸಂಸ್ಕೃತಜನ್ಯ ಭಾಷೆಯೆಂದು ಜನ ತಿಳಿಯುತ್ತಾರೆ. ಈ ವಿಚಾರವಾಗಿ ಗ್ರೀಯರ್ಸನ್ ಹೀಗೆ ಹೇಳುತ್ತಾನೆ: 'ಕೊನೆಗೆ ನಾವು ಶಬ್ದಭಂಡಾರಕ್ಕೆ ಬರುತ್ತೇವೆ. ಈ ಒಂದು ಕಾರಣದಿಂದಾಗಿಯೇ ಕಾಶ್ಮೀರಿ ಸಂಸ್ಕೃತಜನ್ಯ ಎಂಬುದನ್ನು ಅಲ್ಲಗಳೆಯುವುದು ಕಷ್ಟವಾಗುತ್ತದೆ. ಆದರೆ ಶಬ್ದಸಂಪತ್ತಿನ ಆಧಾರದ ಮೇಲೆ ಭಾಷೆಗಳನ್ನು ವರ್ಗೀಕರಿಸುವುದಿಲ್ಲ. ಭಾಷೆಯಲ್ಲಿ ಬಹುಕಾಲ ನಿಲ್ಲುವಂಥ ಮತ್ತು ಎರವಲು ಪಡೆಯದಂಥ ನಿತ್ಯಜೀವನದ ಬಳಕೆಯ ಪದಗಳು ಇತ್ಯಾದಿ– ಶಿಣ ಭಾಷೆಯ ಪದಗಳಿಗೆ ಸಮಾನವಾಗಿದ್ದು ಪಿಶಾಚ ಪರಿವಾರಕ್ಕೆ ಸೇರಿದವುಗಳಾಗಿವೆ. ಕಾಶ್ಮೀರೀ ಭಾಷೆ ದಾರ್ದಿಕ್ ಪರಿವಾರದ ಪಿಶಾಚ ವರ್ಗಕ್ಕೆ ಸೇರಿದ ಒಂದು ಮಿಶ್ರಿತ ಭಾಷೆಯಾಗಿದೆ. ಭಾರತೀಯ ಸಾಹಿತ್ಯ ಹಾಗೂ ಸಂಸ್ಕೃತಿಯಿಂದ ಪ್ರಭಾವಿತವಾಗಿ ಅದರ ಶಬ್ದಭಂಡಾರ ಸಂಸ್ಕೃತ ಜನ್ಯಪದಗಳಿಂದ ತುಂಬಿದೆ. ಆದರೆ ಮೂಲತ: ಅದರ ಶಬ್ದಗಳು, ಧ್ವನಿವ್ಯವಸ್ಥೆ, ವಾಕ್ಯರಚನೆ ಮುಂತಾದವುಗಳೆಲ್ಲ ಪಿಶಾಚ ವರ್ಗಕ್ಕೆ ಸೇರಿದವಾಗಿವೆ'.

ಕಾಶ್ಮೀರೀ ಭಾಷೆಯನ್ನು ಆರ್ಯ ಹಾಗೂ ದಾರ್ದಿಕ್ ಪರಿವಾರದೊಡನೆ ತುಲನಾತ್ಮಕವಾಗಿ ಹಾಗೂ ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಾಗಿದೆ. ಭಾವನಾತ್ಮಕವಾಗಿ ವಿವೇಚಿಸುವುದನ್ನು ಬಿಟ್ಟು ವೈಜ್ಞಾನಿಕವಾಗಿ ಪರಿಶೀಲಿಸುವವರೆಗೆ ಗ್ರಿಯರ್ಸನ್ನನ ಅಭಿಪ್ರಾಯವನ್ನೇ ನಾವು ಅನುಮೋದಿಸಬೇಕು.

**ಕಾಶ್ಮೀರಿಯ ಉಪಭಾಷೆಗಳು:** ಕಾಶ್ಮೀರಿಯ ಉಪಭಾಷೆಗಳ ಬಗ್ಗೆ ಖಚಿತವಾದ ಕ್ಷೇತ್ರ ಪರಿವೀಕ್ಷಣೆ ಇನ್ನೂ ನಡೆದಿಲ್ಲ. ಸದ್ಯಕ್ಕೆ ನಮಗೆ ಸಿಕ್ಕಿದ ಪುರಾವೆಗಳು ಗ್ರಿಯರ್‌ಸನ್ನನ ಗ್ರಂಥದಲ್ಲಿವೆ. ಆದರೆ ಅವು ಅಷ್ಟು ಖಚಿತವಾಗಿಲ್ಲ. ಕಾಶ್ಮೀರಿಯ ಉಪಭಾಷೆಗಳನ್ನು ಮುಖ್ಯವಾಗಿ ಭೌಗೋಳಿಕ ಹಾಗೂ ಸಾಮಾಜಿಕವಾಗಿ ವರ್ಗೀಕರಿಸಬಹುದು.

**ಭೌಗೋಳಿಕ ಉಪಭಾಷೆಗಳು:** 1961ರ ಜನಗಣತಿಯ ಪ್ರಕಾರ ಈ ಕೆಳಗಿನ ಭೌಗೋಳಿಕ ಉಪಭಾಷೆಗಳಿವೆ–ಬುಂಜ್ ವಾಲಿ (550), ಕಿಷ್ಟವಾರೀ (11,633), ಪೊಗುಲೀ (9,508), ಶಿರಾಜೀ ಕಾಶ್ಮೀರೀ (19,978), ಕಘನಿ (152), ಕೊಹಿಸ್ತಾನೀ (81). ಗ್ರಿಯರ್‌ಸನ್ ಕಷ್ಟವಾರೀ ಇವು ಮಾತ್ರ ಕಾಶ್ಮೀರೀ ಭಾಷೆಯ ಪ್ರಧಾನ ಉಪಭಾಷೆಯೆಂದೂ ಪೊಗುಲೀ, ಸಿರಾಜೀ, ರಾಮ್‌ಬನಿ ಮುಂತಾದುವು ಕಾಶ್ಮೀರಿ ಮತ್ತು ಲಹಂಡಾ ಭಾಷೆಗಳ ಮಿಶ್ರಿತ ರೂಪಗಳೆಂದೂ ಅಭಿಪ್ರಾಯಪಡುತ್ತಾನೆ. ಗ್ರಾಮೀಣ ಮತ್ತು ಧಾರ್ಮಿಕ ವ್ಯತ್ಯಾಸಗಳನ್ನು ಬಿಟ್ಟರೆ ಕಷ್ಟವಾರೀ ಮಾತ್ರ ಮುಖ್ಯ ಉಪಭಾಷೆಯೆಂದು ಮುಂದಿನ ಸಂಶೋಧನೆಗಳು ತೋರಿಸಬಹುದು. ಇತರ ಭಾಷೆಗಳೆಲ್ಲ ಕಾಶ್ಮೀರೀ ಮತ್ತು ಪಂಜಾಬಿ ಮುಂತಾದ ಆಸುಪಾಸಿನ ಭಾಷೆಗಳ ಕಲಸುಮೇಲೋಗರ ಎನ್ನಬಹುದು.

ಸಾಮಾಜಿಕ ಉಪಭಾಷೆಗಳುಳ್ಳ ಸಾಮಾಜಿಕ ಪ್ರಭೇದಗಳಲ್ಲಿ ಹಿಂದೂ ಕಾಶ್ಮೀರೀ ಮತ್ತು ಮುಸ್ಲಿಂ ಕಾಶ್ಮೀರೀ ಇವು ಮುಖ್ಯವಾದವು. ಸಾಹಿತ್ಯದಲ್ಲಿಯೂ ಇವುಗಳ ಪ್ರತ್ಯೇಕತೆ ಕಂಡುಬರುತ್ತದೆ. ಜಾತಿ ಹಾಗೂ ಧರ್ಮನಿಷ್ಠವಾದ ಈ ಉಪಭಾಷೆಗಳ ಧ್ವನಿಮಾಗಳ ವಿತರಣೆಯಲ್ಲಿಯೂ ಆವೃತ್ತಿಯಲ್ಲಿಯೂ ವ್ಯತ್ಯಾಸಗಳಿವೆ. ಹಾಗೆಯೇ ಶಬ್ದಸಂಪತ್ತಿನಲ್ಲಿಯೂ ಶಬ್ದರಚನೆಯಲ್ಲಿಯೂ ಕೆಲವು ವ್ಯತ್ಯಾಸಗಳಿವೆ. ಹಿಂದೂ ಕಾಶ್ಮೀರಿ ಸಂಸ್ಕೃತದಿಂದಲೂ ಮುಸ್ಲಿಂ ಕಾಶ್ಮೀರಿ ಪರ್ಷಿಯನ್ ಅರಬ್ಬಿಯಿಂದಲೂ ಶಬ್ದಗಳನ್ನು ಎರವಲು ಪಡೆದಿವೆ. ಈ ವ್ಯತ್ಯಾಸ ಕೆಲವು ಸಾಹಿತ್ಯ ರೂಪಗಳಲ್ಲಿಯೂ ಸರ್ಕಾರಿ ಶೈಲಿಯಲ್ಲಿಯೂ ಕಂಡುಬರುವುದಿಲ್ಲ. ಈ ಶೈಲಿ ಧಾರ್ಮಿಕ ಉಪಭಾಷೆಗಳ ವ್ಯತ್ಯಾಸ ಶಬ್ದ ಸಂಪತ್ತಿನಲ್ಲಿ ಮಾತ್ರ ಎಂದು ಕಂಡುಬರಬಹುದು.

ಪ್ರಭೇದಗಳ ಧ್ವನಿ ವ್ಯವಸ್ಥೆ ಒಂದೇ ರೀತಿಯಾಗಿದ್ದರೂ ಈ ಎರಡು ಸಾಮಾಜಿಕ ಪ್ರಭೇದಗಳ ಮುಖ್ಯ ವ್ಯತ್ಯಾಸಗಳನ್ನು ಈ ರೀತಿ ಸಂಗ್ರಹಿಸಬಹುದು. ಹಿಂದೂ ಕಾಶ್ಮೀರಿಯ ರ ಕಾರ ಮುಸ್ಲಿಂ ಕಾಶ್ಮೀರಿಯ ಡ ಕಾರವಾಗಿದೆ. ಉದಾ: ಹಿಂದೂ ಕಾಶ್ಮೀರಿಯ ಗುರ್=ಕುದುರೆ, ಯೋರ್=ಇಲ್ಲಿ, ಹೋರ್= ಅಲ್ಲಿ ಮುಂತಾದವು ಮುಸ್ಲಿಂ ಕಾಶ್ಮೀರಿಯಲ್ಲಿ ಗುಡ್, ಯೋಡ್ ಮತ್ತು ಹೋಡ್ ಆಗಿವೆ. ಹಿಂದೂ ಕಾಶ್ಮೀರಿಯ ಉಚ್ಚ–ಮಧ್ಯಸ್ವರ ಮುಸ್ಲಿಂ ಕಾಶ್ಮೀರಿಯಲ್ಲಿ ಉಚ್ಚ–ಅಗ್ರಸ್ವರವಾಗಿವೆ. ಹಿಂದೂ ಕಾಶ್ಮೀರಿ ರ್‌ಖ್=ಸಾಲು, ಟ್‌ಖ್=ಓಡು, ಖಾನ್=ಸಿಂಬಳ ಇವು ಮುಸ್ಲಿಂ ಕಾಶ್ಮೀರಿಯಲ್ಲಿ ರಿಖ್, ಟಿಖ್, ಖಿನ್ ಆಗಿವೆ. ಹಿಂದೂ ಕಾಶ್ಮೀರಿಯ ಮಧ್ಯ ಸ್ವರ ಮುಸ್ಲಿಂ ಕಾಶ್ಮೀರಿಯಲ್ಲಿ ಮಧ್ಯ–ನಿಮ್ನ ಸ್ವರವಾಗಿದೆ. ದಹ್ (deh) ಹತ್ತು, ಗಾತ್ (g : th) ಹದ್ದು ಇವು ಮುಸ್ಲಿಂ ಕಾಶ್ಮೀರಿಯಲ್ಲಿ ದಹ್ (dah)

ಗಾತ್ (gā : th) ಇತ್ಯಾದಿ ಆಗುತ್ತವೆ. ಮಧ್ಯ ಸ್ವರ ಪಶ್ಚಸ್ವರವಾದುದಕ್ಕೆ ಉದಾಹರಣೆ ಹಿಂದೂ ಕಾಶ್ಮೀರಿಯ ಮಾಜ್ (mɘ : j)= ತಾಯಿ ಮುಸ್ಲಿಂ ಕಾಶ್ಮೀರಿ ಅರಬ್ಬೀ ಪಾರ್ಸಿಯಿಂದಲೂ ಎರವಲು ಪಡೆದಿದ್ದರೂ ವ್ಯಾಪಾರ, ನ್ಯಾಯಾಂಗ ಮುಂತಾದವುಗಳ ಶೈಲಿಯಲ್ಲಿ ಎರಡು ಪ್ರಭೇದಗಳಿಗೂ ಸಮನಾದ ಶಬ್ದಗಳಿವೆ. ಆದರೆ ಆಡುಮಾತಿನಲ್ಲಿ ಹಿಂದೂ ಕಾಶ್ಮೀರಿ ಮತ್ತು ಮುಸ್ಲಿಂ ಕಾಶ್ಮೀರಿಯ ಶಬ್ದಭಂಡಾರದಲ್ಲಿ ತುಂಬ ವ್ಯತ್ಯಾಸಗಳಿವೆ.

| ಹಿಂದೂ ಕಾಶ್ಮೀರಿ | ಅರ್ಥ | ಮುಸ್ಲಿಂ ಕಾಶ್ಮೀರಿ |
|---|---|---|
| ಕ್ರೂದ್ | ಕೋಪ | ಗೋಸ್ |
| ಗಂಡುನ್ | ಮದುವೆ ನಿಶ್ಚಿತಾರ್ಥ | ನಿಶಾನ್ |
| ಖೋಸ್ | ಲೋಟ | ಪಾಲ್ |
| ನೆನಿ | ಮಾಂಸ | ಹೊಕಿ |
| ಸೊರ್‌ಗ್ | ಸ್ವರ್ಗ | ಅಖ್‌ತಾಬ್ |
| ದರ್‌ಮ್ | ಧರ್ಮಾ | ದಿಲ್ |

**ಧ್ವನಿವಿಜ್ಞಾನ:** ಯಾವುದೋ ಒಂದು ಉಪಭಾಷೆಯ ಧ್ವನಿಗಳ ಆಧಾರದ ಮೇಲೆ ರಚಿತವಾದ ಹಿಂದಿನ ಧ್ವನಿ ವಿಶ್ಲೇಷಣೆ ವೈಜ್ಞಾನಿಕವೂ ಅಲ್ಲ, ಸಾಕಷ್ಟು ವಿಸ್ತಾರವಾದದೂ

ಇಲ್ಲ. ಆದರೆ ಇತ್ತೀಚಿನ ಕೆಲವು ಗ್ರಂಥಗಳಲ್ಲಿ-ಕಚ್ ರು ಮತ್ತು ಹಂಡೂ-ಇವರ ಗ್ರಂಥಗಳಲ್ಲಿ ಕಾಶ್ಮೀರೀ ಧ್ವನಿಗಳ ವೈಜ್ಞಾನಿಕ ವಿಶ್ಲೇಷಣೆ ನಡೆದಿದೆ. ಕಾಶ್ಮೀರಿಯ ವ್ಯಂಜನಗಳು ಹೀಗಿವೆ:

ಸ್ಪರ್ಶಗಳು; ಪ ಫ ಬ ತ ಥ ದ ಟ ಠ ಡ ಕ ಖ ಗ

ಸ್ಪರ್ಶೋಷ್ಮಗಳು; ತ್ಸ ತ್ಯ ಚ ಛ ಜ

ಊಷ್ಮಗಳು; ಸ ಜ಼ ಶ ಹ

ಅನುನಾಸಿಕಗಳು; ಮ ನ

ಪಾರ್ಶ್ವಿಕ; ಲ

ಕಂಪಿತ; ರ

ಅರ್ಧಸ್ವರಗಳು; ವ ಯ

ಸ್ವರಗಳು; ಇ ಉ

ಎ ಒ

ಓ್ರ (ə)

ಇ (ɨ) ಅ (ə) ಅ (a)

ಎಲ್ಲ ಸ್ವರಗಳಿಗೂ ದೀರ್ಘ ರೂಪವಿದೆ. ಎ, ಒ ಮತ್ತು ಅ (e) ವೂ ಎಲ್ಲ ದೀರ್ಘ ಸ್ವರಗಳೂ ಅನುಸ್ವಾರ ಸಹಿತವಾಗಿಯೂ ಅನುಸ್ವಾರ ರಹಿತವಾಗಿಯೂ ಉಚ್ಚರಿಸಲ್ಪಡುತ್ತವೆ. ಚ, ಜ, ಶ ಮತ್ತು ಯ ಇವನ್ನು ಬಿಟ್ಟು ಬೇರೆ ಎಲ್ಲ ವ್ಯಂಜನಗಳೂ ತಾಲವ್ಯೀಕರಣ ಪಡೆಯುತ್ತವೆ.

ಕಾಶ್ಮೀರೀ ಭಾಷೆಯಲ್ಲಿ ಕೆಲವು ಮಾತ್ರಾಸ್ವರಗಳೂ ಇವೆ. ಅವು ಎರಡು ವರ್ಣಗಳ ಮಧ್ಯದಲ್ಲಿರುವ ವ್ಯಂಜನ ಗುಚ್ಛದ ಮಧ್ಯದಲ್ಲಿ ಬರುತ್ತವೆ. ಅ, ಎ, ಒ ಮತ್ತು ಸಂವೃತ ಆ (ə) ಇವುಗಳಿಗೆ ಪ್ರತಿಯಾಗಿ ಬರುವ ಈ ಮಾತ್ರಾಸ್ವರಗಳು ಅನುಕ್ರಮವಾಗಿ ಸಂವೃತ ಅ, ಎ, ಉ ಮತ್ತು ಸಂವೃತ ಅ ಹೀಗೆ ಉಚ್ಚರಿಸಲ್ಪಡುತ್ತವೆ.

ಕಾಶ್ಮೀರಿಯ ವರ್ಣ ರಚನೆ ಈ ರೀತಿ ಇದೆ. ಒಂದು ಸ್ವರ ಮಾತ್ರ-ಆ (ಹೌದು), ವ್ಯಂಜನ ಸ್ವರ ಹು (ಅವನು), ವ್ಯಂಜನ ವ್ಯಂಜನ ಸ್ವರ ತ್ರೆ (ಮೂರು), ಸ್ವರ ವ್ಯಂಜನ ಆಸ್ (ನಗು), ವ್ಯಂಜನ ಸ್ವರ ವ್ಯಂಜನ ಗೊಬ್ (ಭಾರ), ವ್ಯಂಜನ ವ್ಯಂಜನ ಸ್ವರ ವ್ಯಂಜನ ಪ್ರೂತ್ಸ್ (ಒಳ್ಳೆಯವನು) ಸ್ವರ ವ್ಯಂಜನ ವ್ಯಂಜನ ಅಮಬ್ - (ಮಾವಿನಹಣ್ಣು) - ವ್ಯಂಜನಸ್ವರ ವ್ಯಂಜನ ವ್ಯಂಜನ ಸನ್‌ಖ್ (ಶಂಖ) ವ್ಯಂಜನ 19 ವ್ಯಂಜನ ಸ್ವರ ವ್ಯಂಜನ, ವ್ಯಂಜನ ಟ್ರೊಂಬ್ (ಇಂಜೆಕ್ಷನ್ ಕೊಡು).

ಕಾಶ್ಮೀರೀ ವರ್ಣಪ್ರಧಾನವಾದ ಭಾಷೆಯಾಗಿರುವುದರಿಂದ ಬಲಾಘಾತಕ್ಕೆ ಹೆಚ್ಚು ಮಹತ್ತ್ವವಿಲ್ಲ. ಹಿಂದಿ ಮತ್ತು ಇತರ ಆರ್ಯಭಾಷೆಗಳಂತೆ ಬಲಾಘಾತ ಭಾವೋದ್ವೇಗ ಇತ್ಯಾದಿಗಳನ್ನು ಮಾತ್ರ ಸೂಚಿಸುತ್ತದೆ.

ಶಬ್ದ ಮತ್ತು ವಾಕ್ಯರಚನೆ: ಕಾಶ್ಮೀರಿಯ ಶಬ್ದರಚನೆಯಲ್ಲಿ ಆರ್ಯಭಾಷೆಗಳಿಂದ ಭಿನ್ನವಾದ ಕೆಲವು ಲಕ್ಷಣಗಳಿವೆ. ಸಮೀಪ ಸೂಚಕ ಮತ್ತು ದೂರ ಸೂಚಕವೆಂಬ ಎರಡು ವಿಧವಾದ ಸರ್ವನಾಮಗಳಿಗೆ ಬದಲಾಗಿ ಕಾಶ್ಮೀರೀ ಭಾಷೆಯಲ್ಲಿ ಮೂರು ವಿಧದ ಸರ್ವನಾಮಗಳಿವೆ. ಯಿ (ಇದು), ಹು (ಅದು; ಕಣ್ಣಿಗೆ ಕಾಣುವ) ಮತ್ತು ಸು (ಅದು; ಕಣ್ಣಿಗೆ ಕಾಣದ). ಇವು ವಚನ, ಲಿಂಗ ಮತ್ತು ವಿಭಕ್ತಿಗನುಸಾರವಾಗಿ ರೂಪಭೇದವನ್ನು ಹೊಂದುತ್ತವೆ.

| **ಪುಲ್ಲಿಂಗ** | | **ಸ್ತ್ರೀಲಿಂಗ** | |
|---|---|---|---|
| ಏಕವಚನ | ಬಹುವಚನ | ಏಕವಚನ | ಬಹುವಚನ |
| ಯಿ | ಯಿಂ | ಯಿ | ಯಿಮ್ |
| ಹು | ಹುಂ | ಹೊ | ಹುಮ್ |
| ಸು/ತಿ | ತಿಂ | ಸೊ/ತಿ | ತಿಮ್ |

ಕಾಶ್ಮೀರಿಯ ವಾಕ್ಯರಚನೆಯ ವಿಚಾರವಾಗಿ ಹೆಚ್ಚು ಸಂಶೋಧನೆ ನಡೆದಿಲ್ಲ. ಆದರೂ ಈ ಕೆಳಗಿನ ವೈಶಿಷ್ಟ್ಯಗಳನ್ನು ಗಮನಿಸಬಹುದು. ವಾಕ್ಯದಲ್ಲಿ ಶಬ್ದಗಳ ಅನುಕ್ರಮ ಪರ್ಶಿಯನ್ ಭಾಷೆಯಂತಿದೆ. ಕ್ರಿಯಾಪದ ಇಂಗ್ಲಿಷಿನಂತೆ ವಾಕ್ಯದ ಮಧ್ಯದಲ್ಲಿ ಬರುತ್ತದೆ. ರಾಮ್ ನೇ ಖಾನಾ ಖಾಯಾ ಎನ್ನುವ ಹಿಂದೀ ವಾಕ್ಯಕ್ಕೆ ಸಮಾನವಾದ ಕಾಶ್ಮೀರೀ ವಾಕ್ಯ ರಾಮನ್ ಖಾವ್ ಬತಿ (ರಾಮ ತಿಂದ ಆಹಾರ) ಎಂದಾಗಿದೆ. ಕರ್ಮಪದ ಕ್ರಿಯಾಪದಕ್ಕೆ ಪರವಾಗಿ ಬರುತ್ತದೆ.

**ಲಿಪಿ:** ಸಾಂಪ್ರದಾಯಿಕವಾಗಿ ಕಾಶ್ಮೀರೀ ಭಾಷೆಯನ್ನು ಶಾರದಾ ಲಿಪಿಯಲ್ಲಿ ಬರೆಯುತ್ತಾರೆ. ಇದರ ಪ್ರಾಚೀನ ಸಾಹಿತ್ಯವೆಲ್ಲ ಈ ಲಿಪಿಯಲ್ಲಿಯೇ ಇದೆ. ಈ ಲಿಪಿ ಹತ್ತನೆಯ ಶತಮಾನದ ಹೊತ್ತಿಗೆ ಪ್ರಚಾರಕ್ಕೆ ಬಂತೆಂದು ಊಹಿಸಿದೆ. ಕ್ರಮೇಣ ಚಾರಿತ್ರಿಕ ಕಾರಣಗಳಿಂದ ಈ ಲಿಪಿಯ ಪ್ರಚಾರ ಕಡಿಮೆಯಾಗತೊಡಗಿತು. ಕಾಶ್ಮೀರೀ ಪಂಡಿತರು ಈಗಲೂ ಇದನ್ನು ಉಪಯೋಗಿಸುತ್ತಾರೆ. ಕಾಶ್ಮೀರ ಕಣಿವೆಗೆ ಶಾರದಾ ಭೂಮಿ ಎನ್ನುವ ಹೆಸರಿದ್ದುದರಿಂದ ಲಿಪಿಗೂ ಈ ಹೆಸರು ಬಂತು. ಈ ಲಿಪಿ ದೇವನಾಗರಿ ಲಿಪಿಯನ್ನು ಹೋಲುತ್ತದೆ. ಕೆಲವು ಕಾಶ್ಮೀರಿ ಹಿಂದೂಗಳು ದೇವನಾಗರಿ ಲಿಪಿಯನ್ನು ಬಳಕೆಯಲ್ಲಿಟ್ಟುಕೊಂಡಿದ್ದಾರೆ. ರೋಮನ್ ಲಿಪಿಯನ್ನು ಕೆಲವರು ಬಳಸಿದ್ದಾರೆ. ಪರ್ಸೋ-ಅರ‍್ಯಾಬಿಕ್ ಲಿಪಿಯೂ ಪ್ರಚಾರದಲ್ಲಿದೆ. 1947ನೆಯ ಇಸವಿಯಿಂದ ಈ ಲಿಪಿ ಕೂಡಾ ರಾಜಕೀಯ ಮಾನ್ಯತೆ ಪಡೆದಿದೆ. ಲಿಪಿ ಸುಧಾರಣೆ ಇನ್ನೂ ನಡೆಯುತ್ತಿದೆ.

**ಆಧುನಿಕ ಸಂಶೋಧನೆಗಳು:** ಇತ್ತೀಚೆಗೆ 1947 ರಿಂದ ವಿದ್ವಾಂಸರು ಕಾಶ್ಮೀರಿಯ ಕಡೆಗೆ ಆಕರ್ಷಿತರಾಗಿದ್ದಾರೆ. ದಾರ್ದಿಕ್ ಭಾಷೆಗಳು ಭೌಗೋಳಿಕವಾಗಿ ಬೇರೆ ಬೇರೆ ರಾಷ್ಟ್ರಗಳಲ್ಲಿ ಹಂಚಿಹೋಗಿರುವುದರಿಂದ ಈ ದಿಶೆಯಲ್ಲಿನ ಸಂಶೋಧನೆ ಭಾರತದಿಂದ ಹೊರಗೆ ಅಂದರೆ ರಷ್ಯ, ಅಮೆರಿಕ ಮತ್ತು ಪಾಕಿಸ್ತಾನಗಳಲ್ಲಿ ನಡೆಯುತ್ತಿದೆ. ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಕಲೆ ಮತ್ತು ಸಂಸ್ಕೃತಿ ಅಕಾಡೆಮಿ ಕಾಶ್ಮೀರೀ ಕೋಶಗಳ ರಚನೆಯಲ್ಲಿ ತೊಡಗಿದೆ. ಅಮೆರಿಕದ ಇಲ್ಲಿನಾಯ್ ವಿಶ್ವವಿದ್ಯಾನಿಲಯ ಕಾಶ್ಮೀರೀ ವ್ಯಾಕರಣ ಮತ್ತು ಶಿಕ್ಷಣ ಸಾಮಗ್ರಿಗಳನ್ನು ಪ್ರಕಟಿಸಿದೆ. ಭಾರತೀಯ ಭಾಷೆಗಳ ಕೇಂದ್ರಸಂಸ್ಥೆಯೂ ಕಾಶ್ಮೀರೀ ಭಾಷೆಯಲ್ಲಿ ಪ್ರಶಿಕ್ಷಣವನ್ನು ಪ್ರಾರಂಭಿಸಿ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿದೆ. ವಿಶ್ವೇಶ್ವರಾನಂದ ವೈದಿಕ ಸಂಶೋಧನ ಸಂಸ್ಥೆ ಕಾಶ್ಮೀರಿಯ ಉಪಭಾಷೆಗಳ ಅಧ್ಯಯನವನ್ನು ಕೈಗೊಂಡಿದೆ.

ಕಾಶ್ಮೀರೀ ಭಾಷೆ ಇನ್ನೂ ಹೆಚ್ಚು ಹೆಚ್ಚು ವಿದ್ವಾಂಸರ ಗಮನ ಸೆಳೆಯ ಬೇಕಾಗಿದೆ. ವಿದ್ಯಾಭ್ಯಾಸದ ಮಾಧ್ಯಮವಾಗಿಯೂ ಅದನ್ನು ಬಳಸಬೇಕಾಗಿದೆ. ಸರ್ಕಾರದ ಕಡೆಯಿಂದ ಈ ದಿಶೆಯಲ್ಲಿ ಹೆಚ್ಚಿನ ಪ್ರಯತ್ನ ನಡೆದಿಲ್ಲ. ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಪರಕೀಯರ ಆಡಳಿತಕ್ಕೆ ಒಳಗಾಗಿದ್ದ ಕಾಶ್ಮೀರಿಗಳು ತಮ್ಮ ಭಾಷೆಯ ಉನ್ನತಿಗಾಗಿ ಪ್ರಯತ್ನಿಸಲಿಲ್ಲ. ಹೀಗಾಗಿ ಸರ್ಕಾರ ಹಾಗೂ ಶೈಕ್ಷಣಿಕ ಸಂಸ್ಥೆಗಳು ಕೂಡ ಈ ಭಾಷೆಯನ್ನು ಅಧ್ಯಯನ ಯೋಗ್ಯವೆಂದು ಪರಿಗಣಿಸಲಿಲ್ಲ. (ಜೆ.ಎಚ್.)

**ಕಾಶ್ಮೀರೀ ಸಾಹಿತ್ಯ :** ಕಾಶ್ಮೀರೀ ಭಾಷೆಯಲ್ಲಿ ಕಥೆ, ಕಥನ, ಕವನ, ಪದ್ಯ ಲಾವಣಿ, ನುಡಿಗಟ್ಟು ಮುಂತಾದವುಗಳ ರೂಪದಲ್ಲಿ ತನ್ನದೇ ಆದ ಸಾಹಿತ್ಯ ಪರಂಪರೆಯಿದೆ. ಆಡುನುಡಿಯಲ್ಲಿ ನಿಬದ್ಧವಾದ ಈ ಸಾಹಿತ್ಯರಾಶಿ ಕಾಲನ ಗರ್ಭದಲ್ಲಿ ಅಡಗಿಹೋದರೂ ಜನರ ನೆನಪಿನಲ್ಲಿ ಅಳಿದುಳಿದ ಕೃತಿಗಳಲ್ಲಿ ಕಾಶ್ಮೀರದ ಜನಪದ ಭಾವನೆಗಳು ರಾಜ್ಯದ ಸಾಮಾಜಿಕ ಹಾಗೂ ರಾಜನೈತಿಕ ವಿಪ್ಲವಗಳ ಕಡೆಗೆ ಎಷ್ಟರ ಮಟ್ಟಿಗೆ ಸಚೇತನವಾಗಿದ್ದುವೆನ್ನುವುದನ್ನು ಕಾಣಬಹುದು. ಹಿಂದೂಗಳ ಹಬ್ಬಗಳಲ್ಲಿ ಹಾಡುವ ಹಾಡುಗಳು ಸ್ವರೂಪ ಮತ್ತು ವಿಷಯಗಳಲ್ಲಿ ಸಮೃದ್ಧವಾಗಿವೆ. ಪ್ರಾಂತೀಯ ಸಂಪ್ರದಾಯಗಳಲ್ಲಿ ವ್ಯತ್ಯಾಸಗಳಿದ್ದರೂ ಭಾರತದ ಸಾಂಸ್ಕೃತಿಕ ಐಕ್ಯಕ್ಕೆ ಸಾಕ್ಷಿಯೆಂದು ಪರಿಗಣಿಸಬಹುದು. ಪರ್ವತಶ್ರೇಣಿಗಳಿಂದ ಪ್ರತ್ಯೇಕಿಸಲ್ಪಟ್ಟಿದ್ದರೂ ಕಾಶ್ಮೀರ ಶತಮಾನಗಳಿಂದಲೂ ಭಾರತೀಯ ಸಂಸ್ಕೃತಿಗೆ ಸಮೀಪವಾಗಿಯೇ ಇದೆ. ಕಾಶ್ಮೀರದ ಗಾದೆಗಳನ್ನಾಗಲಿ ಪದ್ಯಗಳನ್ನಾಗಲಿ ಅಧ್ಯಯನ ಮಾಡುವಾಗ ವೇದ ಉಪನಿಷತ್ತುಗಳ ತತ್ತ್ವಗಳ ಅರಿವಾಗದಿರುವುದಿಲ್ಲ.

ಮೊಟ್ಟಮೊದಲಿನ ಕಥೆಗಳೆಂದು ಪ್ರಸಿದ್ಧವಾದ ಬೃಹತ್ಕಥೆ ಮತ್ತು ಪಂಚತಂತ್ರಗಳು ಕಾಶ್ಮೀರದಲ್ಲಿಯೇ ಹುಟ್ಟಿದವು. ಇಲ್ಲಿನ ಜನಪದ ಕಥೆಗಳೂ ಕಥಾಸರಿತ್ ಸಾಗರ ಮತ್ತು ಪಂಚತಂತ್ರದ ಕಥೆಗಳಷ್ಟೇ ಸಮೃದ್ಧವಾಗಿವೆ. ಕಾಶ್ಮೀರದ ಹಾಸ್ಯ ಪ್ರವೃತ್ತಿ ಭಾರತದಲ್ಲಿಯೇ ಪ್ರಸಿದ್ಧವಾಗಿದೆ. ಗ್ರಿಯರ್ಸನ್ ಕಾಶ್ಮೀರದ ನುಡಿಗಟ್ಟುಗಳನ್ನು ತುಂಬ ಹೊಗಳಿದ್ದಾನೆ. ಕಾಶ್ಮೀರದ ನುಡಿಗಟ್ಟುಗಳ ಗಣಿಗಳನ್ನು ಅಗೆದರೆ ಭಾಷಾವೈಜ್ಞಾನಿಕ ಸತ್ಯಗಳ ಅದಿರುಗಳು ದೊರಕುತ್ತವೆ. ಹಬ್ಬಹರಿದಿನಗಳಲ್ಲಿ, ಉತ್ಸವಗಳಲ್ಲಿ, ಋತುಗಳಲ್ಲಿ ಮಾತ್ರವಲ್ಲದೆ ಕಸಬುಗಾರರು ತಮ್ಮ ಕೆಲಸಗಳಲ್ಲಿ ನಿರತರಾದಾಗ ಹಾಡುವ ಹಾಡುಗಳು, ಅಕ್ ನಂದುನ್ ಹಿಮಾಲ್ ನಗ್‌ರಾಯ್ ಮುಂತಾದ ಲಾವಣಿಗಳು-ಇವೆಲ್ಲ ಕಾಶ್ಮೀರದ ಜನಪದ ಸಾಹಿತ್ಯದ ವೈವಿಧ್ಯಗಳನ್ನು ಮಾತ್ರವಲ್ಲದೆ ಜನಪದ ಗೀತೆಗಳ ರಾಗಗಳನ್ನೂ ಪ್ರತಿಬಿಂಬಿಸುತ್ತವೆ. ಇದರ ಆಧಾರದ ಮೇಲೆಯೇ ಮುಂದಿನ ಭಾವಗೀತೆಗಳು ರಚಿಸಲ್ಪಟ್ಟಿವೆ. ಕಾಶ್ಮೀರಿಯಲ್ಲಿ ಮಕ್ಕಳ ಹಾಡುಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಜನನ, ಉಪನಯನ, ಮದುವೆ, ಮರಣ ಮುಂತಾದ ಧಾರ್ಮಿಕ ಸಮಾರಂಭಗಳ ಹಾಡುಗಳು ಸಾಂಸ್ಕೃತಿಕ ದೃಷ್ಟಿಯಿಂದ ಎಷ್ಟು ಸಮೃದ್ಧವಾಗಿವೆಯೋ ಮಾನವ ಜೀವವಿಜ್ಞಾನದ ದೃಷ್ಟಿಯಿಂದಲೂ ಮುಖ್ಯವಾಗಿವೆ.

**ಪ್ರಾಚೀನಯುಗ:** 1500ರ ವರೆಗಿನ ಸಾಹಿತ್ಯ ಪ್ರಾಚೀನ ಯುಗಕ್ಕೆ ಸೇರುತ್ತದೆ. ಸಂಸ್ಕೃತ ಸಾಹಿತ್ಯಕ್ಕೆ ಕಾಶ್ಮೀರದ ಕೊಡುಗೆ ತುಂಬ ಮಹತ್ತ್ವಪೂರ್ಣವಾಗಿದೆಯೆಂಬ ವಿಷಯ ಎಲ್ಲರಿಗೂ ತಿಳಿದೇ ಇದೆ. ದಾಮೋದರ, ಅಭಿನವಗುಪ್ತ, ಕಲ್ಹಣ, ಬಿಲ್ಹಣ, ಕ್ಷೇಮೇಂದ್ರ ಮುಂತಾದವರ ಹೆಸರುಗಳು ಸಂಸ್ಕೃತ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ಉಳಿದಿವೆ. ಕಾಶ್ಮೀರದ ಶೈವಾಗಮ ಸಿದ್ಧಾಂತವೂ ಪ್ರಸಿದ್ಧವೇ. ತಮಿಳುನಾಡಿನ ಶೈವಸಿದ್ಧಾಂತವೂ ಇದಕ್ಕೆ ಸಂಬಂಧಿಸಿದ್ದೇ ಆಗಿದೆ. ಕಾಶ್ಮೀರಿ ಪ್ರತ್ಯೇಕ ಭಾಷೆಯಾಗಿ ವಿಕಾಸಗೊಳ್ಳುವುದಕ್ಕೆ ಮೊದಲು ಪ್ರಾಕೃತ ಮತ್ತು ಅಪಭ್ರಂಶದ ಕಾಲವಿತ್ತು. ಆದರೆ ಅದನ್ನು ಕಾಶ್ಮೀರೀ ಪ್ರಾಕೃತ ಅಥವಾ ಕಾಶ್ಮೀರೀ ಅಪಭ್ರಂಶ ಎನ್ನುವುದಕ್ಕೆ ಬೇಕಾದ ಉದಾಹರಣೆಗಳು ಸಿಕ್ಕಿಲ್ಲ. ಕಲ್ಹಣನ

ರಾಜತರಂಗಿಣಿಯಲ್ಲಿ ಕಾಶ್ಮೀರೀ ಅಪಭ್ರಂಶ ಎನ್ನಬಹುದಾದ ಒಂದು ಅರ್ಧಸಾಲು ದೊರಕುತ್ತದೆ: 'ರಂಗಸ್ಸ ಹೇಲು ದಿಣ್ಣ' (ಹೇಲು ಎನ್ನುವ ಗ್ರಾಮವನ್ನು ರಂಗನಿಗೆ ಕೊಟ್ಟಿದೆ). ಇದು ಹತ್ತನೆಯ ಶತಮಾನದಲ್ಲಿ ಬರೆದ ಗ್ರಂಥ. ಈ ವಿಚಾರವಾಗಿ ಚಟರ್ಜಿಯವರು ಹೇಳುತ್ತಾರೆ–ಹಳೆಯ ಕಾಶ್ಮೀರಿ ಯುಗಕ್ಕಿಂತ ಹಿಂದೆ ಸಂಸ್ಕೃತದ ಜೊತೆ ಆರ್ಯಭಾಷೆಯ ಪ್ರಾಕೃತ ಮತ್ತು ಅಪಭ್ರಂಶ ರೂಪವನ್ನೇ ಕಾಶ್ಮೀರದ ವಿದ್ವಾಂಸರೂ ಬಳಸುತ್ತಿದ್ದರು. ತಂತ್ರಸಾರದ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಅಪಭ್ರಂಶದ ಎರಡೆರಡು ಶ್ಲೋಕಗಳಿವೆ. ಆದರೆ ಇದರಲ್ಲಿ ಕಾಶ್ಮೀರಿಯ ಲಕ್ಷಣಗಳೇನೂ ಕಾಣಿಸುವುದಿಲ್ಲ. ಮಹೇಶ್ವರಾನಂದನ ಮಹಾರ್ಥ ಮಂಜರಿಯಲ್ಲಿಯೂ 71 ಪ್ರಾಕೃತ ಶ್ಲೋಕಗಳಿವೆ. ಇದನ್ನು 1200ರಲ್ಲಿ ಬರೆಯಲಾಗಿದೆ ಎನ್ನಬಹುದು.

ಕಾಶ್ಮೀರಿ ಭಾಷೆಯಲ್ಲಿ ನಮಗೆ ಸಿಗುವ ಅತಿ ಪ್ರಾಚೀನ ದಾಖಲೆ ಎಂದರೆ ಶಿತಿಕಂಠಾಚಾರ್ಯ ಸಂಸ್ಕೃತದಲ್ಲಿ ಬರೆದ ಮಹಾನಯ ಪ್ರಕಾಶ ಎನ್ನುವ ಗ್ರಂಥದಲ್ಲಿ ಕಂಡುಬರುವ 94 ಶ್ಲೋಕಗಳು. ಇದೇ ಕಾಲದಲ್ಲಿ ಚುಮ್ಮಾ ಸಂಪ್ರದಾಯವೆಂಬ ಇನ್ನೊಂದು 74 ಶ್ಲೋಕಗಳ ಗ್ರಂಥವೂ ರಚಿಸಲ್ಪಟ್ಟಿತು. ಗ್ರಿಯರ್‌ಸನ್ ಇದರ ಕಾಲ 1500 ಎಂದೂ ಚಟರ್ಜಿ 1300 ಎಂದೂ ಅಭಿಪ್ರಾಯಪಡುತ್ತಾರೆ. ಹದಿನಾಲ್ಕನೆಯ ಶತಮಾನದಲ್ಲಿ ಲಾಲ್ ದೇದ್ ಎನ್ನುವ ಕವಯಿತ್ರಿಯೊಬ್ಬಳು ಕಾಶ್ಮೀರಿಯಲ್ಲಿ ಅನುಭಾವಿ ಕವಿತೆಗಳನ್ನು ಬರೆದಳು. ಈ ಕವಿತೆಗಳು ಜನಪದ ಸಂಪ್ರದಾಯದಲ್ಲಿ ನಮಗೆ ದೊರೆತ ಅತಿ ಪ್ರಾಚೀನ ದಾಖಲೆಗಳು ಎನ್ನಬಹುದು. ಲಲ್‌ವಾಖ್ ಎಂದು ಪ್ರಸಿದ್ಧವಾದ ಈ ಕವಿತೆಗಳು ಶಿವನನ್ನು ಕುರಿತಾದ ಅನುಭಾವಿ ರಚನೆಗಳು. ಲಾಲ್ ದೆದ್ದಳ ವೈವಾಹಿಕ ಜೀವನ ಸಫಲವಾಗಿರಲಿಲ್ಲ. ಆಕೆಯ ದಾರುಣ ಅನುಭವಗಳು ಈ ಕೃತಿಗಳ ಮೂಲಕ ವ್ಯಕ್ತವಾಗಿವೆ. ಆಕೆಯ ತರುವಾಯ 1500ರಷ್ಟಕ್ಕೆ ಶಾ ನೂರುದ್ದೀನ್ ಎನ್ನುವ ಇನ್ನೊಬ್ಬ ಮುಸ್ಲಿಂ ಸಂತ ಅನುಭಾವಿ ಶ್ರುಕ್ ಎಂಬ ಭಕ್ತಿಗೀತೆಗಳ ಗ್ರಂಥವನ್ನು ರಚನೆ ಮಾಡಿದ.

**ಮಧ್ಯಕಾಲ–ಪೂರ್ವಭಾಗ:** 1500–1800. ಈ ಕಾಲದಲ್ಲಿ ಕಾಶ್ಮೀರೀ ಭಾಷೆ ರಾಜಾಶ್ರಯ ಪಡೆಯಿತು. ಅಬಿದೀನ್ ಎನ್ನುವ ಬಾದಶಾಹ ಅದನ್ನು ರಾಜಭಾಷೆಯಾಗಿ ಮಾಡಿದ. ಅವನ ಆಸ್ಥಾನದಲ್ಲಿ ಸಂಸ್ಕೃತ, ಪರ್ಷಿಯನ್ ಮತ್ತು ಕಾಶ್ಮೀರೀ ಭಾಷೆಯ ಕವಿಗಳಿದ್ದರು. ಉತ್ಥಸೋಮ ಎಂಬ ಕವಿ ಕೆಲವು ಭಾವಗೀತೆಗಳನ್ನೂ ಅಬಿದೀನನ ಜೀವನ ಚರಿತ್ರೆಯನ್ನೂ ಮಾನಕ ಎಂಬ ಸಂಗೀತ ಲಕ್ಷಣ ಗ್ರಂಥವನ್ನೂ ಬರೆದ. ಭಟ್ಟಾವತಾರ ಎನ್ನುವ ಕವಿ ಬಾಣಾಸುರ ವಧ ಎನ್ನುವ ಕಥನಕಾವ್ಯವನ್ನೂ ಜೈನ ವಿಲಾಸ ಎನ್ನುವ ಗ್ರಂಥವನ್ನೂ ಬರೆದ. ಯೋಧ ಭಟ್ಟ ಎನ್ನುವ ಕವಿ ಜೈನಚರಿತ ಎನ್ನುವ ಜೀವನಚರಿತ್ರೆಯನ್ನೂ ಜೈನಪ್ರಕಾಶ ಎಂಬ ನಾಟಕವನ್ನೂ ಬರೆದ. ಇವುಗಳಲ್ಲಿ ಬಾಣಾಸುರ ವಧ ಎನ್ನುವ ಗ್ರಂಥ ಮಾತ್ರ ಈಗ ಉಪಲಬ್ಧವಾಗಿದೆ. ಇದು ಒಂದು ಶೃಂಗಾರಪ್ರಧಾನವಾದ ಪ್ರೇಮ ಕಾವ್ಯ. 1150ರ ವರೆಗಿನ ರಾಜಮನೆತನಗಳ ಚರಿತ್ರೆಯಾದ ರಾಜತರಂಗಿಣಿಯ ಮಾದರಿಯಲ್ಲಿಯೇ ಮುಂದಿನ ರಾಜರುಗಳ ಚರಿತ್ರೆಯಾದ ಅಬಿದೀನ್ ರಾಜ ಬರೆಸಿದ್ದಾನೆ. ಮುಲ್ಲಾ ಅಹಮದ್ ಎಂಬಾತ ರಾಜ ತರಂಗಿಣಿ ಮತ್ತು ಮಹಾಭಾರತವನ್ನು ಪರ್ಷಿಯನ್ ಭಾಷೆಗೆ ಅನುವಾದ ಮಾಡಿದ್ದಾನೆ. ಶ್ರೀವರನೆಂಬಾತ ಯೂಸುಫ್ ಜುಲ್ಯೆಕ ಎನ್ನುವ ಪರ್ಷಿಯನ್ ಈ ಪ್ರೇಮ ಕಾವ್ಯವನ್ನು ಸಂಸ್ಕೃತಕ್ಕೆ ಅನುವಾದ ಮಾಡಿದ್ದಾನೆ.

1500ರಿಂದೀಚೆಗೆ ಬರಬರುತ್ತ ಬ್ರಾಹ್ಮಣ ಸಂಪ್ರದಾಯದ ಶೈವ ಅನುಭಾವಿಗಳ ಸಂಖ್ಯೆ ಕಡಿಮೆಯಾಗುತ್ತ ಬಂತು. ಇಸ್ಲಾಂ ಪಂಥದ ಸೂಫೀ ಸಂಪ್ರದಾಯ ಪ್ರಬಲವಾಯಿತು. ಇದರಿಂದಾಗಿ ಕಾಶ್ಮೀರೀ ಭಾಷೆ ಮತ್ತು ಸಾಹಿತ್ಯದಲ್ಲಿ ಆಧುನಿಕತೆಯ ಕಳೆ ಕೂಡಿಬಂತು. ಕಾಶ್ಮೀರದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯೂ ಇದಕ್ಕೆ ಕಾರಣವಾಯಿತು ಎನ್ನಬಹುದು. ಈ ಕಾಲದಲ್ಲಿ ಕಾಶ್ಮೀರ ಮೂರು ಮಹಾ ಸಾಮ್ರಾಟರ ಅಧೀನಕ್ಕೆ ಒಳಪಟ್ಟಿತು. 1586ರಲ್ಲಿ ಕಾಶ್ಮೀರ ಸುಲ್ತಾನರ ಪತನವಾದ ಮೇಲೆ 1748ರವರೆಗೆ ಮೊಗಲ ಸುಲ್ತಾನರು ಆಳಿದರು. ಆಮೇಲೆ 1820ರವರೆಗೆ ಆಫ್ಘನ್ ರಾಜನ ವಶಕ್ಕೊಳಪಟ್ಟಿತು. ಇದರಿಂದಾಗಿ ಹಿಂದೂ ಧರ್ಮ ಮತ್ತು ಸಂಸ್ಕೃತದ ಪ್ರಭಾವ ಕುಗ್ಗಿ ಇಸ್ಲಾಂ ಧರ್ಮ ಮತ್ತು ಸೂಫೀ ಸಂಪ್ರದಾಯದ ಪ್ರಾಬಲ್ಯ ಹೆಚ್ಚಾಯಿತು. ಆದರೂ ಹಿಂದೂ ಹಾಗೂ ಸೂಫೀ ಸಂಪ್ರದಾಯಗಳ ಸಾಮರಸ್ಯವನ್ನು ಇಲ್ಲಿ ನಾವು ಕಾಣುತ್ತೇವೆ. ಸಾಹಿತ್ಯದಲ್ಲಿ ಮಾತ್ರ ಈ ಸಾಮರಸ್ಯ ಅಷ್ಟೊಂದು ಕಾಣಬರುವುದಿಲ್ಲ. ಈ ಕಾಲದಲ್ಲಿ ಪ್ರಕಟವಾದ ಕಾವ್ಯಗಳೆಲ್ಲ ಪರ್ಷಿಯನ್ ಕಾವ್ಯಗಳ ಪಡಿಯಚ್ಚುಗಳಂತಿವೆ. ಹಿಂದೂ ಕವಿಗಳು ಮಾತ್ರ ಪುರಾಣದಿಂದ ಆರಿಸಿದ ಕಥಾವಸ್ತುಗಳನ್ನು ಉಪಯೋಗಿಸಿದ್ದಾರೆ. ಭಾಷೆ, ಶಬ್ದಗಳು, ಮತ್ತು ಅಲಂಕಾರಗಳಲ್ಲಿ ಕವಿಯ ಧಾರ್ಮಿಕ ಹಿನ್ನೆಲೆಯನ್ನು ಕಾಣಬಹುದು. ಈ ಯುಗದ ಕೆಲವು ಮುಖ್ಯವಾದ ಕವಿಗಳ ಹೆಸರುಗಳು ಹೀಗಿವೆ. ಹಬ್ಬ ಖೋತನ್ (1600) ಎಂಬ ಕವಯಿತ್ರಿ ತನ್ನ ಭಾವಗೀತೆಗಳಿಂದಾಗಿ ಪ್ರಸಿದ್ಧಳಾಗಿದ್ದಾಳೆ. ವಿವಾಹ ವಿಚ್ಛೇದ ಪಡೆದು ಪುನರ್ವಿವಾಹವಾದ ಈಕೆಯ ಪ್ರೇಮ, ಆಸೆ, ಭಾವೋದ್ವೇಗಗಳು ಕಾವ್ಯದಲ್ಲಿ ಪ್ರತಿಬಿಂಬಿತವಾಗಿವೆ. ಅರಿನ್‌ಮಾಲ್ (1800) ಕವಿಯ ಭಾವಗೀತೆಗಳಲ್ಲಿ ಭಕ್ತಿಭಾವನೆಗಳೂ ತುಂಬಿವೆ. ಹಬೀಬುಲ್ಲ ನೌಶಹರಿ (1700) ಕೂಡ ಭಾವಗೀತೆಗಳನ್ನು ರಚಿಸಿದ್ದಾನೆ. ಜಹಾಂಗೀರನ ಸಮಕಾಲೀನನಾದ ಸಾಹಿಬ್ ಕೌಲ್ ಎಂಬ ಕವಿ ಕೃಷ್ಣಾವತಾರ ಮತ್ತು ಜನಮಚರಿತ ಎಂಬ ಕಾವ್ಯಗಳನ್ನು ಬರೆದಿದ್ದಾನೆ. ರೂಪಭವಾನಿ (1720) ಸಂಸ್ಕೃತ ಮಿಶ್ರಿತ ಭಾಷೆಯಲ್ಲಿ ಧಾರ್ಮಿಕ ಗೀತೆಗಳನ್ನು ರಚಿಸಿದ್ದಾನೆ. ಪ್ರಕಾಶ್‌ರಾಮ (1700) ರಾಮಾವತಾರಚರಿತವನ್ನು ಬರೆದಿದ್ದಾನೆ. ಈ ಕೆಲವು ಕಾವ್ಯಗಳ ಕಥಾವಸ್ತು ಹಿಂದೂ ಪುರಾಣಗಳಿಂದ ಆರಿಸಿದ್ದಾದರೂ ಅವುಗಳ ಮೇಲೆ ಪರ್ಷಿಯನ್ ಪ್ರಭಾವ ಬಿದ್ದಿದೆ. ಮಿರ್ ಅಬ್ದುಲ್ಲ (1807) ಅವರ ಕೋಶುರ್ ಆಕ್ವಿದ ಮತ್ತು ಮಕ್ತಾಸರ್‌ವಕಾಯ ಎಂಬ ಧಾರ್ಮಿಕ ಪದ್ಯಗಳೂ ಗಂಗಾಪ್ರಸಾದನ ಶೋಕ್ ದುಖ್ ಚರಿತ ಎಂಬ ಪದ್ಯಗಳೂ ಪ್ರಸಿದ್ಧವಾಗಿವೆ.

**ಮಧ್ಯಕಾಲ–ಉತ್ತರಭಾಗ:** 1800–1900. ಹದಿನೆಂಟನೆಯ ಶತಮಾನ ಮತ್ತು ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧ ಭಾಗದ ಕವಿಗಳು ಪರ್ಷಿಯನ್‌ಭಾಷೆ ಹಾಗೂ ಸಾಹಿತ್ಯದಿಂದ ಪ್ರಭಾವಿತರಾಗಿದ್ದರು. ಆಮೇಲೆ ಬಂದ ಕವಿಗಳು ಪುರಾಣದ ಕಥಾವಸ್ತುಗಳಿಂದ ಮಾತ್ರವಲ್ಲದೆ ಜನಪದ ಸಾಹಿತ್ಯದಿಂದಲೂ ಸ್ಫೂರ್ತಿ ಪಡೆದರು. ಈ ಕಾಲವನ್ನು ಕಾಶ್ಮೀರೀ ಸಾಹಿತ್ಯದ ಸುವರ್ಣಕಾಲವೆನ್ನಬಹುದು. ಈ ಕಾಲದ ಕವಿಗಳಲ್ಲಿ ಈ ಕೆಳಗಿನವರು ಪ್ರಸಿದ್ಧರಾಗಿದ್ದಾರೆ. ಪರಮಾನಂದ (1880) ಎನ್ನುವ ಕವಿ ಶಿವಪಾರ್ವತಿಯರ ಮೇಲೆ ಶಿವಲಗನ್ ಎಂಬ ಭಕ್ತಿ ಕಾವ್ಯವನ್ನು ರಚಿಸಿದ್ದಾನೆ. ರಾಧಾ ಸ್ವಯಂವರ್ ಮತ್ತು ಸೋದಾಮ್ ಚರಿತ ಇವನ ಇನ್ನೆರಡು ಕೃತಿಗಳು. ಮೊಹಮದ್ ಗಾಮಿ (1855) ಯೂಸುಫ್ ಜುಲೈಕ, ಶಿರಿನ್ ಖುಸ್‌ರೋ, ಲೈಲಾ–ವ–ಮಜ್ನು ಮುಂತಾದ ಶೃಂಗಾರ ಕಾವ್ಯಗಳನ್ನು ರಚಿಸಿದ್ದಾನೆ. ಮುಕ್‌ಬುಲ್‌ಶಾ ಪರ್ಷಿಯನ್ ಸಾಹಿತ್ಯದ ಪ್ರೇಮಕಥೆಯೊಂದರ ಆಧಾರದ ಮೇಲೆ ಗುಲ್‌ರೆಜ್ ಎನ್ನುವ ಕಾವ್ಯ ಬರೆದಿದ್ದಾನೆ. ಗ್ರೀಸ್ತ್‌ನಾಮ ಎಂಬ ಗ್ರಾಮೀಣ ಜೀವನದ ಕಥೆಯನ್ನೂ ವಿಡಂಬನೆಯ ರೂಪದಲ್ಲಿ ಬರೆದಿದ್ದಾನೆ. ಲಖ್‌ಮಂಜು ಬರೆದ ನಳದಮಯಂತಿ, ವಹಾಬ್ ಪರೆ ಬರೆದ ಶಹ್‌ನಾಮಾ, ರಸೂಲ್ ಮೀರ್ ಬರೆದ ಗಜ್ಜಲ್‌ಗಳು–ಇವೂ ಪ್ರಸಿದ್ಧವಾಗಿವೆ. ಉಪನಿಷತ್ತಿನ ಶುನಶ್ಯೇಪಾ ಖ್ಯಾನದ ಆಧಾರದ ಮೇಲೆ ರಚಿತವಾದ ರಮ್‌ಜಾನ್‌ಬಟ್‌ನ ಅಖನಂದುಮ್ ಕೂಡ ಪ್ರಸಿದ್ಧವಾಗಿದೆ. ಕಲಂದರ್ ಶಾ, ನಾಜ್ಹಿಮ್, ಮಿಸ್‌ಕೀನ್, ಖ್ವಾಜಾ ಅಕ್‌ರಮ್, ಅಜ್ಹೀಜ್ ದರ್‌ವೇಶ್, ವಾಹಬ್, ಖಾರ್, ಮಿರ್ಜಾ ಕಾಕ್ ಮುಂತಾದವರೂ ಈ ಕಾಲದ ಪ್ರಸಿದ್ಧ ಕವಿಗಳು.

**ಆಧುನಿಕ ಯುಗ:** 1900–46. ದೇಶ ಸಾಂಸ್ಕೃತಿಕ ಪುನರುಜ್ಜೀವನವನ್ನು ಪಡೆದಾಗ ಕಾಶ್ಮೀರೀ ಸಾಹಿತ್ಯದ ಆಧುನಿಕ ಯುಗ ಪ್ರಾರಂಭವಾಯಿತೆನ್ನಬಹುದು. ಆಗಲೇ ಜನ ತಮ್ಮ ಭಾಷೆಗಳ ಸೌಂದರ್ಯವನ್ನು ಮನಗಂಡು ಸಾಹಿತ್ಯ ಮತ್ತು ಸಂಸ್ಕೃತಿಯ ಮಹತ್ತ್ವವನ್ನು ಅರಿಯತೊಡಗಿದರು. ವಿಶ್ವಖಂಡದಲ್ಲೆಲ್ಲ ರಾಷ್ಟ್ರೀಯ ಜಾಗೃತಿ ಹಾಗೂ ಸ್ವಾತಂತ್ರ್ಯಪ್ರೇಮ ಹುಟ್ಟಿದ ಕಾಲವದು. ಕಾಶ್ಮೀರದ ಕಣಿವೆಯೂ ಅದರ ಪ್ರಭಾವಕ್ಕೊಳಪಟ್ಟಿತು. ಈ ಹೊಸ ಭಾವನೆಗಳಿಂದ ಪ್ರೇರಿತನಾದ ಮಹ್‌ಜೂರ್ ಎಂಬ ಕವಿಯ ಕಾವ್ಯದಲ್ಲಿ ಶೃಂಗಾರರಸದೊಡನೆ ದೇಶಭಕ್ತಿ ಮತ್ತು ಪ್ರಕೃತಿ ಪ್ರೇಮವನ್ನು ನೋಡಬಹುದು. ಈತನನ್ನು ಕಾಶ್ಮೀರೀ ಸಾಹಿತ್ಯದ ಹೊಸ ಯುಗದ ಪ್ರವರ್ತಕ ಎನ್ನಬಹುದು. ಕೃಷ್ಣರಾಜ್‌ದಾನ್ (ರಾಜಾನಕ) ಇನ್ನೊಬ್ಬ ಪ್ರತಿಭಾವಂತ ಕವಿ. ಆತ ಪ್ರಕೃತಿವರ್ಣನೆ ಮತ್ತು ಗೀತರೂಪಕಗಳಿಗೆ ಪ್ರಸಿದ್ಧನಾಗಿದ್ದಾನೆ. ಆತನ ಶಿವಪರಿಣಯದಲ್ಲಿ ತುಲಸೀದಾಸನ ರಾಮಾಯಣದಂತೆ ಭಕ್ತಿ ಮತ್ತು ಅನುಭಾವದ ಸಮನ್ವಯವಿದೆ. ಜಿಂದ ಕೌಲ್ ಬರೆದ ಸುಮ್‌ರನ್ ಕೂಡ ಅನುಭಾವಿ ಕವನಗಳ ಸಂಗ್ರಹ. ನಾರಾಯಣ ಖರ್ ಎಂಬಾತ ಭಗವದ್ಗೀತೆಯನ್ನೂ ಮನಜೂ ಅತ್ತಾರ್ ಎಂಬಾತ ಭಾಗವತ ಪುರಾಣವನ್ನೂ ಅನುವಾದ ಮಾಡಿದ್ದಾರೆ.

**ಸಮಕಾಲೀನ ಯುಗ :** ಗದ್ಯಸಾಹಿತ್ಯದ ವಿಕಾಸದ ದೃಷ್ಟಿಯಿಂದ ಈ ಯುಗ ತುಂಬ ಮಹತ್ತ್ವಪೂರ್ಣವಾಗಿದೆ. ಗದ್ಯಸಾಹಿತ್ಯದ ಪರಂಪರೆ ಆಧುನಿಕ ಯುಗದಲ್ಲಿಯೇ ಪ್ರಾರಂಭವಾದರೂ ಗದ್ಯದ ವಿಕಾಸ 1947ರಿಂದ ಈಚೆಗೆ ಪ್ರಾರಂಭವಾಯಿತೆನ್ನಬಹುದು. ಪರ್ಸೋ ಅರ್‍ಯಾಬಿಕ್ ಲಿಪಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡ ಮೇಲೆ ಇದರಲ್ಲಿ ಗದ್ಯ ಕೃತಿಗಳನ್ನು ಪ್ರಕಟಿಸುವ ಕಾರ್ಯ ಆರಂಭವಾಯಿತು. ಕಾಶ್ಮೀರೀ ಗದ್ಯದ ವಿಕಾಸದಲ್ಲಿ ಆಕಾಶವಾಣಿಯ ಪಾತ್ರ ತುಂಬ ಮಹತ್ತ್ವದ್ದಾಗಿದೆ. ಕಾದಂಬರಿ, ಕಥೆ, ನಾಟಕ, ಕಾವ್ಯ, ಲೇಖನ ಎಲ್ಲ ಈಗ ಕಾಶ್ಮೀರಿಯಲ್ಲಿ ಪ್ರಕಟವಾಗುತ್ತಿವೆ.

ಹಿಂದೀ ಮತ್ತು ಇತರ ಸಮಕಾಲೀನ ಭಾಷೆಗಳ ಸಾಹಿತ್ಯದಲ್ಲಿ ಕಂಡುಬರುವ ಪ್ರವೃತ್ತಿಗಳೆಲ್ಲವೂ ಕಾಶ್ಮೀರಿಯಲ್ಲಿಯೂ ಕಂಡುಬರುತ್ತವೆ. ಹಳೆಯ ಪ್ರವೃತ್ತಿಗಳ ಪುನರುಜ್ಜೀವನವನ್ನು ನಾವು ಮತ್ತೆ ಇಲ್ಲಿ ನೋಡಬಹುದು. ಜನಪದ ಗೀತೆಗಳ ನಾದಮಾಧುರ್ಯ, ಪ್ರತೀಕಾತ್ಮಕತೆ, ಪ್ರಕೃತಿ ವರ್ಣನೆ, ಲಾವಣಿಯ ವೃತ್ತಗಳು ಎಲ್ಲವನ್ನು ಈ ಯುಗದಲ್ಲಿ ಕಾಣಬಹುದು. ಆಧುನಿಕ ಪೀಳಿಗೆಯ ಕವಿಗಳು ಜನಪದ ಸಂಪ್ರದಾಯ ಶೈಲಿಗಳನ್ನು ತಮ್ಮ ಅಭಿವ್ಯಕ್ತಿಗೆ ಸಾಧನವಾಗಿ ಬಳಸಿಕೊಳ್ಳುವ ಹವ್ಯಾಸದಲ್ಲಿ ತೊಡಗಿದ್ದಾರೆ. ಹಿಂದೀ, ಉರ್ದು, ಬಂಗಾಲಿ ಮತ್ತು ಪಂಜಾಬಿ ಕಥೆಕಾದಂಬರಿಗಳು ಕಾಶ್ಮೀರೀ ಭಾಷೆಗೆ ಅನುವಾದವಾಗಿವೆ. ಈ ಯುಗದ ಪ್ರಸಿದ್ಧ ಕವಿಗಳು ನಾದಿಮ್, ರಾಹೀ, ಆಜ಼ಾದ್,

ಕಾಮಿಲ್, ನಾಜ್‍ಕೀ, ಬರ್ಕ್, ರೋಸನ್, ಪ್ರೇಮಿ, ಮಜ್‍ಬೂರ್, ಅಲ್‍ಮಸ್ತ್, ಫಿರಾಕ್, ಚಮನ್, ಬೇಕಸ್, ಆಜ್ಹಿಮ್, ಕುಂದನ್, ಸಾಕೀ, ಖಾಯಾಲ್, ಫಾಜ಼ಿಲ್, ಫಾನೀ, ಅಂಬಾರ್‍ದಾರ್, ವಲೀ ಮುಂತಾದವರು.

ಕಾಶ್ಮೀರಿಯಲ್ಲಿ ಪತ್ರಿಕಾ ವ್ಯವಸಾಯ ಇನ್ನೂ ಪ್ರಾರಂಭವಾಗಬೇಕಷ್ಟೆ. 1947ರಿಂದ ಗದ್ಯದ ವಿಕಾಸವಾಗುತ್ತಿದ್ದರೂ ಪತ್ರಿಕಾ ವ್ಯವಸಾಯ ಪ್ರಾರಂಭವಾಗಲಿಲ್ಲ. ಗದ್ಯ ಹಾಗೂ ಕಥಾ ಸಾಹಿತ್ಯವನ್ನು ಬೆಳೆಸಿದವರಲ್ಲಿ ಈ ಕೆಳಗಿನ ಹೆಸರುಗಳನ್ನು ಸ್ಮರಿಸಬಹುದು. ಮೊಹಿದ್ದಿನ್, ಅಮೀನ್ ಕಾಮಿಲ್, ಸೋಮನಾಥ ಝಿತ್‍ಸೀ. ಆಲಿಮೊಹಮ್ಮದ್ ಲೋನ್, ದೀಪಕ್ ಕೌಲ್ ಅವತಾರ್ ಕೃಷ್ಣನ್ ರೆಹ್‍ಬರ್ ಸೂಫಿ ಗುಲಾಂ ಮೊಹಮ್ಮದ್, ಹೃದಯ್ ಕೌಲ್ ಭಾರತೀ, ಉಮೇಶ್ ಕೌಲ್, ಬನ್‍ಸೀ ನಿರ್ದೋಶ್, ಮುಷ್ಕಾರ್ ಖಾನ್, ಶಂಕರ್ ರೈನಾ ಮತ್ತು ಫಾರೋಕ್ ನಾಜ್‍ಕೀ.

ವಿಚಾರ ಸಾಹಿತ್ಯವೂ ಇತ್ತೀಚೆಗೆ ಬೆಳೆಯುತ್ತಿದೆ. ಈ ದಿಶೆಯಲ್ಲಿ ಜಿಯಾಲಾಲ್ ಕೌಲ್, ಪುಷ್ಪ್, ಹಂಡೂ, ಓಂಕಾರ್‍ನಾಥ್ ಕಾಚ್‍ರು. ಓಂಕಾರ್‍ನಾಥ್ ಕೌಲ್, ಹಾಜಿನೀ, ರತ್ತನ್ ಲಾಲ್ ಶಾಂತ್, ಮೋಹನ್‍ಕೃಷ್ಣನ್ ಧರ್, ನಂದಲಾಲ್ ಭತ್ತ ಇವರುಗಳ ಪ್ರಯತ್ನ ಶ್ಲಾಘನೀಯವಾಗಿದೆ.

ಕಾಶ್ಮೀರೀ ಸಾಹಿತ್ಯ ಹೆಚ್ಚಿನ ಜನರ ಗಮನವನ್ನು ಇನ್ನೂ ಸೆಳೆಯಲಿಲ್ಲ. ಇದಕ್ಕೆ ರಾಜಕೀಯ ಹಾಗೂ ಶೈಕ್ಷಣಿಕ ಕಾರಣಗಳೂ ಇಲ್ಲದಿಲ್ಲ. ಕಾಶ್ಮೀರೀ ಜನತೆಯ ಮನೋಭಾವವೂ ಇದಕ್ಕೆ ಒಂದು ಮುಖ್ಯ ಕಾರಣ. ಕಾಶ್ಮೀರೀ ವಿಶ್ವವಿದ್ಯಾಲಯದಲ್ಲಿ ಕೂಡ ಕಾಶ್ಮೀರೀ ಭಾಷೆಯ ಹೆಚ್ಚಿನ ಅಧ್ಯಯನವಾಗಲಿ, ಸಂಶೋಧನೆಯಾಗಲಿ ನಡೆಯುತ್ತಿಲ್ಲ. ಕಾಶ್ಮೀರೀ ಸಾಹಿತ್ಯದ ಉದಯ ಮತ್ತು ವಿಕಾಸದ ವಿಚಾರವಾಗಿ ಈಗ ತಾನೇ ಅಧ್ಯಯನ ಪ್ರಾರಂಭವಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರ ಸಾಹಿತ್ಯ ಪರಿಷತ್ತು ಕಾಶ್ಮೀರೀ ಸಾಹಿತ್ಯದ ಅಭಿವೃದ್ಧಿಗಾಗಿ ಶ್ರಮಿಸತೊಡಗಿದೆ ಮತ್ತು ಶಿರಾಜ್ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಅನೇಕ ಹಸ್ತಪ್ರತಿಗಳನ್ನು ಪ್ರಕಟಿಸಿದೆ. ಕೋಶ ರಚನಾ ಕಾರ್ಯವನ್ನು ಕೈಗೊಂಡಿದೆ. ಕುರುಕ್ಷೇತ್ರ ವಿಶ್ವವಿದ್ಯಾಲಯವೂ ಕಾಶ್ಮೀರೀ ಭಾಷೆಯ ಮೇಲೆ ಸಂಶೋಧನೆಯನ್ನು ಕೈಗೊಂಡಿದೆ. ಭಾರತೀಯ ಭಾಷೆಗಳ ಕೇಂದ್ರೀಯ ಅಧ್ಯಯನ ಸಂಸ್ಥೆ ತನ್ನ ಪಾಟಿಯಾಲಾ ಶಾಖೆಯಲ್ಲಿ ಕಾಶ್ಮೀರೀ ಭಾಷೆಯ ಅಧ್ಯಾಪನ ಮತ್ತು ಸಂಶೋಧನ ಕಾರ್ಯವನ್ನು ಕೈಗೊಂಡಿದೆ. (ಜೆ.ಎಚ್.)

**ಕಾಶ್ಯಪ ಮಾತಂಗ :** ಬೌದ್ಧಧರ್ಮವನ್ನು ಚೀನ ದೇಶದಲ್ಲಿ ಪ್ರಚಾರಮಾಡಿದವರಲ್ಲಿ ಅಗ್ರಮಾನ್ಯ. ಮಧ್ಯಭಾರತಕ್ಕೆ ಸೇರಿದವನು. ಬಾಲ್ಯದಿಂದಲೂ ಬೌದ್ಧಧರ್ಮದಿಂದ ಆಕರ್ಷಿತನಾಗಿ, ಹೀನಯಾನ ಮತ್ತು ಮಹಾಯಾನ ಪಂಥಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದ. ವಿದ್ಯಾಭ್ಯಾಸಕ್ಕಾಗಿ ತಕ್ಷಶಿಲೆಗೆ ಹೋಗಿದ್ದ ಈತ ಅಲ್ಲಿಂದ ತನ್ನ ಜೊತೆಗಾರ ಧರ್ಮರತ್ನನೆಂಬ ಬೌದ್ಧ ಸಂನ್ಯಾಸಿಯೊಡನೆ ಮಧ್ಯ ಏಷ್ಯದ ಯೂ–ಚಿ ರಾಜ್ಯಕ್ಕೆ ಹೋದ. ಧರ್ಮಪ್ರಚಾರವೇ ಇವರಿಬ್ಬರ ಗುರಿಯಾಗಿತ್ತು. ಅನಂತರ ಮರಳ್ಗಾಡು ಮತ್ತು ಪರ್ವತಶ್ರೇಣಿಗಳಿಂದ ಕೂಡಿದ ದುರ್ಗಮ ಪ್ರದೇಶದಲ್ಲಿ ಪ್ರಯಾಣಮಾಡಿ ಸು. 65ರಲ್ಲಿ ಲೋಯಾಂಗ್ ನಗರ ತಲಪಿದ. ಆಗ ಚೀನವನ್ನಾಳುತ್ತಿದ್ದ ಚಕ್ರವರ್ತಿ ಮಿಂಗ್ ಟೀ. ಹ್ಯಾನ್ ವಂಶಸ್ಥನಾದ ಆತನಿಗೆ ಬೌದ್ಧಧರ್ಮದಲ್ಲಿ ಹೆಚ್ಚಿನ ಆಸಕ್ತಿಯಿತ್ತು. ಅವನು ಭಾರತೀಯ ಯಾತ್ರಿಕರನ್ನು ಸ್ವಾಗತಿಸಿ, ಇವರಿಗಾಗಿ ಲೋಯಾಂಗ್‍ನಲ್ಲಿ 68ರಲ್ಲಿ ಪೂಮಾಸ್ಸೆ ವಿಹಾರವನ್ನು (ಬಿಳಿಕುದುರೆಯ ವಿಹಾರ) ಕಟ್ಟಿಸಿದ. ಆತನ ಪ್ರೋತ್ಸಾಹದಿಂದ ಕಾಶ್ಯಪ ಮಾತಂಗ ಧರ್ಮರತ್ನನ ಸಹಾಯ ಪಡೆದು ಬೌದ್ಧ ಧರ್ಮವನ್ನು ಆ ದೇಶದ ಎಲ್ಲ ಭಾಗಗಳಲ್ಲೂ ಪ್ರಚಾರಮಾಡಿದುದಲ್ಲದೆ ಐದು ಬೌದ್ಧ ಗ್ರಂಥಗಳನ್ನು ಚೀನೀ ಭಾಷೆಗೆ ತರ್ಜುಮೆ ಮಾಡಿದುದಾಗಿ ತಿಳಿದುಬಂದಿದೆ. ಕಾಶ್ಯಪ ಮಾತಂಗ ಸುವರ್ಣಪ್ರಭಾಸಸೂತ್ರವೆಂಬ ಬೌದ್ಧಗ್ರಂಥದ ಮೇಲೆ ವ್ಯಾಖ್ಯಾನ ರಚಿಸಿದ್ದಾನೆ. ಈತ ಭಾಷಾಂತರಿಸಿದ ಗ್ರಂಥಗಳಲ್ಲಿ ನಮಗೆ ದೊರೆತಿರುವುದು 43 ವಿಭಾಗಗಳ ಸೂತ್ರವೆಂಬ ಗ್ರಂಥವೊಂದೇ. ಇದು ಬೌದ್ಧಸಂಹಿತೆಗಳಲ್ಲಿ ಒಂದಲ್ಲ. ಬೌದ್ಧ ಭಿಕ್ಷುಗಳ ಮಾರ್ಗದರ್ಶನಕ್ಕಾಗಿ ಪ್ರಶ್ನೋತ್ತರ ರೂಪದಲ್ಲಿರುವ ಒಂದು ಕೃತಿ. ಈತ ಭಾಷಾಂತರಿಸಿದ ಇತರ ಕೃತಿಗಳು ಪ್ರಾಯಶಃ ಲಲಿತ ವಿಸ್ತರ, ಧರ್ಮಸಮುದ್ರ ಕೋಶಸೂತ್ರ, ದಶಭೂಮಿ ಕ್ಲೇಶಚ್ಛೇದಿಕಾ ಸೂತ್ರ, ಜಾತಕ ಮತ್ತು ಪ್ರತಿಮೋಕ್ಷ–ಎಂಬುದು ಪಂಡಿತರ ಅಭಿಪ್ರಾಯ. (ಬಿ.ಕೆ.ಜಿ.; ಜಿ.ಆರ್.ಆರ್.)

**ಕಾಷ್‍ನಿಟೇ, ಮೇರಿ ಲೂಯಿಸೆ :** 1901–. ಜರ್ಮನಿಯ ಕವಯತ್ರಿ, ಕಾದಂಬರಿ ಹಾಗೂ ಕಥೆಗಾರ್ತಿ. ನಾಜ಼ಿಗಳು ಜರ್ಮನಿಯಲ್ಲಿ ಪ್ರಬಲರಾಗಿ ಬೌದ್ಧಿಕ ಸ್ವಾತಂತ್ರ್ಯವನ್ನು ನಾಶಗೊಳಿಸಲು ಪ್ರಾರಂಭಿಸಿದಾಗ ಹಲವು ಸಾಹಿತಿಗಳು ದೇಶವನ್ನು ಬಿಟ್ಟುಹೋದರು. ಅವರು ಜರ್ಮನಿಯಾಚೆ ನಿಂತು ತಮ್ಮ ಸಾಹಿತ್ಯ ಸೃಷ್ಟಿಯನ್ನು ಮುಂದುವರಿಸಿದರು. ಈಕೆ ದೇಶದೊಳಗೇ ಉಳಿದು ಸಾಹಿತ್ಯ ಸೃಷ್ಟಿಗೆ ತೊಡಗಿದವರ ಗುಂಪಿಗೆ ಸೇರಿದವಳು.

ಈಕೆ 1927 ರಿಂದ ಕವನಗಳನ್ನು ಬರೆಯುತ್ತಿದ್ದರೂ ಮೊದಲನೆಯ ಕವನ ಸಂಗ್ರಹ ಪ್ರಕಟವಾದುದು 1947ರಲ್ಲಿ. ಇವಳು ಎರಡು ಮಹಾಯುದ್ಧಗಳ ಅನುಭವಗಳನ್ನು ಉಂಡವಳು. ಹಿಟ್ಲರನ ಪ್ರಭುತ್ವದ ದಬ್ಬಾಳಿಕೆಯನ್ನು ಕಂಡವಳು. ಎರಡು ಬಾರಿ ಸೋತ ತನ್ನ ದೇಶದ ಸಂಕಟವನ್ನು ಅನುಭವಿಸಿದವಳು. ಇದರಿಂದ ಇವಳ ಕವನಗಳ ಸ್ಥಾಯೀ ಭಾವ ವಿಷಾದ, ವಸ್ತು ಯುದ್ಧಕಾಲದ ಅನುಭವಗಳು. ಅನುಭವದ ತೀಕ್ಷ್ಣತೆ ಮತ್ತು ಪ್ರಾಮಾಣಿಕತೆ, ಛಂದಸ್ಸಿನ ವೈವಿಧ್ಯ, ಅದರ ಮೇಲೆ ಇವಳ ಅಸಾಧಾರಣ ಪ್ರಭುತ್ವ–ಇವು ಈಕೆಯನ್ನು ಶ್ರೇಷ್ಠ ಕವಯಿತ್ರಿಯನ್ನಾಗಿ ಮಾಡಿದುವು.

ಲೀಬಿ ಬಿಗಿಂಟ್ (ಪ್ರೇಮದ ಉದಯ–1933) ಇವಳ ಮೊದಲ ಗಣನೀಯ ಕಾದಂಬರಿ. ಇದು ಬಹುಮಟ್ಟಿಗೆ ಆತ್ಮವೃತ್ತ. ಈಕೆಯ ಪ್ರಸಿದ್ಧ ಕಾದಂಬರಿ ಗಸ್ಟೇವ್ ರೂರ್‍ಬೆಟ್ (1950). ರಾಜಕೀಯ ಕ್ರಾಂತಿಯಲ್ಲಿ ಭಾಗವಹಿಸಿದ ಫ್ರೆಂಚ್ ಚಿತ್ರಕಾರ ಈ ಕೃತಿಯ ನಾಯಕ.

ಈಕೆ ತನ್ನ ಸಣ್ಣಕಥೆಗಳಲ್ಲಿ ಸಾಮಾನ್ಯ ಅನುಭವಗಳಾಚೆಯ ಒಂದು ಕಾಲ್ಪನಿಕ ಜಗತ್ತಿನಲ್ಲಿ ಕಾಲಿಡಲು ಯತ್ನಿಸಿದ್ದಾಳೆ. ಕಥೆಯ ವೃತ್ತಾಂತ ರೀತಿಯಲ್ಲಿ ಪ್ರಾಚೀನ ಸಾಹಿತ್ಯ ಮನೋಧರ್ಮವಿದ್ದರೂ ನಿರೂಪಣೆಯಲ್ಲಿ ಸಂಯಮ, ಸಾಮಗ್ರಿಯ ಜಾಗೃತ ವಿನ್ಯಾಸ ಕಾಣುತ್ತವೆ. (ಎಲ್.ಎಸ್.ಎಸ್.)

**ಕಾಸರಗೋಡು :** ಕೇರಳ ರಾಜ್ಯದ ಒಂದು ಜಿಲ್ಲೆ. ಕಾಸರಗೋಡನ್ನು 1984, ಮೇ 24ರಂದು ಒಂದು ಜಿಲ್ಲೆಯನ್ನಾಗಿ ಮಾರ್ಪಡಿಸಲಾಯಿತು. ಜಿಲ್ಲಾ ವಿಸ್ತೀರ್ಣ 1992 ಚ.ಕಿಮೀ. ಜನಸಂಖ್ಯೆ 13,02,600 (2011).

ಕಾಸರಗೋಡು ತಾಲ್ಲೂಕು ಕೇರಳದ ಉತ್ತರದ ತುದಿಯಲ್ಲಿದೆ. ಉತ್ತರ ಪೂರ್ವಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ದಕ್ಷಿಣದಲ್ಲಿ ಹೊಸದುರ್ಗ (ಕಾಞಂಗಾಡು) ತಾಲ್ಲೂಕು, ಪಶ್ಚಿಮದಲ್ಲಿ ಅರಬ್ಬೀ ಕಡಲು ಇವು ಕಾಸರಗೋಡು ತಾಲ್ಲೂಕಿನ ಮೇರೆಗಳು. ಪಟ್ಟಣ ಪಯಸ್ವಿನಿ ನದಿ ಅರಬ್ಬೀ ಸಮುದ್ರವನ್ನು ಸೇರುವೆಡೆಯಲ್ಲಿದೆ.

ಕಾಸರಗೋಡು ತಾಲ್ಲೂಕು ಏರು ತಗ್ಗುಗಳುಳ್ಳ ಪ್ರದೇಶ. ಸಮುದ್ರದ ದಡದಲ್ಲಿ ಅಲ್ಲಲ್ಲಿರುವ ಮರ (ಲ್ಯಾಟರೈಟ್) ಕಲ್ಲಿನ ಗುಡ್ಡಗಳು ಪೂರ್ವಕ್ಕೆ ಹೋದಂತೆಲ್ಲ ಎತ್ತರವಾಗುತ್ತವೆ. ಸಣ್ಣ ಸಣ್ಣ ಕಣಿವೆಗಳು, ತೊರೆಗಳು, ಝರಿಗಳು ಇವೆ. ಅಡಕೆ, ಬತ್ತ ತೆಂಗು, ಗೇರುಬೀಜ ಮುಂತಾದವನ್ನು ಬೆಳೆಯಲು ನೈಸರ್ಗಿಕ ಅನುಕೂಲತೆಗಳುಳ್ಳ ಫಲವತ್ತಾದ ಭೂಭಾಗವಿದು. ಸಮುದ್ರ ದಡದಿಂದ ಪೂರ್ವಕ್ಕೆ ಸು. 32 ಕಿಮೀ. ಅನಂತರ ಅಲ್ಲಲ್ಲಿ ದಟ್ಟವಾದ ಕಾಡುಗಳು ಹಬ್ಬಿವೆ.

ಕಾಸರಗೋಡು ತಾಲ್ಲೂಕಿನ ಕನಿಷ್ಠ ಉಷ್ಣತೆ 16º ಸೆಂ.–26.7º ಸೆಂ. ಗರಿಷ್ಠ ಉಷ್ಣತೆ 24.6º ಸೆಂ.–35º ಸೆಂ. ಜೂನ್ ತಿಂಗಳಲ್ಲಿ ಮಳೆಗಳ ಆರಂಭವಾಗುತ್ತದೆ. ಐದು ತಿಂಗಳು ಮಳೆಗಾಲ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಚಂದ್ರಗಿರಿಯ ಹತ್ತಿರ ಅರಬ್ಬೀ ಕಡಲನ್ನು ಸೇರುವ ಪಯಸ್ವಿನಿ ಈ ತಾಲ್ಲೂಕಿನ ನದಿಗಳಲ್ಲೆಲ್ಲ ದೊಡ್ಡದು. ಉಳಿದವು ಮೊಗ್ರಾಲ್, ಕುಂಬಳೆ, ಸಿರಿಯ ಮತ್ತು ಉಪ್ಪಳ ನದಿಗಳು.

ತಾಲ್ಲೂಕಿನ ಮುಖ್ಯ ಬೆಳೆ ಬತ್ತ. ತಗ್ಗಿನ ಬಯಲುಗಳಲ್ಲಿ ವರ್ಷದಲ್ಲಿ ಮೂರು ಬತ್ತದ ಬೆಳೆಗಳು. ಅಡಕೆ ಬೆಳೆಗೆ ಇದು ಪ್ರಸಿದ್ಧವಾಗಿದೆ. ಇಲ್ಲಿ ಎಕರೆಗಳಷ್ಟು ಅಡಕೆ ತೋಟಗಳಿವೆ. ಗೇರುಬೀಜ ಮತ್ತು ಮೆಣಸು ಇಲ್ಲಿಯ ಪ್ರಸಿದ್ಧ ವಾಣಿಜ್ಯ ಬೆಳೆಗಳು. ಸಮುದ್ರತೀರಪ್ರದೇಶದಲ್ಲಿ ತೆಂಗಿನ ಬೆಳೆ ಅಧಿಕ. ಕಾಸರಗೋಡಿಗೆ 34 ಕಿಮೀ ದೂರದಲ್ಲಿ ಕೇಂದ್ರೀಯ ಪ್ಲಾಂಟೇಷನ್ ಸಂಶೋಧನ ಸಂಸ್ಥೆಯಿದೆ. ಭಾರತದ ತೆಂಗು, ಅಡಕೆ, ಕೋಕೋ ಮತ್ತು ಗೇರುಬೀಜದ ಸಂಶೋಧನೆಗೆ ಸಂಬಂಧಿಸಿದ ಪ್ರಧಾನ ಕೇಂದ್ರ ಇದು. ಹಿರೇಹಳ್ಳಿ (ಕರ್ನಾಟಕ), ಪೀಚಿ (ಕೇರಳ), ಪಲೋಡ್ (ಕೇರಳ), ಮೋತಿನಗರ (ಪಶ್ಚಿಮ ಬಂಗಾಲ), ಕಾಹಿಕುಚಿ (ಅಸ್ಸಾಂ)–ಇವು ಈ ಕೇಂದ್ರದ ಶಾಖೆಗಳು. ಜಗತ್ತಿನ ಎಲ್ಲೆಡೆಗಳಿಂದಲೂ ತರಿಸಿ ಪ್ರಾಯೋಗಿಕವಾಗಿ ಬೆಳೆಸಿದ ನಲವತ್ತೈದು ಜಾತಿಯ ತೆಂಗಿನ ಮರಗಳು ಇಲ್ಲಿವೆ.

ಕಾಸರಗೋಡು ಅನೇಕ ಮತ, ಜಾತಿ, ಭಾಷೆ ಮತ್ತು ಸಂಸ್ಕೃತಿಗಳ ಸಂಗಮ ಸ್ಥಳ. ಈ ತಾಲ್ಲೂಕಿನ ಜನಸಂಖ್ಯೆ 1071,508 (1991). ಹವ್ಯಕರು (ಕನ್ನಡ), ಶಿವಳ್ಳಿಯವರು (ತುಳು), ಕೋಟದವರು (ಕನ್ನಡ), ಕರ್ಹಾಡರು (ಮರಾಠಿ), ಸ್ಥಾನಿಕರು (ತುಳು), ಸಾರಸ್ವತರು (ಕೊಂಕಣಿ), ಗೌಡಸಾರಸ್ವತರು (ಕೊಂಕಣಿ), ಚಿನಿವಾರರು (ಕನ್ನಡ), ಬಂಟರು (ತುಳು), ಬಂಟರು ಅಥವಾ ನಾಡವರು (ಕನ್ನಡ), ಬಿಲ್ಲವರು (ತುಳು–ಮಲಯಾಳ), ನಾಯರರು (ಮಲಯಾಳ), ಗಾಣಿಗರು (ಕನ್ನಡ–ಮಲಯಾಳ), ಕುಂಬಾರರು (ತುಳು–ಮಲಯಾಳ), ಮರಾಠಿಗರು (ಮರಾಠಿ–ಕನ್ನಡ), ಕೊರಗರು (ತುಳು), ಹರಿಜನರು (ತುಳು), ಮಾದಿಗರು (ಕನ್ನಡ), ಬೈರ (ಕನ್ನಡ), ಮುಸಲ್ಮಾನರಲ್ಲಿ ಮಾಪಿಳ್ಳೆಯವರು (ಮಲಯಾಳ), ತುರುಕರು (ಹಿಂದೂಸ್ತಾನಿ), ಕ್ರೈಸ್ತರಲ್ಲಿ ಪ್ರಾಟೆಸ್ಟಂಟರು (ಕನ್ನಡ–ತುಳು), ಕೆಥೊಲಿಕರು (ಕೊಂಕಣಿ)–ಇದು ಭಾಷಾನುಗುಣವಾಗಿ ಜನರ ವಿಂಗಡಣೆ.

ಬಡಗಿ ಕೆಲಸ, ಚಿನ್ನಬೆಳ್ಳಿ ಕೆಲಸ, ಕಮ್ಮಾರಿಕೆ, ಹೊಲಿಗೆ, ಮಡಕೆ ಮಾಡುವುದು, ಬೀಡಿ ಕಟ್ಟುವುದು, ಚಾಪೆ ತಯಾರಿಸುವುದು ಮುಂತಾದ ಸಣ್ಣ ಸಣ್ಣ ಉದ್ಯಮಗಳಿಂದ

ಜೀವಿಸುವ ಶ್ರಮಜೀವಿಗಳ ಸಂಖ್ಯೆ ಇಲ್ಲಿ ಅಧಿಕ. ಗೋಡಂಬಿ ಕಾರ್ಖಾನೆ, ಗರಗಸದ ಕಾರ್ಖಾನೆ, ಮತ್ಸೋದ್ಯಮ, ವಾಹನಗಳ ರಿಪೇರಿ, ಇವು ಇಲ್ಲಿಯ ಕೈಗಾರಿಕೆಗಳು.

ಈ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿಯ ಉದ್ದ ದಕ್ಷಿಣೋತ್ತರಕ್ಕೆ 48 ಕಿಮೀ. ಕಾಸರಗೋಡಿನಿಂದ ಪೂರ್ವಕ್ಕೆ ಜಾಲ್ಲೂರು ರಸ್ತೆಯ ಉದ್ದ 48 ಕಿಮೀ. ಕಾಸರಗೋಡಿನಿಂದ ಈಶಾನ್ಯಕ್ಕೆ ಪುತ್ತೂರಿಗೆ ಹೋಗುವ ರಸ್ತೆಯ ಉದ್ದ 33 ಕಿಮೀ. ಉಳಿದವು ಸಣ್ಣಸಣ್ಣ ರಸ್ತೆಗಳು. ದಕ್ಷಿಣ ರೈಲ್ವೆಯ ಬ್ರಾಡ್ ಗೇಜ್ ಮಾರ್ಗ ಈ ತಾಲ್ಲೂಕಿನ ಕರಾವಳಿಯ ಅಂಚಿನಲ್ಲಿ 35 ಕಿಮೀಗಳನ್ನು ಹಾಯ್ದುಹೋಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸು ಸರ್ಕಾರದ ಆಡಳಿತದಲ್ಲಿದ್ದಾಗ ಹೊಸದುರ್ಗವೂ ಸೇರಿದಂತೆ ಈ ತಾಲ್ಲೂಕು ದಕ್ಷಿಣಕನ್ನಡ ಜಿಲ್ಲೆಯ ಒಂದು ಅಂಗವಾಗಿತ್ತು. 1956ರಲ್ಲಿ ಭಾಷಾನುಗುಣ ರಾಜ್ಯರಚನೆಯಾದ ಮೇಲೆ ಈ ತಾಲ್ಲೂಕು ಕೇರಳ ರಾಜ್ಯಸರ್ಕಾರದ ಆಡಳಿತಕ್ಕೊಳಪಟ್ಟಿತು. 1957 ಜನವರಿ 1ರಂದು ಹೊಸದುರ್ಗ (ಕಾಞಂಗಾಡು) ಪ್ರತ್ಯೇಕ ತಾಲ್ಲೂಕಾಯಿತು. ಕಾಸರಗೋಡು ತಾಲ್ಲೂಕಿನಲ್ಲಿ ಒಂದು ಪುರಸಭೆಯೂ ಹದಿನೆಂಟು ಪಂಚಾಯಿತಿಗಳೂ ಇವೆ.

ಶಿಕ್ಷಣದಲ್ಲಿ ಈ ತಾಲ್ಲೂಕು ಮುಂದಿದೆ. ಇಲ್ಲಿ ಶಾಲಾ ಕಾಲೇಜುಗಳು ಮತ್ತು ವೃತ್ತಿ ತರಬೇತಿ ಸಂಸ್ಥೆಗಳಿವೆ. ಕನ್ನಡದಲ್ಲಿ ಸ್ನಾತಕೋತ್ತರ ಶಿಕ್ಷಣ ಲಭ್ಯವಿದೆ.

**ಇತಿಹಾಸ :** ಕಾಸರಗೋಡು ಶಬ್ದದ ನಿಷ್ಪತ್ತಿಯನ್ನು ಸಾಧಿಸಲು ಸ್ಪಷ್ಟವಾದ ಆಧಾರಗಳು ದೊರೆಯುವುದಿಲ್ಲ. ಕಾಸರಕನ ಮರಗಳು ಅಧಿಕವಾಗಿ ಬೆಳೆಯುತ್ತಿದ್ದ ಕಾರಣ ಕಾಸರಕನ ಕಾಡು ಕಾಸರಗೋಡು ಆಗಿದೆಯೆಂದು ಒಂದು ಅಭಿಪ್ರಾಯ. ಕಾಸರಕನ ಮರಗಳು ಈ ಪ್ರದೇಶದಲ್ಲಿ ಅಲ್ಲಲ್ಲಿ ಈಗಲೂ ಕಾಣಸಿಗುತ್ತವೆ. ಕಾಸರಗೋಡಿನ ಹೊರವಲಯದಲ್ಲಿ ಕರಂದ ಕಾಡು, ಬಾರಿಕಾಡು (ಬಾಳೆಕಾಡು) ಎನ್ನುವ ಸ್ಥಳಗಳು ಈಗಲೂ ಉಂಟು. ಕೆಲವರು ಇದಕ್ಕೆ ಸಂಸ್ಕೃತ ಮೂಲವನ್ನು ಹೇಳುತ್ತಾರೆ. ಕಾಸಾರಕ್ರೋಢ (ಕೊಳಗಳ ಸಮೂಹ) ಎಂಬುದು ಕಾಸರಗೋಡು ಆಯಿತು ಎಂಬುದು ಇವರ ವಾದ.

ಮೊಸಡಿಗುಂಪೆಯ ಗುಹೆಗಳು ಈ ಪ್ರದೇಶದ ಇತಿಹಾಸಕ್ಕೆ ಸಂಬಂಧಿಸಿದ ಪ್ರಾಚೀನ ಗುಹೆಗಳು. ಯಜ್ಞಕುಂಡಗಳೂ ತ್ರಿಶೂಲಗಳೂ ಇರುವ ಲ್ಯಾಟರೈಟ್ ಕಲ್ಲಿನ ಗುಹೆಗಳು ಮತ್ಸ್ಯೇಂದ್ರನಾಥನ ಕಾಲದವು ಎಂದು ಊಹಿಸಲಾಗಿದೆ. ಅಡೂರಿನ ಹತ್ತಿರ ಇರುವ ಗುಹೆ ಪೌರಾಣಿಕ ಹಿನ್ನಲೆಯುಳ್ಳದ್ದು. ಕಾಸರಗೋಡಿನ ಬಟ್ಟಂಬಾರೆ ಗುಡ್ಡದಲ್ಲಿ ಮೊಸಡಿಗುಂಪೆಯ ಗುಹೆಯ ಮಾದರಿಯ ಒಂದು ಚಿಕ್ಕ ಗುಹೆಯಿದೆ.

ಪೆರ್ಲದ ಹತ್ತಿರ ಇರುವ ಅತ್ಯಂತ ಪ್ರಾಚೀನಕಾಲದ ಕೋಟೆಯ ಹೆಸರು ಮಾಯಿಲಕೋಟೆ. ತುಳುನಾಡಿನ ಅರಸರು ಪ್ರಾಬಲ್ಯಕ್ಕೆ ಬರುವ ಮೊದಲು ಇಲ್ಲಿಯ ಮೂಲನಿವಾಸಿಗಳಾದ ಮಾಯಿಲರು ಪ್ರಬಲರಾಗಿದ್ದಾಗ ಕಟ್ಟಿದ ಕೋಟೆಯಿದು.

ಹಂಗಳದ ಕದಂಬರ ದೊರೆ ನಾಲ್ಕನೆಯ ಮಯೂರವರ್ಮ ಸ್ಥಾಪಿಸಿದ ನಾಲ್ಕು ಕೇಂದ್ರಗಳಲ್ಲಿ ಕಾಸರಗೋಡು ಕೇಂದ್ರವೂ ಒಂದು. ಇದು ಕುಂಬಳೆ ಸೀಮೆ ಅಥವಾ ಕುಂಬಳೆ ರಾಜ್ಯ ಎನ್ನಿಸಿಕೊಂಡಿತ್ತು. ತುಳುನಾಡಿನ ತೆಂಕು ಗಡಿಯಲ್ಲಿದ್ದ ಕುಂಬಳೆ ರಾಜ್ಯಕ್ಕೆ ಉತ್ತರದಲ್ಲಿ ಸೀರೆಹೊಳೆ, ದಕ್ಷಿಣದಲ್ಲಿ ಪಯಸ್ವಿನಿ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಪೂರ್ವದಲ್ಲಿ ಅಡೂರು-ಇವು ಆಗ ಇದರ ಚತುರ್ಗಡಿ. ಕುಂಬಳೆ ರಾಜಮನೆತನದ ಸ್ಥಾಪಕನೂ 4ನೆಯ ಮಯೂರವರ್ಮನೇ. ಇಕ್ಕೇರಿ ಅರಸರ ದೃಷ್ಟಿ ಕುಂಬಳೆ ರಾಜ್ಯದ ಮೇಲೆ ಬಿದ್ದದ್ದು 1500ರ ಅನಂತರ. ಕೆಳದಿಯ ಅರಸ ಸದಾಶಿವನಾಯಕ (1513–46) ಕಾಸರಗೋಡು ಕೋಟೆಯನ್ನು ಕಟ್ಟಿಸಿ ತೊಲಗದ ಕಂಬವನ್ನು (ಅಚಲವಾದ ಜಯಸ್ತಂಭವನ್ನು) ಸ್ಥಾಪಿಸಿದ. ಕೋಟೆಯ ಗೋಡೆಗಳನ್ನು ಲ್ಯಾಟರೈಟ್ ಕಲ್ಲಿನಲ್ಲಿ ಕಟ್ಟಲಾಗಿದೆ. ಪಶ್ಚಿಮದಲ್ಲಿ ಹೆಬ್ಬಾಗಿಲು, ಪೂರ್ವದಲ್ಲಿ ಗುಪ್ತದ್ವಾರ, ದುಃಸ್ಥಿತಿಯಲ್ಲಿರುವ ಬತೇರಿ, ಕೋಟೆಯೊಳಗೆ ಮಾರುತಿಯ ಸಣ್ಣ ದೇವಾಲಯ ಮತ್ತು ಅದರ ಪಕ್ಕದಲ್ಲಿ ಆಳವೂ ಅಗಲವೂ ಆದ ದೊಡ್ಡ ಪಾಳು ಬಾವಿ ಇವೆ. ಈ ಕೋಟೆ ಇಕ್ಕೇರಿ ಅರಸರ ಕೈತಪ್ಪಿ ಬ್ರಿಟಿಷರ ವಶವಾದ ಮೇಲೆ ಬ್ರಿಟಿಷರು ಮಾರುತಿ ದೇವಾಲಯದ ಅರ್ಚಕರಾಗಿದ್ದ ಶಂಭಟ್ಟರಿಗೆ ಈ ಕೋಟೆಯ ಅಧಿಕಾರವನ್ನು ವಹಿಸಿಕೊಟ್ಟರು. ಶಂಭಟ್ಟರಿಂದ ಚಂದಾವರ್ ಗಣಪಯ್ಯನವರು ಐದು ರೂಪಾಯಿ ಎರಡೂವರೆ ಆಣೆಗೆ ಮೂಲ ಗೇಣಿಗೆ ಪಡೆದುಕೊಂಡರು. ಗಣಪಯ್ಯನವರ ಕುಟುಂಬದ ಒಕ್ಕಲುಗಳು ಈಗಲೂ ಕೋಟೆಯೊಳಗೆ ವಾಸಮಾಡುತ್ತಿದ್ದಾರೆ. ಹೊರಕೋಟೆಯಲ್ಲಿ ಒಂದು ಭೂತದ ಗುಡಿಯಿದೆ. ನರಕಚತುರ್ದಶಿಯ ಕಾಲದಲ್ಲಿ ಬೈದ್ಯರು ಕಟ್ಟುವ ಚಾಮುಂಡೇಶ್ವರಿ. ಧೂಮಾವತಿ, ರಾಜದೈವದ ಕೋಲ ನಡೆಯುತ್ತವೆ.

ಕುಂಬಳೆ ಕೋಟೆ ವಿಸ್ತಾರದಲ್ಲಿ ಕಾಸರಗೋಡು ಕೋಟೆಯಷ್ಟೇ ಇದೆ. ಕೊಡಿಯಾಲ, ಮೂಡಬಿದರೆ, ಮೂಲ್ಕಿ, ಉಳ್ಳಾಲ, ಕುಂಬಳೆ, ಪುದುಂವೆಟ್ಟು, ಬೆಳ್ಳಾರೆ, ಕಾಂತಮಂಗಲ, ಒಂದಡ್ಕ, ಚಂದ್ರಗಿರಿ, ಬೇಕಲ, ಹೊಸದುರ್ಗ ಮುಂತಾದ ಕೋಟೆಗಳನ್ನು ಬಲಪಡಿಸಿದವನು ಇಕ್ಕೇರಿ ರಾಜಾರಾಮನ ಮಗ ಹಿರಿಯ ವೆಂಕಟಪ್ಪನಾಯಕ. 1514ರಲ್ಲಿ ದುರ್ತೆ ಬಾರಬೋಸ್ ಎಂಬ ಪೋರ್ಚುಗೀಸ್ ಪ್ರವಾಸಿ ಕುಂಬಳೆ ಕೋಟೆಗೆ ಬಂದಿದ್ದ. ಈ ಕೋಟೆಯಿಂದ ಮಾಲ್ಡಿವ್ ದ್ವೀಪಗಳಿಗೆ ಅಕ್ಕಿಯನ್ನು ಕಳುಹಿಸುತ್ತಿದ್ದರೆಂದೂ ಅದಕ್ಕೆ ಬದಲಾಗಿ ಹಗ್ಗಹುರಿಗಳನ್ನು ಕೊಳ್ಳುತ್ತಿದ್ದರೆಂದೂ ಅವನು ಹೇಳಿದ್ದಾನೆ. ಈ ಕೋಟೆಯಿಂದ ಪೋರ್ಚುಗೀಸರಿಗೆ ಹೇರಳವಾಗಿ ಅಕ್ಕಿ ಸಾಗುತ್ತಿತ್ತು. ಕುಂಬಳೆಯ ಪ್ರಖ್ಯಾತ ಅರಸು ಇಮ್ಮಡಿ ಜಯಸಿಂಹ ಪಾಂಡ್ಯರಾಜನನ್ನು ಚಂದ್ರಗಿರಿಯ ಹತ್ತಿರ ಸೋಲಿಸಿ ಹಿಮ್ಮೆಟ್ಟಿಸುವಷ್ಟು ಈತ ಪ್ರಬಲನಾಗಿದ್ದ. ಕುಂಬಳೆಸೀಮೆ ಕ್ಷೀಣಸ್ಥಿತಿಗಿಳಿದದ್ದು 17ನೆಯ ಶತಮಾನದಲ್ಲಿ. ಆಗ ಕುಂಬಳೆಯಲ್ಲಿ ಆಳುತ್ತಿದ್ದ ಕೃಷ್ಣರಾಯ ಕುಂಬಳೆಗೆ 10 ಕಿಮೀ ದೂರದಲ್ಲಿ ಮಾಯಿಪ್ಪಾಡಿಯಲ್ಲಿ (ಸಿರಿಬಾಗಿಲು) ಪ್ರತ್ಯೇಕ ಅರಮನೆಯನ್ನು ಕಟ್ಟಿಸಿಕೊಂಡು ವಾಸಮಾಡತೊಡಗಿದ. ಆದರೆ ಅವನ ಒಬ್ಬ ರಾಣಿ ಮಾತ್ರ ಕುಂಬಳೆ ಅರಮನೆಯನ್ನು ಬಿಡದೆ ಅಲ್ಲಿಯೇ ಉಳಿದಳು. ಮಾಯಿಪ್ಪಾಡಿ ಅರಮನೆಯಲ್ಲಿ ನೆಲೆಸಿದ ರಾಜನ ವಂಶಸ್ಥರು ಈಗಲೂ ಇದ್ದಾರೆ, ಈ ಕೋಟೆಗಳಲ್ಲದೆ ಇಕ್ಕೇರಿ ಅರಸರ ಕಾಲದಲ್ಲಿ ಕಟ್ಟಿದ ಚಂದ್ರಗಿರಿ ಕೋಟೆ, ಒಂದೆಡ್ಕ, ಪಳಲಿಕೋಟೆ ಮುಂತಾದವು ಈ ತಾಲ್ಲೂಕಿನಲ್ಲಿವೆ.

ಅಡೂರು, ಮಧೂರು, ಕಾವು ಮತ್ತು ಕಣಿಪುರಗಳ ದೇವಾಲಯಗಳು ಕುಂಬಳೆ ಅರಸರ ಕಾಲದಿಂದಲೂ ಪ್ರಸಿದ್ಧಿಹೊಂದಿವೆ. ಅರ್ಜುನ ಪಾಶುಪತಾಸ್ತ್ರವನ್ನು ಪಡೆಯಲು ತಪಸ್ಸುಮಾಡಿದ ಇಂದ್ರಕೀಲವೇ ಅಡೂರು–ಎಂಬುದು ಅಲ್ಲಿಯ ಸ್ಥಳಪುರಾಣ. ಅದಕ್ಕೆ



ಅಗಲ್ಪಾಡಿ ಶ್ರೀ ಅನ್ನಪೂರ್ಣೇಶ್ವರಿ

ಉರುಡೂರು ಎಂಬುದು ಮತ್ತೊಂದು ಹೆಸರು. ಕುಂಬಳೆ ರಾಜ್ಯದ ಅರಸರು ತಮ್ಮ ರಾಯಸ ಮೊದಲಾದ ಆಡಳಿತ ಪತ್ರವ್ಯವಹಾರಗಳಿಗೆ ಉಪಯೋಗಿಸುತ್ತಿದ್ದ ಶ್ರೀ ಉರುಡೂರು ಮಹಾಲಿಂಗೇಶ್ವರ ಪ್ರಸನ್ನ ಎನ್ನುವ ಮುದ್ರೆ ಅಡೂರು ಶ್ರೀ ಮಹಾಲಿಂಗೇಶ್ವರನ ಅಂಕಿತದ್ದು. ಅಡೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಚಾಳುಕ್ಯರ ಅರಸ 2ನೆಯ ಮಯೂರವರ್ಮನ ಕನ್ನಡ ಶಾಸನವಿದೆ.

ಕಾಸರಗೋಡಿನಿಂದ ಈಶಾನ್ಯಕ್ಕೆ 8 ಕಿಮೀ ದೂರದಲ್ಲಿ ಮಧೂರು ಶ್ರೀಮದನಂತೇಶ್ವರ ದೇವಾಲಯವಿದೆ. ತಲೆದೂಗುವ ತೆಂಗು, ನಲಿದಾಡುವ ಕೌಂಗು, ಸುತ್ತಲೂ ಫಲವತ್ತಾದ ಗದ್ದೆಬಯಲು, ಎದುರಿನಲ್ಲಿ ಮಧುವಾಹಿನಿ, ಪಕ್ಕದಲ್ಲಿ ದೊಡ್ಡಕೊಳ; ಪ್ರಶಾಂತ ಪರಿಸರ. ಶ್ರೀಮದನಂತೇಶ್ವರ ದೇವಾಲಯದ ಎದುರು ಮಂಟಪದಲ್ಲಿ ಪುತ್ರಕಾಮೇಷ್ಟಿಯಾಗದಿಂದ ಶ್ರೀರಾಮಜನನದವರೆಗಿನ ಕಥಾವೃತ್ತಾಂತವನ್ನು ಮರದಲ್ಲಿ ಕೆತ್ತಲಾಗಿದೆ. ದೇವಾಲಯದೊಳಗೆ ಪೂರ್ವಾಭಿಮುಖವಾಗಿ ಶ್ರೀ ಸಿದ್ಧಿ ವಿನಾಯಕನ ವಿಗ್ರಹವಿದೆ. ಈ ಮೂರ್ತಿ ಮದರು

ಎನ್ನುವ ಹರಿಜನ ಸ್ತ್ರೀಯೊಬ್ಬಳಿಗೆ ಹುಲ್ಲು ಕುಯ್ಯುತ್ತಿದ್ದಾಗ ಸಿಕ್ಕಿತೆಂದೂ ಆದ್ದರಿಂದಲೇ ಈ ಸ್ಥಳಕ್ಕೆ ಮದರೂರು, ಮಧೂರು ಎಂದು ಹೆಸರು ಬಂತೆಂದೂ ಸ್ಥಳಪುರಾಣವುಂಟು. ಅಪಾರವೆಚ್ಚದಿಂದ ಜರಗುವ ಮೂಡಪ್ಪಸೇವೆ ಈ ದೇವಾಲಯದ ವೈಭವದ ಉತ್ಸವ. ಕಾವು (ಮುಜುಂಗಾವು) ಶ್ರೀ ಪಾರ್ಥಸಾರಥಿಯ ದೇವಾಲಯವನ್ನು ಮುಚುಕುಂದ ಮುನಿ ಸ್ಥಾಪಿಸಿದನೆಂದು ಪ್ರತೀತಿಯುಂಟು. ದೇವಾಲಯದ ಎದುರಿನಲ್ಲಿರುವ ದೊಡ್ಡ ಕೊಳಕ್ಕೆ ಮುಚುಕುಂದ ತೀರ್ಥವೆಂದು ಹೆಸರು. ಕಣಿಪುರದಲ್ಲಿ ಶ್ರೀ ಗೋಪಾಲಕೃಷ್ಣ ದೇವಾಲಯವಿದೆ. ಕಣಿಪುರಕ್ಕೆ ಕಣ್ವಪುರ, ಕಣಿಯರ, ಕುಂಬಳೆ ಎಂಬ ಹೆಸರುಗಳೂ ಇವೆ. ಇಲ್ಲಿಯ ಶ್ರೀ ಗೋಪಾಲಕೃಷ್ಣನ ಮೂರ್ತಿಯನ್ನು ಕಣ್ವಮುನಿಗಳು ಪ್ರತಿಷ್ಠಾಪಿಸಿದರೆಂದು ಸ್ಥಳಪುರಾಣ. ಈ ಮೂರ್ತಿ ತೆಂಕುತಿಟ್ಟು ಯಕ್ಷಗಾನ ಕಲಾವಿದರ ಆರಾಧನೆಯ ದೈವ.

ಮಂಜೇಶ್ವರದ ಶ್ರೀ ಅನಂತೇಶ್ವರ ದೇವಾಲಯ ಮಧ್ವಮತಾನುಯಾಯಿಗಳಾದ ಗೌಡಸಾರಸ್ವತರದು. ಭದ್ರ ನರಸಿಂಹ ಇಲ್ಲಿಯ ಪ್ರಧಾನ ದೇವತೆ. ಶಿವಲಿಂಗದಲ್ಲಿ ವಿಷ್ಣುವಿನ ಸನ್ನಿಧಾನವನ್ನು ನಂಬಿ ಆರಾಧಿಸಿಕೊಂಡು ಬರುತ್ತಿರುವ ಒಂದು ಶುದ್ಧ ವೈಷ್ಣವ ಕ್ಷೇತ್ರ ಮಂಜೇಶ್ವರ. ಭದ್ರನರಸಿಂಹಮೂರ್ತಿಯ ಸಿಂಹಾಸನದ ಹಿಂದೆ ಇಡೀ ಗರ್ಭಗೃಹದಲ್ಲಿ 2.7 ಮೀಗಳ ಎತ್ತರವಿರುವ ಒಂದು ದೊಡ್ಡ ಹುತ್ತವಿದೆ. ಇದಕ್ಕೆ ಸಂಬಂಧಿಸಿದಂತೆ ಷಷ್ಠಿಯ ಕಾಲದಲ್ಲಿ ಐದು ದಿನಗಳ ಜಾತ್ರೆ ನಡೆಯುತ್ತದೆ. ಹೇರಳವಾದ ಸಂಪತ್ತು ತುಂಬಿ ತುಳುಕಿದ್ದ ಈ ಕ್ಷೇತ್ರ ಆಗಾಗ ಲೂಟಿಗೊಳಗಾಗಿ ಜೀರ್ಣೋದ್ಧಾರ ಪಡೆದ ಇತಿಹಾಸವಿದೆ. ಕುಂದಾಪುರದ ಉತ್ತರಗಡಿಯಿಂದ ತಲಚೇರಿಯವರೆಗೆ ಗೌಡ ಸಾರಸ್ವತ ಸಮಾಜದ ಹದಿನೆಂಟು ಪೇಟೆಯ ದೇವಸ್ಥಾನವೆನ್ನಿಸಿಕೊಂಡ ವೈಶಿಷ್ಟ್ಯ ಇದಕ್ಕುಂಟು. ಇಲ್ಲಿ 135 ವರ್ಷಗಳ ಹಿಂದೆ ನಿರ್ಮಿತವಾದ ಒಂದು ಬ್ರಹ್ಮರಥವಿದೆ. ಇದರ ಎತ್ತರ 5.15 ಮೀ, ಅಗಲ 5.15 ಮೀ. ಅಟ್ಟಳಿಗೆಗಳಿಂದ ಅಲಂಕೃತವಾದಾಗ 21.5 ಮೀ ಎತ್ತರಕ್ಕೇರುವ ರಮ್ಯರಥವಿದು. ಈ ದೇವಸ್ಥಾನದ ಹೊರಭಾಗದಲ್ಲಿ ಒಂದು ಜೋಗಿ ದೈವದ ಕಲ್ಲುಂಟು. ಇದು ಭೂತಪ್ರೇತಗಳನ್ನು ಬಿಡುಸುವುದೆಂದು ನಂಬಿಕೆಯಿದೆ. ಪ್ರತಿನಿತ್ಯವೂ ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಇಲ್ಲಿಗೆ ಬರುತ್ತಾರೆ.

ಕರ್ಾಡದಲ್ಲಿ ಬ್ರಾಹ್ಮಣ ಸಮಾಜದವರ ದೇವಾಲಯಗಳಿವೆ. ಅಗಲ್ವಾಡಿ, ಮಲ್ಲ, ತೈರೆ, ಬಾಯಾರುಗಳಲ್ಲಿ ಈ ಸಮಾಜದವರು ನಂಬಿ ಆರಾಧಿಸುವ ದುರ್ಗಾ ಪರಮೇಶ್ವರಿ ದೇವಾಲಯಗಳುಂಟು. ಇವನ್ನು ಮಠಗಳೆಂದೂ ಕರೆಯುತ್ತಾರೆ. ಅಗಲ್ವಾಡಿ ದೇವಾಲಯದಲ್ಲಿ ನಡೆಯುವ ಅನ್ನದಾನದ ಕೀರ್ತಿಯಿಂದಾಗಿ ದುರ್ಗಾಪರಮೇಶ್ವರಿ ಅನ್ನಪೂರ್ಣೇಶ್ವರಿಯಾಗಿದ್ದಾಳೆ. ಇಲ್ಲಿ ಪ್ರತಿವರ್ಷ ಮಾಘಶುದ್ಧ ಪಂಚಮಿಯಿಂದ ದಶಮಿಯ ತನಕ ವೈಭವಪೂರ್ಣಜಾತ್ರೆ ನಡೆಯುತ್ತದೆ. ಎರಡು ಎಕರೆ ಜಾಗವನ್ನೊಳಗೊಂಡ ಈ ದೇವಾಲಯದ ಆವರಣದಲ್ಲಿ ಒಂದು ದೊಡ್ಡ ಕೊಳವುಂಟು. ಕರ್ಾಡ ಬ್ರಾಹ್ಮಣಸಮಾಜದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳ ಆಶ್ರಯಸ್ಥಾನವಾದ ಕ್ಷೇತ್ರ.

ಪೆರಡಾಲದ ಶ್ರೀ ಉದನೇಶ್ವರ ಕಿಡೂರು ಶ್ರೀ ಮಹಾಲಿಂಗೇಶ್ವರ, ಕಾಟುಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ, ಕುಂಟಿಕ್ಕಾನ ಶ್ರೀ ಶಂಕರನಾರಾಯಣ–ಮುಂತಾದ ದೇವತೆಗಳು ಇಲ್ಲಿ ಹವ್ಯಕಸಮಾಜದವರು ಆರಾಧಿಸುವ ದೇವತೆಗಳು.

ಕಾಸರಗೋಡಿನಿಂದ 3.2. ಕಿಮೀ. ಈಶಾನ್ಯಕ್ಕಿರುವ ಕೂಡಲು ಶ್ರೀ ವಿಷ್ಣು ಮಂಗಲ ಕ್ಷೇತ್ರ ತುಂಬ ಪುರಾತನವಾದುದು. ಈ ಕ್ಷೇತ್ರದ ದಕ್ಷಿಣ ಭಾಗದಲ್ಲಿರುವ ಕೆರೆಗೆ ಚಕ್ರತೀರ್ಥವೆಂದು ಹೆಸರು. ಕುಂಬಳೆಯ ಅರಸನಾದ ಜಯಸಿಂಹ ಶ್ರೀ ಮಧ್ವಾಚಾರ್ಯರನ್ನು ಇಲ್ಲಿಗೆ ಬರಮಾಡಿಕೊಂಡಿದ್ದನೆಂದೂ ಅದನ್ನು ತಿಳಿದ ಕಾವು ಮಠದ ತ್ರಿವಿಕ್ರಮಪಂಡಿತ (ಶ್ರೀ ಶಂಕರಾಚಾರ್ಯರ ಶಿಷ್ಯ) ಶ್ರೀ ಮಧ್ವಾಚಾರ್ಯರೊಂದಿಗೆ ಮತ ಚರ್ಚೆಗೆ ನಿಂತನೆಂದೂ ಎಂಟು ದಿನಗಳವರೆಗೆ ನಡೆದ ವಾದದಲ್ಲಿ ತ್ರಿವಿಕ್ರಮ ಪಂಡಿದ ಸೋತು ಆಚಾರ್ಯರ ಶಿಷ್ಯನಾದನೆಂದೂ ಹೇಳಲಾಗಿದೆ. ಇವರಿಬ್ಬರೂ ಚರ್ಚೆ ನಡೆಸಿದ ಸ್ಥಳಕ್ಕೆ ಕೂಡಲು ಎಂದು ಹೆಸರಾಯಿತು.

ಇವೇ ಅಲ್ಲದೆ, ಮುಳಿಯೂರು ಶ್ರೀ ಸುಬ್ರಹ್ಮಣ್ಯೇಶ್ವರ ದೇವಾಲಯ, ಅನಂತಪುರದ ಅನಂತೇಶ್ವರ ದೇವಾಲಯ, ಕಾಸರಗೋಡಿನ ಮಲ್ಲಿಕಾರ್ಜುನ ಮತ್ತು ವೆಂಕಟರಮಣ ದೇವಾಲಯ–ಇವು ಪ್ರೇಕ್ಷಣೀಯ ಕ್ಷೇತ್ರಗಳು.

ಕಾಸರಗೋಡಿನಿಂದ ಪೂರ್ವಕ್ಕೆ 11.2 ಕಿಮೀ ದೂರದಲ್ಲಿ ಎಡನೀರು ಮಠವಿದೆ. ಶ್ರೀ ಶಂಕರಾಚಾರ್ಯರ ಶಿಷ್ಯಪರಂಪರೆಯಲ್ಲಿ ಪ್ರಖ್ಯಾತರಾದ ತ್ರೋಟಿಕಾಚಾರ್ಯರ ಕಾಲದಲ್ಲಿ ಸ್ಥಾಪಿತವಾದ ಮಠವಿದು. ಈ ಮಠಾಧೀಶರಾಗಿ ಧರ್ಮಪ್ರಚಾರಮಾಡಿದ ಹದಿಮೂರು ಮಂದಿ ಗುರುಗಳ ಸಮಾಧಿಗಳು ಇಲ್ಲುಂಟು. ಮಠದ ಆವರಣದಲ್ಲಿ ಶ್ರೀ ಗೋಪಾಲಕೃಷ್ಣ ದೇವಾಲಯವಿದೆ. ಶ್ರೀಮದೀಶ್ವರಾನಂದ ಸ್ವಾಮೀಜಿಯವರು ತೆರೆದ ಉಚಿತ ಶಿಕ್ಷಣ ಪ್ರೌಢಶಾಲೆ ಈ ಮಠದ ಆಶ್ರಮದಲ್ಲಿ ನಡೆಯುತ್ತಿದೆ. ಇದು ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ ಮುಂತಾದವನ್ನು ಅಭಿವೃದ್ಧಿಗೊಳಿಸುತ್ತಿರುವ ಒಂದು ಕ್ಷೇತ್ರ.

ಅಡೂರಿನಲ್ಲಿ ಏರಿದ ಕೊಡಿ (ಧ್ವಜಾರೋಹಣ) ಮಧೂರಿನಲ್ಲಿ ಇಳಿಯಬೇಕು ಎನ್ನುವ ಸಂಪ್ರದಾಯವುಂಟು. ಮೀನಮಾಸ ಸಂಕ್ರಮಣದಲ್ಲಿ ಪ್ರಾರಂಭವಾಗಿ ಮೇಷಮಾಸದ ಐದನೆಯ ದಿನ ಜಾತ್ರೆಗಳು ಮುಕ್ತಾಯಗೊಳ್ಳುತ್ತವೆ. ಅಡೂರು, ಕಾಸರಗೋಡು, ಪೈಕ,



ಶ್ರೀ ವೆಂಕಟರಮಣ ದೇವಾಲಯ, ಕಾಸರಗೋಡು

ಬೆದರಡ್ಕ, ಅಂಬಲಡ್ಕ, ಪುತ್ತಿಗೆ ಮತ್ತು ಮಧೂರುಗಳಲ್ಲಿ ತಲಾ ಐದು ದಿನಗಳಂತೆ ಒಟ್ಟು ಮೂವತ್ತೈದು ದಿನಗಳು ಎಡೆಬಿಡದೆ ನಡೆಯುವುದು ಇಲ್ಲಿಯ ಜಾತ್ರೆಗಳ ವೈಶಿಷ್ಟ್ಯ.

ಕಾಸರಗೋಡಿನ ತಳಂಗೆರೆಯಲ್ಲಿರುವ ಮಾಲಿಕ್ ದೀನಾರನ ಕಾಲದಲ್ಲಿ ನಿರ್ಮಿತವಾದುದೆಂದು ಪ್ರತೀತಿಯಿರುವ ಪ್ರಾಚೀನ ಮಸೀದಿಯಲ್ಲದೆ ಈ ತಾಲ್ಲೂಕಿನಲ್ಲಿ ಅಲ್ಲಲ್ಲಿ ಹಲವು ಮಸೀದಿಗಳಿವೆ. ಹತ್ತಕ್ಕೂ ಹೆಚ್ಚು ಚರ್ಚುಗಳು ಈ ತಾಲ್ಲೂಕಿನಲ್ಲುಂಟು. ಮಂಜೇಶ್ವರದಲ್ಲಿ ಒಂದು ಜೈನಬಸದಿ, ಕಾಸರಗೋಡಿನ ನೆಲ್ಲಿಕುಂಟೆಯಲ್ಲಿ ಒಂದು ವೀರ ಶೈವಮಠ–ಇವು ಜೈನ ಮತ್ತು ಶೈವಮತಪ್ರಚಾರಶಾಖೆಯಾಗಿ ಉಳಿದಿವೆ.

ಕಾಸರಗೋಡು ತಾಲ್ಲೂಕು ತೆಂಕುತಿಟ್ಟು ಯಕ್ಷಗಾನದ ತೌರು. ಯಕ್ಷಗಾನದಲ್ಲಿ ಪ್ರಸಿದ್ಧವಾದ ಪಾರ್ತಿಸುಬ್ಬ (ಸು. 1760–1820) ಕುಂಬಳೆಯವ. ಕೂಡ್ಲು ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಭಾ, ಕುಂಬಳೆ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂಡಲಿ, ಇಚಲಂಪಾಡಿ

ಚೇಡಭೂತ

ಮೇಳ ಮತ್ತು ಕೊರಕೋಡು ಮೇಳಗಳು ಯಕ್ಷಗಾನ ಕಲೆಯನ್ನು ವಿಸ್ತಾರಗೊಳಿಸಿದ ಕಲಾಮಂಡಲಗಳು. ಈ ತಾಲ್ಲೂಕಿನಲ್ಲಿ ತಾಳಮದ್ದಲೆಯ ಕಲಾವಿದರಿಲ್ಲದ ಗ್ರಾಮವಿಲ್ಲ.

ಭಾಷಾಭೇದವಿಲ್ಲದೆ ಅವ್ಯಾಹತವಾಗಿ ಪ್ರೋತ್ಸಾಹ ಪಡೆದು ಬೆಳಗುತ್ತಿರುವ ಕಲೆಯಿದು. ಮಲಯಾಳ ಮಾತೃಭಾಷೆ ಆಗಿರುವವರಲ್ಲೂ ಕನ್ನಡ ಯಕ್ಷಗಾನ ಕಲಾವಿದರು ಅನೇಕರಿದ್ದಾರೆ.



ಮಲಯಾಳ ಭೂತ : ರಕ್ತೇಶ್ವರಿ

ಕನ್ನಡದ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ಕಾಸರಗೋಡು ತಾಲ್ಲೂಕಿನವರು. ಈಗಲೂ ಅಲ್ಲಿ ಅನೇಕ ಕನ್ನಡ ಕವಿಗಳಿದ್ದಾರೆ.

ಕುಂಬಳ, ಕೋಳಿಅಂಕ, ಅಳಿಯಸಂತಾನಕಟ್ಟು, ದಸರ ಉತ್ಸವ, ದೀಪಾವಳಿ, ಷಷ್ಠಿಯ ಉತ್ಸವ–ಮುಂತಾದ ಆಚರಣೆಗಳಲ್ಲಿ ದಕ್ಷಿಣದ ತುಳು ಸಂಸ್ಕೃತಿ ಇಲ್ಲಿ ಬೇರೂರಿ ನಿಂತಿದೆ. ಮರುಮಕ್ಕತ್ತಾಯಂ, ಕಥಕ್ಕಳಿ, ಓಣಂ–ಮೊದಲಾದ ಮಲಯಾಳ ಸಂಸ್ಕೃತಿಯ ಉತ್ಸವಗಳಿಗೂ ಇದು ಆಹ್ವಾನ ನೀಡಿದೆ.

ಕುಂಬಳೆಯ ಅರಸರ ಕಾಲದಲ್ಲಿ ಪ್ರಸಿದ್ಧಿಹೊಂದಿದ್ದ ಅಡೂರು, ಮಧೂರು, ಕಾವು ಮತ್ತು ಕಣಿಪುರಗಳ ದೇವಸ್ಥಾನಗಳಂತೆಯೇ ಆ ಕಾಲದಿಂದಲೂ ಪ್ರಸಿದ್ಧಿಯಾಗಿರುವ ನಾಲ್ಕು ಭೂತಸ್ಥಾನಗಳು ಈ ತಾಲ್ಲೂಕಿನಲ್ಲಿವೆ. ಪೈಕ, ಬೆದರಡ್ಕ, ಅಂಬಲಡ್ಕ ಮತ್ತು ಪುತ್ತಿಗೆ–ಇವೇ ಆ ನಾಲ್ಕು ಭೂತಸ್ಥಾನಗಳು. ಪಂಜುರ್ಲಿ, ಧೂಮಾವತಿ (ಜುಮಾದಿ). ಕಲ್ಲುರ್ಟಿ, ಕಲ್ಕುಡ, ಅಣ್ಣಪ್ಪ–ಮೊದಲಾದ ತುಳು ಭೂತಗಳಂತೆ ಪಿಲಿ.

ಚಾಮುಂಡಿ, ಮುತ್ತಪ್ಪದೈವಂ, ಬೆಳ್ಚಪಾಡ, ರಕ್ತೇಶ್ವರಿ ಇತ್ಯಾದಿ ಮಲಯಾಳ ಭೂತಗಳೂ ಪೂಜೆಗೊಳ್ಳುವ ಪ್ರದೇಶವಿದು. ಹಿಂದೂಗಳೂ ಮುಸ್ಲಿಮರೂ ನಂಬುವ ಅಲಿಭೂತ ಈ ತಾಲ್ಲೂಕಿನ ವಿಶಿಷ್ಟಭೂತ.

ಕಾಸರಗೋಡು ವಿಷ್ಣು, ಶಿವ, ಶಕ್ತಿ, ನಾಗಗಳು ಮತ್ತು ಭೂತಗಳು ಆರಾಧನೆಗೊಳ್ಳುವ, ಹಿಂದೂ, ಮುಸ್ಲಿಂ, ಕ್ರೈಸ್ತ ಮತ್ತು ಜೈನ ಸಮುದಾಯಗಳ, ವಿವಿಧ ಭಾಷೆಗಳ ಜನಪದ ಕಲೆಗಳ, ಕಲಾವಿದರ, ಮಧುರಮೈತ್ರಿಯ ಸಂಗಮಸ್ಥಳವಾಗಿದೆ. (ಬಿ.ಕೆ.ಟಿ.)

**ಕಾಸಲ್, ಆಲ್ಬ್ರೆಕ್ಟ್ :** 1853–1927. ಜರ್ಮನಿಯ ಜೀವರಸಾಯನ ಶಾಸ್ತ್ರಜ್ಞ, ನೊಬೆಲ್ ಪಾರಿತೋಷಿಕ ಪುರಸ್ಕೃತ (1960). ಸ್ವಿಟ್ಜರ್ಲೆಂಡಿನ ರಾಸ್ಟಾಕ್‌ನಲ್ಲಿ ಜನಿಸಿದ. ತೌರೂರಿನ ಜಿಮ್ನಾಷಿಯಂನಲ್ಲಿ ಶಿಕ್ಷಣ ಪಡೆದ. ಸ್ಟ್ರಾಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆಯುತ್ತಿದ್ದಾಗ ಆಧುನಿಕ ಜೀವರಸಾಯನಶಾಸ್ತ್ರಜ್ಞರಲ್ಲೊಬ್ಬನಾದ ಫೆಲಿಕ್ಸ್ ಹಾಪ್–ಸೀಲರ್ ಎಂಬಾತ ಈತನಿಗೆ ಗುರುವಾಗಿದ್ದ. ಡಾಕ್ಟರ್ ಆಫ್ ಮೆಡಿಸನ್ ಪದವಿಯನ್ನು ಪಡೆದ ಮೇಲೆ (1878) ಹಾಪ್–ಸೀಲರ್ ಮತ್ತು ಬರ್ಲಿನಿನ ಶರೀರಶಾಸ್ತ್ರ ಸಂಸ್ಥೆಯ ಇ.ಡ್ಯು ಬಾಯ್ಸ್ ರೇಮಂಡರ ನೇತೃತ್ವದಲ್ಲಿ ಕೆಲಸ ಮಾಡಿದ. ಅನಂತರ ಬರ್ಲಿನಿನ ಶರೀರಶಾಸ್ತ್ರ ಸಂಸ್ಥೆಯ ರಸಾಯನಶಾಸ್ತ್ರ ವಿಭಾಗದ ನಿರ್ದೇಶಕನಾಗಿ ನೇಮಕಗೊಂಡ (1895). 1901ರ ವರೆಗೂ ಇದೇ ಹುದ್ದೆಯಲ್ಲಿ ಮುಂದುವರಿದ. ಇದೇ ಸಂದರ್ಭದಲ್ಲಿ ಹೈಡಲ್‌ಬರ್ಗ್‌ನಲ್ಲಿ ಇಂಥದ್ದೇ ಹುದ್ದೆಗೆ ಬಂದ ಆಮಂತ್ರಣವನ್ನು ಅಂಗೀಕರಿಸಿ ತನ್ನ ಕೊನೆಯ ಕಾಲದವರೆಗೆ ಅದೇ ಹುದ್ದೆಯಲ್ಲಿ ಇದ್ದ. ಮರಣಕ್ಕೆ ಮೊದಲು ಈತನಿಗೆ ಹೈಡಲ್‌ಬರ್ಗ್‌ನ ಎಮೆರಿಟಸ್ ಪ್ರಾಧ್ಯಾಪಕನ ಗೌರವವೂ (1901–23) ಹೈಡಲ್‌ಬರ್ಗ್‌ನ ಸಂಸ್ಥೆಯ ನಿರ್ದೇಶಕನ ಸ್ಥಾನಗೌರವವೂ ದೊರಕಿದುವು. ಶರೀರಶಾಸ್ತ್ರ ಸಂಬಂಧವಾದ ಪತ್ರಿಕೆಯೊಂದಕ್ಕೆ 30 ವರ್ಷಗಳಿಗಿಂತಲೂ ಹೆಚ್ಚು ಕಾಲ ಸಂಪಾದಕನಾಗಿದ್ದ. ಈತನ ಅನೇಕ ಸಂಶೋಧನ ಪ್ರಬಂಧಗಳು ಈ ಪತ್ರಿಕೆಯಲ್ಲಿ ಪ್ರಕಟವಾದುವು. ಜೀವಂತಕೋಶಗಳ ರಸಾಯನಶಾಸ್ತ್ರದ ಬಗೆಗಿನ ಸಮಸ್ಯೆಗಳ ಸ್ಪಷ್ಟನೆಯಲ್ಲಿ ಸಾವಯುವ ರಸಾಯನಶಾಸ್ತ್ರ ವಿಧಾನಗಳನ್ನು ಅನ್ವಯ ಮಾಡಿದವರಲ್ಲಿ ಈತ ಮೊದಲಿಗ. ಈತನ ಸಂಶೋಧನೆಗಳು ಮುಖ್ಯವಾಗಿ ನ್ಯೂಕ್ಲಿಯಿಕ್ ಆಮ್ಲಗಳ ಮೇಲೆ ನಡೆದುವು. ನ್ಯೂಕ್ಲಿಯಿಕ್ ವಸ್ತುಗಳನ್ನೊಳಗೊಂಡಂತೆ ಪ್ರೋಟೀನುಗಳ ಮೇಲೆ ಸಂಶೋಧನೆ ನಡೆಸಿ ಅದರಿಂದ ಜೀವಕೋಶ ರಸಾಯನಶಾಸ್ತ್ರದ ಮೇಲೆ ಬೆಳಕು ಚೆಲ್ಲಿದ ಕಾರಣದಿಂದಾಗಿ ಈತನಿಗೆ ನೊಬೆಲ್ ಪಾರಿತೋಷಿಕ ದೊರಕಿತು. ಅಡೆನಿನ್ ಮತ್ತು ಥಯಮಿನ್‌ಗಳನ್ನು ಕಂಡುಹಿಡಿದ ಖ್ಯಾತಿ ಈತನದು. ಈತ ಹೈಡಲ್‌ಬರ್ಗ್‌ನಲ್ಲೇ ನಿಧನವಾದ. *

**ಕಾಸೀನಿ, ಜಿಯೊವಾನಿ ಡೊಮಿನಿಕೊ :** 1625–1712. ಇಟಲಿ ಮತ್ತು ಫ್ರಾನ್ಸುಗಳ ಖ್ಯಾತ ಖಗೋಳವಿಜ್ಞಾನಿ. ಇಟಲಿಯ ಖಗೋಳವಿಜ್ಞಾನಿಗಳು ನಕ್ಷಾನಿರೂಪಣಕಾರರೂ ಆದ ಕಾಸೀನಿ ಮನೆತನದವರ ಮೂಲಪುರುಷನೀತ. ಜನಿಸಿದ್ದು ಇಟಲಿಯ ನೀಸ್ ನಗರದ ಬಳಿಯಿರುವ ಪೆರಿನಾಲ್ಡೋವಿನಲ್ಲಿ. ಜಿನೆವದಲ್ಲಿ ವಿದ್ಯಾಭ್ಯಾಸ. ಅನಂತರ ಬೋಲೋನ್ಯಾ ವಿಶ್ವವಿದ್ಯಾಲಯದಲ್ಲಿ ಖಗೋಳವಿಜ್ಞಾನ ಪ್ರಾಧ್ಯಾಪಕನಾದ (1650). ಗುರುಗ್ರಹ ಮತ್ತು ಮಂಗಳಗ್ರಹಗಳ ಆವರ್ತನಾವಧಿಗಳನ್ನು ಅನುಕ್ರಮವಾಗಿ 1660 ಮತ್ತು 1665ರಲ್ಲಿ ಗಣಿಸಿ ಖ್ಯಾತನಾದ. ಪ್ಯಾರಿಸ್‌ನ ವೇದಶಾಲೆಯ ನಿರ್ದೇಶಕನಾದ (1667). ಗುರುಗ್ರಹದ ಉಪಗ್ರಹಗಳ (ಚಂದ್ರರ) ಚಲನೆ ಕುರಿತ ಒಂದು ಕೋಷ್ಟಕವನ್ನು ರಚಿಸಿದ (1668). ಮುಂದೆ ಈ ಕೋಷ್ಟಕ ಡೇನಿಷ್ ಖಗೋಳವಿಜ್ಞಾನಿ ರೂಮರನಿಗೆ (1645–1710) ಬೆಳಕಿನ ವೇಗವನ್ನು ನಿರ್ಧರಿಸಲು ಸಹಾಯಕವಾಯಿತು. 1673ರಲ್ಲಿ ಈತನಿಗೆ ಪ್ಯಾರಿಸಿನ ಪೌರತ್ವ ಲಭಿಸಿದುದರಿಂದ ಅಲ್ಲಿಯೇ ನೆಲಸಿ ಅಧ್ಯಯನ ಸಂಶೋಧನೆಗಳನ್ನು ಮುಂದುವರಿಸಿದ.

ಶನಿಗ್ರಹದ ಬಗ್ಗೆ ಸಂಶೋಧನೆಯನ್ನು 1671–84ರ ವರೆಗೂ ನಡೆಸಿ ಅದರ ನಾಲ್ಕು ಉಪಗ್ರಹಗಳನ್ನು [ಇಯಾಪೆಟಸ್ (1671), ರ್‍ಹೀಆ (1672), ಡಯಾನೆ ಮತ್ತು ಟೆಥೀಸ್ (1684)] ಆವಿಷ್ಕರಿಸಿ, ಶನಿಗ್ರಹದ ಉಪಗ್ರಹಗಳ ಬಗ್ಗೆ ಈತನ ಸಂಶೋಧನೆ ಹೈಗನ್ಸನ (1629–1695) ಸಂಶೋಧನೆಯನ್ನು ಮೀರಿಸಿತ್ತು. ಹೈಗನ್ಸನ ಖ್ಯಾತ ಪರಿಶೋಧನೆಯಾದ ಶನಿಗ್ರಹದ ಬಳೆಯ ವಿಚಾರದಲ್ಲಿ ಈತ ಸಂಶೋಧನೆ ಮಾಡಿ ಆ ಬಳೆಯಲ್ಲಿ ನಿಜಕ್ಕೂ ಎರಡು ಬಳೆಗಳಿವೆ ಮತ್ತು ಅವುಗಳ ನಡುವೆ ಒಂದು ಕಪ್ಪು ಪ್ರದೇಶವಿದೆ ಎಂಬುದನ್ನು ಶೋಧಿಸಿದ. ಆ ಪ್ರದೇಶಕ್ಕೆ ಈಗಲೂ ಕಾಸೀನಿ ಕಪ್ಪು ಪ್ರದೇಶವೆಂದೇ ಹೆಸರಿದೆ. ರಾಶಿಚಕ್ರಬೆಳಕಿನ (ಜ಼ೋಡಿಯಾಕಲ್ ಲೈಟ್) ಬಗ್ಗೆ ಮೂಲಭೂತ ಅಧ್ಯಯನ, ಸಂಶೋಧನೆಗಳನ್ನು ಮಾಡಿ ಆ ಬಗ್ಗೆ ಒಂದು ಗ್ರಂಥವನ್ನು ಹೊರತಂದ (1693). ಮಂಗಳಗ್ರಹದ ದಿಗ್ವ್ಯತ್ಯಾಸವನ್ನು ನಿರ್ಧರಿಸುವಲ್ಲಿ ಈತನ ಕೆಲಸ ಪ್ರಶಂಸಾರ್ಹ. ಕಾಸೀನಿ ಆ ಗ್ರಹದ ವೀಕ್ಷಣೆ ಮಾಡುವ ಕಾಲಕ್ಕೆ ಸರಿಯಾಗಿ ಫ್ರೆಂಚ್ ಗಯಾನದಲ್ಲಿ ರೀಪೆ ಎಂಬ ಫ್ರೆಂಚ್ ಖಗೋಳವಿಜ್ಞಾನಿ ಸಹ ಅದೇ ಗ್ರಹವನ್ನು ವೀಕ್ಷಿಸುತ್ತಿದ್ದ. ಇದರಿಂದಾಗಿ ಭೂಮಿಯಿಂದ ಮಂಗಳ ಗ್ರಹದ ದೂರ ನಿರ್ಧರಿಸಲು ಕಾಸೀನಿಗೆ ಅನುಕೂಲವಾಯಿತು. ಕೆಪ್ಲರನ ಕಾಲದಿಂದಲೂ ಭೂಮಿಯಿಂದ ಸೂರ್ಯನ ಮತ್ತು ಇತರ ಗ್ರಹಗಳ ದೂರ ಸಾಕಷ್ಟು ನಿಖರವಾಗಿ ಗೊತ್ತಿದ್ದರೂ ಅದನ್ನು ಇನ್ನಷ್ಟು ಪರಿಷ್ಕರಿಸುವುದು ಅಗತ್ಯವಾಗಿತ್ತು. ತಾನು ಲೆಕ್ಕಹಾಕಿದ ಮಂಗಳಗ್ರಹದ ದೂರದ ಸಹಾಯದಿಂದ ಭೂಮಿ–ಸೂರ್ಯ 140 ಮಿಲಿಯನ್ ಕಿಮೀ ಎಂದು ಕಾಸೀನಿ ನಿರ್ಧರಿಸಿದ. ವಾಸ್ತವ ದೂರ 148 ಮಿಲಿಯನ್ ಕಿಮೀ. ಸೂರ್ಯನ ಸುತ್ತಲ ಗ್ರಹಗಳ ಚಲನೆಯ ಬಗ್ಗೆ ಇರುವ ಕೆಪ್ಲರನ ದೀರ್ಘವೃತ್ತಗಳು ಎಂಬ ಹೆಸರಿಗೆ ಬದಲಾಗಿ ಕೆಲವು ಬೇರೆ ಬೇರೆ ದೀರ್ಘವೃತ್ತಾಕಾರದ ಕಕ್ಷೆಗಳನ್ನು ಈತ ಸೂಚಿಸಿದ. ಇವನ್ನು ಕಾಸೀನಿಯನ್ಸ್ ಎಂದು ಕರೆಯುತ್ತಾರೆ. ಕ್ರಾಂತಿಚಕ್ರದ ಬಾಗುವಿನ ಬಗ್ಗೆಯೂ ಈತ ಅಧ್ಯಯನ ನಡೆಸಿದ. ವೈಜ್ಞಾನಿಕವಾಗಿ ಇಷ್ಟೆಲ್ಲ ಮಹತ್ಸಾಧನೆಗಳನ್ನು ಈತ ಸಿದ್ಧಿಸಿದ್ದರೂ ವೈಯಕ್ತಿಕವಾಗಿ ಬಲು ಛಲವಾದಿಯೂ ಹಿಡಿದ ಪಟ್ಟನ್ನು ಬಿಡದವನೂ ಆಗಿದ್ದ. ಕೋಪರ್ನಿಕಸ್‌ನ (1473–1540) ಸೂರ್ಯಕೇಂದ್ರವಾದವನ್ನು ಒಪ್ಪದಿದ್ದ ಮಹಾಖಗೋಳ ವಿಜ್ಞಾನಿಗಳಲ್ಲಿ ಈತ ಕೊನೆಯವನೆಂದರೆ ಇವನ ಪುರಾತನ ಸಂಪ್ರದಾಯಶರಣತೆಯ ಅರಿವಾದೀತು.

ಕಾಸೀನಿ ವಂಶದಲ್ಲಿ ನಾಲ್ಕು ಜನ ಖಗೋಳ ವಿಜ್ಞಾನಿಗಳೂ ಒಬ್ಬ ಸಸ್ಯವಿಜ್ಞಾನಿಯೂ ಆಗಿಹೋದರು. ಫ್ರಾನ್ಸ್ ದೇಶದ ಖಗೋಳವಿಜ್ಞಾನದಲ್ಲಿ ಈ ವಂಶಸ್ಥರು ಒಂದು ಶತಮಾನದವರೆಗೆ ಸಾರ್ವಭೌಮತ್ವ ಸ್ಥಾಪಿಸಿದ್ದರೂ ಆ ವಿಜ್ಞಾನದ ಬೆಳವಣಿಗೆಗೆ ಅಷ್ಟೇನೂ ಪೋಷಕವಾಗಲಿಲ್ಲ.

ಇತ್ತೀಚೆಗೆ (2004) ಶನಿಗ್ರಹವನ್ನು ಅರಸಿ ಹೊರಟ ಬಾಹ್ಯಾಕಾಶ ನೌಕೆಗೆ ಕ್ಯಾಸಿನಿ ಎಂದೇ ಹೆಸರಿಸಲಾಗಿದೆ. *

**ಕಾಸ್ಟರೀಕ :** (ಕೋಸ್ಟರಿಕ) ಮಧ್ಯ ಅಮೆರಿಕದ ಒಂದು ಗಣರಾಜ್ಯ. ಉತ್ತರದಲ್ಲಿ ನಿಕರಾಗ್ವ, ಪೂರ್ವದಲ್ಲಿ ಕ್ಯಾರಿಬೀಯನ್ ಸಮುದ್ರ, ದಕ್ಷಿಣದಲ್ಲಿ ಪನಾಮಾ ರಾಜ್ಯ ಮತ್ತು ಪಶ್ಚಿಮಕ್ಕೆ ಪೆಸಿಫಿಕ್ ಸಾಗರ ಇವೆ. ವಿಸ್ತೀರ್ಣ 51100 ಚ.ಕಿಮೀ. ಮಧ್ಯ ಅಮೆರಿಕದ ಅತ್ಯಂತ ಕಿರಿಯ ರಾಷ್ಟ್ರಗಳಲ್ಲಿ ಇದು ಎರಡನೆಯದು (ಇದಕ್ಕಿಂತ ಕಿರಿಯದು ಎಲ್ ಸ್ಯಾಲ್ವಡಾರ್). ಜನಸಂಖ್ಯೆ 42,28,100 (2005). ರಾಜಧಾನಿ ಸ್ಯಾನ್‍ಜೋಸ್. ಜನಸಂಖ್ಯೆ 3,15,909 (2002).

**ಭೂರಚನೆ :** ಕಾಸ್ಟರೀಕದ ಓಸ ಮತ್ತು ನಿಕೋಯ ಎಂಬ ಎರಡು ಹಿರಿಯ ಪರ್ಯಾಯದ್ವೀಪಗಳಲ್ಲಿ ಸಂಮಿಶ್ರ ಸ್ವಭಾವದ, ಎರಡನೆ ಭೂಯುಗದ ರೂಪಪರಿವರ್ತಿತ ಬಂಡೆಗಳಿವೆ. ಈ ಪರ್ಯಾಯ ದ್ವೀಪಗಳ ತಳಪ್ರದೇಶ, ನೈಋತ್ಯ ತೀರಪ್ರದೇಶ, ರೀಯೊ ಡಿ ಟೆರ್‍ರಬ ನದಿಯ ಜಲಾನಯನ ಭೂಮಿ ಹಾಗೂ ಪೆಸಿಫಿಕ್ ಸಾಗರದ ಕಡೆಯ

ತಗ್ಗುಪ್ರದೇಶ–ಇವು ತೃತೀಯ ಭೂಯುಗದ ಶಿಲೆಗಳಿಂದ ಕೂಡಿವೆ. ಅಗ್ನಿಪರ್ವತಗಳ ಅಪಾರ ಬೂದಿಯೂ ಹರಡಿದೆ. ಈ ರಾಜ್ಯದ ವಾಯುವ್ಯದಲ್ಲಿ ಅನೇಕ ಸುಪ್ತ ಅಗ್ನಿಪರ್ವತಗಳುಳ್ಳ ವಾಲ್ಕ್ಯಾನಿಕ ಪರ್ವತಶ್ರೇಣಿಗಳಿವೆ. ಅವುಗಳ ಪಾರ್ಶ್ವಗಳಲ್ಲಿ ಜ್ವಾಲಾಮುಖಿಗಳಿಂದೆದ್ದ ರಾಸಾಯನಿಕ ವಸ್ತುಗಳೂ, ಮಿಯೋಸೀನ್ ಯುಗದ ಸಮುದ್ರದಷ್ಟೂ ಹರಡಿಕೊಂಡಿವೆ. ಅಲ್ಲಿಯ ಅಗ್ನಿಪರ್ವತಗಳು 1364–2022 ಮೀ ಎತ್ತರಕ್ಕಿವೆ; ಅವುಗಳಲ್ಲಿ ಮಿರಾವಾಲೆಸ್ ಅಗ್ನಿಪರ್ವತವೇ ಅತ್ಯಂತ ಎತ್ತರವಾದ್ದು (2022 ಮೀ). ರಾಜ್ಯದ ಆಗ್ನೇಯ ಭಾಗದಲ್ಲಿ ವಿಶಾಲವಾಗಿ ಹರಡಿರುವ ಕಾರ್ಡೆಯೇರಾ ದೆ ತಲಮಾಂಕಾ ಪರ್ವತ ಶ್ರೇಣಿಗಳಲ್ಲಿ ಮಿಯೋಸೀನ್–ಓಲಿಗೋಸೀನ್ ಯುಗದ ಕಲ್ಲುಂಡೆಗಳೂ ಜೇಡಿಪದರಕಲ್ಲುಗಳೂ ಮರಳುಗಲ್ಲುಗಳೂ ಜ್ವಾಲಾಮುಖಿಗಳಿಂದ ಹೊರಸುರಿದ ವಸ್ತುಗಳೂ ಇವೆ. ಈ ಪರ್ವತ ಶ್ರೇಣಿಯಲ್ಲಿ ಅತ್ಯಂತ ಎತ್ತರವಾದ ಶಿಖರ ಚೀರ್‍ರಿಪೋ ಗ್ರಾಂಡೆ (3798 ಮೀ) ಕಾರ್ಡೆಯೇರಾ ಸೆಂಟ್ರಲ್ ಪರ್ವತಶ್ರೇಣಿಯ ಮೂರನೆಯ ಭೂಯುಗದ ಅಗ್ನಿಪರ್ವತಗಳಿವೆ; ಅವುಗಳಲ್ಲಿ ಹಲವು ಸುಪ್ತವಾಗಿವೆ. ಮುಖ್ಯವಾದವು ಪೊವಾಸ್ (2689 ಮೀ), ಬಾರ್ವ, (2889 ಮೀ) ಟೂರ್ಯಾಲ್ಬಾ (3309 ಮೀ) ಮತ್ತು ಇರಾಜೂ (3412 ಮೀ). ಕಾರ್ಡಿಯೇರಾ ಸೆಂಟ್ರಲ್ ಪರ್ವತಗಳ ಪಶ್ಚಿಮದಲ್ಲಿ ಮೆಸೇಟಾ ಸೆಂಟ್ರಲ್ ಪರ್ವತ ಸಾಲುಗಳಿವೆ. ಸೀಮೆ ಸುಣ್ಣದಂಥ ಮೃದುಶಿಲೆಗಳು, ಜ್ವಾಲಾಮುಖಿಯ ಲಾವ ಮತ್ತು ಬೂದಿ ಅಲ್ಲಿ ಹರಡಿಕೊಂಡಿವೆ. ನಾಡಿನ ಈಶಾನ್ಯ ಭಾಗದಲ್ಲಿ ಮಿಯೋಸೀನ್–ಓಲಿಗೋಸೀನ್ ಯುಗದ ಮರಳುಗಲ್ಲು, ಜೇಡಿಪದರಗಲ್ಲು, ಸುಣ್ಣಕಲ್ಲು ಹಾಗೂ ಇತ್ತೀಚಿನ ಮೆಕ್ಕಲು ಮಣ್ಣಿನ ಗುಡ್ಡೆಗಳಿವೆ.

**ನದಿಗಳು :** ಕಾಸ್ಟರೀಕ ರಾಜ್ಯದ ಪೂರ್ವ ಮೈದಾನಗಳಲ್ಲಿ ಅನೇಕ ದೊಡ್ಡ ನದಿಗಳು ಹರಿದು ಕ್ಯಾರಿಬೀಯನ್ ಸಮುದ್ರವನ್ನು ಸೇರುತ್ತವೆ. ಸಿಕ್ಸಾಮೋಲ ನದಿ ತನ್ನ ಹರವಿನಲ್ಲಿ ಸ್ವಲ್ಪದೂರ ಅಂತಾರಾಷ್ಟ್ರೀಯ ಗಡಿಯಾಗಿ ಪರಿಣಮಿಸುತ್ತದೆ. ರೆವೆಂಟ ಜೋನ್ ನದಿ ಇರಜೂ ಜ್ವಾಲಾಮುಖಿ ಪರ್ವತದಲ್ಲಿ ಉದ್ಭವಿಸಿ ಪೂರ್ವಾಭಿಮುಖವಾಗಿ ಕ್ಯಾರಿಬೀಯನ್ ಸಮುದ್ರದತ್ತ ತಿರುಗುವುದಕ್ಕೆ ಮುಂಚೆ ಮೆಸೇಟಾ ಸೆಂಟ್ರಲ್ ಪ್ರಸ್ಥಭೂಮಿಯ ಪೂರ್ವಭಾಗದಲ್ಲಿ ಬಸಿದುಹೋಗುತ್ತದೆ. ಚೀರ್‍ರಿಪೋ ನದಿಯೂ ಅದೇ ಪರ್ವತದಲ್ಲಿ ಹುಟ್ಟುತ್ತದೆ. ಆರೆನಾಲ್–ಸಾನ್ ಕಾರ್ಲಾಸ್ ನದಿ ಕಾರ್ಡೆಯೇರಾ ವಾಲ್ಕ್ಯಾನಿಕ ಪರ್ವತಶ್ರೇಣಿಗಳ ಪಶ್ಚಿಮದಲ್ಲಿರುವ ಆರೆನಾಲ್ ಸರೋವರದಲ್ಲಿ ಹುಟ್ಟಿ ಸಾನ್ ವಾನ್ ನದಿಯನ್ನು ಕೂಡುತ್ತದೆ. ತನ್ನ ಹರವಿನಲ್ಲಿ ಸ್ವಲ್ಪ ದೂರ ಅಂತರರಾಷ್ಟ್ರೀಯ ಗಡಿಯಾಗಿರುವ ಸಾನ್ ವಾನ್ ನದಿ ನೌಕಾಸಂಚಾರಕ್ಕೆ ಯೋಗ್ಯವಾಗಿದೆ. ಗ್ರಾಂಡೆ ದೆ ಟೆರ್‍ರಾಬ, ಮೆಸೆಟಾ ಸೆಂಟ್ರಲ್ ಪ್ರಸ್ಥಭೂಮಿಯಲ್ಲಿ ಬಸಿದು ಹೋಗುವ ಗ್ರಾಂಡೆ ಡೆ ಟಾರೇಕ್ಲೋಸ್ ಮತ್ತು ಗುನಾಕಾಸ್ಟೆ ತಗ್ಗುಭೂಮಿಯಲ್ಲಿ ಬಸಿದುಹೋಗುವ ಟೆಂಪಿಸ್ಕ್ಯು–ಇವು ಪೆಸಿಫಿಕ್ ಸಾಗರವನ್ನು ಸೇರುವ ಹಿರಿಯ ನದಿಗಳು.

**ವಾಯುಗುಣ :** 909 ಮೀಗಿಂತ ಕಡಿಮೆ ಎತ್ತರದ ಪ್ರದೇಶಗಳಲ್ಲಿ ವಾರ್ಷಿಕ ಮಧ್ಯಕ

ಸಾನ್ ಓಸೇಯಲ್ಲಿಯ ಮಾರುಕಟ್ಟೆಯೊಂದರಲ್ಲಿ ಕಿತ್ತಳೆ ಮಾರಾಟ

ಉಷ್ಣತೆ 26.6$^{o}$ ಸೆಂಮೀ. 909 ಮೀಗಿಂತ ಹೆಚ್ಚು ಎತ್ತರದಲ್ಲಿ 23.3$^{o}$ ಸೆಂ. 1515 ಮೀ ಎತ್ತರದಲ್ಲಿ 15$^{o}$ ಸೆಂ. 1153 ಮೀ ಎತ್ತರದಲ್ಲಿರುವ ರಾಜಧಾನಿ ಸ್ಯಾನ್‍ಜೋಸ್‍ನಲ್ಲಿ ವಾರ್ಷಿಕ ಮಧ್ಯಕ ಉಷ್ಣತೆ 19.4$'$ ಸೆಂ. ಇರುತ್ತವೆ. ಭೂಮಟ್ಟ ಮತ್ತು ಈಶಾನ್ಯ ವಾಣಿಜ್ಯ ಮಾರುತಗಳನ್ನು ಅವಲಂಬಿಸಿ ಮಳೆಯಾಗುತ್ತದೆ. ಕೆಲವು ಕಡೆ ವಾರ್ಷಿಕ ಮಳೆಯ ಪ್ರಮಾಣ 400 ಸೆಂಮೀಗಿಂತ ಹೆಚ್ಚಾಗಿರುತ್ತದೆ. ಈಶಾನ್ಯದ ಮೈದಾನ ಮತ್ತು ಪರ್ವತ ಪ್ರದೇಶಗಳಲ್ಲಿ 160–120 ಸೆಂಮೀ ಮಳೆಯಾಗುತ್ತದೆ; ಅಲ್ಲಿ 5 ತಿಂಗಳುಗಳ ಕಾಲ ಒಣ ಹವೆ. ಆಗ್ನೇಯ ಮೈದಾನ ಮತ್ತು ಪರ್ವತ ಪ್ರದೇಶಗಳಲ್ಲಿ ಮಳೆ 160–260 ಸೆಂ.ಮೀ. ಮೂರು ತಿಂಗಳೂ ಒಣ ಹವೆ.

**ಸಸ್ಯಗಳು :** ಕಾಸ್ಟರೀಕದ ಸ್ವಾಭಾವಿಕ ಸಸ್ಯಗಳಲ್ಲಿ ಐದು ಬಗೆಯ ಅರಣ್ಯಗಳು ಹಾಗೂ ಮೂರು ಬಗೆಯ ಹುಲ್ಲುಗಾವಲುಗಳಿವೆ. ಎರಡು ಬಗೆಯ ಅರಣ್ಯಗಳು ಸಾಮಾನ್ಯವಾದವು: ಕ್ಯಾರಿಬೀಯನ್ ಸಮುದ್ರ ಮತ್ತು ಪೆಸಿಫಿಕ್ ಸಾಗರದ ಕಡೆಗಳಲ್ಲಿರುವ ಸಿಹಿನೀರು ಮತ್ತು ಉಪ್ಪುನೀರಿನ ಜೌಗು ಪ್ರದೇಶಗಳಲ್ಲಿ ತೆಂಗು ಹಾಗೂ ತೊಗಟೆಮರಗಳು ಬೆಳೆಯುತ್ತವೆ. ನಿತ್ಯಹಸುರಿನ ಅರಣ್ಯಗಳು ದೇಶದ ಶೇ. 60 ರಷ್ಟು ಪ್ರದೇಶವನ್ನು ಆವರಿಸಿವೆ. ಇವುಗಳಲ್ಲಿ ಸ್ವಲ್ಪಭಾಗವನ್ನು ಕಡಿದು ವ್ಯವಸಾಯಕ್ಕೂ ಬಾಳೆ ತೋಟಗಳಿಗೂ ರೈಲುಮಾರ್ಗ ಹಾಕುವುದಕ್ಕೂ ಉಪಯೋಗಿಸಿಕೊಂಡಿದ್ದಾರೆ. ಕಾರ್ಡೆಯೇರಾ ದೆ ತಲಮಾಂಕಾ ಪರ್ವತಗಳ ಪೂರ್ವ ಇಳಿಜಾರುಗಳಿಂದ ಓಸಾ ಪರ್ಯಾಯದ್ವೀಪದವರೆಗೆ ವ್ಯಾಪಿಸಿರುವ ಅರಣ್ಯಗಳಲ್ಲಿ 1,000ಕ್ಕೂ ಹೆಚ್ಚು ಬಗೆಯ ವೃಕ್ಷಗಳು ಯಥೇಚ್ಛವಾಗಿ ಬೆಳೆದಿವೆ. ಅಲ್ಲಿಯ ಮರಗಳಲ್ಲಿ ದೇವದಾರು, ಲಿಗ್ನಂ ವಿಟೇ, ಬಾಲ್ಸ, ಕರಿಮರ, ರಬ್ಬರ್, ಬ್ರಜಿಲ್‍ವುಡ್–ಇವು ಮುಖ್ಯವಾದವು. 3030 ಮೀ ಎತ್ತರದ ಪ್ರದೇಶಗಲ್ಲಿ ಓಕ್ ಮರಗಳೂ ಆಲ್ಪ್ಸ್ ಪರ್ವತಗಳಲ್ಲಿರುವ ಮಾದರಿಯ ಹುಲ್ಲುಗಾವಲುಗಳೂ ಇವೆ. ವಾಯವ್ಯದ ಒಣಹವೆಯ ತಗ್ಗು ಭೂಮಿಗಳಲ್ಲಿ ಉಷ್ಣವಲಯದ ಅರಣ್ಯಗಳೂ ಸವಾನ ಹುಲ್ಲುಗಾಡುಗಳೂ ಇವೆ. ಅನೇಕ ಬಗೆಯ ಔಷಧ ಮೂಲಿಕೆಗಳು ಅರಣ್ಯಗಳಲ್ಲಿ ಸಿಗುತ್ತವೆ.

**ಪ್ರಾಣಿಗಳು :** ಕಾಸ್ಟರೀಕದ ಅರಣ್ಯಗಳಲ್ಲಿ ಸಾರಂಗ, ಅಳಿಲು, ಒಪಾಸಂ, ಟೇಪಿಯರ್, ಮುಳ್ಳುಹಂದಿ, ಮೊಸಳೆ; ಇಗ್ವಾನ, ವಿವಿಧ ಬಗೆಯ ಹಾವು, ಆಮೆ, ಅನೇಕ ಜಲಚರ ಪಕ್ಷಿಗಳು, ಪರಿಸರಕ್ಕೆ ಹೋಲುವ ಬಣ್ಣವುಳ್ಳ ಪಕ್ಷಿಗಳು, ಜೀರುಂಡೆ, ಬಾವಲಿ–ಮೊದಲಾದವು ಜೀವಿಸುತ್ತವೆ. ಪೆಸಿಫಿಕ್ ಸಾಗರತೀರದಲ್ಲಿ ಟುನಾ, ಕತ್ತಿ ಮೀನು, ಹಂದಿಮೀನು, ಶಾರ್ಕ್, ಸೀಗಡಿ ಮೊದಲಾದವು ಸಿಗುತ್ತವೆ.

**ಇತಿಹಾಸ :** ಕೊಲಂಬಸ್ ತನ್ನ ನಾಲ್ಕನೆಯ ಮತ್ತು ಕೊನೆಯ ಕಡಲಯಾನದಲ್ಲಿ ಕಾಸ್ಟರೀಕ ದೇಶವನ್ನು ಕಂಡುಹಿಡಿದ. ಆ ಹೆಸರನ್ನು ಕೊಟ್ಟವನೂ ಅವನೇ ಎಂದು ಕಾಣುತ್ತದೆ. ಇಲ್ಲಿಯ ಜನ ಧರಿಸಿದ್ದ ಆಭರಣಗಳನ್ನು ನೋಡಿದ ಸ್ಪ್ಯಾನಿಷ್ ನಾವಿಕರು

ಕ್ಯಾರಿಬೀಯನ್ ತೀರದಲ್ಲಿ ಹೇರಳವಾಗಿ ಚಿನ್ನ ಸಿಗುವುದೆಂದು ಭಾವಿಸಿ ಈ ನಾಡಿಗೆ ಕಾಸ್ಟರೀಕ ಅಥವಾ ಶ್ರೀಮಂತ ಕಡಲಂಚು ಎಂದು ಹೆಸರಿಸಿದರು. ಈ ದೇಶವನ್ನು ಕಂಡುಹಿಡಿದ ಕೂಡಲೆ ಇಲ್ಲಿ ವಸಾಹತು ಸ್ಥಾಪಿಸಲು ಸ್ಪೇನ್ ಮಾಡಿದ ಯತ್ನ ವಿಫಲಗೊಂಡಿತು. ವಲಸೆಗಾರರಿಗೆ ಇಂಡಿಯನ್ ಜನರಿಂದ ಅಪಾರ ಸಾವುನೋವುಗಳು ಸಂಭವಿಸಿದುವು.

ಮೊದಮೊದಲು ಈ ದೇಶಕ್ಕೆ ನೂವ ಕಾರ್ಟಾಗೊ ಎಂಬ ಹೆಸರು ಇತ್ತು. 1540 ರಿಂದ ಕಾಸ್ಟರೀಕ ಎಂಬ ಹೆಸರನ್ನು ಸಾಮಾನ್ಯವಾಗಿ ಅಂಗೀಕರಿಸಲಾಗಿದೆ. ಆಗಿನಿಂದ ಅದು ಸ್ಪೇನ್ ದೇಶದ ಪ್ರಾಂತ್ಯವಾಯಿತು. ಅದರ ರಾಜ್ಯಪಾಲನಾಗಿದ್ದ ವಾನ್ ವಾಸ್‍ಕ್ವೆಜ಼್ ಕಾರೊನಾಡೋ 1560–1573ರಲ್ಲಿ ಇದರ ಗಡಿಗಳನ್ನು ನಿರ್ಧರಿಸಿದ. ಬಹು ದೀರ್ಘಕಾಲ ಸ್ಪೇನ್ ದೇಶದ ದಬ್ಬಾಳಿಕೆಗೆ ಒಳಗಾಗಿದ್ದ ಜನ ಬಡತನದಿಂದ ನೊಂದಿದ್ದರು. ಮೆಕ್ಸಿಕೋ ದೇಶ ಸ್ಪೇನಿನ ದಬ್ಬಾಳಿಕೆಯ ವಿರುದ್ಧ ದಂಗೆಯೆದ್ದು ಸ್ವಾತಂತ್ರ್ಯ ಪಡೆಯಿತೆಂಬ ವಾರ್ತೆ ಹರಿದೊಡನೆಯೇ ಮಧ್ಯ ಅಮೆರಿಕದ ಇತರ ರಾಜ್ಯಗಳಂತೆ ಕಾಸ್ಟರೀಕವೂ 1821ರ ಸೆಪ್ಟೆಂಬರ್ 15ರಂದು ಸ್ವತಂತ್ರವಾಯಿತು. ಕಾಸ್ಟರೀಕ ಮೊದಲು ಮೆಕ್ಸಿಕೋ ರಾಜ್ಯದೊಂದಿಗೆ ಸೇರಿದರೂ ತರುವಾಯ ಮಧ್ಯ ಅಮೆರಿಕ ರಾಜ್ಯಗಳ ಒಕ್ಕೂಟವನ್ನು ಸೇರಿತು. ಕೊನೆಗೆ ಆ ದೇಶಗಳ ರಾಜಕೀಯದಿಂದ ಹೊರಬಂದು ಪ್ರತ್ಯೇಕ ಧೋರಣೆ ತಳೆಯಿತು. ಸ್ವಾತಂತ್ರ್ಯದ ಪ್ರಾರಂಭ ಕಾಲದಲ್ಲಿ ಉದಾರ ಪಕ್ಷ ಮತ್ತು ಸಂಪ್ರದಾಯ ಪಕ್ಷ ಎಂಬ ಎರಡು ಪಕ್ಷಗಳು ಹುಟ್ಟಿಕೊಂಡುವು. ಪ್ರಾಂತೀಯ ವಿರಸಗಳು ಉದ್ಭವಿಸಿದುವು. 1827ರಲ್ಲಿ ನಡೆದ ಒಳಯುದ್ಧದ ಪರಿಣಾಮವಾಗಿ ರಾಜಧಾನಿಯನ್ನು ಕಾರ್ಟಾಗೋದಿಂದ ಸ್ಯಾನ್‍ಜೋಸ್ ನಗರಕ್ಕೆ ವರ್ಗಾಯಿಸಲಾಯಿತು. ನಾಲ್ಕು ವರ್ಷಗಳಿಗೊಮ್ಮೆ ರಾಜಧಾನಿಯನ್ನು ಒಂದು ಪಟ್ಟಣದಿಂದ ಇನ್ನೊಂದಕ್ಕೆ ಸರದಿಯಂತೆ ಬದಲಿಸಬೇಕೆಂಬ ಸಲಹೆ 1834ರಲ್ಲಿ ಬಂದಿತ್ತು. ಆದರೆ ಸ್ಯಾನ್‍ಜೋಸ್ ಶೀಘ್ರವಾಗಿ ಬೆಳೆಯಲಾರಂಭಿಸಿದ್ದರಿಂದ ನಗರಗಳ ನಡುವಣ ಈ ಪೈಪೋಟಿ ನಿಂತುಹೋಯಿತು.

ಕಾಸ್ಟರೀಕ ಮತ್ತು ನಿಕರಾಗ್ವ ರಾಜ್ಯಗಳೆರಡೂ ಸಾನ್‍ವಾನ್ ನದಿಯ ನೀರಿನ ಬಳಕೆಯ ಬಗ್ಗೆ ವಿವಾದಗಳಲ್ಲಿ ತೊಡಗಿದ್ದುವು. ನಿಕರಾಗ್ವದ ದೊಡ್ಡ ಪ್ರಾಂತ್ಯಗಳಲ್ಲೊಂದಾದ ಗ್ವಾನಕ್ಯಾಸ್ಟ ಆ ರಾಜ್ಯದಿಂದ ಹೊರಬಂದು ಕಾಸ್ಟ ರೀಕ ರಾಜ್ಯವನ್ನು ಸೇರಿಕೊಂಡಾಗ ವಿವಾದ ಹೆಚ್ಚಿತು. ಆದರೂ 1855ರಲ್ಲಿ ನಿಕರಾಗ್ವ ರಾಜ್ಯವನ್ನು ವಿಲಿಯಂ ವಾಕರ್ ಎಂಬಾತ ಆಕ್ರಮಿಸಲು ಬಂದಾಗ, ಕಾಸ್ಟರೀಕ ಆ ರಾಜ್ಯಕ್ಕೆ ನೆರವಾಗಿ ನಿಂತಿತು.

ಅಧ್ಯಕ್ಷ ಜನರಲ್ ಥಾಮಸ್ ಗ್ವಾರ್ಡಿಯನ ಕಾಲದಲ್ಲಿ ಕಾಸ್ಟರೀಕ ಪ್ರಗತಿ ಹೊಂದಿತು. ಸರ್ವಾಧಿಕಾರಿ ವಿಧಾನಗಳನ್ನು ಬಳಸಿ ಅವನು ದೇಶದ ಸಕ್ಕರೆ ಮತ್ತು ಕಾಫಿ ವ್ಯಾಪಾರವನ್ನು ಹೆಚ್ಚಿಸಿದ. ಶಾಲೆಗಳ ನಿರ್ಮಾಣಕ್ಕೆ ಭಾರಿ ಕಾರ್ಯಕ್ರಮ ಯೋಜಿತವಾಯಿತು; 1870–1880ರಲ್ಲಿ ರೈಲು ಮಾರ್ಗಗಳ ನಿರ್ಮಾಣವಾಯಿತು. 1871ರಲ್ಲಿ ಅಂಗೀಕೃತವಾದ ಹೊಸ ಸಂವಿಧಾನ 1949ರ ವರೆಗೆ ಮುಂದುವರಿಯಿತು. ಈ ಸಂವಿಧಾನದಲ್ಲಿ ಧಾರ್ಮಿಕ ಸಹನೆಗೆ ಅವಕಾಶ ನೀಡಲಾಗಿತ್ತು. ಕಡ್ಡಾಯ ಶಿಕ್ಷಣ ಕಾನೂನು ಜಾರಿಗೆ ಬಂದದ್ದು 1886ರಲ್ಲಿ. 1890ರಲ್ಲಿ ನಿಜವಾದ ಪ್ರಜಾಸತ್ತಾತ್ಮಕ ಚುನಾವಣೆ ನಡೆದು ಓಸೇ ಜಾಕ್ವಿನ್ ರೋಡ್ರಿಕ್ವೆಜ಼್ ಅಧ್ಯಕ್ಷನಾದ.



ಕಾಫಿ ಬೀಜಗಳನ್ನು ಒಣಗಿಸುತ್ತಿರುವುದು : ಕಾಫಿ ಕಾಸ್ಟರೀಕದ ಮುಖ್ಯ ಬೆಳೆ

ಅಮೆರಿಕ ಸಂಯುಕ್ತ ಸಂಸ್ಥಾನ ಮಾಡಿಕೊಂಡ ಒಂದು ಒಪ್ಪಂದದ ಪ್ರಕಾರ ಸಾನ್ ವಾನ್ ನದಿಯನ್ನು ಅಂತರ ಸಾಗರ ಜಲಯಾನಕ್ಕಾಗಿ ಉಪಯೋಗಿಸಿಕೊಳ್ಳಲು ನಿಕರಾಗ ಅವಕಾಶ ನೀಡಿದಾಗ ಕಾಸ್ಟರೀಕ ದೇಶ ಇದನ್ನು ಪ್ರತಿಭಟಿಸಿತು. ಮಧ್ಯ ಅಮೆರಿಕ ನ್ಯಾಯಾಲಯದ ಮುಂದೆ ತನ್ನ ಹಕ್ಕನ್ನು ಪ್ರತಿಪಾದಿಸಿತು. ನ್ಯಾಯಾಲಯದ ತೀರ್ಪು ಕಾಸ್ಟರೀಕದ ಪರವಾಗಿತ್ತು. ನಿಕರಾಗ್ವ ಮತ್ತು ಅಮೆರಿಕ ಸಂಯುಕ್ತಸಂಸ್ಥಾನ ಅದನ್ನು ಒಪ್ಪಲು ನಿರಾಕರಿಸಿದುವು. ಕಾಸ್ಟರೀಕ ಮತ್ತು ಪನಾಮಾ ರಾಜ್ಯಗಳ ನಡುವಣ ಗಡಿ ಸಮಸ್ಯೆ 1941ರ ವರೆಗೆ ಇತ್ಯರ್ಥವಾಗಲಿಲ್ಲ. ಈ ಬಗ್ಗೆ ಮನಸ್ತಾಪಗಳು ಮುಂದುವರಿದು ಕೊನೆಗೆ ರಾಫೇಲ್ ಕಾಲ್ಡೆರೋನ್ ಗ್ವಾರ್ಡಿಯ ಅಧ್ಯಕ್ಷತೆಯಲ್ಲಿದ್ದ ಸರ್ಕಾರ ಪನಾಮಾ ರಾಜ್ಯದೊಂದಿಗೆ ತನ್ನ ಗಡಿಯನ್ನು ನಿರ್ಧರಿಸಿಕೊಂಡಿತು.

1913ರಲ್ಲಿ ಕಾಸ್ಟರೀಕ ಮೊದಲ ಬಾರಿಗೆ ನೇರ ಚುನಾವಣೆ ನಡೆಸಿತು. ಯಾವ ಅಭ್ಯರ್ಥಿಯೂ ಬಹುಮತ ಪಡೆಯಲಿಲ್ಲವಾಗಿ ರಾಜ್ಯದ ಸಭೆ (ಕಾಂಗ್ರೆಸ್) ಅಲ್‍ಫ್ರೆಡೊ ಗೊಂಜಾಲೆಜ಼ನನ್ನು ಅಧ್ಯಕ್ಷನನ್ನಾಗಿ ನೇಮಿಸಿತು. ಈತ ಮಾಡಿದ ತೆರಿಗೆ ಕಾನೂನುಗಳ ತಿದ್ದುಪಡಿಗಳನ್ನೂ ಇನ್ನಿತರ ಸುಧಾರಣೆಗಳನ್ನೂ ಆತನ ಬೆಂಬಲಿಗ ಜನರಲ್ ಫ್ರೆಡೆರಿಕೊ ಟಿನೋಕೊ ಖಂಡಿಸಿ, ಜನವರಿ 1917ರಲ್ಲಿ ಬಂಡಾಯ ನಡೆಸಿದ; ಕ್ರಾಂತಿಯಿಂದ ಆತ ಸ್ಥಾಪಿಸಿದ ಸರ್ಕಾರವನ್ನು ಅಮೆರಿಕ ಸಂಯುಕ್ತಸಂಸ್ಥಾನ ಅಂಗೀಕರಿಸಲಿಲ್ಲ. ಅವನ ಆಡಳಿತ ಜನಪ್ರಿಯವಾಗಲಿಲ್ಲ; ದಂಗೆಗಳೆದ್ದುವು. 1919ರಲ್ಲಿ ಆತ ದೇಶತ್ಯಾಗ ಮಾಡಿದ. ತರುವಾಯ ಜೂಲಿಯೋ ಅಕಾಸ್ಟ ಅಧ್ಯಕ್ಷನಾಗಿ ಚುನಾಯಿತನಾದ. ಅಮೆರಿಕ ಖಂಡಗಳಲ್ಲೇ ಅತ್ಯಂತ ಶ್ರೇಷ್ಠವಾದ ಹಾಗೂ ವಿಧಿಬದ್ಧವಾದ ಪ್ರಜಾಸತ್ತೆಯೆಂದು ಕಾಸ್ಟರೀಕ ಹೆಸರು ಗಳಿಸಿತು. 1925ರಲ್ಲಿ ಮತದಾರರಿಗೆ ಓದು ಬರಹದ ಪರೀಕ್ಷೆ ನಡೆಸುವ ಕ್ರಮವನ್ನೂ ರಹಸ್ಯಮತದಾನ ಪದ್ಧತಿಯನ್ನೂ ಜಾರಿಗೆ ತರಲಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಜಪಾನ್, ಜರ್ಮನಿ ಮತ್ತು ಇಟಲಿಗಳ ಮೇಲೆ ಈ ದೇಶ ಯುದ್ಧ ಘೋಷಿಸಿತ್ತು (1941).

1948ರಲ್ಲಿ ಕಾಸ್ಟರೀಕದಲ್ಲಿ ಒಂದು ಬಿಕ್ಕಟ್ಟು ಸಂಭವಿಸಿತ್ತು. ಕ್ರಮಬದ್ಧವಾಗಿ ಚುನಾಯಿತನಾದ ಒಟಿಲಿಯೊ ಉಲೇಟೆಯನ್ನು ಅಧಿಕಾರದಿಂದ ಉರುಳಿಸಲು ಸಾಮ್ಯವಾದಿಗಳು ಪ್ರಯತ್ನಿಸಿದರು. ಆದರೆ, ಜೋಸ್ ಫಿಗ್ವೆರ್ಸ್ ಎಂಬವನು ದಂಗೆಯನ್ನಡಗಿಸಿ ಅಧಿಕಾರವನ್ನು ಉಲೇಟಗೆ ವಹಿಸಿಕೊಟ್ಟ. 1949ರಲ್ಲಿ ಹೊಸ ಸಂವಿಧಾನವೊಂದು ಅಂಗೀಕೃತವಾಯಿತು. ಉಲೇಟೆಯ ತರುವಾಯ ಅಧ್ಯಕ್ಷನಾದ ಫಿಗ್ವೆರ್ಸನ ಕಾಲದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಇತರ ಉದ್ಯಮಗಳನ್ನು ರಾಷ್ಟ್ರೀಕರಿಸುವ ಸೂಚನೆಗಳಿದ್ದುವು. 1958ರಲ್ಲಿ ಅಧ್ಯಕ್ಷನಾದವನು ಎಚಾಂಡಿ ಜಿಮೇನೆಜ಼್. ಈತನ ತರುವಾಯ 1962ರಲ್ಲಿ ಬಂದ ಅಧ್ಯಕ್ಷ ಫ್ರಾನ್ಸಿಸ್ಕೊ ಜೆ. ಓರ್ಲಿಚ್. ಅವನ ಅನಂತರ ಜೋಸೆ ಜೋಕ್ವಿನ್ ಟ್ರೆಜೋಸ್ ಫರ್ನಾಂಡೆಜ಼್ ಅಧ್ಯಕ್ಷನಾದ.

**ಆಡಳಿತ ವ್ಯವಸ್ಥೆ** : ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಿಂದ ಕೂಡಿದ ಏಕಾತ್ಮಕ ರಾಜ್ಯವ್ಯವಸ್ಥೆಗೆ 1949ರ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. 1871ರ

ಕಾಸ್ಟರೀಕದ ರಾಜಧಾನಿ ಸಾನ್ ಓಸೆಯ ಒಂದು ಬೀದಿ

ಸಂವಿಧಾನದ ಮೇರೆಗೆ ಮಂತ್ರಿಗಳು ಶಾಸನ ಸಭೆಯಲ್ಲಿ ಹಾಜರಾದರೂ ಮತನೀಡುವ ಅಧಿಕಾರ ಹೊಂದಿರಲಿಲ್ಲ. ಮಂತ್ರಿಗಳನ್ನು ಶಾಸನ ಸಭೆಯ ಮುಂದೆ ಕಡ್ಡಾಯವಾಗಿ ಹಾಜರು ಪಡಿಸಲು ಮತ್ತು ಅವರನ್ನು ಪ್ರಶ್ನಿಸಿ ಖಂಡಿಸಲು 1949ರ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಯಿತು. ಕಾಸ್ಟರೀಕದ ಏಕಸದನದ ಶಾಸನ ಸಭೆಯಲ್ಲಿ 45 ಮಂದಿ ಸದಸ್ಯರಿದ್ದಾರೆ. ಅವರ ಅಧಿಕಾರಾವಧಿ 4 ವರ್ಷ. ಇಬ್ಬರನ್ನು ಅಧ್ಯಕ್ಷಸ್ಥಾನಕ್ಕೆ ಹೆಸರಿಸುತ್ತಾರೆ. ಅಧ್ಯಕ್ಷಸ್ಥಾನಕ್ಕೆ ನಿಲ್ಲುವ ಅಭ್ಯರ್ಥಿ ಕೊನೆಯ ಪಕ್ಷ ಸೇಕಡ 45ರಷ್ಟು ಸಾರ್ವತ್ರಿಕ ಮತ ಪಡೆಯದಿದ್ದರೆ ನಿರ್ಣಾಯಕ ಚುನಾವಣೆ ನಡೆಯುತ್ತದೆ. 1949ರಿಂದಲೂ ಸ್ತ್ರೀ–ಪುರುಷರಿಗೆ ಮತದಾನದ ಹಕ್ಕಿದೆ. ಸಾನ್ ಓಸೇ ನಗರದಲ್ಲಿ ಆಡಳಿತಕ್ಕೆ ಸಂಬಂಧಪಟ್ಟ ಪ್ರೌಢಶಾಲೆಯೊಂದರ ಸ್ಥಾಪನೆಯಾಗಿದೆ. ಆಡಳಿತದ ಸೌಕರ್ಯಕ್ಕಾಗಿ ರಾಜ್ಯವನ್ನು ಆಲಾಹ್ವೇಲಾ, ಕಾರ್ಟಾಗೊ, ಗ್ವಾನಾಕಾಸ್ಟೆ, ಎರೇದ್ಯ, ಲಿಮಾನ್, ಪೂಂಟಾರೇನಾಸ್ ಮತ್ತು ಸ್ಯಾನ್‍ಜೋಸ್ ಎಂಬ ಏಳು ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ. ನ್ಯಾಯಾಡಳಿತ ಕೇಂದ್ರೀಕೃತವಾಗಿದೆ. ಪರಮೋಚ್ಚ ನ್ಯಾಯಾಲಯವನ್ನು ಶಾಸನಸಭೆ ನೇಮಿಸುತ್ತದೆ. ಅಪೀಲು ನ್ಯಾಯಾಲಯಗಳನ್ನೂ ಇತರ ನ್ಯಾಯಾಲಯಗಳನ್ನೂ ಪರಮೋಚ್ಚ ನ್ಯಾಯಾಲಯವೇ ನೇಮಕ ಮಾಡುತ್ತದೆ.

**ಕಾರ್ಮಿಕರು ಹಾಗೂ ಸಮಾಜ ಕಲ್ಯಾಣ** : ಈ ರಾಜ್ಯದಲ್ಲಿ ಸಾಮಾಜಿಕ ವಿಮಾ ವ್ಯವಸ್ಥೆಯುಂಟು. ಇದರ ಅಡಿಯಲ್ಲಿ ಹಣದ ನೆರವು, ವೈದ್ಯಸೌಲಭ್ಯ, ಪ್ರಸೂತಿಕಾಲದ ನೆರವು, ಆಶ್ರಿತರ ರಕ್ಷಣೆ–ಈ ಯೋಜನೆಗಳಿವೆ. ಕಾರ್ಮಿಕ ಪರಿಹಾರ ಕಾನೂನೂ

ಜಾರಿಯಲ್ಲಿದೆ. ವೃದ್ಧಾಪ್ಯ ವಿಮಾ ವ್ಯವಸ್ಥೆಯುಂಟು. ವ್ಯವಸ್ಥಿತವಾದ ರೀತಿಯಲ್ಲಿ ಹಕ್ಕುಗಳ ಸಾಧನೆಗೂ ಮುಷ್ಕರಗಳಿಗೂ 1943ರ ಕಾಯಿದೆಯಲ್ಲಿ ಅವಕಾಶವುಂಟು. ಕಾರ್ಮಿಕ ಮತ್ತು ಉದ್ಯಮಿಗಳ ನಡುವಣ ವಿವಾದಗಳ ತೀರ್ಪಿಗೆ ಮಧ್ಯಸ್ಥಿಕೆ ನ್ಯಾಯಾಲಯಗಳುಂಟು.

ಕಾಸ್ಟರೀಕ ಜನರಲ್ಲಿ ಶೇ. 97.6ರಷ್ಟು ಮಂದಿ ಬಿಳಿಯರು ಇಲ್ಲವೆ ಮೆಸ್ಟಿಜೊ ಜನ. ಪ್ರಾರಂಭದಲ್ಲಿ ಈ ದೇಶಕ್ಕೆ ಬಂದ ಸ್ಪೇನ್ ದೇಶೀಯರು ಎಸ್ಟ್ರೆಮಡೂರ ಮತ್ತು ಆಂಡಲೂಸಿಯ ಜಿಲ್ಲೆಗಳಿಂದ ಬಂದರು. ತರುವಾಯ ಕ್ಯಾಸ್ಟೈಲಿನಿಂದ ಬಂದ ಜನ ಇವರನ್ನು ಕೂಡಿಕೊಂಡರು. ಮೂಲವಾಸಿಗಳಾದ ಇಂಡಿಯನ್ ಜನರ ಸಂಖ್ಯೆ 1956ರಲ್ಲಿ 4,000 ಇತ್ತು; ಇಂಡಿಯನರು ದೂರದ ಬೆಟ್ಟಗಳಲ್ಲಿ ವಾಸಮಾಡುತ್ತಾರೆ. ವ್ಯವಸಾಯಕ್ಕಾಗಿ ಕರೆತಂದ ನೀಗ್ರೋಗಳು ಒಟ್ಟು ಜನಸಂಖ್ಯೆಯ ಸೇಕಡ 2ರಷ್ಟು ಇದ್ದಾರೆ. ಇವರು ತೀರ ಪ್ರದೇಶದ ಬಾಳೆತೋಟಗಳಲ್ಲಿ ಕೆಲಸಮಾಡುತ್ತಾರೆ. ಮೂಲನಿವಾಸಿಗಳಾದ ಇಂಡಿಯನ್ ಜನರ ಹೊರತು ಉಳಿದವರು ಸ್ಪ್ಯಾನಿಷ್ ಭಾಷೆಯನ್ನಾಡುತ್ತಾರೆ. ಶಿಕ್ಷಣದಲ್ಲಿ ಫ್ರೆಂಚ್ ದ್ವಿತೀಯ ಪಠ್ಯವಿಷಯವಾಗಿತ್ತು; ಈಗ ಇಂಗ್ಲಿಷ್ ಅದರ ಸ್ಥಾನವನ್ನು ಪಡೆದುಕೊಂಡಿದೆ.

ಕಾಸ್ಟರೀಕ ಜನರಲ್ಲಿ ಶೇ. 90 ಮಂದಿ ರೋಮನ್ ಕೆಥೊಲಿಕರು. ದೇಶದ ಮೂಲ ವಾಸಿಗಳಾದ ಇಂಡಿಯನರ ಜಾನಪದ ಸಂಸ್ಕೃತಿ–ಕಲೆಗಳ ಸಂಪರ್ಕವಿಲ್ಲದೆ ಈ ಧರ್ಮ ಬೆಳೆದು ಬಂದಿದೆ.

ಕಾಸ್ಟರೀಕ ಜನ ತಮ್ಮ ಸಂಸ್ಕೃತಿಯನ್ನು ಸ್ಪೇನ್ ದೇಶದ ಕೆಥೋಲಿಕ್ ಪದ್ಧತಿಗಳಿಗನುಸಾರವಾಗಿ ರಕ್ಷಿಸಿಕೊಂಡು ಬಂದಿದ್ದಾರೆ. ಇದು ವಿಶಿಷ್ಟ ರಾಷ್ಟ್ರೀಯ ಸ್ವಭಾವ ತಾಳಿದೆ. ಕುಟುಂಬ ಬಾಂಧವ್ಯ, ಸಾಂಪ್ರದಾಯಿಕ ಪದ್ಧತಿಗಳ ಆಚರಣೆ, ಕ್ರಿಸ್‌ಮಸ್ ವಾರದ ಮೆರವಣಿಗೆ, ವಾರ್ಷಿಕ ಹಬ್ಬಗಳು–ಇವು ಕಾಸ್ಟರೀಕನರ ಸಂಸ್ಕೃತಿಯ ವೈಶಿಷ್ಟ್ಯ.

ಜಾನಪದ ಹೆಚ್ಚು ಅಭಿವೃದ್ಧಿ ಹೊಂದಿದ್ದರೂ ಗ್ರಾಮೀಣ ಸಂಸ್ಕೃತಿ ಕಾಸ್ಟರೀಕ ಜನರ ಜೀವನಕ್ಕನುಗುಣವಾಗಿದೆ. ರಿಟ್ರೀಟ್ ಸಮಾರಂಭದಲ್ಲಿ ಸ್ತ್ರೀಪುರುಷರ ಭೇಟಿಗೆ ಅವಕಾಶವುಂಟು.

ಕಾಲ್ಚೆಂಡು ಕಾಸ್ಟರೀಕದ ರಾಷ್ಟ್ರಕ್ರೀಡೆ. ಬ್ಯಾಸ್ಕೆಟ್‌ಬಾಲ್, ಮುಷ್ಟಿಕಾಳಗ, ಬೇಸ್‌ಬಾಲ್, ಗಾಲ್ಫ್, ಟೆನಿಸ್ ಮತ್ತು ಈಜು–ಇವೂ ಜನಪ್ರಿಯವಾಗಿವೆ.

**ಅರ್ಥವ್ಯವಸ್ಥೆ :** ವ್ಯವಸಾಯೋತ್ಪನ್ನಗಳು, ಅವುಗಳ ಪರಿಷ್ಕರಣ ಇವುಗಳ ಆಧಾರದ ಮೇಲೆ ಕಾಸ್ಟರೀಕದ ಆರ್ಥಿಕ ಪ್ರಗತಿಯಾಗಿದೆ. ಬಾಳೆ ಮತ್ತು ಕಾಫಿ ಹೇರಳವಾಗಿ ಬೆಳೆಯುತ್ತವೆ. ಅರಣ್ಯಗಳಲ್ಲಿ ಸಿಗುವ ಸೀಡಾರನ್ನೂ ಪ್ಲೈವುಡ್ ತಯಾರಿಕೆಗೆ ಉಪಯೋಗವಾಗುವ ಕಾಟಿವೊ ಮರವನ್ನೂ ಕಡಿದು ರಫ್ತು ಮಾಡುತ್ತಾರೆ. ಇಂಟರ್–ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಸೈನ್ಸ್ ಎಂಬ ಕೃಷಿ ಅಧ್ಯಯನ ಸಂಸ್ಥೆಯೊಂದು ಟೂರ್ಯಾಲಾವ ನಗರದಲ್ಲಿದೆ. ಜೇಡಿ ಮಣ್ಣು, ಸಿಮೆಂಟು ತಯಾರಿಕೆಯ ವಸ್ತುಗಳು. ಚಿನ್ನ, ಉಪ್ಪು, ಗಂಧಕ–ಇವು ಕಾಸ್ಟರೀಕದಲ್ಲಿ ಸಿಕ್ಕುತ್ತವೆ. ಈ ರಾಜ್ಯದಲ್ಲಿ ವಾರ್ಷಿಕವಾಗಿ 4,50,000 ಪೌಂಡುಗಳಷ್ಟು ಮೀನು ಹಿಡಿಯುತ್ತಾರೆ.

ಕಾಸ್ಟರೀಕದಿಂದ ಬಾಳೆ, ಕೋಕೋ ಅಬೆಕ, ಜಾನುವಾರು ಮತ್ತು ಅರಣ್ಯ ವಸ್ತುಗಳು ರಫ್ತಾಗುತ್ತವೆ; ಮುಖ್ಯ ಗ್ರಾಹಕ ರಾಷ್ಟ್ರಗಳು ಅಮೆರಿಕ ಸಂಯುಕ್ತಸಂಸ್ಥಾನ, ಜರ್ಮನಿ, ಕೆನಡ ಮತ್ತು ನೆದರ್ಲೆಂಡ್ಸ್, ಮೋಟಾರುಗಳು ಹಾಗೂ ಯಂತ್ರೋಪಕರಣಗಳನ್ನು ಇದು ಆಮದು ಮಾಡಿಕೊಳ್ಳುತ್ತದೆ.

ಕಾಸ್ಟರೀಕದ ನಾಣ್ಯ ಕೊಲೋನ್. ಕಾಸ್ಟರೀಕ ಕೇಂದ್ರೀಯ ಬ್ಯಾಂಕು ಹಣಕಾಸಿನ ನೀತಿಯನ್ನೂ ವಿದೇಶಿ ವಿನಿಮಯವನ್ನೂ ನಿರ್ದೇಶಿಸುತ್ತದೆ.

**ಸಾರಿಗೆ ಸಂಪರ್ಕ, ಪಟ್ಟಣಗಳು :** 1960ರ ದಶಕದಲ್ಲಿದ್ದ ರಸ್ತೆ ಸಂಪರ್ಕ ಸುಸಜ್ಜಿತವಾಗಿದೆ. ಸಂಖ್ಯೆ 30,000. ರೈಲುಮಾರ್ಗದಲ್ಲಿ ಬಹುಭಾಗ ಖಾಸಗಿ ಪ್ಲಾಂಟೇಷನ್ ಕಂಪನಿಗಳಿಗೆ ಸೇರಿದೆ. ಸರ್ಕಾರದ ಒಡೆತನಕ್ಕೆ ಸೇರಿದ್ದು 317 ಕಿಮೀ ಮಾತ್ರ.

ಕಾಸ್ಟರೀಕದ ಹೆದ್ದಾರಿಗಳ ನಿರ್ಮಾಣಕ್ಕಾಗಿ ವಿಶ್ವ ಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ನೆರವು ನೀಡಿವೆ. ಕಾಸ್ಟರೀಕದಲ್ಲಿ ವಿಮಾನಮಾರ್ಗಗಳೂ ಉಂಟು. ಸಾನ್ ಒಸೇಯಿಂದ ಮುಖ್ಯ ಪಟ್ಟಣಗಳಿಗೆ ವಿಮಾನ ಸಂಪರ್ಕವುಂಟು.

ಕಾಸ್ಟರೀಕದ ಇತರ ಪಟ್ಟಣಗಳಿವು: ಅಲಾಜುಯೆಲಾ (237966) (2003), ಕಾರ್ಟಾಗೊ (461163) (2003), ಲೈಬೀರಿಯ (40977) (2003), ಹೆರೇಡಿಯ (339295) (2003), ಲಿಮಾನ್ (339295) (2003) ಮತ್ತು ಪೂಂಟಾರೇನಾಸ್ (357483) (2003). (ವಿ.ಜಿ.ಕೆ.; ಜಿ.ಇ.ಪಿ.)

**ಕಾಸ್ಟಸ್ :** ಆಕರ್ಷಕವಾದ ಎಲೆಗಳು ಮತ್ತು ಸುಂದರವಾದ ಹೂಗಳಿಂದಾಗಿ ಉದ್ಯಾನ ಪ್ರಾಮುಖ್ಯ ಪಡೆದಿರುವ ಒಂದು ಸಸ್ಯ ಜಾತಿ. ಜಿಂಜಿಬರೇಸೀ ಕುಟುಂಬಕ್ಕೆ ಸೇರಿದೆ. ಉಷ್ಣದೇಶಗಳಲ್ಲೆಲ್ಲ ಇದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದರಲ್ಲಿ ಸುಮಾರು 140 ಪ್ರಭೇದಗಳಿವೆ. ಈ ಪೈಕಿ ಕೆಲವನ್ನು ಅಲಂಕಾರ ಸಸ್ಯಗಳಾಗಿ ಉದ್ಯಾನಗಳಲ್ಲಿ ಬೆಳೆಸುವುದುಂಟು. ಹೀಗೆ ಬೆಳೆಸುವ ಪ್ರಭೇದಗಳಲ್ಲಿ ಕಾಸ್ಟಸ್ ಸ್ಪೀಶಿಯೋಸಸ್, ಕಾ. ಇಲಿಗನ್ಸ್, ಕಾ. ಪಿಕ್ಟಸ್, ಕಾ.ಇಗ್ನಿಯಸ್ ಮತ್ತು ಕಾ.ಅರ್ಗೈರೋಫಿಲಸ್ ಎಂಬುವು ಮುಖ್ಯವಾದುವು. ಕಾಸ್ಟಸ್ 1–3 ಮೀ ಎತ್ತರಕ್ಕೆ ಬೆಳೆಯುವ ಮೂಲಿಕೆ ಸಸ್ಯ. ಗೆಡ್ಡೆಯಂತಿರುವ ಬೇರು, ಉದ್ದನೆಯ ನೀಳವಾದ ಹಾಗೂ ರಸಭರಿತವಾದ ಕಾಂಡ, ಉದ್ದುದ್ದನೆಯ ಎಲೆಗಳು, ಕಾಂಡದ ಸುತ್ತ ಹೊದಿಕೆಯಂತೆ ಸುತ್ತಿರುವ ಎಲೆಯ ಬುಡ, ಕಾಂಡದ ತುದಿಯಲ್ಲಿ ಹುಟ್ಟುವ ಕದಿರು ಹೂಗೊಂಚಲು (ಸ್ಪೈಕ್), ಜೋಲು ಬಿದ್ದಿರುವ ಉಪಪತ್ರಗಳು (ಬ್ರಾಕ್ಟ್ಸ್), ಹಳದಿ, ಕೆಂಪು, ಬಿಳಿ, ಕೇಸರಿ ಮುಂತಾದ ವರ್ಣವೈವಿಧ್ಯವನ್ನು ತೋರುವ ಹೂಗಳು ಈ ಸಸ್ಯದ ಮುಖ್ಯ ಲಕ್ಷಣಗಳು. ಹೂಗಳ ಸೌಂದರ್ಯ ಅವುಗಳಲ್ಲಿನ ಗಂಟೆಯಾಕಾರದ ದೊಡ್ಡ ಬರಡು ಕೇಸರದಿಂದ ಹೆಚ್ಚುತ್ತದೆ. ಅಂಡಾಶಯ ನೀಚ ಸ್ಥಾನದ್ದು. ಅದರಲ್ಲಿ ಮೂರು ಕೋಣೆಗಳಿವೆ. ಫಲ ಸಂಪುಟ ಮಾದರಿಯದು. ಬೀಜಗಳು ಅಸಂಖ್ಯಾತ.

ಕಾಸ್ಟಸ್ ಸಸ್ಯವನ್ನು ಕಾಂಡದ ತುಂಡುಗಳಿಂದ ವೃದ್ಧಿಸಬಹುದು. ಮರಳು ಮಿಶ್ರಿತ ಗೋಡುಮಣ್ಣಿನಲ್ಲಿದು ಚೆನ್ನಾಗಿ ಬೆಳೆಯುತ್ತದೆ. ಕೊಂಚ ನೆರಳಿದ್ದರೆ ಬೆಳೆವಣಿಗೆಗೆ ಚೆನ್ನು. (ಬಿ.ಎ.ಪಿ.)

**ಕಾಸ್ಟಿನ್, ಮಿರಾನ್ :** 1633–92. ರೊಮೇನಿಯದ ಚರಿತ್ರಕಾರ. ದೇಶದಲ್ಲಿಯ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಲು ಇವನ ಕುಟುಂಬದವರು ಪಡೋಲಿಯಕ್ಕೆ ಓಡಿಹೋಗಿದ್ದರು. ಅಲ್ಲಿ ಕಾಸ್ಟಿನ್ ವಿದ್ಯಾಭ್ಯಾಸ ಮಾಡಿ ನ್ಯಾಯಶಾಸ್ತ್ರದಲ್ಲಿ ಪದವಿ ಗಳಿಸಿ 1652ರಲ್ಲಿ ರೊಮೇನಿಯಕ್ಕೆ ಹಿಂದಿರುಗಿ ಅಲ್ಲಿ ಅನೇಕ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿದ. ಆದರೆ ಅರಸನೊಂದಿಗೆ ಮನಸ್ತಾಪ ಬಂದು ಮತ್ತೆ 1684ರಲ್ಲಿ ಪೋಲೆಂಡಿಗೆ ಹೋಗಬೇಕಾಯಿತು. ಮರುವರ್ಷ ಹಿಂದಿರುಗಿದರೂ ಅರಸನ ವಿರುದ್ಧ ಪಿತೂರಿ ಮಾಡಿದನೆಂದು 1692ರಲ್ಲಿ ಇವನ ತಲೆ ಕತ್ತರಿಸಿದರು.

ಕಾಸ್ಟಿನನ ಕೆಲಸ ಎರಡು ರೀತಿಗಳಲ್ಲಿ ಮುಖ್ಯವಾದ್ದು. ರೊಮೇನಿಯರು ಲ್ಯಾಟಿನರ ವಂಶಕ್ಕೆ ಸೇರಿದವರು ಎಂಬ ಅಭಿಪ್ರಾಯವನ್ನು ಪ್ರತಿಪಾದಿಸಲು ಪ್ರಯತ್ನಿಸಿದವರಲ್ಲಿ ಇವನೇ ಮೊದಲಿಗ. ರೊಮೇನಿಯರ ದೇಶಾಭಿಮಾನವನ್ನು ಬಲಗೊಳಿಸಿ ಸ್ವತಂತ್ರ ಸಾಹಿತ್ಯದ ರಚನೆಗೆ ಮಾರ್ಗಮಾಡಿದ, ಹಲವು ಶಕ್ತಿಗಳಲ್ಲಿ ಈ ಸಂಶೋಧನೆಯೂ ಒಂದು. ಎರಡನೆಯದಾಗಿ ರೊಮೇನಿಯದಲ್ಲಿ ಚಾರಿತ್ರಿಕ ವೃತ್ತಾಂತವನ್ನು ಸಾಹಿತ್ಯದ ಎತ್ತರಕ್ಕೇರಿಸಿದವನೀತ. ಈ ಕಾಲದ ಚಾರಿತ್ರಿಕ ಬರೆಹಗಾರರಲ್ಲಿ ಮೊದಲನೆಯ ಸ್ಥಾನ ಈತನದು. ಇವನ ಮಗನಾದ ನೆಕುಲೈ ತಂದೆಯ ಕೆಲಸವನ್ನು ಮುಂದುವರಿಸಿದ. ವಿಶೇಷ ವಿದ್ವತ್ತು, ದೇಶಾಭಿಮಾನದೊಂದಿಗೆ ಪ್ರಾಮಾಣಿಕತೆಯಿಂದ ಸಂಗತಿಗಳನ್ನೂ ಘಟನೆಗಳನ್ನೂ ನಿರೂಪಿಸಬೇಕೆಂಬ ಶ್ರದ್ಧೆ–ಇವು ಈತನ ವೃತ್ತಾಂತಗಳಿಗೆ ಮಹತ್ತ್ವವನ್ನು ತಂದುಕೊಟ್ಟುವು.

ದೇಶಾಭಿಮಾನ ಕಾಸ್ಟಿನನ ಚಾರಿತ್ರಿಕ ಕೃತಿಗಳ ಚೇತನವಾಗಿದ್ದಂತೆ ಅವನ ದೀರ್ಘ ಕವನ–ಮಾಲ್ಡೇವಿಯನ್ ಜನತೆಯನ್ನು ಕುರಿತು (1673) ಎಂಬುದೂ ಚೇತನವಾಯಿತು. ರೋಮ್‌ನಗರದ ಸ್ಥಾಪನೆ, ಅದರ ಜೀವಂತ ಪ್ರಭಾವ ಇವು ಕವನದ ವಸ್ತು. ಇವನ ಮತ್ತೊಂದು ಕವನ ಜಗತ್ತನ್ನು ಕುರಿತದ್ದು. (ಎಲ್.ಎಸ್.ಎಸ್.)

**ಕಾಸ್ಟಿಲ್ಯೋನಾ, ಬಾಲ್ಡಾಸಾರೆ ಕಾಂಟೆ :** 1478–1529. ಇಟಲಿಯ ರಾಜಕಾರಣಿ, ಸಾಹಿತಿ, ಆಸ್ಥಾನಿಕ. ಹುಟ್ಟಿದ್ದು ಕಸಾಟಿಕದಲ್ಲಿ. ವಿದ್ಯಾಭ್ಯಾಸ ಮಿಲಾನಿನಲ್ಲಿ. ಇಲ್ ಲಿಬ್ರೊ ಡೆಲ್ ಕೋರ್ಟೆಜಿಯಾನೊ (ಆಸ್ಥಾನಿಕನ ಕೈಪಿಡಿ) ಎಂಬ ಗದ್ಯಗ್ರಂಥ ಹೊಸ ಹುಟ್ಟಿನ ಕಾಲದ ಐರೋಪ್ಯ ಸಾಹಿತ್ಯದಲ್ಲಿ ಶ್ರೇಷ್ಠ ಕೃತಿ ಎನಿಸಿದೆ. ಇದರಲ್ಲಿ ಆದರ್ಶ ಆಸ್ಥಾನಿಕನ, ಸದ್ಗೃಹಸ್ಥನ ಗುಣಲಕ್ಷಣಗಳನ್ನಲ್ಲದೆ ಆಗಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ತತ್ತ್ವಗಳ ವಿಶ್ಲೇಷಣೆಯನ್ನು ಕಾಣಬಹುದು. ಇದಲ್ಲದೆ ಈತ ಇಟಾಲಿಯನ್ ಮತ್ತು ಲ್ಯಾಟಿನ್ ಭಾಷೆಗಳೆರಡಲ್ಲೂ ಕವನಗಳನ್ನು ಬರೆದಿದ್ದಾನೆ. (ಎಚ್.ಕೆ.ಆರ್.)

**ಕಾಸ್ಟ್ನರ್, ಎರಿಕ್ :** 1899–. ಜರ್ಮನ್ ಕವಿ, ಕಾದಂಬರಿಕಾರ ಹಾಗೂ ವಿಡಂಬನಕಾರ. 1899ರಲ್ಲಿ ಡ್ರೆಸ್ಡನ್ ಊರಿನಲ್ಲಿ ಹುಟ್ಟಿದ. ರೊಸ್ಟಾಕ್, ಲೀಪ್‌ಜಿಗ್, ಬರ್ಲಿನ್‌ಗಳಲ್ಲಿ ಶಿಕ್ಷಣ ಪಡೆದು ಕೆಲಕಾಲ ಶಾಲಾಶಿಕ್ಷಕನಾಗಿ, ಅನಂತರ ಬ್ಯಾಂಕ್ ಗುಮಾಸ್ತೆಯಾಗಿ ಕೆಲಸ ಮಾಡಿದ. ಅನಂತರ ಹೆಚ್ಚಿನ ಅಧ್ಯಯನ ಮಾಡಿ ಡಾಕ್ಟರೇಟ್ ಪ್ರಶಸ್ತಿ ಪಡೆದು ಪತ್ರಿಕೋದ್ಯಮಿಯಾದ. ಆಗ ಪ್ರಕಟಿಸಿದ ತನ್ನ ಕವನ ಸಂಕಲನ ಗಳಿಸಿದ ಹಣದಿಂದ ಪ್ರೋತ್ಸಾಹಿತನಾಗಿ ಕೃತಿ ರಚನೆಯನ್ನೇ ಪೂರ್ಣವಾಗಿ ಅವಲಂಬಿಸಿದ.

ಈತ ತನ್ನ ಬಾಲ್ಯದ ನೋವು ನಲಿವುಗಳನ್ನೆಲ್ಲ ತನ್ನ ಕೃತಿಗಳಲ್ಲಿ ಚಿತ್ರಿಸಿದ್ದಾನೆ. ಒಂದನೆಯ ಮಹಾಯುದ್ಧ ಮತ್ತು ಅದರ ಅನಂತರ ಕಾಣಿಸಿಕೊಂಡ ಆರ್ಥಿಕ ಕುಸಿತಗಳ ಪರಿಣಾಮಗಳಿಂದ ಚೇತರಿಸಿಕೊಂಡ ಯುರೋಪಿನಲ್ಲಿ ಆರಂಭವಾದ ಪರಿಸ್ಥಿತಿಯಲ್ಲಿ ನವೀನ ವಸ್ತುನಿಷ್ಠೆ ಎಂಬ ಹೊಸ ತತ್ತ್ವ ಸಾಹಿತ್ಯದಲ್ಲಿ ತಲೆದೋರಿತು. ಯುದ್ಧದ ಭೀಕರತೆ ದುಷ್ಪರಿಣಾಮಗಳೂ 1920ರಲ್ಲಿದ್ದ ಜರ್ಮನಿಯ ಸಾಮಾಜಿಕ ಜೀವನದ ಚಿತ್ರಗಳೂ ಕಾದಂಬರಿಗಳ ಸಾಮಗ್ರಿಗಳಾದವು. ಕಾಸ್ಟ್ನರ್ ಸಮಾಜದ ಬದುಕನ್ನೇ ಕುರಿತು ವಿಡಂಬನ ಕವಿತೆಗಳನ್ನೂ ಹಾಸ್ಯಪ್ರಧಾನ ಕಾದಂಬರಿಗಳನ್ನೂ

ಬರೆದ. ನಾಜ್ಹೀ ಪಕ್ಷದ ಏರಿಕೆಯಲ್ಲಿ ಕಾಣಿಸಿಕೊಂಡ ಕರಾಳ ದೈತ್ಯ ಪ್ರವೃತ್ತಿಗಳು ಇನ್ನೂ ಅಂತರ್ಯದಲ್ಲಿ ಸುಳಿಯುತ್ತಿದ್ದ ಕಾಲದಲ್ಲೇ ಈ ಕವಿಪ್ರಜ್ಞೆ ಅದನ್ನು ಗುರುತಿಸಿತ್ತು.

ಕಾಸ್ಟನರನ ಪ್ರತಿಭೆ, ಮೋಹಕವಾದ ಬರೆವಣಿಗೆ, ಹಾಸ್ಯಯುಕ್ತವಾದ ಶೈಲಿ ಎಲ್ಲರ ಗಮನ ಸೆಳೆಯುವಂಥದು. ಜರ್ಮನರ ಬದುಕಿನಲ್ಲಿನ ಅಪೂರ್ವವಾದ ವಿನೋದ ಶೀಲತೆ ಈತನ ಬರೆಹಗಳಲ್ಲಿ ಬಂದಿರುವುದೇ ವಿಶೇಷ. ಈತನ ನಗೆ ಲಘುಮಾನಸ ಜನ್ಯವಲ್ಲ; ಅದರ ಹಿಂದೆ ನೋವಿನ, ಅನುತಾಪದ ಛಾಯೆ ಇದೆ. ಈತ ಉದ್ದೇಶಿಸಿದಲ್ಲೆಲ್ಲ ಹೃದಯದ ಭಾರವನ್ನು ಹಗುರಗೊಳಿಸುವ ನಗೆಯನ್ನು ಉಕ್ಕಿಸಿ ಹರಿಸಿದ್ದಾನೆ. ಗಂಭೀರ ವಿಚಾರಶೀಲರಿಗೆ ಇಂಥ ಉಲ್ಲಾಸಬೇಕು ಅನಿಸುತ್ತದೆ.

ಸಾಹಿತ್ಯದ ಸೊಗಸನ್ನು ಕೆಡಿಸದೆ, ರಂಜನೆಯ ಜೊತೆಗೆ ಲೋಕ ಶಿಕ್ಷಣವನ್ನೂ ಸಾಧಿಸಿದ ಈತನ ಕೃತಿಗಳು ಕ್ರಿಸ್ಟೋಫರ್ ಇಷರವುಡ್‌ನ ಜರ್ಮನ್ ಕಥೆಗಳನ್ನೂ ಸ್ಯಾಜಿಟೇರಿಯಸನ ವಿಡಂಬನ ಕಾವ್ಯವನ್ನೂ ನೆನಪಿಗೆ ತರುತ್ತವೆ, ಆದರೆ ಇವನ ಕೃತಿಗಳಲ್ಲಿ ಇನ್ನೂ ಹೆಚ್ಚಿನ ಶಕ್ತಿಯೂ ಆಳಕ್ಕೆ ನಾಟುವ ಗುಣವೂ ಇವೆ. ಈತನ ಅತ್ಯಂತ ಜನಪ್ರಿಯ ಕೃತಿ ಎಮಿಲ್ ಅಂಡ್ ದಿ ಡಿಟೆಕ್ಟಿವ್ಸ್. ಈತ ಮಕ್ಕಳಿಗಾಗಿ ಬರೆದ ಸಾಹಿತ್ಯ ಲೋಕ ಪ್ರಸಿದ್ಧವಾಗಿದೆ. (ಕೆ.ಬಿ.ಪಿ.)

**ಕಾಸ್‍ಬಕ್, ಜಾರ್ಜ್ :** 1866–1918. ರೊಮೇನಿಯದ ಕವಿ. ತಂದೆ ಹಳ್ಳಿಯೊಂದರಲ್ಲಿ ಅರ್ಚಕನಾಗಿದ್ದ. ಪದವೀಧರನಾದ ಮೇಲೆ ಈತ ಪತ್ರಿಕೋದ್ಯಮವನ್ನು ಪ್ರವೇಶಿಸಿ ಬುಕರೆಸ್ಟ್‌ನಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೂರು ನಿಯತಕಾಲಿಕಗಳನ್ನು ಹೊರಡಿಸಿದ.

ಬಾಳಿನ ಸೊಗಸು ಉಲ್ಲಾಸಗಳನ್ನು ಉತ್ಸಾಹದಿಂದ ಹಾಡುವ ಕವಿ ಈತ. ಮಣ್ಣಿನ ವಾಸನೆ ಈತನ ಸಾಹಿತ್ಯವನ್ನು ತುಂಬಿದೆ. ರೈತರ ನಿತ್ಯ ಜೀವನದಲ್ಲಿ ಈತನಿಗೆ ಅಪಾರ ಆಸಕ್ತಿ, ಸಂತೋಷ. ಅವರ ಭೂಮಿಯ ಪ್ರೇಮ ಇವನ ಕವನಗಳಲ್ಲಿ ಅಭಿವ್ಯಕ್ತಿ ಪಡೆಯಿತು. ಇವನದು ಶಕ್ತಿಯುತವಾದ ಶೈಲಿ: ತಿಳಿಹಾಸ್ಯ, ವಿಡಂಬನೆ ಬೆರೆತು ಬರೆಹಕ್ಕೆ ತೀಕ್ಷ್ಣತೆ ಬಂದಿದೆ. ಈತನ ಮಹಾನ್ ಕೃತಿಗಳೆನಿಸಿದ ಜಾನ್‌ಫಿರಾನ ವಿವಾಹ ಮತ್ತು ಫುಲ್‌ಗರ್‌ನ ಸಾವು ರೊಮೇನಿಯ ಕಾವ್ಯಜಗತ್ತಿನಲ್ಲಿನ ಉನ್ನತ ಶಿಖರಗಳೆನಿಸಿವೆ. ವಾಸ್ತವತೆಗೆ ಭವ್ಯ ಕಥನಕಲೆಯ ಮೆರುಗು ಕೊಟ್ಟು, ಯುರೋಪಿನ ಶ್ರೇಷ್ಠ ಕಾವ್ಯಗಳ ಪಂಕ್ತಿಗೆ ಸೇರುವ ಕೃತಿಗಳನ್ನು ಈತ ಸೃಷ್ಟಿಸಿದ ವರ್ಜಿಲ್ ಮತ್ತು ಡಾಂಟೆಯರ ಕಾವ್ಯಗಳನ್ನೂ ಸುಂದರವಾಗಿ ಅನುವಾದ ಮಾಡಿದ. ಮಿಹಇಲ್ ಈಮಿನೆಸ್ಕುನ (1850–89) ಕಾವ್ಯಜಗತ್ತು, ವಿಷಾದ ತುಂಬಿದುದಾಗಿದ್ದು ರೊಮೇನಿಯದ ಕವಿಗಳ ಮೇಲೆ ಗಾಢವಾದ ಪ್ರಭಾವ ಬೀರಿದುದರ ಪರಿಣಾಮವಾಗಿ ಒಂದು ಕವಿಪೀಳಿಗೆಯೇ ವಿಷಣ್ಣತೆಯ ಛಾಯೆಯಲ್ಲಿ ಮುಳುಗಿ ಹೋಗಿತ್ತಷ್ಟೆ **(ನೋಡಿ– ಈಮಿನೆಸ್ಕು, ಮಿಹಇಲ್)**. ಇದನ್ನು ಮರೆಸಿ ಸಾಹಿತ್ಯ ಜಗತ್ತಿನಲ್ಲಿ ಹೊಸ ಉಲ್ಲಾಸ, ಜೀವನ ಶ್ರದ್ಧೆಗಳನ್ನು ಹರಡಿದವರೆಂದರೆ ವ್ಲಾಹುತ್ (1858–1917) ಮತ್ತು ಕಾಸ್‌ಬಕ್. (ಎಲ್.ಎಸ್.ಎಸ್.)

**ಕಾಸ್‍ಮಸ್ :** 6ನೆಯ ಶತಮಾನದ ಅಲೆಕ್ಸಾಂಡ್ರಿಯದ ಒಬ್ಬ ಸಂನ್ಯಾಸಿ, ಪ್ರವಾಸಿ ಮತ್ತು ಲೇಖಕ. ಮೊದಲು ಈತ ವ್ಯಾಪಾರಿಯಾಗಿದ್ದ. ಅದಕ್ಕಾಗಿ ತನ್ನ ಹುಟ್ಟೂರಾದ ಅಲೆಕ್ಸಾಂಡ್ರಿಯವನ್ನು ಬಿಟ್ಟು ದೂರದ ಅನೇಕ ದೇಶಗಳನ್ನು ಸುತ್ತಿದ. ಮೆಡಿಟರೇನಿಯನ್ ಸಮುದ್ರ, ಕೆಂಪು ಸಮುದ್ರ ಹಾಗೂ ಪರ್ಷಿಯನ್ ಕೊಲ್ಲಿಗಳ ಮೇಲೆಲ್ಲ ಓಡಾಡಿದ್ದೇನೆ ಎಂಬುದಾಗಿ ಆತ ತನ್ನ ಬರೆಹಗಳಲ್ಲಿ ಹೇಳಿಕೊಂಡಿದ್ದಾನೆ. ಭಾರತದ ನಾವಿಕನನ್ನು ಇಂಡಿಕೋ ಪ್ಲೂಸ್ಟಸ್ ಎಂಬ ಉಪನಾಮದಿಂದ ಕರೆದಿರುವ ಕಾರಣ, ಈತ ಭಾರತ ಸಮುದ್ರ ತೀರಕ್ಕೂ ಬಂದು ಹೋಗಿದ್ದಿರಬಹುದೆಂದು ಊಹಿಸಲಾಗಿದೆ. ಸಿಂಹಳ ಮತ್ತು ಮಲಬಾರ್ ತೀರಗಳನ್ನು ಕುರಿತು ಈತ ಮಾಡಿರುವ ವರ್ಣನೆಗಳು ಈ ಊಹೆಯನ್ನೇ ಸಮರ್ಥಿಸುತ್ತವೆ.

ಕಾಸ್‌ಮಸ್‌ಗೆ ಜ್ಞಾನಾರ್ಜನೆಯಲ್ಲಿ ಹೆಚ್ಚಿನ ಆಸಕ್ತಿಯಿತ್ತು. ಜೊತೆಗೆ ಈತ ಪ್ರವಾಸಪ್ರಿಯ. ತಾನು ಕಂಡ ದೇಶಗಳ ವಿಚಾರಗಳನ್ನು ತನ್ನ ಬರಹಗಳಲ್ಲಿ ಹೇಳಿದ್ದಾನೆ. ಕ್ರಿಶ್ಚಿಯನ್ ಟೋಪೋಗ್ರಫಿ ಎಂಬುದು ಈತ ಬರೆದಿರುವ ಗ್ರಂಥ. ಭೂಮಿ ಗುಂಡಾಗಿದೆ ಎಂಬ ವಾದವನು ಖಂಡಿಸುವುದಕ್ಕಾಗಿಯೇ ತಾನು ಈ ಗ್ರಂಥವನ್ನು ರಚಿಸಿದ್ದಾಗಿ ಹೇಳಿಕೊಂಡಿದ್ದಾನೆ. ಅನೇಕ ಪ್ರಾಣಿಗಳ ಮತ್ತು ಗಿಡಗಳ ವರ್ಣನೆಯ ಜೊತೆಗೆ ಇದರಲ್ಲಿ ಚಿತ್ರಗಳೂ ಇರುವುದು ಈ ಗ್ರಂಥದ ಒಂದು ವೈಶಿಷ್ಟ್ಯ. ಗ್ರಂಥದಲ್ಲಿ ಬರುವ ಚಾರಿತ್ರಿಕ ಹಾಗೂ ಭೌಗೋಳಿಕ ವಿಷಯಗಳು ಮುಖ್ಯವಾದುವು. ಇದರಲ್ಲಿ ಉತ್ಪ್ರೇಕ್ಷೆಗಳಿಲ್ಲ. *

**ಕಾಸ್ಮಾಸ್ :** ಕಂಪಾಸಿಟೀ ಕುಟುಂಬಕ್ಕೆ ಸೇರಿದ, ಉದ್ಯಾನಪ್ರಾಮುಖ್ಯವಿರುವ ಒಂದು ಏಕವಾರ್ಷಿಕ ಅಥವಾ ಬಹುವಾರ್ಷಿಕ ಮೂಲಿಕೆ ಸಸ್ಯಜಾತಿ. ಮೆಕ್ಸಿಕನ್ ಆಸ್ಟರ್ ಎಂಬ ಹೆಸರೂ ಇದಕ್ಕಿದೆ. ಇದರಲ್ಲಿ ಸುಮಾರು 20 ಪ್ರಭೇದಗಳಿವೆ. ಎಲ್ಲವೂ ಅಮೆರಿಕದ ಉಷ್ಣಪ್ರದೇಶಗಳ ಮೂಲದವು. ಅಲಂಕಾರ ಸಸ್ಯಗಳಾಗಿ ಪ್ರಸಿದ್ಧಿ ಹೊಂದಿರುವ ಪ್ರಭೇದಗಳು ಎರಡು: ಕಾಸ್ಮಾಸ್ ಬೈಪಿನ್ನೇಟಸ್ ಮತ್ತು ಕಾ. ಸಲ್ಫ್ಯೂರಿಯಸ್. ಒಂದೊಂದರಲ್ಲೂ ಹಲವಾರು ತಳಿಗಳಿವೆ.

ಕಾಸ್ಮಾಸ್ ಬೈಪಿನ್ನೇಟಸ್ ಸು. 3.2–3.3 ಮೀ ಎತ್ತರಕ್ಕೆ ಬೆಳೆಯುವ ಗಿಡ. ಎಲೆಗಳು ಅಭಿಮುಖವಾಗಿ ಜೋಡಣೆಗೊಂಡಿದ್ದು ಗರಿಗಳಂತೆ ಸೀಳುಸೀಳಾಗಿವೆ. ಹೂಗಳು

ಕಾಸ್ಮಾಸ್ ಬೈಪಿನ್ನೇಟಿಸ್ ಪ್ರಭೇದ

(ನಿಜವಾಗಿಯೂ ಹೂಗೊಂಚಲುಗಳು) ಗುಲಾಬಿ, ಕಡುಗೆಂಪು, ಊದಾ ಮುಂತಾದ ಬಣ್ಣದವಾಗಿದ್ದು ಬಹಳ ಆಕರ್ಷಣೀಯವಾಗಿವೆ. ಅಗಲ 7–9 ಸೆಂಮೀ. ಬಹಳ ಉದ್ದವಾದ ತೊಟ್ಟಿರುವುದರಿಂದ ಕತ್ತರಿಸಿ ಹೂದಾನಿಗಳಲ್ಲಿಡಲು ಯೋಗ್ಯವಾಗಿವೆ. ಈ ಪ್ರಭೇದದ ವಿವಿಧ ತಳಿಗಳಲ್ಲಿ ಸೆನ್ಸೇಶನ್ ಕ್ಲಾಂಡೈಕ್ ಎಂಬ ಮಿಶ್ರತಳಿ, ಎಲ್ಲೊ ಫ್ಲೇರ್ ಮತ್ತು ಆರೆಂಜ್ ಫ್ಲೇರ್ ಎಂಬುವು ಮುಖ್ಯವಾದುವು.

ಕಾಸ್ಮಾಸ್ ಸಲ್ಫ್ಯೂರಿಯಸ್ ಪ್ರಭೇದ ಎಲ್ಲ ವಿಧಗಳಲ್ಲಿಯೂ ಬೈಪಿನ್ನೇಟಸ್ ಪ್ರಭೇದವನ್ನೇ ಹೋಲುತ್ತದೆ. ಆದರೆ ಇದರ ಹೂಗಳ ಬಣ್ಣ ಹಳದಿ. ಇದರಿಂದ ಹಳದಿ ಬಣ್ಣದ ಹೂ ಬಿಡುವ ಹೊಸ ಹೊಸ ತಳಿಗಳನ್ನು ಪಡೆಯಲಾಗಿದೆ.

ಕಾಸ್ಮಾಸನ್ನು ಬೀಜಗಳಿಂದ ವೃದ್ಧಿಪಡಿಸುತ್ತಾರೆ. ನೇರವಾಗಿಯೇ ಮಡಿಗಳಲ್ಲಿ, ಕುಂಡಗಳಲ್ಲಿ ಬಿತ್ತಿ ಬೆಳೆಸಬಹುದು. ಮರಳುಮಿಶ್ರಿತ ಗೋಡುಮಣ್ಣು ಇದರ ಬೆಳೆವಣಿಗೆಗೆ ಯೋಗ್ಯವಾದದ್ದು. ಬಹಳ ಫಲವತ್ತಾದ ಮಣ್ಣಿನಲ್ಲಿ ಬಿತ್ತಿದರೆ ಎಲೆ ಮತ್ತು ಕಾಂಡಗಳೇ ಹುಲುಸಾಗಿ ಬೆಳೆದು ಹೂಗಳ ಸಂಖ್ಯೆ ಮತ್ತು ಗಾತ್ರ ಚಿಕ್ಕದಾಗುತ್ತವೆ. ಬೀಜ ಮೊಳೆತು ಸಸಿಗಳು ಹೊಮ್ಮಿದಾಗ 25–40 ಸೆಂಮೀ ಅಂತರದಲ್ಲಿ ಸಸಿಗಳನ್ನು ಬಿಟ್ಟು ಉಳಿದವನ್ನು ತೆಗೆದುಹಾಕಬೇಕು. ಗಿಡ ಬೆಳೆಯುತ್ತಿರುವಾಗ ಆಗಾಗ್ಗೆ ಕೆಲವು ಕುಡಿಗಳನ್ನು ಚಿವುಟಿ ಹಾಕುತ್ತಿದ್ದರೆ ಗಿಡ ಪೊದೆಯಂತೆ ಬೆಳೆದು ಸುಂದರವಾಗಿ ಕಾಣುತ್ತದೆ. ಸಸಿಗಳು ಬಂದ 25–30 ದಿವಸಗಳಾದ ಮೇಲೊಮ್ಮೆ ಗೊಬ್ಬರವನ್ನು ಮೇಲ್ಪದರವಾಗಿ ಹಾಕಬೇಕು. ಆಮೇಲೆ 40 ಮತ್ತು 50ನೆಯ ದಿವಸಗಳಲ್ಲಿ ಹಿಂಡಿಯ ಗೊಬ್ಬರದ ದ್ರಾವಣ ಹಾಕಬೇಕು. (ಕ.)

**ಕಾಸ್ಯಾಕರು :** ಮಧ್ಯಯುಗದಲ್ಲಿ ಕಪ್ಪುಸಮುದ್ರದ ಉತ್ತರಕ್ಕಿರುವ ಹುಲ್ಲುಗಾವಲು ಪ್ರದೇಶಗಳಲ್ಲಿ, ಮಧ್ಯ ಏಷ್ಯ–ಟರ್ಕಿ ಪ್ರಾಂತ್ಯಗಳಲ್ಲಿ ವಾಸ ಮಾಡುತ್ತಿದ್ದ ಅಲೆಮಾರಿ ಜನಾಂಗ.

ಕಾಸ್ಯಾಕ್ ತುರ್ಕಿ ಭಾಷೆಯಿಂದ ಬಂದ ಪದ. ಇದರ ಅರ್ಥ ಸಾಹಸಿ, ದಂಗೆಕೋರ ಮತ್ತು ಸಾಮಾನ್ಯವಾಗಿ, ಸ್ವತಂತ್ರ ಮನುಷ್ಯ ಎಂದು. ರಷ್ಯದ ಉಕ್ರೇನ್ ಪ್ರಾಂತ್ಯದಲ್ಲಿ ಕಾಸ್ಯಾಕರು ತಮ್ಮ ಪ್ರಭಾವ ಹರಡಿದ್ದರು. ಉಕ್ರೇನಿಯನ್ನರಿಗೆ ಮೊದಲು ಕಾಸ್ಯಾಕರು ಎಂಬ ಹೆಸರು ಬಂದಿದ್ದರೂ ಎಲ್ಲ ಕಾಸ್ಯಾಕರೂ ಉಕ್ರೇನಿಯರಾಗಿರಲಿಲ್ಲ. ಕಾಸ್ಯಾಕ್ ಜನಾಂಗದ ಬಹುಮಂದಿ ತುರ್ಕಿ ಜನಾಂಗಕ್ಕೂ ಇನ್ನು ಹಲವರು ಮಿಶ್ರ ಬುಡಕಟ್ಟುಗಳಿಗೂ ಸೇರಿದ್ದರು. 15ನೆಯ ಶತಮಾನದಲ್ಲಿ ಪೂರ್ವ ಯುರೋಪಿನ ನೀಪರ್, ಡಾನ್ ಮತ್ತು ಅವುಗಳ ಉಪನದಿಗಳ ತೀರಪ್ರದೇಶಗಳಲ್ಲಿ ಇವರು ಪ್ರಾಬಲ್ಯ ಪಡೆದರು. ಇವರ ಸಾಮಾಜಿಕ ಜೀವನ ಅಮೆರಿಕದ ಅನಾಗರಿಕ ಪಶ್ಚಿಮ ಜನಾಂಗಗಳ ಜೀವನವನ್ನು ಹೋಲುತ್ತಿತ್ತು.

ಒಬ್ಬ ಕಾಸ್ಯಾಕ್ ಯೋಧ

15ನೆಯ ಶತಮಾನದಲ್ಲಿ ಕ್ರಿಮಿಯದ ಖಾನರೂ ರಷ್ಯದ ರ್‍ಯಜಾನ್ ಅಧಿಪತಿಗಳೂ ಕಾಸ್ಯಾಕರನ್ನು ತಮ್ಮ ಗಡಿಕಾವಲಿಗೆ ನೇಮಿಸಿದ್ದರು. 16ನೆಯ ಶತಮಾನದಲ್ಲಿ ಪೋಲೆಂಡಿನ ದೊರೆಗಳು ತಮ್ಮ ರಾಜ್ಯದ ಮೇರೆಗಳನ್ನು ಟಾರ್ಟರರ ಆಕ್ರಮಣಗಳಿಂದ ರಕ್ಷಿಸಿಕೊಳ್ಳಲು ಶೂರರಾದ ಕಾಸ್ಯಾಕರನ್ನು ತಮ್ಮ ಸೇನೆಗೆ ಸೇರಿಸಿಕೊಂಡರು. 17ನೆಯ ಶತಮಾನದಲ್ಲಿ ಉಕ್ರೇನ್ ಪ್ರಾಂತ್ಯ ರಷ್ಯ ಮತ್ತು ಪೋಲೆಂಡುಗಳ ನಡುವೆ ಹಂಚಿ ಹೋದಾಗ ರಷ್ಯನರು ಕಾಸ್ಯಾಕರನ್ನು ಗಡಿ ಕಾವಲಿಗೆ ಉಪಯೋಗಿಸಿಕೊಂಡರಲ್ಲದೆ, ಯೂರಲ್ ಪರ್ವತಾವಳಿಗೆ ಆಚೆ ತಮ್ಮ ರಾಜ್ಯವನ್ನು ವಿಸ್ತರಿಸಲೂ ಈ ಯೋಧ ಜನಾಂಗದ ಉಪಯೋಗ ಪಡೆದರು. ಇರ್‌ಮಾಕ್ ಟಿಮೋಫೀವಿಚ್ ಎಂಬ ಕಾಸ್ಯಾಕ್ ಯೋಧ ರಷ್ಯಕ್ಕೆ ಸೈಬೀರಿಯವನ್ನು ಸೇರಿಸಲು ಬಹಳ ಸಹಾಯ ಮಾಡಿದ. ಆದರೆ ರಷ್ಯದ ಝಾರ್ ಪ್ರಭುಗಳಾಗಲಿ ಅವರ ಮಾಂಡಲೀಕರಾಗಲಿ ಜಮೀನುದಾರರಾಗಲಿ ಸ್ವಾತಂತ್ರ್ಯಪ್ರಿಯರಾದ ಕಾಸ್ಯಾಕರ ಹಕ್ಕು ಬಾಧ್ಯತೆಗಳಿಗೆ ಕುಂದುಂಟುಮಾಡಿದ ಸಂದರ್ಭಗಳಲ್ಲಿ ಅವರ ವಿರುದ್ಧ ದಂಗೆ ಎದ್ದಿದ್ದೂ ಉಂಟು. 17 ಮತ್ತು 18ನೆಯ ಶತಮಾನಗಳಲ್ಲಿ ಅಂಥ ದಂಗೆಗಳು ನಡೆದುವು. ಸ್ಟೀಫನ್ ರಾಜಿನ್, ಕೊಂದ್ರಾತಿ ಬುಲಾವಿನ್, ಇಮಿಲಿಯನ್ ಪುಗಚೇವ್ ಮೊದಲಾದವರು ಇಂಥ ಹೋರಾಟಗಳ ನಾಯಕರಾಗಿದ್ದರು.

ಕಾಸ್ಯಾಕ್ ಜನಾಂಗದವರು ಹಲವು ವಿಶೇಷ ಹಕ್ಕು ಬಾಧ್ಯತೆಗಳನ್ನು ಪಡೆದಿದ್ದರು. ಇವಕ್ಕೆ ಪ್ರತಿಫಲವಾಗಿ ಅವರು ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. 18–20 ವರ್ಷಗಳಿಗೆ ಮೇಲ್ಪಟ್ಟ ಎಲ್ಲ ಕಾಸ್ಯಾಕರಿಗೂ ಸೈನ್ಯದ ತರಬೇತಿ ಕಡ್ಡಾಯವಾಗಿತ್ತು.

20ನೆಯ ಶತಮಾನದ ಮೊದಲ ಭಾಗದಲ್ಲಿ ರಷ್ಯದಲ್ಲಿ ಕಾಸ್ಯಾಕರೇ ಪ್ರಧಾನವಾಗಿ ವಾಸಿಸುತ್ತಿದ್ದ 12 ಪ್ರದೇಶಗಳಿದ್ದುವು. 59,777 ಚ.ಕಿಮೀಗಳ ಪ್ರದೇಶದಲ್ಲಿ 1,20,00,000 ಕಾಸ್ಯಾಕರಿದ್ದರು. ಅವರಲ್ಲಿ 50,00,000 ಕಾಸ್ಯಾಕರು ವಿಶೇಷ ರೀತಿಯ ಸ್ಥಾನಮಾನಗಳನ್ನು ಪಡೆದಿದ್ದವರು. ಶಾಂತಿಕಾಲದಲ್ಲಿ 55,000 ಕಾಸ್ಯಾಕರು ಆಯುಧಧಾರಿಗಳಾಗಿದ್ದರೆ, ಯುದ್ಧಕಾಲದಲ್ಲಿ 1,80,000 ಕಾಸ್ಯಾಕರು ಆಯುಧ ಧರಿಸುತ್ತಿದ್ದರು.

1917ರ ಕ್ರಾಂತಿಯ ಅನಂತರ ಕಾಸ್ಯಾಕರು ತಮ್ಮ ಪ್ರದೇಶಗಳನ್ನು ರಷ್ಯದ ಒಕ್ಕೂಟದಲ್ಲಿ ಸೇರಿದ ಸಣ್ಣ ಗಣರಾಜ್ಯಗಳನ್ನಾಗಿ ಮಾರ್ಪಡಿಸಿಕೊಂಡರು. ರಷ್ಯದ ಎಲ್ಲ ಕಾಸ್ಯಾಕರನ್ನೊಳಗೊಂಡ ಒಂದು ಒಕ್ಕೂಟವನ್ನು ಡಾನ್ ನಾಯಕ (ಅಟಮನ್) ಕಲೆಡಿನನ ನೇತೃತ್ವದಲ್ಲಿ ಸ್ಥಾಪಿಸಿಕೊಂಡರು. ರಷ್ಯದಲ್ಲಿ 1918–20ರ ನಡುವೆ ನಡೆದ ಆಂತರಿಕ ಯುದ್ಧದಲ್ಲಿ ಕಾಸ್ಯಾಕರು ಎರಡು ಪಂಗಡಗಳಾಗಿ ಒಡೆದು ಬೋಲ್ಷೆವಿಕರ ಮತ್ತು ಅವರ ವಿರೋಧಿಗಳ ಪರ ಸೇರಿಕೊಂಡು ತಮ್ಮತಮ್ಮಲ್ಲಿಯೇ ಕಾದಾಡಿದರು. ರಷ್ಯನ್ ಬಿಳಿ ಸೇನೆಗಳು ಸೋಲನ್ನೊಪ್ಪಿದಾಗ 30,000 ಕಾಸ್ಯಾಕರು ಪರದೇಶಗಳಿಗೆ ವಲಸೆ ಹೋದರು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಕಾಸ್ಯಾಕರ ಸೇನೆಯೊಂದನ್ನು ಪುನರ್‌ರಚಿಸಲಾಯಿತು. ಅನಂತರ ಅವರು ಹಿಂದಿನಿಂದ ನಡೆದುಕೊಂಡು ಬಂದಿದ್ದ ಪಂಗಡಗಳನ್ನು ರದ್ದುಗೊಳಿಸಿ, ಅವುಗಳನ್ನು ಹೊಸ ಆಡಳಿತ ಪ್ರಾಂತ್ಯಗಳಾಗಿ ವಿಂಗಡಿಸಿ, ಸೋವಿಯತ್ ಒಕ್ಕೂಟದೊಳಗೆ ಸೇರಿಸಲಾಯಿತು.

ಕಾಸ್ಯಾಕರ ಜೀವನವನ್ನೂ ಅವರ ಸಾಹಸ ಕಾರ್ಯಗಳನ್ನೂ ಕುರಿತ ಸಾಹಿತ್ಯ ಸಾಕಷ್ಟಿದೆ. ಅಂಥ ಕಾದಂಬರಿಗಳ ಸಾಲಿನಲ್ಲಿ ಎನ್. ವಿ. ಗೋಗೋಲನ ತಾರಾಸ್ ಬುಲ್ಬ, ಟಾಲ್ಸ್‌ಟಾಯನ ಕೋಜಾಕಿ ಮತ್ತು ಹೆಚ್. ಸಿನ್‌ಕಿವಿಚ್‌ನ ವಿತ್ ಫೈರ್ ಅಂಡ್ ಸ್ವೋರ್ಡ್– ಇವು ಕೆಲವು ಮುಖ್ಯ ಕೃತಿಗಳು. (ಎಸ್.ಕೆ.ಎಸ್.)

**ಕಾಹುಗೋಟೆ :** ಕೋಟೆಯ ರಕ್ಷಣೆಯಲ್ಲಿ ನಿರತರಾಗಿರುವ ಸೈನಿಕರ ವಾಸಕ್ಕೆ ಕೋಟೆಯಲ್ಲೇ ಕಟ್ಟಿದ ಕತ್ತಲೆಯ ನೆಲಮನೆ. ಇದು ಗಿರಿದುರ್ಗದ ಅತ್ಯಂತ ಬಲಿಷ್ಠ ಭಾಗ. ಶತ್ರುಸೇನೆ ಏನಾದರೂ ಕೋಟೆಯನ್ನು ಆಕ್ರಮಿಸಿದರೆ ಈ ಕತ್ತಲಮನೆಗಳು ದುರ್ಗರಕ್ಷಕರಿಗೆ ಆಶ್ರಯಸ್ಥಾನಗಳಾಗುವುವು. ಕೋಟೆಯ ಮಧ್ಯ ಪ್ರದೇಶದಲ್ಲಿರುವ ಗೋಪುರದಲ್ಲಿ ಕೈದಿಗಳಿಗಾಗಿ ಮಾಡಿರುವ ಭದ್ರವಾದ ನೆಲಮಾಳಿಗೆಯ ಕೋಣೆಗಳಿದ್ದುವು. ಕತ್ತಲುಗವಿಯ ಬಂದೀಖಾನೆಯ ಈ ಕೋಣೆಗಳಲ್ಲಿ ತಪ್ಪಿತಸ್ಥರನ್ನು ಸೆರೆ ಹಾಕುತ್ತಿದ್ದರು.

ಕೋಟೆಯ ರಕ್ಷಣಶಕ್ತಿಯನ್ನು ಹೆಚ್ಚಿಸಲು ಎತ್ತರದ ಕಲ್ಲು ಗೋಡೆಗಳ ಬದಲು ತಗ್ಗಾದ ದಪ್ಪ ಮಣ್ಣುಗೋಡೆಗಳು ಕಲ್ಲಿನ ಮೇಲ್ಮೈಗೆ ಬಂದವು. ರಕ್ಷಣೆಯ ಮಣ್ಣು ದಿಬ್ಬಗಳ ಆಳುವೇರಿಗಳು, ತಡೆಗೋಡೆ, ಗೋಡೆಯ ಹಿಂದೆ ಕಮಾನಿನ ಸುರಂಗ ಮಾರ್ಗಗಳು, ಕೋಟೆಯ ಸುತ್ತಲೂ ಗ್ಲೇಸಿಸ್ ಎಂಬ ಇರುಕಲು ಮಣ್ಣುದಿಬ್ಬಗಳು, ಇವೇ ಮೊದಲಾದವುಗಳ ಹಿಂದೆ ರಕ್ಷಣಸೈನ್ಯಕ್ಕೆ ಮುಚ್ಚಿಗೆಯ ಆಶ್ರಯಗಳು ನಿರ್ಮಿತವಾದುವು. ಕಾಲಾಂತರದಲ್ಲಿ ಯುದ್ಧತಂತ್ರ ಬದಲಾದಂತೆ ಮಣ್ಣಿನ ದಿಡ್ಡಿಗೋಡೆಗಳಿಂದ ಮುಚ್ಚಿದ ಕಾಂಕ್ರೀಟ್ ಬಂತು. ಬಾಂಬುಗಳನ್ನು ನಿವಾರಿಸಲು 6'–10' ದಪ್ಪದ ಕಾಂಕ್ರೀಟ್ ಚಾವಣಿಗಳಾದವು. ಬಂದೂಕುಗಳನ್ನು ರಕ್ಷಿಸಲು ಕೊಠಡಿಗಳ ನಿರ್ಮಾಣವಾಯಿತು. ಅಲ್ಲದೇ ಉಕ್ಕಿನ ಗುಮ್ಮಟ, ಸಣ್ಣ ಗೋಪುರಗಳೂ ಕಾಂಕ್ರೀಟ್ ಕೋಟೆಗಳೂ ರಕ್ಷಣ ಸಾಧನಗಳೂ ಭೂಮಿಯೊಳಗೆ ನಿರ್ಮಿತವಾದುವು.

ಭೂಮಿಯೊಳಗೇ 960 ಕಿಮೀ ಉದ್ದ ಚಾಚಿದ್ದ ಮ್ಯಾಜಿನೋಲೈನ್ ಎಂಬ ಅದ್ಭುತ ಕೋಟೆಯಲ್ಲಿ ಸೈನಿಕರ ಗೃಹಗಳು ಕತ್ತಲ ನೆಲಮಾಳಿಗೆಯಲ್ಲಿವೆ. ಜರ್ಮನರ ಸೀಗ್‌ಫ್ರೈಡ್ ಲೈನಿನಲ್ಲೂ ರಷ್ಯನರ ಸ್ಟಾಲಿನ್ ಲೈನಿನಲ್ಲೂ ಕಾಹುಗೋಟೆಗಳಿವೆ. ಅಮೆರಿಕದ ಕಾಲರ್‍ಯಾಡೊ ಪ್ರಾಂತ್ಯದ ಕೆಯೆನ್ನೇ ಪರ್ವತದಲ್ಲಿ ಶಿಖರದಿಂದ 2500'ಗಳ ಕೆಳಗೆ 6½ ಲಕ್ಷ ಟನ್ ಬಂಡೆಗಳನ್ನು ಒಡೆದ 100 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ ಅಭೇದ್ಯ ಕೋಟೆಯಲ್ಲಿ 12,000'ಗಳ ಉದ್ದದ ಭಾರಿ ಸುರಂಗಗಳಲ್ಲಿ 20,000 ಸೈನಿಕರಿಗೆ ಮನೆಗಳಾಗಿವೆ. ಭೂಕಂಪ ಮತ್ತು ಬಾಂಬುಗಳಿಂದ ರಕ್ಷಣೆ ಒದಗಿಸಲು ಈ ಗೃಹಗಳನ್ನು ಉಕ್ಕಿನ ಸ್ಪ್ರಿಂಗುಗಳ ಮೇಲೆ ನಿಲ್ಲಿಸಿದ್ದಾರೆ. ಇವಕ್ಕೆ 36' ದಪ್ಪ, 13' ಎತ್ತರ 11' ಅಗಲ ಮತ್ತು 30 ಟನ್ ತೂಕದ ಮೂರು ವಿದ್ಯುಚ್ಚಾಲಿತ ದಿಡ್ಡಿ ಬಾಗಿಲುಗಳಿವೆ. ಕೋಟೆ ರಕ್ಷಣೆಗೆ ಸಂಬಂಧಿಸಿದ ಕೋಟ್ಯಂತರ ಪ್ರಶ್ನೆಗಳಿಗೆ ಗಣಕಯಂತ್ರ ಸೆಕೆಂಡುಗಳಲ್ಲಿ ಉತ್ತರ ಕೊಡುತ್ತದೆ. ನೋರಾಡ್ ಕ್ಯಾಮರಾ ಸಾವಿರಾರು ಕಿಮೀ ದೂರದ ವಸ್ತುಗಳನ್ನು ಪರದೆಯ ಮೇಲೆ ಚಿತ್ರಿಸುತ್ತದೆ. ರಾಡಾರ್ ಅಂತರಿಕ್ಷ ವಿಮಾನಗಳ ಚಲನವಲನಗಳನ್ನು ಪತ್ತೆ ಮಾಡುತ್ತದೆ. ಗಣಕಯಂತ್ರ ಆ ಸಂಕೇತಗಳನ್ನು ತತ್‌ಕ್ಷಣ ಹಿಡಿದು ಆಜ್ಞೆಗಳನ್ನು ಕೊಡುತ್ತದೆ. (ಎಂ.ಜಿ.ಕೆ.ಎಂ.)

**ಕಾಳಗಮೀನು :** ಮಲಯ, ಸಯಾಂ, ಥೈಲೆಂಡ್ ಮತ್ತಿತರ ಆಗ್ನೇಯ ಏಷ್ಯದ ದೇಶಗಳ ಸಿಹಿನೀರಿನ ಕೊಳಗಳಲ್ಲಿ ವಾಸಿಸುವ ಒಂದು ಬಗೆಯ ಮೀನು (ಫೈಟಿಂಗ್ ಫಿಶ್). ಭಯಂಕರವಾಗಿ ಹೋರಾಡುವ ಗಂಡುಮೀನಿನ ಅಸಾಮಾನ್ಯ ಗುಣವೇ ಇದರ ಹೆಸರಿಗೆ ಕಾರಣ. ಇದರ ವೈಜ್ಞಾನಿಕ ನಾಮ ಬೆಟ ಸ್ಪೆಂಡೆನ್ಸ್. ಪೂರ್ಣ ಬೆಳೆದ ಗಂಡು ಮೀನು ಸು. 2"–3" ಉದ್ದ ಇದೆ. ಬಲು ಉದ್ದವಾದ ಅಗಲವಾದ ಥಳಥಳಿಸುವ ಕೆಂಪು, ನೀಲಿ, ಹಸುರು ಮುಂತಾಗಿ ವರ್ಣರಂಜಿತವಾಗಿರುವ ಈಜುರೆಕ್ಕೆಗಳಿರುವುದರಿಂದ ಸುಂದರವಾಗಿ ಕಾಣುತ್ತದೆ. ಹೆಣ್ಣುಮೀನು ಗಂಡಿನಷ್ಟು ಆಕರ್ಷಕವಾಗಿಲ್ಲ. ಕೀಟಗಳ ಡಿಂಭಗಳೇ ಇವುಗಳ ಆಹಾರ.



ಈ ಮೀನಿನ ಗೂಡು ಕಟ್ಟುವ ವಿಧಾನ ಮತ್ತು ಮರಿಗಳ ಪಾಲನೆಯ ಕ್ರಮ ಬಲು ವಿಚಿತ್ರವಾದುವು. ಗೂಡು ಕಟ್ಟುವ ಕಾರ್ಯ ಗಂಡಿನದು. ಈ ಕಾರ್ಯದಲ್ಲಿ ಬಹಳ ಆಸಕ್ತಿ ತೋರಿಸುವ ಗಂಡು ಮೀನು ನೀರಿನ ಮೇಲ್ಮಟ್ಟಕ್ಕೆ ಬಂದು ಗಾಳಿಯನ್ನು ಹೀರಿಕೊಂಡು ತನ್ನ ಮೊದಲಿನ ಜಾಗಕ್ಕೆ ತೆರಳುತ್ತದೆ. ಅಲ್ಲಿಂದ ಬಾಯಲ್ಲಿನ ಗಾಳಿಯನ್ನು ಸಣ್ಣ ಸಣ್ಣ ಗುಳ್ಳೆಗಳಾಗಿ ಹೊರಬಿಡುತ್ತದೆ. ಪ್ರತಿಗುಳ್ಳೆಯೂ ಒಂದು ವಿಶೇಷ ಬಗೆಯ ಗಟ್ಟಿಲೋಳೆಯಿಂದ ಆವೃತವಾಗಿರುವುದರಿಂದ ಗುಳ್ಳೆಗಳು ಒಡೆಯದೆ ಒಂದಕ್ಕೊಂದು ಅಂಟಿಕೊಳ್ಳುತ್ತವೆ. ಹೀಗೆ ಅಂಟಿಕೊಂಡ ಗುಳ್ಳೆಗಳು ನೀರಿನ ಮಟ್ಟಕ್ಕೆ ಬಂದು ಒಟ್ಟಾಗಿ ಗೂಡಿನಂತೆ ತೇಲತೊಡಗುತ್ತವೆ.

ಅನಂತರ ಗಂಡು ಮೀನು ಪ್ರೌಢ ವಯಸ್ಸಿನ ಹೆಣ್ಣುಮೀನಿನ ಬೇಟಕ್ಕೆ ಸಿದ್ಧವಾಗುತ್ತದೆ. ಅಂಥ ಮೀನೊಂದು ಸಿಕ್ಕಾಗ ಅದನ್ನು ಬೆನ್ನಟ್ಟಿ ಬಲವಾಗಿ ಅಪ್ಪಿಕೊಳ್ಳುವುದರ ಮೂಲಕ ಹೆಣ್ಣು ಮೊಟ್ಟೆಯಿಡುವಂತೆ ಬಲಾತ್ಕರಿಸುತ್ತದೆ. ಮೊಟ್ಟೆಗಳು ಹೊರ ಬರುತ್ತಿದ್ದಂತೆಯೇ ಅವುಗಳನ್ನು ನಿಶೇಚನಗೊಳಿಸುತ್ತದೆ. ಮೊಟ್ಟೆಗಳು ಭಾರವಾಗಿರುವುದರಿಂದ ನಿಧಾನವಾಗಿ ನೀರಿನ ತಳಕ್ಕಿಳಿಯುತ್ತವೆ. ಆಗ ಗಂಡು ಮೀನು ಹೆಣ್ಣನ್ನು ಅಲ್ಲಿಂದ ಓಡಿಸಿ ನೀರಿನ ತಳಕ್ಕಿಳಿದು ತನ್ನ ಬಾಯಲ್ಲಿ ಮೊಟ್ಟೆಗಳನ್ನು ಹಿಡಿದುಕೊಂಡು ಮೇಲಕ್ಕೆ ಬಂದು ಗೂಡಿನೊಳಕ್ಕೆ ಸೇರಿಸುತ್ತದೆ. ಈ ರೀತಿ ಹಲವಾರು ಬಾರಿ ಮಾಡಿ ಎಲ್ಲ ಮೊಟ್ಟೆಗಳನ್ನು ಗೂಡಿಗೆ ಸಾಗಿಸಿ ಅದರ ಬಳಿ ಕಾವಲು ನಿಲ್ಲುತ್ತದೆ. ಗೂಡಿನ ಗುಳ್ಳೆಗಳು ಆಕಸ್ಮಾತ್ತಾಗಿ ಒಡೆದರೆ ಬೇರೆ ಗುಳ್ಳೆಗಳನ್ನು ಸೇರಿಸುವುದು, ಮೊಟ್ಟೆಗಳು ಕೆಳಗೆ ಬೀಳುವಂತಾದರೆ ಅವನ್ನು ಮತ್ತೆ ಸ್ವಸ್ಥಾನಕ್ಕೆ ಸೇರಿಸುವುದು, ಬೇರೆ ಮೀನುಗಳು ಬಂದರೆ, ಮೊಟ್ಟೆಯಿಟ್ಟ ಹೆಣ್ಣುಮೀನೇ ಬಂದರೂ ಓಡಿಸುವುದು–ಮುಂತಾದ ಕೆಲಸಗಳನ್ನು ಕಾವಲಿರುವ ಗಂಡುಮೀನು ನಡೆಸುತ್ತದೆ. ಹೀಗೆ ಮೊಟ್ಟೆಗಳೊಡೆದು ಮರಿಗಳಾಗುವವರೆಗೂ ಅವನ್ನು ಕಾಪಾಡುತ್ತದೆ. ಬಹಳ ಆದರದಿಂದ ಸಹನೆಯಿಂದ ಮರಿಗಳನ್ನು ನೋಡಿಕೊಳ್ಳುವುದಾದರೂ ಅಪೂರ್ವವಾಗಿ ಕೆಲವು ಮರಿಗಳನ್ನು ಕಬಳಿಸುವುದೂ ಉಂಟು. ಕೆಲವೊಮ್ಮೆ ಹೆಣ್ಣು ಮೀನೊಂದು ಗೂಡಿನ ಹತ್ತಿರ ಬಂದು ಗಂಡನ್ನು ಓಡಿಸಿ ತಾನೇ ಕಾವಲಿಗೆ ನಿಲ್ಲುವುದುಂಟು.

ಕಾಳಗಮೀನಿನ ಗಂಡುಗಳು ಬಲು ಜಗಳಗಂಟಿಗಳೆಂದೂ ಹೆಸರಾಗಿವೆ. ಗಂಡುಗಳು ಪರಸ್ಪರ ಸಮೀಪಿಸಿದಾಗ ಬಹಳ ಉದ್ರೇಕಗೊಂಡು ಕ್ರೂರವಾಗಿ ಹೋರಾಡತೊಡಗುತ್ತವೆ. ತಮ್ಮ ಚೂಪಾದ ಹಲ್ಲುಗಳಿಂದ ಒಂದನ್ನೊಂದು ಕಚ್ಚಿ ಈಜುರೆಕ್ಕೆಗಳನ್ನು ಹುರುಪೆಗಳನ್ನು ಕಿತ್ತು ಹರಿದು ಉಗ್ರವಾಗಿ ಜಗಳವಾಡುತ್ತವೆ. ಈ ಗುಣವನ್ನು ಕಂಡೇ ಸಯಾಮಿನ ಜನ ಇವುಗಳ ನಡುವೆ ಮನರಂಜನೆಗಾಗಿ ಕಾಳಗ ಸ್ಪರ್ಧೆಗಳನ್ನೇರ್ಪಡಿಸುತ್ತಾರೆ. ಇದಕ್ಕಾಗಿಯೇ ವಿಶೇಷ ತಳಿಗಳನ್ನು ಎಬ್ಬಿಸಿರುವುದೂ ಉಂಟು. ಹುಂಜದ ಕಾಳಗದಲ್ಲಿನಂತೆ ಜೂಜುಕಟ್ಟಿ ಮೀನಿನ ಸ್ಪರ್ಧೆ ನಡೆಸುವುದು ಥೈಲೆಂಡ್, ಸಯಾಂ ಪ್ರದೇಶಗಳಲ್ಲಿ ಬಹಳ ಸಾಮಾನ್ಯ. (ಎಂ.ಜೆ.ಎಸ್.ಆರ್.)

**ಕಾಳಗಿ :** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಒಂದು ಗ್ರಾಮ. ಗುಲ್ಬರ್ಗದಿಂದ ಪೂರ್ವಕ್ಕೆ ಸು. 32ಕಿಮೀ ದೂರದಲ್ಲಿದೆ. ಇದು 11ನೆಯ ಶತಮಾನದಲ್ಲಿ ಕಲ್ಯಾಣದ ಚಾಳುಕ್ಯರ ಆಳಿಕೆಯಲ್ಲಿ ಕಾಳುಗೆ ಎಂಬ ಹೆಸರಿನಿಂದ ಮನ್ನೆದಡಿ 1000 ನಾಡಿನ ರಾಜಧಾನಿಯಾಗಿ ಪ್ರಸಿದ್ಧವಾಗಿತ್ತು. ತ್ರೈಲೋಕ್ಯಮಲ್ಲ ಸೋಮೇಶ್ವರನ ಆಳಿಕೆಯಲ್ಲಿ ವಾರಣಕುಲಕ್ಕೆ ಸೇರಿದ ಮಹಾಮಂಡಲೇಶ್ವರ ದಿಬ್ಬರಸ ಈ ಪ್ರಾಂತ್ಯವನ್ನು ಆಳುತ್ತಿದ್ದ. ಬಹುಶಃ ಅವನ ಕಾಲದಲ್ಲಿ ಅವನ ಹೆಸರಿನಿಂದ ಬಿಡ್ಡೇಶ್ವರ (ದಿಬ್ಬೇಶ್ವರ) ದೇವಾಲಯವನ್ನು ಇಲ್ಲಿ ನಿರ್ಮಿಸಲಾಗಿದೆ. 12ನೆಯ ಶತಮಾನದಲ್ಲಿ ಕಳಚುರಿ ರಾಯಮುರಾರಿ ಸೋವಿದೇವ ಆಳುತ್ತಿದ್ದಾಗ ಬಾಣವಂಶದ ವೀರಗೊಂಕರಸ ಮನ್ನೆದಡಿ ನಾಡನ್ನು ಇಲ್ಲಿಂದ ಆಳುತ್ತಿದ್ದು ಬಹುಶಃ ತನ್ನ ತಂದೆ ಉದಯಾದಿತ್ಯ ವೀರಕಾಳರಸನ ಹೆಸರಿನಲ್ಲಿ ಸ್ವಯಂಭು ಕಾಳೇಶ್ವರ ದೇವಾಲಯವನ್ನು ನಿರ್ಮಿಸಿ ಅನೇಕ ದತ್ತಿಗಳನ್ನು ಬಿಟ್ಟಂತೆ ತೋರುತ್ತದೆ. ಕಾಳೇಶ್ವರ ದೇವಾಲಯಕ್ಕೆ ಮನ್ನೆದಡಿ 1000ಕ್ಕೆ ಸೇರಿದ್ದ ನೂರುಂಬಾಡ ಪ್ರಾಂತ್ಯದ ಪ್ರತಿಯೊಂದು ಹಳ್ಳಿಯಿಂದ ಒಂದು ಗದ್ಯಾಣವನ್ನು ದತ್ತಿಯಾಗಿ ಹಿರಿಯ ದಂಡನಾಯಕ ಮಾಧವಯ್ಯ ಬಿಟ್ಟುದಾಗಿ ಶಾಸನವೊಂದರಿಂದ ತಿಳಿದುಬರುತ್ತದೆ. 13ನೆಯ ಶತಮಾನದ ಅನಂತರ ಈ ಊರು ತನ್ನ ಪ್ರಾಮುಖ್ಯವನ್ನೂ ಕಳೆದುಕೊಂಡಿತು.

ಮೇಲೆ ತಿಳಿಸಿದ ದಿಬ್ಬೇಶ್ವರ ಕಾಳೇಶ್ವರ ದೇವಾಲಯಗಳಲ್ಲದೆ ಚಾಳುಕ್ಯ ಮತ್ತು ಕಳಚುರಿಗಳ ಕಾಲದಲ್ಲಿ ಸೋಮೇಶ್ವರ, ಜಯಲಿಂಗೇಶ್ವರ ದೇವಾಲಯ ಮೊದಲಾದ ಹಲವು ದೇವಾಲಯಗಳು ಇಲ್ಲಿ ನಿರ್ಮಿತವಾದುದಾಗಿ ಶಾಸನಗಳು ತಿಳಿಸುತ್ತವೆ. ಆದರೆ ಈ ದೇವಾಲಯಗಳು ಜೀರ್ಣಾವಸ್ಥೆಯಲ್ಲಿವೆ. ಕೆಲವು ನಾಮಾವಶೇಷವಾಗಿವೆ. ದೇವಾಲಯಗಳ ಶಿಲ್ಪಗಳು, ಗೋಡೆ ಚಾವಣಿಗಳ ಭಾಗಗಳು, ಇತರ ಶಿಲಾಫಲಕಗಳು ಊರಿನ ಸುತ್ತ ಚೆಲ್ಲಾಡಿವೆ. ಇವುಗಳಲ್ಲಿ ತಕ್ಕಮಟ್ಟಿಗೆ ಉಳಿದುಬಂದಿರುವ ದೇವಾಲಯವೆಂದರೆ ಕಾಳಮೇಶ್ವರ ಅಥವಾ ಕಾಳೇಶ್ವರ ದೇವಾಲಯ. ಆದರೆ ಮೂಲ ದೇವಾಲಯಕ್ಕೆ ಅನಂತರದ ಕಾಲದಲ್ಲಿ ಕೆಲವು ಭಾಗಗಳನ್ನು ಸೇರಿಸಿರುವುದಲ್ಲದೆ ದೇವಸ್ಥಾನಕ್ಕೆ ಪೂರ್ಣವಾಗಿ ಸುಣ್ಣ ತುಂಬಿರುವುದರಿಂದ ಅದರ ಮೂಲ ಸೌಂದರ್ಯ ಬಹಳ ಮಾಸಿದೆ ಎನ್ನಬಹುದು. ಆದರೂ ಈ ದೇವಾಲಯದ ಹೊರಗೋಡೆಗಳ ಮೇಲೆ ಇರುವ ಸುಂದರವಾದ ಭಂಗಿಗಳಲ್ಲಿ ನಾಟ್ಯಮಗ್ನರಾಗಿರುವ ಸ್ತ್ರೀಮೂರ್ತಿಗಳ ಉಬ್ಬು ಶಿಲ್ಪಗಳು ಆಕರ್ಷಕವಾಗಿವೆ. ಇವುಗಳಲ್ಲಿನ ಒಂದು ವಿಶೇಷವೆಂದರೆ ಈ ಕೆಲವು ಮೂರ್ತಿಗಳ ಮೇಲೆ ಅಪರೂಪವಾಗಿ ಕಿರುಶಾಸನಗಳಿದ್ದು ಆ ಮೂರ್ತಿಗಳ ಭಾವಭಂಗಿಗಳನ್ನು ಅವುಗಳನ್ನು ಕಂಡರಿಸಿರುವ ಉದ್ದೇಶವನ್ನು ವಿವರಿಸುತ್ತವೆ. ಸಾಮಾನ್ಯವಾಗಿ ಈ ಕಿರುಶಾಸನಗಳು ನೀಲಕಂಠನನ್ನು ಬಗೆಬಗೆಯಾಗಿ ಅಲ್ಲಿ ಕಂಡರಿಸಿರುವ ಸ್ತ್ರೀಯರು ವರ್ಣಿಸುತ್ತಿರುವುದನ್ನು ಸೂಚಿಸುತ್ತವೆ. ವೀಣೆಯನ್ನು ನುಡಿಸಿ ಹಾಡುತ್ತಿರುವ ಸ್ತ್ರೀಮೂರ್ತಿಯ ಶಿಲ್ಪವೊಂದರ ಮೇಲಿನ ಶಾಸನ 'ಧರೆಯೊಳಗೆ ನೀಲಕಂಠನೆ ಸುಜನಂ ಧಾರ್ಮಿಕನೆಂದು ಒರಳಿ ವಸಂತಂ ಗುಜರಿ ಸಿರಿರಾಗದೆ ವೀಣಾಕಾರ್ತಿ ಪಾಡುತ್ತುಮಿರ್ದಳ್ ಎಂದಿದೆ. ಇಲ್ಲಿ ಹೆಸರಿಸಿರುವ ಕೆಲವು ರಾಗಗಳು ಗಮನಿಸತಕ್ಕವಾಗಿವೆ. ಮೋಹಕ ಭಂಗಿಯಲ್ಲಿ ನಿಂತು ಮುಂಗೈ ಮೇಲೆ ಕುಳಿತಿರುವ ಗಿಳಿಯೊಂದನ್ನು ನುಡಿಸುತ್ತಿರುವ ಸ್ತ್ರೀಮೂರ್ತಿಯ ಮೇಲಿನ ಒಂದು ಶಾಸನ, 'ಲಲಿತಾಂಗಿ ಆಡಿಸುತ್ತಿರೆ ಗಿಳಿಯಾಡಿತು. ನೀಲಕಂಠನ್ ಈ ಬಂಧಂ ನೀವೇಳಿರೆ ಏಳಿರೆ ತೋರಣಂಗೂಡಿ ಕಳಸಕನ್ನಡಿಯಿಂದ ಇದಿರುಗೊಳ್ವುದು' ಎಂದು ವರ್ಣಿಸಿದರೆ, ಮತ್ತೊಂದರಲ್ಲಿ ಬುಧಾಗ್ರಣಿ ನೀಲಕಂಠನನ್ನು ಮನೋನುರಾಗದಿಂದ ಬಗೆಬಗೆಯಾಗಿ ವರ್ಣಿಸಿ ಸರಸ್ವತಿಯಂತೆ ಆಡುತ್ತಿರುವ ಮೂರ್ತಿಯ ವರ್ಣನೆ ಇದೆ. ಹೀಗೆ ಶಾಸನಗಳನ್ನುಳ್ಳ ಶಿಲಾಬಾಲಿಕೆಯ ಮೂರ್ತಿಗಳಿರುವುದು ಚಾಳುಕ್ಯ ಶಿಲ್ಪದಲ್ಲಿ ಅಪರೂಪವೇ. ಉಳಿದಂತೆ ದೇವಾಲಯದ ದ್ವಾರಗಳು, ಕಂಬಗಳು, ಒಳಚಾವಣಿಯ ಶಿಲ್ಪಗಳು ಇತರ ಸಾಮಾನ್ಯವಾದ ಚಾಳುಕ್ಯ ದೇವಾಲಯಗಳಲ್ಲಿರುವಂತೆಯೇ ಇವೆ.

ಈ ದೇವಾಲಯದ ಮುಂದೆ ಕೆಲವು ಗಜಗಳ ಅಂತರದಲ್ಲಿ ನಿಂತಿರುವ ದೇವಾಲಯವೇ ಇಲ್ಲಿನ ಅತ್ಯಂತ ಪ್ರಾಚೀನ ದಿಬ್ಬೇಶ್ವರ ದೇವಾಲಯವಿರಬಹುದು. ಎತ್ತರವಾದ ಜಗತಿಯ ಮೇಲೆ ಮೂರು ಗರ್ಭಗೃಹಗಳು, ಮೂರು ಸುಕನಾಸಿಗಳು, ನಡುವೆ ಒಂದು ನವರಂಗ, ಮುಂದೆ ಒಂದಂಕಣದ ಮುಖಮಂಟಪಗಳಿವೆ. ಹೊರಗೋಡೆಗಳು ಕಚ್ಚುಕಚ್ಚಾಗಿ ಉಬ್ಬಿದ ಆಯಾಕಾರದ ಗೋಡೆಗಳಿಂದ ಕೂಡಿವೆ. ಚಾಳುಕ್ಯರ ಕಾಲದ ದೇವಾಲಯಗಳ ತಳವಿನ್ಯಾಸದಲ್ಲಿ ಇದು ಅಪರೂಪವಾದುದೆನಿಸಿದೆ. ಹೊರಗೋಡೆಗಳ ಮೇಲೆ ಹೆಚ್ಚು ಉಬ್ಬಿನಿಂತಿರುವ ಸುಂದರವಾದ ಮೂರ್ತಿಗಳನ್ನು ಕಾಣಬಹುದು. ಆದರೆ ದೇವಾಲಯ ಅತ್ಯಂತ ಜೀರ್ಣಾವಸ್ಥೆಯಲ್ಲಿದೆ.

ಈಗ ಊರು ಈ ದೇವಾಲಯಗಳಿರುವ ಹಳೆಯ ನಿವೇಶನದಿಂದ ಸ್ವಲ್ಪ ದೂರದಲ್ಲಿದೆ. ಅಲ್ಲಿಯೂ ಮಲ್ಲಿಕಾರ್ಜುನ ದೇವಾಲಯ, ಚೌಡೇಶ್ವರಿ ಗುಡಿ, ಆಂಜನೇಯನ ಗುಡಿಗಳಿವೆ. ಆದರೆ ವಾಸ್ತುಶಿಲ್ಪ ದೃಷ್ಟಿಯಿಂದ ಇವು ಸಾಮಾನ್ಯ ರಚನೆಗಳು.

ಕಾಳಗಿ ಒಂದು ಯಾತ್ರಾಸ್ಥಳ. ಇಲ್ಲಿನ ಕಾಳೇಶ್ವರ ಮತ್ತು ನರಸಿಂಹ ದೇವಾಲಯಗಳು ವರ್ಷವಿಡೀ ಈ ಸುತ್ತಿನ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತವೆ. ಮೇ ತಿಂಗಳಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತದೆ. (ಎಂ.ಎಚ್.)

**ಕಾಳಪ್ಪ, ಎಸ್.:** 1924–2000. ಕರ್ನಾಟಕದ ಹೆಸರಾಂತ ಕಲಾವಿದ. 1924ರಲ್ಲಿ ಮೈಸೂರಿನಲ್ಲಿ ಜನಿಸಿದರು. ಬಾಲ್ಯದಿಂದಲೇ ಚಿತ್ರಕಲೆಯ ಬಗ್ಗೆ ವಿಶೇಷ ಒಲವನ್ನು ಹೊಂದಿದ್ದ ಇವರು ಮೈಸೂರಿನ ಚಾಮರಾಜ ತಾಂತ್ರಿಕ ಶಾಲೆಯ ವಿದ್ಯಾರ್ಥಿಯಾಗಿ ಚಿತ್ರಕಲೆಯನ್ನು ಅಭ್ಯಾಸ ಮಾಡಿ ಡಿಪ್ಲೊಮಾ ಪದವಿ ಗಳಿಸಿದರು (1942).

ನಿಸರ್ಗ ಹಾಗೂ ಪೌರಾಣಿಕ ಚಿತ್ರಗಳ ರಚನೆಯಲ್ಲಿ ಇವರು ನಿಷ್ಣಾತರು. ಹಳೆಯ ಮೈಸೂರಿನ ಕಲಾ ಪರಂಪರೆಯನ್ನು ಮುಂದುವರೆಸಿ ಬೆಳೆಸಲು ಶ್ರಮಿಸಿದರು. ನಾಟಕ, ಚಲನಚಿತ್ರ ಮತ್ತು ಪ್ರಚಾರ ಕ್ಷೇತ್ರಗಳಲ್ಲಿ ಕಲಿಕೆಯನ್ನು ವಿಸ್ತರಿಸಿದರು. ನಿರಂತರ ಕೃತಿರಚನಾ ಚಟುವಟಿಕೆಯನ್ನು ರೂಢಿಸಿಕೊಂಡಿದ್ದ ಇವರು ಶ್ರೀಕಲಾನಿಕೇತನ ಎಂಬ ಕಲಾಶಾಲೆಯನ್ನು ಪ್ರಾರಂಭಿಸಿ (1954) ಶಿಷ್ಯಪರಂಪರೆಯನ್ನೂ ಬೆಳೆಸಿದರು.

ಕಲೆಗೆ ಸಬಂಧಿಸಿದಂತೆ ಅನೇಕ ಪ್ರಯೋಗಗಳನ್ನು ನಡೆಸಿದ ಇವರು ಅನ್ವೇಷಕ ಮನೋಭಾವ ಹೊಂದಿದ್ದ ವ್ಯಕ್ತಿ. ಇವರ ವೈಶಿಷ್ಟವೆಂದರೆ ಚಿತ್ರಕಲೆಯನ್ನು ಸಿನಿಮಾ, ನಾಟಕ ಮತ್ತು ಪ್ರಚಾರ ಕಲೆಗಳಲ್ಲಿ ಸಮರ್ಥವಾಗಿ ಬಳಸಿದರೆಂಬುದು. ಬೆಂಗಳೂರು, ಮೈಸೂರು ಹಾಗೂ ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳಗಳಲ್ಲೂ ಈ ಕ್ಷೇತ್ರದಲ್ಲಿ ಇವರು ಹೆಸರಾಗಿದ್ದರು.

ಮೈಸೂರಿನಲ್ಲಿದ್ದ ನವಜ್ಯೋತಿ ಸ್ಟುಡಿಯೋದಲ್ಲಿ ಹಲವು ವರ್ಷಗಳು ಕಲಾ ದಿಗ್ದರ್ಶಕರಾಗಿ ಸೇವೆಸಲ್ಲಿಸಿದರು. ಕಲಾಕೃತಿಗಳು ಸಂಗ್ರಹಾಲಯಗಳಲ್ಲಿ, ಪ್ರದರ್ಶನಮಂದಿರಗಳಲ್ಲಿ ಮಾತ್ರವಿರದೆ ಜನಸಾಮಾನ್ಯರಿಗೂ ತಲಪುವಂತಾಗಬೇಕೆಂಬುದು ಇವರ ಹೆಬ್ಬಯಕೆಯಾಗಿತ್ತು. ಭಾರತ ಗಣರಾಜ್ಯೋತ್ಸವ ಸಂದರ್ಭದಲ್ಲಿ ನವದೆಹಲಿಯಲ್ಲಿ ಜರುಗುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸ್ತಬ್ದಚಿತ್ರಗಳನ್ನು ರಚಿಸುವುದರ ಮೂಲಕ ತಮ್ಮ ಬಯಕೆಯನ್ನು ಕಾರ್ಯರೂಪಕ್ಕೆ ತಂದರು. ಇದೇ ಸಂದರ್ಭದಲ್ಲಿ ರಾಜ್ಯದ ಪರವಾಗಿ ಇವರು ರಚಿಸಿದ ಮಹಿಷಾಸುರಮರ್ದಿನಿ ಸ್ತಬ್ದಚಿತ್ರ ಅಪಾರ ಮೆಚ್ಚುಗೆ ಪಡೆಯಿತು.

ತಮ್ಮ ಕಲಾ ಪ್ರಾವೀಣ್ಯದಿಂದ ಇವರು ರಷ್ಯ, ಇಂಗ್ಲೆಂಡ್, ಇಂಡೊನೇಷ್ಯ ಮತ್ತು ಜಪಾನ್‍ಗಳಲ್ಲಿ ರಂಗಸಜ್ಜಿಕೆ ಅಳವಡಿಸುವ ಅವಕಾಶವನ್ನು ಪಡೆದು ಅದರಲ್ಲಿ ಯಶಸ್ಸು ಹಾಗೂ ಕೀರ್ತಿ ಗಳಿಸಿದರು. ಗುಬ್ಬಿ ನಾಟಕ ಕಂಪನಿಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಇವರು ತಯಾರಿಸಿದ ಎರಡು ಪ್ಯಾನೆಲ್‍ಗಳು ಮತ್ತೊಂದು ಗಮನಾರ್ಹ ರಚನೆ.

ಇವರು ಚಿತ್ರಕಲಾ ಮಾಧ್ಯಮವನ್ನು ಅನೇಕ ಪ್ರಕಾರಗಳಲ್ಲಿ ತೊಡಗಿಸಿ ಯಶಸ್ವಿಯಾದರು. ಹಳೆಯ ಭಿತ್ತಿಚಿತ್ರಗಳು, ಕಲಾಕೃತಿಗಳನ್ನು ಮೂಲದ ಸೊಗಸಿಗೆ ಕಿಂಚಿತ್ತೂ ಚ್ಯುತಿಬಾರದಂತೆ ನಕಲು ಮಾಡುವದರಲ್ಲೂ ಇವರು ನಿಪುಣರಾಗಿದ್ದರು. ಇವರು ಲಲಿತಕಲಾ ಅಕಾಡೆಮಿಯ ಕಲಾ ಪ್ರದರ್ಶನಗಳ ಹಾಗೂ ದಸರ ವಸ್ತುಪ್ರದರ್ಶನದ ಕಲಾ ವಿಭಾಗದ ತೀರ್ಪುಗಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಕರ್ನಾಟಕ ಚಿತ್ರಕಲಾ ಅಕಾಡೆಮಿಯ ಸದಸ್ಯರಾಗಿ, ಮೈಸೂರಿನ ಚಿತ್ರಕಲಾಸಂಘದ ಪದಾಧಿಕಾರಿಯಾಗಿ, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಇವರ ಬಹುಮುಖ ಪ್ರತಿಭೆ ಮತ್ತು ಕಲಾನೈಪುಣ್ಯಕ್ಕಾಗಿ ಅನೇಕ ಬಹುಮಾನಗಳು ಪ್ರಶಸ್ತಿಗಳು ಲಭಿಸಿವೆ. ದಸರ ವಸ್ತುಪ್ರದರ್ಶನದ ಪ್ರಥಮ ಬಹುಮಾನಗಳು (1938 ಮತ್ತು 1952) ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಇವು ಉಲ್ಲೇಖನಾರ್ಹ (1986). ಇವರು 2000 ಇಸವಿಯಲ್ಲಿ ನಿಧನರಾದರು. (ಎಸ್‌ಯು.ಎಂ.)

**ಕಾಳಮಾರಿ :** ಲೀಷ್ಮೇನಿಯಾ ಡೊನವಾನಿ ಎಂಬ ಪರಪುಷ್ಟ ಜೀವಿಯಿಂದ ಪರಿಣಮಿಸುವ ಸಾಂಕ್ರಾಮಿಕ ವ್ಯಾಧಿ. ಬಹಳಕಾಲ ತೀವ್ರವಾಗಿ ಜ್ವರ ಬರುವುದು, ತುಂಬಕಾಲ ಎಳೆದಾಡುವುದು, ಗುಲ್ಮದ, ಪಿತ್ತಕೋಶದ ಊತ, ದೇಹ ಸೊರಗುವುದು, ರಕ್ತಹೀನತೆ ಮೊದಲಾದವು ಇದರ ಲಕ್ಷಣಗಳು. ಈ ರೋಗಚಿಹ್ನೆಗಳು ಆಕಸ್ಮಾತ್ ಅಥವಾ ಕ್ರಮವಾಗಿ ಕಾಣಿಸಿಕೊಳ್ಳಬಹುದು. ಕೆಲವು ಸಂದರ್ಭಗಳಲ್ಲಿ ರೋಗ ಬಹಳ ಚುರುಕಾಗಿ ಬಂದು ಚಳಿ, ತುಂಬ ಜ್ವರ ಮತ್ತು ವಾಂತಿ ಮುಂತಾದ ಲಕ್ಷಣಗಳುಂಟಾಗಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ವಿಷಮಶೀತಜ್ವರದ (ಟೈಫಾಯಿಡ್) ಲಕ್ಷಣ ತೋರಬಹುದು. ಒಂದು ವಾರದಲ್ಲಿ 103° ರಿಂದ 104° ಫ್ಯಾ. ವರೆಗೂ ಜ್ವರ ಏರಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ಹೆಚ್ಚು ಜ್ವರ ಕಾಣಿಸಿಕೊಳ್ಳದೆ ಅಗೋಚರವಾಗಿ, ನಿಧಾನವಾಗಿ ರೋಗ ಉಂಟಾಗಬಹುದು. ಚುರುಕಿನಿಂದ ರೋಗ ಉಂಟಾದಾಗ ದಿವಸಕ್ಕೆ ಎರಡು ಸಲ ಬಿಟ್ಟು ಬಿಟ್ಟು ಚಳಿ–ಜ್ವರ ಬರುತ್ತದೆ; ಜ್ವರ ನಿಂತಾಗ ಬೆವರುತ್ತದೆ. ಮಧ್ಯಾಹ್ನ ಬಹಳ ಮುಂಚೆಯೇ ಜ್ವರ ಬಂದು ಸಾಯಂಕಾಲ ಇಳಿದು ಪುನಃ ಅರ್ಧ ರಾತ್ರಿಗೆ ಸ್ವಲ್ಪ ಮುಂಚೆಯೇ ಜ್ವರ ಪ್ರಾರಂಭವಾಗುತ್ತದೆ. ಪ್ರಾರಂಭದಲ್ಲಿ 2ರಿಂದ 6ವಾರಗಳು ಈ ರೀತಿ ಆಗಬಹುದು. ರೋಗ ಇನ್ನೂ ಎಳೆದಾಡುವುದಾದರೆ ಪುನಃ ಮೇಲ್ಕಂಡಂತೆ ಜ್ವರ ಉಂಟಾಗಬಹುದು. ಈ ರೋಗದ ವ್ಯಾಪ್ತಿ ಭಾರತದ ಅಸ್ಸಾಂ, ಬಂಗಾಳ, ಬಿಹಾರ್, ತಮಿಳುನಾಡು, ಸಿಕ್ಕಿಂ ಪ್ರಾಂತ್ಯಗಳು, ಚೀನ, ರಷ್ಯ ದೇಶದ ದಕ್ಷಿಣಭಾಗ, ಮೆಡಿಟರೇನಿಯನ್ ಪ್ರದೇಶಗಳು, ಆಫ್ರಿಕ, ಪರಗ್ವೆ, ಅರ್ಜೆಂಟೀನ ಮತ್ತು ಬ್ರೆಜಿಲ್‌ಗಳಿಗೆ ಸೀಮಿತವಾಗಿದೆ.

ರೋಗದ ಹರಡುವಿಕೆಗೆ ಮೂರು ಮುಖ್ಯಾಂಶಗಳಿರಬೇಕು. ರೋಗದ ಕ್ರಿಮಿಗಳ ಆಸರೆಯಾದ ಒಬ್ಬ ರೋಗಿ, ಕ್ರಿಮಿಗಳನ್ನು ಒಬ್ಬರಿಂದೊಬ್ಬರಿಗೆ ಹರಡಲು ಸ್ಯಾಂಡ್ ಫ್ಲೈ ಎಂಬ ನೊಣ, ರೋಗಕ್ಕೆ ಸುಲಭವಾಗಿ ತುತ್ತಾಗತಕ್ಕ ಪ್ರಜಾಸಂಖ್ಯೆ. ರೋಗ ನಿವಾರಣೋಪಾಯಗಳು ಮುಖ್ಯವಾಗಿ ರೋಗಗ್ರಸ್ತರನ್ನು ಬೇರ್ಪಡಿಸುವುದು, ರೋಗಪೀಡಿತ ಪ್ರದೇಶಗಳನ್ನು ಸ್ವಲ್ಪ ಕಾಲ ತೊರೆಯುವುದು, ಸ್ಯಾಂಡ್ ಫ್ಲೈ ನೊಣಗಳ ನಾಶ, ಇತ್ಯಾದಿ. ಆಂಟಿಮೊನಿ ಲೋಹದಿಂದ ತಯಾರಿಸಿದ ಔಷಧೋಪಚಾರಗಳಿಂದ ರೋಗಿ ಗುಣಗೊಳ್ಳುವುದೇ ಅಲ್ಲದೆ ರೋಗ ಇತರರಿಗೆ ಹರಡುವುದೂ ನಿಲ್ಲುತ್ತದೆಂದು ಗೊತ್ತಾಗಿದೆ. (ಎಚ್.ಎಸ್.ಎಸ್.ಎಚ್.)

**ಕಾಳವ್ವೆ :** ಸು. 1186. ಬಸವಾದಿ ಪ್ರಮಥರ ಕಾಲದಲ್ಲಿ ಜೀವಿಸಿದ್ದ ಪ್ರಸಿದ್ಧ ವಚನಕಾರ್ತಿ, ಶಿವಾನುಭವಿ, ಶರಣಮಾರ್ಗಾನುಯಾಯಿ. ಉರಿಲಿಂಗ ಪೆದ್ದಿಯ **(ನೋಡಿ)** ಹೆಂಡತಿ. ಉರಿಲಿಂಗ ಪೆದ್ದೆಗಳರಸ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಆಂಧ್ರ ಪ್ರದೇಶದಿಂದ ಬಂದು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂಧಾರ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಈಕೆಯ ಪತಿ ಪೆದ್ದಯ್ಯ ಕುಪ್ರಸಿದ್ಧ ಕಳ್ಳ. ಉರಿಲಿಂಗದೇವನ **(ನೋಡಿ)** ಪ್ರಭಾವದಿಂದ ಶರಣನಾಗಿ ಉರಿಲಿಂಗ ಪೆದ್ದಿಯಾದ. ಪತಿಯನ್ನನುಸರಿಸಿ ಈಕೆಯೂ ಶರಣೆಯಾದಳು. ಈಕೆ ಹನ್ನೆರಡನೆಯ ಶತಮಾನದ ಸುಪ್ರಸಿದ್ಧ ವಚನಾಕಾರ್ತಿಯರಿಗೆ ಸರಿಮಿಗಿಲೆನಿಸುವಂತೆ ವಚನಗಳನ್ನು ರಚಿಸಿರುವುದಲ್ಲದೆ ತನ್ನ ಪತಿಯ ಜೊತೆಯಲ್ಲಿ ಶಿವಾನುಭವ ಪ್ರಚಾರ ಕಾರ್ಯದಲ್ಲಿ ನಿರಂತರ ನೆರವಾದವಳು. ಅಸ್ಪೃಶ್ಯರೆನಿಸಿದ್ದ ಈ ಸತಿ ಪತಿಯರು ಶಿವಾನುಭವವನ್ನು ಪಡೆದ ಮೇಲೆ ಶ್ರೇಷ್ಠ ಜ್ಞಾನಿಗಳೆನಿಸಿಕೊಂಡರು. ಈಕೆ ರಚಿಸಿರಬಹುದಾದ ಎಲ್ಲ ವಚನಗಳೂ ಸಿಕ್ಕಿಲ್ಲ. ಸಿಕ್ಕಿರುವ ಕೆಲವೇ ವಚನಗಳಲ್ಲಿ ಕಾಣುವ ಪಾಂಡಿತ್ಯ, ಅನುಭವ, ನಿಷ್ಠೆ, ತತ್ತ್ವಜ್ಞಾನದ ತಿಳಿವಳಿಕೆಗಳೂ ಗೃಹಿಣಿಯಲ್ಲಿರಬೇಕಾದ ಸದ್ಗುಣಗಳ ವಿವರಗಳೂ ಈಕೆಯನ್ನು ಶ್ರೇಷ್ಠ ವಚನಕಾರ್ತಿಯಾಗಿಸಿವೆ. ಹನ್ನೆರಡನೆಯ ಶತಮಾನದಲ್ಲಿ ಕಾಣುವ ಅಪೂರ್ವ ಸತಿಪತಿ ಜೋಡಿಗಳಲ್ಲಿ ಇವರದೂ ಒಂದು.

'ತುಮರಿಯ ಕೊಳ್ಳಿಯಂತೆ ಉರಿವಾತ ಭಕ್ತನೆ'; 'ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ, ಸತ್ಯ ಶುದ್ಧವಿಲ್ಲದದು ಕಾಯಕವಲ್ಲ'; 'ವ್ರತವೇ ಮುತ್ತು ರತ್ನ'–ಈಕೆಯ ವಚನಗಳಲ್ಲಿ ಬರುವ ಇಂಥ ಮಾತುಗಳು ಸಾಹಿತ್ಯದ ಕಾಂತಿಯಿಂದ ಮಿನುಗುತ್ತವೆ. (ಜಿ.ಎಸ್.ಪಿ.ಎಂ.)

**ಕಾಳ ಸಂತೆ :** ಸರ್ಕಾರದ ನಿಯಂತ್ರಣಕ್ಕೊಳಪಟ್ಟ ವಸ್ತುಗಳ ನ್ಯಾಯ ಸಮ್ಮತವಲ್ಲದ ರೀತಿಯ ವ್ಯಾಪಾರ (ಬ್ಲಾಕ್ ಮಾರ್ಕೆಟ್). ಮುಕ್ತಪೇಟೆಯಲ್ಲಿ ಬೇಡಿಕೆ ಹಾಗೂ ಪೂರೈಕೆಗಳು ಸಂಧಿಸುವೆಡೆಯಲ್ಲಿ ಬೆಲೆಯ ನಿರ್ಧಾರವಾಗುತ್ತದೆ. ಅತಿ ಬೇಡಿಕೆಯ ಪರಿಣಾಮವಾಗಿ ಬೆಲೆಯಲ್ಲಿ ಹೆಚ್ಚಳ ಕಂಡುಬಂದಲ್ಲಿ, ಕೊಂಡುಕೊಳ್ಳಲು ಸಮರ್ಥರಾದವರಿಗೆ ಮಾತ್ರ ಸರಕುಗಳು ದೊರೆಯುತ್ತವೆ. ಉಳಿದವರು ಬರಿಗೈಯಿಂದ ಹೋಗಬೇಕಾಗುತ್ತದೆ. ಸರ್ಕಾರ ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಕೆಲವು ಅನುಭೋಗ ವಸ್ತುಗಳನ್ನು ನಿಯಂತ್ರಿಸಬೇಕಾಗುತ್ತದೆ. ಉತ್ಪಾದಕ ವಸ್ತುಗಳಾದ ಕಲ್ಲಿದ್ದಲು, ಉಕ್ಕು, ಪೆಟ್ರೋಲಿಯಂ, ಮೊದಲಾದವುಗಳ ಕೊರತೆಯುಂಟಾದಲ್ಲಿ ಸರ್ಕಾರ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು ನಿರಾತಂಕವಾಗಿ ಸಾಗುವಂತೆ ಆ ವಸ್ತುಗಳನ್ನು ಕೂಡ ನಿಯಂತ್ರಿಸುತ್ತದೆ. ಕೊರತೆಯ ವಸ್ತುಗಳ ನ್ಯಾಯವಾದ ವಿತರಣೆ ಸಾಧಿಸುವುದು ನಿಯಂತ್ರಣದ ಉದ್ದೇಶ. ನಿಯಂತ್ರಿತ ಬೆಲೆ ಸಹಜ ಬೆಲೆಗಿಂತ ಕಡಿಮೆಯಿದ್ದರೆ ಸರಕುಗಳು ಗುಟ್ಟಾಗಿ ಮಾರಾಟವಾಗುತ್ತವೆ. ಏಕೆಂದರೆ ಕಾಯಿದೆಯ ಪ್ರಕಾರ ನಿಯಂತ್ರಿತವಾದ ಸರಕುಗಳು ಸರ್ಕಾರ ನಿರ್ಧರಿಸಿದ ಬೆಲೆಗೆ ಮಾರಾಟವಾಗಬೇಕು. ಸಾಮಾನ್ಯವಾಗಿ ಇವುಗಳ ಪಡಿತರವೂ ಇರುವುದುಂಟು. ಪಡಿತರದ ಮೂಲಕ ಲಭ್ಯವಾದ ಪರಿಮಾಣ ಸಾಲದಿದ್ದಾಗ ಅನುಭೋಗಿಗಳು ಅಥವಾ ಬಳಕೆದಾರರು ಅಧಿಕ ಪರಿಮಾಣವನ್ನು ಪಡೆಯಲು ಅಧಿಕ ಬೆಲೆ ಕೊಡಲು ಮುಂದೆ ಬರುವರು. ಇದರಿಂದ ವಸ್ತುಗಳ ಗುಪ್ತ ಮಾರಾಟವಾಗುತ್ತದೆ. ಕಾಳಸಂತೆ ನಿರ್ಮಾಣವಾಗುವುದು ಹೀಗೆ. ಸರ್ಕಾರದ ಮೇಲ್ವಿಚಾರಣೆ ಹಾಗೂ ಆಡಳಿತ ಬಿಗಿಯಾಗದಿದ್ದರೆ ಕಾಳಸಂತೆಯ ಕ್ಷೇತ್ರ ವಿಸ್ತಾರವಾಗುವುದುಂಟು. ಕಾಳಸಂತೆಯಲ್ಲಿ ಬೆಲೆಗಳು ಹೇಗೆ ನಿರ್ಧಾರವಾಗುವುವೆಂಬುದನ್ನು ಬೌಲ್ಡಿಂಗ್ ವಿವರಿಸಿದ್ದಾನೆ. ಕಾಳಸಂತೆಯಲ್ಲಿ ಸಾಮಾನುಗಳನ್ನು ಕೊಂಡುಕೊಳ್ಳುವವರ ಮೇಲೆ ನಿರ್ಬಂಧಗಳನ್ನು ಹೇರಿದಾಗ ಬೆಲೆಗಳು ಇಳಿಯಲಾರಂಭಿಸುವುವು. ನಿರ್ಬಂಧಗಳನ್ನು ಮಾರಾಟಗಾರರ ಮೇಲೆ ಹೇರಿದಾಗ ಬೆಲೆಗಳು ಮತ್ತಷ್ಟು ಹೆಚ್ಚುತ್ತ ಹೋಗುತ್ತವೆ. ಆದ್ದರಿಂದ ಕಳ್ಳಪೇಟೆಯ ಬೆಲೆ ಸಹಜಬೆಲೆಯ ಸಮೀಪದಲ್ಲಿರಬೇಕಾದರೆ ಗ್ರಾಹಕರನ್ನು ದಂಡಿಸುವುದು ಹೆಚ್ಚು ಪರಿಣಾಮಕಾರಿ.

ಕಾಳಸಂತೆಯ ಕ್ಷೇತ್ರ ಅತ್ಯಧಿಕ ಬೇಡಿಕೆಯನ್ನು ಅವಲಂಬಿಸಿದುದರಿಂದ ಪರಸ್ಪರ ಪತ್ರವ್ಯವಹಾರಗಳ ಅನುಕೂಲವಿಲ್ಲದಾಗ ಮಾರಾಟಗಾರರು ತಮಗೆ ಲಾಭವೆನಿಸಿದ ರೀತಿಯಲ್ಲಿ ಬೆಲೆಗಳನ್ನು ನಿರ್ಧರಿಸುತ್ತಾರೆ. ಈ ಬೆಲೆಗಳ ಸರಾಸರಿ ಬೆಲೆ ಮುಕ್ತಪೇಟೆಯ ಸರ್ವಸಾಧಾರಣ ಬೆಲೆಗಿಂತ ಅಧಿಕವಾಗಿರುತ್ತದೆ. ಕಾಳಸಂತೆಯ ವ್ಯವಹಾರದ ಮೇಲೆ ಸರ್ಕಾರದ ಆಡಳಿತದ ಬಿಗಿ ಕಡಿಮೆಯಾದರೆ ಉತ್ಪಾದನೆ ಹೆಚ್ಚಬಹುದು. ಆದರೆ ಉತ್ಪಾದಿತ ವಸ್ತುವಿನ ಪೂರೈಕೆಯ ಪರಿಮಾಣ ನಿಯಂತ್ರಿತ ಪೇಟೆಗಿಂತ ಕಾಳಸಂತೆಯಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ. ಸರ್ಕಾರದ ನಿರ್ಬಂಧಗಳು ಹೆಚ್ಚಾದಾಗ ನಿಯಂತ್ರಿತ ಪೇಟೆಯಲ್ಲಿಯ ಪೂರೈಕೆ ಹೆಚ್ಚಾಗಿ, ಉತ್ಪಾದನೆಯಲ್ಲಿ ಇಳಿಮುಖ ಕಂಡುಬರುವುದುಂಟು. ಸರ್ಕಾರ ಜನತೆಯ ಹಿತ ಹಾಗೂ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಅನುಕೂಲವಾದ ಧೋರಣೆಯನ್ನು ಅನುಸರಿಸಬೇಕಾಗುತ್ತದೆ. ಆದರೆ ಕಾಳ ಸಂತೆಯ ವ್ಯವಹಾರ ನ್ಯಾಯಸಮ್ಮತವಾಗಲಾರದು ಯುದ್ಧ ಹಾಗೂ ಆರ್ಥಿಕ ಅಭಿವೃದ್ಧಿ ಸಮಯಗಳಲ್ಲಿ ಸರಕುಗಳ ಸರಿಯಾದ ವಿತರಣೆಯಾಗಬೇಕಾದರೆ ನಿಯಂತ್ರಣ ಕ್ರಮಗಳ ಅವಶ್ಯಕತೆ ಹೆಚ್ಚು. ಕಾಳಸಂತೆಯ ವ್ಯವಹಾರವನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸಬೇಕಾದರೆ ಸರ್ಕಾರ ಯಾವ ಭೇದಭಾವವೂ ಇಲ್ಲದೆ ಕೊಂಡುಕೊಳ್ಳುವವರ ಹಾಗೂ ಮಾರುವವರ ಮೇಲೆ ತೀವ್ರ ಕ್ರಮಗಳನ್ನು ಕೈಕೊಳ್ಳಲೇಬೇಕಾಗುತ್ತದೆ. (ಎಸ್.ಜಿ.ಕೆ.)

**ಕಾಳಹಸ್ತಿ :** ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಸುವರ್ಣಮುಖಿ ನದೀತೀರದಲ್ಲಿರುವ ಪ್ರಮುಖ ಶೈವ ಯಾತ್ರಾಸ್ಥಳ. ದಕ್ಷಿಣ ಕೈಲಾಸವೆಂದು ಪ್ರಸಿದ್ಧವಾಗಿದೆ. ಇದರ ಬಳಿಯಲ್ಲಿರುವ ಬೆಟ್ಟಕ್ಕೆ ಕೈಲಾಸಗಿರಿಯೆಂದು ಹೆಸರು. ನಾಯಿಡುಪೇಟೆ–ತಿರುಪತಿ ರೈಲುಮಾರ್ಗದಲ್ಲಿ ನಾಯಿಡುಪೇಟೆದಿಂದ 29 ಕಿಮೀ ದೂರದಲ್ಲಿದೆ. ರೇಣಿಗುಂಟ–ಗೂಡೂರು ರೈಲುದಾರಿಯ ನಿಲ್ದಾಣಗಳಲ್ಲಿ ಕಾಳಹಸ್ತಿಯೂ ಒಂದು. ಇಲ್ಲಿಯ ಕಾಳಹಸ್ತೀಶ್ವರ ಹಾಗೂ ಜ್ಞಾನ ಪ್ರಸನ್ನಾಂಬಿಕೆ ದೇವಾಲಯಗಳು ಪ್ರಾಚೀನವೂ ಪ್ರಸಿದ್ಧವೂ ಆಗಿವೆ. ಇಲ್ಲಿರುವ ಪಂಚಲಿಂಗಗಳಲ್ಲಿ ಮುಖ್ಯವಾದ್ದು ವಾಯುಲಿಂಗ. ಸಹಸ್ರಾರು ಭಕ್ತರು ಶಿವರಾತ್ರಿಯ ಕಾಲದಲ್ಲಿ ಇಲ್ಲಿ ಸೇರಿ 10 ದಿನಗಳ ಕಾಲ ವಿಜೃಂಭಣೆಯಿಂದ ಉತ್ಸವವನ್ನು ಆಚರಿಸುತ್ತಾರೆ. ಪಲ್ಲವ, ಚೋಳ ಮತ್ತು ವಿಜಯನಗರ ರಾಜರು ಈ ದೇವಾಲಯಕ್ಕೆ ಅನೇಕ ಸವಲತ್ತುಗಳನ್ನು ಒದಗಿಸಿದ್ದರು.

ಕಾಳಹಸ್ತಿಗೆ ಸಂಬಂಧಿಸಿದ ಪ್ರಾಚೀನ ಐತಿಹಾಸಿಕ ದಾಖಲೆಗಳು ಹೆಚ್ಚಾಗಿ ದೊರಕಿಲ್ಲ. ಸ್ಥಳಪುರಾಣದಲ್ಲೂ ಹಲವು ಶೈವಪುರಾಣಗಳಲ್ಲೂ ಕಾಳಹಸ್ತಿಗೆ ಸಂಬಂಧಿಸಿದ ಅನೇಕ ಐತಿಹ್ಯಗಳುಂಟು. ಅಲೌಕಿಕ ಘಟನೆಗಳ ನಿರೂಪಣೆಗಳೇ ಇವುಗಳಲ್ಲಿ ಹೆಚ್ಚು. ಇವುಗಳ ಪ್ರಕಾರ ಕಾಳಹಸ್ತಿಯ ಶಿವಲಿಂಗ ಬ್ರಹ್ಮದೇವನಿಂದ ಸ್ಥಾಪಿತವಾಯಿತು. ಕಾಳಹಸ್ತಿ ಎಂಬ ಹೆಸರಿಗೆ ಸಂಬಂಧಿಸಿದಂತೆ ಕೆಲವು ವಿವರಣೆಗಳಿವೆ.

ಶ್ರೀಕಾಳಹಸ್ತಿ ಎಂಬ ಹೆಸರಿನ ಶ್ರೀ ಎಂಬುದು ಜೇಡರಹುಳುವಿಗೂ ಕಾಳ ಎಂಬುದು ಕಾಳಸರ್ಪಕ್ಕೂ ಹಸ್ತಿ ಎಂಬುದು ಆನೆಗೂ ಸಂಕೇತಗಳೆಂದು ತಿಳಿಸಿ ಅವಕ್ಕೆ ಸಂಬಂಧಿಸಿದಂತೆ ಒಂದೊಂದು ಐತಿಹ್ಯವನ್ನು ನಿರೂಪಿಸಲಾಗಿದೆ.

ಒಂದು ಜೇಡರ ಹುಳು ಲಿಂಗದ ಸುತ್ತಲೂ ಬಲೆ ಹೆಣೆದು ಲಿಂಗವನ್ನು ಪೂಜಿಸಿತೆಂದೂ ಒಂದು ಕಾಳಸರ್ಪ ಲಿಂಗದ ಮೇಲೆ ರತ್ನಗಳನಿಟ್ಟು ಪೂಜಿಸಿತೆಂದೂ ಆನೆ ತನ್ನ ಸೊಂಡಲಲ್ಲಿ



ಕಾಳಹಸ್ತೀಶ್ವರ ದೇವಾಲಯ

ನೀರು ತಂದು ಅಭಿಷೇಕ ಮಾಡಿ ಪತ್ರಪುಷ್ಪಗಳಿಂದ ಪೂಜಿಸಿತೆಂದೂ ಆ ಮೂರೂ ಪ್ರಾಣಿಗಳು ತಮ್ಮ ಭಕ್ತಿ ಮತ್ತು ಸೇವೆಗಳಿಂದ ಮೋಕ್ಷ ಪಡೆದುವೆಂದೂ ಸ್ಥಳಪುರಾಣ ತಿಳಿಸುತ್ತದೆ.

ಹೆಚ್ಚು ಜನಜನಿತವಾಗಿರುವ ಮತ್ತೊಂದು ಐತಿಹ್ಯ ಬೇಡರ ಕಣ್ಣಪ್ಪನಿಗೆ ಸಂಬಂಧಿಸಿದ್ದು. ಪೆರಿಯ ಪುರಾಣದ ಪ್ರಕಾರ ಬೇಡರ ಕಣ್ಣಪ್ಪ ಕಾಳಹಸ್ತೀಶ್ವರನ ಪರಮಭಕ್ತ. ತಾನು



ಬ್ರಹ್ಮಗಿರೀಶ್ವರ ದೇವಾಲಯದ ಬಳಿಯ ಮೂರ್ತಿಶಿಲ್ಪ

ಕೊಂದ ಪ್ರಾಣಿಗಳ ಹಸಿ ಮಾಂಸವನ್ನು ದೇವರಿಗೆ ನೈವೇದ್ಯ ಮಾಡುತ್ತಿದ್ದ. ಬಾಯಲ್ಲಿ ನೀರನ್ನು ತುಂಬಿ ತಂದು ಶಿವಲಿಂಗಕ್ಕೆ ಅಭಿಷೇಕ ಮಾಡುತ್ತದ್ದ. ಶಿವಗೋಚರನೆಂಬ ಪೂಜಾರಿ ಒಮ್ಮೆ ಲಿಂಗದ ಮುಂದೆ ಮಾಂಸದ ಚೂರುಗಳನ್ನು ಕಂಡು ತಲ್ಲಣಿಸಿ, ವೈದಿಕ ಸಂಪ್ರದಾಯದಂತೆ ಪ್ರಾಯಶ್ಚಿತ್ತ ಮಾಡಿಕೊಂಡು ಲಿಂಗವನ್ನು ಶುದ್ಧಿಮಾಡಿ ಪೂಜಿಸಿದ. ಆದರೆ ಮರುದಿನವೂ ಮಾಂಸದ ಚೂರುಗಳಿದ್ದವು. ಈ ದೃಷ್ಕೃತ್ಯದ ಮೂಲವನ್ನು ತಿಳಿಯುವ ಸಲುವಾಗಿ ಪೂಜಾರಿ ದೇವಾಲಯದಲ್ಲಿ ಅಡಗಿ ಕುಳಿತ. ಅದೇ ಸಮಯದಲ್ಲಿ ಶಿವನಿಗೂ ಕಣ್ಣಪ್ಪನನ್ನು ಪರೀಕ್ಷಿಸುವ ಇಚ್ಛೆಯಾಯಿತು. ಪೂಜಾಕಾಲದಲ್ಲಿ ಶಿವಲಿಂಗದ ಕಣ್ಣಿನಿಂದ ನೀರು ಸುರಿಯುತ್ತಿದ್ದುದನ್ನು ಕಂಡ ಕಣ್ಣಪ್ಪ ದೇವರ ಬಾಧೆಯನ್ನು ಪರಿಹರಿಸಲು ತನ್ನ ಕಣ್ಣನ್ನೇ ಕಿತ್ತು ದೇವರಿಗೆ ಅರ್ಪಿಸಿದ. ಆದರೆ ಮತ್ತೊಂದು ಕಣ್ಣಲ್ಲಿ ಸಹ ನೀರು ಸುರಿಯುತ್ತಿದ್ದುದನ್ನು ಕಂಡ ಕಣ್ಣಪ್ಪ ತನ್ನ ಇನ್ನೊಂದು ಕಣ್ಣನ್ನೂ ಅರ್ಪಿಸಿದ. ಸಂಪ್ರೀತನಾದ ಶಿವ ಕಣ್ಣಪ್ಪನಿಗೆ ಮತ್ತು ಅಲ್ಲಿ ಉಪಸ್ಥಿತನಾಗಿದ್ದ ಪೂಜಾರಿಗೆ ಮೋಕ್ಷ ನೀಡಿದನೆಂದು ಪೆರಿಯ ಪುರಾಣ ತಿಳಿಸುತ್ತದೆ. ಕಣ್ಣಪ್ಪ ಅರುವತ್ತುಮೂರು ಶೈವ ಪುರಾತನರಲ್ಲೊಬ್ಬ. ದೇವಾಲಯದಲ್ಲಿ ಇಂದಿಗೂ ಕಣ್ಣಪ್ಪನ ವಿಗ್ರಹವೊಂದಿದೆ.

ಕಾಳಹಸ್ತಿಯ ಸ್ಥಳಮಾಹಾತ್ಮ್ಯವೂ ತೆಲುಗು ಕವಿ ಧೂರ್ಜಟಿಯ ಶ್ರೀಕಾಳಹಸ್ತಿ ಶತಕಗಳೂ ಇಂಥ ಅನೇಕ ಐತಿಹ್ಯಗಳನ್ನು ತಿಳಿಸುತ್ತವೆ. ಸುಪ್ರಸಿದ್ಧ ತಮಿಳು ಶೈವಸಂತರಾದ ಸಂಬಂಧರ್, ಅಪ್ಪರ್, ಸುಂದರಮೂರ್ತಿ ಮೊದಲಾದವರು ಈ ದೇವಾಲಯಕ್ಕೆ ಆಗಮಿಸಿದ್ದುದಾಗಿ ತಿಳಿದುಬರುತ್ತದೆ. ಶಂಕರಾಚಾರ್ಯ ಮತ್ತು ತಮಿಳು ಕವಿ ನಕ್ಕೀರರ್ ಇಲ್ಲಿಗೆ ಭೇಟಿ ಕೊಟ್ಟು ಶಿವಪೂಜೆ ಮಾಡಿದರೆಂದು ಹೇಳಲಾಗಿದೆ. ರಾಮಾನುಜಾಚಾರ್ಯರ ತಮ್ಮ (ಚಿಕ್ಕಮ್ಮನ ಮಗ) ಗೋವಿಂದ ತನ್ನ ಗುರುಗಳಾದ ಯಾದವಪ್ರಕಾಶರ ಜೊತೆಯಲ್ಲಿ ಯಾತ್ರೆ ಹೋಗಿದ್ದ ಕಾಲದಲ್ಲಿ ಕಾಶಿಯ ಬಳಿ ಗಂಗೆಯಲ್ಲಿ ಮೀಯುತ್ತಿದ್ದಾಗ ಅವನ ಅಂಗೈಯಲ್ಲಿ ಶಿವಲಿಂಗ ಪ್ರತ್ಯಕ್ಷವಾಯಿತೆಂದೂ ಅದರೊಂದಿಗೆ ಆತ ಕಾಳಹಸ್ತಿಗೆ ಹೋಗಿ ನೆಲಸಿದನೆಂದೂ ಮುಂದೆ ರಾಮಾನುಜರು ಸನ್ಯಾಸ ಸ್ವೀಕಾರಮಾಡಿ ಧರ್ಮಪ್ರಚಾರ

ಶಿವದೇವಾಲಯವೊಂದರ ದ್ವಾರಪಾಲಕರು

ಕಾರ್ಯದಲ್ಲಿ ತೊಡಗಿದಾಗ ಶಿವನ ಅಪ್ಪಣೆ ಪಡೆದು ತನ್ನ ಸೋದರಮಾವ ಶ್ರೀಶೈಲಪೂರ್ಣರೊಂದಿಗೆ ತಿರುಪತಿಯಲ್ಲಿ ವಾಸವಾಗಿದ್ದು ಅನಂತರ ರಾಮಾನುಜರನ್ನು ಸೇರಿದನೆಂದೂ ಒಂದು ಐತಿಹ್ಯವುಂಟು.

ಕಾಳಹಸ್ತಿ ಪ್ರದೇಶ ಸಾತವಾಹನ, ಪಲ್ಲವ, ಚೋಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಭಾಗವಾಗಿತ್ತು. ಸಾತವಾಹನರ ಆಳ್ವಿಕೆಯ ಕಾಲದಲ್ಲಿ ಬಹುಶಃ ಇಲ್ಲಿ ಮರಮುಟ್ಟುಗಳಿಂದ ಚಿಕ್ಕ ಗುಡಿಯೊಂದನ್ನು ನಿಲ್ಲಿಸಿ, ಲಿಂಗವನ್ನು ಸ್ಥಾಪಿಸಿದ್ದಿರಬಹುದೆಂದು ಊಹಿಸಲಾಗಿದೆ. ಅನಂತರ ಕಾಳಹಸ್ತಿ ತೊಂಡಮಂಡಲದ ಪಲ್ಲವರ ಅಧೀನಕ್ಕೆ ಬಂತು. ವಾಸ್ತು ಮತ್ತು ಶಿಲ್ಪಶೈಲಿಯ ಆಧಾರದ ಮೇಲೆ ಪಲ್ಲವರ ಕಾಲದಲ್ಲಿ ಪ್ರಥಮವಾಗಿ ಶಿಲೆಯಿಂದ ಈ ದೇವಾಲಯದ ಕೆಲವು ಭಾಗಗಳು ನಿರ್ಮಿತವಾಗಿರಬಹುದು. ಪಂಚಮುಖ ದೇವಾಲಯ ಹಾಗೂ ಶಿವ ಮತ್ತಿತರ ವಿಗ್ರಹಗಳಿಗೂ ಮಹಾಬಲಿಪುರಂ ದೇವಾಲಯಗಳು ಮತ್ತು ವಿಗ್ರಹಗಳಿಗೂ ಹೆಚ್ಚು ಹೋಲಿಕೆ ಕಂಡುಬರುತ್ತದೆ. ಆದರೂ ಪಲ್ಲವರ ಕಾಲದ ಶಾಸನಗಳು ಇಲ್ಲಿ ದೊರೆತಿಲ್ಲ.

ಚೋಳರ ಕಾಲದಲ್ಲಿ ಕಾಳಹಸ್ತಿ ಪ್ರಸಿದ್ಧವಾದ ಯಾತ್ರಾಸ್ಥಳವಾಗಿತ್ತೆಂದು ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಒಂದನೆಯ ಕುಲೋತ್ತುಂಗ ಚೋಳನ ಕಾಲದಲ್ಲಿ ಇಲ್ಲಿಯ ಶಿವಾಲಯ ವಿಸ್ತಾರಗೊಂಡಿತು. ಅಲ್ಲದೆ ಅನೇಕ ಚಿಕ್ಕ ದೇವಾಲಯಗಳೂ ನಿರ್ಮಾಣವಾದುವು. ಧನಿಕರಾದ ಭಕ್ತರು ಇಲ್ಲಿ ಮಠಗಳನ್ನು ಕಟ್ಟಿಸಿಕೊಟ್ಟುದಲ್ಲದೆ, ಯೋಗಿಗಳಿಗೆ ಹಾಗೂ ಯಾತ್ರಾರ್ಥಿಗಳಿಗೆ ಅನ್ನ ವಸತಿಗಳ ಏರ್ಪಾಟು ಮಾಡಿದರು.

ಚೋಳರ ಕಾಲದಲ್ಲಿ ಯಾದವರಾಯ ನರಸಿಂಹದೇವ ಕಾಳಹಸ್ತಿಯ ದೇವಾಲಯಕ್ಕೆ ವಿಶೇಷ ಕೊಡುಗೆಯಿತ್ತುದಾಗಿ ತಿಳಿದುಬರುತ್ತದೆ. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಕಾಳಹಸ್ತಿಯ ದೇವಾಲಯ ವಿಶೇಷವಾಗಿ ಅಭಿವೃದ್ಧಿ ಹೊಂದಿತು. ಈತ ದೇವಾಲಯದ ಭವ್ಯವಾದ ಹಾಗೂ ಇಂದಿಗೂ ಪ್ರಸಿದ್ಧವಾಗಿರುವ ಗಾಳಿ ಗೋಪುರವನ್ನೂ ನೂರ್ಕಾಲು ಮಂಟಪವನ್ನೂ 1516ರಲ್ಲಿ ಕಟ್ಟಿಸಿದ. ಇವನ ಅನಂತರ ಆಳಿದ ಅಚ್ಯುತರಾಯನ ಪಟ್ಟಾಭಿಷೇಕ ಇಲ್ಲಿ ನಡೆಯಿತೆಂದು ತಿಳಿದುಬರುತ್ತದೆ. ಅಚ್ಯುತರಾಯನ ಹೆಸರಿನ ಮಂಟಪವೊಂದನ್ನು ಅವನೇ ಕಟ್ಟಿಸಿದನೆಂದು ತೋರುತ್ತದೆ. (ಜಿ.ಎಚ್.; ಜಿ.ಆರ್.ಆರ್.)

**ಕಾಳಾಚಾರ್‌ರು :** 1942–. ಪ್ರಚಾರದಿಂದ ದೂರವಾಗಿ ಆನುವಂಶೀಯವಾಗಿ ಬಂದ ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ಶ್ರದ್ಧೆಯಿಂದ ಮುಂದುವರೆಸುತ್ತಿರುವ ಶಿಲ್ಪಿ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ನಾರಾಯಣಗೊಂಡನ ಹಳ್ಳಿಯವರು. 1942 ಜೂನ್ 15 ರಂದು ಜನಿಸಿದರು. ತಂದೆ ರುದ್ರಾಚಾರ್. ಆನುವಂಶೀಯವಾಗಿ ಬಂದ ಶಿಲ್ಪಶಾಸ್ತ್ರವನ್ನು ತಾತನವರಾದ ಮೈಸೂರು ಆಸ್ಥಾನ ಶಿಲ್ಪಿಗಳಾದ ನಾಗೇಂದ್ರ ಆಚಾರ್ಯರಿಂದ ಕಲಿತರು. ಓದಿನ ನಡುವೆಯೇ ಕಲಾ ವ್ಯಾಸಂಗವೂ ಸಾಗಿ, ಮುಂದೆ ಕಾಳಾಚಾರ್ ಅವರು ಪೂರ್ಣಾವಧಿ ಶಿಲ್ಪವೃತ್ತಿಯನ್ನೇ ಆರಿಸಿಕೊಂಡರು. ಶಾಲಾ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲು ಕಲಾಕೃತಿ ರಚಿಸುವ ಮೂಲಕ ಕಲಾ ಪ್ರಪಂಚಕ್ಕೆ ಕಾಲಿಟ್ಟರು. ಅನಂತರ ಶಿಲೆ, ಲೋಹ, ಮರ, ಚಿನ್ನ, ಬೆಳ್ಳಿ ಮತ್ತು ಚಿತ್ರಕಲಾ ಮಾಧ್ಯಮಗಳಲ್ಲಿ ಪರಿಣಿತರಾಗಿ, ಸಾವಿರಾರು ಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಶಿಲ್ಪಗಳು ಭಾರತದಲ್ಲಲ್ಲದೆ, ವಿದೇಶಗಳಲ್ಲೂ ಸಂಗ್ರಹವಾಗಿವೆ. ಅಲ್ಲದೆ ಗ್ರಾಮೀಣ ಜನರಿಗೆ ಬೇಕಾದ ದೇವತಾ ಮೂರ್ತಿಗಳು, ಉತ್ಸವ ಮೂರ್ತಿಗಳನ್ನು ರಚಿಸುವುದರಲ್ಲೂ ಪ್ರಾವೀಣ್ಯತೆ ಪಡೆದಿದ್ದಾರೆ.

ಇವರ ಕುಟುಂಬವೇ ಶಿಲ್ಪ ಕಲಾರಾಧನೆಗೆ ಮುಡಿಪಾಗಿದೆ. ಇಬ್ಬರು ಗಂಡು ಮಕ್ಕಳು ಕಲಾ ಸೇವೆಯಲ್ಲಿ ತೊಡಗಿದ್ದಾರೆ. ಶಿಲ್ಪಕಲೆಯಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳನ್ನು ಮನೆಯಲ್ಲಿಯೇ ಆಶ್ರಯನೀಡಿ ಊಟ ವಸತಿಯ ಜೊತೆಗೆ ಶಿಲ್ಪಕಲೆಯನ್ನು ಕಲಿಸುತ್ತಿದ್ದಾರೆ. ರು. ಕಾಳಾಚಾರ್ ಅವರು ಈಗ ದೇವಸ್ಥಾನ ಶಿಲ್ಪ ನಿರ್ಮಾಣದಲ್ಲಿ ಹೆಚ್ಚು ತೊಡಗಿದ್ದಾರೆ.

ಪೂಜಾಮೂರ್ತಿಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿಯೇ ಮೂರ್ತಿಗಳನ್ನು ರಚಿಸುತ್ತಾರೆ. ಇವರ ಬಳಿ ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದಂತೆ ಪ್ರಾಚೀನ ಗ್ರಂಥಗಳಿವೆ. ಇವರ ಮನೆ ಶಿಲ್ಪ ಕಾರ್ಯಾಗಾರ, ಶಾಲೆ ಎಲ್ಲವೂ ಆಗಿದೆ, ಸಾಂಪ್ರದಾಯಿಕ ಶಿಲ್ಪಕಲೆಗಾಗಿ ತಮ್ಮನ್ನೇ ಮುಡಿಪಾಗಿಟ್ಟುಕೊಂಡಿದ್ದು ದೂರದ ಹಳ್ಳಿಗಾಡಿನಲ್ಲಿ ಶಿಲ್ಪಗಳನ್ನು ರಚಿಸುವುದರಲ್ಲಿ ಮಗ್ನರಾಗಿದ್ದರೂ, ಸಾಮಾಜಿಕ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮೈಸೂರು ದಸರ ಪ್ರದರ್ಶನದಲ್ಲಿ 1960, 61 ಮತ್ತು 62ರಲ್ಲಿ ಸತತವಾಗಿ ಮೂರು ವರ್ಷಗಳ ಕಾಲ ಪ್ರಶಸ್ತಿ ಪಡೆದಿದ್ದಾರೆ. ಇವರ ಶಿಲ್ಪಕಲಾ ಸೇವೆಯನ್ನು ಗಮನಿಸಿ ಕರ್ನಾಟಕ ಸರ್ಕಾರ ಶಿಲ್ಪಕಲಾ ಪ್ರವೀಣ ಬಿರುದು ಹಾಗೂ ರಾಜ್ಯೋತ್ಸವ ಪ್ರಶಸ್ತಿಯನ್ನು 1995ರಲ್ಲಿ ನೀಡಿತು. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕತರು (1997) ಕರ್ನಾಟಕ ಸರಕಾರ 2003ರಲ್ಲಿ ಪ್ರತಿಷ್ಠಿತ ಜಕಣಾಚಾರಿ ಪ್ರಶಸ್ತಿ ನೀಡಿ ಗೌರವಿಸಿದೆ. (ಎಂ.ಬಿ.ಎಸ್)

**ಕಾಳಾಮುಖ :** ಲಾಕುಳ ಶೈವ ಪಂಥದ ಒಂದು ಶಾಖೆ; ಮಧ್ಯಕಾಲೀನ ಆಂಧ್ರ–ಕರ್ನಾಟಕಗಳಲ್ಲಿ ನೆಲಸಿದ್ದ ಅಲ್ಪಸಂಖ್ಯಾತ ಮತಗಳಲ್ಲಿ ಪ್ರಮುಖವಾದ್ದು. ಲಾಕುಳ ಪಂಥದ ಅನುಯಾಯಿಗಳಾದ ಕೆಲವರು ಕಾಳಾಮುಖ ಅಥವಾ ಅಸಿತವಕ್ತ್ರ ದೀಕ್ಷೆಯನ್ನು ಪಡೆಯುತ್ತಿದ್ದರು. ಇವರಿಗೆ ಏಕ್ಕೋಟಿಮುನಿಗಳೆಂದೂ ಹೆಸರಿತ್ತು. ಮುಖದ ಮೇಲೆ ಕಪ್ಪುಬಣ್ಣದ ಗುರುತುಗಳನ್ನು ಮಾಡಿಕೊಳ್ಳುತ್ತಿದ್ದುದರಿಂದ ಇವರಿಗೆ ಕಾಳಾಮುಖರೆಂದು ಹೆಸರಾಯಿತು. ಪ್ರಸಕ್ತಶಕದ ಆರಂಭದಲ್ಲಿ ಕಾಶ್ಮೀರದ ದೇವ ವ್ರತಮುನಿಸಂತತಿಗೆ ಸೇರಿದವರೊಡನೆ ಇವರ ಸಂಬಂಧವಿತ್ತೆಂದು ಶಿಕಾರಿಪುರದ 99ನೆಯ ಶಾಸನ ಸೂಚಿಸುತ್ತದೆ. ಏಳನೆಯ ಶತಮಾನದಿಂದ ಐನೂರು ವರ್ಷಗಳ ಕಾಲ ಇದು ಕರ್ನಾಟಕದಲ್ಲಿ ಬೌದ್ಧ–ಜೈನಧರ್ಮಗಳ ವಿರುದ್ಧ ಸ್ಪರ್ಧಿಸುತ್ತ ಪ್ರಬಲವಾಗಿತ್ತು. ಆಂಧ್ರ ಮತ್ತು ತಮಿಳುನಾಡಿನ ಹಲಭಾಗಗಳಲ್ಲೂ ಇದರ ಪ್ರಾಬಲ್ಯ ಕಾಣಬರುತ್ತದೆ. ಬಳ್ಳಿಗಾವೆಯ ಕೇದಾರೇಶ್ವರ ಮಂದಿರ, ಆಂಧ್ರದ ಶ್ರೀಶೈಲ ಈ ಪಂಥದವರ ಪ್ರಮುಖ ಸ್ಥಾನಗಳಾಗಿದ್ದುವು. ಇವರಿಗೆ ರಾಜಾಶ್ರಯ ದೊರೆತಿತ್ತು. ಇವರು ಅನೇಕ ದತ್ತಿಗಳನ್ನು ಬಿಟ್ಟಿದ್ದುದಾಗಿ ಶಾಸನಗಳು ತಿಳಿಸುತ್ತವೆ. ಚಾಳುಕ್ಯ 2ನೆಯ ಜಯಸಿಂಹನ (1013–42) ರಾಣಿ ಸುಗ್ಗಲೆ ಈ ಪಂಥದವಳಾಗಿದ್ದು, ತನ್ನ ಪತಿಯನ್ನೂ ಇದಕ್ಕೆ ಪರಿವರ್ತಿಸಿದಳು. 2ನೆಯ ಸೋಮೇಶ್ವರನ ಕಾಲದಲ್ಲಿ (1068–76) ಇದು ಬಹಳ ಪ್ರಬಲವಾಯಿತು. ಆ ಕಾಲದ ಕಾಳಾಮುಖಗುರು ಸರ್ವೇಶ್ವರ ಶಕ್ತಿದೇವನಿಗೆ (ಸು. 1070) ರಾಜಗುರು ಎಂಬ ಬಿರುದೂ 77 ದೇವಾಲಯಗಳ ಒಡೆತನವೂ ಇದ್ದುದಾಗಿ ಶಾಸನವೊಂದು (ಎ.ಕ.8, ಸೊರಬ–276) ತಿಳಿಸುತ್ತದೆ. ಸೋಮೇಶ್ವರ ಚಕ್ರವರ್ತಿ ಆತನ ಶಿಷ್ಯ. ಅನಂತರದ ಚಕ್ರವರ್ತಿ 6ನೆಯ ವಿಕ್ರಮಾದಿತ್ಯ ಜೈನಧರ್ಮದಲ್ಲಿ ಆಸಕ್ತನಾಗಿದ್ದರೂ ಕಾಳಾಮುಖರಿಗೂ ಆಶ್ರಯ ನೀಡಿದ್ದ. ಹೊಯ್ಸಳರ ಕಾಲದಲ್ಲಿ ಹಳೆಬೀಡಿನಲ್ಲಿ ಕಾಳಾಮುಖ ಪಂಥದ ಪ್ರಸಿದ್ಧ ಗುರುಪರಂಪರೆಯೊಂದಿದ್ದು, ಕೋಡಿಯ ಮಠದೊಡನೆ ಇದರ ಸಂಬಂಧವಿತ್ತು. 1162ರಲ್ಲಿ ಕಳಚೂರಿ ಬಿಜ್ಜಳ ಈ ಮಠವನ್ನು ಸಂದರ್ಶಿಸಿ, ಮೆಚ್ಚಿ, ಇದಕ್ಕೆ ದತ್ತಿಗಳನ್ನು ಬಿಟ್ಟಿದ್ದಂತೆ ತಿಳಿದುಬರುತ್ತದೆ.

ಹಲವಾರು ಶಾಸನಗಳಲ್ಲಿ ಇವರ ತಪಸ್ಯೆ, ಪಾಂಡಿತ್ಯ, ಔದಾರ್ಯಗಳ ಪ್ರಶಂಸೆಯಿದೆ. ಆದರೂ ವೇದಶಾಸ್ತ್ರಗಳಿಗೆ ವಿರುದ್ಧವಾದ ಮತ್ತು ಸತ್ವದ ಬಗ್ಗೆ ವಿಚಿತ್ರವಾದ ಭಾವನೆಗಳನ್ನು ಇವರು ತಳೆದಿದ್ದರೆಂದು ಶ್ರೀರಾಮಾನುಜ, ಅಲ್ಲಮಪ್ರಭು ಮತ್ತು ಚೆನ್ನಬಸವ ಇವರು ಹೇಳಿದ್ದಾರೆ. ಕಾಳಾಮುಖರು ತಲೆಬುರುಡೆಯನ್ನು ಪಾನಪಾತ್ರೆಗಳನ್ನಾಗಿ ಬಳಸುತ್ತಿದ್ದರು. ಶ್ಮಶಾನದ ಬೂದಿಯನ್ನು ದೇಹಕ್ಕೆ ಬಳಿದುಕೊಳ್ಳುತ್ತಿದ್ದರು; ನರಮಾಂಸವನ್ನು ತಿನ್ನುತ್ತಿದ್ದರು; ದಂಡಧಾರಿಗಳಾಗಿರುತ್ತಿದ್ದರು; ಮದ್ಯದ ಪಾತ್ರೆಯಲ್ಲಿ ದೇವರಿಗೆ ಬಲಿಯನ್ನರ್ಪಿಸುತ್ತಿದ್ದರು–ಎಂದೆಲ್ಲ ಅವರು ಹೇಳಿದ್ದಾರೆ. ಇವರಲ್ಲಿ ಲೈಂಗಿಕ ಸ್ವೇಚ್ಛಾಚಾರವಿತ್ತೆಂದೂ ತಿಳಿದುಬರುತ್ತದೆ. ಕಾರಣವಿಲ್ಲದೆ ನಗುವುದು, ಕುಣಿಯುವುದು, ಉದ್ಗರಿಸುವುದು, ಅಂಗವಿಕಲರಂತೆ ನಟಿಸುವುದು–ಇವೇ ಮುಂತಾದವು ಇವರ ಅತಿಗಾಮಿಚರ್ಯೆಗಳಾಗಿದ್ದುವು.

ಈ ಪಂಥದ ಗುರುಗಳಲ್ಲಿ ಸಾಮಾನ್ಯವಾಗಿ ರಾಶಿ, ಶಕ್ತಿ ಎಂಬ ಎರಡು ಪಂಗಡಗಳಿದ್ದುವು. ಶಾಸನಗಳಲ್ಲಿ ಇವರ ಕೆಲವು ಗುರುಗಳ ಉಲ್ಲೇಖವಿದೆ. ಕಲಾಶಕ್ತಿ (ಸು. 640) ನೇತ್ರಶಿವಾಚಾರ್ಯ (ಸು. 900), ಈಶ್ವರದೇವ ರುದ್ರಗಣ (ಸು. 1030), ಸರ್ವೇಶ್ವರಶಕ್ತಿ (ಸು. 1070) ಮತ್ತು ನಾಗಶಿವಪಂಡಿತ (ಸು. 1183) ಗಮನಾರ್ಹರು. ಇವರ ಇತಿಹಾಸದಲ್ಲಿ ಪ್ರಮುಖನಾದವನೆಂದರೆ ಕೊನೆಯಲ್ಲಿ ಕಂಡುಬರುವ ಶಿವಗುರು, ವಾಣೀವಿಲಾಸ ಕಾಶೀವಿಲಾಸ ಕ್ರಿಯಾಶಕ್ತಿ (ಸು. 1370). ರಾಜರಾಜಗುರುವೆಂದು ಕೀರ್ತಿತನಾದ ಈತ ವಿದ್ಯಾರಣ್ಯರ ಸಮಕಾಲೀನ. ಈತ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಹರಿಹರ ಬುಕ್ಕ ಸೋದರರಿಗೆ ಉತ್ತೇಜನ ನೀಡಿದನೆಂಬುದು ಕೆಲವರ ವಾದ. ಕ್ರಿಯಾಶಕ್ತಿಯೇ ವಿದ್ಯಾರಣ್ಯರೆಂದು ಹೇಳುವ ವಾದವೂ ಉಂಟು. ಈತನ ಅನಂತರ ಕಾಳಾಮುಖಪಂಥ ಕ್ಷೀಣವಾದಂತೆ ಕಾಣುತ್ತದೆ. (ಜಿ.ಎನ್.ಎಸ್.)

**ಕಾಳಿಂಗರಾಯ :** ಕರ್ನಾಟಕದ ಸುದೀರ್ಘ ಜನಪದ ಕಾವ್ಯಗಳಲ್ಲಿ ಒಂದು. ಆಂಧ್ರ ಹಾಗೂ ಕರ್ನಾಟಕದ ಎರಡು ರಾಜ್ಯಗಳಲ್ಲೂ ಈ ಕಥೆ ಪ್ರಚಲಿತವಾಗಿದೆ. ಜನಪದ ಪುಣ್ಯಕಥೆಗಳ ಸಾಲಿನಲ್ಲಿ ಇದಕ್ಕೆ ಅಗ್ರಸ್ಥಾನ. ತ್ರಿಪದಿ ಛಂದಸ್ಸಿನಲ್ಲಿ ಲಭ್ಯವಾಗುವ ಈ ಕಾವ್ಯ ಕಂಠಸ್ಥ ಸಂಪ್ರದಾಯದಲ್ಲಿ ಉಳಿದು ಬಂದ ಒಂದು ಸುಸಂಬದ್ಧ ರಚನೆಯಾಗಿದೆ. ಇದರ ಆರಂಭ ಅಂತ್ಯಗಳನ್ನು ಗಮನಿಸಿದಾಗ ಶಿಷ್ಟ ಸಂಪ್ರದಾಯದ ಮಾರ್ಗಕಾವ್ಯಗಳ ಸ್ವರೂಪವನ್ನೇ ಕಾಣಬಹುದಾಗಿದೆ. ಪೀಠಿಕಾ ಪ್ರಕರಣದಲ್ಲಿ ದೇವತಾಸ್ತುತಿ, ಕಾವ್ಯವನ್ನು ಹಾಡಿಸಿದವರ ಸ್ಮರಣೆ, ಅದನ್ನು ಕೇಳುವವರಲ್ಲಿ ಇರಬೇಕಾದ ಶ್ರದ್ಧೆ, ಆಸಕ್ತಿ–ಈ ಎಲ್ಲ ವಿವರಗಳನ್ನೂ ಪ್ರಸ್ತಾವಿಸಲಾಗುತ್ತದೆ.

ಆತಗಿನ್ನ ಮೊದಲು ಈಕೀಯ ನೆನೆದೇವೆ
ಸುತ್ತೇಳು ಹೊಂಡದ ಗಿರಿಯಳ–ಮೇಲುದುರುಗಾದ
ಸತ್ಯಕ್ಕನ ಮೊದಲು ಬಲಗೊಂಡೆ

ಶರಣರ ಕತೆಯ ಈಗ್ಯಾರು ಕರೆಸ್ಯಾರೆ
ಸಾಲು ಮಾಳಿಗೆ ಮನೆಯೋರು–ತಿಪ್ಪೇಸ್ವಾಮಿ
ಸತ್ಯಕಾರ ಕತೆಯ ತಗಿಸ್ಯಾರು

ತಾಯಿ ತಂದೆಯ ತೋರಿಟ್ಟು ಹೇಳೀನೆ
ಲಿಂಗದ ಗುಡಿಯಾಗೆ ನೆನೆದೇನೆ–ಈ ಹಾಡ
ಕೆಂಚವ್ವ ಜಾಣೆ ಕಲಿಸ್ಯಾಳೆ

ಕಾವ್ಯದ ಅಂತ್ಯದಲ್ಲಿಯೂ ಕತೆಗಾರ್ತಿ ಕತೆಯನ್ನು ಹಾಡಿಸಿದವರಿಗೆ, ಕೇಳಿದವರಿಗೆ, ಸೊಲ್ಲು ಕೊಟ್ಟವರಿಗೆ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತಾಳೆ.

ಹಾಡಿದಕ್ಕಗಿನ್ನ ಕೇಳಿದಕ್ಕಗಿನ್ನ
ಸೋಯೆಂದ ಅಕ್ಕಗಳೆ ಸುಖಿಬಾಳು– ನಿಮ್ಹೊಟ್ಟೀಯಲಿ
ಕಾಳಿಂಗನೆಂಬೊ ಮಗಬರಲಿ
ಕಂಚಿನುಂಗುರದ ಕೆಂಚೆಣ್ಣು ಕೇಳೆ
ಅಂತರಿಸಿ ಧ್ವನಿಯ ನಿಲಹೊಯ್ಯಿ–ಉತ್ತದಾಳ
ಸಂಪನ್ನರತೆಯ ಮುಗಿದಾವೆ

ಹೀಗೆ ಕಾಳಿಂಗರಾಯನ ವೃತ್ತಾಂತ ಅತ್ಯಂತ ಶ್ರದ್ಧೆ, ನಿಷ್ಠೆಗಳಿಂದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹಾಡಬಹುದಾದ ಕತೆಯಾದುದರಿಂದ ಅದರ ಸ್ವರೂಪ ಕೆಡದಂತೆ ಉಳಿದು ಬಂದಿದೆ. ನಾಲ್ಕಾರು ಅಧ್ಯಾಯಗಳಲ್ಲಿ ಕತೆಯನ್ನು ವಿಸ್ತರಿಸಿಕೊಳ್ಳುವಾಗ ಕಂಠಸ್ಥ ಸಂಪ್ರದಾಯಕ್ಕೆ ಅನುಗುಣವಾಗಿ, ಸ್ಮರಣೆಯಲ್ಲಿಟ್ಟುಕೊಳ್ಳುವ ಅನುಕೂಲಕ್ಕಾಗಿ ಬೇರೆ ಬೇರೆ ಪಲ್ಲವಿಗಳನ್ನು ಒಂದೊಂದು ಅಧ್ಯಾಯಕ್ಕೂ ಬದಲಿಸಿಕೊಂಡು ವೈವಿಧ್ಯಮಯ ಮಟ್ಟುಗಳಲ್ಲಿ ಹಾಡಲಾಗುತ್ತದೆ. ಎಲ್ಲ ಸಂಪ್ರದಾಯದ ಜನಪದಗಾಯಕರಲ್ಲೂ ಹಾಡುಗಾರಿಕೆಯ ಸೊಗಸನ್ನು ಮೆರೆಯಲು,

ಏಕತಾನತೆಯನ್ನು ನಿವಾರಿಸಿಕೊಳ್ಳಲು ಸುದೀರ್ಘ ರಚನೆಗಳಲ್ಲಿ ಈ ತಂತ್ರವನ್ನೇ ಅಳವಡಿಸಿಕೊಳ್ಳುವುದು ಗಮನಾರ್ಹ ಅಂಶವಾಗಿದೆ.

ಕರ್ನಾಟಕದ ಪುರುಷ ಗಾಯಕರಲ್ಲಿ ನೀಲಗಾರರು, ದೇವರ ಗುಡ್ಡರು, ಚೌಡಿಕೆಯವರು, ದೊಂಬಿದಾಸರು ಮುಂತಾದ ವೃತ್ತಿಗಾಯಕರು ಅನೇಕ ಜನಪದ ಪುಣ್ಯಕಥೆಗಳನ್ನು ವಾದ್ಯವಿಶೇಷದೊಡನೆ ಸಮಗ್ರರಾತ್ರಿ ಹಾಡುವ ವಿಶಿಷ್ಟ ಸಂಪ್ರದಾಯಗಳಂತೆಯೇ ಸ್ತ್ರೀ ಗಾಯಕರು ಯಾವ ವಾದ್ಯವಿಶೇಷವನ್ನೂ ಬಳಸದೆ ಹಾಡುವ ಸುದೀರ್ಘಕತೆಗಳೂ ಅನೇಕ. ಗೊತ್ತಾದ ಸಂದರ್ಭಗಳಲ್ಲಿ ಉದುಗೊರೆಗಳನ್ನು ನೀಡಿಹಾಡಿಸುವ ವ್ಯಾಪಕವಾದ ಕತೆಗಳಿವು. ಗುಣಸಾಗರಿ, ಅಣಜಿ ಹೊನ್ನಮ್ಮ, ಹುಳಿಯೂರು ಕೆಂಚಮ್ಮ, ಬಾಲನಾಗಮ್ಮ ಮುಂತಾದ ಕತೆಗಳು ಈ ವರ್ಗಕ್ಕೆ ಸೇರುತ್ತವೆ. ಕಾಳಿಂಗರಾಯ ಮಧ್ಯ ಕರ್ನಾಟಕದ ಒಂದು ಶ್ರೇಷ್ಠ ಸಂಪ್ರದಾಯದಲ್ಲಿ ಅತ್ಯಂತ ಜನಪ್ರಿಯ ಕತೆಯಾಗಿದೆ.

ಮಕ್ಕಳಿಲ್ಲದ ಮದರಂಬೆ ಶಿವನ ಕರುಣೆಯಿಂದ ತನ್ನ ಇಳಿವಯಸ್ಸಿನಲ್ಲಿ ಗಂಡು ಮಗುವೊಂದನ್ನು ಪಡೆಯುತ್ತಾಳೆ. ಹುಟ್ಟುವಂಥ ಕಂದ ಹೆಚ್ಚುಕಾಲ ಬದುಕಲಾರ ಎಂದು ಹೇಳಿದರೂ ಕೇಳದೆ ಪಡೆದ ಮಗುವಿಗೆ ಕಾಳಿಂಗರಾಯನೆಂದು ಹೆಸರಿಡುತ್ತಾಳೆ. ಕಾಳಿಂಗರಾಯ ಓದಿನಲ್ಲಿ ಅತಿ ಜಾಣನಾಗಿ ಒಂದು ಬರೆಯೆಂದರೆ ಎಂಬತ್ತು ಬರೆದು, ಗುರುವಿಗೆ ಆಶ್ಚರ್ಯವನ್ನುಂಟುಮಾಡುತ್ತಾನೆ. ಎಲ್ಲರ ಮೆಚ್ಚಿನ ಶಿಶುವಾಗಿ ಬೆಳೆದು, ಗೆಳೆಯರೊಡನೆ ಒಮ್ಮೆ ಚೆಂಡಾಡುವಾಗ ಕಾಳಿಂಗರಾಯ ವಿಧಿಮಾಯೆಯ ದೃಷ್ಟಿಗೆ ಬೀಳುತ್ತಾನೆ. ಮರುದಿನ ಹುಲಿಯ ಬೇಟೆಯಲ್ಲಿ ವಿಧಿ ಅವನ ಮರಣವನ್ನು ಬರೆದು ಮಾಯವಾಗುತ್ತಾಳೆ. ಕಾಳಿಂಗರಾಯ ಯಾರ ಮಾತನ್ನೂ ಲೆಕ್ಕಿಸದೆ ಮರುದಿನ ಹುಲಿಯ ಬೇಟೆಗೆ ಹೋಗಿ ಘೋರ ವ್ಯಾಘ್ರಕ್ಕೆ ಬಲಿಯಾಗುತ್ತಾನೆ. ಮಗನ ಮರಣದಿಂದ ಕಡುದುಃಖಕ್ಕೊಳಗಾದ ಮದರಂಬೆ ಸತ್ತ ಮಗನಿಗೆ ಮದುವೆ ಮಾಡುವ ನಿರ್ಧಾರಕ್ಕೆ ಬರುತ್ತಾಳೆ. ಮುದ್ದು ಚೆನ್ನವ್ವನೊಡನೆ ಸತ್ತ ಕಾಳಿಂಗನ ಲಗ್ನವಾಗುತ್ತದೆ. ಸುಡುಗಾಡಿನಲ್ಲಿ ತನ್ನಪತಿಯ ಶವವನ್ನು ಬಿಟ್ಟು ಬರಲಾರದೆ, ಚೆನ್ನವ್ವ ಒಬ್ಬಳೇ ಅಲ್ಲಿ ಉಳಿಯುತ್ತಾಳೆ. ನಾನಾ ಬಗೆಯಲ್ಲಿ ಅವಳ ದೃಢವನ್ನು ಪರಿಕಿಸಿದ ಶಿವ, ಕೊನೆಗೆ ಕಾಳಿಂಗನನ್ನು ಬದುಕಿಸುತ್ತಾನೆ. ಶಿವರಾಯನೊಡನೆ ಎಲ್ಲರೂ ಕೈಲಾಸಕ್ಕೆ ತೆರಳುತ್ತಾರೆ. ಇದಿಷ್ಟು ಕತೆಯ ಚೌಕಟ್ಟು.

ಮಗನನ್ನು ಪಡೆಯುವ ಮುನ್ನ ತಾಯಿಯ ಹಂಬಲ, ಪಡೆದ ಮಗನನ್ನು ಬೆಳೆಸಿದ ಬಗೆ, ಚೆಂಡಾಟದ ಸನ್ನಿವೇಶ, ಬೇಟೆ, ತಾಯಿಯ ದುಃಖ, ಚೆನ್ನವ್ವನನ್ನು ತಂದ ಬಗೆ, ಚೆನ್ನವ್ವನ ಪತಿಭಕ್ತಿ, ದೃಢನಿಷ್ಠೆ–ಮುಂತಾದುವು ಅತ್ಯಂತ ಉಜ್ಜ್ವಲವಾಗಿ ಈ ಕಾವ್ಯದಲ್ಲಿ ಮೂಡಿಬಂದಿವೆ. ಜನಪದ ಕತೆಗಳ ಪ್ರಸಿದ್ಧ ಆಶಯಗಳು ಈ ಕತೆಯಲ್ಲಿ ಕೂಡಿಬಂದು ಸುಂದರ ಕಥಾಶಿಲ್ಪವನ್ನು ಮೂಡಿಸಿವೆ. ಕನ್ನಡ ಸಾರಸ್ವತಲೋಕದ ಒಂದು ಉತ್ಕೃಷ್ಟ ಕೃತಿಯಾಗಿ ಜನಪದ ಕಾವ್ಯಗಳ ಘನತೆಯನ್ನು ಎತ್ತಿಹಿಡಿಯುವ ಅತ್ಯುತ್ತಮ ಮಾದರಿಯಾಗಿ ಈ ಕೃತಿ ಉಳಿಯುತ್ತದೆ.

ಉಚ್ಚಂಗಿದುರ್ಗದ ಪ್ರಸಿದ್ಧ ಜನಪದ ಗಾಯಕಿ ಎಲಿಸವ್ವ ಹಾಡಿದ ಈ ಕತೆಯ ಒಂದು ಪಾಠ ಈಗಾಗಲೇ ಕೃತಿರೂಪದಲ್ಲಿ ಪ್ರಕಟವಾಗಿದೆ. (ಜಿ.ಎಸ್.ಪಿ.)

**ಕಾಳಿಂಗರಾವ್, ಪಿ :** 1911–81. ಪ್ರಸಿದ್ಧ ಗಾಯಕ, ಸಂಗೀತ ನಿರ್ದೇಶಕ. 1914 ಆಗಸ್ಟ್ 31 ರಂದು ದಕ್ಷಿಣ ಕನ್ನಡ ಜಿಲ್ಲೆ ಪಾಂಡೇಶ್ವರದಲ್ಲಿ ಜನಿಸಿದರು. ಹಾರಾಡಿ ರಾಮಗಾಣಿಗರ ಗುರುಗಳಾಗಿದ್ದ ಪಾಂಡೇಶ್ವರ ಪುಟ್ಟಯ್ಯ ಇವರ ತಂದೆ, ತಾಯಿ ನಾಗರತ್ನಮ್ಮ. ಸುಬ್ರಹ್ಮಣ್ಯ ದೇವರ ಮನೆಯೊಕ್ಕಲಿನವರಾಗಿದ್ದ ತಾಯಿ, ಮಗನಿಗೆ ಸುಬ್ರಹ್ಮಣ್ಯ ಹೆಸರನ್ನೇ ಇಟ್ಟು ಸುಬ್ರಾಯ ಶಾನಭಾಗ್ ಎಂದು ಕರೆಯುತ್ತಿದ್ದರು. ಅನಂತರ ಕಾಳಿಂಗಶರ್ಮನೆನಿಸಿ, ಮುಂದೆ ಕಾಳಿಂಗರಾವ್ ಎಂಬ ಹೆಸರು ರೂಢಿಗತವಾಯಿತು.

ಬಾಲ್ಯದಲ್ಲಿ ಶಾಲಾರಂಗಭೂಮಿಯಿಂದಲೇ ನಾಟಕರಂಗ, ಪ್ರವೇಶಿಸಿದರು. ಇವರಲ್ಲಿದ್ದ ಸುಪ್ತಕಲೆಯ ವಿಕಾಸಕ್ಕೆ ನೆರವಾದವರು ಸೋದರಮಾವ ಸೂರತ್ ಮಂಜಯ್ಯ. ಬಾಲಕನಲ್ಲಿದ್ದ ಸಂಗೀತಾಸಕ್ತಿಯನ್ನು ಗುರುತಿಸಿದ ಅವರು ಶ್ಲೋಕಗಳು, ದೇವರ ನಾಮಗಳು, ಭಜನೆಗಳನ್ನು ಕಲಿಸಿದರು. ಕಾಲಕ್ರಮದಲ್ಲಿ ರಾಯರ ಒಲವು ಶಾಸ್ತ್ರೀಯ ಸಂಗೀತದತ್ತ ಹೊರಳಿತು. ಜೊತೆ ಜೊತೆಗೇ ಅಂಟಿಕೊಂಡಿದ್ದು ಸಂಗೀತ ಹಾಗೂ ನಾಟಕದ ಗೀಳು. ಇದರೊಂದಿಗೆ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳೆರಡರ ಸಾಹಿತ್ಯದಲ್ಲೂ ಆಸಕ್ತಿ ತಳೆದರು. ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಚಂದ್ರಹಾಸ ನಾಟಕದಲ್ಲಿ ಚಂದ್ರಹಾಸನಾಗಿ ಅಭಿನಯಿಸಿ ತಮ್ಮ ಅಭಿನಯಕ್ಕೆ ಚಿನ್ನದ ಪದಕ ಪಡೆದುಕೊಂಡರು. ಆಗ ನಾಟಕ ವೀಕ್ಷಿಸಿದ ರಂಗಭೂಮಿಯ ನಟ ಮುಂಡಾಜೆ ರಂಗನಾಥಭಟ್ಟರು ತಮ್ಮ ಅಂಬಾಪ್ರಸಾದಿತ ನಾಟಕ ಮಂಡಳಿಯಲ್ಲಿ ಅವಕಾಶ ಕಲ್ಪಿಸಿದರು. ಲೋಹಿತಾಶ್ವ, ಧ್ರುವ, ಕೃಷ್ಣನಾಗಿ ಬಾಲ ಪಾತ್ರಗಳಲ್ಲಿ ಮೆರೆದರು. ಭಟ್ಟರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಕ್ಷಣವನ್ನು ಪಡೆಯುವ ಅವಕಾಶ ಕಾಳಿಂಗರಾಯರಿಗೆ ದೊರೆಯಿತು. ಆ ನಾಟಕ ಕಂಪನಿಯಲ್ಲಿ ಮುಖ್ಯ ಪಾತ್ರಧಾರಿಗಳಾಗಿದ್ದ ವೆಂಕಟರಾವ್ ರಾಮದುರ್ಗಾ ಹಾಗೂ ರಾಮಚಂದ್ರಬುವಾ ಮರೇಳಕರ್ ಇವರಿಗೆ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವನ್ನೂ ಕಲಿಸಿದರು. ಕಾಲಕ್ರಮದಲ್ಲಿ ಇವರು ಬಾಲ ಪಾತ್ರಗಳಿಂದ ಸ್ತ್ರೀ ಪಾತ್ರಕ್ಕೇರಿದರು. ರಾಯರ ಸೊಸೆ, ಆಜನ್ಮಕುಮಾರಿ, ಕಾಳಿಯ ಮರ್ದನ, ತುಳಸಿದಾಸ, ಮಿಸ್ ಮಾಧುರಿ, ವಿಕ್ರಮ ಶಶಿಕಲಾ ಮುಂತಾದ ನಾಟಕಗಳಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಅಭಿನಯಿಸಿದರು.

ಹಲವಾರು ಕಂಪನಿ ನಾಟಕಗಳಲ್ಲಿ ವೇಷ ಹಾಕಿ ಮೆರೆದಿದ್ದ ರಾಯರು ಚಲನಚಿತ್ರರಂಗದ ಲೋಕಕ್ಕೆ ಬೆರಗಾಗಿ ಮದರಾಸಿಗೆ ಕಾಲಿಟ್ಟರು. ಪ್ರೇಮಸಾಗರ, ವಸಂತಸೇನಾ ಮೊದಲಾದ ಚಿತ್ರಗಳಿಗೆ ಸಂಗೀತ ನೀಡಿದರು. ಇದರೊಂದಿಗೆ ಚಿತ್ರಗಳಲ್ಲೂ ಅಭಿನಯಿಸಿದರು. ಇವರ ಪ್ರತಿಭೆಯನ್ನು ಗುರುತಿಸಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯವರು, ತಮ್ಮ ಸಂಗೀತ ಕಾಲೇಜಿಗೆ ಪ್ರಾಚಾರ್ಯರನ್ನಾಗಿ ನೇಮಿಸಿಕೊಂಡರು. ಆದರೆ ಕೆಲಸದ ಏಕತಾನತೆಗೆ ಬೇಸರಗೊಂಡು, ಕೆಲಸಕ್ಕೆ ರಾಜೀನಾಮೆ ನೀಡಿದರು.

ಮದರಾಸು ಬಿಟ್ಟು ಮೈಸೂರಿಗೆ ಬಂದರು. ಇಲ್ಲಿ ನಿರ್ಮಾಣವಾದ ಪ್ರಥಮ ಚಲನಚಿತ್ರ ಕೃಷ್ಣಲೀಲಾಗೆ ಸಂಗೀತ ನೀಡಿದರು. ಯಾರೂ ತುಳಿಯದ ಜಾಡಿನಲ್ಲಿ ತಮ್ಮ ಹೆಜ್ಜೆಯನ್ನೂರುವ ಆಸೆ ಇವರದಾಗಿತ್ತು. ಆ ತುಡಿತದ ಫಲವೇ ಜನಪದ ಗೀತೆಗಳು, ಲಾವಣಿ, ವಚನ, ದೇವರನಾಮ, ಭಾವಗೀತೆ ಮುಂತಾದ ವೈವಿಧ್ಯಮಯವಾದ ಸಾಹಿತ್ಯದ ಹಾಡುಗಾರಿಕೆಯಲ್ಲಿ ಸಾರ್ಥಕತೆಯನ್ನು ಪಡೆದರು. ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತದ ಜೊತೆಗೆ ಪಾಶ್ಚಾತ್ಯ ಸಂಗೀತವನ್ನೂ ಅಭ್ಯಾಸ ಮಾಡಿದ್ದರಿಂದ ಆಯಾಯಾ ಸಾಹಿತ್ಯದ ಧ್ವನಿಯನ್ನನುಸರಿಸಿ ರಾಗದ ಕವಚವನ್ನು ತೊಡಿಸಿ, ಕವನದ ಭಾವಕ್ಕೆ ಇಂಬುಕೊಡುತ್ತಿದ್ದರು.

ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಗೀತೆಯನ್ನು ಸ್ವರಸಂಯೋಜಿಸಿ ಹಾಡಿದರು (1946). ಕರ್ನಾಟಕ ರಾಜ್ಯೋದಯದ ಅನಂತರ ಕರ್ನಾಟಕ ಸರ್ಕಾರ ಈ ಹಾಡನ್ನು ಹಾಡಿದ್ದ ಕಾಳಿಂಗರಾಯರನ್ನು ಸನ್ಮಾನಿಸಿತು. ಇವರು ತಮ್ಮ ವಿಶಿಷ್ಟ ಗಾಯನದ ಮೂಲಕ ಜನಪದಗೀತೆಗಳಿಗೆ, ಭಾವಗೀತೆಗಳಿಗೆ ಹೊಸ ತಿರುವನ್ನು ಕೊಟ್ಟರು. ಜಿ.ಪಿ. ರಾಜರತ್ನಂರವರ ರತ್ನನ ಪದಗಳನ್ನು ಹೇಗೆ ಭಾವಪೂರ್ಣವಾಗಿ ಹಾಡಬಹುದೆಂದು ಮೊದಲಿಗೆ ತೋರಿಸಿಕೊಟ್ಟರು. ಇವರ ನಾಲಗೆಯ ಮೇಲೆ ದಾಸರು ನಲಿದರು, ವಚನಕಾರರು ಕುಣಿದರು, ಜನಪದರು ಉಕ್ಕಿ ಹರಿದರು, ಭಾವಗೀತಾಕಾರರು ಮಿಂಚಿದರು, ಯೆಂಡ್ಕುಡಕರತ್ನ ಮೆರೆದ. ಕಾಳಿಂಗರಾಯರು ಎಲ್ಲ ಪ್ರಕಾರದ ಹಾಡುಗಳಿಂದ ಭಾರತದ ಉದ್ದಗಲಕ್ಕೂ ತಮ್ಮ ಗಾನಸುಧೆ ಹರಿಸಿದರು. ಇದಲ್ಲದೆ ಕಿತ್ತೂರು ಚೆನ್ನಮ್ಮ, ಅಬ್ಬಾ ಆ ಹುಡುಗಿ, ಅಣ್ಣ ತಂಗಿ, ಲಗ್ನಪತ್ರಿಕೆ ಚಿತ್ರಗಳಲ್ಲಿ ಹಾಡಿದರು. ನಟಶೇಖರ, ಅಬ್ಬಾ ಆ ಹುಡುಗಿ, ತರಂಗ ಚಿತ್ರಗಳಿಗೆ ಸಂಗೀತ ನೀಡಿದರು.

ನಾಟಕರತ್ನ ಗುಬ್ಬಿವೀರಣ್ಣನವರ ದಶಾವತಾರ ನಾಟಕಕ್ಕೆ ಸಂಗೀತ ನಿರ್ದೇಶಿಸಿದರು (1955). ಆ ಕಂಪನಿಯ ಲವ ಕುಶ ನಾಟಕಕ್ಕೂ ಸಂಗೀತ ನೀಡಿದರು. ಸುಮಾರು ಐದಾರು ವರ್ಷ ಈ ಕಂಪನಿಯಲ್ಲಿ ದುಡಿದರು. ರಂಗನಾಟಕಗಳಿಗೂ ವಿನೂತನ ಶೈಲಿಯ ಹೊಚ್ಚ ಹೊಸ ರಾಗರೂಪವನ್ನು ಕೊಟ್ಟು ಪ್ರಸಿದ್ಧರಾದರು.

ಆಕಾಶವಾಣಿಯ ಗಾಯಕರಾಗಿಯೂ ಇವರು ಸೇವೆಸಲ್ಲಿಸಿದರು. ಇಂಥ ಪ್ರತಿಭಾವಂತ ಗಾಯಕನಿಗೆ ಜಾನಪದ ಸಂಗೀತರತ್ನ, ಬಾಲಗಂಧರ್ವ, ಜಾನಪದ ಕಲಾಚಕ್ರವರ್ತಿ, ಗಾಯನ ಚಕ್ರವರ್ತಿ, ಗಾಯನ ಕಂಠೀರವ, ಕನ್ನಡ ಉದಯಗಾನ ಕೋಗಿಲೆ, ಸಂಗೀತ ರಸವಿಹಾರಿ ಇವು ಜನ ಮೆಚ್ಚಿಕೊಟ್ಟ ಬಿರುದುಗಳು. ಇವರ ಬಾಳಿನ ಸಂಜೆ ಅಷ್ಟೊಂದು ಸುಗಮವಾಗಿರಲಿಲ್ಲ. ಆರ್ಥಿಕ ಮುಗ್ಗಟ್ಟಿನಿಂದಾಗಿ ನಲುಗಿದರು. ಇವರ ಪತ್ನಿ ಮೀನಾಕ್ಷಿ. ಕಾಳಿಂಗರಾಯರು 1981 ಸೆಪ್ಟಂಬರ್ 21ರಂದು ನಿಧನರಾದರು. ಎಚ್.ಎಂ.ವಿ.ಸಂಸ್ಥೆ ಇವರ ಕೆಲವು ಧ್ವನಿಮುದ್ರಿಕೆಗಳನ್ನು ಹೊರತಂದಿದೆ. ಜೀವನದಲ್ಲಿ ಸಂಪತ್ತನ್ನು ಗಳಿಸಲಾಗದಿದ್ದರೂ ರಾಯರು ಸಹೃದಯರ ಹೃದಯದಲ್ಲಿ ವಿರಾಜಮಾನರಾಗಿದ್ದರು. ವ್ಯಸನಗಳು ಅವರನ್ನು ಕಾಡಿದರೂ ಕೊನೆ ಉಸಿರಿರುವವರೆಗೂ ಇವರು ಕನ್ನಡದ ಗಾನ ಸುಧಾರಕನಾಗಿ ಜನರಿಗೆ ಸಂಗೀತದ ರಸದೌತಣ ಉಣಬಡಿಸಿದ ಅಪೂರ್ವ ಪ್ರತಿಭೆ. (ಎಚ್.ಆರ್.ಎಲ್.)

**ಕಾಳಿತುಂಬೆ :** ಸಾಲ್ವಿಯ ಎಂಬ ಶಾಸ್ತ್ರೀಯ ಹೆಸರಿನ ಒಂದು ಮೂಲಿಕೆ ಸಸ್ಯಜಾತಿ; ಲೇಬಿಯೇಟೀ ಕುಟುಂಬಕ್ಕೆ ಸೇರಿದೆ. ಇದರಲ್ಲಿ ಅನೇಕ ಪ್ರಭೇದಗಳಿವೆ. ಇವುಗಳಲ್ಲಿ ಸಾಲ್ವಿಯ ಈಜಿಪ್ಷಿಯಾಕ, ಸಾಲ್ವಿಯ ಪ್ಲೆಬಿಯ, ಸಾಲ್ವಿಯ ಕಾಕ್ಸೀನಿಯ, ಸಾಲ್ವಿಯ ಮುರ್‍ಕ್ರಾಫ್ಟಿಯಾನ, ಸಾ. ಲ್ಯಾನೇಟ ಎಂಬುವು ಮುಖ್ಯವಾದುವು ಸಾಲ್ವಿಯ ಅಫಿಸಿನ್ಯಾಲಿಸ್ ಎಂಬ ಇನ್ನೊಂದು ಪ್ರಭೇದವನ್ನು ಸಾಮಾನ್ಯವಾಗಿ ಉದ್ಯಾನಗಳಲ್ಲಿ ಅಲಂಕಾರಸಸ್ಯವಾಗಿ ಬೆಳೆಸುತ್ತಾರೆ. ಇದಕ್ಕೆ ಗಾರ್ಡನ್ ಸೇಜ್ ಎಂಬ ಸಾಮಾನ್ಯ ಬಳಕೆಯ ಹೆಸರಿದೆ. ಕಾಳಿತುಂಬೆ ಗಿಡಗಳು ಉಷ್ಣವಲಯಗಳಲ್ಲೂ ಸಮಶೀತೋಷ್ಣವಲಯಗಳಲ್ಲೂ ಬೆಳೆಯುತ್ತವೆ. ಭಾರತದ ಎಲ್ಲ ಪ್ರದೇಶಗಳಲ್ಲೂ ಇವು ಸಾಮಾನ್ಯ. 30–45 ಸೆಂಮೀ ಎತ್ತರಕ್ಕೆ ಬೆಳೆಯುವ ಪುಟ್ಟಗಾತ್ರದ ಗಿಡಗಳಿವು. ಕಾಂಡ ಚಚ್ಚೌಕವಾಗಿದೆ. ಎಲೆಗಳು ಅಭಿಮುಖವಾಗಿ ಜೋಡಣೆಗೊಂಡಿವೆ. ಹೂಗೊಂಚಲು ಅಂತ್ಯಾರಂಭಿ ಮಾದರಿಯದು; ಕಾಂಡದ ತುದಿಯಲ್ಲಿ ಉತ್ಪತ್ತಿಯಾಗುತ್ತದೆ. ಹೂಗಳು ಕೆಂಪು, ನೀಲಿಕಂದು, ಬಿಳುಪು ಇತ್ಯಾದಿ ವರ್ಣವೈವಿಧ್ಯವನ್ನು ತೋರುತ್ತವೆ.

ಹೂಗಳಿಗೆ ಉಪಪತ್ರಗಳಿವೆ (ಬ್ರಾಕ್ಟ್ಸ್); ಹೂ ತೊಟ್ಟು ಇಲ್ಲ. ಉಭಯ ಪಾರ್ಶ್ವಸಮಾಂಗತೆ ಹೂವಿನ ವಿಶಿಷ್ಟ ಲಕ್ಷಣ. ಸಾಲ್ವಿಯ ಸಸ್ಯದಲ್ಲಿ ಪಾರಾಗಾರ್ಪಣಕ್ರಿಯೆಗೆ ಅನುಕೂಲವಾಗುವಂತೆ

ಒಂದು ವಿಶಿಷ್ಟ ವ್ಯವಸ್ಥೆ ಇದೆ. ಇದಕ್ಕೆ ಸನ್ನೆ ವಿಧಾನದ ಪರಾಗಾರ್ಪಣೆ ವಿಧಾನ (ಲಿವರ್ ಮೆಕ್ಯಾನಿಸಮ್) ಎಂದು ಹೆಸರು. ಹೂವಿನಲ್ಲಿ ದಳಗಳು ಕೂಡಿಕೊಂಡು ಕೊಳವೆಯಂತಿದ್ದು ತುದಿಯಲ್ಲಿ ಎರಡು ತುಟಿಗಳಂತೆ ಭಾಗವಾಗದೆ. ಮೇಲಿನ ತುಟಿ 2 ದಳಗಳಿಂದ ಕೂಡಿ ಹೆಡೆಯಾಕಾರದಲ್ಲಿದೆ. 3 ದಳಗಳಿಂದ ಕೂಡಿದ ಕೆಳತುಟಿ ಒಂದು ಬಗೆಯ ಪೀಠದಂತಿದ್ದು ಕೀಟಗಳು ಇದರ ಮೇಲೆ ಒಂದು ಕುಳಿತುಕೊಳ್ಳಲು ಅನುಕೂಲವಾಗಿದೆ. ಹೂವಿನಲ್ಲಿರುವ 2 ಕೇಸರಗಳು ಚಿಕ್ಕದಾದ ಕೇಸರದಂಡಗಳಿಂದ ಕೆಳತುಟಿಯ ಬುಡದಲ್ಲಿ ಅಂಟಿಕೊಂಡಿವೆ. ಕೇಸರಗಳ ಸಂಬಂಧಕಗಳು (ಕನೆಕ್ಟಿವ್ಸ್) ಮಾತ್ರ ಬಲು ನೀಳವಾಗಿದ್ದು ಆಟದ ತೂಗುತೊಲೆಯ (ಸೀಸಾ) ಮಾದರಿಯಲ್ಲಿ ಕೇಸರದಂಡಗಳಿಗೆ ಅಂಟಿಕೊಂಡು ತೂಗಾಡುತ್ತವೆ. ಸಂಬಂಧಕಗಳ ಮೇಲಿನ ತುದಿಯಲ್ಲಿ ಪರಾಗ ಕೋಶಗಳಿವೆ. ತುದಿಯ ಈ ದಳಸಮೂಹದ ಬುಡದಲ್ಲಿ ಅಂಡಾಶಯದ ಸುತ್ತ ಮಕರಂದ ಗ್ರಂಥಿಗಳಿವೆ. ಮಕರಂದವನ್ನು ಹೀರಿ ಬಂದ ದುಂಬಿ ಪೀಠದ ಮೇಲೆ ಕುಳಿತುಕೊಂಡು ತನ್ನ ಸೊಂಡಿಲನ್ನು ಹೂ ದಳದ ಕೊಳವೆಯಲ್ಲಿ ತೂರಿಸುತ್ತದೆ, ಆಗ ಅವು ಸನ್ನೆಯಂತೆ ವರ್ತಿಸಿ ಕೇಸರಗಳ ಮೇಲ್ತುದಿಗಳು ಹೆಡೆಯಿಂದ ಹೊರಬಂದು ದುಂಬಿಯ ಬೆನ್ನಿನ ಮೇಲೆ ಬಡಿಯುತ್ತವೆ. ಆಗ ಪರಾಗ ಕೋಶಗಳು ಪರಾಗವನ್ನು ದುಂಬಿಯ ಮೇಲೆ ಉದುರಿಸುತ್ತವೆ. ಈ ಗಿಡದಲ್ಲಿ ಕೇಸರಗಳು ಮತ್ತು ಶಲಾಕಾಗ್ರ ಏಕ ಕಾಲದಲ್ಲಿ ಪಕ್ವವಾಗುವುದಿಲ್ಲವಾದ್ದರಿಂದ ಪರಾಗ ದುಂಬಿಯ ಮೇಲೆ ಉದುರಿದಾಗ ಅದೇ ಹೂವಿನ ಶಲಾಕಾಗ್ರ ದುಂಬಿಗೆ ಬಡಿದರೂ ಪರಾಗವನ್ನು ಗ್ರಹಿಸುವುದಿಲ್ಲ. ಅಲ್ಲಿ ಶಲಾಕಾಗ್ರ ಪಕ್ವವಾಗಿದ್ದರೆ ಪರಾಗವನ್ನು ಗ್ರಹಿಸುತ್ತದೆ. ಇದು ಪರಾಗಸ್ಪರ್ಶ ಕ್ರಮ.

ಸಾಲ್ವಿಯ ಗಿಡಗಳನ್ನು ಹೆಚ್ಚಾಗಿ ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಕೆಲವು ಪ್ರಭೇದಗಳು ಔಷಧಿ ಗಿಡಗಳಾಗಿ ಉಪಯೋಗವಾಗುತ್ತವೆ. ಸಾಲ್ವಿಯ ಈಜಿಪ್ಟಿಯಾಕ ಗಿಡವನ್ನು ಕಣ್ಣುರೋಗಗಳ ನಿವಾರಣೆಗೆ ಉಪಯೋಗಿಸುತ್ತಾರೆ. ಸಾ. ಕಾಬೂಲಿಕ ಗಿಡವನ್ನು ಜ್ವರ, ನೆಗಡಿ ಮತ್ತು ಶ್ವಾಸಕೋಶ ರೋಗಗಳಿಗೆ ಬಳಸುತ್ತಾರೆ. ಸಾಲ್ವಿಯ ಅಫಿಸಿನ್ಯಾಲಿಸ್ ಪ್ರಭೇದದ ಎಲೆಗಳನ್ನು ಮೆಂಡಿಕೆಯ ಉರಿಯೂತದಲ್ಲಿ (ಟಾನ್ಸಿ ಲೈಟಿಸ್) ಮುಕ್ಕಳಿಸುವ ಔಷಧಿಯಾಗಿ ಉಪಯೋಗಿಸುತ್ತಾರೆ. ಸಾ. ಸ್ಪೈನೋಸ ಪ್ರಭೇದದ ಬೀಜಗಳು ಹಲ್ಲು ನೋವನ್ನು ಕಡಿಮೆಮಾಡುತ್ತವೆ. (ಎಂ.ಸಿ.ಆರ್.)

**ಕಾಳಿದಾಸ :** ಸು. 4ನೆಯ ಶತಮಾನ. ಸಂಸ್ಕೃತ ಸಾಹಿತ್ಯದಲ್ಲಿ ಕವಿಕುಲಗುರು ಎಂಬ ಪ್ರಶಸ್ತಿಗೆ ಪಾತ್ರನಾದ ಕವಿ; ಕವಿತಾಮಾಧುರ್ಯ ಮತ್ತು ಪ್ರತಿಭೆಗಳಿಂದ ವಿಶ್ವಕವಿಗಳ ಶ್ರೇಣಿಯಲ್ಲಿ ಸೇರಿರುವಂಥವ. ಇಷ್ಟು ಪ್ರಸಿದ್ಧವಾದವನ ಕಾಲ ನಮಗೆ ನಿಶ್ಚಿತವಾಗಿ ತಿಳಿಯದಿರುವುದು ಸೋಜಿಗ ಸಂಗತಿ. ಆಧುನಿಕ ಪಂಡಿತರು ಈ ವಿಷಯದಲ್ಲಿ ಶೋಧನೆ ನಡೆಸಿ ವಿಧವಿಧವಾದ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇವನ ಕಾಲ ಪ್ರ.ಶ.ಪೂ. ಮೊದಲ ಶತಮಾನವೆಂದು ಕೆಲವರೂ ಪ್ರ.ಶ. ಎರಡನೆ ಶತಮಾನವೆಂದು ಕೆಲವರೂ ನಾಲ್ಕನೆಯದೆಂದು ಕೆಲವರೂ ಆರನೆಯದೆಂದು ಮತ್ತೆ ಕೆಲವರೂ ಹೇಳುತ್ತಾರೆ, ಅಂತೂ ಚಂದ್ರಗುಪ್ತ ವಿಕ್ರಮಾದಿತ್ಯನ (357–413) ಆಸ್ಥಾನದಲ್ಲಿದ್ದನೆಂದು ಹೇಳುವುದು ಬಹುಜನ ಪಂಡಿತರ ಮತವಾಗಿದೆಯಲ್ಲದೆ ಸಮಂಜಸವಾಗಿಯೂ ತೋರುತ್ತದೆ. ಈ ಚಂದ್ರಗುಪ್ತ ಉಜ್ಜಯಿನಿಯಲ್ಲಿ ಆಳುತ್ತಿದ್ದನಾದುದರಿಂದಲೂ ಕವಿಯ ಕಾವ್ಯಗಳಲ್ಲಿ ಈ ನಗರದ ಬಗ್ಗೆ ವಿಶೇಷ ಅಭಿಮಾನ ವ್ಯಕ್ತಪಟ್ಟಿರುವುದರಿಂದಲೂ ಉಜ್ಜಯಿನಿ ಕಾಳಿದಾಸನ ವಾಸಸ್ಥಳವಾಗಿದ್ದಿರಬೇಕೆಂದು ಹೇಳಬಹುದು. ಇಂಥ ಊಹೆಗಳನ್ನು ಬಿಟ್ಟರೆ ಇವನ ವೈಯಕ್ತಿಕ ವಿಷಯಗಳ ವಿಚಾರಗಳೇನೂ ನಮಗೆ ತಿಳಿದಿಲ್ಲ. ಇವನ ಕೃತಿಗಳು ಏಳು : ಎರಡು ಖಂಡಕಾವ್ಯಗಳು–ಋತುಸಂಹಾರ ಮತ್ತು ಮೇಘಸಂದೇಶ ; ಎರಡು ಮಹಾಕಾವ್ಯಗಳು–ಕುಮಾರ ಸಂಭವ ಮತ್ತು ರಘುವಂಶ: ಮೂರು ನಾಟಕಗಳು–ಮಾಲವಿಕಾಗ್ನಿ ಮಿತ್ರ, ವಿಕ್ರಮೋರ್ವಶೀಯ ಮತ್ತು ಅಭಿಜ್ಞಾನ ಶಾಕುಂತಲ.

ಕಾಳಿದಾಸನ ಕೃತಿಗಳು ಸರ್ವತೋಪೂರ್ಣವಾಗಿವೆ, ಸರ್ವಾಂಗ ಸುಂದರವಾಗಿವೆ. ಇದು ಹೆಚ್ಚು ಇದು ಕಡಿಮೆ ಎನ್ನುವಂತಿಲ್ಲ. ಲಾಕ್ಷಣಿಕರ ಎಲ್ಲೆಯಲ್ಲಿಯೇ ಇದ್ದರೂ ಕವಿ ಅದರಿಂದ ಬದ್ಧನಾಗಿಲ್ಲ. ಕಾವ್ಯಕ್ಕೆ ಬೇಕಾದುದೆಲ್ಲಕ್ಕೂ ಇವನಲ್ಲಿ ಉದಾಹರಣೆಗಳಿವೆ. ಯಾವುದೂ ಅತಿಯಾಗಿಲ್ಲ. ವಸ್ತುವಿನ್ಯಾಸ, ಪಾತ್ರಸೃಷ್ಟಿ, ತಕ್ಕ ಮಾತು, ತಕ್ಕ ಶಬ್ದಜಾಲ–ಎಲ್ಲದರಲ್ಲೂ ಪರಸ್ಪರ ಔಚಿತ್ಯ ತಾನೇತಾನಾಗಿದೆ. ಇಂಥ ಅದ್ಭುತ ಪ್ರತಿಭಾಪೂರ್ಣನಾದ್ದರಿಂದಲೆ ಕಾಳಿದಾಸ ಭಾರತದ ಪ್ರಾಚೀನ ಹಾಗೂ ಆಧುನಿಕ ವಿಮರ್ಶಕರಿಂದ ಮಾತ್ರವಲ್ಲದೆ, ವಿಶ್ವದ ಪಂಡಿತರಿಂದಲೂ ಮೆಚ್ಚುಗೆಯನ್ನು ಪಡೆದಿದ್ದಾನೆ. (ಎಸ್.ಆರ್.ಎ.)

**ಋತುಸಂಹಾರ:** ಇದೊಂದು ಕತೆಯಿಲ್ಲದ ಕಾವ್ಯ. ಬಹುಶಃ ಇದು ಕಾಳಿದಾಸ ಬರೆದ ಕಾವ್ಯಗಳಲ್ಲಿ ಮೊದಲನೆಯದು. ಇದರಲ್ಲಿ ಒಂದೊಂದು ಋತುವಿಗೆ ಒಂದೊಂದು ಸರ್ಗದಂತೆ ಆರು ಸರ್ಗಗಳಿವೆ. ಒಟ್ಟು ಶ್ಲೋಕಗಳ ಸಂಖ್ಯೆ 114. ಇಂದ್ರವಜ್ರ, ವಂಶಸ್ಥ, ವಸಂತತಿಲಕ, ಮಾಲಿನೀ ಮತ್ತು ಶಾರ್ದೂಲವಿಕ್ರೀಡಿತ–ಇವು ಇಲ್ಲಿ ಬಳಸಿರುವ ವೃತ್ತಗಳು. ಈ ಕಾವ್ಯಕ್ಕೆ ಆಲಂಕಾರಿಕರೂ ಪಂಡಿತರೂ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವಂತೆ ಕಂಡುಬರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಈ ಪದ್ಯಗಳ ಸರಳತೆ. ಈ ಕಾವ್ಯದಲ್ಲಿ ಭಾವಗಾರಿಕೆಗಿಂತ ಬಣ್ಣಗಾರಿಕೆ ಹೆಚ್ಚು. ಋತುಗಳಲ್ಲೂ ಈ ಲೋಕ ಯಾವ ಯಾವ ಚೆಲುವನ್ನು ತಳೆದು ಯಾವ ಯಾವ ಸೊಗಸುಗಳನ್ನು ರಸಿಕರಿಗೆ ನೀಡುತ್ತದೆ ಎಂಬುದರ ವರ್ಣನೆಯನ್ನು ಈ ಕಾವ್ಯ ಮನೋಹರವಾಗಿ ನಿರ್ವಹಿಸುತ್ತದೆ. ಆರು ಸರ್ಗಗಳಲ್ಲಿ ಕವಿ ಆರು ಋತುಗಳನ್ನು ವರ್ಣಿಸುತ್ತಾನೆ. ಇಡೀ ಕಾವ್ಯದಲ್ಲಿ ಪ್ರಿಯಪ್ರೇಯಸಿಯರ ದೃಷ್ಟಿ ಇರುವುದಲ್ಲದೆ ಪ್ರತಿಪದ್ಯವೂ ಪ್ರಿಯ ಪ್ರೇಯಸಿಗೆ ಹೇಳಿದಂತೆ ರಚನೆಗೊಂಡಿದೆ. ಮೊದಲು ಗ್ರೀಷ್ಮದ ವರ್ಣನೆ–ಕಾವ್ಯ ವಸಂತದಲ್ಲಿ ಮುಗಿಯಲೆಂದು, ಸೂರ್ಯನೀಗ ಪ್ರಚಂಡ; ಚಂದ್ರ ಸ್ಪೃಹಣೀಯ. ಸಂಜೆಗಳು ತುಂಬ ಅಂದ. ಸ್ತ್ರೀಪುರುಷರಲ್ಲಿ ಕಾಮ ಪ್ರಬಲಿಸುತ್ತಿಲ್ಲ. ಬಿಸಿಲ ಬೇಗೆಯ ಈ ಸರ್ವಸಂಕಟ ಸಮಯದಲ್ಲಿ ಎಲ್ಲ ಪ್ರಾಣಿಗಳೂ ತಮ್ಮ ತಮ್ಮ ವೈರವನ್ನು ಮರೆತಿವೆ. ಆಗ ಮೋಡಗಳ ಮದ್ದಾನೆಗಳಿಂದಲೂ ಮಿಂಚಿನ ಪತಾಕೆಗಳಿಂದಲೂ ಗುಡುಗಿನ ಮದ್ದಳೆಗಳಿಂದಲೂ ಕೂಡಿದವನಾಗಿ ರಾಜಠೀವಿಯಲ್ಲಿ ಕಾಮಿಜನಪ್ರಿಯನೂ ಸಸ್ಯಬಂಧುವೂ ಪ್ರಾಣಿಗಳಿಗೆ ಪ್ರಾಣಭೂತನೂ ಆದ ವರ್ಷಋತುರಾಜ ಬಂದ. ಕಾರ್ಮುಗಿಲುಗಳಲ್ಲಿ ಕೆಲವು ಕನ್ನೈದಿಲೆಗಳಂತೆ, ಕೆಲವು ಕಾಡಿಗೆಯಂತೆ, ಮತ್ತೆ ಕೆಲವು ಗರ್ಭಿಣಿಯರ ಸ್ತನದಂತೆ ಕಪ್ಪಾಗಿವೆ. ಬಿಳುಪು ಹೊರತು ಮಿಕ್ಕೆಲ್ಲ ಬಣ್ಣಗಳನ್ನೂ ಬಯಲೂ ಬನವೂ ಮೆರೆಸುತ್ತಿವೆ. ಗಾಳಿಗೆ ಕಂಪುತಂಪುಗಳನ್ನಿತ್ತು, ಕಾಳ್ಗಿಚ್ಚನ್ನಾರಿಸಿ, ಮಲೆಕೋಡುಗಳಲ್ಲಿ ತಂಗುವ ಮೋಡಗಳು ವಿರಹಿಗಳಲ್ಲಿ ಮಾತ್ರ ದಗೆಯೆಬ್ಬಿಸುತ್ತವೆ. ಕಾಶಕುಸುಮಗಳು ಬಿಳಿಸೀರೆಯನ್ನುಟ್ಟು ಪದ್ಮವಕ್ತ್ರೆಯಾಗಿ ಕಲಹಂಸ ಕೂಜಿತಗಳ ನೂಪುರ ಧ್ವನಿಯನ್ನು ಹರಡುತ್ತ ಮಾಗಿದ ನೆಲ್ಲೆನೆಗಳ ತನುಕಾಂತಿಯನ್ನು ಮೆರೆಸುತ್ತ ಬಳುಕು ಮೈಯ ಶರತ್ಸುಂದರಿ ಬರುತ್ತಾಳೆ. ಈಗ ಹೆಂಗಸರ ಹುಬ್ಬಿನ ಮುರಿತಗಳಿಗಿಂತ ಹೊಳೆದೆರೆಗಳ ಮುರಿತ ಚೆನ್ನು. ಇಗೋ ಹಿಮಗಾಲ, ಹೆಂಗಸರೆಲ್ಲ ತಮ್ಮೊಡವೆಗಳನ್ನೆಲ್ಲ ಕಳೆದಿಟ್ಟು ಜಾಯಿಕಾಯಿ ಗಂಧವನ್ನು ಲೇಪಿಸಿಕೊಂಡು ಪ್ರಿಯರನ್ನೊಡಗೂಡುವ ಸಂಭ್ರಮದಲ್ಲಿದ್ದಾರೆ. ಒಲಿದವರ ಕೂಟಕ್ಕೆ ಚಳಿಗಾಲಕ್ಕಿಂತ ಇನಿಗಾಲವಿಲ್ಲ. ಆದರೆ ಬೇಟಕ್ಕೋ ವಸಂತ ಕಾಲ: ಇದರ ಬಣ್ಣವೇ ಬೇರೆ, ಬೆಡಗೇ ಬೇರೆ. ಹೀಗೆ ಬೇಸಗೆಯಲ್ಲಿ ಮೊದಲಾಗಿ ಸುಗ್ಗಿಯಲ್ಲಿ ಈ ಕಾವ್ಯ ಮುಗಿಯುತ್ತದೆ.

ವಸಂತದ ಬರುವನ್ನು ಪ್ರಿಯಪ್ರೇಯಸಿಗೆ ಹೀಗೆ ಬಣ್ಣಿಸುತ್ತಾನೆ:

ಪ್ರಫುಲ್ಲ ಚೂತಾಂಕುರ ತೀಕ್ಷ್ಣಸಾಯಕೋ ದ್ವಿರೇಫಮಾಲಾ ವಿಲಸದ್ಧನುರ್ಗುಣಃ
ಮನಾಂಸಿ ಭೇತ್ತುಂ ಸುರತಪ್ರಸಂಗಿನಾಂ ವಸಂತಯೋದ್ಧಾ ಸಮುಪಾಗತಃ

ಪ್ರಿಯೇ ಅರಳಿದ ಮಾವಿನ ಚಿಗುರುಗಳ ತೀಕ್ಷ್ಣ ಬಾಣಗಳೊಂದಿಗೆ ದುಂಬಿಸಾಲಿನ ಹೆದೆಗಟ್ಟಿದ ಬಿಲ್ಲನ್ನು ಹಿಡಿದು ಪ್ರಣಯಿಗಳ ಮನಸ್ಸನ್ನು ಭೇದಿಸಲು ಅಗೋ ವಸಂತಯೋಧ ಬಂದಿದ್ದಾನೆ, ಪ್ರಿಯೆ!

ಶೈಲಿ ಇನ್ನೂ ಅಪಕ್ವವಾಗಿದೆಯಾದರೂ ಋತುಸಂಹಾರ ಕಾಳಿದಾಸನಿಗಿರುವ ಪ್ರಕೃತಿ ಪ್ರೇಮವನ್ನು ವಿಶೇಷವಾಗಿ ಹೊರಸೂಸುತ್ತದೆ. ಈ ಕಾವ್ಯದಲ್ಲಿ ಮಾನವ ಭಾವಾವೇಶಗಳಿಗೆ ತಕ್ಕಂತೆ ಪ್ರಕೃತಿಯೂ ಭಾವಾವೇಶ ಹೊಂದುವುದು ಪ್ರತಿಪಾದಿತವಾಗಿದೆ. ಇದರಲ್ಲಿ ಕೇವಲ ಸೂಚಕವಾಗಿ ಬರುವ ಉಪಮೆಗಳು ಮುಂದಿನ ಕಾವ್ಯಗಳಲ್ಲಿ ಬಹಳ ಚಮತ್ಕೃತಿ, ಸಂಪೂರ್ಣತೆಗಳಿಂದ ವಿಸ್ತಾರಗೊಂಡಿವೆ. (ಪಿ.ಟಿ.ಎನ್.)

**ಮೇಘದೂತ**: ಅಥವಾ ಮೇಘಸಂದೇಶ ವಿರಹಿಯಾದ ಯಕ್ಷನೊಬ್ಬನ ಮನೋವೃತ್ತಿಯನ್ನು ಚಿತ್ರಿಸಿರುವ ಒಂದು ಖಂಡ ಕಾವ್ಯ. ಇದರಲ್ಲಿ ಪೂರ್ವಮೇಘವೆಂದೂ

ಉತ್ತರಮೇಘವೆಂದೂ ಎರಡು ಭಾಗಗಳಿವೆ. ಇದರ 115 ಶ್ಲೋಕಗಳೂ ಮಂದಾಕ್ರಾಂತ ವೃತ್ತದಲ್ಲಿವೆ. ಕುಬೇರನ ಸೇವೆಯಲ್ಲಿದ್ದ ಯಕ್ಷನೊಬ್ಬ ತಾನು ಮಾಡಿದ ತಪ್ಪಿಗಾಗಿ ಒಂದು ವರ್ಷ ಕಾಲ ತನ್ನ ಪ್ರಿಯಪತ್ನಿಯನ್ನೂ ನೆಲಸೂರಾದ ಅಲಕಾವತಿಯನ್ನೂ ಬಿಟ್ಟು ಹೊರಗೆ ಹೋಗಬೇಕಾದ ಸಂದರ್ಭ ಒದಗುತ್ತದೆ. ಶಿಕ್ಷೆಯನ್ನನುಭವಿಸಲು ಯಕ್ಷ ವಿಂಧ್ಯ ಪರ್ವತದ ರಾಮಗಿರ್ಯಾಶ್ರಮ ಪ್ರದೇಶದಲ್ಲಿ ವಿರಹ ದುಃಖದಲ್ಲಿ ಸವೆಯುತ್ತಾ ಕಾಲ ಕಳೆಯುತ್ತಿದ್ದ. ಎಂಟು ತಿಂಗಳು ಕಳೆಯಲು ಮಳೆಗಾಲ ಆರಂಭವಾಯಿತು. ಉತ್ತರ ದಿಕ್ಕಿಗೆ ಓಡುತ್ತಿದ್ದ ಮೋಡ ಶಿಖರವೊಂದರ ಮೇಲೆ ತಂಗಿದ್ದಾಗ ವಿರಹಿಯಾದ ಯಕ್ಷ ಅದನ್ನು ಸ್ವಾಗತಿಸಿ ತನ್ನ ಪ್ರಿಯೆಗೆ ತನ್ನ ಸಂದೇಶವನ್ನು ತಲಪಿಸಬೇಕೆಂದು ಬೇಡಿದ. ಅಲಕಾವತಿಗೆ ಮಾರ್ಗನಿರ್ದೇಶ ಮಾಡುವುದೇ ಪೂರ್ವಮೇಘದ ವಸ್ತು. ಇದು ವರ್ಣನಾತ್ಮಕವಾದ ಪೂರ್ವಭಾಗ. ಅಲಕಾವತಿಯಲ್ಲಿ ತನ್ನ ಮನೆಯ ಗುರುತು, ಪ್ರಿಯೆ ಇರಬಹುದಾದ ಸ್ಥಿತಿಯ ವರ್ಣನೆ, ತಲಪಿಸಬೇಕಾದ ಸಂದೇಶ–ಇವು ಉತ್ತರಮೇಘದ ವಸ್ತು.

ಪೂರ್ವಮೇಘವನ್ನು ವರ್ಣನಾತ್ಮಕ ಗೀತೆಯೆಂದೂ ಉತ್ತರ ಮೇಘವನ್ನು ಉತ್ಕಂಠಾ ಗೀತೆಯೆಂದೂ ಕರೆಯಬಹುದು. ಈ ಕಾವ್ಯದ ಪ್ರತಿಯೊಂದು ಶ್ಲೋಕವೂ ರತ್ನಪ್ರಾಯವಾಗಿದೆ. ಇಡಿಯ ಗೀತ ಒಂದು ಭವ್ಯ ರತ್ನಮಾಲಿಕೆಯಂತಿದೆ. ವಿರಹಿಯ ದೃಷ್ಟಿಕೋನದಲ್ಲಿ ಪ್ರತಿಪಾದಿತವಾದ ಪ್ರಕೃತಿಯ, ಪಟ್ಟಣಗಳ, ಜನರ, ವರ್ಣನೆಗಳೂ ವಿರಹಿಗಳ ಮನಸ್ಸನ್ನು ವಿಭಜಿಸಿ ಬೇರೆ ಬೇರೆ ವಿಧಗಳಲ್ಲಿ ರೂಪಿಸಿರುವ ಚಿತ್ರಗಳೂ ಅದಕ್ಕೆ ತಕ್ಕ ವಾಗರ್ಥಗಳೂ ಛಂದಸ್ಸೂ ಕಾಳಿದಾಸನ ಅದ್ಭುತ ಕಲಾ ಪ್ರೌಢಿಮೆಗೆ ನಿದರ್ಶನವಾಗಿವೆ. ಆದುದರಿಂದ ವಿಶ್ವದಲ್ಲಿಯೇ ಈ ಲಘು ಕಾವ್ಯ ವಿಸ್ಮಯಕಾರಕ ಪ್ರಣಯಗೀತೆಯೆಂದು ಪ್ರಸಿದ್ಧಿ ಪಡೆದಿದೆ. (ಎಸ್.ಆರ್.ಎ.)

**ಕುಮಾರಸಂಭವ**: ಕಾಳಿದಾಸನಿಗೆ ಸಂಸ್ಕೃತ ಮಹಾಕವಿಗಳಲ್ಲಿ ಅಗ್ರಸ್ಥಾನವನ್ನು ದೊರಕಿಸುವುದಕ್ಕೆ ರಘುವಂಶದಷ್ಟೇ ಕುಮಾರಸಂಭವವೂ ಕಾರಣವೆನ್ನಬಹುದು. ಎರಡೂ ಮಹಾಕಾವ್ಯಗಳು. ಎರಡೂ ರಾಷ್ಟ್ರೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರನ್ನಗನ್ನಡಿಗಳು. ರಸಭಾವಗಳ ಮಧುರ ನಿರ್ವಹಣೆಯಲ್ಲಿ, ಸಮುಚಿತ ಹಾಗು ಸುಲಲಿತ ಅಲಂಕಾರಗಳ ಸಂಯೋಜನೆಯಲ್ಲಿ, ಪ್ರಕೃತಿಯ ರಮಣೀಯ ಮುಖಗಳ ಹಾಗೂ ಉದಾತ್ತ ಪಾತ್ರಗಳ ಸ್ವಭಾವ ಸುಂದರ ವರ್ತನೆಗಳ ಸಹಜ ಪ್ರತಿಪಾದನೆಯಲ್ಲಿ ಕಾಳಿದಾಸನನ್ನು ಸರಿಗಟ್ಟುವವರು ವಿರಳ. ರಘುವಂಶದ ಆದಿಯಲ್ಲಿ ಕವಿ ವಿನಯವನ್ನು ಪ್ರದರ್ಶಿಸಿರುವಂತೆ ಕುಮಾರಸಂಭವದ ಆದಿಯಲ್ಲಿ ಪ್ರದರ್ಶಿಸಿಲ್ಲ. ಅಲ್ಲಿ ಸೂರ್ಯವಂಶದ ಅನೇಕ ಅರಸರ ವರ್ಣನೆಯಲ್ಲಿ ಕಾವ್ಯ ಬಹುನಾಯಕವೆನಿಸಿದರೆ, ಇಲ್ಲಿ ಜಗತ್ತಿಗೆ ತಾಯ್ತಂದೆಗಳಾದ ಪಾರ್ವತೀಪರಮೇಶ್ವರರ ವಿವಾಹ ಹಾಗೂ ಪುತ್ರಪ್ರಾಪ್ತಿಯ ಏಕೈಕ ವಸ್ತುವಿದೆ; ಶೃಂಗಾರವೊಂದೇ ಪ್ರಧಾನರಸವಾಗಿದೆ. ಇವುಗಳ ಮೇಲಿಂದಲೂ ಕುಮಾರಸಂಭವದ ಕಾವ್ಯನೈಪುಣ್ಯದ ಆಧಾರದಿಂದಲೂ ಕೆಲವು ವಿದ್ವಾಂಸರು ಇದು ರಘುವಂಶದ ರಚನೆಯ ಅನಂತರ ವಿರಚಿತವಾದುದೆಂದು ಬಗೆದರೆ, ಮತ್ತೆ ಕೆಲವರು ಈ ಕಾರಣಗಳಿಂದಲೇ ಇದನ್ನು ಕಾಳಿದಾಸನ ಮೊದಲ ಮಹಾಕಾವ್ಯವೆಂದು ಪರಿಗಣಿಸುತ್ತಾರೆ. ಇದರ ನಿರ್ಣಯ ಕಷ್ಟ.

ಕುಮಾರಸಂಭವದಲ್ಲಿ ಹದಿನೇಳು ಸರ್ಗಗಳು ಅಚ್ಚಾಗಿದ್ದರೂ ಮಲ್ಲಿನಾಥನೇ ಮೊದಲಾದ ಹಿಂದಿನವರ ವ್ಯಾಖ್ಯಾನಗಳು ಸಿಕ್ಕುವುದು ಮೊದಲ ಎಂಟು ಸರ್ಗಗಳಿಗೆ ಮಾತ್ರ. ಸಂಸ್ಕೃತ ಲಕ್ಷಣಕಾರರು ಕೂಡ 9ರಿಂದ 17ರ ವರೆಗಿನ ಸರ್ಗಗಳಿಂದ ಒಂದು ಉದಾಹರಣೆಯನ್ನೂ ಕೂಡ ಎತ್ತಿಕೊಂಡಿಲ್ಲ. ಇದನ್ನು ನೋಡಿದರೆ ಕಾಳಿದಾಸ ಮೊದಲ ಎಂಟು ಸರ್ಗಗಳನ್ನು ಮಾತ್ರ ಬರೆದಿರಬೇಕೆಂದು ಊಹಿಸಬೇಕಾಗುತ್ತದೆ. ಎಂಟನೆಯ ಸರ್ಗದಲ್ಲಿ ಪಾರ್ವತೀಪರಮೇಶ್ವರರ ಸಂಭೋಗ ವರ್ಣನೆ ಮಾತ್ರ ಇರುವುದರಿಂದ ಕುಮಾರಸ್ವಾಮಿಯ ಪ್ರತಾಪವರ್ಣನೆಯನ್ನು ತಾರಕಾಸುರನ ವಧೆಯವರೆಗೆ ಮುಂದಿನ ಅಜ್ಞಾತ ಕವಿಯೊಬ್ಬ ಬರೆದು ಸೇರಿಸಿದಂತಿದೆ. ಮೊದಲ ಎಂಟು ಸರ್ಗಗಳ ಬಂಧಕೌಶಲ ಹಾಗು ಕಾವ್ಯಗುಣಗಳು ಮುಂದಿನ ಭಾಗದಲ್ಲಿ ಕಾಣುವುದೂ ಇಲ್ಲ.

ಪಾರ್ವತಿಪರಮೇಶ್ವರರ ಈ ಕಥೆ ರಾಮಾಯಣದಲ್ಲೂ ಶಿವಸ್ಕಾಂದ ಮುಂತಾದ ಪುರಾಣಗಳಲ್ಲೂ ಸಂಗ್ರಹವಾಗಿ ಇಲ್ಲವೆ ವಿಸ್ತಾರವಾಗಿ ಬಂದಿದೆ. ಅಶ್ವಘೋಷನಿಗೂ ಇದರ ಪರಿಚಯವಿತ್ತು. ಕಾಳಿದಾಸ ಯಾವುದೇ ಮೂಲದಿಂದ ಕಥೆಯನ್ನು ಆಯ್ದಿರಲಿ, ತನ್ನದೇ ಆದ ಪ್ರತಿಭೆಯಿಂದ ಈ ಮಹಾಕಾವ್ಯವನ್ನು ನೆಯ್ದಿದ್ದಾನೆ. ವಟುವೇಷದ ಶಿವನಿಗೂ ಪಾರ್ವತಿಗೂ ನಡೆಯುವ ಸಂವಾದ, ಮನ್ಮಥನ ಪ್ರತಾಪ, ರತಿವಿಲಾಪ, ಶಿವಪಾರ್ವತೀವಿಲಾಸ ಇತ್ಯಾದಿ ವರ್ಣನೆಗಳೆಲ್ಲ ಕವಿಪ್ರತಿಭೆಯೇ ಕಲ್ಪಿಸಿರುವ ಕುಸುಮಗಳಾಗಿವೆ.

ಒಂದನೆಯ ಸರ್ಗದ ಪ್ರಾರಂಭದಲ್ಲಿ ಬರುವ ಹಿಮಾಲಯ ನಗಾಧಿರಾಜನ ವರ್ಣನೆ ಎಷ್ಟೊಂದು ಸಜೀವ ಹಾಗು ಚೇತೋಹಾರಿಯಾಗಿದೆಯೆಂದರೆ ಕಾಶ್ಮೀರವೇ ಕಾಳಿದಾಸನ ಜನ್ಮದೇಶವಾಗಿರಬೇಕೆಂದು ಕೆಲ ವಿದ್ವಾಂಸರು ಇದರ ಮೇಲಿಂದ ಊಹಿಸಿದ್ದಾರೆ. ಕಾಳಿದಾಸನ ಪ್ರತಿಭೆಗೆ ಹಿಮಾಲಯ ಬರಿಯ ಕಲ್ಲು ರಾಶಿಯಲ್ಲ, ಹಿಮದ ಹೆಪ್ಪೂ ಅಲ್ಲ; ಅದು ಭಾರತದ ಭಾಗ್ಯದೇವತೆ; ಪೂರ್ವಪಶ್ಚಿಮ ಸಮುದ್ರಗಳವರೆಗೆ ಮೈಚಾಚಿರುವ ಅಳತೆಗೋಲು; ಆತ ಗಂಗೆ ಪಾರ್ವತಿಯರ ಜನಕ. ಅವನ ಪತ್ನಿ ಮೇನಾದೇವಿ. ಪಾರ್ವತಿಯ ರೂಪಲಾವಣ್ಯಗಳ ವರ್ಣನೆಯ ಸವಿಯನ್ನು ಕಾವ್ಯವನ್ನೋದಿಯೇ ಅರಿಯಬೇಕು. ಉಮೆಯ ಮುಖದ ಮೇಲೆ ಲೀಲೆಯಿಂದಿಳಿದ ಲಾವಣ್ಯದೇವತೆಗೆ ಪದ್ಮದ ಪರಿಮಳವೂ ಚಂದ್ರನ ಕಾಂತಿಯೂ ಒಟ್ಟಿಗೇ ಲಭಿಸಿದುದಂತೆ. ನಾರದನಿಂದ ಈಕೆ ಶಿವನ ಕೈ ಹಿಡಿಯುವಳೆಂಬುದನ್ನರಿತು ಹಿಮವಂತ ಪಾರ್ವತಿಯನ್ನು ಅಲ್ಲಿಯೇ ತಪಗೈಯುತ್ತಿದ್ದ ಶಿವನ ಶುಶ್ರೂಷೆಗೆ ನೇಮಿಸುತ್ತಾನೆ.

ತಾರಕಾಸುರ ಬ್ರಹ್ಮನ ವರಗಳಿಂದ ಕೊಬ್ಬಿ ಇಂದ್ರಾದಿ ದೇವತೆಗಳಿಗೆ ಕೊಡುತ್ತಿದ್ದ ಹಿಂಸೆಯ ವರ್ಣನೆ ಎರಡನೆಯ ಸರ್ಗದ ವಸ್ತು. ಬೃಹಸ್ಪತಿಯ ನೇತೃತ್ವದಲ್ಲಿ ದೇವತೆಗಳೇ ಬ್ರಹ್ಮನ ಬಳಿಗೆ ಬಂದು ಗೋಳಿಡುತ್ತಾರೆ. ದೇವತೆಗಳ ಶಕ್ತಿಯೆಲ್ಲ ತಾರಕಾಸುರನ ಮುಂದೆ ಉಡುಗಿಹೋಗಿ ಅವರು ನಿಸ್ಸಹಾಯರಾಗಿದ್ದಾರೆ. ವಿಷ್ಣು ಚಕ್ರವನ್ನು ಬಿಟ್ಟರೆ ಅದು ರಕ್ಕಸನ ಕೊರಳ ಹಾರವಾಯಿತಂತೆ. ಶಿವಪಾರ್ವತಿಯರಿಗೆ ವಿವಾಹವಾದರೆ ಅವರ ಮಗನಿಂದ ತಾರಕವಧೆಯಾಗುವುದೆಂದು ಬ್ರಹ್ಮ ದೇವತೆಗಳನ್ನು ಸಂತೈಸಿ ಕಳುಹುತ್ತಾನೆ.

ಈ ಕಾರ್ಯಕ್ಕೆ ಮನ್ಮಥನೇ ಯೋಗ್ಯನೆಂದು ಇಂದ್ರ ಅವನಿಗೆ ಮರ್ಯಾದೆ ಮಾಡಿ ಶಿವನ ಮನಸ್ಸನ್ನು ಪಾರ್ವತಿ ಅಪಹರಿಸುವಂತೆ ಮಾಡಬೇಕೆಂದು ನೇಮಿಸುತ್ತಾನೆ. ಮನ್ಮಥನ ಮಿತ್ರನಾದ ವಸಂತನ ಆಗಮನದಿಂದ ಆಶ್ರಮದ ಗಿಡಮರಬಳ್ಳಿಗಳಲ್ಲಿ ಪಶುಪಕ್ಷಿಗಳಲ್ಲಿ ಕೂಡ ಕಾಮವಿಕಾರಗಳು ಅಂಕುರಿಸುವುವು. ಮೂರನೆಯ ಸರ್ಗದ ಈ ಪ್ರಕೃತಿವರ್ಣನೆ ಪಾರ್ವತಿಯ ದಿವ್ಯಸೌಂದರ್ಯದ ವರ್ಣನೆಗೆ ಹಿನ್ನೆಲೆಯಾಗಿ ಬಂದಿದ್ದು ಸಂಸ್ಕೃತ ಸಾಹಿತ್ಯದಲ್ಲಿಯೇ ಅತ್ಯಂತ ರಸಮಯವಾಗಿದೆ. ಸಮಯ ಸಾಧಿಸಿ ಕಾಮ ತನ್ನ ಸಮ್ಮೋಹನಾಸ್ತ್ರವನ್ನು ಶಿವನ ಮೇಲೆ ಪ್ರಯೋಗಿಸುತ್ತಾನೆ. ಒಂದು ಕ್ಷಣ ಅವನ ಮನಸ್ಸೂ ಚಂಚಲವಾಗುತ್ತದೆ. ಮರುಕ್ಷಣವೇ ಅವನ ನೇತ್ರಾಗ್ನಿ ಕಾಮನನ್ನು ಸುಟ್ಟು ಬೂದಿ ಮಾಡುತ್ತದೆ.

ನಾಲ್ಕನೆಯ ಸರ್ಗದ ತುಂಬ ರತಿಯ ಪ್ರಲಾಪ ವರ್ಣಿತವಾಗಿದೆ. ಕರುಣರಸ ಇಲ್ಲಿ ಹೊನಲಾಗಿ ಹರಿದಿದೆ. ಶೃಂಗಾರದಂತೆ ಕರುಣ ರಸಪ್ರತಿಪಾದನೆಯಲ್ಲೂ ಕಾಳಿದಾಸನಿಗಿರುವ ನೈಪುಣ್ಯವನ್ನಿಲ್ಲಿ ಕಾಣಬಹುದು.

ಶಿವನನ್ನು ತನ್ನ ಚೆಲುವಿನಿಂದ ಒಲಿಸಲಾಗದ ಪಾರ್ವತಿ ಉಗ್ರತಪವನ್ನು ಕೈಗೊಳ್ಳುತ್ತಾಳೆ. ಅದರ ವಿಸ್ತಾರವಾದ ವರ್ಣನೆ ಐದನೆಯ ಸರ್ಗದಲ್ಲಿ ಬರುತ್ತದೆ. ಮಹಾ ಮಹಾ ಋಷಿಗಳ ತಪಸ್ಸನ್ನೂ ಅವಳ ದೃಢ ವ್ರತ ಮೀರಿಸಿದೆ. ಕಡೆಗೆ ಶಿವನೇ ಅವಳ ಮನುಶ್ಶುದ್ಧಿಯನ್ನು ಪರೀಕ್ಷಿಸಲೆಂದು ವಟುವೇಷದಲ್ಲಿ ಬರುತ್ತಾನೆ. ಶಿವನ ಅಕಟವಿಕಟ ಸ್ವರೂಪವನ್ನೂ ಮನಬಂದಂತೆ ತೆಗಳುತ್ತಾನೆ. ಎಷ್ಟಾದರೂ ಪಾರ್ವತಿಯ ಮನೋನಿರ್ಧಾರ ಅಚಲವೇ ಎಂಬುದನ್ನು ಮನಗಂಡು ತನ್ನ ನಿಜರೂಪವನ್ನು ತೋರಿಸಿ ಅವಳನ್ನು ವರಿಸಲು ಹೊರಡುತ್ತಾನೆ. ಪಾರ್ವತಿಯ ಮನದಾಸೆ ಕೈಗೂಡುತ್ತದೆ.

ಲೋಕರೀತಿಯಂತೆ ಗುರುಹಿರಿಯರ ಆಶೀರ್ವಾದ ಪಡೆದು ಶಿವಪಾರ್ವತಿಯರು ವಿವಾಹವಾಗುವ ವರ್ಣನೆ ಆರು ಮತ್ತು ಏಳನೆಯ ಸರ್ಗಗಳ ವಿಷಯ. ಗೃಹಸ್ಥ ಜೀವನದ ಆದರ್ಶ ಮೌಲ್ಯಗಳನ್ನೆಲ್ಲ ಇಲ್ಲಿ ಕಾಳಿದಾಸ ಸುಂದರವಾಗಿ ಕಾವ್ಯರೂಪದಿಂದ ಚಿತ್ರಿಸಿದ್ದಾನೆ. ಈ ಭಾಗ ಕೂಡ ಅವನ ಪ್ರತಿಭೆಯ ನಿರ್ಮಾಣಕ್ಷಮತ್ವಕ್ಕೆ ಸೂಚಕವಾಗಿದೆ. ನಾಚುವ ನವವಧು, ಆಶೀರ್ವದಿಸುವ ಮುತ್ತೈದೆಯರು, ಎಲ್ಲರೂ ಮೆಚ್ಚುವ ವಿವಾಹ ವಿಧಿಕಲಾಪಗಳು–ಇವು ಇಂದೂ ನಮ್ಮ ಮನಸ್ಸನ್ನು ಸೆಳೆಯಬಲ್ಲವು.

ಶಯ್ಯಾಗೃಹದಲ್ಲಿ ನವಪ್ರಣಯಿಗಳ ಸುರತವಿಲಾಸದ ವರ್ಣನೆಗೆ ಇಡಿಯಾಗಿ ಎಂಟನೆ ಸರ್ಗ ಮೀಸಲಾಗಿದೆ. ದೇವತೆಗಳ ಶೃಂಗಾರವನ್ನೂ ಲೌಕಿಕ ಕಾಮಶಾಸ್ತ್ರಾನುಸಾರ ಇಲ್ಲಿ ವರ್ಣಿಸಲಾಗಿದ್ದು ಉಜ್ಜ್ವಲ ಅಲಂಕಾರಗಳ ಪ್ರಭೆಯಿಂದ ಅವನ್ನು ಬೆಳಗಿಸಲಾಗಿದೆ. ಹಿಂದಿನ ಲಾಕ್ಷಣಿಕರಲ್ಲಿ ಕೆಲವರು ಇದನ್ನು ಅಸಭ್ಯ ದೋಷವೆಂದು ಕುಂದಿಟ್ಟರೂ ಕಾಳಿದಾಸನ ಪ್ರತಿಭಾತಿಶಯದಿಂದ ದೋಷ ಮರೆಯಾಗಿದೆಯೆನ್ನಲು ಮರೆತಿಲ್ಲ.

ಶೃಂಗಾರರಸ ನಿರೂಪಣೆಯಲ್ಲಿ ಕಾಳಿದಾಸ ಎತ್ತಿದ ಕೈಯೆಂದು ಖ್ಯಾತಿಯಾಂತಿದ್ದಾನೆ. ಅವನ ಈ ವಿಖ್ಯಾತಿಗೆ ಕುಮಾರಸಂಭವ ಕೂಡ ಆಧಾರವಾಗಿದೆ. ದಿವ್ಯ ಸೌಂದರ್ಯದ ನಖಶಿಖಾಂತ ವರ್ಣನೆ, ಶೃಂಗಾರದ ವಿಪ್ರಲಂಭ ಹಾಗು ಸಂಭೋಗ ಮುಖಗಳ ಹೃದಯಸ್ಪರ್ಶಿಯಾದ ನಿರೂಪಣೆ, ತಪಸ್ಸೌಂದರ್ಯದ ಹಾಗು ಪರಮಾತ್ಮನ ಯೋಗಾನುಷ್ಠಾನದ ಮಾರ್ಮಿಕ ಪ್ರತಿಪಾದನೆ; ಹಾಗು ಎಲ್ಲಕ್ಕೂ ಮೇಲೆ ತಪಸ್ಸೌಂದರ್ಯದ, ಕಾಮದಹನದ ಸಾಂಕೇತಿಕಾರ್ಥಧ್ವನಿ, ಭಾರತೀಯ ಸಂಸ್ಕೃತಿಯ ತಿರುಳಾದ ಪುರುಷಾರ್ಥಗಳ ಉಜ್ಜ್ವಲ ಸಮನ್ವಯ ದೃಷ್ಟಿ, ಸಂವಾದಗಳಲ್ಲಿ ತಿಳಿಹಾಸ್ಯ ತಪ್ಪದ ನಾಟಕೀಯತೆ, ಪ್ರಕೃತಿಯ ವಿವಿಧ ಮುಖಗಳ ಭವ್ಯಶಬ್ದ ಚಿತ್ರ ರಚನೆ, ಉತ್ತಮ ಜೀವನದ ಮೀಮಂಸೆ, ಉಪಮೋತ್ಪ್ರೇಕ್ಷಾದಿಗಳ ಸಮುಚಿತ ಚಮತ್ಕಾರ–ಇವೆಲ್ಲವುಗಳಿಂದ ಭರಿತವಾಗಿರುವ ಕುವಾರಸಂಭವ ಇಂದಿಗೂ ಓದುಗರನ್ನು ಆಕರ್ಷಿಸುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. (ಕೆ.ಕೆ.)

**ರಘುವಂಶ** : 19 ಸರ್ಗಗಳ ಮಹಾಕಾವ್ಯ. ಕಾಳಿದಾಸನ ಪಳಗಿದ ಕೈ ಇದರಲ್ಲಿ ಸ್ಪಷ್ಟವಾಗಿದೆ. ಸೂರ್ಯವಂಶದ ರಾಜರ ಚರಿತ್ರೆಯನ್ನಿಲ್ಲಿ ದಿಲೀಪನಿಂದ ಮೊದಲುಗೊಂಡು

ಬರೆಯಲಾಗಿದೆ. ಇದರಲ್ಲಿ ಮೂರು ಘಟ್ಟಗಳನ್ನು ಕಾಣಬಹುದು. ಮೊದಲ ಒಂಬತ್ತು ಸರ್ಗಗಳು ಶ್ರೀರಾಮನ ಪೂರ್ವ ಚರಿತ್ರೆ. 10 ರಿಂದ 15 ಪೂರ್ತಿ ಶ್ರೀರಾಮನ ಕಥೆ. ಮಿಕ್ಕವು ಶ್ರೀರಾಮನ ಅನಂತರದ ಅರಸುಗಳ ಚರಿತ್ರೆ. ದಿಲೀಪನಿಗೆ ಮಕ್ಕಳಿಲ್ಲದಿರಲು ತನ್ನ ಕುಲಗುರುವಾದ ವಸಿಷ್ಠನ ಬಳಿಗೆ ಹೋಗಿ ಅವರ ಉಪದೇಶಾನುಸಾರ ಪತ್ನೀಸಮೇತನಾಗಿ ಸುರಭಿಯ ಮಗಳಾದ ನಂದಿನೀಧೇನುವಿನ ಸೇವೆಯನ್ನು ಮಾಡುತ್ತಿದ್ದ. ಒಂದು ದಿನ ಮಾಯಾಸಿಂಹವೊಂದು ನಂದಿನಿಯನ್ನು ಹಿಡಿದುಕೊಳ್ಳಲು, ಆ ಹಸುವನ್ನು ಸಿಂಹದಿಂದ ಬಿಡಿಸಲು ಬಾಣವನ್ನೆಳೆಯಲು ಹೋದ ರಾಜನ ಕೈ ಬತ್ತಳಿಕೆಗೇ ಅಂಟಿತು. ಆ ಸಿಂಹ ಮನುಷ್ಯರಂತೆ ಮಾತನಾಡಿತು. ಅದರೊಡನೆ ರಾಜ ಬಹಳಕಾಲ ವಾದ ಮಾಡಿದ. ಸಿಂಹ ಯಾವುದಕ್ಕೂ ಒಪ್ಪಲಿಲ್ಲ. ಕಡೆಗೆ ಆ ಹಸುವಿನ ಬದಲು ತನ್ನನ್ನೇ ತಿನ್ನಬೇಕೆಂದು ಆತ್ಮಾರ್ಪಣ ಮಾಡಿದ. ಆಗ ನಂದಿನೀ ಇವನ ಭಕ್ತಿಗೆ ಮೆಚ್ಚಿದಳು. ಸಿಂಹ ಮಾಯವಾಯಿತು. ದಿಲೀಪ ಪುತ್ರ ವರವನ್ನು ಪಡೆದ. ಅನಂತರ ಸುದಕ್ಷಿಣೆಯಲ್ಲಿ ರಘು ಹುಟ್ಟಿದ. ದಿಲೀಪನ ಅನಂತರ ರಾಜನಾದ ರಘು ದಿಗ್ವಿಜಯಕ್ಕಾಗಿ ಹೊರಟ. ಅವನಿಗೆ ಯಾರೂ ಎದುರಾಳಿಗಳೇ ಇರಲಿಲ್ಲ. ಹೀಗೆ ಸರ್ವತ್ರ ಜಯಶಾಲಿಯಾಗಿ ಹಿಂತಿರುಗಿದ ಮೇಲೆ ವಿಶ್ವಜಿತ್ ಯಾಗವನ್ನು ಮಾಡಿ ತನ್ನಲ್ಲಿದ್ದ ಸರ್ವಸ್ವವನ್ನೂ ದಾನ ಮಾಡಿದ. ಈ ಸ್ಥಿತಿಯಲ್ಲಿದ್ದ ರಘುವಿನ ಬಳಿಗೆ ಕೌತ್ಸನೆಂಬ ಋಷಿ ಬಂದು, ಗುರುದಕ್ಷಿಣೆಗಾಗಿ 14 ಲಕ್ಷ ವರಹಗಳು ತನಗೆ ಬೇಕೆಂದು ಕೇಳಿದ. ಕೇಳಿದವರಿಗಿಲ್ಲವೆನ್ನದ ಸ್ವಭಾವವುಳ್ಳ ರಘು ಒಪ್ಪಿಕೊಂಡ. ಆ ಧನವನ್ನು ಸಂಗ್ರಹಿಸಲು ಕುಬೇರನೊಡನೆ ಯುದ್ಧ ಹೂಡಬೇಕೆಂದು ಅಂದುಕೊಂಡ. ಕುಬೇರ ಇವನ ಪರಾಕ್ರಮಕ್ಕೆ ಹೆದರಿ ಆ ರಾತ್ರಿ ರಘುವಿನ ಕೋಶದಲ್ಲಿ ಸುವರ್ಣವೃಷ್ಟಿಯನ್ನು ಕರೆದ. ರಘು ಕೌತ್ಸನಿಗೆ ಆತ ಕೇಳಿದುದಕ್ಕಿಂತಲೂ ಹೆಚ್ಚಾಗಿಯೇ ಧನವನ್ನು ಕೊಟ್ಟು ಸಂತೋಷಗೊಳಿಸಿದ. ಪ್ರತಿಯಾಗಿ ಕೌತ್ಸ ವೀರಪುತ್ರ ಹುಟ್ಟಲೆಂದು ಆಶೀರ್ವದಿಸಿದ. ಆ ಆಶೀರ್ವಾದ ಫಲದಿಂದ ಜನಿಸಿದವನೇ ಅಜ. ವಿದರ್ಭರಾಜನಾದ ಭೋಜನ ತಂಗಿ ಇಂದುಮತಿ ಸ್ವಯಂವರದಲ್ಲಿ ಅಜನನ್ನು ವರಿಸಿದಳು. ಇವರ ಮಗನೇ ದಶರಥ. ಇಂದುಮತಿ ಅಜರು ಒಮ್ಮೆ ಉದ್ಯಾನವನದಲ್ಲಿ ವಿಹರಿಸುತ್ತಿದ್ದಾಗ ದಿವ್ಯ ಪುಷ್ಪಮಾಲೆಯೊಂದು ಇಂದುಮತಿಯ ಮೇಲೆ ಬಿತ್ತು. ಆ ಕ್ಷಣವೇ ಅವಳು ಮೃತಳಾದಳು. ಅಜ ಆಕೆಯ ವಿರಹವನ್ನು ತಾಳಲಾರದೆ ಕುಗ್ಗಿ, ಕಂದಿ, ಹಲವು ವರ್ಷಗಳಲ್ಲಿಯೇ ಸ್ವರ್ಗಸ್ಥನಾದ. ಆ ಬಳಿಕ ರಾಜನಾದ ದಶರಥ ಒಂದು ದಿನ ಬೇಟೆಗೆಂದು ಹೋಗಿದ್ದಾಗ ತಿಳಿಯದೆ ಮುನಿ ಕುಮಾರನನ್ನು ಹೊಡೆದು ಕೊಂದು, ಪುತ್ರಶೋಕದಿಂದ ಸಾಯುವ ಶಾಪವನ್ನು ಪಡೆದ. ಪುತ್ರಕಾಮೇಷ್ಟಿಯಾಗವನ್ನು ಮಾಡಿ ರಾಮ, ಲಕ್ಷ್ಮಣ, ಶತ್ರುಘ್ನ ಮತ್ತು ಭರತರನ್ನು ಪಡೆದ. 11ನೆಯ ಸರ್ಗದಿಂದ 5 ಸರ್ಗಗಳು ಪೂರ್ತಿ ಉತ್ತರ ಕಾಂಡ ಸೇರಿದ ವಾಲ್ಮೀಕಿ ರಾಮಾಯಣದ ಸಂಗ್ರಹ ಬರುತ್ತದೆ. ಅಲ್ಲಿ ಇಲ್ಲಿ ಕೆಲವು ವ್ಯತ್ಯಾಸಗಳನ್ನು ಬಿಟ್ಟರೆ ಕಥೆಯಲ್ಲಿ ವಾಲ್ಮೀಕಿಯನ್ನೇ ಕವಿ ಅನುಸರಿಸಿದ್ದಾನೆ. ರಾಮನ ಅನಂತರ ಕುಶ ಆಮೇಲೆ ಅತಿಥಿ ಅವನಾದ ಮೇಲೆ ನಿಷಧನೇ ಮೊದಲಾದ ರಾಜರು ಆಳಿದರು. ಕಡೆಯವನಾದ ಅಗ್ನಿವರ್ಣ ಸ್ತ್ರೀಲೋಲನಾಗಿದ್ದು ರಾಜ್ಯ ಕಾರ್ಯಗಳನ್ನು ಪೂರ್ಣವಾಗಿ ಮರೆತ. ಕೊನೆಗೆ ಕ್ಷಯರೋಗಕ್ಕೆ ತುತ್ತಾಗಿ ಮಡಿದ. ಗರ್ಭಿಣಿಯಾಗಿದ್ದ ಅವನ ಹೆಂಡತಿಯೇ ಅವನ ಅನಂತರ ರಾಜ್ಯಭಾರವನ್ನು ವಹಿಸಿಕೊಂಡಳು. ಇಲ್ಲಿಗೆ ರಘುವಂಶ ಕಾವ್ಯ ಹಠಾತ್ತನೆ ನಿಲ್ಲುತ್ತದೆ. ಈ ಕಾವ್ಯದ ವಸ್ತುವನ್ನು ವಿಷ್ಣುಪುರಾಣ, ಪದ್ಮಪುರಾಣ ಹಾಗೂ ವಾಲ್ಮೀಕಿ ರಾಮಾಯಣಗಳಿಂದ ಆರಿಸಿಕೊಳ್ಳಲಾಗಿದೆ. ಆದರೂ ದಶರಥನ ಮತ್ತು ಶ್ರೀರಾಮನ ಕಥೆಯನ್ನು ಬಿಟ್ಟರೆ ಮಿಕ್ಕವೆಲ್ಲವೂ ಬಹುಪಾಲು ಕಾಳಿದಾಸನ ಕಲ್ಪನೆಯೆಂದೇ ತೋರುತ್ತದೆ. ರಘುವಿನ ದಿಗ್ವಿಜಯ ಸಂದರ್ಭದಲ್ಲಿ ಭಾರತದಲ್ಲಿ ವಿವಿಧ ಪ್ರದೇಶಗಳನ್ನು ಬಣ್ಣಿಸುವ ಅವಕಾಶವನ್ನು ಕವಿ ಕಲ್ಪಿಸಿಕೊಂಡಿದ್ದಾನೆ. ಇಂದುಮತೀ ಸ್ವಯಂವರದಲ್ಲಿ ಸಭಾಂಗಣದಲ್ಲಿ ನೆರೆದಿದ್ದ ಅನೇಕ ರಾಜರ, ರಾಜಪುತ್ರರ ವರ್ಣನೆ ಮನಮೋಹಕವಾಗಿದೆ. ಅಜವಿಲಾಪ ರತಿವಿಲಾಪದಷ್ಟು ಹೃದಯವನ್ನು ಮುಟ್ಟುವುದಿಲ್ಲ. ಅರಣ್ಯದಲ್ಲಿ ಪರಿತ್ಯಕ್ತಳಾದ ಸೀತೆಯ ಸ್ಥಿತಿ ಕರುಣೆಯ ಚರಮ ಸೀಮೆಯನ್ನು ಮುಟ್ಟಿದೆ. ಕಾಳಿದಾಸ ಮುಖ್ಯವಾಗಿ ಆರಿಸಿಕೊಂಡಿರುವುದೆಲ್ಲವೂ ಆದರ್ಶ ರಾಜರ ಕತೆಗಳನ್ನೇ. ಅವರ ಆದರ್ಶ ಗುಣಗಳನ್ನು ಬಹು ವಿವರವಾಗಿ ಆತ ವರ್ಣಿಸಿದ್ದಾನೆ. ದಿಲೀಪ ಆದರ್ಶ ರಾಜ, ಗುರುಭಕ್ತ, ಶಾಸ್ತ್ರವಿಧಿಗಳನ್ನು ಆಚರಿಸುವುದರಲ್ಲಿ ಬಹಳ ಆಸಕ್ತಿಯುಳ್ಳವ. ಗುರುವಿನ ಆಜ್ಞೆಗೆ ಅಡ್ಡಿ ಬರುವುದಾದರೆ, ತನ್ನ ಜೀವನವನ್ನೇ ಅರ್ಪಿಸುವಷ್ಟು ದಾರ್ಢ್ಯವುಳ್ಳವ. ರಘು ಅಪ್ರತಿಮ ವೀರ, 'ಅರ್ಥಿಕಾಮಾತ್ ಅಧಿಕಪ್ರದ'–ಬೇಡಿದವರ ಬಯಕೆಗಿಂತ ಹೆಚ್ಚಾಗಿಯೇ ಕೊಡುವವನೆಂದು ಬಿರುದು ಹೊತ್ತ ಮಹಾಪುರುಷ. ಸತಿ ಇಲ್ಲದಿದ್ದರೆ ಪತಿ ನಿರ್ಜೀವವೇ ಎಂಬುದನ್ನು ಆದರ್ಶಪ್ರೇಮಿ ಅಜನ ದೃಷ್ಟಾಂತದಿಂದ ಕವಿ ಸಾರಿದ್ದಾನೆ. ಪುತ್ರಪ್ರೇಮದ ಬೆಲೆಯನ್ನು ದಶರಥನ ಚರಿತ್ರೆ ಸ್ಪಷ್ಟಪಡಿಸುತ್ತದೆ. ಶ್ರೀರಾಮ ಅನಂತ ಗುಣನಿಧಿ. ತನ್ನ ಧರ್ಮ ಪ್ರಜಾಪಾಲನ, ಅದಕ್ಕೆ ಬಾಧೆ ಬರದಂತೆ ಏನು ಬೇಕಾದರೂ ಮಾಡಲು ಸಿದ್ಧನೆಂದು ಆತ ತಿಳಿದಿದ್ದ: ಅದಕ್ಕಾಗಿ ಪತ್ನಿಯನ್ನೂ ತ್ಯಜಿಸಿದ. ಅವನ ಪಿತೃಭಕ್ತಿ, ಭ್ರಾತೃವಾತ್ಸಲ್ಯಗಳಿಗೆ ಸಾದೃಶ್ಯವೇ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಶ್ರೀರಾಮ ಏಕಪತ್ನೀ ವ್ರತಸ್ಥ. ಹೀಗೆ ಆದರ್ಶ ವ್ಯಕ್ತಿತ್ವವನ್ನು ಮುಂದಿಡುವ ಈ ಕಾವ್ಯ ಆದರ್ಶ ಕಾವ್ಯವಾಗಿದೆ.

ಇನ್ನೂ ಕಾಳಿದಾಸನ ನಾಟಕಗಳ ವಿಚಾರ. ಕಾಳಿದಾಸ ತನ್ನ ಮೂರು ನಾಟಕಗಳಲ್ಲಿಯೂ ಪ್ರೇಮದ ವಿವಿಧ ಮುಖವನ್ನು ಚಿತ್ರಿಸುತ್ತಾನೆ. ಆತನ ಮಾಲವಿಕಾಗ್ನಿಮಿತ್ರದಲ್ಲಿ ಪ್ರತಿಪಾದಿತವಾಗಿರುವ ಪ್ರೇಮ ಕೇವಲ ಐಹಿಕ. ವಿಕ್ರಮೋರ್ವಶೀಯದಲ್ಲಿ ಪ್ರೇಮದ ಮಟ್ಟ ಕೊಂಚ ಮೇಲೇರುತ್ತದೆ. ಶಾಕುಂತಲದಲ್ಲಿ ಪ್ರೇಮ ಸ್ವರ್ಗದ ಮಟ್ಟಕ್ಕೇರುತ್ತದೆ. ಇಂಥ ಪ್ರತಿಪಾದನೆಗೆ ತಕ್ಕ ಸನ್ನಿವೇಶ ಪಾತ್ರಗಳ ಸೃಷ್ಟಿ ಅಭೂತಪೂರ್ವ ಹಾಗೂ ಅಸದೃಶ ರೀತಿಯಲ್ಲಿ ಕಾಲಿದಾಸತ್ರಯ ಎಂದು ಪ್ರಸಿದ್ಧವಾದ ಈ ನಾಟಕಗಳಲ್ಲಿ ಮೂಡಿಬಂದಿವೆ.

**ಮಾಲವಿಕಾಗ್ನಿಮಿತ್ರ:** ಇದು ಅಂಕಗಳ ನಾಟಕ, ಅಂತಃಪುರದಲ್ಲಿಯೇ ನಡೆದ ಪ್ರಣಯ ವೃತ್ತಾಂತ ಇದರ ವಸ್ತು. ಅಗ್ನಿಮಿತ್ರನೆಂಬ ದೊರೆ ತನ್ನ ಅಂತಃಪುರದಲ್ಲಿ ವೇಷಾಂತರದಲ್ಲಿದ್ದ ಮಾಲವಿಕೆ ಎಂಬ ರಾಜಪುತ್ರಿಯನ್ನು ಕಂಡು ಮೋಹಿಸಿ, ಅವಳನ್ನು ವಿವಾಹವಾದುದು ನಾಟಕದ ಕಥೆ. ಕಥೆ ಕುತೂಹಲದಿಂದ ಪ್ರಾರಂಭವಾಗಿ ಮಧ್ಯೆ ಮಧ್ಯೆ ಅಡ್ಡಿಗಳನ್ನು ಹೊಂದಿ ಕೊನೆಗೆ ಅವೆಲ್ಲವೂ ಆಶ್ಚರ್ಯಕರವಾದ ರೀತಿಯಲ್ಲಿ ದೂರವಾಗಿ ಸುಖಾಂತವಾಗಿ ಪರಿಣಮಿಸಿದೆ. ಕವಿ ಕಥೆಯನ್ನು ಹೊಂದಿಸಿಕೊಳ್ಳುವುದರಲ್ಲಿ ಕೌಶಲವನ್ನು ತೋರಿಸಿರುವಂತೆಯೇ ಮಾತುಗಳನ್ನು ಸಂದರ್ಭಕ್ಕೆ ತಕ್ಕಂತೆ ಸೊಗಸಾಗಿ ಜೋಡಿಸುವುದರಲ್ಲಿಯೂ ತನ್ನ ಜಾಣ್ಮೆಯನ್ನು ಮೆರೆದಿದ್ದಾನೆ. ಆದರ್ಶ ಯುವತಿಯಾದ ಮಾಲವಿಕೆಯ ರೂಪ ಸೌಂದರ್ಯಾದಿಗಳನ್ನೂ ನಟನ ಚಾತುರ್ಯವನ್ನೂ ಪ್ರದರ್ಶಿಸುವಲ್ಲಿ ಕವಿ ಅಮಿತಾಸಕ್ತಿಯನ್ನು ತೋರಿದ್ದಾನೆ. ತನ್ಮೂಲಕ ಪ್ರೇಕ್ಷಕವರ್ಗದವರ ಆಸಕ್ತಿಯನ್ನು ಸೆರೆಹಿಡಿದಿದ್ದಾನೆ. ಮಾಲವಿಕೆ ಅಗ್ನಿಮಿತ್ರರ ಸಮಾಗಮಕ್ಕೆ ವಿದೂಷಕನಿಂದ ಆಗುವ ಅನುಕೂಲಗಳು ಅವನ ಪಾತ್ರಕ್ಕೆ ಕಳೆಕೊಟ್ಟಿವೆ.

**ವಿಕ್ರಮೋರ್ವಶೀಯ:** ಐದು ಅಂಕಗಳ ನಾಟಕ. ಕೇಶಿ ಎಂಬ ದಾನವನಿಂದ ಕಷ್ಟಕ್ಕೊಳಗಾದ ಅಪ್ಸರೆ ಊರ್ವಶಿಯನ್ನು ಪೂರೂರವ ಬಿಡಿಸಿದ್ದರಿಂದ ಆ ರಾಜನಲ್ಲಿ ಅವಳಿಗೆ ಅನುರಾಗ ಹುಟ್ಟಿತು. ಅವರೀರ್ವರ ಪ್ರಣಯ ಕಥೆಯೇ ನಾಟಕದ ವಸ್ತು. ಮಧ್ಯೆ ಊರ್ವಶಿ ಪ್ರಣಯ ಕೋಪದಿಂದ ಕುಮಾರವನವನ್ನು ಪ್ರವೇಶಿಸಿ ಹುಚ್ಚು ಹಿಡಿದು ಅಲೆಯುವ ಪ್ರಸಂಗವನ್ನು ಕವಿ ಹೃದಯಸ್ಪರ್ಶಿಯಾಗಿ ವಿವರಿಸುತ್ತಾನೆ. ವೇದಗಳಲ್ಲಿ ಸೂಚಿತವಾದ ಪುರೂರವ ಊರ್ವಶಿಯರ ಕಥೆ ಪದ್ಮಪುರಾಣ, ವಿಷ್ಣುಪುರಾಣ ಮತ್ತು ಭಾಗವತಗಳಲ್ಲಿ ವಿವರಿಸಲ್ಪಟ್ಟಿದೆ. ಕಥಾ ಸರಿತ್ಸಾಗರದಲ್ಲಿಯೂ ಬರುವುದರಿಂದ ಬೃಹತ್ಕಥೆಯಲ್ಲೂ ಇದು ಇದ್ದಿತೆನ್ನಬಹುದು. ಇವುಗಳ ಆಧಾರದ ಮೇಲೆ ಕಥೆಯನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಕಾಳಿದಾಸ ರೂಪಿಸಿಕೊಂಡಿದ್ದಾನೆ. ಮೇಲಿನ ಎರಡೂ ನಾಟಕಗಳ ಮಹಾರಾಣಿಯರು ಪತಿವ್ರತಾಶಿರೋಮಣಿಗಳು; ಪತಿಯ ಸಂತೋಷಕ್ಕಾಗಿ ತಮ್ಮ ಸುಖವನ್ನೆ ತ್ಯಜಿಸಲು ಸಿದ್ಧರಾದವರು. ಮಾಲವಿಕಾಗ್ನಿಮಿತ್ರದ ಧಾರಣಿ ಉದಾತ್ತಭಾವನೆಯಿಂದ ಪತಿಯ ಹಿತವನ್ನು ಬಯಸಿ ಪ್ರತಿಪಕ್ಷ ವರ್ಗಕ್ಕೆ ಸೇರಿದ ಮಾಲವಿಕೆಯನ್ನು ವಿವಾಹವಾಗಲು ರಾಜನಿಗೆ ತಾನೇ ಅನುಮತಿ ಕೊಡುತ್ತಾಳೆ. ವಿಕ್ರಮೋರ್ವಶೀಯದ ಔಶೀನರಿ ಊರ್ವಶಿಯ ಪ್ರಣಯ ವಿಷಯವನ್ನು ತಿಳಿದು ಮೊದಲು ಕೋಪಿಸಿಕೊಂಡರೂ ಕಡೆಗೆ ತಾನಾಗಿಯೇ ತನ್ನ ಸುಖವನ್ನು ಒತ್ತಿಟ್ಟು, ಪತಿಯ ಸುಖವನ್ನು ಬಯಸುತ್ತಾಳೆ. (ಎಸ್.ಆರ್.ಎ.)

**ಅಭಿಜ್ಞಾನ ಶಾಕುಂತಲ:** ಮಹಾಭಾರತದ ಶಾಕುಂತಲೋಪಾಖ್ಯಾನದ ಅಸ್ಥಿಪಂಜರದಲ್ಲಿ ನಾಟಕೀಯ ವಸ್ತುವಿಗೆ ಬೇಕಾದ ಮೂಲದ್ರವ್ಯಗಳು ಮಾತ್ರ ಕಾಳಿದಾಸನ ಪ್ರತಿಭೆಗೆ ದೊರೆತವೆನ್ನಬಹುದು. ಅತಿಯಾಸೆಯ ಕನ್ಯೆ, ಕಾಮಾತುರನಾದ ರಾಜ ಇವರಿಬ್ಬರೂ ಅನುಚಿತ ಆತುರದಲ್ಲಿ ಕೂಡಿ ಕಾಲಾಂತರದವರೆಗೆ ಹೇಗೆ ಪರಿತಪಿಸಿದರೆಂಬುದೇ ಮೂಲಕಥೆಯಾಗಿತ್ತು. ತನ್ನ ಚೆಲುವಿನ ಗರ್ವವುಳ್ಳ ಕನ್ಯೆ ಅದನ್ನು ಮಾರಿಕೊಳ್ಳಲು ಒಂದು ರಾಜ್ಯವನ್ನೇ ಬೆಲೆಯಾಗಿ ನಿಶ್ಚಯಿಸುತ್ತಾಳೆ. ಇಲ್ಲಿ ಅನುರಾಗದ ಆವೇಗಕ್ಕಿಂತ ಮಾರಾಟದ ವ್ಯವಹಾರವೇ ಹೆಚ್ಚಾದಂತಿದೆ. ಹಿರಿಯರ ಅನುಮತಿಯನ್ನು ಪಡೆಯಬೇಕೆಂದು ಅವರಲ್ಲಿ ಒಬ್ಬರಿಗೂ ಹೊಳೆಯುವುದಿಲ್ಲ. ರಾಜನಾದ ದುಷ್ಯಂತ ಕೂಡ ರಾಜಧಾನಿಯನ್ನು ತಲುಪಿದೊಡನೆ ಶಕುಂತಲೆಯನ್ನು ಕರೆಸಿಕೊಳ್ಳುವುದಾಗಿ ಮಾಡಿದ್ದ ವಾಗ್ದಾನವನ್ನು ಸರಾಗವಾಗಿ ಮರೆತೇ ಬಿಡುತ್ತಾನೆ. ಅವನಿಗೆ ಮತ್ತೆ ನೆನಪು ಮಾಡಿಕೊಡಲು ಅವಳೇ ಆರು ವರ್ಷಗಳ ಕಾಲ ಸುಮ್ಮನಿದ್ದಳೆನ್ನುವುದಾದರೋ ಒಂದು ಸೋಜಿಗವೇ. ಆಗಲೂ ಶಕುಂತಲೆಯ ಅಥವಾ ಅವಳ ಬಾಲಕನ ಅರಿವೇ ತನಗಿಲ್ಲವೆಂದು ರಾಜ ಹಾರಿಕೆಯ ಮಾತನ್ನೇ ಆಡುತ್ತಾನೆ. ಅವರನ್ನು ಸ್ವೀಕರಿಸಿದರೆ ಪ್ರಜೆಗಳೆಲ್ಲ ತನ್ನ ನಡತೆಯನ್ನು ಶಂಕಿಸುವರೋ ಎಂಬ ಅಂಜಿಕೆಯೇ ಅವನಿಗೆ ಪ್ರಬಲವಾಗುತ್ತದೆ. ಹೇಗೋ ಕಡೆಗೊಮ್ಮೆ ಈ ವಿಷಮ ಪರಿಸ್ಥಿತಿಯಿಂದ ಇಬ್ಬರೂ ಪಾರಾಗುವಂತೆ ಅನಿರೀಕ್ಷಿತವಾಗಿ ಅಶರೀರ ವಾಣಿಯ ದೈವ ಸಹಾಯವೊದಗುತ್ತದೆ.

ಪರಿಶುದ್ಧ ಹಾಗು ಉದಾತ್ತವಾದ ಪ್ರೇಮದ ಚಿತ್ರಣವೇ ಕಾಳಿದಾಸನ ವಿವಕ್ಷೆ. ಆದುದರಿಂದ ಆತ ಉಪಾಖ್ಯಾನದ ಶಕುಂತಲೆಯ ವ್ಯಕ್ತಿತ್ವದಲ್ಲಿ ಅನಪೇಕ್ಷಿತ ಅಥವಾ ಅಸಂಭಾವ್ಯವೆನಿಸಿದ

ಅಂಶಗಳನ್ನೆಲ್ಲ ಕೈಬಿಟ್ಟು ಮುಗ್ಧ, ನಿರಾಡಂಬರ, ಕೋಮಲ, ಮಧುರ, ಮನೋಹರ, ಸುಶೀಲಗಳ ಸಾಕಾರಮೂರ್ತಿಯನ್ನಾಗಿ ಆಕೆಯನ್ನು ಚಿತ್ರಿಸುತ್ತಾನೆ. ತಂದೆ ಕಣ್ವರ ಮೇಲೆ ಆಕೆಗಿರುವ ವಿಶೇಷ ಪ್ರೀತಿಗೌರವಗಳನ್ನು ಎತ್ತಿ ತೋರಿಸುತ್ತಾನೆ. ಪಾವನ ತಪೋವನದಲ್ಲಿ ಕನ್ಯೆಯರ ಸಹಜ ಮಧುರ ಜೀವನವನ್ನು ಮನಗಾಣಿಸಲೆಂದು ಆಕೆಗೆ ಅನಸೂಯೆ ಪ್ರಿಯಂವದೆಯರೆಂಬ ಓರುಗೆಯ ಸಖಿಯರಿಬ್ಬರನ್ನು ತರುತ್ತಾನೆ. ನಿಜವಾಗಿ ಕಾಳಿದಾಸನ ಶಕುಂತಲೆ ಪುಣ್ಯಾಶ್ರಮದ ಸುಕುಮಾರ ತರುಲತೆಗಳು, ಜಿಂಕೆಮರಿ, ಪುಟ್ಟಹಕ್ಕಿಗಳೊಡನೆ ತಾದಾತ್ಮ್ಯ ಪಡೆದು ತಾನೂ ಅವುಗಳಲ್ಲಿ ಒಂದೆನಿಸುತ್ತಾಳೆ. ಕಾಳಿದಾಸ ಇಲ್ಲಿ ಚಿತ್ರಿಸಿರುವ ಪ್ರಕೃತಿಯ ಸೌಂದರ್ಯ ಹಾಗು ಮಾಧರ್ಯಗಳ ವಾತಾವರಣವೇ ಸಮ್ಮೋಹಕವಾಗಿದೆ.

ಹೀಗೆಯೇ ದುಷ್ಯಂತನ ಚಾರಿತ್ರದಲ್ಲಿ ರಾಜನಾದ ದುಷ್ಯಂತನಿಗೆ ಸಲ್ಲದ ಕ್ಷುದ್ರ ಮನೋಭಾವ, ಕಾಮಾಂಧತೆ, ಕಪಟ ಮುಂತಾದುವಕ್ಕೆ ಸ್ವಲ್ಪವೂ ಎಡೆಯಿಲ್ಲದಂತೆ ಅವನನ್ನು ಉದಾತ್ತಗೊಳಿಸಲು ಕಾಳಿದಾಸ ಶ್ರಮಿಸಿದ್ದಾನೆ. ದುಷ್ಯಂತನಿಂದಾದ ಶಕುಂತಲಾಪರಿತ್ಯಾಗಕ್ಕೆ ಬೇರೊಂದು ಕಾರಣವನ್ನು ಕಲ್ಪಿಸಿದಲ್ಲದೆ ಇದು ಶಕ್ಯವಿರಲಿಲ್ಲ. ತನ್ನ ಪ್ರತಿಭೆಯ ಒಂದು ಸುಂದರ ನವೋನ್ಮೇಷದಿಂದ ಆತ ಸಿಟ್ಟಿನ ಬೆಂಕಿಯಾದ ದುರ್ವಾಸ ಋಷಿಯ ನೂತನ ಪಾತ್ರವನ್ನೇ ಸೃಷ್ಟಿಸಿ ದುಷ್ಯಂತನ ಪತ್ನೀಪರಿತ್ಯಾಗಕ್ಕೆ ದುರ್ವಾಶಾಪವನ್ನೇ ಪರಮಕಾರಣವೆಂದು ಕಲ್ಪಿಸಿದ. ಅರಿಯದೆ ಶಕುಂತಲೆ ಒಮ್ಮೆ ಕಣ್ವಾಶ್ರಮದಲ್ಲಿ ಅತಿಥಿಯಾಗಿ ಬಂದಿದ್ದ ದುರ್ವಾಸನನ್ನು ಯಥೋಚಿತವಾಗಿ ಸತ್ಕರಿಸದೆ ಅವನ ಕೋಪವನ್ನು ಕೆರಳಿಸಿದ್ದಳು. ಪತಿ ನಿನ್ನನ್ನು ಗಮನಿಸದೆ ಹೋಗಲಿ ಎಂದು ಸಿಟ್ಟಿನ ಭರದಲ್ಲಿ ಆತ ಶಾಪ ಕೊಟ್ಟಿದ್ದ. ಆಗ ಶಕುಂತಲೆ ಇನ್ನೂ ಗರ್ಭಿಣಿ. ಈ ವೃತ್ತಾಂತ ಆಕೆಗೆ ಗೊತ್ತಾಗಲಿಲ್ಲ. ಅವಳ ಸಖಿಯರಿಗೆ ಮಾತ್ರ ಗೊತ್ತಿತ್ತು. ಸಖಿಯರು ಬೇಕೆಂದೇ ಶಕುಂತಲೆಗೆ ಅದನ್ನು ತಿಳಿಸಲಿಲ್ಲ. ಅದಕ್ಕೆ ಪ್ರತಿಯಾಗಿ, ಅವರು ದುರ್ವಾಸರ ಕಾಲಿಗೇ ಬಿದ್ದು, ಅವರಿಂದ ಅಭಯ ಪಡೆದಿದ್ದರು–ದುಷ್ಯಂತನಿತ್ತ ಉಂಗುರವನ್ನು ತೋರಿಸಿದೊಡನೆ ಶಕುಂತಲೆಯನ್ನು ಆತ ಗುರುತಿಸುವನು–ಎಂದು, ಹೀಗೆ ನಾಟಕದಲ್ಲಿ ಅಭಿಜ್ಞಾನ ಅಥವಾ ಉಂಗುರ ಶಕುಂತಲೆಯ ದೈವದ ಸಂಕೇತ ಅಥವಾ ಪ್ರತಿನಿಧಿಯಾಗಿದೆ. ಇದನ್ನು ಕಾಳಿದಾಸನ ಪ್ರತಿಕೌಶಲದ ಪರಮದೃಷ್ಟಾಂತವೆನ್ನಬಹುದು. ಉಂಗುರಕ್ಕೆ ಈ ಸಾಂಕೇತಿಕವಾದ ವಿಶೇಷಾರ್ಥವಿರುವುದೆಂದು ನಮಗೆ ಸೂಚಿಸುವುದಕ್ಕಾಗಿಯೇ ಆತ ನಾಟಕಕ್ಕೆ ಅಭಿಜ್ಞಾನ ಶಾಕುಂತಲವೆಂದು ಹೆಸರಿಟ್ಟು ಅದಕ್ಕೆ ಮಹತ್ತ್ವದ ಸ್ಥಾನವಿತ್ತಿದ್ದಾನೆ. ಈ ಉಂಗುರ ನಾಟಕದುದ್ದಕ್ಕೂ ನಾಯಕನಾಯಕಿಯರ ಭಾಗ್ಯಪರಿವರ್ತನೆಯಲ್ಲಿ ಕಣ್ಣು ಮುಚ್ಚಾಲೆಯಾಟವನ್ನು ಮತ್ತೆ ಮತ್ತೆ ಆಡುತ್ತದೆ.

ಪ್ರಥಮಾಂಕದಲ್ಲಿ ಕನ್ನೆಯರು ದುಷ್ಯಂತನ ಗುರುತನ್ನು ಹಿಡಿಯಲು ಸಹಾಯ ಮಾಡುತ್ತದೆ. ಈ ದುಷ್ಯಂತ ನಾಮಾಂಕಿತವಾದ ಉಂಗುರ. ಅಂಕದ ಕಡೆಗೆ ದುಷ್ಯಂತನೇ ಅದನ್ನು ಶಕುಂತಲೆಯ ಕೈಗೆ ಇಡುತ್ತಾನೆ–ತೋರಿಕೆಗೆ ಅವಳು ತನ್ನ ಸಖಿಯರಿಗೆ ಗಿಡಗಳ ನೀರೆರೆದು ತೀರಿಸಬೇಕಾಗಿರುವ ಸಾಲಕ್ಕೆ ಪ್ರತಿಯಾಗಿ, ವಸ್ತುತಃ ಅವನ ಅನುರಾಗದ ಪ್ರತಿನಿಧಿಯಾಗಿ ಕಣ್ವಾಶ್ರಮದಲ್ಲಿ ಶಕುಂತಲೆ ಇರುವವರೆಗೂ ಅವಳ ಕೈಯಲ್ಲಿಯೇ ಉಂಗುರ ಇತ್ತು. ಆದರೆ ಅವಳು ಪತಿಗೃಹಕ್ಕೆ ಹೊರಟಾಗ ದಾರಿಯಲ್ಲಿ ಸ್ನಾನಕ್ಕೆಂದಿಳಿದ ಶಚೀತೀರ್ಥದಲ್ಲಿ ಅವಳ ಕೈಯಿಂದ ಕಳಚಿಬಿದ್ದು ಮೀನಿನ ಹೊಟ್ಟೆಯನ್ನು ಸೇರಿತು. ದುಷ್ಯಂತನಿಗೆ ತಾನು ಪತ್ನಿಯೆಂದು ಪ್ರಮಾಣಿಸುವ ಏಕೈಕ ಸಾಕ್ಷಿಯಾದ ಈ ಉಂಗುರ ಆಸ್ಥಾನದಲ್ಲಿ ಅವಳ ಕೈಲಿಲ್ಲದೆ ಪೇಚಿಗೆ ಕಾರಣವಾಯಿತು. ಕಾಲಾಂತರದಲ್ಲಿ ಅದು ಮೀನುಗಾರನೊಬ್ಬನಿಗೆ ದೊರೆತು, ಅವನನ್ನು ಹಿಡಿದ ನಗರರಕ್ಷಕರ ಮೂಲಕವಾಗಿ ಮತ್ತೆ ದುಷ್ಯಂತನ ಬಳಿಗೇ ತಿರುಗಿ ಬಂತು. ಅದನ್ನು ಕಂಡೊಡನೆ ದುಷ್ಯಂತನಿಗೆ ಶಕುಂತಲೆಯ ನೆನಪು ಮರಳಿತು–ದುರ್ವಾಸರ ಶಾಪ ಮುಗಿದ ಪ್ರಯುಕ್ತ. ಆಗಿನ ಅವನ ತೀವ್ರ ವಿರಹ ಯಾತನೆ ಅವನ ಅಕಲ್ಮಷ ಪ್ರೇಮವನ್ನು ಕನ್ನಡಿಸುತ್ತದೆ. ದೇವತೆಗಳು ದಿವ್ಯ ಮಾರೀಚಾಶ್ರಮದಲ್ಲಿ ದುಷ್ಯಂತನಿಗೆ ಪತ್ನೀಪುತ್ರರ ಸಮಾಗಮವಾಗಲು ಸಹಾಯ ಮಾಡುತ್ತಾರೆ. ಆಗ ಮತ್ತೆ ಶಕುಂತಲೆಯ ಕೈಬೆರಳಿಗೇ ಆ ಉಂಗುರವನ್ನು ತೊಡಿಸಹೊರಟ ದುಷ್ಯಂತನನ್ನು ಕುರಿತು ಅದರ ಸಹವಾಸವೇ ತನಗಿನ್ನು ಬೇಡುವೆನ್ನುತ್ತಾಳೆ, ಶಕುಂತಲೆ.

ಅತ್ಯಂತ ನಾಟಕೀಯವಾದ ವಸ್ತುಸಂವಿಧಾನದಲ್ಲಿ ಕಾಳಿದಾಸನ ಕಲಾಕೌಶಲವನ್ನು ಎತ್ತಿ ತೋರಿಸುವ ಈ ಪ್ರಮುಖ ವ್ಯತ್ಯಾಸಗಳಲ್ಲದೆ ಆತ ತನ್ನ ಪ್ರತಿಭೆಯಿಂದ ಮನೋಹರ ಪ್ರಕೃತಿ ವರ್ಣನೆಯ ದೃಶ್ಯಗಳನ್ನೂ ತನ್ನದೇ ಅದ ವಿಶಿಷ್ಟ ವ್ಯಕ್ತಿತ್ವವಿರುವ ಗೌಣಪಾತ್ರಗಳನ್ನೂ ಹೊಸದಾಗಿ ಸೃಷ್ಟಿಸಿಕೊಂಡಿದ್ದಾನೆ. ನಾಲ್ಕನೆಯ ಅಂಕದ ಬೀಳ್ಕೊಡಿಗೆಯ ದೃಶ್ಯ ಒಂದು ಸುಂದರ ಭಾವಗೀತಾತ್ಮಕ ಭವ್ಯ ಸನ್ನೀವೇಶ. ಐದನೆಯ ಅಂಕದಲ್ಲಿ ಬರುವ ಪರಿತ್ಯಾಗದ ಶಿಖರಸನ್ನಿವೇಶಕ್ಕೆ ಇದು ಅತ್ಯಂತ ವಿಷಮವಾದ ಹಿನ್ನೆಲೆಯನ್ನು ಮಾರ್ಮಿಕವಾಗಿ ಮಾಡಿಕೊಡುತ್ತದೆ. ಒಂದೊಂದು ಮರಗಿಡಗಳನ್ನೂ ಮೃಗಪಕ್ಷಿಗಳನ್ನೂ ನೆಚ್ಚಿನ ಸಖಿಯರನ್ನೂ ಅಕ್ಕರೆಯ ತಂದೆಯನ್ನೂ ಅಗಲುವ ಶಕುಂತಲೆಯ ಕುರುಣಾಜನಕ ದೃಶ್ಯ ನಮ್ಮ ಹೃದಯವನ್ನು ತಟ್ಟನೆ ಮುಟ್ಟಿ ಅನುಕಂಪೆಯನ್ನು ಕೆರಳಿಸಲು ಆ ಮನೋಧರ್ಮದ ವಿಶ್ವಮಾನವೀಯತೆಯೇ ಕಾರಣ. ಅತ್ತ ತವರಿನ ಜಗತ್ತು, ಇತ್ತ ಕತ್ತಲೆ ಕವಿದ ಭವಿತವ್ಯದ ಜಗತ್ತು ಎರಡರ ನಡುವೆ ಅಂತರಾಳ ಸ್ಥಿತಿಯಲ್ಲಿ ತ್ರಿಶಂಕುವಿನಂತೆ ತೊಳಲುವ ಶಕುಂತಲೆಯ ದಃಖವನ್ನು ಕಂಡು ನಮ್ಮ ಹೃದಯ ಸಹಾನುಭೂತಿಯಿಂದ ಅವಳತ್ತಧಾವಿಸುತ್ತದೆ. ಹೀಗೆಯೇ ದಿವ್ಯ ಮಾರೀಚಾಶ್ರಮದ ಪ್ರಶಾಂತ ಹಾಗೂ ಪಾವನ ವಾತಾವರಣವಾದರೂ ನಮ್ಮ ಹೃದಯವನ್ನು ಪ್ರಶಾಂತ ಪ್ರಭೆಯಿಂದ ತುಂಬುತ್ತದೆ.

ಗಯಟೆ, ಠಾಕೂರ್ ಮುಂತಾದ ವಿಶ್ವವಂದ್ಯ ಮಹಾಕವಿಗಳು ಉತ್ಸಾಹಾತಿಶಯದಿಂದ ಅಭಿಜ್ಞಾನ ಶಾಕುಂತಲ ನಾಟಕವನ್ನು ಮೆಚ್ಚಿ ಬಾಯ್ತುಂಬ ಕೊಂಡಾಡಿರುವುದರ ರಹಸ್ಯವೇ ಇದು. ನವ ವಸಂತದ ಕುಸುಮಸಂಪತ್ತು ಮತ್ತು ಗ್ರೀಷ್ಮಋತುವಿನ ಫಲಸಮೃದ್ಧಿ, ದೇವಲೋಕದ ಸೊಬಗು ಮತ್ತು ಭೂಲೋಕದ ಚೆಲವು. ಅಷ್ಟೇಕೆ ಆತ್ಮತುಷ್ಟಿಯನ್ನು ನೀಡಬಲ್ಲ, ಸಂತೃಪ್ತಿಯನ್ನು ಈಯಬಲ್ಲ ಅಶೇಷ ವಿಶೇಷಗಳೆಲ್ಲವೂ ಶಾಕುಂತಲದಲ್ಲಿ ಸಂಗಮವಾಗಿದೆ ಎಂದು ಗಯಟೆ ಉದ್ಗರಿಸಿದ. ಇದರ ತಾತ್ಪರ್ಯವನ್ನು ಮಾರ್ಮಿಕವಾಗಿ ವಿವರಿಸುತ್ತ ಠಾಕೂರರು ಕುಸುಮಾವಸ್ಥೆಯಿಂದ ಹಿಡಿದು ಫಲಾವಸ್ಥೆಯವರೆಗೆ, ಭೂಲೋಕದ ಅಲ್ಪತೆ ದೇವಲೋಕದ ಪೂರ್ಣತೆಯಲ್ಲಿ ಪರ್ಯವಸಾನಗೊಳ್ಳುವವರೆಗೆ, ಭೌತಿಕ ಆಧ್ಯಾತ್ಮಿಕದಲ್ಲಿ ಐಕ್ಯಗೊಳ್ಳುವವರೆಗೆ ನಾವು ಕಾಣುವ ಕ್ರಮಿಕ ವಿಕಾಸವೇ ಈ ನಾಟಕದ ಜೀವಾಳವೆಂದು ಸ್ಪಷ್ಟಪಡಿಸಿದರು. ಒಂದು ಭೂಮಿಕೆಯಿಂದ ಇನ್ನೊಂದು ಭೂಮಿಕೆಯವರೆಗೆ ವಸ್ತುವನ್ನು ಪರಿಣತಗೊಳಿಸುವುದೇ–ಎಂದರೆ ಪ್ರೇಮವನ್ನು ಪ್ರಾಕೃತಿಕ ಸೌಂದರ್ಯದ ವಲಯದಿಂದ ಆಧ್ಯಾತ್ಮಿಕ ಸೌಂದರ್ಯದ ಶಾಶ್ವತ ಸ್ವರ್ಗಕ್ಕೆ ಏರಿಸುವುದೇ ನಾಟಕದ ಮೂಲೋದ್ದೇಶ. ಇದ್ದಕ್ಕಿದ್ದಂತೆ ಅಕಸ್ಮಾತ್ತಾಗಿ ಬೀಸಿದ ಯೌವನ ವಿಕಾರವೆಂಬ ಒಂದು ಸುಳಿಗಾಳಿ ಅವಳನ್ನು ಒಂದು ದುರ್ಬಲ ಕ್ಷಣದಲ್ಲಿ ದುಷ್ಯಂತನಿಗೆ ಒಪ್ಪಿಸಿತು. ಅಷ್ಟರಿಂದಲೇ ಆತ ಅವಳನ್ನು ನಿಜವಾಗಿ, ಪೂರ್ಣವಾಗಿ, ಒಲಿಸಿಕೊಂಡಂತಾಗಲಿಲ್ಲ. ಒಲುಮೆಯ ಪರಮ ಸಾಧನವೆಂದರೆ ಭಕ್ತಿ, ತಪಸ್ಯೆ. ಆದುದರಿಂದ ಕವಿ ಇಬ್ಬರು ಪ್ರಣಯಿಗಳೂ ಸುದೀರ್ಘ ಹಾಗೂ ಕಠಿಣ ಸಮಸ್ಯೆಯನ್ನು ಆಚರಿಸುವಂತೆ ಅಳವಡಿಸಿ, ಅವರು ಸತ್ಯವಾಗಿ, ಶಾಶ್ವತವಾಗಿ, ಪರಸ್ಪರ ಪ್ರೇಮದ ಪೂರ್ಣ ಪಾತ್ರತೆಯನ್ನು ಪಡೆಯುವಂತೆ ಮಾಡಿದ್ದಾನೆ. ಈ ನಾಟಕದ ವಿಶ್ವವ್ಯಾಪಿಯಾದ ಅಂತರಾರ್ಥವನ್ನು ಇದಕ್ಕಿಂತ ಉತ್ತಮವಾಗಿ ಬಣ್ಣಿಸುವುದು ಅಸಾಧ್ಯ. ಹೀಗೆ ಮೂಲ ಮಹಾಭಾರತದ ಉಪಾಖ್ಯಾನ ಕಥೆಯನ್ನು ಮಾರ್ಪಡಿಸಿ ನಾಯಕ ನಾಯಿಕೆಯರಿಬ್ಬರ ಪಾತ್ರಗಳನ್ನೂ ಉನ್ನತಗೊಳಿಸಿರುವುದಲ್ಲದೆ ಅವರ ಪ್ರೇಮವನ್ನು ಭೂಮಿಯಿಂದ ಸ್ವರ್ಗದವರೆಗೆ ಎಲ್ಲ ಅಂತಸ್ತುಗಳಲ್ಲಿಯೂ ಚಿತ್ರಿಸಿರುವುದು ಕಾಳಿದಾಸನ ಪ್ರತಿಭೆಯ ವೈಶಿಷ್ಟ್ಯವಾಗಿದೆ.

ಇದರಂತೆಯೇ, ದಿವ್ಯ ಹಾಗು ಪಾವನವಾದ ಮಾರಿಚಾಶ್ರಮದಲ್ಲಿ ಬರುವ ಪುನಸ್ಸಮಾಗಮದ ಸನ್ನಿವೇಶ ಕೂಡ ಕಾಳಿದಾಸನ ಉಜ್ವಲ ಪ್ರತಿಭಾ ಸಾಮರ್ಥ್ಯಕ್ಕೆ ಇನ್ನೊಂದು ನಿದರ್ಶನವಾಗಿದೆ. ಇಲ್ಲಿ ಪ್ರತ್ಯಭಿಜ್ಞೆ ಕ್ರಮ ಕ್ರಮವಾಗಿ ಉಂಟಾಗುತ್ತದೆ. ತನಗೊಬ್ಬ ವಂಶದ ಕುಡಿಯಾದ ಮಗನಾದಾನೇ ಎಂದು ಹಾರೈಸಿ ಹಂಬಲಿಸುತ್ತಿರುವ ದುಷ್ಯಂತನಿಗೆ ಕ್ರಮಕ್ರಮವಾಗಿ ಸಿಂಹದ ಮರಿಯೊಡನೆ ಆಡುತ್ತಿರುವ ಆ ಹುಡುಗನೇ ತನ್ನ ಮಗನೆಂಬ ಅರಿವಾಗುತ್ತದೆ. ಆ ಹುಡುಗನ ಮೂಲಕ ಅವನ ತಾಯಿಯಾದ ಶಕುಂತಲೆಯ ಗುರುತೂ ಹತ್ತುತ್ತದೆ. ಆಕೆಯಂತೂ ಅವನ ಪೌರುಷ್ಯವನ್ನೆಲ್ಲ ಮರೆತು ಕ್ಷಮೆಯನ್ನು ವರ್ಷಿಸಲು ಮುಂದಾಗುವ ಪ್ರಾಣಕಾಂತೆಯಾಗಿ ತೊಳಗುತ್ತಾಳೆ. ಅಲ್ಲಿಯ ಶಾಂತತಪೋವನದ ಅತಿಮಾನುಷ ಹಿನ್ನೆಲೆಯಲ್ಲಿ ಇದರ ಸಂಭಾವ್ಯತೆಯೂ ಸಹಜವಾಗಿ ಸಿದ್ಧಿಸುತ್ತದೆ. ಇದೇ ರೀತಿ ಹಿಂದೊಮ್ಮೆ ಕಾಳಿದಾಸನ ಪ್ರತಿಭೆ ಅತಿಮಾನುಷ ಘಟನೆಯನ್ನು ತಂದು ಶಕುಂತಲೆಯನ್ನು ಅತಿ ವಿಷಮವಾದ ಪರಿಸ್ಥಿತಿಯಿಂದ ಪಾರುಮಾಡಿತ್ತು–ದುಷ್ಯಂತನಿಂದ ತಿರಿಸ್ಕೃತೆಯಾದ ಶಕುಂತಲೆಯನ್ನು ಮಾರೀಚಾಶ್ರಮಕ್ಕೆ ಒಯ್ಯಲು ಶಕುಂತಲೆಯ ತಾಯಿ ಮೇನಕೆ ತನ್ನ ಸಖಿ ಸಾನುಮತಿಯನ್ನು ಕಳಿಸಿದಳೆಂದು ವರ್ಣಿಸಿದಾಗ. ಹೀಗೆ ಇಡಿಯ ನಾಟಕ ಸಾಗುವುದು ದೈವಮಾನುಷ ಹಿನ್ನಲೆಯಲ್ಲಿ ಋಷಿಗಳೂ ದೇವತೆಗಳೂ ಮಾನವಲೋಕದ ಪ್ರೇಮಿಗಳನ್ನು ಪರೀಕ್ಷಿಸುತ್ತ, ಒಮ್ಮೆ ಸಹಾಯ ಮಾಡುತ್ತ, ಒಮ್ಮೆ, ವಿಘ್ನವೊಡ್ಡುತ್ತ ಇರುತ್ತಾರೆ. ಮಾನವ ಪಾತ್ರಗಳಾದರೂ ವಾಸ್ತವಿಕ ಜೀವನದ ಸಂಕುಚಿತ ಪರಿಮಿತಿಗಿಂತ ಎಷ್ಟೋ ಮೇಲೆ ಇರತಕ್ಕವರು. ನಾಯಕ ನಾಯಿಕೆಯರಿಬ್ಬರೂ ಒಮ್ಮೊಮ್ಮೆ ಭೂಲೋಕದಿಂದ ದೇವಲೋಕಕ್ಕೆ ಗಮನಾಗಮನವುಳ್ಳವರು. ಪ್ರಧಾನ ಪಾತ್ರಗಳ ಈ ಪೌರಾಣಿಕ ಹಾಗು ದೇವಮಾನುಷ ಅಂಶಗಳನ್ನು ಮರೆತು ಇಂದಿನ ವಾಸ್ತವಿಕ ಸಾಹಿತ್ಯವಿಮರ್ಶೆಯ ಅಳತೆಗೋಲಿಂದ ಪಾತ್ರಗಳನ್ನು ವಿವೇಚಿಸಿದರೆ ಕಾಳಿದಾಸನ ಮೂಲತಾತ್ಪರ್ಯಕ್ಕೇ ಲೋಪ ಬಂದೀತು.

ವಾಸ್ತವಿಕತೆಯ ಅಂಶಗಳೂ ಸೇರ್ಪಡೆಯಾಗಿ ನಾಟಕದ ಸ್ವಾರಸ್ಯ ಹೆಚ್ಚಲೆಂದೇ ಕಾಳಿದಾಸ ಗೌಣಪಾತ್ರಗಳನ್ನು ಸೃಷ್ಟಿಸಿ ತನ್ನ ಜಾಣ್ಮೆಯನ್ನು ಮೆರೆದಿದ್ದಾನೆ. ಇಲ್ಲಿ ಹಾಸ್ಯಗಾರನಾದ ವಿದೂಷಕನಿಗೆ ನಾಯಕನ ಶೃಂಗಾರ ವೃತ್ತಾಂತದಲ್ಲಿ ಯಾವ ಕೈವಾಡವೂ ಇಲ್ಲ. ಶಕುಂತಲೆಯ ಇಬ್ಬರು ಸಖಿಯರಲ್ಲಿ ಅನುಸೂಯೆಯ ಸ್ವಭಾವ ಗಂಭೀರ ಹಾಗು ಮೃದು; ಪ್ರಿಯಂವದೆಯದು ನಕ್ಕು ನಗಿಸುವ, ಮಾತನ್ನು ಹುರಿಯುವ ಮನೋಧರ್ಮ, ಶಕುಂತಲೆಯ ಶಾಪ ವೃತ್ತಾಂತವನ್ನು ಕೂಡ ಇವರು ಆಕೆಗೆ ತಿಳಿಸಲಿಲ್ಲವೆಂಬ ಸನ್ನಿವೇಶ

ರಚನೆಯಿಂದ ವಿಷಮ-ಸಂಘಟನೆಯ (ಡ್ರಮ್ಯಾಟಿಕ್ ಐರನಿ) ನಾಟಕ ತಂತ್ರವನ್ನು ಕವಿ ಯಶಸ್ವಿಯಾಗಿ ಬಳಸಿದ್ದಾನೆ. ಕಣ್ವ ಋಷಿಗಳ ಇಬ್ಬರು ಶಿಷ್ಯರಲ್ಲಿಯೂ ಪರಸ್ಪರ ಸೂಕ್ಷ್ಮ ವೈಲಕ್ಷಣ್ಯಗಳಿವೆ. ಶಾರ್ಙ್ಗರವ ಮುಂಗೋಪಿ ಮತ್ತು ತನ್ನದೇ ಸರಿಯೆಂದುವಾದಿಸುವವ; ಆದರೆ ಶಾರದ್ವತನದು ಪ್ರಸನ್ನ ಹಾಗು ಗಂಭೀರ ಪ್ರಕೃತಿ. ಕಾಳಿದಾಸ ಚಿತ್ರಿಸಿರುವ ಮೀನುಗಾರನೂ ಅವನನ್ನು ಹಿಡಿದು ಗೋಳಿಡಿಸುವ ನಗರಕ್ಷಕರೂ ಕವಿಯ ವಾಸ್ತವಿಕ ಪ್ರಜ್ಞೆ ಹಾಗು ಹಾಸ್ಯ ಪ್ರವೃತ್ತಿಗಳಿಗೆ ಉತ್ತಮ ನಿದರ್ಶನಗಳು. ಹೀಗೆ ಅಭಿಜ್ಞಾನ ಶಾಕುಂತಲ ಸರ್ವಾಂಗಸುಂದರವಾದ ನಾಟಕರತ್ನವೆನಿಸಿದೆ. (ಕೆ.ಕೆ.)

**ಸಮಾರೋಪ:** ಕಾಳಿದಾಸನ ಕೃತಿಗಳಲ್ಲಿ ಕಂಡುಬರುವ ಪ್ರಕೃತಿಯ ಮನಮೋಹಕ ವರ್ಣನೆಗಳು ಸಹೃದಯರ, ವಿಮರ್ಶಕರ ಮನಸೆಳೆದಿವೆ. ಅವನ ಪ್ರತಿಭೆ, ಕಲ್ಪನಾಶಕ್ತಿಗೆ ಮಿತಿಯೇ ಇಲ್ಲ. ಪ್ರಕೃತಿಯನ್ನು ಅನೇಕ ಸಂದರ್ಭಗಳಲ್ಲಿ ವರ್ಣಿಸಿದ್ದರೂ ಒಂದೊಂದು ಸಲವೂ ಹೊಸ ಹೊಸ ಭಾವವನ್ನೇ ಆತ ವ್ಯಕ್ತಗೊಳಿಸಿರುತ್ತಾನೆ. ಪ್ರಕೃತಿ ಚಿತ್ರವೇ ಏಕೆ, ಮಾನವರ ಮನೋಭಾವ. ಅದಕ್ಕೆ ತಕ್ಕ ವ್ಯಾಪಾರಗಳನ್ನು ಸಂಪೂರ್ಣವಾಗಿ ತಿಳಿದಿದ್ದು ಶಬ್ದಗಳ ಮೂಲಕ ಅವು ಸಹೃದಯರ ಅನುಭವಕ್ಕೂ ಬರುವಂತೆ ಚಿತ್ರಿಸುತ್ತಾನೆ. ಶಿವನಿಗೆ ಪಾರ್ವತಿಯನ್ನು ಕೊಟ್ಟು ಮದುವೆ ಮಾಡೆಂದು ಸಪ್ತರ್ಷಿಗಳು ಪರ್ವತರಾಜನೊಡನೆ ಹೇಳುತ್ತಿದ್ದಾಗ ಆತನ ಪಕ್ಕದಲ್ಲಿ ನಿಂತಿದ್ದ ಪಾರ್ವತಿ ತಲೆಬಾಗಿ ಕೈಯಲ್ಲಿದ್ದ ಕಮಲ ಪುಷ್ಪದ ದಳಗಳನ್ನು ಎಣಿಸುತ್ತಿದ್ದಳಂತೆ. ಪಾರ್ವತಿ ಲಜ್ಜಾಶೀಲೆ ಎಂಬುದನ್ನು ಇಲ್ಲಿ ಕವಿ ಕುಶಲತೆಯಿಂದ ಹೊರಗೆಡಹಿದ್ದಾನೆ.

ರಘುವಂಶದ 9ನೆಯ ಸರ್ಗವೊಂದನ್ನು ಬಿಟ್ಟರೆ ಮತ್ತೆಲ್ಲಿಯೂ ಕಾಳಿದಾಸ ಚಿತ್ರಕಾವ್ಯದ ರಚನೆಗೆ ಯತ್ನಿಸಿಲ್ಲ. ಈತ ಚಿತ್ರಗಳಿಂದ ತನ್ನ ಪ್ರತಿಭೆಯನ್ನು ಹೊರಪಡಿಸಲು ಇಚ್ಛಿಸಲಿಲ್ಲ. ಪದಗಳು, ವೃತ್ತಗಳು ಮನಸ್ಸಿನಲ್ಲಿರುವ ಅರ್ಥಭಾವಗಳಿಗೆ ತಕ್ಕಂತೆ ತಾವಾಗಿಯೆ ಈ ಕವಿಯಲ್ಲಿ ಹೊರ ಹೊಮ್ಮುತ್ತವೆ. ಶಿವನ ತಪೋಭಂಗವಾಗದಂತೆ ತೋರಿದಾಗ ಕುಟೀರವದ ಬಾಗಿಲಿನಲ್ಲಿ ನಿಂತ ನಂದಿ ತನ್ನ ಬಾಯ ಮೇಲೆ ಬೆರಳಿಟ್ಟನೋ ಇಲ್ಲವೊ ಎಲ್ಲ ಬಾಹ್ಯಕ್ರಿಯೆಯೂ ಸ್ತಬ್ಧವಾಯಿತಂತೆ. ಮರಗಳು ಸಹ ಅಲ್ಲಾಡಲಿಲ್ಲ. ಈ ಶ್ಲೋಕವನ್ನು ಓದುತ್ತಿರುವಾಗ ಒಂದು ಕ್ಷಣ ನಮಗೂ ಅದೇ ಅನುಭವ ಬರುತ್ತದೆ.

ಕಾಳಿದಾಸ ಯಾವ ಒಂದು ತತ್ತ್ವವನ್ನು ಪ್ರತಿಪಾದಿಸಲು ಯತ್ನಿಸದಿದ್ದರೂ ಅವನ ಕೃತಿಗಳಲ್ಲೆವೂ ಒಂದು ದಾರ್ಶನಿಕ ಹಿನ್ನೆಲೆಯಲ್ಲಿಯೇ ರೂಪುಗೊಂಡಿವೆ, ಕಾಳಿದಾಸನಿಗೆ ಪ್ರಕೃತಿಯೇ ದೇವತೆ, ಅದೇ ಅವನಿಗೆ ಪ್ರಾಣ. ಮೂರು ಲೋಕಗಳೂ ಪ್ರಕೃತಿಯಲ್ಲೇ ಅಡಗಿವೆ. ನಗರ ಸಹ ಪ್ರಕೃತಿಯ ಒಂದು ಮುಖ. ಪ್ರಕೃತಿ ಮಾನವನ ಮೇಲೆ ಪ್ರಭಾವ ಬೀರುವುದು. ಮಾನವನ ಮನೋವೃತ್ತಿಯಿಂದ ಪ್ರಕೃತಿ ಪ್ರಭಾವಿತವಾಗುವುದು. ಯಕ್ಷಪತ್ನಿಯ ವಿರಹಾವಸ್ಥೆಯನ್ನು ಕಂಡು ಮೋಡ ಕಣ್ಣೀರಿಡುವುದು; ಅರಣ್ಯದಲ್ಲಿ ಪರಿತ್ಯಕ್ತಳಾದ ಸೀತೆಯ ಸ್ಥಿತಿಯನ್ನು ಕಂಡು ಸುತ್ತಮುತ್ತಲಿನ ಚೇತನಾಚೇತನ ಪದಾರ್ಥಗಳೆಲ್ಲವೂ ಆಕೆಯೊಡನೆ ಸಮವಾದ ದುಃಖವನ್ನು ಅನುಭವಿಸುವುವು.

ನೃತ್ಯಂ ಮಯೂರಾಃ ಕುಸುಮಾನಿ ವೃಕ್ಷಾಃ
ದರ್ಭಾನುಪಾತ್ತಾನ್ ವಿಜಹುರ್ಹರಿಣ್ಯಃ ।
ತಸ್ಯಾಃ ಪ್ರಪನ್ನೇ ಸಮದುಃಖಭಾವಂ
ಅತ್ಯಂತ್ಯಮಾಸೀದ್ ರುದಿತಂ ವನೇಪಿ ॥ (ರಘುವಂಶ)
ಪ್ರಕೃತಿ ಹೀಗೆ ಮಾನವನ ಸುಖದುಃಖಗಳಲ್ಲಿ ಸಮಭಾಗಿ.

ಕಾಳಿದಾಸನ ಅಭಿಮತದಲ್ಲಿ ಆದರ್ಶಪ್ರೇಮವೆಂಬುದು ಪರಸ್ಪರ ಅನುರಾಗದಿಂದಲಾಗಲೀ ಸಂಭೋಗದಿಂದಲಾಗಲೀ ವ್ಯಕ್ತವಾಗುವುದಲ್ಲ. ವಿಪ್ರಲಂಭವೆಂಬುದು ಪ್ರೇಮಕ್ಕೆ ಪುಟವಿಟ್ಟಂತೆ. ಆ ಪರಿಸ್ಥಿತಿಯನ್ನು ದಾಟಿ ಬಂದರೇ ಅದು ಆದರ್ಶ ಪ್ರೇಮವಾಗುವುದು. ಅಲ್ಲದೆ ಇಂಥ ಪ್ರೇಮಕ್ಕೆ ರೂಪಲಾವಣ್ಯಗಳು ಸಹಾಯಕವಲ್ಲ. ಮನಃಪ್ರವೃತ್ತಿ, ಗುಣ-ಇವೇ ಇದಕ್ಕೆ ಮುಖ್ಯ ಕಾರಣ. ಹೀಗೆ ಏಕಪತ್ನೀತ್ವದ ಮೇಲೆ ನಿಂತಿರುವ ಸಾತ್ತ್ವಿಕವಾದ ಈ ಪ್ರೇಮದ ಕೊನೆಯ ಮೆಟ್ಟಲು ಪ್ರಿಯ ಪ್ರೇಯಸಿಯರ ಐಕ್ಯ-ಅರ್ಧನಾರೀಶ್ವರತ್ವ. ಮೇಲಾಗಿ ಪುತ್ರರತ್ನಜನನ ಈ ಶ್ರೇಷ್ಠ ದಾಂಪತ್ಯದ ಫಲವೆಂದು ಕಾಳಿದಾಸನ ದೃಢನಂಬಿಕೆ. ಈ ಚಿತ್ರಣದಲ್ಲಿಯೂ ಸ್ತ್ರೀಪಾತ್ರಕ್ಕೆ ಕವಿ ವಿಶೇಷ ಗಮನ ಇತ್ತಿದ್ದಾನೆ. ಆದರ್ಶ ಪ್ರೇಯಾಸಿಯಾದವಳು ಆದರ್ಶ ಗೃಹಿಣಿಯೂ ಆಗಬೇಕೆಂದು ಕಾಳಿದಾಸ ಶಾಕುಂತಲದಲ್ಲಿ ಹೇಳುವಂತಿದೆ. ಆಶ್ರಮವಾಸಿಗಳಾದರೂ ಧೀಮಂತರಾದುದರಿಂದ ಲೌಕಿಕವನ್ನು ಬಲ್ಲ ಕಣ್ವರ ಬಾಯಲ್ಲಿ ಒಂದೇ ಶ್ಲೋಕದಲ್ಲಿ ಭಾರತೀಯ ಗೃಹಿಣಿಯರ ಚರಿತ್ರೆಯನ್ನೇ ಬಟ್ಟಿಯಿಳಿಸಿ ಹೇಳಿದ್ದಾನೆ. ಇಂದಿಗೂ ಸ್ತ್ರೀಸಮುದಾಯಕ್ಕದು ಘನತಮ ಬುದ್ಧಿವಾದವಾಗಿದೆ.

ಕಾಳಿದಾಸನ ಮನಸ್ಸು ಭೋಗಾಸಕ್ತಿಯ ಕಡೆಗೆ ಬಾಗಿದ್ದರೂ ಸುಖವೂ ದುಃಖವೂ ಸಮ, ಯಾವುದೂ ಶಾಶ್ವತವಲ್ಲ-ಎಂದು ಆತ ತಿಳಿದಿದ್ದನೆಂದು ಹೇಳಬಹುದು. ಸುಖವನ್ನನುಭವಿಸುವಾಗ ಹಿಗ್ಗುವುದಾಗಲೀ ದುಃಖ ಬಂದಾಗ ಕುಗ್ಗುವುದಾಗಲೀ ಕವಿಗೆ ಹಿಡಿಸುವುದಿಲ್ಲ. ಕಾಳಿದಾಸ ಶೃಂಗಾರವನ್ನು ಚಿತ್ರಿಸುವುದರಲ್ಲಿ ಅಗ್ರಗಣ್ಯನಾದರೂ ಅವನ ಕಾವ್ಯಗಳು ನಾಲ್ಕು ಗೋಡೆಗಳ ಮಧ್ಯದಲ್ಲಿಯೋ ಪ್ರೇಮದ ವನದಲ್ಲಿಯೇ ನಿರ್ಜನವಾದ ಪ್ರಕೃತಿಯ ಮಡಿಲಲ್ಲಿಯೋ ಇರುವಂತೆ ತೋರಿದರೂ ಮಾನವನ ಮನಸ್ಸಿನ ಏರಿಳಿತಗಳನ್ನು ಕವಿ ಚೆನ್ನಾಗಿ ಅರಿತಿದ್ದ ಮತ್ತು ಅವನ್ನು ಕಾವ್ಯದಲ್ಲಿ ಸಹೃದಯರಿಗೆ ಹೃದಯಂಗಮವಾಗುವಂತೆ ಹಿಡಿದಿಡಲು ಸಮರ್ಥನಾಗಿದ್ದ. ಒಟ್ಟಿನಲ್ಲಿ ಕಾಳಿದಾಸ ಆಶಾವಾದಿ; ಧರ್ಮಶ್ರದ್ಧೆ ಮತ್ತು ದೈವಭಕ್ತಿಯುಳ್ಳ ಶ್ರೇಷ್ಠ ಕವಿ.

ತನ್ನ ಕಾವ್ಯಗಳಲ್ಲಿ ವಿಶ್ವಸಾಮಾನ್ಯ ಧರ್ಮಗಳು ಪ್ರತಿಪಾದಿತವಾಗಿರುವುದರಿಂದ ವಿಶ್ವಸಾಹಿತ್ಯದಲ್ಲಿ ಕಾಳಿದಾಸ ಗಣ್ಯಸ್ಥಾನ ಪಡೆದಿದ್ದಾನೆ. ಕವಿಕುಲಗುರುವಾಗಿದ್ದ ಆತನ ಪ್ರಭಾವ ಅವನ ಅನಂತರದವರ ಮೇಲೆ ಹೇರಳವಾಗಿ ಬಿದ್ದಿದೆ. ಯಾವ ಕವಿಯೂ ಕಾಳಿದಾಸನಿಂದ ಸ್ಫೂರ್ತಿ ಪಡೆಯದೇ ಇಲ್ಲ. ಭಾರವಿ, ಬಾಣ, ಭವಭೂತಿಗಳಲ್ಲಿ ಅವನ ಪ್ರಭಾವ ಸ್ಪಷ್ಟವಾಗಿದೆ. ಹಲವರು ಅವನನ್ನು ಅನುಸರಿಸಲು ಪ್ರಯತ್ನಿಸಿರುವುದು ಕಾಳಿದಾಸನ ಉತ್ತಮತೆಗೆ ನಿದರ್ಶನ. ಕೆಲವರಂತೂ ಅವನ ಕಾವ್ಯದಿಂದಲೇ ಅನೇಕ ಭಾವಗಳನ್ನೂ ಶೈಲಿಯನ್ನೂ ಮಾತುಗಳನ್ನೂ ತೆಗೆದುಕೊಂಡಿದ್ದಾರೆ. ಕಾಳಿದಾಸನಂಥ ಕವಿಶ್ರೇಷ್ಠ ಇದುವರೆವಿಗೂ ಹುಟ್ಟಲಿಲ್ಲ; ಅದ್ಯಾಪಿ ತತ್ತುಲ್ಯಕರ್ತೇ ಅಭಾವಾತ್-ಎಂಬ ಮಾತು ಇಂದಿಗೂ ನಿಂತುಹೋಗಿದೆ. (ಎಸ್.ಆರ್.ಎ.)

**ಕನ್ನಡದಲ್ಲಿ ಕಾಳಿದಾಸ:** ನೃಪತುಂಗ, ಪಂಪ, ಪೊನ್ನ, ಹರಿಹರ, ದುರ್ಗಸಿಂಹ, ನಾಗವರ್ಮ ಮುಂತಾದ ಹಳಗನ್ನಡ ಮಹಾಕವಿಗಳೆಲ್ಲ ಕಾಳಿದಾಸನ ಕಾವ್ಯ ನಾಟಕಗಳ ಪರಿಚಯವನ್ನು ಮಾಡಿಕೊಂಡು ಕಾಳಿದಾಸನಿಂದ ಪ್ರಭಾವಿತರಾಗಿದ್ದರೆನ್ನಲು ಸಾಕಷ್ಟು ಆಧಾರಗಳು ದೊರೆಯುತ್ತವೆ. ಬಾಯಿ ತುಂಬ ಕಾಳಿದಾಸನನ್ನು ಹೊಗಳುವುದರ ಜೊತೆಗೆ ಪೊನ್ನನಂಥವರು ಅವನ ಎಷ್ಟೋ ಪದ್ಯಗಳನ್ನು ತಮ್ಮ ಕಾವ್ಯಗಳಲ್ಲಿ ಕನ್ನಡಿಸಿಕೊಂಡಿದ್ದಾರೆ. ಆದರೆ ಕಾಳಿದಾಸನ ಇಡಿಯ ಕೃತಿಗಳನ್ನು ಸಮಗ್ರವಾಗಿ ಅನುವಾದ ಮಾಡುವ ಕಾರ್ಯ ಪ್ರಾರಂಭವಾದುದು 19ನೆಯ ಶತಮಾನದಲ್ಲಿಯೇ ಎಂದು ತೋರುತ್ತದೆ. ಮೈಸೂರು ರಾಜರಲ್ಲಿ ಆಸ್ಥಾನ ಪಂಡಿತರಾಗಿದ್ದ ಸಂಸ್ಕೃತ ಕನ್ನಡ ಪಂಡಿತರೂ ಉತ್ತರ ಕರ್ನಾಟಕದಲ್ಲಿ ಉಚ್ಚ ಶಿಕ್ಷಣ ಪಡೆದ ಲೇಖಕರೂ ತಂತಮ್ಮ ರೀತಿಯಿಂದ ಈ ಅವಧಿಯಲ್ಲಿ ಕಾಳಿದಾಸನ ಕೃತಿಗಳನ್ನೆಲ್ಲ ಕನ್ನಡಕ್ಕೆ ತಂದರು. ಮೈಸೂರು ಕಡೆಗೆ ಬಸವಪ್ಪಶಾಸ್ತ್ರಿಗಳ ಶಾಕುಂತಲ, ಸೋಸಲೆ ಅಯ್ಯಶಾಸ್ತ್ರಿಗಳ ವಿಕ್ರಮೋರ್ವಶೀಯ, ಧಾರವಾಡದ ಕಡೆ ಶಾಂತಕವಿ ಅಥವಾ ಸಕ್ಕರಿ ಬಾಳಾಚಾರ್ಯರ ಶಾಕುಂತಲ ಮತ್ತು ಶೇಷಗಿರಿ ರಾಮಚಂದ್ರ ಚುರಮುರಿ ಅವರ ಶಾಕುಂತಲ-ಇವು ಕನ್ನಡದಲ್ಲಿ ರಚಿತವಾಗಿ ಖ್ಯಾತಿಗೆ ಪಾತ್ರವಾದುವು. ಇದರಂತೆ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳ ಮೇಘದೂತ ಎಸ್.ಜಿ. ನರಸಿಂಹಾಚಾರ್ಯರ ಅಜನೃಪಚರಿತೆ ಮತ್ತು ದಿಲೀಪಚರಿತೆ ಇವನ್ನೂ ಇಲ್ಲಿ ಉಲ್ಲೇಖಿಸಬಹುದು.

ಈ ಪ್ರಖ್ಯಾತ ಕೃತಿಗಳೆಲ್ಲ ಕನ್ನಡ ಸಾಹಿತ್ಯದಲ್ಲಿ ಪರಂಪರಾಗತವಾಗಿದ್ದ ಕಂದ, ವೃತ್ತಗಳ ಶೈಲಿಯಲ್ಲಿಯೋ ಇಲ್ಲವೆ ಷಟ್ಪದಿ ಶೈಲಿಯಲ್ಲಿಯೋ ಬರೆದಂಥವು. ನಾಟಕದಲ್ಲಿ ಬರುವ ಗದ್ಯವೂ ಸ್ವಲ್ಪ ಜಟಿಲವಾಗಿರುವುದೇ ಹೆಚ್ಚು. ಆದರೂ ರಂಗಭೂಮಿಯ ಪ್ರಾಥಮಿಕಾವಸ್ಥೆಯಲ್ಲಿ ಈ ಅನುವಾದಗಳು ಹೆಚ್ಚಿನ ಜನಪ್ರಿಯತೆಗಳಿಸಲು ಅವುಗಳಲ್ಲಿ ಬರುತ್ತಿದ್ದ ಹೊಸ ಹೊಸ ಗೀತಾದಿ ರಚನೆಗಳೂ ಕಾರಣ. ಬಸವಪ್ಪಶಾಸ್ತ್ರಿಗಳಿಗೆ ಅಭಿನವ ಕಾಳಿದಾಸ ಎಂಬ ಆಸ್ಥಾನ ಪ್ರಶಸ್ತಿಯೇ ದೊರಕಿತು. ಅವರ ಅನುವಾದದಲ್ಲಿ ಸ್ವಂತ ಕವಿತೆಯೆನಿಸುವಷ್ಟು ಸಹಜವಾದ ದ್ರಾಕ್ಷಾಪಾಕವನ್ನೂ ಕಾಣಬಹುದು. ಮೂಲದ ಸ್ವಾರಸ್ಯಕ್ಕೆ ಎಲ್ಲಿಯೂ ಕುಂದಾಗದಂತೆ ಈ ಬಗೆಯ ಅನುವಾದ ಮೂಡುವುದಾದರೂ ಒಂದು ಸಾರಸ್ವತ ಸಿದ್ಧಿಯೇ ಸರಿ ಅವರದೇ ಇನ್ನೊಂದು ಅನುವಾದವಾದ ವಿಕ್ರಮೋರ್ವಶೀಯದಲ್ಲಿ ಈ ಬಗೆಯ ಅಪೂರ್ವ ಸಿದ್ಧಿ ಕಾಣಿಸದು. ಉತ್ತರ ಕರ್ನಾಟಕದ ಕಡೆಗೆ ಚುರಮುರಿಯವರ ಶಾಕುಂತಲವೂ ತುಂಬ ಪ್ರಸಿದ್ಧಿಯನ್ನೈದಲು ಅವರ ಭಾಷೆಯ ಸೊಬಗೂ ಹಾಡುಗಳೂ ಕಾರಣವೆನ್ನಬಹುದು. ಇದೇ ರೀತಿಯ ಸಿದ್ಧಕವಿತಾಸಂಪತ್ತು ಕುಕ್ಕೆಯವರ ಮೇಘದೂತದಲ್ಲೂ ಕಾಣಸಿಗುತ್ತದೆ. ರಘುವಂಶದ ಕೆಲವೇ ಸರ್ಗಗಳ ಅನುವಾದವಾದರೂ ಅಜನೃಪಚರಿತೆ, ದಿಲೀಪ ಚರಿತೆಗಳು ಪಠ್ಯಪುಸ್ತಕಗಳಾಗುವಷ್ಟು ಪರಿಣಾಮಕಾರಿ ಷಟ್ಪದೀಪ್ರಯೋಗಗಳು.

ಈ ಪ್ರಸಿದ್ಧ ಪದ್ಯಾನುವಾದಗಳಲ್ಲದೆ ಗದ್ಯರೂಪದಲ್ಲಿಯೂ ಕಾಳಿದಾಸನ ಕೃತಿ ಪರಿಚಯಗಳು ಈ ಕಾಲಕ್ಕೇ ಕನ್ನಡದಲ್ಲಿ ಮೊದಲಿಗೆ ಮೂಡಿ ಬಂದುವು. ಇವುಗಳಲ್ಲೆಲ್ಲ ಪ್ರಾಚೀನಾವಾದುವೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಲ ನಾಟಕ ನವೀನ ಟೀಕೆ. ಬಿ. ಕೃಷ್ಣಪ್ಪನವರ ಕನ್ನಡ ಶಾಕುಂತಲ. ಮೊದಲನೆಯದರಲ್ಲಿ ಮೂಲಕ್ಕಿಂತ ಹೆಚ್ಚಿನ ಎಷ್ಟೋ ಸಂಗತಿಗಳು ಸೇರಿಕೊಂಡಿದ್ದರೆ, ಎರಡನೆಯದರಲ್ಲಿ ಪಾಂಡಿತ್ಯ ಪೂರ್ಣವಾದ ಪೀಠಿಕೆಯೂ ಇದೆ.

ಇಷ್ಟು ಪ್ರಸಿದ್ಧಿಗೆ ಬಾರದ ಮತ್ತೆ ಕೆಲವು ಅನುವಾದಗಳಿವು: ಮಲ್ಲಿಕಾರ್ಜುನಪ್ಪ ಶಿವಲಿಂಗಪ್ಪ ರೈನಾಪುರ, ಅಥಣಿ-ಇವರ ಮೇಘದೂತ (ವಾರ್ಧಕ ಷಟ್ಪದಿ 1910): ಬಳ್ಳಾರಿ ವೈ. ನಾಗೇಶಶಾಸ್ತ್ರಿಗಳ ಕರ್ಣಾಟಕ ರಘುವಂಶ ಮತ್ತು ಕುಮಾರಸಂಭವ (1938); ಬಸವರಾಜಶಾಸ್ತ್ರೀ ಮಲ್ಲಿನಾಥಶಾಸ್ತ್ರೀ ಕೋಡಿಕೊಪ್ಪಮಠ, ಬಿಜಾಪುರ ಇವರ ರಘುವಂಶಸಾರ

ಸಂಗ್ರಹ (1926); ಶಾಂತಕವಿಗಳ ಋತುಸಂಹಾರ; ಧೋಂಡೋ ನರಸಿಂಹ ಮುಳಬಾಗಿಲ ಅವರ ಮಾಳವಿಕಾಗ್ನಿಮಿತ್ರ (1897)–ಇವೆಲ್ಲ ಈಗ ಗ್ರಂಥ ಭಂಡಾರಗಳಲ್ಲಿ ಹುಡುಕಬೇಕಾಗಿರುವ ಅಪೂರ್ವ ಪ್ರತಿಗಳೆನಿಸಿವೆ.

ಅಂಬಿಕಾತಯದತ್ತರು ಕನ್ನಡದಲ್ಲಿ ಒಂದು ವಿನೂತನ ಛಂದಸ್ಸನ್ನು ನಿರ್ಮಿಸಿ ಮೇಘದೂತವನ್ನು ಮೂಲಕ್ಕಿಂತ ಒಂದು ತೂಕ ಹೆಚ್ಚು ಎನಿಸಿವಂತೆ ಭಾವಾನುವಾದ ಮಾಡಿ ಅನುವಾದ ಕ್ಷೇತ್ರದಲ್ಲಿ ಒಂದು ವಿಕ್ರಮವನ್ನೇ ಸಾಧಿಸಿದ್ದಾರೆನ್ನಬಹುದು.

ಸಮೇತನಹಳ್ಳಿ ರಾಮರಾಯರು ಕಾಳಿದಾಸನ ಶಾಕುಂತಲಾ ನಾಟಕವನ್ನು ಆಧರಿಸಿ ಸರಳ ರಗಳೆಯಲ್ಲಿ ಬೃಹತ್ ಕಾವ್ಯವೊಂದನ್ನು ರಚಿಸಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ, ಕಾಳಿದಾಸನ ಸಕಲ ಕೃತಿಗಳನ್ನೂ ಆಧುನಿಕ ಕನ್ನಡಗದ್ಯ ಪದ್ಯಗಳಲ್ಲಿ ಸಂಪೂರ್ಣವಾಗಿ ಅನುವಾದಿಸಿದ ಯಶಸ್ಸು ಎಸ್. ವಿ. ಪರಮೇಶ್ವರ ಭಟ್ಟ ಅವರದು. ಅನುವಾದ ಪದ್ಯಗಳಲ್ಲಿ ಒಮ್ಮೊಮ್ಮೆ ಗದ್ಯಸರಣಿ ಬರುವ ಕೊರತೆಯನ್ನು ಬಿಟ್ಟರೆ ಅವು ಇಂದಿನವರಿಗೆ ತುಂಬ ಪ್ರಯೋಜಕವಾಗಿವೆ. ಕೆ. ಕೃಷ್ಣಮೂರ್ತಿ ಅವರು ಶಾಕುಂತಲವನ್ನು ಹೊಸ ಗದ್ಯದಲ್ಲಿ ಬರೆಯುವ ಯತ್ನವನ್ನು ಮಾಡಿದ್ದಾರೆ.

ಕಾಳಿದಾಸನ ವಿಮರ್ಶೆಯಲ್ಲಿಯೂ ಕನ್ನಡ ಶ್ರೀಮಂತವಾಗಿದೆಯೆನ್ನಬೇಕು. ಕೇವಲ ಕೆಲವು ಪ್ರಬಂಧಗಳನ್ನು ಬರೆದ ಮಾಸ್ತಿ, ತೀ. ನಂ. ಶ್ರೀ., ದ. ರಾ. ಬೇಂದ್ರೆ ಇವರನ್ನು ಬಿಟ್ಟರೂ ಒಂದೊಂದು ನಾಟಕವನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಸ್ವತಂತ್ರ ಗ್ರಂಥಗಳನ್ನು ಬರೆದಿರುವ ಕೀರ್ತಿ ಎಸ್. ವಿ. ರಂಗಣ್ಣನವರದು. ಕಾಳಿದಾಸನ ಸಮಗ್ರ ಪರಿಚಯಕ್ಕಾಗಿ ಎಂ. ಲಕ್ಷ್ಮೀನರಸಿಂಹಯ್ಯನವರಂಥ ಉದ್ದಾಮ ಪಂಡಿತರೂ ಸಿ.ಕೆ. ವೆಂಕಟರಾಮಯ್ಯನವರಂಥ ರಸಿಕರೂ ಆದ್ಯ ರಂಗಾಚಾರ್ಯರಂಥ ಮೇಧಾವಿಗಳೂ ಬೃಹದ್ಗ್ರಂಥಗಳನ್ನೇ ರಚಿಸಿದ್ದಾರೆ. ಸಾಹಿತ್ಯ ಚರಿತ್ರೆಯಲ್ಲಿ ತುಲನಾತ್ಮಕವಾಗಿ ಕಾಳಿದಾಸನ ಸ್ಥಾನವನ್ನು ಎ.ಆರ್. ಕೃಷ್ಣಶಾಸ್ತ್ರಿಗಳ ಸಂಸ್ಕೃತ ನಾಟಕದಲ್ಲಿಯೂ ಕೆ. ಕೃಷ್ಣಮೂರ್ತಿ ಅವರ ಸಂಸ್ಕೃತ ಕಾವ್ಯದಲ್ಲಿಯೂ ಬೆಲೆಕಟ್ಟಿ ನಿರ್ದೇಶಿಸಲಾಗಿದೆ. ಹೀಗೆ ಕನ್ನಡದಲ್ಲಿ ಕಾಳಿದಾಸನ ಗ್ರಂಥಗಳ ಪ್ರಚಾರ, ಅನುವಾದ ಕಾರ್ಯ ಒಂದು ನೂರು ವರ್ಷಗಳಿಂದಲೂ ಅವ್ಯಾಹತವಾಗಿ ಸಾಗಿದೆಯೆನ್ನಲಡ್ಡಿಯಿಲ್ಲ. (ಕೆ.ಕೆ.)

**ಕಾಳಿಂಗ ಸರ್ಪ :** ರೆಪ್ಟಿಲಿಯಾ ವರ್ಗದ ಸ್ಕ್ವಮಾಟ ಗಣದ ಎಲಾಪಿಡೆ ಕುಟುಂಬದ ಸದಸ್ಯ. ಕನ್ನಡದ ಹೆಸರು ಕಾಳಿಂಗ ಸರ್ಪ. ಆಂಗ್ಲಭಾಷೆಯ ಕಿಂಗ್ ಕೋಬ್ರ. ವೈಜ್ಞಾನಿಕ ಹೆಸರು ಓಫಿಯೋಫಾಗಸ್ ಹನ್ನಾ.

ಇದು ತನ್ನ ಕೀರ್ತಿಗೆ ತಕ್ಕಂತೆ ಒಂದು ರಾಜ ಸರ್ಪ. ಎಲಾಪಿಡಿ ಕುಟುಂಬದ ಏಕಸದಸ್ಯವಾದರೂ ಕೆಲವು ವಿಜ್ಞಾನಿಗಳು ಓಫಿಯೋಫಾಗಸ್ ಪ್ರಭೇದದಲ್ಲಿ ಅನೇಕ ಹಾವುಗಳಿವೆ ಎಂದು ಅಭಿಪ್ರಾಯಪಡುತ್ತಾರೆ. ಕಾಳಿಂಗ ಸರ್ಪ ಜಗತ್ತಿನಲ್ಲಿಯೇ ಅತ್ಯಂತ ಉದ್ದದ ವಿಷಕಾರಿ ಸರ್ಪ. ಇದು 15ರಿಂದ 18 ಅಡಿಗಳವರೆಗೆ ಬೆಳೆಯಬಲ್ಲುದು. ಅದರ ಹೊಳೆಯುವ ಕಪ್ಪುಬಣ್ಣದ ದೇಹದುದ್ದಕ್ಕೂ ಇರುವ ಹಳದಿ ಪಟ್ಟಿಗಳೊಂದಿಗೆ ಶೋಭಿಸುತ್ತದೆ. ವಯಸ್ಸಾದಂತೆ ಈ ಹಳದಿ ಪಟ್ಟಿಗಳು ಪೇಲವವಾಗುತ್ತವೆ. ಆದರೂ ಇವುಗಳು ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಬಣ್ಣಗಳಲ್ಲಿ – ಕಪ್ಪು, ಬೂದು, ದಟ್ಟ ಆಲಿವ್ ಹಸುರು, ಕಂದು ಹಳದಿ – ಕಂಡುಬರುತ್ತವೆ. ಕಣ್ಣಿನ ಪಕ್ಕದಲ್ಲಿನ ವಿಸ್ತೃತವಾದ ಒಂದು ಜೊತೆ ಫಲಕಗಳು ಹಾಗೂ ಮೂರನೆಯ ಹಾಗೂ ನಾಲ್ಕನೆಯ ತುಟಿ ಫಲಕದ ನಡುವೆ ಇರದ ಬೆಣೆಯಾಕಾರದ ಫಲಕದಿಂದ ಇತರ ನಾಗರ ಹಾವುಗಳಿಂದ ಇದನ್ನು ಪ್ರತ್ಯೇಕಿಸಬಹುದು.

ನಾಗರಹಾವಿನೊಂದಿಗೆ ಹೋಲಿಸಿದಾಗ ಕಂಡುಬರುವ ಇನ್ನೊಂದು ವ್ಯತ್ಯಾಸವೆಂದರೆ ಇದರ ಹೆಡೆಯ ಆಕಾರ. ಅದು ನಾಗರಹಾವಿನದರಷ್ಟು ಅಗಲವಾಗಿರುವುದಿಲ್ಲ. ಬಹಳ ಉದ್ದದ ಹಾವಾದ್ದರಿಂದ, ಕೆಣಕಿದಾಗ ತನ್ನ ದೇಹವನ್ನು ನಾಲ್ಕು ಅಡಿಗಳಷ್ಟು ಎತ್ತರಕ್ಕೆ ಎತ್ತಿ ಸರಿಸುಮಾರು ಎದುರಿಗೆ ನಿಂತಿರುವವರ ಕಣ್ಣಿನಲ್ಲಿ ಕಣ್ಣಿಟ್ಟು ನೋಡಬಲ್ಲುದು.

ಕಾಳಿಂಗ ಸರ್ಪಗಳು ಮಳೆಕಾಡುಗಳು, ಉಷ್ಣವಲಯದ ತೇವಭರಿತ ಕಾಡುಗಳಿಂದ ತೊಡಗಿ ಕಾಂಡ್ಲವನಗಳು, ಬಿದಿರು ಮೆಳೆ ಹಾಗೂ ಕಾಡಿನ ನೀರಿನ ಝರಿಗಳ ಬಳಿ ಕಂಡುಬರುತ್ತವೆ. ಇವುಗಳ ವ್ಯಾಪ್ತಿ ಹಿಮಾಲಯದ ಕೆಳಗಿನ ದಕ್ಕನ್ ಪ್ರಸ್ಥಭೂಮಿ, ನೇಪಾಲ, ಭೂತಾನ್, ಮಯನ್ಮಾರ್, ಥೈಲೆಂಡ್, ಕ್ಯಾಂಪೂಚಿಯ, ಲಾವೋಸ್, ವಿಯಟ್ನಾಂ, ದಕ್ಷಿಣ ಚೀನ, ಇಂಡೋನೇಷ್ಯ (ಸುಮಾತ್ರ, ಜಾವ, ಬೋರ್ನಿಯೋ) ಮತ್ತು ಫಿಲಿಪೈನ್ಸ್ ಒಳಗೊಂಡಂತೆ ದಕ್ಷಿಣ ಪೂರ್ವ ಏಷ್ಯದ ಅರಣ್ಯಪ್ರದೇಶಗಳು.

ಕಾಳಿಂಗ ಸರ್ಪದ ಆಹಾರ ಕೇವಲ ಇತರೆ ಹಾವುಗಳು. ಅತಿ ಅಪರೂಪವಾಗಿ ಉಡಗಳು. ಇವು ಉತ್ತಮ ಈಜುಗಾರ ಹಾವುಗಳು, ಮರವನ್ನೂ ಚೆನ್ನಾಗಿ ಹತ್ತಬಲ್ಲವು.

ಅತಿವಿಷಕಾರಿ ಹಾವಾದ ಇದು ಒಂದು ಆನೆಯನ್ನು ಕೊಲ್ಲುವಷ್ಟು ವಿಷವನ್ನು ಹೊಂದಿರುತ್ತದೆ. ಆದರೆ, ಇದರ ವಿಷ ವಿಷಸತ್ವಕ್ಕಿಂತ ವಿಷದ ಪ್ರಮಾಣ ಸಾವನ್ನು ತರುತ್ತದೆ ಎಂಬುದು ಗಮನಾರ್ಹ. ಈ ಹಾವು ಒಮ್ಮೆ ಕಚ್ಚಿದಾಗ ಏಳು ಮಿಲಿ ಲೀಟರ್ ವಿಷವನ್ನು ದೇಹಕ್ಕೆ ಸೇರಿಸುವುದರಿಂದ ಶೀಘ್ರವಾಗಿ ಸಾವನ್ನು ತರುತ್ತದೆ.

ಕಾಳಿಂಗ ಸರ್ಪಗಳು ಅತಿ ವಿರಳವಾಗಿ ಮನುಷ್ಯರನ್ನು ಕಚ್ಚುತ್ತವೆ. ಇದರ ಜಾಗತಿಕ ವ್ಯಾಪ್ತಿಯಲ್ಲಿ ಕೇವಲ 32 ಕಚ್ಚಿದ ಪ್ರಸಂಗಗಳು ದಾಖಲಾಗಿದ್ದು, ಇದರ ಒಂದು ಮೂರನೆಯದರಷ್ಟು ಪ್ರಸಂಗದಲ್ಲಿ ಮಾತ್ರ ಸಾವುಂಟಾಗಿದೆ. ಈ ಹಾವಿನ ಕಡಿತಕ್ಕೆ ಪ್ರತಿವಿಷ ಭಾರತದಲ್ಲಿ ದೊರಕುವುದಿಲ್ಲ.

ಈ ಹಾವುಗಳು ತಮ್ಮ 5 – 6ನೆಯ ವಯಸ್ಸಿನಲ್ಲಿ ಲೈಂಗಿಕ ಪ್ರಬುದ್ಧತೆ ಪಡೆಯುತ್ತವೆ. ಜೀವನವನ್ನೆಲ್ಲಾ ಏಕಾಂಗಿಯಾಗಿ ಕಳೆಯುವ ಇವು ಸಂತಾನೋತ್ಪತ್ತಿಗಾಗಿ ಮಾತ್ರ ಜೊತೆಯಾಗುತ್ತವೆ. ವಸಂತಕಾಲದಲ್ಲಿ ಗಂಡು ಹೆಣ್ಣುಗಳು ಕೂಡುತ್ತವೆ. ಹೆಣ್ಣು ಹೊರಸೂಸುವ ವಾಸನೆಯನ್ನನುಸರಿಸಿ ಹಲವಾರು ಗಂಡು ಹಾವುಗಳು ಒಂದು ಹೆಣ್ಣಿಗಾಗಿ ಬರುತ್ತವೆ. ಇಲ್ಲಿ ಹೋರಾಟ ನಡೆದು ಗೆದ್ದ ಹಾವು ಹೆಣ್ಣಿನೊಂದಿಗೆ ಹಲವಾರು ಬಾರಿ ಕೂಡಿದ ಅನಂತರ ತನ್ನ ಏಕಾಂಗಿ ಜೀವನಕ್ಕೆ ಹಿಂದಿರುಗುತ್ತದೆ. ಹೆಣ್ಣು ಮುಂದಿನ ತಿಂಗಳುಗಳಲ್ಲಿ ಗೂಡು ಕಟ್ಟಲು ಸೂಕ್ತ ಜಾಗ ಹುಡುಕುತ್ತದೆ.

ಜಗತ್ತಿನ ಹಾವುಗಳಲ್ಲಿ ಕಾಳಿಂಗ ಸರ್ಪ ಮಾತ್ರ ಗೂಡು ಕಟ್ಟುವ ಹಾವು. ಕಾಲುಗಳಿಲ್ಲದ ಇವು ತಮ್ಮ ಉದ್ದ ಶರೀರ ಹಾಗೂ ದೇಹದ ಮಾಂಸ ಖಂಡಗಳನ್ನು ಬಳಸಿಕೊಂಡು ಉತ್ತಮ ಕೌಶಲದ ಗೂಡನ್ನು ರಚಿಸುತ್ತವೆ. ಹೆಣ್ಣು ಒಮ್ಮೆಗೆ 20 – 50 ಮೊಟ್ಟೆಗಳನ್ನಿಟ್ಟು ಸುಮಾರು 70 – 90 ದಿನಗಳವರೆಗೆ ಕಾವಲು ಕಾಯುತ್ತದೆ. ಇನ್ನೇನು ಮರಿಗಳು ಹೊರ ಬರುತ್ತವೆ ಎನ್ನುವ ಸಂದರ್ಭದಲ್ಲಿ ಹೆಣ್ಣು ಹಾವು ಹೊರಟುಹೋಗುತ್ತದೆ. ಬಹುಶಃ ಕಾಳಿಂಗ ಸರ್ಪಗಳು ಹಾವು ತಿನ್ನುವ ಹಾವುಗಳಾದ್ದರಿಂದ ಈ ಅಭ್ಯಾಸ ಬಂದಿರಬೇಕು. ಹುಟ್ಟಿದ ಕೆಲವು ವಾರಗಳವರೆಗೆ ಮೊಟ್ಟೆಯೊಳಗಿರುವ ಹಳದಿ ಭಾಗದ ಉಳಿಗೆಗಳನ್ನು ತಿಂದು ಬದುಕುವ ಇವು ಅನಂತರ ಕಾಡಿನೊಳಗೆ ಹೋಗಿ ಸಣ್ಣ ಸಣ್ಣ ಹಾವುಗಳನ್ನು ಹಿಡಿದು ತಿನ್ನತೊಡಗುತ್ತವೆ. ಕಾಳಿಂಗ ಸರ್ಪಕ್ಕೆ ಯಾವುದೇ ನೈಸರ್ಗಿಕ ಶತ್ರುಗಳಿಲ್ಲ. ಆದರೆ, ಇದರ ಮರಿಗಳು ಇತರ ಹಾವುಗಳಿಗೆ, ಪಕ್ಷಿ, ಉಡ, ಮುಂಗುಸಿ, ಕಾಡುಹಂದಿ ಮುಂತಾದವುಗಳಿಗೆ ಆಹಾರವಾಗುವುದುಂಟು.

ಮಾನವನಿಂದ ಕಾಡಿನ ಅತಿಕ್ರಮಣದಿಂದಾಗಿ ಕಾಳಿಂಗ ಸರ್ಪಕ್ಕೆ ಆವಾಸದ ಕೊರತೆಯಾಗುತ್ತಿದೆ. ಇದರಿಂದ ಮಾನವ – ಕಾಳಿಂಗ ಸರ್ಪ ಸಂಘರ್ಷ ಹೆಚ್ಚುವುದು. ಕಾಳಿಂಗ ಸರ್ಪವನ್ನು ಭಾರತೀಯ ವನ್ಯಜೀವಿ ಕಾಯಿದೆ, 1972ರ ಎರಡನೆಯ ಪರಿಚ್ಛೇದದಲ್ಲಿ ಸೇರಿಸಲಾಗಿದ್ದು, ಅವನ್ನು ಹಿಡಿಯುವುದು, ಕೊಲ್ಲುವುದು ಶಿಕ್ಷಾರ್ಹ ಅಪರಾಧವಾಗಿದೆ. ಆದರೆ, ಅದರ ಆವಾಸವನ್ನು ರಕ್ಷಿಸದಿದ್ದಲ್ಲಿ ಡ್ರಾಗನ್ನಿನಂತೆ ತನ್ನದೇ ನೆಲೆಯಿಂದ ಶಾಶ್ವತವಾಗಿ ಮರೆಯಾಗಲಿದೆ. (ಪಿ.ಜಿ.)

**ಕಾಳೀ :** ಶಕ್ತಿತ್ರಯ ರೂಪಿಣಿಯಾದ ಪಾರ್ವತಿಯ ರೂಪಾಂತರ. ಕಾಳೀ ದೇವತೆಯ ಮತ್ತೊಂದು ಉಗ್ರರೂಪ ದುರ್ಗೆ. ಭಾರತದಲ್ಲಿ ಎಲ್ಲೆಲ್ಲೂ ಕಾಳೀ ದೇವಸ್ಥಾನಗಳಿವೆ. ಎಲ್ಲಕ್ಕಿಂತ ಪ್ರಸಿದ್ಧವಾದದ್ದು ಹೂಗ್ಲಿನದಿಯ ದಡದಲ್ಲಿ ಕಲ್ಕತ್ತೆಯ ದಕ್ಷಿಣ ಬಡಾವಣೆಯಲ್ಲಿರುವ ಕಾಳೀಘಾಟ್ ದೇವಾಲಯ. ಈ ದೇವತೆಗೆ ನರಬಲಿ ಮತ್ತು ಪಶುಬಲಿ ತುಂಬ ಇಷ್ಟ ಈ ದೇವತೆ ಕತ್ತಿನಲ್ಲಿ ಕಪಾಲುಮಾಲೆಯನ್ನೂ ಎರಡು ಕೈಗಳಲ್ಲಿ ಕತ್ತಿ ಬಾಕುಗಳನ್ನೂ ಮತ್ತೆರಡು ಕೈಗಳಲ್ಲಿ ರಕ್ತ ತೊಟ್ಟಿಕ್ಕುತ್ತಿರುವ ರುಂಡಗಳನ್ನೂ ಹೊಂದಿರುವಂತೆ ರೂಪಿತಳಾಗಿರುತ್ತಾಳೆ. ರಕ್ತಸಿಕ್ತವಾದ ಮುಖದಿಂದ ಕೂಡಿದ್ದು ದೊಡ್ಡದಾದ ತನ್ನ ನಾಲಗೆಯನ್ನು ಹೊರಗೆ ಚಾಚಿರುತ್ತಾಳೆ. ದುರ್ಗಾಷ್ಟಮಿಯ ದಿವಸ ಕೋಲ್ಕತ್ತದ ಕಾಳೀಘಾಟನಲ್ಲಿ ಏಳುನೂರು ಎಂಟುನೂರು ಮೇಕೆಗಳನ್ನು ಈ ದೇವತೆಗೆ ಬಲಿ ಕೊಡುತ್ತಾರೆ. ಶಾಕ್ತೇಯರೂ ಕಾಪಾಲಿಕರೂ ಕಾಳೀದೇವತೆಯ ಪರಮ ಉಪಾಸಕರು. (ಜಿ.ಎಚ್.)

ಕಾಳೀಯ ಒಂದು ಕಂಚಿನ ವಿಗ್ರಹ, ದಕ್ಷಿಣಭಾರತ

**ಕಾಳೀ ನದಿ :** ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಹರಿಯುವ ಒಂದು ನದಿ. ಪಶ್ಚಿಮ ಘಟದಲ್ಲಿ ಸಮುದ್ರಮಟ್ಟದಿಂದ 909 ಮಿ. ಅಡಿ ಎತ್ತರದಲ್ಲಿ ಇದರ ಉಗಮ. ಸ್ವಲ್ಪದೂರ ಆಗ್ನೇಯಾಭಿಮುಖವಾಗಿ ಹರಿದು, ದಾಂಡೇಲಿಯನ್ನು ಸೋಕಿ ನಿಬಿಡಾರಣ್ಯಗಳನ್ನು ಹಾಯ್ದು ಅನಂತರ ಪಶ್ಚಿಮಕ್ಕೆ ಮೊಗಮಾಡಿ ಘಟ್ಟದ ಇಳಿಜಾರಿನಲ್ಲಿ ಜಿಗಿದು, ಉತ್ತರ ಕನ್ನಡ ಜಿಲ್ಲೆಯ ಕೇಂದ್ರವಾದ ಕಾರವಾರದ ಬಳಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಈ ನದಿಯ ಉದ್ದ ಕೇವಲ 161 ಕಿಮೀ. ಇದು ಹರಿಯುವ ಮಾರ್ಗದಲ್ಲಿ

ಬಹುಭಾಗ ಪರ್ವತ ಪ್ರದೇಶ. ಕಡಲು ಸೇರುವ ಮುನ್ನ ಇದು ದಾಟುವ ಕರಾವಳಿ ಕೂಡ ತೀರ ಕಿರಿದು. ಆದ್ದರಿಂದ ಇದು ನೀರಾವರಿಗೆ ಹೆಚ್ಚಾಗಿ ಉಪಯುಕ್ತವಾಗಿಲ್ಲ. ಕಾಳೀ ನದಿಯ ಇಡೀ ಜಲಾನಯನ ಪ್ರದೇಶದಲ್ಲಿ (12319 ಚ.ಕಿಮೀ) ವರ್ಷಕ್ಕೆ ಸು. 889 ಸೆಂಮೀ ಮಳೆಯಾಗುತ್ತದೆ. ಕಾಳಿಯೂ ಇದರ ಉಪನದಿಗಳಾದ ಪಂಡ್ರಿ, ಬಾರ್ಚಿ, ತಟ್ಟಿಹಳ್ಳ, ಕಾನೇರಿ ವಾಕಿ ಮತ್ತು ಮಾರ್ದಿ ನದಿಗಳೂ ಮಳೆಗಾಲದಲ್ಲಿ (ಜೂನ್–ಸೆಪ್ಟೆಂಬರ್) ತುಂಬಿ ಹರಿಯುತ್ತವೆ. ಈ ನದಿಯ ನೀರಿನ ಘನಗಾತ್ರ 278 ಟಿಎಂಸಿ ಅಡಿ.

ಕಾಳಿಯ ಅಗಾಧ ಜಲರಾಶಿಯನ್ನು ನೀರಾವರಿಗೆ ಹೆಚ್ಚಾಗಿ ಬಳಸಿಕೊಳ್ಳಲು ಅವಕಾಶವಿಲ್ಲವಾದರೂ ಇದರ ವಿದ್ಯುತ್‌ವಿಭವ ಅಗಾಧವಾದ್ದು (13 ಲಕ್ಷ ಕಿವಾ.) ಈ ಪ್ರದೇಶದಲ್ಲಾಗುವ ಮಳೆಯಲ್ಲಿ ಶೇ. 90 ರಷ್ಟು ಕೇವಲ ನಾಲ್ಕು ತಿಂಗಳುಗಳಲ್ಲಿ–ಜೂನ್ ಮಧ್ಯದಿಂದ ಅಕ್ಟೋಬರ್ ಮಧ್ಯದವರೆಗೆ–ಬೀಳುವುದರಿಂದ ವರ್ಷವಿಡೀ ವಿದ್ಯುದುತ್ಪಾದನೆ ಸಾಧ್ಯವಾಗುವಂತೆ ಇದರ ಪ್ರವಾಹವನ್ನು ನಿಯಂತ್ರಿಸುವುದು ಅವಶ್ಯ. ನದಿ ಅರಬ್ಬೀ ಸಮುದ್ರವನ್ನು ಸೇರುವ ಮುನ್ನ ಅದರಿಂದ ಆದಷ್ಟು ಹೆಚ್ಚಿನ ಪ್ರಯೋಜನ ಪಡೆಯುವ ಸಲುವಾಗಿ ಅಲ್ಲಲ್ಲಿ ಜಲಾಶಯಗಳನ್ನು ನಿರ್ಮಿಸಿ ವಿದ್ಯುದುತ್ಪಾದನ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯ ನಡೆದಿದೆ. ವಿದ್ಯುತ್ತಿನ ಅಭಿವೃದ್ಧಿಗಾಗಿ ಯೋಜನೆಯೊಂದನ್ನು ರಚಿಸಲಾಗಿದ್ದು, ಅಂತಿಮವಾಗಿ ಈ ಕಣಿವೆಯಲ್ಲಿ ಎಂಟು ಕಟ್ಟೆಗಳನ್ನೂ ಆರು ವಿದ್ಯುತ್ ಕೇಂದ್ರಗಳನ್ನೂ ನಿರ್ಮಿಸಬೇಕೆಂಬುದು ಉದ್ದೇಶ.

ಕಾಳೀ ಜಲವಿದ್ಯುತ್ ಯೋಜನೆಯ ಮುಖ್ಯ ಜಲಾಶಯವನ್ನು ಸುಪದ ಬಳಿ ನಿರ್ಮಿಸಲಾಗಿದೆ. ಅಲ್ಲಿಯ ಕಟ್ಟೆಯ ಎತ್ತರ 97 ಮೀ 10 ಲಕ್ಷ ಕಿವಾ. ವಿದ್ಯುತ್ತಿನ ಉತ್ಪಾದನೆಗೆ ತಗಲುವುದೆಂದು ನಿರೀಕ್ಷಿಸಿರುವ ವೆಚ್ಚ ರೂ. 120 ಕೋಟಿ ಕನಿಷ್ಠ ವೆಚ್ಚದಲ್ಲಿ ಅತ್ಯಂತ ಶೀಘ್ರವಾಗಿ ಇದರ ಫಲ ದೊರಕುವಂತೆ ಯೋಜನಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು.

ಮೊದಲನೆಯ ಹಂತದಲ್ಲಿ ಬೊಮ್ಮನಳ್ಳಿಯ ಬಳಿ ಕಾಳೀ ನದಿಗೆ ಅಡ್ಡಲಾಗಿ 23 ಮೀ ಎತ್ತರದ ಕಟ್ಟೆ ಕಟ್ಟಲಾಗಿದೆ. ಇದರಿಂದ ನಿರ್ಮಿತವಾದ ಸರೋವರದ ನೀರನ್ನು 882 ಮೀ ಉದ್ದದ ಒತ್ತಡ ಸುರಂಗವೊಂದರ ಮೂಲಕ 150 ಸೆಂಮೀ ವ್ಯಾಸ ಮತ್ತು 68 ಮೀ ಆಳದ ತೊಟ್ಟಿಯೊಳಕ್ಕೆ ಹರಿಸಿ ಅದಕ್ಕೆ ತಲಾ 1/2 ಮೀ ವ್ಯಾಸ ಮತ್ತು 772 ಮೀ ಉದ್ದ ಇರುವ ಎರಡು ತೂಬುಗಳನ್ನು ನಿರ್ಮಿಸಲಾಗಿದೆ. ಇದರಿಂದ 353 ಮೀ ಔನ್ನತ್ಯ ದೊರಕುತ್ತದೆ. ತಲಾ 165 ಮೆವಾ.ನ ವಿದ್ಯುಜ್ಜನಕ ಯಂತ್ರಗಳನ್ನು ಸ್ಥಾಪಿಸಿ ಇಲ್ಲಿ ಉತ್ಪತ್ತಿಯಾದ ವಿದ್ಯುತ್ತನ್ನು ಸು. 64 ಕಿಮೀ ದೂರದಲ್ಲಿರುವ ಹುಬ್ಬಳ್ಳಿಗೆ ಸಾಗಿಸಲಾಗುತ್ತದೆ. ಕಾಳಿ, ಶರಾವತಿ ಮತ್ತು ಮುನಿರಾಬಾದ್ (ತುಂಗಭದ್ರಾ ಎಡದಂಡೆ) ವಿದ್ಯುಜ್ಜನಕ ಕೇಂದ್ರಗಳಿಗೆ ಹುಬ್ಬಳ್ಳಿಯ ವಿದ್ಯುತ್ ಸ್ವೀಕಾರ ಕೇಂದ್ರದ ಸಂಪರ್ಕವಿರುತ್ತದೆ.

ಅತ್ಯಂತ ಕಡಿಮೆ ವೆಚ್ಚದಲ್ಲಿ, ಬಹುತೇಕ ದೇಶೀಯ ಸಲಕರಣೆ ಮತ್ತು ತಂತ್ರಜ್ಞಾನದ ನೆರವಿನಿಂದ ಅನುಷ್ಠಾನಕ್ಕೆ ತರಲಾದ ಈ ಯೋಜನೆಯನ್ನೂ ಕಾರ್ಯಗತಗೊಳಿಸುವ ಹೊಣೆಯನ್ನು ಕರ್ನಾಟಕ ಪವರ್ ಕಾರ್ಪೋರೇಷನ್ ಹೊತ್ತಿದೆ. *

**ಕಾಳು ಕೊರೆಯುವ ಕುಟ್ಟಿ :** ಕೋಲಿಯಾಪ್ಟಿರ ಗಣದ ಬ್ರಾಸ್ಟೈಕಿಡೀ ಕುಟುಂಬಕ್ಕೆ ಸೇರಿದ ರೈಜೋಪರ್ತ ಡಾಮಿನಿಕ ಎಂಬ ವೈಜ್ಞಾನಿಕ ಹೆಸರಿನ ಕೀಟ. ಪೀಪಾಯಿ ಆಕಾರದ ದೇಹ, ಮಾಸಲು ಕಪ್ಪುಬಣ್ಣ, ಕೆಳಕ್ಕೆ ಬಗ್ಗಿದಂಥ ತಲೆ, ತಲೆಯ ಮುಂದಕ್ಕೆ ಚಾಚಿರುವ ಎದೆಯ ಮೊದಲ ಖಂಡ. ತುದಿಯಲ್ಲಿ ಉಬ್ಬಿರುವ ಕುಡಿ ಮೀಸೆಗಳು–ಇದರ ಮುಖ್ಯಲಕ್ಷಣಗಳು. ಇದು ದ್ವಿದಳ ಧಾನ್ಯಗಳಲ್ಲಿ ಉಂಡೆ ಕಾಳುಗಳಿಗೆ ಮಾತ್ರ ಕಂಟಕಕಾರಿ. ಸಾಮಾನ್ಯವಾಗಿ ಅಕ್ಕಿ ಸೊಂಡಿಲುಕೀಟದೊಂದಿಗೆ ಇರುವುದುಂಟು. ತಾಯಿಕೀಟ ಒಂದು ಬಾರಿಗೆ ಸು.500 ಮೊಟ್ಟೆಗಳನ್ನಿಡುತ್ತದೆ. ಹುಳುಗಳು ಪ್ರಾರಂಭದಲ್ಲಿ ಕಾಳಿನ ಹೊರಗಿನ ಧೂಳು, ಹುಡಿ ತಿಂದುಕೊಂಡಿದ್ದು ಆಮೇಲೆ ಕಾಳನ್ನು ಕೊರೆದು ಒಳಗೆ ಪ್ರವೇಶಿಸುತ್ತವೆ. ಕಾಳಿನ ಮೇಲೆ ಕಾಣಿಸುವ ರಂಧ್ರಗಳು ಪ್ರೌಢಕೀಟ ಹೊರಗೆ ಬಂದ ತೂತುಗಳೇ ವಿನಾ ಮರಿ ಒಳಗೆ ಹೋಗಲು ಮಾಡಿದುವಲ್ಲ. ಕೀಟಗಳು ಸುಮಾರು ನಾಲ್ಕು ವಾರ ಬದುಕಿರುತ್ತವೆ. (ಡಿ.ಎಸ್.)

**ಕಾಳೆ, ಭಿ ಪ :** 1889–. ಕನ್ನಡ ಗ್ರಂಥಕರ್ತ, ಪ್ರಕಾಶಕ, ಮುದ್ರಕ. ಭಿಕಾಜಿಪಂತ ಕಾಳೆ ಎಂಬುದು ಇವರ ಪೂರ್ಣನಾಮ. ಭಿ. ಪ. ಕಾಳೆ ಎಂದು ಪ್ರಸಿದ್ಧರಾಗಿದ್ದಾರೆ. ತಂದೆ ಪರಶುರಾಮ ಪಂತ. ಕಾಳೆ ಎಂಬುದು ಮನೆತನದ ಹೆಸರು.

ಧಾರವಾಡ ಜಿಲ್ಲೆಯ ಕುಂದುಗೋಳ ತಾಲ್ಲೂಕಿನ ಸಾಂಸಿ ಗ್ರಾಮದಲ್ಲಿ 1889ರ ಜನವರಿ 20ರಂದು ಇವರ ಜನನ. ಆಗ ಇದು ಪಟವರ್ಧನ ಸಂಸ್ಥಾನಿಕರ ಆಡಳಿತಕ್ಕೆ ಒಳಪಟ್ಟಿದ್ದು ಕುರಂದವಾಡ ಸಂಸ್ಥಾನಿಕರ ಅಧೀನದಲ್ಲಿತ್ತು. ಸಂಸ್ಥಾನಿಕರ ಮನೆ ಮಾತು ಮರಾಠಿಯಾಗಿದ್ದುದರಿಂದ ಅವರ ಆಡಳಿತದ ಭಾಷೆಯೂ ಮರಾಠಿಯೇ ಆಗಿತ್ತು. ಎಂತಲೇ ನೂರರಲ್ಲಿ ನೂರು ಜನ ಕನ್ನಡಿಗರಿಂದಲೇ ತುಂಬಿದ್ದ ಸಾಂಸಿ ಗ್ರಾಮವೂ ಮರಾಠಿಯ ಪ್ರಭಾವಕ್ಕೆ ಒಳಗಾಗಿತ್ತು.

ಆಡಳಿತಭಾಷೆಯ ಕಾರಣದಿಂದಲೇ ಮಹಾರಾಷ್ಟ್ರದಿಂದ ಪಟವರ್ಧನ ಸಂಸ್ಥಾನಕ್ಕೆ ಬಂದು ಅಲ್ಲಿಯ ಬೇರೆ ಬೇರೆ ಊರುಗಳಲ್ಲಿ ನೆಲಸಿದ ಚಿತ್ಪಾವನ (ಕೊಂಕಣಸ್ಥ) ಬ್ರಾಹ್ಮಣ

ಮನೆತನಗಳಲ್ಲಿ ಕಾಳೆ ಕುಟುಂಬವೂ ಒಂದು. ಈ ಕುಂಟುಂಬ ಸಾಂಸಿಯಲ್ಲಿ ನೆಲಸಿತು. ಕಾಳೆಯವರ ಮನೆ ಮಾತು ಮರಾಠಿಯಾದರೂ ಅವರ ಪ್ರಾಥಮಿಕ ಶಿಕ್ಷಣ ಕನ್ನಡಭಾಷೆಯಲ್ಲೇ ಆಯಿತು. ಆ ಕಾಲದ ಪ್ರಾಥಮಿಕ ಶಾಲೆಯ ಕೊನೆಯ ಘಟ್ಟವಾದ ಮುಲಕೀ ಪರೀಕ್ಷೆಯಲ್ಲಿ ಕಾಳೆಯವರು ತೇರ್ಗಡೆ ಹೊಂದಿದರಲ್ಲದೆ, ನಾಲ್ಕನೆಯ ತರಗತಿಯವರೆಗೆ ಇಂಗ್ಲಿಷ್ ಶಾಲೆಯಲ್ಲಿ ಓದಿದರು.

ಹಾವೇರಿ ತಾಲ್ಲೂಕಿನ ಅಗಡಿಯ ಬಳಿಯ ಆನಂದವನ ಅಗ್ರಹಾರದಲ್ಲಿ, ಸದ್ಬೋಧಚಂದ್ರಿಕೆ ಮಾಸಪತ್ರಿಕೆಗಾಗಿ ಆರಂಭವಾದ ಒಂದು ಚಿಕ್ಕ ಮುದ್ರಣಾಲಯದ ವ್ಯವಸ್ಥಾಪಕರಾಗಿ ಕಾಳೆಯವರು 1909ರಲ್ಲಿ ಅಲ್ಲಿಗೆ ಹೋದರು. ಗಳಗನಾಥರ ಮೊದಮೊದಲಿನ ಪುಸ್ತಕಗಳೆಲ್ಲ ಇವರ ವ್ಯವಸ್ಥಾಪಕತ್ವದಲ್ಲಿಯೇ ಮುದ್ರಿತವಾಗುತ್ತಿದ್ದುವು. ಸದ್ಬೋಧ ಚಂದ್ರಿಕೆ ಮಾಸಪತ್ರಿಕೆಯ ವ್ಯವಸ್ಥಾಪಕರೂ ಇವರೇ ಆಗಿದ್ದರು. ಗಳಗನಾಥರು ಆನಂದವನವನ್ನು ಬಿಟ್ಟು ಹೊರಟಮೇಲೆ, ಸದ್ಬೋಧಚಂದ್ರಿಕೆಯ ಹೆಚ್ಚಿನ ಹೊಣೆಯನ್ನು ಇವರೇ ಹೊರಬೇಕಾಯಿತು. ಈ ಅವಧಿಯಲ್ಲಿ ಕಾಳೆಯವರು 20ಕ್ಕಿಂತ ಹೆಚ್ಚು ಐತಿಹಾಸಿಕ, ಸಾಮಾಜಿಕ ಮತ್ತು ಪತ್ತೇದಾರಿ ಕಾದಂಬರಿಗಳನ್ನು ಬರೆದು ಪ್ರಕಟಿಸಿದರು. ಇವುಗಳಲ್ಲಿ ಹೆಚ್ಚಿನ ಸಂಖ್ಯೆಯವು ಮರಾಠಿಯಿಂದ ಭಾಷಾಂತರಿಸಿದವು; ಅನುವಾದಿಸಿದವು. ಮಹಾರಾಷ್ಟ್ರದ ಸುಪ್ರಸಿದ್ಧ ಸಾಹಿತಿಗಳಾದ ದಿ. ನ. ಚಿಂ. ಕೇಳಕರರ ಮರಾಠಾ ಆಣಿ ಇಂಗ್ರಜ ಎಂಬ ಇತಿಹಾಸ ಗ್ರಂಥವನ್ನೂ ಪ್ರಕಟಿಸಿದರು.

ಮಕ್ಕಳ ಶಿಕ್ಷಣಕ್ಕಾಗಿ ಇವರು ಆನಂದವನವನ್ನು ಬಿಡಬೇಕಾಯಿತು. ಧಾರವಾಡದ ಮದೀಹಾಳ ಭಾಗದಲ್ಲಿ ಮನೆಮಾಡಿ ಇರತೊಡಗಿದರು. ಇಲ್ಲಿಯೂ ಒಂದು ಚಿಕ್ಕ ಮುದ್ರಣಾಲಯವನ್ನು ಇರಿಸಿಕೊಂಡು, ಮತ್ತು ಹನ್ನೆರಡು ವರ್ಷಗಳವರೆಗೆ ತಮ್ಮ ಕೃತಿಗಳನ್ನು ಪುನರ್ಮುದ್ರಿಸುವ ಕಾರ್ಯ ನಡೆಸಿದರು. ಆ ಮುದ್ರಣಾಲಯವನ್ನು ಧಾರವಾಡದ ಜನತಾ ವಿದ್ಯಾಸಂಸ್ಥೆಗೆ ದಾನವಾಗಿ ಕೊಟ್ಟಿದ್ದಾರೆ. ಕಾಳೆಯವರು ತಮ್ಮ ವೃದ್ಧಾಪ್ಯ ಜೀವನವನ್ನು ಧಾರವಾಡದಲ್ಲಿಯೇ ಕಳೆದರು. (ಬಿ.ಕೆ.ಆರ್.)

**ಕಿಂಕ್, ಹಾನ್ಸ್ ಅರ್ನ್ಸ್ಟ್ :** 1865–1926. ನಾರ್ವೆ ದೇಶದ ನಾಟಕಕಾರ ಮತ್ತು ಕಾದಂಬರಿಕಾರ, ಅಕ್ಟೋಬರ್ 11, 1865ರಲ್ಲಿ ಜನಿಸಿದ ಈತ ತನ್ನ ಬಾಲ್ಯದ ದಿನಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಕಳೆದ. ಅಲ್ಲಿನ ಜನಜೀವನದ ಬಗ್ಗೆ ಅದರಲ್ಲೂ ಬೇಸಾಯಗಾರರ ಬದುಕಿನ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ಅವರ ಬದುಕನ್ನು ಹತ್ತಿರದಿಂದ ಕಂಡು ಅಭ್ಯಸಿಸಿದ. ಮುಂದೆ ಈತ ರಚಿಸಿದ ಕೃತಿಗಳಲ್ಲಿ ಪ್ರಾದೇಶಿಕ ಅನುಭವಗಳು ಚೆನ್ನಾಗಿ ಚಿತ್ರಿತವಾಗಿವೆ.

ಇಟಲಿ ದೇಶಕ್ಕೆ ಹಲವು ಬಾರಿ ಭೇಟಿಕೊಟ್ಟಿದ್ದ ಕಿಂಕ್ ಇಟಲಿ ಸಾಹಿತ್ಯವನ್ನು ಅದರಲ್ಲೂ ಸಾಹಿತ್ಯ ಮತ್ತು ಕಲೆಗಳ ಪುನರುಜ್ಜೀವನ ಕಾಲದಲ್ಲಿ ಆದ ಸಾಹಿತ್ಯ ಕ್ರಾಂತಿಯ ವಿಷಯವನ್ನು ವಿಶೇಷವಾಗಿ ಅಧ್ಯಯನ ಮಾಡಿದ. ಇದರಿಂದಾಗಿ ಹೊಸ ಬಗೆಯ ಸಾಹಿತ್ಯವನ್ನು ಸೃಷ್ಟಿಸುವ ಬಗ್ಗೆ ಇವನ ಮನಸ್ಸು ಕೆಲಸಮಾಡತೊಡಗಿತು. ಕವಿತಾಮಯವಾದ ಇವನ ಭಾವನೆಗಳಲ್ಲಿ ದಯೆ, ಕೋಮಲತೆ ಮತ್ತು ದಿವ್ಯತೆಗಳ ತ್ರಿವೇಣೀ ಸಂಗಮವನ್ನು ಗುರುತಿಸಬಹುದು.

ಪ್ರಾರಂಭದಲ್ಲಿ ಇವನ ಕೃತಿಗಳಿಗೆ ಒಳ್ಳೆಯ ಸ್ವಾಗತ ದೊರೆಯಲಿಲ್ಲವಾದರೂ ಕ್ರಮೇಣ ಅವಕ್ಕೆ ಸಲ್ಲಬೇಕಾದ ಮಾನ್ಯತೆ ಸಂದಿತು. ಇವನು ರಚಿಸಿದ ಅನೇಕ ಕೃತಿಗಳಲ್ಲಿ ಎಮಿಗ್ರಾಂಟ್ಸ್, ದಿ ಅವಲಾಂಚ್ ಫೆಲ್, ದಿ ಡ್ರೋವರ್ ಎಂಬುವು ಮುಖ್ಯವಾದುವು. ಇವನ ಸಣ್ಣಕತೆಗಳಲ್ಲಿ ಅನೇಕವು ಶಾಶ್ವತವಾಗಿ ಉಳಿಯಬಲ್ಲಂಥವಾಗಿವೆ.

ಇವನದು ವರ್ಣಮಯ ಶೈಲಿ. ಇದರಿಂದಾಗಿ ಇವನ ಕೃತಿಗಳು ಅರ್ಥವಾಗುವುದು ಸ್ವಲ್ಪ ಕಷ್ಟ ಎಂದು ವಿಮರ್ಶಕರ ಅಭಿಪ್ರಾಯ. ಆದರೂ ಇವನ ವರ್ಣನೆಗಳಲ್ಲಿನ ಪ್ರಾದೇಶಿಕತೆ ಮತ್ತು ಆಡುಮಾತಿನ ಸೊಗಸು ಮೆಚ್ಚುವಂಥವು. *

**ಕಿಂಕಜೂ :** ಕಾರ್ನಿವೊರ ಗಣದ ರಕೂನ್ (ಪ್ರೋಸಿಯಾನಿಡೀ) ಕುಟುಂಬದ ಪೋಟಾಸ್ ಜಾತಿಗೆ ಸೇರಿದ ಪೋಟಾಸ್ ಫ್ಲಾವಸ್ ಎಂಬ ವೈಜ್ಞಾನಿಕ ಹೆಸರಿನ ಏಕೈಕ

ಪ್ರಭೇದ ಜೀವಿ. ಇದು ಹಾರುವ ಬೆಕ್ಕೂ ಹೌದು. ಇದು ದಕ್ಷಿಣ ಮತ್ತು ಮಧ್ಯ ಅಮೆರಿಕದ ಉಷ್ಣಪ್ರದೇಶಗಳ ಕಾಡುಗಳಲ್ಲಿ ವಾಸಿಸುತ್ತದೆ. ಇದನ್ನು ಕಪಿಸಿಂಹ, ಜೇನುಕರಡಿ ಎಂದೂ

ಕರೆಯುವುದುಂಟು. ಇದರ ಗಾತ್ರ ಬೆಕ್ಕಿನಷ್ಟು ಮೈಮೇಲೆ ದಟ್ಟವಾಗಿ ಬೆಳೆದಿರುವ ತೆಳುಹಳದಿ ಬಣ್ಣದ ಬಹುನಯವಾದ ಕೂದಲುಗಳಿವೆ. ತಲೆ ಗುಂಡು, ಮೂತಿ ಮೊನಚು, ಮುಖದ ಆಚೆ ಈಚೆ ಅಗಲವಾದ ಪಳಪಳನೆ ಹೊಳೆಯುವ ಕಣ್ಣುಗಳಿವೆ. ತಲೆಯ ಮೇಲ್ಭಾಗದಲ್ಲಿ ಇಕ್ಕಡೆಯಲ್ಲೂ ಗುಂಡಾದ ಸಣ್ಣ ಕಿವಿಗಳಿವೆ. ನಾಲಗೆ ಬಲು ಉದ್ದ, ಕಾಲುಗಳು ಗಿಡ್ಡ; ಬಾಲ ದಪ್ಪ, ಉದ್ದ 20'–22' ಬಾಲವನ್ನು ಕೊಂಬೆಗೆ ಸುತ್ತಿ ಜೋತುಬೀಳುತ್ತದೆ.

ಕಿಂಕಜೂ ನಿಶಾಚರ ಪ್ರಾಣಿ. ಹಗಲುವೇಳೆ ಮರದ ಪೊಟರೆಯಲ್ಲೊ ಎಲೆಗಳ ನಡುವೆಯೊ ಮೈಯನ್ನು ಉಂಡೆಮಾಡಿಕೊಂಡು ಬಾಲದಿಂದ ಸುತ್ತಿಕೊಂಡು ಅಡಗಿರುತ್ತದೆ. ರಾತ್ರಿ ಆಹಾರಕ್ಕಾಗಿ ಸಂಚರಿಸುತ್ತದೆ. ಇದು ಬಹುಮಟ್ಟಿಗೆ ಮರವಾಸಿ. ನೆಲದ ಮೇಲೆ ನಡೆಯುವುದೇ ಕಡಿಮೆ, ಕೊಂಬೆಯಿಂದ ಕೊಂಬೆಗೆ, ಮರದಿಂದ ಮರಕ್ಕೆ ಹಾರುತ್ತ ಆಹಾರ ಹುಡುಕಿಕೊಂಡು ಹೋಗುತ್ತದೆ. ಕಾಡು ಅಂಜೂರ, ಜೇನು ಇದರ ಮುಖ್ಯ ಆಹಾರವಾದರೂ ಸಣ್ಣಪುಟ್ಟ ಹಕ್ಕಿಗಳನ್ನೂ ಮೊಟ್ಟೆಗಳನ್ನೂ ತಿನ್ನುವುದುಂಟು. ಹಿಂಗಾಲು ಮುಂಗಾಲುಗಳ ಸಹಾಯದಿಂದ ಕೋತಿಯಂತೆ ಹಣ್ಣನ್ನು ಹಿಡಿದುಕೊಂಡು ತನ್ನ ಉದ್ದವಾದ ನಾಲಗೆಯಿಂದ ಒಳಗಿನ ತಿರುಳನ್ನು ತೆಗೆದು ತಿನ್ನುತ್ತದೆ.

ಅನೇಕ ವೇಳೆ ಗಂಡುಹೆಣ್ಣುಗಳು ಒಟ್ಟಾಗಿ ವಾಸಿಸುತ್ತವೆ. ಹೆಣ್ಣು ಒಂದು ಸೂಲಿನಲ್ಲಿ ಎರಡರಿಂದ ನಾಲ್ಕು ಮರಿ ಹಾಕುತ್ತದೆ. ಅವು ಹುಟ್ಟಿದ 10 ದಿನಗಳ ಅನಂತರ ಕಣ್ಣು ತೆರೆಯುತ್ತವೆ. ಒಂದು ತಿಂಗಳ ವೇಳೆಗೆ ಅವುಗಳ ಬಾಲಕ್ಕೆ ಗ್ರಹಣ ಶಕ್ತಿ ಬರುತ್ತದೆ. ಎರಡು ತಿಂಗಳ ವೇಳೆಗೆ ಅವು ಮರದ ಕೊಂಬೆಗೆ ನೇತುಹಾಕಿಕೊಂಡು ಜೋತುಬೀಳಬಲ್ಲವು. ಕಿಂಕಜೂನ ಆಯಸ್ಸು ಸುಮಾರು 20 ವರ್ಷ.

ರಕೂನ್ ಕುಟುಂಬಕ್ಕೆ ಸೇರಿದ ಮತ್ತೊಂದು ಪ್ರಾಣಿಯಾದ ಒಲಿಂಗೊ ಕಿಂಕಜೂಗಳ ಸಮೂಹದಲ್ಲಿ ವಾಸಿಸುತ್ತಿರುತ್ತದೆ. ಎಕ್ವಡಾರ್‌ನಿಂದ ನಿಕರಾಗುವದವರೆಗೆ ಇದು ಕಂಡುಬರುವುದು ಹೆಚ್ಚು. ಇವೆರಡು ಪ್ರಾಣಿಗಳ ತುಪ್ಪಳವೂ ತೆಳುಹಳದಿ ಬಣ್ಣವಾಗಿದ್ದರೂ ಒಲಿಂಗೋವಿ ಬಾಲಕ್ಕೆ ಹಿಡಿದುಕೊಳ್ಳುವ ಶಕ್ತಿಯಿಲ್ಲ. ಅಲ್ಲದೆ ಒಲಿಂಗೋವಿನ ತುಪ್ಪಳ ಹೆಚ್ಚು ಉದ್ದ.

ಕಿಂಕಜೂವನ್ನು ಅಮೆರಿಕದ ಕೆಲವು ಭಾಗದಲ್ಲಿ ಪಳಗಿಸಿ ಸಾಕುತ್ತಾರೆ. (ಎಸ್.ಎನ್.ಕೆ.ಯು.)

**ಕಿಂಗ್, ಕೊರೆಟಾ :** 1927–. ಖ್ಯಾತ ನೀಗ್ರೋ ನಾಯಕ ಮಾರ್ಟಿನ್ ಲ್ಯೂಥರ್ ಕಿಂಗನ ಹೆಂಡತಿ (**ನೋಡಿ– ಕಿಂಗ್, ಮಾರ್ಟಿನ್ ಲ್ಯೂಥರ್ (ಜೂನಿಯರ್)**) ಅಲಬಾಮಾ ಸಂಸ್ಥಾನದ ಹೈಬರ್ಗರ್‌ನಲ್ಲಿ 1927ರ ಏಪ್ರಿಲ್ 27ರಂದು ಹುಟ್ಟಿದರು. ಬಾಲ್ಯ ಕಷ್ಟದಲ್ಲೇ ಕಳೆಯಿತು. ಶಾಲೆ ಮುಗಿಸಿ ಕಾಲೇಜಿಗೆ ಬರುವ ವೇಳೆಗೇ ಈಕೆಗೆ ಸಂಗೀತದಲ್ಲಿ ಪ್ರಬಲವಾದ ಆಸಕ್ತಿ ಹುಟ್ಟಿತ್ತು. ಕಾಲೇಜಿನಲ್ಲಿ ಅದು ಪ್ರಬಲವಾಯಿತು. ಆಮೇಲೆ ಬಾಸ್ಟನಿನ ಪ್ರಸಿದ್ಧ ಸಂಗೀತ ಶಿಕ್ಷಣ ಶಾಖೆಯೊಂದನ್ನು ಸೇರಿದಳು. ಸ್ನೇಹಿತೆಯೊಬ್ಬಳ ಒತ್ತಾಯದ ಫಲವಾಗಿ ಡಾ. ಕಿಂಗನನ್ನು ಭೇಟಿಯಾದಳು. ತನಗೆ ತಿಳಿಯದೆಯೇ ಅವನಲ್ಲಿ ಆಸಕ್ತಳಾದಳು. ಗಾಢಸ್ನೇಹ ಬೆಳೆಯಿತು. 1953ರ ಜೂನ್ 18ರಂದು ಹೈಬರ್ಗರ್‌ನಲ್ಲಿ ಇವರಿಬ್ಬರ ನಡುವೆ ಅತ್ಯಾಧುನಿಕ ರೀತಿಯಲ್ಲಿ ಮದುವೆ ನಡೆಯಿತು. ಕೆಲವು ತಿಂಗಳಲ್ಲೇ ಕೊರೆಟಾ ಸಂಗೀತ ಶಿಕ್ಷಣ ಮುಗಿಯಿತು. ಕಿಂಗ್‌ಗೆ ಮಾಂಟ್ಗಮರಿಯ ಡೆಕ್ಸ್ಟರ್ ಅವೆನ್ಯೂ ಬ್ಯಾಪ್ಟಿಸ್ಟ್ ಚರ್ಚಿನಲ್ಲಿ ಪಾದ್ರಿಯ ಕೆಲಸ ಸಿಕ್ಕಿದ್ದರಿಂದ 1954ರಲ್ಲಿ ಇಬ್ಬರೂ ಬಾಸ್ಟನನ್ನು ಬಿಟ್ಟು ಮಾಂಟ್ಗಮರಿಗೇ ಹೋಗಿ ನೆಲಸಿದರು.

ಮಾಂಟ್ಗಮರಿಯ ಬಸ್ ಬಹಿಷ್ಕಾರದಿಂದ ಕಿಂಗನ ರಭಸದ ಸಾರ್ವಜನಿಕ ಜೀವನ ಆರಂಭವಾಯಿತು. 1960ರಲ್ಲಿ ಆತನ ಅನುಕೂಲಕ್ಕಾಗಿ ಸಂಸಾರ ಮಾಂಟ್ಗಮರಿಯನ್ನು ಬಿಟ್ಟು ಅಟ್ಲಾಂಟಕ್ಕೆ ಬಂತು. ಕಿಂಗ್ ಸಾರ್ವಜನಿಕ ಜೀವನದಲ್ಲಿ ಮುಳುಗಿದ್ದಾಗ ಕೊರೆಟಾ ಬೆಳೆಯುತ್ತಿದ್ದ ಸಂಸಾರದ ಕಡೆಗೆ ಎಲ್ಲ ಗಮನವನ್ನೂ ಕೊಟ್ಟಳು. 1956ರಲ್ಲಿ ಯಾರೋ ತಮ್ಮ ಮನೆಯೊಳಗೆ ಬಾಂಬೊಂದನ್ನು ಎಸೆದಾಗಿನಿಂದ ತನ್ನ ಗಂಡನ ಜೀವನವನ್ನು ಆವರಿಸಿದ್ದ ಅಪಾಯಗಳ ಅರಿವು ಆಕೆಗೆ ಪೂರ್ಣವಾಗಿಯೇ ಇತ್ತು. ಈ ಭೀತಿಯ ನೆರಳಿನಲ್ಲೇ ತನ್ನ ನಾಲ್ಕೂ ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿ ಮಾಡಿದಳು.

ಕೊರೆಟಾ ಪತಿಯೊಡನೆ ನೂರಾರು ಪ್ರದರ್ಶನಗಳಲ್ಲಿ ಭಾಗವಹಿಸಿದಳು. 1959ರಲ್ಲಿ ಆತನೊಡನೆ ಭಾರತಕ್ಕೆ ಬಂದು ಅನೇಕ ರಸಿಕವೃಂದಗಳ ಮುಂದೆ ಹಾಡಿದಳು. 1964ರಲ್ಲಿ ಶಾಂತಿಗಾಗಿ ಕೊಡಲ್ಪಟ್ಟ ನೊಬೆಲ್ ಪಾರಿತೋಷಕವನ್ನು ಸ್ವೀಕರಿಸಲು ಕಿಂಗ್ ಆಸ್ಲೋಗೆ ತೆರಳಿದಾಗ ಅವನೊಡನೆ ಈಕೆಯೂ ಹೋಗಿದ್ದಳು. ಇಷ್ಟಲ್ಲದೆ 1962ರಲ್ಲಿ ಜಿನೀವದಲ್ಲಿ ಸೇರಿದ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಮಹಿಳಾಪ್ರತಿನಿಧಿಯಾಗಿ ಭಾಗವಹಿಸಿದ್ದಳು. ಈಕೆಯ ದುಡಿಮೆ ಈಗಲೂ ನೀಗ್ರೋ ಚಳವಳಿಗೆ ಮೀಸಲಾಗಿತ್ತು.

1968ರಲ್ಲಿ ಕಿಂಗ್ ಹತ್ಯಾಕಾರಿಯೊಬ್ಬನ ಗುಂಡಿಗೆ ಬಲಿಯಾದಾಗ ಶ್ರೀಮತಿ ಕಿಂಗ್ ಪ್ರದರ್ಶಿಸಿದ ಸ್ಥೈರ್ಯ ಅಪ್ರತಿಮವಾಗಿತ್ತು. ಪತಿ ನೆರವೇರಿಸಲು ಒಪ್ಪಿದ್ದ, ಆದರೆ ನೆರವೇರಿಸಲಾಗದೆ ಹೋದ ಎಲ್ಲ ಕಾರ್ಯಕಲಾಪಗಳನ್ನೂ ತಾನೇ ನೆರವೇರಿಸಿ ಕೊಟ್ಟಳು. ಅಮೆರಿಕದ ಜನದ ದೃಷ್ಟಿಯಲ್ಲಿ ಈಕೆ ಕಿಂಗನ ಅಹಿಂಸಾತ್ಮಕ ಸಾಮಾಜಿಕ ಪರಿವರ್ತನೆಯ ಒಬ್ಬ ಹೊಸ ಹರಿಕಾರೆಯಾಗಿದ್ದಾಳೆ.

ಮಾರ್ಟಿನ್ ಲ್ಯೂಥರ್ ಕಿಂಗ್‌ಗೆ ಭಾರತ ನೀಡಿದ ಜವಾಹರಲಾಲ್ ನೆಹರೂ ಪಾರಿತೋಷಕವನ್ನು ಶ್ರೀಮತಿ ಕಿಂಗ್ ಪತಿಯ ಪರವಾಗಿ ಸ್ವೀಕರಿಸಿದಾಗ, ಆ ಹಣದಲ್ಲಿ ಅರ್ಧವನ್ನು ಅಮೆರಿಕದ ನೀಗ್ರೋ ಹೋರಾಟಕ್ಕಾಗಿ ತೆಗೆದಿಡಲಾಗುವುದೆಂದೂ ಉಳಿದರ್ಧದಲ್ಲಿ ಭಾರತದ ಹರಿಜನ ವಿದ್ಯಾರ್ಥಿಯೊಬ್ಬ ಅಟ್ಲಾಂಟದ ಕಿಂಗ್ ಸ್ಮಾರಕ ಸಂಸ್ಥೆಯಲ್ಲಿ ಶಿಕ್ಷಣ ಪಡೆಯಲು ಅನುವಾಗುವಂಥ ನಿಧಿಯೊಂದನ್ನು ಸ್ಥಾಪಿಸಲಾಗುವುದೆಂದೂ ಘೋಷಿಸಿದಳು.

ಕಿಂಗ್ ಜೊತೆಯಲ್ಲಿ ತಾನು ಕಳೆದ ದಿನಗಳನ್ನು ಕುರಿತು ಈಕೆ ಪುಸ್ತಕವೊಂದನ್ನು ಬರೆದಿದ್ದಾಳೆ. ಇದು ತನ್ನ ಹೃದಯಸ್ಪರ್ಶಿ ಗುಣದಿಂದ ವಿಮರ್ಶಕರ ಗಮನವನ್ನು ಸೆಳೆದಿದೆ. (ಎಂ.ಎಸ್.ಎಚ್.ಎ.)

**ಕಿಂಗ್, ಮಾರ್ಟಿನ್ ಲ್ಯೂಥರ್ (ಜೂನಿಯರ್) :** 1929–68. ವರ್ಣಭೇದ ಹಾಗೂ ಪ್ರತ್ಯೇಕೀಕರಣ ನೀತಿಯ ವಿರುದ್ಧ ಅಮೆರಿಕದ ನೀಗ್ರೋಗಳು ನಡೆಸಿದ ಹೋರಾಟದ ಪ್ರಮುಖನಾಯಕ. ಮೂವತ್ತೊಂಬತ್ತು ವರ್ಷದ ತನ್ನ ಆಯಸ್ಸಿನಲ್ಲಿ ಕಿಂಗ್ ಹದಿನೈದಕ್ಕೂ ಹೆಚ್ಚು ಬಾರಿ ಜೈಲನ್ನು ಕಂಡ: ಲೆಕ್ಕವಿಲ್ಲದಷ್ಟು ಬೆದರಿಕೆಗಳನ್ನು ಎದುರಿಸಿದ; ಅನೇಕ ಸಲ ಏಟುಗಳನ್ನು ತಿಂದ. ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ ನೀಗ್ರೋಗಳ ಮಿಡುಕಾಟದ, ಧೈರ್ಯಸ್ಥೈರ್ಯಗಳ ಅಹಿಂಸೆಯ ಉದಾತ್ತ ಸಂಕೇತವಾಗಿ ಬೆಳೆದ.

ಕಿಂಗ್ ಹುಟ್ಟಿದ್ದು 1929ರ ಜೂನ್ 15ರಂದು. ತಂದೆ ಜಾರ್ಜಿಯ ಸಂಸ್ಥಾನದ ಅಟ್ಲಾಂಟದ ಚರ್ಚೊಂದರ ನೀಗ್ರೋ ಪಾದ್ರಿ; ನೀಗ್ರೋ ಅಸಹಕಾರದ ನಾಯಕ ಕಿಂಗ್ ಪ್ರತಿಭಾವಂತ ವಿದ್ಯಾರ್ಥಿಯಾದ್ದರಿಂದ 19 ವರ್ಷಕ್ಕೇ ಪದವೀಧರನಾಗಿ ಮುಂದೆ ಧರ್ಮಶಾಸ್ತ್ರ ಪದವಿಗಾಗಿ ಬಿಳಿಯರ ಕಾಲೇಜೊಂದರಲ್ಲಿ ಓದಿದ. 1951ರಲ್ಲಿ ಕಾಲೇಜಿಗೆ ಮೊದಲಿಗನಾಗಿ ಉತ್ತೀರ್ಣನಾದ. ಇದಾದ ಮೇಲೆ ಬಾಸ್ಟನಿನಲ್ಲಿ ಡಾಕ್ಟೊರೇಟ್‌ಗೆ ವ್ಯಾಸಂಗ ನಡೆಸಿ, ಅಲ್ಲೇ ಸಂಗೀತ ಕಲಿಯುತ್ತಿದ್ದ ಕೊರೆಟಾ ಸ್ಕಾಟಳನ್ನು ಮದುವೆಯಾದ.

1954ರಲ್ಲಿ ಕಿಂಗ್ ಅಲಬಾಮಾ ರಾಜ್ಯದ ಮಾಂಟ್ಗಮರಿಯ ಡೆಕ್ಸ್ಟರ್ ಅವೆನ್ಯೂ ಬ್ಯಾಪ್ಟಿಸ್ಟ್ ಚರ್ಚಿನ ಪಾದ್ರಿಯಾಗಿ ಕೆಲಸವನ್ನು ಒಪ್ಪಿಕೊಂಡು ಆ ನಗರಕ್ಕೆ ಸೆಪ್ಟೆಂಬರಿನಲ್ಲಿ ಬಂದು ನೆಲಸಿದ. ತನ್ನ ಚರ್ಚಿನ ವ್ಯಾಪ್ತಿಗೆ ಒಳಪಟ್ಟ ನೀಗ್ರೋಗಳ ಸಂಘಟನೆಗಾಗಿ ಮಾತ್ರ ಪ್ರಯತ್ನಿಸುತ್ತ ತನ್ನ ಕರ್ತವ್ಯ ಪಾಲಿಸುತ್ತ ಸಾಮಾನ್ಯ ಗೃಹಸ್ಥಜೀವನ ಪ್ರಾರಂಭಿಸಿದ.

1955ರ ಡಿಸೆಂಬರ್ 1ರಂದು ಮಾಂಟ್ಗಮರಿಯ ನಗರ ಬಸ್ಸೊಂದರಲ್ಲಿ ಕುಳಿತಿದ್ದ ರೋಸಾ ಪಾರ್ಕ್ಸ್ ಎಂಬ ನೀಗ್ರೋ ಮಹಿಳೆ ಆ ಬಸ್ಸಿನಲ್ಲಿದ್ದ ಬಿಳಿಯನೊಬ್ಬನಿಗೆ ತನ್ನ ಸ್ಥಳವನ್ನು ಬಿಟ್ಟುಕೊಡಲು ನಿರಾಕರಿಸಿ ಪೋಲೀಸರ ಬಂಧನಕ್ಕೆ ಒಳಗಾದಾಗ ಬಸ್ಸುಗಳಲ್ಲಿ

ಅನುಸರಿಸಲಾಗುತ್ತಿದ್ದ ಪ್ರತ್ಯೇಕೀಕರಣ ನೀತಿಯಿಂದ ನೀಗ್ರೋಗಳು ಅಸಮಾಧಾನಗೊಂಡು. ಡಿಸೆಂಬರ್ 5 ರಂದು ಬಸ್ಸುಗಳಿಗೆ ಬಹಿಷ್ಕಾರ ಹಾಕಲು ನಿರ್ಧರಿಸಿದರು. ಕಿಂಗನನ್ನು ತಮ್ಮ ನಾಯಕನಾಗಿ ಆಯ್ಕೆ ಮಾಡಿದರು. ಒಂದು ದಿನದ ಬಹಿಷ್ಕಾರ 382 ದಿನ ಮುಂದುವರಿಯಿತು. ಬಹಿಷ್ಕಾರದ ನಾಯಕತ್ವ ಸುಲಭವಾಗಿರಲಿಲ್ಲ. ಅಧಿಕಾರಿಗಳು ಕಿಂಗನನ್ನು ಕುಂಟು ನೆವ ಹೇಳಿ ಬಂಧಿಸಿದರು. ಹೆಂಡತಿ ಮತ್ತು ಎರಡು ಮಗು–ಇಬ್ಬರೇ ಮನೆಯೊಳಗಿದ್ದಾಗ ಅವರ ಮನೆಯೊಳಕ್ಕೆ ಬಾಂಬನ್ನು ಎಸೆಯಲಾಯಿತು. ರೊಚ್ಚಿಗೆದ್ದ ನೀಗ್ರೋಗಳನ್ನು ಸಮಾಧಾನಪಡಿಸುತ್ತ ಕಿಂಗ್ ಅವರಿಗೆ ತಮ್ಮ ಅಹಿಂಸಾವ್ರತದ ಮೊದಲ ಪಾಠವನ್ನು ಕಲಿಸಿದ. ಅಲಬಾಮದ ಬಸ್ ಪ್ರತ್ಯೇಕೀಕರಣ ನೀತಿ ಕಾನೂನುಬಾಹಿರವೆಂದು ಅಮೆರಿಕದ ಪರಮೋಚ್ಚ ನ್ಯಾಯಾಲಯ ಸಾರಿತು. ಬಹಿಷ್ಕಾರದ ಈ ಅಪ್ರತಿಮ ವಿಜಯದಿಂದಾಗಿ ಕಿಂಗನ ನಾಯಕತ್ವಕ್ಕೆ ರಾಷ್ಟ್ರೀಯ ಮನ್ನಣೆ ದೊರೆಯಿತು.

ಮುಂದಿನ ಮೂರು ವರ್ಷ ಕಿಂಗ್ ಅಮೆರಿಕದ ನೀಗ್ರೋಗಳ ಸಂಘಟನೆಗಾಗಿ ಬಿಡುವಿಲ್ಲದೆ ಕೆಲಸ ಮಾಡಿದ. 1957ರಲ್ಲಿ ಆಫ್ರಿಕದ ಘಾನಾ ರಾಜ್ಯದ ಸ್ವಾತಂತ್ರ್ಯೋತ್ಸವದಲ್ಲಿ ಆ ಸರ್ಕಾರದ ಅತಿಥಿಯಾಗಿ ಭಾಗವಹಿಸಿದ್ದ. 1959ರಲ್ಲಿ ನೀಗ್ರೋ ಹೋರಾಟದಲ್ಲಿ ತನಗೆ ಸ್ಫೂರ್ತಿ ಕೊಟ್ಟಿದ್ದ ಗಾಂಧೀಜಿಯ ದೇಶವಾದ ಭಾರತದ ಯಾತ್ರೆ ಕೈಗೊಂಡ.

ರಾಷ್ಟ್ರೀಯ ನಾಯಕತ್ವದ ಹೊಣೆ ಹೊರುತ್ತ ಒಂದು ಚರ್ಚಿನ ಎಲ್ಲ ಕೆಲಸವನ್ನೂ ತಾನೇ ನೋಡಿಕೊಳ್ಳುವುದು ಕಿಂಗನಿಗೆ ಕಠಿಣವಾಯಿತು. ಆದ್ದರಿಂದ 1960ರಲ್ಲಿ ಆತ ಮಾಂಟ್ಗಮರಿಯನ್ನು ಬಿಟ್ಟು ಅಟ್ಲಾಂಟಕ್ಕೆ ಬಂದ. ಅಲ್ಲಿಯ ಬ್ಯಾಪ್ಟಿಸ್ಟ್ ಚರ್ಚಿನಲ್ಲಿ ತನ್ನ ತಂದೆಯ ಸಹಾಯಕ ಪಾದ್ರಿಯಾದ. ಉಪಾಹಾರಗೃಹ ಪ್ರವೇಶ, ಬಿಳಿಯರ ಮತ್ತು ನೀಗ್ರೋಗಳ ಸಂಯುಕ್ತ ಬಸ್ ಪ್ರವಾಸ ಪ್ರದರ್ಶನ–ಹೀಗೆ ದಕ್ಷಿಣ ನೀಗ್ರೋ ಹೋರಾಟ 1960–61ರಲ್ಲಿ ಹೊಸ ಹೊಸ ರೂಪ ತಳೆಯಿತು. ಈ ಸ್ವಾತಂತ್ರ್ಯ ಪ್ರವಾಸಗಳ ಫಲಶ್ರುತಿಯಾಗಿ ಜಾರ್ಜಿಯದಲ್ಲಿ ಹೊಸದೊಂದು ಚಳವಳಿಯೇ ಪ್ರಾರಂಭವಾಯಿತು. ಕಿಂಗ್ ಇದರ ನಾಯಕತ್ವ ವಹಿಸಿದ. ಸುಮಾರು 2,000 ಜನ ಜೈಲನ್ನು ತುಂಬಿದರು. ಆದರೂ ಚಳವಳಿ ಸಫಲವಾಗಲಿಲ್ಲ.

ನೀಗ್ರೋ ಚಳವಳಿಯ ವಿಚಾರದಲ್ಲಿ ಅಮೆರಿಕದ ಕೇಂದ್ರ ಸರ್ಕಾರ ಸಾಕಷ್ಟು ದೃಢವಾದ ನಿಲವನ್ನು ತಳೆದಿಲ್ಲ. ಅದಕ್ಕೆ ಅಗತ್ಯವಾದ ಕಾನೂನಿಗೆ ನೆರವನ್ನು ಕೊಡುತ್ತಿಲ್ಲ ಎಂಬುದಾಗಿ ಕಿಂಗ್ ಎಚ್ಚರಿಕೆ ನೀಡುತ್ತಲೇ ಇದ್ದ. ಈ ಸಂಬಂಧದಲ್ಲಿ 1962ರಲ್ಲಿ ಅಧ್ಯಕ್ಷ ಕೆನೆಡಿಯನ್ನು ಕಂಡು ಎರಡನೆಯ ನೀಗ್ರೋ ವಿಮೋಚನಾ ಘೋಷಣೆಯೊಂದನ್ನು ಹೊರಡಿಸಬೇಕೆಂದು ಅವರನ್ನು ಒತ್ತಾಯಪಡಿಸಿದ. 1954 ರಲ್ಲಿ ಕಾಂಗ್ರೆಸ್ ಹೊಸ ನಾಗರಿಕ ಹಕ್ಕುಗಳ ಕಾಯಿದೆಯೊಂದನ್ನು ಅಂಗೀಕರಿಸಿತು. ಅಲ್ಪ ಸಂಖ್ಯಾತರ ಎಲ್ಲ ಸಮಸ್ಯೆಗಳನ್ನೂ ಇದು ಪರಿಹರಿಸದಿದ್ದರೂ ಕೆಲವನ್ನಾದರೂ ಪರಿಹರಿಸುತ್ತದೆ ಎಂಬುದು ಕಿಂಗನ ಅಭಿಪ್ರಾಯವಾಗಿತ್ತು.

ಕಿಂಗ್ ತನ್ನ ಹೋರಾಟಗಳಲ್ಲೆಲ್ಲ ಅತ್ಯಂತ ಕಠಿಣವಾದ್ದು ಎಂದು ಕರೆದ ಹೋರಾಟವೊಂದನ್ನು 1962ರ ಏಪ್ರಿಲಿನಲ್ಲಿ ಅಲಬಾಮದ ಬರ್ಮಿಂಗ್‌ಹ್ಯಾಂ ನಗರದಲ್ಲಿ ಪ್ರಾರಂಭಿಸಿದ. ನೀಗ್ರೋಗಳ ಸಂಘಟನೆ ಆಗಲೇ ನಡೆದಿತ್ತು. ಸಹಸ್ರಾರು ವಿದ್ಯಾರ್ಥಿಗಳು ಕೂಡ ಸಂಕಲ್ಪ ಪತ್ರಕ್ಕೆ ತಮ್ಮ ಸಹಿ ಹಾಕಿ ಹೋರಾಟಕ್ಕಾಗಿ ಉತ್ಸುಕರಾಗಿ ಕಾದಿದ್ದರು. ಎಲ್ಲ ವಿಚಾರಗಳಲ್ಲೂ ನೀಗ್ರೋಗಳಿಗೆ ಸಮಾನಾವಕಾಶಸಿಗುವಂತೆ ತಾನು ಚಳವಳಿ ನಡೆಸುತ್ತಿರುವುದಾಗಿ ಕಿಂಗ್ ಘೋಷಿಸಿದ. ಸಣ್ಣ ಪ್ರದರ್ಶನಗಳಿಂದ ಇದು ಮೊದಲಾಯಿತು. ಈ ಪ್ರದರ್ಶನಗಳನ್ನು ಪ್ರಾದೇಶಿಕ ನ್ಯಾಯಾಲಯ ನಿಷೇಧಿಸಿತು. ಮಾರನೆಯ ದಿನವೇ ಕಿಂಗ್ 40 ಅನುಯಾಯಿಗಳೊಡನೆ ಇದನ್ನು ಪ್ರತಿಭಟಿಸಿ ಬಂಧನಕ್ಕೆ ಒಳಗಾದ. ಜಾಮೀನು ಕೊಟ್ಟು ಹೊರಗೆ ಬಂದು ಚಳವಳಿಯನ್ನು ತೀವ್ರಗೊಳಿಸಿದ. ಸಹಸ್ರಾರು ವಿದ್ಯಾರ್ಥಿಗಳು ಹಾಡುತ್ತ ಕೂಗುತ್ತ ನಿಷೇಧಾಜ್ಞೆಗಳನ್ನು ಮುರಿದರು. ಪೋಲೀಸರು ತಮ್ಮ ನಾಯಿಗಳನ್ನೂ ಲಾಠಿಗಳನ್ನೂ ಪ್ರಚಂಡವಾದ ನೀರಿನ ಧಾರೆಯನ್ನು ಎರಚಬಲ್ಲ ನೀರುಕೊಳವೆಗಳನ್ನೂ ಧಾರಾಳವಾಗಿ ಉಪಯೋಗಿಸಿ ಇವರನ್ನು ಹತ್ತಿಕ್ಕಲು ಯತ್ನಿಸಿದರು. ಪೋಲೀಸ್ ದೌರ್ಜನ್ಯಗಳ ಸುದ್ದಿ ದೇಶವಿದೇಶಗಳಲ್ಲೆಲ್ಲ ಹಬ್ಬಿತು. ವಿಶೇಷ ವರದಿಗಳೂ ಚಿತ್ರಗಳೂ ಆಡಳಿತದ ವಿರುದ್ಧವಾಗಿ ಜನಾಭಿಪ್ರಾಯವನ್ನು ಸಂಘಟಿಸಿದವು. ಬರ್ಮಿಂಗ್‌ಹ್ಯಾಮಿನ ಭೇದವಾದಿಗಳು ನೀಗ್ರೋಗಳೊಂದಿಗೆ ಒಪ್ಪಂದ ಮಾಡಿಕೊಂಡರು. ಪ್ರತ್ಯೇಕೀಕರಣದ ನಿವಾರಣೆಗಾಗಿ ಯೋಜನೆಯೊಂದನ್ನು ಎರಡು ಪಂಗಡಗಳೂ ಅಂಗೀಕರಿಸಿದವು.

ಬರ್ಮಿಂಗ್‌ಹ್ಯಾಮಿನಲ್ಲಿ ನಡೆದಂಥ ಘಟನೆಗಳೇ ಅಮೆರಿಕದಲ್ಲೆಲ್ಲ ನಡೆಯಲು ಪ್ರಾರಂಭವಾದವು. 1963ರ ಆಗಸ್ಟ್ 28ರಂದು ವಾಷಿಂಗ್‌ಟನ್ನಿನ ಲಿಂಕನ್ ಸ್ಮಾರಕದ ಮುಂದೆ 2 1/2 ಲಕ್ಷ ಜನರ ಪ್ರಚಂಡ ಪ್ರದರ್ಶನವೊಂದು ನಡೆಯಿತು. ಇದರಲ್ಲಿ 60,000 ಬಿಳಿಯರು ಸೇರಿದ್ದರು. ಈ ಮಹಾ ಜನಸಮುದಾಯವನ್ನುದ್ದೇಶಿಸಿ ಕಿಂಗ್ ಮಾಡಿದ ಭಾಷಣ ಲೋಕಪ್ರಸಿದ್ಧವಾಗಿದೆ.

ಆದರೆ ಕಿಂಗ್ ಕಂಡ ಕನಸು ನನಸಾಗಲಿಲ್ಲ. ಮತ್ತೊಮ್ಮೆ ಅಮೆರಿಕದ ನಗರಗಳಲ್ಲಿ ಹಿಂಸಾಕಾಂಡ ಮೊದಲಾಯಿತು. 1968ರ ಏಪ್ರಿಲ್ 4ರಂದು ಟೆನಿಸೀ ಸಂಸ್ಥಾನದ ಮೆಂಫಿಸ್ನಲ್ಲಿ ಹತ್ಯಾಕಾರಿಯೊಬ್ಬನ ಗುಂಡಿಗೆ ಆಹುತಿಯಾಗಿ ಕಿಂಗ್ ಮಡಿದಾಗ ಅಮೆರಿಕದ ನೀಗ್ರೋಗಳ ಮುಂದೆ ಹೊಸತೊಂದು ಬೆಳಕಿನ ದಾರಿ ತೆರೆದಿತ್ತು. ಹೊಸ ಆಕಾಂಕ್ಷೆಗಳು ಮೆಲ್ಲನೆ ತಲೆದೋರಿದುವು.

ಕಿಂಗ್ ತನ್ನ ಜೀವಮಾನದಲ್ಲಿ ಅನೇಕ ಪ್ರಶಸ್ತಿಗಳನ್ನೂ ಗೌರವಗಳನ್ನೂ ಪಡೆದಿದ್ದ. 1964ರಲ್ಲಿ ಇವನಿಗೆ ನೊಬೆಲ್ ಶಾಂತಿ ಪಾರಿತೋಷಕ ಸಿಕ್ಕಿತ್ತು. ಅಂತಾರಾಷ್ಟ್ರೀಯ ಸ್ನೇಹಸಂವರ್ಧನೆಗಾಗಿ ಭಾರತ ಸ್ಥಾಪಿಸಿರುವ ಜವಾಹರಲಾಲ್ ನೆಹರೂ ಪಾರಿತೋಷಕವನ್ನು ಕಿಂಗನಿಗೆ ಆತನ ಮರಣೋತ್ತರ ನೀಡಿ ಗೌರವಿಸಲಾಯಿತು. ಶಾಂತಿಗಾಗಿ ನಾವು ಅಹಿಂಸೆಯ ದಾರಿಯನ್ನು ಅವಲಂಬಿಸಿದ್ದೇವೆ. ಮಾತುಕತೆಗಳನ್ನು ನಡೆಸಲು, ನ್ಯಾಯವಾದ ನಿರ್ಣಯವೊಂದಕ್ಕೆ ಬರಲು ನಾವು ಯಾವಾಗಲೂ ಸಿದ್ಧ. ಆದರೆ ಅಗತ್ಯ ಬಿದ್ದಾಗ ಕಷ್ಟಗಳನ್ನು ಎದುರಿಸುವುದಕ್ಕೂ ನಮಗೆ ನಿಜವೆಂದು ಕಂಡದ್ದನ್ನು ಎತ್ತಿಹಿಡಿಯುವುದಕ್ಕೂ ಅದಕ್ಕಾಗಿ ನಮ್ಮ ಜೀವನವನ್ನೇ ಪಣವಾಗಿ ಒಡ್ಡುವುದಕ್ಕೂ ಅಷ್ಟೇಮಟ್ಟಿಗೆ ಸಿದ್ಧವಾಗಿದ್ದೇವೆ–ಎಂಬುದು ಕಿಂಗ್ ನೊಬೆಲ್ ಪಾರಿತೋಷಕವನ್ನು ಸ್ವೀಕರಿಸಿದ ಸಂದರ್ಭದಲ್ಲಿ ಹೇಳಿದ ಮಾತು. ಇವನ ರಾಜಕೀಯ ಮಾರ್ಗದ ಮೇಲೆ ಮಹಾತ್ಮ ಗಾಂಧೀಜಿಯವರ ತತ್ವದ ಗಾಢ ಪರಿಣಾಮವಿದ್ದದ್ದು ಸುಸ್ಪಷ್ಟ. (ಎಂ.ಎಸ್.ಎಚ್.ಎ.)

**ಕಿಂಗ್, ವಿಲಿಯಂ :** 1663–1712. ಇಂಗ್ಲಿಷ್ ಕವಿ. ಚತುರೋಕ್ತಿ ಹಾಗೂ ವಿವಿಧ ರೀತಿಯ ಬರೆಹಗಳಿಗೆ ಪ್ರಸಿದ್ಧನಾದವ. 1685ರಲ್ಲಿ ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದ ಪದವಿ ಪಡೆದು, ಕಾನೂನನ್ನು ಅಭ್ಯಾಸ ಮಾಡಿ, ಅನಂತರ ಸಾಹಿತ್ಯ ರಚನೆಗೆ ತೊಡಗಿದ. ಮಾನವ ಸ್ವಭಾವದಲ್ಲಿನ ದೌರ್ಬಲ್ಯವನ್ನು ಗುರುತಿಸುವ ಶಕ್ತಿ ಪಡೆದಿದ್ದ ಈತ ಕಟುವಿಮರ್ಶಕನಾಗಿಯೂ ಇದ್ದ. ಆದರೆ ಈತನ ಬರೆವಣಿಗೆಯಲ್ಲಿನ ಹಾಸ್ಯದ ಹೊನಲು ವಿಮರ್ಶೆಯ ತೀಕ್ಷ್ಣತೆಯನ್ನು ಕಡಿಮೆ ಮಾಡಿರುವುದರಿಂದ ಈತ ಹೆಚ್ಚಿನ ಜನಪ್ರಿಯತೆಗೆ ಕಾರಣನಾಗಿದ್ದಾನೆ.

ಟೋರಿ ಮತ್ತು ಹೈಚರ್ಚ್ ಪಕ್ಷಪಾತಿಯಾಗಿ ಅನೇಕ ಲಘು ಗ್ರಂಥಗಳನ್ನು ಬರೆದ. ಟೋರಿಪಕ್ಷದ ನಾಯಕ ವಿಲಿಯಂ ಷರ್ಲಾಕ್ ಮತ್ತು ವಿರೋಧಪಕ್ಷದ ರಾಬರ್ಟ್ ಸೌತ್ ಕ್ರೈಸ್ತ ತ್ರಿಮೂರ್ತಿತತ್ವವನ್ನು ಕುರಿತು ನಡೆಸಿದ ವಾಗ್ವಾದಗಳನ್ನು ಕುರಿತು ಈತ ಒಂದು ಲಘುಪತ್ರಕವನ್ನು ಬರೆದನಲ್ಲದೆ ದಿ ಬ್ಯಾಟಲ್ ರಾಯಲ್ ಎಂಬ ಲಾವಣಿಯನ್ನು ರಚಿಸಿದ. ರಾಬರ್ಟ್ ಮೋಲ್ಸ್‌ವರ್ತ್ ಡೆನ್‌ಮಾರ್ಕಿನ ಸರ್ಕಾರ ಪದ್ಧತಿಯನ್ನು ಟೀಕಿಸಿದಾಗ ಅದಕ್ಕೆ ಪರಿಣಾಮಕಾರಿ ಪ್ರತ್ಯುತ್ತರ ಬರೆದ (1694). ಇದಕ್ಕಾಗಿ ಡೆನ್‌ಮಾರ್ಕ್ ವಿಶ್ವವಿದ್ಯಾನಿಲಯ ಕಿಂಗ್‌ಗೆ ಧನ್ಯವಾದವನ್ನರ್ಪಿಸಿತು. ಜೊತೆಗೆ ರಾಜಕುಮಾರಿ ಆನ್‌ಳ ಕಾರ್ಯದರ್ಶಿಯ ಕೆಲಸ ಸಿಕ್ಕಿತು. 1699ರಲ್ಲಿ ಬೆಂಟ್ಲೆಯನ್ನು ಅಣಕಮಾಡಿ ಡೈಲಾಗ್ಸ್ ಆಫ್ ದಿ ಡೆಡ್ ಎಂಬ ಪುಸ್ತಕವನ್ನು ಅತ್ಯಂತ ಚತುರೋಕ್ತಿಯಿಂದ ಬರೆದ. ತನಗೆ ಹಾಲು ನೀಡುತ್ತಿದ್ದ ಕೆಂಪು ಹಸುವನ್ನು ಕುರಿತು ಮಲಿ ಆಫ್ ಮನ್‌ಟೌನ್ (1704) ಕವನ ರಚಿಸಿದ. 1701ರಲ್ಲಿ ಅರ್ಲ್ ಆಫ್ ಅಂಗೆಲ್ಸೆಯ ದಾಂಪತ್ಯ ವಿಚ್ಛೇದನದ ಬಗ್ಗೆ ಲಾರ್ಡ್ಸ್ ಸಭೆಯಲ್ಲಿ ವಾದಿಸಿ ಜಯಿಸಿದ. ಇದರಿಂದ ಕಿಂಗ್‌ಗೆ ಐರ್ಲೆಂಡಿನ ನ್ಯಾಯಾಧೀಶ ಸ್ಥಾನ ದೊರಕಿತು. ಆದರೆ ಆ ಕೆಲಸದಲ್ಲಿ ಈತನಿಗೆ ಆಸಕ್ತಿಯಿರಲಿಲ್ಲ.

ಇಂಗ್ಲೆಂಡಿಗೆ ಹಿಂದಿರುಗಿ 1708ರಲ್ಲಿ ಹೋರೇಸನ ದಿ ಆರ್ಟ್ ಆಫ್ ಪೊಯಟ್ರಿ ಪದ್ಯವನ್ನನುಸರಿಸಿ ದಿ ಆರ್ಟ್ ಆಫ್ ಕುಕರಿ ಎಂಬ ಕವನವನ್ನು ಪ್ರಕಟಿಸಿದ. ಸಮಕಾಲೀನ ವಿಜ್ಞಾನವನ್ನು ಗೇಲಿ ಮಾಡಿ ಯೂಸ್‌ಫುಲ್ ಟ್ರಾನ್ಸಾಕ್ಷನ್ ಇನ್ ಫಿಲಾಸಫಿ ಎಂಬ ಗ್ರಂಥವನ್ನು ಬರೆದ (1709). ಪ್ರಬಂಧಕಾರ ಸ್ಟೀಲ್ ನಡೆಸುತ್ತಿದ್ದ ದಿ ಟ್ಯಾಟ್ಲರ್ ಮತ್ತು ದಿ ಎಕ್ಸಾಮಿನರ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆದ. ಮೈತುಂಬ ಸಾಲ ಮಾಡಿ ತೀರಿಸಲಾಗದೆ ಸೆರೆಮನೆ ವಾಸವನ್ನೂ ಅನುಭವಿಸಿದ. 1711ರಲ್ಲಿ ಈತನಿಗೆ ಹುದ್ದೆಯೊಂದು ದೊರಕಿದರೂ ಇಷ್ಟವಿಲ್ಲದೆ ಮರುವರ್ಷ ಅದನ್ನು ಬಿಟ್ಟ.

ಈತನ ಕವಿತೆಗಳಲ್ಲಿ ಹಾಸ್ಯ ಮತ್ತು ಸ್ವೋಪಜ್ಞತೆ ಮಿಂಚುತ್ತವೆ. 1788ರಲ್ಲಿ ಈತನ ಬರೆಹವೆಲ್ಲ ಒಂದು ಸಂಪುಟದಲ್ಲಿ ಪ್ರಕಟವಾಯಿತು. (ಟಿ.ವಿ.ಎಸ್.)

**ಕಿಂಗ್, ವಿಲಿಯಂ ಲೈಯನ್ ಮೆಕೆನ್‌ಜಿ :** 1874–1950. ಕೆನಡದ ರಾಜ್ಯನೀತಿಜ್ಞ; ಮೂರು ಸಾರಿ ಪ್ರಧಾನಿಯಾಗಿದ್ದವ. ಆಂಟೇರಿಯೋ ಪ್ರಾಂತ್ಯಕ್ಕೆ ಸೇರಿದ ಬರ್ಲಿನ್‌ನಲ್ಲಿ (ಈಗ ಕಿಚನರ್) 1874ರ ಡಿಸೆಂಬರ್ 17ರಂದು ಜನಿಸಿದ. ವಿಲಿಯಂ ಲೈಯನ್ ಮಕೆನ್‌ಜಿಯ ಮೊಮ್ಮಗನೀತ. ಟೊರಾಂಟೋ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರ ಪದವಿಯನ್ನು ಪಡೆದು, ಶಿಕಾಗೋ ಹಾಗೂ ಹಾರ್ವರ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರೌಢವಿದ್ಯಾರ್ಥಿವೇತನ ಪಡೆದು, ತನ್ನ ವಿಶ್ವವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ. ಹೊಸದಾಗಿ ರಚಿತವಾದ ಕಾರ್ಮಿಕ ಇಲಾಖೆಯನ್ನು 1900ರಲ್ಲಿ ಸೇರಿ ಅದರ ಲೇಬರ್ ಗೆಜೆಟ್ ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡಿದ. ಕಾರ್ಮಿಕರಿಗೆ ಸಂಬಂಧಿಸಿದ ವಿವಾದಗಳನ್ನು ಪರಿಹರಿಸುವುದರಲ್ಲಿ ಈತನ ಕೌಶಲ ಪ್ರಕಟವಾಯಿತು. ಕಾರ್ಮಿಕ ಉಪಮಂತ್ರಿಯ ಹುದ್ದೆಗೆ ಈತ ರಾಜೀನಾಮೆ ಕೊಟ್ಟು 1908ರಲ್ಲಿ ಉತ್ತರ ವಾಟರ್ಲೂ ಕ್ಷೇತ್ರದಿಂದ ಚುನಾವಣೆಯಲ್ಲಿ

ಸ್ಪರ್ಧಿಸಿ ವಿಜಯಿಯಾದ. ಇದಕ್ಕೆ ಪ್ರತಿಯಾಗಿ ಕಿಂಗ್‍ಗೆ ಕಾರ್ಮಿಕ ಸಚಿವ ಸ್ಥಾನ ಲಭ್ಯವಾಯಿತು (1909). ಸ್ವತಂತ್ರ ಉದ್ಯಮಕ್ಕೆ ಧಕ್ಕೆ ಬಾರದಂತೆ ಸಾರ್ವಜನಿಕರ ಹಿತ ರಕ್ಷಿಸುವುದೇ ಸರ್ಕಾರ ಅನುಸರಿಸಬಹುದಾದ ಸೂಕ್ತ ಪಾತ್ರ–ಎಂಬುದು ಈತನ ಅಭಿಪ್ರಾಯವಾಗಿತ್ತು. ಕೈಗಾರಿಕೆ ವಿವಾದಗಳ ಮತ್ತು ಉದ್ಯಮ ಕೂಟಗಳ ತನಿಖೆಗಳಿಗೆ ಸಂಬಂಧಿಸಿದ 1907ರ ಮತ್ತು 1910ರ ಕಾಯಿದೆಗಳು ಕಿಂಗನ ಪ್ರತಿಪಾದನೆಗೆ ಸಾಕ್ಷಿಗಳಾಗಿವೆ.

1911ರ ಚುನಾವಣೆಗಳಲ್ಲಿ ಕಿಂಗ್ ಸೋತ. ಲಿಬರಲ್ ಪಕ್ಷದೊಂದಿಗೆ ತನ್ನ ಸಂಬಂಧ ಕಡಿದುಕೊಳ್ಳಲಿಲ್ಲವಾದರೂ ರಾಕ್‍ಫೆಲರ್ ಪ್ರತಿಷ್ಠಾನಕ್ಕೆ ಸಲಹೆಗಾರನಾಗಿ ಕೆಲಸ ಮಾಡಿದ. ಕಾಲೊರಾಡೋದಲ್ಲಿ ನಡೆದ ಒಂದು ಮುಷ್ಕರಕ್ಕೆ ಸಂಧಾನಕಾರನಾಗಿದ್ದ. 1919ರಲ್ಲಿ ಇವನ ಇಂಡಸ್ಟ್ರಿ ಅಂಡ್ ಹ್ಯೂಮಾನಿಟಿ ಎಂಬ ಪುಸ್ತಕ ಪ್ರಕಟವಾಯಿತು.

1919ರಲ್ಲಿ ಕಿಂಗ್ ಲಿಬರಲ್ ಪಕ್ಷದ ನಾಯಕನಾಗಿ ಆಯ್ಕೆ ಹೊಂದಿದ. 1917ರಲ್ಲಿ ಬಲಾತ್ಕಾರ ಯೋಧ ಸಂಗ್ರಹಣದ ವಿಚಾರವಾಗಿ ಉದ್ಭವಿಸಿದ್ದ ವಿವಾದದಿಂದಾಗಿ ಛಿದ್ರವಾಗಿದ್ದ ಪಕ್ಷವನ್ನು ಮತ್ತೆ ಕಟ್ಟುವ ಹೊಣೆ ಇವನದಾಯಿತು. ಬಲಾತ್ಕಾರ ಯೋಧಸಂಗ್ರಹಣದ ಪರವಾದ ಲಿಬರಲ್ ಸದಸ್ಯರ ಬೆಂಬಲವನ್ನು ಗಳಿಸುವುದರಲ್ಲಿ ಇವನಿಗೆ ಯಶಸ್ಸು ದೊರಕಿತು. 1921ರ ಚುನಾವಣೆಗಳಲ್ಲಿ ಜಯವೂ ಲಭ್ಯವಾಯಿತು. ಆ ವರ್ಷದ ಡಿಸೆಂಬರ್ 29ರಂದು ಕಿಂಗ್ ಕೆನಡದ ಪ್ರಧಾನಿಯಾದ.

ಕಿಂಗನಿಗೆ ಸಂಸತ್ತಿನಲ್ಲಿ ಸ್ಥಿರವಾದ ಬಹುಮತ ಇರಲಿಲ್ಲ. ಇದಕ್ಕಾಗಿ ಈತ ಪ್ರೋಗ್ರೆಸಿವ್ಸ್ ಪಕ್ಷದ ಬೆಂಬಲ ಪಡೆಯಬೇಕಾಯಿತು. ಅದು ರೈತರ ಪಕ್ಷ. ಪಶ್ಚಿಮ ಕೆನಡದಲ್ಲಿ ಅದು ಪ್ರಬಲವಾಗಿತ್ತು. ತೆರಿಗೆ ಮತ್ತು ಸಾರಿಗೆ ದರಗಳನ್ನು ಇಳಿಸಿದ್ದು ಈ ಬೆಂಬಲ ದೊರಕಲು ಒಂದು ಕಾರಣ, ಕೆನಡ ಸ್ವಯಮಾಡಳಿತ ಪಡೆಯಬೇಕೆಂಬ ನೀತಿ ಅನುಸರಿಸಿದ್ದು ಇನ್ನೊಂದು ಕಾರಣ. ಆ ಸಮಯದಲ್ಲಿ ಬ್ರಿಟನ್–ತುರ್ಕಿಗಳ ನಡುವೆ ಯುದ್ಧ ಸಂಭವಿಸಿತು. ಇದಕ್ಕಾಗಿ ಕೆನಡದ ಸೈನ್ಯಬೇಕೆಂದು ಬ್ರಿಟನ್ ಕೇಳಿತು. ಕೆನಡದ ಸೈನ್ಯವನ್ನು ಕಳುಹಿಸಲು ಕಿಂಗ್ ಒಪ್ಪಲಿಲ್ಲ. 1923ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದೊಂದಿಗೆ ಹ್ಯಾಲಿಬಟ್ ಫಿಷರೀಸ್ ಕೌಲು ಮಾಡಿಕೊಂಡ. 1923 ಮತ್ತು 1926ರಲ್ಲಿ ನಡೆದ ಸಾಮ್ರಾಜ್ಯ ಸಮ್ಮೇಳನದಲ್ಲಿ ಕೆನಡದ ಸ್ವಯಮಾಡಳಿತವನ್ನೇ ಸಮರ್ಥಿಸಿದ. 1925ರ ಚುನಾವಣೆಗಳಲ್ಲಿ ಕಿಂಗನ ಪಕ್ಷಕ್ಕೆ ಕೆಲವು ಸ್ಥಾನಗಳು ನಷ್ಟವಾದುವು. ಆದರೂ ಪ್ರೋಗ್ರೆಸಿವ್‍ಗಳ ಬೆಂಬಲದಿಂದ ಅಧಿಕಾರದಲ್ಲಿ ಮುಂದುವರಿದ. ಆದರೆ ಸುಂಕದ ಇಲಾಖೆಯಲ್ಲಿಯ ಭ್ರಷ್ಟಾಚಾರದ ಕುರಿತಾದ ಕೆಲವು ಸತ್ಯಸಂಗತಿಗಳು ಬಯಲಾದ್ದರ ಪರಿಣಾಮವಾಗಿ 1926ರಲ್ಲಿ ಪ್ರಧಾನಿಯ ಹುದ್ದೆಗೆ ರಾಜೀನಾಮೆ ನೀಡಿದ. ಅನಂತರ ಬಂದ ಕನ್ಸರ್ವೆಟಿವ್ ಸರ್ಕಾರಕ್ಕೆ ಕೆಲವೇ ದಿನಗಳಲ್ಲಿ ಸಂಸತ್ತಿನಲ್ಲಿ ಸೋಲಾಯಿತು. ಅನೇಕ ಪ್ರೋಗ್ರೆಸಿವ್‍ಗಳು ಕಿಂಗನ ಲಿಬರಲ್ ಪಕ್ಷ ಸೇರಿದರು. 1926ರ ಚುನಾವಣೆಗಳಲ್ಲಿ ಭದ್ರವಾದ ಬಹುಮತದೊಂದಿಗೆ ಕಿಂಗ್ ಮತ್ತೆ ಅಧಿಕಾರಕ್ಕೆ ಬಂದ.

ಅನಂತರದ ಉಚ್ಛ್ರಾಯದ ವರ್ಷಗಳಲ್ಲಿ ಕಿಂಗನ ಆಡಳಿತ ಮೂಲತಃ ಸಂಪ್ರದಾಯವಾದಿಯಾಗಿತ್ತು. ಕ್ರಮಕ್ರಮವಾಗಿ ತೆರಿಗೆಗಳನ್ನು ಇಳಿಸಲಾಯಿತು. ಸರ್ಕಾರದವರ ವರಮಾನದ ಹೆಚ್ಚುವರಿಯನ್ನು ರಾಷ್ಟ್ರೀಯ ಋಣದ ತೀರ್ವೆಗೆ ಬಳಸಲಾಯಿತು. ವೃದ್ಧಾಪ್ಯವೇತನವನ್ನು ಜಾರಿಗೆ ಕೊಟ್ಟದ್ದು ಆ ಕಾಲದಲ್ಲೇ. ಪಶ್ಚಿಮದ ಪ್ರಾಂತ್ಯಗಳನ್ನು ರಚಿಸಿದಾಗ ಒಕ್ಕೂಟ ಸರ್ಕಾರದ ವಶದಲ್ಲಿದ್ದ ಸಾರ್ವಜನಿಕ ಭೂಸ್ವತ್ತುಗಳನ್ನು ಆ ಪ್ರಾಂತ್ಯಗಳಿಗೇ ವಹಿಸಿಕೊಡಲಾಯಿತು. ಆದರೆ ನಿರುದ್ಯೋಗ ಪರಿಹಾರಕ್ಕಾಗಲಿ, ಹೆದ್ದಾರಿಯ ನಿರ್ಮಾಣ ಕಾರ್ಯಕ್ಕಾಗಲಿ ಪ್ರಾಂತೀಯ ಸರ್ಕಾರಗಳಿಗೆ ನೆರವು ನೀಡಲು ಕಿಂಗ್ ನಿರಾಕರಿಸಿದ. 1939ರಲ್ಲಿ ಕಿಂಗ್‍ಗೆ ಸೋಲಾಯಿತು. ಕಿಂಗ್ ವಿರೋಧಪಕ್ಷದ ನಾಯಕನಾದ. ರಿಚರ್ಡ್ ಬೆನೆಟನ ಸಾಮಾಜಿಕ ಕಾನೂನಿಗೆ ಆತ ಸಮ್ಮತಿ ನೀಡಿದನಾದರೂ ಅದು ಸಂವಿಧಾನಬದ್ಧವಲ್ಲವೆಂದು ವಾದಿಸಿದ. ಅಧಿಕ ತೆರಿಗೆ ನೀತಿಗೂ ಸರ್ಕಾರದ ಅಧಿಕಾರಷಾಹಿಗೂ ಇವನ ತೀವ್ರ ವಿರೋಧವಿತ್ತು. ಲಿಬರಲ್ ಪಕ್ಷವನ್ನು ಕಿಂಗ್ ಮತ್ತೆ ಸಂಘಟಿಸಿದನಲ್ಲದೆ ಕಲ್ಯಾಣಸಾಧನೆಗಾಗಿ ಹಿತಮಿತವಾದ ಕಾನೂನು ತರಬಹುದೆಂಬುದು ಪಕ್ಷದ ಹೊಸ ಧೋರಣೆಯಾಯಿತು. 1935ರ ಚುನಾವಣೆಯಲ್ಲಿ ಕಿಂಗ್‍ಗೆ ಜಯ ಲಭಿಸಿತು. ವಿಶ್ವಾದ್ಯಂತ ಸಂಭವಿಸಿದ್ದ ಆರ್ಥಿಕ ಮುಗ್ಗಟ್ಟಿನ ಬಿರುಸು ಕೆನಡದಲ್ಲಿ ಇನ್ನೂ ಇತ್ತು. ಜೊತೆಗೆ ಪಶ್ಚಿಮದ ಪ್ರಾಂತ್ಯಗಳಲ್ಲಿ ಕೃಷಿ ಉತ್ಪನ್ನ ಕಡಿಮೆಯಾಗಿತ್ತು, ಕಿಂಗ್ ಅವಕ್ಕೆ ನೆರವು ನೀಡಿದ. ಬ್ರಿಟನ್ ಅಮೆರಿಕಗಳೊಡನೆ ವ್ಯಾಪಾರ ಒಪ್ಪಂದ ಮಾಡಿಕೊಂಡು ಕೆನಡದ ರಫ್ತನ್ನು ಅಧಿಕಗೊಳಿಸಬೇಕೆಂಬುದು ಅವನ ನೀತಿಯಾಗಿತ್ತು. ಕೆನಡದ ಸ್ವಯಮಾಡಳಿತ ನೀತಿಗೆ ಧಕ್ಕೆ ತರುವ ರೀತಿಯಲ್ಲಿ ಅಂತಾರಾಷ್ಟ್ರೀಯ ವಿವಾದಗಳಲ್ಲಿ ಸಿಲುಕಿಕೊಳ್ಳುವುದು ಇವನ ಉದ್ದೇಶವಾಗಿರಲಿಲ್ಲ. ಆಕ್ರಮಣಶೀಲ ರಾಷ್ಟ್ರಗಳನ್ನು ತೃಪ್ತಿಪಡಿಸಿಯಾದರೂ ಯುದ್ಧವನ್ನು ತಡೆಗಟ್ಟಬೇಕೆಂಬುದು ಈತನ ಅಭಿಪ್ರಾಯವಾಗಿತ್ತು. ಈತ ಕೆನಡ–ಬ್ರಿಟನ್ ಸಂಬಂಧವನ್ನು ಇನ್ನಷ್ಟು ಬಿಗಿಗೊಳಿಸಿದ.

1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾದ ಮೇಲೆ, ಸೆಪ್ಟೆಂಬರ್ 10 ರಂದು, ಕೆನಡವೂ ಅಧಿಕೃತವಾಗಿ ಯುದ್ಧ ಘೋಷಿಸಿತು. ಬ್ರಿಟನ್ನಿನ ನೆರವಿಗೆ ಕೆನಡದ ಸರಕುಗಳೂ ಸೈನ್ಯವೂ ಲಭ್ಯವಾದುವು. ಆ ಜರೂರು ಸಂದರ್ಭದಲ್ಲಿ ಸಂಮಿಶ್ರ ಸರ್ಕಾರವೊಂದನ್ನು ರಚಿಸಬೇಕೆಂಬ ಒತ್ತಾಯವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಕಿಂಗ್ 1940ರಲ್ಲಿ ಚುನಾವಣೆಗಳನ್ನು ನಡೆಸಿದ. ಕಿಂಗ್ ಪಕ್ಷವೇ ಬಹುಮತದಿಂದ ವಿಜಯಗಳಿಸಿತು. ಬಲಾತ್ಕಾರ ಯೋಧ ಸಂಗ್ರಹಣವನ್ನು ಜಾರಿಗೆ ತರುವುದಿಲ್ಲವೆಂಬುದು ಕಿಂಗ್ ವಾಗ್ದಾನವಾಗಿತ್ತು. ಆದರೆ ಇಂಗ್ಲಿಷ್ ಸಂಜಾತ ಕೆನಡಿಯನರು ಇದಕ್ಕಾಗಿ ಒತ್ತಾಯಿಸಿದರು. ತತ್ಫಲವಾಗಿ ಕಿಂಗ್ ಆಗಾಗ ತನ್ನ ನಿರ್ಧಾರವನ್ನು ಸಡಿಲಗೊಳಿಸಬೇಕಾಯಿತು. 1942ರಲ್ಲಿ ನಡೆಸಿದ ಜನಮತ ಗಣನೆಯಲ್ಲಿ ಬಲಾತ್ಕಾರ ಯೋಧಸಂಗ್ರಹಣಕ್ಕೆ ಬಹುಮತ ಬಂತು. ಗೃಹರಕ್ಷಣೆಗಾಗಿ ಯೋಧರ ಬಲಾತ್ಕಾರ ಸಂಗ್ರಹಣೆ ಜಾರಿಗೆ ಬಂತು. ಸಾಗರಾಂತರ ಕ್ಷೇತ್ರಗಳಲ್ಲಿ ಯುದ್ಧ ಮಾಡುತ್ತಿದ್ದ ಸೈನಿಕರು ಹೆಚ್ಚು ಸಂಖ್ಯೆಯಲ್ಲಿ ಹತರಾದಾಗ ಆ ನಷ್ಟ ತುಂಬುವುದಕ್ಕೂ ಬಲಾತ್ಕಾರ ಸಂಗ್ರಹಣೆ ಅವಶ್ಯವಾಯಿತು. ರಾಷ್ಟ್ರ ರಕ್ಷಣಾ ಮಂತ್ರಿ ರಾಜೀನಾಮೆ ನೀಡಿದ. ಕಿಂಗ್ ಮನಸ್ಸಿಲ್ಲದೆ ವಿದೇಶಿ ಸೈನಿಕ ಸೇವೆಗೂ ಬಲಾತ್ಕಾರ ಸಂಗ್ರಹಣವನ್ನು ಭಾಗಶಃ ಜಾರಿಗೆ ತಂದ. ಆದರೆ ಈ ವಿಚಾರದಲ್ಲಿ ಕಿಂಗ್ ಅನುಸರಿಸಿದ ನಿಧಾನ ನೀತಿಯಿಂದಾಗಿ ಫ್ರೆಂಚ್ ಕೆನಡಿಯನರಿಗೆ ಸಮಾಧಾನವಾಯಿತು. ಬಲಾತ್ಕಾರ ಸಂಗ್ರಹಣವಾಗದಂತೆ ಮಾಡಲು ಕಿಂಗ್ ಶಕ್ತಿಮೀರಿ ಶ್ರಮಿಸಿದನೆಂಬುದು ಅವರಿಗೆ ಮನವರಿಕೆಯಾಗಿ ಅವರು ಸರ್ಕಾರದ ನಿರ್ಧಾರವನ್ನೊಪ್ಪಿಕೊಂಡರು.

1945ರ ಚುನಾವಣೆಗಳಲ್ಲೂ ಕಿಂಗ್ ಜಯಶಾಲಿಯಾದ. ಯುದ್ಧದಿಂದ ಶಾಂತಿಯ ಅರ್ಥವ್ಯವಸ್ಥೆಗೆ ರಾಷ್ಟ್ರವನ್ನು ಪರಿವರ್ತನೆಗೊಳಿಸುವ ಕಾರ್ಯದ ಮೇಲೆ ಸೂಕ್ತಪರಿಶೀಲನೆ ನಡೆಸಿದ. ಅಂತರರಾಷ್ಟ್ರೀಯ ವಿಚಾರಗಳಲ್ಲಿ ಕೆನಡವೂ ಭಾಗವಹಿಸಬೇಕೆಂಬ ಸೂಚನೆಯನ್ನು ಕಿಂಗ್ ಒಪ್ಪಿದ. ವಿಶ್ವಸಂಸ್ಥೆ ಮತ್ತು ಉತ್ತರ ಅಟ್ಲಾಂಟಿಕ್ ಕೌಲು ಸಂಸ್ಥೆಗಳಲ್ಲಿ ಆ ರಾಷ್ಟ್ರವೂ ಪಾತ್ರ ವಹಿಸಿತು. ಅನಾರೋಗ್ಯದಿಂದಾಗಿ ಕಿಂಗ್ 1948ರಲ್ಲಿ ಪ್ರಧಾನಿಪದವಿಗೆ ರಾಜೀನಾಮೆ ನೀಡಿದ. ಈತ ತೀರಿಕೊಂಡದ್ದು 1950ರ ಜುಲೈ 22ರಂದು.

ಕೆನಡ ರಾಷ್ಟ್ರದ ಐಕ್ಯಕ್ಕಾಗಿ ಶ್ರಮಿಸಿದ ವ್ಯಕ್ತಿ ಕಿಂಗ್. ಫ್ರೆಂಚ್ ಕೆನಡಿಯನರ ಸಂಸ್ಕೃತಿಯನ್ನು ಗೌರವಿಸಿ ತನ್ಮೂಲಕ ಏಕತೆ ಸಾಧಿಸಿದ. ಮಂತ್ರಿ ಪದವಿಗೆ ಸಮರ್ಥರನ್ನು ಆರಿಸಿಕೊಂಡು, ಅವರ ಶಾಖೆಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡದೆ, ಸಚಿವ ಸಹೋದ್ಯೋಗಿಗಳ ವಿಶ್ವಾಸ ಮತ್ತು ಗೌರವವನ್ನು ಸಂಪಾದಿಸಿದ್ದ. ಉಚ್ಚ ಶಿಕ್ಷಣದಿಂದ ಪಡೆದ ಜ್ಞಾನ, ಕಾರ್ಮಿಕರಲ್ಲಿ ಅವನಿಗಿದ್ದ ಅಭಿಮಾನ, ಪ್ರಾಂತೀಯವಾದ ಸಮಸ್ಯೆಗಳು ಮತ್ತು ಹಿತಾಸಕ್ತಿಗಳನ್ನು ಬಗೆಹರಿಸುವುದರಲ್ಲಿ ಆತ ತೋರಿದ ಸಂಯಮಯುತ ಮಾರ್ಗದರ್ಶನ, ಯುದ್ಧವಿರೋಧಿ ಭಾವನೆ, ಅತಿರೇಕದಿಂದ ಕೂಡಿದ ಸಮಾಜವಾದಕ್ಕಿಂತ ಸಮಾಜಕಲ್ಯಾಣ ಕಾರ್ಯಕ್ರಮವೇ ಲೇಸು ಎಂಬ ಧೋರಣೆ, ನೆರೆಹೊರೆಯ ರಾಷ್ಟ್ರಗಳೊಡನೆ ಸ್ನೇಹ ಸಂಬಂಧವನ್ನು ವೃದ್ಧಿಗೊಳಿಸಿಕೊಳ್ಳಬೇಕೆಂಬ ನೀತಿ, ಸತ್ವವನ್ನು ಒಪ್ಪಿ ಅಧಿಕಾರವನ್ನು ತ್ಯಜಿಸುವ ಪ್ರಾಮಾಣಿಕತೆ ಮತ್ತು ಸ್ನೇಹ ಭಾವನೆಗಳಿಂದಾಗಿ ಕಿಂಗ್ ಸುಮಾರು 22 ವರ್ಷಗಳ ಕಾಲ ಕೆನಡದ ಶ್ರೇಷ್ಠ ರಾಜ್ಯ ನೀತಿಜ್ಞನಾಗಿ ಆ ರಾಷ್ಟ್ರದ ನಾಯಕತ್ವ ವಹಿಸಿದ್ದ. (ಎಂ.ಬಿ.ಆರ್.ಯು.)

**ಕಿಂಗ್ ಹೆನ್ರಿ :** 1592–1669. ಲಂಡನಿನ ಬಿಷಪನೊಬ್ಬನ ಮಗ. ವೆಸ್ಟ್‍ಮಿನಿಸ್ಟರ್ ಶಾಲೆ ಮತ್ತು ಆಕ್ಸ್‍ಫರ್ಡ್‍ಗಳಲ್ಲಿ ವಿದ್ಯಾರ್ಜನೆ ಮಾಡಿ ಚಿಚೆಸ್ಟರಿನ ಮಠಾಧಿಪತಿಯಾದ (1642). ಅರಸು ಮನೆತನದ ಅನೇಕ ವ್ಯಕ್ತಿಗಳನ್ನೂ ತನ್ನ ಆಪ್ತಮಿತ್ರರನ್ನೂ (ಮುಖ್ಯವಾಗಿ ಡನ್, ಐಸ್ಯಾಕ್ ವಾಲ್ಟನ್, ಬೆನ್ ಜಾನ್ಸನ್) ಕುರಿತು ಈತ ಚರಮಗೀತಗಳನ್ನೂ ಬರೆದಿದ್ದಾನೆ. ಕವಿ ತನ್ನನ್ನೇ ಕುರಿತು ಬರೆದುಕೊಂಡ ಚರಮಗೀತೆ 1663ರಲ್ಲಿ ಹೊರಬಂದ ಇವನ ಕವನ ಸಂಗ್ರಹದಲ್ಲಿದೆ. (ಎನ್.ಎಸ್.ಎಲ್.)

**ಕಿಂಗ್‍ಸ್ಟನಿನ ಶ್ರೀಮಂತರು :** ಇಂಗ್ಲೆಂಡಿನ ಹಲ್‍ನದಿಯ ದಡದಲ್ಲಿರುವ ಚಾರಿತ್ರಿಕ ಮಹತ್ತ್ವವುಳ್ಳ ಕಿಂಗ್‍ಸ್ಟನ್ ನಗರದ ಅರ್ಲ್ ಮತ್ತು ಡ್ಯೂಕರ ಪರಂಪರೆ. ಮಧ್ಯಕಾಲೀನ ಬ್ರಿಟನಿನಲ್ಲಿ ರೂಢಿಗೆ ಬಂದು ಈಗಲೂ ಬಳಕೆಯಲ್ಲಿರುವ ಈ ಗೌರವ ಪದವಿಗಳಲ್ಲಿ ಅರ್ಲ್ ಪದವಿಗಿಂತಲೂ ಡ್ಯೂಕ್ ಪದವಿ ಹೆಚ್ಚಿನ ಮಟ್ಟದ್ದು.

ರಾಬರ್ಟ್ ಪೀರ್‍ಪಾಂಟ್ (1584–1643) ಕಿಂಗ್‍ಸ್ಟನಿನ ಮೊದಲನೆಯ ಅರ್ಲ್‍ವಾಸ್ತವವಾಗಿ ಕಿಂಗ್‍ಸ್ಟನಿನ ಅರ್ಲ್ ಪದವಿಯನ್ನು 1628ರಲ್ಲಿ ಈತನಿಗಾಗಿಯೇ ಸೃಷ್ಟಿಸಲಾಯಿತು. ಇವನು ನಾಟಿಂಗ್‍ಹ್ಯಾಂಷೈರಿನ ಸರ್ ಹೆನ್ರಿ ಪೀರ್‍ಪಾಂಟನ ಮಗ. 1601ರಲ್ಲಿ ಈತ ನಾಟಿಂಗ್‍ಹ್ಯಾಂನಿಂದ ಪಾರ್ಲಿಮೆಂಟಿನ ಸದಸ್ಯನಾದ. 1627ರಲ್ಲಿ ಇವನನ್ನು ವೈಕೌಂಟ್ ನೆವಾರ್ಕ್ ಎಂದು ಗೌರವಿಸಲಾಯಿತು. ಅಂತರ್ಯುದ್ಧ ಪ್ರಾರಂಭವಾದಾಗ ಈತ ಅಲಿಪ್ತನಾಗಿಯೇ ಉಳಿಯಲು ಪ್ರಯತ್ನಿಸಿದನಾದರೂ 1643ರಲ್ಲಿ ರಾಜನ ಪಕ್ಷವನ್ನು ಸೇರಿಕೊಂಡ. ಆಗ ಈತನನ್ನು ಪೂರ್ವದೇಶಗಳ ಲೆಫ್ಟಿನೆಂಟ್ ಜನರಲ್ ಆಗಿ ನೇಮಿಸಲಾಯಿತು. ಆ ಸಂದರ್ಭದಲ್ಲಿ ಪಾರ್ಲಿಮೆಂಟ್ ಪಕ್ಷದವರು ಗೇನ್ಸ್‍ಬರೋದಲ್ಲಿ ಇವನನ್ನು ಸೆರೆಹಿಡಿದು ಹಲ್‍ಗೆ ಕರೆದೊಯ್ಯುತ್ತಿದ್ದಾಗ 1643ರಲ್ಲಿ ಜುಲೈ 25ರಂದು ಹಠಾತ್ತನೆ ಸಾವಿಗೆ ಈಡಾದ. ಈತನಿಗೆ ಹೆನ್ರಿ (1606–1680), ವಿಲಿಯಂ (ನಿಧನ: 1678) ಮತ್ತು ಫ್ರಾನ್ಸಿಸ್ (ನಿಧನ : 1659) ಎಂಬ ಮೂವರು ಗಂಡು ಮಕ್ಕಳಿದ್ದರು. ವಿಲಿಯಂ ಮತ್ತು

ಫ್ರಾನ್ಸಿಸ್ ಪಾರ್ಲಿಮೆಂಟಿನ ಪ್ರಮುಖ ಸದಸ್ಯರಾಗಿದ್ದರು. ಹಿರಿಯನಾದ ಹೆನ್ರಿ ಎರಡನೆಯ ಅರ್ಲ್ ಆದ. ಈತ ಅಕ್ಸ್‌ಬ್ರಿಜ್ ಸಂಧಾನಗಳಲ್ಲಿ ಮೊದಲನೆಯ ಚಾರಲ್ಸ್‌ನ ಪ್ರತಿನಿಧಿಯಾಗಿದ್ದ. 1645ರಲ್ಲಿ ಈತ ಪ್ರಿವಿ ಕೌನ್ಸಿಲಿನ ಸದಸ್ಯನಾದ; ಡಾರ್ಚೆಸ್ಟರಿನ ಮಾರ್ಕ್ವಿಸ್ ಎಂಬ ಗೌರವವೂ ದೊರಕಿತು. ಈತ 1647ರಲ್ಲಿ ಕಾಮನ್‌ವೆಲ್ತ್ ಆಳ್ವಿಕೆಯ ಕಾಲದಲ್ಲಿ ಹೆಚ್ಚು ಮೊತ್ತದ ದಂಡವನ್ನು ತೆತ್ತು ತನ್ನ ಪದವಿಯ ವಿಷಯದಲ್ಲಿ ಕರಾರು ಮಾಡಿಕೊಂಡು, ತರುವಾಯ ಲಂಡನಿಗೆ ತೆರಳಿ ನ್ಯಾಯಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳನ್ನು ಅಭ್ಯಾಸಮಾಡಿದ. 1660ರಲ್ಲಿ ಮತ್ತೆ ಇವನನ್ನು ಪ್ರಿವಿ ಕೌನ್ಸಿಲಿನ ಸದಸ್ಯನಾಗಿ ನೇಮಿಸಲಾಯಿತು. 1666ರಲ್ಲಿ ನಾಟಿಂಗ್ ಹ್ಯಾಮಿನ ರೆಕಾರ್ಡರ್ (ಅಪರಾಧದ ಮತ್ತು ವ್ಯವಹಾರದ ನ್ಯಾಯಾಧಿಕಾರವುಳ್ಳವನಾಗಿ ಮೂರು ತಿಂಗಳಿಗೊಮ್ಮೆ ನ್ಯಾಯಸ್ಥಾನವನ್ನು ನಡೆಸುವ ಒಬ್ಬ ದಂಡಾಧಿಕಾರಿ) ಆಗಿ ಇವನನ್ನು ನೇಮಿಸಲಾಯಿತು. 1680ರಲ್ಲಿ ಈತ ನಿಧನಹೊಂದಿದಾಗ ಮಾರ್ಕ್ವಿಸ್ ಪದವಿಯ ಫಲವಾಗಿ ದೊರೆತಿದ್ದ ಇನಾಮತಿ ಭೂಸ್ವತ್ತು ಕೊನೆಗೊಂಡಿತು. ಅರ್ಲ್ ಪದವಿ ಮಾತ್ರ ಆನುವಂಶಿಕವಾಗಿ ಮುಂದುವರಿಯಿತು. ಅನುಕ್ರಮವಾಗಿ ಈ ವಂಶದ ರಾಬರ್ಟ್ (ನಿ. 1682), ವಿಲಿಯಂ (ನಿ. 1690) ಮತ್ತು ಎವೆಲಿನ್ (1665–1726) ಕ್ರಮಶಃ 3, 4 ಮತ್ತು 5ನೆಯ ಅರ್ಲ್‌ಗಳಾದರು.

ಇವರಲ್ಲಿ 1665ರಿಂದ 1726ರ ವರೆಗೆ ಅಧಿಕಾರ ನಿರ್ವಹಿಸಿದ ಐದನೆಯ ಅರ್ಲ್‌ಎವೆಲಿನ್ ಮುಖ್ಯ. ಈತ ವ್ಹಿಗ್ ಪಕ್ಷದ ನಿಷ್ಠಾವಂತ ಸದಸ್ಯ. 1706ರಲ್ಲಿ ಮಾರ್ಕ್ವಿಸ್ ಆಫ್ ಡಾರ್ಚೆಸ್ಟರ್ ಪದವಿಯೂ 1708ರಲ್ಲಿ ಪ್ರಿವಿ ಕೌನ್ಸಿಲಿನ ಸದಸ್ಯತ್ವವೂ ಇವನಿಗೆ ದೊರಕಿದುವು. 1715ರಲ್ಲಿ ಕಿಂಗ್ಸ್‌ಟನಿನ ಡ್ಯೂಕ್ ಪದವಿಯೂ ದೊರಕಿತು. ಡ್ಯೂಕ್ ಪದವಿಯ ಮನ್ನಣೆಯನ್ನು ಪಡೆದ ಕಿಂಗ್ಸ್‌ಟನಿನ ಮೊದಲ ಅರ್ಲ್ ಈತನೇ. ಮುಂದೆ ಲಾರ್ಡ್ ಪ್ರಿವಿ ಕೌನ್ಸಿಲ್ ಮತ್ತು ಲಾರ್ಡ್ ಪ್ರೆಸಿಡೆಂಟ್ ಆಫ್ ದಿ ಕೌನ್ಸಿಲ್ ಎಂಬ ಗೌರವದ ಹುದ್ದೆಗಳನ್ನೂ ಈತ ನಿರ್ವಹಿಸಿದ. 1726ರ ಮಾರ್ಚ್ 5ರಂದು ಇವನು ತೀರಿಕೊಂಡ. ಈತನಿಗೆ ವಿಲಿಯಂ ಎಂಬ ಒಬ್ಬ ಮಗನೂ ಐವರು ಹೆಣ್ಣು ಮಕ್ಕಳೂ ಇದ್ದರು. ವಿಲಿಯಂ 1713ರಲ್ಲಿಯೇ ತೀರಿಕೊಂಡಿದ್ದದರಿಂದ, ಅವನ ಮಗನಾದ ಎವೆಲಿನ್ (1771–1773) ಎರಡನೆಯ ಮತ್ತು ಕೊನೆಯ ಡ್ಯೂಕ್ ಆಗಿ ಅಧಿಕಾರ ವಹಿಸಿಕೊಂಡ. ಇವನು ಕಟ್ಟಿದ ಸೇನೆ ಕುಲ್ಲೋಡೆನ್‌ನ ದಂಗೆಕೋರರನ್ನು ನಿಗ್ರಹಿಸಿ ವಿಶೇಷ ಖ್ಯಾತಿಗಳಿಸಿತು. 1755ರಲ್ಲಿ ಇವನನ್ನು ಜನರಲ್ ಹುದ್ದೆಗೆ ಏರಿಸಲಾಯಿತು. ಈತನ ಪ್ರಸಿದ್ಧಿಗೆ ಕಾರಣವಾದ ಮತ್ತೊಂದು ಸಂಗತಿ ಎಂದರೆ ಬ್ರಿಸ್ಟಲಿನ ಮಾರ್ಕ್ವಿಸ್ ಆಗಿದ್ದ ಎಲಿಜಬೆತ್ ಚುಡ್ಲೇಯನ್ನು ವಿವಾಹವಾದ್ದು. ಇವನು 1773ರಲ್ಲಿ ಸಂತತಿಯಿಲ್ಲದೆ ಮೃತನಾದುದರಿಂದ ಕಿಂಗ್ಸ್‌ನಿನ ಈ ಶ್ರೀಮಂತ ಪದವಿ ಮುಂದುವರಿಯಲಿಲ್ಲ. (ಪಿ.ಜಿ.ಡಿ.)

**ಕಿಂಗ್ಸ್‌ಲಿ, ಚಾರ್ಲ್ಸ್ :** 1819–1875. ಆಂಗ್ಲ ಕಾದಂಬರಿಕಾರ, ಇತಿಹಾಸಕಾರ, ಧರ್ಮಗುರು, ಪಾದ್ರಿಯೊಬ್ಬನ ಮಗನಾದ ಈತ ಡಾರ್ಟ್‌ಮೂರಿನ ಬಳಿ ಸಣ್ಣ ಗ್ರಾಮ ಒಂದರಲ್ಲಿ ಹುಟ್ಟಿದ. ಬಾಲ್ಯವನ್ನು ಬಾರ್ನ್ಯಾಕ್‌ನಲ್ಲೂ ಡೆವಾನ್‌ಷೈರಿನ ಕೊವೆಲ್ಲಿಯಲ್ಲೂ ಕಳೆದ. ತನ್ನ ನಾಲ್ಕನೆಯ ವರ್ಷದಲ್ಲಿಯೇ ಉಪದೇಶ ಭಾಷಣಗಳನ್ನು ಬರೆಯುತ್ತಿದ್ದನೆಂದು ಹೇಳಲಾಗಿದೆ. ವಿದ್ಯಾಭ್ಯಾಸ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲೂ ಕೇಂಬ್ರಿಜ್‌ನ ಮ್ಯಾಗ್ಡಲೀನ್ ಕಾಲೇಜಿನಲ್ಲೂ ನಡೆಯಿತು. ಮುಂದೆ ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡಬೇಕೆಂಬ ಅಭಿಲಾಷೆಯಿತ್ತು. ಅದು ಕೈಗೂಡದೆ 1842ರಲ್ಲಿ ಪಾದ್ರಿಯ ಸಹಾಯಕನಾಗಿ ಎರಡು ವರ್ಷಗಳ ಕಾಲ ಕೆಲಸಮಾಡಿದ. ಅನಂತರ ಹ್ಯಾರಿಸ್‌ಷೈರಿನ ಎವರ್‌ಸ್ಲೇಯಲ್ಲಿ ಪಾದ್ರಿಯಾದ ಮುಂದಿನ ವರ್ಷ ದಿ ಸೇಂಟ್ಸ್ ಟ್ರಾಜಿಡಿ ಎಂಬ ನಾಟಕವನ್ನು ಪ್ರಕಟಿಸಿದ. ಹಂಗೇರಿಯ ಸೇಂಟ್ ಎಲಿಜಬೆತಳೇ ಅದರ ನಾಯಕಿ. ಯೀಸ್ಟ್ (1848) ಮತ್ತು ಆಲ್ಟನ್‌ಲಾಕ್ (1850) ಎಂಬ ಕಾದಂಬರಿಗಳಲ್ಲಿ ಕಾರ್ಮಿಕ ಹಾಗೂ ರೈತಾಪಿ ವರ್ಗದವರ ಸಾಮಾಜಿಕ ಸಮಸ್ಯೆಗಳನ್ನು ವರ್ಣಿಸಲಾಗಿದೆ. 1853ರಲ್ಲಿ ಪ್ರಕಟವಾದ ಹೈಪೇಷ ಗ್ರಂಥದಲ್ಲಿ ಅಲೆಕ್ಸಾಂಡ್ರಿಯದ ಗ್ರೀಕ್ ತತ್ತ್ವಜ್ಞರಿಗೂ ಪ್ರಾಚೀನ ಕ್ರೈಸ್ತಮತಾವಲಂಬಿಗಳಿಗೂ ಇದ್ದ ಭಿನ್ನಾಭಿಪ್ರಾಯಗಳನ್ನು ತೋರಿಸಲಾಗಿದೆ. ಹೈಪೇಷ ಅಲೆಕ್ಸಾಂಡ್ರಿಯದಲ್ಲಿ 5ನೆಯ ಶತಮಾನದಲ್ಲಿದ್ದ ಒಬ್ಬ ವೇದಾಂತಿ. ಆಕೆಯನ್ನು ಕ್ರೈಸ್ತ ಸನ್ಯಾಸಿಗಳು ಹಿಂಸಿಸಿ ಕೊಲ್ಲುತ್ತಾರೆ. ಸಾಧಾರಣ ಜನರಿಗೆ ವಿದ್ಯಾವತಿಯರನ್ನು ಕಂಡರೆ ಇರುವ ಅಸಹನೆಯನ್ನು ಈ ಪುಸ್ತಕ ಎತ್ತಿ ತೋರಿಸಿದೆ. ಮುಂದೆ ಪ್ರಕಟವಾದ ವೆಸ್ಟ್‌ವರ್ಡ್ ಹೋ ಎಂಬ ಗ್ರಂಥದಲ್ಲಿ ಇದೇ ಸಮಸ್ಯೆಗಳಿದ್ದು ಆ ಪುಸ್ತಕ ತುಂಬ ಜನಪ್ರಿಯತೆ ಗಳಿಸಿತು. ದಿ ವಾಟರ್ ಬೇಬೀಸ್ (1863) ಎಂಬುದು ಮಕ್ಕಳಿಗಾಗಿ ಬರೆದ ಪುಸ್ತಕ. ಇದರಲ್ಲಿ ಪ್ರಕೃತಿವೈಚಿತ್ರ್ಯದತ್ತ ಮಕ್ಕಳ ಕುತೂಹಲವನ್ನು ಕೆರಳಿಸಲಾಗಿದೆ. ದಿ ತ್ರೀ ಫಿಷರ್ಸ್, ಎ ಫೇರ್‌ವೆಲ್, ಯಂಗ್ ಅಂಡ್ ಓಲ್ಡ್–ಇವು ಈತನ ಕವನಗಳಲ್ಲಿ ಮುಖ್ಯವಾದವು. 1859ರಲ್ಲಿ ಕಿಂಗ್ಸ್‌ಲಿ ವಿಕ್ಟೋರಿಯ ರಾಣಿಯ ಅರಮನೆಯ ಬಿಷಪ್ ಆಗಿದ್ದ. 1860–69ರ ವರೆಗೆ ಕೇಂಬ್ರಿಜ್‌ನಲ್ಲಿ ಆಧುನಿಕ ಇತಿಹಾಸದ ಪ್ರಾಧ್ಯಾಪಕನಾಗಿದ್ದ. 1875ರಲ್ಲಿ ತೀರಿಕೊಂಡ. 1872ರಲ್ಲಿ ಈತನ ಆಯ್ದ ಕವನ ಸಂಕಲನವೊಂದು ಪ್ರಕಟವಾಯಿತು. 1877ರಲ್ಲಿ ಈತನ ಹೆಂಡತಿ ಪತಿಯ ಪತ್ರಗಳನ್ನು ಪ್ರಕಟಿಸಿದಳು. ಉದ್ವೇಗಪೂರ್ಣವಾದ ಸ್ವಭಾವದವನಾದರೂ ತನ್ನ ಇತರ ಉದಾರಗುಣಗಳಿಂದಾಗಿ ಕಿಂಗ್ಸ್‌ಲಿ ಜನರ ಮೆಚ್ಚಿಕೆಗೆ ಪಾತ್ರನಾಗಿದ್ದ. (ಎಚ್.ವಿ.ಎಸ್.; ಎನ್.ಎಸ್.ಎಲ್.)

**ಕಿಂಗ್ಸ್‌ಲಿ, ಹೆನ್ರಿ :** 1830–76. ಆಂಗ್ಲಕವಿ, ಕಾದಂಬರಿಕಾರ ಮತ್ತು ಪತ್ರಿಕೋದ್ಯಮಿ. ಕಿಂಗ್ಸ್‌ಲಿ, ಚಾರ್ಲ್ಸ್‌ನ ತಮ್ಮ. ನಾರ್ತಾಂಪ್ಟನ್ ಷೈರಿನಲ್ಲಿರುವ ಬಾರ್ನಾಕ್‌ನಲ್ಲಿ 2 ಜನವರಿ 1830ರಲ್ಲಿ ಜನಿಸಿದ. ಲಂಡನ್ನಿನ ಕಿಂಗ್ಸ್ ಕಾಲೇಜು ಮತ್ತು ಆಕ್ಸ್‌ಫರ್ಡ್ ಕಾಲೇಜಿನಲ್ಲಿ ವ್ಯಾಸಂಗಮಾಡಿ, ಆಸ್ಟ್ರೇಲಿಯದ ಚಿನ್ನದ ಗಣಿಗಳಲ್ಲಿ ಕೆಲಸಕ್ಕೆ ಹೋದ (1853). ಐದು ವರ್ಷಗಳ ಅನಂತರ ಇಂಗ್ಲೆಂಡಿಗೆ ಬಂದು ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದ. ದಿ ರಿಕಲೆಕ್ಷನ್ಸ್ ಆಫ್ ಜಾಫ್ರಿ ಹ್ಯಾಮ್‌ಲಿನ್ ಎಂಬುದು ಈತ ಬರೆದ ಪ್ರಥಮ ಕಾದಂಬರಿ. ಆಸ್ಟ್ರೇಲಿಯದ ಜನಜೀವನ ಇದರ ವಸ್ತು. ರ‍್ಯಾವನ್ ಷೂ (1861) ಮತ್ತು ದಿ ಹಿಲಿಯರ್ಸ್ ಅಂಡ್ ದಿ ಬರ್ಟನ್ಸ್ (1865) ಎಂಬುವು ಈತನ ಉತ್ತಮ ಹಾಗೂ ಜನಪ್ರಿಯ ಕಾದಂಬರಿಗಳು. ದಿ ಬಾಯ್ ಇನ್ ಗ್ರೆ ಎಂಬುದು ಈತ ಮಕ್ಕಳಿಗಾಗಿ ಬರೆದಿರುವ ಪುಸ್ತಕ. 1869ರಲ್ಲಿ ಎಡಿನ್‌ಬರೋಗೆ ಹೋಗಿ ಲಿಬರಲ್ ಡೆಯಿಲಿ ರೆವ್ಯೂ ಎಂಬ ಪತ್ರಿಕೆಯ ಸಂಪಾದಕನಾದ. ಜರ್ಮನಿ ಮತ್ತು ಫ್ರಾನ್ಸ್‌ಗಳಿಗೆ ನಡೆದ ಯುದ್ಧ ಸಮಯದಲ್ಲಿ ಯುದ್ಧ ವರದಿಗಾರನಾಗಿಯೂ ಕೆಲಸ ಮಾಡಿದ. (ಕೆ.ಎಸ್.ಬಿ.ಜಿ.)

**ಕಿಂಡರ್‌ಗಾರ್ಟನ್ :** ಜರ್ಮನ್ ಶಿಕ್ಷಣಪಂಡಿತ ಫ್ರೀಡ್ರಿಷ್ ಫ್ರೊಬೆಲ್ (1782–1852) ಎಂಬಾತ 3 ರಿಂದ 5 ವರ್ಷದ ಮಕ್ಕಳಿಗಾಗಿ ಅವರ ಆಟ ಮುಂತಾದ ಸ್ವಾಭಾವಿಕ ಆಸಕ್ತಿಗಳನ್ನು ಬಳಸಿಕೊಂಡು ವಿಶಿಷ್ಟ ರೀತಿಯ ಉಪಕರಣ ಮತ್ತು ಕಾರ್ಯಕ್ರಮಗಳ ಮೂಲಕ ಅವರ ಸರ್ವತೋಮುಖವಾದ ವಿಕಾಸವನ್ನು ಸಾಧಿಸಲು ಆರಂಭಿಸಿದ ಪ್ರಾಥಮಿಕ ಪೂರ್ವದ ಒಂದು ಶಿಕ್ಷಣಪದ್ಧತಿ. 'ಶಾಲೆಯೇ ಒಂದು ತೋಟ: ಅಲ್ಲಿನ ಮಕ್ಕಳೇ ಎಳೆಯ ಸಸಿಗಳು, ಅಧ್ಯಾಪಕರೇ ಅದಕ್ಕೆ ನೀರೆರೆದು ಪೋಷಿಸುವ ತೋಟಗಾರರು' ಎಂಬ ಭಾವನೆಯನ್ನು ತಳೆದಿದ್ದ ಫ್ರೊಬೆಲ್ ತನ್ನ ಶಾಲೆಯನ್ನು ಕಿಂಡರ್‌ಗಾರ್ಟನ್ (ಮಕ್ಕಳ ತೋಟ) ಎಂದೇ ಕರೆದ. ಶಿಕ್ಷಣದ ಬಗ್ಗೆ ಅವನದು ಆಧ್ಯಾತ್ಮಕ ದೃಷ್ಟಿ: ಜನತೆಯಲ್ಲಿ ಅದು ಆಧ್ಯಾತ್ಮಿಕ ಭಾವನೆಯನ್ನು ಪೋಷಿಸಬೇಕೆಂಬುದು ಅವನ ನಂಬಿಕೆ. ದೈವದತ್ತವಾಗಿ ಬಂದಿರುವ ಶಕ್ತಿಸಾಮರ್ಥ್ಯಗಳು ಮಕ್ಕಳಲ್ಲಿ ಅಡಗಿವೆಯೆಂದೂ ಶಿಕ್ಷಣದಿಂದ ಅವು ಹೊರಹೊಮ್ಮಬೇಕೆಂದೂ ಅವನು ಭಾವಿಸಿದ್ದ. ಅವನಿಗೂ ಹಿಂದಿದ್ದ ಪೆಸ್ಟಲಾಜಿ ಸೂಚಿಸಿದ್ದಂತೆ ಮಕ್ಕಳ ಬಗ್ಗೆ ಪ್ರೇಮಾಸಕ್ತಿಗಳನ್ನು ತಳೆದು ಅವರ ಶಿಕ್ಷಣವನ್ನು ರೂಪಿಸಬೇಕೆಂಬುದು ಫ್ರೊಬೆಲ್ಲರ ಭಾವನೆಯೂ ಆಗಿತ್ತು.

ಶೈಶವ ವ್ಯಕ್ತಿಯ ಒಳಗಿನ ಅಂಶ (ಆಟದ ಆಸಕ್ತಿ) ಹೊರಹೊಮ್ಮುವ ಕಾಲವೆಂದೂ ಬಾಲ್ಯ ಹೊರಗಿನ ಅಂಶ ಒಳಹೋಗುವ (ಕಲಿಯುವ) ಕಾಲವೆಂದೂ ಫ್ರೊಬೆಲ್ ನಂಬಿದ್ದ. ಆದ್ದರಿಂದ ಅವನು ತನ್ನ ಶಾಲೆಯಲ್ಲಿ ಆಟಕ್ಕೆ ಪ್ರಾಶಸ್ತ್ಯವಿತ್ತ. ಮಕ್ಕಳಿಗೆ ಆಟವೇ ಸ್ವಾಭಾವಿಕ ಜೀವನ. ಆಗ ಅವರು ಸಂತೋಷವನ್ನು ವ್ಯಕ್ತಪಡಿಸುವುದು ಆಟದ ಮೂಲಕ. ಅಂಥ ಆಟ ದೈವಲೀಲೆಗೆ ಸಮಾನ. ಆ ಆಟಗಳಿಂದ ಮಕ್ಕಳಿಗೆ ನೆಮ್ಮದಿಯೂ ತೃಪ್ತಿಯೂ ದೊರಕುವುವು. ಆದ್ದರಿಂದ ಮಕ್ಕಳ ಎಲ್ಲ ಮುಖವಾದ ಶಿಕ್ಷಣಕ್ಕೂ ಅವರ ಆಟದ ಆಸಕ್ತಿಯನ್ನೇ ಆತ ಆಧಾರ ಮಾಡಿಕೊಂಡ.

ಫ್ರೊಬೆಲ್ ತನ್ನ ಶಾಲೆಗೆ ಪಠ್ಯವಸ್ತುವನ್ನು ಗೊತ್ತುಮಾಡಲಿಲ್ಲ. ಪಠ್ಯಪುಸ್ತಕಗಳನ್ನೂ ಬಳಸಲಿಲ್ಲ. ಓದು ಬರೆಹ ಲೆಕ್ಕಗಳನ್ನು ಕಲಿಯಲು ಅದು ಸೂಕ್ತವಾದ ಕಾಲವಲ್ಲವೆಂಬುದೇ ಅದಕ್ಕೆ ಕಾರಣ. ಆಟದ ಮೂಲಕ ಮಕ್ಕಳು ಚಟುವಟಿಕೆಯಿಂದಿದ್ದು ಸ್ವಪ್ರಯತ್ನದಿಂದ ಅನುಭವ ಪಡೆಯುವ ಅವಕಾಶವಿರುವುದರಿಂದ ಅವರಿಗೆ ಆಟವೇ ಪರಿಣಾಮಕಾರಿಯಾದ ಶೈಕ್ಷಣಿಕ ಕಾರ್ಯಕ್ರಮವೆಂದಾತ ನಿರ್ಧರಿಸಿದ. ಅದಕ್ಕೆ ಸಹಾಯಕವೆನಿಸುವಂತೆ ವಿಶಿಷ್ಟರೀತಿಯ ಆಟಗಳನ್ನು (ಫ್ರೊಬೆಲ್ಸ್ ಗಿಫ್ಟ್) ಕಾರ್ಯಶ್ರೇಣಿಗಳನ್ನೂ ಆತ ನಿಯೋಜಿಸಿದ. ಆಟಿಕೆಗಳಲ್ಲಿ ಕೆಲವು ಗೋಳಾಕಾರವಾಗಿವೆ; ಇನ್ನು ಕೆಲವು ದುಂಡನೆಯ ತುಂಡುಗಳಂತಿವೆ; ಮತ್ತೆ ಕೆಲವು ಸಮಾನಮುಖಿಗಳ ಘನಾಕೃತಿಗಳಂತಿವೆ. ಮಕ್ಕಳು ಅವನ್ನು ಬಳಸಿಕೊಂಡು ಆಡುವರು. ಅಂಥ ಒಂದು ಆಟವನ್ನು ಇಲ್ಲಿ ಸೂಚಿಸಬಹುದು. ಪ್ರತಿಯೊಂದು ಮಗುವಿಗೂ ಆರು ಸಮಾನಮುಖಿಗಳ ಘನಾಕೃತಿಯೊಂದನ್ನು ಕೊಟ್ಟು ಅಧ್ಯಾಪಕರು ಆ ಆಟಕ್ಕೆಂದೇ ರಚನೆಯಾಗಿರುವ 'ಆರು ಮುಖಗಳು ನನಗೆ, ಘನವಸ್ತು ನಾನು; ಉದ್ದದಲು ಅಗಲದಲು ಎಲ್ಲ ಮುಖ ಒಂದೆ, ನನ್ನ ಸರಿಸಮನಾಗಿ ಹೋಳೆರಡುಮಾಡು, ಈ ಆಟ ಬಲು ಚೆಂದ. ಇಬ್ಭಾಗ ಮಾಡು'–ಎಂಬರ್ಥದ ಗೀತೆಯನ್ನು ಹೇಳಿಕೊಡುವರು. ಆ ಘನಾಕೃತಿ ಸುಲಭವಾಗಿ ಬೇರ್ಪಡಿಸಬಹುದಾದ ಹೋಳುಗಳಿಂದಾಗಿರುತ್ತದೆ. ಮಕ್ಕಳು ಅದು ಆರು ಮುಖಗಳನ್ನೂ ನೋಡಿಕೊಂಡು ಹಾಡು ಸೂಚಿಸುವಂತೆ ಅದನ್ನು ಎರಡು ಭಾಗ ಮಾಡಿಕೊಂಡು ಆಡುವರು. ಪ್ರಪಂಚದ ಬೇರೆ ಬೇರೆ ಮುಖಗಳು ಬೇರೆಬೇರೆಯಾಗಿ ತೋರಿದರೂ ಅವೆಲ್ಲ ಒಂದಕ್ಕೊಂದಕ್ಕೆ ಸಮವೆಂಬ ಭಾವನೆಯನ್ನು ಮೂಡಿಸಲು ಈ ಆಟವನ್ನು ಏರ್ಪಡಿಸಿದೆ. ಇದರಂತೆ ಗೋಳ ಮತ್ತು ಉರುಳೆಗಳನ್ನೂ ಆಟಕ್ಕೆ ಬಳಸಲಾಗುವುದು.

ಈ ಆಟಗಳಿಂದ ಫ್ರೋಬೆಲ್ ಭಾವಿಸಿದ್ದ ಸೂಕ್ಷ್ಮಭಾವನೆಗಳು ಮಕ್ಕಳಲ್ಲಿ ಮೂಡಬಲ್ಲವೇ ಎಂದು ಯಾರಾದರೂ ಅನುಮಾನಿಸಬಹುದಾದರೂ ಅವು ಮಕ್ಕಳಿಗೆ ತೃಪ್ತಿಸಂತೋಷಗಳನ್ನು ತರುವುವೆಂಬುದನ್ನು ಮಾತ್ರ ಅನುಮಾನಿಸುವಂತಿಲ್ಲ. ಅದಕ್ಕಾಗಿ ಬಳಸುವ ಆಟಿಕೆಗಳು ಮಕ್ಕಳ ಕೈಕಾಲುಗಳಿಗೂ ಜ್ಞಾನೇಂದ್ರಿಯಗಳಿಗೂ ಒಳ್ಳೆಯ ವ್ಯಾಯಾಮವನ್ನೂ ಅಭ್ಯಾಸವನ್ನೂ ಒದಗಿಸುತ್ತವೆ; ವಿಕಸಿಸುತ್ತಿರುವ ಅವುಗಳ ಮನಸ್ಸನ್ನು ಪ್ರಚೋದಿಸಿ ನಿರ್ದೇಶಿಸುವುದಕ್ಕೂ ನೆರವಾಗುತ್ತವೆ. ಇಂಥ ಆಟಗಳಲ್ಲದೆ ಫ್ರೋಬೆಲ್ ಕೆಲವು ಇತರ ಚಟುವಟಿಕೆಗಳನ್ನೂ ತನ್ನ ಕಲಿಕೆ ಕ್ರಮದಲ್ಲಿ ಸೇರಿಸಿದ್ದಾನೆ. ರಂಧ್ರ ಕೊರೆಯುವುದು, ಹೊಲಿಯುವುದು, ಚಿತ್ರ ಬರೆಯುವುದು, ಒಂದರೊಡನೊಂದನ್ನು ನುಲಿಯುವುದು, ನೇಯುವುದು, ಕತ್ತರಿಸುವುದು, ಮಡಿಸುವುದು, ಮಾದರಿಗಳನ್ನು (ಮಣ್ಣು, ಮೇಣ ಇತ್ಯಾದಿಗಳಿಂದ) ಮಾಡುವುದು–ಇವು ಆ ಚಟುವಟಿಕೆಗಳಲ್ಲಿ ಮುಖ್ಯವಾದವು.

ಈಚೆಗೆ ಕಿಂಡರ್‌ಗಾರ್ಟನ್ ಶಾಲೆಯಲ್ಲಿ ಫ್ರೋಬೆಲ್ಲನ ಆಟಿಕೆಗಳನ್ನು ಬಳಸುತ್ತಿದ್ದರೂ ಅವೇ ಅಲ್ಲಿ ಅಷ್ಟು ಪ್ರಧಾನವೆನಿಸಿಲ್ಲ. ಅದಕ್ಕೆ ಆತ ನೀಡಿದ್ದ ದೈವಿಕಸಂಕೇತವನ್ನಾಗಲೀ ಅವುಗಳ ಮೂಲಕ ಮಕ್ಕಳು ದೇವರಲ್ಲಿ ಭಕ್ತಿಭಾವವನ್ನು ಬೆಳಸಿಕೊಳ್ಳುವರೆಂಬ ಅಂಶವನ್ನಾಗಲೀ ಇಂದಿನವರು ಒಪ್ಪುತ್ತಿಲ್ಲ. ಆದರೆ, ಮಕ್ಕಳ ಸ್ವಾಭಾವಿಕ ಆಸಕ್ತಿಗಳನ್ನು ಅವರ ಶಿಕ್ಷಣಕ್ಕಾಗಿ ಬಳಸಿಕೊಳ್ಳುವ ಅಗತ್ಯವನ್ನು ತೋರಿಸಿಕೊಟ್ಟ ಮೊದಲಿಗನೆಂದು ಶಿಕ್ಷಣ ಜಗತ್ತು ಅವನನ್ನು ಗೌರವಿಸುತ್ತಿದೆ. ಶೈಶವದಲ್ಲಿ ತಮ್ಮ ಭಾವನೆಗಳನ್ನೂ ಆಸಕ್ತಿಗಳನ್ನೂ ಹೊರಪಡಿಸಲು ಮಕ್ಕಳಿಗೆ ಸ್ವಾತಂತ್ರ್ಯವನ್ನೂ ಚಟುವಟಿಕೆಯ ಸನ್ನಿವೇಶಗಳನ್ನೂ ಒದಗಿಸುವ ಅಗತ್ಯವನ್ನೂ ಅವರು ಶಿಕ್ಷಣದಲ್ಲಿ ಆಟದ ಪ್ರಾಮುಖ್ಯವನ್ನು ಅರಿತುಕೊಳ್ಳಬೇಕಾದ ಅಗತ್ಯವನ್ನೂ ಸೂಚಿಸಿ ಶಿಕ್ಷಣಕ್ಕೆ ಶಾಸ್ತ್ರೀಯ ತಳಹದಿಯನ್ನು ಹಾಕಿಕೊಟ್ಟ ಕೀರ್ತಿಯೂ ಅವನಿಗೆ ಸಲ್ಲುತ್ತದೆ.

ವ್ಯಕ್ತಿತ್ವ ನಿರೂಪಣೆಯಲ್ಲಿ ಶೈಶವ ಮತ್ತು ಬಾಲ್ಯದಲ್ಲಿ ದೊರಕುವ ಅನುಭವಗಳು ಮುಂದಿನ ಜೀವನವನ್ನು ಮಹತ್ತರವಾಗಿ ಪರಿಣಾಮಗೊಳಿಸುವುದೆಂಬ ಅಂಶ ಬೆಳಕಿಗೆ ಬಂದಂತೆ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬರಹತ್ತಿವೆಯಷ್ಟೆ. ಅಂಥ ಸಂಸ್ಥೆಗಳಲ್ಲಿ ಫ್ರೋಬೆಲ್ಲನ ಕಿಂಡರ್‌ಗಾರ್ಟನ್ ಮೊಟ್ಟಮೊದಲು ಅಸ್ತಿತ್ವಕ್ಕೆ ಬಂದ ಶಿಶುಶಾಲೆ. ಕಳೆದ ಶತಮಾನದ ಕೊನೆಯ ವೇಳೆಗೆ ಶಾಲೆಗಳು ಜರ್ಮನಿಯಲ್ಲೂ ಯುರೋಪಿನ ಇತರ ದೇಶಗಳಲ್ಲೂ ಈ ಶತಮಾನದ ಆರಂಭದಲ್ಲಿ ಅಮೆರಿಕದಲ್ಲೂ ಇತರ ದೇಶಗಳಲ್ಲೂ ಆರಂಭವಾದುವು. ಆ ವೇಳೆಗೆ ಇಂಗ್ಲೆಂಡಿನಲ್ಲೂ ಅದರ ವಸಾಹತುಗಳಲ್ಲೂ ಮಾರ್ಗರೆಟ್ ಮ್ಯಾಕ್ಮಿಲನ್ ಎಂಬಾಕೆ ಪ್ರಚಾರಕ್ಕೆ ತಂದ ನರ್ಸರಿ ಶಾಲೆಗಳು (ಶಿಶುವಿಹಾರಗಳು) ಹೆಚ್ಚು ಪ್ರಚಾರಕ್ಕೆ ಬಂದು ಜನಪ್ರಿಯವಾದವು. ಸದ್ಯದಲ್ಲಿ ಕಿಂಡರ್‌ಗಾರ್ಟನ್ ಶಾಲೆಗಳು ಜರ್ಮನಿಯಲ್ಲೂ ಯುರೋಪಿನ ಇತರ ದೇಶಗಳಲ್ಲೂ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲೂ ಪ್ರಚಾರದಲ್ಲಿವೆ. ಫ್ರೋಬೆಲ್ ಆರಂಭಿಸಿದ ಮೂಲರೂಪದ ಕಿಂಡರ್‌ಗಾರ್ಟನ್ ಶಾಲೆಗಳನ್ನು ಮಾರ್ಪಡಿಸಿಕೊಂಡು ಅಮೆರಿಕದಲ್ಲಿ ದೇಶಾದ್ಯಂತವೂ ಪ್ರಚಾರಕ್ಕೆ ತರಲಾಗಿದೆ. ಅಂಥ ಶಾಲೆಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ.

**ಆಧುನಿಕ ಕಿಂಡರ್‌ಗಾರ್ಟನ್ :** ಈ ಶಾಲೆಗಳಲ್ಲಿ ಫ್ರೋಬೆಲ್ಲನ ತತ್ತ್ವದೃಷ್ಟಿಯನ್ನು ಅನುಸರಿಸಿದರೂ ಮಕ್ಕಳನ್ನು ಆಧ್ಯಾತ್ಮಿಕ ಜೀವನಕ್ಕೆ ಸಿದ್ಧಪಡಿಸುವುದೇ ಶಿಕ್ಷಣದ ಪ್ರಧಾನ ಗುರಿಯೆಂಬ ಅಂಶವನ್ನಿವು ಒಪ್ಪುವುದಿಲ್ಲ. ಆಟದ ಆಸಕ್ತಿಯನ್ನು ಚಟವಟಿಕೆಯ ಕಾರ್ಯಗಳಿಗಾಗಿ ಬಳಿಸಿಕೊಂಡು ಮಕ್ಕಳು ಅವರಿಗೊಪ್ಪುವ ಸಂಘ ಜೀವನವನ್ನು ನಡೆಸುವಂತೆ ಮಾಡುವುದೇ ಅವುಗಳ ಉದ್ದೇಶವೆಂದೀಗ ಒಪ್ಪಲಾಗಿದೆ. ನಾಲ್ಕು ವರ್ಷದ ಮಕ್ಕಳು ಆಗಲೇ ಮನೆಯಲ್ಲಿ ಸಾಧಿಸಿರುವ ಅನುಭವಗಳಲ್ಲಿ ಪ್ರಗತಿದಾಯಕವೆನಿಸಿದವನ್ನು ಆರಿಸಿ ಅಲ್ಲಿ ಬೆಳೆಸುವರು. ದೇಹಪೋಷಣೆಗೆ ಆಗತ್ಯವಾದ ಆಹಾರ, ನಿದ್ರೆ, ವಿಶ್ರಾಂತಿ ಮುಂತಾದವುಗಳ ಕಡೆ ಹೆಚ್ಚಿನ ಗಮನಕೊಡುವರು. ಮಕ್ಕಳ ನಡೆನುಡಿಗಳಲ್ಲಿ ಉಚಿತ ಅಭ್ಯಾಸಗಳನ್ನು ಮೂಡುಸುವಂಥ ಸನ್ನಿವೇಶಗಳನ್ನು ರಚಿಸುವರು. ಐದು ವರ್ಷ ತುಂಬಿದ ಮಕ್ಕಳಿಗೆ ಓದುಬರಹ ಲೆಕ್ಕಗಳನ್ನು ಕಲಿಸುವಾಗಲೂ ಆಟಕ್ಕೆ ಪ್ರಾಶಸ್ತ್ಯವಿತ್ತೇ ಕಾರ್ಯಕ್ರಮಗಳನ್ನು ರಚಿಸಿಕೊಳ್ಳುವರು.

**ಕಾರ್ಯಕ್ರಮ :** ವರ್ತನೆ, ನುಡಿ. ಚಿತ್ರ. ಆಟ–ಇತ್ಯಾದಿಗಳ ಮೂಲಕ ಮಕ್ಕಳು ಚಟುವಟಿಕೆಯಿಂದಿರುವಂತೆ ಮಾಡಿ ಅವರು ತಮ್ಮ ಮನೋಭಾವಗಳನ್ನು ವ್ಯಕ್ತಪಡಿಸುವಂತೆ ಮಾಡಲು ಅವಕಾಶ ಕಲ್ಪಿಸುವುದೇ ಕಿಂಡರ್‌ಗಾರ್ಟನ್ ಶಾಲೆಯ ಮುಖ್ಯ ಕಾರ್ಯಕ್ರಮ. ಆಗ ಅವರ ಪರಿಶೀಲನಾಸಕ್ತಿ, ಸಂಗ್ರಹಣಶಕ್ತಿ, ರಚನಾಸಕ್ತಿ ಮುಂತಾದವು ಪ್ರಕಾಶಕ್ಕೆ ಬರುತ್ತವೆ. ಅನುಕರಣಶಕ್ತಿ ತೀವ್ರವಾಗಿರುವುದರಿಂದ ತಮ್ಮ ಮುಂದಿನ ಜೀವನಕ್ಕೆ ಅಗತ್ಯವೆನಿಸುವ ನಡೆ, ನುಡಿ, ವರ್ತನೆ, ಮನೋಭಾವ ಇವನ್ನೆಲ್ಲ ಅಧ್ಯಾಪಕರ ಮೇಲ್ಪಂಕ್ತಿಯನ್ನು ನೋಡಿ ಅವರು ರೂಢಿಸಿಕೊಳ್ಳುವರು. ಆದರೆ ಮಕ್ಕಳ ಮೇಲೆ ಆ ಕಲಿವನ್ನು ಅಧ್ಯಾಪಕರು ಕೃತಕವಾಗಿ ಹೇರಬಾರದು. ಸ್ವಾಭಾವಿಕವಾಗಿ ಸನ್ನಿವೇಶದ ರಚನೆಯಿಂದ ಅದು ಸಾಧಿತವಾಗುವಂತೆ ನೋಡಿಕೊಳ್ಳಬೇಕು.

**ಆಟಗಳ ಮೂಲಕ ಅನುಭವಸಾಧನೆ :** ಆಟದ ಮೂಲಕ ಮಕ್ಕಳಿಗೆ ತೃಪ್ತಿ ಸಂತೋಷಗಳನ್ನು ದೊರಕಿಸುವುದಲ್ಲದೆ ಅಗತ್ಯ ಕಲಿವನ್ನೂ ಸಾಧಿಸಬೇಕು. ಈ ಗುರಿ ಈಡೇರುವಂತೆ ಅವನ್ನು ನಿರ್ದಿಷ್ಟ ರೀತಿಯಲ್ಲಿ ನಿಯೋಜಿಸಿರಬೇಕಾಗುತ್ತದೆ. ಆ ಆಟಗಳಲ್ಲಿ ಎರಡು ವಿಧ: ಸ್ವತಂತ್ರವಾಗಿ ಆಡುವ ಆಟಗಳು; ಅಧ್ಯಾಪಕರ ನೇತೃತ್ವದಲ್ಲಿ ಆಡುವ ಆಟಗಳು. ನಿತ್ಯವೂ ಮಕ್ಕಳು ಮನಬಂದ ಆಟಗಳನ್ನು ಆಡಲು ನಿರ್ದಿಷ್ಟಕಾಲ ಗೊತ್ತುಮಾಡಿರುವರು. ಮಕ್ಕಳ ಕಣ್ಣಿಗೆ ಬೀಳುವಂತೆ ಬಗೆಬಗೆಯ ಆಟದ ಸಾಮಾನುಗಳನ್ನು ಇರಿಸಿರುವರು. ತಮಗಿಷ್ಟ ಬಂದವನ್ನು ಆಯ್ದುಕೊಂಡು ಆಡುವಾಗ ಅವರ ಇಂದ್ರಿಯಪಾಟವ, ಹಸ್ತಕೌಶಲ, ಅಂಗಚಲನೆ ಇವೆಲ್ಲ ಕುದುರುತ್ತವೆ. ಆಟ ಮುಗಿದ ಮೇಲೆ ಸಾಮಾನುಗಳನ್ನು ಮತ್ತೆ ಒಪ್ಪವಾಗಿ ಇರಿಸುವ ಅಭ್ಯಾಸವನ್ನೂ ಬೆಳೆಸಲಾಗುತ್ತದೆ.

ಲಯಬದ್ಧ ಚಟುವಟಿಕೆಗಳು: ಲಯಬದ್ಧ ಸನ್ನಿವೇಶಗಳಿಂದ ಮಕ್ಕಳ ಆಸಕ್ತಿಯನ್ನು ಪ್ರಚೋದಿಸಿ ಚಟುವಟಿಕೆಯಿಂದಿರಿಸುವುದು ಕಿಂಡರ್‌ಗಾರ್ಟನ್ ಕಾರ್ಯಕ್ರಮದಲ್ಲಿ ಸೇರಿದೆ. ಅಂಥ ಸನ್ನಿವೇಶಗಳ ತಾಳಲಯಗಳಿಗೆ ಉತ್ಸಾಹಗೊಂಡು ಅವಕ್ಕೆ ಸರಿಯಾಗಿ ತಮ್ಮ ಮನೋಭಾವಗಳನ್ನು ಮಕ್ಕಳು ಪ್ರದರ್ಶಿಸುವರು; ಸಂಗೀತ, ಚಿತ್ರ, ಹಾಡು, ಕವಿತೆ ಇತ್ಯಾದಿ ಸನ್ನಿವೇಶಗಳನ್ನು ಬಳಸಿಕೊಂಡು ಅಧ್ಯಾಪಕರ ನಿರ್ದೇಶನದಲ್ಲಿ ಮಕ್ಕಳು ಸಾಮೂಹಿಕ ಆಟದಲ್ಲಿ ತೊಡಗುವರು. ಮಕ್ಕಳು ತಾಳವಿಕ್ಕಿದಂತೆ ಹೆಜ್ಜೆಯಿಡುವರು; ಕಂಠನಾದ ಮಾಡುವರು; ಚಪ್ಪಾಳೆಯಿಕ್ಕುವರು; ಮೂಗರಂತೆ ಭಂಗಿ ಮಾಡುವರು; ಅಂಗಗಳನ್ನು ಚಲಿಸುವರು. ಆಗ ಅವರ ಭಾವಪ್ರಕಾಶಕ್ಕೆ ಅವಕಾಶವಾಗುವುದು. ಪ್ರಾಸಬದ್ಧ ಗೀತೆಗಳಿಗೆ ಮಕ್ಕಳು ಲಯಬದ್ಧವಾಗಿ ವರ್ತಿಸುವುದರಿಂದ ಅಲ್ಲಿ ಅವುಗಳನ್ನು ಯಥೇಚ್ಛವಾಗಿ ಬಳಸಲಾಗುವುದು. ಅಂಗಸಾಧನೆ, ಸಂಖ್ಯಾ ಪರಿಚಯ, ಪದಾರ್ಥಜ್ಞಾನ ಇತ್ಯಾದಿಗಳನ್ನು ಅಧ್ಯಾಪಕರೇ ನಿರ್ದೇಶಿಸಿ ಒತ್ತಾಯವಾಗಿ ಬೋಧಿಸದೆ ಸೂಕ್ತರೀತಿಯ ಲಯಬದ್ಧ ಸನ್ನಿವೇಶಗಳ ಮೂಲಕ ಅವನ್ನು ಬೋಧಿಸುವರು. ಅಂಥ ಗೀತೋಪಕರಣಗಳಲ್ಲಿ ಕಾರ್ಯಪ್ರಧಾನ ಗೀತೆಗಳು ಮುಖ್ಯವಾದವು. ಗೀತೆಯನ್ನು ಪಠಿಸುವಾಗ ಮಕ್ಕಳು ಅದರ ಅರ್ಥವನ್ನು ವರ್ತನೆಯಲ್ಲಿ ಪ್ರಕಟಿಸುವರು. ಅಂಥ ಗೀತೆಗಳಲ್ಲಿ ಪದಗಳು ಕಠಿಣವಾಗಿರದೆ ಲಯಬದ್ಧವಾಗಿ ಭಾವಗಳನ್ನು ಪ್ರಚೋದಿಸುವಂತಿರುತ್ತವೆ. ನೃತ್ಯಗಳಲ್ಲಿ ಬಳಸುವ ಗೀತೆಗಳಲ್ಲೂ ಅದನ್ನು ಕಾಣಬಹುದು. ಅಲ್ಲದೆ ತಂಬೂರಿ ತಾಳ, ತಮಟೆ, ಜಿಂಗಲ್ ಬೆಲ್ ಮುಂತಾದವನ್ನೂ ಬಳಸಲಾಗುವುದು.

**ಕಿಂಡರ್‌ಗಾರ್ಟನ್ ಉಪಕರಣಗಳು:** ಕೀಲುಕುದುರೆ, ಜಾರುಗುಪ್ಪೆ, ತಳ್ಳುವ ಗಾಡಿ, ಜಿಗಿಯುವ ಹಗ್ಗ, ತೂಗುತೊಲೆ, ಜಗ್ಗುಮಣೆ, ಉಯ್ಯಾಲೆ, ಗಾಳಿಗಿರಕ, ರೈಲು, ವಿಮಾನ ಮುಂತಾದ ಬಗೆಬಗೆಯ ಸಾಮಾನುಗಳನ್ನು ಅಲ್ಲಿ ಆಟಕ್ಕೆ ಬಳಸುವರು. ಅವು ಆಟದ ಸಾಮಾನುಗಳಂತಿದ್ದರೂ ಮಕ್ಕಳ ದೇಹದ ಬೆಳವಣಿಗೆಗೂ ಮನಸ್ಸಿನ ವಿಕಾಸಕ್ಕೂ ಅಗತ್ಯ ಪ್ರಚೋದನೆ ದೊರಕಿಸುವಂತೆ ಅವು ರಚಿತವಾಗಿರುತ್ತವೆ. ಅವುಗಳಲ್ಲಿ ಆಸಕ್ತಿ ಬೆಳೆದಂತೆ ಅವನ್ನು ಅಥವಾ ಅವುಗಳ ಮಾದರಿಗಳನ್ನು ತಾವೇ ಮಾಡಿಕೊಳ್ಳಲು ಮಕ್ಕಳಿಗೆ ಅವಕಾಶ ಕಲ್ಪಿಸಲಾಗುವುದು. ಅದಕ್ಕಾಗಿ ಜೇಡಿಮಣ್ಣು, ಕಾಗದ, ಹಲಗೆ, ಹಗ್ಗ ಮುಂತಾದವನ್ನು ಒದಗಿಸುವರು. ಆ ಮೂಲಕ ಅವರ ಅಭಿವ್ಯಕ್ತಿ ಗುಣ, ಹಸ್ತಕೌಶಲ, ನೇತ್ರಪಟುತ್ವ, ರಚನಾಶಕ್ತಿ ಇವೆಲ್ಲ ವೃದ್ಧಿಯಾಗುವುವು.

**ಪಠ್ಯವಸ್ತು :** ಮೊದಲು ಎರಡು ಮತ್ತು ಮೂರನೆಯ ವಯಸ್ಸಿನ ತರಗತಿಗಳಿಗೆ ಯಾವ ಪಠ್ಯಕ್ರಮವೂ ಇರುವುದಿಲ್ಲ. ಮುಂದೆ ಪ್ರಾಥಮಿಕ ಶಾಲೆಯ ವಯಸ್ಸಿನ ಮಕ್ಕಳಿಗೆ ಓದುಬರೆಹ ಲೆಕ್ಕಗಳನ್ನು ಕಲಿಸಬೇಕಾಗುತ್ತದೆ. ಇಲ್ಲವಾದರೆ ಅವರು ಸಾಂಪ್ರದಾಯಿಕ ಪಾಠಶಾಲೆಯ ಮಕ್ಕಳೊಡನೆ ಸರಿದೂಗಲಾರರು. ಆದರೂ ಅದಕ್ಕಾಗಿ ನಿರ್ದಿಷ್ಟ ಪಠ್ಯವಸ್ತುವೇನೂ ಇರುವುದಿಲ್ಲ. ಓದು ಬರೆಹ ಲೆಕ್ಕಗಳನ್ನು ಕೇವಲ ಪ್ರಾಸಂಗಿಕವಾಗಿ ಕಲಿಸುವರು. ನಾಳೆ ಶಾಲೆಗೆ ರಜ. ಇದು ಆಟದ ಕಾಲ, ಸೋಮವಾರ ಜಾತ್ರೆ ಇತ್ಯಾದಿ ಸೂಚನೆಗಳನ್ನು, ತಿಳಿಸುವ ರೂಪದಲ್ಲಿ ಓದನ್ನು ಕಲಿಸುವರು; ಅಗತ್ಯವಾದಾಗ ಮಕ್ಕಳು ಬರೆಯುವಂತೆ ಮಾಡಿ ಬರೆವಣಿಗೆ ಕಲಿಸುವರು. ಮರದ ತುಂಡುಗಳ ಜೋಡಣೆ, ಆಟದ ಸಾಮಾನುಗಳ ಎಣಿಕೆ, ಅವುಗಳ ಹರಡುವಿಕೆ ಮುಂತಾದ ಸನ್ನಿವೇಶಗಳಲ್ಲಿ ಸಂಖ್ಯಾಪರಿಚಯ ಮತ್ತು ಲೆಕ್ಕಗಳನ್ನು ಕಲಿಸಲಾಗುವುದು.

ಹಸ್ತಕೌಶಲವನ್ನು ಬೆಳೆಸಲು ದೊಡ್ಡವರ ಕಸಬುಗಳಿಗೆ ಬದಲು ಮಕ್ಕಳ ಆಸಕ್ತಿಯ ಉದ್ಯಮಗಳನ್ನೇ ಆಚರಿಸಲು ಅವಕಾಶವಿರುವುದು ಇಂಥ ಶಾಲೆಗಳ ಗಮನಾರ್ಹವಾದ ಅಂಶ. ಸಾಮೂಹಿಕ ಆಟಗಳನ್ನಾಡುವಾಗ ಅವರಲ್ಲಿ ಸಮಾಜ ಜೀವನಕ್ಕೆ ಅಗತ್ಯವಾದ ಭಾವನೆ, ವರ್ತನೆ, ಆಲೋಚನೆ ಮುಂತಾದವನ್ನೆಲ್ಲ ಬೆಳಸಲಾಗುವುದು. ನೇರವಾಗಿ ಸಮಾಜ ಪರಿಜ್ಞಾನವನ್ನಾಗಲಿ ಪೌರನೀತಿಯನ್ನಾಗಲಿ ಬೋಧಿಸುವುದಿಲ್ಲ. ಕಥೆ ಹೇಳುವುದನ್ನು ಕಾರ್ಯಕ್ರಮದಲ್ಲಿ ಸೇರಿಸಿದ್ದರೂ ಅದು ನೀತಿಬೋಧೆಗಾಗಲ್ಲ, ಮಾತಾಡುವ ಶಕ್ತಿಯನ್ನು ಬೆಳೆಸುವುದಕ್ಕೆ, ಕಲ್ಪನಾಶಕ್ತಿಯನ್ನು, ಪ್ರತಿಭೆಯನ್ನು, ಜ್ಞಾಪಕ ಶಕ್ತಿಯನ್ನು ಕುದುರಿಸುವುದಕ್ಕೆ,

ಬಣ್ಣಹಾಕುವುದು, ಚಿತ್ರ ಬರೆಯುವುದು, ಮಾದರಿ ರಚಿಸುವುದು ಇತ್ಯಾದಿ ಕಾರ್ಯಕ್ರಮಗಳ ಮೂಲಕ ಅದರ ಕಲಾಭಿರುಚಿಯನ್ನು ಬೆಳೆಸುವರು.

ಕೆಲವು ದಶಮಾನಗಳಿಂದೀಚೆಗೆ ಕಿಂಡರ್‌ಗಾರ್ಟನ್ ಶಾಲೆಗಳ ಉತ್ತರಾರ್ಧದಲ್ಲಿ ಪ್ರಾಥಮಿಕ ಶಾಲೆಯ ಪಠ್ಯವಸ್ತುವನ್ನೇ ಗೊತ್ತುಮಾಡಿಕೊಂಡು ಅಲ್ಲಿನಂತೆ ವೇಳಾಪಟ್ಟಿಗಳನ್ನೂ ರಚಿಸಿಕೊಳ್ಳುವುದು ಕಂಡುಬರುತ್ತಿದೆ. ಅಕ್ಕಪಕ್ಕಗಳಲ್ಲಿರುವ ಪ್ರಾಥಮಿಕ ಶಾಲೆಯಿಂದ ಹೊರಬರುವ ಮಕ್ಕಳಿಗಿಂತ ತಮ್ಮ ಮಕ್ಕಳು ಸಾಂಪ್ರದಾಯಿಕ ವಿದ್ಯೆಯಲ್ಲಿ ಸರಿದೂಗುವಂತಾಗಬೇಕೆಂಬ ಸ್ಪರ್ಧೆಯೇ ಕಾರಣವೆನ್ನಬಹುದು. (ಎನ್.ಎಸ್.ವಿ.)

**ಕಿಂದಮ :** ಒಬ್ಬ ಋಷಿ. ಪಾಂಡುವಿನ ಅಕಾಲಮರಣಕ್ಕೆ ನಿಮಿತ್ತನಾದವ. ಹಗಲು ಹೊತ್ತಿನಲ್ಲಿ ಲೈಂಗಿಕ ಸುಖವನ್ನನುಭವಿಸಬೇಕೆಂಬ ಇಚ್ಛೆಯಿಂದೀತ ಒಂದು ದಿನ ಜಿಂಕೆಯ ರೂಪವನ್ನು ತಳೆದು ತನ್ನ ಸತಿಯೊಂದಿಗೆ ಕ್ರೀಡಿಸುತ್ತಿದ್ದ. ಬೇಟೆಗಾಗಿ ಕಾಡಿಗೆ ಬಂದಿದ್ದ ಪಾಂಡುರಾಜ ಹರಿಣರೂಪದಿಂದಿದ್ದ ಕಿಂದಮನಿಗೆ ಗುರಿಯಿಟ್ಟು ಬಾಣಪ್ರಯೋಗ ಮಾಡಿದ. ನೊಂದ ಕಿಂದಮ ಸಾಯುವ ಮೊದಲು ಪಾಂಡುವನ್ನುದ್ದೇಶಿಸಿ 'ನೀನು ನಿನ್ನ ಮಡದಿಯೊಂದಿಗೆ ಕ್ರೀಡಿಸಿದಾಗ ನನ್ನಂತೆ ಮರಣಹೊಂದು' ಎಂದು ಶಾಪವಿತ್ತು ಸತ್ತ.

ಮುಂದೊಂದು ದಿನ ಋಷಿಶಾಪವನ್ನುಲ್ಲಂಘಿಸಿ ಮಾದ್ರಿಯನ್ನು ಆಲಂಗಿಸಿ ಪಾಂಡು ಸಾಯುತ್ತಾನೆ. ಈ ವಿವರ ಮಹಾಭಾರತದ ಆದಿಪರ್ವದಲ್ಲಿದೆ. (ಕೆ.ಎಸ್.ವಿ.)

**ಕಿಂಪುರುಷರು :** ಕಿನ್ನರರಂತೆ ಗಂಧರ್ವ ವರ್ಗಕ್ಕೆ ಸೇರಿದವರು. ಬ್ರಹ್ಮಪುತ್ರ ಪುಲಹನೆಂಬ ಬ್ರಹ್ಮರ್ಷಿಯ ವಂಶಜರಾಗಿದ್ದು ದೇವ ಪಂಗಡಗಳಲ್ಲಿ ಒಂದಕ್ಕೆ ಸೇರಿದವರೆನ್ನಲಾಗಿದೆ. ಕುಬೇರ ಇವರ ಪಂಗಡಕ್ಕೆ ಒಡೆಯ. ಇವರ ಶರೀರ ಕುದುರೆಯಂತಿದ್ದು ಮುಖ ಮನುಷ್ಯರಂತಿದೆ. ಇವರ ವಾಸಸ್ಥಾನ ಕಿಂಪುರುಷಖಂಡ ಜಂಬೂದ್ವೀಪದ ಒಂಬತ್ತು ಭಾಗಗಳಲ್ಲಿ ಇದೊಂದು. ಜಂಬೂದ್ವೀಪಕ್ಕೆ ಚಕ್ರವರ್ತಿಯಾಗಿದ್ದ ಆಗ್ನೀಧ್ರನ ಒಂಬತ್ತು ಮಕ್ಕಳಲ್ಲಿ ಕಿಂಪುರುಷ ಒಬ್ಬನೆಂದೂ ಹೇಳಿದೆ. ಈತ ಮೇರುಪುತ್ರಿ ಪ್ರಥರೂಪೆಯನ್ನು ವಿವಾಹವಾಗಿ ಈ ಭಾಗವನ್ನಾಳುತ್ತಿದ್ದ (**ನೋಡಿ– ಕಿನ್ನರರು**).

ಧರ್ಮರಾಜ ರಾಜಸೂಯ ಯಾಗ ಮಾಡಿದಾಗ ಅರ್ಜುನ ಈ ದೇಶಕ್ಕೆ ಬಂದು ಇಲ್ಲಿಯ ಅರಸನಿಂದ ಕಪ್ಪಕಾಣಿಕೆಗಳನ್ನು ಪಡೆದನೆಂದು ಮಹಾಭಾರತದಲ್ಲಿ ಉಲ್ಲೇಖವಿದೆ.

ಜೈನಪಂಥದಂತೆ ಎಂಟು ವಿಧ ವ್ಯಂತರ ದೇವರುಗಳಲ್ಲಿ ಕಿಂಪುರುಷರು ಎರಡನೆಯ ಗುಂಪಿಗೆ ಸೇರಿದವರು. ಪುರುಷ, ಪುರುಷೋತ್ತಮ, ಸತ್ಪುರುಷ, ಮಹಾಪುರುಷ, ಪುರುಷಪ್ರಭ, ಅತಿಪುರುಷ, ಮರು, ಮರುದೇವ ಮರುಪ್ರಭ, ಯಶಸ್ವಂತ–ಎಂದು ಕಿಂಪುರುಷರಲ್ಲಿ ಹತ್ತು ಬಗೆ. ಈ ಗುಂಪಿಗೆ ಸತ್ಪುರುಷ ಮಹಾಪುರುಷ ಎಂಬ ಇಬ್ಬರು ಇಂದ್ರರು. ರೋಹಿಣಿ ನವಮಿ ಎಂಬಿಬ್ಬರು ಸತ್ಪುರುಷನಿಗೂ ಹ್ರೀ ಪುಷ್ಪವತಿ ಎಂಬಿಬ್ಬರು ಮಹಾಪುರುಷನಿಗೂ ವಲ್ಲಭೆಯರು. (ಎಸ್.ಎನ್.ಕೆ.; ಜಿ.ಎಚ್.)

**ಕಿಂಬರ್ಲಿ :** ದಕ್ಷಿಣ ಆಫ್ರಿಕದ ಮಧ್ಯಭಾಗದಲ್ಲಿ ಆರೆಂಜ್ ಫ್ರೀ ಸ್ಟೇಟಿನ ಗಡಿಯ ಬಳಿ, ಉತ್ತರ ಗುಡ್‌ಹೋಪ್ ಪ್ರಾಂತ್ಯದಲ್ಲಿರುವ ಮುಖ್ಯ ನಗರ. ವಜ್ರದ ಗಣಿಗಳಿಂದಾಗಿ ಪ್ರಸಿದ್ಧವಾಗಿದೆ. ಸಮುದ್ರಮಟ್ಟಕ್ಕಿಂತ 1215 ಮೀ ಎತ್ತರದಲ್ಲಿರುವ ಈ ನಗರದ ಜನಸಂಖ್ಯೆ 41,100 (2000). ಇವರಲ್ಲಿ ಶೇ. 67 ರಷ್ಟು ಮಂದಿ ಐರೋಪ್ಯರು.

ಕಿಂಬರ್ಲಿ ನಗರ ಮಧ್ಯದಲ್ಲಿ ಪೌರಸಭಾ ಕಟ್ಟಡವೂ ಉತ್ತರ ಕೇಪ್ ತಾಂತ್ರಿಕ ಕಾಲೇಜೂ ಕಿಂಬರ್ಲಿ ನಾಟ್ಯಶಾಲೆಯೂ ವಿಲಿಯಂ ಹಂಫ್ರೀಸ್ ಕಲಾಕೇಂದ್ರವೂ ಇವೆ. ಇಲ್ಲಿರುವ ಜಾನ್ ಸ್ಮಟ್ಸ್ ವೃಕ್ಷರಾಜಿತ ಮಾರ್ಗದ ಉದ್ಯಾನದ ನಡುವೆ ವಜ್ರದ ಮೊರವೊಂದನ್ನು ಎತ್ತಿಹಿಡಿದ ಕಾರ್ಮಿಕರ ಪ್ರತಿಮೆಯೊಂದಿದೆ. ಇದು ಕಿಂಬರ್ಲಿಯ ಹಳೆಯ ಚರಿತ್ರೆಯ ಸಂಕೇತ. ನಗರದ ವಸತಿಕೇಂದ್ರದ ಮುಖದಲ್ಲಿ ಸೆಸಿಲ್ ರ್ಹೋಡ್ಸನ ಪ್ರತಿಮೆಯಿದೆ. ಕಿಂಬರ್ಲಿಯಲ್ಲಿ ಇನ್ನೂ ಅನೇಕ ಸಾರ್ವಜನಿಕ ಕಟ್ಟಡಗಳೂ, ಚರ್ಚುಗಳೂ, ಸಾರ್ವಜನಿಕ ಗ್ರಂಥಾಲಯಗಳೂ, ವಿದ್ಯಾಸಂಸ್ಥೆಗಳೂ, ಆಸ್ಪತ್ರೆಗಳೂ, ಸಸ್ಯಶಾಸ್ತ್ರಕ ಉದ್ಯಾನವೂ ಇವೆ.

ಕಿಂಬರ್ಲಿಗೂ ದಕ್ಷಿಣ ಆಫ್ರಿಕದ ಇತರ ಪ್ರಮುಖ ಪಟ್ಟಣಗಳಿಗೂ ರೈಲು, ರಸ್ತೆ ಮತ್ತು ವಾಯುಮಾರ್ಗಗಳಿವೆ. ಕಿಂಬರ್ಲಿ ಮುಖ್ಯವಾಗಿ ವಜ್ರದ ಗಣಿಗಳಿಗೆ ಪ್ರಸಿದ್ಧವಾಗಿದ್ದರೂ ಇದು ಉತ್ತರ ಕೇಪ್ ಪ್ರಾಂತ್ಯದ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವುದರಿಂದ ಇದರ ಪ್ರಾಮುಖ್ಯ ಹೆಚ್ಚಿದೆ. ಕಬ್ಬಿಣದ ಅದುರು, ಉಪ್ಪು, ಕಲ್ನಾರು, ಸುಣ್ಣದ ಕಲ್ಲು ಮತ್ತು ಮ್ಯಾಂಗನೀಸ್‌ಗಳಲ್ಲಿ ವಹಿವಾಟು ನಡೆಯುತ್ತದೆ. ಬಟ್ಟೆಗಿರಣಿಗಳೂ ಯಂತ್ರಗಳ ಕಾರ್ಖಾನೆಗಳೂ ಉಂಟು.

ಕಿಂಬರ್ಲಿಯ ಇತಿಹಾಸ 1871ರಲ್ಲಿ ಆರಂಭವಾಯಿತು. ಅಲ್ಲಿಯ ಹೊಲಗಳಲ್ಲಿ ವಜ್ರಗಳಿದ್ದುದನ್ನು ಗಣಿಗಾರರು ಕಂಡುಹಿಡಿದು ಅಲ್ಲೇ ನೆಲಸಿದರು. ಮೊದಲು ಅಲ್ಲಿ ಮೂರು ಗಣಿಗಳಿದ್ದುವು. ಇವುಗಳಲ್ಲಿ ಮೂರನೆಯದನ್ನು 1973ರಲ್ಲಿ ಕಿಂಬರ್ಲಿ ಎಂದು ಕರೆಯಲಾಯಿತು. ಬ್ರಿಟನಿನ ವಸಾಹತು ಸಚಿವನಾಗಿದ್ದ ಲಾರ್ಡ್ ಕಿಂಬರ್ಲಿಯ ಗೌರವಾರ್ಥ ಅದಕ್ಕೆ ಈ ಹೆಸರಿಡಲಾಯಿತು. ಗಣಿಗಾರರ ಶಿಬಿರಗಳು ಕ್ರಮೇಣ ಒಂದಾಗಿ ನಗರವಾಗಿ ಬೆಳೆದಾಗ ಇಡೀ ಪಟ್ಟಣಕ್ಕೂ ಕಿಂಬರ್ಲಿ ಎಂಬ ಹೆಸರೇ ಬಂತು. 1880ರಲ್ಲಿ ಈ ಪಟ್ಟಣವನ್ನು ಕೇಪ್ ಕಾಲೊನಿಗೆ ಸೇರಿಸಲಾಯಿತು.

1885ರಲ್ಲಿ ಕಿಂಬರ್ಲಿಯಿಂದ ಕೇಪ್ ಟೌನಿಗೆ ರೈಲ್ವೆ ಏರ್ಪಟ್ಟಾಗ ಕಿಂಬರ್ಲಿಗೆ ಹೆಚ್ಚಿನ ಪ್ರಾಮುಖ್ಯ ಬಂತು. ದಕ್ಷಿಣ ಆಫ್ರಿಕ ಯುದ್ಧದಲ್ಲಿ ಇದು 126 ದಿನಗಳ ಕಾಲ ಮುತ್ತಿಗೆಗೆ ಒಳಗಾಗಿತ್ತು. ಬಹುತೇಕ ಉಪವಾಸ, ಉಗ್ರ ಫಿರಂಗಿ ದಾಳಿ ಇವುಗಳನ್ನು ಎದುರಿಸಿ ನಿಂತಿತು. ಕೊನೆಗೆ 1900 ಫೆಬ್ರವರಿಯಲ್ಲಿ ಜನರಲ್ ಜಾನ್ ಫ್ರೆಂಚ್ ಇದನ್ನು ಮುತ್ತಿಗೆಯಿಂದ ವಿಮೋಚನೆಗೊಳಿಸಿದ. ಕಿಂಬರ್ಲಿಯ ನೆರೆಯಲ್ಲಿ ಬೆಳೆದಿದ್ದ ಇನ್ನೊಂದು ವಸತಿಯನ್ನೂ ಸೇರಿಸಿ ಇದಕ್ಕೆ ನಗರದ ಸ್ಥಾನ ನೀಡಲಾಯಿತು. ಒಂದನೆಯ ಮಹಾಯುದ್ಧ ಕಾಲದಲ್ಲೂ 1930ರ ದಶಕದ ಆದಿಭಾಗದ ಮುಗ್ಗಟ್ಟಿನ ಕಾಲದಲ್ಲೂ ಇಲ್ಲಿಯ ವಜ್ರದ ಗಣಿಗಳನ್ನು ಮುಚ್ಚಲಾಗಿತ್ತು. 1935ರಲ್ಲಿ ಮತ್ತೆ ಗಣಿಗೆಲಸ ಪ್ರಾರಂಭವಾಯಿತು. 1960ರ ದಶಕದ ಈ ಜಿಲ್ಲೆಯ ಡ್ಯುಟಾಯಿಟ್ ಸ್ಪ್ಯಾನ್, ಬುಲ್ಟ್‌ಫಾಂಟೀನ್, ವೆಸೆಲ್‌ಟನ್ ಮತ್ತು ಡಿ ಬೀರ್ಸ್ ಗಣಿಗಳಲ್ಲಿ ವಜ್ರ ತೆಗೆಯುತ್ತಿದ್ದರು. ಕಿಂಬರ್ಲಿ ಗಣಿಗೆ 'ಮಹಾ ಬಿಲ' ಎಂಬ ಅಡ್ಡಹೆಸರಿತ್ತು. ಇದರ ವ್ಯಾಸ 454 ಮಿ. ಸುತ್ತಳತೆ ಸುಮಾರು 1.6 ಕಿಮೀ ಇದನ್ನು 1941ರಲ್ಲಿ ಮುಚ್ಚಲಾಯಿತು (ಎಂ.ಎ.ಎಚ್.)

**ಕಿಕೂಯೂ :** ದಕ್ಷಿಣ ಮಧ್ಯ ಕೀನ್ಯದ ಎತ್ತರ ಪ್ರದೇಶದಲ್ಲಿರುವ, ಬಂಟು ಮಾತಾಡುವ ಜನರ ಬಣ. ಕೀನ್ಯದಲ್ಲೇ ಇದು ದೊಡ್ಡ ಬಣ. ಈ ಜನರ ಸಂಖ್ಯೆ ಒಂದು ಮಿಲಿಯನ್‌ಗೂ ಹೆಚ್ಚು. ಕಿಕೂಯೂ ಬಣದಲ್ಲಿ ಎಂಬೂ ನ್ಡಿಯಾ, ಮ್ಬೇರೆ ಕಿಚೂಗೂ, ಟೀಗಾನಿಯಾ, ಇಗೆಂಬೇ, ಇಮೆಂಟೀ, ಮೂಟೀನೀ, ಇಗೋಜೀ, ಮ್ವಿಂಬೀ, ಮುತಾಂಬೀ, ತರಾಕಾ ಮತ್ತು ಚೂಣ ಎಂಬ ಉಪಗಣಗಳಿವೆ. ಕಿಕೂಯೂ ಪ್ರದೇಶಕ್ಕೆ ಆಗ್ನೇಯದಲ್ಲಿರುವ ಮೈದಾನ ಪ್ರದೇಶದಲ್ಲಿ ವಾಸಿಸುವ ಕಾಂಬಾಗಳು ಕಿಕೂಯೂಗಳ ಅತ್ಯಂತ ನಿಕಟ ಸಂಬಂಧಿಗಳು.

ಕಿಕೂಯೂ ಮಹಿಳೆಯರು

ಕಿಕೂಯೂಗಳು ಮಿಲೆಟ್, ಬಟಾಣಿ, ಬೀನ್ಸ್, ಗೆಣಸು ಮೊದಲಾದ ಧಾನ್ಯಗಳನ್ನು ಹಳೆಯ ವಿಧಾನಗಳಿಂದ ಬೆಳೆಯುತ್ತಾರೆ. ಇವರ ಕೃಷಿಯಲ್ಲಿ ಗುದ್ದಲಿಯೇ ಸರ್ವಸ್ವ. ಈಗ್ಗೆ ಹತ್ತು ವರ್ಷಗಳಿಂದೀಚೆಗೆ ದನಕರು, ಕುರಿ ಆಡು ಮೊದಲಾದ ಪ್ರಾಣಿಗಳನ್ನು ಸಾಕುವುದಕ್ಕೆ ಪ್ರಾಮುಖ್ಯ ನೀಡಲಾಗುತ್ತಿದೆ. ಕೆರೆಗಳ ಏರಿಗಳನ್ನು ಕಟ್ಟಿ ಚಿಕ್ಕ ಚಿಕ್ಕ ನೀರಾವರಿ ಕಾಂಗಾರಿಗಳನ್ನು ಈಚೆಗೆ ಕೈಕೊಳ್ಳಲಾಗುತ್ತಿದೆ. ಯುರೋಪಿನ ವಸಾಹತುದಾರರ ಬಳಿ ದಿನಗೂಲಿ ಮಾಡಲು ಈ ಬಣಗಳ ಬಹುತೇಕ ಜನ ಪಟ್ಟಣಗಳಿಗೆ ವಲಸೆ ಹೋದ ನಿಮಿತ್ತ ಕೃಷಿರಂಗಕ್ಕೆ ಭಾರಿ ಹೊಡೆತ ಬಿತ್ತು. ಇವರು ಉತ್ಪಾದಿಸುವ ಜೋಳ, ಕಾಫಿ

ಮುಂತಾದವು ಹಣದ ಬೆಳೆಗಳು. ಅಲ್ಲದೆ ಈ ಜನ ಅಕ್ಕಪಕ್ಕದ ನಗರಗಳಲ್ಲಿ ಹಣ್ಣು ತರಕಾರಿಗಳನ್ನು ಮಾರಿ ಹಣ ಗಳಿಸುತ್ತಾರೆ.

**ಸಾಮಾಜಿಕ ಜೀವನ:** ಬಹುಪತ್ನಿತ್ವ ಕಿಕೂಯುಗಳಲ್ಲಿ ಜಾರಿಯಲ್ಲಿದೆ. ಬಹಳ ಹಿಂದಿನ ಕಾಲದಿಂದಲೂ ಈ ಜನ ಕುರುಚಲ ಬೇಲಿಯಿಂದಲೂ ಕಾಪುಗೋಡೆಗಳಿಂದಲೂ

ಕಿಕೂಯೂ ಯೋಧರು

ಆವೃತವಾದ ಗುಡಿಸಲುಗಳಲ್ಲಿ ವಾಸಿಸುತ್ತ ಬಂದಿದ್ದಾರೆ. ಕಿಕೂಯೂ ಗಂಡಸಿನ ಪ್ರತಿಯೊಬ್ಬ ಹೆಂಡತಿಗೂ ಒಂದೊಂದು ಪ್ರತ್ಯೇಕವಾದ ಗುಡಿಸಲಿರುತ್ತದೆ. ಸಮಾಜದ ಸ್ಥಳೀಯ ಘಟಕದ ಹೆಸರು ಮ್ಬಾರಿ. ಒಂದೊಂದು ಮ್ಬಾರಿಯಲ್ಲೂ 12 ರಿಂದ 100 ಮಂದಿಯವರೆಗೆ ಜನರಿರುತ್ತಾರೆ. ಪುರುಷರೂ ಅವರ ಹೆಂಡತಿಯರೂ ಮಕ್ಕಳೂ ಸೇರಿ ಈ ಘಟಕವಾಗುತ್ತದೆ. ಇದು ಪಿತೃಪ್ರಧಾನ ಸಂಘಟನೆ. ಆಯಾಕುಲಗಳಿಗೆ ಸೇರಿದ ಜನರೇ ಅಲ್ಲದೆ ಮ್ಬಾರಿಯಲ್ಲಿ ರಕ್ತಸಂಬಂಧಿಗಳಲ್ಲದವರೂ ಅತಿಥಿಗಳೂ ಇರುತ್ತಾರೆ. ಇವರನ್ನು ಅಹೋಯಿ ಮತ್ತು ನ್ಡುಂಗಾಟಾ ಎಂದು ಕರೆಯುತ್ತಾರೆ.

ಕಿಕೂಯೂ ಜನ ಉತ್ತರದ ಪ್ರದೇಶಗಳಿಂದ ಇಲ್ಲಿಗೆ ಬಂದಿರಬೇಕೆಂದೂ ಇಲ್ಲಿ ಇವರಿಗಿಂತ ಮುಂಚೆ ವಾಸವಾಗಿದ್ದ ದೊರೋಬೋ ಜನರಿಂದ ಜಮೀನನ್ನು ಕ್ರಮ ಕ್ರಮವಾಗಿ ವಶಪಡಿಸಿಕೊಂಡಿರಬೇಕೆಂದೂ ಊಹಿಸಲಾಗಿದೆ. ಇವರಲ್ಲಿ ಪ್ರತಿಯೊಂದು ಮ್ಬಾರಿಯ ಮುಖ್ಯಸ್ಥನನ್ನೂ ಮುರಾಮತಿಯೆಂದು ಕರೆಯಲಾಗುತ್ತದೆ. ಇಂಥ ಹಲವಾರು ಮ್ಬಾರಿಗಳ ಸಮೂಹ ಸ್ಥೂಲವಾಗಿ ಒಂಬತ್ತು ವಿಭಾಗಗಳಾಗಿಯೂ ಹಲವು ಉಪವಿಭಾಗಗಳಾಗಿಯೂ ವಿಂಗಡತವಾಗಿದೆ. ಅಲ್ಲದೆ ಇಡೀ ಗಣವೇ ಕಿಕೂಯೂ ಮತ್ತು ಮ್ಯಾಸ್ಸೇ ಎಂದು ಎರಡು ಸಮಭಾಗಗಳಾಗಿ ವಿಂಗಡವಾಗಿದೆ. ಕಿಕೂಯೂಗಳ ಆಡಳಿತ ವೈಶಿಷ್ಟವೆಂದರೆ ವಯೋನುಗುಣವಾಗಿ ಅವರ ಸಂಘಟನೆ. ಈ ಸಂಘಟನೆಗಳೇ ಅಲ್ಲಿಯ ಆಡಳಿತ ವ್ಯವಸ್ಥೆಗಳು ಪ್ರತಿವರ್ಷವೂ ಬಾಲಕರ ಗುಂಪುಗಳನ್ನು ವಿಧಿಪೂರ್ವಕವಾಗಿ ಈ ವಯೋವ್ಯವಸ್ಥೆಗೆ ಸೇರಿಸಿ ದೀಕ್ಷೆ ನೀಡಲಾಗುತ್ತದೆ. ಒಂದೊಂದು ತಲೆಮೊರೆಯೂ 20–30 ವರ್ಷಗಳ ಕಾಲ ಆಡಳಿತ ನಡೆಸಿ ಅನಂತರ ಮುಂದಿನ ತಲೆಮೊರೆಗೆ ಅಧಿಕಾರ ವಹಿಸಿಕೊಡುತ್ತದೆ. ವಿವಿಧ ಶ್ರೇಣಿಗಳ ಹಿರಿಯರ ನ್ಯಾಯ ಮಂಡಲಿಗಳೂ ಉಂಟು. ಅತ್ಯುನ್ನತ ಶ್ರೇಣಿಯ ಸದಸ್ಯರು ಮತಾಚರಣೆಯ ವಿಚಾರಗಳಲ್ಲಿ ಅಧಿಕಾರ ಚಲಾಯಿಸುತ್ತಾರೆ. ಕಿಕೂಯೂಗಳ ದೇವರು ನ್ಗಾಯಿ. ಇವನು ಸರ್ವಶಕ್ತ, ಸೃಷ್ಟಿಕರ್ತ, ಪಿತೃಪೂಜೆಯಲ್ಲೂ ಇವರಿಗೆ ನಂಬಿಕೆಯುಂಟು. ಇವರು ದೇವಪಿತೃಗಳಿಬ್ಬರಿಗೂ ಪ್ರಾರ್ಥನೆಗಳನ್ನೂ ಬಲಿಗಳನ್ನೂ ಸಲ್ಲಿಸುತ್ತಾರೆ.

ಐರೋಪ್ಯರಿಂದ ಆಬಾದಿಗೆ ಬಂದ ಜಮೀನುಗಳೂ ನೈರೋಬಿ ನಗರವೂ ಕಿಕೂಯೂ ವಸತಿಗೆ ಸನಿಯದಲ್ಲಿವೆ. ಈ ಸನ್ನಿವೇಶದಿಂದಾಗಿ ಇವರಿಗೂ ಐರೋಪ್ಯರಿಗೂ ನಡುವೆ ಘರ್ಷಣೆ ಏರ್ಪಟ್ಟಿತು. ಐರೋಪ್ಯ ವಲಸೆಗಾರರನ್ನು ಅಲ್ಲಿಂದ ಹೊರದಬ್ಬಲು ಕಿಕೂಯೂಗಳ ಮಾವ್–ಮಾವ್ ಎಂಬ ಕ್ರಾಂತಿಕಾರಿ ರಹಸ್ಯ ಸಂಘವೊಂದು ಏರ್ಪಟ್ಟಿತ್ತು. ಕೀನ್ಯ ಸರ್ಕಾರ ನೇಮಿಸಿದ ಸ್ಥಳೀಯ ನಾಯಕರಿಗೆ ಸಂಪ್ರದಾಯದ ಅಂಗೀಕಾರ ಮುದ್ರೆ ಬೀಳಲಿಲ್ಲ. ಕ್ರೈಸ್ತಪ್ರಚಾರಕರನ್ನೂ ಇವರು ವಿರೋಧಿಸಿದರು. ನೆಲಕ್ಕಾಗಿ ಸ್ಪರ್ಧೆ, ವರ್ಣೀಯರ ಪ್ರತ್ಯೇಕತೆ–ಮುಂತಾದ ಕಾರಣಗಳಿಂದಾಗಿ ಅಶಾಂತಿ ಹಬ್ಬಿತ್ತು. ಕೀನ್ಯ ಸರ್ಕಾರ ಈ ಜನರ ನೆಮ್ಮದಿ ಪ್ರಗತಿಗಳನ್ನು ಸಾಧಿಸಲು ಶ್ರಮಿಸುತ್ತಿದೆ. (ಎಸ್.ಎಲ್.ಎ.)

**ಕಿಕ್ಕೇರಿ :** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ ಮತ್ತು ಅದೇ ಹೆಸರಿನ ಹೋಬಳಿಯ ಕೇಂದ್ರ. ಕೃಷ್ಣರಾಜಪೇಟೆಗೆ 13 ಕಿಮೀ ಮತ್ತು ಶ್ರವಣಬೆಳಗೊಳಕ್ಕೆ 16 ಕಿಮೀ ದೂರದಲ್ಲಿ ಕೃಷ್ಣರಾಜಪೇಟೆ– ಚೆನ್ನರಾಯಪಟ್ಟಣ ರಸ್ತೆಯಲ್ಲಿದೆ. ಈ ಹೋಬಳಿಯಲ್ಲಿ ಕಿಕ್ಕೇರಿಯೇ ದೊಡ್ಡ ಗ್ರಾಮ.

ಬ್ರಹ್ಮೇಶ್ವರ ದೇವಾಲಯದ ಒಂದು ನೋಟ

ಕೀಕ ಎಂಬವನ ಹೆಸರಿನಿಂದ ಕಿಕ್ಕೇರಿ ಎಂಬ ಹೆಸರು ಬಂದುದಾಗಿ ಐತಿಹ್ಯವಿದೆ. ಇಲ್ಲಿ ಒಂದು ರಮ್ಯವಾದ ಕೆರೆಯಿದೆ. ಇಲ್ಲಿಯ ಹೊಯ್ಸಳಕಾಲೀನ ದೇವಾಲಯಗಳಲ್ಲಿ ಬ್ರಹ್ಮೇಶ್ವರ ದೇವಾಲಯ ಮತ್ತು ಜನಾರ್ಧನ ದೇವಾಲಯ ಮುಖ್ಯವಾದವು. ಬ್ರಹ್ಮೇಶ್ವರ ದೇವಾಲಯವನ್ನು ಬಮ್ಮರಿ ನಾಯಕಿತ್ತಿ ಎಂಬವಳು 1171ರಲ್ಲಿ ಹೊಯ್ಸಳರಾಜ ಒಂದನೆಯ ನರಸಿಂಹನ ಕಾಲದಲ್ಲಿ ಕಟ್ಟಿಸಿದಳು. ಈ ಕಟ್ಟಡದ ನಿರ್ಮಾಣ ವೈಶಿಷ್ಟ್ಯಪೂರ್ಣವಾಗಿದೆ. ಇದರ ಹೊರವಲಯ ಹೊರಗಡೆಗೆ ಉಬ್ಬಿದಂತಿದೆ. ಒಳಭಾಗದಲ್ಲಿ ವಿಶಾಲವಾದ ಹಜಾರವಿದೆ. ಇದು ಏಕಕೂಟಾಚಲ. ನವರಂಗದಲ್ಲಿರುವ 1.2 ಮೀ ಎತ್ತರದ ವಿಷ್ಣುವಿಗ್ರಹ ಉತ್ತಮ ಕುಸುರುಗಾರಿಕೆ ಪ್ರದರ್ಶಿಸುತ್ತದೆ. ನವರಂಗದ ಕಂಬಗಳ ಮೇಲೆ ಕೊರೆದಿರುವ ಮದನಿಕೆ ವಿಗ್ರಹಗಳು ಜೀವಂತವಾಗಿರುವಂತೆ ಕಾಣುವ ಉತ್ತಮ ಕಲಾಕೃತಿಗಳು. ನವರಂಗದ ಚಾವಣಿಯ ತಳಭಾಗದಲ್ಲಿ 9 ಭುವನೇಶ್ವರಿಗಳಿವೆ. 8 ದಿಕ್ಕುಗಳಲ್ಲಿರುವ ಭುವನೇಶ್ವರಿಗಳು ಮಧ್ಯಭಾಗದ ಚೌಕಾರದ ಭುವನೇಶ್ವರಿಯನ್ನು ಸುತ್ತುವರಿದಿವೆ. ಅವುಗಳಲ್ಲಿ ಅಷ್ಟದಿಕ್ಪಾಲಕರ ಮತ್ತು ನವಗ್ರಹಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಗೋಡೆಗಳ ಮೇಲೆ ದೇವತೆಗಳ ಚಿತ್ರಗಳನ್ನು ಅಂದವಾಗಿ ಕೆತ್ತಲಾಗಿದೆ.

ಬ್ರಹ್ಮೇಶ್ವರ ದೇವಾಲಯವಲ್ಲದೆ ಎರಡು ನರಸಿಂಹ ದೇವಾಲಯಗಳೂ ಈ ಹಳ್ಳಿಯ ಆರಾಧ್ಯದೇವತೆ ಕಿಕ್ಕೇರಮ್ಮನ ದೇವಾಲಯವೂ ಭವ್ಯ ಕೆತ್ತನೆಗಳಿಂದ ಕೂಡಿವೆ. ಕಿಕ್ಕೇರಮ್ಮನ ಜಾತ್ರೆ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ಈ ದೇವತೆಗೆ ಯಾವ ಪ್ರಾಣಿಗಳನ್ನೂ ಬಲಿಕೊಡುವುದಿಲ್ಲ. ಇಲ್ಲಿ 15 ಒಕ್ಕಲಿಗ ಕುಟುಂಬಗಳು ಸರದಿಯ ಪ್ರಕಾರ ಈ ದೇವಸ್ಥಾನದ ಅರ್ಚಕರಾಗಿ ಪೂಜೆ ನಡೆಸುತ್ತಾರೆ. ಜೀರ್ಣವಾದ ಒಂದು ಪುರಾತನ ಕೋಟೆಯೂ ಇಲ್ಲಿದೆ.

ಈ ಹೋಬಳಿಯ ಜನರ ಮುಖ್ಯ ಕಸಬು ವ್ಯವಸಾಯ, ಮುಂಗಾರು ಬೆಳೆಗಳಾದ ರಾಗಿ, ಜೋಳಗಳನ್ನು ಬೆಳೆಯುತ್ತಾರೆ. ಕಬ್ಬು, ತೆಂಗು, ಬಾಳೆ ಉಳಿದ ಮುಖ್ಯ ಬೆಳೆಗಳು.

ಹತ್ತಿ ನೂಲುವುದು, ನೇಯುವುದು ಮತ್ತು ರೇಷ್ಮೆ ದಾರಗಳನ್ನು ತೆಗೆಯುವುದರಲ್ಲಿ ಕಿಕ್ಕೇರಿ ಹೆಸರುವಾಸಿಯಾಗಿದೆ. ಇಲ್ಲಿ 9 ಸಹಕಾರ ನೇಯ್ಗೆ ಸಂಘಗಳಿವೆ.

ಕಿಕ್ಕೇರಿ ಗ್ರಾಮದಲ್ಲಿ ಮೂರನೆಯ ದರ್ಜೆಯ ಪ್ರವಾಸಿಮಂದಿರ, ಸಾರ್ವಜನಿಕ ಆರೋಗ್ಯಕೇಂದ್ರ, ಪಶುಚಿಕಿತ್ಸಾಲಯ ಮತ್ತು ಪ್ರೌಢಶಾಲೆ, ಕಾಲೇಜು ಇವೆ. ಇಲ್ಲಿ ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ. (ಪಿ.ಎಚ್.)

**ಕಿಗೋಮ ಪ್ರದೇಶ :** ಟಾಂಗನ್ಯೀಕದ ಒಂದು ಪ್ರದೇಶ. 1963 ಮೇ ತಿಂಗಳಿನಲ್ಲಿ ಪುನರ್‌ರಚಿತವಾದ ಆಡಳಿತ ಘಟಕಗಳಲ್ಲೊಂದು. ಹಿಂದಣ ಪಶ್ಚಿಮ ಪ್ರದೇಶದಲ್ಲಿದ್ದ ಕಿಗೋಮ, ಕಿಬೋಂಡೋ ಮತ್ತು ಕಸೂಲು ಜಿಲ್ಲೆಗಳು ಇದರಲ್ಲಿವೆ. ವಾಯುವ್ಯದಲ್ಲಿ ಬುರುಂಡಿ, ಈಶಾನ್ಯದಲ್ಲಿ ಶಿನ್ಯಾಂಗ ಪ್ರದೇಶ, ಪೂರ್ವದಕ್ಷಿಣಗಳಲ್ಲಿ ಟಬೋರ ಪ್ರದೇಶ, ಪಶ್ಚಿಮದಲ್ಲಿ ಟಾಂಗನ್ಯೀಕ ಸರೋವರ–ಇವು ಇದರ ಮೇರೆಗಳು. ಕಿಗೋಮದ ಜನಸಂಖ್ಯೆ 1,679,109 (2002). ಕಿಗೋಮ ಪ್ರದೇಶದಲ್ಲಿ ಮಧ್ಯ ಟಾಂಗನ್ಯೀಕ ಪ್ರಸ್ಥಭೂಮಿ ಮೇಲ್ಮುಖವಾಗಿ ಮಡಿಸಿಕೊಂಡಿದೆ. ಇಲ್ಲಿಯ ಉನ್ನತ ಶಿಖರದ ಹೆಸರು ಕುಂಗ್ವೆ (2494 ಮೀ). ಈ ಪ್ರದೇಶದ ಉತ್ತರ ಭಾಗದಲ್ಲಿ ಮಲಾಗರಾಸಿ ನದಿಯೂ ಅದರ ಉಪನದಿಯಾದ ಮೊಯೋವೋಸಿಯೂ ಹರಿದು ಟಾಂಗನ್ಯೀಕ ಸರೋವರವನ್ನು ಸೇರುತ್ತವೆ. ಈ ಪ್ರದೇಶದ ಸರಾಸರಿ ಮಧ್ಯಾಹ್ನದ ಉಷ್ಣತೆ ಆಗಾಗ್ಗೆ 320° ಸೆಲ್ಸಸ್‌ಗಳನ್ನೂ ಮೀರಿರುತ್ತದೆ. ವಾರ್ಷಿಕ ಮಳೆಯ ಸರಾಸರಿ 60 ಸೆಂಮೀ. ಉನ್ನತ ಪ್ರದೇಶಗಳಲ್ಲಿ 80–100 ಕಿಮೀ ಮಳೆ ಬೀಳುತ್ತದೆ. ಇಲ್ಲಿ ಬಗೆ ಬಗೆಯ ಗುಣಗಳ ಮಣ್ಣುಗಳಿವೆ. ಎತ್ತರ ಪ್ರದೇಶದಲ್ಲಿ ನಿತ್ಯಹಸುರ ಕಾಡುಗಳೂ ಉಳಿದೆಡೆಗಳಲ್ಲಿ ಬಗೆಬಗೆಯ ಹುಲ್ಲುಗಾಡುಗಳೂ ಇವೆ.

ಇಲ್ಲಿರುವ ಜನರ ಗಣಗಳಲ್ಲಿ ಹಾ ಅತ್ಯಂತ ದೊಡ್ಡದು. ಈ ಜನ ಕಿಗೋಮದ ಎಲ್ಲ ಕಡೆಗಳಲ್ಲಿಯೂ ಹರಡಿದ್ದಾರೆ. ರುಂಡಿಗಳು ಹಾಗಳನ್ನೇ ಬಹಳಮಟ್ಟಿಗೆ ಹೋಲುತ್ತಾರೆ. ನ್ಯಾಂವೇಜಿ, ವಿನ್ಜಾ (ಬಿನ್ಜಾ), ಕಿಕೋ (ನ್ಯಾಹೋಜ಼) ಇವರು ಇತರರು. ಕಿಕೋ ಜನ ಬಹುತೇಕ ಅಜ್ಞಾತವಾಸಿಗಳು. ಇವರು ಮಲಾಗರಾಸಿಯ ಜವುಗು ಪ್ರದೇಶಗಳಲ್ಲಿದ್ದಾರೆ.

ಕಿಗೋಮ ಪ್ರದೇಶದ –ಮುಖ್ಯ ಪಟ್ಟಣ ಕಿಗೋಮ. ಟಾಂಗನ್ಯೀಕ ಸರೋವರದ ದಡದಲ್ಲಿದೆ. ಡಾರ್ ಎಸ್ ಸಲಾಮಿನಿಂದ ಇಲ್ಲಿಗೆ ರೈಲ್ವೆಯುಂಟು. ಹತ್ತಿ, ಮೆಕ್ಕೆ ಜೋಳ, ಧಾನ್ಯಗಳು ಮತ್ತು ಎಣ್ಣೆಬೀಜಗಳು ಈ ಪ್ರದೇಶದ ಪ್ರಮುಖ ಬೆಳೆಗಳು. ಸಿಹಿ ಗೆಣಸು, ಆಲೂಗೆಡ್ಡೆ, ಬತ್ತ ಮತ್ತು ಸಂಬಾರ ಪದಾರ್ಥಗಳನ್ನೂ ಕಾಫಿ ಮತ್ತು ಹೊಗೆಸೊಪ್ಪುಗಳನ್ನೂ ಬೆಳೆಯುತ್ತಾರೆ. ಜೇನುಮೇಣ ಸಂಗ್ರಹಣ ಮತ್ತು ಮೀನುಗಾರಿಕೆ ಎರಡು ಮುಖ್ಯ ಉಪಕಸುಬುಗಳು. ತುಪ್ಪದ ತಯಾರಿಕೆ ಚರ್ಮದ ಹದಗಾರಿಕೆ– ಈ ಕಸಬುಗಳೂ ಉಂಟು. ಬೆಲೆಬಾಳುವ ಮರದ ದಿಮ್ಮಿಗಳು ಇಲ್ಲಿ ದೊರಕುತ್ತವೆ. ಉವಿನ್ಜದ ಉಪ್ಪಿನ ಊಟೆಗಳಲ್ಲಿ ವರ್ಷವರ್ಷವೂ ಹೇರಳವಾಗಿ ಉಪ್ಪಿನ ಉತ್ಪದನೆಯಾಗುತ್ತದೆ. ಈ ಪ್ರದೇಶದಲ್ಲಿ ಟ್ಸೆಟ್ಸಿ ನೊಣದ ಅಪಾಯ ಅಧಿಕ. ನಿದ್ರಾವ್ಯಾಧಿ ವರ್ಷವರ್ಷವೂ ಮರುಕಳಿಸುತ್ತಿರುತ್ತದೆ. (ಕೆ.ಎನ್.ಸಿ.)

**ಕಿಗ್ಗ :** ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ, ಶೃಂಗೇರಿಯಿಂದ ಪಶ್ಚಿಮಕ್ಕೆ 10 ಕಿಮೀ ದೂರದಲ್ಲಿರುವ ಒಂದು ಗ್ರಾಮ. ಇಲ್ಲಿ ಇತಿಹಾಸಪ್ರಸಿದ್ಧವಾದ ಋಷ್ಯಶೃಂಗೇಶ್ವರ ದೇವಾಲಯವಿದೆ. ದ್ರಾವಿಡ ವಾಸ್ತುಶೈಲಿಯಲ್ಲಿ ನಿರ್ಮಿತವಾಗಿರುವ ಈ ಸುಂದರ ದೇವಾಲಯದಲ್ಲಿ ಚಾಳುಕ್ಯರ ಕಾಲದ ಶಾಸನಗಳು ಕಂಡುಬಂದರೂ ಈಗಿರುವ ಕಟ್ಟಡ ಪ್ರಾಯಶಃ ವಿಜಯನಗರ ಕಾಲದ ಆದಿಭಾಗಕ್ಕೆ ಸೇರಿದುದಾಗಿದೆ. ಎರಡು ಪ್ರಾಕಾರಗಳಿಂದ ಆವೃತವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ ಮತ್ತು ಪ್ರದಕ್ಷಿಣ ಪಥಗಳಿವೆ. ಗರ್ಭಗುಡಿಯ ಬಲಬದಿಯಲ್ಲಿರುವ ಸಣ್ಣ ಗುಡಿಯೊಂದರಲ್ಲಿ ಗಣಪತಿಯ ವಿಗ್ರಹವೂ ಎಡಬದಿಯ ಗುಡಿಯಲ್ಲಿ ಮಹಿಷಾಸುರ ಮರ್ದಿನಿಯ ಶಿಲ್ಪವೂ ಸ್ಥಾಪಿತವಾಗಿವೆ. ಗರ್ಭಗುಡಿಯಲ್ಲಿಯ 8 ಮೀ ಎತ್ತರದ ಲಿಂಗಕ್ಕೆ ಮೂರು ಕೋಡುಗಳಿವೆ. ಎಡಪಕ್ಕದ ಕೋಡು ಪತ್ನಿ ಶಾಂತಳ ಪ್ರತೀಕ. ಮುಂಭಾಗದಲ್ಲಿರುವ ಮೂರನೆಯ ಕೋಡು ನಂದಿಯ ಪ್ರತೀಕ.

ನವರಂಗದಲ್ಲಿರುವ ಸ್ತಂಭಗಳು ಕೆಳಭಾಗದಲ್ಲಿ ಚಚ್ಚೌಕನೆಯ ತಳಹದಿಯ ಮೇಲೆ ಅಷ್ಟಮುಖವಾಗಿಯೂ ಮೇಲ್ಭಾಗದಲ್ಲಿ ಗುಂಡಾಗಿಯೂ ಇವೆ. ಈ ಸ್ತಂಭಗಳ ಫಲಕಗಳ ಮೇಲೆ ವಿಜಯನಗರ ಶೈಲಿಯ ಕೆತ್ತನೆಗಳಿವೆ. ವೇಶ್ಯಾಸ್ತ್ರೀಯರು ಋಷ್ಯ ಶೃಂಗನನ್ನು ಲೋಮಪಾದನ ರಾಜಧಾನಿಗೆ ಹೊತ್ತುಕೊಂಡು ಹೋಗುತ್ತಿರುವ ದೃಶ್ಯ ಇವುಗಳ ಪೈಕಿ ಮುಖ್ಯವಾದ್ದು. ಮುಖಮಂಟಪದಲ್ಲಿರುವ ಆರು ಸ್ತಂಭಗಳಲ್ಲಿ ನಾಲ್ಕು ಎಂಟುಮುಖಗಳನ್ನುಳ್ಳವು. ಅವುಗಳ ಮೇಲೆ ಚಕ್ರಾಕಾರದ ಬೋದಿಗೆಗಳಿವೆ. ದ್ರಾವಿಡ ಶೈಲಿಯ ಈ ಮಂಟಪದ ಮುಂಭಾಗದ ಎರಡು ಸ್ತಂಭಗಳ ಮೇಲೆ ಆನೆಗಳನ್ನು ಎದುರಿಸುತ್ತಿರುವ ಸಿಂಹವಾಹನರಾದ ಮಾನವರ ಚಿತ್ರಗಳನ್ನು ಕಾಣಬಹುದು. ದೇವಸ್ಥಾನದ ನೈಋತ್ಯ ಮೂಲೆಯಲ್ಲಿ ನಂದಿಯ ವಿಗ್ರಹವಿದೆ. ಇದು ಹೊರಗಿನಿಂದ ತರಲಾಗಿದ್ದು. ಇದರ ಶಿಲ್ಪ ಸರಳ, ನೈಜ. ಇದು ಪಲ್ಲವರ ಕಾಲದ್ದಾಗಿರಬಹುದು. (ಬಿ.ಕೆ.ಜಿ.)

**ಕಿಚ್‌ನರ್, ಹೋರೇಷಿಯೋ ಹರ್ಬರ್ಟ್ :** 1850–1916. ಬ್ರಿಟನಿನ ಫೀಲ್ಡ್–ಮಾರ್ಷಲ್ ಮತ್ತು ರಾಜ್ಯನೀತಿ ನಿಪುಣ. ಐರ್ಲೆಂಡಿನಲ್ಲಿ ಹುಟ್ಟಿದ. ವುಲ್‌ವಿಚ್‌ನ ರಾಯಲ್ ಮಿಲಿಟರಿ ಅಕೆಡಮಿಯಲ್ಲಿ ಶಿಕ್ಷಣ ಪಡೆದು ರಾಯಲ್ ಎಂಜಿನಿಯರ್ ಶಾಖೆಯಲ್ಲಿ

1871ರಲ್ಲಿ ಕಮಿಷನ್ ಅಧಿಕಾರಿಯಾದ. ಫ್ರಾನ್ಸ್–ಪ್ರಷ್ಯ ಯುದ್ಧದಲ್ಲಿ ಫ್ರಾನ್ಸಿನ ಪಕ್ಷ ಕೆಲಸ ಮಾಡಿದ. 1874–82ರಲ್ಲಿ ಪ್ಯಾಲಸ್ತೀನ್, ಅನಟೋಲಿಯ, ಸೈಪ್ರಸ್‌ಗಳಲ್ಲಿ ಸುದ್ದಿ ಇಲಾಖೆ ಮತ್ತು ಸರ್ವೆ ಇಲಾಖೆಗಳಲ್ಲಿ ಕೆಲಸಗಳನ್ನು ಮಾಡಿದ. ಈಜಿಪ್ಟಿನ ಅಶ್ವದಳದ ಅಧಿಕಾರಿಯಾಗಿ ಸೂಡಾನ್ ಯುದ್ಧದಲ್ಲಿ ತೋರಿಸಿದ ಅಪೂರ್ವ ಧೈರ್ಯ, ಸಹಿಷ್ಣುತೆಗಾಗಿ ವಿಖ್ಯಾತನಾದ. ಜಾಂಜಿಬಾರ್‌ನಲ್ಲಿ ಸ್ವಾಕಿನ್‌ನ ಗವರ್ನರ್ ಆಗಿಯೂ ಕೈರೋನಲ್ಲಿ ಅಡ್‌ಜುಟೆಂಟ್ ಜನರಲ್ ಆಗಿಯೂ ಕೆಲಸ ಮಾಡಿದ. ಈಜಿಪ್ಟಿನ ಪೋಲಿಸಿನಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದ. ಈಜಿಪ್ಟಿನ ಸೇನೆಯಲ್ಲಿ ಸರದಾರನಾಗಿ ಡೋಂಗೋಲವನ್ನು ಹಿಡಿದಿದ್ದಕ್ಕಾಗಿ ಮೇಜರ್–ಜನರಲ್ ಆದ. ಅದ್ವಿತೀಯ ಕ್ರಿಯಾಶಕ್ತಿ, ಅರ್ಹತೆಗಾಗಿ ಈಜಿಪ್ಟಿನಲ್ಲಿ ಸರ್ವಸೈನ್ಯಾಧಿಪತಿಯಾದ. ಬಹು ಪ್ರಬಲರಾಗಿ ತೊಂದರೆ ಕೊಡುತ್ತಿದ್ದ ಮೇಹ್ದಿಗಳೆಂಬ ದರ್ವೇಶಿಗಳ ಸೇನೆಗಳನ್ನು ಅತ್‌ಬಾರಾ, ಓಂಡರ್‌ಮನ್ ಯುದ್ಧಗಳಲ್ಲಿ ಪರಾಕ್ರಮದಿಂದ ಸೋಲಿಸಿ ಸುಡಾನನ್ನು ಪುನಃ ಈಜಿಪ್ಟಿಗೆ ಸೇರಿಸಿದ. ಇದಕ್ಕಾಗಿ ನೈಲ್ ನದೀ ದಂಡಯಾತ್ರೆಯಲ್ಲಿ ನಾನಾ ಕಷ್ಟಗಳನ್ನು ಸಾಹಸದಿಂದ ಎದುರಿಸಿ ಅಸಂಖ್ಯಾತ ಅರಬರನ್ನು ಕ್ರೂರತನದಿಂದ ಕೊಂದ. ಇವನ ಗೆಲುವು ಲೋಕವನ್ನು ಬೆರಗು ಮಾಡಿತು. ಬ್ಯಾರನ್ ಬಿರುದನ್ನೂ ಜಿ.ಸಿ.ಬಿ. ಪ್ರಶಸ್ತಿಯನ್ನೂ ಪಡೆದ. ಪಾರ್ಲಿಮೆಂಟ್ ಇವನನ್ನು ಪ್ರಶಂಸಿಸಿ 30,000 ಪೌಂಡ್‌ಗಳನ್ನು ಬಹುಮಾನವಾಗಿ ನೀಡಿತು.

ಫ್ರೆಂಚರ ಸೇನೆ ಸೂಡಾನಿನ ಕೆಲವು ಭಾಗಗಳನ್ನು ಆಕ್ರಮಿಸಲು ಕಿಚನರ್ ಅದನ್ನು ಚಾತುರ್ಯ, ದೃಢತೆಯಿಂದ ಹಿಂದಟ್ಟಿದ್ದು ಇವನ ಖ್ಯಾತಿಯನ್ನು ಏರಿಸಿತು. ಸುಡಾನಿನ ಗವರ್ನರ್ ಜನರಲ್ ಆದ. ನಾಶವಾಗಿದ್ದ ಖಾರ್ಟೂಮ್ ಪಟ್ಟಣವನ್ನು ಪುನರ್ನಿರ್ಮಿಸಿ ಸುಂದರಗೊಳಿಸಿದ. ರೈಲು ಮಾರ್ಗಗಳನ್ನು ಸ್ಥಾಪಿಸಿದ. ಲೆಫ್ಟೆನೆಂಟ್– ಜನರಲ್ ಆಗಿ ದಕ್ಷಿಣ ಆಫ್ರಿಕ ಯುದ್ಧದಲ್ಲಿ ಲಾರ್ಡ್ ರಾಬರ್ಟ್ಸ್‌ನ ಚೀಫ್–ಆಫ್–ಸ್ಟಾಫ್ ಆದ. 1900 ರಲ್ಲಿ ಪ್ರಧಾನ ದಂಡನಾಯಕನಾಗಿ ಸರ್ವಾಧಿಕಾರವನ್ನು ವಹಿಸಿಕೊಂಡ. ಬೋಅರ್‌ಗಳ ಗೆರಿಲ್ಲಾ ತಂತ್ರಗಳ ಹಾವಳಿಯನ್ನು ನಿಗ್ರಹಿಸಲು ಕಿಚನರನ ಗಣಿತಶಾಸ್ತ್ರ ಮನೋವೃತ್ತಿ ಚದುರಂಗದಾಟವನ್ನನುಸರಿಸಿ ಬ್ಲಾಕ್ ಹೌಸ್, ಸ್ವಾಪ್, ಡ್ರೈವ್ ಎಂಬ ಪ್ರಬಲ ಸಂಚುಗಳನ್ನು ನಿಯೋಜಿಸಿತು. ಹೆಂಗಸರು, ಮಕ್ಕಳನ್ನು ರೋಗಗ್ರಸ್ತ ಠಾಣ್ಯಗಳಿಗೆ ಅಟ್ಟಿ, ಜಮೀನುಗಳನ್ನು ಸುಟ್ಟು ಬೋಅರ್‌ಗಳನ್ನು ಅಡಗಿಸಿದ.

ವೈಕೌಂಟ್ ಪದವಿಯನ್ನೂ ಆರ್ಡರ್–ಆಫ್–ಮೆರಿಟ್ ಪ್ರಶಸ್ತಿಯನ್ನೂ ಪಾರ್ಲಿಮೆಂಟಿನಿಂದ 50,000 ಪೌಂಡ್ ಪ್ರತಿಫಲವನ್ನೂ ಗಳಿಸಿದ. ಭಾರತದಲ್ಲಿ ಕಮಾಂಡರ್–ಇನ್–ಚೀಫ್ (1902–99) ಆಗಿ ಆಡಳಿತ ಕ್ರಮಗಳಲ್ಲೂ ಸೈನ್ಯಗಳಲ್ಲೂ ಅನೇಕ ಪರಿಷ್ಕರಣೆಗಳನ್ನು ನೆರವೇರಿಸಿದ. ಸೇನಾ ಇಲಾಖೆಯ ಸರ್ವಾಧಿಕಾರ ತನಗೆ ಸೇರಿದ್ದು, ವೈಸ್‌ರಾಯ್‌ಗಲ್ಲ ಎಂದು ವೈಸ್‌ರಾಯ್ ಲಾರ್ಡ್ ಕರ್ಜನನೊಡನೆ ಜಗಳವಾಡಿದ. ಬ್ರಿಟಿಷ್ ಮಂತ್ರಿಮಂಡಲ ಬಹುಮಟ್ಟಿಗೆ ಕಿಚ್‌ನರನ್ನು ಅನುಮೋದಿಸಿದ್ದರಿಂದ ಕರ್ಜನ್ 1905ರಲ್ಲಿ ರಾಜೀನಾಮೆ ಕೊಟ್ಟ. ಭಾರತದ ವೈಸ್‌ರಾಯ್ ಆಗಬೇಕೆಂದು ಕಿಚ್‌ನರ್ ಮಾಡಿದ ಪ್ರಯತ್ನಗಳು ವಿಫಲವಾದವು. 1909 ರಲ್ಲಿ ಕಿಚ್‌ನರ್ ಫೀಲ್ಡ್–ಮಾರ್ಷಲ್ ಆಗಿ ಮೆಡಿಟರೇನಿಯನ್ ವಲಯದಲ್ಲಿ ಕಮಾಂಡರ್–ಇನ್–ಚೀಫ್ ಮತ್ತು ಹೈ ಕಮಿಷನರ್ ಆದ. ಆಸ್ಟ್ರೇಲಿಯ, ನ್ಯೂಜಿಲೆಂಡ್‌ಗಳಲ್ಲಿ ಅಮೋಘ ಯೋಜನೆಗಳನ್ನು ನಿರ್ವಹಿಸಿದ. 1911ರಲ್ಲಿ ಈಜಿಪ್ಟ್‌ನಲ್ಲಿ ರೆಸಿಡೆಂಟ್ ಮತ್ತು ಕಾನ್ಸಲ್–ಜನರಲ್ ಆದ. ಟ್ರಿಪೋಲಿ ಮತ್ತು ಬಾಲ್ಕನ್ ಯುದ್ಧಗಳಲ್ಲಿ ಈಜಿಪ್ಟ್‌ಗೆ ಮಾರ್ಗದರ್ಶಕನಾಗಿದ್ದ. ಈತ ಅವಿವಾಹಿತ, ಗಮನವೆಲ್ಲ ತನ್ನ ಕರ್ತವ್ಯದ ಮೇಲೆಯೇ. ಉಳಿತಾಯದ ಬ್ಯಾಂಕುಗಳು, ಹತ್ತಿ ಮಾರ್ಕೆಟ್ಟುಗಳು, ಶಾಲೆಗಳು, ಆರೋಗ್ಯ ಯೋಜನೆಗಳು, ಆಸ್ವಾನ್ ಅಣೆಕಟ್ಟಿನ ಏರಿಕೆ. ರೈತಾಭಿವೃದ್ಧಿಗಳಿಗಾಗಿ ಪರಿಶ್ರಮಿಸಿದ. ಈ ಕೆಲಸಗಳ ಮೆಚ್ಚುಗೆಯಾಗಿ ಈತನಿಗೆ ಅರ್ಲ್ ಪದವಿ ಲಭಿಸಿತು. ಈಜಿಪ್ಟಿನ ಖೆಡಿವೆ ಅಬ್ಬಾಸ್ ಹಿಲ್ಮಿಯೊಡನೆ ಜಗಳವಾಡಿ ಅವನನ್ನು ಪದಚ್ಯುತಿ ಮಾಡುವುದರಲ್ಲಿದ್ದ.

ಒಂದನೆಯ ಮಹಾಯುದ್ಧದ ಆರಂಭದಲ್ಲಿ ಕಿಚ್‌ನರ್ ಜನರ ಸರ್ವತೋಮುಖ ಮೆಚ್ಚುಗೆಯಿಂದ ಇಂಗ್ಲೆಂಡಿನ ಯುದ್ಧ ಕಚೇರಿಯಲ್ಲಿ ಕದನ ಮಂತ್ರಿಯಾದ. ಕ್ರಮವಾದ ಸೇನೆಯೊಂದೇ ಯುದ್ಧಕ್ಕೆ ಸಾಲದೆಂದೂ ಪ್ರಾದೇಶಿಕ ಸೈನ್ಯಗಳು ನಿರ್ಬಲವಾಗಿದ್ದವೆಂದೂ ವಾದಿಸುತ್ತ ಸ್ವಯಂಸೇವಕರ ಸೈನ್ಯಗಳನ್ನು ನಿರ್ಮಿಸತೊಡಗಿದ. ಆ ಕಾಲದಲ್ಲಿ ಕಡ್ಡಾಯವಾಗಿ ಸೈನ್ಯಕ್ಕೆ ಸೇರಿಸುವ ಕಾಯಿದೆ ಇನ್ನೂ ಬಂದಿರಲಿಲ್ಲ. ಇವನ ಹೆಸರಿನ ಇಂದ್ರಜಾಲ ಮಹಿಮೆಯಿಂದ ಒಂದು ವರ್ಷದೊಳಗೆ 17 ಲಕ್ಷ ಜನರು ಆತ್ಮಸಂತೋಷದಿಂದ ಕಿಚ್‌ನರ್ ಸೇನೆಗೆ ಸೇರಿದರು. ಸಂಖ್ಯೆ 30 ಲಕ್ಷಕ್ಕೇರಿತು. ಯುದ್ಧ ಸೆಕ್ರೆಟರಿ, ಚೀಫ್–ಆಫ್–ಸ್ಟಾಫ್, ಆಡಳಿತಗಾರ, ಸಮರ ತಂತ್ರಜ್ಞ, ಇಡೀ ದೇಶದ ಕೈಗಾರಿಕೆಗಳ ಮುಖಂಡ–ಈ ಅಧಿಕಾರಗಳನ್ನೆಲ್ಲ ತನ್ನೊಬ್ಬನ ಕೈಯಲ್ಲೇ ಇಟ್ಟುಕೊಳ್ಳಲಿಚ್ಛಿಸಿ ಕಿಚ್‌ನರ್ ಕೆಲವು ಕಾಲ ಸರ್ವಶಕ್ತನಾಗಿದ್ದ. ಇದು ಸರಿಯಲ್ಲ. ಅಷ್ಟು ಹೊಣೆಗಾರಿಕೆ ಎಂಥ ಶಕ್ತನಿಗೂ ಅಸಾಧ್ಯ, ಡಾರ್ಡನೆಲ್ಸ್‌ನ ಅನಾಹುತಕ್ಕೆ ಇದೇ ಕಾರಣ ಎಂದು ಇವನ ವಿರೋಧಿಗಳು ಟೀಕಿಸಿದರು. ಇದರ ಜೊತೆಗೆ ಇವನ ಅಹಂಕಾರ, ಸ್ವಪ್ರತಿಷ್ಠೆ, ಜವಾಬ್ದಾರಿಯನ್ನು ಇತರರಿಗೆ ವಹಿಸಲು ಅನಿಚ್ಛೆ, ಇತರರ ವಿವೇಚನೆಯ ನಿರಾಕರಣೆ–ಇವುಗಳಿಂದ ಅನೇಕರು ಇವನ ಶತ್ರುಗಳಾದರು. ಅಲ್ಲಿಂದ ವರ್ಗವಾಗಲು ಇವನು ಒಪ್ಪಲಿಲ್ಲ. ಕೆಲವು ಅಧಿಕಾರಗಳನ್ನು ಅವನಿಂದ ತೆಗೆಯಲಾಯಿತು. ಜನರಿಗೆ ಇವನು ಆರಾಧ್ಯದೇವತೆಯಂತಿದ್ದರೂ ಸಹೋದ್ಯೋಗಿಗಳ ತಿರಸ್ಕಾರದಿಂದ ಖಿನ್ನನಾದ.

ರಷ್ಯದಲ್ಲಿ ಜಾರನಿಗೂ ಸೇನಾ ಅಧಿಕಾರಿಗಳಿಗೂ ಸಲಹೆ ಕೊಡಲು ಕಿಚ್‌ನರ್ ಆಮಂತ್ರಿಸಲ್ಪಟ್ಟು ರಷ್ಯಕ್ಕೆ ಹೊರಟ. ದಾರಿಯಲ್ಲಿ ಇವನ ನಾವೆ ಹ್ಯಾಂಪ್‌ಷೈರ್ 5 ಜೂನ್ 1916ರಲ್ಲಿ ಬಿರುಗಾಳಿಗೆ ಸಿಕ್ಕಿಕೊಂಡು ಓರ್ಕನೀ ದ್ವೀಪಗಳಾಚೆ ಜರ್ಮನ್ ಮೈನ್‌ಗೆ ಬಡಿದು ನಾಶವಾಗಲು ಇವನು ಮುಳುಗಿ ಸತ್ತ. ಇವನ ಕೀರ್ತಿಯ ಮಹಿಮೆಗಾಗಿ ಸೇಂಟ್ ಪಾಲ್ಸ್ ಕತೀಡ್ರಲ್‌ನಲ್ಲಿ ಏಳು ಲಕ್ಷ ಪೌಂಡ್ ಚಂದಾದಿಂದ ಇವನ ಸ್ಮಾರಕವನ್ನು ಸ್ಥಾಪಿಸಲಾಗಿದೆ. (ಎಂ.ಜಿ.ಕೆ.ಎಂ.; ಎಸ್.ಎಚ್.ಐ.)

**ಕಿಜ಼ಿಲ್ :** ಪ್ರಾಚೀನ ಮಧ್ಯ ಏಷ್ಯದ ಕುಚಿ ರಾಜ್ಯದಲ್ಲಿ ಸುಪ್ರಸಿದ್ಧವಾಗಿದ್ದ ವಾಸ್ತುಶಿಲ್ಪ ಮತ್ತು ವರ್ಣಚಿತ್ರ ಕಲಾಕೇಂದ್ರ. ಮಧ್ಯ ಏಷ್ಯದಲ್ಲಿ ಭಾರತೀಯ ಸಂಸ್ಕೃತಿ ಎಷ್ಟರಮಟ್ಟಿಗೆ ತನ್ನ ಪ್ರಭಾವ ಬೀರಿತ್ತೆಂಬುದು ಇಲ್ಲಿಯ ಗುಹಾಲಯಗಳಿಂದ ಸ್ಪಷ್ಟವಾಗುತ್ತದೆ. ಗ್ರುನ್‌ವೆಡೆಲ್, ಓಲ್ಡನ್‌ಬರ್ಗ್, ಪೆಲಿಯೊ ಮುಂತಾದ ವಿದ್ವಾಂಸರ ಅನ್ವೇಷಣೆಯ ಫಲವಾಗಿ ಈ ಗುಹಾಲಯಗಳು ಬಳಕೆಗೆ ಬಂದುವು. ಭಾರತದಲ್ಲಿರುವ ಅಜಂತ ಮತ್ತು ಎಲ್ಲೋರದ ಗುಹಾಲಯಗಳ ಮಾದರಿಯಲ್ಲಿ ಇಲ್ಲಿಯ ಗುಹೆಗಳನ್ನು ಅಖಂಡ ಶಿಲೆಯಲ್ಲಿ ಕೊರೆಯಲಾಗಿದೆ. 4–8ನೆಯ ಶತಮಾನದವರೆಗೆ ಈ ಗುಹೆಗಳು ಬೌದ್ಧ ಭಿಕ್ಷುಗಳ ವಾಸಸ್ಥಾನಗಳಾಗಿದ್ದುವು. ಮೊದಲನೆಯ ಹಂತದವು ಸಣ್ಣವು. ಅವುಗಳಲ್ಲಿ ಎರಡು ಅಂಕಣಗಳು ಮಾತ್ರ ಇರುತ್ತವೆ. ಎರಡನೆಯವುಗಳಲ್ಲಿ ಗುಮ್ಮಟದ ಮಾದರಿಯ ಶಿಖರಗಳಿವೆ. ಮೂರನೆಯವುಗಳಲ್ಲಿ ಪಿರಮಿಡಿನ ಆಕಾರದ ಚಾವಣಿಗಳುಂಟು. ಒಳಗೋಡೆಗಳ ಮೇಲೆ ಸುಂದರ ವರ್ಣಚಿತ್ರಗಳಿವೆ. ಇವಕ್ಕೆ ತಿಳಿಯಾದ ಹಸಿರು, ಕೆಂಪು ಮತ್ತು ಕಂದು ಬಣ್ಣಗಳನ್ನು ವಿಶೇಷವಾಗಿ ಬಳಸಲಾಗಿದೆ. ಈ ಚಿತ್ರಗಳ ವಿನ್ಯಾಸ ಮತ್ತು ಅಂಗಾಂಗ ಚಿತ್ರಣದಲ್ಲಿ ಗುಪ್ತರ ಶೈಲಿಯ ಪ್ರಭಾವಗಳು ಎದ್ದು ಕಾಣುತ್ತವೆ. 6ನೆಯ ಶತಮಾನದ ಅನಂತರ ಭಾರತೀಯ ಪ್ರವಾಹಗಳು ಕ್ಷೀಣಿಸಿ ಇರಾನ್ ಮತ್ತು ಚೀನಿ ಪ್ರಭಾವಗಳು ವಿಶೇಷವಾದುವು. ಅಲ್ಲಿಗೆ ಭಾರತೀಯ ಪ್ರಭಾವಗಳು ಆಫ್ಘಾನಿಸ್ತಾನದ ಮೂಲಕ ಹೋಗಿದ್ದಿರಬಹುದೆಂದು ಭಾವಿಸಲಾಗಿದೆ. ಅಲ್ಲಿಯ ವರ್ಣಚಿತ್ರಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಿಸಿದವು ಬಹು ರಮ್ಯವಾಗಿವೆ. ಭಾರತವನ್ನು ಬಿಟ್ಟರೆ, ಬೇರೆ ಯಾವ ದೇಶದ ಕಲಾಕಾರನೂ ಬುದ್ಧನನ್ನು ವರ್ಣಚಿತ್ರದಲ್ಲಿ ಕಿಜ಼ಿಲ್‌ನ ಚಿತ್ರಕಾರನಷ್ಟು ಸುಂದರವಾಗಿ ರೂಪಿಸಿಲ್ಲವೆಂಬುದು ವಿದ್ವಾಂಸರ ಅಭಿಪ್ರಾಯ. ಆದ್ದರಿಂದಲೇ ಈ ಗುಹಾಲಯಗಳಿಗೆ ವಿಶೇಷ ಪ್ರಾಮುಖ್ಯವಿದೆ. (ಎ.ವಿ.ಎನ್.)

**ಕಿಟಕಿ ಕಲ್ಲು :** ಮನೆಗಳ ಗೋಡೆಗಳಲ್ಲಿ ಕಿಟಕಿಗಳ ಮೇಲುಗಡೆಯೂ ಬಾಗಿಲುಗಳ ಮೇಲುಗಡೆಯೂ ಎಳೆದಿರುವ ಚಪ್ಪಡಿ (ಲಿಂಟಲ್). ಮೇಲಿನ ಕಟ್ಟಡದ ಭಾರ ಈ ಚಪ್ಪಡಿಗಳ ಮೂಲಕ ಪಕ್ಕದ ಗೋಡೆಯ ಮೇಲೆ ಬಿದ್ದು, ಕೆಳಕ್ಕೆ ಇಳಿದು ಕಟ್ಟಡದ ಅಡಿಪಾಯವನ್ನು ಸೇರುತ್ತದೆ. ಹಿಂದೆ ಕಲ್ಲಿನ ಚಪ್ಪಡಿಗಳನ್ನು ಬಹು ಸಾಮಾನ್ಯವಾಗಿ ಬಳಸುತ್ತಿದ್ದರು. ಈಗ ಪ್ರಚಲಿತ ಕಾಂಕ್ರೀಟಿನ ಉಪಯೋಗವು ಸರ್ವ ಸಾಮಾನ್ಯವಾಗಿದೆ. (ಎಚ್.ಸಿ.ಕೆ.)

**ಕಿಟಾ – ಕಿಯೂಷೂ :** ಜಪಾನಿನ ಒಂದು ಪಟ್ಟಣ. ಫುಕುವೋಕ ಪ್ರಾಂತ್ಯದ ಉತ್ತರ ಭಾಗದಲ್ಲಿದೆ. 1963ರಲ್ಲಿ ವಕಮಟ್ಸು, ಯಹಾಟ, ಟೊಬಾಟ, ಕೊಕರ ಮತ್ತು ಮೋಜಿ ಪಟ್ಟಣಗಳನ್ನು ಒಟ್ಟುಗೂಡಿಸಿ ಇದನ್ನು ರಚಿಸಲಾಯಿತು. ಈ ಐದೂ ಈಗ ಕಿಟಾ–ಕಿಯೂಷೂ ನಗರದ ಐದು ವಿಭಾಗಗಳು. ಇದರ ವಿಸ್ತೀರ್ಣ 486 ಚ.ಕಿಮೀ. ಇದು ಷಿಮೊನೊಸೆಕಿ ಮತ್ತು ಟ್ಸುಷಿಮ ಜಲ ಸಂಧಿಗಳ ದಡದಲ್ಲಿದೆ. ಜನಸಂಖ್ಯೆಯ ದೃಷ್ಟಿಯಿಂದ ಇದು 1965ರಲ್ಲಿ ಜಪಾನಿನ ಏಳನೆಯ ನಗರವಾಗಿತ್ತು. ಜನಸಂಖ್ಯೆ: 993483. (2005). ಕಿಯೂಷೂನಲ್ಲಿ ಇದೇ ಅತ್ಯಂತ ದೊಡ್ಡದು.

ಕಿಟಾ–ಕಿಯೂಷೂ ಜಪಾನಿನ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಒಂದು. ಯಹಾಟದಲ್ಲಿ ಕಬ್ಬಿಣ ಮತ್ತು ಉಕ್ಕು, ರಾಸಾಯನಿಕ ಸಿಮೆಂಟ್ ಮತ್ತು ಗಾಜಿನ ಸಾಮಾನುಗಳೂ ವಕಮಟ್ಸುವಿನಲ್ಲಿ ಲೋಹಗಳು, ಯಂತ್ರಗಳು, ಹಡಗುಗಳು ಮತ್ತು ರಾಸಾಯನಿಕಗಳೂ ಟೊಬಾಟದಲ್ಲಿ ಹತ್ತಿ ಬಟ್ಟೆಗಳು ಮತ್ತು ಲೋಹಗಳೂ ಕೊಕುರದಲ್ಲಿ ಕಬ್ಬಿಣ ಮತ್ತು ಉಕ್ಕು ಯಂತ್ರಗಳೂ ವಿಶೇಷವಾಗಿ ತಯಾರಾಗುತ್ತವೆ. ಟೊಬಾಟದಲ್ಲಿ ಆಳ ಕಡಲಿನ ಮತ್ಸ್ಯೋದ್ಯಮವೂ ಮುಖ್ಯ. ಮೋಜಿಯು ಎಂಬುದು ಕಿಟಾ–ಕಿಯೂಷೂ ಪಟ್ಟಣದ ಪ್ರಮುಖ ಬಂದರು. ಇದು ಕಿಟಾ–ಕಿಯೂಷೂವಿನ ಪೂರ್ವತಮ ವಿಭಾಗ. ಕಲ್ಲಿದ್ದಲು ವಿಶೇಷವಾಗಿ ಈ ಬಂದರಿನ ಮೂಲಕ ಬರುತ್ತದೆ. ಹಡಗು ನಿರ್ಮಾಣ ಮತ್ತು ಆಹಾರ ತಯಾರಿಕೆ ಇಲ್ಲಿಯ ಎರಡು ಮುಖ್ಯ ಕೈಗಾರಿಕೆಗಳು. ಕಿಟಾ–ಕಿಯೂಷೂವಿನ ಎರಡು ದೊಡ್ಡ ಸಮಸ್ಯೆಗಳೆಂದರೆ ನೆಲದ ಅಭಾವ ಮತ್ತು ಕೈಗಾರಿಕೆಗೆ ನೀರಿನ ಕೊರತೆ. ನಗರದಲ್ಲಿ ಜನರ ಒತ್ತಡ ಅಧಿಕವಾಗಿದೆ. ಇಲ್ಲಿಂದ ಷಿಮೊನೊಸೊಕಿ ಜಲಸಂಧಿಯ ಆಚೆಗಿರುವ ಹಾನ್ಷೂ ನಗರಕ್ಕೆ ಎರಡು ಸುರಂಗಗಳಿವೆ. ಇವುಗಳಲ್ಲಿ ಒಂದು ರೈಲು ಮಾರ್ಗಗಳಿಗೂ ಇನ್ನೊಂದು ರಸ್ತೆ ಮಾರ್ಗಗಳಿಗೂ ಮೀಸಲು. (ಎಂ.ಎ.ಎಚ್.)

**ಕಿಟ್ಟ :** ಲೋಹಗಳನ್ನು ಅದಿರುಗಳಿಂದ ಪ್ರತ್ಯೇಕಿಸುವಾಗ, ಕುಲುಮೆಗಳಿಂದ ಹೊರ ಹರಿಯುವ, ಅದಿರುಗಳಲ್ಲಿನ ಅಶುದ್ಧತೆಗಳನ್ನೊಳಗೊಂಡ, ಒಂದು ದ್ರವರೂಪ ವಸ್ತು (ಸ್ಲ್ಯಾಗ್). ಬಹುತೇಕ ಕ್ಯಾಲ್ಸಿಯಮ್ ಸಿಲಿಕೇಟುಗಳು, ಫಾಸ್ಫೇಟ್‌ಗಳು ಮತ್ತು ಸಲ್ಫೇಟ್‌ಗಳಿಂದ ಕೂಡಿರುತ್ತದೆ. ಅದಿರು ಹಾಗೂ ಅಪಕರ್ಷಣಕಾರಿ ಮತ್ತು ಸ್ರಾವಕ ವಸ್ತುಗಳ (ಫ್ಲಕ್ಸ್) ಮಿಶ್ರಣವನ್ನು ಕುಲುಮೆಯೊಳಗಡೆ ಚೆನ್ನಾಗಿ ಕಾಯಿಸಿದಾಗ ಲೋಹ ದ್ರವರೂಪದಲ್ಲಿ ಪ್ರತ್ಯೇಕಗೊಳ್ಳುತ್ತದೆ. ಸ್ರಾವಕವಸ್ತು ಅದಿರಿನ ಕಲ್ಮಷ ಮತ್ತು ಇಂಧನದ ಬೂದಿಯೊಡನೆ ಸಂಯೋಗ ಹೊಂದಿ ಒಂದು ದ್ರವವಾಗುವುದು. ಅದೇ ಕಿಟ್ಟ. ಕಿಟ್ಟ ದ್ರವರೂಪದಲ್ಲಿರುವ ಲೋಹದೊಡನೆ ವಿಲೀನವಾಗುವುದಿಲ್ಲ. ದ್ರವಲೋಹಕ್ಕಿಂತ ಕಿಟ್ಟ ಸಾಮಾನ್ಯವಾಗಿ ಕಡಿಮೆ ಸಾಂದ್ರತೆಯುಳ್ಳದ್ದು. ಪರಿಣಾಮವಾಗಿ ಅದು ಮೇಲ್ಪದರವಾಗಿರುತ್ತದೆ. ಕಿಟ್ಟಕ್ಕಿರಬೇಕಾದ ಕೆಲ ಮುಖ್ಯ ಲಕ್ಷಣಗಳೆಂದರೆ ಅದು ಕುಲುಮೆಯೊಳಗಿನ ಉಷ್ಣತೆಯಲ್ಲಿ ಸುಲಭವಾಗಿ ದ್ರವವಾಗುವಂತಿರಬೇಕು. ಅದಿರಿನ ಮುಖ್ಯ ಲೋಹವನ್ನು ತನ್ನಲ್ಲಿ ವಿಲೀನಗೊಳಿಸಿ ಕೊಳ್ಳಬಾರದು, ಅಶುದ್ಧತೆಗಳನ್ನು ಆದಷ್ಟು ಪರಿಣಾಮಕಾರಿಯಾಗಿ ತನ್ನಲ್ಲಿ ವಿಲೀನಗೊಳಿಸಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. ಕುಲುಮೆಯ ಒಳಮೈಗೆ ಜೀರ್ಣಕಾರಿಯಾಗಬಾರದು. ಕುಲುಮೆಯೊಳಗಡೆ ಒಮ್ಮೆ ಬೇರ್ಪಟ್ಟ ಲೋಹ ಮತ್ತೆ ರಾಸಾಯನಿಕ ಕ್ರಿಯೆಗೊಳಗಾಗದಂತೆ ಕಿಟ್ಟದ ಮೇಲ್ಪದರ ರಕ್ಷಣಾಕವಚವೂ ಆಗಿರುತ್ತದೆ. ಕೆಲ ವೇಳೆ ಭಾರಿ ಪ್ರಮಾಣದ ನೀರಿನ ಆವಿ ಉತ್ಪಾದನ ಕೇಂದ್ರಗಳಲ್ಲಿ ಕಲ್ಲಿದ್ದಲನ್ನು ಉರಿಸಿದಾಗಲೂ ಶೇಷವಾಗಿ ಉಳಿಯುವ ಬೂದಿಯನ್ನು ದ್ರವರೂಪದಲ್ಲಿ ಕಿಟ್ಟವಾಗಿ ಹೊರತೆಗೆಯುವ ಪದ್ಧತಿ ಆಚರಣೆಯಲ್ಲಿದೆ. ಕುಲುಮೆಗಳಿಂದ ಹೊರಹರಿದ ದ್ರವರೂಪದ ಕಿಟ್ಟ ಆರಿದಂತೆ ಘನವಾಗುವುದು. ಆರುವಾಗ ಗಾಳಿ ಅಥವಾ ನೀರಿನ ಆವಿಯನ್ನು ನುಗ್ಗಿಸಿ ದ್ರವರೂಪದ ಕಿಟ್ಟವನ್ನು ಸಣ್ಣ ಸಣ್ಣ ಗಡ್ಡೆಗಳಾಗಿಯಾಗಲೀ, ಉಣ್ಣೆಯ ಎಳೆಯಂತಾಗಲೀ ಪಡೆಯಬಹುದು. ಗುಡ್ಡೆಗಳು ಜಲ್ಲಿ ಕಲ್ಲಿನಂತೆ ಬಹು ಗಟ್ಟಿಯೂ ಭಾರವೂ ಆಗಿರುತ್ತವೆ. ಆದ್ದರಿಂದ ಸಾಮಾನ್ಯ ರಸ್ತೆ ಮತ್ತು ರೈಲುರಸ್ತೆ ನಿರ್ಮಾಣ, ಸಿಮೆಂಟ್ ಕಾಂಕ್ರೀಟ್, ಹಡಗುಗಳ ಸ್ಥಿರತೆಗಾಗಿ ಉಪಯೋಗಿಸುವ ನಿಲುಭಾರ ಮುಂತಾದವುಗಳಲ್ಲಿ ಅದನ್ನು ಉಪಯೋಗಿಸುತ್ತಾರೆ. ಕಿಟ್ಟದ ಉಣ್ಣೆ (ಸ್ಲ್ಯಾಗ್ ವೂಲ್) ಬೆಂಕಿ, ಉಷ್ಣ ಮತ್ತು ಶಬ್ದನಿರೋಧಕ ರಚನಾವಸ್ತುವಾಗಿ ಉಪಯೋಗ ಹೊಂದುವುದು. (ಎಚ್.ಎಸ್.ಎನ್.)

**ಕಿಟೆಲ್, ಫರ್ಡಿನಾಂಡ್ :** 1832–1903. ಕನ್ನಡಕ್ಕೆ ಶಾಶ್ವತ ಸ್ವರೂಪದ ಬೃಹತ್ ಶಬ್ದಕೋಶವನ್ನು ಒದಗಿಸಿದವರೂ ಹಳೆಗನ್ನಡ ಕೃತಿಗಳ ಗ್ರಂಥಸಂಪಾದನೆಗೆ ತಳಹದಿ ಹಾಕಿದವರೂ ಸ್ವಯಂ ಕವಿಯೂ ಆಗಿದ್ದ ಫರ್ಡಿನಾಂಡ್ ಕಿಟೆಲ್ 1832ರಲ್ಲಿ ಜನಿಸಿದರು. ಜರ್ಮನಿಯ ರಾಸ್ಟರ್‌ಹಾಫ್ ಎಂಬುದು ಇವರ ಹುಟ್ಟೂರು. ಮಿಶನರಿಯಾಗ ಬಯಸಿ ಬಾಸೆಲ್‌ನಲ್ಲಿ ಅದರ ತರಬೇತಿಯನ್ನು ಪಡೆದು 1853ರಲ್ಲಿ ಮೈಸೂರು ದೇಶಕ್ಕೆ ಆಗಮಿಸಿದರು. ತಮ್ಮ 22ನೆಯ ವಯಸ್ಸಿನಲ್ಲಿ ಕನ್ನಡ ಕಲಿಯಲಾರಂಭಿಸಿದರು. ಮಂಗಳೂರು, ಧಾರವಾಡ–ಇವುಗಳಿಗಿಂತ ಮಡಿಕೇರಿಯಲ್ಲೇ ಹೆಚ್ಚು ಸಮಯವನ್ನು ಕಳೆದರು. ಪ್ರಕೃತಿಯ ಅಸ್ವಸ್ಥತೆಯಿಂದಾಗಿ 1863ರಲ್ಲಿ, ಅನಂತರ ಕೋಶದ ಕೆಲಸಕ್ಕಾಗಿ 1877ರಲ್ಲಿ ಸ್ವದೇಶದಲ್ಲಿಯೇ ಕೆಲವರ್ಷಗಳನ್ನು ಕಳೆಯಬೇಕಾಗಿ ಬಂದಿತು.

ಇಲ್ಲಿ ಇದ್ದಾಗ ಇತರ ಬಾಸೆಲ್ ಮಿಶನರಿಗಳಂತೆ ಕ್ರೈಸ್ತ ಧರ್ಮ ಪ್ರಚಾರದಲ್ಲಿ ತೊಡಗಬೇಕಿತ್ತು. ಇದರಲ್ಲಿ ಅವರು ಅಯಶಸ್ವಿ. ಅವರ ಒಲವು ಹಳಗನ್ನಡ ಕಾವ್ಯಗಳ ಅಭ್ಯಾಸ, ಭಾರತೀಯ ತತ್ವಜ್ಞಾನ ಮತ್ತು ದ್ರಾವಿಡ ಭಾಷಾಧ್ಯಯನಗಳ ಕಡೆಗಿತ್ತು. ಸ್ವಯಂ

ಅಭ್ಯಸಿಸಿದರು. ಇವರದು ಅತ್ಯಂತ ಕುಶಾಗ್ರ ಬುದ್ಧಿ ಮತ್ತು ಅಗಾಧ ನೆನಪಿನ ಶಕ್ತಿ. ಬಲುಬೇಗ ಈ ವಿಷಯಗಳಲ್ಲಿ ಪರಿಣತಿ–ಹೊಂದಿದರು.

ಸುರುವಿಗೆ ಇವರು ಜರ್ಮನ್ ಭಾಷೆಯಲ್ಲಿದ್ದ ಕ್ರೈಸ್ತಗೀತೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಪರಮಾತ್ಮಜ್ಞಾನ ಎಂಬ ಗ್ರಂಥವನ್ನು ಬರೆದರು. ಅದ್ವೈತ ತತ್ತ್ವಗಳನ್ನು ಖಂಡಿಸಿ ಕ್ರೈಸ್ತ ಧರ್ಮದ ಹೆಚ್ಚುಗಾರಿಕೆಯನ್ನು ತೋರಿಸುವ ವಿವೇಚನೆ ಅದಾಗಿದೆ (1863). ಅಷ್ಟು ಚಿಕ್ಕ ಗ್ರಂಥದಲ್ಲಿ ಉದಾಹರಿಸಿರುವ ಐವತ್ತಕ್ಕೂ ಮಿಕ್ಕಿದ ಸಂಸ್ಕೃತ ಶಾಸ್ತ್ರಗಳ ಉಲ್ಲೇಖದಿಂದ ಇವರ ಆಳವಾದ ವ್ಯಾಸಂಗದ ಕಲ್ಪನೆ ಬರುವಂತಿದೆ. ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಇವರ ಬೃಹತ್ ಗ್ರಂಥ 'ಕ್ರೈಸ್ತ ಸಭಾಚರಿತ್ರೆ'ಯಲ್ಲಿ (1870). ಸ್ವತಂತ್ರವಾದ ವಿಷಯ ಮಂಡನೆ ಇದೆ, ಸೊಗಸಾದ ಆಧುನಿಕ ಕನ್ನಡ ಭಾಷೆಯಲ್ಲಿ.



ಇವರ ಭಾರತೀಯ ತತ್ತ್ವಜ್ಞಾನಕ್ಕೆ ಸಂಬಂಧಿಸಿದ ಎಟ್ರಾಕ್ಟ್ ಆನ್ ಸಾಕ್ರಿಫೈಸ್ (1872) ಮತ್ತು ಲಿಂಗಕಲ್ಟ್ಸ್ ಇನ್ ಇಂಡಿಯನ್ (1876) ಇವು ವಿದೇಶಿ ಭಾಷೆಗಳಲ್ಲಿವೆ. ಮೊದಲಿನದರಲ್ಲಿ ಯಜ್ಞಕ್ರಿಯೆಯು ಹೊರಗಿನ ಆರ್ಯರಿಂದ ಬಂದದ್ದು ಎಂದು ಸಿದ್ಧಪಡಿಸಿ, ನಮ್ಮಲ್ಲಿಯ 21 ಯಜ್ಞಕ್ರಮಗಳನ್ನು ವಿವರಿಸಿದ್ದಾರೆ. ಲಿಂಗ ವಿಚಾರವಾದರೂ ಹೊರಗಿನಿಂದ ನಮ್ಮಲ್ಲಿಗೆ ಬಂದದ್ದು ಎಂಬುದನ್ನು ಸಂಶೋಧನ ರೀತ್ಯಾ ವಿವೇಚಿಸಿದ್ದಾರೆ. 12ನೆಯ ಶತಮಾನದ ವೀರಶೈವರ ಲಿಂಗ ಪರಿಕಲ್ಪನೆಯನ್ನು ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ.

ಇವರ ದ್ರಾವಿಡ ಭಾಷಾ ವ್ಯಾಸಂಗದ ಫಲಶ್ರುತಿಯನ್ನು ಇಂಡಿಯನ್ ಆಂಟಿಕ್ವರಿ ಮತ್ತು ಇಂಡಿಯನ್ ಎವ್ಯಾನ್‌ಜಲಿಕಲ್ ರಿವ್ಯೂ– ಈ ಪತ್ರಿಕೆಗಳಲ್ಲಿ ಅಥವಾ ಲೇಖನಗಳಲ್ಲಿ ಕಾಣಬಹುದು. ಅವುಗಳ ಆಳ ಮತ್ತು ವ್ಯಾಪ್ತಿ ಎಷ್ಟೆಂದರೆ, ಆ ವೇಳೆಗೆ ದ್ರಾವಿಡ ಭಾಷೆಯ ಬಗ್ಗೆ ಹೆಸರುವಾಸಿಯಾಗಿದ್ದ ಕಾಲ್ಡ್‌ವೆಲ್ ಕಿಟೆಲ್‌ರನ್ನು ಗೌರವಪೂರ್ವಕವಾಗಿ ಉಲ್ಲೇಖಿಸಿದ್ದಾರೆ (ಕಂಪ್ಯಾರಟಿವ್ ಸ್ಟಡಿ ಆಫ್ ದ್ರವಿಡಿಯನ್ ಲ್ಯಾಂಗ್ವೇಜಸ್) ದ್ರಾವಿಡ; ಕನ್ನಡ ಶಬ್ದಗಳು ವಿಷಯದಲ್ಲಿ ಕಿಟೆಲ್ಲರ ಮೂಲಭೂತ ನಿಲುವು, ಶಬ್ದಗಳ ನಿಜಸ್ವರೂಪವನ್ನು ತಿಳಿಯಬೇಕಾದರೆ ಅವುಗಳ ಮೂಲದ, ತೀರಾ ಮೂಲದ ರೂಪವನ್ನು ಕಂಡುಕೊಳ್ಳಬೇಕು ಎನ್ನುವುದಾಗಿದ್ದಿತು. ಈ ಹಿನ್ನೆಲೆಯಲ್ಲಿ ಇವರು ದ್ರಾವಿಡದಿಂದ ಸಂಸ್ಕೃತಕ್ಕೆ ರೂಪಾಂತರಗೊಂಡ ಸು. 400 ಶಬ್ದಗಳನ್ನು ಪಟ್ಟಿಮಾಡಿ, ತಮ್ಮ ನಿಘಂಟುವಿನ ಪೀಠಿಕೆಯಲ್ಲಿ ಕೊಟ್ಟಿದ್ದಾರೆ.

ಕಿಟೆಲ್ಲರು ಅನೇಕ ಹಳಗನ್ನಡ ಕಾವ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರಷ್ಟೆ. ಬಾಸಲ್ ಮಿಶನ್ನಿನವರೇ ಆದ ಮೋಗ್ಲಿಂಗ್ ಪ್ರಕಟಿಸಿದ್ದ (1848–50) ಏಳೆಂಟು ಕಾವ್ಯಗಳನ್ನು ಬಿಟ್ಟರೆ, ಬೇರಾವ ಕೃತಿಗಳೂ ಶುದ್ಧರೂಪದಲ್ಲಿ ಮುದ್ರಣಗೊಂಡಿರಲಿಲ್ಲ. ಕಿಟೆಲ್ಲರು ಕೇಶಿರಾಜನ 'ಶಬ್ದಮಣಿದರ್ಪಣ'ವನ್ನೂ (1871) ನಾಗವರ್ಮನ 'ಛಂದೋಂಬುದಿ'ಯನ್ನೂ ಶಾಸ್ತ್ರೀಯವಾಗಿ ಸಂಪಾದಿಸಿ 1874ರಲ್ಲಿ ಪ್ರಕಟಿಸಿದರು. ಪಾಠಶುದ್ಧತೆ, ಪಾಠಾಂತರ ಹಾಗೂ ಸೂಕ್ತ ಅಡಿಟಿಪ್ಪಣಿಗಳನ್ನು ಕೊಟ್ಟು ಈ ವಿಷಯದಲ್ಲಿ ಮಾರ್ಗದರ್ಶಕರಾದರು.

ಕನ್ನಡಕ್ಕೆ ಸಂಬಂಧಿಸಿದ ಇನ್ನೆರಡು ಉಪಕ್ರಮಗಳೆಂದರೆ, ವಿಚಿತ್ರ (ಸಚಿತ್ರ) ವರ್ತಮಾನ ಸಂಗ್ರಹ ಎಂಬ ಪಕ್ಷ ಪತ್ರಿಕೆಯನ್ನೂ (1862) ಕನ್ನಡ ಪಂಚತಂತ್ರ ಹಾಗೂ ಕನ್ನಡ ಮೂರನೆಯ ಪುಸ್ತಕವನ್ನೂ ಶಾಲೆಗಳ ಉಪಯೋಗಾರ್ಥವಾಗಿ ವಿನೂತನ ರೀತಿಯಲ್ಲಿ ಸಂಪಾದಿಸಿ ಪ್ರಕಟಿಸಿದ್ದುದು. ಈ ಮೂರನೆಯ ಪುಸ್ತಕದಲ್ಲಿಯೇ (1864) ಇವರ ಕೆಲವು ಬಿಡಿ ಕವಿತೆಗಳು–ಐವತ್ತಕ್ಕೂ ಮೇಲ್ಪಟ್ಟು – ಸ್ವತಂತ್ರವಾಗಿ ರಚಿಸಲ್ಪಟ್ಟಿವೆ. ಆ ಮೂಲಕ ಹೊಸಗನ್ನಡ ಸ್ವತಂತ್ರ ಕವಿತಾರಚನೆಯ ಆದ್ಯಪ್ರವರ್ತಕರೆನಿಸಿದ್ದಾರೆ. ದೇಶ ವಿದೇಶ, ನಿಸರ್ಗ, ಪ್ರಾಣಿ ಜೀವಿಗಳು, ಜೀವನ ವಿಕಾಸ ಮುಂತಾದ ಆಧುನಿಕವೆನಿಸುವ ಲೌಕಿಕ ವಿಷಯಗಳು ಇವುಗಳಲ್ಲಿ ಅಡಕವಾಗಿವೆ.

ಕವನಿಸುವಿಕೆ ಕಿಟೆಲ್ ಅವರ ಸಹಜ ಪ್ರಕೃತಿ ಎಂದು ಹೇಳಬಹುದು. ಕನ್ನಡ ಕಲಿತ ಹೊಸತರಲ್ಲಿಯೇ ಯೇಸುವಿನ ಜೀವನ ಚರಿತೆಯ ಒಂದು ಖಂಡಕಾವ್ಯವನ್ನು ರಚಿಸಿದ್ದಾರೆ (1861–62). ಷಟ್ಪದಿಯಲ್ಲದೆ ದಾಸರ ಹಾಡುಗಳ ಕೀರ್ತನ ರೂಪವಾಗಿಯೂ ಇಲ್ಲಿಯ ಕವಿತೆಗಳಿವೆ. ಹೊಸಗನ್ನಡದಲ್ಲಿಯ ಆದ್ಯ ಖಂಡಕಾವ್ಯವಿದು. ಕನ್ನಡ ಕವಿತೆಯ ಬಗ್ಗೆ ಇವರಿಗಿದ್ದ ಒಲವಿಗೆ ನಿದರ್ಶನವಾಗಿ ಟೀಕೆ–ಸಾರಾಂಶಗಳೊಡನೆ ಪ್ರಕಟಿಸಿದ ಇವರ ಎರಡು ಸಂಗ್ರಹಗಳನ್ನೂ ಇಲ್ಲಿ ಕಾಣಿಸಬೇಕು (**ಕಾವ್ಯಮಂಜರಿ**–1877 ಮತ್ತು **ಕರ್ನಾಟಕ ಕಾವ್ಯಮಾಲೆ** 1874).

ಇವರ ಕನ್ನಡ ನಿಘಂಟು ಇಂಗ್ಲಿಷ್‌ನಲ್ಲಿ ಕೊಟ್ಟ ಅರ್ಥಕ್ಕೆ ಮಾತ್ರ ವಿಕಾಸವಾದದ್ದಲ್ಲ. ಅದರಲ್ಲಿಯ ಪ್ರತಿಶಬ್ದ ಮೂಲರೂಪ, ದ್ರಾವಿಡ ಭಾಷೆಗಳಲ್ಲಿಯ ಜ್ಞಾತಿ ಪದಗಳು, ಹಳಗನ್ನಡದಲ್ಲಿ ಅವುಗಳ ಬಳಕೆ, ಜೊತೆಗೆ ಆ ಶಬ್ದವನ್ನೊಳಗೊಂಡ ಗಾದೆಗಳು–ಏನೆಲ್ಲ ಅಂಶಗಳಿಂದ ಕೂಡಿದ್ದಿದೆ. ಹೀಗೆ ಅದು ನಾಡಿನ ಸಾಮಾಜಿಕ ಕೋಶವೂ ಆಗಿದೆ. ಸು. 70 ಸಾವಿರ ಶಬ್ದಗಳ ಈ ಸಂಪುಟ ಪ್ರಾಮಾಣ್ಯತೆಯನ್ನು ಪ್ರಶ್ನಿಸಬೇಕಾದ್ದಿಲ್ಲ–ಎಂಬ ಭಾವನೆ ಕೊಡುತ್ತದೆ. ಈ ಕೋಶದಿಂದಾಗಿ ಕನ್ನಡ ಭಾಷೆಗೆ ಅಖಿಲಭಾರತ ಮನ್ನಣೆ ದೊರಕಿತು. ಹೊರಗಿನ ಟ್ಯೂಬಿಂಗೆನ್ ವಿಶ್ವವಿದ್ಯಾಲಯವು ಈ ಕೃತಿಗಾಗಿ ಇವರಿಗೆ 1896ರಲ್ಲಿ ಡಾಕ್ಟೊರೇಟ್ ಪದವಿಯನ್ನಿತ್ತಿತ್ತು.

ಕಿಟೆಲ್ಲರ ಕೊನೆಯ ಕೃತಿಯಾದ, ಎ ಗ್ರಾಮ್ ಆಫ್ ದಿ ಕನ್ನಡ ಲಾಂಗ್ವೇಜ್ ಎಂಬುದರಲ್ಲಿ ಕನ್ನಡ ಭಾಷೆಯ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಅವಸ್ಥಾಂತರಗಳನ್ನು ಉದಾಹರಣೆ ಸಹಿತ ವಿವರಿಸಲಾಗಿದೆ. ಅದು ಮುದ್ರಣಗೊಂಡು ಇವರ ಕೈ ಸೇರಿದ ಕೆಲ ದಿನಗಳಲ್ಲಿ ಇವರು ನಿಧನರಾದರು (1903). ಹೀಗೆ ಕಿಟೆಲ್ ಕನ್ನಡಕ್ಕೆ ಸಲ್ಲಿಸಿದ ಸೇವೆ ಅನನ್ವಿತವಾದದ್ದು; ಶಾಶ್ವತ ಸ್ವರೂಪದ್ದು.

"ಸಂಸ್ಕೃತವನ್ನು ಕೇವಲ ಅನುಕರಣೆ ಮಾಡುವುದರಲ್ಲೇ ಪರ್ಯವಸಾನವಾಗದ ಏಕೈಕ ದೇಶೀ ಭಾಷೆಯೆಂದರೆ ತಮಿಳು;.... ಆದರೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭ್ಯಾಸ ಹೆಚ್ಚಿದಂತೆಲ್ಲ ಅದು ಇತರ ಯಾವ ದಕ್ಷಿಣ ಭಾಷೆಗಳಿಗೂ ಸರಿದೊರೆಯಾಗಿ ನಿಲ್ಲಬಲ್ಲದೆಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆಂದು ನನಗನ್ನಿಸುತ್ತದೆ" ಎಂದಿದ್ದಾರೆ ಕಿಟೆಲ್. (ಜಿ.ಪಿ.ಎಂ., ಎಂ.ಎಂ.ಬಿ)

**ಕಿಡ್, ಥಾಮಸ್ :** 1558–94. ಆಂಗ್ಲ ನಾಟಕಕಾರ. ಗುಮಾಸ್ತೆಯೊಬ್ಬನ ಮಗ. ಹುಟ್ಟಿದ್ದು ಲಂಡನಿನಲ್ಲಿ. ಎಡ್ಮಂಡ್ ಸ್ಪೆನ್‌ಸರ್‌ನ ಸಹಪಾಠಿ. ಮಾರ್ಲೊನ ಜೊತೆಗಾರ. ಈತನ ಜೀವಿತದ ಬಗೆಗೆ ಹೆಚ್ಚು ವಿವರಗಳು ತಿಳಿದಿಲ್ಲವಾದರೂ ಸ್ವೇಚ್ಛಾಜೀವನ ನಡೆಸುತ್ತಿದ್ದ ತರುಣ ಸಾಹಿತಿಗಳ ಗುಂಪಿಗೆ ಸೇರಿದವನೆಂದು ಪ್ರತೀತಿ. ಮಾರ್ಲೊನಂತೆ ಈತನೂ ನಾಸ್ತಿಕನೆಂಬ ಆಕ್ಷೇಪಣೆಗೆ ಗುರಿಯಾಗಿ ಸ್ವಲ್ಪಕಾಲ ಸೆರೆಮನೆಯಲ್ಲಿದ್ದ. ಕಡೆಯ ವರ್ಷಗಳನ್ನು ಬಡತನದಲ್ಲಿ ಕಳೆದ. ಹ್ಯಾಮ್ಲೆಟ್‌ನ ಕಥೆಯನ್ನು ವಸ್ತುವಾಗಿಟ್ಟುಕೊಂಡು ಷೇಕ್ಸ್‌ಪಿಯರ್‌ಗಿಂತ ಮೊದಲೇ ಕಿಡ್ ಒಂದು ದುರಂತ ನಾಟಕವನ್ನು ರಚಿಸಿದ್ದನೆಂದು ಹೇಳಲಾಗಿದೆ. ಅದರದು ಇಂದು ಉಪಲಬ್ಧವಿಲ್ಲ. 1592ರ ಹೊತ್ತಿಗೆ ಈತನ ಸ್ಪಾನಿಷ್ ಟ್ರ್ಯಾಜಡಿ ಎಂಬ ನಾಟಕ ಜನಪ್ರಿಯವಾಗಿತ್ತು. ಇದು ಡಚ್ ಮತ್ತು ಜರ್ಮನ್ ಭಾಷೆಗಳಿಗೂ ಭಾಷಾಂತರವಾಗಿದೆ. ಸೆನೆಕನ ನಾಟಕಗಳ ಧೋರಣೆಯನ್ನು ಇದರಲ್ಲಿ ಗುರುತಿಸಿದವರಿದ್ದಾರೆ. 1580ರಲ್ಲಿ ಪೋರ್ಚುಗಲ್‌ನ ಮೇಲೆ ಸ್ಪೇನ್ ಗಳಿಸಿದ ವಿಜಯ ಇದರ ರಾಜಕೀಯ ಹಿನ್ನೆಲೆ. ತಂದೆಯೊಬ್ಬ ತನ್ನ ಮಗನಿಗಾದ ಅನ್ಯಾಯಕ್ಕೆ ಮುಯ್ಯಿ ತೀರಿಸಲು ಪ್ರಯತ್ನಿಸಿ ಸಾವಿಗೀಡಾದುದು ಇದರ ವಸ್ತು. ಸಾಲಮನ್ ಅಂಡ್ ಪರ್‌ಸೀಡ (1592) ಎಂಬ ನಾಟಕವೂ ಇವನದೇ ಆಗಿರಬಹುದು. ಈತನ ಪಾಂಪೆ ದಿ ಗ್ರೇಟ್ ಕೃತಿ ಫ್ರೆಂಚ್‌ನಿಂದ ಭಾಷಾಂತರವಾಗಿದೆ. ಕಿಡ್‌ನ ಸೃಷ್ಟಿ ಮಹಾಸಾಹಿತ್ಯವಲ್ಲ. ಆದರೆ ನಾಟಕದ ರಚನೆ, ವಸ್ತುವಿನ ಸಂವಿಧಾನ, ಪಾತ್ರನಿರೂಪಣೆಗೆ ಘಟನೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು, ಪಾತ್ರದ ಬೆಳವಣಿಗೆಯ ಸೂಚನೆ–ಇವುಗಳಲ್ಲಿ ಕಿಡ್‌ನ ಕೈ ಸ್ವಲ್ಪ ಪಳಗಿರುವುದನ್ನು ಕಾಣಬಹುದು. ಈತ ರಂಗ ಭೂಮಿಯ ಮೇಲಿನ ಸಂಭಾಷಣೆಯನ್ನು ಮೊದಲಿದ್ದುದಕ್ಕಿಂತ ಸಹಜವಾಗಿಸಿದ. ಮಾರ್ಲೊನೊಂದಿಗೆ ಸೇರಿ ದುಡಿದು ಷೇಕ್ಸ್‌ಪಿಯರನ ನಾಟಕಸೃಷ್ಟಿಗೆ ಇಂಗ್ಲಿಷ್ ರಂಗಭೂಮಿಯನ್ನು ಕಿಡ್ ಸಿದ್ಧಗೊಳಿಸಿದ ಎನ್ನುವ ಮಾತೂ ಇದೆ. ಎಫ್. ಎ.ಬೋಆಸನ ಸಂಪಾದಕತ್ವದಲ್ಲಿ ಕಿಡ್‌ನ ಕೃತಿಗಳು ಬೆಳಕು ಕಂಡವು (1901). (ಎಲ್.ಎಸ್.ಎಸ್.)

**ಕಿಡ್, ವಿಲಿಯಂ :** 1645–1701. ಕಡಲು ದರೋಡೆಗಾರ. ಕ್ಯಾಪ್ಟನ್ ಕಿಡ್ ಎಂದು ಪ್ರಸಿದ್ಧ. ಈತ ಸ್ಕಾಟ್ಲೆಂಡಿನಲ್ಲಿ ಜನಿಸಿದ. ಈ ಕಸುಬು ಹಿಡಿದಿದ್ದು 1689ರಿಂದ. ಫ್ರೆಂಚ್‌ರ ವಿರುದ್ಧ ಬ್ರಿಟಿಷ್ ಸರ್ಕಾರದಿಂದ ಸನ್ನದು ಪಡೆದು ವೆಸ್ಟ್ ಇಂಡೀಸ್ ಮತ್ತು ಉತ್ತರ ಅಮೆರಿಕನ್ ತೀರ ಪ್ರದೇಶಗಳಲ್ಲಿದ್ದ ಹಡಗಿನ ನಾಯಕನಾಗಿದ್ದ. ಈಸ್ಟ್ ಇಂಡಿಯಾ ಕಂಪನಿಯ ಹಡಗುಗಳನ್ನು ಕಡಲು ದರೋಡೆಗಾರರು ಕೆಂಪು ಸಮುದ್ರ ಮತ್ತು ಹಿಂದೂ ಮಹಾಸಾಗರದಲ್ಲಿ ಪೀಡಿಸುತ್ತಿದ್ದುದನ್ನು ತಪ್ಪಿಸಲು ಬ್ರಿಟಿಷ್ ಸರ್ಕಾರ ಈತನನ್ನು 1695ರಲ್ಲಿ ಅಧಿಕೃತವಾಗಿ ನೇಮಿಸಿತು. ಈತ 1695 ಜುಲೈ 4ರಂದು ಅಡ್ವೆಂಚರ್ ಗ್ಯಾಲಿ ಎಂಬ ಹಡಗಿನಲ್ಲಿ ನ್ಯೂಯಾರ್ಕಿಗೆ ಬಂದು ಅಲ್ಲಿ ಹಲವರನ್ನು ತನ್ನ ಹಡಗಿಗೆ ಸೇರಿಸಿಕೊಂಡು 1969ರ ಡಿಸೆಂಬರಿನಲ್ಲಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಮಡಗಾಸ್ಕರ್ ದ್ವೀಪಕ್ಕೆ ಹೊರಟರೂ ಕ್ರಮೇಣ ಕಡಲು ದರೋಡೆಗಾರರ ಹಾದಿಯನ್ನು ಬಿಟ್ಟು 1697ರ ಫೆಬ್ರವರಿಯಲ್ಲಿ ಕೋಮಾರೊ ದ್ವೀಪಗಳಿಗೆ ಹೋದ. ಬ್ರಿಟಿಷ್ ಸರ್ಕಾರದೊಡನೆ ಮಾಡಿಕೊಂಡ ಕರಾರಿನ ಪ್ರಕಾರ ವರಮಾನವನ್ನು ತರದಿದ್ದರೆ ಇವನಿಗೂ ನಾವಿಕರಿಗೂ ಸಂಬಳ ಕೊಡುವಂತಿರಲಿಲ್ಲ.

ಆದ್ದರಿಂದ ಈತ ಕೊಳ್ಳೆ ಹೊಡೆಯಲು ತೀರ್ಮಾನಿಸಿದ. 1697 ಆಗಸ್ಟಿನಲ್ಲಿ ಎಮೆನ್‌ನಿಂದ ಬರುತ್ತಿದ್ದ ನೌಕೆಯ ಮೇಲೆ ದಾಳಿ ಮಾಡಿ ವಿಫಲನಾದರೂ ಅನಂತರ ಹಲವು ಸಣ್ಣ ಹಡಗುಗಳನ್ನು ವಶಪಡಿಸಿಕೊಂಡ. 1967 ಅಕ್ಟೋಬರಿನಲ್ಲಿ ಒಂದು ಡಚ್ ಹಡಗನ್ನು ಆಕ್ರಮಣ ಮಾಡಲು ಒಪ್ಪದಿದ್ದುದರಿಂದ ಇವನ ನಾವಿಕರು ದಂಗೆ ಏಳುವುದರಲ್ಲಿದ್ದಾಗ ಪರಸ್ಪರ ವಾದದಲ್ಲಿ ಕೋಪಗೊಂಡು ವಿಲಿಯಂ ಮೂರ್ ಎಂಬ ತನ್ನ ಫಿರಂಗಿ ಅಧಿಕಾರಿಯನ್ನು ಗಾಯಗೊಳಿಸಿ ಅವನ ಮರಣಕ್ಕೆ ಕಾರಣನಾದ.

1698 ಜನವರಿ 30ರಂದು ಆರ್ಮೇನಿಯನರ ಕ್ವೆಡಾಫ್ ಮರ್ಚೆಂಟ್ ಎಂಬ ಹಡಗನ್ನು ವಶಪಡಿಸಿಕೊಂಡ. ಇದು ಕಿಡ್ಡನ ದರೋಡೆಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು, ಅತ್ಯಂತ ಅಮೂಲ್ಯವಾದ್ದು. ಸಮುದ್ರಯಾನಕ್ಕೆ ನಿಷ್ಪ್ರಯೋಜಕವಾಗಿದ್ದ ತನ್ನ ಅಡ್ವೆಂಚರ್ ಗ್ಯಾಲಿಯನ್ನು ನಾಶಪಡಿಸಿ ಕ್ವೆಡಾಫ್ ಮರ್ಚೆಂಟ್‌ನಲ್ಲಿ ಪ್ರಯಾಣ ಬೆಳೆಸಿದ. ಮಡಗಾಸ್ಕರ್ ದ್ವೀಪಕ್ಕೆ ಭೇಟಿಕೊಟ್ಟು ವೆಸ್ಟ್ ಇಂಡೀಸಿನ ಆಂಗ್ವಿಲ ದ್ವೀಪವನ್ನು ಏಪ್ರಿಲ್ 1699ರಲ್ಲಿ ತಲುಪಿದಾಗ, ತನ್ನನ್ನು ಕಡಲುದರೋಡೆಗಾರನೆಂದು ಆಪಾದಿಸಲಾಗಿದೆಯೆಂದು ತಿಳಿಯಿತು. ಕ್ವೆಡಾಫ್ ಮರ್ಚೆಂಟ್ ನೌಕೆಯನ್ನು ಬಿಟ್ಟು ಆಂಟೋನಿಯೊ ಎಂಬ ಹೊಸ ಹಡಗನ್ನು ಕೊಂಡು ನ್ಯೂ ಇಂಗ್ಲೆಂಡಿಗೆ ಹೋದ. ನ್ಯೂಯಾರ್ಕಿನ ಗವರ್ನರ್ ಬೆಲ್ಲೋಮೋಂಟಿನ ಮುಂದೆ ತಾನು ನಿರಪರಾಧಿಯೆಂಬುದನ್ನು ಸ್ಥಾಪಿಸಲು ಮಾಡಿದ ಪ್ರಯತ್ನದಲ್ಲಿ ಕಿಡ್ ಸಫಲನಾಗಲಿಲ್ಲ. ಅನಂತರ ಕಿಡ್‌ನನ್ನು ಇಂಗ್ಲೆಂಡಿಗೆ ಕಳುಹಿಸಲಾಯಿತು. ವಿಲಿಯಂ ಮೂರ್ ಕೊಲೆ ಮತ್ತು ಕಡಲು ದರೋಡೆಯ ಇತರ ಐದು ಆಪಾದನೆಗಳನ್ನು ಇವನ ಮೇಲೆ ಹೊರಿಸಿ 1701 ಮೇ 9–10 ರಂದು ಇವನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಈತ ತಪ್ಪಿತಸ್ಥನೆಂಬುದು ರುಜುವಾಯಿತು. 1701 ಮೇ 23 ರಂದು ಈತನನ್ನು ಮರಣದಂಡನೆಗೆ ಗುರಿಪಡಿಸಲಾಯಿತು. (ಎ.ಪಿ.ಪಿ.)

**ಕಿರ್ಡರ್ಲಿನ್ – ವಾಕ್ಟರ್, ಆಲ್ಫ್ರೆಡ್ ಫಾನ್ :** 1852–1912. ಜರ್ಮನಿಯ ರಾಜ್ಯನೀತಿಜ್ಞ, ಬಿಸ್ಮಾರ್ಕನ ಉತ್ತರಾಧಿಕಾರಿ ಎಂದು ಪರಿಗಣಿತನಾಗಿದ್ದನೆಂಬ ಭಾವನೆ ಈಚಿನವರೆಗೂ ಇತ್ತು. ಈ ಭಾವನೆ ತಪ್ಪೆಂಬುದು ಈಚಿನ ಸಂಶೋಧನೆಯಿಂದ ಸ್ಥಿರವಾಗಿದೆ. 1852 ಜುಲೈ 10ರಂದು ಜರ್ಮನಿಯ ಸ್ಟಟ್‌ಗರ್ಟ್ ನಗರದಲ್ಲಿ ಬ್ಯಾಂಕೊಂದರ ಒಡೆಯನಾಗಿದ್ದ ರಾಬರ್ಟ್ ಕಿರ್ಡರ್ಲಿನ್ ಮತ್ತು ಅವನ ಪತ್ನಿ ಬ್ಯಾರೊನೆಸ್ ಮೇರಿ ಫಾನ್ ವಾಕ್ಟರ್ ಇವರ ಮಗ. ಕಿರ್ಡರ್ಲಿನ್–ವಾಕ್ಟರ್ 1870–71ರಲ್ಲಿ ಫ್ರಾನ್ಸ್ ಮತ್ತು ಜರ್ಮನಿಗಳ ನಡುವೆ ನಡೆದ ಯುದ್ಧದಲ್ಲಿ ಭಾಗವಹಿಸಿದ್ದ. ಅನಂತರ ಕಾನೂನಿನ ಅಭ್ಯಾಸಮಾಡಿ 1879ರಲ್ಲಿ ಜರ್ಮನಿಯ ವಿದೇಶಾಂಗ ವ್ಯವಹಾರ ಶಾಖೆಯನ್ನು ಸೇರಿದ. ವಿದೇಶಾಂಗ ಕಚೇರಿಯ ಪ್ರತಿನಿಧಿಯಾಗಿ ಜರ್ಮನ್ ಚಕ್ರವರ್ತಿ ಎರಡನೆಯ ವಿಲಿಯಂನೊಡನೆ ದೇಶ ಸಂಚಾರ ಮಾಡಿದ. ವಾಕ್ಟರ್ ಮುಂಗೋಪಿ. ಅದರಿಂದಾಗಿ ಇವನಿಗೆ ಚಕ್ರವರ್ತಿಯ ಬೆಂಬಲ ತಪ್ಪಿಹೋಯಿತು. 1900ರಲ್ಲಿ ಬುಕಾರೆಸ್ಟಿಗೆ ರಾಯಭಾರಿಯಾಗಿ ಇವನ ನೇಮಕವಾಯಿತು. ಆದರೆ ವಿದೇಶಾಂಗ ಮಂತ್ರಿ ಮಾರ್ಷಲ್‌ಫಾನ್ ಬಿಬರ್‌ಸ್ಟೀನ್ ಇವನ ಪರವಾಗಿದ್ದ. ಬರ್ಲಿನ್–ಬಾಗ್ದಾದ್ ರೈಲುಮಾರ್ಗ ನಿರ್ಮಾಣದ ಯೋಜನೆಗೆ ತುರ್ಕಿಯ ಬೆಂಬಲ ಪಡೆಯಲು ಇಸ್ತಾನ್‌ಬುಲ್‌ಗೆ ಹೋಗುವ ಅವಕಾಶ ದೊರಕಿತು. 1908ರಲ್ಲಿ ಜರ್ಮನಿಯ ಉಪವಿದೇಶಾಂಗ ಮಂತ್ರಿಯಾಗಿ ಇವನ ನೇಮಕವಾಯಿತು. ಬಾಸ್ನಿಯ–ಹರ್ಸಿಗೋವಿನಗಳನ್ನು ಆಸ್ಟ್ರಿಯ–ಹಂಗರಿ ಆಕ್ರಮಿಸಿಕೊಂಡಾಗ ಉಂಟಾದ ಉತ್ಕಟ ಪರಿಸ್ಥಿತಿಯನ್ನು ನಿವಾರಿಸುವುದರಲ್ಲಿ ಕಿರ್ಡರ್ಲಿನ್–ವಾಕ್ಟರ್ ಯಶಸ್ಸು ಗಳಿಸಿದ. ರಷ್ಯಕ್ಕೆ ಒಂದು ಎಚ್ಚರಿಕೆ ಪತ್ರವನ್ನು ಬರೆದು, ಅದು ಸರ್ಬಿಯ ದೇಶಕ್ಕೆ ಬೆಂಬಲ ನೀಡದಂತೆ ಮಾಡಿದ. 1910ರಲ್ಲಿ ಈತನನ್ನು ಸರ್ಕಾರದ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕ ಮಾಡಲಾಯಿತು.

1911ರಲ್ಲಿ ಮೊರಾಕೋ ಸಂಬಂಧವಾಗಿ ಕಿರ್ಡರ್ಲಿನ್–ವಾಕ್ಟರ್ ಕೈಕೊಂಡ ಒಂದು ಅನಿಷ್ಟ ಕ್ರಮದಿಂದಾಗಿ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಈತ ಕುಖ್ಯಾತಿ ಗಳಿಸಿದ. ಫ್ರೆಂಚರು ಮೊರಾಕೋದ ರಬಾತ್ ಮತ್ತು ಫೆಜ್ ಪಟ್ಟಣಗಳನ್ನು ಆಕ್ರಮಿಸಿಕೊಂಡಾಗ ಮೊರಾಕೋ ಸ್ವಾತಂತ್ರ್ಯ ಸಂಪೂರ್ಣವಾಗಿ ನಷ್ಟವಾದಂತೆಯೇ ಎಂಬುದಾಗಿ ಈತ ಭಾವಿಸಿದ್ದ. ಫ್ರೆಂಚರೊಂದಿಗೆ ಒಪ್ಪಂದ ಮಾಡಿಕೊಂಡು ಮೊರಾಕೋದ ಒಡೆತನದ ಬಗ್ಗೆ ಇತ್ಯರ್ಥ ಮಾಡಿಕೊಳ್ಳಬೇಕೆಂಬುದು ಈತನ ಮೊದಲಿನ ಯೋಚನೆಯಾಗಿತ್ತು. ಆದರೆ ಅನಂತರ ಈತ ಮನಸ್ಸು ಬದಲಾಯಿಸಿದ. ಆಗಡಿರ್‌ಗೆ ಯುದ್ಧ ನೌಕೆಯೊಂದನ್ನು ಕಳಿಸಿದ. ಆ ನಗರವನ್ನು ವಶಪಡಿಸಿಕೊಳ್ಳುವುದು ತನ್ನ ಉದ್ದೇಶವೆಂದು ಜರ್ಮನ್ ಜನತೆ ಭಾವಿಸಲು ಅವಕಾಶ ನೀಡಿದ. ಅಲ್ಲದೆ ಫ್ರಾನ್ಸಿನೊಡನೆ ಸಂಧಾನದಲ್ಲಿ ಗ್ರೇಟ್ ಬ್ರಿಟನ್ನಿಗೆ ಪ್ರವೇಶ ದೊರಕದಂತೆ ಪ್ರಯತ್ನಿಸಿದ. ಆಗ ಈ ವ್ಯವಹಾರದಲ್ಲಿ ಇಂಗ್ಲೆಂಡಿನಲ್ಲಿ ಅಧಿಕಾರದಲ್ಲಿದ್ದ ಲಿಬರಲ್ ಪಕ್ಷದ ಪ್ರಧಾನಿ ಕೈ ಹಾಕುವುದಾಗಿ ಲಾಯ್ಡ್ ಜಾರ್ಜ್‌ನಿಂದ ಬೆದರಿಕೆ ಹೋಯಿತು. ಕೊನೆಗೆ 1911 ನವೆಂಬರಿನಲ್ಲಿ ಫ್ರಾನ್ಸಿಗೂ ಜರ್ಮನಿಗೂ ಒಪ್ಪಂದವಾಯಿತು. ಫ್ರೆಂಚ್ ಕಾಂಗೋವಿನ ಕೆಲವು ಭಾಗಗಳು ಜರ್ಮನ್ ಕಾಮೆರೂನ್ಸ್‌ಗೆ ಸೇರ್ಪಡೆಯಾಗಬೇಕೆಂದು ಇತ್ಯರ್ಥವಾಯಿತು. ಜರ್ಮನಿಯ ಬಲಪಕ್ಷಗಳಿಗೆ ಇದು ತೃಪ್ತಿ ನೀಡಲಿಲ್ಲ. ಅವರು ಕಿರ್ಡರ್ಲಿನ್–ವಾಕ್ಟರನನ್ನು ಟೀಕಿಸಿದರು. ಮೊರಾಕೋ ದೇಶ ಫ್ರಾನ್ಸಿನ ಆಶ್ರಿತರಾಜ್ಯವಾಯಿತು. ಫ್ರೆಂಚರಿಗೂ ಸಮಾಧಾನವಾಗಲಿಲ್ಲ. ಪ್ರಧಾನಿಯಾಗಿದ್ದ ಕೊಯೋನ ಅಧಿಕಾರಕ್ಕೆ ಚ್ಯುತಿ ಬಂತು. ಕಿರ್ಡರ್ಲಿನ್–ವಾಕ್ಟರನ ಧೋರಣೆಯಿಂದಾಗಿ ಅಂತಾರಾಷ್ಟ್ರೀಯ ಬಿಕ್ಕಟ್ಟು ಅಧಿಕವಾಯಿತು. ದುರ್ವ್ಯಸನಗಳಿಂದ ಆರೋಗ್ಯವನ್ನು ಕೆಡಿಸಿಕೊಂಡಿದ್ದ ಕಿರ್ಡರ್ಲಿನ್–ವಾಕ್ಟರ್ 1912ರ ಡಿಸೆಂಬರ್ 30ರಂದು ನಿಧನನಾದ. (ಎ.ಪಿ.ಪಿ.)

**ಕಿಡಿ ಪತ್ರಿಕೆ :** ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಒಂದು ಕನ್ನಡ ಪತ್ರಿಕೆ; ದ್ವೈವಾರಿಕ. ವಿಶ್ವಕರ್ಣಾಟಕ, ಮಾತೃಭೂಮಿ ಮತ್ತು ಒಕ್ಕಲಿಗರ ಪತ್ರಿಕೆಗಳಲ್ಲಿ ಕೆಲಸ ಮಾಡಿ ತಮ್ಮ ಮೊನಚಾದ ವರದಿಗಳಿಗೂ ಲೇಖನಗಳಿಗೂ ಹೆಸರಾಗಿದ್ದ ಪಿ. ಶೇಷಪ್ಪ ಅವರು ಇದರ ಸಂಪಾದಕರಾಗಿದ್ದರು. ಕಿಡಿಯನ್ನು ಪ್ರಾರಂಭಿಸುವ ಮುನ್ನ 1947ರ




ಆಗಸ್ಟ್ 15ರಂದು ಇವರು ಸ್ವಾತಂತ್ರ್ಯೋದಯ ಎಂಬ ದ್ವೈವಾರಿಕವನ್ನು ಪ್ರಾರಂಭಿಸಿದ್ದರು. ಹದಿನೈದು ದಿನಗಳ ಬಳಿಕ ಪ್ರಾರಂಭವಾದ ಜವಾಬ್ದಾರಿ ಸರ್ಕಾರ ಚಳವಳಿಗೆ ಪೂರ್ಣ ಬೆಂಬಲ ನೀಡಿ ಅಂದಿನ ಸರ್ಕಾರದ ಆಗ್ರಹಕ್ಕೆ ಅದು ಅನೇಕ ಸಲ ತುತ್ತಾಯಿತು. ನಾನಾ ಬಗೆಯ ಏಳು–ಬೀಳುಗಳಿಗೆ ಒಳಗಾಗಿ ಒಂದು ವರ್ಷಕಾಲ ನಡೆಯಿತು. ಹಳೆಯ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿತವಾದ ಮೇಲೂ ಶೇಷಪ್ಪನವರ ಸ್ವಾತಂತ್ರ್ಯೋದಯ ಪತ್ರಿಕೆಯ ಸ್ವತಂತ್ರ ಧೋರಣೆ ಕೊನೆಗೊಳ್ಳಲಿಲ್ಲ. ಆಗಿನ ಮೈಸೂರು ಸಂಸ್ಥಾನದ ಪ್ರಥಮ ಜನತಾ ಸರ್ಕಾರದ ಕೆಲವು ನೀತಿ ನಿಲುವುಗಳನ್ನು ನಿರ್ಭಯವಾಗಿ ಟೀಕಿಸಿದ ಆ ಪತ್ರಿಕೆಯಿಂದ ಭಾರಿ ಮೊತ್ತದ ಠೇವಣಿಯನ್ನು ಸರ್ಕಾರ ಕೇಳಿತು. ಠೇವಣಿ ಕೊಡಲಾಗಲಿ, ಮುಚ್ಚಳಿಕೆ ಬರೆದು ಕೊಡಲಾಗಲಿ ಶೇಷಪ್ಪನವರು ಒಪ್ಪಲಿಲ್ಲ. ಕೆಲವು ವಾರಗಳಲ್ಲೇ ಇವರು ಕಿಡಿ ಪತ್ರಿಕೆಯನ್ನು ಹೊರಡಿಸಿದರು.

ರಷ್ಯನ್ ಕ್ರಾಂತಿಯ ನಾಯಕ ಲೆನಿನನ ಇಸ್ಕ್ರಾ ಪತ್ರಿಕೆಯನ್ನು ಶೇಷಪ್ಪನವರು ಮೆಚ್ಚಿಕೊಂಡಿದ್ದರು. ಇಸ್ಕ್ರಾ ಎಂದರೆ ಕಿಡಿ ಎಂದರ್ಥ. ಆದ್ದರಿಂದ ಇವರು ತಮ್ಮ ಪತ್ರಿಕೆಗೂ ಕಿಡಿ ಎಂದು ನಾಮಕರಣ ಮಾಡಿದರು.

ಪ್ರಕಟಣೆ ಆರಂಭವಾದ ಕೆಲವು ದಿನಗಳಲ್ಲೇ ಏಕೈಕ ರಾಜಕೀಯ ವಾರಪತ್ರಿಕೆಯಾಗಿ ಪರಿವರ್ತನೆಗೊಂಡ ಕಿಡಿ ಜನಪ್ರಿಯತೆ ಗಳಿಸಲು ಹೆಚ್ಚು ಸಮಯ ಬೇಕಾಗಲಿಲ್ಲ. ರಾಜ್ಯದ ರಾಜಕೀಯಕ್ಕೆ ಮೀಸಲಾಗಿದ್ದ ಕಿಡಿ ಅಂದಿನ ಸರ್ಕಾರದ ಮೇಲೆ ಹಾಗೂ ರಾಜಕೀಯದ ಮೇಲೆ ಪ್ರಭಾವ ಬೀರುತ್ತಿತ್ತು. ಪತ್ರಿಕೆ ಸತತವಾಗಿ ಕಾಂಗ್ರೆಸ್ ವಿರೋಧಿ ಧೋರಣೆಯನ್ನೇ ತಳೆದಿತ್ತು. 1948ರ ಪೊಲೀಸ್ ಮುಷ್ಕರದ ಸಂದರ್ಭದಲ್ಲಿ ಮತ್ತು 1950ರ ವಿಮಾನ ಕಾರ್ಖಾನೆಯ ಕೆಲಸಗಾರರ ಮುಷ್ಕರದ ಸಂದರ್ಭದಲ್ಲಿ ಶೇಷಪ್ಪನವರು ಕಾರಾಗೃಹವಾಸವನ್ನನುಭವಿಸಿದರು.

ರಾಜಕೀಯ ಮತ್ತು ಆಡಳಿತದ ಒಳಮರ್ಮವನ್ನು ಶೋಧಿಸಿ ರಹಸ್ಯಗಳನ್ನು ಹೊರಗೆಡಹುತ್ತಿದ್ದ ಕಿಡಿಪತ್ರಿಕೆಯ ಪ್ರತಿ ಸಂಚಿಕೆಯ ಪ್ರಕಟಣೆಯನ್ನೂ ಓದುಗರು ಆಸಕ್ತಿಯಿಂದ ಎದಿರು ನೋಡುತ್ತಿದ್ದರು. ಅದನ್ನು ಕೊಂಡು ಓದುತ್ತಿದ್ದರು. ಜನಪ್ರಿಯ ರಾಜಕೀಯ ವ್ಯಂಗ್ಯಚಿತ್ರಗಳು ಕಿಡಿಯ ಒಂದು ವೈಶಿಷ್ಟ್ಯ. ಶೇಷಪ್ಪ ಅವರ ಹರಿತವಾದ ಹಾಗೂ ನಿರ್ದಾಕ್ಷಿಣ್ಯವಾದ ಖಾರದ ಬರೆಹಗಳು ಓದುಗರ ಮೆಚ್ಚುಗೆಗೆ ಪಾತ್ರವಾಗಿದ್ದುವು.

ಕಿಡಿ ತುಳಿದ ಕಾಂಗ್ರೆಸ್ ವಿರೋಧಿ ಬರೆಹಗಳು 1952ರ ತರುವಾಯ ಅಧಿಕಾರಕ್ಕೆ ಬಂದ ಸರ್ಕಾರವನ್ನು ಕೆರಳಿಸಿದುವು. ಕಿಡಿಯಲ್ಲಿ ಕಾಣಿಸಿಕೊಂಡ ಲೇಖನಗಳ ವಿರುದ್ಧ ಹತ್ತಾರು ಮೊಕದ್ದಮೆಗಳನ್ನು ಹೂಡಲಾಯಿತು. ಒಂದೊಂದು ಮೊಕದ್ದಮೆಯಲ್ಲೂ

ಮುದ್ರಕರಿಂದ ಮೂರು ಸಾವಿರ ರೂ. ಸಂಪಾದಕರು ಮತ್ತು ಪ್ರಕಾಶಕರಿಂದ ಮೂರು ಸಾವಿರ ರೂ. ಠೇವಣಿ ಕೇಳಲಾಯಿತು. ಆದರೆ ನ್ಯಾಯಾಲಯದ ತೀರ್ಪು ಹೊರಬೀಳುವುದಕ್ಕೆ ಒಂದೆರಡು ದಿನಗಳಿಗೆ ಮೊದಲು ಎಲ್ಲ ಮೊಕದ್ದಮೆಗಳನ್ನೂ ಸರ್ಕಾರ ವಾಪಸು ತೆಗೆದುಕೊಂಡಿತು.

ಕಿಡಿ ಪತ್ರಿಕೆ ಸರ್ಕಾರದ ರಹಸ್ಯಗಳನ್ನು ಬಯಲು ಮಾಡುತ್ತಿದ್ದರೂ ಅದರ ಸಂಪಾದಕರು ಅವುಗಳ ಸತ್ಯಾಸತ್ಯತೆಗಳನ್ನು ಖಚಿತಪಡಿಸಿಕೊಳ್ಳದೆ ಪ್ರಕಟಿಸುತ್ತಿರಲಿಲ್ಲ. ಇದರಿಂದ ಶೇಷಪ್ಪನವರು ತಮ್ಮ ವಿರೋಧಿಗಳ ಗೌರವಕ್ಕೂ ಪಾತ್ರರಾಗಿದ್ದರು.

10"× 13" ಆಕಾರದ ನಾಲ್ಕು ಪುಟಗಳ ಸಂಚಿಕೆಯ ಬಿಡಿ ಪ್ರತಿಯ ಬೆಲೆ ಮೊದಲು ಆರು ಕಾಸು. ಅದು ಸಾಮಾನ್ಯ ಓದುಗನ ಕಿಸೆಗೂ ನಿಲುಕುವಂತಿರಬೇಕೆಂಬುದು ಇವರ ಉದ್ದೇಶವಾಗಿದ್ದುದರಿಂದ ಅದರ ಬೆಲೆಯನ್ನು ಎಂದೂ ಒಂದು ಆಣೆಗಿಂತ ಹೆಚ್ಚು ಏರಿಸಲೇ ಇಲ್ಲ. ಪೈಸೆ ಚಲಾವಣೆಗೆ ಬಂದ ಮೇಲೆ ಅದರ ಬೆಲೆ ಏಳು ಪೈಸೆ ಆಗಿತ್ತು. ಸರ್ಕಾರದ ಒಂದು ಜಾಹೀರಾತನ್ನೂ ಪ್ರಕಟಿಸದಿದ್ದುದು ಕಿಡಿಯ ಇನ್ನೊಂದು ವೈಶಿಷ್ಟ್ಯ. ಸರ್ಕಾರ ಅದಕ್ಕೆ ಜಾಹೀರಾತನ್ನು ಕೊಡಲೂ ಇಲ್ಲ; ಶೇಷಪ್ಪನವರು ಅಪೇಕ್ಷಿಸಲೂ ಇಲ್ಲ.

ದೇವನಹಳ್ಳಿಯಲ್ಲಿ ಜನಿಸಿ ಬೆಂಗಳೂರಿನಲ್ಲಿ ನೆಲೆಸಿದ್ದ ಶೇಷಪ್ಪ ಅವರು ಪತ್ರಿಕೋದ್ಯಮವನ್ನೇ ನಂಬಿದ್ದರು. ತಮ್ಮ ಅನೇಕ ಆಕ್ಷೇಪಾರ್ಹ ಬರೆಹಗಳಿಗಾಗಿ ಇವರು ಹಲವು ಕಷ್ಟ ನಿಷ್ಠುರಗಳ ಜೊತೆಗೆ ಒಂದೆರಡು ಸಲ ತುರಂಗವಾಸವನ್ನೂ ಅನುಭವಿಸಿದರು. ಕೆಲವೊಮ್ಮೆ ಭೂಗತರಾಗಿಯೂ ಇರಬೇಕಾಗಿತ್ತು. 1963 ಜನವರಿ 2ರಂದು ಶೇಷಪ್ಪನವರು ತಮ್ಮ 44ನೆಯ ವಯಸ್ಸಿನಲ್ಲಿ ನಿಧನರಾದರು.

ಹುಟ್ಟು, ಪತ್ರಿಕೋದ್ಯಮಿಯಾಗಿದ್ದ ಶೇಷಪ್ಪ ಮತ್ತು ಇವರ ಕಿಡಿ ಬೇರೆಬೇರೆಯಾಗಿರಲಿಲ್ಲ. ಇವರು ಕಿಡಿ ಶೇಷಪ್ಪ ಎಂದೇ ಹೆಸರು ಗಳಿಸಿದ್ದರು. ಶೇಷಪ್ಪನವರ ಅನಂತರ ಆ ಪತ್ರಿಕೆಯ ಪ್ರಕಟಣೆ ನಿಂತಿತು. (ಎಸ್.ಪಿ.ಆರ್.)

**ಕಿಡಿಕೋಷ್ಠ (ಕಿಡಿಮಂದಿರ) :** ವಿದ್ಯುದಂಶವಿರುವ ಉಪಪರಮಾಣು ಕಣಗಳ ಪಥಗಳನ್ನು ಕಾಣುವಂತೆ ಮಾಡುವ ಒಂದು ಸಾಧನ (ಸ್ಪಾರ್ಕ್ ಚೇಂಬರ್). ವಿದ್ಯುದಂಶವಿರುವ ಕಣ, ವಿದ್ಯುದಂಶ ಪಡೆದಿರುವ ಫಲಕಗಳ ಮೂಲಕ ಹಾದುಹೋದಾಗ ಅವುಗಳ ಮಧ್ಯೆ ಇರುವ ಅನಿಲದಲ್ಲಿ ಅದು ಉಂಟುಮಾಡುವ ಅಯಾನುಗಳ ನೇರದಲ್ಲೇ ಉಂಟಾಗುವ ವಿದ್ಯುತ್ ಕಿಡಿಗಳಿಂದ ಕಣದ ಪಥವನ್ನು ಚಿತ್ರಿಸಬಹುದು. ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್, ಮೇಸಾನ್ ಮತ್ತು ಇತರ ಕಣಗಳ ಗುಣಲಕ್ಷಣಗಳ ಅನ್ವೇಷಣೆಗೆ ಸಹಾಯಕವಾದ ಅನೇಕ ಸಾಧನಗಳನ್ನು ಭೌತವಿಜ್ಞಾನಿಗಳು 20ನೆಯ ಶತಮಾನದ ಆದಿಯಿಂದಲೂ ಸತತವಾಗಿ ಕಂಡುಹಿಡಿಯುತ್ತ ಬಂದಿದ್ದಾರೆ. ಅನೇಕ ಶಕ್ತಿಯುತ ಕಣಗಳಲ್ಲಿ ಒಂದು ವಿಶಿಷ್ಟ ಕಣದ ಅಪೂರ್ವ ಘಟನೆಯನ್ನು ಮಾತ್ರ ಚಿತ್ರಿಸುವ ಸಾಧನವನ್ನು ಕಂಡುಹಿಡಿಯಲು ವಿವಿಧ ರೀತಿಗಳಲ್ಲಿ ವಿಜ್ಞಾನಿಗಳು ಪ್ರಯತ್ನಿಸಿದ್ದಾರೆ. ಈ ಸಾಧನಗಳಲ್ಲಿ ಕಿಡಿಕೋಷ್ಠ ಇತ್ತೀಚಿನ ಸಾಧನ.

ವಿದ್ಯುದಂಶವಿರುವ ಕಣ ಅದು ಚಲಿಸುತ್ತಿರುವ ದಾರಿಯಲ್ಲಿ ಸಿಗುವ ಪರಮಾಣುವಿನ ಎಲೆಕ್ಟ್ರಾನಿನ ಮೇಲೆ ವಿದ್ಯುತ್ಬಲವನ್ನು ಉಂಟುಮಾಡಿ ಅದನ್ನು ಪರಮಾಣುವಿನಿಂದ ಬೇರ್ಪಡಿಸುತ್ತದೆ. ಆದ್ದರಿಂದ ಆ ಪಥದಲ್ಲಿ ಎಲೆಕ್ಟ್ರಾನ್ ಮತ್ತು ಎಲೆಕ್ಟ್ರಾನ್ ರಹಿತ ಪರಮಾಣು ಅಂದರೆ ಅಯಾನುಗಳುಂಟಾಗುತ್ತವೆ. ಈ ಅಯಾನುಗಳ ಸಹಾಯದಿಂದ ಚಲಿಸುತ್ತಿರುವ ಕಣದ ಪಥವನ್ನು ಚಿತ್ರಿಸಲು ಸಾಧನಗಳನ್ನು ರಚಿಸಿದ್ದಾರೆ.

ಕಿಡಿಕೋಷ್ಠದ ಉಪಜ್ಞೆಕಾರರು (ಇನ್ವೆಂಟರ್ಸ್) ಟಿ.ಇ. ಕ್ರಾನ್‌ಷಾ ಮತ್ತು ಜಿ.ಎಫ್. ಡಿಬೀರ್ ಎಂಬ ಬ್ರಿಟಿಷ್ ವಿಜ್ಞಾನಿಗಳು (1957). ಕಿಡಿಕೋಷ್ಠದಲ್ಲಿ ಗಾಳಿಯನ್ನು ತುಂಬಿದ್ದುದರಿಂದ ಎರಡು ಅಥವಾ ಹೆಚ್ಚು ಪಥಗಳನ್ನು ಸೂಚಿಸುವುದು ಅಸಾಧ್ಯವಾಗಿತ್ತು ಮತ್ತು ಕಿಡಿಯನ್ನುಂಟುಮಾಡಲು ಫಲಕಗಳಿಗೆ ಹೆಚ್ಚು ವೋಲ್ಟೇಜನ್ನು ಕೊಡಬೇಕಾಗಿತ್ತು. ಕಣದ ಪಥದಲ್ಲಿ ಉಂಟಾಗುವ ಅಯಾನುಗಳ ಎಲೆಕ್ಟ್ರಾನುಗಳು ಆಮ್ಲಜನಕದ ಅಣುವಿನೊಂದಿಗೆ ಸೇರುವುದರಿಂದ ಅದನ್ನು ಫಲಕದ ಪಕ್ಕಕ್ಕೆ ತಳ್ಳಲು ಹೆಚ್ಚು ಕಾಲ ತೆಗೆದುಕೊಳ್ಳುತ್ತಿತ್ತು. ಈ ಕಾರಣಗಳಿಂದ ಕಿಡಿಕೋಷ್ಠದೊಳಗೆ ಗಾಳಿಗೆ ಬದಲಾಗಿ ನಿಯಾನ್ ಅನಿಲವನ್ನು ತುಂಬಿ ಉಪಕರಣವನ್ನು ಸುಧಾರಿಸಿದರು (1959). ಎಸ್. ಫುಕಯಿ ಮತ್ತು ಎಸ್. ವಿಯಮೆಟೊ ಇದನ್ನು ಮಾಡಿದ ವಿಜ್ಞಾನಿಗಳು. ಈ ಸುಧಾರಿತ ಕಿಡಿಕೋಷ್ಠದಲ್ಲಿ ಅನೇಕ ತೆಳುವಾದ ಲೋಹದ ಫಲಕಗಳನ್ನು ಸುಮಾರು 3 ಮಿಮೀ ಅಂತರದಲ್ಲಿರುವಂತೆ ಒಂದರ ಪಕ್ಕದಲ್ಲೊಂದು ಸಮಾಂತರವಾಗಿ ಇಟ್ಟಿದೆ ಮತ್ತು ಕೋಷ್ಠದಲ್ಲಿ ನಿಯಾನ್ ಅನಿಲವನ್ನು ತುಂಬಿದೆ. ಒಂದು ಬಿಟ್ಟು ಮತ್ತೊಂದರಂತೆ ಫಲಕಗಳನ್ನು ಹೆಚ್ಚು ವೋಲ್ಟೇಜಿನ (ಸು. 10 ಕಿವೋ) ವಿದ್ಯುತ್ ಸ್ಪಂದನಗಳನ್ನು ಕಳಿಸುವ ಉತ್ಪಾದಕಕ್ಕೆ ಸೇರಿಸಿದೆ. ಉಳಿದ ಫಲಕಗಳು ಭೂಸಂಪರ್ಕ ಹೊಂದಿವೆ. ಕೋಷ್ಠದ ಒಳಗೂ ಹೊರಗೂ ಗುಣಕಗಳನ್ನು ಇಟ್ಟಿದೆ. ಒಂದು ಕಣದ ಯಾವುದಾದರೊಂದು ಘಟನೆ ಯಾವಾಗ ಕೋಷ್ಠದಲ್ಲಿ ಕಂಡುಬರುತ್ತದೆ ಎಂಬುದನ್ನು ಗುಣಕ ಮತ್ತು ತಾರ್ಕಿಕ ವಿದ್ಯುನ್ಮಂಡಲ ಇವುಗಳ ಸಹಾಯದಿಂದ ನಿರ್ಧರಿಸಬಹುದು; ಹಾಗೂ ಅದು ಕಂಡಾಗ ವಿದ್ಯುತ್‌ಸ್ಪಂದನವನ್ನು ಉತ್ಪಾದಕ ಫಲಕಗಳಿಗೆ ಕಳುಹಿಸುವಂತೆ ತಾರ್ಕಿಕ ವಿದ್ಯುನ್ಮಂಡಲ ಪ್ರೇರೇಪಿಸುತ್ತದೆ. ವಿದ್ಯುದಂಶವಿರುವ ಕಣ ಹೋಗುವ ದಾರಿಯಲ್ಲಿ ಅದು ಬಿಟ್ಟ ಅಯಾನುಗಳ ಹಿಂಜಾಡಿನಲ್ಲೇ ವಿದ್ಯುತ್ ಕಿಡಿಗಳು ಕಾಣಿಸಿಕೊಳ್ಳುತ್ತವೆ. ಇದೇ ಕ್ಷಣದಲ್ಲಿ ಛಾಯಾಚಿತ್ರಪಟವನ್ನು ತೆಗೆಯಬಹುದು.

ಕಿಡಿಕೋಷ್ಠದೊಳಗೆ ಹೋಗುವ ಒಂದು ಕಣಕ್ಕೂ ಮತ್ತೊಂದು ಕಣಕ್ಕೂ ಕೆಲವು ಮೈಕ್ರೋಸೆಕೆಂಡುಗಳಷ್ಟು ಅಂತರವಿದೆ. ಒಂದು ಕಣ ಒಳಹೊಕ್ಕ ಅನಂತರ ಒಂದು ಮೈಕ್ರೋಸೆಕೆಂಡಿಗಿಂತ ಕಡಿಮೆಕಾಲದಲ್ಲಿಯೇ (0.2 $\mu$ ಸೆಕ್) ವಿದ್ಯುತ್‌ಸ್ಪಂದನವನ್ನು ಕೋಷ್ಠಕಕ್ಕೆ ಕೊಡಬೇಕು. ಫಲಕಗಳ ಮಧ್ಯೆ ಇರಬಹುದಾದ ಅಯಾನುಗಳನ್ನು ಒಂದು ಮೈಕ್ರೋಸೆಕೆಂಡಿನ ಅನಂತರ ಪಕ್ಕಕ್ಕೆ ಸರಿಯುವಂತೆ ಫಲಕಗಳಿಗೆ ಏಕಮುಖ (ಡಿ.ಸಿ.) ವೋಲ್ಟೇಜ್ (ಸು. 80 ವೋ/ಸೆಂಮೀ.) ಕೊಡಬೇಕು. ಹೀಗೆ ಮಾಡುವುದರಿಂದ ಕೋಷ್ಠಕ್ಕೆ ನುಗ್ಗುವ ಅನೇಕ ಕಣಗಳಲ್ಲಿ ಒಂದೇ ಕಣದ ಮುಖ್ಯ ಘಟನೆಯನ್ನು ಚಿತ್ರಿಸಲು ಸಾಧ್ಯವಾಗುವುದು. ಹಾಗೂ ಇನ್ನೊಂದು ಕಣದ ಮುಖ್ಯ ಘಟನೆಯನ್ನು ಚಿತ್ರಿಸಲು ಕೋಷ್ಠವನ್ನು ಸಿದ್ಧಪಡಿಸಿದಂತಾಗುವುದು. ಕಿಡಿಕೋಷ್ಠವನ್ನು ಕಾಂತಕ್ಷೇತ್ರದಲ್ಲಿಟ್ಟು ಕಣದ ಪಥವನ್ನು ತಿಳಿದು ಅದರ ವೇಗೋತ್ಕರ್ಷ, ವಿದ್ಯುದಂಶದ ಲಕ್ಷಣ ಇತ್ಯಾದಿ ಅಂಶಗಳನ್ನು ತಿಳಿಯಬಹುದು.

ಕಣಗಳ ಅಪೂರ್ವ ಕ್ರಿಯೆ ಮತ್ತು ಪರಮಾಣುಗಳೊಂದಿಗೆ ಅವುಗಳ ಪರಸ್ಪರ ಕ್ರಿಯೆಗಳನ್ನು ತಿಳಿಯಲು ಸಹಾಯವಾಗುವಂತೆ ವಿವಿಧ ರೀತಿಯ ಕಿಡಿಕೋಷ್ಠಗಳನ್ನು ರಚಿಸಿದ್ದಾರೆ.

ಕೆಲವು ಕೋಷ್ಠಗಳಲ್ಲಿ ದಪ್ಪನಾದ ಇಂಗಾಲದ ಫಲಕಗಳನ್ನು ಉಪಯೋಗಿಸಿ ಕಣಗಳು ಇಂಗಾಲದ ಪರಮಾಣುವಿನೊಂದಿಗೆ ಉಂಟುಮಾಡುವ ಪರಸ್ಪರ ಕ್ರಿಯೆಯ ಅನ್ವೇಷಣೆ ಮಾಡಲು ಸಹಾಯವಾಗಿದೆ. ಇನ್ನು ಕೆಲವು ಸ್ತಂಭಾಕಾರದ ಕೋಷ್ಠಗಳನ್ನು ರಚಿಸಿ ಅವುಗಳ ಅಕ್ಷಗಳಲ್ಲಿ ಲಕ್ಷ್ಯವನ್ನು ಇಟ್ಟು ಕಣಗಳ ಚದುರುವಿಕೆಯನ್ನು ತಿಳಿಯಲು ಸಹಾಯಕವಾಗಿದೆ.

ಮೇಘಕೋಷ್ಠ ಮತ್ತು ಬುದ್ಬುದ ಕೋಷ್ಠಗಳಿಗಿಂತ ಕಿಡಿಕೋಷ್ಠದ ಹೆಚ್ಚು ಉಪಯೋಗಗಳಿವು: 1 ಕಣದ ಯಾವ ಘಟನೆ ಬೇಕೋ ಅದನ್ನೇ ಚಿತ್ರಿಸಬಹುದು; 2 ವಿದ್ಯುತ್ ಸ್ಪಂದನವನ್ನು ಕಳುಹಿಸಿದ ಒಂದು ಅಥವಾ ಎರಡು ಮೈಕ್ರೋಸೆಕೆಂಡುಗಳಲ್ಲೇ ಹಳೆಯ ಅಯಾನುಗಳನ್ನು ಪಕ್ಕಕ್ಕೆ ಸರಿಸುವಂತೆ ಮಾಡುವುದು ಮತ್ತು ವಿದ್ಯುತ್ ಸ್ಪಂದನ ಕಳುಹಿಸಿದ ಒಂದು ಮೈಕ್ರೋಸೆಕೆಂಡ್ ಮುಂಚಿನ ಒಂದೇ ಕಣದ ಘಟನೆಯನ್ನು ಛಾಯಾಚಿತ್ರಪಟದಲ್ಲಿ ಕಾಣುವುದು.

ಕಿಡಿಮಂದಿರವನ್ನು ಉಪಯೋಗಿಸಿ 1961 ಮತ್ತು 1962ರಲ್ಲಿ ಬ್ರೂಕ್‌ಹೇವನ್ ಪಟ್ಟಣದ ಪ್ರಯೋಗಶಾಲೆಯಲ್ಲಿ ಎರಡು ರೀತಿ (ಎಲೆಕ್ಟ್ರಾನ್–ನ್ಯೂಟ್ರಿನೋ ಮತ್ತು ಮ್ಯುವಾನ್–ನ್ಯೂಟ್ರಿನೋ) ನ್ಯೂಟ್ರಿನೋಗಳನ್ನು ಕಂಡುಹಿಡಿಯಲು ಪ್ರಯೋಗಗಳನ್ನು ನಡೆಸಿದರು. ಈ ಪ್ರಯೋಗಗಳಲ್ಲಿ ಹೆಚ್ಚು ಶಕ್ತಿಯುತ (30 ಬಿ.ಸಿ.ವಿ.) ಪ್ರೋಟಾನ್ ಕಿರಣಾವಳಿಯನ್ನು ಬೇರಿಯಂ ಲಕ್ಷ್ಯದ ಮೇಲೆ ಬಿಟ್ಟು ಲಕ್ಷ್ಯದ ನ್ಯೂಟ್ರಾನ್ ಮತ್ತು ಪ್ರೋಟಾನುಗಳೊಂದಿಗೆ ಪರಸ್ಪರ ಕ್ರಿಯೆ ನಡೆಸಿ ಧನ ಮತ್ತು ಋಣ ಪೈಯಾನುಗಳನ್ನು ( $^{+}$ ಮತ್ತು $\pi^{-}$) ಉಂಟುಮಾಡಿದೆ. ಈ ಪೈಯಾನುಗಳು ಶಿಥಿಲಗೊಂಡು ಮ್ಯುವಾನುಗಳು, ನ್ಯೂಟ್ರಿನೋ ಮತ್ತು ಪ್ರತಿನ್ಯೂಟ್ರಿನೋಗಳು ಉಂಟಾಗಿವೆ. ಉಕ್ಕಿನ ತಡೆಯೂ ಪೈಯಾನುಗಳನ್ನು ಮತ್ತು ಮ್ಯೂವಾನುಗಳನ್ನು ತಡೆಯುತ್ತದೆ. ಆದರೆ ದ್ರವ್ಯರಾಶಿ ಮತ್ತು ವಿದ್ಯುದಂಶವಿಲ್ಲದ ನ್ಯೂಟ್ರಿನೋ ಮತ್ತು ಪ್ರತಿನ್ಯೂಟ್ರಿನೋಗಳು ಮುಂದೆ ಸಾಗುತ್ತವೆ. ತಡೆಯಿಂದಾಚೆ ಇರುವ ಕಿಡಿಕೋಷ್ಠದಲ್ಲಿ ನ್ಯೂಟ್ರಿನೋ ಹೊಕ್ಕು ನ್ಯೂಟ್ರಾನಿನೊಂದಿಗೆ ಪರಸ್ಪರ ಕ್ರಿಯೆ ನಡೆಸಿ ಋಣ ಮ್ಯೂವಾನನ್ನು ( $^{-}$) ಉತ್ಪತ್ತಿಮಾಡುತ್ತದೆ. ಪ್ರತಿ ನ್ಯೂಟ್ರಿನೋ ಪ್ರೋಟಾನಿನೊಂದಿಗೆ ಪರಸ್ಪರ ಕ್ರಿಯೆ ನಡೆಸಿ ಧನ ಮ್ಯುಯಾನನ್ನು ( $\mu^{+}$) ಉತ್ಪತ್ತಿಮಾಡುತ್ತದೆ. ಮೇಘಕೋಷ್ಠದಲ್ಲಿ ಮ್ಯುವಾನುಗಳ ಪಥವನ್ನು ತಿಳಿದು ನ್ಯೂಟ್ರಿನೋ ಮತ್ತು ಪ್ರತಿನ್ಯೂಟ್ರಿನೋಗಳನ್ನು ನಿರ್ಧರಿಸಬಹುದು. (ಆರ್.ಎಸ್.ಬಿ.; ವಿ.ಇ.)

**ಕಿಡಿ ಪ್ರಜ್ವಲನೆ :** ಕಡಿಮೆ ಸಂಪೀಡನ ಪ್ರಮಾಣವುಳ್ಳ (ಕಂಪ್ರೆಷನ್ ರೇಷಿಯೊ) ಎಂಜಿನ್ನುಗಳಲ್ಲಿ; ಉದಾಹರಣೆಗೆ ಅಂತರ್ದಹನ ಎಂಜಿನ್‌ನ ವರ್ತುಲ ನಾಳಿಯಲ್ಲಿ ಅನಿಲ ಮಿಶ್ರಣವನ್ನು ವಿದ್ಯುತ್ ಕಿಡಿಯಿಂದ ಹೊತ್ತಿಸಲು ಪ್ರೇರಕ ಬಾಹ್ಯಕಾರಕ (ಸ್ಪಾರ್ಕ್ ಇಗ್ನಿಷನ್)ಬಳಸುತ್ತಾರೆ. ಇಂಥ ಎಂಜಿನ್ನುಗಳಲ್ಲಿ ಸಂಪೀಡನ ಘಾತದ (ಕಂಪ್ರೆಷನ್ ಸ್ಟ್ರೋಕ್) ಅಂತ್ಯದಲ್ಲಿ ಸಾಕಷ್ಟು ಉಷ್ಣತೆ ಉಂಟಾಗದಿರುವುದರಿಂದ ಇಂಧನ–ಗಾಳಿ ಮಿಶ್ರಣ ತಾನಾಗಿಯೇ ಹೊತ್ತಿಕೊಳ್ಳುವುದಿಲ್ಲ. ಆಗ ಸಿಲಿಂಡರಿನೊಳಗೆ ವಿದ್ಯುತ್ ಕಿಡಿಯನ್ನು ಉಂಟುಮಾಡಿ ಇಂಧನಮಿಶ್ರಣವನ್ನು ಕಿಡಿಬಿರಡೆ (ಸ್ಪಾರ್ಕ್ ಪ್ಲಗ್) ತೆಗೆದುಹಾಕಬಹುದಾದ ಸಾಧನವನ್ನು ಸಿಲಿಂಡರಿಗೆ ಜೋಡಿಸಬೇಕು. ಇದರ ಮೂಲಕ ಅಧಿಕ ವೋಲ್ಟೇಜ್ ಇರುವ ವಿದ್ಯುಚ್ಛಕ್ತಿಯನ್ನು

ಹರಿಸಿದರೆ ಅದು ಎಲೆಕ್ಟ್ರೋಡುಗಳ ನಡುವಿನ ತೆರಪನ್ನು ದಾಟುವ ಪ್ರಯತ್ನದಲ್ಲಿ ವಿದ್ಯುತ್ ಕಿಡಿಯನ್ನು ಉಂಟುಮಾಡುತ್ತದೆ. ಇದರಿಂದ ಇಂಧನ–ಗಾಳಿ ಮಿಶ್ರಣ ಹೊತ್ತಿಕೊಂಡು ಜ್ವಾಲೆ ಮಿಶ್ರಣದ ಪೂರ್ತಿ ಹರಡಿ ಅಗತ್ಯವಾದ ದಹನವುಂಟಾಗುತ್ತದೆ.

**ಪ್ರೇರಕ ಸುರುಳಿಯ ಜ್ವಲನ (ಇಂಡಕ್ಷನ್ ಕಾಯಿಲ್ ಇಗ್ನಿಷನ್):** ಈ ವ್ಯವಸ್ಥೆಯಲ್ಲಿ ಒಂದೇ ದಿಂಡಿನ ಸುತ್ತಲೂ ಪ್ರಾಥಮಿಕ ಹಾಗೂ ದ್ವಿತೀಯಕ ಸುರುಳಿಗಳಿಂದ ಬಿಗಿಯಲ್ಪಟ್ಟ ಪ್ರೇರಕ ಸುರುಳಿಯೆಂಬ ಭಾಗ ಉಂಟು. ಕಿಡಿಯ ಉತ್ಪಾದನೆಗೆ ಅಗತ್ಯವಾದ ವಿದ್ಯುಚ್ಛಕ್ತಿಯನ್ನು ವಿದ್ಯುತ್‌ಕೋಶ ಒದಗಿಸುತ್ತದೆ. ವಿಯೋಜಕ ಬಿಂದುಗಳ (ಬ್ರೇಕರ್ ಪಾಯಿಂಟ್ಸ್) ಸಂಪರ್ಕ ಕೂಡಿಸಿ, ಸ್ವಿಚ್ಚನ್ನು ಹಾಕಿದಾಗ ಮಂಡಲ (ಸರ್ಕಿಟ್) ಪೂರ್ಣಗೊಂಡು ವಿದ್ಯುತ್‌ಕೋಶ ಒದಗಿಸುವ ವಿದ್ಯುಚ್ಛಕ್ತಿ ಪ್ರಾಥಮಿಕ ಸುರುಳಿಗಳ ಮತ್ತು ವಿಯೋಜಕ ಬಿಂದುಗಳ ಮೂಲಕ ಹರಿದು ಎಂಜಿನ್ನಿನ ಚೌಕಟ್ಟು ಅಥವಾ ಸಂಪರ್ಕಗಳಿಂದ ಪುನಃ ವಿದ್ಯುತ್‌ಕೋಶಕ್ಕೆ ಹರಿಯುತ್ತದೆ.



ಚಿತ್ರ 1

ವಿದ್ಯುಚ್ಛಕ್ತಿ ಪ್ರಾಥಮಿಕ ಸುರುಳಿಗಳಲ್ಲಿ ಹರಿದಾಗ ದಿಂಡಿನ ಒಳಗೂ ಸುತ್ತಲೂ ಕಾಂತಕ್ಷೇತ್ರವೊಂದನ್ನು ಪ್ರೇರೇಪಿಸುತ್ತದೆ. ಇದಾದ ತರುವಾಯ ಸೂಕ್ತ ಘಟಕಗಳ ಜೋಡಣೆಯಿಂದ ಎಂಜಿನ್ನಿನ ಚಲನೆಯೇ ವಿಯೋಜಕ ಬಿಂದುಗಳ ಸಂಪರ್ಕವನ್ನು ಕಡಿಯುತ್ತದೆ. ಇದರಿಂದ ವಿದ್ಯುನ್ಮಂಡಲ ತುಂಡಾಗಿ ಇದುವರೆಗೂ ವಿಯೋಜಕ ಬಿಂದುಗಳ ಮೂಲಕ ಹರಿಯುತ್ತಿದ್ದ ವಿದ್ಯುಚ್ಛಕ್ತಿ ಪಥಬದಲಿಸಿ ವಿದ್ಯುತ್ಸಂಗ್ರಾಹಕವನ್ನು (ಎಲೆಕ್ಟ್ರಿಕ್ ಕಂಡೆನ್ಸರ್) ತುಂಬುತ್ತದೆ. ಹೀಗಾಗಿ ಶೀಘ್ರವಾಗಿ ಪ್ರಾಥಮಿಕ ವಿದ್ಯುತ್ತು ಹಾಗೂ ಇದರಿಂದ ಕಾಂತಕ್ಷೇತ್ರ ಕುಸಿಯುತ್ತವೆ. ದಿಂಡಿನ ಕಾಂತಕ್ಷೇತ್ರದ ಈ ರೀತಿಯ ಶೀಘ್ರ ಕುಸಿತ ಅದೇ ದಿಂಡಿಗೆ ಸುತ್ತಿರುವ ದ್ವಿತೀಯಕ ಸುರುಳಿಗಳಲ್ಲಿ ಒಂದು ಅತ್ಯಧಿಕ ವೋಲ್ಟೇಜನ್ನು ಪ್ರೇರೇಪಿಸುತ್ತದೆ. ಈ ವೋಲ್ಟೇಜಿನ ಏರಿಕೆ ದ್ವಿತೀಯಕ ಸುರುಳಿಯಲ್ಲಿರುವ ತಂತಿಯ ಸುತ್ತುಗಳ ಸಂಖ್ಯೆಯನ್ನು ಅವಲಂಬಿಸಿದೆ. ಎಷ್ಟು ವೋಲ್ಟೇಜ್ ಬೇಕೆಂಬುದು ಎಂಜಿನ್ನಿನ ಸಂಪೀಡನ ಒತ್ತಡ, ವೇಗ, ಮಿಶ್ರಣ ಪ್ರಮಾಣ, ಕಿಡಿಬಿರಡೆ ಉಷ್ಣತೆ, ಕಿಡಿಬಿರಡೆ ಎಲೆಕ್ಟ್ರೋಡುಗಳ ನಡುವಿನ ತೆರಪು ಇವನ್ನು ಅವಲಂಬಿಸಿದೆ. ಈ ಅಧಿಕ ವೋಲ್ಟೇಜನ್ನು ಡಿಸ್ಟ್ರಿಬ್ಯೂಟರ್ ಎಂಬ ತಿರುಗಬಲ್ಲ ಸ್ವಿಚ್ಚಿನಿಂದ ಸರಿಯಾದ ಕ್ರಮದಲ್ಲಿ ಪ್ರತಿಯೊಂದು ಸಿಲಿಂಡರಿನಲ್ಲಿರುವ ಕಿಡಿಬಿರಡೆಗೆ ಒಯ್ದು, ಈಗಾಗಲೇ ಹೇಳಿರುವಂತೆ, ಕಿಡಿಯನ್ನು ಉಂಟುಮಾಡಬಹುದು. ವಿದ್ಯುತ್ಸಂಗ್ರಾಹಕವನ್ನು ಉಪಯೋಗಿಸದಿದ್ದರೆ ಕಾಂತಕ್ಷೇತ್ರದ ಕುಸಿತದಿಂದುಂಟಾದ ಪ್ರಾಥಮಿಕ ವೋಲ್ಟೇಜ್ ವಿಯೋಜಕ ಬಿಂದುಗಳ ನಡುವೆಯೇ ಕಿಡಿಯನ್ನು ಉಂಟುಮಾಡಿ, ಅವನ್ನು ಸುಟ್ಟು ಬೇಗ ನಾಶಮಾಡುತ್ತದೆ.

**ಜೋಡಿ ಪ್ರಜ್ವಲನ (ಡ್ಯುಅಲ್ ಇಗ್ನಿಷನ್):** ಕೆಲವು ಎಂಜಿನ್ನುಗಳಿಗೆ ಒಂದೇ ದಹನ ಕೋಷ್ಠದಲ್ಲಿ ಒಮ್ಮೆಗೇ ಎರಡು ಕಿಡಿಗಳನ್ನು ಉಂಟುಮಾಡುವ ವ್ಯವಸ್ಥೆ ಇರುವುದುಂಟು. ಇದರಿಂದ ಸ್ವಲ್ಪ ಹೆಚ್ಚಾಗಿ ಶಕ್ತಿಯನ್ನು ಪಡೆಯಬಹುದು. ರಕ್ಷಾ ಕವಚವಿರುವ (ಇನ್ಸುಲೇಟೆಡ್) ಎರಡು ಎಲೆಕ್ಟ್ರೋಡುಗಳನ್ನುಳ್ಳ ವಿಶೇಷ ಕಿಡಿಬಿರಡೆಗಳನ್ನು ಶ್ರೇಣಿಯಲ್ಲಿ ಜೋಡಿಸಿದ್ದರೆ ಸಾಮಾನ್ಯ ಪ್ರಜ್ವಲನ ವ್ಯವಸ್ಥೆಯಿಂದಲೇ ಕಿಡಿಯನ್ನು ಪಡೆಯಬಹುದು. ಆದರೆ ಅಧಿಕ ಒತ್ತಡದಲ್ಲಿರುವ ಎರಡು ತೆರವು ಶ್ರೇಣಿಯಲ್ಲಿ ದಾಟಲು ಅತ್ಯಧಿಕ ವೋಲ್ಟೇಜ್ ಬೇಕು.

**ಕಾಂತ ವಿದ್ಯುತ್ ಜ್ವಲನ:** ಸೂಕ್ತ ಜೋಡಣೆಗಳ ನೆರವಿನಿಂದ ಎಂಜಿನ್ನಿನ ದಂಡ(ಷಾಫ್ಟ್)ದಿಂದ ಚಲನೆಯನ್ನು ಪಡೆದು ಇಚ್ಛಿತ ವೋಲ್ಟೇಜನ್ನು ಉಂಟುಮಾಡುವ ವಿದ್ಯುಜ್ಜನಕದಂತಿರುವ ಸಾಧನ. ಇದರಿಂದ ಈ ವ್ಯವಸ್ಥೆ ಕೆಲಸಮಾಡಲು ವಿದ್ಯುತ್ ಕೋಶದ ಅಗತ್ಯವಿಲ್ಲ. ಇಲ್ಲಿ ಸಹ ಮೆದು ಕಬ್ಬಿಣದ ದಿಂಡನ್ನು ಪ್ರಾಥಮಿಕ ಹಾಗೂ ದ್ವಿತೀಯಕ ಸುರುಳಿಗಳಿಂದ ಬಿಗಿದಿರುತ್ತಾರೆ. ಇದರ ಸುತ್ತಲೂ ಒಂದು ಜೊತೆ ಶಾಶ್ವತ ಕಾಂತಗಳು ತಿರುಗುವ ಏರ್ಪಾಡಿದೆ. ಇಂಥ ಕಾಂತಕೂಟ ಕಾಂತಪ್ರವಾಹದ ದಿಕ್ಕನ್ನು ಪೂರ್ತಿಯಾಗಿ ಪರಾವರ್ತನೆಗೊಳಿಸುತ್ತದೆ (ರಿವರ್ಸಸ್). ಕಾಂತಪ್ರವಾಹದ ಪ್ರಖರತೆ ಮತ್ತು ದಿಕ್ಕಿನ ಈ



ಚಿತ್ರ 2

ಶೀಘ್ರ ಬದಲಾವಣೆಯಿಂದ ಪ್ರಾಥಮಿಕ ಮಂಡಲದಲ್ಲಿ ವಿದ್ಯುತ್ತು ಹರಿಯುತ್ತದೆ. ಈಗ ಸೂಕ್ತ ಕಾಲದಲ್ಲಿ ವಿಯೋಜಕ ಬಿಂದುಗಳ ಸಂಪರ್ಕವನ್ನು ಕಡಿದಾಗ, ವಿದ್ಯುಚ್ಛಕ್ತಿ ವಿದ್ಯುತ್ಸಂಗ್ರಾಹಕಕ್ಕೆ ಹರಿಯುತ್ತದೆ. ಕಾಂತಕ್ಷೇತ್ರದ ಕುಸಿತ, ದ್ವಿತೀಯಕ ಸುರುಳಿಗಳಲ್ಲಿ ವೋಲ್ಟೇಜಿನ ಏರಿಕೆ ಮುಂತಾದುವನ್ನು ಈ ಹಿಂದೆಯೇ ಹೇಳಿದೆ.

ಎಂಜಿನ್ನು ಅಧಿಕ ವೇಗದಿಂದ ಓಡುವಾಗ ಕಾಂತವಿದ್ಯುತ್ ವ್ಯವಸ್ಥೆ ಉತ್ತಮವಾಗಿರುತ್ತದೆ. ವೇಗ ಕಡಿಮೆಯಿದ್ದರೆ ದುರ್ಬಲ ಕಿಡಿ ಉತ್ಪತ್ತಿಯಾಗುತ್ತದೆ. ಇದರಿಂದ ಯಾವುದೇ ಕಾರಣಕ್ಕಾಗಿ ಪ್ರವರ್ತಕ ಮೋಟಾರು (ಸ್ಟಾರ್ಟಿಂಗ್ ಮೋಟಾರ್) ವಕ್ರದಂಡವನ್ನು ಅತ್ಯಂತ ಮಂದಗತಿಯಲ್ಲಿ ಮಾತ್ರ ತಿರುಗಿಸಬಲ್ಲುದಾದರೆ ಇಂಥ ಎಂಜಿನ್ನುಗಳ ಪ್ರವರ್ತನ (ಸ್ಟಾರ್ಟಿಂಗ್) ಕಷ್ಟವಾಗುತ್ತದೆ.

**ಎಲೆಕ್ಟ್ರಾನಿಕ್ ಜ್ವಲನ:** 1. ವಿಯೋಜಕ ಬಿಂದುಗಳು ಕೆಲವು ಆಂಪೇರುಗಳಷ್ಟು ಪ್ರೇರಿತ ವಿದ್ಯುತ್ತನ್ನು ಹರಿಯಗೊಡುವ ಮತ್ತು ಕಡಿಯುವ ಕೆಲಸವನ್ನು ಶೀಘ್ರವಾಗಿ ಮಾಡುವುದರಿಂದ ಬಿಂದುಗಳು ಸುಡುತ್ತವೆ ಹಾಗೂ ಸವೆಯುತ್ತವೆ. ಇದನ್ನು ನಿಯಮಿತವಾಗಿ ಶುದ್ಧಿಗೊಳಿಸಿ ಸರಿಯಾಗಿ ಕೂಡಿಸಬೇಕಾಗುತ್ತದೆ. 2. ವಿಯೋಜಕ ಹಾಗೂ ಪ್ರೇರಕ ಮಂಡಲಗಳೆರಡರ ವಿದ್ಯುತ್ತು ಮತ್ತು ಯಾಂತ್ರಿಕ ಪರಿಮಿತಿಗಳಿಂದಾಗಿ ಇವು ಸೆಕೆಂಡಿಗೆ 400 ಕಿಡಿಗಳಿಗಿಂತಲೂ ಅಧಿಕ ದರದಲ್ಲಿ ತೃಪ್ತಿಕರವಾಗಿ ಕಿಡಿಗಳನ್ನು ಉಂಟು ಮಾಡುವುದಿಲ್ಲ. ಇವು ಮೇಲೆ ವಿವರಿಸಿದ ವ್ಯವಸ್ಥೆಗಳ ದೋಷಗಳು. ಅರೆವಾಹಕ (ಸೆಮಿಕಂಡಕ್ಟರ್) ಬಳಗದ ಘನಸ್ಥಿತಿಯ (ಸಾಲಿಡ್ ಸ್ಟೇಟ್) ಎಲೆಕ್ಟ್ರಾನಿಕ್ ಸಾಧನೆಗಳಿಂದ ಈ ತೊಂದರೆಗಳನ್ನು ನಿವಾರಿಸಬಹುದು. ಮಿಕ್ಕೆಲ್ಲ ವಿಧದಲ್ಲೂ ಸಾಂಪ್ರದಾಯಿಕವಾಗಿರುವ ಜ್ವಲನ ವ್ಯವಸ್ಥೆಯಲ್ಲಿ ವಿಯೋಜಕ ಮತ್ತು ಸುರುಳಿಗಳ ನಡುವೆ ಟ್ರಾನ್ಸಿಸ್ಟರನ್ನು ಸೇರಿಸುವುದಕ್ಕೆ ಟ್ರಾನ್ಸಿಸ್ಟರ್ ಸಹಾಯ ಪಡೆದ ಸಂಪರ್ಕಗಳು ಎಂದು ಹೆಸರು. ಈ ಕ್ರಮ ಬಿಂದುಗಳ ಸವೆತವನ್ನು ಕಡಿಮೆ ಮಾಡುತ್ತದೆ ಹಾಗೂ ಎಂಜಿನ್ನಿನ ಪ್ರವರ್ತನದಲ್ಲಿ ಸಹಾಯಕಾರಿಯಾಗುತ್ತದೆ. (ಕೆ.ಆರ್.ಎಂ.ಐ.)

**ಕಿಡಿ ವಿದ್ಯುತ್ :** ವಿದ್ಯುದ್ಧ್ರುವಗಳ ಮಧ್ಯೆ ಇರುವ ಅನಿಲದಲ್ಲಿ ಒಂದು ರೀತಿಯ ಸ್ಥಿರವಿದ್ಯುತ್ ಪ್ರವಾಹದಿಂದ ಮತ್ತೊಂದಕ್ಕೆ ಸಂಕ್ರಮಿಸುವುದನ್ನು ಸೂಚಿಸುವ ಅಸ್ಥಿರ ಮತ್ತು ವಿಚ್ಛಿನ್ನ ವಿದ್ಯುತ್ ಪ್ರವಾಹ (ಸ್ಪಾರ್ಕ್, ಎಲೆಕ್ಟ್ರಿಕ್). ಇದರ ನಿಖರ ವ್ಯಾಖ್ಯೆ ಕಷ್ಟವಾದರೂ ಸ್ಥೂಲವಾಗಿ ಎರಡು ವಿದ್ಯುದ್ವಾಹಕಗಳ ನಡುವೆ ಇರುವ ರೋಧ ಮುರಿದುಬಿದ್ದು ಅವು ಪರಸ್ಪರ ಸಂಪರ್ಕಿಸುವಂತಾದಾಗ ಸಂಭವಿಸುವ ಆಯಾನೀಕರಣ ಮತ್ತು ಕ್ಷಿಪ್ರ ವಿಸರ್ಜನೆಗೆ ಕಿಡಿ ವಿದ್ಯುತ್ ಎಂದು ಕರೆಯಬಹುದು. ಕೆಲವು ಸೆಂಟಿಮೀಟರುಗಳಷ್ಟು ವ್ಯಾಸವಿರುವ ಕೊಳವೆಯೊಳಗೆ ಪಾದರಸದ ಕೆಲವು ಮಿಲಿಮೀಟರ್ ಒತ್ತಡದ ಅನಿಲವನ್ನು ತುಂಬಿದೆ ಮತ್ತು ಕೆಲವು ಸೆಂಟಿಮೀಟರ್‌ಗಳ ಅಂತರದಲ್ಲಿ ವಿದ್ಯುದ್ಧ್ರುವಗಳನ್ನು ಇಟ್ಟಿದೆ. ಅನಿಲದಲ್ಲಿ ವಿದ್ಯುತ್‌ಪ್ರವಾಹವನ್ನು ಉಂಟುಮಾಡಿ ಅದರ ಪ್ರಮಾಣವನ್ನು ಹೆಚ್ಚಿಸುತ್ತ ಹೋದಂತೆ ಅನೇಕ ರೀತಿಯ ವಿದ್ಯುತ್‌ಪ್ರಭೆಗಳನ್ನು ಕಾಣಬಹುದು. ವಿದ್ಯುತ್ ಪ್ರವಾಹ ಮತ್ತು ವಿದ್ಯುದ್ಧ್ರುವಗಳಿಗಿರುವ ವೋಲ್ಟೇಜ್ ವ್ಯತ್ಯಾಸಗಳನ್ನು ಚಿತ್ರ 1ರಲ್ಲಿ ತೋರಿಸಿದೆ. ಬೆಳಗುತ್ತಿರುವ ಪ್ರವಾಹದಿಂದ ವಿದ್ಯುಚ್ಚಾಪಕ್ಕೆ ಸಂಕ್ರಮಿಸುವಾಗ ಸಾಮಾನ್ಯವಾಗಿ ವಿದ್ಯುತ್ ಕಿಡಿ ಕಾಣಿಸಿಕೊಳ್ಳುತ್ತದೆ.

**ಕ್ರಿಯಾವಿನ್ಯಾಸ (ಮೆಕಾನಿಸಂ):** ಅನಿಲದಲ್ಲಿನ ಎಲ್ಲ ರೀತಿಯ ವಿದ್ಯುತ್‍ಪ್ರವಾಹಗಳಿಗಿಂತ ಕಿಡಿಪ್ರವಾಹದ ಅಧ್ಯಯನ ಅತಿ ತೊಡಕಾದದ್ದು. ಇದು ಅಸ್ಥಿರ ಮತ್ತು ವಿಚ್ಛಿನ್ನವಾದ ಕ್ರಿಯೆ. ಅನಿಲದ ಒತ್ತಡ, ವಿದ್ಯುದ್ಧ್ರುವಗಳ ಆಕಾರ, ಮೇಲ್ಮೈ ಉಷ್ಣತೆ, ಅವುಗಳಿಗಿರುವ ಅಂತರ, ವೋಲ್ಟೇಜ್ ವ್ಯತ್ಯಾಸ ಕಾಲಕ್ಕೆ ಅನುಸಾರವಾಗಿ ಇಳಿಯುವುದು.



ಚಿತ್ರ 1

ಅಯಾನುಗಳನ್ನು ಉಂಟುಮಾಡುವ ಬಾಹ್ಯ ಪ್ರೇರಕಗಳು ಇತ್ಯಾದಿ ಅನೇಕ ವಿದ್ಯಮಾನಗಳ ಮೇಲೆ ಅಧ್ಯಯನ ಅವಲಂಬಿಸಿದೆ. ಒಂದು ಕಿಡಿಗೂ ಮತ್ತೊಂದು ಕಿಡಿಗೂ ಕೆಲವು ಸ್ಥಿತಿಗಳು ಬದಲಾಗಬಹುದು. ಹೀಗೆ ವಿದ್ಯುತ್ ಕಿಡಿಗಳ ಅಭ್ಯಾಸ ಬಹಳ ತೊಡಕಾದ ಕಾರಣ ಕೆಲವೇ ಸ್ಥಿತಿಗಳನ್ನು ಲಕ್ಷ್ಯದಲ್ಲಿಟ್ಟು ನಡೆಸಿದ ಅಧ್ಯಯನವನ್ನು ಇಲ್ಲಿ ವಿವರಿಸಿದೆ.




ಚಿತ್ರ 2

ಅನಿಲದ ಒತ್ತಡ $p$ ಮತ್ತು ವಿದ್ಯುದ್ಧ್ರುವಾಂತರ $d$ ಇವನ್ನು ಅನುಸರಿಸಿ ಕಿಡಿಯನ್ನು ಉಂಟುಮಾಡುವ ವೋಲ್ಟೇಜ್ ವ್ಯತ್ಯಾಸ, $pd$ಗೆ ಅನುಸಾರವಾಗಿ ಇರುತ್ತದೆ ಮತ್ತು $p$ಯಾಗಲೀ $d$ಯಾಗಲೀ ಪ್ರತ್ಯೇಕವಾಗಿ ಅಲ್ಲ ಎಂಬ ಅಂಶವನ್ನು ಎಫ್. ಪಾಷನ್ ಪ್ರಾಯೋಗಿಕವಾಗಿಯೂ ಜೆ. ಎಸ್. ಟೌನ್‍ಸೆಂಡ್ ತಾರ್ಕಿಕವಾಗಿಯೂ ತೋರಿಸಿದ್ದಾರೆ. ಹಾಗೂ $pd$ಯ ಒಂದು ವಿಶಿಷ್ಟ ಬೆಲೆಗೆ ಕಿಡಿಯನ್ನು ಉಂಟುಮಾಡುವ ವೋಲ್ಟೇಜ್ ವ್ಯತ್ಯಾಸ ಕನಿಷ್ಠವಾಗಿರುತ್ತದೆ ಎಂದು ಸಹ ತೋರಿಸಿದ್ದಾರೆ (ಚಿತ್ರ 2). ಎರಡು ವಿದ್ಯುದ್ಧ್ರುವಗಳ ಮಧ್ಯೆ ಕಿಡಿ ಉಂಟಾಗದಂತಿರಬೇಕಾದರೆ ಅವುಗಳ ಮಧ್ಯೆ ಶೂನ್ಯ ಪ್ರದೇಶವನ್ನು ಏರ್ಪಡಿಸಬೇಕು ಇಲ್ಲವೇ ಹೆಚ್ಚು ಒತ್ತಡದ ಅನಿಲವನ್ನು ತುಂಬಬೇಕು. ಕೊನೆಯ ಪದ್ಧತಿಯನ್ನು ಅಯಾನ್ ವೇಗವರ್ಧಕದ ಸ್ಥಿರವಿದ್ಯುಜ್ಜನಕದಲ್ಲಿ (ಎಲೆಕ್ಟ್ರೊಸ್ಟ್ಯಾಟಿಕ್) ಜನರೇಟರ್ ಉಪಯೋಗಿಸಿರುತ್ತಾರೆ. ಇಡೀ ಉಪಕರಣವನ್ನು ಹೆಚ್ಚು ಒತ್ತಡದ ತೊಟ್ಟಿಯಲ್ಲಿ ಇಟ್ಟಿರುತ್ತಾರೆ. ವಿದ್ಯುತ್ ಕಿಡಿ ಉಂಟಾಗುವ ಕಾಲ ವಿದ್ಯುದ್ಧ್ರುವಗಳ ಮಧ್ಯೆ ಒಂದು ಎಲೆಕ್ಟ್ರಾನ್ ಹಾದು ಹೋಗುವ ಕಾಲಕ್ಕಿಂತ ಕಡಿಮೆ ಎಂದು ಎಲ್. ಬಿ. ಲೋಯಬ್ ಸೂಚಿಸಿದ. ಆದ್ದರಿಂದ ಎಲೆಕ್ಟ್ರಾನನ್ನು ಬಿಟ್ಟಂತೆ ಅನಿಲದಲ್ಲಿ ಅಯಾನುಗಳನ್ನು ಉಂಟುಮಾಡುವ, ಬೇರೊಂದು ಕರ್ತೃ ಇರಬೇಕೆಂದಾಯಿತು. ಕಿಡಿಯ ಪಥದ ಉದ್ದಕ್ಕೂ ಬೆಳಕು ಅಯಾನುಗಳನ್ನು ಉಂಟುಮಾಡುವ ಕಾರ್ಯದಲ್ಲಿ ತೊಡಗಿರಬೇಕೆಂದು ಊಹಿಸಬಹುದು. ವಿದ್ಯುತ್ ಕಿಡಿಗೆ ಬೇಕಾಗುವ ಅತಿಹೆಚ್ಚಿನ ವಿದ್ಯುತ್ ಕ್ಷೇತ್ರದಲ್ಲಿ ಒಂದು ಎಲೆಕ್ಟ್ರಾನ್ ಅಯಾನುಗಳನ್ನು ಉಂಟುಮಾಡುತ್ತದೆ. ಈ ಅಯಾನುಗಳು ಪುನಃ ಅಯಾನುಗಳನ್ನು ಉಂಟುಮಾಡುತ್ತವೆ. ಹೀಗೆ ಅಯಾನುಗಳ ರಾಶಿ ಋಣಧ್ರುವದ ಕಡೆಯಿಂದ ಧನಧ್ರುವದ ಕಡೆಗೆ ಪ್ರಸರಿಸುತ್ತದೆ. ಅಯಾನುಗಳ ರಾಶಿಯಲ್ಲಿ ಪ್ರಚೋದಿತಸ್ಥಿತಿಯ ಪರಮಾಣು ಸ್ವಾಭಾವಿಕ ಸ್ಥಿತಿಗೆ ಇಳಿಯುವುದರ ಮೂಲಕ ಬೆಳಕು ಹೊರಬರುತ್ತದೆ. ಇದು ಅನಿಲದಲ್ಲಿ ಎಲ್ಲೆಲ್ಲೂ ಅಯಾನುಗಳನ್ನು ಉಂಟುಮಾಡುತ್ತದೆ. ಈ ದ್ಯುತಿ ವಿದ್ಯುತ್ಕಾರ್ಯ ಮೇಲ್ಮೈಮೇಲೆ ಎಲೆಕ್ಟ್ರಾನ್‍ಗಳನ್ನು ಉಂಟುಮಾಡುತ್ತದೆ. ಇವು ಪುನಃ ವಿದ್ಯುದ್ಧ್ರುವಗಳ ಮಧ್ಯೆ ಉದ್ದಕ್ಕೂ ಅಯಾನುಗಳ ರಾಶಿಯನ್ನು ಉಂಟುಮಾಡುತ್ತವೆ. ಹೀಗೆ ಸುಮಾರು



ಚಿತ್ರ 3

10–8 ಸೆ. ನಲ್ಲಿ ಇಡೀ ಕಿಡಿಪಥ ವಿದ್ಯುದ್ವಾಹಕ ಪಥವಾಗುತ್ತದೆ. ಅನಿಲ ಒತ್ತಡವಾಯುಮಂಡಲದ ಒತ್ತಡದಷ್ಟಿದ್ದರೆ ಕಿಡಿಪಥ ಸಾಧಾರಣವಾಗಿ ನೇರವಾಗಿರುತ್ತದೆ.

ಬಾಹ್ಯ ವಿದ್ಯುನ್ಮಂಡಲದಿಂದ ಬೇಕಾಗುವಷ್ಟು ವಿದ್ಯುತ್ ಪ್ರವಾಹವನ್ನು ಒದಗಿಸಿದರೆ ಕಿಡಿ ವಿದ್ಯುಚ್ಚಾಪವಾಗುತ್ತದೆ ಮತ್ತು ಒತ್ತಡ ಕಡಿಮೆಯಾದಲ್ಲಿ ವಿದ್ಯುಚ್ಚಾಪ ಅಥವಾ ಮಿಂಚು (ಗ್ಲೋ) ರೂಪವನ್ನು ತಾಳುತ್ತದೆ. ವಿದ್ಯುದ್ಧ್ರುವಗಳ ಮಧ್ಯೆ ಉದ್ದಕ್ಕೂ ಅಯಾನುಗಳಿರುವುವು. ಅವುಗಳ ಒಟ್ಟುಗೂಡುವಿಕೆಯಿಂದ ಮತ್ತು ಪರಮಾಣುಗಳು ಪ್ರಚೋದಿತಸ್ಥಿತಿಯಿಂದ ಸ್ವಾಭಾವಿಕ ಸ್ಥಿತಿಗೆ ಇಳಿಯುವುದರಿಂದ ಕಿಡಿಯಲ್ಲಿ ಬೆಳಕು ಕಂಡುಬರುತ್ತದೆ. (ಪಿ.ಇ.)

**ಕಿಡ್ಡೂಷ್ :** ಯಹೂದ್ಯರಲ್ಲಿ, ಸಬತ್ತಿನ ಹಿಂದಿನ ಸಂಜೆ ದ್ರಾಕ್ಷಾರಸ ಪಾನದೊಡನೆ ಮಾಡುವ ಆಶೀರ್ವಾದ ಅಥವಾ ಪ್ರಾರ್ಥನೆ. ಇದು ಅವರಲ್ಲಿ ಒಂದು ಮುಖ್ಯ ಸಂಸ್ಕಾರವೆನಿಸಿದೆ. (ಜೆ.ಎಚ್.)

**ಕಿಣ್ವಗಳು :** ಆಹಾರ ಪದಾರ್ಥಗಳ ಚಯಾಪಚಯ ಕ್ರಿಯೆಗಳಿಗೆ ಹಾಗೂ ದೇಹದ ಇತರ ನಾನಾ ಕಾರ್ಯಗಳಿಗೆ ಸಂಬಂಧಪಟ್ಟ ರಾಸಾಯನಿಕ ಕ್ರಿಯೆಗಳು ದೇಹದೊಳಗಿನ ಸೌಮ್ಯ ಪರಿಸರದಲ್ಲಿ ನಡೆಯುವಾಗ ಅವುಗಳಿಗೆ ವೇಗವರ್ಧಕಗಳಂತೆ ವರ್ತಿಸುವ ಕೆಲವು ವಸ್ತುಗಳೇ (ಎನ್‍ಜೈಮ್ಸ್). ಕಿಣ್ವಗಳು ಪ್ರೋಟೀನುಗಳು. ಆದ್ದರಿಂದ ಇವು ಪ್ರೋಟೀನುಗಳಿಗೆ ಸಹಜವಾದ ಎಲ್ಲ ಗುಣಗಳನ್ನು ಪ್ರದರ್ಶಿಸುತ್ತವೆ. ಅಲ್ಲದೆ ತಮಗೇ ವಿಶಿಷ್ಟವಾದ ಕೆಲವು ಗುಣಗಳನ್ನು ಸಹ ಪಡೆದಿವೆ: 1. ಯಾವುದೇ ಒಂದು ಕಿಣ್ವ ತನಗೆಂದೇ ವಿಶಿಷ್ಟವಾದ ಕ್ರಿಯಾಧರದ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ವಿಶಿಷ್ಟತೆ (ಸ್ಪೆಸಿಫಿಸಿಟಿ) ಎರಡು ಬಗೆಯದು. ಕೆಲವು ಕಿಣ್ವಗಳು ನಿರ್ದಿಷ್ಟತೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತವೆ. ಕ್ರಿಯಾಧರಸಂಯುಕ್ತದಲ್ಲಿರುವ ಬಂಧದ ಪ್ರಕೃತಿ ಸರಿಯಾಗಿರಬೇಕಲ್ಲದೆ ಬಂಧನದಲ್ಲಿ ಪಾಲ್ಗೊಳ್ಳುವ ಪುಂಜಗಳು ಮತ್ತು ಬಂಧದ ಮೂರು ಆಯಾಮಗಳ ವಿನ್ಯಾಸ ಕಿಣ್ವದ ವಿಶಿಷ್ಟತೆಯನ್ನು ತೃಪ್ತಿಗೊಳಿಸುವಂತಿರಬೇಕು. ಬಂಧದ ಸ್ವರೂಪ ಅನುಕೂಲವಾಗಿದ್ದರೆ ಕೆಲವು ಬಗೆಯ ಕಿಣ್ವಗಳು. ತೃಪ್ತಿಪಟ್ಟು ಇಕ್ಕೆಲದ ಅಣು ಅಥವಾ ಪರಮಾಣುಗಳ ಪ್ರಕೃತಿ ಮತ್ತು ಬಂಧದ ಮೂರು ಆಯಾಮಗಳ ವಿನ್ಯಾಸಗಳ ಬಗ್ಗೆ ಅಷ್ಟಾಗಿ ಗಮನವೀಯುವುದಿಲ್ಲ. 2. ಪ್ರತಿಯೊಂದು ಕಿಣ್ವಕ್ಕೂ ಒಂದು ಅನುಕೂಲತಮವಾದ ಉಷ್ಣತೆಯಿದೆ. ಇದರಲ್ಲಿ ಕಿಣ್ವದ ದಕ್ಷತೆ ಹೆಚ್ಚು. ಸಾಧಾರಣವಾಗಿ ರಾಸಾಯನಿಕ ಕ್ರಿಯೆಗಳು ಹೆಚ್ಚಿನ ಉಷ್ಣತೆಯಲ್ಲಿ ಅಧಿಕ ವೇಗದಿಂದ ನಡೆಯುತ್ತವೆ. ಕಿಣ್ವವರ್ಧಿತ ಕ್ರಿಯೆಗಳೂ ಈ ತತ್ತ್ವಕ್ಕೆ ಹೊರತಾದವುಗಳಲ್ಲ. ಆದರೆ ಹೆಚ್ಚಿನ ಉಷ್ಣತೆಯಲ್ಲಿ ಕಿಣ್ವ ಬಹುಬೇಗ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುವುದರಿಂದ ಕಿಣ್ವವರ್ಧಿತ ಕ್ರಿಯೆಗಳನ್ನು, ಕೆಲವು ಕಿಣ್ವಗಳ ವಿನಾ, ಸೌಮ್ಯವಾದ ಉಷ್ಣತೆಯಲ್ಲಿ ನಡೆಸಬೇಕು. ಕಿಣ್ವಗಳು ಸಾಮಾನ್ಯವಾಗಿ 38° ಸೆಂ.ನಲ್ಲಿ ದಕ್ಷತೆಯಿಂದ ಕೆಲಸಮಾಡುತ್ತವೆ. 3. ಕಿಣ್ವಗಳು ಅಮೈನೋ ಆಮ್ಲಗಳಿಂದ ರಚಿತವಾಗಿರುವುದರಿಂದ ಋಣ ಮತ್ತು ಧನ ವಿದ್ಯುತ್ತುಗಳೆರಡನ್ನೂ ಹೊಂದಿಸಲು ಸಾಧ್ಯ. ಆದ್ದರಿಂದ ಕಿಣ್ವ ವಿಲೀನವಾಗಿರುವ ದ್ರಾವಣದ ಆಮ್ಲತೆ ಅಥವಾ ಪ್ರತ್ಯಾಮ್ಲತೆ ಕಿಣ್ವದ ಒಟ್ಟಿನ ವಿದ್ಯುಚ್ಛಕ್ತಿಯ ಪ್ರಕೃತಿಯನ್ನು ನಿರ್ಧರಿಸುತ್ತದೆ. ಕಿಣ್ವ ದಕ್ಷತೆಯಿಂದ ಕೆಲಸಮಾಡಲು ಅದರಲ್ಲಿರುವ ಕೆಲವು ಅಮೈನೋ ಆಮ್ಲಗಳು ಅಯಾನೀಕರಣವಾಗಬೇಕಾದ್ದರಿಂದ ಕಿಣ್ವದ ಸಾಮರ್ಥ್ಯ ದ್ರಾವಣದ ಆಮ್ಲತೆಯನ್ನು ಅವಲಂಬಿಸುತ್ತದೆ. ಪ್ರತಿಯೊಂದು ಕಿಣ್ವಕ್ಕೂ ಅನುಕೂಲತಮವಾದ ಆಮ್ಲೀಯತೆ ಇದೆ.

ಎಂದರೆ ಪ್ರತಿಯೊಂದು ಕಿಣ್ವಕ್ಕೂ ಅನುಕೂಲತಮ pH ಅಂಕವಿದೆ. ಕೆಲವು ಕಿಣ್ವಗಳು ಅನುಕೂಲತಮ pH ಗಿಂತ ಸ್ವಲ್ಪಮಟ್ಟಿಗೆ ವ್ಯತ್ಯಾಸವಾಗಿರುವ ಪರಿಸರದಲ್ಲೂ ಕೆಲಸಮಾಡುತ್ತವೆ. ಇನ್ನು ಕೆಲವು ಕಿಣ್ವಗಳ ಚಟುವಟಿಕೆ ಕುಂಠಿತವಾಗುತ್ತದೆ. 4. ಕಿಣ್ವವು ಕ್ರಿಯೆಯನ್ನು ಪುರೋಗಾಮಿ ಮತ್ತು ಪ್ರತೀಗಾಮಿ ದಿಶೆಗಳಲ್ಲಿ ವರ್ಧಿಸಬಲ್ಲುದು. ಜೈವಿಕ ವ್ಯವಸ್ಥೆಯಲ್ಲಿ ಕ್ರಿಯೆ ನಡೆಯುವ ದಿಕ್ಕು ಕ್ರಿಯಾಧಾರ ಮತ್ತು ಫಲಿತಗಳ ಸಾಂದ್ರಣ, ಕೋಶಕ್ಕೆ ಫಲಿತದ ಆವಶ್ಯಕತೆ ಕ್ರಿಯೆಗೆ ಬೇಕಾದ ಶಕ್ತಿ ಮುಂತಾದ ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ.

ಕಿಣ್ವಗಳು ಜೀವಿಗಳ ಕೋಶಗಳಲ್ಲಿರುತ್ತವೆ. ಜೀವಿಗಳ ಅಂಗಾಂಶಗಳನ್ನು ಮೂಲಗಳನ್ನಾಗಿ ಬಳಸಿ ಕಿಣ್ವಗಳನ್ನು ಪಡೆಯಬಹುದು. ಪ್ರಾರಂಭದಲ್ಲಿ ಅಂಗಾಂಶಗಳನ್ನು ನೀರಿನಲ್ಲಿ ಅಥವಾ ಸಾರರಿಕ್ತ ಬಫರ್ ದ್ರಾವಣದಲ್ಲಿ ಅರೆದು ಕಿಣ್ವಗಳನ್ನು ವಿಲೀನ ಸ್ಥಿತಿಗೆ ತರಲಾಗುವುದು. ಕೆಲವು ಕೋಶಗಳ ಪರೆ ಸುಲಭವಾಗಿ ಒಡೆಯುವುದರಿಂದ ಗ್ರೈಂಡರುಗಳಲ್ಲಿ ಅರೆಯುವ ಕಾರ್ಯವನ್ನು ನಡೆಸಬಹುದು. ಪೊರೆ ಸುಲಭವಾಗಿ ಒಡೆಯದಿದ್ದರೆ ಗಾಜಿನಪುಡಿ, ಮರಳು ಅಥವಾ ಕಾರ್ಬೊರೆಂಡಮನ್ನು ಉಪಯೋಗಿಸಿ ಅರೆಯಬಹುದು. ನೀರು ಅಥವಾ ಬಫರಿನಲ್ಲಿ ವಿಲೀನವಾದ ಕಿಣ್ವವನ್ನು ವಿಲೀನವಾಗದ ಇತರ ವಸ್ತುಗಳಿಂದ ಭ್ರಮಣಯಂತ್ರಗಳಲ್ಲಿ ಬೇರ್ಪಡಿಸಬಹುದು. ಪ್ರೋಟೀನುಗಳ ಬೇರ್ಪಡೆಗೆ ಅನುಸರಿಸುವ ವಿಧಾನಗಳನ್ನು ಬಳಸಿ ಕಿಣ್ವಗಳನ್ನು ಬೇರ್ಪಡಿಸಬಹುದು. ಹೆಚ್ಚಿನ ಬಳಕೆಯಲ್ಲಿರುವ ಒಂದು ವಿಧಾನ ಹೀಗಿದೆ: ಕೋಶದಲ್ಲಿರುವ ಕಿಣ್ವದಲ್ಲಿ ಇತರ ಪ್ರೋಟೀನುಗಳು ಮಿಶ್ರವಾಗಿರುವುದರಿಂದ ಅಮೋನಿಯಂ ಸಲ್ಫೇಟ್ ಅಥವಾ ಸೋಡಿಯಂ ಸಲ್ಫೇಟನ್ನು ಹಂತಹಂತವಾಗಿ ಮಿಶ್ರದ್ರಾವಣಕ್ಕೆ ಸೇರಿಸಲಾಗುವುದು. ಎಲ್ಲ ಪ್ರೋಟಿನುಗಳು ಅಮೋನಿಯಂ ಸಲ್ಫೇಟ್ ದ್ರಾವಣದ ಒಂದೇ ಸಾರದಲ್ಲಿ ಒತ್ತರಿಸುವುದಿಲ್ಲ. ಸಾರದ ವಿವಿಧ ಮಟ್ಟಗಳಲ್ಲಿ ಪ್ರೋಟೀನುಗಳು ಒತ್ತರಿಸಬಹುದು. ಬೇಕಾದ ಕಿಣ್ವ ಯಾವ ಸಾರದಲ್ಲಿ ಒತ್ತರಿಸುತ್ತದೆ ಎಂಬುದನ್ನು ಪೂರ್ವಭಾವಿ ಪ್ರಯೋಗಗಳಿಂದ ಕಂಡುಹಿಡಿದು ಅಪೇಕ್ಷಿತ ಸಾರವನ್ನು ಹಂತ ಹಂತಗಳ ಮೂಲಕ ಮುಟ್ಟಬಹುದು. ಕಿಣ್ವ ಒತ್ತರಿಸುವ ಮುನ್ನ ದ್ರಾವಣದಿಂದ ಹೊರಬರುವ ಪ್ರೋಟೀನುಗಳನ್ನು ಭ್ರಮಣಯಂತ್ರದ ಸಹಾಯದಿಂದ ಪ್ರತ್ಯೇಕಿಸಬಹುದು. ಅಪೇಕ್ಷಿತ ಕಿಣ್ವದ ಒತ್ತರವನ್ನು ಅನಂತರ ಬೇರ್ಪಡಿಸಿ ನೀರಿನಲ್ಲಿ ಅಥವಾ ಬಫರಿನಲ್ಲಿ ವಿಲೀನಮಾಡಿ, ಡಯಾಲಿಸಿಸ್ ವಿಧಾನದಿಂದ ಅಮೋನಿಯಂ ಸಲ್ಫೇಟ್ ಮತ್ತು ಇತರ ಲವಣಗಳಿಂದ ಬೇರ್ಪಡಿಸಬಹುದು. ಈಚೆಗೆ ಸೆಫಾಡೆಕ್ಸ್–G–25 ಎಂಬ ಕೃತಕ ರಾಳವನ್ನು ಈ ಕಾರ್ಯಕ್ಕೆ ಬಳಸುತ್ತಿದ್ದಾರೆ. ಈ ಹಂತದಲ್ಲಿ ಕಿಣ್ವ ಇತರ ಪ್ರೋಟೀನುಗಳನ್ನೂ ಒಳಗೊಂಡಿರಬಹುದು. ಮುಂದಿನ ಶುದ್ಧೀಕರಣ ವಿಧಾನಗಳು ಕಿಣ್ವದ ಪ್ರಕೃತಿಯನ್ನು ಅವಲಂಬಿಸಿರುತ್ತವೆ. ಅಸಿಟೋನ್ ಅಥವಾ ಮದ್ಯಸಾರವನ್ನು ಸೂಕ್ತ ಪ್ರಮಾಣದಲ್ಲಿ ಕಿಣ್ವದ ದ್ರಾವಣಕ್ಕೆ ಸೇರಿಸಿ ಕಿಣ್ವವನ್ನು ಮಾತ್ರ ಒತ್ತರಿಸಬಹುದು. ಟ್ರೈಕ್ಯಾಲ್ಸಿಯಂ ಫಾಸ್ಫೇಟ್ ಮತ್ತು ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಮುಂತಾದ ಜೆಲ್‌ಗಳಿಂದ ಆಯ್ದ ರೀತಿಯಲ್ಲಿ ಕಿಣ್ವವನ್ನು ಅಧಿಶೋಷಿಸಿ ಅನಂತರ ಸೂಕ್ತವಾದ ಬಫರ್ ದ್ರಾವಣಗಳಿಂದ ಜೆಲ್ಲನ್ನು ಪ್ರೋದ್ಧಾವಿಸಿ (ಎಲ್ಯೂಟ್) ಕಿಣ್ವವನ್ನು ಶುದ್ಧ ರೂಪದಲ್ಲಿ ಪಡೆಯಬಹುದು. ಈಚೆಗೆ ಕಾರ್ಬಾಕ್ಸಿಮೀಥೈಲ್ ಸೆಲ್ಯುಲೋಸ್ ಮತ್ತು ಡೈಈಥೈಲ್ ಅಮೈನೋ ಈಥೈಲ್ ಸೆಲ್ಯುಲೋಸ್, ಸೆಫಾಡೆಕ್ಸ್–G–200 ಇತ್ಯಾದಿ ಕೃತಕರಾಳಗಳ ಬಳಕೆ ಹೆಚ್ಚಿದೆ. ಶುದ್ಧೀಕರಣದ ಪ್ರಗತಿಯನ್ನು ಕಿಣ್ವದ ಸಾರಜನಕಾಂಶ ಮತ್ತು ಚಟುವಟಿಕೆಗಳ ಪ್ರಮಾಣಗಳನ್ನು ಹಂತ ಹಂತಗಳಲ್ಲಿಯೂ ಹೋಲಿಸುವುದರ ಮೂಲಕ ಕಂಡುಕೊಳ್ಳಬಹುದು. ಸಾಮಾನ್ಯವಾಗಿ ಕಿಣ್ವಗಳನ್ನು ಹರಳಿನ ರೂಪದಲ್ಲಿ ಪಡೆಯುವುದು ಶುದ್ಧೀಕರಣದ ತುತ್ತ ತುದಿಯನ್ನು ಮುಟ್ಟಿದಂತೆ ಎಂದು ಭಾವಿಸಲಾಗಿದೆ. ಆದರೆ ಎಲ್ಲ ಕಿಣ್ವಗಳನ್ನು ಹರಳಿನ ರೂಪದಲ್ಲಿ ಪಡೆಯುವುದು ಸಾಧ್ಯವಿಲ್ಲ. ಕಿಣ್ವಗಳು ಪ್ರಯೋಗಶಾಲೆಯ ಉಷ್ಣತೆಯಲ್ಲಿ ತಮ್ಮ ಕ್ರಿಯಾಸಾಮರ್ಥ್ಯವನ್ನು ಕಳೆದುಕೊಳ್ಳುವುದರಿಂದ ಬೇರ್ಪಡೆ ಮತ್ತು ಶುದ್ಧೀಕರಣಗಳನ್ನು $0^{o}$ಸೆಂ. $-4^{o}$ ಸೆಂ. ಶೀತಲತೆಯಲ್ಲಿ ನಡೆಸಬೇಕು. ಆಮ್ಲೀಯತೆ ಅನುಕೂಲತಮವಾಗಿರುವಂತೆ ಎಚ್ಚರಿಕೆಯನ್ನು ವಹಿಸಬೇಕು. (ಪಿ.ಎಸ್.ಎಸ್.ಎಚ್.)

ಕಿಣ್ವವರ್ಧಿತ ಕ್ರಿಯಾಪ್ರಕೃತಿಗಳ ಆಧಾರದ ಮೇಲೆ ಕಿಣ್ವಗಳನ್ನು ಒಟ್ಟು ಆರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

**1. ಆಕ್ಸಿಡೋ–ರಿಡಕ್ಟೇಸುಗಳು (ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳ ವರ್ಧಕಗಳು):** ಈ ಗುಂಪಿಗೆ ಸೇರಿದ ಕಿಣ್ವಗಳು ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳನ್ನು ವರ್ಧಿಸುತ್ತವೆ. ಉತ್ಕರ್ಷಣ ಕ್ರಿಯೆ ನಡೆದಾಗ ಶಕ್ತಿ ಬಿಡುಗಡೆಯಾಗುತ್ತದೆ. ದೇಹದಲ್ಲಿ ಉತ್ಕರ್ಷಣ ಹೊಂದುವ ವಸ್ತು ತನ್ನಲ್ಲಿರುವ ಜಲಜನಕದ ಪರಮಾಣುಗಳನ್ನು ಅಥವಾ ಋಣ ವಿದ್ಯುತ್‌ಕಣಗಳನ್ನು (ಎಲೆಕ್ಟ್ರಾನುಗಳನ್ನು) ಕಳೆದುಕೊಳ್ಳುತ್ತದೆ. ಅಂತಿಮವಾಗಿ ಜಲಜನಕ ಆಕ್ಸಿಜನ್ನಿಗೆ ವರ್ಗಾಯಿಸಲ್ಪಟ್ಟು ಅದರೊಂದಿಗೆ ಸಂಯೋಜನೆಯಾಗಿ ನೀರಿನ ಅಣುವನ್ನು ಉತ್ಪತ್ತಿ ಮಾಡುತ್ತದೆ. ವಸ್ತುವಿನ ಚಯಾಪಚಯ ಕ್ರಿಯೆಯಲ್ಲಿ ಬಿಡುಗಡೆಯಾಗಬಹುದಾದ ಜಲಜನಕವನ್ನು ಆಕ್ಸಿಜನ್ನಿಗೆ ವರ್ಗಾಯಿಸುವ ಕ್ರಿಯೆಯನ್ನು ಈ ಗುಂಪಿನ ಕಿಣ್ವಗಳು ವರ್ಧಿಸುತ್ತವೆ. ವಿಟಮಿನ್ ಬಿ ಗುಂಪಿಗೆ ಸೇರಿದ ನಿಕೋಟಿನಿಕ್ ಆಮ್ಲ, ರೈಬೋಫ್ಲೇವಿನ್ ಸಂಯುಕ್ತಗಳೂ ಫಾರ್‌ಫೈರಿನ್ ಆವರ್ತ ವ್ಯವಸ್ಥೆ ಮತ್ತು ಕಬ್ಬಿಣದ ಪರಮಾಣುಗಳೂ ಈ ಕಿಣ್ವಗಳ ಸಹವರ್ತಿಗಳು. ಕೋಶದಲ್ಲಿ ಮೈಟೋಕಾಂಡ್ರಿಯ ಎಂಬ ಕಣ ಉಸಿರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಗುಂಪಿನ ಕಿಣ್ವಗಳಲ್ಲಿ ಕೆಲವು ಇದರ ಅಂಶಗಳು. ಆಕ್ಸಿಜನ್ನಿನ ಸಹಾಯದಿಂದ ಕೋಶಗಳಲ್ಲಿ ವಸ್ತುಗಳ ಉತ್ಕರ್ಷಣೆಗೆ ಸಹಕಾರಿಯಾದ ಈ ಕಿಣ್ವಗಳನ್ನು ಉಚ್ಛ್ವಾಸ–ನಿಶ್ವಾಸ ಶ್ರೇಣಿಗಳೆಂದೂ ಕರೆಯಲಾಗಿದೆ. ವಸ್ತುವಿನಿಂದ ಬಿಡುಗಡೆಯಾದ ಜಲಜನಕ ಒಮ್ಮೆಲೇ ಆಕ್ಸಿಜನ್ನಿಗೆ ರವಾನೆಯಾಗದೆ ಹಂತ ಹಂತದಲ್ಲಿ ಕಿಣ್ವಶ್ರೇಣಿಗಳ ಮೂಲಕ ಸಾಗಿಸಲ್ಪಡುವುದು. ಇದರಿಂದ ಶಕ್ತಿ ಒಮ್ಮೆಗೇ ಉತ್ಪತ್ತಿಯಾಗದೆ ಹಂತ ಹಂತಗಳಲ್ಲಿ ಉತ್ಪತ್ತಿಯಾಗಿ ಶೇಖರವಾಗುವುದು. ಮೇಲೆ ತಿಳಿಸಿದ ಶ್ರೇಣಿಯಲ್ಲಿ ಪ್ರತಿಯೊಂದು ಕಿಣ್ವಕ್ಕೂ ತನ್ನದೇ ಆದ ಸ್ಥಾನವಿದೆ. ಶ್ರೇಣಿಯ ಕಿಣ್ವಗಳು ಈ ಕ್ರಮದಲ್ಲಿವೆ: (i) ನಿಕೋಟಿನ್ ಅಮೈಡ್ ಅಡಿನೈನ್ ಡೈನ್ಯೂಕ್ಲಿಯೋಟೈಡ್‌ಗಳನ್ನು ಸಹವರ್ತಿಗಳನ್ನಾಗಿ ಉಳ್ಳ ಡೀಹೈಡ್ರೋಜಿನೇಸ್‌ಗಳು. (ii) ಫ್ಲೇವೋ ಪ್ರೋಟೀನುಗಳು. (iii) ಕೋಎನ್‌ಜೈಮ್ ಮತ್ತು ಸೈಟೋಕ್ರೋಮ್ ಬಿ.ಸಿ. ಮತ್ತು ಎ. ಗಳು. ಜಲಜನಕ ಪ್ರಥಮತಃ ಪಿರಿಡಿನ್ ನ್ಯೂಕ್ಲಿಯೋಟೈಡ್ ಕಿಣ್ವಗಳಿಗೆ ವರ್ಗಾಯಿತವಾಗಿ ಅನಂತರ ಫ್ಲೇವೋಪ್ರೋಟೀನಿಗೂ ತದನಂತರ ಕೋಎನ್‌ಜೈಮ್ ಮಾರ್ಗವಾಗಿ ಸೈಟೋಕ್ರೋಮ್ ಬಿ.ಸಿ.ಎ. ಮೂಲಕ ಆಕ್ಸಿಜನ್ನಿಗೆ ವರ್ಗಾಯಿತವಾಗುತ್ತದೆ. ಉದಾಹರಣೆಗೆ, ಕೋಶದಲ್ಲಿ ಈಥೈಲ್ ಆಲ್ಕೊಹಾಲ್ (ಮದ್ಯಸಾರ) ಉತ್ಕರ್ಷಣೆ ಹೊಂದಿ ಅಸಿಟಾಲ್ಡೀಹೈಡಾಗಿ ಪರಿವರ್ತನೆಯಾಗುತ್ತದೆ. ಈ ಕ್ರಿಯೆಯನ್ನು ಕೆಳಗೆ ಕಂಡಂತೆ ತೋರಿಸಬಹುದು. ಎಂದರೆ ಮದ್ಯಸಾರದಿಂದ ಬಿಡುಗಡೆಯಾಗುವ ಜಲಜನಕದ ಪರಮಾಣುಗಳನ್ನು ಆಕ್ಸಿಜನ್ನಿಗೆ ವರ್ಗಾಯಿಸುವ ಕ್ರಿಯೆಯಲ್ಲಿ ಈ ಗುಂಪಿನ ಕಿಣ್ವಗಳು ಮಧ್ಯವರ್ತಿಗಳಾಗಿವೆ.




ಚಿತ್ರ 1

ವಿಟಮಿನ್ ಸಿ. ಅಥವಾ ಅಸ್ಕಾರ್ಬಿಕ್ ಆಮ್ಲವನ್ನು ಉತ್ಕರ್ಷಿಸುವ ಮತ್ತು ಅಪಕರ್ಷಿಸುವ ಅಸ್ಕಾರ್ಬಿಕ್ ಆಮ್ಲ ಆಕ್ಸಿಡೇಸ್ ಕಿಣ್ವ, ಹೈಡ್ರೋಜನ್ ಪರಾಕ್ಸೈಡನ್ನು ವಿಭಜಿಸುವ ಕ್ಯಾಟಲೇಸ್ ಮತ್ತು ಪೆರಾಕ್ಸಿಡೇಸ್ ಕಿಣ್ವಗಳು ಈ ಗುಂಪಿಗೆ ಸೇರಿವೆ.

**2. ಟ್ರಾನ್ಸ್‌ಫರೇಸುಗಳು (ವರ್ಗಾವಣೆ ಕಿಣ್ವಗಳು):** ಕೆಲವು ಜೈವಿಕ ಕ್ರಿಯೆಗಳಲ್ಲಿ ಒಂದು ವಸ್ತುವಿನಿಂದ ಪರಮಾಣುಗಳ ವಿಶಿಷ್ಟ ಗುಂಪನ್ನು ಇನ್ನೊಂದು ವಸ್ತುವಿಗೆ ವರ್ಗಾಯಿಸುವ ಕ್ರಿಯೆಯನ್ನು ವರ್ಧಿಸುವ ಕಿಣ್ವಗಳು. ಮೀಥೈಲ್ ಪುಂಜವನ್ನು ವರ್ಗಾಯಿಸುವ ಟ್ರಾನ್ಸ್‌ಮಿಥಿಲೇಸ್, ಕೀಟೋ ಗುಂಪನ್ನು ವರ್ಗಾಯಿಸುವ ಟ್ರಾನ್ಸ್‌ಕೀಟೋಲೇಸುಗಳು, ಅಮೈನೋಗುಂಪುಗಳನ್ನು ವರ್ಗಾಯಿಸುವ ಅಮೈನೋ ಟ್ರಾನ್ಸ್‌ಫರೇಸುಗಳು ಇತ್ಯಾದಿ ಕಿಣ್ವಗಳು ಈ ಗುಂಪಿಗೆ ಸೇರಿವೆ. ಟ್ರಾನ್ಸ್‌ಕೀಟೋಲೇಸ್ ಕಿಣ್ವಗಳಿಗೆ ಅನ್ಯುರಿನ್ ಅಥವಾ ಥಯಾಮೀನ್ ಎಂಬ ವಿಟಮಿನ್ನಿನಿಂದ ಸಂಜಾತವಾದ ಥಯಾಮೀನ್ ಪೈರೋಫಾಸ್ಫೇಟ್ ಎಂಬ ಸಹವರ್ತಿಯೂ ಅಮೈನೋ ಟ್ರಾನ್ಸ್‌ಫರೇಸ್‌ಗಳಿಗೆ ಪಿರಿಡಾಕ್ಸಿನ್ ಎಂಬ ಕಿಣ್ವದಿಂದ ಸಂಜಾತವಾದ ಪಿರಿಡಾಕ್ಸಾಲ್ ಫಾಸ್ಫೇಟ್ ಎಂಬ ಸಹವರ್ತಿಯೂ ನೆರವನ್ನು ನೀಡುತ್ತವೆ. ಅಮೈನೋ ಟ್ರಾನ್ಸ್‌ಫರೇಸ್ ಕಿಣ್ವ ವರ್ಧಿಸುವ ಕ್ರಿಯೆಯಲ್ಲಿ ಒಂದು ಅಮೈನೋ ಆಮ್ಲ ಅಮೈನೋಗುಂಪಿನ ದಾತೃವಿನಂತೆಯೂ ಕೀಟೋಆಮ್ಲವೊಂದು ಪರಿಗ್ರಾಹಿಯಂತೆಯೂ ವರ್ತಿಸುತ್ತವೆ. ಜೈವಿಕ ವ್ಯವಸ್ಥೆಯಲ್ಲಿ ಸಕ್ಕರೆಯ ಜೀರ್ಣಕ್ರಿಯೆಯಲ್ಲಿ ಕೆಲವು ಕೀಟೋ ಆಮ್ಲಗಳು ಉತ್ಪತ್ತಿಯಾಗುತ್ತವೆ. ಪ್ರೋಟೀನಿನ ಜೀರ್ಣಕ್ರಿಯೆಯಲ್ಲಿ ಹಲವು ಅಮೈನೋ ಆಮ್ಲಗಳು ಉತ್ಪತ್ತಿಯಾಗುತ್ತವೆ. ಆದ್ದರಿಂದ ಈ ಕ್ರಿಯೆ ಸಕ್ಕರೆಗಳ ಚಯಾಪಚಯ ಕ್ರಿಯೆಗೂ ಅಮೈನೋ ಆಮ್ಲಗಳ ಚಯಾಪಚಯ ಕ್ರಿಯೆಗಳಿಗೂ ಸಂಬಂಧವನ್ನು ಕಲ್ಪಿಸುತ್ತದೆ.

**3. ಹೈಡ್ರೋಲೇಸಸ್:** ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಬಹುಮಟ್ಟಿನ ಕ್ರಿಯೆಗಳು ರಾಸಾಯನಿಕ ಬಂಧದ ಎರಡೂ ಕಡೆಗೆ ನೀರಿನ ಅಂಶಗಳಾದ H+ ಮತ್ತು (CH)– ಅಯಾನುಗಳನ್ನು ಸೇರಿಸುವುದರ ಮೂಲಕ ಬಂಧವನ್ನು ಛೇದಿಸುವ ಕ್ರಿಯೆಗಳು. ಆದ್ದರಿಂದ ಈ ಕ್ರಿಯೆಗಳನ್ನು ವರ್ಧಿಸುವ ಕಿಣ್ವಗಳ ಸಂಖ್ಯೆಯೂ ಅಧಿಕ. ಸಸ್ಯಗಳಿಂದ ತಯಾರಿಸಲ್ಪಟ್ಟ ಪ್ರಾಣಿಗಳ ಆಹಾರವಸ್ತುಗಳಾಗಿರುವ ಸ್ಟಾರ್ಚ್, ಪ್ರೋಟೀನ್ ಮತ್ತು ತೈಲಗಳಲ್ಲಿ ಜಲವಿಚ್ಛೇದನ ಹೊಂದುವ ಬಂಧನಗಳಿವೆ. ಕ್ರಿಯೆಗಳಿಗೆ ಒಳಗಾಗುವ ಕ್ರಿಯಾಧರದ ಪ್ರಕೃತಿಯನ್ನು ಅನುಸರಿಸಿ ಈ ಗುಂಪಿನ ಕಿಣ್ವಗಳನ್ನು ಹೀಗೆ ಪುನಃ ವಿಂಗಡಿಸಲಾಗಿದೆ: (i) ಪೆಪ್ಟಿಡೇಸುಗಳು: ಪ್ರೋಟೀನುಗಳಲ್ಲಿ ಅಮೈನೋ ಆಮ್ಲಗಳ ನಡುವೆ ಏರ್ಪಟ್ಟಿರುವ ಪೆಪ್ಟೈಡು ಬಂಧಗಳನ್ನು

ಮುರಿಯುವ ಕಿಣ್ವಗಳು. ಜಠರರಸದಲ್ಲಿರುವ ಪೆಪ್ಸಿನ್ ಈ ಗುಂಪಿಗೆ ಸೇರಿದ ಒಂದು ಕಿಣ್ವ. (ii) ಗ್ಲೈಕೋಸಿಡೇಸುಗಳು: ಬಹುಶರ್ಕರಗಳಲ್ಲಿ ಶರ್ಕರ ಮಾನಗಳ ನಡುವೆ ಏರ್ಪಡುವ ಗ್ಲೈಕೋಸಿಡಿಕ್ ಬಂಧಗಳನ್ನು ಜಲವಿಚ್ಛೇದನೆಗೆ ಒಳಪಡಿಸುವ ಕಿಣ್ವಗಳು. ಸ್ಟಾರ್ಚ್ ಬೃಹದಣುವನ್ನು ಮಾಲ್ಟೋಸ್ ಆಗಿ ಪರಿವರ್ತಿಸುವ ಅಮೈಲೇಸ್ ಕಿಣ್ವ ಈ ಗುಂಪಿಗೆ ಸೇರಿದೆ. ಇದು ಬಾಯಿಯ ಜೊಲ್ಲಿನಲ್ಲಿರುತ್ತದೆ. (iii) ಲೈಪೇಸ್: ತೈಲಾಮ್ಲಗಳಲ್ಲಿ ಮತ್ತು ಕೊಬ್ಬುಗಳಲ್ಲಿ ಸಾಮಾನ್ಯವಾಗಿ ಗ್ಲಿಸರಾಲ್ ಮತ್ತು ತೈಲಾಮ್ಲಗಳ ನಡುವೆ ಬಂಧವೇರ್ಪಟ್ಟಿರುತ್ತದೆ. ಈ ಬಂಧವನ್ನು ಜಲವಿಚ್ಛೇದನೆಗೊಳಿಸುವ ಕಿಣ್ವ ಸಮುದಾಯಕ್ಕೆ ಲೈಪೇಸುಗಳು ಎಂದು ನಾಮಕರಣ ಮಾಡಲಾಗಿದೆ. ಹರಳಿನ ಬೀಜ ಲೈಪೇಸ್ ಕಿಣ್ವದ ಉತ್ತಮ ಮೂಲ. (iv) ನ್ಯೂಕ್ಲಿಯೇಸುಗಳು: ಇವು ಡೀ ಆಕ್ಸಿರೈಬೋನ್ಯೂಕ್ಲಿಯಿಕ್ ಆಮ್ಲ (ಡಿಎನ್‌ಎ) ಮತ್ತು ರೈಬೋನ್ಯೂಕ್ಲಿಯೆಕ್ ಆಮ್ಲಗಳನ್ನು ಜೀರ್ಣಗೊಳಿಸುವ ಕಿಣ್ವಗಳು. ಹಾವಿನ ವಿಷದಲ್ಲಿ ಈ ಬಗ್ಗೆಯ ಕಿಣ್ವಗಳಿವೆ. (v) ಫಾಸ್ಫಟೇಸುಗಳು: ಇವು ಫಾಸ್ಫೇಟ್ ಪುಂಜಗಳನ್ನೊಳಗೊಂಡ ಅನೇಕ ವಸ್ತುವಿನ ಮೇಲೆ ವರ್ತಿಸಿ ಫಾಸ್ಫೇಟ್ ಪುಂಜವನ್ನು ಬಿಡುಗಡೆಮಾಡುವ ಕಿಣ್ವಗಳು ರಕ್ತದಲ್ಲಿ ಎರಡು ಬಗೆಯ ಫಾಸ್ಫಟೇಸುಗಳಿವೆ.

**4. ಲಯೇಸುಗಳು:** ಈ ಗುಂಪಿನ ಕಿಣ್ವಗಳು ಯುಗ್ಮಬಂಧವಿರುವ (ಡಬಲ್ ಬಾಂಡ್) ವಸ್ತುವಿಗೆ ಪರಮಾಣುಗಳ ಗುಂಪನ್ನು ಅಥವಾ ಅಣುವಿನ ಅಂಶಗಳನ್ನು ವರ್ಗಾಯಿಸುತ್ತವೆ. ಅಥವಾ ಈ ಸಂಯುಕ್ತಗಳಲ್ಲಿ ಇಂಗಾಲ ಮತ್ತು ಇಂಗಾಲ ಪರಮಾಣುಗಳಿಗಿರುವ ಬಂಧವನ್ನು ಮುರಿಯುತ್ತವೆ. ಪೈರೂವಿಕ್ ಆಮ್ಲದಿಂದ ಇಂಗಾಲದ ಡೈಆಕ್ಸೈಡನ್ನು ಹೊರ ಹೊರಡಿಸುವ ಕಿಣ್ವ ಈ ಗುಂಪಿಗೆ ಸೇರಿದ ಒಂದು ಕಿಣ್ವ.

**5. ಐಸೋಮರೇಸುಗಳು:** ಅಣುವಿನ ರಾಸಾಯನಿಕ ಘಟನೆಯಲ್ಲಿ ಬದಲಾವಣೆಯಿಲ್ಲದೆ ಅದರ ಒಳರಚನೆಯಲ್ಲಿ ವ್ಯತ್ಯಾಸಗಳನ್ನು ಉಂಟುಮಾಡಿ ಸಮಘಟಕಗಳನ್ನು ಉತ್ಪತ್ತಿಮಾಡುವ ಕಿಣ್ವಗಳು ಈ ಗುಂಪಿಗೆ ಸೇರಿವೆ. ಗ್ಲೂಕೋಸನ್ನು ಫ್ರಕ್ಟೋಸಿಗೆ ಪರಿವರ್ತಿಸುವ ಕಿಣ್ವ ಗ್ಲೂಕೋಸಿನ ಚಯಾಪಚಯ ಕ್ರಿಯೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.

**6. ಲಿಗೇಸುಗಳು:** ಈ ಗುಂಪಿನ ಕಿಣ್ವಗಳು ಎರಡು ಅಣುಗಳ ನಡುವೆ ರಾಸಾಯನಿಕ ಬಂಧವನ್ನು ಏರ್ಪಡಿಸುತ್ತವೆ. ಆದರೆ ಈ ಬಂಧರಚನೆಗೆ ಶಕ್ತಿ ಆವಶ್ಯಕವಾದದ್ದರಿಂದ ಕ್ರಿಯೆಗೆ ಎಟಿಪಿ ಅಣುವಿನ ನೆರವು ಅಗತ್ಯ. ಕ್ರಿಯೆ ನಡೆಯುವ ವೇಳೆಯಲ್ಲಿ ಎಟಿಪಿ ಜಲವಿಚ್ಛೇದನ ಹೊಂದಿ ಎಎಂಪಿ ಮತ್ತು ಪೈರೋಫಾಸ್ಫೇಟ್ ಅಣುಗಳು ಬಿಡುಗಡೆಯಾಗಿ ಶಕ್ತಿ ಹೊರಬರುತ್ತದೆ. ಶಕ್ತಿಯನ್ನು ಬಳಸಿ ಬಂಧದ ರಚನೆಯಾಗುತ್ತದೆ. ಇವೆರಡು ಕ್ರಿಯೆಗಳೂ ಏಕಕಾಲದಲ್ಲಿ ಕ್ರಿಯೆಯ ಅಂಗವಾಗಿ ನಡೆಯುತ್ತದೆ. ಅಸಿಟಿಕ್ ಆಮ್ಲ, ಅಸಿಟೈಲ್ ಕೊಎನ್‌ಜೈಮ್ ಎ ಆಗಿ ಪರಿವರ್ತನೆಯಾಗುವ ಕ್ರಿಯೆಯನ್ನು ವರ್ಧಿಸುವ ಕಿಣ್ವ ಈ ಗಂಪಿನದು.

ಅನೇಕ ರಾಸಾಯನಿಕ ಕ್ರಿಯೆಗಳು ತಂತಾನೆ ನಡೆಯುವಾಗ ಕ್ರಿಯಾವೇಗ ಮಂದವಾಗಿದ್ದು ಕಿಣ್ವಗಳನ್ನು ಸೇರಿಸಿದಾಗ ಶೀಘ್ರಗತಿಯಿಂದ ನಡೆಯುತ್ತವೆ. ಕಿಣ್ವ ಕ್ರಿಯಾವೇಗವನ್ನು ವರ್ಧಿಸುವ ಕ್ರಮವನ್ನು ಅರಿಯುವುದು ಮೂಲಭೂತವಾದ ಪ್ರಶ್ನೆ. ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಕಿಣ್ವವರ್ಧಿತ ಕ್ರಿಯೆಗಳಿಗೂ ಇನಾರ್ಗ್ಯಾನಿಕ್ ವೇಗವರ್ಧಕಗಳಿಂದ ಪ್ರಚೋದಿತವಾದ ಕ್ರಿಯೆಗಳಿಗೂ ಕೆಲವು ವಿಷಯಗಳಲ್ಲಿ ಹೋಲಿಕೆ ಇದ್ದರೂ ಅನೇಕ ವ್ಯತ್ಯಾಸಗಳೂ ಇವೆ. ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ಕ್ರಿಯೆಗಳು ಅಭಿಕರ್ಮಕ (ರೀಏಜೆಂಟ್) ಮತ್ತು ಫಲಿತಗಳ ಸಾಂದ್ರಣವನ್ನು ಮಾತ್ರವಲ್ಲದೆ ಕಿಣ್ವದ ಸಾಂದ್ರಣವನ್ನೂ ಅವಲಂಬಿಸುತ್ತವೆ. ಕಿಣ್ವದ ಮಟ್ಟ ಸಾಕಷ್ಟಿರುವಾಗ ಕ್ರಿಯೆ ನಡೆಯುವ ದಿಕ್ಕು ಅಭಿಕರ್ಮಕ ಮತ್ತು ಫಲಿತಗಳ ಸಾಂದ್ರಣವನ್ನು ಅವಲಂಬಿಸುತ್ತದೆ. ಅಲ್ಲದೆ ಜೈವಿಕ ವ್ಯವಸ್ಥೆಯಲ್ಲಿ ಕಿಣ್ವ ನಾನಾತರಹೆಯ ಹತೋಟಿಗಳಿಗೆ ಒಳಪಟ್ಟಿರುವುದರಿಂದ ಸಮಸ್ಯೆಯು ಇನ್ನಷ್ಟು ಕ್ಲಿಷ್ಟವಾಗುತ್ತದೆ. ಆದರೂ ಕಿಣ್ವವನ್ನು ಬೇರ್ಪಡಿಸಿ ಕೋಶದ ಹೊರಗೆ ಅದರ ಬಗ್ಗೆ ನಡೆಸಿರುವ ಅಧ್ಯಯನಗಳಿಂದ ಕ್ರಿಯಾಗತಿ ಕ್ರಿಯಾವಿಧಿಗಳಿಗೂ ಕಿಣ್ವದ ರಚನೆಗೂ ಇರುವ ಸಂಬಂಧ ಇತ್ಯಾದಿ ಸಮಸ್ಯೆಗಳ ಮೇಲೆ ಕೊಂಚಮಟ್ಟಿಗೆ ಬೆಳಕನ್ನು ಬೀರಿದಂತಾಗಿದೆ.

ಮೈಕೇಲಿಸ್ ಮತ್ತು ಮೆಂಟನ್ ಎಂಬ ವಿಜ್ಞಾನಿಗಳು ಕಿಣ್ವವರ್ಧಿತ ಕ್ರಿಯಾಗತಿ ವಿಶ್ಲೇಷಣೆಗೆ ಗಣಿತಶಾಸ್ತ್ರದ ಆಧಾರವನ್ನು ಮೊತ್ತಮೊದಲು ಕೊಟ್ಟರು. ಈ ಆಧಾರವನ್ನು ಕಲ್ಪಿಸಲು ಅವರು ಕೆಲವು ಪ್ರಮೇಯಗಳನ್ನು ಪೂರ್ವಭಾವಿಯಾಗಿ ಅಂಗೀಕರಿಸಿದರು. ಇವುಗಳಲ್ಲಿ ಮುಖ್ಯವಾದವು: (i) ಕ್ರಿಯೆಯ ಪ್ರಥಮ ಹೆಜ್ಜೆಯಲ್ಲಿ ಕ್ರಿಯಾಧರ ಮತ್ತು ಕಿಣ್ವಗಳಿಗೆ ಕ್ಷಣಿಕವಾದ ಸಂಬಂಧವೇರ್ಪಟ್ಟು ಸಂಕೀರ್ಣವೊಂದು ಉತ್ಪತ್ತಿಯಾಗುತ್ತದೆ. (ii) ಉತ್ಪತ್ತಿಯಾದ ಸಂಕೀರ್ಣ ಎರಡು ವಿಧವಾಗಿ ನಶಿಸಬಹುದು. ಮೊದಲನೆಯದಾಗಿ ಸಂಕೀರ್ಣ ಒಡೆದು ಕಿಣ್ವ ಮತ್ತು ಕ್ರಿಯಾಧರಗಳು ಬಿಡುಗಡೆಯಾಗಬಹುದು. ಈ ಮಾರ್ಗದಲ್ಲಿ ಫಲಿತ ಉತ್ಪತ್ತಿಯಾಗುವುದಿಲ್ಲ. ಎರಡನೆಯದಾಗಿ ಸಂಕೀರ್ಣದ ಫಲವಾಗಿ ಕ್ರಿಯಾಧರ ಉತ್ತೇಜಿತಗೊಂಡು ರಾಸಾಯನಿಕ ಕ್ರಿಯೆ ನಡೆದು ಫಲಿತ ಉತ್ಪತ್ತಿಯಾಗಬಹುದು. ಆಗ ಕಿಣ್ವ ಬಿಡುಗಡೆಯಾಗಿ ಮತ್ತೊಂದು ಕ್ರಿಯಾಧರ ಅಣುವಿನೊಂದಿಗೆ ಸೇರಲು ಅವಕಾಶವಾಗುತ್ತದೆ. ಈ ರೀತಿ ಕಿಣ್ವದ ಅಣುಗಳು ಅಧಿಕ ಸಂಖ್ಯೆಯಲ್ಲಿ ಅಲ್ಲದಿದ್ದರೂ ಕ್ರಿಯಾಧರದ ಅಣುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪರಿವರ್ತಿಸಬಲ್ಲವು.

ಈಚೆಗೆ, ಕಿಣ್ವ ಕ್ರಿಯಾಧರದೊಂದಿಗೆ ಸಂಕರ್ಷಣವನ್ನು ರಚನೆಮಾಡುತ್ತದೆ ಎಂಬ ಪ್ರಮೇಯಕ್ಕೆ ಸಾಕಷ್ಟು ಆಧಾರಗಳು ದೊರೆತಿವೆ. ಮೈಕೇಲಿಸ್ ಮೆಂಟನ್‌ರವರ ಸಮೀಕರಣದ ಪ್ರಕಾರ ನಿರೀಕ್ಷಿಸಬಹುದಾದ ಫಲಿತಾಂಶಗಳು ಪ್ರಯೋಗದ ಮೂಲಕ ದೊರೆತ ಫಲಿತಾಂಶಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಮೈಕೇಲಿಸ್ ಮತ್ತು ವೆಂಟನ್‌ರವರ ಸಮೀಕರಣವನ್ನು ಈ ರೀತಿ ವಿವರಿಸಬಹುದು:

$$E + S \underset{K_2}{\overset{K_1}{\rightleftharpoons}} ES \xrightarrow{K_3} P + E$$

ಕಿಣ್ವ + ಕ್ರಿಯಾಧರ ಸಂಕರ್ಷಣ ಫಲಿತ+ಕಿಣ್ವ ...(1)

$K_1$ $K_2$ ಮತ್ತು $K_3$ಗಳು ಕ್ರಿಯಾವೇಗವನ್ನು ನಿರ್ಧರಿಸುವ ಅಚಲಾಂಕಗಳು. ES ಸಂಕರ್ಷಣ ಉತ್ಪತ್ತಿಯಾಗುವ ವೇಗವನ್ನು ಈ ರೀತಿ ತಿಳಿಸಬಹುದು:

$$\frac{d(ES)}{dt} = K[[E] - [ES][S]] \qquad ...(2)$$

[[E] [ES]] = ಸಂಕರ್ಷಣ ರೂಪದಲ್ಲಿರುವ ಬಿಡು ಕಿಣ್ವ

[ES] ಸಂಕರ್ಷದ ಉತ್ಪತ್ತಿಯ ವೇಗ ಬಿಡುಕಿಣ್ವ ಮತ್ತು ಕ್ರಿಯಾಧರದ ಸಾಂದ್ರಣವನ್ನು ಅವಲಂಬಿಸಿದೆ. [ES] ಸಂಕರ್ಷಣ ನಶಿಸುವ ವೇಗ ಮೇಲೆ ಹೇಳಿದ ಎರಡು ಮಾರ್ಗಗಳನ್ನು ಅವಲಂಬಿಸಿದೆ. ಆದ್ದರಿಂದ

$$\frac{d[ES]}{dt} = K_3[ES] - K_2[ES] \qquad ...(3)$$

ಸಮತೋಲನ ಸ್ಥಿತಿಯಲ್ಲಿ ES ಸಂಕರ್ಷಣದ ಉತ್ಪತ್ತಿ ಅದು ನಾಶವಾಗುವುದಕ್ಕೆ ಸಮವಾಗಿರುವುದು;

$$K_1 \; [E]-[ES] \; ] \; [S] \equiv K_3 \; [ES]+K_2[ES] \qquad ...(4)$$

ಮರುಜೋಡಣೆ ಆದ ಅನಂತರ

$$\frac{[S][E] = [ES]]}{[ES]} = \frac{K_2 + K_3}{K_1} = K_m \qquad ...(5)$$

ಮೂರು ಅಂಕಗಳ ಲಬ್ಧವನ್ನು $K_m$ ಎಂದು ಕರೆಯಲಾಗಿದೆ. ಇದನ್ನು ಮೈಕೇಲಿಸ್ ಅಚಲಾಂಕವೆಂದೂ ಕರೆಯುವುದುಂಟು. ಸಮತೋಲನ ಸ್ಥಿತಿಯಲ್ಲಿ [ES]ನ ಸಾಂದ್ರಣ

$$ES = \frac{[ES][S]}{K_m + S} \qquad ...(6)$$

ಪ್ರಾಯೋಗಿಕವಾಗಿ [ES]ನ ಸಾಂದ್ರತೆಯನ್ನು ಅಳತೆಮಾಡುವುದು ಕಷ್ಟವಾದದ್ದರಿಂದ ಕ್ರಿಯೆಯ ಪ್ರಾರಂಭವೇಗಕ್ಕೂ ES ಸಂಕರ್ಷಣಕ್ಕೂ ಸಂಬಂಧ ಕಲ್ಪಿಸುವ ಸಮೀಕರಣವನ್ನು ಉಪಯೋಗಿಸಿ $K_m$ನ ಮೌಲ್ಯವನ್ನು ಕಂಡುಹಿಡಿಯಬಹುದು.

ಪ್ರಾರಂಭವೇಗ

$$v = K_3 \, [ES] \qquad ...(7)$$

Sನ ಸಾಂದ್ರಣ ಕಿಣ್ವದ [E] ಸಾಂದ್ರಣಕ್ಕಿಂತ ಅತ್ಯಧಿಕವಾಗಿದ್ದಾಗ ಕಿಣ್ವದ ಎಲ್ಲ ಅಣಗಳೂ ಸಂಕರ್ಷಣ ರೂಪದಲ್ಲಿರುತ್ತವೆ.

ಆದ್ದರಿಂದ E=[ES] ...(8)

ವೇಗವೂ ಗರಿಷ್ಠ ವೇಗಕ್ಕೆ ($v$) ಸಮವಾಗಿರುತ್ತದೆ.

$$V = K_3[E] \qquad ...(9)$$

ಈಗ (7)ನೆಯ ಸಮೀಕರಣದಲ್ಲಿ [ES]ಗೆ (6)ನೆಯ ಸಮೀಕರಣದಲ್ಲಿರುವ ಬೆಲೆಯನ್ನು ಕೊಟ್ಟು (9)ನೆಯ ಸಮೀಕರಣದಿಂದ ಭಾಗಿಸಿದರೆ.

$$v = \frac{VX[S]}{K_m + S} \qquad ...(10)$$

$$K_m = [S](\frac{V}{v} - 1)$$

ಇದು ಮೈಕೇಲಿಸ್–ಮೆಂಟನ್ನಿನ ಸಮೀಕರಣ.

ಪ್ರಾರಂಭವೇಗ vಯು Vಯ ಅರ್ಧದಷ್ಟಿದ್ದಾಗ $K_m$=[S] ಎಂದಾಗುತ್ತದೆ. ಎಂದರೆ $K_m$ ಮೌಲ್ಯ ಕ್ರಿಯಾಧರದ ಮೌಲ್ಯಕ್ಕೆ ಸಂಖ್ಯಾತ್ಮಕವಾಗಿ ಸಮವಾಗಿರುವುದು.

ಈ ಸಮೀಕರಣದಿಂದ ಮೈಕೇಲಿಸ್ ಅಚಲಾಂಕವೆಂದರೆ ಕಿಣ್ವಪ್ರಚೋದಿತ ಕ್ರಿಯೆಯ ಪ್ರಾರಂಭವೇಗ ಗರಿಷ್ಠವೇಗದ ಅರ್ಧದಷ್ಟು ವೇಗವನ್ನು ಮುಟ್ಟಲು ಬೇಕಾಗುವ ಕ್ರಿಯಾಧರದ ಸಾಂದ್ರಣದ (ಲೀಟರಿಗೆ ಇಂತಿಷ್ಟು ಗ್ರಾಮ್ ಅಣುತೂಕವೆಂಬಂತೆ ಅಳೆದಾಗ) ಸಂಖ್ಯಾಮೌಲ್ಯಕ್ಕೆ ಸಮವಾಗಿರುವುದು ಎಂದೂ ವಿವರಿಸಬಹುದು. ಈ ಅಂಕವನ್ನು ಕಿಣ್ವ–ಕ್ರಿಯಾಧರಗಳಿಗಿರುವ ಆಕರ್ಷಣಬಲ ಸೂಚಿ ಎಂದೂ ಭಾವಿಸಬಹುದು. $K_m$ನ ಮೌಲ್ಯ ಅಧಿಕವಾದರೆ (ಎಂದರೆ ಕ್ರಿಯೆಯ ವೇಗವನ್ನು ಹೆಚ್ಚಿಸಬೇಕಾದರೆ ಹೆಚ್ಚು ಕ್ರಿಯಾಧರಬೇಕು) ಕಿಣ್ವಕ್ಕೂ ಕ್ರಿಯಾಧರಕ್ಕೂ ಇರುವ ಆಕರ್ಷಣ ಬಲ ಅಧಿಕ. $K_m$ನ ಮೌಲ್ಯ ಕಡಿಮೆಯಾದರೆ ES ಸಂಕರ್ಷಣ ಶೀಘ್ರವಾಗಿ ವಿಭಜನೆಯಾಗುತ್ತದೆ. ಆದ್ದರಿಂದ ಕಿಣ್ವಕ್ಕೂ ಕ್ರಿಯಾಧರಕ್ಕೂ ಇರುವ ಆಕರ್ಷಣ ಬಲ ಅಲ್ಪಪ್ರಮಾಣದಲ್ಲಿರುತ್ತದೆಂದು ತಿಳಿದುಬರುತ್ತದೆ.

ಕ್ರಿಯಾಧರವನ್ನು ಕಿಣ್ವದೊಂದಿಗೆ ಅನುಕೂಲತೆಯ ಉಷ್ಣತೆ ಮತ್ತು ಆಮ್ಲೀಯತೆಯಲ್ಲಿ (pH) ಹುದುಗಿಟ್ಟರೆ ಫಲಿತ ಉತ್ಪತ್ತಿಯಾಗುತ್ತದೆ. ಕ್ರಿಯಾಮಿಶ್ರಣದಲ್ಲಿ ಫಲಿತ ಕಾಣಿಸಿಕೊಳ್ಳುವ ವೇಗವನ್ನು ನಾನಾವಿಧಾನಗಳಿಂದ ಅಳೆಯಬಹುದು. ಎಲ್ಲ ವಿಧಾನಗಳು ಕ್ರಿಯೆ ಪ್ರಾರಂಭವಾದ ಕ್ಷಣದಿಂದ ಹಿಡಿದು ಗೊತ್ತಾದ ಅವಧಿಗಳಲ್ಲಿ ಹುದುಗಿನ ಮಿಶ್ರಣದಲ್ಲಿ ಫಲಿತದ ಪ್ರಮಾಣವನ್ನು ಕಂಡುಹಿಡಿಯುವ ಮಾರ್ಗವನ್ನೇ ಅವಲಂಬಿಸಿವೆ. ರಾಸಾಯನಿಕ ವಿಧಾನಗಳ ಮೂಲಕವೋ ಭೌತ ಮಾಪನೆಗಳ ಮೂಲಕವೋ ಫಲಿತವನ್ನು ಆಗಾಗ್ಗೆ ಅಳೆದು ಕ್ರಿಯೆಯ ಮುನ್ನಡೆಯನ್ನು ನಿಷ್ಕರ್ಷಿಸಬಹುದು. ಕ್ರಿಯೆ ನಡೆದು ಕಾಲದ ವಿರುದ್ಧವಾಗಿ ಫಲಿತ ಪ್ರಮಾಣವನ್ನು ನಕ್ಷೆಯಲ್ಲಿ ಗುರುತಿಸಿದರೆ ಚಿತ್ರದಲ್ಲಿ ತೋರಿಸಿರುವ ವಕ್ರರೇಖೆ ದೊರೆಯುತ್ತದೆ. ಈ ರೇಖೆಯ ರೂಪ ಕಿಣ್ವವರ್ಧಿತ ಎಲ್ಲ ಕ್ರಿಯೆಗಳಿಗೂ ಬಹುಶಃ ಅನ್ವಯಿಸುತ್ತದೆ.

ಕಿಣ್ವಗಳ ಕ್ರಿಯಾವರ್ಧಕ ಸಾಮರ್ಥ್ಯ ಅನೇಕ ವೇಳೆ ಪ್ರೋಟೀನುಗಳಲ್ಲದ ಮತ್ತು ಅಲ್ಪಾಣುತೂಕದ ವಸ್ತುಗಳನ್ನು ಅವಲಂಬಿಸಿದೆ. ಇಂಥ ವಸ್ತುಗಳಿಗೆ ಸಹವರ್ತಿಗಳು ಎಂದು ಹೆಸರು. ಖನಿಜವಸ್ತುಗಳಾದ ಮೆಗ್ನೀಸಿಯಂ, ಮ್ಯಾಂಗನೀಸ್, ಸತು, ತಾಮ್ರ, ಕಬ್ಬಿಣ ಮತ್ತು ಕ್ಯಾಲ್ಸಿಯಂ ಇತ್ಯಾದಿ ಲೋಹಗಳ ಅಯಾನುಗಳೂ ವಿಟಮಿನ್ ಬಿ ಸಮುಚ್ಚಯಕ್ಕೆ ಸೇರಿದ ಥಯಾಮೀನ್, ರೈಬೋಫ್ಲೇವಿನ್, ನಿಕೋಟಿನಿಕ್ ಆಮ್ಲ, ಲಿಪೋಯಿಕ್ ಆಮ್ಲ, ಬಯಾಟಿನ್ ಪಿರಿಡಾಕ್ಸಾಲ್ ಫಾಸ್ಫೇಟ್, ಫೋಲಿಕ್ ಆಮ್ಲಗಳು ಮತ್ತು ವಿಟಮಿನ್ ಬಿ$_{12}$ ಜೀವಸತ್ತ್ವಗಳಿಂದ ಉತ್ಪನ್ನವಾಗುವ ವಸ್ತುಗಳೂ ಈ ಗುಂಪಿಗೆ ಸೇರಿವೆ. ಸಹವರ್ತಿಗಳು ಕಿಣ್ವಗಳೊಂದಿಗೆ ರಾಸಾಯನಿಕ ಬಂಧಗಳ ಮೂಲಕವಾಗಿ ಅಥವಾ ಭೌತ ಸಂಪರ್ಕದ ಮೂಲಕವಾಗಿ ಸೇರಿರಬಹುದು. ಕಿಣ್ವಗಳು ವರ್ಧಿಸುವ ಕ್ರಿಯೆಯಲ್ಲಿ ಸಹವರ್ತಿಗಳು ನೇರವಾಗಿ ಕ್ರಿಯಾಧರದೊಂದಿಗೆ ಸಂಕರ್ಷಣವನ್ನು ರೂಪಿಸುತ್ತವೆ. ಕಿಣ್ವದ ಪ್ರೋಟೀನ್ ಭಾಗ ಕ್ರಿಯೆ ನಡೆಯಲು ಅಗತ್ಯವಾದ ಚೌಕಟ್ಟನ್ನು ಒದಗಿಸುತ್ತದೆ.



ಚಿತ್ರ 2

ಜೈವಿಕ ವ್ಯವಸ್ಥೆಯಲ್ಲಿ ಕಿಣ್ವಗಳ ಚಟುವಟಿಕೆ ನಾನಾ ತರಹೆಯ ಹತೋಟಿಗೆ ಒಳಪಟ್ಟಿರುತ್ತದೆ. ಅನೇಕ ಸಂದರ್ಭಗಳಲ್ಲಿ ಕ್ರಿಯೆಯ ಅಂತ್ಯಫಲಿತವೇ ಕಿಣ್ವದ ಚಟುವಟಿಕೆಯನ್ನು ತಗ್ಗಿಸುತ್ತದೆ. ಕೋಶದಲ್ಲಿ ನಾನಾ ಚಟುವಟಿಕೆಯ ಕ್ರಿಯೆಯಲ್ಲಿ ಒಮ್ಮೇ ನಡೆಯುತ್ತವೆ. ಒಂದು ಕ್ರಿಯೆಯ ಫಲಿತ ಇನ್ನೊಂದು ಕ್ರಿಯೆಯಲ್ಲಿ ಆರಂಭವಸ್ತುವಾಗಬಹುದಾದ್ದರಿಂದ ಯಾವ ಒಂದು ವಸ್ತುವೂ ಶೇಖರವಾಗುವುದಿಲ್ಲ. ಕೋಶಕ್ಕೆ ಅಗತ್ಯವಿಲ್ಲದಿದ್ದಾಗ ಒಂದು ವಸ್ತು ಉತ್ಪತ್ತಿಯಾಗುತ್ತಲೇ ಇದ್ದರೆ ಹಿತ ಪ್ರಮಾಣಕ್ಕಿಂತ ಅಧಿಕ ಮಟ್ಟದಲ್ಲಿ ಶೇಖರವಾಗಿ ಕೋಶಕ್ಕೆ ಅಪಾಯಕಾರಿಯಾಗಿ ಪರಿಣಮಿಸಬಹುದು ಅಧಿಕ ಮಟ್ಟದಲ್ಲಿ ಶೇಖರವಾಗಿ ಕೋಶಕ್ಕೆ ಅಪಾಯಕಾರಿಯಾಗಿ ಪರಿಣಮಿಸಬಹುದು. ಇಲ್ಲವೇ ಬೇರೊಂದು ಕಿಣ್ವಕ್ಕೆ ಪ್ರತಿಬಂಧಕದಂತೆ ವರ್ತಿಸಿ ನಡೆಯುತ್ತಿರುವ, ನಡೆಯಲೇಬೇಕಾದ ಕ್ರಿಯೆಗೆ ತಡೆಯನ್ನು ಉಂಟುಮಾಡಬಹುದು. ಈ ಅನಾಹುತವನ್ನು ತಪ್ಪಿಸುವುದಕ್ಕಾಗಿಯೇ ಅನಾವಶ್ಯಕವಾದ ಪ್ರಮಾಣದಲ್ಲಿ ಫಲಿತ ಉತ್ಪತ್ತಿಯಾಗುವ ಸಂದರ್ಭದಲ್ಲಿ ಆ ಕ್ರಿಯೆಗೆ ಸಂಬಂಧಪಟ್ಟ ಕಿಣ್ವದ ಚಟುವಟಿಕೆ ಫಲಿತದಿಂದ ತಗ್ಗಿಸಲ್ಪಡುವುದು. ನಾನಾ ಕಿಣ್ವಗಳ ಸಹಕಾರದಿಂದ ಅಂತಿಮ ಫಲಿತ ಉತ್ಪತ್ತಿಯಾಗುವ ಸಂದರ್ಭದಲ್ಲಿ ಅಂತ್ಯಫಲಿತ ಪ್ರಥಮ ಹಂತದ ಕಿಣ್ವದ ಚಟುವಟಿಕೆಯನ್ನು ತಗ್ಗಿಸುವುದು. ಕೋಶಕ್ಕೆ ಫಲಿತದ ಅಗತ್ಯ ಬಿದ್ದಾಗ ಕಿಣ್ವ ಎಂದಿನ ಚಟುವಟಿಕೆಯ ಮಟ್ಟವನ್ನು ತಲುಪುವುದು.

ಕಿಣ್ವದ ಚಟುವಟಿಕೆಯನ್ನು ಆಂಶಿಕವಾಗಿಯೋ ಪೂರ್ಣವಾಗಿಯೋ ತಡೆಗಟ್ಟಬಲ್ಲ ರಾಸಾಯನಿಕ ವಸ್ತುಗಳಿಗೆ ಪ್ರತಿಬಂಧಕಗಳು (ಇನ್ ಹಿಬಿಟರ್ಸ್) ಎಂದು ಹೆಸರು. ಅನೇಕ ಕೃತಕ ಪ್ರತಿಬಂಧಕಗಳನ್ನು ತಯಾರಿಸಲಾಗಿದೆ. ಇವುಗಳ ನೆರವಿನಿಂದ ಕಿಣ್ವದ ಚಟುವಟಿಕೆಯ ಪ್ರಗತಿಯನ್ನು ಪ್ರಯೋಗಶಾಲೆಯಲ್ಲಿ ಅರಿಯಲು ಸಾಧ್ಯವಾಗಿದೆ. ಪ್ರತಿಬಂಧಕಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು: (i) ಸ್ಪರ್ಧಿ ಪ್ರತಿಬಂಧಕಗಳು: ಈ ವರ್ಗಕ್ಕೆ ಸೇರಿದ ಪ್ರತಿಬಂಧಕಗಳು ಕ್ರಿಯಾಧರ ಕಿಣ್ವದೊಂದಿಗೆ ಸೇರುವಂತೆಯೇ ಕಿಣ್ವದೊಂದಿಗೆ ಸೇರಿ ಸಂಕರ್ಷಣವನ್ನು ರಚಿಸುತ್ತವೆ. ಎಂದರೆ ಕ್ರಿಯಾಧರಕ್ಕೂ ಪ್ರತಿಬಂಧಕಕ್ಕೂ ಕಿಣ್ವದೊಂದಿಗೆ ಸೇರುವ ಸಲುವಾಗಿ ಸ್ಪರ್ಧೆ ಏರ್ಪಡುವುದು. ಇದರ ಫಲವಾಗಿ ಕ್ರಿಯಾವೇಗ ಕುಗ್ಗುವುದು. ಸ್ಪರ್ಧಿ ಪ್ರತಿಬಂಧಕಗಳು ಸಾಮಾನ್ಯವಾಗಿ ಕ್ರಿಯಾಧರದ ಆಕಾರವನ್ನು ಹೋಲುತ್ತವೆ. ಪ್ರತಿಯೊಂದು ಕಿಣ್ವಕ್ಕೂ ಚಟುವಟಿಕೆಯ ಕೇಂದ್ರಗಳಿದ್ದು ಕ್ರಿಯಾಧರ ಈ ಕೇಂದ್ರದೊಂದಿಗೆ ರಾಸಾಯನಿಕ ಅಥವಾ ಭೌತ ಬಂಧಗಳಿಂದ ಸೇರುವುದೆಂದು ಭಾವಿಸಲಾಗಿದೆ. ಪ್ರತಿಬಂಧಕ ಈ ಕೇಂದ್ರವನ್ನು ಆಕ್ರಮಿಸಿ ಕ್ರಿಯಾಧರ ಕಿಣ್ವದೊಂದಿಗೆ ಸೇರುವುದನ್ನು ತಪ್ಪಿಸುತ್ತದೆ. ಸೂಕ್ಷ್ಮಜೀವಿಗಳಿಗೆ ಮಾರಕವಾಗಿ ಉಪಯೋಗವಾಗುವ ಸಲ್ಫಾನಿಲ್ ಎಮೈಡ್ ಔಷಧ ಈ ಪ್ರತಿಬಂಧಕಕ್ಕೆ ಉದಾಹರಣೆ. ಈ ತರಹೆಯ ಪ್ರತಿಬಂಧಕವನ್ನು ಕ್ರಿಯಾಧರದ ಸಾಂದ್ರಣವನ್ನು ಸಾಕಷ್ಟು ಹೆಚ್ಚಿಸುವುದರಿಂದ ನಿವಾರಿಸಬಹುದು. (ii) ಅಸ್ಪರ್ಧಿ ಪ್ರತಿಬಂಧಕಗಳು: ಈ ಬಗೆಯ ಪ್ರತಿಬಂಧಕಗಳು ಕಿಣ್ವದ ಚಟುವಟಿಕೆಯನ್ನು ಕೇಂದ್ರದೊಂದಿಗೆ ಭೇದಿಸಲು ಅಸಾಧ್ಯವಾದ ಬಂಧಗಳಿಂದ ಸೇರಿ ಚಟುವಟಿಕೆಯನ್ನು ಕುಂಠಿತಗೊಳಿಸುತ್ತವೆ. ಉಸಿರಾಟದಲ್ಲಿ ನಿರತವಾದ ಸೈಟೋಕ್ರೋಮ್ ಕಿಣ್ವಗಳು ಸಯನೈಡಿನಿಂದ ಪ್ರತಿಬಂಧಿಸುವ ರೀತಿ ಈ ತರಹೆಯ ಪ್ರತಿಬಂಧನಕ್ಕೆ ಉದಾಹರಣೆ.

ಕಿಣ್ವ ಬೃಹದಣು. ಆದ್ದರಿಂದ ಅದರ ಗಾತ್ರ ಸಾಧಾರಣವಾಗಿ ಕ್ರಿಯಾಧರದ ಗಾತ್ರಕ್ಕಿಂತ ಅನೇಕ ಪಟ್ಟು ಹೆಚ್ಚಾಗಿರುತ್ತದೆ. ಇದರಿಂದಾಗಿ ಕಿಣ್ವ ಮತ್ತು ಕ್ರಿಯಾಧರಗಳ ಸಂಕರ್ಷಣದಲ್ಲಿ ಕಿಣ್ವದ ಪ್ರತಿಯೊಂದು ಅಮೈನೋ ಆಮ್ಲವೂ ಕ್ರಿಯಾಧರದೊಂದಿಗೆ ನೇರವಾಗಿ ಸಂಪರ್ಕಹೊಂದಿರುವುದು ಅಸಾಧ್ಯ. ಆದ್ದರಿಂದ ಕಿಣ್ವದ ಎಲ್ಲ ಭಾಗಗಳು ಕ್ರಿಯೆಗೆ ಆವಶ್ಯಕವಿಲ್ಲವೆಂದೂ ಕಿಣ್ವದ ಚಟುವಟಿಕೆ ಕೆಲವು ಅಮೈನೋ ಆಮ್ಲಗಳ ಗುಂಪಿನಲ್ಲಿ ಕೇಂದ್ರೀಕೃತವಾಗಿರುವುದೆಂದೂ ತಿಳಿದುಬರುತ್ತದೆ. ಈ ಗುಂಪಿಗೆ ಕಿಣ್ವದ ಚಟುವಟಿಕೆಯ ಕೇಂದ್ರವೆಂಬ ಹೆಸರನ್ನಿಡಲಾಗಿದೆ. ಚಟುವಟಿಕೆಯ ವ್ಯಾಪ್ತಿಯಲ್ಲಿ ಕ್ರಿಯಾಧರದೊಂದಿಗೆ ನೇರವಾದ ಅಥವಾ ನಿಕಟಸಂಪರ್ಕವುಳ್ಳ ಅಮೈನೋ ಆಮ್ಲಗಳು ಸೇರುತ್ತವೆ. ಈ ಕೇಂದ್ರ ಪಕ್ಕ ಪಕ್ಕದಲ್ಲಿ ಜೋಡಿಸಲ್ಪಟ್ಟ ಕೆಲವು ಅಮೈನೋ ಆಮ್ಲಗಳ ಗುಂಪೆಂದು ಭಾವಿಸಬಾರದು. ಕಿಣ್ವದ ಅಮೈನೋ ಆಮ್ಲಗಳ ಸರಪಳಿ ಲಂಬವಾಗಿರದೆ ಮಡಿಸಿಕೊಂಡಿರುತ್ತದೆ. ಈ ಮಡಿಕೆಯ ಫಲವಾಗಿ ಸರಪಳಿಯಲ್ಲಿ ದೂರವಾಗಿರುವ ಎರಡು ಅಮೈನೋ ಆಮ್ಲಗಳು ಮೂರು ಆಯಾಮಗಳಲ್ಲಿ ನಿಕಟವಾದ ಸ್ಥಾನಗಳಲ್ಲಿರಬಹುದು.

ಕೆಳಗಿನ ಚಿತ್ರಗಳಿಂದ ಈ ಅಭಿಪ್ರಾಯವನ್ನು ವಿಶದೀಕರಿಸಲಾಗಿದೆ:

ಚಿತ್ರ (1) ರಲ್ಲಿ ಅಮೈನೋ ಆಮ್ಲಗಳನ್ನು ನೀಳವಾದ ಸರಪಳಿಯಂತೆ ಜೋಡಿಸಿದಾಗ $R_2$ ಅಮೈನೋ ಆಮ್ಲ $R_{14}$ ಆಮ್ಲಕ್ಕೆ ದೂರವಾಗಿರುತ್ತವೆ. ಆದರೆ (2) ರಲ್ಲಿ $R_2$ ಮತ್ತು $R_{14}$ಗಳು ಸಮೀಪವಾಗಿರುತ್ತವೆ. $R_2$ ಮತ್ತು $R_{14}$ಗಳ ಗುಂಪು ಚಟುವಟಿಕೆಯ ಕೇಂದ್ರವಾಗಿರಬಹುದು. ಅನೇಕ ಕಿಣ್ವಗಳಲ್ಲಿ ಸರಣಿಯಲ್ಲಿ ದೂರವಾಗಿರುವ ಆದರೆ ಮಡಿಕೆಯ ಫಲವಾಗಿ ಹತ್ತಿರ ಬಂದಿರುವ ಎರಡು ಅಮೈನೋ ಆಮ್ಲಗಳ ಹೊಂದಾಣಿಕೆಯಿಂದ ಕ್ರಿಯೆ ಜರುಗುವುದೆಂದು ಕಂಡುಬಂದಿದೆ. ಕೇವಲ ಕೆಲವೇ ಆಮ್ಲಗಳು ಕಿಣ್ವಗಳ ಚಟುವಟಿಕೆಗೆ ಬೇಕೆಂದ ಮಾತ್ರಕ್ಕೆ ಮಿಕ್ಕೆಲ್ಲ ಅಮೈನೋ ಆಮ್ಲಗಳು ಅನಾವಶ್ಯಕವೆಂದು ಭಾವಿಸಬಾರದು. ಕಿಣ್ವದ ಚಟುವಟಿಕೆಯ ಕೇಂದ್ರ ತನ್ನ ಆಕಾರವನ್ನು ಉಳಿಸಿಕೊಳ್ಳಬೇಕಾದರೆ ಮಿಕ್ಕೆಲ್ಲ ಅಮೈನೋ ಆಮ್ಲಗಳ ಸಹಕಾರವೂ ಬೇಕು. ಎಲ್ಲ ಪ್ರೋಟೀನುಗಳಂತೆ ಕಿಣ್ವದ ಮೂರು ಆಯಾಮಗಳ ಆಕೃತಿ ಅಮೈನೋ ಆಮ್ಲಗಳ ಸರಣಿಯ ಪ್ರಕೃತಿ, ಜಲಜನಕ ಬಂಧಗಳು ಮತ್ತು ಮಡಿಕೆಯ ಸ್ಥಿರತೆ ಇವನ್ನು ಅವಲಂಬಿಸಿದೆ.



ಚಿತ್ರ 3

ಕಿಣ್ವದ ಚಟುವಟಿಕೆಯ ಕೇಂದ್ರದಲ್ಲಿರುವ ಅಮೈನೋ ಆಮ್ಲಗಳನ್ನು ಗುರುತಿಸಲು ನೇರವಾದ ಮತ್ತು ಪರೋಕ್ಷವಾದ ವಿಧಾನಗಳನ್ನು ಬಳಸಲಾಗಿದೆ. ನೇರವಾದ ಒಂದು ವಿಧಾನದಲ್ಲಿ ಕೇಂದ್ರದಲ್ಲಿಯ ಯಾವುದೊಂದು ಅಮೈನೋ ಆಮ್ಲಕ್ಕೆ ಗೊತ್ತಾದ ವಸ್ತುವೊಂದನ್ನು ಕೋವೇಲೆಂಟ್ ಬಂಧದ ಮೂಲಕ ಸೇರಿಸಿ ಅಂಕಿತಗೊಳಿಸಲಾಗುವುದು. ಅನಂತರ ಕಿಣ್ವವನ್ನು ಜೀರ್ಣಗೊಳಿಸಿ ಅಂಕಿತಗೊಂಡಿರುವ ಆಮೈನೋ ಆಮ್ಲವೂ ಪ್ರಕೃತಿಯನ್ನು ತಿಳಿಯಬಹುದು. ಅಂಕಿತ ಕಿಣ್ವದ ಕ್ರಿಯಾಧರವನ್ನು ಬಹುಮಟ್ಟಿಗೆ ಹೋಲುವುದಾದರೆ ಕೃತಕ ಕ್ರಿಯಾಧರ (ಅಂಕಿತ) ಮತ್ತು ಕಿಣ್ವಗಳ ಸಂಕರ್ಷಣವನ್ನು ಬೇರ್ಪಡಿಸಿ ಪರೀಕ್ಷಿಸಬಹುದು. ಈ ವಿಧಾನವನ್ನು ಅನುಸರಿಸಿ ಟ್ರಿಪ್ಸಿನ್ ಮತ್ತು ಕೈಮೋ ಟ್ರಿಪ್ಸಿನ್ (ಪ್ರೋಟೀನುಗಳನ್ನು ವಿಭಜಿಸುವ ಕಿಣ್ವಗಳು) ಗ್ಲಿಸರಾಲ್ಡಿಹೈಡನ್ನು ಉತ್ಕರ್ಷಿಸುವ ಟ್ರಯೋಸ್ ಫಾಸ್ಫೇಟ್ ಡೀಹೈಡ್ರೋಜಿನೇಸ್ ಮತ್ತು ಇನ್ನೂ ಇತರ ಕಿಣ್ವಗಳ ಮತ್ತು ಅವುಗಳ ಕ್ರಿಯಾಧರಗಳ ಸುಸ್ಥಿರ ಸಂಕರ್ಷಣವನ್ನು ಬೇರ್ಪಡಿಸಲಾಗಿದೆ. ಫಾಸ್ಫೇಟ್ ಪುಂಜವನ್ನು ಅಂಕಿತದಂತೆ ಉಪಯೋಗಿಸಿ ಹೈಡ್ರೋಲೇಸುಗಳಲ್ಲಿ ಸೀರಿನ್ ಅಮೈನೋ ಆಮ್ಲ ಕೇಂದ್ರದಲ್ಲಿರುವ ಒಂದು ಅಮೈನೋ ಆಮ್ಲವೆಂದು ಗೊತ್ತುಮಾಡಲಾಗಿದೆ. ಹಿಸ್ಟಿಡಿನ್ ಕೇಂದ್ರಕ್ಕೆ ಸೇರಿದ ಇನ್ನೊಂದು ಅಮೈನೋ ಆಮ್ಲ.

ಅನೇಕ ಕಿಣ್ವಗಳು ಕ್ರಿಯಾಧರದೊಂದಿಗೆ ಕೇವಲ ಕ್ಷಣಿಕವಾದ ಮಧ್ಯವರ್ತಿಯನ್ನು ರಚಿಸುವುದರಿಂದ ಚಟುವಟಿಕೆಯ ಕೇಂದ್ರದ ಅನ್ವೇಷಣೆ ಅಷ್ಟು ಸುಲಭವಲ್ಲ. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಎರಡು ವಿಧಾನಗಳನ್ನು ಅನುಸರಿಸಲಾಗುವುದು: (i) ಉತ್ಪತ್ತಿಯಾಗುವ ಮಧ್ಯವರ್ತಿಯನ್ನು ರಾಸಾಯನಿಕ ಕ್ರಿಯೆಗಳ ಮೂಲಕ ಸ್ಥಿರೀಕರಿಸಿ ಅನಂತರ ಸಂಕರ್ಷಣವನ್ನು ಬೇರ್ಪಡಿಸಬಹುದು. (ii) ಕ್ರಿಯಾಧರದ ಬದಲು ಅದನ್ನು ಬಹುಮಟ್ಟಿಗೆ ಹೋಲುವ, ಆದರೆ ಸ್ಥಿರವಾದ ಮಧ್ಯವರ್ತಿಯನ್ನು ಕೊಡುವ ಅರೆಕ್ರಿಯಾಧರವನ್ನು ಉಪಯೋಗಿಸಿ ಮಧ್ಯವರ್ತಿಯನ್ನು ಬೇರ್ಪಡಿಸಬಹುದು. ಆದರೆ ಅರೆಕ್ರಿಯಾಧರ ಚಟುವಟಿಕೆಯ ಕೇಂದ್ರವನ್ನು ಮಾತ್ರ ಸೇರುವುದೆಂದು ನಿಖರವಾಗಿ ಹೇಳುವಂತಿಲ್ಲ. ಉದಾಹರಣೆಗೆ ಅನೇಕ ಕಿಣ್ವಗಳು ಪ್ಯಾರಾಕ್ಲೋರೋ, ಮರ್‌ಕ್ಯುರಿ ಬೆಂಜೀನ್ ಸಲ್ಫೋನೇಟ್ ಅಥವಾ ಪ್ಯಾರಾಹೈಡ್ರಾಕ್ಸಿ ಮರ್‌ಕ್ಯುರಿ ಬೆಂಜೋಯೇಟ್‌ಗಳೊಂದಿಗೆ ಬಿಡು ಥಯಾಲ್ ಅಥವಾ ಸಲ್ಫ್‌ಹೈಡ್ರಿಲ್ (ಎಕ್ಸ್ಪ್ರೆಸ್ಡ್ –SH ಗ್ರೂಪ್) ಪುಂಜಗಳ ಮೂಲಕ ಸೇರಿ ಪಟುತ್ವಗೊಳ್ಳದ ಫಲಿತವನ್ನು ರಚಿಸುತ್ತವೆ. ಈ ಕಿಣ್ವಗಳ ಚಟುವಟಿಕೆಗೆ ಬಿಡುವಾಗಿರುವ –SH ಪುಂಜಗಳು ಅಗತ್ಯ. ಆದರೆ ಕಿಣ್ವದ ಪಟುತ್ವವಿಹೀನತೆ ಕೇಂದ್ರದ –SH ಪುಂಜಗಳಿಗಾದ ಅಡಚಣೆಯಿಂದಲೇ ಅಥವಾ ಕಿಣ್ವದ ಬೆನ್ನುಮೂಳೆಯಂತಿರುವ ಇತರ ಭಾಗಗಳ–SH ಪುಂಜಗಳು ಮೇಲೆ ಹೇಳಿದ ವಸ್ತುಗಳೊಂದಿಗೆ ಸೇರಿದಾಗ ಆಗಬಹುದಾದ ಘಟನಾತ್ಮಕ ಅವ್ಯವಸ್ಥೆಯಿಂದಲೇ ಎಂದು ಹೇಳಲಾಗುವುದಿಲ್ಲ.

ಕಿಣ್ವದ ಚಟುವಟಿಕೆ ಕೇಂದ್ರಗಳಲ್ಲಿರುವ ಅಮೈನೋ ಆಮ್ಲಗಳನ್ನು ಪರೋಕ್ಷ ವಿಧಾನಗಳಿಂದಲೂ ಗುರುತಿಸಬಹುದೆಂದು ಮೇಲೆ ತಿಳಿಸಿದೆ. ಕಿಣ್ವಗಳ ಚಟುವಟಿಕೆ ಅವುಗಳಿಗೆ ಅನುಕೂಲತಮವಾದ ಆಮ್ಲೀಯತೆಯಲ್ಲಿ ಗರಿಷ್ಠಮಿತಿಯನ್ನು ಮುಟ್ಟುವುದು. ಎಂದರೆ ಕ್ರಿಯಾವೇಗ ಅತ್ಯುನ್ನತ ಮಟ್ಟದಲ್ಲಿ ನಡೆಯುವುದು. ಹೀಗೆ ಚಟುವಟಿಕೆ ಹೆಚ್ಚಲು ಚಟುವಟಿಕೆ ಕೇಂದ್ರದಲ್ಲಿರುವ ಅಮೈನೋ ಆಮ್ಲಗಳು ಅಯಾನೀಕರಣವಾಗುವುದೇ ಕಾರಣವೆಂದು ಭಾವಿಸಲಾಗಿದೆ. ಆದ್ದರಿಂದ ವಿವಿಧ ಆಮ್ಲೀಯತೆಯ ಪರಿಸರದಲ್ಲಿ ಕಿಣ್ವದ ಪಟುತ್ವದ ಪ್ರಮಾಣವನ್ನು ಅಳೆದು ಅನುಕೂಲತೆಯ ಪರಿಸರದಲ್ಲಿ ಕಿಣ್ವದ ಪಟುತ್ವದ ಪ್ರಮಾಣವನ್ನು ಅಳೆದು ಅನುಕೂಲತಮ ಆಮ್ಲೀಯತೆಯನ್ನು ಗೊತ್ತು ಮಾಡಿ ಆ ಆಮ್ಲೀಯತೆಯಲ್ಲಿ ಹೆಚ್ಚಿಗೆ ಅಯಾನೀಕರಣವಾಗುವ ಅಮೈನೋ ಆಮ್ಲಗಳು ಕೇಂದ್ರದಲ್ಲಿ ಇರಬಹುದೆಂದು ಭಾವಿಸಬಹುದು. ಇನ್ನೊಂದು ಪರೋಕ್ಷ ವಿಧಾನದ ರೀತ್ಯಾ ಕಿಣ್ವವನ್ನು ಫಾರ್ಮಾಲ್ಡಿಹೈಡ್ ಅಥವಾ ನೈಟ್ರಸ್ ಆಮ್ಲಗಳ ಪ್ರಭಾವಕ್ಕೆ ಸಿಕ್ಕಿಸಿ ಅನಂತರ ಅದರ ಚಟುವಟಿಕೆಯಲ್ಲಾಗುವ ವ್ಯತ್ಯಾಸವನ್ನು ಪರೀಕ್ಷಿಸುವುದು. ಫಾರ್ಮಾಲ್ಡಿಹೈಡ್ ಅಥವಾ ನೈಟ್ರಸ್ ಆಮ್ಲಗಳ ಪ್ರಭಾವಕ್ಕೆ ಸಿಕ್ಕಿಸಿ ಅನಂತರ ಅದರ ಚಟುವಟಿಕೆಯಲ್ಲಾಗುವ ಗುಂಪುಗಳನ್ನು ಪರೀಕ್ಷಿಸುವುದು. ಫಾರ್ಮಾಲ್ಡಿಹೈಡು ಬಿಡಿ ಅಮೈನೋ ಗುಂಪುಗಳನ್ನು ಬಂಧಿಸುತ್ತದೆ. ಮತ್ತು ನೈಟ್ರಸ್ ಆಮ್ಲ ಈ ಗುಂಪನ್ನು ನಾಶಮಾಡುತ್ತದೆ. ಈ ಎರಡು ವಸ್ತುಗಳ ಪ್ರಭಾವದಿಂದ ಕಿಣ್ವದ ಪಟುತ್ವ ನಷ್ಟವಾದರೆ ಚಟುವಟಿಕೆ ಕೇಂದ್ರದಲ್ಲಿ ಬಿಡಿ ಅಮೈನೋ ಪುಂಜಗಳು ಇವೆಯೆಂದು ಭಾವಿಸಬಹುದು. ಪರೋಕ್ಷ ವಿಧಾನಗಳೆಲ್ಲವೂ ಕೇಂದ್ರದಲ್ಲಿರುವ ಅಮೈನೋ ಆಮ್ಲಗಳ ಪ್ರಕೃತಿಯ ಬಗ್ಗೆ ನಿಶ್ಚಿತವಾದ ಉತ್ತರವನ್ನು ಕೊಡಲಾರವು. ಇತ್ತೀಚೆಗೆ ಲೈಸೋಸೈಮ್ ಕಿಣ್ವದ ಚಟುವಟಿಕೆ ಕೇಂದ್ರವನ್ನು ಎಕ್ಸ್‌ಕಿರಣಗಳ ಸಹಾಯದಿಂದ ಗೊತ್ತು ಹಚ್ಚಿ ಅದರಲ್ಲಿರುವ ಅಮೈನೋ ಆಮ್ಲಗಳ ಪ್ರಕೃತಿಯನ್ನು ನಿರ್ಧರಿಸಲಾಗಿದೆ.

ಜೈವಿಕ ವ್ಯವಸ್ಥೆಯಲ್ಲಿ ನಡೆಯುವ ರಾಸಾಯನಿಕ ಕ್ರಿಯೆ ಅತ್ಯಂತ ಜಟಿಲವಾದದ್ದು. ಕ್ರಿಯೆ ನಡೆಯುವಾಗ ಛೇದಿಸಲ್ಪಡುವ ಇಲ್ಲವೆ ರಚಿತವಾಗುವ ಬಂಧಗಳ ಸ್ವರೂಪ, ಮಧ್ಯವರ್ತಿಗಳ ಪ್ರಕೃತಿ ಮತ್ತು ಕ್ರಿಯಾಮಾರ್ಗ ಇವೆಲ್ಲವನ್ನು ತಿಳಿಯಬೇಕಾದರೆ ಕೆಲವು ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕು. ಈ ಬಗೆಯ ವಿಶ್ಲೇಷಣಗಳು ಅಣುವಿನ ಮಟ್ಟದಲ್ಲಿ ನಡೆಯಬೇಕಾದ್ದರಿಂದ ಕ್ರಿಯಾಧರದ ಮೂರು ಆಯಾಮಗಳ ಆಕೃತಿ ಕಿಣ್ವದ ಆಕೃತಿಯೊಂದಿಗೆ ಹೊಂದಿಕೊಂಡು ಸಂಕರ್ಷಣವಾಗುವ ಬಗೆ, ಸಂಕರ್ಷಣದ ಫಲವಾಗಿ ಕ್ರಿಯಾಧರದ ಘಟನೆಯಲ್ಲಿ ಉಂಟಾಗುವ ಬದಲಾವಣೆ ಮತ್ತು ಫಲಿತದ ಉತ್ಪತ್ತಿ ಇವೆಲ್ಲದರ ಅರಿವೂ ನಮಗಾಗಬೇಕು. ಕ್ರಿಯೆ ಅತ್ಯಂತ ವೇಗದಲ್ಲಿ ನಡೆಯುವುದರಿಂದಲೂ ಕ್ರಿಯಾಧರ–ಕಿಣ್ವದ ಸಂಕರ್ಷಣಗಳು ಅತ್ಯಂತ ಅಲ್ಪಾಯುಷಿಗಳಾದ್ದರಿಂದಲೂ ಈ ಪ್ರಶ್ನೆಗಳಿಗೆ ಉತ್ತರ ದೊರಕಿಸುವುದು ಸುಲಭವಲ್ಲ. ಆದರೂ ಕ್ರಿಯೆಯ ಪ್ರಾರಂಭವೇಗ ಮತ್ತು ಸ್ಥಿರಸ್ಥಿತಿ ಸಮತೋಲನದ ಮೇಲೆ ಪ್ರತಿಬಂಧಕಗಳಿಂದಾಗುವ ಪರಿಣಾಮದ ಅಧ್ಯಯನದಿಂದಲೂ ಸಮಸ್ಥಾನಿಗಳ ಉಪಯೋಗದಿಂದಲೂ ಕೆಲವು ಕಿಣ್ವಗಳ ಸಂದರ್ಭದಲ್ಲಿ ಕ್ರಿಯಾವಿಧಿಯ ಬಗ್ಗೆ ಅಧ್ಯಯನಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಕಿಣ್ವಗಳು ಪ್ರೋಟೀನುಗಳಾದ್ದರಿಂದ ಕೋಶದಲ್ಲಿ ಪ್ರೋಟೀನುಗಳು ಸಂಶ್ಲೇಷಣೆಯಾಗುವ ರೀತಿಯಲ್ಲಿ ಉತ್ಪತ್ತಿಯಾಗುತ್ತವೆ. ಕೋಶದ ಡಿಎನ್ಎ ಕಿಣ್ವದ ಸಂಶ್ಲೇಷಣೆಗೆ ಬೇಕಾದ ಸುದ್ದಿಯನ್ನು ಒದಗಿಸುತ್ತದೆ. ಅಮೈನೋ ಆಮ್ಲಗಳನ್ನು ಹೊತ್ತ ಆರ್‌ಎನ್ಎಗಳು ಡಿಎನ್ಎ–ನಿರ್ದೇಶಿತ ದೂತ–ಆರ್‌ಎನ್ಎ ನೇತೃತ್ವದಲ್ಲಿ ರೈಬೋಸೋಮುಗಳಿಗೆ ಅಮೈನೋ ಆಮ್ಲವನ್ನು ಕೊಂಡೊಯ್ಯುತ್ತವೆ. ರೈಬೊಸೋಮಿನ ಮೇಲೆ ಅಮೈನೊ ಆಮ್ಲಗಳು ಅನುಕ್ರಮವಾಗಿ ಬದ್ಧವಾಗಿ ಕಿಣ್ವವನ್ನು ಉತ್ಪತ್ತಿಮಾಡುತ್ತವೆ. ಸಿದ್ಧವಾದ ಕಿಣ್ವ ಸರಿಯಾದ ರೀತಿಯಲ್ಲಿ ಮಡಚಿಕೊಂಡು ಪಟುತ್ವವುಳ್ಳ ಕಿಣ್ವವಾಗುತ್ತದೆ. ಕಿಣ್ವವನ್ನು ಸಂಶ್ಲೇಷಿಸಲು ಬೇಕಾದ ಪರಿಜ್ಞಾನ ಆನುವಂಶಿಕವಾಗಿ ದೊರೆಯುತ್ತದೆ. ಎಷರೇಕಿಯಾ ಕೋಲೈ ತರಹೆಯ ಸೂಕ್ಷ್ಮಜೀವಿಗಳಲ್ಲಿ ಅವು ಬೆಳೆಯುವ ಮಾಧ್ಯಮದ ಘಟಕಗಳನ್ನು ಮಾರ್ಪಡಿಸಿ ಪ್ರೇರೇಪಿಸಬಹುದು. ಗ್ಲೂಕೋಸನ್ನು ಒಳಗೊಂಡ ಮಾಧ್ಯಮದಿಂದ ಎಷರೇಕಿಯಾ ಕೋಲೈಯನ್ನು ಲ್ಯಾಕ್ಟೋಸ್ ಒಳಗೊಂಡ ಮಾಧ್ಯಮಕ್ಕೆ ಬದಲಾಯಿಸಿದರೆ, ಅದು ತನ್ನಲ್ಲಿ ಸಾಧಾರಣವಾಗಿ ಉತ್ಪತ್ತಿಯಾಗದ ಬೀಟಗ್ಯಲಾಕ್ಟೋಸೈಡೇಸ್ ಎಂಬ ಕಿಣ್ವವನ್ನು ಉತ್ಪಾದಿಸಲು ಪ್ರಾರಂಭಿಸುತ್ತದೆ. ಪುನಃ ಗ್ಲೂಕೋಸ್ ಮಾಧ್ಯಮಕ್ಕೆ ಬದಲಾಯಿಸಿದಾಗ ಕಿಣ್ವದ ಉತ್ಪತ್ತಿ ನಿಂತುಹೋಗುತ್ತದೆ.

ಈಚಿನ ಸಂಶೋಧನೆಗಳು ಆನುವಂಶಿಕ ಗುಣಗಳಿಗೂ ಕಿಣ್ವಗಳಿಗೂ ಇರುವ ಸಂಬಂಧವನ್ನು ತೋರಿಸಿಕೊಟ್ಟಿವೆ. ಪೀಳಿಗೆ ತನ್ನ ಪಿತೃಗಳಿಂದ ಅನೇಕ ವಿಶಿಷ್ಟಗುಣಗಳನ್ನು ಆನುವಂಶಿಕವಾಗಿ ಪಡೆಯುತ್ತದೆ. ಹೂವಿನ ಬಣ್ಣ, ಪರಿಮಳ, ಹಣ್ಣುಗಳ ರುಚಿ, ಮಾನವನಲ್ಲಿ ಕಂಡುಬರುವ ಕೂದಲಿನ ಬಣ್ಣ, ಮೈ ಬಣ್ಣ, ಮುಖದ ರೂಪರೇಖೆಗಳು, ನಡೆಯುವ ರೀತಿ, ಮಾತಿನ ಧ್ವನಿ ಇತ್ಯಾದಿಗಳಲ್ಲಿ ಅನುರೂಪತೆ ಕಾಣುತ್ತೇವೆ. ಹೊರನೋಟಕ್ಕೆ ಕಾಣಬರುವ ಈ ಭೌತಗುಣಗಳು ರಾಸಾಯನಿಕ ಕ್ರಿಯೆಗಳ ಅಂತ್ಯ ಫಲಿತಾಂಶಗಳು. ಈ ರಾಸಾಯನಿಕ ವಸ್ತುಗಳನ್ನು ತಯಾರಿಸಲು ಕೋಶ ಕಿಣ್ವದ ಸಹಾಯವನ್ನು ಪಡೆಯುತ್ತದೆ. ಕಿಣ್ವದಲ್ಲಿ ಇರಬಹುದಾದ ವ್ಯತ್ಯಾಸಗಳಿಂದ ಬಣ್ಣ, ಪರಿಮಳ, ರುಚಿ ಇತ್ಯಾದಿಗಳಲ್ಲಿಯೂ ವೈವಿಧ್ಯಗಳೇರ್ಪಡುತ್ತವೆ.

ಆನುವಂಶೀಯತೆ ಮತ್ತು ಕಿಣ್ವಗಳಿಗೆ ಇರುವ ನಿಕಟಸಂಬಂಧವನ್ನು ಬೀಡ್ಲ್ ಮತ್ತು ಟೇಟಮ್ ಎಂಬ ವಿಜ್ಞಾನಿಗಳು ನ್ಯೂರೋಸ್ಪಾರಾಕ್ರಾಸಾ ಎಂಬ ಬೂಷ್ಟಿನಲ್ಲಿ ನಡೆಸಿದ ಸಂಶೋಧನೆಗಳಿಂದ ಸ್ಪಷ್ಟಪಡಿಸಿದರು. ಸಹಜವಾಗಿ ಬೂಷ್ಟಿನ ಬೆಳವಣಿಗೆಗೆ ಆರ್ಜಿನಿನ್ ಎಂಬ ಅಮೈನೋ ಆಮ್ಲ ಬೇಕು. ಬೂಷ್ಟು ಈ ಆಮ್ಲವನ್ನು ಗ್ಲುಟಾಮಿಕ್ ಆಮ್ಲದಿಂದ ತಯಾರಿಸಿಕೊಳ್ಳಬಲ್ಲದು. ಒಂದು ತರಹೆಯ ವ್ಯತ್ಯಯ (ಮ್ಯುಟೇಷನ್) ಉಂಟಾದಾಗ ಈ ಸಾಮರ್ಥ್ಯಕ್ಕೆ ಕುಂದು ಬರುವುದು. ಈ ಬೂಷ್ಟಿನ ಬೆಳವಣಿಗೆಗೆ ಆರ್ಜಿನಿನ್ ಆಮ್ಲವನ್ನೇ ಒದಗಿಸಬೇಕು. ಈ ವ್ಯತ್ಯಯವನ್ನು Z ಎಂದು ಭಾವಿಸುವುದಾದರೆ ಸಿಟ್ರುಲಿನ್ ಅಥವಾ ಆರ್ಜಿನಿನ್ ಒದಗಿಸಿದರೂ ಬೆಳೆಯುವ ಸಾಮರ್ಥ್ಯವನ್ನು ಪಡೆದಿರುವ ವ್ಯತ್ಯಯ Y ಎಂದು ಭಾವಿಸಬಹುದು. X ತರಹೆಯ ವ್ಯತ್ಯಯ ಹೊಂದಿದ ಬೂಷ್ಟು ಆರ್ನಿಥಿನ್ ಅಥವಾ ಸಿಟ್ರುಲಿನ್ ಅಥವಾ ಆರ್ಜಿನಿನ್ ಒದಗಿಸಿದರೂ ಬೆಳೆಯುತ್ತದೆ. ಎಂದರೆ ಬೂಷ್ಟು ಗ್ಲುಟಾಮಿಕ್ ಆಮ್ಲವನ್ನು ಆರ್ಜಿನಿನ್ನಿಗೆ ಕೆಳಕಂಡ ಹಂತಗಳಲ್ಲಿ ಮಾರ್ಪಡಿಸುತ್ತದೆಂದು ಭಾವಿಸಬಹುದು.

| X | Y | Z |
|---|---|---|
| ↓ | ↓ | ↓ |
| ಕಿಣ್ವ 1 | ಕಿಣ್ವ 2 | ಕಿಣ್ವ 3 |

–ಗ್ಲುಟಾಮಿಕ್ ⟶ ಆರ್ನಿಥಿನ್ ⟶ ಸಿಟ್ರುಲಿನ್ ಆರ್ಜಿನಿನ್

ಪ್ರತಿಯೊಂದು ಹಂತದಲ್ಲಿಯೂ ಒಂದು ವಿಶಿಷ್ಟ ಕಿಣ್ವ ಭಾಗವಹಿಸುತ್ತದೆ. Z ವ್ಯತ್ಯಯ ಹೊಂದಿದ ಜೀವಿಗಳಲ್ಲಿ 3ನೆಯ ಕಿಣ್ವ ಉತ್ಪತ್ತಿಯಾಗುವುದಿಲ್ಲ ಅಥವಾ ಉತ್ಪತ್ತಿಯಾದರೂ ಅದರ ಸಾಮರ್ಥ್ಯ ಬಹುಮಟ್ಟಿಗೆ ವಿಶಿಷ್ಟವಾಗಿರುತ್ತದೆ. ಹಾಗೆಯೇ Y ವ್ಯತ್ಯಯ ಹೊಂದಿದ ಜೀವಿಯಲ್ಲಿ 2ನೆಯ ಕಿಣ್ವ ಉತ್ಪತ್ತಿಯಾಗುವುದಿಲ್ಲ ಮತ್ತು X ವ್ಯತ್ಯಯ ಹೊಂದಿದ ಬೂಷ್ಟಿನಲ್ಲಿ 1ನೆಯ ಕಿಣ್ವ ಸಂಶ್ಲೇಷಣೆಯಾಗುವುದಿಲ್ಲ. X, Y ಮತ್ತು Z ರೀತಿಯ ವ್ಯತ್ಯಯವನ್ನು ಹೊಂದಿದ ನ್ಯೂರೋಸ್ಪಾರಾಜೀವಿಗಳ ಕೋಶವನ್ನು ಪರೀಕ್ಷಿಸಿದಾಗ ಈ ಜೀವಿಗಳಲ್ಲಿ ಸಂಬಂಧಪಟ್ಟ ಕಿಣ್ವಗಳು (i) ಅತ್ಯಲ್ಪ ಪ್ರಮಾಣದಲ್ಲಿ ಸಂಶ್ಲೇಷಣೆಯಾಗುತ್ತವೆ.

(ii) ತಯಾರಿಸಲ್ಪಟ್ಟರೂ ಭಾಗಶಃ ಇಲ್ಲವೆ ಸಂಪೂರ್ಣವಾಗಿ ವೇಗವರ್ಧಕ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತವೆ. ಅಥವಾ (iii) ಕಿಣ್ವಗಳನ್ನು ರಚನೆ ಮತ್ತು ಇತರ ಗುಣಗಳಲ್ಲಿ ಹೋಲುವ, ಆದರೆ ಕ್ರಿಯಾವರ್ಧಕ ಶಕ್ತಿಯಿಲ್ಲದ ವೈಪರೀತ್ಯ ಪ್ರೋಟೀನಿನ ಉತ್ಪತ್ತಿ ಆಗುವುದೆಂದು ತಿಳಿದು ಬಂದಿತು. Z ತರಹೆಯ ವ್ಯತ್ಯಯವನ್ನು ಹೊಂದಿದ ಜೀವಿಯ ಕೋಶವನ್ನು ನೇರವಾಗಿ ಅಥವಾ ಗುಟಾಮಿಕ್ ಆಮ್ಲವನ್ನು ಒದಗಿಸಿದ ಅನಂತರ ಪರೀಕ್ಷಿಸಿದರೆ ಸಿಟ್ರುಲಿನ್, ಆರ್ನಿಥಿನ್ ಮತ್ತು ಗ್ಲುಟಾಮಿಕ್ ಆಮ್ಲಗಳು ಅನುಕ್ರಮವಾದ ಪ್ರಮಾಣದಲ್ಲಿ ಶೇಖರವಾಗುತ್ತವೆಂದು ತೋರಿಸಬಹುದು, ಆರ್ಜಿನಿನ್ ಆಮ್ಲವನ್ನು ತನ್ನ ಕೋಶಗಳಲ್ಲಿ ಸಂಘಟಿಸಲಾರದ ಜೀವಿಯ ಕೋಶಗಳಲ್ಲಿ 1ನೆಯ ಮತ್ತು 2ನೆಯ ಕಿಣ್ವ ತಯಾರಾಗುತ್ತದೆಯಾದರೂ 3ನೆಯ ಕಿಣ್ವ ತಯಾರಾಗುವುದಿಲ್ಲ. ಎಂದರೆ ಗ್ಲುಟಾಮಿಕ್ ಆಮ್ಲ ಆರ್ನಿಥಿನ್‌ಗೂ ಆರ್ನಿಥಿನ್ ಸಿಟ್ರುಲಿನ್ನಿಗೂ ಪರಿವರ್ತನೆಯಾಗುತ್ತದೆ. ಆದರೆ 3ನೆಯ ಕಿಣ್ವದ ಅಭಾವವಿರುವುದರಿಂದ ಸಿಟ್ರುಲಿನ್ ಆರ್ಜಿನಿನ್ನಿಗೆ ಪರಿವರ್ತನೆಯಾಗುವುದಿಲ್ಲ.

ಆನುವಂಶೀಯತೆಗೆ ಜೀವಿಗಳ ಕೋಶಗಳಲ್ಲಿರುವ ವರ್ಣತಂತುಗಳೇ ಕಾರಣವೆಂದು ಅನೇಕ ವರ್ಷಗಳಿಂದ ತಿಳಿದುಬಂದಿದೆ. ವ್ಯತ್ಯಯ ಹೊಂದಿದ ಜೀವಿಗಳಲ್ಲಿನ ವರ್ಣತಂತುವಿನ ನಕ್ಷೆಗೂ (ಜೆನೆಟಿಕ್ ಮ್ಯಾಪ್) ಸಹಜ ಜೀವಿಗಳಲ್ಲಿನ ವರ್ಣತಂತುವಿನ ನಕ್ಷೆಗೂ ವ್ಯತ್ಯಾಸವಿರುತ್ತದೆ. ವರ್ಣತಂತುವಿನಲ್ಲಿ ಅನೇಕಾನೇಕ ಜೀನುಗಳಿವೆ. ಕಿಣ್ವಗಳ ಉತ್ಪತ್ತಿಯನ್ನು ಈ ಜೀನುಗಳು ನಿರ್ದೇಶಿಸುತ್ತವೆ. ಇದರಿಂದ ಒಂದು ಜೀನ್ ಒಂದು ಪ್ರೋಟೀನ್ ಎಂಬ ತತ್ತ್ವ ಪ್ರತಿಪಾದಿಸಲ್ಪಟ್ಟು ಬಹುಮಟ್ಟಿಗೆ ಪ್ರಾಯೋಗಿಕ ಆಧಾರವನ್ನೂ ಪಡೆಯಿತು. ಇತ್ತೀಚಿನವರೆಗೆ ಜೀನ್ ವರ್ಣತಂತುವಿನ ಪೃಥಕ್ಕಾದ (ಡಿಸ್‌ಕ್ರೀಟ್) ಒಂದು ಅಂಶವೆಂದೂ ಆನುವಂಶಿಕ ವ್ಯತ್ಯಯಕ್ಕೆ ಒಳಗಾದ ಜೀವಿಗಳಲ್ಲಿ ಈ ವ್ಯತ್ಯಯ ಜೀನಿನ ಮಟ್ಟದಲ್ಲಿ ಉಂಟಾಗಿ ಕಿಣ್ವದ ಅಭಾವ ಅಥವಾ ಕುಂಠಿತಪಟುತ್ವ ಇತ್ಯಾದಿ ಗುಣಗಳಲ್ಲಿ ಪ್ರತಿಬಿಂಬಿತವಾಗುವುದೆಂದೂ ನಂಬಲಾಗಿತ್ತು. ಬ್ಯಾಕ್ಟೀರಿಯೋಫೇಜ್ ಎಂಬ ಅತಿಸೂಕ್ಷ್ಮಜೀವಿಗಳಲ್ಲಿ ನಡೆದ ಸಂಶೋಧನೆಗಳಿಂದ ವ್ಯತ್ಯಯಕ್ಕೆ ಒಳಗಾದ ಜೀವಿಗಳಲ್ಲಿ ಜೀನಿನ ಒಳಭಾಗದಲ್ಲಿ ಯಾವುದೊಂದು ಸ್ಥಳದಲ್ಲಿ ಮಾತ್ರ ವ್ಯತ್ಯಾಸವಾಗುವುದೆಂದು ತಿಳಿದುಬಂದಿತು. ಒಂದು ಜೀನ್–ಒಂದು ಪ್ರೋಟೀನ್ ಎಂಬ ತತ್ತ್ವ ಕೊಂಚ ಮಾರ್ಪಾಡಾಗಿ ಒಂದು ಜೀನ್–ಒಂದು ಪಾಲಿಪೆಪ್ಟೈಡ್ ಎಂಬ ತತ್ತ್ವ ಪ್ರಚಲಿತವಾಗಿದೆ. ಎಂದರೆ ವರ್ಣತಂತುವಿನ ಒಂದು ಪೃಥಕ್ ಅಂಶವಾದ ಒಂದು ಜೀನ್ ಕೋಶದಲ್ಲಿ ಒಂದು ಪಾಲಿಪೆಪ್ಟೈಡ್ ಉತ್ಪತ್ತಿಗೆ ಕಾರಣವೆಂದರ್ಥ. ಕಿಣ್ವ ಪಾಲಿಪೆಪ್ಟೈಡ್ ಆದ್ದರಿಂದ ಜೀನ್ ಕಿಣ್ವದ ಸಂಶ್ಲೇಷಣೆಗೆ ಕಾರಣ.

ವರ್ಣತಂತುಗಳು ರಾಸಾಯನಿಕವಾಗಿ ನ್ಯೂಕ್ಲಿಯೆಕ್ ಆಮ್ಲಗಳು. ಇವುಗಳಲ್ಲಿ ಡೀ ಆಕ್ಸಿರೈಬೋ ನ್ಯೂಕ್ಲಿಯೆಕ್ ಆಮ್ಲಗಳ (ಡಿಎನ್‌ಎ) ಸರಪಣಿಗಳಿವೆ. ಈ ಆಮ್ಲಗಳು ಅಡಿನೈನ್, ಥಯಮೀನ್, ಗ್ವಾನಿನ್ ಮತ್ತು ಸೈಟೋಸಿನ್ ಎಂಬ ಪ್ರತ್ಯಾಮ್ಲಗಳಿಂದಲೂ ಡೀ ಆಕ್ಸಿರೈಬೋಸ್ ಎಂಬ ಸಕ್ಕರೆಯಿಂದಲೂ ಮತ್ತು ಫಾಸ್ಫಾರಿಕ್ ಆಮ್ಲಗಳಿಂದಲೂ ರೂಪಿತವಾಗಿವೆ. ರೈಬೋಸ್ ಮತ್ತು ಫಾಸ್ಫೇಟುಗಳು ಸರಪಣಿಯ ಬೆನ್ನೆಲುಬುಗಳು. ಡಿಎನ್‌ಎಗಳ ವೈವಿಧ್ಯಕ್ಕೆ ನಾಲ್ಕು ಪ್ರತ್ಯಾಮ್ಲಗಳ ಜೋಡಣೆಯ ಕ್ರಮವೇ ಕಾರಣ. ಜೀನುಗಳಲ್ಲಿನ ಪ್ರತ್ಯಾಮ್ಲಗಳ ಅನುಕ್ರಮತೆಗೂ ಜೀನುಗಳಿಂದ ನಿರ್ದೇಶಿತವಾದ ಕಿಣ್ವಗಳ ಅಮೈನೋ ಆಮ್ಲಗಳ ಅನುಕ್ರಮತೆಗೂ ಇರುವ ಸಂಬಂಧವನ್ನು ಬಹುಮಟ್ಟಿಗೆ ಅರಿಯಲು ಸಾಧ್ಯವಾಗಿದೆ. ಡಿಎನ್‌ಎ ಬೃಹದಣುವಿನಲ್ಲಿ ಪಕ್ಕಪಕ್ಕದಲ್ಲಿ ಜೋಡಿಸಲ್ಪಟ್ಟಿರುವ ಮೂರು ಪ್ರತ್ಯಾಮ್ಲಗಳ ಗುಂಪು ಒಂದು ಅಮೈನೋ ಆಮ್ಲದ ಸಂಕೇತದಂತೆ ವರ್ತಿಸುತ್ತದೆ. ಪ್ರೋಟೀನುಗಳಲ್ಲಿರುವ ಸುಮಾರು ಇಪ್ಪತ್ತು ಅಮೈನೋ ಆಮ್ಲಗಳ ಸಂಕೇತ ಗುಂಪುಗಳನ್ನು ನಿರ್ಧರಿಸಲಾಗಿದೆ. ಕೋಶಗಳಲ್ಲಿ ಕಿಣ್ವಗಳು ಸಂಶ್ಲೇಷಣೆಯಾಗುವ ವೇಳೆಯಲ್ಲಿ ಡಿಎನ್‌ಎ ತನ್ನಲ್ಲಿರುವ ಪ್ರತ್ಯಾಮ್ಲಗಳ ತ್ರಿವಳಿ ಜೋಡಣೆಯ ಪ್ರಕಾರ ಪ್ರೋಟೀನುಗಳಲ್ಲಿ ಅಮೈನೋ ಆಮ್ಲಗಳು ಯಾವ ಯಾವ ಸ್ಥಾನದಲ್ಲಿ ಸೇರಬೇಕೆಂಬುದನ್ನು, ಅರ್ಥಾತ್ ಆಮ್ಲಗಳ ಜೋಡಣೆಯನ್ನು ನಿರ್ದೇಶಿಸುತ್ತದೆ. ಎಂದರೆ ಪ್ರೋಟೀನಿನ ಭೌತ ಮತ್ತು ರಾಸಾಯನಿಕ ಗುಣಗಳನ್ನು ಡಿಎನ್‌ಎ ತನ್ನ ಹತೋಟಿಯಲ್ಲಿಟ್ಟುಕೊಂಡಿರುತ್ತದೆ. ವರ್ಣತಂತುವಿನ ಪ್ರತಿ ಒಂದು ಜೀನು ಒಂದು ಪಾಲಿಪೆಪ್ಟೈಡಿಗೆ ಬೇಕಾದ ಸಮಾಚಾರವನ್ನು ಅಡಕಮಾಡಿಕೊಂಡಿರುತ್ತದೆ. ಡಿಎನ್‌ಎ ಪ್ರತ್ಯಾಮ್ಲಗಳ ಜೋಡಣೆಯಲ್ಲಿ ಅಕಸ್ಮಾತ್ ವ್ಯತ್ಯಾಸವುಂಟಾದರೆ ಪ್ರೋಟೀನಿನ ಅಮೈನೋ ಆಮ್ಲಗಳ ಜೋಡಣೆಯಲ್ಲಿ ವ್ಯತ್ಯಾಸಗಳುಂಟಾಗಿ ಅದರ ಗುಣಗಳೇ ಬದಲಾವಣೆಯಾಗುತ್ತವೆ. ವ್ಯತ್ಯಯವಾದಾಗ ಡಿಎನ್‌ಎ ಸರಣಿಯ ಅನುಕ್ರಮದಲ್ಲಿ ವ್ಯತ್ಯಾಸವಾಗುತ್ತದೆ. ತತ್ಫಲವಾಗಿ ಉತ್ಪತ್ತಿಯಾಗುವ ಪ್ರೋಟೀನ್ ಕಿಣ್ವವಾಗಿದ್ದ ಪಕ್ಷದಲ್ಲಿ ಅದರ ವೇಗವರ್ಧಕ ಶಕ್ತಿ ಭಾಗಶಃ ಇಲ್ಲವೆ ಸಂಪೂರ್ಣವಾಗಿಯೋ ನಷ್ಟ ಹೊಂದಬಹುದು.

ಮಾನವನ ಆನುವಂಶೀಯತೆಯ ಬಗ್ಗೆ ನಡೆದಿರುವ ಅಧ್ಯಯನಗಳಿಗೆ ಆನುವಂಶಿಕ ರೋಗಗಳ ಬಗ್ಗೆ ನಡೆದಿರುವ ಸಂಶೋಧನೆಗಳಿಂದ ಬಹುಮಟ್ಟಿಗೆ ಪ್ರಯೋಜನವಾಗಿದೆ. ಈ ರೋಗಗಳು ಅಮೈನೋ ಆಮ್ಲಗಳ ಚಯಾಪಚಯ ಮಾರ್ಗದಲ್ಲಿ ಉಂಟಾಗುವ ವ್ಯತ್ಯಾಸಗಳಿಂದ ಉದ್ಭವವಾಗುತ್ತವೆ. ಈಗ ಅರ್ಧ ಶತಮಾನದ ಹಿಂದೆಯೇ ಗ್ಯರಾಡ್ ಎಂಬ ವಿಜ್ಞಾನಿ ಸಿಸ್ಟಿನೂರಿಯ, ಅಲ್‌ಕ್ಯಾಪ್ಟೋನೂರಿಯ, ವರ್ಣಹೀನತೆ (ಆಲ್ಬಿನಿಸಂ) ಮುಂತಾದ ಕಾಯಿಲೆಗಳು ಸಹಜವಾಗಿ ನಡೆಯಬೇಕಾದ ಅಮೈನೋ ಆಮ್ಲಗಳ ಚಯಾಪಚಯದ ಹಾದಿಯಲ್ಲಿ ಕಾಣಿಸಿಕೊಳ್ಳುವ ಸ್ವಭಾವಜನ್ಯ ದೋಷದಿಂದ ಉಂಟಾಗುವ ಸ್ವಭಾವಜನ್ಯ ರೋಗಗಳೆಂದು ಗುರುತಿಸಿದ. ಈ ದೋಷಗಳು ಯಾವುದೊಂದು ನಿರ್ದಿಷ್ಟ ಕಿಣ್ವಗಳ ಅಭಾವದಿಂದ ಉಂಟಾಗಿರಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ. ಅಲ್‌ಕ್ಯಾಪ್ಟೋನೂರಿಯ ಕಾಯಿಲೆಯಿಂದ ನರಳುತ್ತಿದ್ದ ರೋಗಿಯಲ್ಲಿ ಹೋಮೋಜಂಟಿಸಿಕ್ ಆಕ್ಸಿಡೇಸ್ ಎಂಬ ಕಿಣ್ವ ಉತ್ಪತ್ತಿಯಾಗುವುದಿಲ್ಲವೆಂದು 1958ರಲ್ಲಿ ತಿಳಿದುಬಂದಿತು. ಈ ರೋಗದಲ್ಲಿ ರೋಗಿ ಮೂತ್ರವಿಸರ್ಜನೆ ಮಾಡಿದ ಅನಂತರ ಅದು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಈ ಮೂತ್ರದಲ್ಲಿ ಹೋಮೋ ಜಂಟಿಸಿಕ್ ಆಮ್ಲವಿದ್ದು ಗಾಳಿಯ ಸಂಪರ್ಕದಲ್ಲಿ ಅದು ಕಪ್ಪುಬಣ್ಣಕ್ಕೆ ತಿರುಗುತ್ತದೆ. ಸಹಜವಾಗಿ ಹೋಮೋಜಂಟಿಸ್ ಆಮ್ಲ ದೇಹದಲ್ಲಿ ಉತ್ಕರ್ಷಣೆ ಹೊಂದುತ್ತದೆ. ಈ ಕ್ರಿಯೆಯನ್ನು ವರ್ಧಿಸುವ ಹೋಮೋಜಂಟಿಸ್ ಆಕ್ಸಿಡೇಸ್ ಕಿಣ್ವ ರೋಗಿಯಲ್ಲಿ ಇರುವುದಿಲ್ಲವಾಗಿ ಈ ಆಮ್ಲ ರಕ್ತದಲ್ಲಿ ಶೇಖರವಾಗಿ ಮೂತ್ರದಲ್ಲಿ ವಿಸರ್ಜಿತವಾಗುತ್ತದೆ. ಹೋಮೋಜಂಟಿಸಿಕ್ ಆಮ್ಲ ಟೈರೋಸೀನ್ ಆಮ್ಲದ ಅಪಚಯದ ಹಾದಿಯಲ್ಲಿ ಒಂದು ಮಧ್ಯವರ್ತಿ.

ಮಾನವನಲ್ಲಿ ಕಿಣ್ವಗಳ ಅಭಾವದಿಂದ ಉಂಟಾಗುವ ಕಾಯಿಲೆಗಳ ಅಧ್ಯಯನ ಕಿಣ್ವದ ಅಭಾವದ ಸ್ವರೂಪವನ್ನು ನಿಶ್ಚಯಿಸುವುದರಷ್ಟಕ್ಕೆ ಮಾತ್ರ ಸೀಮಿತವಾಗದೆ ತತ್ಸಂಬಂಧವಾಗಿ ಉಂಟಾಗುವ ಇತರ ಪ್ರತಿಕ್ರಿಯೆಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ ರೋಗಕ್ಕೆ ನೇರವಾಗಿ ಸಂಬಂಧವಿಲ್ಲದಂತೆ ತೋರುವ ಅನೇಕ ಪ್ರತಿಕ್ರಿಯೆಗಳೂ ತೋರಿಬರುತ್ತವೆ. ಫೀನೈಲ್ ಕಿಟೋನೂರಿಯ ಎಂಬ ಆನುವಂಶಿಕ ರೋಗದಿಂದ ನರಳುವ ರೋಗಿಯ ಬುದ್ಧಿ ಬಹಳ ಮಂದ. ಈ ಕಾಯಿಲೆಯಲ್ಲಿ ರೋಗಿಯ ಮೂತ್ರದಲ್ಲಿ ಫೀನೈಲ್ ಪೈರೂವಿಕ್ ಆಮ್ಲ, ಫೀನೈಲ್ ಅಸಿಟಿಕ್ ಆಮ್ಲ ಮತ್ತು ಫೀನೈಲ್ ಅಲಾನಿನ್ ಆಮ್ಲಗಳು ಸಾಧಾರಣಮಟ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಸರ್ಜಿತವಾಗುತ್ತವೆ. ಇಂಥ ರೋಗಪೀಡಿತರು ಎಕ್ಸಿಮಾ ಮತ್ತು ನಡುಕ ರೋಗಗಳಿಂದ ಬಾಧೆಪಡುತ್ತಾರೆ. ಫೀನೈಲ್ ಅಲಾನಿನ್ ಆಮ್ಲ ಟೈರೋಸೀನಿಗೆ ಬದಲಾವಣೆಯಾಗದಿರುವುದೇ ಇದಕ್ಕೆ ಕಾರಣ. ಕ್ರಿಯೆಯನ್ನು ನಡೆಸುವ ಫೀನೈಲ್ ಅಲಾನಿನ್ ಹೈಡ್ರಾಕ್ಸಿಲೇಸ್ ಎಂಬ ಕಿಣ್ವದ ಸಾಮರ್ಥ್ಯ ಬಹುಮಟ್ಟಿಗೆ ಕುಂಠಿತವಾಗಿರುತ್ತದೆ.

ಫೀನೈಲ್ ಅಲಾನಿನ್ ಆಮ್ಲ ಅಥವಾ ಫೀನೈಲ್ ಪೈರೂವಿಕ್ ಆಮ್ಲದ ಶೇಖರಣೆಯಿಂದ ಬುದ್ಧಿಮಾಂದ್ಯವಾಗಲೀ ಎಕ್ಸಿಮಾ ಮತ್ತಿತರ ಪ್ರತಿಕ್ರಿಯೆಗಳಾಗಲೀ ಏಕೆ ಉಂಟಾಗುತ್ತವೆಂಬುದು ಇನ್ನೂ ಗೊತ್ತಾಗಿಲ್ಲ. ದೇಹದಲ್ಲಿ ನಾನಾ ಮುಖಗಳಲ್ಲಿ ನಡೆಯುವ ಕ್ರಿಯೆಗಳು ಪರಸ್ಪರ ಸಂಬಂಧವನ್ನು ಹೊಂದಿರುವುದರಿಂದ ಒಂದು ಕ್ರಿಯೆಯಲ್ಲಿ ಉಂಟಾಗುವ ದೋಷ ಆ ಕ್ರಿಯೆಗೆ ಮಾತ್ರ ಸೀಮಿತವಾಗದೆ ನಾನಾ ತರಹೆಯ ಉಪಕ್ರಿಯೆಗಳಿಗೆ ಅವಕಾಶಮಾಡಿಕೊಡಬಹುದು. ಒಂದೇ ತರಹೆಯ ಕೋಶಗಳಿಂದ ಪ್ರಾರಂಭವಾಗುವ ಭ್ರೂಣ ಬೆಳೆಯುವಾಗ ಅನೇಕ ತರಹೆಯ ಕೋಶಗಳಾಗಿ ಮಾರ್ಪಡುತ್ತದೆ. ಈ ಸಮಯದಲ್ಲಿ ಯಾವ ಒಂದು ಕ್ರಿಯೆಯಲ್ಲಿ ತಲೆದೋರಬಹುದಾದ ದೋಷ ಅದಕ್ಕೆ ಸಂಬಂಧಪಟ್ಟ ನಮಗೆ ಪೂರ್ಣವಾಗಿ ಅರ್ಥವಾಗದಿರುವ ಅನೇಕ ಕ್ರಿಯೆಗಳಿಗೆ ಎಡೆಮಾಡಿಕೊಡಬಹುದು. ಮಾನವನ ದೇಹದಲ್ಲಿ ನಡೆಯುವ ಕಿಣ್ವವರ್ಧಿತ ಚಯಾಪಚಯಗಳೆಲ್ಲಕ್ಕೂ ಇರುವ ಪರಸ್ಪರ ಸಂಬಂಧಗಳು ನಮಗೆ ಅರ್ಥವಾಗುವವರೆಗೆ ಆನುವಂಶಿಕ ಕಾಯಿಲೆಗಳ ಪೂರ್ಣ ಮಾಹಿತಿ ದೊರೆಯಲಾರದು. (ಎಚ್.ಎಸ್.ಎಸ್.)

**ಕಿತ್ತಳೆ :** ರೂಟೇಸೀ ಕುಟುಂಬಕ್ಕೆ ಸೇರಿದ ಸಿಟ್ರಸ್ ಎಂಬ ವೈಜ್ಞಾನಿಕ ಹೆಸರಿನ ಜಾತಿಯ ರೆಟಿಕ್ಯುಲೇಟ ಪ್ರಭೇದಕ್ಕಿರುವ ಸಾಮಾನ್ಯ ಬಳಕೆಯ ಹೆಸರು (ಆರಿಂಜ್). ಇಂಗ್ಲಿಷಿನಲ್ಲಿ ಇದನ್ನು ಮ್ಯಾಂಡರಿನ್ ಆರಿಂಜ್ ಅಥವಾ ಮ್ಯಾಂಡರಿನ್ ಎಂದೂ ಇದರ ಕೆಲವು ಬಗೆಗಳನ್ನು ಟ್ಯಾಂಜರಿನ್ ಎಂದೂ ಕರೆಯುವುದುಂಟು. ಇಂಗ್ಲಿಷಿನ ಆರಿಂಜ್ ಪದ ಸಿಟ್ರಸ್ ಜಾತಿಯ ಸೈನೆನ್ಸಿಸ್ (ಚೀನ ಅಥವಾ ಮೊಜ಼ಾಂಬಿಕ್ ಆರಿಂಜ್) ಮತ್ತು ಆರ್ಯಾಂಶಿಯಮ್ (ಸೌರ್ ಆರಿಂಜ್) ಪ್ರಭೇದಗಳಿಗೂ ಅನ್ವಯವಾಗುತ್ತದೆ. ಕನ್ನಡದಲ್ಲಿ ಸೈನೆನ್ಸಿಸ್ ಪ್ರಭೇದಕ್ಕೆ ಮೋಸಂಬಿ (**ನೋಡಿ– ಮೂಸಂಬಿ**) ಎಂಬ ಹೆಸರಿದೆ. ಇದರ ಹಣ್ಣನ್ನು ಬಹು ರುಚಿಯಾದ ಹಾಗೂ ಪುಷ್ಟಿಕರವಾದ ಹಣ್ಣುಗಳಲ್ಲಿ ಒಂದೆಂದು ಪರಿಗಣಿಸಲಾಗಿದ್ದು ಇದು ಮಾನವನಿಗೆ ಬಹಳ ಹಿಂದಿನಿಂದಲೂ ಪರಿಚಿತವಾಗಿದೆ.

ಏಷ್ಯಖಂಡದ ಉಷ್ಣವಲಯ ಅದರಲ್ಲೂ ಮಲಯ ದ್ವೀಪಸ್ತೋಮಗಳು ಕಿತ್ತಳೆಯ ತವರು ಎಂದು ನಂಬಲಾಗಿದೆ. ಇಲ್ಲಿಂದ ಅದು ತನ್ನ ಬೆಳವಣಿಗೆಗೆ ಅನುಕೂಲ ವಾಯುಗುಣವಿರುವ ಪ್ರದೇಶಗಳಿಗೆ ಹಬ್ಬಿದೆ ಎಂದು ಹೇಳಲಾಗಿದೆ. ಇಂದು ಕಿತ್ತಳೆ ಪ್ರಪಂಚದ ಉಷ್ಣ ಹಾಗೂ ಉಪೋಷ್ಣ ವಲಯಗಳಲ್ಲೆಲ್ಲ ಬೇಸಾಯದಲ್ಲಿದೆ. ಕಿತ್ತಳೆಯನ್ನು ಬೆಳೆಯುವ ದೇಶಗಳಲ್ಲಿ ಪ್ರಮುಖವಾದವು ಭಾರತ, ಉತ್ತರ ಅಮೆರಿಕ, ಇಂಗ್ಲೆಂಡ್,

ಯುರೋಪಿನ ಮೆಡಿಟರೇನಿಯನ್ ಪ್ರದೇಶ, ಆಸ್ಟ್ರೇಲಿಯ ಮತ್ತು ದಕ್ಷಿಣ ಆಫ್ರಿಕ. ಭಾರತದಲ್ಲಿ ಪಂಜಾಬ್, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಲ ಮತ್ತು ಅಸ್ಸಾಂಗಳಲ್ಲಿ ಕಿತ್ತಳೆಬೇಸಾಯ ಇದೆ. ಕರ್ನಾಟಕದ ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಕಿತ್ತಳೆಯನ್ನು ಬೆಳೆಸಲಾಗುತ್ತಿದೆ.

ಕಿತ್ತಳೆ ಪುರಾತನ ಕಾಲದಿಂದಲೂ ರೂಟೇಸೀ ಕುಟುಂಬದ ನಿಂಬೆ ಮುಂತಾದ ಪ್ರಭೇದಗಳೊಡನೆ ಬೇಸಾಯದಲ್ಲಿತ್ತೆಂದು ನಂಬಿಕೆಯಿದೆ. ಆದರೆ ಇದು ತನ್ನ ಮೂಲವಾಸಸ್ಥಾನದಿಂದ ಬೇರೆ ಪ್ರದೇಶಗಳಿಗೆ ಹೇಗೆ ಹರಡಿತೆಂಬ ಬಗ್ಗೆ ಖಚಿತ ವಿವರಣೆ ಇಲ್ಲ. ಕಿತ್ತಳೆ ತನ್ನ ತವರಿನಿಂದ ಭಾರತಕ್ಕೂ ಅನಂತರ ಆಫ್ರಿಕದ ಪೂರ್ವತೀರ ಪ್ರದೇಶಗಳಿಗೂ ಅಲ್ಲಿಂದ ಮೆಡಿಟರೇನಿಯನ್ ಪ್ರದೇಶಗಳಿಗೂ ಹರಡಿತೆಂದು ಹೇಳಲಾಗಿದೆ. ಸ್ಯಾಮ್ಯುಯಲ್ ಟಾಲ್ಕಾವ್‌ಸ್ಕಿ ಎಂಬಾತ ಸಿಟ್ರಸ್ ಜಾತಿಯ ಸಸ್ಯಗಳ ಇತಿಹಾಸವನ್ನು ಕುರಿತು ಬರೆದಿರುವ ತನ್ನ ಪುಸ್ತಕದಲ್ಲಿ ಪ್ರಸ್ತಕಶಕದ ಮೊದಲನೆಯ ಶತಮಾನದ ಮಧ್ಯದ ವೇಳೆಗೆ ಇಟಲಿಯಲ್ಲಿ ಕಿತ್ತಳೆಯ ಬೇಸಾಯವಿತ್ತೆಂದು ಉಲ್ಲೇಖಿಸಿದ್ದಾನೆ. 15ನೆಯ ಶತಮಾನದ ಕೊನೆಯ ವೇಳೆಗೆ ಕಿತ್ತಳೆ ಪಶ್ಚಿಮ ಗೋಳಾರ್ಧಕ್ಕೆ ಹರಡಿತು. ಕೊಲಂಬಸ್ ತನ್ನ ಎರಡನೆಯ ವಿಶ್ವಪರ್ಯಟನದಲ್ಲಿ ಕ್ಯಾನರಿ ದ್ವೀಪದಿಂದ ಕಿತ್ತಳೆ ಬೀಜಗಳನ್ನು ಕೊಂಡೊಯ್ದನೆಂದು ಹೇಳಲಾಗಿದೆ. ಅನಂತರ ಕಿತ್ತಳೆ ದಕ್ಷಿಣ ಅಮೆರಿಕ ಹಾಗೂ ಉತ್ತರ ಅಮೆರಿಕಗಳೆರಡಕ್ಕೂ ಪಸರಿಸಿತು.

ಕಿತ್ತಳೆಸಸ್ಯ ಸು. 6 ಕಿಮೀ ಎತ್ತರಕ್ಕೆ ಬೆಳೆಯುವ ಸಣ್ಣಮರ. ಎಲೆಗಳು ಸರಳ; ಪರ್ಯಾಯವಾಗಿ ಜೋಡಣೆಯಾಗಿವೆ. ವೃಂತಪರ್ಣಗಳಿಲ್ಲ. ಎಲೆಗಳ ತೊಟ್ಟಿನ ಮೇಲೆ ಅಗಲವಾದ ರೆಕ್ಕೆಯಿದೆ. ಎಲೆಗಳ ಆಕಾರ ಅಂಡದಂತೆ; ತುದಿ ಮೊನಚು. ಎಲೆಗಳು ಕಂಕುಳಲ್ಲಿ ಮುಳ್ಳುಗಳಿವೆ. ಹೂಗೊಂಚಲು ಅಂತ್ಯಾರಂಭಿ ಮಾದರಿಯ ಕಾರಿಂಬ್ ಎಂಬ ಬಗೆಯದು. ಹೂಗಳು ದ್ವಿಲಿಂಗಿಗಳು; ಆರೀಯಸಮಾಂಗತೆಯುಳ್ಳವು. ಒಂದೊಂದು ಹೂವಿನಲ್ಲೂ 3–5 ಹಾಲೆಗಳುಳ್ಳ ಪುಷ್ಪಪಾತ್ರೆಯೂ 4–8 ದಪ್ಪವಾದ ದಳಗಳೂ ಹೇರಳ ಸಂಖ್ಯೆಯಲ್ಲಿ ಕೇಸರಗಳೂ ಹಲವು ಕಾರ್ಪೆಲ್‌ಗಳಿಂದ ಕೂಡಿದ ಸಂಯುಕ್ತ ಮಾದರಿಯ ಉಚ್ಚಸ್ಥಾನದ ಅಂಡಾಶಯವೂ ಇವೆ. ಅಂಡಾಶಯಕ್ಕೂ ಕೇಸರದಂಡಗಳಿಗೂ ನಡುವೆ ವರ್ತುಲಾಕಾರದ ತಟ್ಟೆಯಿದೆ. ಅಂಡಕೋಶದಲ್ಲಿ ಹಲವಾರು ಕೋಣೆಗಳಿದ್ದು ಒಂದೊಂದರಲ್ಲೂ ದ್ವಿಲಂಬ ಸಾಲುಗಳಲ್ಲಿ ಜೋಡಣೆಯಾಗಿರುವ ಅಂಡಕಗಳಿವೆ; ಅಂಡಕಗಳ ಸಂಖ್ಯೆ ಪ್ರತಿಕೋಣೆಗೆ 4–8. ಫಲ ಗುಂಡಗಿನ ಆಕಾರದ ಬೆರಿಮಾದರಿಯದು. ಇದರಲ್ಲಿ ಚರ್ಮಿಲವಾದ ಹೊರಸಿಪ್ಪೆಯೂ (ಎಪಿಕಾರ್ಪ್) ತೆಳುವಾದ ಮತ್ತು ಬಿಳಿಯ ಬಣ್ಣದ ನಡುಸಿಪ್ಪೆಯೂ (ಮೀಸೋಕಾರ್ಪ್) ತೆಳುವಾದ ಒಳಸಿಪ್ಪೆಯೂ (ಎಂಡೋಕಾರ್ಪ್) ಇವೆ. ಹೊರಸಿಪ್ಪೆಯಲ್ಲಿ ಅಸಂಖ್ಯಾತವಾಗಿ ತೈಲಗ್ರಂಥಿಗಳಿವೆ. ಈ ತೈಲವೇ ಹಣ್ಣಿನ ವಿಶಿಷ್ಟವಾಸನೆಗೆ ಕಾರಣ. ಹೊರಸಿಪ್ಪೆಯೂ ನಡುಸಿಪ್ಪೆಯೂ ಒಂದಕ್ಕೊಂದು ಬಲವಾಗಿ ಅಂಟಿಕೊಂಡಿವೆ. ಒಳಸಿಪ್ಪೆ ಫಲದ ಕೋಣೆಗಳೊಳಗೆ ನುಗ್ಗಿ ಅವನ್ನು ಹಲವಾರು ಕೋಣೆಗಳಾಗಿ ವಿಂಗಡಿಸಿದೆಯಲ್ಲದೆ ಒಳಸಿಪ್ಪೆಯ ಒಳಭಾಗದಿಂದ ಹಲವಾರು ರಸಭರಿತವಾದ ಏಕಕೋಶಿ ರೋಮಗಳು ಹೊರಟು ಅಂಡಾಶಯದ ಕೋಣೆಗಳನ್ನೆಲ್ಲ ಆವರಿಸಿವೆ. ಈ ರೋಮಗಳಿಂದ ಕೂಡಿದ ಮೃದುವಾದ ಹಾಗೂ ರಸಭರಿತವಾದ ಭಾಗವೇ ನಾವು ತಿನ್ನುವ ತಿರುಳು. ಕೋಣೆಗಳೇ ಕಿತ್ತಳೆ ತೊಳೆಗಳು (ಸೋಳೆಗಳು). ಕಿತ್ತಳೆಹಣ್ಣಿನಸಿಪ್ಪೆ ತಿರುಳಿನೊಂದಿಗೆ ಅಂಟಿಕೊಂಡಿಲ್ಲದೆ ಸಡಿಲವಾಗಿರುವುದು ಅದರ ಇನ್ನೊಂದು ವಿಶೇಷ ಲಕ್ಷಣ. ಕಿತ್ತಳೆ ಹಣ್ಣಿಗೆ ಹೆಸ್ಪೆರಿಡಿಯಮ್ ಎಂಬ ಶಾಸ್ತ್ರೀಯ ಹೆಸರಿದೆ.

**ಕಿತ್ತಳೆಯ ಬಗೆಗಳು :** ಕಿತ್ತಳೆಯಲ್ಲಿ ಒಂದು ನೂರಕ್ಕೂ ಹೆಚ್ಚು ಬಗೆಗಳಿವೆ. ಮೆಡಿಟರೇನಿಯನ್ ಪ್ರದೇಶದಲ್ಲಿ ಬೆಳೆಯುವ ಜಾಫ, ಶಮೂಟಿ, ಬೆಲ್ಲಾಡಿ, ಅಮೆರಿಕದ ಫ್ಲಾರಿಡದಲ್ಲಿ ಬೆಳೆಯಲಾಗುವ ಡ್ಯಾನ್ಸಿ ಟ್ಯಾಂಜರಿನ್ ದಿ ಟೆಂಪಲ್, ಜಪಾನ್ ದೇಶದ ಮೂಲವಾಸಿಯಾದ ಸಾಟ್ಸುಮ, ಭಾರತದ ನಾಗಪುರಿ, ಕೊಡಗು, ಉನ್ಸು ಮತ್ತು ಕುನ್ಸು ಬಗೆಗಳು ಮುಖ್ಯವಾದುವು. ಶಮೂಟಿ ಬಗೆಯಲ್ಲಿ ಬೀಜಗಳಿಲ್ಲ. ಸಾಟ್ಸುಮ ಬಗೆ ಬೇರಾವ ಬಗೆಗಳಿಗಿಂತ ಹೆಚ್ಚು ಚಳಿಯನ್ನು ತಡೆದುಕೊಳ್ಳಬಲ್ಲುದು. ಭಾರತದ ನಾಗಪುರಿ ಕಿತ್ತಳೆ ಕೊಡಗಿನ ಬಗೆಗಿಂತ ಹೆಚ್ಚು ರುಚಿಯುಳ್ಳದ್ದು. ಉನ್ಸು ಮತ್ತು ಕುನ್ಸು ಬಗೆಗಳು ಪರದೇಶದಿಂದ ಬಂದಿರುವ ಮಿಶ್ರ ಜಾತಿಯವು; ಕಿತ್ತಳೆರಸದ ಉತ್ಪಾದನೆಗೆ ಮಾತ್ರ ಉಪಯುಕ್ತವಾಗಿವೆ. ಇವುಗಳಲ್ಲೂ ಬೀಜಗಳಿಲ್ಲ.

ಕಿತ್ತಳೆ ಬೇಸಾಯ: ಕಿತ್ತಳೆಬೇಸಾಯಕ್ಕೆ ತಂಪಾದ ಹವೆ ಸೂಕ್ತವಾದುದು. ಉಷ್ಣತೆ 50°–110° ಫ್ಯಾ. ವ್ಯಾಪ್ತಿಯಲ್ಲಿರಬೇಕು. ಕಿತ್ತಳೆಯನ್ನು ಸುಮಾರು 12–28 ಸೆಂಮೀ ಮಳೆ ಬೀಳುವ ಮತ್ತು ಸಮುದ್ರಮಟ್ಟದಿಂದ 608 ಮೀ ಎತ್ತರವಿರುವ ಪ್ರದೇಶಗಳಲ್ಲಿ ಬೆಳೆಸಬಹುದು. ಕಿತ್ತಳೆಗಿಡ ಮೆಕ್ಕಲು ಮತ್ತು ಜಂಬಿಟ್ಟಿಗೆ ಮಣ್ಣುಗಳಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ. ಜೌಗಿಲ್ಲದ ಕಪ್ಪು ಜೇಡುಮಣ್ಣು ಕೂಡ ಇದರ ಬೇಸಾಯಕ್ಕೆ ಉತ್ತಮವಾದುದು. ಕಿತ್ತಳೆ ಸಸ್ಯದ ಬೇರು ಭೂಮಿಯಲ್ಲಿ ಆಳವಾಗಿ ಬೆಳೆಯುವುದಾದರೂ ಸಸ್ಯಕ್ಕೆ ಬೇಕಾದ ನೀರನ್ನು ಹೀರಿಕೊಳ್ಳುವ ಬೇರುಗಳು ಭೂಮಿಯ ಮೇಲುಭಾಗದ ಎರಡು ಅಡಿ ಮಣ್ಣಿನಲ್ಲಿರುವುದರಿಂದ ಇದರ ಬೇಸಾಯಕ್ಕೆ ಅತಿ ಆಳವಾದ ಮಣ್ಣಿನ PH 5.5 ರಿಂದ 6.5ರ ವರೆಗಿರಬೇಕು.

**ವೃದ್ಧಿ:** ಕಿತ್ತಳೆ ಸಸ್ಯವನ್ನು ಎರಡು ರೀತಿಗಳಿಂದ ವೃದ್ಧಿ ಮಾಡಬಹುದು.1 ಲಿಂಗರೀತಿ 2 ನಿರ್ಲಿಂಗರೀತಿ

**1 ಲಿಂಗರೀತಿ :** ಕಿತ್ತಳೆಗಿಡದಲ್ಲಿ ಪರಕೀಯ ಪರಾಗಸ್ಪರ್ಶವಾದ ಗರ್ಭಧಾರಣೆಯಾಗಿ ಬೀಜಗಳಾಗುವುದರಿಂದ ಲಿಂಗರೀತಿಯಲ್ಲಿ ವೃದ್ಧಿ ಮಾಡಬಹುದು. ಆದರೆ ಬೀಜಗಳಿಂದ ವೃದ್ಧಿ ಮಾಡಿದ ಸಸಿಗಳು ತಮ್ಮ ತಾಯಿ ಸಸಿಗಳಂತೆ ಇಳುವರಿ ಕೊಡುವುದು ಬಹಳ ಕಡಿಮೆಯಾದರೂ ಒಂದೇ ಬೀಜದಲ್ಲಿ ಬಹು ಭ್ರೂಣಗಳಿರುವುದರಿಂದ ಬೀಜಗಳಿಂದ ವೃದ್ಧಿ ಮಾಡುವುದು ಬಹಳ ಲಾಭದಾಯಕ. ಬೀಜಗಳನ್ನು ಮೊದಲು ಒಟ್ಲುಪಾತಿಯಲ್ಲಿ ಮೊಳೆಯಿಸಿ, ಬಂದ ಸಸಿಗಳನ್ನು ವರ್ಗಾವಣೆ ಮಾಡಿ ಕಿತ್ತಳೆಯನ್ನು ಬೆಳೆಸುತ್ತಾರೆ. ಒಟ್ಲುಪಾತಿಯಲ್ಲಿ ಎರಡು ವಿಧಗಳಿವೆ. (i) ನೆಲದ ಮೇಲೆ : ಪಾತಿ ಮಾಡುವ ಮಣ್ಣನ್ನು 2–3 ಬಾರಿ ಚೆನ್ನಾಗಿ ಅಗೆದು. ಕಳೆ ತಗೆದು, ಹೆಂಟೆಯನ್ನು ಪುಡಿ ಮಾಡಿ ಅಗತ್ಯವಿದ್ದಲ್ಲಿ ಹದವಾಗಿ ನೀರು ಹಾಕಿ, ಸು. 6 ಮೀ ಉದ್ದ 1 ಮೀ, ಅಗಲ ಮತ್ತು ಸು. 25. ಸೆಂಮೀ ಎತ್ತರದ ಪಾತಿಗಳನ್ನು ಮಾಡಬೇಕು. ಪಾತಿಗಳ, ಮೇಲೆ 75 ಮಿಮೀ ಎತ್ತರ ಮರಳನ್ನು ಹಾಕಿ ಒಂದೇ ಮಟ್ಟದ ಪಾತಿಯನ್ನು 1/8 ಆಳವಾಗಿ ಮತ್ತು ಸು. 25 ಮಿಮೀ ಅಂತರಗಳಲ್ಲಿ ಬೀಜಗಳನ್ನು ಬಿತ್ತಬೇಕು. ಇರುವೆಗಳು ಹಾವಳಿ ಮಾಡುವ ಸಾಧ್ಯತೆ ಇರುವುದರಿಂದ ವಾರಕ್ಕೆ ಒಂದು ಸಾರಿ ಹೆಪ್ಟಕ್ಲೋರ್ ಅಥವಾ ಗೆಮಾಕ್ಸಿನ್ ಪುಡಿಯನ್ನು ಪಾತಿಗಳ ಸುತ್ತಲೂ ಚಿಮುಕಿಸಬೇಕು. (ii) ಚಪ್ಪರದ ಮೇಲೆ ಒಟ್ಲುಪಾತಿ: ಕಿತ್ತಳೆ ಸಸಿಗಳನ್ನು ಚಪ್ಪರದ ಮೇಲೆ ಒಟ್ಲುಪಾತಿ ಮಾಡಿ ಬೆಳೆಸಬಹುದಾದರೂ ಕೂಡ ಈ ಪದ್ಧತಿ ಹೆಚ್ಚು ಬಳಕೆಯಲ್ಲಿಲ್ಲ.

**2. ನಿರ್ಲಿಂಗರೀತಿ:** ನಿರ್ಲಿಂಗರೀತಿಯಲ್ಲಿ ಲೇಯರ್ ಮಾಡುವುದು. ಗೂಟ ಕಟ್ಟುವುದು, ಕಸಿ ಮಾಡುವುದು ಮುಂತಾದ ಹಲವು ವಿಧಗಳಿದ್ದರೂ ಕಣ್ಣು ಹಾಕಿಕೆಯ ಕ್ರಮ ಹೆಚ್ಚಿನ ಬಳಕೆಯಲ್ಲಿದೆ. ಕಣ್ಣು ಹಾಕುವುದು ಇತರ ವಿಧಾನಗಳಿಗಿಂತ ಸುಲಭ. ಮತ್ತು ಇದರಲ್ಲಿ ಅಲ್ಪ ಸಮಯದಲ್ಲೇ ಯಶಸ್ಸು ಪಡೆಯಬಹುದು. ಉತ್ತಮ ಕಿತ್ತಳೆ ತಳಿಗಳು ಕೆಲವು ಬಾರಿ ರೋಗಗಳಿಗೆ ತುತ್ತಾಗುತ್ತವೆ ಅಥವಾ ಭೂಮಿಗೆ ಹೊಂದಿಕೊಳ್ಳುವುದಿಲ್ಲ. ಆಗ ಇಂಥ ರೋಗಗಳಿಗೆ ನಿರೋಧಕ ಗುಣ ಹೊಂದಿರುವ ಆದರೆ ಇಳುವರಿ ದೃಷ್ಟಿಯಿಂದ ಕೀಳುಮಟ್ಟದ ಕೆಲವು ತಳಿಗಳನ್ನು ಬೇರು ಸಸಿಯಾಗಿ (ರೂಟ್‌ಸ್ಟಾಕ್) ತೆಗೆದುಕೊಂಡು ಅವುಗಳ ಮೇಲೆ ಉತ್ತಮ ತಳಿಯಿಂದ ಕಣ್ಣು ತೆಗೆದು ಹಾಕಿ ಬೆಳೆಸಿದರೆ, ಕಣ್ಣು ಸಸಿ ಉತ್ತಮ ತಳಿಯಂತೆ ಅಧಿಕ ಇಳುವರಿಯನ್ನು ಕೊಡುತ್ತದೆ. ಬೇರು ಸಸಿಯನ್ನು ಬೆಳೆಯುವುದಕ್ಕೆ ಮೊದಲು ತೋಟಗಾರನಿಗೆ ಯಾವ ಬೇರು ಸಸಿಯ ಮೇಲೆ ಯಾವ ಕಾಂಡ ಸಸ್ಯದ ಕಣ್ಣುಹಾಕಿದರೆ ಯಶಸ್ವಿಯಾಗುತ್ತದೆ ಎಂಬುದರ ಪೂರ್ಣ ಅರಿವು ಇರಬೇಕು. ಭಾರತ ದೇಶದಲ್ಲಿ ಸಾಮಾನ್ಯವಾಗಿ ಕಿತ್ತಳೆಯನ್ನು ಸಿಹಿನಿಂಬೆಯ ತಳಿಗಳ ಮೇಲೆ ಬೆಳೆಸುತ್ತಾರೆ. ಮೈಸೂರು ತೋಟಗಾರಿಕೆ ಇಲಾಖೆಗೆ ಸೇರಿದ ಗೋಣಿಕೊಪ್ಪಲು ಮತ್ತು ಚೆಟ್ಟಳ್ಳಿ ಕಿತ್ತಳೆ ಸಂಶೋಧನ ಕೇಂದ್ರಗಳಲ್ಲಿ ಕೊಡಗು ಕಿತ್ತಳೆಯನ್ನು ಮಲೆನಾಡು ಮತ್ತು ಕೊಡಗು ಪ್ರದೇಶಗಳಲ್ಲಿ ಬೇಸಾಯದಲ್ಲಿರುವ ಗಜನಿಂಬೆ ಮತ್ತು ಟ್ರೈಫೋಲಿಯೇಟ್ ತಳಿಗಳ ಮೇಲೆ ಕಣ್ಣು ಹಾಕಿ ಉತ್ತಮ ಫಲಿತಾಂಶವನ್ನು ಪಡೆದಿದ್ದಾರೆ.

**ಬೇರು ಸಸಿಗಳನ್ನು ಬೆಳೆಸುವುದು:** ಬೇಕಾದ ತಳಿಗಳಿಂದ ಬೀಜಗಳನ್ನು ಪಡೆದು ಬೂದಿಯನ್ನು ಬೆರೆಸಿ ಪಾತಿಗಳಲ್ಲಿ ನೆಡುವುದು ರೂಢಿಯಲ್ಲಿದೆ. ಬೀಜಗಳನ್ನು ತೆಗೆದ ತತ್‌ಕ್ಷಣ ಪಾತಿಗಳಲ್ಲಿ ಹಾಕುವುದು ಲೇಸು, ಹೆಚ್ಚು ದಿವಸ ಬೀಜಗಳನ್ನು ಬಿತ್ತದೆ ಇಟ್ಟರೆ ಅವುಗಳ ಮೊಳೆಯುವ ಶಕ್ತಿ ಕಡಿಮೆಯಾಗುತ್ತದೆ. ಬೀಜ ಪಡೆದ ಎರಡು ವಾರಗಳಲ್ಲಿ ಮೊಳೆಸದಿದ್ದರೆ ಅನಂತರ ಮೊಳೆಯುವ ಶೇಕಡ ಸಂಖ್ಯೆ ಕಡಿಮೆಯಾಗುತ್ತದೆ. ಬೀಜಗಳು ಬಿತ್ತಿದ 20 ದಿವಸಗಳ ಅನಂತರ ಮೊಳೆಯುತ್ತವೆ. ಬೀಜ ಬಿತ್ತಿದ 1 ವರ್ಷದ ಅನಂತರ ಸಸಿಗಳು ಸುಮಾರು 30 ಸೆಂಮೀ ಎತ್ತರ ಬೆಳೆಯುತ್ತವೆ. ಒಂದು ವರ್ಷದ ಸಸಿಗಳನ್ನು ಎರಡನೆಯ ಪಾತಿಗೆ ಹಾಕುವುದು ಉತ್ತಮ. ಎರಡನೆಯ ಪಾತಿಯ ಅಳತೆ 3 ಮೀ ಉದ್ದ 1 ಮೀ ಅಗಲ ಇರುವುದು. ಸೂಕ್ತ ಸಸಿಗಳನ್ನು ಎರಡನೆಯ ಪಾತಿಯಲ್ಲಿ ನೆಡುವಾಗ ಸಾಲಿನಿಂದ ಸಾಲಿಗೆ 30 ಸೆಂಮೀ ಸಸಿಯಿಂದ ಸಸಿಗೆ 45 ಸೆಂಮೀ ಅಂತರ ಕೊಡಬೇಕು. ಎರಡನೆಯ ಪಾತಿಯಲ್ಲಿ ಸಸಿಗಳನ್ನು ನೆಟ್ಟ ಮೇಲೆ ಕಾಲ ಕಾಲಕ್ಕೆ ಸರಿಯಾಗಿ ನೀರು ಕೊಟ್ಟು ಎಚ್ಚರಿಕೆ ವಹಿಸಬೇಕು ಸಸಿಗಳನ್ನು ಪೊದೆಯಂತೆ ಬೆಳೆಸುವುದು ಉತ್ತಮ. ಕಸಿಮಾಡಲು ಉಪಯೋಗಿಸುವ ಕಣ್ಣನ್ನು ಉತ್ತಮ ಹಾಗೂ ಅಧಿಕ ಫಲ ಕೊಡುವ ಸಸ್ಯಗಳಿಂದ ಆರಿಸಬೇಕು ಆರಿಸಿದ ಕಣ್ಣು ಚೆನ್ನಾಗಿ ಬಲಿತಿರಬೇಕು ಕಣ್ಣುಗಳನ್ನು ಹೊರ ಊರುಗಳಿಗೆ ಸಾಗಿಸುವಾಗ ತೇವ ಸಾಗಿಸಬೇಕು. ಕಣ್ಣು ಹಾಕುವುದಕ್ಕೆ ಮೊದಲು ಎಲೆಯ ತೊಟ್ಟನ್ನು ಕಣ್ಣಿನೊಂದಿಗೆ ಉಳಿಸಿಕೊಂಡು ಎಲೆಗಳನ್ನು ಕತ್ತರಿಸಿ ತೆಗೆದು ಹಾಕಬೇಕು.

**ಕಣ್ಣು ಹಾಕುವುದು:** ನವಂಬರ್‌ನಿಂದ ಡಿಸೆಂಬರ್ ತಿಂಗಳು ಕಣ್ಣು ಹಾಕಲು ಯೋಗ್ಯವಾದ ಕಾಲ. ಕಣ್ಣು ಹಾಕುವ ಕಾಲಕ್ಕೆ ಬೇರು ಸಸಿಯ ಕಾಂಡ ಸು. 6 ಮಿಮೀ –12 ಮಿಮೀ ದಪ್ಪವಿರಬೇಕು. ಕಣ್ಣು ಹಾಕುವಾಗ ಬೇರು ಸಸಿಯ ಕಾಂಡದ ಮೇಲೆ ನೆಲದ ಮಟ್ಟದಿಂದ 15 ಸೆಂಮೀ – 22 ಸೆಂಮೀ ಎತ್ತರದಿಂದ T ಆಕಾರದಲ್ಲಿ ಹರಿತವಾದ ಚಾಕುವಿಂದ ಮೇಲು ಭಾಗದ ತೊಗಟೆಯನ್ನು ಕತ್ತರಿಸಬೇಕು. ಅನಂತರ ಚಾಕುವಿನ ಮೊನಚಾದ ತುದಿಯಿಂದ ಕತ್ತರಿಸಿರುವ ತೊಗಟೆಯ ಎರಡು ಭಾಗಗಳನ್ನು ಕೂಡಿಸಿ ಕಣ್ಣಿನ ಮಧ್ಯಭಾಗವನ್ನು ಬಿಟ್ಟು, ಮೇಲೆ ಮತ್ತು ಕೆಳಭಾಗದಲ್ಲಿ ಪಾಲಿತಿನ್ ಅಥವಾ ನೆನೆಸಿದ ಬಾಳೆಯ ನಾರಿನಿಂದ ಬಿಗಿಯಾಗಿ ಸುತ್ತಬೇಕು. ಕಣ್ಣು ಹಾಕಿದ 4 ವಾರಗಳಲ್ಲಿ ಕಣ್ಣು ಹಸಿರಾಗಿದ್ದು ಉಳಿದಿರುವ ಎಲೆಯ ತೊಟ್ಟು ಉದುರಿ ಹೋದರೆ ಕಣ್ಣು ಬೇರು ಸಸಿಗೆ ಅಂಟಿಕೊಂಡಿದೆ ಎಂದು ಗೊತ್ತಾಗುತ್ತದೆ. ಕಣ್ಣು ಚಟುವಟಿಕೆಯಿಂದ ಬೆಳೆಯಲು ಪ್ರಾರಂಭಿಸಿದರೆ ಕಣ್ಣಿನ ಮೇಲಿನ 20 ಸೆಂಮೀ ಕಾಂಡವನ್ನು ಉಳಿಸಿ ಮಿಕ್ಕದ್ದನ್ನು ಕತ್ತರಿಸಿ ಹಾಕಬೇಕು. ಕಣ್ಣು ಚಿಗುರಿ 7½ ಸೆಂಮೀ ಬೆಳೆದ ಅನಂತರ ಕಣ್ಣಿನಿಂದ ಮೇಲ್ಭಾಗದಲ್ಲಿರುವ ಮೊದಲಿನ ಕಾಂಡವನ್ನು ಕತ್ತರಿಸಿ ಹಾಕಬೇಕು. ಅನಂತರ ಕಣ್ಣು ಸಸಿಯನ್ನು ಬೇಕಾದ ಸ್ಥಳಗಳಲ್ಲಿ ನೆಡಲು ಉಪಯೋಗಿಸಬಹುದು.

**ಭೂಮಿಯನ್ನು ಸಿದ್ಧಪಡಿಸುವಿಕೆ:** ಕಿತ್ತಳೆ ಹಣ್ಣಿನ ಸಸ್ಯಗಳನ್ನು ನೆಡಲು ಆರಿಸಿದ ಭೂಮಿಯಲ್ಲಿ ಒಂದು ಗುಂಡಿಯಿಂದ ಮತ್ತೊಂದು ಗುಂಡಿಗೆ ಸು. 6–7 ಮೀ ಅಂತರವಿರುವಂತೆ 60–76 ಸೆಂಮೀ ಉದ್ದ, 60–76 ಸೆಂಮೀ ಅಗಲ, 60–76 ಸೆಂಮೀ ಆಳದ ಗುಂಡಿಗಳನ್ನು ಮೇ–ಜೂನ್ ತಿಂಗಳಲ್ಲಿ ತೆಗೆಯಬೇಕು ಗುಂಡಿಗಳನ್ನು ತೆಗೆಯುವಾಗ ಮೇಲು ಭಾಗದ ಮತ್ತು ಕೆಳಭಾಗದ ಮಣ್ಣನ್ನು ಬೇರೆ ಬೇರೆ ಹಾಕಬೇಕು. ಅನಂತರ ಮೇಲುಭಾಗದ ಮಣ್ಣಿಗೆ 25 ಕೆಜಿ ಕೊಟ್ಟಿಗೆ ಗೊಬ್ಬರ, 1 ಕೆಜಿ ಮೂಳೆಪುಡಿ ಮತ್ತು 2 ಕೆಜಿ ಒಲೆ ಬೂದಿಯನ್ನು ಹಾಕಿ ಮಿಶ್ರಮಾಡಿ ಗುಂಡಿಗಳಿಗೆ ತುಂಬಬೇಕು. ಸಸಿಗಳನ್ನು ನೆಡವುದಕ್ಕೆ 1 ವಾರ ಮೊದಲು ನೀರು ಹಾಯಿಸುವುದರಿಂದ ಮಣ್ಣು ಸರಿಯಾಗಿ ಕುಳಿತುಕೊಳ್ಳುತ್ತದೆ. ಸಸಿಗಳನ್ನು ಮುಂಗಾರು ಮಳೆಯ ಪ್ರಾರಂಭದಲ್ಲಿ (ಜೂನ್–ಜುಲೈ)ನೆಡುವುದು ಉತ್ತಮ.

**ಸಸಿಗಳನ್ನು ಆರಿಸುವಿಕೆ:** ಒಳ್ಳೆಯ ಸಸಿಗಳನ್ನು ನೆಡಲು ಆರಿಸದಿದ್ದರೆ ಬೇಸಾಯ ಲಾಭದಾಯಕವಾಗುವುದಿಲ್ಲ. ಆದ್ದರಿಂದ ಸಸಿಗಳನ್ನು ಆರಿಸುವಾಗ ಕೆಳಗೆ ಕಾಣಿಸಿರುವ ಅಂಶಗಳನ್ನು ಗಮನಿಸಬೇಕು. (i) ಸಸಿಗೆ 3–5 ಆಹಾರವನ್ನು ಒದಗಿಸುವ ಸು. 22 ಸೆಂಮೀ ಎತ್ತರದಲ್ಲಿರಬೇಕು. (ii) ಕಣ್ಣಿನ ಕೂಡಿಕೆ (ಬಡ್ ಜಾಯಿಂಟ್) ನೆಲದ ಮಟ್ಟದಿಂದ ಸು. 22 ಸೆಂಮೀ ಎತ್ತರದಲ್ಲಿರಬೇಕು. (iii) ಕಾಂಡದಿಂದ ಹೊರಟ ತಾಯಿ ಬೇರು ಸುಮಾರು ಸು. 25 ಸೆಂಮೀ ಕ್ಕಿಂತಲೂ ಉದ್ದವಾಗಿದ್ದರೆ ಲೇಸು.

**ನೆಡುವಿಕೆ:** ಸಾಮಾನ್ಯವಾಗಿ ಮೈಸೂರು ರಾಜ್ಯದಲ್ಲಿ ಮುಂಗಾರು ಮಳೆಯ ಪ್ರಾರಂಭದಲ್ಲಿ ಕಿತ್ತಳೆ ಹಣ್ಣಿನ ಸಸಿಯನ್ನು ನೆಡುವುದು ರೂಢಿಯಲ್ಲಿದೆ. ಸಸಿಗಳನ್ನು ಗುಂಡಿಯ ಮಧ್ಯದಲ್ಲಿ ನೆಡಬೇಕು ಕಣ್ಣುಕೂಡಿಕೆ ನೆಲಮಟ್ಟದಿಂದ 22 ಸೆಂಮೀ ಎತ್ತರದಲ್ಲಿರಬೇಕು. ನೆಟ್ಟ ಅನಂತರ ನೀರು ಹಾಯಿಸಿ ಸಸ್ಯದ ಸುತ್ತಲೂ ಒಣಹುಲ್ಲು ಮತ್ತು ತರಗನ್ನು ಹೊದಿಸುವುದು ರೂಢಿಯಲ್ಲಿದೆ. ಸಸಿಗಳನ್ನು ನೆಟ್ಟ ಮೇಲೆ ಊರುಗೋಲು ಕೊಡಬೇಕು.

**ನೀರಾವರಿ:** ಸಾಮಾನ್ಯವಾಗಿ ನೀರಾವರಿ ಮಳೆಯನ್ನು ಅನುಸರಿಸುತ್ತದೆ. ವರ್ಷಕ್ಕೆ ಸು. 125–250 ಸೆಂಮೀ ಮಳೆ ಬಿದ್ದು $40^{\circ}$–$60^{\circ}$ ಫ್ಯಾ ಉಷ್ಣತೆ ಇರುವ ಪ್ರದೇಶಗಳಲ್ಲಿ ನೀರಾವರಿಯ ಆವಶ್ಯಕತೆ ಇಲ್ಲ. ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಮಳೆಗಾಲವನ್ನು ಬಿಟ್ಟು ಉಳಿದ ಎಲ್ಲ ಕಾಲಗಳಲ್ಲಿ ಅಗತ್ಯವಾಗಿ ನೀರು ಹಾಯಿಸಬೇಕು ಸಸಿಗಳು ಬೆಳೆದಂತೆಲ್ಲ ಆವಶ್ಯಕವಾಗುವ ನೀರಿನ ಪ್ರಮಾಣ ಅಧಿಕವಾಗುತ್ತದೆ. ಕಿತ್ತಳೆ ಗಿಡಗಳು 4–5 ವರ್ಷಗಳವರೆಗೆ ಇಳುವರಿಯನ್ನು ಕೊಡುವುದಿಲ್ಲ. ಗಿಡಗಳ ಮಧ್ಯೆ ಸಾಕಷ್ಟು ಸ್ಥಳವಿರುವುದರಿಂದ ಆಸ್ಥಳದಲ್ಲಿ ಒಂದು ವರ್ಷದ ಅವಧಿಯಲ್ಲಿ ಫಲ ಕೊಡುವ ಹಣ್ಣಿನ ಬೆಳೆಗಳನ್ನಾಗಲಿ ತರಕಾರಿ ಮುಂತಾದ ಬೆಳೆಗಳನ್ನಾಗಲಿ ಉಪಬೆಳೆಯಾಗಿ ಬೆಳೆಸಬಹುದು. ಇದರಿಂದ ಉಪಬೆಳೆಯ ಲಾಭಬರುವುದಲ್ಲದೆ ಮುಖ್ಯ ಬೆಳೆಗೆ ಬೇಸಾಯ ಮಾಡಿದಂತಾಗುತ್ತದೆ.

**ಗೊಬ್ಬರ ಹಾಕುವುದು :** ಕಾಲಕ್ಕೆ ಸರಿಯಾಗಿ ನೀರಾವರಿ ಮಾಡಿ, ಗೊಬ್ಬರ ಹಾಕಿ, ಉತ್ತಮ ಬೇಸಾಯ ಪದ್ಧತಿಗಳನ್ನು ಅನುಸರಿಸುವುದರಿಂದ ಲಾಭದಾಯಕವಾದ ಫಸಲನ್ನು ಪಡೆಯಬಹುದು. ಅಲ್ಲದೆ ಮರಗಳು ಹೆಚ್ಚು ಕಾಲ ಬದುಕುತ್ತವೆ. ಸಸಿಗಳನ್ನು ನೆಟ್ಟಮೇಲೆ ಒಂದೆರಡು ವರ್ಷ ಸಸ್ಯವೊಂದಕ್ಕೆ 23 ಕೆಜಿ ಕೊಟ್ಟಿಗೆ ಗೊಬ್ಬರವನ್ನು ಕೊಡಬೇಕು. ಫಸಲು ಬಿಡಲು ಪ್ರಾರಂಭಿಸಿದ ಅನಂತರ ಮರಕ್ಕೆ 46–92 ಕೆಜಿ ಕೊಟ್ಟಿಗೆ ಗೊಬ್ಬರವನ್ನು ಪ್ರತಿವರ್ಷವೂ ಕೊಡುತ್ತಿರಬೇಕು. ಕೊಡುವ ಗೊಬ್ಬರ ಯಾವುದೇ ಆಗಲಿ ಹೂ ಬಿಡುವುದಕ್ಕೆ ಮುಂಚೆ ಗೊಬ್ಬರ ಕೊಡುವುದು ಉತ್ತಮ. ಮೈದಾನ ಪ್ರದೇಶಗಳಲ್ಲಿ ಡಿಸೆಂಬರ್–ಜನವರಿ ತಿಂಗಳಲ್ಲಿ ಗೊಬ್ಬರ ಹಾಕುತ್ತಾರೆ. ಮಲೆನಾಡು ಮತ್ತು ಸಮುದ್ರಮಟ್ಟಕ್ಕಿಂತ ಎತ್ತರದಲ್ಲಿರುವ ಪ್ರದೇಶಗಳಲ್ಲಿ ಜೂನ್–ಆಗಸ್ಟ್ ತಿಂಗಳಲ್ಲಿ ಒಂದು ಸಲ ಗೊಬ್ಬರ ಹಾಕುವುದು ಸೂಕ್ತ. ಮರಳು ಭೂಮಿಯಲ್ಲಿ ಮತ್ತು ಕಡಿಮೆ ಫಲವತ್ತಾಗಿರುವ ಇತರ ಬಗೆಯ ಭೂಮಿಗಳಲ್ಲಿ ವರ್ಷಕ್ಕೆ ಎರಡು ಬಾರಿ ಗೊಬ್ಬರ ಕೊಡುವುದು ಅಗತ್ಯ. ಗೊಬ್ಬರವನ್ನು ಪಾತಿಗಳ ಮೇಲೆ ಹರಡಿ. ಕೈಗುದ್ದಲಿಯಿಂದ ಕೆದಕಿ ಮಣ್ಣಿನೊಡನೆ ಮಿಶ್ರ ಮಾಡಬೇಕು. ನೈಸರ್ಗಿಕ ಗೊಬ್ಬರವಲ್ಲದೆ ಸೀಮೆ ಗೊಬ್ಬರ ಹಾಕುವುದು ರೂಢಿಯಲ್ಲಿದೆ. ಸೀಮೆಗೊಬ್ಬರವನ್ನು ಮೂರು ಕಂತುಗಳಲ್ಲಿ ಅಂದರೆ ಏಪ್ರಿಲ್–ಮೇ, ಜೂನ್ ಮತ್ತು ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳಲ್ಲಿ ಹಾಕುವುದು ಉತ್ತಮ. ಸೀಮೆಗೊಬ್ಬರವನ್ನು ಮರದ ಬುಡದಿಂದ ಸು. 45 ಸೆಂಮೀ ದೂರದಲ್ಲಿ ಬುಡದ ಸುತ್ತಲೂ ಹಾಕಿ. ಮುಳ್ಳುಗುದ್ದಲಿಯಿಂದ ಗೊಬ್ಬರವನ್ನು ಮಣ್ಣಿನೊಡನೆ ಮಿಶ್ರ ಮಾಡಿ ಅನಂತರ ನೀರು ಹಾಯಿಸಬೇಕು. ಹೀಗೆ ಹಾಕಲಾಗುವ ಸೀಮೆ ಗೊಬ್ಬರದಲ್ಲಿ ಮುಖ್ಯವಾದುವು ಕ್ಯಾಲ್ಸಿಯಮ್ ಅಮೋನಿಯಮ್ ನೈಟ್ರೇಟ್, ಸಿಂಗಲ್ ಸೂಪರ್ ಫಾಸ್ಫೇಟ್ ಮತ್ತು ಮ್ಯೂರಿಯೇಟ್ ಆಫ್ ಪೊಟ್ಯಾಷ್.

**ಮಧ್ಯವರ್ತಿ ಬೇಸಾಯ :** ನೀರು ಹಾಯಿಸುವುದು. ಮಳೆ ಬೀಳುವುದು ಮತ್ತು ಜನರ ತುಳಿತ ಇತ್ಯಾದಿಗಳಿಂದ ಭೂಮಿಯ ಮೇಲುಭಾಗ ಗಟ್ಟಿಯಾಗುತ್ತದೆ. ಈ ರೀತಿ ಗಟ್ಟಿಯಾಗುವುದು ಕಿತ್ತಳೆ ಸಸ್ಯಕ್ಕೆ ಒಳ್ಳೆಯದಲ್ಲ. ಆದ್ದರಿಂದ ಭೂಮಿಯ ಮೇಲುಭಾಗವನ್ನು ಅಗೆದು, ಕಳೆ ತೆಗೆದು ಭೂಮಿಯನ್ನು ಚೊಕ್ಕಟವಾಗಿಡುವುದು ಉತ್ತಮ.

**ಸವರುವುದು :** ಸಸಿ ನೆಟ್ಟ ಒಂದು ವರ್ಷದಲ್ಲಿ ಮುಖ್ಯ ರೆಂಬೆಗಳು ಹೆಚ್ಚು ಸಂಖ್ಯೆಯಲ್ಲಿ ಹುಟ್ಟಲು ಪ್ರಾರಂಭವಾಗುತ್ತವೆ. ಇದರಿಂದ ಕೊಂಬೆಗಳು ಜಡೆಯಂತೆ ಹೆಣೆದುಕೊಂಡು ಇಳುವರಿ ಕಡಿಮೆಯಾಗುತ್ತದೆ. ಆದ್ದರಿಂದ ಯೋಗ್ಯವಾದ ಎರಡು ಅಥವಾ ಮೂರು ರೆಂಬೆಗಳನ್ನು ಬಿಟ್ಟು ಉಳಿದವನ್ನು ಕತ್ತರಿಸಿ ತೆಗೆದು ಹಾಕುವುದು ಲೇಸು. ಸಸಿ ನೆಟ್ಟ ಸು. 5 ವರ್ಷಕ್ಕೆ ಹುಸಿ ಕೊಂಬೆಗಳು ಬಂದು ಅಧಿಕವಾಗಿ ಎಲೆಗಳನ್ನು ಬಿಟ್ಟು, ಫಲ ಕಡಿಮೆಯಾಗುವುದರಿಂದ ಹುಸಿ ಕೊಂಬೆಗಳನ್ನು ಕತ್ತರಿಸಿ ತೆಗೆಯಬೇಕು. ಫಲ ಕೊಡುವುದಕ್ಕೆ ಪ್ರಾರಂಭಿಸಿದ ಅನಂತರ ಸವರುವ ಆವಶ್ಯಕತೆ ಇಲ್ಲ. ಕೊಟ್ಟಿಗೆ ಗೊಬ್ಬರ. ಸೀಮೆಗೊಬ್ಬರ ಹಾಕುವುದು ಮತ್ತು ಆಗಾಗ ನೀರಾವರಿ ಮಾಡುವುದರಿಂದ ಕಿತ್ತಳೆ ಗಿಡ ವರ್ಷದ ಎಲ್ಲ ಕಾಲಗಳಲ್ಲಿ ಹೂ ಬಿಡುವುದಕ್ಕೆ ಪ್ರಾರಂಭಿಸುತ್ತದೆ. ಆದರೆ ಬೆಳೆಯ ಹಿತದೃಷ್ಟಿಯಿಂದ ಇದು ಉತ್ತಮವಲ್ಲ. ಆದ್ದರಿಂದ ವಿಶೇಷ ಬೇಸಾಯ ಪದ್ಧತಿಯನ್ನು ಅನುಸರಿಸಿ, ಗಿಡಗಳಿಗೆ ವಿಶ್ರಾಂತಿ ಕೊಟ್ಟು, ಒಂದೇ ಒಂದು ಋತುವಿನಲ್ಲಿ ಹೆಚ್ಚು ಫಲ ಬಿಡುವಂತೆ ಮಾಡಬೇಕು.

**ಇಳುವರಿ :** ಕಣ್ಣುಹಾಕಿದ ಸಸ್ಯ ನೆಟ್ಟ 4 ವರ್ಷಗಳ ಅನಂತರ ಫಲ ಕೊಡಲು ಪ್ರಾರಂಭಿಸುತ್ತದೆ. ಬೀಜಗಳಿಂದ ಬೆಳೆಸಿದ ಸಸ್ಯಗಳು 9 ವರ್ಷದ ಅನಂತರ ಫಲಕೊಡಲು ಪ್ರಾರಂಭಿಸುತ್ತವೆ. ವರ್ಷಕ್ಕೆ ಒಂದು ಗಿಡದಿಂದ 1,000 ಹಣ್ಣುಗಳನ್ನು ಪಡೆಯಬಹುದು. ಒಂದು ಕಿತ್ತಳೆ ಗಿಡದಿಂದ ಸುಮಾರು 40 ವರ್ಷಗಳ ಕಾಲ ಹಣ್ಣನ್ನು ಪಡೆಯಬಹುದು. ಕಿತ್ತಳೆ ಹಣ್ಣುಗಳನ್ನು ಅವು ಗಿಡದ ಮೇಲೆ ಚೆನ್ನಾಗಿ ಮಾಗಿದ ಮೇಲೆಯೇ ಕೊಯ್ಯಬೇಕು. ಹೀಗಲ್ಲದೆ ಎಳೆಯವಾಗಿದ್ದಾಗಲೇ ಕೊಯ್ದರೆ ಅನಂತರ ಅವು ಚೆನ್ನಾಗಿ ಮಾಗುವುದಿಲ್ಲ. ಅಲ್ಲದೆ ಗಿಡದ ಮೇಲೆಯೇ ಮಾಗಲು ಬಿಟ್ಟರೆ ಸಕ್ಕರೆಯ ಅಂಶವೂ ಹೆಚ್ಚಾಗುತ್ತದೆ. ಹಣ್ಣುಗಳನ್ನು ಕೀಳುವಾಗ ಅವು ಒಡೆಯದಂತೆ, ಸಿಪ್ಪೆ ತರಚಿಹೋಗದಂತೆ ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ ಅವು ಒಡೆದ ಕಡೆ ಬೂಷ್ಟು ಬೆಳೆದು ಹಣ್ಣು ಹಾಳಾಗಬಹುದು. ಆದ್ದರಿಂದ ಹಣ್ಣನ್ನು ಕೊಯ್ಯುವಾಗ ಕೈಗೆ ಗವಸು ಹಾಕಿಕೊಂಡು ಕೊಯ್ಯುವುದೇ ವಾಡಿಕೆಯಲ್ಲಿರುವ ಕ್ರಮ.

**ಕೀಟಗಳು ಮತ್ತು ರೋಗಗಳು:** ಕಿತ್ತಳೆಗೆ ಹಲವಾರು ಕೀಟಗಳು ರೋಗಗಳು ತಗುಲಿ ಗಣನೀಯವಾದ ನಷ್ಟವನ್ನುಂಟುಮಾಡುತ್ತವೆ.

ಕೆಲಿಡೋನಿಯಂ ಸಿಂಕ್ಟಂ ಎಂಬ ಹುಳು ಕಾಂಡವನ್ನು ಕೊರೆದು ಕಿತ್ತಳೆ ಬೆಳೆಯನ್ನು ನಾಶಮಾಡುತ್ತದೆ. ಕ್ಯಾಲಿಫೋರ್ನಿಯ ಪ್ರದೇಶಗಳಲ್ಲಿ ಕೆಲವು ಹುರುಪೆ ಕೀಟಗಳು ಕಿತ್ತಳೆ ಬೆಳೆಯನ್ನು ಹಾಳುಮಾಡುತ್ತವೆ. ಇವುಗಳಲ್ಲಿ ಮುಖ್ಯವಾದುವು ಕೆಂಪುಸ್ಕೇಲ್ (ಅಯೊನಿಡಿಯೆಲ ಆರಂಶಿಯೈ), ಕಪ್ಪುಸ್ಕೇಲ್ (ಸಾಸೆಟ್ಟಿಯ ಓಲಿಯೆ), ಹಳದಿ ಸ್ಕೇಲ್ (ಅಯೊನಿಡಿಯೆಲ ಸಿಟ್ರಿನ), ಊದಾ ಸ್ಕೇಲ್ (ಲೆಪಿಡೊಸಾಫಿಸ್ ಬೆಕಿಯೈ) ಮತ್ತು ಸಿಟ್ರಿಕೋಲ ಸ್ಕೇಲ್ (ಕಾಕಸ್ ಸೂಡೊಮ್ಯಾಗ್ನೋಲಿಯಾನಮ್.) ಇವುಗಳಲ್ಲದೆ ಈ ಕೆಳಗೆ ಕಂಡ ಕೀಟಗಳೂ ಕೂಡ ಕಿತ್ತಳೆ ಸಸ್ಯಗಳಲ್ಲಿ ಕಂಡುಬರುತ್ತವೆ. ಹಣ್ಣಿನ ರಸ ಹೀರುವ ಚಿಟ್ಟೆ (ಆಫಿಡಿರಿಸ್) ಹೇನುಗಳು, ತಿಗಣೆ ಕೀಟಗಳು (ಮೀಲೀ ಬಗ್ಸ್), ಫಲಮಕ್ಷಿಕಗಳು ಮತ್ತು ಉಣ್ಣಿಗಳು.

ರೋಗಗಳಲ್ಲಿ ಏಕಾಣುಜೀವಿಯಿಂದ ಬರುವ ಕರ್ಜಿರೋಗ (ಜ್ಞಾಂತೊಮೊನಾಸ್ ಸಿಟ್ರಿಯೈ)ಮತ್ತು ಅನೇಕ ಶಿಲೀಂದ್ರ ರೋಗಗಳು ಕಿತ್ತಳೆ ಬೆಳೆಗೆ ತಗಲುತ್ತವೆ. ಫೈಟಾಫ್ಥರ ಜಾತಿಯ ಶಿಲೀಂಧ್ರದಿಂದ ಹಾನಿಕರವಾದ 'ಬ್ರೌನ್‌ರಾಟ್ ಗಮ್ಮೋಸಿಸ್' ಅಥವಾ 'ಫೂಟ್‌ರಾಟ್' ರೋಗಗಳು ಬರುತ್ತವೆ. ಇದರಿಂದ ಕಾಂಡದ ಕೆಳಭಾಗ ಮತ್ತು ಬೇರುಗಳು ಕೊಳೆಯುತ್ತವೆ. ಶೀತ ಹವೆಯಲ್ಲಿ ಹಣ್ಣುಗಳಿಗೆ ಬ್ರೌನ್ ರಾಟ್ ಹರಡಿ ಹಣ್ಣುಗಳು ಕೊಳೆಯುತ್ತವೆ. ಶೇಖರಿಸಿರುವ ಹಣ್ಣುಗಳನ್ನು ಫೈಟಾಫ್ಥರ ಪೆನಿಸಿಲಿಯಂ. ಫೈ. ಡಿಜಿಟೇಟಮ್ (ಹಸಿರು ಬೂಸಲು) ಪೆನಿಸಿಲಿಯಂ ಇಟಾಲಿಕಂ, ಆಲ್ಟರ್‌ನೇರಿಯ ಸಿಟ್ರಸ್‌ಗಳು ನಾಶಮಾಡುತ್ತವೆ. ಅತಿ ಹಾನಿಕರವಾದ ವೈರಸ್

ರೋಗವೆಂದರೆ ಟ್ರಿಪ್ಸಿಸ್. ಇದು ಫ್ಲಾರಿಡ, ಕ್ಯಾಲಿಫೋರ್ನಿಯ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಜಾವಗಳಲ್ಲಿ ಸಾಮಾನ್ಯ. ಈ ರೋಗದಿಂದ ಗಿಡಗಳು ತಕ್ಷಣ ಸಾಯುತ್ತವೆ. ಇವುಗಳ ಜೊತೆಗೆ ಕಾಂಡದ ಒಣಗುವಿಕೆ (ಡ್ರೈಬ್ಯಾಕ್) ಎಲೆಗಳ ಮಚ್ಚೆರೋಗ, ಬೂದುರೋಗಗಳು ಕಿತ್ತಳೆ ಬೆಳೆಗೆ ಹಾನಿಕರ. (ಎಂ.ಎಚ್.ಎಂ.; ಜಿ.ಬಿ.)

**ಕಿತ್ತಾನಾರು :** ಅರ್ಟಿಕೇಸೀ ಕುಟುಂಬಕ್ಕೆ ಸೇರಿದ ಬೊಮೀರಿಯ ಎಂಬ ವೈಜ್ಞಾನಿಕ ಹೆಸರಿನ ಒಂದು ಜಾತಿಯ ಸಸ್ಯ. ಈ ಜಾತಿಯಲ್ಲಿ ಸು. 75 ಪ್ರಭೇದಗಳಿವೆ. ಭಾರತದಲ್ಲಿ 10 ಪ್ರಭೇದಗಳು ಬೆಳೆಯುತ್ತವೆ. ಇವುಗಳಲ್ಲೆಲ್ಲ ಬಹಳ ಸಾಮಾನ್ಯವಾದವೂ ಮುಖ್ಯವಾದವೂ ಇಂತಿವೆ– ಬೊಮೀರಿಯ ನೀವಿಯ, ಬೊ.ಮ್ಯಾಕ್ರೊಫಿಲ ಮತ್ತು ಬೊ.ಮಲಬಾರಿಕ. ನೀವಿಯ ಪ್ರಭೇದ ಅತ್ಯಂತ ಮುಖ್ಯವಾದುದು. ಇದನ್ನು ಚೀನದಲ್ಲೂ ಬೆಳೆಸುತ್ತಾರೆ. ಅಲ್ಲಿ ಇದಕ್ಕೆ ಚೀನಹುಲ್ಲು ಎಂಬ ಹೆಸರಿದೆ.

ಕಿತ್ತಾನಾರಿನ ಎಲ್ಲ ಪ್ರಭೇದಗಳೂ ಮೂಲಿಕೆ ಅಥವಾ ಪೊದೆ ಸಸ್ಯರೂಪದ ಬಹುವಾರ್ಷಿಕ ಗಿಡಗಳು. ಈ ಸಸ್ಯವನ್ನು ಬೀಜದ ಅಥವಾ ಬೇರು ಮತ್ತು ಕಾಂಡ 10 ತಿಂಗಳುಗಳಲ್ಲಿ ಬಲಿಯುತ್ತದೆ. ಕಾಂಡದ ಬಣ್ಣ ಎಳೆಯದಿದ್ದಾಗ ಹಸಿರಾಗಿದ್ದು ಬಲಿತಂತೆ ಕಂದುಬಣ್ಣಕ್ಕೆ ತಿರುಗುತ್ತದೆ.

ಇದರ ಕಾಂಡದ ಒಳತೊಗಟೆಯಿಂದ ಉತ್ತಮ ದರ್ಜೆಯ ನಾರು ದೊರೆಯುತ್ತದೆ. ಇದು ಸಸ್ಯ ನಾರುಗಳಲ್ಲಿಯೇ ಅತ್ಯಂತ ಉದ್ದವು (1–5 ಮೀ)ಬಾಳಿಕೆ ಬರುವಂಥದೂ ರೇಷ್ಮೆಯಂತೆ ಹೊಳಪು ಮತ್ತು ಮೃದುವಾದದ್ದೂ ಆಗಿರುತ್ತದೆ. ಆದರೆ ಎಳೆಗಳಿಗೆ ಸ್ಥಿತಿಸ್ಥಾಪಕಗುಣವಿಲ್ಲ. ಬೇಕಾದ ಹಾಗೆ ಮಣಿಸಲೂ ಬರುವುದಿಲ್ಲ. ಈ ನಾರು ವಾಯುಗುಣದ ವೈಪರೀತ್ಯ, ರಾಸಾಯನಿಕ ವಸ್ತುಗಳು, ಸಮುದ್ರದ ನೀರು ಮುಂತಾದವುಗಳಿಂದ ಏನೂ ಧಕ್ಕೆಗೊಳ್ಳುವುದಿಲ್ಲ. ಆದ್ದರಿಂದಲೇ ಇದು ನೀರಿನಲ್ಲಿ ನೆನೆಸಿದಾಗ ಹಿಗ್ಗುವುದೂ ಇಲ್ಲ, ಕುಗ್ಗುವುದೂ ಇಲ್ಲ. ನಾರನ್ನು ಹತ್ತಿ, ಉಣ್ಣೆ ಅಗಸೆನಾರುಗಳಿಗೆ ಬದಲಿ ವಸ್ತುವಾಗಿಯೂ ಸುಕ್ಕದ ಮತ್ತು ಕೊಳೆಯದ ಬಟ್ಟೆಗಳ ತಯಾರಿಕೆಗೂ ಬಳಸುತ್ತಾರೆ. ಜಮಖಾನೆಗಳೂ, ಗ್ಯಾಸ್ ಮ್ಯಾಂಟಲ್‍ಗಳೂ ಜರಿ ಮತ್ತು ಕರೆನ್ಸಿ ಹಾಳೆಗಳ ತಯಾರಿಕೆಗಳಿಗೆ ಇದರ ಬಳಕೆ ಹೆಚ್ಚು. ಅಸ್ಸಾಂ ಮತ್ತು ಬಂಗಾಲದಲ್ಲಿ ಇದನ್ನು ಒಂದು ವಿಶಿಷ್ಟ ಬಟ್ಟೆಯ (ಗ್ಲಾಸ್ ಕ್ಲಾತ್) ತಯಾರಿಕೆಗೂ ಬಳಸುತ್ತಾರೆ.

ಗಿಡ ಬಲಿಯುವ ಹಾಗೂ ಹೂಬಿಡುವ ಮುನ್ನವೇ ಕಾಂಡವನ್ನು ಕತ್ತರಿಸಿ ಅದರಿಂದ ನಾರನ್ನು ತೆಗೆಯುತ್ತಾರೆ. ಸಾಮಾನ್ಯವಾಗಿ ಎಲ್ಲ ಪ್ರಭೇದಗಳಿಂದಲೂ ನಾರನ್ನು ತೆಗೆಯಬಹುದು. ಆದರೆ ನಾರು ತೆಗೆಯುವುದು ಬಹಳ ಕಷ್ಟ. ಅಲ್ಲದೇ ಇದಕ್ಕೆ ಹೆಚ್ಚು ವೆಚ್ಚ ತಗಲುವುದರಿಂದ, ನೇರವಾಗಿ ನೇಯ್ಗೆ ಕೈಗಾರಿಕೆಯಲ್ಲಿ ಉಪಯೋಗಿಸುವಷ್ಟು ಹೆಚ್ಚು ಪ್ರಾಮಾಣದಲ್ಲಿ ನಾರನ್ನು ತೆಗೆಯಲಾಗುವುದಿಲ್ಲ. ಉಣ್ಣೆ, ರೇಷ್ಮೆ, ಹತ್ತಿ, ಜೊತೆ ನೇಯ್ಗೆ ಕೈಗಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಕಿತ್ತಾನಾರನ್ನು ಚೀನ, ಜಪಾನ್, ಜಾವ, ಫಾರ್ಮೋಸಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಭಾರತದಲ್ಲಿ ಹಿಮಾಲಯದ ತಪ್ಪಲು ಪ್ರದೇಶ, ಅಸ್ಸಾಂ ಮತ್ತು ಬಂಗಾಲಗಳಲ್ಲಿ ವಿಶೇಷವಾಗಿ ಬೆಳೆಸಲಾಗುತ್ತಿದೆ. (ಬಿ.ಪಿ.)

**ಕಿತ್ತೂರು[1] :** ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಒಂದು ಗ್ರಾಮ. ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಧಾರವಾಡ–ಬೆಳಗಾಂವಿಯ ನಡುವೆ ಇದೆ. ಕಿತ್ತೂರು ಹಿಂದೆ ಕನ್ನಡನಾಡಿನ ಮಹಾನಗರಗಳಲ್ಲೊಂದಾಗಿತ್ತು. 12ನೆಯ ಶತಮಾನದಿಂದ ಕಿತ್ತೂರು ಎಂಬ ಹೆಸರು ಬಳಕೆಯಲ್ಲಿದೆ. ಗೋವೆಯ ಕದಂಬ ವಂಶದ ಮೂರನೆಯ ಜಯಕೇಶಿಯ ಕಾಲದ ಕನ್ನಡ ಶಾಸನವೊಂದು ಇಲ್ಲಿಯ ಬಸವದೇವಾಲಯದಲ್ಲಿದೆ. ಇದೇ ಇಲ್ಲಿ ದೊರಕಿರುವ ಪ್ರಾಚೀನವಾದ ಮತ್ತು ಈ ಊರನ್ನು ಹೆಸರಿಸುವ ಶಾಸನ. 1534ರಲ್ಲಿ ಬೆಳಗಾಂವಿಯ ನವಾಬ ಅಸದ್‍ಖಾನನ ಮಿತ್ರ ಯೂಸುಫ್ ಖಾನನ ಜಹಗೀರಿಯಲ್ಲಿ ಕಿತ್ತೂರು ಸೇರಿತು. ಸು. 1586ರಲ್ಲಿ ಇಲ್ಲಿ ದೇಸಾಯರ ಆಡಳಿತ ಪ್ರಾರಂಭವಾಯಿತು. ಈ ಮನೆತನದ ಸ್ಥಾಪಕರಾದ ಹಿರೇಮಲ್ಲ ಮತ್ತು ಚಿಕ್ಕಮಲ್ಲ ಮಲೆನಾಡಿನ ಗೌಡಕುಲಕ್ಕೆ ಸೇರಿದ ಸಹೋದರರು. ಇವರು ಬಿಜಾಪುರದ ಸೈನ್ಯದೊಂದಿಗೆ ಇಲ್ಲಿಗೆ ಬಂದು ಸಂಪಗಾವ್ ಎಂಬಲ್ಲಿ ನೆಲೆಸಿದರು. ಕಾಲಕ್ರಮದಲ್ಲಿ ದೊಡ್ಡಮಲ್ಲ ಬಿಜಾಪುರ ಸೈನ್ಯಕ್ಕೆ ಸಲ್ಲಿಸಿದ ಅಮೋಘ ಸೇವೆಯಿಂದ ಸರದೇಶಮುಖಿ ದತ್ತಿಯನ್ನು ಪಡೆದ. ಬಿಜಾಪುರದ ಸುಲ್ತಾನರ ಅವನತಿಯ ಅನಂತರ ಕಿತ್ತೂರು ಸವಣೂರಿನ ನವಾಬರ ಅಧೀನವಾಯಿತು. ಆದರೆ 1746ರಲ್ಲಿ ಸವಣೂರಿನ ನವಾಬ ಕಿತ್ತೂರನ್ನು ಮರಾಠರ ವಶಕ್ಕೆ ಕೊಡಬೇಕಾಗಿತ್ತು. 1778ರಲ್ಲಿ ಹೈದರ್ ಅಲಿ ಕಿತ್ತೂರು ದೇಸಾಯಿಯನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಯನ್ನು ವಸೂಲಿ ಮಾಡಿದರೂ ಮುಂದಿನ ವರ್ಷದಲ್ಲಿ ಪರಶುರಾಮಭಾವು ಅದನ್ನು ವಶಪಡಿಸಿಕೊಂಡು ದೇಸಾಯಿಯನ್ನು ಸೆರೆಹಿಡಿದ. ಇತ್ತಕಡೆಯಿಂದ ಟಿಪ್ಪುಸುಲ್ತಾನ್ ಕಿತ್ತೂರಿನ ಮೇಲೆ ಯುದ್ಧ ಮಾಡಿ ಆಗಿನ ದೇಸಾಯಿ ಮಲ್ಲಸರ್ಜನನ್ನು ಬಂಧಿಸಿ ಕಿತ್ತೂರಿನಲ್ಲಿ ಮೈಸೂರಿನ ಸೈನ್ಯದ ಭಾಗವೊಂದನ್ನು ಇರಿಸಿದ. ಕಾಲಕ್ರಮದಲ್ಲಿ ಕಿತ್ತೂರು ಮರಾಠರ ವಶವಾಯಿತು. ಪರಶುರಾಮಭಾವು ಕಿತ್ತೂರಿನಲ್ಲಿ ಮಮ್ಲುತ್‍ದಾರನನ್ನು ನಿಯಮಿಸಿ ಅದನ್ನು ಧಾರವಾಡಕ್ಕೆ ಅಧೀನವನ್ನಾಗಿ ಮಾಡಿದ. 1802ರಲ್ಲಿ ಮಲ್ಲಸರ್ಜ ಪೇಷ್ವೆಗಳಿಗೆ ಕಪ್ಪಕಾಣಿಕೆ ಸಲ್ಲಿಸುತ್ತಿದ್ದರೂ ವೆಲ್ಲೆಸ್ಲಿಯ ಮೈತ್ರಿಯನ್ನು ಬೆಳೆಸಿಕೊಂಡು ಮರಾಠರಿಂದ ಸ್ವತಂತ್ರನಾಗಲು ಯೋಚಿಸಿ ವೆಲ್ಲೆಸ್ಲಿಯ ಯುದ್ಧಗಳಲ್ಲಿ ಸಹಾಯಮಾಡಿದ. ಇದರಿಂದ ಸಂತೋಷಗೊಂಡ ವೆಲ್ಲೆಸ್ಲಿ ಮರಾಠರಿಗೂ ಮಲ್ಲಸರ್ಜನಿಗೂ ಮೈತ್ರಿ ಏರ್ಪಡಿಸಿದ. ಇದರ ಪ್ರಕಾರ ಮಲ್ಲಸರ್ಜ ಸ್ವತಂತ್ರವಾಗಿ ಆಳಿದರೂ ಪೇಷ್ವೆಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಬೇಕಾಯಿತು. ಆದರೆ ಸ್ವಲ್ಪ ಸಮಯದಲ್ಲಿಯೇ ಮಲ್ಲಸರ್ಜ ಮರಾಠರಿಂದ ಸೆರೆಯಾಗಿ ಪುಣೆಯ ಕಾರಾಗೃಹದಲ್ಲಿ ಬಂಧಿಯಾದ. 1816ರಲ್ಲಿ ಬಂಧಮುಕ್ತನಾದ ಮಲ್ಲಸರ್ಜ ಕಿತ್ತೂರಿಗೆ ಹಿಂದಿರುಗುವ ಮಾರ್ಗದಲ್ಲಿ ಮೃತನಾದ. ಕಿತ್ತೂರಿನ ಅರಸರಲ್ಲಿ ಮಲ್ಲಸರ್ಜನೇ ಅತ್ಯಂತ ಮುಖ್ಯನಾದವ.

ಮಲ್ಲಸರ್ಜನ ಅನಂತರ ಅವನ ಜ್ಯೇಷ್ಠಪುತ್ರ ಶಿವಲಿಂಗರುದ್ರಸರ್ಜ ದೊರೆಯಾದ. ಇವನ ಕಾಲದಲ್ಲಿ ಬ್ರಿಟಿಷರಿಗೂ ಮರಾಠರಿಗೂ ವೈಮನಸ್ಯ ವೃದ್ಧಿಯಾಗಿ, 1818ರಲ್ಲಿ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಶಿವಲಿಂಗರುದ್ರಸರ್ಜ ಬ್ರಿಟಿಷರಿಗೆ ವಿಶೇಷವಾಗಿ ಸಹಾಯ ಮಾಡಿದ. ಇದರಿಂದ ಸಂತೋಷಗೊಂಡ ಬ್ರಿಟಿಷರು ಶಿವಲಿಂಗರುದ್ರ ಸರ್ಜನಿಗೆ ಕಿತ್ತೂರನ್ನು ಜಹಗೀರಿಯಾಗಿ ಕೊಟ್ಟರು. ಶಿವಲಿಂಗರುದ್ರಸರ್ಜ ಬ್ರಿಟಿಷರೊಡನೆ ಮೈತ್ರಿಯಿಂದಿದ್ದು 1824 ರವರೆಗೆ ರಾಜ್ಯವಾಳಿದ. ಇವನಿಗೆ ಮಕ್ಕಳಿರಲಿಲ್ಲವಾದ್ದರಿಂದ ಶಿವಲಿಂಗಪ್ಪನೆಂಬ ಬಾಲಕನನ್ನು ದತ್ತು ಸ್ವೀಕಾರಮಾಡಿದರೂ ಅವನು ಸಂಸ್ಥಾನದ ರಾಜನಾಗಲು ಬ್ರಿಟಿಷ್ ಅಧಿಕಾರಿ ಥ್ಯಾಕರೆ ಒಪ್ಪಲಿಲ್ಲ. ಮಲ್ಲಸರ್ಜನ ವಿಧವೆ ಚೆನ್ನಮ್ಮನೂ ಇತರರೂ ಬ್ರಿಟಿಷ್ ಅಧಿಕಾರಿಗಳನ್ನು ಬಹುವಾಗಿ ಪ್ರಾರ್ಥಿಸಿದರೂ ಅದರಿಂದ ಉಪಯೋಗವಾಗಲಿಲ್ಲ. ಥ್ಯಾಕರೆಯ ಕುತಂತ್ರವನ್ನು ಗವರ್ನರ್ ಎಲ್‍ಫಿನ್‍ಸ್ಟನ್ನನೂ ಅರ್ಥಮಾಡಿಕೊಳ್ಳಲಿಲ್ಲ. ಸಂತತಿಹೀನವಾದ ಕಿತ್ತೂರು ಸಂಸ್ಥಾನ ಬ್ರಿಟಿಷರ ಆಳ್ವಿಕೆಗೆ ಒಳಪಡಬೇಕೆಂದು ಬ್ರಿಟಿಷರು ಹಠಹಿಡಿದರು. ಕಿತ್ತೂರಿನ ಅಭಿಮಾನಿ ಪ್ರಜೆಗಳು ತಮ್ಮ ಸಂಸ್ಥಾನ ಬ್ರಿಟಿಷರಿಗೆ ಸೇರುವುದನ್ನು ತಪ್ಪಿಸಲು ಚೆನ್ನಮ್ಮನ ನೇತೃತ್ವದಲ್ಲಿ ಪ್ರಾಣಾರ್ಪಣೆ ಮಾಡಲು ಸಿದ್ಧರಾದರು. ಚೆನ್ನಮ್ಮನ ನೇತೃತ್ವದಲ್ಲಿ ಬ್ರಿಟಿಷರಿಗೂ ಕಿತ್ತೂರು ಸೈನ್ಯಕ್ಕೂ 1824 ಅಕ್ಟೋಬರ್ 23ರಂದು ಯುದ್ಧ ನಡೆಯಿತು. ಯೋಧರು ಥ್ಯಾಕರೆಯನ್ನೂ ಅವನ ಸಹಾಯಕರನ್ನೂ ಕೊಂದರು. ನೂರಾರು ಬ್ರಿಟಿಷ್ ಸೈನಿಕರು ಸೆರೆ ಸಿಕ್ಕಿದರು. ಇದರಿಂದ ಕ್ರೋಧಗೊಂಡ ಬ್ರಿಟಿಷರು ಹೇಗಾದರೂ ಚೆನ್ನಮ್ಮನನ್ನು ಸೋಲಿಸಿ, ಕಿತ್ತೂರನ್ನು ವಶಮಾಡಿಕೊಳ್ಳಲು ನಿರ್ಧರಿಸಿದರು. ಮೈಸೂರು, ಶೋಲಾಪುರ ಮತ್ತು ಇತರ ದಂಡು ಪ್ರದೇಶಗಳಿಂದ ಬ್ರಿಟಿಷ್ ಸೈನ್ಯಗಳು ಬಂದು ಕಿತ್ತೂರಿನಲ್ಲಿ ಸೇರಿಕೊಂಡವು. ಶೂರಳಾದರೂ ಶಾಂತಿಪ್ರಿಯಳಾದ ಚೆನ್ನಮ್ಮ ರಕ್ತಪಾತವನ್ನು ನಿಲ್ಲಿಸುವ ಸಲುವಾಗಿ ಗವರ್ನರ್ ಎಲ್‍ಫಿನ್‍ಸ್ಟನ್ನನಿಗೆ ಪತ್ರ ಬರೆದು ಥ್ಯಾಕರೆಯ ಕುತಂತ್ರವನ್ನು ವಿವರಿಸಿದಳು. ಪ್ರಯೋಜನವಾಗಲಿಲ್ಲ. ಕಮಿಷನರಾಗಿದ್ದ ಚಾಪ್ಲಿನನ ಮೋಸದ ಮಾತನ್ನು ನಂಬಿ, ಸೆರೆಯಲ್ಲಿದ್ದ ಬ್ರಿಟಿಷ್‍ಯೋಧರನ್ನೆಲ್ಲ ಚೆನ್ನಮ್ಮ ವಿಮೋಚನೆಗೊಳಿಸಿದಳು. ಚಾಪ್ಲಿನ್ ಚೆನ್ನಮ್ಮನ ಮೇಲೆ ಯುದ್ಧ ಹೂಡಿದ. ಬ್ರಿಟಿಷ್ ಸೈನ್ಯಕ್ಕೂ ಕಿತ್ತೂರಿನ ಸೈನ್ಯಕ್ಕೂ ನಡೆದ ಘೋರ ಕದನದಲ್ಲಿ ಸ್ವತಃ ಚೆನ್ನಮ್ಮನೇ ಸೇನಾಧಿಪತ್ಯವನ್ನು ವಹಿಸಿಕೊಂಡು ಯುದ್ಧವನ್ನು ಎಚ್ಚರಿಕೆಯಿಂದ ನಿರ್ದೇಶಿಸಿದಳು. ದೇಶಾಭಿಮಾನಿಗಳೂ ಯೋಧರೂ ಆದ ಕಿತ್ತೂರಿನ ಸೈನಿಕರು ತಾಯಿನಾಡಿನ ರಕ್ಷಣೆಗೋಸ್ಕರ ಕಾದಾಡಿದರೂ ಹೆಚ್ಚು ಸಂಖ್ಯೆಯಲ್ಲಿದ್ದ ಮತ್ತು ಒಳ್ಳೆಯ ಆಯುಧಗಳನ್ನು ಹೊಂದಿದ್ದ ಬ್ರಿಟಿಷ್ ಸೈನ್ಯದ ಮುಂದೆ ಸೋತರು. ಕೊನೆಗೆ ಡಿಸೆಂಬರ್ 3ನೆಯ ದಿನಾಂಕದಂದು ಕಿತ್ತೂರು ಕೋಟೆ ಬ್ರಿಟಿಷರ ವಶವಾಯಿತು. ರಾಣಿ ಚೆನ್ನಮ್ಮ ಮತ್ತು ಅವಳ ಬಂಧುಗಳು ಬ್ರಿಟಿಷರ ಬಂಧಿಗಳಾದರು. ಅವಳನ್ನು ಬೈಲಹೊಂಗಲದ ಕಾರಗೃಹದಲ್ಲಿಡಲಾಯಿತು. ಚೆನ್ನಮ್ಮ 1829, ಫೆಬ್ರವರಿ 21 ರಂದು ಸೆರೆಯಲ್ಲೆ ನಿಧನಳಾದಳು.

ಕಿತ್ತೂರಿನ ಪ್ರಜೆಗಳಲ್ಲಿ ಅಡಗಿದ್ದ ದೇಶಾಭಿಮಾನ ನಶಿಸಿಹೋಗದೆ ಮತ್ತೊಂದು ಸ್ವಾತಂತ್ರ್ಯ ಸಮರಕ್ಕೆ ಎಡೆಮಾಡಿಕೊಟ್ಟಿತು. ಸಂಗೊಳ್ಳಿ ರಾಯಣ್ಣನೆಂಬ ಸಾಮಾನ್ಯ ಪ್ರಜೆ ಇದರ ಮುಖಂಡ. ಬಿಚ್ಚುಗತ್ತಿ ಚೆನ್ನಬಸಪ್ಪ, ಗಜವೀರ ಬಾಲಣ್ಣ ಮುಂತಾದ ತನ್ನ ಶೂರಮಿತ್ರರ ಸಹಾಯದಿಂದ ಒಂದು ಸಣ್ಣ ಸೈನ್ಯವನ್ನು ಮಾಡಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಲು ಸಿದ್ಧನಾದ. ದೇಸಾಯಿಯ ದತ್ತುಪುತ್ರ ಶಿವಲಿಂಗಪ್ಪನನ್ನು ಕಿತ್ತೂರಿನ ರಾಜನಾಗಿ ಮಾಡುವ ಉದ್ದೇಶವನ್ನು ಸಾರಿ ಬ್ರಿಟಿಷರ ಸರ್ಕಾರಿ ಕಟ್ಟಡಗಳನ್ನು ಸುಟ್ಟುಹಾಕಿ, ಕೈಗೆ ಸಿಕ್ಕಿದ ಬ್ರಿಟಿಷ್ ಅಧಿಕಾರಿಗಳನ್ನು ಕೊಂದ. ಜನಪ್ರಿಯ ರಾಯಣ್ಣ ಸುಮಾರು ನಾಲ್ಕು ತಿಂಗಳುಗಳ ಕಾಲ ಬ್ರಿಟಿಷರ ಕಣ್ಣಿಗೆ ಬೀಳದೆ ವಿಧ್ವಂಸಕ ಕಾರ್ಯಗಳಲ್ಲಿ ತೊಡಗಿದ. ಇದರಿಂದ ಬ್ರಿಟಿಷರು ತತ್ತರಿಸಿದರು. ಆದರೆ ಹಣದ ಆಸೆಯಿಂದ ರಾಯಣ್ಣನನ್ನು ಪತ್ತೆ ಹಚ್ಚುವುದರಲ್ಲಿ ಕೆಲವರು ಸಹಾಯ ಮಾಡಿದರು. ರಾಯಣ್ಣ ಸೆರೆ ಸಿಕ್ಕಿದಾಗ ಬ್ರಿಟಿಷರು ರಾಯಣ್ಣನನ್ನು ದೇಶದ್ರೋಹಿಯೆಂದು ಗಲ್ಲಿಗೇರಿಸಿದರು. ಕಿತ್ತೂರು ಬ್ರಿಟಿಷರ ವಶವಾಯಿತು.

ಕಿತ್ತೂರು ಇಂದು ಸಣ್ಣ ಗ್ರಾಮವಾಗಿದ್ದರೂ ಚೆನ್ನಮ್ಮ, ರಾಯಣ್ಣ ಮುಂತಾದ ವೀರರ ಕಥೆಯನ್ನು ಹೇಳಲು ಅಲ್ಲಿ ಪಾಳುಬಿದ್ದಿರುವ ಭವ್ಯ ಕೋಟೆಯ ಅವಶೇಷಗಳು ಇಂದಿಗೂ

ನಿಂತಿವೆ. ಕೋಟೆಯ ಮಣ್ಣಿನ ಗೋಡೆ 2.1 ಮೀ ದಪ್ಪವಿದೆ. ಎತ್ತರದ ದಿಬ್ಬದ ಮೇಲಿರುವುದರಿಂದ ಕೋಟೆ ಅನೇಕ ಕಿಮೀವರೆಗೆ ಎದ್ದು ಕಾಣುತ್ತದೆ. ಕೋಟೆ ಚೆನ್ನಾಗಿದ್ದ ಕಾಲದಲ್ಲಿ ಇದೊಂದು



ಕಿತ್ತೂರಿನ ಕೋಟೆಯ ಅವಶೇಷ

ಅಸಾಧಾರಣವಾದ ದುರ್ಗವಾಗಿದ್ದಿರಬಹುದೆಂದು ಬ್ರಿಟಿಷ್ ಚರಿತ್ರಕಾರರು ಒಪ್ಪಿದ್ದಾರೆ. ಈ ಕೋಟೆಗೆ ಬಹು ಸಮೀಪದಲ್ಲಿಯೇ ದೇಸಾಯರ ಅರಮನೆಯಿದ್ದ ಸ್ಥಳವಿದೆ. ಅರಮನೆಯ ಬಹುಭಾಗ ನಾಶವಾಗಿದ್ದರೂ ಅದರ ಭವ್ಯತೆ ಇನ್ನೂ ಎದ್ದುಕಾಣುತ್ತದೆ. ಅದರ ಹೊರ ಅಂಗಳದ ಉದ್ದ ಸು. 30.30 ಮೀ ಅಗಲ 9 ಮೀ ತೇಗದ ಮರದ ಕಂಬಗಳ ಮೇಲಣ ಕೆತ್ತನೆಯ ಕೆಲಸ ನಾಜೂಕಾದುದು. ದಿಮ್ಮಿಗಳನ್ನೇ ಛಾವಣಿಗಾಗಿ ಬಳಸಿದ್ದಾರೆ. ಇವೂ ಕೆತ್ತನೆಯ ಕೆಲಸದಿಂದ ಕೂಡಿವೆ. ನೆಲಕ್ಕೆ ಹಾಸಲು ಉಪಯೋಗಿಸಿದ್ದ ಹೊಳಪುಳ್ಳ ಮತ್ತು ನಯಮಾಡಿದ ಕಲ್ಲು ಚಪ್ಪಡಿಗಳು ಅಲ್ಲಲ್ಲಿ ಬಿದ್ದಿವೆ. ಇವು ಆಗಿನ ಕಾಲದ ಶ್ರೀಮಂತಿಕೆ, ಕಲಾವಂತಿಕೆಗಳ ಮೂಕ ಸಾಕ್ಷಿಗಳಾಗಿವೆ. (ಎ.ವಿ.ಎನ್;ಎಂ.ಎಚ್.)

**ಕಿತ್ತೂರು**[2] **:** ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಒಂದು ಗ್ರಾಮ. ಹೆಗ್ಗಡದೇವನ ಕೋಟೆಯ ದಕ್ಷಿಣಕ್ಕೆ ಕಪಿಲಾ ನದಿಯ ಬಲದಂಡೆಯ ಮೇಲಿದೆ. ಕೀರ್ತಿಪುರ ಅಥವಾ ಕಿತ್ತಿಪುರ ಇದರ ಪ್ರಾಚೀನ ಹೆಸರು. ಇದು ಪುನ್ನಾಟರಾಜರ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. 11ನೆಯ ಶತಮಾನದ ಶಾಸನ ಒಂದರಲ್ಲಿ ಇದು ಅನಂತಕೀರ್ತಿಯ ಮಹಾನಗರವೆಂಬ ಉಲ್ಲೇಖವಿದೆ. ಈ ಊರಿನ ಉತ್ತರಕ್ಕೆ ಕಪಿಲಾ ನದಿಯ ದಂಡೆಯಲ್ಲಿ ಇದ್ದ ಪುರಾತನ ನಗರದ ಅವಶೇಷಗಳು ಈಗಲೂ ಕಂಡುಬರುತ್ತವೆ. ಅಲ್ಲೆಲ್ಲ ಬಿದ್ದಿರುವ ಇಟ್ಟಿಗೆ ಚುರೂಗಳೂ ಮನೆಗಳ ತಳಪಾಯಗಳೂ ಕೆಂಪು ಕಪ್ಪು ಮಣ್ಣಿನ ಮಡಕೆಯ ಚೂರುಗಳೂ ಮುಂತಾದವು ಇಲ್ಲಿ ಸುಮಾರು ಒಂದು–ಎರಡನೆಯ ಶತಮಾನಗಳಿಂದಲೂ ಒಂದು ಊರು ಇದ್ದುದಕ್ಕೆ ಸಾಕ್ಷಿಯಾಗಿವೆ.

ಇಲ್ಲಿರುವ ರಾಮೇಶ್ವರ ದೇವಾಲಯ ಪ್ರಾಚೀನವಾದದ್ದು. ಈಗಿರುವ ದೇವಾಲಯ ಇತ್ತೀಚೆಗೆ ನಿರ್ಮಿತವಾದುದಾದರೂ ಅದರಲ್ಲಿ ಪ್ರಾಚೀನ ದೇವಾಲಯದ ಅನೇಕ ಅವಶೇಷಗಳನ್ನು ಕಾಣಬಹುದಾಗಿದೆ. ದೇವಾಲಯದಲ್ಲಿ ಪಲ್ಲವ ಶೈಲಿಯ ಸಿಂಹದ ಕಂಬಗಳು, ಸುಂದರವಾಗಿ ಕೆತ್ತಿರುವ ದ್ವಾರಪಾಲಕರು, ಮಹಿಷಮರ್ದಿನಿ ಮುಂತಾದ ಶಿಲ್ಪಗಳಿವೆ. ಇವು ಗಂಗ, ಪಲ್ಲವ ಶೈಲಿಯವು. ಊರಿನಲ್ಲಿ ಅಲ್ಲಲ್ಲಿ ಬಿದ್ದಿರುವ ಗಂಗರ ಶೈಲಿಯ ಕಂಬಗಳೂ ಶಿಲ್ಪಗಳೂ ಈ ಊರಿನ ಪ್ರಾಚೀನತೆಗೆ ಸಾಕ್ಷಿಯಾಗಿವೆ. (ಎಂ.ಎಚ್.)

**ಕಿತ್ತೂರುಚೆನ್ನಮ್ಮ:** 1778–1829. ಕನ್ನಡನಾಡಿನ ವೀರ ಮಹಿಳೆಯರಲ್ಲಿ ಅಗ್ರಪಂಕ್ತಿಗೆ ಸೇರಿದ, ಸ್ವಾತಂತ್ರ್ಯ ಸ್ವಾಭಿಮಾನಗಳ ಸಾಕಾರಮೂರ್ತಿಯಾದ ಕಿತ್ತೂರಿನ ರಾಣಿ. ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಕಿರಿಯ ಹೆಂಡತಿ. ಕಾಗತಿ ದೇಸಾಯಿಯ ಮಗಳು. ತನ್ನ ಪುಟ್ಟ ರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ಸೆಟೆದು ನಿಂತು ನಡೆಸಿದ ಹೋರಾಟ, ಅಲ್ಲಿ ತೋರಿಸಿದ ಧೈರ್ಯ, ಸಾಹಸ, ಕೆಚ್ಚುಗಳು ಈಕೆಯನ್ನು ಅಜರಾಮರವಾದ ಕೀರ್ತಿಶಿಖರಕ್ಕೇರಿಸಿದೆ. ಚೆನ್ನಮ್ಮನಿಂದ ಕಿತ್ತೂರು ಪ್ರಸಿದ್ಧವಾಗಿದೆ.

ಮಲ್ಲಸರ್ಜನ ಕಾಲದಲ್ಲಿ ಹೈದರ್, ಟಿಪ್ಪು ಹಾಗೂ ಮರಾಠರು ಕಿತ್ತೂರಿನ ಮೇಲೆ ದಾಳಿ ಮಾಡಿದ್ದರು. ಮರಾಠರು ದೇಸಾಯಿಯನ್ನು ಸೆರೆಹಿಡಿದಿದ್ದರು. ರಾಣಿ ಚೆನ್ನಮ್ಮನೇ



ಕಿತ್ತೂರು ಚೆನ್ನಮ್ಮನ ಪ್ರತಿಮೆ

ರಾಜ್ಯದ ಆಡಳಿತ ಸೂತ್ರಗಳನ್ನು ಹಿಡಿದಿದ್ದಳು (1809–10). ಪೇಶ್ವೆಯ ಬಂಧನದಲ್ಲಿದ್ದ ಮಲ್ಲಸರ್ಜ ತನ್ನ ಕಡೆಗಾಲದಲ್ಲಿ ಬಿಡುಗಡೆ ಹೊಂದಿ ಕಿತ್ತೂರಿಗೆ ಹಿಂತಿರುಗಿದೊಡನೆಯೇ ತೀರಿಕೊಂಡ. ಅವನ ಮಗ ಶಿವಲಿಂಗರುದ್ರ ಸರ್ಜ ಪಟ್ಟಕ್ಕೆ ಬಂದು (1816) ಎಂಟು ವರ್ಷಗಳ ಕಾಲ ಮಾತ್ರ ಆಳಿ, ಕ್ಷಯರೋಗಪೀಡಿತನಾಗಿ ತೀರಿಕೊಂಡ. ಮಕ್ಕಳಿಲ್ಲದಿದ್ದುದರಿಂದ ಮಾಸ್ತಮರಡಿ ಗೌಡರ ಮಗ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡಿದ್ದ ಚೆನ್ನಮ್ಮನೇ ಆಗ ದತ್ತಕನ ಹೆಸರಿನಿಂದ ರಾಜ್ಯಭಾರ ಮಾಡುತ್ತಿದ್ದಳು. ಶಿವಲಿಂಗರುದ್ರ ಸರ್ಜ ನೀಡಿದ ಸಹಾಯ ಸಹಕಾರಗಳಿಂದ ಸುಪ್ರೀತರಾಗಿದ್ದ ಬ್ರಿಟಿಷರು ಆತನಿಗೆ ವಂಶಪಾರಂಪರ್ಯವಾಗಿ ಕಿತ್ತೂರನ್ನಾಳಿಕೊಂಡಿರುವಂತೆ ಸನ್ನದನ್ನು ಕೊಟ್ಟಿದ್ದರು. ಆದರೆ ಅವನ ಮರಣದೊಂದಿಗೆ ಅವರಿಗೆ ಕಿತ್ತೂರು ಸಂಸ್ಥಾನವನ್ನು ಕಬಳಿಸಲು ನೆಪ ಸಿಕ್ಕಂತಾಯಿತು. ಧಾರವಾಡದಲ್ಲಿ ಕಲೆಕ್ಟರನೂ ರಾಜಕೀಯ ಪ್ರತಿನಿಧಿಯೂ ಆಗಿದ್ದ ಥ್ಯಾಕರೆ ದಖನ್ನಿನ ಕಮಿಷನರ್ ಆಗಿದ್ದ ಚಾಪ್ಲಿನ್ನನ ಜೊತೆಗೂಡಿ ಸನ್ನಾಹ ಮಾಡಿ ದತ್ತು ಸ್ವೀಕಾರವನ್ನು ಶಿವಲಿಂಗರುದ್ರ ಸರ್ಜ ಮಾಡಿಕೊಂಡಿಲ್ಲವೆಂದೂ ಅದು ಅವನ ಮರಣಾನಂತರ ಆದುದೆಂದೂ ತನ್ನ ಮೇಲಧಿಕಾರಿ ಗೌರ್ನರ್ ಎಲ್ಫಿನ್‌ಸ್ಟನ್‌ಗೆ ಸುಳ್ಳುವರದಿ ಕಳುಹಿಸಿ ಅವನನ್ನು ತಪ್ಪುದಾರಿಗೆಳೆದ. ಅಲ್ಲದೆ ತನ್ನ ಸರ್ಕಾರದಿಂದ ಉತ್ತರ ಬರುವವರೆಗೆ ಬನ್ನೂರು ಮಲ್ಲಪ್ಪಶೆಟ್ಟಿ ಮತ್ತು ವೆಂಕಟರಾವ್ ಎಂಬ ಕಾರಭಾರಿಗಳಿಗೆ ಆಡಳಿತವನ್ನು ಒಪ್ಪಿಸಬೇಕೆಂದು ತಿಳಿಸಿ ಖಜಾನೆಗೆ ಬೀಗಮುದ್ರೆ ಹಾಕಲು ಪ್ರಯತ್ನಿಸಿದ. ಹೀಗೆ ಥ್ಯಾಕರೆ ತನ್ನ ರಾಜ್ಯದ ಕಾರ್ಯಭಾರದಲ್ಲಿ ಅನಾವಶ್ಯಕವಾಗಿ ತಲೆಹಾಕಿದುದು ಚೆನ್ನಮ್ಮನ ಸ್ವಾಭಿಮಾನವನ್ನು ಕೆಣಕಿತು. ಚೆನ್ನಮ್ಮನೂ ಸಂಸ್ಥಾನದ ಹಿರಿಯರೂ ಇದಕ್ಕೆ ಎಷ್ಟು ಮಾತ್ರಕ್ಕೂ ಒಪ್ಪಲು ಸಿದ್ಧರಿರಲಿಲ್ಲ. ಆದರೂ ಚೆನ್ನಮ್ಮ ತಾಳ್ಮೆಯಿಂದ ದತ್ತಕ ಮತ್ತು ಆಡಳಿತದ ವಿಷಯವಾಗಿ ಪತ್ರವ್ಯವಹಾರ ನಡೆಸಿದಳು. ಸಂಸ್ಥಾನದ ಪರವಾಗಿ ಸಂಧಾನ ನಡೆಸಲು ಲಿಂಗಾಭಟ್ಟ, ರಾಚಪ್ಪ ಎಂಬ ಇಬ್ಬರು ವಕೀಲರನ್ನು ಕಂಪನಿ ಸರ್ಕಾರಕ್ಕೆ ಕಳುಹಿಸಿದಳು. ಎಂಥ ಸಂದರ್ಭವೇ ಬರಲಿ, ಸಂಸ್ಥಾನದ ಅಸ್ತಿತ್ವವನ್ನು ಉಳಿಸಬೇಕೆಂದು ಸಂಕಲ್ಪಿಸಿ ಸೈನ್ಯವನ್ನು ಸಜ್ಜುಗೊಳಿಸಲು ಏರ್ಪಡಿಸಿದಳು. ಬೇರೆ ಬೇರೆ ಸ್ಥಳಗಳಲ್ಲಿ ಇರಿಸಿದ ಸರದಾರರನ್ನೂ ಸೈನಿಕರನ್ನೂ ಕರೆಸಿಕೊಂಡಳು. ಇದು ಇಂಗ್ಲಿಷರಿಗೆ ತಿಳಿಯದಿರಲಿಲ್ಲ. ಥ್ಯಾಕರೆ 1824ರ ಅಕ್ಟೋಬರ್ 23ರಂದು ಸೈನ್ಯಸಮೇತನಾಗಿ ಕಿತ್ತೂರಿಗೆ ಬಂದ. ಕೋಟೆಯ ಬಾಗಿಲನ್ನು ಭದ್ರಪಡಿಸಲಾಗಿತ್ತು. ಕೋಟೆಯಲ್ಲಿ ಸೈನ್ಯ ಯುದ್ಧಕ್ಕೆ ಸಜ್ಜಾಗಿ ನಿಂತಿತ್ತು. ಬಾಗಿಲಿಗೆ ಎರಡು ಫಿರಂಗಿಗಳನ್ನು ಗುರಿಮಾಡಿ ನಿಲ್ಲಿಸಿದ್ದ ಸೇನಾಧಿಕಾರಿಗಳು ಇಪ್ಪತ್ತು ನಿಮಿಷಗಳೊಳಗಾಗಿ ಬಾಗಿಲು ತೆರೆಯದಿದ್ದರೆ ಲಗ್ಗೆ ಹಾಕುವುದಾಗಿ ಘೋಷಿಸಿದರು.

ಕಿತ್ತೂರು ಜಗ್ಗಲಿಲ್ಲ, ಯುದ್ಧವನ್ನೇ ಆರಿಸಿಕೊಂಡಿತು. ಗುರುಸಿದ್ದಪ್ಪನ ನಾಯಕತ್ವದಲ್ಲಿ ಕಿತ್ತೂರು ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ಬಿದ್ದಿತು. ಕತ್ತಿಯನ್ನು ಹಿರಿದು ಕುದುರೆಯನ್ನೇರಿದ ಚೆನ್ನಮ್ಮ ಸೈನಿಕರನ್ನು ಹುರಿದುಂಬಿಸಿದಳು. ಆಕೆಯ ಮೈಗಾವಲಿನ ಭಟ ಅಮಟೂರ ಬಾಳಪ್ಪ ಥ್ಯಾಕರೆಯನ್ನು ಗುಂಡಿಟ್ಟುಕೊಂದ. ಭೀಕರ ಕಾಳಗ ನಡೆಯಿತು. ಇಂಗ್ಲಿಷರ ಕಡೆ ಹಲವರು ಸತ್ತರು. ಅವರಿಗೆ ಸೋಲಾಯಿತು. ಹಲವರು ಸೆರೆ ಸಿಕ್ಕರು. ಅವರಲ್ಲಿ ಸ್ಟೀವನ್‌ಸನ್, ಎಲಿಯಟ್ ಮುಖ್ಯರು. ಅವರೊಂದಿಗೆ ಹಲವು ಮಕ್ಕಳೂ ಇದ್ದರು. ಚೆನ್ನಮ್ಮ ಮಕ್ಕಳ ವಿಷಯದಲ್ಲಿ ತುಂಬ ದಯೆಯಿಂದ ನಡೆದುಕೊಂಡು ಅವರನ್ನು ಸುಖವಾಗಿರಿಸಿ ಜೋಕೆಯಿಂದ ಕಾಯಲು ಆಜ್ಞಾಪಿಸಿದಳು. ಈ ಮುತ್ತಿಗೆಯಲ್ಲಿ ಚೆನ್ನಮ್ಮನಿಗೆ ಪೂರ್ಣ ಜಯವಾಯಿತು.

ಬ್ರಿಟಿಷರ ಸೋಲಿನ ಸುದ್ದಿಯನ್ನು ಕೇಳಿದೊಡನೆ ಚಾಪ್ಲಿನ್ ಮತ್ತು ಲೆಫ್ಟಿನೆಂಟ್ ಕರ್ನಲ್ ಡೀಕನ್ ದೊಡ್ಡ ಸೈನ್ಯದೊಡನೆ ಕಿತ್ತೂರಿನ ಮೇಲೆ ಸಾಗಿಬಂದರು (3–11–1824). ಯುದ್ಧವನ್ನು ತಪ್ಪಿಸಲು ಚೆನ್ನಮ್ಮ ಕಿತ್ತೂರಿನ ಪರಿಸ್ಥಿತಿಯನ್ನು ವಿವರಿಸಿ ಗೌರ್ನರಿಗೂ ಕಮಿಷನರ್‌ಗೂ ಬರೆಸಿ ತಿಳಿಸಿದುದು ವ್ಯರ್ಥವಾಯಿತು. ಕಿತ್ತೂರಿಗೆ ಬಲವಾದ ಮುತ್ತಿಗೆ ಬಿತ್ತು. ಬಂದಿಗಳನ್ನು ಬಿಡಿಸಲು ಚಾಪ್ಲಿನ್ ಪ್ರಯತ್ನಿಸಿದ. ಆದರೆ ಕಿತ್ತೂರಿನ ಆಡಳಿತದಲ್ಲಿ ಆಂಗ್ಲರು ಪ್ರವೇಶ ಮಾಡುವುದಿಲ್ಲವೆಂಬ ಭರವಸೆ ಕೊಡುವವರೆಗೂ ಬಂದಿಗಳ ಬಿಡುಗಡೆ ಇಲ್ಲವೆಂದು ಚೆನ್ನಮ್ಮ ಸ್ಪಷ್ಟವಾಗಿ ತಿಳಿಸಿದಳು. ಚಾಪ್ಲಿನ್ನನ ಬೆದರಿಕೆಗಳಿಗೆ ಆಕೆ ಅಂಜಲಿಲ್ಲ. ಎರಡು ಕಡೆಯೂ ಯುದ್ಧ ಸಿದ್ಧತೆಗಳಾದುವು. ಏನೇ ಆಗಲಿ ಶರಣಾಗತರಾಗುವುದು ಅವಮಾನಕರವೆಂದೂ ಕಡೆಯವರೆಗೂ ಹೋರಾಡಬೇಕೆಂದೂ ಚೆನ್ನಮ್ಮನೂ ಉಳಿದ ಸರದಾರರೂ ನಿರ್ಧರಿಸಿದರು. ಆದರೆ ಕೋಟೆಯೊಳಗೇ ಹಲವು ವಿದ್ರೋಹಿಗಳು ಸೇರಿ ಪಿತೂರಿ ನಡೆಸಿದ್ದರು. ಆಂಗ್ಲರದು ಅಪಾರ ಸೈನ್ಯ. ಅದು ಫಿರಂಗಿದಳ, ಅಶ್ವದಳ, ಮದರಾಸಿನ ಸಿಪಾಯಿಗಳು ಮತ್ತು ಮುಂಬೈನ ಪದಾತಿಗಳನ್ನೊಳಗೊಂಡಿತ್ತು. ಅದರೊಂದಿಗೆ ಹೋರಾಡುವುದು ಸುಲಭವಲ್ಲವೆಂಬುದು ಚೆನ್ನಮ್ಮನಿಗೆ ಗೊತ್ತಿತ್ತು. ಆದರೆ ಆಕೆಯ ಸ್ವಾಂತತ್ರ್ಯಪ್ರೇಮ, ಆಕೆಯ ಸೈನಿಕರ ಸ್ವಾಮಿಭಕ್ತಿ ಇವು ಆಕೆಯ ಧೈರ್ಯವನ್ನು ನೂರ್ಮಡಿಗೊಳಿಸಿದುವು. ಈ ನಡುವೆ ಬ್ರಿಟಿಷ್ ಸರ್ಕಾರಕ್ಕೂ ಚೆನ್ನಮ್ಮನಿಗೂ ನಡೆದ ಪತ್ರವ್ಯವಹಾರದಲ್ಲಿ ಬ್ರಿಟಿಷರು ಕೇವಲ ತಮ್ಮ ಕಡೆಯವರನ್ನು ಸೆರೆಯಿಂದ ಬಿಡುಗಡೆ ಮಾಡಿಸುವ ಪ್ರಯತ್ನ ಮಾತ್ರ ಮಾಡಿದರು. ಚೆನ್ನಮ್ಮನ ಬೇಡಿಕೆಗಳನ್ನು ತಿರಸ್ಕರಿಸಿದ್ದ ಅವರು ಇಂಗ್ಲಿಷ್ ಖೈದಿಗಳ ಸ್ಥಾನಬದ್ಧತೆಯಿಂದ ಚೆನ್ನಮ್ಮನಿಗೆ ಯಾವ ಪ್ರಯೋಜನವಿಲ್ಲವೆಂದೂ ಅವರನ್ನು ಬಿಡುಗಡೆ ಮಾಡುವುದರಿಂದ ಪ್ರಯೋಜನವಾಗಬಹುದೆಂದೂ ತಿಳಿಸಿದರು. ಈ ಪತ್ರಕ್ಕೆ ಉತ್ತರಿಸಿದ ಚೆನ್ನಮ್ಮ ಸಂಸ್ಥಾನದ ಸ್ವಾತಂತ್ರ್ಯವನ್ನು ಮುಂದುವರಿಸುವುದೆ ತನ್ನ ಅಪೇಕ್ಷೆಯೆಂದೂ ಅದಕ್ಕಾಗಿಯೇ ಕೈದಿಗಳ ಬಿಡುಗಡೆ ಸಾಧ್ಯವಿಲ್ಲವೆಂದೂ ಸಂಸ್ಥಾನವನ್ನು ಹಾಗೆಯೇ ಉಳಿಯಗೊಡುವುದಾಗಿ ಪತ್ರ ಬರೆದು ತಿಳಿಸಿದಲ್ಲಿ ಮಾತ್ರ ತನ್ನ ಕಾರಬಾರಿಗಳನ್ನು ಸಂಧಾನಕ್ಕೆ ಕಳುಹಿಸುವುದಾಗಿಯೂ ತಿಳಿಸಿದಳು. ಬ್ರಿಟಿಷರು ತಮ್ಮ ಕಡೆಯವರನ್ನು ಬಿಡಿಸಿಕೊಳ್ಳಲು ಬೇರೆ ಉಪಾಯ ಕಾಣದೆ ಇಂಗ್ಲಿಷ್ ಕೈದಿಗಳನ್ನು ಬಿಟ್ಟರೆ ಯುದ್ಧ ಪ್ರಾರಂಭಿಸುವುದಿಲ್ಲವೆಂದು ಭರವಸೆ ಕೊಟ್ಟರು. ಅದರಂತೆ ಚೆನ್ನಮ್ಮ ಆ ಕೈದಿಗಳನ್ನು ಬಿಟ್ಟುಕೊಟ್ಟಳು. ಆಕೆಗೆ ವೃಥಾ ರಕ್ತಪಾತವಾಗುವುದು ಬೇಕಿರಲಿಲ್ಲ. ಆದರೆ ಬ್ರಿಟಿಷರು ಕುಟಿಲತಂತ್ರವನ್ನನುಸರಿಸಿದರು. ಕೋಟೆಯನ್ನು ತೆರವು ಮಾಡಬೇಕೆಂದೂ ಹೊರಗೆ ಬಂದು ವಿಧೇಯತೆಯನ್ನು ತೋರದಿದ್ದರೆ ಅವರ ಪ್ರಾಣರಕ್ಷಣೆಯಾಗದೆಂದೂ ಹತ್ತುಗಂಟೆಯೊಳಗಾಗಿ ಶರಣಾಗದಿದ್ದರೆ ಯುದ್ಧ ಪ್ರಾರಂಭಿಸುವುದಾಗಿಯೂ ಚಾಪ್ಲಿನ್ ಬರೆದ. ಚೆನ್ನಮ್ಮ ಅದಕ್ಕೆ ಧೀರೋದಾತ್ತವಾದ ಮುತ್ಸದ್ದಿತನದಪತ್ರ ಬರೆದು "ನಾವು ಎಂದೂ ಯುದ್ಧವನ್ನು ಬಯಸಿಲ್ಲ. ಯುದ್ಧವನ್ನು ತಪ್ಪಿಸಲು ಪ್ರಯತ್ನಮಾಡುತ್ತ ಬಂದಿದ್ದೇವೆ. ನಮ್ಮ ಈ ಸ್ನೇಹಭಾವನೆಗಳನ್ನು ಲಕ್ಷಿಸದೆ ನೀವು ವೈರಭಾವನೆಗಳನ್ನು ತಳೆದಿದ್ದೀರಿ. ನಮಗೆ ಬೇರೆ ಮಾರ್ಗವಿಲ್ಲ" ಎಂದು ಹೇಳಿದಳು. ಅಕ್ಟೋಬರ್ 24ರಿಂದ ನವೆಂಬರ್ 30ರ ವರೆಗೆ ಈ ಪತ್ರವ್ಯವಹಾರಗಳು ನಡೆದುವು. ಯುದ್ಧದ ಸಿದ್ಧತೆಗಳನ್ನು ಪೂರೈಸುವುದಕ್ಕೆ ಮಾತ್ರ ಈ ವಿಳಂಬವನ್ನು ಬ್ರಿಟಿಷರು ಉಪಯೋಗಿಸಿಕೊಡರು. ಅವರಿಗೆ ಕಿತ್ತೂರನ್ನು ಸ್ವತಂತ್ರವಾಗಿ ಬಿಡುವುದು ಬೇಕಿರಲಿಲ್ಲ. ನವಂಬರ್ 30ರಂದು ಆರಂಭವಾದ ಯುದ್ಧ ಡಿಸೆಂಬರ್ 3ರಂದು ತೀವ್ರವಾಯಿತು. ಚೆನ್ನಮ್ಮನೂ ಕಿತ್ತೂರಿನ ಸೈನಿಕರೂ ವೀರಾವೇಶದಿಂದ ಹೋರಾಡಿದರು. ಆದರೆ ಬ್ರಿಟಿಷರ ಫಿರಂಗಿಗಳು ಕೋಟೆಯ ಭಾಗಗಳನ್ನು ಕೆಡವಿದುವು. ಕೋಟೆಯೊಳಗಿನ ವಿದ್ರೋಹದಿಂದಾಗಿ ಮದ್ದಿನ ಮನೆಯಲ್ಲಿ ಮೋಸ ನಡೆದುಹೋಯಿತು. ಕಿತ್ತೂರಿಗೆ ಸೋಲು ಸಿದ್ಧವೆನಿಸಿತು. ಶತ್ರುಗಳ ಕೈಗೆ ಸಿಗಬಾರದೆಂದು ಚೆನ್ನಮ್ಮ ಕೋಟೆಯ ಕಿರುಗಂಡಿಯಿಂದ ಪಾರಾಗಿ ಸಂಗೊಳ್ಳಿಯ ಮಾರ್ಗವಾಗಿ ತಪ್ಪಿಸಿಕೊಂಡು ಹೋಗಲೆತ್ನಿಸಿದ್ದರೂ ಬ್ರಿಟಿಷರು ಆಕೆಯನ್ನು ಹಿಡಿದು ಬೈಲಹೊಂಗಲದಲ್ಲಿ ಸೆರೆಯಿಟ್ಟರು. ಆರು ವರ್ಷಗಳ ಕಾಲ ಸೆರೆಮನೆಯಲ್ಲಿದ್ದಾಗ ಸಂಗೊಳ್ಳಿರಾಯಣ್ಣ, ಬಿಚ್ಚುಗತ್ತಿ ಚೆನ್ನಬಸಪ್ಪ, ಗಜವೀರ, ಬಾಲಣ್ಣ ಮೊದಲಾದವರು ಈಕೆಯೊಂದಿಗೆ ಸಂಪರ್ಕ ಹೊಂದಿದ್ದು, ಅಲ್ಲಲ್ಲಿ ದಂಗೆಯೆಬ್ಬಿಸಿದರು. ಸಂಗೊಳ್ಳಿ ರಾಯಣ್ಣನನ್ನು ಸೆರೆಹಿಡಿದು ಬ್ರಿಟಿಷರು ಗಲ್ಲಿಗೇರಿಸಿದಾಗ ಚೆನ್ನಮ್ಮನಿಗೆ ಪುನಃ ತನ್ನ ನಾಡನ್ನು ಬಿಡುಗಡೆ ಮಾಡುವ ಕನಸು ಒಡೆದು ಹೋಯಿತು. ಹತಾಶಳಾದ ಈಕೆ 1829 ಫೆಬ್ರವರಿ 21ರಂದು ಸೆರೆಯಲ್ಲಿಯೇ ನಿಧನಳಾದಳು.

ಚೆನ್ನಮ್ಮ ತನ್ನ ಸಂಸ್ಥಾನದ ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ನಡೆಸಿದ ಹೋರಾಟ ಜನಮನದಲ್ಲಿ ಅಚ್ಚಳಿಯದೆ ಉಳಿಯಿತು. ಬಗೆಬಗೆಯಲ್ಲಿ ಲಾವಣಿಯಾಗಿ, ಹಾಡಾಗಿ, ಕಥೆಯಾಗಿ ವೀರ ಚೆನ್ನಮ್ಮನ ಸಾಹಸಗಳು ಕಿತ್ತೂರಿನ ಸುತ್ತಮುತ್ತಲ ಊರುಗಳಲ್ಲಿ ಹಬ್ಬಿ ಇಂದಿಗೂ ಉಳಿದಿದೆ. ಬ್ರಿಟಿಷರ ಮೇಲೆ ಬಂಡೆದ್ದು ಅವರನ್ನು ಈ ದೇಶದಿಂದಲೇ ಹೊರಗೋಡಿಸಲು ನಡೆದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಚೆನ್ನಮ್ಮ ನಡೆಸಿದ ಪ್ರಥಮ ಹೋರಾಟ ಸ್ಫೂರ್ತಿಯ ನೆಲೆಯಾಯಿತು; ನಾಂದಿಯಾಯಿತು. (ಎಂ.ಎಚ್.)

**ಕಿತ್ತೂರು ದೇಸಾಯರು:** 1585–1824ರ ವರೆಗೆ ಬೆಳಗಾಂವಿ ಜಿಲ್ಲೆ ಕಿತ್ತೂರು ಮತ್ತು ಸುತ್ತಲ ಪ್ರದೇಶಗಳನ್ನು ಆಳಿದ ಮನೆತನ.

ವಿಜಯನಗರ ಸಾಮ್ರಾಜ್ಯದ ಪತನಾನಂತರ ಹುಟ್ಟಿಕೊಂಡ ಹಲವಾರು ಸಣ್ಣಪುಟ್ಟ ಮನೆತನಗಳಲ್ಲಿ ಕಿತ್ತೂರಿನ ದೇಸಾಯರ ಮನೆತನವೂ ಒಂದು. ಹೀರೆಮಲ್ಲ ಮತ್ತು ಚಿಕ್ಕಮಲ್ಲ ಎಂಬ ಮಲೆನಾಡಿನ ಗೌಡಮನೆತನದ ಸೋದರರಿಬ್ಬರು ಈ ಮನೆತನದ ಮೂಲಪುರುಷರು. 16ನೆಯ ಶತಮಾನದ ಅಂತ್ಯದಲ್ಲಿ ವ್ಯಾಪಾರಕ್ಕಾಗಿ ಬಂದು ಸಂಪಗಾಂವಿಯಲ್ಲಿ ನೆಲಸಿ ಬಿಜಾಪುರ ಸೈನ್ಯಕ್ಕೆ ಸಾಮಾನು ಸರಬರಾಜು ಮಾಡುತ್ತಿದ್ದ ಇವರಿಗೆ ಬೆಳಗಾಂವಿಯ ಕಿಲ್ಲೇದಾರನಾಗಿದ್ದ ಅಸದ್‌ಖಾನ್‌ನು ಹಟ್ಟಿಹೊಲೆ ಮತ್ತು ಇತರ ಆರು ಊರುಗಳನ್ನು ಉಂಬಳಿಯಾಗಿ ಬಿಟ್ಟಿದ್ದ. ಹಿರೇಮಲ್ಲ ಸೈನ್ಯದಲ್ಲಿ ಸೇರಿ ಪರಾಕ್ರಮವನ್ನು ತೋರಿದ್ದರಿಂದ ಬಿಜಾಪುರದ ಸುಲ್ತಾನ ಅವನಿಗೆ ಷಂಷೇರ್ ಜಂಗ್ ಬಹದ್ದೂರ್ ಎಂಬ ಬಿರುದು ಕೊಟ್ಟುದುದಲ್ಲದೆ 1585ರಲ್ಲಿ ಹುಬ್ಬಳ್ಳಿಯ ಸರ್‌ದೇಶ ದತ್ತಿಯನ್ನು ಬಿಟ್ಟ. ಕಿತ್ತೂರು ಸೇರಿದಂತೆ 19 ಹಳ್ಳಿಗಳಿದ್ದ ಈ ನಾಡನ್ನು ಈತನೂ ಈತನ ಅನಂತರ ಬಂದ ಹಿರೇನಾಗನಗೌಡ, ಚಿಕ್ಕನಾಗನಗೌಡ ಮತ್ತು ಬಿಚ್ಚುಗತ್ತಿ ಚೆನ್ನಬಸಪ್ಪ ಮೊದಲಾದವರು ಬಹುವಾಗಿ ಅಭಿವೃದ್ಧಿಪಡಿಸಿದರು. ಔರಂಗಜೇಬ್ ಬಿಜಾಪುರವನ್ನು ಆಕ್ರಮಿಸಿದಾಗ ದೇಸಾಯರ ವಂಶದಲ್ಲಿ 5ನೆಯವನಾಗಿ 1660ರಿಂದ ಆಳಲಾರಂಭಿಸಿದ್ದ ಅಲ್ಲಪ್ಪಗೌಡ ಸರದೇಸಾಯಿ ಸಮಯ ಸಾಧಿಸಿ ಬೀಡಿ, ಸಂಪಗಾಂವಿಗಳನ್ನು ಗೆದ್ದು ಕಿತ್ತೂರಿನಿಂದ ಆಳಲಾರಂಭಿಸಿದ. ಕಿತ್ತೂರಿನ ಕೋಟೆಯನ್ನು ಇವನೇ ಕಟ್ಟಿಸಿದ್ದನೆಂದು ಹೇಳಲಾಗಿದೆ. ಇವನ ಮಗ ಮುದಿಮಲ್ಲಪ್ಪ ಸರದೇಸಾಯಿ ಮುಗಲರ ಪ್ರತಿನಿಧಿಯಾಗಿ ದಕ್ಷಿಣದಲ್ಲಿ ಆಳುತ್ತಿದ್ದ ಸವಣೂರು ನವಾಬನ ಸಾಮಂತನಾದ. ಮುಂದೆ ಕ್ರಮವಾಗಿ ಚಿಕ್ಕಮಲ್ಲಪ್ಪ ದೇಸಾಯಿ, ಶಿವನಗೌಡ ಸರದೇಸಾಯಿ ಮತ್ತು ಮಲವರುದ್ರಸರ್ಜ ಮುಗಲರ ಅಧೀನರಾಗಿ ಆಳಿದರು. ಈ ಹೊತ್ತಿಗೆ ಮರಾಠರು ಪ್ರಬಲರಾದರು. 1746ರಲ್ಲಿ ಸವಣೂರಿನ ನವಾಬ ಕಿತ್ತೂರಿನ ಜೊತೆಗೆ ಇನ್ನೂ ಕೆಲವು ಭಾಗಗಳನ್ನು ಪೇಶ್ವೆಗೆ ಒಪ್ಪಿಸಬೇಕಾಯಿತು. ಆಗ ಕಿತ್ತೂರಿನಲ್ಲಿ ಮಲವರುದ್ರಸರ್ಜನ ತಮ್ಮನ ಮಗ ವೀರಪ್ಪದೇಸಾಯಿ ಆಳುತ್ತಿದ್ದ. ವೀರಪ್ಪದೇಸಾಯಿ ಪರಾಕ್ರಮಶಾಲಿಯೂ ಧೈರ್ಯಸ್ಥನೂ ಆಗಿದ್ದು ಮರಾಠರು ನಡೆಸಿದ ಹಲವು ಯುದ್ಧಗಳಲ್ಲಿ ಭಾಗವಹಿಸಿದ್ದ. ಮೂರನೆಯ ಪಾಣಿಪಟ್ಟದ ಕದನದಲ್ಲಿ ಇವನು ಹೋರಾಡಿದುದಾಗಿ ತಿಳಿದುಬರುತ್ತದೆ. ಈ ನಡುವೆ ಹೈದರ್ 1774ರಲ್ಲಿ ಈ ಪ್ರಾಂತ್ಯಗಳನ್ನು ಗೆದ್ದದ್ದರಿಂದ ಕಿತ್ತೂರಿನ ದೇಸಾಯಿ ಅವನಿಗೆ ಕಪ್ಪ ಕೊಡಬೇಕಾಗಿತ್ತಾದರೂ ವೀರಪ್ಪ ದೇಸಾಯಿ ತನ್ನ ಸ್ವಂತ ರಾಜ್ಯವನ್ನು ವಿಸ್ತರಿಸಿ ಗೋಕಾಕ ಮತ್ತು ಸವದತ್ತಿ ತಾಲ್ಲೂಕಿನ ಭಾಗಗಳನ್ನು ವಶಪಡಿಸಿಕೊಂಡ. ಈ ಸುತ್ತಮುತ್ತಲಿನ ಪ್ರಾಂತ್ಯಗಳ ಮೇಲೆ ಆಗ ಅಧಿಕಾರ ನಡೆಸುತ್ತಿದ್ದ ಮರಾಠರ ಪರಶುರಾಮ ಭಾವು ದಂಡೆತ್ತಿ ಬಂದು ಗೋಕಾಕದ ಬಳಿ ವೀರಪ್ಪದೇಸಾಯಿಯನ್ನೆದುರಿಸಿದ. ವೀರಪ್ಪ ದೇಸಾಯಿ ಸೋತು ಸೆರೆಯಾಗಿ ಮೀರಜಿನಲ್ಲಿ ಸೆರೆಮನೆಯಲ್ಲಿರುವಾಗಲೇ ನಿಧನ ಹೊಂದಿದ.

1782ರಲ್ಲಿ ಪಟ್ಟಕ್ಕೆ ಬಂದ ಮಲ್ಲಸರ್ಜನ ಕಾಲದಲ್ಲಿ ಕಿತ್ತೂರು ರಾಜ್ಯ ಕಲಘಟಗಿ, ಮುನವಳ್ಳಿ, ನರಗುಂದ, ಧಾರವಾಡದವರೆಗೆ ವಿಸ್ತರಿಸಿತ್ತು. ಸಂಸ್ಥಾನ 700 ಹಳ್ಳಿಗಳನ್ನೊಳಗೊಂಡಿತ್ತು. ಮಲ್ಲಸರ್ಜ ಪಟ್ಟಕ್ಕೆ ಬಂದಾಗ ಅವನಿಗಿನ್ನೂ 17 ವರ್ಷ. ಒಂದು ಕಡೆ ಮರಾಠರು ಮತ್ತೊಂದು ಕಡೆ ಟಿಪ್ಪು ಇವನ ಪ್ರಾಂತ್ಯವನ್ನು ಕಬಳಿಸಲು ಹವಣಿಸುತ್ತಿದ್ದರು. ಹಲವು ಬಾರಿ ಈ ರಾಜ್ಯ ಸುಲಿಗೆಗೊಳಗಾಯಿತು. ಟಿಪ್ಪು ಕಿತ್ತೂರಿಗೆ ಎರಡು ಬಾರಿ ಮುತ್ತಿಗೆ ಹಾಕಿ 1785ರಲ್ಲಿ ಮಲ್ಲಸರ್ಜನನ್ನು ಸೆರೆಹಿಡಿದು ಕಬ್ಬಾಳದುರ್ಗದಲ್ಲಿ ಸೆರೆಯಿಟ್ಟು ಕಿತ್ತೂರು ಕೋಟೆಯಲ್ಲಿ ಬಲವಾದ ಸೈನ್ಯವನ್ನು ಇರಿಸಿದ. ಅನಂತರ ಗಣೇಶಪಂತ ಬೆಹರೆ ಮತ್ತು ತುಕೋಜಿ ಹೋಳ್ಕರ ಎಂಬ ಮರಾಠ ಸರದಾರರು ಟಿಪ್ಪುವಿನ ಸೈನ್ಯವನ್ನೋಡಿಸಿ ಕಿತ್ತೂರು ಮತ್ತು ಆ ಪ್ರಾಂತ್ಯವನ್ನು ತಮ್ಮ ಕೈವಶಮಾಡಿಕೊಂಡರೂ ಟಿಪ್ಪುವಿನ ಸೇನಾನಿ ಬದುಲ್‌ಖಾನ್ ಝುಮಾನ್ ಮತ್ತೆ ಕಿತ್ತೂರನ್ನು ಗೆದ್ದುಕೊಂಡ. ಮಲ್ಲಸರ್ಜ ಮೂರು ವರ್ಷಗಳ ಅನಂತರ ಸೆರೆಯಿಂದ ತಪ್ಪಿಸಿಕೊಂಡು ಬಂದು ಮರಾಠರೊಂದಿಗೆ ಸ್ನೇಹ

ಬೆಳೆಸಿದ. 1787ರಲ್ಲಿ ಮೂರನೆಯ ಮೈಸೂರು ಯುದ್ಧದ ಪರಿಣಾಮವಾಗಿ ಆದ ಶ್ರೀರಂಗಪಟ್ಟಣದ ಒಪ್ಪಂದದಂತೆ ಕಿತ್ತೂರು ಪೇಶ್ವೆಯ ಅಧೀನಕ್ಕೊಳಪಟ್ಟು ಪರಶುರಾಮಭಾವುವಿನ ಆಡಳಿತಕ್ಕೊಳಗಾಗಿ ಧಾರವಾಡ ಪ್ರಾಂತ್ಯದ ಭಾಗವಾಯಿತು. ಪರಶುರಾಮಭಾವು 1788ರಲ್ಲಿ ಪಟ್ಟಣಕುಡಿ ಕಾಳಗದಲ್ಲಿ ಗಾಯಗೊಂಡು ತೀರಿಕೊಂಡ ಮೇಲೆ ಮಲ್ಲಸರ್ಜ ಸ್ವತಂತ್ರನಾಗಲು ಹವಣಿಸಿದ. ಮರಾಠರ ಬಲ ಕುಂದುತ್ತಿದ್ದುದನ್ನು ಮನಗಂಡ ಇವನು 1803ರಲ್ಲಿ ಇಂಗ್ಲಿಷರ ಸ್ನೇಹ ಬೆಳೆಸಿ ವೆಲ್ಲೆಸ್ಲಿಗೆ ಯುದ್ಧದಲ್ಲಿ ಸಹಾಯ ಮಾಡಿದ. ಧೊಂಡಿಯಾ ವಾಘ್ ಇಲ್ಲಿ ನಡೆಸುತ್ತಿದ್ದ ಸುಲಿಗೆಯನ್ನು ತಪ್ಪಿಸಲು ಇಂಗ್ಲಿಷರಿಗೆ ಸೈನ್ಯಸಹಾಯವನ್ನೂ ಒದಗಿಸಿದ. ಇದರಿಂದ ಪೇಶ್ವೆ ಮತ್ತು ಕಿತ್ತೂರು ದೇಸಾಯಿಯರ ನಡುವೆ ಒಪ್ಪಂದಉಂಟಾಗಲು ವೆಲ್ಲೆಸ್ಲಿ ಮಧ್ಯಸ್ಥಿಕೆ ವಹಿಸಿದ. ಪೇಶ್ವೆ 1809ರಲ್ಲಿ ಮಲ್ಲಸರ್ಜನ ಆಧಿಪತ್ಯವನ್ನು ಒಪ್ಪಿಕೊಂಡು ಅವನು ವರ್ಷಂಪ್ರತಿ 1,75,000 ರೂಪಾಯಿಗಳ ಕಪ್ಪ ಸಲ್ಲಿಸಬೇಕೆಂದೂ ಕಿತ್ತೂರಿನಲ್ಲಿ ಒಂದು ಸೈನ್ಯವನ್ನಿರಿಸಿ ಅದರ ವೆಚ್ಚವನ್ನು ದೇಸಾಯಿ ವಹಿಸಿಕೊಳ್ಳಬೇಕೆಂದೂ ವಿಧಿಸಿದ. ಆದರೆ ಕೆಲಕಾಲದಲ್ಲಿಯೇ ಪೇಶ್ವೆ ಮಲ್ಲಸರ್ಜನನ್ನು ಸೆರೆಹಿಡಿದು ಪುಣೆಯಲ್ಲಿ ಬಂಧನದಲ್ಲಿಟ್ಟ. ಅವನಿಗೆ ರೋಗ ಬಂದು ಅದು ಉಲ್ಬಣಿಸಿದಾಗ ಮರಾಠರು ಅವನನ್ನು ಬಿಡುಗಡೆ ಮಾಡಿದರೂ ಕಿತ್ತೂರಿಗೆ ಹಿಂದಿರುಗಿದ ಸ್ವಲ್ಪ ಕಾಲದಲ್ಲಿಯೇ ಅವನು ಮರಣಹೊಂದಿದ. ಕಿತ್ತೂರನ್ನು ದೀರ್ಘ ಕಾಲ ಆಳಿದ ಮಲ್ಲಸರ್ಜ ಪರಾಕ್ರಮಿಯೂ ಸಾಹಸಿಯೂ ಆಗಿದ್ದು ಪ್ರಬಲರಾದ ಮರಾಠರು ಮತ್ತು ಮೈಸೂರರಸರ ಆಕ್ರಮಣಗಳನ್ನು ಕೆಚ್ಚೆದೆಯಿಂದ ಎದುರಿಸಿದ. ಕಲೆ ಮತ್ತು ಸಾಹಿತ್ಯದ ಪೋಷಕನೂ ಆಗಿದ್ದ. ಇವನ ಆಸ್ಥಾನದಲ್ಲಿ ಕೊಳಸಿ ರಂಗಾಚಾರ್ಯ, ವೆಂಗಿಚೆನ್ನಬಸಪ್ಪ, ಮುಳುಗುಂದ ಚೆನ್ನಬಸಪ್ಪ ಮೊದಲಾದ ಪಂಡಿತರೂ ವರರುದ್ರಕವಿ, ಅಮೃತೇಶ್ವರ ಎಂಬ ಕವಿಗಳೂ ಇದ್ದರು.

ಮಲ್ಲಸರ್ಜನಿಗೆ ರುದ್ರಮ್ಮ ಮತ್ತು ಚೆನ್ನಮ್ಮ ಎಂಬ ಇಬ್ಬರು ಹೆಂಡಿರು. ಶಿವಲಿಂಗರುದ್ರಸರ್ಜ (ಬಾಪುಸಾಹೇಬ), ವೀರಪ್ಪಸರ್ಜ ಮತ್ತು ಶಿವಲಿಂಗಸರ್ಜ (ಬಾಳಾಸಾಹೇಬ) ಎಂಬ ಮೂವರು ಗಂಡುಮಕ್ಕಳು. ಶಿವಲಿಂಗರುದ್ರಸರ್ಜ 1816ರಲ್ಲಿ ಪಟ್ಟಕ್ಕೆ ಬಂದ. ಇವನು ಆಂಗ್ಲರ ಸ್ನೇಹ ಸಂಪಾದಿಸಿ ಅವರಿಗೆ ವಿಶೇಷ ನೆರವಿತ್ತು ಬೆಳಗಾವಿ ಕೋಟೆಯ ಮುತ್ತಿಗೆಯ ಕಾಲದಲ್ಲಿ ಸೈನಿಕರು ಮತ್ತು ಸಾಮಗ್ರಿಗಳನ್ನೊದಗಿಸಿದ. ಕಿತ್ತೂರ ದೇಸಾಯಿ ಸಲ್ಲಿಸುತ್ತಿದ್ದ ಅಪಾರ ಸಹಕಾರ ಸಹಾಯವನ್ನು ನೆನೆದು ಇಂಗ್ಲಿಷರು ಕಿತ್ತೂರ ಸಂಸ್ಥಾನ ಸ್ವತಂತ್ರವಾಗಿ ಮುಂದುವರಿಯುವ ಸಲುವಾಗಿ ಭರವಸೆಯ ಸನದನ್ನು ಕೊಟ್ಟರು. ಥಾಮಸ್ ಮನ್ರೋ ಕೊಟ್ಟ ಈ ಸನದಿನ ಪ್ರಕಾರ ಕಿತ್ತೂರು ದೇಸಾಯಿ ಬ್ರಿಟಿಷರಿಗೆ ವರ್ಷಂಪ್ರತಿ ರೂ.1,70,000 ಕಪ್ಪವನ್ನು ಕೊಡುತಕ್ಕುದೆಂದೂ ಅವನು ಕಿತ್ತೂರು ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ಅನುಭವಿಸತಕ್ಕುದೆಂದೂ ಒಪ್ಪಂದವಾಯಿತು. ಆದರೆ ವ್ಯಾಧಿಗ್ರಸ್ತನಾಗಿದ್ದ ಶಿವಲಿಂಗರುದ್ರ ಸರ್ಜ 8 ವರ್ಷಗಳಕಾಲ ಮಾತ್ರ ಆಳಿ 1824 ಸೆಪ್ಟಂಬರ್ 11ರಂದು ಮಕ್ಕಳಿಲ್ಲದೆ ಮೃತನಾದ. ಸಾಯುವುದಕ್ಕೆ ಮುಂಚೆ ಇವನು ಶಿವಲಿಂಗಪ್ಪನೆಂಬ ಬಾಲಕನನ್ನು ದತ್ತುಸ್ವೀಕಾರ ಮಾಡಿಕೊಂಡಿದ್ದ. ಆದರೆ ಅದುವರೆಗೂ ಅತ್ಯಂತ ಸ್ನೇಹದಿಂದಿದ್ದ ಇಂಗ್ಲಿಷರು ಈ ದತ್ತುಸ್ವೀಕಾರವನ್ನು ನಿರಾಕರಿಸಿದಾಗ ಚೆನ್ನಮ್ಮ ಕಿತ್ತೂರಿನ ಸ್ವಾತಂತ್ರವನ್ನು ರಕ್ಷಿಸಲು ಕೆಚ್ಚಿನಿಂದ ಹೋರಾಡಿ ಬ್ರಿಟಿಷ್ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದಳು. ಆದರೆ ಬ್ರಿಟಿಷರು ಮತ್ತೆ ಅಪಾರ ಸೈನ್ಯವನ್ನು ತಂದು ಘೋರ ಯುದ್ಧವನ್ನು ನಡೆಸಿ ಕೋಟೆಯನ್ನು ವಶಪಡಿಸಿಕೊಂಡರು. ಚೆನ್ನಮ್ಮ ಸೆರೆಯಾದಳು. ಕಿತ್ತೂರು ಸಂಸ್ಥಾನ ಬ್ರಿಟಿಷರ ಆಡಳಿತಕ್ಕೊಳಗಾಯಿತು. ದೇಸಾಯರ ಆಡಳಿತ ಕೊನೆಗೊಂಡಿತು (1824). (ಎಂ.ಎಚ್.)

**ಕಿನವುಲ್ಫ್ :** ಎಂಟನೆಯ ಶತಮಾನದ ಕಡೆಯಲ್ಲಿ ಜೀವಿಸಿದ್ದ ಪ್ರಾಚೀನ ಆಂಗ್ಲ ಕವಿಗಳಲ್ಲಿ ಒಬ್ಬ. ನಾರ್ದಂಬ್ರಿಯಕ್ಕೆ ಸೇರಿದವನೆಂದು ಹೇಳಲಾಗಿದೆ. ಎಕ್ಸೆಟರ್ ಮತ್ತು ವರ್ಸೆಲಿ ಗ್ರಂಥಗಳಲ್ಲಿರುವ ನಾಲ್ಕು ಪದ್ಯಗಳ ಕರ್ತೃ. ಈತನ ಜೀವಿತದ ಬಗ್ಗೆ ಹೆಚ್ಚು ತಿಳಿದಿಲ್ಲ. ಸಮಕಾಲೀನ ಲ್ಯಾಟಿನ್ ಚರ್ಚುಗಳ ಸಾಹಿತ್ಯದ ಬಗ್ಗೆ ಈತನಿಗೆ ಸಾಕಷ್ಟು ತಿಳಿವಳಿಕೆ ಇದ್ದಂತೆ ತೋರುತ್ತದೆ. ಹಳೆಯ ಇಂಗ್ಲಿಷಿನ ಉಪಭಾಷೆಯೊಂದರಲ್ಲಿ ತನ್ನ ಪದ್ಯಗಳನ್ನು ರಚಿಸಿದ್ದಾನೆ. ದಿ ಫೇಟ್ಸ್ ಆಫ್ ಅಪೋಸಲ್ಸ್ ಮತ್ತು ಎಲಿನ್ ಎಂಬ ಪದ್ಯಗಳು ವರ್ಸೆಲಿಯದಲ್ಲಿಯೂ ದಿ ಆಸೆನ್ಷನ್ ಮತ್ತು ಜೂಲಿಯಾನಗಳು ಎಕ್ಸೆಟರ್‌ನಲ್ಲಿಯೂ ಇವೆ. ಇವುಗಳಲ್ಲಿ ಎಲಿನ್ ಶ್ರೇಷ್ಠ ಕೃತಿ ಎನಿಸಿಕೊಂಡಿದೆ. ಇದರಲ್ಲಿ ಕಾನ್‌ಸ್ಟನ್‌ಟೈನ್ ಚಕ್ರವರ್ತಿಯ ತಾಯಿಯಾದ ಹೆಲೆನ ಶಿಲುಬೆಯನ್ನು ಕಂಡುಕೊಂಡದ್ದನ್ನು ತಿಳಿಸಲಾಗಿದೆ. ಕೊನೆಯ ಭಾಗ ಕೃತಿಕಾರನ ವ್ಯಕ್ತಿತ್ವ ಜೀವಿತದ ಪ್ರಸಂಗಗಳ ಮೇಲೆ ಬೆಳಕು ಚೆಲ್ಲುತ್ತದೆ. (ಎನ್.ಎಸ್.ಎಲ್.)

**ಕಿನ್‌ಕಾಪು :** ಭಾರವೂ ಅಮೂಲ್ಯವು ಆದ ವಿಶಿಷ್ಟ ಬಗೆಯ ಬಟ್ಟೆ(ಬ್ರೋಕೇಡ್). ಇದನ್ನು ಸಾಮಾನ್ಯವಾಗಿ ರೇಷ್ಮೆಯಿಂದ ತಯಾರಿಸುತ್ತಾರೆ. ಬೆಳ್ಳಿ ಹಾಗೂ ಚಿನ್ನದ ಜರತಾರಿ ಎಳೆಗಳನ್ನು ಅಡ್ಡತಂತುಗಳನ್ನಾಗಿ ಉಪಯೋಗಿಸಿ, ಎಬ್ಬಿದ ಹೂ ಮಾದರಿಗಳನ್ನು ಬಿಡಿಸಿ ಬಟ್ಟೆಯನ್ನು ಅಂದಗೊಳಿಸುತ್ತಾರೆ. ಕಿನ್‌ಕಾಪಿನ ಇಂಗ್ಲಿಷ್ ಸಮನಾರ್ಥಕ ಪದ ಬ್ರೋಕೇಡ್ ಎಂಬುದು ಫ್ರೆಂಚ್ ಬ್ರೊಕಾರ್ಟ್ ಎಂಬ ಪದದಿಂದ ನಿಷ್ಪನ್ನವಾಗಿದೆ, ಅಲಂಕೃತ ಬಟ್ಟೆ ಎಂಬುದು ಅದರ ಅರ್ಥ. ಬ್ರೋಕೇಡ್ ಎಂಬ ಹೆಸರು ಲ್ಯಾಟಿನ್ ಭಾಷೆಯಿಂದ ಉಗಮವಾಗಿದೆಯೆಂಬ ಅಭಿಪ್ರಾಯವೂ ಉಂಟು. ಲ್ಯಾಟಿನ್ ಬ್ರೋಕಸ್ ಎಂಬುದಕ್ಕೆ ಹೊರಚಾಚಿದ ಅಥವಾ ಚೂಪಾದ ಎಂಬ ಅರ್ಥವಿರುವುದೇ ಇದಕ್ಕೆ ಕಾರಣ.

ಹಿಂದಿನಿಂದಲೂ ಭಾರತ ಕಿನ್‌ಕಾಪು ಅಥವಾ ಕಲಾಬತ್ತು ಬಟ್ಟೆಗೆ ಪ್ರಸಿದ್ಧವಾಗಿದೆ. ಕಿನ್‌ಕಾಪು ಬಟ್ಟೆಗಳನ್ನು ಭಾರತೀಯ ರಾಜಮಹಾರಾಜರು ಧರಿಸುತ್ತಿದ್ದರು. ಭಾರತದಲ್ಲಿ ಈ ಬಟ್ಟೆಯ ತಯಾರಿಕೆಯ ಬಹು ದೊಡ್ಡ ಕೇಂದ್ರ ವಾರಾಣಸಿ. ಕಿನ್‌ಕಾಪು ಭಾರತದ ಕೈಮಗ್ಗ ತಯಾರಿಕೆಯ ಅತ್ಯಂತ ನಯವಾದ ಬಟ್ಟೆ. ಇದರಲ್ಲಿ ಶ್ರೇಷ್ಠ ಬಗೆಯ ಕಿನ್‌ಕಾಪು ಬಟ್ಟೆಯನ್ನು ಕೈಮಗ್ಗದಿಂದಲೇ ಚಿನ್ನ ಬೆಳ್ಳಿ ಜರಿಗಳನ್ನು ಉಪಯೋಗಿಸಿ ಯಥೇಚ್ಛವಾದ ಹಾಗೂ ಬಹು ಜಟಿಲವಾದ ಚಿತ್ತಾರದ ಮಾದರಿಗಳಿಂದ ಅಲಂಕೃತವಾಗಿರುವಂತೆ ನೇಯುತ್ತಾರೆ. ಚಿತ್ತಾರದ ಮಾದರಿಗಳನ್ನು ಮತ್ತು ಮನಮೋಹಕವಾದ ಬಣ್ಣಗಳನ್ನು ಬನಾರಸ್ ಕಿನ್‌ಕಾಪಿನಲ್ಲಿ ಕಾಣಬಹುದು.

ಕಿನ್‌ಕಾಪು ಎಂಬ ಹೆಸರು ಹತ್ತಿ, ರೇಷ್ಮೆ, ಲಿನನ್, ರೇಯಾನ್, ಕೃತಕದಾರ ಮೊದಲಾದ ಪ್ರಮುಖ ತರಹದ ನೇಯ್ಗೆದಾರಗಳಿಂದ ತಯಾರಾದ ಎಲ್ಲ ಬಟ್ಟೆಗಳಿಗೂ ಸಾಮಾನ್ಯವಾಗಿ ಅನ್ವಯವಾಗುತ್ತದೆ. ಹಾಗಿದ್ದರೂ ಅದರ ಪರಿಮಿತ ಅರ್ಥದಲ್ಲಿ ಈ ಹೆಸರು ನಮೂನೆಗಳಿಂದ ಅಲಂಕರಿಸುವ ವಿಧಾನದಲ್ಲಿ ಚಿನ್ನ ಮತ್ತು ಬೆಳ್ಳಿ ಜರಿಗಳಿಂದ ವಿಸ್ತೃತ ಹೂಮಾದರಿಗಳನ್ನು ಬಿಡಿಸಿ ನೇಯುವ ಬಟ್ಟೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಬಟ್ಟೆಗಳ ಮೇಲೆ ಆಗಬೇಕಾದ ನಿರ್ದಿಷ್ಟ ಹೊಂದಿಕೆಗೆ ತಕ್ಕಂತೆ, ಸಾಧಾರಣ ಬಟ್ಟೆಯ ಮೇಲೆ ಹಾಸು ಎಳೆಗಳನ್ನು ಇಲ್ಲವೆ ಅಡ್ಡಎಳೆಗಳ ಹಿಂಜುಗಳನ್ನು ಅಥವಾ ಹಾಸುಎಳೆ ಮತ್ತು ಅಡ್ಡಎಳೆಗಳೆರಡನ್ನೂ ಯಥೇಚ್ಛವಾಗಿ ಕಾಣಿಸಿ ಚಿತ್ರನಮೂನೆಗಳನ್ನು ನೇಯಬಹುದು. ಹೆಚ್ಚಿಗೆ ಅಡ್ಡಎಳೆಗಳಿಂದ ಚಿತ್ರ ನಮೂನೆಗಳನ್ನು ನೇಯುವ ವಿಧಾನವನ್ನು ವಾರಾಣಸಿಯಲ್ಲಿ ಸರ್ವಸಾಮಾನ್ಯವಾಗಿ ಅನುಸರಿಸುತ್ತಾರೆ. ಆ ಬಗ್ಗೆ ಬೇಕಾದ ಹೆಚ್ಚಿಗೆ ಅಡ್ಡಎಳೆಗಳನ್ನು 3–4 ಅಂಗುಲಗಳ ಬಿದಿರಿನ ಸಿರ್ಕಿಗಳು ಒದಗಿಸುತ್ತವೆ. ಸಿರ್ಕಿನೇಯ್ಗೆ ಸಾಧನಗಳ ಮೇಲೆ ಹೆಚ್ಚಿಗೆ ಬೇಕಾಗಿರುವ ಅಡ್ಡಎಳೆಗಳನ್ನು ಸುತ್ತಿರುತ್ತಾರೆ. ನೇಯ್ಗೆಯಲ್ಲಿ ಎಷ್ಟು ಸಿರ್ಕಿಗಳು ಬೇಕಾಗುವುವೆಂಬುದು ಚಿತ್ರ ನಮೂನೆಗಳ ರಚನೆ, ಅವುಗಳಿಗೆ ಬೇಕಾದ ಬಣ್ಣ, ಬಟ್ಟೆಯ ಉದ್ದಕ್ಕೂ ನೇಯ್ಗೆಯಾಗುವ ಚಿತ್ತಾರದ ಮಾದರಿಗೆ ಅವಶ್ಯವಾದ ನೇಯ್ಗೆಯ ಪುನರಾವೃತ್ತಿ ಇವನ್ನು ಅವಲಂಬಿಸಿದೆ.

ಕಿನ್‌ಕಾಪು ಬಟ್ಟೆಯ ತಯಾರಿಕೆಯಲ್ಲಿ ಉಪಯೋಗಿಸುವ ಮಗ್ಗಗಳೆಲ್ಲವೂ ಬಿದಿರಿನ ಹಣಿಗೆಯಿಂದ ಕೂಡಿದ ಲಾಳಿಬೀಸಿ ನೇಯುವ ಗುಂಡಿಯ ಕೈಮಗ್ಗಗಳಾಗಿವೆ. ಹೆಚ್ಚು ಅಡ್ಡೆಎಳೆ ಚಿತ್ರಗಳು ಜಾಲದ ಸಹಾಯದಿಂದ ರಚನೆಯಾಗುತ್ತದೆ. ಚಿತ್ರ ನಮೂನೆಗಳನ್ನು ನಕ್ಷಾಬಂಧಕರು, ಅಂದರೆ ನಮೂನೆಗಳನ್ನು ರಚಿಸುವವರು, ನಕ್ಷೆಗಳಿಗೆ ಅಳವಡಿಸುತ್ತಾರೆ. ತರುವಾಯ ನಕ್ಷೆಗಳನ್ನು ನೇಯ್ಗೆಯಲ್ಲಿ ಬಿಡಿಸಿಕೊಳ್ಳಲಾಗುವುದು. ನಕ್ಷೆ ಅಥವಾ ನಮೂನೆಗಳನ್ನು ಬಿಡಿಸಲು ಮಗ್ಗದ ಚಲನೆಯಲ್ಲಿ ಇಬ್ಬರ ಸಹಾಯ ಬೇಕಾಗುವುದು: ಅವನಲ್ಲಿ ಒಬ್ಬ ನೇಯಲು ಕುಳಿತುಕೊಳ್ಳುತ್ತಾನೆ. ಮತ್ತೊಬ್ಬ ಜಾಲವನ್ನು ಎಳೆಯಲು ನಿಲ್ಲುತ್ತಾನೆ. ಇತ್ತೀಚೆಗೆ ಜಾಲವನ್ನು ಎಳೆಯುವಾತನಿಗೆ ಪ್ರತಿಯಾಗಿ ಹೆಚ್ಚು ಭಾರವಿಲ್ಲದ ಜಾಕ್ವಾರ್ಡ್ ಎಂಬ ಸಾಧನಗಳನ್ನು ಉಪಯೋಗಿಸುತ್ತಾರೆ.

ಕಿನ್‌ಕಾಪಿಗೆ ಬಟ್ಟೆಯನ್ನು ಸಾಮಾನ್ಯ ವಿಧಾನದಲ್ಲಿಯೇ ನೇಯುತ್ತಾರೆ. ಆದರೆ ಲೋಹದ ತಂತುಗಳನ್ನು ಇಲ್ಲವೆ ಬಣ್ಣಕಟ್ಟಿದ ರೇಷ್ಮೆ ಎಳೆಗಳನ್ನು ಹೆಚ್ಚಿಗೆ ಅಡ್ಡಎಳೆಗಳನ್ನಾಗಿ ಮಗ್ಗದಲ್ಲಿ ಉಪಯೋಗಿಸುತ್ತಾರೆ. ಇಂಥ ಹೆಚ್ಚಿಗೆ ಅಡ್ಡಎಳೆಗಳನ್ನು ಎಲ್ಲಿ ಬೇಕೊ ಅಲ್ಲಿ ಅಲಂಕಾರಕ್ಕಾಗಿ ಮಾತ್ರವೇ ಉಪಯೋಗಿಸಿಕೊಳ್ಳುತ್ತಾರೆ. ಕೆಲವು ಸಮಯಗಳಲ್ಲಿ, ಬಣ್ಣದ ಅಡ್ಡತಂತುಗಳನ್ನು ಬಟ್ಟೆಯ ಇಡೀ ಅಡ್ಡಗಲಕ್ಕೆ ವ್ಯಾಪಿಸುವಂತೆ ನೇಯಲು ಸಾಧ್ಯ. ಈ ವಿಧಾನದಲ್ಲಿ ಸಿರ್ಕಿಗಳ ಅವಶ್ಯಕತೆ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಅಲ್ಲಲ್ಲಿ ಬೇಕಿಲ್ಲದ ಹೆಚ್ಚಿಗೆ ಬಣ್ಣದ ಅಡ್ಡತಂತುಗಳನ್ನು ಕತ್ತರಿಸುತ್ತಾರೆ. ಬಹುಮಟ್ಟಿಗೆ ಕಿನ್‌ಕಾಪು ಬಟ್ಟೆಗಳ ನೇಯ್ಗೆಯಲ್ಲಿ ಬಟ್ಟೆಯ ಹಿಂಭಾಗ ಮಗ್ಗಕ್ಕೆ ಮೇಲ್ಮುಖವಾಗಿರುವಂತೆ ನೇಯ್ಗೆಯ ವ್ಯವಸ್ಥೆ ಇರುತ್ತದೆ.

ಕಿನ್‌ಕಾಪು ಬಟ್ಟೆಯನ್ನು ತಿರುಗುಮುರುಗು ಮಾಡಿ ಉಪಯೋಗಿಸುವಂತಿಲ್ಲ ಅದನ್ನು ನೇಯುವುದಕ್ಕೆ ಹೆಚ್ಚು ಕಾಲ ಹಿಡಿಯುವುದಲ್ಲದೆ ಈ ಕೆಲಸ ಬಲುತ್ರಾಸವಾದದ್ದೂ ಹೌದು. ಕೆಲವು ಇಂಚುಗಳಷ್ಟು ಪ್ರಮಾಣದ ಕಿನ್‌ಕಾಪನ್ನು ಮಾತ್ರವೇ ಇಡೀ ದಿನದಲ್ಲಿ ನೇಯಲು ಸಾಧ್ಯ. ಆದ್ದರಿಂದ ಅದು ಹೆಚ್ಚು ಬೆಲೆಬಾಳುವ ಬಟ್ಟೆಯಾಗಿದೆ.

ಅಪ್ಪಟವಾದ ಬ್ರಾಕೇಡ್ ಅಥವಾ ಕಿನ್‌ಕಾಪು ಬಟ್ಟೆಗೆ ಅತ್ಯುತ್ತಮ ರೇಷ್ಮೆಯನ್ನು ಹಾಗೂ ಅಪ್ಪಟ ಚಿನ್ನ ಮತ್ತು ಬೆಳ್ಳಿ ಜರಿಯನ್ನು (ಕಲಾಬತ್ತು) ಉಪಯೋಗಿಸುತ್ತಾರೆ ಇತ್ತೀಚೆಗೆ ಅಗ್ಗದ ಬಗೆಯ ಕಿನ್‌ಕಾಪು ಬಟ್ಟೆಗಳಿಗೆ ಬಣ್ಣಕಟ್ಟಿದ ಕೃತಕ ರೇಷ್ಮೆಯನ್ನೂ ಸಾಮಾನ್ಯ ಜರಿಯನ್ನೂ ಉಪಯೋಗಿಸುತ್ತಾರೆ. (ಎಲ್.ಡಿ.)

**ಕಿನ್ನರ ಕಥೆ :** ಜನಪದ ಕಥೆಗಳಲ್ಲಿಯೇ ಅತ್ಯಂತ ಪ್ರಸಾರವಿರುವ, ಹೆಚ್ಚು ಸಂಖ್ಯೆಯಲ್ಲಿ ದೊರೆಯುವ, ಸುಲಭವಾಗಿ ಪ್ರಯಾಣ ಮಾಡಬಹುದಾದ ಪ್ರಕಾರವೆಂದರೆ ಕಿನ್ನರ ಕಥೆ

(ಫೇರಿ ಟೇಲ್). ಅಲೆಗ್ಸಾಂಡರ್ ಕ್ರಾಪೆಯವರು ಹೇಳುವ ಹಾಗೆ, ಇದು ಅವಿಚ್ಛಿನ್ನ ಕಥನವುಳ್ಳ, ತಕ್ಕಮಟ್ಟಿಗೆ ದೀರ್ಘತೆಯಿರುವ, ಹಾಸ್ಯವನ್ನು ಬಿಟ್ಟಿರದಿದ್ದರೂ ಒಟ್ಟಾರೆ ಗಂಭೀರವಾದ ಗದ್ಯಕೃತಿಯಾಗಿದೆ: ಇದರ ಕೇಂದ್ರ ಪಾತ್ರದಲ್ಲಿ ಒಬ್ಬ ನಾಯಕ ಅಥವಾ ನಾಯಿಕೆ ಇದ್ದು, ಅವರು ಆರಂಭದಲ್ಲಿ ನಿರ್ಗತಿಕರಾಗಿ ಚಿತ್ರಿತರಾಗಿರುತ್ತಾರೆ; ಅತಿಮಾನುಷ ಅಂಶಕ್ಕೆ ಪ್ರಾಧಾನ್ಯವಿದ್ದು, ಸಾಹಸ ಪರಂಪರೆಗಳನ್ನು ಎಸಗಿದ ಮೇಲೆ ಅವರು ತಮ್ಮ ಗುರಿಯನ್ನು ಮುಟ್ಟುವರಲ್ಲದೆ, ಮುಗಿಯದ ಸುಖಕ್ಕೆ ಭಾಜನರಾಗುತ್ತಾರೆ. ಒಂದಾನೊಂದು ಊರಿನಲ್ಲಿ ಒಬ್ಬಾನೊಬ್ಬ ರಾಜ-ಎಂದು ಪ್ರಾರಂಭವಾಗುವ ಕಿನ್ನರ ಕಥೆ ನಾಯಕ ನಾಯಿಕೆಯರ ವಿವಾಹದಲ್ಲಿ ಮುಕ್ತಾಯಗೊಳ್ಳುತ್ತದೆ.

ಇದು ಅಸಂಖ್ಯಾತ ಆಶಯಗಳಿಂದ ರೂಪಿತವಾಗಿರುತ್ತದೆ: ಅಲ್ಲದೆ ಆಶಯದ ಮೂಲಕವೇ ಕಥೆ ಬೆಳೆಯುತ್ತ ಹೋಗುತ್ತದೆ. ಇಂಥ ಹಲವಾರು ಆಶಯಗಳು ಪ್ರತಿ ಕಥಾವರ್ಗದಲ್ಲೂ (ಟೈಪ್) ಇರುತ್ತವೆ. ಪ್ರಪಂಚಾದ್ಯಂತ ವಿತರಣೆಯಲ್ಲಿರುವ ಕಿನ್ನರ ಕಥೆಗಳ ಅಸಂಖ್ಯಾತ ರೂಪಾಂತರಗಳು ಎಲ್ಲೆಡೆ ದೊರೆಯುತ್ತವೆ. ಇವುಗಳೆಲ್ಲದರ ಅಧ್ಯಯನದಿಂದ ಇದೊಂದು ಪ್ರಾಚೀನ ಜಗತ್ತಿನ ಉಳಿಕೆ ಎಂದು ವಿದ್ವಾಂಸರು ತೀರ್ಮಾನ ಮಾಡಿದ್ದಾರೆ.

ಕಿನ್ನರ ಕಥೆ ಹರ್ಷಾಂತವಾದ, ಭಾವರಸಾತಿರೇಕವುಳ್ಳ, ಪ್ರಾಯೋಗಿಕವಾಗಿ ಸದ್ಗುಣಕ್ಕೆ ಜಯವನ್ನು ತೋರಿಸುವ ಕಥೆಯಾಗಿದೆ. ಇದಕ್ಕೆ ಸಾರ್ವತ್ರಿಕವಾದ ಕೆಲವು ಲಕ್ಷಣಗಳಿವೆ. ಅವುಗಳನ್ನೀಗ ಪರಿಶೀಲಿಸಬಹುದು. ಮೊದಲಿಗೆ ಪಾತ್ರಗಳಿಗೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ನೋಡಬಹುದು. ಕಿನ್ನರ ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳು ಬಹಳ ಕಡಿಮೆ. ಅವನ್ನು ಒಟ್ಟಾರೆ ನಾಯಕ ಅಥವಾ ನಾಯಿಕೆ, ಕರುಣಾಳು ಸಹಾಯಕರು ಮತ್ತು ಖಳನಾಯಕರೆಂದು ಮೂರು ರೀತಿಯಲ್ಲಿ ವರ್ಗೀಕರಿಸಬಹುದು.

ಕಿನ್ನರ ಕಥೆಯ ನಾಯಕ ಅನ್ವೇಷಕನಾಗಿ, ನಿರೀಕ್ಷಕನಾಗಿ ಮತ್ತು ವಿವಾಹಾರ್ಥಿಯಾಗಿ ಕಾಣಿಸಿಕೊಳ್ಳುತ್ತಾನೆ. ನಾವು ಎಂಥೆಂಥ ಉತ್ತಮಗುಣಗಳಿರಬೇಕೆಂದು ಬಯಸುತ್ತೇವೆಯೋ ಅವೆಲ್ಲ ಅವನಲ್ಲಿರುತ್ತವೆ. ಮುಖ್ಯವಾಗಿ ಧೈರ್ಯ, ಜಾಣತನ, ಶುಚಿತ್ವ, ಚಿತ್ತಸ್ಥೈರ್ಯ, ಔದಾರ್ಯ, ಬುದ್ಧಿವಂತಿಗೆ, ಮಾತಿಗೆ ಕಿವಿಗೊಡುವಿಕೆ, ದಯಾಪರತೆ ಮತ್ತು ಸಭ್ಯತೆಗಳು ಎದ್ದುಕಾಣುವ ಗುಣಗಳಾಗಿರುತ್ತವೆ. ನಾಯಿಕೆಯಲ್ಲಿ ಧೈರ್ಯವೊಂದನ್ನು ಬಿಟ್ಟು ಉಳಿದೆಲ್ಲ ಗುಣಗಳೂ ಸಮನಾಗಿ ಕಾಣಬರುತ್ತವೆ. ನಾಯಕನಲ್ಲಿ ಯಾವುದೇ ಲೋಪದೋಷಗಳ ಸಾಧ್ಯತೆ ಇರುವುದಿಲ್ಲ. ಆದ್ದರಿಂದ ನಾಯಕನ ಪಾತ್ರದಲ್ಲಿ ಸಾಮಾನ್ಯವಾಗಿ ವಿಕಾಸ ಕಾಣದಿರುವುದು ವಿಶೇಷ ವಿಚಾರವಾಗುತ್ತದೆ. ಪ್ರಾರಂಭದಲ್ಲಿ ಕಾಣಿಸಿಕೊಂಡ ಒಳ್ಳೆಯತನ ಮುಕ್ತಾಯದವರೆವಿಗೂ ಹಾಗೆಯೇ ಇರುತ್ತದೆ. ಇದಕ್ಕೆ ಅಪವಾದಗಳಿದ್ದರೂ ಅಪೂರ್ವ. ಕಿನ್ನರ ಕಥೆಯ ಅಸಂಖ್ಯಾತ ವರ್ಗಗಳಲ್ಲಿ ನಾಯಕ ಇಬ್ಬರು ದಡ್ಡ ಸೋದರರನ್ನೂ, ನಾಯಿಕೆ ಇಬ್ಬರು ಅಸೂಯಾಪರ ಸೋದರಿಯರನ್ನೂ ಪಡೆದಿರುತ್ತಾರೆ. ಈ ಸೋದರ ಸೋದರಿಯರು ಉದ್ದಿಷ್ಟ ಕಾರ್ಯಕ್ಕೆ ಪ್ರಯತ್ನಿಸಿ ದುಃಖಿತರಾದಾಗ ನಾಯಕ ಅಥವಾ ನಾಯಿಕೆ ಅವರನ್ನು ಕೊನೆ ಮುಟ್ಟಿಸುತ್ತಾರೆ. ಪಾತ್ರಗಳಿಗೆ ಸಂಬಂಧಿಸಿದಂತೆ ಕಿನ್ನರ ಕಥೆಯ ವಿಶೇಷ ಲಕ್ಷಣವೊಂದೆಂದರೆ, ನಾಯಕ ಸ್ವಯಂ ತನ್ನ ಪಾತ್ರದ ಕೆಲಸ ಮಾಡದಿರುವುದು. ಇಂಥ ಮಾದರಿಗಳಲ್ಲಿ ಪ್ರಮುಖ ಕೆಲಸವೆಲ್ಲ ಅತಿಮಾನುಷ ಅಥವಾ ಅದ್ಭುತ ಸಹಾಯಕರಿಂದ ನಡೆದು ಹೋಗುತ್ತದೆ.

ಕಿನ್ನರ ಕಥೆಯ ಅತಿಮುಖ್ಯ ಸಮಸ್ಯೆಯೆಂದರೆ, ನಾಯಕ ಅಥವಾ ನಾಯಿಕೆಯರು ಕಿರಿಯ ಮಗ ಅಥವಾ ಮಗಳಾಗಿ ಚಿತ್ರಿತವಾಗಿರುವುದು. ಇವರು ಕಥಾ ಪ್ರಾರಂಭದಲ್ಲಿಯೇ ದುಃಸ್ಥಿತಿಯಲ್ಲಿರುವಂತೆ ವರ್ಣಿತವಾಗಿರುತ್ತದೆ. ನಾಯಕನಾದ ಕಿರಿಯ ಮಗ ತನ್ನ ಬಂಧುವರ್ಗದಿಂದ ವಂಚಿತನಾಗಿರುತ್ತಾನೆ; ಹಾಗೆಯೇ ನಾಯಿಕೆ ಕ್ರೂರ ಮಲತಾಯಿ ಅಥವಾ ಮಲ ಸೋದರರ ಕಿರುಕುಳಕ್ಕೆ ಒಳಗಾಗಿರುತ್ತಾಳೆ. ಈ ರೀತಿಯ ಕಥನ ಮಾದರಿಗಳಲ್ಲಿ ಎಷ್ಟೋ ಸಾರಿ ನಾಯಕ ಅಕ್ರಮವಾಗಿ ಹುಟ್ಟಿದ ಅನಾಥ ಅಥವಾ ವಿಧವೆಯ ಮಗನಾಗಿರುತ್ತಾನೆ. ಕೆಲವು ಕಥೆಗಳಲ್ಲಿ ಆತ ಮಂದ ಬುದ್ಧಿಯವನಾಗಿದ್ದು, ಬೌದ್ಧಿಕ ಎಚ್ಚರ ಅವನಲ್ಲಿ ನಿಧಾನವಾಗಿ ಬರುವಂತೆ ಚಿತ್ರಿತವಾಗಿರುತ್ತದೆ. ಆದ್ದರಿಂದ ಇಲ್ಲಿಯ ನಾಯಕ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತ ಸ್ವಸಾಮರ್ಥ್ಯದಿಂದ ಮೇಲಕ್ಕೆ ಬಂದ ವ್ಯಕ್ತಿಯಾಗಿರುತ್ತಾನೆ.

ಹೀಗೆ ಕಿನ್ನರ ಕಥೆಗಳಲ್ಲಿ ಕಿರಿಯ ಮಗನೇ ನಾಯಕನಾಗಿರುವುದಕ್ಕೆ ಕಾರಣವನ್ನು ಹುಡುಕುತ್ತ ಮಾನವಶಾಸ್ತ್ರಜ್ಞರು ಕೆಲವು ಊಹೆಗಳನ್ನು ಮಾಡಿರುವುದುಂಟು. ಪ್ರಾಚೀನ ಕಾಲದಲ್ಲಿ ಆಸ್ತಿ ಹಕ್ಕು ಕಿರಿಯ ಮಗನ ಮೂಲಕ ನಡೆದು ಬರುತ್ತಿದ್ದ ಪದ್ಧತಿಯಿರುತ್ತಿದ್ದುದೇ ಕಾರಣವೆಂದು ಕೆಲವರು ಹೇಳುತ್ತಾರೆ. ಇದನ್ನು ಒಂದು ಪಕ್ಷ ಒಪ್ಪಿಕೊಂಡರೂ ಪಿತ್ರಾರ್ಜಿತ ಆಸ್ತಿ ಕಿರಿಯ ಮಗನಿಗೆ ಹೋಗಲು ಆತ ಇತರರಿಗಿಂತ ಹೆಚ್ಚು ಯೋಗ್ಯ ಎನ್ನುವುದು ಸರಿಯಾಗಲಾರದು. ಈ ದೃಷ್ಟಿಯನ್ನೇ ಇಟ್ಟುಕೊಂಡು, ಹಿರಿಯ ಮಗನ ಮೂಲಕ ಆಸ್ತಿ ವಿತರಣೆಯಾಗುತ್ತಿದ್ದ ಪದ್ಧತಿ ಇದ್ದ ಕಡೆ ಹಿರಿಯ ಮಗನೇ ನಾಯಕನಾಗಿರಬೇಕಾಗಿದ್ದಿತಲ್ಲ ಎಂದೂ ವಾದಿಸಬಹುದು. ಆದರೆ ಇವೆಲ್ಲ ತರ್ಕವಾಗುತ್ತದೆಯಷ್ಟೆ. ಇಂಥ ಯಾವುದೇ ವಿಚಾರ ಅನಾವಶ್ಯಕವೆನಿಸಿದರೂ ಬೆಲೆಯಿರುವುದಿಲ್ಲವೆಂದು ಹೇಳಲಾರವು. ಕಡೆಗೆ, ಕಥೆಗಳ ಮೂಲಕ ಪ್ರಾಚೀನ ಜೀವನದ ಬಗ್ಗೆ ಕೆಲವು ಹೊಳಹುಗಳಾದರೂ ದೊರಕಬಹುದು. ಇದಕ್ಕೆ ಬದಲಾಗಿ ಕೇವಲ ಸಾಹಿತ್ಯಕ ತಂತ್ರಕ್ಕಾಗಿ ಕಿರಿಯ ಮಗನಿಗೆ ಗುರುತ್ವ ಕೇಂದ್ರವನ್ನು ವರ್ಗಾಯಿಸಿರುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಈ ರೀತಿಯ ತಂತ್ರ ಬಹುತೇಕ ಸಾಹಿತ್ಯಕ ಕೃತಿಗಳಾಗಿರುವ ಕಿನ್ನರ ಕಥೆಗಳಲ್ಲಿ ಆಶ್ಚರ್ಯವಾದ ವಿಚಾರವಾಗಲಾರದು.

ಈ ಸಮಯದಲ್ಲಿಯೇ ಇನ್ನೊಂದು ಸಂಗತಿಯನ್ನು ಹೇಳಿಬಿಡಬಹುದು. ಕಿನ್ನರ ಕಥೆಯಲ್ಲಿ, ನಾಯಕ ರಾಜಕುಮಾರಿಯನ್ನು ಮದುವೆಯಾದ ತರುವಾಯ ಮಾವನ ಸಾಮ್ರಾಜ್ಯವನ್ನು ಪಡೆಯುವುದು ಒಂದು ರೀತಿಯಾಗಿದೆ. ಇದಕ್ಕೆ ಕಾರಣವನ್ನು ಹುಡುಕುತ್ತ, ಇಂಥ ಕಥೆಗಳು ಉದಯವಾದಾಗ, ಸಾಮ್ರಾಜ್ಯಗಳು ಹಿರಿಯ ಮಗನ ಮೂಲಕ ಹೋಗದೆ, ಮಗಳ ಮೂಲಕ ಹೋಗುತ್ತಿದ್ದುದೇ ಕಾರಣವೆಂದು ಮಾನವಶಾಸ್ತ್ರೀಯ ಪಂಥ ವಿಚಾರ ಮಾಡಿದೆ. ಆದರೆ ಇದು ಸಾರ್ವತ್ರಿಕವಾಗಿತ್ತೆಂದು ಹೇಳಲಾಗುವುದಿಲ್ಲ. ಇದಲ್ಲದೆ, ಹಿರಿಯ ಮಗನ ಮೂಲಕ ಸಾಮ್ರಾಜ್ಯ ಹೋಗುತ್ತಿದ್ದ ಪರಂಪರೆಗೆ ನಿದರ್ಶನಗಳಾಗಿ ಹಲವಾರು ಕಥೆಗಳು ಇರುವುದರಿಂದ ಈ ವಿಚಾರಕ್ಕೆ ಯಾವುದೇ ಮಾನವಶಾಸ್ತ್ರೀಯ ನಿರ್ದಿಷ್ಟ ಕಾರಣವನ್ನು ಕೊಡುವುದು ಕಷ್ಟವಾಗುತ್ತದೆಂದು ಹೇಳಬಹುದು,

ಕಿನ್ನರ ಕಥೆಗಳಲ್ಲಿ ನಾಯಕ ಮತ್ತು ನಾಯಿಕೆಯರನ್ನು ಬಿಟ್ಟರೆ, ಪಾತ್ರವರ್ಗದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವವರೆಂದರೆ ಸಹಾಯಕ ವರ್ಗವೇ ಆಗಿದೆ. ನಾಯಕನ ಕಾರ್ಯನಿರ್ವಹಣೆಯಲ್ಲಿ ಇವರ ಪಾತ್ರ ವೈವಿಧ್ಯಪೂರ್ಣವಾದುದು. ಇವರ ಕಾರ್ಯ ಎರಡು ತೆರನಾದುದು; ಒಂದು, ನಾಯಕನಿಗೆ ಸಲಹೆ ಕೊಡುವುದಕ್ಕೆ ಮಾತ್ರ ಪರಿಮಿತವಾದ ವರ್ಗ; ಎರಡು, ಕಾರ್ಯದ ಪ್ರಧಾನ ಹಾಗೂ ಕಷ್ಟದ ಭಾಗವನ್ನುವಹಿಸುವ ಸಹಾಯಕ ವರ್ಗ. ಮೊದಲನೆಯದರಲ್ಲಿ ನಾಯಕನ ಕೆಲಸ ಸಲಹೆ ತೆಗೆದುಕೊಂಡರೂ ಸ್ವಂತ ಸಾಧನೆಯ ಮೇಲೆ ನಿಂತಿರುತ್ತದೆ; ಆದರೆ ಎರಡನೆಯದರಲ್ಲಿ ನಾಯಕನ ಕಾರ್ಯ ಸುಲಭಗೊಳ್ಳುತ್ತದೆ. ಇದರಿಂದ ಒಂದು ಮಾತು ಮಾತ್ರ ಸತ್ಯ; ನಾಯಕ ಎಷ್ಟೇ ಗುಣಸಂಪನ್ನನಾಗಿದ್ದರೂ ಸಹಾಯಕರಿಲ್ಲದೆ ಜಯ ಪಡೆಯಲಾರ. ಇಂಥ ಕರುಣಾಳು ಸಹಾಯಕರನ್ನು ಪ್ರಾಣಿಗಳು, ಅತಿಮಾನುಷ ಶಕ್ತಿಗಳು, ಮತ್ತು ಅಚೇತನ ವಸ್ತುಗಳೆಂದು ಮೂರು ವಿಭಾಗ ಮಾಡಿಕೊಳ್ಳಬಹುದು. ನಾಯಕ ಇವುಗಳ ಸ್ನೇಹವನ್ನು ದಯಾಪರ ಕಾರ್ಯದಿಂದ ಮತ್ತು ಸೌಜನ್ಯದ ನಡೆವಳಿಕೆಯಿಂದ ಗಳಿಸಿಕೊಂಡಿರುತ್ತಾನೆ. ಆದ್ದರಿಂದ, ಕೃತಜ್ಞತೆಯನ್ನು ಉಕ್ಕಿಸುವಂಥ ಯಾವ ಕಾರ್ಯವನ್ನೂ ಮಾಡದೆ ಅವುಗಳ ಸಹಾಯವನ್ನು ನಾಯಕ ಪಡೆಯಲಾರ ಎಂಬುದು ಒಂದು ಸುನಿಶ್ಚಿತವಾದ ಸಂಗತಿ. ಸಾಮಾನ್ಯವಾಗಿ ಈ ಸಹಾಯಕ ವರ್ಗದಲ್ಲಿ ಅತಿಮಾನುಷ ರೀತಿಯ ಸಹಾಯಕರೇ ಹೆಚ್ಚು ಕಾಣಿಸಿಕೊಳ್ಳುವುದು. ಇನ್ನೊಂದು ವಿಷಯವೆಂದರೆ, ಕೆಲವು ಸಂದರ್ಭಗಳಲ್ಲಿ ಸಹಾಯ ಅನೈಚ್ಛಿಕವಾಗಿ ಒದಗಿ ಬರುವುದು. ದೆವ್ವಗಳ ಅಥವಾ ಅತಿಮಾನುಷ ಶಕ್ತಿಗಳ ಅಶರೀರವಾಣಿಯೊಂದನ್ನು ಕೇಳಿ, ಅವುಗಳ ಆದೇಶದಂತೆ ನಾಯಕ ಮುಂದೆ ಕಾರ್ಯ ಪ್ರವೃತ್ತನಾಗುವುದು. ಈ ಆಶಯ ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ನಾಯಕನಿಗೆ ಸಹಾಯಕರೇ ಇರುವುದಿಲ್ಲ. ಆದರೆ ಕಾರ್ಯವನ್ನು ಸುಗಮಗೊಳಿಸಲು ಅದ್ಭುತ ವಸ್ತುಗಳನ್ನು ಹೊಂದಿರಬಹುದು. ಉದಾಹರಣೆಗೆ, ಮಂತ್ರದ ಉಂಗುರ, ಮಂತ್ರದ ಟೋಪಿ, ಮಂತ್ರದ ದೊಗಲೆ ಅಂಗಿ, ಮಾಯದ ಚಾಪೆ, ಮಂತ್ರದಂಡ-ಮೊದಲಾದುವುಗಳಿಂದ ನಾಯಕನಿಗೆ ಸಹಾಯಕವಾಗಿ ಕಥೆ ಅದ್ಭುತ ವಾತಾವರಣದಲ್ಲಿ ಬೆಳೆಯಬಹುದು.

ಈಗ ಪಾತ್ರವರ್ಗದ ಪ್ರತಿನಾಯಕರನ್ನು ಪರಿಶೀಲಿಸಬಹುದು. ಪ್ರತಿಯೊಂದು ಒಳ್ಳೆಯ ಕಿನ್ನರ ಕಥೆಯಲ್ಲೂ ಈ ಖಳನಾಯಕರು ಕಾಣಬರುವರು. ಇವರನ್ನು ಸಮೀಪವರ್ತಿಗಳು, ಮತ್ತು ಕಾರ್ಯಗಳು ಸಂಬಂಧ ಕಲ್ಪಿಸುವ ತನಕ ಪರಸ್ಪರ ಸಂಬಂಧವಿಲ್ಲದವರು ಎಂಬುದಾಗಿ ಎರಡು ವಿಧ ಮಾಡಿಕೊಳ್ಳಬಹುದು. ಮೊದಲ ವರ್ಗದಲ್ಲಿ ಹಗೆತನದ ಚಿಕ್ಕಪ್ಪಂದಿರು, ಮಲತಾಯಿಯರು, ಅಸೂಯಾಪರ ಸೋದರ ಸೋದರಿಯರು ಹಾಗೂ ಮಲ ಸೋದರ ಸೋದರಿಯರು, ವಿಶ್ವಾಸ ಘಾತಕ ಜೊತೆಗಾರರು-ಮೊದಲಾದವರು ಬರುವರು. ಎರಡನೆಯ ವರ್ಗದಲ್ಲಿ ರಾಕ್ಷಸರು, ಪ್ರೇತಗಳು, ದೆವ್ವಗಳು ಐಂದ್ರಜಾಲಿಕರು, ಮಾಟಗಾರರು, ಬೃಹದ್ದೇಹಿಗಳು, ಸೈತಾನರು ಮುಂತಾದವರು ಸೇರಿಕೊಳ್ಳುವರು. ಇಲ್ಲಿ ಒಂದು ವಿಮರ್ಶಾರ್ಹ ವಿಚಾರವೆಂದರೆ ಮಲಸೋದರ ಸೋದರಿಯರ ಅಸೂಯಾ ಕಲ್ಪನೆಗೆ ವಾಸ್ತವಿಕತೆಯ ನಿದರ್ಶನ ದೊರೆತರೂ ಸೋದರ ಸೋದರಿಯರ ಅಸೂಯೆಗೆ ಕಾರಣ ಹೇಳುವುದು ಕಷ್ಟ ಎಂಬುದು. ಮೇಲಿನ ಎರಡು ವರ್ಗಗಳಲ್ಲಿ ಮೊದಲ ಗುಂಪಿನವರೇ ನಿಜವಾದ ಖಳನಾಯಕರು. ಮೊದಲ ಗುಂಪಿನವರಿಗೂ ನಾಯಕನಿಗೂ ಪ್ರತಿಸಂಬಂಧ ಇದ್ದರೆ, ಈ ಯಾವುದೇ ಸ್ವಾಭಾವಿಕ ಉಪಕಾರದ ಹಂಗು ಎರಡನೆಯ ಗುಂಪಿನವರಿಗೆ ಇರುವುದಿಲ್ಲ. ಆದರೆ, ಎರಡು ವರ್ಗದ ಖಳನಾಯಕರೂ ಕಡೆಗೆ ಶಿಕ್ಷೆಗೆ ಗುರಿಯಾಗುತ್ತಾರೆ. ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಪ್ರತಿನಾಯಕರ ಚಿತ್ರ ಇದು.

ಇನ್ನೂ ಎರಡನೆಯದಾಗಿ ಕಥನಕ್ರಿಯೆಗೆ ಸಂಬಂಧಿಸಿದ ವಿಷಯ. ಕಥನಕ್ರಿಯೆಗೆ ನಾಯಕ ಒಂದಲ್ಲ ಒಂದು ವಿಧದಲ್ಲಿ ಸಂಬಂಧಪಟ್ಟಿರುತ್ತಾನೆ. ಅವನ ಸಾಧನೆಯ ಇತಿಹಾಸವೇ ಕಥೆ. ಅವನ ಬಗೆಗಿನ ಘಟನಾಪರಂಪರೆಗಳೇ ವಸ್ತು. ಕಥನಕ್ರಿಯೆಯ ನಾಯಕನ

ಸಾಮಾನ್ಯವಾದ ವಿಷಯವೊಂದೆಂದರೆ ಅನ್ವೇಷಣಾ ಆಶಯ. ಕಥೆ ಸುಂದರವಾಗಿರಲು ಇದು ಸಹಾಯ ಮಾಡಿದೆ. ಮನವನ್ನು ರಂಜಿಸುವ ಮೂಲಕ ತೃಪ್ತಿ ಪಡಿಸುವ ಕಾರ್ಯ ಇದರದು. ಕಥೆ ಕ್ರಿಯಾಶೀಲವಾಗುವುದೇ ಇಂಥ ಆಶಯಗಳ ಮೇಲೆ. ಈ ಅನ್ವೇಷಣೆ ಕಥಾವರ್ಗದಿಂದ ಕಥಾವರ್ಗಕ್ಕೆ ವ್ಯತ್ಯಾಸವಾಗುತ್ತ ಹೋಗುತ್ತದೆ. ಇಂಥ ಅನ್ವೇಷಣೆಯ ಹಲವು ರೀತಿಗಳೆಂದರೆ ಆದರ್ಶ ಸ್ತ್ರೀ, ಅದ್ಭುತ ಕುದುರೆ, ಅದ್ಭುತ ಪಕ್ಷಿ, ಜೀವಜಲ, ಶಕ್ತ್ಯಾಯುಧ, ಒಗಟು –ಇತ್ಯಾದಿಗಳು. ಕ್ರಿಯೆಯ ಮತ್ತೊಂದು ಗುಂಪೆಂದರೆ ಕಾವಲು ಕಾಯುವುದು. ಉದಾಹರಣೆಗಾಗಿ, ಮೂರು ಜನ ಸೋದರರು ಮೂರು ರಾತ್ರಿಗಳಲ್ಲಿ ಉದ್ದಿಷ್ಟ ವಿಷಯವೊಂದಕ್ಕೆ ಕಾವಲು ಕಾಯುವುದು. ಹಿರಿಯರಿಬ್ಬರು ಸತ್ತರೆ ಕಿರಿಯವ ಪರೀಕ್ಷೆಯಲ್ಲಿ ಗೆಲ್ಲುವುದು. ದುರ್ಗವನ್ನು ದೆವ್ವಗಳಿಂದ ಮುಕ್ತ ಮಾಡುವುದೊಂದು ಗಮನಾರ್ಹ ಆಶಯ. ಕಾರ್ಯಕ್ಕೆ ಪ್ರವೃತ್ತಿಸುವ ಪ್ರತಿ ಮನುಷ್ಯನನ್ನೂ ಅವು ಕೊಂದು ಹಾಕಿ ಬಿಡುತ್ತವೆ. ಆದರೆ ನಾಯಕ ತನ್ನ ಧೈರ್ಯ ಹಾಗೂ ಜಾಗರೂಕತೆಗಳಿಂದಾಗಿ, ತಾನು ಪಡೆದಿರುವ ಮಂತ್ರಶಕ್ತಿಯಿಂದಾಗಿ ದೆವ್ವಗಳನ್ನು ಕೆಡವಿ ಕೋಟೆಯನ್ನು ಮುಕ್ತಗೊಳಿಸುತ್ತಾನೆ. ತತ್ಫಲವಾಗಿ ರಾಜಕುಮಾರಿಯನ್ನು ಬಹುಮಾನವಾಗಿ ಪಡೆಯುತ್ತಾನೆ. ಕ್ರಿಯೆಯ ಇನ್ನೊಂದು ಗುಂಪೆಂದರೆ ನಾಯಕ ವಧುವನ್ನು ಗೆಲ್ಲಲು ಹಲವಾರು ಪರೀಕ್ಷೆಗೆ ಒಳಗಾಗುವುದು. ಉದಾಹರಣೆಗೆ ರಥದ ಸ್ಪರ್ಧೆ, ದ್ವಂದ್ವಯುದ್ಧ, ಒಗಟು ಬಿಡಿಸುವುದು, ಚದುರಂಗದ ಆಟ ಇತ್ಯಾದಿ. ಇಂಥ ಪರೀಕ್ಷೆಗಳಲ್ಲಿ ಗೆದ್ದರೆ ವಧು ದೊರಕುವಳು. ಇಲ್ಲದಿದ್ದರೆ ಇಲ್ಲ. ಕೆಲವು ಸಾರಿ ನಾಯಕನ ಮದುವೆ ಮೊದಲಿನ ವಧುವಿಗೆ ಬದಲಾಗಿ ಬೇರೆ ವಧುವಿನ ಜೊತೆಯಲ್ಲಿ ನಿಶ್ಚಯವಾದಾಗ ಅನುಮಾನ ದೊಡ್ಡದಾಗುತ್ತದೆ. ಆದರೆ ಕ್ರಿಯೆ ಇದ್ದಕ್ಕಿದ್ದ ಹಾಗೆ ಮೂಲಕ್ಕೆ ತಿರುಗಿ ಎಲ್ಲರನ್ನು ಚಕಿತಗೊಳಿಸಿ ಸುಖಾಂತದಲ್ಲಿ ಮುಕ್ತಾಯವಾಗುತ್ತದೆ. ಇದು ಕಿನ್ನರ ಕಥೆಯ ರೋಮಾಂಚಕತೆಯ ಲಕ್ಷಣವನ್ನು ಹೇಳುತ್ತದೆ.

ಮೂರನೆಯದಾಗಿ ಕಿನ್ನರ ಕಥೆಗೂ ನೀತಿಗೂ ಇರುವ ಸಂಬಂಧವನ್ನು ಕುರಿತ ವಿಚಾರಕ್ಕೆ ಬರಬಹುದು. ಕಿನ್ನರ ಕಥೆಗಳಲ್ಲಿ ನಿತ್ಯಾತ್ಮಕ ಮೌಲ್ಯಗಳ ಅಸ್ತಿತ್ವವನ್ನು ಕುರಿತು ಕೆಲವರು ಹೇಳುತ್ತಾರೆ. ಆದರೆ ಈ ಕಥೆಗಳು, ನೀತಿಭಾವನೆಗಳ ಪ್ರತಿನಿಧಿಗಳೆಂದು ಹೇಳಲಾಗುವುದಿಲ್ಲ. ಕಥೆಯಲ್ಲಿ ಬರುವ ಖಳನಾಯಕನ ಶಿಕ್ಷೆಯಿಂದಾಗಿ ಕೆಲವರು ಇಂಥಾ ಭಾವನೆಗಳನ್ನು ರೂಪಿಸಿಕೊಂಡಿರಲು ಸಾಕು. ಆದರೆ ಇಂಥ ಕಡೆ ಸಂವಿಧಾನಾತ್ಮಕ ಕಾನೂನನ್ನು ಕಾಣದೆ, ಜನರ ಸಾಮಾನ್ಯ ಜ್ಞಾನವಷ್ಟನ್ನು ಮಾತ್ರ ನಿರೀಕ್ಷಿಸಬೇಕಾಗುತ್ತದೆ. ಇನ್ನೂ ಮುಂದುವರಿದು ಹೇಳುವುದಾದರೆ ಕಿನ್ನರ ಕಥೆಗಳು ಮತಧರ್ಮಶಾಸ್ತ್ರದ ಚಿಂತನೆಯಿಂದ ಮುಕ್ತಗೊಂಡಿರುತ್ತವೆ. ಯಾವುದೇ ತತ್ತ್ವಶಾಸ್ತ್ರದ ಅಥವಾ ಭಾವನಾಶಾಸ್ತ್ರದ ಚಿಂತನೆಯಿಂದ ಮುಕ್ತಗೊಂಡಿರುತ್ತವೆ. ಯಾವುದೇ ತತ್ತ್ವಶಾಸ್ತ್ರದ ಆದರ್ಶವನ್ನು ಇವು ಹೇಳುವುದಿಲ್ಲ. ಆದರೆ, ಕೆಲವು ಕಥೆಗಳಲ್ಲಿ ಕಾಣಿಸಿಕೊಳ್ಳುವ ಒಂದೇ ಒಂದು ತಾತ್ತ್ವಿಕ ದೃಷ್ಟಿಯೆಂದರೆ ಅದೃಷ್ಟವಾದ. ಉದಾಹರಣೆಗೆ, ಮಗನಿಂದಲೊ, ಮಗಳ ಮಗನಿಂದಲೊ ಅಥವಾ ತಂಗಿಯ ಮಗನಿಂದಲೊ ತಾನು ಕೊಲ್ಲಲ್ಪಡುತ್ತೇನೆಂದು ದೈವವಾಣಿಯೊಂದು ತಿಳಿಸುವುದು. ಅದರಿಂದ ಮುಕ್ತನಾಗಲು ಪ್ರಯತ್ನಿಸಿದರೂ ಅದು ಹೇಗೋ ನಡೆದು ಹೋಗುವುದು. ಇನ್ನೊಂದು ಗಮನಾರ್ಹ ಅಂಶವೆಂದರೆ, ಕಿನ್ನರ ಕಥೆಗಳಲ್ಲಿನ ಧಾರ್ಮಿಕ ಅಂಶ ಭೂತ ವಿದ್ಯೆಯ ಕಡೆಗೆ ಕೈ ತೋರಿಸುತ್ತದೆ–ಎಂಬುದಾಗಿದೆ. ಆದರೆ, ಈ ಯಾವುದೇ ಭೂತಗಳು ಸುವ್ಯವಸ್ಥಿತವಾದ ಅಥವಾ ಚೆನ್ನಾಗಿ ಬೆಳವಣಿಗೆ ಹೊಂದಿದ ಧಾರ್ಮಿಕ ಪದ್ಧತಿಯ ಭಾಗವನ್ನು ರೂಪಿಸುವುದಿಲ್ಲ. ನಿರ್ದಿಷ್ಟ ವರ್ಗದ ಇತಿಹಾಸವನ್ನು ಹುಡುಕುವುದರಲ್ಲೂ ಇದು ನೆರವಾಗುವುದಿಲ್ಲ. ಇದರ ಕಾರ್ಯವೆಲ್ಲ ಪಾಠವೊಂದರ ರಾಷ್ಟ್ರೀಯತೆಯನ್ನು ನಿಗದಿಸುವಲ್ಲಿ ಕೊನೆಗೊಳ್ಳುತ್ತದೆ.

ನಾಲ್ಕನೆಯದಾಗಿ, ಕಿನ್ನರ ಕಥೆಯ ತಂತ್ರವನ್ನು ಕುರಿತಂತೆ ಕೆಲವು ವಿಚಾರಗಳನ್ನೀಗ ಪ್ರಸ್ತಾಪಿಸಬಹುದು. ಕಿನ್ನರ ಕಥೆಗಳು ಕೌಶಲಪೂರ್ಣವಾದ ರಚನೆಗಳು. ಈ ದೃಷ್ಟಿಯಿಂದ, ಕಿನ್ನರ ಕಥೆಯಲ್ಲಿ ಬರುವ ಕೆಲವು ಸಾಂಪ್ರದಾಯಿಕ ನಿಯಮಗಳು ಗಮನಾರ್ಹವಾದವು. ಇವುಗಳಲ್ಲಿ ಎರಡು, ಮೂರು, ನಾಲ್ಕು ಮತ್ತು ನಲವತ್ತರ ಸಂಖ್ಯೆಗಳು ಮತ್ತೆ ಮತ್ತೆ ಬರುವುದು ಪ್ರಮುಖವಾದ ಅಂಶವಾಗುತ್ತದೆ. ಎರಡರ ಸಂಖ್ಯೆಗೆ ಅವಳಿ ಸೋದರರು ನಿದರ್ಶನವಾಗುತ್ತದೆ. ಮೂರರ ಸಂಖ್ಯೆ ತುಂಬ ವೈವಿಧ್ಯಪೂರ್ಣವಾಗಿ ಕಾಣಿಸಿಕೊಳ್ಳುತ್ತದೆ. ಮೂರು ದಿನಗಳು, ಮೂರು ತಿಂಗಳುಗಳು ಮತ್ತು ಮೂರು ವರ್ಷಗಳು ಕಾಲಮಿತಿಯನ್ನು ಸೂಚಿಸುತ್ತವೆ, ಮೂರರ ಸಂಖ್ಯೆ ಪಾತ್ರಗಳಿಗೆ ಮಾತ್ರವಲ್ಲದೆ ಘಟನೆಗಳಿಗೂ ಅನ್ವಯಿಸುತ್ತದೆ. ಮಂತ್ರದಿಂದ ಮಾಡಿದ ದುರ್ಗ ಮೂರು ರಾತ್ರಿಗಳು ರಕ್ಷಿತವಾಗಿರುವುದು, ವಿಷಯವನ್ನು ತಿಳಿಸುವ ಮೂರು ಜನ ಮುದುಕರನ್ನು ಅನ್ವೇಷಣಾಕಾರ ಭೇಟಿಯಾಗುವುದು, ವಧುವನ್ನು ಮದುವೆಯಾಗಲು ವರ ಮೂರು ಪ್ರಶ್ನೆಗಳಿಗೆ ಉತ್ತರಿಸಬೇಕಾದುದು ಅಥವಾ ಮೂರು ಒಗಟುಗಳನ್ನು ಒಡೆಸಬೇಕಾಗುವುದು ಅಥವಾ ಮೂರು ಕೆಲಸಗಳನ್ನು ಮಾಡಬೇಕಾದದು–ಮುಂತಾದುವು ಇದಕ್ಕೆ ನಿದರ್ಶನ. ವಧುವಿನ ಆಯ್ಕೆಗೆ ಸಂಬಂಧಿಸಿದಂತೆ ಬರುವ ಮೂರು ಕಾರ್ಯಗಳನ್ನು ಕುಪಿನರಾಜ (ಕರ್ಣಾಟಕ ಜಾನಪದ ಕಥೆಗಳು) ಎಂಬ ಕಥೆಯಲ್ಲಿನಂತೆ ಹೊಲಕ್ಕೆ ರಾಗಿ ಬಿತ್ತಿ, ಉಳಿಸಿ ಆದ ಮೇಲೆ ಮತ್ತೆ ರಾಗಿಯನ್ನು ಆಯ್ದು ರಾಶಿಮಾಡುವ ಹಾಗೆ ಹೇಳುವುದು, ಉಂಗುರವನ್ನು ಬಾವಿಗೆ ಹಾಕಿ ತೆಗೆಯಲು ಹೇಳುವುದು, ಇಂದ್ರನ ಮಗಳನ್ನೇ ಹೋಲುವ ಸುಂದರಿಯನ್ನು ಸೃಷ್ಟಿಸಿ ವಧುವನ್ನು ಆರಿಸಿಕೊಳ್ಳೆಂದು ತಿಳಿಸುವುದು–ಇವನ್ನು ನೋಡಬಹುದು. ನಾಯಕನಿಗೆ ಸಹಾಯಕರಾಗಿ ಬರುವ ಇರುವೆ, ಕಪ್ಪೆ ಮತ್ತು ಚಿಟ್ಟೆಗಳು ಈ ಕಾರ್ಯವನ್ನು ನಿರ್ವಹಿಸುತ್ತವೆ. ಅವಕ್ಕೆ ನಾಯಕ ಮೊದಲೇ ಸಹಾಯ ಮಾಡಿ ಅವನ್ನು ಕೃತಜ್ಞರನ್ನಾಗಿ ಮಾಡಿರುತ್ತಾನೆ. ಮೂರಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿಚಾರವೆಂದರೆ, ಮೂರು ಕ್ರಮೇಣ ಕ್ರಿಯೆಯ ಗಾಢತೆಯನ್ನು ಪಡೆದುಕೊಂಡು, ಅದರ ಗುರುತ್ವಕೇಂದ್ರ ಮೂರನೆಯದರ ಮೇಲೆ ನಿಲ್ಲುವುದು. ಉದಾಹರಣೆಗೆ, ರಾಜನ ಮೂರು ಜನ ಹೆಣ್ಣು ಮಕ್ಕಳಲ್ಲಿ ಮೂರನೆಯವಳು ಕಿರಿಯವಳಷ್ಟೇ ಅಲ್ಲದೆ ಸುಂದರಿಯೂ ನಾಯಿಕೆಯೂ ಆಗಿರುವುದು ಮತ್ತು ಮೂರು ಜನ ಗಂಡು ಮಕ್ಕಳಲ್ಲಿ ಕಿರಿಯವನಾದ ಮೂರನೆಯವನೇ ನಾಯಕನಾಗಿರುವುದು. ಇನ್ನು ನಾಲ್ಕು ಮತ್ತು ಏಳರ ಸಂಖ್ಯೆಗಳು ವಿರಳವಾಗಿ ಮಾತ್ರ ಕಾಣಿಸಿಕೊಳ್ಳುತ್ತವೆ. ನಲವತ್ತರ ಸಂಖ್ಯೆ ನಲವತ್ತು ದಿನಗಳ ಕಾಲಮಿತಿಯನ್ನು ಸೂಚಿಸುವಾಗ ಬರುತ್ತದೆ.

ಮೇಲಿನ ಪ್ರಮುಖ ವಿಚಾರಗಳ ಜೊತೆಗೆ ಇನ್ನು ಕೆಲವು ಲಕ್ಷಣಗಳನ್ನು ಗುರುತಿಸಬಹುದು. ಕಿನ್ನರ ಕಥೆಗಳಲ್ಲಿ ವ್ಯಕ್ತವಾಗಿರುವ ಜಗತ್ತು ಸರ್ವೋತ್ತಮ ಎನ್ನಲಾಗದು. ಇದು ಸಾಕಷ್ಟು ಆದರ್ಶವಾದುದು. ಕೆಟ್ಟದು ಶಿಕ್ಷೆಗೆ ಒಳಗಾಗುತ್ತದೆ. ಒಳ್ಳೆಯವರು. ವೀರರಾದವರು ಮತ್ತು ಕೆಲವು ವೇಳೆ ದಡ್ಡರು ಹೇಡಿಗಳು ಕೂಡ ಅನಿವಾರ್ಯವಾಗಿ ಹರ್ಷಾಂತವಾಗಿ ಹೊರಬರುತ್ತಾರೆ. ಇದರ ಇನ್ನೊಂದು ಉಲ್ಲೇಖನೀಯ ಅಂಶವೆಂದರೆ ಪ್ರತಿನಾಯಕರನ್ನು ಬಿಟ್ಟರೆ ಇಲ್ಲಿ ಸಾವು ಎಂಬುದು ಇಲ್ಲ. ಇನ್ನು ಮುಂದಿನ ಲಕ್ಷಣ ರೂಪ ಪರಿವರ್ತನೆಗೆ ಸಂಬಂಧಿಸಿದುದು. ಮಂತ್ರದ ಸಾಮರ್ಥ್ಯದಿಂದ ವ್ಯಕ್ತಿಯನ್ನು ಕಲ್ಲಾಗಿ ಮಾಡುವುದು, ಮತ್ತೆ ಬದುಕಿಸುವುದು–ಹೀಗೆ. ಇದರಲ್ಲಿ ಮಂತ್ರದಂಡ, ಮರಿಜವಳೆಕಡ್ಡಿ, ಮಂತ್ರಿಸಿದ ನೀರು, ಶಾಪ ಮೊದಲಾದವು ಬರುತ್ತವೆ; ಮಾಟಗಾರರು, ದೇವತೆಗಳು, ರಾಕ್ಷಸರು, ಮಾಂತ್ರಿಕ ವಸ್ತುಗಳನ್ನು ಹೊಂದಿರುವವರು ಸಾಮಾನ್ಯವಾಗಿ ಈ ಕೆಲಸವನ್ನು ನಿರ್ವಹಿಸುತ್ತಾರೆ. ಇದಕ್ಕೆ ತುತ್ತಾದ ವ್ಯಕ್ತಿಗಳೆಂದರೆ ಕಾರ್ಯಸಾಧನೆಯಲ್ಲಿರುವ ನಾಯಕನೋ ಅಥವಾ ನಾಯಿಕೆಯೋ ಆಗಿರುತ್ತಾರೆ.

ಕಿನ್ನರ ಕಥೆಗಳನ್ನು ಇತರ ಪ್ರಕಾರಗಳಂತೆಯೇ ಸಾಂಸ್ಕೃತಿಕ ಮತ್ತು ಸಾಹಿತ್ಯಕ ದೃಷ್ಟಿಗಳೆರಡರಿಂದಲೂ ನೋಡಬೇಕಾಗುತ್ತದೆ. ಯಾವುದೇ ಒಂದು ರೀತಿಯಲ್ಲಿ ಮಾಡಿದ ಪರಿಶೀಲನೆ ಅಪೂರ್ಣವಾದುದೇ ಸರಿ. ಸಾಂಸ್ಕೃತಿಕವಾಗಿ ನೋಡಿದಾಗ ಕಿನ್ನರ ಕಥೆಗಳು ಪುರಾತನ ಜಗತ್ತಿನ ಉಳಿಕೆಗಳೆಂದು ಕೆಲವರ ಅಭಿಪ್ರಾಯ. ಇದು ವಿಲಕ್ಷಣವಾದುದೇನೂ ಅಲ್ಲ. ಮಹಾಕಾವ್ಯಗಳಲ್ಲಿ ಇಂಥ ಪಳೆಯುಳಿಕೆಗಳನ್ನು ಪತ್ತೆ ಹಚ್ಚುವಂತೆ ಈ ಕಥೆಗಳಲ್ಲಿಯೂ ಕಾಣಬಹುದೆನಿಸುತ್ತದೆ. ಹಲವು ವೇಳೆ ಇಲ್ಲಿನ ಆಶಯಗಳು ನಿರ್ದಿಷ್ಟ ಕಥಾವರ್ಗ ರಚಿತವಾದ ಕಾಲಕ್ಕೆ ಸೇರಿದುವೆಂದು ಹೇಳಬಹುದು. ಉದಾಹರಣೆಗೆ, ಅವಳಿ ಆಶಯ ಮತ್ತು ವಧು ಅನ್ವೇಷಣೆಗಳನ್ನು ನೋಡಬಹುದು. ಆದರೆ ಇನ್ನು ಕೆಲವರು, ಕಿನ್ನರ ಕಥೆಗಳು ಬಹುತೇಕ ಸಾಹಿತ್ಯಿಕ ಸೃಷ್ಟಿಗಳೆಂದೇ ಹೇಳುತ್ತಾರೆ. ಬೇರೆ ಕಥಾ ಪ್ರಕಾರಗಳಿಗೆ ಹೋಲಿಸಿದಾಗ ಇವುಗಳಲ್ಲಿ ಸಾಹಿತ್ಯಾಂಶ ಹೆಚ್ಚು ಎಂಬುದು ಸತ್ಯವಾದ ಮಾತು. ಇದರ ಜನಪ್ರಿಯ ಕಲ್ಪಕತೆ ನಿಸ್ಸಂಶಯವಾಗಿ ಹಳೆಯ ಕಾಲದ ಕಾದಂಬರಿ ಮಾದರಿಯದೆಂದು ವಿದ್ವಾಂಸರು ಗುರುತಿಸಿರುವುದು ಸರಿಯೆನಿಸುತ್ತದೆ. ಕಿನ್ನರ ಕಥೆಗಳು 3–4 ಪುಟಗಳಿಂದ 30–40 ಪುಟಗಳ ತನಕ ದೊರೆಯುವುದೇ ಇದನ್ನು ಸಮರ್ಥಿಸುತ್ತದೆ. ಕಿನ್ನರ ಕಥೆಗಳ ಪ್ರಧಾನ ಉದ್ದೇಶ ಮನರಂಜನೆಯೇ ಆಗಿರಬೇಕು. ಇವು ಮಾನವ ವಿಕಾಸದ ಮೂರು ಪ್ರಸಿದ್ಧ ಹಂತಗಳನ್ನು ಪ್ರತಿನಿಧಿಸುವುದಿಲ್ಲವೆಂದೂ ಅಥವಾ ಆ ಹಂತಗಳನ್ನು ಇವುಗಳಲ್ಲಿ ನೋಡಲಾಗದೆಂದೂ ಇದಕ್ಕೆ ಈ ಕಥೆಗಳು ಅನಂತರದ ಸೃಷ್ಟಿಯಾಗಿರುವುದೇ ಕಾರಣವೆಂದೂ ಅಲೆಕ್ಸಾಂಡರ್ ಕ್ರಾಪ್ಪೆ ಅಭಿಪ್ರಾಯಪಟ್ಟಿದ್ದಾನೆ. ಆದ್ದರಿಂದ ಜನಪ್ರಿಯ ಕಥಾ ಪ್ರಕಾರಗಳಲ್ಲಿ ಪ್ರಾಯಶಃ ಇದು ಕಿರಿಯದಾಗುತ್ತದೆ. ಇಲ್ಲಿನ ಕಲಾತ್ಮಕ ದೃಷ್ಟಿ ಅನಕ್ಷರಸ್ಥ ಜನತೆಯ ಪೂರ್ಣಸೃಷ್ಟಿಯೆಂಬುದನ್ನು ಹೇಳುತ್ತದೆ.

ಇಲ್ಲಿ ಮತ್ತೊಂದು ಅಂಶವನ್ನು ಪ್ರಸ್ತಾಪಕ್ಕೆ ತರಬಹುದು. ಅದು ನಿರ್ದಿಷ್ಟ ದೇಶವೊಂದರ ಸಾಹಿತ್ಯದಲ್ಲಿಯೂ ಕಿನ್ನರ ಕಥೆಗಳು ಪ್ರವೇಶ ಮಾಡಿರುವಂಥದು. ಈ ಕಥೆಗಳು ಸೌಂದರ್ಯಾನುಭವದ ಸಾಧನಗಳಾಗಿದ್ದುದೇ ಇದಕ್ಕೆ ಕಾರಣವಿರಬಹುದು. ಆಯಾ ದೇಶಗಳ ಮಹಾಕಾವ್ಯ, ಕಥಾಸಾಹಿತ್ಯಗಳಲ್ಲಿ ಇವು ದೊರಕುತ್ತವೆ. ಹೀಗೆ ಬರೆವಣಿಗೆಯ ಮೂಲಕ ರಕ್ಷಿಸಿಕೊಂಡು ಬಂದಿರುವ ಇವುಗಳಿಂದ ಕೆಲಮಟ್ಟಿಗೆ ಜನಪದ ಕಿನ್ನರ ಕಥೆಗಳ ಕಾಲನಿರ್ದೇಶನಕ್ಕೆ ಸಹಾಯವಾಗುತ್ತದೆ. ಸಾಹಿತ್ಯಕ ಕಥೆಗಳ ಕಾಲ ಬಹುಮಟ್ಟಿಗೆ ಗೊತ್ತಿರುವುದೇ ಇದು ಸಾಧ್ಯವಾಗುವಂತೆ ಮಾಡುತ್ತದೆ. ಇದರಿಂದಾಗಿ, ವಾಚಕ ಸಂಪ್ರದಾಯ ಕಥೆಗಳ ಜೊತೆಯಲ್ಲಿ ಬರೆವಣಿಗೆಯಲ್ಲಿರುವ ಈ ಕಥೆಗಳು ಐತಿಹಾಸಿಕ ಪಾಠಗಳಾಗಿ ಕಾಣಿಸಿಕೊಳ್ಳುತ್ತವೆ.

ಕಿನ್ನರ ಕಥೆ ತುಂಬ ವ್ಯಾಪಕವಾದ, ಜನಪ್ರಿಯವಾದ ಪ್ರಕಾರ, ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಜಾನಪದ ವೈಜ್ಞಾನಿಕ ಅಧ್ಯಯನ ಆರಂಭವಾದಾಗ ಮೊದಲ ಗಮನವನ್ನು ಸೆಳೆದದ್ದು ಕಿನ್ನರ ಕಥೆ. ಅದರಲ್ಲಿಯೂ ಜರ್ಮನಿಯ ಗ್ರಿಮ್ ಸೋದರರ ಕಥಾಸಂಕಲನ ಪ್ರಕಟವಾದ ಮೇಲಂತು, ಈ ದಿಶೆಯಲ್ಲಿ ಹೊಸ ಅಧ್ಯಾಯವೊಂದು ತೆರೆಯಿತೆನ್ನಬೇಕು, ಯುರೋಪಿನಾದ್ಯಂತ ಜನಪದ ಕಥೆಯ ತುರ್ತುಸಂಗ್ರಹ ಕಾರ್ಯಕ್ಕೆ ಇದು ಅಪಾರ ಪ್ರಚೋದನೆಯನ್ನು ನೀಡಿತು. ಫಿನ್ಲೆಂಡಿನಲ್ಲಿ ಮೊದಲು ರೂಪಿತವಾದ ಚಾರಿತ್ರಿಕ–ಭೌಗೋಳಿಕ ವಿಧಾನಕ್ಕೆ ಕಿನ್ನರ ಕಥೆಗಳು ತುಂಬ ನೆರವಾದುವು.

ಕಿನ್ನರ ಕಥೆಗಳು ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಅಪಾರ ಸಂಖ್ಯೆಯಲ್ಲಿ ಸಿಗುತ್ತವೆ. ಇಂಥ ಕಥೆಗಳಲ್ಲಿ ಕಿನ್ನರರ ಹಾಜರಿ ಬಹಳ ಮುಖ್ಯವಾದುದ್ದು. ಅವಿಲ್ಲದವು ಕಿನ್ನರ ಕಥೆಗಳಾಗುವುದಿಲ್ಲ. ಈ ದೃಷ್ಟಿಯಿಂದ, ಗ್ರಿಮ್ ಸೋದರ ಸಂಕಲನದಲ್ಲಿರುವ ಎಷ್ಟೋ ಕಥೆಗಳು ಕಿನ್ನರ ಕಥೆಗಳಾಗುವುದಿಲ್ಲ. ಆದರೆ ಸಿಂಡ್ರೆಲಾ, ಸ್ನೋವೈಟ್, ಹನ್ಸೆಲ್ ಮತ್ತು ಗ್ರೆಟಿಲ್ ಕಥೆಗಳು ಕಿನ್ನರ ಕಥೆಗಳ ಸೊಗಸಾದ ಉದಾಹರಣೆಗಳಾಗುತ್ತವೆ. ಇವುಗಳಲ್ಲಿ ಎರಡನೆಯ ಕಥೆಯಲ್ಲಿ ಕ್ರೂರ ಮಲತಾಯಿ ತನ್ನ ಸವತಿಯ ಮಗಳು ಸ್ನೋವೈಟಳ ಸೌಂದರ್ಯಕ್ಕೆ ಅಸೂಯೆಪಟ್ಟು ಕೊಲ್ಲಿಸುವ ಪ್ರಯತ್ನ ಮಾಡಿದುದು ಮತ್ತು ನಂಬಿಕಸ್ಥ ಸೇವಕನಿಂದ ಸ್ನೋವೈಟ್ ಪಾರಾದುದು ಮೊದಲಾದುದರ ಚಿತ್ರವಿದೆ. ಮುಂದೆ ಅತಿಮಾನುಷದ ಸಹಾಯದಿಂದ ಮಲತಾಯಿ ಕೊಟ್ಟ ಹಿಂಸೆಗಳು ಪರಿಹಾರವಾಗಿ ರಾಜನೊಬ್ಬನನ್ನು ಸ್ನೋವೈಟ್ ಮದುವೆಯಾಗುವುದನ್ನು ಕಾಣುತ್ತೇವೆ. ಕನ್ನಡದಲ್ಲಿ ಇಂಥದೇ ಆಶಯವನ್ನು ಹೊತ್ತ ದೊಡ್ಡ ಹೊನ್ನಿ ಚಿಕ್ಕಹೊನ್ನಿ ಕಥೆಯನ್ನು ನೋಡಬಹುದು. ಹಾಗೆಯೇ ಹನ್ಸೆಲ್ ಮತ್ತು ಗ್ರೆಟಿಲ್ ಕಥೆಯನ್ನು ನಮ್ಮಲ್ಲಿನ ಮಾಟಗಾತಿ (ಕರ್ಣಾಟಕದ ಜಾನಪದ ಕಥೆಗಳು) ಕಥೆ ಹೋಲುತ್ತದೆ. ಅಲ್ಲಿನ ಹನ್ಸೆಲ್, ಗ್ರೆಟಿಲ್ ಇಲ್ಲಿನ ಚೆನ್ನ, ಚೆನ್ನಿಯಾಗಿದ್ದಾರೆ. ಹೀಗೆ ಕುಪ್ಪಿನರಾಜ, ನಾಗೇಂದ್ರ, ರಾಜಕುಮಾರ–ಮಂತ್ರಿಕುಮಾರ, ಬಿದರೆಯೊಳಗಿನ ಚದುರೆ, ಭಿಕ್ಷುಕರಾಜ– ಇತ್ಯಾದಿ ಅಸಂಖ್ಯ ನಿದರ್ಶನಗಳನ್ನು ನೋಡಬಹುದು. ಕುಪ್ಪಿನರಾಜ ನಿಜಕ್ಕೂ ಒಂದು ಮಹತ್ತ್ವ ಪೂರ್ಣವಾದ ಕಥೆ. ಸುಮಾರು ಇಪ್ಪತ್ತು ಪುಟಗಳಷ್ಟಿರುವ ಈ ದೀರ್ಘ ಕಥೆ ಹಲವಾರು ಘಟನೆಗಳಿಂದ, ಆಶಯಗಳಿಂದ ಸಂಘಟಿತಗೊಂಡ ಅದ್ಭುತ ರಚನೆಯಾಗಿದೆ. ಒಂದು ಪುಟ್ಟ ಕಾದಂಬರಿಯ ವಸ್ತು ಇದರಲ್ಲಿದೆ ಎಂದರೆ ಆಶ್ಚರ್ಯವಾಗದು.

ಒಟ್ಟಿನಲ್ಲಿ ಜನಪದದ ಸ್ವಸ್ವಾತ್ಮಕ ಶಕ್ತಿಯನ್ನೂ ಕಥನ ಸಾಮರ್ಥ್ಯವನ್ನೂ ಪ್ರತಿನಿಧಿಸುವುದಕ್ಕೆ ಕಿನ್ನರ ಕಥೆಗಳು ಸಾಕ್ಷಿಗಳಾಗುತ್ತವೆ ಎನ್ನಬಹುದು. ಅನಕ್ಷರಸ್ಥರ ಕಲ್ಪನಾ ವೈಭವಕ್ಕೆ ಭೂತಗನ್ನಡಿ ಹಿಡಿಯುವ ಇವು ಅವರು ಬಾಳಿ ಬಿಟ್ಟು ಹೋದ ಬದುಕಿನ ಕಡೆಗೂ ಕ್ಷ–ಕಿರಣಗಳನ್ನು ಬೀರುತ್ತವೆಂದು ಹೇಳಬಹುದಾಗಿದೆ (**ನೋಡಿ– ಅಜ್ಜಿಕಥೆ; ಕಟ್ಟುಕಥೆ**). (ಆರ್.ಜಿ.)

**ಕಿನ್ನರಿಜೋಗಿ:** ಕಿನ್ನರಿ ಎಂಬ ವಾದ್ಯ ಬಾರಿಸುತ್ತ ಹಾಡು ಹೇಳಿಕೊಂಡು ಭಿಕ್ಷೆ ಬೇಡುವ ಜನಪದ ಹಾಡುಗಾರರು. ಕಿನ್ನರಿ ಅಥವಾ ಕಿಂದರಿ ಮೂರು ಅಥವಾ ಐದು ಸೋರೆಬುರುಡೆಗಳನ್ನು ಒಂದು ಬಿದಿರಿನ ಕೊಳವೆಗೆ ಜೋಡಿಸಿ, ನಾಲ್ಕೈದು ತಂತಿ ಬಿಗಿದು ಮಾಡಿದ ಒಂದು ವಾದ್ಯ. ಈ ವಾದ್ಯ ಹಿಡಿದು ಹಾಡುವ ಜನರಾದ್ದರಿಂದ ಇವರಿಗೆ ಕಿನ್ನರಿ ಜೋಗಿ (ಯೋಗಿ) ಗಳೆಂಬ ಹೆಸರು ಬಂದಿರುವಂತೆ ತೋರುತ್ತದೆ.

ಕಿನ್ನರಿ ಜೋಗಿ ಮೇಳ

ಕಿನ್ನರಿ ಜೋಗಿಗಳು ಮುಖ್ಯವಾಗಿ ಆದಿಚುಂಚನಗಿರಿಯ ಭೈರವೇಶ್ವರನ ಒಕ್ಕಲು. ಇವರು ದೀಕ್ಷಾಬದ್ಧರಾದ ಜನ. ಕಿವಿಗಳಿಗೆ ಕಾಪಾಲಿ ಮುದ್ರೆ ಹಾಕಿಸಿಕೊಂಡಿರುತ್ತಾರೆ. ಅರಿಶಿಣಗಾವಿ ಅಂಗಿ, ಹಾರೋಗಚ್ಚೆ, ಸೊಂಟಕ್ಕೆ ಮತ್ತು ತಲೆಗೆ ಕೆಂಪು ವಸ್ತ್ರ, ಕಾಲಿಗೆ ಗೆಜ್ಜೆ – ಇವು ಇವರ ಉಡುಪು.

ಕಿನ್ನರಿ ಜೋಗಿಗಳು ಮುಖ್ಯವಾಗಿ ಹಾಡುವುದು ಅರ್ಜುನ ಜೋಗಿ ಹಾಡು. ಅರ್ಜುನ ಸುಭದ್ರೆಯನ್ನು ಅಪಹರಿಸಲು ಹೋದಾಗ ಜೋಗಿ ವೇಷ ಹಾಕಿಕೊಂಡು ಕಿನ್ನರಿ ಹಿಡಿದು ಬಾರಿಸುತ್ತ ಹೋದನೆಂದು ಒಂದು ಜನಪದ ಕಥೆಯುಂಟು. ಆದರೆ ಇದಕ್ಕೆ ಮಹಾಭಾರತದ ಕಥೆಯಲ್ಲಿ ಆಧಾರವಿಲ್ಲ. ಬಹುಶಃ ವೇಷದಲ್ಲಿ ಇವರು ಅರ್ಜುನನ ಸನ್ಯಾಸಿ ವೇಷಕ್ಕೆ ಸರಿಬರಬಹುದೆಂದು ಕಾಣುತ್ತದೆ. ಇವರು ಅರ್ಜುನ ಸುಭದ್ರೆಯರಿಗೆ ಸಂಬಂಧಪಟ್ಟ ಹಾಡುಗಳಲ್ಲದೆ ಬೇರೆ ಹಾಡುಗಳನ್ನೂ ಹಾಡುತ್ತಾರೆ. ಅವುಗಳಲ್ಲಿ ಚುಂಚನಗಿರಿಯ ಭೈರವ ಮಾಳವ್ವರ ಕಥೆಯೂ ಒಂದು. ಉತ್ತರ ಕರ್ನಾಟಕದ ಕಡೆ ಅರ್ಜುನಜೋಗಿಯ ಹಾಡುಗಬ್ಬಗಳೆಂಬ ಒಂದು ಪ್ರಕಾರವೇ ಉಂಟು. ಆದರೆ ಅಲ್ಲಿ ಆ ಹಾಡುಗಳನ್ನು ಹಾಡುವವರು ಕಿನ್ನರಿ ಜೋಗಿಗಳಲ್ಲ.

ಕರ್ನಾಟಕದಲ್ಲಿ ಜೋಗಿ ಎಂಬ ಜಾತಿಯ ಜನರಿದ್ದಾರೆ. ಹಂದಿಜೋಗಿ ಎಂಬ ಹೆಸರಿನ ಜನರೂ ಇದ್ದಾರೆ. ಆದರೆ ಇವರು ಕಿನ್ನರಿ ಬಾರಿಸುವುದಿಲ್ಲ. ಇವರು ಹಂದಿಗಳನ್ನು ಸಾಕಿ ಜೀವಿಸುತ್ತಾರೆ. ಹಾಗೆಯೇ, ಭೈರಪ್ಪನ ಭಕ್ತರ ಮನೆಗಳಿಗೆ ಹೋಗಿ ಮೀಸಲು ತೀರಿಸುವ ಜೋಗಪ್ಪಗಳಿಗೂ ಜೋಗಿಗಳೆಂದೇ ಕರೆಯುತ್ತಾರೆ. ಆದರೆ ಇವರಿಗೂ ಕಿನ್ನರಿ ಜೋಗಿಗಳಿಗೂ ಯಾವುದೇ ಸಂಬಂಧ ಕಂಡುಬರುವುದಿಲ್ಲ. (ಎಚ್.ಎಲ್.ಎಸ್.)

**ಕಿನ್ನರರು :** ಕಶ್ಯಪಮುನಿಯಿಂದ ಸುರಸೆಯಲ್ಲಿ ಜನಿಸಿದವರು. ಗಂಧರ್ವರ ಗುಂಪಿಗೆ ಸೇರಿದ್ದು ಕುಬೇರನ ಕೈಂಕರ್ಯದಲ್ಲಿರುವವರೆನ್ನಲಾಗಿದೆ. ಗಾಂಧರ್ವರೆನಿಸಿದ ಇವರ ದೇಹ ಮನುಷ್ಯರಂತಿದ್ದು ಮುಖ ಮಾತ್ರ ಕುದುರೆಯಂತಿದೆಯೆಂದು ಹೇಳುತ್ತಾರೆ. ಬಾಣಭಟ್ಟನ ಕಾದಂಬರಿಯಲ್ಲಿ ಚಂದ್ರಾಪೀಡ ಕಿನ್ನರ ಮಿಥುನವೊಂದನ್ನು ಅಟ್ಟಿ ಹೊರಟು ಮಹಾಶ್ವೇತೆಯನ್ನು ಕಂಡ ಸಂದರ್ಭದ ವರ್ಣನೆಯಿದೆ. (ಜಿ.ಎಚ್.)

**ಕಿನ್ಸೆ, ಆಲ್‌ಫ್ರೆಡ್ ಚಾರಲ್ಸ್ :** 1894–1956. ಜನರ ಲೈಂಗಿಕ ಜೀವನದ ಒಳಗುಟ್ಟುಗಳನ್ನು ಆಳವಾಗಿ ಅಭ್ಯಸಿಸಲು ದೊಡ್ಡ ಯೋಜನೆಯನ್ನೇ ಕೈಗೊಂಡ ಅಮೆರಿಕದ ಪ್ರಾಣಿವಿಜ್ಞಾನಿ. ಅಮೆರಿಕದ ನ್ಯೂಜರ್ಸಿಯಲ್ಲಿ ಹುಟ್ಟಿದ. ಬ್ರನ್ಸ್‌ವಿಕ್, ಹಾರ್ವರ್ಡ್‌ಗಳಲ್ಲಿ ಕಲಿಕೆ ಮುಂದುವರಿಸಿ ಕೊನೆಗೆ 1920 ರಿಂದ 27 ವರ್ಷಗಳ ಕಾಲ ಪ್ರಾಣಿವಿಜ್ಞಾನದ ಪ್ರಾಧ್ಯಾಪಕನಾಗಿದ್ದು, ಆಮೇಲೆ ಕೊನೆಯ ತನಕ ಇಂಡಿಯಾನಾ ವಿಶ್ವವಿದ್ಯಾಲಯದ ಲೈಂಗಿಕ ಸಂಶೋಧನ ಸಂಸ್ಥೆಯ ನಿರ್ದೇಶಕನಾಗಿದ್ದ. ಲೈಂಗಿಕ ಜೀವನದ ಪದ್ಧತಿ, ರೂಢಿ, ಸಂಪ್ರದಾಯ, ಒಳಗುಟ್ಟುಗಳನ್ನು ಹೊರಗೆಡಹುವುದರಲ್ಲಿ ಇವನಿಗಿದ್ದ ಕಟ್ಟಾಸಕ್ತಿಯಿಂದ ಆ ಸಂಸ್ಥೆ ಹುಟ್ಟಿತು. ಇವನೂ ಇವನ ಸಹೋದ್ಯೋಗಿಗಳು ಸೇರಿ ನಡೆಸಿದ ಶೋಧನೆಗಳ ಫಲವಾಗಿ ಪ್ರಪಂಚದಲ್ಲಿ ಎಲ್ಲೆಲ್ಲೂ ಗಂಡಸರಲ್ಲಿನ ಲೈಂಗಿಕ ವರ್ತನೆ (1948), ಹೆಂಗಸರಲ್ಲಿನ ಲೈಂಗಿಕ ವರ್ತನೆ(1953) ಎಂಬ ಹೆಸರಾದ ಎರಡು ಪುಸ್ತಕಗಳು ಹೊರಬಂದವು. 18,500 ಜನರನ್ನು ಕಂಡು ಗೋಪ್ಯವಾಗಿ ಸಂಗ್ರಹಿಸಿದ ವಿವರಗಳು ಈ ಪುಸ್ತಕಗಳಲ್ಲಿವೆ. ಗಂಡು ಹೆಣ್ಣುಗಳ ಲೈಂಗಿಕ ವರ್ತನೆಗಳಲ್ಲಿ ಎಷ್ಟೊಂದು ಅಭಾಸ, ಏರುಪೇರು, ವಿಚಿತ್ರಗಳಿವೆ ಎನ್ನುವುದನ್ನು ಈತ ವರದಿಮಾಡಿದ್ದಾನೆ. ಇವನ ಇವೆರಡು ವರದಿಗಳ ಆಧಾರದ ಮೇಲೆ ನೂರಾರು ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿನ ತರ್ಕ, ವಾದ, ರೀತಿ ನೀತಿಗಳನ್ನು ಕಟುವಾಗಿ ಟೀಕಿಸಿದವರೂ ಇದ್ದಾರೆ. (ಡಿ.ಎಸ್.ಎಸ್.)

**ಕಿಪ್‌ನ ಉಪಕರಣ :** ಪ್ರಯೋಗಶಾಲೆಯಲ್ಲಿ ಉಷ್ಣದ ಬಳಕೆ ಇಲ್ಲದೆಯೇ ದ್ರವವೊಂದು ಘನಪದಾರ್ಥದ ಮೇಲೆ ಕ್ರಿಯೆ ಜರುಗಿಸಿ ಅನಿಲ ಉತ್ಪಾದಿಸುವಂತೆ ಮಾಡಲು ಬಳಸುವ ಗಾಜಿನ ಉಪಕರಣ. ಉದಾ : ಹೈಡ್ರೊಕ್ಲೋರಿಕ್ ಆಮ್ಲ ಕಬ್ಬಿಣದ ಸಲ್ಫೈಡ್ ಮೇಲೆ ಕ್ರಿಯೆ ಜರುಗಿಸಿ ಹೈಡ್ರೊಜನ್ ಸಲ್ಫೈಡ್ ಉತ್ಪಾದನೆ ಮಾಡುತ್ತಾರೆ. ಇದು ಗಾಜಿನಿಂದ ರಚಿತವಾಗಿದ್ದು ಇದರಲ್ಲಿ ಪ್ರತ್ಯೇಕಿಸಬಹುದಾದ ಎರಡು ಭಾಗಗಳಿವೆ. ಒಂದು ಭಾಗದಲ್ಲಿ (ಕೆಳಭಾಗ) ಎರಡು ಕೋಶಗಳು (A ಮತ್ತು B) ಇದ್ದು ಇವುಗಳ ನಡುವೆ ಒಂದು ಕಿರಿದಾದ ಪ್ರದೇಶದ ಮೂಲಕ ಸಂಪರ್ಕ ಏರ್ಪಡಿಸಿದೆ. Aಯ ಪಾರ್ಶ್ವದಲ್ಲಿ ಒಂದು ತಿರುಗುನಲ್ಲಿ Dಇದೆ. Bಯ ಮೇಲ್ಭಾಗದಲ್ಲಿ ಗಾಜಿನ ಬಿರಡೆಯಿಂದ ಮುಚ್ಚಿರುವ ಒಂದು ಸಣ್ಣ ಬಾಯಿ Eಇದೆ. ಇದರ ಕೆಳಕ್ಕೆ ಉದ್ದವಾದ ಮತ್ತು ಕ್ರಮೇಣ ಕಿರಿದಾಗುವ ಒಂದು ನಾಳವನ್ನು (F) ಬೆಸೆದಿದೆ. ಇದು ಒಂದು ದೊಡ್ಡ ಪ್ರನಾಳದಂತಿದೆ. ಉಪಕರಣವನ್ನು ಉಪಯೋಗಿಸುವಾಗ Cಯು Aಯ ಮೇಲ್ಭಾಗದೊಡನೆ ಅನಿಲ ಹೊರಸೂಸಲು ಅವಕಾಶವಿಲ್ಲದ ರೀತಿಯಲ್ಲಿ ಜೋಡಿಸಲ್ಪಟ್ಟಿರುವುದು. ಆಗ ಇದರ ನಾಳದ ತುದಿ Bಯ ತಳಕ್ಕಿಂತ ಸ್ವಲ್ಪ ಮೇಲಿರುವುದು.

ಉಪಯೋಗಿಸುವ ರೀತಿ : ತಯಾರಿಸಬೇಕಾದ ಅನಿಲ ಹೈಡ್ರೊಜನ್ ಆಗಿರಲಿ. ಆಗ ಮಧ್ಯದ ಕೋಶದಲ್ಲಿ (A) ಸ್ವಲ್ಪ ಹರಳು ಹರಳಾಗಿರುವ ಸತುವನ್ನು (ಗ್ರಾನ್ಯುಲೇಟೆಡ್ ಸಿಂಕ್) ಇಡಬೇಕು. Aಯ ತಿರುಗುನಲ್ಲಿಯನ್ನು ತೆರೆದು Cಯ ಮೂಲಕ ಸಜಲಸಲ್ಫ್ಯೂರಿಕ್

ಆಮ್ಲವನ್ನು B ಕೋಶ ತುಂಬಿ A ಯಲ್ಲಿರುವ ಸತು ಮುಚ್ಚುವಂತೆ ಹಾಕಬೇಕು. ಆಗ ಸತು ಆಮ್ಲದೊಡನೆ ವರ್ತಿಸಿ ಉತ್ಪನ್ನವಾದ ಹೈಡ್ರೊಜನ್‌ನಲ್ಲಿಯ ಮೂಲಕ ಹೊರಸೂಸುವುದು. ಇದನ್ನು ನೀರಿನ ಮೇಲೆ ಅನಿಲ ಶೇಖರ ಜಾಡಿಯಲ್ಲಿ ಶೇಖರಿಸಬಹುದು ಅಥವಾ ಬೇರೆ ಅಪೇಕ್ಷಿತ ರೀತಿಯಲ್ಲಿ ಉಪಯೋಗಿಸಬಹುದು. ಅನಿಲ ಬೇಡವಾದಾಗ ನಲ್ಲಿಯನ್ನು ಮುಚ್ಚಿದರೆ ಸಾಕು. ಅನಿಲಕ್ಕೆ ಹೊರಹೋಗಲು ಅವಕಾಶವಿಲ್ಲದೆ A ಯಲ್ಲಿಯೇ ಶೇಖರಿಸಿ ಆಮ್ಲವನ್ನು ಕೆಳಗೆ ದಬ್ಬಿ ಸತು ಮತ್ತು ಆಮ್ಲಗಳ ಸಂಪರ್ಕವಿಲ್ಲದಂತಾಗಿ ಅನಿಲದ ಉತ್ಪತ್ತಿ ನಿಂತುಹೋಗುವುದು. ಪುನಃ ಅನಿಲ ಬೇಕಾದಾಗ ನಲ್ಲಿಯನ್ನು ತೆರೆದರೆ ಸರಿ. A ಯಲ್ಲಿ ಶೇಖರಿಸಿದ್ದ ಹೈಡ್ರೊಜನ್ ಹೊರಸೂಸಿ, ಆಮ್ಲ ಕೆಳಕ್ಕಿಳಿದು ಪುನಃ ಸತು–ಆಮ್ಲಗಳ ಸಂಪರ್ಕ ಏರ್ಪಟ್ಟು, ಹೈಡ್ರೊಜನ್ ಉತ್ಪತ್ತಿ ಮತ್ತೆ ಆರಂಭವಾಗುವುದು.



**ಕಿಪ್‌ನ ಉಪಕರಣ : ಚಿತ್ರದಲ್ಲಿ G ಸತುವಿನ ಚೂರುಗಳು : ಸಜಲ ಸಲ್ಫ್ಯೂರಿಕ್ ಆಮ್ಲ**

ಹೀಗೆ ಈ ಉಪಕರಣದಲ್ಲಿ ಅವಶ್ಯವಿದ್ದಾಗ ನಮಗೆ ಬೇಕಾದಷ್ಟು ಮಾತ್ರ ಅನಿಲವನ್ನು ಪಡೆದು ಅನಂತರ ಅನಿಲದ ಉತ್ಪಾದನೆಯನ್ನು ನಿಲ್ಲಿಸಬಹುದು. ಆದ್ದರಿಂದ ಅನಿಲ ನಮಗೆ ಅವಶ್ಯವಾದಾಗಲೆಲ್ಲ ಉಪಕರಣವನ್ನು ಹೊಸದಾಗಿ ಜೋಡಿಸುವುದು ತಪ್ಪುವುದಲ್ಲದೆ ರಾಸಾಯನಿಕ ವಸ್ತುಗಳ ಅಪವ್ಯಯವೂ ನಿಲ್ಲುವುದು. ಕ್ರಮೇಣ ಇದರಲ್ಲಿ ಸತು ಮತ್ತು ಆಮ್ಲ ಪೂರ್ಣವಾಗಿ ಉಪಯೋಗಿಸಲ್ಪಡುತ್ತವೆ. ಸತು ಮುಗಿದು ಹೋದರೆ ಹೊಸ ಸತುವನ್ನು A ಯಲ್ಲಿ ತುಂಬಬೇಕು. ಆಮ್ಲ ಉಪಯೋಗಿಸಲ್ಪಟ್ಟರೆ B ಕೋಶದ ಬಾಯಿ ತೆರೆದು ಇದರ ಮೂಲಕ ಅನುಪಯುಕ್ತ ಆಮ್ಲವನ್ನು ಹೊರಸುರಿದು ಹೊಸ ಆಮ್ಲದಿಂದ ಇದನ್ನು ಹಿಂದೆ ಹೇಳಿದಂತೆ ತುಂಬಬೇಕು.

ಇತರ ಅನಿಲಗಳ ತಯಾರಿಕೆಯಲ್ಲಿ ಆಯಾ ಸಂದರ್ಭಕ್ಕೆ ಸೂಕ್ತವಾದ ಘನವಸ್ತು ಮತ್ತು ದ್ರವಗಳನ್ನು ಉಪಯೋಗಿಸಬೇಕು. ಉದಾಹರಣೆಗೆ ಹೈಡ್ರೊಜನ್ ಸಲ್ಫೈಡಿನ ತಯಾರಿಕೆಯಲ್ಲಿ ಫೆರಸ್ ಸಲ್ಫೈಡು ಮತ್ತು ಸಜಲ ಸಲ್ಫ್ಯೂರಿಕಾಮ್ಲಗಳನ್ನೂ ಕಾರ್ಬನ್ ಡೈ ಆಕ್ಸೈಡ್ ತಯಾರಿಕೆಯಲ್ಲಿ ಅಮೃತಶಿಲೆಯ ಚೂರುಗಳು ಮತ್ತು ಸಜಲ ಹೈಡ್ರೊಕ್ಲೋರಿಕಾಮ್ಲವನ್ನೂ ಆಕ್ಸಿಜನ್ ತಯಾರಿಕೆಯಲ್ಲಿ ಆಕ್ಸೋನ್ ($Na_2O_2$) ಬಿಲ್ಲೆಗಳು ಮತ್ತು ನೀರನ್ನೂ ಉಪಯೋಗಿಸಬೇಕು. (ಕೆ.ಎಸ್.ಬಿ.)

**ಕಿಪ್ಚಾಕ್ :** 11 ನೆಯ ಶತಮಾನದ ಹೊತ್ತಿಗೆ ಕಪ್ಪುಸಮುದ್ರದ ಉತ್ತರಭಾಗವನ್ನು ಆಕ್ರಮಿಸಿ, ಅಲ್ಲಿ ಪ್ರಬಲವಾಗಿದ್ದ ಒಂದು ಜನಾಂಗ. ರಷ್ಯನರ ಇತಿವೃತ್ತಿಗಳಲ್ಲಿ ಇವರ ಹೆಸರು ಮೊಟ್ಟಮೊದಲಿಗೆ ಬರುವುದು 1054ರಲ್ಲಿ. ಕಿಪ್ಚಾಕ್ ಎಂಬುದು ತುರ್ಕಿ ಭಾಷೆಯ ಪದ. ರಷ್ಯನ್ ಭಾಷೆಯಲ್ಲಿ ಈ ಜನಾಂಗವನ್ನು ಪಾಲೋವ್‌ಸ್ತಿ ಎಂದು ಕರೆಯುತ್ತಾರೆ. ಬಿಜ್ಹಾಂಟಿನ್ ಮತ್ತು ಲ್ಯಾಟಿನ್ ಮೂಲಗಳಲ್ಲಿ ಕೊಮಾನೊಯ್ ಅಥವಾ ಕೊಮಾನಿ ಎಂಬ ಪರ್ಯಾಯವಾದ ಅಂಕಿತಗಳು ಕಂಡುಬರುತ್ತವೆ. ವಾಲನಿ, ಪಲ್ಲಡಿ, ಫಾಲೋನ್ಸ್ ಮುಂತಾದವು ಕಿಪ್ಚಾಕ್ ಜನಾಂಗಕ್ಕೆ ಇತರ ಐರೋಪ್ಯ ಮೂಲಗಳಲ್ಲಿ ಕಂಡುಬರುವ ಹೆಸರುಗಳು. ಕಿಪ್ಚಾಕ್ ಜನರನ್ನೇ ಕುಮಾನೊಯರೆಂದೂ ಹೇಳುತ್ತಾರೆ. 11ನೆಯ ಶತಮಾನದಿಂದ 13ನೆಯ ಶತಮಾನದವರೆಗೂ ಪ್ರಬಲವಾಗಿದ್ದ ಈ ಜನಾಂಗ ಮಂಗೋಲಿಯನರ ಆಕ್ರಮಣದೊಂದಿಗೆ ಅವನತಿ ಹೊಂದಿತು.

ಕಿಪ್ಚಾಕ್ ಜನಾಂಗದ ಮೂಲ ಯಾವುದೆಂಬುದನ್ನು ನಿರ್ಣಯಿಸುವುದು ಕಷ್ಟ. ಈ ಜನಾಂಗದಿಂದ ಒಂದು ಭಾಗ ಮಾತ್ರವಾದರೂ ಸಾರಿ ಉಯ್‌ಗರ್ಸ್‌ಗೆ ಸಂಬಂಧಿಸಿದ ಸಾರಿ ಜನಾಂಗದಿಂದ ಹೊರಹೊಮ್ಮಿದೆಯೆಂದು ಹೇಳಬಹುದು. ಈಗಲೂ ಚೀನೀ ತುರ್ಕಿಸ್ತಾನದಲ್ಲಿ ಈ ಪಂಗಡದ ಜನ ಕಂಡುಬರುತ್ತಾರೆ. ಈ ಜನಾಂಗದ ಕೆಲವು ಬಣಗಳು ಮೂಲದಲ್ಲಿ ಚೀನದ ಗಡಿಪ್ರದೇಶಗಳಲ್ಲಿದ್ದುವೆಂದೂ ಹೇಳಬಹುದು. ಮಂಗೋಲ್ ಭಾಷೆಯಾಡುವ ಕಿಟಾಯರು ಪಶ್ಚಿಮ ಸೈಬೀರಿಯದಲ್ಲಿ ಕಿಪ್ಚಾಕರನ್ನೊಡಗೂಡಿದರೆಂದು ಸ್ಥೂಲವಾಗಿ ಹೇಳಬಹುದು. ಪಶ್ಚಿಮ ಸೈಬೀರಿಯದಲ್ಲಿ 9ನೆಯ ಶತಮಾನದಿಂದಲೂ ಕಿಟಾಯರು ಇದ್ದರೆಂದೂ ಅಲ್ಲಿಂದ ಅವರು ದಕ್ಷಿಣ ರಷ್ಯಕ್ಕೆ ವಲಸೆ ಬಂದರೆಂದೂ ಐತಿಹ್ಯವಿದೆ.

ಪೆಶೆನೆಗ್ಸ್ ಎಂಬ ತುರ್ಕಿ ಜನತೆಯ ಮಿತ್ರರಾಗಿ ಕಿಪ್ಚಾಕರು 1078ರಲ್ಲಿ ಬಿಜ್ಹಾಂಟಿನರೊಂದಿಗೆ ಹೋರಾಟವಾರಂಭಿಸಿ ಏಡ್ರಿಯಾನೊಪಲನ್ನು ಆಕ್ರಮಿಸಿದರು. ಆದರೆ 1091ರಲ್ಲಿ ಶತ್ರುಪಕ್ಷವನ್ನು ವಹಿಸಿ ಪೆಶೆನೆಗ್ ಆಧಿಪತ್ಯದ ವಿರುದ್ಧವಾಗಿ ಹೋರಾಡಿ ಅದನ್ನು ನೆಲಸಮ ಮಾಡಿದರು. 1094 ಮತ್ತು 1114 ಕಿಪ್ಚಾಕರ ವಿರುದ್ಧವಾಗಿ ಬಿಂಜ್ಹಾಂಟಿನ್ ಚಕ್ರವರ್ತಿ ಅಲೆಕ್ಸಿಯಸ್ ಹೋರಾಟ ನಡೆಸಿದ. ಕಿಪ್ಚಾಕ್ ಬಣಗಳು ಕಾರ್ಪೇಥಿಯನ್ ಪರ್ವತದ ಪೂರ್ವಭಾಗದ ಉದ್ದಕ್ಕೂ ಸೆಣಸಾಡಿದವು. ದಣಿದಿದ್ದ ತಮ್ಮ ಬಲಗಳನ್ನು ಯಾರು ಹೆಚ್ಚು ಹಣ ನೀಡುತ್ತಾರೋ ಅವರ ನೆರವಿಗೆ ನೀಡಲು ಬಯಸಿದರು. ಕಾನ್‌ಸ್ಟಾಂಟಿನೋಪಲಿನ ಲ್ಯಾಟಿನ್ ಅಥವಾ ಫ್ರಾಂಕಿಸ್ ಚಕ್ರವರ್ತಿಯಾಗಿದ್ದ ಒಂದನೆಯ ಬಾಡ್ವಿನನ ವಿರುದ್ಧ 1205ರಲ್ಲಿ ನಡೆದ ಯುದ್ಧದಲ್ಲಿ ಕಿಪ್ಚಾಕರು ಕಲೋಯಾನ್ ಅಸೆನ್ನರ ಪರ ವಹಿಸಿದರು. 1221–23ರಲ್ಲಿ ಮಂಗೋಲರು ರಷ್ಯದ ಮೇಲೆ ದಂಡೆತ್ತಿ ಬಂದಾಗ ಕಿಪ್ಚಾಕರು ಒಂದು ಬಾರಿ ಮಂಗೋಲರ ಪರವಾಗಿಯೂ ಮತ್ತೊಂದು ಬಾರಿ ರಷ್ಯನರ ಪರವಾಗಿಯೂ ಯುದ್ಧ ಮಾಡಿದರು. ಒಟ್ಟಿನಲ್ಲಿ ಅವರು ಯಾವೊಂದು ಪಕ್ಷಕ್ಕೂ ನಿಷ್ಠೆ ತೋರಿಸಲಿಲ್ಲ. 1237ರಲ್ಲಿ ಪುನಃ ಮಂಗೋಲರು ಕಿಪ್ಚಾಕ್ ಪ್ರಾಂತ್ಯಗಳ ಮೇಲೆ ದಾಳಿ ಮಾಡಿ ಪೂರ್ವಬಣಗಳ ನಾಯಕನಾಗಿದ್ದ ಬಾಚ್‌ಮನನನ್ನು ಕೊಂದರು. ಹೀಗಾಗಿ ಪಶ್ಚಿಮ ಕಿಪ್ಚಾಕರ (ಕುಮಾನರ) ನಾಯಕ ಕುಥೆನನಿಗೆ ರಷ್ಯನರ ಆಕ್ರಮಣವನ್ನೆದುರಿಸಲು ಅಸಾಧ್ಯವಾಗಿ, ಆತ ತನ್ನ ಜನರೊಂದಿಗೆ ಹಂಗರಿಯ 4ನೆಯ ಬೇಲಾ ದೊರೆಗೆ ಶರಣಾಗತನಾದ. ರೋಷಗೊಂಡ ಮಂಗೋಲಿಯನರು 1241–42ರಲ್ಲಿ ಆ ದೇಶದ ಮೇಲೆ ಬಹುಶಃ ಸೇಡು ತೀರಿಸಿಕೊಳ್ಳಲೇನೋ ಎಂಬಂತೆ ಯುದ್ಧ ಮಾಡಿದರು. ಮಂಗೊಲರ ಆಕ್ರಮಣದಿಂದ ಕಿಪ್ಚಾಕ್ ಜನಾಂಗ ಒಂದು ರೀತಿಯಲ್ಲಿ ನಿತ್ರಾಣವಾದರೂ ಕುಮಾನರು ಶಕ್ತರಾಗಿಯೇ ಇದ್ದರು. 1240ರಲ್ಲಿ ಅವರು 2ನೆಯ ಬಾಲ್ಡ್‌ವಿನನ ಪರವಾಗಿಯೂ 1259ರಲ್ಲಿ 8ನೆಯ ಮೈಕಿಲ್ ಪಾಲಿಯೊ ಲೊಗಪನ ಪರವಾಗಿಯೂ ಕಾದಾಡಿದರು.

ಮಾಮೆಲ್ಯೂಕರೆಂಬ ಕಿಪ್ಚಾಕ್ ಗುಲಾಮರು ಅಯ್ಯುಬಿಡ್ ಸೇನೆಗೆ ಸೇವೆ ಸಲ್ಲಿಸುತ್ತಿದ್ದು, ಆ ಮೇಲೆ ಈಜಿಪ್ಟ್ ಮತ್ತು ಸಿರಿಯಗಳ ಚರಿತ್ರೆಯಲ್ಲಿ ಮಹತ್ತ್ವಗಳಿಸಿ, ಅನಂತರ 19ನೆಯ ಶತಮಾನದವರೆಗೂ ಅವಶೇಷರೂಪವಾಗಿದ್ದರು. ಕಿಪ್ಚಾಕರ ಇನ್ನೊಂದು ಬಣ ಕರಾಯಿಮರದು. ಇವರು ಉತ್ತರ ಲಿಥುವೇನಿಯಕ್ಕೆ ವಲಸೆ ಬಂದರು. ಈಗಲೂ ಇವರು ಪೋಲೆಂಡಿನಲ್ಲಿದ್ದಾರೆ. ಕಿಪ್ಚಾಕರ ಸಾಮಾಜಿಕ ಜೀವನ ಬಹಳ ಅಸ್ಥಿರವಾಗಿಯೂ ಅವ್ಯವಸ್ಥಿತವಾಗಿಯೂ ಇತ್ತು. ಅವರು ಅಲೆಮಾರಿಗಳಾಗಿದ್ದರು. ಲ್ಯಾಟಿನ್ ಸಾಮ್ರಾಜ್ಯದ ಫ್ರಾಂಕರ ಹಾಗೂ ಕಿಪ್ಚಾಕರ ನಡುವೆ ವಿವಾಹ ಸಂಬಂಧಕ್ಕೆ ಯಾವ ಅಡಚಣೆಯೂ ಇರಲಿಲ್ಲ. ಒಂದು ರೀತಿಯ ಕಾಡುಜನರಾಗಿದ್ದ ಅವರು ಉಳುವೆ ಬೇಸಾಯವನ್ನು ಅರಿತಿರಲಿಲ್ಲ. ಅವರ ವಾಸ ಗುಡಿಸಲು ಅಥವಾ ಮನೆಗಳಲ್ಲಲ್ಲ, ಫೆಲ್ಟ್‌ನಿಂದ ಮಾಡಿದ ಗುಡಾರಗಳಲ್ಲಿ, ಹಾಲು, ಗಿಣ್ಣು, ಮಾಂಸಗಳೇ ಅವರ ಆಹಾರ. ಪ್ರತಿಯೊಬ್ಬ ನಿವಾಸಿಯ ಬಳಿಯೂ ಹತ್ತು ಹನ್ನೆರಡು ಕುದುರೆಗಳಿರುತ್ತಿದ್ದವು. ಚಳಿಗಾಲದಲ್ಲಿ ಅವರು ಗುಡಾರಗಳಿಂದ ಹೊರಬಂದು ಆಕ್ರಮಣ ನಡೆಸುತ್ತಿದ್ದರು.

ಕಿಪ್ಚಾಕ್ ಒಂದು ತುರ್ಕಿ ಭಾಷೆ. ಈ ಭಾಷೆಯಲ್ಲಿ ರಚಿತವಾದ ಕೋಡೆಕ್ಸ್ ಕ್ಯುಮಾನಿಕಸ್ ಎಂಬ ಉದ್ಗ್ರಂಥವೊಂದನ್ನು ವೆನಿಸಿನ ಸೇಂಟ್ ಮಾರ್ಕ್ ಗ್ರಂಥಾಲಯದಲ್ಲಿ ರಕ್ಷಿಸಿಡಲಾಗಿದೆ. ಇದು ಬಹುಶಃ 13–14ನೆಯ ಶತಮಾನಗಳಲ್ಲಿ ರಚಿತವಾಗಿದ್ದಿರಬೇಕು. ಇದರಲ್ಲಿ ಲ್ಯಾಟಿನ್‌ನಿಂದ ಭಾಷಾಂತರವಾದ ಕೆಲವು ಭಾಗಗಳಿವೆಯಲ್ಲದೆ ಶಬ್ದಗಳ ಪಟ್ಟಿಯೂ ಕುಮಾನ್–ಜರ್ಮನ್ ಶಬ್ದಕೋಶವೂ ಇದ್ದುದರ ಫಲವಾಗಿ ಕುಮಾನ್–ಅರಬ್ಬೀ ಶಬ್ದಕೋಶಗಳೂ ವ್ಯಾಕರಣಗಳೂ ರಚಿತವಾದವು. ತುರ್ಕಿಭಾಷೆ ಚರಿತ್ರೆಗಳನ್ನಭ್ಯಾಸ ಮಾಡಲು ಇವೆಲ್ಲ ಉಪಯುಕ್ತವಾಗಿವೆ. ಕಿಪ್ಚಾಕರನ್ನು ಕ್ರೈಸ್ತರನ್ನಾಗಿ ಮತಾಂತರಗೊಳಿಸಬೇಕೆಂಬುದು ಸಂತಡೊಮಿನಿಕನ ಮಹದಾಶೆಯಾಗಿತ್ತು. ಆದರೆ ಬಹುಮಟ್ಟಿಗೆ ಅದು ಕನಸಾಗಿಯೇ ಉಳಿಯಿತು. (ಎಸ್.ಎಲ್.ಎ.)

**ಕಿಪ್ಪರ್ ಮೀನು :** ಸಾಲ್ಮನ್ ಜಾತಿಯ ಗಂಡುಮೀನಿಗೆ ಅದರ ವಂಶಾಭಿವೃದ್ಧಿಯ ಕಾಲದಲ್ಲಿನ ಸಾಮಾನ್ಯ ಹೆಸರು. ಆ ಅವಧಿಯಲ್ಲಿ ಮೀನಿನ ಕೆಳದವಡೆ ಉಬ್ಬಿಕೊಂಡು ಕೊಕ್ಕಿನಂತೆ ಕಾಣುವುದೇ ಈ ಹೆಸರಿಗೆ ಕಾರಣ. ಕೊಕ್ಕಿಗೆ 'ಕಿಪ್' ಎಂಬ ಹೆಸರು ಉಂಟು. ಬಹಳ ಕಾಲ ಕೆಡದಂತೆ ಇಡಲು ಹೊಗೆಯಾಡಿಸಿ ಹದಮಾಡಿದ ಮೀನಿಗೂ ಕಿಪ್ಪರ್ ಮೀನೆಂಬ ಹೆಸರೇ ಇದೆ. ಮೀನನ್ನು ಸೀಳಿ, ಶುಚಿಮಾಡಿ, ಉಪ್ಪು ಸೇರಿಸಿ, ಹೊಗೆಯಾಡಿಸಿ ಹದಮಾಡುವ ಕ್ರಮಕ್ಕೆ ಕಿಪರಿಂಗ್ ಎಂದು ಹೆಸರು. ಸ್ಯಾಮನ್ ಮೀನಲ್ಲದೆ ಹೆರಿಂಗ್ ಮೀನನ್ನೂ ಈ ರೀತಿ ಸಂಸ್ಕರಿಸಿ ಕೆಡದಂತೆ ಮಾಡಿ ಶೇಖರಿಸುತ್ತಾರೆ. ಮೊದ ಮೊದಲು ಸ್ಯಾಮನ್ ಮತ್ತು ಹೆರಿಂಗ್ ಮೀನುಗಳಿಗೆ ಮಾತ್ರ ಈ ಪದ ಬಳಸಲಾಗುತ್ತಿತ್ತು. ಕಾಲಕ್ರಮದಲ್ಲಿ ಇದರ ಬಳಕೆ ವಿಸ್ತಾರಗೊಂಡು ಹೊಗೆಯಾಡಿಸಿ ಹದಮಾಡಿದ ಯಾವ ಮೀನಿಗಾದರೂ ಬಳಸಬಹುದಾಗಿದೆ.

ಕಿಪ್ಪರ್ ಮಾಡಿದ ಸ್ಯಾಮನ್ ಮೀನು 1479 ರಿಂದಲೂ ಹೆರಿಂಗ್ ಮೀನು 1843 ರಿಂದಲೂ ಬ್ರಿಟನ್‌ನಲ್ಲಿ ಬಳಕೆಯಲ್ಲಿವೆ. (ಪಿ.ಜಿ.ಕೆ.)

**ಕಿಪ್ಲಿಂಗ್, ಜೋಸೆಫ್ ರಡ್‌ಯಾರ್ಡ್ :** 1865–1936. ಆಂಗ್ಲ ಕಾದಂಬರಿಕಾರ, ಕಥೆಗಾರ, ಕವಿ. ತಂದೆ ಜಾನ್ ಲಾಕ್‌ವುಡ್ ಕಿಪ್ಲಿಂಗ್ ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಶಿಲ್ಪಶಾಸ್ತ್ರದ ಪ್ರಾಧ್ಯಾಪಕನಾಗಿದ್ದಾಗ ಬೊಂಬಾಯಿಯಲ್ಲಿ ಹುಟ್ಟಿದ ಕಿಪ್ಲಿಂಗ್ ವೆಸ್ಟ್‌ವರ್ಡ್ ಹೋನ ಯುನೈಟೆಡ್ ಸರ್ವಿಸಸ್ ಕಾಲೇಜಿನಲ್ಲಿ ಓದಿದ. ಆರನೆಯ ವಯಸ್ಸಿನಲ್ಲಿ ತನ್ನ ಸಹೋದರಿಯೊಂದಿಗೆ ಇಂಗ್ಲೆಂಡಿಗೆ ಹೋದ. ಈತ ಅಲ್ಲಿ ನಿರ್ದಯಿ ಹೆಂಗಸೊಬ್ಬಳ ಆಶ್ರಯದಲ್ಲಿ 6 ವರ್ಷ ಕಳೆದ. ಆ ದಾರುಣಮಯ ದಿನಗಳನ್ನು ತನ್ನ 'ಬಾ ಬಾ ಬ್ಲಾಕ್ ಷೀಪ್'– ಕಥೆಯಲ್ಲಿ ಚಿತ್ರಿಸಿದ್ದಾನೆ. ತನ್ನ 17ನೆಯ ವಯಸ್ಸಿನಲ್ಲಿ (1882) ಭಾರತಕ್ಕೆ ಹಿಂತಿರುಗಿ ಲಾಹೋರಿನ ಸಿವಿಲ್ ಮತ್ತು ಮಿಲಿಟರಿ ಗೆಜೆಟ್ಟಿನ ಸಂಪಾದಕನಾದ. ಅಲ್ಲಿಯ ಸ್ಥಳೀಯ ವಸ್ತುಸಂಗ್ರಹಾಲಯದಲ್ಲಿ ಈತನ ತಂದೆ ಕ್ಯುರೇಟರ್ ಹುದ್ದೆಯಲ್ಲಿದ್ದ. ಏಳುವರೆ ವರ್ಷಗಳ ಕಾಲ ಆಂಗ್ಲೊ ಇಂಡಿಯನ್ ಪತ್ರಿಕೆಯೊಂದಕ್ಕೆ ಖಾಲಿ ಬಿದ್ದ ಸ್ಥಳ ತುಂಬಿಸಲು ಬರೆದ ಕವಿತೆಗಳು ಮತ್ತು ಸಣ್ಣ ಕಥೆಗಳಿಂದಾಗಿ ಈತ ಪ್ರಸಿದ್ಧಿ ಪಡೆದ. ಡಿಪಾರ್ಟ್‌ಮೆಂಟಲ್ ಡಿಟ್ಟೀಸ್ (1886) ಈತನ ಪ್ರಥಮ ವಿಡಂಬನ ಗೀತೆಗಳ ಸಂಕಲನ. 1887–89 ರ ಅವಧಿಯಲ್ಲಿ ಕಿಪ್ಲಿಂಗ್ ಸುಮಾರು 70 ಕಥೆಗಳನ್ನು ಬರೆದು ಪ್ರಕಟಿಸಿದ. ಅವೆಲ್ಲ ಪತ್ರಿಕೆಗಾಗಿ ಬರೆದವು. ಪ್ಲೇಯ್ನ್ ಟೇಲ್ಸ್ ಫ್ರಮ್ ದಿ ಹಿಲ್ಸ್, ಸೋಲ್ಜರ್ಸ್ ತ್ರಿ, ದಿ ಸ್ಟೋರಿ ಆಫ್ ದ ಗ್ಯಾಡ್ಸ್‌ಬೀಸ್, ಇನ್ ಬ್ಲ್ಯಾಕ್ ಅಂಡ್ ವೈಟ್, ಅಂಡರ್ ದಿ ದೇವದಾರ್ಸ್, ದಿ ಫಾಂಟಮ್ ರಿಕ್ಷಾ, ವೀ ವಿಲ್ಲಿ ವಿಂಕಿ–ಈ ಗ್ರಂಥಗಳಲ್ಲಿ ಈತನ ಕಥೆಗಳು ಅಡಕವಾಗಿವೆ. 1889ರಲ್ಲಿ ಇಂಗ್ಲೆಂಡಿಗೆ ತೆರಳುವಾಗ ಜಪಾನ್ ಮತ್ತು ಅಮೆರಿಕದಲ್ಲಿ ಸ್ವಲ್ಪಕಾಲ ತಂಗಿದ್ದ. ಅಲ್ಲಿಯ ವಿಚಾರಗಳನ್ನು ದಿ ಲೈಟ್ ದಟ್ ಫೇಯ್ಲ್ಡ್ (1891) ಕಾದಂಬರಿಯಲ್ಲಿ ಕಾಣಬಹುದು. ಇದೇ ಸಮಯದಲ್ಲಿ ಹೊರ ಎರಡು ಕಥಾಸಂಕಲನಗಳಲ್ಲಿ ಅತ್ಯುತ್ತಮ ಕಥೆಗಳು ಅಡಗಿದೆ. 1892ರಲ್ಲಿ ಆಸ್ಟ್ರೇಲಿಯ, ನ್ಯೂಜಿಲೆಂಡ್‌ಗಳನ್ನು ಸುತ್ತಿ ಕ್ಯಾರೊಲಿನ್ ಸ್ಟಾರ್ ಬ್ಯಾಲೆಸ್ಟಿಯರ್ ಎಂಬ ಅಮೆರಿಕದ ಮಹಿಳೆಯನ್ನು ಮದುವೆಯಾಗಿ ಆಕೆಯ ಸಂಬಂಧಿಕರೊಡನೆ ಅಮೆರಿಕದಲ್ಲೇ ನೆಲಸಿದ. ನಾಲ್ಕು ವರ್ಷಗಳ ಅನಂತರ ಇಂಗ್ಲೆಂಡಿಗೆ ಹಿಂದಿರುಗಿದ. ಅಮೆರಿಕದಲ್ಲಿದ್ದಾಗ ಪ್ರಾಣಿಗಳ ಕಥೆಗಳೆನಿಸಿದ ಜಂಗಲ್ ಬುಕ್ (1894–95) ಎಂಬ ಎರಡು ಪುಸ್ತಕಗಳನ್ನೂ ಬೆಸ್ತನ ಜೀವನವೊಂದನ್ನು ಚಿತ್ರಿಸುವ ಕಾಪ್ಟನ್ಸ್ ಕರೇಜಿಯಸ್ (1897) ಎಂಬ ಕಥೆಯನ್ನು ಬ್ರಿಟಿಷ್ ಚಕ್ರಾಧಿಪತ್ಯದ ಹೆಚ್ಚಳ ಕುರಿತ ಬ್ಯಾರಕ್ ರೂಂ ಬ್ಯಾಲಡ್ಸ್ (1892) ಮತ್ತು ದಿ ಸೆವನ್ ಸೀಸ್ (1896) ಎಂಬ ಪದ್ಯಗಳನ್ನೂ ಬರೆದ. 1895ರಲ್ಲಿ ಟೆನಿಸ್ಸನ ಕವಿಗೆ ಇತ್ತಂಥ ರಾಷ್ಟ್ರಕವಿ (ಪೊಯೆಟ್ ಲಾರಿಯೆಟ್) ಸ್ಥಾನಗೌರವವನ್ನು ಈತನಿಗೆ ನೀಡಲಾಯಿತು. ಸ್ಥಾನದ ಸಂಕೋಲೆಯಿಂದ ಬಂಧಿತನಾಗಿ ಮಾಡುವ ಸಾಹಿತ್ಯ ಸೇವೆಗಿಂತ ಸ್ವತಂತ್ರವಾಗಿದ್ದುಕೊಂಡು ಹೆಚ್ಚು ಸೇವೆ ಮಾಡಬಹುದೆಂದು ಭಾವಿಸಿ ಅದನ್ನೀತ ತಿರಸ್ಕರಿಸಿದ.



ದಿ ಡೇಸ್ ವರ್ಕ್ (1898) ಎಂಬ ಕಥಾಸಂಕಲನದಲ್ಲಿ ಉತ್ತಮ ಕಥೆಗಳಿವೆ. ಕಿಮ್ (1601) ಇಂಡಿಯಾದಲ್ಲಿನ ಕವಿಯ ಬಾಲ್ಯ ಜೀವನವನ್ನು ಚಿತ್ರಿಸುವ ಕಾದಂಬರಿ ಜಸ್ಟ್ ಸೊ ಸ್ಟೋರಿಸ್ ಫಾರ್ ಚಿಲ್ಡ್ರನ್, ಪಕ್ ಆಫ್ ಪುಕ್ಸ್‌ಹಿಲ್ (1906); ರಿವಾರ್ಡ್ಸ್ ಅಂಡ್ ಫೇರಿಸ್ (1910)–ಇವು ಈತನ ಇತರ ಪುಸ್ತಕಗಳು, ತನ್ನ ಇಳಿವಯಸ್ಸಿನಲ್ಲಿ ಎ ಡೈವರ್ಸಿಟಿ ಆಫ್ ಕ್ರೀಚರ್ಸ್ (1917); ಡೆಬಿಟ್ಸ್ ಅಂಡ್ ಕ್ರೆಡಿಟ್ಸ್ (1926); ಲಿಮಿಟ್ಸ್ ಅಂಡ್ ರಿನ್ಯೂಯಲ್ಸ್ (1932) ಗ್ರಂಥಗಳನ್ನು ಬರೆದ. ಒಂದನೆಯ ಮಹಾಯುದ್ಧದಲ್ಲಿ ತನ್ನ ಒಬ್ಬನೇ ಮಗ ಸಾವನ್ನಪ್ಪಲು ದಿ ಐರಿಷ್ ಗಾರ್ಡ್ಸ್ ಇನ್ ದಿ ಗ್ರೇಟ್ ವಾರ್ (1923) ಎಂಬ ಗ್ರಂಥವನ್ನು ಬರೆದ. 1907ರಲ್ಲಿ ಕಿಪ್ಲಿಂಗ್‌ಗೆ ಸಾಹಿತ್ಯಕ್ಕಾಗಿ ನೊಬೆಲ್ ಪಾರಿತೋಷಕ ದೊರಕಿತು. ಹಿಂದೆ ಪೊಯಟ್ ಲಾರಿಯೆಟ್ ಪದವಿಯನ್ನು ತಿರಸ್ಕರಿಸಿದಂತೆ ಮೂರು ಬಾರಿ ನೀಡಿದ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಯನ್ನೂ ಕಿಪ್ಲಿಂಗ್ ತಿರಸ್ಕರಿಸಿದ. 1926ರಲ್ಲಿ ರಾಯಲ್ ಸೊಸೈಟಿ ಆಫ್ ಲಿಟರೇಚರಿನ ಚಿನ್ನದ ಪದಕ ಪಡೆದ. ಆಕ್ಸ್‌ಫರ್ಡ್, ಕೇಂಬ್ರಿಜ್, ಎಡಿನ್ಬರೊ, ಡರ್ಹ್ಯಾಂ, ಪ್ಯಾರಿಸ್, ಸ್ಟ್ರಾಸ್‌ಬರ್ಗ್, ಅಥೆನ್ಸ್, ಮೆಗ್ಗಿಲ್ ವಿಶ್ವವಿದ್ಯಾಲಯಗಳು ಈತನಿಗೆ ಗೌರವ ಡಾಕ್ಟರೇಟುಗಳನ್ನು ನೀಡಿದುವು. ನಿಧನಾನಂತರ ಈತನ ದೇಹವನ್ನು ವೆಸ್ಟ್ ಮಿನ್‌ಸ್ಟರ್ ಅಬೆಯಲ್ಲಿ ಸಮಾಧಿ ಮಾಡಲಾಯಿತು. ಸಣ್ಣಕಥೆಗಳ ರಚನೆಯಲ್ಲಿ ಕಿಪ್ಲಿಂಗ್ ಅದ್ವಿತೀಯ, ನಿಸ್ಸೀಮ. ಈತನ ಕವನಗಳ ವಿಚಾರವಾಗಿ ವಿಮರ್ಶಕರಲ್ಲಿ ಭಿನ್ನಾಭಿಪ್ರಾಯವಿದೆ. ಆಡುನುಡಿಗಳ ಔಚಿತ್ಯಪೂರ್ಣ ಬಳಕೆ, ಮನಮೋಹಕವಾದ ವರ್ಣನೆ, ಸ್ಥೈರ್ಯ, ದೇಶಪ್ರೇಮವನ್ನು ಉಕ್ಕಿಸುವ ಸನ್ನಿವೇಶಗಳನ್ನು ತರುವುದು–ಇವು ಈತನ ಬರವಣಿಗೆಯ ಕೆಲವು ವೈಶಿಷ್ಟ್ಯಗಳು, ಬ್ರಿಟಿಷ್ ರಾಷ್ಟ್ರದ ಜನತೆಯ ಮೇಲ್ಮೆಯಲ್ಲಿ ಕಿಪ್ಲಿಂಗನಿಗೆ ಅಪಾರ ಗೌರವ, ನಂಬಿಕೆಗಳಿದ್ದು ಅವನ ಸಾಹಿತ್ಯ ಸೃಷ್ಟಿ ರಾಜಕೀಯದಿಂದ ಪ್ರಭಾವಿತವಾಗಿದೆ. (ಎಚ್.ವಿ.ಎಸ್.; ಎಸ್.ಎಸ್.ಎಲ್.)

ಕಿಪ್ಲಿಂಗ್‌ನದು ಅಸಾಧಾರಣ ಜನಪ್ರಿಯತೆ. ಸಾಮಾನ್ಯ ಬ್ರಿಟಿಷ್ ಸಿಪಾಯಿಯ ಚೈತನ್ಯಪೂರ್ಣ ವಿಶಿಷ್ಟ ಭಾಷೆಯಲ್ಲಿನ ಕವನಗಳನ್ನು ಸಾಮಾನ್ಯವಾಗಿ ಕಾವ್ಯದಿಂದ ದೂರ ಇರುವವರೂ ಓದಿದರು, ಇಷ್ಟಪಟ್ಟರು. ಇವನ ತೀವ್ರ ದೇಶಾಭಿಮಾನ ಮತ್ತು ಸಾಮ್ರಾಜ್ಯಶಾಹಿ ಧೋರಣೆಗಳು ಆ ಕಾಲದ ಓದುಗರಿಗೆ ಪ್ರಿಯವಾದವು. ಆದರೆ ಅನಂತರ ಪೀಳಿಗೆಗಳು ಇವನಿಂದ ದೂರವಾದವು. 1910ರ ಹೊತ್ತಿಗೆ, ಬೋಯರ್ ಯುದ್ಧವನ್ನು ಬ್ರಿಟನ್ ಸರಿಯಾಗಿ ನಿರ್ವಹಿಸದೆ, ಜನರ ಸಾಮ್ರಾಜ್ಯಶಾಹಿ ಉತ್ಸಾಹಕ್ಕೆ ಕುಂದುಬಂದಿತು. ಪ್ರಜಾಪ್ರಭುತ್ವವನ್ನು, ಮಹಿಳೆಯರಿಗೆ ಮತದಾನ ಹಕ್ಕನ್ನು ಕೊಡುವುದನ್ನು ವಿರೋಧಿಸಿದ.

ಇವನ ಪ್ರಸಿದ್ಧ ಕಾದಂಬರಿ 'ಕಿಮ್' ಭಾರತದಲ್ಲಿ ಬೆಳೆಯುತ್ತಿದ್ದ ಐರಿಷ್ ಹುಡುಗನ ಕಥೆಯನ್ನು ಹೇಳುತ್ತದೆ. ಕಿಮ್ ಬ್ರಿಟಿಷ್ ಗುಪ್ತಜನರ ದಳದಲ್ಲಿಯೂ ಕೆಲಸ ಮಾಡುತ್ತಾನೆ. ಒಬ್ಬ ಲಾಮಾನ ಅನುಚರನೂ ಆಗಿದ್ದಾನೆ. ಈ ಕಾದಂಬರಿಯನ್ನು ಕಿಪ್ಲಿಂಗ್ ಬರೆಯುವ ಹೊತ್ತಿಗೆ (1901) ಭಾರತದಲ್ಲಿ ರಾಷ್ಟ್ರಾಭಿಮಾನದ ಅಲೆಗಳು ಎದ್ದಿದ್ದರೂ ಕಾದಂಬರಿಯಲ್ಲಿ ಇದರ ಸೂಚನೆಯೂ ಇಲ್ಲ, ಬಿಳಿ ಮನುಷ್ಯ ಭಾರತೀಯರ ಪ್ರೀತಿಯ ಧಣಿ 'ದ ವೈಟ್ ಮ್ಯಾನ್ಸ್ ಬರ್ಡನ್' ಎನ್ನುವುದು ಕಿಪ್ಲಿಂಗ್‌ನಿಗೆ ಪ್ರಿಯವಾದ ಪದ ಸಮೂಹ; ಇದರ ಅರ್ಥ, ಬಿಳಿಯರಲ್ಲದವರನ್ನು ನಾಗರಿಕರನ್ನಾಗಿ ಮಾಡುವ ಹೊಣೆಯನ್ನು ದೈವವೇ ಬಿಳಿಯನಿಗೆ ವಿಧಿಸಿದೆ ಎಂದು. ಕಾದಂಬರಿಯನ್ನು ಅಂದಿನ ಭಾರತೀಯರ ಚಿತ್ರಗಳಿಗಾಗಿ ಇಂದೂ ಓದಬೇಕಾದದ್ದು, ಬಹು ಶಕ್ತಿ ಬರೆಹ ಇವನದು. (ಎಲ್.ಎಸ್.ಎಸ್.)

**ಕಿಬ್ಬನಹಳ್ಳಿ :** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ ಒಂದು ಗ್ರಾಮ ಮತ್ತು ಪ್ರಾಕ್ತನ ನೆಲೆ. ಈ ಗ್ರಾಮದ ಪರಿಸರದಲ್ಲಿ ಹಬ್ಬಿರುವ ಬಾಣಸಂದ್ರ ಬೆಟ್ಟದ ಶಾಖೆಗಳ ಬುಡದಲ್ಲಿ ಮತ್ತು ಅಲ್ಲಿಂದ ಹರಿದುಬರುವ ಝರಿಗಳ ದಡಗಳಲ್ಲಿ ಪೂರ್ವ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗಗಳ ಕಾಲದ ಅನೇಕ ರೀತಿಯ ಶಿಲೋಪಕರಣಗಳು ದೊರಕುತ್ತವೆ. ಇಲ್ಲಿಯ ಪೂರ್ವ ಶಿಲಾಯುಗದ ಕಾಲದಲ್ಲಿ ಅಬೆವಿಲಿಯನ್ ಮತ್ತು ಅಷೂಲಿಯನ್ ರೀತಿಯ ಕೈಕೊಡಲಿಗಳು, ಸೀಳುಗೊಡಲಿಗಳು (ಕ್ಲೀವರ್), ಹೆರೆಯುವ ಉಪಕರಣಗಳು ಮತ್ತು ಕೊಕ್ಕು ತುದಿಯುಳ್ಳ ಉಪಕರಣಗಳು (ಬೀಕ್ಡ್ ಇಂಪ್ಲಿಮೆಂಟ್ಸ್) ಬಳಕೆಯಲ್ಲಿದ್ದುವು. ಉಂಡೆಕಲ್ಲುಗಳು ಮತ್ತು ಕಲ್ಲುಚಕ್ಕೆಗಳಿಂದ ಮಾಡಿದ ಎರಡು ಸಂಪ್ರದಾಯದ ಉಪಕರಣಗಳೂ ಇಲ್ಲಿ ದೊರಕುತ್ತವೆ. ಸೂಕ್ಷ್ಮ ಶಿಲಾಯುಗದ ಕಾಲದಲ್ಲಿ ತೆಳುಕಲ್ಲುಚಕ್ಕೆಯ, ಎರಡು ಕಡೆ ಅಲುಗುಳ್ಳ ಚಿಕ್ಕ ಚಾಕುಗಳೂ ಅರ್ಧಚಂದ್ರಾಕೃತಿಯ ಮೊನೆ ಉಪಕರಣಗಳೂ ಬಳಕೆಯಲ್ಲಿದ್ದವು. ಅವು ಮಧ್ಯ ಪ್ಲೀಸ್ಟೋಸೀನ್ ಮತ್ತು ಅನಂತರ ಕಾಲದಲ್ಲಿ ಯುರೋಪ್ ಮತ್ತು ಆಫ್ರಿಕಗಳಲ್ಲಿ ಪ್ರಚಲಿತವಾಗಿದ್ದ ಆಯುಧಗಳನ್ನು ಹೋಲುತ್ತವೆ. ಕರ್ನಾಟಕದಲ್ಲಿಯೂ ಜನ ಸುಮಾರು 4,00,000 ವರ್ಷಗಳಷ್ಟು ಹಿಂದಿನಿಂದ ನೆಲಸಿದ್ದರೆಂದು ಊಹಿಸಲು ಇವೇ ಆಧಾರ. ಕರ್ನಾಟಕದಲ್ಲಿ ಮಾನವನ ಪ್ರಾಚೀನತೆಯನ್ನು ಸಾಧಿಸುವ ಕೆಲವೇ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಕಿಬ್ಬನಹಳ್ಳಿಯದೂ ಒಂದು. (ಎಸ್.ಎನ್.)

**ಕಿಯಾ ಗಿಣಿ :** ಗಿಣಿಗಳನ್ನೊಳಗೊಂಡ ಸಿಟ್ಟಾಸಿಫಾರ್ಮೀಸ್ ಗಣದ ಸಿಟ್ಟಾಸಿಡೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಹಕ್ಕಿ. ಇದರ ವೈಜ್ಞಾನಿಕನಾಮ ನೆಸ್ಟರ್ ನೊಟಾಬಿಲಿಸ್.

ಇದರ ತವರು ನ್ಯೂಜಿಲೆಂಡ್. ಎತ್ತರವಾದ ಪರ್ವತ ಪ್ರದೇಶಗಳಲ್ಲಿನ ಕಲ್ಲುಪೊಟರೆಗಳಲ್ಲಿ ಗೂಡು ಕಟ್ಟಿಕೊಂಡು ವಾಸಿಸುತ್ತದೆ.

ಇದು ಹೆಚ್ಚು ಕಡಿಮೆ ಕಾಗೆಯಷ್ಟು ದೊಡ್ಡದು. ಗಿಣಿಗಳಲ್ಲಿರುವಂತೆ ಬಾಗಿರುವ ಬಲವಾದ ಕೊಕ್ಕು ಇದೆ. ಮೈಬಣ್ಣ ಕಂದುಮಿಶ್ರಿತ ಹಸುರು. ಗಿಣಿಗಳಂತೆಯೇ ಹಣ್ಣು, ಮೊಗ್ಗು, ಹುಳು, ಕೀಟ ಮುಂತಾದುವನ್ನು ತಿಂದು ಜೀವಿಸುತ್ತದೆ. ಚಳಿಗಾಲದಲ್ಲಿ ಪರ್ವತದ ಅತೀವ ಚಳಿಯನ್ನು ಸಹಿಸಲಾರದೆ ಕಣಿವೆಗಳಿಗೆ ಇಳಿದುಬರುತ್ತದೆ. ಆಗ ಕೆಲವೊಮ್ಮೆ ಕುರಿಗಳ ಬೆನ್ನನ್ನು ಕುಕ್ಕಿ ಮಾಂಸವನ್ನು ಬಗಿದು ತಿನ್ನುವುದುಂಟು. ಇದರಿಂದಾಗಿ ಮಾನವನಿಗೆ ಈ ಹಕ್ಕಿಯನ್ನು ಕಂಡರೆ ಆಗದು. (ಜೆ.ಎಂ.ಬಿ.)

**ಕಿರಣಣಬೆ ಬೇನೆ :** ಅಣಬೆಗಳ ತಂಡಕ್ಕೆ ಸೇರಿರುವ ಕಿರಣಣಬೆ ಎನಿಸಿಕೊಳ್ಳುವ ಪ್ರಪಂಚದಲ್ಲಿ ಎಲ್ಲೆಲ್ಲೂ ಇರುವ ಬೇರೂರಿರುವ ಬೇನೆಯಿದು. ರೋಗಕಾರಕ ಸೂಕ್ಷ್ಮಜೀವಾಣುಗಳಿಂದ ಈ ಬೇನೆಗೆ ಈ ಹೆಸರಾಗಿದೆ (ಆಕ್ಟಿನೊಮೈಕೋಸಿಸ್). ಆರೋಗ್ಯವಂತರಲ್ಲಿ, ಹೆಚ್ಚಾಗಿ ಹಳ್ಳಿಗಳಲ್ಲಿ ವಾಸಿಸುವವರಲ್ಲಿ, ಬಾಯಲ್ಲಿ ಮುಖ್ಯವಾಗಿ ಮೆಂಡಿಕೆ, ಹಲ್ಲುಗಳ ಸುತ್ತಲೂ ಇವು ಇರುತ್ತವೆ. ಸಾಮಾನ್ಯವಾಗಿ ನಿರಪಾಯಕಾರಿಗಳು, ಸೋಂಕಾಗಬೇಕಾದರೆ ತಾವಿನ ಗಾಯ ಮುಖ್ಯ ಜೀವಾಣುಗಳಿಗೆ ಅಂಗಾಂಶಗಳ ಈಡಾಗುವಿಕೆಯೇ ಜೀವಾಣುಗಳು ನುಗ್ಗಿ ರೋಗವುಂಟುಮಾಡಲು ಬಲು ಅತ್ಯಗತ್ಯ ಅಂಶವೆಂದು ನಂಬಲಾಗಿದೆ.

ಯಾವ ಬಗೆಯ ಅಂಗಾಂಶಕ್ಕಾದರೂ ರೋಗ ಹತ್ತಬಹುದು. ಸೋಂಕಾದೆಡೆಯಲ್ಲಿ ಮೆತು ಅಂಗಾಂಶಗಳ ಊತ ಮೊದಲು ಕಾಣಿಸಿಕೊಳ್ಳುವುದು. ಈ ಊದಿರುವ ಅಂಗಾಂಶ ಗಡುಸಾಗುತ್ತ ಬಂದು ಆಮೇಲೆ ಅನೇಕ ಪುಟ್ಟ ಕುರುಗಳಾಗಿ ಅಲ್ಲಲ್ಲಿ ಮೆತುಗೊಳ್ಳುತ್ತದೆ. ಕೊನೆಗೆ ಇವು ಒಡೆದುಕೊಂಡು ನಾಳಿಗಳಾಗಿ ಮೇಲಾಯದಲ್ಲಿ ಆಗುವ ಕಂಡಿಗಳಿಂದ, ಬರಿಯ ಕಣ್ಣಿಗೆ ಕಾಣುವ ಗಂಧಕ ಹರುಳುಗಳೆನಿಸಿಕೊಳ್ಳುವ ಸಣ್ಣ ಹಳದಿಯಂಥ ಹರಳುಗಳಿರುವ ಕೀವನ್ನು ಸುರಿಸುತ್ತವೆ. ಹರಳುಗಳು ಕವಲೊಡೆಯುತ್ತಿರುವ ಜೀವಾಣುಗಳು ಹೆಣೆದುಕೊಂಡಿರುವ ಮುದ್ದೆಗಳು, ಕುರುಗಳಲ್ಲಿ ರಕ್ಷಣಾತ್ಮಕ ಜೀವಕಣಗಳ ನಡುವೆ ಇವು ಇರುತ್ತವೆ.

ಸಾಮಾನ್ಯವಾಗಿ ಇವು ಮೂರು ಕಡೆಗಳಲ್ಲಿ ಕಾಣಿಸಿಕೊಳ್ಳುತ್ತವೆ. 1 ಮೊಗ ಮತ್ತು ಕುತ್ತಿಗೆಯಲ್ಲಿ; ಬಾಯೊಳಗಿನ ಸಾಮಾನ್ಯವಾಗಿ ಹುಳುಕುಹಲ್ಲಿನೊಳಗಿಂದ ಬಂದ ಸೋಂಕಿನಿಂದ ಮೊದಲಾಗಿ ಅದರಲ್ಲೂ ಕೆಳದವಡೆಯ ಕೋನದ ಬಳಿ ಕಾಣಿಸಿ ಕೊಳ್ಳುತ್ತದೆ. ಈ ಜಾಗದಲ್ಲಿಯೇ ಬಲು ಸಾಮಾನ್ಯ. 2. ಹೊಟ್ಟೆಯಲ್ಲಿ; ಇದು ಸಾಮಾನ್ಯವಾಗಿ ಮೂಗುರುಳು (ಕೀಕಂ) ಇಲ್ಲವೇ ಕರುಳವಾಳದಲ್ಲಿ ಮೊದಲಾಗಿ ಬಲ ಬದಿಯ ಕೆಳಗಡೆ ಊದಿಕೊಳ್ಳುವುದು. ಸೋಂಕು ಇಲ್ಲಿಂದ ಹೊಟ್ಟೆಯ ಮುಂದಿನ ಗೋಡೆಗೆ ನೇರವಾಗಿ ಹರಡಿಕೊಳ್ಳಬಹುದು, ಇಲ್ಲವೇ ರಕ್ತ ಹರಿವಿನ ಮೂಲಕ ಯಕೃತ್ತಿಗೆ ಹರಡಿಕೊಂಡು ಅಲ್ಲಿ ಹಲವಾರು ಕುರುಗಳಾಗಬಹುದು. ಈ ಅಂಗದಲ್ಲಿನ ದೊಡ್ಡ ಕುರುವೊಂದು ವಪೆಯ ಮೂಲಕ ಬಲಬದಿಯ ಪೊಳ್ಳಿನೊಳಕ್ಕೆ ಒಡೆದುಕೊಳ್ಳಬಹುದು. 3 ಎದೆಯಲ್ಲಿ: ಶ್ವಾಸಕೋಶಗಳ ಮೊದಲ ಸೋಂಕಾಗಿಯೋ ಹೊಟ್ಟೆಯಿಂದ ಹರಡಿದಂತೆ ಮರುಚಲದ್ದಾಗಿಯೋ ಆಗಬಹುದು.

ರಕ್ತ ಹರಿವುದರ ಮೂಲಕ ಪಕ್ಕದ ಇಲ್ಲವೇ ಮಿದುಳು, ಯಕೃತ್ತು ಮೊದಲಾದ ದೂರದ ಅಂಗಗಳಿಗೆ ಮೇಲಿನ ಮೊದಲೆಡೆಗಳಿಂದ ಹಬ್ಬಿದ ಹೊರತು, ಈ ರೋಗ ಮಾರಕವಲ್ಲ. ದನ, ಬೆಕ್ಕು, ನಾಯಿ, ಕುರಿ, ಹಂದಿ ಮೊದಲಾದವಲ್ಲೂ ಈ ಬೇನೆ ಆಗಬಹುದು. ಆದರೆ ಇದರ ರೋಗಾಣುಗಳ ಪಂಗಡ ಮಾತ್ರ ಬೇರೆ. (ಕೆ.ವಿ.ಜಿ.)

**ಕಿರಲುಬೋಗಿ :** ಡಿಪ್ಟಿರೊಕಾರ್ಪೇಸೀ ಕುಟುಂಬಕ್ಕೆ ಸೇರಿದ ಹೋಪಿಯ ಪಾರ್ವಿಫ್ಲೊರ ಎಂಬ ವೈಜ್ಞಾನಿಕ ಹೆಸರಿನ ದೊಡ್ಡ ಪ್ರಮಾಣದ, ದಟ್ಟವಾದ ಹಂದರದ, ಸುಂದರವಾದ, ನಿತ್ಯಹರಿದ್ವರ್ಣದ ಮರ. ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳಲ್ಲಿ ಬಲು ಸಾಮಾನ್ಯ. ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳ ನಿತ್ಯಹರಿದ್ವರ್ಣಕಾಡುಗಳಲ್ಲಿ ಹೆಚ್ಚು ವ್ಯಾಪಕವಾಗಿ ಬೆಳೆಯುತ್ತದೆ. ತೇವಪೂರಿತವಾದ ಹಾಗೂ ಫಲವತ್ತಾದ ಮಣ್ಣು ಇದರ ಬೆಳವಣಿಗೆಗೆ ಅನುಕೂಲವಾಗಿರುವುದರಿಂದ ನದಿದಡಗಳು, ಕಣಿವೆಗಳು ಮುಂತಾದೆಡೆ ಸೊಂಪಾಗಿ ಬೆಳೆಯುತ್ತದೆ. ಕೆಲವೊಮ್ಮೆ ಗಡುಸಾದ ಜಂಬೆ (ಲ್ಯಾಟರೈಟ್) ಮಣ್ಣಿನಲ್ಲೂ ಬೆಳೆಯುವುದುಂಟು.

ಕಿರಲುಬೋಗಿ ಸುಮಾರು 120 ಅಡಿ ಎತ್ತರಕ್ಕೆ ಬೆಳೆಯುವ ಬೃಹದ್ ಗಾತ್ರದ ಮರ. ಮರದ ಬೊಡ್ಡೆಯ ಸುತ್ತಳತೆ ಸು. 18 ಅಡಿ ಇರುವುದುಂಟು. ಬರಿಯ ಬೊಡ್ಡೆಯೇ 50'–60' ಎತ್ತರ ಇರುತ್ತದೆ. ಎಲೆಗಳು ಸರಳ; ಪರ್ಯಾಯ ಮಾದರಿಯಲ್ಲಿ ಜೋಡಣೆಯಾಗಿವೆ. ಹೂಗಳು ಚಿಕ್ಕವು; ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ; ಇವುಗಳ ಬಣ್ಣ ನಸುಹಳದಿ. ಹೂಗಳಿಗೆ ಕೊಂಚ ಸುವಾಸನೆಯೂ ಇದೆ. ಹೂಬಿಡುವ ಕಾಲ ಜನವರಿ–ಫೆಬ್ರವರಿ ತಿಂಗಳುಗಳು. ಫಲ ಒಂದೇ ಬೀಜವುಳ್ಳ ನಟ್ ಮಾದರಿಯದು. ಇದಕ್ಕೆ ಎರಡು ರೆಕ್ಕೆಗಳಿವೆ. ಗಾಳಿಯಿಂದಾಗುವ ಫಲಪ್ರಸಾರಕ್ಕೆ ಇವು ಸಹಾಯಕ. ಕಿರಲುಬೋಗಿಯ ಚೌಬೀನೆ ಮಾಸಲು, ಬೂದುಮಿಶ್ರ ಕಂದುಬಣ್ಣದ್ದು; ಸಾಧಾರಣಮಟ್ಟಿಗೆ ಹದಗೊಳ್ಳುತ್ತದೆ; ಗಡುಸಾಗಿದ್ದು ಬಾಳಿಕೆ ಬರುವುದು. ಆದರೆ ಕೊಯ್ಯುಕ್ಕೆ ಸ್ವಲ್ಪ ಕಷ್ಟ. ಹಸಿಮರವನ್ನು ಕೊಯ್ದು ನೆರಳಿನಲ್ಲಿ ಆರಲು ಇಡಬೇಕು. ಈ ಮರಕ್ಕೆ ಗೆದ್ದಲು ಹತ್ತುವುದಿಲ್ಲವಾದ್ದರಿಂದ ದೋಣಿಗಳಿಗೆ, ರೈಲ್ವೆ ಸ್ಲೀಪರುಗಳಿಗೆ ಹೆಚ್ಚಾಗಿ ಬಳಸುವರು. ಇದರ ಮರ ಚೆನ್ನಾಗಿ ಮೆರಗು ತೆಗೆದುಕೊಳ್ಳಬಲ್ಲುದಾದರೂ ಹತ್ತರಿ ಹಿಡಿದು ನಯಮಾಡುವುದು ಕಷ್ಟ. ಮನೆಕಟ್ಟಲು ಇದನ್ನು ತೊಲೆ, ಸರ, ಕಂಬ ಇತ್ಯಾದಿಗಳಿಗೆ ಬಳಸುವರು. ಅಂಗಡಿಮುಂಗಟ್ಟುಗಳಿಗೂ ಪೆಟ್ಟಿಗೆ, ಬೀರು, ಬ್ರಷ್ಷುಗಳ ಹಿಡಿ ಮುಂತಾದವುಗಳಿಗೂ ಉಪಯೋಗಿಸುವುದುಂಟು. ಕೆಲಸಕ್ಕಾಗದ ಭಾಗಗಳನ್ನು ಒಳ್ಳೆಸೌದೆಯಾಗಿ ಬಳಸುತ್ತಾರೆ. (ಎ.ಕೆ.ಎಸ್.)

**ಕಿರಾಣಿ ವ್ಯಾಪಾರಿ :** ಗೃಹಕೃತ್ಯಕ್ಕೆ ಬೇಕಾದ ಚಿಲ್ಲರೆ ಸಾಮಾನುಗಳನ್ನು, ಮುಖ್ಯವಾಗಿ ಸಂಬಾರ ಜಿನಸಿ, ಒಣಹಣ್ಣುಗಳು, ಸಕ್ಕರೆ ಮುಂತಾದವನ್ನು, ಮಾರಾಟ ಮಾಡುವವ (ಗ್ರೋಸರ್). ಸರಕುಗಳನ್ನು ಒಟ್ಟಿನ ಮೇಲೆ (ಗ್ರೋಸ್) ಕೊಂಡು ಮಾರುವವರನ್ನು ಇಂಗ್ಲಿಷಿನಲ್ಲಿ ಗ್ರೋಸರ್ ಎಂದು ಕರೆಯಲಾಗುತ್ತಿತ್ತು. ಕ್ರಮೇಣ ಈ ಶಬ್ದದ ಅರ್ಥದಲ್ಲಿ ವ್ಯತ್ಯಾಸವಾಯಿತು. ಒಟ್ಟು ಮತ್ತು ಚಿಲ್ಲರೆ ವ್ಯಾಪಾರ ಮಾಡುವವರನ್ನೆಲ್ಲ ಗ್ರೋಸರ್ ಎಂದು ಕರೆಯುವ ವಾಡಿಕೆಯಿದೆ.

ಒಟ್ಟು ವ್ಯಾಪಾರಿಗಳು ಕಾರ್ಖಾನೆಯಿಂದಲೇ ಹೆಚ್ಚಿನ ಪ್ರಮಾಣದಲ್ಲಿ ಕೊಂಡುಕೊಳ್ಳುತ್ತಾರೆ. ಅಥವಾ ವ್ಯವಸಾಯೋತ್ಪನ್ನವಾದರೆ ಅದರ ಉತ್ಪತ್ತಿ ಸ್ಥಾನದಿಂದ ಅವನ್ನು ಸಣ್ಣ ಗುಡ್ಡೆಯಾಗಿ ಕೊಂಡು ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟ ಮಾಡುವುದು ಇದರ ಕಾರ್ಯ.

ಸಾಮಾನ್ಯ ಗ್ರಾಹಕರಿಗೆ ಚಿಲ್ಲರೆ ವ್ಯಾಪಾರಿಗಳು ಅತಿಮುಖ್ಯ. ಇವರು ಎಲ್ಲ ಕಡೆಗಳಲ್ಲೂ ಉಂಟು. ವ್ಯಾಪಾರದ ಗಾತ್ರಕ್ಕೆ ಅನುಸಾರವಾಗಿ ಈ ಅಂಗಡಿಗಳ ಗಾತ್ರ ವ್ಯತ್ಯಾಸವಾಗುತ್ತದೆ. ಮನೆಯ ದಿನಬಳಕೆಯ ವಸ್ತುಗಳೆಲ್ಲ ಇಲ್ಲಿರುತ್ತವೆ. ಐರೋಪ್ಯ ದೇಶಗಳಲ್ಲಿ ಕಿರಾಣಿ ವರ್ತಕರು ಮಾಂಸ ಪದಾರ್ಥಗಳನ್ನೂ ಮಾರಾಟ ಮಾಡುತ್ತಾರೆ. ಭಾರತದಲ್ಲಿ ಹಾಗಲ್ಲ. ಮಾಂಸದ ಅಂಗಡಿಗಳು ಪ್ರತ್ಯೇಕವಾಗಿರುತ್ತವೆ.

ಸಣ್ಣ ಕಿರಾಣಿ ಅಂಗಡಿಗಳಿಗೆ ಕಾರ್ಖಾನೆಗಳೂ ಸಗಟು ವ್ಯಾಪಾರಿಗಳೂ ಆವಲಂಬನ. ಸಾಮಾನ್ಯವಾಗಿ ಇವು ಏಕವ್ಯಕ್ತಿ ಅಥವಾ ಪಾಲುದಾರಿಕೆ ಉದ್ಯಮಗಳು. ಆದರೆ ಈ ವ್ಯಾಪಾರ ಮಾಡುವ ಸರಪಣಿ ಮಳಿಗೆಗಳೂ ಇಲಾಖಾ ಮಳಿಗೆಗಳೂ ಬಳಕೆದಾರರ ಸಹಕಾರ ಸಂಘಗಳೂ ಉಂಟು. ಇವು ಮಾರಾಟ ಮಾಡುವ ಸರಕುಗಳು ಸಾಮಾನ್ಯವಾಗಿ ಮುದ್ರಾಂಕಿತವಾದವು. ಅವುಗಳ ಮೇಲೆ ಲಾಭದ ಪ್ರಮಾಣ ಕಡಿಮೆ. ಆದರೆ ಅವು ಹೆಚ್ಚು ವ್ಯಾಪಾರ ಮಾಡುವುದರಿಂದ ಒಟ್ಟಿನಲ್ಲಿ ಲಾಭದಾಯಕವಾಗಿರುತ್ತದೆ. ಕಿರಾಣಿ ಅಂಗಡಿಗಳ ಒಂದು ದೊಡ್ಡ ಅನುಕೂಲವೆಂದರೆ ಗ್ರಾಹಕರೊಂದಿಗೆ ಅವು ಪಡೆಯುವ ವೈಯಕ್ತಿಕ ಸಂಪರ್ಕ. ಅವರ ರುಚಿಧರ್ಮಗಳನ್ನೂ ಬಯಕೆಗಳನ್ನೂ ಅಂಗಡಿಕಾರ ಚೆನ್ನಾಗಿ ಅರಿತಿರುತ್ತಾನೆ. ನಿತ್ಯಬಳಕೆಯ ಸರಕನ್ನು ಹೆಚ್ಚಾಗಿ ಕೊಂಡು ದಾಸ್ತಾನು ಮಾಡಿಕೊಳ್ಳಲಾಗದ ಅಸಂಖ್ಯಾತ ಅನುಭೋಗಿಗಳಿಗೆ ಕಿರಾಣಿ ಅಂಗಡಿ ಒಂದು ವರ. ಉದ್ದರಿ ಲೆಕ್ಕ, ಮನೆಮನೆಗೆ ಸರಕಿನ ಸರಬರಾಯಿ ಮುಂತಾದ ಸೌಲಭ್ಯಗಳನ್ನೂ ಅದು ಒದಗಿಸುತ್ತದೆ. (ಜಿ.ಕೆ.ಐ.)

**ಕಿರಾತ :** ಪ್ರಾಚೀನ ಮಂಗೋಲರ ಬುಡುಕಟ್ಟಿಗೆ ಸೇರಿದ ಒಂದು ಜನಾಂಗ. ಉತ್ತರ ಭಾರತದಲ್ಲಿ ಇವರನ್ನು ಹೆಚ್ಚಾಗಿ ಕಾಣಬಹುದು. ಚೀನ ಟಿಬೆಟ್ಟುಗಳಲ್ಲೂ ಇವರು ವ್ಯಾಪಿಸಿದ್ದಾರೆ. ಸಂಸ್ಕೃತ ಕಾವ್ಯಗಳಲ್ಲಿ ಕಿರಾತರ ಉಲ್ಲೇಖವಿದೆ. ಇತ್ತೀಚೆಗೆ ಕಿರಾತ ಪದವನ್ನು ಗುಡ್ಡಗಾಡುಗಳಲ್ಲಿ ವಾಸಿಸುವ ಜನಾಂಗಕ್ಕೋ ಹಿಮಾಲಯ ತಪ್ಪಲಿನ ಗುಹಾವಾಸಿಗಳಿಗೋ ಬಳಸುತ್ತಿದ್ದಾರೆ. ಬೇಡರಿಗೂ ಸಾಮಾನ್ಯವಾಗಿ ಇದೇ ಹೆಸರಿದೆ. ಮಹಾಭಾರತದಲ್ಲಿ ಇವರನ್ನು ವಾಯವ್ಯ ಭಾಗದ ಶುದ್ಧ ಅನಾಗರಿಕ ಜನಾಂಗವೆಂದೂ ರಾಮಾಯಣದಲ್ಲಿ ಹಸೀ ಮೀನುಗಳನ್ನು ತಿನ್ನುವ, ಸ್ವಭಾವದಲ್ಲಿ ಹುಲಿಯ ಕಾಠಿಣ್ಯವುಳ್ಳ ದ್ವೀಪವಾಸಿಗಳೆಂದೂ ವರ್ಣಿಸಲಾಗಿದೆ. ಈ ಜನ ಕೌರವರ ಕಡೆ ಸೇರಿ ಯುದ್ಧ ಮಾಡಿದರೆಂದೂ ಧರ್ಮರಾಯನ ರಾಜಸೂಯ ಯಾಗಕ್ಕೆ ಕಾಣಿಕೆಗಳನ್ನು ತಂದೊಪ್ಪಿಸಿದರೆಂದು ಮಹಾಭಾರತದಿಂದ ತಿಳಿದುಬರುತ್ತದೆ. ಇವರು ಗಿಡಮೂಲಿಕೆಗಳಿಂದ ರಸೌಷಧಗಳನ್ನು ತಯಾರಿಸುವುದರಲ್ಲಿ ಪ್ರಸಿದ್ಧರಾಗಿದ್ದು ಚಾಪೆ ಮತ್ತು ಚರ್ಮಗಳಿಗಾಗಿ ಅವನ್ನು ಆರ್ಯರಿಗೆ ಮಾರುತ್ತಿದ್ದರೆಂದೂ ಅಥರ್ವಣ ವೇದದಲ್ಲಿ ಹೇಳಲಾಗಿದೆ. ಮೊನಚಾದ ಮುಡಿಗಂಟು, ಹೊಂಬಣ್ಣದ ಕಿರಾತ ಕನ್ಯೆಯರ ಸೌಂದರ್ಯ ಹಾಗೂ ದೇಹಸೌಷ್ಠವಕ್ಕೆ ಮರುಳಾದ ಅನೇಕ ಚಕ್ರವರ್ತಿಗಳು ಅವರನ್ನು ತಮ್ಮ ಅಂತಃಪುರಕ್ಕೆ ಸೇರಿಸಿಕೊಳ್ಳುತ್ತಿದ್ದರೆಂದು ಹೇಳಲಾಗಿದೆ. ಇತ್ತೀಚೆಗೆ ಕಿರಾತರು ಉತ್ತರ ಪ್ರದೇಶ, ಕಾಮರೂಪ (ಅಸ್ಸಾಂ) ಮತ್ತು ನೇಪಾಳಗಳಲ್ಲಿ ಹೆಚ್ಚಾಗಿ ಕಾಣಬರುತ್ತಿದ್ದು ಮುಖ್ಯ ಪಂಗಡಗಳಾಗಿರುವುದನ್ನು ಗುರುತಿಸಬಹುದು.

ಅರ್ಜುನನಿಗೆ ಪಾಶುಪತಾಸ್ತ್ರವನ್ನು ಅನುಗ್ರಹಿಸಲು ಶಿವ ಮತ್ತು ಪಾರ್ವತಿಯರು ಕಿರಾತ ವೇಷದಿಂದ ಬಂದ ಪ್ರಸಂಗವನ್ನು ಮಹಾಭಾರತದಲ್ಲಿ ವರ್ಣಿಸಲಾಗಿದೆ. ಕಿರಾತಾರ್ಜುನೀಯ ಪ್ರಸಂಗದ ಈ ವಸ್ತುವನ್ನೇ ಭಾರವಿ ತನ್ನ ಕಾವ್ಯಕ್ಕೆ ಉಪಯೋಗಿಸಿಕೊಂಡಿದ್ದಾನೆ. *

**ಕಿರಾತಗೂಸುತನ :** ಎಳೆಗೂಸುಗಳಲ್ಲಿ ಹುಟ್ಟುವಾಗಲೇ ಅಂಗ, ಅವಯವಗಳು ಇಲ್ಲದೆಯೋ ವಿಪರೀತ ದೊಡ್ಡದು ಇಲ್ಲವೆ ಸಣ್ಣದಾಗೋ ಎಂದಿನ ಜಾಗ ಬಿಟ್ಟೋ ಇರುವಿಕೆ (ಮಾನ್ಸ್ಟ್ರಸಿಟಿ). ರಾಕ್ಷಸನನ್ನು ಹೋಲುವ ಈ ಕಿರಾತಗೂಸು (ಮಾನ್‌ಸ್ಟರ್) ಒಂಟಿ ಇಲ್ಲವೇ ಅವಳಿಯಾಗಿರಬಹುದು. ವಿಕಾರವಾಗಿದ್ದರೂ ಕೂಸುಬದುಕಿರಲೂಬಹುದು. ಆರೋಗ್ಯವಾಗಿರಲೂಬಹುದು. ಕೈಕಾಲುಗಳಲ್ಲಿ ಬೆಟ್ಟುಗಳು ಹೆಚ್ಚು ಇಲ್ಲವೇ ಕಡಿಮೆಯಾಗಿರಬಹುದು. ಒಂದಕ್ಕೊಂದು ಅಂಟಿರಲೂಬಹುದು. ಗರ್ಭದಲ್ಲಿ ಪಿಂಡದ ವಿಕಾಸವಾಗುವಾಗ, ಹುಟ್ಟಿದ ಮೇಲೆ ಇನ್ನಿಲ್ಲವಾಗಬೇಕಾದ ಅಂಗಗಳು ಹಾಗೇ ಉಳಿಯಬಹುದು. ಬಿಡಿಯಾಗಿರಬೇಕಾದ ಎಷ್ಟೋ ಒಳಾಂಗಗಳು ಒಂದಕ್ಕೊಂದು ಅಂಟಿರಬಹುದು. ವಿಕಾಸದ ಹೊತ್ತಿನಲ್ಲಿ ಹಲವು ಸಂದುಗಳು, ಬಿರುಕುಗಳು ಸರಿಯಾಗಿ ಕೂಡಬೇಕಾದವು ಒಂದು ಭಾಗವೋ ಪೂರ್ತವೋ ಹಾಗೇ ಉಳಿದುಬಿಡಬಹುದು ಎರಡು ಕಣ್ಣುಗಳೂ ಹಣೆ ನಡುವೆ ಒಂದುಗೂಡಿ ಒಕ್ಕಣ್ಣು ಆಗಬಹುದು.

ಅವಳಿ ಮಕ್ಕಳು ಹುಟ್ಟುವಾಗ ಒಂದಕ್ಕೊಂದು ಅಂಟಿಕೊಂಡು ಅವಳಿ ಕಿರಾತಗೂಸು ಹುಟ್ಟಬಹುದು. ಹೀಗೆ ಕೂಡಿರುವಾಗ ಎರಡೂ ಸಮವಾಗಿ ಇಲ್ಲವೇ ಒಂದು ದೊಡ್ಡದು ಒಂದು ಸಣ್ಣದು ಆಗಿರಬಹುದು. ಸಮವಾದಲ್ಲಿ, ಅವಳಿಗಳು ಒಂದಕ್ಕೊಂದು ತಲೆತಲೆಗೋ ಮುಂಡಮುಂಡಕ್ಕೋ ಪಿರ್ರೆಪಿರ್ರೆಗೋ ಅಂಟಿರಬಹುದು. ಎರಡು ಮೊಗಗಳೂ ಬೇರೆ ಬೇರೆ ಕಡೆಗೆ ತಿರುಗಿರಬಹುದು. ಇಲ್ಲವೇ ಒಂದು ತಲೆಗೆ ಎರಡು ಮುಂಡಗಳು ತಗಲಿರಬಹುದು. ಮುಂಡಗಳೆರಡೂ ಒಂದಾಗಿದ್ದು ತಲೆಗಳು ಎರಡಿರಬಹುದು. ಎದೆಗಳು ಪಕ್ಕದಲ್ಲೋ ಎದುರುಬದುರಾಗೋ ಒಂದಕ್ಕೊಂದು ಅಂಟಿದ್ದು, ಉಳಿದ ಮೈ ಭಾಗಗಳು ಬೇರೆಯಾಗಿ ಉಳಿದಿರಬಹುದು. ಹಾಗೇ ಅವಳಿಗಳು ಪೂರ್ತಿಯಾಗಿ ಬೇರೆಬೇರೆಯಾಗಿದ್ದರೂ ಕೇವಲ ತಲೆ, ಎದೆ, ನಡು, ಕುಂಡಿ, ಇಲ್ಲವೇ ಬೆನ್ನುಗಳಲ್ಲಿ ಮಾತ್ರ ಅಂಟಿರಬಹುದು. ಸಯಾಮೀ ಅವಳಿಗಳಾಗಿ ಅಸಮಕಿರಾತಗೂಸುಗಳು ಗರ್ಭದಲ್ಲಿ ಪಿಂಡಗಳಾಗಿದ್ದಾಗ ಎರಡೂ ಸಮವಾಗಿ ವಿಕಾಸವಾಗುತ್ತಿದ್ದರೂ ಒಂದು ಸತ್ತು ಕೇವಲ ಮಾಂಸದ ಮುದ್ದೆಯಾಗಿ ಉಳಿಯಬಹುದು. ಕೆಲವು ವೇಳೆ ಅವಳಿಗಳಲ್ಲಿ ಒಂದು ಸಾಯದೆಯೇ ಅದರ ಬೆಳವಣಿಗೆ ಕುಂದಿದರೆ ಆಗ ಅದು ಇನ್ನೊಂದರ ಮೇಲೆ ಪರಪಿಂಡಿಯಾಗಿರುತ್ತದೆ. ಈ ಪರಪಿಂಡಿ ಚೆನ್ನಾಗಿ ವಿಕಾಸವಾಗಿ ಪಿಂಡಗೂಸಿನ ಹಾಗೆ ತೋರಬಹುದು. ಇಲ್ಲವೇ ಕೇವಲ ಹಲ್ಲು ಕೂದಲು ಉಗುರಂಥ ಕೆಲವು ಊತಕಗಳ ಗೆಡ್ಡೆಯಾಗಿರಬಹುದು. (ಪಿ.ಕೆ.ಆರ್.)

**ಕಿರಿ ಗೋಣಿಮರ :** ಸಾಲ್ವಡೊರೇಸೀ ಕುಟುಂಬಕ್ಕೆ ಸೇರಿದ ಸ್ಯಾಲ್ವಡೋರ ಪರ್ಸಿಕ ಮತ್ತು ಸಾಲ್ವಡೋರ ಓಲಿಯಾಯ್ಡಿಸ್ ಎಂಬೆರಡು ಮರಗಳಿಗಿರುವ ಸಾಮಾನ್ಯ ಹೆಸರು. ಇವೆರಡು ಮರಗಳೂ ಭಾರತ, ಸಿಂಹಳ, ಈಜಿಪ್ಟ್, ಇಥಿಯೋಪಿಯ ಮುಂತಾದ ದೇಶಗಳಲ್ಲಿ ಸಾಮಾನ್ಯವಾಗಿ ಕಾಣಬರುತ್ತವೆ. ಭಾರತದಲ್ಲಿ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಪಂಜಾಬ್ ಗಳಲ್ಲಿ ಹೇರಳವಾಗಿ ಬೆಳೆಯುತ್ತವೆ. ಎರಡೂ ಸುಮಾರು 15'–30' ಎತ್ತರಕ್ಕೆ ಬೆಳೆಯುವ ಮರಗಳು. ಬೆಳೆಯುವ ಪ್ರದೇಶವನ್ನು ಅವಲಂಬಿಸಿ ಮರದ ಎತ್ತರ ವ್ಯತ್ಯಾಸವಾಗುತ್ತದೆ. ಕಡಲತೀರ ಪ್ರದೇಶಗಳಲ್ಲಿ ಕೇವಲ 6' ಎತ್ತರವಿರಬಹುದು. ಮರದ ರೆಂಬೆಗಳು ಕೆಳಕ್ಕೆ ಬಗ್ಗಿರುವುದರಿಂದ ದೂರಕ್ಕೆ ಪೊದೆಸಸ್ಯದಂತೆ ಕಾಣುತ್ತವೆ.

ಕಿರಿಗೋಣಿಮರದ ಒಂದು ರೆಂಬೆ

ಕಿರಿ ಗೋಣಿಮರದ ಎಲೆಗಳು ಸರಳ, ಅಭಿಮುಖವಾಗಿ ಜೋಡಣೆಯಾಗಿವೆ. ಇವಕ್ಕೆ ಮಲ್ಲಿಗೆಯಂಥ ಸುವಾಸನೆ ಇದೆ. ಕಿರಿ ಗೋಣಿಮರದ ಸುತ್ತ ಈ ವಾಸನೆ ಹರಡಿರುತ್ತದೆ. ಸಾಮಾನ್ಯವಾಗಿ ಎಲೆಗಳು ದಪ್ಪ; ಸುಲಭವಾಗಿ ಮುರಿದು ಹೋಗುತ್ತವೆ. ಹೂಗಳು ಚಿಕ್ಕವು; ಅಂತ್ಯಾರಂಭಿ ಮಾದರಿಯ ಗೊಂಚಲುಗಳಲ್ಲಿ ಜೋಡಣೆಯಾಗಿವೆ; ಇವುಗಳ ಬಣ್ಣ ಬಿಳಿ ಅಥವಾ ಹಸುರು ಮಿಶ್ರಿತ ಹಳದಿ. ಫಲ ಅಷ್ಠಿಫಲ ಮಾದರಿಯದು. ಕಾಯಿಯ ಬಣ್ಣ ಬಿಳಿ, ಕೆಂಪು, ಹಳದಿ, ಊದಾ, ಬೂದು ಇತ್ಯಾದಿ. ಸ್ಯಾಲ್ವಡೋರ ಓಲಿಯಾಯ್ಡಿಸ್ ಪ್ರಭೇದದ ಹಣ್ಣು ಸಿಹಿಯಾಗಿಯೂ ಸ್ಯಾ. ಪರ್ಸಿಕದ ಹಣ್ಣು ಉಪ್ಪು ಮಿಶ್ರಿತ ಕಹಿರುಚಿಯುಳ್ಳದ್ದೂ ಆಗಿದೆ. ಹಣ್ಣಿನ ಸಿಪ್ಪೆಯಲ್ಲಿ ಎರಡು ಪದರಗಳಿವೆ. ಹೊರಪದರ ತೆಳು ಹಾಗೂ ಮೃದುವಾಗಿಯೂ ಒಳಪದರ ಗಟ್ಟಿಯಾಗಿಯೂ ಇವೆ. ಬೀಜ ಹಳದಿ ಬಣ್ಣದ್ದು; ಇದಕ್ಕೆ ಮಧುರವಾದ ವಾಸನೆಯಿದೆ. ಬೀಜದಲ್ಲಿ ಒಂದು ಬಗೆಯ ಎಣ್ಣೆಯಿದೆ. ಬೀಜದಲ್ಲಿನ ಎಣ್ಣೆಯ ಪ್ರಮಾಣ ಶೇ.35–40. ಇದರ ಬಣ್ಣ ಬೂದುಮಿಶ್ರಿತ ಹಸುರು. ಇದನ್ನು ಕೊಬ್ಬರಿಎಣ್ಣೆಯ ಬದಲಾಗಿ ಸಾಬೂನು ತಯಾರಿಕೆಯಲ್ಲಿ ಬಳಸುವುದುಂಟು. ಇದು ಭಾರತದ ಕೆಲವೆಡೆ ಬಳಕೆಯಾಗುವ ಮುಖ್ಯ ಬಗೆಯ ಎಣ್ಣೆಗಳಲ್ಲೊಂದು. ಈ ಉಪಯೋಗದಿಂದಾಗಿ ಕಿರಿ ಗೋಣಿಮರದ ಬೀಜಗಳನ್ನು ಸಂಗ್ರಹಿಸಿ ಅವುಗಳಿಂದ ಎಣ್ಣೆಯನ್ನು ತೆಗೆಯುವ ಸಣ್ಣಪ್ರಮಾಣದ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಮರದ ರೆಂಬೆ ಮತ್ತು ಕಾಯಿಗೊಂಚಲುಗಳನ್ನು ಕತ್ತರಿಸಿ ಲೊಥಾಣಿ ಎಂಬ ಯಂತ್ರದ (ಹತ್ತಿ ಬೀಜವನ್ನು ಹತ್ತಿಯಿಂದ ಬೇರ್ಪಡಿಸುವ ಯಂತ್ರ) ಸಹಾಯದಿಂದ ರೆಂಬೆ ಮತ್ತು ಗೊಂಚಲುಗಳಿಂದ ಹಣ್ಣನ್ನು ಬೇರ್ಪಡಿಸಿ ಅನಂತರ ಬೀಜ ಒಡೆಯುವ ಯಂತ್ರಗಳಿಗೆ ಸಾಗಿಸಿ ಬೀಜಗಳನ್ನು ಒಡೆದು ಬೇಳೆ ತಯಾರಿಸುತ್ತಾರೆ. ಬೇಳೆಗಳನ್ನು ಎಕ್ಸ್‌ಪೆಲರ್ ಮತ್ತು ಗಾಣಗಳಿಗೆ ಹಾಕಿ ಎಣ್ಣೆಯನ್ನು ತೆಗೆಯುತ್ತಾರೆ. ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶಗಳಲ್ಲಿ ಈ ಉದ್ಯಮ ಹೆಚ್ಚು.

ಕಿರಿ ಗೋಣಿಮರಕ್ಕೆ ಹಲವಾರು ಔಷಧೀಯ ಗುಣಗಳೂ ಇವೆ. ತೊಗಟೆಯಿಂದ ತಯಾರಿಸಿದ ಕಷಾಯವನ್ನು ಸಣ್ಣಜ್ವರದ ನಿವಾರಣೆಗೆ ಬಳಸುತ್ತಾರೆ. ಎಲೆಗಳನ್ನು ಸಂಧಿವಾತ, ಆಸ್ತಮ, ಕೆಮ್ಮು, ಗಂತಿ ಮುಂತಾದುವುಗಳಲ್ಲಿ ಉಪಯೋಗಿಸುವುದುಂಟು. ಎಲೆ ಹಾಗೂ ಕಾಯಿಗಳಿಗೆ ಪಚನಶಕ್ತಿಯನ್ನು ಹೆಚ್ಚಿಸುವ ಗುಣ ಇದೆ. ಅಲ್ಲದೆ ಇವು ಲಘುವಿರೇಚಕಗಳೂ ಹೌದು. ಹಣ್ಣಿಗೆ ಕಾಮೋತ್ತೇಜಕ ಗುಣ ಇದೆಯೆಂದು ಹೇಳಲಾಗಿದೆ. ಸಿಹಿಯಾಗಿರುವ ಹಣ್ಣನ್ನು ದನಕರುಗಳು, ಒಂಟೆಗಳು ಹಾಗೂ ಮನುಷ್ಯರು ತಿನ್ನುತ್ತಾರೆ. ಕೆಳದರ್ಜೆಯ ಬೀಜಗಳನ್ನು ದನಗಳಿಗೆ ಮೇವಾಗಿ ಉಪಯೋಗಿಸುವುದುಂಟು. ಇದರಿಂದ ಹಾಲಿನ ಕೊಬ್ಬಿನ ಅಂಶ ಹೆಚ್ಚುತ್ತದೆಂದು ಹೇಳಲಾಗಿದೆ. ಹೊಗೆಸೊಪ್ಪಿನ ಬೆಳೆಗೆ ಕಿರಿ ಗೋಣಿಮರದ ಸೊಪ್ಪನ್ನು ಗೊಬ್ಬರವಾಗಿ ಉಪಯೋಗಿಸುವ ಕ್ರಮ ಕೆಲವೆಡೆ ಇದೆ. (ಎಚ್.ಜಿ.ಎಂ.)

**ಕಿರೀಟಿಕ ಕೂಡುಗರಣೆಕೆ :** ಗುಂಡಿಗೆಯ ಮೇಲುಗಡೆ ಕಿರೀಟದಂತೆ ಸುತ್ತುವರಿದಿರುವ ಧಮನಿ (ಆರ್ಟರಿ) ಒಂದರೊಳಗಡೆ ರಕ್ತ ಗರಣೆಗಟ್ಟಿ ಕೂಡುತ್ತ ಹೋಗಿ ಕೊನೆಗೆ ಉಂಟಾಗುವ ಅಡಚಣೆ (ಕಾರೊನರಿ ಥ್ರಾಂಬೊಸಿಸ್). ಗುಂಡಿಗೆ ನೋವು ಕಾಣಿಸಿಕೊಂಡು ಕೆಲವೇಳೆ ಇದ್ದಕ್ಕಿದ್ದಂತೆ ಸಾವೊದಗುವ ಈ ರೋಗಲಕ್ಷಣಕ್ಕೆ ಈ ಹೆಸರನ್ನು ಮೊದಲು ಸೂಚಿಸಿದವ ಅದಾಂ ಹ್ಯಾಮರ್. ಧಮನಿಯಲ್ಲಿ ರಕ್ತದ ಹರಿವಿಗೆ ಅಡ್ಡಿಯಾದರೆ, ರಕ್ತದ ಪೂರೈಕೆ ಕಡಿದಂತಾಗಿ ಅದರಾಚೆ ಇರುವ ಗುಂಡಿಗೆಯ ಆ ಭಾಗ ನಿರ್ಜೀವಗೊಳ್ಳುವುದು. ವಯಸ್ಸು ಮತ್ತಿತರ ಕಾರಣಗಳಿಂದ ಒಳ ಅಳತೆ ಆಗಲೆ ಕಿರಿದಾಗಿ ಗಡುಸಾಗಿರುವ ಧಮನಿಯ ಅಂಬಲಿಪೆಡಸಣೆ (ಅಥೆರೊಸ್ಕ್ಲೀರೊಸಿಸ್) ನಿಂದ ಒಳ ಅಳತೆ ಆಗಲೇ ಕಿರಿದಾಗಿ ಗಡುಸಾಗಿರುವ ಧಮನಿಯಲ್ಲಿ ಹೀಗಾಗುವುದು ಸಾಮಾನ್ಯ. ಒಂದು ಧಮನಿಗೆ ಹೀಗೆ ಅಡ್ಡಿಯಾದರೆ ಪಕ್ಕದ ಇನ್ನೊಂದು ಧಮನಿಯ ಕಿರಿಗವಲುಗಳು ಕೆಲವು ವಾರಗಳಲ್ಲಿ ಈ ಕೆಲಸವನ್ನು ಎತ್ತಿಕೊಳ್ಳುವುವು. ಕೆಲವು ತಿಂಗಳಲ್ಲಿ ಬಹು ಮಟ್ಟಿಗೆ ಎಂದಿನಂತೆ ರಕ್ತಪೂರೈಕೆಯಾಗಿ ಸ್ನಾಯುವಿನ ನಿರ್ಜೀವಗೊಂಡಭಾಗ ಚೇತರಿಸಿಕೊಂಡು ವಾಸಿಯಾಗಿ ಕಲೆಗಟ್ಟುವುದು. ಈ ಇನ್ನೊಂದು ಧಮನಿ ಸಾಕಷ್ಟು ಹೆಚ್ಚಿನ ಕೆಲಸ ವಹಿಸುವಂತಾದರೆ ರೋಗಿ ಬದುಕಿ ಉಳಿಯುವನು. ಇಲ್ಲವಾದರೆ ಅಸುನೀಗುವನು. ಕಿರೀಟಿಕ ಕೂಡುಗರಣೆಕೆಗೆ ಮೊದಲಬಾರಿ ಗುರಿಯಾದ ರೋಗಿಗಳಲ್ಲಿ ನೂರಕ್ಕೆ 80 ಮಂದಿ ಬದುಕಿಕೊಳ್ಳುತ್ತಾರೆ. (ಡಿ.ಎಸ್.ಎಸ್.)

**ಕಿರುಕುಳ ಕಾಳಗ :** ಶತ್ರುಗಳಿಗೆ ಕಿರುಕುಳ ಕೊಡಲು ಸಣ್ಣ ಸಣ್ಣ ದಳಗಳು ಹೊಂಚುಹಾಕುತ್ತ ಪ್ರತ್ಯೇಕ ಪ್ರತ್ಯೇಕವಾಗಿ ಮೇಲೆ ಬಿದ್ದು ಕ್ರಮವಿಲ್ಲದೆ ನಡೆಸುವ ತುಂಡು ಕಾಳಗ (ಗೆರಿಲ ವಾರ್ಫೇರ್). ಕುಯುಕ್ತಿ, ಕಪಟ ತಂತ್ರಗಳಿಂದ ಹೋರಾಟದ ಶಕ್ತಿಯನ್ನು ಕುಗ್ಗಿಸುವುದು ಈ ಕಾಳಗದ ಉದ್ದೇಶ. ಈ ಯೋಧರು ಸೇತುವೆ, ಅಣೆಕಟ್ಟು, ಜಲಾಶಯ, ರಸ್ತೆ, ರೈಲುಮಾರ್ಗ, ಕಾರ್ಖಾನೆ, ಯಂತ್ರೋಪಕರಣ, ವಿದ್ಯುದುತ್ಪಾದಕ ಕೇಂದ್ರ, ಹಡಗು, ಟೆಲಿಫೋನ್, ಟೆಲಿಗ್ರಾಫ್‌ಗಳನ್ನು ನಾಶಮಾಡುತ್ತಾರೆ. ಕಾಡು, ಗಣಿ, ಹೊಲ, ಪೈರು, ಹೊಲಸುನೀರಿನ ಕಾಲುವೆ, ಸುರಂಗದ ಚರಂಡಿ, ಗುಹೆ, ಕಂದಕ, ಕಣಿವೆಗಳಲ್ಲಿ ಅವಿತುಕೊಂಡು ಹೊಂಚುಹಾಕುತ್ತ ಮೋಟರ್ ಕಾರ್, ಟ್ರಕ್, ರೈಲುಗಾಡಿಗಳನ್ನು ಉರುಳಿಸಿ. ಸಾವಿರಾರು ಶತ್ರುಗಳನ್ನು ಕೊಂದು, ಶಸ್ತ್ರಾಸ್ತ್ರಗಳನ್ನು ಹಿಡಿದುಕೊಳ್ಳುತ್ತಾರೆ. ವೈರಿಗಳ ಪಾಳ್ಯ, ಡಿಪೋ, ಉಗ್ರಾಣ, ಮದ್ದುಗುಂಡುಗಳನ್ನು ಧ್ವಂಸಮಾಡುತ್ತಾರೆ. ರಾತ್ರಿ ಕತ್ತಲಲ್ಲಿ ಶತ್ರುಗಳ ಹಿಂಬದಿಯ ಫೌಜುಗಳನ್ನು ಏಕಾಏಕಿ ಮಿಂಚಿನ ವೇಗದಲ್ಲಿ ಹೊಡೆದುಹಾಕಿ ಕೈಗೆ ಸಿಕ್ಕದೆ ಮಾಯವಾಗುತ್ತಾರೆ. ಶತ್ರುಗಳಿಗೆ ಹೋಗುವ ಆಹಾರ, ಕಾಗದಪತ್ರಗಳನ್ನು ತಡೆಗಟ್ಟುತ್ತಾರೆ.

ಈ ಅರೆಮರೆ ತುಕಡಿ ಕಾಳಗಕ್ಕೆ ಗೆರಿಲ ಯುದ್ಧವೆಂದು ಹೆಸರು. ಗೆರಿಲ ಎಂಬುದು ಸ್ಪೇನ್ ಭಾಷೆಯ ಒಂದು ಶಬ್ದದಿಂದ ಬಂದಿದೆ. ಅದರ ಅರ್ಥ ಚಿಕ್ಕ ಕಾಳಗ. 1809–13ರಲ್ಲಿ ಸ್ಪೇನ್ ಪೋರ್ಚುಗಲ್ಲಿನ ಗೆರಿಲೆರೋ ತಂಡದವರು ವೆಲಿಂಗ್ಟನ್ನನ ನಾಯಕತ್ವದಲ್ಲಿ ಭಾರಿ ಫ್ರೆಂಚ್ ಸೇನೆಯನ್ನು ಪದೇಪದೇ ಹಣಗಾಡಿಸಿ ದೇಶದಿಂದ ಓಡಿಸಿಬಿಟ್ಟರು. ಅಂದಿನಿಂದ ಇಂಥ ಕಿರುಕುಳ ಕಾಳಗಕ್ಕೆ ಗೆರಿಲಯುದ್ಧವೆಂದು ಹೆಸರು ನಿಂತಿದೆ. ಗೆರಿಲಗಳು ಕ್ರಮಬದ್ಧ ಸೈನಿಕರಲ್ಲ. ಸೈನಿಕ ಉಡುಪನ್ನು ಧರಿಸುವುದಿಲ್ಲ. ಅಸೈನಿಕ ಪೌರನಿವಾಸಿಗಳು, ಶಿಸ್ತು, ಕಟ್ಟುಪಾಡಿನಲ್ಲಿ ತರಬೇತಿ ಪಡೆಯುತ್ತಾರೆ. ಭಾರದ ಆಯುಧ, ಉಪಕರಣಗಳನ್ನು ಒಯ್ಯುವುದಿಲ್ಲ. ಅವರಿಗೆ ನಿರ್ದಿಷ್ಟ ನಿವಾಸ, ಸಿಬ್ಬಂದಿ, ಡಿಪೋ, ಪಾಳ್ಯಗಳಿಲ್ಲ. ರಕ್ಷಿಸಿಕೊಳ್ಳಬೇಕಾದ ಸ್ಥಾನಗಳಿಲ್ಲ. ಅತ್ಯಂತ ಅನುಕೂಲವಾದ ಸಂದರ್ಭಗಳಲ್ಲಿ ವಿನಾ ಅವರು ಶತ್ರುಗಳೆದುರಿಗೆ ನಿಂತು ಕಾದಾಡುವುದಿಲ್ಲ. ಕೆಲವು ಸಾರಿ ದರೋಡೆ ಕಳ್ಳರ ತಂಡಗಳೂ ಗೆರಿಲ ಯುದ್ಧವನ್ನು ಮಾಡುತ್ತವೆ.

ಗೆರಿಲಗಳಿಗೆ ಧೈರ್ಯ, ಶೀಘ್ರ ಚಲನವಲನ, ಸಹಿಷ್ಣುತೆಗಳಿರಬೇಕು. ಸ್ಥಳೀಯ ನಿವಾಸಿಗಳ ಸಹಕಾರ, ಸಹಾನುಭೂತಿಗಳನ್ನು ಗಳಿಸಿದರೆ ಅವರಿಂದ ಅನೇಕ ಸೌಕರ್ಯಗಳನ್ನು ಪಡೆಯಬಹುದು. ಶತ್ರುಗಳಿಗೆ ಗುಟ್ಟು ಕೊಡದೆ, ಅವರ ವಿಷಯಗಳನ್ನು ಚಮತ್ಕಾರದಿಂದ ಸಂಗ್ರಹಿಸಿ, ರಾಷ್ಟ್ರೀಯ ಸೈನ್ಯದೊಡನೆ ಸುಸಂಘಟಿತವಾಗಿರಬೇಕು.

ಅಮೆರಿಕದ ಕ್ರಾಂತಿಯಲ್ಲಿ ವಲಸೆಗಾರರು ಗೆರಿಲ ಪಡೆಗಳು ಬ್ರಿಟಿಷ್ ಸೈನ್ಯಗಳ ಮೇಲೆ ಹಾವಳಿಮಾಡಿದವು. ಅಮೆರಿಕದ ರಾಷ್ಟ್ರಾಂತಯುದ್ಧದಲ್ಲಿ ಗೆರಿಲ ಚಳವಳಿ ಪ್ರಬಲವಾಗಿತ್ತು. ಇಟಲಿ ದೇಶವನ್ನು ಏಕೀಕರಿಸಲು ಗ್ಯರಿ ಬಾಲ್ಡಿ ಗೆರಿಲ ಕಾಳಗಗಳನ್ನು ನಡೆಸಿದ. ಬೋಅರ್ ಯುದ್ಧದಲ್ಲಿ ಬೋಅರ್ ಗೆರಿಲಗಳು ನಿಪುಣತೆಯಿಂದ ಬ್ರಿಟಿಷ್ ಸೇನೆಗಳನ್ನು ಗೋಳಾಡಿಸಿದರು. ಒಂದನೆಯ ಮಹಾಯುದ್ಧದಲ್ಲಿ ಅರಬ್ಬೀ ಗೆರಿಲಗಳು ಕರ್ನಲ್ ಲಾರೆನ್ಸನ ಮುಂದಾಳ್ತನದಲ್ಲಿ ತಮಗಿಂತಲೂ ಐದರಷ್ಟು ದೊಡ್ಡದಾಗಿದ್ದ ತುರ್ಕಿ ಸೇನೆಗಳ ಮೇಲೆ ಹಾವಳಿಮಾಡಿ 35,000 ತುರ್ಕಿಯವರನ್ನು ಕೊಂದರು ಮತ್ತು ಅಷ್ಟೇ ಮಂದಿಯನ್ನು ಸೆರೆಹಿಡಿದರು. ಫ್ರಾನ್ಸಿನ ಗೆರಿಲಗಳು ದಕ್ಷಿಣ ಕ್ಯಾರೊಲೀನದಲ್ಲಿ ಕಾರ್ನವಾಲಿಸ್‍ನ ಭಾರಿ ಸೈನ್ಯವನ್ನು ಕಾಡಿದರು. ನೆಪೋಲಿಯನ್ ಮಾಸ್ಕೊದಿಂದ ಹಿಮ್ಮೆಟ್ಟುತ್ತಿದ್ದಾಗ ರಷ್ಯದ ರೈತರು ಫ್ರೆಂಚರನ್ನು ಹೊಡೆದೋಡಿಸಿದರು. ಚೀನದ ತಾಯ್‍ಪಿಂಗ್ ದಂಗೆಯಲ್ಲಿ ರೈತಾಪಿ ಜನರು, ಕೂಲಿಗಳು ಸಮುದ್ರ ಕಳ್ಳರು ಮೌಚೂ ರಾಜವಂಶಾವಳಿಯ ಮೇಲೆ ಗೆರಿಲ ಕಾಳಗ ಮಾಡಿದಾಗ ಎರಡು ಕೋಟಿ ಜನರು ಮಡಿದರು. ಐರ್ಲೆಂಡಿನ ಸ್ವರಾಜ್ಯ ಚಳವಳಿಯಲ್ಲಿ ಡೀ ವಲೇರನ ಗೆರಿಲಗಳು ಬ್ರಿಟಿಷರನ್ನು ನರಳಾಡಿಸಿ ಭೀಕರ ಕೃತ್ಯಗಳನ್ನು ನಡೆಸಿದರು. ಲೆನಿನ್ನನ ಬೋಲ್‍ಷೆವಿಕ್ ಕ್ರಾಂತಿಯಲ್ಲಿ ಸೋವಿಯತ್ ಗೆರಿಲಗಳು ಉಗ್ರವಾಗಿ ಹೋರಾಡಿದರು. ಮಾವೋತ್ಸೆಡುಂಗನ ಗೆರಿಲಗಳು ಜಪಾನಿ ಆಕ್ರಮಿಗಳನ್ನೂ ಚಿಯಾಂಗ್–ಕೈ–ಷೆಕ್‍ನ ಸೇನೆಯನ್ನೂ ಓಡಿಸಿಬಿಟ್ಟರು.

ಜರ್ಮನರು ರಷ್ಯವನ್ನು ಮುತ್ತಿದಾಗ ರಷ್ಯನ್ ಗೆರಿಲಗಳು ಜರ್ಮನ್ ಸೈನಿಕರಂತೆಯೂ ಹಳ್ಳಿಗಾಡಿನವರಂತೆಯೂ ವೇಷಬದಲಿಸುತ್ತ ಶತ್ರುಗಳ ಕಣ್ಣಿಗೆ ಮಣ್ಣೆರಚಿ ಮೂರು ಲಕ್ಷ ಜರ್ಮನರನ್ನು ಕೊಂದರು. 500 ವಿಮಾನ, ಸಾವಿರಾರು ಮೋಟರ್ ವಾಹನಗಳಿಗೆ ಗುಂಡಿಕ್ಕಿದರು. 3,000 ರೈಲುಗಳನ್ನು ಉರುಳಿಸಿದರು. 3,300 ಸೇತುವೆಗಳನ್ನು ಮುರಿದರು. 1,200 ಟ್ಯಾಂಕ್, 4.030 ಲಾರಿ, 895 ಮಳಿಗೆಗಳನ್ನು ಹಿಡಿದರು. ಪೈರುಗಳು, ಧಾನ್ಯದವಸಗಳು ಶತ್ರುಗಳಿಗೆ ಸಿಕ್ಕದಂತೆ ಸುಟ್ಟುಬಿಟ್ಟರು. ಜಗತ್ತಿನಲ್ಲಿ ಅತ್ಯಂತ ದೊಡ್ಡದಾದ, ಹತ್ತು ಲಕ್ಷ ಅಶ್ವಸಾಮರ್ಥ್ಯ ವಿದ್ಯುಚ್ಛಕ್ತಿ ಉದ್ಭವಿಸುತ್ತಿದ್ದ, ನೀಸರ್ ಅಣೆಕಟ್ಟನ್ನು ನಾಶಮಾಡಿದರು. ಡಾನ್‍ನದಿಯ ಏರಿಗಳನ್ನು ಕೆಡವಿ ದೇಶವನ್ನು ನೀರಿನ ಪ್ರವಾಹದಿಂದ ಹಾವಳಿ ಮಾಡಿದರು. ಭಾರತ, ಆಫ್ರಿಕಗಳಲ್ಲಿ ಬ್ರಿಟಿಷರ ಮೇಲೆ, ಮೊರಾಕೋದಲ್ಲಿ ಫ್ರೆಂಚರು ಸ್ಪೇನಿನವರ ಮೇಲೆ ಬಾಲ್ಕನ್‍ನಲ್ಲಿ ತುರ್ಕಿಯವರು ಆಸ್ಟ್ರೋಹಂಗರಿಯನ್ನರ ಮೇಲೆ ಗೆರಿಲ ಯುದ್ಧಗಳಾದವು. ವರ್ಜೀನಿಯದಲ್ಲಿ ಹತ್ತು ಲಕ್ಷ ಶತ್ರುಗಳು ಮಡಿದರು. ಗ್ರೀಸ್, ಬಲ್ಗೇರಿಯ, ರೊಮೇನಿಯ, ಇಂಡೊನೇಷ್ಯ, ಮಯನ್ಮಾರ್, ಮಲಯ, ಥೈಲೆಂಡ್, ಆಲ್ಜೀರಿಯ, ಲೇ ಆಸ್, ಕೊರಿಯಗಳಲ್ಲಿ ಗೆರಿಲ ಪ್ರಾಬಲ್ಯವಿತ್ತು. ಕೀನ್ಯದಲ್ಲಿ ಮಾವ್–ಮಾವ್, ಫಿಲಿಪೀನ್ಸ್‍ನಲ್ಲಿ ಹೂಕ್, ವಿಯೆಟ್ನಾಂನಲ್ಲಿ ವಿಯೆಟ್ ಕಾಂಗ್ ಚಳವಳಿಗಳು ಘೋರವಾಗಿದ್ದವು. ಮೊಳೆಗಳಿರುವ ಹಲಗೆಗಳನ್ನು ಮಾರ್ಗಗಳಲ್ಲಿಟ್ಟು ಶತ್ರುಗಳ ಮೋಟರ್ ಟೈರ್‍ಗಳನ್ನು ಚುಚ್ಚಿಸುವುದು; ಹಾದಿಗಳಲ್ಲಿ ಎಣ್ಣೆಸುರಿದು ಶತ್ರುಗಳನ್ನು ಬೀಳಿಸುವುದು; ಹ್ಯಾಂಡ್ ಗ್ರೆನೇಡ್, ಬಾಂಬುಗಳನ್ನು ಗುಂಪುಗಳಿಗೆಸೆಯುವುದು, ಮನುಷ್ಯರನ್ನು ಕದ್ದುಕೊಂಡು ಹೋಗುವುದು; ಗುಪ್ತವಧೆ ಮುಂತಾದ ಭಯೋತ್ಪಾದಕ ಕೃತ್ಯಗಳು ನಡೆದವು. ಧೀರ ಸ್ತ್ರೀಯರೂ ಗೆರಿಲಗಳಾದರು. ಸೈಪ್ರಸ್‍ನಲ್ಲಿ ಜನರಲ್ ಗ್ರಿವಾಸ್, ಯೂಗೋಸ್ಲಾವಿಯದಲ್ಲಿ ಮಾರ್ಷಲ್ ಟಿಟೋ, ಬೋಲೀವಿಯದಲ್ಲಿ ಗ್ವೆವಾರ್, ವಿಯೆಟ್ನಾಂನಲ್ಲಿ ಹೋಚಿಮಿನ್, ಕ್ಯೂಬದಲ್ಲಿ ಕ್ಯಾಸ್ಟ್ರೋ–ಇವರ ಅದ್ಭುತ ಗೆರಿಲಾ ಸಾಹಸಗಳು ಲೋಕವನ್ನು ಬೆರಗುಗೊಳಿಸಿದವು. (ಎಂ.ಜಿ.ಕೆ.ಎಂ.)

**ಕಿರು ಚಿತ್ರಣ :** ಸಣ್ಣ ಪ್ರಮಾಣದಲ್ಲಿ ವರ್ಣಚಿತ್ರಗಳನ್ನು ನಿರೂಪಿಸುವ ಕಲೆಯೇ ಕಿರುಚಿತ್ರಣ (ಮಿನಿಯೇಚರ್ ಪೇಂಟಿಂಗ್). ಸಾಮಾನ್ಯವಾಗಿ ಕಿರುಚಿತ್ರಗಳಿಗೆ ವ್ಯಕ್ತಿಗಳೇ ವಸ್ತುಗಳಾಗಿರುವ ಕಾರಣದಿಂದ ಇದನ್ನು ವ್ಯಕ್ತಿಚಿತ್ರಣದ (ಪೋರ್ ಟ್ರೇಚರ್) ಒಂದು ಪ್ರಕಾರವೆಂದು ಭಾವಿಸುವುದುಂಟು. ಆದರೆ ಇದು ಸರಿಯಲ್ಲ. ಪ್ರಕೃತಿದೃಶ್ಯಗಳನ್ನು

ಕಿನ್ನರ : ರೂವಾನ್‍ವೇಲಿ, ಅನುರಾಧಪುರ (ಶ್ರೀಲಂಕ)

ಕಿರುಚಿತ್ರಣದಲ್ಲಿ ರೂಪಿಸುವ ಪದ್ಧತಿ ಪ್ರಾಚೀನ ಭಾರತ ಮತ್ತು ಜಪಾನುಗಳಲ್ಲಿ ರೂಢಿಯಲ್ಲಿತ್ತು. ಆದರೆ ಅಲಂಕರಣ ಪಟ್ಟಿಕೆಗಳ ಅಂಗವಾಗಿ ಆದರೂ ಸ್ವತಂತ್ರವಾಗಿ ಚಿತ್ರಿತವಾದ ವರ್ಣಚಿತ್ರಗಳೂ ಈ ಗುಂಪಿಗೆ ಸೇರಬಹುದಾಗಿವೆ. ಈ ಶೈಲಿಗೆ ಪೂರ್ವರಂಗವಾಗಿ ಪ್ರಾಚೀನ ಕಾಲದ ತಾಳಪತ್ರ ಗ್ರಂಥಗಳಲ್ಲಿ ಬಿಡಿಸುತ್ತಿದ್ದ ಚಿತ್ರಗಳಿದ್ದುವು; ಲೋಹಪದಕಗಳ

ಅಜಂತ ಮೊದಲನೆಯ ಗುಹೆಯಲ್ಲಿನ ಚಿತ್ರ

ಮೇಲೆ, ನಾಣ್ಯಗಳ ಮೇಲೆ ಮೂಡಿಸುತ್ತಿದ್ದ ವ್ಯಕ್ತಿಚಿತ್ರಗಳಿದ್ದುವು. ಕುಷಾಣರ ಕಾಲದಲ್ಲೇ ಬುದ್ಧ, ಶಿವ, ಸ್ಕಂಧ ಮುಂತಾದ ದೇವತೆಗಳ ಚಿತ್ರಗಳನ್ನು ಹೊತ್ತ ಸಣ್ಣ ನಾಣ್ಯಗಳು ಚಲಾವಣೆಯಲ್ಲಿದ್ದುವು. ಜೈನರ ಕಲ್ಪಸೂತ್ರಗಳಲ್ಲಿ ತೀರ್ಥಂಕರರ, ಜಿನರ, ಮುನಿಗಳ ಚಿತ್ರಗಳಲ್ಲದೆ ಹಲವಾರು ಪ್ರಸಂಗಗಳೂ ನಿರೂಪಿತವಾಗಿವೆ. ಪರ್ಷಿಯನ್ ಗ್ರಂಥಗಳನ್ನೂ ಕಿರುಚಿತ್ರಗಳನ್ನು ಬಿಡಿಸುವ ಪದ್ಧತಿಯಿದ್ದಿತು. ಹೀಗೆ ಪೂರ್ವಕಾಲದಲ್ಲಿ ಅಲಂಕರಣಕ್ಕಾಗಿ, ಉಲ್ಲೇಖಕ್ಕಾಗಿ ಮೂಡಿಸುತ್ತಿದ್ದ ಕಿರು ಚಿತ್ರಣಗಳು ಕಾಲಕ್ರಮದಲ್ಲಿ ವಿಶಿಷ್ಟ ಸ್ಥಾನವನ್ನು

ಪಡೆದುವು. ಪ್ರಾಚೀನ ಭಾರತದಲ್ಲಿ ಅಜಂತದಲ್ಲಿ ಕೆಲವು ಕಿರುಚಿತ್ರಣಗಳು ರಚಿತವಾಗಿವೆ. ಇವುಗಳಲ್ಲಿ ಪ್ರಾಣಿ, ವ್ಯಕ್ತಿ, ಪಕ್ಷಿ, ಪುಷ್ಪ, ಫಲಗಳನ್ನು ಚಿತ್ರಿಸಲಾಗಿದೆ. ಸಿಂಹಳದಲ್ಲೂ ಇಂಥ ಕೆಲವು ಚಿತ್ರಗಳು ರಚಿತವಾಗಿದ್ದರೂ ಅವುಗಳ ಕಾಲವನ್ನು ನಿರ್ದಿಷ್ಟವಾಗಿ ತಿಳಿಸಲಾಗುವುದಿಲ್ಲ. ಇವಲ್ಲದೆ ಭಾರತದ ಚಿತ್ರಕಲೆಯಲ್ಲಿ ಇಂಥ ಕಿರುಚಿತ್ರಣಗಳು ಅನೂಚಾನವಾಗಿ ನಡೆದುಬಂದಿದ್ದರೂ ಹಲವಾರು ಕಾರಣಗಳಿಂದ ಬಹಳಷ್ಟು ನಾಶವಾಗಿವೆ. 11 ನೆಯ ಶತಮಾನದಲ್ಲಿ ಬಂಗಾಲದ ಪಾಲವಂಶದ ರಾಜರ ಆಶ್ರಯದಲ್ಲಿ ರಚಿತವಾದ ತಾಳೆ ಗರಿಯ ಹಸ್ತಪ್ರತಿಗಳ ಮೇಲಿನ ಚಿತ್ರಗಳನ್ನು ಇಲ್ಲಿ ಹೆಸರಿಸಬಹುದು. 12 ರಿಂದ 14 ನೆಯ ಶತಕಗಳಲ್ಲಿ ಪಶ್ಚಿಮ ಭಾರತದಲ್ಲಿ ತಾಳೆಗರಿಗಳ ಹಸ್ತ ಪ್ರತಿಗಳ ಮೇಲೇ ಪುನಃ ತಲೆದೋರುತ್ತವೆ. 15 ನೆಯ ಶತಕದಲ್ಲಿ ತಾಳೆ ಗರಿಯ ಬದಲು ಅದರ ಆಕಾರದಲ್ಲಿ ಕತ್ತರಿಸಿದ ಕಾಗದದ ಮೇಲೆ ಈ ಚಿತ್ರಣಗಳು ರಚಿತವಾಗುತ್ತಿದ್ದು, ಕಾಲ ಕ್ರಮದಲ್ಲಿ ರಜಪೂತ ಚಿತ್ರಕಲೆಗೆ ಕಾರಣವಾದುವು. 16–17ನೆಯ ಶತಮಾನಗಳಲ್ಲಿ ರಾಜಸ್ಥಾನ, ಬುಂದೇಲ ಖಂಡ, ಪಂಜಾಬ್, ಹಿಮಾಲಯ ಮತ್ತು ಕಾಶ್ಮೀರಗಳಲ್ಲಿ ವಿಶೇಷವಾಗಿದ್ದ ಭಾಗವತ ಮತ್ತಿತರ ಪುರಾಣದೃಶ್ಯಗಳ ಚಿತ್ರಗಳಲ್ಲಿ ಕಿರುಚಿತ್ರಣಗಳೂ ಹೆಚ್ಚು ಸಂಖ್ಯೆಯಲ್ಲಿವೆ.

ಥಾಮಸ್–ಫ್ರ್ಯಾಂಕ್‌ಲ್ಯಾಂಡ್ : ಎಸ್. ಕೂಪರನ ಚಿತ್ರ

15ನೆಯ ಶತಮಾನದಲ್ಲಿ ಸಾದಿಯ ಬುಸ್ತನ್ ಎಂಬ ಪರ್ಶಿಯನ್ ಗ್ರಂಥದ ಪ್ರತಿಯೊಂದರಲ್ಲಿ ಹೆರಾತ್ ಶಾಖೆಗೆ ಸಂಬಂಧಿಸಿದ ಕಿರುಚಿತ್ರಗಳಿವೆ. ಇಬ್ಬರು ಸಂತರು ಸಂಧಿಸುವ ದೃಶ್ಯವನ್ನು ಸ್ವಾರಸ್ಯವಾಗಿ ನಿರೂಪಿಸಿರುವ ಚಿತ್ರವೊಂದು ಪ್ರಸಿದ್ಧವಾಗಿದೆ. ಕಿರುಚಿತ್ರಗಳ ಸಂಪ್ರದಾಯ ಪರ್ಶಿಯ ದೇಶದಲ್ಲಿ ಮೊದಲಿಗೆ ಅವತರಿಸಿ ಕಾಲಕ್ರಮದಲ್ಲಿ ಭಾರತಕ್ಕೆ ಬಂದಿತು ಎಂಬ ವಾದವಿದೆ. ಜೈನರ ತಾಳಕಾಚಾರ್ಯ ತಾಳಗ್ರಂಥದಲ್ಲಿ ಈ ಸಂಪ್ರದಾಯ ಆರಂಭವಾಯಿತೆಂದರೆ ಉತ್ಪ್ರೇಕ್ಷೆಯಲ್ಲ. ಮೊಗಲ್ ಕಾಲದ ಕಿರುಚಿತ್ರಗಳು ಜಗತ್ಪ್ರಸಿದ್ಧವಾಗಿವೆ. ರಾಜರ, ಅಧಿಕಾರಿಗಳ, ಶ್ರೀಮಂತರ ನೈಜಮೂರ್ತಿಗಳನ್ನು ಸೊಗಸಾದ, ಸೂಕ್ಷ್ಮವಾದ ವರ್ಣವಿನ್ಯಾಸದಲ್ಲಿ ನಿರ್ಮಿಸಿದ ಸಾವಿರಾರು ನಿದರ್ಶನಗಳು ಇಂದಿಗೂ ಉಳಿದಿವೆ. ಇದು ರಾಜಪುತ್ರರ ಆಸ್ಥಾನಗಳಲ್ಲಿ (ಜಯಪುರ, ಉದಯಪುರ, ಗ್ವಾಲಿಯರ್), ತಂಜಾವೂರು ನಾಯಕರ ಆಶ್ರಯದಲ್ಲಿ, ಮೊಗಲ್ ಸಾಮಂತರ ಸನ್ನಿಧಿಗಳಲ್ಲಿ ವಿಶೇಷವಾಗಿ ಬೆಳೆಯಿತು. ಹದಿನಾರನೆಯ ಶತಮಾನದಲ್ಲಿ ಸಿದ್ಧವಾದ ಗೀತ ಗೋವಿಂದ, ಭಾಗವತಪುರಾಣ ಮುಂತಾದ ಗ್ರಂಥಗಳಲ್ಲಿಯೂ ಕಿರುಚಿತ್ರಗಳನ್ನು ಮೂಡಿಸುವ ಪದ್ಧತಿ ಬಂದಿತು. ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಸಿದ್ಧವಾದ ನೂರಾರು ಕಿರುವ್ಯಕ್ತಿ ಚಿತ್ರಗಳು ಮೈಸೂರಿನ ಜಗನ್ಮೋಹನ ಚಿತ್ರಶಾಲೆಯಲ್ಲಿವೆ. ಮುಮ್ಮಡಿ ಕೃಷ್ಣರಾಜ ಒಡೆಯರು ಯದುರಾಜರ ಸಂತತಿಯನ್ನು ನಿರೂಪಿಸುವ ವಂಶಾಂಬುಜವೆಂಬ ವಂಶವೃಕ್ಷವನ್ನು ಬರೆಸಿ ಅದರಲ್ಲಿ ತಮ್ಮ ಪೂರ್ವಜರ ಚಿತ್ರಗಳನ್ನೆಲ್ಲ ಅಳವಡಿಸಿದ್ದಾರೆ.



ಶ್ರೀಮತಿ ಆಸ್ಲಿ : ಎಸ್. ಕೂಪರನ ಮತ್ತೊಂದು ಕೃತಿ

ಹೊರದೇಶಗಳಲ್ಲಿ ಶ್ರೀಮಂತರು ತಮಗೆ ಬೇಕಾದವರ ವ್ಯಕ್ತಿ ಚಿತ್ರಗಳನ್ನು ಬರೆಸಿ ಅವನ್ನು ತಮ್ಮ ಕೊರಳಿನಲ್ಲಿ ಪದಕಗಳಂತೆ ಧರಿಸುವ ಸಂಪ್ರದಾಯವಿದ್ದಿತು. ಲಾಕೆಟುಗಳು, ಮೆಡಲ್‌ಗಳು, ಪಾಕ್‌ಗಳು, ಇವುಗಳಿಗೆ ಅಡಕವಾಗಿ ಕಿರುಚಿತ್ರಗಳು ಕಾಣಿಸಿಕೊಂಡವು. ವರ್ತುಲಾಕಾರದ ಕಿರುಚಿತ್ರಗಳ ಶೈಲಿ ಹೀಗೆ ಮೊದಲಾಯಿತು. ಬ್ರಿಟನಿನಲ್ಲಿ ಈ ಶೈಲಿಗೆ

ಕಾಗದದ ಮೇಲಿನ ಕಿರುಚಿತ್ರ : ಗುಜರಾತ್

ವಿಶೇಷವಾದ ಪುರಸ್ಕಾರ ದೊರೆಯಿತು. ಇಲ್ಲಿ ಜರ್ಮನ್–ಸ್ವಿಸ್ ಜನಾಂಗದವನಾದ ಹಾನ್ಸ್ ಹೋಲ್ಬೇನ್ ಕಿ ಎಂಬಾತ ಸೃಷ್ಟಿಸಿರುವ ಕಿರುಚಿತ್ರಗಳು ಜಗತ್ತಿನ ಕಲಾಕೃತಿಗಳಲ್ಲೇ ಶ್ರೇಷ್ಠವೆಂದು ಪರಿಗಣಿತವಾಗಿವೆ. ಹದಿನಾರನೆಯ ಶತಮಾನದಲ್ಲಿದ್ದ ಬ್ರಿಟಿಷ್ ಜನಾಂಗದ ನಿಕೊಲಸ್

ತಾಳೆ ಓಲೆಯ ಮೇಲಿನ ವರ್ಣಚಿತ್ರ : ಪಾಲ ಶೈಲಿ

ಹಿಲಿಯರ್ಡ್ (1547–1619) ಕೂಡ ಉತ್ತಮ ಕಿರುಚಿತ್ರಗಾರ. ಮೂರನೆಯ ವಯಸ್ಸಿನಲ್ಲೇ ಈ ಕಲೆಯನ್ನು ಕೈವಶಮಾಡಿಕೊಂಡ ಈತ ಹಲವು ಶೈಲಿಗಳನ್ನು ಸೇರಿಸಿ ರಮ್ಯವಾದ ಅಲಂಕರಣಗಳಿಂದ ಕೂಡಿದ ಸಹಜವ್ಯಕ್ತಿ ಚಿತ್ರಗಳನ್ನು ಕಿರುಪ್ರಮಾಣದಲ್ಲಿ ಬಿಡಿಸಿದ್ದಾನೆ. ಎಲಿಜಬೆತ್‌ರಾಣಿಯದೇ ಒಂದು ಕಿರುಚಿತ್ರವಿದೆ. ಹಿಲಿಯರ್ಡನ ಶಿಷ್ಯ ಒಲಿವರ್ ಕೂಡ ಉತ್ತಮ ಕಿರುಚಿತ್ರಕಾರ. ಮುಂದಿನ ತಲೆಮಾರಿನಲ್ಲಿ ಸ್ಯಾಮ್ಯುಅಲ್ ಕೂಪರ್ ಈ ಕಲೆಯನ್ನು

ತುಂಬ ಜನಪ್ರಿಯವನ್ನಾಗಿ ಮಾಡಿದ. ಹೀಗೆ ಉಜ್ವಲವಾಗಿ ಬೆಳೆದ ಕಲೆ ಸರ್ ವಿಲಿಯಂರಾಸ್ (1794–1860) ಎಂಬ ಕಲಾವಿದನ ಕಾಲದವರೆಗೂ ನಿಂತು. ಅನಂತರ ಕಳೆಗುಂದಿತು. ಛಾಯಾಚಿತ್ರದ ಉಗಮದಿಂದ ಕಿರುಚಿತ್ರಗಳಿಗೆ ಪ್ರಾಶಸ್ತ್ಯ ತಪ್ಪಿತು.

ಕಿರುಚಿತ್ರಗಳನ್ನು ದಂತದ ಹಲಗೆಗಳ ಮೇಲೆ ಮೂಡಿಸುವುದು ಕಷ್ಟಸಾಧ್ಯವಾದ ಕಲೆ. ನುಣುಪಾದ ಮೈಮೇಲೆ ವರ್ಣಗಳು ನಿಲ್ಲುವುದಿಲ್ಲ; ನೀರಿನಲ್ಲಿ ಕಲೆಸಿದ ಬಣ್ಣಗಳು ಉಳಿಯುವಂತೆ ಮಾಡಲು ವಿಶೇಷವಾದ ವಿಧಾನವನ್ನು ಮೊಗಲ್ ಕಲಾವಿದರು

ಅಜಂತ ಮೊದಲನೆಯ ಗುಹೆಯಲ್ಲಿನ ಚಿತ್ರಗಳು

ಕಂಡುಹಿಡಿದು ಪ್ರಯೋಗ ಮಾಡಿದರು. ಇವರಿಂದಾಗಿ ದಂತ ಕಿರುಚಿತ್ರಗಳು ಹೆಚ್ಚು ಪ್ರಚಲಿತವಾದುವು. ಪಾಶ್ಚಾತ್ಯದೇಶದಲ್ಲಿ ಸು. 18ನೆಯ ಶತಮಾನದಲ್ಲಿ ಈ ಕಲೆಗೆ ಪುರಸ್ಕಾರ ದೊರೆಯಿತು. ಇಟಲಿದೇಶದ ಮಹಿಳೆ ರೋಸಲ್ಬಾ ಕೆರೀರಾ (1675–1757) ಈ ಕ್ಷೇತ್ರದಲ್ಲಿ ತುಂಬ ದುಡಿದಳು. ಹದಿನೆಂಟನೆಯ ಶತಮಾನದ ಪರಾರ್ಧದಲ್ಲಿ ಬ್ರಿಟನ್

ಯಕ್ಷ : ರೊವಾನ್‌ವೇಲಿ, ಅನುರಾಧಪುರ, (ಶ್ರೀಲಂಕ)

ದೇಶದ ಉತ್ತಮ ಕಲೆಗಾರರಾಗಿದ್ದ ಜಾನ್ ಸ್ಮಾರ್ಟ್(1741–1811), ಜಾರ್ಜ್ ಎಂಜಲ್‌ಹಾರ್ಟ್(1750–1829), ರಿಚರ್ಡ್ ಕೊಸ್ವೆ (1742–1821) ಮುಂತಾದವರು ಈ ದಂತಕಿರುಚಿತ್ರಕಲೆಯನ್ನು ನಿರ್ಮಿಸಿದ. ಭಾರತದಲ್ಲಿ ಬಹುಕಾಲದಿಂದ ಇರುವ ಈ ಕಲೆಯನ್ನು ಅಭ್ಯಾಸಮಾಡಿ ಸಿದ್ಧಿಸಿಕೊಂಡವರೆಂದರೆ ಕೆ. ವೆಂಕಟಪ್ಪ. ಇವರು ದಂತದ ಸಣ್ಣಹಲಗೆಗಳ ಮೇಲೆ ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ತಮ್ಮ ಗುರು ಅವನೀಂದ್ರನಾಥಠಾಕೂರರ ಚಿತ್ರಗಳನ್ನು ಅತ್ಯಂತ ಸುಂದರವಾಗಿ, ಅದ್ಭುತವರ್ಣ ವಿನ್ಯಾಸದಲ್ಲಿ ಬಿಡಿಸಿದ್ದಾರೆ.

ಪ್ರಾಚೀನಕಾಲದ ಸಂಸ್ಕೃತಿಗಳಿಗೆ ಸೇರಿದ ಮಣ್ಣಿನ ಕಲಶಗಳ ಮೇಲೆ ಅನೇಕ ದೇಶಗಳವರು ಕಿರುಚಿತ್ರಗಳನ್ನು ಮೂಡಿಸುತ್ತಿದ್ದರು. ಭಾರತದ ಪ್ರಾಚೀನ ಸಂಸ್ಕೃತಿಗಳಿಗೆ ಸೇರಿದ ಮಣ್ಣುಪಾತ್ರೆಗಳ ಮೇಲೆ ಇಂಥ ವರ್ಣಚಿತ್ರ ಅನೇಕವಾಗಿವೆ. ಮಧ್ಯಯುಗದಲ್ಲಿ ಚೀನ, ಜಪಾನ್‌ಗಳಲ್ಲಿ ಕುಡಿಯುವ ಬಟ್ಟಲುಗಳ ಮೇಲೆ, ಬಡಿಸುವ ತಟ್ಟೆಗಳ ಮೇಲೆ, ಹೂವಿಡುವ ಕೂಜಗಳ ಮೇಲೆ ಚಿತ್ರಗಳನ್ನು ಬಿಡಿಸುವ ಕಲೆಯನ್ನು ಮುಗಿಲು ಮುಟ್ಟಿಸಿದರು. ಇದಕ್ಕಾಗಿಯೇ ಮಣ್ಣನ್ನು ಹದಮಾಡಿಕೊಳ್ಳುತ್ತಿದ್ದರು. ಈಗ ಚೀನ ಮಣ್ಣು ಎಂದು ಪ್ರಖ್ಯಾತವಾಗಿರುವ ಪದಾರ್ಥದ ಮೇಲೆ ಚಿತ್ರಗಳನ್ನು ಬಿಡಿಸದಿದ್ದರೆ ಅದೊಂದು ನ್ಯೂನತೆಯೆನ್ನುವಷ್ಟು ಈ ಮಣ್ಣಿಗೂ ಚಿತ್ರಣಕ್ಕೂ ಬಾಂಧವ್ಯ ಬೆಳೆಯಿತು. ಹದಿನೇಳನೆಯ ಶತಮಾನದಿಂದಾಚೆ ಲೋಹಗಳ ಮೇಲೂ ಕಿರು ಚಿತ್ರಗಳನ್ನು ಮೂಡಿಸುವ ಶೈಲಿ ಆರಂಭವಾಯಿತು. ಎನ್ಯಾಮಲ್ ಕಿರುಚಿತ್ರಗಳು ಪ್ರಚಲಿತವಾದವು. ಫ್ರೆಂಚ್ ಕಲಾವಿದ ಜೆ. ಪಿಟಿಟೊ (1607–91) ಮತ್ತು ಜರ್ಮನ್ ದೇಶೀಯನಾದ ಸಿ.ಎಫ್. ಸಿಂಕೆ (1683–1767) ಇವರು ವಿಶ್ವವಿಖ್ಯಾತರಾದ ಎನ್ಯಾಮಲ್ ಕಿರುಚಿತ್ರಗಾರರು.

1770–1840ರ ವರೆಗೆ ಐರೋಪ್ಯ ದೇಶಗಳಲ್ಲಿ ಕಿರುಪ್ರಮಾಣದ ಛಾಯಾಚಿತ್ರಗಳೂ (ಮಿನಿಯೇಚರ್ ಸಿಲ್ಹೌಟ್ಸ್) ತುಂಬ ಜನಪ್ರಿಯವಾಗಿದ್ದವು. ಇವನ್ನು ಬಡವರ ಕಿರುಚಿತ್ರಗಳೆಂದು ಬಣ್ಣಿಸುತ್ತಿದ್ದರು. ಕಾರಣವೇನೆಂದರೆ ಬಲು ಬೇಗ, ಕಡಿಮೆಬೆಲೆಯಲ್ಲಿ ಬೀದಿಯಲ್ಲೇ ಕಲಾವಿದರು ಈ ಚಿತ್ರಗಳನ್ನು ಬಿಡಿಸಿಕೊಡುತ್ತಿದ್ದರು. ಫ್ರೆಂಚ್ ಸರ್ಕಾರದ ಆರ್ಥಿಕ ಮಂತ್ರಿಯಾಗಿದ್ದ ಡೀ ಸಿಲ್ಹೌಟ್ಸ್ ತುಂಬ ಜಿಪುಣನಾಗಿದ್ದು ಇಂಥ ಚಿತ್ರಗಳನ್ನೇ ಮನೆ ತುಂಬ ಅಲಂಕಾರಕ್ಕಾಗಿ ಇಟ್ಟಿದ್ದುದರಿಂದ ಈ ಚಿತ್ರ ಶೈಲಿಗೆ ಅವನ ಹೆಸರೇ ಬಂದಿತು. ಹತ್ತೊಂಬತ್ತನೆಯ ಶತಮಾನದ ಆಗಸ್ಟಿನ್ ಎಡ್ವುಅರ್ಟ್ ಈ ಛಾಯಾ ಕಿರುಚಿತ್ರ ಕ್ಷೇತ್ರದಲ್ಲಿ ದೊಡ್ಡ ಕಲೆಗಾರನಾಗಿದ್ದ. ಫೋಟೋಗ್ರಫಿ ಬಳಕೆಗೆ ಬಂದಾಗ ಈ ಛಾಯಾಚಿತ್ರಗಳು ಹಿಂದುಳಿದವು.

ವ್ಯಕ್ತಿಯನ್ನು ಕಲೆಯಲ್ಲಿ ಸ್ಥಿರಗೊಳಿಸಲು ಕಿರುಚಿತ್ರಗಳನ್ನು ಬರೆಯುವವರೆಂದ ಮೇಲೆ, ವ್ಯಕ್ತಿನಿರ್ದೇಶಕ್ಕಿಂತ ಹಿನ್ನೆಲೆಯಲ್ಲಿರುವ ಮನೋಧರ್ಮ ಪ್ರಮುಖವಾಗುತ್ತದೆ. ವ್ಯಕ್ತಿಯ ಬಾಹ್ಯ ಸ್ವರೂಪವೇ ಮುಖ್ಯವೆಂದು ನಮ್ಮವರು ಎಣಿಸಲಿಲ್ಲ. ಚಿತ್ರಣದಲ್ಲಿ ಮೂಡಿ ಬರಬೇಕಾದುದು ಆ ವ್ಯಕ್ತಿಯ ಸ್ವಭಾವ, ಸಂಕೇತ, ಪಾತ್ರ. ನಿದರ್ಶನಕ್ಕೆ ಜೈನರ ಗ್ರಂಥವಾದ ಕಲ್ಪಸೂತ್ರದ ಪ್ರತಿಗಳಲ್ಲಿ ಹಲವಾರು ಜೈನಮುನಿಗಳ, ಸಾಧುಗಳ ಕಿರುಚಿತ್ರಗಳಿವೆ, ರಾಜರ ಚಿತ್ರಣಗಳೂ ಇವೆ. ಸ್ಥೂಲ ವಿವರಗಳಲ್ಲಿ ಎಲ್ಲ ಮುನಿಗಳೂ ಒಂದೇ ತೆರನಾಗಿದ್ದಾರೆ, ಎಲ್ಲ ರಾಜರೂ ಒಂದೇ ತೆರನಾಗಿದ್ದಾರೆ. ಮುಖದ ಮಾಟ. ಮೈಯ ರೇಖೆಯಿಂದ ವ್ಯಕ್ತಿಯನ್ನು ನಿರೂಪಿಸುವ ಸಂಕಲ್ಪ ಇಲ್ಲಿ ಇಲ್ಲ; ಸಂದರ್ಭವನ್ನು ಅರಿತು ಅದರ ಬಲದಿಂದ ಆಯಾಯಾ ವ್ಯಕ್ತಿಗಳನ್ನು ನಿರ್ದೇಶಿಸಬೇಕೆಂಬ ಆಗ್ರಹ ಇಲ್ಲಿ ಕಾಣುತ್ತದೆ. ಕಿರುಚಿತ್ರಣ ಸಹಜಪ್ರತಿಕೃತಿಗಳಾಗಿರಬೇಕೆಂಬ ದೃಷ್ಟಿ ಅರ್ವಾಚೀನವಾದುದು. ಈಗ ಕಿರುಚಿತ್ರವೆಂದರೆ ಯಥಾರ್ಥವಾದ ಸ್ವರೂಪ ನಿರೂಪಣೆಯೆಂದೇ ಅರ್ಥ. ಇದೇ ಕಾರಣದಿಂದ ಛಾಯಾಚಿತ್ರ ಕಲೆಯಾಗಿ ಪ್ರಬುದ್ಧವಾದೊಡನೆ ಕಿರುಚಿತ್ರಗಳ ಪ್ರಚಾರ ಕುಗ್ಗಿತು.

ಪರ್ಷಿಯನ್ ಗ್ರಂಥಗಳಲ್ಲಿ ವ್ಯಕ್ತಿಚಿತ್ರಣದ ಹವ್ಯಾಸವಿಲ್ಲದಿದ್ದುದರಿಂದ ಅಕ್ಷರ ವಿನ್ಯಾಸದೊಂದಿಗೆ (ಕ್ಯಾಲಿಗ್ರಫಿ) ಲತಾವಿನ್ಯಾಸ, ಪುಷ್ಪವಿನ್ಯಾಸಗಳನ್ನೂ ಮೂಡಿಸುತ್ತಿದ್ದರು. ಇಂಥ ಅಲಂಕರಣಗಳಲ್ಲಿ ಕೂಡ ಪ್ರಕೃತಿ ಸಹಜವಾಗಿರಬೇಕೆಂಬ ನಿಷ್ಠೆ ಕಾಣಿಸುವುದಿಲ್ಲ. ಇಲ್ಲಿ ಕಲ್ಪನಾತಂತ್ರದ ವಿನ್ಯಾಸಗಳೇ ಹೆಚ್ಚು, ಸೂಕ್ಷ್ಮ ಪರಿಧಿಯೊಳಗೆ ವ್ಯಕ್ತಿಯನ್ನೋ ಸಂದರ್ಭವನ್ನೋ ನಿರೂಪಿಸುವುದು ಸುಲಭ ಸಾಧ್ಯವಲ್ಲ. ರೇಖೆಗಳಲ್ಲಿಯೇ ಸ್ವಭಾವವನ್ನು ನಿರ್ದೇಶಿಸುವುದು ಕಷ್ಟ. ವಿವರಗಳನ್ನು ನೈಜವಾಗಿ ಬಿಡಿಸಬೇಕೆಂದರೆ ಅವಕಾಶವಿರಬೇಕು. ಈ ಎಲ್ಲ ಕಾರಣಗಳಿಂದಾಗಿ ಕಿರುಚಿತ್ರಗಳಲ್ಲಿ ಘನದೃಷ್ಟಿಯಿರದೆ ಸಂಕೇತ ಪ್ರಮುಖವಾದ ದೃಷ್ಟಿ ಕಾಣಬರುತ್ತದೆ. ಇದಕ್ಕೆ ಅತ್ಯುತ್ತಮ ನಿದರ್ಶನವೆಂದರೆ ಟಿಬೆಟನ್ ಗ್ರಂಥಗಳಲ್ಲಿ ಮತ್ತು ಸ್ಕ್ರೋಲ್ ಚಿತ್ರಗಳಲ್ಲಿ ಪ್ರತೀತ್ಯ ಸಮುತ್ಪಾದತತ್ತ್ವದ ವಿವಿಧ ಪ್ರಕಾರಗಳನ್ನು ಚಿತ್ರಿಸಿರುವ ಬಗೆ. ಅವರ ಮತ್ತು ಚೀನದೇಶದ ಮಂಡಲ ನಿರೂಪಣೆಗಳಲ್ಲಿಯೂ ಕಿರುಚಿತ್ರಗಳು ಇವೆ. ಇತ್ತೀಚೆಗೆ ಮೈಸೂರಿನ ರಘುಪತಿಭಟ್, ಶ್ರೀಹರಿ ಮತ್ತು ಮೈಸೂರಿನ ಮಹಿಳೆಯೊಬ್ಬರು ಈ ಕಲೆಯಲ್ಲಿ ತಮ್ಮ ಪ್ರತಿಭೆಯನ್ನು ತೋರಿದ್ದಾರೆ. (ಎಸ್.ಕೆ.ಆರ್.)

**ಕಿರುನಾಟಕ :** ಕಿರುನಾಟಕವೆಂದರೆ ನಾಟಕಕ್ಕಿಂತ ಚಿಕ್ಕದು; ಆದರೆ ಏಕಾಂಕ ನಾಟಕಕ್ಕಿಂತ ದೊಡ್ಡದು (ಷಾರ್ಟ್ ಪ್ಲೇ). ಏಕಾಂಕ ನಾಟಕವು ಕಿರುನಾಟಕವು ಹುಟ್ಟಿ ಬೆಳೆದು ರೂಢಿಗೆ ಬಂದ ಮೇಲೆ ಹಿಂದಿನಿಂದಲೂ ಇದ್ದ ನಾಟಕಕ್ಕೆ ಹೊಸದಾಗಿ ಪೂರ್ತಿ ಉದ್ದದ ನಾಟಕ (ಫುಲ್‌ಲೆಂತ್ ಪ್ಲೇ) ಅಥವಾ ಪೂರ್ಣ ನಾಟಕ ಎಂಬ ಅಂಕಿತವನ್ನು ಅಂಟಿಸುವ ವಿದ್ಯಮಾನ ನಡೆಯಿತು. ಆದರೆ ಹಾಗೆ ಮಾಡುವುದಕ್ಕೆ ಯಾವ ಅಗತ್ಯವೂ ಇರಲಿಲ್ಲ. ಪ್ರಾಚೀನರ ಶಿಷ್ಟ ನಾಟಕವಾಗಲಿ ಹೊಸ ಹುಟ್ಟಿನವರ ರೊಮ್ಯಾಂಟಿಕ್ ನಾಟಕವಾಗಲಿ

ನವಶಿಷ್ಟತೆಯ ನಾಟಕವಾಗಲಿ ಹತ್ತೊಂಬತ್ತನೆಯ ಶತಮಾನದ ಕಾವ್ಯ ರೂಪಕವಾಗಲಿ ಅವಕ್ಕೆ ನಿರ್ದಿಷ್ಟ ಪರಿಪುಷ್ಟಿ ಇದ್ದೇ ಇದೆ. ನಾಟಕಕ್ಕೆ ಐದು ಅಂಕ ಇರತಕ್ಕದು ಎಂಬುದು ನಾಟಕಕಾರರ ಬಳಕೆಯ ಸೂತ್ರ. ಐದಂಕ ಕೂಡಿದ್ದರೇ ನಾಟಕ ಎಂಬುದು ಆ ಸೂತ್ರದ ಅನುಮೇಯ. ಇಬ್ಸನ್ ಬಂದ ಮೇಲೆ ನಾಟಕಕ್ಕೆ ನಾಲ್ಕು ಅಂಕಗಳೇ ಸಾಕು ಎಂಬ ಅಭಿಪ್ರಾಯ ಬಲಗೊಂಡಿತು. ನಿಜವಾಗಿ ನಾಟಕಕ್ಕೆ ಅನುರೂಪವಾದ ವಿಸ್ತಾರವನ್ನು ನಿರ್ಣಯಿಸುವುದು ಘಟನೆಗಳು; ಘಟನಾವಳಿಗಳ ಸಮರ್ಪಕ ಸಂಖ್ಯೆ. ಅದು ಅತಿ ಎನ್ನಿಸಬಾರದು, ಚಿಕ್ಕದು ಎನ್ನಿಸಲೂಬಾರದು. ಇನ್ನೊಂದು ದೃಷ್ಟಿಯಿಂದ ಸುಮಾರು ಎರಡೂವರೆ ಅಥವಾ ಮೂರು ಘಂಟೆಗಳ ಕಾಲವನ್ನು ಯಾವ ಕೃತಿ ತನ್ನ ರಂಗಾಭಿನಯಕ್ಕೆ ನ್ಯಾಯವಾಗಿ ಬೇಡುತ್ತದೋ ಅದೇ ಪೂರ್ಣ ನಾಟಕ, ಸಮಗ್ರ ನಾಟಕ ಅಥವಾ ಸುಮ್ಮನೆ ಹೇಳುವುದಾದರೆ ನಾಟಕ.

ಏಕಾಂಕ ನಾಟಕ ಅರ್ಥ ಸ್ವಯಂವೇದ್ಯ. ಅದು ನಾಟಕದ ಐದನೆಯ ಒಂದು ಭಾಗದಷ್ಟರ ಪರಿಮಿತಿಯಲ್ಲಿ ಅಡಕವಾದ, ಸಂಪೂರ್ಣ ಸ್ವತಂತ್ರವಾದ ಜಾತಿಗೆ ಸೇರುತ್ತವೆ.

ಅದೇ ತೆರನ ನಿರ್ದೇಶನ ವಾಕ್ಯ ಕಿರುನಾಟಕಕ್ಕೂ ಸ್ಥೂಲವಾಗಿ ಸಲ್ಲುತ್ತದೆ. ಏಕಾಂಕದ ಎರಡರಷ್ಟು ಅದರ ಗರಿಷ್ಠ ಪರಿಮಿತಿ; ನಾಟಕದ ಅರ್ಧದಷ್ಟು ವರಿಷ್ಠ ಪರಿಮಿತಿ. ಇದು ಗಣಿತ ರೀತಿಯ ಲೆಕ್ಕಚಾರವಲ್ಲ. ಸಾಹಿತ್ಯ ಕೇಳುವ ವಿಷಯ ವಿವರಣೆ. ಕಿರುನಾಟಕದ ಕಥಾವಸ್ತುವಿನ ಪೂರ್ಣ ನಿರೂಪಣೆಗೆ ಎರಡೋ ಮೂರೋ ಅಂಕ ಸಾಕಾಗಬೇಕು. ಕಡಿಮೆಯಾದರೆ ಏಕಾಂಕವೋ ಕಿರುನಾಟಕವೋ ಎಂಬ ಸಂಶಯ ಏಳುತ್ತದೆ. ಹೆಚ್ಚಾದರೆ ತಕ್ಕ ನಾಟಕವಾಗಿ ರಚನೆಗೊಳ್ಳಲಿಲ್ಲ ಎಂಬ ಆಕ್ಷೇಪಣೆ ಏಳುತ್ತದೆ. ಶೂರ್ಪನಖಿಯ ನಾಸಚ್ಛೇದನ ಪ್ರಸಂಗ, ರಾಮನ ಪರಿಹಾಸದ ಪ್ರಸಂಗ ಮುಖ್ಯವಾದಲ್ಲಿ ಅದು ಏಕಾಂಕ ನಾಟಕಕ್ಕೆ ಮಾತ್ರ ಬರುತ್ತದೆ. ರಾಮ ಸುಗ್ರೀವ ಸಖ್ಯದ ವೃತ್ತಾಂತದಲ್ಲಿ ಅವರಿಬ್ಬರಿಗೂ ಹೆಚ್ಚು ಕಡಿಮೆ ಸರಿ ಸಮಾನಾದ ಪಾತ್ರವಿದೆಯಲ್ಲದೆ ಹನುಮಂತನಿಗೂ ಜವಾಬ್ದಾರಿ ಕಾರ್ಯವಿದೆಯಾಗಿ ಅದು ಕಿರುನಾಟಕವಾಗುವುದೇ ಒಳ್ಳೆಯದು.

ಯಾವ ಬಗೆಯ ಸಾಹಿತ್ಯ ಕೃತಿಯಾದರೂ ಏಕತೆ ಅದನ್ನು ಆಳುವ ರಾಜ ನಿಯಮ. ನಾಟಕದಲ್ಲಿಯೂ ಏಕತೆಯನ್ನು ಉಲ್ಲಂಘಿಸಿದರೆ ಹಾನಿ.

ಸು. 1920 ರಿಂದ ಈಚಿನ ಕಾಲ ಕಿರುನಾಟಕ ಅವಧಿಯಾಗಿಬಿಟ್ಟಿದೆ. ಶಾಲಾ ಕಾಲೇಜುಗಳೂ ವಿದ್ಯಾರ್ಥಿಗಳು ನಾಟಕಾಭಿನಯದಲ್ಲಿ ವಿಶೇಷ ಆಸಕ್ತಿಯುಳ್ಳ ಹವ್ಯಾಸಿಗಳೂ ಇತರ ಸಂಘಗಳೂ ಚಿಕ್ಕಚಿಕ್ಕ ನಾಟಕಗಳನ್ನಾಡಿ ಆಹ್ವಾನಿತ ನೋಟಕರ ಸಂತೋಷಕ್ಕೆ ಮನೋರಂಜನೆ ಒದಗಿಸುವ ಪದ್ಧತಿ ವಿಪುಲವಾಗಿ ಹಬ್ಬಿ ಹರಡಿದೆ. ನೂರಾರು ಸಾವಿರಾರು ಕಿರುನಾಟಕಗಳು ತಯಾರಾಗುತ್ತಿವೆ. ಅವುಗಳಲ್ಲಿ ಅನೇಕ ಸಂಖ್ಯೆಯವು ಒಂದೆರಡು ದಿನವಿದ್ದು ಮಾಯವಾಗುವ ಕ್ಷಣಿಕ ಮಾದರಿಯವು. ಆದರೆ ಅವುಗಳಲ್ಲಿ ಕೆಲವಾದರೂ ಉಜ್ವಲ ಸಂಭಾಷಣೆ, ಬಿಗಿಯಾದ ಕಥಾಸಂಯೋಜನೆ, ಕಾತರವೆಬ್ಬಿಸಿ ಇಳಿಸಿ ಸಾಗುವ ಕಲಾತಂತ್ರ, ಅನಿರೀಕ್ಷಿತ ತಿರುಗಣೆ, ಬಿಕ್ಕಟ್ಟು, ಅಚ್ಚರಿ ಅಂತ್ಯ ಮುಂತಾದ ಕ್ರಮಗಳೆಲ್ಲವನ್ನೂ ಒಳಗೊಂಡು ನಿಜವಾಗಿ ನಾಟಕೀಯವಾಗಿ ಶಾಶ್ವತ ಸಾಹಿತ್ಯದ ಭಂಡಾರಕ್ಕೆ ಸೇರುವಂಥವಾಗಿವೆ.

ಕಿರುನಾಟಕದ ವಿಸ್ಮಯಕರ ಅಭಿವೃದ್ಧಿಗೆ ನಾಟಕದ ಕ್ಷೀಣತೆಯೂ ಒಂದು ಕಾರಣ. ಪ್ರಬಲ ಎದುರಾಳಿಯಾದ ಚಲನಚಿತ್ರದಿಂದ ನಾಟಕ ಕಂಗೆಟ್ಟಿದೆ. ಪ್ರದರ್ಶನಕ್ಕೆ ಸಜ್ಜಾದ ನಾಟಕ ಕಲೆ, ನುರಿತ ನಟವರ್ಗ, ಶಕ್ತಸಾಹಿತಿ, ನಿರ್ದೇಶಕರು ಮುಂತಾದ ದುಬಾರಿ ಸಲಕರಣೆ ನಾಟಕಕ್ಕೆ ಬೇಕು, ಅಷ್ಟಿದ್ದರೂ ಪ್ರೇಕ್ಷಕರು ಸಮೂಹಗೂಡಿ ಬಂದು ನೋಡಿ ನಲಿಯುತ್ತಾರೆಂಬ ಭರವಸೆಯಿಲ್ಲ.

ಕಥಾವಸ್ತುವಿನ ವಿಚಾರದಲ್ಲಿ ಕಿರುನಾಟಕ ಸರ್ವಭಕ್ಷಕವಾಗಿದೆ, ವಾಸ್ತವ್ಯ, ಕಲ್ಪನೆ, ಚಿತ್ರಕಲ್ಪನೆ, ಸ್ವಪ್ನ ಯಾವುದರಿಂದ ಬೇಕಾದರೂ ಅದಕ್ಕೆ ವಿಷಯ ಸಾಮಗ್ರಿ ದೊರಕಬಹುದು.

ಸ್ವಂತಿಕೆ, ವೈಶಿಷ್ಟ್ಯ ಮೊದಲಾದುವನ್ನು ಮೆರೆಯುವುದಕ್ಕೆ ಸಾಹಿತಿಗೆ ಕಿರುನಾಟಕದಲ್ಲಿ ಹೇರಳವಾದ ಅವಕಾಶವಿದೆ. ಬೊಂಬೆಯಾಟದ ಪಂಚ್ ಪಾತ್ರ, ಷೇಕ್ಸ್‌ಪಿಯರನ ಹ್ಯಾಮ್ಲೆಟ್, ಎಂಟನೆಯ ಹೆನ್ರಿಯ ಆರನೆಯ ಹೆಂಡತಿ, ರಣರಂಗದ ಒಂದು ರಾತ್ರಿ, ಯಾವುದು ತಾನೇ ಕಿರುನಾಟಕಕ್ಕೆ ರುಚಿಯಾಗಲಾರದು!

ಕಿರುನಾಟಕದ ವ್ಯಾಪ್ತಿ ದಿನದಿನಕ್ಕೆ ಹೆಚ್ಚುತ್ತಿದೆ. ಸು. 20 ನಿಮಿಷದಿಂದ 40–50 ನಿಮಿಷ ಕಾಲವನ್ನು ಪ್ರದರ್ಶನಕ್ಕೆ ತೆಗೆದುಕೊಳ್ಳುವ ಸಮಸ್ತ ಕೃತಿಗಳೂ ಕಿರುನಾಟಕವೆಂದೇ ಈಚಿನ ಭಾವನೆ. ಹಿಂದಿನ ಯುಗಗಳ ಸಣ್ಣ ರೂಪಕ ಕೃತಿಗಳಿಗೂ ಅದೇ ಹೆಸರನ್ನು ಸಮಾಧಾನದಿಂದ ಅನ್ವಯಿಸಲಾಗಿದೆ. ನೀತಿ ನಾಟಕ, ಇಂಟರ್ ಲ್ಯೂಡ್, ಪ್ರಹಸನ ಕೂಡ ಕಿರುನಾಟಕವೆಂಬ ವಿಭಾಗಕ್ಕೆ ಸೇರಿವೆ. ಏಕಾಂತ ನಾಟಕವೂ ಈಗ ಕಿರುನಾಟಕವೇ. ಒಂದೇ ನಾಟಕವನ್ನು ಕೆಲವಾರು ಏಕಾಂಕ ನಾಟಕವೆಂದು ಕರೆದರೆ ಇತರ ಕೆಲವರು ಕಿರುನಾಟಕವೆಂದು ಕರೆದಿದ್ದಾರೆ.

ಕನ್ನಡದಲ್ಲಿ ಕೈಲಾಸಂ, ಕುವೆಂಪು, ಬೇಂದ್ರೆ, ಕೈವಾರ ರಾಜರಾವ್, ಶ್ರೀರಂಗ ರಾಶಿ, ನಾ ಕಸ್ತೂರಿ, ಪರ್ವತವಾಣಿ, ಕ್ಷೀರಸಾಗರ ಕೆ. ಗುಂಡಣ್ಣ ಮೊದಲಾದವರ ಅನೇಕ ಕಿರುನಾಟಕಗಳು ಜನಪ್ರಿಯವಾಗಿವೆ (**ನೋಡಿ– ಉಪನಾಟಕಗಳು–ಏಕಾಂಕ–ನಾಟಕ**).

(ಎಸ್.ವಿ.ಆರ್.)

**ಕಿರುನಿದರ್ಶನ ಸಿದ್ಧಾಂತ :** ಒಂದು ಸಂಖ್ಯಾಕಲನ ನಿದರ್ಶನದಿಂದ (ಸ್ಟ್ಯಾಟಿಸ್ಟಿಕಲ್ ಸ್ಯಾಂಪಲ್) ಲೆಕ್ಕ ಹಾಕಿ ತೆಗೆದ ನಿದರ್ಶಜ (ಸ್ಟ್ಯಾಟಿಸ್ಟಿಕ್). ಅರ್ಥವತ್ತಾಗಿ ಇದೆಯೇ ಎಂದು ಪರೀಕ್ಷಿಸಲು ನಿದರ್ಶನದ ಗಾತ್ರ ಹಿರಿದಾಗಿದ್ದಾಗ ನಿದರ್ಶನದ ಶಿಷ್ಟದೋಷವನ್ನು (ಸ್ಟ್ಯಾಂಡರ್ಡ್ ಎರ್ರರ್) ಬಳಸುವುದು ರೂಢಿ. ಏಕೆಂದರೆ ಹಿರಿಯ ನಿದರ್ಶನಗಳಲ್ಲಿ ನಿದರ್ಶಜಗಳ ವಿತರಣೆ ಪ್ರಸಾಮಾನ್ಯವಾಗಿರುವುದು (ನಾರ್ಮಲ್) ಅಥವಾ ಸರಿಸುಮಾರು ಪ್ರಸಾಮಾನ್ಯವಾಗಿರುವುದು (ಅಪ್ರಾಕ್ಸಿಮೇಟ್‌ಲಿ ನಾರ್ಮಲ್). ಈ ಪರೀಕ್ಷಣಗಳಲ್ಲಿ ಕೆಲವು ಕಸುವಿನದಾಗಿ ಇರುತ್ತವೆ. ಅಂದರೆ ಪರೀಕ್ಷಣ ನಿದರ್ಶಜದ ವಿತರಣೆ ಪ್ರಸಾಮಾನ ವಿತರಣೆಯಿಂದ ಅತಿದೂರವಾಗಿದ್ದರೂ ಪರೀಕ್ಷಣಕ್ಕೆ ಯಾವ ಕುಂದೂ ಉಂಟಾಗುವುದಿಲ್ಲ. ಆದರೆ ಕಿರುನಿದರ್ಶನಗಳಲ್ಲಿ (ಸ್ಮಾಲ್ ಸ್ಯಾಂಪಲ್ಸ್) ನಿದರ್ಶಜದ ವಿತರಣೆ ಪ್ರಸಾಮಾನ್ಯ ವಿತರಣೆಯಿಂದ ಬಹುಶಃ ಭಿನ್ನವಾಗಿರುವುದು. ಅಲ್ಲದೆ ಕಿರುನಿದರ್ಶನಗಳಿಂದ ಪಡೆಯುವ ಪ್ರಾಚಲದ (ಪ್ಯರಾಮೀಟರ್) ಅಂದಾಜು ಸಹ ಅನೇಕ ವೇಳೆ ವಿಶ್ವಾಸಾರ್ಹವಾಗಿರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಶಿಷ್ಟದೋಷವನ್ನು ಬಳಸುವುದು ಅಷ್ಟು ಸಮರ್ಪಕವಾಗಿರುವುದಿಲ್ಲ. ಆದ ಕಾರಣ ಕಿರುನಿದರ್ಶನಗಳಿಗೆ ಅನ್ವಯವಾಗುವ ಬೇರೆ ಒಂದು ಸಿದ್ಧಾಂತವನ್ನೇ ನಿರ್ಮಿಸಬೇಕಾಗುವುದು. ವಿವಿಧ ನಿದರ್ಶಜಗಳ ನಿಷ್ಕೃಷ್ಟವಾದ ವಿತರಣೆಗಳನ್ನು ಕಂಡುಹಿಡಿದು ಅವುಗಳ ಆಧಾರದ ಮೇಲೆ ಉಪಯುಕ್ತವಾದ ಪರೀಕ್ಷಣಗಳನ್ನು ರೂಪಿಸಬೇಕಾಗುವುದು.

**ಕಿರುನಿದರ್ಶನಗಳಿಂದ ಮಧ್ಯಕ (ಮೀನ್) ಮತ್ತು ವಿಚಲನೆಯ (ವೇರಿಯೆನ್ಸ್) ಅಂದಾಜು:** ಮಧ್ಯಕ $\mu$ ಮತ್ತು ವಿಚಲನೆ $\sigma^2$ ಇರುವ ಒಂದು ಸಂಖ್ಯಾಕಲನ ಸಮಷ್ಟಿ ಅಥವಾ ವಿಶ್ವದಿಂದ ಯಾದೃಚ್ಛಿಕವಾಗಿ ಆರಿಸಿ ತೆಗೆದ $n$ಗಾತ್ರದ ನಿದರ್ಶನದ ಮಧ್ಯಕ ಆಗಿದ್ದರೆ ಇದರ ವಿತರಣೆಯ ಮಧ್ಯಕ $\mu$ ಮತ್ತು ವಿಚಲನೆ $\sigma^2/n$ ಇರುವುವೆಂಬುದು ತಿಳಿದ ಸಂಗತಿ. ನಿದರ್ಶನ ಹಿರಿಯದಾಗಲಿ ಕಿರಿಯದಾಗಲಿ ಮೂಲವಿಶ್ವ ಪ್ರಸಾಮಾನ್ಯವಾಗಿದ್ದರೂ ಇಲ್ಲದಿದ್ದರೂ ಈ ಫಲಿತಾಂಶ ಸತ್ಯವಾಗಿರುವುದು. ದತ್ತವಿಶ್ವ ಪ್ರಸಾಮಾನ್ಯವಾಗಿದ್ದರೆ ನಿದರ್ಶನ ಮಧ್ಯಕ (ಸ್ಯಾಂಪಲ್ ಮೀನ್) ಪ್ರಸಾಮಾನ್ಯ ವಿತರಣೆಯನ್ನು (ನಾರ್ಮಲ್ ಡಿಸ್ಟ್ರಿಬ್ಯೂಷನ್) ಹೊಂದಿರುವುದು.

ನಿದರ್ಶನದ ಮಧ್ಯಕದಿಂದ ನಿದರ್ಶನದ ಬಿಡಿಬೆಲೆಗಳ ಅಂತರಗಳನ್ನು ವರ್ಗಮಾಡಿ ಕೂಡಿಸಿ ಬಂದ ಮೊತ್ತಕ್ಕೆ ನಿದರ್ಶನದ ವರ್ಗ ಸಂಕಲನ (ಸಮ್ ಆಫ್ ಸ್ಕ್ವೇಯರ್ಸ್ ಆಫ್ ಸ್ಯಾಂಪಲ್ಸ್) ಎಂದು ಹೆಸರು. ಅಂದರೆ ವರ್ಗಸಂಕಲನ = $\sum(X_i - \bar{X})^2$ , ಸಂಕಲನ ಪ್ರತಿಕ್ರಿಯೆ ನಿದರ್ಶನದ ಎಲ್ಲ ಬೆಲೆಗಳನ್ನು ಒಳಗೊಂಡಿರುವುದು. $n$ನ ಬೆಲೆ ಹಿರಿದಾಗಿದ್ದ ಹೊರತು ನಿದರ್ಶನದ ವಿಚಲನೆ $S_2 = \frac{1}{n}\sum(x_i - \bar{x})^2$ ವಿಶ್ವದ ವಿಚಲನೆಯ ಅನಭಿನತ (ಅನ್‌ಬಯಸ್ಡ್) ಅಂದಾಜಾಗುವುದಿಲ್ಲ. ಈಗ $S^2$ ಎಂಬ ನಿದರ್ಶಜವನ್ನು ಈ ಕೆಳಗಿನಂತೆ ವ್ಯಾಖ್ಯಿಸುತ್ತೇವೆ :

$$(n-1)s^2 = \sum_{i=1}^{n}(x_i - \bar{x})^2 = nS^2$$

ವಿಶ್ವ ವಿಚಲನೆ $\sigma^2$ ವನ್ನು ಈ ನಿದರ್ಶಜ $s^2$ ದಿಂದ ಅನಭಿನತವಾಗಿ ಅಂದಾಜು ಮಾಡಬಹುದು. ಅಂದರೆ $E(s^2) = \sigma^2$ ಇಲ್ಲಿ $E$ ಎಂಬುದು ಗಣಿತೀಯ ನಿರೀಕ್ಷೆಯನ್ನು ಸಂಕೇತಿಸುತ್ತದೆ. ಪ್ರಸಾಮಾನ್ಯ ವಿತರಣೆಯ ಮೇರೆಗೆ $x_i$ ಗಳು ಹರಹುತ್ತವೆ ಆದ್ದರಿಂದ ಮಧ್ಯಕ 0 ಮತ್ತು ವಿಚಲನೆ $\sigma^2$ ಉಳ್ಳ ಪ್ರಸಾಮಾನ್ಯ ವಿತರಣೆಯಂತೆ $y_i$ ಗಳು ಹರಹುತ್ತವೆ ಮತ್ತು $y_i$ ಗಳು ಪರಸ್ಪರ ಸ್ವತಂತ್ರವಾಗಿರುವುವು. ಆದ್ದರಿಂದ $Y_i^2/\sigma^2$ ಬೇರೆ ಬೇರೆ ಸ್ವತಂತ್ರವಾಗಿ ಸ್ವಾತಂತ್ರ್ಯಾಂಕ (ಡಿಗ್ರೀಸ್ ಆಫ್ ಫ್ರೀಡಂ) 1 ಉಳ್ಳ $x^2$ ದಂತೆ ಹರಹಿರುತ್ತವೆ; ಮತ್ತು $\sum_{i=2}^{n} y^2/\sigma^2$ ಸ್ವಾತಂತ್ರ್ಯಾಂಕ ($n$-1) ಉಳ್ಳ $x^2$ ವಿತರಣೆಯಂತೆ ಹರಹಿರುತ್ತದೆ. n—1=v ಎಂದು ಆದೇಶಿಸಲಾಗಿ $nS^2/\sigma^2 = v\ c^2/\sigma^2$ ಆಗುವುದು. ಆದ್ದರಿಂದ $v\ c^2/\sigma^2$ ಸ್ವಾತಂತ್ರ್ಯಾಂಕರಣ $r^2$ ಉಳ್ಳ $x^2$ ವಿತರಣೆಯಂತೆ ಹರಹಿದೆ ಎಂಬುದಾಗಿ ನಿರೂಪಿಸಬಹುದು.

ಈ ಫಲವನ್ನು ತಳಹದಿಯನ್ನಾಗಿ ಇಟ್ಟುಕೊಂಡು ನಿದರ್ಶನವನ್ನು ಒದಗಿಸಿದ ವಿಶ್ವವನ್ನು ಕುರಿತ ಆಧಾರಕಲ್ಪನೆಯ (ಹೈಪಾಥಿಸಿಸ್) ಪರೀಕ್ಷಣ ನಡೆಸಲು ಕೆಲವು ಸಂದರ್ಭಗಳಲ್ಲಿ ಸಾಧ್ಯವಾಗುವುದು. ವಿವರ್ತದ (ವೇರಿಯೆಟ್) ನಿದರ್ಶನ ಬೆಲೆಗಳಿಂದ $x^2$ ವಿತರಣೆಯಂತೆ ಹರಹಿರುವ ಯಾವುದಾದರೂ ನಿದರ್ಶಜವನ್ನು ಗಣನೆ ಮಾಡಲು ಸಾಧ್ಯವಾಗುವಂಥ ಆಧಾರಕಲ್ಪನೆಯಿದ್ದರೆ ಇದು ಸಾಧ್ಯ. ದೃಷ್ಟಾಂತಕ್ಕೆ ಯಾದೃಚ್ಛಿಕ ನಿದರ್ಶನದ 10 ಬೆಲೆಗಳಿಂದ ವಿಶ್ವವಿಚಲನೆಯ ಅಂದಾಜು $s^2$=10.5 (ಸೆಂಮೀ)$^2$ ಎಂದು ಲೆಕ್ಕಮಾಡಲಾಗಿದೆ. ಹಾಗಾದರೆ 6.5 (ಸೆಂಮೀ)$^2$ ವಿಚಲನೆಯುಳ್ಳ ವಿಶ್ವದಿಂದ ದತ್ತನಿದರ್ಶನ ಹುಟ್ಟಿದೆಯೆಂದು ನಾವು ಗ್ರಹಿಸಬಹುದೆ? ಇದು ಸಮಂಜಸವೆಂದು ಅನಿಸುತ್ತದೆಯೇ? ಇದರ ಉತ್ತರವನ್ನು ಪಡೆಯಲು ನಾವು ಹೀಗೆ ತರ್ಕಿಸುತ್ತೇವೆ. ದತ್ತ ನಿದರ್ಶನದ ವರ್ಗಸಂಕಲನ $9 \times 10.5 = 94.5$; ದತ್ತ ಆಧಾರಕಲ್ಪನೆಯ ಮೇರೆಗೆ $\sigma^2$ = 6.5. ಆದ್ದರಿಂದ ಮೇಲಿನ ಸಂಕಲನದಲ್ಲಿ ಕಂಡುಬರುವ $(x_i - \bar{x})$ ವಿವರ್ತಗಳು ಸ್ವತಂತ್ರವಲ್ಲ; $\Sigma(x_i - \bar{x})=0$ ಎಂಬ ನಿರ್ಬಂಧಕ್ಕೆ ಒಳಪಟ್ಟಿವೆ. ಅಂದರೆ ಸ್ವತಂತ್ರವಾದ ವಿವರ್ತಗಳು (*n*-1) ಅಷ್ಟೇ ಇರುವುವು. ಇದಕ್ಕೆ $\Sigma(x_i - \bar{x})^2$ ವರ್ಗಸಂಕಲನಕ್ಕೆ ಸಂಬಂಧಿಸಿದ ಸ್ವಾತಂತ್ರ್ಯಾಂಕ (ಡಿಗ್ರೀಸ್ ಆಫ್ ಫ್ರೀಡಂ) ಎಂದು ಹೆಸರು. ವಿಚಲನ $\sigma^2$ ವನ್ನು ಅನಭಿನತವಾಗಿ ಅಂದಾಜು ಮಾಡುವ $s^2$ ನಿದರ್ಶಜ (*n*-1) ಸ್ವಾತಂತ್ರ್ಯಾಂಕದ ಮೇಲೆ ನಿಂತಿದೆ ಎನ್ನುತ್ತೇವೆ.

ದತ್ತ ಸಂಖ್ಯಾಕಲನ ವಿಶ್ವ ಪ್ರಸಾಮಾನ್ಯವಾಗಿರುವುದೆಂದೂ ನಿದರ್ಶನ ಕಿರಿದಾಗಿರುವುದೆಂದೂ ಇಟ್ಟುಕೊಳ್ಳೋಣ. ಇದರಡಿ ಪ್ರತಿಪಾದಿಸಿರುವ ಫಲಿತಾಂಶಗಳು ನಿಷ್ಕೃಷ್ಟವಾದವು. ವಿಶ್ವದ ವಿತರಣೆ ಪ್ರಸಾಮಾನ್ಯದಿಂದ ಅನತಿದೂರವಾಗಿದ್ದಾಗ ಅನೇಕವೇಳೆ ಈ ಫಲಗಳು ಸ್ಥೂಲವಾಗಿ ಅಂದರೆ ಸರಿಸುಮಾರು ಸತ್ಯ.

***ಯಾದೃಚ್ಛಿಕ ನಿದರ್ಶನದ ವರ್ಗಸಂಕಲನದ ವಿತರಣೆ***: ನಿದರ್ಶನದ ಗಾತ್ರ *n* ಇದ್ದು ಸ್ವತಂತ್ರ ಅವೇಕ್ಷಣೆಗಳು $x_1, x_2$ ............., $x_n$. ಇರಲಿ ರೇಖೀಯ ಲಂಬಮಾನವಾದ (ಲೀನಿಯರ್ ಆರ್ಥಾಗೊನೆಲ್) ರೂಪಾಂತರದಿಂದ $x_i$ ಗಳನ್ನು $y_i$ ಗಳಿಗೆ ಪರಿವರ್ತಿಸಿ $y_1 = \bar{x}\sqrt{n}$ ಆಗುವಂತೆ ಮಾಡೋಣ. ಆಗ $\Sigma x_i^2 = \Sigma(x_i - \bar{x})^2 + n\bar{x}^2 = nS^2 + y_1^2$ ಆಗುವುದು.

ಆದ್ದರಿಂದ $nS^2 = \Sigma Y_i^2 - Y_1^2 = \sum_2^n y_i^2$

ಇದರಿಂದಾಗಿ $nS^2/\sigma^2 = \sum_{i=2}^{n} Y_i^2/\sigma^2$

ವಿಶ್ವದ ಮಧ್ಯಕವನ್ನು ಮೂಲಬಿಂದುವನ್ನಾಗಿಟ್ಟುಕೊಂಡರೆ ಮಧ್ಯಕ 0 ಮತ್ತು ವಿಚಲನೆ $\sigma^2$ ಉಳ್ಳ $x^2 = 94.5/6.5 = 14.54$. ಇದರ ಸ್ವಾತಂತ್ರ್ಯಾಂಕ 9 ಈಗ $x^2$ ದ ಬೆಲೆ 14.54 ಕ್ಕಿಂತ ಹೆಚ್ಚಾಗಿರುವ ಸಂಭಾವ್ಯತೆ 0.10 ಗಿಂತ ಅಧಿಕವಿರುವುದೆಂದು ಕೋಷ್ಟಕದ ಸಹಾಯದಿಂದ ತಿಳಿಯುತ್ತೇವೆ. ಅಂದರೆ ನಿದರ್ಶನ ಒದಗಿಸಿಕೊಟ್ಟಿರುವ $x^2$ ಬೆಲೆ ಅರ್ಥವತ್ತಾಗಿಲ್ಲ; ಎಂದರೆ ದತ್ತ ಆಧಾರಕಲ್ಪನೆಗೆ ಪ್ರತಿಕೂಲವಾಗಿ ಯಾವ ವಿಧವಾದ ಆಧಾರವೂ ಇರುವುದಿಲ್ಲ. ದತ್ತ ಆಧಾರಕಲ್ಪನೆಯನ್ನು ಒಪ್ಪುತ್ತೇವೆ.

***ಸ್ಟೂಡೆಂಟನ t ನಿದರ್ಶಜ ಮತ್ತು ಅದರ ವಿತರಣೆ*** :ಮಧ್ಯಕ $\mu$ ಮತ್ತು ವಿಚಲನೆ $\sigma^2$ ಉಳ್ಳ ಪ್ರಸಾಮಾನ್ಯ ವಿಶ್ವದಿಂದ ತೆಗೆದ *n* ಗಾತ್ರದ ಯಾದೃಚ್ಛಿಕ ನಿದರ್ಶನದ ಮಧ್ಯಕ $\bar{x}$ ಆಗಿದ್ದರೆ $(\bar{x}-\mu)$ ವಿವರ್ತ ಮಧ್ಯಕ 0 ಮತ್ತು ವಿಚಲನೆ $\sigma^2/n$ ಇರುವ ಪ್ರಸಾಮಾನ್ಯ ವಿತರಣೆಯಂತೆ ಹರಹಿರುವುದೆಂಬುದು ತಿಳಿದ ಸಂಗತಿ. ಈಗ. $u = \frac{\bar{x}-\mu}{\sigma/\sqrt{n}}$ ಎಂದು ಬರೆದರೆ *u* ಒಂದು ಶಿಷ್ಟ ಪ್ರಸಾಮಾನ್ಯ ವಿವರ್ತವಾಗಿರುವುದು. ಅಂದರೆ ಮಧ್ಯಕ 0 ಮತ್ತು ವಿಚಲನ 1 ಇರುವ ಪ್ರಸಾಮಾನ್ಯ ವಿತರಣೆಯಂತೆ *u* ಹರಹಿರುವುದು. ವಿಚಲನೆ $\sigma^2$ ಅಜ್ಞಾತವಾಗಿದ್ದರೆ ಅದರ ಸ್ಥಾನದಲ್ಲಿ ಅದರ ಅಂದಾಜು $s^2$ ವನ್ನು ಬಳಸಬೇಕಾಗುವುದು. ಇದರಿಂದ $t = \left(\frac{\bar{x}-\mu}{s}\right)\sqrt{n}$ ಎಂಬ ನಿದರ್ಶಜ ಲಭಿಸುವುದು. ಇದು ಪ್ರಸಾಮಾನ್ಯವಾಗಿ ಹರಹಿರುವುದಿಲ್ಲ. ಇದರ ವಿತರಣೆಯನ್ನು 1908 ರಲ್ಲಿ ಮೊತ್ತಮೊದಲು ಡಬ್ಲ್ಯೂ. ಎಸ್. ಗಾಸೆಟ್ ಎಂಬ ಐರ್ಲೆಂಡ್ ದೇಶದ ರಸಾಯನವಿಜ್ಞಾನಿ ಕಂಡುಹಿಡಿದು ಪ್ರಚುರಪಡಿಸಿದ. ಈತ ಅಲ್ಲಿಯ ಒಂದು ಸಾರಾಯಿ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ. ಸ್ಟೂಡೆಂಟ್ (ವಿದ್ಯಾರ್ಥಿ) ಎಂಬ ಅಜ್ಞಾತನಾಮವನ್ನು ತಳೆದು ಸಂಖ್ಯಾಕಲನ ಲೇಖನಗಳನ್ನು ಬರೆಯುತ್ತಿದ್ದ. ಈ ಕಾರಣದಿಂದ ಇದಕ್ಕೆ ಸ್ಟೂಡೆಂಟ್‌ನ *t* ಎಂದು ಹೆಸರಾಯಿತು. ನಿದರ್ಶನದ ವರ್ಗಸಂಕಲನ $\Sigma(x_i - \bar{x})^2$ ದ ಸ್ವಾತಂತ್ರ್ಯಾಂಕ *v* ಆಗಿದ್ದರೆ,

$$\frac{t^2}{v} = \frac{(\bar{x}-\mu)^2/(\sigma^2/n)}{nS^2/\sigma^2}$$

ಬಲಬದಿಯ ಅಂಶ ಸ್ವಾತಂತ್ರ್ಯಾಂಕ 1 ಇರುವ $x^2$ ವಿತರಣೆಯಂತೆ ಹರಹಿರುತ್ತದೆ, ಮತ್ತು ಬಲಬದಿಯ ಛೇದ ಸ್ವಾತಂತ್ರ್ಯಾಂಕ *v* ಇರುವ $x^2$ ವಿತರಣೆಯಂತೆ ಹರಹಿರುತ್ತದೆ. ಇವೆರಡೂ ಸ್ವತಂತ್ರ. ಆದ್ದರಿಂದ ಇವುಗಳ ನಿಷ್ಪತ್ತಿ $\frac{1}{2}$ ಮತ್ತು $\frac{1}{2}v$ ಪ್ರಾಚಲಗಳಿರುವ $\beta_2$ ವಿವರ್ತದಂತೆ ಹರಹಿರುತ್ತದೆ. ಆದಕಾರಣ $t^2$ ದ ಸಂಭಾವ್ಯತಾ ಸಾಂದ್ರತೆ (ಪ್ರಾಬಬಿಲಿಟಿ ಡೆನ್ಸಿಟಿ)

$$\frac{C(t^2)^{-\frac{1}{2}}}{(1+t^2v)^{(v+1)^2}}$$

ಇರುವುದು. ಇಲ್ಲಿಯ ಸ್ಥಿರಾಂಕ $C = \frac{1}{\sqrt{v.B(\frac{1}{2},\frac{1}{2v})}}$ , ಮತ್ತು $t^2$ ದ ಬೆಲೆ 0 ಯಿಂದ $\infty$ ವರೆಗೆ ಬದಲಾಗುತ್ತದೆ. ಇದರಿಂದ t ವಿತರಣೆ

$$dp = \frac{dt}{\sqrt{v}.B(\frac{1}{2},\frac{1}{2}v)(1+t^2/v)^{(v+1)^2}}(-\infty < t < \infty)$$

ಎಂದು ಸಾಧಿಸಬಹುದು. ಇದೇ ಸ್ವಾತಂತ್ರ್ಯಾಂಕ *v* ಉಳ್ಳ *t* ವಿತರಣೆಯಾಗುವುದು. ಈ ವಿತರಣೆ ಸಮಾಂಗವಾಗಿದೆ.

$t = \frac{\bar{x}-\mu}{s/\sqrt{n}}$ ಎಂದು ಬರೆದರೆ ಅಂಶ ಮಧ್ಯಕ 0 ಇರುವ ಪ್ರಸಾಮಾನ್ಯ ವಿತರಣೆಯಂತೆ ಹರಹಿರುವುದು; ಮತ್ತು ಛೇದ ಅಂಶದ ಶಿಷ್ಟದೋಷದ ಅಂದಾಜಾಗಿರುವುದು.

***t–ಪರೀಕ್ಷಣ*** : ಪ್ರಸಾಮಾನ್ಯ ಮೂಲವಿಶ್ವದ ಮಧ್ಯಕದ ಬೆಲೆ $\mu$ ಇರುವುದೆಂಬ ಅಭಿಗೃಹೀತ ಸಾಧುವೇ ಎಂಬುದನ್ನು ಅದರಿಂದ ತೆಗೆದ ಯಾದೃಚ್ಛಿಕ ನಿದರ್ಶನದಿಂದ ಪರೀಕ್ಷಿಸಲು *t* ಪರೀಕ್ಷಣ ಉಪಯುಕ್ತವಾಗಿರುವುದು. ನಿದರ್ಶನದಿಂದ $\bar{x}$ ಮತ್ತು $s^2$ ಗಳ ಬೆಲೆಗಳನ್ನು ಲೆಕ್ಕಹಾಕಿ $t = \frac{(\bar{x}-\mu)}{s}\sqrt{n}$ ಎಂಬ ನಿದರ್ಶಜವನ್ನು ಗಣಿಸುತ್ತೇವೆ. ಮಧ್ಯಕ $\mu$ ಉಳ್ಳ ಪ್ರಸಾಮಾನ್ಯ ವಿಶ್ವದಿಂದ ತೆಗೆದ ಯಾದೃಚ್ಛಿಕ ನಿದರ್ಶನದ *t* ಶುದ್ಧಬೆಲೆಯಲ್ಲಿ ಇದಕ್ಕಿಂತ ಹೆಚ್ಚಾಗಿರುವ *p* ಸಂಭವತೆಯನ್ನು ಕೋಷ್ಟಕದಿಂದ ನೋಡಿ ತಿಳಿಯುತ್ತೇವೆ. *p* ಯ ಬೆಲೆ 0.05 ಕ್ಕಿಂತ ಕಡಿಮೆ ಇದ್ದರೆ *t* ಯ ಬೆಲೆ ಅರ್ಥವತ್ತಾಗಿದೆ ಎನ್ನುತ್ತೇವೆ. 0.01 ಕ್ಕಿಂತ ಕಡಿಮೆ ಇದ್ದರೆ ಬಹಳ ಅರ್ಥವತ್ತಾಗಿದೆ ಎನ್ನುತ್ತೇವೆ; ಅರ್ಥವತ್ತಾದ ಬೆಲೆ ಎಂದರೆ ದತ್ತ ಆಧಾರಕಲ್ಪನೆ ಸತ್ಯವಿರುವಾಗ ಆ ಬೆಲೆಯ ಸಂಭಾವ್ಯತೆ ತೀರ ಕಡಿಮೆಯಾಗಿರಬೇಕು. ಹಾಗೆ ಕಡಿಮೆ ಇದ್ದಲ್ಲಿ ವಿಶ್ವದ ಮಧ್ಯಕ $\mu$ ಎಂಬ ಆಧಾರಕಲ್ಪನೆಯ ಬಗ್ಗೆ ಸಂಶಯ ಹುಟ್ಟುವುದು.

**ಅಂತರ ಅಂದಾಜು (ಇಂಟರ್ವಲ್ ಎಸ್ಟಿಮೇಷನ್):** ಈ ತತ್ತ್ವವನ್ನು ಬಳಸಿಕೊಂಡು ಮೂಲವಿಶ್ವದ ಅಜ್ಞಾತ ಮಧ್ಯಕ $\mu$ ವಿನ ಬೆಲೆಗೆ ಎಲ್ಲೆಕಟ್ಟನ್ನು ನಿರ್ಧರಿಸಬಹುದು. ಕೋಷ್ಟಕದಲ್ಲಿ ಕಾಣಿಸಿರುವ 0.05 ಮಟ್ಟದ *t* ಯ ಬೆಲೆಯನ್ನು $t_1$ ಎಂದು ಸೂಚಿಸಿದರೆ ವಿಶ್ವದ ಮಧ್ಯಕ $\mu$ ಈ ನಿಬಂಧನೆಯನ್ನು ಪಾಲಿಸಬೇಕು.

$$\frac{|x-\mu|\sqrt{n}}{s} < t_1$$

$\mu$ ವಿನ ಇಂಥ ಬೆಲೆಗೆ ದತ್ತ ನಿದರ್ಶನದ *t* ಬೆಲೆ ಅರ್ಥವತ್ತಾಗಿರುವುದಿಲ್ಲ. ಆದ್ದರಿಂದ $x-\frac{st_1}{\sqrt{n}}\angle\mu\angle\bar{x}+\frac{st_1}{\sqrt{n}}$ ಇರಬೇಕು. ಅಂದರೆ $\mu$ ವಿನ ಬೆಲೆ ಈ ಎರಡು ಎಲ್ಲೆಕಟ್ಟುಗಳ ನಡುವೆ ಇರಬೇಕು ಎಂದು 0.95 ಮಟ್ಟದ ಭರವಸೆಯಿಂದ ಹೇಳಬಹುದು. ಇದರಂತೆಯೇ 0.01 ಮಟ್ಟದ ಕೋಷ್ಟಕದ *t* ಬೆಲೆಯನ್ನು $t_2$ ಎಂದು ಸೂಚಿಸಿದರೆ $\mu$ ಎಲ್ಲೆಕಟ್ಟೆ 0.99 ಮಟ್ಟದ ಭರವಸೆಯಿಂದ $\bar{x}-\frac{st_2}{\sqrt{n}}<\mu<\bar{x}+\frac{st_2}{\sqrt{n}}$ ಎಂದು ಹೇಳಬಹುದು. ಈ ವಿಧಾನಕ್ಕೆ ಅಂತರ ಅಂದಾಜು ಅಥವಾ ಅವಧಿಯ ಅಂದಾಜು ಎಂದು ಹೆಸರು.

**ಎರಡು ನಿದರ್ಶನಗಳ ಮಧ್ಯಕಗಳ ಹೋಲಿಕೆ:** ಪರಸ್ಪರ ಸ್ವತಂತ್ರವಾದ $n_1$ ಮತ್ತು $n_2$ ಗಾತ್ರಗಳ ಎರಡು ಯಾದೃಚ್ಛಿಕ ನಿದರ್ಶನಗಳ ಮಧ್ಯಕಗಳು $\bar{x}_1$ ಮತ್ತು $\bar{x}_2$ ಇದ್ದರೆ ಈ ಮಧ್ಯಕಗಳ ವ್ಯತ್ಯಾಸ ಅರ್ಥವತ್ತಾಗಿದೆ ಎಂದು ಪರೀಕ್ಷಿಸಲು ಸಹ $t$ ವಿತರಣೆಯನ್ನು ಬಳಸಬಹುದು. ಎರಡು ನಿದರ್ಶನಗಳನ್ನೂ ಒಂದೇ ಪ್ರಸಾಮಾನ್ಯ ವಿಶ್ವದಿಂದ ಆರಿಸಿಕೊಂಡಿದ್ದೇವೆ ಎಂಬ ಆಧಾರಕಲ್ಪನೆಯನ್ನು ಪರೀಕ್ಷೆಗೊಳಗಾಗಿಸುತ್ತೇವೆ.

ಮಧ್ಯಕ $\mu$ ಮತ್ತು ವಿಚಲನೆ $\sigma^2$ ಇರುವ ಒಂದೇ ಪ್ರಸಾಮಾನ್ಯ ವಿಶ್ವದಿಂದಲೇ ಎರಡು ನಿದರ್ಶನಗಳೂ ಬಂದಿವೆಯಾದರೆ $_2$, $\bar{x}_2$ ಇವರೆಡೂ ಒಂದೇ ಮಧ್ಯಕ $\mu$ ಇರುವ ಪ್ರಸಾಮಾನ್ಯ ವಿತರಣೆಗಳಂತೆ ಹರಹಿರುತ್ತವೆ. ಮೊದಲನೆಯದರ ವಿಚಲನೆ $\sigma^2/n_1$ ಆಗಿಯೂ ಎರಡನೆಯದರ ವಿಚಲನೆ $6^2/n_2$ ಆಗಿಯೂ ಇರುವುದು. ನಿದರ್ಶನಗಳು ಪರಸ್ಪರ ಸ್ವತಂತ್ರವಾದ್ದರಿಂದ ($\bar{x}_2-\bar{x}_2$) ವ್ಯತ್ಯಾಸ ಮಧ್ಯಕದ ಬೆಲೆ 0 ಆಗಿಯೂ ವಿಚಲನೆ $\sigma^2\left(\frac{1}{n_1}+\frac{1}{n_2}\right)$ ಆಗಿಯೂ ಉಳ್ಳ ಪ್ರಸಾಮಾನ್ಯ ವಿತರಣೆಯಂತೆ ಹರಹಿದೆ ಎಂದು ತೀರ್ಮಾನಿಸಬಹುದು. ಈಗ

$\bar{x}$

$$u=\frac{\bar{x}_1-\bar{x}_2}{\sigma\sqrt{\frac{1}{n_1}+\frac{+1}{n_2}}}$$

ಎಂದಿಟ್ಟುಕೊಂಡರೆ *u* ಒಂದು ಶಿಷ್ಟ ಪ್ರಸಾಮಾನ್ಯ ವಿವರ್ತ ಎಂಬುದು ಸ್ಪಷ್ಟ. ಆದರೆ σ ದ ಬೆಲೆ ತಿಳಿಯದು. ಆದ್ದರಿಂದ ಈ ಫಲಿತಾಂಶವನ್ನು ಬಳಸಲಾಗುವುದಿಲ್ಲ. ದತ್ತ ನಿದರ್ಶನಗಳ ಅವೇಕ್ಷಣೆಗಳಿಂದ σ ವನ್ನು ಅಂದಾಜು ಮಾಡಬೇಕು, ದತ್ತ ನಿದರ್ಶನಗಳ ವಿಚಲನೆಗಳು $S_1^2$ ಮತ್ತು $S_2^2$ ಇದ್ದರೆ $S^2=(n^1S_1^2+n^2S_2^2)/v$ ಎಂಬುದು $\sigma^2$ ದ ಅನಭಿನತ ಅಂದಾಜಾಗಿರುವುದು. ಇಲ್ಲಿ $v=n_1+n_2-2$. ಹಾಗೂ $n_1s_1^2/\sigma^2$ ಎಂಬುದು *n*-1 ಸ್ವಾತಂತ್ರ್ಯಾಂಕದ $x^2$ ಮೇರೆಗೆ ಹರಹಿರುತ್ತದೆ ಮತ್ತು $n_2S_2^2/\sigma^2$ ಎಂಬುದು ($n_2$-1) ರ ಸ್ವಾತಂತ್ರ್ಯಾಂಕದ $x^2$ ಮೇರೆಗೆ ಹರಹಿರುತ್ತದೆ. ಇವೆರಡೂ ಸ್ವತಂತ್ರವಾಗಿರುವುದರಿಂದ $(n^1S_1^2+n^2S_2^2)]\sigma^2$ ಎಂಬುದು *v* ಸ್ವಾತಂತ್ರ್ಯಾಂಕವುಳ್ಳ $x^2$ ಮೇರೆಗೆ ಹರಹಿರುತ್ತದೆ. ಈಗ

$$t=\frac{\bar{x}_1=\bar{x}_2}{s\sqrt{\frac{1}{n_1}+\frac{1}{n_2}}}$$

ಎಂದಿಟ್ಟುಕೊಳ್ಳೋಣ. ಮಧ್ಯಕ 0 ಇರುವ ಪ್ರಸಾಮಾನ್ಯ ವಿತರಣೆಯಂತೆ ಅಂಶ ಹರಹಿರುತ್ತದೆ; ಮತ್ತು ಇದರ ಛೇದ ಶಿಷ್ಟದೋಷ *v* ಸ್ವಾತಂತ್ರ್ಯಾಂಕದ ಮೇಲೆ ಅಂದಾಜು ಮಾಡುವ ನಿದರ್ಶಜವಾಗಿರುವುದು. ಆದ್ದರಿಂದ *t*ಯು ವಿತರಣೆ *v* ಸ್ವಾತಂತ್ರ್ಯಾಂಕದ ಸ್ಟೂಡೆಂಟ್ಸ್ *t*ಯಂತೆ ಇರುವುದು. ನಿದರ್ಶನಗಳಿಂದ ದೊರೆವ *t*ಯು ಬೆಲೆ ಅರ್ಥವತ್ತಾಗಿದ್ದರೆ ಎರಡು ನಿದರ್ಶನಗಳೂ ಒಂದೇ ಪ್ರಸಾಮಾನ್ಯ ವಿಶ್ವದಿಂದ ಬಂದವು ಎಂಬ ಆಧಾರಕಲ್ಪನೆಯನ್ನು ಕೈಬಿಡಬೇಕು.

**ವಿಶ್ವ ವಿಚಲನೆಗಳ ಸ್ವತಂತ್ರ ಅಂದಾಜುಗಳ ಹೋಲಿಕೆ** : $n_1$, $n_2$ ಗಾತ್ರಗಳ ಎರಡು ಸ್ವತಂತ್ರವಾದ ಯಾದೃಚ್ಛಿಕ ನಿದರ್ಶನಗಳ ವಿಚಲನೆಗಳು ಕ್ರಮವಾಗಿ $S_1^2, S_{22}$ ಇರಲಿ. ಇವುಗಳಿಂದ $S_1^2=\frac{n_1s_1^2}{v_1}$ ಮತ್ತು $S_2^2=\frac{n_2s_2^2}{v_2}$ (ಇಲ್ಲಿ $v_1=n_1-1, v_2=n_2-1$) ಎಂಬ ನಿದರ್ಶಜಗಳು ಸಂವಾದಿವಿಶ್ವವಿಚಲನೆಗಳನ್ನು ಅಂದಾಜು ಮಾಡುತ್ತವೆ. ಈ ಎರಡು ನಿದರ್ಶನಗಳೂ ಒಂದೇ ಪ್ರಸಾಮಾನ್ಯ ವಿಶ್ವದಿಂದ ಬಂದವು ಎಂದು ಪರಿಗಣಿಸುವುದು ಸಾಧುವೇ ಅಲ್ಲವೇ ಎಂಬುದಾಗಿ ಪರೀಕ್ಷಣ ಮಾಡಬೇಕು; ಅಂದರೆ ಪ್ರಸಾಮಾನ್ಯ ವಿಶ್ವದ ವಿಚಲನೆ $\sigma^2$ ದ ಈ ಎರಡು ಅಂದಾಜುಗಳ ವ್ಯತ್ಯಾಸ ಅರ್ಥವತ್ತಾಗಿದೆಯೇ ಎಂದು ಪರೀಕ್ಷಿಸಲು ಬಯಸುತ್ತೇವೆ. ಇದಕ್ಕೆ ಉಪಯುಕ್ತವಾದ ಪರೀಕ್ಷಣ ನಿಕಷವೆಂದರೆ ಈ ಎರಡು ಅಂದಾಜುಗಳ ನಿಷ್ಪತ್ತಿ $s_1^2/s_2^2$. ಈ ನಿಷ್ಪತ್ತಿಯನ್ನು *F* ಎಂದು ಸಂಕೇತಿಸುತ್ತೇವೆ ಮತ್ತು ಈ ಪರೀಕ್ಷಣಕ್ಕೆ *F* ಪರೀಕ್ಷಣ ಎಂದು ಹೆಸರು. ಈ ಸಂಕೇತದ ಮೇರೆಗೆ

$$\frac{v_1F}{v_2}=\frac{n_1S_1^2/\sigma^2}{n_2S^2/\sigma^2}$$

ಇದರ ಅಂಶ ಮತ್ತು ಛೇದಗಳು ಕ್ರಮವಾಗಿ $v_1$ ಮತ್ತು $v_2$ ಸ್ವಾತಂತ್ರ್ಯಾಂಕಗಳ $x^2$ ವಿತರಣೆಗಳಂತೆ ಸ್ವತಂತ್ರವಾಗಿ ಹರಹಿರುವುವು. ಅದ್ದರಿಂದ $v_1F/v_2$ ಎಂಬ ಇವೆರಡರ ನಿಷ್ಪತ್ತಿ $\frac{1}{2}v_1, \frac{1}{2}v_2$ ಪ್ರಾಚಲಗಳುಳ್ಳ $\beta_2$ ವಿವರ್ತದಂತೆ ಹರಹಿರುವುದು. ವಿಚಲನ ನಿಷ್ಪತ್ತಿ (ವೇರಿಯೆನ್ಸ್ ರೇಷಿಯೊ) *F* ನ ನಿಜವಾದ ಸಂಭಾವ್ಯತಾ ಸಾಂದ್ರತೆ

$$C.\frac{F^{\frac{1}{2}(v_1-2)}}{(v_1F+v_2)^{\frac{1}{2}(v_1+v_2)}}$$

ಇಲ್ಲಿ $C=v_1\frac{1}{2}v_1v_2\frac{1}{2}v_2/B(\frac{1}{2}v_1,\frac{1}{2}v_2)$ ಈ ವಿತರಣೆ $\sigma^2$ ದಿಂದ ಸ್ವತಂತ್ರವಾಗಿದೆ ಎಂಬುದನ್ನು ಗಮನಿಸತಕ್ಕದ್ದು. ಈಗ $F=e^{2z}$ ಎಂದು ಬರೆದರೆ $z=\frac{1}{2}\log_e F$ ಅಗುವುದು. ಈ *z* ವಿವರ್ತದ ಸಂಭವತಾ ಸಾಂದ್ರತೆ

$$\frac{v_1^{\frac{1}{2}}v_2^{\frac{1}{2}}v_2v_1^2}{B(\frac{1}{2}v_1,\frac{1}{2})(v_1C^2z+v_2\frac{1}{2}(v_1+v_2)}$$

ಎಂದು ಆರ್.ಎ.ಫಿಷರ್ ತೋರಿಸಿರುವನು. ಇದಕ್ಕೆ ಫಿಷರನ *z* ವಿತರಣೆ ಎಂದು ಹೆಸರು. $v_1$ ಮತ್ತು $v_2$ ಗಳನ್ನು ಜೊತೆ ಜೊತೆಯಾಗಿ ತೆಗೆದುಕೊಂಡು, ಯಾವ ಬೆಲೆಗಳಿಗೆ ಅತೀತವಾಗಿ 0.05 ಮತ್ತು 0.01 ಸಂಭಾವ್ಯತೆಯಿಂದ *z*ನ ಬೆಲೆಗಳಿರುವುವು ಎಂಬುದನ್ನು ಲೆಕ್ಕ ಮಾಡಿ ಕೋಷ್ಟಕದ ರೂಪದಲ್ಲಿ ಫಿಷರ್ ಒದಗಿಸಿಕೊಟ್ಟಿದ್ದಾನೆ. ಇದರ ಆಧಾರದ ಮೇಲೆ ವಿಚಲನೆನಿಷ್ಪತ್ತಿ *F*ನ ಬಗ್ಗೆ ಇದೇ ರೀತಿಯ ಕೋಷ್ಟಕವನ್ನು ಜಿ.ಡಬ್ಲ್ಯು. ಸ್ನೆಡಕರ್ ಎಂಬಾತ ರಚಿಸಿರುವನು. ಇದರ ಬಳಕೆ ಸರಳವಾಗಿರುವುದರಿಂದ *F* ಕೋಷ್ಟಕ ಬಹಳ ಜನಪ್ರಿಯವಾಗಿದೆ. ಫಿಷರನನ್ನು ಗೌರವಿಸುವ ಸಲುವಾಗಿ ಆತನ ಹೆಸರಿನ ಮೊದಲಕ್ಷರವಾದ *F*ನ್ನು ವಿಚಲನ ನಿಷ್ಪತ್ತಿಗೆ ಸಂಕೇತವಾಗಿ ಬಳಸಿ ಕೋಷ್ಟಕವನ್ನು ಸ್ನೆಡಕರ್ ಪ್ರಕಟಿಸಿದ್ದಾನೆ. ವಿಚಲನೆಯ ಎರಡು ಅಂದಾಜುಗಳಲ್ಲಿ ದೊಡ್ಡದನ್ನು ಪೂರ್ವ ಪದವನ್ನಾಗಿಸಿ ಪಡೆದ ನಿಷ್ಪತ್ತಿಯನ್ನು *F* ಎಂದು ತೆಗೆದುಕೊಂಡು ಕೋಷ್ಟಕ ರಚನೆ ಮಾಡಲಾಗಿದೆ. ಅಂಶದ ಸ್ವಾತಂತ್ರ್ಯಾಂಕ $v_1$ ಮತ್ತು ಛೇದದ ಸ್ವಾತಂತ್ರ್ಯಾಂಕ $v_2$ ಕೋಷ್ಟಕದಲ್ಲಿ $v_1$ ನೀಟಸಾಲನ್ನೂ $v_2$ ಅಡ್ಡ ಸಾಲನ್ನೂ ಸೂಚಿಸುತ್ತವೆ. *F* ನಿಷ್ಪತ್ತಿ ಯಾವ ಬೆಲೆಯನ್ನು ಹೆಚ್ಚುವ ಸಂಭಾವ್ಯತೆ 0.05 ಇರುವುದೋ ಆ ಬೆಲೆಯನ್ನು ಕೋಷ್ಟಕದ ಈ ನೀಟ ಮತ್ತು ಅಡ್ಡಗಳ ಸಂಗಮಸ್ಥಾನದಲ್ಲಿ ಬರೆಯಲಾಗಿದೆ. ಇದಕ್ಕೆ *F* ನಿಷ್ಪತ್ತಿಯ ಶೇ. 5 ಬೆಲೆ ಎಂದು ಹೆಸರು. ಇದೇ ರೀತಿ 0.01 ಸಂಭಾವ್ಯತೆಯ ಮಟ್ಟದಲ್ಲಿ *F* ನಿಷ್ಪತ್ತಿಯ ಬೆಲೆಗಳನ್ನು ಕೊಡಲಾಗಿದೆ. ಶೇ. 5 ಮಟ್ಟದ *F* ನಿಷ್ಪತ್ತಿಗಿಂತ ಕಡಿಮೆ ಬೆಲೆ ದತ್ತ ನಿದರ್ಶನಗಳಿಂದ ದೊರೆತ ಪಕ್ಷದಲ್ಲಿ ಅದು ಅರ್ಥವತ್ತಾಗಿರುವುದಿಲ್ಲ. ಶೇ. 5 ಬೆಲೆಗಿಂತ ಹೆಚ್ಚಾಗಿಯೂ ಶೇ.1 ಬೆಲೆಗಿಂತ

ಕಡಿಮೆಯಾಗಿಯೂ ಅವೇಕ್ಷಿತ ಬೆಲೆ ಇದ್ದರೆ ಆಗ ಅದು ಶೇ. 5 ಮಟ್ಟದಲ್ಲಿ ಅರ್ಥವತ್ತಾಗಿದ್ದು ಶೇ. 1 ಮಟ್ಟದಲ್ಲಿ ಅರ್ಥವತ್ತಾಗಿರುವುದಿಲ್ಲ. ಶೇ. 1 ಬೆಲೆಗಿಂತ ಹೆಚ್ಚಾಗಿದ್ದರೆ ಅದು ಹೆಚ್ಚು ಅರ್ಥವತ್ತಾಗಿದೆ. ಅರ್ಥವತ್ತಾದ $F$ ನಿಷ್ಪತ್ತಿಯ ಬೆಲೆ ದೊರಕಿತೆಂದರೆ ಆಧಾರಕಲ್ಪನೆ ಸ್ವೀಕಾರಯೋಗ್ಯವಲ್ಲ ಎಂದು ತೀರ್ಮಾನಿಸುತ್ತೇವೆ. ಈ ಪರೀಕ್ಷಣ ಬಲು ಮುಖ್ಯವಾದದ್ದು. ವಿಚಲನ ವಿಶ್ಲೇಷಣದ (ಅನಾಲಿಸಿಸ್ ಆಫ್ ವೇರಿಯನ್ಸ್) ಮೂಲಕ ಪ್ರಯೋಗಗಳ ಫಲಿತಾಂಶಗಳನ್ನು ಅರ್ಥ ನಿಷ್ಪನ್ನ ಮಾಡುವಲ್ಲಿ ಈ ಪರೀಕ್ಷಣವನ್ನು ಸರ್ವೇಸಾಮಾನ್ಯವಾಗಿ ಬಳಸುತ್ತೇವೆ. ದೃಷ್ಟಾಂತಕ್ಕೆ, ಗಾತ್ರ 10 ಮತ್ತು 8 ಇರುವ ನಿದರ್ಶನಗಳಿಂದ ದೊರೆವ ವಿಚಲನೆಯ ಅಂದಾಜುಗಳು 6.4 ಮತ್ತು 3.8 ಎಂದಿರಲಿ. ಆಗ $v_1=9$, $v_2 = 7$ ಮತ್ತು

$F = \frac{6.4}{3.6} = 2.33$ ಕೋಷ್ಟಕದಿಂದ 5% ಮಟ್ಟದಲ್ಲಿ 9 ಮತ್ತು 7 ಸ್ವಾತಂತ್ರ್ಯಾಂಕಗಳಿಗೆ ಸರಿಯಾದ ಬೆಲೆ 3.68; ಮತ್ತು ಶೇ. 1 ಮಟ್ಟದಲ್ಲಿ 6.71 ಆದ್ದರಿಂದ ಶೇ.5 ಮಟ್ಟದಲ್ಲಿ Fನ ಅವೇಕ್ಷಿತ ಬೆಲೆ ಅರ್ಥವತ್ತಾಗಿಲ್ಲ. ಅಂದರೆ ದತ್ತ ಎರಡು ನಿದರ್ಶನಗಳೂ ಒಂದೇ ಪ್ರಸಾಮಾನ್ಯ ವಿಶ್ವದಿಂದ ಬಂದಿವೆ ಎಂಬ ಆಧಾರಕಲ್ಪನೆಯನ್ನು ಅಸ್ವೀಕಾರ ಮಾಡಲು ತಕ್ಕ ಆಧಾರಗಳಿಲ್ಲ ಎಂದು ತೀರ್ಮಾನಿಸುತ್ತೇವೆ.

**ಅವೇಕ್ಷಿತ ಸಹಸಂಬಂಧ ಗುಣಾಂಕದ (ಕಾರಿಲೇಷನ್ ಕೋಎಫಿಷಿಯಂಟ್) ಅರ್ಥವತ್ತತೆಯ ಪರೀಕ್ಷಣ :** $x$, $y$ ಗಳ ದ್ವಿವಿವರ್ತ ಪ್ರಸಾಮಾನ್ಯ ಅಥವಾ ದ್ವಿಚರ ವಿಶ್ವವನ್ನು ಪರಿಶೀಲಿಸೋಣ. $x, y$ ಗಳ ಶಿಷ್ಟಭ್ರಂಶ (ಸ್ಟ್ಯಾಂಡರ್ಡ್ ಡೀವಿಯೇಷನ್) $\sigma_1$, $\sigma_2$ ಇರಲಿ ಮತ್ತು ಇವುಗಳ ಸಹಸಂಬಂಧ $\sigma$ ಇರಲಿ. ಹಾಗೂ $x, y$ ಗಳನ್ನು ಅವುಗಳ ಮಧ್ಯಕಗಳಿಂದ ಅಳತೆ ಮಾಡೋಣ. ಈ ವಿಶ್ವದಿಂದ ತೆಗೆದ $n$ ಗಾತ್ರದ ಯಾದೃಚ್ಛಿಕ ನಿದರ್ಶನ $(x_i, y_i)$, ($i$ = 1.2...... $n$) ಆಗಿರಲಿ, ನಿದರ್ಶನಗಳಲ್ಲಿ $x,y$ ಗಳ ಶಿಷ್ಟಭ್ರಂಶಗಳು $s_1$, $s_2$ ಆಗಿಯೂ ಸಹಬಂಧ ಗುಣಕ $r$ ಆಗಿಯೂ ಇರಲಿ. ಹಿರಿಯ ನಿದರ್ಶನದಲ್ಲಿ

$r$ನ ಶಿಷ್ಟದೋಷ (ಸ್ಟ್ಯಾಂಡರ್ಡ್ ಎರ್ರರ್) ಇರುವುದು. $\sigma = 0$ ಆದಾಗ

ಶಿಷ್ಟದೋಷ 1/ ಆಗುವುದು. ಈ ಫಲಿತಾಶವನ್ನು ಪ್ರಯುಕ್ತಿಸಬೇಕಾದರೆ $n$ನ ಬೆಲೆ ದೊಡ್ಡದಾಗಿರಬೇಕು. ಅಂದರೆ >500. ಕಿರುಬೆಲೆಗಳಿಗೆ ಇದು ಒಪ್ಪುವುದಿಲ್ಲ, ದತ್ತ ನಿದರ್ಶನದಲ್ಲಿ $y$ ವಿವರ್ತದ ವರ್ಗ ಸಂಕಲನವಾದ $nS^2$ ಎಂಬುದರ ಸ್ವಾತಂತ್ರ್ಯಾಂಕ $n$-1 ಇರುವುದೆಂದು ಹಿಂದೆ ಹೇಳಿದ್ದೇವೆ. ಇದನ್ನು ಲಂಬಮಾನವಾದ ಎರಡು ಘಟಕಗಳಾಗಿ ವಿಂಗಡಿಸಬಹುದು: ಹಿಂಚಲನೆಯ (ರಿಗ್ರೆಷನ್) ಸಲುವಾಗಿ ಸ್ವಾತಂತ್ರ್ಯಾಂಕ 1 ಇರುವ $nr^2S^2$ ಮತ್ತು ಹಿಂಚಲನೆಯಿಂದ ದೋಷದ ಸಲುವಾಗಿ ಸ್ವಾಂತಂತ್ರ್ಯಾಂಕ ($n$-2) ಇರುವ $n(1-r^2)S^2$. ಹೀಗೆ ವಿಶ್ಲೇಷಿಸಲಾದ ಈ ಎರಡು ರಾಶಿಗಳನ್ನು $\sigma_2{}^2$ ದಿಂದ ಭಾಗಿಸಲಾಗಿ ಅವು ಅಯಾ ಸ್ವಾತಂತ್ರ್ಯಾಂಕದ $x^2$ ವಿತರಣೆಯ ಮೇರೆಗೆ ಹರಹಿರುತ್ತವೆ. ಇವೆರಡರ ನಿಷ್ಪತ್ತಿ

$r^2$ ಇರುವುದರಿಂದ ಅದರ ವಿತರಣೆ $n$ನ ಎಲ್ಲ ಬೆಲೆಗಳಿಗೂ ಮತ್ತು $\frac{1}{2}(n-2)$

ಪ್ರಾಚಲಗಳುಳ್ಳ $\beta_1$ ವಿವರ್ತದಂತೆ ಇರುವುದು. ಆದ್ದರಿಂದ ಎಂಬುದು

$\beta_2(\frac{1}{2}, \frac{1}{2}(n-2)$ ವಿವರ್ತದಂತೆ ಹರಹಿರುವುದು. ಈಗ $t = \frac{r}{\sqrt{1-r^2}}\sqrt{n-2}$ ಎಂದು

ಬರೆದರೆ $t^2/(n-2)$ ನಿದರ್ಶಜ $\frac{1}{2}$ ಮತ್ತು $\frac{1}{2(n-2)}$ ಪ್ರಾಚಲಗಳುಳ್ಳ

$\beta_2$ ವಿವರ್ತದಂತೆ ಹರಹಿರುವುದು. ಆದ್ದರಿಂದ ಈ $t$ನಿದರ್ಶಜ ಸ್ಟೂಡೆಂಟ್ಸ್ $t$ ಯಂತೆ $n-2$ ಸ್ವಾತಂತ್ರ್ಯಾಂಕದೊಡನೆ ಹರಹಿರುತ್ತದೆ ಈ ಫಲಿತಾಂಶ $n$ನ ಎಲ್ಲ ಬೆಲೆಗಳಿಗೂ (ಕಿರಿಯ ಮತ್ತು ಹಿರಿಯ ಬೆಲೆಗಳಿಗೆ) ಸತ್ಯವಾಗಿರುವುದು. ಇದರ ಪ್ರಯುಕ್ತಿಯಿಂದ ನಿದರ್ಶನದ ಸಹಸಂಬಂಧ ಗುಣಕ ಅರ್ಥವತ್ತಾಗಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಬಹುದು.

ನಿದರ್ಶನದ ಅವೇಕ್ಷಣೆಗಳಿಂದ ಮೇಲೆ ತೋರಿಸಿದ $t$ನಿದರ್ಶಜದ ಬೆಲೆಯನ್ನು ಕಂಡುಹಿಡಿಯುತ್ತೇವೆ. ವಿಶ್ವದಲ್ಲಿನ $x, y$ ವಿವರ್ತಗಳ ಸಹಸಂಬಂಧ 0 ಎಂದು ಒಪ್ಪಿದರೆ ಅವೇಕ್ಷಿತ $t$ ಬೆಲೆ ಅಪೂರ್ವವಾದುದೇ ಎಂದು $t$ ಕೋಷ್ಟಕದ ಸಹಾಯದಿಂದ ಕಂಡುಹಿಡಿಯುತ್ತೇವೆ. ಸಂಭವತೆ 0.05 ಕ್ಕಿಂತ ಕಡಿಮೆಯಿದ್ದರೆ ಅಪೂರ್ವ ಎಂದು ಪರಿಗಣಿಸತ್ತೇವೆ. ಇನ್ನೂ ಕಟ್ಟುನಿಟ್ಟಾಗಿ ತೀರ್ಮಾನಿಸಬೇಕಾದಲ್ಲಿ ಸಂಭಾವ್ಯತೆ 0.01 ಕ್ಕಿಂತ ಕಡಿಮೆ ಇರಬೇಕಾದೀತು.

ದೃಷ್ಟಾಂತಕ್ಕೆ 10 ಜೊತೆ ಅವೇಕ್ಷಣೆಗಳಿಂದ ಲೆಕ್ಕ ಹಾಕಿ ಬಂದ ಸಹಸಂಬಂಧ ಗುಣಾಂಕ 0.60 ಎನ್ನೋಣ. ಆಗ $r = 0.60$. $v = 8$ ಮತ್ತು $t = 2.12$. ಕೋಷ್ಟಕದಿಂದ 0.05 ಸಂಭಾವ್ಯತಾ ಮಟ್ಟದಲ್ಲಿ $t$ ಯ ಬೆಲೆ 2.31. ಅವೇಕ್ಷಿತ ಬೆಲೆ ಇದಕ್ಕಿಂತ ಕಡಿಮೆ ಇದೆ. ಆದ್ದರಿಂದ 0.60 ಎಂಬ ಸಹಸಂಬಂಧ ಗುಣಾಂಕದ ಬೆಲೆ ಅರ್ಥವತ್ತಾಗಿಲ್ಲ. ವಿಶ್ವದ $\sigma = 0$ ಎಂಬ ಆಧಾರಕಲ್ಪನೆಯನ್ನು ತಿರಸ್ಕರಿಸತಕ್ಕ ಪ್ರಬಲ ಕಾರಣವೇನೂ ಇರುವುದಿಲ್ಲ.

**ಸರ್ವಸಾಮಾನ್ಯವಾಗಿ ಸಹಸಂಬಂಧ ಗುಣಾಂಕದ ಪರೀಕ್ಷಣ :** ದ್ವಿಚರ ಪ್ರಸಾಮಾನ್ಯ ವಿಶ್ವದ ಸಹಸಂಬಂಧ $\sigma$ ಇದ್ದಾಗ ಆದ್ದರಿಂದ ತೆಗೆದ $n$ ಗಾತ್ರದ ನಿದರ್ಶನದ ಸಹಸಂಬಂಧ ಗುಣಾಂಕ $r$ ಆಗಿದ್ದರೆ ಇದರ ಸಂಭಾವ್ಯತಾ ಸಾಂದ್ರತೆ

$$\frac{d^{n-2}}{d(rp)^{n-2}}\left(\frac{arc\cos(-rp)}{\sqrt{1-r^2p^2}}\right)$$ ಫಿಷರ್ ಈ

ವಿತರಣೆಯನ್ನು 1915ರಲ್ಲಿ ನಿಗಮನ ಮಾಡಿದ. ಹಿರಿಯ $n$ನ ಬೆಲೆಗೆ ಸಹ ಈ ವಿತರಣೆ ಪ್ರಸಾಮಾನ್ಯ ವಿತರಣೆಯಿಂದ ಅತಿಯಾಗಿ ಬೇರ್ಪಟ್ಟಿರುವುದು, ಆದ್ದರಿಂದ ಶಿಷ್ಟದೋಷವನ್ನು ಈ ಸಂದರ್ಭದಲ್ಲಿ ಬಳಸುವುದು ಅನುಚಿತ. ಈಗ

$$Z = \frac{1}{2}\log_e\frac{1+r}{1-r}, \quad \xi = \log\frac{1+\sigma}{1-\sigma}$$

ಎಂಬ ರೂಪಾಂತರಗಳನ್ನು ಮಾಡಲು $Z$ನ ವಿತರಣೆಯ $\xi$ ಮತ್ತು ವಿಚಲನೆ 1/($n$–3) ಇರುವ ಪ್ರಸಾಮಾನ್ಯ ವಿತರಣೆಗೆ ಉಪಸಮವಾಗಿರುವುದು. ಅಲ್ಲದೆ $n$ನ ಬೆಲೆ ಹೆಚ್ಚಿದಂತೆಲ್ಲ $Z$ನ ವಿತರಣೆ ಬಲು ಬೇಗ ಪ್ರಸಾಮಾನ್ಯ ವಿತರಣೆಗೆ ಉಪಗಮಿಸುವುದು. $Z$ನ ಶಿಷ್ಟದೋಷ ನಿದರ್ಶನ ಸಹಸಂಬಂಧ $r$ ನಿಂದ ಸ್ವತಂತ್ರವಾಗಿರುವುದು. ನಿದರ್ಶನದ ಅವೇಕ್ಷಿತ ಸಹಸಂಬಂಧ ನಮೂದಿಸಿದ ಬೆಲೆಯಿಂದ ಅರ್ಥವತ್ತಾಗಿ ಬೇರೆಯಾಗಿದೆಯೇ ಎಂದು ಪರೀಕ್ಷಿಸಲು $Z$ ನಿದರ್ಶಜವನ್ನು ಬಳಸಬಹುದು. ಇದರಂತೆಯೇ ಎರಡು ಸ್ವತಂತ್ರ ನಿದರ್ಶನಗಳಿಂದ ದೊರೆತ $r$ನ ಬೆಲೆಗಳು ಅರ್ಥವತ್ತಾಗಿ ಬೇರೆಬೇರೆಯಾಗಿವೆಯೇ ಎಂದೂ ಪರೀಕ್ಷಿಸಬಹುದು.

ಮೇಲೆ ಹೇಳಿದ ಫಿಷರ್ ರೂಪಾಂತರವನ್ನು ಪ್ರಯುಕ್ತಿಸಿ ಅವೇಕ್ಷಿತ $r$ ಮತ್ತು ನಮೂದಿಸಿದ $P$ ಇವುಗಳಿಂದ $Z$ ಮತ್ತು $\xi$ಗಳನ್ನು ಗಣಿಸುತ್ತೇವೆ. ಮಧ್ಯಕ 0 ಮತ್ತು ವಿಚಲನೆ 1/($n$–3) ಇರುವ ಪ್ರಸಾಮಾನ್ಯ ವಿತರಣೆಗೆ ($Z$-$\xi$) ಎಂಬ ಭ್ರಂಶ ಹರಹಿರುತ್ತದೆ. ಈ ಭ್ರಂಶ ಅರ್ಥವತ್ತಾಗಿದೆಯೇ ಇಲ್ಲವೇ ಎಂದು ನಾವು ಸುಲಭವಾಗಿ ತಿಳಿಯಬಹುದು. $P=0$ ಎಂಬ ಸಂದರ್ಭದಲ್ಲಿ ವಿಶ್ವವಿಚಲನೆಗಳ ಸ್ವತಂತ್ರ ಅಂದಾಜುಗಳ ಹೋಲಿಕೆ ಎಂಬ ಪ್ರಕರಣದಲ್ಲಿ ಕೊಟ್ಟಿರುವ ಪರೀಕ್ಷಣವನ್ನು ಬಳಸುವುದು ಮೇಲು.

**ಎರಡು ನಿದರ್ಶನಗಳ ಸಹಸಂಬಂಧ ಗುಣಾಂಕಗಳ ಹೋಲಿಕೆ:** ಎರಡು ಸ್ವತಂತ್ರ ನಿದರ್ಶನಗಳನ್ನು ಬಳಸಿ ಪಡೆದ ಸಹಸಂಬಂಧ ಗುಣಾಂಕಗಳನ್ನು ಹೋಲಿಸಲು ಫಿಷರನ $Z$ ಪರೀಕ್ಷಣವನ್ನು ಬಳಸಬಹುದು. $n_1$, $n_2$ ಗಾತ್ರದ ನಿದರ್ಶನಗಳಿಂದ ದೊರೆತ ಸಹಸಂಬಂಧ ಗುಣಾಂಕಗಳು $r_1$, $r_2$-ಆಗಿರಲಿ. ಇಷ್ಟು ತಿಳಿದರೆ ಆ ಎರಡು ನಿದರ್ಶಜಗಳು ಒಂದೇ ಪ್ರಸಾಮಾನ್ಯ ವಿಶ್ವದಿಂದ ಬಂದಿರುವುವೆಂದು ಭಾವಿಸಬಹುದೇ ? ಈ ಪ್ರಶ್ನೆಯನ್ನು ಉತ್ತರಿಸಲು ದತ್ತ ನಿದರ್ಶನಗಳಿಗೆ ಸೂಕ್ತವಾದ $Z$ನ್ನು ಲೆಕ್ಕ ಹಾಕಬೇಕು : ಅಂದರೆ

$Z_1 = \log_e\frac{1+r_1}{1-r_1}$, $Z_2 =$ . ಈ ಬೆಲೆಗಳನ್ನು ಕಂಡುಹಿಡಿಯಬೇಕು.

ಮಧ್ಯಕ 0 ಮತ್ತು ವಿಚಲನೆ $^2 = + \frac{1}{n_2-3}$ ಇರುವ ಪ್ರಸಾಮಾನ್ಯ

ವಿತರಣೆಯಂತೆ ಉಪಸಮವಾಗಿ $Z_1$-$Z_2$ ಎಂಬ ಅಂತರ ಹರಹಿರುವುದು. $|Z_1-Z_2|$ <1.96$_8$ ಆಗಿದ್ದರೆ ಶೇ. 5 ಮಟ್ಟದಲ್ಲಿ ಈ ವ್ಯತ್ಯಾಸ ಅರ್ಥವತ್ತಾಗಿಲ್ಲ. ಆದ್ದರಿಂದ ನಿದರ್ಶನಗಳೆರಡೂ ಒಂದೇ ವಿಶ್ವದಿಂದ ಬಂದಿವೆ ಎನ್ನುವ ಆಧಾರಕಲ್ಪನೆಯನ್ನು ಒಪ್ಪದಿರಲು ಬಲಯುತ ಕಾರಣವಾವುದೂ ಇಲ್ಲ. ಎರಡು ನಿದರ್ಶನಗಳೂ ಒಂದೇ ಪ್ರಸಾಮಾನ್ಯ ವಿಶ್ವದಿಂದ ಬಂದಿವೆ ಎಂಬ ಆಧಾರ ಕಲ್ಪನೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಉದಾಹರಣೆಗೆ 15 ಜೊತೆ ಅವೇಕ್ಷಣೆಗಳಿಂದ ಲೆಕ್ಕ ಮಾಡಿದ ಸಹಸಂಬಂಧ ಗುಣಾಂಕ 0.45 ಎಂದೂ ಸ್ವತಂತ್ರವಾದ ಮತ್ತೊಂದು ನಿದರ್ಶನದಿಂದ ದೊರೆತ ಸಹಸಂಬಂಧ ಗುಣಾಂಕ 0.72 ಎಂದೂ ಇರಲಿ. ಇವೆರಡೂ ಅರ್ಥವತ್ತಾಗಿ ಬೇರೆಯಾಗಿವೆಯೇ ಎಂದು ನೋಡಲು ಫಿಷರನ ರೂಪಾಂತರದಿಂದ $Z_1$= 0.485 ಮತ್ತು $Z_2$=0.907 ಎಂದು ಗಣಿಸುತ್ತೇವೆ.

ಈ ಎರಡು ಬೆಲೆಗಳೂ ಒಂದೇ ಪ್ರಸಾಮಾನ್ಯ ವಿಶ್ವದಿಂದ ಬಂದುವು ಎಂಬ ಆಧಾರ ಕಲ್ಪನೆಯ ಮೇರೆಗೆ | $Z_1$-$Z_2$ | ಇದರ ಶಿಷ್ಟದೋಷ

$\sigma$ = $\sqrt{\frac{1}{12}+\frac{1}{9}} = \frac{1}{6}\sqrt{7} = 0.441$ ಆಗುವುದು. ಆದರೆ ಅವೇಕ್ಷಣೆಗಳಿಂದ |

$Z_1$-$Z_2$ | = 0.421. ಇದು ಶಿಷ್ಟದೋಷಕ್ಕಿಂತ ಕಡಿಮೆಯಾಗಿರುವುದರಿಂದ $Z_1$-$Z_2$ಗಳ ವ್ಯತ್ಯಾಸ ಅರ್ಥವತ್ತಾಗಿಲ್ಲ. ಆದ್ದರಿಂದ ನಿದರ್ಶನಗಳು ಒಂದೇ ಪ್ರಸಾಮಾನ್ಯ ವಿಶ್ವದಿಂದ ಬಂದವು ಎಂಬ ಅಭಿಕಲ್ಪನೆಯನ್ನು ತಳ್ಳಿಹಾಕುವಂತಿಲ್ಲ.

ಈ ಫಲಿತಾಂಶಗಳು ಆಂಶಿಕ ಸಹಸಂಬಂಧಗಳಿಗೂ (ಪಾರ್ಷಿಯಲ್ ಕಾರಿಲೇಷನ್) ಅನ್ವಯಿಸುತ್ತದೆ. ಆದರೆ ಈ ಪರಿಸ್ಥಿತಿಯಲ್ಲಿ ಯಾವ ಆಂಶಿಕ ಸಹಸಂಬಂಧ ಗುಣಾಂಕವನ್ನು ಪರೀಕ್ಷಣಕ್ಕೊಳಗಾಗಿಸುತ್ತೇವೋ ಅದರಲ್ಲಿನ ಗೌಣವಾದ ಅಡಿಬರಹಗಳು ಎಷ್ಟಿವೆಯೋ ಅಷ್ಟನ್ನು ಸೂತ್ರದಲ್ಲಿನ $n$ನ ಬೆಲೆಯಿಂದ ಕಳೆಯಬೇಕು.

**ಅನೇಕ ನಿದರ್ಶನಗಳು :** ಎರಡಕ್ಕಿಂತ ಹೆಚ್ಚಿನ ನಿದರ್ಶನಗಳಿದ್ದರೂ ಇಂಥದ್ದೇ ಕ್ರಮವನ್ನು ಕೈಗೊಳ್ಳಬಹುದು. ಒಟ್ಟು $k$ನಿದರ್ಶನಗಳು ಇರುವುವೆಂದು ಭಾವಿಸೋಣ. ನಿದರ್ಶನ iನಿಂದ ದೊರೆತ ಸಹಸಂಬಂಧ ಗುಣಾಂಕ $r_i$ ಆಗಿರಲಿ ($i$=1,2,….$n$). ಪ್ರತಿ ಒಂದು $r_i$ ಸಹ ಮೂಲವಿಶ್ವದ ಸಹಸಂಬಂಧ ಗುಣಾಂಕದ ಅಂದಾಜಾಗಿರುವುದು. ಈ ಅಂದಾಜುಗಳು ಏಕರೀತಿಯಾಗಿರುವುವೇ (ಹೊಮೊಜೀನಿಯಸ್) ಎಂಬುದನ್ನು ಪರೀಕ್ಷಿಸಬೇಕಾದರೆ ನಿದರ್ಶನಗಳೆಲ್ಲ ಒಂದೇ ದ್ವಿಚರ ಪ್ರಸಾಮಾನ್ಯ ವಿಶ್ವದಿಂದ ಬಂದಿವೆ ಎಂದು ಆಧಾರಕಲ್ಪನೆ ಮಾಡುತ್ತೇವೆ. ಫಿಷರನ ರೂಪಾಂತರವನ್ನು ಬಳಸಿ $r_i$ ಗಳಿಂದ ಸಂವಾದೀ $Z_i$ ಗಳನ್ನು ಕಂಡುಹಿಡಿಯತ್ತೇವೆ. ಈ ಬೆಲೆಗಳು ಉಪಸಮವಾಗಿ ಒಂದೇ ಮಧ್ಯಕವುಳ್ಳ ಮತ್ತು ವಿಚಲನೆ $1/(n_i–3)$ ಇರುವ ಪ್ರಸಾಮಾನ್ಯ ವಿತರಣೆಯಂತೆ ಹರಹಿರುತ್ತವೆ. ಇದರ ಮಧ್ಯಕ $\zeta$ದ ಕನಿಷ್ಠತಮ ವಿಚಲನೆಯ ಅಂದಾಜನ್ನು ಪಡೆಯಲು $Z_i$ ಗಳಿಗೆ ಅವುಗಳ ವಿಚಲನೆಗೆ ವಿಲೋಮವಾದ ಭಾರಗಳನ್ನು ನೀಡಿ ಭಾರಿತ ಮಧ್ಯಕವನ್ನು (ವೆಯ್ಟೆಡ್ ಆವರೇಜ್) ಕಂಡುಹಿಡಿಯಬೇಕು. ಈ ಮಧ್ಯಕ $Z = \frac{\sum(n_i-3)Z_i}{\sum(n_i-3)}$ ಆಗುವುದು. ಪ್ರತಿ $Z_i$ ಉಪಸಮವಾಗಿ ಮಧ್ಯಕ $\zeta$ ಮತ್ತು ವಿಚಲನೆ $1/(n_i-3)$ ಇರುವ ಪ್ರಸಾಮಾನ್ಯ ವಿತರಣೆಯಂತೆ ಹರಹಿರುತ್ತದೆ. ಆದ್ದರಿಂದ $\sum(n_i–3)(z_i-Z)^2$ ಎಂಬುದು ಉಪಸಮವಾಗಿ $k$–1 ಸ್ವಾತಂತ್ರ್ಯಾಂಕದ $x^2$ ವಿತರಣೆಯಂತೆ ಹರಹಿರುತ್ತದೆ. ($Z$ ಎಂಬ ಅಂದಾಜನ್ನು ಗಣಿಸುವುದರಲ್ಲಿ ಒಂದು ಸ್ವಾತಂತ್ರ್ಯಾಂಕ ಲುಪ್ತವಾಗಿದೆ). ಈ ಬೆಲೆ ಅರ್ಥವತ್ತಾಗಿಲ್ಲದಿದ್ದರೆ $r_i$ ಬೆಲೆಗಳು ಏಕರೀತಿಯವು ಎಂದು ತೀರ್ಮಾನಿಸುತ್ತೇವೆ ಮತ್ತು $\zeta$ದ ನಿಜ ಬೆಲೆಯನ್ನು $Z$ ನಿಂದ ಅಂದಾಜು ಮಾಡುತ್ತೇವೆ. ಆ ಸಂದರ್ಭಗಳಲ್ಲಿ $\overset{\cap}{\mathrm{P}}$ =tanh z ಎಂಬುದು ವಿಶ್ವದ pವಿನ ಅಂದಾಜಾಗಿರುವುದು.

**ಅವೇಕ್ಷಿತ ಹಿಂಚಲನೆಯ (ಲೀನಿಯರ್ ರಿಗ್ರೆಷನ್) ಗುಣಾಂಕದ ಅರ್ಥವತ್ತತೆ :** ದ್ವಿಚರ ಪ್ರಸಾಮಾನ್ಯ ವಿಶ್ವದಿಂದ ತೆಗೆದ ನಿದರ್ಶನದಲ್ಲಿ $x$ನ ಮೇಲಿನ $y$ಯ ರೇಖೀಯ ಹಿಂಚಲನೆಯ ಗುಣಾಂಕ $b$ ಯ ಅರ್ಥವತ್ತತೆಯನ್ನು ಪರೀಕ್ಷಿಸಬೇಕಾದಲ್ಲಿ ಈ ಕ್ರಮವನ್ನು ಅನುಸರಿಸಬಹುದು. ನಿದರ್ಶನದಲ್ಲಿ $\dot{x}$ ,$y$ಗಳ ವರ್ಗಸಂಕಲನಗಳು $nS_1^2$ ಮತ್ತು $nS_2^2$ ಆಗಿದ್ದರೆ $nr^2S_2^2 = nS_1^2b^2 = b^2\sum(x_i-\overline{x})^2$, ಹಿಂಚಲನೆಯ ಸಮೀಕರಣದಿಂದ $y_i$ಯ ಅಂದಾಜು ಬೆಲೆ $_i$ಆಗಿದ್ದರೆ ಆಗ $\sum(y_i–_i)^2 = n(1-r^2)S_2^2$, ಈ ಹಿಂದೆಯೇ ತೋರಿಸಿರುವಂತೆ $r^2/(1-r^2)$ ಎಂಬುದು $\frac{1}{2}$ ಮತ್ತು $\frac{1}{2}$(n–2) ಪ್ರಾಚಲಗಳುಳ್ಳ $\beta_2$ ವಿವರ್ತದಂತೆ ಹರಹಿರುವುದು. ಆದ್ದರಿಂದ $b^2\sum(x_i-\overline{x})^2/\sum(y_i-\overline{Y})^2$ ಸಹ $\beta_2$ ವಿವರ್ತದಂತೆ ಹರಹಿರುವುದು ; ಇದರ ಪ್ರಾಚಲಗಳು $\frac{1}{2}$ ಮತ್ತು $\frac{1}{2}(n–2)$ ಇದರಿಂದಾಗಿ

$$\sqrt{\sum(x_i-\overline{x})^2/\sum(y_i-\overline{Y}_i)^2}$$

ಎಂಬುದು ($n$–2) ಸ್ವಾತಂತ್ರ್ಯಾಂಕವುಳ್ಳ ಸ್ಟೂಡೆಂಟ್ಸ್ $t$ಯಂತೆ ಹರಹಿರುವುದು. ಈ ನಿದರ್ಶನವನ್ನು ಬಳಸಿ ಅವೇಕ್ಷಿತ ಹಿಂಚಲನೆಯ ಗುಣಾಂಕದ ಅರ್ಥವತ್ತತೆಯನ್ನು ಪರೀಕ್ಷಿಸಬಹುದು.

ವಿಶ್ವದಲ್ಲಿ $x,y$ಗಳು ಸಹಸಂಬಂಧವಾಗಿದ್ದು $x$ನ ಮೇಲಿನ $y$ರೇಖೀಯ ಪ್ರತೀಪಾಯನ ಗುಣಾಂಕ $\beta$ಆಗಿದ್ದರೆ ಅವೇಕ್ಷಿತ ಪ್ರತೀಪಾಯನ ಗುಣಾಂಕ $b$ಮತ್ತು $\beta$ಗಳ ವ್ಯತ್ಯಾಸ ಅರ್ಥವತ್ತಾಗಿದೆಯೇ ಎಂದು ಪರೀಕ್ಷಿಸಲು $b$ಗೆ ಬದಲು ($b$–$\beta$) ಯನ್ನು ಆದೇಶಿಸಿ ಇದೇ ಪರೀಕ್ಷಣವನ್ನು ಬಳಸಬಹುದು. ಅಂದರೆ

$$t = (b-\beta)\sqrt{n-2},\ \sqrt{\sum(x_1-\overline{x})/\sum(y_1-Y_1)^2}$$

**ಅತೀತ ಬೆಲೆಗಳ ಪರೀಕ್ಷಣ :** ಕೆಲವು ಸಂದರ್ಭಗಳಲ್ಲಿ ಲಘುತಮ ಅಥವಾ ಮಹತ್ತಮ ಅವೇಕ್ಷಣೆಯಿಂದ ಒಂದು ನಿದರ್ಶನದ ಪರೀಕ್ಷಣವನ್ನು ನಡೆಸಬೇಕಾಗುವುದು. ನಿದರ್ಶನದ ಸ್ವತಂತ್ರವಾಗಿ ಆರಿಸಿ ತೆಗೆದ ಅವೇಕ್ಷಿತ ಬೆಲೆಗಳನ್ನು ಆರೋಹಣ ಕ್ರಮದಲ್ಲಿ ಹೀಗೆ ಓರಣವಾಗಿರಿಸಿದ್ದೇವೆ ಎನ್ನೋಣ $x_1<x_2<x_3<$ … … $<x_n$. ಈ ಬೆಲೆಗಳು ಜನಕ ವಿಶ್ವದ (ಪೇರೆಂಟ್ ಪಾಪ್ಯುಲೇಷನ್) ವಿತರಣ ಉತ್ಪನ್ನ $F(x)$ ಆಗಿದ್ದರೆ $x_n<x$ ಎಂಬುದರ ಸಂಭಾವ್ಯತೆ $[F(x)]^n$ ಇರುವುದು. ಹೇಗೆಂದರೆ $x_n \leq x$ ಆಗಿದ್ದರೆ ನಿದರ್ಶನದ ಉಳಿದ ಪ್ರತಿಯೊಂದು ಬೆಲೆಗೂ ಇದು ಸಾಧುವಾಗುವುದು. ಶಿಷ್ಟ ಪ್ರಸಾಮಾನ್ಯ ವಿಶ್ವದಿಂದ ತೆಗೆದ $n$ ಗಾತ್ರದ ನಿದರ್ಶನದಲ್ಲಿನ ಮಹತ್ತಮ ಬೆಲೆ $x$ಗಿಂತ ಕಡಿಮೆಯಾಗಿರುವ ಸಂಭವತೆ $P(x_n < x) = [\phi(x)]^n$. ಇಲ್ಲಿ

$\phi(x) = \frac{1}{\sqrt{2\pi}}\int_{-\infty}^{x}\exp(-8\,{}^2\!/_2)du$, ಮಹತ್ತಮ ಬೆಲೆ $x_n$ನ ಕೆಳಗಣ ಮತ್ತು ಮೇಲಣ ಶತಾಶಬಿಂದುಗಳನ್ನು ಟಿಪ್ಪೆಟ್ ಮತ್ತು ಪಿಯರ್ಸನ್ ಲೆಕ್ಕ ಮಾಡಿ ಪ್ರಚುರಪಡಿಸಿರುವರು. ಚಿಹ್ನೆಯನ್ನು ಬದಲಾಯಿಸಿ ಕೆಳಗಣ ಮತ್ತು ಮೇಲಣ ಶತಾಂಶಬಿಂದುಗಳ ಅಭಿದಾನಗಳನ್ನು ಅದಲು ಬದಲು ಮಾಡಿದರೆ ಲಘುತಮ ಬೆಲೆ $x_1$ನ್ನು ಕುರಿತ ಪರೀಕ್ಷಣಕ್ಕೆ ಇದೇ ಕೋಷ್ಟಕವನ್ನು ಬಳಸಬಹುದು.

ಅವೇಕ್ಷಿತ $x_i$ ಗಳನ್ನು ಶಿಷ್ಟ ಪ್ರಸಾಮಾನ್ಯ ವಿಶ್ವದಿಂದ ಸ್ವತಂತ್ರವಾಗಿ ಪಡೆದಿದೆ ಎಂದು ಇಟ್ಟುಕೊಂಡರೆ ಪ್ರತಿಯೊಂದು $x_i^2$ ಸ್ವಾತಂತ್ರ್ಯಾಂಕ 1 ಇರುವ $x^2$ ವಿವರ್ತವಾಗಿರುವುದು ಆದ್ದರಿಂದ $\sum_{i-1}^{n} x_i^2$ಸ್ವಾತಂತ್ರ್ಯ ಗುಣಾಂಕ $n$ ಇರುವ $x^2$ ವಿವರ್ತವಾಗಿರುವುದು. ಇದರಿಂದಾಗಿ ಶಿಷ್ಟ ಪ್ರಸಾಮಾನ್ಯ ವಿಶ್ವದಿಂದ ಈ ನಿದರ್ಶನ ಬಂದಿದೆಯೇ ಎಂಬುದನ್ನು ನಿರ್ಧರಿಸಲು $x^2$ ಪರೀಕ್ಷಣವನ್ನು ಕೈಗೊಳ್ಳಬಹುದು.

ಇದೇ ಸಮಸ್ಯೆಯನ್ನು ಬೇರೊಂದು ದೃಷ್ಟಿಕೋನದಿಂದಲೂ ಪರಿಶೀಲಿಸಬಹುದು. ನಿದರ್ಶನದ ಲಘುತಮ ಬೆಲೆ $x_1$ ಆದರೆ ಸ್ವಾತಂತ್ರ್ಯಾಂಕ 1 ಉಳ್ಳ $x^2$ ಮೇರೆಗೆ $x_1^2$ ಹರಹಿರುತ್ತದೆ. ಮತ್ತು ಸ್ವಾತಂತ್ರ್ಯಾಂಕ ($n$–1) ಉಳ್ಳ $x^2$ಮೇರೆಗೆ $\sum_{i=2}^{n} x_1^2$ ಹರಿಹಿರುತ್ತದೆ. ಇವೆರಡೂ ಸ್ವತಂತ್ರವಾಗಿರುವುವು. ಆದ್ದರಿಂದ $x^2{}_1/(x_2^2 + x_3^2 + \ldots\ldots + x_n^2)$ ವಿತರಣೆ $\beta_2[\frac{1}{2}, \frac{1}{2}$ (n-1) ] ವಿವರ್ತದಂತಿರುವುದು. ಅದ್ದರಿಂದ

$$t = \sqrt{(n-1)x_1^2/(x^2 + \ldots\ldots + x_n^2)}$$

ನಿದರ್ಶಜ ಸ್ವಾತಂತ್ರ್ಯಾಂಕ ($n$-1) ಇರುವ ಸ್ಟೂಡೆಂಟನ $t$ಯಂತೆ ಹರಹಿರುವುದು ದತ್ತ ನಿದರ್ಶನದಿಂದ ದೊರೆತ $t$ ಬೆಲೆಯನ್ನು $t$ ಕೋಷ್ಟಕದ ಸಹಾಯದಿಂದ ಪರೀಕ್ಷಿಸಬಹುದು. ಯಾದೃಚ್ಛಿಕ ನಿದರ್ಶನದ $n$ ಬೆಲೆಗಳ ಪೈಕಿ ಯಾವುದಾದರೂ ನಿರ್ದಿಷ್ಟ ಒಂದು ಬೆಲೆಯ ವರ್ಗಕ್ಕೂ ಉಳಿದ $n$-1 ಬೆಲೆಗಳ ವರ್ಗ ಸಂಕಲನಕ್ಕೂ ಇರುವ ನಿಷ್ಪತ್ತಿ ತಾತ್ತ್ವಿಕವಾಗಿ ದತ್ತ ನಿದರ್ಶನದ ಅವೇಕ್ಷಿತ ನಿಷ್ಪತ್ತಿಗಿಂತ ಹೆಚ್ಚಾಗಿರುವ ಸಂಭಾವ್ಯತೆ $P$ಯನ್ನು ಕೋಷ್ಟಕದಿಂದ ಕಂಡುಹಿಡಿಯುತ್ತೇವೆ. ಆದ್ದರಿಂದ ಯಾವುದೇ ಒಂದು ಅವೇಕ್ಷಣೆಯ ವರ್ಗವನ್ನು ಉಳಿದ ಅವೇಕ್ಷಣೆಗಳ ವರ್ಗಸಂಕಲನದಿಂದ ಭಾಗಿಸಿ ಬಂದ ಲಬ್ಧ ಪ್ರಸಕ್ತ ನಿದರ್ಶನದ $x_1^2/(x_2^2 + \ldots\ldots + x_n^2)$ ಬೆಲೆಗಿಂತ ಹೆಚ್ಚಾಗಿರುವ ಸಂಭಾವ್ಯತೆ $nP(1-P)/(n^{-1})$ ಇರುವುದು. $P$ಕಡಿಮೆ ಇದ್ದು ಆದರೆ $n$ ದೊಡ್ಡದಾಗಿಲ್ಲದಿದ್ದರೆ ಈ ಸಂಭಾವ್ಯತೆಯ ಬೆಲೆ ಉಪಸಮವಾಗಿ $nP$ ಇರುವುದು. ಯಾವುದಾದರೂ ಭಾಗಲಬ್ಧಕ್ಕೆ ಸಂಭಾವ್ಯತೆ 0.05ಗಿಂತ ಕಡಿಮೆಯಾಗಿದ್ದರೆ $t$ಯ ಬೆಲೆ ಅರ್ಥವತ್ತಾಗಿದೆ ಎಂದು ಪರಿಗಣಿಸುತ್ತೇವೆ. (ಎಂ.ವಿ.ಜೆ.)

**ಕಿರುನೆಲ್ಲಿ :** ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಮೂಲಿಕೆ ಸಸ್ಯ. ಇದಕ್ಕೆ ನೆಲನೆಲ್ಲಿ ಎಂಬ ಹೆಸರೂ ಇದೆ. ವೈಜ್ಞಾನಿಕ ನಾಮ ಫಿಲ್ಯಾಂತಸ್ ಫ್ರಾಟೆರ್ನಸ್. ಇದರ ತವರು ಪ್ರಾಯಶಃ ಪಶ್ಚಿಮ ಪಾಕಿಸ್ತಾನ ಸಾಮಾನ್ಯವಾಗಿ ಉಷ್ಣಪ್ರದೇಶಗಳಲ್ಲಿಯೂ ಶೀತಪ್ರದೇಶದ ಸಾಗುವಳಿ ಮಾಡುವ ಪ್ರದೇಶಗಳಲ್ಲೂ ಕಳೆಸಸ್ಯವಾಗಿ ಬೆಳೆಯುತ್ತದೆ.

ಕಿರುನೆಲ್ಲಿ ಸು. 60 ಸೆಂಮೀ ಉದ್ದ ಬೆಳೆಯುವ ವಾರ್ಷಿಕ ಗಿಡ. ಕಾಂಡ ದುಂಡಗೆ ಮೃದುವಾಗಿದೆ. ಎಲೆಗಳು ಸರಳ; ಕಾಂಡದ ಮೇಲೆ ದ್ವಿಲಂಬ ಸಾಲುಗಳಲ್ಲಿ ಜೋಡಣೆಯಾಗಿವೆ. ಬಣ್ಣ ಹಳದಿ, ಬಿಳಿ ಇಲ್ಲವೆ ಹಸಿರು. ಗಂಡುಹೂವಿನಲ್ಲಿ ಮೂರು ಕೇಸರಗಳಿವೆ. ಇವುಗಳ ದಂಡಗಳು ಒಂದರೊಡನೊಂದು ಕೂಡಿಕೊಂಡಿವೆ. ಹೆಣ್ಣುಹೂವಿನಲ್ಲಿ ಮೂರು ಸಂಯುಕ್ತ ಕಾರ್ಪೆಲ್‌ಗಳಿಂದಾದ ಉಚ್ಚಸ್ಥಾನದ ಅಂಡಾಶಯವಿದೆ. ಇದರಲ್ಲಿ 3 ಕೋಣೆಗಳಿದ್ದು ಒಂದೊಂದರಲ್ಲೂ ಎರಡೆರಡು ಅಂಡಕಗಳು ಅಕ್ಷಸ್ಥ ಅಂಡಕಾಧಾರಕ್ಕೆ ಸೇರಿಕೊಂಡಿದೆ. ಫಲ ಸಂಪುಟ ಮಾದರಿಯದು.

ಕಿರುನೆಲ್ಲಿ ಜೀರ್ಣಕಾರಿ. ಅಲ್ಲದೆ ಇದಕ್ಕೆ ಮುಖ್ಯವಾಗಿ ಸಂಕುಚಿಸುವ, ಜ್ವರ ತಗ್ಗಿಸುವ ಮತ್ತು ಮೂತ್ರಸ್ರಾವವನ್ನು ಉತ್ತೇಜಿಸುವ ಔಷಧೀಯ ಗುಣಗಳಿವೆ. ಎಲೆಗಳಲ್ಲಿನ ಪೊಟ್ಯಾಸಿಯಂ ಮೂಲವಸ್ತು ಮೂತ್ರಸ್ರಾವ ಸಂಬಂಧಿ ರೋಗದ ನಿವಾರಣೆಗೆ ಮುಖ್ಯ ಕಾರಣವಾಗಿದೆ. ಗಿಡದ ರಸವನ್ನು ಮಹೋದರ ಮತ್ತು ಮೂತ್ರ ಹಾಗೂ ಜನನಾಂಗ ದ್ವಾರದ ರೋಗಗಳಿಗೆ ಬಳಸುತ್ತಾರೆ. ಆಗತಾನೇ ಕತ್ತರಿಸಿದ ಬೇರುಗಳನ್ನು ಕಾಮಾಲೆ ರೋಗಕ್ಕೆ ಉಪಯೋಗಿಸುತ್ತಾರೆ. ಹಾಲಿನಲ್ಲಿ ಬೆರೆಸಿದ ಬೇರುಗಳನ್ನು ಕ್ಷೀರಸ್ರಾವಕ ವಸ್ತುವಾಗಿ ಬಳಸುವುದುಂಟು. ರಾಜಸ್ತಾನದಲ್ಲಿ ಬೇರುಗಳ ರಸವನ್ನು ಒಂಟೆಗಳ ಪಚನಾಂಗ ಸಂಬಂಧಿ ರೋಗಗಳಿಗೆ ಬಳಸುತ್ತಾರೆ. ಎಲೆ ಮತ್ತು ಬೇರುಗಳ ಕಷಾಯವನ್ನು ಅಕ್ಕಚ್ಚಿನಲ್ಲಿ ಬೆರೆಸಿ, ಹುಣ್ಣು, ಊತ ಮತ್ತು ಗಾಯಗಳಿಗೆ ಹಚ್ಚಲು ಬಳಸುತ್ತಾರೆ. ಗಿಡದ ಹಾಲ್ರೊರೆಯನ್ನು ಹಣ್ಣುಗಳಿಗೆ ಹಾಕುತ್ತಾರೆ. ಎಲೆಗಳಿಂದ ತೆಗೆದ ಕಷಾಯವನ್ನು ನೆತ್ತಿ ತಂಪಾಗಿರಲು ಉಪಯೋಗಿಸುತ್ತಾರೆ. ಎಲೆ ಮತ್ತು ಬೇರುಗಳಿಂದ ಪಡೆಯಬಹುದಾದ ಆಲ್ಕೊಹಾಲ್ ಸಾರಕ್ಕೆ ಬ್ಯಾಕ್ಟೀರಿಯ ನಿರೋಧಕ ಶಕ್ತಿಯಿದೆ.

ಒಣಗಿದ ಎಲೆಗಳಲ್ಲಿ ಫಿಲ್ಯಾಂತಿನ್ ಎಂಬ ಕಹಿಯಾದ ವಸ್ತು ಶೇ.0.4ರಷ್ಟೂ ರುಚಿ ಇಲ್ಲದ ಹೈಪೊಫಿಲ್ಯಾಂತಿನ್ ಎಂಬ ವಸ್ತು ಅಲ್ಪಸ್ವಲ್ಪವಾಗಿಯೂ ಬಣ್ಣವಿಲ್ಲದ ಮೇಣ ಶೇ. 5ರಷ್ಟೂ ಇವೆ. ಮೇಣದಲ್ಲಿ ತೈಲಾಮ್ಲ, ಆಲ್ಕೊಹಾಲುಗಳಿಂದ ರಚಿತವಾದ ಎಸ್ಟರುಗಳೂ ಬಿಡು ತೈಲಾಮ್ಲಗಳೂ ಹೈಡ್ರೋಕಾರ್ಬನ್‌ಗಳೂ ಇವೆ. ಕಾಂಡದಲ್ಲಿ ಸೆಪೋನಿನ್ ಎಂಬ ವಸ್ತು ಇದೆ. ಫಿಲ್ಯಾಂತಿನ್ ಕಪ್ಪೆ ಮತ್ತು ಮೀನುಗಳಿಗೆ ವಿಷಪ್ರಾಯವಾದದ್ದು. (ಎಚ್.ಎಸ್.ಎಸ್.ಕೆ.)

**ಕಿರುಮಿದುಳು :** ಹಿಮ್ಮೆದುಳಿನ ಹಿಂಭಾಗ (ಸೆರಿಬೆಲ್ಲಂ), ಶರೀರದ ಚಲನವಲನಗಳನ್ನು ಸಮನ್ವಯ ಮಾಡುವುದೂ ಶರೀರದ ಸಮಸ್ಥಿತಿಯನ್ನು ಕಾಪಾಡುವುದೂ ಇದರ ಕೆಲಸ. ಮೀನುಗಳಿಗಿಂತ ಕೆಳದರ್ಜೆಯ ಪ್ರಾಣಿಗಳಲ್ಲಿ ಇದು ಸಾಕಷ್ಟು ವಿಕಸಿತವಾಗಿಲ್ಲ. ಷಾರ್ಕ್ ಮೊದಲಾದ ಮೀನುಗಳಲ್ಲೂ ಹಕ್ಕಿಗಳಲ್ಲೂ ಮನುಷ್ಯನನ್ನೊಳಗೊಂಡಂತೆ ಸಸ್ತನಿಗಳಲ್ಲೂ ಇದು ಚೆನ್ನಾಗಿ ವಿಕಸಿತವಾಗಿದೆ (**ನೋಡಿ– ಮಿದುಳು**). (ಎಂ.ಬಿ.)

**ಕಿರ್ಗೀಸ್ತಾನ್:** ಮಧ್ಯಏಷ್ಯದ ಒಂದು ಸ್ವತಂತ್ರ ಗಣರಾಜ್ಯ. ಉ.ಅ. 38°–43° ಪೂ.ರೇ. 68°–80° ವರೆಗೆ ವಿಸ್ತರಿಸಿರುವ ಈ ಪ್ರದೇಶವನ್ನು ಕಿರ್ಗೀಜಿಯ ಎಂದೂ ಕರೆಯುವರು. ಉತ್ತರ ಮತ್ತು ವಾಯವ್ಯಗಳಲ್ಲಿ ಕಜಕ್ ಗಣರಾಜ್ಯ. ಪಶ್ಚಿಮದಲ್ಲಿ ಉಜ್ಬೆಕ್ ಗಣರಾಜ್ಯ ದಕ್ಷಿಣ ಮತ್ತು ನೈಋತ್ಯಗಳಲ್ಲಿ ತಾಜಿಕ್ ಗಣರಾಜ್ಯ, ಆಗ್ನೇಯದಲ್ಲಿ ಚೀನ ಜನತಾ ಗಣರಾಜ್ಯ– ಇದರ ಮೇರೆಗಳು. ವಿಸ್ತೀರ್ಣ 199,900 ಚ.ಕಿಮೀ. ಜನಸಂಖ್ಯೆ 54,82,000 (2009) ರಾಜಧಾನಿ ಬಿಸ್ಕೇಕ್. ವಿಸ್ತೀರ್ಣ 127 ಚ.ಕಿಮೀ. ಜನಸಂಖ್ಯೆ 1,250,000 (2007).

**ಮೇಲ್ಮೈ ಲಕ್ಷಣ** : ಬೆಟ್ಟಗುಡ್ಡಗಳಿಂದ ಕೂಡಿದ ಕಿರ್ಗಿಜ್ ರಾಜ್ಯದ ಬಹುಭಾಗ ಸಮುದ್ರಮಟ್ಟಕ್ಕೆ 1524 ಮೀಗೂ ಹೆಚ್ಚಿನ ಎತ್ತರದಲ್ಲಿದೆ. ಟೆಯೆನ್ ಷಾನ್ ಶ್ರೇಣಿಗಳ ಪಶ್ಚಿಮ ಭಾಗ ಈ ರಾಜ್ಯದಲ್ಲಿದೆ. ಈ ಶ್ರೇಣಿಗೆ ಸೇರಿದ ಪೋಬೇಡಾ (7396 ಮೀ) ಮತ್ತು ಖಾನ್‌ಟೆಂಗ್ರಿ (6915 ಕಿಮೀ) – ಈ ಎರಡು ಶಿಖರಗಳು ಸೋವಿಯತ್–ಚೀನಿ ಗಡಿಯಲ್ಲಿವೆ. ಪೋಬೇಡಾ ಶಿಖರ ಸೋವಿಯತ್ ದೇಶದ ಅತ್ಯುನ್ನತ ಶಿಖರಗಳಲ್ಲಿ ಎರಡನೆಯದು. ಹಿಮಾವೃತವಾದ ಈ ಶಿಖರಗಳು ಕೂಡಿದಂತಿವೆ. ಈ ಗುಂಟಿನ ಬಳಿಯಿಂದ ಪಶ್ಚಿಮಕ್ಕೆ ಕುಂಗೈ–ಅಲಾ–ಟೌ ಪರ್ವತ ಶ್ರೇಣಿಯೂ ನೈಋತ್ಯಕ್ಕೆ ಕೊಕ್ಷಾಲ್–ಟೌ ಶ್ರೇಣಿಯೂ ಹಬ್ಬಿವೆ. ಕೊಕ್ಷಾಲ್–ಟೌ ಪರ್ವತ ಶಿಖರ ಸೋವಿಯತ್–ಚೀನ ಗಡಿಯ ಗುರುತಾಗಿದೆ. ಕುಂಗೈ–ಅಲಾ–ಟೌ ಪರ್ವತಶ್ರೇಣಿ ಕಿರ್ಗೀಜ಼್ ಬೆಟ್ಟದ ಸಾಲುಗಳ ಚಾಚಿನಿಂದ ಪಶ್ಚಿಮಕ್ಕೆ ಮತ್ತಷ್ಟು ದೂರ ವ್ಯಾಪಿಸಿಕೊಂಡಿದೆ. ಅಲಾಯ್ ಪರ್ವತಗಳು ಕೊಕ್ಷಾಲ್–ಟೌ ಪರ್ವತ ಶ್ರೇಣಿಯ ಮುಂದುವರಿಕೆ. ಕಿರ್ಗೀಜಿಯದ ಬಹುಭಾಗ ಈ ಪರ್ವತದ ಕವಲಿನಿಂದ ಆವೃತವಾಗಿದೆ.

ದೇಶದ ಆಳವಾದ ಸರೋವರಗಳಲ್ಲಿ ಒಂದಾದ ಇಸಿಕ್‌ಕಲ್ ಇರುವುದು ಪೂರ್ವದ ಪ್ರಸ್ಥಭೂಮಿಯಲ್ಲಿ. 5249 ಮೀ. ಎತ್ತರಕ್ಕೆ ಹೋಗುವ ಪೊಬೇಡಾ ಮತ್ತು ಕಾನ್–ಟ್ರೆಂಗ್ರಿ ಪರ್ವತಗಳ ದಟ್ಟ ಭಾಗದಿಂದ ಪಶ್ಚಿಮಕ್ಕೆ ವ್ಯಾಪಿಸಿರುವ ಬೆಟ್ಟಸಾಲುಗಳಲ್ಲಿ ಮೂರನೆಯದು ತೆರ್‌ಸ್ಕೈ–ಆಲಾ–ಟೌ ಪರ್ವತಸಾಲು. ಇದು 5249 ಮೀ ಎತ್ತರವನ್ನು ನಿಲುಕುತ್ತದೆ. ಇಸಿಕ್–ಕಲ್ ಸರೋವರದ ದಕ್ಷಿಣ ಅಂಚಿನ ಉದ್ದಕ್ಕೂ ಅದರ ತಪ್ಪಲು ಹರಡಿದೆ. ಈ ಪ್ರಸ್ಥಭೂಮಿಯ ಪ್ರಮುಖ ಪ್ರದೇಶದ ಅಗಲ 198 ಕಿಮೀ 3030 ಮೀ ಎತ್ತರದಲ್ಲಿರುವ ಮತ್ತು ಪೂರ್ವ–ಪಶ್ಚಿಮ ದಿಕ್ಕುಗಳಿಗೆ ಹರಡಿರುವ ಈ ಪ್ರದೇಶದಲ್ಲಿ ಉದ್ಭವಿಸುವ ಮುಖ್ಯ ನದಿಗಳು ಎರಡು : ಇವುಗಳಲ್ಲಿ ಚೂ ನದಿ ಒಂದು. ಇದು ಕುಂಗೈ–ಆಲಾ–ಟೌ ಮತ್ತು ಕಿರ್ಗೀಜ್ ಶ್ರೇಣಿಗಳ ನಡುವೆ ಇರುವ ಕಡಿದಾದ ಕಣಿವೆಗಳ ಮೂಲಕ ಉತ್ತರಕ್ಕೆ ಹರಿದು. ತರುವಾಯ ಈಶಾನ್ಯಕ್ಕೆ ತಿರುಗಿ, ಸು. 144 ಕಿಮೀಗಳಷ್ಟು ದೂರ ಹರಿದು ಕಿರ್ಗೀಜ಼ಿಯ ಮತ್ತು ಕಜಕ್‌ಸ್ತಾನಗಳ ನಡುವಣ ಗಡಿಯಾಗಿ ಪರಿಣಮಿಸುತ್ತದೆ. ಇಲ್ಲಿ ಹುಟ್ಟುವ ಇನ್ನೊಂದು ನದಿ ನರಿನ್. ಪೂರ್ವಕ್ಕೆ ಫರ್ಗಾನ ಕಣಿವೆಯ ಮೂಲಕ ಪೂರ್ವಕ್ಕೆ ಹರಿಯುತ್ತದೆ. ಇದು ಸೀರ್ ದಾರ್ಯದ ಉಪನದಿ. ಕೊಕ್ಷಾಲ್ ಮತ್ತು ಅಲಾಯ್ ಪರ್ವತ ಶ್ರೇಣಿಗಳು ಸೇರುವ ಬೆಟ್ಟಗಳ ಗಂಟಿನ ಭಾಗದಿಂದ ಫರ್ಗಾನ ಶ್ರೇಣಿ ಕವಲೊಡೆದು ವಾಯವ್ಯಾಭಿಮುಖವಾಗಿ ಸಾಗುತ್ತದೆ.

ಕಿರ್ಗೀಜ಼ಿಯ ಪಶ್ಚಿಮ ಪ್ರದೇಶ ಪೂರ್ವದ್ದಕ್ಕಿಂತ ತಗ್ಗಾಗಿದೆ. ಅದು ಸ್ಥೂಲವಾಗಿ ಕುದುರೆಯ ಲಾಳದ ಆಕಾರದಲ್ಲಿ ಪಶ್ಚಿಮಕ್ಕೆ ತೆರೆದಂತಿದ್ದು, ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಫರ್ಗಾನ ಕಣಿವೆಯಿಂದ ಆವೃತವಾಗಿದೆ. ಈ ಕಣಿವೆಯ ಮುಖ್ಯಭಾಗ ಉಜ್ಬೆಕಿಸ್ತಾನಕ್ಕೂ ಇದರ ಪಶ್ಚಿಮದ ಒಂದು ಭಾಗ ತಾಜಿಕ್‌ಸ್ತಾನಕ್ಕೂ ಸೇರಿವೆ. ಈ ಭಾಗದಲ್ಲಿ ಹರಿಯುವ ಸೀರ್ ದಾರ್ಯ ನದಿಯನ್ನು ಕಾರಾ ದಾರ್ಯಾ ಎಂದು ಕರೆಯುತ್ತಾರೆ. ಈ ನದಿ ಕಿರ್ಗೀಜ಼ಿಯದ ನೈಋತ್ಯ ಭಾಗದಲ್ಲಿ ಹುಟ್ಟುತ್ತದೆ.

**ವಾಯುಗುಣ**: ಭೂಮಿಯ ಎತ್ತರ ಮತ್ತು ತೆರಪಿಗೆ ಅನುಗುಣವಾಗಿ ವಾಯುಗುಣ ವ್ಯತ್ಯಾಸ ಹೊಂದುತ್ತದೆ. ಪಶ್ಚಿಮಕ್ಕೂ ಉತ್ತರಕ್ಕೂ ಮುಖ ಮಾಡಿರುವ ಇಳಕಲು ಪ್ರದೇಶಗಳಲ್ಲಿ ಹೆಚ್ಚು ತೇವದ ಗಾಳಿ ಬೀಸುವುದರಿಂದಲೂ ಬಿಸಿಲು ಕಡಿಮೆಯಾಗಿರುವುದರಿಂದಲೂ ಅಲ್ಲಿ ಸಸ್ಯಸಂಪತ್ತು ಹೇರಳವಾಗಿದೆ. ಕಿರ್ಗೀಜ಼ಿಯದಲ್ಲಿ 3030ಮೀ ಎತ್ತರದ ವರೆಗೆ ಮಳೆ ಕ್ರಮವಾಗಿ ಹೆಚ್ಚುತ್ತಾ ಹೋಗುತ್ತದೆ. ಅದಕ್ಕೂ ಹೆಚ್ಚಿನ ಎತ್ತರದಲ್ಲಿ ಬೇಸಗೆಯಲ್ಲಿ ಸಹ ಹಿಮಗಡ್ಡೆಯಿರುತ್ತದೆ. ಫ್ರೂನ್ಜ಼ೆನಗರದ ಪ್ರದೇಶದಲ್ಲಿ (769 ಮೀ) ವಾರ್ಷಿಕ ಮಳೆ 30 ಸೆಂ.ಮಿ.; ಫ಼ೆವಾಲ್ಸ್‌ ಬಳಿ (1757 ಮೀ) 36 ಸೆಂಮೀ ಜನವರಿಯ ಕನಿಷ್ಠ ಉಷ್ಣತೆ ಈ ಎರಡು ಕಡೆಗಳಲ್ಲಿ –4° ಸೆಂ. ಮತ್ತು ಪ್ಷೆವಾಲ್ಸ್‌ನಲ್ಲಿ 18° ಸೆಂ.

**ಸ್ವಾಭಾವಿಕ ಸಸ್ಯಗಳು** : ಹಿಮಘನೀಕರಣ ಮತ್ತು ಭೂಮಿಯ ಎತ್ತರಕ್ಕನುಗುಣವಾಗಿ ಇಲ್ಲಿಯ ಸಸ್ಯಗಳು ಆಲ್ಪ್ಸ್ ಪರ್ವತಗಳ ಸಸ್ಯಗಳನ್ನೇ ಹೋಲುತ್ತದೆ. ಉಪ ಆಲ್ಪ್ಸ್ ಮಾದರಿಯ, ಮನೋಹರವಾದ ಹಾಗೂ ವಿವಿಧ ಹೂಗಳಿಂದ ಕೂಡಿದ ಹುಲ್ಲುಗಾವಲುಗಳು ಈ ರಾಜ್ಯದಲ್ಲಿವೆ. ಕಣಿವೆಯ ತಪ್ಪಲುಗಳಲ್ಲಿ ಮತ್ತು ಉತ್ತರದ ಇಳಿಭೂಮಿಗಳಲ್ಲಿ ಹೊರತು ಇತರ ಕಡೆಗಳಲ್ಲಿ ಅರಣ್ಯಗಳು ವಿರಳ. ಅರಣ್ಯಗಳು ಇರುವ ಕಡೆ ಪೈನ್ ಮಾದರಿಯ ಗಿಡಗಳೇ ಹೆಚ್ಚು. ಫರ್ ಮತ್ತು ಎರಡು ವಿಧಗಳ ಸ್ಪ್ರೂಸ್ ಜಾತಿಯ ಗಿಡಗಳು. ಮಾಪಲ್, ಅಷ್, ಅಸ್ಪೆನ್ ಮತ್ತು ಜಾನಿಪರ್ ಮರಗಳು ಇಲ್ಲಿ ಬೆಳೆಯುತ್ತವೆ. ಫ್ರೂನ್ಜ಼ೆನಗರದ ಪೂರ್ವ ಮತ್ತು ಪಶ್ಚಿಮಕ್ಕೆ ಹರಡಿರುವ ಕಿರ್ಗೀಜ್ ಪರ್ವತಶ್ರೇಣಿಯ ಉತ್ತರ ಭಾಗದ ಫಲವತ್ತಾದ ಮೆಕ್ಕಲು ಮಣ್ಣಿನ ಪ್ರದೇಶ; ಸಮುದ್ರಮಟ್ಟಕ್ಕೆ 1212 ಮೀ ಎತ್ತರಕ್ಕಿರುವ ಕೃಷಿ ನೆಲದ ಪ್ರದೇಶ; 2424 ಮೀ ಎತ್ತರಕ್ಕಿರುವ ಶಂಕಾಕಾರದ ಗಿಡಗಳಿರುವ ಪ್ರದೇಶ; ಸದಾ ಹಿಮದಿಂದ ಕೂಡಿದ. 3333 ಸೆಂಮೀ ಎತ್ತರಕ್ಕಿರುವ ಉಪ ಆಲ್‌ಪೈನ್ ಮತ್ತು ಆಲ್ಪ್ಸ್ ಪರ್ವತಗಳ ಮಾದರಿಯ ಹುಲ್ಲುಗಾವಲುಗಳಿರುವ ಪ್ರದೇಶ ಹೀಗೆ ಉತ್ತರದ ಇಳಿಜಾರು ಪ್ರದೇಶವನ್ನು ವಿಭಜಿಸಬಹುದು. ಫರ್ಗಾನ ಕಣಿವೆಯ ಕಿರ್ಗೀಜ್ ಭಾಗವೂ ಜಲಾಲ್–ಅಬಾದ್ ಮತ್ತು ಆಷ್ ನಗರಗಳ ಸುತ್ತುಮುತ್ತಲ

ಪ್ರದೇಶವೂ ಫಲವತ್ತಾಗಿವೆ. ಸೇಬು, ಮರಸೇಬು, ಪ್ಲಮ್. ಆಫ್ರಿಕನ್ ಮತ್ತು ವಾಲ್ನಟ್‌ಗಳು ಕೆಲವು ಕಣಿವೆಗಳಲ್ಲಿ ಸ್ವಾಭಾವಿಕವಾಗಿಯೇ ಬೆಳೆಯುತ್ತವೆ. ಕಾಡು ಮೃಗಗಳು ಇಲ್ಲಿ ಕಡಿಮೆ. ಅನೇಕ ಬಗೆಯ ಹಕ್ಕಿಗಳು ತಗ್ಗು ಪ್ರದೇಶಗಳಲ್ಲಿ ಹೇರಳವಾಗಿವೆ. ಮೌಫ್ಲಾನ್, ಜಿಂಕೆ, ಮಾರ್‌ಮಾಟ್ ಅಳಿಲುಗಳಿವೆ.

**ಜನಜೀವನ** : ಕಿರ್ಗೀಝ್ ಜನ ತುರ್ಕಿ ಬುಡಕಟ್ಟಿಗೆ ಸೇರಿದವರು. 12ನೆಯ ಶತಮಾನದ ವರೆಗೆ ಬೈಕಾಲ್ ಸರೋವರ ಮತ್ತು ಯೆನಿಸೇ ನದಿಗಳ ನಡುವಣ ಸೈಬೀರಿಯ ಬಯಲುಗಳಲ್ಲಿ ಅವರು ವಾಸವಾಗಿದ್ದರು. ಚೀನಿ ಚರಿತ್ರಕಾರರು ಅವರನ್ನು 10ನೆಯ ಶತಮಾನದಲ್ಲಿ ಕಾಕಾಸ್ ಎಂದೂ 13ನೆಯ ಶತಮಾನದಲ್ಲಿ ಕಿ-ಲಿ-ಕಿ-ಟ್‌ಝ್ ಎಂದೂ ಕರೆದಿದ್ದಾರೆ. ಜಂಗೇಸ್ ಖಾನನ ದಾಳಿಗಳನ್ನು ಸಹಿಸಲಾರದೆ ಅವರು 13ನೆಯ ಶತಮಾನದಲ್ಲಿ ದಕ್ಷಿಣಕ್ಕೆ ಹೊರಟು ಟಿಯೆನ್ ಷಾನ್ ಮತ್ತು ಪಾಮಿರ್ ಪ್ರದೇಶವನ್ನು ಸೇರಿ ಹಲವಾರು ಶತಮಾನಗಳ ಕಾಲ ಅಲೆಮಾರಿಜೀವನವನ್ನೇ ಸಾಗಿಸಿದರು. ಪಶುಪಾಲನೆಯೇ ಅವರ ಜೀವನೋಪಾಯವಾಗಿತ್ತು. ಹೇರನ್ನು ಹೊರಲು ಹಾಗೂ ಸಂಚಾರ ಮಾಡಲು ಅವರು ಬಲಯುತವಾದ ಅಶ್ವ, ಯಾಕ್ ಮತ್ತು ಎರಡು ಡುಬ್ಬಗಳ ಒಂಟೆಗಳನ್ನು ಉಪಯೋಗಿಸುತ್ತಾರೆ. ಮಂಗೋಲಲರು ಇಡೀ ತುರ್ಕಿಸ್ತಾನವನ್ನು ಗೆದ್ದು ಮೂರು ಶತಮಾನಗಳ ವರೆಗೆ ಸಾಮ್ರಾಜ್ಯ ಸ್ಥಾಪಿಸಿದ್ದ ಕಾಲದಲ್ಲೂ ಕಿರ್ಗೀಝ್ ಜನ ಮಾತ್ರ ತಮ್ಮ ನೆಲೆನಾಡಿನ ಬೆಟ್ಟಗುಡ್ಡಗಳಿಂದಾಗಿ ಸುರಕ್ಷಿತವಾಗಿದ್ದರು. ಬೂಕಾರ ಮತ್ತು ಉಜ್ಬೆಕ್ ರಾಜ್ಯಗಳ ಅಮೀರರು ಅವರನ್ನು ತಮ್ಮ ಅಧೀನಕ್ಕೆ ತರಲು ಯತ್ನಿಸಲಿಲ್ಲ. 18ನೆಯ ಶತಮಾನದ ಪ್ರಾರಂಭದಲ್ಲಿ ಕಿರ್ಗೀಝ್ ಜನರು ಕಲ್‌ಮಿಕ್ ಜನರೊಡನೆ ಯುದ್ಧ ಮಾಡಬೇಕಾಯಿತು.

ಕಿರ್ಗೀಝ್ ಪ್ರದೇಶದಲ್ಲಿ 19ನೆಯ ಶತಮಾನದ ಪ್ರಥಮಾರ್ಧದಲ್ಲಿ ಕೂಡ ಕಿರ್ಗೀಝರು ಹಿಂದಿನಂತೆಯೇ ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದರು. ಅವರು ಸ್ವಲ್ಪಮಟ್ಟಿಗೆ ತಮ್ಮ ಬಣದ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದರಾದರೂ ಭಾಗಶಃ ಕೊಕ್ಯಾಂಡ್ ಪ್ರದೇಶದ ಖಾನರ ಅಧೀನರಾಗಿದ್ದರು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಕಿರ್ಗೀಝಿಯದ ಮೇಲೆ ರಷ್ಯ ದಾಳಿ ನಡೆಸಿ ಅದನ್ನು ತನ್ನ ಪ್ರಮುಖ ವಸಾಹತನ್ನಾಗಿ ಮಾಡಿಕೊಂಡಿತು. ಫಲವತ್ತಾದ ಭೂಮಿಯನ್ನೆಲ್ಲ ರಷ್ಯದ ನೆಲಸಿಗರು ಹಂಚಿಕೊಂಡರು. ಈ ಅಕ್ರಮ 1916ರ ಕ್ರಾಂತಿಗೆ ಮುಖ್ಯ ಕಾರಣವಾಯಿತು. ಈ ಕ್ರಾಂತಿಯನ್ನು ಹತ್ತಿಕ್ಕಲು ಸರ್ಕಾರ ತೀವ್ರ ಕ್ರಮ ಕೈಕೊಂಡಿತು. ಕಿರ್ಗೀಝ್ ಜನ ಬಹಳ ಕಷ್ಟನಷ್ಟಗಳಿಗೀಡಾದರು. 1917ರ ಕ್ರಾಂತಿಗೆ ಹಿಂದೆ ಕಿರ್ಗೀಝ್‌ರನ್ನು ಒಂದು ರಾಷ್ಟ್ರೀಯ ಅಥವಾ ರಾಜಕೀಯ ಘಟಕಕ್ಕೆ ಸೇರಿದವರೆಂದು ಪರಿಗಣಿಸಿರಲಿಲ್ಲ. ಈಗಿನ ಕಿರ್ಗೀಝಿಯ ಪ್ರದೇಶ ಹಲವು ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿತ್ತು. 1926ರ ವರೆಗೆ ಕಿರ್ಗೀಝರನ್ನು ಕಾರಾ-ಕಿರ್ಗೀಝ್ ಎಂದು ತಪ್ಪಾಗಿ ಕರೆಯುತ್ತಿದ್ದರು. ಕ್ರಾಂತಿಯ ತರುವಾಯ, ಸೋವಿಯತ್ ಆಡಳಿತದ ವಿರುದ್ಧ ನಡೆಯುತ್ತಿದ್ದ ಮರಸು ಕಾಳಗಕ್ಕೆ ಕಿರ್ಗೀಝಿಯವೊಂದು ನೆಲೆಯಾಗಿತ್ತು. 1924 ಅಕ್ಟೋಬರ್ 14ರಂದು ಕಿರ್ಗೀಝಿಯಕ್ಕೆ ಸ್ವಯಮಾಡಳಿತದ ಅಧಿಕಾರ ಲಭ್ಯವಾಯಿತು. ಅದು ಸಮಾಜವಾದಿ ಗಣರಾಜ್ಯವಾದ್ದು 1926 ಫೆಬ್ರವರಿ 1ರಂದು. ಅದು ಕಿರ್ಗೀಝ್ ಸೋವಿಯತ್ ಸಮಾಜವಾದಿ ಗಣರಾಜ್ಯವೆಂದು ಘೋಷಿತವಾದ್ದು 1936 ಡಿಸೆಂಬರ್ 5ರಂದು.

ಕಿರ್ಗೀಸ್ತಾನದ ಆಷ್ ನಗರ ಇದು ಆಷ್-ಖೊರೊಗ್ ರಸ್ತೆಯ ಕೊನೆಯ ಪಟ್ಟಣ ಹಾಗೂ ರೇಷ್ಮೆ ಕೈಗಾರಿಕೆಯ ಮುಖ್ಯಕೇಂದ್ರ. ಕಿಝಿಲ್-ಕಿಯ ನಗರ ಕಲ್ಲಿದ್ದಲು ಗಣಿಗಳ ಕೇಂದ್ರ. ಪ್ಷೆವಾಲ್ಸ್ಕ್ ಇಸಿಕ್-ಕಲ್ ಸರೋವರದ ದಡದ ಮೇಲಿದೆ. ಇದು ದ್ರಾಕ್ಷಾರಸ ಮತ್ತು ಬೀರ್ ತಯಾರಿಕಾ ಕೇಂದ್ರ. ಟೋಕ್ಮಾಕ್ ಮೋಟರುವಾಹನ ರಿಪೇರಿ ಮತ್ತು ನಾರು ಹದಗೊಳಿಸುವ ಕೇಂದ್ರವಾಗಿದೆ.

ಕಿರ್ಗೀಝ್ ಗಣರಾಜ್ಯದಲ್ಲಿ ಸಾರ್ವತ್ರಿಕ ಶಾಲೆಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಸಾರ್ವತ್ರಿಕ ಶಾಲೆಗಳು, ಕೆಲವು ಬೋರ್ಡಿಂಗ್ ಶಾಲೆಗಳು ಸಹ ಇವೆ. ರಾಜಧಾನಿ ಬಿಸ್ಕೇಕ್‌ನಲ್ಲಿ ಪ್ರೌಢಶಿಕ್ಷಣ ಸಂಸ್ಥೆಗಳಲ್ಲಿ ಕೃಷಿ, ವೈದ್ಯಕೀಯ ಹಾಗೂ ಉಪಾಧ್ಯಾಯ ಶಿಕ್ಷಣಕ್ಕೆ ಅವಕಾಶವಿದೆ. ಕಿರ್ಗೀಝ್ ರಾಜ್ಯ ವಿಶ್ವವಿದ್ಯಾಲಯದ ಸ್ಥಾಪನೆಯಾದ್ದು 1951ರಲ್ಲಿ. ಸಂಯುಕ್ತ ಸೋವಿಯತ್ ಸಮಾಜವಾದಿ ಗಣರಾಜ್ಯದ ವಿಜ್ಞಾನ ಅಕಾಡೆಮಿಯ ಆಧಾರದ ಮೇಲೆ ಇಲ್ಲಿಯ ವಿಜ್ಞಾನ ಅಕಾಡೆಮಿಯನ್ನು 1954ರಲ್ಲಿ ಸ್ಥಾಪಿಸಲಾಯಿತು.

**ಕೃಷಿ, ಕೈಗಾರಿಕೆ, ಸಾರಿಗೆ :** ಕ್ರಾಂತಿಗೆ ಹಿಂದೆ ಈಗಿನ ಕಿರ್ಗೀಝಿಯ ಪ್ರದೇಶದ ಜನ ಕೃಷಿಯಲ್ಲಿ ನಿರತರಾಗಿದ್ದರು. ಇತ್ತೀಚಿಗೆ ವಿವಿಧ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ಕಲ್ಲಿದ್ದಲು ಮತ್ತು ಸೀಸದ ಅದಿರನ್ನು ತೆಗೆಯುವ ಗಣಿ ಕೆಲಸ, ವ್ಯವಸಾಯ, ಹೈನು ಕೈಗಾರಿಕೆ, ಸಕ್ಕರೆ ತಯಾರಿಕೆ ; ಕಬ್ಬಿಣೇತರ ಲೋಹ ಕೈಗಾರಿಕೆ (ಪಾದರಸ ಮತ್ತು ಆಂಟಿಮೊನಿ ಲೋಹ), ಉತ್ತಮ ದರ್ಜೆಯ ತುಪ್ಪಟ-ಕುರಿಗಳ ಸಾಕಣೆ; ಉಣ್ಣೆ ಮಾರಾಟ, ಮಾಂಸವನ್ನು ಡಬ್ಬಗಳಲ್ಲಿ ತುಂಬುವುದು ; ಮರಗಳ ತೊಗಟೆಯಿಂದ ಚಾಪೆ, ಹಗ್ಗ ಮೊದಲಾದವುಗಳ ತಯಾರಿಕೆ ಮತ್ತು ವೈದ್ಯಕೀಯ ಉಪಯೋಗಕ್ಕಾಗಿ ಗಸಗಸೆ ಗಿಡಬೆಳೆಸುವುದು-ಇವು ಕಿರ್ಗೀಝಿಯದ ಪ್ರಮುಖ ಉದ್ಯಮಗಳು. ಗ್ರಾಮಾಂತರ ಪ್ರದೇಶದಲ್ಲಿ ಜಾನುವಾರುಗಳ ಸಾಕಣೆ ಹೆಚ್ಚುತ್ತಿದೆ. ಬೇಸಗೆಯಲ್ಲಿ ಉತ್ತರಭಾಗದ ಕಣಿವೆಗಳಲ್ಲಿ ಸಸ್ಯಗಳು ಯಥೇಚ್ಛವಾಗಿರುವುದರಿಂದ ದಕ್ಷಿಣದ ಮಂದೆಗಳನ್ನು ಅಲ್ಲಿಗೆ ಸಾಗಿಸುತ್ತಾರೆ.

ದಕ್ಷಿಣದಲ್ಲಿ ಸುಲ್ಯುಕ್ತ ಮತ್ತು ಕಿಝಿಲ್-ಕಿಯಗಳಲ್ಲೂ ಪೂರ್ವದಲ್ಲಿ ಕೋಕ್‌ಯಾಂಗಾಕ್ ತಾಷ್‌ಕುಮೆರ್‌ಗಳಲ್ಲೂ ಕಲ್ಲಿದ್ದಲು ಸಿಗುತ್ತದೆ. ಇದರ ವಾರ್ಷಿಕ ಉತ್ಪನ್ನ ಸು. 20,00,000 ಟನ್. ಪೂರ್ವ ಫರ್ಗಾನ ಕಣಿವೆಯ ಚಾಂಗಿರ್‌ಟಾಷ್ ಮತ್ತು ಮೈಲಿ-ಸೈಗಳಲ್ಲಿ ತೈಲನಿಕ್ಷೇಪಗಳಿವೆ. ಹೊಸ ತೈಲನಿಕ್ಷೇಪಗಳು ಕೋಕ್‌ಟಾಷ್ ಮತ್ತು ಇಜ್ಬಸ್ಕೆಂಟ್‌ಗಳಲ್ಲಿ ದೊರಕಿವೆ. ಜೇಲಿಸ್ಕಿಯಲ್ಲೂ ಆಲಾ-ಟಾ ಪರ್ವತಗಳ ದಕ್ಷಿಣದ ಇಳುಕುಲು ಪ್ರದೇಶದ ಆಕುಟ್ಯುಝ್‌ನಲ್ಲೂ ಪಾದರಸ ಮತುಝಾ ಆಂಟಿಮೊನಿ ಗಣಿಗಳಿವೆ. ಟ್ಯುಯ-ಮುಯುನ್ ಮತ್ತು ಮೈಲಿ-ಸೈ ಬಳಿ ಯುರೇನಿಯಂ ಲೋಹ ಸಿಗುತ್ತದೆ.

ರಾಜಧಾನಿ ಬಿಸ್ಕೇಕ್ ಸುತ್ತಲೂ ಅನೇಕ ಸಣ್ಣಪುಟ್ಟ ಕೈಗಾರಿಕೆಗಳ ಸ್ಥಾಪನೆಯಾಗಿದೆ. ಅವುಗಳಲ್ಲಿ ರೇಷ್ಮೆ ಮತ್ತು ಹತ್ತಿಬೀಜದಿಂದ ಎಣ್ಣೆ ತೆಗೆಯುವ ಕಾರ್ಖಾನೆಗಳು ಮತ್ತು ಹತ್ತಿ ಬಿಡಿಸುವ ಯಂತ್ರಾಗಾರಗಳು ಮುಖ್ಯವಾದುವು. ವ್ಯವಸಾಯ ಸಲಕರಣೆಗಳ ಕಾರ್ಖಾನೆಗಳು ಸಹ ಇವೆ. ಸಕ್ಕರೆ ಕಾರ್ಖಾನೆ, ಮಾಂಸವನ್ನು ಡಬ್ಬಗಳಲ್ಲಿ ತುಂಬುವ ಕಾರ್ಖಾನೆ, ಹಿಟ್ಟಿನ ಗಿರಣಿ, ಪಾದರಕ್ಷೆಯ ತಯಾರಿಕೆಯ ಕಾರ್ಖಾನೆ, ಹಣ್ಣುಗಳನ್ನು ಡಬ್ಬಗಳಲ್ಲಿ ಶೇಖರಿಸುವ ಕಾರ್ಖಾನೆ-ಇವು ಚು ಕಣಿವೆಯಲ್ಲಿ ಬೆಳೆದಿವೆ.

ಕಿರ್ಗೀಝ್ ಬೆಟ್ಟಗುಡ್ಡಗಳ ದೇಶವಾದ್ದರಿಂದ ರೈಲುಮಾರ್ಗಗಳು ಹೆಚ್ಚಾಗಿಲ್ಲ. ಬಿಸ್ಕೇಕ್ ಮತ್ತು ಚಿಮ್‌ಕೆಂಟ್ ನಗರಗಳ ನಡುವೆ ರೈಲ್ವೆ ಸಂಪರ್ಕವುಂಟು. ಎರಡನೆಯ ಮಹಾಯುದ್ಧದ ತರುವಾಯ ಈ ರೈಲುಮಾರ್ಗವನ್ನು ಇಸಿಕ್-ಕಲ್ ಸರೋವರದ ದಂಡೆಯ ರೈಬಾಚ್ಯೆ ನಗರದ ವರೆಗೆ ವಿಸ್ತರಿಸಿದೆ. ಶೇ.80ರಷ್ಟು ಸರಕುಗಳನ್ನು ರಸ್ತೆಗಳ ಮೂಲಕವೇ ಸಾಗಿಸುತ್ತಾರೆ. ಫ್ರೂನ್‌ಝೆ ರೈಬಾಚ್ಯೆ-ನಾರಿನ್-ಟೋರುಗಾರ್ಟ್ ರಸ್ತೆ, ಫ್ರೂನ್‌ಝೆ -ನಮನ್ಗನ್ ರಸ್ತೆ, ಟಾಲಾಸ್-ಚ್ಯಾಂಬುಲ್ ರಸ್ತೆ, ಕೋಚ್ ಕೋರ್ಕ-ಚಾಯೇಕ್ ರಸ್ತೆ, ಇಸಿಕ್-ಕಲ್ ಸರೋವರದ ಉತ್ತರ ಮತ್ತು ದಕ್ಷಿಣ ಅಂಚುಗಳಲ್ಲಿ ರೈಬಾಚ್ಯೆ ನಗರದಿಂದ ಪ್ಷೆವಾಲ್ಸ್ಕ್‌ವರೆಗೆ ಹಾಕಿರುವ ಇಸಿಕ್-ಕಲ್-ರಿಂಗ್ ರಸ್ತೆ ಮತ್ತು ಆಷ್-ಕಿಝಿಲ್‌ಕಿಯ ರಸ್ತೆ-ಇವು ಈ ಗಣರಾಜ್ಯದ ಪ್ರಮುಖ ಹೆದ್ದಾರಿಗಳು.

ಇಸಿಕ್-ಕಲ್ ಸರೋವರ ಚಳಿಗಾಲದಲ್ಲಿ ಹೆಪ್ಪುಗಟ್ಟುವುದಿಲ್ಲವಾಗಿ ಚೌಬೀನೆ, ತೈಲ, ಕಲ್ಲಿದ್ದಲು ಮತ್ತು ಗೋದಿ-ಇವುಗಳನ್ನು ಈ ಸರೋವರದ ಮೂಲಕ ಹಡಗುಗಳಲ್ಲಿ ಸಾಗಿಸುತ್ತಾರೆ. ಮಾಸ್ಕೋ ಮತ್ತು ತಾಷ್ಕೆಂಟ್ ನಗರಗಳೊಂದಿಗೆ ವಿಮಾನ ಸಂಪರ್ಕವುಂಟು.

ರಷ್ಯ 1876ರಲ್ಲಿ ಈ ಭೂಭಾಗವನ್ನು ತನ್ನ ವಶಪಡಿಸಿಕೊಂಡು ಸಾವಿರಾರು ಮಂದಿ ಉಕ್ರೇನಿಯನ್ನರು, ರಷ್ಯನ್ನರು ಮತ್ತು ಸ್ಲಾವಿಕ್ ರೈತರನ್ನು ಇಲ್ಲಿ ನೆಲಸುವಂತೆ ಮಾಡಿತು. 1916ರಲ್ಲಿ ಕಿರ್ಗೀಜರು ದಂಗೆಯೆದ್ದು ಅನೇಕರನ್ನು ಕೊಂದದ್ದಲ್ಲದೆ ಸಾವಿರಾರು ಸಂಖ್ಯೆಯಲ್ಲಿ ಚೀನ ಕಡೆಗೆ ವಲಸೆ ಹೋದರು. 1917ರ ರಷ್ಯಕ್ರಾಂತಿಯನ್ನು ಕಮ್ಯೂನಿಷ್ಟರ ಆಡಳಿತ ಬಂದು 1922ರಲ್ಲಿ ಸೋವಿಯತ್ ಯೂನಿಯನ್ (ರಷ್ಯ ಒಕ್ಕೂಟ) ಸ್ಥಾಪಿತವಾಗಿ ಕರ್ಗೀಸ್ತಾನ್ ಅದರ ಒಂದು ಭಾಗವಾಯಿತು. 1936ರಲ್ಲಿ ಕಿರ್ಗೀಜ್ ಸೋವಿಯತ್ ಸಮಾಜವಾದಿ ಗಣರಾಜ್ಯವಾಯಿತು. 1991ರಲ್ಲಿ ರಷ್ಯ ಒಕ್ಕೂಟ ಒಡೆದು ಹೋಗಿ ಇತರೇ ರಾಜ್ಯಗಳ ಜೊತೆಗೆ ಕಿರ್ಗೀಸ್ತಾನ್ ಕೂಡ ಒಂದು ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಯಿತು. (ವಿ.ಜಿ.ಕೆ.)

**ಕಿರ್ಚಾಫ್, ಗಸ್ಟಾವ್ ರಾಬರ್ಟ್ :** 1824-87. ಜರ್ಮನಿಯ ಭೌತವಿಜ್ಞಾನಿ. ಜನನ ಅಂದಿನ ಜರ್ಮನಿಯ ಕೋನಿಗ್ಸ್‌ಬರ್ಗಿನಲ್ಲಿ (ಇಂದಿನ ರಷ್ಯದ ಕಾಲಿನಿನ್‌ಗ್ರಾಡ್) ಮಾರ್ಚ್ 12, 1824ರಂದು. ವಿದ್ಯಾಭ್ಯಾಸ ಕೊನಿಗ್ಸ್‌ಬರ್ಗ್ ವಿಶ್ವವಿದ್ಯಾಲದಲ್ಲಿಯೇ ವಿದ್ಯಾಭ್ಯಾಸಾನಂತರ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ 1847-50ರವರೆಗೆ ಯಾವ ಸಂಭಾವನೆಯೂ ಇಲ್ಲದೆ ಅಧ್ಯಾಪಕ ವೃತ್ತಿ ನಡೆಸಿ ಅನಂತರ ನಾಲ್ಕು ವರ್ಷಗಳು ಬ್ರೆಸ್‌ಲೊ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ. ಈ ಸಂದರ್ಭದಲ್ಲೇ ಈತನಿಗೆ ಜರ್ಮನಿಯ ವಿಖ್ಯಾತ ರಸಾಯನಶಾಸ್ತ್ರಜ್ಞ ರಾಬರ್ಟ್ ಬುನ್‌ಸೆನ್‌ನೊಡನೆ (1811-99) ಸಂಪರ್ಕ ಒದಗಿದ್ದು. ಆತನೊಡನೆ ಕಿರ್ಚಾಫ್ ಹೈಡಲ್‌ಬರ್ಗ್ ವಿಶ್ವವಿದ್ಯಾಲಯಕ್ಕೆ ಭೌತವಿಜ್ಞಾನಿ ಪ್ರಾಧ್ಯಾಪಕನಾಗಿ ತೆರಳಿದ. 1874-87ರ ವರೆಗೆ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ. ಈ ಕಾಲಾವಧಿಯಲ್ಲಿ ಜರ್ಮನಿಯ ಭೌತ ಹಾಗೂ ದೇಹಶಾಸ್ತ್ರಜ್ಞ ಹರ್‌ಮಾನ್ ವಾನ್ ಹೆಲ್‌ಮ್ಹೋಲ್ಟ್ಸ್‌ನೊಡನೆ (1821-94) ಸಂಪರ್ಕ ಬೆಳೆಸಿಕೊಂಡ. ಬುನ್‌ಸೆನ್‌ನೊಡನೆ ಕೆಲಸಮಾಡಿ ರೋಹಿತ ಗ್ರಾಹಿಯನ್ನು (ಸ್ಪೆಕ್ಟ್ರೊಸ್ಕೋಪ್) ರಚಿಸಿದ ಇದರಿಂದ ಸೀಸಿಯಂ (1860) ಮತ್ತು ರುಬಿಡಿಯಂ (1861) ಎಂಬ ಧಾತುಗಳ ಇರುವಿಕೆಯನ್ನು ಕಂಡುಹಿಡಿಯಲು ಸಾಧ್ಯವಾಯಿತು.

ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಭೌತವಿಜ್ಞಾನಕ್ಕೆ ಕಿರ್ಖ್‌ಫ್‌ನ ಕೊಡುಗೆಗಳು ಅಪಾರ. ದ್ಯುತಿಶಾಸ್ತ್ರದಲ್ಲಿ ಬುನ್‌ಸೆನ್ನನ ಸಂಪರ್ಕ ಈತನಿಗೆ ಎಷ್ಟು ಸಹಾಯಕವಾಯಿತೋ ವಿದ್ಯುತ್ ವಿಭಾಗದಲ್ಲಿ ವಿಲ್ ಹೆಲ್ಮ್ ವೇಬರನ (ಜರ್ಮನಿಯ ಭೌತವಿಜ್ಞಾನಿ; 1804–91) ಸಂಪರ್ಕ ಅಷ್ಟೇ ಪರಿಣಾಮಕಾರಿಯಾಯಿತು. ಸರ್ ಚಾರ್ಲ್ಸ್ ವ್ಹೀಟ್‌ಸ್ಟನ್ (ಇಂಗ್ಲಿಷ್ ಭೌತವಿಜ್ಞಾನಿ : 1802–75) ರೂಪಿಸಿದ ವಿದ್ಯುನ್ಮಂಡಲವನ್ನು ಮಾರ್ಪಡಿಸಿ ಯಾವ ವಿದ್ಯುನ್ಮಂಡಲದಲ್ಲೇ ಆಗಲಿ ವಿವಿಧ ಭಾಗಗಳಲ್ಲಿ ಹರಿಯುವ ವಿದ್ಯುತ್ಪ್ರಮಾಣವನ್ನು ಲೆಕ್ಕಾಚಾರ ಹಾಕಲು ಸಹಾಯವಾಗುವಂತೆ ತನ್ನದೇ ಹೆಸರಿನ ಒಂದು ಪ್ರಮೇಯವನ್ನು ಕಿರ್ಚಾಫ್ ನಿರೂಪಿಸಿದ್ದಾನೆ. ಓಮ್ ನಿಯಮಗಳನ್ನು ಮೂರು ಆಯಾಮಗಳ ವಿದ್ಯುತ್ ಗತಿವಿಜ್ಞಾನಕ್ಕೆ ಸಂಬಂಧವನ್ನು ಕಲ್ಪಿಸಲು ಪ್ರಯತ್ನಿಸಿದ. ಈತನ ಪ್ರಯೋಗಗಳಲ್ಲಿ ಬಹು ಮುಖ್ಯವಾದುದೆಂದರೆ ಒಂದು ತಂತಿಯಲ್ಲಿ ಪ್ರಸರಿತವಾಗುವ ವಿದ್ಯುತ್ ಸಂಜ್ಞೆಯ ವೇಗ ಬೆಳಕಿನ ವೇಗಕ್ಕೆ ಸಮವೆಂದು ತೋರಿಸಿದುದು.

ಕಿರ್ಚಾಫ್‌ನ ಇತರ ಆಸಕ್ತ ವಿಭಾಗಗಳೆಂದರೆ ಕಬ್ಬಿಣದಲ್ಲಿ ಉಷ್ಣವಹನ, ಸ್ಫಟಿಕಗಳಲ್ಲಿ ಪ್ರತಿಫಲನ ಮತ್ತು ವಕ್ರೀಭವನ. ದ್ರಾವಣ, ಬಾಷ್ಪೀಕರಣ ಮತ್ತು ರಾಸಾಯನಿಕ ಕ್ರಿಯೆಗಳಿಗೆ ಅನ್ವಯಿಸುವ ಉಷ್ಣಗತಿಶಾಸ್ತ್ರದ ಕೆಲವು ಪ್ರಮೇಯಗಳನ್ನು ಸಹ ಈತ ಮಂಡಿಸಿದ್ದಾನೆ. ರೋಹಿತ ವಿಶ್ಲೇಷಣೆಯನ್ನು (ಬುನ್‌ಸೆನ್ನನ ಜೊತೆಯಲ್ಲಿ) ನೀಡಿದುದರ ಪರಿಣಾಮವಾಗಿ ಆಕಾಶಕಾಯಗಳ ರಚನೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಯಿತು. ಕಿರ್ಚಾಫ್‌ನ ಲೇಖನಗಳೆಲ್ಲವನ್ನೂ ಒಗ್ಗೂಡಿಸಿ 1882ರಲ್ಲಿ ಪ್ರಕಟಿಸಲಾಯಿತು. ಈತ ತನ್ನ 64ನೆಯ ವಯಸ್ಸಿನಲ್ಲಿ 1887 ಅಕ್ಟೋಬರ್ 17ರಂದು ನಿಧನ ಹೊಂದಿದ. (ಪಿ.ವಿ.)

**ಕಿರ್ಲೋಸ್ಕರ :** ಮರಾಠಿ ಮಾಸಪತ್ರಿಕಾ ರಂಗದಲ್ಲಿ ಕ್ರಾಂತಿ ಸಾಧಿಸಿದ ಒಂದು ಪತ್ರಿಕೆ. 1919ರಲ್ಲಿ ಪ್ರಾರಂಭವಾಯಿತು. ಪ್ರಸಿದ್ಧ ಉದ್ಯಮಿ ಶಂಕರರಾವ್ ಕಿರ್ಲೋಸ್ಕರ್ ಇದರ ಸಂಪಾದಕ. ಸಾಮಾನ್ಯ ಉದ್ದೇಶದ ನಿಯತಕಾಲಿಕೆಗೆ ಮರಾಠಿಯಲ್ಲಿ ಈ ಪತ್ರಿಕೆ

ಒಂದು ಉದಾಹರಣೆ. ವ್ಯಕ್ತಿಪರಿಚಯ, ಪ್ರವಾಸಕಥನ, ಮೃಗಯಾವಿಹಾರ, ಕಥೆ–ಇವುಗಳೇ ಅಲ್ಲದೆ ಸಮಾಜ, ರಾಜಕಾರಣ, ಶಿಕ್ಷಣ ಮೊದಲಾದ ವಿಷಯಗಳನ್ನು ಕುರಿತ ಲೇಖನಗಳು, ಪ್ರಮುಖ ವಿಚಾರಗಳ ಬಗ್ಗೆ ತಜ್ಞರ ಸಂದರ್ಶನ ಮುಂತಾದವು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಲಲಿತಸಾಹಿತ್ಯವನ್ನು ನೀಡುವುದರ ಜೊತೆಗೆ ಓದುಗರ ಜ್ಞಾನದಾಹವನ್ನು ತಣಿಸುವ ಕಾರ್ಯವನ್ನೂ ಇದು ಈಡೇರಿಸುತ್ತ ಬಂದಿದೆ. ಲಘುಕಥಾ ಸಾಹಿತ್ಯಕ್ಕೆ ಈ ಪತ್ರಿಕೆ ವಿಶೇಷ ಪ್ರಾಶಸ್ತ್ಯ ನೀಡಿತು. ಮರಾಠಿ ಕಥಾಸಾಹಿತ್ಯಚರಿತ್ರೆಯಲ್ಲಿ ಈ ಪತ್ರಿಕೆಗೆ ಒಂದು ಮಹತ್ತ್ವದ ಸ್ಥಾನವುಂಟು. ಆ ಚರಿತ್ರೆಯಲ್ಲಿ 1945ರ ವರೆಗಿನ ಕಾಲವನ್ನು ಕಿರ್ಲೋಸ್ಕರ ಯುಗ ಎಂದು ಕರೆಯುವಷ್ಟುಮಟ್ಟಿಗೆ ಈ ಪತ್ರಿಕೆ ಕಥಾಸಾಹಿತ್ಯಕ್ಕೆ ದೇಣಿಗೆ ನೀಡಿದೆ. ಸಚಿತ್ರ ಲೇಖನಗಳ ಪ್ರಕಟಣೆಯನ್ನು ಪ್ರಪ್ರಥಮವಾಗಿ ಮರಾಠಿಯಲ್ಲಿ ಪ್ರಾರಂಭಿಸಿದ್ದು ಕಿರ್ಲೋಸ್ಕರ ಪತ್ರಿಕೆಯೇ. ಮಾಸಪತ್ರಿಕೆಗಳ ಲೇಖಕರಿಗೆ ಗೌರವಧನ ಕೊಡುವ ಸಂಪ್ರದಾಯವನ್ನು ಇದು ರೂಢಿಯಲ್ಲಿ ತಂದಿತು.

ಶಂಕರರಾವ್ ಕಿರ್ಲೋಸ್ಕರ ನುರಿತ ಪತ್ರಿಕೋದ್ಯಮಿ, ಲೇಖಕ, ಚಿತ್ರಕಾರರಲ್ಲಿ ಪ್ರಯೋಗಶೀಲ. ಜನರಲ್ಲಿಯ ಹೊಸತನವನ್ನು ಕಂಡುಹಿಡಿದು ಅದನ್ನು ಓದುಗರಿಗೆ ಕೊಡುವ ಕಾರ್ಯದಲ್ಲಿ ನಿಷ್ಣಾತ. ಒಳ್ಳೆಯ ಚಿತ್ರಕಾರ ಕೂಡ. ಮರಾಠಿ ಮಾಸಪತ್ರಿಕೆಗಳಲ್ಲಿ ಕಿರ್ಲೋಸ್ಕರ ಅಗ್ರಸ್ಥಾನ ಪಡೆಯಲು ಶಂಕರರಾವ್ ಬಹಳ ಮಟ್ಟಿಗೆ ಕಾರಣ. ಕಿರ್ಲೋಸ್ಕರದ ಅನಂತರದ ಸಂಪಾದಕ ಎಂ.ಎಸ್. ಕಿರ್ಲೋಸ್ಕರ. ತಂದೆ ಶಂಕರರಾವ್ ಹಾಕಿಕೊಟ್ಟ ಮಾರ್ಗದಲ್ಲಿಯೇ ಮಗನ ಸಂಪಾದಕತ್ವದಲ್ಲೂ ಪತ್ರಿಕೆ ಮುಂದುವರಿಯುತ್ತಿದೆ. ಮಹಾರಾಷ್ಟ್ರದಲ್ಲಿ ಇದು ಉತ್ತಮ ಕೌಟುಂಬಿಕ ಪತ್ರಿಕೆಯೆಂದು ಹೆಸರು ಪಡೆದಿದೆ. (ಎಸ್.ವಿ.ಪಿ.ಎ.)

**ಕಿಲಿಗ್ರೂ, ಥಾಮಸ್ :** 1612–83. ಇಂಗ್ಲೆಂಡಿನ ನಾಟಕಕಾರ ಮತ್ತು ಹಾಸ್ಯಗಾರ. 1612 ಫೆಬ್ರವರಿ 7ರಂದು ಲಂಡನಿನಲ್ಲಿ ಜನಿಸಿದ. ಒಂದನೆಯ ಚಾರ್ಲ್ಸ್ ದೊರೆಗೆ ಪರಿಚಿತನಾಗಿದ್ದ ಈತ, ನಾಟಕ ಕಲೆಯಲ್ಲಿ ಬಹುವಾದ ಆಸಕ್ತಿ ತೋರಿದ. ನಾಟಕ ಪ್ರದರ್ಶನ ಇವನ ಪ್ರಮುಖ ಹವ್ಯಾಸವಾಯಿತು. ರಚಿಸಿರುವ ಅನೇಕ ನಾಟಕಗಳಲ್ಲಿ ಪಾರ್‌ಸನ್ಸ್ ವೆಡ್ಡಿಂಗ್ ತುಂಬ ಪ್ರಸಿದ್ಧವಾದುದು. ಎರಡನೆಯ ಚಾರ್ಲ್ಸ್ ದೊರೆಯ ಕಾಲದಲ್ಲಿ ಅರಮನೆಯ ಪ್ರಮುಖ ಇಲಾಖೆಯ ಹಿರಿಯ ಅಧಿಕಾರಿಯಾಗಿದ್ದ ಈತ ರಾಜಕುಟುಂಬಕ್ಕೆ ಪ್ರಿಯವ್ಯಕ್ತಿಯಾಗಿದ್ದ.

ಡ್ರೂರಿಲೇನ್ ಎಂಬಲ್ಲಿ ಥಿಯೇಟರ್ ರಾಯಲ್ ಎಂಬ ನಾಟಕ ಸಂಸ್ಥೆಯೊಂದನ್ನು ಸ್ಥಾಪಿಸಿ, ಅನೇಕ ನಾಟಕಗಳನ್ನೀತ ಪ್ರದರ್ಶಿಸಿದ. ಇಂಗ್ಲೆಂಡಿನ ಚಾರಿತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ನಾಟಕಗಳನ್ನು ಪ್ರದರ್ಶಿಸಿದ್ದು ಈತನ ವೈಶಿಷ್ಟ್ಯ. ಸ್ವತಃ ಇವನೇ ಅನೇಕ ನಾಟಕಗಳನ್ನು ಬರೆದಿದ್ದಾನೆ ; ನಾಟಕ ಕಲೆಯಲ್ಲಿ ಕಾಳಜಿ ಇದ್ದುದರಿಂದ ತಾನು ಸಾಯುವವರೆಗೂ ಥಿಯೇಟರ್ ಸಂಸ್ಥೆಯನ್ನು ವಹಿಸಿಕೊಂಡು ಬಂದ.

ಪ್ರಮುಖ ನಾಟಕಕಾರನಾಗಿದ್ದ ಥಾಮಸ್, ತನ್ನ ಚತುರೋಕ್ತಿ ಮತ್ತು ಹಾಸ್ಯೋಕ್ತಿಗಳಿಂದ ಇಂಗ್ಲೆಂಡಿನ ಜನತೆಗೆ ಪ್ರಿಯನಾಗಿದ್ದ. ಈತ ಮಾತನಾಡಲು ಪ್ರಾರಂಭಿಸಿದನೆಂದರೆ ಶ್ರೋತೃಗಳು ನಗೆಗಡಲಿನಲ್ಲಿ ಮುಳುಗುತ್ತಿದ್ದರಂತೆ. ಈತನ ಎಲ್ಲ ಕೃತಿಗಳನ್ನೂ ಸಂಕಲಿಸಿ ಒಂದು ಸಂಪುಟದಲ್ಲಿ ಪ್ರಕಟಿಸಲಾಗಿದೆ (1664). *

**ಕಿಲಿಮಾಂಜಾರೋ :** ಟಾಂಗನ್ಯೀಕ ರಾಜ್ಯದಲ್ಲಿರುವ ಪರ್ವತ ಪಂಕ್ತಿ: ಜ್ವಾಲಾಮುಖಿಯಿಂದ ನಿರ್ಮಿತ. ಕೀನ್ಯದ ಸರಹದ್ದಿನ ವರೆಗೂ ಹಬ್ಬಿದೆ. 910ಮೀ ಎತ್ತರದ ಪ್ರಸ್ಥಭೂಮಿಯ ಮೇಲೆ ನಿಂತಿರುವ ಈ ಪರ್ವತ ಪಂಕ್ತಿಯ ನಡುಶಿಖರದ ಹೆಸರು ಕೀಬೋ. ಇದರ ಎತ್ತರ 5866ಮೀ. ಇದು ಆಫ್ರಿಕದಲ್ಲೇ ಅತ್ಯುನ್ನತ ಶಿಖರ. ಕಿಲಿಮಾಂಜಾರೋ ಪರ್ವತಗುಚ್ಛ ಪೂರ್ವ–ಪಶ್ಚಿಮವಾಗಿ 81 ಕಿಮೀ ಹಬ್ಬಿದೆ. ಇದರಲ್ಲಿರುವ ಮುಖ್ಯ ಜ್ವಾಲಾಮುಖಿಗಳು ಮೂರು : ಇವುಗಳಲ್ಲಿ ಕೀಬೋ ಇತ್ತೀಚಿನದು. ಷೀರಾ ಅತ್ಯಂತ ಹಳೆಯದು. ಕಿಲಿಮಾಂಜಿರೋ ಪಟ್ಟಣದ ಜನಸಂಖ್ಯೆ 24,64,79 (2002).

ಪ್ರಸ್ಥಭೂಮಿಯಿಂದ ನೋಡಿದರೆ ಕೀಬೋ ಶಿಖರವೊಂದು ಹಿಮಕವಚ ತೊಟ್ಟ ಗೋಪುರದಂತೆ ಕಾಣಿಸುತ್ತದೆ. ಕೀಬೋದ ಹೊರ ಬಾಯಿಯ ಅಗಲ 2.4 ಕಿಮೀ ಆಳ 182ಮೀ. ಇದರೊಳಗಿರುವ ಶಂಕುವಿನಾಕಾರದ ಬೂದಿಯ ಗುಡ್ಡೆಯ ನಡುವೆ ಇರುವ ಬಾಯಿಯ ಅಗಲ 337ಮೀ, ಆಳ 121.33ಮೀ.

ಪೂರ್ವ ಆಫ್ರಿಕದ ಇತರ ಪರ್ವತಗಳಂತೆ ಕಿಲಿಮಾಂಜಾರೋದಲ್ಲೂ ಎತ್ತರಕ್ಕೆ ಅನುಗುಣವಾಗಿ ಖಚಿತವಾದ ಸಸ್ಯವಲಯಗಳನ್ನು ಗುರುತಿಸಬಹುದು. 1213ಮೀ – 1820ಮೀ ಎತ್ತರದ ದಕ್ಷಿಣ ಇಳಿಜಾರು ಪ್ರದೇಶದಲ್ಲಿ ಕಾಫಿ, ಬಾಳೆ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. 1820ಮೀ – 1000ಮೀ ಎತ್ತರದ ಪ್ರದೇಶ ದಟ್ಟ ಕಾಡುಗಳಿಂದ ತುಂಬಿದೆ. ಉತ್ತರ ಭಾಗದ ಅಷ್ಟೇ ಎತ್ತರದ ಪ್ರದೇಶದಲ್ಲಿ ಇವು ತೆಳ್ಳಗಾಗುತ್ತ ನಡೆದು ವಾಯುವ್ಯದ ಒಣ ವಾಯುಗಣ ಪ್ರದೇಶದಲ್ಲಿ ಅದೃಶ್ಯವಾಗುತ್ತವೆ. ಕಾಡು ಪ್ರದೇಶದ ಮೇಲ್ಭಾಗದಲ್ಲಿ, ಎಂದರೆ 4550ಮೀಗಿಂತ ಎತ್ತರದಲ್ಲಿ ಮಳೆಯ ಪರಿಮಾಣ ಕ್ರಮೇಣ ಕಡಿಮೆಯಾಗುತ್ತದೆ.

ಕಿಲಿಮಾಂಜಾರೋ ಪರ್ವತಾವಳಿಯ ಸು. 1935 ಚ.ಕಿಮೀ ಪ್ರದೇಶವನ್ನು ಅಭಯಾರಣ್ಯವಾಗಿ ಪರಿಗಣಿಸಲಾಗಿದೆ. ಆನೆ, ಖಡ್ಗಮೃಗ, ಕಾಡೆಮ್ಮೆ, ಜಿಂಕೆ ಮುಂತಾದ ಪ್ರಾಣಿಗಳು ಇಲ್ಲಿ ವಾಸವಾಗಿವೆ. ಪರ್ವತದ ದಕ್ಷಿಣದಲ್ಲಿರುವ ಮೋಷಿ ಎಂಬಲ್ಲಿಂದ ಕಿಲಿಮಾಂಜಾರೋ ಪರ್ವತದ ಆರೋಹಣ ಸುಲಭ. ಈ ಸ್ಥಳ ಮೊಂಬಾಸಾದಿಂದ ಪಶ್ಚಿಮಕ್ಕೆ 367 ಕಿಮೀ ಮತ್ತು ಕೀನ್ಯದ ನೈರೋಬಿಯಿಂದ ದಕ್ಷಿಣಕ್ಕೆ 362 ಕಿಮೀ ದೂರದಲ್ಲಿದೆ. ಶಿಖರಾರೋಹಣಕ್ಕೆ ಆವಶ್ಯಕವಾದ ಸೌಲಭ್ಯ ಸಲಕರಣೆಗಳನ್ನು ಮೌಂಟ್ ಕ್ಲಬ್ ಆಫ್ ಈಸ್ಟ್ ಆಫ್ರಿಕ ಎಂಬ ಸಂಸ್ಥೆ ಒದಗಿಸುತ್ತದೆ. ಕೀಬೋ ಶಿಖರವನ್ನು ಹತ್ತುವುದು

ಪ್ರಯಾಸಕರ; ಆದರೆ ಅದಕ್ಕೆ ಹೆಚ್ಚಿನ ಪ್ರಾವೀಣ್ಯ ಆವಶ್ಯಕವಿಲ್ಲ. ಮಾವೆನ್ಸಿಯನ್ನೇರಲು ಆರೋಹಣಾನುಭವ ಇರಲೇಬೇಕು. ಜೋಹಾನ್ಸ್ ರೆಬ್‌ಮನ್ ಮತ್ತು ಲುಡ್ವಿಗ್ ಕ್ರಾಫ್ ಎಂಬ ಜರ್ಮನ್ ಪಾದ್ರಿಗಳು 1848ರಲ್ಲಿ ಕಿಲಿಮಾಂಜಾರೋವನ್ನು ಕಂಡುಹಿಡಿದರು.



ಕೀಬೋ: ಆಫ್ರಿಕದ ಅತ್ಯುನ್ನತ ಶಿಖರ

ಹ್ಯಾನ್ಸ್ ಮೇಯರ್ ಮತ್ತು ಲುಡ್ವಿಗ್ ಪರ್ಟ್‌ಷೆಲರ್–ಇವರು 1889ರಲ್ಲೂ ಫ್ರಿಟ್ಸ್ ಜೇಗರ್ 1997ರಲ್ಲೂ ಕೀಬೋ ಶಿಖರವನ್ನೇರಿದರು. ಮಾವೆನ್ಸಿಯನ್ನು ಮೊತ್ತಮೊದಲಿಗೆ ಏರಿದಾತ ಫ್ರಿಟ್ಸ್ ಜೇಗರ್ (1912). ಈ ಪ್ರದೇಶವನ್ನು ಕುರಿತು ಅಧ್ಯಯನ ನಡೆಸಿದವರಲ್ಲಿ ಆರ್. ರ‍್ಯೂಷ್ (1927), ಜೆ. ಜೆ. ರಿಚರ್ಡ್ (1940) ಮತ್ತು ಪಿ. ಸಿ. ಸ್ಪಿಂಕ್ (1950) ಪ್ರಮುಖರು. 1950ರಲ್ಲಿ ಇದರ ಭೂಗರ್ಭ ಸಮೀಕ್ಷೆಯನ್ನು ಷೆಫೀಲ್ಡ್ ವಿಶ್ವವಿದ್ಯಾಲಯದ ಸಂಶೋಧನ ತಂಡದವರು ಕೈಗೊಂಡಿದ್ದರು. ಇತ್ತೀಚೆಗೆ ಟಾಂಗನ್ಯೀಕದ ಭೂಗರ್ಭ ಸಮೀಕ್ಷಣ ವಿಭಾಗ ಈ ಪ್ರದೇಶದ ಗಂಧಕ ನಿಕ್ಷೇಪವನ್ನು ಆರ್ಥಿಕವಾಗಿ ಬಳಸಿಕೊಳ್ಳುವುದರ ಬಗ್ಗೆ ಅಧ್ಯಯನ ನಡೆಸಿದೆ. (ಆರ್.ಡಿ.ಆರ್.)

**ಕಿಲಿಮಾಂಜಾರೋ ಪ್ರದೇಶ :** ಟಾಂಗನ್ಯೀಕದ ಒಂದು ಆಡಳಿತ ವಿಭಾಗ. 1963ರಲ್ಲಿ ಆ ದೇಶ ಕೈಕೊಂಡ ಪುನರ್ವಿಂಗಡಣೆಯ ಫಲವಾಗಿ ಅಸ್ತಿತ್ವಕ್ಕೆ ಬಂತು. ಕಿಲಿಮಾಂಜಾರೋ ಜಿಲ್ಲೆ, ಪಾರೆ ಜಿಲ್ಲೆ ಇವನ್ನು ಸೇರಿಸಿ ಈ ಪ್ರದೇಶವನ್ನು ರಚಿಸಲಾಯಿತು. 5,000 ಹೆಕ್ಟೇರ್ ವಿಸ್ತಾರವಾಗಿರುವ ಈ ಪ್ರದೇಶದ ಜನಸಂಖ್ಯೆ 6,94,000 (1978).

ಉತ್ತರ ಪೂರ್ವಗಳಲ್ಲಿ ಕೀನ್ಯ, ಆಗ್ನೇಯ ದಕ್ಷಿಣಗಳಲ್ಲಿ ಟಾಂಗನ್ಯೀಕ ಪ್ರದೇಶ, ಪಶ್ಚಿಮದಲ್ಲಿ ಉತ್ತರ ಪ್ರದೇಶ– ಇವು ಇದರ ಮೇರೆಗಳು. ಕಿಲಿಮಾಂಜಾರೋಪರ್ವತ ಶ್ರೇಣಿಯಿಂದ ಆಗ್ನೇಯಾಭಿಮುಖವಾಗಿ ಪಾರೆ ಪರ್ವತಗಳು ಹಬ್ಬಿವೆ. ಕಿಲಿಮಾಂಜಾರೋದಲ್ಲಿ ಹುಟ್ಟುವ ಹೊಳೆಗಳು ಉತ್ತರಾಭಿಮುಖವಾಗಿ ಹರಿದು ಆಂಬೊಸೆಲಿ ಸರೋವರವನ್ನೋ ಕೀನ್ಯದಲ್ಲಿರುವ ಟ್ಸಾವೋ ನದಿಯನ್ನೋ ಸೇರುತ್ತವೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಮಳೆಯಾಗುವುದು ಮಾರ್ಚ್–ಮೇ ತಿಂಗಳುಗಳಲ್ಲಿ. ಎತ್ತರಕ್ಕೆ ಅನುಗುಣವಾಗಿ ಉಷ್ಣತೆ ವ್ಯತ್ಯಾಸವಾಗುತ್ತದೆ. ಪರ್ವತದ ಬದಿಗಳಲ್ಲಿರುವ ಜ್ವಾಲಾಮುಖಿನಿರ್ಮಿತ ನೆಲ ಅತ್ಯಂತ ಫಲವತ್ತಾದ್ದು. ಪರ್ವತದ ತಪ್ಪಲುಗಳು ಕೆಂಪುಮಣ್ಣಿನಿಂದ ಕೂಡಿವೆ. ವೃಕ್ಷರಾಜಿತ ಸವಾನದಿಂದ ಹಿಡಿದು ಪರ್ವತಕಾಡುಗಳ ಮತ್ತು ಆಫ್ರೊ–ಆಲ್ಪೈನ್ ಸಸ್ಯಗಳ ವರೆಗೆ ನಾನಾ ಬಗೆಯ ಸಸ್ಯಗಳುಂಟು.

ಕಿಲಿಮಾಂಜಾರೋ ಪ್ರದೇಶದಲ್ಲಿ ವಾಸಿಸುವ ಜನರ ಪಂಗಡಗಳಲ್ಲಿ ಚಗ್ಗಾ ಎಂಬುದು ಅತಿ ದೊಡ್ಡದು : ಜನಸಂಖ್ಯೆ 3 ಮಿಲಿಯನ್ (2000). ಇವರು ಕಿಲಿಮಾಂಜಾರೋ ಪರ್ವತದ ಇಳಿಜಾರುಗಳಲ್ಲಿ ವಾಸಿಸುತ್ತಾರೆ. ಪಾರೆಗಳು ವಾಸಿಸುವುದು ಪಾರೆ ಜಿಲ್ಲೆಯಲ್ಲಿ. ಇವರ ಸಂಖ್ಯೆ 1,000,000 (2005). ಮೂರನೆಯ ಪ್ರಮುಖ ಪಂಗಡವೆಂದರೆ ಮ್ಬುಗು 29,000 (1987). ಕಿಲಿಮಾಂಜಾರೋದ ಇಳಿಜಾರುಗಳಲ್ಲಿ ಕೆಲವು ಐರೋಪ್ಯರೂ ವಾಸಿಸುತ್ತಾರೆ.

ಕಾಫಿ ಇಲ್ಲಿಯ ಮುಖ್ಯ ಬೆಳೆ. ನೀರಾವರಿ ಬೆಳೆಯಾದ ಕಬ್ಬಿನಿಂದ ಸಕ್ಕರೆ ತೆಗೆಯುವ ಒಂದು ಕಾರ್ಖಾನೆ ಅರುಷ ಚಿನಿ ಎಂಬಲ್ಲಿ ಇದೆ. ಕತ್ತಾಳೆ ನಾರು, ಮುಸುಕಿನ ಜೋಳ, ಬಾಳೆ, ಗೆಣಸು ಮತ್ತು ತಿಂಗಳಹುರುಳಿ ಇತರ ಬೆಳೆಗಳು. ಮೋಷಿ ಈ ಪ್ರದೇಶದ ಆಡಳಿತಕೇಂದ್ರ. ಇದರ ಜನಸಂಖ್ಯೆ 1,44,739 (2012). ಕಿಲಿಮಾಂಜಾರೋದ ದಕ್ಷಿಣದ ಬದಿಯಲ್ಲಿ ಈ ಪಟ್ಟಣವಿದೆ. ಇಲ್ಲಿಗೂ ಟಾಂಗಕ್ಕೂ ರೈಲ್ವೆ ಸಂಪರ್ಕವುಂಟು. ಕೀನ್ಯ ರೈಲ್ವೆಯೊಂದಿಗೂ ಸಂಬಂಧ ಏರ್ಪಟ್ಟಿದೆ. (ಬಿ.ಎನ್.ಎ.ಜಿ.)

**ಕಿವಿ :** ಮನುಷ್ಯನ ಪಂಚೇಂದ್ರಿಯಗಳಲ್ಲಿ ಒಂದು. ಶ್ರವಣೇಂದ್ರಿಯವೆಂದು ಹೆಸರು. ಇದರಲ್ಲಿ ಮೂರು ಪ್ರಧಾನ ವಿಭಾಗಗಳಿವೆ : ಹೊರಗಿವಿ. ನಡುಗಿವಿ. ಒಳಗಿವಿ.

**ಹೊರಗಿವಿ :** ಇದರಲ್ಲಿ ಕರ್ಣ ಮತ್ತು ಕರ್ಣಕುಹರ ಎಂದು ಎರಡು ವಿಭಾಗಗಳಿವೆ. ಕರ್ಣ ತಲೆಯ ಪಕ್ಕದಲ್ಲಿ ಹೊರಕ್ಕೆ ಚಾಚಿದೆ ಮತ್ತು ಪ್ರಶ್ನಾರ್ಥಕ ಚಿಹ್ನೆಯಂತಿದೆ. ಇದರ ಆಕಾರಕ್ಕೆ ಆಧಾರ ಒಳಗಿರುವ ಸ್ಥಿತಿಸ್ಥಾಪಕ ಶಕ್ತಿಯಿರುವ ಮೆಲ್ಲೆಲುಬು. ಮೇಲೆ ಚರ್ಮದ ಹೊದಿಕೆಯಿದೆ. ಆಚೆ ಕಡೆ ಹಳ್ಳವಾಗಿದ್ದು ಕಬ್ಬೆ ಕಾಲುಗಳಿದ್ದಂತಿವೆ. ಇದರ ಅಂಚಿನ ಮೇಲಿನ ಮುಕ್ಕಾಲು ಭಾಗ ಮಡಚಿದೆ. ಸುರುಳಿಕೊಂಡ ಈ ಅಂಚು ಹೆಲಿಕ್ಸ್. ಇದು ಹಿಂದೆ ಕೆಳಕ್ಕೆ ತಿರುಗುವ ಸ್ಥಳದಲ್ಲಿ ಬಹುಜನರಲ್ಲಿ ಡಾರ್ವಿನ್ ಗುಳ್ಳೆಯಿರುತ್ತದೆ. ಮಾನವನ ಪೂರ್ವಜರಲ್ಲಿ ಉದ್ದ ಕಿವಿಯಿದ್ದಿರಬಹುದೆಂಬುದಕ್ಕೆ ಈ ಗುಳ್ಳೆ ಸೂಚಕ. ಹೆಲಿಕ್ಸ್‌ನ ಒಳಗಡೆ ಪ್ರತಿಹೆಲಿಕ್ಸ್ (ಆಂಟಿಹೆಲಿಕ್ಸ್) ಎಂಬುದು ಉಂಟು. ಇದು ಕಿವಿತೂತಿನ ಮೇಲೆ ಕವಲೊಡೆಯುತ್ತದೆ. ಪ್ರತಿಹೆಲಿಕ್ಸ್ ಒಳಗಡೆ ಕಾಂಕ ಎಂಬ ಹಳ್ಳವೂ ಅದರ ಮುಂಭಾಗದಲ್ಲಿ ಕರ್ಣಕುಹರದ ಹೊರಬಾಯಿಯೂ ಇವೆ. ಕುಹರದ ಮುಂದೆ ತ್ರಿಕೋಣದಂತಿರುವ ಟ್ರೇಗಸ್ ಉಂಟು. ಕರ್ಣದ ಅತಿಕೆಳಭಾಗವಾದ ಹಾಲೆ ಮೆಲ್ಲೆಲುಬಿಲ್ಲದೆ ಮೆತ್ತಗಿದೆ. ಇದೇ ಕಿವಿ ಚುಚ್ಚುವ ಭಾಗ. ಮುಂದಿನ, ಮೇಲಿನ ಮತ್ತು ಹಿಂದಿನ ಚಿಕ್ಕ ಕರ್ಣಪೇಶಿಗಳು ಕರ್ಣವನ್ನು ಸ್ವಲ್ಪ ಅಲುಗಾಡಿಸಬಲ್ಲುವು.




ಚಿತ್ರ 1. ಹೊರಗಿವಿಯ ಭಾಗಗಳು : 1. ಆಂಟಿ ಹೆಲಿಕ್ಸ್, 2 ಮುಮ್ಮೂಲೆ ಹಳ್ಳ 3 ಕರ್ಣ ಕುಹರ 4. ಟ್ರೇಗಸ್, 5 ಹಾಲೆ, 6 ಆಂಟಿ ಟ್ರೇಗಸ್, 7 ಕಾಂಕ, 8 ಡಾರ್ವಿನ್ ಗುಳ್ಳೆ 9 ಹೆಲಿಕ್ಸ್

ಕರ್ಣಕುಹರದ ಉದ್ದ 2.5 ಸೆಂಮೀ. ಇದರ ಹೊರ 1/3 ಭಾಗದಲ್ಲಿ ಮೆಲ್ಲೆಲುಬಿದೆ. ಒಳ 2/3 ಭಾಗದಲ್ಲಿ ಎಲುಬಿದೆ. ಕಿವಿಯಲ್ಲಿ ಬೆರಳಿಟ್ಟು ದವಡೆ ಆಡಿಸಿದರೆ ಮೆಲ್ಲೆಲುಬಿನ ಭಾಗದಲ್ಲಿ ದವಡೆ ಮೂಳೆ ಆಡುವುದು ಗೊತ್ತಾಗುವುದು. ಗಲ್ಲದ ಮೇಲಿನ ಬಲವಾದ ಏಟು ಕಿವಿಗೆ ಅಪಾಯವಾಗಬಹುದು. ಕುಹರಕ್ಕೆ ಚರ್ಮ ಒಳಹೊದಿಕೆ. ಈ ಚರ್ಮದ ವಿಶೇಷ ಸ್ವೇದಗ್ರಂಥಿಗಳು ಗುಗ್ಗೆಯನ್ನು ಸುರಿಸುತ್ತವೆ. ಚರ್ಮ ಬಿಗಿಯಾಗಿ ಅಂಟಿರುವುದರಿಂದ ಇದರ ಕುರುಗುಳ್ಳೆಗಳು ಬಹಳ ನೋವುಂಟು ಮಾಡುತ್ತವೆ. ಕುಹರದ ಒಳ ಕೊನೆಯಲ್ಲಿ ಕಿವಿದಮಟೆಯಿದೆ. ಕುಹರ S ಆಕಾರದಲ್ಲಿದೆ. ಹೊರಭಾಗ ಒಳಕ್ಕೆ ಮುಂದಕ್ಕೆ ಮತ್ತು ಸ್ವಲ್ಪ ಮೇಲಕ್ಕೆ. ಮಧ್ಯಭಾಗ ಹಿಂದಕ್ಕೆ ಮೇಲಕ್ಕೆ ಮತ್ತು ಒಳಭಾಗ ಮುಂದಕ್ಕೆ ಕೆಳಕ್ಕೆ ತಿರುಗಿವೆ. ಕರ್ಣವನ್ನು ಮೇಲಕ್ಕೆ ಹಿಂದಕ್ಕೆ ಎಳೆದರೆ ಕುಹರ ಸ್ವಲ್ಪ ನೆಟ್ಟಗಾಗುತ್ತದೆ. ಆಗ ವೈದ್ಯ ತುತ್ತೂರಿಯಂಥ ವೀಕ್ಷಣಿಯನ್ನಿಟ್ಟು ಒಳಕ್ಕೆ ಬೆಳಕು ಬಿಟ್ಟು ಕಿವಿದಮಟೆಯನ್ನು ನೋಡಬಹುದು. ಮಕ್ಕಳಲ್ಲಿ ಕುಹರ ಕುರುಚಾಗಿದೆ; ಕಿವಿದಮಟೆ ಆಳದಲ್ಲಿಲ್ಲ; ಆದ್ದರಿಂದ ಮಕ್ಕಳ ಕಿವಿಗೆ ಕಡ್ಡಿ ಹಾಕುವುದರಿಂದ ಕಿವಿದಮಟೆಗೆ ಅಪಾಯವುಂಟು. ದೊಡ್ಡವರ ಕಿವಿದಮಟೆಗೆ ಮುತ್ತಿನ ಹೊಳಪಿದೆ. ಇದು ಹೊರಮೈ ಸ್ವಲ್ಪ ಕೆಳಗಾಗುವಂತೆ ವಾಲಿದೆ. ಕೂಸಿನಲ್ಲಿ ಇದರ ಹೊರಮೈ ಪಾದಗಳ ಕಡೆ ತಿರುಗಿದೆ. ಹೊರಮೈಯ ಕೇಂದ್ರದಿಂದ ಮೇಲಕ್ಕೆ ಹೋಗುವ ಕೆಂಪು ಹಳದಿ ಗೀರು ಕಾಣುತ್ತದೆ. ಇದು ಸುತ್ತಿಗೆ ಮೂಳೆಯ ಹಿಡಿಯಿಂದಾದ ಉಬ್ಬು. ಸುತ್ತಿಗೆಯ ಒಳಸೆಳೆತದಿಂದ ಕೇಂದ್ರದಲ್ಲಿ ಅಂಬೊ ಎಂಬ ಮಧ್ಯಗುಳಿ ಕಾಣುತ್ತದೆ. ಹೊರಗಿವಿಯ ಮೂಲಕ ತೂರಿದ ಶಬ್ದತರಂಗಗಳು ಕಿವಿದಮಟೆಯನ್ನು ಅದಿರಿಸುತ್ತವೆ.

ವಿಕಲಕರ್ಣ (ಸೀಳ್ಗಿವಿಯೂ ಇರಬಹುದು), ಎರಡನೆಯ ಕರ್ಣ, ತೂತಿಲ್ಲದಿರುವಿಕೆ ಕರ್ಣದ ಮುಂದೆ ತೂತುಗಳು ಮತ್ತು ಬುಡ್ಡೆಗಳು ಇವು ಹೊರಗಿವಿಯ ವಿಕಲತೆಗಳು. ಕೆಳದವಡೆ ಮೂಳೆಯಿಲ್ಲದಿರುವಾಗ ಎರಡು ಕಿವಿಗಳೂ ಸೇರಿ ಕತ್ತಿನಲ್ಲಿರಬಹುದು.

**ನಡುಗಿವಿ :** ಕಿವಿ ಇದು ಮೂಳೆಯಲ್ಲಿರುವ ಸಣ್ಣ ಪೊಳ್ಳು. ಕಿವಿದಮಟೆಯ ಕಂಪನವನ್ನು ಒಳಗಿವಿಗೆ ಮುಟ್ಟಿಸುವ ಮೂರು ಸಣ್ಣ ಮೂಳೆಗಳ ಸರಣಿ ಇದರಲ್ಲಿದೆ : ಲೋಳ್ಪೊರೆಯ ಒಳಹೊದಿಕೆಯಿದೆ, ಪೊಳ್ಳಿನಲ್ಲಿ ಗಾಳಿಯಿದೆ. ಗುಂಟಲಿಗೆ ಸೇರಿದ ಕಿವಿಗಂಟಲು ನಾಳದಿಂದ ಹೊರಗಾಳಿಯ ಒತ್ತಡವೂ ಪೊಳ್ಳಿನ ಗಾಳಿಯ ಒತ್ತಡವೂ ಒಂದೇ ಆಗುತ್ತದೆ. ಕಿವಿದಮಟೆಯ ಹೊರಗಡೆ ಕುಹರದಲ್ಲಿಯೂ ಒಳಗಡೆ ಪೊಳ್ಳಿನಲ್ಲಿಯೂ ಇರುವುದರಿಂದ ಅದು ಶಬ್ದಕ್ಕೆ ಸರಿಯಾಗಿ ಅದಿರಲು ಸಾಧ್ಯವಾಗುತ್ತದೆ. ಒಳಗಾಳಿಯಿಲ್ಲದಿದ್ದರೆ ತಮಟೆ ಕಂಪಿಸಲಾಗದೆ ಕಿವುಡುಂಟಾಗುತ್ತದೆ.

ನಡುಗಿವಿಯ ಮೇಲಿನ ಕೆಳಗಿನ ಮತ್ತು ಹಿಂದುಮುಂದಿನ ವ್ಯಾಸಗಳು ಸುಮಾರು 15 ಮಿಮೀ. ಪಕ್ಕದಿಂದ ಪಕ್ಕಕ್ಕೆ ಮೇಲುಗಡೆ 6 ಮಿಮೀ. ಮಧ್ಯೆ (ಅಂಬೊ ಇರುವಲ್ಲಿ) 2 ಮಿಮೀ ಮತ್ತು ಕೆಳಗೆ 4 ಮಿಮೀ. ಈ ಪೊಳ್ಳಿನ ಹೊರಭಿತ್ತಿಯಲ್ಲಿ ಕಿವಿದಮಟೆ ಉಂಟು. ಒಳಭಿತ್ತಿಯಲ್ಲಿ ಮಧ್ಯೆ ಚಿಕ್ಕ ಉಬ್ಬು (ಪ್ರೊಮೊಂಟರಿ) ಇವೆ. ಇದು ಒಳಗಿವಿಯ ಶಂಖದ ಮೊದಲ ಸುರುಳಿಯಿಂದಾದುದು. ಈ ಉಬ್ಬಿನ ಮೇಲುಗಡೆ ಹಿಂದು ಮುಂದು




**ಚಿತ್ರ 2 ಹೊರಗಿವಿ, ನಡುಗಿವಿ, ಒಳಗಿವಿಯ ಭಾಗಗಳು : 1. ಯೂಟ್ರಿಕಲ್, 2 ಶಂಖಸುರುಳಿ ನಾಳ, 3. ಸ್ಯಾಕ್ಯೂಲ್, 4 ಯೂಸ್ಟೇಕಿಯನ್ ನಾಳ, 5 ಕಿವಿದಮಟೆ, 6 ಸಣ್ಣ ಮೂಳೆಗಳಿರುವ ಪೊಳ್ಳು, 7. ಕರ್ಣ, 8 ಕರ್ಣಕುಹರ, 9 ಅರ್ಧವೃತ್ತನಾಳ**

ಉದ್ದವಾಗಿರುವ ಅಲಸಂದೆ ಕಾಳಿನಾಕಾರದ ವೆಸ್ಟಿ ಬ್ಯೂಲ್ ರಂಧ್ರವಿದೆ. ಇದರ ಮೂಲಕ ಚಿಕ್ಕ ಮೂಳೆಗಳ ಸರಣಿ ಶಬ್ದಕಂಪನವನ್ನು ಒಳಕ್ಕೆ ಸಾಗುತ್ತದೆ. ಉಬ್ಬಿನ ಕೆಳಗಡೆ ಒಂದು ಚಿಕ್ಕ ಗುಂಡು ರಂಧ್ರವಿದ್ದು ಅದು ಪೊರೆಯಿಂದ (ಚಿಕ್ಕ ತಮಟೆ) ಮುಚ್ಚಿಕೊಂಡಿದೆ. ಶಂಖದಲ್ಲಿ ಒಳಒತ್ತಡ ಹೆಚ್ಚಾದಾಗ ಈ ಪೊರೆ ಉಬ್ಬುತ್ತದೆ. ಕಡಿಮೆಯಾದಾಗ ಒಳಹೋಗುತ್ತದೆ. ಒಳ ಭಿತ್ತಿಯ ಮೇಲ್ಭಾಗದಲ್ಲಿ ಮುಖದ ಪೇಶಿಗಳಿಗೆ ಹೋಗುವ ತಲೆಯ 7ನೆಯ ನರ ಹಿಂದಕ್ಕೆ ಹೋಗುತ್ತದೆ. ಪೊಳ್ಳಿನ ಹಿಂದಿನ ಗೋಡೆಯಲ್ಲಿ ಮೇಲುಗಡೆ ಒಂದು ಚಿಕ್ಕ ತೂತು ಇದೆ. ಇದರ ಮೂಲಕ ಗಾಳಿ ಕಿವಿಯ ಹಿಂದಿರುವ ಮೂಳೆಗಾಗಿ ಗೂಡುಗಳಲ್ಲಿ ಒತ್ತಡವನ್ನು ಸಮಮಾಡುತ್ತದೆ. ಈ ತೂತಿನ ಕೆಳಗೆ ಒಂದು ಚಿಕ್ಕ ಮುಳ್ಳಿದೆ. ಇದು ಸ್ಟೆಪೀಡಿಯಸ್ ಎಂಬ ಪೇಶಿಯ ಆಧಾರ. ಹೊರ ಮತ್ತು ಒಳಗೋಡೆಗಳು ಮುಂದುಗಡೆ ಬಹಳ ಹತ್ತಿರವಿರುವುದರಿಂದ ಮುಂದಿನ ಗೋಡೆ ಬಹಳ ಇಕ್ಕಟ್ಟು ಆದರೂ ಇದರ ಮೇಲ್ಭಾಗದಲ್ಲಿ ಟೆನ್ಸಾರ್ ಟಿಂಪನಿ ಎಂಬ ಚಿಕ್ಕ ಪೇಶಿಗೆ ಒಂದು ಚಿಕ್ಕ ಗೂಡಿದೆ. ಶಬ್ದ ಹೆಚ್ಚಾದಂತೆ ಇದು ಕಿವಿದಮಟೆಗೆ ಅಂಟಿರುವ ಸುತ್ತಿಗೆ ಮೂಳೆಯನ್ನು ಒಳಕ್ಕೆ ಎಳೆದು ತಮಟೆಯ ಅತಿ ಕಂಪನದಿಂದ ಒಳಗಿವಿಗೆ ಆಗುವ ಅಪಾಯವನ್ನು ತಪ್ಪಿಸುತ್ತದೆ. ರಿಕಾಬುಮೂಳೆಗೆ ಅಂಟಿರುವ ಸ್ಟೆಪೀಡಿಯಸ್‌ನ ಕೆಲಸವೂ ಇದೇ ರೀತಿ. ಟೆನ್ಸಾರ್ ಟಿಂಪನಿ ಗೂಡಿನ ಕೆಳಗೆ ಕಿವಿ ಗಂಟಲುನಾಳದ ಹಿಂದಿನ ಬಾಯಿಯಿದೆ. ಈ ನಾಳದ ಉದ್ದ 36 ಮಿಮೀ. ಇದರ ಕಿವಿಕೊನೆಯ ಭಾಗದಲ್ಲಿ ಮೂಳೆಯಿದೆ; ಮುಂದಿನ ಭಾಗದಲ್ಲಿ ಮೆಲ್ಲೆಲುಬಿದೆ. ಇದರ ಮೂಲಕ ಗಂಟಲ ಲೋಳೆಪೊರೆಯೂ ನಡುಗಿವಿಯ ಲೋಳೆಪೊರೆಯೂ ಒಂದೇ ಆಗಿವೆ. ಇದರಿಂದ ಗಂಟಲ ಕ್ರಿಮಿಗಳು ನಡುಗಿವಿಯನ್ನು ಸೇರಿ ಉರಿತ ಉಂಟಾಗಬಹುದು ಮತ್ತು ಕಿವಿದಮಟೆ ತೂತುಬಿದ್ದು ಕಿವಿಯಲ್ಲಿ ಕೀವು ಸೋರಬಹುದು. ಕೂಸಿನಲ್ಲಿ ಈ ನಾಳದ ಉದ್ದ 18 ಮೀಮೀ. ಮತ್ತು ಇದು ಸಮಮಟ್ಟದಲ್ಲಿದೆ. ದೊಡ್ಡವರಲ್ಲಿ ಇದರ ಮುಂದಿನ ಬಾಯಿ ಹಿಂದಿನ ಬಾಯಿಗಿಂತ ಕೆಳಮಟ್ಟದಲ್ಲಿದೆ. ನಡುಗಿವಿಯ ಮಾಡಿನಲ್ಲಿ ಮಿದುಳುಪೊರೆಗಳನ್ನು ಬೇರ್ಪಡಿಸುವ ಮೂಳೆಯ ರೇಕಿದೆ; ನೆಲ ಇಕ್ಕಟ್ಟಾಗಿದೆ.

ಕಿವಿದಮಟೆ ನಡುಗುವಿಯ ಹೊರ ಗೋಡೆಯ ಹೆಚ್ಚು ಭಾಗ. ಇದು ಹೊರ ಮತ್ತು ನಡುಗಿವಿಗಳ ನಡುವೆ ಇದೆ. ಇದರದು ಮೊಟ್ಟೆಯಾಕಾರ. ಮೇಲುಕೆಳಗಿನ ವ್ಯಾಸ 9–10 ಮಿಮೀ. ಅತಿಚಿಕ್ಕ ವ್ಯಾಸ 8–9 ಮಿಮೀ, ಇದು ವಾಲಿರುವುದರಿಂದ ಇದಕ್ಕೂ ಕರ್ಣಕುಹರದ ತಳಕ್ಕೂ ನಡುವೆ 45°ಗಳಷ್ಟು ಬಾಗು ಉಂಟು. ಇದರ ಅಂಚು ಮೆಲ್ಲೆಲುಬಿನ ಉಂಗುರದಿಂದ ಸ್ವಲ್ಪ ದಪ್ಪವಾಗಿದೆ. ಇದರ ಹೊರಪದರ ಚರ್ಮ, ಒಳಪದರ ಲೋಳೆಪೊರೆ, ಇದಕ್ಕೆ ಮೇಲ್ಮಟ್ಟದಲ್ಲಿ ಮಧ್ಯಕಿವಿಯ ಅಟ್ಟವಿದೆ. ಇದರಲ್ಲಿ ಸುತ್ತಿಗೆ ಮತ್ತು ಅಧ್ಗಣಿಯ (ಅಟೆಗಲ್ಲು) ಹೆಚ್ಚು ಭಾಗಗಳಿವೆ.

ಸುತ್ತಿಗೆ (ಮ್ಯಾಲಿಯಸ್), ಅಡಿಗಲ್ಲು (ಇಂಕಸ್) ಮತ್ತು ರಿಕಾಬು (ಸ್ಟೇಪೀಸ್) ಎಂಬವು ನಡುಗಿವಿಯಲ್ಲಿರುವ ಚಿಕ್ಕ ಮೂಳೆಗಳು. ಇವುಗಳಲ್ಲಿ ಸುತ್ತಿಗೆ ದೊಡ್ಡದು. ಸುತ್ತಿಗೆಯ ಹಿಡಿ ತಮಟೆಯ ಹೊಕ್ಕುಳಿನ ವರೆಗೂ ಅಂಟಿದೆ. ಅದರ ತಲೆ ಅಟ್ಟದಲ್ಲಿದೆ. ಇದಕ್ಕೆ ಹಿಂದೆ ಅಡಿಗಲ್ಲಿನೊಡನೆ ಕೀಲಿದೆ. ಅಡಿಗಲ್ಲಿನ ಉದ್ದ ಚಾಚು ಕೆಳಕ್ಕೆ ತಿರುಗಿದೆ. ಇದರ ಕೆಳ ತುದಿಗೆ ಸಿಲ್ವಿಯಸ್‌ನ ಮಣಿಗಂಟು ಎಂದು ಹೆಸರು. ಈ ಗಂಟಿಗೂ ರಿಕಾಬಿಗೂ ನಡುವೆ ಕೀಲಿದೆ. ರಿಕಾಬಿನ ಒಂದು ಕಾಲು ಹಿಂದೆ, ಇನ್ನೊಂದು ಮುಂದು. ಅದರ ಪಾದ ಮಧ್ಯಕಿವಿ ಒಳಗೋಡೆಯ ವೆಸ್ಟಿಬ್ಯೂಲ್ ರಂಧ್ರದಲ್ಲಿ ಸಿಕ್ಕಿಕೊಂಡಿದೆ. ಸುತ್ತಿಗೆ ಮತ್ತು ಅಡಿಗಲ್ಲು ಒಂದೇ ಸನ್ನೆಯಾಗಿ ಅದುರುತ್ತವೆ. ತಮಟೆ ಹೊರಕ್ಕೆ ಸರಿದಾಗ ರಿಕಾಬಿನ ಪಾದ ಹೊರಕ್ಕೆ ಬರುತ್ತದೆ.

**ಒಳಗಿವಿ :** ಇದು ತೊಡಕಾಗಿದೆ. ಮೂಳೆಯ ಒಳಗಿವಿ ಮತ್ತು ಪೊರೆಯ ಒಳಗಿವಿ ಎಂದು ಎರಡಿದೆ. ಮೂಳೆಯದರೊಳಗೆ ಪೊರೆಯ ಒಳಗಿವಿಯಿದೆ.

**ಮೂಳೆಯ ಒಳಗಿವಿ :** ಇದರ ಭಾಗಗಳು ವೆಸ್ಟಿಬ್ಯೂಲ್, ಮೂರು ಅರ್ಧವೃತ್ತ ನಾಳಗಳು ಮತ್ತು ಶಂಖ, ನಡುಗಿವಿಯ ಒಳಪಕ್ಕದ ಹಿಂಭಾಗದಲ್ಲಿ ವೆಸ್ಟಿಬ್ಯೂಲ್ ಇದೆ. ಇವೆರಡಕ್ಕೂ ನಡುವೆ ಇರುವ ವೆಸ್ಟಿಬ್ಯೂಲ್ ರಂಧ್ರದಲ್ಲಿ ರಿಕಾಬಿನ ಪಾದವಿದೆ. ಮಿದುಳುಪೆಟ್ಟಿಗೆಯ ಹಿಂಭಾಗದಲ್ಲಿರುವ ಒಳಕರ್ಣಕುಹರಕ್ಕೂ ವೆಸ್ಟಿಬ್ಯೂಲಿಗೂ ನಡುವೆ ಸ್ಥಿತಿಶ್ರವಣನರದ (ತಲೆಯ 8ನೆಯ ನರ) ಶಾಖೆಗಳು ತೂರುವ ಸಣ್ಣ ತೂತುಗಳಿರುವ ತೆಳುವಮೂಳೆಯಿದೆ. ವೆಸ್ಟಿಬ್ಯೂಲಿನ ಕೆಳಭಾಗದಲ್ಲಿ ಮಿದುಳು ಪೆಟ್ಟಿಗೆಯ ಹಿಂಭಾಗವನ್ನು ಸೇರುವ ವೆಸ್ಟಿಬ್ಯೂಲ್ ನೀರ್ಗೊಳವೆ ಯಿದೆ. ವೆಸ್ಟಿಬ್ಯೂಲಿನ ಹಿಂಭಾಗಕ್ಕೆ ಮೂರು ಅರ್ಧ ವೃತ್ತನಾಳಗಳೂ ಅಂಟಿ ಕೊಂಡಿವೆ ಇವುಗಳಲ್ಲಿ ಪಕ್ಕಕೊಳವೆಗೂ ವೆಸ್ಟಿಬ್ಯೂಲಿಗೂ ನಡುವೆ ಎರಡು ಪ್ರತ್ಯೇಕ ತೂತುಗಳಿವೆ. ಮೇಲ್ಗೊಳವೆಯ ಹೊರಕೊನೆ ಮತ್ತು ಹಿಂಗೊಳವೆಯ ಕೆಳಕೊನೆಗಳಲ್ಲಿ ಪ್ರತ್ಯೇಕ




**ಚಿತ್ರ 3 : ಪೊರೆ ಒಳಗಿವಿಯ ಭಾಗಗಳು : 1. ಶಂಖ ಸುರುಳಿ ನಾಳ, 2 ಸಾಕ್ಯೂಲ್, 3 ಯೂಟ್ರಿಕಲ್, 4 ಅರ್ಧವೃತ್ತನಾಳ**

ತೂತುಗಳಿವೆ. ಮೇಲ್ಗೊಳವೆಯ ಹೊರ ಕೊನೆ ಮತ್ತು ಹಿಂಗೊಳವೆಯ ಕೆಳಕೊನೆಗಳಲ್ಲಿ ಪ್ರತ್ಯೇಕ ತೂತುಗಳಿವೆ. ಪ್ರತಿಯೊಂದು ಕೊಳವೆಯ ಒಂದು ಕೊನೆ ಉಬ್ಬಿದೆ. ಮೇಲ್ಗೋಳವೆ ನೆಟ್ಟಗಿದೆ ಮತ್ತು ಅದಕ್ಕೆ ಹೊರ ಮತ್ತು ಒಳಕಾಲುಗಳಿವೆ. ಪಕ್ಕಕೊಳವೆ ಸಮಮಟ್ಟದಲ್ಲಿದ್ದು ಅದರ ಕಾಲುಗಳು ಮೇಲು ಕೆಳಗಿವೆ. ವೆಸ್ಟಿಬ್ಯೂಲಿಗೆ ಮುಂದುಗಡೆ ಶಂಖ ಅಂಟಿದೆ. ಇದು ಬಸವನಹುಳದ ಗೂಡಿನಂತಿದೆ. ಇದರ ತುದಿಯೂ ಅಕ್ಷವೂ ಮುಂದಕ್ಕೆ ಪಕ್ಕಕ್ಕೆ ತಿರುಗಿವೆ. ಇದರ ಮಧ್ಯಗೂಟದ ಸುತ್ತ 2¼ಸುರುಳಿಯಿರುವ ಶಂಖಕೊಳವೆಯಿದೆ. ಶಂಖದ ಉದ್ದ 5 ಮಿಮೀ. ಶಂಖಕೊಳವೆಯ ಉದ್ದ 30 ಮಿಮೀ. ಇದು ಬುಡದ ಕಡೆ ಅಗಲವಾಗಿದ್ದು ಶಂಖದ ತುದಿಯ ಕಡೆ ಕ್ರಮೇಣ ಚಿಕ್ಕದಾಗುತ್ತದೆ. ಮಧ್ಯಗೂಟವನ್ನು ಬುಡದಿಂದ ತುದಿಯವರೆಗೆ ಬಳಸಿರುವ ಒಂದು ಸುರುಳಿ ಚಜ್ಜವಿದೆ. ಇದು ಶಂಖ ಕೊಳವೆಯೊಳಕ್ಕೆ ಅರ್ಧದಷ್ಟು ಚಾಚಿದೆ. ಶ್ರವಣ ನರಶಾಖೆಗಳು ಇದನ್ನು ತೂರುತ್ತವೆ.

**ಪೊರೆಯ ಒಳಗಿವಿ :** ಇದು ಮೂಳೆಯ ಒಳಗಿವಿಯ ಒಳಗಿದ್ದರೂ ಅದರ ತುಂಬ ಇಲ್ಲ. ಪೊರೆಯ ಕಿವಿಗೂ ಮೂಳೆಕಿವಿಗೂ ನಡುವೆ ಹೊರನೀರಿದೆ. ಪೊರೆಯ ಕಿವಿಯೊಳಗೆ ಒಳನೀರಿದೆ. ಒಳನೀರೂ ಹೊರನೀರೂ ಬೆರೆಯುವಂತಿಲ್ಲ. ಈ ನೀರುಗಳಿಲ್ಲದಿದ್ದರೆ ಶ್ರವಣಪೊರೆ ಕಂಪಿಸಲಾರದು. ಪೊರೆಯ ಒಳಗಿವಿಯೆ ಭಾಗಗಳು ಯುಟ್ರಿಕ್ಲ್. ಮೂರು ಅರ್ಧವೃತ್ತನಾಳಗಳು, ಸ್ಯಾಕ್ಯೂಲ್, ಶ್ರವಣನಾಳ. ಮೂಳೆಯ ವೆಸ್ಟಿಬ್ಯೂಲ್‌ನೊಳಗೆ ಮುಂದೆ ಸ್ಯಾಕ್ಯೂಲ್, ಹಿಂದೆ ಯುಟ್ರಿಕ್ಲ್ ಇವೆ. ಇವುಗಳಲ್ಲಿ ಮ್ಯಾಕುಲ ಎಂಬ ವಿಶೇಷ ವೇದನವುಳ್ಳ ಕಣಗಳ ಗುಳ್ಳೆಯಿದೆ. ಈ ಗುಳ್ಳೆಯಲ್ಲಿ ವಿಶೇಷವೇದನ ರೋಮಕಣಗಳಿದ್ದು ಇವುಗಳ ಸುತ್ತ ಶ್ರವಣನರದ ಕೆಲವು ಕೊನೆಗಳಿವೆ.

ಮ್ಯಾಕುಲದಲ್ಲಿ ಸುಣ್ಣಕಲ್ಲಿನ ಸಣ್ಣಹರಳುಗಳಿವೆ. ಪೊರೆಯ ಅರ್ಧವೃತ್ತನಾಳಗಳು ಮೂಳೆಯ ಅರ್ಧವೃತ್ತನಾಳಗಳಿಗಿಂತ ಅತಿಸಣ್ಣವಾಗಿವೆ. ಇವುಗಳ ಪ್ರತಿಯೊಂದು ಬುಡ್ಡೆಯಲ್ಲೂ ವಿಶೇಷವೇದನ ರೋಮಕಣಗಳ ಬದುವಿದೆ. ಈ ನಾಳಗಳೆಲ್ಲ ಯುಟ್ರಿಕ್ಲ್‌ನೊಳಕ್ಕೆ ತೆರೆಯುತ್ತವೆ. ಸ್ಯಾಕ್ಯೂಲಿನ ಕೆಳಭಾಗದಿಂದ ಹಿಂದಕ್ಕೆ ಬಾಗಿರುವ ಒಳನೀರಿನ ಕೊಳವೆ

ಯುಟ್ರಿಕ್ಲನ್ನು ಸೇರುತ್ತದೆ. ಸ್ಯಾಕ್ಯೂಲಿನ ಮುಂದೆ ಶಂಖಿಕೊಳವೆಯೊಳಗಿರುವ ಶ್ರವಣನಾಳವನ್ನು ಸೇರಿಸುವ ಕುರುಚುನಾಲವಿದೆ. ಶಂಖಿಕೊಳವೆಯನ್ನು ಅಡ್ಡಕತ್ತರಿಸಿದರೆ ಮಧ್ಯ ಗೂಟಕ್ಕೆ ಅಂಟಿರುವ ಸುರುಳಿ ಚಜ್ಜ ಮತ್ತು ಇದಕ್ಕೆ ಅಂಟಿರುವ ಶ್ರುತಿಪೊರೆ ಶಂಖಿಕೊಳವೆಯನ್ನು ಇಬ್ಭಾಗಿಸುವುದು ಕಾಣುತ್ತದೆ. ಶ್ರುತಿಪೊರೆ ಶಂಖಿಕೊಳವೆಯ ಹೊರಗೋಡೆಗೆ ಬಲವಾದ ಸ್ನಾಯುವಿನಿಂದ ಅಂಟಿಕೊಂಡಿದೆ. ಸುರುಳಿ ಚಜ್ಜದ ಇನ್ನೊಂದು ತುಟಿಗೆ ರೇಸ್ನಂ ಪೊರೆ ಅಂಟಿಕೊಂಡಿದೆ. ಇದೂ ಶಂಖಿಕೊಳವೆಯ ಹೊರಗೋಡೆಗೆ ಅಂಟಿರುವುದರಿಂದ ಕೊಳವೆಯ ಮೇಲರ್ಧದಿಂದ ತ್ರಿಕೋಣಭಾಗ ಬೇರ್ಪಡುತ್ತದೆ. ಇದರಿಂದ ಶಂಖಿಕೊಳವೆಯ ಅಡ್ಡಕತ್ತರಿಕೆಯಲ್ಲಿ ಮೂರು ಭಾಗಗಳು ಕಾಣುತ್ತವೆ. ಮೇಲಿನದು ವೆಸ್ಟಿಬ್ಯೂಲ್‌ನಾಲೆ, ಮಧ್ಯದ್ದು ಶ್ರವಣನಾಳ, ಕೆಳಗಿನದು ನಡುಗಿವಿನಾಲೆ. ಶಂಖದ ತುದಿಯಲ್ಲಿ ವೆಸ್ಟಿಬ್ಯೂಲ್ ಮತ್ತು ನಡುಗಿವಿನಾಲೆಗಳ ಸಂಗಮವಿದೆ. ಇದರಿಂದ ಒಂದು ನಾಲೆಯ ನೀರು ಇನ್ನೊಂದರೊಳಕ್ಕೆ ಹೋಗಬಹುದು. ವೆಸ್ಟಿಬ್ಯೂಲ್ ರಂಧ್ರವನ್ನು ಮುಚ್ಚಿರುವ ರಿಕಾಬು ಪಾದದ ವರೆಗೂ ವಿಸ್ತರಿಸಿದೆ. ನಡುಗಿವಿನಾಲೆಯೊಳಗಿನ ಹೊರನೀರು ನಡುಗಿವಿಯ ಗುಂಡುರಂಧ್ರದ ಚಿಕ್ಕ ತಮಟೆಯ ವರೆಗೂ ಹರಡಿದೆ ಮತ್ತು ಶಂಖ ಕೊಳವೆಯ ಮೂಲಕ ಮಿದುಳು ಪೆಟ್ಟಿಗೆಯ ಹಿಂಭಾಗದ ಮಧ್ಯ ಮತ್ತು ಒಳ ಮಿದುಳ್ಪೊರೆಗಳ ನಡುವೆ ಇರುವ ಮಿದುಳು ಹುರಿನೀರಿನೊಡನೆ ಬೆರೆಯುತ್ತದೆ. ಇದರಿಂದ ಒಳಗಿವಿಯ ಕಶ್ಮಲಗಳು ಆಚೆಗೆ ಹೋಗಲು ಸಾಧ್ಯ. ಶ್ರವಣನಾಳ ಶಂಖದ ತುದಿಯ ಕಡೆ ಮುಚ್ಚಿಕೊಂಡಿದೆ. ಮತ್ತು ಅದರ ಒಳನೀರು ಹೆನ್ಸನ್ ನಾಳದ ಮೂಲಕ ಸ್ಯಾಕ್ಯೂಲಿನ ನೀರಿನೊಡನೆ ಬೆರೆಯುತ್ತದೆ.

ಶ್ರವಣನಾಳದಲ್ಲಿ ಕಾರ್ಟಿ ಅಂಗವೆಂಬ ನಿಜ ಶ್ರವಣೇಂದ್ರಿಯವಿದೆ. ಇದನ್ನು ಮಾರ್ಕ್ವಿಸ್ ಆಲ್ಫನ್ಸೊ ಕಾರ್ಟಿ (1822–76) ಎಂಬ ಇಟಲಿಯ ಸೂಕ್ಷ್ಮ ಅಂಗರಚನಾ ಶಾಸ್ತ್ರಜ್ಞ ಕಂಡುಹಿಡಿದ. ಇದು ಶ್ರುತಿಪೊರೆಯ ವೆಸ್ಟಿಬ್ಯೂಲ್‌ನಾಲೆಯ ಕಡೆ ಇದೆ. ಶ್ರುತಿಪೊರೆಯ ಅಗಲ ಶಂಖದ ಬುಡದ ಕಡೆ 0.21 ಮಿಮೀ., ತುದಿಯ ಕಡೆ 0.36 ಮಿಮೀ. ಇದರ ಮೇಲೆ ಕಾರ್ಟಿಸುರಂಗವಿದೆ. ಇದು 2¾ ಸುತ್ತಿನ ಸೂಕ್ಷ್ಮ ಸುರುಳಿ ನಾಳ ಇದರ ಗೋಡೆಗಳು 6,000 ಒಳ ಮತ್ತು 4,000 ಹೊರಕಾರ್ಟಿಕೋಲುಗಳೆಂಬ ಜೀವಕೋಶಗಳಿಂದಾಗಿವೆ. ಈ ಸಾಲುಗಳಿಗೆ ಅಚೆ ಮತ್ತು ಒಳಗಡೆ ಆಚೆಯ ಮತ್ತು ಒಳರೋಮ ಕಣಗಳಿವೆ. ಆಚೆ ರೋಮಕಣಗಳ ನಡುವೆ ಡೀಟರ್ಸ್‌ನ ಆಸರೆ ಕಣಗಳಿವೆ. ತೀರ ಆಚೆ ಹೆನ್ಸನ್‌ನ ದೊಡ್ಡ ಕಣಗಳಿವೆ. ಇವನ್ನು ಮುಚ್ಚಿದಂತೆ ಬಲೆಪೊರೆಯೆಂಬ ಸೂಕ್ಷ್ಮಪೊರೆಯಿದೆ. ರೋಮಕಣಗಳ ರೋಮಗಳು ಇದನ್ನು ತೂರುತ್ತವೆ. ಇದರ ಮೇಲೆ ಸಡಿಲಾದ, ಡೀಟರ್ಸ್ ಕಣಗಳಿಗೆ ಅಂಟಿರಬಹುದಾದ, ಟೆಕ್ಟೋರಿಯಲ್ ಪೊರೆಯಿದೆ. ಈ ಪೊರೆ ಸುರುಳಿಚಜ್ಜದ ಮೇಲ್ತುಟಿಗೆ ಅಂಟಿಕೊಂಡಿದೆ. ಶ್ರವಣನರತಂತುಗಳು ಮಧ್ಯಗೂಟದಲ್ಲಿರುವ ಸುರುಳಿ ನರಗಂಟಿನಿಂದ ಹೊರಟು ಸುರುಳಿಚಜ್ಜವನ್ನು ತೂರಿ ಒಳ ಮತ್ತು ಹೊರರೋಮ ಕಣಗಳಿಗೆ ಹೋಗುತ್ತದೆ.

**ಕಿವಿಯ ಕಾರ್ಯವಿಧಾನ** : ಪ್ರಾಣಿಗಳ ವಿಕಾಸದಲ್ಲಿ (ಸರಳವಾದ ಬೆನ್ನು ಮೂಳೆ ಪ್ರಾಣಿಗಳಲ್ಲಿ) ಸರಿಯಾದ ದೇಹವಿನ್ಯಾಸವನ್ನು ನಿಯಂತ್ರಿಸುವುದು ಕಿವಿಯ ಮೊದಲ ವಿಕಾಸದ ಹೆಜ್ಜೆ ಮತ್ತು ಕೆಲಸ. ಮೀನು ಮುಂತಾದ ಕೆಳದರ್ಜೆ ಪ್ರಾಣಿಗಳಲ್ಲಿ ಇದೇ ಕಿವಿಯ ಕೆಲಸ; ಕೇಳುವುದಲ್ಲ. ಇದೇ ಒಳಗಿವಿಯ ವಿಕಾಸದ ಪ್ರಾರಂಭ. ದೇಹ ತಲೆ ಕೆಳಗಾಗದ, ಬೆನ್ನುಕೆಳಗಾಗದ, ಬೀಳದ ಅಥವಾ ವಾಲದ ಸಮಸ್ಥಿತಿಗೆ ಕಣ್ಣುಗಳ ಮತ್ತು ಇತರ ದೇಹಭಾಗಗಳ ಪೇಶಿಗಳ ಸಂತುಲಿತ ಕಾರ್ಯ ಅಗತ್ಯ. ಹೀಗೆ ಪೇಶಿಗಳನ್ನು ಶಿಸ್ತಿನಲ್ಲಿಡುವುದು ವೆಸ್ಟಿಬ್ಯೂಲ್ ಅಂಗದ, ಅದರಲ್ಲೂ ಯುಟ್ರಿಕ್ಲ್ ಮತ್ತು ಅರ್ಧ ವೃತ್ತನಾಳಗಳ ಕೆಲಸ ಕೆಲವು ಮೀನು ಜಾತಿಗಳಲ್ಲಿರುವಂತೆ ಸ್ಯಾಕ್ಯೂಲಿನ ಕೆಲಸ ಶಬ್ದ ತರಂಗವೇದನೆ. ಸಂಚಾರೀ ಕಶೇರುಕಗಳಲ್ಲಿ ಶ್ರವಣಗ್ರಾಹಕಶಕ್ತಿ ಕ್ರಮವಾಗಿ ಹೆಚ್ಚುತ್ತ ಪಕ್ಷಿ ಮತ್ತು ಸ್ತನಿಗಳಲ್ಲಿ ಉಚ್ಚಸ್ಥಾನವನ್ನು ಹೊಂದಿದೆ. ಇದಕ್ಕೆ ಸಮವಾಗಿ ವೆಸ್ಟಿಬ್ಯೂಲ್ ಕೂಡ, ತನ್ನ ದಾರಿಯಲ್ಲಿ, ಸಂಚಾರಿಗಳಲ್ಲಿ ಹೆಚ್ಚು ಸಂಕೀರ್ಣವಾಗಿ ಹಿಂಗಾಲು ಮುಂಗಾಲುಗಳ ಚಲನೆಗಳಿಗೆ ಸರಿಯಾಗಿ ವಿವಿಧವಾಗುತ್ತದೆ ಮತ್ತು ವಿಶೇಷ ವಿಕಾಸವನ್ನು ಹೊಂದುತ್ತದೆ.

ಸರಿಯಾದ ಶ್ರವಣವ್ಯವಸ್ಥೆಯೆಂದರೆ ಶಬ್ದವನ್ನು ಕೇಳುವ ಮತ್ತು ಶಬ್ದ ತರಂಗಗಳಿಗೆ ಸೂಕ್ತ ಪ್ರತಿಕ್ರಿಯೆ ತೋರಿಸುವ ಶಕ್ತಿಯಿರುವುದು. ಸಾಧಾರಣವಾಗಿ ಅಲುಗಾಡುವ ಹೊರಕಿವಿಗಳೇ ಶಬ್ದತರಂಗಗಳನ್ನು ಗ್ರಹಿಸುತ್ತವೆ. ತಲೆಬುರುಡೆಯಾಗಲಿ ಅಥವಾ ದೇಹದ ಇನ್ನು ಯಾವ ಭಾಗವೇ ಅಗಲಿ ಅಲ್ಲ. ಹೊರಗಿವಿಯಲ್ಲಿ ನುಗ್ಗಿದ ಶಬ್ದದ ಅಲೆಗಳು ಕುಹರದ ಮೂಲಕ ಕಿವಿದಮಟೆ ಮತ್ತು ನಡುಗಿವಿ ಸಣ್ಣಮೂಳೆಗಳ ಸರಣಿಯನ್ನು ಅದುರಿಸುತ್ತದೆ. ಈ ಸರಣಿ ತೂಗುಸೇತುವೆಯಂತೆ ಆಡಿ ವೆಸ್ಟಿಬ್ಯೂಲ್ ರಂಧ್ರದಲ್ಲಿರುವ ರಿಕಾಬುಪಾದ ಅದುರುತ್ತದೆ. ಮೂಳೆ ಒಳಗಿವಿ ಹಿಗ್ಗದೆ ಬಿಗಿಯಾಗಿರುವುದರಿಂದಲೂ ಅದರಲ್ಲಿರುವ ನೀರು ಒತ್ತಡದಿಂದ ಕುಗ್ಗದಿರುವುದರಿಂದಲೂ ರಿಕಾಬು ಪಾದ ಸ್ವಲ್ಪ ಒಳ ನುಗ್ಗಿದಾಗ ಗುಂಡುರಂಧ್ರವನ್ನು ಮುಚ್ಚಿರುವ ಚಿಕ್ಕ ತಮಟೆ ಹೊರಕ್ಕೆ ಉಬ್ಬುತ್ತದೆ ಹೀಗಾಗುವುದು ಶಬ್ದ ಕಂಪನಗಳಿಂದುಂಟಾದ ಅಲುಗಾಟದಿಂದ ಅಲೆಗಳು ವೆಸ್ಟಿಬ್ಯೂಲ್ ನಾಲೆ ನೀರಿನಿಂದ ನಡುಗಿವಿನಾಲೆ ನೀರಿಗೆ ಶ್ರುತಿಗೆ ಸರಿಯಾದ ಶ್ರುತಿಪೊರೆಯ ಭಾಗದ ಮೂಲಕ ಹಾಯುವುದರಿಂದ. ಶ್ರುತಿ ಪೊರೆಯ ಅಗಲ ಶಂಖದ ಬುಡದಿಂದ ತುದಿಯ ಕಡೆ ಹೆಚ್ಚುವುದರಿಂದ ಅದರ ಶ್ರುತಿಶಂಖದ ತುದಿಯಿಂದ ಬುಡದ ಕಡೆಗೆ ಕ್ರಮವಾಗಿ ಹೆಚ್ಚುತ್ತದೆ. ಅಂದರೆ ಮಂದ್ರಸ್ಥಾಯಿಯ ಶ್ರುತಿಗಳು ತುದಿಯ ಕಡೆಯಲ್ಲೂ ತಾರಸ್ಥಾಯಿಯ ಶ್ರುತಿಗಳು ಬುಡದ ಕಡೆಯಲ್ಲೂ ಮಧ್ಯಸ್ಥಾಯಿಯ ಶ್ರುತಿಗಳು ಇವೆರಡರ ಮಧ್ಯದಲ್ಲೂ ಅನುಕ್ರಮವಾಗಿ ಹಾಯುತ್ತವೆ. 2¾ಕ್ಕಿಂತ ಹೆಚ್ಚು ಸುತ್ತುಗಳ ಶಂಖವಿರುವ ಪ್ರಾಣಿಗಳು ಮನುಷ್ಯ ಕೇಳಲಾರದ ಶಬ್ದಗಳನ್ನು ಕೇಳಬಲ್ಲುವು. ಡಾಲ್ಟನ್ ಪೀಪಿ ಮನುಷ್ಯನಿಗೆ ಕೇಳಿಸದೆ ನಾಯಿಗೆ ಕೇಳಿಸುವುದು ಈ ಕಾರಣದಿಂದ. ಎರಡೂ ಕಿವಿಗಳಿಗೆ ತಲಪುವ ಅಲೆಗಳು ಸ್ವಲ್ಪ ವ್ಯತ್ಯಾಸವಾಗಿರುವುದರಿಂದ ಶಬ್ದದ ದಿಕ್ಕನ್ನು ತಿಳಿಯಲು ಸಾಧ್ಯ ; ಸಂಗೀತದ ಇಂಪೂ ಹೆಚ್ಚು, ಶಬ್ದವೂ ಹೆಚ್ಚು ಕೇಳಿಸುತ್ತದೆ.

**ಹೋಲಿಕೆ ಅಂಗರಚನೆ** : ಒಳಗಿವಿಯಾಗುವ ಭ್ರೂಣದ ಹೊರಚರ್ಮದ ಒಳ ಬುಡ್ಡೆಯ ಮೂಲವೂ ಮೀನಿನ ಪಾರ್ಶ್ವರೇಖಾಂಗಗಳ ಮೂಲವೂ ಬಹುಶಃ ಒಂದೇ. ಕೆಳಮಟ್ಟದ ಕಶೇರುಕಪ್ರಾಣಿಗಳಲ್ಲಿ ಒಳನೀರ್ಗೊಳವೆ (ಪೊರೆ ಒಳಗಿವಿಯಾಗುವ ಭಾಗ) ತಲೆಯ ಮೇಲಿನ ರಂಧ್ರದ ಮೂಲಕ ಹೊರಕ್ಕೆ ತೆರೆಯುತ್ತದೆ. ಕೆಲವು ಮೆಲ್ಲೆಲುಬು ಮೀನುಜಾತಿಗಳಲ್ಲಿ ಸ್ಯಾಕ್ಯೂಲಿನೊಳಕ್ಕೆ ಮರಳು ನುಗ್ಗುವಷ್ಟು ರಂಧ್ರ ದೊಡ್ಡದಾಗಿರುತ್ತದೆ. ಕೆಲವು ಎಲುಬು ಮೀನುಜಾತಿಗಳಲ್ಲಿ ಈಜುಬುಡ್ಡೆಗೂ ಒಳಗಿವಿಗೂ ನಡುವೆ ಸಣ್ಣ ಮೂಳೆಗಳ ಸರಪಣಿಯಿರುತ್ತದೆ. ದವಡೆಯಿಲ್ಲದ ಗುಂಡುಬಾಯಿ ಮೀನುಗಳಲ್ಲಿ ಪಕ್ಕ ಅರ್ಧವೃತ್ತನಾಳವಿಲ್ಲ. ಪೆಟ್ರೋಮೈಜಾನ್ ಮೀನಿನಲ್ಲಿ ಮೇಲಿನ ಮತ್ತು ಹಿಂದಿನ ಅರ್ಧವೃತ್ತನಾಳಗಳು ಮಾತ್ರ ಇದೆ. ಇವೆರಡೂ ಮೈಸೀನ್ ಮೀನಿನಲ್ಲಿ ಒಂದಾಗಿ ಕಾಣುತ್ತವೆ. ಇನ್ನೂ ಹೆಚ್ಚಿನ ದರ್ಜೆಯ ಮೀನುಜಾತಿಗಳಲ್ಲಿ ಮೂರು ಅರ್ಧವೃತ್ತನಾಳಗಳಿವೆ. ಬಹಳ ಕಶೇರುಕಪ್ರಾಣಿಗಳಲ್ಲಿ ಸುಣ್ಣಕಲ್ಲಿನ ಹರಳುಗಳು ಒಳಗಿವಿಯಲ್ಲಿರುತ್ತವೆ. ಇವು ಬಹು ಚಿಕ್ಕವಾಗಿರಬಹುದು. ಆದರೆ ಮೇಲ್ಜಾತಿಗಳ ಮೂಳೆ ಮೀನುಗಳಲ್ಲಿದ್ದಂತೆ ದೊಡ್ಡವಾಗಿದ್ದರೆ ಇವನ್ನು ಕಿವಿಗಲ್ಲುಗಳೆನ್ನುತ್ತಾರೆ. ಮೀನುಗಳಲ್ಲಿ ಯುಟ್ರಿಕ್ಲ್, ಸ್ಯಾಕ್ಯೂಲ್, ಮೂರು ಅರ್ಧ ವೃತ್ತನಾಳಗಳು, ಒಳನೀರ್ಗೊಳವೆ ಮತ್ತು ಒಂದು ಕುರುಚು ಲೆಗೀನ ಮಾತ್ರ ಒಳಗಿವಿಯ ಭಾಗಗಳು. ಜಲಸಾಂಚಾರಿಗಳಲ್ಲಿ ಲೆಗೀನ ಎಂಬ ನಾಳದ ಮೂಲದಲ್ಲಿ ಮುಖ್ಯ ವೇದನಸ್ಥಾನವಿದೆ. ಇದೇ ಬಹುಶಃ ಶ್ರವಣನಾಳದ ಮೂಲಸ್ವರೂಪ. ಒಳನೀರ್ಗೊಳವೆ ಚರ್ಮಸಂಬಂಧವನ್ನು ಕಡಿದುಕೊಂಡು ಅನೇಕ ಪ್ರಾಣಿಗಳಲ್ಲಿ ಬೆನ್ನು ಮೂಳೆ ನಳಿಗೆಯಲ್ಲಿ ಲಂಬಿಸಿ ಬೆನ್ನುಮಣಿಗಳ ನಡುವೆ ಇರುವ ತೂತುಗಳ ಮೂಲಕ ಹೊಟ್ಟೆಯೊಳಕ್ಕೆ ಚಾಚಿರುತ್ತದೆ ಸಾಮಾನ್ಯ ಕಪ್ಪೆಯಲ್ಲಿ ಈ ರೀತಿಯಿದೆ. ಮೊದಲು ಈ ಪ್ರಾಣಿವರ್ಗದಲ್ಲಿ ನಡುಗಿವಿ ಮತ್ತು ಕಿವಿ ಗಂಟಲು ನಾಲ ಕಾಣಿಸಿ ಕೊಳ್ಳುತ್ತವೆ. ಹೊರಗಿವಿಯಿಲ್ಲದೆ ಕಿವಿದಮಟೆ ಚರ್ಮಮಟ್ಟದಲ್ಲಿದ್ದು ಒಂದೇ ಸಣ್ಣ ಮೂಳೆಕಡ್ಡಿಯಿಂದ ಶಬ್ದಕಂಪನಗಳು ಒಳಗಿವಿಯನ್ನು ಮುಟ್ಟುತ್ತವೆ.

ಸರೀಸೃಪಗಳಲ್ಲಿ ಒಳಗಿವಿ ಇನ್ನೂ ಹೆಚ್ಚು ಮುಂದುವರಿಯುತ್ತದೆ. ಆಮೆ, ಹಾವುಗಳಲ್ಲಿ ಜಲಸಂಚಾರಿಗಳಲ್ಲಿರುವಂತೆ ಶ್ರವಣನಾಳ ಕುರುಚಾಗಿ ಮೂಲಾವಸ್ಥೆಯಲ್ಲೇ ಇದೆ. ಮೊಸಳೆಗಳಂಥ ಉನ್ನತ ದರ್ಜೆ ಪ್ರಾಣಿಗಳಲ್ಲಿ ಶ್ರವಣನಾಳ ಉದ್ದವಾಗಿ ಸ್ವಲ್ಪ ತಿರುಚಿಕೊಂಡು ಕೊನೆಯಲ್ಲಿ ಸೂಕ್ಷ್ಮ ಲೆಗೀನಾವನ್ನು ಹೊಂದಿದೆ. ಇದರೊಡನೆ ವೆಸ್ಟಿಬ್ಯೂಲ್ ಮತ್ತು ನಡುಗಿವಿನಾಲೆಗಳು ಬೆಳೆಯಲು ಪ್ರಾರಂಭಿಸುತ್ತವೆ. ಒಳನೀರ್ಗೊಳವೆ ಕೆಲಪ್ರಾಣಿಗಳಲ್ಲಿ ಮಿದುಳುಪೆಟ್ಟಿಗೆ ಮತ್ತು ಇನ್ನಿತರ ದೇಹಭಾಗಗಳಿಗೆ ವಿಸ್ತರಿಸುತ್ತದೆ. ಹಾವುಗಳಲ್ಲಿ ಕಿವಿದಮಟೆಯೇ ಇಲ್ಲ; ಮತ್ತು ಶ್ರವಣನಾಳವೂ ಇಲ್ಲದಿರುವುದರಿಂದ ಹಾವುಗಳಿಗೆ ಶಬ್ದ ಕೇಳಿಸುವಂತಿಲ್ಲ; ಹಾವಾಡಿಗನ ಸಂಗೀತ ಕೇಳಿಸದೆ ಹಾವು ಅವನ ಚೇಷ್ಟೆಗಳಿಗೆ ಸರಿಯಾಗಿ ನೋಡಿಕೊಂಡು ಆಡುತ್ತದೆ. ಹಕ್ಕಿಗಳಲ್ಲಿ ಶ್ರವಣನಾಳ ಮೊಸಳೆಗಳಲ್ಲಿದ್ದಂತಿದೆ. ಆದರೆ ಮೇಲಿನ ಅರ್ಧವೃತ್ತನಾಳ ಕೂಡುವಡೆ ಈ ಹಿಂದಿನದು ಮೇಲ್ಮಟ್ಟದಲ್ಲಿದೆ. ಕೆಲವು ಹಲ್ಲಿಗಳಲ್ಲಿ ಮತ್ತು ಗೂಗೆಗಳಂಥ ಹಕ್ಕಿಗಳಲ್ಲಿ ಒಂದು ಚಿಕ್ಕ ಚರ್ಮದ ಮಡಿಕೆ ಕರ್ಣದಂತೆ ಕಾಣುವುದು. ಕಾಂಗರೂ ಜಾತಿಯಲ್ಲಿ ಶ್ರವಣನಾಳ ಸರೀಸೃಪಗಳಲ್ಲಿದ್ದಂತೆ ಕುರುಚಾಗಿ ನೇರವಾಗಿದೆ. ಇದಕ್ಕಿಂತ ಮೇಲಿನ ಜಾತಿಗಳ ಸ್ತನಿಗಳಲ್ಲಿ ಶ್ರವಣನಾಳ ಸುರುಳಿಯಾಗಿದೆ ; ಅತಿ ದೊಡ್ಡ ಜಂತುವಾದ ತಿಮಿಂಗಿಲದಲ್ಲಿ 1½ ಸುತ್ತಿದ್ದರೆ ಇಲಿ ಜಾತಿಯ ಸೀಲೊಗೊನಿಸ್‌ನಲ್ಲಿ 5 ಸುತ್ತುಗಳಿವೆ. ಸ್ತನಿಗಳಲ್ಲಿ ಲೆಗೀನ ಬಹಳ ಚಿಕ್ಕದಾಗಿದೆ. ಕಾರ್ಟಿಯ ಶ್ರವಣಾಂಗ ಸ್ತನಿಗಳಲ್ಲಿ ಮಾತ್ರ ಇದೆ. ಒಂದು ಕೋಲುಮೂಳೆಗೆ ಬದಲು ಮೂರು ಚಿಕ್ಕ ಮೂಳೆಗಳ ಸರಣಿಯಿದೆ. ಕೆಲವು ಸ್ತನಿಗಳಲ್ಲಿ, ಅದರಲ್ಲೂ ಮಾಂಸಾಹಾರಿಗಳಲ್ಲಿ, ನಡುಗಿವಿ ಉಬ್ಬಿ ಬುಡ್ಡೆಯಂತಿದೆ. ಕಿವಿಯ ಹಿಂದಿನ ಮೂಳೆಯಲ್ಲಿ ಸಣ್ಣ ಗಾಳಿಗೂಡುಗಳಲ್ಲಿ ಮನುಷ್ಯನಲ್ಲಿ ಮಾತ್ರ ಇವೆ.

ಮನುಷ್ಯ ನೆಟ್ಟಗೆ ನಿಂತು ತಲೆಯನ್ನು ಮತ್ತು ದೇಹವನ್ನು ಎಲ್ಲಕಡೆಗೂ ಬೇಗ ಬೇಗ ತಿರುಗಿಸಬಲ್ಲವನಾದ್ದರಿಂದ ಅವನಿಗೆ ಅಲುಗಾಡುವ ಲಂಬಕರ್ಣಗಳ ಅಗತ್ಯವಿಲ್ಲ.

**ಭ್ರೂಣದಲ್ಲಿ ಶ್ರವಣಾಂಗವೃದ್ಧಿ :** ಭ್ರೂಣದ ಮೊದಲನೆಯ ಮತ್ತು ಎರಡನೆಯ ಕಿವಿರುಗಳ ಮೇಲೆ ಕರ್ಣ ರೂಪುಗೊಳ್ಳುತ್ತದೆ. ಟ್ರೇಗಸ್ ಮತ್ತು ಹಲಿಕ್ಸ್‌ನ ಮುಂಭಾಗ ಮೊದಲು ಕಿವಿರಿನ ಮೇಲೆ ಮೊಳೆಯುವ ಇಗುಳ್ಳೆಗಳಿಂದಲೂ ಪ್ರತಿಟ್ರೇಗಸ್, ಪ್ರತಿಹೆಲಿಕ್ಸ್ ಮತ್ತು ಹಾಲೆಗಳು ಎರಡನೆಯ ಕಿವಿರಿನ 3 ಗುಳ್ಳೆಗಳಿಂದಲೂ ಆಗುತ್ತವೆ. ಡಾರ್ವಿನ್‌ಗುಳ್ಳೆ ಈ ಎರಡು ಕಿವಿರುಗಳು ಬೆನ್ನಕಡೆ ಸೇರುವುದಕ್ಕಿಂತ ಸ್ವಲ್ಪ ಮೇಲಿದೆ, ಇವೆರಡರ ಸಂದಿಯಲ್ಲಿ ಕರ್ಣಕುಹರದ ನಿರ್ಮಾಣವಾಗುತ್ತದೆ. ಭ್ರೂಣದ ಗಂಟಲಲ್ಲಿ ಒಳ ಮೊದಲ ಕಿವಿರು ಸಂದಿನಿಂದ ಕಿವಿಗಂಟಲು ಕೊಳವೆ ಮತ್ತು ಮಧ್ಯಕಿವಿಗಳ ವೃದ್ಧಿಯಾಗುತ್ತದೆ. ಕಿವಿದಮಟೆ ಮೊದಲ ಕಿವಿರು ಸಂದುಪಡೆಯಿಂದಾದುದು; ಅದರಿಂದಲೇ ಅದರ ಹೊರಪೊರೆಯು ಭ್ರೂಣದ ಹೊರಚರ್ಮದಿಂದಲೂ ಒಳಲೋಳೆಪೊರೆ ಒಳಚರ್ಮದಿಂದಲೂ ಮಧ್ಯಪೊರೆ ಮಧ್ಯಚರ್ಮದಿಂದಲೂ ಆದವು. ಮಧ್ಯಕಿವಿಯ ಚಿಕ್ಕ ಮೂಳೆಗಳು ಮೀನುಗಳಂಥ ಕೆಳದರ್ಜೆ ಪ್ರಾಣಿಗಳಲ್ಲಿರುವಂಥ ಕಿವಿರು ಪಂಜರದಿಂದ ರೂಪುಗೊಂಡವು. ಪೊರೆ ಒಳ ಕಿವಿ ಭ್ರೂಣದ ತಲೆಯ ಒಳಚರ್ಮದಲ್ಲಿ ಗುಳಿಯಂತೆ ಮೊದಲಾಗಿ. ಗುಳಿ ಮುಚ್ಚಿ ಬುಡ್ಡೆಯಾಗಿ, ಈ ಬುಡ್ಡೆಯ ಚರ್ಮದಿಂದ ಬೇರ್ಪಟ್ಟು ಸ್ತನಿಗಳಲ್ಲಿ ಅಂಜೂರದಾಕಾರದ ಕೋಶವಾಗುತ್ತದೆ. ಈ ಕೋಶದ ಕೆಳಭಾಗ ಚಿಗುರಿ ಶ್ರವಣನಾಳವಾಗುತ್ತದೆ. ಮೇಲ್ಭಾಗದಿಂದ ಮೂರು ಚಕ್ರಾಕಾರದ ಪೊಳ್ಳುತಟ್ಟೆಗಳು ಬೆಳೆದು ಇವುಗಳ ಮಧ್ಯಭಾಗಗಳು ಕರಗಿ ಅಂಚುಗಳು ಅರ್ಧವೃತ್ತನಾಳಗಳಾಗುತ್ತವೆ. ಅನಂತರ ಕೋಶದ ಮಧ್ಯಭಾಗ ಬೆಳೆಯದೆ ಸಣ್ಣಗಿದ್ದು ಸ್ಯಾಕ್ಯೂಲ್, ಯುಟ್ರಿಕ್ಲ್ ಆಗುತ್ತವೆ. ಕೋಶದ ಸುತ್ತಲಿರುವ ಮಧ್ಯಚರ್ಮ ಮೆಲ್ಲೆಲುಬಾಗಿ ಕ್ರಮೇಣ ಎಲುಬಾಗಿ ಮೂಳೆ ಒಳಗಿವಿಯಾಗಿ ಕಿವಿಮೂಳೆಯಲ್ಲಿ ಸೇರಿಹೋಗುತ್ತದೆ. ಎರಡೂ ಶ್ರವಣನಾಳಗಳಿಲ್ಲದವರು ಹುಟ್ಟುಕಿವುಡುಮೂಗರು. (ಎಂ.ಡಿ.)

**ಕಿವಿಯ ಉಗಮ ಮತ್ತು ವಿಕಾಸ :** ಕಿವಿಯ ಉಗಮವನ್ನು ಪ್ರಾಚೀನಕಾಲದ ಮೀನುಗಳಲ್ಲಿ ಕಾಣಬಹುದು. ಮೊದಲು ದೇಹದ ಮೇಲುಮೈಯಲ್ಲಿದ್ದ ಅಂಗವೊಂದು ದೇಹದೊಳಕ್ಕೆ ಇಳಿದು ಒಳಗಿವಿಯಾಗಿ ಮಾರ್ಪಟ್ಟಿರಬಹುದೆಂದು ಊಹಿಸಲಾಗಿದೆ. ಪ್ರಾಚೀನಕಾಲದ ಮೀನುಗಳಾದ ಆಸ್ಟ್ರಕೊಡರ್ಮಿ, ಪುಪ್ಪುಸ ಮೀನು ಮತ್ತು ಅಕ್ಯಾಂತೋಡಿಯ ಗುಂಪಿಗೆ ಸೇರಿದ ಕೆಲವು ಪ್ರಾಣಿಗಳಲ್ಲಿ ಕಾಣಬರುವ ರಂಧ್ರನಾಲಾಮಂಡಲದಿಂದ ಒಳಗಿವಿ ಉದ್ಭವಿಸಬಹುದೆಂದು ಹೇಳಲಾಗಿದೆ. ಇಂದಿನ ಕಶೇರುಕಗಳ ಒಳಗಿವಿಯಲ್ಲಿ ಕಾಣಬರುವ ಅರ್ಧವೃತ್ತನಾಳಗಳ ಇತ್ತೀಚಿನ ರಚನೆಗಳಲ್ಲ. ಅತ್ಯಂತ ಪ್ರಾಚೀನವಾದ ಸೈಲೂರಿಯನ್ ಕಾಲದ ಕಶೇರುಕಗಳಲ್ಲೂ ಇವು ಇದ್ದುವು.

ಮೀನುಗಳಲ್ಲಿ ಪಾರ್ಶ್ವಪಂಕ್ತಿಮಂಡಲವೆಂಬ ಇಂದ್ರಿಯಾಂಗಸಂಗ್ರಹ ಉಂಟು. ಇದು ನೀರಿನ ಚಲನೆಗೆ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಒತ್ತಡಕ್ಕಾಗಲಿ ಅಥವಾ ಒತ್ತಡದ ಅಲೆಗಳಿಗಾಗಲಿ ಇದು ಸೂಕ್ಷ್ಮವಾಗಿಲ್ಲ. ಅಂದರೆ ಸಾಮಾನ್ಯಾರ್ಥದಲ್ಲಿ ಹೇಳುವುದಾದರೆ ಶಬ್ದವನ್ನು ಇದು ಗ್ರಹಿಸಲಾರದು. ಆದರೆ ನೀರಿನಲ್ಲಿ ಒಂದು ನಿಜವಾದ ಶಬ್ದಮೂಲ ನೀರಿನ ಚಲನೆಯನ್ನೂ ಸನಿಯದ ಕ್ಷೇತ್ರದಲ್ಲಿ ಒತ್ತಡದ ಅಲೆಗಳನ್ನೂ ಉತ್ಪತ್ತಿ ಮಾಡುತ್ತದೆ. ಈ ಸನಿಯಕ್ಷೇತ್ರದ ನೀರಿನ ಚಲನೆಗಳು ಪಾರ್ಶ್ವಪಂಕ್ತಿಯನ್ನು ಪ್ರಚೋದಿಸುತ್ತವೆ. ಆದ್ದರಿಂದ ಪಾರ್ಶ್ವಪಂಕ್ತಿ ಸನಿಯ ಕ್ಷೇತ್ರದ ಶಬ್ದಕ್ಕೆ ಸಂವೇದನೆಯನ್ನು ತೋರುತ್ತದೆ ಎಂದು ಹೇಳಬಹುದು. ಒತ್ತಡದ ಅಲೆಗಳ ಗ್ರಹಿಕೆಯೇ ನಾವು ಸಾಮಾನ್ಯವಾಗಿ ಹೇಳುವ ಶ್ರವಣಕ್ರಿಯೆ. ಪಾರ್ಶ್ವಪಂಕ್ತಿಗೆ ನೇರವಾಗಿ ಶಬ್ದಗಳನ್ನು ಗ್ರಹಿಸುವ ಸಾಮರ್ಥ್ಯ ಇಲ್ಲ. ತಲೆ ಬುರುಡೆಯ ಆಳದಲ್ಲಿರುವ ಒಳಗಿವಿ, ದೇಹದ ಬಾಹ್ಯ ಪರಿಸರದಲ್ಲಿ ಉಂಟಾಗುವ ಸನಿಯಕ್ಷೇತ್ರದ ಚಲನೆಗಳಿಗೆ ದೇಹದ ಹೊರಮೈಯಲ್ಲಿರುವ ಪಾರ್ಶ್ವಪಂಕ್ತಿಯಷ್ಟೇ ಸಮರ್ಥವಾಗಿ ಸಂವೇದನೀಯವಾಗಲಾರದು. ಆದ್ದರಿಂದ ಮೀನುಗಳಲ್ಲಿ ಕೇವಲ ಸಂತುಲನಾಂಗವಾಗಿ ಕಾಣಿಸಿಕೊಂಡ ವಾಯುಕೋಶ ಒತ್ತಡ ಭಿನ್ನತೆಗಳನ್ನು ನೀರಿನ ಚಲನೆಗಳಾಗಿ ಪರಿವರ್ತಿಸುವ ಕ್ರಿಯೆಯನ್ನು ವಹಿಸಿಕೊಂಡಿತು. ಇದರಿಂದಾಗಿ ಹೊಸದೊಂದು ಸಂವೇದನಾ ನಾಲೆ ರೂಪುಗೊಂಡಿತು ಮತ್ತು ಇದುವರೆಗೆ ಹೊರ ಜಗತ್ತಿನ ಸಂಪರ್ಕದಿಂದ ದೂರವಾಗಿದ್ದ ಒಳಗಿವಿ ಹೊರಜಗತ್ತಿನೊಡನೆ ಸಂಪರ್ಕ ಪಡೆಯಿತು. ಈಗ ಅದು ಒತ್ತಡದ ಅಲೆಗಳಿಗೆ ಸಂವೇದನೀಯವಾಯಿತು. ಹೀಗೆ ಸಂವೇದನೀಯ ಸುರಂಗವೊಂದು ಏರ್ಪಟ್ಟಿತು. ಕೆಲವು ಸಣ್ಣ ಮೂಳೆಗಳನ್ನು (ಆಸಿಕಲ್ಸ್) ಒಳಗೊಂಡ ಈ ವಾಯುಕೋಶವನ್ನು ಈಗ ಸ್ಪಷ್ಟವಾಗಿ ನಡುಗಿವಿ ಎಂದು ಕರೆಯಬಹುದು. ಈ ನಡುಗಿವಿಯ ಕ್ರಿಯಾವಿಧಾನ ನೆಲದ ಮೇಲಿನ ಕಶೇರುಗಳು ನಡುಗಿವಿಯನ್ನೇ ಹೆಚ್ಚಾಗಿ ಹೋಲುತ್ತದೆ. ಆದರೆ ನೆಲದ ಮೇಲೆ ವಾಸಿಸುವ ಕಶೇರುಕಗಳ ನಡುಗಿವಿ ಫ್ಯಾರಿಂಕ್ಸ್‌ನ ಮೊದಲನೆಯ ಅಥವಾ ಸ್ಪೈರಕಲ್ ಸಂಚಿಯಿಂದ ಉದ್ಭವಿಸುತ್ತದೆ. ಫ್ಯಾರಿಂಕ್ಸ್‌ನಿಂದ ಉದ್ಭವಿಸಿದ ಈ ನಡುಗಿವಿ ವಾಯುಕೋಣೆ ನಡುಗಿವಿಗಿಂತಲೂ ಹೆಚ್ಚು ಸಮರ್ಥವಾದುದೆಂದು ತಿಳಿದಿದೆ.

ಆದಿಮೀನುಗಳಲ್ಲಿ ಸ್ಪೈರಕಲ್ ಅಪಸರಣಾಂಗ ಅಗಲವಾದ, ಚಪ್ಪಟೆಯಾದ ಯಾವ ಭಾಗಕ್ಕೂ ಸಂಬಂಧವಿರದ ಸಂಚಿರೂಪದ ರಚನೆ. ಹೈಯೊಮ್ಯಾಂಡಿಬುಲಾರ್ ಮತ್ತು ಪ್ಯಾರೊಟಿಕ್ ದಂತಫಲಕ ಹಾಗು ಪ್ಯಾಲಟೊಕ್ವಾಡ್ರೇಟಗಳ ನಡುವೆ ಅಪ್ಪಚ್ಚಿಯಾಗಿತ್ತು. ವಿಕಾಸದ ಅನಂತರದ ಹಂತಗಳಲ್ಲಿ ಈ ಅಪಸರಣಾಂಗ ಹೈಯೊಮ್ಯಾಂಡಿಬುಲಾರನ್ನು ಇತರ ರಚನೆಗಳಿಗೆ ಬಂಧಿಸುವ ಅಸ್ಥಿರಜ್ಜುವಿಗೆ ನಿಕಟವಾಗಿ ಹೊಂದಿಕೊಂಡು ಇಪ್ಪದರದ ಪಟಲವಾಯಿತು. ಈ ಊಹಾಪಟಲವೇ ಚತುಷ್ಪಾದಿಗಳ ಟಿಂಪಲಿಕ ಪಟಲದ ಸಾದೃಶ ರಚನೆ. ಆದ್ದರಿಂದ ಮೀನುಗಳ ಹಂತದಲ್ಲಿಯೇ ಕಿವಿದಮಟೆಯೊಂದು ರೂಪುಗೊಂಡಿತ್ತು. ಇದರ ಬಡಿತಗಳನ್ನು ಒಳಗಿವಿಗೆ ನಿವೇದಿಸುವ ಕ್ರಿಯೆಯನ್ನು ಹೈಯೊಮ್ಯಾಂಡಿಬುಲಾರ್ ಮೂಳೆ ವಹಿಸಿಕೊಂಡಿತು (ಇದನ್ನು ಕಪ್ಪೆಗಳಲ್ಲಿ ಕಾಣಬಹುದು). ಹೈಯೊಮ್ಯಾಂಡಿಬುಲಾರ್‌ನಿಂದಲೇ ಚತುಷ್ಪಾದಿಗಳ ಸ್ಟೇಪಿಸ್ ಅವತರಿಸಿದುದು. ಆದ್ದರಿಂದ ಪ್ರಾಚೀನ ಮೀನುಗಳಲ್ಲಿ ಕಿವಿದಮಟೆ ಮತ್ತು ಕಿವಿಯ ಸಣ್ಣ ಮೂಳೆಗಳು ಇದ್ದುವು ಎಂದು ಹೇಳಬಹುದು.

ಶಬ್ದವನ್ನು ಒಳಗಿವಿಗೆ ಒಯ್ದು ಮುಟ್ಟಿಸುವ ಅಂಗಗಳ ರಚನೆ ಮತ್ತು ವರ್ತನೆಯಲ್ಲಿ ಮೀನುಗಳಿಗೂ ಚತುಷ್ಪಾದಿಗಳಿಗೂ ವ್ಯತ್ಯಾಸವಿದೆ. ಇದು ನೀರಿನ ಒಳಗೆ ಮತ್ತು ನೆಲದ ಮೇಲಿನ ಶಬ್ದಗ್ರಹಣದಲ್ಲಿ ಇರುವ ಮೂಲ ವ್ಯತ್ಯಾಸದಿಂದ ಉಂಟಾಗಿದೆ. ನೀರಿನ ಮಾಧ್ಯಮದ ಮೂಲಕ ಶಬ್ದದ ಅಲೆಗಳು ಸುಲಭವಾಗಿ ಹಾದುಹೋಗಬಲ್ಲವು. ಆದರೆ ನೆಲದ ಮೇಲೆ ಇದು ಸಾಧ್ಯವಿಲ್ಲ. ಆದ್ದರಿಂದ ಚತುಷ್ಪಾದಿಗಳ ಶಬ್ದಗ್ರಾಹಿ ಅಂಗದಲ್ಲಿ (ನಡುಗಿವಿ) ಒತ್ತಡದ ಕ್ಷೇತ್ರಕ್ಕೆ ಪ್ರತಿಫಲಿಸುವ ಸಾಮರ್ಥ್ಯವುಳ್ಳ ಪಟಲವೊಂದು (ಟಿಂಪೆನಮ್) ಮತ್ತು ಈ ಪಟಲದ ಆವೇಗಗಳನ್ನು ಒಳಗಿವಿಗೆ ಸಾಗಿಸಬಲ್ಲ ರಚನೆ (ಸ್ಟೇಪಿಸ್) ಅಥವಾ ರಚನೆಗಳು ಹಾಗೂ ಟಿಂಪೆನಮ್ ಮತ್ತು ಸ್ಟೇಪಿಸ್‌ಗಳು ಸರಾಗವಾಗಿ ಚಲಿಸಲು ಸಾಧ್ಯವಾಗುವಂತೆ ಗ್ರಾಹಿಪಟಲದ ಹಿಂಭಾಗದಲ್ಲಿ ವಿಶೇಷ ಕೋಟರವೊಂದು ಬೇಕೇ ಬೇಕಾದುವು. ನಡುಗಿವಿ ಕೋಟರ ಅಥವಾ ಟಿಂಪೆನಿಕ್ ಕೋಟರ ಇದ್ದ ಬಗೆಗೆ ಅನೇಕ ಪಳೆಯುಳಿಕೆಗಳಲ್ಲಿ ಸುಳಿವು ಸಿಕ್ಕದಿದ್ದರೂ ಅದು ಇದ್ದಿರಲೇ ಬೇಕು. ಇದೇ ಕ್ರಮೇಣ ಚತುಷ್ಪಾದಿಗಳ ನಡುಗಿವಿಯಾಗಿರಬೇಕು.

ನೀರಿನ ವಾಸ್ತವ್ಯಕ್ಕೂ ನೆಲದ ವಾಸ್ತವ್ಯಕ್ಕೂ ಆಹಾರ ಸೇವನೆಯ ಕ್ರಮದಲ್ಲಿ ವ್ಯತ್ಯಾಸಗಳಿರುವುದರಿಂದ ತನ್ನ ಆಧಾರಕ್ರಿಯೆಯಿಂದ ಹೈಯೊಮ್ಯಾಂಡಿಬುಲಾರ್‌ಗೆ ಬಿಡುಗಡೆ ದೊರಕಿತು. ಅದು ಉಸಿರಾಟಕ್ಕೆ ಪುಪ್ಪುಸಗಳನ್ನೇ ಹೆಚ್ಚಾಗಿ ಅವಲಂಬಿಸಿದುದರಿಂದಾಗಿ ಕಿವಿರುಕವಚ, ಅಂಗಸಕಮಾನುಗಳ ಅಸ್ಥಿಪಂಜರ ಮತ್ತು ಅವುಗಳಿಗೆ ಸಂಬಂಧಿಸಿದ ಸ್ನಾಯುಗಳು ಈಗ ಅನಗತ್ಯವಾದವು. ಅವು ಕ್ರಮೇಣ ಕ್ಷೀಣಿಸಿ ಮಾರ್ಪಾಡುಗೊಂಡು ಅವನ್ನು ಅವಧರಿಸಿದ್ದ ಹೈಯೊಮ್ಯಾಂಡಿಬುಲಾರದಲ್ಲಿ ಕರ್ಣೇಂದ್ರಿಯದ ರೂಪರಚನೆಯ ಪುನರ್ನಿರ್ಮಾಣಕ್ಕೆ ಎಡೆಮಾಡಿಕೊಟ್ಟುವು.

ನಡುಗಿವಿಯ ಮಾರ್ಪಾಟುಗಳು ಹೊಂದಾಣಿಕೆಯ ಮುಖ್ಯ ಅಂಶಗಳು, ಶಬ್ದಗ್ರಹಣ ಮತ್ತು ಅದರ ಸಂವೇದನೆಗೆ ಸಂಬಂಧಿಸಿದಂತೆ ಇದು ಪ್ರಧಾನವಾದ ಹೆಜ್ಜೆ. ಸರೀಸೃಪಗಳು ಮತ್ತು ದ್ವಿಚರಿಗಳು ವಿವಿಧ ರೀತಿಯ ಮಾರ್ಪಾಡುಗಳನ್ನು ತೋರುತ್ತವೆ. ಇವೆಲ್ಲವೂ ಕ್ಷೀಣವಾದ ರಚನೆಗಳು ಎಂದು ಹೇಳುವವಾದರೂ ವಿವಿಧ ರೀತಿಯ ಜೀವನ ಕ್ರಮಗಳಿಗೆ ಹೊಂದಿಕೊಳ್ಳಲು ನಡೆಸಿದ ಮಾರ್ಪಾಡುಗಳು ಇವು ಎನ್ನುವುದನ್ನು ಮರೆಯಬಾರದು. ಒಂದು ವಾಕ್ಯದಲ್ಲಿ ಕಶೇರುಕಗಳ ಶ್ರವಣೇಂದ್ರಿಯ ವಿಕಾಸವನ್ನು ಹೇಳಬಹುದಾದರೆ ಉಸಿರಾಟದ ಸಹಾಯಕಾಂಗಗಳು ಆಹಾರಸೇವನೆಯ ಸಹಾಯಕಾಂಗಗಳಾಗಿ ಮಾರ್ಪಟ್ಟು ಅಂತಿಮವಾಗಿ ಕರ್ಣೇಂದ್ರಿಯ ಸಹಾಯಕಾಂಗಗಳಾಗಿ ಪರಿರ್ತಿತವಾಗಿವೆ.

19 ಮತ್ತು 20ನೆಯ ಶತಮಾನದ ತುಲನಾತ್ಮಕ ಅಂಗರಚನಾಶಾಸ್ತ್ರದ ಅಭ್ಯಾಸಗಳು ಸ್ತನಿಗಳ ನಡುಗಿವಿಯಲ್ಲಿನ ಮೂರು ಶಬ್ದವಾಹಕ ರಚನೆಗಳಲ್ಲಿ ಎರಡು ಸರೀಸೃಪಗಳ ತಲೆಬುರುಡೆ ಮತ್ತು ದವಡೆಗಳ ನಡುವಿನ ಕೀಲಿನ ಮೂಳೆಗಳು ಎಂದು ಗುರುತಿಸಬಹುದೆಂಬುದನ್ನು ತೋರಿಸಿಕೊಟ್ಟವು. ಈ ಮೂಳೆಗಳಿಗೆ ಶಬ್ದವಾಹಕ ಕ್ರಿಯೆಯಲ್ಲಿ ಯಾವ ಪಾತ್ರವೂ ಇರಲಿಲ್ಲ. ಜೀವಂತ ಸರೀಸೃಪಗಳ ಹಾಗೂ ಸ್ತನಿಗಳ ವಿವರವಾದ ಅಭ್ಯಾಸಗಳು ಕೂಡ ಈ ಮೂಳೆಗಳು ದವಡೆಗಳಿಂದ ಕಿವಿಗಳಿಗೆ ಏಕೆ ಮತ್ತು ಹೇಗೆ ವರ್ಗಾಯಿಸಲ್ಪಟ್ಟುವು ಎಂಬ ಪ್ರಶ್ನೆಗೆ ಉತ್ತರವನ್ನು ಕೊಡಲಾರದಾದವು. ಆದರೆ ಈಗ ಪಳೆಯುಳಿಕೆ ಶಾಸ್ತ್ರದ ಕೆಲವು ಸಾಕ್ಷ್ಯಗಳು ಈ ಪ್ರಶ್ನೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತಿವೆ. ಬಹುಶಃ ಸ್ತನಿಗಳ ನಡುಗಿವಿ ರೂಪುಗೊಂಡ ವಿವಿಧ ಅವಸ್ಥೆಗಳ ಶ್ರೇಣಿಯನ್ನು ಇವು ಸೂಚಿಸಬಹುದು.

ಸ್ತನಿಗಳಲ್ಲದ ಚತುಷ್ಪಾದಿಗಳಲ್ಲಿ ಮತ್ತು ಸರೀಸೃಪಗಳಲ್ಲಿ ಹೊರಮೈಯಲ್ಲಿರುವ ಟಿಂಪೆನಮ್ ಮತ್ತು ಕರ್ಣಕೋಟರದ ದ್ವಾರವಾದ ಫೆನಸ್ತ್ರ ಓವಾಲಿಸ್‌ಗೆ ಅಂಟಿಕೊಂಡ ಸ್ಟೇಪಿಸ್ ಎಂಬ ಸರಳು ರೂಪದ ಮೂಳೆಗಳೇ ಶಬ್ದವಾಹಕ ತಂತ್ರಜಾಲವಾಗಿದ್ದವು. ಈ ವ್ಯೂಹ ಕೊಂತದಂತೆ

ಕೆಲಸಮಾಡುತ್ತದೆ. ಗಾಳಿಯಲ್ಲಿ ಉತ್ಪತ್ತಿಯಾಗುವ ದುರ್ಬಲ ಒತ್ತಡದ ಬದಲಾವಣೆಗಳು ವಿಶಾಲವಾದ ಟಿಂಪೆನಮ್ ಮತ್ತು ಅದಕ್ಕಂಟಿಕೊಂಡ ಸ್ಟೇಪಿಸನ್ನು ಪಟುಗೊಳಿಸುತ್ತವೆ. ಮತ್ತು ಒಳಗಿವಿಯ ಫೆನಸ್ತ್ರ ಓವಾಲಿಸ್ ಬಳಿ ಬಲವಾದ ಒತ್ತಡಗಳಾಗಿ ಪರಿವರ್ತನೆಯಾಗುತ್ತವೆ.

ಸ್ತನಿಗಳ ಇತಿಹಾಸದಲ್ಲಿ ಕಿವಿಯ ಭಾಗದ ಪ್ರಧಾನ ಪುನಾರಚನೆಯೊಂದು ನಡೆಯಿತು. ಆಗ ನಡುಗಿವಿಯ ಪರಿವರ್ತನಾ ತಂತ್ರಜಾಲಕ್ಕೆ ಅನೇಕ ಹೊಸ ರಚನೆಗಳು ಸೇರಿದವು. ಪ್ರಾಚೀನ ಚತುಷ್ಪಾದಿಗಳ ವ್ಯೂಹಕ್ಕೆ ಸನ್ನೆಗೋಲು ವಿಧಾನವೊಂದು ಸೇರಿತು. ಈ ವಿಧಾನದಲ್ಲಿ ಟಿಂಪೆನಮ್ ಅನ್ನು ಆಧರಿಸುವ ಮ್ಯಾಲಿಯಸ್, ಇಂಕಸ್ ಮತ್ತು ಎಕ್ಟೊಟಿಂಪೆನಿಕ್ ಮುಖ್ಯವಾದವು.

ಸ್ತನಿಯ ಭ್ರೂಣವೊಂದರ ಕೆಳದವಡೆ ಮತ್ತು ನೆರೆಯ ರಚನೆಗಳನ್ನು ಮುಂದುವರಿದ ಸ್ತನಿ ಆಕಾರದ ಸರೀಸೃಪಗಳೊಡನೆ ಹೋಲಿಸಿ ಸ್ತನಿಗಳ ನಡುಗಿವಿಯ ಮೂಳೆಗಳಿಗೂ ಸರೀಸೃಪಗಳ ದವಡೆಯ ಅಂಶಗಳಿಗೂ ಇರುವ ಸಾದೃಶ್ಯವನ್ನು ತೋರಿಸಬಹುದು. ಸರೀಸೃಪಗಳ ಆರ್ಟಿಕ್ಯುಲಾರ್ ಮೂಳೆ ಸ್ತನಿಗಳ ನಡುಗಿವಿಯ ಮ್ಯಾಲಿಯಸ್ ಸಣ್ಣಮೂಳೆಯಾಗಿದೆ. ಹಾಗೆಯೇ ಸರೀಸೃಪದ ಕ್ವಾಡ್ರೇಟ್ ಇಂಕಸ್ ಆಗಿಯೂ ಆಂಗ್ಯುಲಾರ್ ಎಕ್ಟೊಟಿಂಪೆನಿಕ್ ಆಗಿಯೂ ಆಗಿವೆ.

ಈ ಸಾದೃಶ್ಯಗಳನ್ನು ಗುರುತಿಸಿ ಒಪ್ಪಿಕೊಂಡು 50ಕ್ಕೂ ಹೆಚ್ಚು ವರ್ಷಗಳು ಕಳೆದುಹೋಗಿವೆ. ಆದರೆ ಇಲ್ಲಿರುವ ಕೆಲವು ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಸಿಕ್ಕಿಲ್ಲ. ಉತ್ತರಿಸಲು ಪ್ರಯತ್ನಿಸಿಲ್ಲ. ಮೊದಲನೆಯದಾಗಿ ಕೆಳದವಡೆಯ ಆಧಾರರಚನೆಗಳಾದ ಆರ್ಟಿಕ್ಯುಲಾರ್ ಮತ್ತು ಆಂಗ್ಯುಲಾರ್‌ಗಳು ತಮ್ಮ ಪ್ರಾಚೀನ ಕ್ರಿಯೆಯಿಂದ ಬಿಡುಗಡೆಯಾದುದು ಏಕೆ, ಎರಡನೆಯದಾಗಿ ಈ ಬಿಡುಗಡೆ ದೊರಕಿದ ಮೇಲೆ ಅವು ಹೇಗೆ ಮತ್ತು ಏಕೆ ನಡುಗಿವಿಯ ತಂತ್ರಜಾಲದಲ್ಲಿ ಸೇರಿಹೋದುವು. ಅವಕ್ಕೆ ಕೆಲಸ ಇಲ್ಲದೆ ಹೋಗಿದ್ದರೆ ವರ್ಜಿತವಾಗಿ ಕಳೆದುಹೋಗಬಹುದಾಗಿತ್ತಲ್ಲ?

ಇತ್ತೀಚೆಗೆ ದೊರಕಿದ ಕೆಲವು ಪಳೆಯುಳಿಕೆಗಳು ಈ ಪ್ರಶ್ನೆಗಳ ಮೇಲೆ ಹೊಸ ಬೆಳಕು ಚೆಲ್ಲಲು ಸಹಾಯಕವಾಗಿವೆ. ಈ ಪ್ರಶ್ನೆಗಳಿಗೆ ಅವು ಆಧಾರಪೂರ್ವಕವಾಗಿ ಉತ್ತರ ಕೊಡಲಾರವು. ಆದರೂ ಏನು ನಡೆದಿರಬಹುದೆಂಬುದನ್ನು ಊಹಿಸಲು ನೆರವಾಗಿವೆ. ಆದಿಯ ಟ್ರೈಯಾಸಿಕ್ ಅವಧಿಯ ತ್ರೈನಾಕ್ಸೊಡಾನ್ ಮತ್ತು ಅಂತ್ಯಟ್ರೈಯಾಸಿಕ್‌ನ ಬೈನೊತೀರಿಯಮ್ ಎಂಬ ಸೈಯನೊಡಾಂಟ್‌ಗಳ ಪಳೆಯುಳಿಕೆಗಳು ಈ ದಿಸೆಯಲ್ಲಿ ಮಹತ್ತ್ವದ ಸಾಕ್ಷ್ಯಗಳನ್ನು ಒದಗಿಸುತ್ತವೆ. ಬೈನೊತೀರಿಯಮ್ ಸ್ತನಿಗಳನ್ನು ಬಹಳವಾಗಿ ಹೋಲುವ ಸರೀಸೃಪ. ಈ ಆಧಾರಗಳಿಂದ ಹಿಂದೆ ಹಾಕಿದ ಪ್ರಶ್ನೆಗಳಿಗೆ ಈಗ ಉತ್ತರವನ್ನು ಹೇಳುವ ಸಾಹಸ ಪ್ರಯತ್ನಕ್ಕೆ ತೊಡಗಬಹುದು.

ಸರೀಸೃಪಗಳ ಮತ್ತು ಆದಿಸ್ತನಿ ಸರೀಸೃಪಗಳ ವಿಕಾಸದಲ್ಲಿ ತಲೆಬುರುಡೆಯ ಎತ್ತರ ಕಡಿಮೆಯಾಗುವ ಪ್ರವೃತ್ತಿ ತಲೆದೋರಿತು. ಇದರಿಂದಾಗಿ ಮಾಂಸಗಳು ಮೂಳೆಗಳಿಗೆ ಅಂಟಿಕೊಳ್ಳುವ ಕ್ರಮದಲ್ಲಿ ಪುನಃ ಪರಿಶೀಲನೆ ನಡೆದು ಪುನರ್ ವ್ಯವಸ್ಥೆಯಾಯ್ತು. ಈ ಕಾರಣದಿಂದ ಕೆಳದವಡೆಯ ಡೆಂಟರಿ ಮೂಳೆಯ ಪಶ್ಚಭಾಗದ ಮೂಳೆಗಳು ಕ್ರಮೇಣ ಕ್ಷೀಣವಾದುವು. ಮಾಂಸಗಳು ಡೆಂಟರಿ ಮೂಳೆಗಳಿಗೆ ಅಂಟಿಕೊಂಡುದರಿಂದ ಅವುಗಳ ಗಾತ್ರ ದೊಡ್ಡದಾಯಿತು. ಟ್ರೈಯಾಸಿಕ್ ಅವಧಿಯ ಅಂತ್ಯದ ಹೊತ್ತಿಗೆ ಈ ಪ್ರವೃತ್ತಿಗಳು ಪರಾಕಾಷ್ಠೆಯನ್ನು ತಲುಪಿದವು ಹೀಗೆ ವಿಸ್ತಾರವಾಗಿ ಬೆಳೆದ ಡೆಂಟರಿ ಸ್ತನಿಗಳಲ್ಲಿರುವಂತೆ ನೇರವಾಗಿ ಸ್ಕ್ವಾಮೋಸಲ್‌ಗೆ ಅಂಟಿಕೊಂಡಿತು ಮತ್ತು ಕೆಳದವಡೆ ತಲೆ ಬುರುಡೆಯೊಂದಿಗೆ ಹೊಸ ರೀತಿಯಲ್ಲಿ ಕೀಲಿಕೊಂಡಿತು. ಈ ಕಾಲದಿಂದೀಚೆಗೆ ಡೆಂಟರಿ ಪಶ್ಚ ಮೂಳೆಗಳು ತಮ್ಮ ದವಡೆ ಆಧಾರ ಕ್ರಿಯೆಯಿಂದ ವಂಚಿತವಾಗಿ, ವರ್ಜಿತವಾಗಿ, ಡೆಂಟರಿ ವಿಸ್ತಾರವಾದಂತೆ ಸ್ಥಾನಪಲ್ಲಟವಾದುವು. ಈ ಅವಸ್ಥೆಯನ್ನು ಬೈನೊತೀರಿಯಮ್‌ನಲ್ಲಿ ಸ್ಪಷ್ಟವಾಗಿ ಕಾಣಬಹುದು. ಅದರ ಕಿವಿ ಸ್ತನಿಯ ಕಿವಿಯಾಗಲು ಆಗಲೇ ಪೂರ್ವಸಜ್ಜಿತವಾಗಿತ್ತು. ಆದ್ದರಿಂದ ಸ್ತನಿಯ ನಡುಗಿವಿ ತಂತ್ರಜಾಲದ ಉದ್ಭವ ತೀರಾಪ್ಪಿಡದ ಅಗಿಯುವ ಉಪಕರಣದ ಮೇಲೆ ಪ್ರಥಮವಾಗಿ ನಡೆದ ಆಯ್ಕೆಯ ಒತ್ತಡದ ಪರಿಣಾಮ. ಈ ಕ್ರಿಯಾಜಟಿಲತೆ ಉಂಟಾದ ಬಳಿಕ, ಸ್ತನಿಮಟ್ಟದ ರಚನಾ ವಿನ್ಯಾಸವನ್ನು ತಲುಪಿದ ಮೇಲೆ ಆಯ್ಕೆ ತನ್ನ ಪಾತ್ರವನ್ನು ವಹಿಸಿ, ಉಳಿಕೆಯ ರಚನೆಗಳನ್ನು ಫಲಕಾರಿಯಾದ ರೀತಿಯಲ್ಲಿ ಹೊಂದಿಸಿ ಶಬ್ದವನ್ನು ಸಾಗಿಸಲು ಮತ್ತು ಗ್ರಹಿಸಲು ಕಿವಿಯ ರಚನೆಯಲ್ಲಿ ಅಳವಡಿಸಿಕೊಂಡಿತು.



ಚಿತ್ರ 4 ಸರೀಸೃಪಗಳ ಕಿವಿ

ಡೆಂಟರಿ ಮೂಳೆಯ ಹಿಂದಿನ ತುದಿಯಲ್ಲಿ ಬೆಳೆದ ಗುಬುಟು ವಿಸ್ತರಿಸಿ ಡೆಂಟರಿ ಪಶ್ಚದವಡೆ ಮೂಳೆಗಳ ಕ್ರಿಯೆಯನ್ನು ವಹಿಸಿಕೊಂಡಿತು. ಆದ್ದರಿಂದ ಕೆಲಸವಿಲ್ಲದಂತಾದ ಈ ಅಂಶಗಳು ಕ್ರಮೇಣ ಗಾತ್ರದಲ್ಲಿ ಕಡಿಮೆಯಾದುವು. ಸರೀಸೃಪಗಳಲ್ಲಿ ದವಡೆಗಳನ್ನು ತೆರೆಯುವ ಕ್ರಿಯೆಯಲ್ಲಿ ಡಿಪ್ರೆಸರ್ ಮ್ಯಾಂಡಿಬುಲೆ ಸ್ನಾಯುಗಳಿವೆ. ಪರಿವರ್ತನಾಪರಂಪರೆಯ ಯಾವುದೇ ಹಂತದಲ್ಲಿ ಈ ಸ್ನಾಯುಗಳು ತಮ್ಮ ಕ್ರಿಯಾನಿರ್ವಹನ ಹೊಣೆಯನ್ನು ಕಳೆದುಕೊಂಡು ಇವುಗಳ ಸ್ಥಾನ ಮತ್ತು ಕ್ರಿಯೆಗಳನ್ನು ಸ್ತನಿಗಳ ಡೈಗ್ಯಾಸ್ಟ್ರಿಕ್ ಮ್ಯಾಂಡಿಬುಲೆ ಎಂಬ ಸ್ನಾಯುಗಳು ವಹಿಸಿಕೊಂಡಿರಬೇಕು. ಇದರಿಂದಾಗಿ ಡಿಪ್ರೆಸರ್ ಮ್ಯಾಂಡಿಬುಲೆ ಸ್ನಾಯುಗಳು ಕಣ್ಮರೆಯಾದುವು. ದವಡೆಯ ನಿರ್ವಹಣೆಯಲ್ಲಿ ಭಾಗವಹಿಸುತ್ತಿದ್ದ ಸ್ನಾಯುಗಳು ಡೆಂಟರಿ ಪಶ್ಚಮೂಳೆಗಳಿಗೆ ಅಂಟಿಕೊಂಡಿದ್ದುವು. ಈ ಮೂಳೆಗಳು ಈಗ ಕ್ಷೀಣವಾದ ದೆಸೆಯಿಂದಾಗಿ ಅವು (ಟೆರಿಗಾಯಿಡಿಯಸ್ ಸ್ನಾಯುಗಳು) ಈಗ ರೆಟ್ರೊಆರ್ಟಿಕ್ಯುಲಾರ್ ಪ್ರವರ್ಧಕ್ಕೆ ಅಂಟಿಕೊಂಡುವು.

ಸ್ತನಿಗಳ ವಿಕಾಸದಲ್ಲಿ ಇವುಗಳ ಗಾತ್ರದ ಕ್ಷೀಣತೆಯಾದರೂ ಟಿಂಪೆನಿಕ್‌ನ ಗಾತ್ರ ಕ್ರಮೇಣ ಹೆಚ್ಚಿತು. ಈ ಟಿಂಪೆನಮ್ ರೆಟ್ರೊಆರ್ಟಿಕ್ಯುಲಾರ್ ಪ್ರವರ್ಧವನ್ನು ಸುತ್ತುವರಿಯಿತು. ಈ ಮಾರ್ಪಾಡು ನಡೆದ ಮೇಲೆ ಸ್ತನಿಗಳ ಸಣ್ಣ ಮೂಳೆಗಳು ಕ್ರಿಯಾಸಮರ್ಥವಾದುವು. ಈಗ ಸರೀಸೃಪಗಳ ಒಂದು ಸಣ್ಣ ಮೂಳೆ ತಾಂತ್ರಿಕತೆಯಿದ್ದ ಕಡೆ ಮೂರು ಸಣ್ಣ ಮೂಳೆಗಳ ಮಂಡಲ ರೂಪುಗೊಂಡಿತು.

ಸ್ತನಿಗಳ ನಡುಗಿವಿಯ ಉದ್ಭವದ ಬಗೆಗೆ ಎರಡು ಸಿದ್ಧಾಂತಗಳಿವೆ: 1. ಟಿ.ಎಸ್. ವೆಸ್ಟಾಲ್ ಸಿದ್ಧಾಂತ, 2. ಹಾಪ್‌ಸನ್ಸ್ ಸಿದ್ಧಾಂತ. ಸ್ತನಿಗಳ ಟಿಂಪೆನಿಕ್ ಪಟಲ (ಕಿವಿದಮಟೆ) ಹೊಸದಾಗಿ ಕಾಣಿಸಿಕೊಂಡ ರಚನೆ ಎಂಬುದು ವೆಸ್ಟಾಲ್ ಸಿದ್ಧಾಂತದ ಮೂಲಸೂತ್ರ. ಯಾವ ರೀತಿಯ ವಿಕಾಸವಾದರೂ ನಡೆದಿರಲಿ ಸ್ತನಿಗಳ ನಡುಗಿವಿ ಮುಖ್ಯವಾಗಿ ಯಾಂತ್ರಿಕ ರಚನೆ. ಗಾಳಿಯ ಬಡಿತಗಳನ್ನು ಒಳಗಿವಿಯ ದ್ರವಗಳನ್ನು ಚಲಿಸಬಲ್ಲ ಬಲವಾದ ಬಡಿತಗಳಾಗಿ ಪರಿವರ್ತಿಸುವುದು ಇದರ ಮುಖ್ಯ ಕ್ರಿಯೆ.

ಸ್ತನಿಗಳ ನಡುಗಿವಿಯಲ್ಲಿ ಮೂರು ಸಣ್ಣ ಮೂಳೆಗಳ ಬಗೆಗೆ ರೋಮರ್ ಹೇಳುವ ಮಾತಿದು : ಸಾದೃಶ್ಯ ರಚನೆಗಳು ಹೇಗೆ ಕ್ರಿಯಾವ್ಯತ್ಯಾಸ ಹೊಂದಬಲ್ಲವು ಎಂಬುದನ್ನು ತೋರಲು ಸ್ತನಿಗಳ ಕಿವಿ ಸಣ್ಣ ಮೂಳೆಗಳು ಒಂದು ಉತ್ಕೃಷ್ಟ ಉದಾಹರಣೆ ಈ ಕಿವಿ ಸಣ್ಣ ಮೂಳೆಗಳ ಉಗಮ ವಿಕಾಸವನ್ನು ಕೆಳಗಿನ ಪಟ್ಟಿ ತೋರಿಸುತ್ತದೆ.

| | ಕಾಂಡ್ರಿಕ್ತಿಸ್ (ಮೃದ್ವಸ್ಥಿ ಮೀನುಗಳು) | ಆಸ್ಟಿಕ್ತಿಸ್ (ಮೂಳೆ ಮೀನುಗಳು) | ದ್ವಿಚರಿಗಳು | ಸರಿಸೃಪಗಳು | ಸ್ತನಿಗಳು |
|---|---|---|---|---|---|
| ಮೊದಲನೆಯ ಅಂಗಸಕಮಾನು (ಮ್ಯಾಂಡಿಬುಲಾರ್) | ಪ್ಯಾಲಟೊ ಟೆರಿಗೊಕ್ವಾಡ್ರೇಟ್ (ಮೇಲುದವಡೆ) | ಕ್ವಾಡ್ರೇಟ್ | ಕ್ವಾಡ್ರೇಟ್ | ಕ್ವಾಡ್ರೇಟ್ | ಇಂಕಸ್ |
| ಎರಡನೆಯ ಅಂಗಸಕಮಾನು (ಹೈಯಯಿಡ್) | ಮೆಕಲ್‌ಮೃದ್ವಸ್ಥಿ (ಕೆಳದವಡೆ) ಹೈಯೊಮ್ಯಾಂಡಿಬುಲಾರ್ | ಆರ್ಟಿಕ್ಯುಲಾರ್ ಹೈಯೊಮ್ಯಾಂಡಿಬುಲಾರ್ | ಆರ್ಟಿಕ್ಯುಲಾರ್ ಕಾಲ್ಯುಮೆಲ್ಲ | ಆರ್ಟಿಕ್ಯುಲಾರ್ ಸ್ಟೇಪಿಸ್ | ಮ್ಯಾಲಿಯಸ್ ಸ್ಟೇಪಿಸ್ |

(ಎಚ್.ಬಿ.ಡಿ.)

**ಕಿವಿ, ಮೂಗು ಮತ್ತು ಗಂಟಲು ರೋಗಗಳು :** ಮನುಷ್ಯನ ಕಿವಿ, ಮೂಗು ಮತ್ತು ಗಂಟಲುಗಳು ಅವುಗಳ ಸ್ಥಾನ ಮತ್ತು ಕ್ರಿಯೆಗಳ ನಿಮಿತ್ತ ಪರಸ್ಪರ ನಿಕಟವಾದ ಸಂಬಂಧವನ್ನು ಪಡೆದಿವೆ. ಆದ್ದರಿಂದ ವೈದ್ಯಕೀಯ ತರಬೇತಿ ಮತ್ತು ವ್ಯವಹಾರಗಳಲ್ಲಿ ಇವನ್ನು ಒಟ್ಟಿಗೆ ಪರಿಶೀಲಿಸಲಾಗುತ್ತದೆ. ಯೂಸ್ಟೇಕಿಯನ್ ನಾಳ ಕಿವಿ ಮತ್ತು ಗಂಟಲ ಕುಹರಗಳ ನಡುವೆ ಸಂಬಂಧವನ್ನು ಕಲ್ಪಿಸುವುದರ ಪರಿಣಾಮವಾಗಿ ಮೂಗು ಮತ್ತು ಗಂಟಲಿನ ಕೆಲವು ಕಾಯಿಲೆಗಳು ಕಿವಿಗೂ ವ್ಯಾಪಿಸಿ ಬಾಧೆಗೀಡುಮಾಡುತ್ತವೆ.

**ಕಿವಿಯ ರೋಗಗಳು:** ಕಿವಿ ಶ್ರವಣಕ್ಕೆ ಅಗತ್ಯವಾದ ಮತ್ತು ದೇಹವನ್ನು ಸಮತೋಲದಲ್ಲಿಡಲು ಸಹಾಯಕವಾದ ಮುಖ್ಯ ಅಂಗ. ಕಿವಿಗೆ ಸಂಬಂಧಿಸಿದ ಯಾವುದೇ ಕಾಯಿಲೆ ಅದರ ಈ ಎರಡು ಮುಖ್ಯವಾದ ಕಾರ್ಯಗಳಿಗೆ ಅಡಚಣೆಯನ್ನುಂಟುಮಾಡಬಲ್ಲುದು. ಹೊರಗಿವಿಗೆ ಪೆಟ್ಟುಬಿದ್ದಾಗ ರಕ್ತದ ಹೊಪ್ಪಳೆ ಅಥವಾ ಸೋಂಕುಂಟಾಗಬಹುದು. ಅನಂತರ ಆ ಜಾಗದಲ್ಲಿ ಗಾಯದ ಕಲೆ ಉಳಿದು ಹೊರಗಿವಿ ಸೊಟ್ಟಗಾಗುತ್ತದೆ. ಸಾಮಾನ್ಯವಾಗಿ ಕುಸ್ತಿಮಾಡುವವರಲ್ಲಿ ಮತ್ತು ಮುಷ್ಟಿಕಾಳಗದ ಜಟ್ಟಿಗಳಲ್ಲಿ ಹೊರಗಿವಿಗೆ ಪೆಟ್ಟುಬಿದ್ದು ಅದು ಹೂಕೋಸಿನಾಕಾರದಲ್ಲಿರುವುದುಂಟು. ಕೆಲವರಲ್ಲಿ ಕಿವಿಯನಾಳದ ಚರ್ಮ ಸೂಕ್ಷ್ಮವಾಗಿದ್ದು ಪ್ರೈತ್ಯಕಾರಕಗಳು (ಅಲ್ಲರ್ಜನ್ಸ್) ಅದನ್ನು ಸೋಂಕಿದಾಗ ಕಿವಿಯ ಕಡಿತವುಂಟಾಗುತ್ತದೆ. ಇದರಲ್ಲಿ ಚರ್ಮ ಒಣಗಿ ಚೆಕ್ಕೆಯಾಗಿಯೂ ಅಥವಾ ತೇವವಾಗಿ ಜಿನುಗುತ್ತಲೂ ಇರುತ್ತದೆ. ಕಿವಿಯನ್ನು ಕೆರೆದುಕೊಳ್ಳುವುದನ್ನು ಹಾಗೂ ಸಾಬೂನು ಮತ್ತು ನೀರನ್ನು ಅದಕ್ಕೆ ಹಾಕುವುದನ್ನು ನಿಲ್ಲಿಸಿದಲ್ಲಿ ಕಡಿತ ಶಮನಗೊಳ್ಳುತ್ತದೆ. ಹೊರಗಿವಿಯ ನಾಳದಲ್ಲಿರುವ ಮೇಣಗ್ರಂಥಿಗಳು ಕಿವಿಯ ಮೇಣವನ್ನು ಉತ್ಪತ್ತಿ ಮಾಡುತ್ತವೆ. ಈ ಮೇಣ ಹೆಚ್ಚಾಗಿ ಶೇಖರಗೊಂಡಾಗ ಕಿವಿ ಗುಮ್ಮೆನ್ನುತ್ತದೆ ಮತ್ತು ಶ್ರವಣಶಕ್ತಿ ಕಡಿಮೆಯಾಗುತ್ತದೆ. ಮೇಣವನ್ನು ಹೊರದೆಗೆದಾಗ ಈ ಚಿಹ್ನೆಗಳು ಇಲ್ಲವಾಗುತ್ತವೆ.

ಕಿವಿತಮಟೆಗೆ ನೇರವಾಗಿ ಪೆಟ್ಟುಬಿದ್ದಾಗ ಅಥವಾ ಕಿವಿಯನಾಳಮೇಲೆ (ಕಪಾಲಕ್ಕೆ) ಅಂಗೈಯಿಂದ ಹೊಡೆದಾಗ ಕಿವಿತಮಟೆ ಹರಿದುಹೋಗಬಹುದು. ಇದರಿಂದ ಕಿವಿ ಜುಮ್ಮೆನ್ನುವುದಲ್ಲದೆ ತೀಕ್ಷ್ಣವಾದ ನೋವು ಮತ್ತು ಶ್ರವಣಕ್ಕೆ ತೊಂದರೆಯುಂಟಾಗುತ್ತವೆ. ಯಾವ ಸೋಂಕೂ ತಗುಲದಿದ್ದಲ್ಲಿ ಕಿವಿತಮಟೆಯ ತೂತು ತನಗೆ ತಾನೇ ಮುಚ್ಚಿಹೋಗುತ್ತದೆ. ಈ ರೀತಿ ಪೆಟ್ಟುತಗುಲಿದಾಗ ಅದು ವಾಸಿಯಾಗುವವರೆಗೂ ಕಿವಿಯೊಳಕ್ಕೆ ನೀರನ್ನು ಹಾಕಬಾರದು.

ಮಧ್ಯಕಿವಿಯ ತೀವ್ರ ಸೋಂಕು (ಅಕ್ಯೂಟ್ ಆಟೈಟಿಸ್ ಮೀಡಿಯ) ಸಾಮಾನ್ಯವಾಗಿ ನೆಗಡಿಯಾದ ಅನಂತರ ಬರುತ್ತದೆ. ಸೋಂಕು ಮೂಗಿನಿಂದ ಯೂಸ್ಟೇಕಿಯನ್ ನಾಳದ ಮೂಲಕ ಮಧ್ಯಕಿವಿಗೆ ಹರಡುತ್ತದೆ. ಇದರಿಂದ ಸೋಂಕಿಗೊಳಗಾದ ಕಿವಿಯಲ್ಲಿ ಎಡೆಬಿಡದೆ ತೀವ್ರವಾದ ನೋವು, ಜ್ವರ ಕಾಣಿಸಿಕೊಂಡು ಕಿವಿ ಗುಮ್ಮೆನ್ನುವುದಲ್ಲದೆ ಶ್ರವಣಕ್ಕೆ ಅಡಚಣೆಯುಂಟಾಗುತ್ತದೆ. ಮಧ್ಯಕಿವಿಯ ತೀವ್ರ ಸೋಂಕು ಮಧ್ಯ ಕಿವಿಯಮೂಳೆಗೆ ಹರಡಿದಾಗ ಮಧ್ಯಕಿವಿಯ ದೀರ್ಘ ಸೋಂಕು (ಕ್ರಾನಿಕ್ ಆಟೈಟಿಸ್ ಮೀಡಿಯ) ತಲೆದೋರುತ್ತದೆ. ಇದರಿಂದ ಕಿವಿತಮಟೆ ತೂತಾಗಿ ಕಿವಿ ಸೋರುತ್ತದೆ ಮತ್ತು ಶ್ರವಣಕ್ಕೆ ಅಡ್ಡಿಯುಂಟಾಗುತ್ತದೆ. ಸಾಮಾನ್ಯವಾಗಿ ದುರ್ವಾಸನೆಯಿಂದ ಕೂಡಿರುವ ಈ ಕಿವಿಸೋರುವಿಕೆ ಸತತವಾಗಿರಬಹುದು ಅಥವಾ ಬಿಟ್ಟು ಬಿಟ್ಟು ಕಾಣಿಸಬಹುದು. ಸ್ಥಳೀಯ ಹಾಗೂ ಸಾಮಾನ್ಯ ಚಿಕಿತ್ಸೆಗಳಿಂದ ಇದನ್ನು ವಾಸಿಮಾಡಬಹುದು. ಕೆಲವು ವೇಳೆ ಶಸ್ತ್ರಚಿಕಿತ್ಸೆಯಿಂದ ಸೋಂಕಿಗೊಳಗಾದ ಮೂಳೆಯನ್ನು ತೆಗೆದುಹಾಕಬೇಕಾಗುತ್ತದೆ. ಮಧ್ಯಕಿವಿಯ ಸೋಂಕಿನಿಂದ ಕೆಲವು ಬಾರಿ ಜಟಿಲ ಪರಿಣಾಮಗಳುಂಟಾಗುತ್ತವೆ. ಕಿವಿಯ ಮೇಲ್ಭಾಗದಲ್ಲಿರುವ ತಲೆಯೆಲುಬಿನ ರೋಗ (ಮ್ಯಾಸ್ಟಾಯಿಡ್ ಡಿಸೀಸ್) ತಲೆದೋರಬಹುದು; ಸೋಂಕು ಒಳಕಿವಿಗೂ ಹರಡಿ ಶ್ರವಣಶಕ್ತಿ ಮತ್ತಷ್ಟು ಕುಂದಬಹುದು; ದೇಹದ ಸಮತೋಲನ ಕೆಡಬಹುದು; ಮತ್ತೆ ಕೆಲವು ವೇಳೆ ಇದರಿಂದ ಮಿದುಳಿಗೂ ಸೋಂಕು ತಗಲಬಹುದು. ಮಧ್ಯಕಿವಿಯ ಸೋಂಕಿನಲ್ಲಿ ಕಿವಿಯಲ್ಲಿ ಒಂದೇ ಸಮವಾಗಿ ನೋವಿರುತ್ತದೆ. ಕೆಲವು ವೇಳೆ ದೇಹದ ಸಮತೋಲನಶಕ್ತಿಯೂ ಕುಂದಬಹುದು. ಅಂಥ ಸಮಯದಲ್ಲಿ ತಜ್ಞವೈದ್ಯರಿಂದ ಸಲಹೆ ಪಡೆಯುವುದೊಳ್ಳೆಯದು. ಕೆಲವು ವೇಳೆ ಒಗ್ಗದಿಕೆಯಿಂದ (ಅಲರ್ಜಿ) ಊತವುಂಟಾಗಿ ಯೂಸ್ಟೇಕಿಯನ್ ನಾಳ ಮುಚ್ಚಿಹೋಗುತ್ತದೆ. ಇದರಿಂದ ಸೋಂಕಿನ ಯಾವ ಚಿಹ್ನೆಯೂ ಕಂಡುಬರದಿದ್ದರೂ ಮಧ್ಯಕಿವಿಯಲ್ಲಿ ದ್ರವಶೇಖರಗೊಳ್ಳುತ್ತದೆ. ಶ್ರವಣಶಕ್ತಿ ತುಸು ಕುಂದುವುದಲ್ಲದೆ ಕಿವಿ ಗುಮ್ಮೆನ್ನುತ್ತದೆ. ಕಿವಿತಮಟೆಯಲ್ಲಿ ತೂತುಮಾಡಿ ಈ ದ್ರವವನ್ನು ಹೊರತೆಗೆಯುವುದರಿಂದ ಇದನ್ನು ಗುಣಪಡಿಸಬಹುದು. ಒಗ್ಗದಿಕೆಗೆ ಕಾರಣವಾದ ಅಂಶವನ್ನು ಕಂಡುಹಿಡಿದು ಅದನ್ನು ತಡೆಗಟ್ಟುವುದರಿಂದ ಬೇನೆಯನ್ನು ಶಾಶ್ವತವಾಗಿ ನಿವಾರಿಸಬಹುದು.

ಮುಖದ ನರದ ಕಾರ್ಯಕ್ಕೆ ಅಡಚಣೆಯುಂಟಾದಾಗ ಮುಖಕ್ಕೆ ಪಾರ್ಶ್ವವಾಯು ತಗಲುತ್ತದೆ. ಕಿವಿಯ ಮೂಳೆಯ ಮೂಲಕ ಹಾದುಹೋಗುವ ಈ ನರದ ಭಾಗ ಊದಿಕೊಂಡಾಗಲೂ ಮುಖಕ್ಕೆ ಪಾರ್ಶ್ವವಾಯು ಸಂಭವಿಸುತ್ತದೆ. ಈ ನರದ ಊತ ಸಾಮಾನ್ಯವಾಗಿ ತಾತ್ಕಾಲಿಕ. ಆದರೆ ಕೆಲವು ಬಾರಿ ಇದು ಶಾಶ್ವತವಾಗಿ ಉಳಿಯಬಹುದು. ಪಾರ್ಶ್ವವಾಯುವಿಗೆ ಈಡಾದ ಅನಂತರ ಮುಖದ ಮಾಂಸಖಂಡಗಳ ಶಕ್ತಿ ಮೂರು ನಾಲ್ಕು ವಾರಗಳಲ್ಲಿ ಉತ್ತಮಗೊಳ್ಳದಿದ್ದಲ್ಲಿ ಶಾಶ್ವತವಾದ ಮುಖದ ಪಾರ್ಶ್ವವಾಯುವನ್ನು ತಡೆಗಟ್ಟಲು, ನರದ ಊತವನ್ನು ಕಡಿಮೆ ಮಾಡಲು ಶಸ್ತ್ರಚಿಕಿತ್ಸೆಯ ಮೂಲಕ ನರದ ಒತ್ತಡವನ್ನು ಕಡಿಮೆ ಮಾಡಬೇಕಾಗುತ್ತದೆ.

ಸ್ಟೇಪಿಸ್ ಮೂಳೆ ಗಟ್ಟಿಯಾಗುವುದರಿಂದ ಸಾಮಾನ್ಯವಾಗಿ ಯುವಕರಲ್ಲಿ ಶ್ರವಣಶಕ್ತಿಗೆ ತೊಂದರೆ ಉಂಟುಮಾಡುತ್ತದೆ. ಇದು ಎರಡು ಕಿವಿಗಳಲ್ಲೂ ನಿಧಾನವಾಗಿ ಹೆಚ್ಚುತ್ತ ಹೋಗುತ್ತದೆ. ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಕಾಣಿಸಿಕೊಳ್ಳುವ ಈ ಬೇನೆ ಹೆಂಗಸರಲ್ಲಿ ಹೆಚ್ಚು. ಸ್ಟೇಪಿಸ್ ಮೂಳೆ ಹೆಚ್ಚು ಹೆಚ್ಚಾಗಿ ಗಟ್ಟಿಯಾದಂತೆಲ್ಲ ಶ್ರವಣಶಕ್ತಿಯೂ ಕುಂದುತ್ತ ಬರುತ್ತದೆ. ಔಷಧಿಗಳಿಂದ ಇದರ ಚಿಕಿತ್ಸೆ ಸಾಧ್ಯವಿಲ್ಲ. ಶಸ್ತ್ರಚಿಕಿತ್ಸೆಯಿಂದ ಶ್ರವಣಶಕ್ತಿಯನ್ನು ಸ್ವಲ್ಪಮಟ್ಟಿಗೆ ಉತ್ತಮಗೊಳಿಸಬಹುದು.

ತಲೆಸುತ್ತಿಗೆ ಒಳಗಿವಿಯ ರಚನೆಯಲ್ಲುಂಟಾಗುವ ತೊಂದರೆಯೇ ಮುಖ್ಯಕಾರಣ. ಒಳಗಿವಿಯ ದ್ರವದ ಒತ್ತಡ ಹೆಚ್ಚುಕಡಿಮೆಯಾದಾಗ ಮೇನಿಯರ್ ಕಾಯಿಲೆ ತಲೆದೋರುತ್ತದೆ. ಇದರಲ್ಲಿ ತೀವ್ರವಾದ ತಲೆಸುತ್ತು, ಕೆಲವು ಬಾರಿ ವಾಕರಿಕೆ ಮತ್ತು ವಾಂತಿಯುಂಟಾಗುತ್ತವೆ; ಶ್ರವಣಶಕ್ತಿ ಕಡಿಮೆಯಾಗಿ ಕಿವಿಮೊರೆತಗಳು ತಲೆದೋರುತ್ತವೆ. ಒಳಗಿವಿಯ ದ್ರವದ ಒತ್ತಡ ಹೆಚ್ಚುಕಡಿಮೆಯಾಗದಂತೆ ಮಾಡುವುದರಿಂದ ಈ ಕಾಯಿಲೆಯನ್ನು ತಡೆಗಟ್ಟಬಹುದು. ಸಾಮಾನ್ಯವಾಗಿ ಮಧ್ಯಕಿವಿಯ ಭಾಗದ ಸೋಂಕು ಒಳಗಿವಿಗೆ ಹರಡಿ ಒಳಗಿವಿಯುರಿತ ಉಂಟಾಗುತ್ತವೆ. ಇದರಲ್ಲಿ ಥಟ್ಟನೆ ಶ್ರವಣಶಕ್ತಿ ಸಂಪೂರ್ಣವಾಗಿ ನಾಶವಾಗುವುದಲ್ಲದೆ ದೇಹದ ಸಮತೋಲನಕ್ಕೆ ತೊಂದರೆ, ವಾಕರಿಕೆ, ವಾಂತಿ ಮತ್ತು ಕೆಲವು ಸಾರಿ ತೀವ್ರವಾದ ಕಿವಿಮೊರೆತಗಳು ಉಂಟಾಗುತ್ತವೆ. ಮಧ್ಯ ಮತ್ತು ಒಳಕಿವಿಯ ಸೋಂಕನ್ನು ನಿವಾರಿಸಿದಾಗ ಇದು ವಾಸಿಯಾಗುತ್ತದೆ. ಕೆಲವು ವೇಳೆ ಶಸ್ತ್ರ ಚಿಕಿತ್ಸೆಯ ಮೂಲಕ ಈ ಸೋಂಕನ್ನು ತಡೆಗಟ್ಟಬೇಕಾಗುತ್ತದೆ. ಒಳಗಿವಿಗೆ ರಕ್ತವನ್ನೊದಗಿಸುವ ರಕ್ತನಾಳಗಳು ಸಣ್ಣದಾಗಿಯೂ ಸೂಕ್ಷ್ಮವಾಗಿಯೂ ಇವೆ. ಇವು ಸೆಟೆತುಕೊಂಡಲ್ಲಿ ಅಥವಾ ಒಡೆದು ಹೋದಲ್ಲಿ ಒಳಗಿವಿಯ ಪೋಷಣೆಗೆ ಅಡ್ಡಿಯುಂಟಾಗುತ್ತದೆ. ಇದ್ದರಿಂದ ಥಟ್ಟನೆ ಶ್ರವಣಶಕ್ತಿ ಹೊರಟು ಹೋಗುವುದಲ್ಲದೆ ದೇಹದ ಸಮತೋಲನಕ್ಕೆ ಅಡ್ಡಿಯುಂಟಾಗುತ್ತದೆ. ಕಿವಿಮೊರೆತ ತಲೆದೋರುತ್ತದೆ. ತೀವ್ರವಾದ ಔಷಧೋಪಚಾರವನ್ನು ಮೊದಲೇ ಆರಂಭಿಸುವುದರಿಂದ ಒಳಗಿವಿಯ ಕೆಲಸಗಳನ್ನು ಸಂಪೂರ್ಣವಾಗಿ ಸರಿಪಡಿಸಬಹುದು. ಆದರೆ ಸಾಮಾನ್ಯವಾಗಿ ಇಂಥದರಲ್ಲಿ ಶ್ರವಣಶಕ್ತಿ ತುಸು ಕಡಿಮೆಯಾಗಿರುತ್ತದೆ.

ಮಧ್ಯ ಮತ್ತು ಒಳಗಿವಿಗಳ ಪ್ರದೇಶದಲ್ಲಿ ಗಂಟುಗಳು ಕಾಣಿಸಿಕೊಳ್ಳಬಹುದು ಇದರಿಂದ ಕ್ರಮೇಣವಾಗಿ ಶ್ರವಣಶಕ್ತಿ ಕಡಿಮೆಯಾಗುತ್ತ ಬಂದು ಕಿವಿಮೊರೆತ ತಲೆಸುತ್ತು, ಮುಖದ ಮಾಂಸಖಂಡಗಳ ದುರ್ಬಲತೆ ಮತ್ತು ತಲೆನೋವಿನ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಗಂಟುಗಳನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದು ಹಾಕಬೇಕು. ತಲೆಗೆ ಪೆಟ್ಟುಬಿದ್ದಾಗ ತಲೆಮೂಳೆ ಮುರಿದು ಅಥವಾ ಮುರಿಯದೆಯೂ ಒಳಗಿವಿಗೆ ತೊಂದರೆಯುಂಟಾಗಬಹುದು. ಇದರಿಂದ ಶ್ರವಣಶಕ್ತಿ ಇಲ್ಲವಾಗಿ ದೇಹದ ಸಮತೋಲನಕ್ಕೆ ಅಡ್ಡಿಯುಂಟಾಗುವುದಲ್ಲದೆ ಕಿವಿಮೊರೆತ ಕಂಡುಬರುತ್ತದೆ. ಕೆಲವು ಬಾರಿ ಮುಖದ ನರಕ್ಕೂ ಪೆಟ್ಟು ತಗುಲಿ ಮುಖದ ಮಾಂಸಖಂಡಗಳು ದುರ್ಬಲವಾಗುತ್ತವೆ. ಕಿವಿಮೊರೆತ ಕೆಲವು ವೇಳೆ ಶ್ರವಣನರದ ಬಾಧೆಯಿಂದಲೂ ಉಂಟಾಗುತ್ತದೆ. ಸೋಂಕುನರದ ಮೇಲಿನ ಒತ್ತಡ ಅಥವಾ ಅಸಮಗ್ರ ರಕ್ತಚಲನೆಗಳು ಈ ನರದ ಬಾಧೆಗೆ ಕಾರಣವಾಗಬಹುದು.

**ಮೂಗಿನ ರೋಗಗಳು** : ಮೂಗು ಮನುಷ್ಯನಲ್ಲಿ ಮತ್ತು ಪ್ರಾಣಿಗಳಲ್ಲಿ ಇರುವ ಘ್ರಾಣೇಂದ್ರಿಯ. ಸೇವಿಸಿದ ಗಾಳಿಯನ್ನು ಇದು ಶುದ್ಧಿಗೊಳಿಸುವುದಲ್ಲದೆ ಉಷ್ಣ ನಿಯಂತ್ರಕವಾಗಿಯೂ ಕೆಲಸ ಮಾಡುತ್ತದೆ. ಮೂಗಿಗೆ ಯಾವುದೇ ಬಗೆಯ ರೋಗವುಂಟಾದಲ್ಲಿ ಮುಖ್ಯವಾಗಿ ಉಸಿರಾಡಲು ತೊಂದರೆಯಾಗುತ್ತದೆ. ಮೂಗಿನ ರೋಗಗಳನ್ನು ತೀವ್ರ ಹಾಗೂ ದೀರ್ಘ ಮೂಗುರಿತಗಳೆಂದು ಎರಡು ವಿಧವಾಗಿ ವಿಂಗಡಿಸಬಹುದು. ಮೂಗುರಿತವೆಂದರೆ, ಮೂಗಿನ ಒಳಗಡೆಯಿರುವ ಲೋಳೆಗೂಡಿದ ನಯಚರ್ಮದಲ್ಲಿ ಉರಿತದ ಪ್ರತಿಕ್ರಿಯೆಯುಂಟಾಗುವುದು. ತೀವ್ರ ಮೂಗುರಿತದಲ್ಲಿ ಮೂಗಿನಿಂದ ನೀರಿನೋಪಾದಿಯ ಲೋಳೆ ಹೆಚ್ಚಾಗಿ ಸುರಿಯುವುದಲ್ಲದೆ ಉಸಿರಾಟಕ್ಕೆ ತೊಂದರೆಯುಂಟಾಗುತ್ತದೆ. ತರುವಾಯ ಬೇರೆ ರೀತಿಯ ಸೋಂಕು ತಗುಲದಿದ್ದಲ್ಲಿ ಇದು ಒಂದು ವಾರದೊಳಗೆ ಶಮನವಾಗುತ್ತದೆ ದೂಳು, ರ್‍ಯಾಗ್‌ವೀಡ್ ಎಂಬ ಒಂದು ಬಗೆಯ ಕಳೆ ಮೊದಲಾದ ಒಗ್ಗದಿಕೆ ಕಾರಕಗಳಿಂದುಂಟಾಗುವ ಒಗ್ಗದಿಕೆ ಮೂಗುರಿತದಲ್ಲಿಯೂ ಇದೇ ಬಗೆಯ ಚಿಹ್ನೆಗಳು ಕಂಡುಬರುತ್ತವೆ. ಇದಕ್ಕೆ ದೂಳುಜ್ವರ ಎಂದು ಹೆಸರು. ಉರಿತಕ್ಕೆ ಕಾರಣವಾದ ವಸ್ತುಗಳನ್ನು ನಿವಾರಿಸುವವರೆಗೂ ರೋಗಲಕ್ಷಣಗಳು ಶಮನವಾಗುವುದಿಲ್ಲ.

ತೀವ್ರ ಮೂಗುರಿತ ಪದೇ ಪದೇ ಬಂದಾಗ ದೀರ್ಘ ಮೂಗುರಿತದಲ್ಲಿ ಪರಿಣಾಮಗೊಳ್ಳುತ್ತದೆ. ಇದರ ಮೊದಲ ಹಂತದಲ್ಲಿ ಲೋಳೆಗೂಡಿದ ನಯಚರ್ಮ

ಅತಿವೃದ್ಧಿಗೊಂಡು (ಹೈಪರ್ ಟ್ರೊಫಿ) ಉಸಿರಾಟಕ್ಕೆ ತೊಂದರೆಯಾಗುವುದಲ್ಲದೆ ಮೂಗಿನಿಂದ ಗಟ್ಟಿಯಾದ ಮತ್ತು ಜಿಗುಟಾದ ಲೋಳೆ ಸುರಿಯುತ್ತದೆ. ಇದಕ್ಕೆ ಅತಿವೃದ್ಧಿ ಮೂಗುರಿತ ಎಂದು ಹೆಸರು. ಈ ಸ್ಥಿತಿ ಬಹಳ ಕಾಲದವರೆಗೆ ಮುಂದುವರಿದಲ್ಲಿ ಲೋಳೆಗೂಡಿದ ನಯಚರ್ಮ ಕ್ಷಯಿಸುತ್ತ ಬಂದು ಒಣಗಿದ, ದುರ್ವಾಸನೆಯ ಪಿಸರೆಯುಂಟಾಗುತ್ತದೆ. ಇದಕ್ಕೆ ಕ್ಷೀಣಮೂಗುರಿತ ಎಂದು ಹೆಸರು. ಎರಡು ಹೊಳ್ಳೆಗಳನ್ನು ಬೇರ್ಪಡಿಸುವ ಮೂಗಿನ ಮಧ್ಯದ ಗೋಡೆ ಅಸಮವಾಗಿದ್ದಲ್ಲಿ ಅಥವಾ ವಿಕಾರಗೊಂಡಿದ್ದಲ್ಲಿ ಉಸಿರಾಟಕ್ಕೆ ತೊಂದರೆಯುಂಟಾಗುತ್ತದೆ. ಇದು ಸಾಮಾನ್ಯವಾಗಿ ಮೂಗಿಗೆ ಹೊರಗಿನಿಂದ ಪೆಟ್ಟು ಬಿದ್ದಾಗ ಸಂಭವಿಸುತ್ತವೆ. ಮೂಗಿನಲ್ಲಿ ಕೂದಲುಗುಳಿರುವುದರಿಂದ ಮೂಗಿನ ತುದಿ ಮತ್ತು ಹೊಳ್ಳೆಗಳಲ್ಲಿ ಸ್ಟೆಫಿಲೊಕಾಕಸ್ ಸೋಂಕು ತಗಲುತ್ತದೆ. ಸೋಂಕಿನಿಂದ ಹಾಗೂ ಒಗ್ಗದಿಕೆಯಿಂದ ಉಂಟಾದ ದೀರ್ಘಬಾಧೆಯಿಂದ ಮೂಗಿನ ಮಧ್ಯದಲ್ಲಿ ಗಂಟುಗಳುಂಟಾಗುತ್ತವೆ. ಇವು ಗಾತ್ರದಲ್ಲಿ ದೊಡ್ಡವಾದಾಗ ಉಸಿರಾಟಕ್ಕೆ ತೊಂದರೆಯಾಗುತ್ತದೆ.

**ಗಂಟಲಿನ ರೋಗಗಳು:** ಬಾಯಿ ಮತ್ತು ಮೂಗಿನ ಪ್ರದೇಶಗಳನ್ನು ಅನ್ನನಾಳ ಮತ್ತು ಧ್ವನಿಪೆಟ್ಟಿಗೆಗಳಿಗೆ ಸೇರಿಸುವ ಮಾರ್ಗಪ್ರದೇಶವೇ ಗಂಟಲು. ಇದು ಆಹಾರಪಾನೀಯಗಳನ್ನು ಅನ್ನನಾಳಕ್ಕೂ ಉಚ್ಛ್ವಸಿತ ಮತ್ತು ನಿಶ್ವಸಿತ ವಾಯುವನ್ನು ಧ್ವನಿಪೆಟ್ಟಿಗೆಗೂ ಒಯ್ಯುವ ದ್ವಾರ. ಇದು ಕಿವಿಗಳೆರಡರ ಮಧ್ಯ ಭಾಗದೊಂದಿಗೆ ಯೂಸ್ಟೇಕಿಯನ್ ನಾಳಗಳ ಮೂಲಕ ಸಂಬಂಧವನ್ನು ಪಡೆದಿರುವುದರಿಂದ ಹೊರಗಿವಿ ಮತ್ತು ಮಧ್ಯಕಿವಿಯನ್ನು ಬೇರ್ಪಡಿಸುವ ಕಿವಿತಮಟೆಯ ಮೇಲೆ ಬೀಳುವ ಗಾಳಿಯ ಒತ್ತಡವನ್ನು ಸಮತೋಲನಗೊಳಿಸಲು ಸಹಾಯಕವಾಗುತ್ತದೆ. ಪಾರ್ಶ್ವವಾಯುವಿನಿಂದ ಗಂಟಲಿನ ಮಾಂಸಖಂಡಗಳ ಮೇಲೆ ದುಷ್ಪರಿಣಾಮವುಂಟಾಗಬಹುದು ಅಥವಾ ಬ್ಯಾಕ್ಟೀರಿಯ, ವೈರಸ್ ಮತ್ತು ಫಂಗೈಗಳಿಂದುಂಟಾಗುವ ಸೋಂಕಿನಿಂದ ಗಂಟಲಿನ ಮೇಲ್ಪದರಗಳಿಗೆ ತೊಂದರೆಯುಂಟಾಗಬಹುದು. ಸ್ಟ್ರೆಪ್ಟೊಕಾಕಸ್ ಬ್ಯಾಕ್ಟೀರಿಯದಿಂದ ಉಂಟಾಗುವ ಸೋಂಕಿನಿಂದ ತೀವ್ರಗಲಗ್ರಂಥಿಯ ಉರಿಯೂತ ಉಂಟಾಗಿ ನೋವು, ಜ್ವರ, ಮತ್ತು ಊತ ಕಾಣಿಸಿಕೊಳ್ಳುತ್ತವೆ. ಈ ಸೋಂಕು ಗಲಗ್ರಂಥಿಯ ಹಿಂಭಾಗಕ್ಕೆ ವ್ಯಾಪಿಸಿದಾಗ ಹುಣ್ಣು ತಲೆದೋರುತ್ತದೆ. ಇದರಿಂದ ಗಲಗ್ರಂಥಿಗಳು ಕೀತುಕೊಂಡು ನೋವು ಹೆಚ್ಚಿ ನುಂಗಲು ತೊಂದರೆಯುಂಟಾಗಿ ಬಾಯ್ದೆರೆಯಲು ಕಷ್ಟವಾಗುತ್ತದೆ. ಸ್ಟ್ರೆಪ್ಟೊಕಾಕಸ್ ಬ್ಯಾಕ್ಟೀರಿಯಾದಿಂದ ಉಂಟಾದ ಗಂಟಲು ಸೋಂಕಿನಿಂದ ಕೆಂಪುಜ್ವರ ಬರುತ್ತದೆ. ಇದರಲ್ಲಿ ಚರ್ಮದ ಮೇಲೆ ಕೆಂಪು ಗಂದೆಗಳು ಕಾಣಿಸಿಕೊಳ್ಳುತ್ತವೆ. ಗಂಟಲಿನ ಈ ಸೋಂಕು ಮೂತ್ರಜನಕಾಂಗ ಮತ್ತು ಹೃದಯಗಳ ಮೇಲೆ ದುಷ್ಪರಿಣಾಮವನ್ನು ಉಂಟುಮಾಡಬಹುದು. ಆದರೆ ಪೆನಿಸಿಲಿನ್ ಮತ್ತು ಸ್ವಲ್ಪ ಔಷಧಿಗಳು ಬಳಕೆಗೆ ಬಂದಿರುವುದರಿಂದ ಅದರ ಭೀತಿ ಕಡಿಮೆಯಾಗಿದೆ. ಈ ಸೋಂಕು ಪದೇ ಪದೇ ಬಂದಾಗ ಗಲಗ್ರಂಥಿಗಳು ಮತ್ತು ಅಡಿನಾಯ್ಡ್ ಗ್ರಂಥಿಗಳು ದೊಡ್ಡದಾಗಿ ಉಸಿರಾಟಕ್ಕೆ ಮತ್ತು ನುಂಗಲು ಅಡಚಣೆಯುಂಟಾಗುತ್ತದೆ. ಅಡಿನಾಯ್ಡ್ ಗ್ರಂಥಿಗಳ ಊತದಿಂದ ಸಾಮಾನ್ಯವಾಗಿ ಮಕ್ಕಳಲ್ಲಿ ಕಿವುಡು ಸಂಭವಿಸುತ್ತದೆ. ಗಲಗ್ರಂಥಿಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯುವ ಸಂದರ್ಭದಲ್ಲಿಯೇ ಅಡಿನಾಯ್ಡ್ ಗ್ರಂಥಿಗಳನ್ನೂ ತೆಗೆಯುವುದರಿಂದ ಈ ಕಿವುಡನ್ನು ಹೋಗಲಾಡಿಸಬಹುದು. ಈ ಎರಡು ಗ್ರಂಥಿಗಳೂ ದೇಹಕ್ಕೆ ಉಪಕಾರಿಗಳೇ. ಆದ್ದರಿಂದ ಪದೇ ಪದೇ ಅವುಗಳಿಗೆ ಸೋಂಕು ತಗುಲದ ಹೊರತು ಅವುಗಳನ್ನು ತೆಗೆಯಬಾರದು.

ಡಿಫ್ತೀರಿಯ ಎಂಬುದು ನಿರ್ದಿಷ್ಟ ಬ್ಯಾಕ್ಟೀರಿಯಗಳಿಂದ ಉಂಟಾಗುವ ತೀವ್ರವಾದ ಗಂಟಲುಸೋಂಕು. ಮಕ್ಕಳಲ್ಲಿ ಇದಕ್ಕೆ ಅಗತ್ಯವಾದ ರೋಗ ನಿರೋಧಕಗಳನ್ನು ಬಳಸುವುದರಿಂದ ಇದು ವಿರಳವಾಗಿ ಕಂಡುಬರುತ್ತದೆ. ಪ್ರಾಥಮಿಕ ಹಂತದಲ್ಲಿಯೇ ಇದನ್ನು ಪತ್ತೆ ಹಚ್ಚಿದಲ್ಲಿ ಜೀವರೋಧಕಗಳ ಬಳಕೆಯಿಂದ ಅದನ್ನು ವಾಸಿಮಾಡಬಹುದು. ಇಲ್ಲವಾದಲ್ಲಿ ಅದು ಮಾರಕವಾಗುತ್ತದೆ. ಇತರ ಬಗೆಯ ಗಂಟಲು ಸೋಂಕುಗಳು ವೈರಸ್‌ಗಳಿಂದ ಸಂಭವಿಸಬಹುದು. ಎಕ್ಸ್‌ಕಿರಣಗಳ ದೀರ್ಘಬಳಕೆಯಿಂದ ಮತ್ತು ಕೆಲವು ಔಷಧಿಗಳ ದುಷ್ಪರಿಣಾಮದಿಂದ ದೇಹದಲ್ಲಿರುವ ಬಿಳಿರಕ್ತಕಣಗಳು ಕಡಿಮೆಯಾಗಿ ರೋಗನಿರೋಧಕಶಕ್ತಿ ಕುಂದಿ ಗಂಟಲು ಸೋಂಕುಟಾಗಬಹುದು.

ಗಂಟಲಿನ ಮಾಂಸಖಂಡಗಳಿಗೆ ಸಂಬಂಧಿಸಿದ ನರಗಳಿಗೆ ವೈರಸ್‌ಗಳಿಂದ ಸೋಂಕು ತಗಲುವುದರಿಂದ, ಡಿಫ್ತೀರಿಯದ ನಂಜಿನಿಂದ, ರಾಸಾಯನಿಕ ವಸ್ತುಗಳಿಂದ (ಸೀಸ, ಮೀಥೈಲ್ ಆಲ್ಕೊಹಾಲ್) ಅಥವಾ ಸಾಮಾನ್ಯವಾಗಿ ವಯಸ್ಸಾದವರಲ್ಲಿ ಮಿದುಳಿನ ರಕ್ತಚಲನೆಯಲ್ಲುಂಟಾಗುವ ಆಕ್ರಮಗಳಿಂದ ಗಂಟಲಿನ ಮಾಂಸಖಂಡಗಳು ದುರ್ಬಲವಾಗುತ್ತವೆ. ಇಲ್ಲವೆ ಪಾರ್ಶ್ವವಾಯುವಿಗೀಡಾಗುತ್ತವೆ. ಭಾವೋದ್ವೇಗಕ್ಕೆ ಒಳಗಾದಾಗ ಗಂಟಲಿನ ಕೆಳಭಾಗದ ಸಂಪೀಡಕ ಸ್ನಾಯುಗಳು ಸೆಡೆತುಗೊಂಡು ಗಂಟಲಿನಲ್ಲಿ ಏನೋ ಸಿಕ್ಕಿ ಹಾಕಿಕೊಂಡಂಥ ಸಂವೇದನೆಯುಂಟಾಗುತ್ತದೆ ಗಂಟಲಿನ ಏಡಿಗಂತಿ ವಿರಳವಾಗಿ ಕಂಡುಬರುತ್ತದೆ. ಇದರಲ್ಲಿ ಮೊದಲು ಗಲಗ್ರಂಥಿಗಳ ಜಾಗದಲ್ಲಿ ನೋವಿಲ್ಲದ ಊತ ಕಾಣಿಸಿಕೊಳ್ಳುತ್ತದೆ. ಆ ಭಾಗದ ಒಂದು ಅಂಶವನ್ನು ತೆಗೆದು ಪರೀಕ್ಷೆಗೊಳಪಡಿಸಿ ನೋಡಿದಾಗ ಈ ರೋಗವನ್ನು ನಿಖರವಾಗಿ ಪತ್ತೆಮಾಡಬಹುದು. ಎಕ್ಸ್‌ಕಿರಣ ಚಿಕಿತ್ಸೆಯಿಂದ ಇದನ್ನು ನಿಯಂತ್ರಿಸಬಹುದು. ಧ್ವನಿಪೆಟ್ಟಿಗೆಗೆ ಸೋಂಕು ತಗುಲಿದಾಗ ಧ್ವನಿ ಒಡಕಾಗುತ್ತದೆ. ಮಕ್ಕಳಲ್ಲಿ ಇದು ಉಸಿರಾಟಕ್ಕೆ ತೊಂದರೆಯನ್ನು ಉಂಟುಮಾಡುತ್ತದೆ. ಆವಿಯನ್ನು ಒಳಸೇದುವುದರಿಂದ ಮತ್ತು ಜೀವಿರೋಧಕಗಳನ್ನು ಬಳಸುವುದರಿಂದ ಇದನ್ನು ವಾಸಿಮಾಡಬಹುದು. ಧ್ವನಿಪೆಟ್ಟಿಗೆಯ ಕ್ಷಯವನ್ನು ಔಷಧಿಯಿಂದ ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು. ಕೆಲವುಸಾರಿ ಡಿಫ್ತೀರಿಯದಿಂದ ಉಸಿರಾಟಕ್ಕೆ ತೊಂದರೆಯಾದಾಗ, ಶಸ್ತ್ರಚಿಕಿತ್ಸೆಯ ಮೂಲಕ ಗಾಳಿಯ ಕೊಳವೆಯನ್ನು ತೂತು ಮಾಡಿ ಉಸಿರಾಟಕ್ಕೆ ಅನುಕೂಲಮಾಡಿಕೊಡಬೇಕಾಗಿ ಬರಬಹುದು.

ಸಂಗೀತಗಾರರಲ್ಲಿ (ತಮ್ಮ ಧ್ವನಿಪೆಟ್ಟಿಗೆಯನ್ನು ಹೆಚ್ಚಾಗಿ ಬಳಸುವುದರಿಂದ) ಧೂಮಪಾನಿಗಳಲ್ಲಿ ಕಂಡುಬರುವ ಧ್ವನಿಪೆಟ್ಟಿಗೆಯ ಗಂಟುಗಳಿಂದ ಧ್ವನಿ ಒಡಕಾಗಬಹುದು. ಧ್ವನಿಯಲ್ಲಿ ಒಡಕು ಕೇಳಿ ಬರುವುದು. ಧ್ವನಿಪೆಟ್ಟಿಗೆಯ ಏಡಿಗಂತಿ ರೋಗದ ಮೊದಲ ಚಿಹ್ನೆಯೂ ಅಹುದು. ಆದ್ದರಿಂದ ಯಾವುದೇ ವಿಧವಾದ ಧ್ವನಿಯ ಒಡಕು ಎರಡು ವಾರಕ್ಕಿಂತ ಹೆಚ್ಚಾಗಿ ಉಳಿದಲ್ಲಿ ಅದನ್ನು ತಜ್ಞವೈದ್ಯರಿಂದ ಪರೀಕ್ಷಿಸಿಕೊಳ್ಳಬೇಕು. ಧ್ವನಿಪೆಟ್ಟಿಗೆಯ ಏಡಿಗಂತಿ ರೋಗವನ್ನು ಮೊದಲ ಹಂತದಲ್ಲಿಯೇ ಪತ್ತೆಹಚ್ಚಿದಲ್ಲಿ ವಾಸಿ ಮಾಡಬಹುದು. ಅದು ಹೆಚ್ಚು ವ್ಯಾಪ್ತವಾಗದಿದ್ದಲ್ಲಿ ಎಕ್ಸ್‌ಕಿರಣ ಚಿಕಿತ್ಸೆಯಿಂದ ಅದರ ನಿವಾರಣೆ ಸಾಧ್ಯ. ಆದರೆ ಅದು ಜಾಸ್ತಿಯಾಗಿ ಬೆಳೆದಿದ್ದ ಪಕ್ಷದಲ್ಲಿ ಶಸ್ತ್ರಚಿಕಿತ್ಸೆಯಿಂದ ಧ್ವನಿಪೆಟ್ಟಿಗೆಯನ್ನೇ ತೆಗೆದು ಹಾಕಬೇಕಾಗುತ್ತದೆ.

(ಜೆ.ಇ.ಸಿ.ಎಚ್.)

**ಕಿವಿಯ ರೋಗಗಳು :** ಕಿವಿಯ ರೋಗಗಳನ್ನು ಉಲ್ಲೇಖಿಸುವಾಗ ಕಿವಿಯನ್ನು ಹೊರಗಿವಿ (ಕರ್ಣ), ಒಳಗಿವಿ ಮತ್ತು ಇವೆರಡರ ಮಧ್ಯದ ನಡುಗಿವಿ–ಎಂಬ ಭಾಗಮಾಡಿಕೊಂಡು ಆಯಾ ಭಾಗಕ್ಕೆ ಸಂಬಂಧಿಸಿದ ರೋಗಗಳನ್ನು ಪರಿಶೀಲಿಸುವುದು ವಾಡಿಕೆ.

**ಹೊರಗಿವಿಯ ರೋಗಗಳು:** ತಲೆಯ ಪಕ್ಕದಲ್ಲಿ ಅಂಟಿಕೊಂಡಂತೆ ಕಾಣುವ ಉಪಪರ್ಣ (ಪಿನ್ನ ಅಥವಾ ಆರಿಕಲ್) ಮತ್ತು ಒಳಗೆ ಹೋಗುವ ಶ್ರವಣನಾಳ ಎರಡೂ ಸೇರಿ ಹೊರಗಿವಿ ಎನ್ನಿಸಿಕೊಳ್ಳುತ್ತವೆ. ಉಪಪರ್ಣದೊಳಗಿರುವ ಮೃದ್ವಸ್ಥಿ ಅದನ್ನು ನೆಟ್ಟಗೆ ನಿಲ್ಲುವಂತೆ ಮಾಡುತ್ತದೆ. ನಾಳದ ಸ್ವಲ್ಪ ಭಾಗ ಮೃದ್ವಸ್ಥಿಯಿಂದಲೂ ಉಳಿದ ಭಾಗ ಗಟ್ಟಿಯಾದ ಎಲುಬಿನಿಂದಲೂ ರೂಪಗೊಂಡಿವೆ.

ಉಪಪರ್ಣದ ಹುಟ್ಟು ವಿಕಾರಗಳು: ಉಪಪರ್ಣವೇ ಇಲ್ಲದಿರುವುದು ಅಥವಾ ಇದ್ದರೂ ಅಖಂಡವಾಗಿರದೆ ಸ್ವಲ್ಪಭಾಗ ಮಾತ್ರ ಇರುವುದು, ಚರ್ಮದ ಭಾಗವಿದ್ದು ಮೃದ್ವಸ್ಥಿಯ ಭಾಗ ರೂಪಗೊಳ್ಳದಿರುವುದು ಒಂದು ರೀತಿಯ ವಿಕಾರವೇ. ಇನ್ನೂ ಕೆಲವು ವೇಳೆ ಹೊರಗಿವಿಯ ಶ್ರವಣನಾಳಗಳೇ ರೂಪುಗೊಳ್ಳದಿರುವುದೂ ಅಥವಾ ನಾಳವಿದ್ದರೂ ತೂತಿಲ್ಲದಿರುವುದೂ ಉಂಟು. ಶ್ರವಣನಾಳದಲ್ಲಿ ಅಡ್ಡಪೊರೆ ಬಂದು ನಾಳವನ್ನು ಎರಡು ಭಾಗಗಳಾಗಿ ಮಾಡಿರಬಹುದು. ಈ ವಿಕಾರಗಳಿಂದ ಕಿವುಡು ಸಂಭವಿಸುವುದುಂಟು. ಹೊರಗಿನ ವಿಕಾರಗಳನ್ನು ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಲು ಸಾಧ್ಯ. ಶ್ರವಣನಾಳದ ತೂತು ಮುಚ್ಚಿಕೊಂಡಿದ್ದರೆ ಶಸ್ತ್ರಚಿಕಿತ್ಸೆಯಿಂದದನ್ನು ಸರಿಪಡಿಸುವುದು ಅಸಾಧ್ಯವಲ್ಲದಿದ್ದರೂ ಕಷ್ಟಸಾಧ್ಯ.

**ಉಪಪರ್ಣಗಳಿಗೆ ಪೆಟ್ಟು :** ಉಪಪರ್ಣಗಳಿಗೆ ಪೆಟ್ಟು ಬಿದ್ದು ರಕ್ತಗಟ್ಟಿ ಊದಿಕೊಳ್ಳಬಹುದು (ಹ್ಯಾಮಟೋಮ). ಇದನ್ನು ಚಿಕಿತ್ಸೆಗೊಳಪಡಿಸದೆ ಹಾಗೇ ಬಿಟ್ಟರೆ ಉಪಪರ್ಣಗಳು ವಿಕಾರವಾಗಿ ಕಾಲಿಫ್ಲವರ್ ಕಿವಿ ಎನ್ನುತ್ತಾರೆ. ಮುಷ್ಟಿ ಕಾಳಗಮಾಡುವವರಲ್ಲಿ ಈ ರೀತಿಯ ಕಿವಿ ವಿಕಾರ ಸಾಮಾನ್ಯ ಕಟ್ಟಿಕೊಂಡಿರುವ ರಕ್ತವನ್ನು ಚುಚ್ಚುಮದ್ದು ಕೊಡುವ ಸಿರ್‌ಕೊಳವೆಯಿಂದ ವಿಂಡೋ ಆಪರೇಷನ್ ಮೂಲಕ ಸ್ವಾಭಾವಿಕ ಸ್ಥಿತಿಗೆ ಬರುವಂತೆ ಚಿಕಿತ್ಸೆ ಮಾಡಿ ಸರಿಪಡಿಸಬಹುದು.

**ಉಪಪರ್ಣಗಳ ಸೋಂಕು:** ಏಟು ಬಿದ್ದ ಅನಂತರ ರಕ್ತ ಕಟ್ಟಿರುವಾಗ ಅದರ ಮೂಲಕ ಮೃದ್ವಸ್ಥಿಗೆ ಸೋಂಕು ಅಂಟಬಹುದು. ಕಿವಿಯ ಹಿಂಬದಿಯಲ್ಲಿರುವ ತಲೆ ಬುರುಡೆಯ ಮ್ಯಾಸ್ಟಾಯಿಡ್ ಎಲುಬಿನ ಶಸ್ತ್ರಚಿಕಿತ್ಸೆ ನಡೆಸಿದಾಗಲೂ ಮೃದ್ವಸ್ಥಿಗೆ ಸೋಂಕಂಟುವ ಸಾಧ್ಯತೆ ಇದೆ. ಉಪಪರ್ಣದ ಊತ, ಕೆಂಪೇರುವುದು, ನೋವು ಜೊತೆಗೆ ಜ್ವರ–ಇವು ಸೋಂಕಿನ ಲಕ್ಷಣಗಳು, ಬಿಸಿಬಿಸಿ ಶಾಖ, ಬೆಚ್ಚಾರ, ಕೀವುಗಟ್ಟಿದರೆ ಹೊರತೆಗೆಯುವುದು.– ಇವು ಚಿಕಿತ್ಸೆಯ ಕ್ರಮಗಳು. ಪೆರಿಕ್‌ಬಾಂಡ್ರೈಟಿಸ್ ತುಂಬಾ ನೋವಿನಿಂದ ನರಳುತ್ತಾರೆ. ಇದಕ್ಕೆ ಆಂಟಿಬಯೋಟಿಕ್ಸ್ ಇಂಜೆಕ್ಷನ್ ಸಾಕಷ್ಟು ದಿವಸ ನೀಡಿ ಸರಿಪಡಿಸಬೇಕಾಗುತ್ತದೆ. ಮತ್ತು ಉಪಪರ್ಣ ವಿಕಾರವಾಗುವ ಸಾಧ್ಯತೆಗಳು ಹೆಚ್ಚು.

**ಕರ್ಣಕುರು:** ತಡೆಯಲಸಾಧ್ಯವಾದ ನೋವು ಇಂಥ ಕುರುಗಳ (ಫರಂಕುಲೋಸಿಸ್) ಮುಖ್ಯಲಕ್ಷಣ, ಮೊದಲಲ್ಲಿ ಶಾಖ ಕೊಟ್ಟು ಕೀವು ತುಂಬಿದ ಅನಂತರ ಶಸ್ತ್ರ ಚಿಕಿತ್ಸೆಯಿಂದ ಅದನ್ನು ನಿವಾರಿಸಬೇಕಾಗಬಹುದು. ಕಿವಿಯನ್ನು ಬಡ್ಸ್ ಕಡ್ಡಿ ಮೂಲಕ ಸ್ವಚ್ಛ ಮಾಡುವುದರಿಂದ ಸಾಮಾನ್ಯವಾಗಿ ಉಂಟಾಗುವ ಕಾಯಿಲೆ.

**ಕರ್ಣಚರ್ಮದ ಉರಿಯೂತ :** ಸ್ಟ್ರೆಪ್ಟೋಕಾಕ್ಕೈ ಎಂಬ ಏಕಾಣುಜೀವಿಯಿಂದ ಈ ರೋಗ (ಡರ್ಮಟೈಟಿಸ್) ಪ್ರಾಪ್ತವಾಗುತ್ತದೆ. ಹೊಟ್ಟಿನಂತಿರುವ ಸಿಪ್ಪೆ ಮೇಲೆದ್ದು ಅದರಿಂದ ದ್ರವ ಒಸರುತ್ತದೆ. ದ್ರವ ಒಣಗಿ ಹಳದಿ ಬಣ್ಣದ ಹೆಕ್ಕಳಿಕೆಗಳೂ ಆಗುತ್ತವೆ. ಸೋಂಕು ಕತ್ತಿಗೂ ಮತ್ತು ಮುಖಕ್ಕೂ ಹರಡಬಹುದು. ಮೊದಲು ಗಾಯವಾದರೆ ಅದಕ್ಕೆ ಸೊಂಕು ತಗುಲಿ ರೋಗ ಪ್ರಾರಂಭವಾದದ್ದು ಒಬ್ಬರಿಂದೊಬ್ಬರಿಗೆ ನೇರ ಸಂಪರ್ಕದಿಂದ ಅಥವಾ ಸೋಂಕಿನಿಂದ ಮಲಿನವಾದ ಅಂಗವಸ್ತ್ರದಿಂದ ಹರಡುತ್ತದೆ. ಕಿವಿ ಸೋರುವ ಮಕ್ಕಳಲ್ಲಿ ಕೀವು ಚರ್ಮದ ಮೇಲೆ ಹರಿಯದಂತೆ ಸದಾ ಶುಭ್ರವಾಗಿಟ್ಟುಕೊಳ್ಳದಿದ್ದರೂ ಈ ರೋಗ ಪ್ರಾರಂಭವಾಗಬಹುದು. ಇತರೆಡೆಗಳಲ್ಲಿ ಚರ್ಮದ ಉರಿಯೂತದ ಚಿಕಿತ್ಸೆಯೇ ಈ ರೋಗಕ್ಕೂ ಅನ್ವಯಿಸುತ್ತದೆ.

**ಇಸಬು:** ಕಿವಿಯ ಶಸ್ತ್ರಚಿಕಿತ್ಸೆಯ ಅನಂತರ ಈ ರೋಗ ಹೊರ ಚರ್ಮದಡಿಯಲ್ಲೇ ಸ್ಟ್ರೆಪ್ಟೋಕಾಕ್ಕೈ ಸೊಂಕಿನಿಂದ ಹರಡುತ್ತದೆ. ಕಿವಿ ಊದಿ ಕೆಂಪಗಾಗುತ್ತದೆ; ಅನಂತರ ಬೊಬ್ಬೆಗಳು ಕಾಣಿಸಿಕೊಳ್ಳುತ್ತವೆ. ಅತಿಯಾದ ಜ್ವರವೂ ಈ ರೋಗದ ಲಕ್ಷಣ. ಕಿವಿಯಿಂದ ತಲೆ ಹಾಗೂ ಮುಖಕ್ಕೂ ಸೋಂಕು ಹರಡುವುದು. ವೈದ್ಯರಿಗೆ ತಕ್ಷಣ ತೋರಿಸಿ ಸೂಕ್ತ ಚಿಕಿತ್ಸೆ ಪಡೆಯುವುದಗತ್ಯ.

**ಕರ್ಣಗಳ ಹರ್ಪಿಸ್ :** ಗುಳ್ಳೆಗಳು ತಂಡ ತಂಡವಾಗಿ ಏಳುವ ಒಂದು ಬಗೆಯ ರೋಗ. ಇತರ ಕಡೆ ಹರ್ಪಿಸ್ ರೋಗ ಕಂಡಾಗ ಕರ್ಣ ಚರ್ಮದ ಮೇಲೂ ಕಾಣಬಹುದು. ಶ್ರವಣನಾಳಕ್ಕೂ ಈ ಗುಳ್ಳೆಗಳು ಹರಡಿರಬಹುದು. ನಿರ್ದಿಷ್ಟ ಚಿಕಿತ್ಸೆ ಇಲ್ಲ. ಕೆಲವೊಮ್ಮೆ ಫೇಷಿಯಲ್ ನರ್ವ್ ಪೆರಾಲಿಸಿಸ್ ಆಗುವ ಸಾಧ್ಯತೆ ಹೆಚ್ಚು.

**ಕಣಚರ್ಮ ಕ್ಷಯ:** ಸಾಮಾನ್ಯವಾಗಿ ಮುಖ ಚರ್ಮ ಅಥವಾ ಲೋಳೆ ಪೊರೆಯಲ್ಲಿ ಕ್ಷಯಕ್ರಿಮಿ ಸೊಂಕಿನ ಗಾಯಗಳಾದಾಗಲೇ ಕರ್ಣಚರ್ಮಕ್ಕೂ ಸೋಂಕು ಹಾಯುತ್ತದೆ. ಈ ರೋಗದಲ್ಲಿ ಗಂಟುಗಳು ಕಾಣಿಸಿಕೊಳ್ಳುತ್ತವೆ. ಗಾಯದ ಕೆಲವು ಭಾಗ ಒಣಗಿ ಕಲೆ ನಿಂತಿರುವಂತೆಯೇ ಮತ್ತೊಂದೆಡೆ ಹರಡುವ ಲಕ್ಷಣವೂ ಕಂಡುಬರುತ್ತದೆ. ಗಾಯ ಹುಣ್ಣಾಗಿ ಒಳಗಿರುವ ಮೃದ್ವಸ್ಥಿ ನಾಶವಾಗುತ್ತದೆ.

**ಶ್ರವಣನಾಳದ ರೋಗಗಳು:** ನಾಳದಲ್ಲೇಳುವ ಕುರುಗಳು: ಈ ಕುರುಗಳೂ ಕರ್ಣಕುರುಗಳಂತೆಯೇ. ತಡೆಯಲಾಗದ ನೋವೇ ಮುಖ್ಯ ಲಕ್ಷಣ. ಈ ನೋವು ತಲೆಗೂ ದವಡೆಗಳಿಗೂ ಹರಡಬಹುದು. ಹೊರೆಗೆ ಊತ ಕಾಣಿಸಿಕೊಳ್ಳುತ್ತದೆ. ಉಪಪರ್ಣವನ್ನಲ್ಲಾಡಿಸಿದರೆ ನೋವು ಹೆಚ್ಚಾಗುತ್ತದೆ. ಕುರು ದೊಡ್ಡದಾಗಿ ಶ್ರವಣನಾಳವನ್ನು ಮುಚ್ಚಿದರೆ ಕಿವಿ ಕಿವುಡಾಗುತ್ತದೆ. ಕುರು ಒಡೆದರೆ ಕೀವು. ರಕ್ತ ಹೊರ ಹರಿದು ನೋವು ಕಡಿಮೆಯಾಗುತ್ತದೆ. ಪ್ರಾರಂಭದಲ್ಲಿ ಶಾಖ ಕೊಡಬೇಕು. ಪೂತಿ ನಾಶಕಗಳಿಂದ ಚಿಕಿತ್ಸೆ ಕೊಡಬೇಕು. ಸ್ವಲ್ಪ ಅಥವಾ ಪ್ರತಿಜೀವಕಗಳನ್ನು ವೈದ್ಯರ ಸಲಹೆಯ ಮೇರೆಗೆ ಕೊಡಬೇಕಾಗುತ್ತದೆ. ಶಸ್ತ್ರ ಚಿಕಿತ್ಸೆ ಮಾಡಿ ಕೀವನ್ನು ತೆಗೆಯ ಬೇಕಾಗಬಹುದು.

**ಶ್ರವಣನಾಳದ ಉರಿಯೂತ :** ನಾಳ ಹಾಗೂ ಕಿವಿಯ ಒಳಪೊರೆ ಈ ಉರಿಯೂತಕ್ಕೊಳಗಾಗುತ್ತದೆ. ರೋಗ ಸೌಮ್ಯವಾಗಿ ಇರಬಹುದು ಅಥವಾ ಉಲ್ಬಣಿಸಬಹುದು. ಕಿವಿಯೊಳಗೆ ಕಡ್ಡಿ ಹಾಕುವುದು, ಬೆರಳುಗಳಲ್ಲಿ ಕೆರೆದುಕೊಳ್ಳುವುದು ಇತ್ಯಾದಿ ಚೇಷ್ಟೆಗಳಿಂದ ಗಾಯವಾದಾಗ ಗಾಯದ ಮೂಲಕ ಸೊಂಕು ಅಂಟುತ್ತದೆ. ಸ್ಟ್ರೆಪ್ಟೋಕಾಕ್ಕೈ ಹೀಮೊಲೆಟಿಕಸ್, ಸ್ಟೆಫೆಲೋಕಾಕ್ಕೈ ಅರಿಯಸ್ ಹಾಗೂ ಸ್ಯೂಡೋಮೋನಾಸ್ ಪಯೋಪಯನಿಯಸ್ ರೋಗಕಾರಕ ಏಕಾಣುಜೀವಿಗಳು ಈ ರೋಗಕ್ಕೆ ಕಾರಣ. ಕೆಲವೊಂದು ವಸ್ತುಗಳು ಒಗ್ಗದಿಕೆ ಹಾಗೂ ಮಾನಸಿಕ ಅಂಶಗಳೂ ಈ ರೋಗಗಳಿಗೆ ಕಾರಣವಾಗಬಹುದು. ಕರ್ಣಕುರುವಿನ ಚಿಕಿತ್ಸೆಯೇ ಈ ವ್ಯಾಧಿಗೂ ಅನ್ವಯಿಸುತ್ತದೆ.

**ಶ್ರವಣನಾಳದಲ್ಲಿ ಗುಗ್ಗೆ:** ನಾಳದ ಚರ್ಮದಲ್ಲಿರುವ ಗ್ರಂಥಿಗಳು ಗುಗ್ಗೆಯನ್ನು ಉತ್ಪತ್ತಿಮಾಡುತ್ತವೆ. ನಾಳದಲ್ಲಿ ದೂಳು, ಕೊಳೆ ಇತ್ಯಾದಿಯನ್ನು ಹಿಡಿದು ಹೊರಗೆ ಹಾಕಲು ಗುಗ್ಗೆ ಸಹಾಯ ಮಾಡುತ್ತದೆ. ಗುಗ್ಗೆ ಉತ್ಪತ್ತಿ ಕೆಲವರಲ್ಲಿ ಅಷ್ಟಿಲ್ಲ ಮತ್ತೆ ಕೆಲವರಲ್ಲಿ ಅಧಿಕ. ಗಣಿ ಕೆಲಸಗಾರರಲ್ಲಿ, ಬೆಂಕಿ ಉರಿಯೊಂದಿಗೆ ಕೆಲಸ ಮಾಡುವವರಲ್ಲಿ ಹಾಗೂ ಕಸ ಗುಡಿಸುವವರಲ್ಲಿ ಗುಗ್ಗೆ ಉತ್ಪತ್ತಿ ಅಧಿಕ.

ಗುಗ್ಗೆ ಕಿವಿಯಲ್ಲಿ ತುಂಬಿಕೊಂಡಾಗ ವ್ಯಕ್ತಿ ಕಿವುಡನ್ನು ಅನುಭವಿಸಬೇಕಾಗುತ್ತದೆ. ಗುಗ್ಗೆ ತುಂಬಿದ್ದಾಗ ಧ್ವನಿ ತರಂಗಗಳು ಕಿವಿಯ ಒಳಪೊರೆಯವರೆಗೆ ಹಾಯುವುದಕ್ಕೆ ಅಡಚಣೆಯುಂಟಾಗಿ ಕಿವುಡಾಗುತ್ತದೆ. ಶ್ರವಣ ನಾಳದಲ್ಲಿ ತುರಿ, ನೋವು, ಶಬ್ದ ಇತ್ಯಾದಿ ಚಿಹ್ನೆಗಳೂ ಕಾಣಿಸಿಕೊಳ್ಳುವುದು ಸ್ನಾನದ ಅನಂತರ ಅಥವಾ ಈಜಿ ಹೊರಬಂದೊಡನೆ ಕಿವುಡು ಕಾಣಿಸಿಕೊಳ್ಳಬಹುದು. ಸಾಮಾನ್ಯವಾಗಿ ಗುಗ್ಗೆಯನ್ನು ಪಿಚಕಾರಿಯಿಂದಾಗಲೀ ಇತರ ಸಾಧನದಿಂದಲಾಗಲಿ ಸುಲಭವಾಗಿ ತೆಗೆಯಬಹುದು. ಗುಗ್ಗೆ ಗಟ್ಟಿ ಕಟ್ಟಿದ್ದರೆ ಎರಡು ಮೂರು ದಿನಗಳು ಅದನ್ನು ಔಷಧಗಳಿಂದ ನೆನಸಿ ಮೆದುವಾಗುವಂತೆ ಮಾಡಿ ಅನಂತರ ತೆಗೆಯಬೇಕು. ಶ್ರವಣೇಂದ್ರಿಯ ಬಹಳ ಸೂಕ್ಷ್ಮ. ಗುಗ್ಗೆ ತೆಗೆಯುತ್ತೇನೆಂದು ನಟನೆ ಮಾಡುವ ದಾರಿಗರಿಂದ ಗುಗ್ಗೆ ತೆಗೆಸುವುದು ಅಪಾಯಕರವೆಂದು ಬೇರೆ ಹೇಳಬೇಕಾಗಿಲ್ಲ. ಗುಗ್ಗೆ ಕೆಲವೊಮ್ಮೆ ಚರ್ಮ ಮತ್ತು ಮೂಳೆಯನ್ನು ಕೊರೆದು ಮಿದುಳಿನವರೆಗೂ ತಲಪಿ ಶಾಶ್ವತ ಕಿವುಡತನ ಮತ್ತು ಫೇಷಿಯಲ್ ನರ್ವ್ ಪೆರಾಲಿಸಿಸ್ ಆಗುವ ಸಾಧ್ಯತೆಗಳು ಇರುತ್ತವೆ.

**ಶ್ರವಣನಾಳದ ಅಣಬೆರೋಗ:** ರೋಗಕಾರಕ ಅಣಬೆಯ ಸೋಂಕು ಶ್ರವಣನಾಳದ ಚರ್ಮಕ್ಕಂಟಿದಾಗ ಈ ರೋಗ ಪ್ರಾರಂಭವಾಗುತ್ತದೆ. ನಾಳರಂಧ್ರದಲ್ಲಿ ಬಿಳಿ, ಕಪ್ಪು ಅಥವಾ ಕಂದು ಬಣ್ಣದ ಒದ್ದೆಯಾದ ಒತ್ತುಕಾಗದದಂತಿರುವ ಹೊಟ್ಟು ಏಳುವುದು. ಈ ರೋಗದ ಮುಖ್ಯ ಲಕ್ಷಣ. ನೈಸ್ಟಾಟಿನ್ ಎಂಬ ಅಣಬೆ ನಾಶಕ ಔಷಧದಿಂದ ಈ ರೋಗ ಪೂರ್ಣ ಗುಣವಾಗುತ್ತದೆ. ಮುಖ್ಯ ಕಾರಣಗಳು ಎಣ್ಣೆ ಹಾಗೂ ನೀರು ಕಿವಿಯ ಒಳಗೆ ಹಾಕುವುದು.

**ಶ್ರವಣನಾಳದಲ್ಲಿ ಅನ್ಯವಸ್ತುಗಳು:** ಮಕ್ಕಳು ಸಾಮಾನ್ಯವಾಗಿ ಕಿವಿಯೊಳಗೆ ಕಡ್ಡಿ. ಬಳಪ, ಬೀಜ ಇತ್ಯಾದಿ ಹಾಕಿಕೊಳ್ಳುವುದನ್ನು ಎಲ್ಲರೂ ನೋಡಿರುತ್ತಾರೆ. ಇವನ್ನು ಹೊರಗೆ ತೆಗೆಯಬೇಕು. ಬಟಾಣಿ, ಕಡಲೆಕಾಳು ಇತ್ಯಾದಿ ಬೀಜಗಳನ್ನು ತೆಗೆಯಲು ಪಿಚಕಾರಿ ಹೊಡೆಯಬಾರದು. ಅವು ನೀರಿನಿಂದ ಉಬ್ಬಿ ಕಿವಿಗೆ ಅಪಾಯ ತರಬಹುದು. ಕಲ್ಲುಗಳು, ರಬ್ಬರ್ ಇತ್ಯಾದಿ ಉಬ್ಬದಿರುವ ವಸ್ತುಗಳನ್ನು ತಜ್ಞರು ಪಿಚಕಾರಿಯಿಂದ ತೆಗೆಯುತ್ತಾರೆ. ಇದರಿಂದ ಸಾಧ್ಯವಿಲ್ಲದಿದ್ದರೆ ಮಗುವಿಗೆ ಪ್ರಜ್ಞೆ ತಪ್ಪಿಸಿ, ವಸ್ತುವನ್ನು ಹೊರಗೆ ತೆಗೆಯುವ ವಿಶಿಷ್ಟ ಸಾಧನದಿಂದ ತೆಗೆಸುವುದು ಒಳಿತು. ಕೆಲವೊಮ್ಮೆ ಅನ್ಯ ವಸ್ತುಗಳನ್ನು ಸರಿಯಾಗಿ ತೆಗೆಯಲು ಬರದಿದ್ದರೆ ಇವುಗಳನ್ನು ತಮಟೆಯ ಮೂಲಕ ಮಧ್ಯ ಕಿವಿಗೆ ದೂಡುವ ಸಾಧ್ಯತೆಗಳುಂಟು. ಇದರಿಂದ ಕೆಲವೊಮ್ಮೆ ಕಿವುಡಾಗುವ ಸಾಧ್ಯತೆಗಳು ಇರುತ್ತವೆ.

**ಶ್ರವಣನಾಳದಲ್ಲಿ ಎಲುಬಿನ ಮೊಳಕೆ :** ಈ ಮೊಳಕೆಗಳು ಶ್ರವಣನಾಳದ ಗೋಡೆಯೊಳಗಿಂದ ಹೊರಬರುತ್ತದೆ. ಸಾಮಾನ್ಯವಾಗಿ ಒಂದಕ್ಕೂ ಹೆಚ್ಚಿಗೆ ಮೊಳಕೆಗಳು ಬರುತ್ತವೆ. ಈಜುಗಾರರಲ್ಲಿ ಇದು ಸಾಮಾನ್ಯ. ಅವರಿಗೆ ಅದು ಇರುವ ಅರಿವೂ ಇಲ್ಲದಿರಬಹುದು. ಅಥವಾ ಕಿವುಡಾಗಿ ವೈದ್ಯರ ಹತ್ತಿರ ಬರಬಹುದು. ಪರೀಕ್ಷಿಸಿದಾಗ ಶ್ರವಣನಾಳ ಮೊಳಕೆಗಳಿಂದ ಪೂರ್ಣ ಮುಚ್ಚಿಕೊಂಡಿರುವುದನ್ನು ಕಾಣಬಹುದು. ಇದರೊಂದಿಗೆ ಸೋಂಕಿನಿಂದ ಉರಿಯೂತವೂ ಇರಬಹುದು. ಈ ಹೊರ ಹೊರಟಿರುವ ಎಲುಬಿನ ಮೊಳಕೆಗಳನ್ನು ಶಸ್ತ್ರಕ್ರಿಯೆಯಿಂದ ಡ್ರಿಲ್ ಮಾಡಿ ತೆಗೆಯಬಹುದು.

**ಕಿವಿಯ ಏಡಿಗಂತಿ :** ಈ ವ್ರಣ (ರಾಡೆಂಟ್ ಅಲ್ಸರ್) ಏಡಿಗಂತಿ ಲಕ್ಷಣವನ್ನು ಹೊಂದಿರುತ್ತದೆ. ಇದಕ್ಕೆ ಶಸ್ತ್ರಚಿಕಿತ್ಸೆ ಅಥವಾ ರೇಡಿಯಂ ಚಿಕಿತ್ಸೆ ಕೊಡುವುದು ವಾಡಿಕೆ.

**ಕಿವಿಯೊಳಪೊರೆ ರೊಗಗಳು :** ಒಳಪೊರೆ, ಹೊರಕಿಗಿವಿಯನ್ನು ನಡುಗಿವಿಯಿಂದ ಬೇರ್ಪಡಿಸುತ್ತದೆ. ಇದು ಸೂಕ್ಷ್ಮವಾಗಿ, ತೆಳ್ಳಗೆ, ನುಣುಪಾಗಿ ಮುತ್ತಿನಂತೆ ಹೊಳೆಯುತ್ತಿರುವಂತೆ ಕಾಣುತ್ತದೆ. ಹೊರಗಿವಿಯಿಂದ ಸಾಗಿಬಂದ ಧ್ವನಿತರಂಗಗಳು ಈ ಪೊರೆಗೆ ಅಪ್ಪಳಿಸಿದ ಕೂಡಲೇ ಅದು ಅದುರಿ ಧ್ವನಿಯನ್ನು ನಡುಗಿವಿಗೆ ಸಾಗಿಸುತ್ತದೆ.

ಶ್ರವಣನಾಳದ ಉರಿಯೂತದ ಫಲವಾಗಿ ಈ ಪೊರೆಗೂ ಸೋಂಕುಂಟಾಗಬಹುದು. ಅಂಟಿದರೆ ಪೊರೆಯ ಹೊಳಪು ಮಾಯವಾಗಿ ತೆಳ್ಳಗಿರುವ ಪೊರೆ ದಪ್ಪನಾಗಿ ಕಡುಗೆಂಪಿನ ಬಣ್ಣಕ್ಕೆ ತಿರುಗಿ ಅದರಿಂದ ಹೊಟ್ಟು ಬೀಳಲು ಪ್ರಾರಂಭವಾಗುತ್ತದೆ. ಪೊರೆಯ ಹೊರಪದರದ ಕೋಶಗಳು ಚಕ್ಕೆ ಚಕ್ಕೆಯಾಗಿ ಉದುರುತ್ತವೆ. ಒಂದು ಸಲ ಸೋಂಕಂಟಿ ಪೊರೆ ದಪ್ಪಗಾಗಿ ಬಣ್ಣ ಬದಲಾದರೆ ಪುನಃ ಸ್ವಾಭಾವಿಕ ಸ್ಥಿತಿಗೆ ಹಿಂತಿರುಗುವುದು ಅಪೂರ್ವ.

**ಪೊರೆಯ ಉರಿಯೂತದ ಬೊಕ್ಕೆಗಳು:** ಸಾಮಾನ್ಯವಾಗಿ ಈ ರೋಗಕ್ಕೆ ವೈರಸ್ ಕಾರಣ. ಈ ರೋಗದಿಂದ ಮಿದುಳಿನ ಒಳಗೂ ಪರಿಣಾಮಗಳುಂಟಾಗಬಹುದು. ಇನ್‌ಫ್ಲುಎನ್‌ಜ಼ಾ ಸಾಂಕ್ರಾಮಿಕದ ಕಾಲದಲ್ಲಿ ಈ ಗಂಭೀರ ಪರಿಸ್ಥಿತಿ ಒಬ್ಬೊಬ್ಬರಲ್ಲಿ ಕಂಡುಬರುತ್ತದೆ. ಪೊರೆಯ ಮೇಲೆ ರಕ್ತಕುರು ಕಾಣಿಸಿಕೊಂಡು ಶ್ರವಣನಾಳಕ್ಕೂ ಹರಡುತ್ತದೆ. ಮೊದಲಲ್ಲಿ ಕಿವಿ ಕಿವುಡು ಕಾಣುವುದಿಲ್ಲ. ತೀವ್ರತರ ನೋವು ನಿದ್ರೆಗೂ ಕೆಲಸಗಳಿಗೂ ಅವಕಾಶ ಕೊಡುವುದಿಲ್ಲ ಬೊಕ್ಕೆಗಳೊಡೆಯಬಹುದು ಅಥವಾ ಹಾಗೇ ಒಣಗಿ ಹೆಕ್ಕಳಿಗಿಯಾಗಬಹುದು. ಈ ಸ್ಥಿತಿ ಅನೇಕ ಸಲ ಉಲ್ಬಣಗೊಂಡು ನಡುವಿಗೂ ಹರಡುತ್ತದೆ. ಕೆಲವು ವೇಳೆ ರೋಗಾಣು–ಸಂಕೀರ್ಣ ಕುಹರದ ಉರಿಯೂ ಮತ್ತು ಮಿದುಳಿನ ಮತ್ತದರ ಹೊರ ಪೊರೆಗಳುರಿಯೂ ಇದರಿಂದುಟಾಗಬಹುದು. ಪ್ರತಿಜೀವಕಗಳಿಂದ ಯಶಸ್ವಿ ಚಿಕಿತ್ಸೆ ಕೊಡಬಹುದು.

**ಪೊರೆಯ ಹರ್ಪಿಸ್:** ಕರ್ಣಗಳ ಪೊರೆಗೂ ಹರಡಬಹುದು. ಒಳಗಿವಿಯ ರೋಗಗಳು ವಿಷಯವನ್ನು ಪರಿಶೀಲಿಸುವಾಗ ಹೆಚ್ಚು ವಿವರಗಳನ್ನು ತಿಳಿಯಬಹುದು.

**ಕಿವಿ ಒಳಪೊರೆಗೆ ಪೆಟ್ಟು :** ಹೊರಗಿನ ಹಾಗೂ ಒಳಗಿನ ಪೆಟ್ಟುಗಳಿಂದಲೂ ಪೊರೆಗೆ ಅಪಾಯವಾಗಬಹುದು. ಗುಗ್ಗೆ, ಕಡ್ಡಿ, ಹೇರ್‌ಪಿನ್, ಸೇಫ್ಟಿಪಿನ್, ಬೆಂಕಿಕಡ್ಡಿ ಮತ್ತಿತರ ಕಿವಿ ಒಳಗೆ ಹಾಕುವ ವಸ್ತುಗಳಿಂದ ಪೊರೆಗೆ ಅಪಾಯ ಸಂಭವಿಸಬಹುದು. ಮಕ್ಕಳು ಆಡುವಾಗ ಕಡ್ಡಿ ತೂರಿಸಿ ಪೊರೆಗೆ ಚುಚ್ಚಿಕೊಳ್ಳಬಹುದು. ಬಲವಾಗಿ ಪೆಟ್ಟು ಬಿದ್ದಾಗ ಶ್ರವಣನಾಳದಲ್ಲಿರುವ ಗಾಳಿ ಪೊರೆಗೆ ಅಪ್ಪಳಿಸಿ ಅಘಾತವಾಗಬಹುದು. ಫಿರಂಗಿ ಮದ್ದುಗುಂಡುಗಳ ಧ್ವನಿತರಂಗಳಿಂದಲೂ ಪೊರೆ ಒಡೆಯುವುದು ಸಾಧ್ಯ. ಶ್ರವಣನಾಳದಲ್ಲಿರುವ ಪಾಳಿಯನ್ನು

ಅಕಸ್ಮಾತ್ತಾಗಿ ಹೊರಗೆ ಸೆಳೆದಾಗಲೂ ಇದೇ ರೀತಿಯ ಅಪಾಯ ಸಂಭವಿಸಬಹುದು ನಡುಗಿವಿಯ ಚಾವಣಿಯಲ್ಲಿ ಹಾಯುವ ಪೀಟ್ರಸ್ ಎಲುಬಿನ ಭಾಗ ಏಟಿನಿಂದ ಒಡೆದರೆ ಪೊರೆಯ ಮೇಲ್ಭಾಗ ಹರಿಯಬಹುದು. ಹೀಗೆ ಯಾವುದೇ ಕಾರಣದಿಂದಾಗಲೀ ಪೊರೆ ಒಡೆದರೆ ತತ್‌ಕ್ಷಣ ಕಿವಿಗೆ ಹತ್ತಿ ತುರುಕಿ, ವ್ಯಕ್ತಿ ವಿಶ್ರಾಂತಿ ಪಡೆಯಬೇಕು, ಕಾರಣ ಏನೇ ಇರಲಿ ಪಿಚಕಾರಿ ಹಾಕಬಾರದು. ವೈದ್ಯರಿಗೆ ತಿಳಿಸಿ ಮುಂದೆ ಸೋಂಕು ತಗಲದಂತೆ ಸೂಕ್ತ ಚಿಕಿತ್ಸೆ ಪಡೆಯಬೇಕು. ಒಳಪೊರೆ ಹಾನಿಯಾದಾಗ 24 ರಿಂದ 45 ಗಂಟೆಯೊಳಗೆ ಛಿದ್ರಗೊಂಡ ಪೊರೆಯನ್ನು ಮೈಕ್ರೋಸ್ಕೋಪ್ ಮೂಲಕ ಹತ್ತಿರಗೂಡಿಸಿ ಪ್ಯಾಚ್ ಮಾಡಿದಲ್ಲಿ ಬಹತೇಕ ಪೊರೆ ಮುಚ್ಚಿಕೊಳ್ಳುವ ಸಂಭವವಿರುತ್ತದೆ. ಹಾಗೆ ಪೊರೆ ಮುಚ್ಚಿಕೊಳ್ಳದಿದ್ದಲ್ಲಿ ಆಪರೇಷನ್ ಮೂಲಕ ಪೊರೆ ಕಸಿ ಮಾಡಿ ಮುಚ್ಚಬೇಕಾಗುವ ಸಂಭವವಿರುತ್ತದೆ.

ಒಳಪೊರೆ ಮೂರು ಕಡೆಗಳಲ್ಲಿ ಹರಿಯಬಹುದು. ಮಧ್ಯಭಾಗದಲ್ಲಿ, ಅಂಚಿನಲ್ಲಿ ಅಥವಾ ಮೇಲ್ಭಾಗದಲ್ಲಿರುವ ಗೂಡಿನಲ್ಲಿ (ಆಟಿಕ್). ಪೊರೆ ಒಡೆದರೆ ಯಾವ ತೊಂದರೆಯೂ ಅನುಭವವಾಗದಿರಬಹುದು. ಹಾಗೂ ವ್ಯಕ್ತಿಗೆ ಅದು ಒಡೆದಿದೆ ಎಂಬುದೇ ಗಮನಕ್ಕೆ ಬಾರದಿರಬಹುದು.

**ಯೂಸ್ಟೇಕಿಯನ್ ನಾಳದ ರೋಗಗಳು :** ಶ್ರವಣ ಕ್ರಿಯೆಯಲ್ಲಿ ಯೂಸ್ಟೇಕಿಯನ್ ನಾಳ ಬಹಳ ಮುಖ್ಯಪಾತ್ರವನ್ನು ವಹಿಸುತ್ತದೆ. ಈ ನಾಳ ಕಿವಿರೋಗಗಳಿಗೆ ಅನೇಕ ವೇಳೆ ಮೂಲವೆಂದು ಹೇಳಬಹುದು. ನಾಳದ ತೀವ್ರ ಕೊರತೆ ಕಿವುಡಿಗೆ ಮುಖ್ಯ ಕಾರಣ. ನೆಗಡಿ ಅಥವಾ ನಡುಗಿವಿಯ ತೀವ್ರ ಉರಿಯೂತಗಳಿಂದ ಈ ರೋಗ ಪ್ರಾಪ್ತವಾಗುವುದು ಸಾಮಾನ್ಯ. ನೋವು ಕೆಲವು ವೇಳೆ ಇರುತ್ತದೆ. ಈ ಕೊರತೆ ತೀವ್ರರೀತಿಯಲ್ಲಿ ಕಾಣಿಸಿಕೊಂಡು ಗುಣವಾಗದೇ ಇರಬಹುದು. ಈ ದೀರ್ಘಾವದಿ ಕೊರತೆಯಿಂದ ಆಗಾಗ್ಗೆ ವ್ಯಕ್ತಿ ಕಿವುಡನ್ನು ಅನುಭವಿಸಬೇಕಾಗಬಹುದು. ದೀರ್ಘಾವಧಿ ಕೊರತೆ ಮೂಗಿನಿಂದ ಅಥವಾ ಅದಕ್ಕೆ ಸಂಬಂಧಪಟ್ಟ ಕುಳಿಗಳ ಅಥವಾ ಗಂಟಲ ಕುಹರ, ಮೂಗಿನ ದುಗ್ಧ ಗ್ರಂಥಿಗಳ ಸೋಂಕಿನಿಂದ ಮುಂದುವರಿಯಬಹುದು. ಒಗ್ಗದಿಕೆಯೂ ಈ ನಾಳದ ದೀರ್ಘಾವಧಿ ಕೊರತೆಗೆ ಕಾರಣವಾಗಬಹುದು.

**ನಡುಗಿವಿಯ ರೋಗಗಳು :** ನಡುಗಿವಿಯನ್ನು ಒಂದು ಎಲುಬಿನ ಕೊಠಡಿ ಎಂದು ಹೇಳಬಹುದು. ಒಂದು ಕಡೆ ಕರ್ಣಪೊರೆ ಇದೆ. ಈ ಪೊರೆಯ ಒಳಭಾಗಕ್ಕೆ ನಡುಗಿವಿಯಲ್ಲಿ ಮೂರು ಪುಟಾಣಿ ಮೂಳೆಗಳು ಮಣಿಗಳಂತೆ ಕೂಡಿಕೊಂಡಿವೆ. ಇವಕ್ಕೆ ಅಡಿಗಲ್ಲು. ಸುತ್ತಿಗೆ ಮತ್ತು ರಿಕಾಬು ಎಂದು ಕರೆಯುತ್ತಾರೆ. ಧ್ವನಿತರಂಗಗಳು ಕರ್ಣಪೊರೆಗೆ ಅಪ್ಪಳಿಸಿದಾಗ ಅದು ಅದುರಿ ಆ ತರಂಗಗಳನ್ನು ಈ ಮೂರು ಪುಟಾಣಿ ಮೂಳೆಗಳ ಮೂಲಕ ದ್ರವ ತುಂಬಿರುವ ಒಳಗಿವಿಗೆ ಹಾಯಿಸುತ್ತದೆ. ಧ್ವನಿ ತರಂಗಗಳು ಒಳಗಿವಿಯ ದ್ರವದಲ್ಲಿ ಅಲೆಗಳನ್ನುಂಟುಮಾಡಿ ಶ್ರವಣನರದ ಮೂಲಕ ಧ್ವನಿಯನ್ನು ಮಿದುಳಿಗೆ ಕೊಂಡೊಯ್ದು ಮುಟ್ಟಿಸುತ್ತದೆ.

ನಡುಗಿವಿಗೂ ಗಂಟಲಿಗೂ ಯೂಸ್ಟೇಕಿಯನ್ ನಾಳದ ಮೂಲಕ ನೇರ ಸಂಪರ್ಕವಿದೆ. ನಡುಗಿವಿಯೊಳಗೆ ಗಾಳಿಯ ಒತ್ತಡ ಇದ್ದಕ್ಕಿದ್ದಂತೆ ಏರು ಪೇರಾದರೆ ಪೊರೆ ಹರಿಯುತ್ತದೆ. ಇದೇ ನಾಳದ ಮೂಲಕ ನೆಗಡಿ, ಕೆಮ್ಮು ಇತ್ಯಾದಿ ರೋಗಗಳಲ್ಲಿ ಸೋಂಕು ಹಾದು ನಡುಗಿವಿಯನ್ನು ಮುಟ್ಟಬಹುದು. ಇದರಿಂದ ನಡುಗಿವಿಯ ಉರಿಯೂತ ಪ್ರಾರಂಭವಾಗುತ್ತದೆ. ಹೀಗಾದಾಗ ವ್ಯಕ್ತಿ ತಡೆಯಲಾಗದ ಕಿವಿ ನೋವನ್ನು ಅನುಭವಿಸುತ್ತಾನೆ. ತಂತಿ ಮೀಟಿದಂತಿರುವ ನೋವು ಜೊತೆಗೆ ಜ್ವರ ಹಾಗೂ ಕಿವಿ ಮಾಂದ್ಯ– ಈ ರೋಗದ ಲಕ್ಷಣಗಳು. ಅನೇಕ ವೇಳೆ ನಡುಗಿವಿಯಲ್ಲಿ ಕೀವು ತುಂಬಿ ಕರ್ಣಪೊರೆ ಒಡೆಯಬಹುದು. ಆಗ ಕೀವು ಹೊರಗಿವಿಯಿಂದ ಸ್ರವಿಸಿ ಒತ್ತಡ ಕಡಿಮೆಯಾಗಿ ನೋವು ಶಮನವಾಗಬಹುದು. ಈ ರೋಗದಿಂದ ಇತರ ಗಂಭೀರ ಪರಿಣಾಮಗಳೂ ಸಾಧ್ಯ. ನಡುಗಿವಿಯ ಸೋಂಕು ಮಿದುಳು, ಮಿದುಳಿನ ಚಿಪ್ಪು, ಒಳಗಿವಿ, ಮ್ಯಾಸ್ಟಾಯಿಡ್ ಎಂಬ ಕಿವಿಯ ಹಿಂಬದಿಯಿರುವ ತಲೆಬುರುಡೆಯ ಮೂಳೆ, ಮುಖದ ಮಾಂಸಖಂಡಗಳ ನೆರವಾದ ಮುಖನರ–ಈ ಸ್ಥಳಗಳಿಗೂ ಹರಡಬಹುದು. ಇವು ಯಾವುದಕ್ಕೆ ಸೋಂಕುಂಟಾದರೂ ಯಶಸ್ವಿ ಶಸ್ತ್ರಚಿಕಿತ್ಸೆ ಇಲ್ಲದಿದ್ದರೆ ಪ್ರಾಣಾಪಾಯ ಒದಗಬಹುದು. ಅದೃಷ್ಟವಶಾತ್ ಸಲ್ಪ ಮತ್ತು ಪ್ರತಿಜೀವಕಗಳಂಥ ಅದ್ಭುತ ಔಷಧಿಗಳಿಂದ ಈ ಜಟಿಲ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರವಾಗಿದೆ ಎಂದು ಹೇಳಬಹುದು.

ಅನೇಕ ವೇಳೆ ಕಿವಿ ಸೋರುವುದು ಚಿಕಿತ್ಸೆಯಿಂದ ಗುಣವಾಗದೆ ಕೀವು ಸೋರುತ್ತಲೇ ಇರುತ್ತದೆ. ಈ ದೀರ್ಘಾವಧಿ ಉರಿಯೂತಕ್ಕೆ ಶಸ್ತ್ರಚಿಕಿತ್ಸೆಯೇ ಮದ್ದು. ಇಲ್ಲದಿದ್ದರೆ ಸೋಂಕು ಸುತ್ತಮುತ್ತಲಿರುವ ಮೂಳೆ, ನರ ಮಿದುಳು, ಮಿದುಳಿನ ಭಾಗಗಳಿಗೆ ಹರಡಿ ಗಂಭೀರ ಪರಿಸ್ಥಿತಿ ಎಡೆ ಗೊಡಬಹುದು.

ನಡುಗಿವಿಯ ಉರಿಯೂತದಲ್ಲಿ ಪರಿಣಾಮವಾಗಿ ಕಿವಿ ಕಿವುಡಾಗಬಹುದು ದೀರ್ಘಾವಧಿ ಉರಿಯೂತದಲ್ಲಿ ಮುಖ್ಯವಾಗಿ ಎರಡು ವಿಧ: ಒಂದು–ನಾಳ ಮತ್ತು ಕರ್ಣಪೊರೆಗಳ ರೋಗ ; ಮೇಲಟ್ಟ ಮತ್ತು ಎಲುಬು ಕುಹರ ರೋಗ ಮತ್ತೊಂದು.

**ನಾಳ ಮತ್ತು ಕರ್ಣಪೊರೆಗಳ ರೋಗ :** ಇದು ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡುಬರುವ ರೋಗ. ದೊಡ್ಡವರಲ್ಲಿಯೂ ಕಾಣಿಸಬಹುದು. ತೀವ್ರರೀತಿಯ ನಡುಗಿವಿಯ ಉರಿಯೂತದ ಪರಿಣಾಮವಾಗಿ ಈ ರೋಗ ಬರಬಹುದು. ಮೂಗಿನ ರೋಗ, ಗಂಟಲ ಕುಹರ ಹಾಗೂ ಅಸ್ಥಿಕುಳಿಯ ರೋಗಗಳು ಈ ರೋಗದಿಂದ ಒದಗಿರಬಹುದು. ಕಿವಿಯಿಂದ ಕೀವು ಆಗಾಗ್ಗೆ ಸೋರುವುದು, ಮಿಕ್ಕ ಸಮಯಗಳಲ್ಲಿ ಕೀವು ಇಲ್ಲದೆ ಒಣಗಿ, ನೆಗಡಿ, ಕೆಮ್ಮು ಶೀತವಾದಾಗಲೆಲ್ಲ ಉಲ್ಬಣಿಸಿ ಪುನಃ ಪುನಃ ಕೀವು ಕಾಣಿಸಿಕೊಳ್ಳಬಹುದು. ಕರ್ಣಪೊರೆಯನ್ನು ಪರೀಕ್ಷಿಸಿದರೆ ಅದು ಹರಿದು ತೂತಾಗಿರುವುದನ್ನು ಕಾಣಬಹುದು. ಕೆಲವು ವೇಳೆ ನಡುಗಿವಿಯ ಲೋಳೆಪೊರೆ ಊದಿ ಪಾಲಿಪೈ ಎಂಬ ದುರ್ಮಾಂಸದ ಗಂಟುಗಳು ಕಾಣತ್ತವೆ. ಸಾಮಾನ್ಯವಾಗಿ ಕಿವಿ ಮಂದವಾಗುವುದಾದರೂ ಕೇಳುವುದರಲ್ಲಿ ವ್ಯತ್ಯಾಸವೇನೂ ಇಲ್ಲದೆಯೂ ಇರಬುಹುದು. ಚಿಕಿತ್ಸೆ ಪಡೆಯದಿದ್ದರೆ ಕಿವುಡು ಖಂಡಿತವಾದರೂ ಪ್ರಾಣಾಪಾಯವೇನಿಲ್ಲ.

**ಮೇಲಟ್ಟ ಮತ್ತು ಎಲುಬು ಕುಹರ ರೋಗ:** ಈ ರೋಗಕ್ಕೂ ಹಿಂದೆ ಹೇಳಿದ ನಾಳ ಮತ್ತು ಕರ್ಣಪೊರೆ ರೋಗಕ್ಕೂ ಮುಖ್ಯ ವ್ಯತ್ಯಾಸವೆಂದರೆ–ಈ ರೋಗದಲ್ಲಿ ಪ್ರಾಣಾಪಾಯವಿದೆ ಹಾಗೂ ರೋಗ ಪೂರ್ಣ ಮುಂದುವರಿದು ತೊಡಕುಗಳು ಉದ್ಭವಿಸುವ ವರೆಗೆ ರೋಗದ ಅರಿವೇ ಆಗದಿರಬಹುದು. ಈ ರೋಗದಲ್ಲಿ ಎರಡು ವಿಧ. ಒಂದು ಕೀವು ತುಂಬುವುದು; ಮತ್ತೊಂದು ಕೀವಿಲ್ಲದೆ ಒಂದು ರೀತಿಯ ಕೆನೆಯಂಥ, ದುರ್ನಾತ ಬಡಿಯುವ ದ್ರಾವಕ ಹೊರಬರುವುದು.

ಈ ರೋಗಗಳೂ ನಡುಗಿವಿಯ ಉರಿಯೂತದ ಪರಿಣಾಮವಿರಬಹುದು. ಕಿವಿ ಕೇಳಿಸುವುದೇ ಇಲ್ಲವೆ ಇತ್ಯರ್ಥ ಮಾಡಿಕೊಂಡು ವೈದ್ಯ ಜಾಗರೂಕತೆಯಿಂದ ಸಂಪೂರ್ಣ ಪರಿಶೀಲನೆ ನಡೆಸಿ ಚಿಕಿತ್ಸೆ ಮಾಡಬೇಕಾದದ್ದು ಅಗತ್ಯ. ಎಕ್ಸ್‌ಕಿರಣಗಳಿಂದ ಕಿವಿ ಎಲುಬುಗಳನ್ನೂ ಯೂಸ್ಟೇಕಿಯನ್ ನಾಳವನ್ನೂ ಪರೀಕ್ಷಿಸಬೇಕು. ರೋಗ ಹರಡಿರುವ ಅಂಗಾಂಶಗಳನ್ನು ಸೂಕ್ತ ಸಲಕರಣೆಗಳನ್ನು ಉಪಯೋಗಿಸಿ ಒಳಗಿಂದ ಹೀರಿ ಹೊರಹಾಕಬೇಕು. ಕಿವಿಗೆ ಪ್ರತಿಜೀವಕ ತೊಟ್ಟುಗಳನ್ನು ಹಾಕುವುದರಿಂದ ಯಾವ ಪ್ರಯೋಜನವೂ ಇಲ್ಲ. ಇದರ ಅನಂತರ ಉಳಿದಿರುವುದು ಶಸ್ತ್ರಚಿಕಿತ್ಸೆಯೊಂದೇ. ಕಿವಿ ಕಿವುಡಾಗದಂತೆ ತಡೆಹಾಕುವುದೂ ಸೋಂಕಿನಿಂದ ಪ್ರಾಣಾಪಾಯವಿಲ್ಲದಂತೆ ನೋಡಿಕೊಳ್ಳುವುದೂ ಶಸ್ತ್ರಚಿಕಿತ್ಸೆಯ ಮೂಲ ಉದ್ದೇಶ.

ನಡುಗಿವಿಯ ತೀವ್ರತರದ ಉರಿಯೂತದ ಪರಿಣಾಮವಾಗಿ ಮ್ಯಾಸ್ಟಾಯಿಡ್ ಎಲುಬಿನ ಉರಿಯೂತ, ಮಿದುಳು ರಕ್ತನಾಳಗಳಲ್ಲಿ ರಕ್ತ ಕರಣೆಗಟ್ಟುವುದು, ಒಳಗಿವಿಯ ಸಂಕೀರ್ಣ ಕುಹರದ ಉರಿಯೂತ, ಮಿದುಳು ಹಾಲೆಗಳಲ್ಲಿ ಕೀವು ತುಂಬುವುದು, ಮಿದುಳನ್ನು ಮುಚ್ಚಿರುವ ಹೊರಪದರಗಳ ಉರಿಯೂತ–ಇತ್ಯಾದಿ ರೋಗಗಳು ಸಮಸ್ಯೆಗಳಾಗಬಹುದು.

**ಒಳಗಿವಿಯ ಸಂಕೀರ್ಣ ಕುಹರದ ಉರಿಯೂತ :** ಈ ರೋಗ ವಿರಳವಾದರೂ ಅಪಾಯಕರ. ನಡುಗಿವಿಯ ಉರಿಯೂತದ ಪರಿಣಾಮವೇ ಸಾಮಾನ್ಯವಾಗಿ ಈ ರೋಗಕ್ಕೆ ಕಾರಣ. ಸೋಂಕು ಅನೇಕ ಮಾರ್ಗಗಳಿಂದ ಈ ಅಂಗಕ್ಕೆ ಬಂದು ಸೇರಿ ಪ್ರಾರಂಭದಲ್ಲಿ ಮಿತಿಗೊಳಪಟ್ಟಿದ್ದರೂ ಸೂಕ್ತ ಚಿಕಿತ್ಸೆ ಇಲ್ಲದಿದ್ದರೆ ಕ್ರಮೇಣ ಎಲ್ಲೆಡೆಗೂ ಹಬ್ಬುತ್ತದೆ. ತಲೆ ಸುತ್ತುವುದು. ಆಗಾಗ್ಗೆ ವಾಂತಿ, ಕಣ್ಣುಗುಡ್ಡೆಗಳು ಆದಿರುವುದು, ಇದ್ದಕ್ಕಿದ್ದಂತೆ ರೋಗಿ ಬಿದ್ದುಬಿಡುವುದು–ಈ ರೋಗದ ಲಕ್ಷಣ. ಕಿವಿ ಮಂದವಾಗಿರುವುದು ಸಾಮಾನ್ಯವಾದರೂ ಕೇಳುವುದರಲ್ಲಿ ಹೆಚ್ಚು ವ್ಯತ್ಯಾಸವಿಲ್ಲದೆಯೂ ಇರಬಹುದು. ಈ ರೋಗಿಗಳಿಗೆ ಪೂರ್ಣ ವಿಶ್ರಾಂತಿ ಆವಶ್ಯಕ. ರೋಗಿಗಳನ್ನು ತಜ್ಞರು ಸಂಪೂರ್ಣ ಪರೀಕ್ಷೆಗೊಳಪಡಿಸಿ ಅನಂತರ ಚಿಕಿತ್ಸೆ ಏನೆಂಬುದನ್ನು ನಿರ್ಧರಿಸಬೇಕಾಗುತ್ತದೆ. ಪ್ರತಿಜೀವಕಗಳನ್ನು ಪೂರ್ಣವಾಗಿ ಉಪಯೋಗಿಸಬೇಕಾಗಬಹುದು. ಅನಂತರ ಸೋಂಕನ್ನು ಹೋಗಲಾಡಿಸಲು ಮ್ಯಾಸ್ಟಾಯಿಡ್ ಎಲುಬಿನ ಶಸ್ತ್ರಕ್ರಿಯೆ ನಡೆಸುವುದು ವಾಡಿಕೆ.

**ಕೀವು ಸೋಂಕಿಲ್ಲದ ಕಿವಿಯ ಇತರ ರೋಗಗಳು:** ನಡುಗಿವಿಯೊಳಗಿರುವ ಧ್ವನಿ ವಾಹಕಗಳು ಅಂದರೆ ಮುಖ್ಯವಾಗಿ ಅಡಿಗಲ್ಲು, ಸುತ್ತಿಗೆ ಮತ್ತು ರಿಕಾಬು ಎಲುಬುಗಳು, ಸ್ನಾಯುಗಳು, ಲೋಳೆಪೊರೆ ಇತ್ಯಾದಿ ಅಂಗಾಂಶಗಳು ದೀರ್ಘಾವಧಿ ಉರಿಯೂತದಿಂದ ನಾಶ ಹೊಂದುತ್ತವೆ. ಅನಂತರ ಈ ಅಗಾಂಶಗಳ ಪುನಾರಚನೆ ಸಾಧ್ಯವಿಲ್ಲ. ಇವುಗಳ ಬದಲಿ ನಾರಿನಂತಿರುವ ಅಂಗಾಂಶ ಉತ್ಪತ್ತಿಯಾಗಿ ಈ ನಾರುಗಳು ಒಂದಕ್ಕೊಂದು ಅಂಟಿ, ತೊಡಕಿನಿಂದ ನಡುಗಿವಿ ತನ್ನ ಧ್ವನಿವಾಹಕ ಶಕ್ತಿಯನ್ನು ಪೂರ್ಣವಾಗಿ ಕಳೆದುಕೊಂಡು ವ್ಯಕ್ತಿ ಕಿವುಡಾಗುವಂತೆ ಮಾಡುತ್ತದೆ. ಈ ಕಿವುಡಿಗೆ ಅಂಟು ಕಿವುಡು ಎನ್ನುತ್ತಾರೆ. ಸಾಮಾನ್ಯವಾಗಿ ವ್ಯಕ್ತಿಯ ಗಮನಕ್ಕೆ ಬಾರದೇ ಅಲ್ಪಸಲ್ಪ ಸೋಂಕು ಅಂಟಿ ಅದರ ಪರಿಣಾಮವಾಗಿ ಈ ರೀತಿಯ ಕಿವುಡು ಉಂಟಾಗುತ್ತದೆ. ಸೋಂಕು ತೀವ್ರಗೊಂಡು, ರೋಗ ಉಲ್ಬಣವಾಗುವುದನ್ನು ಪ್ರತಿಜೀವಕ ಚಿಕಿತ್ಸೆ ತಡೆಹಿಡಿದು ಪೂರ್ಣ ಗುಣ ಹೊಂದಲು ಅವಕಾಶ ಕಲ್ಪಿಸದೆಯೂ ಈ ಸ್ಥಿತಿ ಒದಗಬಹುದು. ಕೆಲವು ರೋಗಿಗಳಲ್ಲಿ ಹಿಂದೆಂದೂ ನಡುಗಿವಿಯ ರೋಗವೇ ಇಲ್ಲದೆಯೂ ಅಂಟು ಕಿವುಡು ಕಾಣಿಸಿಕೊಳ್ಳಬಹುದು. ಈ ಸಂದರ್ಭಗಳಲ್ಲಿ ಮೂಗು

ಗಂಟಲ ಕುಹರಗಳಿಂದ ಸೋಂಕು ಹರಡಿ ಆಗಾಗ್ಗೆ ನಾಳ ಕರ್ಣಪೊರೆಗಳ ಉರಿಯೂತ ಮೂಲವಾಗಿ ಕಿವುಡಿಗೆ ಕಾರಣವಾಗುತ್ತದೆ. ಈ ರೋಗಕ್ಕೆ ಕೆಲವು ಶಸ್ತ್ರಚಿಕಿತ್ಸೆಗಳಿದ್ದರೂ ಅವುಗಳ ಫಲ ಆಶಾದಾಯಕವೆಂದು ಹೇಳಲಾಗುವುದಿಲ್ಲ. ಕಿವುಡು ಬಹಳವಾಗಿದ್ದರೆ ಶ್ರವಣಸಾಧನದ ಉಪಯೋಗವನ್ನು ಪರಿಶೀಲಿಸಬೇಕಾಗುವುದು.

**ನಡುಗಿವಿಯ ಗಾಳಿ ಒತ್ತಡದಿಂದುಂಟಾಗುವ ಆಘಾತ (ಬಾರೋ ಟ್ರೋಮ) :** ಕರ್ಣ ಪೊರೆಯ ಎರಡೂ ಪಾರ್ಶ್ವಗಳಲ್ಲಿ ಗಾಳಿಯೊತ್ತಡ ಒಂದೇ ಸಮವಾಗಿರಲು ಗಂಟಲಿನಿಂದ ನಡುಗಿವಿಗೆ ಸಂಪರ್ಕ ಕಲ್ಪಿಸುವುದು ಯೂಸ್ಟೇಕಿನ್ ನಾಳ. ಯಾವ ಕಾರಣದಿಂದಲೇ ಆಗಲಿ ಈ ನಾಳ ಗಾಳಿಯ ಸಂಪರ್ಕವಿಲ್ಲದೆ ಶ್ರವಣನಾಳದ ಮೂಲಕ ಹೊರಗಾಳಿಯ ಒತ್ತಡ ಅಧಿಕವಾದರೆ ಈ ಆಘಾತ ಸಂಭವಿಸುತ್ತದೆ. ಸುರಂಗದೊಳಗೆ ಕೆಲಸ ಮಾಡುವವರು, ಸಮುದ್ರದ ಆಳದಲ್ಲಿ ಮುಳುಗುವವರು ಹಾಗೂ ವಿಮಾನದಲ್ಲಿ ಹಾರಾಡುವರು ಒತ್ತಡದ ಏರುಪೇರನ್ನು ಅನುಭವಿಸಬೇಕಾಗುವುದು ಸಾಮಾನ್ಯ. ಆದ್ದರಿಂದ ಈ ಕೆಲಸಗಾರರಲ್ಲಿ ಈ ರೀತಿಯ ಅಘಾತವನ್ನು ಕಾಣಬಹುದು. ಎಲ್ಲ ಪೂತಿನಾಶಕ ಕ್ರಮಗಳು ಅನುಸರಿಸಿ ಯೂಸ್ಟೇಕಿಯನ್ ನಾಳದಿಂದ ಗಾಳಿ ನಡುಗಿವಿಗೆ ಸೇರುವಂತೆ ಸಂಪರ್ಕ ಕಲ್ಪಿಸಿ ತಜ್ಞರು ಚಿಕಿತ್ಸೆ ಕೊಡುತ್ತಾರೆ.

**ನಡುಗಿವಿಯಲ್ಲಿ ದ್ರವಸ್ರಾವ :** ನಡುಗಿವಿಯಲ್ಲಿ ಸೇರುವ ಈ ದ್ರವ ನೀರಿನಂತೆ ತೆಳ್ಳಗಿರಬಹುದು. ಅಥವಾ ಇನ್ನೂ ಗಟ್ಟಿಯಾದ ಅಂಟಿನಂತಿರಬಹುದು. ವ್ಯಕ್ತಿಯ ಯಾವ ವಯಸ್ಸಿನಲ್ಲಾದರೂ ಈ ರೋಗ ಕಾಣಬಹುದು. ಬಾರೋಟ್ರಾಮ ಆಘಾತವೇ ಅನೇಕ ವೇಳೆ ಈ ರೊಗಕ್ಕೆ ಕಾರಣ. ದ್ರವ ಕ್ರಮೇಣ ಸಂಗ್ರಹವಾಗಿ ನಡುಗಿವಿಯನ್ನು ತುಂಬಬಹುದು. ಅಥವಾ ಒಂದೇ ವೇಳೆಗೆ ಸ್ರವಿಸಿಯೂ ತುಂಬಬಹುದು. ದ್ರವದೊಳಗೆ ರಕ್ತಸ್ರಾವ ಸಾಮಾನ್ಯ. ಈ ಸ್ಥಿತಿ ಯೂಸ್ಟೇಕಿಯಸ್ಸನ ನಾಳ ಮುಚ್ಚಿರುವುದರ ಪರಿಣಾಮ. ಈ ನಾಳ ಮುಚ್ಚುವ ಸಂದರ್ಭಗಳು ಯಾವುದೆಂದರೆ ನಾಳದ ಉರಿಯೂತ. ಒಗ್ಗದಿಕೆ ಗಂಟಲಿನ ದುಗ್ಧ ಗ್ರಂಥಿಗಳು ಉರಿಯೂತದ ಪರಿಣಾಮವಾಗಿ ದಪ್ಪವಾಗುವುದು. ಈ ರೋಗದಲ್ಲಿ ಕಿವಿಮಾಂದ್ಯವಿದ್ದು ಯಾವಾಗಲೂ ಕಿವಿಯಲ್ಲಿ ಕೂಗು ಕೇಳಿಸುತ್ತಿದ್ದು ನಡುಗಿವಿ ತುಂಬಿರುವಂತೆ ಅನುಭವವಾಗುತ್ತದೆ. ನೋವು ವಿರಳ. ಮಕ್ಕಳಲ್ಲಿ ಈ ರೋಗವನ್ನು ಕಿವಿಯ ಮಾಮೂಲು ಪರೀಕ್ಷೆ ನಡೆಸುವಾಗ ವೈದ್ಯ ಕಂಡುಕೊಳ್ಳಬಹುದು. ಯೂಸ್ಟೇಕಿಯಸ್ಸನ ನಾಳದ ಸಂಪರ್ಕವನ್ನು ಕಲ್ಪಿಸವುದು ಎಂದರೆ ದುಗ್ಧ ಗ್ರಂಥಿಯನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಸುವುದು, ನಾಳದ ಉರಿಯೂತಕ್ಕೆ ಚಿಕಿತ್ಸೆಮಾಡಿ ಸರಿಪಡಿಸುವುದು, ಪ್ರಾರಂಭದಲ್ಲೇ ಪತ್ತೆ ಮಾಡಿ ಪ್ರತಿಜೀವಕಗಳನ್ನು ಕೊಡುವುದು ಈ ರೋಗದ ಚಿಕಿತ್ಸಾಕ್ರಮಗಳಲ್ಲಿ ಕೆಲವು.

**ನಡುಗಿವಿಯ ಧ್ವನಿವಾಹಕಾಂಗಗಳ ಅಚಲಸ್ಥಿತಿ :** ಧ್ವನಿ ತರಂಗಗಳನ್ನು ಹೊರಗಿನಿಂದ ಒಳಗಿವಿಗೆ ಸಾಗಿಸಲು ಸಂಬಂಧಪಟ್ಟ ಎಲ್ಲ ಅಂಗಾಂಶಗಳೂ ಸಾಕಷ್ಟು ಸಡಿಲವಾಗಿರಬೇಕಾದದ್ದು ಆವಶ್ಯಕ. ಈ ಧ್ವನಿವಾಹಕ ಅಂಗಾಂಶಗಳು ಚಲಿಸದೇ ಅಚಲಸ್ಥಿತಿ ಉಂಟಾದರೆ ವ್ಯಕ್ತಿ ಕಿವುಡಾಗುತ್ತಾನೆ. ಇದು ಚಿಕ್ಕವಯಸ್ಸಿನಲ್ಲೇ ಪ್ರಾರಂಭವಾಗಿ ಕ್ರಮೇಣ ಮುಂದುವರಿಯವ ಕಿವುಡು ರೋಗ. ಈ ರೋಗ ಗಂಡಸರಿಗಿಂತ ಹೆಂಗಸರಲ್ಲಿ ಅಧಿಕ. ಋತುಮತಿಯಾದ ಅನಂತರ ಪ್ರಾರಂಭವಾದರೂ ರೋಗದ ಅರಿವು ಅನೇಕ ವರ್ಷಗಳ ಅನಂತರ ಆಗಬಹುದು. ಆನುವಂಶಿಕವಾಗಿ ಒಂದೇ ಸಂಸಾರದವರಲ್ಲೇ ಈ ರೋಗ ಅನೇಕ ವೇಳೆ ಕಂಡುಬರುತ್ತದೆ. ಅಲ್ಪ ಕಿವುಡಿನಿಂದ ಪ್ರಾರಂಭವಾದರೂ ಪೂರ್ಣ ಕಿವುಡಿನಲ್ಲಿ ಕೊನೆಗೊಳ್ಳಬಹುದು. ಈ ರೋಗಿಗಳು ಬಹಳ ಮೃದುವಾಗಿ ಮಾತನಾಡುವುದು ವಾಡಿಕೆ. ಅದೇ ಇತರ ಕಿವುಡು ರೋಗಗಳಲ್ಲಿ ರೋಗಿ ಎತ್ತರ ಧ್ವನಿಯಲ್ಲಿ ಕೂಗಿಕೊಂಡು ಮಾತನಾಡುತ್ತಾನೆ. ಕಿವುಡಿನ ಜೊತೆಗೆ ಕಿವಿಯಲ್ಲಿ ಕೂಗು, ಕೆಲವರಲ್ಲಿ ಆಗಾಗ್ಯೆ ತಲೆಸುತ್ತೂ ತೋರಬಹುದು. ಈ ರೋಗಕ್ಕೆ ಅನೇಕ ವಿಧದ ಶಸ್ತ್ರ ಚಿಕಿತ್ಸೆಗಳಿವೆ. ಶಸ್ತ್ರಚಿಕಿತ್ಸೆ ಉಪಯೊಗವಾಗದ ಸಂದರ್ಭದಲ್ಲಿ ಶ್ರವಣಸಾಧನವನ್ನೂ ಉಪಯೋಗಿಸಬಹುದು. ಈ ರೋಗಿಗಳಿಗೆ ತುಟಿಯೋದನ್ನು ಕಲಿಸುವುದೊಳಿತು.

**ಒಳಗಿವಿಯ ಹಾಗೂ ಕಿವಿಯ ಇತರ ರೋಗಗಳು:** ಮೆನಿಯೆರನ ರೋಗ: ಈ ರೋಗದ ಚಿಹ್ನೆಗಳೆಲ್ಲವೂ ಒಳಗಿವಿಯ ಕುಹರ ಹಾಗೂ ಕರ್ಣಶಂಖಕ್ಕೆ (ಕಾಕ್ಲಿಯ) ಸಂಬಂಧಿಸಿದವು. ತಲೆಸುತ್ತು, ವಾಂತಿ, ಕಿವುಡು, ಕಿವಿ ಕೂಗು, ಕಣ್ಣುಗಳ ಅದಿರುವಿಕೆ–ಇವು ರೋಗದ ಮುಖ್ಯ ಲಕ್ಷಣಗಳು. ಮೊದಮೊದಲು ಈ ಘಟನೆಗಳು ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಬಹಳ ದಿವಸಗಳಿಗೆ ಒಂದೊಂದು ಸಲ ಕಾಣಿಸಿಕೊಳ್ಳುತ್ತದೆ ಬರುಬರುತ್ತ ಈ ಹಿಂಸೆಗಳೆಲ್ಲ ತೀವ್ರವಾಗುತ್ತವೆ. ರಾತ್ರಿ ಮಲಗಿ ನಿದ್ರಿಸುತ್ತಿರುವಾಗಲೇ ಈ ಲಕ್ಷಣಗಳೆಲ್ಲ ಪ್ರಾರಂಭವಾಗಿ ಬೆಳಗ್ಗೆ ಎಚ್ಚರವಾಗುವಾಗಲೇ ತೀವ್ರಸ್ಥಿತಿಗೆ ತಿರುಗಿರಬಹುದು. ಈ ಘಟನೆಗಳು ಕ್ರಮೇಣ ಬೇಗಬೇಗ ಕಾಣಿಸಿಕೊಂಡು ಅನಂತರ ಸದಾಕಾಲದಲ್ಲಿಯೂ ಇದ್ದೇ ಇರುತ್ತವೆ. ಸಾಮಾನ್ಯವಾಗಿ ಒಂದೇ ಕಿವಿ ಈ ರೋಗಕ್ಕೆ ತುತ್ತಾಗುತ್ತದೆ. ಎರಡು ಕಿವಿಗಳಲ್ಲಿಯೂ ಈ ರೋಗ ಸಂಭವಿಸಿದರೆ ರೋಗಿಯ ಸ್ಥಿತಿ ಬಹಳ ಶೋಚನೀಯ. ರೋಗಿಗೆ ಲಕ್ಷಣಗಳ ಅರಿವಾದೊಡನೆ ಹಾಸಿಗೆಯಲ್ಲಿ ಮಲಗಿರಬೇಕು. ವೈದ್ಯರು ನಿದ್ರೆಗೆ ಔಷಧಗಳನ್ನು ಕೊಡುತ್ತಾರೆ. ನಕ್ಷತ್ರದಂತಿರುವ ನರಜೀವ ಕಣ ಪುಂಜದ ಮೂಲಕ ಚೇತನ ಪ್ರವಾಹಗಳಿಗೆ ಅಡ್ಡಿ ಮಾಡುವ ಔಷಧಗಳನ್ನು ನೇರವಾಗಿ ಪುಂಜಕ್ಕೆ ಕೊಟ್ಟರೆ ರೋಗದ ತತ್‌ಕ್ಷಣ ಮಾಯವಾಗುತ್ತದೆ. ತಜ್ಞರಿಂದ ರೋಗಿಗೆ ದೀರ್ಘಾವಧಿ ಚಿಕಿತ್ಸೆ ಅಗತ್ಯ.

**ಶ್ರವಣ ನರದ ಗೆಡ್ಡೆ :** ಈ ರೋಗದಲ್ಲಿ ನರ, ಕ್ರಮೇಣ ನಾಶವಾಗುತ್ತ ಬರುತ್ತದೆ. ಆದ್ದರಿಂದ ಕಿವುಡಿನಿಂದಲೇ ಈ ರೋಗವಿದೆ ಎಂಬುದರ ಮೊದಲರಿವು. ತಲೆ ತಿರುಗುವುದಷ್ಟಿರುವುದಿಲ್ಲ; ಓಡಾಡುವುದರಲ್ಲಿ ನಯನಾಜೋಕು ಮಾಯವಾಗುತ್ತದೆ. ರೋಗ ಮುಂದುವರಿದಾಗ ಮುಖದ ಮಾಂಸಖಂಡಗಳ ನಿರ್ಬಲತೆ ಹೆಚ್ಚುತ್ತದೆ. ಸ್ವಾಭಾವಿಕವಾಗಿ ಕಣ್ಣಿನ ಕರೀಗುಡ್ಡೆಯನ್ನು ಬೆರಳಿಂದ ಮುಟ್ಟಲು ಹೋದರೆ ಅಥವಾ ಏನಾದರೂ ಬಿದ್ದರೆ ರೆಪ್ಪೆಗಳು ತತ್‌ಕ್ಷಣ ಮುಚ್ಚಬೇಕಷ್ಟೆ. ಈ ರೋಗದಲ್ಲಿ ಈ ರೀತಿಯ ಪ್ರತಿಕ್ರಿಯೆ ಮಾಯವಾಗುತ್ತದೆ. ರೋಗ ನಿರ್ಧಾರವಾದ ತತ್‌ಕ್ಷಣ ಶಸ್ತ್ರ ಚಿಕಿತ್ಸೆಯಿಂದ ಗೆಡ್ಡೆಯನ್ನು ತೆಗೆಯುವುದು ಈ ರೋಗದ ಚಿಕಿತ್ಸೆ.

**ವಿಕಂಪನ ಕಿವುಡು :** ತಲೆಗೆ ಏಟು ಬೀಳುವುದರಿಂದ ತತ್‌ಕ್ಷಣ ಪ್ರಜ್ಞೆ ತಪ್ಪಿಯೋ ಹಾಗೇಯೋ ಚಿಪ್ಪಿನ ಎಲುಬು ಮುರಿಯಲು ಸಾಧ್ಯ. ಈ ಸಂದರ್ಭಗಳಲ್ಲಿ ಕೆಲವು ವೇಳೆ ಕಿವುಡೂ ತಲೆಹಾಕಬಹುದು. ಈ ಕಿವುಡು, ಪೆಟ್ಟು ತಗುಲಿದ ಆರು ತಿಂಗಳೊಳಗೆ ಗುಣವಾಗದಿದ್ದರೆ ಖಾಯಂ ಕಿವುಡೆಂದೇ ಪರಿಗಣಿಸಬೇಕು.

**ಧ್ವನಿತರಂಗಗಳ ಅಪ್ಪಳಿಸುವಿಕೆಯಿಂದ ಪೆಟ್ಟು :** ಅತ್ಯಂತ ಹೆಚ್ಚಿನ ಧ್ವನಿ ಉತ್ಪತ್ತಿಯಾದಾಗ ಈ ಘಾತ ಉಂಟಾಗಬಹುದು. ಒಂದೇ ಸಲ ಅತಿ ಹೆಚ್ಚಿನ ಶಬ್ದದಿಂದಲೂ ಅಥವಾ ಕೆಲವು ಕಸಬುಗಳಲ್ಲಿರುವಂತೆ ಯಾವಾಗಲೂ ಹೆಚ್ಚಿನ ಶಬ್ದದಲ್ಲಿ ಕೆಲಸ ಮಾಡುವುದರಿಂದಲೂ ಈ ಅಪಾಯ ಒದಗಬಹುದು. ಒಳಗಿವಿಯ ಕಾರ್ಟಿ ಅಂಗದಲ್ಲಿರುವ ಕೇಶ ಜೀವಕೋಶಗಳು ನಾಶವಾಗುವುದು ಈ ರೋಗಕ್ಕೆ ಮೂಲ. ಮೊಟ್ಟಮೊದಲ ರೋಗಿಗೆ ಕಿವಿಕೂಗು ತೋರುವುದರ ಜೊತೆಗೆ ಶ್ರವಣನಾಳದೊಳಗೆ ಹತ್ತಿಯಿಟ್ಟಂತೆ ಭಾಸವಾಗುವುದು, ರೋಗಿಗೆ ಮತ್ತೊಬ್ಬರು ಮಾತನಾಡಿದಾಗ ಕೆಲವು ಶ್ರೇಣಿಯ ಶಬ್ದತರಂಗಗಳು ಕೇಳಿಸುವುದಿಲ್ಲ. ಬರಬರುತ್ತ ಕಿವುಡು ಹೆಚ್ಚುವುದು. ಈ ಸ್ಥಿತಿಗೆ ಚಿಕಿತ್ಸೆ ಏನೂ ಇಲ್ಲ. ಅದೇ ಶ್ರೇಣಿಯ ಶಬ್ದ ತರಂಗಗಳಿರುವ ಕಡೆಗಳಿಗೆ ಪುನಃ ಹೋಗದಂತೆ ಎಚ್ಚರ ವಹಿಸಬೇಕು. ಮುಂಜಾಗ್ರತೆ ವಹಿಸುವುದರಿಂದ ಈ ಆಘಾತವನ್ನು ಪೂರ್ಣವಾಗಿ ತಪ್ಪಿಸಬಹುದು.

**ಕಿವಿಯ ಹರ್ಪಿಸ್ (ರ್‍ಯಾಮ್ಸೆ ಹಂಟರನ ಲಕ್ಷಣಾವಳಿ) :** ತಂಡತಂಡವಾಗಿ ಗುಳ್ಳೆಗಳೇಳುವ ಒಂದು ಬಗೆಯ ರೋಗ. ಸೀತಾಳ ಸಿಡುಬಿನ ರೋಗಾಣು ಈ ರೋಗಕ್ಕೆ ಕಾರಣವೆಂದು ನಂಬಲಾಗಿದೆ. ಮಿದುಳಿನಲ್ಲಿರುವ ಜೆನಿಕುಲೇಟ್ ನರ ಜೀವಕೋಶದ ಪುಂಜ ಹಾಗೂ ಇತರ ನೇರವಾಗಿ ಬರುವ ಮಿದುಳು ನರಗಳ ಜೀವಕೋಶ ಪುಂಜಗಳ ಮೇಲೆ ಪರಿಣಾಮ ಬೀರುತ್ತದೆ. ಈ ಪರಿಣಾಮವೇ ಹರ್ಪೀಸ್. ಹೊರಗಿವಿಯ ಉಪಪರ್ಣ ಹಾಗೂ ಶ್ರವಣನಾಳಗಳಲ್ಲಿ ಈ ಗುಳ್ಳೆಗಳೆದ್ದು ಉರಿಯೂತಕ್ಕೆ ಕಾರಣವಾಗುತ್ತದೆ. ಮಿದುಳಿನ ಏಳು ಮತ್ತು ಎಂಟನೆಯ ನರಗಳು ಅಂದರೆ ಮುಖನರ ಹಾಗೂ ಶ್ರವಣನರಗಳೂ ಈ ರೋಗಕ್ಕೆ ಸಾಮಾನ್ಯವಾಗಿ ತುತ್ತಾಗುತ್ತದೆ. ಇದರಿಂದ ಮುಖನರದ ಹತೋಟಿನಲ್ಲಿರುವ ಮಾಂಸಖಂಡಗಳು ಪಾರ್ಶ್ವ ವಾಯುವಿಗೊಳಗಾಗುತ್ತವೆ. ಇದರೊಂದಿಗೆ ವಾಂತಿ, ತಲೆಸುತ್ತು, ಕಣ್ಣದಿರಿಕೆ ಮತ್ತು ಕಿವುಡು ಸಹ ತೋರಬಹುದು. ಇದಕ್ಕೆ ನಿರ್ದಿಷ್ಟ ಚಿಕಿತ್ಸೆಯಿಲ್ಲ. ರೋಗಿಗೆ ಯಾವ ಚಿಕಿತ್ಸೆಯಿಂದ ನೆಮ್ಮದಿ ದೊರೆಯುತ್ತದೋ ಆ ಚಿಕಿತ್ಸೆ ಮಾಡಬೇಕು.

**ಕಿವಿ ಕ್ಷಯ :** ಮಕ್ಕಳಲ್ಲಿ ಈ ರೋಗ ವಿಶೇಷ. ರೋಗ ನಿಧಾನವಾಗಿ ಮುಂದುವರಿಯುತ್ತದೆ. ಒಳಗಿನ ಮೂಳೆಗೆ ಹರಡಿ ಹೊರಗೆ ಯಾವ ಚಿಹ್ನೆಗಳೂ ಇರದಿರಬಹುದು. ಇತರ ಅಂಗಗಳ ಕ್ಷಯ ಕಿವಿ ಕ್ಷಯಕ್ಕೆ ಸೋಂಕಿನ ಮೂಲ. ಯೂಸ್ಟೇಕಿಯನ್ ನಾಳದ ಮೂಲಕ ಸೋಂಕು ಬರುವುದು ಸಾಮಾನ್ಯ. ರಕ್ತದಿಂದಲೂ ಕಿವಿಗೆ ಸೋಂಕು ತಗಲಬಹುದು. ಕ್ಷಯ ರೋಗಿಗಳಿಗೆ ಕೊಡಬೇಕಾಗಬಹುದು; ಮ್ಯಾಸ್ಟಾಯಿಡ್ ಶಸ್ತ್ರಚಿಕಿತ್ಸೆ ಅಗತ್ಯವೆನಿಸಬಹುದು.

**ಕಿವಿಮೇಹ :** ಶಿಶು ಗರ್ಭದಲ್ಲಿರುವಾಗಲೇ ತಾಯಿ ತಂದೆಯರಿಂದ ಈ ಸೋಂಕುಂಟಾಗುತ್ತದೆ. ಹುಟ್ಟುವಾಗಲೇ ಶಿಶು ಕಿವುಡಾಗಿ ಹುಟ್ಟಬಹುದು. ಕೆಲವು ವೇಳೆ 10–14 ವಯಸ್ಸಿನವರಿಗೆ ಕಿವುಡು ಕಾಣಿಸಿಕೊಳ್ಳದಿರುವುದೂ ಸಾಧ್ಯ. ಇದೇ ರೋಗದ ಇತರ ಚಿಹ್ನೆಗಳು ದೇಹದಲ್ಲಿ ಕಂಡುಬರುತ್ತದೆ. ಕಣ್ಣುಗಳಲ್ಲಿ, ಹಲ್ಲುಗಳಲ್ಲಿ ಮುಖ್ಯವಾಗಿ ಈ ರೋಗದ ವಿಶಿಷ್ಟ ಚಿಹ್ನೆಗಳನ್ನು ಕಾಣಬಹುದು.

ದೊಡ್ಡವರಾದ ಮೇಲೆ ಮೇಹ ಅಂಟಿಸಿಕೊಂಡವರಲ್ಲಿ ಎರಡನೆಯ ಹಂತದಲ್ಲಿ ನಡುಗಿವಿಯ ಉರಿಯೂತ ಹಾಗೂ ಕಡೆ ಹಂತಗಳಲ್ಲಿ ಒಳಗಿವಿಯ ನರ ಹಾಗೂ ಸಂಕೀರ್ಣಕುಹರದ ಉರಿಯೂತ ಉಂಟಾಗಿ ಕಿವಿಕೂಗು, ತಲೆಸುತ್ತು ಹಾಗೂ ಕಿವುಡು ಆಗಾಗ್ಯೆ ಕಾಣಿಸಿಕೊಳ್ಳಬಹುದು. ಮೇಹ ರೋಗಿಗೆ ಕೊಡುವ ಚಿಕಿತ್ಸೆಯೇ ಕಿವಿಮೇಹಕ್ಕೂ ಅನ್ವಯಿಸುತ್ತದೆ.

**ಮಕ್ಕಳಲ್ಲಿ ಕಿವುಡು :** ಮಕ್ಕಳಿಗೆ ಸರಿಯಾಗಿ ಕಿವಿ ಕೇಳಿಸದಿದ್ದರೆ ಮಾತು ಬರುವುದೂ ತಡವಾಗುತ್ತದೆ. ಪೂರ್ಣ ಕಿವುಡಿದ್ದರೆ ಮಾತೇ ಬರುವುದಿಲ್ಲ. ಆದ್ದರಿಂದ ಮಕ್ಕಳಿಗೆ

ಮಾತು ಬರುವುದು ತಡವಾದರೆ ತತ್‌ಕ್ಷಣ ಕಿವಿರೋಗ ತಜ್ಞರಿಂದ ಪರೀಕ್ಷೆ ನಡೆಸಿ ಅವರ ಸಲಹೆ ಪಡೆಯುವುದು ಆವಶ್ಯಕ. ಮೂರು ತಿಂಗಳಿನ ಶಿಶು ಶಬ್ದ ಮಾಡಿದರೆ ಅದು ಎಲ್ಲಿಂದ ಎಂಬುದನ್ನು ಗ್ರಹಿಸಬೇಕು, ಎರಡು ವರ್ಷದ್ದು ಹೇಳಿದ್ದನ್ನು ಅರ್ಥ ಮಾಡಿಕೊಂಡು ಅದರಂತೆ ನಡೆಯಬೇಕು ಹಾಗೂ ಮಾತನಾಡುವಾಗ ಶಬ್ದಗಳನ್ನು ಜೋಡಿಸಬೇಕು. ಈ ಕೆಳಗಿನ ಸಂದರ್ಭಗಳಲ್ಲಿ ಮಕ್ಕಳ ಕಿವಿಯ ಕಡೆ ವಿಶಿಷ್ಟ ಗಮನ ಕೊಡಬೇಕು.

1. ಆನುವಂಶಿಕ ರೋಗ–ಉದಾಹರಣೆಗೆ ಕರ್ಣಶಂಖದ ವಿಕಾರ

2. ಗರ್ಭಿಣಿಯಾದಾಗ ಅಪಾಯಕರ ರೋಗಗಳು–ಜರ್ಮನ್ ದಡಾರ, ಆರ್ ಎಚ್ ಅಸಮಂಜಸ, ಮೇಹ, ಅಪಾಯ ಸಂಭವಿಸಬಹುದಾದ ಔಷಧಿಗಳ ಸೇವನೆ.

3. ಹೆರಿಗೆ ಸಮಯದಲ್ಲಿ–ಶಿಶುವಿಗೆ ಆಮ್ಲಜನಕದ ಕೊರತೆ, ಪೆಟ್ಟು ಹಾಗೂ ತಾಯಿಗೆ ಅಪಸ್ಮಾರರೋಗ.

4. ಕೆಲವು ರೋಗಗಳು ವಯಸ್ಸು ಎಷ್ಟೇ ಆದರೂ ಕಿವುಡು ಉಂಟುಮಾಡಬಹುದು. ಉದಾಹರಣೆಗೆ ದಡಾರ, ಮಂಗಬಾವು, ಮಿದುಳಿನ ಹೊರಪದರಗಳ ಉರಿಯೂತ, ನಡುಗಿವಿಯ ಉರಿಯೂತ, ಮ್ಯಾಸ್ಟಾಯಿಡ್ ಎಲುಬಿನ ಉರಿಯೂತ ಇತ್ಯಾದಿ. ಎಳೆ ವಯಸ್ಸಿನಲ್ಲೇ ಈ ರೋಗಗಳು ಬಂದರೆ ಮಾತನಾಡುವುದು ಸಹ ಸರಿಯಾಗಿ ಬರಲಾರದು.

5. ರಕ್ತಸಂಬಂಧದಲ್ಲಿ ಮದುವೆಗಳಾದರೆ.

ಮೇಲೆ ಹೇಳಿದ ಯಾವ ಸಂದರ್ಭಗಳೂ ಇಲ್ಲದೆ ಮಗುವಿಗೆ ಕೇಳಿಸುವುದೋ ಇಲ್ಲವೋ ಎಂಬ ಅನುಮಾನವೂ ಬರಬಹುದು. ಉದಾಹರಣೆಗೆ ಹೇಳಿದ ಮಾತಿಗೆ ಮಗು ಲಕ್ಷ್ಯ ಕೊಡದಿರುವುದು–ಇತ್ಯಾದಿ.

ಮಕ್ಕಳಲ್ಲಿ ಯಾವ ರೀತಿಯ ಕಿವುಡಾದರೂ ಒಂದು ವರ್ಷ ತುಂಬುವ ಮುನ್ನ ತಿಳಿದು ಚಿಕಿತ್ಸೆಗೆ ಒಳಪಡಿಸಿದರೆ ಪರಿಣಾಮ ಆಶಾದಾಯಕ. ಒಂದು ವೇಳೆ ಮಕ್ಕಳು ಕಿವುಡಾದರೂ ಅವರ ಭವಿಷ್ಯ ಈ ದಿನ ಬರಡಲ್ಲ. ಅಂಥವರಿಗೆ ಶ್ರವಣಸಾಧನಗಳಿವೆ, ವಿಶೇಷ ಶಿಕ್ಷಣವಿದೆ.

ಇತರ ವಿಧದ ಕಿವುಡುಗಳು ಹೀಗಿವೆ : 1 ವಯಸ್ಸಾದಂತೆಲ್ಲ ಕಿವಿಮಾಂದ್ಯ ಅಭಿವೃದ್ಧಿಗೊಳ್ಳುವುದು.

2 ಕೆಲವು ರೋಗಾಣುಗಳಿಂದ ಪ್ರೇರಿತವಾದ ರೋಗಗಳಲ್ಲಿ–ಉದಾಹರಣೆಗೆ ಮಂಗಬಾವು, ಇನ್‌ಫ್ಲುಎನ್‌ಜ಼ಾ ಇತ್ಯಾದಿ–ಅವುಗಳ ಪರಿಣಾಮದಿಂದ ಉಂಟಾಗುವಂಥದು ಪೂರ್ಣ ಕಿವುಡು ಹಾಗೂ ಖಾಯಂ ಕಿವುಡು.

3 ಕೆಲವು ಔಷಧಗಳ ಸೇವನೆ ವಿಷವಾಗಿ ಪರಿಣಮಿಸಿ ಒಳಗಿವಿಯ ಕೇಶ ಕೋಶ ಅಥವಾ ನರಜೀವ ಕೋಶಗಳ ನಾಶಕ್ಕೆ ಕಾರಣವಾಗಿ ಕಿವುಡು ಸಂಭವಿಸಬಹುದು. ಉದಾಹರಣೆಗೆ ಕ್ವಿನೈನ್ ಮತ್ತು ಸಾಲಿಸಿಲೇಟ್ಸ್ ಸೇವನೆ. ಈ ಔಷಧಗಳನ್ನು ಮೊದಲಲ್ಲೇ ತ್ಯಜಿಸಿದರೆ ಕಿವುಡು ಮುಂದುವರಿಯುವುದಿಲ್ಲ; ಶ್ರವಣಶಕ್ತಿ ಹಿಂದಿರುಗಬಹುದು. ಸ್ಟ್ರೆಪ್ಟೋಮೈಸಿನ್, ಕ್ಯಾನಮೈಸಿನ್‌ಗಳ (ಕ್ಷಯ ರೋಗ ಚಿಕಿತ್ಸಾ ಔಷಧಿಗಳು) ಸೇವನೆಯಿಂದಲೂ ಈ ರೀತಿ ಕಿವುಡು ಉಂಟಾಗಬಹುದು. ಔಷಧಿಗಳಿಂದ ಚಿಕಿತ್ಸೆ ಪಡೆಯುವಾಗ ಜಾಗರೂಕತೆ ಆವಶ್ಯಕ.

4 ಮಾನಸಿಕ, ಕಿವುಡು ಯುದ್ಧ ಸಮಯದಲ್ಲಿ ಈ ಕಿವುಡನ್ನು ಗಮನಿಸಲಾಯಿತು. ಉದ್ರೇಕಾಘಾತ ಈ ಸ್ಥಿತಿಗೆ ಕಾರಣ. ಶ್ರವಣಾಂಗಗಳಲ್ಲಿ ಯಾವ ಮಾರ್ಪಾಡಾಗಲೀ ರೋಗವಾಗಲೀ ಕಂಡುಬರುವುದಿಲ್ಲ.

**ಕಿವಿ ಕೂಗು :** ಯಾವ ಶಬ್ದದ ಪ್ರಚೋದನೆಯೇ ಇಲ್ಲದೆ ಕಿವಿಯಲ್ಲಿ ಶಬ್ದ ಕೇಳಿದರೆ ಅದಕ್ಕೆ ಕಿವಿ ಕೂಗು ಅನ್ನುತ್ತಾರೆ. ಕೆಲವು ವೇಳೆ ಶ್ರವಣ ನಾಳದಲ್ಲಿ ಪರವಸ್ತು ಅಥವಾ ಗುಗ್ಗೆ ಕರ್ಣಪೊರೆಗಂಟಿ ಈ ಸ್ಥಿತಿ ಉಂಟಾಗಬಹುದು. ನಡುಗಿವಿಯ ರೋಗದಿಂದಲೂ ಮದ್ಯ, ತಂಬಾಕು, ಆಸ್ಪಿರಿನ್‌ಗಳಿಂದಲೂ ಈ ಜುಗುಪ್ಸೆ ಉಂಟಾಗಬಹುದು.

ಔಷಧಗಳಿಂದಲೇ ಆಗಲಿ ಅಥವಾ ಶಸ್ತ್ರಚಿಕಿತ್ಸೆಯಿಂದಲೇ ಆಗಲಿ ಈ ರೋಗದ ಮೇಲೆ ಪರಿಣಾಮವಿಲ್ಲ.

**ಗೋಚರವಾಗುವ ಕಿವಿಕೂಗು :** ವ್ಯಕ್ತಿ ಜಾಗರೂಕತೆಯಿಂದ ಗಮನಿಸಿದರೆ ಶಬ್ದವೆಲ್ಲಿಂದ ಬರುತ್ತಿದೆ ಎಂಬುದನ್ನು ಪತ್ತೆಮಾಡಬಹುದು. ರಕ್ತನಾಳದ ಊತ, ದವಡೆ ಕೀಲುಗಳ ರೋಗ ಇತ್ಯಾದಿ ಈ ಕೂಗಿಗೆ ಕಾರಣವಾಗಿರಬಹುದು. ಕಾರಣ ಕಂಡುಹಿಡಿದು ಸೂಕ್ತ ಚಿಕಿತ್ಸೆಯಿಂದ ಗುಣ ಹೊಂದಬಹುದು. (ಆರ್.ಎಸ್.ವಿ.)

**ಕಿವಿಯ ಸಾಗಾಲುವೆ :** ನವದ್ವಾರಗಳಲ್ಲೊಂದಾದ ಕಿವಿಯಲ್ಲಿನ ಕಾಲುವೆಯಂಥ ಅವಕಾಶ (ಆರಿಕ್ಯೂಲರ್ ಕೆನಾಲ್). ಕರ್ಣಕುಹರ ಎನ್ನುವುದಿದೆ. ಇದರ ಉದ್ದ 25 ಮಿಮೀ, ವ್ಯಾಸ 6ಮಿಮೀ. ಸ್ವಲ್ಪ ಬಾಗುಳ್ಳ ಕೊಕ್ಕೆಯಂತಿದೆ. ಇದರ ಹೊರ 1/3 ಭಾಗದಲ್ಲಿ ಮೃದ್ವಸ್ಥಿಯಿದೆ; ಈ ಭಾಗದಲ್ಲಿ ದವಡೆಮೂಳೆಯಾಡುವುದನ್ನು ಬೆರಳಿಂದ ತಿಳಿಯಬಹುದು. ಒಳ 2/3 ಭಾಗ ಮೂಳೆಯಲ್ಲಿದೆ. ಇದರ ಒಳಕೊನೆಯಲ್ಲಿ 8 ರಿಂದ 10 ಮಿಮೀ ವ್ಯಾಸವುಳ್ಳ ಅಂಡಾಕಾರದ ಪೊರೆಯಿದೆ. ಇದೇ ಕಿವಿದಮಟೆ. ಲಾಳಿಕೆಯಂತಿರುವ ಕರ್ಣದರ್ಶಿನಿಯಲ್ಲಿ ಬೆಳಕು ಬಿಟ್ಟು ನೋಡಿದರೆ ಇದು ಆರೋಗ್ಯದಿಂದಿದ್ದರೆ ಮುತ್ತಿನಂತೆ ಥಳಥಳಿಸುತ್ತದೆ. ಹೊರಗಡೆ ಚರ್ಮದಿಂದ ಕೂಡಿರುವ ತೆಳುಪೊರೆಯಿದು; ಶಬ್ದತರಂಗಗಳಿಂದ ಕಂಪಿಸುತ್ತದೆ. ಕಾರಣಾಂತರಗಳಿಂದ ಕಂಪನಶಕ್ತಿಯಿಲ್ಲದಿರುವುದು ಒಂದು ರೀತಿಯ ಕಿವುಡು. ಕಿವಿದಮಟೆ ಕರ್ಣಕುಹರಕ್ಕೂ ಗಾಳಿಗೂಡಾದ ಮಧ್ಯಕರ್ಣಕ್ಕೂ ಮಧ್ಯೆ ಇದೆ.

ಕಿವಿಯ ಬಾಗಿಲಲ್ಲಿ ದೂಳು, ಕೀಟಗಳನ್ನು ಸುಲಭವಾಗಿ ಒಳಗೆ ಬಿಡದಂತಿರುವ ಕೂದಲಿದೆ. ಕುಹರದ ಒಳಗಡೆ ಗುಗ್ಗೆಯನ್ನು ಸ್ರವಿಸುವ ಸಣ್ಣ ಚರ್ಮ ಗ್ರಂಥಿಗಳಿವೆ. ಇದರ ನರಕ್ಕೂ ಹೃದಯದ ನರಗಳಿಗೂ ಸಂಬಂಧವಿರುವುದರಿಂದ ಕಿವಿಗೆ ಪಿಚಕಾರಿ ಹೊಡೆದರೆ ಕೆಲವರಲ್ಲಿ (ಹೆಚ್ಚಾಗಿ ಸ್ಥೂಲ ಪ್ರಕೃತಿಯವರಲ್ಲಿ) ಹೃದಯಕ್ರಿಯೆ ನಿಂತು ಮೂರ್ಛೆ ಅಥವಾ ಸಾವು ಕಾಣಬಹುದು. ಇದರ ನರಕ್ಕೂ ಶ್ವಾಸಕೋಶಗಳ ನರಗಳಿಗೂ ಸಂಬಂಧವಿರುವುದರಿಂದ ಇದರ ಗಾಯ ಮುಂತಾದುವುಗಳಿಂದ ಸಾಮಾನ್ಯ ಕೆಮ್ಮಿನ ಔಷಧಿಗಳಿಗೆ ಜಗ್ಗದಿರುವ ಕೆಮ್ಮು ಬರಬಹುದು.

ಕಾಲುವೆಯ ಚರ್ಮ ಮೂಳೆಗೆ ಬಿಗಿಯಾಗಿ ಅಂಟಿಕೊಂಡಿರುವುದರಿಂದ ಸಣ್ಣ ಗುಳ್ಳೆಯೆದ್ದರೂ ಬಹಳ ನೋವಾಗುವುದು.

ದವಡೆ ಅಥವಾ ತಲೆಗೆ ಏಟು ಬಿದ್ದಾಗ ಕಿವಿಯಲ್ಲಿ ರಕ್ತ ಸೋರುವುದು ಅಪಾಯ ಸೂಚಕ. (ಎಂ.ಡಿ.)

**ಕಿವಿರುಗಳು :** ಜಲಚರಗಳಲ್ಲಿ ಅನಿಲವಿನಿಮಯಕ್ಕಾಗಿ ಇರುವ ವಿಶಿಷ್ಟ ಬಗೆಯ ಉಸಿರಾಟದ ಅಂಗಾಂಗಳು (ಗಿಲ್ಸ್). ಇವುಗಳಲ್ಲಿ ಹೊರಮೈ ಪದರ ಅತಿ ತೆಳುವಾಗಿದ್ದು ಅದರ ಮೂಲಕ ಅನಿಲ ವಿನಿಮಯ ನಡೆಯುತ್ತದೆ. ನೀರಿನಲ್ಲಿ ಬೆರೆತಿರುವ ಆಮ್ಲಜನಕ ಈ ಪದರದ ಮೂಲಕ ಹಾದು ರಕ್ತದೊಡನೆ ಬೆರೆಯುತ್ತದೆ. ರಕ್ತದಲ್ಲಿರುವ ಕಾರ್ಬನ್ ಡೈಆಕ್ಸೈಡ್ ಈ ಪದರದ ಮೂಲಕ ಹೊರ ಹಾದು ನೀರಿನೊಂದಿಗೆ ಬೆರೆಯುತ್ತದೆ. ಇದು ಸೂಕ್ಷ್ಮಾಭಿಸರಣೆಗೆ (ಆಸ್ಮಾಸಿಸ್) ಅನುಗುಣವಾಗಿ ನಡೆಯುತ್ತದೆ. ಅನಿಲವಿನಿಮಯಕ್ಕೆ ಸಹಾಯಕವಾಗುವಂತೆ ಕಿವಿರುಗಳು ಅಗಲವಾದ ತಟ್ಟೆಗಳಂತೆಯೋ ನೇರವಾದ ಗರಿಗಳಂತೆಯೋ ಉದ್ದವಾದ ತಂತುಗಳಂತೆಯೊ ರೂಪುಗೊಂಡಿದ್ದು ಸಾಕಷ್ಟು ವಿನಿಮಯಾವಕಾಶವಿರುತ್ತದೆ. ಅಕಶೇರುಕ ಜಲಚರಗಳಾದ ವಲಯವಂತಗಳು (ಅನೆಲಿಡ), ಕಠಿಣ ಚರ್ಮಿಗಳು (ಕ್ರಸ್ಟೇಸಿಯ), ಜಲಕೀಟಗಳು, ಮೃದ್ವಂಗಿಗಳು (ಮೊಲಸ್ಕ) ಮತ್ತು ಕಂಟಕಚರ್ಮಿ (ಎಕಿನೊಡರ್ಮೇಟ) ಹಾಗೂ ಕಶೇರುಕಗಳಾದ ಮೀನು ಮತ್ತು ಕೆಲವು ದ್ವಿಚರಿಗಳಲ್ಲಿ (ಆಂಫಿಬಿಯ) ಕಿವಿರುಗಳನ್ನು ಕಾಣಬಹುದು.

ಹಲವಾರು ಆದಿ ಜಲಜೀವಿಗಳಲ್ಲಿ ಹೊರಮೈ ಚರ್ಮವೇ ಶ್ವಾಸಾಂಗ. ಇದರ ಮೂಲಕವೇ ಅನಿಲವಿನಿಮಯ ನಡೆಯುತ್ತದೆ. ಆದರೆ ವಿಕಾಸದ ಹಂತದಲ್ಲಿ ಪ್ರಾಣಿಗಳಲ್ಲಿ ಅನಿಲವಿನಿಮಯಕ್ಕಾಗಿ ವಿಶೇಷ ಶ್ವಾಸಾಂಗಗಳು ಇವೆ. ವಿನಿಮಯ ನಡೆಯುವ ಜಾಗ ಶ್ವಾಸಾಂಗದಲ್ಲಿ ಕೇಂದ್ರಿಕೃತವಾಗಿದೆ. ಹೀಗೆ ಕೇಂದ್ರೀಕೃತವಾದ ವಿನಿನಮಯಾಂಗಗಳೇ ಕಿವಿರುಗಳು. ಇವು ಸಾಮಾನ್ಯವಾಗಿ ಅಗಲವಾದ ಫಲಕಗಳಂತೆಯೋ ಅತಿ ಸೂಕ್ಷವಾಗಿ ಕೇಸರಗಳ ಗಂಟಿನಂತೆಯೋ ಇರುತ್ತವೆ. ಸಂದಿಪದಿಗಳಲ್ಲಿ, ಅದರಲ್ಲಿಯೂ ಕೀಟವರ್ಗದಲ್ಲಿ ಕೆಲವು ಕೀಟಗಳು ತಮ್ಮ ಪ್ರೌಢಾವಸ್ಥೆಯಲ್ಲಿ ಶ್ವಾಸನಾಳಗಳ ಮೂಲಕ ಉಸಿರಾಡಿದರೂ ಡಿಂಭಾವಸ್ಥೆಯಲ್ಲಿ ಸಣ್ಣ ತಂತುವಿನಂತಿರುವ ಕಿವಿರುಗಳ ಸಹಾಯದಿಂದ ಉಸಿರಾಡುತ್ತವೆ. ಈ ಕಿವಿರುಗಳೊಂದಿಗೆ ರಕ್ತನಾಳಗಳ ಸಂಪರ್ಕ ಉಂಟು. ಕಠಿಣಚರ್ಮಿಗಳ ಕಿವಿರುಗಳು ಎದೆಯ ಭಾಗದ ಉಪಾಂಗಗಳಿಗೆ ಹೊಂದಿಕೊಂಡಿವೆ. ಇವು ದೇಹದಿಂದ ಹೊರ ಚಾಚಿಕೊಂಡಿದ್ದು ಹೊರಮೈಯಲ್ಲಿರುವ ಪದರಗಳೆಲ್ಲವೂ–ಈ ಕಿವಿರಿನಲ್ಲಿವೆ. ಕಿವಿರುಗಳ ಹೊರಭಾಗದಲ್ಲಿ ದೇಹಕ್ಕೆ ಹೊಂದಿಕೊಂಡಿರುವಂತೆ ತೆಳುವಾದ ಕೈಟಿನ್ ಪದರವಿದೆ. ಇದರ ಕೆಳಗೆ ಎಪಿತೀಲಿಯಲ್ ಪದರವಿದೆ. ಇದರ ಕೆಳಗೆ ಸಂಯೋಜಕ ಅಂಗಾಂಶವಿದೆ. ಇದರಲ್ಲಿ ರಕ್ತಪರಿಚಲನೆಗಾಗಿ ರಕ್ತನಾಳಗಳು ಮತ್ತು ಗ್ರಂಥಿಗಳಿವೆ. ಕಿವಿರುಗಳನ್ನೆಲ್ಲ ಮೇಲಿಂದ ಮುಚ್ಚುವಂತೆ ಕಿವಿರುಮುಚ್ಚಳ ಅಥವಾ ರಕ್ಷಣಾಚಿಪ್ಪು ಇದೆ.

ಕಂಟಕಚರ್ಮಿಗಳು ಮತ್ತೊಂದು ಜಲಚರಗಳ ಗುಂಪು. ಇವುಗಳಲ್ಲಿಯೂ ಉಸಿರಾಡುವಿಕೆ ಕಿವಿರುಗಳ ಮೂಲಕ ನಡೆಯುತ್ತದೆ. ಬಾಯಿಗೆ ವಿರುದ್ಧವಾದ ಮೇಲುಮೈಯಲ್ಲಿ ಸಣ್ಣ ಸಣ್ಣ ರಂಧ್ರಗಳಿವೆ. ಇವುಗಳ ಮೂಲಕ ಚರ್ಮಕಿವಿರುಗಳು (ಡರ್ಮಲ್ ಬ್ರಾಂಕಿಯೆ) ಹೊರ ಚಾಚಿರುತ್ತವೆ. ಇವು ಚಿಕ್ಕದಾಗಿದ್ದು ಇವುಗಳಲ್ಲಿ ಹೊರಚರ್ಮದ ಎಲ್ಲ ಪದರಗಳೂ ಇವೆ. ಚರ್ಮಕಿವಿರುಗಳು ಅನಿಲವಿನಿಮಯ ಕಾರ್ಯವನ್ನು ನಿರ್ವಹಿಸುತ್ತವೆ. ಈ ರೀತಿಯ ಚರ್ಮ ಕಿವಿರುಗಳನ್ನು ನಕ್ಷತ್ರಮೀನು (ಸ್ಟಾರ್ ಫಿಶ್), ಕಡಲಕುಡಿಕೆ(ಸೀ ಅರ್ಚಿನ್)ಗಳಲ್ಲಿ ನೋಡಬಹುದು. ಸಮುದ್ರ ಸೌತೆಯಲ್ಲಿ (ಸೀ ಕುಕುಂಬರ್) ಗುದದ್ವಾರಕ್ಕೆ ಅಂಟಿರುವಂತೆ ಕವಲೊಡೆದ ಎರಡು ಶ್ವಾಸವೃಕ್ಷಗಳಿವೆ. ಇವು ಟೊಳ್ಳಾಗಿದ್ದು ದೇಹದ ಮುಂಭಾಗದ ವರೆಗೂ ಹರಡಿಕೊಂಡಿವೆ. ಶ್ವಾಸವೃಕ್ಷಗಳ ಕವಲುಗಳ ಕೊನೆಯಲ್ಲಿ ಉಬ್ಬಿದ ಭಾಗಗಳು (ಅಂಪುಲೆ) ಇವೆ. ಸಮುದ್ರದ ನೀರು ಗುದದ್ವಾರದ ಮೂಲಕ ಒಳಹೊಕ್ಕು ಈ ಶ್ವಾಸವೃಕ್ಷವನ್ನು ತಲುಪುತ್ತದೆ.

ಮೃದ್ವಂಗಿಗಳಲ್ಲಿಯೂ ಉಸಿರಾಡುವಿಕೆ ಕಿವಿರುಗಳ ಮೂಲಕವೇ ನಡೆಯುತ್ತದೆ. ಇಲ್ಲಿ ಕಿವಿರುಗಳು ಬಾಳೆಯ ಎಲೆಯಂತಿದ್ದು, ದೇಹದ ಭಾಗಗಳಿಗೂ ಮ್ಯಾಂಟಲ್‌ಗೂ ಮಧ್ಯೆ ಇರುವ ಮ್ಯಾಂಟಲ್ ಕುಹರದಲ್ಲಿ ಅಡಕವಾಗಿವೆ. ಇವು ದೇಹದಿಂದ ಹೊರಚಾಚಿವೆ. ಇವುಗಳಲ್ಲಿ ದೇಹದ ಎಲ್ಲ ಪದರಗಳೂ ಇರುವುದಲ್ಲದೆ ರಕ್ತನಾಳಗಳ ಸಂಪರ್ಕವೂ ಇದೆ. ಮ್ಯಾಂಟಲ್ ಕುಹರದ ಒಳಗೆ ಬರುವ ನೀರಿನಲ್ಲಿರುವ ಆಮ್ಲಜನಕವನ್ನು ಉಪಯೋಗಿಸಿಕೊಂಡು ಅನಿಲವಿನಿಮಯ ಕ್ರಿಯೆ ನಡೆಯುತ್ತದೆ.

ಆದಿಕಶೇರುಕಗಳಲ್ಲಿ ಕಿವಿರುಗಳು ಗಂಟಲಿನ ಇಬ್ಬದಿಯಲ್ಲಿಯೂ ಇವೆ. ಗಂಟಲಿನ (ಫ್ಯಾರಿಂಕ್ಸ್) ಎರಡು ಪಕ್ಕದಲ್ಲಿಯೂ ಕಿವಿರು ರಂಧ್ರಗಳಿವೆ. ಪ್ರಾಣಿಯಲ್ಲಿ ಬೆಲನೊಗ್ಲಾಸಸ್ U–ಆಕಾರದ ಕಿವಿರು ರಂಧ್ರಗಳಿವೆ. ಇವು ಕಿವಿರು ಕೋಶಕ್ಕೆ ಸಂಬಂಧ ಕಲ್ಪಿಸುತ್ತವೆ. ಕಿವಿರು ರಂಧ್ರ, ಕಿವಿರು ಕೋಶಗಳು ಒಂದರ ಹಿಂದೆ ಒಂದು ಇವೆ. ಕಿವಿರು ಕೋಶದ ಅಂಚಿನಲ್ಲಿ ಮಡಿಚಿಕೊಂಡಂತೆ ಕಿವಿರುಗಳಿವೆ. ನೀರು ಬಾಯಿಯ ಮೂಲಕ ಹರಿದು. ಗಂಟಲಿಗೆ ಹೋಗಿ ಕಿವಿರು ಕೋಶಗಳ ಮೂಲಕ ಹೊರಕ್ಕೆ ಹರಿಯುವಾಗ ಕಿವಿರುಗಳಲ್ಲಿ ಅನಿಲವಿನಿಮಯ ಕ್ರಿಯೆ ನಡೆಯುತ್ತದೆ.

ಕಡಲಚಿಲುಮೆ(ಸೀ ಸ್ಕ್ವಿರ್ಟ್)ಗಳಲ್ಲಿ ದೊಡ್ಡದಾದ ಚೀಲದಂತಿರುವ ಗಂಟಲಿನ ಭಾಗವಿದೆ. ಇದಕ್ಕೆ ಜಲ ಶ್ವಾಸಾಂಗ ಕುಹರ ಎಂದು ಹೆಸರು. ಇದರಲ್ಲಿ ಒಂದರ ಮೇಲೊಂದು ಸಾಲಾಗಿ ಅಳವಡಿಸಿರುವ ಕಿವಿರು ರಂಧ್ರಗಳಿವೆ. ಇವುಗಳ ಮೈಮೇಲೆ ಲೋಮಾಂಗಗಳಿವೆ. ಕಿವಿರು ರಂಧ್ರಗಳ ಮೇಲೆ ಜಲಶ್ವಾಸಾಂಗ ಪದರಗಳು (ಬ್ರಾಂಕಿಯಲ್ ಲ್ಯಾಮೆಲೆ) ಇದ್ದು ಇವು ಅನಿಲವಿನಿಮಯ ಕಾರ್ಯವನ್ನು ಮಾಡುತ್ತವೆ.

ಮೀನನ್ನು ಹೋಲುವ ಪೆಟ್ರೋಮೈಜ಼ಾನ್ ಎಂಬ ದವಡೆ ಇಲ್ಲದ ಕಶೇರುಕ ಜಲಚರದ ಗಂಟಲಿನ ಭಾಗದಲ್ಲಿ ದೇಹದ ಇಬ್ಬದಿಯಲ್ಲಿಯೂ 7 ಕಿವಿರು ರಂಧ್ರಗಳಿವೆ. ಪ್ರೌಢಾವಸ್ಥೆಯಲ್ಲಿ ಕಿವಿರು ರಂಧ್ರಗಳಿಗೂ ಅನ್ನನಾಳದ ಕೆಳಗೆ ಇರುವ ಶ್ವಾಸನಾಳಕ್ಕೂ ಸಂಪರ್ಕವಿದೆ. ಈ ಪ್ರಾಣಿಗಳಲ್ಲಿ ಕಿವಿರು ಕೋಶಗಳು ದ್ವಿಪೀನ ಮಸೂರದಂತಿದ್ದು ಅವುಗಳ ಒಳಮೈಯಲ್ಲಿ ಕಿವಿರು ಫಲಕಗಳು ಇರುತ್ತವೆ. ಇವೇ ಅನಿಲವಿನಿಮಯ ಕ್ರಿಯೆಯಲ್ಲಿ ಭಾಗವಹಿಸುವ ಪ್ರಮುಖ ಅಂಗಗಳು. ಇದೇ ಗುಂಪಿಗೆ ಸೇರಿದ, ಮಣ್ಣಿನಲ್ಲಿ ಹುದುಗಿ ಜೀವಿಸುವ ಮಿಕ್ಸೀನ್ ಎಂಬ ಜಲಚರದಲ್ಲಿ, ಅನ್ನನಾಳದ ಭಾಗದೊಂದಿಗೆ ನೇರವಾದ ಸಂಪರ್ಕ ಹೊಂದಿದ ಕಿವಿರು ಕೋಶಗಳಿವೆ.

ಎಲ್ಯಾಸ್ಮೊಬ್ರಾಂಕ್ ಅಥವಾ ಮೃದ್ವಸ್ಥಿ ಮೀನುಗಳಲ್ಲಿ ಕತ್ತಿನ ಭಾಗದಲ್ಲಿ ಇಬ್ಬದಿಯಲ್ಲಿಯೂ ಐದು ಬಿಡಿಬಿಡಿಯಾದ ಕಿವಿರು ರಂಧ್ರಗಳಿವೆ. ಮೊದಲ ನಾಲ್ಕು ಕಿವಿರುಕೋಶಗಳಲ್ಲಿ ಇಬ್ಬದಿಯಲ್ಲಿಯೂ ಕಿವಿರು ತಂತುಗಳು ಇವೆ. ಇವಕ್ಕೆ ಪೂರ್ಣ ಕಿವಿರುಗಳೆಂದು (ಹೋಲೊಬ್ರಾಂಕ್) ಹೆಸರು. ಕೊನೆಯ ಕಿವಿರುಕೋಶದಲ್ಲಿ ಮುಂಬದಿಯ ಅಂಚಿನಲ್ಲಿ ಮಾತ್ರ ಕಿವಿರು ತಂತುಗಳಿವೆ. ಇದನ್ನು ಅರ್ಧ ಕಿವಿರೆಂದು (ಹೆಮಿಬ್ರಾಂಕ್) ಕರೆಯಲಾಗುತ್ತದೆ. ಕಿವಿರುಗಳಿಗೆ ಮತ್ತು ಕಿವಿರುಕೋಶಗಳಿಗೆ ಮೃದ್ವಸ್ಥಿ ಪಂಜರದ ಆಸರೆಯಿದೆ. ಕಿವಿರುಮುಚ್ಚಳಗಳಿಲ್ಲ. ಕಿವಿರುಕೋಶಗಳು ಕಿವಿರುರಂಧ್ರದ ಮೂಲಕ ಹೊರಕ್ಕೆ ಸಂಪರ್ಕ ಪಡೆದಿದೆ.

ಟೀಲಿಯಾಸ್ಟಿಯೈ ಅಥವಾ ಎಲುಬು ಮೀನುಗಳಲ್ಲಿ ಕತ್ತಿನ ಭಾಗದಲ್ಲಿ ದೇಹದ ಇಬ್ಬದಿಯಲ್ಲಿ ನಾಲ್ಕು ಕಿವಿರುಗಳಿವೆ. ಇವು ನಾಲ್ಕು ಜಲಶ್ವಾಸಾಂಗ ಕಮಾನುಗಳ (ಬ್ರಾಂಕಿಯಲ್ ಆರ್ಚಸ್) ಮೇಲೆ ಜೋಡಣೆಗೊಂಡಿವೆ. ಪ್ರತಿ ಕಿವಿರಿಗೂ ಎರಡು ಕವಲಿದ್ದು ಒಂದೊಂದರಲ್ಲೂ ಹಲವಾರು ಕಿವಿರು ತಂತುಗಳಿವೆ. ಕಿವಿರಿಗೆ ಶುದ್ಧ ರಕ್ತನಾಳದ ಮತ್ತು ಮಲಿನ ರಕ್ತನಾಳದ ಶಾಖೆಗಳಿವೆ. ಇವುಗಳಿಗೆ ಕಿವಿರಿನಲ್ಲಿ ಉಪಶಾಖೆಗಳಿವೆ. ಕಿವಿರುಗಳನ್ನು ಮುಚ್ಚಿರುವಂತೆ ಹಿಂದೆ ಮತ್ತು ಕೆಳಗೆ ಮಾತ್ರ ತೆರೆದಿರುವ ಕಿವಿರು ಮುಚ್ಚಳವಿದೆ. ಕಿವಿರುಗಳ ಶಾಖೆಗಳ ಮಧ್ಯೆ ಅಂತರ ಜಲಶ್ವಾಸಾಂಗ ಪೊರೆ (ಇಂಟರ್‌ಬ್ರಾಂಕಿಯಲ್ ಸೆಪ್ಟಮ್) ಇಲ್ಲ. ಆದರೆ ಗಂಟಲಿನ ಭಾಗಕ್ಕೆ ಹೊಂದಿಕೊಂಡಿರುವಂತೆ ಬಾಚಣಿಗೆಯಂತಿರುವ ಕಿವಿರುಹಲುವೆ ಇದೆ. ಬಾಯಿಯ ಮೂಲಕ ಹರಿದು ಬರುವ ನೀರು ತನ್ನ ಜೊತೆಯಲ್ಲಿ ಆಮ್ಲಜನಕದೊಂದಿಗೆ ಆಹಾರ ವಸ್ತುಗಳನ್ನು ತರುತ್ತದೆ. ಕಿವಿರುಹಲುವೆ ಆಹಾರ ವಸ್ತುಗಳು ಕಿವಿರುಕೋಶಕ್ಕೆ ಹೋಗದಂತೆ ತಡೆದು ಆಮ್ಲಜನಕ ಕರಗಿರುವ ನೀರನ್ನು ಮಾತ್ರ ಕಿವಿರುಕೋಶಕ್ಕೆ ಬಿಡುತ್ತದೆ. ಒಳಕಿವಿರುಮುಚ್ಚಳ ತನ್ನ ಮುಚ್ಚುವಿಕೆ ತೆರೆಯುವಿಕೆಯಿಂದ ಕಿವಿರುಕೋಶದೊಳಕ್ಕೆ ನೀರು ಹರಿಯುವುದನ್ನು ನಿಯಂತ್ರಿಸುತ್ತದೆ. ಇದರಿಂದಾಗಿ ಮೀನಿನಲ್ಲಿ ಉಸಿರಾಡುವಿಕೆ ಕಿವಿರು ಮುಚ್ಚಳದ ಚಲನೆಯನ್ನು ಅನುಸರಿಸುತ್ತದೆ.

ದ್ವಿಚರಿಗಳು ತಮ್ಮ ಪ್ರೌಢಾವಸ್ಥೆಯಲ್ಲಿ ಶ್ವಾಸಕೋಶಗಳಿಂದ ಉಸಿರಾಡಿದರೂ ಡಿಂಭಾವಸ್ಥೆಯಲ್ಲಿ ಕಿವಿರುಗಳ ಮೂಲಕವೇ ಉಸಿರಾಡುತ್ತವೆ. ಕಪ್ಪೆಯಲ್ಲಿನ ಗೊದಮೊಟ್ಟೆಯಲ್ಲಿ ಪ್ರಾರಂಭದಲ್ಲಿ ಕತ್ತಿನ ಇಕ್ಕೆಡೆಯಲ್ಲಿಯೂ ದೇಹದಿಂದ ಮೂರು ಹೊರಕಿವಿರುಗಳಿವೆ, ಹೊರಕಿವಿರುಗಳ ಸ್ಥಾನವನ್ನು ಪಡೆಯುತ್ತವೆ. ಬೆಳವಣಿಗೆ ಮುಂದುವರಿದಂತೆ ಈ ಒಳಕಿವಿರು–ಕಿವಿರುರಂಧ್ರ ಬದಲಾಗಿ ಗಂಟಲಿನ ಹಿಂಬದಿಯಿಂದ ಎರಡು ತೆಳುವಾದ ಕೋಶಗಳು ಬೆಳೆದು ಶ್ವಾಸಕೋಶಗಳಾಗುತ್ತವೆ. ಕ್ರಮೇಣ ಶ್ವಾಸಕೋಶಗಳಿಗೆ ರಕ್ತನಾಳಗಳ ಸಂಪರ್ಕ ಬೆಳೆದು ಅವು ಗಾಳಿಯಲ್ಲಿನ ಆಮ್ಲಜನಕವನ್ನು ಸ್ವೀಕರಿಸುವ ಶ್ವಾಸಾಂಗಗಳಾಗುತ್ತವೆ. ಆದರೆ ಯೂರೋಡಿಲ ಗಣಕ್ಕೆ ಸೇರಿದ ಕೆಲವು ದ್ವಿಚರಿಗಳಲ್ಲಿ ಪ್ರೌಢಾವಸ್ಥೆಯಲ್ಲಿಯೂ ಹೊರ ಕಿವಿರುಗಳೇ ಶ್ವಾಸಾಂಗಗಳು. ಈ ಗಣದ ಟ್ರೈಟಾನ್, ಪ್ರೋಟಿಯಸ್ ಮತ್ತು ಸೈರನ್‌ಗಳಲ್ಲಿ ಪ್ರೌಢಾವಸ್ಥೆಯಲ್ಲಿಯೂ ಡಿಂಭದಲ್ಲಿರುವಂತೆ ಶಾಶ್ವತವಾದ ಹೊರಕಿವಿರುಗಳಿವೆ. ಕ್ರಿಪ್ಟೋಬ್ರಾಂಕಸ್ ಮತ್ತು ಆಂಫಿಯೂಮಗಳಲ್ಲಿ ಪ್ರೌಢಾವಸ್ಥೆಯಲ್ಲಿಯೂ ಕಿವಿರು ರಂಧ್ರಗಳು ಇರುತ್ತವೆ.

ಹೀಗೆ ಜೀವಿಗಳ ಅಗತ್ಯ ಕಾರ್ಯವಾದ ಉಸಿರಾಡುವಿಕೆ ಎಲ್ಲ ಜಲಚರಗಳಲ್ಲಿಯೂ ಕಿವಿರುಗಳು ಅಥವಾ ಇವುಗಳಿಂದ ಮಾರ್ಪಾಡಾದ ಅಂಗಗಳಿಂದ ನಡೆಯುತ್ತದೆ. ಅಕಶೇರುಕಗಳಲ್ಲಿಯೂ ಕಶೇರುಕಗಳಲ್ಲಿಯೂ ಕಿವಿರುಗಳ ರೂಪವೈವಿಧ್ಯವನ್ನು ಕಾಣಬಹುದು. ಅಕಶೇರುಕಗಳಲ್ಲಿ ದೇಹದ ಹೊರಚರ್ಮದ ಭಾಗ ಕಿವಿರಾಗಿ ಮಾರ್ಪಟ್ಟಿದ್ದರೆ ಕಶೇರುಕಗಳಲ್ಲಿ ಕಿವಿರು, ಗಂಟಲಿನ ಭಾಗದಲ್ಲಿ ಹೊರಚಾಚಿದ್ದು ಗಂಟಲಿನಲ್ಲಿರುವ ಅಂಗಾಂಶಗಳನ್ನು ಮತ್ತು ಪದರಗಳನ್ನು ತೋರುತ್ತದೆ. ಇವುಗಳಿಗೆ ರಕ್ತನಾಳಗಳ ಸಂಪರ್ಕವಿದ್ದು ರಕ್ತದಲ್ಲಿನ ಕಾರ್ಬನ್ ಡೈ ಆಕ್ಸೈಡ್ ನೀರಿನಲ್ಲಿರುವ ಆಮ್ಲಜನಕದೊಂದಿಗೆ ಪರಸ್ಪರ ವಿನಿಮಯವಾಗುತ್ತದೆ. ಕಶೇರುಕಗಳ ವಿಕಾಸವಾದಂತೆ ಕಿವಿರುಗಳ ಸಂಖ್ಯೆ ಕಡಿಮೆಯಾಗಿ ಮೃದ್ವಸ್ಥಿ ಮೀನಿನಲ್ಲಿ ಐದು, ಎಲುಬು ಮೀನಿನಲ್ಲಿ ನಾಲ್ಕು ಮತ್ತು ಕೆಲವು ಪ್ರೌಢ ದ್ವಿಚರಿಗಳು ಮತ್ತು ಮಿಕ್ಕ ದ್ವಿಚರಿ ಮರಿ ಅಥವಾ ಗೊದಮೊಟ್ಟೆಯಲ್ಲಿ ಮೂರು ಕಿವಿರುಗಳಿವೆ. ಸರೀಸೃಪ, ಪಕ್ಷಿಗಳು ಮತ್ತು ಸಸ್ತನಿಗಳಲ್ಲಿ ಪ್ರೌಢಾವಸ್ಥೆಯಲ್ಲಿ ಉಸಿರಾಟಕ್ಕೆ ಶ್ವಾಸಕೋಶಗಳಿದ್ದರೂ ಭ್ರೂಣಾವಸ್ಥೆಯಲ್ಲಿ ಕಿವಿರು ರಂಧ್ರಗಳು ಕಂಡುಬರುತ್ತವೆ. ಇದರಿಂದ ಈ ಪ್ರಾಣಿಗಳು ಕಿವಿರುಗಳನ್ನುಳ್ಳ ಪೂರ್ವಜ ಪ್ರಾಣಿಗಳಿಂದ ವಿಕಾಸಗೊಂಡಿರುವುದಕ್ಕೆ ಸಾಕ್ಷಿ ಒದಗಿಸುತ್ತದೆ. (ಸಿ.ಎಂ.ಎಸ್.)

**ಕಿವುಡರ ಶಿಕ್ಷಣ :** ಕಿವುಡಿನ ವಿಷಯವಾಗಿ ಜನಕ್ಕೆ ಹೆಚ್ಚು ಅಜ್ಞಾನವಿದೆ. ಕಿವಿ ಕೇಳುವುದು ಮಂದವಾಗಿರುವವನನ್ನು ತಿಳಿಗೇಡಿ, ಗರ್ವಿ, ಅಸಡ್ಡೆಯವ–ಎನ್ನುವರು. ಕಿವಿಗೆ ಏನೂ ಕೇಳಿಸದ ಮಕ್ಕಳ ವಿಷಯದಲ್ಲಂತೂ ಇದು ಇನ್ನೂ ವಿಪರೀತ. ಮಕ್ಕಳಲ್ಲಿ ಕಿವುಡತನ ಒಂದು ದೊಡ್ಡ ವಿಕಲತೆ ; ಮಿದುಳಿಗೆ ಆಗುವ ಹಾನಿ, ಬುದ್ಧಿ ಮಾಂದ್ಯಗಳನ್ನು ಬಿಟ್ಟರೆ, ಕಿವುಡೇ ಮಕ್ಕಳಲ್ಲಿನ ದೊಡ್ಡತೊಡಕು, ಬಾಳಿನುದ್ದಕ್ಕೂ ಕುರುಡರಿಗಾಗಿ ದುಡಿದ. ಹೆಸರಾಂತ ಹೆಲನ್ ಕೆಲರ್ **(ನೋಡಿ– ಕೆಲರ್, ಹೆಲನ್ ಆಡಮ್ಸ್)** ತಾನು ಕಿವುಡಿ ಕುರುಡಿ ಎಂಬುದನ್ನು ಮರೆಯದೆ ಇನ್ನೊಮ್ಮೆ ತಾನು ಮರುಹುಟ್ಟು ಪಡೆಯುವುದಾದರೆ ಕುರುಡರಿಗಿಂತಲೂ ಕಿವುಡರಿಗಾಗೇ ದುಡಿಯುವುದಾಗಿ ತನ್ನ ಇಳಿ ವಯಸ್ಸಿನಲ್ಲಿ ಹೇಳಿದಳು. ಕುರುಡು ಮತ್ತು ಇತರ ಅಂಗವಿಕಲತೆಗಳ ಹಾಗೆ ಕಿವುಡತನ ಕಣ್ಣಿಗೆ ಕಾಣದಿರುವುದೇ ತೊಂದರೆ. ಜನಸಾಮಾನ್ಯರಿಗೆ ಗೊತ್ತಾಗದ ಹಲವಾರು ವಿಶೇಷ ತೊಡಕುಗಳನ್ನು ವ್ಯಕ್ತಿಗೆ ಇದು ತಂದೊಡ್ಡುತ್ತದೆ.

ಕಿವಿ ಕೇಳದ ಮಗು ಕಿವುಡಾಗಿರುವಂತೆ ಮೂಕೂ ಆಗುತ್ತದೆ. ಕೇಳಿ ಕೇಳಿ ಮಗು ಸರಿಯಾಗಿ ಮಾತನಾಡುವುದನ್ನು ಅಭ್ಯಾಸ ಮಾಡಬೇಕು. ಬಲು ಮುಖ್ಯವಾದ ಈ ಹೆದ್ದಾರಿ ಇಲ್ಲವಾದರೆ, ಅದರ ಸುತ್ತಲೂ ಆಡಿದ್ದನ್ನು ಕೇಳಿಸಿಕೊಳ್ಳದು ; ತಾನೂ ಆಡಿದ್ದೂ ತನಗರಿವಿಲ್ಲವಾಗುವುದು. ಅಂಥ ಮಗುವನ್ನು ಮೂಗ ಎನ್ನುವುದು ನಿಜವಾಗಿ ಸರಿಯಿಲ್ಲ. ಕಿವುಡ ಮಗು ಕೂಡ ಮಾತಾಡಬಲ್ಲುದು. ಅದರ ಮಾತಿನ ಅಂಗಗಳೂ ಚೆನ್ನಾಗೇ ಇರುತ್ತವೆ. ಮಾತಾನಾಡುವುದಕ್ಕೆ ಅದಕ್ಕೆ ಗೊತ್ತಾಗುವ ಹಾಗೆ ಹೇಳಿಕೊಡಬೇಕಷ್ಟೆ. ಆದ್ದರಿಂದ ಆ ಮಗುವನ್ನು ಕಿವುಡ ಎಂದು ಮಾತ್ರ ಹೇಳಬಹುದು. ಮಾತಿಲ್ಲದ ಈ ತೊಡಕು ಮುಂದೆ ಮಗುವಿನ ಮನೋಭಾವನೆಯ ವಿಕಾಸಕ್ಕೂ ಕಲಿಕೆಗೂ ಅಡ್ಡಿಯಾಗುವುದು.

ಕಿವುಡ, ಮಂದಗಿವಿಯವ ಎಂಬ ಮಾತುಗಳಿಗೆ ವಿವರಣೆ ಅಗತ್ಯ. ತನ್ನ ಮನದಲ್ಲಿರುವುದನ್ನು ಇನ್ನೊಬ್ಬರಿಗೆ ತಿಳಿಸಿಕೊಡಲಾಗದಷ್ಟು ಕಿವುಡು ಕೂರಾಗಿದ್ದರು ಕೇಳುವ ಸಾಧನವನ್ನು (ಹಿಯರಿಂಗ್ ಎಯ್ಡ್) ಹಾಕಿಕೊಂಡೋ ಇಲ್ಲದೆಯೋ ಸಮಾಜದಲ್ಲಿ ಹಾಗೂ ನಡೆದುಕೊಳ್ಳುತ್ತಿರುವವ ಮಂದಗಿವಿಯವ. ಈತ ಕೇಳುವ ಸಾಧನದ ನೆರವಿನಿಂದ ಚೆನ್ನಾಗಿ ಮಾತಾಡುತ್ತ, ವಿದ್ಯೆ ಕಲಿತು ಕಸಬು ಹಿಡಿದು ಉಳಿದವರೊಂದಿಗೆ ಸಂಪರ್ಕ ಬೆಳಸಬಲ್ಲ. ಕಿವುಡರಿಗೆ ಕಿವುಡು ಇನ್ನೂ ಜೋರಾಗಿರುತ್ತದೆ. ಕೇಳು ಸಾಧನವನ್ನು ಹಾಕಿಕೊಂಡರೂ ಆಳವಾದ ವಿಶೇಷ ಕಲಿಕೆಯಿಲ್ಲದೆ ಜನರಲ್ಲಿ ಹೆಚ್ಚಾಗಿ ಬೆರೆಯಲಾರರು.

ಹುಟ್ಟು ಕಿವುಡರಿಗೂ ಇಲ್ಲವೇ ಮಾತಾಟ ಮತ್ತು ನುಡಿಗಳನ್ನು ಕಲಿವ ಮೊದಲೇ ಎಳೆತನದಲ್ಲೇ ಕಿವಿ ಕೇಳದಂತಾದವರಿಗೂ ವಯಸ್ಸಾದ ಮೇಲೆ ಕಿವುಡಾಗುವವರಿಗೂ ವ್ಯತ್ಯಾಸಗಳು ಇದ್ದೇ ಇವೆ. ಯಾರೂ ಪೂರಾ ಕಿವುಡರಲ್ಲ. ಎಂಥ ಕಿವುಡಿದ್ದರೂ ಮಗುವಿಗೆ ಇನಿತಾದರೂ ಕೇಳಿಸುವಂತಿರುತ್ತದೆ. ಪೂರಾ ಕಿವುಡು ಬಲು ಅಪರೂಪ. ಅಂಥವರು ತಮಗೆ ಕೇಳಿಸದಿದ್ದರೂ ಸದ್ದುಗಳನ್ನು ಹಿಡಿಯಬಲ್ಲರು. ಗುಡುಗಿನಂಥ ಕೆಲವು ಸದ್ದುಗಳನ್ನು ಕಿವುಡ ಮಕ್ಕಳೂ ಕೇಳಬಲ್ಲುವೆಂದು ಗೊತ್ತಾಗಿದೆ.

ಕಿವುಡರ ಕಲಿಕೆಯಲ್ಲಿ ಮುಖ್ಯವಾದ ಅಂಶವೆಂದರೆ ಅವರಲ್ಲಿ ಇರುವ ಅಲ್ಪ ಶ್ರವಣ ಶಕ್ತಿಯನ್ನು ಬಳಸಿಕೊಳ್ಳುವ ವಿಷಯ, ಇದಕ್ಕೋಸ್ಕರವೇ ಎಲ್ಲ ಕಿವುಡ ಮಕ್ಕಳಿಗೂ ಕೇಳುವ ಸಾಧನವನ್ನು ಹಾಕಿಕೊಳ್ಳುವಂತೆ ನಿಯಮಿಸುವುದು.

ತನ್ನ ಸುತ್ತಲ ಪ್ರಪಂಚದಲ್ಲಿ ಸಕ್ರಿಯ ಪಾತ್ರ ವಹಿಸುವಂತೆ ವ್ಯಕ್ತಿಯನ್ನು ಪ್ರೋತ್ಸಾಹಿಸುವುದೇ ಈ ಶಿಕ್ಷಣದ ಧ್ಯೇಯ. ಮಾತಾಡುತ್ತ, ಕೆಲಸ ಗೇಯುತ್ತ, ಬಾಳುತ್ತ, ಅವನು ಉಳಿದವರೆಲ್ಲರೊಂದಿಗೆ ಸೇರುವಂತಾಗಬೇಕು. ಆದರೆ ಈಗಿರುವ ಹಣದ ಮುಗ್ಗಟ್ಟು ಮತ್ತು ಶಾಲೆಗಳ ಸ್ಥಿತಿಗತಿಗಳನ್ನು ನೋಡಿದರೆ ಎಲ್ಲ ಕಿವುಡು ಮಕ್ಕಳಿಗೂ ಯುಕ್ತ ಶಿಕ್ಷಣ ಕೊಡುವುದು ಅಸಾಧ್ಯವೆನಿಸುತ್ತದೆ.



ಶ್ರವಣ ಪರೀಕ್ಷೆ

ಪ್ರಪಂಚದ ಬೇರೆಡೆಗಳಲ್ಲಿ ಹೇಗೊ ಹಾಗೆ ಭಾರತದಲ್ಲೂ ಕಿವುಡರ ಶಿಕ್ಷಣ ಬಹು ಹಿಂದಿನಿಂದಲೂ ನಡೆದಿದೆ. 1555ರ ಸುಮಾರಲ್ಲಿ ಯುರೋಪಿನಲ್ಲಿ ಈ ಬಗ್ಗೆ ಕೆಲಸ ನಡೆದಂತೆ ದಾಖಲೆಗಳಿವೆ. ಅರಿಸ್ಟಾಟಲ್ ಕೂಡಾ ಕಿವುಡರ ಕಲಿಕೆಯ ಬಗ್ಗೆ ವಿವೇಚಿಸಿ ಅವರಿಗೆ ಶಿಕ್ಷಣ ಆಗದು ಎಂದಿದ್ದ. ಭಾರತದಲ್ಲಿ ಸುಮಾರು 80 ವರ್ಷಗಳ ಹಿಂದೆ ಈ ಕೆಲಸಕ್ಕಾಗಿ ಶಾಲೆಗಳನ್ನು ತೆರೆದರು. ಇದಕ್ಕೂ ಮುಂಚೆ, ಕಿವುಡರ ಕಲಿಕೆಗಾಗಿ ಅಲ್ಲೊಂದಿಲ್ಲೊಂದು ಯತ್ನಗಳಾಗಿರಬೇಕು. 19ನೆಯ ಶತಮಾನದ ನಡುವೆ ಮೈಸೂರು ಸಂಸ್ಥಾನದಲ್ಲಿ ಒಂದು ಕಡೆ ಒಬ್ಬ ಶಿಕ್ಷಕ ಕಿವುಡ ಮಗುವಿಗೆ ಮಾತು ಕಲಿಸಲು ಯತ್ನಿಸಿದ್ದನ್ನು ಕೇಳಿದ್ದುಂಟು. ಹಿಂದೆ ಕಿವುಡ ಮೂಗ ದೊರೆಯೊಬ್ಬ ಮೈಸೂರು ಸಂಸ್ಥಾನವನ್ನು ಆಳಿದ್ದ. ಚಿಕ್ಕದೇವರಾಯನ ಮಗನಾದ ಕಂಠೀರವ ಒಡೆಯರ್ ಹುಟ್ಟು ಕಿವುಡನಾಗಿದ್ದರೂ ಮೈಸೂರನ್ನಾಳುತ್ತಿದ್ದ ( 1704–13). ಅವನನ್ನು ಮೂಕರಸು ಎನ್ನುತ್ತಿದ್ದರಂತೆ. ಇಂಥ ಸಾಧನೆ ಮತ್ತೆಲ್ಲೂ ಇದ್ದಿರಲಾರದು.

ಭಾರತದ ಕಿವುಡರ ಶಾಲೆಗಳಲ್ಲಿ ಬಹುವಾಗಿ ಕಲಿಸಲು ಕೈಸನ್ನೆಯ ಭಾಷೆಯನ್ನು ಬಳಸುತ್ತಿದ್ದಾರೆ. ಕಿವುಡರಿಗೆ ಕಲಿಸಲು ಕೈಸನ್ನೆ ಭಾಷೆಯನ್ನು ಬಳಸಬೇಕೇ ಬೇಡವೇ ಎಂಬ ವಿವಾದ ಹಳೆಯದಾದರೂ ಇನ್ನೂ ಬಗೆಹರಿದಿಲ್ಲ. ಕಿವುಡರಿಗೆ ಈ ಭಾಷೆ ಬಲುಚೆನ್ನಾಗಿ ಹಿಡಿಸುತ್ತದೆಂದು ಕೆಲವರ ಅನಿಸಿಕೆ. ಬರಿಯ ಕೈಸನ್ನೆಯ ಭಾಷೆಯನ್ನು ಕಲಿತವರು ಇತರರೊಂದಿಗೆ ಹೊಂದಿಬಾಳುವುದು ಬಹು ಕಷ್ಟವೆಂದು ಇತರ ಕೆಲವರ ಅನಿಸಿಕೆ. ಅಲ್ಲದೆ ಕೈಸನ್ನೆಯ ಭಾಷೆಯನ್ನೆ ನೆಚ್ಚಿದಾಗ ವ್ಯಕ್ತಿಯಲ್ಲಿರುವ ಅಲ್ಪ ಸ್ವಲ್ಪ ಶ್ರವಣಶಕ್ತಿಯೂ ಅಭಿವ್ಯಕ್ತಿಶಕ್ತಿಯೂ ನಾಶವಾಗಬಹುದು ಎಂಬುದೂ ಇನ್ನೊಂದು ಅಂಶ.

ಕಿವುಡು ಮಗುವಿಗೆ ಮೊದಲಿಂದಲೆ ಕೇಳುವ ಮತ್ತು ಮಾತನಾಡುವ ಅವಕಾಶಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಬೇಕೆಂದು ತಜ್ಞರ ಅಭಿಪ್ರಾಯ. ಒಳ್ಳೊಳ್ಳೆಯ ಕೇಳು ಸಾಧನಗಳೂ ಸುಧಾರಿತ ಕಲಿಕೆಯ ಉಪಕರಣಗಳೂ ಸಿಗುತ್ತಿರುವ ಈಗಿನ ಕಾಲದಲ್ಲಿ ಮಗುವಿನ ಕಿವಿಯ ಶಕ್ತಿಯನ್ನೂ ನಾಲಗೆಯ ಶಕ್ತಿಯನ್ನೂ ಪೂರ್ತಿಯಾಗಿ ಬಳಸಿಕೊಳ್ಳುವ ಅವಕಾಶವಿದೆ. ಕಿವುಡ ಮಕ್ಕಳಿಗೆ ಮುಖ್ಯವಾಗಿ ಕಿವಿಯ ಮೂಲಕ ಮಾತ್ರವೇ ಕಲಿಸಬೇಕೆಂದು ಈಗಲೂ ನಂಬಿರುವ ಜನರಿದ್ದಾರೆ. ತುಟಿಯೋದುವುದನ್ನು (ಲಿಪ್ ರೀಡಿಂಗ್) ಕಲಿಸಲೂ ಅವರು ಒಪ್ಪರು.

ಎಳೆಯ ಮಕ್ಕಳಿಗೆ ಕೈಸನ್ನೆಯ ಭಾಷೆಯನ್ನು ಮೊದಲು ಹೇಳಿಕೊಟ್ಟು ಬರ ಬರುತ್ತ ಅದಕ್ಕೆ ಬದಲಾಗಿ ಮಾತನಾಡುವುದನ್ನು ಕಲಿಸಬೇಕೆಂಬ ಹೊಸ ತಂಡವೊಂದು ಹುಟ್ಟಿಕೊಳ್ಳುತ್ತಿದೆ. ಈ ವಿಚಾರವಾಗಿ ಯಾವ ಇತ್ಯರ್ಥವೂ ಆಗದಿರುವುದರಿಂದ ಈ ಬೇಡಿಕೆಗಳ ಆಗುಹೋಗುಗಳನ್ನು ಮುಂದಿನ ಸಂಶೋಧನೆಯೇ ನಿರ್ಧರಿಸಬೇಕು.

ಇಷ್ಟಾದರೂ ತೀರ ಎಳೆತನದಲ್ಲೇ ಕಿವುಡರ ಶಿಕ್ಷಣ ಮೊದಲಾಗಬೇಕು ಎನ್ನುವುದರಲ್ಲಿ ಬಹುಮಟ್ಟಿನ ಒಮ್ಮತವಿರುವಂತಿದೆ. ಹಲವು ಕಾರಣಗಳಿಂದ ಇದು ಮುಖ್ಯವೆನಿಸಿದೆ. ಇಂತಿಷ್ಟೆಂದು ವಯಸ್ಸನ್ನು ಖಚಿತವಾಗಿ ಹೇಳಲು ಬಾರದಿದ್ದರೂ ಮಗುವಿನ ಜೀವದಲ್ಲಿ ಅದರ ಮನಸ್ಸು ಭಾಷೆಯ ಕಲಿಕೆಯ ಕಡೆಗೆ ವಾಲುವ ಒಂದು ಹಂತವಿದೆ. ಆಗ ಅದರ ಸಕಲ ಇಂದ್ರಿಯಗಳೂ ಮನಸ್ಸೂ ಭಾಷೆಯತ್ತ ಕೆಲಸ ಮಾಡುತ್ತಿರುತ್ತವೆ. ಈ ವಯಸ್ಸಿನಲ್ಲಿ ಮಗುವಿಗೆ ಕಲಿಸದಿದ್ದರೆ ಮಿದುಳಿನಲ್ಲಿ ಭಾಷೆಗೆ ಸಂಬಂಧಿಸಿದ ಈ ಭಾಗಗಳು ಸರಿಯಾಗಿ ವಿಕಾಸವಾಗದೆಂಬ ಶಂಕೆಯೂ ಇದೆ. ಎಳೆತನದಲ್ಲೇ ಕಲಿಕೆ ಮೊದಲಾಗುವುದು ಮುಖ್ಯ. ಆರೋಗ್ಯವಂತ ಮಕ್ಕಳು ಎಳೆಯ ವಯಸ್ಸಲ್ಲೇ ಕಲಿಯುತ್ತಿರುವರು. ಕಿವುಡ ಮಗುವಿಗೆ ಈ ಎಳೆಯ ವಯಸ್ಸಿನಲ್ಲೇ ತರಬೇತು ದೊರೆಯದಾದರೆ ಆರೋಗ್ಯವಂತ ಮಕ್ಕಳಿಗಿಂತ ಅದು ಹಿಂದೆ ಬೀಳುತ್ತದಾಗಿ ಮುಂದಿನ ಕಲಿಕೆಗೆ ಇನ್ನೂ ಕಷ್ಟವಾಗುತ್ತದೆ. ಆದ್ದರಿಂದ ಕಿವುಡಿನ ಶಂಕೆ ಎದ್ದಕೂಡಲೇ ಮಗುವಿನ ಶಿಕ್ಷಣಕ್ಕಾಗಿ ವಿಶೇಷವಾಗಿ ಏರ್ಪಾಡು ಮಾಡಬೇಕು. ತೀರ ಎಳೆಮಗುವಿಗೂ ಕೇಳುವ ಸಾಧನವನ್ನು ಒದಗಿಸಬೇಕು. ಕಿವುಡ ಮಗುವಿಗೆ ಬೇಗನೆ ಶಿಕ್ಷಣ ಕೊಡುವ ಬಲು ದೊಡ್ಡ ಜವಾಬ್ದಾರಿ ಹೆತ್ತವರದು. ಮೊದಲು ಅವರು ಒಬ್ಬ ಶ್ರವಣ ಪರಿಣತನ, ಕಿವಿ ಮೂಗು ಗಂಟಲು ವೈದ್ಯನ (ಇಎನ್‍ಟಿ ಸ್ಪೆಷಲಿಸ್ಟ್) ಸಲಹೆ ಪಡೆಯಬೇಕು. ಮಗುವನ್ನು ಚೆನ್ನಾಗಿ ಪರೀಕ್ಷಿಸಿ, ಕೇಳುವ ಸಾಧನವನ್ನು ಆರಿಸಿಕೊಟ್ಟು ಮನೆಯಲ್ಲಿ ಮಗುವಿಗೆ ಈ ದಿಸೆಯಲ್ಲಿ ತಂದೆ ತಾಯಿಗಳು ಹೇಗೆ ನೆರವಾಗಬಹುದೆಂದೂ ಇವರು ಸೂಚಿಸುತ್ತಾರೆ. ಕೇಳುವ ಸಾಧನವನ್ನು ಮಗು ಯಾವಾಗಲೂ ಹಾಕಿಕೊಂಡಿರಬೇಕಲ್ಲದೆ, ಮಗುವಿನೊಂದಿಗೆ ಮನೆಯವರು ಬಹಳ ಮಾತಾಡುತ್ತಿರಬೇಕು. ಹೆಚ್ಚೆಚ್ಚಾಗಿ ಮಾತಾಡಿದಷ್ಟೂ ಮಕ್ಕಳಿಗೆ ಭಾಷೆ ಚೆನ್ನಾಗಿ ತಿಳಿದು ಮುಂದೆ ಅವರ ವಿದ್ಯಾಭ್ಯಾಸ ಸುಗಮವಾಗುವುದು. ಈ ಮಾತು ಕೇವಲ ಕಿವುಡು ಮಕ್ಕಳಿಗೆ ಮಾತ್ರ ಅನ್ವಯವಾಗಬೇಕಾದ್ದಿಲ್ಲ. ಹೆಚ್ಚು ಹೆಚ್ಚು ಮಾತಿನಿಂದ ಇತರ ಮಕ್ಕಳೂ ಸಂಪುಷ್ಟವಾಗಿ ಬೆಳೆಯುತ್ತವೆ. ವಾಕ್ ಮತ್ತು ಶ್ರವಣ ಚಿಕಿತ್ಸಾಲಯಗಳೂ ಅಖಿಲಭಾರತ ವಾಕ್‍ಶ್ರವಣ ಸಂಸ್ಥೆಗಳಂಥವೂ ಕಿವುಡರ ಶಿಕ್ಷಣದ ವಿಚಾರವಾಗಿ ಹೆತ್ತವರಿಗೆ ಮೇಲಿಂದ ಮೇಲೆ ಸಲಹೆ ನೀಡುತ್ತಿರುವರು. ಎಳೆಯ ವಯಸ್ಸಿನಲ್ಲಿ ಶಿಕ್ಷಣ ಆರಂಭಿಸಿ ಬಲವಾದ ತಳಹದಿ ಹಾಕಿದಲ್ಲಿ, ಕಿವುಡ ಮಕ್ಕಳು ವಿಶೇಷ ಶಾಲೆಗಳ ಬದಲಾಗಿ ಸಾಧಾರಣ ಶಾಲೆಗಳಿಗೇ ಹೋಗಬಹುದು. ಮೈಸೂರು ನಗರದಲ್ಲೇ ಎಷ್ಟೋ ಕಿವುಡ ಮಕ್ಕಳು ಕೇಳುವ ಸಾಧನವನ್ನು ಹಾಕಿಕೊಂಡು ಈಗ ಸಾಧಾರಣ ಶಾಲೆಗಳಿಗೇ ಹೋಗುತ್ತಿರುವರು.

ಕಿವುಡರ ಶಿಕ್ಷಣ ಯೋಜನೆಯಲ್ಲಿ ಮುಖ್ಯ ವಿಚಾರಗಳು ಈ ಕೆಳಗೆ ಕಂಡಂತಿವೆ:

1. ಕೇಳುವ ಸಾಧನ : ಮಗುವಿನಲ್ಲಿ ಶ್ರವಣಶಕ್ತಿಯನ್ನು ಪೂರ್ಣ ಬಳಸಲು ಇದು ನೆರವಾಗುತ್ತದೆ. ಇದರಿಂದ ಮಗುವಿಗೆ ಎಲ್ಲ ಸದ್ದುಗಳೂ ಕೇಳಿಸದಿರಬಹುದು. ಆದರೂ ಎಂದಿಗಿಂತಲೂ ಹೆಚ್ಚು ಸದ್ದುಗಳು ಕೇಳಿಸುವುದಂತೂ ದಿಟ.

2. ತರಬೇತು : ಕೇಳು ಸಾಧನವನ್ನು ಮಗುವಿಗೆ ತೊಡಗಿಸಿದರೆ ಸಾಲದು. ಮಗು ಅದನ್ನು ಬಳಸಬೇಕು. ಸದ್ದುಗಳನ್ನು ಆಲಿಸುವುದನ್ನೂ ಒಂದು ಸದ್ದಿಂದ ಇನ್ನೊಂದರ ವ್ಯತ್ಯಾಸ ಹಿಡಿವುದನ್ನೂ ಸದ್ದುಗಳಿಗೆ ಅರ್ಥ ಕೊಡುವುದನ್ನೂ ತಿಳಿಸಿ ಕೊಡಬೇಕು. ಬೇರೆ ಬೇರೆ ಸದ್ದುಗಳ ಆಟಗಳನ್ನು ಯೋಜಿಸಬೇಕು. ಸ್ವರ, ನಾದಗಳನ್ನು ಗುರುತಿಸುವಂತೆ ಸರಳ ಸಂಗೀತವನ್ನೂ ಹೇಳಿ ಕೊಡಬೇಕು. ಮುಂದೆ ಅವರು ಮಾತಾಡುವಂತಾದಾಗ ಸರಿಯಾದ ಲಯವೂ ಸ್ವರವೂ ಮಾತಿನಲ್ಲಿ ಮೂಡುತ್ತವೆ.

3. ಭಾಷೆ : ಕಿವುಡಿನ ಬಲು ದೊಡ್ಡ ವಿಕಲತೆ ಎಂದರೆ ಭಾಷೆ. ಆದ್ದರಿಂದ ಭಾಷೆಯನ್ನು ಕಲಿಸುವುದರಲ್ಲಿ ಕಿವುಡ ಮಗುವಿಗೆ ಹೆಚ್ಚಿನ ನೆರವು ನೀಡುವುದು ಮುಖ್ಯ. ಕಿವುಡ ಮಕ್ಕಳಿಗೆ ಭಾಷೆಯನ್ನು ಕಲಿಸಲು ಹಲವು ದಾರಿಗಳಿದ್ದರೂ ಸಾಮಾನ್ಯವಾಗಿ ಸುತ್ತಮುತ್ತ ನಡೆವವನ್ನು ವಿವರಿಸುವ ಮಾತುಗಳನ್ನು ಬಳಸುವುದು ಒಳ್ಳೆಯ ಮಾರ್ಗ, ಕಣ್ಣೆದುರಿನ ಅನುಭವದೊಂದಿಗೆ ನುಡಿಯನ್ನು ಕೂಡಿಸಿದರೆ ಕಲಿಕೆ ಇನ್ನೂ ಸುಲಭ. ಆದ್ದರಿಂದ ಭಾಷೆ ಕಲಿಸಲು ಬಲು ಮುಖ್ಯ ಶಿಕ್ಷಕರೆಂದರೆ ಹೆತ್ತವರೇ. ಯಾವಾಗಲೂ ಮಗುವಿನೊಂದಿಗೆ ಅವರು ಮಾತಾಡುತ್ತಿರಬೇಕು. ಮಕ್ಕಳಿಗೆ ಅರ್ಥವಾಗುವ ಹಾಗೆ ಪದಗಳನ್ನೂ ವಾಕ್ಯಗಳನ್ನೂ ಮತ್ತೆ ಮತ್ತೆ ಹೇಳುತ್ತಿರಬೇಕು. ಮಗು ತಾನಾಗೇ ಮಾತಾಡಿ ಭಾಷೆ ಬಳಸುವಂತೆ ಒತ್ತಾಸೆ ಕೊಡಬೇಕು. ಕಿವುಡ ಮಕ್ಕಳಿಗೆ ಮಾತುಕಲಿಯಲು ಬಲು ಕಷ್ಟವಾಗುತ್ತದೆ. ಆದರೂ ಅವು ಕಲಿತೇ ಕಲಿಯುತ್ತದೆ ಎನ್ನುವುದನ್ನು ಮರೆಯಬಾರದು. ಭಾಷೆಗಾಗಿ ಎಲ್ಲ ಇಂದ್ರಿಯಗಳ ಅರಿವನ್ನೂ ಬಳಸಿಕೊಂಡು ಮಗುವಿನ ಕುತೂಹಲ, ಆಸಕ್ತಿಗಳನ್ನು ಹೆಚ್ಚಿಸುವ ಯಾವ ಸಂದರ್ಭವನ್ನೂ ಬಿಡಬಾರದು.

4. ಮಾತಾಡುವುದು : ಕಿವಿ ಕೇಳಿಸದ್ದರಿಂದ ಮಗುವಿಗೆ ಮಾತು ಬರುವುದಿಲ್ಲವೆಂಬುದನ್ನು ಮರೆಯಬಾರದು. ಕಿವುಡರಿಗೆ ಮಾತಾಡುವುದನ್ನು ಕಲಿಸುವಾಗ ಇತರ ಇಂದ್ರಿಯಗಳ ಪಾತ್ರ ನಮ್ಮ ಅರಿವಿಗೆ ಬರುವುದು. ಒಂದು ಗೊತ್ತಾದ ಶಬ್ದವನ್ನು

ಬಾಯಿಂದ ಹೇಳುವುದು ಹೇಗೆಂದು ಮಗು ತಿಳಿಯಬೇಕು. ಇದಕ್ಕಾಗೇ ಕಿವುಡರಿಗೆ ಕಲಿಸುವವರು ಅನೇಕರು ಕನ್ನಡಿಗಳ ಮುಂದೆ ಮಾತಾಡುತ್ತಾರೆ. ಕನ್ನಡಿಯನ್ನು ಮಗು ನೋಡುತ್ತದೆ. ಕಲಿಸುವವನು ಆಡುವುದನ್ನು ಕಂಡು. ಅದನ್ನು ಅನುಕರಿಸಲು ಯತ್ನಿಸುತ್ತದೆ.



ಕೇಳುವ ಸಾಧನಗಳು : ವ್ಯಕ್ತಿ ಉಪಯೋಗಿಸುವ ಸಾಧನವನ್ನು ಚಿತ್ರದ ಮುಂಭಾಗದಲ್ಲೂ ಸಾಮೂಹಿಕ ಕೇಳುವ ಸಾಧನಗಳನ್ನು ಚಿತ್ರದ ಹಿಂಭಾಗದಲ್ಲೂ ಕಾಣಿಸಿದೆ

ಕೇಳುವ ಸಾಧನದ ಮೂಲಕ ಕಲಿಸುವವನ ಮಾತೂ ತನ್ನದೂ ಮಗುವಿಗೆ ಕೇಳಿಸುತ್ತದೆ. ಬೇಕೆಂದಾಗೆಲ್ಲ ಗಂಟಲು, ಮೂಗುಗಳ ಕಂಪನಗಳನ್ನೂ ತನ್ನ ಬಾಯಿಂದ ಹೊರಬೀಳುವ ಉಸಿರನ್ನೂ ತನ್ನ ಕೈಗಳಿಂದ ಮುಟ್ಟಿ ತಿಳಿಯಬಹುದು. ಕಿವಿ ಮಂದವಾಗಿದ್ದರೂ ಹೀಗೆ ಅದು ಮಾತಾಡುವುದನ್ನು ಕಲಿಯುತ್ತದೆ. ಶಬ್ದಗಳನ್ನು ಮಗು ನೋಡುವಂಥ ನೋಟದ ಚಿತ್ರಗಳನ್ನೂ ಮಗು ಮುಟ್ಟಿ ತಿಳಿವ ಬೇರೆ ಬೇರೆ ಪೆಟ್ಟಿಗೆಗಳ ಕಂಪನಗಳಾಗಿ ಮಾರ್ಪಡಿಸುವ ಇನ್ನೂ ಕೆಲವು ಸಲಕರಣೆಗಳನ್ನು ಇಂದಿನ ತಂತ್ರಗಳಲ್ಲಿ ಬಳಸುವುದುಂಟು. ಹೀಗೆ ತನಗೆ ಕಲಿಸುವವ ಮಾತಾಡಿದಾಗ ತಾನು ಕಂಡಿದ್ದನ್ನೂ ಅರಿತಿದ್ದನ್ನೂ ತನ್ನ ಮಾತಿನೊಂದಿಗೆ ಮಗು ಹೋಲಿಸಿ ನೋಡುತ್ತದೆ. ಶಬ್ದಗಳ ಬೇರೆ ಬೇರೆ ಭಾಗಗಳು ಇನ್ನೂ ಜೋರಾಗಿ ಕೇಳುವಂತೆ ಮಾಡುವ ವಿಶೇಷ ಹೇಳುವ ಸಾಧನಗಳನ್ನು ಕೆಲವು ಪರಿಣತರು ಬಳಸುತ್ತಿದ್ದಾರೆ.

5. ತುಟಿಯೋದು : ಕಲಿಸುವವನ ತುಟಿಗಳ ಚಲನೆಯನ್ನು ಮೊಗದ ಚಹರೆಯನ್ನೂ ಗಮನಿಸುತ್ತ ಮಗು ನುಡಿಯನ್ನು ಕಲಿವ ವಿಧಾನವಿದು. ಕಿವಿ ಚೆನ್ನಾಗಿ ಕೇಳುವವರು ಕೂಡ ಕೊಂಚಮಟ್ಟಿಗೆ ತುಟಿಯೋದುವವರು. ಆದರೆ ಕಿವುಡ ಮಗುವಿಗಂತೂ ಇದರಿಂದ ಹೆಚ್ಚಿನ ಪ್ರಯೋಜನವಿದೆ. ಅಷ್ಟೂ ಇಷ್ಟು ಕಿವಿಗೆ ಕೇಳಿಸಿದ್ದಕ್ಕೆ ತುಟಿಯೋದು ಇನ್ನಷ್ಟು ಅರ್ಥ ಕೊಡುವುದರಿಂದ ಮಗುವಿನ ಕಲಿಕೆ ಇನ್ನೂ ಚೆನ್ನಾಗುವುದು. ಇತ್ತೀಚೆಗೆ ಶಿಕ್ಷಕರು ತುಟಿಯೋದಿಗೆ ಅಷ್ಟು ಪ್ರಾಮುಖ್ಯ ಕೊಡುತ್ತಿಲ್ಲ.

ಬೋಧನೆ, ಓದು, ಬರೆವಣಿಗೆ ಮತ್ತಿತರ ವಿಷಯಗಳೇ ಅಲ್ಲದೆ ಇವೆಲ್ಲ ವಿಚಾರಗಳನ್ನೂ ಕಿವುಡರ ಶಾಲೆಗಳಲ್ಲಿ ತಿಳಿಸಿಕೊಡುವರು.

ಬಡಗಿ ಕೆಲಸ, ದರ್ಜಿಕೆಲಸ ಮೊದಲಾದ ಕಸಬಿನ ಶಿಕ್ಷಣಕ್ಕೆ ಅನೇಕ ಶಾಲೆಗಳಲ್ಲಿ ಅವಕಾಶವಿದೆ. ತೀರ ಎಳೆತನದಲ್ಲಿ ಸರಿಯಾದ ರೀತಿಯಲ್ಲಿ ತರಬೇತಿ ಕೊಡಲು ಮೊದಲು ಮಾಡಿದರೆ ಕಿವುಡರು ಸಮಾಜದಲ್ಲಿ ಸ್ವತಂತ್ರವಾಗಿ ಬದುಕು ನಡೆಸುವಷ್ಟು ಸಮರ್ಥರಾಗುತ್ತಾರೆ. ಮೈಸೂರಿನ ಅಖಿಲಭಾರತ ವಾಕ್‌ಶ್ರವಣ ಸಂಸ್ಥೆಯಲ್ಲಿ ಹೆತ್ತವರಿಗೆ ನೆರವಾಗಿ ಅವರ ಮಕ್ಕಳಿಗೆ ದಾರಿ ತೋರಲು ಎಲ್ಲ ಅನುಕೂಲಗಳೂ ಇವೆ. ಮೈಸೂರು, ಗುಲ್ಬರ್ಗಗಳಲ್ಲಿ ಕಿವುಡರಿಗಾಗಿ ಕರ್ನಾಟಕ ಸರ್ಕಾರದ ಶಾಲೆಗಳಿವೆ. ಕಿವುಡರ ನೆರವಿಗಾಗಿರುವ ಸಂಘವೊಂದು ಬೆಂಗಳೂರಿನಲ್ಲಿ ಖಾಸಗಿಯಾಗಿ ಶಾಲೆಯೊಂದನ್ನು ಚೆನ್ನಾಗಿ ನಡೆಸುತ್ತಿದೆ. ವಯಸ್ಕ ಕಿವುಡರ ತರಬೇತಿಗಾಗಿ ಹೈದರಾಬಾದಿನಲ್ಲಿ ಭಾರತ ಸರಕಾರ ಒಂದು ಶಾಲೆಯನ್ನು ನಡೆಸುತ್ತಿದೆ.

ಮುಂಬಯಿ, ಲಖನೌ, ಕೋಲ್ಕತಗಳಲ್ಲಿ ಕಿವುಡರ ಶಿಕ್ಷಕರ ತರಬೇತುವನ್ನು ಕೊಡಲಾಗುತ್ತಿದೆ. ಅಖಿಲಭಾರತ ವಾಕ್‌ಶ್ರವಣ ಸಂಸ್ಥೆಯ ವತಿಯಿಂದ ಮೈಸೂರಿನಲ್ಲೂ ಇಂಥ ಏರ್ಪಾಡು ಇದೆ.

ಭಾರತ ಸರ್ಕಾರದ ಸಮಾಜ ಏಳಿಗೆ ಶಾಖೆಯ ವತಿಯಿಂದ ಅಂಗವಿಕಲರ ಶಿಕ್ಷಣದ ರಾಷ್ಟ್ರೀಯ ಸಲಹಾಮಂಡಲಿ 1955ರಿಂದಲೂ ಕೆಲಸ ಮಾಡುತ್ತಿದೆ. ಅಂಗವಿಕಲರ, ಕಿವುಡರ ಶಿಕ್ಷಣ, ತರಬೇತು, ಮರುವಸತಿ, ನೌಕರಿ, ಏಳಿಗೆಗಳ ವಿಚಾರವಾಗಿ ಆಗಿಂದಾಗ್ಗೆ ಸರ್ಕಾರಕ್ಕೆ ಇದು ಸಲಹೆಗಳನ್ನು ನೀಡುತ್ತದೆ.

ಕಿವುಡರ ಅಖಿಲಭಾರತ ಒಕ್ಕೂಟ 1955ರಲ್ಲಿ ಸ್ಥಾಪನೆಯಾಯಿತು. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ. ಕಿವುಡರಲ್ಲಿ ಒಗ್ಗಟ್ಟು, ಅವರ ಹಿತಸಾಧನೆ ಅಭಿಪ್ರಾಯಗಳ ಪ್ರಚಾರ ಇದರ ಧ್ಯೇಯಗಳು. ಪ್ರತಿವರ್ಷ ಬಾವುಟ ದಿನವನ್ನು ಆಚರಿಸಿ ಕಿವುಡ ಮೂಕರ ಏಳಿಗೆಗಾಗಿ ಹಣ ಕೂಡಿಹಾಕಿ, ಕಿವುಡರಿಗಾಗಿ ಅಚ್ಚುಕೂಟ ಭಾವಚಿತ್ರಣ ಸಂಸ್ಥೆ, ಕಲಿಸುವ ಶಾಲೆ, ತಾಂತ್ರಿಕ ಶಾಲೆಗಳನ್ನು ತೆರೆಯಲಾಗುವುದು, ಸರ್ಕಾರ ಮತ್ತಿತರಡೆಗಳಿಂದ ಬರುವ ಚಂದಾ ದತ್ತಿ, ಮದುವಟ್ಟು, ಇಡಿಗಂಟುಗಳೇ ಇದರ ಮುಖ್ಯ ವರಮಾನ. (ಎಂ.ಎಸ್.ಆರ್.)

**ಕಿವುಡರ, ಮಂದಗಿವಿಯವರ ತರಬೇತು ಮತ್ತು ಏಳಿಗೆ-ಪಾಶ್ಚಾತ್ಯ ದೇಶಗಳಲ್ಲಿ :** ಹುಟ್ಟಿನಿಂದಲೊ ಎಳೆಯ ವಯಸ್ಸಲ್ಲೊ ಕಿವಿ ಕೇಳದಂತಾದವರಿಗೆ, ಕಿವಿ ಮಂದವಾದವರಿಗೆ ಇಲ್ಲವೆ ವಯಸ್ಸಾದ ಮೇಲೆ ಕಿವುಡಾದವರಿಗೆ ಕಲೆ, ವಿದ್ಯೆಗಳನ್ನು ಕಲಿಸುವಿಕೆ, ಮತ್ತವರ ಏಳಿಗೆಯ ಸಾಧನೆಗಳ ಬಗ್ಗೆ ಹೊರದೇಶಗಳಲ್ಲಿ ಸಾಕಷ್ಟು ಕೆಲಸ ನಡೆದಿದೆ. ಹುಟ್ಟಿನಿಂದಲೇ ಹೀಗಾದವರ ತರಬೇತೇ ಬೇರೆ, ಕಿವುಡಾದ ವಯಸ್ಕನಿಗೆ ಮತ್ತೆ ಕಲಿಸುವುದೇ ಬೇರೆ.

ಮುಂದುವರಿದ ನಾಡುಗಳಲ್ಲೂ ಹುಟ್ಟು ಕಿವುಡರಿಗೆ ಏನನ್ನೂ ಕಲಿಸುವುದು ಸಾಧ್ಯವೇ ಇಲ್ಲವೆಂಬ ನಂಬಿಕೆ 16ನೆಯ ಶತಮಾನದ ತನಕ ಇತ್ತು. ಪೂರ್ವಿಕರಲ್ಲಿ ಈ ನಂಬಿಕೆಗೆ ಎರಡು ಕಾರಣಗಳಿದ್ದುವು. ವಿದ್ಯೆಯನ್ನು ಕಲಿಸುವುದೆಲ್ಲ ಮುಖ್ಯವಾಗಿ ಬಾಯಿ ಮಾತಿನಿಂದ ನಡೆಯುತ್ತಿದ್ದುದರಿಂದ ಕಿವುಡರಿಗದು ದಕ್ಕದಂತಾಗಿತ್ತು. ಅಲ್ಲದೆ. ಮಾತಿನ ಅಂಗಗಳಿಗೂ ಕಿವಿಗೂ ಏನೋ ನೇರಸಂಬಂಧ ಇದೆಯೆಂದು ನಂಬಿದ್ದ ಕಾಲವದು. ಆದ್ದರಿಂದ ಮಾತನ್ನು ಕೇಳಿಸಿಕೊಂಡು ಅರ್ಥ ಮಾಡಿಕೊಂಡು ಮಾತನಾಡಲಾಗದ್ದಕ್ಕೆ, ಮಾತಿನ ಅಂಗವೇ ಊನವಾದಂತೆ ತಿಳಿದು. ಮೂಕತನ ಸರಿಪಡಿಸಲಾಗದ ವಿಕಲತೆ ಎಂದು ಆ ಜನ ಭಾವಿಸಿದ್ದರು. ಹುಟ್ಟು ಕಿವುಡಿನ ಪರಿಣಾಮವೇ ಮೂಕತನ, ಕಿವುಡು ಕೂಸಿಗೆ ಮಾತುಗಳು ಕೇಳಿಸಲಾಗದ್ದರಿಂದಲೇ ಮೂಕತನ ತೋರುವುದೆಂದು ವೈದ್ಯರಿಗೂ ಶಿಕ್ಷಕರಿಗೂ ಅರಿವಾದ ಮೇಲೇ ಕಿವುಡರಿಗೂ ವಿದ್ಯೆ ಕಲಿಸುವ ನಿಜವಾದ ಯತ್ನಗಳು ಮೊದಲಾದುವು.

16ನೆಯ ಶತಮಾನದಲ್ಲಿ ಮೊಟ್ಟಮೊದಲಾಗಿ. ಕಿವುಡರಿಗೆ ಮಾತಾಡಲು, ಓದಲು ಬರೆಯಲು ಕಲಿಸಲು ಎದೆಗುಂದದೆ ಹೆಣಗಾಡಿದವ ಸ್ಪೇನಿನ ಸಂನ್ಯಾಸಿ ಪಿಡ್ರೊಪಾನ್ಸ್ ಡಿ ಲಿಯೋನ್. ಇವನ ಮುಂಚೆಯೇ ಹೆಕ್ಲಾಮಿನ ಪಾದ್ರಿಯೊಬ್ಬ ಕಿವುಡ ಹುಡುಗನಿಗೆ ಬಾಯಿಂದ ಉಚ್ಚರಿಸುವುದನ್ನು ಹೇಳಿಕೊಟ್ಟಿದ್ದನ್ನೂ ಜಿರೊನಿಮೊ ಕಾರ್ಡನೊ (1501–76) ತನ್ನ ಪುಸ್ತಕದಲ್ಲಿ ಹುಟ್ಟಾಕಿವುಡಮೂಕನಾಗಿದ್ದವನೊಬ್ಬ ಓದಿ ಬರೆವುದನ್ನು ಕಲಿತು, ಮನದಲ್ಲಿದ್ದುದನ್ನು ಹೇಳುವಂತಾದುದನ್ನೂ ಪಿಡ್ರೊಪಾನ್ಸ್ ಕೇಳಿದ್ದಿರಬಹುದು.

ಸ್ಪೇನಿಗನಾದ ಜುವನ್ ಪಾಬ್ಲೊ ಬೋನೆ ಕಿವುಡರ ಶಿಕ್ಷಣದ ಮೇಲಿನ ಮೊದಲ ಪುಸ್ತಕವನ್ನು ತನ್ನ ತಾಯ್ನುಡಿಯಲ್ಲಿ ಬರೆದ (1620). ಇದೇ ವಿಚಾರವಾಗಿ ಇಂಗ್ಲಿಷ್‌ನಲ್ಲಿ ಮೊದಲ ಪುಸ್ತಕ ಬರೆದವ ಜಾನ್ ಬುಲ್ವರ್ (1648). ಕೆಲವೇ ವರ್ಷಗಳಲ್ಲಿ ಆಕ್ಸ್‌ಫರ್ಡಿನ ವೈದ್ಯ ವಿಲಿಯಂ ಹೋಲ್ಡರೂ ಗಣಿತಜ್ಞ ಜಾನ್ ವಾಲಿಸನೂ ಕಿವುಡರಿಗೆ ಕಲಿಸುತ್ತ, ತಮ್ಮ ವಿಧಾನಗಳ ವಿಚಾರಗಳನ್ನು ಬರೆದಿಟ್ಟರು. ಇಕ್ಕೈಸನ್ನೆಯ ಅಕ್ಷರಮಾಲೆಯ ನೆರವಿನಿಂದ ಬರೆದು ಓದುವುದನ್ನು ಕಲಿಸುವ ರೀತಿಗಳನ್ನು ಜಾರ್ಜ್‌ಡಲ್ಗಾರ್ನೋ ಪ್ರಕಟಿಸಿದ (1680). ಹೀಗೆ ಕಿವುಡರಿಗೆ ಕಲಿಸುವುದರಲ್ಲಿ ಯುರೋಪಿನಲ್ಲೂ ಆಸಕ್ತಿ ಹುಟ್ಟಿತು.

18ನೆಯ ಶತಮಾನದಲ್ಲಿ ಬೇರೆ ಬೇರೆ ತೆರನ ಎರಡು ಶಿಕ್ಷಣ ಪದ್ಧತಿಗಳು ತಲೆಹಾಕಿದುವು. ಕೈಸನ್ನೆಗಳಿಂದ ಕಿವುಡರಿಗೆ ವಿದ್ಯೆ ಕಲಿಸುವ ಫ್ರಾನ್ಸಿನ ಪದ್ಧತಿಯನ್ನು ಚಾರಲ್ಸ್ ಮೈಕೇಲ್ ಜಾರಿಗೆ ತಂದ. ಸ್ಯಾಮ್ಯುಅಲ್ ಹೀನಿಕೆ ಜಾರಿಗೆ ತಂದ ತುಟಿಯೋದಿನ (ಲಿಪ್ ರೀಡಿಂಗ್) ಜರ್ಮನಿಯ ಪದ್ಧತಿಯನ್ನು ಮೋರಿಟ್ಜ್ ಹಿಲ್ (1805–74) ಇನ್ನಷ್ಟು ಸುಧಾರಿಸಿದ. ಇವರಿಬ್ಬರಲ್ಲಿ, ಚಾರಲ್ಸ್ ಮೈಕೇಲ್ ಕಿವುಡರಲ್ಲಿ ತೋರುತ್ತಿದ್ದ ದಯಾಪರತೆ, ದಾನಶೀಲತೆ, ಹೇರಾಸಕ್ತಿಗಳು ಬ್ರಿಟನ್, ಅಮೆರಿಕಗಳ ಎಷ್ಟೋ ಶಿಕ್ಷಕರ ಮೆಚ್ಚುಗೆ ಪಡೆದುವು. ಅವರಲ್ಲಿ ಕೆಲವರು ಪ್ಯಾರಿಸ್ಸಿನಲ್ಲಿದ್ದ ಅವನ ಶಾಲೆಗೆ ಭೇಟಿಯಿತ್ತು, ಸದ್ದಿಲ್ಲದೆ ತಿಳಿಸಿಕೊಡುವ ಅವನ ಪದ್ಧತಿಯನ್ನು ಒಪ್ಪಿಕೊಂಡರು. ವಾಡಿಕೆಯ ಕೈಸನ್ನೆಗಳಿಂದ ತಮ್ಮ ಅನಿಸಿಕೆಗಳನ್ನು ತಿಳಿಸುವ ಒಂದು ಪದ್ಧತಿಯನ್ನು ಆತ ಕಂಡುಹಿಡಿದು ಸುಧಾರಿಸಿದ. ತಮಗೆ ಕಲಿಸಿಕೊಟ್ಟವರೊಂದಿಗೂ ಕೈಸನ್ನೆಗಳನ್ನು ಅರಿತು ಬಳಸುವ ಸಾಮಾನ್ಯರೊಂದಿಗೂ ಕಿವುಡರು ಚೆನ್ನಾಗಿ ಬೆರೆತು, ಬದುಕಿ ಬಾಳುವಂತಾಗಬೇಕೆಂದೇ ಅವನ ಗುರಿಯಾಗಿತ್ತು. ಇದರೆದುರಾಗಿ, ಜರ್ಮನಿಯಲ್ಲಿ ಜಾರಿಯಲ್ಲಿದ್ದ ತುಟಿಯೋದಿನ ಪದ್ಧತಿಯ ಗುರಿ ಸಾಮಾನ್ಯ ಜನರೊಂದಿಗೇ ಹೆಚ್ಚೂ ಕಡಿಮೆ ಸರಾಗವಾಗಿ ಮಾತಾಡುವಾಗ ತುಟಿಯಾಡುವುದನ್ನು ಗಮನಿಸುತ್ತ ಅರಿತುಕೊಳ್ಳುವಂತೆ ತುಟಿಯೋದೆ ಮಾತಾಡುವುದನ್ನು ಕಲಿಸುವುದಾಗಿತು. ಇವೆರಡು ಪದ್ಧತಿಗಳೂ ಯುರೋಪು, ಅಮೆರಿಕಗಳಲ್ಲಿ ಆಗಿಂದಲೂ ರೂಢಿಯಲ್ಲಿವೆ.

ಥಾಮಸ್ ಬ್ರೇಯ್ಡ್‌ವುಡ್ ಎಡಿನ್‌ಬರೋದಲ್ಲಿ ಕಿವುಡರಿಗಾಗಿ ತೆರೆದುದೇ ಬ್ರಿಟನ್ನಿನಲ್ಲಿ ಮೊದಲನೆಯ ಶಾಲೆ. 1785ರಲ್ಲಿ ಇದನ್ನು ಲಂಡನ್ನಿಗೆ ವರ್ಗಾಯಿಸಲಾಯಿತು. ತುಟಿಯೋದಿನ

ಪದ್ಧತಿಯನ್ನಿಲ್ಲಿ ಅನುಸರಿಸಲಾಗುತ್ತಿತ್ತು. 6–7 ವರ್ಷಗಳಲ್ಲಿ ಮೊದಲನೆಯ ಸರ್ಕಾರಿ ಶಾಲೆಯೊಂದು ಆರಂಭವಾಯಿತು. ಮುಂದಿನ ಶತಮಾನದಲ್ಲಿ ಕೊನೆಯ ಪಕ್ಷ ಇಪ್ಪತ್ತಾದರೂ ಕಿವುಡ ಮೂಗರ ಪಾಲನಾಲಯಗಳು ತಲೆಯೆತ್ತಿದುವು. ಬಹುಪಾಲು ಇವಲ್ಲಿ ಸದ್ದಿಲ್ಲದೆ ತಿಳಿಸಿಕೊಡುವ ಪದ್ಧತಿಯೇ ಚಾಲ್ತಿಯಲ್ಲದ್ದು ರೂಢಿಯಾಯಿತು. ಇಷ್ಟಾದರೂ ತುಟಿಯೋದಿನ ಮೂಲಕ ಹೇಳಿಕೊಡುವುದರಲ್ಲಿ ಆಸಕ್ತರಾದ ಕೆಲವರು ಶಿಕ್ಷಕರೂ ಇದ್ದರು.

ಕಿವುಡರಿಗೆ ಸಂಬಂಧಿಸಿದ ಇನ್ನೂ ಎಷ್ಟೋ ವಿಚಾರಗಳೊಂದಿಗೆ, ಇವೆರಡೂ ಪದ್ಧತಿಗಳ ಅಗುಹೋಗುಗಳನ್ನೂ ಚರ್ಚಿಸಿ ವಿಮರ್ಶಿಸಲು, ಕಿವುಡರಿಗೆ ಕಲಿಸುವವರ ಮೊದಲನೆಯ ಅಂತಾರಾಷ್ಟ್ರೀಯ ಕೂಟ (1880) ಮಿಲಾನಿನಲ್ಲಿ ಸೇರಿತ್ತು. ಅಲ್ಲಿ ಫ್ರಾನ್ಸಿನ ಪದ್ಧತಿಗಿಂತ ಜರ್ಮನಿಯವರ ಗುರಿ, ಪದ್ಧತಿಗಳ ಕಡೆಗೇ ಬಹುಮತವೂ ಹೆಚ್ಚು ಒಲವೂ ತೋರಿಬಂತು. ಇಂಗ್ಲೆಂಡಲ್ಲಿ ಈ ಪದ್ಧತಿಯಲ್ಲಿ ನಿರತರಾಗಿದ್ದವರಲ್ಲಿ ಮುಖ್ಯನಾದವ ಥಾಮಸ್ ಆರ್ನಲ್ಡ್. ಮಾಡಿತೋರಿಸಿಕೊಡುವ ಇವನ ಕಲಿಕೆ ಪದ್ಧತಿ, ವಿಧಾನ, ರೀತಿಗಳು ಈಗಲೂ ಹೆಸರಾಗಿವೆ.

ಬ್ರಿಟನ್ನಿನಲ್ಲಿ ಕಿವುಡ ಮಕ್ಕಳಿಗೆ ಶಿಕ್ಷಣಕ್ಕೆ ಅವಕಾಶ ಮಾಡಿಕೊಡುವ ಪಾರ್ಲಿಮೆಂಟಿನ ಮೊಟ್ಟಮೊದಲಿನ ಮಸೂದೆ 1893ರಲ್ಲಿ ಕಾಯಿದೆಯಾಯಿತು. 7–16 ವಯಸ್ಸಿನ ಕಲಿಸಬಲ್ಲ ಎಲ್ಲ ಕಿವುಡ ಮಕ್ಕಳಿಗೂ ಶಿಕ್ಷಣ ಕೊಡಲು ಈ ಕಾಯಿದೆ ಕಡ್ಡಾಯಪಡಿಸಿದ್ದರಿಂದ ಕಿವುಡರಿಗಾಗಿ ಎಷ್ಟೋ ಶಾಲೆಗಳು ತೆರೆದವು. ಇವೆಲ್ಲ ತುಟಿಯೋದಿನ ಪದ್ಧತಿ ಅನುಸರಿಸಿದುವು. ಪ್ರಪಂಚದ ಎರಡು ಮಹಾಯುದ್ಧಗಳ ನಡುವೆ ಕಿವುಡಮಕ್ಕಳಿಗೆ ಎಳೆಯದರಲ್ಲೆ ಶಿಕ್ಷಣ ದೊರೆತು, ಒಂದಿಷ್ಟು ಕಿವಿ ಕೇಳಿಸುವವರಿಗಾಗಿ ಗುಂಪಿನಲ್ಲಿ ಕೇಳುವ ಸಾಧನಗಳು (ಹಿಯರಿಂಗ್ ಎಯ್ಡ್ಸ್) ಶಾಲೆಗಳಿಗೆ ದೊರೆತವು.

ಇಂಗ್ಲೆಂಡಿನ 1944ರ ವಿದ್ಯಾಭ್ಯಾಸ ಕಾಯಿದೆಯಂತೆ, ಹೆತ್ತವರು ಇಷ್ಟಪಟ್ಟರೆ, ಕಿವುಡಾಗಿ ವಿಕಲರಾದ ಮಕ್ಕಳಿಗೆ ಎರಡನೆಯ ವಯಸ್ಸಿನಿಂದಲೇ ಕಲಿಸುವ ಏರ್ಪಾಡನ್ನು ಸ್ಥಳೀಯ ವಿದ್ಯಾಧಿಕಾರಿಗಳು ಮಾಡುವುದು ಅವರ ಕರ್ತವ್ಯ. ಐದನೆಯ ವರ್ಷದಿಂದ ಶಿಕ್ಷಣ ಕಡ್ಡಾಯವಾಗುತ್ತದೆ. ವಿದ್ಯಾಮಂತ್ರಿ ಬೇರೆ ಏರ್ಪಾಡುಮಾಡದಿದ್ದಲ್ಲಿ ಕಿವುಡರೆನಿಸಿಕೊಂಡ ಎಲ್ಲ ಮಕ್ಕಳಿಗೂ ವಿಶೇಷ ಶಾಲೆಯಲ್ಲಿ ಕಲಿಸಬೇಕು. 5ರಿಂದ 16 ವರ್ಷಗಳ ತನಕ ಪೂರಾ ಶಿಕ್ಷಣ ಕಡ್ಡಾಯ. 19–19 ವರ್ಷಗಳ ಕಿವುಡರಿಗೂ ಮಂದಗಿವಿಯವರಿಗೂ ಇನ್ನೂ ಮುಂದಿನ ಶಿಕ್ಷಣ ಕೊಡಲೂ ವಿದ್ಯಾಧಿಕಾರಿಗಳಿಗೆ ಅಧಿಕಾರವಿದೆ. ಈ ಕಲಿಕೆ ಒಂದು ಹೊತ್ತಿನದಾಗಿರಬಹುದು. ಇಲ್ಲವೇ ಹೆತ್ತವರು ಇಷ್ಟಪಟ್ಟರೆ, ವಿಶೇಷ ಇಲ್ಲವೇ ತಾಂತ್ರಿಕ ಶಾಲೆಯಲ್ಲಿ ಎರಡು ಹೊತ್ತೂ ಪಾಠ ನಡೆಸಬಹುದು. ಸರ್ಕಾರಿ ಶಾಲೆಯಲ್ಲಿನ ಶಿಕ್ಷಣಕ್ಕೆ ಶುಲ್ಕವಿಲ್ಲ. ಆದರೆ ಹೆತ್ತವರು ಖಾಸಗಿ ಶಾಲೆಗಳಲ್ಲೂ ಶುಲ್ಕ ತೆತ್ತು ಓದಿಸಬಹುದು.

**ಕಿವುಡಿನ ಪತ್ತೆ:** 5 ವರ್ಷಗಳ ಕೆಳಗಿರುವ ಮಕ್ಕಳಲ್ಲಿ ಕಿವಿ ಮಂದವಾಗಿರುವುದನ್ನು ತಿಳಿಯಲು ಹೆತ್ತವರ, ಹೆರಿಗೆಯ, ಮಕ್ಕಳ ಪಾಲನೆಯ ಕೇಂದ್ರಗಳವರು, ಎಳೆಯ ಮಕ್ಕಳ ಶಾಲೆಗಳವರೂ ಮನೆ ವೈದ್ಯರು, ಕಿವಿವೈದ್ಯರು, ಮಕ್ಕಳ ವೈದ್ಯರೊಂದಿಗೆ ಬೆರೆತು ನೆರವಾಗಬೇಕು. ಮಾತಾಡುವ ವಯಸ್ಸಿಗೆ ಬರುವ ಮುಂಚೆಯೇ ಸದ್ದುಮಾಡಿದರೆ ಮಗು ಪ್ರತಿಕ್ರಿಯೆ ತೋರದ್ದನ್ನು ಗಮನಿಸಬೇಕು. ಹಸುಗೂಸುಗಳು ಮತ್ತು ಎಳೆಯ ಮಕ್ಕಳ ಕಿವುಡನ್ನು ಪರೀಕ್ಷಿಸಲು ಒಂದು ವಿಶೇಷ ವಿಧಾನವಿದೆ.

5–7 ವಯಸ್ಸಿನ ಮಕ್ಕಳಿಗೂ ಅವರವರ ಆಳವಿಗೆ ತಕ್ಕಂತೆ ಇದೇ ವಿಧಾನ ಆಗಬಹುದು; ಇಲ್ಲವೇ ಎಷ್ಟೋ ಬಾರಿ ಆಡಿಯೊಮೀಟರಿನಿಂದ ಪರೀಕ್ಷಿಸಬಹುದು. ಈ ಮೀಟರಿನಲ್ಲಿ ಎರಡು ಬಗೆಗಳಿವೆ. ಆಡಿದ ಮಾತು ಕೇಳಿಸುವುದನ್ನು ಒಂದು ಪರೀಕ್ಷಿಸಿದರೆ, ಇನ್ನೊಂದು ಶ್ರುತಿಕವಲಿನಿಂದ ಏಳುವ ಅಚ್ಚ ದನಿಗಳನ್ನು ಕೇಳಿಕೆಯನ್ನು ಪರೀಕ್ಷಿಸುತ್ತದೆ. ದನಿಯ ಏರನ್ನು ಎರಡರಲ್ಲೂ ಚೆನ್ನಾಗಿ ಹತೋಟಿಯಲ್ಲಡಬಹುದು. ಅವಕಾಶ ಇಲ್ಲವಾದ್ದರಿಂದ ಇನ್ನೂ ಬಳಕೆಗೆ ಬಾರದಿರುವ ಆಲಿಸುವ ಒಳಬಲವನ್ನು ಐದು ವರ್ಷ ಮೀರದವರಲ್ಲಿ ಅಳೆಯಬೇಕು. ಆಲಿಸುವ ಬಲವನ್ನು ಶಾಲಾಮಕ್ಕಳ ಎಂದಿನ ವೈದ್ಯ ಪರೀಕ್ಷೆಯಲ್ಲೋ ಪಾಠಗಳಲ್ಲಿ ಹಿಂದೆ ಬೀಳುವ್ಯದರಿಂದಲೋ ಗುರಿತಿಸಿ ಗಮನಿಸಬಹುದು.

ಶಾಲೆ ಸೇರುವ ಮುಂಚಿನ ವಯಸ್ಸಿನ ಕಿವುಡು ಮಕ್ಕಳನ್ನು ಮುಖ್ಯವಾಗಿ 3 ತಂಡಗಳಲ್ಲಿ ವಿಂಗಡಿಸಬಹುದು. 3 ಅಡಿಗಳು ಇಲ್ಲವೇ ಇನ್ನೂ ದೂರದಿಂದ ಬರುವ ಸುಮಾರು ಗಟ್ಟಿಯಾದ ದನಿಯನ್ನು ಕೇಳಿಸಿಕೊಳ್ಳುವವು, ಒಂದು ಅಡಿಯೊಳಗೆ ಮಾತ್ರ ಗಟ್ಟಿಸದ್ದನ್ನು ಆಲಿಸಬಲ್ಲವರು, ಬರೀ ಕಿವಿಯಿಂದ ಏನೂ ಕೇಳದವರು– ಹೀಗೆ. ಐದರೊಳಗಿನವರು ಮಾತು ಕೇಳಿಸಿಕೊಳ್ಳಬಲ್ಲರೆಂಬುದನ್ನು ಕಂಡುಕೊಂಡರೆ, ಮನೆಯಲ್ಲೂ ಕೂಸುಗಳ ಶಾಲೆಯಲ್ಲೂ ತರಬೇತೊಂದಿಗೆ ತೀರ ಎಳೆಯ ವಯಸಿಂದಲೇ ತುಟಿಯೋದಿಂದ ಕಲಿವುದನ್ನೂ ರೂಢಿಸಿಕೊಳ್ಳಬಹುದು. ಉಳಿದಿರುವ ಕೇಳಿಕೆಯ ಬಲ, ಕಿವುಡಾದ ವಯಸ್ಸು ಕಲಿಕೆಯ ಮಟ್ಟಗಳಿಗೆ ತಕ್ಕಂತೆ, ಶಾಲೆಗೆ ಹೋಗುವೆ ಮಕ್ಕಳ ಶಿಕ್ಷಣವನ್ನು ರೂಪಿಸಬೇಕು.

ಕಿವಿ ಮಂದವಾಗಿರುವ ಮಕ್ಕಳನ್ನು ಹೀಗೆ ವಿಂಗಡಿಸಬಹುದು: ಸಾಮಾನ್ಯ ಶಾಲೆಯಲ್ಲಿ ಚೆನ್ನಾಗಿ ಮುಂದುವರಿಯಲು ತೊಡಕಾಗದಷ್ಟು ಕೊಂಚವೇ ಕಿವುಡಾದ ಮಕ್ಕಳು, ತರಗತಿಯಲ್ಲಿ ಕೂರಲು ಸರಿಯಾದ ಜಾಗ ಕೊಟ್ಟು, ತುಟಿಯೋದುವುದರಲ್ಲಿ ವಿಶೇಷ ತರಬೇತಿನ ನೆರವನ್ನೋ ಕೇಳುವ ಸಾಧನವನ್ನೋ ಇಲ್ಲವೇ ಇವೆರಡನ್ನೋ ಪಡೆದು, ಅರೆಬರೆ ಕಿವುಡಾಗಿದ್ದರೂ ಎಂದಿನ ಸಾಮಾನ್ಯ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು; ಪೂರಾ ಕಿವುಡಾಗದಿದ್ದರೂ ಕಿವುಡ ಎನಿಸಿಕೊಂಡು ಕಿವುಡರಿಗಾಗಿರುವ ವಿಶೇಷ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು.

**ಕಿವುಡರ ಶಾಲೆಗಳು:** ಕಿವುಡರಿಗಾಗಿ ಬ್ರಿಟನ್ನಿನಲ್ಲಿ ಸರ್ಕಾರದ ವಿಶೇಷ ಶಾಲೆಗಳಿವೆ. ದಿನದ ಶಾಲೆಗಳು ಸರ್ಕಾರದವು. ಅನ್ನವಸತಿಗಳೂ ದೊರೆವ ವಿದ್ಯಾಶಾಲೆಗಳು ಖಾಸಗಿಯವು. ಖಾಸಗಿಯವರು ನಡೆಸುವ ದಿನದ ಶಾಲೆಗಳೂ ಇವೆ. ಎಲ್ಲ ಖಾಸಗಿ ಶಾಲೆಗಳಿಗೂ ಸರ್ಕಾರ ಮನ್ನಣೆಯಿತ್ತು ಒಬ್ಬ ವಿದ್ಯಾರ್ಥಿಗೆ ಇಷ್ಟೆಂದು ಕೊಡುಗೆ ಕೊಡುತ್ತದೆ. ಬ್ರಿಟನ್ನಲ್ಲಿ ಬಾಯ್ದೆರೆಯದೇ ಅಲ್ಲದೆ ಸದ್ದಿಲ್ಲದ ಕೈಸನ್ನೆಯ ವಿಧಾನಗಳೆರಡರಲ್ಲೂ ಕಲಿಸುತ್ತಿರುವರು. ಕಿವಿಯಿಂದ ಕೇಳಿಸಿಕೊಳ್ಳಲಾರದ ಮಕ್ಕಳು ಇಂಗ್ಲಿಷನ್ನು ಅರಿತು ಚೆನ್ನಾಗಿ ಬಳಸುವಂತಾಗಲೆಂಬುದೇ ಮುಖ್ಯ ಗುರಿ. ಆದರೆ ಮಾನಸಿಕ ಹಾಗೂ ಸಾಮಾಜಿಕ ಗುರಿಗಳಲ್ಲಿ ಇವೆರಡೂ ಒಂದಕ್ಕೊಂದು ಭಿನ್ನವೆನಿಸಿವೆ.

ಸಾಮಾನ್ಯವಾಗಿ, ಯೋಚಿಸುವುದರಲ್ಲಿ ಪದಗಳ ಪಾತ್ರ, ಜನಸಾಮನ್ಯರೊಂದಿಗೆ ವಿಚಾರ ವಿನಿಮಯ ನಡೆಸಲೋಸುಗ ತುಟಿಯೋದುವುದರ, ಮಾತಿನ ಪಾತ್ರ, ಇವುಗಳ ಹೆಚ್ಚಳಿಕೆಯನ್ನು ತುಟಿಯೋದಿನ ವಿಧಾನ ಒತ್ತಿಹೇಳುತ್ತದೆ. ಅವನ ಕಲಿಕೆಯೂ ಇನ್ನೊಬ್ಬರಿಗೆ ತಿಳಿಸುವ ರೀತಿಯೂ ಕೇವಲ ಬೆರಳಿನ ಕಾಗುಣಿತ, ಕೈಸನ್ನೆಳು. ಬರವಣಿಗೆಗಳಿಗೆ ಮಿತಿಗೊಂಡಿರುವುದಕ್ಕಿಂತಲೂ ತುಟಿಯೋದಿನ ವಿಧಾನ ಚೆನ್ನಾಗಿ ಕೈಗೂಡಿರುವ ವಿದ್ಯಾರ್ಥಿ ತನ್ನ ಮನೆಯಲ್ಲೂ ಕೆಲಸಮಾಡುವ ಪರಿಸರದಲ್ಲೂ ಸಾಮಾಜಿಕವಾಗಿ ತುಂಬುಜೀವನ ನಡೆಸಬಲ್ಲನೆಂಬುದು ನಿಜ. ಆದ್ದರಿಂದ ಮೂಲತಃ ಕಿವುಡು, ಮೂಕತನದ ವಿಕಲತೆಯ ವಿಚಾರವಾಗಿ ಯೋಚಿಸುವುದರಲ್ಲಿ ತುಟಿಯೋದಿನ ಹಾಗೂ ಸದ್ದಿಲ್ಲದೆ ವಿಧಾನಗಳು ಎರಡೂ ಬೇರೆ ಬೇರೆ ಬಗೆಗಳನ್ನು ಸೂಚಿಸುವುವು. ಆಲಿಸುವ ಪ್ರಪಂಚದಲ್ಲಿ ಕಿವುಡ ಮಗು ಬದುಕಿ ಬಾಳಿ ಅದರೊಂದಿಗೆ ಸಂಪರ್ಕ ಬೆಳೆಸಿ ಎಂದಿನ ಸಮಾಜದಲ್ಲಿ ಎಷ್ಟೇ ಮಿತವಾದರೂ ತನ್ನ ಪಾತ್ರವನ್ನು ವಹಿಸುವಂತೆ ಮಾಡುವ ಗುರಿ ತುಟಿಯೋದಿನ ವಿಧಾನಕ್ಕಿದೆ.

ಕಿವುಡ ಮಗುವಿಗೆ ಸದ್ದಿಲ್ಲದೆ ವಿಧಾನದ ಕಲಿಕೆಯಲ್ಲಿ ಎಷ್ಟೇ ತರಬೇತು ಕೊಟ್ಟರೂ ಅದರ ಸಮಾಜ ಬಾಳುವೆ, ಚಟುವಟಿಕೆಗಳು ಬೆರಳಿಂದ ಕಾಗುಣಿತ ಬಿಡಿಸುವವರ, ಕೈಸನ್ನೆ ಅರಿತವರು ಮಾತ್ರ ಇರುವ ಸಮಾಜಕ್ಕೆ ಮಿತಿಗೊಂಡಿರುತ್ತದೆ. ಸಾಧಾರಣ ಮಕ್ಕಳಲ್ಲಿ ಇರುವ ಹಾಗೇ ಕಿವುಡ ಮಕ್ಕಳಲ್ಲೂ ಅವುಗಳ ಬುದ್ಧಿಶಕ್ತಿ, ಅಳವು, ಇಷ್ಟ. ಹಿಂದಿನ ಅನುಭವ. ಪರಿಸರ–ಇವೆಲ್ಲ ಒಬ್ಬೊಬ್ಬನಲ್ಲೂ ಬೇರೆ ಬೇರೆ. ಆದುದರಿಂದ ತುಟಿಯೋದುವುದರಲ್ಲೂ ಮಾತಾಡುವುದರಲ್ಲೂ ಎಲ್ಲರೂ ಅಷ್ಟೇ ಚೆನ್ನಾಗಿ ಕಲಿಯಲಾರದಾದರೆ, ಸದ್ದಲ್ಲದೆ ವಿಧಾನದಿಂದ ಕಲಿಸುವ ತರಗತಿಗೆ ವರ್ಗವಾಗುವುದು.

ಒಳ್ಳೆಯ ಕೇಳುವ ಸಾಧನವಿರುವ, ಚೆನ್ನಾಗಿ ಮುಂದುವರಿಸಿ ಕಿವುಡರ ಶಾಲೆಗಳಲ್ಲಿ ಕೊಂಚವಾದರೂ ಕಿವಿಕೇಳುವ ಮಕ್ಕಳು ಆಲಿಸುವುದರೊಂದಿಗೆ ತುಟಿಯೋದಿ ಮಾತಾಡಲು ಯತ್ನಿಸುವುವು.

ತೀರ ಕಿವುಡಾದ ಮಗು ಕೇವಲ ತುಟಿಯೋದಿ ತಿಳಿದುಕೊಳ್ಳುತ್ತದೆ. ಹೆಜ್ಜೆ ಹೆಜ್ಜೆಯಾಗಿ, ತುಟಿಗಳ ಮೇಲೆ ಪದಗಳು ಮೂಡುವುದನ್ನು ನೋಡಲು ಅವಕಾಶ ಕೊಡುತ್ತ ಬರುವುದರಿಂದ, ಕಿವುಡ ಮಗುವಿನ ಯೋಜನೆ, ಅದರ ಸಮಾಜ ಜೀವನ, ತಿಳಿವಳಿಕೆಯ ಗಳಿಕೆಗಳಲ್ಲಿ ಅದರ ಪಾತ್ರ ಮುಖ್ಯವಾಗಬಹುದು. ಕಿವಿ ಸರಿಯಾಗಿ ಕೇಳಿಸುವ ಮಗುವಿನಷ್ಟು ಬೇಗನೆ ಈ ಮಗು ಕಲಿಯಲಾರದು. ಏಕೆಂದರೆ, ಕಿವಿ ಕೇಳುವ ಮಗು ಶಾಲೆಗೆ ಬರುವ ಹೊತ್ತಿಗೇ ಅರ್ಥವಾಗುವ ರೂಪದಲ್ಲಿ ಬಳಕೆಯ ಮಾತುಗಳನ್ನು ತಿಳಿದು ಬಳಸುವಂತಿರುವುದು. ಆದರೆ, ಕಿವುಡ ಮಗು ಶಾಲೆಗೆ ಕಾಲಿಟ್ಟಮೇಲೇ ಮಾತಾಡಲು ಕಲಿಯಬೇಕಾಗುತ್ತದೆ. ತುಟಿಯೋದು. ಜೊತೆಗೆ ಉಚ್ಚಾರ–ಇವೆರಡನ್ನೂ ಹೊಚ್ಚ ಹೊಸದಾಗಿ ಕಲಿಯಲೇಬೇಕು. ಗೊತ್ತಾದ ನೆರವೂ ವಿಶೇಷ ತರಬೇತೂ ಇಲ್ಲದೆ ತನಗೆ ತಾನೇ ಇವೆರಡನ್ನೂ ಇದು ಕಲಿವಂತಿಲ್ಲ. ಇನ್ನೊಬ್ಬರಿಗೆ ಕೇಳಿಸುವ ಅರ್ಥವಿರುವ, ಉಚ್ಚರಿಸುವ ಮಾತನ್ನು ಆಡಲು, ಮಗುವಿನ ಮುಟ್ಟಿ ತಿಳಿವ ಅರಿವು ತಾಳಗತಿಯನ್ನು ಗಮನಿಸುವ ಒಳಬಲವೂ ಮುಖ್ಯವಾದುವು. ಕಿವುಡು ಮಗು ಕೊಂಚವಾದರೂ ಅಲಿಸಬಹುದಾದರೆ, ಅದಕ್ಕೆ ಅರ್ಥವಾಗುವ ಮಾತನ್ನು ಕೇಳುವುದರ ಜೊತೆಗೇ ತುಟಿಯೋದುತ್ತಿದ್ದರೆ, ನುಡಿ ಬೇಗನೆ ಹತ್ತುತ್ತದೆ. ಅದರ ಮಾತಿನ ಮಟ್ಟವೂ ಮೇಲಾಗುತ್ತದೆ. ಬರುಬರುತ್ತ ಬಾಯ್ದೆರೆಯ ಶಿಕ್ಷಣಕ್ಕೆ ತಕ್ಕನಾಗುವ ಕಿವುಡ ಮಗು ಮಾತಿಲ್ಲದ ಗತಿಯಿಂದ ಮಾತುಗಳು ತುಂಬಿ ಬರುತ್ತವೆ. ಬೇರೆಯವರು ಸರಿಯಾಗಿ ಉಚ್ಚರಿಸಿ ಆಡಿದ ಮಾತನ್ನು ತಿಳಿವಂತಾಗುತ್ತದೆ.

ತುಟಿಯೋದುವುದು: ಕಿವುಡ ಮಗುವಿನ ಕಲಿಕೆಯ ಮೊದಲ ಹಂತಗಳಲ್ಲಿನ ತುಟಿಯೋದಿನ ಪಾತ್ರ ಮುಂದೆಂದಾದರೂ ಕಿವುಡಾದ ವಯಸ್ಕನದಕ್ಕಿಂತ ಬೇರೆ ಆಗಿರುವುದು. ಕಿವುಡ ಮಗು ತಿಳಿದುಕೊಂಡು ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ತುಟಿಯೋದುವುದೇ

ಮುಖ್ಯ ದಾರಿ. ಆದರೆ ವಯಸ್ಕನಿಗೂ ಮಾತು ಕಲಿತಮೇಲೆ ಕಿವುಡಾದ ಮಗುವಿಗೂ ತನಗಾಗಲೇ ಗೊತ್ತಿರುವ ನುಡಿಯನ್ನು ಅರಿಯಲು ತುಟಿಯೋದುವುದು ಒಂದು ಹೊಸದಾರಿ ಅಷ್ಟೆ.

ತನ್ನೊಂದಿಗೋ ಬೇರೆಯವರೊಂದಿಗೋ ಜನ ಕೇಳಿಸುವ ದೂರದಲ್ಲಿ ಮಾತಾಡುತಿರುವಾಗ ಕಿವಿ ಚೆನ್ನಾಗಿ ಕೇಳುವ ಮಗು ಪದಗಳು, ವಾಕ್ಯಗಳ ಪೂರ್ತಿ ಪಾಠವನ್ನು ಆಲಿಸುವುದು. ಆದರೆ ಅದೇ ಕಿವುಡ ಮಗು ತುಟಿಯೋದುತ್ತಿರುವಾಗ ಪದಗಳ ವಾಕ್ಯಗಳ ಪೂರ್ತಿ ಪಾಠವನ್ನು ಅಲ್ಲೊಂದಿಲ್ಲೊಂದು ಮಾತ್ರ ತಿಳಿದುಕೊಳ್ಳಬಲ್ಲುದು. ಓದಿಸುವುದರಿಂದ ಪೂರ್ತಿ ಪಾಠಗಳನ್ನು ತಿಳಿಸಿಕೊಡಬಹುದು. ಈ ಕಾರಣದಿಂದಲೇ ತುಟಿಯೋದುವುದನ್ನು ಆರಂಭಿಸಿದ ಮೇಲೆ, ಅದರ ಜೊತೆಗೆ ಓದುವುದನ್ನೂ ಕಲಿಸುತ್ತ ಬಂದರೆ ಒಳ್ಳೆಯದು. ಒಟ್ಟಿನಲ್ಲಿ ಕಿವಿಕೇಳುವಷ್ಟು ಆಲಿಸುತ್ತ ತುಟಿಯೋದುತ್ತ ಮಾತಾಡುತ್ತ, ಓದುವುದಾದರೆ ಮಾತ್ರ ಕಿವುಡ ಮಗುವಿಗೆ ಹೇಳಿಕೊಟ್ಟಿದ್ದು ಚೆನ್ನಾಗಿ ಹತ್ತಿ ನಿಲ್ಲುತ್ತದೆ.

ಬೆರಳು ಕಾಗುಣಿತ: ಬ್ರಿಟನ್ನಿನಲ್ಲಿ ಇಕ್ಕೈಸನ್ನೆಯ ಅಕ್ಷರಮಾಲೆಯೂ ಅಮೇರಿಕ ಮತ್ತಿತರ ದೇಶದಲ್ಲಿ ಒಂಟಿಕೈಸನ್ನೆಯದೂ ಚಾಲ್ತಿಯಲ್ಲಿವೆ. ಪುರಾತನ ಕಾಲದಿಂದಲೂ ಅಂಕಿಗಳನ್ನು ಬೆರಳುಗಳಲ್ಲಿ ಸನ್ನೆಮಾಡಿ ತೋರುವ ವಾಡಿಕೆಯಿದೆ. ಮೂಕನುಡಿಯಾಗಿ ಬೆರಳುಗಳಿಂದ ಕಾಗುಣಿತ ಬಿಡಿಸುವ ಒಂದು ಬಗೆ ಮಧ್ಯಯುಗದಲ್ಲಿ ಬಳಕೆಯಲ್ಲಿದ್ದಂತೆ ತೋರುತ್ತದೆ. ಮೂರು ಒಂಟಿಕೈ ಅಕ್ಷರಮಾಲೆಗಳನ್ನು ಕಾಸ್ಮಾಸರ್ ಕೊನೆಲ್ಲಿಯಸ್ (1579) ವಿವರಿಸಿದ್ದ. ಇವನ್ನು ಅನುಸರಿಸಿ ಬೋನೆ ಒಂಟಿ ಕೈಬೆರಳು ಅಕ್ಷರ ಮಾಲೆಯನ್ನು ಬಣ್ಣಿಸಿದ. ಗಲ್ಲಾಡೆಟ್ ಇದನ್ನೇ ಫ್ರಾನ್ಸಿಗೂ ಆಮೇಲೆ ಅಮೆರಿಕಕ್ಕೂ ತಂದ. ಬ್ರಿಟನ್ ಒಂದನ್ನು ಬಿಟ್ಟರೆ, ಉಳಿದೆಲ್ಲ ನಾಡುಗಳಲ್ಲೂ ಈಗ ಜಾರಿಯಲ್ಲಿರುವ ಬೆರಳು ಕಾಗುಣಿತ ಈ ವಿಧಾನವೇ; ಇಕ್ಕೈಸನ್ನೆಯ ಇಂಗ್ಲಿಷ್ ಕಾಗುಣಿಯ ಬ್ರಿಟನ್ನಿನಲ್ಲಿ ಜಾರಿಯಲ್ಲಿದೆ.

ಬೆರಳು ಕಾಗುಣಿತದಲ್ಲಿ ಇಂಗ್ಲಿಷ್ ಅಕ್ಷರಮಾಲೆಯ ಒಂದೊಂದು ಅಕ್ಷರವನ್ನೂ ಬಿಡಿಸಬೇಕು. ಕೈಸನ್ನೆ ಅಕ್ಷರಮಾಲೆಯಿಂದ ಕಲಿತ ನುಡಿ ಬಾಯ್ದೆರೆಯಿಂದ ಕಲಿತ ಹಾಗೇ ಇರುವುದು. ಮಾತಾಡುವುದನ್ನು ಬಿಟ್ಟರೆ, ಬೆರಳು ಕಾಗುಣಿತದಿಂದಲೋ ಬರೆದ ಇಂಗ್ಲಿಷಿಂದಲೋ ಕಿವುಡ ತನ್ನ ಮನದಲ್ಲಿರುವುದನ್ನು ಹೊರಪಡಿಸುವನು. ಬೆರಳು ಕಾಗುಣಿತ ತಿಳಿದು ಬಳಸುವವರೊಂದಿಗೆ ಮಾತ್ರ ಇದು ಫಲಕಾರಿ. ಆದರೆ ದೂರದಿಂದ ತುಟಿಯೋದುವುದು ಕಷ್ಟ. ಚೂರದಿಂದಲೇ ಕಂಡು ತಿಳಿಯಬಹುದಾದ್ದರಿಂದ ಹುಟ್ಟು ಕಿವುಡರ ಕೂಟಗಳಲ್ಲಿ ಕೈಸನ್ನೆ ವಿಧಾನ ಹೆಚ್ಚು ಬಳಕೆಗೆ ಬರುತ್ತದೆ.

**ಸನ್ನೆಗಳು:** ತಮಗೆ ತಾವೆ ಮಾತನಾಡುವುದು ಅಭ್ಯಾಸವಾಗುವ ಮೊದಲೇ ಕಿವಿ ಕೇಳಲಿ ಕೇಳದಿರಲಿ, ಎಲ್ಲ ಎಳೆಯ ಮಕ್ಕಳೂ ಹೆಚ್ಚು ಕಡಿಮೆಯಾಗಿ ತೋರುವ ಹಾವಭಾವಗಳಿಗೆ ಈ ಪದವನ್ನು ಬಳಸುವುದಿಲ್ಲ. ವಾಡಿಕೆಯಲ್ಲಿರುವ ಹಾವಭಾವ ಸನ್ನೆಗಳನ್ನು ಕಿವುಡರೂ ಎಷ್ಟೋ ಬಾರಿ ತಂತಮ್ಮಲ್ಲೇ ಬಳಸುತ್ತಾರೆ. ವಾಡಿಕೆಯಲ್ಲಿರುವವನ್ನೇ ತಮ್ಮ ಸನ್ನೆಗಳನ್ನಾಗಿ ರೂಪಿಸಿಕೊಂಡಿರುವು. ಒಂದೊಂದು ಸನ್ನೆಗೂ ಅವರದೇ ಬೇರೆ ಅರ್ಥವಿದೆ. ಸದ್ದಿಲ್ಲದೆ ಸನ್ನೆ ಪದ್ಧತಿಯೊಂದಿಗೆ ಇವೂ ಉಳಿದು ಬಂದಿವೆ. ಇವುಗಳಲ್ಲಿ ಬಹುಪಾಲು ಪದಗಳನ್ನು ಸೂಚಿಸದೆ, ಮನೋಭಾವನೆಗಳನ್ನು ತೋರಿಸುವುವು. ಇದರ ಬಳಕೆಯಲ್ಲಿ ಯಾವ ವ್ಯಾಕರಣ ಸೂತ್ರಗಳೂ ಇಲ್ಲ. ಆದರೆ ಈ ಪದ್ಧತಿಯ ಮೂಲಕರ್ತರು ಇದಕ್ಕೆ ವ್ಯಾಕರಣ ಸೂತ್ರಗಳನ್ನೂ ಹೇಳಬಹುದೆನ್ನುವರು. ಸರ್ ರಿಚರ್ಡ್ ಪೇಜೆಟ್ ಇಂದಿನ ಹಾವ ಭಾವ ಸನ್ನೆಗಳ ಪದ್ಧತಿಯನ್ನು ರೂಪಿಸಿದ್ದಾನೆ.

ಕಸಬು ತರಬೇತು: ಶಾಲೆ ಕಲಿಕೆ ಮುಗಿದ ಮೇಲೆ ಹೊಟ್ಟೆಪಾಡಿಗಾಗಿ ಮುಂದೆ ಇವರೆಲ್ಲ ಒಂದು ಕಸಬನ್ನು ಹಿಡಿಯುವುದರಿಂದ, ಕಿವುಡರಿಗೆ ಕಲಿಸುವಾಗಲೆಲ್ಲ ಕಸಬಿಗಾಗಿ ತರಬೇತು ಕೊಡುವುದು ಮುಖ್ಯ. ಕೈಯಿಂದ ಮಾಡಲಾಗದ ಕಸಬನ್ನು ಹಿಡಿಯುವವರು ಅಪರೂಪ. ಎಲ್ಲ ಕಿವುಡರ ಶಾಲೆಗಳಲ್ಲೂ ಕೈಕೆಲಸದ ಕಸಬುಗಳನ್ನು ಕಲಿಸುವ ಏರ್ಪಾಡುಗಳಿರುತ್ತವೆ. ಇನ್ನೂ ಕೆಲವಲ್ಲಿ ಕಸಬು ಹಿಡಿಯಲು ಕುಶಲ ಕಲೆಗಳನ್ನೂ ಓದಿನ ಜೊತೆಗೋ ಕೊನೆಯ 3 ವರ್ಷಗಳಲ್ಲೋ ಕಲಿಸುವರು.

ಗಳಿಸಿದ ಕಿವುಡತನ: ಕಿವುಡರು, ಮಂದಗಿವಿಯವರು ಎಂದರೆ ಯಾವ ತೆರನ ವೈದ್ಯ ಚಿಕಿತ್ಸೆ ಇಲ್ಲವೇ ಶಸ್ತ್ರಕ್ರಿಯೆಯಿಂದಲೂ ಸರಪಡಿಸಲಾಗದ ಕಿವುಡು ಅನುಭಿಸುತ್ತಿರುವವರು. ಇದಕ್ಕೆ ಎರಡು ಪರಿಹಾರಗಳಿವೆ. ತುಟಿಯೋದುವುದು ಒಂದು; ತಕ್ಕನಾದ ಕೇಳುವ ಸಾಧನವನ್ನು ಹಾಕಿಕೊಂಡು ಬಳಸುವುದು ಎರಡನೆಯದು. ಆದರೆ ಬಹುಮಟ್ಟಿಗೆ ಇವೆರಡೂ ಸೇರಿದರೇ ಅನುಕೂಲ ಹೆಚ್ಚು. ತುಟಿಯೋದುವುದನ್ನು ಕೆಲವು ಶಾಲೆಗಳಲ್ಲಿ ಮಾತ್ರ ಕಲಿಸುವರು. ಕೆಲವೆಡೆ ಇವರಿಗಾಗಿ ಮಿತ್ರ ಮಂಡಲಿಗಳೂ ಇವೆ. (ಆರ್.ಎ.ಎನ್.; ಡಿ.ಎಸ್.ಎಸ್.)

**ಕಿವುಡು ಮತ್ತು ಅರೆಗಿವುಡು :** ಕಿವುಡು ಎಂದರೆ ಕೇಳುವ ಶಕ್ತಿ ಇಲ್ಲದಿರುವುದು. ಇದು ಸ್ವಲ್ಪ ಕಿವುಡಿನಿಂದ ಪೂರ್ತಿ ಕಿವುಡಿನವರೆಗೆ ಬೇರೆ ಬೇರೆ ಮಟ್ಟಗಳಲ್ಲಿರಬಹುದು. ಸ್ವಲ್ಪ, ಸುಮಾರು, ಮತ್ತು ಪೂರ್ತಿ ಎಂಬವು ಕಿವುಡಿನ ಪ್ರಮಾಣವನ್ನು ಸೂಚಿಸುವ ಪದಗಳು. ಕೇಳುವ ಶಕ್ತಿ ಇದ್ದರೂ ದಿನಚರಿಯಲ್ಲಿ ಉಪಯೋಗಕ್ಕೆ ಬಾರದಷ್ಟು ಕಿವುಡು ಇರುವವರಿದ್ದಾರೆ. ಅಳತೆಯ ಮಾತಿನಲ್ಲಿ ಕಿವುಡು ಎಂದರೆ 30 ಡೆಸಿಬೆಲ್‌ಗಳಿಗಿಂತ ಹೆಚ್ಚಿರುವುದು (ಶ್ರವ್ಯ ಶಬ್ದದ ತೀವ್ರತೆಯ ಒಂದು ಮಾನ 1 ಡಿಸಿಬೆಲ್ = 1,259. 30 ಡೆಸಿಬಲ್ = $(1.259)^{30}$. (**ನೋಡಿ– ಡೆಸಿಬೆಲ್**). ಕ್ಷಣಕ್ಕೆ 500. 1,000 ಮತ್ತು 2,000 ಕಂಪನಿವಿರುವ ಶ್ರುತಿಗಳಲ್ಲಿ 70 ಡೆಸಿಬೆಲ್‌ಗಳಿಗಿಂತ ಹೆಚ್ಚು ಕಿವುಡಾಗಿರುವವರನ್ನು ಮಾತ್ರ ಕಿವುಡರು ಎಂದು ಪರಿಗಣಿಸಬೇಕೆಂದು ಭಾರತ ಸರ್ಕಾರ ನಿಗದಿಮಾಡಿದೆ. ಈ ಲೇಖನದಲ್ಲಿ ಕಿವುಡು ಎಂದರೆ 30 ಡೆಸಿಬೆಲ್‌ಗಳಿಗಿಂತ ಹೆಚ್ಚಿರುವುದು ಎಂದು ತಿಳಿಯಬೇಕು.

ಹೆಚ್ಚು ಕಿವುಡಾಗಿರುವವರು ಭಾರತದಲ್ಲಿ 10 ದಶಲಕ್ಷಗಳಷ್ಟಿರುವರೆಂದು ಅಂದಾಜಾಗಿದೆ. ಸ್ವಲ್ಪ ಕಿವುಡಿರುವ ಕೆಪ್ಪರನ್ನೂ ಸೇರಿಸಿಕೊಂಡರೆ ಈ ಸಂಖ್ಯೆಯ ಬಹು ದೊಡ್ಡದಾಗುತ್ತದೆ. ಈ ಅಂಕಿಅಂಶಗಳು ಅಲ್ಲಲ್ಲಿ ನಡೆಯುವ ಜನಗಣತಿಯಿಂದ ತಿಳಿಯುತ್ತವೆ. ದೇಶದ ಕೆಲವು ಭಾಗಗಳಲ್ಲಿ ಶಾಲಾಬಾಲಕರ ವೈದ್ಯಪರೀಕ್ಷೆಯಿಂದ ಶೇ. 17–20 ರಷ್ಟು ಮಕ್ಕಳು ಸ್ವಲ್ಪ ಕಿವುಡಿನಿಂದ ತೊಂದರೆಪಡುವುದು ಗೊತ್ತಾಗಿದೆ.

1971ನೆಯ ಸಾಲಿನ ಜನಗಣತಿಯಿಂದ ಭಾರತದ ಜನರಲ್ಲಿ ಎಷ್ಟು ಕಿವುಡತನವೆದೆಯೆಂದು ತಿಳಿಯಲು ಸಾಧ್ಯವಾಗಿದೆ.

**ಕಿವುಡಿನ ವಿಧಗಳು:** ವಾಯುಮಾಧ್ಯಮದಲ್ಲಿ ಶಬ್ದತರಂಗಗಳು ಸರಿಯತ್ತಿರುತ್ತವೆ. ಈ ಅಲೆಗಳು ಹೊರಗಿವಿಯಲ್ಲಿ ನುಗ್ಗಿ ನಡುಗಿವಿಯಲ್ಲಿನ ಮೂರು ಸಣ್ಣ ಮೂಳೆಗಳ ಮೂಲಕ ಒಳಗಿವಿಯನ್ನು ಸೇರುತ್ತವೆ. ಅಲ್ಲಿ ಸಣ್ಣ ರೋಮಕಣಗಳಿರುವ ಕಾರ್ಟಿ ಅಂಗವಿದೆ. ವಿಂಗಡಿಸಲಾದ ಸಮಾಚಾರ ಕಿವಿಯ ನರದ ಮೂಲಕ ಮಿದುಳಿನಲ್ಲಿರುವ ಶ್ರವಣ ಕೇಂದ್ರವನ್ನು ತಲಪುತ್ತದೆ. ಅಲ್ಲಿ ಸಮಾಚಾರದ ವಿವರಗಳನು ತಿಳಿಯಲಾಗುತ್ತದೆ. ಶಬ್ದ ಸಮಾಚಾರಗಳನ್ನು ಒಯ್ಯುವ ಈ ಮಾರ್ಗಕ್ಕೆ ಅಡಚಣೆಯೊಡ್ಡುವ ಯಾವ ಅಸಾಧಾರಣ ಸ್ಥಿತಿ ಅಥವಾ ಶಬ್ದ ಒಯ್ಯಲಿಕ್ಕೆ, ಕಿವಿಯ ಶಂಖದಲ್ಲಿ ನರಗಳ ಕೆಲಸಕ್ಕೆ ಅಥವಾ ಮಿದುಳಿಗೆ ಸಮಾಚಾರ ತಲುಪುವುದಕ್ಕೆ ಅಡ್ಡಿಮಾಡುವ ಯಾವ ಅಸಾಧಾರಣ ಸ್ಥಿತಿ ಅಥವಾ ರೋಗದಿಂದಲಾಗಲಿ ಕೆಳಕಾಣಿಸಿರುವ ಕಿವುಡಿನ ವಿಧಗಳುಂಟಾಗುತ್ತದೆ.

**1. ವಾಹಕಕಿವುಡು :** ಒಳಗಿವಿಗಿರುವ ಶಬ್ದದ ಅಲೆಗಳ ದಾರಿಯಲ್ಲಿ ಅಡ್ಡಿಯೊದಗುವುದು. ಇದು ಹೊರಗಿವಿಯ, ಕಿವಿದಮಟೆಯ ಮತ್ತು ನಡುಗಿವಿಯ ರೋಗಗಳಿಂದಾಗುತ್ತದೆ ಈ ರೀತಿಯ ಕಿವುಡಿರುವವರಲ್ಲನೇಕರು ತಗ್ಗುಧ್ವನಿಯಲ್ಲಿ ಮಾತನಾಡುತ್ತಾರೆ. ಇದು ಔಷಧ ಅಥವಾ ಶಸ್ತ್ರಚಿಕಿತ್ಸೆಯಿಂದ ಸರಿಹೋಗುತ್ತದೆ.

**2. ಶಂಖದ ಕಿವುಡು :** ಇದು ಒಳಗಿವಿಯಲ್ಲಿ ಕಾರ್ಟಿ ಅಂಗದ ರೋಗದಿಂದಾಗುತ್ತದೆ. ಇದರಲ್ಲಿ ಸಾಧಾರಣವಾಗಿ ದೊಡ್ಡ ಶಬ್ದಗಳಿಗೆ ವ್ಯಕ್ತಿ ಅಸಹನೆ ತೋರುತ್ತಾನೆ ಇಲ್ಲವೇ ಹೇಳಿದ್ದನ್ನು ತಪ್ಪಾಗಿ ಗ್ರಹಿಸುತ್ತಾನೆ.

**3. ನರದ ಕಿವುಡು:** ಇದು ಕಿವಿಯ ನರದ ದೌರ್ಬಲ್ಯದಿಂದಾಗುತ್ತದೆ. ಇದಿದ್ದಲ್ಲಿ ಸಾಧಾರಣವಾಗಿ ಸುಲಭವಾಗಿ ಆಯಾಸವಾಗುವುದು. ಕೇಳಿಸಿದ ಶಬ್ದ ಅರ್ಥವಾಗುವುದಿಲ್ಲ.

**4. ಮಿಶ್ರ ಕಿವುಡು:** ಮೇಲೆ ಹೇಳಿದ 1, 2 ಮತ್ತು 3ನೆಯ ವಿಧಗಳು ಒಟ್ಟಿಗಿರುವುದು.

**5. ಮಾನಸಿಕ ಕಿವುಡು:** ಇದರಲ್ಲಿ ಎರಡು ವಿಧಗಳಿವೆ. ಸನ್ನಿಯ ಕಿವುಡಿನಲ್ಲಿ ಕಿವಿಯ ಯಾವ ಭಾಗದ ರೋಗವೂ ಇರುವುದಿಲ್ಲ. ಸದಾ ಕಿವುಡು ಒಂದೇ ಮಟ್ಟದಲ್ಲಿರುವುದಿಲ್ಲ. ಇಂಥವರ ವ್ಯಕ್ತಿತ್ವದಲ್ಲೇ ಮಾರ್ಪಾಡಾಗುತಿರುತ್ತದೆ. ತೋರಿಕೆ ಕಿವುಡಿನಲ್ಲಿ ಸರಿಯಾಗಿರುವ ಮನುಷ್ಯನೇ ಕಿವುಡನಂತೆ ನಟಿಸುವುದು ಕಂಡು ಬರುತ್ತದೆ. ಕೆಲವು ಉದ್ದೇಶಗಳಿಂದ ವ್ಯಕ್ತಿ ಹೀಗೆ ನಟನೆಮಾಡುತ್ತಾನೆ.

**ನಿಷ್ಕರ್ಷೆ ಮತ್ತು ಅಳತೆ:** ಚಪ್ಪಾಳೆ, ಪಾತ್ರೆ ಶಬ್ದ ಇತ್ಯಾದಿಗಳಿಂದ ಕೂಸಿನಲ್ಲೇ ಕಿವುಡಿರುವುದನ್ನು ಪತ್ತೆಮಾಡಬಹುದು. ಮಾತು ತಿಳಿಯದಿರುವದರಿಂದ ಪ್ರಶ್ನೆಗಳಿಗೆ ಉತ್ತರ ಕೊಡುವುದರಿಂದ ಬೆಳೆದ ಮಗುವಿನಲ್ಲಿರುವ ಕಿವುಡು ತಿಳಿಯುತ್ತದೆ. ಮಾತನ್ನು ತಿಳಿಯಲಾಗದಿರುವುದು, ಅದರಲ್ಲೂ ಗುಂಪು ಸಂಭಾಷಣೆಯಲ್ಲಿ ಕಷ್ಟಕಾಣುವುದು ದೊಡ್ಡವರಲ್ಲಿ ಕಿವುಡಿನ ಮೊದಲ ಸೂಚನೆ. ಕೈಗಡಿಯಾರದ ಶಬ್ದ ಕೇಳದಿದ್ದಾಗ ಬಹು ಜನರು ವೈದ್ಯನನ್ನು ಕಾಣುತ್ತಾರೆ.

ಪಿಸುಮಾತು, ಶ್ರುತಿಚಿಮಟ ಮತ್ತು ಅಡಿಯೋಮೀಟರ್ ಪರೀಕ್ಷೆಗಳಿಂದ ಕಿವುಡಿರುವುದನ್ನು ನಿಶ್ಚಯಿಸಬಹುದು. ಒಂದು ನಿಶ್ಶಬ್ದ ಕೋಣೆಯಲ್ಲಿ 12 ಅಡಿ ದೂರದಲ್ಲಿ ಆಡಿದ ಗಟ್ಟಿಪಿಸುಮಾತನ್ನು ಸಾಮಾನ್ಯರು ಕೇಳಬಲ್ಲರು. ಆಡಿಯೋಮೀಟರ್‌ಗಳಿಂದ ಎಷ್ಟು ಕಿವುಡು ಎಂಬುದನ್ನು ಅಳತೆಮಾಡಬಹುದು.

**ಕಿವುಡಿನ ಕಾರಣಗಳು:** ಕಿವುಡು ಹಲವು ರೋಗಗಳ ಚಿಹ್ನೆ. ಇಲ್ಲಿ ಬೇರೆ ಬೇರೆ ವಯಸ್ಸಗಳಲ್ಲುಂಟಾಗುವ ಅತಿಸಾಮಾನ್ಯ ರೋಗಗಳನ್ನು ತಿಳಿಸಲಾಗಿದೆ. ಆದರೆ ನಿಜಜೀವನದಲ್ಲಿ ಇಲ್ಲಿ ಬರೆದಂತೆ ಅವು ತನಿತನಿಯಾಗಿರುವಿದಿಲ್ಲ. ಸ್ಪಷ್ಟತೆಗೆ ಈರೀತಿ ಬರೆಯಲಾಗಿದೆ.

**ಶೈಶವ ಮತ್ತು ಮೊದಲ ಬಾಲ್ಯಾವಸ್ಥೆ:** ಕೂಸಿನಲ್ಲಿ ಹುಟ್ಟು ಕಿವುಡಿರಬಹುದು. ಇದಕ್ಕೆ ಕಾರಣ ವಂಶಾವಳಿಯ ಪ್ರಭಾವ, ಅಂದರೆ ಪ್ರಬಲ ಅಥವಾ ನಿರ್ಬಲವಂಶವಾಹಿಗಳು

(ಜೀನ್) ಹೀಗೆ ಕಿವುಡು ಪರಂಪರೆಯಿಂದ ಮಗುವಿಗೆ ಬರಬಹುದು. ಗರ್ಭಕೋಶದಲ್ಲಿ ಅಥವಾ ಪ್ರಸವಕಾಲದಲ್ಲಿ ಬಸುರುನಂಜು, ಆರ್ ಎಚ್ ರಕ್ತದೋಷ, ವೈರಸ್ ರೋಗಗಳು, ನಿಧಾನ ಪ್ರಸವ ಅಥವಾ ಪ್ರಸವಗಾಯಗಳಿಂದಾಗಿ ತಾಯಿಯ ಮೂಲಕ ಮಗು ಕಿವುಡಾಗಬಹುದು. ಗದ್ದಬಾವು, ಸೀತಾಳಿ, ಮತ್ತು ಮಿದುಳು ಪೊರೆಯುರಿತಗಳು ಮಗುವಿನಲ್ಲಿ ಅತಿಕಿವುಡನ್ನುಂಟು ಮಾಡುವ ಮೂರು ಸಾಮಾನ್ಯರೋಗಗಳು. ಮಗುವಿನಲ್ಲಿ ಕಿವುಡಿಗೂ ಮಾತು ಕಲಿಯುವುದಕ್ಕೂ ನಿಕಟಸಂಬಂಧವಿದೆ.

**ಶಾಲಾಬಾಲ್ಯಾವಸ್ಥೆ:** ಕಿವಿಯ ಮೇಲೆ ಏಟು, ಪಟಾಕಿ ಸಿಡಿತದ ಶಬ್ದ ಮುಂತಾದುವುಗಳಿಂದ ಕಿವಿತಮಟೆಗೆ ಹಾನಿಯಾಗಿ ಕಿವುಡು ಬರುತ್ತದೆ. ಕಿವಿಸೋರುವುದು ಮಕ್ಕಳಲ್ಲಿ ಕಿವುಡಿಗೆ ಅತಿಸಾಮಾನ್ಯ ಕಾರಣ. ಪದೇ ಪದೇ ಬರುವ ನೆಗಡಿಯೂ ಒಂದು ಕಾರಣ. ಗಂಟಲಿನಲ್ಲಿ ಸಣ್ಣ ದುಗ್ಧಗ್ರಂಥಿಗಳ ಉರಿತವೇ ಆಗಾಗ ಬರುವ ನೆಗಡಿಗೂ ಕಿವಿಗಂಟಲುನಾಳ ಮುಚಿಕೊಳ್ಳುವುದಕ್ಕೂ ಕಾರಣ. ಈ ನಾಳದ ಮತ್ತು ನಡುಗಿವಿಯ ಒಗ್ಗದಿಕೆ ರೋಗದಿಂದ ಗೋಂದುಕಿವಿ ಎಂಬ ಸ್ಥಿತಿಯುಂಟಾಗಿ ಕಿವುಡಾಗುತ್ತದೆ.

ಹೆಚ್ಚು ಗುಗ್ಗೆ, ಮಣಿ, ಕಾಳು, ಕಲ್ಲು ಮುಂತಾದವುಗಳಿಂದ ಕಿವುಡುಂಟಾಗುತ್ತದೆ. ಇವನ್ನು ತೆಗೆಯುವುದರಲ್ಲಾಗುವ ಅಚಾತುರ್ಯದಿಂದ ಕಿವಿಗಳಿಗೆ ಆಗಾಗ ಸರಿಪಡಿಸಲಾಗದ ಹಾನಿಯಾಗುತ್ತದೆ.

**ಪ್ರೌಢಾವಸ್ಥೆ :** ಫಿರಂಗಿ ಶಬ್ದ ಮುಂತಾದ ಗಟ್ಟಿಶಬ್ದಗಳಿಂದ ಸೈನಿಕರಲ್ಲಿ ಕಿವಿದಮಟೆ ಮತ್ತು ಒಳಗಿವಿಗಳಿಗೆ ಹಾನಿಯಾಗುವುದು ಸಾಮಾನ್ಯ. ಇದು ಸಿಡಿತದ ಕಿವುಡು. ಹೊರಗಿವಿಯಲ್ಲಾಗುವ ಒತ್ತಡದ ವ್ಯತ್ಯಾಸಗಳಿಂದ ಕಿವಿದಮಟೆ ಹರಿಯುವುದಲ್ಲದೆ ಒಳಗಿವಿಯಲ್ಲಿ ಸಣ್ಣ ರಕ್ತಸ್ರಾವವಾಗುತ್ತದೆ. ಇದರಿಂದ ಮಿಶ್ರಕಿವುಡುಂಟಾಗುತ್ತದೆ. ವಿಮಾನಪ್ರಯಾಣದಲ್ಲೂ ಇದೇ ರೀತಿ ವ್ಯತ್ಯಾಸಗಳಾಗುತ್ತದೆ. ಇವು ವಿಮಾನ ಇಳಿಯುವಾಗ ಕೆಲವು ಪ್ರಯಾಣಿಕರಲ್ಲುಂಟಾಗುವ ಕಿವಿನೋವು ಮತ್ತು ಕಿವುಡಿಗೆ ಕಾರಣ.

**ನಂಜು:** ಸಾಮಾನ್ಯವಾಗಿ ಉಪಯೋಗಿಸುವ ಸ್ಟ್ರೆಪ್ಟೊಮೈಸಿನ್ ಸಲ್ಫೇಟ್ ಎಂಬ ಚುಚ್ಚುಮದ್ದು ಕಿವಿಯ ಶಂಖದ ಮೇಲೆ ವಿಷಪರಿಣಾಮವನ್ನುಂಟುಮಾಡಿ ಕೆಲವರಲ್ಲಿ ಕಿವುಡಿಗೆ ಕಾರಣವಾಗುತ್ತದೆ. ಹಾಗೆಯೇ ನೋವನ್ನು ಹೋಗಲಾಡಿಸುವ ಸ್ಯಾಲಿಸಿಲೇಟ್ ರಾಸಾಯನಿಕಗಳಿಂದಲೂ ಕಿವುಡಾಗುತ್ತದೆ. ಸಕಾಲಕ್ಕೆ ಅವುಗಳ ಸೇವನೆಯನ್ನು ನಿಲ್ಲಿಸುವುದರಿಂದ ಪರಿಣಾಮವನ್ನು ಕಡಿಮೆಮಾಡಬಹುದು ಮತ್ತು ಕೇಳುವ ಪೂರ್ಣಶಕ್ತಿಯನ್ನೂ ಮತ್ತೆ ಪಡೆಯಬಹುದು.

**ಕ್ರಿಮಿರೋಗಗಳು:** ಸಾಮಾನ್ಯವಾಗಿ ಮಕ್ಕಳಲ್ಲಿ ಕಿವಿಯ ಕೀವು ಮತ್ತು ಉರಿತವನ್ನುಂಟುಮಾಡುವ ಕ್ರಿಮಿಗಳು ದೊಡ್ಡವರನ್ನೂ ಅದೇ ರೀತಿ ಕಾಡಬಹುದು. ಒಳಗಿವಿಗೆ ಮೇಹರೋಗವಾದ ಉಪದಂಶ ತಗಲುವುದರಿಂದ ದಿಢೀರನೆ ಕಡುಕಿವುಡಾಗುತ್ತದೆ. ತತ್‌ಕ್ಷಣ ಚಿಕಿತ್ಸೆಯಾಗದಿದ್ದರೆ ಈ ಕಿವುಡು ಹೋಗುವುದಿಲ್ಲ.

**ಇತರ ರೋಗಗಳು:** ಓಟೊಸ್ಕ್ಲೀರೋಸಿಸ್: ಇದು ಒಳಗಿವಿಯ ಅಸ್ಥಿಕೋಶದ ರೋಗ. ಇದರಿಂದ ಮೂಳೆಯಲ್ಲಿ ವ್ಯತ್ಯಾಸವಾಗಿ ಸ್ಟೇಪಿಸ್ ಎಂಬ ಸಣ್ಣ ಕಿವಿಮೂಳೆಯ ಕೀಲುಕಚ್ಚಿಕೊಂಡು ಮೂಳೆ ಅದುರಲಾರದು. ಇದರಿಂದ ರೋಗಿಯಲ್ಲಿ ವಾಹಕಕಿವುಡು ಹೆಚ್ಚಾಗುತ್ತ ಬರುತ್ತದೆ. ಇದು 18ರಿಂದ 40ರ ವಯಸ್ಸಿನವರೆಗೆ ಸಾಮಾನ್ಯ. ಹೆಂಗಸರಲ್ಲಿ ಹೆಚ್ಚು. ಹಲವು ವೇಳೆ ಚೊಚ್ಚಲಬಾಣಂತಿತನದ ಅನಂತರ ಮೊದಲು ಕಾಣಿಸಿಕೊಳ್ಳುತ್ತದೆ. ಭಾರತದಲ್ಲಿ ಪಟ್ಟಣವಾಸಿಗಳಲ್ಲಿ ಹೆಚ್ಚು. ಇದರಲ್ಲಿ ಸ್ವಲ್ಪ ವಂಶಾವಳಿಯ ಪ್ರಭಾವವೂ ಇದೆ. ಇವರಲ್ಲಿ ಕೆಲವರು ಗದ್ದಲದಲ್ಲಿ ಹೆಚ್ಚು ಚೆನ್ನಾಗಿ ಕೇಳಬಲ್ಲರು. ಈ ರೋಗದ ಚಿಕಿತ್ಸೆ ಹೆಚ್ಚು ಮುಂದುವರಿದಿದೆ. ರೋಗತಟ್ಟಿದ ಎಲುಬನ್ನು ತೆಗೆದು ಕೃತಕ ಭಾಗದ ಜೋಡಣೆಯಿಂದ ಪೂರ್ಣ ಕೇಳುವ ಶಕ್ತಿ ಬರುವುದು.

**ಮಿನಿಯರ್ಸ್ ರೋಗ:** ಫ್ರೆಂಚ್ ವೈದ್ಯನಾಗಿದ್ದ ಪ್ರಾಸ್ಪರ್ ಮಿನಿಯರ್‌ನಿಂದ ಈ ಹೆಸರು ಬಂದಿದೆ. ತಲೆಸುತ್ತು, ಕಿವಿ ಗುಂಯೆನ್ನುವುದು ಮತ್ತು ಕಿವುಡು–ಇವು ಮರಳಿ ಮರಳಿ ಕಾಡುವುದು ಈ ರೋಗದ ಲಕ್ಷಣ. ಪ್ರತಿಸಲ ತಲೆಸುತ್ತು ಬಂದಾಗ ಕಿವುಡು ಮತ್ತು ಕಿವಿ ಗುಂಯೆನ್ನುವುದು ಹೆಚ್ಚುತ್ತವೆ. ತಲೆಸುತ್ತಿನಿಂದ ಯಾರೊ ಹೊಡೆಯಲು ಬಂದಂತೆ ಭಯವುಂಟಾಗಿ ರೋಗಿಗೆ ತೊಂದರೆಯಾಗುತ್ತದೆ. ಕಿವಿ ಗುಂಯೆನ್ನುವುದರಿಂದ ಹುಚ್ಚೂ ಬರಬಹುದು. ಕೆಲವರು ತಪ್ಪು ಕೇಳಿಸುವುದರಿಂದ ಗಾಸಿಪಡುತ್ತಾರೆ. ಒಳಗಿವಿಯ ಒಳನೀರು ಹೆಚ್ಚುವುದರಿಂದ ಈ ರೋಗವುಂಟಾಗುತ್ತದೆ. ಇದು ಗಂಡಸರಲ್ಲಿ ಹೆಚ್ಚು. ಉಪ್ಪು ಮತ್ತು ನೀರಿನ ಸೇವನೆಯನ್ನು ಕಡಿಮೆಮಾಡುವುದರಿಂದ ರೋಗದ ದಾಳಿಗಳನ್ನು ಹತೋಟಿಗೆ ತರಬಹುದು. ಶಾಮಕ ಮದ್ದುಗಳಿಂದ ಕಿವಿ ಗುಂಯೆನ್ನುವುದು ಕಡಿಮೆಯಾಗುತ್ತದೆ. ಮಿತಿಮೀರಿದ ಸ್ಥಿತಿಯಲ್ಲಿ ಶಸ್ತ್ರಕ್ರಿಯೆಯಿಂದ ಅಥವಾ ಶಬ್ದಾತೀತ ಅಲೆಗಳಿಂದ ಒಳಗಿವಿಯನ್ನು ನಾಶಮಾಡಬೇಕಾಗುತ್ತದೆ.

**ಮುಪ್ಪು ಶಬ್ದಹಾನಿ:** ಹಲವು ವರ್ಷ ಒಂದೇ ಶಬ್ದವನ್ನು ಎಡೆಬಿಡದೆ ಕೇಳುತ್ತಿರುವುದರಿಂದ ಆ ಶಬ್ದದ ಶ್ರವಣೇಂದ್ರಿಯ ಭಾಗಗಳು ನಾಶವಾಗುತ್ತವೆ. ಇದನ್ನು ಕೈಗಾರಿಕೋದ್ಯಮಿಗಳಲ್ಲಿ ನೋಡಬಹುದು. ಈಚೀಚೆಗೆ ಈ ಸಮಸ್ಯೆ ಆರೋಗ್ಯಾಧಿಕಾರಿಗಳ ಗಮನವನ್ನು ಎರಡು ಕಾರಣಗಳಿಂದ ಸೆಳೆದಿದೆ; ಕೈಗಾರಿಕೆಗಳಲ್ಲಿ ಹೆಚ್ಚುತ್ತಿರುವ ಸಪ್ಪಳ ಮತ್ತು ಪರಿಹಾರಧನಕ್ಕೆ ಕೆಲಸಗಾರರಿಂದ ಹೆಚ್ಚುತ್ತಿರುವ ಬೇಡಿಕೆಗಳು.

**ಮುಪ್ಪಿನ ಕಿವುಡು :** ಎರಡು ಮುಖ್ಯ ಕಾರಣಗಳಿಂದ ಮುಪ್ಪಿನಲ್ಲಿ ಕಿವುಡು ಸಹಜ. ಮುಪ್ಪಿನಿಂದ ಮಿದುಳುಶಕ್ತಿ ಕುಗ್ಗಿ ಒಳಗಿವಿಯ ಕಾರ್ಟಿ ಅಂಗ ನಶಿಸುವುದು ಒಂದು. ಮುಪ್ಪಿನಲ್ಲಿ ರಕ್ತನಾಳಗಳು ದಪ್ಪವಾಗಿ ರಕ್ತಚಲನೆ ಮಂದವಾಗಿ ರಕ್ತಗಡ್ಡೆಕಟ್ಟಿ ಸಣ್ಣನಾಳಗಳಲ್ಲಿ ಚಲನೆ ನಿಲ್ಲುವುದು ಮತ್ತು ರಕ್ತನಾಳ ಒಡೆದು ಮಿದುಳು ಕಿವಿಗಳಲ್ಲಿ ರಕ್ತಸ್ರಾವವಾಗುವುದು ಇನ್ನೊಂದು.

**ಕಿವುಡು ನಿರೋಧ:** ರೋಗಬರುವುದಕ್ಕೆ ಮುಂಚೆ ಅದು ಬರದಂತೆ ನೋಡಿಕೊಳ್ಳುವುದು ಮೇಲು. ಈ ವಿಚಾರ ಕಿವುಡಿನ ವಿಚಾರದಲ್ಲಂತೂ ಬಹುಸೂಕ್ತ; ಏಕೆಂದರೆ ಕಿವಿಯ ಕೆಲಸವನ್ನು ದೇಹದಲ್ಲಿ ಇನ್ಯಾವ ಅಂಗವೂ ಮಾಡಲಾರದು.

ಅಜಾಗರೂಕತೆಯನ್ನು ತಪ್ಪಿಸುವುದರಿಂದ ಗಾಯಗಳನ್ನು ತಪ್ಪಿಸಬಹುದು. ಕಿವಿಗೆ ಏನು ಬೇಕಾದರೂ ಹಾಕಿಕೊಳ್ಳುವ ಅಭ್ಯಾಸವಿರುವ ಮಕ್ಕಳಲ್ಲಿ ಇದು ಹೆಚ್ಚು ಆವಶ್ಯಕ. ಸಪ್ಪಳಗಳಲ್ಲಿ ವಾಸಿಸುವವರು ಕಿವಿಗೆ ರಕ್ಷೆಗಳನ್ನು ಧರಿಸಿಕೊಳ್ಳುವುದು ಅನಿವಾರ್ಯ.

ಕೆಟ್ಟ ಅಭ್ಯಾಸಗಳನ್ನು ತಪ್ಪಿಸುವುದರಿಂದ ಕ್ರಿಮಿರೋಗ ನಿಯಂತ್ರಣವಾಗುತ್ತದೆ. ಕಿವಿಗಳಿಗೆ ಎಣ್ಣೆ ಹಾಕುವುದು ಸಾಮಾನ್ಯವಾಗಿ ಒಳ್ಳೆಯ ಪದ್ಧತಿ. ಬೆಳ್ಳುಳ್ಳಿ, ಈರುಳ್ಳಿ ಮುಂತಾದ ಉರಿಯುಂಟುಮಾಡುವ ವಸ್ತುಗಳೊಡನೆ ಈ ಎಣ್ಣೆಗಳನ್ನು ಕಾಯಿಸುತ್ತಾರೆ. ಇದು ಕೂಡದು. ಹಾಗೆಯೇ ಗುಗ್ಗೆಯನ್ನು ತೆರೆಯಲು ಚೂಪಾದ ಸಲಕರಣೆಗಳ ಉಪಯೋಗವನ್ನು ತಡೆಗಟ್ಟಬೇಕು.

ನುರಿತವರಿಂತಲೇ ಕಿವಿಯನ್ನು ಪಿಚಕಾರಿಯಿಂದ ತೊಳೆಸಬೇಕು. ಹಳ್ಳಿಗಳಲ್ಲಿ ಜನ ಬಾಯಲ್ಲಿ ನೀರು ತುಂಬಿಕೊಂಡು ಕಿವಿಗಳೊಳಕ್ಕೆ ಉಗಿಯುವ ಅಭ್ಯಾಸವನ್ನಟ್ಟಿದ್ದಾರೆ. ಇದರಿಂದ ಒಬ್ಬರ ಬಾಯಿಂದ ಕ್ರಿಮಿಗಳು ಇನ್ನೊಬ್ಬರ ಕಿವಿಗೆ ಸೇರುತ್ತವೆ.

ಕಿವುಡ ಕಿವುಡರ ಮದುವೆಗಳನ್ನು ಮತ್ತು ಅನುವಂಶಿಕವಾಗಿ ಕಿವುಡರುವವರೊಡನೆ ರಕ್ತಸಂಬಂಧ ಒದಗುವುದನ್ನು ತಪ್ಪಿಸುವುದರಿಂದ ಕಿವುಡು ಮಕ್ಕಳು ಹುಟ್ಟುವುದನ್ನು ನಿವಾರಿಸಬಹುದು. ಬಾಣಂತಿಯ ಆರೋಗ್ಯಕ್ಕೆ ಹೆಚ್ಚಿನ ಗಮನ ಕೊಡುತ್ತಿರುವುದು ಮತ್ತು ಪ್ರಸವಗಳಿಗೆ ಇರಬೇಕಾದ ಆಸ್ಪತ್ರೆಗಳ ಸೌಕರ್ಯ ಹೆಚ್ಚುತ್ತಿರುವುದು ಹುಟ್ಟುಕಿವುಡನ್ನು ಬಹುಮಟ್ಟಿಗೆ ನಿವಾರಿಸಿದೆ.

**ಚಿಕಿತ್ಸೆ :** ಕಿವುಡಿನ ಚಿಕಿತ್ಸೆ ಬಹುಮುಂದುವರಿದಿದೆ. ಬೂಷಲು ಮದ್ದುಗಳು ಕಿವಿಯ ಕ್ರಿಮಿರೋಗಗಳನ್ನು ನಿಯಂತ್ರಿಸಿ ಕಿವುಡನ್ನು ತಪ್ಪಸುವುದರಲ್ಲಿ ಹೆಚ್ಚು ಸಹಕಾರಿಗಳಾಗಿವೆ. ಶಸ್ತ್ರಕ್ರಿಯೆ ಸೂಕ್ಷ್ಮದರ್ಶಿಗಳಿಂದ ನಡುಗಿವಿಯ ಜೀರ್ಣೋದ್ಧಾರ ಸಾಧ್ಯವಾಗಿದೆ. ಈ ಕ್ರಮಕ್ಕೆ ಟಿಂಪನೊಪ್ಲಾಸ್ಟಿ ಎನ್ನುತ್ತಾರೆ. ಇದರಲ್ಲಿ ಹಲವು ವಿಧಗಳಿವೆ. ಇವು ಸೂಕ್ಷ್ಮವಾದವು ಮತ್ತು ಕುಶಲವಾದವು, ಮತ್ತು ಹೆಚ್ಚುಕಾಲ ತೆಗೆದುಕೊಳ್ಳುವ ಶಸ್ತ್ರಕ್ರಿಯೆಗಳು, ಆದರೆ ಒಳ್ಳೆಯ ಕೈಚಳಕವಿರುವವರಿಂದ ಬಹಳ ತೃಪ್ತಿಕರ ಫಲಗಳು ದೊರೆತಿವೆ.

ತಂತಿ ಮತ್ತು ಕೊಬ್ಬು, ತಂತಿ ಮತ್ತು ಲೋಳೆನೊರೆ, ಪಾಲಿಥೀನ್ ಕೊಳವೆ ಮತ್ತು ಸ್ಟ್ರಿಂಗ್ ಮುಂತಾದ ಕೃತಕಸಾಧನಗಳಿಂದ ಓಟೊಸ್ಕ್ಲೀರೋಸಿಸ್ ಅಂಥ ರೋಗಗಳ ಸಮಸ್ಯೆಗಳು ಪರಿಹಾರ ಹೊಂದಿವೆ. ಕಳೆದ 10 ವರ್ಷಗಳಲ್ಲಿ ಇನ್ನು ಯಾವ ಶಸ್ತ್ರವೈದ್ಯ ವಿಭಾಗದಲ್ಲೂ ಇಷ್ಟು ವಸ್ತುಗಳ ಉಪಯೋಗವಾಗಿಲ್ಲ.

**ಶ್ರವಣಸಹಾಯಕಗಳು:** ಇವು ಶಬ್ದವನ್ನು ಹೆಚ್ಚಿಸಲು ಧರಿಸುವ ಸಾಧನಗಳು. ಗ್ರಹಾಮ್ ಬೆಲ್ ಇವುಗಳನ್ನು ಸೃಷ್ಟಿಮಾಡಿದ. ಅಂದಿನಿಂದ ಇವು ಹೆಚ್ಚು ಮಾರ್ಪಾಟು ಹೊಂದಿವೆ. ಟ್ರಾನ್ಸಿಸ್ಟರ್ ಯಾಂತ್ರಿಕ ಜ್ಞಾನದ ಪ್ರಗತಿಯಿಂದ ಈಗ ನಮಗೆ ಆಟೊಮ್ಯಾಟಿಕ್ ವಾಲ್ಯೂಂ ಕಂಟ್ರೋಲ್, ಪೀಕ್ ಕ್ಲಿಪ್ಪಿಂಗ್ ಮುಂತಾದ ಅನುಕೂಲ ಸಾಧನಗಳು ಸಿಕ್ಕಿವೆ. ಅಷ್ಟೇ ಅಲ್ಲದೆ ಅವುಗಳ ಗಾತ್ರವೂ ಕಡಿಮೆಯಾಗಿರುವುದರಿಂದ ಕನ್ನಡಕಗಳನ್ನು ಜನರು ಒಪ್ಪುವಷ್ಟು ಇವನ್ನೂ ಒಪ್ಪುವಂತಾಗಿದೆ. ಆದರೆ ಈ ಸಹಾಯಕಗಳ ಬೆಲೆ ಜನ ಸಾಮಾನ್ಯರಿಗೆ ಎಟುಕುವಷ್ಟು ಕಡಿಮೆಯಾಗಿಲ್ಲ.

ಕಿವುಡು ಮಗುವಿಗೆ ಮಾತು ಕಲಿಸಲು ಶ್ರವಣಸಹಾಯಗಳು ಬೇಕೇ ಬೇಕು. ಶಸ್ತ್ರಕ್ರಿಯೆಗೆ ಕಾರಣಾಂತರದಿಂದ ಒಳಪಡಲಾಗದ, ಬೆಳೆದ ಕಿವುಡರಿಗಂತೂ ಇವು ಅನುಕೂಲಕಾರಿಗಳು. ಆದರೆ ಕೆಲವರು ದೊಡ್ಡ ಶಬ್ದಗಳನ್ನು ಸಹಿಸಲಾರದವರಾದ್ದರಿಂದ ಅವರಿಗೆ ಇಂಥ ಸಹಾಯಗಳು ಸರಿಹೋಗುವುದಿಲ್ಲ. ಆದ್ದರಿಂದ ಸಹಾಯಗಳನ್ನು ಕಿವಿಗೆ ಸಿಕ್ಕಿಸುವ ಮೊದಲು ಎಚ್ಚರಿಕೆಯಿಂದ ಕೇಳುವ ಶಕ್ತಿಯ ಅಳತೆ ಅಳತೆಮಾಡಿಸಿ ನೋಡಬೇಕು. (ಎಂ.ವಿ.ವಿ.)

**ಕಿವುಡು ನಿರೋಧ :** ರೋಗಬರುವುದಕ್ಕೆ ಮುಂಚೆ ಅದು ಬರದಂತೆ ನೋಡಿಕೊಳ್ಳುವುದು ಮೇಲು. ಈ ವಿಚಾರ ಕಿವುಡಿನ ವಿಚಾರದಲ್ಲಂತೂ ಬಹುಸೂಕ್ತ; ಏಕೆಂದರೆ ಕಿವಿಯ ಕೆಲಸವನ್ನು ದೇಹದಲ್ಲಿ ಇನ್ಯಾವ ಅಂಗವೂ ಮಾಡಲಾರದು.

ಅಜಾಗರೂಕತೆಯನ್ನು ತಪ್ಪಿಸುವುದರಿಂದ ಗಾಯಗಳನ್ನು ತಪ್ಪಿಸಬಹುದು. ಕಿವಿಗೆ ಏನು ಬೇಕಾದರೂ ಹಾಕಿಕೊಳ್ಳುವ ಅಭ್ಯಾಸವಿರುವ ಮಕ್ಕಳಲ್ಲಿ ಇದು ಹೆಚ್ಚು ಅವಶ್ಯಕ. ಸಪ್ಪಳಗಳಲ್ಲಿ ವಾಸಿಸುವವರು ಕಿವಿಗೆ ರಕ್ಷೆಗಳನ್ನು ಧರಿಸಿಕೊಳ್ಳುವುದು ಅನಿವಾರ್ಯ.

ಕೆಟ್ಟ ಅಭ್ಯಾಸಗಳನ್ನು ತಪ್ಪಿಸುವುದರಿಂದ ಕ್ರಿಮಿರೋಗ ನಿಯಂತ್ರಣವಾಗುತ್ತದೆ. ಕಿವಿಗಳಿಗೆ ಎಣ್ಣೆ ಹಾಕುವುದು ಸಾಮಾನ್ಯವಾಗಿ ಒಳ್ಳೆಯ ಪದ್ಧತಿ. ಬೆಳ್ಳುಳ್ಳಿ, ಈರುಳ್ಳಿ ಮುಂತಾದ ಉರಿಯುಂಟುಮಾಡುವ ವಸ್ತುಗಳೊಡನೆ ಈ ಎಣ್ಣೆಗಳನ್ನು ಕಾಯಿಸುತ್ತಾರೆ. ಇದು ಕೂಡದು. ಹಾಗೆಯೇ ಗುಗ್ಗೆಯನ್ನು ತೆರೆಯಲು ಚೂಪಾದ ಸಲಕರಣೆಗಳ ಉಪಯೋಗವನ್ನು ತಡೆಗಟ್ಟಬೇಕು.

ನುರಿತವರಿಂದಲೇ ಕಿವಿಯನ್ನು ಪಿಚಕಾರಿಯಿಂದ ತೊಳೆಸಬೇಕು. ಹಳ್ಳಿಗಳಲ್ಲಿ ಜನ ಬಾಯಲ್ಲಿ ನೀರು ತುಂಬಿಕೊಂಡು ಕಿವಿಗಳೊಳಕ್ಕೆ ಉಗಿಯುವ ಅಭ್ಯಾಸವನ್ನಿಟ್ಟಿದ್ದಾರೆ. ಇದರಿಂದ ಒಬ್ಬರ ಬಾಯಿಯ ಕ್ರಿಮಿಗಳು ಇನ್ನೊಬ್ಬರ ಕಿವಿಗೆ ಸೇರುತ್ತವೆ

ಕಿವುಡ ಕಿವುಡರ ಮದುವೆಗಳನ್ನು ಮತ್ತು ಆನುವಂಶಿಕವಾಗಿ ಕಿವುಡಿರುವವರೊಡನೆ ರಕ್ತಸಂಬಂಧ ಒದಗುವುದನ್ನು ತಪ್ಪಿಸುವುದರಿಂದ ಕಿವುಡು ಮಕ್ಕಳು ಹುಟ್ಟುವುದನ್ನು ನಿವಾರಿಸಬಹುದು. ಬಾಣಂತಿಯ ಆರೋಗ್ಯಕ್ಕೆ ಹೆಚ್ಚಿನ ಗಮನ ಕೊಡುತ್ತಿರುವುದು ಮತ್ತು ಪ್ರಸವಗಳಿಗೆ ಇರಬೇಕಾದ ಆಸ್ಪತ್ರೆಗಳ ಸೌಕರ್ಯ ಹೆಚ್ಚುತ್ತಿರುವುದು ಹುಟ್ಟು ಕಿವುಡನ್ನು ಬಹುಮಟ್ಟಿಗೆ ನಿವಾರಿಸಿದೆ.

**ಚಿಕಿತ್ಸೆ :** ಕಿವುಡಿನ ಚಿಕಿತ್ಸೆ ಬಹುಮುಂದುವರಿದಿದೆ. ಬೂಷಲು ಮದ್ದುಗಳು ಕಿವಿಯ ಕ್ರಿಮಿರೋಗಗಳನ್ನು ನಿಯಂತ್ರಿಸಿ ಕಿವುಡನ್ನು ತಪ್ಪಿಸುವುದರಲ್ಲಿ ಹೆಚ್ಚು ಸಹಕಾರಿಗಳಾಗಿವೆ. ಶಸ್ತ್ರಕ್ರಿಯೆ ಸೂಕ್ಷ್ಮದರ್ಶಿಗಳಿಂದ ನಡುಗಿವಿಯ ಜೀರ್ಣೋದ್ಧಾರ ಸಾಧ್ಯವಾಗಿದೆ. ಈ ಕ್ರಮಕ್ಕೆ ಟಿಂಪನೊಪ್ಲಾಸ್ಟಿ ಎನ್ನುತ್ತಾರೆ. ಇದರಲ್ಲಿ ಹಲವು ವಿಧಗಳಿವೆ. ಇವು ಸೂಕ್ಷ್ಮವಾದವು ಮತ್ತು ಕುಶಲವಾದವು, ಮತ್ತು ಹೆಚ್ಚು ಕಾಲ ತೆಗೆದುಕೊಳ್ಳುವ ಶಸ್ತ್ರಕ್ರಿಯೆಗಳು, ಆದರೆ ಒಳ್ಳೆಯ ಕೈಚಳಕವಿರುವುದರಿಂದ ಬಹಳ ತೃಪ್ತಿಕರ ಫಲಗಳು ದೊರೆತಿವೆ.

ತಂತಿ ಮತ್ತು ಕೊಬ್ಬು, ತಂತಿ ಮತ್ತು ಲೋಳೆನೂರೆ, ಪಾಲಿಥೀನ್ ಕೊಳವೆ ಮತ್ತು ಸ್ಪ್ರಿಂಗ್ ಮುಂತಾದ ಕೃತಕಸಾಧನಗಳಿಂದ ಓಟೊಸ್ಕ್ಲೀರೊಸಿಸ್ ಅಂಥ ರೋಗಗಳ ಸಮಸ್ಯೆಗಳು ಪರಿಹಾರ ಹೊಂದಿವೆ. ಕಳೆದ 10 ವರ್ಷಗಳಲ್ಲಿ ಇನ್ನು ಯಾವ ಶಸ್ತ್ರವೈದ್ಯ ವಿಭಾಗದಲ್ಲೂ ಇಷ್ಟು ವಸ್ತುಗಳ ಉಪಯೋಗವಾಗಿಲ್ಲ.

ಶ್ರವಣಸಹಾಯಕಗಳು : ಇವು ಶಬ್ದವನ್ನು ಧರಿಸುವ ಸಾಧನಗಳು. ಗ್ರಹಾಮ್ ಬೆಲ್ ಇವುಗಳನ್ನು ಸೃಷ್ಟಿಮಾಡಿದ. ಅಂದಿನಿಂದ ಇವು ಹೆಚ್ಚು ಮಾರ್ಪಾಟು ಹೊಂದಿವೆ. ಟ್ರಾನ್ಸಿಸ್ಟರ್ ಯಾಂತ್ರಿಕ ಜ್ಞಾನದ ಪ್ರಗತಿಯಿಂದ ಈಗ ನಮಗೆ ಆಟೊಮ್ಯಾಟಿಕ್ ವಾಲ್ಯೂಂ ಕಂಟ್ರೋಲ್, ಪೀಕ್ ಕ್ಲಿಪ್ಪಿಂಗ್ ಮುಂತಾದ ಅನುಕೂಲ ಸಾಧನಗಳು ಸಿಕ್ಕಿವೆ. ಅಷ್ಟೇ ಅಲ್ಲದೆ ಅವುಗಳ ಗಾತ್ರವೂ ಕಡಿಮೆಯಾಗಿರುವುದರಿಂದ ಕನ್ನಡಕಗಳನ್ನು ಜನರು ಒಪ್ಪುವಷ್ಟು ಇವನ್ನೂ ಒಪ್ಪುವಂತಾಗಿದೆ. ಆದರೆ ಈ ಸಹಾಯಕಗಳ ಬೆಲೆ ಜನ ಸಾಮಾನ್ಯರಿಗೆ ಎಟುಕುವಷ್ಟು ಕಡಿಮೆಯಾಗಿಲ್ಲ.

ಕಿವುಡು ಮಗುವಿಗೆ ಮಾತು ಕಲಿಸಲು ಶ್ರವಣಸಹಾಯಗಳು ಬೇಕೇ ಬೇಕು. ಶಸ್ತ್ರಕ್ರಿಯೆಗೆ ಕಾರಣಾಂತರದಿಂದ ಒಳಪಡಲಾಗದ, ಬೆಳೆದ ಕಿವುರಿಗಂತೂ ಇವು ಅನುಕೂಲಕಾರಿಗಳು. ಆದರೆ ಕೆಲವರು ದೊಡ್ಡ ಶಬ್ದಗಳನ್ನು ಸಹಿಸಲಾರದವರಾದ್ದರಿಂದ ಅವರಿಗೆ ಇಂಥ ಸಹಾಯಗಳು ಸರಿಹೋಗುವುದಿಲ್ಲ. ಆದ್ದರಿಂದ ಸಹಾಯಗಳನ್ನು ಕಿವಿಗೆ ಸಿಕ್ಕಿಸುವ ಮೊದಲು ಎಚ್ಚರಿಕೆಯಿಂದ ಕೇಳುವ ಶಕ್ತಿಯ ಅಳತೆ ಅಳತೆಮಾಡಿಸಿ ನೋಡಬೇಕು. (ಎಂ.ವಿ.ವಿ.)

**ಕಿಷ್ಕಿಂಧೆ :** ಕಪಿವೀರರಾದ ವಾಲಿ, ಸುಗ್ರೀವರ ರಾಜಧಾನಿಯಾಗಿದ್ದು ರಾಮಾಯಣ ಕಾಲದಲ್ಲಿ ಪ್ರಸಿದ್ಧವಾಗಿದ್ದ ಒಂದು ಪಟ್ಟಣ. ಈಗ ಪಾಳುಬಿದ್ದ ಹಳ್ಳಿಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನದೀ ತೀರದಲ್ಲಿರುವ ಈ ಹಳ್ಳಿಗೆ ಸಮೀಪವಾಗಿ ಪ್ರಸಿದ್ಧ ಹಂಪೆ ಇದೆ. ಇಲ್ಲಿನ ದೊಡ್ಡ ಬೆಟ್ಟವೊಂದರ ಗುಹೆಯಲ್ಲಿ ವಾಲಿ ಕೆಲಕಾಲ ವಾಸವಾಗಿದ್ದನಂತೆ. *

**ಕಿಸೆಯ ಮತಕ್ಷೇತ್ರ :** 1832ಕ್ಕೆ ಹಿಂದಿನ ಇಂಗ್ಲೆಂಡಿನಲ್ಲಿ ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬದ ಹಿಡಿತದಲ್ಲಿದ್ದ ಪಾರ್ಲಿಮೆಂಟರಿ ಮತಕ್ಷೇತ್ರ (ಪಾಕೆಟ್ ಬರೋ). ಒಂದು ಜಿಲ್ಲೆ ಅಥವಾ ಒಂದು ಪಟ್ಟಣದ ವ್ಯಾಪ್ತಿಗೆ ಒಳಪಟ್ಟ ಇಂಥ ಒಂದೊಂದು ಕ್ಷೇತ್ರದಿಂದಲೂ ಒಬ್ಬೊಬ್ಬ ಪ್ರತಿನಿಧಿಯನ್ನು ಪಾರ್ಲಿಮೆಂಟಿಗೆ ಆಯ್ಕೆ ಮಾಡುವ ಅಧಿಕಾರ ದತ್ತವಾದಾಗ ಕೆಲವು ಕ್ಷೇತ್ರಗಳು ವಿಶಿಷ್ಟ ಹಿತಗಳ ವಶವರ್ತಿಯಾದುವಲ್ಲದೆ, ನಾನಾ ಬಗೆಯ ಭ್ರಷ್ಟಾಚಾರಗಳಿಗೆ ನೆಲೆಯಾದುವು.

ಮೂರನೆಯ ಹೆನ್ರಿಯ ಕಾಲದಿಂದಲೇ ಪಾರ್ಲಿಮೆಂಟಿಗೆ ಈ ಕ್ಷೇತ್ರಗಳಿಂದ ಪ್ರತಿನಿಧಿಗಳನ್ನು ಆಯಾ ನಗರಗಳ ಷೆರಿಫರು ಆರಿಸಿ ಕಳುಹಿಸುತ್ತಿದ್ದರು. ಈ ವ್ಯವಸ್ಥೆಗೆ ತಗಲುತ್ತಿದ್ದ ಅಧಿಕ ವೆಚ್ಚದಿಂದಾಗಿ ಆರಂಭದಲ್ಲಿ ಅನೇಕ ಕ್ಷೇತ್ರಗಳು ಇಂಥ ಅಧಿಕಾರವನ್ನು ಬಯಸಲಿಲ್ಲ. 15ನೆಯ ಶತಮಾನದ ನಡುಗಾಲದ ವೇಳೆಗೆ ಈ ಕ್ಷೇತ್ರಗಳಿಂದ ಪ್ರಾತಿನಿಧ್ಯ ಪಡೆಯುವುದು ಆಕರ್ಷಕವಾಗಿ ಪರಿಣಮಿಸಿತು. ಆರನೆಯ ಎಡ್ವರ್ಡ್ ಅನೇಕ ಹೊಸ ಮತಕ್ಷೇತ್ರಗಳನ್ನು ನಿರ್ಮಿಸಿದ. ಯಾವಯಾವ ಕ್ಷೇತ್ರಗಳಿಂದ ಆರಿಸಿ ಬರುವ ಪ್ರತಿನಿಧಿಗಳು ತನಗೆ ಬೆಂಬಲ ನೀಡುವರೆಂದು ಆತನಿಗೆ ಭರವಸೆಯಿತ್ತೋ ಆ ಕ್ಷೇತ್ರಗಳಿಗೆಲ್ಲ ಮತಾಧಿಕಾರ ಲಭ್ಯವಾಯಿತು.

ಕಾಮನ್ಸ್ ಸಭೆ ಅರಸೊತ್ತಿಗೆಯ ಹಿಡಿತದಲ್ಲಿರಲೆಂದು ಹಳ್ಳಿಗಳನ್ನು ಸಹ ಮತ ಕ್ಷೇತ್ರಗಳನ್ನಾಗಿ ಪರಿವರ್ತಿಸಿದ್ದರಿಂದ ಇವುಗಳ ಸಂಖ್ಯೆ ಅಧಿಕವಾಯಿತು. ಅನಂತರ ರಾಜಾಜ್ಞೆ ಮತ್ತು ಪಾರ್ಲಿಮೆಂಟಿನ ಸಮಿತಿಗಳ ಮೂಲಕ ನಿಯಂತ್ರಿತವಾದ ಮತದಾನದಿಂದಾಗಿ ಈ ಕ್ಷೇತ್ರಗಳ ಚುನಾವಣೆಗಳು ಅರಸರ ಮತ್ತು ವೈಯುಕ್ತಿಕ ಹಿತಾಸಕ್ತಿಗಳ ಬಿಗಿಮುಷ್ಟಿಯಲ್ಲಿದ್ದುವು. ಆಗ ಒಟ್ಟು 200ಕ್ಕೂ ಹೆಚ್ಚು ಕ್ಷೇತ್ರಗಳಿದ್ದವು.

16ನೆಯ ಶತಮಾನದ ಆರಂಭದಲ್ಲಿ ಕಾಮನ್ಸ್ ಸಭೆಯ ಸ್ಥಾನಗಳಿಗೆ ಬೆಲೆ ಅಧಿಕವಾದಾಗ ಆಸ್ಥಾನಿಕರೂ ನ್ಯಾಯವಾದಿಗಳೂ ಜಮೀನುದಾರರೂ ಈ ಮತಕ್ಷೇತ್ರಗಳನ್ನು ಹಣ ಸುರಿದು ವಶಪಡಿಸಿಕೊಳ್ಳಲಾರಂಭಿಸಿದರು. ಅಂದಿನ ಪದ್ಧತಿಯಂತೆ ಅಭ್ಯರ್ಥಿಗಳೇ ಚುನಾವಣೆಯ ಎಲ್ಲ ವೆಚ್ಚವನ್ನೂ ಭರಿಸುತ್ತಿದ್ದರು. ಇದರಿಂದಾಗಿ ಅಂಥವರೇ ಪುನಃ ಪುನಃ ಆಯ್ಕೆ ಹೊಂದಲು ಅವಕಾಶವಿರುತ್ತಿತ್ತು. ಆ ಪ್ರತಿನಿಧಿ ಅತ್ಯಂತ ಪ್ರಭಾವಶಾಲಿಯಾಗಿರುತ್ತಿದ್ದ. 18ನೆಯ ಶತಮಾನದಲ್ಲಂತೂ ಇಂಥ ಮತ ಕ್ಷೇತ್ರಗಳ ಹಾವಳಿ ಹೆಚ್ಚಾಗಿತ್ತು. ಇವನ್ನು ತಮ್ಮ ಕಿಸೆಯಲ್ಲಿಟ್ಟುಕೊಳ್ಳುವ ಸಲುವಾಗಿ ಸ್ಪರ್ಧಿಗಳು ನಾನಾ ಬಗೆಯ ಪ್ರಭಾವ ಬೀರುತ್ತಿದ್ದರು. ಹಣದ ಪ್ರಲೋಭನ, ಬೆದರಿಕೆ ಮುಂತಾದ ಮಾರ್ಗಗಳನ್ನನುಸರಿಸಲಾಗುತ್ತಿತ್ತು. ಸರ್ಕಾರವೇ ಇಂಥ ಪ್ರಭಾವೀಶಕ್ತಿಗಳ ಬೆಂಬಲ ಪಡೆಯುತ್ತಿತ್ತು. ಒಮ್ಮೊಮ್ಮೆ ಧರ್ಮಸಂಸ್ಥೆಗಳು ಕೂಡ ತಮ್ಮ ಪ್ರಭಾವವನ್ನು ಉಪಯೋಗಿಸುತ್ತಿದ್ದುವು.

ಈ ಅನಿಷ್ಟಕಾರಿ ಪ್ರವೃತ್ತಿಗಳನ್ನು ತಡೆಗಟ್ಟಲು ಅನೇಕ ಸುಧಾರಣೆಗಳಾದುವು. ಆದರೂ 18ನೆಯ ಶತಮಾನದ ಕೊನೆಯ ಹೊತ್ತಿಗೆ ಈ ಕ್ಷೇತ್ರಗಳು ಭ್ರಷ್ಟಾಚಾರದ ತುಟ್ಟ ತುದಿಯನ್ನು ತಲಪಿದ್ದುವು. ಇದಕ್ಕೆ ಇದ್ದ ಮೂರು ಕಾರಣಗಳೆಂದರೆ: ಅಧಿಕೈಶ್ವರ್ಯ, ಗಮನಾರ್ಹವಾಗಿ ಬದಲಾದ ಜನಸಂಖ್ಯೆ ಮತ್ತು ಜಮೀನ್ದಾರರ ಶಕ್ತಿರಾಜಕೀಯ. ಕಿಸೆಯ ಮತಕ್ಷೇತ್ರಗಳನ್ನು ಕೊಳ್ಳಬಹುದಾಗಿತ್ತು, ಮಾರಬಹುದಾಗಿತ್ತು ಮತ್ತು ವಂಶಪಾರಂಪರ್ಯವಾಗಿ ಅನುಭವಿಸಬಹುದಾಗಿತ್ತು. ಕೆಳಮನೆಯ ಬಹುಪಾಲು ಸದಸ್ಯರು ಇಂಥ ಕ್ಷೇತ್ರಗಳಿಂದ ಆರಿಸಿ ಬಂದವರಾಗಿದ್ದರು. ಇವರು ಯಾವುದೇ ರೀತಿಯಲ್ಲೂ ಸ್ವತಂತ್ರರಾಗಿರಲಿಲ್ಲ. ಕೆಲವರು ತಮ್ಮ ಸ್ಥಾನಗಳನ್ನು ಮಾರಿಕೊಂಡರೆ ಇನ್ನು ಕೆಲವರು ಅನೇಕ ಉನ್ನತ ಹುದ್ದೆಗಳಿಗಾಗಿ ಅಥವಾ ಶ್ರೀಮಂತ ಪದವಿಗಳಿಗಾಗಿ ತಮ್ಮ ಸ್ಥಾನಗಳನ್ನು ಬದಲಾಯಿಸುತ್ತಿದ್ದರು. ಪುರಸಭೆಯ ಆಡಳಿತದಲ್ಲಿ ಕೂಡ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಕಿಸೆಯ ಮತಕ್ಷೇತ್ರಗಳನ್ನು ಕೊಳೆತ ಮತಕ್ಷೇತ್ರಗಳೆಂದೂ ಕರೆಯಲಾಗುತ್ತಿತ್ತು. ಅವುಗಳ ಮೂಲಕ ಜಮೀನ್ದಾರರು ಪಾರ್ಲಿಮೆಂಟಿನಲ್ಲಿ ಅತ್ಯಧಿಕ ಪ್ರಭಾವಶಾಲಿಗಳಾಗಿ ಪರಿಣಮಿಸಿದ್ದರು. ಕಾಯಿದೆಗಳನ್ನು ತಮ್ಮಿಚ್ಛೆಯಂತೆ ರಚಿಸುತ್ತಿದ್ದರು. 1872ರಲ್ಲಿ ಮತಚೀಟಿಯನ್ನು (ಬ್ಯಾಲಟ್ ಪೇಪರ್) ಜಾರಿಗೆ ತರುವವರೆಗೂ ಇವುಗಳ ಕೆಟ್ಟ ಪ್ರಭಾವ ಮುಂದುವರಿಯಿತು.

1832ರಲ್ಲಿ ಜಾರಿಗೆ ತರಲಾದ ಒಂದು ಸುಧಾರಣೆಯಿಂದ ಅನೇಕ ಕ್ಷೇತ್ರಗಳ ಪ್ರಾತಿನಿಧ್ಯವನ್ನು ಕಸಿದುಕೊಳ್ಳಲಾಯಿತು. ಕ್ಷೇತ್ರಗಳನ್ನು ಮತದಾರರ ಸಂಖ್ಯೆಗಳಿಗೆ ಅನುಗುಣವಾಗಿ ಸಮನಾಗಿ ವಿಂಗಡಿಸಲಾಯಿತು. ಅನಂತರ ಇನ್ನೂ ಅನೇಕ ಸುಧಾರಣೆಗಳು ಜಾರಿಗೆ ಬಂದುವು. 1918ರಲ್ಲಿ ಮತಕ್ಷೇತ್ರಗಳನ್ನು ಪುನರ್ ವಿಂಗಡಿಸಲಾಯಿತು. ಜಮೀನುದಾರರು ಪಡೆದಿದ್ದ ಅನೇಕ ವಿಶೇಷ ಸೌಲಭ್ಯಗಳ ರದ್ದಾದ್ದು 1918ರಲ್ಲಿ. ಇಂಗ್ಲೆಂಡಿನ ಪ್ರಜಾಪ್ರಭುತ್ವವನ್ನು ಇವುಗಳ ದುಷ್ಟ ಪ್ರಭಾವದಿಂದ ಸಂಪೂರ್ಣವಾಗಿ ರಕ್ಷಿಸುವುದು ದೀರ್ಘ ಶ್ರಮದಿಂದ ಸಾಧ್ಯವಾಯಿತು. (ಸಿ.ಪಿ.)

**ಕೀಚಕ :** ಮಹಾಭಾರತದ ಪ್ರಮುಖ ವ್ಯಕ್ತಿಗಳಲ್ಲೊಬ್ಬ. ಬಾಣಾಸುರನ ಅಂಶದಿಂದ ಕೇಕಯ ರಾಜ ಮತ್ತು ಮಾಲವಿಯರ ಮಗನಾಗಿ ಜನಿಸಿದವ. ಈತನಿಗೆ 105 ಮಂದಿ ಒಡಹುಟ್ಟಿದವರೂ ಸುದೇಷ್ಣೆಯೆಂಬ ಸೋದರಿಯೂ ಇದ್ದರು. ಸುದೇಷ್ಣೆ ವಿರಾಟರಾಜನ ರಾಣಿ. ಇವನೂ ಇವನ ತಮ್ಮಂದಿರಾದ 105 ಮಂದಿ ಉಪಕೀಚಕರೂ ವಿರಾಟರಾಜನಲ್ಲಿಯೇ ಇದ್ದರು. ಮಹಾ ಬಲಶಾಲಿಯಾದ ಕೀಚಕ ವಿರಾಟನ ಸೇನಾಪತಿಯಾಗಿದ್ದ. ಇವನಿಗೆ ಸಿಂಹಬಲನೆಂಬ ಹೆಸರೂ ಇದ್ದಿತು. ಕೀಚಕನನ್ನು ಕಂಡು ಹೆದರಿದ ಕೌರವರು ವಿರಾಟನ ರಾಜ್ಯದ ಕಡೆಗೆ ತಲೆ ಮಾಡಿ ಮಲಗುವುದಿಲ್ಲವೆಂಬ ಅಂಶವನ್ನು ತಿಳಿದ ಪಾಂಡವರು ವಿರಾಟ ರಾಜಧಾನಿಯಲ್ಲಿ ತಮ್ಮ ಅಜ್ಞಾತವಾಸದ ಅವಧಿಯನ್ನು ಕಳೆಯಲು ನಿರ್ಧರಿಸಿದರು. ದ್ರೌಪದಿ ಸೈರಂಧ್ರಿಯಾಗಿ ಮಾಲಿನಿ ಎಂಬ ಹೆಸರಿನಲ್ಲಿ ರಾಣಿ ಸುದೇಷ್ಣೆಯ ಬಳಿ ಸೇವಕಿಯಾದಳು. 'ಇಲ್ಲಿಯ ಹೆಂಗಸರೂ ಇಲ್ಲಿ ಕಾಣುವ ಗಿಡಮರಗಳೂ ನಿನ್ನಲ್ಲಿ ಮೋಹಗೊಂಡಂತೆ ತೋರುತ್ತಿದೆ. ಇನ್ನು ಗಂಡಸರು ಕಂಡರೆ ಮೋಹಗೊಳ್ಳದೆ ಇರುತ್ತಾರೆಯೇ'? ಎಂಬ ಸುದೇಷ್ಣೆಯ ಮಾತುಗಳಿಂದ, ದ್ರೌಪದಿ ಮರೆವೇಷದಲ್ಲಿದ್ದರೂ

ತನ್ನ ಸೌಂದರ್ಯವನ್ನು ಮುಚ್ಚಿಟ್ಟುಕೊಳ್ಳಲುಸಮರ್ಥಳಾಗಿದ್ದಾಳೆಂಬುದು ಸ್ಪಷ್ಟ. ಅಕ್ಕನ ಅಂತಃಪುರದಲ್ಲಿ ಓಡಾಡುತ್ತಿದ್ದ ಇವಳನ್ನು ಕೀಚಕ ಕಂಡು, 'ವಾಸನೆಗಟ್ಟಿದ ಮದ್ಯದಂತೆ ಉನ್ಮಾದಗೊಳಿಸುತ್ತಿದ್ದ' ಅವಳ ಪ್ರೇಮವನ್ನು ಯಾಚಿಸುತ್ತಾನೆ. ದ್ರೌಪದಿಯಿಂದ ತಿರಸ್ಕೃತನಾದ ಕೀಚಕ ಅಕ್ಕನ ನೆರವನ್ನು ಬೇಡುತ್ತಾನೆ. ಮಧುವನ್ನು ತರುವಂತೆ ಒತ್ತಾಯ ಮಾಡಿ ಸುದೇಷ್ಣೆ ಮಾಲಿನಿಯನ್ನು ಕೀಚಕನ ಅರಮನೆಗೆ ಕಳುಹಿಸುತ್ತಾಳೆ. ಅವಳನ್ನು ಕಂಡ ಕೀಚಕ ಕಾಮೋದ್ರೇಕದಿಂದ ಮುಂದುವರಿಯುತ್ತಾನೆ. ದ್ರೌಪದಿ ಅವನಿಂದ ತಪ್ಪಿಸಿಕೊಂಡು ಬಂದು ರಾಜಸಭೆಯನ್ನು ಪ್ರವೇಶಿಸುತ್ತಾಳೆ. ಕೀಚಕ ಬೆನ್ನಟ್ಟಿ ಬಂದು ತುಂಬಿದ ಸಭೆಯಲ್ಲಿ ಅವಳ ಜುಟ್ಟು ಹಿಡಿದು ವಿರಾಟರಾಜ, ವೇಷಾಂತರದಲ್ಲಿದ್ದ ಧರ್ಮರಾಯ ಮತ್ತು ಭೀಮಾದಿಗಳೆದುರಿಗೆ ಒದ್ದು ಕೆಡವುತ್ತಾನೆ. ಅಪಮಾನ ಜರ್ಝರಿತಳಾದ ದ್ರೌಪದಿ ಭೀಮನ ನೆರವನ್ನು ಬೇಡುತ್ತಾಳೆ. ಭೀಮ ಭರವಸೆ ಕೊಟ್ಟಮೇಲೆ ದ್ರೌಪದಿ ಕೀಚಕನನ್ನು ರಾತ್ರಿ ನಾಟ್ಯಶಾಲೆಗೆ ಏಕಾಂಗಿಯಾಗಿ ಬರಲು ಆಹ್ವಾನ ಕೊಡುತ್ತಾಳೆ. ಇಚ್ಛಾಪೂರ್ಣತೆಯ ಭರವಸೆಯಿಂದ ಹಿಗ್ಗಿ ಕೀಚಕ ರಾತ್ರಿ ನಾಟ್ಯಶಾಲೆಗೆ ಗೋಪ್ಯವಾಗಿ ಬರುತ್ತಾನೆ. ಮರೆವೇಷದಲ್ಲಿದ್ದ ಭೀಮನಿಗೂ ಕೀಚಕನಿಗೂ ಮಲ್ಲಯುದ್ಧ ನಡೆದು ಕೀಚಕ ಸಾಯುತ್ತಾನೆ. ಅಣ್ಣನ ದುರ್ಮರಣಕ್ಕೆ ಮಾಲಿನಿಯೇ ಕಾರಣಳೆಂದು ತಿಳಿದ ಉಪಕೀಚಕರು ಅವಳನ್ನು ಹಿಡಿದು ಶವರಥಕ್ಕೆ ಕಟ್ಟಿ ಶ್ಮಶಾನಕ್ಕೆಳೆದೊಯ್ಯುತ್ತಿರುತ್ತಾರೆ. ದ್ರೌಪದಿ ಪಾಂಡವರ ಗೋಪ್ಯ ನಾಮವನ್ನು ಹಿಡಿದು ಕೂಗುತ್ತಾಳೆ. ಇದನ್ನು ಕೇಳಿಸಿಕೊಂಡ ಭೀಮ ದೊಡ್ಡ ಮರವೊಂದನ್ನು ಕಿತ್ತು ತಂದು ಉಪಕೀಚಕರನ್ನು ಸವರಿ ಹಾಕಿ, ದ್ರೌಪದಿಯನ್ನು ಬಂಧಮುಕ್ತಳನ್ನಾಗಿಸುತ್ತಾನೆ. ಕೀಚಕ ಹಾಗೂ ಅವನ ದುಷ್ಟ ಸೋದರರು ನಾಶವಾಗುತ್ತಾರೆ.

ಸ್ವಾರಸ್ಯವೆಂದರೆ ಯಾರ ಬಲ ಮತ್ತು ಬೆಂಬಲವನ್ನು ನೆಚ್ಚಿ ಪಾಂಡವರು ಅಜ್ಞಾತವಾಸಕ್ಕಾಗಿ ವಿರಾಟನಗರಿಗೆ ಬಂದರೋ ಅಂಥವರಿಂದಲೇ ಅವರಿಗೆ ಇಷ್ಟೊಂದು ಕಷ್ಟಗಳು ಒದಗುತ್ತವೆ.

ಕವಿಗಳು ಕೀಚಕನ ಸಾವಿನ ಚಿತ್ರವನ್ನು ರಮ್ಯವಾಗಿ ವರ್ಣಿಸಿದ್ದಾರೆ. ಕೈಕಾಲುಗಳನ್ನು ಒಳಕ್ಕೆ ಎಳೆದುಕೊಂಡು ಆಮೆಯಂತೆ ಕೀಚಕ ಒಂದು ಉಂಡೆಯಾಗಿ ರಕ್ತಮಯವಾಗಿ ಬಿದ್ದಿದ್ದನೆಂದು ಮಹಾಭಾರತದ ವರ್ಣನೆ. ಬಳೆಯ ರಾಶಿಯನ್ನು ಆನೆ ತುಳಿದಂತೆ ಮೆಟ್ಟಿ, ನುಚ್ಚು ನುರಿ ಮಾಡಿ, ಹಿಡಿದು ಕಂಭಗಳಿಗೆ ಆಸ್ಫೋಟಿಸಿ ಬಿಸುನೆತ್ತರು, ನೆಣ, ಅಡಗು, ಎಲುಬು-ಸಮಸ್ತಂ ಸುರಿಯೆ, ತುಂಬಿದ ಚೀಲವನ್ನು ಸುರಿದ ಮೇಲೆ ಬರಿದಾದ ಚೀಲ ಕೈಲುಳಿಯುವಂತೆ, ಭೀಮನ ಕೈಯಲ್ಲಿ ಚರ್ಮ ಮಾತ್ರ ಉಳಿಯಿತೆಂದು ಪಂಪ ಕೀಚಕನ ಸಾವನ್ನು ಬಣ್ಣಿಸಿದ್ದಾನೆ. ಕೀಚಕನ ತಲೆಯನ್ನು ಅವನ ಎದೆಯೊಳಕ್ಕೆ ಅಮುಕಿ, ಕೈಕಾಲುಗಳನ್ನು ಹೊಟ್ಟೆಯಲ್ಲಿ ಸೇರಿಸಿ ಖಳನನ್ನು ಒಂದುಂಡೆಯಾಗಿ ಮಾಡಿ ದ್ರೌಪದಿಗೆ ಭೀಮ ತೋರಿದನೆಂದು ಕುಮಾರವ್ಯಾಸನ ವರ್ಣನೆ ; ಖಳನ ಸ್ಥಿತಿ ಕಾಲನ ಕೋಣ ತುಳಿದಂತಿತ್ತು ಎಂದು ಕೀಚಕನ ಸಾವಿನ ರೀತಿಯನ್ನು ಕವಿ ಬಣ್ಣಿಸಿದ್ದಾನೆ.

ವಿರಾಟ ಪರ್ವ ಮಹಾಭಾರತದಲ್ಲಿ ಒಂದು ಸುಂದರ ಭಾಗ. ಇಲ್ಲಿ ಎರಡು ಪ್ರಮುಖ ಘಟನೆಗಳು ನಡೆಯುತ್ತವೆ. ಒಂದು ಕೀಚಕ ವಧೆ ಮತ್ತೊಂದು ಗೋಹರಣ ಮತ್ತು ಕೌರವರ ಸೋಲು. ಪ್ರಾಸಂಗಿಕವಾಗಿ ಉತ್ತರನ ಕಥೆ ಬರುತ್ತದೆ, ಈ ಪ್ರಕರಣಗಳಿಂದ ಮಹಾಭಾರತದ ಕಥೆ ಮುಂದುವರಿಯುತ್ತದೆ. ಸುಂದರ ಸ್ತ್ರೀಯೊಬ್ಬಳ ಕಾರಣಕ್ಕಾಗಿ ಮಹಾ ಬಲಶಾಲಿ ಕೀಚಕ ಹಾಗೂ ಅವನ ಸೋದರರು ಗಂಧರ್ವನೊಬ್ಬನಿಂದ ನಾಶವಾದರೆಂಬ ಸುದ್ದಿಯನ್ನು ದುರ್ಯೋಧನಾದಿಗಳು ತಿಳಿದು, ಕೀಚಕಾದಿಗಳನ್ನು ಕೊಂದವ ಭೀಮನೆಂದೂ ಸ್ತ್ರೀ ದ್ರೌಪದಿಯೆಂದೂ ಸಕಾರಣವಾಗಿ ತರ್ಕಿಸಿ ಪಾಂಡವರನ್ನು ಪತ್ತೆ ಮಾಡುವ ಸಲುವಾಗಿ ಸರ್ವಸೈನ್ಯಸಮೇತರಾಗಿ ವಿರಾಟರಾಜ್ಯದ ಮೇಲೆ ಆಕ್ರಮಣಮಾಡಿ ಗೋಗ್ರಹಣ ಮಾಡುತ್ತಾರೆ. ಅರ್ಜುನನ ಮಹಾ ಪರಾಕ್ರಮದಿಂದಾಗಿ ಪಾಂಡವರ ಗುರುತು ಬಹಿರಂಗವಾಗುತ್ತದೆ. ಆದರೆ ಅಜ್ಞಾತವಾಸದ ಅವಧಿ ಮುಗಿದಿರುತ್ತದೆ. ಹೀಗೆ ಕಥೆ ಮುಂದುವರಿಯಲು ಈ ಪ್ರಕರಣಗಳು ಸಹಾಯಕವಾಗಿವೆ.

ಕೀಚಕನನ್ನು ಕಥಾನಾಯಕನನ್ನಾಗಿಸಿಕೊಂಡು ಕೈಲಾಸಂರವರು ಕೀಚಕ ಎಂಬ ನಾಟಕವನ್ನು ರಚಿಸಿ, ಅಲ್ಲಿ ಅವನನ್ನು ದುರಂತ ನಾಯಕನನ್ನಾಗಿಸುವ ಪ್ರಯತ್ನ ಮಾಡಿದ್ದಾರೆ. ಕೃಷ್ಣಮೂರ್ತಿಪುರಾಣಿಕರು ವಿರಾಟಪರ್ವ ಪ್ರಸಂಗವನ್ನು ವಸ್ತುವಾಗಿಸಿಕೊಂಡು ಸೈರಂಧ್ರಿ ಎಂಬ ಸುಂದರ ನಾಟಕವನ್ನು ರಚಿಸಿದ್ದಾರೆ. (ಜಿ.ಎಸ್.ಪಿ.ಎಂ.)

**ಕೀಟಗಳು :** ಸಂಧಿಪದಿ (ಆರ್ತ್ರೊಪೊಡ) ವಂಶದ ಕೀಟ ವರ್ಗಕ್ಕೆ ಸೇರಿದ ಪ್ರಾಣಿಗಳು. ವರ್ಣರಂಜಿತ ಪತಂಗ, ಹೂಗಳ ಪರಾಗ ಉಂಡು ಮಧು ಶೇಖರಿಸುವ ಜೇನು, ಇರುವೆ, ದುಂಬಿ, ಕಂಬಳಿಹುಳ ಎಲ್ಲ ಕೀಟಗಳೇ.

ಸಂಕ್ಷಿಪ್ತವಾಗಿ ಕೀಟಗಳನ್ನು ಕೆಳಕಂಡಂತೆ ವಿವರಿಸಬಹುದು: ತಲೆ, ಎದೆ ಮತ್ತು ಉದರ ಎಂಬ ಮೂರು ಭಾಗಗಳಾಗಿ ವಿಂಗಡಿಸಿದ ದೇಹವನ್ನುಳ್ಳ ಮತ್ತು ಉಸಿರಾಟದಲ್ಲಿ ಸಹಾಯಕವಾದ ಶ್ವಾಸನಾಳಗಳನ್ನುಳ್ಳ (ಟ್ರೇಕಿಯ) ಸಣ್ಣಗಾತ್ರದಿಂದ ಹಿಡಿದು ಸೂಕ್ಷ್ಮಗಾತ್ರದವರೆಗಿನ ಪ್ರಾಣಿಗಳು. ತಲೆಯಲ್ಲಿ ಒಂದು ಜೊತೆ ಆಂಟೆನಗಳು (ಕುಡಿಮೀಸೆ), ಒಂದು ಜೊತೆ ಮ್ಯಾಂಡಿಬಲ್‌ಗಳು ಮತ್ತು ಎರಡು ಜೊತೆ ಮ್ಯಾಕ್ಸಿಲೆ ಎಂಬ ಭಾಗಗಳು ಇವೆ. ಎದೆಯ ಭಾಗದಲ್ಲಿ ಮೂರು ಜೊತೆ ಕಾಲುಗಳು ಮತ್ತು ಒಂದು ಅಥವಾ ಎರಡು ಜೊತೆ ರೆಕ್ಕೆಗಳು ಇವೆ. ಉದರ ಭಾಗದಲ್ಲಿ ಚಲನಾಂಗಗಳೇನೂ ಇಲ್ಲ. ಉದರದ ಹಿಂತುದಿಯಲ್ಲಿ ಜನನಾಂಗ ದ್ವಾರವಿದೆ. ಜೀವನಕ್ರಮದಲ್ಲಿ ಮರಿಗಳು ಪ್ರೌಢಾವಸ್ಥೆಗೆ ಬರುವಾಗ ಸಾಮಾನ್ಯವಾಗಿ ರೂಪ ಪರಿವರ್ತನೆ ಉಂಟು.

**ಕೀಟವರ್ಗದ ವೈವಿಧ್ಯ:** ಕೀಟವರ್ಗ ಪ್ರಾಣಿವರ್ಗಗಳಲ್ಲೆಲ್ಲ ಅತ್ಯಂತ ದೊಡ್ಡದು. ಈ ವರ್ಗದಲ್ಲಿರುವಷ್ಟು ಪ್ರಭೇದಗಳು ಇನ್ಯಾವ ವರ್ಗದಲ್ಲೂ ಇಲ್ಲ. ಕೀಟಶಾಸ್ತ್ರಜ್ಞರು ಇದುವರೆಗೆ ಸುಮಾರು ಎಂಟುಲಕ್ಷ ಕೀಟಜಾತಿಗಳನ್ನು ಶಾಸ್ತ್ರೀಯವಾಗಿ ವಿವರಿಸಿದ್ದಾರೆ. ಒಟ್ಟು 2 ರಿಂದ 3 ದಶಲಕ್ಷ ಕೀಟ ಪ್ರಭೇದಗಳಿವೆಯೆಂದು ಅಂದಾಜಿದೆ. ಒಂದು ಚಿಕ್ಕ ಪ್ರದೇಶದಲ್ಲಿರುವ ಒಂದು ಜಾತಿಯ ಕೀಟದ ಸಂಖ್ಯೆಯನ್ನು ತೆಗೆದುಕೊಂಡಾಗ ಕೀಟಪ್ರಪಂಚದ ಬೃಹತ್ಸಂಖ್ಯೆಗಳ ಅರಿವು ಸ್ವಲ್ಪ ಉಂಟಾಗುತ್ತದೆ. ಉದಾಹರಣೆಗೆ ಒಂದು ಎಕರೆ ಶೀತಪ್ರದೇಶದಲ್ಲಿ ನಾಲ್ಕು ದಶಲಕ್ಷ ಕಾಲೆಂಬೋಲ ಗಣದ ಕೀಟಗಳು ವಾಸಿಸಬಲ್ಲವಂತೆ. ಇನ್ನೊಂದು ಅಂದಾಜಿನ ಪ್ರಕಾರ ಒಂದು ಬೇಸಗೆಯಲ್ಲಿ ಒಂದು ಜೊತೆ ನೊಣಗಳ ಸಂತತಿ ಒಟ್ಟು 1.91 $X_2^3$ $10^{20}$ರಷ್ಟು ಆಗಬಲ್ಲದಂತೆ ಈ ಅಪಾರ ಸಂಖ್ಯಾಬಲಕ್ಕೆ ಕಾರಣ ಕೀಟಗಳ ಸಣ್ಣ ಗಾತ್ರ, ಸಂತಾನೋತ್ಪತ್ತಿಯ ತೀವ್ರತೆ ಮತ್ತು ವಿವಿಧ ಬಗೆಯ ಆಹಾರಗಳಿಗೆ ಅವು ತೋರುವ ಹೊಂದಾಣಿಕೆ ಮುಂತಾದುವು-ಎಂದು ವಿಜ್ಞಾನಿಗಳ ಅಭಿಪ್ರಾಯ. ದೇಹದ ಗಾತ್ರ ಸಣ್ಣದಾದ್ದರಿಂದ ಮೊಟ್ಟೆಯಿಂದ ಪ್ರಾಯಕ್ಕೆ ಬರಲು ಅಲ್ಪಕಾಲ ಸಾಕು. ಆಹಾರ ಸೇವನೆಯೂ ಕಡಿಮೆ. ಸಂತಾನೋತ್ಪತ್ತಿಯ ವೇಗಕ್ಕೆ ಉದಾಹರಣೆ ಕೊಡುವುದಾದರೆ ಒಂದು ಜಾತಿಯ ಗೆದ್ದಲಿನ ರಾಣಿಕೀಟ ದಿನಕ್ಕೆ 43,000 ಮೊಟ್ಟೆಗಳನ್ನು ಇಡಬಲ್ಲುದಂತೆ; ಜೊತೆಗೆ ತಲೆಮಾರುಗಳು ಅಲ್ಪಾವಧಿಯವು (ಒಂದು ವರ್ಷದಲ್ಲಿ ಹಲವಾರಿರಬಹುದು). ಒಂದು ಜಾತಿಯ ಶೀಡೆ ಎಂಟು ತಿಂಗಳಲ್ಲಿ 16 ತಲೆಮಾರುಗಳನ್ನು ಉತ್ಪತ್ತಿಮಾಡಬಲ್ಲುದಂತೆ. ಕೀಟಗಳಿಗೆ ಹಾರಾಟದ ಶಕ್ತಿ ಇರುವುದರಿಂದ ಇವು ಅನುಕೂಲವಾದ ಸನ್ನಿವೇಶವನ್ನು ಪತ್ತೆಹಚ್ಚಿ ಅಲ್ಲಿಗೆ ಹಾರಿಹೋಗಬಲ್ಲವು. ಕೀಟವರ್ಗದಲ್ಲಿ ಕಾಣಬರುವ ರೂಪ ಪರಿವರ್ತನೆಯೂ ಇದರ ವೈವಿಧ್ಯಕ್ಕೆ ಸಹಾಯಕವಾಗಿದೆ. ಇದರಿಂದ ಮರಿ ಹುಳು, ಪ್ರೌಢಕೀಟಗಳೆರಡೂ ತಮಗೆ ತಕ್ಕ ರೀತಿಯಲ್ಲಿ ಬಾಹ್ಯ ಸನ್ನಿವೇಶಕ್ಕೆ ಹೊಂದಿಕೊಂಡು ಬೆಳೆಯಲು ಸಾಧ್ಯ. ಕೀಟವರ್ಗದ ವೈವಿಧ್ಯ ಮತ್ತು ಸಂಖ್ಯಾಬಲಗಳನ್ನು ಪರಿಶೀಲಿಸಿ ಭೂಗ್ರಹವನ್ನು 'ಕೀಟಗೋಳ' ಎಂದೇ ಕರೆಯುವುದು ವಿಜ್ಞಾನ ದೃಷ್ಟಿಯಿಂದ ಅತಿಶಯೋಕ್ತಿ ಅಲ್ಲ. ಎಲ್ಲ ಬಗೆಯ ಜೈವಿಕ ವಸ್ತುಗಳೂ ಒಂದಲ್ಲ ಒಂದು ಕೀಟಜಾತಿಗೆ ಆಹಾರ. ಆಹಾರ ಲಭ್ಯವಿರುವ ಎಲ್ಲ ಭೂ ಮತ್ತು ಸಿಹಿ ನೀರು ಪ್ರದೇಶಗಳಲ್ಲೂ ಕೀಟ ಸಮುದಾಯಗಳುಂಟು (ಉಪ್ಪು ನೀರಿನಲ್ಲೂ ಕೆಲವು ಜಾತಿ ಕೀಟಗಳು ವಾಸಿಸುವುವು).

ಕೀಟಗಳಲ್ಲಿ ಕಾಣಬರುವ ಹಲವಾರು ವೈಶಿಷ್ಟ್ಯಗಳಲ್ಲಿ ಅವುಗಳ ವೈವಿಧ್ಯಪೂರ್ಣ ಆಹಾರಸಂಪಾದನಾ ರೀತಿ ಹಾಗೂ ಜೀವನಕ್ರಮಗಳು ಮುಖ್ಯವಾದವು. ಕೊಡತಿ ಕೀಟ ಇತ್ಯಾದಿ ಕೆಲವು ಕೀಟಗಳು ಬೇಟೆಯಾಡಿ ಆಹಾರವನ್ನು ಸಂಪಾದಿಸಿದರೆ ಕೆಲವು ಪರಾವಲಂಬಿ ಕೀಟಗಳು ಆತಿಥೇಯ ಪ್ರಾಣಿಗಳ ರಕ್ತನಾಳಗಳಲ್ಲಿ ಜೀವಿಸಿದ್ದು ತಮ್ಮ ಚರ್ಮದ ಮೂಲಕ ರಸರೂಪದ ಆಹಾರವನ್ನು ಹೀರುತ್ತವೆ. ಅನೇಕ ಬಗೆಯ ಕೀಟಗಳಲ್ಲಿ ಮಾನವ ಸಮಾಜದಲ್ಲಿರುವಂತೆಯೇ ಸಮಾಜವ್ಯವಸ್ಥೆ, ಸಹಕಾರಪದ್ಧತಿಗಳನ್ನು ಕಾಣಬಹುದು. ಉದಾಹರಣೆಗೆ ಗೆದ್ದಲು, ಜೇನು, ಇರುವೆ, ಕಣಜ ಇತ್ಯಾದಿ. ಇವುಗಳ ಸಮಾಜವ್ಯವಸ್ಥೆಯಲ್ಲಿ ದುಡಿಮೆಯ ಹಂಚಿಕೆಯನ್ನೂ ನೋಡಬಹುದು. ಈ ಹಂಚಿಕೆಯಲ್ಲಿ ನಿಯಮಿತ ಕರ್ತವ್ಯಗಳಿಗೆ ತಕ್ಕಂತೆ ಕೀಟಗಳ ಅಂಗಾಂಗ ರಚನೆಯಲ್ಲೂ ಬದಲಾವಣೆಗಳಾಗಿವೆ. ಕೆಲಸಗಾರ, ಸೈನಿಕ, ದಾದಿ, ರಾಣಿ ಮುಂತಾದ ಕೀಟ ಬಗೆಗಳನ್ನು ಗುರುತಿಸಬಹುದು. ಕೆಲವು ಜಾತಿಯ ಇರುವೆಗಳಲ್ಲಿ ಶಿಲೀಂದ್ರ ಕೃಷಿ, ಇತರ ಕೀಟಗಳನ್ನು ಅವು ಸ್ರವಿಸುವ ಸಿಹಿರಸಕ್ಕಾಗಿ ಸಾಕಿ ಅವುಗಳಿಂದ ದುಡಿಸಿಕೊಂಡು ಆರಾಮವಾಗಿರುವುದು ಮುಂತಾದ ವಿಚಿತ್ರ ಹಾಗೂ ವಿಶೇಷ ಪ್ರವೃತ್ತಿಗಳೂ ಕಾಣಬರುತ್ತವೆ.

ಜಿರಲೆ

ಕೀಟವರ್ಗ ಸುಮಾರು 25 ಕೋಟಿ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದು ಆಗಿನಿಂದ ವಿಕಾಸ ಹೊಂದುತ್ತಿದೆಯೆಂದು ಕೀಟಶಾಸ್ತ್ರಜ್ಞರ ಅಭಿಪ್ರಾಯ. ಖಚಿತವಾಗಿ ಗೊತ್ತಾಗಿರುವ ಕೀಟ ಪೆನ್ಸಿಲ್ವೇನಿಯನ್ ಕಾಲದ ಶಿಲಾಸ್ತರಗಳಿಂದ ದೊರೆಕಿದೆ (ಇದು ಇಂದಿನ ಕೊಡತಿಕೀಟಗಳನ್ನು ಹೋಲುತ್ತದೆ). ಕೀಟಗಳು ಬಹುಶಃ ಡಿವೋನಿಯನ್ ಯುಗದಲ್ಲಿ ಅಸ್ತಿತ್ವಕ್ಕೆ ಬಂದು ಕಾರ್ಬಾನಿಫೆರಸ್ ಮತ್ತು ಪರ್ಮಿಯನ್ ಕಾಲಗಳಲ್ಲಿ ವಿಕಾಸದಲ್ಲಿ ಮುಂದುವರಿದು ಟ್ರೈಯಾಸಿಕ್ ಮತ್ತು ಜುರಾಸಿಕ್ ಕಾಲಗಳ ಹೊತ್ತಿಗೆ ಇಂದಿನ ಕೀಟಗಳನ್ನು ಹೋಲುವ ಸ್ಥಿತಿಗೆ ಬಂದಿದ್ದುವು. ಕೀಟಗಳ ಪೂರ್ವಜ ಪ್ರಾಣಿಗಳು ಬಹುಶಃ ಟ್ರೈಲೋಬೈಟ್ ಎಂಬ ಗುಂಪಿನ ಪ್ರಾಣಿಗಳೊಂದಿಗೆ ಏಕಕಾಲದಲ್ಲಿ ಅಸ್ತಿತ್ವಕ್ಕೆ ಬಂದುವೆಂದೂ ಇವುಗಳಿಂದ ಕಾಲಾನಂತರ ಅರ್ಯಾಕ್ನಿಡ, ಕ್ರಸ್ಟೇಸಿಯ, ಕೈಲೊಪೊಡ ಮತ್ತು ಇನ್ಸೆಕ್ಟ (ಕೀಟಗಳು) ವರ್ಗಗಳು ಉದ್ಭವವಾದುವೆಂದೂ ಊಹೆಯಿದೆ. ಈ ಪೂರ್ವಜ ಪ್ರಾಣಿಗಳನ್ನು ಪ್ರೋಟಾರ್ತ್ರೊಪೊಡ ಎಂಬ ಗುಂಪಿಗೆ ಸೇರಿಸಲಾಗಿದೆ. ಇವುಗಳೆಲ್ಲ ಸಾಗರದ ಉಪ್ಪುನೀರಿನಲ್ಲಿ ವಾಸಿಸುತ್ತಿದ್ದವೆಂದೂ ಇವುಗಳ ದೇಹ ಖಂಡಗಳಾಗಿ ವಿಂಗಡಣೆಯಾಗಿದ್ದು, ಅದರ ಮೇಲೆಲ್ಲ ಕೈಟಿನ್ ಎಂಬ ವಿಶೇಷ ಬಗೆಯ ವಸ್ತುವಿನ ಕವಚವಿತ್ತೆಂದೂ ಹೇಳಲಾಗಿದೆ. ಇವುಗಳಲ್ಲಿ ಕೀಲುಕಾಲುಗಳಿರಲಿಲ್ಲ. ಇವು ದೇಹವನ್ನು ನೆಲಕ್ಕೆ ತಾಗಿಸಿ ತೆವಳುತ್ತ ಚಲಿಸುತ್ತಿದ್ದುವು ಅಥವಾ ದೇಹವನ್ನು ಪಕ್ಕದಿಂದ ಪಕ್ಕಕ್ಕೆ ಚಲಿಸಿ ಈಜುತ್ತಿದ್ದುವು. ಕಾಲ ಕ್ರಮೇಣ ಕೀಲುಕಾಲುಗಳು ಉದ್ಭವಿಸಿದುವು. ಹಾಗೂ ದೇಹದ ಖಂಡಗಳ ಸಂಖ್ಯೆಯೂ ಕಡಿಮೆಯಾಗುತ್ತ ಬಂದು ಕೊನೆಗೆ 20ಕ್ಕೆ ನಿಂತಿತು.

ಕೀಟವರ್ಗದ ವಿಕಸನ ದೃಷ್ಟಿಯಿಂದ ಕೈಟಿನ್ ಅನುಕೂಲ ಪ್ರತಿಕೂಲಗಳೆರಡಕ್ಕೂ ಕಾರಣವಾಗಿದೆ. ಒಣಸನ್ನಿವೇಶಗಳಲ್ಲಿ ದೇಹದೊಳಗಿನ ಶೀತಾಂಶ ಹೊರಗೆ ಹೋಗದಂತೆ ಇದು ತಡೆಗಟ್ಟುವುದರಿಂದ, ಈ ಜೀವಿಗಳು ಜಲಜೀವನವನ್ನು ತ್ಯಜಿಸಿ, ಭೂ ಭಾಗಗಳಿಗೆ ವಲಸೆ ಬಂದು ಕ್ರಮೇಣ ಮರಳ್ಗಾಡುಗಳಿಗೂ ಹೊಂದಿಕೊಳ್ಳಲು ಸಾಧ್ಯವಾಯಿತು. ಆದರೆ ಚಿಪ್ಪಿನಂತೆ ಗಡುಸಾಗಿರುವ ಈ ಹೊದಿಕೆಯನ್ನು ಬೆಳವಣಿಗೆಯ ಪ್ರತಿಹಂತದಲ್ಲೂ ಕಳಚಬೇಕಾಯಿತು. ಪೊರೆಬಿಟ್ಟ ಹುಳುವಿನ ಮೈ ಮೆತುವಾದ್ದರಿಂದ ಆಕಾರವನ್ನು ಕಳೆದುಕೊಳ್ಳುವ ಅಪಾಯವೇ ಅಲ್ಲದೆ, ಪುನಃ ಪೊರೆಬಲಿಯುವ ವರೆಗೂ ಕೀಟ ಅಸಹಾಯಕ ಸ್ಥಿತಿಯಲ್ಲಿರುತ್ತದೆ.

ಕೀಟಗಳಲ್ಲಿ ಜ್ಞಾನೇಂದ್ರಿಯಗಳ ಮೂಲಕ ಸನ್ನಿವೇಶದ ಅರಿವು ಪಡೆದೇ ಅಪಾಯದಿಂದ ದೂರವಾಗಿ ಇಲ್ಲವೆ ಲಾಭವಿದ್ದೆಡೆಗೆ ಚಲನೆಯನ್ನು ಪ್ರಚೋದಿಸುವಂಥ ನರಮಂಡಲವಿದೆ. ಕೀಟಗಳ ಮಿದುಳು ಅತಿಸೂಕ್ಷ್ಮವಾದರೂ ಇರುವೆ, ಜೇನು ಇವುಗಳ ಹುಟ್ಟುಗುಣದ ನಡವಳಿಕೆ ನೋಡಿದರೆ ಇದು ಬಹಳ ಉನ್ನತಮಟ್ಟದ ರಚನೆಯುಳ್ಳದ್ದೆಂದು ವೇದ್ಯವಾಗುತ್ತದೆ. ಆದರೂ ಸ್ವಾನುಭವದಿಂದ ಜ್ಞಾಪಕಶಕ್ತಿ ಬೆಳೆಸಿಕೊಂಡು, ಜೀವನರೀತಿಯನ್ನು ಬದಲಾಯಿಸಿಕೊಳ್ಳುವ ಬುದ್ಧಿಶಕ್ತಿ ಕೀಟಗಳಿಗೆ ಇಲ್ಲ.

ಕೀಟಗಳ ದೇಹರಚನೆಯ ವಿಶೇಷವೆಂದರೆ ವದನಾಂಗಗಳು ಮತ್ತು ಚಲನಾಂಗಗಳು ಜೋಡಿ ಶ್ರೇಣಿಯಲ್ಲಿರುವುದು. ಕುಡಿಮೀಸೆಗಳು (ಆಂಟೆನೆ) ನೆತ್ತಿಯಮೇಲೆ ಕಣ್ಣುಗಳ



**ಜಿರಲೆಯ ವದನಾಂಗಗಳು**

ಮುಂದೆ ಅಥವಾ ನಡುವೆ ಇರುವ ಹೆಚ್ಚು ಚಲನ ಸ್ವಾತಂತ್ರ್ಯವಿರುವ ಒಂದು ಜೊತೆ ಉಪಾಂಗಗಳು. ಇವುಗಳಲ್ಲಿ ಹಲವಾರು ಖಂಡಗಳನ್ನು ನೋಡಬಹುದು. ನಿಮ್ನವರ್ಗದ ಕೀಟಗಳಲ್ಲಿ ಇವು ಮಣಿಸರದಂತಿವೆ. ಉನ್ನತಮಟ್ಟದ ಕೀಟಗಳ ಕುಡಿಮೀಸೆಗಳ ತುದಿಯಲ್ಲಿ ಬಾಚಣಿಗೆ ಹಲ್ಲುಗಳಂಥ, ಚಮಚದ ಹಿಡಿಯಂಥ, ದೊಣ್ಣೆಯ ಹಿಡಿಯಂಥ, ಫಲಕಗಳ ಕಟ್ಟಿನಂಥ ರಚನೆಗಳು ಇರುವುದುಂಟು. ಕುಡಿಮೀಸೆಗಳು ವಿಶೇಷವಾದ ಜ್ಞಾನೇಂದ್ರಿಯಗಳು ವದನಾಂಗಗಳು ಮುಖ್ಯವಾಗಿ ಮೂರೂಜೊತೆ ರಚನೆಗಳಿಂದ ಕೂಡಿವೆ: (i) ಅಗಿಯಲು ಉಪಯುಕ್ತವಾದ ಮ್ಯಾಂಡಿಬಲ್ ಜೊತೆ, (ii) ಬಾಯಿಯಿಂದ ಆಹಾರ ಬೀಳದಂತೆ ತಡೆಯುವ ಒಂದು ಜೊತೆ ಪ್ರಥಮ ಮ್ಯಾಕ್ಸಿಲ, (iii) ಒಂದು ಜೊತೆ ದ್ವಿತೀಯ ಮ್ಯಾಕ್ಸಿಲ ಕೂಡಿಕೊಂಡು ಆಗಿರುವ ಲೇಬಿಯಂ ಅಥವಾ ಕೆಳತುಟಿ. ಇವಲ್ಲದೆ ಲೇಬ್ರಂ ಅಥವಾ ಮೇಲ್ದುಟಿ, ಬಾಯಿಯೊಳಗಿನ ಹೈಪೋಫ್ಯಾರಿಂಕ್ಸ್ ಮತ್ತು ಎಪಿಫ್ಯಾರಿಂಕ್ಸ್ ಇವು ಕೂಡ ವದನಾಂಗದ ಭಾಗಗಳೇ. ಕೀಟ ತೆಗೆದುಕೊಳ್ಳುವ ಆಹಾರದ ಲಕ್ಷಣದ ಮೇಲೆ ಅದರ ವದನಾಂಗಗಳ ರಚನೆ ಬದಲಾವಣೆಯಾಗಬಹುದು. ಉದಾಹರಣೆಗೆ ಗಟ್ಟಿ ಪದಾರ್ಥಗಳನ್ನು ತುಂಡುಮಾಡಿ ಅಗಿದು ತಿನ್ನುವ ಜಿರಲೆ, ಮಿಡತೆ, ಕಂಬಳಿಹುಳು ಮತ್ತು ದುಂಬಿಗಳಲ್ಲಿ ಮೊನಚಾದ ಹಲ್ಲುಗಳಿವೆ. ಸಸ್ಯಗಳ ರಸ, ಪ್ರಾಣಿಗಳ ರಕ್ತಹೀರಿ ಜೀವಿಸುವ ಕೀಟಗಳ ವದನಾಂಗಗಳು ಸೂಜಿಯಂತೆ ಚೂಪಾದ ತುದಿಯುಳ್ಳ ಕೊಳವೆಗಳಂತಿವೆ. ಹೂಗಳ ಮಕರಂದ ಕುಡಿಯುವ ಪತಂಗಗಳ ವದನಾಂಗಗಳು ಆನೆಯ ಸೊಂಡಿಲಿನಂತಿವೆ. ಪರಾಗವನ್ನು ಕೂಡಿಸುವ ಜೇನಿನ ಮ್ಯಾಕ್ಸಿಲ ಮತ್ತು ಕೆಳತುಟಿ ಈ ಕಾರ್ಯಕ್ಕೆ ತಕ್ಕಂತೆ ಹೊಂದಿಕೊಂಡಿವೆ. ಆಹಾರಕಣಗಳನ್ನು ಜೊಲ್ಲಿನಿಂದ ನೆನೆಸಿ ಕರಗಿಸಿ ಹೀರಿಕೊಳ್ಳುವ ನೊಣಗಳಲ್ಲಿ ಮೇಲ್ದುಟಿ, ನಾಲಿಗೆ, ಕೆಳತುಟಿ ಇವು ಮೂರು ಕೂಡಿ ಸ್ಪಂಜಿನಂಥ ಅಂಗವಾಗಿವೆ.

**ಕೀಟಗಳ ಚಲನಾಂಗಗಳು:** ಕೀಲುಗಳುಳ್ಳ 3 ಜೊತೆ ಕಾಲುಗಳು ಮತ್ತು ಪ್ರೌಢಾವಸ್ಥೆಯಲ್ಲಿ ಸಾಮಾನ್ಯವಾಗಿ ಎರಡು ಜೊತೆ ರೆಕ್ಕೆಗಳು. (ಅನೇಕ ಮರಿ ಕೀಟಗಳಿಗೆ ಆರಕ್ಕಿಂತ ಹೆಚ್ಚು ಕಾಲು ಅಥವಾ ಕಾಲಿಲ್ಲದೇ ಇರುವುದು, ಅನೇಕ ಪ್ರೌಢ ಕೀಟಗಳಿಗೆ ಒಂದೇ ಜೊತೆ ರೆಕ್ಕೆ ಅಥವಾ ರೆಕ್ಕೆಗಳೇ ಇಲ್ಲದಿರುವುದನ್ನು ಕಾಣಬಹುದು). ಚಲನಾಂಗಗಳು ದೇಹದ ಮಧ್ಯಭಾಗವಾದ ಎದೆಗೆ ಜೋಡಣೆಗೊಂಡಿವೆ. ಸಂಧಿಪದಿ ಎಂಬ ಹೆಸರಿಗೆ ಅನುಗುಣವಾಗಿ ಕಾಲಿನಲ್ಲಿ ಐದು ಮುಖ್ಯವಾದ ಸಂಧಿಗಳಿವೆ: ದೇಹದ ಕಡೆಯಿಂದ ಆರಂಭವಾಗಿ ಇವುಗಳಿಗೆ ಕ್ರಮವಾಗಿ ಕಾಕ್ಸ, ಟ್ರೋಕ್ಯಾಂಟರ್, ಫೀಮರ್, ಟಿಬಿಯ ಮತ್ತು ಟಾರ್ಸಸ್ ಎಂದು ಹೆಸರು. ಟಾರ್ಸಸಿನಲ್ಲಿ ಎರಡರಿಂದ ಐದು ಉಪಸಂಧಿಗಳಿರಬಹುದು. ಟಾರ್ಸಸಿನ ಕೊನೆಯಲ್ಲಿ 2 ನಖಗಳು ಮತ್ತು ಅವುಗಳ ಮಧ್ಯದಲ್ಲಿ ಒಂದು ಮೆತ್ತನೆಯ ಗುಬುಟು ಇರುವುದುಂಟು. ಅಡ್ಡಿ ಆತಂಕವಿಲ್ಲದ ಚಲನೆಗೆ ಕಾಲುಗಳು ಸಹಾಯಕವಾಗಿವೆ. ಚಲನೆಯೊಂದೇ ಅಲ್ಲದೆ ಭೂಮಿಯಲ್ಲಿ ತೋಡುವಿಕೆ (ಉದಾ: ಚಿಮ್ಮಂಡೆ). ಬೇಟೆಯನ್ನು ಹಿಡಿದುಕೊಳ್ಳುವುದು (ಉದಾ: ಕೊಡತಿಕೀಟ, ಮ್ಯಾಂಟಿಸ್ ಕೀಟ), ಕುಪ್ಪಳಿಸುವುದು (ಉದಾ: ಮಿಡತೆ). ಇನ್ನಿತರ ಉಪಕಾರ್ಯಗಳಿಗೂ ಕಾಲುಗಳು ಸಹಾಯಕ.

ಎದೆಯ ಎರಡನೆಯ ಮತ್ತು ಮೂರನೆಯ ಖಂಡಗಳ ಮೈ ಹೊದಿಕೆ ತೆಳುವಾಗಿ ವಿಸ್ತರಿಸಿದ ಭಾಗಗಳೇ ರೆಕ್ಕೆಗಳು. ರೆಕ್ಕೆಯ ಮೇಲಿನ, ಕೆಳಗಿನ ಪದರಗಳ ಮಧ್ಯೆ ಕವಲೊಡೆದಿರುವ ನಾಳಗಳುಂಟು. ಇವುಗಳಲ್ಲಿ ಕೆಲವು ಶ್ವಾಸನಾಳಗಳು. ಇನ್ನು ಕೆಲವು ರಕ್ತನಾಳಗಳು. ರೆಕ್ಕೆಯ ಆಕಾರ ತ್ರಿಕೋಣದಂತೆ. ದೇಹದ ಒಂದು ಭಾಗದ ಮುಂದಿನ ಮತ್ತು ಹಿಂದಿನ ಎರಡು ರೆಕ್ಕೆಗಳೂ ಒಟ್ಟಿಗೆ ಚಲಿಸಲು ಸೂಕ್ಷ್ಮವಾದ ಕೊಕ್ಕೆ, ಕೂದಲು ಮತ್ತು ಮುಳ್ಳುಗಳ ಮೂಲಕ ಸಂಪರ್ಕವಿದೆ. ಡಿಪ್ಟಿರ ಗಣದ ಕೀಟಗಳಲ್ಲಿ ಒಂದೇ ಜೊತೆ ರೆಕ್ಕೆ ಇದೆ; ಹಿಂದಿನ ರೆಕ್ಕೆಗಳಿಗೆ ಬದಲು ಸಮತೋಲನೆಯನ್ನು ಕಾಯುವ ಅಂಗಗಳು (ಹಾಲ್ಟಿಯರ್ಸ್) ಇವೆ. ಕೋಲಿಯಾಪ್ಟಿರ ಗಣದ ಕೀಟಗಳಲ್ಲಿ ಮುಂದಿನ ರೆಕ್ಕೆಗಳು ದಪ್ಪ ಮತ್ತು ಗಡುಸಾದ ಎಲಿಟ್ರಗಳಾಗಿ ರೂಪಾಂತರವಾಗಿ ಕೀಟ ವಿಶ್ರಾಂತಿಯಲ್ಲಿದ್ದಾಗ ಹಾರಾಟಕ್ಕೆ ಉಪಯುಕ್ತವಾದ ಹಿಂದಿನ ರೆಕ್ಕೆಗಳನ್ನು ಮುಚ್ಚಿ ಸಂರಕ್ಷಿಸುತ್ತವೆ. ಅಂತೆಯೇ ಹೆಟರಾಪ್ಟಿರ ಗಣದಲ್ಲಿ ಮುಂದಿನ ರೆಕ್ಕೆಯ ತೊಟ್ಟಿನ ಅರ್ಧಭಾಗ ದಪ್ಪ ಮತ್ತು ಗಡುಸಾದ ಹೆಮಿಎಲಿಟ್ರ ಆಗಿದೆ. ಆರ್ಥಾಪ್ಟಿರ ಗಣದಲ್ಲಿ ಮುಂದಿನ ರೆಕ್ಕೆ ಚಕ್ಕಳದಂತೆ ಗಡುಸಾಗಿದೆ. ಇದಕ್ಕೆ ಟೆಗ್ಮೈನ ಎಂದು ಹೆಸರು.



**ಜಿರಲೆಯ ಜೀರ್ಣಾಂಗ ವ್ಯವಸ್ಥೆ**

**ಜೀರ್ಣಾಂಗ ವ್ಯವಸ್ಥೆ:** ಕೀಟಗಳಲ್ಲಿ ಜೀರ್ಣಾಂಗ ವ್ಯವಸ್ಥೆಯೆಂದರೆ ದೇಹದ ಉದ್ದದಷ್ಟೆ ಅಥವಾ ಹೆಚ್ಚು ಉದ್ದ ಇರುವ ಸುರುಳಿ ಸುತ್ತಿಕೊಂಡಿರುವ ಒಂದು ಕೊಳವೆ. ದ್ರವರೂಪದ ಆಹಾರವನ್ನು ಸೇವಿಸುವ ಕೀಟಗಳಲ್ಲಿ ಇದರ ಉದ್ದ ಹೆಚ್ಚು. ಈ ಕೊಳವೆಯಲ್ಲಿ ಮುಂಗರುಳು, ನಡುಕರುಳು ಮತ್ತು ಹಿಂಗರುಳು ಎಂಬ ಮೂರು ಮುಖ್ಯವಾದ ಭಾಗಗಳಿವೆ: ಮುಂಗರುಳು ಮತ್ತು ಹಿಂಗರುಳುಗಳು ದೇಹದೊಳಕ್ಕೆ ಚಾಚಿದ ಹೊರಚರ್ಮದ ಭಾಗಗಳಾದ್ದರಿಂದ ಇವುಗಳಲ್ಲಿ ಚರ್ಮದ ಮೇಲೆ ಇರುವಂಥ ಮೇಲ್ಪೊರೆಯ ಪದರವನ್ನು ಕಾಣಬಹುದು.

ಮುಂಗರುಳಿನ ಮುಖ್ಯ ಭಾಗಗಳಿವು. 1 ಬಾಯಿಯ ಮುಂದಿನ ಆಹಾರ ಕುಳಿ: ಇದು ವದನಾಂಗಗಳಿಗೂ ಮೇಲುತುಟಿಗೂ ಮಧ್ಯದ ಭಾಗ. ತಾತ್ಕಾಲಿಕವಾಗಿ ಆಹಾರ

ಶೇಖರಣೆ ಮಾಡುವುದು ಮತ್ತು ಆಹಾರವನ್ನು ಜೊಲ್ಲಿನಿಂದ ತೋಯಿಸುವುದು ಇಲ್ಲಿಯೇ. 2 ಗಂಟಲು: ಬಾಯಿಗೂ ಆಹಾರನಾಳಕ್ಕೂ ನಡುವಣ ಭಾಗ. 3 ಆಹಾರನಾಳ: ನೇರವಾದ ಈ ಕೊಳವೆ ತಲೆಯ ಹಿಂಭಾಗದಿಂದ ಎದೆಯ ಮುಂಭಾಗದವರೆಗೂ ಚಾಚಿಕೊಂಡಿದೆ. ಇದರ ಒಳಪದರಲ್ಲಿ ಉದ್ದುದ್ದವಾಗಿರುವ ನೆರಿಗೆಗಳುಂಟು. 4 ಎರೆಚೀಲ: ಆಹಾರ ನಾಳದ ಉಬ್ಬಿಕೊಂಡಿರುವ ಹಿಂಭಾಗವಿದು; ಆಹಾರ ಶೇಖರಣೆಗೆ ಉಪಯೋಗಿಸಲ್ಪಡುತ್ತದೆ. 5 ಜಠರ: ಚೀಲದಂಥ ಭಾಗ. ಇದರ ಒಳಪದರದಲ್ಲಿ ಹಲ್ಲಿನಂತಿರುವ ಏಣುಗಳಿದ್ದು, ಆಹಾರವನ್ನು ಅರೆಯಲು ಅವು ಸಹಾಯಕವಾಗಿವೆ.

ನಡುಕರುಳನ್ನು ಹೊಟ್ಟೆ ಎನ್ನಬಹುದು. ಇದರ ಆಕಾರ, ಧಾರಣಶಕ್ತಿ ಮುಂತಾದುವು ಕೀಟ ಸೇವಿಸುವ ಆಹಾರದ ಸ್ವಭಾವ ಮತ್ತು ಪ್ರಮಾಣವನ್ನು ಅನುಸರಿಸಿವೆ. ನಡುಕರುಳು ಕೆಲವು ಕೀಟಗಳಲ್ಲಿ ಚೀಲದಂತೆಯೂ ಬೇರೆಯವುಗಳಲ್ಲಿ ಸುರುಳಿ ಸುತ್ತಿಕೊಂಡಿರುವ ಕೊಳವೆಯಂತೆಯೂ ಇದೆ. ಅನೇಕ ಕೀಟಗಳಲ್ಲಿ ಹೊಟ್ಟೆಯ ಮುಂಭಾಗದಲ್ಲಿ ಬೆರಳಿನ ಆಕಾರದ ಕೊಳವೆಗಳ ಗೊಂಚಲುಂಟು. ಈ ಕೊಳವೆಗಳಿಗೂ ಕರುಳಿಗೂ ಸಂಪರ್ಕವಿರುವುದರಿಂದ ಇವು ಕರುಳಿನ ಹೀರುವಲಯವನ್ನು ಹೆಚ್ಚಿಸುತ್ತವೆ.

ಹಿಂಗರುಳಿನಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು: 1 ಸಣ್ಣ ಕರುಳು, (ಇಲಿಯಮ್), 2 ದೊಡ್ಡಕರುಳು (ಕೋಲಾನ್), 3 ಗುದನಾಳ. ಹಿಂಗರುಳಿನ ಪ್ರಾರಂಭದಲ್ಲಿ ಸೂಕ್ಷ್ಮವಾದ ಕೂದಲೆಳೆಯಂತಿರುವ ಮಾಲ್ಪಿಗೀಯನ್ ಟ್ಯೂಬ್ಯೂಲ್ಸ್ ಎಂಬ ಕೊಳವೆಗಳ ಗೊಂಚಲು ಅಂಟಿಕೊಂಡಿದೆ. ರಕ್ತದಿಂದ ವಿಸರ್ಜಿತವಾಗುವ ವಸ್ತುಗಳನ್ನು ಹೀರಿ, ಹಿಂಗರುಳಿಗೆ ಸೇರಿಸಿ ಹೊರಕ್ಕೆ ಹೋಗುವಂತೆ ಇವು ಮಾಡುತ್ತವೆ.

**ಉಸಿರಾಟದ ವ್ಯವಸ್ಥೆ:** ಕೀಟಗಳಲ್ಲಿ ಶ್ವಾಸಕೋಶಗಳಿಲ್ಲ; ದೇಹಾದ್ಯಂತ ವ್ಯಾಪಿಸಿಕೊಂಡು ಕವಲೊಡೆದಿರುವ ಶ್ವಾಸನಾಳಗಳ (ಟ್ರೇಕಿಯ) ಮೂಲಕ ಉಸಿರಾಟ ನಡೆಯುತ್ತದೆ. ಎದೆ ಮತ್ತು ಉದರಗಳ ಪಕ್ಕಗಳಲ್ಲಿ ಹೊರದೇಹದ ಖಂಡಗಳಿಗನುಸಾರವಾಗಿ ಜೊತೆ ಜೊತೆಯಾಗಿರುವ ಶ್ವಾಸರಂಧ್ರಗಳ (ಸ್ಪೈರಕಲ್ಸ್) ಮೂಲಕ ಗಾಳಿ ಶ್ವಾಸನಾಳಗಳನ್ನು ಪ್ರವೇಶಿಸುತ್ತದೆ. ಜಲವಾಸಿಗಳಾದ ಕೆಲವು ಮರಿಕೀಟಗಳಲ್ಲಿ ಕಿವಿರುಗಳಿವೆ. ಶ್ವಾಸರಂಧ್ರಗಳ ಸಂಖ್ಯೆ ಹತ್ತು ಜೊತೆ–ಎದೆ ಭಾಗದಲ್ಲಿ 2. ಉದರ ಭಾಗದಲ್ಲಿ 8.



ಜಿರಲೆಯ ಉಸಿರಾಟದ ವ್ಯವಸ್ಥೆ

**ಶ್ವಾಸರಂಧ್ರದ ರಚನೆ:** ಗಾಳಿಯ ಪ್ರವೇಶಕ್ಕೆ ರಂಧ್ರ, ಅದರ ಸುತ್ತಲೂ ಹೊರ ಚರ್ಮದ ಅಂಗಳ ಮತ್ತು ಸ್ನಾಯುಗಳ ಹಾಗೂ ಹೊರ ಚರ್ಮದ ತುಂಡುಗಳಿಂದ ಕೂಡಿದ ಕವಾಟವಿದೆ. ದೇಹದ ಶೈತ್ಯಾಂಶ ಆವಿರೂಪದಲ್ಲಿ ಕಳೆದುಹೋಗುವುದನ್ನು ಕವಾಟ ವ್ಯವಸ್ಥೆ ತಡೆಗಟ್ಟುತ್ತದೆ. ಅನೇಕ ಕೀಟಗಳಲ್ಲಿ ಅಂಗಳಕ್ಕೆ ಬದಲು ಹೊರಚರ್ಮದ ಎರಡು ತುಟಿಗಳುಂಟು.

ಶ್ವಾಸನಾಳಗಳು ಮತ್ತು ಅವುಗಳ ಸೂಕ್ಷ್ಮ ಕವಲುಗಳು ಗಾಳಿ ತುಂಬಿಕೊಂಡಾಗ ಬೆಳ್ಳಗೆ ಹೊಳೆಯುತ್ತವೆ. ಇವುಗಳ ಒಳಪದರ ಹೊರ ಚರ್ಮದ್ದು; ಈ ಒಳಪದರ ಸುರುಳಿ ಆಕಾರದಲ್ಲಿ ಉಬ್ಬಿಕೊಂಡಿದೆ. ಇದನ್ನು ಸೂಕ್ಷ್ಮದರ್ಶಕದ ಮೂಲಕ ನೋಡಿದಾಗ ನಾಳಗಳ ಸುತ್ತ ಗೆರೆಗಳಿದ್ದಂತೆ ಕಾಣುತ್ತವೆ. ನಾಳಗಳು ಚಪ್ಪಟೆಯಾಗದಂತೆ ಮತ್ತು ಗಾಳಿಸಂಚಾರ ಸರಾಗವಾಗಿ ನಡೆಯಲು ಈ ಸುರುಳಿಗಳು ಉಪಯುಕ್ತವಾಗಿವೆ. ಶ್ವಾಸನಾಳಗಳ ಕವಲುಗಳು ಬರಬರುತ್ತ ಅತ್ಯಂತ ಸೂಕ್ಷ್ಮವಾಗಿ ಅಂಗಾಂಶಗಳನ್ನೆಲ್ಲ ಪ್ರವೇಶಿಸಿ ಕೊನೆಗೆ ಜೀವಕಣಗಳ ಗುಂಪುಗಳ ಮಧ್ಯೆ ಅಂತ್ಯಗೊಳ್ಳುತ್ತದೆ. ಈ ರೀತಿ ದೇಹಾದ್ಯಂತ ಹೊಕ್ಕು, ಜೀವಕಣಗಳಿಗೆ ನೇರವಾಗಿ ಸ್ವಚ್ಛ ಗಾಳಿಯೊದಗಿಸಿ, ಮಲಿನವಾದ ಗಾಳಿ ಮತ್ತು ನೀರನ್ನು ಹೊರಕ್ಕೆ ಸಾಗಿಸುತ್ತವೆ. ಹಾರುವ ಶಕ್ತಿಯಿರುವ ಕೀಟಗಳಲ್ಲಿ ಕೆಲವು ನಿರ್ದಿಷ್ಟವಾದ ಸ್ಥಳಗಳಲ್ಲಿ ಶ್ವಾಸನಾಳಗಳು ಉಬ್ಬಿಕೊಂಡು ಗಾಳಿಚೀಲಗಳಾಗುವುದುಂಟು. ಇವು ಉಸಿರಾಟಕ್ಕೆ ಸಹಾಯಕವಾಗುವುವಲ್ಲದೆ ಹಾರಾಟದಲ್ಲೂ ಉಪಯುಕ್ತವಾಗಿವೆ.

**ರಕ್ತಪರಿಚಲನಾ ವ್ಯವಸ್ಥೆ:** ಕೀಟಗಳ ರಕ್ತಪರಿಚಲನಾ ವ್ಯವಸ್ಥೆಯಲ್ಲಿ ಬೆನ್ನು ಭಾಗದಲ್ಲಿನ ರಕ್ತನಾಳ (ಡಾರ್ಸಲ್ ವೆಸಲ್) ಒಂದೇ ಪ್ರಮುಖ ಭಾಗ. ದೇಹದ ಉಳಿದಭಾಗಗಳಲ್ಲೆಲ್ಲೂ ರಕ್ತನಾಳಗಳಿಲ್ಲ. ರಕ್ತ ಈ ಭಾಗಗಳಲ್ಲಿ ಅಂಗಾಂಗಗಳ ಮಧ್ಯೆ ಮತ್ತು ಕಾಲುಗಳಲ್ಲಿರುವ ಪೊಟರೆಗಳಲ್ಲಿ ಮಾತ್ರ ಚಲಿಸುತ್ತದೆ. ಡಾರ್ಸಲ್ ರಕ್ತನಾಳ ಹಿಂಭಾಗದಲ್ಲಿ ಮುಚ್ಚಿ ಮುಂಭಾಗದಲ್ಲಿ ತೆರೆದಿರುವಂಥ ಕೊಳವೆ. ಇದು ತಲೆಯಿಂದ ಉದರಭಾಗದ ತುದಿಯವರೆಗೂ ಹಬ್ಬಿದೆ. ಇದನ್ನು ಹೃದಯ ಮತ್ತು ಅಯೋರ್ಟ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಹೃದಯದಲ್ಲಿ ಸಂಪೀಡಕಗಳಿಂದ ನಿರ್ಮಿತವಾದ ನಿರ್ದಿಷ್ಟ ಸಂಖ್ಯೆಯ ಕೋಣೆಗಳು ಕಂಡುಬರುತ್ತವೆ. ಕೋಣೆಗಳ ಪಕ್ಕದಲ್ಲಿರುವ ಆಸ್ಟಿಯ ಎಂಬ ರಂಧ್ರಗಳ ಮೂಲಕ ಹೃದಯವನ್ನು ಪ್ರವೇಶಿಸಿದ ರಕ್ತ ಮುಂದಕ್ಕೆ ಹರಿದು ಅಯೋರ್ಟ ನಾಳದ ಮುಂದಿನ ದ್ವಾರದಿಂದ ಹೊರಕ್ಕೆ ಬಸಿದು ಅಂಗಾಂಗಗಳನ್ನೆಲ್ಲ ತೊಯಿಸುತ್ತದೆ. ರಕ್ತದಲ್ಲಿ ದ್ರವಭಾಗ ಮತ್ತು ರಕ್ತಕಣಗಳುಂಟು. ದ್ರವಭಾಗ ವರ್ಣರಹಿತವಾಗಿರಬಹುದು. ಇಲ್ಲವೆ ತಿಳಿಹಸಿರು, ಹಳದಿ, ಕಂದು ಬಣ್ಣಗಳಿಂದ ಕೂಡಿರಬಹುದು. ಕೆಂಪು ಬಣ್ಣ ವಿರಳ. ಅಂಗಾಂಶಗಳಿಗೆ ಶ್ವಾಸನಾಳಗಳಿಂದ ನೇರವಾಗಿ ಆಮ್ಲಜನಕ ಸರಬರಾಜು ಆಗುವುದರಿಂದ ರಕ್ತಕ್ಕೆ ಉಸಿರಾಟದ ಜವಾಬ್ದಾರಿ ಅಷ್ಟಾಗಿ ಇಲ್ಲ.



ಜಿರಲೆಯ ರಕ್ತ ಪರಿಚಲನಾ ವ್ಯವಸ್ಥೆ

**ವಿಸರ್ಜನಾಂಗಗಳು:** ಇವು ದೇಹದ ಅಂಗಾಂಶಗಳಿಗೆ ಒಂದೇ ಸಮವಾದ ಅಂತರ ಪರಿಸ್ಥಿತಿಯನ್ನು ಒದಗಿಸುತ್ತವೆ. ಪ್ರೋಟೀನು ಅಂಶ ಒಡೆದು ಉತ್ಪತ್ತಿಯಾಗುವ ಸಾರಜನಕ ಸಂಬಂಧದ ತ್ಯಾಜ್ಯವಸ್ತುಗಳನ್ನು ಹೊರಕ್ಕೆ ತಳ್ಳುವುದು ಈ ಅಂಗಗಳ ಮುಖ್ಯ ಕೆಲಸ. ಮಾಲ್ಪಿಗೀಯನ್ ಕೊಳವೆಗಳು, ಕೊಬ್ಬಿನ ಅಂಗ ಇವೇ ಮುಖ್ಯವಾದ ವಿಸರ್ಜನಾಂಗಗಳು.

**ಮಾಲ್ಪಿಗೀಯನ್ ಕೊಳವೆಗಳು:** ಉದ್ದವಾಗಿ ನೂಲಿನಂತಿರುವ ಈ ಕೊಳವೆಗಳು ಒಂದು ಕೊನೆಯಲ್ಲಿ ಕರುಳಿಗೆ ಅಂಟಿಕೊಂಡು ರಕ್ತದಿಂದ ಆವರಿಸಲ್ಪಟ್ಟಿವೆ. ಇವಕ್ಕೆ ಹೊರ ತುದಿಯಲ್ಲಿ (ತೊಟ್ಟಿನಿಂದ ದೂರವಿರುವ ತುದಿ) ರಂಧ್ರವಿಲ್ಲ. ತೊಟ್ಟಿನ ರಂಧ್ರದಿಂದ ಕರುಳಿನ ಒಳಭಾಗಕ್ಕೆ ಸಂಪರ್ಕಹೊಂದಿವೆ. ಒಂದೊಂದು ಕೀಟಜಾತಿಯಲ್ಲೂ ಇವುಗಳ ಸಂಖ್ಯೆ 2–200ರ ವರೆಗೆ ವ್ಯತ್ಯಾಸವಾಗುತ್ತದೆ. ಕೆಲವು ಕೀಟ ಪ್ರಭೇದಗಳಲ್ಲಿ ಇವುಗಳ ಎರಡು ತುದಿಗಳೂ ಹಿಂಗರುಳಿಗೆ ಅಂಟಿಕೊಂಡಿರುವುದುಂಟು. ಇವು ಯೂರಿಕ್ ಆಮ್ಲ ಮುಂತಾದ ಹಾನಿಕಾರವಸ್ತುಗಳನ್ನು ರಕ್ತದಿಂದ ಬೇರ್ಪಡಿಸಿ ಕರುಳಿಗೆ ಸಾಗಿಸುತ್ತವೆ.

**ಕೊಬ್ಬಿನ ಅಂಗ (ಫ್ಯಾಟ್ ಬಾಡಿ):** ಅನೇಕ ರೀತಿಯ ವಸ್ತುಗಳನ್ನು ಶೇಖರಿಸಿಟ್ಟುಕೊಳ್ಳಬಲ್ಲ ಜೀವಕಣಗಳಿಂದ ಕೂಡಿದ ನಿರ್ದಿಷ್ಟ ಆಕಾರವಿಲ್ಲದ ಅಂಗ ಇದು. ಇದರಲ್ಲಿ ಸೂಕ್ಷ್ಮವಾದ ಅನೇಕ ಕುಹರಗಳಿವೆ. ಇದರ ಬಣ್ಣ ಬಿಳಿ, ಹಳದಿ, ಕಿತ್ತಳೆ ಅಥವಾ ಹಸಿರು. ಯೂರಿಕ್ ಆಮ್ಲ, ಅದರ ಲವಣಗಳು, ಕ್ಯಾಲ್ಸಿಯಂ ಲವಣಗಳು ಮುಂತಾದುವು. ಕೊಬ್ಬಿನ ಅಂಗದಲ್ಲಿ ಕಂಡುಬರುತ್ತವೆ. ಕೊಬ್ಬಿನ ಅಂಗದ ಮುಖ್ಯ ಕೆಲಸ ಕೊಬ್ಬು, ಸಕ್ಕರೆ, ಪ್ರೋಟೀನ್ ಮೊದಲಾದ ಆಹಾರವಸ್ತುಗಳ ಶೇಖರಣೆ.

**ಗ್ರಂಥಿಗಳು:** ಕೀಟಗಳಲ್ಲಿ ಎರಡು ಬಗೆಯ ಗ್ರಂಥಿಗಳಿವೆ. 1 ನಿರ್ದಿಷ್ಟವಾದ ಬಾಯಿ ಅಥವಾ ನಾಳಗಳುಳ್ಳ ಮತ್ತು ಸ್ರವಿಸಿದ ರಸವನ್ನು ದೇಹದ ಹೊರಗೆ ಅಥವಾ ಒಂದು ಅಂಗದೊಳಗೆ ಸೇರಿಸುವ ಗ್ರಂಥಿಗಳು. 2 ಸ್ರವಿಸಿದ ರಸವನ್ನು ರಕ್ತದಲ್ಲಿ ಬೆರೆಸಿ ಅದು ದೇಹಾದ್ಯಂತ ಚಲಿಸುವಂತೆ ಮಾಡುವ ನಾಳರಹಿತ ಗ್ರಂಥಿಗಳು.

ಚರ್ಮಗ್ರಂಥಿಗಳು, ನಡುಕರುಳಿನ ಗ್ರಂಥಿಗಳು, ಮಾಲ್ಪಿಗೀಯನ್ ಕೊಳವೆಗಳು, ಇವೆಲ್ಲ ನಾಳವುಳ್ಳ ಗ್ರಂಥಿಗಳು. ಇವಲ್ಲದೆ ಕೆಳಗೆ ಹೇಳಿರುವವನ್ನು ಗಮನಿಸಬಹುದು:

**1. ಮೇಣಗ್ರಂಥಿಗಳು (ವ್ಯಾಕ್ಸ್ ಗ್ಲಾಂಡ್ಸ್):** ಚರ್ಮದ ಬೇರೆ ಬೇರೆ ಭಾಗಗಳಲ್ಲಿರುವ ಈ ಗ್ರಂಥಿಗಳು ಸಸ್ಯತಿಗಣೆಗಳಲ್ಲಿ ಹೆಚ್ಚು. ಮೇಣ, ತೆಳ್ಳನೆಯ ಹುಡಿ, ದಾರಗಳ ಗೊಂಚಲು ಅಥವಾ ಹಲಗೆಯ ರೂಪದಲ್ಲಿ ಉತ್ಪತ್ತಿಯಾಗುತ್ತದೆ.

**2. ಅರಗು ಗ್ರಂಥಿಗಳು (ಲ್ಯಾಕ್ ಗ್ಲಾಂಡ್ಸ್):** ಅರಗು ಕೀಟ ಮತ್ತು ಅದರ ಸಂಬಂಧಿಗಳಲ್ಲಿ ಇವನ್ನು ಕಾಣಬಹುದು. ರಾಳದಂತಿರುವ ಅರಗಿನ ರಕ್ಷಣಾ ಕವಚವನ್ನು ಹೆಣ್ಣು ಕೀಟ ಸ್ರವಿಸುತ್ತದೆ. ಈ ಗ್ರಂಥಿಗಳು ಚರ್ಮದಲ್ಲಿವೆ.

**3. ಶಿರದ ಗ್ರಂಥಿಗಳು (ಸಿಫ್ಯಾಲಿಕ್ ಗ್ಲಾಂಡ್ಸ್):** ದವಡೆ, ಮ್ಯಾಕ್ಸಿಲ ಮತ್ತು ಕೆಳತುಟಿಗೆ ಸೇರಿದ ಗ್ರಂಥಿಗಳು ಇವು. ಕೆಳತುಟಿ ಗ್ರಂಥಿಗಳನ್ನು ಜೊಲ್ಲುಗ್ರಂಥಿಗಳೆಂದೂ ಕರೆಯಬಹುದು. ಇದರ ಸ್ರಾವ ಆಹಾರಸೇವನೆ ಮತ್ತು ಪಚನ ಕ್ರಿಯೆಗೆ ಸಹಾಯಕ.

**4. ರೇಷ್ಮೆ ಗ್ರಂಥಿಗಳು (ಸಿಲ್ಕ್ ಗ್ಲಾಂಡ್ಸ್):** ಪತಂಗಗಳ ಗುಂಪಿನಲ್ಲಿ ಕಂಡುಬರುವ ಕೆಳತುಟಿ ಗ್ರಂಥಿಗಳು ಇವು. ಮರಿಕೀಟಗಳ ಕೋಶಗಳ ಗೂಡುಗಳಿಗೆ ಬೇಕಾಗುವ ರೇಷ್ಮೆಯನ್ನೂ ಸ್ರವಿಸುತ್ತವೆ. ರೇಷ್ಮೆ ಸ್ರವಿಸಿದ ಕೂಡಲೆ ಗಾಳಿಗೆ ಸೋಕಿ ಗಡುಸಾದ ಪ್ರೋಟೀನ್ ಎಳೆಯಾಗಿ ಪರಿವರ್ತನೆ ಹೊಂದುತ್ತದೆ.

**5. ಅಸಹ್ಯ ಹುಟ್ಟಿಸುವ ಗ್ರಂಥಿಗಳು (ರಿಪಗ್ನಟೋರಿಯಲ್ ಗ್ಲಾಂಡ್ಸ್):** ಅನೇಕ ಕೀಟಗಳಲ್ಲಿ ಚರ್ಮದ ಗ್ರಂಥಿಗಳು ಉತ್ಪಾದಿಸುವ ಕೆಟ್ಟವಾಸನೆಯ ರಸ ಬೇರೆ ಪ್ರಾಣಿಗಳನ್ನು

ದೂರವಿಡುವುದರಿಂದ ಆ ಕೀಟಗಳಿಗೆ ರಕ್ಷಣೆ ನೀಡುತ್ತದೆ. ಸಸ್ಯ ತಿಗಣೆಗಳ ದುರ್ವಾಸನೆ ಇದಕ್ಕೆ ಉದಾಹರಣೆ.

**6. ಆಕರ್ಷಕ ಗ್ರಂಥಿಗಳು (ಅಟ್ರ್ಯಾಕ್ಟಂಟ್ ಗ್ಲ್ಯಾಂಡ್ಸ್):** ಅನೇಕ ಪತಂಗಗಳು ಸಂಭೋಗಕ್ಕಾಗಿ ಭಿನ್ನ ಲಿಂಗದ ಕೀಟವನ್ನು ಆಕರ್ಷಿಸುವುದಕ್ಕಾಗಿ ಒಂದು ವಿಶೇಷ ಬಗೆಯ ರಸವನ್ನು ಸ್ರವಿಸುವ ಗ್ರಂಥಿಗಳು.

**7. ವಿಷಗ್ರಂಥಿಗಳು:** ಅನೇಕ ಕಣಜಗಳಲ್ಲಿ ಮುಳ್ಳುಕೊಂಡಿ ಅಥವಾ ಬಾಹ್ಯ ಅಂಡೋಪಕರಣಕ್ಕೆ ಸೇರಿದಂತೆ ವಿಷಗ್ರಂಥಿಗಳಿವೆ.

ನಾಳರಹಿತ ಗ್ರಂಥಿಗಳಲ್ಲಿ ಮುಖ್ಯವಾದುವೆಂದರೆ–1 ಎದೆಯ ಮೊದಲನೆಯ ಖಂಡದ ಗ್ರಂಥಿಗಳು (ಪ್ರೋಥೊರ್‍ಯಾಸಿಕ್ ಗ್ಲಾಂಡ್ಸ್). ಇವುಗಳ ರಸದಿಂದ ಎಳೆಹುಳುಗಳು ಸಕಾಲದಲ್ಲಿ ಪೊರೆ ಕಳಚಿ ಬೆಳೆಯಲು ಸಾಧ್ಯವಾಗುತ್ತದೆ. 2 ಕಾರ್ಪೊರ ಅಲ್ಲೇಟ: ಮಿದುಳಿನ ಹಿಂದೆ ಅಯೋರ್ಟ ನಾಳದೊಡನೆ ಸಂಬಂಧ ಹೊಂದಿರುವ ಜೋಡಿ ಗ್ರಂಥಿ. ಎಳೆಹುಳುಗಳು ಅಕಾಲದಲ್ಲಿ ಬಲಿತ ಕೀಟಗಳ ಗುಣಗಳನ್ನು ಹೊಂದದಂತೆ ತಡೆಗಟ್ಟಲು ಇದರ ರಸ ಸಹಾಯಕ. 3 ಕಾರ್ಪೊರ ಕಾರ್ಡಿಯಾಕ: ಮಿದುಳಿನ ಕೆಳಗಿದೆ. ಮೊಟ್ಟೆಗಳ ಉತ್ಪಾದನೆಗೆ ಸಹಕಾರಿಯಾದ ರಸವನ್ನು ಸ್ರವಿಸುತ್ತದೆ.

ಇವಲ್ಲದೆ ಎಪಿಡರ್ಮಿಸ್ ಪದರದ ಕೆಳಗೆ ಒಂದು ಬಗೆಯ ಚರ್ಮಗ್ರಂಥಿಗಳಿವೆ. ಇವು ಫಿರೋಮೋನ್ ಎಂಬ ಹಾರ್ಮೋನನ್ನು ಸ್ರವಿಸುತ್ತವೆ. ಈ ವಸ್ತು ಒಂದು ಕೀಟ ಜಾತಿಯ ಹಲವಾರು ಕೀಟಗಳನ್ನು ಆಕರ್ಷಿಸಿ ಅವು ಸಮುದಾಯಗಳಲ್ಲಿ ವಾಸಮಾಡುವಂತೆ ಪ್ರಚೋದಿಸುತ್ತದೆ.

ನರಮಂಡಲದ ನಿರ್ದಿಷ್ಟ ಸ್ಥಳಗಳಲ್ಲಿ ನರಕಣಗಳು ಒಟ್ಟುಗೂಡಿ ನರಗ್ರಂಥಿಗಳಾಗುತ್ತವೆ. ಇವುಗಳಿಂದ ಹೊರಬೀಳುವ ಸೂಕ್ಷ್ಮ ಎಳೆಗಳ ಕಟ್ಟುಗಳೇ ನರಗಳು. ನರಮಂಡಲವನ್ನು ಕೇಂದ್ರ ನರವ್ಯೂಹ, ಒಳವಲಯ ನರವ್ಯೂಹ, ಹೊರವಲಯ ನರವ್ಯೂಹ ಎಂದು ಮೂರುಭಾಗಗಳಾಗಿ ವಿಭಾಗಿಸಬಹುದು. ಇವು ಒಂದೊಂದಕ್ಕೂ ನಿಕಟಸಂಬಂಧವಿದೆ.

**1. ಕೇಂದ್ರ ನರವ್ಯೂಹ:** ಇದು ನರಗ್ರಂಥಿ ಪಂಕ್ತಿಗಳ ಒಂದು ಜೊತೆ. ಈ ಪಂಕ್ತಿಗಳು ಉದ್ದುದ್ದಕ್ಕೂ ಅಡ್ಡಡ್ಡಕ್ಕೂ ಕೂಡಿಕೊಂಡಿವೆ. ಅಂದರೆ ಒಂದೊಂದು ಗ್ರಂಥಿಯೂ ಪಕ್ಕದ, ಮೇಲಿನ ಮತ್ತು ಕೆಳಗಿನ ಗ್ರಂಥಿಯೊಡನೆ ಸಂಪರ್ಕ ಪಡೆದಿದೆ. ಕೇಂದ್ರ ನರವ್ಯೂಹವನ್ನು ಅನ್ನನಾಳದ ಮೇಲಿನ ಗ್ರಂಥಿ ಅಥವಾ ಮಿದುಳು, ಅನ್ನನಾಳದ ಕೆಳಗಿನ ಗ್ರಂಥಿ ಮತ್ತು ತಳದ ನರಹುರಿ ಎಂದು ವಿಭಾಗಿಸಬಹುದು. ಮಿದುಳಿನಲ್ಲಿ ಭ್ರೂಣಾವಸ್ಥೆಯ ಶಿರದ ಮೊದಲ ಮೂರು ಖಂಡಗಳ ನರಗ್ರಂಥಿಗಳು ಸೇರಿವೆ. ಮಿದುಳಿಗೆ ಕಣ್ಣು, ಕುಡಿಮೀಸೆ, ಮೇಲುತುಟಿಗಳೊಡನೆ ಸಂಪರ್ಕ ಉಂಟು. ಅನ್ನನಾಳದ ಕೆಳಗಿನ ಗ್ರಂಥಿ ಶಿರದ ಹಿಂದಿನ ಮೂರು ಖಂಡಗಳ ಗ್ರಂಥಿಗಳಿಂದ ಕೂಡಿದೆ; ದವಡೆ, ಮ್ಯಾಕ್ಸಿಲ ಮತ್ತು ಕೆಳತುಟಿಗಳಿಗೆ ನರಗಳನ್ನು ಒದಗಿಸುತ್ತದೆ. ತಳದ ನರಹುರಿ ಇದೆ ಮತ್ತು ಉದರಗಳ ಕೆಳಭಾಗದ ಮಧ್ಯ ರೇಖೆಯಲ್ಲಿರುವ ಗ್ರಂಥಿಗಳ ಜೋಡಿ ಸರಪಣಿ; ಅನ್ನನಾಳದ ಕೆಳಗಿನ ಗ್ರಂಥಿಯ ಹಿಂಭಾಗಕ್ಕೆ ಅಂಟಿಕೊಂಡಿದೆ. ಎದೆಯಲ್ಲಿ ಮೂರು, ಉದರದಲ್ಲಿ ಖಂಡಗಳ ಸಂಖ್ಯೆಯಷ್ಟು. ಇಲ್ಲವೇ (ಕೆಲವು ಕೂಡಿ ಸಂಯುಕ್ತ ಗ್ರಂಥಿಗಳಾಗಿರುವುದರಿಂದ) ಕಡಿಮೆ ಸಂಖ್ಯೆಯಲ್ಲಿ ಇವೆ. ಎದೆಯ ಗ್ರಂಥಿಗಳು ಕಾಲು ಮತ್ತು ರೆಕ್ಕೆಗಳಿಗೂ ಉದರ ಗ್ರಂಥಿಗಳು ಅಲ್ಲಿನ ಮಾಂಸಖಂಡಗಳಿಗೂ ನರಗಳನ್ನು ಕಳಿಸುತ್ತವೆ.


ಜಿರಲೆಯ ನರಮಂಡಲ

**2. ಒಳವಲಯ ನರವ್ಯೂಹ:** ಇದನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. (i) ಅನ್ನನಾಳದ ಅನುಕಂಪನ ವ್ಯೂಹ. ಇದು ಮುಂಗರುಳು, ನಡುಕರುಳು, ಹೃದಯ–ಈ ಭಾಗಗಳಿಗೆ ನರಸಂಪರ್ಕವನ್ನು ಒದಗಿಸುತ್ತದೆ. (ii) ತಳದ ಅನುಕಂಪನ ವ್ಯೂಹ. ಇದು ಎದೆ ಮತ್ತು ಉದರ ಭಾಗಗಳಲ್ಲಿ ತಳದ ನರಹುರಿಯೊಡನೆ ಸಂಬಂಧ ಹೊಂದಿ ಶ್ವಾಸರಂಧ್ರಗಳಿಗೆ ನರಗಳನ್ನು ಒಯ್ಯುತ್ತವೆ. (iii) ಬಾಲದ ಅನುಕಂಪನ ವ್ಯೂಹ. ತಳದ ನರಹುರಿಯ ಕೊನೆಯ ಸಂಯುಕ್ತ ಗ್ರಂಥಿಯಿಂದ ಕವಲೊಡೆದ ಈ ವ್ಯೂಹ ಜನನಾಂಗಗಳಿಗೂ ಜೀರ್ಣಾಂಗ ವ್ಯವಸ್ಥೆಯ ಹಿಂಭಾಗಕ್ಕೂ ನರ ಸಂಪರ್ಕ ಕಲ್ಪಿಸುತ್ತದೆ.

**3. ಹೊರವಲಯ ನರವ್ಯೂಹ:** ಕೇಂದ್ರ ಮತ್ತು ಒಳವಲಯ ನರವ್ಯೂಹಗಳ ಗ್ರಂಥಿಗಳಿಂದ ಹೊರಟು ದೇಹದ ಹೊರ ಮೈಯನ್ನು ಆವರಿಸಿರುವ ನರಗಳು ಈ ಗುಂಪಿಗೆ ಸೇರಿವೆ.

**ಜ್ಞಾನೇಂದ್ರಿಯಗಳು:** ಪರಿಸರದ ಬದಲಾವಣೆಗಳ ಅರಿವು ಮೂಡುವಂತೆ ಮಾಡುವುದು ಜ್ಞಾನೇಂದ್ರಿಯಗಳ ಕೆಲಸ. ಬಾಹ್ಯಪರಿಸರದ ವ್ಯತ್ಯಾಸಗಳನ್ನು ನರಸಂಬಂಧದ ಪ್ರಚೋದನೆಯನ್ನಾಗಿ ಪರಿವರ್ತಿಸಿ ಮಿದುಳಿಗೋ ಬೇರೆ ನರಗ್ರಂಥಿಗೋ ತಲಪಿಸುತ್ತವೆ. ಕೀಟಗಳ ಜ್ಞಾನೇಂದ್ರಿಯಗಳನ್ನು ಯಾಂತ್ರಿಕ ಗ್ರಾಹಕಗಳು (ಮೆಕ್ಯಾನೊರಿಸೆಪ್ಟರ್ಸ್), ಶ್ರವಣೇಂದ್ರಿಯಗಳು (ಆಡಿಟರಿ ಆರ್ಗನ್ಸ್). ರಾಸಾಯನಿಕ ಗ್ರಾಹಕಗಳು (ಕೀಮೊರಿಸೆಪ್ಟರ್ಸ್) ಮತ್ತು ನೇತ್ರೇಂದ್ರಿಯಗಳು ಎಂದು ಸ್ಥೂಲವಾಗಿ ವಿಭಾಗಿಸಬಹುದು.

**ಯಾಂತ್ರಿಕ ಗ್ರಾಹಕಗಳು:** ಸ್ಪರ್ಶ, ಗಾಳಿ, ನೀರು ಮುಂತಾದವುಗಳ ಹೊಡೆತದಿಂದ ವ್ಯತ್ಯಸ್ಥಗೊಳ್ಳುವುದರ ಮೂಲಕ ನರಗಳನ್ನು ಕೆರಳಿಸುತ್ತವೆ. ದೇಹದ ವಿವಿಧಭಾಗಗಳಲ್ಲಿರುವ ನರಸಂಪರ್ಕವುಳ್ಳ ಕೂದಲುಗಳು ಮುಖ್ಯ ಯಾಂತ್ರಿಕ ಗ್ರಾಹಕಗಳು. ಕುಡಿಮೀಸೆಯ ಮೇಲಿರುವ ಜಾನ್ಸ್‌ಟನ್ಸ್ ಅಂಗ ಎಂಬ ಜ್ಞಾನೇಂದ್ರಿಯ ಸಮತೋಲನೆಯ ವ್ಯತ್ಯಾಸ, ಗಾಳಿಯ ರಭಸ, ಘನವಸ್ತುಗಳ ಸಂಬಂಧ, ನೀರಿನ ಕಂಪನ ಮುಂತಾದ ಬಾಹ್ಯ ಪರಿಸ್ಥಿತಿಗಳ ಅರಿವನ್ನು ನೀಡುತ್ತದೆಂದು ಇಲ್ಲಿ ಗಮನಿಸಬಹುದು.

**ಶ್ರವಣೇಂದ್ರಿಯಗಳು:** ಇವುಗಳಿಗೆ ಕರ್ಣಪಟಲ ಅಂಗಗಳೆಂದೂ (ಟಿಂಪಾನಲ್ ಆರ್ಗನ್ಸ್) ಹೆಸರಿದೆ. ಇವು ತೆಳುವಾದ ಹೊರಚರ್ಮದ ಪೊರೆಗಳು; ಜೋಡಿಜೋಡಿಯಾಗಿರುತ್ತವೆ. ಇವುಗಳ ಒಳಭಾಗದಲ್ಲಿ ಶ್ರವಣ ನರದ ಸಂಪರ್ಕವುಳ್ಳ ಜ್ಞಾನವಾಹಕ ಕೂದಲುಗಳ ಗೊಂಚಲುಂಟು. ಗಾಳಿಯ ಅಲೆ ಕರ್ಣಪಟಲದ ಪೊರೆಗೆ ಬಡಿದಾಗ ಆ ಪೊರೆ ಅಲುಗಾಡುತ್ತದೆ. ಈ ಅಲುಗಾಟವನ್ನು ಜ್ಞಾನವಾಹಕ ಕೂದಲುಗಳು ಶ್ರವಣನರದ ಮೂಲಕ ಸಂಬಂಧಪಟ್ಟ ನರಗ್ರಂಥಿಗೆ ಮುಟ್ಟಿಸುತ್ತವೆ. ಕರ್ಣಪಟಲ ಅಂಗಗಳು ದೇಹದ ಬೇರೆ ಬೇರೆ ಭಾಗಗಳಲ್ಲಿ ಅಂದರೆ ಎದೆ, ಉದರ ಮುಂಗಾಲುಗಳ ಮೇಲೆ ಇರುವುದುಂಟು.

**ರಾಸಾಯನಿಕ ಗ್ರಾಹಕಗಳು:** ಇವು ದೇಹದ ನಾನಾಭಾಗಗಳಲ್ಲಿ ಮುಖ್ಯವಾಗಿ ಕುಡಿಮೀಸೆ, ವದನಾಂಗಗಳ ಕುಚ್ಚುಗಳು (ಪಾಲ್ಪ್ಸ್) ಕಾಲುಗಳ ಮೇಲೆ ಕಂಡುಬರುತ್ತವೆ. ಇವು ಕೂದಲಿನಂತೆಯೊ ತಟ್ಟೆಯಂತೆಯೊ ಇವೆ. ಚರ್ಮದ ಮೇಲೆ ಚಾಚಿಕೊಂಡಿರುವ ಅಥವಾ ಗುಳಿಗಳಲ್ಲಿವೆ. ಇವಕ್ಕೆ ನರಗಳ ಸಂಪರ್ಕವಿದೆ. ರಾಸಾಯನಿಕ ಜ್ಞಾನವನ್ನು ಮೂರು ಬಗೆಗಳಾಗಿ ವಿಂಗಡಿಸಬಹುದು. 1. ಉದ್ರೇಕಕಾರಿ ವಸ್ತುಗಳು ಹೆಚ್ಚಾಗಿರುವ ಜಾಗಗಳಿಂದ ದೂರವಿರುವುದು: ಕ್ಲೋರೀನ್, ಅಮೋನಿಯ ಮುಂತಾದ ವಸ್ತುಗಳಿಗೆ ತೋರುವ ಪ್ರತಿಕ್ರಿಯೆ. ಇದಕ್ಕೆ ಸಂಬಂಧಪಟ್ಟ ಗ್ರಾಹಕಗಳು ದೇಹಾದ್ಯಂತವಿವೆಯೆಂದು ಊಹಿಸಲಾಗಿದೆ. 2. ವಾಸನೆ: ವಾಯುವಿನಲ್ಲಿ ಅತ್ಯಲ್ಪಭಾಗದಷ್ಟು ಆವಿ ರೂಪದಲ್ಲಿರುವ ವಸ್ತುಗಳನ್ನೂ ಪತ್ತೆಹಚ್ಚಿ ಅವನ್ನು ಹುಡುಕಿಕೊಂಡು ಹೋಗುವುದು ಅಥವಾ ಅವುಗಳಿಂದ ದೂರ ಸರಿಯುವುದು ಇದೇ ಘ್ರಾಣಶಕ್ತಿ. ಕುಡಿಮೀಸೆ ಮತ್ತು ವದನಾಂಗಗಳ ಕುಚ್ಚುಗಳ ಮೇಲೆ ಘ್ರಾಣಗ್ರಾಹಕ ರೋಮಗಳು ಇರುತ್ತವೆ. 3. ರುಚಿ: ಹೆಚ್ಚು ಪ್ರಮಾಣದಲ್ಲಿ ಕೇಂದ್ರೀಕೃತವಾಗಿರುವ ಉದ್ರೇಕಕಾರಿ ವಸ್ತು ದ್ರವರೂಪದಲ್ಲಿ ಸೂಕ್ತವಾದ ಗ್ರಾಹಕಗಳೊಡನೆ ಸಂಪರ್ಕ ಹೊಂದಿದಾಗ ತೋರುವ ಪ್ರತಿಕ್ರಿಯೆಯೇ ರುಚಿ. ರಸಗ್ರಾಹಕ ರೋಮಗಳು ಕುಡಿಮೀಸೆ, ಬಾಯಿಯ ಒಳಭಾಗ, ವದನಾಂಗಗಳು, ಬಾಹ್ಯ ಅಂಡೋಪಕರಣ, ಮತ್ತು ಕಾಲುಗಳ ಟಾರ್ಸಸ್, ಟಿಬಿಯಗಳ ಮೇಲೆ ಹರಡಿಕೊಂಡಿವೆ.

**ನೇತ್ರೇಂದ್ರಿಯಗಳು:** ಕೀಟಗಳಿಗೆ ಬೆಳಕಿನ ಅರಿವು ಸರಳ ಅಕ್ಷಿ ಮತ್ತು ಸಂಯುಕ್ತಾಕ್ಷಿ ಇವುಗಳ ಮೂಲಕ ಆಗುತ್ತದೆ. ಸರಳಅಕ್ಷಿಗಳು ನೆತ್ತಿಯ ಮೇಲ್ಗಡೆ (ಮೂರು) ಮತ್ತು ಪಕ್ಕಗಳಲ್ಲಿ (ಒಂದರಿಂದ ಏಳು) ಇರುತ್ತವೆ. ಅನೇಕ ಕೀಟಗಳ ಪ್ರೌಢಾವಸ್ಥೆಯಲ್ಲಿ ಇವು ಇಲ್ಲ. ಸರಳನೇತ್ರದ ರಚನೆಯಲ್ಲಿ ಮುಖ್ಯ ಭಾಗಗಳಿವು: ಶುಕ್ಲ ಪಟಲ (ಕಾರ್ನಿಯ), ಯವ (ಲೆನ್ಸ್), ಅಕ್ಷಿಪಟ (ರೆಟಿನ), ವರ್ಣಕೋಶಗಳು (ಪಿಗ್ಮೆಂಟ್ ಸೆಲ್ಸ್) ಮತ್ತು ಕೃಷ್ಣಪಟಲ (ಐರಿಸ್). ಚರ್ಮದ ಮೇಲ್ಪೊರೆ ಸರಳಅಕ್ಷಿಯ ಹೊರಸಿಪ್ಪೆಯಾಗಿದ್ದು ಶುಕ್ಲಪಟಲವೆನಿಸಿಕೊಂಡಿದೆ. ಇದು ಸ್ವಲ್ಪ ಉಬ್ಬಿ ದುಂಡನೆಯ ಯವವಾಗಿ ಅದರ ಮೂಲಕ ಬೆಳಕು ಹಾಯುತ್ತದೆ. ಯವದ ಕೆಳಗಡೆ ಇರುವ ದೃಷ್ಟಿಸ್ತಂಭದ (ರ್‍ಯಾಬ್ಡಮ್) ಸುತ್ತಲೂ ದೃಷ್ಟಿಕೋಶಗಳ (ವಿಶುಯಲ್ ಸೆಲ್ಸ್) ಕಂತೆಯಿಂದ ಕೂಡಿರುವುದೇ ಅಕ್ಷಿಪಟ. ಪ್ರತಿದೃಷ್ಟಿಕೋಶಕ್ಕೂ ದೃಷ್ಟಿನರದ (ಆಪ್ಟಿಕ್ ನರ್ವ್) ಕವಲೊಂದರೊಡನೆ ಸಂಪರ್ಕವಿದೆ. ದೃಷ್ಟಿಕಣಗಳ ಕಂತೆಗಳ ನಡುವೆ ವರ್ಣಕೋಶಗಳಿವೆ. ಕೆಲವು ಕೀಟಗಳಲ್ಲಿ ಯವದ ಅಂಚಿನಿಂದ ಹಿಡಿದು ದೃಷ್ಟಿಕೋಶ ಕೆಳತುದಿಯ ವರೆಗೂ ಇರುವ ದಟ್ಟವಾದ ಬಣ್ಣದ ಹೊದಿಕೆಯೇ ಕೃಷ್ಣಪಟಲ. ಒಂದೊಂದು ಸರಳ ನೇತ್ರವೂ ಒಂದು ಅಸ್ಪಷ್ಟ ಮತ್ತು ತಲೆಕೆಳಗಾದ ಬಿಂಬವನ್ನು ಕೊಡುತ್ತದೆ. ಹೀಗೆ ಸಿಕ್ಕಿದ ಹಲವಾರು ಚಿತ್ರಗಳ ನೆರವಿನಿಂದ ಕೀಟ ಪರಿಸರದಲ್ಲಿ ಅದರ ಸ್ಥಾನವನ್ನೂ ಬೆಳಕು ಕತ್ತಲೆ ಪ್ರದೇಶಗಳನ್ನೂ ಗುರುತಿಸಬಲ್ಲದು.

**ಸಂಯುಕ್ತಾಕ್ಷಿ:** ಸರಳಅಕ್ಷಿಗೂ ಸಂಯುಕ್ತಾಕ್ಷಿಗೂ ಮುಖ್ಯ ವ್ಯತ್ಯಾಸವೆಂದರೆ ಸರಳಅಕ್ಷಿಗೆ ಒಂದೇ ಮುಖ (ಫ್ಯಾಸೆಟ್) ಇದ್ದರೆ ಸಂಯುಕ್ತಾಕ್ಷಿಗೆ ಅನೇಕ ಮುಖಗಳು ಇವೆ. ಆದ್ದರಿಂದ ಸಂಯುಕ್ತಾಕ್ಷಿಯನ್ನು ಬಹುಸಂಖ್ಯೆಯ ದೃಷ್ಟಿಅಂಶಗಳ ಸಮಷ್ಟಿ ಎನ್ನಬಹುದು. ಈ ದೃಷ್ಟಿಅಂಶಗಳಿಗೆ ಆಮಟಿಡಿಯ ಎಂದು ಹೆಸರು. ಒಂದು ಸಂಯುಕ್ತಾಕ್ಷಿಯಲ್ಲಿ ಇವುಗಳ

ಸಂಖ್ಯೆ 6ರಿಂದ 2,800ವರೆಗೂ ಇರುವುದೆಂದು ಅಂದಾಜು ಮಾಡಲಾಗಿದೆ. ಒಂದು ದೃಷ್ಟಿಅಂಶದಲ್ಲಿ ಈ ಭಾಗಗಳು ಇವೆ. 1. ಶುಕ್ಲಪಟಲ: ಬೆಳಕು ತನ್ಮೂಲಕ ಹಾದುಹೋಗಬಲ್ಲ ಯವವಾಗಿ ಮಾರ್ಪಟ್ಟಿರುವ ಚರ್ಮದ ಮೇಲ್ಪೊರೆ. 2. ಶುಕ್ಲಪಟಲ ಸ್ರವಣಪದರ (ಕಾರ್ನಿಯಾಜೆನ್ ಲೇಯರ್): ಚರ್ಮದ ಕೆಳಪದರದ ಎರಡು ಕಣಗಳು ಮೇಲಿನ ಶುಕ್ಲಪಟಲವನ್ನು ಸ್ರವಿಸುತ್ತವೆ. 3. ಸ್ಫಟಿಕ ಶಂಕುಕೋಶಗಳು (ಕ್ರಿಸ್ಟಲೈನ್ ಕೋನ್ ಸೆಲ್ಸ್): ತನ್ಮೂಲಕ ಬೆಳಕು ಹಾದು ಹೋಗಲುಬಿಡುವ ಸ್ಫಟಿಕಾಕಾರದ ಶಂಕುವೆಂಬ ವಸ್ತುವನ್ನು ಸ್ರವಿಸಬಲ್ಲ ನಾಲ್ಕು ಕೋಶಗಳ ಗುಂಪು. 4. ಕೃಷ್ಣಪಟಲದ ಕೋಶಗಳು (ಐರಿಸ್‌ಸೆಲ್ಸ್): ಶುಕ್ಲಪಟಲ ಸ್ರವಣಪದರ ಮತ್ತು ಸ್ಫಟಿಕ ಶಂಕುಕೋಶಗಳ ಸುತ್ತಲೂ ಚಕ್ರಾಕಾರವಾಗಿರುವ ಬಣ್ಣದ ಕೋಶಗಳು. 5 ಸೂಕ್ಷ್ಮ ಅಕ್ಷಿಪಟ (ರೆಟಿನ್ಯುಲ): ದೃಷ್ಟಿ ಅಂಶದ ತೊಟ್ಟಿನಂತಿರುವ ಈ ಭಾಗ ಏಳು ಕಣಗಳಿಂದ ಕೂಡಿದೆ. ಇವೆಲ್ಲ ಸೇರಿ ಮಧ್ಯದಲ್ಲಿ ದೃಷ್ಟಿಸ್ತಂಭವನ್ನು ಸ್ರವಿಸುತ್ತವೆ. ದೃಷ್ಟಿಸ್ತಂಭದ ಬೇರಿನಿಂದ ಹೊರಟ ಸೂಕ್ಷ್ಮ ಎಳೆಗಳು ದೃಷ್ಟಿನರದ ಕವಲುಗಳೊಡನೆ ಸಂಪರ್ಕ ಪಡೆದಿವೆ. ಈ ರೀತಿ ಎಲ್ಲ ದೃಷ್ಟಿ ಅಂಶಗಳೂ ಮಿದುಳಿನ ದೃಷ್ಟಿವಿಭಾಗಕ್ಕೆ ಸಂಬಂಧ ಹೊಂದಿವೆ.

ಕೀಟಗಳ ಸಂಯುಕ್ತಾಕ್ಷಿ ವಸ್ತುಗಳ ರೂಪ ಮತ್ತು ಚಿತ್ರವನ್ನು ಶಬಲ ಖಚಿತ ದೃಷ್ಟಿಯ (ಮೋಸ್ಹಾಯಿಕ್ ವಿಷನ್) ತತ್ತ್ವದ ಮೇಲೆ ನಿರ್ಮಿಸುತ್ತದೆಂದು ವಿಜ್ಞಾನಿಗಳ ಅಭಿಪ್ರಾಯ. ಇದರ ಪ್ರಕಾರ ಒಂದೊಂದು ದೃಷ್ಟಿ ಅಂಶವೂ ತನ್ನ ಯವದ ಮೇಲೆ ಬೀಳುವ ಅಲ್ಪಪ್ರದೇಶದ ಚಿತ್ರವನ್ನು ಮೂಡಿಸುತ್ತದೆ. ಹೀಗೆ ಉಂಟಾದ ಅನೇಕ ಭಿನ್ನ ಭಿನ್ನ ದೃಶ್ಯಗಳೆಲ್ಲ ಕೂಡಿ ಬೆಳಕು ಮತ್ತು ಕಪ್ಪು ಚುಕ್ಕೆಗಳಿಂದ ಕೂಡಿದ ಸಮಗ್ರಚಿತ್ರವಾಗಿ ಪರಿಣಮಿಸುತ್ತದೆ.



ಜಿರಲೆಯ ಸಂಯುಕ್ತ ನೇತ್ರದ ಅಮಟಿಡಿಯಂ ಭಾಗ

**ಶಬ್ದ ಮತ್ತು ಬೆಳಕು ಉತ್ಪತ್ತಿಮಾಡುವ ಅಂಗಗಳು:** ಅನೇಕ ಕೀಟಗಳಲ್ಲಿ ಶಬ್ದೋತ್ಪತ್ತಿ ಅಂಗಗಳಿವೆ. ಈ ಅಂಗಗಳು ಗಂಡು, ಹೆಣ್ಣುಗಳೆರಡರಲ್ಲಿ ಅಥವಾ ಯಾವುದಾದರೊಂದರಲ್ಲಿ ಮಾತ್ರ ಇರಬಹುದು. ಹೆಣ್ಣು ಗಂಡಿನೊಡನೆ ಕೂಡುವಂತೆ ಆಕರ್ಷಿಸುವುದಕ್ಕೂ ಒಂದು ಜಾತಿಯ ಕೀಟಗಳೆಲ್ಲ ಒಟ್ಟಿಗೆ ಇರುವಂತೆ ಮಾಡಲೂ ಅಪಾಯದ ಸೂಚನೆಯನ್ನು ಕೊಡುವುದಕ್ಕೂ ಸಂರಕ್ಷಣೆಗೂ ಶಬ್ದ ಉಪಯುಕ್ತವಾದುದೆಂದು ತಿಳಿಯಲಾಗಿದೆ. ದೇಹದ ಒಂದು ಭಾಗವನ್ನು ಹೊರವಸ್ತುವಿಗೆ ಬಡಿಯುವುದು, ದೇಹದ ಒಂದು ಭಾಗವನ್ನು ಇನ್ನೊಂದು ಭಾಗಕ್ಕೆ ಉಜ್ಜುವುದು–ಉದಾಹರಣೆಗೆ (ಮಿಡತೆಗಳಲ್ಲಿ ಹಿಂದಿನ ಕಾಲಿನ ಫೀಮರ್ ತುಂಡಿನ ಒಳಮುಖದ ರಚನೆಗಳನ್ನು ಮುಂದಿನ ರೆಕ್ಕೆಗೆ ಉಜ್ಜುವುದು) ರೆಕ್ಕೆಗಳ ಅತಿವೇಗದ ಕಂಪನ (ಸೊಳ್ಳೆ, ನೊಣ), ಮಾಂಸಖಂಡಗಳ ಕ್ರಿಯಾಸಹಾಯ, ಒಂದು ವಿಶೇಷ ಬಗೆಯ ಪೊರೆಯ ಅದಿರುವಿಕೆ (ಗಂಡು ಸಿಕಾಡ ಉದರದ ಪಕ್ಕದ ಮೃದಂಗದಂಥ ಪೊರೆಯೇ ಶಬ್ದೋತ್ಪಾದನೆ ಅಂಗ) ಮುಂತಾದ ವಿಧಾನಗಳಿಂದ ಕೀಟಗಳು ಶಬ್ದ ಮಾಡುತ್ತವೆ.

ಬೆಳಕನ್ನು ಹೊರಸೂಸುವ ಅಂಗಗಳ ಮೂಲಕ, ಅಂಥ ಏಕಾಣು ಜೀವಿಗಳನ್ನು ಹೊಂದಿರುವುದರಿಂದ ಅಥವಾ ಬೆಳಕಿಂದ ಕೂಡಿದ ಆಹಾರ ತಿನ್ನುವುದರಿಂದ ಕೀಟಗಳು ಬೆಳಕನ್ನು ಉತ್ಪತ್ತಿಮಾಡುತ್ತವೆ. ಲೈಂಗಿಕ ಆಕರ್ಷಣೆಯೇ ಬೆಳಕಿನ ಉತ್ಪಾದನೆಯ ಮುಖ್ಯ ಉದ್ದೇಶ. ಮಿಂಚುಹುಳುವಿನಲ್ಲಿ (ಕೋಲಿಯಾಪ್ಟಿರ ಗಣದ ಲ್ಯಾಂಪೈರಿಡಿ ಕುಟುಂಬಕ್ಕೆ ಸೇರಿದೆ) ಉದರದ ಎರಡು ಕಡೆಯಲ್ಲೂ ಸ್ವಯಂಪ್ರಕಾಶಿತ ಅಂಗಗಳಿದ್ದು ಹಳದಿ ಮಿಶ್ರಿತ ಹಸುರುಬಣ್ಣದ ಬೆಳಕು ಕ್ಷಣಕ್ಕೊಮ್ಮೆ ಕಾಣಿಸಿಕೊಳ್ಳುತ್ತದೆ.

**ಜನನಾಂಗ ವ್ಯವಸ್ಥೆ:** ಸಂತಾನಾಭಿವೃದ್ಧಿಗೆ ಸಂಬಂಧಿಸಿದ ಅಂಗಗಳ ರಚನೆಯಲ್ಲಿ ವೈವಿಧ್ಯವನ್ನು ಕಾಣಬಹುದು. ಭ್ರೂಣಾವಸ್ಥೆಯಲ್ಲಿ ಗಂಡುಹೆಣ್ಣುಗಳಿಗೆ ಅಷ್ಟು ವ್ಯತ್ಯಾಸವಿರುವುದಿಲ್ಲ. ಬೆಳೆವಣಿಗೆ ಮುಂದುವರಿದಂತೆ ವ್ಯತ್ಯಾಸಗಳು ಸ್ಪಷ್ಟವಾಗುತ್ತವೆ. ಪ್ರಾರಂಭದಲ್ಲಿ ಜನನ ಗ್ರಂಥಿಗಳು ನಡುಚರ್ಮದ ಒಂದು ಜೊತೆ ಚೀಲಗಳಂತಿರುತ್ತವೆ. ಕೀಟಗಳ ವಿಕಾಸದ ಮೊದಲ ಹಂತದಲ್ಲಿ ಈ ಚೀಲಗಳ ನಾಳಗಳು ಬೇರೆಬೇರೆಯಾಗಿ ದೇಹದ ಹೊರಭಾಗಕ್ಕೆ ತೆರೆದು, ಗಂಡಿನಲ್ಲಿ ರೇತಸ್ಸನ್ನೂ ಹೆಣ್ಣಿನಲ್ಲಿ ಅಂಡವನ್ನೂ ಹೊರದೂಡುತ್ತಿದ್ದವು. ತರುವಾಯ ದೇಹದ ತಳಭಾಗದ ಮಧ್ಯರೇಖೆಯಲ್ಲಿ ಹೊರಚರ್ಮ ಸೀಳಿ ಉಂಟಾದ ಕಾಲುವೆಗೆ (ಹೆಣ್ಣಿನಲ್ಲಿ ಯೋನಿನಾಳ, ಗಂಡಿನಲ್ಲಿ ವೀರ್ಯನಾಳ) ಮೇಲಿನ ಎರಡು ನಾಳಗಳು ಸೇರಿಕೊಂಡು ಒಂದೇ ರಂಧ್ರದ ಮೂಲಕ ತೆರೆಯುವಂತಾಯಿತು. ಈ ಸರಳ ರಚನೆಯ ಜನನೇಂದ್ರಿಯಗಳೊಂದಿಗೆ ಕ್ರಮೇಣ ಅನೇಕ ಸಹಾಯಕ ಗ್ರಂಥಿಗಳೂ ಹೆಣ್ಣು ಕೀಟದಲ್ಲಿ ಒಂದು ಅಥವಾ ಇನ್ನೂ ಹೆಚ್ಚು ರೇತಸ್ಸು ಶೇಖರಿಸುವ ಚೀಲಗಳೂ (ಸ್ಪರ್ಮಟೀಕ) ಸಂಭೋಗ ಒರೆಯೂ (ಬರ್ಸ ಕಾಪ್ಯುಲೇಟ್ರಿಕ್ಸ್) ಸೇರಿಕೊಂಡವು.

ಸಾಮಾನ್ಯವಾಗಿ ಜನನಾಂಗದ ಹೊರ ರಂಧ್ರ ಗಂಡುಕೀಟದಲ್ಲಿ ಶಿಶ್ನದ ತುದಿಯಲ್ಲಿ ಉದರದ ತಳದಲ್ಲಿ 9ನೆಯ ಖಂಡದ ಹಿಂದಿನ ಅಂಚಿನಲ್ಲೂ ಹೆಣ್ಣಿನಲ್ಲಿ 8 ಅಥವಾ 9ನೆಯ ಖಂಡದ ಹಿಂದಿನ ಅಂಚಿನಲ್ಲೂ ಇದೆ.

ಹೆಣ್ಣು ಗಂಡು ಕೀಟಗಳಲ್ಲಿ ಜನನೇಂದ್ರಿಯಗಳ ಪಟ್ಟಿ

| ಗಂಡು | ಹೆಣ್ಣು |
|---|---|
| 1. ಕುಹರಗಳಿಂದ ಕೂಡಿದ ಒಂದು ಜೊತೆ ವೃಷಣಗಳು | ಅಂಡೋತ್ಪತ್ತಿಯ ಕೊಳವೆಗಳಿಂದ ಕೂಡಿದ ಒಂದು ಜೊತೆ ಅಂಡಾಶಯಗಳು |
| 2. ಒಂದು ಜೊತೆ ರೇತಸ್ಸು ನಾಳ (ವಾಸ ಡಿಫರೆಂಶಿಯ) | ಒಂದು ಜೊತೆ ಅಂಡನಾಳಗಳು (ಓವಿಡಕ್ಟ್) |
| 3. ವೀರ್ಯ ಕೋಶಗಳು (ಸೆಮನಲ್ ವೆಸಿಕಲ್ಸ್) | ಅಂಡಕೋಶಗಳು |
| 4. ಮಧ್ಯರೇಖೆಯಲ್ಲಿರುವ ವೀರ್ಯ ಹೊರಹೊಮ್ಮುವ ಕೊಳವೆ | ಯೋನಿನಾಳ |
| 5. ಸಹಾಯಕ ಗ್ರಂಥಿಗಳು | ಸಹಾಯಕ ಗ್ರಂಥಿಗಳು |
| 6. – | ರೇತಸ್ಸು ಉಗ್ರಾಣ (ಸ್ಪರ್ಮಟೀಕ) ಸಂಭೋಗ ಒರೆ (ಬರ್ಸ ಕಾಪ್ಯುಲೇಟ್ರಿಕ್ಸ್) |
| 7. ಬಾಹ್ಯ ಜನನೇಂದ್ರಿಯಗಳು | ಬಾಹ್ಯ ಅಂಡೋಪಕರಣ (ಓವಿಪಾಸಿಟರ್) |

**ಗಂಡುಕೀಟದ ಸಂತಾನೋತ್ಪತ್ತಿ ಅಂಗಗಳು.** 1. ವೃಷಣಗಳು: ಇವು ಕರುಳಿನ ಮೇಲ್ಭಾಗ, ತಳಭಾಗ ಅಥವಾ ಪಕ್ಕದಲ್ಲಿವೆ. ಇವುಗಳ ಆಕಾರ ಅಂಡದಂತೆ, ಒಂದೊಂದು ವೃಷಣದಲ್ಲೂ ಕೆಲವು ಫಾಲಿಕಲ್ಸ್ ಅಥವಾ ಹಾಲೆಗಳಿವೆ. ಈ ಫಾಲಿಕಲ್‌ಗಳಲ್ಲಿ ಪ್ರಥಮ ಸ್ಥಿತಿಯ ಬೀಜಾಣುವಿನಿಂದ ಹಿಡಿದು ರೇತ್ರಾಣುಗಳವರೆಗೆ ಬೇರೆ ಬೇರೆ ವಯಸ್ಸಿನ ಕಣಗಳು ನಿರ್ದಿಷ್ಟ ಸ್ಥಳಗಳಲ್ಲಿ ತುಂಬಿರುತ್ತವೆ. 2. ರೇತಸ್ಸು ನಾಳಗಳು : ಇವು ವೀರ್ಯವನ್ನು ವೃಷಣದಿಂದ ಹೊರಕ್ಕೆ ಒಯ್ಯುವ ನಾಳಗಳು. ಇವುಗಳ ಉದ್ದದಲ್ಲಿ ಬಹಳ ವ್ಯತ್ಯಾಸವಿದೆ. ಇವು ಮಾರ್ಗದಲ್ಲಿ ಒಂದುಕಡೆ ಉಬ್ಬಿ ರೇತಸ್ಸಿನ ಶೇಖರಣೆಗಾಗಿ ವೀರ್ಯಕೋಶ ಗಳಾಗುತ್ತವೆ. ಹಿಂದುಗಡೆ ಎರಡು ನಾಳಗಳೂ ಕೂಡಿ ನಡುರೇಖೆಯ ಒಂಟಿ ಕೊಳವೆಯಾಗಿ, ತುದಿಯಲ್ಲಿರುವ ಹೊರಹೊಮ್ಮುವ ಕೊಳವೆ ಮೂಲಕ ಹೊರಕ್ಕೆ ತೆರೆಯುತ್ತವೆ. 3. ಶಿಶ್ನ: ಬೆರಳಿನಾಕಾರದ ಈ ಭಾಗ ಹೊರಹೊಮ್ಮುವ ಕೊಳವೆಯ ತುದಿಗೆ ಸೇರಿಕೊಂಡಿದೆ. ಹೆಣ್ಣುಕೀಟದ ಬಾಹ್ಯ ಜನನೇಂದ್ರಿಯದೊಳಗೆ ಇದು ಪ್ರವೇಶಿಸಿ ವೀರ್ಯವನ್ನು ಇಡುತ್ತದೆ. ಒಂದರಿಂದ ಮೂರು ಜೊತೆ ಸಹಾಯಕ ಗ್ರಂಥಿಗಳು ರೇತಸ್ಸು ನಾಳಗಳೊಡನೆ ಸೇರಿಕೊಂಡಿವೆ. ಇವು ಚೀಲದಂತೆ ಅಥವಾ ನಾಳದಂತೆ ಇವೆ. ಇವುಗಳ ಸ್ರಾವ ವೀರ್ಯದೊಂದಿಗೆ ಮಿಶ್ರವಾಗುತ್ತದೆ.



ಗಂಡು ಜಿರಲೆಯ ಜನನೇಂದ್ರಿಯಗಳು

**ಹೆಣ್ಣು ಕೀಟದ ಸಂತಾನಾಭಿವೃದ್ಧಿ ಅಂಗಗಳು.** 1. ಅಂಡಾಶಯಗಳು: ಕರುಳಿನ ಎರಡು ಪಕ್ಕಗಳಲ್ಲಿ ಇರುವ ಸಾಂದ್ರವಾದ ಅಂಗಗಳು. ಪ್ರತಿ ಅಂಡಾಶಯವೂ ನಿರ್ದಿಷ್ಟ ಸಂಖ್ಯೆಯ ಅಂಡೋತ್ಪತ್ತಿನಾಳಗಳಿಂದ ಕೂಡಿದ್ದು, ಎಲ್ಲವೂ ಅಂಡನಾಳದೊಳಕ್ಕೆ ತೆರೆಯುತ್ತವೆ. ಒಂದೊಂದು ಅಂಡಾಶಯದಲ್ಲಿ ಅಂಡೋತ್ಪತ್ತಿ ನಾಳಗಳ ಸಂಖ್ಯೆ ಎಂಟಕ್ಕಿಂತ ಹೆಚ್ಚಾಗಿಲ್ಲ. ಅಂಡೋತ್ಪತ್ತಿನಾಳ ಉದ್ದವಾದ ಕೊಳವೆಯಂತಿದ್ದು, ಅದರೊಳಗೆ ಬೆಳೆಯುತ್ತಿರುವ ಮೊಟ್ಟೆಗಳ ಸಾಲು ಇರುತ್ತವೆ. ಇಂಥ ಸಾಲಿನಲ್ಲಿ ಅತ್ಯಂತ ಪಕ್ವವಾದ ಮೊಟ್ಟೆಗಳು ನಾಳದ ಕೆಳತುದಿಯಲ್ಲಿ ಅಂದರೆ ಅಂಡನಾಳವನ್ನು ಸೇರುವ ತುದಿಯಲ್ಲಿರುತ್ತವೆ. ಅಂಡೋತ್ಪತ್ತಿನಾಳದ ಮೇಲು

ತುದಿಯಲ್ಲಿ ಸೂಕ್ಷ್ಮವಾದ ಎಳೆಯುಂಟು. ಒಂದು ಅಂಡಾಶಯದ ನಾಳಗಳ ಎಳೆಗಳೆಲ್ಲ ಸೇರಿ ಹುರಿಯಾಗಿ, ಪಕ್ಕದ ಅಂಡಾಶಯದ ಹುರಿಯೊಡನೆ ಕೂಡಿ ನಡುರೇಖೆಯ ಹುರಿಯಾಗುತ್ತದೆ. ನಾಳದ ಮೇಲ್ಭಾಗದಲ್ಲಿ ಮೂಲ ಸ್ಥಿತಿಯ ಬೀಜಾಣುಗಳೂ ಪೋಷಕಕಣಗಳೂ ಕೆಳಗಡೆ ಬೆಳೆಯುತ್ತಿರುವ ಅಂಡಗಳೂ ಪೋಷಕ ಕಣಗಳೂ ತುಂಬಿವೆ. 2. ಅಂಡನಾಳಗಳು: ಒಂದೊಂದು ಅಂಡಾಶಯದಿಂದ ಹಿಂದಿನಿಂದ ಹೊರಟ ಅಂಡನಾಳವೂ ತನ್ನ ಪಕ್ಕದ ನಾಳದೊಡನೆ ಕೂಡಿ, ಉದರದ 7ನೆಯ ಖಂಡದ ಕೆಳಚಿಪ್ಪಿನ ಹಿಂದೆ ಇರುವ ಅಂಡನಾಳವನ್ನು ಸೇರುತ್ತದೆ. ಈ ನಾಳ 8ನೆಯ ಖಂಡಕ್ಕೂ ವ್ಯಾಪಿಸಿ ಅಲ್ಲಿ ಒಳಮಡಿಕೆಯಂತೆ ಉದ್ಭವಿಸುವ ಯೋನಿಯನ್ನು ಕೂಡಿಕೊಳ್ಳುತ್ತದೆ. ಸಂಭೋಗ ಒರೆ ಯೋನಿಪ್ರದೇಶದಲ್ಲಿ ಒಂದು ಚೀಲದಂತಿದೆ. ಹಲವಾರು ರೂಪಗಳುಳ್ಳ ವೀರ್ಯಸಂಗ್ರಹಣಚೀಲ ಯೋನಿ ಅಥವಾ ಜನನ ಕುಳಿಯೊಡನೆ ತನ್ನ ನಾಳದ ಮೂಲಕ ಸಂಪರ್ಕ ಹೊಂದಿದೆ. ಅನೇಕ ಬಗೆಯ ಕೀಟಗಳು ತಮ್ಮ ಜೀವಮಾನದಲ್ಲಿ ಒಂದೇ ಸಲ ಸಂಭೋಗ ಮಾಡುವುವಾದರೂ ದೀರ್ಘಕಾಲ ಮೊಟ್ಟೆ ಇಡುವುದರಿಂದ ವೀರ್ಯ ಶೇಖರಣೆ ಅಗತ್ಯ. 3. ಸಹಾಯಕ ಗ್ರಂಥಿಗಳು: ಒಂದೆರಡು ಜೊತೆ ಗ್ರಂಥಿಗಳು ಯೋನಿಯ ಕೆಳತುದಿಯಲ್ಲಿ ತೆರೆಯುತ್ತವೆ. ತತ್ತಿಗಳನ್ನು ಗುತ್ತಿಗಳಾಗಿ ಕೂಡಿಸುವುದಕ್ಕೂ ಅವುಗಳನ್ನು ಇಡುವ ಜಾಗಕ್ಕೆ ಅಂಟಿಸುವುದಕ್ಕೂ ಇವುಗಳ ಸ್ರಾವ ಉಪಯುಕ್ತವಾಗಿದೆ.

ಹೆಣ್ಣು ಜಿರಲೆಯ ಜನನೇಂದ್ರಿಯಗಳು

**ಕೀಟಗಳ ಮೊಟ್ಟೆ** : ಮೊಟ್ಟೆಯ ಕೋಶದ್ರವ್ಯ ಬಲೆಯಂತಿದ್ದು, ಅದರ ಮಧ್ಯದಲ್ಲಿ ದೊಡ್ಡ ನ್ಯೂಕ್ಲಿಯಸ್ ಮತ್ತು ಹೇರಳವಾಗಿ ಬಂಡಾರ ಗುಳ್ಳೆಗಳು ಇವೆ. ಅಂಡದ ಸುತ್ತ ತೆಳ್ಳನೆಯ ಸಜೀವ ಪೊರೆ (ವಿಟಿಲೈನ್ ಪೊರೆ) ಮತ್ತು ಅದರ ಹೊರಗೆ ಚಿಪ್ಪು (ಕೋರಿಯಾನ್) ಇವೆ. ಚಿಪ್ಪು ಗಡುಸಾಗಿರುವುದರಿಂದ ಮೊಟ್ಟೆಗೆ ನಿರ್ದಿಷ್ಟ ಆಕಾರವಿರುತ್ತದೆ. ಚಿಪ್ಪಿನ ಮೇಲ್ಮೈಯಲ್ಲಿ ಅನೇಕ ಬಗೆಯ ಕೆತ್ತನೆಗಳು–ಹೆಚ್ಚಾಗಿ ಆರು ಮೂಲೆಯ ಚಿತ್ರಗಳು–ಇರುತ್ತವೆ. ಮೊಟ್ಟೆಗೆ ಉದ್ದವಾದ ಅಂಡಾಕಾರವೇ ಸಾಮಾನ್ಯ. ಗೋಳಾಕಾರ, ತಟ್ಟೆ, ಪೀಪಾಯಿ ಆಕಾರಗಳೂ ಉಂಟು. ಒಂದು ಕೊನೆಯಲ್ಲಿ ತೊಟ್ಟು ಮತ್ತು ಮೇಲ್ತುದಿಯಲ್ಲಿ ಮುಚ್ಚಳ ಇರುವುದೂ ಉಂಟು. ಚಿಪ್ಪಿನಲ್ಲಿ ಎರಡು ಪದರಗಳುಂಟು. ಹೊರಪದರ ತೆಳುವಾದ ಎಕ್ಸೊಕೋರಿಯಾನ್, ಒಳಪದರ ದಪ್ಪವಾದ ಎಂಡೊಕೋರಿಯಾನ್, ಹೊರಗಿನ ಪದರ ಕೈಟಿನ್‌ನಂಥ ಸೀರೋಪ್ರೋಟೀನ್ ಅಥವಾ ಕೋರಿಯಾನ್‌ನಿಂದ ಕೂಡಿದೆ. ಮೊಟ್ಟೆ ಚಿಕ್ಕದಿದ್ದು ಇನ್ನೂ ಹೆಣ್ಣಿನ ಶರೀರದಲ್ಲಿದ್ದಾಗ ಮೊಟ್ಟೆಯ ಒಂದು ಕಡೆ ಒಂದು ಸೂಕ್ಷ್ಮವಾದ ರಂಧ್ರವಿರುತ್ತದೆ. ಇದಕ್ಕೆ ಮೈಕ್ರೊಪೈಲ್ ಎಂದು ಹೆಸರು. ಇದರ ಮೂಲಕ ವೀರ್ಯಾಣು ಒಳಹೋಗಬಲ್ಲುದು. ಕೀಟಗಳ ಮೊಟ್ಟೆಗಳು ಅತ್ಯಂತ ಸಣ್ಣಗಾತ್ರದವು. 0.1 ಮಿಮೀ. ನಿಂದ ಹಿಡಿದು 5–6 ಮಿಮೀ. ಉದ್ದವಿರುವುದೇ ಸಾಮಾನ್ಯ.

**ಸಂತಾನೋತ್ಪತ್ತಿಯ ವಿಧಾನಗಳು:** ಹೆಣ್ಣುಕೀಟ ಗರ್ಭಾಂಕುರಗೊಂಡ ಅಂಡವನ್ನು ಹೊರಗಡೆ ಇಟ್ಟು, ಕಾಲಕ್ರಮದಲ್ಲಿ ಅದು ಒಡೆದು, ಮರಿಹುಟ್ಟುವುದೇ ಸಾಮಾನ್ಯ ಪದ್ಧತಿ. ಬೇರೆ ಕೆಲವು ವಿಧಾನಗಳನ್ನು ವಿರಳವಾಗಿ ಕಾಣಬಹುದು. 1. ಮರಿ ಜನನ (ವೈವಿಪ್ಯಾರಿಟಿ): ನೇರವಾಗಿ ಮರಿಗಳು ತಾಯಿಕೀಟದ ದೇಹದಿಂದ ಹುಟ್ಟುವುದು. ಉದಾ: ಏಫಿಡ್ ಜಾತಿಯ ಸಸ್ಯಹೇನುಗಳು. 2. ಪಿತೃರಹಿತ ಸಂತಾನ (ಪಾರ್ಥೆನೊಜೆನಿಸಿಸ್): ಕೆಲವು ಕೀಟ ಜಾತಿಗಳಲ್ಲಿ ಗಂಡುಕೀಟಗಳೇ ಕಂಡು ಬಂದಿಲ್ಲ. ಇನ್ನು ಕೆಲವು ಕೀಟಗಳಲ್ಲಿ ಗಂಡು ಅಪೂರ್ವ. ಆದರೂ ಸಂತಾನವೃದ್ಧಿ ಕಂಡುಬರುತ್ತದೆ. ಈ ರೀತಿ ಹುಟ್ಟಿದ ಕೀಟಗಳು ಎರಡು ಲಿಂಗಗಳಿಗೂ ಸೇರಿರಬಹುದು ಅಥವಾ ಬರಿಗಂಡು, ಬರಿಹೆಣ್ಣು ಕೀಟಗಳಾಗಬಹುದು. 3. ಬಾಲ್ಯ ಸಂತಾನ (ಪೀಡೋಜೆನಿಸಿಸ್): ಮರಿಗಳ ಅಂಡಾಶಯಗಳು ಪಕ್ವಸ್ಥಿತಿಗೆ ಬಂದು ಗಂಡಿನ ಸಂಪರ್ಕವಿಲ್ಲದ ಸಂತಾನೋತ್ಪತ್ತಿ; ಉದಾ: ಸೆಸಿಡೋಮೈಯಿಡ್ ನೊಣಗಳು 4. ಬಹುಭ್ರೂಣತ್ವ *(ಪಾಲಿಎಂಬ್ರಿಯಾನಿ):* ಒಂದು ಮೊಟ್ಟೆಯಿಂದ ಒಂದಕ್ಕೂ ಹೆಚ್ಚು ಭ್ರೂಣಗಳ ಉತ್ಪತ್ತಿ. ಉದಾ: ಕೆಲವು ಪರಾವಲಂಬಿ ಕಣಜಗಳು. 5. ದ್ವಿಲಿಂಗತ್ವ (ಹರ್ಮಫ್ರಡಿಟಿಸಮ್): ಒಂದೇ ಕೀಟದಿಂದ ಅಂಡ ಹಾಗೂ ವೀರ್ಯೋತ್ಪಾದನೆ. ಇದು ಅತ್ಯಂತ ವಿರಳ. ಉದಾಹರಣೆಗೆ ಐಸೀರಿಯ ಪರ್ಚೇಸಿ ಎಂಬ ಸಸ್ಯತಿಗಣೆ ಮೊಟ್ಟೆ, ವೀರ್ಯ ಎರಡನ್ನೂ ಉತ್ಪಾದಿಸಬಲ್ಲುದು.

**ಬೆಳೆವಣಿಗೆ ಮತ್ತು ರೂಪಪರಿವರ್ತನೆ (ಮೆಟಮಾರ್ಫಾಸಿಸ್):** ಮರಿಗಳ ಬೆಳೆವಣಿಗೆಗೆ ಅನುಕೂಲವಾಗಿರುವ ಸ್ಥಳಗಳಲ್ಲೇ ಸಾಮಾನ್ಯವಾಗಿ ಕೀಟಗಳು ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳನ್ನು ಒಂಟೊಂಟಿಯಾಗಿ ಇಲ್ಲವೆ ಗುಂಪು ಗುಂಪಾಗಿ, ಮರಿಗಳು ತಿನ್ನುವ ಎಲೆಗಳ ಮೇಲೆ ಅಥವಾ ಕಾಂಡ ಮುಂತಾದ ಭಾಗಗಳ ಬಿರುಕುಗಳಲ್ಲಿ ಇಡುತ್ತವೆ. ಸಸ್ಯದಲ್ಲಿ ಸ್ವಲ್ಪ ಆಳವಾಗಿ ಮೊಟ್ಟೆ ಇಟ್ಟಾಗ ಗಂಟುಗಳು ಉಂಟಾಗುವುದುಂಟು. ಒಂದು ಜಾಗಕ್ಕೆ ಮೊಟ್ಟೆಗಳನ್ನು ಅಂಟಿಸುವುದೂ ಪೊರೆ ಅಥವಾ ಹತ್ತಿಯಂಥ ಕವಚವನ್ನು ಹೊದಿಸುವುದೂ ಉಂಟು. ಇನ್ನೂ ಕೆಲವು ಕೀಟಗಳು ತತ್ತಿಗಳನ್ನು ಬಿರುಸಾದ ಕೋಶದಲ್ಲಿ (ಜಿರಲೆ, ಒಂಟೆಹುಳು) ಅಥವಾ ಕಾಯಿಯಂಥ ಕೋಶಗಳಲ್ಲಿ (ಮಿಡತೆಗಳು) ಇಡುವುದುಂಟು. ಪರಾವಲಂಬಿ ಕೀಟಗಳು ಅತಿಥೇಯ ಪ್ರಾಣಿಗಳ ಮೈಮೇಲೋ ಒಳಗೋ ಮೊಟ್ಟೆ ಇಡುತ್ತವೆ. ನೆಲವನ್ನು ತೋಡಿ ಮೊಟ್ಟೆಯಿಡುವ ಕ್ರಮ ಕೆಲವು ಕೀಟಗಳಲ್ಲಿ ಉಂಟು.

ಮೊಟ್ಟೆಯೊಳಗಿನ ಭ್ರೂಣದ ಬೆಳೆವಣಿಗೆ ತಾಯಿಯ ದೇಹದಲ್ಲಿದ್ದಾಗಲೂ ಹೊರಗೆ ಬಂದಮೇಲೂ ಮುಂದುವರಿಯುತ್ತದೆ. ಕೆಲವು ಕೀಟಗಳಲ್ಲಿ ಮೊಟ್ಟೆ ಹೊರಗೆ ಬಂದಮೇಲೂ ಮುಂದುವರಿಯುತ್ತದೆ. ಕೆಲವು ಕೀಟಗಳಲ್ಲಿ ಮೊಟ್ಟೆ ಹೊರಗೆ ಬಂದಮೇಲೆ ಮಾತ್ರ ಭ್ರೂಣ ಬೆಳೆಯುತ್ತದೆ. ಮೊಟ್ಟೆ ಒಡೆದು ಮರಿ ಹೊರಗೆ ಬರುವ ಅವಧಿಯಲ್ಲಿ ಬಹಳ ಅಂತರವಿದೆ; ಈ ಅವಧಿ ನೊಣದಲ್ಲಿ 8–12 ಗಂಟೆಯಾದರೆ, ಕೆಲವು ಪತಂಗಗಳಲ್ಲಿ 9 ತಿಂಗಳು. ಬೆಳೆವಣಿಗೆ ಯಾವ ತಡೆಯಿಲ್ಲದೆ ನಡೆಯಬಹುದಾದರೂ ಹವಾಗುಣ ಅನುಕೂಲವಿಲ್ಲದಿದ್ದಾಗ ಅಂದರೆ ಅತಿಯಾದ ಉಷ್ಣತೆ ಅಥವಾ ಶೀತವಿದ್ದಾಗ ಅನಿರ್ದಿಷ್ಟಕಾಲ ತಡೆಗಟ್ಟಬಹುದು. ಕೆಲವು ಜಾತಿಗಳಲ್ಲಿ ದೇಹವ್ಯಾಪಾರಕ್ಕನುಗುಣವಾಗಿ ಇಂಥ ತಡೆಗಾಲ (ಡೈಯಪಾಸ್) ಸ್ವಾಭಾವಿಕವಾಗಿ ಇದ್ದೇ ಇದೆ.

ಗರ್ಭಧರಿಸಿದ ಅಂಡದ ನ್ಯೂಕ್ಲಿಯಸ್ ಮೊದಲು ವಿಭಜನೆಯಾಗುತ್ತದೆ. ವಿಭಾಗವಾದ ತುಂಡುಗಳು ಒಂದೊಂದೂ ಸ್ವಲ್ಪ ಕೋಶದ್ರವ್ಯದಿಂದ ಸುತ್ತುವರಿಯಲ್ಪಟ್ಟು ಮೊಟ್ಟೆಯ ಹೊರವಲಯಕ್ಕೆ ಬಂದು ಬ್ಲಾಸ್ಟೋಡರ್ಮ್ ಎಂಬ ಪದರವಾಗಿ ಪರಿಣಮಿಸುತ್ತದೆ. ಕ್ರಮೇಣ ಈ ಹೊರಪದರದ ತಳಭಾಗದಲ್ಲಿ ಜೀವಾಣು ಪಟ್ಟಿಯೊಂದು (ಜರ್ಮ್ ಬ್ಯಾಂಡ್) ಮೂಡುತ್ತದೆ. ಇದು ಕ್ರಮೇಣ ಮಡಿಕೆಯಾಗಿ ಎರಡು ಪದರಗಳನ್ನೊಳಗೊಳ್ಳುತ್ತದೆ. ಜೀವಾಣುಪಟ್ಟಿ ಬಂಡಾರದೊಳಗೆ ಪ್ರವೇಶಿಸಿ ಅದನ್ನೇ ಆಹಾರವಾಗಿ ಉಪಯೋಗಿಸುತ್ತ ಬೆಳೆಯತೊಡಗುತ್ತದೆ. ಮುಂದೆ ಅಡ್ಡಗೆರೆಗಳು ಕಾಣಿಸಿಕೊಂಡು ಜೀವಾಣುಪಟ್ಟಿ ನಿರ್ದಿಷ್ಟವಾದ ಖಂಡಗಳಾಗಿ ವಿಭಾಗವಾಗುತ್ತದೆ. ಇದೇ ಭ್ರೂಣ. ಇದರಲ್ಲಿ ಶಿರ, ಎದೆ, ಉದರಭಾಗಗಳನ್ನು ಗುರುತಿಸಬಹುದು. ಉಪಾಂಗಗಳು ಉತ್ಪತ್ತಿಯಾಗುವುದೂ ಈ ಹಂತದಲ್ಲಿ. ಕ್ರಮೇಣ ಭ್ರೂಣ ಬಂಡಾರದ ಸುತ್ತಲೂ ಆವರಿಸಿಕೊಳ್ಳುತ್ತದೆ. ಕೆಲಕಾಲಾನಂತರ ಅಂಗರಚನೆಯಾಗಿ, ಸ್ವತಂತ್ರ ಜೀವನ ನಡೆಸುವ ಸಾಮರ್ಥ್ಯ ದೊರೆತಾಗ, ಮರಿಕೀಟ ಮೊಟ್ಟೆಯೊಡೆದುಕೊಂಡು ಹೊರಬರುತ್ತದೆ.

**ರೂಪಪರಿವರ್ತನೆ:** ಮರಿಕೀಟಕ್ಕೂ ಬಲಿತ ಕೀಟಕ್ಕೂ ದೇಹರಚನೆ, ದೇಹ ವ್ಯಾಪಾರದಲ್ಲಿ ವ್ಯತ್ಯಾಸಗಳುಂಟು. ಶೈಶವಾವಸ್ಥೆಯಿಂದ ಪ್ರೌಢಾವಸ್ಥೆಗೆ ಬರಬೇಕಾದರೆ ರಚನಾದೃಷ್ಟಿಯಿಂದ ಕಂಡುಬರುವ ಬದಲಾವಣೆಗಳಿಗೆ ಒಟ್ಟಿನಲ್ಲಿ ರೂಪಪರಿವರ್ತನೆ ಎಂದು ಹೆಸರು. ಕೆಲವು ಕೀಟವರ್ಗಗಳಲ್ಲಿ ಮೊಟ್ಟೆಯೊಡೆದು ಬಂದ ಮರಿಕೀಟವನ್ನು ಪ್ರೌಢಕೀಟಕ್ಕೆ ಹೋಲಿಸಿದರೆ ಸಂತಾನೋತ್ಪತ್ತಿಗೆ ಸಂಬಂಧಿಸಿದ ಅಂಗಗಳು ವಿಕಾಸವಾಗದಿರುವುದರಲ್ಲಿ ಮಾತ್ರ ಬೇರೆಯಾಗಿರುತ್ತವೆ; ಮರಿಗೂ ಪ್ರೌಢಕೀಟಕ್ಕೂ ಇನ್ಯಾವ ವ್ಯತ್ಯಾಸವೂ ಇಲ್ಲ. ಅಪ್ಟೆರಿಗೋಟ ಉಪವರ್ಗದ ಕೀಟಗಳಲ್ಲಿ ಇದು ಸಾಮಾನ್ಯ. ಈ ಕಾರಣದಿಂದ ಈ ಕೀಟಗಳನ್ನು ಅಪರಿವರ್ತಿಗಳೆನ್ನುವುದು (ಏಮೆಟಬೋಲ) ವಾಡಿಕೆ. ಆದರೆ ಬಹುಪಾಲು ಕೀಟಗಳಲ್ಲಿ ರೂಪ ಪರಿವರ್ತನೆ ಇದ್ದೇ ಇದೆ. ಪರಿವರ್ತನೆಯುಳ್ಳ ಕೀಟವರ್ಗಗಳ ಮರಿಗಳು ಪ್ರೌಢಕೀಟಗಳಿಗಿಂತ ಗಾತ್ರದಲ್ಲಿ ಸಣ್ಣವು. ಇವು ಬೆಳೆವಣಿಗೆ ಅವಧಿಯ ನಿರ್ದಿಷ್ಟ ಹಂತಗಳಲ್ಲಿ ಪೊರೆ ಕಳಚಿ ತಮ್ಮ ಗಾತ್ರವನ್ನು ಹೆಚ್ಚಿಸಿಕೊಳ್ಳುತ್ತವೆ. ಪ್ರತಿಯೊಂದು ಕೀಟಪ್ರಭೇದದ ಬೆಳೆವಣಿಗೆಯಲ್ಲೂ ಈ ರೀತಿ ಪೊರೆಬಿಡುವಿಕೆ (ಮೋಲ್ಟಿಂಗ್ ಅಥವಾ ಎಕ್‌ಡೈಸಿಸ್) ಹಲವಾರು ಸಲ ನಡೆಯುತ್ತದೆ. ಎರಡು ಸಾರಿ ಪೊರೆ ಬಿಡುವುದರ ಮಧ್ಯದ ಜೀವಕಾಲಕ್ಕೆ ಅಂತರಿಕೆ ಅಥವಾ ಇನ್ಸ್ಟಾರ್ ಎಂದು ಹೆಸರು. ಒಂದು ಕೀಟದ ಬೆಳೆವಣಿಗೆಯ ಕಾಲದಲ್ಲಿರುವ ಒಟ್ಟು ಇನ್ಸ್ಟಾರ್‌ಗಳ ಸಂಖ್ಯೆಯೂ ನಿರ್ದಿಷ್ಟವೇ. ಈ ಗುಂಪುಗಳನ್ನು ಅಪೂರ್ಣಪರಿವರ್ತಿಗಳು (ಹೆಮಿಮೆಟಬೋಲ) ಮತ್ತು ಪೂರ್ಣಪರಿವರ್ತಿಗಳು (ಹೋಲೊಮೆಟಬೋಲ) ಎಂದು ವಿಭಾಗಿಸಬಹುದು.

ದೇಹದ ಹೊರಭಾಗದಲ್ಲಿ ಉದ್ಭವಿಸುವ ರೆಕ್ಕೆಗಳುಳ್ಳ ಬಾಹ್ಯೋದ್ಭವ ಪಕ್ಷಕ (ಎಕ್ಸೊಟೆರಿಗೋಟ) ಕೀಟಗಳು ಸಾಮಾನ್ಯವಾಗಿ ಅಪೂರ್ಣಪರಿವರ್ತಿಗಳು. ಇವುಗಳಲ್ಲಿ ನೇರ ಅಥವಾ ಸರಳ ರೂಪಪರಿವರ್ತನೆಯನ್ನು ಕಾಣಬಹುದು. ಇವುಗಳಲ್ಲಿ ಕೋಶಾವಸ್ಥೆ ಇಲ್ಲ. ಮರಿಕೀಟಕ್ಕೆ ಅಪ್ಸರೆ (ನಿಂಫ್) ಎಂದು ಹೆಸರು. ಅಪ್ಸರೆಯಲ್ಲಿ ರೆಕ್ಕೆ ಮತ್ತು ಸಂತಾನೋತ್ಪತ್ತಿಯ ಅಂಗಗಳು ಅಪೂರ್ಣಾವಸ್ಥೆಯಲ್ಲಿರುತ್ತವೆ. ಇದು ಗಾತ್ರದಲ್ಲಿ

ಪ್ರೌಢಕೀಟಕ್ಕಿಂತ ಚಿಕ್ಕದು. ದೇಹದ ಆಕಾರ, ವದನಾಂಗ ಮತ್ತು ಸಂಯುಕ್ತ ನೇತ್ರಗಳ ರಚನೆ ಹಾಗೂ ದೈಹಿಕ ಕ್ರಿಯೆಗಳಲ್ಲಿ ಮರಿಗೂ ಪ್ರೌಢಕೀಟಕ್ಕೂ ವ್ಯತ್ಯಾಸವಿಲ್ಲ. ಅಪ್ಸರೆ ನಿರ್ದಿಷ್ಟವಾದ ಅಂತರಗಳಲ್ಲಿ ಪೊರೆ ಕಳಚಿ, ಮೈಗಾತ್ರವನ್ನು ಹೆಚ್ಚಿಸಿಕೊಳ್ಳುತ್ತದೆ.

ಉನ್ನತ ವರ್ಗಕ್ಕೆ ಸೇರಿದ ಅಥವಾ ದೇಹದೊಳಗಿನಿಂದ ಹುಟ್ಟುವ ರೆಕ್ಕೆಗಳುಳ್ಳ ಅಂತರೋದ್ಭವ ಪಕ್ಷಕ (ಎಂಡೋಟೆರಿಗೋಟ) ಕೀಟಗಳು ಪೂರ್ಣಪರಿವರ್ತಿಗಳು. ಮೊಟ್ಟೆಯೊಡೆದು ಬಂದ ಮರಿಗೂ ಪ್ರೌಢ ಕೀಟಕ್ಕೂ ಆಕಾರ ಮತ್ತು ದೇಹರಚನೆಯಲ್ಲಿ ಬಹಳ ವ್ಯತ್ಯಾಸಗಳುಂಟು. ಮರಿಗಳಲ್ಲಿ ಸಂಯುಕ್ತನೇತ್ರಗಳು ಇಲ್ಲವೇ ಇಲ್ಲ ಅಥವಾ ಇದ್ದರೂ ಅವು ಉಪಯುಕ್ತವಲ್ಲ. ಈ ವರ್ಗದ ಮರಿ ಕೀಟಗಳನ್ನು ಡಿಂಭಗಳು (ಲಾರ್ವ) ಎಂದು ಕರೆಯಲಾಗುತ್ತದೆ. ಇವುಗಳ ಜೀವಮಾನದಲ್ಲಿ ನಿರ್ದಿಷ್ಟ ಸಂಖ್ಯೆಯ ಅಂತರ ಕಾಲಗಳೂ, ಪೊರೆ ಬಿಡುವಿಕೆಯೂ ಕಂಡುಬರುತ್ತದೆ. ಪೂರ್ತಿ ಬೆಳೆದ ಡಿಂಭ ಕೋಶಾವಸ್ಥೆಯ (ಪ್ಯೂಪ) ಮೂಲಕ ಪ್ರೌಢ ಕೀಟವಾಗಿ ಪರಿವರ್ತನೆ ಹೊಂದುತ್ತದೆ. ಈ ವಿಧಾನದ ರೂಪಪರಿವರ್ತನೆಯನ್ನು ಸಂಪೂರ್ಣ ಪರಿವರ್ತನೆ ಎನ್ನಲಾಗುತ್ತದೆ.

1 **ಮೂಲಪಾದಿ ಡಿಂಭ** (ಪ್ರೋಟೋಪಾಡ್ ಲಾರ್ವ): ಭ್ರೂಣಾವಸ್ಥೆಯಲ್ಲೇ ಮೊಟ್ಟೆಯೊಡೆದು ಹೊರ ಬಂದು ಆತಿಥೇಯ ಕೀಟಗಳ ದೇಹಗಳೊಳಗೆ ಜೀವಿಸುವ ಹೈಮೆನಾಪ್ಟಿರ ವರ್ಗಕ್ಕೆ ಸೇರಿದ ಪರಾವಲಂಬಿ ಕಣಜಗಳಲ್ಲಿ ಇವು ಹೆಚ್ಚಾಗಿ ಕಾಣಬರುತ್ತವೆ. ಸಾಮಾನ್ಯವಾಗಿ ಇವುಗಳಲ್ಲಿ ಕಾಲುಗಳು ಅಷ್ಟಾಗಿ ವಿಕಾಸಹೊಂದಿರುವುದಿಲ್ಲ.

2. **ಬಹುಪಾದಿ ಡಿಂಭ** (ಪಾಲಿಪಾಡ್ ಲಾರ್ವ): ದೇಹ ಖಂಡಗಳಾಗಿ ಸ್ಪಷ್ಟವಾಗಿ ವಿಭಾಗವಾಗಿದೆ. ಉದರದ ಖಂಡಗಳಿಗೆ ಅಂಟಿಕೊಂಡ ಕಾಲುಗಳಿವೆ. ದೇಹದ ಎರಡು ಪಕ್ಕಗಳಲ್ಲೂ ಸಾಲಾಗಿ ಶ್ವಾಸದ್ವಾರಗಳಿವೆ. ಕುಡಿಮೀಸೆ ಮತ್ತು ಎದೆಯ ಭಾಗದ ಕಾಲುಗಳು ಇರುವುವಾದರೂ ಅಷ್ಟಾಗಿ ಬೆಳೆದಿಲ್ಲ. ಡಿಂಭಗಳು ತಮ್ಮ ಆಹಾರದ ಸಮೀಪದಲ್ಲೇ ಇರುತ್ತವೆ ಮತ್ತು ಸ್ವಲ್ಪ ಜಡಸ್ವಭಾವದವು. ಉದಾಹರಣೆ: ಲೆಪಿಡಾಪ್ಟಿರ ಗಣದ ಕೀಟಗಳು ಮತ್ತು ಸಾಫ್ಲೈ.

3. **ಮಿತಪಾದಿ ಡಿಂಭ** (ಅಲಿಗೋಪಾಡ್ ಲಾರ್ವ): ಇವುಗಳಲ್ಲಿ ತಕ್ಕಮಟ್ಟಿಗೆ ಬೆಳೆದ ಎದೆಯ ಕೀಲು ಕಾಲುಗಳಿವೆ. ದೇಹದ ಹಿಂದಿನ ತುದಿಯಲ್ಲಿ ಒಂದು ಜೊತೆ ಚಿಮುಟದಂಥ ರಚನೆಗಳಿವೆ. ಉದರ ಭಾಗದಲ್ಲಿ ಇನ್ನಾವ ಉಪಾಂಗಗಳೂ ಇಲ್ಲ. ತಲೆ ಮತ್ತು ಅದರ ಉಪಾಂಗಗಳು ಚೆನ್ನಾಗಿ ಬೆಳೆದಿವೆ. ಉದಾಹರಣೆ: ನ್ಯೂರಾಪ್ಟಿರ ಮತ್ತು ಕೋಲಿಯಾಪ್ಟಿರ.

4. **ಅಪಾದಿ ಡಿಂಭ** (ಏಪೋಡಸ್ ಲಾರ್ವ): ಎದೆ ಮತ್ತು ಉದರಗಳು ಸಂಪೂರ್ಣವಾಗಿ ಉಪಾಂಗರಹಿತವಾಗಿವೆ. ಕೋಲಿಯಾಪ್ಟಿರ, ಹೈಮೆನಾಪ್ಟಿರ ಗಣಗಳ ಅನೇಕ ಕುಟುಂಬಗಳ ಮತ್ತು ಡಿಪ್ಟಿರ ಗಣದ ಕೀಟಗಳಲ್ಲಿ ಈ ಬಗೆಯ ಡಿಂಭಗಳನ್ನು ಕಾಣಬಹುದು.

ಸಾಮಾನ್ಯವಾಗಿ ಲೆಪಿಡಾಪ್ಟಿರ ಗಣದ ಡಿಂಭಗಳನ್ನು **ಕಂಬಳಿಹುಳು** (ಕ್ಯಾಟರ್ ಪಿಲರ್) ಎಂದೂ ಕೋಲಿಯಾಪ್ಟಿರ ಗಣದ ಡಿಂಭಗಳನ್ನು **ಗ್ರಬ್** ಎಂದೂ ಡಿಪ್ಟಿರ ಗಣದ ಡಿಂಭಗಳನ್ನು **ಮ್ಯಾಗಟ್** ಎಂದೂ ಕರೆಯುವುದು ವಾಡಿಕೆ.

**ಪೊರೆಬಿಡುವಿಕೆ (ಮೋಲ್ಟಿಂಗ್):** ತಮ್ಮ ಬೆಳೆವಣಿಗೆಯ ಫಲವಾಗಿ ಕೀಟಗಳು ಗಾತ್ರದಲ್ಲಿ ಹೆಚ್ಚುತ್ತ ಹೋಗುತ್ತವೆ. ಆದರೆ ಈ ಹೆಚ್ಚಳಕ್ಕೆ ಅನುಗುಣವಾಗಿ ಕೀಟಗಳ ಗಡಸು ಚರ್ಮ ಹೊಂದಿಕೊಳ್ಳದೆ ಆಗಾಗ ಪೊರೆಯಂತೆ ಉದುರಿ ಹೋಗುತ್ತದೆ. ಇದರೊಂದಿಗೆ ಶ್ವಾಸನಾಳ, ಮುಂಗರುಳಿನ ಮತ್ತು ಹಿಂಗರುಳಿನ ಒಳಪದರಗಳೂ ಕಳಚಿ ಬೀಳುತ್ತವೆ. ಇದೇ ಪೊರೆಬಿಡುವಿಕೆ, ಪೊರೆಬಿಡುವಿಕೆಯಲ್ಲಿ ಒಳಚರ್ಮ ಸಂಕುಚಿತವಾಗಿ ಹೊರಚರ್ಮ ಸಿಪ್ಪೆಯಂತೆ ಅಳ್ಳಕವಾಗುತ್ತದೆ. ಮತ್ತು ಚರ್ಮದ ಈ ಎರಡು ಪದರಗಳ ನಡುವೆ ಒಂದು ಬಗೆಯ ದ್ರವ ತುಂಬಿಕೊಳ್ಳುತ್ತದೆ. ಈ ದ್ರವ ಹೊರ ಚರ್ಮದ ಒಳಮೈಯನ್ನು ಕರಗಿಸುತ್ತದೆ. ಒಳ ಚರ್ಮದ ಮೇಲ್ಭಾಗದಲ್ಲಿ ಹೊಸ ಚರ್ಮ ಸ್ರವಿಸಲ್ಪಟ್ಟ ತರುವಾಯ ಕೀಟ ಹಳೆಚರ್ಮವನ್ನು ಸೀಳಿಕೊಂಡು ಹೊರಬೀಳುತ್ತದೆ.

**ಬೆಳೆವಣಿಗೆ:** ಕೀಟಗಳು ಅತ್ಯಂತ ಗಮನಾರ್ಹವಾದ ರೀತಿಯಲ್ಲಿ ಬೆಳೆಯುತ್ತ ಹೋಗುತ್ತವೆ. ಇವುಗಳ ಬೆಳೆವಣಿಗೆಯ ದರವೂ ಹೆಚ್ಚು. ಅನೇಕ ಪೂರ್ಣ ಪರಿವರ್ತಿಗಳಲ್ಲಿ ಬೆಳೆವಣಿಗೆಯ ತೀವ್ರತೆಯನ್ನೂ ಗಾತ್ರದ ಹೆಚ್ಚಳದ ಪ್ರಮಾಣವನ್ನೂ ಅಂದಾಜು ಮಾಡಬಹುದು. ರೇಷ್ಮೆ ಹುಳುವಿನ ಪ್ರೌಢಕೀಟ ಮೊಟ್ಟೆಯಿಂದ ಬಂದ ಮರಿಹುಳದ 9,100ರಿಂದ 10,500ರಷ್ಟು ಪಾಲು ತೂಕವಿರುತ್ತದಂತೆ; ಕಾಸಸ್ ಕಾಸಸ್ ಎಂಬ ಪತಂಗದಲ್ಲಿ ಈ ಪ್ರಮಾಣ 72,000ದಷ್ಟು..

ಡೈಯರ್ ಎಂಬ ವಿಜ್ಞಾನಿಯ ಪ್ರಕಾರ ಒಂದೊಂದು ಅಂತರ ಕಾಲಕ್ಕೂ ತಲೆಯ ಅಡ್ಡಗಲ 1.4 ರಷ್ಟು ಪ್ರಮಾಣದಲ್ಲಿ ಹೆಚ್ಚುತ್ತ ಹೋಗುತ್ತದೆ. ಇದರಂತೆಯೇ ಕೀಟದ ಉದ್ದದ ಹೆಚ್ಚಳವೂ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ನಡೆಯುತ್ತದೆ ಎಂದು ತಿಳಿದುಬಂದಿದೆ.

**ಕೋಶ (ಪ್ಯೂಪ):** ಪೂರ್ಣ ಪರಿವರ್ತಿಕೀಟಗಳ ಬೆಳೆವಣಿಗೆಯಲ್ಲಿನ ಸುಪ್ತಾವಸ್ಥೆಯ ಕಾಲಕ್ಕೆ ಕೋಶವೆಂದು ಹೆಸರು. ಈ ಅವಧಿಯಲ್ಲಿ ಆಹಾರ ಸೇವನೆಯಾಗಲಿ ಚಲನವಲನಗಳಾಗಲಿ ಇಲ್ಲ. ಇದೊಂದು ಸಂದಿಗ್ಧಸಮಯ. ಅಂದರೆ ಮರಿಕೀಟದ ದೇಹ, ಅವಯವಗಳು ಮುಂದಿನ ಪ್ರೌಢಕೀಟದ ಆವಶ್ಯಕತೆಗಳಿಗೆ ಅನುಕೂಲವಾಗುವಂತೆ ಮಾರ್ಪಾಡಾಗುವ ಕಾಲ. ಕೋಶಾವಸ್ಥೆಯಲ್ಲಿ ಕೀಟ ಅಸಹಾಯಕ ಸ್ಥಿತಿಯಲ್ಲಿರುವುದರಿಂದ ಇದಕ್ಕೆ ವಿಶೇಷವಾದ ಸಂರಕ್ಷಣೆ ಆವಶ್ಯಕ. ಆದ್ದರಿಂದ ಕೋಶ ಶತ್ರುಗಳಿಗೆ ಸಿಕ್ಕದಂತೆ. ವಾತಾವರಣದ ವೈಪರೀತ್ಯಗಳು. ಯಾಂತ್ರಿಕ ತೊಂದರೆಗಳು ಮುಂತಾದವುಗಳಿಗೆ ಸಿಲುಕದಂತೆ ದೂರವಾಗಿರುತ್ತದೆ. ಲೆಪಿಡಾಪ್ಟಿರ ಮತ್ತು ಕೋಲಿಯಾಪ್ಟಿರ ಗಣಗಳ ಕೀಟಗಳಲ್ಲಿ ಕೊನೆಯ ಅಂತರಕಾಲದ (ಕೋಶಾವಸ್ಥೆಗೆ ಹಿಂದಿನ) ಡಿಂಭಗಳು ನೆಲದೊಳಗೆ ತೂರಿ ಮಣ್ಣಿನಗೂಡು ಕಟ್ಟಿಕೊಂಡು ಕೋಶಗಳಾಗುತ್ತವೆ. ಆದರೆ ಬಹುತೇಕ ಕೀಟಗಳು ವಿಶೇಷ ತರಹ ಗೂಡುಗಳನ್ನು (ಕಕೂನ್) ತಯಾರಿಸಿಕೊಳ್ಳುತ್ತವೆ. ತಮ್ಮ ದೇಹದಿಂದ ಉತ್ಪಾದನೆಯಾಗುವ ರೇಷ್ಮೆಎಳೆಗಳನ್ನು ಉಪಯೋಗಿಸಿ ಗೂಡನ್ನು ತಯಾರಿಸುತ್ತವೆ. ಕೆಲಮೊಮ್ಮೆ ಮರದ ಪುಡಿ, ಮಣ್ಣು, ಸಣ್ಣಕಲ್ಲು ಹರಳುಗಳನ್ನು ಉಪಯೋಗಿಸುವುದುಂಟು.

ಕೋಶಾವಸ್ಥೆ ಕಳೆದ ಮೇಲೆ ತಲೆ ಹಾಗೂ ಮೈಮೇಲಿರುವ ಮುಳ್ಳುಗಳಿಂದ ಅಥವಾ ದವಡೆಗಳಿಂದ ಗೂಡನ್ನು ಸೀಳಿಕೊಂಡು ಪ್ರಾಯಕೀಟ ಹೊರಬೀಳುತ್ತದೆ. ಅನಂತರ ಸಮೀಪದ ಯಾವುದಾದರೂ ಆಸರೆಗೆ ನಿಧಾನವಾಗಿ ನಡೆದುಹೋಗಿ, ಮಡಿಕೆಯಾಗಿರುವ ರೆಕ್ಕೆಗಳನ್ನು ಇಳಿಜಾರಾಗಿ ಬಿಟ್ಟುಕೊಂಡು ಕುಳಿತುಕೊಳ್ಳುತ್ತದೆ. ದೇಹದಿಂದ ರೆಕ್ಕೆಗಳಿಗೆ ರಕ್ತ ಹರಿಯುವುದರಿಂದ, ಸಂಬಂಧಪಟ್ಟ ಮಾಂಸಖಂಡಗಳ ಚಲನದಿಂದ, ರೆಕ್ಕೆಗಳು ಹರಡಿಕೊಂಡು ಸಿದ್ಧವಾಗುತ್ತವೆ. ಈ ಸಮಯದಲ್ಲಿ ಕೋಶಾವಸ್ಥೆಯಲ್ಲಿ ಚಯಾಪಚಯ ಕ್ರಿಯೆಯಿಂದ ಹೊರಬೀಳುವ ತ್ಯಾಜ್ಯವಸ್ತು ಒಂದು ತೊಟ್ಟು ದ್ರವರೂಪದಲ್ಲಿ ಆಸನದ್ವಾರದಿಂದ ಹೊರಗೆ ಬರುತ್ತದೆ. ತರುವಾಯ ಕೀಟ ತನ್ನ ಮುಂದಿನ ಜೀವನವನ್ನು ಪ್ರಾರಂಭಿಸುತ್ತದೆ. ರೂಪಪರಿವರ್ತನೆಯ ಕಾಲದಲ್ಲಿ ಮರಿಕೀಟದ ಅಂಗಾಂಶಗಳು ಪೂರ್ತಿಯಾಗಿ ನಾಶವಾಗುತ್ತವೆ. ಈ ಪ್ರಕ್ರಿಯೆಯನ್ನು ಅಂಗಾಂಶನಾಶ (ಹಿಸ್ಟಾಲಿಸಿಸ್) ಎನ್ನಬಹುದು. ಈ ರೀತಿ ಅಳಿದು ಹೋದ ಅಂಗಕಟ್ಟಿನ ಸ್ಥಾನದಲ್ಲಿ ಪ್ರಾಯಕೀಟದ ಅಂಗಾಂಶಗಳು ಪ್ರೌಢ್ಯ ಕುಡಿಗಳೆಂಬ (ಇಮ್ಯಾಜಿನಲ್ ಬಡ್ಸ್) ವಿಕಸಿತ ಜೀವಕಣಗುಂಪುಗಳ ಮೂಲಕ ಉದ್ಭವಿಸುತ್ತವೆ. ಇದನ್ನು ಅಂಗಾಂಶೋತ್ಪತ್ತಿ (ಹಿಸ್ಟೋಜೆನಿಸಸ್) ಎಂದು ಕರೆಯಬಹುದು. ಈ ಕ್ರಿಯೆಗಳು ನಿಯಮಿತ ರೀತಿಯಲ್ಲಿ ನಡೆಯುತ್ತವೆ. ಕೀಟಜೀವನದಲ್ಲಿ ಬೆಳೆವಣಿಗೆ ಮತ್ತು ರೂಪರಿವರ್ತನೆಗೆ ದೇಹದ ಮುಂಭಾಗದಲ್ಲಿರುವ ಕೆಲವು ನಾಳರಹಿತ ಗ್ರಂಥಿಗಳ ಸ್ರಾವಗಳೇ ಕಾರಣವೆಂದು ನಿರ್ಧರಿಸಲಾಗಿದೆ. ಈ ವಿಶೇಷ ಚೋದಕ ಸ್ರಾವಗಳು (ಹಾರ್ಮೋನ್ಸ್) ಎದೆಯ ಪ್ರಥಮ ಖಂಡದ ಗ್ರಂಥಿಗಳಿಂದ ಉತ್ಪತ್ತಿಯಾಗುತ್ತವೆ. ಜೊತೆಗೆ ಕಾರ್ಪೊರ ಅಲ್ಲೇಟ ಗ್ರಂಥಿಗಳ ಸ್ರಾವ ಪ್ರೌಢಕೀಟಗಳ ಗುಣಗಳು ಮರಿಗಳಲ್ಲಿ ಹುಟ್ಟದಂತೆ ತಡೆದು ಬೆಳೆವಣಿಗೆ ಕ್ರಮಬದ್ಧವಾಗಿ ನಡೆಯುವಂತೆ ಮಾಡುತ್ತದೆ. ಡಿಂಭಾವಸ್ಥೆಯ ಕೊನೆಯ ಅಂತರ ಕಾಲದಲ್ಲಿ ಈ ರಸದೂತದ ಉತ್ಪತ್ತಿ ನಿಲ್ಲುವುದರಿಂದ ಕೀಟ ಪ್ರಾಯಕ್ಕೆ ಬರಲು ಸಾಧ್ಯವಾಗುತ್ತದೆ.

**ಬೆಳೆವಣಿಗೆಯಲ್ಲಿ ತಡೆ (ಡೈಯಪಾಸ್):** ಅನೇಕ ಕೀಟಗಳ ಬೆಳೆವಣಿಗೆಗೆ ಒಂದು ನಿರ್ದಿಷ್ಟ ಹಂತದಲ್ಲಿ ತಡೆಯುಂಟಾಗುತ್ತದೆ. ಕೆಲವು ವಾರಗಳಿಂದ ಅನೇಕ ವರ್ಷಗಳವರೆಗೂ ಇರಬಹುದಾದ ಈ ತಡೆಯ ಅವಧಿ ಕಳೆದಮೇಲೆ ಬೆಳೆವಣಿಗೆ ಮತ್ತೆ ಮುಂದುವರಿಯುತ್ತದೆ. ಈ ತಡೆ ಜೀವಮಾನದ ಯಾವ ಹಂತದಲ್ಲಾದರೂ ಉಂಟಾಗಬಹುದು.

**ಕೀಟ ವರ್ಗೀಕರಣ:** ಕೀಟಗಳ ವರ್ಗೀಕರಣ ಬಹಳ ಕ್ಲಿಷ್ಟವಾದ ಸಮಸ್ಯೆ. ಕೀಟಗಳ ಬಗ್ಗೆ ವಿಷಯ ಸಂಗ್ರಹಣೆ ಹೆಚ್ಚಿದಂತೆಲ್ಲ ಈ ವರ್ಗದ ಗಣಗಳ ಸಂಖ್ಯೆ ಹೆಚ್ಚಿರುವುದಲ್ಲದೆ ವರ್ಗೀಕರಣವೂ ಬದಲಾವಣೆಗಳಿಗೆ ಒಳಗಾಗಿದೆ. ಕೀಟವರ್ಗದ ಆಧುನಿಕ ಪದ್ಧತಿಯ ವರ್ಗೀಕರಣ 1885ರಲ್ಲಿ ಬ್ರಾಯರ್ ಎಂಬ ವಿಜ್ಞಾನಿಯಿಂದ ಪರಿಚಯಿಸಲಾಯಿತು. ಆತನು ಕೀಟಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದ. (1) ರೆಕ್ಕೆ ಇಲ್ಲದ ಆಪ್ಟೆರಿಗೋಟ. (2) ರೆಕ್ಕೆಗಳುಳ್ಳ ಟೆರಿಗೋಟ ಬ್ರಾಯರ್ ತರುವಾಯ ಷಾರ್ಪ್, ಟಿಲ್ಯಾರ್ಡ್, ಹ್ಯಾಂಡಲಿರ್ಷ್, ಎಸಿಗ್ ಮೊದಲಾದ ಕೀಟಶಾಸ್ತ್ರಜ್ಞರು ಈ ಕಾರ್ಯವನ್ನು ಮುಂದುವರಿಸಿದರು.

ಆಧುನಿಕರ ರೀತ್ಯ ಕೀಟವರ್ಗವನ್ನು ಕೆಳಕಂಡಂತೆ 2 ಉಪವರ್ಗಗಳಾಗಿಯೂ 29 ಗಣಗಳಾಗಿಯೂ ವಿಂಗಡಿಸಲಾಗಿದೆ.

ಉಪವರ್ಗ 1, ಆಪ್ಟೆರಿಗೋಟ: ರೆಕ್ಕೆಯಿಲ್ಲದ, ಆದಿ ಕೀಟಗಳ ಗುಂಪು. ರೂಪಪರಿವರ್ತನೆ ಅತ್ಯಲ್ಪ ಅಥವಾ ಇಲ್ಲವೇ ಇಲ್ಲ; ಪ್ರೌಢಕೀಟದಲ್ಲಿ ಜನನದ ಉಪಾಂಗಗಳ ಹಿಂದೆ ಒಂದು ಅಥವಾ ಹೆಚ್ಚು ಜೊತೆ ಉದರದ ಉಪಾಂಗಗಳುಂಟು. ಸಂಯುಕ್ತ ನೇತ್ರಗಳಿಲ್ಲ.

ಗಣ 1, ಥೈಸನ್ಯೂರ: ತುಂಡರಿಸುವ ವದನಾಂಗಗಳು; ಕುಡಿಮೀಸೆಯಲ್ಲಿ ಅನೇಕ ಖಂಡಗಳು ಇವೆ. ಉದರದಲ್ಲಿನ ಖಂಡಗಳ ಸಂಖ್ಯೆ 11. ಅನಿರ್ದಿಷ್ಟವಾದ, ಲೇಖಣಿಯಾಕಾರದ, ಜನನ ಬಾಹ್ಯಾಂಗಗಳ ಹಿಂದೆ ಉಪಾಂಗಗಳು; ಒಂದು ಜೊತೆ ಅನೇಕ ತುಂಡುಗಳ ಸರ್ಸಿ ಎಳೆಗಳು; ದೇಹದ ಹಿಂತುದಿಯಲ್ಲಿ ತುಂಡುಗಳಿಂದ ಕೂಡಿದ ಒಂಟಿ ಬಾಲ, ಇವು ಇದರ ಮುಖ್ಯ ಲಕ್ಷಣಗಳು. ಇದು ಅತ್ಯಂತ ಪುರಾತನ ಗುಂಪು; ಇದಕ್ಕೆ ಸೇರಿದ

ಕೀಟಗಳು ಮಣ್ಣು, ಕೊಳೆಯುತ್ತಿರುವ ತರಗು, ಇರುವೆ ಗೆದ್ದಲಗೂಡು, ಮನೆಗಳಲ್ಲಿ ಹಳೆಕಾಗದದಲ್ಲಿರುವ ಮರೆಜೀವಿಗಳು. ಉದಾ: ಲೆಪಿಸ್ಮಾ (ಬೆಳ್ಳಿಮೀನು).

ಗಣ 2, **ಡೈಪ್ಲೂರ:** ಅನೇಕ ತುಂಡುಗಳ ಕುಡಿಮೀಸೆಗಳಿವೆ. ಸಂಯುಕ್ತ ನೇತ್ರಗಳಿಲ್ಲ; ಉದರದ ಖಂಡಗಳ ಪಕ್ಕಕ್ಕೆ ಚಾಚಿರುವ ಲೇಖಣಿಯಾಕಾರದ ಉಪಾಂಗಗಳುಂಟು; ಖಂಡಕ್ಕೆ ಒಂದು ಜೊತೆ ಸರ್ಸಿ ಇದೆ; ಒಂಟಿಬಾಲ ಇಲ್ಲ; ಮಾಲ್ಪಿಗೀಯನ್ ಕೊಳವೆಗಳು ಚಿಕ್ಕವು ಅಥವಾ ಇಲ್ಲವೇ ಇಲ್ಲ. ಉದಾ: ಹೆಟಿರೋಜಾಪಿಕ್ಸ್, ಕ್ಯಾಂಪೋಡಿಯ

ಗಣ 3, **ಪ್ರೋಟ್ಯೂರ:** ಇದಕ್ಕೆ ಸೇರಿದ ಕೀಟಗಳು ಸೂಕ್ಷ್ಮ ಗಾತ್ರದವು. ಚುಚ್ಚುವ ವದನಾಂಗಗಳಿವೆ. ಕುಡಿಮೀಸೆ, ಸಂಯುಕ್ತಾಕ್ಷಿಗಳಿಲ್ಲ. ಉದರದಲ್ಲಿ 11 ಖಂಡಗಳು ಮತ್ತು ಕೊನೆಯಲ್ಲಿ ಒಂದು ಕೊಂಡಿ ಇವೆ. ಮೊದಲ ಮೂರು ಖಂಡಗಳಲ್ಲಿ ಒಂದೊಂದು ಜೊತೆ ಸಣ್ಣ ಉಪಾಂಗಗಳಿವೆ. ಉದಾ: ಅಸಿರೆಂಟೋಮನ್

ಗಣ 4, **ಕೊಲೆಂಬೋಲ:** ವದನಾಂಗಗಳು ಆಹಾರವನ್ನು ತುಂಡರಿಸಲು ಸಹಕಾರಿಯಾಗಿವೆ. ನಾಲ್ಕು ತುಂಡಿನ ಕುಡಿಮೀಸೆ; ಸಂಯುಕ್ತಾಕ್ಷಿಗಳಿಲ್ಲ; ಆರು ಖಂಡಗಳ ಉದರ. 1, 3, 4 ಖಂಡಗಳಲ್ಲೂ ಉಪಾಂಗಗಳಿವೆ; ಶ್ವಾಸನಾಳಗಳು, ಮತ್ತು ಮಾಲ್ಪಿಗೀಯನ್ ಕೊಳವೆಗಳೂ ಇಲ್ಲ; ನೇರ ಬೆಳವಣಿಗೆ. ಉದಾ; ಪೊಡ್ಯೂರಾ(ಸ್ಪ್ರಿಂಗ್‌ಟೈಲ್ಸ್)

ಉಪವರ್ಗ 2, **ಟೆರಿಗೋಟ:** ರೆಕ್ಕೆಯುಳ್ಳ ಕೀಟಗಳು. ಕೆಲವೊಮ್ಮೆ ರೆಕ್ಕೆಯಿರುವುದಿಲ್ಲ. ರೂಪಪರಿವರ್ತನೆ ಉಂಟು; ಬಾಹ್ಯ ಜನನೇಂದ್ರಿಯಗಳ ಹಿಂಭಾಗದ ಖಂಡಗಳಿಗೆ ಉಪಾಂಗಗಳಿಲ್ಲ. ಇದರಲ್ಲಿ ಎಕ್ಸೊಟೆರಿಗೋಟ ಮತ್ತು ಎಂಡೋಟೆರಿಗೋಟ ಎಂಬ ಎರಡು ಗುಂಪುಗಳಿವೆ.

ಗುಂಪು (i) **ಎಕ್ಸೊಟೆರಿಗೋಟ:** ರೂಪಪರಿವರ್ತನೆ ಸರಳ ಮಾದರಿಯದು; ಕೋಶಾವಸ್ಥೆ ವಿರಳ, ರೆಕ್ಕೆಗಳು ದೇಹದ ಹೊರಭಾಗದಲ್ಲಿ ಉದ್ಭವಿಸುತ್ತವೆ; ಮರಿ ಅಪ್ಸರೆಕೀಟ; ದೇಹರಚನೆ ಮತ್ತು ಜೀವನರೀತಿಯಲ್ಲಿ ಪ್ರೌಢಕೀಟವನ್ನು ಹೋಲುತ್ತದೆ.

ಗಣ 5, **ಎಫಿಮಿರಾಪ್ಟಿರ:** ಮೆತುದೇಹದ ಸಣ್ಣ ಕೀಟಗಳು. ಕುಡಿಮೀಸೆಗಳು ರೋಮಾವೃತವಾಗಿವೆ. ವದನಾಂಗಗಳು ನಶಿಸಿಹೋಗುವ ಸ್ಥಿತಿಯಲ್ಲಿವೆ. ರೆಕ್ಕೆಗಳು ಪೊರೆಗಳಂತಿವೆ. ಹಿಂದಿನ ಜೊತೆ ರೆಕ್ಕೆ ಬಹಳ ಸಣ್ಣ, ವಿಶ್ರಾಂತಿಯಲ್ಲಿರುವ ಕೀಟದಲ್ಲಿ ಮೇಲಕ್ಕೆ ಎತ್ತಿಹಿಡಿದಂತಿವೆ, ಅನೇಕ ಅಡ್ಡನರಗಳುಂಟು; ಉದರದ ಕೊನೆಯಲ್ಲಿ ಉದ್ದವಾದ. ಸರ್ಸಿ ಎಳೆಗಳ ಜೊತೆ ಇದೆ. ಒಂಟಿ ಬಾಲದಂತೆ ಒಂದು ಎಳೆ ಇದ್ದರೂ ಇರಬಹುದು; ರೂಪಪರಿವರ್ತನೆ ಅಪೂರ್ಣ; ಅಪ್ಸರೆಕೀಟ ಜಲವಾಸಿ. ಇದರ ದೇಹದ ಹಿಂಭಾಗದಲ್ಲಿ ಮೂರು ಎಳೆಗಳಿವೆ; ಕಿವಿರುಗಳುಂಟು. ಉದಾಹರಣೆ–ಮೇ ಫ್ಲೈ.(ಎಫಿಮೆರಾ)

ಗಣ 6, **ಓಡೋನೇಟ:** ಮಾಂಸಾಹಾರಿ ಕೀಟಗಳು; ಒಂದೇ ಅಳತೆಯ ಎರಡು ಜೊತೆ ಪೊರೆಯಂಥ ರೆಕ್ಕೆಗಳಿವೆ. ರೆಕ್ಕೆಯಲ್ಲಿ ಒತ್ತಾಗಿ ನೇಯ್ದುಕೊಂಡಿರುವ ನರಗಳು ಮತ್ತು ಗಮನಾರ್ಹವಾದ ಕಪ್ಪು ಮಚ್ಚೆಗಳು ಇವೆ. ಸಂಯುಕ್ತನೇತ್ರಗಳು ಬಹು ದೊಡ್ಡವು, ಮತ್ತು ಚಾಚಿಕೊಂಡಿವೆ. ಕುಡಿಮೀಸೆಗಳು ಸಣ್ಣವು; ಎಳೆಯಂತಿವೆ. ಉದರ ಉದ್ದವಾಗಿ ತೆಳುವಾಗಿದೆ. ಗಂಡುಕೀಟಕ್ಕೆ ಉದರದ 2, 3ನೆಯ ಖಂಡಗಳ ಕೆಳಗೆ ಜನನಾಂಗದ ಉಪಕರಣವಿದೆ. ಅಪ್ಸರೆ ಜಲವಾಸಿ; ಅಪ್ಸರೆಯ ಕೆಳತುಟಿ ಸೊಂಡಿಲಿನಂತಿದೆ, ಗುದನಾಳ ಅಥವಾ ಬಾಲಕ್ಕೆ ಅಂಟಿರುವ ಕಿವಿರುಗಳುಂಟು. ಉದಾಹರಣೆ: ಕೊಡತಿ ಕೀಟ, ಕನ್ಯಾಕೀಟ (ಸೆರಿಯಾಗ್ರಿನ್–ಡಾಮ್ಸೆಲ್ ಫ್ಲೈ).

ಗಣ 7, **ಪ್ಲೆಕಾಪ್ಟಿರ:** ಇದಕ್ಕೆ ಸೇರಿದ ಕೀಟಗಳು ಮೆತುದೇಹದ ಕೀಟಗಳು. ಕುಡಿಮೀಸೆ ಉದ್ದವಾಗಿ ರೋಮವೃತವಾಗಿದೆ. ಪೊರೆಯಂಥ ರೆಕ್ಕೆಗಳು, ಹಿಂದಿನ ರೆಕ್ಕೆಗಳು ದೊಡ್ಡವು, ಕೀಟ ವಿಶ್ರಾಂತಿಯಲ್ಲಿದ್ದಾಗ ಬೆನ್ನಿನಮೇಲೆ ಚಪ್ಪಟೆಯಾಗಿ ಕೂಡುತ್ತವೆ; ಉದರದ ಕೊನೆಯಲ್ಲಿ ಉದ್ದವಾದ ಸರ್ಸಿ ಎಳೆಗಳಿವೆ. ಅಪ್ಸರೆ ಕೀಟ ಜಲವಾಸಿ. ಇದಕ್ಕೆ ಉದ್ದವಾದ ಕುಡಿಮೀಸೆ, ಸರ್ಸಿಗಳಿವೆ. ಕಿವಿರುಗಳುಂಟು. ಉದಾಹರಣೆ: ಕಲ್ಲು ನೊಣ (ಸ್ಟೋನ್ ಫ್ಲೈ ಪೆರ್ಲಾ). (ಸಿಂಪೆಟ್ರಮ್ ಡ್ರಾಗನ್ ಫ್ಲೈ).

ಗಣ 8, **ಗ್ರಿಲ್ಲೋಬ್ಲಾಟಾಯ್ಡಿಯ:** ಇದಕ್ಕೆ ಸೇರಿದ ಕೀಟಗಳಿಗೆ ರೆಕ್ಕೆಗಳಿಲ್ಲ. ಕಣ್ಣುಗಳು ಸಾಮಾನ್ಯವಾಗಿ ಇಲ್ಲ; ಇದ್ದರೂ ಬಹಳ ಸಣ್ಣವು. ಕುಡಿಮೀಸೆ ಎಳೆಯಂತಿದೆ. ವದನಾಂಗಗಳು ಆಹಾರವನ್ನು ತುಂಡುಮಾಡಲು ಅನುಕೂಲವಾಗಿವೆ. ಕಾಲುಗಳೆಲ್ಲ ಒಂದೇ ಬಗೆಯವು. ಹೆಣ್ಣು ಕೀಟದಲ್ಲಿ ಬಾಹ್ಯ ಅಂಡೋಪಕರಣವಿದೆ. ಸರ್ಸಿ ಉದ್ದ, 8 ತುಂಡುಗಳಿವೆ.

ಗಣ 9, **ಅರ್ಥಾಪ್ಟಿರ:** ದೊಡ್ಡ ಅಥವಾ ಮಧ್ಯಮ ಗಾತ್ರದ ಕೀಟಗಳು. ರೆಕ್ಕೆಗಳು ಇರಬಹುದು ಅಥವಾ ಇಲ್ಲದಿರಬಹುದು. ಎದೆಯ ಮೊದಲ ಖಂಡ ದೊಡ್ಡದು; ಹಿಂದಿನ ಕಾಲುಗಳು ದೊಡ್ಡವು, ನೆಗೆಯಲು ಉಪಯುಕ್ತವಾಗಿವೆ. ಮುಂದಿನ ರೆಕ್ಕೆಗಳು ಸ್ವಲ್ಪ ದಪ್ಪವಾಗಿವೆ. ಹೆಣ್ಣು ಕೀಟಕ್ಕೆ ಬಾಹ್ಯ ಅಂಡೋಪಕರಣವಿದೆ. ಸರ್ಸಿಗಳು ಚಿಕ್ಕವು, ವಿಭಾಗವಾಗಿಲ್ಲ. ವಿಶೇಷ ಶ್ರವಣೇಂದ್ರಿಯ ಮತ್ತು ಶಬ್ದೋತ್ಪತ್ತಿ ಅಂಗಗಳುಂಟು. ರೂಪ ಪರಿವರ್ತನೆ ಅತ್ಯಲ್ಪ. ಕೀಟವರ್ಗದಲ್ಲೇ ಅತ್ಯಂತ ದೊಡ್ಡ ಸಮುದಾಯ ಇದು. ಉದಾಹರಣೆ: ಚಿಟ್ಟೆ, ಮಿಡತೆ, ಲೋಕಸ್ಟ್ ಮಿಡತೆ(ಶಿಸ್ಟೋ ಸೆರ್ಕಾ), ಚಿಮ್ಮಂಡೆ (ಕ್ರಿಕೆಟ್)(ಗ್ರಿಲ್ಲೋಟಾಲ್ಪಾ)

ಗಣ 10, **ಫಾಸ್ಮಿಡ:** ದೊಡ್ಡ ಗಾತ್ರದ ಕೀಟಗಳು, ದೇಹ ಉದ್ದ ಹಾಗೂ ತೆಳುವಾಗಿದೆ. ದೇಹದ ಆಕಾರ ಕೊಳವೆಯಂತೆ ಇಲ್ಲವೆ ಎಲೆಯಂತೆ. ಎದೆಯ ಮೊದಲ ಖಂಡ ಚಿಕ್ಕದು, ಎರಡನೆಯ ಮತ್ತು ಮೂರನೆಯ ಖಂಡಗಳು ಉದ್ದವಾಗಿವೆ. ಕಾಲುಗಳೆಲ್ಲ ಒಂದೇ ಬಗೆಯವು. ಸರ್ಸಿ ಕಿರಿದು; ಶ್ರವಣೇಂದ್ರಿಯಗಳಾಗಲಿ, ಶಬ್ದೋತ್ಪತ್ತಿ ಅಂಗಗಳಾಗಲಿ ಇಲ್ಲ. ಈ ಕೀಟಗಳು ಮೊಟ್ಟೆಗಳನ್ನು ಒಂಟೊಂಟಿಯಾಗಿ ಇಡುತ್ತವೆ. ಉದಾಹರಣೆ: ಕಡ್ಡಿಕೀಟ, (ಕಾರಾಸಿಯಸ್) ಎಲೆಕೀಟ (ಲೀಫ್ ಇನ್ಸೆಕ್ಟ್). (ಫಿಲ್ಲಿಯಂ)

ಗಣ 11, **ಡರ್ಮಾಪ್ಟಿರ:** ಇದರ ಕೀಟಗಳು ಬಲು ಉದ್ದವಾದುವು. ಇವುಗಳ ಮುಂದಿನ ರೆಕ್ಕೆಗಳು ಚಿಕ್ಕವು; ಚಕ್ಕಳದಂತಿವೆ. ಹಿಂದಿನ ರೆಕ್ಕೆಗಳು ಅರ್ಧಚಕ್ರಾಕಾರದವು, ತೆಳುವಾದ ಪೊರೆಯಂತಿವೆ; ರೆಕ್ಕೆ ಇಲ್ಲದಿರುವುದೇ ಸಾಮಾನ್ಯ; ಸರ್ಸಿಗಳು ಸಾಮಾನ್ಯವಾಗಿ ಗಡುಸಾದ ಚಿಮುಟದಂತಿವೆ; ಬಾಹ್ಯ ಅಂಡೋಪಕರಣ ಚಿಕ್ಕದು ಅಥವಾ ಇಲ್ಲವೇ ಇಲ್ಲ; ರೂಪಪರಿವರ್ತನೆ ಅತ್ಯಲ್ಪ ಅವಧಿಯದು ಅಥವಾ ಇಲ್ಲವೇ ಇಲ್ಲ. ಉದಾಹರಣೆ: ಕರ್ಣಕೀಟ. ಫಾರ್ಫಿಕ್ಯುಲಾ

ಗಣ 12, **ಎಂಬಿಯಾಪ್ಟಿರ:** ರೇಷ್ಮೆಯ ಸುರಂಗಗಳಲ್ಲಿ ವಾಸಿಸುವ ಈ ಕೀಟಗಳು ಸಾಮಾಜಿಕ ಜೀವಿಗಳು; ಮೊದಲನೆಯ ಕಾಲಿನ ಮೊದಲನೆಯ ಟಾರ್ಸಸ್ ತುಂಡು ಬಹಳ ದಪ್ಪ. ಹೆಣ್ಣಿಗೆ ರೆಕ್ಕೆಗಳಿಲ್ಲ. ಗಂಡಿನ ಎರಡು ರೆಕ್ಕೆಗಳೂ ಒಂದೇ ಸಮವಾಗಿವೆ. ಗಂಡಿನ ಸರ್ಸಿಗಳಲ್ಲಿ ಸಮಪಾರ್ಶ್ವತೆ ಇಲ್ಲ. ಹೆಣ್ಣುಕೀಟ ಆಕಾರದಲ್ಲಿ ಡಿಂಭದಂತಿದೆ; ರೂಪಪರಿವರ್ತನೆ ಗಂಡಿನಲ್ಲಿ ಅತ್ಯಲ್ಪ ಅವಧಿಯದು; ಹೆಣ್ಣಿನಲ್ಲಿ ಇಲ್ಲವೇ ಇಲ್ಲ.

ಗಣ 13, **ಡಿಕ್ಟಿಯಾಪ್ಟಿರ:** ಕುಡಿಮೀಸೆ ಅನೇಕ ಖಂಡಗಳುಳ್ಳ ಕೋಲಿನಂತಿದೆ. ಕಾಲುಗಳು ಒಂದೇ ಬಗೆಯವು ಅಥವಾ ಮುಂದಿನವು ಬೇಟೆ ಹಿಡಿಯಲು ಉಪಯುಕ್ತ; ಕಾಲಿನ ಕಾಕ್ಸ ದೊಡ್ಡದು, ಮುಂದಿನ ರೆಕ್ಕೆಗಳು ದಪ್ಪ. ಹೆಣ್ಣಿನ ಬಾಹ್ಯ ಅಂಡೋಪಕರಣ ಚಿಕ್ಕದು. ಗಂಡಿನ ಉದರದ 9ನೆಯ ಖಂಡಕ್ಕೆ ಒಂದು ಜೊತೆ ಸ್ಟೈಲ್ಸ್ ಎಂಬ ಉಪಾಂಗಗಳು ಅಂಟಿಕೊಂಡಿವೆ. ಸರ್ಸಿ ಅನೇಕ ತುಂಡುಗಳುಳ್ಳದ್ದು; ವಿಶೇಷ ಶಬ್ದೋತ್ಪತ್ತಿ ಅಂಗಗಳು, ಶ್ರವಣೇಂದ್ರಿಯಗಳು ಇಲ್ಲ. ಉದಾಹರಣೆ: ಜಿರಲೆ ಪೆರಿಪ್ಲಾನೇಟಾ ಮತ್ತು ಒಂಟೆಹುಳು. ಮ್ಯಾಂಟಿಸ್‌ರಿಲಿಜಿಯೋಸ

ಗಣ 14, **ಐಸಾಪ್ಟಿರ:** ಇವು ಸಾಮಾಜಿಕ ಮತ್ತು ರೂಪವೈವಿಧ್ಯವನ್ನು ತೋರುವ ಕೀಟಗಳು. ರೆಕ್ಕೆಗಳು ಒಂದೇ ಸಮವಾಗಿವೆ. ಅವು ಬಹಳ ಉದ್ದ ಮತ್ತು ಪೊರೆಯಂತಿವೆ, ಕೀಟ, ವಿಶ್ರಾಂತಿಯಲ್ಲಿದ್ದಾಗ ಬೆನ್ನಿನ ಮೇಲೆ ಒಂದರಮೇಲೆ ಒಂದು ಕೂಡುತ್ತವೆ. ಸುಲಭವಾಗಿ ಉದುರುವಂಥವು; ಸರ್ಸಿ ಬಹು ಕಿರಿದು; ರೂಪ ಪರಿವರ್ತನೆ ಅಲ್ಪಾವಧಿಯದು ಅಥವಾ ಇಲ್ಲವೇ ಇಲ್ಲ. ಉದಾಹರಣೆ: ಗೆದ್ದಲು–ಮೈಕ್ರೋಟರ್ಮಿಸ್ ಒಬೇಸಿ

ಗಣ 15, **ಜೋರಾಪ್ಟಿರ:** ರೆಕ್ಕೆಯುಳ್ಳ ಅಥವಾ ರೆಕ್ಕೆಯಿಲ್ಲದ ಕೀಟಗಳು ಈ ಗುಂಪಿಗೆ ಸೇರಿವೆ. ಕುಡಿಮೀಸೆ ಮಣಿಸರದಂತಿದ್ದು 9 ತುಂಡುಗಳಿಂದ ಕೂಡಿದೆ. ರೆಕ್ಕೆಗಳು ಸಾಮಾನ್ಯವಾಗಿ ಇಲ್ಲ. ಇದ್ದರೆ ತೊಟ್ಟಿನ ಹತ್ತಿರ ಸುಲಭವಾಗಿ ಕಳಚಿಕೊಳ್ಳಬಲ್ಲವು; ಎದೆಯ ಮೊದಲ ಖಂಡ ದೊಡ್ಡದು; ಬಾಹ್ಯ ಅಂಡೋಪಕರಣವಿಲ್ಲ; ರೂಪಪರಿವರ್ತನೆ ವಿರಳ.

ಗಣ 16, **ಸೋಕಾಪ್ಟಿರ:** 15–20 ತುಂಡುಗಳ ಎಳೆಯಂಥ ಕುಡಿಮೀಸೆಯುಳ್ಳ ಕೀಟಗಳು; ಎದೆಯ ಮೊದಲ ಖಂಡ ಕಿರಿದು; ಸರ್ಸಿ ಇಲ್ಲ ಉದಾಹರಣೆ: ಪುಸ್ತಕಹೇನು, ಧೂಳು ಹೇನು.

ಗಣ 17, **ಮ್ಯಾಲೊಫೇಗ:** ಇವಕ್ಕೆ ರೆಕ್ಕೆಗಳಿಲ್ಲ. ಇವು ಹಕ್ಕಿಗಳ (ವಿರಳವಾಗಿ ಚತುಷ್ಪಾದಗಳ) ಹೊರಮೈಮೇಲಿನ ಪರಾವಲಂಬಿ ಕೀಟಗಳು; ಕಣ್ಣುಗಳು ಸಣ್ಣವು. ಸರಳಅಕ್ಷಿಗಳಿಲ್ಲ; 3 ಅಥವಾ 5 ತುಂಡುಗಳ ಕುಡಿಮೀಸೆ, ತುಂಡರಿಸುವ ವದನಾಂಗಗಳು; ಎದೆಯ ಕೆಳಭಾಗದಲ್ಲಿನ ಶ್ವಾಸದ್ವಾರಗಳು ಇವುಗಳ ಮುಖ್ಯ ಲಕ್ಷಣಗಳು. ಇವು ರೆಕ್ಕೆ, ಕೂದಲುಗಳ ತುಣುಕುಗಳನ್ನೇ ತಿನ್ನುತ್ತವೆ. ಉದಾಹರಣೆ: ಪಕ್ಷಿಹೇನು. ಲಿಪ್ಯುರಸ್

ಗಣ 18, **ಸೈಫಂಕ್ಯುಲೇಟ** ಅಥವಾ **ಅನಾಪ್ಲೂರ:** ಚತುಷ್ಪಾದಿಗಳ ಹೊರಮೈಮೇಲೆ ಜೀವಿಸುವ ರೆಕ್ಕೆ ಇಲ್ಲದ, ಪರಾವಲಂಬಿ ಕೀಟಗಳು; ಕಣ್ಣುಗಳು ಚಿಕ್ಕವು ಅಥವಾ ಇಲ್ಲವೇ ಇಲ್ಲ; ಸರಳ ಅಕ್ಷಿಗಳಿಲ್ಲ; 3–5 ತುಂಡುಗಳ ಕುಡಿಮೀಸೆ; ವದನಾಂಗಗಳು ಚುಚ್ಚಿ ಹೀರುವುದಕ್ಕೆ ಮಾರ್ಪಾಟು ಹೊಂದಿವೆ; ಬೇಕಿಲ್ಲದಾಗ ಹಿಂದಕ್ಕೆ ತಲೆಯೊಳಗೆ ಸರಿಯುತ್ತವೆ. ಎದೆಯ ಶ್ವಾಸದ್ವಾರಗಳು ಮೇಲ್ಭಾಗದಲ್ಲಿವೆ; ಸರ್ಸಿ ಇಲ್ಲ; ರೂಪ ಪರಿವರ್ತನೆ ಇಲ್ಲ. ಉದಾಹರಣೆ: ಹೇನು *(ಪೆಡಿಕ್ಯುಲಸ್)* ಕೂರೆ.

ಗಣ 19, **ಹೆಮಿಪ್ಟಿರ ಅಥವಾ ರಿಂಕೋಟ:** ಸಾಮಾನ್ಯವಾಗಿ ಎರಡು ಜೊತೆ ರೆಕ್ಕೆಗಳುಂಟು. ಮುಂದಿನದು ಹಿಂದಿನದಕ್ಕಿಂತ (ಹೋಮಾಪ್ಟಿರದಲ್ಲಿ) ಸಂಪೂರ್ಣವಾಗಿ ಅಥವಾ (ಹೆಟಿರಾಪ್ಟಿರದಲ್ಲಿ) ತೊಟ್ಟಿನ ಸಮೀಪದಲ್ಲಿ ಮಾತ್ರ ಹೆಚ್ಚು ಗಡಸು; ವದನಾಂಗಗಳು ಚುಚ್ಚಿ, ಹೀರಲು ಉಪಯುಕ್ತವಾಗಿವೆ. ಕೆಳತುಟಿ ಮೇಲ್ಮುಖದಲ್ಲಿ ಕಾಲುವೆಯಂತಿರುವ ಒರೆಯಂತಿದೆ, ಮತ್ತು ಸೂಜಿಗಳಂತೆ ಮಾರ್ಪಾಡಾಗಿರುವ ದವಡೆ ಮ್ಯಾಕ್ಸಿಲಗಳಾದ ಎರಡು ಜೊತೆ ಮುಳ್ಳುಗಳು ಇದರೊಳಗೆ ಸೇರಿಕೊಳ್ಳುತ್ತವೆ; ರೂಪಪರಿವರ್ತನೆ ಅಪೂರ್ವವಾಗಿ

ಸಂಪೂರ್ಣ ಮಾದರಿಯದು. ಈ ಕೀಟಗಳು ಸಸ್ಯರಸಗಳನ್ನು ಹೀರಿ ಬಹಳ ನಷ್ಟಮಾಡುತ್ತವೆ. ಉದಾಹರಣೆ: ಸಸ್ಯತಿಗಣೆ, ಸಸ್ಯಹೇನು. ಏಫಿಸ್

ಗಣ 20, **ಥೈಸನಾಪ್ಟಿರ ಅಥವಾ ಫೈಸಾಪೊಡ**: ಅತ್ಯಂತ ಸಣ್ಣಕೀಟಗಳು. 6 ರಿಂದ 10 ತುಂಡುಳ್ಳ ಕುಡಿಮೀಸೆ ಉಂಟು; ವದನಾಂಗಗಳು ಚುಚ್ಚುವ ಮಾದರಿಯವು. ರೆಕ್ಕೆಗಳು ಇದ್ದರೆ ಸಣ್ಣಗಾತ್ರದವು; ಅಂಚಿನಲ್ಲಿ ಉದ್ದದ ಕೂದಲುಗಳಿವೆ. ಸರ್ಸಿ ಇಲ್ಲ; ರೂಪಪರಿವರ್ತನೆಯಲ್ಲಿ ಒಂದೆರಡು ಕೋಶಾವಸ್ಥೆಗಳುಂಟು. ಉದಾಹರಣೆ: ಥ್ರಿಪ್ಸ್ (ನುಸಿ ಕೀಟಗಳು)

ಗುಂಪು (ii), **ಎಂಡೋಟೆರಿಗೋಟ**: ರೂಪಪರಿವರ್ತನೆ ಜಟಿಲವಾಗಿದೆ. ಕೋಶಾವಸ್ಥೆ ಉಂಟು; ರೆಕ್ಕೆಗಳು ದೇಹದೊಳಗಿನಿಂದ ಮೂಡುತ್ತವೆ.

ಗಣ 21, **ನ್ಯೂರಾಪ್ಟಿರ**: ಸಣ್ಣದರಿಂದ ದೊಡ್ಡಗಾತ್ರದ ಮೆತುದೇಹದ ಕೀಟಗಳು. ಕುಡಿಮೀಸೆಗಳು ಉದ್ದವಾಗಿವೆ. ಎರಡು ಜೊತೆ ಒಂದೇ ಸಮನಾದ ಪೊರೆಯಂಥ ರೆಕ್ಕೆಗಳು, ವಿಶ್ರಾಂತಿಯಲ್ಲಿದ್ದಾಗ ಮೇಲ್ಛಾವಣಿಯಂತೆ ಮೈಮೇಲೆ ಕೂಡುವುವು; ಸರ್ಸಿ ಇಲ್ಲ; ಮರಿಹುಳು ಮಾಂಸಾಹಾರಿ, ತುಂಡರಿಸುವ ಅಥವಾ ಹೀರುವ ವದನಾಂಗಗಳುಳ್ಳದ್ದು. ನೀರಿನಲ್ಲಿ ವಾಸಿಸುವ ಡಿಂಭಗಳಲ್ಲಿ ಉದರ ಭಾಗದಲ್ಲಿ ಕಿವಿರುಗಳಿವೆ. ಉದಾಹರಣೆ: *ಲೇಸ್‌ವಿಂಗ್ಸ್* ಮತ್ತು *ಮಿರ್ಮಿಲಿಯಾನ್* (ಆಂಟ್‌ಲಯನ್).

ಗಣ 22, **ಮೀಕಾಪ್ಟಿರ:** ಸಣ್ಣ ಅಥವಾ ಮಧ್ಯಮ ಗಾತ್ರದ ಮಾಂಸಾಹಾರಿ ಕೀಟಗಳು; ಉದ್ದನೆಯ ಎಳೆಯಂಥ ಕುಡಿಮೀಸೆಗಳಿವೆ; ತಲೆಯ ಮುಂಭಾಗ ಕೊಕ್ಕಿನಂತೆ ಚಾಚಿಕೊಂಡಿದೆ; ತುಂಡರಿಸುವ ವದನಾಂಗಗಳು; ಕಾಲುಗಳು ಉದ್ದ, ತೆಳು; ರೆಕ್ಕೆಗಳು ಒಂದೇ ಸಮ; ಪೊರೆಯಂತಿವೆ, ಕೀಟ ವಿಶ್ರಾಂತಿಯಲ್ಲಿದ್ದಾಗ ಚಪ್ಪಟೆಯಾಗಿ ಕೂಡುತ್ತವೆ; ಉದರ ಉದ್ದ; ಸರ್ಸಿ ಕಿರಿದು; ಗಂಡಿನ ಬಾಹ್ಯ ಜನನಾಂಗಗಳು ಎದ್ದುಕಾಣುತ್ತವೆ; ಡಿಂಭಗಳಿಗೆ 3 ಜೊತೆ ಎದೆಭಾಗದ ಕಾಲುಗಳಿವೆ. ಉದರಭಾಗದಲ್ಲಿ ಕಾಲುಗಳಿರಬಹುದು; ವದನಾಂಗಗಳು ಕಡಿಯುವ ಮಾದರಿಯವು.

ಗಣ 23, **ಲೆಪಿಡಾಪ್ಟಿರ**; ಈ ಗಣದ ಕೀಟಗಳಿಗೆ ಎರಡು ಜೊತೆ ಪೊರೆಯಂಥ ರೆಕ್ಕೆಗಳಿವೆ. ರೆಕ್ಕೆಗಳಲ್ಲಿ ಅಡ್ಡನರಗಳು ಕಡಿಮೆ. ಮೈ ಮತ್ತು ರೆಕ್ಕೆ ಉಪಾಂಗಗಳ ಮೇಲೆಲ್ಲ ಶಲ್ಕಗಳಿವೆ. ದವಡೆಗಳು ಇಲ್ಲದಿರಬಹುದು. ಇದ್ದರೂ ಕ್ಷೀಣಿಸಿವೆ. ಇದರಿಂದ ಮಾಕ್ಸಿಲಗಳು ರಸ ಹೀರಬಲ್ಲ ಸೊಂಡಿಲಾಗಿ ಮಾರ್ಪಾಡಾಗಿವೆ. ಡಿಂಭಗಳ ದೇಹ ನಿರ್ದಿಷ್ಟವಾದ ಖಂಡಗಳಾಗಿ ವಿಭಾಗವಾಗಿದೆ. ದೇಹದ ಪಕ್ಕಗಳಲ್ಲಿ ಸಾಲಾಗಿ ಶ್ವಾಸದ್ವಾರಗಳಿವೆ. ಕಾಲುಗಳು 8 ಜೊತೆ. ಉದಾಹರಣೆ: ಚಿಟ್ಟೆ (ಬಟರ್‌ಫ್ಲೈ), ಪತಂಗ (ಮಾತ್).

ಗಣ 24, **ಟ್ರೈಕಾಪ್ಟಿರ**: ಪತಂಗಗಳನ್ನು ಹೋಲುವ, ಸಣ್ಣದರಿಂದ ಮಧ್ಯಮ ಗಾತ್ರದ, ರೋಮಾವೃತವಾದ ಕುಡಿಮೀಸೆಗಳುಳ್ಳ ಕೀಟಗಳ ಗುಂಪು. ದವಡೆಗಳು ಸಾಮಾನ್ಯವಾಗಿ ಇಲ್ಲ. ಇದ್ದರೂ ಕ್ಷೀಣಿಸಿವೆ. ರೆಕ್ಕೆಗಳು ಪೊರೆಯಂತಿದ್ದು ದಟ್ಟವಾದ ಕೂದಲುಗಳಿಂದ ಕೂಡಿವೆ ಮತ್ತು ವಿಶ್ರಾಂತಿಯಲ್ಲಿ ಮೇಲ್ಛಾವಣಿಯಂತೆ ಬೆನ್ನಿನ ಮೇಲೆ ಕೂಡುತ್ತವೆ; ಮುಂದಿನ ರೆಕ್ಕೆಗಳು ಉದ್ದ, ಹಿಂದಿನ ರೆಕ್ಕೆಗಳು ಅಗಲ. ಡಿಂಭಗಳು ಜಲವಾಸಿಗಳು. ಇವುಗಳ ದೇಹದ ಖಂಡಗಳು ನಿರ್ದಿಷ್ಟವಾಗಿ ವಿಭಾಗಿಸಲ್ಪಟ್ಟಿವೆ; ಮತ್ತು ದೇಹದ ಹಿಂದಿನ ತುದಿಯಲ್ಲಿ ಕೊಕ್ಕೆಯುಳ್ಳ ಉಪಾಂಗಗಳಿವೆ; ಉದಾಹರಣೆ: ಕ್ಯಾಡಿಸ್ ನೊಣ.

ಗಣ 25, **ಡಿಪ್ಟಿರ:** ಒಂದೇ ಜೊತೆ ಪೊರೆಯಂಥ ರೆಕ್ಕೆಯುಳ್ಳ ಕೀಟಗಳು ಇವು. ಹಿಂದಿನ ಜೊತೆ ರೆಕ್ಕೆಗಳು ಗುಬುಟಾಕಾರದ ಸಮತೋಲನಾಂಗಗಳಾಗಿ ಪರಿವರ್ತನೆಯಾಗಿವೆ. ವದನಾಂಗಗಳು ರಸರೂಪದ ಆಹಾರವನ್ನು ಹೀರುವುದಕ್ಕೆ ಉಪಯುಕ್ತವಾಗಿವೆ. ಕೆಲವು ವೇಳೆ ಸೊಂಡಿಲಿನಂತೆಯೂ ಕೆಲವು ಕೀಟಗಳಲ್ಲಿ ಚುಚ್ಚುವುದಕ್ಕೂ ಹೊಂದಿಕೊಂಡಿವೆ; ದವಡೆಗಳು ಅಪೂರ್ವ. ಕೆಳತುಟಿ ಒಂದು ಜೊತೆ ದಪ್ಪನಾದ ಹಾಲೆಗಳಂತಿರುವುದುಂಟು; ಎದೆಯ ಮೊದಲ ಮತ್ತು ಮೂರನೆಯ ಖಂಡಗಳು ಚಿಕ್ಕವು ಮತ್ತು ಮಧ್ಯದ ಖಂಡದೊಡನೆ ಅಂಟಿಕೊಂಡಿವೆ. ರೂಪಪರಿವರ್ತನೆ ಸಂಪೂರ್ಣ; ಡಿಂಭದ ದೇಹ ನಿರ್ದಿಷ್ಟವಾದ ಖಂಡಗಳಾಗಿ ವಿಭಾಗವಾಗಿದೆ; ಕಾಲುಗಳಿಲ್ಲ, ತಲೆ ಕಿರಿದು, ಒಳಗೆ ಎಳೆದುಕೊಳ್ಳಲ್ಪಟ್ಟಿದೆ; ಉದಾಹರಣೆ: ನೊಣ, ಸೊಳ್ಳೆ ಇತ್ಯಾದಿ.

ಗಣ 26, **ಸೈಫನಾಪ್ಟಿರ** ಅಥವಾ **ಏಫ್ಯಾನಿಪ್ಟಿರ**: ಸಣ್ಣ ಗಾತ್ರದ, ರೆಕ್ಕೆಗಳಿಲ್ಲದ, ಪಕ್ಕದಿಂದ ಪಕ್ಕಕ್ಕೆ ಅದುಮಿದ ದೇಹವುಳ್ಳ ಕೀಟಗಳು; ಸಂಯುಕ್ತಾಕ್ಷಿಗಳಿಲ್ಲ, 2 ಸರಳ ಅಕ್ಷಿಗಳಿವೆ; ಕುಡಿಮೀಸೆಗಳು ಸಣ್ಣಗಾತ್ರದವು ಮತ್ತು ದಪ್ಪ; ವದನಾಂಗಗಳು ಚುಚ್ಚುವುದಕ್ಕೂ ಹೀರುವುದಕ್ಕೂ ಉಪಯುಕ್ತ; ಡಿಂಭಗಳು ಉದ್ದ; ಅವುಗಳ ದೇಹದ ಖಂಡಗಳು ನಿರ್ದಿಷ್ಟವಾಗಿ ಬಿಡಿಸಲ್ಪಟ್ಟಿವೆ. ಕಾಲುಗಳಿಲ್ಲ; ಕೋಶಾವಸ್ಥೆಯನ್ನು ಗೂಡುಗಳಲ್ಲಿ ಕಳೆಯುತ್ತವೆ. ಈ ಕೀಟಗಳು ಪ್ರೌಢಾವಸ್ಥೆಯಲ್ಲಿ ಬಿಸಿರಕ್ತದ ಪ್ರಾಣಿಗಳ ಮೈಮೇಲೆ ಪರಾವಲಂಬಿಗಳಾಗಿ ಜೀವಿಸುತ್ತವೆ. ಉದಾಹರಣೆ: ಚಿಗಟ(ಫ್ಲೀ)–ಕ್ಸೆನೋಪ್ಸಿಲ್ಲಾ

ಗಣ 27, **ಹೈಮೆನಾಪ್ಟಿರ**: ಈ ಗಣದ ಕೀಟಗಳಿಗೆ ಎರಡು ಜೊತೆ ಪೊರೆಯಂಥ ರೆಕ್ಕೆಗಳಿವೆ. ಹಿಂದಿನ ರೆಕ್ಕೆ ಮುಂದಿನದಕ್ಕಿಂತ ಚಿಕ್ಕದು, ಸಣ್ಣ ಕೊಕ್ಕೆಗಳಿಂದ ಎರಡು ರೆಕ್ಕೆಗಳೂ ಸೇರಿಕೊಂಡಿವೆ; ವದನಾಂಗಗಳು ತುಂಡರಿಸುವುದಕ್ಕೂ ಅನೇಕ ವೇಳೆ ನೆಕ್ಕುವುದಕ್ಕೂ ಹೀರುವುದಕ್ಕೂ ಅನುಕೂಲವಾಗಿವೆ. ಉದರ ಕಿರಿದಾಗಿದೆ. ಅದರ ಮೊದಲ ಖಂಡ ಎದೆಯ ಮೂರನೆಯ ಖಂಡದೊಡನೆ ಕೂಡಿಕೊಂಡಿರುವುದುಂಟು; ಬಾಹ್ಯ ಅಂಡೋಪಕರಣ ಉಂಟು ಮತ್ತು ಅದು ಗರಗಸದಾಕಾರದಲ್ಲಿದ್ದು ಕುಯ್ಯುವುದಕ್ಕೆ ಚುಚ್ಚುವುದಕ್ಕೆ ಅಥವಾ ಕುಟುಕುವುದಕ್ಕೆ ಮಾರ್ಪಾಡು ಹೊಂದಿರಬಹುದು; ರೂಪಪರಿವರ್ತನೆ ಸಂಪೂರ್ಣ; ಡಿಂಭ ಸಾಮಾನ್ಯವಾಗಿ ಕಾಲಿಲ್ಲದ್ದು, ಅಪರೂಪವಾಗಿ ಕಾಲುಗಳಿರಬಹುದು; ಕೋಶಾವಸ್ಥೆ ಗೂಡಿನಲ್ಲೇ ನಡೆಯುವುದು ಸ್ವಾಭಾವಿಕ ಲಕ್ಷಣ. ಈ ಗಣ ಕೀಟವರ್ಗದಲ್ಲಿ ಅತ್ಯಂತ ಉನ್ನತ ಸ್ಥಾನಗಳಿಸಿರುವ ದೊಡ್ಡ ಗಣ. ಉದಾಹರಣೆ: ಇರುವೆ, ಜೇನು, ಕಣಜ, ಗರಗಸ ನೊಣ, ಬಡಗಿ ಜೇನು.

ಗಣ 28, **ಕೋಲಿಯಾಪ್ಟಿರ**: ಸಣ್ಣದರಿಂದ ದೊಡ್ಡ ಗಾತ್ರದ ಕೀಟಗಳು; ಮುಂದಿನ ರೆಕ್ಕೆಗಳು ಚಕ್ಕಳದಂತೆ ಗಡಸು ಮತ್ತು ಕೀಟ ವಿಶ್ರಾಂತ ಸ್ಥಿತಿಯಲ್ಲಿದ್ದಾಗ ಬೆನ್ನಿನ ಮೇಲಿನ ನಡುರೇಖೆಯಲ್ಲಿ ಎರಡೂ ಕೂಡಿಕೊಳ್ಳುತ್ತವೆ. ಕೆಳರೆಕ್ಕೆಗಳು ಪೊರೆಯಂತಿದ್ದು, ಮೇಲಿನ ರೆಕ್ಕೆಯ (ಎಲಿಟ್ರ) ಕೆಳಗೆ ಮಡಿಚಿಕೊಂಡಿವೆ. ಕೆಲವೊಮ್ಮೆ ಕೆಳಗಿನ ರೆಕ್ಕೆಗಳು ಇಲ್ಲದಿರಬಹುದು. ಎದೆಯ ಮೊದಲ ಖಂಡ ದೊಡ್ಡದು, ಎರಡನೆಯ ಖಂಡ ಬಹಳ ಕಿರುದು: ರೂಪರಿವರ್ತನೆ ಸಂಪೂರ್ಣ; ಡಿಂಭಗಳಿಗೆ ಅಪೂರ್ವವಾಗಿ ಕಾಲುಗಳಿಲ್ಲ; ಪ್ರಾಣಿ ಸಾಮ್ರಾಜ್ಯದಲ್ಲೇ ಅತ್ಯಂತ ದೊಡ್ಡ ವರ್ಗವಿದು; ಇದುವರೆಗೆ 2,20,000ಕ್ಕೂ ಹೆಚ್ಚು ಪ್ರಭೇದಗಳನ್ನು ವಿವರಿಸಲಾಗಿದೆ. ಉದಾ: ಜೀರುಂಡೆ, ದುಂಬಿ, ಚಿಪ್ಪಿನಕೀಟ, ಸೊಂಡಿಲು ಕೀಟ.

ಗಣ 29, **ಸ್ಟ್ರೆಪ್ಸಿಪ್ಟಿರ**: ಆತಿಥೇಯ ಪ್ರಾಣಿಯ ದೇಹದೊಳಗೆ ವಾಸಿಸುವ ಸೂಕ್ಷ್ಮಗಾತ್ರದ ಪರಾವಲಂಬಿಗಳು. ಗಂಡು ಮಾತ್ರ ಸ್ವತಂತ್ರ ಜೀವಿ. ಕುಡಿಮೀಸೆಗಳು ದಪ್ಪಗಿದ್ದು ಸ್ಪಷ್ಟವಾಗಿವೆ. ಮುಂದಿನ ರೆಕ್ಕೆಗಳು ಸಣ್ಣವು; ಅವುಗಳ ಆಕಾರ ದೊಣ್ಣೆಯಂತೆ. ಹಿಂದಿನ ರೆಕ್ಕೆಗಳು ದೊಡ್ಡವು ಮತ್ತು ಅವುಗಳ ಆಕಾರ ಬೀಸಣಿಗೆಯಂತೆ. ಹೆಣ್ಣು ಕೀಟ ಸಾಧಾರಣವಾಗಿ ತನ್ನ ಹೊರಚರ್ಮದ ಗೂಡಿನಲ್ಲಿ ಸೇರಿಕೊಂಡು, ಆತಿಥೇಯ ಪ್ರಾಣಿಯ ದೇಹದೊಳಗೆ ವಾಸಿಸುತ್ತದೆ. ಕೆಲವು ಪ್ರಭೇದಗಳಲ್ಲಿ ಹೆಣ್ಣು ಕೀಟಗಳು ಆತಿಥೇಯ ಪ್ರಾಣಿಯನ್ನು ಬಿಟ್ಟು ಹೊರಬರುತ್ತವೆ; ಬೆಳೆವಣಿಗೆಯಲ್ಲಿ ಒಂದಕ್ಕಿಂತ ಹೆಚ್ಚು ರೂಪದ ಡಿಂಭಗಳುಂಟು. ಈ ಗಣದ ನಿರ್ದಿಷ್ಟವಾದ ಸ್ಥಾನ ಖಚಿತವಾಗಿ ನಿರ್ಧರಿಸಲ್ಪಟ್ಟಿಲ್ಲ; ಕೆಲವು ವಿಜ್ಞಾನಿಗಳು ಇದನ್ನು ಕೋಲಿಯಾಪ್ಟಿರ ಗಣದಲ್ಲಿ ಸೇರಿಸುತ್ತಾರೆ. (ಡಿ.ಎಸ್.)

**ಕೀಟದಂಶನ :** ಕೀಟಗಳು ಮನುಷ್ಯನನ್ನು ಕಡಿಯುವುದರಿಂದ ಆಗುವ ಕೆಲವು ದುಷ್ಪರಿಣಾಮಗಳೆಂದರೆ ಇಲ್ಲಿ ಚರ್ಚಿಸಿದೆ. ಕೀಟ ಕಡಿದಲ್ಲಿ ತುರಿಕೆ ಉಂಟಾಗಬಹುದು; ಹೆಚ್ಚು ನಂಜೇರಿದರೆ ಬಾವು ಏಳಬಹುದು; ಕೆಲವು ಕೀಟಗಳು ಕಡಿದಾಗಲಂತೂ ಪ್ರಾಣಾಪಾಯವೇ ಆಗಬಹುದು. ಕುದುರೆ ನೊಣಗಳು ಕಚ್ಚಿದಾಗ ಅಂತ್ರಾಕ್ಸ್ ಎಂಬ ಕಾಯಿಲೆ ಬರುತ್ತದೆ. ಕೆಲವು ವಿಶಿಷ್ಟ ಜಾತಿಯ ಸೊಳ್ಳೆಗಳು ಕಡಿದಾಗ ಸ್ಟ್ರೆಪ್ಟೋಕಾಕಲ್ ವಿಷಾಣುಗಳಿಂದ ನಂಜುಂಟಾಗಬಹುದು. ಚಿಗಟ ಕಡಿಯುವುದರಿಂದ ಪ್ಲೇಗ್, ಸೊಳ್ಳೆ ಕಡಿಯುವುದರಿಂದ ಮಲೇರಿಯ, ಆನೆಕಾಲಿನ ರೋಗ ಮುಂತಾದ ರೋಗಗಳು ಬರುತ್ತವೆ. ಅನೇಕ ನಿರ್ದಿಷ್ಟವಾದ ಕಾಯಿಲೆಗಳ ಉಗಮವನ್ನು ಕೀಟದಂಶನದಲ್ಲಿ ಗುರುತಿಸಬಹುದು. ತುಲಾರೀಮಿಯಾ, ರಿಕೆಟ್ಸಿಯಲ್ ಜ್ವರ, ಟೈಫಾಯಿಡ್, ಡೆಂಗು ಜ್ವರ, ಹಳದಿ ಜ್ವರ, ಕಪ್ಪು ಜ್ವರ ಮುಂತಾದ ರೋಗಗಳು ಕೀಟದಂಶನದಿಂದಲೇ ಬರುವಂಥವು.

ಕೀಟ ಕಡಿದ ಸ್ಥಳದಲ್ಲಿ ವಿಷ ಸೇರಿ ರಕ್ತ ಕಣಗಳು ಹಾಳಾಗಬಹುದು. ನರಗಳಿಗೆ ವಿಷವೇರಬಹುದು, ಇಲ್ಲವೇ ಆ ಸ್ಥಳದಲ್ಲಿ ಒಂದು ವಿಧವಾದ ವೇದನೆಯುಂಟಾಗಬಹುದು. ಆ ಭಾಗದಲ್ಲಿ ಉರಿಯೂತ ಕಾಣಿಸಿಕೊಳ್ಳುತ್ತದೆ. ಚರ್ಮ ಉಬ್ಬಿಕೊಳ್ಳುತ್ತದೆ. ಸೂಕ್ಷ್ಮತೆಗೆ ಪ್ರತಿಕ್ರಿಯೆಯುಂಟಾಗುತ್ತದೆ. ದುಂಬಿ, ಕಣಜ, ದೊಡ್ಡ ಕಣಜಗಳು ಕಡಿದಾಗ ತುಂಬ ನೋವಾಗುತ್ತದೆ. ನಾಲಗೆ ಮತ್ತು ಗಂಟಲಲ್ಲಿ ಕಚ್ಚಿದರೆ ಅಲ್ಲಿ ಊದಿಕೊಂಡು ಉಸಿರಾಡುವುದೇ ಕಷ್ಟವಾಗುತ್ತದೆ. ಧ್ವನಿಪೆಟ್ಟಿಗೆಗೆ ಕಚ್ಚಿದರೆ ಶ್ವಾಸನಾಳ ದ್ವಾರ ದಪ್ಪವಾಗಿ ಪ್ರಾಣವೇ ಹೋಗಬಹುದು. ಬಲು ಕೋಮಲ ಜೀವಿಗಳಿಗೆ ದುಂಬಿಗಳು ಅಥವಾ ಕಣಜಗಳು ಕಡಿದಾಗ ರಕ್ತದ ಒತ್ತಡ ಇಳಿದು ರಕ್ತನಾಳಗಳು ವಿಕಾಸಗೊಂಡು ರಕ್ತಚಲನೆಗೆ ತೊಂದರೆಯಾಗಿ ಜ್ಞಾನತಪ್ಪಿಹೋಗುತ್ತದೆ. ಇಂಥವರು ಕೇವಲ ಕೆಲವೇ ಮಿನಿಟುಗಳೊಳಗಾಗಿ ಸಾಯುವುದು ಉಂಟು.

ಕೀಟದಂಶನದಿಂದ ಒದಗುವ ವಿವಿಧ ವಿಕಾರಗಳಿಗೆ ಯುಕ್ತ ಔಷಧೋಪಚಾರ ತತ್‌ಕ್ಷಣ ನಡೆಯಬೇಕು. ಜಂತು ಚಿಕ್ಕದು ಎಂದಮಾತ್ರಕ್ಕೆ ಅದರಿಂದ ಒದಗುವ ಕಿರುಕುಳ, ಹಾನಿ ಕಡಿಮೆ ಪ್ರಮಾಣದ್ದೇ ಆಗಿರಬೇಕಾಗಿಲ್ಲ. (ಎ.ಎನ್.ಎ.)

**ಕೀಟನಾಶಕಗಳು :** ಪೈರುಗಳಿಗೆ ಹಾನಿಕಾರಕವಾದ, ಜನಜೀವನಕ್ಕೆ ಉಪದ್ರವಕಾರಿಯಾದ ಕೀಟಗಳ ನಿರ್ಮೂಲನಕ್ಕೆ ಬಳಸುವ ರಾಸಾಯನಿಕಗಳು (ಇನ್‌ಸೆಕ್ಟಿಸೈಡ್ಸ್). ಈ ರಾಸಾಯನಿಕಗಳ ಪ್ರಭಾವಕ್ಕೆ ಒಳಗಾದ ಕೀಟಗಳ ಜೈವಿಕ ಕ್ರಿಯೆಗಳು ಏರುಪೇರಾಗಿ ಅವು ಸಾಯುವುವು.

ಕೀಟನಾಶಕಗಳು ಸಾವಯವ ಅಥವಾ ನಿರವಯವ ವಸ್ತುಗಳಾಗಿರಬಹುದು. ಬಹುಪಾಲು ಕೀಟನಾಶಕಗಳು ಸಂಯೋಜಿತವಾದವು. ಅವುಗಳ ಕಾರ್ಯವಿಧಾನಕ್ಕೆ ಅನುಗುಣವಾಗಿ ಕೀಟನಾಶಕಗಳನ್ನು ಮುಂದೆ ಸೂಚಿಸಿರುವಂತೆ ವಿಂಗಡಿಸುವುದು ವಾಡಿಕೆ.

**1. ಜಠರ ವಿಷಗಳು:** ಗಿಡಗಳಿಗೆ ಇವನ್ನು ಸಿಂಪಡಿಸಲಾಗುವುದು. ಎಲೆಗಳನ್ನು ಅಗಿದು ತಿನ್ನುವ ಕೀಟಗಳಿಗೆ ಇವು ಮಾರಕವಾಗುವುವು. ಕ್ಯಾಲ್ಸಿಯಂ ಮತ್ತು ಸೀಸದ ಆರ್ಸಿನೇಟುಗಳು, ಪ್ಯಾರಿಸ್ ಗ್ರೀನ್ ಇವುಗಳಲ್ಲಿ ಮುಖ್ಯವಾದವು.

**2. ಸಂಪರ್ಕ ವಿಷಗಳು:** ಕೀಟಗಳ ಮೇಲೆಯೇ ಇವನ್ನು ಪ್ರಯೋಗಿಸುವರು. ಎಲೆಗಳನ್ನು ಕೊರೆದು ದ್ರವರೂಪದ ಆಹಾರವನ್ನು ಹೀರುವ ಜಾತಿಗೆ ಸೇರಿದ ಕೀಟಗಳು ಇವುಗಳಿಂದ ಸಾಯುವುವು. ಸುಣ್ಣ–ಗಂಧಕ ಮಿಶ್ರಣ, ನಿಕೊಟಿನ್ ದೂಳು, ಸೀಮೆಎಣ್ಣೆಯ ಎಮಲ್ಷನ್‌ಗಳು ಈ ಗುಂಪಿಗೆ ಸೇರಿದ ವಸ್ತುಗಳು.

**3. ಉಳಿವ ಕೀಟನಾಶಕಗಳು:** ಇವನ್ನು ತುಂತುರು ರೂಪದಲ್ಲಿ ಗಿಡದ ಹೊರಮೈ ಮೇಲೆ ಹರಡಲಾಗುವುದು. ಇವುಗಳ ಸಂಪರ್ಕಕ್ಕೆ ಬಂದ ಕ್ಷಣವೇ ಮಾರಕಪ್ರಮಾಣದ ವಿಷ ಕೀಟಕ್ಕೆ ತಗಲುವುದು.

**4. ವ್ಯಾಪಕ ಕೀಟನಾಶಕಗಳು:** ಸಸ್ಯಾದ್ಯಂತ ಇವು ವ್ಯಾಪಿಸಿದ್ದು ಸಸ್ಯದ ಯಾವ ಭಾಗವನ್ನು ತಿಂದರೂ ಕೀಟ ಸಾಯುವುದು.

**5. ಕೀಟನಾಶಕ ಧೂಮಗಳು:** ಉಗ್ರಾಣಗಳಲ್ಲಿ ಕೂಡಿಟ್ಟ ಧಾನ್ಯಗಳ ಸಂರಕ್ಷಣೆಗೆ ಮತ್ತು ಸಿಂಪಡಿಸುವ ವಿಧಾನದಿಂದ ನಾಶಪಡಿಸಲು ಸಾಧ್ಯವಾಗದ ಕೊರೆಯುವ ಕೀಟಗಳ ನಿವಾರಣೆಗೆ ಇವು ಸಹಾಯಕಾರಿ. ಅನಿಲರೂಪದಲ್ಲಿ ಅಥವಾ ಸುಲಭವಾಗಿ ಅನಿಲಸ್ಥಿತಿ ತಳೆಯುವ ದ್ರವರೂಪದಲ್ಲಿ ಬಳಸಿದಾಗ ಇವು ಕೀಟಗಳ ಉಸಿರಿನೊಡನೆ ಬೆರೆತು ಅವುಗಳ ದೇಹಗತವಾಗಿ ಕೊಲ್ಲುವುವು. ಇಂಗಾಲದ ಡೈಸಲ್ಫೈಡ್ ($CS_2$). ಹೈಡ್ರೊಜನ್ ಸಯನೈಡ್ ($HCN$), ಈಥೈಲ್ ಅಸಿಟೇಟ್ ($CH_3.CO.O.C_2H_5$) ಮತ್ತು ಇಂಗಾಲದ ಟೆಟ್ರಕ್ಲೋರೈಡುಗಳ ಮಿಶ್ರಣ ಈ ವರ್ಗಕ್ಕೆ ಸೇರಿದ ರಾಸಾಯನಿಕಗಳು.

**6. ಆಕರ್ಷಕಗಳು:** ಆಹಾರಾಂಶವಿರುವ ಸಸ್ಯಭಾಗಗಳನ್ನು ಕೊರೆದು ತಮ್ಮೆಡೆಗೆ ಬರುವಂತೆ ಕೀಟಗಳನ್ನು ಆಕರ್ಷಿಸುವ ಶಕ್ತಿಯಿರುವ ರಾಸಾಯನಿಕಗಳಿವು.

**7. ವಿಕರ್ಷಕಗಳು:** ಕೀಟಗಳು ಸಸ್ಯಗಳ ಬಳಿ ಸುಳಿಯದಂತೆ ಹಿಮ್ಮೆಟ್ಟಿಸುವ ವಸ್ತುಗಳು.

ಮೇಲ್ಕಂಡ ವಿಧಾನಗಳಲ್ಲಿ ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಕಾರ್ಯ ನಿರ್ವಹಿಸುವ ಕೀಟನಾಶಕಗಳು ಇರುವುದರಿಂದ, ಇದನ್ನು ಕಟ್ಟುನಿಟ್ಟಾದ ವರ್ಗೀಕರಣ ಎನ್ನಲುಬಾರದು. ಈಗ ಮುಖ್ಯ ಕೀಟನಾಶಕ ವರ್ಗಗಳ ವೈಶಿಷ್ಟ್ಯವನ್ನು ವಿವೇಚಿಸಲಾಗುವುದು.

**ಜಠರ ವಿಷಗಳು :** ಬಹುತೇಕ ಇವು ಆರ್ಸೆನಿಕ್ ಸಂಯುಕ್ತಗಳು. ಸೀಸದ ಆರ್ಸಿನೇಟ್, ಕ್ಯಾಲ್ಸಿಯಂ ಆರ್ಸಿನೇಟ್ ಮತ್ತು ಪ್ಯಾರಿಸ್ ಗ್ರೀನ್ ಇವುಗಳಲ್ಲಿ ಮುಖ್ಯವಾದವು. ಇವುಗಳ ತಯಾರಿಕೆಗೆ ಆರ್ಸೆನಿಕ್ ಟ್ರೈಆಕ್ಸೈಡ್ ಅಗತ್ಯ. ತಾಮ್ರ ಮತ್ತು ಸೀಸದ ಅದುರುಗಳನ್ನು ಸಂಸ್ಕರಿಸುವಾಗ ಹೊರಬೀಳುವ ಧೂಮದಲ್ಲಿ ಆರ್ಸೆನಿಕ್ ಟ್ರೈಆಕ್ಸೈಡ್ ($As_2O_3$) ಇರುತ್ತದೆ. ಇದನ್ನು ಕೋಶಗಳಲ್ಲಿ ಸಂಗ್ರಹಿಸುವರು. ದಾರುಣ ವಿಷವಾದುದರಿಂದ ಕಾರ್ಖಾನೆಯ ಹೊಗೆಯನ್ನು ಇದರಿಂದ ಪಾರು ಮಾಡಲೇಬೇಕೆಂಬ ನಿಯಮವಿದೆ. ಹೀಗಾಗಿ ಆರ್ಸೆನಿಕ್ ಟ್ರೈಆಕ್ಸೈಡ್ ಅನಿವಾರ್ಯವಾಗಿ ಲಭಿಸುವುದು ಒಂದು ಅನುಕೂಲವೇ. ಇದಕ್ಕಾಗಿ ಕಾಟ್ರೆಲ್ ವಿದ್ಯುತ್ ಒತ್ತರಕಾರಕವನ್ನು ಉಪಯೋಗಿಸುತ್ತಾರೆ. ತಾಮ್ರದ ಉತ್ಪಾದನೆಯ ಕಾಲದಲ್ಲಿ ಹುಟ್ಟುವ ಆರ್ಸೆನಿಕ್ ಟ್ರೈಆಕ್ಸೈಡಿನ ವಾರ್ಷಿಕ ಪ್ರಮಾಣ ಸುಮಾರು ಶೇ. 90 ಭಾಗ ಆರ್ಸೆನಿಕ್‌ಯುಕ್ತ ಕೀಟನಾಶಕಗಳನ್ನು ತಯಾರಿಸಲು ವಿನಿಯೋಗವಾಗುವುದು.

ಹೀಗೆ ಉಪವಸ್ತುವಾಗಿ ಒದಗಿದ ಆರ್ಸೆನಿಕ್ ಟ್ರೈಆಕ್ಸೈಡನ್ನು ಸೋಡಿಯಂ ಆರ್ಸಿನೇಟ್ ($Na_2HAsO_4$) ಆಗುತ್ತದೆ. ಇದನ್ನು ದ್ರಾವಣ ಮಾಡಿಕೊಂಡು ಸೀಸದ ಮತ್ತು ಕ್ಯಾಲ್ಸಿಯಂ ಆರ್ಸಿನೇಟುಗಳನ್ನು ತಯಾರಿಸಬಹುದು. ಮತ್ತೊಂದು ವಿಧಾನದಲ್ಲಿ ಆರ್ಸೆನಿಕ್ ಟ್ರೈಆಕ್ಸೈಡಿನ ದ್ರಾವಣಕ್ಕೆ ಕ್ಲೋರಿನ್ ಹಾಯಿಸಿ ಕಾಯಿಸುವರು. ಕ್ರಿಯೆಯಲ್ಲಿ ಉತ್ಪತ್ತಿಯಾದ ಹೈಡ್ರೋಕ್ಲೋರಿಕ್ ಆಮ್ಲವನ್ನು ಹೊರದೂಡುವುದು ಇದರ ಉದ್ದೇಶ. ಅನಂತರ ನೈಟ್ರಿಕ್ ಆಮ್ಲವನ್ನು ಸೇರಿಸಿ ಪಾಕದ ಸ್ಥಿತಿಗೆ ಬಟ್ಟಿ ಇಳಿಸಿದರೆ ಆರ್ಸೆನಿಕ್‌ಆಮ್ಲ ($H_3AsO_4$)ಉಂಟಾಗುವುದು. ಕರ್ಪೂರೀಕರಿಸಿದ ಹಳದಿ ಲಿಥಾರ್ಜನ್ನು ($PbO$) ನೀರಿನಲ್ಲಿ ಕಲಸಿ ಕೆನೆಯಂತೆ ಮಾಡಿ ಆರ್ಸೆನಿಕ್‌ಆಮ್ಲಕ್ಕೆ ಹಾಕಿದರೆ, ಸಾಮಾನ್ಯ ಉಷ್ಣತೆಯಲ್ಲೇ ಸೀಸದ ಆರ್ಸಿನೇಟು ಒತ್ತರಿಸುವುದು. ಇದನ್ನು ಶೋಧಿಸಿ ಒಣಗಿಸಿ ಹುಡಿಯ ರೂಪದಲ್ಲಿ ರಫ್ತು ಮಾಡುವರು. ಉಪಯೋಗಿಸಿರುವ ಸೀಸದ ಮಾನಾಕ್ಸೈಡಿನ (ಲಿಥಾರ್ಜ್) ಪ್ರಮಾಣಕ್ಕೆ ಅನುಗುಣವಾಗಿ ಆಮ್ಲೀಯ ಅಥವಾ ತಟಸ್ಥ ಸೀಸದ ಆರ್ಸಿನೇಟುಗಳು ಒತ್ತರಿಸುವುವು. ಇದನ್ನು ಕೆಳಕಂಡ ಸಮೀಕರಣಗಳು ಸೂಚಿಸುತ್ತವೆ.

$$PbO + H_3AsO_4 \rightarrow PbHAsO_4 \downarrow + H_2O$$

ಆಮ್ಲೀಯ ಸೀಸದ
ಆರ್ಸಿನೇಟ್

$$3PbO + 2H_3AsO_4 \rightarrow Pb_3(AsO_4)_2 \downarrow + 3H_2O$$

ತಟಸ್ಥ ಸೀಸದ
ಆರ್ಸಿನೇಟ್

ಸೀಸದ ಆರ್ಸಿನೇಟ್ ಬೇಗ ಒತ್ತರಿಸುವುದಿಲ್ಲ. ಇದೊಂದು ಅನುಕೂಲವೆನ್ನಬಹುದು. ಏಕೆಂದರೆ ಸಸ್ಯಕ್ಕೆ ಸಿಂಪಡಿಸುವ ಮುನ್ನ ಅದರ ವಿಲಂಬಿತ ದ್ರಾವಣ ಮಾಡುತ್ತೇವಷ್ಟೆ. ಆಗ ದೀರ್ಘಕಾಲ ವಿಲಂಬಿತ ಸ್ಥಿತಿಯಲ್ಲಿ ಅದು ಉಳಿಯದಿದ್ದರೆ ತೊಂದರೆಯಾಗುತ್ತಿತ್ತು. ಸೀಸದ ನೈಟ್ರೇಟ್ ಅಥವಾ ಅಸಿಟೇಟನ್ನು ಉಪಯೋಗಿಸಿಯೂ ಕ್ರಮವಾಗಿ ಅಥವಾ ತಟಸ್ಥಲವಣಗಳನ್ನು ಮಾಡಿಕೊಳ್ಳಬಹುದು.

$$Pb(NO_3)_2 + H_3AsO_4 \rightarrow PbHAsO_4 \downarrow + 2HNO_3$$

$$3Pb(CH_3.COO)_2 + 2H_3AsO_4 \rightarrow Pb_3(AsO_4)_2 \downarrow + 6CH_3.COOH$$

ಆಮ್ಲೀಯ ಸೀಸದ ಆರ್ಸಿನೇಟ್ ಬಹುಕಾಲ ವಿಲಂಬಿತ ಸ್ಥಿತಿಯಲ್ಲಿ ಇರಬಲ್ಲುದು. ಅದರಲ್ಲಿರುವ ಆರ್ಸೆನಿಕ್ಕಿನ ಅಂಶವೂ ಹೆಚ್ಚು. ಆದ್ದರಿಂದ ಕೀಟದ ಮೇಲೆ ತತ್‌ಕ್ಷಣ ಪರಿಣಾಮವಾಗುವುದು. ಗಿಡವನ್ನು ಗಾಸಿ ಮಾಡದೆ ಕೀಟವನ್ನು ನಾಶಪಡಿಸುವ ಶಕ್ತಿ ತಟಸ್ಥ ಲವಣಕ್ಕಿದೆ. ಪೀಚ್ ಮತ್ತು ಪ್ಲಮ್ ಹಣ್ಣಿನ ಗಿಡಗಳಿಗೆ ಇದನ್ನು ಉಪಯೋಗಿಸುವರು. ಸೀಸದ ಆರ್ಸಿನೇಟ್ ತಯಾರಿಸುವ ಈ ವಿಧಾನಗಳಲ್ಲಿ ಕೊಂಚ ಆರ್ಸೆನಿಕ್ ಆಮ್ಲ ವರ್ತಿಸದೆ ಹಾಗೆಯೇ ಉಳಿದುಬಿಡುವ ಸಂಭವವಿದೆ. ದ್ರಾವ್ಯ ಆರ್ಸೆನಿಕ್ಕಿನ ಅಂಶ ಶೇ. 1% $As_2O_3$ ಕ್ಕಿಂತ ಹೆಚ್ಚಿರುವುದು ಮಾನವನಿಗೆ ಅಪಾಯಕಾರಿ. ಹಾಗಿರಕೂಡದೆಂದು ಕಾನೂನು ಸಹ ಇದೆ. ಆದ್ದರಿಂದ ಮೆಗ್ನೀಸಿಯಂ ಹೈಡ್ರಾಕ್ಸೈಡ್ $[Mg(OH)_2]$ ಸೇರಿಸಿದರೆ ಅದು ಉಳಿದ ಆರ್ಸೆನಿಕ್ ಆಮ್ಲದೊಡನೆ ಕೂಡಿ ಆಮ್ಲೀಯ ಮೆಗ್ನೀಸಿಯಂ ಆರ್ಸಿನೇಟ್ ಆಗುವುದು. $MgHAsO_4 PbHAsO_4$ ಮತ್ತು ಮಿಶ್ರಣ ಶ್ರೇಷ್ಠ ಕೀಟನಾಶಕವೆಂದು ಕಂಡುಬಂದಿದೆ. ಪುಡಿಮಾಡಿದ ಸೀಸದ ಸಲ್ಫೈಡ್ ಅಥವಾ ಸೀಸವನ್ನೇ ಆರ್ಸೆನಿಕ್ ಟ್ರೈಆಕ್ಸೈಡಿನೊಂದಿಗೆ ಹೈಡ್ರೊಕಾರ್ಬನ್ ಉರುವಲಿನ ಸಂಪರ್ಕದಲ್ಲಿ ದಹಿಸಿಯೂ ಸೀಸದ ಆರ್ಸಿನೇಟ್ ಪಡೆಯಬಹುದು.

ಸೋಡಿಯಂ ಆರ್ಸಿಟೇಟಿನ ಕ್ಷಾರೀಯ ದ್ರಾವಣಕ್ಕೆ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣವನ್ನು ಸೇರಿಸಿದಾಗ ಕ್ಯಾಲ್ಸಿಯಂ ಆರ್ಸಿನೇಟ್ ಕೆಳಕಂಡಂತೆ ಒತ್ತರಿಸುವುದು.

$$3CaCl_2 + 2Na_2HAsO_4 \rightarrow Ca_3(AsO_4) + 4NaCl + 2HCl$$

ಒತ್ತರಿಸಿದ ಕ್ಯಾಲ್ಸಿಯಂ ಆರ್ಸಿನೇಟನ್ನು ಬೇರ್ಪಡಿಸಿ ಒಣಗಿಸಿ ಹುಡಿ ಅಥವಾ ಸರಿಯ ರೂಪದಲ್ಲಿ ಮಾರುಕಟ್ಟೆಗೆ ಒದಗಿಸಲಾಗುವುದು. ಕೋಮಲವಾದ ಎಳೆಗಳಿರುವ ಗಿಡಗಳಿಗೆ ಕ್ಯಾಲ್ಸಿಯಂ ಆರ್ಸಿನೇಟನ್ನು ಪ್ರಯೋಗಿಸಬಾರದು. ಏಕೆಂದರೆ ಅದು ಗಿಡವನ್ನು ಗಾಸಿಪಡಿಸುವ ಸಾಧ್ಯತೆಯಿದೆ. ಉಳಿದ ಸಸ್ಯವರ್ಗಕ್ಕೆ ಬಳಸಲು ಅದು ಸೀಸದ ಆರ್ಸಿನೇಟಿಗಿಂತ ಉತ್ತಮ. ಆದರೆ ಅದಕ್ಕಿಂತ ಅಂಟುಗುಣ ಕಡಿಮೆ. ಬೋರ್ಡೋ ಮಿಶ್ರಣ ಅಥವಾ ಸುಣ್ಣದೊಡನೆ ಉಪಯೋಗಿಸಿದರೆ ಈ ತೊಂದರೆ ಇರುವುದಿಲ್ಲ. ಸೀಸದ ಆರ್ಸಿನೇಟಿಗಿಂತ ಕ್ಯಾಲ್ಸಿಯಂ ಲವಣ ಅಗ್ಗ. ಹತ್ತಿಯನ್ನು ಕಾಡುವ ಹುಳುವನ್ನು ಇದು ನಿವಾರಿಸುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಇದಕ್ಕಾಗಿಯೇ ನಿಯೋಜಿತವಾದ ವಿಮಾನದಳವೊಂದಿದೆ. ಗಿಡದಿಂದ ಸುಮಾರು 3" ಅಂತರದಲ್ಲಿ ಹಾರುತ್ತ ಗಂಟೆಗೆ 121–161 ಹೆಕ್ಟೇರು ಹತ್ತಿಯ ಬೆಳೆಯ ಮೇಲೆ ಕ್ಯಾಲ್ಸಿಯಂ ಆರ್ಸಿನೇಟಿನ ದೂಳನ್ನು ಇದರ ಮೂಲಕ ಚೆಲ್ಲುವರು. ವಿಮಾನ ಚಾಲಕನಿಗೆ ಇದೊಂದು ಅಪಾಯಕಾರಿ ಕಾರ್ಯಕ್ರಮವೇ ಸರಿ. ಹತ್ತಿಯ ಬೆಳೆಯ ವ್ಯಾಪಕ ಸಂರಕ್ಷಣೆಗೆ ಬಳಸಿದಾಗ ಹೆಚ್ಚು ವೆಚ್ಚ ತಗಲುತ್ತದೆ. ಆದ್ದರಿಂದ ಅಗ್ಗದ ವಿಧಾನಗಳು ಹುಟ್ಟಿಕೊಂಡಿವೆ. ಅಲ್ಲದೆ ಶುದ್ಧ ಕ್ಯಾಲ್ಸಿಯಂ ಕಾರ್ಬೊನೇಟಿನ ಕಣಗಳ ಮೇಲೆ ಕ್ಯಾಲ್ಸಿಯಂ ಆರ್ಸಿನೇಟ್ ಕೂರಿಸಿ ಅಂತಹ ಪುಡಿಯನ್ನು ಚೆಲ್ಲುವುದರಿಂದ ಒಟ್ಟು ವೆಚ್ಚದಲ್ಲಿ ಉಳಿತಾಯವಾಗುತ್ತದೆ. ಅಲ್ಲದೆ ಶುದ್ಧ ಕ್ಯಾಲ್ಸಿಯಂ ಆರ್ಸಿನೇಟಿನಷ್ಟೇ ಪರಿಣಾಮಕಾರಿಯಾಗಿರುತ್ತದೆ. ಮತ್ತೊಂದು ವಿಧಾನದಲ್ಲಿ ಒತ್ತರಿಸಿದ ಕ್ಯಾಲ್ಸಿಯಂ ಕಾರ್ಬೊನೇಟನ್ನು ಆರ್ಸೆನಿಕ್ ಟ್ರೈಆಕ್ಸೈಡಿನೊಡನೆ ಧಾರಾಳವಾಗಿ ಗಾಳಿಯ ಸಂಪರ್ಕದಲ್ಲಿ 650º ಉಷ್ಣತೆಗೆ ಕಾಯಿಸುವರು.

ಸಿಂಪಡಿಸುವ ದ್ರಾವಣನ್ನು ತಯಾರಿಸಲು ಒಂದು ಪೌಂಡು ಸೀಸದ ಅಥವಾ ಕ್ಯಾಲ್ಸಿಯಂ ಆರ್ಸಿನೇಟನ್ನು 50 ಗ್ಯಾಲನ್ ನೀರಿನಲ್ಲಿ ಕದಡುವುದು ರೂಢಿ. ಅಂದರೆ ಸುಮಾರು ಶೇ. 0.25 ದ್ರಾವಣವಾಗುತ್ತದೆ. ಪೆಟ್ರೋಲ್‌ಚಾಲಿತ ಪಂಪೊಂದನ್ನು ಟ್ರ್ಯಾಕ್ಟರಿನ

ಮೇಲೆ ಹೂಡಿಕೊಂಡು ಅದರ ಸಹಾಯದಿಂದ ಒಬ್ಬಾತ ಗಿಡದ ಮೇಲೆ ದ್ರಾವಣ ಎರಚುತ್ತಿರುವಾಗ ಮತ್ತೊಬ್ಬ ಟ್ರ್ಯಾಕ್ಟರನ್ನು ನಡೆಸುತ್ತಿರಬೇಕು. ಆದ್ದರಿಂದ ಈ ಕೆಲಸಕ್ಕೆ ಇಬ್ಬರ ಅಗತ್ಯವಿದೆ.

ಆಲೂಗಡ್ಡೆಯನ್ನು ತಿಂದುಹಾಕುವ ತಿಗಣೆಯೊಂದಿದೆ. ಇದರ ವಿರುದ್ಧ ಪ್ಯಾರಿಸ್ ಗ್ರೀನ್ ಚೆನ್ನಾಗಿ ಕೆಲಸಮಾಡುತ್ತದೆ. ಆರ್ಸಿನಿಯಸ್ ಆಮ್ಲಕ್ಕೆ ತಾಮ್ರದ ಅಸಿಟೇಟ್ ದ್ರಾವಣ ಸೇರಿಸಿದರೆ ತಾಮ್ರದ ಅಸಿಟೋ ಆರ್ಸಿನೈಟ್ ಒತ್ತರಿಸುವುದು $[Cu(CH_3.COO)_2 3Cu(AsO_2)_2]$. ಇದನ್ನು ಒತ್ತಡದಿಂದ ಶೋಧಿಸಿ ಒಣಗಿಸಿ ಉಪಯೋಗಿಸಬೇಕು. ಸೀಸದ ಆರ್ಸಿನೇಟಿಗಿಂತ ಪ್ಯಾರಿಸ್‌ಗ್ರೀನ್ ಹೆಚ್ಚು ಪ್ರಮಾಣ ದ್ರಾವ್ಯರೂಪದ ಆರ್ಸೆನಿಕ್ ಧರಿಸಬಲ್ಲುದು. ಆದರೂ ಅದರ ಪ್ರಮಾಣ ಶೇ. 3.5 $As_2O_3$ ಮೀರಿರಬಾರದು. ಇದರ ಪ್ರಯೋಗದಿಂದ ಸಸ್ಯ ಸುಟ್ಟು ಹೋಗುವ ಸಂಭವವಿರುವುದರಿಂದ ಅದಕ್ಕೆ ಅಷ್ಟು ಪ್ರಾಶಸ್ತ್ಯವಿಲ್ಲದಂತಾಗಿದೆ.

**ಸಂಪರ್ಕ ಕೀಟನಾಶಕಗಳು:** ಶಲ್ಕ ಕೀಟಗಳು (ಸ್ಕೇಲ್ ಇನ್‌ಸೆಕ್ಟ್ಸ್), ಸಸ್ಯಹೇನುಗಳು, ಕೆಂಪು ತಿಗಣೆ, ಕೆಂಜೇಡ, ದ್ರಾಕ್ಷಿಕೀಟ ಮೊದಲಾದ ಮೃದು ದೇಹರಚನೆಯುಳ್ಳ ಮತ್ತು ಕೊರೆಯುವ ಸ್ವಭಾವದ ಕೀಟಗಳಿಗೆ ಇವು ಪರಿಣಾಮಕಾರಿ. ಕೀಟಗಳ ಶರೀರದ ಮೇಲಿರುವ ಶ್ವಾಸರಂಧ್ರಗಳನ್ನು ಮುಚ್ಚಿಯೋ ಚರ್ಮದ ಮೂಲಕ ಪಸರಿಸಿಯೋ ಅವನ್ನು ನಿಶ್ಚೇಷ್ಟಿತಗೊಳಿಸಿ ಕೊಲ್ಲುವುವು. ಸುಣ್ಣ–ಗಂಧಕ ಮಿಶ್ರಣ, ನಿಕೋಟಿನ್, ಸಾಬೂನು ದ್ರಾವಣ, ಸೀಮೆಎಣ್ಣೆ ಮತ್ತು ತೈಲಎಮಲ್ಷನ್‌ಗಳು ಶ್ವಾಸಕ್ರಿಯಾ ನಿರೋಧಕಗಳು. ಪೈರೆತ್ರಮ್, ರೋಟೆನೋನ್, ಡಿ.ಡಿ.ಟಿ. ಇತ್ಯಾದಿಗಳು ಚರ್ಮಗತ ವಿಷಗಳು.

ಸುಣ್ಣ–ಗಂಧಕ ಮಿಶ್ರಣವನ್ನು ದ್ರಾವಣ ಅಥವಾ ದೂಳಿನ ರೂಪದಲ್ಲಿ ಸಿಂಪಡಿಸಬಹುದು. ಸುಣ್ಣದ ಕೆನೆಯೊಡನೆ ಗಂಧಕವನ್ನು ಕುದಿಸಿದಾಗ, ಪ್ರಧಾನವಾಗಿ ಕ್ಯಾಲ್ಸಿಯಂ ಪಾಲಿಸಲ್ಫೈಡಿರುವ ಹಳದಿ–ಕಂದು ದ್ರಾವಣ ದೊರೆಯುವುದು. ಶೋಧಿಸಿ ಬಂದ ದ್ರಾವಣದಲ್ಲಿ ಶೇ. 24 ಗಂಧಕವಿರುವಂತೆ ಬಟ್ಟಿ ಇಳಿಸಲಾಗುವುದು. ಇದನ್ನು ಭದ್ರವಾದ ಮರದ ಪೀಪಾಯಿಗಳಲ್ಲಿಟ್ಟು ರವಾನಿಸುವರು. ಇದಕ್ಕೆ ಅಗತ್ಯ ಪ್ರಮಾಣ ನೀರನ್ನು ಸೇರಿಸಿ (8–54 ಭಾಗ) ಉಪಯೋಗಿಸಬೇಕು. ಈ ಕೀಟನಾಶಕದ ವಾರ್ಷಿಕ ಉತ್ಪಾದನೆ ಸುಮಾರು ಹತ್ತು ಮಿಲಿಯನ್ ಟನ್ನುಗಳು. ಸೇಬು, ಪೇರ್ ಮತ್ತು ಪೀಚ್ ಹಣ್ಣಿನ
$(H_3AsO_3)$ ತೋಟಗಳಲ್ಲಿ ಇದರ ಬಳಕೆ ಸಾಮಾನ್ಯ.

ಹೊಗೆಸೊಪ್ಪಿನ ಕಸದಿಂದ ನಿಕೊಟಿನ್ ಸಲ್ಫೇಟನ್ನು ರೂಪಿಸಬಹುದು. ಇದರ ಶೇ. 40 ದ್ರಾವಣ ಮಾರುಕಟ್ಟೆಯ ವಸ್ತು. 50 ಗ್ಯಾಲನ್ ನೀರಿನಲ್ಲಿ 2 ಪೌಂಡು ಸಾಬೂನನ್ನು ಸೇರಿಸಿ ಅದರಲ್ಲಿ ನಿಕೊಟಿನ್ ಸಲ್ಫೇಟ್ ವಿಲಂಬಿಸಿ ಉಪಯೋಗಿಸಿದರೆ ಸಾಬೂನು ವಿಷವ್ಯಾಪನೆಗೆ ನೆರವಾಗುವುದು. ಈ ಮಿಶ್ರಣದಲ್ಲಿ ಶೇ. 0.06ಕ್ಕಿಂತ ಕಡಿಮೆ ನಿಕೊಟಿನ್ ಇದ್ದರೆ ಪ್ರಯೋಜನವಿಲ್ಲ. ಒಣಗಿದ ಹೊಗೆಸೊಪ್ಪಿನ ಕಾಂಡಗಳನ್ನು ಸಾಮಾನ್ಯ ಉಷ್ಣತೆಯಲ್ಲಿ ನೀರಿನಲ್ಲಿ ನೆನೆಹಾಕಿಯೂ ಮನೆಯಲ್ಲೇ ನಿಕೊಟಿನ್ ಕಷಾಯ ತಯಾರಿಸಬಹುದು. ಕಾಂಡಗಳನ್ನು ಹುಡಿ ಮಾಡಿ ಜಿಪ್ಸಂ (ಕ್ಯಾಲ್ಸಿಯಂ ಸಲ್ಫೇಟ್), ಕೆಯೊಲಿನ್ (ಬಿಳಿಯ ಜೇಡಿಯ ಮಣ್ಣು) ಅಥವಾ ಸುಣ್ಣದೊಡನೆ ಮಿಶ್ರಮಾಡಿ ಉಪಯೋಗಿಸುವುದುಂಟು. ಯಾವ ವಸ್ತುವನ್ನು ನಿಕೊಟಿನ್ನಿನೊಂದಿಗೆ ಸೇರಿಸಬೇಕೆಂಬುದು ಅದನ್ನು ಯಾವ ಸಸ್ಯದ ರಕ್ಷಣೆಗೆ ಮತ್ತು ಯಾವ ಕೀಟದ ವಿರುದ್ಧ ಬಳಸುತ್ತೇವೆ ಎಂಬುದನ್ನು ಅವಲಂಬಿಸಿದೆ.

ಕೀಟನಾಶಕ ಸಾಬೂನಿನ ದ್ರಾವಣಗಳಲ್ಲಿ ಮೀನಿನ ಎಣ್ಣೆಯೂ ಇದೆ. 4 ಗ್ಯಾಲನ್ ನೀರಿಗೆ 1 ಪೌಂಡು ಸಾಬೂನನ್ನು ಸೇರಿಸುವುದು ವಾಡಿಕೆ. ನಿರ್ದಿಷ್ಟ ಕೀಟನಾಶಕ್ಕೆ ನಿರ್ದಿಷ್ಟ ಪ್ರಬಲತೆಯ ದ್ರಾವಣ ಅಗತ್ಯ. ಮೀನಿನ ಎಣ್ಣೆಯ ದ್ರಾವಣಗಳು ಸಸ್ಯಹೇನುಗಳನ್ನು ನಿರ್ನಾಮ ಮಾಡುವುವು. ಕೇವಲ ಸಾಬೂನಿನ ದ್ರಾವಣವನ್ನು ಉಪಯೋಗಿಸುವುದು ವಿರಳ. ಅದರೊಡನೆ ನಿಕೊಟಿನ್ ಸಲ್ಫೇಟ್, ಸೀಸದ ಆರ್ಸಿನೇಟ್ ಮತ್ತು ಬೋರ್ಡೊ ಮಿಶ್ರಣ ಸೇರಿಸುವುದು ವಾಡಿಕೆ. ಮೀನಿನ ಎಣ್ಣೆಯಿಂದ ಮಾಡಿದ ಪೊಟ್ಯಾಸಿಯಂ ಸಾಬೂನಾದರೆ ಸರ್ವೋತ್ತಮ.

ಸೀಮೆಎಣ್ಣೆ, ಕಚ್ಚಾ ತೈಲ ಮತ್ತು ಕೀಲೆಣ್ಣೆಗಳ ಎಮಲ್ಷನ್‌ಗಳು ಸಹ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡುತ್ತಿವೆ. ಸೀಮೆಎಣ್ಣೆಯ ಎಮಲ್ಷನನ್ನು ಕೆಳಕಂಡಂತೆ ತಯಾರಿಸಬಹುದು. ಅರ್ಧ ಪೌಂಡು ಮೀನಿನ ಎಣ್ಣೆಯ ಸಾಬೂನನ್ನು 1 ಗ್ಯಾಲನ್ ನೀರಿನಲ್ಲಿ ಕರಗಿಸಿ ಅದನ್ನು ಬಿಸಿ ಮಾಡಿ 2 ಗ್ಯಾಲನ್ ಸೀಮೆ ಎಣ್ಣೆಯನ್ನು ಸೇರಿಸಬೇಕು. ಅದನ್ನು ಚೆನ್ನಾಗಿ ಕುಲುಕಿದರೆ ಎಮಲ್ಷನ್ ರೂಪಕ್ಕೆ ಬರುವುದು. ತಣಿದಾಗ ಒತ್ತರಿಸದೆ ವಿಲಂಬಿತ ಸ್ಥಿತಿಯಲ್ಲೇ ಉಳಿಯುವುದು. 1 ಭಾಗ ಎಮಲ್ಷನ್ನಿಗೆ 7 ಭಾಗ ನೀರು ಬೆರೆಸಿ ಸುಪ್ತಾವಸ್ಥೆಯಲ್ಲಿರುವ ಗಿಡಗಳಿಗೆ ಪ್ರಯೋಗಿಸುವರು. ಮೀನಿನ ಎಣ್ಣೆಯ ಸಾಬೂನಿನೊಡನೆ ಸೀಮೆಎಣ್ಣೆ, ಪ್ಯಾರಫಿನ್ ಎಣ್ಣೆ ಮತ್ತು ರೋಸಿನ್ ಎಣ್ಣೆ. ಕಾರ್ಬಾಲಿಕ್‌ಆಮ್ಲಗಳನ್ನೂ ಸೇರಿಸಿ ಎಮಲ್ಷನ್ ಮಾಡಿ ಬಳಸುವುದುಂಟು.

ತೋಟಗಳಲ್ಲಿ ಮತ್ತು ಮನೆಗಳಲ್ಲಿ ಬಳಕೆಗೆ ಅನುಕೂಲವಾದ ಕೀಟನಾಶಕಗಳೆಂದರೆ ಪೈರೆತ್ರಮ್ ಮತ್ತು ರೋಟೆನೋನ್. ಇವು ದ್ರಾವಣ ಅಥವಾ ದೂಳಿನ ರೂಪದಲ್ಲಿರಬಹುದು. ಕ್ರೈಸ್ಯಾನ್ತಮಮ್ ವರ್ಗದ ಹೂಗಳಿಂದ ಪೈರೆತ್ರಮ್ ಮಾಡುವರು. ಇದು ಬಹುವಾಗಿ ಜಪಾನ್, ಕೀನ್ಯ, ಬ್ರಿಟನ್, ಪೂರ್ವ ಆಫ್ರಿಕ ಮತ್ತು ಬೆಲ್ಜಿಯನ್ ಕಾಂಗೊಗಳಲ್ಲಿ ಬೆಳೆಯುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನವೊಂದೇ ಸಹಸ್ರಾರು ಟನ್ನುಗಳಷ್ಟು ಪೈರೆತ್ರಮ್‌ನ್ನು ಈ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ನೊಣಗಳಿಗೆ ಇದು ಮಾರಕವಾದ್ದರಿಂದ ನಿತ್ಯಬಳಕೆಗೆ ಅನುಕೂಲ. ಇದರ ಸಂಪರ್ಕಕ್ಕೆ ಬಂದ ಕೀಟ ಕೂಡಲೇ ನಿಶ್ಚೇಷ್ಟಿತವಾಗುವುದು. ಡಿ.ಡಿ.ಟಿ. ಬೆರೆಸಿದರೆ ಪ್ರಭಾವ ಇನ್ನು ಹೆಚ್ಚುತ್ತದೆ. ಪೈರೆತ್ರಮ್ ಹುಡಿಗಿಂತ ಕಷಾಯ ಮೇಲು.

ಮಲಯಾ ಮತ್ತು ಇಂಡೊನೇಷ್ಯ ದೇಶಗಳಲ್ಲಿ ಡೆರ್ರಿಸ್ ಎಲಿಪ್ಟಿಕಾ ಎಂಬ ಗಿಡ ಹೇರಳವಾಗಿ ಬೆಳೆಯುತ್ತದೆ. ಇದರಿಂದ ತಯಾರಿಸಬಹುದಾದ ಆರು ಆಲ್ಕಲಾಯ್ಡುಗಳಲ್ಲಿ ರೋಟೆನೋನ್ ಹೆಚ್ಚು ಕ್ರಿಯಾಶಾಲಿಯಾದುದು. ಅದರ ಬೇರನ್ನು ಪುಡಿಮಾಡಿ, ಟಾಲ್ಕ್ ಬೆರೆಸಿ ಶೇ.1 ಮಿಶ್ರಣ ಮಾಡುವರು; ಅಥವಾ ಬೇರಿನಿಂದ ಕಷಾಯ ಇಳಿಸಿ ಬಳಸುವರು.

ಕೀಟನಾಶಕವಾಗಿ ಸೋಡಿಯಂ ಫ್ಲೋರೈಡು ಈಚೆಗೆ ಬಳಕೆಯಾಗುತ್ತಿದೆ. ಇದು ಜಿರಲೆಗಳನ್ನು ನಿರ್ಮೂಲ ಮಾಡಬಲ್ಲುದು. ಸಾಕುಪ್ರಾಣಿಗಳನ್ನು ಬಾಧಿಸುವ ಹೇನುಗಳನ್ನು ಇದು ಯಶಸ್ವಿಯಾಗಿ ತೊಡೆದು ಹಾಕುತ್ತದೆ. ಇದರ ಪ್ರಯೋಗದಿಂದ ಸಸ್ಯಗಳಿಗೆ ನಂಜಾಗುವುದರಿಂದ ಅವುಗಳ ಮೇಲೆ ಪ್ರಯೋಗಿಸಬಾರದು.

ಸಂಯೋಜಿತ ಸಾವಯವ ಕೀಟನಾಶಕಗಳು: ಇವುಗಳಲ್ಲಿ ಹೆಸರಾಂತ ಡಿ.ಡಿ.ಟಿ. ಜನ್ಮತಾಳಿದ್ದು ಎರಡನೆಯ ಮಹಾಯುದ್ಧದ ಆದಿಭಾಗದಲ್ಲಿ. ಪೈರೆತ್ರಮ್ ಮತ್ತು ರೋಟೆನೋನ್‌ಗಳ ಕೊರತೆಯನ್ನು ಇದು ತುಂಬಿತೆನ್ನಬಹುದು. ಇದು ವಿಶಿಷ್ಟವಾಸನೆಯುಳ್ಳ ಬಿಳಿಯ ಪುಡಿ. ಡೈಕ್ಲೊರೋ ಡೈಫೀನೈಲ್ ಟ್ರೈಕ್ಲೋರೋ ಈಥೇನ್ ಎಂಬ ರಾಸಾಯನಿಕ ನಾಮದ ಮೊದಲ ಅಕ್ಷರಗಳನ್ನು ಜೋಡಿಸಿ ಡಿ.ಡಿ.ಟಿ. ಎಂಬ ಸಂಕ್ಷಿಪ್ತ ಹೆಸರನ್ನು ಸೃಜಿಸಲಾಗಿದೆ. ಕ್ಲೋರಾಲ್ $(CCl_3.CHO)$ಮತ್ತು ಅದರ ಎರಡರಷ್ಟು ಪ್ರಮಾಣ ಕ್ಲೋರೊ ಬೆಂಜ಼ೀನ್ $(C_2H_5.Cl)$ಸೇರಿಸಿ ಪ್ರಬಲ ಸಲ್ಫ್ಯೂರಿಕ್ ಆಮ್ಲದ ಸಂಪರ್ಕದಲ್ಲಿ ಕಾಯಿಸಿದರೆ ಇದು ದೊರೆಯುವುದು.




ಕ್ರಿಯಾಂತ್ಯದಲ್ಲಿ ಮಿಶ್ರಣವನ್ನು ನೀರಿಗೆ ಸುರಿದರೆ ಡಿ.ಡಿ.ಟಿ. ಬೇರ್ಪಡುವುದು. ಪ್ರಾಸಂಗಿಕವಾಗಿ ಇತರ ಕ್ಲೋರೀನ್‌ಯುಕ್ತ ಈಥೇನ್ ಉತ್ಪನ್ನಗಳೂ ಉಂಟಾಗುವುದರಿಂದ ಮಾರುಕಟ್ಟೆಯ ಡಿ.ಡಿ.ಟಿ. ಕೇವಲ ಶೇ.70 ಶುದ್ಧವಾಗಿರುತ್ತದೆ. ಅದನ್ನು ಸಾವಯವ ಲೀನಕಾರಿಗಳಲ್ಲಿ ಅಥವಾ ನೀರಿನಲ್ಲಿ ಎಮಲ್ಷನ್ ಮಾಡಿ ಚಿಮುಕಿಸಿದರೆ ನೊಣ, ಸೊಳ್ಳೆಯ ಕಾಟ ತಪ್ಪುವುದು. ಏರೊಸಾಲ್ ಬಾಂಬ್‌ಗಳಲ್ಲಿ ಡಿ.ಡಿ.ಟಿ. ವಿಶೇಷವಾಗಿ ಬಳಕೆಯಾಗುತ್ತಿದೆ. ಅದರೊಡನೆ ಪೈರೆತ್ರಮ್ ಎಳ್ಳೆಣ್ಣೆ ಮತ್ತು ಸೋಯಾ ಅವರೆ ಎಣ್ಣೆಯನ್ನು ಸೇರಿಸುವುದು ಪದ್ಧತಿ. ಇವುಗಳ ಸಂಪರ್ಕದಲ್ಲಿ ಡಿ.ಡಿ.ಟಿ.ಯ ಪ್ರಭಾವ ಹೆಚ್ಚುವುದು ವ್ಯಕ್ತವಾಗಿದೆ. ಹುಡಿಯೊಡನೆ ಸಾಮಾನ್ಯವಾಗಿ ಬೆಂಟೋನೈಟ್ ಜಿಪ್ಸಂ ಮೊದಲಾದ ಜಡವಸ್ತುಗಳನ್ನು ಸೇರಿಸಿ ಉಪಯೋಗಿಸುವರು. ಅದಕ್ಕೆ ತೇವಕಾರಕಗಳನ್ನು ಸೇರಿಸಿದರೆ, ಸರಾಗವಾಗಿ ನೀರಿನಲ್ಲಿ ವಿಲಂಬಿತವಾಗುವ ಮಿಶ್ರಣವಾಗುತ್ತದೆ. ಹಣ್ಣಿನ ತೋಟಗಳಲ್ಲಿ ಮಾಡುವುದು ಹೀಗೆಯೇ. ಡಿ.ಡಿ.ಟಿ.ಯಿಂದ ಸೇಬಿನ ನಿರ್ನಾಮವಾಗುವುದು.

ಕೀಟದ ಬಾಧೆಗಳನ್ನು ಅದು ನಿವಾರಿಸಲು ಶಕ್ತವಾಗಿದೆ. ಯುದ್ಧಕಾಲದಲ್ಲಿ ಯೂರೋಪಿನಲ್ಲಿ ಕಾರ್ಯನಿರತರಾಗಿದ್ದ ಸೈನಿಕರಿಗೆ ಡಿ.ಡಿ.ಟಿ. ಲೇಪಿತ ಅಂಗಿಗಳನ್ನು

ಒದಗಿಸಲಾಗಿತ್ತು. ಇದರಿಂದ ಟೈಫಸ್ ಜ್ವರ ಹರಡದೆ ಸಹಸ್ರಾರು ನಾಗರಿಕರ ಜೀವ ಉಳಿಯಿತು. ನಿಂತ ನೀರಿನಲ್ಲಿ ವೃದ್ಧಿಯಾಗುವ ಮಲೇರಿಯಾವಾಹಕ ಸೊಳ್ಳೆಗಳನ್ನು ಇದು ನಿರ್ಮೂಲ ಮಾಡುತ್ತದೆ. ಪ್ರಾಣಿದೇಹದ ಕೊಬ್ಬಿನ ಅಂಗಾಂಶಗಳಲ್ಲಿ ಡಿ.ಡಿ.ಟಿ. ಸಂಗ್ರಹವಾಗುವುದು. ಹಣ್ಣುಗಳನ್ನು ತೊಳೆದರೂ ಅದು ಹೋಗದಿರುವುದು, ಹಸುವಿನ ಹಾಲಿನ ಮೂಲಕವೂ ಅದು ನಮ್ಮ ದೇಹಗತವಾಗುವ ಸಂಭವವಿರುವುದು ಮೊದಲಾದ ದೋಷಗಳಿಂದ ಡಿ.ಡಿ.ಟಿ. ಪ್ರಯೋಗದ ಬಗ್ಗೆ ಒಲವು ತಗ್ಗುತ್ತಿದೆ.




ಮತ್ತೊಂದು ಪ್ರಮುಖ ಕೀಟನಾಶಕವೆಂದರೆ r–ಬಿ.ಎಚ್.ಸಿ. ಹೆಕ್ಸ ಕ್ಲೋರೋ ಸೈಕ್ಲೊಹೆಕ್ಸೇನ್ ಎಂಬುದು ಇದರ ರಾಸಾಯನಿಕ ಹೆಸರು. ಇದರಲ್ಲಿ 16 ಬಗೆಗಳುಂಟು. ಇವುಗಳ ಪೈಕಿ ಗ್ಯಾಮಾ ಸಂಯುಕ್ತಕ್ಕೆ ಕೀಟನಾಶಕ ಗುಣವಿದೆ. ಅಲೆಯುದ್ದ ಕಡಿಮೆ ಇರುವ ಬೆಳಕಿನ ಪ್ರಭಾವದಲ್ಲಿ ಕ್ಲೋರೀನ್ ಬೆಂಜೀನೀನೊಡನೆ ವರ್ತಿಸಿದಾಗ ಬರುವ ಉತ್ಪನ್ನದಲ್ಲಿ ಶೇ.10–14 ಗ್ಯಾಮಾ ಸಂಯುಕ್ತ ಇರುತ್ತದೆ. ಅದರ ಪರಮಾಣು ರಚನಾ ವಿನ್ಯಾಸವನ್ನು ಪಕ್ಕದ ಚಿತ್ರದಲ್ಲಿ ತೋರಿಸಿದೆ. ಅದರ ದ್ರವೀಕರಣ ಬಿಂದು 112.5°ಸೆಂ. ಇದರಿಂದ ಅದನ್ನು ಗುರುತಿಸಬಹುದು.

ಇದರ ವಾಸನೆ ಬಹುಕಾಲ ಉಳಿದುಬಿಡುವುದರಿಂದ ಆಹಾರ ಬೆಳೆಗಳಿಗೆ ಸಿಂಪಡಿಸಲು ಇದು ತಕ್ಕುದಲ್ಲ. ಹತ್ತಿಯ ಸಂರಕ್ಷಣೆಗೆ ಉಪಯೋಗಿಸುವುದೇ ಹೆಚ್ಚು. ಡಿ.ಡಿ.ಟಿ.ಗೆ ಇದು ಪೂರಕವಾಗಿದೆಯೇ ಹೊರತು ಅದರ ಸ್ಥಾನವನ್ನು ಆಕ್ರಮಿಸಲಾರದು. ಆಕ್ಟ ಕ್ಲೋರೋ ಟೆಟ್ರಹೈಡ್ರೊಇಂಡೇನ್ ಎಂಬ ಮತ್ತೊಂದು ಕೀಟನಾಶಕ ಕ್ಲೋರ್‌ಡೇನ್ ಎಂಬ ಹೆಸರಿನಿಂದ ಬಳಸಲ್ಪಡುತ್ತಿದೆ. ಅದರ ರಚನಾಸೂತ್ರವನ್ನು ಕೆಳಗೆ ಚಿತ್ರಿಸಲಾಗಿದೆ:




ಮಿಡತೆಗಳು, ಜಿರಲೆಗಳು ಮತ್ತು ಇರುವೆಗಳನ್ನೂ ಡಿ.ಡಿ.ಟಿ.ಯೊಡನೆ ಮಿಶ್ರಮಾಡಿ ಬಳಸಿದರೆ ತಿಗಣೆಗಳನ್ನೂ ಇದು ನಾಶಪಡಿಸುತ್ತದೆ. ಡಿ.ಡಿ.ಟಿ.ಗೆ ಹೊಂದಿಕೊಂಡು ಸಾಯದೆ ಉಳಿಯುವ ಕೀಟಗಳ ನಿವಾರಣೆಗೋಸ್ಕರ ಹಲವು ಕ್ಲೋರೀನ್‌ಯುಕ್ತ ಹೈಡ್ರೋಕಾರ್ಬನ್ ಕೀಟನಾಶಕಗಳ ಶೋಧವಾಗಿದೆ. ಅವುಗಳಲ್ಲಿ ಟಿ.ಡಿ.ಇ., ಡಿಲಾನ್ ಮೀಥಾಕ್ಸಿಕ್ಲೋರ್ ಮುಂತಾದ ಡಿ.ಡಿ.ಟಿ. ಸಂಬಂಧಿಗಳನ್ನೂ ಹೆಪ್ಟಕ್ಲೋರ್, ಆಲ್ಡ್ರಿನ್, ಡೈಎಲ್ಡ್ರಿನ್, ಎಂಡ್ರಿನ್, ಟಾಕ್ಸಫೀನ್ ಮೊದಲಾದ r–ಬಿ.ಎಚ್.ಸಿ. ಸಂಬಂಧಿಗಳನ್ನೂ ಹೆಸರಿಸಬಹುದು. ಸಂಯೋಜಿತ ಕಾರ್ಬಮೇಟ್ ಕೀಟನಾಶಕಗಳಿಗೂ ಪ್ರಾಶಸ್ತ್ಯ ಹೆಚ್ಚುತ್ತಿದೆ. ಇವುಗಳಲ್ಲಿ ಡಿಮೆಟಾನ್, ಪೈರೊಲಾನ್, ಐಸೊಲಾನ್, ಪಿರಮ್ಯಾಟ್ ಮತ್ತು ಸೆವಿನ್ ಮುಖ್ಯವಾದವು. ಈಚಿನ ವರದಿಗಳ ಪ್ರಕಾರ ಸೊಳ್ಳೆ, ನೊಣ, ಹತ್ತಿಹುಳ ಮತ್ತು ಆಲೂಗೆಡ್ಡೆ ಕ್ರಿಮಿ ಸಹ ಕ್ಲೋರೀನ್‌ಯುಕ್ತ ಹೈಡ್ರೋಕಾರ್ಬನ್ ಕೀಟನಾಶಕಗಳಿಗೆ ಮಣಿಯದ ಹೊಸ ಪೀಳಿಗೆಯನ್ನು ಸೃಜಿಸಿಕೊಂಡಿವೆ. ಹೀಗಾಗಿ ಪ್ರಾಚ್ಯ ದೇಶಗಳ ಜನಾರೋಗ್ಯಕ್ಕೆ ಭಾರಿ ಆತಂಕ ಉಂಟಾಗಿದೆ.

**ಏರೊಸಾಲ್‌ಗಳು:** ಕಲಾಯ್ಡ್ ಸ್ಥಿತಿಯಲ್ಲಿ ಘನ ಅಥವಾ ದ್ರವ ವಸ್ತುಗಳು ಗಾಳಿಯಲ್ಲಿ ವಿಲಂಬಿತವಾಗಿದ್ದರೆ ಅವನ್ನು ಏರೊಸಾಲ್‌ಗಳು ಎನ್ನುತ್ತೇವೆ. ತುಂಬ ಬಳಕೆಯಲ್ಲಿರುವ ಏರೊಸಾಲ್ ಮಿಶ್ರಣದ ತಯಾರಿಕೆಯ ವಿವರ ಹೀಗಿದೆ: ಫ್ರಿಯಾನ್–12 ಮುಂತಾದ ದ್ರವಿತ ಅನಿಲಗಳನ್ನೂ ಕೀಟನಾಶಕದ ತೈಲದ್ರಾವಣವನ್ನೂ ಬೆರೆಸಿ ಮಿಶ್ರಣವನ್ನು ಒತ್ತಡದಿಂದ ಒಂದು ಬಾಂಬಿನೊಳಗೆ ತುಂಬಲಾಗುವುದು. ಅದಕ್ಕೊಂದು ನಿಯಂತ್ರಿತ ಕವಾಟವಿರುವುದು. ಅದನ್ನು ಸಾಕಷ್ಟು ತೆರೆದರೆ ದ್ರವ ಹೊರಬಿದ್ದು ತತ್‌ಕ್ಷಣ ಆವಿಯಾಗುವುದು. ಈ ರಭಸಕ್ಕೆ ಕೀಟನಾಶಕ ಸಿಂಪಡಿಸಲ್ಪಡುವುದು. ವಿಲಂಬಿತ ಸ್ಥಿತಿಯಲ್ಲಿ ಸಿಂಪಡಿಸಿದ ಜಾಗದಲ್ಲಿ ಉಳಿಯುವುದು. ಕವಾಟವನ್ನು ಮುಚ್ಚಿ, ಉಳಿದ ದ್ರವಮಿಶ್ರಣವನ್ನು ಅಗತ್ಯ ಬೀಳುವವರೆಗೆ ಹಿಡಿದಿಟ್ಟಿರುಬಹುದು. ಗುಡಾರ ಅಥವಾ ಮುಚ್ಚಿದ ಆವರಣದಲ್ಲಿರುವ ಸೊಳ್ಳೆ ಇತ್ಯಾದಿಗಳ ನಾಶಕ್ಕೆ ಇದು ಅನುಕೂಲವಾಗಿದೆ. ಬಾಂಬುಗಳಲ್ಲಿರುವ ಮಿಶ್ರಣದಲ್ಲಿ ಶೇ.80–90 ಭಾಗ ದ್ರವಿತ ಅನಿಲ, ಶೇ. 10–20 ಭಾಗ ಕೀಟನಾಶಕವಿರುತ್ತವೆ. ಮನುಷ್ಯರ ಬಳಿ ಕೀಟಗಳು ಸುಳಿಯದಂತೆ ಮಾಡಬೇಕಾದಾಗ ಡೈಮೀಥೈಲ್‌ಥ್ಯಾಲೇಟ್ ಇರುವ ಬಾಂಬನ್ನು ಬಳಸುವರು.

**ಕೀಟನಾಶಕ ಧೂಮಗಳು:** ಸಂಗ್ರಹಿಸಿಟ್ಟ ಗೋದಿ ಮತ್ತು ಇತರ ಧಾನ್ಯಗಳಿಗೆ ಕೀಟಬಾಧೆ ಹೆಚ್ಚು. ಅವುಗಳ ಮೇಲೆ ಇಂಗಾಲದ ಡೈಸಲ್ಫೈಡ್ ಸುರಿದು ಎಲ್ಲ ದ್ವಾರಗಳನ್ನೂ ಮುಚ್ಚಿಬಿಟ್ಟರೆ ಕೀಟಗಳು ಸಾಯುವುವು. ಪೂರ್ಣವಾಗಿ ಮೊಹರು ಮಾಡಬಹುದಾದ ಉಗ್ರಾಣಗಳಲ್ಲಿ ಮಾತ್ರ ಇದು ಸಾಧ್ಯ. ಇಲ್ಲದಿದ್ದರೆ ಇಂಗಾಲದ ಡೈಸಲ್ಫೈಡು ಮತ್ತು ಗಾಳಿಯ ಮಿಶ್ರಣದಿಂದ ಆಸ್ಫೋಟನೆ ಮತ್ತು ಬೆಂಕಿಯ ಅಪಾಯವಿದೆ. ಅದಕ್ಕಿಂತ ಸುಲಭವಾಗಿ ಆವಿಯಾಗುವ, ಅಷ್ಟೇ ಕೀಟನಾಶಕ ಗುಣವುಳ್ಳ ಈಥೈಲ್ ಅಸಿಟೇಟ್ ಮತ್ತು ಇಂಗಾಲದ ಟೆಟ್ರಕ್ಲೋರೈಡಿನ ಮಿಶ್ರಣಕ್ಕೆ ಪ್ರಾಶಸ್ತ್ಯ ಹೆಚ್ಚುತ್ತಿದೆ. ಇದಕ್ಕೆ ಸ್ಫೋಟಕ ಗುಣವಿಲ್ಲ.

ಹೈಡ್ರೋಜನ್ ಸಯನೈಡ್ ಉತ್ತಮ ಕೀಟನಾಶಕವೇನೋ ಹೌದು. ಆದರೆ ಇದು ಮಾನವನಿಗೂ ಉಗ್ರ ವಿಷವಾದುದರಿಂದ ಇದನ್ನು ತುಂಬ ಎಚ್ಚರಿಕೆಯಿಂದ ಉಪಯೋಗಿಸಬೇಕಾಗುತ್ತದೆ. ಅಗತ್ಯ ಪ್ರಮಾಣದ ಸೋಡಿಯಂ ಸಯನೈಡನ್ನು (NaCN) ಒಂದು ಬಟ್ಟಲಿನಲ್ಲಿಟ್ಟು ಅದರ ಮೇಲೆ ಸಲ್ಫ್ಯೂರಿಕಾಮ್ಲವಿರುವ ಸೀಸೆಯನ್ನಿಡಬೇಕು. ಅದಕ್ಕೆ ಒಂದು ದಾರವನ್ನು ಕಟ್ಟಿ ರಾಟೆಯ ಮೇಲೆ ಹಾಯಿಸಿರಬೇಕು. ಬಾಗಿಲ ಹತ್ತಿರ ಬಂದ ಕ್ಷಣದಲ್ಲಿ ದಾರವನ್ನು ಎಳೆದುಹೊರಗಿನಿಂದ ಬಾಗಿಲನ್ನು ಭದ್ರಪಡಿಸಬೇಕು. ಆಗ ಆಮ್ಲ ಸಯನೈಡಿನ ಮೇಲೆ ಬಿದ್ದು ಹೈಡ್ರೋಜನ್ ಸಯನೈಡ್ (*HCN*) ಬಿಡುಗಡೆಯಾಗಿ ಕ್ರಿಮಿಕೀಟಗಳನ್ನು ಕೊಲ್ಲುವುದು. ಕ್ಯಾಲಿಫೋರ್ನಿಯದಲ್ಲಿ ಸಿಟ್ರಸ್ ಜಾತಿಯ ಗಿಡಗಳ ರಕ್ಷಣೆಗೆ ಈ ವಿಧಾನವನ್ನು ಬಳಸುವರು. ಪೂರ್ವಾಗಿಡಕ್ಕೇ ದಪ್ಪವಾದ ಬಟ್ಟೆಯ ಬುರುಕಿಯನ್ನು ಹಾಕಿ, ನೆಲದ ಮೇಲೆ ಹೈಡ್ರೊಜನ್ ಸಯನೈಡನ್ನು ಮೇಲ್ಕಂಡಂತೆ ಉತ್ಪಾದಿಸಿ ಕೀಟವನ್ನು ನಾಶಮಾಡುವರು. ಗಿಡಕ್ಕೆ ಸ್ವಲ್ಪವೂ ತೊಂದರೆಯಾಗುವುದಿಲ್ಲ. ಕ್ಯಾಲ್ಸಿಯಂ ಸಯನೈಡ್ ಸಹ ಹೀಗೆ ವಿನಿಯೋಗವಾಗುತ್ತಿದೆ. (1:9) ಪ್ರಮಾಣ ಎಥಿಲೀನ್ ಆಕ್ಸೈಡ್ ಮತ್ತು ಇಂಗಾಲದ ಡೈಆಕ್ಸೈಡಿನ ಮಿಶ್ರಣಕ್ಕೆ ಕಾರ್ಬಾಕ್ಸೈಡ್ ಎಂಬುದು ವ್ಯವಹಾರನಾಮ. ಇದನ್ನು ಒತ್ತಡದಲ್ಲಿ ಉಕ್ಕಿನ ಕೊಳಾಯಿಗಳಲ್ಲಿ ಸಂಗ್ರಹಿಸಿ ಇಟ್ಟಿರುತ್ತಾರೆ. ಬಾಯಿ ತೆರೆದಾಗ ತುಂತುರು ರೂಪದಲ್ಲಿ ಹೊರಬಿದ್ದು ತತ್‌ಕ್ಷಣ ಆವಿಯಾಗಿ ಕಾರ್ಯೋನ್ಮುಖವಾಗುವುದು. ದಹ್ಯ ಮತ್ತು ಸ್ಫೋಟಕ ಗುಣವಿರದ ಈ ಮಿಶ್ರಣ ಉತ್ತಮ ಕೀಟನಾಶಕ ಹಾಗೂ ಬಳಸಲು ಸುರಕ್ಷಿತ.

ಗೆಡ್ಡೆಗಳು ಮತ್ತು ಬೇರುಗಳನ್ನು ಹೊಕ್ಕು ಕೊರೆದು ಹಾಳು ಮಾಡುವ ತಂತುವಿನ ಆಕಾರದ ಜಂತುಹುಳುಗಳಿವೆ. ಇವುಗಳಿಂದ ಆಲೂಗೆಡ್ಡೆ, ಬೀಟ್ ಸಕ್ಕರೆ ಇತ್ಯಾದಿ ಫಸಲುಗಳಿಗೆ ಅಪಾರ ಹಾನಿ. ಅದ್ದರಿಂದ ಇವುಗಳ ನಾಶಕ್ಕಾಗಿಯೇ ನಿಯೋಜಿತವಾದ ವಿಷಗಳಿವೆ. ಅವುಗಳಲ್ಲಿ ಕ್ಲೋರೊಪಿಕ್ರಿನ್ $CCl_3No_2$. ಮುಖ್ಯವಾದುದು. ಪಿಕ್ರಿಕ್ ಆಮ್ಲವನ್ನು ಚಲುವೆ ಪುಡಿ ಮತ್ತು ನೀರಿನೊಡನೆ ಕುದಿಸಿ ಇದನ್ನು ಪಡೆಯಬಹುದು. ಅದರ ಬೆಲೆ ಹೆಚ್ಚು. ಆದ್ದರಿಂದ ಅಗ್ಗದ ಡಿ.ಡಿ.ಟಿ. ಮಿಶ್ರಣ ಬಳಕೆಗೆ ಬಂದಿದೆ. ಡೈಕ್ಲೋರೋ ಪ್ರೊಪೇನ್ ಮತ್ತು ಡೈಕ್ಲೋರೋ ಪ್ರೊಪೀನ್ ಮಿಶ್ರಣವಿದು. ಇದನ್ನು ಡೌಫ್ಯೂಮ್ ಎಮ್ ಎಂದೂ ಕರೆಯುವರು. ಎಥಿಲೀನ್ ಡೈಬ್ರೋಮೈಡ್ ಮತ್ತು ಮೀಥೈಲ್ ಬ್ರೊಮೈಡುಗಳಿಗೂ ಜಂತುಹುಳು ನಾಶಕ ಗುಣವಿದೆ. ಪೀಚ್ ಗಿಡವನ್ನು ಕೊರೆಯುವ ಕೀಟವುಂಟು. ಇದು ಭೂಮಟ್ಟದಲ್ಲಿ ಗಿಡವನ್ನು ಕೊರೆಯುವುದರಿಂದ ಸಿಂಪಡಿಸುವ ವಿಧಾನದಿಂದ ಅದು ಸಾಯುವುದಿಲ್ಲ. ಆದ್ದರಿಂದ ಗಿಡದ ಸುತ್ತ ಸಣ್ಣ ಕಂದಕವನ್ನು ತೋಡಿ ಅದರಲ್ಲಿ ಪ್ಯಾರಾ ಡೈಕ್ಲೋರೊ ಬೆಂಜೀನನ್ನು ಇಟ್ಟು ಮುಚ್ಚಿದರೆ ಕೀಟನಾಶವಾಗುವುದು.

**ವಿಕರ್ಷಕಗಳು:** ಮಾನವ, ಅವನ ಆಹಾರ ಸಂಗ್ರಹ, ಸಾಕುಪ್ರಾಣಿಗಳು, ಬೆಳೆಗಳು, ಬಟ್ಟೆ ಮುಂತಾದವನ್ನು ರಕ್ಷಿಸುವುದರಲ್ಲಿ ಇವುಗಳ ಪಾತ್ರ ಹಿರಿದು. ಸೊಳ್ಳೆ, ನೊಣ, ತಿಗಣೆ, ಇಲಿ ಮತ್ತು ಹೆಗ್ಗಣಗಳ ವಿರುದ್ಧ ಇವು ಬಳಸಲ್ಪಡುತ್ತಿವೆ. ವಿದ್ಯುತ್ ಕೇಬಲ್ಲುಗಳನ್ನು ಕಡಿದು ಹಾಳು ಮಾಡುವ ಅಳಿಲು ಮೊದಲಾದವನ್ನೂ ಜಿಗಣೆಯನ್ನೂ ದೂರವಿರಿಸಲು ಸೂಕ್ತ ವಿಕರ್ಷಕಗಳಿವೆ. ರಕ್ತಹೀರುವ ಕೀಟಗಳ ವಿರುದ್ಧ ನಾಲ್ಕು ವಿಕರ್ಷಕಗಳು ತುಂಬ ಬಳಕೆಯಲ್ಲಿವೆ. ಸಿಟ್ರೊನೆಲ್ಲಾ ಎಣ್ಣೆ, ಡೈಮೀಥೈಲ್ ಥ್ಯಾಲೇಟ್, ಇಂಡಲೋನ್ (ನಾರ್ಮಲ್ ಬ್ಯೂಟೈಲ್ ಮೆಸಿಟಿಲ್ ಆಕ್ಸೈಡ್ ಆಕ್ಸಲೇಟ್) ಮತ್ತು ರಟ್ಗೆರ್ಸ್–612 (2: ಈಥೈಲ್ ಹೆಕ್ಸೇನ್ ಡಯೋಲ್ 1:3) ಈ ನಾಲ್ಕು ವಿಕರ್ಷಕಗಳು. ಕೊನೆಯ ಮೂರು ವಿಕರ್ಷಕಗಳ 6:2:2 ಪ್ರಮಾಣದ ಮಿಶ್ರಣ ಸೈನಿಕರ ವಿಶಿಷ್ಟ ಉಪಯೋಗಕ್ಕಾಗಿ ರೂಪುಗೊಂಡು, ಈಗ

ಸಾರ್ವಜನಿಕವಾಗಿ ಉಪಯೋಗವಾಗುತ್ತಿದೆ. ಈಗ ಯೋಧರು ವಿಶೇಷವಾಗಿ ಉಪಯೋಗಿಸುವ ಕೀಟನಿರೋಧಕವೆಂದರೆ ಎಮ್. 2020. ಅದರಲ್ಲಿ ಡೈಮೀಥೈಲ್ ಥ್ಯಾಲೇಟ್, ರಟ್ಗೆರ್ಸ್–612 ಮತ್ತು ಡೈಮೀಥೈಲ್ ಕಾರ್ಬೇಟ್ 4:3:3 ಪ್ರಮಾಣದಲ್ಲಿರುತ್ತವೆ. ಈ ಮಿಶ್ರಣ ಸೊಳ್ಳೆಯನ್ನು ಎರಡು ತಾಸಿನವರೆಗೂ ಉಣ್ಣೆ ಮೊದಲಾದ ಹುಳುಗಳನ್ನು ನಾಲ್ಕು ತಾಸಿನ ವರೆಗೂ ಹತ್ತಿರ ಸುಳಿಯಗೊಡುವುದಿಲ್ಲ. ಬಟ್ಟೆಗಳಿಂದ ಕೀಟಗಳನ್ನು ದೂರವಿರಿಸಲು ನಾಲ್ಕು ತಾಸಿನವರೆಗೂ ಹತ್ತಿರ ಸುಳಿಯಗೊಡುವುದಿಲ್ಲ. ಬಟ್ಟೆಗಳಿಂದ ಮುಂದೆ ಸೂಚಿಸಿರುವ ಮಿಶ್ರಣ ಅಗತ್ಯ. ಬೆಂಜೈಲ್ ಬೆಂಜೋಯೇಟ್, ನಾರ್ಮಲ್ ಬ್ಯೂಟೈಲ್ ಅಸಿಟನಿಲೈಡ್, 2–ಬ್ಯೂಟೈಲ್ 2–ಈಥೈಲ್ 1:3 ಪ್ರೋಪೇನ್‌ಡಯೋಲ್ ತಲಾ ಶೇ.30 ಮತ್ತು ಟ್ವೀನ್–80ರ ಶೇ. 10 ಮಿಶ್ರಣಕ್ಕೆ ಎಮ್. 1960 ಎಂದು ಹೆಸರು. ಒಂದು ಚದರ ಗಜ ಬಟ್ಟೆಗೆ 18 ಗ್ರಾಂ ಮಿಶ್ರಣ ಸವರಿದರೆ 7 ದಿವಸಗಳ ಕಾಲ ಕೀಟಗಳು ಹತ್ತಿರ ಬರಲಾರವು. ನುಸಿಗುಳಿಗೆಯ ರೂಪದಲ್ಲಿ ನ್ಯಾಫ್ತಲೀನಿನ ಬಳಕ ನಮಗೆ ಚಿರಪರಿಚಿತವಾಗಿದೆ. ಒಂದು ಸಾಮಾನ್ಯ ಗಾತ್ರದ ಪೆಟ್ಟಿಗೆಯಲ್ಲಿರುವ ಬಟ್ಟೆಬರೆಗಳನ್ನು ಕಾಪಾಡಲು ಸುಮಾರು ಎರಡು ಪೌಂಡುಗಳಷ್ಟು ನ್ಯಾಫ್ತಲೀನ್ ಅಗತ್ಯ. ಆದರೆ ನಾವು ಇಷ್ಟು ಪ್ರಮಾಣದಲ್ಲಿ ಅದನ್ನು ಬಳಸದೆ ಇರುವುದರಿಂದ, ಅದು ಪರಿಣಾಮಕಾರಿ ಕೀಟನಿರೋಧಕವೆನಿಸಿಕೊಳ್ಳದೆ ಹೋಗಿದೆ. ಮಿಲಿಟರಿ ಬಳಕೆಯಲ್ಲಿರುವ ಇತರ ಕೀಟನಿರೋಧಕಗಳೆಂದರೆ ನಾರ್ಮಲ್ ಬ್ಯೂಟೈಲ್ ಅಸಿಟನಿಲೈಡ್, ನಾರ್ಮಲ್ ಪ್ರೋಪೈಲ್ ಅಸಿಟನಿಲೈಡ್ ಹೆಕ್ಸೈಲ್ ಮ್ಯಾಂಡಲೇಟ್ ಮತ್ತು ಉಂಡೆಕಲೀನಿಕ್ ಆಮ್ಲ.

ಸಾವಯವ ರಂಜಕಯುಕ್ತ ಕೀಟನಾಶಕಗಳು 1947ರಿಂದ ಈಚೆಗೆ ಸುಮಾರು 50 ಸಾವಿರ ರಂಜಕಯುಕ್ತ ಕೀಟನಾಶಕಗಳ ಶೋಧವಾಗಿದೆ. ಪ್ಯಾರಾಥಯೋನ್ ಮತ್ತು ಮೀಥೈಲ್ ಪ್ಯಾರಾಥಯೋನ್ ಎಂಬ ಎರಡು ವಸ್ತುಗಳ ವಿಶ್ವ ಉತ್ಪಾದನೆಯೇ 1958ರಲ್ಲಿ 2 ಕೋಟಿ ಪೌಂಡುಗಳಷ್ಟಿತ್ತು. ಬಿಸಿರಕ್ತದ ಪ್ರಾಣಿಗಳಿಗೆ ಇವು ನಂಜನ್ನುಂಟುಮಾಡುತ್ತವೆ. ಅಲ್ಪ ದುಷ್ಪರಿಣಾಮಕಾರಿ ಕೀಟನಾಶಕಗಳು ಇಲ್ಲದಿಲ್ಲ. ಅವುಗಳಲ್ಲಿ ಟೆಟ್ರಈಥೈಲ್‌ಪೈರೊಪಾಸ್ಫೇಟ್, ಕ್ಲೋರೊಥಯೋನ್ ಮ್ಯಾಲ ಥಯೋನ್. ಡಿ.ಡಿ.ವಿ.ಪಿ., ಡೆಲ್ನಾವ್, ಗುಥಯೋನ್, ಟ್ರೈಥಯೋನ್, ಇಥಯೋನ್, ಇ.ಪಿ.ಎನ್. ಮತ್ತು ಡಿಪ್ಟೆರೆಕ್ಸ್ ಇವನ್ನು ಹೆಸರಿಸಬಹುದು. ಷ್ರಾದನ್ ಕೀಟನಾಶಕದ ಸ್ಥಾನ ವಿಶಿಷ್ಟವಾದುದು. ಇದು ಚಿಮುಕಿಸಿದ ಸ್ಥಳಕ್ಕೆ ಮಾತ್ರ ಸೀಮಿತವಾಗದೆ, ಸಸ್ಯಗತವಾಗಿ ಅಲ್ಲಿ ಇನ್ನೂ ಉಗ್ರವಾದ ವಿಷವಾಗಿ ಮಾರ್ಪಟ್ಟು, ಸಸ್ಯದ್ರವವನ್ನು ಹೀರಲು ಬಂದ ಕೀಟಗಳ ಮಾರಣ ಹೋಮವಾಗುವುದು. ಸಸ್ಯ ಬೆಳೆದಂತೆಲ್ಲ ಅದರ ಶಾಖೋಪಶಾಖೆಗಳಿಗೂ ಹರಡಿ ರಕ್ಷಿಸುವುದು ಈ ಕೀಟನಾಶಕದ ವೈಶಿಷ್ಟ್ಯ. ಆದರೆ ಇತರ ಜಠರ ವಿಷಗಳಲ್ಲಿ ಹೀಗಾಗುವುದಿಲ್ಲ. ಸಿಂಪಡಿಸಿದ ಸ್ಥಳಕ್ಕೆ ಮಾತ್ರ ರಕ್ಷಣೆ ಸೀಮಿತವಾಗಿರುತ್ತದೆ. ಬೆಳೆದ ಭಾಗಗಳಿಗೆ ಯಾವ ರಕ್ಷಣೆಯೂ ಇರುವುದಿಲ್ಲ. ಇತ್ತೀಚಿಗೆ ಮಾರುಕಟ್ಟೆಗೆ ಬಂದಿರುವ ಡೆಮಟೋನ್, ಡಿ–ಸಿಸ್ಟನ್, ಥಿಮೆಟ್ ಮತ್ತು ಫಾಸ್ಡ್ರಿನ್‌ಗಳಿಗೆ ಷ್ರಾದನ್ನಷ್ಟೇ ಕೀಟನಾಶಕ ಗುಣವಿದೆಯೆಂದು ವರದಿಯಾಗಿದೆ.

ಕೀಟನಾಶಕಗಳ ಪ್ರಯೋಗ ಕಾಲದಲ್ಲಿ ಗಮನಿಸಬೇಕಾದ ಕೆಲವಂಶಗಳಿವೆ: 1 ದೂಳಿನ ರೂಪದಲ್ಲಿ ಬಳಸುತ್ತಿದ್ದರೆ ಮುಂಜಾನೆ ಪ್ರಯೋಗಿಸುವುದು ಉತ್ತಮ. ಆಗ ಗಿಡದ ಮೇಲಿರುವ ಹಿಮದ ಹನಿಗಳಿಂದ ಅದು ಗಿಡಕ್ಕೆ ಅಂಟಿಕೊಂಡು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. 2 ಬೀಸುಗಾಳಿ ಇರದಿರುವುದು ಲೇಸು. ಅಂಥ ಸಮಯವನ್ನೇ ಕಾದು ಪ್ರಯೋಗಿಸುವುದು ವಿವೇಕ. ಇಲ್ಲದಿದ್ದರೆ ಬಹುಭಾಗ ಕೀಟನಾಶಕ ಗಾಳಿಯ ಪಾಲಾಗುವುದು. 3 ಈ ಕಾರಣಗಳಿಂದ ದೂಳಿನ ರೂಪದಲ್ಲಿ ಉಪಯೋಗಿಸುವುದಕ್ಕಿಂತ ಸಿಂಪಡಿಸುವ ಪದ್ಧತಿ ಉತ್ತಮ. 4 ಯಾವ ಕೀಟದ ನಾಶಕ್ಕೆ ಹವಣಿಸುತ್ತಿದ್ದೇವೆಯೋ, ಅದು ತನ್ನ ಜೀವಿತ ಚಕ್ರದ ಯಾವ ಘಟ್ಟದಲ್ಲಿದೆ ಮತ್ತು ಯಾವ ಹಂತದಲ್ಲಿ ಪ್ರಯೋಗಿಸಿದರೆ ಅದಕ್ಕೆ ಮಾರಕವಾಗುವುದು ಎಂಬುದರ ಅರಿವು ಅಗತ್ಯ. 5 ಬರೀ ಕೀಟನಾಶಕದ ಬದಲು ಅದರೊಡನೆ ನಿರ್ದಿಷ್ಟ ರಾಸಾಯನಿಕಗಳನ್ನು ಕೂಡಿಸಿದರೆ, ಮಿಶ್ರಣದ ಕ್ರಿಯಾಶಕ್ತಿ ವೃದ್ಧಿಯಾಗುವುದು ಕಂಡುಬಂದಿದೆ. ಇಂಥ ಸ್ವಯಂ ಕೀಟನಾಶಕಗಳಲ್ಲದ ಉತ್ತೇಜಕಗಳಿಗೆ ಸಿನೆರ್ಜಿಸ್ಟ್ಸ್ ಎನ್ನುತ್ತಾರೆ. ಪಿಪೆರೊನಿಲ್ ಬ್ಯೂಟಾಕ್ಸೈಡ್ ಮತ್ತು ಸೆಸಾಕ್ಸೇನ್ ಎರಡು ಪ್ರಮುಖ ಪೈರೆತ್ರಮ್ ಸಿನೆರ್ಜಿಸ್ಟುಗಳು.



ಆಲ್ಫಾ ನ್ಯಾಫ್ಥೈಲ್ ಥಯೊ ಯೂರಿಯಾ

**ಇಲಿ ಪಾಷಾಣಗಳು:** ಇಲಿ ಪಾಷಾಣಗಳನ್ನೂ ಕೀಟನಾಶಕಗಳ ವ್ಯಾಪ್ತಿಗೆ ಒಳಪಡಿಸುವುದು ಆಚರಣೆಗೆ ಬಂದಿದೆ. ಆದ್ದರಿಂದ ಅವನ್ನು ಇಲ್ಲಿ ಹೆಸರಿಸಬಹುದು. ಆಂಟೂ (ಆಲ್ಫಾ ನ್ಯಾಫ್ಥೈಲ್ ಥಯೊಯೂರಿಯಾ) ಒಂದು ಪ್ರಸಿದ್ಧವಾದ ಇಲಿಪಾಷಾಣ. ಇದು ಮಾನವನಿಗೆ ನಿರುಪದ್ರವಿಯಾದ್ದರಿಂದ ಬಳಸಲು ಅಡ್ಡಿಯಿಲ್ಲ. ಬೇರಿಯಂ ಕಾರ್ಬೊನೇಟ್ ಮತ್ತೊಂದು. ಇದರ ಬಳಕೆ ಹೆಚ್ಚುತ್ತಿದೆ. ಸೋಡಿಯಂ ಫ್ಲೋರಸಿಟೇಟ್‌ನಿಂದಲೂ ಉತ್ತಮ ಫಲಿತಾಂಶ ದೊರೆತಿದೆ. ಆದರೆ ಇದು ನಮಗೂ ಕೆಡುಕುಮಾಡಬಹುದಾದ್ದರಿಂದ ತಜ್ಞರ ನೇತೃತ್ವದಲ್ಲಿ ಮಾತ್ರ ಬಳಸಬಹುದು. ವ್ಯಾಪಕ ಪ್ರಯೋಗಕ್ಕೆ ಥ್ಯಾಲಿಯಂ ಸಲ್ಫೇಟ್, ಜಿಂಕ್ ಫಾಸ್ಫೇಟ್ ಮತ್ತು ಸ್ಟ್ರಿಕ್ನೈನ್ ಇಂದಿಗೂ ಉತ್ತಮ ಇಲಿ ಪಾಷಾಣಗಳು. (ಎಚ್.ಜಿ.ಎಸ್.)

**ಕೀಟಭಕ್ಷಕ ಕೀಟಗಳು :** ಇತರ ಜಾತಿಯ ಸಣ್ಣ ಕೀಟಗಳನ್ನು ತಿಂದು ಜೀವಿಸುವ ಕೀಟಗಳು. ಇವು ಸಾಧಾರಣವಾಗಿ ಚಟುವಟಿಕೆಯುಳ್ಳವು. ಹೆಚ್ಚು ಕಾಲ ಬೇಕಾಗುವ ಜೀವನ ಚರಿತ್ರೆ ಇವುಗಳ ವೈಶಿಷ್ಟ್ಯ. ಎಲ್ಲ ಕೀಟ ಗಣಗಳಲ್ಲಿಯೂ ಕೀಟಭಕ್ಷಕ ಕೀಟಗಳುಂಟು. ಕೆಲವು ಇತರ ಜೀವಂತ ಕೀಟಗಳನ್ನು ತಿಂದು ಜೀವಿಸುತ್ತವೆ. ಮತ್ತೆ ಕೆಲವಕ್ಕೆ ಸತ್ತ ಪ್ರಾಣಿಗಳು ಅಥವಾ ಕೊಳೆತ ಸಸ್ಯಗಳೇ ಮುಖ್ಯ ಆಹಾರ. ಕೀಟಭಕ್ಷಕ ಕೀಟಗಳಲ್ಲಿ ಈ ಕೆಳಕಂಡವು ಮುಖ್ಯವಾದವು: ಓಡೊನೇಟ ಗಣದ ಕೊಡತಿಕೀಟಗಳು, ನ್ಯೂರಾಪ್ಟರ ಗಣದ ಸಸ್ಯ ಹೇನು ಸಿಂಹಗಳು, ಕೋಲಿಯಾಪ್ಟರ ಗಣದ ನೆಲದುಂಬಿಗಳು, ಡಿಪ್ಟರ ಗಣದ ಹೂನೊಣಗಳು, ಮ್ಯಾಂಟಾಯ್ಡಿಯ ಗಣದ ಒಂಟೆಹುಳು ಅಥವಾ ಮಳ್ಳಿ, ಹೈಮೆನಾಪ್ಟರ ಗಣದ ಕಣಜಗಳು ಮತ್ತು ಅಸಿಲಿಡೀ ಗಣದ ದರೋಡೆ ನೊಣಗಳು.

ಕೀಟಭಕ್ಷಕ ಕೀಟಗಳು ಮನುಷ್ಯ ಬೆಳೆಯುವ ಸಸ್ಯಗಳನ್ನು ನಾಶಮಾಡುವ ಕೀಟಗಳನ್ನು ತಿಂದು ಅವನಿಗೆ ಸಹಕಾರಿಗಳಾಗಿವೆ. ಕೊಡತಿಕೀಟಗಳು ಹಾರುವಾಗಲೆ ತಮಗಿಂತ ಸಣ್ಣಗಾತ್ರದ ಇತರ ಕೀಟಗಳನ್ನು ಹಿಡಿದು ತಿನ್ನುತ್ತವೆ. ನೊಣಗಳು ಮತ್ತು ಸೊಳ್ಳೆಗಳು ಇವುಗಳ ಅಚ್ಚುಮೆಚ್ಚಿನ ಉಣಿಸು. ಒಂದು ಕೊಡತಿಕೀಟ ಎರಡು ಘಂಟೆಗಳ ಅವಧಿಯಲ್ಲಿ ಸುಮಾರು ನಲವತ್ತು ನೊಣಗಳನ್ನೂ, ಕೆಲವು ನಿಮಿಷಗಳಲ್ಲಿ ನೂರಾರು ಸೊಳ್ಳೆಗಳನ್ನೂ ತಿನ್ನುತ್ತವೆಯೆಂದು ಅಂದಾಜಿದೆ. ನೆಲದುಂಬಿಗಳು (ಗ್ರೌಂಡ್ ಬೀಟಲ್ಸ್) ರೈತನ ಅತ್ಯುತ್ತಮ ಸ್ನೇಹಿತರೆಂದು ಹೆಸರುಗಳಿಸಿವೆ. ವಯಸ್ಕ ಕೀಟಗಳು ಮತ್ತು ಇವುಗಳ ಮರಿಗಳು ಮಾನವನಿಗೆ ವಿವಿಧ ರೀತಿಯಲ್ಲಿ ಕೆಡುಕು ಮಾಡುವ ಕೀಟಗಳು ಮತ್ತು ಜಮೀನುಗಳಲ್ಲಿರುವ ದುಂಬಿಗಳು ಮೊದಲಾದುದನ್ನು ತಿಂದು ಜೀವಿಸುತ್ತವೆ. ಮರಿಹುಳು ಕಂಬಳಿಹುಳುವನ್ನು ಹೋಲುತ್ತವೆ. ಮರಿಹುಳುಗಳ ದೇಹ ಉದ್ದವಾಗಿಯೂ ತೆಳುವಾಗಿಯೂ ಸ್ವಲ್ಪಮಟ್ಟಿಗೆ ಚಪ್ಪಟೆಯಾಗಿಯೂ ಇದೆ. ಬಾಲ ಚೂಪಾಗಿದ್ದು ಅದರ ತುದಿಯಲ್ಲಿ ಎರಡು ತೆಳುವಾದ ಮತ್ತು ಚೂಪಾದ ಮುಳ್ಳಿನಂಥ ರಚನೆಗಳಿರುತ್ತವೆ. ಇವು ಹಗಲು ವೇಳೆಯಲ್ಲಿ ಕಲ್ಲುಸಂದಿ. ತೊಗಟೆ, ಕೊಳೆಯುತ್ತಿರುವ ಮರಗಳಲ್ಲಿ ಹುದುಗಿದ್ದು ರಾತ್ರಿ ವೇಳೆಯಲ್ಲಿ ಬೇಟೆಯಾಡುತ್ತವೆ.

ಒಡತಿ ಜೀರುಂಡೆಗಳು (ಲೇಡಿ ಬರ್ಡ್ ಬೀಟಲ್ಸ್) ಪ್ರೌಢಕೀಟಗಳು ಮತ್ತು ಮರಿಗಳು ವಿನಾಶಕಾರಿಗಳಾದ ಹುರುಪೆ ಕೀಟಗಳು, ಸಸ್ಯಹೇನುಗಳು ಮತ್ತು ಇತರ ಮೃದುದೇಹದ ಕೀಟಗಳನ್ನೂ ಅವುಗಳ ಮೊಟ್ಟೆಗಳನ್ನೂ ತಿನ್ನುವುದರಿಂದ ಉಪಯುಕ್ತವಾದವು. ಮರಿಹುಳುಗಳ ದೇಹ ಕಪ್ಪಗಿದ್ದು ಕೆಲವು ವೇಳೆ ಅದರ ಮೇಲೆ ಹಳದಿ ಅಥವಾ ನೀಲಿಬಣ್ಣದ ಚುಕ್ಕೆಗಳಿರುತ್ತವೆ. ಸಸ್ಯಗಳ ಕಾಂಡ ಮತ್ತು ಎಲೆಗಳ ಮೇಲೆ ಆಹಾರಕ್ಕಾಗಿ ತೆವಳುತ್ತವೆ. ಮರಿಹುಳುಗಳು ಆಹಾರ ಸಿಕ್ಕುವ ಸ್ಥಳದಲ್ಲಿ ಕೋಶಾವಸ್ಥೆಯನ್ನು ಕಳೆಯುವುವು.

ಹೂ ನೊಣಗಳು (ಹಾವರ್ ಅಥವಾ ಫ್ಲವರ್ ಫ್ಲೈಸ್): ಇವುಗಳ ಮರಿಗಳು ಅತಿಮುಖ್ಯ ಕೀಟಭಕ್ಷಕಗಳು. ಈ ಮರಿಹುಳುಗಳು ಸಸ್ಯಹೇನುಗಳನ್ನು ಹಿಡಿದು ಅವುಗಳ ಸತ್ತ್ವವನ್ನು ಹೀರಿ ಹೊರಚರ್ಮವನ್ನು ಬಿಸುಡುತ್ತವೆ. ಬಟಾಣಿ ಸಸ್ಯಗಳನ್ನು ನಾಶ ಪಡಿಸುವ ಲಕ್ಷಾಂತರ ಸಸ್ಯಹೇನುಗಳನ್ನು ಹೆಚ್ಚುಕಡಿಮೆ ಮಿನಿಟಿಗೆ ಒಂದರಂತೆ ನಾಶ ಮಾಡುತ್ತವೆ. ಇವುಗಳ ವಯಸ್ಕ ಕೀಟಗಳು ಕೀಟಭಕ್ಷಕಗಳಲ್ಲ.

**ಒಂಟೆಹುಳು:** ನೊಣ, ಮಿಡತೆ, ಚಿಟ್ಟೆ ಮತ್ತು ಇತರ ಜಾತಿಯ ಕೀಟಗಳನ್ನು ತಿನ್ನುತ್ತದೆ. ಇದು ಸಾಧಾರಣವಾಗಿ ಉಷ್ಣವಲಯವಾಸಿ. ಭಾರತದಲ್ಲಿ ಸುಮಾರು 100ಕ್ಕೂ ಹೆಚ್ಚು ಪ್ರಭೇದಗಳಿವೆ.

ಕಣಜಗಳೂ ಕೀಟಾಹಾರಿಗಳೇ. ಸಸ್ಯಗಳನ್ನು ನಾಶಪಡಿಸುವ ಕಂಬಳಿ ಹುಳುಗಳನ್ನು ಹುಡುಕಿ ತಿನ್ನುವುದರಿಂದ ಅತಿ ಸಹಾಯಕವಾಗಿವೆ. ಕೊಂದ ನೂರಾರು ಸಣ್ಣ ಕಂಬಳಿ ಹುಳುಗಳನ್ನು ತಾವು ಮಣ್ಣಿನಿಂದ ಕಟ್ಟಿದ ತಮ್ಮ ಗೂಡುಗಳಲ್ಲಿ ಶೇಖರಿಸಿ ತಮ್ಮ ಮರಿಗಳಿಗೆ ಆಹಾರವನ್ನಾಗಿ ಒದಗಿಸುತ್ತವೆ. ದರೋಡೆ ನೊಣಗಳೆಲ್ಲವೂ (ರಾಬರ್ ಫ್ಲೈಸ್) ಕೀಟಭಕ್ಷಕಗಳು. ಇವು ಇತರ ಸಣ್ಣ ಎರೆ ಕೀಟಗಳ ಮೇಲೆ ಬಿದ್ದು ದಾಳಿ ಮಾಡಿ ಕೊಲ್ಲುವುದರಿಂದ ಇವಕ್ಕೆ ಈ ಹೆಸರು ಬಂದಿದೆ. ಇವುಗಳ ಮರಿಗಳು ಗೊಬ್ಬರದ ಗುಂಡಿಗಳಲ್ಲಿಯೂ ಕೊಳೆತು ನಾರುವ ಮಣ್ಣಿನಲ್ಲಿಯೂ ಜೀವಿಸಿದ್ದು ಇತರ ಜಾತಿಯ ಕೀಟಗಳ ಮರಿಗಳನ್ನು ನಾಶಪಡಿಸುತ್ತವೆ. ಭೂಮಿಯಲ್ಲಿ ಜೀವಿಸುವ ದುಂಬಿಗಳ ಮರಿಗಳು ಇವುಗಳ ಅಚ್ಚುಮೆಚ್ಚಿನ ಆಹಾರ. (ಪಿ.ಎ.ಆರ್.)

**ಕೀಟಭಕ್ಷಕ ಸಸ್ಯಗಳು :** ಕೀಟ, ವಿವಿಧ ಬಗೆಯ ಡಿಂಭಗಳು, ಕ್ರಿಮಿಗಳು ಮುಂತಾದವನ್ನು ಸೆರೆಹಿಡಿದು, ಕಬಳಿಸಿ, ಜೀರ್ಣಿಸಿಕೊಳ್ಳುವ ಸಸ್ಯಗಳು (ಇನ್ಸೆಕ್ಟಿವೊರಸ್ ಪ್ಲಾಂಟ್ಸ್). ಇವು ತಮಗೆ ಬೇಕಾದ ಸಾರಜನಕಯುಕ್ತ ಆಹಾರವನ್ನು ಈ ವಿಧಾನದಿಂದ ಪೂರೈಸಿಕೊಳ್ಳುತ್ತವೆ. ಬಹುಪಾಲು ಸಸ್ಯಗಳಿಗೆ ಭೂಮಿಯೇ ಸಾರಜನಕದ ಮೂಲ. ಅವು ತಮ್ಮ ಬೇರಿನ ಸಹಾಯದಿಂದ ಭೂಮಿಯಲ್ಲಿ ವಿವಿಧ ರೂಪದಲ್ಲಿರುವ ಸಾರಜನಕವನ್ನು ಹೀರಿಕೊಳ್ಳುತ್ತವೆ. ಆದರೆ ಕೀಟಭಕ್ಷಕ ಸಸ್ಯಗಳು ಸಾಮಾನ್ಯವಾಗಿ ಯಾವಾಗಲೂ ನೀರು ನಿಂತಿರುವ, ಸಾರಜನಕ ಕಡಿಮೆಯಿರುವ ಜೌಗು ಪ್ರದೇಶಗಳಲ್ಲಿ ಬೆಳೆಯುವುದರಿಂದ ಅವಕ್ಕೆ ಸಾರಜನಕದ ಕೊರತೆಯಿರುತ್ತದೆ. ಅಲ್ಲದೆ ಇಂಥ ಪ್ರದೇಶಗಳ ಮಣ್ಣಿನ pH ಕೂಡ ಬಹಳ ಕಡಿಮೆಯಿದ್ದು ಸಾರಜನಕವನ್ನು ಸ್ಥಿರೀಕರಿಸುವ ಸಾಮರ್ಥ್ಯವುಳ್ಳ ಬ್ಯಾಕ್ಟೀರಿಯಗಳು ಇಂಥಲ್ಲಿ ನೆಲೆಸಿರುವುದಿಲ್ಲ. ಹೀಗಾಗಿ ಕೀಟಭಕ್ಷಕ ಸಸ್ಯಗಳು ಸಾರಜನಕದ ಅಭಾವಕ್ಕೊಳಗಾಗುತ್ತವೆ. ಈ ಕೊರೆಯನ್ನು ನೀಗಿಸಿಕೊಳ್ಳಲು ಇವು ಕೀಟಗಳನ್ನು ಹಿಡಿದು ಜೀರ್ಣಿಸಿಕೊಳ್ಳುತ್ತವೆ. ಕೀಟಗಳೊಂದೇ ಅಲ್ಲದೆ ಎರೆಹುಳು, ನೆಮಟೋಡ ಗುಂಪಿಗೆ ಸೇರಿದ ಪ್ರಾಣಿಗಳು, ಸಹಸ್ರಪದಿ ಮುಂತಾದ ಸಂಧಿಪದಿಗಳು, ಕಪ್ಪೆಮರಿ ಮುಂತಾದ ಪ್ರಾಣಿಗಳನ್ನೂ ಇವು ಭಕ್ಷಿಸುವುದು ಕಂಡುಬಂದಿದೆ. ಇದರಿಂದ ಇವನ್ನು ಮಾಂಸಾಹಾರಿ ಸಸ್ಯಗಳೆಂದೂ ಕರೆಯುವುದುಂಟು. ಕೀಟಭಕ್ಷಕ ಸಸ್ಯಗಳಿಗೆ ಕೀಟಗಳು ಅತ್ಯಗತ್ಯವೇನಲ್ಲ ಎಂದು ಪ್ರಾಯೋಗಿಕವಾಗಿ ತೋರಿಸಲಾಗಿದ್ದರೂ ಕೀಟಗಳ ಪೂರೈಕೆ ಇದ್ದಾಗ ಬೆಳೆದಷ್ಟು ಹುಲುಸಾಗಿ ಅವಿಲ್ಲದಾಗಿ ಬೆಳೆಯಲಾರವು.

ಸು. 500ಕ್ಕೂ ಮೇಲ್ಪಟ್ಟು ವಿವಿಧ ಬಗೆಯ ಕೀಟಭಕ್ಷಕ ಸಸ್ಯಗಳುಂಟು. ಇವುಗಳಲ್ಲಿ ಬಹುಪಾಲು ಹೂಬಿಡುವ ಸಸ್ಯಗಳಾಗಿದ್ದು ಪ್ರಮುಖವಾಗಿ ಡ್ರಾಸೆರೇಸೀ ಸರಸೀನಿಯೇಸೀ, ಲೆಂಟಿಬ್ಯುಲೇರಿಯೇಸೀ, ನೆಪೆಂತೇಸೀ, ಬಿಬ್ಲಿಡೇಸೀ ಮತ್ತು ಸೆಫಲೋಟೇಸೀ ಕುಟುಂಬಗಳಿಗೆ ಸೇರಿವೆ. ಕೀಟಗಳ ಹೊರಮೈಮೇಲೊ ಇಲ್ಲವೆ ಒಳಗೊ ಪರಾವಲಂಬಿಗಳಾಗಿ ಬೆಳೆಯುವ ಕೆಲವು ಶಿಲೀಂಧ್ರಗಳನ್ನೂ ಕೀಟಭಕ್ಷಕ ಸಸ್ಯಗಳೆಂದೇ ಪರಿಗಣಿಸಬಹುದಾದರೂ ಕೆಲವು ಬಗೆಯವನ್ನು ಮಾತ್ರ ಖಚಿತವಾಗಿ ಕೀಟಭಕ್ಷಕಗಳೆಂದು ಹೇಳಬಹುದು. ಇಂಥ ಶಿಲೀಂಧ್ರಗಳಲ್ಲಿ ಕೀಟಗಳನ್ನು ಸೆರೆಹಿಡಿಯುವುದಕ್ಕೆಂದಿರುವ ವಿಶಿಷ್ಟ ಬಗೆಯ ರಚನೆಗಳನ್ನು ನೋಡಬಹುದು. ಈ ಶಿಲೀಂಧ್ರಗಳಲ್ಲಿ ಮುಖ್ಯವಾದವು ಆರ್ತ್ರೊಬಾಟ್ರಿಸ್ ಆಲಿಗೋಸ್ಪೊರ, ಜ಼ೂಫೇಗಸ್ ಇನ್‌ಸಿಡಿಯನ್ಸ್ ಮತ್ತು ಸಾಮರ್‌ಸ್ಟಾರ್ಫಿಯ ಸ್ಪೈನೋಸ ಎಂಬ ಪ್ರಭೇದಗಳು. ಇವುಗಳ ದೇಹದಲ್ಲಿ ಸೂಕ್ಷ್ಮವಾದ ಕುಣಿಕೆಗಳಂಥ ರಚನೆಗಳಿದ್ದು ಇವುಗಳ ಸಹಾಯದಿಂದ ಶಿಲೀಂಧ್ರಗಳು ಸೂಕ್ಷ್ಮಗಾತ್ರದ ನೆಮಟೋಡ್ ಹುಳುಗಳನ್ನು ಹಿಡಿಯುತ್ತವೆ ಎಂದು ಗೊತ್ತಾಗಿದೆ.

ಹೂಬಿಡುವ ಕೀಟಭಕ್ಷಕ ಸಸ್ಯಗಳಲ್ಲಿ ಮುಖ್ಯವಾದವು ಇವು–ಡ್ರಾಸೆರೇಸೀ ಕುಟುಂಬಕ್ಕೆ ಸೇರಿದ ಡ್ರಾಸಿರ (ಪ್ರಪಂಚದಾದ್ಯಂತ ಇದೆ), ಡ್ರಾಸೊಫಿಲಂ (ಮೆಡಿಟರೇನಿಯನ್ ಪ್ರದೇಶ, ಉತ್ತರ ಆಫ್ರಿಕ, ಮೊರಾಕೊ ದೇಶಗಳ ವಾಸಿ), ಡೈಯೋನಿಯ (ಉತ್ತರ ಅಮೆರಿಕದ ಉತ್ತರ ಕ್ಯಾರೊಲಿನ ರಾಜ್ಯದ ನಿವಾಸಿ), ಆಲ್ಡ್ರೊವ್ಯಾಂಡ (ಪಶ್ಚಿಮದಲ್ಲಿ ಐಬೀರಿಯದಿಂದ ಹಿಡಿದು ಪೂರ್ವದಲ್ಲಿ ಜಪಾನ್‌ವರೆಗೂ ವ್ಯಾಪಿಸಿದೆ), ಬಿಬ್ಲಿಡೇಸೀ ಕುಟುಂಬದ ಬಿಬ್ಲಿಸ್, ಸರಸೀನಿಯೇಸೀ ಕುಟುಂಬಕ್ಕೆ ಸೇರಿದ ಸರಸೀನಿಯ, ಡಾರ್ಲಿಂಗ್ಟೋನಿಯ (ಉತ್ತರ ಅಮೆರಿಕದ ನಿವಾಸಿಗಳು), ಹೀಲಿಯಾಂಫೋರ (ಗಯಾನ ಮತ್ತು ವೆನಿಜ಼ುವೇಲಗಳ ನಿವಾಸಿ), ನೆಪೆಂತೇಸೀ ಕುಟುಂಬದ ನೆಪೆಂತೆಸ್ (ಶ್ರೀಲಂಕ, ಅಸ್ಸಾಂ, ಮಲಯ, ಮೆಸ್ಕಾರ್, ಉತ್ತರ ಆಸ್ಟ್ರೇಲಿಯ, ಭಾರತದಲ್ಲಿ ಬಂಗಾಲ ಮುಂತಾದ ಪ್ರದೇಶಗಳ ನಿವಾಸಿ); ಸೆಫಲೋಟೇಸೀ ಕುಟುಂಬದ ಸೆಫಲೋಟಸ್; ಲೆಂಟಿಬ್ಯುಲೇರಿಯೇಸೀ ಕುಟುಂಬಕ್ಕೆ ಸೇರಿದ ಪಿಂಗಿಕ್ಯುಲ (ದಕ್ಷಿಣ ಅಮೆರಿಕದ ಆಂಡೀಸ್ ಪರ್ವತಶ್ರೇಣಿಯ ನಿವಾಸಿ), ಯುಟ್ರಿಕ್ಯುಲೇರಿಯ (ಪ್ರಪಂಚದಾದ್ಯಂತ ಇದರ ವ್ಯಾಪ್ತಿ ಇದೆ), ಮತ್ತು ಜೆನ್ಲಿಸಿಯ (ಆಫ್ರಿಕ ಹಾಗೂ ದಕ್ಷಿಣ ಅಮೆರಿಕದ ಉಷ್ಣಪ್ರದೇಶಗಳ ನಿವಾಸಿ).

ಎಲ್ಲ ಬಗೆಯ ಕೀಟಭಕ್ಷಕ ಸಸ್ಯಗಳಲ್ಲೂ ಎಲೆಯೇ ಕೀಟಗಳನ್ನು ಹಿಡಿಯುವ ಮತ್ತು ಜೀರ್ಣಿಸುವ ಕಾರ್ಯವನ್ನು ನಿರ್ವಹಿಸುವುದರಿಂದ, ಬಹಳ ಮುಖ್ಯವಾದ ಅಂಗವೆನಿಸಿದೆ. ಇದು ತನ್ನ ಕಾರ್ಯನಿರ್ವಹಣೆಗಾಗಿ ಅನೇಕ ರೀತಿಯಲ್ಲಿ ಮಾರ್ಪಾಡಾಗಿದ್ದು ತನ್ನ ಆಕಾರ ಹಾಗೂ ಒಳರಚನೆಯಲ್ಲಿ ವೈವಿಧ್ಯವನ್ನು ಪ್ರದರ್ಶಿಸುತ್ತದೆ. ಕೆಲವು ಬಗೆಯ ಕೀಟಭಕ್ಷಕ ಸಸ್ಯಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಡ್ರಾಸಿರ ಗಿಡದ ಎಲೆಗಳು ಹೊಳೆಯುವ ಕೆಂಪುಬಣ್ಣದವಾಗಿ ಸಣ್ಣ ಸಣ್ಣ ಚಮಚಗಳಂತಿದ್ದು ಅವುಗಳ ಮೇಲೆಲ್ಲ ಗುಂಡುಸೂಜಿಯಂಥ ಸೂಕ್ಷ್ಮವಾದ ಕೂದಲುಗಳಿವೆ (ಟೆಂಟಕಲ್ಸ್). ಒಂದೊಂದು ಕೂದಲಿನ ತುದಿಯಲ್ಲೂ ಅಂಟು ಪದಾರ್ಥವೊಂದನ್ನು ಸ್ರವಿಸುವ ಗ್ರಂಥಿಗಳಿವೆ. ಅಂಟಿನಿಂದಾವೃತವಾದ ಈ ಕೂದಲುಗಳಿಂದಾಗಿ ಬಿಸಿಲಿನಲ್ಲಿ ಗಿಡ ಬಲುಸುಂದರವಾಗಿ ಹೊಳೆಯುತ್ತಿರುತ್ತದೆ. ಅಂಟು ಪದಾರ್ಥವನ್ನು ಮಕರಂದವೆಂದು ಭ್ರಮಿಸಿ, ಎಲೆಯ ಕೆಂಪುಬಣ್ಣದಿಂದ ಆಕರ್ಷಿತವಾಗಿ ಕೀಟಗಳು ಎಲೆಯ ಮೇಲೆ ಕುಳಿತಾಗ ಅಂಟುದ್ರವಕ್ಕೆ ಅಂಟಿಕೊಳ್ಳುತ್ತವೆ. ಕೆಲವು ಕ್ಷಣಗಳಲ್ಲಿ ಕೂದಲುಗಳೆಲ್ಲ ಕೀಟದ ಮೇಲೆ ಮುಚ್ಚಿಕೊಂಡು ಅದನ್ನು ಸೆರೆಸಿಕ್ಕಿಸಿಕೊಳ್ಳುತ್ತವೆ. ಕ್ರಮೇಣ ಜೀರ್ಣಕಾರಕ ಕಿಣ್ವಗಳನ್ನು

ಡ್ರಾಸಿರ (ಸನ್‌ಡ್ಯೂ)

ಸ್ರವಿಸಿ ಅದನ್ನು ಜೀರ್ಣಿಸಿ ಅದರಿಂದ ಸಾರಜನಕವನ್ನು ಹೀರಿಕೊಳ್ಳುತ್ತವೆ. ಕೀಟವೆಲ್ಲ ಜೀರ್ಣವಾದ ಅನಂತರ ಕೂದಲುಗಳು ಮತ್ತೆ ನೆಟ್ಟಗಾಗುತ್ತವೆ. ಡ್ರಾಸಿರದಲ್ಲಿ ಹಲವಾರು ಪ್ರಭೇದಗಳಿದ್ದು ಕರ್ನಾಟಕದಲ್ಲಿ ಡ್ರಾ. ಇಂಡಿಕ, ಡ್ರಾ. ಬರ್ಮಾನಿಯೈ ಮತ್ತು ಡ್ರಾ. ಪೆಲ್ಟೇಟ ಎಂಬ ಪ್ರಭೇದಗಳು ಬೆಳೆಯುತ್ತವೆ. ಇದಕ್ಕೆ ಇಂಗ್ಲಿಷಿನಲ್ಲಿ ಸನ್‌ಡ್ಯೂ ಎಂಬ ಸಾಮಾನ್ಯ ಬಳಕೆಯ ಹೆಸರಿದೆ.

ಯುಟ್ರಿಕ್ಯುಲೇರಿಯ ಜಾತಿ ಸಂಪೂರ್ಣ ಜಲವಾಸಿ ಇಲ್ಲವೆ ಜೌಗು ಭೂಮಿಯಲ್ಲಿ ಬೆಳೆಯುತ್ತದೆ. ಇದರಲ್ಲಿ ಎಲೆಗಳು ಬುರುಡೆಗಳಂತೆ (ಬ್ಲಾಡರ್) ಮಾರ್ಪಾಟಾಗಿವೆ. ಒಂದೊಂದರಲ್ಲೂ ಒಂದು ಕವಾಟದ್ವಾರವೂ ದ್ವಾರದ ಬಳಿ ದಟ್ಟವಾದ ಬಹುಕೋಶಮಯ ಕೂದಲುಗಳೂ ಇವೆ. ನೀರಿನಲ್ಲಿ ಈಜುವ ಡಿಂಭಗಳು, ಪ್ರೋಟೋಜ಼ೋವ ಪ್ರಾಣಿಗಳು ಇವುಗಳೊಳಕ್ಕೆ ಹೊಕ್ಕು ಸಿಕ್ಕಿಹಾಕಿಕೊಂಡು ಬಿಡುತ್ತವೆ. ಒಮ್ಮೆ ಒಳ ಹೊಕ್ಕರೆ ಮರಳಿ ಹೊರಕ್ಕೆ ಬರುವುದು ಅಸಾಧ್ಯ. ಅನಂತರ ಬುರುಡೆಯ ಒಳ ಮೈಮೇಲಿರುವ ಗ್ರಂಥಿಗಳು ಜೀರ್ಣರಸವನ್ನು ಸ್ರವಿಸಿ ಪ್ರಾಣಿಗಳನ್ನು ಅರಗಿಸಿಕೊಳ್ಳುತ್ತವೆ. ಯುಟ್ರಿಕ್ಯುಲೇರಿಯದ ಎಲೆಗಳು ಬುರುಡೆಗಳಂತಿರುವುದರಿಂದ ಇದನ್ನು ಸಾಮಾನ್ಯ ಇಂಗ್ಲಿಷಿನಲ್ಲಿ ಬ್ಲಾಡರ್‌ವರ್ಟ್ ಎನ್ನಲಾಗುತ್ತದೆ. ಇದರಲ್ಲೂ ಪ್ರಪಂಚಾದ್ಯಂತ ಸು. 250 ಪ್ರಭೇದಗಳಿದ್ದು ಕರ್ನಾಟಕದಲ್ಲಿ ಸುಮಾರು 14 ಪ್ರಭೇದಗಳು ಕಾಣಬರುತ್ತವೆ.

ನೆಪೆಂತೆಸ್ ಜಾತಿ ಒಂದು ಬಗೆಯ ಬಳ್ಳಿ. ಇದರ ಎಲೆಗಳು ಕೀಟಗಳನ್ನು ಹಿಡಿಯುವುದರಲ್ಲಿ ಪರಿಪೂರ್ಣತೆಯನ್ನು ಪಡೆದಿವೆ ಎನ್ನಬಹುದು. ಎಲೆಯ ತೊಟ್ಟು ಕುಡಿಬಳ್ಳಿಯಂತಿದ್ದು ಆಸರೆಗಳನ್ನು ಹಿಡಿದು ಬೆಳೆಯಲು ಸಹಕಾರಿಯಾಗಿದೆ. ಪರ್ಣಭಾಗ (ಲೆಮೈನ) ಹೂಜಿಯಂಥ ರಚನೆಯಾಗಿ ಮಾರ್ಪಟ್ಟಿದೆ. ಇದರಿಂದಲೇ ಈ ಗಿಡಕ್ಕೆ ಇಂಗ್ಲಿಷಿನಲ್ಲಿ ಪಿಚರ್‌ಪ್ಲಾಂಟ್ ಎನ್ನುತ್ತಾರೆ. ಹೂಜಿಯ ಆಳ ಸು. 20 ಸೆಂಮೀ. ಹೂಜಿಗೆ ಬಣ್ಣಬಣ್ಣದ ಆಕರ್ಷಕವಾದ ಮುಚ್ಚಳವಿದೆ. ಮುಚ್ಚಳಕ್ಕೆ ಮುಚ್ಚುವ ಮತ್ತು ತೆರೆಯುವ ಸಾಮರ್ಥ್ಯವಿಲ್ಲ. ಇದು ಕೀಟಗಳನ್ನು ಆಕರ್ಷಿಸುವ ಕಾರ್ಯವನ್ನುಮಾತ್ರ ನಿರ್ವಹಿಸುತ್ತದೆ. ಹೂಜಿಯ ಬಾಯಿ ಬಳಿ ಒಳಮೈಮೇಲೆ ಒಳಮುಖವಾಗಿರುವ ಕೂದಲುಗಳೂ ಒಂದು ಬಗೆಯ

ಜಿಡ್ಡುಪದಾರ್ಥವೂ ಇವೆ. ತಳದಲ್ಲಿ ಜೀರ್ಣಕ್ರಿಯೆಯಲ್ಲಿ ನೆರವಾಗುವ ದ್ರವವೊಂದಿದೆ. ಮುಚ್ಚಳದಿಂದ ಆಕರ್ಷಿತವಾದ ಕೀಟ ಇಲ್ಲವೆ ಹುಳು ತೆವಳಿಕೊಂಡು ಬಾಯ ಬಳಿ

ಸರಸೀನಿಯ

ಬಂದು ಹೂಜಿಯ ಒಳಗಿನ ದ್ರವವನ್ನು ಮಧು ಎಂದು ಭ್ರಮಿಸಿ ಒಳಕ್ಕಿಳಿದಾಗ ಜಿಡ್ಡು ಪದಾರ್ಥದ ದೆಸೆಯಿಂದ ಜಾರಿ ಒಳಕ್ಕೆ ಜೀರ್ಣಿಸಲ್ಪಟ್ಟು ಕರಗಿಹೋಗುತ್ತದೆ.

ಸರಸೀನಿಯ, ಡಾರ್ಲಿಂಗ್‌ಟೋನಿಯ ಮುಂತಾದುವುಗಳಲ್ಲಿ ಎಲೆಯ ಮೇಲೆ ಜೇನುತುಪ್ಪದಂತೆ ಸವಿಯಾದ ರಸ ಶೇಖರವಾಗಿದ್ದು ಅದರ ಸವಿಗೆ ಮಾರುಹೋಗಿ ಬಂದು ಬೀಳುವ ಕೀಟಗಳು ಆಹುತಿಯಾಗುತ್ತವೆ. ಪಿಂಗಿಕ್ಯುಲದ ಚಮಚದ ಆಕಾರವುಳ್ಳ ಎಲೆಗಳಲ್ಲಿ ತೊಟ್ಟುಳ್ಳ ಗ್ರಂಥಿಗಳಿರುತ್ತವೆ. ಇವು ಕೀಟಗಳನ್ನೊಂದೇ ಅಲ್ಲದೆ ಗಾಳಿಯಲ್ಲಿ ಬರುವ ಪರಾಗಾಣುಗಳನ್ನೂ ಹಿಡಿದು ಜೀರ್ಣಿಸಿಕೊಳ್ಳುತ್ತವೆ.

ಕೀಟಭಕ್ಷಕ ಸಸ್ಯಗಳಲ್ಲಿನ ಅತ್ಯಂತ ವಿಚಿತ್ರ ಸಂಗತಿಯೆಂದರೆ ಹಿಡಿದ ಕೀಟಗಳನ್ನು ಜೀರ್ಣಿಸಿಕೊಳ್ಳಲು ಪೆಪ್ಸಿನ್, ಟ್ರಿಪ್ಸಿನ್ ಮೊದಲಾದ ಕಿಣ್ವಗಳನ್ನು ಮನುಷ್ಯನಂತೆಯೇ ಸ್ರವಿಸುವುದು. ಸೂಕ್ಷ್ಮದರ್ಶಕ ಯಂತ್ರದಿಂದ ಷೆನ್ಸ್ಟ್ ಎಂಬಾತ (1963, 1965, 1966) ಶರ್ಕರಮಿಶ್ರಿತ ಅಂಟುದ್ರವವನ್ನು ಸ್ರವಿಸುವ ಫಾಂಗ್ ಷೈಮ್ ಎಂಬ ವಿಶೇಷ ಗ್ರಂಥಿಗಳನ್ನು ನೋಡಿದ. ಈ ಗ್ರಂಥಿಗಳ ಜೀವಕೋಶಗಳಲ್ಲಿನ ಗಾಲ್ಗಿ ವಸ್ತು ಅಂಟುದ್ರವವನ್ನು ಸ್ರವಿಸುವ ಕ್ರಿಯೆಯಲ್ಲಿ ಮುಖ್ಯಪಾತ್ರ ವಹಿಸುತ್ತದೆಯೆಂಬುದನ್ನು ಸ್ಪಷ್ಟವಾಗಿ ಕಂಡ. ಈ ಗಾಲ್ಗಿವಸ್ತು ಗ್ಯಾಲಕ್ಟೋಸ್ ಅರ‍್ಯಾಬಿನೋಸ್, ಕ್ಸೈಲೋಸ್, ರ‍್ಯಾಮ್ನೋಸ್ ವಸ್ತುಗಳನ್ನು ಶೇಖರಿಸಿ ಜೀವಕೋಶಗಳ ಗೋಡೆಗಳೆಡೆಗೆ ಸಣ್ಣ ಸಣ್ಣ ಕೋಶಾಕಾರದಲ್ಲಿ ಬಿಡುಗಡೆಮಾಡುವುದು ಕಾಣಬಂತು. ಈ ಕೋಶಗಳು ಅಡ್ಡಗೋಡೆಗೂ ಕೋಶಪೊರೆಗೂ (ಪ್ಲಾಸ್ಮಮೆಂಬ್ರೇನ್) ನಡುವೆ ಸೇರಿಕೊಳ್ಳುತ್ತವೆ. ಗ್ರಂಥಿಗಳ ಮೇಲಿನ ಕ್ಯೂಟಿಕಲ್ ಲೇಪದಲ್ಲಿ ಸಣ್ಣ ಸಣ್ಣ ರಂಧ್ರಗಳಿದ್ದು ದ್ರವ ಸರಾಗವಾಗಿ ಹೊರಗೆ ಬರಲು ದಾರಿಯಾಗಿದೆ. ಕಪ್ಪೆ ಚಿಪ್ಪಿನಂತೆ ಮುಚ್ಚಿಕೊಳ್ಳುವ ಕೀಟಗ್ರಾಹಕ ಎಲೆಗಳ ಡೈಯೋನಿಯ ಮತ್ತು ಪಿಂಗಿಕ್ಯುಲಗಳಲ್ಲಿವೆ. ಹುಳುಹುಪ್ಪಟೆಗಳು ಹಾರಿಬಂದು ಎಲೆಗಳ ಮೇಲೆ ಕುಳಿತೊಡನೆ ಎಲೆಗಳು ಮುಚ್ಚಿಕೊಂಡು ಕೀಟಗಳನ್ನು ಹಿಡಿದು ತಿನ್ನುತ್ತವೆ. ಕೀಟ ಸಂಪೂರ್ಣವಾಗಿ ಜೀರ್ಣವಾದ ಅನಂತರ ಎಲೆಗಳು ಮತ್ತೆ ತೆರೆಯುತ್ತವೆ. (ವಿ.ಬಿ.)

**ಕೀಟಶಾಸ್ತ್ರ :** ಕೀಟಗಳ ವೈಜ್ಞಾನಿಕ ಅಧ್ಯಯನ (ಎಂಟೊಮಾಲಜಿ). ಇದರಲ್ಲಿ ಎರಡು ವಿಭಾಗಗಳಿವೆ: ಕೀಟಗಳ ಪ್ರಾಣಿಶಾಸ್ತ್ರ ವೃತ್ತಾಂತ (ಝೂಆಲಜಿ ಆಫ್ ದಿ ಇನ್‌ಸೆಕ್ಟ್ಸ್) ಮತ್ತು ಅನ್ವಯ ಕೀಟಶಾಸ್ತ್ರ. ಮೊದಲಿನದರಲ್ಲಿ ಕೀಟಗಳ ವರ್ಗೀಕರಣ, ರೂಪರಚನೆ, ಶರೀರವಿಜ್ಞಾನ, ಕೀಟ ಹಾಗೂ ಪರಿಸರ ಸಂಬಂಧ, ವಂಶಾಭಿವೃದ್ಧಿ ಇತ್ಯಾದಿ ಅಂಶಗಳನ್ನೂ ಎರಡನೆಯದರಲ್ಲಿ ಕೀಟಗಳಿಂದ ಮಾನವನಿಗೆ, ಅವನ ಸಾಕುಪ್ರಾಣಿಗಳಿಗೆ, ಕೃಷಿಗೆ ಆಗುವ ಹಾನಿ ಮತ್ತು ಉಪಕಾರ, ಕೀಟಗಳ ನಿಯಂತ್ರಣ, ಉಪಯುಕ್ತ ಕೀಟಗಳ ಸಾಕಣೆ ಮುಂತಾದುವನ್ನೂ ಅಭ್ಯಾಸ ಮಾಡಲಾಗುತ್ತದೆ. ಅಲ್ಲದೆ ಕೀಟಶಾಸ್ತ್ರದ ಇತಿಹಾಸ ಸಹ ಒಂದು ಪ್ರಮುಖ ಅಧ್ಯಯನವಿಷಯ. (ಪಿ.ಎಂ.)

**ಇತಿಹಾಸ :** ಮಾನವನಿಗೆ ಕೀಟಗಳ ಒಡನಾಟ ಆತನ ಇತಿಹಾಸದಷ್ಟೇ ಪುರಾತನವಾದುದಾದರೂ ಅವುಗಳ ಬಗ್ಗೆ ಬರೆಹಗಳಿರುವುದು ಕೇವಲ ಕೆಲವೇ ಸಾವಿರ ವರ್ಷಗಳಿಂದ ಶಾಸ್ತ್ರೀಯ ಬರೆಹಗಳಂತೂ ಇಲ್ಲವೇ ಇಲ್ಲ. ಹೆಚ್ಚು ಕಡಿಮೆ ಎಲ್ಲವೂ ಉಪಯುಕ್ತ ಕೀಟಗಳಾದ ಜೇನು, ರೇಷ್ಮೆಹುಳು, ಅರಗು ಕೀಟಗಳು, ಅವುಗಳ ಸಾಕಣೆ ಇತ್ಯಾದಿಗಳಿಗೆ ಸಂಬಂಧಿಸಿದವು. ಪ್ರಾಚೀನ ಈಜಿಪ್ಟಿನ ದೇವಾಲಯಗಳ ಗೋಡೆಗಳ ಬರೆಹದಲ್ಲಿ ಜೇನು ಸಾಕಣೆ (ಪ್ರ.ಶ.ಪೂ. ಸು. 2600), ಕೀಟಗಳ ನಿಯಂತ್ರಣದಲ್ಲಿ ಬಳಸಲಾಗುವ ನಿರೋಧಕಗಳ ತಯಾರಿಕೆ (ಪ್ರ.ಶ.ಪೂ. ಸು.1500) ಮುಂತಾದವುಗಳ ಬಗ್ಗೆ ಉಲ್ಲೇಖ ಉಂಟು. ಚೀನ, ಅರೇಬಿಯಗಳಲ್ಲೂ ಇವುಗಳ ಅಧ್ಯಯನ ನಡೆದಿತ್ತು. ಭಾರತದಲ್ಲಿ ಚರಕ (ಪ್ರ.ಶ.ಪೂ.ಸು. 600) ಮತ್ತು ಉಮಸ್ವತಿ (ಪ್ರ.ಶ. ಎರಡನೆಯ ಶತಮಾನ) ಇವರಿಂದ ಕೀಟಗಳ ವರ್ಗೀಕರಣದ ಬಗ್ಗೆ ಅಭ್ಯಾಸ ನಡೆದಿತ್ತೆಂದು ತಿಳಿದಿದೆ. ಕೀಟಗಳ ಶಾಸ್ತ್ರೀಯ ಅಧ್ಯಯನ ಆರಂಭವಾದುದು ಅರಿಸ್ಟಾಟಲ್‌ನಿಂದ (ಪ್ರ.ಶ.ಪೂ. 384–322) ಎಂದು ಹೇಳಬಹುದು. ಅತ ಕೀಟಗಳಿಗೆ ಎಂಟೋಮ ಎಂಬ ಗ್ರೀಕ್ ಹೆಸರು ಕೊಟ್ಟ. ಕೀಟದ ದೇಹದಲ್ಲಿ ತಲೆ. ಎದೆ ಮತ್ತು ಹೊಟ್ಟೆ ಎಂಬ ಮೂರು ಭಾಗಗಳಿರುವುದನ್ನೂ ದೇಹದಲ್ಲಿ ಜಠರ, ಹೃದಯ, ಶ್ರವಣ, ಘ್ರಾಣ ಹಾಗೂ ನೇತ್ರೇಂದ್ರಿಯಗಳಿರುವುದನ್ನೂ ಅವನು ಗಮನಿಸಿದ. ರೆಕ್ಕೆ ಇರುವ, ಇಲ್ಲದಿರುವ ಕೀಟಗಳನ್ನೂ ಅವುಗಳ ವದನಾಂಗಗಳನ್ನೂ ರೂಪಪರಿವರ್ತನೆಯನ್ನೂ ಕಂಡುಹಿಡಿದ. ಅನಂತರ ರೋಮಿನ ತತ್ತ್ವಜ್ಞಾನಿ ಪ್ಲಿನಿ (24–79) ಕೀಟಗಳನ್ನು ಅಭ್ಯಸಿಸಿ ಇವುಗಳ ಉಸಿರಾಟವನ್ನು ವಿವರಿಸಿದ. ಅಲ್ಲದೆ ಅರಿಸ್ಟಾಟಲ್ ಕಂಡುಹಿಡಿಯದಿದ್ದ ಹಲವಾರು ಹೊಸ ಬಗೆಯ ಕೀಟಗಳನ್ನು ಇವನು ವಿವರಿಸಿದ. ಪ್ಲಿನಿಯ ಅನಂತರ 17ನೆಯ ಶತಮಾನದ ವರೆಗೂ ಗಮನಾರ್ಹವಾದ ಅಭ್ಯಾಸವೇನೂ ನಡೆಯಲಿಲ್ಲ. 1602ರಲ್ಲಿ ಆಲ್ಡ್ರೊವಾಂಡಿ ಎಂಬಾತ ಕೀಟ ವರ್ಗೀಕರಣದ ಬಗ್ಗೆ ಪುಸ್ತಕವೊಂದನ್ನು ಪ್ರಕಟಿಸಿ ಕೀಟಗಳನ್ನು ಗುರುತಿಸಲು ಸಹಾಯಕವಾದ ಕೆಲವು ವಿವರಗಳನ್ನು ತಿಳಿಸಿದ. 30 ವರ್ಷಗಳ ಅನಂತರ ಥಾಮಸ್ ಮೊಫೆಟ್ ಎಂಬುವನ ಸಚಿತ್ರ ಪುಸ್ತಕ ಪ್ರಕಟವಾಯಿತು. 17ನೆಯ ಶತಮಾನದಲ್ಲಿ ಮುದ್ರಣ ಕಲೆಯ ಪರಿಷ್ಕರಣ, ರಾಜಕೀಯ ಸ್ಥಿರತೆ, ಧಾರ್ಮಿಕ ಸ್ವಾತಂತ್ರ್ಯ ಹಾಗೂ ಹೊಸ ಖಂಡಗಳ ಪರಿಚಯ ಮತ್ತು ಫ್ರಾನ್ಸಿಸ್ ಬೇಕನ್, ಇವರಿಂದ ಆರಂಭವಾದ ಹೊಸ ವಿಚಾರ ದೃಷ್ಟಿ ಇವೆಲ್ಲ ಸೇರಿ ಕೀಟಶಾಸ್ತ್ರದ ಮೇಲೆ ಆಳವಾದ ಪ್ರಭಾವವನ್ನು ಬೀರಿದುವು. ಲೀವೆನ್‌ಹುಕ್‌ನಿಂದ ಸೂಕ್ಷ್ಮದರ್ಶಕದ ಆವಿಷ್ಕಾರವಾದ ಮೇಲೆ ಮಾಲ್ಪಿಗಿ, ಸ್ವಾಮರ್‌ಡ್ಯಾಮ್ ಮೊದಲಾದ ಖ್ಯಾತ ತಜ್ಞರು ತಮ್ಮ ದೃಷ್ಟಿಯನ್ನು ಕೀಟಗಳೆಡೆಗೆ ಹರಿಸಿದರು. ಮಾಲ್ಪಿಜಿ ಕೀಟಗಳ ಉಸಿರಾಟದ ಕ್ರಮ, ರೇಷ್ಮೆ ಗ್ರಂಥಿಗಳು, ಮಾಲ್ಪಿಜಿಯನ್ ಕೊಳವೆಗಳು, ಜನನಾಂಗ ವ್ಯವಸ್ಥೆ, ನರಮಂಡಲ, ರೆಕ್ಕೆಗಳ ಹುಟ್ಟುವಿಕೆ ಮೊದಲಾದ ಅಂಶಗಳ ಮೇಲೆ ಬೆಳಕು ಬೀರಿದ. ಸ್ವಾಮರ್‌ಡ್ಯಾಮ್ ಚಿಟ್ಟೆ, ಜೇನು, ಕೊಡತಿಕೀಟ ಮುಂತಾದುವುಗಳ ಜೀವನಚರಿತ್ರೆಯನ್ನು ಚಿತ್ರಸಹಿತವಾಗಿ ವಿವರಿಸಿದ. ಅಲ್ಲದೆ ಅವುಗಳ ಜೀವನಕ್ರಮಗಳಲ್ಲಿರುವ ಪರಸ್ಪರ ವ್ಯತ್ಯಾಸಗಳನ್ನು ಕಂಡುಹಿಡಿದು ಕೀಟಗಳನ್ನು ನಾಲ್ಕು ಮುಖ್ಯ ಪಂಗಡಗಳಾಗಿ ವಿಂಗಡಿಸಿದ. ಹದಿನೆಂಟನೆಯ ಶತಮಾನದಲ್ಲಿ ಕೀಟಶಾಸ್ತ್ರದ ಅಧ್ಯಯನದಲ್ಲಿ ನಿರತರಾದವರಲ್ಲಿ ಮುಖ್ಯರಾದವರು ಡಿ ರೇಮರ್, ಸ್ವೀಡನ್ನಿನ ಡಿ ಗೀರ್, ಗೆಡಾರ್ಟ್, ಮೇರಿಯ ಮೇರಿಯನ್, ಜೊಹಾನ್ ಫಿಶ್, ವಿಲಿಯಂ ಗೌಲ್ಡ್ ಮುಂತಾದವರು. ಡಿ ಗೀರ್ ಏಳು ಸಂಪುಟಗಳಲ್ಲಿ ಮೆಮಾಯರ್ಸ್ ಎಂಬ ಪುಸ್ತಕವನ್ನು ಪ್ರಕಟಿಸಿ ಕೀಟವರ್ಗೀಕರಣದ ಮೂಲತತ್ತ್ವಗಳನ್ನು ಪ್ರತಿಪಾದಿಸಿದ. ಅನಂತರ ಹೆಸರಿಸಬಹುದಾದವನು ಜಾನ್ ರೇ. ಇವನು ಸ್ವಾಮರ್‌ಡ್ಯಾಮಿನಂತೆ ಕೀಟಗಳ ರೂಪಪರಿವರ್ತನೆಗಳನ್ನೂ, ಇವನಿಗಿಂತ ಹಿಂದಿನವರಂತೆ ರೂಪರಚನೆಯನ್ನೂ ಕೀಟವರ್ಗೀಕರಣಕ್ಕೆ ಆಧಾರವಾಗಿ ತೆಗೆದುಕೊಂಡ. ಅನಂತರ ಲಿನಿಯಸ್‌ನ ಹೊಸ ದ್ವಿನಾಮ ಪದ್ಧತಿ ಮತ್ತು ಸಿದ್ಧಾಂತಗಳ ಆಧಾರದ ಮೇಲೆ ಕೀಟಗಳ ವರ್ಗೀಕರಣ ಹಾಗೂ ನಾಮಕರಣಕ್ಕೆ ಹೊಸ ರೂಪದೊರೆಯಿತು. 19ನೆಯ ಶತಮಾನದ ವೇಳೆಗೆ ಕೀಟಶಾಸ್ತ್ರಕ್ಕೆ ಒಂದು ಪ್ರಮುಖ ಸ್ಥಾನ ಲಭಿಸಿತ್ತು. ಕರ್ಬಿ, ಸ್ಪೆನ್ಸರ್, ಬರ್ಮೈಸ್ಟರ್ ಮುಂತಾದವರ ಅಭ್ಯಾಸದ ಫಲವಾಗಿ ಕೀಟಗಳ ಬಗೆಗೆ ಹೆಚ್ಚಿನ ಅರಿವು ಮೂಡಲು ಅನುಕೂಲವಾಯಿತು. ಪ್ಯಾರಿಸ್, ಲಂಡನ್ ಮುಂತಾದೆಡೆ ಕೀಟಶಾಸ್ತ್ರ ಸಂಘಗಳು

ಸ್ಥಾಪಿತವಾದುವು. ಈ ಕಾಲದ ಅತ್ಯಂತ ಪ್ರಮುಖ ಕೆಲಸ ಎಂದರೆ ಬ್ರಿಟಿಷ್ ಮ್ಯೂಸಿಯಂ ಕೀಟಗಳ ಬಗ್ಗೆ 20,000 ಪುಟಗಳ ಪುಸ್ತಕವನ್ನು ಪ್ರಕಟಿಸಿದ್ದು. ಅಲ್ಲಿಂದೀಚೆಗೆ ವ್ಯಾಲೇಸ್, ಬೇಟ್ಸ್, ಟ್ರಿಮನ್ ಮುಂತಾದವರು ಕೀಟಗಳ ಬಗ್ಗೆ ಹೆಚ್ಚಿನ ವ್ಯಾಸಂಗ ನಡೆಸಿ ಡಾರ್ವಿನ್ನನ ಜೀವಿ ವಿಕಾಸ ಸಿದ್ಧಾಂತಕ್ಕೆ ಹಲವಾರು ನಿದರ್ಶನಗಳನ್ನು ಒದಗಿಸಿದರು. ಅಲ್ಲದೆ ಕೀಟಶಾಸ್ತ್ರದಿಂದ ಜೀವಶಾಸ್ತ್ರದ ಹಲವು ವಿಭಾಗಗಳಿಗೆ ದೊರೆತ ಕೊಡುಗೆಗಳೂ ಅಪಾರ. ಅಬ್ರಾಕ್ಸಾಸ್ ಪತಂಗದ ಅಧ್ಯಯನದಿಂದ ತಳಿಶಾಸ್ತ್ರದಲ್ಲಿ ಲಿಂಗ ಸಂಬಂದಿ ಜೀನ್‌ಗಳ ಬಗ್ಗೆ ಹೆಚ್ಚು ಅರಿಯಲು ಸಾದ್ಯವಾಯಿತು. ಹಾಗೆಯೆ ಡ್ರಾಸೋಫಿಲ ಎಂಬ ಹಣ್ಣೊಣದಿಂದ ತಳಿಶಾಸ್ತ್ರಕ್ಕಾಗಿರುವ ಉಪಯೋಗ ಅಪಾರ. ಕೀಟಮನಶ್ಯಾಸ್ತ್ರದ ದಿಸೆಯಲ್ಲಿ ಜಾನ್ ಲಬಕ್, ಪೊರೆಲ್, ವ್ಯಾಸ್‌ಮ್ಯಾನ್, ಫೇಬರ್ ಮುಂತಾದವರು ಸಂಶೋಧನೆ ನಡೆಸಿ ಕೀಟಗಳ ವರ್ತನೆ ಮತ್ತು ಸಂಪರ್ಕ ವ್ಯವಸ್ಥೆಯ ಬಗ್ಗೆ ಹೆಚ್ಚಿನ ವಿವರಗಳನ್ನು ಒದಗಿಸಿದರು. ಹೀಗೆ ಕೀಟಶಾಸ್ತ್ರ ಮಾನವ ಕಲ್ಯಾಣದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿದೆ.

**ಆಧುನಿಕ ಕೀಟಶಾಸ್ತ್ರ:** ಮೊದಮೊದಲು ಕೀಟಗಳ ವರ್ಗೀಕರಣದ ಬಗ್ಗೆಯೇ ಕೀಟಶಾಸ್ತ್ರ ಸೀಮಿತವಾಗಿದ್ದರೂ ಇತ್ತೀಚೆಗೆ ಅನ್ವಯ ಕೀಟಶಾಸ್ತ್ರಕ್ಕೆ ಅಗತ್ಯವಾದ ತತ್ತ್ವಗಳನ್ನು ಪ್ರತಿಪಾದಿಸುವುದರ ಕಡೆಗೆ ಹೆಚ್ಚಿನ ಗಮನ ನೀಡಲಾಗಿದೆ. ಆಧುನಿಕ ಕೀಟಶಾಸ್ತ್ರದ ಹಲವಾರು ಪ್ರಕಾರಗಳಲ್ಲಿ ಮುಖ್ಯವಾದವು ನಾಲ್ಕು.

**1. ವರ್ಗೀಕರಣ:** ಕೀಟಗಳನ್ನು ವಿವಿಧ ಗುಂಪು, ಗಣ, ಕುಟುಂಬಗಳಾಗಿ ವಿಂಗಡಿಸುವುದೂ ಅವುಗಳಿಗೆ ಸೂಕ್ತವಾದ ಹೆಸರು ಕೊಡುವುದೂ ಇದರ ಮುಖ್ಯ ಅಂಶ. ಕೀಟಗಳ ಬಾಹ್ಯ ಹಾಗೂ ಒಳ ರೂಪರಚನೆ, ಭ್ರೂಣಶಾಸ್ತ್ರ, ಜೀವರಾಸಾಯನಿಕ ಶಾಸ್ತ್ರ ಮುಂತಾದ ಶಾಖೆಗಳಿಂದ ಇದಕ್ಕೆ ಬೇಕಾಗುವ ಘಟಕಗಳನ್ನು ಪಡೆಯುವುದಲ್ಲದೆ ಕೀಟಗಳ ವರ್ತನೆ, ಭೌಗೋಳಿಕ ವಿಸ್ತರಣೆಗಳನ್ನೂ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದರೂ ಇನ್ನೂ 2–3 ದಶಲಕ್ಷ ಕೀಟಗಳ ವರ್ಗೀಕರಣ, ನಾಮಕರಣ ನಡೆಯಬೇಕಾಗಿದೆ ಎಂದು ಅಂದಾಜಿದೆ. ವರ್ಗೀಕರಣದಿಂದ ಕೀಟಶಾಸ್ತ್ರದ ಇತರ ಪ್ರಕಾರಗಳಿಗೂ ಉಪಯೋಗವಿದೆ. ಯಾವುದೇ ಹೊಸ ಕೀಟಪ್ರಭೇದವೊಂದರ ಶೋಧನೆ ನಡೆದರೂ ಆಗಲೇ ಗೊತ್ತಾಗಿರುವ ಕೀಟಗಳೊಂದಿಗೆ ಹೊಸದನ್ನು ಹೋಲಿಸಿ ಆ ಕೀಟದ ಸೂಕ್ತ ಸ್ಥಾನವನ್ನು ಗೊತ್ತು ಹಚ್ಚಲು ಇದು ಸಹಾಯಕ. ಮತ್ತು ಇದರಿಂದ ಅದರ ಸ್ವಭಾವ, ಪ್ರಾಮುಖ್ಯ ಮತ್ತು ನಿಯಂತ್ರಣದ ಬಗ್ಗೆ ಸಾರ್ವತ್ರೀಕರಣ ಮಾಡಲೂ ಸುಲಭ.

**2. ರೂಪರಚನಾಶಾಸ್ತ್ರ:** ಇದು ಕೀಟಗಳ ಹೊರ ಹಾಗೂ ಒಳರಚನೆಗಳ ಅಧ್ಯಯನ. ಇದರಿಂದ ವರ್ಗೀಕರಣಕ್ಕೆ ಬೇಕಾಗುವ ಘಟಕಗಳನ್ನೆಲ್ಲ ಪಡೆಯಬಹುದಾಗಿದೆ. ಅಲ್ಲದೆ ಕೀಟಗಳ ನೆಲೆ, ಅವು ಪರಿಸರಕ್ಕೆ ಹೊಂದಿಕೊಳ್ಳುವ ಬಗ್ಗೆ ಕೀಟಗಳ ಶಾರೀರಕ ಕ್ರಿಯೆಗಳ ಮೂಲ ತಿಳಿವಳಿಕೆಗೂ ಇದು ಸಹಕಾರಿ. ಇದರಲ್ಲಿ ಎರಡು ಮುಖ್ಯ ಮುಖಗಳನ್ನು ಗುರುತಿಸಬಹುದು: (1) ಪ್ರಾಚೀನ, (11) ಆಧುನಿಕ. ಪ್ರಾಚೀನ ರೂಪ ರಚನಾಶಾಸ್ತ್ರ ಸ್ಥೂಲವಾದ ಗುಣಗಳ ಮೇಲೆ ಮಾತ್ರ ಆಧಾರವಾದುದು. ಆಧುನಿಕ ರೂಪರಚನಾಶಾಸ್ತ್ರ ಇತ್ತೀಚೆಗೆ ಅಭಿವೃದ್ಧಿಗೆ ಬರುತ್ತಿರುವ ಶಾಖೆ. ಇದು ಹೆಚ್ಚಾಗಿ ಜೀವಕೋಶಗಳ ಅತಿಸೂಕ್ಷ್ಮ ಅಧ್ಯಯನಕ್ಕೆ ಸಂಬಂಧಪಟ್ಟುದು ಮತ್ತು ಇದು ಪ್ರಾಯೋಗಿಕವಾದದು. ಇದಕ್ಕೂ ರಸಾಯನಶಾಸ್ತ್ರಕ್ಕೂ ಸಂಬಂಧವುಂಟು, ಜೀವಕೋಶಗಳಲ್ಲಿನ ಮೈಟೋಕಾಂಡ್ರಿಯ, ಗಾಲ್ಗಿ ವಸ್ತುಗಳನ್ನು ಮುಂತಾದುವುಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳಲ್ಲಿ ನೋಡಿ ಹೆಚ್ಚು ವಿವರಗಳನ್ನು ತಿಳಿಯಲಾಗಿದೆ. ಕೀಟಗಳನ್ನು ಹಲವಾರು ಪ್ರಯೋಗ ಪರೀಕ್ಷೆಗಳಿಗೆ ಒಳಪಡಿಸಿ ಅವುಗಳ ವರ್ತನೆ, ಅವುಗಳ ಮೇಲಾಗುವ ಪರಿಣಾಮಗಳನ್ನು ಅಭ್ಯಸಿಸಲಾಗಿದೆ.

**3. ಶರೀರವಿಜ್ಞಾನ:** ಕೀಟಗಳ ವಿವಿಧ ಅಂಗಗಳ, ಅಂಗಾಂಶಗಳ ಕ್ರಿಯಾವಿನ್ಯಾಸಕ್ಕೆ ಸಂಬಂಧಪಟ್ಟಿದೆ. ಕ್ರಿಯೆಗಳಿಗೂ ಅಂಗಗಳ ರಚನೆಗೂ ಇರವ ಸಂಬಂಧ, ಕೀಟಗಳು ವಿವಿಧ ವಾತಾವರಣ, ಪರಿಸ್ಥಿತಿಗಳಲ್ಲಿ ತೋರುವ ಪ್ರತಿಕ್ರಿಯೆಗಳು, ಹೊಂದಾಣಿಕೆಗಳು, ವರ್ತನೆ ಮುಂತಾದುವನ್ನು ಅಭ್ಯಸಿಸಲಾಗಿದೆ. 1900 ರಿಂದೀಚೆಗೆ ಈ ದಿಸೆಯಲ್ಲಿ ಹೆಚ್ಚಿನ ಕೆಲಸ ನಡೆದಿದೆ. ಕೇವಲ ಕಲವೇ ಕೀಟಗಳಲ್ಲಿ ಈ ಬಗೆಯ ಅಧ್ಯಯನ ವಿಸ್ತಾರವಾಗಿ ನಡೆದಿದ್ದರೂ ಇವುಗಳಿಂದ ಲಭಿಸಿರುವ ಜ್ಞಾನ ಅಪಾರವಾದುದು. ಜಿರಲೆ, ಜೇನು, ರೇಷ್ಮೆಪತಂಗ, ಸೊಳ್ಳೆಗಳು, ಡ್ರಾಸೋಫಿಲ, ನೊಣ ಮುಂತಾದ ಕೆಲವೇ ಕೀಟಗಳಲ್ಲಿ ಈ ಬಗೆಯ ಸಂಶೋಧನೆ ನಡೆದಿದೆ. ಇದರ ಅಂಗವಾಗಿ ನಡೆದಿರುವ ಹಲವಾರು ಸಂಶೋಧನೆಗಳು ಕೀಟ ನಿರೋಧಕಗಳಿಂದ ಕೀಟಗಳಲ್ಲಿ ಉಂಟಾಗುವ ಪರಿಣಾಮ, ಕೈಟಿನ್ ಹೊರಕವಚದ ಉತ್ಪಾದನೆ, ಪೊರೆ ಬಿಡುವಿಕೆ, ರೂಪ ಪರಿವರ್ತನೆ, ಹಾರ್ಮೋನುಗಳ ಉತ್ಪತ್ತಿ ಮತ್ತು ಕೀಟಗಳ ಪೋಷಣೆ ಮುಂತಾದ ಅಂಶಗಳ ಬಗ್ಗೆ ಹೆಚ್ಚು ಬೆಳಕು ಚೆಲ್ಲಿವೆ.

**4. ಕೀಟಪರಿಸರಶಾಸ್ತ್ರ:** ಕೀಟಗಳಿಗೂ ಅವುಗಳ ಪರಿಸರಕ್ಕೂ ಇರುವ ಪರಸ್ಪರ ಸಂಬಂಧದ ಅಧ್ಯಯನವೇ ಪರಿಸರಶಾಸ್ತ್ರ. ಶರೀರವಿಜ್ಞಾನದಂತೆಯೆ ಇದೂ ಕೂಡ ಕೀಟಗಳ ನಡತೆ ಕ್ರಿಯಾಚಟುವಟಿಕೆ, ವಾತಾವರಣದ ವಿವಿಧ ಕಾರಕಗಳಿಗೆ ಕೀಟಗಳ ಹೊಂದಾಣಿಕೆಯನ್ನು ಕುರಿತದ್ದು. ಆದರೆ ಶರೀರವಿಜ್ಞಾನ ಮುಖ್ಯವಾಗಿ ಪ್ರಯೋಗಶಾಲೆಗೆ ಸೀಮಿತವಾಗಿದ್ದರೆ ಪರಿಸರಶಾಸ್ತ್ರ ಬಯಲಿನಲ್ಲಿ (ಫೀಲ್ಡ್ ಸೈನ್ಸ್) ನಡೆಯುವಂಥದು. ಶರೀರವಿಜ್ಞಾನದ ಅಧ್ಯಯನ ಜೀವಕೋಶ, ಅಂಗಾಂಶ, ಅಂಗ ಅಥವಾ ಒಂದು ಕೀಟಕ್ಕೆ ಸೀಮಿತವಾಗಿದ್ದರೆ ಪರಿಸರಶಾಸ್ತ್ರ ಕೀಟಗಳ ಗುಂಪು, ಸ್ಥಳೀಯ ಸಂದಣಿ, ಸಮುದಾಯಗಳಿಗೆ ಅನ್ವಯವಾಗುತ್ತದೆ. ಕೀಟಗಳನ್ನೂ ಒಂದೊಂದಾಗಿಯೆ ತೆಗೆದುಕೊಂಡು ಇಲ್ಲವೆ ಕೀಟಸಮುದಾಯಗಳನ್ನು ಆರಿಸಿಕೊಂಡು ಅವುಗಳ ಮೇಲೆ ಪರಿಸರದ ಪ್ರಭಾವವೇನೆಂದು ಅಭ್ಯಸಿಸಬಹುದು. ಇವನ್ನು ಅನುಕ್ರಮವಾಗಿ ಸ್ವಂತ ಪರಿಸರಶಾಸ್ತ್ರ ಹಾಗೂ ಸಮುದಾಯ ಪರಿಸರಶಾಸ್ತ್ರ ಎನ್ನಲಾಗುತ್ತದೆ. ಆದರೆ ಇವೆರಡೂ ಪರಸ್ಪರ ಪೂರಕಗಳು, ಪರಿಸರಶಾಸ್ತ್ರದ ವಿಧಾನಗಳೂ ವಿವಿಧ ಬಗೆಯವು. ಅಭ್ಯಸಿಸಲಾಗುವ ಸಂದಣಿಯ ಸಂಕೀರ್ಣತೆಯನ್ನು ಅವಲಂಬಿಸಿ ವಿಧಾನಗಳು ಭಿನ್ನವಾಗುತ್ತವೆ. ಪ್ರತಿಯೊಂದು ಕೀಟವೂ ತನ್ನ ಬದುಕಿಗೆ ಮತ್ತು ಸಂತಾನವೃದ್ಧಿಗೆ ಆಹಾರ, ನೆಲೆ ಮತ್ತು ಕೆಲವು ಭೌತಸ್ಥಿತಿಗಳನ್ನು ಅವಲಂಬಿಸಿದೆ. ಈ ಪೂರೈಕೆಗಳ ಗುಣ, ಮೊತ್ತಗಳಲ್ಲೂ ಕಾಲ ಮತ್ತು ಅವಕಾಶಗಳಲ್ಲೂ ವ್ಯತ್ಯಾಸವಿದೆ. ಬೇರೆ ಪ್ರಾಣಿಗಳೂ ಈ ಆವಶ್ಯಕತೆಗಳಿಗಾಗಿ ಕೀಟಗಳೊಂದಿಗೆ ಸ್ಪರ್ಧಿಸುತ್ತವೆ. ಅಲ್ಲದೆ ಸ್ವಾಭಾವಿಕ ಶತ್ರುಗಳೂ ಕೀಟಗಳ ಜೀವನಕ್ರಮದ ಮೇಲೆ ಪ್ರಬಾವ ಬೀರುತ್ತವೆ. ಇವೆಲ್ಲ ಸಂಬಂಧಗಳನ್ನು ಕುರಿತು ಪರಿಸರಶಾಸ್ತ್ರಜ್ಞ ಸಂಶೋಧನೆ ನಡೆಸುತ್ತಾನಲ್ಲದೆ ಇವುಗಳನ್ನು ಅಳೆದು, ಪರೀಶೀಲಿಸಿ ನೋಡುತ್ತಾನೆ. ಪ್ರಕೃತಿಯಲ್ಲಿ ಕೀಟಗಳ ಸಂತಾನವೃದ್ಧಿ. ಜೀವನಕ್ರಮ ಮುಂತಾದವು ಯಾವ ನಿಯಂತ್ರಣಗಳಿಗೆ ಒಳಗಾಗಿವೆ ಎಂಬುದರ ತಿಳುವಳಿಕೆಯಿಂದ ಮಾನವ ಕೃತಕವಾಗಿ ತನ್ನ ಅನುಕೂಲಕ್ಕೆ ತಕ್ಕಂತೆ ಕೀಟಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ.

**ಅನ್ವಯ ಕೀಟಶಾಸ್ತ್ರ:** ಮಾನವನ ಆರೋಗ್ಯ, ಕೃಷಿ ವ್ಯವಸ್ಥೆ, ಸಾಕುಪ್ರಾಣಿಗಳು, ಮಾನವ–ನಿರ್ಮಿತ ವಸ್ತುಗಳು ಮುಂತಾದವುಗಳ ಮೇಲೆ ಕೀಟಗಳಿಂದ ಆಗುವ ಪರಿಣಾಮವನ್ನು ಕುರಿತು ನಡೆಸುವ ಅಭ್ಯಾಸ. ಕೀಟಗಳು ಉಪಯುಕ್ತವಾಗಿದ್ದರೆ ಅವನ್ನು ವೃದ್ಧಿಸುವ ಬಗೆ ಹೇಗೆ ಎಂಬುದರ ಅಧ್ಯಯನವೇ ಇದು. ಇದರಲ್ಲಿ ವೈದ್ಯಕೀಯ ಹಾಗೂ ಪಶುವೈದ್ಯಕೀಯ ಕೀಟಶಾಸ್ತ್ರ ಮತ್ತು ಕೃಷಿ ಹಾಗೂ ಅರಣ್ಯಕೀಟಶಾಸ್ತ್ರ ಎಂದು ಎರಡು ಮುಖ್ಯ ಬಗೆಗಳಿವೆ. ಮಾನವನ ಆರೋಗ್ಯಕ್ಕೆ ಸಂಬಂಧಿಸಿದ ಕೀಟಗಳ ಅಧ್ಯಯನವೇ ವೈದ್ಯಕೀಯ ಕೀಟಶಾಸ್ತ್ರ. ಮಾನವನ ಮರಣಗಳಲ್ಲಿ ಶೇ.50 ರಷ್ಟು ಕೀಟಾಧಾರಿತ ವ್ಯಾಧಿಗಳಿಂದುಂಟಾದುವೆಂದು ಗೊತ್ತುಹಚ್ಚಲಾಗಿದೆ. ಇವುಗಳಲ್ಲಿ ಟೈಫಾಯಿಡ್, ಮಲೇರಿಯ, ಪ್ಲೇಗ್, ಹಳದಿಜ್ವರ, ಆನೆಕಾಲುರೋಗ, ನಿದ್ರಾವಾತ ರೋಗ ಮುಖ್ಯವಾದವು.ಇವನ್ನು ಪೋಷಿಸುವ ಕೀಟಗಳಿಲ್ಲದಿದ್ದರೆ ಬಹುಶಃ ಈ ರೋಗಗಳೇ ಇರುತ್ತಿರಲಿಲ್ಲವೇನೊ. ಕೀಟಾಧಾರಿತ ರೋಗವೊಂದನ್ನು ಮೊಟ್ಟಮೊದಲ ಬಾರಿಗೆ ಕಂಡುಹಿಡಿದ ಕೀರ್ತಿ ಪ್ಯಾಟ್ರಿಕ್ ಮ್ಯಾನ್ಸನ್ ಎಂಬುವನಿಗೆ ಸಲ್ಲಬೇಕು. ಆನೆಕಾಲುರೋಗ ಉಂಟುಮಾಡುವ ವುಚರೇರಿಯ ಬಾಂಕ್ರಾಫ್ಟಿಯೈ ಎಂಬ ಕ್ರಿಮಿ ಕ್ಯೂಲೆಕ್ಸ್ ಸೊಳ್ಳೆಯಿಂದ ಹರಡುತ್ತದೆಂದು ಈತ 1878ರಲ್ಲಿ ತೋರಿಸಿಕೊಟ್ಟ. ಇದರಂತೆಯೇ, 1898ರಲ್ಲಿ ರಾಸ್ ಎಂಬಾತ ಅನಾಫಿಲೀಸ್ ಸೊಳ್ಳೆಯಿಂದ ಮಲೇರಿಯ ಹರಡುತ್ತದೆ ತೋರಿಸಿದ. ಈ ರೀತಿ ಹಲವಾರು ರೋಗಗಳು ಕೀಟಗಳಿಂದ ಪ್ರಸಾರವಾಗುವುದನ್ನು ಕಂಡುಹಿಡಿಯಲಾಯಿತು. ಇವೆಲ್ಲ ಸಂಶೋಧನೆಗಳಿಂದಾಗಿ ವೈದ್ಯಕೀಯ ಕೀಟಶಾಸ್ತ್ರ ಅನ್ವಯಕೀಟಶಾಸ್ತ್ರದಲ್ಲಿನ ಒಂದು ಪ್ರಮುಖವಾದ ಅಂಗವೆಂಬ ಭಾವನೆ ಮೂಡಲಾರಂಭಿಸಿತು. ವೈದ್ಯಕೀಯ ಕೀಟಶಾಸ್ತ್ರದ ಸಮಸ್ಯೆಗಳು ಹಲವಾರು. ಸಮಶೀತೋಷ್ಣವಲಯಗಳಲ್ಲಿ ಈ ಸಮಸ್ಯೆಗಳು ಅಷ್ಟಾಗಿಲ್ಲದಿದ್ದರೂ ರೋಗವನ್ನು ಹರಡುವ ಕೀಟಗಳ ಸಂತಾನಾಭಿವೃದ್ಧಿ ಕ್ರಿಯೆಗೆ ಅನುಕೂಲ ಪರಿಸ್ಥಿತಿಗಳಿರುವ ಉಷ್ಣಪ್ರದೇಶಗಳಲ್ಲಂತೂ ಈ ಸಮಸ್ಯೆಗಳು ಅಪಾರ. ಇಂಥಲ್ಲಿ ಸಾಮಾನ್ಯವಾಗಿರುವ ಅತಿಯಾದ ಜನಸಂದಣಿ, ವಸತಿ ಹಾಗೂ ಸುತ್ತಣಪ್ರದೇಶದ ನೈರ್ಮಲ್ಯದ ಕೊರತೆ ಕೂಡ ರೋಗ ಹರಡುವಿಕೆಗೆ ಸಹಾಯಕ ಅಂಶಗಳಾಗಿವೆ. ಮೇಲೆ ಹೇಳಿದ ರೋಗಗಳಲ್ಲದೆ ಕೀಟದಂಶನ–ಜೇನು, ಜೇಡ ಮುಂತಾದ ಕೀಟಗಳ ಕಡಿತ, ಹಲವಾರು ಬಗೆಯ ಕಂಬಳಿ ಹುಳುಗಳಿಂದ ಉಂಟಾಗುವ ಚರ್ಮತುರಿಗಳು, ಮನುಷ್ಯ ದೇಹದ ಮೇಲೆ ಪರಾವಲಂಬಿಗಳಾಗಿ ಜೀವಿಸುವ ಹೇನು, ಕಜ್ಜಿ ಉಣ್ಣಿ, ಮುಂತಾದುವೂ ಕೂಡ ಮಾನವನಿಗೆ ಉಪದ್ರವಕಾರಿಗಳೆನಿಸಿವೆ. ಇಂಥ ಕೀಟಗಳ ಅಧ್ಯಯನ, ಅವನ್ನು ನಿಯಂತ್ರಿಸುವ ಕ್ರಮಗಳ ಆವಿಷ್ಕಾರ ಮುಂತಾದವು ವೈದ್ಯಕೀಯ ಕೀಟಶಾಸ್ತ್ರದ ಮುಖ್ಯ ಸಮಸ್ಯೆಗಳು. ಜಗತ್ತಿನಾದ್ಯಂತ ಈ ದಿಸೆಯಲ್ಲಿ ವಿಪುಲವಾಗಿ ಸಂಶೋಧನೆ ನಡೆಯುತ್ತಿದ್ದು ಅದರಿಂದ ಲಭಿಸುವ ಜ್ಞಾನವನ್ನು ಮಾನವನ ಕಲ್ಯಾಣಕ್ಕೆ ಬಳಸಬಹುದಾಗಿದೆ. ಮಾನವ ಜನಾಂಗದ ಜೀವನಮಟ್ಟವನ್ನು ಏರಿಸಿ ವೈದ್ಯಕೀಯ ಕೀಟಶಾಸ್ತ್ರದ ಜ್ಞಾನ ಮತ್ತು ತಂತ್ರವಿನ್ಯಾಸಗಳ ಪೂರ್ಣ ಅನುಕೂಲತೆ ಜನರಿಗೆ ಲಭ್ಯವಾಗುವಂತೆ ಮಾಡುವುದೇ ಕೀಟಾದಾರಿತ ರೋಗನಿವಾರಣೆಗೆ ಇರುವ ಒಂದು ಮುಖ್ಯ ಕ್ರಮ.

ಕೀಟಗಳಿಂದ ರೋಗ ಹರಡುವ ವಿಧಾನ ಯಾಂತ್ರಿಕವಾಗಿರಬಹುದು ಇಲ್ಲವೆ ಜೈವಿಕವಾಗಿರಬಹುದು. ಟೈಫಾಯಿಡ್ ಬ್ಯಾಕ್ಟೀರಿಯ ನೊಣಗಳ ಕಾಲುಗಳ ಮೂಲಕ ಮಲದಿಂದ ಆಹಾರಕ್ಕೆ ವರ್ಗಾವಣೆಯಾಗುತ್ತದೆ. ಇದು ಯಾಂತ್ರಿಕ ರೀತಿ. ಆದರೆ,

ಮಲೇರಿಯ, ಆನೆಕಾಲುರೋಗ ಮುಂತಾದವುಗಳ ಹರಡುವಿಕೆಯಲ್ಲಿ ರೋಗಾಣು ತನ್ನ ಮುಖ್ಯ ಆತಿಥೇಯ ಪ್ರಾಣಿಯ ದೇಹವನ್ನು ಪ್ರವೇಶಿಸುತ್ತದೆ. ಈ ಕ್ರಮಕ್ಕೆ ಜೈವಿಕ ಸಾಗಣೆ ಎಂದು ಹೆಸರು. ಕೀಟಾಧಾರಿತರೋಗ ನಿವಾರಣೆಗೆ ಹಲವಾರು ಉಪಾಯಗಳುಂಟು, ಮುಖ್ಯವಾದದ್ದು ರೋಗ ಹರಡುವ ಕೀಟಗಳ ನಿವಾರಣೆ. ಶಕ್ತಿಯುತವಾದ ಸಂಶ್ಲೇಷಿತ ಕೀಟನಾಶಕ ಔಷಧಿಗಳನ್ನು ಬಳಸಿ ಕೀಟಗಳನ್ನು ನಿರ್ಮೂಲ ಮಾಡಿ ರೋಗವನ್ನು ಹತೋಟಿಯಲ್ಲಿಡಬಹುದು, ಆದರೆ ಇಂಥ ಔಷಧಿಗಳ ಹಲವಾರು ವರ್ಷಗಳ ಬಳಕೆಯಿಂದಾಗಿ ಕೆಲವು ಕೀಟಗಳು ಒಂದು ಬಗೆಯ ನಿರೋಧಕ ಶಕ್ತಿಯನ್ನು ಬೆಳೆಸಿಕೊಂಡಿವೆ. ಮತ್ತು ಇಂಥ ನಿರೋಧಕ ಶಕ್ತಿಯಿರುವ ಕೀಟಗಳ ತಳಿ ಹುಟ್ಟಿಕೊಂಡು ಕೀಟನಿವಾರಕ ಮದ್ದುಗಳು ಮೊದಲಿನಷ್ಟು ಪರಿಣಾಮಕಾರಿಯಾಗಿ ಕೀಟಗಳನ್ನು ನಿವಾರಿಸಲಾರದಾಗಿವೆ. ರೋಗ ನಿವಾರಣೆಯ ಎರಡನೆಯ ಕ್ರಮ ರೋಗಗಳಿಗೆ ನಿರ್ದಿಷ್ಟ ಬಗೆಯ ಔಷಧಿಗಳನ್ನು ಉಪಯೋಗಿಸುವುದು. ಉದಾಹರಣೆಗೆ ಮಲೇರಿಯ ನಿವಾರಣೆಗೆ ಕ್ವಿನೀನ್, ಪಾಲುಡ್ರಿನ್ ಮುಂತಾದವುಗಳ ಬಳಕೆ. ಇವೆಲ್ಲ ವಿಧಾನಗಳಿಗಿಂತ ಹೆಚ್ಚು ಸೂಕ್ತವಾದುದು ಮತ್ತು ಖಚಿತ ಫಲಿತಾಂಶ ದೊರಕುವ ವಿಧಾನ ಎಂದರೆ ಜೈವಿಕ ನಿಯಂತ್ರಣ.

**ಕೃಷಿ ಮತ್ತು ಅರಣ್ಯಕೀಟಶಾಸ್ತ್ರ:** ಕೀಟಗಳಿಗೂ ಮಾನವನಿಗೆ ಅಗತ್ಯವಾದ ಆಹಾರ, ಬಟ್ಟೆ ಮುಂತಾದ ವಸ್ತುಗಳ ಮೂಲಗಳಾದ ಸಸ್ಯ ಹಾಗು ಪ್ರಾಣಿಗಳಿಗೂ ಇರುವ ಸಂಬಂಧಗಳ ಅಭ್ಯಾಸವೇ ಕೃಷಿ ಸಸ್ಯಶಾಸ್ತ್ರ. ಅರಣ್ಯಗಳಿಂದ ದೊರೆಯುವ ಮರಮುಟ್ಟು ಮತ್ತು ಇತರ ಉಪೋತ್ಪನ್ನಗಳ ಉತ್ಪಾದನೆ ಮತ್ತು ಸಂರಕ್ಷಣೆ ಮತ್ತು ಕೀಟಗಳ ಸಂಬಂಧದ ಅಧ್ಯಯನ ಅರಣ್ಯಕೀಟಶಾಸ್ತ್ರ. ಇವೆರಡು ಕ್ಷೇತ್ರಗಳಿಗೂ ಇವುಗಳ ತತ್ತ್ವಗಳಲ್ಲಿ ಏಕತೆ ಇದ್ದು ಇವು ವೈದ್ಯಕೀಯ ಹಾಗು ಪಶುವೈದ್ಯಕೀಯ ಕೀಟಶಾಸ್ತ್ರಗಳಂತೆಯೇ ಪರಸ್ಪರ ಸಂಬಂಧದ ಹೊಂದಿದ್ದರೂ ಇವೆರಡರ ನಡುವೆ ಕೆಲವು ಮೂಲ ವ್ಯತ್ಯಾಸಗಳುಂಟು. ವೈದ್ಯಕೀಯ ಕೀಟಶಾಸ್ತ್ರದ ಸಮಸ್ಯೆಗಳನ್ನು ಮಾನವನ ಜೀವನಮಟ್ಟವನ್ನು ಏರಿಸುವುದರ ಮೂಲಕ ಪರಿಹರಿಸಲು ಇಲ್ಲವೆ ಕನಿಷ್ಠಗೊಳಿಸಲು ಸಾಧ್ಯವಾಗಿದ್ದರೂ ಈ ವಿಧಾನಗಳು ಕೃಷಿ ಕೀಟಶಾಸ್ತ್ರದ ಸಮಸ್ಯೆಗಳಿಗೆ ಅನ್ವಯವಾಗುವುದಿಲ್ಲ. ಆಧುನಿಕ ವಿಧಾನಗಳಿಂದ ಕೃಷಿ ಸುಧಾರಣೆ ನಡೆಸುವ ಕಾರ್ಯ ಕೀಟನಿಯಂತ್ರಣದ ಸಮಸ್ಯೆಯನ್ನು ಕಡಿಮೆ ಮಾಡುವ ಬದಲು ಹೆಚ್ಚು ಮಾಡಿದೆ ಎಂದೇ ಹೇಳಬೇಕು. ಉದಾಹರಣೆಗೆ ಅಮೆರಿಕದ ಸಂಯುಕ್ತ ಸಂಸ್ಥಾನ. ಇಂಗ್ಲೆಂಡಿನಿಂದ ವಲಸೆಗಾರರು ಉತ್ತರ ಅಮೆರಿಕಕ್ಕೆ ಹೋಗಿ ನೆಲೆಸುವ ಮುಂಚೆ ಇದ್ದ ಇಂಡಿಯನ್ ಜನಾಂಗದವರು ಪ್ರಾಚೀನ ಕೃಷಿ ವಿಧಾನಗಳನ್ನು ಅನುಸರಿಸುತ್ತಿದ್ದರಲ್ಲದೆ ಅವರು ಬೆಳೆಯುತ್ತಿದ್ದ ಬೆಳೆಗಳೂ ಮುಸುಕಿನ ಜೋಳ, ಕುಂಬಳ, ಅವರೆ, ಆಲೂಗಡ್ಡೆ, ತಂಬಾಕು, ಹತ್ತಿ ಮುಂತಾದವುಗಳನ್ನೊಳಗೊಂಡ ಪಶ್ಚಿಮಾರ್ಧಗೋಳದ ಸ್ಥಳೀಯ ಸಸ್ಯಗಳಾಗಿದ್ದುವು. ಕೃಷಿಗಾಗಿ ಬಳಕೆಯಾಗುತ್ತಿದ್ದ ಪ್ರದೇಶಗಳೂ ಪರಸ್ಪರ ದೂರವಿದ್ದು ಒಂದು ಕಡೆ ಅಂಟಿದ ಕೀಟಗಳು ಸುಲಭವಾಗಿ ಬೇರೆಡೆಗೆ ಸಾಗಲು ಆಗುತ್ತಿರಲಿಲ್ಲ. ಅಲ್ಲದೆ ಕೈಯಿಂದಲೇ ಕೀಟಗಳನ್ನು ತೆಗೆದು ನಾಶ ಮಾಡುತ್ತಿದ್ದರು. ಇದರಿಂದ ಕೀಟಗಳಿಂದ ಆಗುತ್ತಿದ್ದ ನಷ್ಟ ಬಹಳ ಕಡಿಮೆ. ಯುರೋಪಿನ ವಲಸೆಗಾರರು ಅಮೆರಿಕಕ್ಕೆ ಬಂದಮೇಲೆ, ಅಮೆರಿಕದಲ್ಲಿ ಪಶ್ಚಿಮ ಮತ್ತು ದಕ್ಷಿಣದ ಕಡೆಗೆ ಒಳಸಾಗಿದಂತೆ ಕೃಷಿಯ ಪ್ರದೇಶವೂ ವಿಸ್ತಾರವಾಗುತ್ತ ಬಂದಿತು. ಇದರಿಂದ ಕೀಟಗಳು ಹರಡುವುದಕ್ಕೂ ಸಹಾಯಕವಾಯಿತು. ಜೊತೆಗೆ ಇವರು ತಮ್ಮ ಆಹಾರಕ್ಕಾಗಿ, ಶೋಕಿಗಾಗಿ ಕೀಟಗಳನ್ನು ಸ್ವಾಭಾವಿಕವಾಗಿ ನಿಯಂತ್ರಿಸುತ್ತಿದ್ದ ಕೀಟಭಕ್ಷಕ ಹಕ್ಕಿಗಳನ್ನು ಕೊಂದುಹಾಕತೊಡಗಿದ್ದರಿಂದಲೂ ಕೀಟಗಳ ಹಾವಳಿ ಹೆಚ್ಚಾಗತೊಡಗಿತು. ಅಲ್ಲದೆ ಯುರೋಪಿನಿಂದ ತಮ್ಮ ಜೊತೆಗೆ ಅಲ್ಲಿನ ದಾನ್ಯ ಸಸ್ಯಗಳನ್ನೂ ತಮ್ಮ ಅರಿವಿಲ್ಲದೆ ಅಲ್ಲಿನ ಕೀಟ ಪ್ರಭೇದಗಳನ್ನೂ ತಂದರು. ಉದಾಹರಣೆಗೆ ಜಿಪ್ಸಿ ಪತಂಗ, ಅಸ್ಪರ್‍ಯಾಗಸ್ ಜೀರುಂಡೆ, ಹಾರನ್ ನೊಣ ಮುಂತಾದವು ವಲಸೆಗಾರರೊಂದಿಗೆ ಬಂದ ಕೀಟಗಳಲ್ಲಿ ಮುಖ್ಯವಾದವು ಹೀಗೆ ಬಂದ ಕೀಟಗಳು ಬಲುಬೇಗ ಹೊಸ ವಾತಾವರಣಕ್ಕೆ ಹೊಂದಿಕೊಂಡು ಸಂತಾನಾಭಿವೃದ್ಧಿಯಲ್ಲಿ ತೊಡಗಿ ಅಮೆರಿಕವನ್ನೆಲ್ಲ ಆವರಿಸಿದುವು. ಈ ಬಗೆಯ ಕೀಟಗಳ ವೃದ್ಧಿ ಇತ್ತೀಚಿನ ವರ್ಷಗಳಲ್ಲೂ ಕಾಣಬಂದಿದೆ. ಉದಾಹರಣೆಗೆ ಆಲ್ಫಾಲ್ಫ ಗಿಡಕ್ಕೆ ಅಂಟುವ ಏಫಿಡ್ ಕೀಟವೊಂದು 1954ರಲ್ಲಿ ಮೊಟ್ಟಮೊದಲ ಬಾರಿಗೆ ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ಕಾಣಿಸಿಕೊಂಡಿತು. ಕೇವಲ ನಾಲ್ಕು ವರ್ಷದ ಅವಧಿಯಲ್ಲಿ ಆ ರಾಜ್ಯವನ್ನೆಲ್ಲ ಆವರಿಸಿತು. ಇದರಿಂದ ಉಂಟಾದ ಬೆಳೆಯ ನಷ್ಟ ಹಾಗೂ ಇದರ ಹತೋಟಿಗೆಂದು ಖರ್ಚಾದ ಹಣ ಸುಮಾರು 3 ಕೋಟಿ ಡಾಲರ್‌ಗಳಷ್ಟು ಎಂದು ಅಂದಾಜು ಮಾಡಲಾಗಿದೆ. ಹೊಸದಾಗಿ ಬಂದ ಕೀಟಗಳು ತಮ್ಮ ಮೂಲ ನೆಲೆಯಲ್ಲಿರಬಹುದಾದ ಪರಾವಲಂಬಿಗಳ, ಶತ್ರುಗಳ ಕಾಟ ಹೊಸ ನೆಲೆಯಲ್ಲಿ ಇಲ್ಲದಿರುವುದೊಂದು, ಹೊಸ ನೆಲೆಯಲ್ಲಿ ಬೆಳೆಯುತ್ತಿರುವ ಸಸ್ಯಗಳು ಈ ಕೀಟಗಳಿಗೆ ಆತಿಥೇಯ ಸಸ್ಯಗಳಾಗುವುದೊಂದು ಹೀಗೆ ದ್ವಿಗುಣ ಲಾಭ ಪಡೆಯುತ್ತವೆ. ಈ ಎಲ್ಲ ಕಾರಣಗಳಿಂದಾಗಿ ಕೀಟಗಳ ಸಮಸ್ಯೆ ಅಧಿಕಗೊಳ್ಳುತ್ತದೆ. ಬೆಳೆಗಳನ್ನು ನಾಶ ಮಾಡುವುದರ ಮೂಲಕ ಮಾಡುವ ನಷ್ಟವೊಂದೇ ಅಲ್ಲದೆ ಕೀಟಗಳು ಕೆಲವು ಸಸ್ಯರೋಗಗಳನ್ನು ಹರಡುವುದರಲ್ಲೂ ಸಹಕಾರಿಗಳಾಗಿವೆ.

ಇದರಿಂದಾಗಿ ಕೃಷಿಗೂ ಕೀಟಗಳಿಗೂ ಇರುವ ನಿಕಟ ಸಂಬಂಧವನ್ನು ಅರಿತುಕೊಂಡು ಹಾನಿಕಾರಕ ಕೀಟಗಳನ್ನು ನಿವಾರಿಸುವ ದಿಸೆಯಲ್ಲಿ ಹಲವಾರು ವಿಧಾನಗಳನ್ನು ಮಾನವ ಅನುಸರಿಸತೊಡಗಿದ್ದಾನೆ. ಇವುಗಳಲ್ಲಿ ಸಾಗುವಳಿ ವಿಧಾನಗಳು (ಕಲ್ಚರಲ್ ಮೆಥಡ್ಸ್), ಭೌತ ಹಾಗೂ ರಾಸಾಯನಿಕ ವಿಧಾನಗಳು ಮತ್ತು ಜೈವಿಕ ವಿಧಾನಗಳು ಮುಖ್ಯವಾದುವು.

**ಸಾಗುವಳಿ ವಿಧಾನಗಳು:** ಮೊದಲಿನಿಂದಲೂ ಅನುಸರಿಸುವ ಕೃಷಿ ವಿಧಾನಗಳನ್ನು ಬದಲಾಯಿಸುವುದನ್ನು ಒಳಗೊಂಡಿವೆ. ಉದಾಹರಣೆಗೆ ಪರ್ಯಾಯ ಸಾಗುವಳಿ ಕ್ರಮ, ಬೆಳೆಗಳಿಂದ ಉಳಿಯುವ ವಸ್ತುಗಳನ್ನೂ ಪರ್ಯಾಯ ಆತಿಥೇಯ ಸಸ್ಯಗಳನ್ನೂ ನಾಶಪಡಿಸುವುದು, ನಾಟಿ ಹಾಕುವ ಇಲ್ಲವೆ ಕೊಯ್ಲಿನ ಕಾಲವನ್ನು ಬದಲಿಸುವುದು, ವಿಶೇಷ ರೀತಿಯ ಸಾಗುವಳಿ ಕ್ರಮಗಳನ್ನು ಅನುಸರಿಸುವುದು, ಇತ್ಯಾದಿ. ಇದರಿಂದ ಕೀಟಗಳಿಂದಾಗುವ ನಷ್ಟವನ್ನು ಗಣನೀಯವಾಗಿ ಕಡಿಮೆಮಾಡಬಹುದಾಗಿದೆ. ಈ ವಿಧಾನದಲ್ಲಿ ನಿವಾರಣೆಗಿಂತ ಪಿಡುಗು ಅಂಟುವ ಮೊದಲೇ ಅದನ್ನು ತಡೆಯುವ ಕಡೆಗೆ ಹೆಚ್ಚು ಗಮನವೀಯಲಾಗುತ್ತದೆ. ಈ ವಿಧಾನವನ್ನನುಸರಿಸಲು ಕೀಟಪಿಡುಗಿನ ಜೀವನಕ್ರಮ, ಸ್ವಭಾವ, ಅದು ಅಂಟುವ ಸಸ್ಯಜಾತಿಯ ತಿಳಿವಳಿಕೆ ಮುಂತಾದವುಗಳು ಅಗತ್ಯವಾಗಿ ಬೇಕು. ಅಲ್ಲದೆ ಗೊಬ್ಬರಗಳ ಬಳಕೆಯಿಂದ ಸಸ್ಯಗಳು ಹೆಚ್ಚು ಶಕ್ತಿಯುತವಾಗುವಂತೆ ಮಾಡುವುದರ ಮೂಲಕ ಅವು ಕೀಟಗಳನ್ನು ನಿರೋಧಿಸುವಂತೆ ಮಾಡಬಹುದು. ಕೀಟ ನಿರೋಧಕ ಗುಣಗಳುಳ್ಳ ತಳಿಗಳನ್ನು ಅಭಿವೃದ್ಧಿ ಪಡಿಸುವುದರಿಂದಲೂ ಕೀಟಗಳನ್ನು ತಡೆಗಟ್ಟಬಹುದು.

**ಭೌತ ಹಾಗೂ ರಾಸಯನಿಕ ವಿಧಾನಗಳು:** ಕೀಟಗಳನ್ನು ಕೈಯಿಂದ ನಾಶಪಡಿಸುವುದು, ತೆರೆ, ಬಲೆ ಮುಂತಾದವನ್ನು ಉಪಯೋಗಿಸಿ ಕೀಟಗಳನ್ನು ಹತೋಟಿಯಲ್ಲಿಡುವುದು ಭೌತ ವಿಧಾನಗಳಲ್ಲಿ ಕೆಲವು. ಕೆಲವು ಬಗೆಯ ರೇಡಿಯೋ ವಿಕಿರಣಗಳನ್ನು (ಎಕ್ಸ್‌ರೇ, ಗಾಮರೇ) ಬಳಸಿ ಕೀಟಗಳಲ್ಲಿನ ಗಂಡುಗಳನ್ನು ನಿರ್ವೀರ್ಯಗೊಳಿಸಿ ಸಂತಾನವೃದ್ಧಿಯಾಗುವಂತೆ ನೋಡಿಕೊಳ್ಳುವುದೂ ಒಂದು ಮುಖ್ಯ ಭೌತ ವಿಧಾನವೆನಿಸತೊಡಗಿದೆ.

ಕೀಟನಾಶಕ, ನಿರೋಧಕ ರಾಸಾಯನಿಕ ವಸ್ತುಗಳನ್ನು ಬಳಸುವುದೇ ರಾಸಾಯನಿಕ ವಿಧಾನ. ಪ್ರಪಂಚದಾದ್ಯಂತ ಹೆಚ್ಚು ಜನಪ್ರಿಯವಾದ ಹಾಗೂ ಬಳಕೆಯಲ್ಲಿರುವ ವಿಧಾನ ಇದು. ಎಲ್ಲ ದೇಶಗಳಲ್ಲೂ ವಿವಿಧ ಬಗೆಯ ಕೀಟನಾಶಕಗಳು ದೊರೆಯುತ್ತವಲ್ಲದೆ ಅವುಗಳ ಬಳಕೆಯ ಕ್ರಮಗಳು, ಉಪಕರಣಗಳು ಮುಂತಾದವು ಸುಲಭವಾಗಿ ದೊರೆಯುತ್ತವೆ. ಕೀಟನಾಶಕಗಳಲ್ಲಿ ಎರಡು ಮುಖ್ಯ ಬಗೆಗಳಿವೆ. ಒಂದು ಕೀಟ ವಿಕರ್ಷಕಗಳು–ಇವು ಕೀಟಗಳನ್ನು ಸಸ್ಯದ ಬಳಿಗೆ ಅಥವಾ ಸಸ್ಯೋತ್ಪನ್ನಗಳ ಬಳಿಗೆ ಬರದಿರುವಂತೆ ತಡೆಯುತ್ತವೆ. ಇನ್ನೊಂದು ಬಗೆಯವು ಕೀಟ ಆಕರ್ಷಕಗಳು. ಇವುಗಳು ಹಾನಿಕಾರಕ ಕೀಟಗಳನ್ನು ಆಕರ್ಷಿಸಿ ಅವು ಈ ವಸ್ತುವನ್ನು ತಿನ್ನುವಂತೆ ಮಾಡಿ ಕೊಂದುಹಾಕುತ್ತವೆ. ಒಂದೊಂದು ಬಗೆಯಲ್ಲೂ ಹಲವಾರು ರೀತಿಯ ಕೀಟನಾಶಕಗಳಿವೆ. ಮೊದಮೊದಲು ಬಳಸಲಾಗುತ್ತಿದ್ದ ಕೀಟನಾಶಕಗಳಲ್ಲಿ ಬಹುಪಾಲು ವಿಷಪೂರಿತವಾದುವು. ಕೀಟ ಈ ವಸ್ತುವನ್ನು ಸೇವಿಸುವುರಿಂದಾಗಲಿ ಇಲ್ಲವೆ ಅದರ ಸಂಪರ್ಕದೊಂದಿಗೆ ಬರುವುದರಿಂದಾಗಲಿ ಸಾವಿಗೀಡಾಗುತ್ತದೆ. ಉದಾಹರಣೆಗೆ ಸೋಡಿಯಂ ಆರ್ಸೈನೈಟ್, ಲೆಡ್ ಆರ್ಸೈನೈಟ್, ಕ್ಯಾಲ್ಸಿಯಂ ಆರ್ಸಿನೇಟ್ ಸೋಡಿಯಂ ಫ್ಲೋರೈಡ್, ಪಾದರಸ ಹಾಗೂ ಸತುವಿನ ಸಂಯುಕ್ತಗಳು ಮುಂತಾದುವು ಸೇವನೆಯಿಂದ ಸಾವುಂಟುಮಾಡುವಂಥವು ನಿಕೋಟಿನ್ ಸಲ್ಫೇಟ್, ಡೆರಿಸ್, ಪೈರೆತ್ರಮ್ ಮುಂತಾದವು ಕೀಟದೊಂದಿಗೆ ಸಂಪರ್ಕಕ್ಕೆ ಬರುವುದರಿಂದ ನಾಶಗೊಳಿಸುವಂಥವು. ಸೇವನೆಯಿಂದ ಸಾವುಂಟು ಮಾಡುವ ಕೀಟನಾಶಕಗಳು ಕೀಟಗಳಿಗೊಂದೇ ಅಲ್ಲದೆ ಮಾನವ ಮತ್ತು ಕೆಲವು ಸಾಕುಪ್ರಾಣಿಗಳಿಗೂ ಮಾರಕಗಳಾದುದರಿಂದ ಇವುಗಳ ಬಳಕೆ ಹೆಚ್ಚು ಜನಪ್ರಿಯವಾಗಿಲ್ಲ.

ಉಗ್ರಾಣಗಳನ್ನು, ಮಳಿಗೆಗಳನ್ನು, ಸಸ್ಯಸಂಗೋಪನ ಕೋಣೆಗಳನ್ನು ಕೀಟ ನಾಶಕಗಳ ಹೊಗೆಯಾಡಿಸುವ ಮೂಲಕ ಕೀಟಗಳನ್ನು ನಾಶಗೊಳಿಸಬಹುದು. ಹೀಗೆ ಬಳಸಲಾಗುವ ಕೀಟನಾಶಕಗಳಲ್ಲಿ ಮುಖ್ಯವಾದುವು ಹೈಡ್ರೊಜನ್ ಸಯನೈಡ್, ಕಾರ್ಬನ್ ಡೈಸಲ್ಫೇಟ್, ಎಥಿಲೀನ್ ಆಕ್ಸೈಡ್ ಅಥವಾ ಎಥಿಲೀನ್ ಡೈಕ್ಲೋರೈಡ್, ಕಾರ್ಬನ್ ಟೆಟ್ರಕ್ಲೋರೈಡ್ ಮಿಶ್ರಣ, ಮೀಥೈಲ್ ಬ್ರೋಮೈಡ್ ಇತ್ಯಾದಿ. ಕೃತಕವಾಗಿ ಸಂಶ್ಲೇಷಿತವಾದ ಕೀಟನಾಶಕಗಳಲ್ಲಿ ಅತ್ಯಂತ ಮುಖ್ಯವಾದುದು ಎರಡನೆಯ ಮಹಾಯುದ್ಧದ ತರುವಾಯ ಪ್ರಸಿದ್ಧಿಗೆ ಬಂದ ಡಿ ಡಿ ಟಿ ಹಲವಾರು ಬಗೆಯ ಕೀಟಗಳಿಗೆ ಮಾರಕವಾಗಿದೆ. ಬಲುಬೇಗ ಜನಪ್ರಿಯವಾದ ಇದು ಈಗೀಗ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಕಾರಣ ಕೀಟಗಳು ಇದಕ್ಕೆ ವಿರುದ್ಧವಾಗಿ ನಿರೋಧಕ ಗುಣವನ್ನು ಬೆಳೆಸಿಕೊಂಡಿರುವುದು ಮತ್ತು ಇದು ಮನುಷ್ಯನಿಗೂ ಹಾನಿಕಾರಕವಾಗಿರುವುದು. ಆಲ್ಡ್ರಿನ್, ಕ್ಲೋರ್‌ಡೇನ್, ಬಿ ಎಚ್ ಸಿ ಮುಂತಾದುವು ಇತರ ಬಗೆಯ ಸಂಶ್ಲೇಷಿತ ಕೀಟನಾಶಕಗಳು, ಇವಕ್ಕಿಂತ ಹೆಚ್ಚು

ಪ್ರಬಲವಾದುವು ಮ್ಯಾಲತಿಯಾನ್, ಪ್ಯಾರತಿಯಾನ್, ಶ್ರಾಡಾನ್, ಸಿಸ್ಟೋಕ್ಸ್ ಮುಂತಾದ ಸಾವಯವ ರಂಜಕವುಳ್ಳ ಸಂಯುಕ್ತಗಳು, ಇವುಗಳಲ್ಲಿ ಕೊನೆಯ ಎರಡು ಸಸ್ಯದೇಹದೊಳಗೆ ಪ್ರವೇಶಿಸಿ ಹಲವಾರು ವಾರಗಳ ಕಾಲ ತಮ್ಮ ಮಾರಕ ಗುಣವನ್ನು ಉಳಿಸಿಕೊಂಡಿರುತ್ತವೆ. ಇವು ಏಫಿಡ್ ಮತ್ತು ಕಾಕ್ಸಿಡ್ ಕೀಟಗಳಿಗೆ ತೀವ್ರಹಾನಿಕಾರಕಗಳೆನಿಸಿವೆ.

ಕೀಟನಾಶಕಗಳನ್ನು ಪುಡಿಯ ರೂಪದಲ್ಲಿ ಇಲ್ಲದೆ ದ್ರವರೂಪದಲ್ಲಿ ಸಸ್ಯಗಳ ಮೇಲೆ ಸಿಂಪಡಿಸಲಾಗುತ್ತದೆ. ಸಿಂಪಡಿಸಲು ಅನೇಕ ಬಗೆಯ ಸರಳ ಹಾಗೂ ಕ್ಲಿಷ್ಟವಾದ ಸಲಕರಣೆಗಳನ್ನು ಉಪಯೋಗಿಸಲಾಗುತ್ತದೆ. ಈಗೀಗ ಏರೋಪ್ಲೇನ್ ಇಲ್ಲದೆ ಹೆಲಿಕಾಪ್ಟರ್‌ಗಳನ್ನು ಬಳಸಿ ಸಿಂಪಡಿಸುವ ಕ್ರಮ ಜನಪ್ರಿಯವಾಗುತ್ತಿದೆ.

**ಜೈವಿಕ ವಿಧಾನಗಳು:** ಹಾನಿಕಾರಕ ಕೀಟಗಳ ಮೇಲೆ ಪರಾವಲಂಬಿ ಜೀವನ ನಡೆಸುವ ಜೀವಿಗಳನ್ನೋ, ಕೀಟಭಕ್ಷಕ ಪ್ರಾಣಿಗಳನ್ನೋ ಇಲ್ಲವೆ ಕೀಟಗಳಿಗೆ ರೋಗವುಂಟುಮಾಡುವ ಜೀವಿಗಳನ್ನೋ ಉಪಯೋಗಿಸಿ ಕೀಟಗಳನ್ನು ನಿವಾರಿಸಬಹುದು. ಪ್ರಕೃತಿಯಲ್ಲಿ ನಮಗೆ ಕಾಣದಂತೆ ಈ ಬಗೆಯ ಕೀಟ ನಿಯಂತ್ರಣ ನಡೆಯುತ್ತದಾದರೂ ಮಾನವನಿಂದ ಈ ಕ್ರಮದ ಅನುಕರಣೆ ಇತ್ತೀಚಿನದು. ಉದಾಹರಣೆಗೆ ಅಮೆರಿಕದಲ್ಲಿ ಕಿತ್ತಳೆ ಜಾತಿಯ ಸಸ್ಯಗಳಿಗೆ ತೀವ್ರ ಹಾನಿಯುಂಟುಮಾಡುತ್ತಿದ್ದ ಐಸೀರಿಯ ಪರ್ಚೇಸಿ ಎಂಬ ಹುರುಪೆ ಕೀಟವನ್ನು ಆಸ್ಟ್ರೇಲಿಯದಿಂದ ತರಲಾದ ರೊಡೋಲಿಯ ಎಂಬ ಜೀರುಂಡೆಯನ್ನು ಬಳಸಿ ನಾಶಪಡಿಸಲಾಯಿತು. ಇದರಂತೆಯೇ, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಮೂಲಂಗಿ ಜಾತಿಯ ಸಸ್ಯಗಳಿಗೆ ಹಾನಿಯುಂಟುಮಾಡುತ್ತಿದ್ದ ಪಯರಿಸ್ ರೇಪೇ ಎಂಬ ಚಿಟ್ಟೆಯನ್ನು ಯುರೋಪಿನಿಂದ ತಂದ ಜೇನುಜಾತಿಯ ಪರಾವಲಂಬಿ ಜೀವಿಯೊಂದರಿಂದ ನಿವಾರಿಸಲಾಯಿತು. ಇದೇ ರೀತಿ, ಹಾನಿಕಾರಕ ಕೀಟಗಳಿಗೆ ರೋಗವುಂಟುಮಾಡಿ ನಾಶಪಡಿಸುವ ಹಲವಾರು ಬ್ಯಾಕ್ಟೀರಿಯ, ಬೂಷ್ಟು, ಪ್ರೋಟೋಜೋವ ಗುಂಪಿನ ಪ್ರಾಣಿಗಳು, ವೈರಸ್‌ಗಳು ಮುಂತಾದುವನ್ನು ಉಪಯೋಗಿಸಿ ಕೀಟಗಳನ್ನು ನಿವಾರಿಸುವುದುಂಟು, ಉದಾಹರಣೆಗೆ ಆಲ್ಫಾಲ್ಫ ಸಸ್ಯಕ್ಕೆ ಅಂಟುವ ಕೋಲಿಯಾಸ್ ಫೈಲೊಡೈಸ್ ಯೂರಿತೀಮ್ ಎಂಬ ಚಿಟ್ಟೆಯ ಕಂಬಳಿ ಹುಳುವನ್ನು ಒಂದು ಬಗೆಯ ವೈರಸ್ ದಾಳಿಗೆ ಈಡುಮಾಡಿ ನಾಶಪಡಿಸಲಾಗಿದೆ.

ಹೀಗೆ ಕೀಟ ನಿಯಂತ್ರಣಕ್ಕೆ ಹಲವಾರು ವಿಭಿನ್ನ ವಿಧಾನಗಳಿದ್ದರೂ ಯಾವ ಒಂದು ಬಗೆಯೂ ಸಂಪೂರ್ಣವಾಗಿ ಕೀಟಗಳನ್ನು ನಾಶಪಡಿಸಲಾರದು. ಎಲ್ಲ ವಿಧಾನಗಳನ್ನೂ ಪರಸ್ಪರ ಪೂರಕವಾಗಿ ಬಳಸಬೇಕಾಗುತ್ತದೆ. ಕೀಟಗಳನ್ನು ಯಶಸ್ವಿಯಾಗಿ ನಿಯಂತ್ರಿಸುವಲ್ಲಿ ಕೀಟಗಳ ಪ್ರಕೃತಿ, ಸ್ವಭಾವ, ಅವುಗಳಿರುವ ಮೂಲನೆಲೆ, ಅವಕ್ಕೂ ಪರಿಸರಕ್ಕೂ ಇರುವ ಸಂಬಂಧ, ಕೀಟಗಳ ಸ್ವಾಭಾವಿಕ ಶತ್ರುಗಳು ಮೊದಲಾದುವುಗಳ ಜ್ಞಾನ ಅಗತ್ಯ. ಅಲ್ಲದೆ ಕೀಟನಾಶಕಗಳಿಂದಾಗುವ ಇತರ ಪರಿಣಾಮಗಳ ಕಡೆಗೂ ಗಮನವೀಯುವುದು ಅಗತ್ಯ. ಕೀಟನಾಶಕಗಳ ಬಳಕೆಗೆ ಬೇಕಾಗುವ ಹಣದ ವೆಚ್ಚ ನಾಶವಾಗಬಹುದಾದ ಬೆಳೆಯ ವೆಚ್ಚಕ್ಕಿಂತ ಹೆಚ್ಚಾಗಬಾರದು. *

**ಕೀಟಾಪೊಡ :** ವಲಯವಂತ (ಅನೆಲಿಡ) ವಿಭಾಗಕ್ಕೆ ಸೇರಿದ ಒಂದು ಮುಖ್ಯವರ್ಗ. ಇದರಲ್ಲಿ ಪಾಲಿಕೀಟ ಮತ್ತು ಆಲಿಗೊಕೀಟ ಎಂಬ ಎರಡು ಗಣಗಳಿವೆ. ಕೆಲವರು ಈ ಗಣಗಳಿಗೆ ಪ್ರತ್ಯೇಕವಾದ ವರ್ಗಸ್ಥಾನಗಳನ್ನು ಕೊಟ್ಟು ಅವನ್ನು ಕೀಟಾಪೊಡ ಅಧಿವರ್ಗದ (ಸೂಪರ್‌ಕ್ಲಾಸ್) ಅಡಿಯಲ್ಲಿಡುವುದು ಆಚರಣೆಗೆ ಬಂದಿದೆ. ಈ ಗುಂಪಿನ ಪ್ರಾಣಿಗಳಲ್ಲೆಲ್ಲ ಬಿರುಗೂದಲುಗಳು (ಸೀಟಿ ಅಥವಾ ಕೀಟೆ) ಬಿರುಗೂದಲು ಕುಳಿಗಳಲ್ಲಿ ಅಥವಾ ದೇಹದ ಎರಡು ಪಕ್ಕಗಳಲ್ಲಿ ಹೊರಚಾಚಿರುವ ಸ್ನಾಯುಮಯವಾದ ಪಾರ್ಶ್ವಪಾದಗಳ ಮೇಲೆ ಜೋಡಣೆಯಾಗಿರುವುದು ಒಂದು ಮುಖ್ಯ ವೈಶಿಷ್ಟ್ಯ. ಬಿರುಗೂದಲುಗಳ ಸಂಖ್ಯೆಯ ಮತ್ತು ಅವುಗಳ ಅಳವಡಿಕೆಯ ಆಧಾರದ ಮೇಲೆ ಈ ಗುಂಪಿನ ಪ್ರಾಣಿಗಳನ್ನು ಪಾಲಿಕೀಟ (ಬಹು ಬಿರುಗೂದಲಿನ ವಲಯವಂತಗಳು) ಮತ್ತು ಆಲಿಗೊಕೀಟಗಳೆಂದು (ಮಿತ ಬಿರುಗೂದಲಿನ ವಲಯವಂತಗಳು) ವರ್ಗೀಕರಿಸಲಾಗಿದೆ.

ಕೀಟಾಪೊಡ ಗುಂಪಿನ ಪ್ರಾಣಿಗಳ ದೇಹ ಸಾಮಾನ್ಯವಾಗಿ ದ್ವಿಪಾರ್ಶ್ವಸಮ್ಮಿತಿಯಿಂದ ಕೂಡಿದ್ದು ಖಂಡ ಅಥವಾ ವಲಯಗಳಾಗಿ ವಿಭಾಗವಾಗಿದೆ. ಖಂಡಗಳು ಒಂದರ ಹಿಂದೊಂದು ಒಂದು ಸರಣಿಯಲ್ಲಿ ಅಳವಡಿಸಿರುತ್ತವೆ. ಈ ದೇಹದ ಖಂಡೀಕರಣ (ಸೆಗ್ಮೆಂಟೇಷನ್) ದೇಹದ ಮೇಲ್ಭಾಗದಲ್ಲಿ ಮಾತ್ರ ಸೀಮಿತಗೊಂಡಿರದೆ ಒಳಭಾಗದಲ್ಲೂ ವ್ಯಾಪಿಸಿದೆ. ದೇಹದ ಗೋಡೆಗೂ ಮತ್ತು ಅನ್ನನಾಳದ ಗೋಡೆಗೂ ಮಧ್ಯೆಯಿರುವ ದೇಹಾಂತರಾವಾಕಾಶ ಅಥವಾ ಸೀಲೋಮ್ ಕೂಡ ನಡುಪೊರೆಗಳಿಂದ (ಸೆಪ್ಟ) ವಿಭಾಗವಾಗಿದೆ. ಈ ಗುಂಪಿನ ಪ್ರಾಣಿಗಳು ವಿವಿದ ಬಗೆಯ ಜೀವನಕ್ಕೆ ಹೊಂದಿಕೊಂಡಿರುವುದರಿಂದ ಇವುಗಳ ದೇಹದ ಹೊರ ಹಾಗೂ ಒಳ ಅಂಗಗಳ ರಚನೆಯಲ್ಲಿ ಅನೇಕ ರೀತಿಯ ಮಾರ್ಪಾಡುಗಳನ್ನು ಕಾಣಬಹುದು. ಪಾಲಿಕೀಟ ಗುಂಪಿನಲ್ಲಿ ಸ್ವತಂತ್ರವಾಗಿ ತೆವಳುವ ನೀರಿಸ್, ಬಿಲ ತೋಡಿಕೊಂಡು ವಾಸಿಸುವ ಅರೆನಿಕೋಲ, ನೆಲದಲ್ಲಿ ಬಿಲ ತೋಡಿ ತಮ್ಮ ಸುತ್ತಲೂ ನಳಿಕೆಯನ್ನು ರಚಿಸಿಕೊಂಡು ಜೀವಿಸುವ ಕೀಟಾಪ್ಟೆರಸ್, ಟೆರಬೆಲ್ಲ, ಸಾಬೆಲ್ಲ ಮೊದಲಾದುವು, ತೇಲೀಜು ಜೀವಿಗಳಾದ ಟೋಮಾಪ್ಟೆರಸ್ ಮತ್ತು ನೆಕೊಕೀಟ ಮುಂತಾದವನ್ನು ಕಾಣುತ್ತೇವೆ. ಪರಿಹೊಂದಾಣಿಕಾ ವಿಸ್ತರಣಕ್ಕೆ ತಕ್ಕಂತೆ ಮುಖದ ಮತ್ತು ಶಿರದ ಅಂಗಗಳು, ಪಾರ್ಶ್ವಪಾದಗಳು ಮೊದಲಾದುವು ಮಾರ್ಪಾಟು ಹೊಂದಿರುವುವಲ್ಲದೆ ಚಲನೆ, ಶ್ವಸನ, ಪಚನ ಮೊದಲಾದ ದೇಹಕ್ರಿಯೆಗಳೂ ಬದಲಾವಣೆಯನ್ನು ಪ್ರದರ್ಶಿಸುತ್ತವೆ. ಸಾಮಾನ್ಯವಾಗಿ ದೇಹದ ಅಗ್ರಭಾಗದಲ್ಲಿ ಪ್ರೋಸ್ಟೋಮಿಯಮ್ ಎಂಬ ಮುಖ ಪೂರ್ವವಿಶಿಷ್ಟವಾಗಿದೆ. ಸ್ವೇಚ್ಛೆಯಾಗಿ ಈಜಾಡುವ ಮತ್ತು ತೆರಳುವ ವಲಯವಂತಗಳಲ್ಲಿ ಕಣ್ಣುಗಳಿವೆ. ಸ್ಪರ್ಶತಂತುವಿನ (ಟೆಂಟಕಲ್) ರೂಪದ ಜ್ಞಾನೇಂದ್ರಿಯಗಳಿವೆ. ಆದರೆ ಬಿಲವಾಸಿಗಳಲ್ಲಿ ಅಥವಾ ನೆಲವನ್ನು ಕೊರೆದು ಹುದುಗಿಕೊಳ್ಳುವ ಕ್ರಿಮಿಗಳಲ್ಲಿ ಇವು ಇಲ್ಲ. ಇಂಥ ಪ್ರಾಣಿಗಳ ಚಲನೆಯಲ್ಲಿ, ಬಿರುಗೂದಲು, ಅವುಗಳಿಗೆ ಸಂಬಂಧಿಸಿದ ಸ್ನಾಯುಗಳು ಮತ್ತು ಸ್ವಲ್ಪಮಟ್ಟಿಗೆ ಸೀಲೋಮಿನಲ್ಲಿರುವ ದ್ರವ ನೆರವಾಗುತ್ತವೆ.

ಈ ಗುಂಪಿನ ಪ್ರಾಣಿಗಳಲ್ಲಿ ಚೆನ್ನಾಗಿ ರೂಪುಗೊಂಡ ರಕ್ತನಾಳಮಂಡಲವಿದೆ. ಇದರಲ್ಲಿ ಡಾರ್ಸಲ್ ಮತ್ತು ವೆಂಟ್ರಲ್ ರಕ್ತನಾಳಗಳು ಪ್ರಮುಖವಾದ ಭಾಗಗಳು, ಪಚನನಾಳದ ಮೇಲ್ಭಾಗದಲ್ಲಿರುವ ಡಾರ್ಸಲ್ ರಕ್ತನಾಳ ರಕ್ತವನ್ನು ಸಂಗ್ರಹಿಸಿಕೊಳ್ಳುವಿದಲ್ಲದೆ, ತನ್ನ ಸಂಕೋಚನದಿಂದ ದೇಹದ ಹಿಂಭಾಗದಿಂದ ಮುಂಭಾಗಕ್ಕೆ ಪ್ರವಹಿಸುವಂತೆ ಮಾಡುತ್ತದೆ. ಅನ್ನನಾಳದ ತಳಭಾಗದಲ್ಲಿರುವ ವೆಂಟ್ರಲ್ ರಕ್ತನಾಳ ರಕ್ತವನ್ನು ದೇಹದ ಇತರ ಭಾಗಗಳಿಗೆ ವಿತರಣೆ ಮಾಡುತ್ತದೆ. ಇದರಲ್ಲಿ ರಕ್ತ ದೇಹದ ಅಗ್ರಭಾಗದಿಂದ ಪಾರ್ಶ್ವಭಾಗಕ್ಕೆ ಹರಿಯುತ್ತದೆ. ಇವೆರಡು ರಕ್ತನಾಳಗಳಿಗೂ ಸಂಬಂಧ ಕಲ್ಪಿಸುವ ಒಂದು ಅಥವಾ ಹಲವು ರಕ್ತನಾಳಗಳಿರುತ್ತವೆ. ಆಲಿಗೊಕೀಟದ ಪ್ರಾಣಿಗಳಲ್ಲಿ ಈ ರಕ್ತನಾಳಗಳು ಪಾರ್ಶ್ವಹೃದಯಗಳಾಗಿ ರೂಪುಗೊಂಡಿವೆ. ಮೇಲೆ ವಿವರಿಸಿದುದು ರಕ್ತಪರಿವಲನೆಯ ಮೂಲವಿನ್ಯಾಸ. ಇದರಲ್ಲಿ ಬಗೆಬಗೆಯ ವ್ಯತ್ಯಾಸಗಳನ್ನು ಕಾಣಬಹುದು. ಸೀಲೋಮ್ ವಿಶಾಲವಾಗಿದ್ದು ಪಚನನಾಳದ ಸುತ್ತಲೂ ವ್ಯಾಪಿಸಿದೆ. ಆದರೆ ಅಕ್ಕಪಕ್ಕದ ಎರಡು ಖಂಡಗಳ ಸೀಲೋಮನ್ನು ಪ್ರತ್ಯೇಕಿಸುವಂತೆ ಸ್ನಾಯುಮಯವಾದ ನಡುಗೋಡೆಗಳು ರೂಪುಗೊಂಡಿವೆ. ಅಲ್ಲವೆ ಪಚನನಾಳವನ್ನು ಸೀಲೋಮ್ ಕುಹರದಲ್ಲಿ ಒಂದು ನಿರ್ದಿಷ್ಟಸ್ಥಾನದಲ್ಲಿಡಲು ಡಾರ್ಸಲ್ ಹಾಗೂ ವೆಂಟ್ರಲ್ ನಡುಗೋಡೆಗಳು ಬೆಳೆದಿರುತ್ತವೆ. ಪಚನಮಂಡಲ ದೇಹದ ಒಂದು ತುದಿಯಲ್ಲಿ ಮತ್ತೊಂದು ತುದಿಯವರೆಗೂ ವ್ಯಾಪಿಸಿದೆ. ಅಂದರೆ ಬಾಯಿ ಒಂದು ತುದಿಯಲ್ಲಿ ಇದ್ದರೆ ಗುದದ್ವಾರ ಮತ್ತೊಂದು ತುದಿಯಲ್ಲಿ ಇದೆ. ಕರುಳಿಗೆ ಸಾಮಾನ್ಯವಾಗಿ ಸಂಕುಚನಾ ಸಾಮರ್ಥ್ಯವಿದೆ. ಶ್ವಸನ ಕಾರ್ಯಕಿವಿರು ಅಥವಾ ಕ್ಲೋಮಗಳ ರೂಪದಲ್ಲಿ ಬೆಳೆದಿರುವ ಅಂಗಗಳಿಂದ ನಡೆಯುತ್ತದೆ. ಕೀಟಾಪೊಡ ಪ್ರಾಣಿಗಳ ವಿಸರ್ಜನಾಂಗಗಳಿಗೆ ನೆಫ್ರೀಡಿಯ ಎಂದು ಹೆಸರು. ಸಾಮಾನ್ಯವಾಗಿ ಒಂದೊಂದು ಖಂಡದಲ್ಲಿ ಒಂದು ಜೊತೆ ನೆಫ್ರೀಡಿಯಗಳಿರುತ್ತವೆ. ಮಾದರಿ ರೂಪದ ನೆಫ್ರೀಡಿಯಮ್ ಸಂಕೀರ್ಣ ಸ್ವರೂಪದ ಒಂದು ನಳಿಕೆ. ಅದರಲ್ಲಿ ಶಿಲಕೆಗಳಿಂದ ಕೂಡಿದ ಆಲಿಕೆ (ನೆಫ್ರೋಸ್ಟೋಮ್), ಗ್ರಂಥಿಕೋಶಗಳಿಂದ ಕೂಡಿದ ಭಾಗಗಳಿರುತ್ತವೆ. ನೆಫ್ರೋಸ್ಟೋಮ್ ನಡುಪೊರೆ ಮುಂಭಾಗದಲ್ಲಿ ತೆರೆದರೆ ಕೂಡಿರದ ಭಾಗಗಳಿರುತ್ತವೆ. ನೆಫ್ರೋಸ್ಟೋಮ್ ನಡುಪೊರೆಯ ಹಿಂಭಾಗದಲ್ಲಿರುತ್ತದೆ. ಅಲ್ಲದೆ ಈ ನಳಿಕೆ ದೇಹದ ಹೊರಭಾಗದಲ್ಲಿ ನೆಫ್ರೀಡಿಯೋಪೋರ್ ಎಂಬ ದ್ವಾರದ ಮೂಲಕ ಹೊರತೆರೆಯುತ್ತದೆ. ನರಮಂಡಲದಲ್ಲಿ ಒಂದು ಜೊತೆ ಗ್ಯಾಂಗ್ಲಿಯಗಳಿಂದ ಕೂಡಿದ ಮಿದುಳು, ಪೆರಿಈಸೋಫ್ಯಾಗಸಿನ ನರವಲಯ ಮತ್ತು ಪ್ರತಿಖಂಡದಲ್ಲೂ ಗ್ಯಾಂಗ್ಲಿಯಗಳಿಂದ ಕೂಡಿದ ವೆಂಟ್ರಲ್ ನರಹುರಿ ವಾಸ್ತವವಾಗಿ ಎರಡು ಹುರಿಗಳನ್ನು ಕೂಡಿಸುವ ಗ್ಯಾಂಗ್ಲಿಯದಿಂದ ಇಕ್ಕಡೆಗಳಿಗೆ ಸಣ್ಣ ಸಣ್ಣ ನರಗಳು ಹೊರಡುತ್ತವೆ.

ಕೀಟಾಪೊಡಾ ಗುಂಪಿನಲ್ಲಿ ಹೆಣ್ಣುಗಂಡೆಂಬ ಲಿಂಗಭೇದವಿರಬಹುದು ಅಥವಾ ಒಂದೇ ಪ್ರಾಣಿಯ ದೇಹದಲ್ಲಿ ಗಂಡುಹೆಣ್ಣುಗಳಿಗೆ ಸಂಬಂಧಿಸಿದ ಪ್ರಜನನ ಗ್ರಾಂಥಿಗಳಿರಬಹುದು. ಇವುಗಳಲ್ಲೆಲ್ಲ ಗ್ಯಾಮೀಟುಗಳು ಸೀಲೋಮ್‌ನ ಪೊರೆಯಿಂದಲೇ ಉದ್ಭವಾಗುತ್ತವೆ. ಗರ್ಭಾಂಕುರಿತ ಅಂಡಾಣು ಬೆಳವಣಿಗೆ ಹೊಂದಿ ನೇರವಾಗಿ ಪ್ರೌಢಾವಸ್ಥೆಯನ್ನು ತಲುಪಬಹುದು. ಇಲ್ಲವೆ ತನ್ನ ಬೆಳವಣಿಗೆಯ ಹಂತದಲ್ಲಿ ಸ್ವತಂತ್ರವಾಗಿ ಈಜಿ ಜೀವಿಸುವ ಟ್ರೋಕೋಫೋರ್ ಎಂಬ ಡಿಂಭಾವಸ್ಥೆಯಲ್ಲಿ ಕೊಂಚಕಾಲ ಕಳೆದು ಅನಂತರ ಪ್ರೌಢಪ್ರಾಣಿಯಾಗಬಹುದು. ಈ ಡಿಂಭ ಅಂಜೂರದ ಆಕಾರದಲ್ಲಿದ್ದು ಇದಕ್ಕೆ ಅಗಲವಾದ ಮುಂತುದಿಯಿದೆ. ಈ ತುದಿಯಲ್ಲಿ ನೀಳವಾದ ಅನೇಕ ಶಿಲಕೆಗಳಿವೆ. ಪಚನಮಂಡಲ ಸಂಪೂರ್ಣವಾಗಿದ್ದು ಅದರಲ್ಲಿ ಬಾಯಿ, ಈಸೋಫ್ಯಾಗಸ್, ಜಠರ, ಕರುಳು ಮತ್ತು ಗುದದ್ವಾರವನ್ನು ಗುರುತಿಸಬಹುದು. ಕೆಲವು ಡಿಂಭಗಳಿಗೆ ಕಣ್ಣುಗಳಿರುವುದೂ ಉಂಟು. ಅಲ್ಲದೆ ಇವುಗಳಲ್ಲಿ ಒಂದು ಜೊತೆ ಡಿಂಭಾವಸ್ಥೆಯ ನೆಫ್ರೀಡಿಯಂ ಮತ್ತು ಸ್ನಾಯುತಂತುಗಳಿರುತ್ತವೆ. ಇಂಥ ತೇಲೀಜುವ ಡಿಂಭ ಕಾಯಪರಿವರ್ತನೆ ಹೊಂದಿ ಪ್ರೌಢಜೀವಿಯಾಗುತ್ತದೆ (**ನೋಡಿ– ಅನೆಲಿಡ; ಆಲಿಗೊ; ಕೀಟ; ಪಾಲಿಕೀಟ**). (ಬಿ.ಎಸ್.ಬಿ.)

**ಕೀಟೀನುಗಳು :** ಸಾಮಾನ್ಯ ಅಣುಸೂತ್ರವನ್ನು ಚಿತ್ರದಲ್ಲಿ ತೋರಿಸಿದೆ. ಇವು ಇಂಗಾಲ ಸಂಯುಕ್ತಗಳು, R ಮತ್ತು R' ಗಳು ಆಲ್ಕೈಲ್ ಅಥವಾ ಅರೈಲ್ ಸಾವಯವ

ಪುಂಜ ಅಥವಾ ಜಲಜನಕದ ಪರಮಾಣುಗಳಾಗಿರಬಹುದು. ಈ ವರ್ಗದ ಅತಿಸರಳಯುಕ್ತವಾದ $CH_2$=C=Oವನ್ನು ಕೇವಲ ಕೀಟೀನ್ ಎಂದು ಕರೆಯುತ್ತೇವೆ. ವರ್ಣರಹಿತವಾದ ಮತ್ತು ಬಹು ಘಾಟು ವಾಸನೆಯ ಅನಿಲವಿದು, ಇದನ್ನು ಅಸಿಟೋನ್, ಅಸಿಟಿಕ್ ಆಮ್ಲ ಅಥವಾ ಡೈಕೀಟೀನನ್ನು ಉಷ್ಣ ವಿಭಜನೆಗೆ ಒಳಪಡಿಸಿ ತಯಾರಿಸಬಹುದು. ಮುಂದೆ ತೋರಿಸಿರುವ ಸಮೀಕರಣಕ್ಕೆ ಅನುಗುಣವಾಗಿ ಆಲ್ಫಬ್ರೋಮೋ ಆಮ್ಲ ಬ್ರೋಮೈಡ್‌ಗಳನ್ನು ಸತುವಿನೊಡನೆ ರಾಸಾಯನಿಕ ಕ್ರಿಯೆಗೆ ಒಳಪಡಿಸಿ ಎಲ್ಲ ಬಗೆಯ ಕೀಟೀನುಗಳನ್ನೂ ತಯಾರಿಸಬಹುದು.



ಎಲ್ಲ ಕೀಟೀನುಗಳೂ ತೀವ್ರ ಪ್ರತಿಕ್ರಿಯೆ ಇರುವ ಸಂಯುಕ್ತಗಳು ಕೀಟೀನುಗಳ ಎರಡು ಅಣುಗಳು ಸುಲಭವಾಗಿ ಒಂದಾಗಿ ಡೈಕೀಟೀನುಗಳೆಂಬ ಹೊಸ ಮತ್ತು ಹೆಚ್ಚು



ಸ್ಥಿರವಾದ ಸಂಯುಕ್ತಗಳ ಸೃಷ್ಟಿಯಾಗುತ್ತದೆ. ಡೈಕೀಟೀನುಗಳನ್ನು ದಾಸ್ತಾನುಮಾಡಿ ಕೀಟೀನುಗಳ ಆಕಾರಗಳಾಗಿ ಉಪಯೋಗಿಸಬಹುದು. ಕೀಟೀನುಗಳು ಅನೇಕ ಇತರ ವರ್ಗಗಳ ಸಂಯುಕ್ತಗಳೊಡನೆ ರಾಸಾಯನಿಕ ಕ್ರಿಯೆಗಳಲ್ಲಿ ಸುಲಭವಾಗಿ ಭಾಗವಹಿಸಬಲ್ಲುವಾದ್ದರಿಂದ ವಿವಿಧ ಸಾವಯವ ಸಂಯೋಜನೆಗಳಲ್ಲಿ ಇವುಗಳ ಉಪಯೋಗವನ್ನು ಪಡೆಯುವ ಸಾಧ್ಯತೆಯಿದೆ. (ಕೆ.ಟಿ.ಎಸ್.)

**ಕೀಟೊ ಆಮ್ಲಗಳು :** ಕೀಟೊ (–CO) ಮತ್ತು ಆಮ್ಲೀಯ (–COOH) ಗ್ರೂಪುಗಳನ್ನು ಹೊಂದಿರುವ ಸಂಯುಕ್ತಗಳು, ಪರಿಣಾಮವಾಗಿ ಈ ಎರಡು ವರ್ಗದ ಸಾವಯವ ವಸ್ತುಗಳ ಲಕ್ಷಣಗಳನ್ನೂ ಪಡೆದಿವೆ. ಆಮ್ಲೀಯ ಗುಂಪಿನ ಪಕ್ಕದಲ್ಲೇ ಕೀಟೊ ಗುಂಪೂ ಇದ್ದರೆ ಆಲ್ಫಾ ಕೀಟಾನಿಕ್ ಆಮ್ಲವಾಗುತ್ತದೆ. ಆಮ್ಲೀಯ ಗುಂಪಿನಿಂದ ಎರಡನೆಯ ಸ್ಥಾನದಲ್ಲಿ ಕೀಟೊ ಗುಂಪಿದ್ದರೆ ಬೀಟಾಕೀಟಾನಿಕ್ ಆಮ್ಲವೆಂದೂ ಮೂರನೆಯ ಸ್ಥಾನದಲ್ಲಿದ್ದರೆ ಗ್ಯಾಮಾ ಕೀಟಾನಿಕ್ ಆಮ್ಲವೆಂದೂ ಕರೆಯಲಾಗುವುದು. ಇವುಗಳಿಗೆ ಉದಾಹರಣೆಯಾಗಿ ಪೈರೂವಿಕ್ ಅಸಿಟೊ ಅಸಿಟಿಕ್ ಮತ್ತು ಲೆವುಲೀನಿಕ್ ಆಮ್ಲಗಳನ್ನು ಹೆಸರಿಸಬಹುದು. ಈ ಆಮ್ಲಗಳ ರಚನಾಸೂತ್ರಗಳು ಹೀಗಿವೆ.

$CH_3$- CO(1). COOH ... ಪೈರೂವಿಕ್ ಆಮ್ಲ

$CH_3$- CO(2). $CH_2$(1). COOH ... ಅಸಿಟೊ ಅಸಿಟಿಕ್ ಆಮ್ಲ

$CH_3$ - CO(3). $CH_2$(2). $CH_2$(1). COOH. ... ಲೆವುಲೀನಿಕ್ ಆಮ್ಲ

**ಪೈರೂವಿಕ್ ಆಮ್ಲ:** ಅತಿ ಸರಳ ಕೀಟೊ ಆಮ್ಲವಿದು. ಶರ್ಕರ ಪಿಷ್ಟಾದಿಗಳು ಮತ್ತು ಪ್ರೋಟೀನುಗಳು ಅಂತಿಮವಾಗಿ ಜೀವದ್ರವ್ಯವಾಗುವಾಗ ಪೈರೂವಿಕ್ ಆಮ್ಲ ಮಧ್ಯಂತರ ವಸ್ತುವಾಗಿ ಉತ್ಪತ್ತಿಯಾಗುವುದೆಂದು ನಂಬಲಾಗಿದೆ. ಹಣ್ಣುಗಳಿಂದ ತಯಾರಿಸಬಹುದು. ಇದನ್ನು ಏಕಾಂಗಿಯಾಗಿಯೋ ಪೊಟ್ಯಾಸಿಯಂ ಬೈ ಸಲ್ಫೇಟಿನೊಂದಿಗೋ 210°–




ಟಾರ್ಟಾರಿಕ್ ಆಮ್ಲ ಈನಾಲ್ ರೂಪ ಕೀಟೊ ರೂಪ (ಪೈರೂವಿಕ್ ಆಮ್ಲ)

220° ಸೆಂ. ಉಷ್ಣತಾಮಿತಿಯಲ್ಲಿ ಕಾಯಿಸಿದಾಗ ಪೈರೂವಿಕ್ ಆಮ್ಲ ಕೆಳಕಂಡಂತೆ ಉಂಟಾಗುತ್ತದೆ.

ಇದಕ್ಕೆ ಪೈರೂವಿಕ್ ಆಮ್ಲವೆಂದು ಹೆಸರಾಗಲು ಮೇಲ್ಕಂಡ ತಯಾರಿಕೆಯ ವಿಧಾನವೇ ಕಾರಣ (ಗ್ರೀಕ್‌ನಲ್ಲಿ pyr ಎಂದರೆ ಬೆಂಕಿ, L. uva ಎಂದರೆ ದ್ರಾಕ್ಷಿ), αα ಡೈಬ್ರೋಮೊ ಪ್ರೊಪಿಯೋನಿಕ್ ಆಮ್ಲವನ್ನು ಜಲವಿಶ್ಲೇಷಣೆ ಮಾಡಿದಾಗಲೂ ಪೈರೂವಿಕ್ ಆಮ್ಲ ಬರುತ್ತದೆ.




ಪೈರೂವಿಕ್ ಆಮ್ಲ ಬಣ್ಣವಿಲ್ಲದ ದ್ರವವಸ್ತು. 165° ಸೆಂ. ಉಷ್ಣತೆಯಲ್ಲಿ ಕುದಿಯುತ್ತದೆ. ನೀರು, ಆಲ್ಕೊಹಾಲ್ ಮತ್ತು ಈಥರುಗಳಲ್ಲಿ ಸರಾಗವಾಗಿ ಬೆರೆಯುವುದು. ಕೀಟೊ ಗುಂಪಿರುವ ಪ್ರಯುಕ್ತ ಆಕ್ಸೀಮ್ ಫೀನೈಲ್ ಹೈಡ್ರಜೋನುಗಳನ್ನು ಕೊಡುವುದು. ಹೈಡ್ರೊಸಯನಿಕ್ ಆಮ್ಲವನ್ನು ಕೂಡಿಸಿಕೊಳ್ಳುವುದು. ಜಲಮಾಧ್ಯಮದಲ್ಲಿ ಸೋಡಿಯಂ ಅಮಾಲ್ಗಂನಿಂದ ಅಪಕರ್ಷಿಸಿದಾಗ ಲ್ಯಾಕ್ಟಿಕ್ ಆಮ್ಲವಾಗುತ್ತದೆ.




ಲ್ಯಾಕ್ಟಿಕ್ ಆಮ್ಲ

ಆಮ್ಲೀಯ ಗುಂಪಿನ ದೆಸೆಯಿಂದ ಲವಣಗಳು, ಎಸ್ಟರುಗಳು ಮತ್ತು ಇತರ ಆಮ್ಲೀಯ ವ್ಯುತ್ಪನ್ನಗಳು ಉಂಟಾಗುವುವು. ಶೇ.10 ಸಲ್ಫ್ಯೂರಿಕ್ ಆಮ್ಲದೊಡನೆ ಮೊಹರಾದ ನಳಿಗೆಯಲ್ಲಿ ಕಾಯಿಸಿದಾಗ ಅಸಿಟಾಲ್ಡಿಹೈಡ್ ಮತ್ತು ಇಂಗಾಲದ ಡೈ ಆಕ್ಸೈಡುಗಳು ದೊರೆಯುವುವು.

$$CH_3\text{-CO. COOH} \rightarrow CH_3\text{. CHO} + CO_2$$

ಬೀಟಾ ಕೀಟಾನಿಕ್ ಆಮ್ಲಗಳನ್ನು ಕಾಯಿಸಿದಾಗ ಕೀಟೋನುಗಳು ಉಂಟಾಗುವುವು. ಆದ್ದರಿಂದ ಆಲ್ಫಾ ಮತ್ತು ಬೀಟಾ ಕೀಟಾನಿಕ್ ಆಮ್ಲಗಳನ್ನು ಈ ಕ್ರಿಯೆಯ ಸಹಾಯದಿಂದ ಗುರುತಿಸಬಹುದು. ಆದರೆ ಪ್ರಬಲ ಸಲ್ಫ್ಯೂರಿಕ್ ಆಮ್ಲದೊಡನೆ ಸ್ವಲ್ಪ ಕಾಯಿಸಿದಾಗ ಅಸಿಟಿಕ್ ಆಮ್ಲ ಮತ್ತು ಇಂಗಾಲದ ಮಾನಾಕ್ಸೈಡ್ ಬರುತ್ತವೆ.

$$CH_3\text{-CO. COOH} \rightarrow CH_3\text{. COOH} + CO$$

ಈ ವಿಧಾನವನ್ನು ಅನುಸರಿಸಿ ಸಾವಯವ ಆಮ್ಲದ ಅಣುವಿನಲ್ಲಿರುವ ಇಂಗಾಲದ ಪರಮಾಣುಗಳನ್ನು ಒಂದೊಂದಾಗಿ ಹಂತ ಹಂತವಾಗಿ ಕಡಿಮೆ ಮಾಡಬಹುದು. ಉದಾಹರಣೆಗೆ




ಅಸಿಟೊ ಅಸಿಟಿಕ್ ಆಮ್ಲ: ಅತಿ ಸರಳ ಬೀಟಾ ಕೀಟಾನಿಕ್ ಆಮ್ಲವಿದು. ಆರ್ಯೋಗವಂತನಾದವನ ಮೂತ್ರದಲ್ಲಿ ಅಲ್ಪ ಪ್ರಮಾಣದ ಅಸಿಟೊ ಅಸಿಟಿಕ್ ಆಮ್ಲ ಇರುತ್ತದೆ. ಇದು ಅಸ್ಥಿರ ವಸ್ತು. ಬೀಟಾ ಹೈಡ್ರಾಕ್ಸಿ ಬ್ಯುಟಿರಿಕ್ ಆಮ್ಲವನ್ನು ಉತ್ಕರ್ಷಿಸಿ ಅಥವಾ ಅಸಿಟೊ ಅಸಿಟಿಕ್ ಎಸ್ಟರನ್ನು ತಣ್ಣಗಿರುವ ದುರ್ಬಲ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದೊಡನೆ ವರ್ತಿಸುವಂತೆ ಮಾಡಿ ಇದನ್ನು ಪಡೆಯಬಹುದು. ಕ್ರಿಯಾಶೀಲ ಮೆಥಿಲೀನ್

ಗುಂಪಿರುವುರಿಂದ ($-CH_2-$) ಈ ಆಮ್ಲದ ಎಸ್ಟರು ಸಂಯೋಜನ ರಸಾಯನವಿಜ್ಞಾನದಲ್ಲಿ ಪ್ರಸಿದ್ಧವಾಗಿದೆ. ಪಾಕದಂತಿರುವ ದ್ರವವಸ್ತುವಿನ ರೂಪದಲ್ಲಿ ಈ ಆಮ್ಲ ಪರಿಚಿತವಾಗಿದೆ. ಅದರ ಹರಳುಗಳು 36° ಸೆಂ. ಉಷ್ಣತೆಯಲ್ಲಿ ದ್ರವೀಕರಿಸುತ್ತವೆ. ನೀರಿನೊಡನೆ ಸರಾಗವಾಗಿ ಬೆರೆಯಬಲ್ಲದು. ಫೆರಿಕ್ ಕ್ಲೋರೈಡ್ ದ್ರಾವಣದ ಸಂಪರ್ಕದಲ್ಲಿ ದಟ್ಟ ಕೆಂಪು ನೇರಿಳೆ ಬಣ್ಣ ಕೊಡುವುದು. ಅಯೋಡೊಫಾರಂ ಪರೀಕ್ಷೆಯನ್ನು ಉತ್ತರಿಸುತ್ತದೆ. ಕಾಯಿಸಿದಾಗ ಸುಲಭವಾಗಿ ವಿಭಜಿಸುವುದು.

$$CH_3.CO.CH_2.COOH \xrightarrow{\text{ಉಷ್ಣ}} CH_2.CO.CH_3 + CO_2$$

ಅಸಿಟೋನ್

ಮಧುಮೇಹ ರೋಗಿಗಳಲ್ಲಿ ತಲೆದೋರುವ ಅಸಿಟೋನೂರಿಯ ಸ್ಥಿತಿಯಲ್ಲಿ ಅಸಿಟೋನು ಉತ್ಪತ್ತಿಯಾಗುವುದು ಹೀಗೆಯೇ. ಅಸಿಟೊ ಅಸಿಟಿಕ್ ಆಮ್ಲ ಬೀಟಾಹೈಡ್ರಾಕ್ಸಿ ಬ್ಯುಟರಿಕ್ ಆಮ್ಲ ಮತ್ತು ಅವುಗಳ ಎಸ್ಟರುಗಳನ್ನು ಅಸಿಟೋನ್ ಕಾಯಗಳೆಂದು ಕರೆಯುತ್ತಾರೆ. ಪ್ರಾಣಿದೇಹದಲ್ಲಿ ಕೊಬ್ಬು ಜಲವಿಶ್ಲೇಷಿತವಾಗಿ ಆಮ್ಲಗಳು ಹುಟ್ಟುತ್ತವೆ. ಇವು ದಹಿಸಿದಾಗ ಪ್ರತಿ ಹಂತದಲ್ಲೂ ಇಂಗಾಲದ ಎರಡು ಪರಮಾಣುಗಳನ್ನು ಕಳೆದುಕೊಂಡು ಬೀಟಾ ಹೈಡ್ರಾಕ್ಸಿ ಮತ್ತು ಬೀಟಾ ಕೀಟಾನಿಕ್ ಆಮ್ಲಗಳನ್ನು ಕೊಡುವುವು. ಅಂತ್ಯಪೂರ್ವಹಂತದಲ್ಲಿ ಅಸಿಟೊ ಅಸಿಟಿಕ್ ಆಮ್ಲ ಅಸಿಟಿಕ್ ಆಮ್ಲವಾಗುವುದು. ಹೀಗಾಗಲು ಏಕಕಾಲದಲ್ಲಿ ಶರ್ಕರ ಪಿಷ್ಟಾದಿಗಳ ದಹನವಾಗಬೇಕು. ಇದಕ್ಕೆ ಇನ್ಸುಲಿನ್ ಎಂಬ ಹಾರ್ಮೋನ್ ಅಗತ್ಯ. ಮಧುಮೇಹ ರೋಗಿಯಲ್ಲಿ ಇನ್ಸುಲಿನ್ ಕೊರತೆಯಿರುವುದರಿಂದ ಶರ್ಕರ ಪಿಷ್ಟಾದಿಗಳು ಗ್ಲೂಕೋಸ್ ರೂಪದಲ್ಲಿ ಮೂತ್ರದಲ್ಲಿ ವಿಸರ್ಜಿತವಾಗುತ್ತವೆ. ರಕ್ತದಲ್ಲಿ ಅಸಿಟೊ ಅಸಿಟಿಕ್ ಆಮ್ಲದ ಪ್ರಮಾಣ ಹೆಚ್ಚಿ ಅಸಿಟೋನಿನ ಉತ್ಪತ್ತಿ ಅನಿವಾರ್ಯವಾಗುತ್ತದೆ.

**ಲೆವುಲೀನಿಕ್ ಆಮ್ಲ:** ಲೆವುಲೋಸ್ (ಫ್ರಕ್ಟೋಸ್) ಅಥವಾ ಸುಕ್ರೋಸ್ (ಕಬ್ಬಿನ ಸಕ್ಕರೆ) ಸಕ್ಕರೆಯನ್ನು ಪ್ರಬಲ ಹೈಡ್ರೋಕ್ಲೋರಿಕ್ ಆಮ್ಲದೊಡನೆ ಕಾಯಿಸಿ ಈ ಗ್ಯಾಮಾ ಕೀಟಾನಿಕ್ ಆಮ್ಲವನ್ನು ತಯಾರಿಸಬಹುದು.

$$C_6H_{12}O_6 \rightarrow CH_3.CO.CH_2.CH_2.COOH + H.COOH + H_2O$$

ಲೆವುಲೋಸ್

$$C_{12}H_{22}O_{11} \rightarrow 2CH_3.CO.CH_2.CH_2.COOH + 2.H.COOH + H_2O$$

ಸುಕ್ರೋಸ್

ಅಸಿಟೊ ಅಸಿಟಿಕ್ ಎಸ್ಟರಿನಿಂದಲೂ ಈ ಆಮ್ಲವನ್ನು ಪಡೆಯಬಹುದು.




ಇದೊಂದು ಹರಳುರೂಪದ ಘನವಸ್ತು. 34° ಸೆಂ. ಉಷ್ಣತೆಯಲ್ಲಿ ದ್ರವಿಸುತ್ತದೆ. ನೀರು ಆಲ್ಕೋಹಾಲ್ ಮತ್ತು ಈಥರಿನಲ್ಲಿ ದ್ರಾವ್ಯ. ಇದರ ಎಸ್ಟರಿನಲ್ಲಿ ಕ್ರಿಯಾಶೀಲ ಮೆಥಿಲೀನ್ ಗುಂಪಿಲ್ಲ. ಆದ್ದರಿಂದ ರಾಸಾಯನಿಕ ಸಂಯೋಜನೆಯಲ್ಲಿ ಅಸಿಟೊ ಅಸಿಟಿಕ್ ಎಸ್ಟರಿನಂತೆ ಪ್ರಮುಖ ಪಾತ್ರ ವಹಿಸಲಾರದು. ಸಾಮಾನ್ಯ ಉಷ್ಣತೆಯಲ್ಲಿ ವಿಭಜಿಸದಿರುವುದು ಇದರ ವೈಶಿಷ್ಟ್ಯ.

(ಎಚ್.ಜಿ.ಎಸ್.)

**ಕೀಟೋನುಗಳು :** ಕಾರ್ಬೋನಿಲ್ ಪುಂಜವನ್ನುಳ್ಳ (>C=O) ಸಾವಯವ ಸಂಯುಕ್ತಗಳ ಒಂದು ವರ್ಗ. ಸಾಮಾನ್ಯ ಅಣುಸೂತ್ರವನ್ನುಳ್ಳ (ಮುಂದಿನ ಚಿತ್ರ) ಈ ಸಂಯುಕ್ತಗಳಲ್ಲಿ R ಮತ್ತು R'ಗಳು ಆಲ್ಕೈಲ್, ಅರೈಲ್ ಅಥವಾ ಹೆಟಿರೋಸೈಕ್ಲಿಕ್ ಪರಮಾಣುಪುಂಜಗಳಾಗಿರಬಹುದು. R ಅಥವಾ R' ಹೆಟಿರೋಸೈಕ್ಲಿಕ್ ಪುಂಜವಾಗಿದ್ದಲ್ಲಿ ಕಾರ್ಬೊನಿಲ್ ಪುಂಜದ ಇಂಗಾಲದ ಜೋಡಣೆಯಾಗಿರುವ ಹೆಟಿರೋಸೈಕ್ಲಿಕ್ ಪುಂಜದ ಪರಮಾಣು ಇಂಗಾಲವೇ ಆಗಿರಬೇಕು. R ಮತ್ತು R' ಪುಂಜಗಳು ಒಂದೇ ಆಗಿದ್ದಲ್ಲಿ ಅಂಥ ಕೀಟೋನನ್ನು ಸರಳ



ಕೀಟೋನ್ ಎಂದೂ ಅವು ಭಿನ್ನವಾಗಿದ್ದಲ್ಲಿ ಮಿಶ್ರಕೀಟೋನ್ ಆಲಿಫ್ಯಾಟಿಕ್ ಕೀಟೋನ್. R ಮತ್ತು ಗಳಲ್ಲಿ ಒಂದಾದರೂ ಅರೈಲ್ ಪುಂಜವಾಗಿದ್ದಲ್ಲಿ ಆರೋಮ್ಯಾಟಿಕ್ ಕೀಟೋನುಗಳು ಲಭಿಸುತ್ತವೆ. ಕಾರ್ಬೊನಿಲ್ ಪುಂಜ ಪರಮಾಣುವೃತ್ತ (ರಿಂಗ್ ಆಫ್ ಎ ಸೈಕ್ಲಿಕ್ ಕಾಂಪೌಂಡ್) ಒಂದರ ಭಾಗವಾಗಿದ್ದಲ್ಲಿ ಅದನ್ನು ಸೈಕ್ಲಿಕ್ ಕೀಟೋನ್ ಎನ್ನುತ್ತೇವೆ.

ಕೀಟೋನುಗಳನ್ನು ತಯಾರಿಸಲು ಉಪಯೋಗಿಸುವ ಹಲವಾರು ವಿಧಾನಗಳಲ್ಲಿ ಕೆಲವು ಮುಖ್ಯವಾದುವನ್ನು ಕೆಳಗೆ ವಿವರಿಸಲಾಗಿದೆ.

1. ಉತ್ಕರ್ಷಣ (ಆಕ್ಸಿಡೇಷನ್) ಅಥವಾ ಡೀಹೈಡ್ರೋಜನೀಕರಣದಿಂದ ದ್ವಿತೀಯಕ ಆಲ್ಕೋಹಾಲುಗಳನ್ನು ಕೀಟೋನುಗಳಾಗಿ ಪರಿವರ್ತಿಸಬಹುದು. ವೇಗವರ್ಧಕಗಳ ಸಾನ್ನಿಧ್ಯದಲ್ಲಿ ಆಮ್ಲಜನಕದ ನೆರವಿನಿಂದ ಕೆಳಗೆ ತೋರಿಸಿರುವ ಸಮೀಕರಣಕ್ಕೆ ಅನುಗುಣವಾಗಿ ಉತ್ಕರ್ಷಣವನ್ನು ಸಾಧಿಸಿ ಕೀಟೋನುಗಳನ್ನು ತಯಾರಿಸಬಹುದು.



ಆಮ್ಲಜನಕವನ್ನು ಒದಗಿಸದೆಯೂ ವೇಗವರ್ಧಕಗಳ ಸಹಾಯದಿಂದ ಕೀಟೋನುಗಳನ್ನು ತಯಾರಿಸಬಹುದು. ಈ ಬಗೆಯ ಕ್ರಿಯೆಯಲ್ಲಿ ನೀರಿಗೆ ಬದಲಾಗಿ ಜಲಜನಕದ ಬಿಡುಗಡೆಯಾಗುತ್ತದೆ.



ಪೊಟ್ಯಾಸಿಯಂ ಡೈ ಕ್ರೋಮೇಟಿನಂಥ ರಾಸಾಯನಿಕ ಉತ್ಕರ್ಷಣಕಾರಿಗಳ ನೆರವಿನಿಂದಲೂ ಈ ಡೀಹೈಡ್ರೋಜನೀಕರಣವನ್ನು ಸಾಧಿಸಬಹುದು. ಅದನ್ನೇ ಇಲ್ಲಿರುವ ಸಮೀಕರಣದಲ್ಲಿ ತೋರಿಸಲಾಗಿದೆ.



2. ಅಪರ್ಯಾಪ್ತ ಸಂಯುಕ್ತಗಳನ್ನು ಓಜೋನಿನೊಡನೆ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಿದಾಗ ಓಜೋನೈಡುಗಳ ಸೃಷ್ಟಿಯಾಗುತ್ತದೆ. ಇವನ್ನು




ವೇಗವರ್ಧಕವೊಂದರ ಸಾನ್ನಿಧ್ಯದಲ್ಲಿ ಜಲಜನಕದೊಡನೆ ಸಂಯೋಗಿಸಿದಾಗ ಓಜೋನೈಡ್ ವಿಭಜನೆಯಾಗಿ ಆಲ್ಡಿಹೈಡ್ ಮತ್ತು ಅಥವಾ ಕೀಟೋನುಗಳ ಉತ್ಪತ್ತಿಯಾಗುತ್ತದೆ. ಉತ್ಪತ್ತಿಯಾಗುವ ಕಾರ್ಬೊನಿಲ್ ಸಂಯುಕ್ತಗಳು ಮೂಲ, ಅಪರ್ಯಾಪ್ತ ಸಂಯುಕ್ತವನ್ನು ಅವಲಂಬಿಸಿರುತ್ತವೆ. ಈ ಬಗೆಯ ಕೀಟೋನ್ ಸಂಯೋಜನೆಯನ್ನು ಕೆಳಗೆ ತೋರಿಸಿರುವ ಸಮೀಕರಣದಿಂದ ನಿದರ್ಶಿಸಬಹುದು.

3. ಸಾವಯವ ಆಮ್ಲಗಳನ್ನು ವೇಗವರ್ಧಕಗಳ ಸಾನ್ನಿಧ್ಯದಲ್ಲಿ ಉಷ್ಣಕ್ರಿಯೆಗೆ (ಪೈರೊಲಿಸಿಸ್) ಒಳಪಡಿಸಿದಾಗ ಕೀಟೋನುಗಳ ಸೃಷ್ಟಿಯಾಗುತ್ತದೆ. 400°-450° ಸೆಂ ಉಷ್ಣತೆಯಲ್ಲಿರುವ ಥೋರಿಯಂ ಆಕ್ಸೈಡಿನ ಮೇಲೆ ಆಮ್ಲಗಳನ್ನು ಹಾಯಿಸಿ ಈ ಕ್ರಿಯೆಯಲ್ಲಿ ಸಾಧಿಸಬಹುದು. ಎರಡು ಆಮ್ಲಗಳ ಮಿಶ್ರಣವನ್ನು ಉಪಯೋಗಿಸಿ ಮಿಶ್ರ ಕೀಟೋನುಗಳನ್ನು ಈ ಕೆಳಗೆ ತೋರಿಸಿರುವ ಸಮೀಕರಣಕ್ಕೆ ಅನುಗುಣವಾಗಿ ತಯಾರಿಸಬಹುದಾದರೂ ಅದೇ ಸಮಯದಲ್ಲಿ ಸರಳ ಕೀಟೋನುಗಳ ಸೃಷ್ಟಿಯೂ ಆಗುವುದರಿಂದ ಮಿಶ್ರ ಕೀಟೋನುಗಳ ಉತ್ಪತ್ತಿ ಕಡಿಮೆ ಇರುತ್ತದೆ.



ಸಾವಯವ ಆಮ್ಲಗಳಿಂದ ಕೀಟೋನುಗಳನ್ನು ತಯಾರಿಸುವ ಮತ್ತೊಂದು ವಿಧಾನವೂ ಬಳಕೆಯಲ್ಲಿದೆ. ಸಾವಯವ ಆಮ್ಲಗಳ ಕ್ಯಾಲ್ಸಿಯಂ ಲವಣಗಳನ್ನು ಉಷ್ಣಕ್ರಿಯೆಗೆ ಒಳಪಡಿಸಿ ಬಟ್ಟಿಯಿಳಿಸಿದಾಗಲೂ ಕೀಟೋನುಗಳ ಉತ್ಪತ್ತಿಯಾಗುತ್ತದೆ.



ಎರಡು ಬಗೆಯ ಆಮ್ಲಗಳ ಲವಣಗಳನ್ನು ಒಟ್ಟಿಗೆ ಉಪಯೋಸಿದಾಗ ಸರಳ ಕೀಟೋನುಗಳೊಡನೆ ಅಲ್ಪ ಪ್ರಮಾಣದಲ್ಲಿ ಮಿಶ್ರ ಕೀಟೋನುಗಳ ಉತ್ಪಾದನೆಯೂ ಆಗುತ್ತದೆ.

4. ಗ್ರಿನಾರ್ಡ್ ಅಥವಾ ಮತ್ತಿತರ ಸಾವಯವ ಲೋಹ ಸಂಯುಕ್ತಗಳನ್ನು ಉಪಯೋಗಿಸಿ ಸರಳ ಅಥವಾ ಮಿಶ್ರ ಕೀಟೋನುಗಳನ್ನು ತಯಾರಿಸಬಹುದು. ಈ ಬಗೆಯ ತಯಾರಿಕೆಗಳನ್ನು ಕೆಳಗೆ ಸಮೀಕರಣಗಳಿಂದ ನಿದರ್ಶಿಸಬಹುದು.



5. ಎಸ್ಟರುಗಳು ಪಟು (ಆ್ಯಕ್ಟಿವ್) ಜಲಜನಕವನ್ನುಳ್ಳ ಇತರ ಸಂಯುಕ್ತಗಳೊಡನೆ ಸಂಯೋಗಿಸಿದಾಗ ಕೀಟೋನುಗಳ ಸೃಷ್ಟಿಯಾಗುತ್ತದೆ. ಈ ಬಗೆಯ ಕೀಟೋನ್ ಸಂಯೋಜನೆಯ ನಿದರ್ಶನವಾಗಿ ಕೆಳಗಿರುವ ಸಮೀಕರಣವನ್ನು ಬರೆಯಲಾಗಿದೆ:

$CH_3$ -CO-$C_2H_5$+H-$CH_2$-CO-O$C_2H_5$

ಎಸ್ಟರು →$CH_3$-CO-$CH_2$-CO-O$C_2H_5$+ $C_2H_5$-OH

(ಕಾರ್ಬೊನಿಲ್ ಪುಂಜದ ಪಕ್ಕದಲ್ಲಿರುವ ಇಂಗಾಲಕ್ಕೆ ಸೇರಿದ ಜಲಜನಕ ಪಟುವಾದುದು. ಮೇಲಿನ ಪಕ್ಕದಲ್ಲಿರುವ ಪಟುಜಲಜನಕವನ್ನು ಕೆಳಗೆ ಗೆರೆ ಹಾಕಿ ತೋರಿಸಿದೆ.)

ಈ ವಿಧಾನವನ್ನೂ, ಸಾವಯವ ಲೋಹಸಂಯುಕ್ತಗಳನ್ನು ಉಪಯೋಗಿಸುವ ವಿಧಾನಗಳನ್ನೂ ಅನೇಕ ಸಂಕೀರ್ಣ (ಕಾಂಪ್ಲೆಕ್ಸ್) ಸಾವಯವ ಸಂಯೋಜನೆಗಳಲ್ಲಿ ಉಪಯೋಗಿಸಲಾಗಿದೆ.

ರಾಸಾಯನಿಕ ಗುಣಲಕ್ಷಣಗಳಲ್ಲಿ ಕೀಟೋನ್ ಆಲ್ಡಿಹೈಡ್‌ಗಳಿಗೆ (ಕಾರ್ಬೊನಿಲ್ ಪುಂಜವನ್ನುಳ್ಳ ಸಾವಯವ ಸಂಯುಕ್ತಗಳ ಮತ್ತೊಂದು ವರ್ಗ) ಬಹಳ ಸಾಮ್ಯವಿದೆ. ಈ ಎರಡು ವರ್ಗದ ಸಂಯುಕ್ತಗಳಲ್ಲೂ ಇರುವ ಕಾರ್ಬೊನಿಲ್ ಪುಂಜದಲ್ಲಿ ಭಾಗಶಃ ಧನ-ಋಣ ವಿದ್ಯುದಂಶಗಳ ಅಗಲಿಕೆ ಇರುವುದು ಕಂಡುಬರುತ್ತದೆ. ಈ ಅಗಲಿಕೆಯೇ ಕಾರ್ಬೊನಿಲ್ ಸಂಯುಕ್ತಗಳ ಭಾಗವಹಿಸುವ ಬಹು ಕ್ರಿಯೆಗಳನ್ನು ನಿರ್ದೇಶಿಸುತ್ತದೆ. ಕೀಟೋನುಗಳ ಅನೇಕ ರಾಸಾಯನಿಕ ಕ್ರಿಯೆಗಳನ್ನು ಕಾರ್ಬೊನಿಲ್ ಪುಂಜ ಇಂಗಾಲ ಮತ್ತು ಆಮ್ಲಜನಕ ಪರಮಾಣುಗಳ ನಡುವಣ ದ್ವಿಬಂಧಕ್ಕೆ ಆಗುವ ಸಂಕಲನಗಳೆಂದು ಪರಿಗಣಿಸಬಹುದು. ಕೀಟೋನುಗಳು ಸಾಮಾನ್ಯ ವಾತಾವರಣದಲ್ಲಿ ಸ್ಥಿರವಾಗಿದ್ದರೂ ಅವು ತಕ್ಕಮಟ್ಟಿಗೆ ಪಟುವಾದ ಸಂಯುಕ್ತಗಳು; ಅನೇಕ ರಾಸಾಯನಿಕ ಕ್ರಿಯೆಗಳನ್ನು ಮುಂದೆ ಪರಿಶೀಲಿಸಲಾಗಿದೆ.

1. ಕಾರ್ಬೊನಿಲ್ ದ್ವಿಬಂಧಕ್ಕೆ ಎರಡು ಜಲಜನಕದ ಪರಮಾಣುಗಳು ಸೇರಿದರೆ ಎರಡನೆಯ ವರ್ಗದ ಆಲ್ಕೊಹಾಲಿನ ಉತ್ಪತ್ತಿಯಾಗುತ್ತದೆ. ಈ ಹೈಡ್ರೊಜನೀಕರಣ ಅಥವಾ ಅಪಕರ್ಷಣವನ್ನು ಲಿಥಿಯಂ ಅಲ್ಯೂಮಿನಿಯಂ ಹೈಡ್ರೈಡ್, ಸೋಡಿಯಂ ಬೋರೋ ಹೈಡ್ರೈಡ್ ಅಥವಾ ಸೋಡಿಯಂ-ಆಲ್ಕೊಹಾಲ್ ಮಿಶ್ರಣಗಳಂಥ ಅಪಕರ್ಷಣಕಾರಿಗಳನ್ನು ಉಪಯೋಗಿಸಿ ಸಾಧಿಸಬಹುದು. ಇಲ್ಲವಾದರೆ ವೇಗವರ್ಧಕಗಳ ಸಾನ್ನಿಧ್ಯದಲ್ಲಿ ಜಲಜನಕವನ್ನಾದರೂ ಉಪಯೋಗಿಸಬಹುದು. ಒಟ್ಟಿನಲ್ಲಿ ಅಪಕರ್ಷಣಕ್ರಿಯೆ ಈ ಸಮೀಕರಣಕ್ಕೆ ಅನುಗುಣವಾಗಿರುತ್ತದೆ.

ಮತ್ತೊಂದು ಬಗೆಯ ಅಪಕರ್ಷಣದಿಂದ ಕೀಟೋನುಗಳ ಆಮ್ಲಜನಕವನ್ನು ನಿವಾರಿಸಿ ಕಾರ್ಬೊನಿಲ್ ಪುಂಜ ಪೂರ್ಣವಾಗಿ ನಾಶವಾಗುವಂತೆ ಮಾಡಬಹುದು. ಇದನ್ನು ಸಾಧಿಸಲು ಎರಡು ಬಗೆಯ ಅಪಕರ್ಷಣದಲ್ಲಿ ಅಮಾಲ್ಗಂ ಮಾಡಿದ ಸತು ಮತ್ತು ಹೈಡ್ರೊಕ್ಲೋರಿಕ್ ಆಮ್ಲಗಳ ಮಿಶ್ರಣವನ್ನು ಅಪಕರ್ಷಣಕಾರಿಯಾಗಿ ಉಪಯೋಗಿಸಲಾಗುತ್ತದೆ.



ವುಲ್ಫ್ -ಕಿಷ್ನರ್-ಹ್ವಾಂಗ್-ಮಿನ್ಲಾನ್ ವಿಧಾನದಲ್ಲಿ ಪೊಟ್ಯಾಸಿಯಂ ಹೈಡ್ರಾಕ್ಸೈಡಿನ ಸಾನ್ನಿಧ್ಯದಲ್ಲಿ ಹೈಡ್ರಜೀನನ್ನು ಅಪಕರ್ಷಕವಾಗಿ ಉಪಯೋಗಿಸಲಾಗುತ್ತದೆ. ಅಪಕರ್ಷಣ ಈ ಸಮೀಕರಣಕ್ಕನುಗುಣವಾಗಿ ಆಗುತ್ತದೆ:



ಈವರೆಗೆ ತಿಳಿಸಿರುವ ಎಲ್ಲ ಅಪಕರ್ಷಣ ವಿಧಿಗಳನ್ನೂ ರಾಸಾಯನಿಕ ಸಂಯೋಜನೆಗಳಲ್ಲಿ ಧಾರಾಳವಾಗಿ ಉಪಯೋಗಿಸಲಾಗುತ್ತಿದೆ.

2. ಅನೇಕ ಕೀಟೋನುಗಳಿಗೆ ಹೈಡ್ರೋಜನ್ ಸಯನೈಡಿನೊಡನೆ ಸಂಕಲನ ಸಾಧ್ಯ ಕಾರ್ಬೊನಿಲ್ ಪುಂಜಕ್ಕೆ ಹೈಡ್ರೋಜನ್ ಸಯನೈಡ್ ಸಂಕಲನಗೊಂಡಾಗ ಸಯನೋಹೈಡ್ರಿನುಗಳ ಸೃಷ್ಟಿಯಾಗುತ್ತದೆ. ಇವುಗಳಿಂದ ಅನೇಕ ಸಾವಯವ ಆಮ್ಲಗಳನ್ನು

ಸಂಯೋಜಿಸಬಹುದು. ಈ ವಿಧಾನದಿಂದ ತಯಾರಿಸಲಾಗುವ ಹೈಡ್ರಾಕ್ಸಿ ಆಮ್ಲಗಳ ಸಂಯೋಜನೆಯನ್ನು ಕೆಳಗಿನ ಸಮೀಕರಣ ಸೂಚಿಸುತ್ತದೆ:



3. ಅನೇಕ ಆಲಿಫ್ಯಾಟಿಕ್ ಕೀಟೋನುಗಳಿಗೆ ಸೋಡಿಯಂ ಬೈಸಲ್ಫೈಟ್ ಸಂಕಲನಗೊಳ್ಳಬಲ್ಲದು.



ಈ ರಾಸಾಯನಿಕಕ್ರಿಯೆಯನ್ನು ಕೀಟೋನುಗಳ ಶುದ್ಧೀಕರಣಕ್ಕಾಗಿಯೂ ಸಾವಯವ ಸಂಯುಕ್ತಗಳ ಮಿಶ್ರಣಗಳಿಂದ ಕೀಟೋನುಗಳನ್ನು ಬೇರ್ಪಡಿಸುವುದಕ್ಕಾಗಿಯೂ ಉಪಯೋಗಿಸುತ್ತಾರೆ. ಕೀಟೋನ್–ಬೈ ಸಲ್ಫೈಟ್ ಸಂಯುಕ್ತಗಳನ್ನು ಸಯನೋ ಹೈಡ್ರಿನುಗಳ ತಯಾರಿಕೆಯಲ್ಲೂ ಉಪಯೋಗಿಸಬಹುದು.



4. ಕೀಟೋನುಗಳನ್ನು ಮೆಗ್ನೀಷಿಯಂ ಮತ್ತು ಮೆಗ್ನೀಷಿಯಂ ಲವಣಗಳೊಡನೆ ರಾಸಾಯನಿಕಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಿ ಗ್ಲೈಕಾಲುಗಳನ್ನು ಉತ್ಪಾದಿಸಬಹುದು. ಈ ಕ್ರಿಯೆ ನಡೆಯುವ ಬಗೆ ಹೀಗಿರಬಹುದೆಂದು ಭಾವಿಸಲಾಗಿದೆ:



ಈ ವಿಧಾನದಿಂದ ತಯಾರಾಗುವ ಪಿನಕೋಲುಗಳೆಂಬ ಗ್ಲೈಕಾಲುಗಳೊಡನೆ ಪ್ರಬಲ ಸಲ್ಫ್ಯೂರಿಕ್ ಆಮ್ಲ ವರ್ತಿಸಿದಾಗ ಪಿನಕೊಲೋನುಗಳೆಂಬ ಹೊಸ ಕೀಟೋನುಗಳ ಸೃಷ್ಟಿಯಾಗುತ್ತದೆ. ಪಿನಕೊಲೋನ್ ಸೃಷ್ಟಿಯ ಬಗೆಯನ್ನು ಈ ಸಮೀಕರಣದಿಂದ ಅರಿಯಬಹುದು.




ಈ ಕ್ರಿಯೆ ಪಿನಕೊಲೋನ್ ರಿಆರೇಂಜ್‌ಮೆಂಟ್ ಎಂಬ ಹೆಸರಿನಿಂದ ಪರಿಚಿತವಾಗಿದೆ.

5. ಕೀಟೋನುಗಳಿಗೆ ಆಲ್ಕೊಹಾಲುಗಳ ಸಂಕಲನವಾದಾಗ ಹೆಮಿಅಸಿಟಾಲ್ ಮತ್ತು ಅಸಿಟಾಲುಗಳ ಸೃಷ್ಟಿಯಾಗುತ್ತದೆ.




ಆಲ್ಕೊಹಾಲುಗಳ ಬದಲು ಕೀಟಾನುಗಳನ್ನು ಉಪಯೋಗಿಸಿದಾಗ ಕೀಟಾಲುಗಳ ಉತ್ಪತ್ತಿಯಾಗುತ್ತದೆ.




ಹಲವು ಸಾವಯವ ಸಂಯೋಜನೆಗಳಲ್ಲಿ ಕೀಟೋನ್ ಅಂಶ ರಾಸಾಯನಿಕಕ್ರಿಯೆಗಳಲ್ಲಿ ಭಾಗವಹಿಸದಂತೆ ಅದನ್ನು ರಕ್ಷಿಸಲು ಕಾರ್ಬೊನಿಲ್ ಪುಂಜವನ್ನು ಕೀಟಾಲ್ ಆಗಿ ಪರಿವರ್ತಿಸಲಾಗುತ್ತದೆ.

6. ಗ್ರಿನಾರ್ಡ್ ಸಂಯುಕ್ತಗಳ ನೆರವಿನಿಂದ ಕೀಟೋನುಗಳನ್ನು ಮೂರನೆಯ ವರ್ಗದ ಆಲ್ಕೊಹಾಲುಗಳಾಗಿ ಪರಿವರ್ತಿಸಬಹುದು. ಈ ಕ್ರಿಯೆಯನ್ನು ಕೆಳಗಿರುವ ಸಮೀಕರಣದಲ್ಲಿ ತೋರಿಸಿದೆ:



7. ಅಮೈನೋ ಪುಂಜವನ್ನುಳ್ಳ ($-NH_2$) ಅಮೈನ್, ಹೈಡ್ರಾಕ್ಸಿಲಮೈನ್ ಸೆಮಿ ಕಾರ್ಬಜೈಡ್ ಮತ್ತು ಅನೇಕ ಹೈಡ್ರಜೀನ್ನುಗಳೊಡನೆ ಕೀಟೋನುಗಳು ರಾಸಾಯನಿಕ ಕ್ರಿಯೆಗಳಲ್ಲಿ ಭಾಗವಹಿಸಿ ಇಮೈನ್, ಆಕ್ಸಿಮ್, ಸೆಮಿಕಾರ್ಬಜೋನ್ ಮತ್ತು ಹೈಡ್ರಜೋನ್‌ಗಳೆಂಬ ವಿವಿಧ ಸಂಯುಕ್ತಗಳ ಉತ್ಪತ್ತಿಗೆ ಕಾರಣವಾಗುತ್ತವೆ. ಈ ಕ್ರಿಯೆಗಳು ಮುಂದೆ ತೋರಿಸಿರುವ ಸಮೀಕರಣಗಳಿಂದ ವಿಶದವಾಗುತ್ತವೆ:



ಈ ಕ್ರಿಯೆಗಳನ್ನು ಕೀಟೋನುಗಳ ಅನನ್ಯತೆಯನ್ನು (ಐಡೆಂಟಿಟಿ) ಸಾಧಿಸಲು ವಿಶೇಷವಾಗಿ ಉಪಯೋಗಿಸಲಾಗುತ್ತಿದೆ.

ಕೀಟೋನ್ ವರ್ಗಕ್ಕೆ ಸೇರಿದ ಅತಿ ಸರಳ ಮತ್ತು ಸಾಮಾನ್ಯ ಸಂಯುಕ್ತ ಅಸಿಟೋನ್. ಇದರ ಅಣುಸೂತ್ರ $CH_3CO–CH_3$. ಆರೋಗ್ಯವಂತರ ಮೂತ್ರದಲ್ಲಿ ಈ ಸಂಯುಕ್ತ ಅತ್ಯಲ್ಪ ಪ್ರಮಾಣದಲ್ಲಿರುವುದು. ಆದರೆ ಸಿಹಿಮೂತ್ರ ರೋಗವುಳ್ಳವರ ಮೂತ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿರುವುದು ಕಂಡುಬಂದಿದೆ.

ಪ್ರಯೋಗಶಾಲೆಯಲ್ಲಿ ಮತ್ತು ಅನೇಕ ಕೈಗಾರಿಕೆಗಳಲ್ಲಿ ಅಸಿಟೋನನ್ನು ದ್ರಾವಕವಾಗಿ ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಅಸಿಟೋನನ್ನು ದ್ರಾವಕವಾಗಿ ಉಪಯೋಗಿಸುವ ಹಿರಿಯ ಕೈಗಾರಿಕೆಗಳಲ್ಲಿ ಕೃತಕ ರೇಷ್ಮೆಯ ಉತ್ಪಾದನೆಯೂ ಒಂದು. ಕ್ಯಾಲ್ಸಿಯಂ ಅಸಿಟೇಟನ್ನು ಉಷ್ಣಕ್ರಿಯೆಗೆ ಒಳಪಡಿಸಿ ಅಸಿಟೋನನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತದೆ. ಪಿಷ್ಟ ಮೊದಲಾದ ಪ್ರೋಟೀನುಗಳಿಂದ ಮತ್ತು ಬ್ಯಾಕ್ಟೀರಿಯಗಳ ನೆರವಿನಿಂದ ಅಸಿಟೋನನ್ನು ತಯಾರಿಸಬಹುದು. ದ್ರಾವಕವಾಗಿ ಮಾತ್ರವಲ್ಲದೆ ಅನೇಕ ಇತರ ಸಂಯುಕ್ತಗಳ ಉತ್ಪಾದನೆಯಲ್ಲೂ ಅಸಿಟೋನನ್ನು ಉಪಯೋಗಿಸುತ್ತಾರೆ. ಕೆಲವು ಬಗೆಯ ಪ್ಲಾಸ್ಟಿಕುಗಳ ತಯಾರಿಕೆಯಲ್ಲಿ ಪ್ಲಾಸ್ಟಿಕಿನ ಸಾಂದ್ರತೆಯನ್ನು ಇಳಿಸಿ ಗಾತ್ರವನ್ನು ಹೆಚ್ಚಿಸಲು ಅಸಿಟೋನನ್ನು ಉಪಯೋಗಿಸುತ್ತಾರೆ. ಹಲವು ಆಸ್ಫೋಟಕಗಳಿಗೆ ಬೇಕಾಗುವ ಧೂಮರಹಿತ ಚೂರ್ಣದ ತಯಾರಿಕೆಗೆ ಅಸಿಟೋನ್ ಅಗತ್ಯ. ಇಷ್ಟೇ ಅಲ್ಲದೆ ಕ್ಲೋರೋಫಾರಂ ಅಯಡೋಫಾರಂ, ಅಯನೋನ್ ಸುಗಂಧಗಳು, ಸಲ್ಫೋನಾಲ್ ಮತ್ತು ಕ್ಲೋರಟೋನುಗಳೆಂಬ ಔಷಧಗಳ ತಯಾರಿಕೆಗಳಿಗೆ ಬೇಕಾಗುವ ಮೂಲ ಸಾಮಗ್ರಿಗಳಲ್ಲಿ ಅಸಿಟೋನ್ ಒಂದು ಮುಖ್ಯ ಸಂಯುಕ್ತ.

ನಮಗೆ ದಿನಬಳಕೆಯಾಗಿರುವ ಅನೇಕ ವಸ್ತುಗಳಲ್ಲಿ ಕೀಟೋನುಗಳಿರುವುದು ತಿಳಿದುಬಂದಿದೆ. ಶುಂಠಿಯ ತೀಕ್ಷ್ಣವಾದ ರುಚಿಗೆ ಅದರಲ್ಲಿರುವ ಜಿಂಜೆರೋನ್ ಮತ್ತು ಶೋಗವೋಲ್ ಎಂಬ ಎರಡು ಕೀಟೋನುಗಳೇ ಕಾರಣ.



ಜಿಂಜೆರೋನ್



ಶೋಗವೋಲ್

ಸಾಮಾನ್ಯವಾಗಿ ಕೀಟೋನುಗಳು ದ್ರವಗಳು; ಮತ್ತು ಅವುಗಳ ವಾಸನೆ ಅಹಿತಕರವೇನಲ್ಲ. ಹಲವು ಕೀಟೋನುಗಳ ವಾಸನೆಗಳಂತೂ ಜನಸಾಮಾನ್ಯರಿಗೆ ಪರಿಚಿತವಾಗಿವೆ. ಮಂಗಳಾರತಿಗೆ ಉಪಯೋಗಿಸುವ ಕರ್ಪೂರ ಒಂದು ಕೀಟೋನ್. ಕಸ್ತೂರಿಯ ಪರಿಮಳಕ್ಕೆ ಕಾರಣವಾಗಿರುವ ಸಂಯುಕ್ತ ಮಸ್ಕೋನ್ ಎಂಬ ಒಂದು ಕೀಟೋನ್. ಸಿವೆಟೋನ್ ಎಂಬ ಮತ್ತೊಂದು ಕೀಟೋನ್ ಪುನುಗಿನ ಸುವಾಸನೆಗೆ ಕಾರಣ.



ಕರ್ಪೂರ



ಮಸ್ಕೋನ್



ಸಿವೆಟೋನ್

ಇವಲ್ಲದೆ ಕೃತಕವಾಗಿ ತಯಾರಿಸಲಾದ ಹಲವು ಕೀಟೋನುಗಳನ್ನೂ ಸುಗಂಧದ ಉದ್ದಿಮೆಯಲ್ಲಿ ಉಪಯೋಗಿಸುತ್ತಾರೆ. ಹತ್ತರಿಂದ ಹನ್ನೆರಡು ಪರಮಾಣುಗಳನ್ನುಳ್ಳ ಸೈಕ್ಲಿಕ್ ಕೀಟೋನುಗಳ ವಾಸನೆ ಕರ್ಪೂರದ ವಾಸನೆಯನ್ನು ಹೋಲುತ್ತದೆ. ಹದಿಮೂರು ಪರಮಾಣುಗಳನ್ನುಳ್ಳ ಸೈಕ್ಲಿಕ್ ಕೀಟೋನ್ ದೇವದಾರುವಿನ ವಾಸನೆಯನ್ನುಳ್ಳದ್ದು. ಹದಿನಾಲ್ಕರಿಂದ ಹದಿನೆಂಟು ಪರಮಾಣುಗಳನ್ನುಳ್ಳ ಕೀಟೋನುಗಳ ವಾಸನೆಗೂ ಮಸ್ಕೋನಿನ ವಾಸನೆಗೂ ಸಾಮ್ಯವಿದೆ. ಮಸ್ಕೋನಿನ ವಾಸನೆಯನ್ನು ಬಹುಮಟ್ಟಿಗೆ ಹೋಲುವ ವಾಸನೆಯನ್ನುಳ್ಳ ಹದಿನೈದು ಪರಮಾಣುಗಳನ್ನುಳ್ಳ ಎಕ್ಸಾಲ್ಟೋನ್ ಎಂಬ ಸೈಕ್ಲಿಕ್ ಕೀಟೋನನ್ನು ಸುಗಂಧದ ಕೈಗಾರಿಕೆಯಲ್ಲಿ ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ.

ಹಲವು ಪ್ರಕೃತಿದತ್ತ ಆರೋಮ್ಯಾಟಿಕ್ ಕೀಟೋನುಗಳನ್ನು ಬಣ್ಣದ ಕೈಗಾರಿಕೆಯಲ್ಲಿ ಉಪಯೋಗಿಸುತ್ತಾರೆ. (ಕೆ.ಟಿ.ಎಸ್.)

**ಕೀಟ್ಸ್, ಜಾನ್ :** 1795–1821. ಇಂಗ್ಲಿಷ್ ರೊಮಾಂಟಿಕ್ ಕವಿಗಳಲ್ಲಿ ವ್ಯಕ್ತಿತ್ವವೂ ಔನ್ನತ್ಯವೂ ಉಳ್ಳ ಗುಂಪಿಗೆ ಸೇರಲು ಅರ್ಹನಾದ ಕವಿ. ಹುಟ್ಟಿದ್ದು ಲಂಡನ್ನಿನಲ್ಲಿ, 31 ಅಕ್ಟೋಬರ್ 1795ರಂದು. ತಂದೆ ಥಾಮಸ್ ಕೀಟ್ಸ್ ಹೋಟೆಲೊಂದರ ಕುದುರೆ ಲಾಯದ ಮುಖ್ಯ ಕಾಸ್ತಾರನಾಗಿದ್ದು, ತನ್ನ ದಣಿಯ ಮಗಳನ್ನು ಮದುವೆಯಾಗಿ, ಪ್ರಯಾಣಿಕರ ಕುದುರೆಗಳನ್ನು ನೋಡಿಕೊಳ್ಳುವ ಮತ್ತು ಬೇಕೆಂದವರಿಗೆ ಕುದುರೆಗಳನ್ನು ಬಾಡಿಗೆಗೆ ಕೊಡುವ ವ್ಯವಹಾರ ಮಾಡುತ್ತಿದ್ದ. ಬಾಲ್ಯದಲ್ಲಿ ಜಾನ್ ಅಂದದ ಮುಖಚಹರೆಗೂ ಕೆಚ್ಚೆದೆಗೂ ಜಗಳಗಂಟಿತನಕ್ಕೂ ಹೆಸರಾಂತಿದ್ದ. ಒಮ್ಮೆ ಅವನ ತಾಯಿ ರೋಗಗೊಂಡಿದ್ದಾಗ ಅವಳಿಗೆ ಕೊಂಚವೂ ತೊಂದರೆ ಆಗಕೂಡದೆಂದು ವೈದ್ಯ ವಿಧಿಸಿದ್ದ. ಆಗ ಜಾನ್ ಹಳೆಯದೊಂದು ಕತ್ತಿ ಹಿಡಿದು ಆ ಕೋಣೆಯ ಬಾಗಿಲಲ್ಲಿ ಕಾವಲು ಕಾದ. ಅವನಿಗಿನ್ನೂ ಆಗ ಐದು ತುಂಬಿರಲಿಲ್ಲ. ಕಾಸ್ತಾರ ವೃತ್ತಿಯವನಾದರೂ ಥಾಮಸ್ ಕೀಟ್ಸ್, ವಿದ್ಯೆ ಸಭ್ಯತೆ ಸಂಸ್ಕೃತಿಗಳ ಅಭಿಮಾನಿ. ಜಾನ್‌ನನ್ನೂ ಅವನ ತಮ್ಮಂದಿರನ್ನೂ ಹತ್ತಿರದ ಊರಾದ ಎನ್‌ಫೀಲ್ಡಿನ ಪ್ರಖ್ಯಾತ ಪಾಠಶಾಲೆಗೆ ಕಳಿಸಿದ. ಅಲ್ಲಿ ಜಾನನಿಗೆ ಓದಿಗಿಂತಲೂ ಹೆಚ್ಚಾಗಿ ಕದನವೆಂದರೆ ಪ್ರೀತಿ; 1804ರಲ್ಲಿ ತಂದೆ ತೀರಿಕೊಂಡ. ಆದರೂ ಹುಡುಗರ ವಿದ್ಯಾಭ್ಯಾಸಕ್ಕೆ ಚ್ಯುತಿ ಉಂಟಾಗಲಿಲ್ಲ. ಸುಲಭವಾಗಿ ಕೆರಳುವ ಜಾಯಮಾನದವನಾದರೂ ಜಾನ್ ವಿಪರೀತ ಉದಾರಿ; ಆದ್ದರಿಂದ ಅವನನ್ನು ಕಂಡು ಎಲ್ಲರಿಗೂ ವಿಶ್ವಾಸ. 1810ರಲ್ಲಿ ತಾಯಿ ಗತಿಸಿದಳು. ನಾಲ್ವರು ಕಿರಿಯರ ಪಾಲನೆ ಅಬ್ಬೆ ಎಂಬೊಬ್ಬ ವರ್ತಕನ ಜವಾಬ್ದಾರಿಯಾಯಿತು. ಸು. 8,000 ಪೌಂಡು, ಅವರ ಪಿತ್ರಾರ್ಜಿತ ಆಸ್ತಿ.

ಜಾನ್ ಕೀಟ್ಸ್‌ನ ಶಾಲಾ ವ್ಯಾಸಂಗ 1810ರಲ್ಲಿ ಮುಗಿಯಿತು. ಅಬ್ಬೆ ಇವನನ್ನು ಕೂಡಲೆ ಹತ್ತಿರದ ಎಡ್ಮಂಟನ್ ಎಂಬ ಊರಿನಲ್ಲಿ ಪ್ರಸಿದ್ಧನಾಗಿದ್ದ ಹ್ಯಾಮಂಡ್ ಎಂಬ ಶಸ್ತ್ರವೈದ್ಯನ ಕೈಕೆಳಗೆ ಐದು ವರ್ಷ ಕಲಿಕೆಯವನನ್ನಾಗಿ ಗೊತ್ತುಮಾಡಿದ. ವೈದ್ಯಕೀಯದಲ್ಲಿ ಜಾನನಿಗೆ ಪೂರಾ ಶ್ರದ್ಧೆ ಬಾರದಿದ್ದರೂ ಅದನ್ನು ಅಸಡ್ಡೆಗೆ ಈಡುಮಾಡಲಿಲ್ಲ. ಶಾಲೆಯಲ್ಲಿದ್ದಾಗ ಮೊದಮೊದಲು ಅಲಕ್ಷಿಸುತ್ತಿದ್ದ ಜ್ಞಾನಾರ್ಜನೆ ಕಡೆಯ ಎರಡು ವರ್ಷಗಳಲ್ಲಿ ಅವನ ಚಿತ್ತವನ್ನು ಬಲವಾಗಿ ಸೆಳೆದಿತ್ತು. ವರ್ಜಿಲ್ ಕವಿಯನ್ನು ಆತ ಪಠಿಸಿದ್ದ; ಕೈಪಿಡಿ ನಿಘಂಟುಗಳ ಮೂಲಕ ಪ್ರಾಚೀನ ಗ್ರೀಕರ ಪುರಾಣ ಕಥಾವಳಿಯನ್ನು ಪರಿಚಯ ಮಾಡಿಕೊಂಡಿದ್ದ ; ಅದಕ್ಕೆ ಮನಸೋತಿದ್ದ. 1812ರಲ್ಲಿ ಒಂದು ವಿಶೇಷ ಘಟನೆ ನಡೆಯಿತು. ಗೆಳೆಯ ಕೌಡನ್ ಕ್ಲಾರ್ಕ್ ಇವನಿಗೆ ಸ್ಪೆನ್ಸರ್ ಕವಿಯ ಫೇರಿ ಕ್ವೀನ್ ಎಂಬ ಮಹಾಕಾವ್ಯವನ್ನು ಓದಲು ಎರವಿತ್ತ. ಕೀಟ್ಸಿಗೆ ಯಾವುದೋ ಅಮೂಲ್ಯ ನಿಧಿ ದೊರಕಿದಂತಾಯಿತು. ಎಳೆಯ ಕುದುರೆ ವಸಂತದ ಹಸುರು ಬಯಲಲ್ಲಿ ನೆಗೆನೆಗೆದು ಓಡಾಡುವಂತೆ ಆ ಅದ್ಭುತ ಕಾವ್ಯದಲ್ಲಿ ಆಸಕ್ತನಾದನಂತೆ. ತಾನೂ ಒಬ್ಬ ಕವಿ. ಪದ್ಯರಚನೆಯೇ ತನ್ನ ನೇಮಿತ ಕೃಷಿ ಎಂಬುದು ಆಗ ಅವನಿಗೆ ಮಂದಟ್ಟಾಯಿತು. ಸ್ಪೆನ್ಸರನ್ನು ಅನುಕರಿಸಿ ಪದ್ಯ ಬರೆದ. 1814ರಲ್ಲಿ ಅವನಿಗೂ ಹ್ಯಾಮಂಡನಿಗೂ ನಡುವೆ ವೈಮನಸ್ಯ ಬೆಳೆಯಿತಾಗಿ, ಕಲಿಕೆಯನ್ನು ಕೊನೆಗೊಳಿಸಿ, ಲಂಡನ್ನಿಗೆ ನಡೆದು, ಆಸ್ಪತ್ರೆಯಲ್ಲಿ ವೈದ್ಯ ಅಭ್ಯಾಸ ಮಾಡತೊಡಗಿದ. ಸಾಹಿತ್ಯದ ಪ್ರಭಾವ ಇವನ ಮೇಲೆ ಪ್ರಬಲವಾಗಿದ್ದರೂ ವೈದ್ಯ ಪರೀಕ್ಷೆಯಲ್ಲಿ ತೇರ್ಗಡೆಯಾದ.

ಲೀ ಹಂಟ್ ಎಂಬಾತ ಒಬ್ಬ ಕವಿ, ಒಳ್ಳೆಯ ಪ್ರಬಂಧಕಾರ. ಎಕ್ಸಾಮಿನರ್ ಎಂಬ ಪತ್ರಿಕೆಯನ್ನು ನಡೆಸುತ್ತ ಸಾಹಿತ್ಯ ಸಮಾಜಗಳ ಟೀಕಾಕಾರನಾಗಿದ್ದ. ಅವನದ್ದು ತೀವ್ರಗಾಮಿಗಳ ಪಕ್ಷ; ರಾಜಕುಮಾರನ ವಿಚಾರವಾಗಿ ಕಟುವಿಮರ್ಶೆ ಪ್ರಕಟಿಸಿ ಸೆರೆಮನೆಗೆ ಹೋಗಿ ಬಂದ. ಆ ಶಿಕ್ಷೆ ಅವನಿಗೆ ಬಹಳ ಯಶಸ್ಸನ್ನು ತಂದುಕೊಟ್ಟಿತು. ಯುವಕ ಕವಿಗಳು ಅವನ ಹಿಂಬಾಲಕರಾದರು: ಅವರಲ್ಲಿ ಕೀಟ್ಸನೂ ಒಬ್ಬ. ವಿರೋಧ ಪಕ್ಷದವರು ಲೀ ಹಂಟನ ಗುಂಪನ್ನು ಕಾಕಿ ಮತ ಎಂದು ಅಪಹಾಸ್ಯ ಗೈದರು. ಕೀಟ್ಸ್ 1817ರಲ್ಲಿ ತನ್ನ ಕೃತಿಗಳನ್ನು

ಪ್ರಕಟಿಸಿದ; ಅದು ಜನಚಿತ್ತವನ್ನು ಆಕರ್ಷಿಸಲಿಲ್ಲ. ಮೂರನೆಯ ವರ್ಷ ಎಂಡಿಮಿಯಾನ್ ಎಂಬ ಕಥನಕಾವ್ಯವನ್ನು ಹೊರತಂದ. ತತ್‍ಕ್ಷಣವೇ ಸ್ಕಾಟ್ಲೆಂಡಿನ ಬ್ಲಾಕ್‍ವುಡ್ಸ್ ಮತ್ತು




ರೋಮ್ ನಗರದಲ್ಲಿರುವ ಕವಿ ಸಮಾಧಿಯ ಮೇಲೆ ಕೆತ್ತಿರುವ ಒಂದು ಲೇಖ

ಕ್ವಾರ್ಟರ್ಲಿ ಎಂಬ ಇವನ ಕವಿತ್ವವನ್ನು ಕಠೋರ ಖಂಡನೆಗೆ ಗುರಿ ಮಾಡುತ್ತ, ಹೊಟ್ಟೆಗೆ ಹಿಟ್ಟಿಲ್ಲದ ಕವಿಯಾಗಿ ಸಾಯುವುದಕ್ಕಿಂತ ಹೊಟ್ಟೆಗೆ ಹಿಟ್ಟಿಲ್ಲದ ವೈದ್ಯನಾಗಿ ಸಾಯುವುದು ಲೇಸು; ಗುಳಿಗೆ ಸೀಸೆಗಳ ಕಡೆಗೇ ಹಿಂದಿರುಗು-ಎಂದು ಮೂದಲಿಸಿದುವು. ಕೀಟ್ಸ್ ಮನಸೊಂದರೂ ಪೂರ್ತಿ ಧೈರ್ಯಗೆಡಲಿಲ್ಲ. ಉತ್ಸಾಹ ಕಳೆದುಕೊಳ್ಳಲಿಲ್ಲ. ಎಂಡಿಮಿಯಾನ್ ಹೇಗೆ ತನಗೇ ಅತೃಪ್ತಿಕರವಾಗಿತ್ತು ಎಂಬುದನ್ನು ಅವನು ಚೆನ್ನಾಗಿ ಬಲ್ಲ. ಅದೇ ವರ್ಷ ಫ್ಯಾನಿ ಬ್ರೌನ್ ಎಂಬ ತರುಣಿಯನ್ನು ಕಂಡಾಗ ಗಾಢಪ್ರೇಮ ಇವನಲ್ಲಿ ಉದಯಿಸಿತು. ಆದರೆ ಇದ್ದ ಹಣ ಖರ್ಚಾಗಿ ಹೋಗಿತ್ತು. ಸಾಹಿತ್ಯದಿಂದಲೇ ಬದುಕುವ ಇವನ ಹಂಬಲಕ್ಕೆ ನಿರ್ದಯ ವಿಮರ್ಶಕರು ಕೊಡಲಿ ಹಾಕಿದ್ದರು. ಸ್ಥಿತಿ ಹೀಗೆ ವಿಷಮವಾಗಿದ್ದರೂ ಕಂಗೆಡದೆ, ಆಪ್ತಮಿತ್ರರ ಸಹಾಯದಿಂದ ದಿವಸ ನೂಕುತ್ತ ಕೀಟ್ಸ್ ಕಾವ್ಯ ಕಟ್ಟುತ್ತಲೇ ಹೋದ. 1820ರಲ್ಲಿ ಈತ ಪ್ರಕಟಿಸಿದ ಲೇಮಿಯಾ, ಇಸಾಬೆಲಾ ಮತ್ತು ಇತರ ಕವನಗಳು ಎಂಬ ಹೊತ್ತಗೆ ಇವನ ಋಜು ಆತ್ಮಪ್ರತ್ಯಯಕ್ಕೆ ಸಾಕ್ಷ್ಯವಾಯಿತು. ಅಷ್ಟು ಹೊತ್ತಿಗೆ ಕ್ಷಯರೋಗ ಅವನನ್ನು ಬಲವಾಗಿ ಹಿಡಿದಿರುವ ಸಂಗತಿ ಸ್ಪಷ್ಟವಾಗಿ ತಿಳಿಯಿತು. ಆ ರೋಗಕ್ಕೇ ಅವನ ತಾಯಿಯೂ ತಮ್ಮನೂ ತುತ್ತಾಗಿದ್ದರು; ತಮ್ಮನ ಆರೋಗ್ಯಕ್ಕೋಸ್ಕರ ಅವನೊಂದಿಗೆ ಅಲ್ಲಿ ಇಲ್ಲಿ ಪ್ರವಾಸ ಕೈಗೊಂಡರೂ ಏನೂ ಫಲ ದೊರೆಯಲಿಲ್ಲ. 1820ರ ಹಿಮಗಾಲದಲ್ಲಿ ಇಂಗ್ಲೆಂಡಿನಲ್ಲಿ ಉಳಿಯಲಾರನೆಂದು ತಿಳಿದ ಸ್ನೇಹಿತರು ಇಟಲಿಗೆ ಹೋಗುವಂತೆ ಅವನನ್ನು ಬಲಾತ್ಕರಿಸಿದರು. ಜೋಸೆಫ್ ಸೆವರ್ನ್ ಎಂಬ ಜೊತೆಗಾರನೊಡನೆ ಸೆಪ್ಟೆಂಬರಿನಲ್ಲಿ ಜಾನ್ ನೇಪಲ್ಸಿಗೆ ಹೊರಟ. ತನ್ನ ಬಾಳು ಸಮಾಧಿಯಾಚೆಯ ಬಾಳು ಎಂದು ಅವನೇ ಗಂಭೀರವಾಗಿ ಹೇಳಿಕೊಂಡ. ರೋಮ್ ನಗರ ತಲಪುವ ಹೊತ್ತಿಗೆ ಪ್ರಾಣಪಕ್ಷಿ ಹೊರಹಾರಲು ಸಿದ್ಧವಾಗಿತ್ತು. ಸೆವರ್ನ್ ಮತ್ತು ದೇವರಿಗೆ ಧನ್ಯವಾದ, ಅದು ಬಂದಿದೆ ಎಂದು ನುಡಿಯುತ್ತ, 23 ಫೆಬ್ರವರಿ 1821ರಂದು ಕೀಟ್ಸ್ ಮೃತ್ಯುವಶನಾದ.

ಬೈರನ್ ಷೆಲ್ಲಿ ಕವಿಗಳು 'ಪಾಪ, ಕೀಟ್ಸ್ ಕ್ರೂರ ಟೀಕಾಕಾರರ ಖಡ್ಗಕ್ಕೆ ಬಲಿಯಾದ' ಎಂಬ ಐತಿಹ್ಯ ಹರಡಿದರು. ಇವನ ವ್ಯಕ್ತಿ ತೇಜಸ್ಸಿಗೆ ಅನುಗುಣವಾಗಿ ಈಗ ಸತ್ಯಾಂಶ ಸಕಲರಿಗೂ ಗೊತ್ತು. ದೃಢಸಂಕಲ್ಪದ ಗಂಭೀರಭಾವನೆಗಳ ಸೌಂದರ್ಯೋಪಾಸಕ, ಕೀಟ್ಸ್ ಕಾವ್ಯಕ್ಕೆ ಇವನ ಶಕ್ತಿ ಭಕ್ತಿಯೆಲ್ಲವೂ ಮೀಸಲು. ದೊಡ್ಡ ಕವಿಗಳ ಸಾಲಿನಲ್ಲೇ ತನ್ನ ಜಾಗ ಕಾದಿರಿಸಲ್ಪಟ್ಟಿದೆಯೆಂದು ನಿರಹಂಕಾರದಿಂದ ಇವನೇ ಹೇಳಿಕೊಳ್ಳುತ್ತಿದ್ದ.

**ಕಾವ್ಯಚಕ್ರ :** ಕೀಟ್ಸನ ಜೀವಿತಕಾಲದಲ್ಲಿ ಪ್ರಕಟಗೊಂಡ ಇವನ ಕೃತಿಗಳು 45. ಇವನ ಮರಣಾನಂತರದ ಪ್ರಕಟಗೊಂಡವು ಸುಮಾರು 63. ಈ 108 ಕೃತಿಗಳಲ್ಲಿ ಒಂದು ಪದ್ಯ ಟ್ರಾಜಿಡಿ, 6 ಕಥನಕಾವ್ಯ, 9 ಪ್ರಗಾಥ, 46 ಸಾನೆಟ್ ಇವೆ. ಮಿಕ್ಕವು ಹಲವು ಬಗೆಯವು. ಅವುಗಳಲ್ಲಿ ಹಲಕೆಲವು ಅಸಮಗ್ರ. ಅನೇಕ ಕೃತಿಗಳು ಉತ್ಕೃಷ್ಟತೆ ಸಾಮಾನ್ಯತೆ ನೀರಸತ್ವ ಅಕವಿತ್ವಗಳ ಬೆರಕೆಯಿಂದ ದೂಷ್ಯವಾಗಿವೆ. ನೈಜ ಕವಿತ್ವದ ಮಧುರವಾಣಿ ಆಗೊಮ್ಮೆ ಈಗೊಮ್ಮೆ ಕೇಳಿಬರುತ್ತದೆ. ಕೀಟ್ಸ್ ದಿಟವಾಗಿ ನಾಟಕಕಾರನಲ್ಲ, ಕಥನ ಕವಿಯೂ ಅಲ್ಲ. ನಿಜವಾಗಿ ಈತ ಭಾವಗೀತೆಯ ಕವಿ. ಆದರೆ ಬರ್ನ್ಸ್, ಷೆಲ್ಲಿ, ಕೋಲ್‍ರಿಜ್ಜರಂತೆ ಯಾವಾಗಲೂ ನಿರ್ದುಷ್ಟ ಭಾವಗೀತೆಯನ್ನು ಸಾಧಿಸಲು ಇವನಿಂದ ಆಗಲಿಲ್ಲ. ಸಾಧಿಸಲು ಆದಾಗ ಇವನು ಬಲು ಎತ್ತರವನ್ನು ಮುಟ್ಟಿದನೆಂದು ಒಪ್ಪಬೇಕು.

**ಮುಖ್ಯ ಕೃತಿಗಳ ವಿವರ : ಎಂಡಿಮಿಯಾನ್**: ಸ್ಪೆನ್ಸರನಿಂದ ಸ್ಫೂರ್ತಿ ಪಡೆದು ಕೀಟ್ಸ್ ಈ ಕಥನಕಾವ್ಯಕ್ಕೆ ಕೈ ಹಾಕಿದ. ಇವನ ಉದ್ದೇಶ ಹಿರಿದಾದದ್ದೆ. ಗ್ರೀಕ್ ಪುರಾಣಕತೆಯ ಎಂಡಿಮಿಯಾನ್ ಒಬ್ಬ ಸುಂದರ ಕುರುಬ ತರುಣ. ಆತ ಗುಹೆಯೊಂದರಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಸೆಮೀಲಿ ಎಂಬ ಚಂದ್ರದೇವತೆ ಮೋಹಗೊಂಡು ಕೆಳಕ್ಕಿಳಿದು ಬಂದು ಅವನಿಗೆ ಮುತ್ತು ಕೊಟ್ಟು ಅವನ ಜೊತೆ ಮಲಗಿದಳು. ಹೀಗೆಯೇ ಹಲವು ರಾತ್ರಿ ಕಳೆಯಿತು. ಕೊನೆಗೆ ಸೆಮೀಲಿ ಬೇಸರ ಪಟ್ಟೊ ಮಗುವಾದ ಮೇಲೆ ಮಗುವನ್ನು ಹೊರಲಾರದೆಯೋ ಎಂಡಿಮಿಯಾನ್ ಸತತವಾಗಿ ನಿದ್ರಿಸುತ್ತಿರುವಂತೆ ಮಾಡಿದಳಂತೆ; ಹಾಗೂ ಅವನ ಯುವ ಲಾವಣ್ಯ ಸ್ವಲ್ಪವೂ ಮಾಸದಂತೆ ವರವಿತ್ತಳಂತೆ. ಈ ಕಥೆಯ ಹಿಂದೆ ಅನ್ಯಾರ್ಥವನ್ನು ಕೂಡಿಡಬೇಕೆಂದೂ ಕೀಟ್ಸನ ಆಶಯ. ಎಂಡಿಮಿಯಾನ್ ಕವಿಯ ಆತ್ಮದ ಪ್ರತೀಕ; ಚಂದ್ರದೇವತೆ ಪರಿಪೂರ್ಣ ಸೌಂದರ್ಯದ ಪ್ರತೀಕ. ಆದರ್ಶ ಸೌಂದರ್ಯದ ಸನ್ನಿಧಿ ಕವಿಯ ಆತ್ಮಕ್ಕೆ ಶಾಂತಿ ಲಭಿಸಬೇಕಾದರೆ ಅದು ಜೀವನದ ನಾನಾ ಗೂಢ ಸ್ಥಳಗಳಲ್ಲಿ ಅರಸುತ್ತ ತೊಳಲತಕ್ಕದ್ದು. ಸಂಕಟ ನಿರಾಶೆಗಳ ಅನುಭವವೂ ಅಗತ್ಯ. ಕಡೆಗೆ ಇನ್ನೇನು ಗುರಿ ಸಿಕ್ಕಲಾರದು ಎಂಬ ಘಳಿಗೆಯಲ್ಲಿ ಕುಸಿದುಬಿದ್ದಾಗ ಅದರ ಸನಿಯದಲೇ ಕವಿಯ ಆತ್ಮ ! ಇಂಥ ಅಭಿಪ್ರಾಯಗಳನ್ನು ಕಾರ್ಯವಳಿಯಲ್ಲಿ ರೂಪಿಸುವುದಾಗಲಿ ಅನ್ಯಾರ್ಥ ಸಂಕೇತವನ್ನು ಖಚಿತವಾಗಿ ಚಿತ್ರಿಸುವುದಾಗಲಿ ಕೀಟ್ಸನಿಂದ ಆಗಿಲ್ಲ . ನಾಲ್ಕು ಅಧ್ಯಾಯಗಳ ಅದ್ಭುತ ರಮ್ಯ ಕಥೆ (ರೊಮಾನ್ಸ್). ಒಟ್ಟಿನಲ್ಲಿ ಯುಕ್ತವಾಗಿ ನಿಯಂತ್ರಿತವಾಗಿಲ್ಲ. ಆ ಭಾಗ ಈ ಭಾಗದಲ್ಲಿ ಚೆಲುವಾದ ಹೇಳಿಕೆಗಳೂ ವಾಕ್ಯಗಳೂ ಇವೆ. ' A thing of beauty is a joy for ever ' ಎನ್ನುವ ಪ್ರಸಿದ್ಧ ಪಂಕ್ತಿ ಈ ಕಾವ್ಯದ ಮೊದಲ ಪಂಕ್ತಿ.

**ಹೈಪೀರಿಯನ್ :** ಇದನ್ನು ರಚಿಸುವಾಗ ಕೀಟ್ಸನ ಆಶೆ ಮಹದಾಶೆಯಾಗಿತ್ತು. ಹತ್ತು ಪರಿಚ್ಛೇದಗಳ ಭವ್ಯಕಾವ್ಯವನ್ನು (ಎಪಿಕ್) ಬರೆದು ಮಿಲ್ಟನನೊಂದಿಗೆ ಸ್ಪರ್ಧೆ ನಿಲ್ಲುವ ಹೆಬ್ಬಯಕೆ ಇವನಲ್ಲಿತ್ತು. ಗ್ರೀಕ್ ಪುರಾಣದಂತೆ ಹೈಪೀರಿಯಾನ್ ಸೃಷ್ಟಿಯ ಆದಿಯಲ್ಲಿ ಬಂದ ಟೈಟನರಲ್ಲಿ ಒಬ್ಬ; ಸೂರ್ಯಮಂಡಲ ಅವನ ಕ್ಷೇತ್ರ. ದೇವತೆಗಳ ಚರಿತ್ರೆಯಲ್ಲಿ ಟೈಟನರ ಯುಗ ಒಂದು. ಕೋನಸ್ ಅಥವಾ ಸ್ಯಾಟರ್ನ್ ಅವರಲ್ಲಿ ಮುಖ್ಯಸ್ಥ, ಆಳರಸ, ಕ್ರೋನಸನ ಮಕ್ಕಳಲ್ಲಿ ಒಬ್ಬನಾದ ಜ್ಯೂಸ್ ತಂದೆಯನ್ನೂ ಇತರ ಟೈಟನರನ್ನೂ ಸೋಲಿಸಿ ಮೂಲೆಗೊತ್ತಿ ಒಲಿಂಪಿಯನ್ ದೇವತೆಗಳ ಯುಗವನ್ನು ಅರಂಭಗೊಳಿಸಿದ. ಒಲಿಂಪಿಯನ್ನರ ಸೂರ್ಯದೇವತೆ ಅಪಾಲೋ. ಆತನಿಂದ ಹೈಪೀರಿಯನ್ ಸ್ಥಾನಭ್ರಷ್ಟನಾದ. ಈ ಕಥೆಯ ಹಿಂದೆಯೂ ಅನ್ಯಾರ್ಥವನ್ನು ಇಡಬೇಕೆಂಬ ಅಪೇಕ್ಷೆ ಕೀಟ್ಸನದು. ಟೈಟನರು ಸೌಂದರ್ಯದ ದೃಷ್ಟಿಯಿಂದ ಅರ್ಧ ಪರಿಷ್ಕೃತರು; ಅರ್ಧ ಸಂಸ್ಕೃತರು; ಆದ್ದರಿಂದ ಲಾವಣ್ಯದಲ್ಲೂ ಸಂಸ್ಕೃತಿಯಲ್ಲೂ ಅಧಿಕರಾದ ಒಲಿಂಪಿಯನರು ಎದ್ದು ಬಂದ ಕೂಡಲೆ ಟೈಟನರು ಹಿಂದೆ ಸರಿಯುವುದು ನ್ಯಾಯವೆ. ತನ್ನ ಶಕ್ತಿಗೂ ಸತ್ತ್ವಕ್ಕೂ ಮೀರಿದ ಭಾರಿ ಸಾಹಸಕ್ಕೆ ಕೀಟ್ಸ್ ಮನತಂದು ಪೇಚಾಡಿದ. ಸೋತ, ಕೆಲಸದಿಂದ ಪರಾಙ್ಮುಖನಾದ. ಮಿಲ್ಟನ್ನನನ್ನು ಅನುಕರಿಸಹೋದದ್ದು ಪೆಚ್ಚುತನವೆಂಬುದು ಬೇಗ ಮನವರಿಕೆಯಾಯಿತು, ಇವನಿಗೆ, ಅಗಾಧ ಭಾವನೆಗಳೆಲ್ಲಿ? ಪ್ರಚಂಡ ಭಾವಗಳೆಲ್ಲಿ? ಮಹಾ ಲೋಕಾನುಭವವೆಲ್ಲಿ? ಮಹಾ ಭಾವನೆಗಳೆಲ್ಲಿ? ಮಹಾ ಶೈಲಿಯ ಅಧಿಪತ್ಯವೆಲ್ಲಿ? ಆದರೂ ಮೂರು ಪರಿಚ್ಛೇದಗಳ ಈ ಕಾವ್ಯ ಕೀಟ್ಸ್ ಅಭಿವೃದ್ಧಿ ಹೊಂದಿದ ಮೇಲೆ ಏನು ಮಾಡಬಲ್ಲನೆಂಬುದನ್ನು ಸೂಚಿಸುತ್ತಿತ್ತು. ದೊಡ್ಡ ಕವಿಯ ಮುನ್ಸೂಚನೆ ಸ್ಫುಟವಾಗಿದೆ, ಇದರಲ್ಲಿ.

**ಇಸಾಬೆಲಾ :** ಪ್ರೇಮದ ದಂತಕತೆ ವರ್ಣಿತವಾಗಿದೆ, ಇದರಲ್ಲಿ. ತನ್ನ ಶ್ರೀಮಂತ ಅಣ್ಣಂದಿರ ಕಾರಕೂನನನ್ನು ಇಸಾಬೆಲಾ ಪ್ರೀತಿಸುತ್ತಾಳೆ. ಸಹಿಸದೆ ಅವರು ಅವನನ್ನು ಕೊಂದು ಕಾಡಿನಲ್ಲಿ ಹೂತುಬಿಡುತ್ತಾರೆ. ಇಸಾಬೆಲಾ ಗುಟ್ಟಾಗಿ ನಡೆದು ಪ್ರಿಯನ ರುಂಡವನ್ನು ಕತ್ತರಿಸಿ ತಂದು, ತುಳಸಿಯಂಥ ಗಿಡದ ಕುಂಡದಲ್ಲಿ ಅದನ್ನು ಹುದುಗಿಸಿ, ಆ ಕುಂಡದ ಬಳಿ ಕುಳಿತು ಮಾತಿಲ್ಲದೆ ರೋದಿಸುತ್ತಾಳೆ. ಕುಂಡವೂ ಇಲ್ಲದಂತಾಗಿ ಅವಳಿಗೆ ಸಾವೇ ಗತಿಯಾಗುತ್ತದೆ. ಅಂದಚಂದಗೂಡಿದ ವಾಕ್ಯಗಳೂ ವರ್ಣನೆಗಳೂ ಬರುತ್ತವೆಯಾದರೂ ಸಡಿಲತೆಯೂ ರಾಗಾತಿರೇಕವೂ ಸಲ್ಲದ ಪದಗಳೂ ತುಂಬಿರುವುದರಿಂದ ಕವಿಯ ಪ್ರಥಮ ಪ್ರಯತ್ನವೆಂಬುದು ನಿಶ್ಚಿತವಾಗಿದೆ.

**ಸೇಂಟ್ ಅನಿಸ್ ಹಬ್ಬದ ಹಿಂದಿನ ರಾತ್ರಿ (ಈವ್ ಆಫ್ ಸೇಂಟ್ ಅನಿಸ್) :** ಸರಿಸುಮಾರಾಗಿ ದೋಷರಹಿತವಾದ ಕಾವ್ಯ ಇದು; ಕಥೆಗಾರಿಕೆ ಪಾತ್ರಚಿತ್ರಣ ವರ್ಣನೆ ಎಲ್ಲದರಲ್ಲೂ ಕೀಟ್ಸನ ಕೌಶಲ್ಯಕ್ಕಿಲ್ಲಿ ಕನ್ನಡಿ ಹಿಡಿದಿದೆ. ಪಾರ್ಫಿರೊ ಶತ್ರು ಗುಂಪಿನ ಕನ್ಯೆ ಮಾಡಲೀನಳನ್ನು ಪ್ರೇಮಿಸಿ, ಅವರ ದುರ್ಗಕ್ಕೆ ಗುಟ್ಟಾಗಿ ಆಗಮಿಸಿ, ಅವರು ಪಾನಾಮೋದದಲ್ಲಿ

ಬಿದ್ದಿರುವಾಗ, ಅವಳನ್ನು ಕರೆದುಕೊಂಡು ಹೋಗಿಬಿಡುವುದೇ ಕಾವ್ಯದ ಕಥೆ. ಆ ಕಾರ್ಯಾವಳಿ ಬರಿ ಮೂಳೆಕಟ್ಟು; ಸನ್ನಿವೇಶ ಪರಿಸ್ಥಿತಿ ಕಾಲ ದೇಶಗಳ ಅನ್ಯಾದೃಶ ವರ್ಣನೆ ಅದಕ್ಕೆ ಮಾಂಸ, ರಜ್ಜು, ಪ್ರೇಮಿಗಳಿಗೆ ನೆರವು ನೀಡುವ ವೃದ್ಧಿ ದಾದಿ. ಕೊರೆಯುವ ಚಳಿ, ಸರಿರಾತ್ರಿಯ ಗಂಭೀರತೆ, ಮಾಡೆಲೀನಳ ಸಾಲಂಕೃತ ಕೊಠಡಿ ಮುಂತಾದುವು ಕಣ್ಣಿಗೆ ಕಟ್ಟುವಂತೆಯೂ ಅತ್ಯಂತ ರಮಣೀಯವಾಗಿಯೂ ನಿರೂಪಿತವಾಗಿವೆ. ಒಂಬತ್ತು ಸಾಲಿನ ಸ್ಪೆನ್ಸರ್‌ನ ಪದ್ಯದ ಮಾದರಿಯ ಪದ್ಯವನ್ನು ಇದಕ್ಕೆ ಆರಿಸಿಕೊಂಡದ್ದು ಸಾರ್ಥಕವಾಗಿದೆ.

**ಲೇಮಿಯಾ :** ಗ್ರೀಕರ ಪುರಾಣದಂತೆ ಲೇಮಿಯಾ ಮೊದಲಲ್ಲಿ ಓರ್ವ ರಾಜಕುಮಾರಿ. ದೇವದೇವನಾದ ಜ್ಯೂಸನ ಕಣ್ಣು ಅವಳ ಮೇಲೆ ಬಿತ್ತು. ಅವಳೂ ಅವನಿಗೆ ಒಲಿದಳು. ಅವನಿಂದ ಅವಳಿಗೆ ವಿಚಿತ್ರವಾದೊಂದು ವರ ಬಂತು. ತನ್ನ ನೇತ್ರವನ್ನು ಬೇಕುಬೇಕಾದಾಗ ಕಿತ್ತುಕೊಳ್ಳುವ ಮತ್ತೆ ಇಟ್ಟುಕೊಳ್ಳುವ ಮನುಷ್ಯಾತೀತ ಚಾತುರ್ಯ ಅವಳದಾಯಿತು. ಹಲವು ಮಕ್ಕಳನ್ನು ಲೇಮಿಯಾ ಹೆತ್ತಳು; ಅದರೆ ಜ್ಯೂಸನ ಪಟ್ಟಮಹಿಷಿ ಹೀರಾ ಅವೆಲ್ಲವನ್ನೂ ಸಂಹರಿಸಿದಳು, ಸಿಲ್ಲಾ ಎಂಬೊಂದು ವಿಕೃತ ಹೆಣ್ಣು ಉಳಿಯಿತು. ಬೆಂದ ಎದೆಯ ಲೇಮಿಯಾ ಕಟ್ಟುಗ್ರ ರೋಷದಿಂದ ಕಂಡಕಂಡಲ್ಲಿ ಮಕ್ಕಳನ್ನು ತಿನ್ನುವ ಕ್ರೂರಿಯಾದಳು. ಕೊನೆಗೆ ಎಂಪ್ಯೂಸೆ ಎಂಬ ಕಠೋರ ದೆವ್ವಗಳಲ್ಲಿ ಒಂದಾದಳು. ತರುಣರನ್ನು ಕಾಮ ಪ್ರವೃತ್ತಿಗೆ ಸೆಳೆದು ಅವರು ಮಲಗಿದ್ದಂತೆ ಅವರ ಅಸುಗಳನ್ನು ಹೀರಿ ಸಾಯಿಸುವುದೇ ಅವಳ ಕೆಲಸವಾಯಿತು. ಕೀಟ್ಸ್ ಈ ಕಥೆಯ ಸರಣಿಯನ್ನು ಸುರಮ್ಯವಾಗಿ ಬದಲಾಯಿಸಿದ. ಲೇಮಿಯಾ ಉಜ್ವಲ ಬಣ್ಣಗಳ ಒಂದು ಹಾವು; ಮನುಷ್ಯ ಸ್ತ್ರೀಯಾಗುವ ಉತ್ಕಟಾಭಿಲಾಷೆಯಿಂದ ಪರಿತಪಿಸುತ್ತಿರುವ ಹಾವು. ಇದ್ದಕ್ಕಿದ್ದಂತೆ ದೇವತೆಗಳ ದೂತ ಹರ್ಮಿಸ್ ತನ್ನ ಪ್ರೇಮದ ಒಬ್ಬ ವನದೇವಿಯನ್ನು ಹುಡುಕುತ್ತ ಬಂದ; ಲೇಮಿಯಾ ಅವಳನ್ನು ಅವರಿವರ ಕಾಟದಿಂದ ತಪ್ಪಿಸಲು ಮರೆಸಿಟ್ಟಿದ್ದಳು. ಹರ್ಮಿಸಿಗೆ ಅವಳನ್ನು ತೋರಿಸಿಕೊಟ್ಟು ಪ್ರತಿಯಾಗಿ ಅವನಿಂದ ಹೆಣ್ಣು ರೂಪನ್ನು ಪಡೆದಳು. ಲೋಕವನ್ನೇ ಮರುಳುಗೊಳಿಸುವ ರೂಪ ಅವಳದ್ದು . ಲೀಸಿಯಸ್ ಎಂಬ ವಿದ್ಯಾರ್ಥಿ ಅವಳನ್ನು ಕಂಡು ಮೋಹಪರವಶನಾದ, ಅವಳಿಗೂ ಅವನ ಮೇಲೆ ಮೋಹ. ಅವಳನ್ನು ಮದುವೆಯಾಗಲು ತನ್ನ ಕುಟೀರಕ್ಕೆ ಆತ ಕರೆದುತಂದ. ಬಂಧುಬಳಗಕ್ಕೆ ಔತಣ ಏರ್ಪಡಿಸುವ ಪದ್ಧತಿಯಿತ್ತು. ಲೇಮಿಯಾ ತನ್ನ ಅಮಾನುಷ ಬಲದಿಂದ ವಿಶಾಲ ಮಹಲು ಉಪವನ ಆಳುಕಾಳು ಎಲ್ಲವನ್ನೂ ನಿರ್ಮಿಸಿದಳು. ಲೀಸಿಯಸ್ ತನ್ನ ಉಪಾಧ್ಯಾಯ ಅಪಲೋನಿಯಸ್ಸಿಗೆ ಆಹ್ವಾನ ಕೊಟ್ಟಿರಲಿಲ್ಲ; ಏತಕ್ಕೆಂದರೆ ಆತನ ವದನ ಕಣ್ಣಿಗೆ ಬಿದ್ದೊಡನೆ ಲೇಮಿಯಾ ಹೆದರಿ ತತ್ತರಿಸಿ ಚೀರಿದ್ದಳು. ಆದರೇನು? ಅಪಲೋನಿಯಸ್ ಬಂದೇ ಬಂದ. ಊಟಕ್ಕೆ ಕುಳಿತಿದ್ದವರಿಗೆ ಲೀಸಿಯಸ್ ತನ್ನ ಅಪೂರ್ವ ಮದವಣಗಿತ್ತಿಯನ್ನು ಪ್ರಶಂಸಿಸಿ ಪರಿಚಯ ಮಾಡಿಸುತ್ತಿರುವಾಗ ಅಪಲೋನಿಯಸ್ ತತ್ತ್ವಜ್ಞನಂತೆ 'ಅದು ಹೆಣ್ಣಲ್ಲ. ಹಾವು' ಎಂದು ಕೂಗಿಬಿಟ್ಟ. ತಕ್ಷಣ ಲೇಮಿಯಾ ಅದೃಶ್ಯಳಾದಳು, ಲೀಸಿಯಸ್ಸನ್ನು ಕಡುದುಃಖಕ್ಕೆ ಈಡುಮಾಡಿ.

ಲೇಮಿಯಾ ಕೀಟ್ಸನ ಕಾವ್ಯನೈಪುಣ್ಯ ಗರಿಗೆದರಿಕೊಂಡಿರುವುದಕ್ಕೆ ಸಾಕ್ಷ್ಯ.

**ಕರುಣೆಯಿಲ್ಲದ ನಾರಿ (ಲಾ ಬೆಲ್ ಡಾಮ್ ಸಾಂ ಮೆಸೆಲ್) :** ಇದೊಂದು ಆಶ್ಚರ್ಯಕರವಾದ ಲಾವಣಿ. ಮಧ್ಯಯುಗದ ರೊಮಾನ್ಸ್ ಕಾವ್ಯಗಳ ಸಾರವನ್ನೂ ಸೊಬಗನ್ನೂ ತನ್ನ ಚಿಕ್ಕ ಆಕಾರದಲ್ಲಿ ಹೃದಯಂಗಮವಾಗಿ ಅಡಕ ಮಾಡಿಕೊಂಡಿದೆ.

**ಪ್ರಗಾಥಗಳು :** ಕೀಟ್ಸನ ಅತ್ಯುತ್ತಮ ಕಾವ್ಯಗುಣ ಇವನ ಪ್ರಗಾಥಗಳಲ್ಲಿ ಸ್ಫುಟವಾಗಿ ಮೂಡಿಬಂದಿದೆ. ಅದು ಪ್ರಾಯಶಃ ಇವನ ಅರಿವಿಗೆ ಗೋಚರವಾಗಿರಲಿಲ್ಲ. ನಿಸರ್ಗವನ್ನು ಅದರ ಶಾಂತಸ್ಥಿತಿಯಲ್ಲಿ ಚಿತ್ರಿಸುವುದರಲ್ಲೂ ಆಂತರ್ಯದ ಭಾವ ಭಾವನೆಗಳಿಗೆ ಮಧುರವೂ ಗಂಭೀರವೂ ಆದ ಅಭಿವ್ಯಕ್ತಿಯನ್ನು ಹೊಂದಿಸುವುದರಲ್ಲೂ ಇವನಿಗಿದ್ದ ಸಹಜ ಕೌಶಲ್ಯ ಶ್ಲಾಘನೀಯ. ಗ್ರೀಕರ ಭಸ್ಮಕರಂಡ, ಶರದೃತು. ಓಡ್ ಆನ್ ಎಗ್ರೀಷನ್, ಓಡ್ ಟು ಆಟಮ್, ಓಡ್ ಟು ಮೆಲಾಂಕಲಿ, ಓಡ್ ಟು ಎ ನೈಟಿಂಗೇಲ್, ಓಡ್ ಟು ಸೈಕಿ, ದುಗುಡ, ಬುಲ್‌ಬುಲ್ ಹಕ್ಕಿ, ಆತ್ಮ ಮೊದಲಾದವಕ್ಕೆ ಇಂಗ್ಲಿಷ್ ಸಾಹಿತ್ಯದಲ್ಲಿ ಶಾಶ್ವತ ಸ್ಥಾನ ಕೀಟ್ಸನ ಪ್ರಗಾಥಗಳಿಂದಾಗಿ ಸಲ್ಲುವಂತಾಗಿದೆ. ಎಲ್ಲೆಲ್ಲೂ ಮಾನವನ ಕ್ಷಣಿಕವೂ ಅನಿಶ್ಚಿತವೂ ಆತಂಕಮಯವೂ ಆದ ಬಾಳಿಗೂ ಪೂರ್ಣ ಸೌಂದರ್ಯ ಮತ್ತು ಶುದ್ಧ ಆನಂದಗಳ ನಿರಂತರತ್ವಕ್ಕೂ ಇರುವ ವ್ಯತ್ಯಾಸ ಕವಿಯನ್ನು ಪದೇ ಪದೇ ಚೋದಿಸುತ್ತಿರುವುದನ್ನು ಈ ಬರೆಹಗಳಲ್ಲಿ ಕಾಣುತ್ತೇವೆ. ಅಲ್ಲಲ್ಲಿ ಬಂದಿರುವ ಪದಗುಚ್ಛಗಳೂ ವಾಕ್ಯಗಳೂ ನಿಜವಾದ ಇಂಗ್ಲಿಷ್ ಕವನ ಯಾವುದು ಎಂಬುದನ್ನು ನಮಗೆ ತಿಳಿಸಬಲ್ಲವು.

**ಸಾನೆಟ್ಟುಗಳು:** ಇವುಗಳಲ್ಲಿ ಒಳ್ಳೆಯವೂ ಅಷ್ಟೊಂದು ಒಳ್ಳೆಯವಲ್ಲದವೂ ಮಿಳಿತವಾಗಿವೆ. ಕೆಲವಂತೂ ಕೆಲಸವಿಲ್ಲದಿದ್ದಾಗ ಏನೋ ಬರೆಯಬೇಕೆಂದು ಬರೆದ ಪಂಕ್ತಿಗಳಾಗಿವೆ. ಕೀಟ್ಸನ ಕೈವಾಡವನ್ನು ಪ್ರದರ್ಶಿಸುವುವು ಕೆಲವೇ ಕೆಲವು. ಸಾನೆಟ್ಟನ್ನು ಭಾವಗೀತೆಯೆಂದು ಕರೆದರೂ ಅದಕ್ಕೆ ಭಾವಗೀತೆಯ ಸ್ವರೂಪ ತೊಡಿಸುವುದು ದಿಟವಾಗಿ ಇಲ್ಲಿ ಕಷ್ಟಸಾಧ್ಯ.

**ದರ್ಶನ, ತತ್ತ್ವಗಳು :** ಕವಿಯಾದವನು ಕಾವ್ಯಕ್ಕೋಸ್ಕರವೇ ಹೇಗೆ ಜೀವಿಸಬಹುದೆಂಬುದಕ್ಕೆ ಉತ್ಕೃಷ್ಟ ನಿದರ್ಶನ ಜಾನ್ ಕೀಟ್ಸ್. ತನ್ನ ಕಾಲದಲ್ಲಿ ಯೋಚನಾಪರರೆಲ್ಲರನ್ನೂ ಆಕರ್ಷಿಸಿ ಅವರ ಮನಸ್ಸು ಹೃದಯಗಳ ಮೇಲೆ ಒತ್ತಡ ಹೇರುತ್ತಿದ್ದ ರಾಜಕೀಯ ಸಾಮಾಜಿಕ ವೈಜ್ಞಾನಿಕ ಚಳವಳಿಗಳಿಂದ ಇವನು ಸದಾ ನಿರ್ಲಿಪ್ತನಾಗಿ ದೂರವಿರುತ್ತಿದ್ದ. ಕವಿಗೆ ಅವೆಲ್ಲ ಅಪ್ರಾಸಂಗಿಕ ಅಮುಖ್ಯ ಹೊರಗು–ಎಂದೇ ಇವನ ದೃಢನಿರ್ಧಾರ. ಹಾಗಾದರೆ ಕವಿ ಯಾವುದನ್ನು ಬರೆಯಬೇಕು. ಯಾವುದರ ಧ್ಯಾನದಲ್ಲಿ ಮಗ್ನನಾಗಿರಬೇಕು? ಇದಕ್ಕೆ ಇವನ ಉತ್ತರ–ಸೌಂದರ್ಯ ಅವನ ಪ್ರಧಾನ ತತ್ತ್ವ ಎರಡು: ಸುಂದರ ವಸ್ತುವಿನಿಂದ ಸದಾ ಸಂತಸ; ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ. ಸೌಂದರ್ಯವನ್ನು ಕಂಡುಕೊಂಡು ಅದರ ಚಿಂತನೆಯಿಂದ ಸೌಖ್ಯ ಪಡೆಯಬೇಕಾದರೆ ಮನಸ್ಸಿಗಿಂತಲೂ ಹೆಚ್ಚಾಗಿ ಜ್ಞಾನೇಂದ್ರಿಯಗಳು ಕೆಲಸ ಮಾಡಬೇಕೆಂದು ಇವನ ಅಭಿಮತ. ಸಂವೇದನಾಪೂರಿತ ಜೀವನ ಬೇಕು, ಆಲೋಚನಾಮಯ ಜೀವನ ಬೇಡ ಎನ್ನುತ್ತಿದ್ದ, ಆತ.

ಈ ದೃಷ್ಟಿ ಅಪೂರ್ಣವೆಂದು ಹೇಳಲೇಬೇಕಾಗಿಲ್ಲ. ಬರಬರುತ್ತ ಕೀಟ್ಸನ ಮನಸ್ಸು ಪ್ರಬುದ್ಧವಾಯಿತು. ತನ್ನ ಕಾವ್ಯಗಳ ದೊಡ್ಡ ಕೊರತೆ ಯಾವುದೆಂಬುದೂ ಇವನಿಗೆ ತೋಚುತ್ತ ಬಂತು. ಜೀವನದ ಇತರ ನಾನಾ ಮುಖಗಳ ಪರಿಚಯವಾದರೇ ಅದರ ಸತ್ಯಾಂಶದ ಇಣಿಕುನೋಟ ದೊರೆತೀತು ಎಂದು ಇವನು ಮನಗಂಡ. ಗ್ರಂಥಜ್ಞಾನ, ಪ್ರಪಂಚಜ್ಞಾನ ಎಷ್ಟು ಲಭ್ಯವಾದರೆ ಅಷ್ಟು ಒಳ್ಳೆಯದು ; ಆದ್ದರಿಂದ ಅವನ್ನು ಸಂಪಾದಿಸಲು ಹೆಣಗತಕ್ಕದ್ದು–ಎಂದು ಸಂಕಲ್ಪ ಮಾಡಿಕೊಂಡ. ಈತ ಮಿತ್ರರಿಗೂ ಸಹೋದರರಿಗೂ ಬರೆದ ಕಾಗದಗಳು ಉಳಿದುಬಂದಿದ್ದು ಉತ್ತಮ ಗದ್ಯಸಾಹಿತ್ಯವೆನಿಸಿವೆ. ಅವುಗಳಲ್ಲಿ ಮನೋದಾರ್ಢ್ಯ ವಿವೇಕ ವಿಚಕ್ಷಣೆ ಸಹಿಷ್ಣುತೆ ಸಹಾನುಭೂತಿ ಗಾಂಭೀರ್ಯ ಮುಂತಾದ ಗಂಡು ಗುಣಗಳು ಎದ್ದುಕಾಣುತ್ತವೆ; ಕಾವ್ಯಗಳಲ್ಲಿ ನಿಬಿಡವಾಗಿರುವ ರಾಗಾತಿರೇಕವಾಗಲಿ ಲಘುಕಲ್ಪನೆಯಾಗಲಿ ಅಲ್ಲಿ ತಲೆದೋರುವುದಿಲ್ಲ. ಕೀಟ್ಸನ ಕೆಲವು ಹೇಳಿಕೆಗಳಿಗೆ ಸಾಹಿತ್ಯ ವಿಮರ್ಶೆಯಲ್ಲಿ ಸೂತ್ರ ಸ್ಥಾನ ದೊರಕಿದೆ. (ಎಸ್.ವಿ.ಆರ್.; ಎನ್.ಎಸ್.ಎಲ್.)

ಪ್ರಗಾಥಗಳು ಬಹು ಸ್ಪಷ್ಟವಾಗಿ ಕೀಟ್ಸ್‌ನ ಪ್ರತಿಭೆಯನ್ನು ಸಾರುತ್ತವೆ. ಮಾತಿನಲ್ಲಿ ಮರೆಯಲಾಗದ ಚಿತ್ರಗಳನ್ನು ಕೆತ್ತಬಲ್ಲವನು ಕೀಟ್ಸ್. ಛಂದಸ್ಸಿನ ಮೇಲೆ, ಭಾಷೆಯ ಮೇಲೆ, ಪದಗಳ ನಾದದ ಮೇಲೆ ಈತನಿಗಿರುವ ಪ್ರಭುತ್ವವನ್ನು ಇವು ಸಾರುತ್ತವೆ. ಯೌವನ, ಚೆಲುವು, ಪ್ರೇಮ ಎಲ್ಲ ಕ್ಷಣಿಕ ಎಂಬ ಕೊರಗು ಕವಿಯ ಮನಸ್ಸನ್ನು ಕಾಡುತ್ತಿದೆ. ಬದುಕಿನ ಎಲ್ಲ ಅನುಭವಗಳಲ್ಲಿ ಅನಿವಾರ್ಯವಾದ ದ್ವಿಮುಖತೆ (ಡ್ಯುಯಾಲಿಟಿ) ಯನ್ನು ಇವನು ಗುರುತಿಸುತ್ತಾನೆ. ಉದಾಹರಣೆ, 'ಓಡ್ ಆನ್ ಎ ಗ್ರೀಷನ್ ಅರ್ನ್' ನಲ್ಲಿ ಕಾಲ ಓಡುತ್ತಿದೆ, ಎಲ್ಲ ಕ್ಷಣಿಕ ಎಂಬ ನೋವಿದೆ. ಆದರೆ ಕಾಲದ ಅಸ್ತಿತ್ವದಲ್ಲಿ ಅನುಭವ ಸಾಧ್ಯ; ಅನುಭವ ಬೇಕೆಂದರೆ ಕಾಲದ ಓಟವನ್ನು ಸ್ವೀಕರಿಸಬೇಕು. ಒಂದು ವಿಶಿಷ್ಟವಾದ ಪ್ರಗಾಥ 'ಟು ಆಟಮ್' ವಿಷಣ್ಣತೆ ಮತ್ತು ಸಂತೋಷ ಒಟ್ಟಿಗಿವೆ. ಬದುಕಿನ ಕ್ಷಣಭಂಗುರತೆ ಮತ್ತು ಅಮರತ್ವದ ನಮ್ಮ ಅಂತರ್ಬೋಧ ಇವುಗಳ ಕರ್ಷಣ ಕೀಟ್ಸ್‌ನ ಕಾವ್ಯದ ವಸ್ತು.

ಕೀಟ್ಸ್‌ನ ಪತ್ರಗಳು ಉಳಿದು ಬಂದಿವೆ. ಕಾವ್ಯವನ್ನು ಕುರಿತು, ಷೇಕ್ಸ್‌ಪಿಯರ್, ಮಿಲ್ಟನ್ ಮೊದಲಾದ ಕವಿಗಳನ್ನು ಕುರಿತು ಇಲ್ಲಿ ಅಪೂರ್ವ ಹೊಳಹುಗಳಿವೆ. (ಎಲ್.ಎಸ್.ಎಸ್.)

**ಕೀತ್, ಎ.ಬಿ. :** 1879–1944. ಸಂಸ್ಕೃತ ಸಾಹಿತ್ಯಕ್ಷೇತ್ರದಲ್ಲಿ ಗಣ್ಯ ಕೆಲಸ ಮಾಡಿರುವ ಹಿರಿಯ ವಿದ್ವಾಂಸರಲ್ಲೊಬ್ಬ. ಆರ್ಥರ್ ಬೆರಿಡೇಲ್ ಕೀತ್ ಎಂಬುದು ಪೂರ್ಣನಾಮ.



ಇಂಗ್ಲೆಂಡಿನ ಎಡಿನ್‌ಬರೋ ಹತ್ತಿರ ಜನ್ಮವೆತ್ತಿದ ಈತ 1897ರಲ್ಲಿ ಅಲ್ಲಿನ ವಿಶ್ವವಿದ್ಯಾಲಯದಿಂದ ಪುರಾತನ ಭಾಷೆಗಳಲ್ಲಿ ಪ್ರಥಮ ದರ್ಜೆ ಆನರ್ಸ್ ಪದವಿ ಪಡೆದು ಎಂ.ಎ. ಪದವೀಧರನಾದ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಬ್ಯಾಲಿಯೋಲ್ ಕಾಲೇಜಿನಲ್ಲಿ ಬೋಡೆನ್ ಸಂಸ್ಕೃತ ವಿದ್ಯಾರ್ಥಿವೇತನ ದೊರಕಿತಾಗಿ ಪುರಾತನ ಭಾಷಾವಿಷಯದಲ್ಲಿ ಅಲ್ಲೂ ಪ್ರಥಮಸ್ಥಾನ ಗಳಿಸಿಕೊಂಡ (1899). ಭಾರತೀಯ ಲೋಕ ಸೇವಾ ಪರೀಕ್ಷೆಯಲ್ಲಿ ಹಿಂದಿನ ಎಲ್ಲ ವರ್ಷಗಳ ಪ್ರಥಮ ಅಭ್ಯರ್ಥಿಗಳಿಗಿಂತಲೂ ಒಂದು ಸಹಸ್ರ ಅಂಕಗಳನ್ನೂ ಹೆಚ್ಚಿಗೆ ಪಡೆದು, ಬಾಲ್ಯದಿಂದಲೂ ಬೆಳೆಸಿಕೊಂಡು ಬಂದಿದ್ದ ಮೇಧಾಶಕ್ತಿಯನ್ನು ತೋರ್ಪಡಿಸಿ, ವಿಜಯಿಯಾದ. ಈ ಮೇಧಾವಿಯ ದಪ್ಪತಲೆ, ದೃಢಕಾಯ ಒಳಗಿನ ಅಂತಸ್ಸತ್ತ್ವವನ್ನು ಘೋಷಿಸುವಂತಿದ್ದುವು.

1901ರಲ್ಲಿ ವಿದೇಶೀ ಸ್ವಾಸ್ಥ್ಯಗಳ ಕಚೇರಿಗೆ ಸೇರಿದ. ಅಲ್ಲಿ ಕೆಲಸದಲ್ಲಿದ್ದುಕೊಂಡೇ 1904ರಲ್ಲಿ ಲಾ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ತೇರ್ಗಡೆಯಾದ. ಬೃಹದ್ ಗ್ರಂಥಗಳ ಸೃಷ್ಟಿಗೆ ಕೈಹಾಕಿ ತನ್ನ ಅಸಾಧಾರಣ ಪ್ರತಿಭೆ, ಮೇಧಾಶಕ್ತಿ ಮತ್ತು ಜ್ಞಾಪಕಶಕ್ತಿಯನ್ನು ಸದುಪಯೋಗಪಡಿಸಿಕೊಂಡು ಸುಮಾರು ನಲವತ್ತು ವರ್ಷಗಳ ಕಾಲ ಸತತವಾಗಿ ಸಂಸ್ಕೃತ ಸಾಹಿತ್ಯಕ್ಕೂ ಬ್ರಿಟಿಷರ ರಾಜ್ಯವ್ಯವಸ್ಥೆಯ ಕಾಯಿದೆಗೂ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ಈತ ರಚಿಸಿದ.

ಕೀತ್ ವೈದಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಋಗ್ವೇದದ ಐತರೇಯಾರಣ್ಯಕ, ಶಾಂಖಾಯನ ಅರಣ್ಯಕ, ಋಗ್ವೇದದ ಬ್ರಾಹ್ಮಣಗಳು, ಕೃಷ್ಣಯಜುರ್ವೇದೀಯ ತೈತ್ತಿರೀಯ ಸಂಹಿತೆ–ಇವನ್ನು ಸಂಪಾದಿಸಿದ್ದಾನೆ. ಇಲ್ಲವೆ ಭಾಷಾಂತರಿಸಿದ್ದಾನೆ. ವೇದ ಮತ್ತು ಉಪನಿಷತ್ತುಗಳ ಧರ್ಮ ಮತ್ತು ದರ್ಶನ ಎಂಬ ಎರಡು ಭಾಗಗಳನ್ನು ವಿಮರ್ಶಾರೂಪದಲ್ಲಿ ಪ್ರಕಟಿಸಿದ್ದಾನೆ. ಮೆಕ್‌ಡೊನೆಲ್ ಜೊತೆ ವೈದಿಕ ಅಭಿದಾನ ಮತ್ತು ವಿಷಯಸೂಚಿ ಎಂಬ ಬೃಹದ್ ಗ್ರಂಥವೊಂದನ್ನು ರಚಿಸಿದ್ದಾನೆ.

ಸಾಂಖ್ಯದರ್ಶನ, ಭಾರತೀಯ ತರ್ಕಶಾಸ್ತ್ರ ಮತ್ತು ಅಣುವಾದ, ಕರ್ಮಮೀಮಾಂಸೆ, ಬೌದ್ಧದರ್ಶನಗಳು–ಇವು ಕೀತ್ ರಚಿತ ತತ್ತ್ವಶಾಸ್ತ್ರ ಗ್ರಂಥಗಳು. ಸಂಸ್ಕೃತನಾಟಕ ಮತ್ತು ಸಂಸ್ಕೃತ ಸಾಹಿತ್ಯ ಚರಿತ್ರೆ ಎಂಬಿವು ಈತನ ಇನ್ನೆರಡು ಬೃಹದ್ ವಿಮರ್ಶಾಗ್ರಂಥಗಳು.

ಕೇವಲ ಮೂವತ್ತು ವರ್ಷ ವಯಸ್ಸಿನಲ್ಲೇ ಆಕ್ಸ್‌ಫರ್ಡಿನಲ್ಲಿ ಬೋಡೆನ್ ಸಂಸ್ಕೃತ ಉಪಪ್ರಾಧ್ಯಾಪಕನಾದ ಕೀತ್ 35 ವಯಸ್ಸಿನಲ್ಲಿ (1914) ಎಡಿನ್‌ಬರೊನಲ್ಲಿ ಸಂಸ್ಕೃತ ಮತ್ತು ತುಲನಾತ್ಮಕ ಭಾಷಾಶಾಸ್ತ್ರದ ಪ್ರಾಧ್ಯಾಪಕನಾದ. ವಿಂಟರ್‌ನಿಟ್ಸ್ ಮತ್ತು ಜೌಫ್ರೆಕ್‌ರವರಂಥ ಮಹಾಮೇಧಾವಿಗಳ ಜೊತೆಯಲ್ಲಿ ಆಕ್ಸ್‌ಫರ್ಡಿನ ಬೋಡ್‌ಲಿಯನ್ ಪುಸ್ತಕ ಭಂಡಾರದಲ್ಲಿದ್ದ ಸಂಸ್ಕೃತ ಮತ್ತು ಪ್ರಾಕೃತ ಹಸ್ತಪ್ರತಿಗಳ ಸೂಚಿಯನ್ನು ತಯಾರಿಸಿದ (1905).

ಇಂಥ ಉದ್ದಾಮ ಪಂಡಿತನೂ ವಿಮರ್ಶಕನೂ ಆದ ಕೀತ್‌ಗೆ ಆಕ್ಸ್‌ಫರ್ಡ್, ಎಡಿನ್‌ಬರೊ ಮತ್ತು ಲೀಡ್ಸ್ ವಿಶ್ವವಿದ್ಯಾಲಯಗಳು ಡಾಕ್ಟರೇಟ್ ಪ್ರಶಸ್ತಿಯನ್ನಿತ್ತು ಗೌರವಿಸಿದವು. ಕೊವೆಲ್, ಮೆಕ್‌ಡೊನೆಲ್ ಮತ್ತು ಕೀತ್ ಈ ಮೂವರು ಸಂಸ್ಕೃತ ಸಾಹಿತ್ಯರತ್ನಮಾಲೆಗೆ ಇಂಗ್ಲೆಂಡಿತ್ತ ರತ್ನತ್ರಯರೆಂದು ಪ್ರಸಿದ್ಧರಾಗಿದ್ದಾರೆ. (ಸಿ.ಜಿ.ಪಿ.)

**ಕೀತ್, ಸರ್ ಆರ್ಥರ್ :** 1866–1955. ಅಂಗರಚನಾಶಾಸ್ತ್ರ ಮತ್ತು ಭೌತಮಾನವವಿಜ್ಞಾನಗಳಲ್ಲಿ ಪ್ರಸಿದ್ಧ ಪಂಡಿತನಾಗಿದ್ದು ತನ್ನ ಗ್ರಂಥಗಳಿಂದಲೂ ಇತರ ಸಾಮಾಜಿಕ ಕೆಲಸಕಾರ್ಯಗಳಿಂದಲೂ ಖ್ಯಾತನಾದ ವಿದ್ವಾಂಸ. ಜಾನ್ ಕೀತ್ ಮತ್ತು ಜೆಸ್ಸಿ ಮ್ಯಾಕ್‌ಫರ್‌ಸನ್ ಎಂಬ ಸ್ಕಾಟಿಷ್ ದಂಪತಿಗಳ ಹತ್ತು ಮಕ್ಕಳಲ್ಲಿ ಈತ ಆರನೆಯವ. 1866ನೆ ಫೆಬ್ರುವರಿ 5ರಂದು ಸ್ಕಾಟ್ಲೆಂಡಿನ ಅಬರ್ಡೀನ್‌ಗೆ ಉತ್ತರಕ್ಕೆ ಇರುವ ಓಲ್ಡ್‌ಮಚಾರ್ ಎಂಬಲ್ಲಿ ಜನ್ಮವೆತ್ತಿದ. ಚಿಕ್ಕಂದಿನಲ್ಲಿ ಇವನಿಗೆ ಜಮೀನು ಮೇಲ್ವಿಚಾರಣೆಯ ಕೆಲಸವನ್ನು ವಹಿಸಲಾಗಿತ್ತು. ಈತನಿಗೆ ಪಂಡಿತ ಭಾಷೆಗಳಾಗಿದ್ದ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಅಷ್ಟೊಂದು ಪರಿಶ್ರಮವಿಲ್ಲದಿದ್ದುದೇ ಇದಕ್ಕೆ ಕಾರಣ. ಆದರೂ ಈತ ವೈದ್ಯವಿಭಾಗದ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಅಬರ್ಡೀನ್ ವಿಶ್ವವಿದ್ಯಾಲಯದ ವೈದ್ಯಕೀಯ ಪದವಿಗಳಿಸಿದ. ಅನಂತರ ಲಂಡನ್ ಮತ್ತು ಲೀಪ್‌ಜಿಗ್ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಿದ.

1899ರಲ್ಲಿ ಸಿಸಿಲಿಯ ಎಂಬಾಕೆಯನ್ನು ಮದುವೆಯಾದ. ಅನಂತರ ಸಯಾಂನಲ್ಲಿ ವೈದ್ಯಕೀಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ. ಪಕ್ಕದ ಅರಣ್ಯಗಳಲ್ಲಿದ್ದ ವಾನರವರ್ಗದ ದೇಹರಚನೆಯನ್ನು ಕುರಿತು ಆಳವಾದ ಅಧ್ಯಯನ ನಡೆಸಿದ್ದು ಇದೇ ಅವಧಿಯಲ್ಲಿ. ಈ ವಿಷಯದ ಆಳವಾದ ವ್ಯಾಸಂಗದಿಂದಾಗಿ ಈತನಿಗೆ ಮಾನವನ ಉಗಮ ಮತ್ತು ಬುಡಕಟ್ಟುಗಳ ಮೂಲಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿತು. ಈತನ ಆರೋಗ್ಯ ಯಾವಾಗಲೂ ಅಂಥ ಹೇಳಿಕೊಳ್ಳುವ ಸ್ಥಿತಿಯಲ್ಲಿದ್ದಿರಲಿಲ್ಲ. ಆದರೂ 89 ವರ್ಷಗಳಷ್ಟು ಸುದೀರ್ಘ ಜೀವನವನ್ನು ಈತ ನಡೆಸಿದ. ಆಶ್ಚರ್ಯದ ಸಂಗತಿಯೆಂದರೆ, ತನ್ನ ಸಾಧಾರಣ ಆರೋಗ್ಯದಿಂದಲೇ ಕ್ಷಯದಂಥ ರೋಗವನ್ನು ಎದುರಿಸಿ ಗೆದ್ದ.

ಈತ 1908ಕ್ಕೆ ಮೊದಲು ಲಂಡನ್ ಆಸ್ಪತ್ರೆಯಲ್ಲಿ ಅಧ್ಯಾಪಕನಾಗಿದ್ದುದಲ್ಲದೆ, ರಾಯಲ್ ಕಾಲೇಜ್ ಆಫ್ ಸರ್ಜನ್ಸ್‌ಗೆ ಸಂಬಂಧಿಸಿದ ವಸ್ತುಸಂಗ್ರಹಾಲಯದ ಸಂರಕ್ಷಣಾಧಿಕಾರಿಯಾಗಿ 1908ರಿಂದ 1933ರ ವರೆಗೆ ಸೇವೆ ಸಲ್ಲಿಸಿದ. ಇವನ ಉಪನ್ಯಾಸಗಳು ಯಾವಾಗಲೂ ಜನಪ್ರಿಯವಾಗಿದ್ದು ವೈದ್ಯರನ್ನಷ್ಟೇ ಅಲ್ಲ, ವಿದ್ಯಾವಂತ ಜನಸಾಮಾನ್ಯರನ್ನೂ ಆಕರ್ಷಿಸುತ್ತಿದ್ದುವು. ಅಂಗರಚನಾಶಾಸ್ತ್ರದಲ್ಲಿ ಕೀತನಿಗಿದ್ದ ಪಾಂಡಿತ್ಯ ಆತ ಬರೆದಿರುವ ಅನೇಕಾನೇಕ ಲೇಖನಗಳು ಮತ್ತು ಗ್ರಂಥಗಳಲ್ಲಿ ವ್ಯಕ್ತವಾಗಿದೆ. ಡಾರ್ವಿನ್ನನ ವಿಕಾಸವಾದದಲ್ಲಿ ಈತನಿಗೆ ಅಚಲ ವಿಶ್ವಾಸವಿತ್ತು.

ಅತ್ಯಂತ ಉಪಯುಕ್ತವಾದ ಅಧ್ಯಯನವನ್ನು ಕೀತ್ ನಡೆಸಿದ್ದು ತನ್ನ ನಿವೃತ್ತ ಜೀವನಾವಧಿಯಲ್ಲಿ. ಟಿ.ಡಿ.ಮೆಕಾನನೊಂದಿಗೆ ಕೀತ್ ತಲೆಬುರುಡೆಗಳ ರಚನೆಯ ವಿಷಯದಲ್ಲಿ ಸುದೀರ್ಘ ಸಂಶೋಧನೆ ನಡೆಸಿದ. ಕೀತ್‌ನ ಪ್ರತಿಭೆ ಈತನ ಲೇಖನ ಮತ್ತು ಗ್ರಂಥಗಳಿಂದ ಮಾತ್ರವಲ್ಲದೆ ವೈದ್ಯಕೀಯ ವಸ್ತು ಸಂಗ್ರಹಣಾಲಯದ ನಿರ್ವಹಣೆಯಲ್ಲಿ ಈತ ತೋರಿದ ಕ್ರತುಶಕ್ತಿಯಿಂದಲೂ ವ್ಯಕ್ತವಾಗುತ್ತದೆ. ಜನಾಕರ್ಷಕ ಕೇಂದ್ರವಾಗುವುದರ ಜೊತೆಗೆ ಆ ವಸ್ತುಸಂಗ್ರಹಾಲಯ ಒಂದು ಶೈಕ್ಷಣಿಕ ಹಾಗೂ ಸಂಶೋಧನ ಕೇಂದ್ರವಾಗುವಂತೆ ಮಾಡುವುದರಲ್ಲಿ ಈತ ಯಶಸ್ವಿಯಾದ.

ಕೀತ್ ಮಾನವಜನಾಂಗದ ಬಗ್ಗೆ ಅತ್ಯಂತ ಉದಾತ್ತವಾದ ಕಲ್ಪನೆಗಳನ್ನು ಹೊಂದಿದ್ದ. ಯುದ್ಧಗಳು ಮಾನವೀಯ ಹಾಗೂ ಸಾಮಾಜಿಕ ವಿಕಾಸಕ್ಕೂ ನೀತಿನಿಯಮಗಳ ಬೆಳವಣಿಗೆಗೂ ಮಾರಕವಾಗಿವೆಯೆಂದು ಈತ ಪ್ರತಿಪಾದಿಸುತ್ತಿದ್ದ.

1914 ರಿಂದ 1918ರ ವರೆಗೆ ಈತ ಆಂತ್ರೊಪೊಲಾಜಿಕಲ್ ಸಂಸ್ಥೆಯ ಅಧ್ಯಕ್ಷನಾಗಿದ್ದ. 1921ರಲ್ಲಿ ಈತನಿಗೆ ಸರ್ ಪದವಿಯನ್ನು ನೀಡಿ ಗೌರವಿಸಲಾಯಿತು. 1928ರಲ್ಲಿ ಈತ ಹಕ್ಸ್ಲೆ ಸ್ಮಾರಕ ಉಪನ್ಯಾಸಗಳನ್ನಿತ್ತ. ಕೀತ್‌ನ ಬರವಣಿಗೆಯಲ್ಲಿ ಈ ಕೆಳಗಿನವು ಮುಖ್ಯವಾದವು: ಹ್ಯೂಮನ್ ಎಂಬ್ರಿಯಾಲಜಿ ಅಂಡ್ ಮಾರ್ಫಾಲಜಿ (1901), ಏನ್ಷಂಟ್ ಟೈಪ್ಸ್ ಆಫ್ ಮ್ಯಾನ್ (1911), ದಿ ಹ್ಯೂಮನ್ ಬಾಡಿ (1912), ಆಂಟಿಕ್ವಿಟಿ ಆಫ್ ಮ್ಯಾನ್ (1915), ಎಂಜಿನ್ಸ್ ಆಫ್ ದಿ ಹ್ಯೂಮನ್ ಬಾಡಿ (1919), ನ್ಯೂ ಡಿಸ್ಕವರೀಸ್ ರಿಲೇಟಿಂಗ್ ಟು ದಿ ಆಂಟಿಕ್ವಿಟಿ ಆಫ್ ಮ್ಯಾನ್ (1931), ಎ ನ್ಯೂ ಥಿಯರಿ ಆಫ್ ಎವೊಲ್ಯೂಷನ್ (1948), ಎನ್ ಆಟೋಬಯಾಗ್ರಫಿ (1950). (ಬಿ.ಎನ್.ಎ.ಜಿ.)

**ಕೀನೊಪೋಡಿಯೇಸೀ :** ಚಕ್ಕೋತಸೊಪ್ಪಿನ ಗಿಡದ ಕುಟುಂಬ. ಸೆಂಟ್ರಾಸ್ಪರ್ಮಿ ಗಣಕ್ಕೆ ಸೇರಿದೆ. ಇದರಲ್ಲಿ 75 ಜಾತಿಗಳು 500 ಪ್ರಭೇದಗಳು ಇವೆ. ಈ ಕುಟುಂಬಕ್ಕೆ ಸೇರಿದ ಕೆಲವು ಸಸ್ಯಗಳಲ್ಲಿ ಮರುಭೂಮಿಯಲ್ಲಿ ಬೆಳೆಯುವ ಸಸ್ಯಗಳ (ಜ಼ೀರೊಫೈಟ್ಸ್) ಲಕ್ಷಣಗಳನ್ನು ಕಾಣುತ್ತೇವೆ. ಏಕೆಂದರೆ ಇವು ಲವಣಮಿಶ್ರಿತ ನೀರಿರುವ ಸಮುದ್ರ ತೀರಗಳಲ್ಲಿ ಬೆಳೆಯುತ್ತವೆ. ಸಮುದ್ರ ತೀರದ ಮಣ್ಣಿನಲ್ಲಿ ಲವಣದ ಅಂಶ ಅಧಿಕವಾಗಿರುವುದರಿಂದ ಸಸ್ಯಗಳು ಸಾಕಷ್ಟು ನೀರನ್ನು ಹೀರಿಕೊಳ್ಳಲಾರವು. ಹೀಗಾಗಿ ಈ ಪರಿಸ್ಥಿತಿಯಲ್ಲಿ ಬೆಳೆಯುವ ಸಸ್ಯಗಳಲ್ಲಿ ಬಾಷ್ಪವಿಸರ್ಜನಾ ಕ್ರಿಯೆ (ಟ್ರಾನ್ಸ್‌ಪಿರೇಷನ್) ಅನಿವಾರ್ಯವಾಗಿ ಅತ್ಯಲ್ಪ ಪ್ರಮಾಣದಲ್ಲಿ ನಡೆಯಬೇಕು. ಇದಕ್ಕಾಗಿ ಇವುಗಳ ದೇಹದಲ್ಲಿ ಕೆಲವು ವಿಶಿಷ್ಟ ಪರಿವರ್ತನೆಗಳನ್ನು ಕಾಣಬಹುದು. ಈ ಸಸ್ಯಗಳು ಸಾಮಾನ್ಯವಾಗಿ ಪುಟ್ಟಗಿಡಗಳ ರೂಪದಲ್ಲೂ ಪೊದೆಗಳ ರೂಪದಲ್ಲೂ ಚಿಕ್ಕಮರಗಳ ರೂಪದಲ್ಲೂ ಬೆಳೆಯುತ್ತವೆ. ಕೀನೊಪೋಡಿಯಮ್, ಸ್ಯಾಲಿಕಾರ್ನಿಯ, ಸುಯೇಡ, ಹ್ಯಾಲೊಕ್ಸೈಲಾನ್, ಬೀಟ, ಸ್ಪಿನೇಶಿಯ ಓಲರೇಸಿಯ ಸಸ್ಯವನ್ನು ಸಾಮಾನ್ಯವಾಗಿ ಚಕ್ಕೋತಸೊಪ್ಪಿನ ಗಿಡ ಎಂದು ಕರೆಯುತ್ತಾರೆ. ಕೀನೊಪೋಡಿಯೇಸೀ ಕುಟುಂಬದ ಸಸ್ಯಗಳ ಬೇರುಗಳು ಭೂಮಿಯಲ್ಲಿ ಬಹು ಆಳಕ್ಕೆ ಹೋಗಿ ಬೆಳೆಯುತ್ತವೆ. ಎಲೆಗಳು ಚಿಕ್ಕವಾಗಿದ್ದು ವಿವಿಧರೂಪಗಳಲ್ಲಿ ಇರುತ್ತವೆ. ಕೆಲವು ಸಸ್ಯಗಳಲ್ಲಿ ದಪ್ಪನಾಗಿ ರಸಭರಿತವಾಗಿ ಕಾಣುತ್ತವೆ. ಎಲೆಗಳ ಮೇಲೆ ಕೂದಲುಗಳು ಬೆಳೆದಿರುವುದೂ ಉಂಟು. ಕೆಲವು ಸಸ್ಯಗಳಲ್ಲಿ ಎಲೆಗಳೇ ಇಲ್ಲದಿರಬಹುದು. ಕಾಂಡ ಪಾಪಾಸ್‌ಕಳ್ಳಿಯಲ್ಲಿರುವಂತೆ ದಪ್ಪವಾಗಿರಬಹುದು. ಕೆಲವು ಪ್ರಭೇದಗಳಲ್ಲಿ ಕಾಂಡ ಖಂಡಖಂಡಗಳಾಗಿ ವಿಭಾಗವಾಗಿದೆ. ಕಾಂಡವನ್ನು ಕತ್ತರಿಸಿನೋಡಿದಾಗ ಜ಼ೀರೊಫೈಟ್ಸ್ ಸಸ್ಯಗಳ ಗುಣಗಳನ್ನೇ ನೋಡಬಹುದು. ಹೂಗೊಂಚಲುಗಳು ಪ್ರಥಮವಾಗಿ ಅಂತ್ಯಾರಂಭಿ ಮಾದರಿಯಲ್ಲಿ ಜೋಡಣೆಯಾಗಿದ್ದು ಅದರ ಕವಲುಗಳಲ್ಲಿ ಮಧ್ಯಾರಂಭಿ ಜೋಡಣೆ ಇರುತ್ತದೆ. ಹೂಗಳು ಬಹಳ ಚಿಕ್ಕಗಾತ್ರದವು; ಏಕಲಿಂಗಿ ಅಥವಾ ದ್ವಿಲಿಂಗಿಗಳಾಗಿರಬಹುದು. ಹೂವಿನ ಪೆರಿಯತ್ ಭಾಗ ಸರಳರೀತಿಯದು. ಕೆಲವೊಮ್ಮೆ ಪೆರಿಯಾಂತ್ ಭಾಗವೇ ಇರುವುದಿಲ್ಲ. ಕೇಸರಗಳ ಸಂಖ್ಯೆ ಪೆರಿಯಾಂತ್ ಸಂಖ್ಯೆಯಷ್ಟೆ ಅಥವಾ ಕಡಿಮೆ. ಅಂಡಾಶಯ ಉಚ್ಚಸ್ಥಾನದ್ದು. ಫಲ ಚಿಕ್ಕದಾಗಿದ್ದು ಅದಕ್ಕೆ ಏಕೀನ್ ಅಥವಾ ನಟ್ ಎಂದು ಹೆಸರಿದೆ.

ಕೀನೊಪೋಡಿಯಮ್ ಆಲ್ಬಂ ಮತ್ತು ಕೀ. ಆಂಬ್ರಸಾಯ್ಡಿಸ್ ಪ್ರಭೇದಗಳಿಂದ ಒಂದು ಬಗೆಯ ಎಣ್ಣೆಯನ್ನು ತೆಗೆಯುತ್ತಾರೆ. ಕರುಳಿನಲ್ಲಿನ ಪರತಂತ್ರ ಜೀವಿಗಳು, ಕೊಕ್ಕೆಹುಳು, ಜಂತುಹುಳುಗಳ ನಿರ್ಮೂಲನಕ್ಕಾಗಿ ಔಷಧರೂಪದಲ್ಲಿ ಈ ಎಣ್ಣೆಯನ್ನು ಉಪಯೋಗಿಸುತ್ತಾರೆ. ಈ ಕುಟುಂಬಕ್ಕೆ ಸೇರಿದ ಕ್ವಿನೋವ ಎಂಬ ಸಸ್ಯ ದಕ್ಷಿಣ ಅಮೆರಿಕದಲ್ಲಿ ಒಂದು ಆಹಾರ ಬೆಳೆ. ಅದರ ಬೀಜಗಳನ್ನು ಅಕ್ಕಿಯಂತೆ ಆಹಾರವಾಗಿ ಸೇವಿಸುತ್ತಾರೆ. ಅದು ಒಂದು ಮಿಥ್ಯಾಧಾನ್ಯ ಸಸ್ಯ ಎಂತಲೂ ಹೇಳಬಹುದು. ಚಕ್ಕೊತಸೊಪ್ಪನ್ನು (ಸ್ಪಿನೇಶಿಯ ಓಲರೇಸಿಯ) ಹಸಿಯಾಗಿಯೊ ಬೇಯಿಸಿಯೊ ಉಪಯೋಗಿಸುತ್ತಾರೆ. ಇದರ ಎಲೆ ಮತ್ತು ಬೀಜಗಳು ಔಷಧರೂಪದಲ್ಲಿಯೂ ಉಪಯುಕ್ತ. ಬೀಟ್‌ರೂಟ್ ಎಂಬುದರಿಂದ ವಿವಿಧ ಜಾತಿಯ ಬೀಟ ಗಡ್ಡೆ ದೊರೆಯುತ್ತವೆ. ಇವನ್ನು ತರಕಾರಿಯಾಗಿ ಬಳಸುವುದು ಹೆಚ್ಚು. ಇದರಲ್ಲಿ ಸಕ್ಕರೆಯ ಅಂಶ ಅಧಿಕವಾಗಿರುವುದರಿಂದ ಐರೋಪ್ಯ ದೇಶಗಳಲ್ಲಿ ಇದರಿಂದ ಸಕ್ಕರೆಯನ್ನು ಉತ್ಪಾದಿಸುತ್ತಾರೆ. (ಬಿ.ಪಿ.)

**ಕೀನ್ಯ :** ಪೂರ್ವ ಆಫ್ರಿಕದ ಒಂದು ಗಣರಾಜ್ಯ. ಉತ್ತರಕ್ಕೆ ಇಥಿಯೋಪಿಯ ಮತ್ತು ಸೂಡಾನ್ ಗಣರಾಜ್ಯ, ದಕ್ಷಿಣಕ್ಕೆ ಟಾಂಗನ್ಯೀಕ, ಪೂರ್ವಕ್ಕೆ ಹಿಂದೂ ಸಾಗರ ಮತ್ತು ಸೊಮಾಲಿ ಗಣರಾಜ್ಯ ಹಾಗೂ ಪಶ್ಚಿಮಕ್ಕೆ ಉಗಾಂಡ ಇವೆ. ಕೀನ್ಯದ ಒಟ್ಟು ವಿಸ್ತೀರ್ಣ

580367 ಚ.ಕಿಮೀ (ಇದರಲ್ಲಿ 13393 ಚ.ಕಿಮೀ ಜಲಾವೃತ, ಒಟ್ಟು ಜನಸಂಖ್ಯೆ 38,610,097 (2009). ರಾಜಧಾನಿ ನೈರೋಬಿ. ಜನಸಂಖ್ಯೆ 2940000 (2006). ಕೀನ್ಯಕ್ಕೆ ಆ ಹೆಸರು ಬಂದಿರುವುದು ಕೀನ್ಯ ಪರ್ವತದಿಂದಾಗಿ. ಅದನ್ನು ಕಿಕೂಯುಗಳು ಕೀರೀನ್ಯಾಗ (ಧವಳ ಪರ್ವತ) ಎಂದು ಕರೆಯುತ್ತಾರೆ.

**ಮೇಲ್ಮೈ ಲಕ್ಷಣ:** ಇದರ ತೀರ ಪ್ರದೇಶ ದಕ್ಷಿಣದಲ್ಲಿರುವ ಉಂಬ ನದಿಯ ಮುಖಜಭೂಮಿಯಿಂದ ಉತ್ತರದ ಡಿಕ್ ನದೀಮುಖದ ವರೆಗೂ ಹಬ್ಬಿದೆ. ತೀರ ಅಂಕುಡೊಂಕು: ಅನೇಕ ಕೊಲ್ಲಿಗಳೂ ಖಾರಿಗಳು ಇವೆ. ಮೊಂಬಾಸ ಮತ್ತು ಕಿಲಿಂಡೀನಿ ಉತ್ತಮವಾದ ಬಂದರುಗಳು. ಮೊಂಬಾಸ, ಲಾಮು ಮಂಡ ಮತ್ತು ಪಟ್ಟ ದ್ವೀಪಗಳು



ಮುಖ್ಯ ಭೂಭಾಗದಿಂದ ಬೇರ್ಪಟ್ಟಿವೆ. ಕರಾವಳಿಯ ಮೈದಾನ 3 ರಿಂದ 16 ಕಿಮೀಗಳಷ್ಟು ಅಗಲವಾಗಿದೆ. ಪಶ್ಚಿಮಕ್ಕೆ ಹೋದಂತೆಲ್ಲ ಭೂಮಿಯ ಎತ್ತರ ಹೆಚ್ಚುತ್ತ ಹೋಗಿ ಸು. 1966 ಮೀ ಏರುತ್ತದೆ. ನಿಯಿಕ ಪ್ರದೇಶದಲ್ಲಿಯ ಬೆಟ್ಟಗುಡ್ಡಗಳು ಜಲಜಶಿಲೆಗಳಿಂದ ಮಾರ್ಪಟ್ಟಿವೆ. ಟೇಟ ಮತ್ತು ಪಶ್ಚಿಮ ಮೆಚ ಕೋಸ್‍ಗಳು ಬಿಡಿ ಪರ್ವತಗಳು. ಯಟ್ಟಾ ಪ್ರಸ್ಥಭೂಮಿ, ಚೀಯೂಲು ಶ್ರೇಣಿ ಮತ್ತು ಕಿಲಿಮಾಂಜಾರೋ ಪರ್ವತಗಳಲ್ಲಿ ಅನೇಕ ಜ್ವಾಲಾಮುಖಿಗಳುಂಟು. ರೂಡಾಲ್ಫ್ ಸರೋವರದ ಪೂರ್ವಕ್ಕಿರುವ ಕೂಲಾಲ್ ಜ್ವಾಲಾಮುಖಿಯ ಕುಪ್ಪೆಯ ಎತ್ತರ 2279 ಮೀ ಮಾರ್ಸಾಬಿಟ್ 1695 ಮೀ ಎತ್ತರವಾಗಿದೆ. ಇವುಗಳ ಸುತ್ತಮುತ್ತಲೂ ಬರಡು ನೆಲ ಹರಡಿದೆ.

ಪೂರ್ವ ಕೀನ್ಯದಲ್ಲಿರುವ ರಿಫ್ಟ್ ಕಣಿವೆಯ ಪೂರ್ವದ ಅಂಚು ಕಡಿದಾಗಿಯೂ ಎತ್ತರವಾಗಿಯೂ ಇದೆ. ಅಲ್ಲಿರುವ ಅಬರ್‌ದಾರ್ ಶ್ರೇಣಿಯ ಸರಾಸರಿ ಎತ್ತರ 3333 ಮೀ ಅಲ್ಲಿಯ ಸಟ್ಟಿಮ್ಮ ಮತ್ತು ಕಿನಾಂಗಾಪ್ ಶಿಖರಗಳು ಅನುಕ್ರಮವಾಗಿ 3971 ಮೀ ಹಾಗೂ 3882 ಮೀ ಎತ್ತರವಾಗಿವೆ. ಇದರ ಉತ್ತರಕ್ಕಿರುವ ಲೈಕೀಪೀಯ ಪ್ರದೇಶದ ಎತ್ತರ 1818 ಮೀ ನೈರೋಬಿಯ ದಕ್ಷಿಣ ಭಾಗದಲ್ಲಿ ಆತಿ ಮತ್ತು ಕಪಿಟೆ ಮೈದಾನಗಳಿವೆ. ಅಬರ್‌ದರ್ ಶ್ರೇಣಿಗಳು ಪೂರ್ವ ಆಗ್ನೇಯಗಳ ಕಡೆ ಇಳಿಜಾರಾಗಿ ಸಾಗಿ ಮತ್ತೆ ಎತ್ತರವಾಗುತ್ತವೆ. ಕೀನ್ಯ ಪರ್ವತ (5169 ಮೀ.) ಇರುವುದು ಇಲ್ಲೇ. ಮೇರುವಿನ ಈಶಾನ್ಯಕ್ಕೆ ನ್ಯಾಂಬೇನಿ ಶ್ರೇಣಿಯಿದೆ. ಇದು ಜ್ವಾಲಾಮುಖಿ ನಿರ್ಮಿತವಾದ್ದು.

ಸೀಳು ಕಣಿವೆ 48–64 ಕಿಮೀ ಅಗಲವಾಗಿದ್ದು ಸುತ್ತಮುತ್ತಲಿನ ಪ್ರದೇಶಕ್ಕಿಂತ 606–909 ಮೀ ಆಳವಾಗಿದೆ. ಈ ಕಣಿವೆಯ ಉದ್ದಕ್ಕೂ ಅನೇಕ ಬೆಟ್ಟಗುಡ್ಡಗಳೂ, ಜ್ವಾಲಾಮುಖಿಗಳೂ, ಆಳವಿಲ್ಲದ ಸರೋವರಗಳೂ ಉಂಟು. ಇವುಗಳಲ್ಲಿ ಮಗಾಡಿ, ನೈವಾಷ, ಎಲ್ಮೆಂಟೇಟ, ನಾಕೂರು, ಹ್ಯಾನಿಂಗ್ಟನ್ ಮತ್ತು ಬಾರಿಂಗೊ ಮುಖ್ಯ. ರಿಫ್ಟ್ ಕಣಿವೆಯ ಪಶ್ಚಿಮಪಾರ್ಶ್ವ ಪೂರ್ವಪಾರ್ಶ್ವಕ್ಕಿಂತ ಕಡಿದಾಗಿಲ್ಲದಿದ್ದರೂ ಹೆಚ್ಚು ಎತ್ತರವಾಗಿದೆ. ಇದರ ಸರಾಸರಿ ಎತ್ತರ 2727 ಮೀ ಗಿಂತ ಹೆಚ್ಚು. ಈ ಉನ್ನತ ಪ್ರದೇಶದ ಪಶ್ಚಿಮ ಭಾಗದಲ್ಲಿರುವ ಟ್ರಾನ್ಸ್–ನ್ಜೋಯ ಮತ್ತು ವಾಸಿನ್‌ಗೀಷು ಪ್ರಸ್ಥಭೂಮಿಗಳು ಮತ್ತು ದಕ್ಷಿಣಕ್ಕಿರುವ ನಾಂದಿ ಮತ್ತು ಕೆರಿಚೋ ಪರ್ವತ ಪ್ರದೇಶ–ಇವೆಲ್ಲ 1818–2121 ಮೀ ಎತ್ತರದಲ್ಲಿದೆ. ಪರ್ವತ ಪ್ರದೇಶದ ಪಶ್ಚಿಮದ ತುದಿಯಲ್ಲಿರುವ ಎಲ್‌ಗಾನ್ ಶಿಖರದ ಎತ್ತರ 4296 ಮೀ. ಇದು ಉಗಾಂಡ ಗಡಿಯಲ್ಲಿದೆ.



**ಮೊಂಬಾಸದಲ್ಲಿರುವ ಆಫ್ರಿಕ ಮಹಾದ್ವಾರ : ಲೋಹದಲ್ಲಿ ರಚಿತವಾದ ನಾಲ್ಕು ಬೃಹತ್ ಗಜದಂತಗಳು ಇದರ ವೈಶಿಷ್ಟ್ಯ**

ಪಶ್ಚಿಮ ಕೀನ್ಯದ ಪರ್ವತ ಪ್ರದೇಶದ ಎತ್ತರ 1515–970 ಮೀ ಪ್ರಸ್ಥಭೂಮಿಯ ನಡುವೆ ತಗ್ಗುನೆಲ ಹಬ್ಬಿದೆ. ದಕ್ಷಿಣದಲ್ಲಿ ಕಿಸ್ಸೆ ಪರ್ವತ ಪ್ರದೇಶವೂ ಗ್ವಾಸಿ ಮತ್ತು ಹೋಮ ಜ್ವಾಲಾಮುಖಿಗಳೂ ಮುಖ್ಯವಾದುವು. ಈ ಪ್ರದೇಶದ ಭಾಗದಲ್ಲಿ ದೊಡ್ಡ ಗ್ರಾನೈಟ್ ಗುಡ್ಡಗಳಿವೆ.

ಕೀನ್ಯದ ಸೀಳು ಕಣಿವೆಯ ಪಶ್ಚಿಮದ ಜಲೋತ್ಸಾರಣ ಪ್ರದೇಶದಲ್ಲಿ ಹರಿಯುವ ನದಿಗಳು ವಿಕ್ಟೋರಿಯ ಸರೋವರವನ್ನು ಸೇರುತ್ತವೆ. ಪೂರ್ವದ ನದಿಗಳು ಹಿಂದೂ ಸಾಗರದ ಕಡೆಗೆ ಹರಿಯುತ್ತವೆ. ಕೀನ್ಯದ ದೊಡ್ಡ ನದಿ ಟಾನ. ಇದರ ಉದ್ದ 800 ಕಿಮೀ ಅತಿ–ಸಾಬಾಕಿ–ಗಾಲಾನ ನದೀ ಟಾನ. ವ್ಯವಸ್ಥೆಯ ಉದ್ದ 544 ಕಿಮೀ ಇದು ನೈರೋಬಿಯ ಉತ್ತರದಲ್ಲಿ ಉಗಮಿಸಿ ಮಲಿಂಡಿಯ ಬಳಿ ಹಿಂದೂ ಸಾಗರವನ್ನು ಸೇರುತ್ತದೆ. ವಾಸೋನೀರೋ ನದಿಯ ಉಗಮ ಲೈಕಿಪಿಯ ಪ್ರಸ್ಥಭೂಮಿಯಲ್ಲಿ, ಇದು ಪೂರ್ವ ಮುಖವಾಗಿ ಹರಿದು ಲೊರಿಯನ್ ಜವುಗು ಪ್ರದೇಶವನ್ನು ಸೇರುತ್ತದೆ.

**ವಾಯುಗುಣ:** ಸಮಭಾಜಕದ ಆಚೀಚೆ ಹಬ್ಬಿರುವ ಕೀನ್ಯದ ಅನೇಕ ಕಡೆ ವರ್ಷಕ್ಕೆ 75 ಸೆಂಮೀ ಗಿಂತ ಕಡಿಮೆ ಮಳೆಯಾಗುತ್ತದೆ; ಉತ್ತರ ಕೀನ್ಯದಲ್ಲಿ 25 ಸೆಂಮೀ ಗಿಂತ ಕಡಿಮೆ. ಅಧಿಕ ಉಷ್ಣತೆ ಮತ್ತು ಬಾಷ್ಪೀಕರಣದಿಂದಾಗಿ ಶುಷ್ಕತೆ ಹೆಚ್ಚು. ಮಳೆ ಬಹಳ ಅನಿಶ್ಚಿತ. ಕೆಲವು ವರ್ಷಗಳಲ್ಲಿ ಅನಾವೃಷ್ಟಿಯ ಕ್ಷೇತ್ರ ವಿಸ್ತರಿಸುವುದುಂಟು ತೀರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುತ್ತದೆ. ಇಲ್ಲಿಯ ಸರಾಸರಿ ಉಷ್ಣತೆ 21.1 ಸೆಂ. ಜನವರಿ–ಮಾರ್ಚಿಯಲ್ಲಿ ಸೆಖೆ ಹೆಚ್ಚು; ಜೂನ್–ಜುಲೈ ತಂಪು ಕಾಲ. ಸಾಗರ ಮಾರುತ ಆಹ್ಲಾದಕರ; ಅಲ್ಲಿ ಬಿಸಿಲು ಹೆಚ್ಚು, ಪೂರ್ವ ಕೀನ್ಯದ ಉನ್ನತ ಪ್ರದೇಶಗಳಲ್ಲಿ ತಕ್ಕಮಟ್ಟಿನ ಮಳೆಯಾಗುತ್ತದೆ. ಅಲ್ಲಿ ಮಾರ್ಚಿಯಿಂದ ಮೇ ವರೆಗೆ ಮಳೆಗಾಲ. ಅಕ್ಟೋಬರಿನಿಂದ ಡಿಸೆಂಬರಿನ ವರೆಗಿನ ಕಾಲದಲ್ಲೂ ಮಳೆಯಾಗುತ್ತದೆ. 2121 ಮೀಗಿಂತ ಹೆಚ್ಚು ಎತ್ತರವಾಗಿರುವ ಪ್ರದೇಶದಲ್ಲಿ ಮಂಜು ಸುರಿಯುತ್ತದೆ. ಕೀನ್ಯ ಪರ್ವತ ಶಿಖರ ಪ್ರದೇಶದಲ್ಲಿ ಅನೇಕ ಹಿಮನದಿಗಳುಂಟು; ಪಶ್ಚಿಮ ಕೀನ್ಯದ ಪ್ರಸ್ಥಭೂಮಿಗಳಲ್ಲಿ ಸಮನಾಗಿ ಮಳೆಯ ಹಂಚಿಕೆಯಾಗಿದೆ. ಆದರೆ ಕಿಸೂಮು ಮೈದಾನ ಹಾಗೂ ವಿಕ್ಟೋರಿಯ ಸರೋವರತೀರದಲ್ಲಿ ಮಳೆ ಕಡಿಮೆ.

**ಸ್ವಾಭಾವಿಕ ಸಸ್ಯಗಳು:** 1818–3030 ಮೀ ಎತ್ತರದ ಪ್ರದೇಶಗಳಲ್ಲಿ ಅಲ್ಲಲ್ಲಿ ನಿತ್ಯಹಸುರು ಕಾಡುಗಳುಂಟು. ಇವುಗಳ ಕೆಳಭಾಗದಲ್ಲಿ ಹುಲ್ಲುಗಾವಲುಗಳಿವೆ. ಕೀನ್ಯದ ಅರಣ್ಯಗಳ ಒಟ್ಟು ವಿಸ್ತೀರ್ಣ 17402 ಚ.ಕಿಮೀ. ಇವೆಲ್ಲವೂ ಪೂರ್ತಿಯಾಗಿ ಉನ್ನತಪ್ರದೇಶಗಳಲ್ಲಿವೆ. ಇವುಗಳಿಗಿಂತ ಮೇಲೆ ಬಿದಿರು ಬೆಳೆದಿದೆ. ಅದಕ್ಕೂ ಎತ್ತರದ ನೆಲ ಬಹುತೇಕ ಬಂಜರು. ಅಲ್ಲಲ್ಲಿ ಕುರುಚಲುಗಳು ಬೆಳೆದಿವೆ. ಪಶ್ಚಿಮದ ಪ್ರಸ್ಥಭೂಮಿಯಲ್ಲಿ ವಿಸ್ತಾರವಾದ ಹುಲ್ಲುಗಾವಲೂ ಅಲ್ಲಲ್ಲಿ ಮರಗಳೂ ಉಂಟು. ಮೇಲೆ ವಿವರಿಸಿದ ಸಸ್ಯ ಪ್ರಕಾರಗಳಿರುವುದು ಲೈಕಿಪಿಯ,

ರಿಫ್ಟ್‌ಕಣಿವೆ ಮತ್ತು ನೈರೋಬಿಯ ದಕ್ಷಿಣ ಭಾಗದಲ್ಲಿ. 909 ಮೀ ಗಿಂತ ತಗ್ಗಿನ ಪ್ರದೇಶಗಳು ಅರೆಮರುಭೂಮಿಗಳು; ಇಲ್ಲಿ ಮುಳ್ಳುಪೊದೆ ಮತ್ತು ಕುರುಚಲು ಸಾಮಾನ್ಯ. ಉತ್ತರ ಕೀನ್ಯದ ಇನ್ನೂ ಒಣಪ್ರದೇಶಗಳು ಮರುಭೂಮಿಗಳು. ಕರಾವಳಿಯಲ್ಲಿ ಅಲ್ಲಲ್ಲಿ ದಟ್ಟವಾದ ಕಾಡುಗಳೂ ಭರತದ ಅಂಚುಗಳಲ್ಲಿ ತೆಂಗು ತಾಳೆಗಳೂ ಅಳಿವೆಗಳ ಪ್ರದೇಶಗಳಲ್ಲಿ ಗುಲ್ಮವೃಕ್ಷಗಳೂ ಸಾಮಾನ್ಯವಾಗಿವೆ.

**ಪ್ರಾಣಿಗಳು:** ಕೀನ್ಯದ ಕುರುಚಲು ಪೊದೆಗಳ ಪ್ರದೇಶಗಳು ಅನೇಕ ವನ್ಯ ಮೃಗಗಳ ಬೀಡುಗಳಾಗಿವೆ. ಸಿಂಹ, ಚಿರತೆ, ಕಡವೆ, ಕಾಡುನಾಯಿ, ಕಾಡೆಮ್ಮೆ, ಫೇಂಡಾ ಮೃಗ. ಹೇಸರಗತ್ತೆ ಜಿರಾಫೆಗಳು ಅಧಿಕ ಸಂಖ್ಯೆಯಲ್ಲಿವೆ. ದೊಡ್ಡ ದೊಡ್ಡ ನದಿಗಳಲ್ಲೂ ಸರೋವರಗಳಲ್ಲೂ ನೀರಾನೆಗಳೂ ಮೊಸಳೆಗಳೂ ಮೀನುಗಳೂ ಹೇರಳವಾಗುಂಟು. ನರಿ, ಬಬೂನ್ ಮತ್ತು ಕೋಲಂಬಸ್ ಕೋತಿಗಳೂ ಇವೆ. ಹೆಬ್ಬಾವು, ನಾಗರಹಾವು ಮತ್ತು ಮಾಂಬಾಜಾ ಹಾವುಗಳಿಗೂ ಅನೇಕ ವಿಷಕೀಟಗಳಿಗೂ ಕ್ರಿಮಿ ಕೀಟಗಳಿಗೂ ಇದು ನೆಲೆ. ಉಷ್ಟ್ರಪಕ್ಷಿ, ಕೊಕ್ಕರೆ, ರಣಹದ್ದು, ಗೂಬೆ, ಬಾತು, ಪೆಲಿಕನ್– ಇವು ಕೆಲವು ಹಕ್ಕಿಗಳು. ಕೀನ್ಯದ ವನಗಳು ಮೃಗಯಾ ವಿಹಾರಕ್ಕಾಗಿ ಪ್ರಸಿದ್ಧವಾಗಿವೆ. ಇವು ಸೌಂದರ್ಯದ ನೆಲೆಗಳು ವಿಶ್ವದ ಎಲ್ಲ ಭಾಗಗಳಿಂದಲೂ ಪ್ರವಾಸಿಗಳನ್ನು ಇವು ಆಕರ್ಷಿಸಿವೆ. ನೈರೋಬಿ ವನ (114 ಚ.ಕಿಮೀ) ಟ್ಸಾವೋ ವನ (20808 ಚ.ಕಿಮೀ) ಮೌಂಟ್ ಕೀನ್ಯ (704 ಚ.ಕಿಮೀ) ಆಬರ್‌ದಾರ್ (590 ಚ.ಕಿಮೀ) ಆಂಬೋಸೀಲಿ (3261 ಚ.ಕಿಮೀ) ಮಾರಾ (1813 ಚ.ಕಿಮೀ ಮತ್ತು ಮೇರು (1554 ಚ.ಕಿಮೀ)– ಇವು ಕೀನ್ಯದ ಮುಖ್ಯ ರಾಷ್ಟ್ರೀಯ ವನಗಳು.

**ಜನಜೀವನ:** ಕೀನ್ಯದ ಜನರಲ್ಲಿ ಆಫ್ರಿಕನೇತರರು ಕೇವಲ ಶೇ. 3 ಇದ್ದರು. ಇವರ ಸಂಖ್ಯೆ ಈಚೆಗೆ ಕಡಿಮೆಯಾಗಿದೆ. ಐರೋಪ್ಯರು ಹಿಂದೆ ಇಲ್ಲಿ ವಾಣಿಜ್ಯ, ಕೃಷಿಗಳಲ್ಲಿ ಅಧಿಕವಾಗಿ ನಿರತರಾಗಿದ್ದರು. ವಲಸೆಗಾರರಲ್ಲಿ ಭಾರತೀಯರೂ ಪಾಕಿಸ್ತಾನಿಗಳೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಅರಬರು ಇವರ ವಾಸ ಬಹುತೇಕ ಕರಾವಳಿಯಲ್ಲಿ. ಆಫ್ರಿಕನ್ ಜನರಲ್ಲಿ ಬಹುಸಂಖ್ಯಾತರು ಸ್ಥಳೀಯ ಮತಗಳನ್ನನುಸರಿಸುವವರು. ಕ್ರೈಸ್ತರು ಶೇ. 25 ರಷ್ಟು ಇದ್ದಾರೆ. ಮುಸ್ಲಿಮರು ಶೇ. 6. ಇವರಲ್ಲಿ ಬಹುಮಂದಿ ಆಗಾಖಾನನ ಇಸ್ಮೇಲಿ ಅನುಯಾಯಿಗಳು. ಕೀನ್ಯದ ಅಧಿಕೃತ ಭಾಷೆಗಳು ಇಂಗ್ಲಿಷ್ ಮತ್ತು ಸ್ವಾಹೀಲಿ. ಕಿಕೂಯು ಮತ್ತು ಲುವೋ ಭಾಷೆಗಳು ಪ್ರಚಾರದಲ್ಲಿವೆ.

ಕೀನ್ಯ ಷಿಲಿಂಗ್ ಇಲ್ಲಿಯ ನಾಣ್ಯ. ಇದನ್ನು 1966ರಲ್ಲಿ ಪೂರ್ವ ಆಫ್ರಿಕನ್ ಷಿಲಿಂಗಿನ ಬದಲು ಚಲಾವಣೆಗೆ ತರಲಾಯಿತು.

ಕೀನ್ಯದ ರಾಜಧಾನಿ ನೈರೋಬಿ. 2000ದಲ್ಲಿದ್ದಂತೆ ಜನಸಂಖ್ಯೆ ಮೊಂಬಾಸ (665018) ಇತರ ಮುಖ್ಯಪಟ್ಟಣಗಳು. ನಾಕೂರು (300000), ಕೀಸೂಮು (322024), ಎಲ್ಡೊರೆಟ್ (193830) ಮತ್ತು ಕಿಟಾಲೆ (63254).

**ಕೃಷಿ:** ಆಫ್ರಿಕದ ಬಹುಪಾಲು ರಾಷ್ಟ್ರಗಳಂತೆ ಕೀನ್ಯವೂ ಆರ್ಥಿಕ ದೃಷ್ಟಿಯಿಂದ ಹಿಂದುಳಿದ ರಾಷ್ಟ್ರ. ಕೀನ್ಯದ ಅರ್ಥವ್ಯವಸ್ಥೆ ಮೂಲಭೂತವಾಗಿ ಕೃಷಿಮೂಲವಾದ್ದು. ಕೈಗಾರಿಕೋದ್ಯಮ ಎರಡನೆಯ ಮಹಾಯುದ್ಧದಿಂದೀಚೆಗೆ ಬೆಳೆಯುತ್ತ ಬಂದಿದ್ದರೂ ಕೀನ್ಯದ ಅರ್ಥವ್ಯವಸ್ಥೆಯಲ್ಲಿ ಅದರ ಸ್ಥಾನ ಇನ್ನೂ ಕೆಳಮಟ್ಟದಲ್ಲಿಯೇ ಇದೆ. 1954ರಲ್ಲಿ ಕೀನ್ಯದ ರಾಷ್ಟ್ರೀಯ ವರಮಾನದ

ಕೀನ್ಯದ ಕುಶಲ ವಸ್ತುಗಳ ಪ್ರದರ್ಶನ

ಶೇ.47 ಕೃಷಿಯಿಂದ ಬಂದಿತ್ತು. ಕೈಗಾರಿಕೆಯ ಪಾಲು ಕೇವಲ ಶೇ.10. ಅಲ್ಲಿಂದೀಚೆಗೆ ಪರಿಸ್ಥಿತಿ ಸ್ವಲ್ಪ ಉತ್ತಮಗೊಂಡಿದೆ. 1966ರಲ್ಲಿ ಕೃಷಿ ಕೈಗಾರಿಕೆಗಳ ಪಾಲು ಅನುಕ್ರಮವಾಗಿ ಶೇ.36 ಮತ್ತು ಶೇ.14 ಎಂದು ಅಂದಾಜು ಮಾಡಲಾಗಿದೆ.

ಕಾಫಿ, ಚಹ, ಸಕ್ಕರೆ, ಕತ್ತಾಳೆ ನಾರು, ಜೋಳ, ಗೋದಿ, ಓಟ್ಸ್ ಮತ್ತು ಹತ್ತಿ ಇಲ್ಲಿಯ ಮುಖ್ಯ ಬೆಳೆಗಳು. ಮಾಂಸ ಮತ್ತು ಹೈನುವಸ್ತುಗಳ ಉತ್ಪಾದನೆಯೂ ಗಮನಾರ್ಹವಾಗಿದೆ.

ಕೃಷಿಕಾರ್ಯ ಕೀನ್ಯದ ಪ್ರಸ್ಥಭೂಮಿ ಬಯಲುಸೀಮೆ ಹಾಗೂ ತೀರ ಪ್ರದೇಶಗಳಲ್ಲಿ ಕೇಂದ್ರಿಕೃತವಾಗಿದೆ. ಪ್ರಸ್ಥಭೂಮಿ ಪ್ರದೇಶದಲ್ಲಿ ಶೇ.90ರಷ್ಟು ಭೂಮಿಯ ಮಾಲೀಕತ್ವ ಐರೋಪ್ಯರದು. ಇವರು ಕಾಫಿ, ಚಹ, ಕತ್ತಾಳೆ ನಾರು ಮೊದಲಾದ ಪ್ಲಾಂಟೇಷನ್ ಬೆಳೆಗಳ ಉತ್ಪಾದನೆಯಲ್ಲಿ ನಿರತರಾಗಿದ್ದಾರೆ. ಏಷ್ಯನರು ಮುಖ್ಯವಾಗಿ ಕಬ್ಬು ಬೆಳೆ ಮತ್ತು ಅದರ ಸಂಸ್ಕರಣದಲ್ಲಿ ನಿರತರಾಗಿದ್ದಾರೆ. ಆಫ್ರಿಕನ್ನರು ಆಹಾರವಸ್ತುಗಳನ್ನು ಬೆಳೆಯುವುದರ ಜೊತೆಗೆ ಅಲ್ಪ ಪ್ರಮಾಣದಲ್ಲಿ ಕಾಫಿ, ಹತ್ತಿ ಚಹ ಮತ್ತು ಕತ್ತಾಳೆ ನಾರುಗಳನ್ನೂ ಬೆಳೆಯುತ್ತಾರೆ. ಈಚೆಗೆ ಕೀನ್ಯ ಸರ್ಕಾರ ಆಫ್ರಿಕನ್ನರ ಸ್ಥಿತಿಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳಲ್ಲಿ ಅವರನ್ನು ಕೃಷಿ ಉದ್ಯಮಗಳಲ್ಲಿ ನೆಲೆಗೊಳಿಸುವುದೂ ಒಂದಾಗಿದೆ. ಕೀನ್ಯದ ಪ್ರಸ್ಥಭೂಮಿ ಪ್ರದೇಶದ ಜಮೀನಿನಲ್ಲಿ ಎಲ್ಲರಿಗೂ ಸಾಗುವಳಿಗೆ ಅವಕಾಶ ಮಾಡಿಕೊಟ್ಟಿರುವುದರ ಜೊತೆಗೆ ಸರ್ಕಾರ ಐರೋಪ್ಯರಿಂದ ಕೊಂಡ ಭೂಮಿಯಲ್ಲಿ ಆಫ್ರಿಕನರನ್ನು ನೆಲೆಗೊಳಿಸುವ ಬೃಹತ್ ಯೋಜನೆಯೊಂದನ್ನು ಕೈಗೊಂಡಿದೆ.

ಕೀನ್ಯ ಆಹಾರ ವಿಚಾರದಲ್ಲಿ ಬಹುತೇಕ ಸ್ವಯಂಪೂರ್ಣತೆ ಪಡೆದಿದೆ. ಕೀನ್ಯದ ಕಾಡುಗಳು ಸ್ಥಳೀಯ ಮರಮುಟ್ಟಿನ ಬೇಡಿಕೆಯನ್ನು ಪೂರೈಸುವುದರ ಜೊತೆಗೆ ರಫ್ತಿಗಾಗಿಯೂ ಮರಗಳನ್ನು ಒದಗಿಸುತ್ತವೆ. ಸರ್ಕಾರ ಈಚೆಗೆ ಪುನರ್ನವೀಕರಣ ಕಾರ್ಯಕ್ರಮವನ್ನು ಕೈಗೊಂಡು ಕಾಡುಗಳನ್ನು ವೃದ್ಧಿಗೊಳಿಸುವುದರಲ್ಲಿ ನಿರತವಾಗಿದೆ. ಕೀನ್ಯದಲ್ಲಿ ಸಮುದ್ರತೀರ ಸಾಕಷ್ಟಿದ್ದರೂ ಸಾಗರಮತ್ಸ್ಯೋತ್ಪನ್ನ ದೇಶದ ಒಟ್ಟು ಮತ್ಸ್ಯೋತ್ಪನ್ನದ 1/5 ರಷ್ಟು ಮಾತ್ರ. ವಿಕ್ಟೋರಿಯ ಸರೋವರ ಮುಖ್ಯ ಮತ್ಸ್ಯೋದ್ಯಮ ಕೇಂದ್ರ.

**ಖನಿಜ, ಕೈಗಾರಿಕೆ:** ಕೀನ್ಯದಲ್ಲಿ ಹೆಚ್ಚು ಖನಿಜ ನಿಕ್ಷೇಪಗಳಿಲ್ಲ. ಚಿನ್ನ ಬೆಳ್ಳಿ, ತಾಮ್ರ, ಸುಣ್ಣಕಲ್ಲು, ಉಪ್ಪು ಮುಂತಾದವು ಇದ್ದರೂ ಬಹು ಕಡಿಮೆ. ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರುಗಳು ಕೀನ್ಯದಲ್ಲಿ ದೊರಕುವುದಿಲ್ಲ. ಆದರೂ ಈಚೆಗೆ ಅಲ್ಲಿಯ ಸರ್ಕಾರ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೈಕೊಂಡಿದೆ. ದೇಶದ ಸ್ವಸಂಪೂರ್ಣತೆ ಸಾಧಿಸುವ ಉದ್ದೇಶದಿಂದ ಬಂಡವಾಳವಸ್ತುಗಳಿಗಿಂತ ಅನುಭೋಗಿವಸ್ತು ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಆಹಾರ ಪದಾರ್ಥ, ಸಿಗರೇಟ್, ಉಣ್ಣೆಯ ಹೊದಿಕೆಗಳು, ಪಾದರಕ್ಷೆ ಮತ್ತಿತರ ಅನುಭೋಗ ವಸ್ತುಗಳ ಕಾರ್ಖಾನೆಗಳನ್ನು ಮುಖ್ಯ ನಗರಗಳಲ್ಲಿ ಸ್ಥಾಪಿಸಲಾಗಿದೆ.

**ಅಂತಾರಾಷ್ಟ್ರೀಯ ವ್ಯಾಪಾರ:** ಕೀನ್ಯದ ರಫ್ತುಗಳಲ್ಲಿ ಮುಖ್ಯವಾದವು ಕಾಫಿ, ಕತ್ತಾಳೆ ನಾರು, ಚಹ, ಮಾಂಸ ಹಾಗೂ ಚರ್ಮ. ಕೈಗಾರಿಕಾವಸ್ತುಗಳು, ಯಂತ್ರಗಳು ಮತ್ತು ಪೆಟ್ರೋಲಿಯಂ ಮುಖ್ಯ ಆಮದುಗಳು. ಕೀನ್ಯದ ರಫ್ತುಗಳ 1/3 ಭಾಗ ಬ್ರಿಟನಿಗೂ 1/3

ರೊಡಾಲ್ಫ ಸರೋವರದಲ್ಲಿ ದನಗಳ ಜಲಕ್ರೀಡೆ

ಭಾಗ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಪಶ್ಚಿಮ ಜರ್ಮನಿಗೂ ಹೋಗುತ್ತದೆ. ಅದರ ಆಮದುಗಳಲ್ಲಿ ಬಹುಭಾಗ ಬ್ರಿಟನ್, ಜಪಾನ್, ಜರ್ಮನಿ ಮತ್ತು ಇರಾನ್‌ಗಳಿಂದ ಬರುತ್ತದೆ. ಅದರ ವ್ಯಾಪಾರಶಿಲ್ಕು ಅದಕ್ಕೆ ಸಾಮಾನ್ಯವಾಗಿ ಅನುಕೂಲಕರವಾಗಿಲ್ಲ.

**ಸಾರಿಗೆ ಸಂಪರ್ಕ:** ಕೀನ್ಯ ಮತ್ತು ಉಗಾಂಡಗಳ ಆಮದು ರಫ್ತುಗಳ ಬಹುಭಾಗ ಸಾಗುವುದು ಮೊಂಬಾಸದ ಮೂಲಕ. ಇದು ಪೂರ್ವ ಆಫ್ರಿಕದ ಅತಿದೊಡ್ಡ ಬಂದರು. 1896ರಲ್ಲಿ ಆರಂಭವಾಗಿ 1901ರಲ್ಲಿ ಪೂರ್ಣಗೊಂಡ ಉಗಾಂಡ ರೈಲ್ವೆಯಿಂದ ಮೊಂಬಾಸಕ್ಕೂ ವಿಕ್ಟೋರಿಯ ಸರೋವರದ ದಂಡೆಯ ಕೀಸೂಮುವಿಗೂ ಸಂಪರ್ಕ

ಏರ್ಪಟ್ಟಿದೆ. ಅಲ್ಲಿಂದ ಉಗಾಂಡಕ್ಕೆ ಜಹಜು ಸಂಪರ್ಕವುಂಟು. 1931ರಲ್ಲಿ ನಾಕೂರುವಿನಿಂದ ವಾಸಿನ್ ಗೀಷು ಪ್ರಸ್ಥಭೂಮಿಯ ಮೂಲಕ ಉಗಾಂಡದ ಕಾಂಪಾಲಕ್ಕೆ ರೈಲ್ವೆ ಸಂಪರ್ಕ ಕಲ್ಪಿಸಲಾಯಿತು. 1951ರಲ್ಲಿ ಈ ರೈಲು ಮಾರ್ಗವನ್ನು ಪಶ್ಚಿಮ ಉಗಾಂಡದ ಕಾಸೇಸೆ ವರೆಗೂ ವಿಸ್ತರಿಸಲಾಯಿತು. ಹೀಗಾಗಿ ಮೊಂಬಾಸದ ಹಿನ್ನಾಡಿನಲ್ಲಿ 1658 ಕಿಮೀ ಉದ್ದದ ರೈಲ್ವೆ ಸಂಪರ್ಕ ಕಲ್ಪಿಸಿದಂತಾಗಿದೆ. ವಾಯಿಯಿಂದ ಕಾಹೆಗೆ (ಟಾಂಗನ್ಯೀಕ) ಹಾಕಲಾಗಿರುವ ರೈಲುಮಾರ್ಗದ ಉದ್ದ 150 ಕಿಮೀ ಇದರಿಂದ ಟಾಂಗ ರೈಲುಮಾರ್ಗಕ್ಕೆ ಸಂಬಂಧ ಏರ್ಪಟ್ಟಿದೆ. ಮಗಾಡಿ ಸರೋವರದ ಸೋಡ ಉತ್ಪನ್ನವನ್ನು ಸಾಗಿಸಲು ಕೋನ್ಜರಿಂದ ಕವಲೊಡೆಯುವ ಮಾರ್ಗ ಅನುಕೂಲಕರವಾಗಿದೆ. ಇತರ ರೈಲುಮಾರ್ಗಗಳು ಪರ್ವತನಾಡಿನ ಕೃಷಿ ಪ್ರದೇಶಗಳಿಗೆ ಉಪಯುಕ್ತವಾಗಿವೆ.

ರಸ್ತೆಗಳು ಅಷ್ಟೇನೂ ಅಭಿವೃದ್ಧಿ ಹೊಂದಿಲ್ಲ. 1960ರಲ್ಲಿದ್ದ ರಸ್ತೆಗಳ ಉದ್ದ 41600 ಕಿಮೀ ಇದರಲ್ಲಿ ಹೆದ್ದಾರಿಗಳ ಉದ್ದ 5920 ಕಿಮೀ ಮಾತ್ರ. ಇದರಲ್ಲಿ ಬಿಟ್ಯುಮೆನ್ ರಸ್ತೆಗಳ ಉದ್ದ ಕೇವಲ 1014 ಕಿಮೀ.

ನೈರೋಬಿಗೆ ಆಗ್ನೇಯದಲ್ಲಿರುವ ಎಂಬಾಸಾಕಿಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. (ಕೆ.ಎನ್.ಸಿ.; ಎ.ಜಿ.ಎ.)

**ಇತಿಹಾಸ:** ಕೀನ್ಯ ಹಲವಾರು ಶತಮಾನಗಳ ಕಾಲ ದಕ್ಷಿಣ ಅರೇಬಿಯದೊಂದಿಗೆ ವ್ಯಾಪಾರ ಸಂಪರ್ಕ ಪಡೆದಿತ್ತೆಂಬುದೇ ಅದರ ವಿಷಯವಾಗಿ ತಿಳಿದು ಬರುವ ಪ್ರಾಚೀನತಮ ಚಾರಿತ್ರಿಕ ವಿಷಯ. ತೀರಪ್ರದೇಶವನ್ನು ಬಿಟ್ಟರೆ ಒಳನಾಡಿನ ವಿಚಾರ 19ನೆಯ ಶತಮಾನದ ಮಧ್ಯಕಾಲದವರೆಗೆ ಏನೇನೂ ತಿಳಿದಿರಲಿಲ್ಲ. ಈ ಸಮಯದಲ್ಲಿ ಒಳನಾಡಿನಲ್ಲಿ ಹೇರಳವಾಗಿ ದೊರಕುತ್ತಿದ್ದ ದಂತದ ಅನ್ವೇಷಣೆಗಾಗಿ ಅರಬರೂ ಸ್ವಾಹೀಲಿ ತಂಡಗಳೂ ಕಿಲಿಮಾಂಜಾರೋ ಪರ್ವತ ಮತ್ತು ವಿಕ್ಟೋರಿಯ ಸರೋವರ ಪ್ರದೇಶಗಳಿಗೆ ಹೋಗಲಾರಂಭಿಸಿದರು. ಆದರೆ ಆ ಪ್ರದೇಶಗಳಲ್ಲಿದ್ದ ಮಾಸೈ ಜನರ ವಿರೋಧದಿಂದ ಆ ಪ್ರಯತ್ನಗಳು ಹೆಚ್ಚು ಫಲಕಾರಿಯಾಗಲಿಲ್ಲ. ಅನಂತರ ಜರ್ಮನಿಯ ಪಾದ್ರಿಗಳಾದ ಜೊಹಾನ್ ಲುಡ್ವಿಗ್ ಕ್ರಾಫ್ ಮತ್ತು ಜೊಹಾನೆಸ್ ರೆಬ್ಮನ್ ಇವರು ಮೊಂಬಾಸದ ಬಳಿಯ ರಬೈ ಎಂಬಲ್ಲಿ ತಮ್ಮ ಸಂಸ್ಥೆಯ ನೆಲೆಯೊಂದನ್ನು ಸ್ಥಾಪಿಸಿದರು. 1848ರಲ್ಲಿ ರೆಬ್ಮನ್ ಕಿಲಿಮಾಂಜಾರೋ ಪ್ರವೇಶಿಸಿದ. ಕ್ರಾಫ್ 1849ರಲ್ಲಿ ಕೀನ್ಯ ಪರ್ವತ ಪ್ರದೇಶವನ್ನು ಸಂದರ್ಶಿಸಿದ.

18ನೆಯ ಶತಮಾನದ ಮಧ್ಯಕಾಲದಲ್ಲಿ ಮಧ್ಯ ಕೀನ್ಯ ಪ್ರದೇಶಕ್ಕೆ ಪ್ರವೇಶಿಸಿದ ಮಾಸೈ ಜನ ಕ್ರಮೇಣ ಪ್ರಬಲರಾಗಿ 1859ರ ವೇಳೆಗೆ ಮೊಂಬಾಸ ತೀರದವರೆಗೂ ತಮ್ಮ ಪ್ರಭಾವ ಬೀರಿದ್ದರು. ಆ ಪಂಗಡದ ನಾಯಕನಾದ ಲೈಬೊನನ (ಮಂತ್ರವಾದಿ–ವೈದ್ಯ–ದೊರೆ) ನೇತೃತ್ವದಲ್ಲಿ ಯುದ್ಧಪಟುಗಳಾದ (ಮೊರಾನ್) ಇವರು ನೆರೆಹೊರೆಯ ಬುಡಕಟ್ಟಿನ ಜನರಿಗೆ–ಬ್ಯಾಂಟು ಪಂಗಡದ ರೈತರಿಗೆ–ಭಯದಾಯಕರಾಗಿದ್ದರು. ಆದರೆ ಪಶ್ಚಿಮ ಭಾಗದಲ್ಲಿದ್ದ ನಾಂದಿ ಮತ್ತು ಪೂರ್ವಭಾಗ ದಲ್ಲಿದ್ದ ಟವೇಟ ಮತ್ತು ಟೈಟ ಜನ ಇವರಿಗೆ ಭಯಪಡದೆ ಸ್ವರಕ್ಷಣೆ ಮಾಡಿಕೊಳ್ಳುತ್ತಿದ್ದರು. ಹೆಚ್ಚು ಜನಸಂಖ್ಯೆ ಹೊಂದಿದ್ದ ಕಿಕೂಯು ಪಂಗಡದವರು ಕೂಡ ಮಾಸೈ ಪಂಗಡದವರಿಗೆ ಅಂಜಿ ಬೆಟ್ಟಗುಡ್ಡಗಳಲ್ಲಿ ಆಶ್ರಯ ಪಡೆಯುತ್ತಿದ್ದರು. ಉತ್ತರ, ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಕಿಕೂಯುಗಳು ಕ್ರಮೇಣ ಹಬ್ಬಿಕೊಂಡು ವ್ಯವಸಾಯಕ್ಕೆ ಗಮನ ಕೊಡಲಾರಂಭಿಸಿದರು. ಕ್ರಮೇಣ ಪ್ರಬಲರಾಗುತ್ತಿದ್ದ ಕಿಕೂಯುಗಳಲ್ಲಿ ಕೇಂದ್ರೀಕೃತ ನಾಯಕತ್ವವಿಲ್ಲದಿದ್ದುದೇ ಅವರು ಮಾಸೈ ಪಂಗಡದವರಿಗೆ ಅಂಜಲು ಕಾರಣವಾಗಿತ್ತು. 1890ರ ದಶಕದಲ್ಲಿ ಉಂಟಾದ ಸಾಂಕ್ರಾಮಿಕ ರೋಗಗಳಿಂದ ಕಿಕೂಯು ಮತ್ತು ಮಾಸೈಗಳು ಕಷ್ಟದೆಶೆಯಲ್ಲಿದ್ದರು. ಆ ಸಮಯದಲ್ಲಿ ಮಾಸೈಗಳ ನಾಯಕ ಲೈಬೊನ್ ಎಂಬಟಿಯನ್ ತೀರಿಕೊಂಡ. ಅನಂತರ ಅವನ ಕಿರಿಯ ಮಗ ಲೆನಾನ ಆ ಜನರಲ್ಲಿ ಶಾಂತಿಯನ್ನು ಸ್ಥಾಪಿಸಿದರೂ ಅವರ ಮೊದಲಿನ ಶಕ್ತಿಸಾಮರ್ಥ್ಯಗಳು ಪುನಹ ಕಂಡುಬರಲಿಲ್ಲ. ಈ ಸುಮಾರಿಗೆ ಬ್ರಿಟಿಷರು ಕೀನ್ಯವನ್ನು ಪ್ರವೇಶಿಸಿದರು.

ಬ್ರಿಟನಿನ ಜೋಸೆಫ್ ಥಾಮ್ಸನ್ 1883ರಲ್ಲಿ ಮಾಸೈಗಳ ಪ್ರದೇಶದಲ್ಲಿ ಸಂಚರಿಸಿದ. ಬ್ರಿಟಿಷ್ ಪೂರ್ವ ಆಫ್ರಿಕ ಕಂಪನಿ ಅದೇ ಸಮಯಕ್ಕೆ ಹುಟ್ಟಿಕೊಂಡಿತು. 1886ರಲ್ಲಿ ಜರ್ಮನರೂ ಕೀನ್ಯ ಪ್ರವೇಶ ಮಾಡಿದರು. ಈ ಮಧ್ಯೆ ಜ಼ಾನ್ಜ಼ಿಬಾರಿನ ಸುಲ್ತಾನನ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಕೆಲವು ಸಮಸ್ಯೆಗಳುದ್ಭವಿಸಲು ಬ್ರಿಟನ್, ಜರ್ಮನಿ ಮತ್ತು ಫ್ರಾನ್ಸ್‌ಗಳು ತೀರಪ್ರದೇಶದಲ್ಲಿ ರುವುನಾ ಮತ್ತು ಟಾನ ನದಿಗಳ ಮಧ್ಯದ 16 ಕಿಮೀ ಅಗಲದ ಭೂಭಾಗ ಸುಲ್ತಾನನಿಗೆ ಸೇರಿದ್ದೆಂದು ಒಪ್ಪಿಕೊಂಡು ಇತರ ಪ್ರದೇಶಗಳಲ್ಲಿ ಯಾವಯಾವ ಭಾಗಗಳಲ್ಲಿ ತಮ್ಮ ಪ್ರಭಾವ ಬೆಳೆಸಬಹುದೆಂಬುದರ ಬಗ್ಗೆ ಪರಸ್ಪರ ಒಪ್ಪಂದ ಮಾಡಿಕೊಂಡುವು. ಈ ಒಪ್ಪಂದದ ಪ್ರಕಾರ ಈಗಿನ ಕೀನ್ಯದ ಬಹುಭಾಗ ಬ್ರಿಟಿಷರ ಪ್ರಭಾವಕ್ಕೊಳಗಾಯಿತು. 1887ರಲ್ಲಿ ಬ್ರಿಟಿಷ್‌ಪೂರ್ವ ಆಫ್ರಿಕ ಸಂಘ ಮತ್ತು ವಿಲಿಯಂ ಮ್ಯಕಿನ್ನಾನ್ ಅಲ್ಲಿಯ ಸುಲ್ತಾನನಿಂದ ಅವನ ಪ್ರದೇಶದ ಮೇಲೆ 50 ವರ್ಷಗಳ ಗೇಣಿ ಹಕ್ಕನ್ನು ಪಡೆದರು. ಕಾಲಕ್ರಮದಲ್ಲಿ ಅದು ಶಾಶ್ವತವಾಗಿ ಅವರಿಗೇ ಸೇರುವಂತಾಯಿತು. ಬ್ರಿಟಿಷ್ ಸರ್ಕಾರಕ್ಕೆ ಈ ಪ್ರದೇಶದ ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಳ್ಳಲು ಇಷ್ಟವಿಲ್ಲದುದರಿಂದ 1888ರಲ್ಲಿ ಈ ಸಂಘವನ್ನು ಕಾನೂನುಬದ್ಧವಾದ ಬ್ರಿಟಿಷರ ಹಿತಾಸಕ್ತಿಗಳನ್ನು ಕಾಯುವ ಕರ್ತವ್ಯವನ್ನು ಆ ಕಂಪನಿಗೆ ಒಪ್ಪಿಸಿತು.

ಮಾಸೈ ವೀರರು

ಆರ್ಥಿಕ ಮುಗ್ಗಟ್ಟಿನಿಂದ ಕೀನ್ಯದ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗದೆ ತೊಳಲುತ್ತಿದ್ದಾಗ ಆ ಕಂಪನಿ ಉಗಾಂಡದ ಅಂತರ್ಯುದ್ಧದಲ್ಲಿ ಸಿಕ್ಕಿಹಾಕಿಕೊಂಡಿತು. 1894ರಲ್ಲಿ ಬುಗಾಂಡವನ್ನು ತನ್ನ ಆಶ್ರಿತ ರಾಜ್ಯವೆಂದು ಬ್ರಿಟಿಷ್ ಸರ್ಕಾರ ಘೋಷಿಸಿದ ಅನಂತರ ಕಂಪನಿಗೆ 2, 50,000 ಪೌಂಡುಗಳನ್ನು ಕೊಟ್ಟು, ಸನ್ನದನ್ನು ರದ್ದು ಪಡಿಸಿ ಅದರ ವಶದಲ್ಲಿದ್ದ ಪ್ರದೇಶವನ್ನು ತನ್ನ ನೇರ ಹತೋಟಿಗೆ ಒಳಪಡಿಸಿಕೊಂಡಿತು. ಪೂರ್ವ ಆಫ್ರಿಕ ರಕ್ಷಿತದೇಶ ಅಸ್ತಿತ್ವಕ್ಕೆ ಬಂತು. ಆ ಪ್ರದೇಶದ ಮೊದಲ ಆಡಳಿತಗಾರನಾಗಿ ಸರ್ ಆರ್ಥರ್ ಹಾರ್ಡಿಂಜನ ನೇಮಕವಾಯಿತು. ವಿವಿಧ ಪಂಗಡಗಳ ಮೇಲೆ ಬ್ರಿಟಿಷ್ ಸರ್ಕಾರದ ಆಡಳಿತವನ್ನು ಜಾರಿಗೆ ತರಲು ಬಹಳ ಶ್ರಮವಾಯಿತು. ತೀರಪ್ರದೇಶದ ಮಜ್ರುಯಿಗಳೂ ಒಳಪ್ರದೇಶಗಳಲ್ಲಿ ಕಿಕೂಯು ಮತ್ತು ಕಾಂಬ ಜನರೂ ಪಶ್ಚಿಮ ಭಾಗದಲ್ಲಿ ನಾಂದಿಗಳೂ ಬ್ರಿಟಿಷ್ ಅಧಿಕಾರವನ್ನು ವಿರೋಧಿಸಿದರು. ಮಾಸೈ ಜನ ಬ್ರಿಟಿಷರನ್ನು ವಿರೋಧಿಸದೆ ಸುಮ್ಮನಾದ್ದು ಆಶ್ಚರ್ಯದ ಸಂಗತಿ.

ಬ್ರಿಟನಿನೊಡನೆ ಹೆಚ್ಚಿನ ಸಂಪರ್ಕ ಸಾಧ್ಯವಿಲ್ಲದಿದ್ದುದೂ ಆರ್ಥಿಕ ಅಡಚಣೆಗಳೂ ಬ್ರಿಟಿಷ್ ಅಧಿಕಾರ ಬಲಗೊಳ್ಳಲು ಅಡ್ಡಿಯಾಗಿದ್ದುವು. ಅಲ್ಲದೆ ಸ್ಥಳೀಯ ಪಂಗಡಗಳಲ್ಲಿ ಸುವ್ಯವಸ್ಥಿತ ಆಡಳಿತ ಪದ್ಧತಿಯಿರಲಿಲ್ಲ. ಬ್ರಿಟಿಷರು ಎಲ್ಲೆಡೆಯಲ್ಲೂ ತಮ್ಮ ಆಡಳಿತ ಪದ್ಧತಿಯನ್ನೇ ಸ್ಥಾಪಿಸಿದರು. ಈ ಕೆಲಸ ಕುಂಟುತ್ತ ನಿಧಾನವಾಗಿ ಸಾಗಿತು. ವಿಕ್ಟೋರಿಯ ಸರೋವರ ಪ್ರಾಂತ್ಯದ ನಿಸರ್ಗ ಸಂಪತ್ತಿನ ಉಪಯೋಗ ಪಡೆಯುವ ಉದ್ದೇಶದಿಂದ ತೀರಪ್ರದೇಶದಿಂದ ವಿಕ್ಟೋರಿಯ ಪ್ರದೇಶದವರೆಗೆ ರೈಲುಮಾರ್ಗವನ್ನು ಹಾಕುವ ತೀರ್ಮಾನ ಕೈಗೊಳ್ಳಲಾಯಿತು. ಪೂರ್ವ ಆಫ್ರಿಕದ ಆರ್ಥಿಕ ಸಂಪತ್ತಿನ ಉಪಯೋಗ ಪಡೆಯಲೂ ಆ ಪ್ರದೇಶದ ರಕ್ಷಣಾವ್ಯವಸ್ಥೆಯ ದೃಷ್ಟಿಯಿಂದಲೂ ರೈಲುಮಾರ್ಗ ಅವಶ್ಯವಾಗಿತ್ತು. 1895ರಲ್ಲಿ ಮೊಂಬಾಸದ ಬಳಿ ಈ ಕೆಲಸ ಪ್ರಾರಂಭವಾಗಿ 1903ರ ವೇಳೆಗೆ ಪೂರ್ಣಗೊಂಡಿತು. ಹೆಚ್ಚು ಹಣ ವ್ಯಯವಾಗಿದ್ದುದರಿಂದ ಹುಟ್ಟುವಳಿಯನ್ನು ಹೆಚ್ಚಿಸುವ ಸಲುವಾಗಿ ಬ್ರಿಟಿಷ್ ಕೃಷಿಕರನ್ನೂ ವ್ಯಾಪಾರಿಗಳನ್ನೂ ಈ ಒಳಪ್ರದೇಶದಲ್ಲಿ ನೆಲೆಸಲು ಉತ್ತೇಜಿಸಿ ತನ್ಮೂಲಕ ಸರ್ಕಾರ ತನ್ನ ಆದಾಯವನ್ನು ಹೆಚ್ಚಿಸಿಕೊಂಡಿತು. 1901ರಿಂದ ಅಲ್ಲಿಯ ಆಡಳಿತಗಾರನಾಗಿದ್ದ ಚಾರ್ಲ್ಸ್ ಎಲಿಯಟ್ ಇಂಗ್ಲೆಂಡಿನ ಜನರನ್ನಲ್ಲದೆ ದಕ್ಷಿಣ ಆಫ್ರಿಕದಲ್ಲಿದ್ದ ಐರೋಪ್ಯರನ್ನೂ ಇಲ್ಲಿಯ ವಸಾಹತು ಕಾರ್ಯಕ್ಕೆ ಆಹ್ವಾನಿಸಿ ನೆರವು ನೀಡಿದ. ಕ್ರಮೇಣ ಸೀಳು ಕಣಿವೆ ಮತ್ತು ಅದರಾಚಿನ ಪ್ರಸ್ಥಭೂಮಿ ಪ್ರದೇಶಗಳೂ ಬಿಳಿಯರ ವಸಾಹತುಗಳಾದವು. ಆ ಪ್ರದೇಶದಲ್ಲಿದ್ದ ದೇಶೀಯರಿಗೆ ಇದರಿಂದ ಹೆಚ್ಚಿನ ಅನ್ಯಾಯವಾಯಿತು. ಆಫ್ರಿಕದ ಜನ ಬಿಳಿಯರಲ್ಲಿ ಕೂಲಿಗಳಾಗಿ ದುಡಿಯಲು ಉತ್ಸಾಹ ತೋರದಿದ್ದುದರಿಂದ ಕೆಲಸಗಾರರ ಅಭಾವವೇರ್ಪಟ್ಟಿತು. ಕಡ್ಡಾಯ ಶ್ರಮ ಪದ್ಧತಿಯನ್ನು ವಿಧಿಸಿದರೂ ಹೆಚ್ಚು ಪ್ರಯೋಜನವಾಗಲಿಲ್ಲ. ಒಂದನೆಯ ಮಹಾಯುದ್ಧಾನಂತರ ಕಡ್ಡಾಯ ಶ್ರಮ ಪದ್ಧತಿಯನ್ನು ರದ್ದುಗೊಳಿಸಲಾಯಿತು. 1904ರಲ್ಲಿ ಚಾರ್ಲ್ಸ್ ಎಲಿಯಟನ ನಿರ್ಗಮನದ ಅನಂತರ ಆಫ್ರಿಕವನ್ನು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತಗೊಳಿಸಿದುದರಿಂದ ಅವರಲ್ಲಿ ಅತೃಪ್ತಿ ಬೆಳೆಯಿತು.

ರೈಲುಮಾರ್ಗ ನಿರ್ಮಾಣದಲ್ಲಿ ದೇಶೀಯರು ಕೆಲಸ ಮಾಡಲು ಆಸಕ್ತಿ ತೋರದಿದ್ದರಿಂದ ಸಹಸ್ರಾರು ಮಂದಿ ಭಾರತೀಯ ಕೂಲಿಗಳನ್ನು ಕರೆತರಲಾಯಿತು.

ಇವರಲ್ಲಿ ಕೆಲವರು ಒಪ್ಪಂದದ ಕೆಲಸ ಮುಗಿದ ಅನಂತರ ಹಿಂದಿರುಗಿದರು. ಅನೇಕರು ಅಲ್ಲಿಯೇ ನೆಲಸಿ ವ್ಯಾಪಾರದಲ್ಲಿ ತೊಡಗಿದರು; ಹೊಸ ಪ್ರದೇಶಗಳಿಗೆ ಹೋಗಿ ಸಾಹಸದಿಂದ ವ್ಯಾಪಾರ ಮುಂದುವರಿಸಿ ಪೂರ್ವ ಆಫ್ರಿಕ ರಕ್ಷಿತಪ್ರದೇಶದ ಆರ್ಥಿಕಾಭಿವೃದ್ಧಿಗೆ ಕಾರಣರಾದರು. ಭಾರತೀಯರು ಅಲ್ಲಿ ಭೂಸ್ವಾಮಿಗಳಾಗುವುದನ್ನು ಅಲ್ಲಿಯ ಬಿಳಿಯರು ವಿರೋಧಿಸಿದರು. ಆಡಳಿತವೂ ಬಿಳಿಯರ ಪರವಾಗಿಯೇ ನಿಂತಿತು. ಈ ಮಧ್ಯೆ ಬಿಳಿಯರು ತಮ್ಮ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಅವುಗಳ ಮೂಲಕ ಆಡಳಿತದ ಮೇಲೆ ಒತ್ತಾಯ ತಂದು ಭಾರತೀಯರಿಗೆ ಸರ್ಕಾರದ ಆಡಳಿತ ಮತ್ತು ಆರ್ಥಿಕ ಮುನ್ನಡೆಗಳಲ್ಲಿ ಪಾಲು ಸಿಕ್ಕದಂತೆ ಮಾಡುತ್ತಿದ್ದರು. 1907ರ ವೇಳೆಗೆ ಬಿಳಿಯರ ಇಬ್ಬರು ಪ್ರತಿನಿಧಿಗಳು ಆಡಳಿತ ಸಲಹಾ ಮಂಡಲಿಯನ್ನು ಪ್ರವೇಶಿಸಿ ತಮ್ಮವರ ಪರವಾಗಿ ಪ್ರಭಾವ ಬೀರಿತು. ಹೆಚ್ಚು ಜನ ಗಂಡಸರು ಯುದ್ಧದಲ್ಲಿ ಪಾಲ್ಗೊಂಡುದರಿಂದ ಅನೇಕ ಕೃಷಿ ಕ್ಷೇತ್ರಗಳು ಪಾಳುಬಿದ್ದುವು; ಸಣ್ಣಪುಟ್ಟ ರೈತರು ದಿವಾಳಿಯೆದ್ದರು. ಬ್ಯಾಂಕುಗಳಿಂದ ನಿರೀಕ್ಷಿತ ಸಹಾಯ ದೊರಕಲಿಲ್ಲ. 1920ರ ದಶಕದಲ್ಲಿ ವಿಶ್ವದ ಇತರ ರಾಷ್ಟ್ರಗಳಲ್ಲಿ ಸಂಭವಿಸಿದ ಆರ್ಥಿಕ ಏರುಪೇರುಗಳ ಪರಿಣಾಮ ಕೀನ್ಯದ ಮೇಲೂ ಆಯಿತು. ಆದರೆ ಆ ದಶಕದ ಉತ್ತರಾರ್ಧದ ವೇಳೆಗೆ ಬಿಳಿಯರು ಚೇತರಿಸಿಕೊಂಡರು. ಮತ್ತೊಮ್ಮೆ 1930ರ ದಶಕದಲ್ಲಿ ತಲೆದೋರಿದ ಮುಗ್ಗಟ್ಟಿನಿಂದ ಹೊಸ ಸಮಸ್ಯೆಗಳು ಸಂಭವಿಸಿದರೂ ದೇಶದ ಆರ್ಥಿಕಸ್ಥಿತಿ ಹೊಸದಾಗಿ ನಿರ್ಮಿತವಾದ ರೈಲುಮಾರ್ಗಗಳ ಪ್ರಭಾವದಿಂದ ಸುಧಾರಿಸಿತು.

1920ರಲ್ಲಿ ಈ ಪ್ರದೇಶವನ್ನು ಕೀನ್ಯ ಎಂಬ ಹೆಸರಿನ ವಸಾಹತು ರಾಜ್ಯವೆಂದು ಘೋಷಿಸಲಾಯಿತು. ಆ ವೇಳೆಗೆ ಬಿಳಿಯರಿಗೆ ರಾಜ್ಯದ ಆಡಳಿತ ಸಮಿತಿಗೆ ಸದಸ್ಯರನ್ನು ಚುನಾಯಿಸುವ ಹಕ್ಕು ದೊರೆತಿತ್ತು. ಭಾರತೀಯರು ತಮಗೂ ಸಮಾನ ಹಕ್ಕು ಬೇಕೆಂದು ಚಳವಳಿ ಪ್ರಾರಂಭಿಸಿದರು. ಕೀನ್ಯನರ ಹಕ್ಕುಬಾಧ್ಯತೆಗಳಿಗೆ ಹೆಚ್ಚಿನ ಪ್ರಾಧಾನ್ಯವಿರಬೇಕೆಂದೂ ಅಲ್ಪಸಂಖ್ಯಾತರ ಹಕ್ಕುಬಾಧ್ಯತೆಗಳೂ ರಕ್ಷಿತವಾಗಬೇಕೆಂದೂ 1923ರಲ್ಲಿ ಬ್ರಿಟಿಷ್ ವಸಾಹತು ಕಾರ್ಯದರ್ಶಿ ಡೆವಾನ್ ಷೈರ್ ಡ್ಯೂಕ್ ತೀರ್ಪು ನೀಡಿದ. ಈ ತೀರ್ಪು ಬಿಳಿಯರಿಗೆ ಅನುಕೂಲವಾಗಿತ್ತು. ಅವರು ಆಫ್ರಿಕನರ ಹಕ್ಕುಬಾಧ್ಯತೆಗಳ ಪೋಷಕರೆಂದು ಹೇಳಿಕೊಂಡರೇ ವಿನಾ ಇದರಿಂದ ದೇಶೀಯರಿಗೆ ಯಾವ ಸೌಲಭ್ಯವೂ ದೊರಕಲಿಲ್ಲ. ಅವರ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಸುಧಾರಿಸಲಿಲ್ಲ. ಅವರ ವಿದ್ಯಾಭ್ಯಾಸಕ್ಕೆ ಆಡಳಿತ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ದೇಶೀಯರಿಗೆ ಈ ವೇಳೆಗೆ ಅವರ ಹಕ್ಕುಗಳ ಅರಿವು ಮೂಡಿತ್ತು. ಬಿಳಿಯರ ಮಾದರಿಯಲ್ಲಿ ಅವರೂ ಸಂಘಸಂಸ್ಥೆಗಳನ್ನು ಕಟ್ಟಿಕೊಂಡು ತಮ್ಮ ಹಕ್ಕುಗಳಿಗಾಗಿ ಒತ್ತಾಯ ತರಲಾರಂಭಿಸಿದರು. 1921ರಲ್ಲಿ ಕಿಕೂಯು ಯುವಕ ಸಂಘ ಹುಟ್ಟಿಕೊಂಡಿತು. 1925ರಲ್ಲಿ ಅದಕ್ಕೆ ಕಿಕೂಯು ಕೇಂದ್ರೀಯ ಸಂಘವೆಂದು ನಾಮಕರಣವಾಯಿತು. ಆಡಳಿತ ಸಮಿತಿಯಲ್ಲಿ ತನಗೂ ಪ್ರಾತಿನಿಧ್ಯ ದೊರಕಬೇಕೆಂದು ಸಂಘ ಬಯಸಿತಲ್ಲದೆ ಕಿಕೂಯು ಕಾರ್ಮಿಕರಿಗೆ ಹೆಚ್ಚಿನ ವೇತನ ಮತ್ತು ಸೌಲಭ್ಯಗಳು ಬೇಕೆಂದು ಕೇಳಲಾರಂಭಿಸಿದರು.

ಈ ಮಧ್ಯ ಪೂರ್ವ ಆಫ್ರಿಕದಲ್ಲಿ ಬ್ರಿಟಿಷರ ಪ್ರಭಾವದಲ್ಲಿದ್ದ ಉಗಾಂಡ ಮತ್ತು ಕೀನ್ಯವನ್ನೂ ಜರ್ಮನ್ ಪ್ರದೇಶಗಳನ್ನೂ ಒಂದುಗೂಡಿಸುವ ಪ್ರಯತ್ನ ನಡೆಯುತ್ತಿತ್ತು. ಮೊದಮೊದಲು ಅಲ್ಲಿಯ ಬಿಳಿಯ ವಸಾಹತುಗಾರರು ಇದಕ್ಕೆ ಒಪ್ಪಲಿಲ್ಲ. ಕ್ರಮೇಣ ಅವರು ಇದಕ್ಕೆ ಬೆಂಬಲ ನೀಡಿದರು. ಆ ವೇಳೆಗೆ ಎರಡನೆಯ ಮಹಾಯುದ್ಧ ಸಂಭವಿಸಿತು. ಇಟಲಿ ಶತ್ರುರಾಷ್ಟ್ರವಾಗಿದ್ದುದರಿಂದ ಕೀನ್ಯದ ರಕ್ಷಣೆಗೆ ಆತಂಕವೇರ್ಪಟ್ಟಿತು. ಆದರೆ ಇಟಲಿ ಶರಣಾಗತವಾದಾಗ ಕೀನ್ಯದ ಸೈನ್ಯ ವಿಶ್ವದ ಇತರ ಕ್ಷೇತ್ರಗಳಲ್ಲಿ ಹೋರಾಟದಲ್ಲಿ ನಿರತವಾಯಿತು. 1946ರಲ್ಲಿ ಇಬ್ಬರು, 1948ರಲ್ಲಿ ನಾಲ್ವರು ಮತ್ತು 1951ರಲ್ಲಿ ಎಂಟು ಮಂದಿ ದೇಶೀಯ ಪ್ರತಿನಿಧಿಗಳು ಈ ಸಭೆಗೆ ಸದಸ್ಯರಾದರು. 1948ರಲ್ಲಿ ಕೀನ್ಯ, ಉಗಾಂಡ ಮತ್ತು ಟಾಂಗನ್ಯೀಕ ರಾಜ್ಯಗಳ ಕೆಲವು ಆಡಳಿತ ಇಲಾಖೆಗಳನ್ನು ಪೂರ್ವ ಆಫ್ರಿಕ ಹೈ ಕಮಿಷನ್ನಿಗೆ ಒಪ್ಪಿಸಲಾಯಿತು.

1950ರ ದಶಕದಲ್ಲಿ ಮೌ-ಮೌ ಚಳವಳಿ ಪ್ರಾರಂಭವಾದುದರ ಫಲವಾಗಿ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿತವಾಯಿತು. ಈ ಚಳವಳಿಯಲ್ಲಿ ಕಿಕೂಯು ಪಂಗಡದವರದೇ ಪ್ರಾಧಾನ್ಯ. ಇದು ಕೀನ್ಯದ ಬಿಳಿಯರ ವಿರುದ್ಧವಾದ ಚಳವಳಿ. ಜೋಮೋಕೆನ್ಯಾಟ ಇದರ ನಾಯಕ. ಅವನಿಗೂ ಅವನ ಜೊತೆಗಾರರಿಗೂ 1953ರಲ್ಲಿ ಏಳು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. 1959 ರಲ್ಲಿ ಅವನಿಗೆ ವಿಮೋಚನೆಯಾದರೂ ಅವನನ್ನು ನಿರ್ಬಂಧಕ್ಕೆ ಒಳಪಡಿಸಲಾಯಿತು. ತುರ್ತುಪರಿಸ್ಥಿತಿಯ ಅಂತ್ಯವಾದ್ದು 1960ರಲ್ಲಿ.

1957ರಲ್ಲಿ ಅಲ್ಲಿಯ ಆಡಳಿತಕ್ಕೆ ಆಯ್ಕೆ ಹೊಂದಿದ್ದ ಪ್ರತಿನಿಧಿಗಳ ಸಂಖ್ಯೆ 8. 1958ರಲ್ಲಿ ಇದನ್ನು ಹೆಚ್ಚಿಸಲಾಯಿತು. 1960ರ ಲಂಡನ್ ಸಮ್ಮೇಳನದ ಫಲವಾಗಿ ವಿಧಾನಸಭೆಯಲ್ಲಿ ದೇಶಿಯರಿಗೆ ಬಹುಮತ ದೊರಕಿತಲ್ಲದೆ ಮಂತ್ರಿಮಂಡಲದ 10 ಸ್ಥಾನಗಳಲ್ಲಿ 4 ಅವರಿಗೆ ಲಭ್ಯವಾಯಿತು. ಕೀನ್ಯ-ಆಫ್ರಿಕ ರಾಷ್ಟ್ರೀಯ ಒಕ್ಕೂಟ ಮತ್ತು ಕೀನ್ಯ-ಆಫ್ರಿಕ ಪ್ರಜಾಸತ್ತಾತ್ಮಕ ಒಕ್ಕೂಟಗಳು ಪ್ರಮುಖ ರಾಜಕೀಯ ಪಕ್ಷಗಳಾಗಿ ಮುಂದೆ ಬಂದುವು. ಮೊದಲಿಗೆ ಟಾಮ್ಬೋಯ, ಅನಂತರ ಜೋಮೊ ಕೆನ್ಯಾಟ ಇವರು ರಾಷ್ಟ್ರೀಯ ಒಕ್ಕೂಟದ ನೇತಾರರು. 1962ರ ಲಂಡನ್ ಸಮ್ಮೇಳನದಲ್ಲಿ ಕೀನ್ಯದ ಸಂವಿಧಾನ ರೂಪಿತವಾಯಿತು. 1963ರ ಮಹಾ ಚುನಾವಣೆಗಳಲ್ಲಿ ರಾಷ್ಟ್ರೀಯ ಒಕ್ಕೂಟ ಪಕ್ಷಕ್ಕೆ

**ನೈರೋಬಿಯ ಬಳಿಯ ಚತುರ್ದಶ ಜಲಪಾತ**

ಬಹುಮತ ದೊರಕಿತು. ಆ ವರ್ಷದ ಜೂನ್ ತಿಂಗಳಲ್ಲಿ ಪೂರ್ಣ ಸ್ವಯಂಮಾಡಳಿತ ಅಧಿಕಾರ ಪಡೆದಿದ್ದ ಜನಪ್ರಿಯ ಸರ್ಕಾರ ರಚಿತವಾಯಿತು. 1963ರ ಡಿಸೆಂಬರ್ 12ರಂದು ಕೀನ್ಯ ಸ್ವತಂತ್ರ ರಾಷ್ಟ್ರವೆಂದು ಘೋಷಿತವಾಗಿ, ಕಾಮನ್ವೆಲ್ತಿನ ಸದಸ್ಯ ರಾಷ್ಟ್ರವಾಯಿತು.

ಈ ಮಧ್ಯೆ ರಾಜ್ಯದ ನೈಋತ್ಯ ಭಾಗದಲ್ಲಿದ್ದ ಸೊಮಾಲಿಗಳು ಕೀನ್ಯದಿಂದ ಬೇರ್ಪಟ್ಟು ಸೊಮಾಲಿ ಗಣರಾಜ್ಯಕ್ಕೆ ಸೇರಿಕೊಳ್ಳಬೇಕೆಂದು ಚಳವಳಿ ಪ್ರಾರಂಭಿಸಿದರು. 1963ರ ಡಿಸೆಂಬರ್ 10ರಂದು ಜ಼ಾನ್‌ಜ಼ಿಬಾರ್ ಸ್ವತಂತ್ರವಾಗಿ, ಕೀನ್ಯ ಸಮುದ್ರತೀರದಲ್ಲಿ ತನಗೆ ಸೇರಿದ್ದ ಪ್ರದೇಶವನ್ನು ಕೀನ್ಯಕ್ಕೆ ಒಪ್ಪಿಸಿತು. ಮೌಮೌ ಚಳವಳಿಯ ಫಲವಾಗಿ ಕಿಕೂಯುಗಳು ದೊಡ್ಡ ಗ್ರಾಮಗಳಲ್ಲಿ ಕೇಂದ್ರೀಕೃತರಾದರು. ಭೂಸುಧಾರಣೆಗಳು ಜಾರಿಗೆ ಬಂದುವು. ಕೃಷಿ ಅಭಿವೃದ್ಧಿಗಾಗಿ ದೇಶೀಯರಿಗೆ ಹೆಚ್ಚಿನ ಆರ್ಥಿಕ ಸಹಾಯ ನೀಡಲಾಯಿತು. ವಿದೇಶಿ ಬಂಡವಾಳ ಅಧಿಕ ಪ್ರಮಾಣದಲ್ಲಿ ದೊರಕಿದುದರ ಫಲವಾಗಿ ಕೃಷಿಯ ಜೊತೆಗೆ ಕೈಗಾರಿಕಾಭಿವೃದ್ಧಿಯೂ ಸಾಧ್ಯವಾಗಿ ಇಂದು ಆಫ್ರಿಕದ ರಾಜ್ಯಗಳಲ್ಲಿ ಕೀನ್ಯ ಒಂದು ಪ್ರಮುಖ ರಾಜ್ಯವಾಗಿದೆ.

**ಆಡಳಿತ ಮತ್ತು ಸಾಮಾಜಿಕ ಪರಿಸ್ಥಿತಿ:** ಸ್ವಾತಂತ್ರ್ಯಪೂರ್ವದಲ್ಲಿ ಆಡಳಿತಾಧಿಕಾರಿಗೆ ಸಲಹೆ ನೀಡಲು ಒಂದು ಮಂತ್ರಿಮಂಡಲವಿತ್ತು. ರಾಜ್ಯದ ಶಾಸನಗಳನ್ನು ಆತ ವಿಧಾನಸಭೆಯ ಸಲಹೆ ಮತ್ತು ಒಪ್ಪಿಗೆ ಪಡೆದು ಮಾಡಬೇಕಾಗಿತ್ತು. 1962ರ ಫೆಬ್ರವರಿ-ಏಪ್ರಿಲ್ ತಿಂಗಳುಗಳಲ್ಲಿ ಲಂಡನ್ ಅಧಿವೇಶನದಲ್ಲಿ ಪ್ರಮುಖ ರಾಜಕೀಯ ಧುರೀಣರು ಕೀನ್ಯದ ಸಂವಿಧಾನವನ್ನು ರೂಪಿಸಿದರು. 1963ರ ಜೂನ್ 1ರಿಂದ ಅದು ಜಾರಿಗೆ ಬಂತು. 1963ರ ಡಿಸೆಂಬರ್ 12ರಂದು ಸ್ವತಂತ್ರವಾದ ಮೇಲೆ ಅದು ಕಾಮನ್ವೆಲ್ತನ್ನು ಸೇರಿತು. ಬ್ರಿಟನ್ನಿನ ರಾಣಿಯನ್ನು ಕೀನ್ಯದ ರಾಣಿಯೆಂದು ಘೋಷಿಸಲಾಯಿತು. 1964ರಲ್ಲಿ ಕೀನ್ಯ ಗಣರಾಜ್ಯವಾಯಿತು. ಹೊಸ ಸಂವಿಧಾನದ ಪ್ರಕಾರ ಕೀನ್ಯರ ಕಾರ್ಯಾಂಗಮುಖ್ಯ ಅದರ ಅಧ್ಯಕ್ಷ; ಆತ ಇದರ ನಿರ್ವಹಣೆಗಾಗಿ ಪ್ರಧಾನ ಮಂತ್ರಿಯಿಂದೊಡಗೂಡಿದ ಸಂಪುಟವನ್ನು ನೇಮಿಸುತ್ತಾನೆ. 1963 ವರೆಗೂ ಸೆನೆಟ್ ಮತ್ತು ಪ್ರತಿನಿಧಿ ಸಭೆಗಳೆಂಬ ಎರಡು ವಿಧಾನ ಸದನಗಳಿದ್ದುವು. ಅವೆರಡನ್ನೂ ಒಂದುಗೂಡಿಸಿ ರಾಷ್ಟ್ರೀಯ ಸಭೆಯನ್ನು ನಿರ್ಮಿಸಲಾಯಿತು. ಮಧ್ಯ, ತೀರ, ನ್ಯಾನ್ಜ, ಸೀಳು ಕಣಿವೆ, ದಕ್ಷಿಣ, ಉತ್ತರ ಎಂಬ ಆರುಪ್ರಾಂತ್ಯಗಳಿವೆ. ನೈರೋಬಿ ಪ್ರಾಂತ್ಯಾತೀತ ಜಿಲ್ಲೆ.

ಕೀನ್ಯದ ಪ್ರಮುಖ ರಾಜಕೀಯ ಪಕ್ಷಗಳು ಕೀನ್ಯ-ಆಫ್ರಿಕ ರಾಷ್ಟ್ರೀಯ ಒಕ್ಕೂಟ (ಕಾನು) ಮತ್ತು ಕೀನ್ಯ-ಆಫ್ರಿಕ ಪ್ರಜಾಸತ್ತಾತ್ಮಕ ಒಕ್ಕೂಟ (ಕಾಡು) ಕಿಕೂಯು ಮತ್ತು ಲುವೊ ಎಂಬೆರಡು ಪ್ರಬಲ ಪಂಗಡಗಳ ಬೆಂಬಲವನ್ನು ಕಾನು ಪಡೆದಿದೆ. ಕಾಡುವಿಗೆ ಕಿಕೂಯು ಪಂಗಡದ ಹಿಡಿತವನ್ನು ತಪ್ಪಿಸಿಕೊಳ್ಳಬಯಸುವ ಇತರ ಅಲ್ಪಸಂಖ್ಯಾತ ಬುಡಕಟ್ಟಿನವರು ಬೆಂಬಲಿಗರು. ಬಲಿಷ್ಠ ಕೇಂದ್ರ ಸರ್ಕಾರವನ್ನು ಕಾನು ಪ್ರತಿಪಾದಿಸುತ್ತದೆ. ಕಾನು ಇದಕ್ಕೆ ವಿರೋಧ. ಕಾನು ಪ್ರಬಲವಾಗಿದ್ದು ಅಧಿಕಾರ ನಡೆಸುತ್ತಿದೆ.

ಕೀನ್ಯದ ಕಾರ್ಮಿಕರ ಚಳವಳಿ ಬ್ರಿಟಿಷ್ ಕಾರ್ಮಿಕ ಚಳವಳಿಯ ಮಾದರಿಯದು. ಅಲ್ಲಿ ಕ್ರಮೇಣ ಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಯಾಗುತ್ತಿದೆ. ಮೊದಲು ಕೈಗಾರಿಕಾ ರಂಗಕ್ಕೆ ಸೀಮಿತವಾಗಿದ್ದ ಈ ಚಳವಳಿ ಇತ್ತೀಚೆಗೆ ಕೃಷಿ ಕ್ಷೇತ್ರಕ್ಕೂ ಹಬ್ಬಿದೆ. ಕೀನ್ಯದಲ್ಲಿ

ಮಾಲೀಕರ ಸಂಘಗಳೂ ಕಾರ್ಮಿಕ ಸಂಘಗಳೂ ಇವೆ. ಕಾರ್ಮಿಕ ಸಂಘಗಳ ಸದಸ್ಯರ ಸಂಖ್ಯೆ ಲಕ್ಷಕ್ಕೂ ಹೆಚ್ಚು.

ಎರಡನೆಯ ಮಹಾಯುದ್ಧಾನಂತರ ಕೀನ್ಯದಲ್ಲಿ ಜೀವನ ಸ್ಥಿತಿ ಕ್ರಮೇಣ ಸುಧಾರಿಸುತ್ತಿದೆ. ಅಲ್ಲಿಯ ಬಿಳಿಯರ ಜೀವನಮಟ್ಟ ಉತ್ತಮವಾದ್ದು. ಸರ್ಕಾರೀ ಸೇವೆಯಲ್ಲಿರುವ ದೇಶೀಯರೂ ಉತ್ತಮ ಸ್ಥಿತಿಯಲ್ಲಿದ್ದಾರಾದರೂ ಜನಸಾಮಾನ್ಯರ, ಕೆಳವರ್ಗದವರ ಪರಿಸ್ಥಿತಿ ಅತೃಪ್ತಿಕರ. ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನ ಕ್ಷೇತ್ರದಲ್ಲಿ ಸರ್ಕಾರ ಹೆಚ್ಚಾಗಿ ಆಸಕ್ತಿ ವಹಿಸಿದೆ. ಜನರ ಆರೋಗ್ಯಮಟ್ಟ ಸುಧಾರಿಸಿಲ್ಲ. ಬಿಳಿಯರ ಆರೋಗ್ಯ ಮಟ್ಟ ಉತ್ತಮವಾಗಿದ್ದರೂ ದೇಶೀಯರಲ್ಲಿ ಬಾಲಮರಣ ಹೆಚ್ಚು. ಜನರ ಸರಾಸರಿ ಆಯುಃ ಪರಿಮಿತಿ ಕಡಿಮೆ. ನ್ಯೂಮೋನಿಯ ಮುಂತಾದ ಶ್ವಾಸಕೋಶ ರೋಗಗಳು, ಚರ್ಮ ಮತ್ತು ಕಣ್ಣಿನ ವ್ಯಾಧಿಗಳು ಮತ್ತು ಕ್ಷಯರೋಗ ಬಹಳ ಹೆಚ್ಚಾಗಿವೆ. ಮಲೇರಿಯವೂ ಅಧಿಕ. ವೈದ್ಯಸೌಲಭ್ಯಗಳಿಗಾಗಿ ಸರ್ಕಾರ ಹೆಚ್ಚು ಹಣವನ್ನು ವ್ಯಯಿಸುತ್ತಿದ್ದರೂ ಬಹಳ ಪ್ರಯೋಜನವಾಗಿಲ್ಲ. ಸರ್ಕಾರಿ ಮತ್ತು ಖಾಸಗಿ ವೈದ್ಯಶಾಲೆಗಳು ಸಾಕಷ್ಟಿವೆ.

ಸಂವಿಧಾನದ ಪ್ರಕಾರ ರೂಪಿತವಾದ ಪರಮೋಚ್ಚ ನ್ಯಾಯಾಲಯವೊಂದುಂಟು. ಅದರಲ್ಲಿ ಶ್ರೇಷ್ಠನ್ಯಾಯಾಧೀಶರಲ್ಲದೆ 11 ಮಂದಿ ನ್ಯಾಯಾಧೀಶರಿರುತ್ತಾರೆ, ನೈರೋಬಿ, ಮೊಂಬಾಸ ಮತ್ತು ಕೀಸಮುಗಳಲ್ಲಿ ಪರಮೋಚ್ಚ ನ್ಯಾಯಾಲಯ ವರ್ಷವಿಡೀ ಕಾರ್ಯಚರಣೆಯಲ್ಲಿರುತ್ತದೆ. ಇದರ ಸಂಚಾರೀ ಅಧಿವೇಶನ ಇತರ ಪ್ರಮುಖ ನಗರಗಳಲ್ಲೂ ಆಗಾಗ ನಡೆಯುತ್ತದೆ. ಮ್ಯಾಜಿಸ್ಟ್ರೇಟ್ ಮತ್ತಿತರ ಕೆಳವರ್ಗದ ನ್ಯಾಯಾಲಯಗಳು ಪರಮೋಚ್ಚ ನ್ಯಾಯಾಲಯದ ಅಧೀನಕ್ಕೊಳಪಟ್ಟು ನ್ಯಾಯ ವಿತರಣೆ ಮಾಡುತ್ತವೆ.

**ಶಿಕ್ಷಣ:** ಕೀನ್ಯದಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. ಅರ್ಧಕ್ಕೂ ಕಡಿಮೆ ಜನ ಅಕ್ಷರಸ್ಥರು. ನೈರೋಬಿಯಲ್ಲಿರುವ ವಿಶ್ವವಿದ್ಯಾಲಯ ಕಾಲೇಜು ಪೂರ್ವ ಆಫ್ರಿಕ ವಿಶ್ವವಿದ್ಯಾಲಯಕ್ಕೆ ಸೇರಿದೆ. ಕೀನ್ಯದ ಸಾವಿರಾರು ವಿದ್ಯಾರ್ಥಿಗಳು ವಿದೇಶಗಳಲ್ಲಿ ವ್ಯಾಸಂಗ ಮಾಡುತ್ತಾರೆ.

**ಕ್ರೀಡೆಗಳು:** ಕಾಲ್ಚೆಂಡು, ಟೆನಿಸ್, ಕ್ರಿಕೆಟ್, ಅಂಗಸಾಧನೆ ಇವೆಲ್ಲ ಸಂಘಟಿತವಾಗಿವೆ. ಕರಾವಳಿಯಲ್ಲಿ ಜಲಕ್ರೀಡೆಗಳು ಪ್ರಿಯವಾಗಿವೆ. ಕೀನ್ಯದ ಕ್ರೀಡಾಪಟುಗಳು ಕಾಮನ್ವೆಲ್ತ್ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಯಶಸ್ವಿಯಾಗಿ ಸ್ಪರ್ಧಿಸುತ್ತಿದ್ದಾರೆ. 1968ರಲ್ಲಿ ನಡೆದ ಒಲಂಪಿಕ್ ಕ್ರೀಡೆಗಳಲ್ಲಿ ಕೀನ್ಯನರ ಪಾತ್ರ ಗಮನಾರ್ಹವಾಗಿತ್ತು. *

**ಕೀನ್ಶಾಸ :** ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ರಾಜಧಾನಿ: ಕಿನ್ಶಾಸ ಪ್ರಾಂತ್ಯದ ಆಡಳಿತಕೇಂದ್ರ. ಕಾಂಗೋ ನದಿಯ ಎಡದಂಡೆಯ ಮೇಲೆ–ಅದರ ದಕ್ಷಿಣ ಪಾರ್ಶ್ವದಲ್ಲಿ –ಸ್ಟಾನ್ಲಿ ಮಡುವಿನ ಮುಖಭಾಗದಲ್ಲಿ– ಹಬ್ಬಿದೆ. ಕಾಂಗೋ ನದಿಯ ಎದುರು ದಂಡೆಯ ಮೇಲೆ ಇರುವುದು ಬ್ರ್ಯಾಜವಿಲೆ–ಕಾಂಗೋ ಗಣರಾಜ್ಯದ ರಾಜಧಾನಿ. ಹಿಂದೆ ಕೀನ್ಶಾಸಕ್ಕೆ ಲೀಯೊಪೋಲ್ಡ್ ವಿಲ್ ಎಂಬ ಹೆಸರಿತ್ತು. 13 ವಿಭಾಗಗಳನ್ನೂ ಒಂದು ಹೊರವಲಯವನ್ನೂ ಒಳಗೊಂಡ ಈ ನಗರದ ಜನಸಂಖ್ಯೆ 1958ರಲ್ಲಿ 3,89,547 ಇತ್ತು. 1967ರಲ್ಲಿ ಇದರ ಜನಸಂಖ್ಯೆ ಸುಮಾರು 15,00,000 ಆಗಿತ್ತು. ಈಗಿನ ಜನಸಂಖ್ಯೆ 7,017,000 (2004)

ಕಿನ್ಶಾಸದ ಐರೋಪ್ಯ ನಿವಾಸ

ಕೀನ್ಶಾಸ ಆಫ್ರಿಕದ ಸಮಭಾಜಕೀಯ ಪ್ರದೇಶದ ನಗರಗಳಲ್ಲೆಲ್ಲ ವಿಶಿಷ್ಟವಾದ್ದು. ಕಾಂಗೋ ರಾಜ್ಯ ಸ್ವಾತಂತ್ರಗಳಿಸುವುದಕ್ಕೆ ಹಿಂದೆ ಅಲ್ಲಿ ಅಧಿಕ ಸಂಖ್ಯೆಯಲ್ಲಿ ವಾಸವಾಗಿದ್ದ ಐರೋಪ್ಯರು ಸ್ವಾತಂತ್ರ್ಯಸಮರ ಕಾಲದಲ್ಲಿ ನಗರವನ್ನು ತ್ಯಜಿಸಿ ಹೋಗಿದ್ದರೂ ಅವರ ಸಂಖ್ಯೆ ಈಗ ಹಿಂದಿನಂತೆಯೇ ತಕ್ಕಮಟ್ಟಿಗಿದೆ. ಭವ್ಯ ಕಟ್ಟಡಗಳಿಂದ ಕೂಡಿದ ಐರೋಪ್ಯ ಬಡಾವಣೆ ಇರುವುದು ಕಾಂಗೋ ನದಿಯ ದಂಡೆಯ ಮೇಲೆ, ಕಲಿನಾ ಪಾಯಿಂಟ್ ಎಂಬ ಸ್ಥಳಕ್ಕೆ ಪೂರ್ವದಲ್ಲಿ. ಈ ಭಾಗ ವಿಶಾಲವಾದ ರಸ್ತೆಗಳಿಂದಲೂ ಚೌಕಗಳಿಂದಲೂ ಉದ್ಯಾನಗಳಿಂದಲೂ ಕೂಡಿ ಆಕರ್ಷಕವಾಗಿದೆ. ಸರ್ಕಾರಿ ಕಚೇರಿಗಳು, ವಿದ್ಯಾಸಂಸ್ಥೆಗಳು ಮತ್ತು ಹಡಗುರವಾನೆ ಕಂಪನಿಗಳು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಂಡಿವೆ. ಕಾಂಗೋ ಜನರ ವಸತಿಗಳಿರುವುದು ನಗರದ ಮಧ್ಯಭಾಗದಲ್ಲಿ–ದಟ್ಟವಾಗಿ ಹರಡಿರುವ ವೃಕ್ಷಗಳ ನಡುವೆ.

ಕೀನ್ಶಾಸ ಕಾಂಗೋರಾಜ್ಯದ ಮುಖ್ಯ ವಾಣಿಜ್ಯಕೇಂದ್ರ. ಕೀನ್ಶಾಸದ ಬಂದರು ಐರೋಪ್ಯರ ಬಡಾವಣೆಯ ಎದುರಿಗೆ ನದೀ ದಂಡೆಯನ್ನು ಆವರಿಸಿ ಕೊಂಡಿದೆ. ಅಲ್ಲಿಂದ ನದಿಯ ಪ್ರವಾಹಕ್ಕೆ ಇದಿರಾಗಿ, 1600 ಕಿಮೀ ದೂರದಲ್ಲಿರುವ ಕೀಸಾಂಗಾನಿಯ ವರೆಗೆ ನೌಕಾಸಂಚಾರ ಸಾಧ್ಯ. ಕಾಂಗೋ ನದೀಮಾರ್ಗದಲ್ಲಿ ಕೀನ್ಶಾಸ ನಗರವೇ ಪಶ್ಚಿಮದ ತುದಿ. ಅಲ್ಲಿಂದ ಮುಂದೆ, ನೈರುತ್ಯದಲ್ಲಿ 256 ಕಿಮೀ ದೂರದಲ್ಲಿರುವ ಮಟಾಡಿ ರೇವಿಗೆ ಸಮುದ್ರ ನೌಕೆಗಳು ಕಾಂಗೋ ನದಿಯ ಮೂಲಕ ಬರುತ್ತವೆ. ಕೀನ್ಶಾಸ ನಗರಕ್ಕೂ ಮಟಾಡಿಗೂ ನಡುವೆ 1898ರಲ್ಲಿ ರಚನೆಯಾದ ರೈಲುಮಾರ್ಗವಿದೆ. ಈ ಭಾಗದಲ್ಲಿ ಕಾಂಗೋನದಿಯ ವೇಗ ಅಧಿಕವಾಗಿದ್ದು ಅನೇಕ ಜಲಪಾತಗಳಿರುವುದರಿಂದ ಇಲ್ಲಿ ನೌಕಾಯಾನ ಸಾಧ್ಯವಿಲ್ಲ.

ಕೀನ್ಶಾಸ ನಗರದಿಂದ ತೆಂಗಿನಕಾಯಿ, ಚೌಬೀನೆ, ಕಾಫಿ, ತವರ, ರಬ್ಬರ್, ದಂತ, ಸಕ್ಕರೆ ಮೊದಲಾದವು ರಫ್ತಾಗುತ್ತವೆ. ನಗರದಲ್ಲಿ ಹಲವು ಜವಳಿ ಗಿರಣಿಗಳಿವೆ. ಬಂದರಿನ ಬಳಿ ವನಸ್ಪತಿ ಎಣ್ಣೆ ಹಾಗೂ ಪೆಟ್ರೋಲ್ ದಾಸ್ತಾನು ಸ್ಥಳಗಳುಂಟು. ಕಾಂಗೋ ನದಿಯಲ್ಲಿ ಸಂಚರಿಸುವ ಹಡಗುಗಳ ಉಪಯೋಗಕ್ಕಾಗಿ ಮಟಾಡಿ–ಕೀನ್ಶಾಸ ನಗರಗಳ ನಡುವೆ ನದಿಯ ಅಂಚಿನಲ್ಲೇ ಪೆಟ್ರೋಲಿಯಂ ಎಣ್ಣೆಯ ಕೊಳವೆಯನ್ನು ಹಾಕಿದ್ದಾರೆ. ಅಂತಾರಾಷ್ಟ್ರೀಯ ಹಾಗೂ ಅಂತರ್ದೇಶೀಯ ಸಂಚಾರ ಸೌಕರ್ಯಕ್ಕಾಗಿ ಏರ್ಪಟ್ಟಿರುವ ವಿಮಾನ ನಿಲ್ದಾಣ ಈ ನಗರದ ಪೂರ್ವ ದಿಕ್ಕಿನಲ್ಲಿದೆ.

ಬೆಲ್ಜಿಯಂ ರಾಜ್ಯದ ಪರವಾಗಿ ಆಫ್ರಿಕದಲ್ಲಿ ವಸಾಹತುಗಳನ್ನು ಸ್ಥಾಪಿಸಲು ಎಚ್.ಎಂ ಸ್ಟ್ಯಾನ್‌ಲಿ 1887ರಲ್ಲಿ ಆಗಮಿಸಿದಾಗ ಇಲ್ಲಿ ಕೀನ್ಶಾಸ ಮತ್ತು ಕಿಂಟಾಂಬೊ ಎಂಬ ಎರಡು ಹಳ್ಳಿಗಳಿದ್ದುವು. ಕಿಂಟಾಂಬೊದಲ್ಲಿ ಆತ ಒಂದು ಕೋಠಿ ಸ್ಥಾಪಿಸಿ, ಈ ಸ್ಥಳವನ್ನು ತನ್ನ ದೊರೆಯಾದ 2ನೆಯ ಲೀಯೊಪೋಲ್ಡ್ ನ ಹೆಸರಿನಲ್ಲಿ ಲೀಯೊಪೋಲ್ಡ್ವಿಲ್ ಎಂದು ಕರೆದ. 1880ರ ದಶಕದಲ್ಲಿ ಇಲ್ಲಿ ಅನೇಕ ಕ್ರೈಸ್ತ ಮಿಷನ್ ಗಳೂ ವ್ಯವಹಾರ ಸಂಸ್ಥೆಗಳೂ ಸ್ಥಾಪಿತವಾದುವು. ಬೆಲ್ಜಿಯಂ ಕಾಂಗೋದ ರಾಜಧಾನಿಯನ್ನು ಬೋಮದಿಂದ ಇಲ್ಲಿಗೆ 1929ರಲ್ಲಿ ಬದಲಾಯಿಸಲಾಯಿತು. 1960ರಲ್ಲಿ ಇದು ನೂತನ ಗಣರಾಜ್ಯದ ರಾಜಧಾನಿಯಾಯಿತು.

**ಕೀನ್ಶಾಸ ಪ್ರಾಂತ್ಯ:** ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ಪಶ್ಚಿಮತಮ ಪ್ರಾಂತ್ಯ. ಇದಕ್ಕೆ ಕಿರಿದಾದ ಅಟ್ಲಾಂಟಿಕ್ ಸಾಗರತೀರವುಂಟು. ಪ್ರಾಂತ್ಯದ ವಿಸ್ತೀರ್ಣ 3,59,652 ಚ.ಕಿಮೀ; ಈ ಪ್ರಾಂತ್ಯದಲ್ಲಿ ಹರಿಯುವ ಕಾಂಗೋ ನದಿಯ ಪೂರ್ವಕ್ಕೆ ಕ್ವಾಂಗೋ ಮತ್ತು ಕ್ವಿಲೂ ಪ್ರಸ್ಥಭೂಮಿಗಳಿವೆ. ಲೇಯೋಪೋಲ್ಡ್ ಸರೋವರದ ಸುತ್ತ ದಟ್ಟವಾದ ಸಮಭಾಜಕೀಯ ಕಾಡುಗಳುಂಟು. ಪಶ್ಚಿಮದ ಬಾಸ್–ಕಾಂಗೋದಲ್ಲಿ ವರ್ಷಕ್ಕೆ ನಾಲ್ಕೈದು ತಿಂಗಳುಗಳ ಕಾಲ ಒಣಹವೆ ಇರುತ್ತದೆ; ಅಟ್ಲಾಂಟಿಕದ ಚಳಿಗಾಳಿ ಬೀಸುವುದರಿಂದ ಆಗ ಹವಾ ಬಹಳ ತಣ್ಣಗಿರುತ್ತದೆ.

ಕೀನ್ಶಾಸ ಪ್ರಾಂತ್ಯದ ಬಾಸ್–ಕಾಂಗೋ ಮತ್ತು ಮಯೂಂಬೆ ಪ್ರದೇಶಗಳಲ್ಲಿ ಜನಸಾಂದ್ರತೆ ಹೆಚ್ಚು. ಕೀನ್ಶಾಸ ನಗರ ಈ ಪ್ರಾಂತ್ಯದ ಆಡಳಿತ ಕೇಂದ್ರ. ಮಟಾಡಿ ಮತ್ತು ಬೋಮ–ಇವು ಈ ರೇವುಪಟ್ಟಣಗಳು. ಜಾಂಗೋದಲ್ಲಿ ಜಲವಿದ್ಯುತ್ ಕೇಂದ್ರವಿದೆ. 1962ರಲ್ಲಿ ಕೀನ್ಶಾಸ ಪ್ರಾಂತ್ಯವನ್ನು ಕಾಂಗೋ–ಮಧ, ಕಾಂಗೋ, ಕ್ವಿಲೂ ಮತ್ತು ಮೈ–ನ್ಡೊಂಬೆ ಎಂದು ವಿಭಾಗಿಸಲಾಯಿತು. (ವಿ.ಜಿ.ಕೆ.)

**ಕೀಬಲ್, ಜಾನ್ :** 1792–1866. ಇಂಗ್ಲಿಷ್ ಕವಿ, ಕ್ರೈಸ್ತಗುರು. ಗ್ಲೌಸ್ಟರ್ ಷೈರ್‌ನ ಫೇರ್‌ಫರ್ಡ್‌ನಲ್ಲಿ ಜನಿಸಿದ. ಆಕ್ಸ್‌ಫರ್ಡಿನ ಕಾರ್ಪಸ್ ಕ್ರಿಸ್ಟಿ ಕಾಲೇಜಿಗೆ ಹೋಗುವ ಮುನ್ನ ಪಾದ್ರಿಯಾದ ತಂದೆಯ ಬಳಿಯೇ ವಿದ್ಯಾಭ್ಯಾಸ ಮಾಡಿದ. ಕಾಲೇಜಿನಲ್ಲಿ ಥಾಮಸ್ ಆರ್ನಲ್ಡ್ ಮತ್ತು ಜಾನ್ ಟೇಲರ್ ಕೋಲ್‌ರಿಜ್ ಈತನ ಸಹಪಾಠಿಗಳು. ಇವರೇ ಈತನ ಜೀವನ ಚರಿತ್ರೆಯನ್ನು ಬರೆದಿದ್ದಾರೆ. 1810 ರಲ್ಲಿ ಆಕ್ಸ್‌ಫರ್ಡಿನಲ್ಲಿ ಮೊದಲ ದರ್ಜೆಯ ಎರಡು ಆನರ್ಸ್ ಪದವಿಗಳನ್ನು ಪಡೆದ ಮೇಲೆ ಓರಿಯಲ್ ಕಾಲೇಜಿನಲ್ಲಿ ಕೀಬಲ್ ಫೆಲೊ ಆಗಿ ನೇಮಕಗೊಂಡ. ಈತನ ಜೀವಿತಾದರ್ಶವೆಲ್ಲ ಕ್ರೈಸ್ತಗುರುವಿನ ಕೆಲಸವಾಗಿತ್ತು. 1815ರಲ್ಲೀತ ತನ್ನ ತಂದೆಗೆ ಸಹಾಯಕನಾಗಿ ನೇಮಕಗೊಂಡ. ಏತನ್ಮಧ್ಯೆ, ಕ್ರಿಶ್ಚಿಯನ್ ಇಯರ್ (1827) ಎಂಬ ಪವಿತ್ರ ಗೀತೆಗಳನ್ನು ಬರೆದು ಪ್ರಕಟಿಸಿದ. ಈ ಗೀತೆಗಳು ಕೀಬಲ್‌ಗೆ ಅಪಾರ

ಕೀರ್ತಿಯನ್ನು ತಂದುವು. ಅಲ್ಲದೆ ಆಕ್ಸ್‌ಫರ್ಡ್‌ನಲ್ಲಿ (1831) ಕಾವ್ಯ ವಿಭಾಗದ ಮುಖ್ಯಸ್ಥನಾಗಿ ಈತ ನೇಮಕಗೊಂಡು ಆ ಪದವಿಯಲ್ಲಿ 1841ರವರೆಗೂ ಮುಂದುವರಿದ. 1833ರಲ್ಲಿ ಪ್ರಕಟವಾದ ಈತನ ಉಪದೇಶ ಭಾಷಣಗಳನ್ನೊಳಗೊಂಡ ನ್ಯಾಷನಲ್ ಅಪಾಸ್ಟಸಿ ಎಂಬ ಗ್ರಂಥ ಇಂಗ್ಲಿಷ್ ಚರ್ಚಿನ ಕ್ರಾಂತಿಕಾರಕ ಬದಲಾವಣೆಗಳಿಗೆ ಕಾರಣವಾಯಿತು. ತಂದೆಯ ಕಾಲಾನಂತರ ಈತ 1836ರಲ್ಲಿ ವಿಂಚೆಸ್ಟರ್ ಬಳಿಯಿರುವ ಹರ್‌ಸ್ಲೆಯ ಪಾದ್ರಿ ಪದವಿಯನ್ನು ಸ್ವೀಕರಿಸಿ ತನ್ನ ಜೀವಿತವನ್ನೆಲ್ಲ ಅಲ್ಲೇ ಕಳೆದ. 1846ರಲ್ಲಿ ಲೈರ ಇನೊಸೆಂಟಿಯಂ ಎಂಬ ಕವನ ಸಂಕಲನವನ್ನು ಪ್ರಕಟಿಸಿದ. ಈತನ ಮರಣಾನಂತರ ಲೆಟರ್ಸ್ ಆಫ್ ಸ್ಪಿರಿಚ್ಯುಯಲ್ ಕಾನ್ಸಲ್ ಮತ್ತು 12 ಸಂಪುಟಗಳ ಪ್ಯಾರಿಷ್ ಸರ್‌ಮನ್ಸ್ ಪ್ರಕಟಗೊಂಡುವು. 1869ರಲ್ಲಿ ಆಕ್ಸ್‌ಫರ್ಡ್‌ನಲ್ಲಿ ಈತನ ಜ್ಞಾಪಕಾರ್ಥವಾಗಿ ಕೀಬಲ್ ಕಾಲೇಜನ್ನು ಸ್ಥಾಪಿಸಲಾಯಿತು. ಕೀಬಲ್ ಆಕ್ಸ್‌ಫರ್ಡಿನ ಕ್ರೈಸ್ತಗುರುಗಳಲ್ಲಿ ಖುಷಿಯಂತೆ ಬಾಳಿದನಲ್ಲದೆ ಅಂದಿನ ಇಂಗ್ಲಿಷ್ ಜನಾಂಗಕ್ಕೆ ನಿಜವಾದ ಧರ್ಮಪ್ರವರ್ತಕನೆನಿಸಿದ್ದ. *

**ಕೀಬಲ್, ರಾಬರ್ಟ್ :** 1887–1927, ಇಂಗ್ಲಿಷ್ ಕಾದಂಬರಿಗಾರ. ಬೆಡ್‌ಫರ್ಡ್‌ಷೈರಿನಲ್ಲಿ ಜನಿಸಿದ ಈತನ ಪ್ರೌಢವ್ಯಾಸಂಗ ಕೇಂಬ್ರಿಜ್‌ನಲ್ಲಾಯಿತು. 1911ರಲ್ಲಿ ಕ್ರೈಸ್ತ ಧರ್ಮಬೋಧಕನಾಗಿ ದೀಕ್ಷೆಪಡೆದು ಆಫ್ರಿಕದ ದೇಶಗಳಲ್ಲಿ ಧರ್ಮಪ್ರಸಾರಕನಾಗಿ ಸಂಚರಿಸಿದ. ಬಸುಟೋಲ್ಯಾಂಡ್‌ನ ಲೆರಿಬ್ ಎಂಬಲ್ಲಿ ಚರ್ಚಿನ ಮುಖ್ಯಸ್ಥನಾದ. ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿದ. ದಕ್ಷಿಣ ಆಫ್ರಿಕದ ಸೇನೆಯಲ್ಲಿ ಧರ್ಮಗುರುವಾಗಿ ಸೇವೆ ಸಲ್ಲಿಸಿದ. ಆ ದಿನಗಳ ತನ್ನ ಅನುಭವಗಳನ್ನೆಲ್ಲ ಸೇರಿಸಿ ಸ್ಟ್ಯಾಂಡಿಂಗ್ ಬೈ ಎಂಬ ಪ್ರಥಮ ಕಾದಂಬರಿಯನ್ನು ಬರೆದು 1919ರಲ್ಲಿ ಪ್ರಕಟಿಸಿದ. ಈ ಕೃತಿಗೆ ಸಿಕ್ಕ ಪ್ರೋತ್ಸಾಹದಿಂದ 1921ರಲ್ಲಿ ಮತ್ತೊಂದು ಕಾದಂಬರಿಯನ್ನು ಬರೆದ. ಅದರ ಹೆಸರು ಸೈಮನ್ ಕಾಲ್ಡ್ ಪೀಟರ್. ಕೀಬಲ್ ಇದರಲ್ಲಿ ಕ್ರೈಸ್ತಧರ್ಮದ ಬಗ್ಗೆ ಇದ್ದ ತನ್ನ ನಂಬಿಕೆ ಶ್ರದ್ಧೆಗಳನ್ನು ಕಳೆದುಕೊಂಡ ಬಗೆಯನ್ನು ನಿವೇದಿಸಿದ್ದ. ಈ ಪುಸ್ತಕ ವಾಚಕವೃಂದದಲ್ಲಿ ದೊಡ್ಡ ಕೋಲಾಹಲವನ್ನೆಬ್ಬಿಸಿ ಬಹು ಪ್ರಸಿದ್ಧವಾಯಿತು. ಕಾದಂಬರಿಕಾರನಿಗೆ ಅಪಾರವಾದ ಖ್ಯಾತಿಯೂ ಹಣವೂ ಲಭಿಸಿದವು. ಈ ಕಾದಂಬರಿಯ ಮುಂದಿನಭಾಗ ಎಂಬಂತೆ ಬಂದ ರಿಕಾಂಪೆನ್ಸ್ (1925) ಅಷ್ಟು ಜನಪ್ರಿಯವಾಗಲಿಲ್ಲ.

ಆರೋಗ್ಯ ಕಾರಣಗಳಿಗಾಗಿ ಕೀಬಲ್ ದಕ್ಷಿಣ ಸಾಗರದ ದ್ವೀಪವೊಂದರ ಆರೋಗ್ಯ ಧಾಮಕ್ಕೆ ಹೋಗಿ ನೆಲಸಿದ ಮೇಲೆ 1926ರಲ್ಲಿ ತಾಹಿತಿ, ಐಲ್ ಆಫ್ ಡ್ರೀಮ್ಸ್ ಮತ್ತು ದಿ ಗ್ರೇಟ್ ಗೆಲಿಲಿಯನ್ ಎಂಬ ಮೂರು ಕಾದಂಬರಿಗಳನ್ನು ಬರೆದ. ತನ್ನ ಧರ್ಮದ ಬಗ್ಗೆ ಈತನಿಗೆ ಮೊದಲು ಶ್ರದ್ಧೆ ಉಂಟಾದುದೂ ಕಡೆಯಲ್ಲಿ ಅದು ಕಳೆದುಹೋದುದೂ ಹಾಗಿರಲಿ, ಇವನು ಬರೆದ ಕಾದಂಬರಿಗಳಲ್ಲೆಲ್ಲ ಆ ಧರ್ಮ ಬೋಧಕ ಮನೋಧರ್ಮ ಅಚ್ಚೊತ್ತಿರುವುದು ಕಂಡುಬರುತ್ತದೆ. (ಕೆ.ಬಿ.ಪಿ.ಎಚ್.ವಿ.ಎಸ್.)

**ಕೀರಫ್ :** ರಷ್ಯನ್ ಸೋವಿಯತ್ ಗಣರಾಜ್ಯದ ಆಬ್ಲಾಸ್ಟ್ (ಆಡಳಿತ ವಿಭಾಗ) ಮತ್ತು ಆ ವಿಭಾಗದ ಮುಖ್ಯಪಟ್ಟಣ. ಐರೋಪ್ಯ ರಷ್ಯದ ಈಶಾನ್ಯದಲ್ಲಿ, ವ್ಯಟ್ಕ ನದೀಪ್ರದೇಶವನ್ನೆಲ್ಲ ಹೆಚ್ಚು ಕಡಿಮೆ ಆವರಿಸಿಕೊಂಡಿರುವ ಕೀರಫ್ ಆಬ್ಲಾಸ್ಟಿನ ವಿಸ್ತೀರ್ಣ 123289 ಚ.ಕಿಮೀ ನದಿಯಲ್ಲಿ ಹರಿದು ಬಂದ ನೀರ್ಗಲ್ಲ ಪ್ರವಾಹದೊಂದಿಗೆ ಬಂದು ಹರಡಿದ ಮುರುಕಲುಗುಪ್ಪೆಯಿಂದಾದ ನೆಲದಿಂದ ಕೂಡಿದ ಕೀರಫ್ ಮೈದಾನದ ಎತ್ತರದ ಭಾಗ ಸುಣ್ಣಕಲ್ಲಿನಿಂದ ಕೂಡಿದ್ದು ನಡುನಡುವೆ ನದಿಗಳ ಆಳವಾದ ಕೊರೆತಕ್ಕೆ ಈಡಾಗಿದೆ. ಬಹುತೇಕ ಇಡೀ ಪ್ರದೇಶದಲ್ಲಿ ಟೈಗ ಕಾಡುಗಳುಂಟು. ಇಲ್ಲಿ ಪೈನ್, ಫರ್, ಸ್ಪ್ರೂಸ್ ಮತ್ತು ಬರ್ಚ್ ಬೆಳೆಯುತ್ತವೆ. ಅತ್ಯಂತ ದಕ್ಷಿಣದಲ್ಲಿ ಪರ್ಣಪಾತಿ ವೃಕ್ಷಗಳುಂಟು. ಇಲ್ಲಿ ಓಕ್ ಸಾಮಾನ್ಯ. ಅಲ್ಲಲ್ಲಿ ವಿಶಾಲವಾದ ಸಸ್ಯಾಂಗಾರಪೂರಿತ ನೆಲವೂ ಜವುಗು ಭೂಮಿಯೂ ಇವೆ. ತಗ್ಗು ನೆಲಗಳಲ್ಲಿ ಹುಲ್ಲುಗಾವಲುಗಳಿವೆ. ಇಲ್ಲಿಯ ಮಣ್ಣು ಬೀಳುಬೂದು ಬಣ್ಣವುಳ್ಳದ್ದು. ಇಲ್ಲಿಯದು ಖಂಡಾಂತರ ವಾಯುಗುಣ. ಜನವರಿಯ ಉಷ್ಣತೆ: – 16° ಸೆಂ. (4° ಫ್ಯಾ.) ಜುಲೈ ತಿಂಗಳಿನದು 17°ಸೆಂ. ವಾರ್ಷಿಕ ಮಳೆ 40–48 ಸೆಂಮೀ. ಅರಣ್ಯಾಧಾರಿತ ಕಸಬುಗಳು ಹಿಂದಿನಿಂದಲೂ ಪ್ರಮುಖವಾಗಿವೆ. ಅಣೆಕಟ್ಟು, ಬೊಂಬೆ ಮತ್ತು ಕಲಾಬತು ಕೆಲಸಗಳ ಬದಲು ಈಗ ಮರದ ತಿರುಳು. ವೆನೀರ್ ವನಸ್ಪತಿ ರಸಾಯನ, ಮರಕೊಯ್ತ– ಮುಂತಾದ ಉದ್ಯಮಗಳು ಬೆಳೆದಿವೆ. ಕೃಷಿ ಅಷ್ಟೇನೂ ಮುಖ್ಯವಲ್ಲ. ರೈ, ಓಟ್ಸ್, ಬಕ್‌ವ್ಹೀಟ್ ಮತ್ತು ಆಲೂಗೆಡ್ಡೆ ಇಲ್ಲಿಯ ಬೆಳೆಗಳು. ಹಂದಿಗಳನ್ನೂ ದನಕರುಗಳನ್ನೂ ಸಾಕುತ್ತಾರೆ. ಕೀರಫ್‌ನ ಜನಸಂಖ್ಯೆಯಲ್ಲಿ ಒಟ್ಟು ಶೇ. 37 ರಷ್ಟು ಜನ ಪಟ್ಟಣವಾಸಿಗಳು. ಕೀರಫ್ ಆಬ್ಲಾಸ್ಟಿನಲ್ಲಿ 16 ಪಟ್ಟಣಗಳೂ 29 ಪಟ್ಟಣಜಿಲ್ಲೆಗಳೂ ಇವೆ. ಕೀರಫ್ ನಗರವಲ್ಲದೆ ಸ್ಲೊಬೋಡ್‌ಸ್ಕಿ ಮತ್ತು ಕೋಟೆಲ್ ನಿಚ್ ದೊಡ್ಡ ನಗರಗಳು.

ಕೀರಫ್ ನಗರಕ್ಕೆ ಹಿಂದೆ ವ್ಯಟ್ಕ ಎಂಬ ಹೆಸರಿತ್ತು. ಇದು ವ್ಯಟ್ಕ ನದಿಯ ಬಲದಂಡೆಯ ಮೇಲಿದೆ. ಇಲ್ಲಿಂದ ಮಾಸ್ಕೋಗೆ 720 ಕಿಮೀ ದೂರ. 1181 ರಲ್ಲಿ ನಾವ್ ಗರಾಡಿನ ವರ್ತಕರು ಈ ನಗರವನ್ನು ನಾಫ್ ಎಂಬ ಹೆಸರಿನಲ್ಲಿ ಸ್ಥಾಪಿಸಿದರು. ಇದು ವ್ಯಟ್ಕ ಪ್ರದೇಶದ ಕೇಂದ್ರವಾಯಿತು. 14–15 ನೆಯ ಶತಮಾನಗಳಲ್ಲಿ ರಷ್ಯನರು ಇಲ್ಲಿ ನೆಲೆಸಿದರು. 1489ರಲ್ಲಿ ಮಾಸ್ಕೋ ಇದನ್ನು ವಶಪಡಿಸಿಕೊಂಡಿತು. ವ್ಯಟ್ಕ ಎಂಬ ಹೆಸರು ಇದಕ್ಕೆ ಬಂದದ್ದು 1780ರಲ್ಲಿ. ಮುಖ್ಯ ಮಾರ್ಗಗಳಿಗೆ ದೂರದಲ್ಲಿದ್ದುದರಿಂದ ಇದರ ಬೆಳೆವಣಿಗೆ ನಿಧಾನವಾಗಿತ್ತು. ದೇಶಾಂತರ ಶಿಕ್ಷೆಗೆ ಒಳಗಾದವರನ್ನು ಇಲ್ಲಿಗೆ ಕಳುಹಿಸಲಾಗುತ್ತಿತ್ತು. 1906ರಲ್ಲಿ ಕೂಡ ಇಲ್ಲಿಂದ ಮಾಸ್ಕೋಗೆ ನೇರ ರೈಲ್ವೆ ಸಂಪರ್ಕ ಇರಲಿಲ್ಲ. ಈಗ ಇಲ್ಲಿಂದ ಬೇರೆಡೆಗಳಿಗೆ ರೈಲು ಮಾರ್ಗಗಳ ನಿರ್ಮಾಣವಾಗಿದೆ. ಹಳೆಯ ಕುಶಲ ಕಸಬುಗಳ ಬದಲು ಆಧುನಿಕ ಸಹಕಾರ ಕೈಗಾರಿಕೆಗಳು ಸ್ಥಾಪಿತವಾಗಿವೆ. ಕ್ರೋಮಿಯಂ ಮತ್ತು ಕಬ್ಬಿಣೇತರ ಲೋಹ ಕೈಗಾರಿಕೆಗಳು, ಯಂತ್ರ ತಯಾರಿಕೆ, ಮಾಪನೋಪಕರಣಗಳು, ಕೃಷಿ ಉಪಕರಣಗಳು. ಮರಗೆಲಸ, ಬೆಂಕಿಕಡ್ಡಿ, ಪಾದರಕ್ಷೆ ಮತ್ತು ಕೃತಕ ಚರ್ಮ ಉತ್ಪಾದನಾ ಕೈಗಾರಿಕೆಗಳು ಬೆಳೆದಿವೆ.

ರಷ್ಯನ್ ಕ್ರಾಂತಿಕಾರ ಅಲೆಕ್ಸಾಂಡರ್ ಇವಾನೊವಿಚ್ ಹರ್ಟ್‌ಸೆನ್ (1812–70) ದೇಶಭ್ರಷ್ಟನಾಗಿ ಕೀರಫ್‌ನಲ್ಲಿದ್ದಾಗ ಶಿಕ್ಷಕ ಶಿಕ್ಷಣ ಸಂಸ್ಥೆ ಮತ್ತು ಕೃಷಿ ಸಂಸ್ಥೆಗಳನ್ನು ಸ್ಥಾಪಿಸಿದ. ಬಾಲ್ಷೆವಿಕ್ ನಾಯಕ ಎಸ್. ಎಂ. ಕೀರಫನ ಹೆಸರನ್ನು ಈ ನಗರಕ್ಕೆ ಇಡಲಾದ್ದು 1934ರಲ್ಲಿ. ಕೀರಫ್ ಒಂದು ಮುಖ್ಯ ರೈಲ್ವೆ ಸಂಧಿಸ್ಥಳ. (ಕೆ.ಎನ್.ಸಿ.)

**ಕೀರೆಸೊಪ್ಪಿನ ಗಿಡ :** ಅಮರಾಂತೇಸಿ ಕುಟುಂಬಕ್ಕೆ ಸೇರಿದ ಅಮರಾಂತಸ್ ವಿರಿಡಿಸ್ ಎಂಬ ವೈಜ್ಞಾನಿಕ ಹೆಸರಿನ ಏಕವಾರ್ಷಿಕ ಪರ್ಣಸಸಿ. ಇದರ ಸೊಪ್ಪು ಅಗ್ಗವಾದ ತರಕಾರಿಯೆನಿಸಿದೆ. ಆರೋಗ್ಯದೃಷ್ಟಿಯಿಂದ ಇದು ಉತ್ಕೃಷ್ಟವಾದ ತರಕಾರಿ. ಇದು ಸುಮಾರು ಒಂದು ಅಡಿ ಎತ್ತರಕ್ಕೆ ಬೆಳೆಯುತ್ತದೆ. ಎಲೆಗೆ ತೊಟ್ಟು ಇದೆ; ಆಕಾರ ಕರನೆಯಂತೆ; ನಯವಾದ ಅಂಚು ಇದೆ; ತುದಿ ಮೊನಚು. ಎಲೆ ಹಸಿರಾಗಿದ್ದು ನಾಳರಚನೆ ತಳಭಾಗದಲ್ಲಿ ಪ್ರಧಾನವಾಗಿ ಕಾಣುತ್ತಿರುತ್ತದೆ. ಹೂಗಳು ಸ್ಪೈಕ್ ಮಾದರಿಯ ಗೊಂಚಲಿನಲ್ಲಿ ಸಮಾವೇಶಗೊಂಡಿವೆ.

ಬೇಸಾಯ : ವರ್ಷದ ಎಲ್ಲ ಕಾಲದಲ್ಲೂ ಬೆಳೆಸಬಹುದಾದ ಕೀರೆಸೊಪ್ಪು ಭಾರತದಲ್ಲಿ ಬಡವಬಲ್ಲಿದರೆನ್ನದೆ ಎಲ್ಲರೂ ಬಳಸುವ ಜನಪ್ರಿಯ ತರಕಾರಿ. ಬೀಜ ಬಿತ್ತಿದ ಒಂದು ತಿಂಗಳಿಗೆ ಸೊಪ್ಪು ಬರುವುದರಿಂದ ಇದನ್ನು ತೋಟಗಳಲ್ಲಿ ಹೇಗೋ ಹಾಗೆ ಮನೆಯ ಕೈತೋಟಗಳಲ್ಲೂ ಹಿತ್ತಿಲಲ್ಲೂ ಬೆಳೆಸುವರು. ಚೆನ್ನಾಗಿ ಹದಮಾಡಿದ ಭೂಮಿಯನ್ನು ಅನುಕೂಲಕ್ಕೆ ತಕ್ಕ ಹಾಗೆ ಪಾತಿ ಮಾಡಿ ಅವುಗಳಲ್ಲಿ ಕೀರೆ ಬೀಜವನ್ನು ಬಿತ್ತಬೇಕು. 5–6 ದಿವಸಗಳಲ್ಲಿ ಅವು ಮೊಳೆಯುತ್ತವೆ. ಆಲೂಗಡ್ಡೆ, ಈರುಳ್ಳಿ ಮುಂತಾದುವುಗಳೊಡನೆ ಮಿಶ್ರ ಬೆಳೆಯಾಗಿ ಬಿತ್ತಿದ ಕೀರೆ ಸಸ್ಯಗಳನ್ನು ಬೇರುಸಮೇತ ಕೀಳುತ್ತಾರೆ. ಪಾತಿಗಳಲ್ಲಿ ಶುದ್ಧ ಬೆಳೆಯಾಗಿ ಬಿತ್ತಿದ ಕೀರೆಸಸ್ಯವನ್ನು ಭೂಮಿಯ ಮೇಲುಭಾಗದಲ್ಲಿ 1" ಬಿಟ್ಟು ಕುಯ್ಯುತ್ತಾರೆ. ಅದು ಮತ್ತೆ ಚಿಗುರಿ ಸೊಪ್ಪಾಗುತ್ತದೆ. ಚಿಗುರನ್ನು ಇದೇ ರೀತಿ ಕುಯ್ಯಬಹುದು. ಕೀರೆಯ ಬೇರುಗಳನ್ನು ಸಹ ತರಕಾರಿಯಾಗಿ ಉಪಯೋಗಿಸಬಹುದು. (ಎಂ.ಎಚ್.ಎಂ.)

**ಕೀರ್ಕೆಗಾರ್ಡ್, ಸೋರೆನ್ ಆಬ್ಯೆ :** 1813–55. ಡೇನಿಷ್ ತತ್ತ್ವಜ್ಞಾನಿ. ಧರ್ಮಜಿಜ್ಞಾಸು ಮತ್ತು ಲೇಖಕ. ಹುಟ್ಟಿದ್ದು ಡೆನ್ಮಾರ್ಕಿನ ಕೋಪೆನ್‌ಹೇಗೆನ್‌ನಲ್ಲಿ. ತಂದೆ ಮೈಕೇಲ್‌ನ ಏಳನೆಯ ಹಾಗೂ ಕೊನೆಯ ಮಗ. ಈತನ ಜೀವಿತದ ಮೇಲೆ ತಂದೆಯ ಪ್ರಭಾವ ಅನೇಕ ರೀತಿಯಲ್ಲಿ ಆಗಿದೆ. ವಂಶಪಾರಂಪರ್ಯವಾಗಿ ಬಂದ ಧಾರ್ಮಿಕ ಪ್ರಜ್ಞೆ, ತರ್ಕಶಾಸ್ತ್ರ ಬಗೆಗಿನ ವಿವೇಚನೆ, ಧಾರ್ಮಿಕ ಜೀವನಕ್ಕೆ ಬೇಕಾದ ಅಗತ್ಯ– ಇವೆಲ್ಲವನ್ನೂ ಕೀರ್ಕೆಗಾರ್ಡ್ ತಂದೆಯಿಂದ ಪಡೆದ. ಈತನ ಮೇಲೆ ತಾಯಿ ಅನ್ನೆ ಲುಂಡಳ ಪ್ರಭಾವ ಅತ್ಯಲ್ಪ . ಬಾಲ್ಯದಲ್ಲಿ ಯಾವ ಎರಿಳಿತಗಳನ್ನೂ ಕಾಣದೆ ಬೆಳೆದ ಈತ 1821ರಲ್ಲಿ ಗ್ರಾಮರ್ ಸ್ಕೂಲಿಗೆ ದಾಖಲಾದ. 1830ರಲ್ಲಿ ಮೆಟ್ರಿಕ್ ಪಾಸು ಮಾಡಿದ. 1837ರಲ್ಲಿ ಲ್ಯಾಟಿನ್ ಕಲಿತ. 1838ರಲ್ಲಿ ತನ್ನ ತಂದೆಯ ಸಾವಿನಿಂದ ಬಹುವಾಗಿ ನೊಂದ. ಅಲ್ಲಿಗೇ ಅವನ ವಿದ್ಯಾಭ್ಯಾಸ ನಿಂತಿತು. 1840ರಲ್ಲಿ ಕೋಪೆನ್‌ಹೇಗೆನ್ ವಿಶ್ವವಿದ್ಯಾನಿಲಯದಲ್ಲಿ ವೇದಾಂತ ವಿಷಯದಲ್ಲಿ ಪದವಿ ಪಡೆದ. ದಿ ಕಾನ್ಸೆಪ್ಟ್ ಆಫ್ ಐರನಿ ಎಂಬ ಪ್ರಬಂಧ ಬರೆದು ಎಂ.ಎ. ಪದವಿ ಪಡೆದ. ಆ ಗ್ರಂಥ 1841ರಲ್ಲಿ ಪ್ರಕಟಗೊಂಡಿತು. ಅನಂತರ ಎರಡು ವರ್ಷಗಳ ಕಾಲ ಜರ್ಮನಿಯಲ್ಲಿ ಸುತ್ತಾಡಿದ. 1843ರಲ್ಲಿ ಪ್ರಕಟಿಸಿದ ಐದರ್–ಆರ್, ರೆಪಿಟಿಷನ್, ಫಿಯರ್ ಅಂಡ್ ಟ್ರೆಂಬ್ಲಿಂಗ್ ಎಂಬ ಗ್ರಂಥಗಳ ಪ್ರಕಟಣೆಯಿಂದ ದೊಡ್ಡ ತತ್ತ್ವಜ್ಞಾನಿಯೆಂದು ಖ್ಯಾತಿ ಪಡೆದ. 1845ರಲ್ಲಿ ಸ್ಟೇಜಸ್ ಆನ್ ಲೈಫ್ಸ್ ವೇ ಮತ್ತು ಇತರ ಕೆಲವು ಗ್ರಂಥಗಳನ್ನು ಪ್ರಕಟಿಸಿದ. ಅವುಗಳಲ್ಲಿ ಕ್ರೈಸ್ತಧರ್ಮದ ಮೂಲಭೂತ ತತ್ತ್ವಗಳನ್ನು ಚರ್ಚಿಸಿದ್ದ, ಮಾನವನ ನಿಯಮಿತ ಜೀವನಕ್ಕೆ ಬೇಕಾದ ಸೌಂದರ್ಯ ತತ್ತ್ವಗಳನ್ನು ತಿಳಿಸಿದ್ದ, ಮನುಷ್ಯ ತನ್ನಲ್ಲಿಯೇ ತಾನು ಸತ್ಯವನ್ನು ಕಂಡುಕೊಳ್ಳಬೇಕೆಂದು ವಿವರಿಸಿದ. ಅನಂತರ ಡೇನಿನ ನ್ಯಾಷನಲ್ ಚರ್ಚಿನ ವಿರುದ್ಧ ಹೋರಾಟ ನಡೆಸಿದ. ಇದರಿಂದಾಗಿ ಈತನನ್ನು ಕ್ರೈಸ್ತ ಅಸ್ತಿತ್ವವಾದಿಗಳ ಗುಂಪಿಗೆ ಸೇರಿಸಲಾಯಿತು. 1846ರಿಂದ 1848ರ ವರೆಗೆ ಕನ್‌ಕ್ಲೂಡಿಂಗ್ ಆನ್ ಸೈಂಟಿಫಿಕ್ ಪೋಸ್ಟ್ ಸ್ಕ್ರಿಪ್ಟ್, ದಿ ಸಿಕ್‌ನೆಸ್ ಅನ್ ಟು ಡೆತ್, ಟ್ರೈನಿಂಗ್ ಇನ್ ಕ್ರಿಶ್ಚಿಯಾನಿಟಿ, ಫಾರ್

ಸೆಲ್ಫ್-ಎಕ್ಸಾಮಿನೇಷನ್, ಜಜ್ ಫಾರ್ ಯುವರ್ ಸೆಲ್ವ್ಸ್ ಮುಂತಾದ ಧಾರ್ಮಿಕ ಗ್ರಂಥಗಳನ್ನು ರಚಿಸಿದ. 1855ರಲ್ಲಿ ಆರ್ಥಿಕ ದೃಷ್ಟಿಯಿಂದ ಬಹಳ ದುಃಸ್ಥಿತಿಯಲ್ಲಿದ್ದ. ಅದೇ ವರ್ಷ ನವೆಂಬರ್ ತಿಂಗಳಲ್ಲಿ ಕೊಪೆ ಹೇಗೆನ್‍ನಲ್ಲಿ ನಿಧನನಾದ.

ಕೀರ್ಕ್‍ಗಾರ್ಡ್ ಯಾವೊಂದು ಪಂಥವನ್ನಾಗಲಿ ಅಥವಾ ಶಿಷ್ಯಸಮೂಹವನ್ನಾಗಲಿ ಬಿಟ್ಟುಹೋಗಲಿಲ್ಲ. ಇವನ ಎಲ್ಲ ಪುಸ್ತಕಗಳು ಕ್ರೈಸ್ತಧರ್ಮದ ಅರಿವಿಗೆ ದಾರಿ ಮಾಡಿಕೊಡುತ್ತವೆ. ಅವು ಮಾನವನ ಆಲೋಚನಾ ಶಕ್ತಿಯನ್ನು, ಸೌಂದರ್ಯ ಪ್ರಜ್ಞೆಯನ್ನು, ಪ್ರತಿಯೊಬ್ಬನೂ ತನ್ನ ಕಾಲಮೇಲೆ ನಿಲ್ಲಲು ಬೇಕಾದ ನೈತಿಕ ಜೀವನವನ್ನು ಬೋಧಿಸುತ್ತವೆ. ಹೆನ್ರಿಕ್ ಇಬ್ಸನ್, ಆಂಟೋನ್ ಚೆಕಾಫ್ ಮೊದಲಾದವರು ಈತನ ತತ್ತ್ವಗಳನ್ನು ಬಹಳವಾಗಿ ಮೆಚ್ಚಿದವರು. ಒಂದನೆಯ ಮಹಾಯುದ್ಧದ ಅನಂತರ ಕೀರ್ಕ್‍ಗಾರ್ಡ್‍ನ ತತ್ತ್ವಗಳಿಂದ ಪ್ರಾಟೆಸ್ಟಂಟ್ ಮತ ಪುನರಜ್ಜೀವನಗೊಂಡಿತು. ಈ ಎರಡು ಮಹಾಯುದ್ಧಗಳ ನಡುವೆ ಜರ್ಮನಿ ಮತ್ತು ಫ್ರಾನ್ಸ್ ದೇಶಗಳಲ್ಲಿ ಹೊಸದೊಂದು ತತ್ತ್ವ ಹುಟ್ಟಿತು. ಅದೇ ಅಸ್ತಿತ್ವವಾದ. ಈ ವಾದ ಬಹುಮಟ್ಟಿಗೆ ಕೀರ್ಕ್‍ಗಾರ್ಡ್‍ನ ತತ್ತ್ವಗಳಿಂದ ಅಸ್ತಿತ್ವಕ್ಕೆ ಬಂದುದು. **(ನೋಡಿ- ಅಸ್ತಿತ್ವವಾದ)**

*

**ಕೀರ್ತನ ಕಲೆ :** ಪುರಾಣಶ್ರವಣಕ್ಕಿಂತ ಹೆಚ್ಚು ಜನಪ್ರಿಯವಾಗಿರುವ ಒಂದು ಸಾಂಸ್ಕೃತಿಕ ಹವ್ಯಾಸ. ಹರಿಕಥೆ, ಶಿವಕಥೆ, ಜಿನಕಥೆ-ಮೊದಲಾದ ಹೆಸರುಗಳಿಂದ ಪ್ರಸಿದ್ಧವಾಗಿದೆ. ಕಥಾಕಾಲಕ್ಷೇಪ ಎಂದು ಹೇಳುವುದೂ ಉಂಟು. ವಿಷಯ ಕಥಾಕಾಲಕ್ಷೇಪವಾದರೆ ಶ್ರೋತೃಗಳನ್ನು ಭಗವದ್‍ಭಕ್ತರೆಂದೂ ಕಥೆ ಹೇಳುವವರನ್ನು ದಾಸರು, ಭಾಗವತರೂ ಎಂದೂ ಹೇಳುವುದು ವಾಡಿಕೆ. ಭಗವನ್ನಾಮ ಸಂಕೀರ್ತನವೇ ಇಲ್ಲಿ ಪ್ರಧಾನವಾದುದರಿಂದ ಈ ಹವ್ಯಾಸವನ್ನು ಕೀರ್ತನವೆಂದೂ ಇದನ್ನು ನಿರ್ವಹಿಸುವವರನ್ನು ಕೀರ್ತನಕಾರರೆಂದೂ ಕರೆಯುತ್ತಾರೆ. ಈ ಕಲೆ ಸಾಕಷ್ಟು ಪ್ರಾಚೀನವಾದುದಾದರೂ ಇದರ ಉಗಮ, ಚರಿತ್ರೆಗಳನ್ನು ತಿಳಿಸುವ ಲಿಖಿತ ದಾಖಲೆಗಳಾವುವೂ ದೊರೆತಿಲ್ಲ. ನವವಿಧ ಭಕ್ತಿಗಳಲ್ಲಿ ಕೀರ್ತನವೂ ಒಂದೆನಿಸಿದ್ದು ಅದರ ಮೂಲಕ ದೇವರ ಸೇವೆ ಮಾಡುವ ಪದ್ಧತಿ ಬಹು ಪ್ರಾಚೀನವಾದುದಂತೂ ಹೌದು.

ಇತಿಹಾಸದ ಪ್ರಸಿದ್ಧ ವಿಷಯಗಳನ್ನೋ ಪುರಾಣಕಾವ್ಯಾದಿಗಳ ಭಾಗಗಳನ್ನೋ ರಾಗವಾಗಿ ಓದುವ ವ್ಯಾಖ್ಯಾನಿಸುವ ಕ್ರಮ ಬಹಳ ಹಿಂದಿನಿಂದ ನಡೆದುಬಂದಿದೆ: ಆದಿಕವಿ ವಾಲ್ಮೀಕಿಯ ಶ್ರೀಮದ್ ರಾಮಾಯಣವನ್ನು ಮೊದಲು ಪ್ರಕಾಶಕ್ಕೆ ತಂದವರು ಅದನ್ನು ಮಧುರವಾಗಿ ಹಾಡುತ್ತ ಹೊರಟ ಕುಶಲವರು. ಪುರಾಣಗಳನ್ನು ಹೇಳುವ ಸೂತಪುರಾಣಿಕರೂ, ಶೌನಕರೂ, ವೈಶಂಪಾಯನ ಮುಂತಾದವರೂ ಆ ಪುರಾಣಗಳಷ್ಟೇ ಪ್ರಸಿದ್ಧರಾಗಿದ್ದಾರೆ. ಹೀಗೆಯೇ ಪ್ರಸಿದ್ಧರಾದ ರಾಜರ ಚರಿತ್ರೆಯನ್ನೂ ವೀರವತ್ತಾದ ಘಟನೆಗಳನ್ನೂ ವರ್ಣಿಸುವ ಗಾಥಾಗಳನ್ನು (ಹಾಡು ಗಬ್ಬಗಳು) ಜನತೆಯ ಅಪೇಕ್ಷೆಯಂತೆ ಹಾಡುತ್ತಿದ್ದುದೂ ಉಂಟು. ಪುರಾಣಗಳನ್ನು ರಾಗವಾಗಿ ಓದಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಹೇಳುವ ಪೌರಾಣಿಕರು ದೇಶದಲ್ಲೆಲ್ಲ ಇದ್ದಿರಬೇಕು. ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಗುಡಿಯ ಮಂಟಪಗಳಲ್ಲಿಯೂ ಅಶ್ವತ್ಥಕಟ್ಟೆಗಳಲ್ಲಿಯೂ ಕುಳಿತು ಇವುಗಳ ಅನುವಾದ, ರಸನಿರೂಪಣೆಗಳನ್ನು ಪೌರಾಣಿಕರು ಮಾಡುತ್ತಿದ್ದರೆಂದು ತೋರುತ್ತದೆ. ಅದನ್ನು ಕೇಳುವ ಜನ, ಪ್ರಾಚೀನ ಕಥೆಗಳನ್ನೂ ಉಪಾಖ್ಯಾನಗಳನ್ನೂ ಆಸ್ವಾದಿಸಿ ಮನರಂಜನೆ ಪಡೆಯುತ್ತಿದ್ದುದು ಮಾತ್ರವಲ್ಲದೆ, ಪುರಾಣಿಕರು ವಿವರಿಸುತ್ತಿದ್ದ ಅನೇಕ ಶಾಸ್ತ್ರೀಯ ಮತ್ತು ತಾತ್ತ್ವಿಕ ವಿಷಯಗಳಿಂದ ಸಾಕಷ್ಟು ಲೋಕಾನುಭವವನ್ನು ಜ್ಞಾನವನ್ನೂ ಪಡೆಯುತ್ತಿದ್ದರು. ಆ ಕಾಲದಲ್ಲಿ ಮುದ್ರಣ ಸೌಕರ್ಯವಿರಲಿಲ್ಲ. ಹಸ್ತಲಿಖಿತ ಗ್ರಂಥಗಳು ಕೆಲವರಲ್ಲಿ ಮಾತ್ರ ಇದ್ದುವು. ಇಂಥ ಪರಿಸ್ಥಿತಿಯಲ್ಲಿ ಇತರರಿಂದ ಕೇಳಿ ತಿಳಿದುಕೊಳ್ಳುವುದೇ ಜ್ಞಾನಾರ್ಜನೆಗೆ ಮುಖ್ಯ ಮಾರ್ಗವಾಗಿತ್ತು. ಮುದ್ರಣ ಬಳಕೆಗೆ ಬಂದಮೇಲೂ ಪುರಾಣಶ್ರವಣ ಕಥಾಶ್ರವಣಗಳು ನಡೆದು ಬರುತ್ತಿರುವುದನ್ನು ನೋಡಿದರೆ ಈ ಬಗೆಯ ಶ್ರವಣದಿಂದ ಆಗುವ ಪರಿಣಾಮ ಸ್ವಂತವಾಗಿ ಓದುವುದರಿಂದ ಆಗುವುದಿಲ್ಲವೆಂಬುದು ಸ್ವತಃ ಸಿದ್ಧ. ಪರಂಪರಾಗತವಾಗಿರುವ ಈ ಏರ್ಪಾಡು ದೇವಾನುದೇವತೆಗಳ ಹಾಗೂ ಪುಣ್ಯಪುರುಷರ ಚರಿತ್ರೆಗಳನ್ನು ಜನಸಾಮಾನ್ಯರಿಗೆ ಪರಿಚಯ ಮಾಡಿದ್ದು ಮಾತ್ರವಲ್ಲದೆ ಅವರ ಮನೋಧರ್ಮವನ್ನು ಚಾರಿತ್ರ್ಯವನ್ನೂ ತಿದ್ದಲು ಸಹಕಾರಿಯಾದುವು.

ಮಧ್ಯಕಾಲದಲ್ಲಿ-ಅಂದರೆ ಸುಮಾರು 15ನೆಯ ಶತಮಾನದಿಂದೀಚೆಗೆ ಹುಟ್ಟಿದ ಭಕ್ತಿಪಂಥಗಳು, ಆಗ ಜನ್ಮತಾಳಿದ ಸಂತರು ಮತ್ತು ಅವರ ಶಿಷ್ಯಪರಂಪರೆ ಕೈಗೊಂಡ ಧರ್ಮಪ್ರಚಾರ, ಜನಸಾಮಾನ್ಯರಲ್ಲಿ ಧರ್ಮಜಾಗೃತಿಯನುಂಟು ಮಾಡಿದವು. ಭಕ್ತಿಯ ಮಹಿಮೆಯನ್ನು ಸಾರುತ್ತ ಸಂತರು ಭಗವನ್ನಾಮಸಂಕೀರ್ತನೆಗೂ ಪುಣ್ಯ ಕಥಾಶ್ರವಣಕ್ಕೂ ನೈತಿಕ ಆದರ್ಶಗಳಿಗೂ ವಿಶೇಷ ಪ್ರಾಶಸ್ತ್ಯ ಕೊಟ್ಟರು. ಈ ಭಕ್ತಿಪಂಥಗಳ ಆಂದೋಲನವೇ ಆಧುನಿಕ ಕಾಲದ ಕೀರ್ತನಪದ್ಧತಿಗೆ ಹಿನ್ನೆಲೆಯಾಯಿತೆನ್ನಬಹುದು. ಅಷ್ಟೇ ಅಲ್ಲದೆ ಪ್ರಾಂತ್ಯ, ಭಾಷೆ, ಜಾತಿ-ಎಂಬ ಭೇದಭಾವಗಳನ್ನು ತೊರೆದು ಭಗವದ್ಭಕ್ತರಲ್ಲಿ ಭಾವೈಕ್ಯವನ್ನೂ ಅದು ತಂದು ಕೊಟ್ಟಿತು. ಕ್ರಮೇಣ ಕಥಾಶ್ರವಣ ಪದ್ಧತಿಯಲ್ಲಿ ಹೊಸ ರೀತಿಗಳೂ ಬೆಳೆದವು.

ಪಂಢರಪುರ ದಕ್ಷಿಣ ದೇಶದ ಕೀರ್ತನ ಚಟುವಟಿಕೆಗೆ ಒಂದು ಮುಖ್ಯಕೇಂದ್ರವಾಯಿತು. ಪೂರ್ವಕಾಲದಲ್ಲಿ ಕರ್ನಾಟಕದ ಭಾಗವೇ ಆಗಿದ್ದ ಈ ನಗರ ಕರ್ನಾಟಕ ದಾಸಪರಂಪರೆಗೆ ಪುಣ್ಯಕ್ಷೇತ್ರವಾಯಿತು. ಶ್ರೀಪಾದರಾಯರು, ವ್ಯಾಸರಾಯರು, ಪುರಂದರದಾಸರು-ಮುಂತಾದ ಕನ್ನಡದ ಸಂತರು-ಅದೇ ಕಾಲಕ್ಕೆ ಜ್ಞಾನದೇವ, ನಾಮದೇವ- ಮುಂತಾದ ಮಹಾರಾಷ್ಟ್ರ ಸಂತರು-ವಿಠಲದೇವರಿಂದ ಸ್ಫೂರ್ತಿಯನ್ನು ಪಡೆದು ಭಗವನ್ನಾಮ ಸಂಕೀರ್ತನೆ ಮಾಡುತ್ತ ದೇಶದಲ್ಲೆಲ್ಲ ಸಂಚರಿಸಿದರು. ಆಗಿನ ಕಾಲದ ಕನ್ನಡನಾಡಿನ ಹರಿದಾಸರು ಈಗಿನ ಕೀರ್ತನಕಾರರಂತೆ ಹರಿಕಥೆಯನ್ನು ಮಾಡಿದರೋ ಮಾಡಿಸಿದರೋ ತಿಳಿಯದು. ಆದರೆ ಈಗ ದಕ್ಷಿಣ ದೇಶದಲ್ಲೆಲ್ಲ ರೂಢಿಯಲ್ಲಿರುವ ಕಥೆ ಮಾಡುವ ಪದ್ಧತಿಗೆ ಅಂಕುರಾರ್ಪಣೆಯಾಯಿತೆನ್ನಬಹುದು. ಶಿವಾಜಿ ಮಹಾರಾಜನ ಗುರುವಾಗಿದ್ದ ಸಮರ್ಥರಾಮದಾಸ ಮಹಾರಾಷ್ಟ್ರದಲ್ಲೆಲ್ಲ ಧರ್ಮಪ್ರಚಾರ ಕಾರ್ಯವನ್ನು ತನ್ನ ಶಿಷ್ಯರ ಮುಖಾಂತರ ಕೈಕೊಂಡಿದ್ದು ಎಲ್ಲರಿಗೂ ತಿಳಿದ ವಿಷಯ. ಈ ಶಿಷ್ಯರು ಹೋದೆಡೆಯಲ್ಲೆಲ್ಲ, ನಾಮಸಂಕೀರ್ತನೆಯನ್ನು ಮಾಡಿದ್ದಲ್ಲದೆ, ಪ್ರವಚನಗಳ ಮೂಲಕವೂ ಸೇರಿದ ಜನರಿಗೆ ಬೋಧೆಯನ್ನೂ ಪ್ರಬೋದನೆಯನ್ನೂ ಒದಗಿಸಿದರು. ಇದೇ ಪರಂಪರೆಗೆ ಸೇರಿದ ಸಂತ ತುಕಾರಾಮ್ ಪಂಢರಪುರ ದೇವಾಲಯದಲ್ಲಿ ಈ ರೀತಿಯ ಕೀರ್ತನೆಗಳನ್ನೂ ಭಜನೆ, ಅಭಂಗ ಗಾಯನ, ಪ್ರವಚನಗಳನ್ನೂ ಮಾಡುತ್ತಿದ್ದನೆಂದೂ ಅದನ್ನು ಕೇಳಲು ಶಿವಾಜಿ ಮಹಾರಾಜನೇ ಅಜ್ಞಾತನಾಗಿ ಬರುತ್ತಿದ್ದನೆಂದೂ ಪ್ರತೀತಿ. ರಾಮದಾಸ ಹಾಗೂ ತುಕಾರಾಮರ ಕೀರ್ತನೆಗಳೇ ದಕ್ಷಿಣ ದೇಶದಲ್ಲಿ ಈಗ ರೂಢಿಯಲ್ಲಿರುವ ಹರಿಕಥೆಗಳ ಉಗಮವೆಂದು ಕೆಲವರ ಅಭಿಪ್ರಾಯ. ಆದರೆ ಕನ್ನಡ ನಾಡಿನಲ್ಲಿ ಭಕ್ತಿಪಂಥದ ಉಗಮ, ಬೆಳೆವಣಿಗೆಗಳನ್ನೂ ಹರಿದಾಸ ಪಂಥದ ವ್ಯಾಪ್ತಿಯನ್ನೂ ನೋಡಿದರೆ ಕಥೆಗಾರಿಕೆಯಲ್ಲಿ ಕನ್ನಡಿಗರದ್ದೇ ವಿಶೇಷವಾದ ಒಂದು ಮಾರ್ಗ ಬೆಳೆದುಬಂದಿರುವಂತೆ ತೋರುತ್ತದೆ. ಭಾಗವತರ ವೇಷಭೂಷಣಗಳು, ಕಥಾವಸ್ತುವನ್ನು ಬೆಳೆಸುವ ಕ್ರಮ, ಸಂಗೀತ, ನೃತ್ಯಗಳ ಬಳಕೆ-ಇವೆಲ್ಲದರಲ್ಲೂ ತಮಿಳುದೇಶ, ಆಂಧ್ರ, ಮಹಾರಾಷ್ಟ್ರ ಮತ್ತು ಕನ್ನಡದೇಶಗಳ ಪದ್ಧತಿಗಳಲ್ಲಿ ಸ್ಥೂಲವಾಗಿ ಸಾಮ್ಯ ಕಂಡರೂ ವಿವರಗಳಲ್ಲಿ ವಿಶೇಷ ಭಿನ್ನತೆ ಇದೆ. ಆದ್ದರಿಂದ ಒಂದರಿಂದ ಇನ್ನೊಂದು ಹುಟ್ಟಿತೆನ್ನುವುದಕ್ಕಿಂತ ಎಲ್ಲ ಒಟ್ಟಾಗಿ ಬೆಳೆದುವು, ಒಂದನ್ನು ಇನ್ನೊಂದು ಅನುಕರಿಸಿತು ಒಂದು ಹೇಳುವುದು ಸಾಧು.

ಇಂದಿಗೂ ಮಹಾರಾಷ್ಟ್ರದಲ್ಲಿಯೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲೂ ಈ ಕೀರ್ತನಪದ್ಧತಿ ವಿಕಾಸಗೊಂಡು ದಾಸರು ಧರ್ಮಪ್ರವಾದಿಗಳಿಗೆ ಒಪ್ಪುವಂಥ ಒಂದು ಉದ್ದವಾದ ಕಾಷಾಯದ ನಿಲುವಂಗಿಯನ್ನು ಧರಿಸಿ ತಮ್ಮ ಕಥೆಯನ್ನು ಹೇಳುತ್ತಾರೆ. ಅವರ ಪದ್ಧತಿಯ ಒಂದು ವೈಶಿಷ್ಟ್ಯ, ಮಧ್ಯೆ ಮಧ್ಯೆ ಸಾಮೂಹಿಕವಾಗಿ ಶ್ರೋತ್ರಗಳೆಲ್ಲರ ಬಾಯಿಯಿಂದಲೂ ನಾಮಭಜನೆಯನ್ನು ಮಾಡಿಸುವುದು. ಇತರ ಪ್ರಾಂತ್ಯಗಳಲ್ಲಿ ಇದು ಅಷ್ಟು ರೂಢಿಯಲ್ಲಿಲ್ಲ.

ಆಂಧ್ರದಲ್ಲಿ ದಾಸರು ಒಳ್ಳೆಯ ವೇಷಭೂಷಣಗಳನ್ನು ಧರಿಸಿ ಹಿನ್ನಲೆಯ ವಾದ್ಯ ಮೇಳದೊಡನೆ ಹಾಡುತ್ತ ಕಾಲಕ್ಷೇಪ ನಡೆಸುತ್ತಾರೆ. ಅವರ ವೈಶಿಷ್ಟ್ಯವೆಂದರೆ ಭರತನಾಟ್ಯದ ರೀತಿಯಲ್ಲಿ ಆಗಾಗ್ಗೆ ನೃತ್ಯ ಮಾಡುವುದು, ತಮ್ಮ ಅಂಗವಿನ್ಯಾಸವನ್ನೂ ಅಭಿನಯವನ್ನೂ ಹಾಡುವ ಕಾಲದಲ್ಲಿ ಅಳವಡಿಸಿಕೊಳ್ಳುವುದು. ಭರತನಾಟ್ಯದ ಅಂಶಗಳ ಪ್ರದರ್ಶನ ಆಂಧ್ರದಲ್ಲಿರುವಂತೆ ಇತರ ಪ್ರಾಂತಗಳಲ್ಲಿಲ್ಲ. ಇದು ಪ್ರಾಯಶಃ ಅವರಲ್ಲಿರುವ ಕೂಚಿಪುಡಿ ಭಾಗವತ ಸಂಪ್ರದಾಯದ ಪ್ರಭಾವದಿಂದಾಗಿರಬಹುದು.

ತಮಿಳುನಾಡಿನ ಕೀರ್ತನಕಾರರು ತಮ್ಮದೇ ಆದ ರೀತಿಯಲ್ಲಿ ಕಲೆಯನ್ನು ಬೆಳೆಸಿಕೊಂಡಿದ್ದಾರೆ, ಉತ್ತಮ ಗೃಹಸ್ಥ ವೇಷಭೂಷಣ ಧರಿಸಿ, ಸಂಗೀತಕ್ಕೂ ರಸಭರಿತವಾಗಿ ಕಥೆಯನ್ನು ಹೇಳುವುದಕ್ಕೂ ಅವರು ಪ್ರಾಶಸ್ತ್ಯ ಕೊಟ್ಟಿದ್ದಾರೆ. ತಮಿಳುನಾಡಿನಲ್ಲಿ ಕೀರ್ತನಕಾರರನ್ನೂ ಭಾಗವತರೆಂದು ಕರೆಯುತ್ತಾರೆ. ಅವರಲ್ಲಿ ಅನೇಕರು ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಸಂಸ್ಕೃತದಲ್ಲಿ ಪಾಂಡಿತ್ಯವನ್ನೂ ಪಡೆದಿರುತ್ತಾರೆ. ಮೂಲ ಸಂಸ್ಕೃತ ಶ್ಲೋಕಗಳನ್ನು ಉದಾಹರಿಸಿ ಅನುವಾದ ಮಾಡುತ್ತಾ ಹೋಗುತ್ತಾರೆ. ಈ ಸುದೀರ್ಘ ವ್ಯಾಖ್ಯಾನಗಳು ಬೇಸರವಾಗದಂತೆ ಶ್ಲೋಕಗಳನ್ನೂ ಸಂಗೀತಕೃತಿಗಳನ್ನೂ ಶಾಸ್ತ್ರೀಯವಾಗಿ ಹಾಡುತ್ತಾರೆ. ಇದಕ್ಕಾಗಿ ಹಿಮ್ಮೇಳದವರೂ ಇರುತ್ತಾರೆ. ಒಮ್ಮೊಮ್ಮೆ ಈ ಕಾಲಕ್ಷೇಪಗಳು ಸಂಗೀತ ಕಚೇರಿಗಳೇ ಆಗಿಬಿಡುತ್ತವೆ. ಈ ಮಾತುಗಳೇ ಕೇರಳದ ಕಲಾವಿದರಿಗೂ ಬಹುಮಟ್ಟಿಗೆ ಅನ್ವಯಿಸುತ್ತವೆ.

ಕರ್ನಾಟಕದ ಕೀರ್ತನಕಾರರಲ್ಲಿ-ಅವರವರ ವೈಯಕ್ತಿಕ ಅಭಿರುಚಿಗೂ ಸಾಮರ್ಥ್ಯಕ್ಕೂ ಅನುಗುಣವಾಗಿ, ನಾಮಭಜನೆ, ಪ್ರವಚನ, ಸಂಸ್ಕೃತ ಶ್ಲೋಕಗಳು, ವ್ಯಾಖ್ಯಾನ, ಉಪಕಥೆಗಳು- ಇವೆಲ್ಲವೂ ಬೆರೆತು ಕೀರ್ತನಕಲೆ ವಿಕಾಸಗೊಳ್ಳುತ್ತದೆ, ವೀರಶೈವರಿಗೂ ಜೈನರಿಗೂ ಕರ್ನಾಟಕವೇ ಮುಖ್ಯ ವಾಸಸ್ಥಾನವಾಗಿರುವುದರಿಂದ ಇಲ್ಲಿ ಹರಿಕಥೆಗಳ ಜೊತೆಗೆ ಶಿವಕಥೆಗಳೂ ಪ್ರಚಲಿತವಾಗಿವೆ. ಈ ಎಲ್ಲ ಬಗೆಯ ಕೀರ್ತನೆಗಳನ್ನೂ ಕೇಳಲು ಎಲ್ಲ

ಮತಾವಲಂಬಿಗಳೂ ಸೇರುವುದು, ಕರ್ನಾಟಕದಲ್ಲಿ ಹಿಂದಿನ ಕಾಲದಿಂದಲೂ ನಡೆದು ಬಂದಿರುವ ಧರ್ಮಸಹಿಷ್ಣುತೆಯ ನಿದರ್ಶನವಾಗಿದೆ.

ಕಥಾ ನಿರೂಪಣೆ ಇವುಗಳ ಮುಖ್ಯ ಅಂಶವಾಗಿದ್ದರೂ ಅದನ್ನು ಹೃದಯಂಗಮವಾಗಿಯೂ ಪ್ರಭಾವಪೂರ್ಣವಾಗಿಯೂ ಮಾಡುವುದಕ್ಕಾಗಿ ಇದರಲ್ಲಿ ತೊಡಗುವವರು ಸಂಗೀತ, ನೃತ್ಯ, ಅಭಿನಯ, ಉಪಕಥೆ, ಉಪನ್ಯಾಸ ಶಾಸ್ತ್ರಾನುವಾದ, ಸಾಮೂಹಿಕ ಭಜನೆ ಇವನ್ನು ಸಂದರ್ಭಾನುಸಾರವಾಗಿ ತಮ್ಮ ಶಕ್ತಿಗೆ ಅನುಗುಣವಾಗಿ ಬಳಸುತ್ತ ಬಂದಿದ್ದಾರೆ. ಹೀಗಾಗಿ ಇದೊಂದು ಅನೇಕ ಕಲೆಗಳ ಸಮ್ಮಿಶ್ರಣವಾಗಿ ರೂಪಗೊಂಡು ವಿಕಾಸ ಹೊಂದಿದೆ. ಇದು ದಕ್ಷಿಣ ಭಾರತಕ್ಕೆ ಅನ್ವಯಿಸುವ ಮಾತು. ದಕ್ಷಿಣ ದೇಶದಲ್ಲಿನ ಆಕಾಶವಾಣಿ ಕೇಂದ್ರಗಳಲ್ಲಿ ಈ ಕಲೆಗೆ ಅವಕಾಶವನ್ನು ಹಿಂದಿನಿಂದ ನೀಡಲಾಗಿದೆ.

ಜನತೆಯ ಶಿಕ್ಷಣಕ್ಕೂ ಪ್ರಚಾರಕ್ಕೂ ಇದೊಂದು ಉತ್ತಮ ವಿಧಾನವೆಂದು ಮನಗಂಡು ಕ್ರೈಸ್ತ ಧರ್ಮಪ್ರಚಾರದಲ್ಲಿ ತೊಡಗಿರುವವರೂ ಕ್ರೈಸ್ತಕೀರ್ತನೆಗಳನ್ನು ಮಾಡುವುದಕ್ಕೆ ಆರಂಭಿಸಿದ್ದಾರೆ. ಕೇವಲ ಉಪನ್ಯಾಸ, ಪ್ರವಚನಗಳಿಂದ ಜನ ಆಕರ್ಷಿತರಾಗುವುದಿಲ್ಲವೆಂದು ಮನಗೊಂಡು ಈ ಕಾಲಕ್ಷೇಪ ಪದ್ಧತಿಯನ್ನು ಅವರೂ ರೂಢಿಸಿಕೊಳ್ಳುತ್ತಿದ್ದಾರೆ. ಮೂಲತಃ ಭಕ್ತಿ ಪ್ರಚಾರಕ್ಕೂ ಧರ್ಮಪ್ರಚಾರಕ್ಕೂ ಮೀಸಲಾಗಿದ್ದ ಕೀರ್ತನ ಪದ್ಧತಿಯನ್ನು ಆಧುನಿಕ ಕಾಲದಲ್ಲಿ ವಿವಿಧೋದ್ದೇಶಗಳ ಸಾಧನೆಗೆ ಬಳಸಲಾಗುತ್ತಿದೆ. ಅಕ್ಷರ ಪ್ರಚಾರ, ಸಾರ್ವಜನಿಕ ಆರೋಗ್ಯ ಶಿಕ್ಷಣ, ಪಾನನಿರೋಧ ಪ್ರಚಾರ, ರಾಜಕೀಯ ಪ್ರಚಾರ, ಮುಂತಾದ ಲೌಕಿಕ ಕಾರ್ಯಗಳಿಗಾಗಿಯೂ ಈ ವಿಧಾನವನ್ನು ಉಪಯೋಗಿಸಲಾಗುತ್ತಿದೆ. ಆಗೊಮ್ಮೆ ಈಗೊಮ್ಮೆ ಪ್ರಸಿದ್ಧ ವಿಜ್ಞಾನಿಗಳ ಜೀವನವನ್ನು ಕುರಿತು ಕಥೆ ಮಾಡಿರುವ ನಿದರ್ಶನಗಳೂ ಇವೆ. ಆದರೆ ಇಂದಿಗೂ ಹೆಚ್ಚಿನ ಪ್ರಮಾಣದಲ್ಲಿ ಪ್ರಯೋಗವಾಗುತ್ತಿರುವುದು ಪುರಾಣ ಪುಣ್ಯ ಕಥೆಗಳೇ.

ರಾಮಾಯಣ, ಮಹಾಭಾರತ ಮತ್ತು ಭಾಗವತಗಳು ಕಥೆಗಳ ಕಣಜವಾಗಿರುವುದರಿಂದ ಕೀರ್ತನಕಾರರಿಗೆ ಸಾಕಷ್ಟು ವಿಷಯಗಳು ಇವುಗಳಲ್ಲಿ ಸಿದ್ಧವಾಗಿ ದೊರೆಯುತ್ತವೆ. ಇವನ್ನು ಆಮೂಲಾಗ್ರವಾಗಿ ಮನನ ಮಾಡಿಕೊಂಡು ಅನೇಕ ಕಥೆಗಳನ್ನಾಗಿ ವಿಂಗಡಿಸಿಕೊಂಡು, ಪ್ರವಚನಮಾಡಿ ಮುಗಿಸಿ ಮಂಗಳವನ್ನು ಆಚರಿಸುವ ಪದ್ಧತಿ ಇದೆ ; ಅಥವಾ ಇವುಗಳಲ್ಲಿ ಒಂದು ಭಾಗವನ್ನೊ ಉಪಖ್ಯಾನವನ್ನೊ ತೆಗೆದುಕೊಂಡು ಕಥೆಯನ್ನು ಹೇಳುವ ರೂಢಿಯೂ ಉಂಟು. ಇವೇ ಅಲ್ಲದೆ ಸಾಧುಸಂತರ ಜೀವನ ಚರಿತ್ರೆಗಳು ಅಂದರೆ ಪುರಂದರದಾಸರು, ಕನಕದಾಸರು, ಸಮರ್ಥರಾಮದಾಸರು, ತುಕಾರಾಮ, ತ್ಯಾಗರಾಜ, ರಾಮಕೃಷ್ಣ, ವಿವೇಕಾನಂದ, ಸಾಯಿಬಾಬ ಮುಂತಾದವರ ಮಹಿಮಾಪೂರ್ಣ ಜೀವನ ಚರಿತ್ರೆಗಳು ಕಥಾಕಾಲಕ್ಷೇಪದ ವಸ್ತುಗಳಾಗಿರುವುದೂ ಉಂಟು. ಭದ್ರಗಿರಿ ಕೇಶವದಾಸರು ಇಂಗ್ಲಿಷ್‌ನಲ್ಲಿ ಕಥೆ ಮಾಡುವ ಒಂದು ಕ್ರಮವನ್ನು ರೂಢಿಸಿಕೊಂಡು ದೇಶ ವಿದೇಶಗಳಲ್ಲಿ ಪ್ರವಚನ ಮಾಡಿ ಖ್ಯಾತಿ ಗಳಿಸಿದರು.

ಕೀರ್ತನಕಲೆಯನ್ನು ಕೆಲವರು ತಮ್ಮ ಜೀವನವೃತ್ತಿಯಾಗಿಯೂ ಕೆಲವರು ತಮ್ಮ ವಿರಾಮಕಾಲದ ಉಪವೃತ್ತಿಯನ್ನಾಗಿಯೂ ಮಾಡಿಕೊಂಡಿದ್ದಾರೆ. ಕೀರ್ತನೆ ಮುಗಿಯುವುದಕ್ಕೆ ಮುಂಚೆ ದೇವರ ಪಟಕ್ಕೆ ಮಂಗಳಾರತಿಯನ್ನೆತ್ತಿ ಆರತಿ ತಟ್ಟೆಯನ್ನು ಸಭಿಕರ ಮಧ್ಯೆ ತೆಗೆದುಕೊಂಡು ಹೋದಾಗ ಶ್ರೋತೃಗಳು ತಮ್ಮ ಶಕ್ತ್ಯಾನುಸಾರ ಕಾಣಿಕೆ ಹಾಕುತ್ತಾರೆ. ಈ ಕಾಣಿಕೆಯೇ ಕೀರ್ತನಕಾರರಿಗೆ ಸಲ್ಲುವ ಸಂಭಾವನೆ. ಕೆಲವು ವೇಳೆ ಒಂದು ಸಂಸ್ಥೆಯವರು ಈ ಕಥೆಗೆ ಏರ್ಪಾಡುಮಾಡಿ ಕೀರ್ತನಕಾರರಿಗೆ ಸಂಭಾವನೆ ಕೊಡುವುದೂ ಉಂಟು. ಹೇಗೇ ಇರಲಿ ಕೀರ್ತನಕಾರರು ಈ ಅನಿರ್ದಿಷ್ಟವಾದ, ಬಹಳ ಏರಿಳಿತಕ್ಕೆ ಗುರಿಯಾಗುವ ವರಮಾನವನ್ನೇ ಅವಲಂಬಿಸಬೇಕಾಗುತ್ತದೆ. ಪ್ರಖ್ಯಾತ ಕೀರ್ತನಕಾರರನ್ನು ಬಿಟ್ಟರೆ, ಈ ಕಲೆಯಲ್ಲಿ ತೊಡಗಿರುವವರಿಗೆ ಸಿಗುವುದನ್ನು ಸಂಗೀತ ಮುಂತಾದ ಕಲಾವಿದರಿಗೆ ದೊರೆಯುವ ವರಮಾನದೊಂದಿಗೆ ಹೋಲಿಸಿದರೆ, ತೀರ ಅಲ್ಪವೆಂದೇ ಹೇಳಬೇಕು. ಆದರೆ ಈ ಕಲೆಯಲ್ಲಿ ನಿಷ್ಣಾತರಾದವರು ಜನರ ಪ್ರೀತಿ ಗೌರವಗಳನ್ನು ಗಳಿಸಿ, ಈ ವೃತ್ತಿಯಿಂದ ತಕ್ಕ ಮಟ್ಟಿಗೆ ಸಂಪಾದನೆ ಮಾಡುತ್ತಾರೆ.

ಕೀರ್ತನ ಕಲೆ ಅನೇಕ ಮುಖ್ಯ ಕಲೆಗಳ ಮೇಳವಾಗಿರುವುದರಿಂದ ಇದರಲ್ಲಿ ನೈಪುಣ್ಯ ಪಡೆದ ಅಗ್ರಗಣ್ಯರಾಗುವುದು ಸುಲಭವಲ್ಲ. ಕೆಲವರಿಗೆ ಹುಟ್ಟುಗುಣವಾಗಿಯೇ ಈ ಕಲೆಯಲ್ಲಿ ಸಾಮರ್ಥ್ಯವಿರುತ್ತದೆ ; ಅದು ಅನುವಂಶಿತವಾಗಿ ಬಂದದ್ದೂ ಆಗಿರಬಹುದು ; ಉತ್ತಮ ಗುರುಗಳ ಉಪದೇಶದ ಮೂಲಕ ಅವರು ಕಲಿತದ್ದಿರಬಹುದು. ಆದರೆ ಈ ಕಲೆಯ ಎಲ್ಲ ಅಂಶಗಳ ನೈಪುಣ್ಯ ದೀರ್ಘ ಸಾಧನದಿಂದಲೇ ಸಿದ್ಧಿಸಬೇಕು.

ಕಲೆಯ ಮುಖ್ಯ ಭಾಗ ಕಥೆಯ ಪ್ರತಿಪಾದನೆ. ಇದು ಸಾಹಿತ್ಯಕ್ಕೂ ವಾಗ್ಮಿತೆಗೂ ಸಂಬಂಧಿಸಿದ ಪ್ರೌಢಿಮೆ. ಭಾಷಾಜ್ಞಾನ, ಸಾಹಿತ್ಯ ಪರಿಚಯ ಚೆನ್ನಾಗಿ ಉಳ್ಳವರು ಮಾತ್ರವೇ ಸಾಕಷ್ಟು ಶಬ್ದಸಂಪತ್ತನ್ನು ಪಡೆದು, ಔಚಿತ್ಯವನ್ನರಿತು ಶಬ್ದಪ್ರಯೋಗ ಮಾಡಿ ತಕ್ಕ ಪರಿಣಾಮವನ್ನುಂಟು ಮಾಡಬಲ್ಲರು. ಈ ಕಥಾಸಾಹಿತ್ಯ ಬಹುಮಟ್ಟಿಗೆ ವೈಯಕ್ತಿಕ ರಚನೆ; ಅಥವಾ ಗುರುಗಳಿಂದ ಬಂದದ್ದು. ಹೊಸಕೆರೆ ಚಿದಂಬರಯ್ಯನವರ ಕೀರ್ತನ ಕಂಠಾಭರಣ. ಬೇಲೂರು ಕೇಶವದಾಸರ ಭಕ್ತ ವಿಜಯ–ಇಂಥ ಸಾಹಿತ್ಯವನ್ನೊದಗಿಸಿವೆ. ಭದ್ರಗಿರಿ ಅಚ್ಯುತದಾಸರೂ, ಕೇಶವದಾಸರೂ ಈ ಸಾಹಿತ್ಯವನ್ನು ಒದಗಿಸುತ್ತಿದ್ದಾರೆ.

ಕಥನದಲ್ಲಿ ವಾಗ್ಮಿ ಬಹುಮುಖ್ಯ ಅಂಶ. ಸ್ಫುಟವೂ ನಿರರ್ಗಳವೂ ನಿರ್ದುಷ್ಟವೂ ಆದ ಉಚ್ಚಾರಣೆಯಿಂದಲೇ ಸಭಿಕರ ಮೇಲೆ ಸರಿಯಾದ ಪರಿಣಾಮ ಉಂಟಾಗಬೇಕಾದರೆ ಧ್ವನಿಯನ್ನು ಸೂಕ್ತರೀತಿಯಲ್ಲಿ ಅಳವಡಿಸಿಕೊಂಡು ಎತ್ತರಿಸಿಯೋ ತಗ್ಗಿಸಿಯೋ ಅಲ್ಲಲ್ಲಿ ಅಲ್ಪ ವಿರಾಮ ಕೊಟ್ಟು, ಕಥೆ ಹೇಳುವುದರಿಂದ ಶ್ರೋತೃಗಳ ಗಮನವನ್ನು ಇನ್ನೂ ತೀವ್ರವಾಗಿ ಆಕರ್ಷಿಸಬಹುದು. ಉತ್ತಮ ನಟರ ಹಾಗೂ ಉಪನ್ಯಾಸಕರ ವಾಕ್ಪಟುತ್ವವೂ ವಾಗ್ವಿಲಾಸವೂ ಕೀರ್ತನಕಾರರಿಗೆ ಬೇಕು. ಪುರಂದರದಾಸರು ತಮ್ಮ ಒಂದು ದೇವರನಾಮದಲ್ಲಿ ಉತ್ತಮ ಹರಿದಾಸರ ಲಕ್ಷಣಗಳನ್ನು ವಿವರಿಸಿದ್ದಾರೆ. ಸಂಗೀತ ಕೀರ್ತನಕಲೆಯ ಒಂದು ಅಂಶವಾದರೂ ಅದು ಮುಖ್ಯಾಂಶವಲ್ಲ. ಸಂದರ್ಭಾನುಸಾರ ಕಥಾಭಾಗ ಹೃದಯಂಗಮವಾಗಲು, ಹಾಗೂ ಸರಿಯಾದ ವಾತಾವರಣ ಏರ್ಪಡಲು ಒಂದು ಕೃತಿ, ದೇವರನಾಮ, ಸುಳಾದಿ, ಉಗಾಭೋಗ, ವಚನ–ಇವನ್ನು ರಾಗಯುಕ್ತವಾಗಿ ಹೇಳಿ ಮುಂದುವರಿಯುವುದು ಸೂಕ್ತವೇ ಹೊರತು, ಸಂಗೀತಾದಿ ಇತರ ಅಂಶಗಳು ಪ್ರಧಾನವಾಗಿ ಕಥೆ ಮಂಕಾಗುವಂತೆ ಮಾಡಬಾರದು.

ಅಭಿನಯ ಅಂದರೆ ಅಂಗವಿನ್ಯಾಸ, ಮುಖಮುದ್ರೆ, ಕಥಾನಿರೂಪಣೆಯಲ್ಲಿ ವಿಶೇಷಸ್ಥಾನ ಪಡೆದಿದೆ. ಕಥೆಯನ್ನು ಹೇಳುವವರು ಅದರ ಭಾವವನ್ನು ಸವಿದು ತಲ್ಲೀನರಾದಾಗ ಸಹಜವಾಗಿಯೇ ಸೂಕ್ತವಾದ ಅಭಿನಯದಿಂದ ತಮ್ಮ ನಿರೂಪಣೆಯನ್ನು ಹೆಚ್ಚು ಪ್ರಭಾವಯುತವನ್ನಾಗಿ ಮಾಡಬಲ್ಲರು. ಅದರಲ್ಲಿಯೂ ಕಥೆಯಲ್ಲಿ ಸಂಭಾಷಣೆಗಳು ಬಂದಾಗ, ಇಬ್ಬರು ಮೂವರು ಪಾತ್ರವಹಿಸಿದಾಗ ಕೀರ್ತನಕಾರ ತನ್ನ ಧ್ವನಿಯನ್ನು ಬದಲಾಯಿಸುತ್ತ ಒಂದು ನಾಟಕದ ದೃಶ್ಯವನ್ನೇ ಅಭಿನಯಿಸಲು ಅವಕಾಶವುಂಟು. ಅನೇಕ ಕೀರ್ತನಕಾರರಿಗೆ ಈ ಕೌಶಲವಿರುತ್ತದೆ ; ಕಥೆಯ ನಾಟಕೀಯ ಭಾಗಗಳನ್ನು ಏಕಪಾತ್ರಾಭಿನಯ ವಿಧಾನದಿಂದ ಅಭಿನಯಿಸಿ ಶ್ರೋತೃಗಳಿಗೆ ಒಳ್ಳೆಯ ಮನೋರಂಜನೆಯನ್ನು ಒದಗಿಸಬಹುದು. ಆದರೆ ಇಂಥ ಕಥಾ ಭಾಗಗಳು ಉತ್ತಮ ಸಾಹಿತ್ಯದ ಲಕ್ಷಣಗಳಿಂದ ಕೂಡಿರಬೇಕಾದ್ದು ಗಮನಿಸಬೇಕಾದ ವಿಷಯ.

ಆಂಧ್ರದಲ್ಲಿರುವಂತೆ ಭರತನಾಟ್ಯ ಭಂಗಿಗಳನ್ನೂ ಹೆಜ್ಜೆಗಳನ್ನೂ ಆಗಾಗ್ಗೆ ಒಂದು ಮಿತಿಯಲ್ಲಿ ಅಳವಡಿಸಿಕೊಂಡಾಗ ಕೀರ್ತನಕಾರನ ಕಲೆಗೆ ಒಂದು ಲಾವಣ್ಯ ಬರುತ್ತದೆ ಕರ್ನಾಟಕದಲ್ಲಿ ಇದು ರೂಢಿಯಲ್ಲಿಲ್ಲ. ಇದಕ್ಕೆ ತರಬೇತೂ ಅಂಗಸೌಷ್ಠವವೂ ಬೇಕು. ಕೆಲವು ಸ್ತ್ರೀಯರು ಈ ಕಲೆಯ ಉಪಾಸಕರಾಗುತ್ತಿದ್ದಾರೆ. ಅಂಥವರಿಗೆ ಈ ನೃತ್ಯ ಭಾಗಗಳನ್ನು ಅಳವಡಿಸಿಕೊಳ್ಳುವುದು ಸುಲಭವಾದೀತು.

ಈಚಿನವರೆಗೂ ಕಲೆಗಳು ಗುರುಶಿಷ್ಯ ಪರಂಪರೆಯ ಮಾರ್ಗದಿಂದಲೇ ಉಳಿಯುತ್ತ, ಬೆಳೆಯುತ್ತ ಬಂದುವು. ಆದರೆ ಹೆಚ್ಚು ಜನ ಇವುಗಳ ಅಭ್ಯಾಸವನ್ನು ಮಾಡಲು ಅವಕಾಶವಿರುವಂತೆ ಈಗ ಶಾಲೆಗಳೂ ಕಲಾಕ್ಷೇತ್ರಗಳೂ ಸಂಸ್ಥೆಗಳೂ ರೂಪ ತಾಳಿವೆ. ಆದರೆ ಕೀರ್ತನಕಲೆಗೆ ಈ ವ್ಯವಸ್ಥೆಯನ್ನು ಮಾಡಲು ಬಹಳ ವಿಳಂಬವಾಯಿತು. ಈ ಕೊರತೆಯನ್ನು ನಿವಾರಿಸಲು ಈಗೀಗ ಪ್ರಯತ್ನಗಳು ನಡೆಯುತ್ತಿವೆ. ತಿರುವಾದಿ, ಹೈದರಾಬಾದ್, ಬೆಂಗಳೂರು–ಈ ಸ್ಥಳಗಳಲ್ಲಿ ಕೀರ್ತನ ಕಲೆಯ ಅಭ್ಯಾಸಕ್ಕೆಂದು ಶಾಲೆಗಳನ್ನು ಸ್ಥಾಪಿಸಿ ನಡೆಸುವ ಪ್ರಯತ್ನಗಳು ನಡೆದಿವೆ.

ಧ್ವನಿಸಹಿತ ಪ್ರದರ್ಶಿಸುವ ಚಲನಚಿತ್ರಗಳನ್ನು ಬಿಟ್ಟರೆ, ಜನತೆಯ ಶಿಕ್ಷಣಕ್ಕೆ ಕೀರ್ತನೆಯಷ್ಟು ಪರಿಣಾಮಕಾರಿಯಾದ ವಿಧಾನ ಮತ್ತೊಂದಿಲ್ಲ. ಜೀವರಹಿತ ಚಿತ್ರಗಳಿಗಿಂತಲೂ ಸಜೀವವಾದ ಈ ಕಲೆ, ಕೀರ್ತನಕಾರನ ವ್ಯಕ್ತಿತ್ವದಿಂದ ಅಚ್ಚಳಿಯದ ರೀತಿಯಲ್ಲಿ ಪ್ರಭಾವವನ್ನುಂಟುಮಾಡಬಲ್ಲುದು. ಈಚೆಗೆ ಸುಶಿಕ್ಷಿತರಾದವರು ಈ ಕಾಲಕ್ಷೇಪಗಳನ್ನು ಕೇಳಲು ಅಷ್ಟು ಸಂಖ್ಯೆಯಲ್ಲಿ ಹೋಗದಿದ್ದರೂ ಸಮಾಜದಲ್ಲಿ ಅನೇಕರು, ವಿಶೇಷವಾಗಿ ಮಹಿಳೆಯರು, ಇದರಲ್ಲಿ ಆಸಕ್ತರಾಗಿ ಹೆಚ್ಚು ಸಂಖ್ಯೆಯಲ್ಲಿ ನೆರೆಯುತ್ತಾರೆ. ಉಪನ್ಯಾಸಗಳನ್ನೂ ಭಾಷಣಗಳನ್ನೂ ಕೇಳಲೂ ಅಷ್ಟು ಸಂಖ್ಯೆಯಲ್ಲಿ ಜನ ಸೇರುವುದಿಲ್ಲವೆಂಬುದು ಎಲ್ಲರ ಅನುಭವಕ್ಕೆ ಬಂದ ವಿಷಯ. ಜನರಲ್ಲಿ, ವಿಶೇಷವಾಗಿ ಹಳ್ಳಿಗರಲ್ಲಿ, ಅಕ್ಷರಜ್ಞಾನ ಸಾಕಷ್ಟು ಇಲ್ಲದಿರುವುದರಿಂದ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಓದುವ ಅಭ್ಯಾಸ ಬಹಳ ಕಡಿಮೆ. ಇಂಥ ಪರಿಸ್ಥಿತಿಯಲ್ಲಿ ಕೀರ್ತನ ಸಂಪ್ರದಾಯವನ್ನು ಬಲಗೊಳಿಸಿ, ದಕ್ಷರಾದ ಕೀರ್ತನಕಾರರು ಜನತಾ ಶಿಕ್ಷಣಕಾರ್ಯವನ್ನು ಕೈಕೊಳ್ಳಲು ಅವಕಾಶವಿದೆ ; ಅದರ ಅಗತ್ಯವೂ ಇದೆ.

ಕೀರ್ತನ ಕಲೆಯಲ್ಲಿ ಸಾಕಷ್ಟು ಕೆಲಸ ಮಾಡಿರುವ ಪ್ರಮುಖರಲ್ಲಿ ಕೆಲವರನ್ನು ಇಲ್ಲಿ ಹೆಸರಿಸಬಹುದು. ಬೇಲೂರು ಕೇಶವದಾಸರು, ಹಂಡೆ ಶ್ರೀಪಾದದಾಸರು, ವೇಣುಗೋಪಾಲದಾಸರು, ಗಮಕಿ ರಾಮಕೃಷ್ಣಶಾಸ್ತ್ರಿಗಳು, ಜಯತೀರ್ಥಾಚಾರ್ಯರು, ಗೋಪಿನಾಥದಾಸರು, ಜಯಸಿಂಹದಾಸರು, ಲಕ್ಷ್ಮೀಪತಿ ಸಹೋದರರು, ಭದ್ರಗಿರಿ ಕೇಶವದಾಸರು, ನಿರ್ಮಲಾನಂದದಾಸರು, ಭದ್ರಗಿರಿ ಅಶ್ವತ್ಥದಾಸರು, ವಿಮಲಾನಂದದಾಸರು, ನದೀಪುರಂ ಶ್ರೀನಿವಾಸರಂಗಾಚಾರ್ಯರು, ಅರುಣ ಕುಮಾರ ಇವರೂ, ಪಂಢರಿಬಾಯಿ,

ರಾಜಮ್ಮ, ಅನಂತಲಕ್ಷ್ಮಿ ಮೊದಲಾದವರೂ ಹರಿಕಥೆಯಲ್ಲಿ ಪ್ರಸಿದ್ಧರು. ಬಿ. ಶಿವಮೂರ್ತಿ ಶಾಸ್ತ್ರಿಗಳು, ರೇವಣ್ಣ, ಬಾಲಭಾರತಿ ಯದುಗಿರಿ ಕುಮಾರಿ–ಮೊದಲಾದವರು ಶಿವಕಥೆಯಲ್ಲಿ ಪ್ರಸಿದ್ಧರು. ಬೊಮ್ಮಯ್ಯ ಪೊಮ್ಮಣ್ಣಯ್ಯ ಸಹೋದರರು, ಬೆಳಗಿಲಿಯ ಶಾಂತರಾಜಯ್ಯ ಮೊದಲಾದವರು ಜಿನಕಥೆಯಲ್ಲಿ ಮುಖ್ಯರು. (ಕೆ.ಎಸ್.ಜಿ.ಆರ್.; ಬಿ.ಎಸ್.)

**ಕೀರ್ತಿನಾಥ ಕುರ್ತಕೋಟಿ :** 1928–2003. ಕನ್ನಡದ ಅಗ್ರಗಣ್ಯ ವಿಮರ್ಶಕರು ಹಾಗೂ ವಿದ್ವಾಂಸರು. 1928 ಅಕ್ಟೋಬರ್ 13ರಂದು ಗದಗ ಸಮೀಪದ ಕುರ್ತಕೋಟಿಯ ವಿದ್ವತ್‌ಪರಂಪರೆಯ ಗೌಡರ ಮನೆತನದಲ್ಲಿ ಜನಿಸಿದರು. ತಂದೆ ಡಿ.ಕೆ.ಕುರ್ತಕೋಟಿ, ತಾಯಿ ಪದ್ಮಾವತಿಬಾಯಿ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಗದಗಿನಲ್ಲಿ ಪಡೆದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು (1958). ಗದಗಿನಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ, ಬೆಳಗಾಂವಿ ಕಾಲೇಜಿನಲ್ಲಿ ಟ್ಯೂಟರ್ ಆಗಿ, ಪುಣೆಯ ಸರ್ ಪರಶುರಾಮಭಾವು ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು (1958–67). ಅನಂತರ ಗುಜರಾತಿನ ಸರ್ದಾರ್ ಪಟೇಲ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ (1967), ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಶೈಕ್ಷಣಿಕ ಸೇವೆ ಸಲ್ಲಿಸಿ ನಿವೃತ್ತಿಯ ಬಳಿಕ ಧಾರವಾಡದಲ್ಲಿ ನೆಲೆಸಿದರು.

ಧಾರವಾಡದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪರಿಸರ ಇವರ ಮೇಲೆ ಗಾಢವಾದ ಪ್ರಭಾವ ಬೀರಿತು. ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ರಂ.ಶ್ರೀ.ಮುಗಳಿ, ವಿ.ಕೃ.ಗೋಕಾಕ ಮೊದಲಾದವರ ಸಂಪರ್ಕ ಹಾಗೂ ಸಹವಾಸಗಳು ಇವರಿಗೆ ದೊರೆತವು. ಇವರು ಕನ್ನಡ, ಇಂಗ್ಲಿಷ್, ಮರಾಠಿ, ಸಂಸ್ಕೃತ, ಗುಜರಾತಿ, ಹಿಂದಿ ಮೊದಲಾದ ಭಾರತೀಯ ಭಾಷಾ ಸಾಹಿತ್ಯದ ಆಳವಾದ ಅಧ್ಯಯನ ಹಾಗೂ ಅಪೂರ್ವವಾದ ತಮ್ಮ ಪಾಂಡಿತ್ಯ ಪ್ರತಿಭೆಗಳಿಂದ ಕನ್ನಡ ವಿಮರ್ಶೆಗೆ ಹೊಸ ಆಯಾಮ ನೀಡಿದರು. 'ಮನೋಹರ ಗ್ರಂಥಮಾಲೆ'ಯ ನಡೆದು ಬಂದ ದಾರಿಯ ಸಂಪುಟಗಳಿಗೆ ಬರೆದ 'ಯುಗ ಧರ್ಮ ಹಾಗೂ ಸಾಹಿತ್ಯ ದರ್ಶನ' (1962) ಹೊಸಗನ್ನಡ ವಿಮರ್ಶೆಯಲ್ಲಿ ಗಮನಾರ್ಹವಾದುದು. ಆಧುನಿಕ ಕನ್ನಡ ಸಾಹಿತ್ಯವನ್ನು ವಿಮರ್ಶೆಯ ನಿಕಷಕ್ಕೆ ಹಚ್ಚಿ ನೋಡುವ ಕುರ್ತಕೋಟಿಯವರ ಸಾಹಸ ಅದ್ವಿತೀಯವಾದದ್ದು. ಇವರು ಆಧುನಿಕ ಕನ್ನಡ ವಿರ್ಮಶೆಗೆ ಹೊಸಭಾಷೆ, ದೃಷ್ಟಿ ಧೋರಣೆಗಳನ್ನು ರೂಪಿಸಿದರು. ಮನೋಹರ ಗ್ರಂಥಮಾಲೆಯ ಸಾಹಿತ್ಯ ಸಲಹೆಗಾರರಾಗಿಯೂ ಇವರು ಅನೇಕ ಲೇಖಕರ ಪ್ರತಿಭೆಯನ್ನು ಗುರುತಿಸಿ ಅವರ ಕೃತಿಗಳು ಪ್ರಕಟವಾಗುವಂತೆ ನೋಡಿಕೊಂಡರು; ಅನೇಕ ಕೃತಿಗಳನ್ನು ವಿಮರ್ಶಿಸಿದರು. ಮನ್ವಂತರ ಎಂಬ ಸಾಹಿತ್ಯ ವಿಮರ್ಶಾ ಪತ್ರಿಕೆಯ ಸಂಪಾದಕರಾಗಿ ಸಾಹಿತ್ಯ ಚರ್ಚೆಗೆ ವೈಚಾರಿಕ ಆಯಾಮವನ್ನು ಒದಗಿಸಿದರು. ನವ್ಯಕಾವ್ಯ ಪ್ರಯೋಗ (1963), ಭೃಂಗದ ಬೆನ್ನೇರಿ, ವಿಮರ್ಶೆಯ ವಿನಯ: ನಾಟಕ (1985), ವಿಮರ್ಶೆಯ ವಿನಯ: ಕಾದಂಬರಿ (1982), ಸಂಸ್ಕೃತಿ ಸ್ಪಂದನ, ಪುಟಬಂಗಾರಕ್ಕೆ ಬರೆದ ಪ್ರಸ್ತಾವನೆ, ಶ್ರಾವಣ ಪ್ರತಿಭೆ, ಕುಮಾರವ್ಯಾಸ, ಉರಿಯನಾಲಗೆ (1993), ದ.ರಾ.ಬೇಂದ್ರೆ, ಬಾರೋ ಸಾಧನಕೇರಿಗೆ, ಬಯಲು ಆಲಯ (1992), ಅಸಂಗತನಾಟಕಗಳು, ಕನ್ನಡ ಸಾಹಿತ್ಯ ಸಂಗಾತಿ (1995), ನೂರುಮರ ನೂರು ಸ್ವರ (1998) ಪ್ರತ್ಯಭಿಜ್ಞಾನ (1999) – ಹೀಗೆ ವಿಮರ್ಶೆಯ ವಿವಿಧ ಸಂಪುಟಗಳಲ್ಲಿ ಇವರ ವಿಮರ್ಶನ ಪಾಂಡಿತ್ಯಪ್ರವಾಹ ಹರಿದಿದೆ.

ಇವರು ಅಂಕಣ ಸಾಹಿತ್ಯದಲ್ಲೂ ವೈಚಾರಿಕ ಪ್ರತಿಭೆಯನ್ನು ಪ್ರಕಟಪಡಿಸಿದ್ದಾರೆ. ಪ್ರಜಾವಾಣಿಯ 'ಸಮ್ಮುಖ' ಅಂಕಣ ಲೇಖನಗಳು ವಿಶಿಷ್ಟವಾಗಿವೆ. ಭಾರತೀಯ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಇವರ ವಿಚಾರಧಾರೆ, ವ್ಯಾಖ್ಯಾನ ಪರಿಣತಿ ವಿಶೇಷವಾದದ್ದು. ಇವರು ಕುಮಾರವ್ಯಾಸ ಮತ್ತು ಬೇಂದ್ರೆ ಸಾಹಿತ್ಯದ ತಜ್ಞರೆಂದೂ ಖ್ಯಾತರಾಗಿದ್ದಾರೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಮೂರು ನೂರಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ. ಶ್ರೇಷ್ಠ ಅನುವಾದಕರೂ ಆಗಿರುವ ಇವರು ಶಂ.ಬಾ.ಜೋಶಿ ಅವರ ಮರಾಠೀ ಸಂಸ್ಕೃತಿ: ಕೆಲವು ಸಮಸ್ಯೆಗಳು ಎಂಬ ಕೃತಿಯನ್ನು ಅನುವಾದಿಸಿದ್ದಾರೆ. ಇದರ ಅನುವಾದಕ್ಕಾಗಿ ಕೇಂದ್ರಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ (1993) ಮತ್ತು ಉರಿಯನಾಲಗೆ ಅಂಕಣ ಲೇಖನ ಸಂಪುಟಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ (1995) ದೊರಕಿವೆ. ಆಮನಿ (1956), ಚಂದ್ರಗುಪ್ತ (1983) ಇವು ಇವರ ಸೃಜನಶೀಲ ಬರೆಹದ ಮಾದರಿಗಳು.

ಇವರು ಅಪರೂಪದ ವಾಗ್ಮಿಗಳೂ ಹೌದು. ಪ್ರಾಚೀನ ಮತ್ತು ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಸಮಾನವಾದ ಶ್ರದ್ಧೆಯುಳ್ಳವರೂ ಆಗಿದ್ದ ಇವರು ಸಮಕಾಲೀನ ಭಾರತೀಯ ವಿದ್ವಾಂಸ ವಿಮರ್ಶಕರಲ್ಲಿ ಪ್ರಮುಖರಾಗಿದ್ದರು. ನಿರಂತರವಾದ ಓದು, ಸಾಹಿತ್ಯಸಂವಾದ ನಡೆಸುವ ಮನೋಹರ ಗ್ರಂಥಮಾಲೆಯ ಅಟ್ಟದ ಗೆಳೆಯರ ಬಳಗದ ರಸಿಕ ಹರಟೆಗಾರರಾಗಿಯೂ ಹೆಸರಾಗಿದ್ದರು. ಅಭಿಮಾನಿಗಳು ಇವರಿಗೆ ಅರ್ಪಿಸಿದ ಅಭಿನಂದನಗ್ರಂಥ. 'ಕನ್ನಡದ ಕೀರ್ತಿ' (1989). ಇವರು 2003 ಆಗಸ್ಟ್ 31ರಂದು ಧಾರವಾಡದಲ್ಲಿ ನಿಧನಹೊಂದಿದರು. (ಜಿ.ಎಂ.ಎಚ್)

**ಕೀರ್ತಿಮತೀ :** ವ್ಯಾಸಪುತ್ರ ಶುಕ್ರಾಚಾರ್ಯನ ಮಗಳು; ವಿಭ್ರಾಜ ಅರಸನ ಮಗ ಅಣುಹ ರಾಜನನ್ನು ಮದುವೆಯಾಗಿ ಬ್ರಹ್ಮದತ್ತನೆಂಬ ಮಗನನ್ನು ಪಡೆದಳೆಂದು ಹರಿವಂಶ, ಮತ್ಸ್ಯ ಪುರಾಣಗಳಿಂದ ತಿಳಿದುಬರುತ್ತದೆ. *

**ಕೀರ್ತಿವರ್ಮ :** ಸು.1100 ಕನ್ನಡದಲ್ಲಿ ಮೊತ್ತ ಮೊದಲ ವೈದ್ಯಗ್ರಂಥವಾದ ಗೋವೈದ್ಯದ ಕರ್ತೃ. ಈತನ ಕಾಲ ಪ್ರ.ಶ. 1,100 ಎಂದು ಕರ್ಣಾಟಕ ಕವಿಚರಿತೆಕಾರರ ಅಭಿಪ್ರಾಯ. ಈ ಅಭಿಪ್ರಾಯವನ್ನು ಪುನರ್ವಿಮರ್ಶಿಸಿ. ಎಸ್. ಲಕ್ಷ್ಮೀನಾರಾಯಣರಾಯರು ಈತನ ಕಾಲ 1080ರವರೆಗೆ ಇರಬಹುದೆಂದು ನಿಶ್ಚಯಿಸಿದ್ದಾರೆ.

*ಜಿನನಾಪ್ತಂ ಗುರುದೇವಚಂದ್ರಮುನಿಪಂ ತ್ರೈಲೋಕ್ಯಮಲ್ಲಾಧಿಪಂ*
*ಜನಕಂ ಪಾಲಭವಂಧ್ಯ... ... ... ...ವಾಕ್ಶ್ರೀವರಂ ವಿಕ್ರಮಾಂ*
*ಕನರೇಂದ್ರಂ ತನಗಗ್ರಜಾತನೆನಲಂತಾರ್ ನೋಂತರೀ ಕೀರ್ತಿವ–*
*ರ್ಮನರೇಂದ್ರಂಬರಮೆಂದು ಧಾತ್ರಿ ಪೊಗಟ್ಟುಗಂ ನಿಚ್ಚಂ ಮಹೋತ್ಸಾಹದಿಂ*

ಗೋವೈದ್ಯದಲ್ಲಿನ ಈ ಪದ್ಯದಿಂದ ಈತನ ತಂದೆ ತ್ರೈಲೋಕ್ಯ ಮಲ್ಲಾಧಿಪ, ಅಣ್ಣ ವಿಕ್ರಮಾಂಕ ನರೇಂದ್ರ. ಗುರು ದೇವಚಂದ್ರಮುನಿ, ಇಷ್ಟದೇವತೆ ಜಿನ ಎಂದು ತಿಳಿದು ಬರುತ್ತದೆ. ಇವನ ಸಮಕಾಲೀನ ಕವಿ ಬ್ರಹ್ಮಶಿವ ತನ್ನ ಸಮಯ ಪರೀಕ್ಷೆಯಲ್ಲಿ ಈತನನ್ನು ಹೀಗೆ ಹೊಗಳಿದ್ದಾನೆ;

*ಜನತಾನಂದ ಚಳುಕ್ಯಾಭರಣನವನಿಪಾಳೋತ್ತಮಂ ಸಾರ್ವಭೌಮಂ*
*ಜನಕಂ ತ್ರೈಲೋಕ್ಯಮಲ್ಲಂ ಸಕಳವಸುಮತೀವಲ್ಲಭಂ ವಿಕ್ರಮಾಂಕಾ*
*ವನಿಪಂ ತಾನಗ್ರಜಾತಂ ತ್ರಿಭುವನಪತಿ ದೇವಾಧಿದೇವಂ ಜಿನೇಂದ್ರಂ*
*ತನಗಾಪ್ತಂ ಮತ್ತೆನಲ್ಕೇಂ ಪಿರಿಯನೊ ಜಗತೀನಾಥರೊಳ್ ಕೀರ್ತಿವರ್ಮಂ*

*ಅರಸುಮಗಂ ಗಡ ಕವಿ ಗಡ*
*ಪಿರಿದೀವಂ ಗಡ ಬಟಿಕ್ಕೆ ಜೈನಂ ಗಡೆನಲ್*
*ಧರಣಿಪತಿ ಕೀರ್ತಿವರ್ಮಂ*
*ನಿರತಂ ಪೊನ್ ಕಮ್ಮಿತಾದುದೆನಿಸಿದನಿಳೆಯೊಳ್॥*

ಇದರಿಂದ ಕೀರ್ತಿವರ್ಮ ಚಾಳುಕ್ಯ ರಾಜರ ವಂಶದಲ್ಲಿ ಹುಟ್ಟಿದವನೆಂದು ವ್ಯಕ್ತವಾಗುತ್ತದೆ. ಆ ರಾಜರಲ್ಲಿ ತ್ರೈಲೋಕ್ಯಮಲ್ಲ 1042–68 ರವರೆಗೆ ಆಳಿದಂತೆಯೂ ಅವನ ಮಗನಾದ ವಿಕ್ರಮಾದಿತ್ಯ 1076–1126ರವರೆಗೆ ಆಳಿದಂತೆಯೂ ತಿಳಿಯುತ್ತದೆ. ಈ ವಿಕ್ರಮಾದಿತ್ಯನೇ ಕವಿಯ ಅಣ್ಣನಾಗಿದ್ದಿರಬೇಕು. ವಿಕ್ರಮಾದಿತ್ಯನಿಗೆ ಮೂರನೆಯ ಜಯಸಿಂಹ, ವಿಷ್ಣುವರ್ಧನ ವಿಜಯಾದಿತ್ಯರೆಂಬ ಇಬ್ಬರು ತಮ್ಮಂದಿರಿದ್ದರು. ಕೀರ್ತಿವರ್ಮ ಎಂಬುದು ವಿಷ್ಣುವರ್ಧನ ವಿಜಯಾದಿತ್ಯನ ಮತ್ತೊಂದು ಹೆಸರೆಂದು ಎಸ್. ಲಕ್ಷ್ಮೀನಾರಾಯಣರ ಅಭಿಮತ.

ಗೊವೈದ್ಯ ಕನ್ನಡದಲ್ಲಿ ರಚಿತವಾದ ಮೊತ್ತಮೊದಲಿನ ವೈದ್ಯಗ್ರಂಥ. ಇದರ ಓಲೆಗರಿ ಪ್ರತಿ ಅಸಮಗ್ರವೂ ಅಶುದ್ಧವೂ ಆಗಿದೆ ಎಂದು ಕರ್ಣಾಟಕ ಕವಿಚರಿತೆಕಾರರು ಹೇಳುತ್ತಾರೆ. ಇದು ಚಂಪೂಗ್ರಂಥ. ಇದರಲ್ಲಿ ಗೋವುಗಳ ವ್ಯಾಧಿಗಳಿಗೆ ಔಷಧಗಳನ್ನೂ ಯಂತ್ರಗಳನ್ನೂ ಬರೆಹಾಕುವ ಕ್ರಮಗಳನ್ನೂ ವಿಸ್ತಾರವಾಗಿ ಹೇಳಿದೆ. ಈ ಗ್ರಂಥದ ಮೊದಲ ಒಂದು ಪದ್ಯ ಹೀಗಿದೆ :

*ಬಡವಂ ಕೊಬ್ಬಿದ ಬಂಜೆಯ*
*ನುಡುಗದೆ ಹಯಮಾಡಿ ಕಱೆವ ತೆಱನಂ ಕುತ್ತಂ*
*ಬಿಡುವಂತು ವೈರಿಕರಿಹರಿ*
*ನುಡಿದಂ ಕಂದರ್ಪಮೂರ್ತಿ ಕೀರ್ತಿವಿಲಾಸಂ*

ಎರಡು ಪದ್ಯಗಳು ಹೀಗಿವೆ:

*ಬಡಿಯದೆ ಭಾರಮಂ ಪಿರಿದನಿಕ್ಕದೆ ಮೇಹುಜ(ಲ)ಂಗಳೆಂಬಿವಂ*
*ಕುಡದವಱೆಂದಕ್ಕಟಂ ಬರದು ನೀಳದೆ ಕಾಯದೆ ಗೋಕುಲಂಗಳಂ*
*ಬಡವನಱೆಯದಂತು ಕಡುಗರುವಿಸಮಾನರಾಯಂ ಲಕ್ಷ್ಮಿಯ(ಂ)*
*ಸಡೆದ(ಪ)ರೆಂದು ಪೇೞ್ದನುದಿತೋತ್ಸವದಿಂ ಬುಧಭವ್ಯಬಾಂಧವಂ*

*ಅಧಿಕಂ ರಕ್ತಪ್ರಭಂ ಕಾಲಚನನಮರ್ದಿರೆ ಅಂತಸ್ತಸತ್ತಾ*
*ಣದಜೀವಧನಂ ನೋಡಲ್ ಬಹೀಃಪ್ರಾಣಮುನಡೆನಿದಾನಂ ಜಗಕ್ಕೆಂದು ಕಾವ್ಯಂ*
*ಬುಧೋಸದವೈದ್ಯರತ್ನಂ ದೆಸೆದೆಸೆಗೆಸೆಯಲ್ ಪೇಟ್ಟಿನುತ್ಸಾಹದಿಂ ಮಿ*
*ತಧರಾವಿಕ್ರದರಪಾಲಭವಂದ್ಯಂ ಸಹಜಕವಿಜಿತೋತ್ಸಾಹನಂ ಕೀರ್ತಿಚಂದ್ರಂ*

ಈ ಕವಿ ಕೀರ್ತಿಚಂದ್ರ, ವೈರಿಕರಿಹರಿ, ಕಂದರ್ಪಮೂರ್ತಿ, ರತ್ನಾಕರ, ಬುಧಭವ್ಯ ಬಾಂಧವ, ವೈದ್ಯರತ್ನ, ಪಾಲಭವಂದ್ಯ, ಕವಿತಾಬ್ಧಿಚಂದ್ರಮ, ಕೀರ್ತಿವಿಲಾಸ ಎಂದು ಮೊದಲಾದ ಪ್ರಶಸ್ತಿಗಳಿಂದಲೂ ಬಿರುದುಗಳಿಂದಲೂ ತನ್ನನ್ನು ವಿಶ್ಲೇಷಿಸಿ ಕೊಂಡಿದ್ದಾನೆ. (ಜಿ.ಸಿ.ಎ.)

**ಕೀರ್ತಿವರ್ಮ (ಚಂದೆಲ) :** ಚಂದೆಲ ವಂಶದ ಅತ್ಯಂತ ಪ್ರಮುಖ ದೊರೆ (ಸು. 1073–1100) ; ವಿಜಯಪಾಲನ ಎರಡನೆಯ ಮಗ. ವಿಜಯಪಾಲನ ಮರಣಾನಂತರ ಹಿರಿಯನಾದ ದೇವೇಂದ್ರವರ್ಮ ಸ್ವಲ್ಪಕಾಲ ರಾಜ್ಯವಾಳಿ ಸು. 1073ರಲ್ಲಿ ಮರಣ ಹೊಂದಿದಾಗ ಕೀರ್ತಿವರ್ಮ ಚಂದೆಲ ರಾಜನಾದ. ಇವನು ಸಿಂಹಾಸನವನ್ನೇರಿದ ತರುವಾಯದಲ್ಲೇ ಕಳಚುರಿ ಕರ್ಣ ಇವನನ್ನು ಸೋಲಿಸಿ ರಾಜ್ಯವನ್ನು ಸ್ವಲ್ಪಕಾಲ ಆಕ್ರಮಿಸಿದ್ದ. ಕೀರ್ತಿವರ್ಮ ತನ್ನ ನೆಚ್ಚಿನ ಸಾಮಂತನಾಗಿದ್ದ ಗೋಪಾಲನ ಸಹಾಯದಿಂದ ಕರ್ಣನನ್ನು ಸೋಲಿಸಿ ಪುನಃ ಅಧಿಕಾರ ಸ್ಥಾಪಿಸಿದ.

ಘಸ್ನಿ ಸಾಮ್ರಾಜ್ಯದ ಪಂಜಾಬ್ ಪ್ರದೇಶದ ಪ್ರಾಂತ್ಯಾಧಿಕಾರಿಯಾಗಿದ್ದ ಮಹಮ್ಮದ್ 1090ರಲ್ಲಿ ಕಲಂಜರ ಕೋಟೆಯನ್ನು ಮುತ್ತಿ ಕೊಳ್ಳೆ ಹೊಡೆದ. ಕೀರ್ತಿವರ್ಮ ಅವನನ್ನು ಸೋಲಿಸಿ ಹಿಮ್ಮೆಟ್ಟುವಂತೆ ಮಾಡಿದ. ಝಾನ್ಸಿ ಜಿಲ್ಲೆಯ ಕೀರ್ತಿಗಿರಿ ಎಂಬಲ್ಲಿ ಈತ ಒಂದು ಕೋಟೆಯನ್ನು ಕಟ್ಟಿಸಿದ. ದೇವಘಡದ ಬಳಿಯಲ್ಲಿ ಕೀರ್ತಿವರ್ಮನ ಒಂದು ಶಾಸನವೂ ಈತ ಅಚ್ಚು ಹಾಕಿಸಿದ ಅನೇಕ ಚಿನ್ನದ ನಾಣ್ಯಗಳೂ ದೊರೆತಿವೆ. ಕೀರ್ತಿವರ್ಮ ಪ್ರಬೋಧ ಚಂದ್ರೋದಯ ಗ್ರಂಥದ ಕರ್ತೃವಾದ ಕೃಷ್ಣಮಿಶ್ರನ ಆಶ್ರಯದಾತ. ಕೀರ್ತಿವರ್ಮನ ಮರಣಾನಂತರ ಅವನ ಮಗ ಸಲ್ಲಕ್ಷಣವರ್ಮ ರಾಜನಾದ. (ಜಿ.ಆರ್.ಆರ್.; ಡಿ.ಎಂ.ಜಿ.ಬಿ.)

**ಕೀರ್ತಿವರ್ಮ I :** (ಬಾದಾಮಿ ಚಳುಕ್ಯ) : ಬಾದಾಮಿ ಚಳುಕ್ಯ ಮನೆತನದ 2ನೆಯ ಅರಸ. 2ನೆಯ ಪುಲಕೇಶಿ ಇವನ ಮಗ. ಅವನ ಮರಣಾನಂತರ ಪಟ್ಟಕ್ಕೆ ಬಂದ (ಸು. 566–97). ಇವನಿಗೆ ಕೀರ್ತಿರಾಜ, ಕತ್ತಿ ಅರಸ ಎಂಬ ಹೆಸರುಗಳ ಜೊತೆಗೆ ವಲ್ಲಭ, ಪೃಥ್ವೀವಲ್ಲಭ, ಸತ್ಯಾಶ್ರಯ ಮತ್ತು ಪುರುರಣ ಪರಾಕ್ರಮ ಎಂಬ ಬಿರುದುಗಳೂ ಇದ್ದುವು. ಕೊಂಕಣ ಪ್ರದೇಶದಲ್ಲಿ ಪುರಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಮೌರ್ಯ ಶಾಖೆಯನ್ನೂ ಬನವಾಸಿಯ ಕದಂಬರನ್ನೂ ಈಗಿನ ಬಳ್ಳಾರಿ ಮತ್ತು ಕರ್ನೂಲುಗಳ ಮಧ್ಯದಲ್ಲಿದ್ದ ನಳರನ್ನೂ ಸೋಲಿಸಿ ಈತ ತನ್ನ ಅಧಿಕಾರವನ್ನು ವಿಸ್ತರಿಸಿದ. ಈ ವಿಜಯಗಳ ಜ್ಞಾಪಕಾರ್ಥವಾಗಿ ಅಗ್ನಿಷ್ಟೋಮ, ಬಹುಸುವರ್ಣ ಮೊದಲಾದ ಯಾಗಗಳನ್ನು ಆಚರಿಸಿದ. ಈತ ಬಾದಾಮಿಯ ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಿದನಲ್ಲದೆ ಬಾದಾಮಿಯ ಗುಡ್ಡದಲ್ಲಿ ಕೆಲವು ಗುಹಾಲಯಗಳನ್ನು ಕೊರೆಸಿದ. ಕೀರ್ತಿವರ್ಮನ ಆಜ್ಞಾನುಸಾರವಾಗಿ ಅವನ ತಮ್ಮ ಮಂಗಳೇಶ ಬಾದಾಮಿಯಲ್ಲಿ ಸುಂದರವಾದ ವಿಷ್ಣು ದೇವಾಲಯವನ್ನು ಕಟ್ಟಿಸಿದುದಾಗಿ ಮಹಾಕೂಟ ಶಾಸನ ತಿಳಿಸುತ್ತದೆ. ಕೀರ್ತಿವರ್ಮನ ರಾಣಿ ದುರ್ಲಭದೇವಿ ಸೇಂದ್ರಕ ಮನೆತನದವಳು. ಕೀರ್ತಿವರ್ಮ ಮತ್ತು ದುರ್ಲಭದೇವಿಯರಿಗೆ ಇಮ್ಮಡಿ ಪುಲಕೇಶಿ, ಕುಬ್ಜ ವಿಷ್ಣುವರ್ಧನ, ಧರಾಶ್ರಯ ಜಯಸಿಂಹ ಮತ್ತು ಬುದ್ಧವರ್ಷ ಎಂಬ ನಾಲ್ವರು ಗಂಡು ಮಕ್ಕಳಿದ್ದರು. ಕೀರ್ತಿವರ್ಮ ಸು. 597ರಲ್ಲಿ ಮರಣ ಹೊಂದಿದಾಗ ಅವನ ಮಕ್ಕಳು ಇನ್ನೂ ಚಿಕ್ಕ ವಯಸ್ಸಿನವರಾಗಿದ್ದುದರಿಂದ ಅವನ ತಮ್ಮ ಮಂಗಳೇಶ ಆಡಳಿತವನ್ನು ವಹಿಸಿದ. (ಜಿ.ಆರ್.ಆರ್.)

**ಕೀರ್ತಿವರ್ಮ II :** (ಬಾದಾಮಿ ಚಳುಕ್ಯ) : ಇಮ್ಮಡಿ ವಿಕ್ರಮಾದಿತ್ಯನ ಮಗ ; ಅವನ ಉತ್ತರಾಧಿಕಾರಿ ; ಮತ್ತು ಬಾದಾಮಿ ಚಾಳುಕ್ಯ ಮನೆತನದ ಕೊನೆಯ ದೊರೆ (745–57). ಚಿಕ್ಕವಯಸ್ಸಿನಲ್ಲೇ ಯುದ್ಧಕಲೆಯಲ್ಲಿ ಪರಿಣತಿ ಪಡೆದಿದ್ದ. ವಿಕ್ರಮಾದಿತ್ಯ ಈತನಿಗೆ ಯುವರಾಜಪಟ್ಟವನ್ನು ಕಟ್ಟಿದ್ದ. ಇವನಿಗೆ ಶ್ರೀಪೃಥ್ವೀವಲ್ಲಭ, ಪರಮೇಶ್ವರ, ಮಹಾರಾಜಾಧಿರಾಜ ಮತ್ತು ನೃಪಸಿಂಹ ಎಂಬ ಬಿರುದುಗಳಿದ್ದುವು. ಯುವರಾಜನಾಗಿದ್ದಾಗ ಕಂಚಿಯ ಮೇಲೆ ದಂಡೆತ್ತಿ ಹೋಗಿ ಪಲ್ಲವ ರಾಜನನ್ನು ಸೋಲಿಸಿ ವಿಪುಲವಾದ ಐಶ್ವರ್ಯವನ್ನು ಅನೇಕ ಆನೆಗಳನ್ನೂ ಅವನಿಂದ ಪಡೆದುತಂದು ತನ್ನ ತಂದೆಗೆ ಅರ್ಪಿಸಿದ. ಈತ ರಾಜನಾಗುವ ವೇಳೆಗೆ ರಾಷ್ಟ್ರಕೂಟ ದಂತಿದುರ್ಗ ಪ್ರಬಲನಾಗಿದ್ದ. ಆತ ಕೀರ್ತಿವರ್ಮನನ್ನು ಸೋಲಿಸಿದುದಾಗಿ ಸಾಮನ್‌ಘಡ ಶಾಸನ ತಿಳಿಸುತ್ತದೆ. 757ರಲ್ಲಿ ಇಮ್ಮಡಿ ಕೀರ್ತಿವರ್ಮ ಗತಿಸಿದಾಗ ಬಾದಾಮಿ ಚಳುಕ್ಯ ಸಾಮ್ರಾಜ್ಯವೂ ಅವನೊಂದಿಗೆ ಕಣ್ಮರೆಯಾಯಿತು. (ಜಿ.ಆರ್.ಆರ್.)

**ಕೀಲ್ :** ಜರ್ಮನ್ ಸಂಯುಕ್ತ ಗಣರಾಜ್ಯದ ಒಂದು ನಗರ, ಬಾಲ್ಟಿಕ್ ಸಮುದ್ರದ ಮೇಲಣ ಒಂದು ಬಂದರು, ಶ್ಲೆಸ್‌ವಿಗ್–ಹೋಲ್‌ಸ್ಟೈನ್ ರಾಜ್ಯದ ಮುಖ್ಯಪಟ್ಟಣ. ಪಶ್ಚಿಮ ಬಾಲ್ಟಿಕ್ ಸಮುದ್ರದ ಒಂದು ಒಳಚಾಚಾದ ಕೀಲರ್ ಫೋರ್ಡಿನ ಎರಡೂ ದಂಡೆಗಳ ಮೇಲೆ ಹರಡಿದೆ. ಹ್ಯಾಂಬರ್ಗ್ ನಗರ ಇದರ ದಕ್ಷಿಣಕ್ಕೆ 144 ಕಿಮೀ ದೂರದಲ್ಲಿದೆ. ಜನಸಂಖ್ಯೆ 245567 (2001).

ಎರಡನೆಯ ಮಹಾಯುದ್ಧದ ಕಾಲದಲ್ಲಿ ವಿಮಾನದಾಳಿಯಿಂದ ಈ ನಗರದ ಸುಮಾರು 1/3 ಭಾಗ ನಾಶವಾಗಿತ್ತು. ಹೊಸ ನಗರವನ್ನು ಇಲ್ಲಿಯ ಪುರಭವನದ ಸುತ್ತ ನಿರ್ಮಿಸಲಾಗಿದೆ. ನಡುನಡುವೆ ಹಸಿರು ಮೈದಾನಗಳಿಂದ ಕೂಡಿರುವ ಹೊಸನಗರ ಸುಂದರವಾಗಿದೆ. ಪುರಭವನ (1911), ಪೌರಸಭಾ ನಾಟ್ಯ ಮಂದಿರ (1907), ಆಸ್ಟ್‌ಸೀಹಾಲ್ ಪ್ರದರ್ಶನ ಭವನ (1950)–ಇವು ಕೆಲವು ಮುಖ್ಯ ಕಟ್ಟಡಗಳು. ಸೇಂಟ್ ನಿಕೋಲಾಸನ ಚರ್ಚ್ ಪೇಟೆಯ ನಡುವೆ ಇದೆ. 1240ರಲ್ಲಿ, ನಗರದ ಸ್ಥಾಪನೆಯಾದಾಗ, ಕಟ್ಟಲಾದ ಈ ಕಟ್ಟಡವನ್ನು 1949ರಲ್ಲಿ ಪುನರ್ನಿರ್ಮಿಸಲಾಯಿತು. 13ನೆಯ ಶತಮಾನದ ಅರಮನೆಯ ಪಳೆಯುಳಿಕೆ ಇದರ ಬಳಿಯೇ ಇದೆ. ವಿಶ್ವವಿದ್ಯಾಲಯ ವೈದ್ಯಕ ಶಾಲೆಯನ್ನು 1965ರಲ್ಲಿ ಶ್ಲೆಸ್‌ವಿಗ್‌ನ ಡ್ಯೂಕ್ ಆದ ಕ್ರಿಶ್ಚಿಯನ್ ಆಲ್ಬ್ರೆಕ್ಟ್ ಸ್ಥಾಪಿಸಿದ. ಹೊಸ ವಿಶ್ವವಿದ್ಯಾಲಯದ ಶಿಕ್ಷಣ ಸಂಸ್ಥೆಗಳ ಪೈಕಿ ಕೃಷಿ ವಿಜ್ಞಾನ ಶಾಲೆ ಮತ್ತು ವಿಶ್ವ ಅರ್ಥಶಾಸ್ತ್ರ ಸಂಸ್ಥೆ ಮುಖ್ಯವಾದವು. ಕಡಲಿಗೆದುರಾಗಿ ಹಳೆಯ ವಿಶ್ವವಿದ್ಯಾಲಯದ ಆವರಣದಲ್ಲಿ ಚಿತ್ರಶಾಲೆಯೂ ಸಸ್ಯಶಾಸ್ತ್ರ ಉದ್ಯಾನವೂ ಇವೆ.

ಕೀಲ್ ಪಟ್ಟಣದ ಬಂದರು ಅತ್ಯುತ್ತಮವಾದ್ದು. ಇದರ ಸರಾಸರಿ ಆಳ 12 ಮೀ, ಉದ್ದ 11 ಕಿಮೀ ಇದರ ದಕ್ಷಿಣದ ತುದಿಯ ಅಗಲ 596 ಮೀ. ಮುಖದ ಬಳಿ ಇದು 3 ಕಿ.ಮೀ ಅಗಲವಾಗಿದೆ. ಕೀಲ್ ಕಾಲುವೆ **(ನೋಡಿ)** ಇರುವುದು ಇದಕ್ಕೆ ಉತ್ತರದಲ್ಲಿ. ಈ ಕಾಲುವೆಯ ಮೇಲೆ ಎತ್ತರದಲ್ಲಿ ಕಟ್ಟಲಾಗಿರುವ ಸೇತುವೆಯ ಮೇಲೆ ಹ್ಯಾಂಬರ್ಗಿನಿಂದ ಡೆನ್ಮಾರ್ಕಿಗೆ ಹೋಗುವ ರೈಲುಮಾರ್ಗವೂ ರಸ್ತೆಯೂ ಇವೆ.

ಈ ನಗರದ ಎಡಬಲ ಭಾಗಗಳ ನಡುವೆ ದೋಣಿಗಳು ಸಂಚರಿಸುತ್ತವೆ. ಕಡಲ ಚಾಚಿನ ಆಚೀಚೆ ದಡಗಳಲ್ಲಿರುವ ಹಳ್ಳಿಗಳ ಮೀನುಗಾರರಿಗೆ ಇದರಿಂದ ಅನುಕೂಲ, ಹಡಗು ನಿರ್ಮಾಣ, ಎಂಜಿನಿಯರಿಂಗ್ ಇವು ಮುಖ್ಯ ಕೈಗಾರಿಕೆಗಳು. ಕಬ್ಬಿಣ ಎರಕ, ಮುದ್ರಣ, ಮದ್ಯಸಾರ, ಇಟ್ಟಿಗೆ, ಮೀನು ಹದಗಾರಿಕೆ–ಮುಂತಾದವು ಇತರ ಕೈಗಾರಿಕೆಗಳು. ಕಲ್ಲಿದ್ದಲು ವ್ಯಾಪಾರ ನಡೆಯುತ್ತದೆ. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಈ ನಗರ ಒಂದು ಮುಖ್ಯ ನೌಕಾನೆಲೆಯಾಗಿತ್ತು. ಕೀಲರ್ ಹೋಜ್ (ಕೀಲರ್ ವಾರ) ಎಂಬುದು ಈ ಪಟ್ಟಣದ ಮುಖ್ಯ ಉತ್ಸವ.

10ನೆಯ ಶತಮಾನದಲ್ಲಿ ಈ ನಗರವನ್ನು ಕೈಲ್ ಎಂದು ಕರೆಯಲಾಗುತ್ತಿತ್ತು. ಹಡಗು ರಕ್ಷೆ ಎಂಬ ಅರ್ಥದ ಆಂಗ್ಲೋ–ಸ್ಯಾಕ್ಸನ್ ಪದವೊಂದರಿಂದ ಇದು ವ್ಯುತ್ಪತ್ತಿ ಪಡೆಯಿತೆಂದು ಊಹಿಸಲಾಗಿದೆ. 1242ರಲ್ಲಿ ಇದಕ್ಕೆ ಹಕ್ಕುಗಳು ಪ್ರಾಪ್ತವಾದುವು. ಹ್ಯಾನ್ಸಿಯಾಟಿಕ್ ಲೀಗಿನ ಸದಸ್ಯತ್ವ ಇದಕ್ಕೆ ಲಭ್ಯವಾದ್ದು 1284ರಲ್ಲಿ. 14ನೆಯ ಶತಮಾನದಲ್ಲಿ ವ್ಯಾಪಾರದ ಅನೇಕ ಸವಲತ್ತುಗಳು ಕೀಲ್‌ಗೆ ಲಭ್ಯವಾದುವು. 1773ರಲ್ಲಿ ಕೀಲ್ ನಗರ ಡೆನ್ಮಾರ್ಕಿನ ಭಾಗವಾಯಿತು. 1814ರಲ್ಲಿ ನಾರ್ವೆಯನ್ನು ಸ್ವೀಡನಿಗೆ ವಶಪಡಿಸುವ ಕೌಲು ಆದದ್ದು ಕೀಲ್‌ನಲ್ಲಿ. 1866ರಲ್ಲಿ ಇಡೀ ಶ್ಲೆಸ್‌ವಿಗ್–ಹೋಲ್‌ಸ್ಟೈನಿನೊಂದಿಗೆ ಇದು ಪ್ರಷ್ಯಕ್ಕೆ ಸೇರಿತು. ಎರಡನೆಯ ಮಹಾಯುದ್ಧಾನಂತರ, 1945ರಲ್ಲಿ, ಇದನ್ನು ಪಶ್ಚಿಮ ಜರ್ಮನಿಗೆ ಸೇರಿಸಲಾಗಿತ್ತು. 1990 ಅಕ್ಟೋಬರ್ 3 ರಂದು ಪೂರ್ವ ಪಶ್ಚಿಮ ಜರ್ಮನಿಗಳೆರಡೂ ಒಂದುಗೂಡಿದ್ದು ಕೀಲ್ ಪಟ್ಟಣ ಈಗ ಜರ್ಮನ್ ಗಣರಾಜ್ಯಕ್ಕೆ ಸೇರಿದೆ. (ಎಂ.ಎ.ಎಚ್.)

**ಕೀಲ್ ಕಾಲುವೆ :** ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಕಡಲುಗಳನ್ನು ಕೂಡಿಸುವ ಕಾಲುವೆ. 1887–95ರಲ್ಲಿ ನಿರ್ಮಿತವಾದ ಇದನ್ನು 1907–14ರಲ್ಲಿ ವಿಸ್ತರಿಸಲಾಯಿತು. ಹೋಲ್ಟೆನೌ ಮತ್ತು ಬ್ರನ್ಸ್‌ಬುಟೆಲ್‌ಕೂಗ್‌ಗಳೆಡೆಗಳಲ್ಲಿರುವ ತೂಬುಗಳು 325 ಮೀ ಉದ್ದ, 44 ಮೀ ಅಗಲ ಮತ್ತು 14 ಮೀ ಎತ್ತರವಾಗಿವೆ. ಹೋಲ್ಟೆನೌ ಎಂಬುದು ಕೀಲ್‌ನ ಬಂದರು. ಬ್ರನ್ಸ್‌ಬುಟೆಲ್‌ಕೂಗ್ ಎಂಬುದು ಎಲ್ಬ್ ನದಿಯ ಮುಖ. ಕಾಲುವೆಯ ಉದ್ದ 86 ನಾವಿಕ ಕಿಮೀ. ಅಗಲ 101 ಮೀ ಆಳ 11.11 ಮೀ.

ಪ್ರಾರಂಭದಲ್ಲಿ ಈ ಕಾಲುವೆಯನ್ನು ಸೈನಿಕರ ಸಾಗಾಣಿಕೆಗೆ ಮಾತ್ರ ಉಪಯೋಗಿಸಲಾಗುತ್ತಿತ್ತು. ಕಾಲಕ್ರಮೇಣ ಸರಕು ಸಾರಿಗೆಯೂ ಆರಂಭವಾಯಿತು. ಎರಡನೆಯ ಮಹಾಯುದ್ಧಕ್ಕೆ ಮುಂಚೆ ಇದು ಜರ್ಮನಿಯ ಒಡೆತನಕ್ಕೆ ಒಳಪಟ್ಟಿತು. 1919ರ ವರ್ಸೇಲ್ಸ್ ಕೌಲಿನ ಪ್ರಕಾರ ಈ ಕಾಲುವೆಯು ಬಳಕೆಯನ್ನು ಅಂತಾರಾಷ್ಟ್ರೀಕರಿಸಲಾಗಿತ್ತು. ಶುಲ್ಕ ವಸೂಲಿ ಮಾಡಬೇಕಾಗಿದ್ದುದು ಅದರ ದುರಸ್ತಿಗಾಗಿ ಮತ್ತು ನಿರ್ವಹಣ ವೆಚ್ಚಕ್ಕಾಗಿ ಮಾತ್ರ. ಅಡಾಲ್ಫ್ ಹಿಟ್ಲರ್ ಈ ಷರತ್ತುಗಳನ್ನು ತಿರಸ್ಕರಿಸಿದ. ಎರಡನೆಯ ಮಹಾಯುದ್ಧಾನಂತರ ಇದು ಪಶ್ಚಿಮ ಜರ್ಮನಿಗೆ ಸೇರಿತು.

ಕೀಲ್ ಕಾಲುವೆ ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಸಮುದ್ರಗಳನ್ನು ಕೂಡಿಸುವ ಅತಿ ಸುರಕ್ಷಿತವಾದ, ಬಹಳ ಅನುಕೂಲಗಳುಳ್ಳ ಮತ್ತು ಅತಿ ಕಡಿಮೆ ವೆಚ್ಚದ ಜಲಮಾರ್ಗ. 1913ರಲ್ಲಿ ಒಟ್ಟು 1,03,50,000 ಟನ್ ನಿವ್ವಳ ತೂಕದ ನೀರಿನ ಭಾಗವನ್ನಾಕ್ರಮಿಸುವ,

55,382 ಹಡಗುಗಳು ಇದರ ಮೂಲಕ ಸಾಗಿದವು. 1960ರಲ್ಲಿ 4,15,27,000 ಟನ್ ನಿವ್ವಳ ತೂಕದ ನೀರಿನ ಭಾಗವನ್ನಾಕ್ರಮಿಸುವ 80,303 ಹಡಗುಗಳು ಸಾಗಿದುವು. (ಎಂ.ಎಸ್.)

**ಕೀಲುಕುದುರೆ :** ಜನಪದ ನೃತ್ಯಗಳಲ್ಲಿ ಬಳಸಲಾಗುವ ಒಂದು ಬಗೆಯ ಸಾಧನ. ದಕ್ಷಿಣ ಭಾರತದ ಎಲ್ಲ ಭಾಷಾಪ್ರದೇಶಗಳಲ್ಲೂ ಕೀಲುಕುದುರೆಯ ಕುಣಿತ ಹಿಂದಿನಿಂದ ಜನಪ್ರಿಯವಾಗಿದೆ. ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ಬರುವ ಕೀಲುಕುದುರೆಯ ಸನ್ನಿವೇಶವನ್ನು ಇಲ್ಲಿ ನೆನೆಯಬಹುದು. ರಾಜಕುಮಾರ ತಾನು ಪ್ರೀತಿಸಿದ ಪ್ರಿಯತಮೆಯನ್ನು

ಸಂದರ್ಶಿಸುವ ಸನ್ನಿವೇಶಗಳಲ್ಲಿ ಇಲ್ಲವೆ ಆಕೆಯನ್ನು ಅಪಹರಿಸಿಕೊಂಡು ಹೋಗುವಲ್ಲಿ ಕೀಲುಕುದುರೆಯನ್ನು ಬಳಸುವ ಕಲ್ಪನೆ ರಮ್ಯವಾದುದು. ಏಳು ಉಪ್ಪರಿಗೆ ಅರಮನೆಯ ಮೇಲೆ ಸುರಕ್ಷಿತಳಾಗಿರುವ ರಾಜಕುಮಾರಿಯನ್ನು ಆಕೆಯ ಪ್ರಿಯತಮ ಅಂತರಿಕ್ಷ ಮಾರ್ಗವಾಗಿ ಗುಟ್ಟಾಗಿ ಆಕೆಯ ಸಾಮೀಪ್ಯವನ್ನು ಸೇರಲು ಕೀಲುಕುದುರೆಯನ್ನು ಉಪಯೋಗಿಸುತ್ತಾನೆ. ಇಂಥ ಅನೇಕ ಸನ್ನಿವೇಶಗಳಲ್ಲಿ ಈ ಕೀಲುಕುದುರೆ ಮಾಯಾ ಜಗತ್ತಿನ ಕಾಲ್ಪನಿಕ ಪಾತ್ರವಾಗಿ ಬಹಳ ಸುಂದರವಾಗಿ ಬೆಳೆದು ಬಂದಿದೆ. ಇಂದಿನ ಜನಪದ ಕಲಾರಂಗದಲ್ಲಿ ಕೀಲುಕುದುರೆಯನ್ನು ನೃತ್ಯಕ್ಕೆ ಹೇಗೆ ಅಳವಡಿಸಿದ್ದರೆನ್ನುವುದನ್ನು ಪರಿಶೀಲಿಸಬಹುದು.

ಕೀಲುಗಳಿಂದ ಜೋಡಿಸಲ್ಪಟ್ಟ ಈ ಕುದುರೆಯ ರಚನೆಯೂ ಒಂದು ಅಪೂರ್ವ ಜನಪದ ಕಲೆ. ಶಿಲ್ಪ ಮತ್ತು ಚಿತ್ರಗಳ ಸಾಮರಸ್ಯವನ್ನು ಇಲ್ಲಿ ಕಾಣಬಹುದು. ಕೀಲುಕುದುರೆಯ ಹೊಟ್ಟೆಯ ಭಾಗವನ್ನು ಕಾಲುಗಳನ್ನು ಬಿಟ್ಟು ಉಳಿದ ದೇಹ ಭಾಗವನ್ನು ಅಂದರೆ ಎದೆ ಮತ್ತು ಹಿಂಭಾಗವನ್ನು ಕುದುರೆಯ ಆಕಾರದಂತೆ ಬಿದುರಿನ ತೆಳುವಾದ ದಬ್ಬೆಗಳಿಂದ ಹೆಣೆದು ರಚಿಸಿಕೊಳ್ಳುತ್ತಾರೆ. ಮೇದರ ವಂಶ ಪಾರಂಪರ್ಯವಾದ ಕಲೆ ಇದು. ತಲೆ ಮತ್ತು ಕತ್ತನ್ನು ಮಾತ್ರ ಆಯಾ ಪ್ರದೇಶದ ಗ್ರಾಮಕಲಾವಿದರು ರಚಿಸಿಕೊಡುತ್ತಾರೆ. ಅಕ್ಕಸಾಲಿ, ರಂಗಾರೆಯವ ಇಲ್ಲವೆ ಚಿತ್ರಗಾರ ಕುದುರೆಯ ತಲೆಭಾಗವನ್ನು ರೂಪಿಸಿಕೊಡುತ್ತಾನೆ. ಟೊಳ್ಳಾದ ಕತ್ತನ್ನುಳ್ಳ ಕುದುರೆಯ ತಲೆಯನ್ನು ಕಾಗದದ ಹಿಟ್ಟಿನಿಂದ ರಚಿಸಲಾಗುತ್ತದೆ. ಅನಂತರ ಅದಕ್ಕೆ ಸ್ವಾಭಾವಿಕ ಬಣ್ಣ ಹಚ್ಚಲಾಗುತ್ತದೆ. ಕೀಲನ್ನು ಅಳವಡಿಸಿರುತ್ತಾರಾಗಿ ಕುಣಿವಾಗ ಕುದುರೆಯ ನಾಲಗೆ ಮೇಲೆ ಕೆಳಗೆ ಆಡುತ್ತದೆ. ತಲೆಯನ್ನು ಬಿದುರಿನ ಮುಂಡಕ್ಕೆ ಸೇರಿಸಿ ಬಿಗಿಯುತ್ತಾರೆ.

ಕೀಲುಕುದುರೆಯನ್ನು ನಡೆಸುವ ವ್ಯಕ್ತಿ ರಾಜನಂತೆ ವೇಷಭೂಷಣಗಳನ್ನು ಧರಿಸಿಕೊಂಡು ತನ್ನ ಎರಡು ಕಾಲುಗಳಿಗೂ ಒಂದೊಂದು ಪುಟ್ಟನೆಯ ಮರಗಾಲುಗಳನ್ನು ಕಟ್ಟಿಕೊಂಡಿರುತ್ತಾನೆ. ಸಾಮಾನ್ಯವಾಗಿ ಇವು ಎರಡು ಅಡಿ ಉದ್ದವೂ ಹಗುರವೂ ಆದ ಮರದಿಂದಾದವು. ಪಾದಗಳು ಕೂರಲು ಅನುಗುಣವಾಗಿ ಇರುವ ಈ ಮರಗಾಲುಗಳ ಮೇಲುಭಾಗವನ್ನು ಕಾಲುಗಳಿಗೆ ನುಣುಪಾದ ನೂಲಿನಿಂದ ಬಿಗಿದಿರುತ್ತಾರೆ. ಸವಾರ ಕುದುರೆಯ ಹೊಟ್ಟೆಯಲ್ಲಿರುವ ರಂಧ್ರದಿಂದ ತೂರಿ ನಿಲ್ಲುತ್ತಾನೆ. ಕುದುರೆಗೆ ಹೊದಿಸುವ ಗೌನು ಬಣ್ಣದ್ದಾಗಿದ್ದು ಅದರ ದೇಹವನ್ನು ಸವಾರನ ಮರಗಾಲುಗಳನ್ನೂ ಮುಚ್ಚುವಷ್ಟು ಉದ್ದನಾಗಿರುತ್ತದೆ. ಹೀಗೆ ಕುದುರೆಯ ಬೆನ್ನಿನ ನಡುವೆ ಸೇರಿ ನಿಂತಿರುವ ಸವಾರ ತನ್ನ ಎರಡು ಹೆಗಲುಗಳಿಗೆ ಆ ದಬ್ಬೆಯ ಕುದುರೆಯ ದೇಹವನ್ನು ಬಿಗಿದುಕೊಳ್ಳುತ್ತಾನೆ. ನೃತ್ಯಮಾಡುವಾಗ ಕುದುರೆಯ ಲಗಾಮುಗಳನ್ನು ಕೈಲಿ ಹಿಡಿದು ಅದರ ತಲೆಬಾಲಗಳನ್ನು ಹಿಂದು ಮುಂದು ಮಾಡಿ ಸಹಜಭಂಗಿಯಲ್ಲಿ ನೃತ್ಯ ಮಾಡುತ್ತಾನೆ. ಸವಾರನ ಕೈಕಾಲುಗಳನ್ನು ಕುದುರೆ ಮೇಲಿರುವಂತೆಯೇ ಇಟ್ಟುಕೊಳ್ಳುವ ರೀತಿ ಮತ್ತು ಒನಪು ವೈಯಾರಗಳಿಂದ, ಚಾಕುಚಕ್ಯತೆಗಳಿಂದ ಆತ ಕುಳಿತಿರುವುದು ನೋಡಿದರೆ ಜೀವಂತ ಕುದುರೆ ಮೇಲಿರುವಂತೆಯೇ ಭಾಸವಾಗುತ್ತದೆ.

ಕೀಲುಕುದುರೆಯ ನೃತ್ಯ ಕನ್ನಡನಾಡಿನಲ್ಲಿ, ಆಂಧ್ರ, ತಮಿಳುನಾಡು ಮತ್ತು ಕೇರಳ ಮುಂತಾದ ನೆರೆಪ್ರಾಂತ್ಯಗಳಲ್ಲಿ ಉಳಿದು ಬಂದಿದೆ. ದೇವರ ಉತ್ಸವಗಳಲ್ಲಿ, ಇಲ್ಲವೆ ಮದುವೆಯ ಮೆರವಣಿಗೆಗಳಲ್ಲಿ ಅಥವಾ ವಿಶೇಷ ಉತ್ಸವಗಳಲ್ಲಿ ಈ ನೃತ್ಯದವರನ್ನು ಕರೆಸುವ ರೂಢಿ ಇದೆ. ನೃತ್ಯದಲ್ಲಿ ಸಾಮಾನ್ಯವಾಗಿ ರಾಜ ರಾಣಿಯರಿಗೆಂದು ಎರಡು ಕುದುರೆಗಳಿರುತ್ತವೆ. ವಾದ್ಯಮೇಳದೊಂದಿಗೆ ಈ ನೃತ್ಯ ಬಹು ಆಕರ್ಷಕವಾಗಿ ತೋರುತ್ತದೆ. (ಪಿ.ಆರ್.ಟಿ.)

**ಕೀಲುಗಟ್ಟು :** ಎರಡು ಮೂಳೆಗಳು ತುದಿಯಲ್ಲಿ ಸೇರಿ ಕೀಲು ರಚಿಸುತ್ತವೆ. ಚಲನೆ ಕೀಲುಗಳು ಮತ್ತು ಅಚಲ ಕೀಲುಗಳೆಂದು ಎರಡು ವಿಧದ ಕೀಲುಗಳಿವೆ. ಕೆಲವೊಂದು ವೇಳೆ ಕೀಲು ಹಿಡಿದು ಕಟ್ಟಿದ ಹಾಗಾಗಿ ಕೀಲು ಅಲುಗಾಡದಂತಾಗುವುದು ಇದಕ್ಕೆ ಕಾರಣಗಳು ಕೀಲಿನ ಒಳಗಿರಬಹುದು ಇಲ್ಲವೆ ಕೀಲಿನ ಹೊರಗೆ ಇರಬಹುದು.

ಕೀಲುಗಟ್ಟುವುದು ಮುಖ್ಯವಾಗಿ ಎರಡು ವಿಧಗಳಿವೆ. ಕೀಲು ಸುತ್ತಲಿನ ಇಲ್ಲವೆ ಒಳಗಿನ ಊತಕ ತಂತುಕದಿಂದಾಗಿ ಕೀಲುಗಟ್ಟಬಹುದು. ಕೀಲಿನ ಮೇಲ್ಮೈಯ ಮೆಲ್ಲೆಲುಬು ಹಾಳಾಗಿ ಅದರ ತಳದೆಲುಬು ಬೆಳೆದು ಕೀಲಿನ ಇನ್ನೊಂದು ಎಲುಬಿನೊಂದಿಗೆ ಕೂಡಿಕೊಂಡು ಕೀಲುಗಟ್ಟಬಹುದು: ಮೊದಲಿನದಕ್ಕೆ ತಂತುಕ ಕೀಲುಗಟ್ಟು ಎನ್ನುತ್ತಾರೆ: ಎರಡನೆಯದಕ್ಕೆ ಎಲುಬಿನ ಕೀಲುಗಟ್ಟು ಎನ್ನುತ್ತಾರೆ.

ಕೀಲಿಗೆ ಯಾವುದಾದರೂ ಸೋಂಕು ಹತ್ತಿ ಕೀಲಿನ ಮೆಲ್ಲೆಲುಬು, ಕೀಲಚೀಲ ಇಲ್ಲವೆ ಕೀಲಿನ ಹುರಿಗಳು ಹಾಳಾಗಿ ಅಂಟಿಕೊಂಡು ಕೀಲು ಆಡದಂತಾಗಬಹುದು. ಇಲ್ಲಿ ಮೆಲ್ಲೆಲುಬು ಪೂರ್ತಿ ಹಾಳಾಗುವದಿಲ್ಲ. ಇಂತಹ ಸಂದರ್ಭಗಳಲ್ಲಿ ಕೀಲು ಕೊಂಚ ಅಲುಗಾಡಿದರೂ ತುಂಬಾ ನೋವಾಗುತ್ತದೆ. ಕ್ಷಯದಿಂದ ಕೀಲು ಹಾಳಾದಾಗ ತಂತುಕ ಕೀಲುಗಟ್ಟಾಗುವುದು. ನಂಜಿನ ಸೋಂಕು ಕೀಲುಗಳಲ್ಲಿ ಉಂಟಾದರೆ ಕೀಲು ಮೆಲ್ಲೆಲುಬು ಹಾಳಾಗಿ ಎಲುಬಿನ ಕೀಲುಗಟ್ಟು ಉಂಟಾಗುತ್ತದೆ. ಇಲ್ಲಿ ಕೀಲು ಪೂರ್ಣ ಅಚಲವಾಗುತ್ತದೆ. ಅಲುಗಾಡಲು ಆಸ್ಪದವಿಲ್ಲವಾಗಿ ನೋವು ಸಹ ಇರುವದಿಲ್ಲ.

ಗಾಯ, ಪೆಟ್ಟು, ಸೋಂಕು, ಆ ಭಾಗದ ಉಪಯೋಗಹೀನತೆ, ಎಲುಬು ಮುರಿದಾಗ ಅಳವಡಿಸುವ ಪ್ಲಾಸ್ಟರ ದಬ್ಬೆ , ಅಥವಾ ಅಚ್ಚು (ಕಾಸ್ಟ), ಶಸ್ತ್ರಕ್ರಿಯೆಯ ಅನಂತರ ಚೂಟಿ ಸಾಧನೆಯ ಕೊರತೆ ಹಾಗೂ ಕೆಲವೊಮ್ಮೆ ಬೇಕಾಗಿ ಶಸ್ತ್ರಕ್ರಿಯೆಯಿಂದಲೂ ಪಡೆದ ಕೀಲುಗಟ್ಟುವಿಕೆ, ವಯಸ್ಸಾದಂತೆ ಸವೆತದಿಂದಾಗುವ ಎಲುಗೀಲುರಿತ (ಆಸ್ಟಿಯೋ ಆರ್ಥೊಸಿಸ್), ಬೆನ್ನೆಲುಗಳ ಉರಿತ (ಸ್ಪಾಂಡಿಲೋಸಿಸ್) ರುಮಟಾಯ್ಡ್‌ಕೀಲುರಿತ; ಸ್ನಾಯು ಕುಗ್ಗುವಿಕೆ ಗಳಂಥಹ ರೋಗ ಕಾರಕ ಸ್ಥಿತಿಗಳಲ್ಲಿ ಕೀಲುಗಟ್ಟುವಿಕೆ ಉಂಟಾಗುವುದು. ಎಲುಬು ಮುರಿದಾಗ ಇಲ್ಲವೆ ಕೀಲು ಬಿಟ್ಟಾಗ (ಡಿಸಲೊಕೇಶನ್) ಆ ಭಾಗವನ್ನು ನೀವಿದರೆ, ಬಲವಾಗಿ ಬಿಗಿದು ಕಟ್ಟಿದರೆ ಚೂಟಿ ಸಾಧನೆ (ಆಕ್ಟಿವ್ ಎಕ್ಸರಸೈಜ್) ಮಾಡದಿದ್ದರೆ, ಸ್ನಾಯುವಿನಲ್ಲಿ ಎಲುಬು ಮೊಳಕೆಯೊಡೆದರೆ (ಮಯೋಸೈಟಿಸ್ ಆಸಿಫಿಕೆನ್ಸ್); ಚರ್ಮಕ್ಕೆ ಗಾಯವಾಗಿ ಚರ್ಮ ಸುಕ್ಕುಗಟ್ಟಿದರೆ ಕೀಲುಗಟ್ಟಿ ಕೀಲಿನ ಚಲನೆ ಇಲ್ಲದಂತಾಗುವುದು. ಹೀಗೆ ಕೀಲುಗಟ್ಟುವಿಕೆಗೆ ಅನೇಕಾನೇಕ ಕಾರಣಗಳಿವೆ.

ಅನೇಕ ಸಂದರ್ಭಗಳಲ್ಲಿ ಕೀಲುಗಟ್ಟುವಿಕೆಯನ್ನು ತಡೆಗಟ್ಟಬಹುದು. ಎಲುಬು ಮುರಿದಾಗ ಕೀಲುಸರಿದಾಗ ಆ ಭಾಗದಲ್ಲಿ ನೀವುದನ್ನು ಮಾಡಲೇಬಾರದು. ಒರೆಸುವುದು, ತಿಕ್ಕುವದಕ್ಕೆ ಆಸ್ಪದ ಕೊಡಲೇಬಾರದು. ಭಾಗವನ್ನು ಜೋರಾಗಿ ಬಿಗಿದು ಕಟ್ಟಲೇಬಾರದು. ಮುರಿದ ಭಾಗ ಸರಿಕೂಡಿಸಿ ಹಿಡಿದಿಟ್ಟು ಉಪಚರಿಸುವಾಗ ಮುರಿತದ ಕೆಳಗಿನ ಮತ್ತು ಮೇಲಿನ ಕೀಲುಗಳನ್ನು ಚೂಟಿಯಾಗಿ ಆಡಿಸುತ್ತಿರಬೇಕು. ಹೀಗಾದರೆ ಕೀಲುಗಟ್ಟುವುದು ಸಂಭವಿಸುವದಿಲ್ಲ. ಕೆಲವು ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ಮಾಡಿ ತಂತುಗಟ್ಟಿದವುಗಳನ್ನು ಸಡಿಲಗೊಳಿಸಿ ಕೀಲು ಮತ್ತೆ ಚಲನೆ ಪಡೆಯುವಂತೆ ಮಾಡಲು ಸಾಧ್ಯವಿದೆ. (ಎಚ್.ಕೆ.ಎಸ್.ಎಂ.)

**ಕೀಲುಗಳ, ತಂತುಗಟ್ಟುಗಳ ರೋಗಗಳು ಮತ್ತು ಊನಗಳು:** ಕೀಲಿನಲ್ಲಿ ಎಲ್ಲಿ ರೋಗ ಹತ್ತಿದೆ, ಊನವಾಗಿದೆ ಎನ್ನುವದಕ್ಕೆ ತಕ್ಕಂತೆ ಇವುಗಳಿಗೆ ಬೇರೆ ಬೇರೆ ಹೆಸರುಗಳಿವೆ. ಕ್ಷಯ, ಕೀಲುವಾತ, ಉಪದಂಶ, ಪರಮಾ (ಗೊನೋರಿಯ) ರೋಗದಂತೆ ಗೊತ್ತಾದ ಕಾರಣಗಳಿದ್ದರೆ ಕೀಲುರಿತಕ್ಕೆ ಆಯಾ ರೋಗದ ಹೆಸರು ಬರುವುದು. ಉದಾಹರಣೆಯಾಗಿ, ಕೀಲಿನಲ್ಲಿ ಉರಿತಕ್ಕೀಡಾಗುವ ಒಂದು ಅಂಗಭಾಗವಾದ ಕೀಲೋಳು (ಸೈನೋವಿಯಲ್) ಪೊರೆಯ ಊತವೇ ಕೀಲೋಳುರಿತ (ಸೈನೊವೈಟಿಸ್). ಇಡೀ ಕೀಲಿನ ಎಲ್ಲ ಭಾಗಗಳ ಉರಿತವೇ ಕೀಲುರಿತ (ಆರ್ತ್ರೈಟಿಸ್). ಮೂಳೆಯಲ್ಲಿ ಮುಖ್ಯವಾಗಿ ಉರಿತ ಹೆಚ್ಚಾಗಿದ್ದರೆ, ಎಲುಗೀಲುರಿತ (ಆಸ್ಟಿಯೊ ಆರ್ತ್ರೈಟಿಸ್) ಆಗುವುದು. ಕೀಲುಕ್ಷಯದ ತೆರನ ರೋಗವನ್ನು ಬಿಟ್ಟು ಕೀಲುಗಳ, ತಂತುಗಟ್ಟುಗಳ ಉಳಿದೆಲ್ಲ ರೋಗ ಊನಗಳನ್ನು ಇಲ್ಲಿ ಹೇಳಿದೆ.

ಹುಟ್ಟಿನಿಂದ ಬರುವ ಕುಂದುಗಳು: ಗರ್ಭದಲ್ಲಿ ಬೆಳೆವಾಗ ಪಿಂಡದ ವಿಕಾಸ ಕೆಟ್ಟರೆ, ಪಿಂಡಕಣ ರಸದಲ್ಲಿ (ಜರ್ಮ್‌ಪ್ಲಾಸಂ) ಕುಂದಿದ್ದರೆ, ಕೀಲುಗಳು ಇಲ್ಲವಾಗಬಹುದು. ಒಂದಕ್ಕೊಂದು ಅಂಟಿರಬಹುದು. ತೀರ ಸೊಟ್ಟಪಟ್ಟನಾಗಿರಬಹುದು. ಕೀಲಿನ ಒಂದೋ ಎರಡೋ ಮೂಳೆಗಳು ಇಲ್ಲವಾಗಬಹುದು, ಎರಡೋ ಹೆಚ್ಚೋ ಮೂಳೆಗಳಿದ್ದು ಅಂಟಿರಬಹುದು. ಸರಿಯಾಗಿ ಬೆಳೆಯದ ಕೀಲುಗಳು ಜಾಗತಪ್ಪಿರಬಹುದು. ಸೊಂಟದ ಕೀಲುಗಳಲ್ಲಿ ಹೀಗಾಗುವುದು ಸಾಮಾನ್ಯ. ನುಲಿಗೊರಳು (ರೈನೆಕ್), ಲಟ್ಟಪಾದ (ಕ್ಲಬ್ ಪುಟ್), ಲಟ್ಟಗೈ (ಕ್ಲಬ್ ಹ್ಯಾಂಡ್) ಇವುಗಳಲ್ಲಿದ್ದ ಹಾಗೆ. ಸ್ನಾಯುಗಳ ಸಮತೋಲ ಕೆಟ್ಟರೆ ಇಡೀ ಅವಯವವೇ ಸೊಟ್ಟನಾಗಬಹುದು.

ಎಲುಗುಂದಣದಲ್ಲಿ (ಅಸಿಟ್ಯಾಬ್ಯುಲಂ) ತೊಡೆಯ ಮೂಳೆಯ ದುಂಡು ತಲೆ, ಹುಟ್ಟುವ ಮೊದಲೋ ಹೆರಿಗೆಯಲ್ಲೋ ಆಮೇಲೋ ಇಲ್ಲವಾದರೆ ಚಪ್ಪೆ ಕೀಲ್ತಪ್ಪಿಕೆ ಹುಟ್ಟಾ ಬಂದದ್ದು–ಎನಿಸಿಕೊಳ್ಳುತ್ತದೆ. ಹೀಗಾಗುವುದರ ಕಾರಣ ಗೊತ್ತಿಲ್ಲ. ಹೀಗಾಗುವುದು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಲ್ಲಿ 5 ಪಟ್ಟು ಹೆಚ್ಚು. ಇದನ್ನು ಗುರುತಿಸುವುದು ಸುಲಭ: ಪಿರ್ರೆಗಳೂ ಕಾಲುಗಳೂ ಅಸಮವಾಗಿದ್ದು ಸೊಂಟಗೀಲಿನ ಚಲನೆಯಲ್ಲಿ ಹಿಡಿತ ಕಂಡುಬರುತ್ತದೆ. ಕುಳಿತು ತೊಡೆಗಳನ್ನು ಅಗಲಿಸವುದಾಗದು. ಎಕ್ಸ್ ಕಿರಣ ಚಿತ್ರದಲ್ಲಿ ಕೀಲನ್ನು ಕಂಡಾಗ ತೊಡೆಮೂಳೆಯ ತಲೆಯಲ್ಲಿ ಮೂಳೆ ಬೆಳೆಯದೆ ತಲೆ ಭಾಗ ಮೇಲಕ್ಕೆ ಜರುಗಿದ್ದು ಎಲುಗುಂದಣದ ಆಳ ಕಡಿಮೆಯಾಗಿರುವುದು ತೋರುತ್ತದೆ. ಹಸುಗೂಸಿನಲ್ಲಿ ಈ ಕೀಲನ್ನು ಎಂದಿನಂತೆ ಕೂರಿಸಿ ಮುಂದೆ ಕೀಲು ಸೊಟ್ಟವಾಗದಂತೆ ತಪ್ಪಿಸುವುದು ಕಷ್ಟ. ಎಷ್ಟೋ ಮಕ್ಕಳಲ್ಲಿ ಕೀಲು ಚೆನ್ನಾಗಿ ಕೂಡಿದ್ದರೂ ಅದರ ಕುಳಿ ಆಳವಿಲ್ಲದ್ದಾಗಿರುತ್ತದೆ. ಆಗ ಇದನ್ನು ಸುಮ್ಮನೆ 6 ತಿಂಗಳಕಾಲ ತೊಡೆಗಳನ್ನು ಅಗಲಿಸಿಡುವ ದಬ್ಬೆ ಕಟ್ಟುಗಳನ್ನು (ಸ್ಪ್ಲಿಂಟ್) ಹಾಕಿದರೆ ಸಾಕು. ಕೀಲುಗಳ ಮತ್ತವುಗಳ ತಂತುಗಟ್ಟುಗಳ ಹುಟ್ಟಿನಿಂದ ಬರುವ ಕೀಲ್ತಪ್ಪಿಕೆಗಳೂ (ಡಿಸ್ಲೊಕೇಷನ್ಸ್) ಸೊಟ್ಟುಗಳೂ ಸಾಮಾನ್ಯವಾಗಿ ಒಂದು ಅವಯವದಲ್ಲಿ ಒಂದೆಡೆ ಮಾತ್ರ ಕಾಣಿಸಿಕೊಳ್ಳುತ್ತವೆ. ಇಡೀ ಮೈಯಲ್ಲಿನ ಎಲ್ಲ ಕೀಲುಗಳೂ ತಂತುಗಟ್ಟುಗಳೂ ಹಿಗ್ಗದಂತಾಗಿ ಅಡ್ಡಾದಿಡ್ಡಿಯಾಗಿ ಬಿಗಿತುಕೊಂಡಿರುವುದು ಬಲು ವಿರಳ.

**ಪೆಟ್ಟುಗಳು :** ಬಿದ್ದ ಪೆಟ್ಟಿನ ತೀವ್ರತೆಗೆ ಅನುಗುಣವಾಗಿ ಬಗೆಬಗೆಯ ಊನಗಳು, ಸೊಟ್ಟುಗಳು ಆಗುತ್ತವೆ. ಕೀಲಿನ ಭಾಗಗಳಿಗೆ ನೇರವಾಗಿ ಪೆಟ್ಟಾಗಬಹುದು ಇಲ್ಲವೇ ಕೀಲಿನಲ್ಲಿ ಸೋಂಕು ಸೇರಬಹುದು; ಕೀಲುರಿತ ಆಗಬಹುದು. ಕೀಲೋಳಿನ ಚೀಲಕ್ಕೆ ಪೆಟ್ಟು ಬಿದ್ದರೆ ಮಂದದ್ರವ ಹೊರಗೆ ಜಿನುಗುತ್ತದೆ. ಒಂಟಿ ತಂತು ಗಟ್ಟು ಹಿಗ್ಗಿ ಹರಿದುದರಿಂದಾಗುವ ಉಳುಕುಗಳು ಯಾವ ತೊಡಕೂ ಇಲ್ಲದೆ 6 ವಾರಗಳೊಳಗಾಗಿ ವಾಸಿಯಾಗುತ್ತವೆ. ಮಂಡಿಯಂಥ ದೊಡ್ಡ ಕೀಲಿನ ಸುತ್ತಲಿನ ಹಲವು ತಂತುಗಟ್ಟುಗಳು ಹರಿದರೆ, ಹರಡಿನ (ಆ್ಯಂಕ್ಲ್) ಸುತ್ತ ಇರುವಂಥ ಸಣ್ಣ ತಂತುಗಟ್ಟುಗಳು ಮೇಲಿಂದ ಮೇಲೆ ಹರಿದು ಉಳುಕುಗಳಾದರೆ, ಕೀಲಿಗೆ ಬೇರೂರಿದಂತೆ ಊನವಾಗುವುದು. ಕಾಲ್ಚೆಂಡಾಟಗಳಲ್ಲಿ ಹಲವೇಳೆ ತಂತುಗಟ್ಟುಗಳಿಗೆ ಪೆಟ್ಟಾಗಿ ಅವು ತಿರುಚಿಕೊಳ್ಳುತ್ತವೆ. ಈ ಪೆಟ್ಟು, ಗಾಯ ಕೀಲಿನೊಳಕ್ಕೂ ತಾಕಿ ಕೀಲ್ಗೂಡಿಸುವ ಮೆಲ್ಲೆಲುಬಿನ ಚಂದ್ರಬಟ್ಟುಗಳನ್ನು (ಮೆನಿಸ್ಕೈ) ಹಾಳುಮಾಡಿ, ಕೀಲು ಬೀಗಹಾಕಿದಂತಾಗುತ್ತದೆ. ಹರಿದ ಮೆಲ್ಲೆಲುಬನ್ನು ಶಸ್ತ್ರಕ್ರಿಯೆಯಿಂದ ಕೊಯ್ತೆಗೆಯಬೇಕಾಗಬಹುದು. ಮಂಡಿಗೆ ಬಲವಾಗಿ ತಾಕಿದ ಪೆಟ್ಟು ತೊಡೆಮೂಳೆ ಮೂಲಕ ಹೋಗಿ ಚಪ್ಪೆ ಕೀಲು ತಪ್ಪಿಸಬಹುದು ಹಾಗೇ ಚಪ್ಪೆಗೀಲಿನ ಕುಳಿಯ ಹಿಂದಣ ತುಟಿ ಮುರಿಯಲೂಬಹುದು.

ಉಳುಕುಗಳಲ್ಲಿ ತಂತುಗಟ್ಟುಗಳು ಬಲವಾಗಿ ಕಿತ್ತಂತಾಗಿ ಕೀಲಿನ ಒಳಗೂ ಸುತ್ತಲೂ ರಕ್ತ ಸುರಿವುದು. ಕೆಲವೇಳೆ ಕಂಡರಗಳೂ ಕೀಲ್ತಪ್ಪುವುವು. ಉಳುಕಿನ ಭಾಗ ಕೂಡಲೇ ಊದಿ ಅಲುಗಾಡಿಸಿದರೆ ನೋಯುತ್ತದೆ. ಕೀಲಿನ ಎಲುಬು ಮುರಿದ ಹಾಗೇ ಹೊರಗಾಣುತ್ತದೆ. ಮುಂದೆ ಕಿಲೋಳುರಿತ ಆಗುವುದನ್ನು ತಪ್ಪಿಸಲು, ಕೀಲುಗಳನ್ನು ಕೊಂಚವೂ ಅಲುಗಾಡದಂತೆ ಇರಿಸಿರಬೇಕು. ಆಮೇಲೆ ಊತ, ಕೋಮಲತೆ ಇಳಿವ ತನಕ ಹಿಗ್ಗುಪಟ್ಟಿ ಸುತ್ತಬೇಕು.

ಕೀಲೊಳಗಡೆ ಕೀಲೋಳಿನ ದ್ರವದೊಂದಿಗೆ ರಕ್ತಗೂಡಿದ್ದರೆ ರಕ್ತಗೀಲುವೆ (ಹೀಮೊರ್ಥ್ರೋಸಿಸ್) ಆಗುತ್ತದೆ. ಹೀಗಾದಾಗ ತಂತುಗಟ್ಟುಗಳಿಗೂ ಕೀಲಿನ ಮೇಲ್ಮೈಗಳಿಗೂ ಪೆಟ್ಟಾಗುವುದು. ಕೀಲೊಳಗಡೆ ರಕ್ತಗರಣೆರೋಧಕ ವಸ್ತುಗಳು ಇರುವುದರಿಂದ ಕೀಲೊಳಗೆ ಸುರಿದ ರಕ್ತ ಹೆಪ್ಪುಗಟ್ಟದು. ಮಂಡಿ ಕೀಲಿನಲ್ಲಿ ಹೀಗೆ ಸೇರುವ ದ್ರವ 30 ಮಿಲೀ ಮೀರಬಹುದು. ಆಗ ನೋವಿಳಿಸಲು ಅದನ್ನು ತೆಗೆದುಹಾಕಬೇಕಾಗಬಹುದು. ಕುಸುಮರೋಗದಲ್ಲೂ (ಹೀಮೊಫಿಲಿಯ) ಹೀಗಾಗಬಹುದು.

ಕೀಲಿನ ಮೂಳೆ ಸವೆದುಹೋಗಿ ಕೀಲುಸುತ್ತಣ ತಂತುಗಟ್ಟುಗಳೂ ಕೀಲೋಳುಪೊರೆಯೂ ಒಂದಕ್ಕೊಂದು ಅಂಟಿಕೊಳ್ಳುವುದನ್ನು ತಪ್ಪಿಸಲು, ಬೆಳೆದವರಲ್ಲಿ ಮೂಳೆಗಳನ್ನು ಗಚ್ಚಿನ ಅಚ್ಚುಗಳು (ಕ್ಯಾಸ್ಟಸ್), ಹಿಡಿಕಟ್ಟುಗಳಲ್ಲಿ (ಬ್ರೇಸಸ್) ಬಹಳ ಕಾಲ ಅಲುಗಾಡದಂತೆ ಇರಿಸದ ಹಾಗೆ ನೋಡಿಕೊಳ್ಳಬೇಕು.

**ಸೋಂಕು, ರೋಗ:** ಕೀಲಿನ ತೆರೆದಿರುವ ಗಾಯ, ಪೆಟ್ಟು, ಹುಣ್ಣುಗಳಲ್ಲಿ ತಂತುಗಟ್ಟು ಮತ್ತು ಕೀಲುಗಳಲ್ಲಿ ಏಕಾಣುಜೀವಿ ಸೋಂಕುಗಳು ಹತ್ತಬಹುದು. ಬೇಟೆ, ಕದನಗಳಲ್ಲಿ ಆಕಸ್ಮಿಕಗಳಲ್ಲಿ ತೀವ್ರವಾದ ಸೋಂಕುಗಳು ಹತ್ತಲು ಮದ್ದು ಗುಂಡುಗಳು, ಸಿಡಿಮದ್ದಿನ ಕೊಳವೆ ಚೂರುಗಳೊಂದಿಗೆ ಕೊಳಕು ಅರಿವೆ ಚಿಂದಿಗಳು ಹಲವೇಳೆ ಕಾರಣವಾಗುತ್ತವೆ. ಕೆಟ್ಟು ಹಾಳಾಗಿರುವ ಭಾಗಗಳನ್ನು ಕೂಡಲೇ ಕತ್ತರಿಸಿ ತೆಗೆದುಹಾಕಿ, ಸೋಂಕಾಗಿ ರಕ್ತದ ಹರವಿಗೆ ಕೀವುಜನಿಕ ಜೀವಾಣುಗಳು ಸೇರದಂತೆ ಜೀವಿರೋಧಕಗಳನ್ನು ನೀಡುವುದೇ ಇದರ ಚಿಕಿತ್ಸೆ. ಏಕಾಣುಜೀವಿಗಳ ಸೋಂಕುಗಳು, ಪರಮಾ (ಗೊನೋರಿಯ), ವಿಷಮಶೀತಜ್ವರ, ಮತ್ತಿತರ ರೋಗಗಳಲ್ಲಿ ರಕ್ತದ ಮೂಲಕ ಕೀಲುಗಳಿಗೂ ಹರಡಿ ನೆಲೆಸುತ್ತದೆ.

ಉಪದಂಶ (ಸಿಫಿಲಿಸ್), ಮಜ್ಜಾನಾಳಿಕೆ (ಸಿರಿಂಗೊಮಯೀಲಿಯ), ಧಮನಿ ಪೆಡಸಣೆಯಂಥ (ಆರ್ಟೀರಿಯೊಸ್ಕ್ಲೀರೋಸಿಸ್) ಕೇಂದ್ರನರಮಂಡಲದ ರೋಗಗಳಿಂದ ಸಾಮಾನ್ಯವಾಗಿ ತಂತುಗಟ್ಟು ಮತ್ತು ಕೀಲಿನ ಮೇಲ್ಮೈಗಳನ್ನು ಕಾಪಿಡುವ ನೋವು ಕೀಲಿನ ಭಂಗಿಯ ಅರಿವೂ ಹಾಳಾಗುತ್ತದೆ. ಇದರಿಂದ ನರಬೇನೆಯ ಇಲ್ಲವೇ ಷಾರ್ಕೋನ ಕೀಲಾಗುತ್ತದೆ. ಹೀಗಾದಾಗ, ಕೀಲು ನೋವಿಲ್ಲದೆ ಊದಿಕೊಂಡು ತಂತುಗಟ್ಟುಗಳೂ ಕೀಲಿನ ಮೇಲ್ಮೈಗಳೂ ಹೇಗೋ ಏಕೋ ಹಾಳಾಗುತ್ತವೆ. ಇಂಥ ಕೀಲು ನೆಲೆದಪ್ಪುತ್ತದೆ; ಇಲ್ಲವೇ ಅದಕ್ಕದೇ ಕಿತ್ತುಬರುತ್ತದೆ. ಎಳೆಯದರಲ್ಲೇ ಗುರುತಿಸಿ ಕೀಲ್ಗಟ್ಟಿಸುವ ಶಸ್ತ್ರಕ್ರಿಯೆ ಕೈಗೊಂಡರೆ ಲೇಸು.

ಮುಖ್ಯವಾಗಿ 20–40 ವಯಸ್ಸಿನ ಗಂಡಸರಲ್ಲಿ ಕೀಲುಗಳನ್ನೂ ತಂತುಗಟ್ಟುಗಳನ್ನೂ ಬಹಳ ಊನಗೊಳಿಸುವ ಬೇನೆಯೆಂದರೆ ಗಡಸುಗಟ್ಟುವ ಬೆನ್ನೆಲುಗೀಲುರಿತ (ಆಂಕಿಲೋಸಿಂಗ್ ಸ್ಪಾಂಡಿಲೈಟಿಸ್). ಇದಕ್ಕೆ ಕಾರಣ ಗೊತ್ತಿಲ್ಲ; ಸರಿಯಾದ ಚಿಕಿತ್ಸೆಯಂತೂ ಇಲ್ಲ. ಕೂಡಿಸುವ ಬೇರೂರಿದ ಉರಿತದ ಬೇನೆಯಾದ ಡುಪುಟ್ರೆನ್ನನ ಚಿರಸೆಳೆತ (ಕಂಟ್ರಾಕ್ಚರ್) ಇನ್ನೊಂದು ಬಗೆಯದು. ಕಿರುಬೆರಳು, ಉಂಗುರ ಬೆರಳುಗಳ ನಡುವಣ ಅಂಗೈಯಲ್ಲೂ ಅಂಗಾಲುಗಳಲ್ಲೂ ಇದು ತಲೆದೋರುತ್ತದೆ. ಕೆಲವರಲ್ಲಿ ತಲೆಮಾರಿನ ಗುಣವಿದ್ದರೂ ನಿಜವಾದ ಕಾರಣ ಗೊತ್ತಿಲ್ಲ. ಬಿಗುವಾಗಿರುವ ಅಂಗೈಯ ದಡಗಟ್ಟನ್ನು (ಫೇಸ್ಕಿಯ) ಕೊಯ್ತೆಗೆಯುವುದೇ ಇದಕ್ಕೆ ಚಿಕಿತ್ಸೆ.

ಕೀಲಿನ ಮೂಳೆಯಿಂದ ಹರಡಿಕೊಂಡೋ ಗಾಯ ಪೆಟ್ಟುಗಳಿಂದಲೋ ಮೈಯಲ್ಲಿ ಬೇರೆ ರೋಗಗಳಿದ್ದರೂ ಕೀಲುರಿತ ಆಗುತ್ತದೆ. ಕೀಲು ಕೆಂಪಗೆ ಊದಿಕೊಂಡು ಬಲು ನೋಯುತ್ತದೆ. ಮೈಯಲ್ಲೆಲ್ಲ ಜ್ವರ ಬಂದ ಹಾಗಿರುವುದು. ವಿಷವೇನಾದರೂ ಜೋರಾಗಿದ್ದರೆ, ಕೀಲಿನೊಳಗೆ ಕೀವಾಡುತ್ತದೆ. ಆಗ ಕೀಲು ಊದಿಕೊಂಡು ಉಬ್ಬಿ ದೊಡ್ಡದಾಗಿರುವುದು. ಇದಕ್ಕೆ ಬೇಗನೆ ಚಿಕಿತ್ಸೆ ಆಗಬೇಕು. ಕೀಲನ್ನು ಕೊಯ್ದು ಕೀವನ್ನು ಹೊರಡಿಸಿ, ಒಳಗೆಲ್ಲ ಚೆನ್ನಾಗಿ ಚೊಕ್ಕವಾಗಿ ತೊಳೆದರೆ ಸಾಕಾಗಬಹುದು. ಇಲ್ಲವೇ ಕೆಲವೇಳೆ ಅವಯವವನ್ನೇ ಬಲಿಕೊಡಬೇಕಾಗಬಹುದು.

ಮೈಯಲ್ಲಿನ ಕೆಲವು ಭಾಗಗಳು ಒಂದನ್ನೊಂದು ಉಜ್ಜುವೆಡೆಗಳಲ್ಲಿ ರಸಿಕೆ ತುಂಬಿದ ಚೀಲವಾದ, ದಿಂಚೀಲದ (ಬರ್ಸ್) ಉರಿತವೇ ದಿಂಚೀಲುರಿತ (ಬರ್ಸೈಟಿಸ್). ಸಾಮಾನ್ಯವಾಗಿ ದಿಂಚೀಲಗಳು ಹೆಗಲು, ಮೊಣಕೈ, ಮಂಡಿ, ಸೊಂಟ, ಅಕಿಲಸನ ಕಂಡರಗಳಲ್ಲಿ ಇರುತ್ತವೆ. ದಿಂಚೀಲುರಿತದಲ್ಲಿ ಕೀಲನ್ನೋ ಸ್ನಾಯುವನ್ನೋ ಆಡಿಸಿದಾಗ ನೋವೂ ಆಗಿ ಕೆಲವೇಳೆ ಒಳಗಡೆ ನೀರೂ ಸೇರಿರುವುದು.

ಮೂಳೆಮುರುಟು (ರಿಕೆಟ್ಸ್) ರೋಗದ ಮಕ್ಕಳು ಹೆಜ್ಜೆಯಿಡಲು ತೊಡಗಿದಾಗ ಕಾಲಿನ ಮಂಡಿಗಳು ಒಂದಕ್ಕೊಂದು ತಾಕುವಷ್ಟು ಒಳಕ್ಕೆ ಬಾಗಿ ತಾಗುಮಂಡಿ (ನಾಕ್ ನೀ) ಆಗುತ್ತದೆ. ಮಂಡಿಕೀಲಿನ ಮೂಳೆಗಳು ಸೊಟ್ಟವಾಗಿ ಬೆಳೆವುದೇ ಇದರ ಕಾರಣ. ಎಳೆಯದರಲ್ಲಿ ದಬ್ಬೆಕಟ್ಟುಗಳು ಹಿಡಿಕಟ್ಟುಗಳನ್ನು ಕಟ್ಟಿಡುವದರಿಂದ ಇದನ್ನು ತಪ್ಪಿಸಬಹುದು. ಆದರೆ ಮೂಳೆಗಳು ಬೆಳೆದು ನಿಂತು ಗಡುಸಾಗಿ ಬಿಟ್ಟಮೇಲೆ ಮಂಡಿಕೀಲಿನ ಮೂಳೆಗಳ ಕೊನೆಗಳನ್ನು ಕತ್ತರಿಸಿ ಒಂದಕ್ಕೊಂದು ನೆಟ್ಟಗೆ ಕೂಡಿಕೊಳ್ಳುವ ತನಕ ಗಚ್ಚಿನ (ಪ್ಲಾಸ್ಟರಿನ) ಅಚ್ಚಿನಲ್ಲಿ ಇಡಬೇಕಾಗಬಹುದು. **(ನೋಡಿ– ಎಲು ಮುರುಟು)**

**ಗಂತಿಗಳು :** ತಂತುಗಟ್ಟುಗಳಲ್ಲಿ ಗಂತಿಗಳು ಏಳುವುದೇ ಇಲ್ಲ. ಆದರೆ ಕೀಲಿನ ಕವಚದಲ್ಲಿ ಸೇರಿರುವ ತಂತುಗಳಲ್ಲಿ ಮಾತ್ರ ಜಿಟ್ಟಿಯ ಅನುವಳಿಕೆ (ಸಿಸ್ಟಿಕ್ ಡೀಜನರೇಷನ್) ಆಗಬಹುದು. ಹೀಗಾಗಿರುವುದಕ್ಕೆ ಸಾಧಾರಣವಾಗಿ ಕೀಲೋಳ್ಗಂತಿ (ಗ್ಯಾಂಗ್ಲಿಯಾನ್) ಎನ್ನುವುದುಂಟು. ಇದರಲ್ಲಿ ತಂತುವಿನ ಊತಕದ ಚೀಲದಲ್ಲಿ ತಿಳಿಯಾದ ಗಿಜಿ ತೆರನ ದ್ರವ ಇರುತ್ತದೆ; ಮಣಿಕಟ್ಟು ಪಾದಗಳ ನಡುವೆ ಇದು ಸಾಮಾನ್ಯ. ಇವುಗಳಿಂದ ತೊಂದರೆ ಇಲ್ಲ. ಕೀಲುಗಳಲ್ಲೂ ಅವುಗಳ ಸುತ್ತಲೂ ಹಳಗಂತಿ (ಜ಼ಾಂತೋಮ), ತಂತುಗಂತಿ (ಫೈಬ್ರೋಮ), ರಕ್ತನಾಳಗಂತಿ (ಹಿಮ್ಯಾಂಜಿಯೊಮ), ತಂತುಮಾಂಸಗಂತಿ

(ಫೈಬ್ರೊಸಾರ್ಕೋಮ), ಮತ್ತಿತರ ಬಗೆಗಳ ಮೆಲುಪಿನ (ಬಿನೈನ್), ಅರ್ಬುದದಂಥ (ಮೆಲಿಗ್ನೆಂಟ್) ಗಂತಿಗಳು ಏಳಬಹುದು.

ಕಟ್ಟುವಾರೆ (ಗೌಟ್) ತೆರನ ಕೆಲವು ಜೀವವಸ್ತುಕರಣದ (ಮೆಟಬಾಲಿಕ್) ಬೇನೆಗಳಲ್ಲಿ ಗಂತಿ ತೆರನ ಊತಗಳಿದ್ದರೂ ಅವು ವಿಷಮ ಗಂತಿಗಳಲ್ಲ. ಕೀಲುಗೂಡಿಸುವ ಮೆಲ್ಲೆಲುಬಿನ ಇಲ್ಲವೇ ಕೀಲೋಳಿನ ಎಳೆಗೊಂಡೆಗಳ (ವಿಲ್ಲೈ) ಎಲುಮೆಲ್ಲೆಲುಬಿನ (ಆಸ್ಟಿಯೊಕಾರ್ಟಿಲೇಜಿನಸ್) ಗಂತಿಗಳಿಂದ ಬಂದ ಬಿಡಿ ಚೂರುಗಳು ಕೀಲಿನ ದ್ರವದಲ್ಲಿ ಹುಲುಸಾಗಿ ಬೆಳೆಯುತ್ತವೆ. ಇವಕ್ಕೆ ಕೀಲಿನ ಚಿಟ್ಟಿಲಿಗಳು ಎನ್ನುವುದುಂಟು. ಎಲುಬುಗಳ ನಡುವೆ ಮೆಲ್ಲೆಲುಬು ಸಿಕ್ಕಿಕೊಂಡು ಚೂರಾಗುವದರಿಂದ ಮಂಡಿಕೀಲಿನಲ್ಲಿ ತೇಲುವ ಮೆಲ್ಲೆಲುಬುಗಳು ಮುಖ್ಯವಾಗಿ ಕಾಣಬರುತ್ತವೆ. ಕೀಲೋಳಿನ ಚೀಲದಲ್ಲಿ ಈ ಚೂರುಗಳು ತೇಲಾಡುತ್ತ ಕೀಲು ಬೀಗ ಹಾಕಿದಂತೆ ಸಿಕ್ಕಿಹಾಕಿಕೊಳ್ಳಲು ಕಾರಣವಾಗುತ್ತವೆ. ಹೀಗಾದಾಗ ರೋಗಿ ಇದ್ದಕ್ಕಿದ್ದ ಹಾಗೆ ಕುಸಿದು ಬೀಳುತ್ತಾನೆ. ಮಂಡಿಕೀಲು ವಿಪರೀತ ನೋಯುತ್ತದೆ. ಕೀಲೋರಿನ ಪೊರೆಗೆ ಪೆಟ್ಟಾಗಿ ಕೊಂಚ ಉರಿತವಾಗಿರುತ್ತದೆ. ಈ ಚೂರುಗಳನ್ನು ಕೆಲವೇಳೆ ಚರ್ಮದ ಮೂಲಕ ಮುಟ್ಟಿ ತಿಳಿದು ಹಿಡಿಯಲೂಬಹುದು. ಹೀಗೆ ಹಿಡಿದುಕೊಂಡು ಶಸ್ತ್ರಕ್ರಿಯೆಯಿಂದ ಹೊರತೆಗೆಯಬಹುದು. ಆದರೆ ಆಗಾಗ್ಗೆ ನೋವಾಗಿ ತೊಂದರೆಕೊಟ್ಟರೆ ಕೀಲನ್ನು ಕೊಯ್ದು ಅವನ್ನು ಹುಡುಕಿ ಹೊರತೆಗೆಯಬೇಕು **(ನೋಡಿ– ಉಳುಕು–ಸೆಳೆತ)**.

ಕೀಲಿನಲ್ಲೋ ಅದರ ಸಂಬಂಧವಾಗೋ ಬೆಳೆದ ಕೀಲೋಳಿನ ಮಾಂಸಗಂತಿ ಬಲು ಅಪೂರ್ವ. ಬಲುಬೇಗನೆ ಇದು ರಕ್ತದ ಮೂಲಕ ಪುಪ್ಪುಸಗಳಿಗೆ ಹರಡಿ ನೆಲೆಸುವುದು. ಜೀವುಂಡಿಗೆಯಿಂದ (ಬಯಾಪ್ಸಿ) ಮಾತ್ರ ಗುರುತಿಸಬಹುದಾದ್ದರಿಂದ ಅದನ್ನು ಬೇಗನೆ ಮಾಡಿ ಕಂಡುಕೊಳ್ಳಬೇಕು. ಪುಪ್ಪುಸಗಳಿಗೆ ಹರಡಿಲ್ಲವಾದರೆ ಏಡಿಗಂತಿರೋಧಕ ಮದ್ದುಗಳನ್ನು ಅವಯವಕ್ಕೆ ರಕ್ತದಲ್ಲಿ ಸೇರಿಸುವುದು, ವಿಕಿರಣ ರೋಗ ಚಿಕಿತ್ಸೆ (ರೇಡಿಯೊತೆರಪಿ). ಇಡೀ ಅಂಗ ತೆಗೆವುದೇ ಮುಂತಾದವು ಇದರ ಚಿಕಿತ್ಸೆ **(ನೋಡಿ– ಎಲುಬಿನ ರೋಗಗಳು–ಗಾಯಗಳು–ಎಲುಮುರಿಕೆಗಳು–ಕೀಲ್ತಪ್ಪಿಕೆಗಳು–ಎಲುನೇರ್ಪಿಕ–ಶಸ್ತ್ರವೈದ್ಯ–ಅಸ್ಥಿಶಾಸ್ತ್ರ–ಕಟ್ಟುವಾರೆ)**. (ಡಿ.ಎಸ್.ಎಸ್.)

**ಕೀಲುಗಳು ಮತ್ತು ತಂತುಗಟ್ಟುಗಳು :** ಎರಡು ಅಥವಾ ಹೆಚ್ಚು ಮೂಳೆಗಳು ಸೇರುವಲ್ಲಿ ಅವುಗಳ ನಡುವಿನ ಚಲನೆಯ ವೈಶಿಷ್ಟ್ಯವನ್ನು ಅನುಸರಿಸಿ ಕೀಲುಗಳ (ಜಾಯಿಂಟ್ಸ್) ರಚನೆ ಆಗುತ್ತದೆ. ಎರಡು ಅಥವಾ ಹೆಚ್ಚು ಮೂಳೆಗಳನ್ನು ಪರಸ್ಪರ ಬಂಧಿಸಿಡುವ, ಗಮ್ಯತೆಯೂ ಸಾಮರ್ಥ್ಯವೂ ಇರುವ ಊತಕವೇ ತಂತುಗಟ್ಟು (ಲಿಗಮೆಂಟ್), ಕೀಲುಗಳು ಮೂಳೆಗಳ ಅಂಚಿನಲ್ಲಿ ಇರುತ್ತವೆ. ಕೆಲವು ಕೀಲುಗಳಲ್ಲಿ ಚಲನೆಗೂ ಆಸ್ಪದವಿರದಿದ್ದರೆ (ತಲೆ ಬುರುಡೆ) ಇನ್ನೂ ಕೆಲವು ಕಡೆ ಸ್ವಲ್ಪವಾದರೂ ಚಲನೆಗೆ ಅವಕಾಶವಿರಬೇಕಾಗುತ್ತದೆ (ಬೆನ್ನುಮೂಳೆಗಳು). ಉಳಿದ ಕಡೆ ಸಂಪೂರ್ಣ ಚಲನೆ ಅತ್ಯಗತ್ಯವಾಗಿರುತ್ತದೆ (ಕೈಕಾಲುಗಳು). ಕೀಲುಗಳನ್ನು ತಂತುಕೀಲುಗಳು (ಫೈಬ್ರಸ್ ಜಾಯಿಂಟ್ಸ್), ಮೆಲ್ಲೆಲುಬು ಕೀಲುಗಳು (ಕಾರ್ಟಿಲೇಜಿನಸ್ ಜಾಯಿಂಟ್ಸ್) ಮತ್ತು ಸೈನೋವಿಯಲ್ ಕೀಲುಗಳೆಂದು ವಿಂಗಡಿಸಬಹುದು.

ತಂತುಕೀಲುಗಳಲ್ಲಿ ಮೂಳೆಗಳ ಹೊರಮೈಯನ್ನು ತಂತುಗಳು ಬಿಗಿಯಾಗಿ ಬಂಧಿಸಿರುತ್ತವೆ. ಈ ಕೀಲುಗಳಲ್ಲಿ ಯಾವ ವಿಧವಾದ ಚಲನೆಗೂ ಅವಕಾಶವಿರುವುದಿಲ್ಲ (ಉದಾಹರಣೆಗೆ ತಲೆಬುರುಡೆಯ ಕೀಲುಗಳು). ಈ ಕೀಲುಗಳನ್ನು ಹೊಲಿಗೆ ಕೀಲುಗಳು, ಬೆಣೆಕುಳಿ ಕೀಲುಗಳು ಮತ್ತು ಅಸ್ಥಿರಜ್ಜು ಸಂಧಿಗಳೆಂದು ಪ್ರತ್ಯೇಕಿಸಬಹುದು. ಹೊಲಿಗೆ ಕೀಲುಗಳನ್ನು ಇನ್ನೂ ಅನೇಕ ಚಿಕ್ಕ ಚಿಕ್ಕ ಪಂಗಡಗಳಾಗಿ ವಿಂಗಡಿಸಬಹುದು. ಮೂಳೆಗಳ ಅಂಚು ಗರಗಸದ ಹಲ್ಲುಗಳಂತೆ ಇದ್ದರೆ ಅದಕ್ಕೆ ದಂತುರ ಹೊಲಿಗೆ ಕೀಲೆಂದು ಹೆಸರು; ಅಂಚಿನಲ್ಲಿ ಹಲ್ಲುಗಳಂತಿದ್ದರೆ ಅದು ಶಲ್ಕ ಕೀಲು. ಸ್ಪಷ್ಟವಾದ ಅಂಚುಳ್ಳ ಕೀಲು ಎಂಬ ಪ್ರಭೇದವೂ ಉಂಟು. ಸ್ಪಷ್ಟವಾದ ಕೀಲುಗಳಲ್ಲಿ ಮೂಳೆಯ ಅಂಚುಗಳು ಯಾವ ವಿಧವಾದ ರೂಪ ಬದಲಾವಣೆಯಿಲ್ಲದೆ ಒಂದನ್ನೊಂದು ಹಾಗೆಯೇ ಅಂಟಿಕೊಂಡಿರುತ್ತವೆ. ಇದಕ್ಕೆ ಸಮತಲ ಕೀಲು ಎಂದು ಹೆಸರು.

ಒಂದು ಮೂಳೆಯ ಅಂಚನ್ನು ಇನ್ನೊಂದರ ಅಂಚು ಮುಚ್ಚಿ ಆ ಮೂಳೆಗಳ ಅಂಚಿನಲ್ಲಿ ರೂಪಬದಲಾವಣೆಯಾಗಿದ್ದರೆ ಅಂಥವನ್ನು ಲಿಂಬಸ್ ಹೊಲಿಗೆ ಸೇರುವ ಸೂಚರ್ ಎಂದು ಕರೆಯುತ್ತಾರೆ.

**ಬೆಣೆಕುಳಿ ಕೀಲು (ಪೆಗ್ ಎಂಡ್ ಸಾಕೆಟ್ ಜಾಯಿಂಟ್):** ಇದರಲ್ಲಿ ಒಂದು ಮೂಳೆಯ ಶಂಕುವಿನಾಕರದ ಭಾಗ ಇನ್ನೊಂದು ಮೂಳೆಯಲ್ಲಿರುವ ಕುಳಿಯಲ್ಲಿ ಕುಳಿತುಕೊಂಡಿರುತ್ತದೆ. ಇಂಥ ಕೀಲುಗಳನ್ನು ಹಲ್ಲು ಮತ್ತು ದವಡೆಯ ಕೀಲುಗಳಲ್ಲಿ ನೋಡಬಹುದು.

**ಅಸ್ಥಿರಜ್ಜು ಸಂಧಿ:** ಇದರಲ್ಲಿ ಮೂಳೆಗಳು ಎದುರುಬದುರಾಗಿ ಬಂದಾಗ ಅವನ್ನು ಅಂತರ ಮೂಳೆಗಳ ತಂತುಗಳು ಬಂಧಿಸಿರುತ್ತವೆ.

**ಮೆಲ್ಲೆಲುಬು ಕೀಲು:** ಎರಡು ಮೂಳೆಗಳನ್ನು ಮೃದ್ವಸ್ಥಿಗಳು ಕೂಡಿಸಿ ಅವುಗಳಲ್ಲಿ ಅಲ್ಪಚಲನೆಗೆ ಅವಕಾಶ ಮಾಡಿಕೊಡುತ್ತವೆ. ಈ ಕೀಲುಗಳಲ್ಲಿ ಎರಡು ವಿಧಗಳುಂಟು: ಪ್ರಾಥಮಿಕ ಮೃದ್ವಸ್ಥಿ ಕೀಲುಗಳು ಮತ್ತು ದ್ವಿತೀಯಕ ಮೃದ್ವಸ್ಥಿ ಕೀಲುಗಳು. ಪ್ರಾಥಮಿಕ ಮೃದ್ವಸ್ಥಿ ಕೀಲುಗಳಲ್ಲಿನ (ಪ್ರೈಮರಿ ಕಾರ್ಟಿಲೇಜಿನಸ್ ಜಾಯಿಂಟ್ಸ್) ಮೃದ್ವಸ್ಥಿ ಕಾಲಕ್ರಮೇಣ



**ಚಿತ್ರ 1 ವಿವಿಧ ಕೀಲುಗಳು, (1, 2, 3, 4, 5) : A ಮೂಳೆಗಳು, B ತಂತು ಪೊರೆ, C ಮೂಳೆಗಳ ಅಂತರದಲ್ಲಿರುವ ಮೃದ್ವಸ್ಥಿ, D ಬಾಹ್ಯ ತಂತುಗಟ್ಟುಗಳು, E ಮೂಳೆಗಳು ಅಂತರದಲ್ಲಿರುವ ತಂತು ಮೃದ್ವಸ್ಥಿ ಫಲಕ, F ಮೃದ್ವಸ್ಥಿ ಫಲಕ, G ಬಂಧಿಸುವ ತಂತುಗಟ್ಟು**

ಮೂಳೆಗಳಾಗಿ ಪರಿವರ್ತಿಸಲ್ಪಟ್ಟು ಆ ಕೀಲುಗಳಲ್ಲಿ ಯಾವ ಚಲನೆಗೂ ಅವಕಾಶವಿರುವುದಿಲ್ಲ. ದ್ವಿತೀಯಕ (ಸೆಕಂಡರಿ) ಮೃದ್ವಸ್ಥಿ ಕೀಲುಗಳಲ್ಲಿ ಈ ವಿಧವಾದ ಬದಲಾವಣೆಗೆ ಅವಕಾಶವಿರುವುದಿಲ್ಲ. ಈ ಕೀಲುಗಳು ತಂತುಗಳಿಂದ ಬಿಗಿಯಲ್ಪಟ್ಟಿರುತ್ತವೆ. ಇವುಗಳಲ್ಲಿ ಸ್ವಲ್ಪ ಚಲನೆಗೆ ಅವಕಾಶವಿದೆ. ಹೀಗೆ ಉತ್ಪತ್ತಿಯಾಗುವ ಕೀಲುಗಳಲ್ಲಿ ಭಾಗವಹಿಸುವ ಮೂಳೆಗಳ ಮಧ್ಯೆ ಮೃದ್ವಸ್ಥಿ ಮತ್ತು ತಂತುಗಳಿಂದ ಸೃಷ್ಟಿಸಲ್ಪಟ್ಟ ತಂತುಮೃದ್ವಸ್ಥಿ ಬಿಲ್ಲೆ ಇರುತ್ತವೆ. ಈ ತರಹದ ಕೀಲುಗಳನ್ನು ಬೆನ್ನುಮೂಳೆಗಳಲ್ಲಿ ಕಾಣಬಹುದು.

**ಸೈನೋವಿಯಲ್ ಕೀಲು :** ದೇಹದ ಹಲವಾರು ಕೀಲುಗಳು ಈ ಗುಂಪಿಗೆ ಸೇರಿವೆ. ಇಂಥ ಕೀಲಿನಲ್ಲಿ ಎರಡು ಮೂಳೆಗಳು ಸೇರಿರುವಲ್ಲಿ ಮೃದ್ವಸ್ಥಿ ಇದ್ದರೂ ಅವು ಒಂದನ್ನೊಂದು ಕೂಡಿಕೊಂಡಿರುವುದಿಲ್ಲ. ಅಲ್ಲಿ ಸ್ವಲ್ಪ ಸ್ಥಳಾವಕಾಶವಿರುತ್ತದೆ. ಇದಕ್ಕೆ ಕೀಲುಕುಳಿ (ಜಾಯಿಂಟ್ ಕ್ಯಾವಿಟಿ) ಎಂದು ಹೆಸರು. ಸೈನೋವಿಯಲ್ ಕೀಲುಗಳನ್ನು ಒಂದು ವಿಧವಾದ ಗಟ್ಟಿ ಪೊರೆ ಆವರಿಸಿದೆ. ಒಳಭಾಗದಲ್ಲಿ ಸೈನೋವಿಯಲ್ ಪೊರೆಯು ಅಸ್ತರಿ ಹಾಕಿದಂತಿದೆ. ಕೀಲಿನ ಚಲನಸ್ವಾತಂತ್ರ್ಯ ಗಮನಾರ್ಹವಾಗಿದೆ. ಮಣಿಗಂಟು, ಮಂಡಿಕೀಲುಗಳು ಇದಕ್ಕೆ ನಿದರ್ಶನ. ಸೈನೋವಿಯಲ್ ಕೀಲುಗಳಲ್ಲಿ ಕೀಲುಕುಳಿಯ ಜೊತೆಗೆ ಮೃದ್ವಸ್ಥಿ ಮತ್ತು ತಂತುಗಳಿಂದ ರಚಿತವಾದ ತಂತುಮೃದ್ವಸ್ಥಿಬಿಲ್ಲೆ (ಫೈಬ್ರೊಕಾರ್ಟಿಲೇಜಿನಸ್ ಡಿಸ್ಕ್) ಇದೆ. ಈ ಬಿಲ್ಲೆ ಕೀಲುಗಳ ನಾನಾವಿಧವಾದ ಚಲನೆಗೆ ಅವಕಾಶಮಾಡಿಕೊಡುವುದಲ್ಲದೆ ಕೀಲಿನ ಮೃದ್ವಸ್ಥಿಗಳು ಹಾಳಾಗದಂತೆ ಸಹ ನೋಡಿಕೊಳ್ಳುತ್ತದೆ. ಕೀಲಿನ ಸುತ್ತ ಆವರಿಸಿರುವ ಗಟ್ಟಿಪೊರೆ ಕೆಲವು ಕಡೆ ದಪ್ಪವಾಗಿ ಕೀಲಿನ ತಂತುಗಟ್ಟುಗಳಾಗಿ ಮಾರ್ಪಡುತ್ತದೆ. ಇವು ಸಮಾಂತರವಾಗಿ ಅಳವಟ್ಟಿವೆ. ತಂತುಗಟ್ಟು ಒರಟು, ಗಟ್ಟಿ, ಮಣಿಯಲು ಸಹಕಾರಿ, ಹೆಚ್ಚಿಗೆ ಹಿಗ್ಗದು. ದೇಹದಲ್ಲಿ ಬೇರೆ ಬೇರೆ ಕೀಲುಗಳು ಬೇರೆ ಬೇರೆ ವಿಧವಾದ ಚಲನೆಗಳಿಗೋಸ್ಕರ ಉತ್ಪತ್ತಿಯಾಗಿರುವುದರಿಂದಲೇ ತಂತುಗಟ್ಟುಗಳು ಸಹ ಆವಶ್ಯಕತೆಗೆ ಅನುಗುಣವಾಗಿ ಹಿಗ್ಗುತ್ತವೆ. ಆ ಮಿತಿಯನ್ನು ಮೀರಿ ಹಿಗ್ಗಿಸಿದರೆ ಕೀಲುಗಳಲ್ಲಿ ನೋವುಂಟಾಗುತ್ತದೆ. ಕೀಲಿನ ಸುತ್ತ ಇರುವ ಗಟ್ಟಿ ಪೊರೆಯ ಒಳಗಡೆ ಅಸ್ತರಿ ಹಾಕಿರುವ ಸೈನೋವಿಯಲ್ ಪೊರೆಯಿಂದ ಸೈನೋವಿಯ ಎಂಬ ದ್ರವ ಉತ್ಪತ್ತಿಯಾಗುವುದು. ಇದು ಕೀಲಿನ ಚಲನೆಗೆ ಸಹಕಾರಿ. ಸೈನೋವಿಯವು ಕೀಲಿನ ಮೃದುಚಾಲಕ ವಸ್ತುವಾಗಿರುವುದೇ ಅಲ್ಲದೆ ಕೀಲಿನ ಮೃದ್ವಸ್ಥಿಗಳಿಗೆ ಪೋಷಕವೂ ಹೌದು.

ಸೈನೋವಿಯಲ್ ಕೀಲುಗಳು, ಎರಡು ಅಕ್ಷಗಳಲ್ಲಿ ಚಲಿಸುವ ಕೀಲುಗಳು ಮತ್ತು ಅನೇಕ ಅಕ್ಷಗಳಲ್ಲಿ ಚಲಿಸುವ ಕೀಲುಗಳೆಂದು ವರ್ಗೀಕರಿಸಬಹುದು.

**ಹಿಂಜ್ ಕೀಲು:** ಇದರಲ್ಲಿ ಚಲನೆ ಒಂದೇ ದಿಕ್ಕಿನಲ್ಲಿದೆ. ಇಂಥ ಕೀಲುಗಳಲ್ಲಿ ಭಾಗವಹಿಸುವ ಮೂಳೆಗಳು ಒಂದನ್ನೊಂದು ಕೂಡಿಕೊಂಡು ಅವುಗಳ ಎರಡು ಬದಿಯಲ್ಲೂ ಬಲು ದಪ್ಪವಾದ ತಂತುಗಟ್ಟುಗಳಿರುತ್ತವೆ.

**ತಿರುಗಣಿ ಕೀಲು (ಪಿವಟ್ ಜಾಯಿಂಟ್):** ಇದರಲ್ಲಿ ಕೇವಲ ತಿರುಗುವ ಚಲನೆಯನ್ನು ಕಾಣಬಹುದು. ಗೂಟದ ಸುತ್ತ ಸುತ್ತುವರಿಯಲ್ಪಟ್ಟ ಬಿಗಿತಂತುವಿನ ಒಳಗೆ ಬೆಣೆ ತಿರುಗಿಸಬಹುದು ಇಲ್ಲವೆ ಬೆಣೆಯ ಸುತ್ತ ಇರುವ ತಂತುಗಳ ಉಂಗುರ ತಿರುಗಬಹುದು. ಈ ಉಂಗುರ ಭಾಗಶಃ ಮೂಳೆಯಿಂದ ಇನ್ನುಳಿದ ಭಾಗ ತಂತುವಿನಿಂದ ರಚನೆಗೊಂಡಿದೆ.

**ಮೂಳೆತಲೆಯಂತಿರುವ ಕೀಲುಗಳು:** ಒಂದು ಮೂಳೆಯ ಕಹರದಲ್ಲಿ ಮತ್ತೊಂದು ಮೂಳೆಯ ತಲೆ ಸೇರಿ ಈ ತರಹದ ಕೀಲುಗಳುಂಟಾಗುತ್ತವೆ. ಇವುಗಳಲ್ಲಿ ಎಲ್ಲ ವಿಧವಾದ ಚಲನೆಗಳೂ ನಡೆಯುತ್ತವೆ.

**ಸಮತಲಕೀಲು (ಪ್ಲೇನ್ ಜಾಯಿಂಟ್ಸ್):** ಇದರಲ್ಲಿ ಸಮತಲ ಮೇಲ್ಮೈಯಿರುವ ಮೂಳೆಗಳು ಒಂದನ್ನೊಂದು ಎದುರಾಗಿ ಸಂಧಿಸುತ್ತವೆ. ಇದನ್ನು ಆವರಿಸಿರುವ ತಂತುಗಟ್ಟುಗಳು ಮತ್ತು ಮೂಳೆಯ ಮುಂದೆ ಚಾಚಿಕೊಂಡಿರುವ ಭಾಗಗಳನ್ನು ಅವಲಂಬಿಸಿ ಚಲನೆ ಉಂಟು.

**ದವಡೆಕೀಲು:** ಮೇಲುಭಾಗದಲ್ಲಿ ಕಪೋಲ ಮೂಳೆಯ ಕುಹರ, ಕೆಳಗಡೆ ದವಡೆ ಮೂಳೆಯ ಮಂಡೆ ಕೂಡಿ ಈ ಕೀಲಾಗಿದೆ. ಇದನ್ನು ದಪ್ಪ ಪೊರೆ ಸುತ್ತುವರಿದಿದೆ. ಕೀಲಿನ ಹೊರಪಕ್ಕದಲ್ಲಿ ಒಂದು ತಂತುಗಟ್ಟು ಉಂಟು. ಸ್ಪೀನೋ ಮ್ಯಾಂಡಿಬ್ಯುಲ್ಲಾರ್, ಸ್ಟೈಮೋಮ್ಯಾಂಡಿಬ್ಯುಲಾರ್ ತಂತುಗುಟ್ಟುಗಳೂ ಇವೆ. ಆಹಾರವನ್ನು ಅಗಿಯಲು ಈ ಕೀಲು ಸಹಾಯಕವಾಗಿದೆ.

**ಬೆನ್ನುಮೂಳೆಯ ಕೀಲುಗಳು:** ಕುತ್ತಿಗೆಯ ಎರಡನೆಯ ಕಶೇರುಖಂಡದಿಂದ ತ್ರಿಕಾಸ್ಥಿಯ (ಸೇಕ್ರಂ) ವರೆಗೆ ಒಂದನ್ನೊಂದು ಮೃದ್ವಸ್ಥಿಗಳಿಂದ ಮತ್ತು ಸೈನೋವಿಯಲ್ ಕೀಲುಗಳಿಂದ ಕೂಡಿಕೊಂಡಿವೆ. ಬೆನ್ನುಮೂಳೆಗಳ ಕಾಯಗಳ ಮಧ್ಯೆ ತಂತುಮೃದ್ವಸ್ಥಿ ಬಿಲ್ಲೆ ನೆಲೆಸಿದೆ. ಈ ಬೆನ್ನು ಮೂಳೆಗಳನ್ನು ಮುಂಭಾಗದಲ್ಲಿ ಮತ್ತು ಹಿಂಬದಿಯಲ್ಲಿ ಉದ್ದವಾದ ತಂತುಗಟ್ಟುಗಳು ಬಿಗಿದಿವೆ. ಬೆನ್ನೆಲುಬುತಂತು (ಸುಪ್ರಸ್ಪೈನಸ್ ಲಿಗಮೆಂಟ್) ಇತ್ಯಾದಿ.

**ತ್ರಿಕಾಸ್ಥಿ ಮತ್ತು ಕಾಕ್ಸಿಕ್ಸ್‌ಕೀಲು (ಸ್ಯಾಕ್ರೊ ಕಾಕ್ಸಿಜಿಯಲ್ ಜಾಯಿಂಟ್):** ಇದು ಮೃದ್ವಸ್ಥಿಕೀಲು. ಇದಕ್ಕೆ ಸಹಾಯಕವಾಗಿ ಮುಂಭಾಗದ, ಹಿಂಬದಿಯ ಮತ್ತು ಪಕ್ಕದ ತಂತುಗಟ್ಟುಗಳಿವೆ. ಈ ಎರಡು ಮೂಳೆಗಳೂ ಕೂಡವಲ್ಲಿ ತಂತು ಮೃದ್ವಸ್ಥಿ ಬಿಲ್ಲೆ ಇದೆ.

**ಅಟ್ಲಾಂಟೋ ಆಕ್ಸಿಯಲ್ ಕೀಲು:** ಮೂರು ಸೈನೋವಿಯಲ್ ಕೀಲುಗಳಿಂದ ಕೂಡಿದೆ. ಮಧ್ಯಮ ಕೀಲು ತಿರುಗಣಿ ಕೀಲು.

**ಅಟ್ಲಾಂಟೋ ಆಕ್ಸಿಪಿಟಲ್ ಕೀಲು :** ಬೆನ್ನುಮೂಳೆ ಮತ್ತು ತಲೆಬುರುಡೆಯನ್ನು ಕೂಡಿಸುತ್ತದೆ.

**ಪಕ್ಕೆಲುಬು ಬೆನ್ನುಮೂಳೆಯ ಕೀಲು :** ಇದರಲ್ಲಿ ಪಕ್ಕೆಲುಬುಗಳ ತಲೆಗಳು ಬೆನ್ನುಮೂಳೆಯ ಕಾಯದೊಳಕ್ಕೆ ಸೇರಿರುತ್ತವೆ. ಕುತ್ತಿಗೆ ಮತ್ತು ಮೂಳೆಯ ಗುಬಟುಗಳು ಬೆನ್ನುಮೂಳೆಯ ಅಡ್ಡಚಾಚಿನೊಂದಿಗೆ ಸೇರುತ್ತವೆ.

**ಎದೆಮೂಳೆ ಪಕ್ಕೆಲುಬು ಕೀಲು :** ಮೊದಲನೆಯ ಪಕ್ಕೆಲುಬಿನ ಕೀಲು ಮೃದ್ವಸ್ಥಿಯ ಕೀಲಾಗಿದ್ದು ಉಳಿದವು ಸೈನೋವಿಯಲ್ ಕೀಲುಗಳಾಗಿವೆ.

**ಎದೆಮೂಳೆ ಗ್ರೀವಾಸ್ಥಿಕೀಲು (ಸ್ಟರ್ನೋಕ್ಲ್ಯಾವಿಕ್ಯುಲರ್ ಜಾಯಿಂಟ್):** ಈ ಕೀಲು ಗ್ರೀವಾಸ್ಥಿ ಮತ್ತು ಎದೆಮೂಳೆಯನ್ನು ಕೂಡಿಸುತ್ತದೆ. ಇದಕ್ಕೆ ಕೀಲಿನ ದಪ್ಪ ಪೊರೆ, ಮುಂಭಾಗದ ಮತ್ತು ಹಿಂಭಾಗದ ಗ್ರೀವಾಸ್ಥಿ ಎದೆಮೂಳೆಯ ತಂತುಗಟ್ಟುಗಳು ಮತ್ತು ಅಂತರಗ್ರೀವಾಸ್ಥಿಯ ತಂತು ಮತ್ತು ಪಕ್ಕೆಲುಬು ಗ್ರೀವಾಸ್ಥಿ ತಂತುಗಟ್ಟುಳಿವೆ.

**ಹೆಗಲೆಲುಬು ಗ್ರೀವಾಸ್ಥಿ ಕೀಲು :** ಇದು ಹೆಗಲೆಲುಬನ್ನು ಗ್ರೀವಾಸ್ಥಿಯೊಡನೆ ಸೇರಿಸುತ್ತದೆ. ಇದು ಸಮತಲಕೀಲು. ಇದಕ್ಕೆ ದಪ್ಪಪೊರೆ, ಅಕ್ರೋಮೀಯೋ ಕ್ಲ್ಯಾವಿಕ್ಯುಲಾರ್ ಮತ್ತು ಕೊರಾಕೋಕ್ಲ್ಯಾವಿಕ್ಯುಲಾರ್ ತಂತುಗಟ್ಟುಗಳಿವೆ.

**ಭುಜದ ಕೀಲು :** ಇದು ಒರಳುಗುಂಡಿ ಕೀಲು (ಬಾಲ್ ಅಂಡ್ ಸಾಕೆಟ್ ಜಾಯಿಂಟ್) ಮೇಲ್ತೋಳಿನ ಎಲುಬಿನ ತಲೆ ಮತ್ತು ಸ್ಕಂದಾಸ್ಥಿಯ ಕೀಲುಕುಳಿಗಳ ಮಧ್ಯೆ ಈ ಕೀಲಿದೆ. ಈ ಕೀಲಿನ ಸುತ್ತ ದಪ್ಪ ಪೊರೆಯಿದೆ. ಈ ಕೀಲಿನಲ್ಲಿ ಎಲ್ಲ ವಿಧವಾದ ಚಲನೆಗಳು ಸಾಧ್ಯ.

**ಮೊಣಕೈ ಕೀಲು :** ಇದರಲ್ಲಿ ಎರಡು ಕೀಲುಗಳಿವೆ. ಮೇಲ್ತೋಳಿನ ಎಲುಬು ಮುಂದೋಳಿನ ಹೊರ ಮತ್ತು ಒಳ ಎಲುಬುಗಳೊಂದಿಗೆ ಕೀಲುಗಳನ್ನು ಉಂಟುಮಾಡಿವೆ. ಇವು ತಿರುಗಣಿ ಕೀಲುಗಳು. ಇವುಗಳಿಗೆ ಸಹಾಯಕವಾಗಿ ದಪ್ಪಪೊರೆ, ಮುಂದೋಳಿನ ಹೊರಮೂಳೆ (ಅಲ್ನಾ) ಮತ್ತು ಒಳಮೂಳೆಗಳ (ರೇಡಿಯಸ್) ಪಕ್ಕಪಕ್ಕದ ತಂತುಗಟ್ಟುಗಳಿವೆ.

**ಮಣಿಕಟ್ಟು ಕೀಲು :** ಇದು ಮುಂದೋಳಿನ ಒಳಮೂಳೆ (ಅಲ್ನಾ)ಯ ಕೆಳಭಾಗ, ರೇಡಿಯಸ್‌ನ ಕೆಳ ಕೊನೆಯ ಭಾಗ ಮೇಲುಗಡೆ, ದ್ರೋಣಾಸ್ಥಿ, ಬಾಲಚಂದ್ರಾಕೃತಿ ಅಸ್ಥಿ ಮತ್ತು ತ್ರಿಕೋನಾಸ್ಥಿಗಳು ಕೆಳಗಡೆ ಸೇರಿ ಈ ಕೀಲಾಗಿದೆ. ಇದರ ಸುತ್ತ ದಪ್ಪನಾದ ಕೀಲುಪೊರೆ ಉಂಟು. ಈ ಪೊರೆಗೆ ಸಹಾಯಕವಾಗಿ ಅಂಗೈಯ್ಯ ರೇಡಿಯೋ ಕಾರ್ಪಲ್, ಹಿಂಗೈಯ್ಯ ರೇಡಿಯೋ ಕಾರ್ಪಲ್, ರೇಡಿಯಲ್ ಕೊಲ್ಯಾಟರಲ್, ಅಂಗೈ ಅಲ್ನೋಕಾರ್ಪಲ್, ಅಲ್ನಾರ್ ಕೊಲ್ಯಾಟರಲ್ ತಂತುಗಟ್ಟುಗಳಿವೆ.

**ಅಂತರ ಮಣಿಕಟ್ಟುಗಳ ಕೀಲುಗಳು :** ಈ ಮಣಿಕಟ್ಟುಗಳಲ್ಲಿ ಒಂದನ್ನೊಂದು ಹಿಂಬದಿಯ, ಅಂಗೈಕಡೆಯ ಮತ್ತು ಅಂತರಮೂಳೆಗಳ ತಂತುಗಟ್ಟುಗಳು ಬಂಧಿಸಿವೆ.

**ಮಣಿಕಟ್ಟುಗಳು ಮತ್ತು ಮುನ್‌ಮಣಿಕಟ್ಟುಗಳ ಕೀಲುಗಳು :** ಹೆಬ್ಬೆರಳಿನ ಕೀಲು ಮೊದಲನೆಯ ಮುನ್‌ಮಣಿಕಟ್ಟು ಮತ್ತು ಚತುರ್ಭುಜಾಸ್ಥಿಗಳಿಂದ ಆಗಿವೆ. ಕೀಲುಗಳ ದಪ್ಪಪೊರೆಯಿದೆ. ಇವುಗಳಿಗೆ ಸಹಾಯಕವಾಗಿ ಪಕ್ಕದ ಮುಂಭಾಗದ ಮತ್ತು ಹಿಂಬದಿಯ ತಂತುಗಟ್ಟುಗಳಿವೆ; ಎರಡು, ಮೂರು, ನಾಲ್ಕು ಮತ್ತು ಐದನೆಯ ಮುನ್‌ಮಣಿಕಟ್ಟುಗಳು ಮಣಿಕಟ್ಟುಗಳೊಡನೆ ಸೇರಿ ಕೀಲುಗಳಾಗಿವೆ. ಈ ಕೀಲುಗಳಿಗೆ ದಪ್ಪಪೊರೆ, ಅಂತರ ಮೂಳೆ ತಂತುಗಟ್ಟು, ಹಿಂಬದಿಯ ಮತ್ತು ಅಂಗೈ ತಂತುಗಟ್ಟುಗಳು ಸಹಾಯಕವಾಗಿವೆ. ಮುನ್‌ಮಣಿಕಟ್ಟುಗಳು ಬೆರಳು ಮೂಳೆಗಳೊಡನೆ ಸೇರಿ ಕೀಲುಗಳುಂಟಾಗಿವೆ. ಇವುಗಳಿಗೆ ಅಂಗೈಕಡೆ ಒಂದು ತಂತುಗಟ್ಟು ಮತ್ತು ಎರಡು ಪಕ್ಕದ ತಂತುಗಟ್ಟುಗಳಿವೆ: ಅಂತರ ಬೆರಳೆಲುಬು ಕೀಲುಗಳು ತಿರುಗಣಿ ಕೀಲುಗಳು. ಪ್ರತಿ ಕೀಲಿಗೂ ಒಂದು ಅಂಗೈತಂತುಗಟ್ಟು ಮತ್ತು ಎರಡು ಪಕ್ಕ ಪಕ್ಕದ ತಂತುಗಟ್ಟುಗಳಿವೆ.

ಚಿತ್ರ 2 ರೊಂಡಿ ಕೀಲಿನ ಕೊಯ್ತ

ವಸ್ತಿಕುಹರದಲ್ಲಿ ತ್ರಿಕಾಸ್ಥಿ ಮತ್ತು ರೊಂಡಿಯ ಎಲುಬಿನ ಕೀಲು, ಎರಡು ಪ್ಯೂಬಿಕ್ ಮೂಳೆಗಳ ಮಧ್ಯ ಕೀಲುಗಳಿವೆ. ರೊಂಡಿಯ ಎಲುಬು ಬೆನ್ನುಮೂಳೆಗಳ ಸಂಗಡ ಇನ್ನೊಂದು ಕೀಲನ್ನು ಉಂಟುಮಾಡುತ್ತದೆ.

**ರೊಂಡಿ ಕೀಲು (ಹಿಪ್ ಜಾಯಿಂಟ್) :** ಇದು ತೊಡೆ ಮೂಳೆಯ ತಲೆ ಮತ್ತು ಎಲುಬಿನ ಕುದುರುಗಳಿಂದ ಆಗಿದೆ. ಈ ಕೀಲಿನ ಸುತ್ತ ದಪ್ಪಪೊರೆಯಿದೆ. ಇದರಲ್ಲಿ ಎಲ್ಲ ವಿಧವಾದ ಚಲನೆಗಳು ಉಂಟಾಗುತ್ತವೆ.

**ಮಂಡಿಕೀಲು :** ಇದು ಸ್ವಲ್ಪ ಮಾರ್ಪಾಡು ಹೊಂದಿದ ತಿರುಗಣಿ ಕೀಲು. ಈ ಕೀಲಿನಲ್ಲಿ ತೊಡೆಮೂಳೆ, ಮೊಣಕಾಲ ಮೂಳೆ ಮತ್ತು ಮಂಡಿ ಚಿಪ್ಪುಗಳು ಪಾತ್ರ ವಹಿಸುತ್ತವೆ. ದಪ್ಪಪೊರೆ, ಮಂಡಿಚಿಪ್ಪು ತಂತುಗಟ್ಟು, ತೊಡೆ ಮತ್ತು ಮೊಣಕಾಲಮೂಳೆಗಳ ಪಕ್ಕಪಕ್ಕದ ತಂತುಗಟ್ಟುಗಳು, ನೇರತಪ್ಪಿದ ಮತ್ತು ಕಮಾನಿನಾಕಾರದ, ಮಂಡಿಯ ಹಿಂಭಾಗದಲ್ಲಿನ ಕುಳಿಯ ತಂತುಗಟ್ಟುಗಳು ಮುಂದಿನ ಮತ್ತು ಶಿಲುಬೆಯಾಕಾರದ ಮತ್ತು ಅಡ್ಡನಾದ ತಂತುಗಟ್ಟುಗಳು ಸಹಾಯಕವಾಗಿವೆ. ಈ ಕೀಲನ್ನು ಮಡಿಸಲು, ಉದ್ದಮಾಡಲು ಮತ್ತು ಸ್ವಲ್ಪ ಹೊರಳಿಸಲು ಸಾಧ್ಯವಿದೆ.

**ಮುಂಗಾಲುಕೀಲು (ಆ್ಯಂಕಲ್ ಜಾಯಿಂಟ್):** ಇದು ತಿರುಗಣಿಕೀಲು, ಮಂಡಿ ಕಾಲಿನ ಕೆಳಭಾಗ ಮತ್ತು ಫಿಬುಲ ಮೂಳೆಯ ಕೆಳಭಾಗ, ಮೇಲುಗಡೆ, ಹರಡೆಲುಬು ಕೆಳಗಡೆ ಸೇರಿ ಈ ಕೀಲಾಗಿದೆ. ದಪ್ಪಪೊರೆ, ತ್ರಿಕೋನಾಕಾರದ ತಂತುಗಟ್ಟು ಮುಂಭಾಗದ ಮತ್ತು ಹಿಂಭಾಗದ ಟ್ಯಾಲೋಫೀಬ್ಯುಲಾರ್ ತಂತುಗಟ್ಟುಗಳಿವೆ. ಅಂತರಟಾರ್ಸಲ್ ಕೀಲುಗಳು ಅನೇಕವಿವೆ. ಟ್ಯಾಲೋಕಾಲ್‌ಕೇನಿಯಸ್, ಟ್ಯಾಲೋಕ್ಯಾಲ್ ಕೇನಿಯೋ ನ್ಯಾವಿಕ್ಯುಲಾರ್, ಕ್ಯಾಲ್ಕೆನಿಯೋ ಕ್ಯೂಬಾಯ್ಡ್, ಕ್ಯಾನಿಯೋ, ನ್ಯಾವಿಕ್ಯುಲಾರ್ ಕ್ಯೂಬಾಯ್ಡೋ ನ್ಯಾವಿಕ್ಯುಲಾರ್ ಇಂಟರ್‌ಕ್ಯೂನಿಫಾರಾ ಮತ್ತು ಕ್ಯೂನಿಯೋ ಕ್ಯೂಬಾಯ್ಡ್ ಕೀಲುಗಳಿವೆ.

**ಟಾರ್ಸೋ ಮೆಟಟಾರ್ಸಲ್ ಕೀಲುಗಳು :** ಇವು ಸೈನೋವಿಯಲ್ ಕೀಲುಗಳು. ಮೊದಲನೆಯ ಮೆಟಟಾರ್ಸಲ್ ಮೂಳೆ ಒಳಬದಿಯ ಬೆಣೆಯಸ್ಥಿಯ ಸಂಗಡ ಎರಡನೆಯ ಒಳಬದಿಯ ಮತ್ತು ಹೊರಬದಿಯ ಬೆಣೆಯಸ್ಥಿಯ ಮಧ್ಯೆ ಮತ್ತು ಮಧ್ಯಬೆಣೆಯಸ್ಥಿಯ ಸಂಗಡ, ಮೂರನೆಯದು ಹೊರಬದಿಯ ಬೆಣೆಯಸ್ಥಿಯ ಸಂಗಡ, ನಾಲ್ಕನೆಯದು

ಘನಾಕೃತಿ ಮೂಳೆಯ ಸಂಗಡ ಮತ್ತು ಹೊರಬದಿಯ ಬೆಣೆಯಸ್ಥಿಯ ಸಂಗಡ, ಐದನೆಯ ಘನಾಕೃತಿಮೂಳೆಯ ಸಂಗಡ ಸೇರಿ ಕೀಲುಗಳುಂಟಾಗಿವೆ. ಹಿಂಬದಿಯ ಮತ್ತು ಅಂಗಾಲಿನ ಟಾರ್ಸೋ ಮೆಟಾಟಾರ್ಸಲ್ ಮತ್ತು ಅಂತರ ಮೂಳೆಯ ಬೆಣೆಯಸ್ಥಿ ಮೆಟಾಟಾರ್ಸಲ್ ತಂತುಗಟ್ಟುಗಳಿಂದ ಬಿಗಿಯಲ್ಪಟ್ಟಿವೆ.

**ಮೆಟಾಟಾರ್ಸೋಬೆರಳೆಲುಬುಗಳ ಕೀಲುಗಳು :** ಇವು ಮೂಳೆ ತಲೆಯಂತಿರುವ ಕೀಲುಗಳು. ಮೆಟಟಾರ್ಸಲ್ ಮೂಳೆಗಳು, ಸಮೀಪದ ಕಾಲ್ಬೆರಳುಗಳ ಎಲುಬಿನೊಂದಿಗೆ ಸೇರಿ ಈ ಕೀಲುಗಳುಂಟಾಗಿವೆ. ದಪ್ಪಪೊರೆ, ಅಂಗಾಲಿನ, ಆಳವಾದ ಅಡ್ಡವಾಗಿರುವ ಮೆಟಾಟಾರ್ಸಲ್ ಮತ್ತು ಪಕ್ಕಪಕ್ಕದ ತಂತುಗಟ್ಟುಗಳು ಸಹಾಯಕವಾಗಿವೆ.

**ಅಂತರ ಕಾಲ್ಬೆರಳುಗಳ ಮೂಳೆಗಳ ಕೀಲುಗಳು :** ತಿರುಗಣಿಕೀಲುಗಳು ದಪ್ಪ ಪೊರೆ ಮತ್ತು ಎರಡು ಪಕ್ಕಪಕ್ಕದ ತಂತುಗಟ್ಟುಗಳು ಇವನ್ನು ಬಂಧಿಸಿವೆ.

(ಎ.ಎನ್.ಎ.)



**ಚಿತ್ರ 3 ಎದುರಿನಿಂದ ನೋಡಿದಾಗ ಕಾಣುವ ಮೊಣ ಕಾಲುಕಿಲಿನ ಕೊಯ್ತು**

**ಕೀಲುರಿತ :** ದೇಹದ ಯಾವುದೇ ಕೀಲಿನ ಸೋಂಕಿನ ಪರಿಣಾಮ (ಆರ್ಥ್ರೈಟಿಸ್). ಸಂಧಿವಾತ ಪರ್ಯಾಯ ಪದ. ಬೇರೆ ಬೇರೆ ಕಾರಣಗಳ ಪರಿಣಾಮವಾಗಿ ತಲೆದೋರುವ ನೋವಿನ ಅನುಭವವಿದು. ಮಾನವದೇಹದಲ್ಲಿರುವ ಕೀಲುಗಳು ಹಲವಾರು ಬಗೆಯವು. ಇವುಗಳಲ್ಲಿ (ಕಾರ್ಟಿಲೇಜ್) ಮೃದ್ವಸ್ಥಿ ತಂತುಗಟ್ಟು (ಲಿಗಮೆಂಟ್) ಮತ್ತು ಸ್ನಾಯುರಜ್ಜು (ಟೆಂಡನ್) ಮುಖ್ಯವಾದವು. ಮೂಳೆಯ ಒಂದು ಭಾಗ ಇನ್ನೊಂದು ಮೂಳೆಯ ಭಾಗದೊಂದಿಗೆ ಕೂಡಿ ತಿರುಗಲು ಸಹಾಯವಾಗುವಂತೆ ಕೀಲುಗಳ ರಚನೆ ಉಂಟು. ತಿರುಗುವ ಭಾಗವನ್ನು ಮೃದ್ವಸ್ಥಿಗಳಿಂದ ಮಾಡಿದೆ. ಅಲ್ಲದೆ ಈ ಭಾಗ ಸರಾಗವಾಗಿ, ಚಲಿಸಲು ಸಹಾಯವಾಗುವಂತೆ ಬಲು ನುಣುಪಾಗಿರುತ್ತದೆ. ಮೂಳೆಗಳು ಒಂದಕ್ಕೊಂದು ಹೊಂದಿಕೊಂಡು ತಿರುಗುವಾಗ ವಿಶೇಷ ಘರ್ಷಣೆಗೊಳಗಾಗದಂತೆ ಕೀಲಿನೊಳಗೆ ಸಿನೋವಿಯಲ್ ಎಂಬ ಹೆಸರಿನ ದ್ರವವಿದೆ. ಮೃದ್ವಸ್ಥಿ, ಸ್ನಾಯುರಜ್ಜು ಮತ್ತು ತಂತುಗಟ್ಟುಗಳೆಲ್ಲವೂ ಕೀಲಿನ ಭಾಗದಲ್ಲಿ ಕೀಲಿನ ಪೊರೆಯಿಂದ (ಜಾಯಿಂಟ್ ಕ್ಯಾಪ್ಸೂಲ್) ಆವರಿಸಲ್ಪಟ್ಟಿರುತ್ತವೆ. ಕೆಲವು ಕೀಲುಗಳಲ್ಲಿ ಚಲನೆ ವಿಶೇಷವಾಗಿರುತ್ತದೆ (ಉದಾಹರಣೆಗೆ ಬೆನ್ನೆಲುಬಿನ ಕೀಲು ಮತ್ತು ಬೆನ್ನೆಲುಬು ಮತ್ತು ತೊಡೆಯ ಕೀಲಿರುವ ಮೂಳೆಯಲ್ಲಿನ ಇತರ ಕೀಲುಗಳು). ಕೀಲಿನ ಪೊರೆಯೊಳಗಾಗಲಿ ಕೀಲಿನ ಯಾವುದಾದರೂ ಭಾಗಕ್ಕೆ ಗಾಯವಾದಾಗ ಅಥವಾ ವ್ಯಾಪಿಸಿದ ಯಾವುದಾದರೂ ರೋಗದ ಸೋಂಕಿನಿಂದುಂಟಾದ ವಿಷವಸ್ತುಗಳು ವ್ಯಾಪಿಸಿದಾಗ ಕೀಲುರಿತ ಉಂಟಾಗಬಹುದು. ಕಾರಣ ಯಾವುದೇ ಇರಲಿ, ಕೀಲುರಿತ ಉಂಟಾದಾಗ ಅದರ ಕಾರಣಕ್ಕೆ ಅನುಸಾರವಾಗಿ ಕೀಲಿನೊಳಗಿನ ದ್ರವ ಪದಾರ್ಥ ಹೆಚ್ಚಾಗಿ ಕೀಲಿನಲ್ಲಿ ಊತ ಕಾಣಿಸಿಕೊಳ್ಳಬಹುದು. ಸ್ನಾಯುರಜ್ಜು ಅಥವಾ ತಂತುಗಟ್ಟಿನಲ್ಲಿ ಉರಿ ಕಾಣಿಸಿಕೊಂಡು ಕೀಲಿನ ಚಲನೆಯನ್ನು ಅಡ್ಡಿಪಡಿಸಿ ನೋವನ್ನು ಉಂಟುಮಾಡಬಹುದು. ಮೃದ್ವಸ್ಥಿಗಳಿಂದ ಕೂಡಿ ನುಣುಪಾದ ಭಾಗ ನಶಿಸಿ ಒರಟಾಗಿ ಕೀಲುಗಳು ಸರಾಗವಾಗಿ ತಿರುಗದಂತೆ ಅಡ್ಡಿಪಡಿಸಿ ನೋವನ್ನುಂಟುಮಾಡಬಹುದು. ಕೀಲಿನಲ್ಲಿ ಕಾಣಿಸಿದ ಉರಿ ಕ್ರಮೇಣ ಅತಿರೇಕವಾಗಿ ಮೂಳೆಗಳು ಒಂದಕ್ಕೊಂದು ಕೂಡಿಕೊಂಡು ಕೀಲಿನಲ್ಲಿ ಚಲನೆಯೇ ಇಲ್ಲದಂತಾಗಬಹುದು. ಕೀಲಿನ ಪೊರೆಯೊಳಗಿರುವ ರಕ್ತನಾಳಗಳಿಂದ ರಕ್ತಸ್ರಾವಾಗಿ ಕೀಲಿನ ಪೊರೆಯೊಳಗೆ ರಕ್ತ ಸೇರಬಹುದು.

ಕೀಲುರಿತದ ಲಕ್ಷಣಗಳು ಕೆಲವು ವೇಳೆ ಒಡನೆಯೇ ಕಂಡುಬರಬಹುದು ಅಥವಾ ಇನ್ನು ಕೆಲವು ವೇಳೆ ಕ್ರಮೇಣ ಕಂಡುಬರಬಹುದು. ಕೆಲವು ತರಹ ಕೀಲುರಿತ ಒಂದೇ ಕೀಲಿನಲ್ಲಿ ಕಾಣಿಸಿಕೊಂಡರೆ ಇನ್ನೂ ಕೆಲವು ಅನೇಕ ಕೀಲುಗಳಲ್ಲಿ ಕಾಣಿಸಬಹುದು. ಅಥವಾ ಕೆಲವು ಕೀಲುಗಳಲ್ಲಿ ಕಾಣಿಸಿಕೊಂಡು ಅದು ಕಡಿಮೆಯಾಗಿ ಅನಂತರ ಬೇರೆ ಕೀಲುಗಳಿಗೆ ವ್ಯಾಪಿಸಬಹುದು. ಈ ತರಹದ ಲಕ್ಷಣಗಳು ಕಾಣಿಸಿಕೊಳ್ಳುವುದು ರೋಗದ ಸೋಂಕಿನ ರೀತಿಯನ್ನೂ ಅವಲಂಬಿಸಿರುತ್ತದೆ.

ಲಿಂಗ, ವಯಸ್ಸು, ದೇಶದ ವಾಯುಗುಣ, ಜನಜೀವನದ ಮಟ್ಟ ಮತ್ತು ಅವರ ಆಚಾರ ವ್ಯವಹಾರಗಳಿಗೆ ಅನುಗುಣವಾಗಿ ಕೀಲುರಿತ ಕಾಣಿಸಿಕೊಳ್ಳುವುದರಲ್ಲೂ ವ್ಯತ್ಯಾಸ ಕಂಡುಬರುತ್ತದೆ. ಕೀಲುರಿತವನ್ನು ಮುಖ್ಯವಾಗಿ ನಾಲ್ಕುಭಾಗಗಳಾಗಿ ವಿಂಗಡಿಸಬಹುದು: 1 ಸಂಧಿವಾತ ಲಕ್ಷಣಗಳಿಂದ ಕೂಡಿದ ಕೀಲುರಿತ (ರೂಮಟಾಯಿಡ್ ಆರ್ಥ್ರೈಟಿಸ್); 2 ನಿರ್ದಿಷ್ಟವಾದ ರೋಗದ ಸೋಂಕಿನಿಂದ ಉಂಟಾಗುವ ಕೀಲುರಿತ; 3 ಕೀಲಿನ ಭಾಗಗಳು ಯಾವುದೇ ಕಾರಣದಿಂದಾಗಲೀ ಬೇಗ ನಶಿಸಿ ಹೋಗಿ ಉಂಟಾಗುವ ಕೀಲುರಿತ (ಆಸ್ಟಿಯೋ ಆರ್ಥ್ರೈಟಿಸ್), 4 ಏಡಿಗಂತಿ ಮತ್ತು ಅದರ ದ್ವಿತೀಯಕಗಳು ಕೀಲುಗಳಿಗೆ ವ್ಯಾಪಿಸುವುದರಿಂದಲೂ ಇತರ ನಿರ್ದಿಷ್ಟವಲ್ಲದ ಕಾರಣಗಳಿಂದಲೂ ಉಂಟಾಗುವ ಕೀಲುರಿತ.

ರೂಮಟಾಯ್ಡ್ ಕೀಲುರಿತಕ್ಕೆ ಕಾರಣ ಗೊತ್ತಿಲ್ಲವಾದರೂ ಅದರ ಚಿಕಿತ್ಸೆಯಲ್ಲಿ ಅನೇಕ ಪರಿಣಾಮಕಾರಿ ಔಷಧಗಳು ಇಂದು ಲಭ್ಯವಾಗಿವೆ. ಈ ಕೀಲುರಿತದಿಂದಾಗಬಹುದಾದ ವಿಕಲತೆ ತಪ್ಪಿಸಲು ಸಹ ಔಷಧಗಳು ಸಹಾಯಕಾರಿಯಾಗಿವೆ. ಜೀವಿರೋಧಕ (ಆ್ಯಂಟಿಬಯಟಿಕ್) ಕಂಡುಕೊಂಡು ಬಳಕೆ ಪ್ರಾರಂಭವಾದ ಮೇಲೆ ಸೋಂಕು ರೋಗಗಳ ಹಾವಳಿ ಕಡಿಮೆಯಾಗಿದೆ. ಕೀಲುಗಳು ಹಾಳಾಗುವುದು ಇಲ್ಲದಂತಾಗಿದೆ ಮತ್ತು ವಿಕಲತೆಯಿಂದ ಬಳಲುವುದು ತಪ್ಪಿದೆ.

**1 ಸಂಧಿವಾತ ಲಕ್ಷಣಗಳಿಂದ ಕೂಡಿದ ಕೀಲುರಿತ:** ಸಾಮಾನ್ಯವಾಗಿ ಇದು ಮಧ್ಯವಯಸ್ಕರಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಗಂಡಸರಿಗಿಂತಲೂ ಹೆಂಗಸರೇ ಹೆಚ್ಚಾಗಿ ತುತ್ತಾದಾದರೂ ರೋಗದ ಸೋಂಕು ಶರೀರಕ್ಕೆ ತಗಲಿದಾಗ, ಶರೀರ ಪೋಷಣೆ ಸರಿಯಾಗಿಲ್ಲದಿರುವಾಗ ಅಥವಾ ಮನುಷ್ಯ ಮಾನಸಿಕ ಹೊಯ್ದಾಟಕ್ಕೆ ಗುರಿಯಾಗಿರುವಾಗ ಈ ರೋಗಲಕ್ಷಣ ಕಾಣಿಸಿಕೊಳ್ಳಬಹುದು. ಹೆಂಗಸರಲ್ಲಿ ಮುಟ್ಟುನಿಂತ ಮೇಲೆ ಈ ಕಾಯಿಲೆ ಕಾಣಿಸಿಕೊಳ್ಳುವುದು ವಿರಳ. ಈ ರೋಗಲಕ್ಷಣದಲ್ಲಿ ಉರಿತವೇ ಮುಖ್ಯವಾದುದು. ಕೀಲಿನ ಸುತ್ತಮುತ್ತಲಿನ ಮೃದುವಾದ ಅಂಗಕಟ್ಟುಗಳಲ್ಲಿ ಮೊದಲು ಉರಿತ ಕಾಣಿಸಿಕೊಳ್ಳುತ್ತದೆ. ಅನಂತರ ಅದು ನಶಿಸಿ ಮೂಳೆಗಳು ಒಂದಕ್ಕೊಂದು ತಿರುಗುವ ಭಾಗದಲ್ಲಿ ಕೂಡಿಕೊಂಡುಬಿಡಬಹುದು. ರೋಗಲಕ್ಷಣದ ಜೊತೆಯಲ್ಲೇ ಕಾಣಿಸಿಕೊಳ್ಳುವ ಸೆಳೆತ ಮತ್ತು ನೋವು ಕೀಲನ್ನು ಚಲಿಸದಂತೆ ಮಾಡುತ್ತವೆ. ಕೆಲವು ವೇಳೆ ಮೂಳೆಗಳಲ್ಲಿ ಸುಣ್ಣದ ಅಂಶವೇ ಕಡಿಮೆಯಾಗಿಬಿಡುವುದೂ ಉಂಟು. ಇದನ್ನು ಎಕ್ಸ್‌ಕಿರಣಗಳ ನೆರವಿನಿಂದ ಕಾಣಬಹುದು. ರಕ್ತದಲ್ಲಿ ಕಾಣಿಸಿಕೊಳ್ಳುವ ವ್ಯತ್ಯಾಸ. ರಕ್ತಹೀನತೆ ಸರ್ವೇ ಸಾಮಾನ್ಯ ಮತ್ತು ರಕ್ತಕಣಗಳು ದುಗ್ಧರಸದಲ್ಲಿ ಅತಿ ಬೇಗ ತಳಕ್ಕೆ ಹೋಗುತ್ತವೆ. ಈ ಒಂದು ಗುಣ ರೋಗಲಕ್ಷಣವನ್ನು ತಿಳಿದುಕೊಳ್ಳಲೂ ಚಿಕಿತ್ಸೆ ನಡೆಸಿದಾಗ ರೋಗ ಗುಣವಾಗುತ್ತಿರುವ ಮಟ್ಟವನ್ನು ತಿಳಿಯಲೂ ಸಹಾಯಮಾಡುತ್ತದೆ. ಈ ತರಹದ ಕೀಲುರಿತ ಆರಂಭವಾಗುವಾಗ ಅಂಥವರಲ್ಲಿ ತೂಕ ಕಡಿಮೆಯಾಗುವುದು. ನಿಶ್ಶಕ್ತಿ, ಮಾನಸಿಕ ಹೊಯ್ದಾಟ, ಬೇಸರ ಇವೆಲ್ಲ ಉಂಟಾಗಬಹುದು. ಕೈಯಲ್ಲಿನ ಬೆರಳಿಗೂ ಹಸ್ತಕ್ಕೂ ಹೊಂದಿಕೊಂಡಿರುವ ಎರಡನೆಯ ಕೀಲಿನಲ್ಲಿ (ಎರಡನೆಯ ಮೆಟಕಾರ್ಪೆಲ್ ಕೀಲು) ವಿಶೇಷವಾಗಿ ನೋವು ಊತ ಮೊದಲು ಕಾಣಿಸಿಕೊಳ್ಳುತ್ತವೆ. ಪಾದದಕೀಲಿನಲ್ಲೂ (ಮೆಟಟಾರ್ಸಲ್ ಜಾಯಿಂಟ್) ಕಾಣಿಸಿಕೊಳ್ಳಬಹುದು. ಅನಂತರ ಕೈಕಾಲಿನ ಮಾಂಸಖಂಡಗಳಲ್ಲಿ ಅವುಗಳ ಗಾತ್ರ ಕಮ್ಮಿಯಾಗಿ ಶಕ್ತಿ ಕುಗ್ಗಿ ಕೀಲಿನ ಚಲನವಲನಗಳಿಗೆ ಅಡ್ಡಿ ಆತಂಕ ಉಂಟಾಗಬಹುದು. ಅನಂತರ ಕೀಲುರಿತ ಮೊಣಕೈ, ಮೊಣಕಾಲು, ಮಂಡಿ, ತೋಳು, ಭುಜ, ತೊಡೆ– ಈ ಕೀಲುಗಳಿಗೂ ಹರಡಬಹುದು. ಹೀಗೆಲ್ಲ ಆಗುತ್ತಿರುವಾಗ ಕೀಲಿಗೆ ಕೂಡಿಕೊಂಡಿರುವಂತೆ ಅದರ ಸುತ್ತ ಊತ ಕಾಣಿಸಿಕೊಳ್ಳುತ್ತದೆ. ಇಷ್ಟೆಲ್ಲ ಆದರೂ ಕೀಲುಗಳು ಒಡನೆಯೇ ನಿರುಪಯುಕ್ತವಾಗುವುದಿಲ್ಲ. ಹಾಗಾಗಲು ಕೆಲವಾರು ವರ್ಷಗಳೇ ಹಿಡಿಯುತ್ತವೆ. ಆದರೆ ಈ ತರಹದ ಕೀಲುರಿತದಿಂದ ಅದು ಪ್ರಾರಂಭವಾದ ದಿನದಿಂದಲೇ ಶರೀರದ ನೆಮ್ಮದಿಗೆ ಭಂಗ ಉಂಟಾಗುತ್ತದೆ. ಈ ರೋಗಲಕ್ಷಣದ ಇನ್ನೊಂದು ವಿಚಿತ್ರವೆಂದರೆ ಹೆಂಗಸು ಗರ್ಭಿಣಿಯಾದಾಗ ಇಲ್ಲವೇ ಮನುಷ್ಯನಿಗೆ ಕಾಮಾಲೆ ರೋಗ ತಗಲಿದಾಗ ರೋಗ ವಾಸಿಯಾದ ಹಾಗೆ ಆಗಿ ಪ್ರಸವವಾದಮೇಲೆ ಅಥವಾ ಕಾಮಾಲೆ ರೋಗ ವಾಸಿಯಾದ ಮೇಲೆ ಇದು ಮರುಕಳಿಸುತ್ತದೆ.

ಈ ರೋಗ ತಗಲಿದವರ ಪೈಕಿ ಶೇ.20 ರಷ್ಟು ಜನಕ್ಕೆ ಸಂಪೂರ್ಣ ಗುಣವಾಗಬಹುದು. ಶೇ.50ರಷ್ಟು ಜನಕ್ಕೆ ಸಾಮಾನ್ಯ ಗುಣ ಕಾಣಬಹುದು. ಶೇ.20ರಷ್ಟು ಜನರಲ್ಲಿ ಕೀಲುಗಳು ಸ್ವಲ್ಪವಾದರೂ ಉಪಯೋಗವಾಗುವಷ್ಟು ಗುಣ ಕಾಣಬಹುದು. ಇನ್ನುಳಿದ ಶೇ.10 ರಷ್ಟು ಜನರಿಗೆ ಎಷ್ಟೇ ಚಿಕಿತ್ಸೆ ನಡೆಸಿದಾಗಲೂ ಉಪಚರಿಸಿದಾಗಲೂ ಅವರು ಗುಣ ಹೊಂದಲಾರರು ಎಂದು ಅಂಕಿ ಅಂಶಗಳ ಆಧಾರದಿಂದ ತಿಳಿದುಬಂದಿದೆ. ಈ ರೋಗಕ್ಕೆ ಚಿಕಿತ್ಸೆ ಅನೇಕ ತಿಂಗಳುಗಳು ಅಥವಾ ವರ್ಷಗಳೇ ಬೇಕಾಗುತ್ತದೆ. ರೋಗ ಮರುಕಳಿಸುವುದು ಸರ್ವೇ ಸಾಮಾನ್ಯವಾದ್ದರಿಂದ ಸರಿಯಾದ ಕಾಲದಲ್ಲಿ ಎಚ್ಚರಿಕೆ ವಹಿಸಿ ಚಿಕಿತ್ಸೆ ನಡೆಸದಿದ್ದರೆ ಕೀಲುಗಳು ಯಾವ ರೀತಿಯಲ್ಲೂ ಉಪಯೋಗಕ್ಕೆ ಬಾರದೆ ಮನುಷ್ಯ ಜೀವನವೇ ಹಾಳಾಗಬಹುದು. ಈ ರೋಗಕ್ಕೆ ಅನೇಕ ತರಹದ ಚಿಕಿತ್ಸೆಗಳಿದ್ದರೂ ನಿರ್ದಿಷ್ಟವಾದ ಯಾವ ಚಿಕಿತ್ಸಾಕ್ರಮವೂ ಇದುವರೆಗೂ ಗೊತ್ತಾಗಿಲ್ಲ.

2. ನಿರ್ದಿಷ್ಟವಾದ ರೋಗದ ಸೋಂಕಿನಿಂದ ಉಂಟಾಗುವ ಕೀಲುರಿತ: ಇವುಗಳಲ್ಲಿ ರೋಗಜನಕ ಏಕಾಣುಜೀವಿಗಳಾದಂಥ ಗೋನೋಕಾಕ್ಕೈ. ಮೆನಿಂಗೋಕಾಕ್ಕೈ. ಕ್ಷಯ ರೋಗಾಣು, ವಿಷಮಶೀತ ಜ್ವರಾಣು, ಆಮಶಂಕೆಯ ರೋಗಾಣುಗಳಿಂದುಂಟಾಗುವ ವ್ಯಾಧಿಗಳು ಸೇರಿವೆ. ಇವು ದೇಹದಲ್ಲಿ ಕಾಣಿಸಿಕೊಂಡು ಕೆಲವುಕಾಲದ ಮೇಲೆ ರೋಗದ ಸೋಂಕು ಕೀಲುಗಳಿಗೂ ಹರಡಿಕೊಂಡು ಕೀಲುರಿತ ಉಂಟಾಗಬಹುದು. ಗೊನೋರಿಯಾ ರೋಗಕ್ಕೆ ತುತ್ತಾದವರಲ್ಲಿ ಶೇ. 1–5 ರಷ್ಟು ಜನ ಈ ರೋಗದ ಸೋಂಕಿನ ಕೀಲುರಿತಕ್ಕೆ ತುತ್ತಾಗುತ್ತಾರೆ. ಇವರಲ್ಲಿ ಹೆಂಗಸರಿಗಿಂತ ಗಂಡಸರ ಸಂಖ್ಯೆಯೇ ಹೆಚ್ಚು. ಈ ರೋಗಕ್ಕೆ ತುತ್ತಾದವರ ಕಣ್ಣುಗಳಲ್ಲಿ ಕೂಡ ಒಂದೊಂದು ಸಲ ರೋಗದ ಸೋಂಕು ಕಾಣಿಸಿಕೊಳ್ಳುತ್ತದೆ. ಈ ತರಹ ಕೀಲುರಿತ ಸಾಮಾನ್ಯವಾಗಿ ಮಂಡಿ, ಮೊಣಕೈ, ಮೊಣಕಾಲು ಮುಂತಾದ ಕೀಲುಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಮೆನಿಂಗೋಕಾಕ್ಕೈನಿಂದುಂಟಾಗುವ ಕೀಲುರಿತದಲ್ಲಿ ಮಿದುಳಿಗೆ ಈ ರೋಗಾಣು ಸೋಂಕಿದಾಗ ಸೆರಿಬ್ರೋಸ್ಪೈನಲ್ ಜ್ವರ ಉಂಟಾಗುತ್ತದೆ. ಹೀಗಾದ ಎರಡನೆಯ ವಾರದ ಹೊತ್ತಿಗೆ ಕೀಲುರಿತವೂ ಮಂಡಿ, ಮೊಣಕೈ, ಮೊಣಕಾಲಿನಲ್ಲಿ ಕಾಣಿಸಿಕೊಳುತ್ತದೆ. ಈ ರೋಗದ ಸೋಂಕು ಕೀಲುಗಳನ್ನು ನೇರವಾಗಿ ವ್ಯಾಪಿಸಿಯೂ ಕೀಲುರಿತ ಉಂಟಾಗಬಹುದು. ಹಾಗಾದಾಗ ಕೀಲಿನಲ್ಲಿ ನೋವು ಸೆಳೆತ ಮಾತ್ರ ಕಾಣಿಸಿಕೊಂಡು ಬಾಕಿ ರೀತಿಯಲ್ಲಿ ದೇಹಕ್ಕೆ ಯಾವ ವಿಧವಾದ ತೊಂದರೆಯೂ ಆಗದೆ ಇರಬಹುದು. ರಕ್ತದಲ್ಲಿನ ಬಿಳಿರಕ್ತಕಣಗಳು ಕಡಿಮೆಯಾಗಿಬಿಡುವುದೂ ಈ ರೋಗದ ಒಂದು ಲಕ್ಷಣ.

ನ್ಯೂಮೋಕಾಕ್ಕೈನಿಂದುಂಟಾಗುವ ಕೀಲುರಿತ: ನ್ಯೂಮೋನಿಯಾ ರೋಗದಿಂದ ನರಳುತ್ತಿರುವವರಲ್ಲಿ ಒಂದೊಂದು ಸಲ ವಿರಳವಾಗಿ ಈ ಕೀಲುರಿತ ಕಾಣಿಸಿಕೊಳ್ಳಬಹುದು. ಇದು ಕಾಣಿಸಿಕೊಳ್ಳುವುದು ಸಾಮಾನ್ಯವಾಗಿ ತೊಡೆ, ಭುಜದಂಥ ದೊಡ್ಡಕೀಲುಗಳಲ್ಲೇ. ನ್ಯೂಮೋನಿಯಾ ರೋಗದಿಂದ ಚೇತರಿಸಿಕೊಳ್ಳುತ್ತಿರುವ ರೋಗಿಗಳಲ್ಲಿ ಹೆಚ್ಚಾಗಿ ಕೀಲುರಿತ ಉಂಟಾಗುವುದುಂಟು ಮತ್ತು ಕೀಲಿನೊಳಗಿನ ದ್ರವಪದಾರ್ಥ ಹೆಚ್ಚಾಗಿ ಊತವೂ ಕಾಣಿಸಿಕೊಳ್ಳುವುದುಂಟು. ಕೀಲಿನೊಳಗಿನ ದ್ರವಪದಾರ್ಥವನ್ನು ಆಗ ಪರೀಕ್ಷಿಸಿದರೆ ಅದರಲ್ಲಿ ನ್ಯೂಮೋಕಾಕ್ಕೈ ರೋಗಾಣುಗಳನ್ನು ಕಾಣಬಹುದು.

ಕ್ಷಯ ರೋಗಾಣುವಿನಿಂದ ಉಂಟಾಗುವ ಕೀಲುರಿತ ಕಾಣಿಸಿಕೊಳ್ಳುವದು ಹೇಗೆ ನಿಧಾನವೋ ಹಾಗೆ ಚಿಕಿತ್ಸೆ ನಡೆಸಿದಾಗ ಅದು ವಾಸಿಯಾಗುವುದೂ ಬಹಳ ನಿಧಾನ. ಒಂದು ಸಲ ಈ ರೋಗ ಕೀಲಿಗೆ ವ್ಯಾಪಿಸಿ ಕೀಲುರಿತ ಉಂಟಾದಾಗ ಕೀಲುಗಳಲ್ಲಿ ಯಾವ ಊನವೂ ಇಲ್ಲದೆ ಸಂಪೂರ್ಣ ವಾಸಿಯಾಗುವುದು ಬಹಳ ಅಪರೂಪ. ಇದು ದೇಹದ ಯಾವ ಕೀಲನ್ನು ಬೇಕಾದರೂ ಸೋಂಕುತ್ತದೆ. ಬೆನ್ನೆಲುಬು ತೊಡೆ ಎಲ್ಲ ರೀತಿಯಲ್ಲಿ ಗುಣ ಕಂಡರೂ ಕೀಲುಗಳು ಮೊದಲಿನಂತೆಯೇ ಉಪಯೋಗಕ್ಕೆ ಬರುವುದು ಅಪರೂಪ. ಇದು ಚಿಕಿತ್ಸೆಯನ್ನು ಪ್ರಾರಂಭಿಸುವುದಕ್ಕೂ ರೋಗ ಕಾಣಿಸಿಕೊಳ್ಳುವುದಕ್ಕೂ ಇರುವ ಕಾಲದ ಅಂತರವನ್ನು ಅವಲಂಬಿಸುತ್ತದೆ.

ವಿಷಮಶೀತಜ್ವರ, ಆಮಶಂಕೆ ಮುಂತಾದ ರೋಗಗಳ ಸೋಂಕು ಮೊದಲು ದೇಹದಲ್ಲಿ ಕಾಣಿಸಿಕೊಂಡು ರೋಗ ಮುಂದುವರಿಯುತ್ತಿರುವಾಗ ಅಥವಾ ಮನುಷ್ಯ ರೋಗದಿಂದ ಚೇತರಿಸಿಕೊಳ್ಳುತ್ತಿರುವಾಗ ಕೀಲುರಿತ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಆಯಾ ರೋಗಾಣುಗಳಿಂದುಂಟಾಗುವ ವಿಷವಸ್ತುಗಳೂ ಕಾರಣವಾಗಬಹುದು.

ಸ್ಟ್ರೆಪ್ಟೊಕಾಕ್ಕೈ, ಸ್ಟೆಫಿಲೋಕಾಕ್ಕೈ ಮುಂತಾದ ಕಾಕ್ಕೈ ಗುಂಪಿಗೆ ಸೇರಿದ ರೋಗಾಣುಗಳು ಕಿವಿ, ಗಂಟಲುಮೂಳೆ ಅಥವಾ ದೇಹದ ಇನ್ನಿತರ ಭಾಗಗಳಲ್ಲಿ ಸೋಂಕಿರುವಾಗ ಅದು ಕೀಲುಗಳನ್ನೂ ವ್ಯಾಪಿಸಿ ಕೀಲುರಿತ ಉಂಟಾಗಬಹುದು. ಈ ರೀತಿಯ ಕೀಲುರಿತದಲ್ಲಿ ವಿಶೇಷವಾಗಿ ಹೆಚ್ಚು ಜ್ವರಬರುವುದು, ಚಳಿಯಾಗುವುದು, ಬೆವರುವುದು, ಮತ್ತು ಕೀಲಿನಲ್ಲಿ ಅತ್ಯಂತ ನೋವು ಕಾಣಿಸಿಕೊಳ್ಳುವುದು ಮತ್ತು ಊತ ಕಾಣಿಸಿಕೊಳ್ಳುವುದು ವಾಡಿಕೆ. ಆಗ ಕೀಲಿನ ಚಲನೆಗೆ ಬಹಳವಾಗಿ ಅಡ್ಡಿಯುಂಟಾಗಿಬಿಡುತ್ತದೆ. ಹೀಗಾಗಿರುವಾಗ ರಕ್ತದಲ್ಲಿರುವ ಬಿಳಿರಕ್ತಕಣಗಳು ಬಹಳವಾಗಿ ಹೆಚ್ಚಾಗಿರುತ್ತವೆ. ಕೀಲಿನೊಳಗಿನ ದ್ರವಪದಾರ್ಥ ಕ್ರಮೇಣ ಕೀವಿನಿಂದೊಡಗೂಡುವುದು. ಈ ಕೀಲುರಿತವನ್ನು ಬೇಗ ಚಿಕಿತ್ಸೆಗೆ ಒಳಪಡಿಸದಿದ್ದರೆ ಕೀಲಿನೊಳಗೆ ಸೇರಿರುವ ಕೀವು ಕೀಲಿನೊಳಗಿನ ಭಾಗಗಳನ್ನು ನಾಶಪಡಿಸಿ ಕೀಲುಗಳನ್ನು ಯಾವ ರೀತಿಯೂ ಉಪಯೋಗಕ್ಕೆ ಬಾರದಂತೆ ಮಾಡಿಬಿಡುತ್ತದೆ. ಈ ರೀತಿಯ ಕೀಲುರಿತಗಳಲ್ಲಿ ಅವಕ್ಕೆ ಕಾರಣವಾದ ರೋಗಾಣು ನಿರ್ದಿಷ್ಟವಾಗಿ ತುತ್ತಾಗುವುದರಿಂದ ಸರಿಯಾದ ಚಿಕಿತ್ಸಾ ಕ್ರಮವೆಂದರೆ ಜೀವಿರೋಧಕ ಔಷಧಿಗಳು, ವಿಶ್ರಾಂತಿ, ಶುಶ್ರೂಷೆ. ಸರಿಯಾದ ಜೀವಸತ್ವಗಳಿಂದ ಕೂಡಿದ ಆಹಾರ ಮತ್ತು ಕೀಲುಗಳಿಗೂ ಸರಿಯಾದ ಉಪಶಮನದ ಆರೈಕೆ. ಚಿಕಿತ್ಸೆ ನಿಧಾನವಾದಷ್ಟೂ ಈ ರೀತಿಯ ಕೀಲುರಿತದಿಂದ ಕೀಲುಗಳಿಗೆ ಅಪಾಯ ತಪ್ಪಿದ್ದಲ್ಲ.

3. ಕೀಲಿನ ಭಾಗಗಳು ನಶಿಸಿಹೋಗಿ ಉಂಟಾಗುವ ಕೀಲುರಿತ: ಇದು ಸಾಮಾನ್ಯವಾಗಿ ಇಳಿವಯಸ್ಸಿನಲ್ಲಿ ಕಾಣಿಸಿಕೊಳ್ಳುವುದೇ ಹೆಚ್ಚು. ಇದಕ್ಕೆ ಕಾರಣಗಳೂ ಅನೇಕ. ಹುಟ್ಟಿದಂದಿನಿಂದಲೇ ಕೀಲಿನಲ್ಲಿರುವ ಕೆಲವು ದೋಷಗಳು, ಚಯಾಪಚಯದಲ್ಲಿ ದೋಷವುಂಟಾಗುವಿಕೆ (ಉದಾ : ಯೂರಿಕ್ ಆಮ್ಲ ಎನ್ನುವ ರಾಸಾಯನಿಕ ವಸ್ತು ದೇಹದಲ್ಲಿ ಜಾಸ್ತಿ ಸೇರಿದಾಗ ಗೌಟ್ ಎನ್ನುವ ಕೀಲುರಿತ ಉಂಟಾಗುತ್ತದೆ), ನರಗಳ ದುರ್ಬಲತೆ, ಯಾವುದಾದರೂ ದೀರ್ಘಾವಧಿಯ ಖಾಯಿಲೆಯಿಂದ ಉಂಟಾದ ವಿಷವಸ್ತುಗಳು ಅಥವಾ ವಂಶಪಾರಂಪರ್ಯವಾಗಿ ಬಂದಿರುವ ಕಾರಣಗಳೂ ಇರಬಹುದು. ಈ ತರಹದ ಕೀಲುರಿತ ಸಾಮಾನ್ಯವಾಗಿ ಯಾರು ಹೆಚ್ಚು ದೇಹಶ್ರಮ ಪಟ್ಟಿರುತ್ತಾರೋ ಅವರ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು. ಈ ನೋವಿನಿಂದಾಗಿ ಮನುಷ್ಯನ ಉದ್ಯೋಗಕ್ಕೆ ಅನುಸಾರವಾಗಿ ಯಾವ ಕೀಲುಗಳು ಅವನ ಉದ್ಯೋಗದಲ್ಲಿ ಹೆಚ್ಚು ಶ್ರಮವಹಿಸುತ್ತವೆಯೋ ಆ ಕೀಲುಗಳಲ್ಲಿ ಕೀಲುರಿತ ಉಂಟಾಗುತ್ತದೆ. ಇದರಿಂದ ಮಾಂಸಖಂಡಗಳಲ್ಲಿ ಶಕ್ತಿ ಕುಗ್ಗಿ ಆಯಾ ಕೀಲುಗಳ ಚಲನೆ ಸಮರ್ಪಕವಾಗಿ ನಡೆಯದೇ ಹೋಗಬಹುದು. ಅಥವಾ ಮಾಂಸಖಂಡಗಳು ಸಂಕುಚಿತಗೊಂಡು, ಕೀಲಿನ ಚಲನೆಯಾದಾಗ ನೋವುಂಟಾಗಿ, ಅದರ ಚಲನೆಯೇ ಕಡಿಮೆಯಾಗಿಬಿಡಬಹುದು.

ಈ ತರಹದ ಕೀಲುರಿತದಲ್ಲಿ ಕೀಲಿನೊಳಗಿನ ದ್ರವ ಹೆಚ್ಚಾಗುವುದಿಲ್ಲ. ಕೆಲವು ಸಲ ಕೀಲುಗಳಲ್ಲಿ ಯಾವ ತೊಂದರೆಯೂ ಗೊತ್ತಾಗದು. ಕೇವಲ ಎಕ್ಸ್‌ಕಿರಣಗಳ ಸಹಾಯದಿಂದ ದೇಹವನ್ನು ಪರೀಕ್ಷೆ ಮಾಡುತ್ತಿರುವಾಗ ಕೀಲುರಿತದ ಲಕ್ಷಣಗಳು ಕೆಲವು ಕೀಲುಗಳಲ್ಲಿ ಕಂಡುಬರಬಹುದು. ಈ ತರಹ ಲಕ್ಷಣ ಕಾಣಿಸುವುದು ಬೆನ್ನು ಮೂಳೆಯ ಕೀಲುಗಳಲ್ಲಿ ಸರ್ವೇ ಸಾಮಾನ್ಯ. ಈ ಕೀಲುರಿತದಲ್ಲಿ ಮೂಳೆಗಳು ಒಂದಕ್ಕೊಂದು ಕೂಡಿಕೊಳ್ಳುವುದಿಲ್ಲ. ತಿರುಗುವ ಮೃದ್ವಸ್ಥಿಯ ನುಣುಪಾದ ಭಾಗ ಮಾತ್ರ ಹಾಳಾಗಿಹೋಗಿ ಕೀಲುಗಳು ಸರಾಗವಾಗಿ ಚಲಿಸದಂತಾಗಿಬಿಡುತ್ತದೆ.

ಮನುಷ್ಯ ಉಳಿದೆಲ್ಲ ರೀತಿಯಲ್ಲಿ ಆರೋಗ್ಯವಂತನಾಗಿಯೇ ಕಾಣುತ್ತಿದ್ದರೂ ಕೀಲಿನಲ್ಲಿ ಸ್ವಲ್ಪ ನೋವು ಕಾಣಿಸಿಕೊಳ್ಳುವುದು, ಕೀಲಿಗೆ ಹೊಂದಿಕೊಂಡಿರುವ ಮಾಂಸಖಂಡಗಳಲ್ಲಿ ಸೆಳೆತ ಇವೇ ಮೊದಲಾದ ಲಕ್ಷಣಗಳು ಕೀಲುರಿತದಲ್ಲಿ ಸಾಮಾನ್ಯವಾದುದು. ಇದರಲ್ಲಿ ಯಾವ ನಿರ್ದಿಷ್ಟವಾದ ರೋಗದ ಸೋಂಕೂ ಗೊತ್ತಾಗುವುದಿಲ್ಲ. ನೋವನ್ನು ಶಮನಮಾಡುವ ಔಷಧಗಳಿಂದ ತಾತ್ಕಾಲಿಕ ಪ್ರಯೋಜನ ಪಡೆಯಬಹುದು. ಕೀಲುರಿತ ಕಾಣಿಸಿಕೊಂಡ ಮೇಲೆ ಚಲನೆ ಕಡಿಮೆಯಾದಷ್ಟೂ ರೋಗ ಮುಂದುವರಿಯಲು ಸಹಾಯವಾಗಿಬಿಡುವುದರಿಂದ ಈ ಕೀಲುರಿತ ಕಾಣಿಸಿಕೊಂಡವರು ನಿಗದಿಯಾದ ಕೆಲವು ವ್ಯಾಯಾಮ ಮಾಡುವುದು ಸೂಕ್ತ. ಮುಂಗಾಲಿನ ಟಿಬಿಯಾ ಎಲುವಿನ ಮೇಲ್ಭಾಗ ಕೊಯ್ದು ಕೀಲಿನ ಅಸಮತೆ ನೀಗುವ ಶಸ್ತ್ರಕ್ರಿಯೆ ಮಧ್ಯವಯಸ್ಸಿನವರಲ್ಲಿ ಉತ್ತಮ ಫಲಿತಾಂಶ ನೀಡುತ್ತದೆ. ಮುಪ್ಪಿನವರಲ್ಲಿ ಮಂಡಿಕೀಲಿನೆಲುವು ಕೊಯ್ದೆಗೆದು ಅದರ ಸ್ಥಳದಲ್ಲಿ ಕೃತಕ ಕೀಲನ್ನು (ಸ್ಟೇನ್‌ಲೆಸ್ ಸ್ಟೀಲ್ ಮತ್ತು ಒತ್ತಡತಾಳುವ ಮೆತ್ತನೆಯ ವಿಶಿಷ್ಟ ಪಾಲಿಎಥಿಲಿನ್), ಜೋಡಿಸುವ ಶಸ್ತ್ರಕ್ರಿಯೆ ರೋಗಿಗೆ ನೋವಿನಿಂದ ಮುಕ್ತಿ ನೀಡುತ್ತದೆ.

4. ಏಡಿಗಂತಿಯಿಂದ ಮತ್ತು ಇತರ ನಿರ್ದಿಷ್ಟವಲ್ಲದ ಕಾರಣಗಳಿಂದುಂಟಾದ ಕೀಲುರಿತ: ಏಡಿಗಂತಿಯೇ ನೇರವಾಗಿ ಯಾವುದಾದರೂ ಕೀಲನ್ನು ವ್ಯಾಪಿಸಬಹುದು. ಅಥವಾ ದೇಹದ ಬೇರೆ ಭಾಗದಲ್ಲಿ ಈ ಸೋಂಕು ಕಾಣಿಸಿಕೊಂಡು ಅನಂತರ ಬೇರೆ ಯಾವ ಕೀಲನ್ನು ಬೇಕಾದರೂ ವ್ಯಾಪಿಸಬಹುದು. ಚಯಾಪಚಯದಲ್ಲಿ ದೋಷವುಂಟಾಗಿ ಬರುವ ಕೀಲುರಿತದಲ್ಲಿ ಗೌಟ್ ಅನ್ನುವುದು ಮುಖ್ಯವಾದುದು. ಇದು ನ್ಯೂಕ್ಲಿಯೋ ಪ್ರೋಟೀನ್‌ನಲ್ಲಿರುವ ಪ್ಯೂರೀನ್ ಎಂಬ ಜೀವರಸಾಯನ ವಸ್ತುವಿನ ಚಯಾಪಚಯ ಸರಿಯಾಗಿ ನಡೆಯದೇ ಹೋದಾಗ ಯೂರಿಕ್ ಆಮ್ಲ ಅನ್ನುವ ಅಂಶ ರಕ್ತದಲ್ಲಿ ಹೆಚ್ಚಾಗಿಬಿಟ್ಟು ಅದು ಕೀಲಿನೊಳಗೆಲ್ಲ ಕಟ್ಟಿಕೊಂಡು ಕೀಲಿನ ಚಲನೆಗೆ ಅಡ್ಡಿಪಡಿಸಿ ಕೀಲುರಿತ ಉಂಟಾಗುತ್ತದೆ. ಕಾಲಿನ ಹೆಬ್ಬೆರಳಿಗೆ ಹೊಂದಿಕೊಂಡಿರುವ ಕೀಲುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ಲಕ್ಷಣ ಕಾಣುವುದು ಹೆಂಗಸರಿಗಿಂತ ಗಂಡಸರಲ್ಲೇ ಹೆಚ್ಚು. ಇದು ವಂಶಪಾರಂಪರ್ಯವಾಗಿ ಬರುವ ಕಾಯಿಲೆಗಳಲ್ಲಿ ಒಂದು. ಸಾಮಾನ್ಯವಾಗಿ ಮಧ್ಯವಯಸ್ಕರಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಕೆಲವು ಔಷಧಗಳಿಂದ ಈ ಕೀಲುರಿತದ ಪರಿಣಾಮಗಳನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಿದೆ. ಏಡಿಗಂತಿಯಿಂದುಂಟಾದ ಕೀಲುರಿತ ಕೆಲವು ವೇಳೆ ಜೀವಕ್ಕೆ ಅಪಾಯ ಉಂಟುಮಾಡಿದರೆ ಇನ್ನು ಕೆಲವು ವಿಧವಾದ ಕೀಲುರಿತಗಳು ಮನುಷ್ಯನನ್ನು ಯಾವ ರೀತಿಯಲ್ಲೂ ಉಪಯೋಗವಿಲ್ಲದಂತೆ ಮಾಡಿಬಿಡುತ್ತವೆ. ಚಿಕ್ಕ ಮಕ್ಕಳಲ್ಲಿ ಮಂಡಿ ಮೊಣಕಾಲು ಮತ್ತು ಕೈಯಲ್ಲಿನ ಕೀಲುಗಳಲ್ಲಿ ಕಾಣಿಸಿಕೊಳ್ಳುವ ಕೀಲುರಿತ ಪೂರ್ಣ ಗುಣವಾದರೂ ಕೆಲವು ಕಾಲದ ಮೇಲೆ ಇದರ ಪರಿಣಾಮವಾಗಿ ಹೃದಯಕ್ಕೆ ಧಕ್ಕೆಯಾಗಬಹುದು. ಈ ತರಹದ ಕೀಲುರಿತ ಕೊಳಚೆ ಪ್ರದೇಶದಲ್ಲಿ ಬಡತನದಿಂದ ವಾಸಿಸುವ ಜನಗಳಲ್ಲೇ ಇಪ್ಪತ್ತು ಜನರಿಗೊಬ್ಬರಂತೆ ಒಂದಲ್ಲ ಒಂದು ತರಹ ಕೀಲುರಿತಕ್ಕೆ ತುತ್ತಾಗಿರುತ್ತಾರೆಂದು ತಿಳಿದುಬಂದಿದೆ. ಇದರಿಂದಾಗಿ ಮನುಷ್ಯ ಬಾಕಿ ರೀತಿಯಲ್ಲಿ ಆರೋಗ್ಯವಾಗಿ ಕಂಡುಬಂದರೂ ಕೀಲುರಿತ, ಅದರ ನೋವು. ಅದರಿಂದುಂಟಾಗುವ

ಅಡೆ ತಡೆಗಳು ಅವನ ಜೀವಿತದ ಉಪಯುಕ್ತವಾದ ಎಷ್ಟೋ ವೇಳೆಯನ್ನು ಕಸಿದುಕೊಂಡು ಬಿಡುತ್ತವೆ. (ಎಚ್.ಆರ್.ಡಿ.ಎಚ್.)

**ಕೀಲುವಾತ ಜ್ವರ :** ಪಟ್ಟಣಗಳಲ್ಲಿ ವಾಸಿಸುವ ಕಡಿಮೆ ಆದಾಯ ಬರುವ ಬಡವರಲ್ಲಿಯೂ ಜನಸಂದಣಿ ಹೆಚ್ಚಾಗಿರುವ, ಅನಾರೋಗ್ಯಕರವಾದ ವಾತಾವರಣದಲ್ಲಿ, ಜೌಗು ಪ್ರದೇಶದ ಗುಡಿಸಲುಗಳಲ್ಲಿ ವಾಸಿಸುವ ಜನಗಳಲ್ಲಿಯೂ ಹೆಚ್ಚಾಗಿ ಕಾಣಿಸಿಕೊಳ್ಳುವ ವ್ಯಾಧಿ. ಒಂದೇ ಮನೆಗೆ ಸೇರಿದ ಮಕ್ಕಳು ಒಂದೇ ವಿಧವಾದ ಸನ್ನಿವೇಶಕ್ಕೆ ಸಿಲುಕುವುದರಿಂದ ಆ ಎಲ್ಲ ಮಕ್ಕಳಿಗೂ ಈ ಕಾಯಿಲೆ ಬರುವ ಅವಕಾಶಗಳು ಹೆಚ್ಚು. ಇದು ಸಾಮಾನ್ಯವಾಗಿ ಶರತ್ಕಾಲ ಮತ್ತು ವಸಂತಕಾಲಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸಮಶೀತೋಷ್ಣವಲಯದಲ್ಲಿ ಇದರ ವ್ಯಾಪ್ತಿ ಹೆಚ್ಚು. ಉಷ್ಣವಲಯದಲ್ಲಿ ಬಲು ಕಡಿಮೆ. ಇದು ವಂಶಪಾರಂಪರ್ಯವಾಗಿ ಬರುವ ಕಾಯಿಲೆಯಲ್ಲ. ಸಾಮಾನ್ಯವಾಗಿ ಹೆಂಗಸರಿಗಿಂತ ಗಂಡಸರಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. 5–15 ವರ್ಷದ ವಯಸ್ಸಿನವರಿಗೆ ಬರುವುದು ಹೆಚ್ಚು. 50 ವರ್ಷಕ್ಕಿಂತ ಕಡಿಮೆಯಿರುವವರಿಗೆ ಬರುವ ಹೃದಯದ ರೋಗಗಳಿಗೆ ಕೀಲುವಾತ ಜ್ವರ ಅತ್ಯಂತ ಸಾಮಾನ್ಯವಾದ ಕಾರಣ, ಈ ರೋಗ ಬರುವುದಕ್ಕೆ ಒಂದರಿಂದ ನಾಲ್ಕು ವಾರ ಮುಂಚೆ ಎ ಗುಂಪಿನ ಹೀಮೋಲೈಟಿಕ್ ಸ್ಟ್ರೆಪ್ಟೋಕಾಕ್ಕೈ ರೋಗಾಣುವಿನಿಂದ ಸೋಂಕು ತಗುಲಿರುತ್ತದೆ. ಗಂಟಲು ನೋವು, ಮೂಗಿನ ಸೋಂಕು, ಕಿವಿ ಸೋರುವುದು ಇಲ್ಲವೇ ಉಸಿರಾಟದ ಮೇಲು ಸೋಂಕು ತಗುಲಿರಬಹುದು. ಗರ್ಭಿಣಿಯರಿಗೆ ಈ ಕಾಯಿಲೆ ಬರದಿದ್ದರೂ ಇದು ಬಂದವರು ಗರ್ಭಿಣಿಯರಾಗಬಹುದು.

ಕೀಲುವಾತ ಜ್ವರ ನಿಧಾನವಾಗಿ ಉಲ್ಬಣಿಸುವ ಒಂದು ರೋಗ. ಇದು ಮಧ್ಯದಲ್ಲಿ ಹಾಗೆಯೇ ಅಳಿಸಿಹೋಗಬಹುದು, ಇಲ್ಲವೆ ಹೆಚ್ಚಾಗಬಹುದು. ಅಪೂರ್ವವಾಗಿ ಇದು ತೀವ್ರವಾಗಿರುತ್ತದೆ. ಈ ಕಾಯಿಲೆ ಬಲಿಯುತ್ತಿದ್ದಂತೆ ಹೃದಯದ ಕವಾಟಗಳಿಗೆ, ಹೃದಯಕ್ಕೆ ತೊಂದರೆಯುಂಟಾಗುತ್ತದೆ.

ಅತಿ ಹೃತ್ತಿಯಾವೇಗ ನಿದ್ರೆಯಲ್ಲಿಯೂ ಇರುತ್ತದೆ. ಜ್ವರ, ವಿಪರೀತ ಮೈ ಬೆವರುವಿಕೆ, ತಲೆನೋವು, ಆಲಸ್ಯ, ಹಸಿವಾಗದಿರುವಿಕೆ, ವಾಕರಿಕೆ ಮತ್ತು ಸುಸ್ತುಗಳಿರುತ್ತವೆ.

ಕೆಲವರಿಗೆ ಆಗಾಗ್ಗೆ ಮೂಗಿನಿಂದ ರಕ್ತ ಸುರಿಯುತ್ತಿರುತ್ತದೆ. ಕೀಲುಗಳಲ್ಲಿ ನೋವು ಹೆಚ್ಚುತ್ತಿರುತ್ತದೆ. ಇದ್ದಕ್ಕಿದ್ದಂತೆಯೇ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳಬಹುದು–ಕೀಲುಗಳು ಊದಿಕೊಳ್ಳುತ್ತವೆ, ಬಿಗಿತುಕೊಳ್ಳುತ್ತವೆ, ಮುಟ್ಟಿದರೆ ನೋಯುತ್ತವೆ. ಮಂಡಿ, ಕಾಲಿನ ಹರಡು, ಭುಜದ ಕೀಲು, ಮಣಿಕಟ್ಟು ಮತ್ತು ಮೊಣಕೈ ಕೀಲುಗಳು ಹೆಚ್ಚಿನ ತೊಂದರೆಗೆ ಸಿಲುಕುತ್ತವೆ. ಎರಡು ಕಡೆಯೂ ಏಕರೀತಿಯಲ್ಲಿರುವುದಿಲ್ಲ. ಈ ಕೀಲುಗಳ ಉರಿಯೂತ ಒಂದು ಕೀಲಿನಿಂದ ಇನ್ನೊಂದು ಕೀಲಿಗೆ ಹರಿಯುತ್ತಿರುತ್ತದೆ. ಮುಂದಿನ ಕೀಲಿನ ನೋವು ಹೆಚ್ಚಾಗುತ್ತಿದ್ದಂತೆ ಹಿಂದೆ ಆಗಿದ್ದ ಕೀಲಿನ ನೋವು ಉತ್ತಮವಾಗುತ್ತಿರುತ್ತದೆ. ಈ ಕೀಲುಗಳ ಉರಿಯೂತ ಒಂದರಿಂದ ಐದು ವಾರಗಳವರೆಗಿರುತ್ತದೆ. ಅನಂತರ ಯಾವ ಅಂಗವಿಕಲತೆಯೂ ಇಲ್ಲದೆ ಕೀಲುಗಳು ವಾಸಿಯಾಗುತ್ತವೆ. ಕೀಲಿನ ನೋವು ಮತ್ತು ಉರಿಯೂತಗಳನ್ನು ಮಕ್ಕಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಕೀಲು ಮೊದಲು ಬಿಸಿಯಾಗುತ್ತದೆ, ಕೆಂಪಾಗುತ್ತದೆ, ಊದಿಕೊಳ್ಳುತ್ತದೆ, ನೋಯುತ್ತಿರುತ್ತದೆ. ಮುಟ್ಟಿದರೆ ನೋವು ಹೆಚ್ಚಾಗುತ್ತದೆ. ಜ್ವರ ಬರುತ್ತದೆ. ದೊಡ್ಡವರಲ್ಲಿ ಒಂದೇ ಕೀಲು ಇಲ್ಲವೇ ಸಣ್ಣ ಕೀಲುಗಳಿಗೆ ತೊಂದರೆಯಾಗಬಹುದು.

ಕಾಯಿಲೆ ತೀವ್ರವಾಗಿರುವಾಗ ಇದು ಹೃದಯಾವರಣ, ಶ್ವಾಸಕೋಶಾವರಣ, ಹೃದಯ ಮತ್ತು ಶ್ವಾಸಕೋಶಗಳಿಗೆ ತಗಲುತ್ತದೆ. ಸೈನೋವಿಯಲ್ ಕೀಲುಗಳನ್ನು ತೊಂದರೆಗೀಡುಮಾಡುತ್ತದೆ. ಈ ರೋಗ ಕೀಲುಗಳನ್ನು ನೆಕ್ಕಿ ಹೃದಯವನ್ನು ಕಡಿಯುತ್ತದೆ. ಶೇ.75–80 ಭಾಗದ ರೋಗಿಗಳಲ್ಲಿ ಮೈಟ್ರಲ್ ಕವಾಟ ತೊಂದರೆಗೀಡಾಗುತ್ತದೆ, ಶೇ.30 ಭಾಗ ಅಯೋರ್ಟಾ ಕವಾಟ, ಶೇ.5ಕ್ಕಿಂತ ಕಡಿಮೆ ಟ್ರೈಕಸ್‌ಪಿಡ್ ಮತ್ತು ಪಲ್ಮನರಿ ಕವಾಟಗಳು ತೊಂದರೆಗೀಡಾಗುತ್ತವೆ, ವಿಚಿತ್ರಗೊಂಡಿರುತ್ತವೆ. ಈ ಕಾಯಿಲೆಗಳಲ್ಲಿ ಮುಖ್ಯವಾಗಿ ಹೃದಯದ ಉರಿಯೂತ, ಹೃದಯಾವರಣದ ಉರಿಯೂತ, ಹೃದಯ ದೊಡ್ಡದಾಗುವಿಕೆ, ಹೃದಯದ ವೈಫಲ್ಯಗಳನ್ನು ಕಾಣುತ್ತೇವೆ. ಅಯೋರ್ಟ ಮತ್ತು ಮೈಟ್ರಲ್ ಕವಾಟಗಳು ವಿರೂಪಗೊಳ್ಳುವುದರಿಂದ ಮರ್ಮರ ಧ್ವನಿಗಳು ಕೇಳಿಬರುತ್ತವೆ. ಹೃದಯದ ಬಡಿತದ ನಾದದಲ್ಲಿ ವ್ಯತ್ಯಾಸವಿರುತ್ತದೆ. ಹೃದಯದ ಬಡಿತದಲ್ಲಿಯೇ ವ್ಯತ್ಯಾಸ ಕಾಣಬಹುದು. ಹೃದಯಕ್ಕೆ ಬಲು ತೊಂದರೆಯುಂಟಾಗಿ ರೋಗಿ ನರಳುತ್ತಾನೆ. ರೋಗಿ ಗತಿಸಲೂಬಹುದು. ಶಸ್ತ್ರಚಿಕಿತ್ಸೆಗೆ ಒಗ್ಗದ ರೋಗಿಗಳು ಚಿಕ್ಕ ವಯಸ್ಸಿನಲ್ಲಿಯೇ ಹೃದಯದ ವೈಫಲ್ಯನಿಂದ ಮತ್ತು ರೋಗಾಣುಗಳ ಸೋಂಕಿನಿಂದ ಗತಿಸುತ್ತಾರೆ.

ಚರ್ಮದಲ್ಲಿ ಕೆಲವು ವೇಳೆ ಗಂಟುಗಳು ಕಾಣಿಸಿಕೊಳ್ಳುತ್ತವೆ. ಮಧ್ಯದಲ್ಲಿ ಏನೂ ಇರದೆ ಉಂಗುರದಂತೆ ಅಂಚಿನಲ್ಲಿ ಕೆಂಪಾಗಿರುತ್ತವೆ. ಇವು ಒಂದನ್ನೊಂದು ಸೇರಿಕೊಂಡಿರಬಹುದು, ಉಬ್ಬಿಕೊಂಡಿರಬಹುದು. ಇವು ಕೆಲವು ಕಾಲದ ಅನಂತರ ಅಳಿಸಿಹೋಗಬಹುದು. ಇಲ್ಲವೇ ಬಹಳ ದಿವಸಗಳವರೆಗೆ ಉಳಿಯಬಹುದು. ಕೆಲವರಿಗೆ ಚರ್ಮದ ಕೆಳಗಡೆ ಸಣ್ಣ ಸಣ್ಣ ಗಂಟುಗಳಾಗಿರುತ್ತವೆ. ಇವನ್ನು ಸಾಮಾನ್ಯವಾಗಿ ಮಕ್ಕಳಲ್ಲಿ ಕಾಣುತ್ತೇವೆ. ಕೆಲವರಲ್ಲಿ ಕಡಿಮೆಯಾಗಿಯೂ, ಮತ್ತು ಕೆಲವರಲ್ಲಿ ಹೆಚ್ಚಾಗಿಯೂ ಇರುತ್ತವೆ. ಇವು ಗಟ್ಟಿಯಾಗಿಯೂ ಗಡುಸಾಗಿಯೂ ನೋವಿಲ್ಲದೆಯೂ ಇರುತ್ತವೆ. ಇವು ಅಂಗಾಂಶ ಕೋಶ, ಸ್ನಾಯುರಜ್ಜು, ಕೋಶಗಳಿಗೆ ಹೊಂದಿಕೊಂಡು ಮೂಳೆಗಳು ಎಲ್ಲಿ ಹೆಚ್ಚಾಗಿ ಮೈದೋರುತ್ತವೆಯೋ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಮೊಳಕೈ, ಹಿಂಗೈ, ಕಾಲ್ಗಿಣ್ಣು, ಬೆನ್ನುಮೂಳೆ, ತಲೆಬುರುಡೆಯ ಹಿಂಬದಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇವು ಕಾಣಿಸಿಕೊಂಡು ಅಳಿಸಿಹೋಗಬಹುದು, ಇಲ್ಲವೇ ಆಗಾಗ್ಗೆ ಕಾಣಿಸಿಕೊಳ್ಳಬಹುದು.

ಕಂಪವಾತ ಇದ್ದಕ್ಕಿದ್ದಂತೆಯೇ ಕಾಣಿಸಿಕೊಳ್ಳಬಹುದು. ಈ ರೋಗ ಬಂದವರಲ್ಲಿ ಶೇ. 50ರಷ್ಟು ಜನರಿಗೆ ಕೀಲುವಾತ ಜ್ವರದ ಇತರ ಲಕ್ಷಣಗಳಿರುತ್ತವೆ. ಹುಡುಗಿಯರಿಗೆ ಹೆಚ್ಚಾಗಿ ಈ ರೋಗ ತಗಲುತ್ತದೆ. ಬುದ್ಧಿವಂತ ಮಕ್ಕಳಲ್ಲಿ ಈ ರೋಗವನ್ನು ಹೆಚ್ಚಾಗಿ ಕಾಣಬಹುದು. ನಿದ್ರೆ ಮಾಡುವಾಗ ಅನೈಚ್ಛಿಕ ಚಲನೆ ನಿಂತು ಹೋಗುತ್ತದೆ. ದೊಡ್ಡವರಲ್ಲಿ ಈ ರೋಗ ಸಾಮಾನ್ಯವಾಗಿ ಕಾಣುವುದಿಲ್ಲ, ನಾಲಗೆ, ಕೈ, ತೋಳುಗಳು, ಬೆರಳುಗಳು, ಕಾಲುಗಳು ಅನೈಚ್ಛಿಕವಾಗಿ ಚಲಿಸುತ್ತಿರುತ್ತವೆ. ಈ ರೀತಿಯ ಅನೈಚ್ಛಿಕ ಚಲನೆಯುಂಟಾದವರಲ್ಲಿ ಕೀಲುಗಳ ಉರಿಯೂತವಿಲ್ಲದೆ ಇರಬಹುದು.

ಈ ರೋಗಿಗಳಲ್ಲಿ ಬಿಳಿರಕ್ತ ಕಣಗಳು ಹೆಚ್ಚಾಗುತ್ತವೆ. ರಕ್ತ ಶೀಘ್ರವಾಗಿಯೂ ವೇಗವಾಗಿಯೂ ಮಡ್ಡಿಗಟ್ಟುತ್ತದೆ. ರಕ್ತಹೀನತೆಯುಂಟಾಗುತ್ತದೆ. ರಕ್ತದಲ್ಲಿ ಅನೇಕ ಬದಲಾವಣೆಗಳುಂಟಾಗುತ್ತವೆ. ಮೂತ್ರದಲ್ಲಿ ಆಲ್ಬ್ಯುಮಿನ್ ಮತ್ತು ರಕ್ತ ಕಣಗಳು ಹೋಗಬಹುದು. ಶೇ.5 ರೋಗಿಗಳಲ್ಲಿ ಗಂಟಲಿನಿಂದ ತೆಗೆದು ವಸ್ತುವಿನಿಂದ ಬೀರಿ ಹೀಮೋಲೈಟಿಕ್ ಸ್ಟ್ರೆಪ್ರೋಕಾಕ್ಕೈಗಳನ್ನು ಬೆಳೆಸಿ ಬೇರ್ಪಡಿಸಬಹುದು.

**ದುಷ್ಪರಿಣಾಮಗಳು :** ಹೃದಯ ದುರ್ಬಲಗೊಳ್ಳುವುದು, ಹೃದಯದ ವೈಫಲ್ಯ, ಹೃದಯ ನಿಯಮವಿಲ್ಲದೆ ಬಡಿಯುವುದು, ಹೃದಯಾವರಣದ ಉರಿಯೂತ, ಹೃದಯಾವರಣದೊಳಗೆ ನೀರು ಸೇರುವುದು, ಶ್ವಾಸಕೋಶಗಳ ಉರಿಯೂತ, ರಕ್ತದ ಗಡ್ಡೆಗಳು ಶ್ವಾಸಕೋಶವನ್ನು ಸೇರುವುದು, ಮಿದುಳಿಗೆ ರಕ್ತದ ಗಡ್ಡೆಗಳು ಹೋಗಿ ರೋಗಿಗೆ ಲಕ್ವ ಹೊಡೆಯುವುದು, ಶ್ವಾಸಕೋಶಗಳಲ್ಲಿ ನೀರು ತುಂಬುವುದು ಇತ್ಯಾದಿಗಳನ್ನು ಈ ರೋಗಿಗಳಲ್ಲಿ ಕಾಣಬಹುದು. ಪುನಃ ಕಾಯಿಲೆ ಬರುವುದನ್ನು ತಡೆಗಟ್ಟದೆ ಹೋದರೆ ಪ್ರತಿಸಾರಿಯೂ ಹೃದಯಕ್ಕೆ ಗಾಸಿ ಹೆಚ್ಚಾಗುವುದು. (ಎ.ಎನ್.ಎ.)

**ಕೀಲ್‌ಹಾರ್ನ್, ಫ್ರಾಂಜ್ :** 1840–1908. ಕನ್ನಡ ನಾಡಿನ ಪ್ರಾಚೀನ ಶಾಸನಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ಪರಿಷ್ಕರಿಸಿ ವಿದ್ವತ್ಪೂರ್ಣ ಉಪೋದ್ಘಾತ ಟಿಪ್ಪಣಿಗಳೊಂದಿಗೆ ಪ್ರಕಟಿಸಿದ ವಿದ್ವಾಂಸ. ಪಶ್ಚಿಮ ಜರ್ಮನಿಯ ಆಸ್ನಬ್ರೂಕ್‌ನಲ್ಲಿ ಹುಟ್ಟಿದ.

ಈತ ಜರ್ಮನಿಯ ಗೊಟ್ಟಿಂಜೆನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದು ಇಂಗ್ಲೆಂಡಿನಲ್ಲಿದ್ದು ಅಲ್ಲಿಂದ ಭಾರತಕ್ಕೆ ಬಂದು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪೌರತ್ಯ ಭಾಷೆಗಳ ಪ್ರಾಧ್ಯಾಪಕನಾದ. 1861ರಲ್ಲಿ ಡಾಕ್ಟೊರೇಟ್ ಪದವಿ ಪಡೆದಾಗ ಈತನಿಗೆ ಕೇವಲ 21 ವರ್ಷ. ಈತ ಜರ್ಮನಿಯಲ್ಲಿದ್ದಾಗ ಮ್ಯಾಕ್ಸ್‌ಮುಲ್ಲರ್ ಸಾಯಣರ ಟೀಕೆಯೊಂದಿಗೆ ಋಗ್ವೇದವನ್ನು ಸಂಪಾದಿಸುತ್ತಿದ್ದ. ಆತನಿಗೂ ಸಂಸ್ಕೃತ–ಇಂಗ್ಲಿಷ್ ಶಬ್ದಕೋಶದ ರಚನಾಕಾರ್ಯದಲ್ಲಿ ತೊಡಗಿದ ಮಾನಿಯರ್ ವಿಲಿಯಮ್ಸರಿಗೂ ಈತ ನೆರವಾದ (1862–65), ಒಳ್ಳೆಯ ಮೇಧಾವಿ, ಸಂಸ್ಕೃತ ಪಂಡಿತ, ನುರಿತ ಸಂಶೋಧನಕನಾದ ಈತ ಪುಣೆಯ ಪೇಷ್ವೆಯವರ ಸಂಸ್ಕೃತ ಹಸ್ತಲಿಖಿತ ಭಾಂಡಾಗಾರದ ಮೂಲಕ ಸಂಸ್ಕೃತ, ಪ್ರಾಕೃತ ಮತ್ತು ಪಾಲಿ ಭಾಷೆಗಳಲ್ಲಿ ಸಂಶೋಧನೆಗಳನ್ನು ನಡೆಸಿದ. ವ್ಯಾಕರಣದಲ್ಲಿ ಈತನಿಗೆ ಉತ್ಕಟ ಅಭಿರುಚಿ, ಭಾರತೀಯ ಪಂಡಿತರಿಂದ ಸಂಸ್ಕೃತ ವ್ಯಾಕರಣದ ಜಾಡನ್ನು ತಿಳಿದ ಈತ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಒಂದು ಸಂಸ್ಕೃತ ವ್ಯಾಕರಣವನ್ನೂ ಪರದೇಶದ ಸಂಸ್ಕೃತಾಭ್ಯಾಸಿಗಳಿಗೆ ಉಪಯೋಗವಾಗುವಂತೆ ಪಾಣಿನೀಸೂತ್ರ, ಕಾತ್ಯಾಯನವೃತ್ತಿ, ಪತಂಜಲಿ ಮಾಹಾಭಾಷ್ಯ, ಭಟ್ಟೋಜಿ ದೀಕ್ಷಿತರ ಕೌಮುದಿ ಗ್ರಂಥಗಳ ಆಧಾರಗಳನ್ನು ಕೊಟ್ಟು ಶಾಸ್ತ್ರಬದ್ಧವಾದ ರೀತಿಯಲ್ಲಿ ಇಂಗ್ಲಿಷಿನಲ್ಲಿ ಬೇರೊಂದು ವ್ಯಾಕರಣ ಗ್ರಂಥ–ಇಷ್ಟನ್ನೂ ಬರೆದ. ಪತಂಜಲಿಯ ಮಹಾಭಾಷ್ಯವನ್ನು ಅನೇಕ ಹಸ್ತಪ್ರತಿಗಳ ಆಧಾರದಿಂದ ಪರಿಷ್ಕರಿಸಿ ಪ್ರಕಟಿಸಿದ. ಈತನ ಮತ್ತೊಂದು ಉದ್ಗ್ರಂಥವೆಂದರೆ ನಾಗೋಜಿ ಭಟ್ಟನ ಪರಿಭಾಷೇಂದು ಶೇಖರದ ಮೇಲೆ ರಚಿಸಿದ ಕೃತಿ. ಮೊದಲಿಗೆ ಬ್ಯೂಲರ್ ಸಂಪಾದಕನಾಗಿದ್ದು ಮೃತನಾದ ಅನಂತರ ಈತ ಇಂಡೊ–ಆರ್ಯನ್ ಸಂಶೋಧನೆಯ ವಿಶ್ವಕೋಶಕ್ಕೆ ಸಂಪಾದಕನೂ ಆಗಿದ್ದ.

1886ರ ಅನಂತರ ಈತನ ದೃಷ್ಟಿ ಶಾಸನ ಸಂಶೋಧನೆಯ ಕಡೆಗೆ ತಿರುಗಿತು. ಶಾಸನಗಳ ಸಂಶೋಧನೆ ಪ್ರಕಾಶನಗಳಲ್ಲಿ ಬ್ಯೂಲರ್ ಮತ್ತು ಬಸಿರಲ್‌ರ ತರುವಾಯದಲ್ಲಿ ಫ್ಲೀಟ್, ಹುಲ್ಷ್ ಮತ್ತು ಕೀಲ್‌ಹಾರ್ನ್‌ರು ವಿಖ್ಯಾತಪಂಡಿತರೆಂದು ಹೆಸರಾದವರು. ಪ್ರಸಿದ್ಧವಾದ ಐಹೊಳೆಯ 2ನೆಯ ಪುಲಕೇಶಿಯ ದಿಗ್ವಿಜಯ ಪ್ರಶಸ್ತಿ ಶಾಸನ, ಕಾಕುತ್ಸ್ಥವರ್ಮನ ಶಾಸನಗಳನ್ನು ಕುರಿತ ಬರೆಹ, ಶಾಸನಗಳಲ್ಲಿ ಬರುವ ತಿಥಿಗಳ ವಿಮರ್ಶಾತ್ಮಕ ಲೇಖನಗಳು,

ಔತ್ತರೇಯ ಮತ್ತು ದಾಕ್ಷಿಣಾತ್ಯ ರಾಜಮನೆತನಗಳ ಕಾಲಾನುಗುಣ ಶಾಸನಗಳ ಯಾದಿಗಳು ಇತರ ಸಂಶೋಧಕರಿಗೆ ಮಾರ್ಗದರ್ಶಕಗಳಾಗಿವೆ. ಎಪಿಗ್ರಾಫಿಯ ಇಂಡಿಕ, ಇಂಡಿಯನ್ ಆಂಟಿಕ್ವೆರಿ ಮೊದಲಾದ ಸಂಶೋಧನ ಪತ್ರಿಕೆಗಳಲ್ಲಿ ಬರೆದ ಈತನ ಲೇಖನಗಳು ಪ್ರಸಿದ್ಧವಾಗಿವೆ. ಎಪಿಗ್ರಾಫಿಯ ಇಂಡಿಕದಲ್ಲಿ ಈತ ಪ್ರಕಟಿಸಿದ ಭಾರತೀಯ ಶಾಸನಗಳ ಸರಣಿ ಗಮನಾರ್ಹವಾದುದು.

ಐಹೊಳೆ ಮತ್ತು ತಾಳಗುಂದ ಶಾಸನಗಳ ಪಾಂಡಿತ್ಯಪೂರ್ಣ ಉಪೋದ್ಘಾತಗಳಿಂದ ಸಂಸ್ಕೃತ ಸಾಹಿತ್ಯ, ವ್ಯಾಕರಣ ಮತ್ತು ಛಂದಃಶಾಸ್ತ್ರಗಳ ಮೇಲೆ ಈತನಿಗಿದ್ದ ಪ್ರಭುತ್ವ ವ್ಯಕ್ತವಾಗುತ್ತದೆ.

ಕೀಲ್‌ಹಾರ್ನ್‌ಗೆ ಗೌರವದ ಎಲ್‌ಎಲ್.ಡಿ. ಮತ್ತು ವಿಕ್ಟೋರಿಯ ಮಹಾರಾಣಿಯಿಂದ ಸಿ.ಐ.ಇ. ಪ್ರಶಸ್ತಿಗಳೂ ದೊರಕಿದ್ದುವು. ಸಂಸ್ಕೃತ ಮತ್ತು ಪ್ರಾಕೃತವಿಮರ್ಶನ ಕ್ಷೇತ್ರದಲ್ಲಿ ಈತನ ಹೆಸರು ಅಜರಾಮರವಾದುದು. ಕೀಲ್‌ಹಾರ್ನ್ ತನ್ನ ದೇಶಕ್ಕೆ ಮರಳಿದ ಅನಂತರವೂ ಎಪಿಗ್ರಾಫಿಯ ಇಂಡಿಕಕ್ಕೆ ಅನೇಕ ವಿಮರ್ಶಾತ್ಮಕ ಲೇಖನಗಳನ್ನು ಬರೆದ. (ಪಿ.ಬಿ.ಡಿ.; ಆರ್.ಎಸ್.ಪಿ.; ಬಿ.ಆರ್.ಎಂ.)

**ಕೀವ್ :** ಉಕ್ರೇನ್ ಗಣರಾಜ್ಯದ ರಾಜಧಾನಿ ಮತ್ತು ಆಡಳಿತ ಕೇಂದ್ರ ನಗರ. ನೀಪರ್ ನದಿಯ ದಂಡೆಯ ಮೇಲೆ, ಅದು ಡೆಸ್ನಾ ನದಿಯನ್ನು ಕೂಡುವೆಡೆಯಿಂದ ಕೆಲವು ಮೈಲಿಗಳ ಕೆಳಗೆ, ಸ್ಥಾಪಿತವಾಗಿದೆ. ನೀಪರ್ ನದಿಯಿಂದ 91 ಮೀ ಎತ್ತರದಲ್ಲಿರುವ ಕೀವ್ ನಗರದ ಅನೇಕ ಉಪನಗರಗಳು ನದಿಯ ಎದುರು ದಡದ ಮೇಲೆ ತಗ್ಗಿನಲ್ಲಿ, ಹರಡಿವೆ. ಜನಸಂಖ್ಯೆ 26,37,000 (2002).

ಇದು ಉಕ್ರೇನ್ ದೇಶದ ಅತ್ಯಂತ ಪ್ರಾಚೀನ ಮತ್ತು ಇತಿಹಾಸಪ್ರಸಿದ್ಧ ನಗರ. ಇದನ್ನು ರಷ್ಯನ್ ಪಟ್ಟಣಗಳ ಮಾತೆ ಎಂದು ಕರೆಯುತ್ತಾರೆ. ಈ ಪಟ್ಟಣ 8ನೆಯ ಶತಮಾನದಲ್ಲಿ ಕೀ ಮತ್ತು ಸಹೋದರರಿಂದ ಸ್ಥಾಪಿತವಾಯಿತೆಂಬ ಐತಿಹ್ಯವಿದೆ. 9ನೆಯ ಶತಮಾನದ ದಾಖಲೆಗಳಲ್ಲಿ ಈ ಸ್ಥಳದ ಉಲ್ಲೇಖವಿದೆ. ನೀಪರ್ ನದಿಯ ಎತ್ತರದಂಡೆ ಮತ್ತು ಸುತ್ತಮುತ್ತಣ ಜವುಗುನೆಲದಿಂದಾಗಿ ಈ ಪಟ್ಟಣಕ್ಕೆ ಸ್ವಾಭಾವಿಕ ರಕ್ಷಣೆ ಒದಗಿಬಂತು. ಕೀವ್ ಶೀಘ್ರವಾಗಿ ಬೆಳೆಯುವುದಕ್ಕೆ ಇದರ ಸನ್ನಿವೇಶ ಮುಖ್ಯ ಕಾರಣ. 9ನೆಯ ಶತಮಾನದ ಕೊನೆಯ ವೇಳೆಗೆ ಕೀವ್‌ನ ಅರಸರು ರಷ್ಯದ ಇತರ ಪ್ರದೇಶಗಳ ಮೇಲೆ ಒಡೆತನ ಸ್ಥಾಪಿಸಿದ್ದರು. ಮೊಟ್ಟಮೊದಲನೆಯ ರಷ್ಯನ್ ರಾಜ್ಯ ಜನ್ಮ ತಳೆಯಿತು. ಬಿಝಾಂಟಿಯಂನಿಂದ ಕೀಯಿಫ್ ಮೂಲಕ ಇತರ ಪ್ರದೇಶಗಳ ವರೆಗೆ ಸಾಗುತ್ತಿದ್ದ ವ್ಯಾಪಾರಮಾರ್ಗಗಳಿಂದಾಗಿ ಇದರ ಪ್ರಾಮುಖ್ಯ ಬೆಳೆಯಿತು. ಆದರೆ ಕೀವ್‌ಗೂ ಅಲೆಮಾರಿ ಯೋಧರಿಗೂ ಪದೇ ಪದೇ ಯುದ್ಧಗಳು ಜರುಗುತ್ತಲೇ ಇದ್ದುವು. 12ನೆಯ ಶತಮಾನದಲ್ಲಿ ಇದರ ಶಕ್ತಿ ಕುಂದಿತು. 1240ರಲ್ಲಿ ಟಾರ್ಟರರು ಅದನ್ನು ಧ್ವಂಸ ಮಾಡಿದರು. ಅನಂತರ ಇದು ಕ್ರಮವಾಗಿ ಲಿಥುವೇನಿಯ ಮತ್ತು ಪೋಲೆಂಡ್‌ಗಳ ಅಧೀನಕ್ಕೆ ಬಂತು. 1648ರಲ್ಲಿ ಕಾಸ್ಸಾಕರು ನಡೆಸಿದ ದಂಗೆಯಲ್ಲಿ ಕೀವ್ ಕೂಡ ಪಾತ್ರ ವಹಿಸಿತ್ತು. ರಷ್ಯ–ಪೋಲೆಂಡ್ ಯುದ್ಧದ ಅನಂತರ ಇದು ಕಾಸ್ಸಾಕರ ಸ್ವಯಮಾಡಳಿತ ಪಟ್ಟಣವಾಗಿ ರಷ್ಯನರ ಆಶ್ರಯ ಗಳಿಸಿತು. 19ನೆಯ ಶತಮಾನದಲ್ಲಿ–ರೈಲ್ವೆಗಳು ಬಂದಮೇಲೆ–ಕೀವ್‌ನ ಪ್ರಾಮುಖ್ಯ ವಿಶೇಷವಾಗಿ ಬೆಳೆಯಿತು. ಉಕ್ರೇನಿಯನ್ ಸೋವಿಯತ್ ಸಮಾಜವಾದಿ ಗಣರಾಜ್ಯದ ಸ್ಥಾಪನೆಯಾದ (1917) ಮೇಲೆ, 1934ರಲ್ಲಿ, ಅದರ ರಾಜಧಾನಿಯನ್ನು ಖಾರ್ಕಾಫಿನಿಂದ ಕೀವ್‌ಗೆ ವರ್ಗಾಯಿಸಲಾಯಿತು.

ಎರಡನೆಯ ಮಹಾಯುದ್ಧಾನಂತರ ಈ ಪಟ್ಟಣದ ಅನೇಕ ಕಟ್ಟಡಗಳು ಹೊಸದಾಗಿ ನಿರ್ಮಾಣವಾದುವು. ವೃಕ್ಷರಾಜಿತ ರಸ್ತೆಗಳು ಮತ್ತು ಉದ್ಯಾನವನಗಳು ಈ ನಗರದ ಸೌಂದರ್ಯವನ್ನು ಹೆಚ್ಚಿಸಿವೆ. ಇಲ್ಲಿ ಕೃಷಿ ಕೈಗಾರಿಕೆಗಳ ಖಾಯಂ ವಸ್ತುಪ್ರದರ್ಶನವೊಂದುಂಟು. ಸೇಂಟ್ ಸೋಫಿಯಾ ಕೆಥೆಡ್ರಲ್, ಸೇಂಟ್ ಆಂಡ್ರ್ಯೂ ಚರ್ಚ್ ಮತ್ತು ಸೇಂಟ್ ವಾಲ್ಡಿಮೀರ್ ಕೆಥೆಡ್ರಲ್–ಇವು ಇಲ್ಲಿಯ ಮುಖ್ಯವಾದ ಪ್ರಾಚೀನ ಕಟ್ಟಡಗಳಾಗಿವೆ.

ಕೀವ್ ಕೈಗಾರಿಕಾ ಕ್ಷೇತ್ರದಲ್ಲೂ ಪ್ರಸಿದ್ಧಿ ಪಡೆದಿದೆ. ಯಂತ್ರದ ಭಾಗಗಳು, ಹಡಗು, ಮೋಟಾರ್ ಸೈಕಲ್, ವಿದ್ಯುತ್ ಉಪಕರಣ ಮತ್ತು ರೇಡಿಯೋಗಳು ಇಲ್ಲಿಯ ಮುಖ್ಯ ಕೈಗಾರಿಕೋತ್ಪನ್ನಗಳು. ಬಣ್ಣಗಳು, ಅರಗು, ಔಷಧಿಗಳು, ಛಾಯಾಚಿತ್ರದ ಉಪಕರಣಗಳು, ಹತ್ತಿಬಟ್ಟೆಗಳು, ಚರ್ಮದ ಸಾಮಾನುಗಳು, ಆಹಾರ ಪದಾರ್ಥಗಳು, ಮುದ್ರಣ ಮತ್ತು ಪೀಠೋಪಕರಣಗಳು ಇತರ ಉತ್ಪನ್ನಗಳು.

ಎರಡನೆ ಮಹಾಯುದ್ಧ ಕಾಲದಲ್ಲಿ 1941–43ರಲ್ಲಿ ಜರ್ಮನರು ಕೀವ್‌ನಗರವನ್ನಾಕ್ರಮಿಸಿಕೊಂಡು ಸಾಕಷ್ಟು ಹಾಳುಗೆಡವಿದರು. ಅನಂತರ ಈ ನಗರವನ್ನು ಮತ್ತೆ ನಿರ್ಮಿಸಲಾಯಿತು. 1991ರಲ್ಲಿ ಈ ನಗರ ಸಮೀಪದ ಚರ್ನೊಬಿಲ್‌ನಲ್ಲಿ ಅಣುಸ್ಥಾವರದಲ್ಲಿ ಅವಘಡವಾಗಿ, ಇಡೀ ರಷ್ಯದೇಶವೇ ಅಣುಸ್ಥಾವರಗಳ ಬಗ್ಗೆ ಹೆಚ್ಚು ಎಚ್ಚರಿಕೆ ಕ್ರಮ ತೆಗೆದುಕೊಂಡಿತು. ಈ ವರ್ಷದಲ್ಲೆ ಉಕ್ರೇನ್ ಸ್ವತಂತ್ರ ಗಣರಾಜ್ಯವಾಯಿತು. ರಷ್ಯದ ಒಕ್ಕೂಟ ಒಡೆಯಿತು.

ಕೀವ್ ಸಂಚಾರಮಾರ್ಗಗಳ ಕೇಂದ್ರ ಮಾಸ್ಕೋ, ಖಾರ್ಕಾಫ್, ವಿನಿಟ್ಸ ಮತ್ತು ಒಡೆಸ್ಸಾಗಳಿಗೆ ರೈಲುಮಾರ್ಗಗಳುಂಟು. ನೀಪರ್ ನದಿಗೆ ಅಡ್ಡಲಾಗಿ ರೈಲು ಮತ್ತು ರಸ್ತೆ ಸೇತುವೆಗಳನ್ನು ನಿರ್ಮಿಸಲಾಗಿದೆ. ಸೋವಿಯತ್ ದೇಶ ಮತ್ತು ಪೂರ್ವ ಐರೋಪ್ಯ ಕೇಂದ್ರಗಳಿಗೆ ಇಲ್ಲಿಂದ ವಾಯುಮಾರ್ಗಗಳುಂಟು. ನೀಪರ್ ನದಿಯಲ್ಲಿ ವರ್ಷದಲ್ಲಿ 9 ತಿಂಗಳ ಕಾಲ ನೌಕಾಯಾನ ಮಾಡಬಹುದು.

ಕೀವ್ ಉಕ್ರೇನಿನ ಮುಖ್ಯ ಸಾಂಸ್ಕೃತಿಕ ಕೇಂದ್ರ. ಇಲ್ಲಿ ಟಿ.ಜಿ. ಷೆವ್ಚೆಂಕೋ ವಿಶ್ವವಿದ್ಯಾಲಯ ಮತ್ತು ಇನ್ನೂ ಅನೇಕ ಉನ್ನತ ವಿದ್ಯಾಸಂಸ್ಥೆಗಳಿವೆ. ಷೆವ್ಚೆಂಕೊ ನಾಟಕಶಾಲೆ ಇಲ್ಲಿಯ ಪ್ರಮುಖ ಸಾಂಸ್ಕೃತಿಕ ಆಕರ್ಷಣೆ. (ಎಂ.ಎ.ಎಚ್.)

**ಕೀವ್ ಸಮರ :** ಎರಡನೆಯ ಮಹಾಯುದ್ಧದಲ್ಲಿ ಜರ್ಮನರ ಸೈನ್ಯಕ್ಕೂ ರಷ್ಯನರ ಸೈನ್ಯಕ್ಕೂ ನಡೆದ ಕಾಳಗದಲ್ಲಿ ಒಂದು ಪ್ರಮುಖ ಘಟ್ಟ. ಮೊದಲಿಗೆ ರಷ್ಯ ಜರ್ಮನಿಗಳಲ್ಲಿ ಮೈತ್ರಿಯ ಕೌಲು ಏರ್ಪಟ್ಟಿತು. ಆದರೆ ಸ್ಟಾಲಿನ್ ಕೆಲವು ಬಾಲ್ಟಿಕ್ ಪ್ರಾಂತಗಳನ್ನು ಮತ್ತು ರೂಮೇನಿಯದ ಬೆಸ್‌ಅರೇಬಿಯವನ್ನು ಆಕ್ರಮಿಸಿದುದೂ ಅಮೆರಿಕ ಜರ್ಮನಿಯ ಶತ್ರುದೇಶಗಳಿಗೆ ಕೈಗಾರಿಕಾ ಮತ್ತು ಆರ್ಥಿಕ ಸಹಾಯವನ್ನು ನೀಡಿದುದೂ ಹಿಟ್ಲರನನ್ನು ಕೆರಳಿಸಿದವು. ಬೋಲ್ಷೆವಿಕರನ್ನು ಧ್ವಂಸಮಾಡಿ, ರಷ್ಯದ ಆಹಾರವಸ್ತುಗಳು, ಕಬ್ಬಿಣ, ಕಲ್ಲಿದ್ದಲು, ಮ್ಯಾಂಗನೀಸ್ ಮತ್ತು ಕೂಲಿ ಕೆಲಸದವರನ್ನು ಜರ್ಮನಿಗಾಗಿ ಅಪಹರಿಸುವುದು, ರಷ್ಯವನ್ನು ಶತ್ರುಗಳೊಡನೆ ಸೇರಿಕೊಳ್ಳದಂತೆ ಅಂಕೆಯಲ್ಲಿಡುವುದು ತಾನು ಲೋಕಪ್ರಭಾವವನ್ನು ಗಳಿಸುವುದು–ಇವು ಹಿಟ್ಲರನ ಬಯಕೆಗಳಾಗಿದ್ದುವು. ನೀಪರ್‌ನದಿಯ ದಂಡೆಯಲ್ಲಿ ಮಧ್ಯ ಯುರೋಪಿನ ಹೆಬ್ಬಾಗಿಲಿನಂತೆ ನಿಂತು ಕೈಗಾರಿಕೆ. ವ್ಯಾಪಾರಗಳಲ್ಲಿ ಅಗ್ರಗಣ್ಯವಾಗಿ ಸೋವಿಯತ್ ಪಟ್ಟಣಗಳ ತಾಯಿಯೆಂದು ಯಶಸ್ವಿಯಾಗಿದ್ದ ಕೀವ್‌ಪಟ್ಟಣವನ್ನೂ ಫಲವತ್ತಾದ ಉಕ್ರೇನ್ ಪ್ರಾಂತವನ್ನೂ ಕಾಕಸಸ್ ಪರ್ವತಗಳ ಎಣ್ಣೆಕ್ಷೇತ್ರಗಳನ್ನೂ ಆಕ್ರಮಿಸಲು ಹಿಟ್ಲರ್ ಹಾರೈಸುತ್ತಿದ್ದ. ರಷ್ಯ ದುರ್ಬಲ ರಾಷ್ಟ್ರವೆಂಬ ತಪ್ಪು ಭಾವನೆಯಿಂದ ಅದನ್ನು ತೀವ್ರವಾಗಿ ಜಯಿಸಬಹುದೆಂದು ಎಣಿಸಿದ್ದ.

ಈ ಕಾರಣಗಳಿಂದ ಹಿಟ್ಲರ್ ಬಾರ್ಬರೋಸ್ಸಾ ಎಂಬ ಪ್ರಚಂಡ ಹಂಚಿಕೆಯನ್ನು ಬಹು ಗೋಪ್ಯವಾಗಿ ಹೂಡಿ ರಷ್ಯವನ್ನು ದಾಳಿಮಾಡುವುದಿಲ್ಲವೆಂದು 1939ರಲ್ಲಿ ಸ್ಟಾಲಿನ್‌ನೊಡನೆ ತಾನು ಮಾಡಿಕೊಂಡಿದ್ದ ಒಪ್ಪಂದವನ್ನು ಮುರಿದು, 1941 ಜೂನ್ 22ರಂದು ರಷ್ಯದ ವಿರುದ್ಧ ಏಕಾಏಕಿ ದಾಳಿಮಾಡಿದ. ಬಾಲ್ಟಿಕ್ ಸಮುದ್ರದಿಂದ ಕಪ್ಪುಸಮುದ್ರದ ವರೆಗಿನ 3220 ಕಿಮೀ ಉದ್ದ ಎಲ್ಲೆಯನ್ನು ಅತಿಕ್ರಮಿಸುವಂತೆ ಮೂರು ಭಾರಿ ಸೇನಾ ಸಮೂಹಗಳನ್ನು ಬಹು ನಿಪುಣ ದಳಪತಿಗಳ ನಾಯಕತ್ವದಲ್ಲಿ ಕಳುಹಿಸಿದ. 180 ಡಿವಿಜನುಗಳು, ಅಗಾಧ ಟ್ಯಾಂಕ್ ಮತ್ತು ವಾಯುಪಡೆಗಳು ಉತ್ತರದಲ್ಲಿ ಲೆನಿನ್‌ಗ್ರಾಡ್ ಕಡೆಗೆ, ದಕ್ಷಿಣದಲ್ಲಿ ಕೀವ್ ಕಡೆಗೆ ಬೆಣೆ ಮತ್ತು ಕಡಾಯಿ ಎಂಬ ಯುದ್ಧತಂತ್ರದ ವ್ಯೂಹರಚನೆಯಲ್ಲಿ ನುಗ್ಗಿದವು.

ಕೀವ್ ಕಡೆ 57 ಡಿವಿಜನುಗಳು 13 ಬ್ರಿಗೇಡುಗಳು ಮತ್ತು 1,300 ವಿಮಾನಗಳು ಹೊರಟವು. ರಷ್ಯನ್ ಸೇನೆಗಳು ಚದುರಂಗತಂತ್ರ ಮತ್ತು ಸ್ಪಂಜ್‌ತಂತ್ರಗಳೆಂಬ ವ್ಯೂಹ ರಚನೆಯ ಚಮತ್ಕಾರದಲ್ಲಿ ಬಹು ಶೌರ್ಯದಿಂದ ಹೋರಾಡಿದವು. ಆದರೆ ನಾಜಿಗಳ ಟ್ಯಾಂಕ್ ಮತ್ತು ಯಾಂತ್ರಿಕ ಪಡೆಗಳು ಬೆಣೆಯಾಕಾರದ ರಚನೆಯಲ್ಲಿ ಕೆಂಪು ಸೇನೆಗಳನ್ನು ತೂರಿಕೊಂಡು ಮುಂದುವರಿಯುತ್ತ ಅನೇಕ ಪ್ರಾಂತಗಳನ್ನು ವಶಪಡಿಸಿಕೊಂಡವು. ಬಗ್ ಮತ್ತು ನೀಪರ್ ನದಿಗಳ ಮಧ್ಯ ಉಕ್ರೇನ್ ಮಾರ್ಗವಾಗಿ ಕಪ್ಪು ಸಮುದ್ರದ ಕಡೆ ನುಗ್ಗಿ ರೇವುಪಟ್ಟಣಗಳಲ್ಲಿದ್ದ ರಷ್ಯನ್ನರನ್ನು ಸೆರೆಹಿಡಿದುವು. ಕೀವ್ ಪ್ರದೇಶದ ದಕ್ಷಿಣದಲ್ಲಿ ನಡೆದ ಭಾರಿ ಉಮಾನ್ ಯುದ್ಧದಲ್ಲಿ ಹಿಟ್ಲರನ ಕುತಂತ್ರದಂತೆ ನಾಲ್ಕು ನಾಜಿದಳಗಳು ಚಿಮ್ಮಟದ ಚಲನೆಯಲ್ಲಿ ಕೆಂಪು ಸೇನೆಯನ್ನು ಸುತ್ತುಗಟ್ಟಿ 6,00,000 ರಷ್ಯನ್ನರನ್ನು ಸೆರೆಹಿಡಿದವು.

ಹಿಮ್ಮೆಟ್ಟುತ್ತಿದ್ದ ರಷ್ಯನರು ಧಾನ್ಯ ದವಸ ಪೈರುಗಳನ್ನು ಜರ್ಮನರಿಗೆ ಸಿಕ್ಕದಂತೆ ಸುಟ್ಟರು. ಸೇತುವೆ, ಅಣೆಕಟ್ಟು, ಕಾರ್ಖಾನೆ, ಯಂತ್ರಗಳನ್ನು ಕೆಡವಿದರು. ಗೆರಿಲ ಕಾಳಗ ತಂತ್ರದಲ್ಲಿ ಕಾಡು, ಹೊಲ, ಹೊಲಸು ನೀರಿನ ಸುರಂಗ. ಜವುಗುಗಳಲ್ಲಿ ಅವಿತುಕೊಂಡು ನಾಜಿಗಳ ಹಿಂಬದಿಯ ಸೈನ್ಯ, ಪಾಳ್ಯ, ಉಗ್ರಾಣ, ಮಳಿಗೆ, ರೈಲುಗಳನ್ನು ನಾಶಮಾಡಿದರು. ನಾಜಿ ಅಥವಾ ರೈತರ ಉಡುಪಿನಲ್ಲಿ ಹೊಂಚುಹಾಕಿಕೊಂಡು ಸಾವಿರಾರು ನಾಜಿ ಟ್ಯಾಂಕ್, ವಿಮಾನ, ಲಾರಿ ಲಕ್ಷಾಂತರ ಜರ್ಮನರನ್ನು ಧ್ವಂಸಮಾಡಿದರು.

ನಾಜಿಗಳು ಕವಲುಗೋಲಿನಂತೆ ನುಗ್ಗಿ ಕೀವನ್ನು ಆವರಿಸಿದರು. ಕೀವನ್ನು ರಕ್ಷಿಸಲು ರಷ್ಯನ್ನರು ಶೌರ್ಯದಿಂದ ಮೂರು ತಿಂಗಳು ಹೋರಾಡಿದರು. ಸೆಪ್ಟೆಂಬರ್ 29ರ ನಾಜಿಗಳು ಕೀವ್‌ನ್ನು ಹಿಡಿದರು. 50,000 ಯಹೂದಿಗಳನ್ನು ಕೊಲೆ ಮಾಡಿದರು. ರೈಲುಗಳನ್ನು ಹಿಡಿದು ತಮಗೆ ತಕ್ಕಂತೆ ಅಣಿಮಾಡಿಕೊಂಡರು. ನಾಜಿ ಸೈನ್ಯಗಳು ನೀಪರ್‌ನದಿಯನ್ನು ದಾಟಿ ಕರ್ಚ್, ಓರಲ್, ಒಡೆಸ್ಸಾ ಸೆಬಾಸ್ಟಪೋಲ್ ಮುಂತಾದ ಅಸಂಖ್ಯಾತ ಊರುಗಳನ್ನು ವಶಪಡಿಸಿಕೊಂಡವು. ಪೆರಿಕಾಫ್ ಭೂಕಂಠದಾಚೆ ಕ್ರಿಮಿಯಾಕ್ಕೆ ಹೋದುವು. ಡಾನ್‌ನದೀ ದಂಡೆಯ ರೋಸ್ಟೋವನ್ನು ಹಿಡಿದು ಕಾಕಸಸ್ ಪರ್ವತದ ಎಣ್ಣೆಕ್ಷೇತ್ರಗಳನ್ನು ಸಮೀಪಿಸಿದುವು. ಮಾಸ್ಕೋ ಕಡೆ ಹೋದ ಸೈನ್ಯ ಐದು ತಿಂಗಳುಗಳಲ್ಲಿ

ಮಾಸ್ಕೋವನ್ನು ಸಮೀಪಿಸಿತು. ಜರ್ಮನ್ನರಿಗೆ ರಷ್ಯದ ಉಗ್ರ ಚಳಿಯನ್ನು ತಡೆಯಲಾಗಲಿಲ್ಲ. ಚಳಿಗಾಲದ ಬಟ್ಟೆಗಳು ಯುದ್ಧ ಸಲಕರಣೆಗಳೂ ತಕ್ಕಷ್ಟು ಇರಲಿಲ್ಲ. ಚಳಿಗಾಲದ ಯುದ್ಧಕ್ಕೆ ತರಬೇತಾಗಿದ್ದ ಅಗಾಧ ರಷ್ಯನ್ ಸೇನೆಗಳು ಟ್ಯಾಂಕುಗಳೊಡನೆ ಹಿಮಗಡ್ಡೆ ರಾಶಿಗಳ ಮೇಲೆ ಜಾರುಬಂಡಿಗಳಲ್ಲಿ ನುಗ್ಗಿ ನಾಜಿ ಸೈನ್ಯವನ್ನು ಓಡಿಸಿದುವು. ಲೆನಿನ್‌ಗ್ರಾಡನ್ನು ಮುತ್ತಿದ್ದ ನಾಜಿ ಸೈನ್ಯದಲ್ಲಿ ರಷ್ಯನರು ಲಕ್ಷಾಂತರ ಜನರನ್ನು ಕೊಂದು, ಸಾವಿರಾರು ಜರ್ಮನರನ್ನು ಸೆರೆಹಿಡಿದರು.

ಜುಲೈ 1943ರಲ್ಲಿ ರಷ್ಯನ್ ಸೈನಿಕರ ಸಂಖ್ಯೆ 55 ಲಕ್ಷವಿತ್ತು. ಜರ್ಮನರ ಐದರಷ್ಟು ಯುದ್ಧದ ಆಯುಧಗಳೂ ರಷ್ಯದಲ್ಲಿ ಹೇರಳವಾಗಿ ತಯಾರಾಗುತ್ತಿದ್ದವು. ಅಮೆರಿಕ, ಇಂಗ್ಲೆಂಡುಗಳೂ ರಷ್ಯಕ್ಕೆ ಟ್ಯಾಂಕ್ ವಿಮಾನಗಳನ್ನು ನೀಡಿದುವು. ರಷ್ಯ ಶೇ.45 ರಷ್ಟು ನಾಜಿ ಟ್ಯಾಂಕ್‌ಗಳನ್ನು ಫಿರಂಗಿ ತೋಪುಗಳಿಂದ ನಾಶಮಾಡಿತ್ತು. ರಷ್ಯದ ಫಿರಂಗಿದಳ ಜರ್ಮನಿಯದಕ್ಕಿಂತ ಹೆಚ್ಚು ಸಮರ್ಥವಾಗಿತ್ತು. ಕೆಂಪು ಸೇನೆಗಳು ನಾಜಿಗಳ ಮೇಲೆ ಪ್ರಬಲವಾಗಿ ತಿರುಗಿಬಿದ್ದು ಅವರನ್ನು ಕಾಕಸಸ್‌ನಿಂದ ಅಟ್ಟಿಕೊಂಡು ಹೋಗಿ, ಹಿಂದೆ ಹಿಂದಕ್ಕೆ ಓಡಿಸುತ್ತ, ಕಳೆದುಕೊಂಡಿದ್ದ ಸ್ಥಳಗಳನ್ನೆಲ್ಲ ವಶಪಡಿಸಿಕೊಂಡು ನೀಪರ್ ನದಿಯವರೆಗೂ ಮುಂದುವರಿದುವು. ಬಹು ದಣಿದಿದ್ದ ನಾಜಿ ಸೈನ್ಯಗಳಿಗೆ ಸ್ವಲ್ಪ ವಿರಾಮಕ್ಕೂ ಅವಕಾಶಕೊಡದೆ ನಿರಂತರವಾಗಿ ಬೆನ್ನುಹತ್ತುತ್ತಿದ್ದವು. ನೀಪರ್ ನದಿಯ ಕಣಿವೆಯಲ್ಲಿ ಆಶ್ರಯ ಪಡೆದು ರಷ್ಯನರನ್ನು ಎದುರಿಸಬೇಕೆಂದಿದ್ದ ನಾಜಿಗಳ ಪ್ರಯತ್ನಗಳು ಭಂಗವಾದುವು. ರಷ್ಯನರು ನಾಜಿಗಳ 22 ಡಿವಿಜನುಗಳನ್ನು ನಿರ್ಮೂಲಮಾಡಿ ನೀಪರ್ ನದಿಯನ್ನು ದಾಟಿ, 6 ನವೆಂಬರ್ 1943ರಲ್ಲಿ ಕೀವನ್ನು ಆಕ್ರಮಿಸಿದರು. ನಾಜಿ ಸೇನೆಗಳನ್ನು ಅನೇಕ ಕಾಳಗಗಳಲ್ಲಿ ಸೋಲಿಸಿ ಫೆಬ್ರವರಿ 1944ರ ಹೊತ್ತಿಗೆ ಅವರನ್ನು ರಷ್ಯದಿಂದ ಹೊರಗೆ ಪೂರ್ತಿಯಾಗಿ ಅಟ್ಟಿಬಿಟ್ಟರು. (ಎಂ.ಜಿ.ಕೆ.ಎಂ.)

**ಕೀವು ನಂಜು :** ಸಾಮಾನ್ಯವಾಗಿ ಕೀವು ಉತ್ಪತ್ತಿಮಾಡುವ ರೋಗಾಣುಗಳಿಂದ ಉಂಟಾದ ಉರಿಯೂತದಲ್ಲಿ ಸ್ಥಳಿಕ ರಕ್ಷಣಾ ಪ್ರತಿಬಂಧಕಗಳ ಕುಸಿತದಿಂದ ಜಾಡ್ಯ ಶರೀರದ ನಾನಾ ಭಾಗಗಳಿಗೆ ಹರಡುವುದರಿಂದ ಅಥವಾ ರೋಗಾಣುಗಳ ಇಲ್ಲವೇ ಅವುಗಳಿಂದುಂಟಾದ ಉರಿಯೂತದಿಂದ ಉತ್ಪತ್ತಿಯಾದ ವಿಷಪದಾರ್ಥಗಳು ಶರೀರ ಹೀರಿಕೊಂಡು ಉಂಟಾಗುವ ದೈಹಿಕ ರೋಗಲಕ್ಷಣ (ಸೆಪ್ಸಿಸ್). ಕೀವು ಉತ್ಪತ್ತಿ ಮಾಡುವ ರೋಗಾಣುಗಳಲ್ಲಿ ಅತಿಮುಖ್ಯವಾದವು ಸ್ಟಫಿಲೋಕಾಕಸ್, ಸ್ಟ್ರೆಪ್ಟೊಕಾಕಸ್, ನ್ಯೂಮೊಕಾಕಸ್, ಮೆನಿಂಗೊಕಾಕಸ್ ಮತ್ತು ಗೋನೋಕಾಕಸ್ ; ಇವಲ್ಲದೆ ವಿಷಮಶೀತಜ್ವರಕ್ಕೆ ಕಾರಣವಾದ ರೋಗಾಣುಗಳೂ ಪ್ಲೇಗಿನ ರೋಗಾಣುಗಳೂ ಅಪೂರ್ವವಾಗಿ ಇತರ ರೋಗಾಣುಗಳೂ ಕೀವುನಂಜಿಗೆ ಕಾರಣ. ಕೀವನ್ನು ಉತ್ಪತ್ತಿಮಾಡುವ ಜೀವಾಣುಗಳು ಎಲ್ಲರ ಮೈಮೇಲೆಯೂ ಸಾಮಾನ್ಯವಾಗಿ ಇವೆ. ಆದರೆ ಎಲ್ಲರಲ್ಲೂ ಅವು ಕೀವನ್ನು ಉತ್ಪತ್ತಿಮಾಡುವುದಿಲ್ಲ; ಎಲ್ಲರಲ್ಲೂ ಕೀವುನಂಜು ರೋಗಲಕ್ಷಣಗಳು ತೋರುವುದೂ ಇಲ್ಲ. ರೋಗ ಬರಬೇಕಾದರೆ ಈ ರೋಗಾಣುಗಳು ಅತ್ಯುಗ್ರ ವಿಷೋತ್ಪಾದಕಗಳಾಗಿರಬೇಕು. ಇಲ್ಲವೇ ಶರೀರದಲ್ಲಿನ ರಕ್ಷಣಾ ಪ್ರತಿಬಂಧಕಗಳು ಕುಸಿದಿರಬೇಕು; ಗಾಯ, ಶಸ್ತ್ರಚಿಕಿತ್ಸೆ, ಪ್ರಸವ ಇತ್ಯಾದಿ ಕಾರಣಗಳಿದ್ದು ಅಲ್ಲಿ ರೋಗಾಣುಗಳು ಅತಿಯಾಗಿ ಸಂತಾನಾಭಿವೃದ್ಧಿ ಹೊಂದಿ ಅದರಿಂದ ಕೀವು, ಕೀವುನಂಜು ಉತ್ಪತ್ತಿಯಾಗುವುದುಂಟು. ಕೀವುನಂಜು ಸಣ್ಣ ಮಕ್ಕಳಲ್ಲೂ ವಯಸ್ಸಾದವರಲ್ಲೂ ದೌರ್ಬಲ್ಯದಿಂದಿರುವರಲ್ಲೂ ಸಿಹಿಮೂತ್ರ ರೋಗಿಗಳಲ್ಲೂ ಪ್ರತಿವಿಷವಸ್ತುಗಳು ಕಡಿಮೆಯಾದಾಗ ಅತಿ ಬೇಗ ಕಾಣಬರುತ್ತದೆ. ಆಸ್ಪತ್ರೆಗಳಲ್ಲಿಯ ಹೆರಿಗೆ ಕೋಣೆ, ಶಸ್ತ್ರಚಿಕಿತ್ಸಾಮಂದಿರ ಮತ್ತು ಪ್ರಸವ, ಶಸ್ತ್ರಚಿಕಿತ್ಸೆಯ ಅನಂತರ ರೋಗಿಗಳಿಡುವ ಸಾರ್ವತ್ರಿಕ ಕೊಠಡಿಗಳಲ್ಲಿ ಮಕ್ಕಳ ವಿಭಾಗಗಳಲ್ಲಿ ಕೀವುನಂಜು ರೋಗ ಅತಿಯಾಗಿ ಕಾಣಿಸುವುದಲ್ಲದೆ ಅತಿ ಸಾವಿಗೂ ಕಾರಣವಾಗಿವೆ. ಪ್ರಸವಮಾಡಿಸುವಾಗ ಅಥವಾ ಶಸ್ತ್ರಚಿಕಿತ್ಸೆ ಮಾಡುವಾಗ ಸರಿಯಾದ ಪೂತಿನಾಶಕ (ಆಂಟಿಸೆಪ್ಟಿಕ್) ಕ್ರಮಗಳನ್ನು ಅನುಸರಿಸದೆ ಹಿಂದಿನ ಕಾಲದಲ್ಲಿ ರೋಗಿಗಳಿಗೆ ಹಾನಿಯೂ ಸಾವುನೋವೂ ಬಹಳವಾಗಿ ಉಂಟಾದುದುಂಟು. ಪೂತಿನಾಶಕ ಕ್ರಮಗಳನ್ನು ಅನುಸರಿಸುವ ವಿಧಾನ ಮತ್ತು ಅದರ ಔಚಿತ್ಯವನ್ನು ಕಂಡುಹಿಡಿದವರಲ್ಲಿ ಲಾರ್ಡ್ ಲಿಸ್ಟರ್ (1827–1912), ಲ್ಯಾಂಗನ್‌ಬೆಕ್ (1810–87), ಹೋಮ್ಸ್ (1809–94) ಇವರು ಮುಖ್ಯರು. ಇವರು ವೈದ್ಯಜಗತ್ತಿಗೆ ಸಾಬೂನು ನೀರಿನಿಂದ ಕೈತೊಳೆಯುವುದು ಮತ್ತು ಪೂತಿನಾಶಕಗಳ ಉಪಯೋಗ–ಇವುಗಳಿಂದ ಕೀವುನಂಜು ರೋಗ ಬರದಂತೆ ಮಾಡುವುದನ್ನು ತೋರಿಸಿ (1842–67) ಅಪೂರ್ವ ಸೇವೆಸಲ್ಲಿಸಿದ್ದಾರೆ. ಇತ್ತೀಚೆಗೆ ಬೇಕಾದ ಆಯುಧಗಳ ಕ್ರಿಮಿಶುದ್ಧೀಕರಣದ (ಸ್ಟರಿಲೈಸೇಷನ್) ಬಳಕೆಯಿಂದಲೂ ಜೀವಿವಿಷಗಳ ಉಪಯೋಗದಿಂದಲೂ ತಕ್ಕಷ್ಟು ಪ್ರಗತಿ ಸಿದ್ಧಿಸಿದೆ. ಸೋಂಕುವಾಹಕವ್ಯಕ್ತಿಗಳನ್ನು ಪತ್ತೆಹಚ್ಚಿ ಅವರನ್ನು ರೋಗಿಗಳಿಂದ ಬೇರ್ಪಡಿಸಿ ಕ್ರಿಮಿನಾಶಕ ಔಷಧಿಗಳಿಂದ ಶುದ್ಧೀಕರಿಸಿ ಕೀವುನಂಜು ಹಬ್ಬದಂತೆ ಎಚ್ಚರವಹಿಸುತ್ತಿದ್ದಾರೆ. ಹಾಗಿದ್ದರೂ ರೋಗಾಣುಗಳು ನಿವಾರಕ ಔಷಧಿಗಳಿಗೆ ನಿರೋಧಶಕ್ತಿಯನ್ನು ಪಡೆಯುತ್ತಿದ್ದು ಕೀವುನಂಜು ಇನ್ನೂ ಬಗೆ ಹರಿಯದೆ ಪ್ರಶ್ನೆಯಾಗಿಯೇ ಇದೆ.

ಕೀವುನಂಜು ನಾನಾ ತರವಾಗಿ ರೂಪಿತವಾಗಬಹುದು: 1 ಚರ್ಮದ ಮತ್ತು ಚರ್ಮದ ಕೆಳಗಿನ ಅಂಗಾಂಶಗಳಲ್ಲಿ ಹರಡಿ ಉರಿಯೂತ, ವಸ್ತಿಕುಹರದ ಅಂಗಾಂಶಗಳಲ್ಲಿ ಉರಿಯೂತ, ಮೂತ್ರದ್ವಾರದ ಸುತ್ತಲ ಉರಿಯೂತ, ವಾಯು ತುಂಬಿದ ಅಂಗಕ್ಷಯ–ಈ ತರಹದ ಸ್ಥಳಿಕ ಚಿಹ್ನೆಗಳಲ್ಲದೆ ಇಲ್ಲಿಂದ ಶರೀರಕ್ಕೆ ವಿಷವೇರಿ ಕೀವುನಂಜಿನ ಲಕ್ಷಣಗಳು ಕಾಣಿಸುವುವು. 2 ದುಗ್ಧರಸ ವಾಹಕ ನಾಳಗಳ ಉರಿಯೂತ ಮತ್ತು ದುಗ್ಧರಸಗ್ರಂಥಿಗಳ ಉರಿಯೂತವಾಗಿಯೂ ಕಾಣಬಹುದು. 3 ರೋಗಾಣುಗಳು ರಕ್ತದಲ್ಲಿ ಹರಡಿ ನೆತ್ತರ ನಂಜು ಉಂಟಾಗಬಹುದು.

ಕೀವುನಂಜು ಯಾವ ತರಹದಲ್ಲಿ ರೂಪಿತವಾದರೂ ಚಳಿ, ಜ್ವರ, ತಲೆನೋವು, ಮೈಕೈನೋವು ಇವು ರೋಗದ ವೈಶಿಷ್ಟ್ಯಗಳು. ಚರ್ಮದ ಮತ್ತು ಚರ್ಮದ ಕೆಳಗಿನ ಅಂಗಾಂಶಗಳಲ್ಲಿ ಹರಡಿದರೆ ಅಲ್ಲಿ ಊತ ಉಂಟಾಗಿ ಚರ್ಮ ಕೆಂಪಾಗಿ, ಬಿಸಿಯಾಗಿ ನೋವಿರುತ್ತದೆ. ವಾಯು ತುಂಬಿದ ಅಂಗಕ್ಷಯದಲ್ಲಿ ಚರ್ಮ ಚಿಟಗುಟ್ಟುವುದಲ್ಲದೆ ದುರ್ವಾಸನೆಯ ಕೀವುಳ್ಳ ವ್ರಣಗಳೂ ಉಂಟಾಗುತ್ತವೆ. ಇಲ್ಲಿಂದ ಕೀವುನಂಜು ದುಗ್ಧರಸನಾಳಗಳಿಗೆ ಹರಡಬಹುದು. ಆಗ ನಾಳಗಳು ಊದಿ ಅವುಗಳ ಮೇಲಿನ ಚರ್ಮ ಕೆಂಪಾದ ನೋವುಳ್ಳ ರೇಖೆಗಳನ್ನು ತೋರಿಸುತ್ತದೆ. ದುಗ್ಧನಾಳಗಳಿಂದ ಉರಿಯೂತ ದುಗ್ಧಗ್ರಂಥಿಗಳಿಗೆ ಹರಡಿ ಗ್ರಂಥಿಗಳು ಊದಿ ನೋವಾಗುತ್ತವೆ; ಕೆಲವು ವೇಳೆ ದುಗ್ಧನಾಳಗಳ ಮೇಲೆ ಕೊಳೆತ ವ್ರಣಗಳು ಕಾಣಿಸಿಕೊಳ್ಳುವುದೂ ದುಗ್ಧಗ್ರಂಥಿ ಕೀವು ತುಂಬಿ ಕುರುವಾಗಿ ಕೀವು ಹೊರಬರುವುದೂ ಉಂಟು. ಕೀವುನಂಜು ದುಗ್ಧಗ್ರಂಥಿಗಳಿಂದ ರಕ್ತಕ್ಕೆ ಹರಡಿ ಅಲ್ಲಿ ರೋಗಾಣುಗಳ ಸಂತತಿ ಅಭಿವೃದ್ಧಿಗೊಂಡು ನೆತ್ತರುನಂಜು ಆಗುವುದಲ್ಲದೆ ದೇಹದ ನಾನಾ ಭಾಗಗಳಲ್ಲಿ ಕುರುಗಳು ಏಳಬಹುದು. ನೆತ್ತರುನಂಜು ತೀರ ಅಪಾಯದ ಸೋಂಕು ರೋಗ. ಇದರಲ್ಲಿ ನಂಜು, ಜ್ವರ ಚಳಿ ಬರುವುದಲ್ಲದೆ ಚರ್ಮದ ಮೇಲೆ ನಾನಾತರಹದ ಗುಳ್ಳೆಗಳೂ ಏಳಬಹುದು. ಹೃದಯಾವರಣದ ಉರಿಯೂತ ಹೃದಯದ ಒಳಪೊರೆಯ ಊತ, ಶ್ವಾಸಕೋಶಾವರಣದ ಉರಿಯೂತ, ಮಿದುಳಿನ ಮತ್ತು ಮಿದುಳು ಬಳ್ಳಿಯ ಪೊರೆಗಳ ಊರಿಯೂತ, ಕೀಲುಗಳ ಉರಿಯೂತ, ಸ್ಥಾನಾಂತರಿಸಿದ ಕುರುಗಳು ಮತ್ತು ರಕ್ತಸ್ರಾವ ತೋರಿಕೆಯ ವಿಲಕ್ಷಣಗಳು ತಲೆದೋರುತ್ತವೆ. ಶೀಘ್ರವಾಗಿ ಸ್ನಾಯುಗಳು ನಿಶ್ಚೇತನಗೊಂಡು ಸಾವು ಸಹ ಉಂಟಾಗಬಹುದು, ಕೀವುಗುಳ್ಳೆ (ಮೊಡವೆ, ಬೊಕ್ಕೆ), ಎಲುಬಿನ ಉರಿಯೂತ, ದಂತ ಚಿಕಿತ್ಸಾನಂತರ ಗಲಗ್ರಂಥಿಯ ಶಸ್ತ್ರಚಿಕಿತ್ಸೆ, ಮೂತ್ರಾಪಕರ್ಷಕದಿಂದ ಮೂತ್ರ ತೆಗೆಯುವಿಕೆ. ವಿಷಮ ಶೀತಜ್ವರ, ಶ್ವಾಸಕೋಶದ ಉರಿಯೂತ, ಉದರ ಪರಿವೇಷ್ಟನ ಪಟಲದ ಉರಿಯೂತ, ಮಿದುಳು ಪೊರೆಗಳ ಉರಿಯೂತ, ಕೆಟ್ಟ ಕುರು, ಸಿಡುಬು, ಸೀತಾಳೆ ಸಿಡುಬು, ಪ್ಲೇಗು ಇತ್ಯಾದಿ ರೋಗಗಳಲ್ಲಿ ಕೀವುಜಾಡ್ಯ ಹರಡಿ ನೆತ್ತರು ನಂಜಾಗಬಹುದು. ಹಸುಕೂಸಿನ ಹೊಕ್ಕುಳಬಳ್ಳಿಯಿಂದ ಕೀವುನಂಜು ಹರಡಿ ನಂಜಾಗುವುದು ವಿರಳವಲ್ಲ.

ಪ್ರಸೂತಿಸಂಬಂಧವಾದ ಕೀವುನಂಜು ಹೆರಿಗೆಯ ಅನಂತರವೂ ಗರ್ಭಪಾತದ ಅನಂತರವೂ ಕಾಣಿಸಿಕೊಳ್ಳಬಹುದು. ಸಹಜವಾದ ಪ್ರಸೂತಿಯಲ್ಲೂ ಕೆಲವಾರು ಸಣ್ಣ ಜಜ್ಜುಗಾಯಗಳು, ಉಜ್ಜುಗಾಯಗಳು ಇದ್ದು ಕೀವಾಣುಗಳಿಗೆ ಈಡಾಗಬಹುದು. ನಿಧಾನ ಪ್ರಸವ, ಕಸದ ತುಂಡುಗಳು ಒಳಗೇ ಉಳಿಯುವಿಕೆ. ಗರ್ಭಕೋಶದ ಸಡಿಲಿಕೆ ಇವೂ ಕೀವುನಂಜನ್ನು ಹೆಚ್ಚಿಸುತ್ತವೆ. ರಕ್ತಹೀನತೆ, ರಕ್ತಸ್ರಾವ ಹೃದ್ರೋಗ, ಕ್ರಿಮಿಜಾಡ್ಯ ಇವುಗಳಿಂದ ತಾಯಿಯ ರಕ್ಷಣಾಪ್ರತಿಬಂಧಕ ಶಕ್ತಿ ಕುಗ್ಗಿದಲ್ಲಿ ಕೀವುನಂಜು ವಿಶೇಷವಾಗಿ ಅಂಟುವುದು. ಪ್ರಸವ ಸಮಯದಲ್ಲಿ ಪದೇ ಪದೇ ಪರೀಕ್ಷೆಗಳು, ಆಯುಧ ಪ್ರಯೋಗ, ಶಸ್ತ್ರಚಿಕಿತ್ಸೆ ಇವು ಕೀವುನಂಜು ಮತ್ತು ನೆತ್ತರು ನಂಜನ್ನು ಆಹ್ವಾನಿಸುತ್ತವೆ. ಈ ಎಲ್ಲ ಸಂದರ್ಭಗಳಲ್ಲಿ ಕೀವುನಂಜು ಉತ್ಪತ್ತಿಮಾಡುವ ರೋಗಾಣುಗಳು ರೋಗಿಯ ದೇಹದಿಂದಾಗಲಿ ವೈದ್ಯರು ಸೂಲಗಿತ್ತಿಯರಿಂದಾಗಲಿ ಹರಡಿ ರೋಗೋತ್ಪತ್ತಿಯಾಗುತ್ತದೆ. ದೋಷಾತ್ಮಕ ಗರ್ಭಪಾತದಲ್ಲಿ ಕೀವುನಂಜಾಗಿ ನೆತ್ತರು ನಂಜಿಗೆ ತಿರುಗಿ ಸಾವೇ ಸಂಭವಿಸಬಹುದು. ಪ್ರಸೂತಿ ಸಂಬಂಧವಾದ ಕೀವುನಂಜನ್ನು ತಡೆಯಲು ಪ್ರಸೂತಿಮಾಡಿಸುವವರು ಸೋಂಕುವಾಹಕರಾಗಿರದೆ, ಕೈಗಳನ್ನು ಚೆನ್ನಾಗಿ ಸಾಬೂನು ನೀರಿನಿಂದ ತೊಳೆದು ಪೂತಿನಾಶಕಗಳಲ್ಲಿ ಅದ್ದಿ ಪ್ರಸವ ಮಾಡಿಸುವುದು ಅತಿ ಮುಖ್ಯ ಕ್ರಮ.

ಕೀವುನಂಜು, ನೆತ್ತರುನಂಜು ಉಗ್ರವ್ಯಾಧಿಗಳು. ಇವನ್ನು ಶೀಘ್ರವಾಗಿ ಜೀವಾಣುಗಳನ್ನು ನಾಶಮಾಡುವ ಔಷಧಿಗಳನ್ನು ಬಳಸಿ ರೋಗಾಣುಗಳನ್ನು ನಿವಾರಿಸುವುದಲ್ಲದೆ ರೋಗಿಯ ಪ್ರತಿರೋಧಶಕ್ತಿಯನ್ನು ಹೆಚ್ಚಿಸಬೇಕು. ಕೀವು ಎಲ್ಲಿಯಾದರೂ ಅಡಗಿದ್ದರೆ ಅದನ್ನು ಹೊರತೆಗೆಯುವುದು ಅತ್ಯಾವಶ್ಯಕ. ಜೊತೆಗೆ ರೋಗಿಯ ರಕ್ತವೃದ್ಧಿ ಶಕ್ತಿವೃದ್ಧಿಗೆ ಬೇಕಾದ ಉಪಚಾರಗಳನ್ನೂ ಮಾಡಬೇಕು. (ಆರ್.ಡಿ.ಎಂ.)

**ಪೂತಿನಾಶಕಗಳು :** ಇವು ವಿಷಕ್ರಿಮಿಗಳನ್ನು ನಾಶಪಡಿಸುತ್ತವೆ. ಈ ವಿಧಾನಕ್ಕೆ ಎಸೆಪ್ಸಿಸ್ ಎಂದು ಹೆಸರು. ಬೇರೆ ಬೇರೆ ಪಂಗಡಕ್ಕೆ ಸೇರಿದ ಕೆಲವು ರಾಸಾಯನಿಕ ದ್ರವ್ಯಗಳು ಅಪಾಯಕರವಾದ ಸೂಕ್ಷ್ಮದರ್ಶಕೀಯ ಕ್ರಿಮಿಗಳನ್ನು ನಾಶಮಾಡಬಲ್ಲುವು.

ಅವುಗಳಲ್ಲಿ ಕೆಲವು ಬ್ಯಾಕ್ಟಿರಿಸೈಡಲ್ ಎಂದರೆ ವಿಷಕ್ರಿಮಿಗಳನ್ನು ನಾಶಮಾಡಬಲ್ಲುವು. ಮತ್ತೆ ಕೆಲವು ಬ್ಯಾಕ್ಟೀರಿಯೋಸ್ಟಾಟಿಕ್ ಎಂದರೆ ಬ್ಯಾಕ್ಟೀರಿಯಗಳ ಪ್ರಭಾವವನ್ನು ತಗ್ಗಿಸುತ್ತವೆ. ಯಾವುದೊಂದು ವಸ್ತು ಎಲ್ಲ ಸನ್ನಿವೇಶಗಳಲ್ಲಿಯೂ ಸಮರ್ಪಕವಾಗಿ ಫಲಕಾರಿಯಾಗಲಾರದು. ಆದರೆ ಈ ವಸ್ತುಗಳ ಉಪಯೋಗ ಈಗಿನ ಆಧುನಿಕ ಔಷಧಶಾಲೆಗಳಲ್ಲಿ ಅತ್ಯಾವಶ್ಯಕ. ಶಸ್ತ್ರಚಿಕಿತ್ಸೆಗೆ ಮೊದಲು ಮನುಷ್ಯನ ಅಂಗಗಳು, ಅಂದರೆ ಅದರ ಮೇಲಿನ ಚರ್ಮ, ವೈದ್ಯಶಾಸ್ತ್ರೀಯ ಅಸ್ತ್ರಗಳು ಮತ್ತು ಅದಕ್ಕೆ ಬೇಕಾದ ಸಲಕರಣೆ ಇವೆಲ್ಲವನ್ನೂ ವಿಷಕ್ರಿಮಿಗಳಿಂದ ಕಾಪಾಡಬೇಕಾಗುವುದು. ಕೊಳೆತು ನಾರುವ ವಿಷಕ್ರಿಮಿಗಳು ಚರ್ಮದ ಮೂಲಕ ಮನುಷ್ಯನ ಒಳಭಾಗವನ್ನು ಸೇರಿ ಎಂಥ ಅಪಾಯವನ್ನಾದರೂ ತಂದೊಡ್ಡಬಹುದು. ಇಂಥವನ್ನು ತಡೆದುದರ ಖ್ಯಾತಿ ಜೋಲಿಸ್ಟರ್ ಎಂಬ ಪ್ರಸಿದ್ಧ ಪುರುಷನಿಗೆ ಸಲ್ಲುವುದು. ಆತ ಕಾರ್ಬಾಲಿಕ್ ಆಮ್ಲ ಎಂಬುದನ್ನು ಔಷಧಶಾಲೆಗಳಲ್ಲಿ ಉಪಯೋಗಿಸಿ ನಂಜನ್ನು ಬಹುಮಟ್ಟಿಗೆ ತಡೆಗಟ್ಟಿದ. ಈಗಿನ ಔಷಧಶಾಲೆಗಳಲ್ಲಿ ನಂಜನ್ನು ತಡೆಗಟ್ಟುವುದೇ ಒಂದು ನಿಯಮವೆಂದು ತಿಳಿದು ಒಂದು ಚಿಕಿತ್ಸೆ ನಡೆಯುವುದರ ಮುನ್ನ ಆ ಭಾಗದ ಚರ್ಮ, ಉಪಯೋಗಿಸುವ ಅಸ್ತ್ರಗಳು. ರಬ್ಬರ್ ಚೀಲಗಳು ಮತ್ತು ಇನ್ನಿತರ ಸಲಕರಣೆಗಳೆಲ್ಲವನ್ನೂ ವಿಷನಾಶಕ ದ್ರವದಿಂದಾಗಲೀ ಅಥವಾ ಹೆಚ್ಚು ಉಷ್ಣತೆಯಲ್ಲಿ ಉಷ್ಣ ಕ್ರಿಮಿನಾಶಕ ವಿಧಾನದಿಂದಾಗಲೀ ಕಾಪಾಡಿ ಸೂಕ್ಷ್ಮದರ್ಶಕೀಯ ವಿಷಾಣುಗಳು ಒಳಗೆ ಪ್ರವೇಶಿಸದಂತೆ ಮಾಡಬಹುದು.

ಬೇರೆ ಬೇರೆ ಗುಂಪಿನ ವಸ್ತುಗಳನ್ನು ಈ ಕ್ರಿಮಿನಾಶಕ ಕಾರ್ಯದಲ್ಲಿ ಉಪಯೋಗಿಸುವುದರಿಂದ, ಅದರ ಪರಿಣಾಮ ಇಷ್ಟೇ ಎಂದು ಹೇಳಬೇಕಾದರೆ ಒಂದು ಅಳತೆ ಬೇಕು. ಅದು ರೈಡಿಲ್ ವಾಕರ್ ಎಂಬಾತ ಕಂಡುಹಿಡಿದ (1903) ವಿಧಾನದಿಂದ ಹೇಳಬಹುದು. ಅಂದರೆ ವಿಷಮಶೀತಜ್ವರದ ಕ್ರಿಮಿಗಳನ್ನು 24 ಗಂಟೆಗಳಲ್ಲಿ ಕೊಲ್ಲಬೇಕಾದರೆ ಫೀನಾಲ್ ಎಂಬ ಕ್ರಿಮಿನಾಶಕ ಎಷ್ಟು ಬೇಕಾಗುತ್ತದೋ ಎಂಬುದನ್ನು ತಿಳಿದು ಅದನ್ನು ಬೇರೆ ಪೂತಿನಾಶಕ ವಸ್ತುಗಳೊಡನೆ ಹೋಲಿಸುವುದು. ಈ ಹೋಲಿಕೆಯ ಪ್ರಮಾಣಕ್ಕೆ ಫೀನಾಲ್ ಗುಣಾಂಕ ಅಥವಾ ರೈಡಿಲ್‌ವಾಕರ್ ಗುಣಾಂಕ ಎಂದು ಹೆಸರು. ಒಂದು ವಸ್ತುವಿನ ಫಲ ಫಿನಾಲಿಗಿಂತ 2, 4 ಅಥವಾ 6ರಷ್ಟು ಎಂದು ಹೋಲಿಸಬಹುದು. ಆಧುನಿಕ ಕಾಲದಲ್ಲಿ ಇಂಥ ವಸ್ತುಗಳ ಪ್ರಭಾವ ಅಂಗಾಂಗಗಳ ಮೇಲೆ ಹೇಗೆ ಎಂಬುದನ್ನು ತಿಳಿಯಬೇಕಾಗುತ್ತದೆ.

ಪೂತಿನಾಶಕ ವಸ್ತುಗಳನ್ನು ಒಂಬತ್ತು ವಿಭಾಗವಾಗಿ ವಿಂಗಡಿಸಬಹುದು: 1. ಉತ್ಕರ್ಷಣಕಾರಕಗಳು (ಆಮ್ಲಜನಕದೊಡನೆ ಸಂಯೋಗ ಪದಾರ್ಥಗಳು): $KMnO_4.H_2O_2$. ಇವುಗಳ ಕ್ರಿಯಾಸಾಮರ್ಥ್ಯಶಕ್ತಿ, ಆಮ್ಲಜನಕ ಹೊರಡುವುದುರಿಂದ ಲಭಿಸಿದೆ. 2. ಹ್ಯಾಲೋಜೆನ್ಸ್: Cl, I ಅಯೊಡೋಫಾರಂ. ಅಯೋಡೀನ್ ಮತ್ತು ಶೇ.70 ಆಲ್ಕೊಹಾಲ್ ಮಿಶ್ರಣ ಚರ್ಮವನ್ನು ವಿಷಾಣುಗಳಿಂದ ದೂರಮಾಡಿ ಶುದ್ಧಿ ಮಾಡುವುದು. 3. ಆಮ್ಲಗಳು ಮತ್ತು ಕ್ಷಾರಗಳು: ಬೋರಿಕ್ ಆಮ್ಲ ಬೊರಾಕ್ಸ್, ಬೆನ್‌ಜೋಯಿಕ್ ಮುಂತಾದವು. ಆದರೆ ಇವು ಅಂಗಗಳನ್ನೇ ಕ್ಷಯಿಸುವುದರಿಂದ ಅಷ್ಟು ಪ್ರಯೋಜನಕಾರಿಯಲ್ಲ. 4. ಅಪಮಾರ್ಜಕಗಳು (ಡಿಟರ್‌ಜೆಂಟ್ಸ್): ಅಂಗಶುದ್ಧಿ ಮಾಡುವ ವಸ್ತುಗಳು. ಉದಾಹರಣೆಗೆ ಸಾಬೂನು, ಜೆಪರ್ನಿನ್ ಮುಂತಾದುವು. ಇವು ಚರ್ಮವನ್ನು ಶುದ್ಧಮಾಡಿ ವಿಷಕ್ರಿಮಿಗಳನ್ನು ತಡೆಗಟ್ಟುತ್ತವೆ. 5. ಆಲ್ಕೊಹಾಲ್ (ಮದ್ಯಸಾರ): ಈಥೈಲ್ ಆಲ್ಕೊಹಾಲ್ ಶೇ.70 ಚರ್ಮಶುದ್ಧಿಗೆ ಬಹಳ ಒಳ್ಳೆಯ ವಸ್ತು. 6. ಆಲ್‌ಡಿಹೈಡ್‌ಗಳು: ಆಲ್ಕೊಹಾಲ್ ಆಮ್ಲಜನಕದ ಜೊತೆಗೆ ಕೂಡಿ ಆಗುವ ಸಂಯುಕ್ತ ಪದಾರ್ಥಗಳು. ಉದಾಹರಣೆಗೆ ಫಾರ್ಮಾಲ್ ಡಿ ಹೈಡ್ ಶೇ. 2–5 ದ್ರಾವಣವನ್ನು ಶಸ್ತ್ರಗಳನ್ನು ಶುದ್ಧಿಮಾಡಲು ಉಪಯೋಗಿಸುವುದುಂಟು. 7. ಲೋಹಗಳ: ಪದಾರ್ಥಗಳು: ಉದಾಹರಣೆಗೆ ಸಿಲ್ವರ್ ನೈಟ್ರೇಟ್ ($AgNO_3$), ಮರ್ಕ್ಯುರಿಕ್ ಕ್ಲೋರೈಡ್ ($HgCl_2$) ಕ್ಲೋರೈಡ್, ಮರಕ್ರೊ ಕ್ರೊಂ ಮತ್ತು ಮರ್‌ಕೈಲೇಟ್ ಇವು ಅಂಗವನ್ನು ದಹಿಸದೆ ಶುದ್ಧಿಮಾಡುವುವು. ಇವುಗಳ ಲೇಪನದಿಂದ ಚರ್ಮವನ್ನು ಮತ್ತು ಅಸ್ತ್ರಗಳನ್ನು ಶುದ್ಧಿಮಾಡಬಹುದು. 8. ವರ್ಣದ್ರವ್ಯಗಳು (ಡೈಸ್): ಅಕ್ರಿಫ್ಲೇವಿನ್, ಬ್ರಿಲಿಯಂಟ್ ಗ್ರೀನ್ ಮೈಲೇಟ್ ಮತ್ತು ಕ್ರಿಸ್ಟಲ್ ವೈಲೇಟ್ ಇವು ಕ್ರಿಮಿನಾಶಕ ವಸ್ತುಗಳು ಮತ್ತು ಸೂಕ್ಷ್ಮಾಣುಗಳಿಗೆ ವರ್ಣವನ್ನು ಕೊಡುವುವು. ಮನುಷ್ಯನ ಅವಯವಗಳಿಗೆ ಬಹುಕಾಲದ ವರೆಗೆ ಉಪಯೋಗಿಸಿದರೂ ಇವು ವಿಷವಾಗುವುದಿಲ್ಲ. 9. ಫೀನಾಲ್ ಉತ್ಪನ್ನಗಳು : ಕಾರ್ಬಾಲಿಕ್ ಆಮ್ಲವನ್ನು ಲಿಸ್ಟರ್ ಎಂಬ ಸಂಶೋಧಕ ಉಪಯೋಗಿಸಿ ಇದು ಕ್ರಿಮಿನಾಶಕವಾಗಿ ಬಹಳ ಉತ್ಕೃಷ್ಟವಾದ ವಸ್ತುವೆಂದು ತೋರಿಸಿದ್ದಾನೆ. ಫೀನಾಲ್ ಒಂದೇ ಅಲ್ಲದೆ ಅದರಿಂದ ತಯಾರಿಸಿದ ಇತರ ದ್ರಾವಣಗಳಾದ ಡೆಟ್ಟಾಲ್, ಲೆಸಾಲ್ ಎಂಬುದನ್ನು ಕೂಡ ವಿಷಕ್ರಿಮಿಗಳನ್ನು ತಡೆಯುವ ವಸ್ತುಗಳಾಗಿ ಉಪಯೋಗಿಸುತ್ತಾರೆ. (ಬಿ.ಆರ್.ಎಂ.ಬಿ.)

**ಕೀವೂ :** ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ಒಂದು ಪೂರ್ವ ಪ್ರಾಂತ್ಯ. ಸಮಭಾಜಕದಿಂದ ದಕ್ಷಿಣಕ್ಕೆ ಲೊಮಾನಿ ನದಿಗೂ ಎಡ್ವರ್ಡ್, ಕೀವೂ ಮತ್ತು ಟಾಂಗನ್ಯೀಕ ಸರೋವರಗಳಿಗೂ ನಡುವೆ ಇದೆ. ವಿಸ್ತೀರ್ಣ 259077.70 ಚ.ಕಿಮೀ. ಜನಸಂಖ್ಯೆ ಸು. 5050348 (2002). ಪ್ರಾಂತ್ಯದ ಪಶ್ಚಿಮ ಭಾಗ ಪ್ರಸ್ಥಭೂಮಿ (45 ಮೀ); ಪೂರ್ವದಲ್ಲಿ ಸರೋವರಗಳ ಬಳಿಯ ಪ್ರದೇಶ ಪರ್ವತಮಯ. ರೂವೆಂಜೋರಿ ಶ್ರೇಣಿಯ ಎತ್ತರ 5080 ಮೀ ವಿರುಂಗ ಜ್ವಾಲಮುಖಿ ಶ್ರೇಣಿಯ ಉನ್ನತ ಶಿಖರ ಕಾರಿಸಿಂಬಿ (448 ಮೀ) ಪ್ರಾಂತ್ಯದ ಬಹುಭಾಗ ಸಮಭಾಜಕೀಯ ಕಾಡಿನಿಂದ ಆವೃತವಾಗಿದೆ. ಪ್ರಾಂತ್ಯದ ಎತ್ತರದಿಂದಾಗಿ ಇಲ್ಲಿಯ ವಾಯುಗುಣ ಹಿತಕರ. ಐರೋಪ್ಯರು ಅಧಿಕ ಸಂಖ್ಯೆಯಲ್ಲಿ ಇಲ್ಲಿ ನೆಲಸಲು ಇದರ ವಾಯುಗುಣ ಒಂದು ಕಾರಣ. ಎಡ್ವರ್ಡ್ ಸರೋವರದ ಬಳಿ ಆಲ್ಬರ್ಟ್ ರಾಷ್ಟ್ರೀಯ ವನದಲ್ಲಿ ಗೊರಿಲ, ಕಾಡೆಮ್ಮೆ, ಆನೆ, ಖಡ್ಗಮೃಗ ಮತ್ತು ಜಿರಾಫೆ ಇವೆ.

ಬೂಕವೂ, ಕೊಸಾಂಗೋ, ಕಿಂಡೂ, ವೂವಿರ, ರೂಚೂರೂ–ಇವು ಕೀವೂ ಪ್ರಾಂತ್ಯದ ಪಟ್ಟಣಗಳು. ಪ್ರಾಂತ್ಯದ ಮುಖ್ಯಪಟ್ಟಣ ಬೂಕವೂ. ಇದರ ಜನಸಂಖ್ಯೆ 476000 (2004). ಉತ್ತರ ಕೀವೂ, ದಕ್ಷಿಣ ಕೀವೂ, ಮನೀಮ–ಇವು ಇದರ ಜಿಲ್ಲೆಗಳು. ಗೋಮ, ಬೂಕವೂ ಮತ್ತು ಕಿಂಡು–ಪೋರ್ಟ್–ಎಂಪೇನ್ ಅನುಕ್ರಮವಾಗಿ ಇವುಗಳ ಆಡಳಿತ ಕೇಂದ್ರಗಳು. ಲೂವಲಾಬ, ಲೋಮಮೀ, ಲೋವಾ, ಎಲಿಲ ಮತ್ತು ವೂಲೆಂಡೀ ಇವು ಈ ಪ್ರಾಂತ್ಯದ ಮುಖ್ಯ ನದಿಗಳು. ಮನೀಮದ ದಕ್ಷಿಣದಿಂದ ಉತ್ತರಕ್ಕೆ ಅಡ್ಡಲಾಗಿ ಲೂವಲಾಬ ನದಿ ಹರಿಯುತ್ತದೆ. ಈ ಪ್ರಾಂತ್ಯದಲ್ಲಿ ಕಾಫಿ, ಚಹ ತೋಟಗಳಿವೆ. ಇಲ್ಲಿಯ ರೈತರು ಸೇವಂತಿಗೆ ವರ್ಗಕ್ಕೆ ಸೇರಿದ ಒಂದು ಸಸ್ಯವನ್ನೂ ಸಿಂಕೋನ ಮರವನ್ನೂ ನಿಂಬೆ, ಕಿತ್ತಲೆ, ಹೇರಳೆ, ಚಕ್ಕೋತ ಮತ್ತು ಉಷ್ಣವಲಯದ ಇತರ ತರಕಾರಿ ಮತ್ತು ಹಣ್ಣುಗಳನ್ನೂ ಬೆಳೆಯುತ್ತಾರೆ. ಅಲ್ಲದೆ ಬತ್ತ, ಹತ್ತಿ, ಬೆಳೆಗಳು ಮುಂತಾದವನ್ನೂ ಬೆಳೆಯುತ್ತಾರೆ. ತಾಳೆಯೆಣ್ಣೆ ಒಂದು ಮುಖ್ಯ ಉತ್ಪನ್ನ ಕೀವೂ ಪ್ರಾಂತ್ಯ ಐರೋಪ್ಯರ ಮುಖ್ಯ ವ್ಯವಸಾಯ ಕೇಂದ್ರವಾಗಿತ್ತು.

ಕೀವೂ ಸರೋವರ, ಟಾಂಗನ್ಯೀಕ ಸರೋವರ ಮತ್ತು ಲೂವಲಾಬ ನದಿಯ ಕೆಳದಂಡೆಯಲ್ಲಿ ನೌಕಾಸಂಚಾರವುಂಟು. ಕೆಂಡು ಮತ್ತು ಕೊಂಗೋಲೋ, ವೂವಿರ ಮತ್ತು ಕಮಾನ್ಯೊಲಗಳ ನಡುವೆ ರೈಲು ಸಂಪರ್ಕ ಏರ್ಪಟ್ಟಿದೆ. ಪ್ರಸಿದ್ಧವಾದ ಆಲ್ಬರ್ಟ್ ರಾಷ್ಟ್ರೀಯ ವನದ ಮೃಗಪಕ್ಷಿಗಳು ವೈವಿಧ್ಯಮಯ. ಬಾಂಟುಗಳು ಇಲ್ಲಿಯ ಮುಖ್ಯನಿವಾಸಿಗಳು. (ಎಸ್.ಎನ್.ಎಲ್.)

**ಕೀವೂ ಸರೋವರ :** ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ಪೂರ್ವ ಗಡಿಯ ಬಳಿ ಇರುವ ಸರೋವರಗಳ ಪೈಕಿ ಅತ್ಯುನ್ನತವಾದ್ದು. ಸಮುದ್ರ ಮಟ್ಟಕ್ಕಿಂತ 1438 ಮೀ ಎತ್ತರದಲ್ಲಿ, ಕೀವೂ ಪ್ರಾಂತ್ಯಕ್ಕೂ ರುವಾಂಡಕ್ಕೂ ನಡುವೆ ಇದೆ. ಇದರ ಉದ್ದ 90 ಕಿಮೀ. ಗರಿಷ್ಠ ಅಗಲ 50 ಕಿಮೀ. ವಿಸ್ತೀರ್ಣ 2667 ಚ.ಕಿಮೀ. ತ್ರಿಕೋಣಾಕೃತಿಯಲ್ಲಿರುವ ಈ ಸರೋವರದ ಸರಾಸರಿ ಆಳ 218 ಮೀ. ಕೆಲವು ಕಡೆ ಇದು 697 ಮೀ ಆಳವಾಗಿದೆ. ಇದರ ನೀರು ದಕ್ಷಿಣದ ಕಡೆಗೆ ರೂಜ್ಜಿಜ಼ಿ ನದಿಯ ಬಂಡೆಗಳ ಮೂಲಕ ಹೊರಕ್ಕೆ ಹರಿದು 2,300' ಕೆಳಗಿರುವ ಟಾಂಗನ್ಯೀಕ ಸರೋವರವನ್ನು ಸೇರುತ್ತದೆ. ಇಲ್ಲಿ ವಿದ್ಯುತ್ತಿನ ಉತ್ಪಾದನೆಯಾಗುತ್ತದೆ.

ಕೀವೂ ಆಫ್ರಿಕದಲ್ಲೆಲ್ಲ ಅತ್ಯಂತ ಸುಂದರವಾದ ಸರೋವರ. ಇಟಲಿಯ ಲಾಗೋಮಾಜೋರಿ ಸರೋವರವನ್ನು ಬಿಟ್ಟರೆ ಕೀವೂ ಸರೋವರವೇ ಪ್ರಪಂಚದ ಅತ್ಯಂತ ಸುಂದರ ಸರೋವರವೆಂದು ಜಾನ್ ಗಂತರ್ ಹೇಳಿದ್ದಾನೆ. ಚಿತ್ರಪಟದಂತೆ ಆಕರ್ಷಕವಾದ ಪ್ರಕೃತಿ ಸೌಂದರ್ಯದಿಂದ ಕೂಡಿದ ಮತ್ತು ಮೆಟ್ಟಲು ಮೆಟ್ಟಲಾಗಿರುವ ದಡಗಳು ಕೆಲವು ಕಡೆ ಅತ್ಯಂತ ಕಡಿದಾಗಿವೆ. ದಕ್ಷಿಣ ಭಾಗದಲ್ಲಿ ನೆಲ ಕುಸಿದು ಸಂಭವಿಸಿದ ಕಮರಿಯ ಏಣುಗಳು ಬಲು ಚೂಪು. ಬೂಕವೂವಿನ ಪಶ್ಚಿಮಕ್ಕೆ ಉದ್ರೇಕದಿಂದ ಚಿಮ್ಮಲು ಸಿದ್ಧವಾಗಿರುವಂತೆ ನಿಂತಿರುವ ಕಾಹೂನೀ ಜ್ವಾಲಾಮುಖಿಗಳ ಗುಂಪು ಕೀವೂ ಸರೋವರದ ಪಶ್ಚಿಮ ತೀರವನ್ನು 96 ಕಿಮೀವರೆಗೂ ಹಬ್ಬಿಕೊಂಡಿದೆ. ಈಶಾನ್ಯದಲ್ಲಿ ಸದಾ ಚಟುವಟಿಕೆಯಿಂದ ಕೂಡಿದ ವಿರುಂಗ ಶ್ರೇಣಿಯ ಜೀವಂತ ಜ್ವಾಲಮುಖಿಗಳಾದ ನೈರಾಂಗೋಂಗೋ ಮತ್ತು ನ್ಯಾಮ್ಲಗೀರಗಳಿವೆ.

ಕೀವೂ ಸರೋವರದ ಮೇಲ್ಮೈ ಆಗಿಂದಾಗ್ಗೆ ಥಟ್ಟನೆ ಸಂಭವಿಸುವ ಬಿರುಗಾಳಿಯಿಂದ ಪ್ರಕ್ಷುಬ್ಧಗೊಳ್ಳುತ್ತದೆ. ಈ ಸರೋವರದಲ್ಲಿ ಮೀನು, ನೀರುನಾಯಿ ಮತ್ತು ನೀರುಬೆಕ್ಕುಗಳುಂಟು, ಮೊಸಳೆಗಳಾಗಲಿ, ನೀರಾನೆಗಳಾಗಲೀ ಇಲ್ಲ. ಇದರ ಸುತ್ತ ಮುತ್ತ ಸೊಳ್ಳೆಗಳಿಲ್ಲ. ಈ ಸರೋವರದಲ್ಲಿರುವ ಜೀವಿವರ್ಗವೂ ಟಾಂಗನ್ಯೀಕ ಸರೋವರದ್ದೂ ಭಿನ್ನವಾದವು: ಆದರೆ ಇದೂ ಎಡ್ವರ್ಡ್ ಸರೋವರದ್ದೂ ಒಂದೇತರ. ಜ್ವಾಲಾಮುಖಿಯಲಾವದಿಂದಲೂ ಮಳೆಯ ನೀರಿನಿಂದಲೂ ಈ ಸರೋವರ ಸಂಭವಿಸಿದೆಯೆಂದು ಹೇಳಲಾಗಿದೆ. 1894ರಲ್ಲಿ ಜರ್ಮನಿಯ ಪರಿಶೋಧಕ ಕೌಂಟ್ ಅಡಾಲ್ಫ್ ವಾನ್ ಗಾಟ್ಸೆನ್ ಮೊದಲ ಬಾರಿಗೆ ಕೀವೂ ಸರೋವರವನ್ನು ಸಂದರ್ಶಿಸಿದ ಐರೋಪ್ಯ. (ಎಸ್.ಎನ್.ಎಲ್.)

**ಕೀವೊಸಡು :** ಕೀವು ತುಂಬಿದ ಒಸಡು (ಪಯೋರಿಯ). ಒಸಡಿನಲ್ಲಿ ಹಲ್ಲುಗಳಿಗಾಗಿ ಕುಳಿಗಳಿವೆ. ಇವುಗಳಲ್ಲಿ ನೆಲೆಸಿರುವ ಹಲ್ಲುಗಳ ಸುತ್ತ ಅಂಗಾಂಶ ಬೆಳೆದು ಹಲ್ಲುಗಳು ಅಲುಗಾಡದೆ ಭದ್ರವಾಗಿರುತ್ತವೆ. ಹುಳುಕುಹಲ್ಲಿನಿಂದ ಇಲ್ಲವೇ ಹಲ್ಲಿಗೆ ಏಟು ಬೀಳುವುದರಿಂದ ಈ ಅಂಗಾಂಶ ಸೋಂಕಿಗೆ ಈಡಾಗುತ್ತದೆ. ಅದರಲ್ಲಿ ಮೊದಲಿಗೆ ಉರಿಯೂತ

ಕಾಣಿಸಿಕೊಂಡು ಅಂಗಾಂಶ ಹಾಳಾಗತೊಡಗುತ್ತದೆ. ಅನಂತರ ಹಲ್ಲಿಗೆ ಬೆಂಬಲವಾಗಿರುವ ಸುತ್ತಲಿನ ಮೂಳೆ ಕೂಡ ನಾಶವಾಗತೊಡಗುತ್ತದೆ. ಈ ಸ್ಥಿತಿಯೇ ಕೀವೊಸಡು. ಹಲ್ಲಿನ ಬಳಿ ಕೀವು ಕಾಣಿಸುವ ಮೊದಲೇ ಹಲ್ಲಿನ ಸುತ್ತ ಇರುವ ಮೂಳೆ ಹಾಗೂ ಅಂಗಾಂಶ ಬಹಳಷ್ಟು ಹಾಳಾಗಿರುತ್ತವಾದ್ದರಿಂದ ಈ ಸ್ಥಿತಿ ರೋಗದ ಕೊನೆಯ ಹಂತವನ್ನು ಪ್ರತಿನಿಧಿಸುತ್ತದೆ. ಕೆಲವೇ ದಿವಸಗಳಲ್ಲಿ ಹಲ್ಲು ಬೀಳುತ್ತದೆ. ಕೀವೊಸಡಿನಲ್ಲಿ ಒಸಡಿನ ಒಳ ಹಾಗೂ ಹೊರಭಾಗಗಳಲ್ಲಿರುವ ಅಂಗಾಂಶಕ್ಕಿಂತ ಹಲ್ಲುಗಳ ಮಧ್ಯೆ ಇರುವ ಅಂಗಾಂಶ ಹೆಚ್ಚಾಗಿ ನಾಶಹೊಂದುತ್ತದೆ. ಮೇಲ್ದವಡೆಯಲ್ಲಿನ ಕೀವೊಸಡಿನಿಂದ ಸೋಂಕು ಮೇಲ್ದವಡೆಯ ಮೂಳೆಗೂ ಹರಡುವ ಸಾಧ್ಯತೆ ಉಂಟು. *

**ಕೀಸಲ್‌ಗರ್ :** ಡೈಆಟಮ್ಸ್ ಎಂಬ ಏಕಾಣುಸಸ್ಯಜೀವಿಗಳ ಸಿಲಿಕಾಯುಕ್ತ ಅವಶೇಷಕ್ಕೆ ಈ ಹೆಸರು. ಡೈಆಟಮೇಷಿಯಸ್ ಮಣ್ಣು ಎಂದು ಸಹ ಹೆಸರಿದೆ. ಸಮುದ್ರವಾಸಿಗಳಾದ ಡೈಆಟಂ ಸಸ್ಯಗಳು ಸತ್ತು ಕೊಳೆತಮೇಲೆ ಮಣ್ಣಿನ ಕಣಗಳಾಗುತ್ತವೆ. ಇವು ಪ್ರಮುಖವಾಗಿ ಸಿಲಿಕದ ರೂಪಗಳು. ಕ್ರಮೇಣ ಈ ಕಣಗಳು ಸಮುದ್ರತಳದಲ್ಲಿ ಶೇಖರಗೊಂಡು ಕೀಸಲ್‌ಗರಿನ ನಿಕ್ಷೇಪದ ರೂಪು ತಳೆಯುತ್ತವೆ. ಇಂಥ ಸಂಚಯನ ವಾರ್ಷಿಕವಾಗಿ 1–500 ಸೆಂಮೀ ನಷ್ಟು ದಪ್ಪ ಬೆಳೆಯಬಹುದಷ್ಟೆ. ಕೀಸಲ್‌ಗರ್ ಮಣ್ಣು ಜಲಜಶಿಲೆಯ ರೂಪದಲ್ಲಿ ಕ್ಯಾಲಿಫೋರ್ನಿಯದ ತೀರದಲ್ಲಿ ಹೇರಳವಾಗಿ ದೊರೆಯುತ್ತದೆ. ಇದರ ನಿಕ್ಷೇಪದ 426 ಮೀಗಳಿಗೂ ಮೀರಿ ಉಂಟು. ಇದಲ್ಲದೇ ಡೆನ್‌ಮಾರ್ಕ್, ಜಪಾನ್, ಫ್ರಾನ್ಸ್ ಮತ್ತು ಆಲ್ಜೀರಿಯ ದೇಶಗಳಲ್ಲೂ ಕೀಸಲ್‌ಗರ್ ನಿಕ್ಷೇಪಗಳಿವೆ. ಇವು ಪ್ಲೀಸ್ಟೊಸೀನ್ ಮತ್ತು ತರುವಾಯದ ಕಾಲದ್ದೆಂದು ತಿಳಿದು ಬಂದಿವೆ.

ಚಾಕ್ ಪುಡಿಯನ್ನು ಹೋಲುವ ಕೀಸಲ್‌ಗರ್‌ನ ಸಂಗ್ರಹದಲ್ಲಿ ಸಿಲಿಕ ($SiO_2$) ಇರುವುದುಂಟು. ಕಾಯಿಸಿದ ಅನಂತರ ಅದರಲ್ಲಿರುವ ಅಂಗವಸ್ತುಗಳ ಸರಾಸರಿ ಸೇಕಡ ಪ್ರಮಾಣ ಕೆಳಕಂಡಂತಿದೆ: $SiO_2$, 88.I, $Al_2O_3$ 4.0, $Fe_2O_3$ 1.6, CaO 1.6, MgO 0.6, ಇತರ ವಸ್ತುಗಳು 1.4, ಸುಟ್ಟಾಗ ಉಂಟಾಗುವ ಇಳುವರಿ 3.7. ಕೀಸಲ್‌ಗರ್‌ನ ವ್ಯಾಪಕ ಉಪಯೋಗಕ್ಕೆ ಆಧಾರವಾದ ಅದರ ಗುಣ ಲಕ್ಷಣಗಳನ್ನು ಮುಂದೆ ಪ್ರಸ್ತಾಪಿಸಲಾಗಿದೆ. ಅದರ ಕಣಗಳ ಗಾತ್ರ ಅತಿಸೂಕ್ಷ್ಮ. ನೈಸರ್ಗಿಕ ನಮೂನೆಯ ಶೇ.52 ಭಾಗದಷ್ಟು ಕಣಗಳು–2–10 ಮೈಕ್ರಾನ್ ಗಾತ್ರದವು. ಶೇ.26 ಪಾಲಿನಷ್ಟು ಕಣಗಳು 2 ಮೈಕ್ರಾನುಗಳಿಗಿಂತ ಕಡಿಮೆ ಮತ್ತು ಶೇ.22 ಭಾಗ 10 ಮೈಕ್ರಾನುಗಳಿಗಿಂತ ಹೆಚ್ಚು ಗಾತ್ರದವು, ಸೋಸುವ ಸಾಧನಗಳಲ್ಲಿ ಕೀಸಲ್‌ಗರ್‌ನ ಬಳಕೆ ಪ್ರಧಾನವಾಗಿ ಕಣಗಾತ್ರವನ್ನು ಅವಲಂಬಿಸಿದೆ, ಪ್ರಕೃತಿದತ್ತವಾದ ಕೀಸಲ್‌ಗರನ್ನು ಸುಟ್ಟರೆ ಊದಾ ಅಥವಾ ಇಟ್ಟಿಗೆ ಬಣ್ಣದ ಪುಡಿ ಉಂಟಾಗುತ್ತದೆ. ಇದರ ಮೂಲಕ ದ್ರವಗಳನ್ನು ದ್ವಿಗುಣಿತ ವೇಗದಲ್ಲಿ ಸೋಸಬಹುದು. ಸ್ರಾವಕವನ್ನು ಬೆರೆಸಿ ಸುಟ್ಟರೆ ಹಾಲು ಬಿಳುಪಾದ ಕೀಸಲ್‌ಗರ್ ದೊರೆಯುವುದು. ಇದರ ಮೂಲಕ ದ್ರವಗಳನ್ನು ಸೋಸುವುದು ಹತ್ತುಪಟ್ಟು ಸರಾಗ.

1 ಗ್ರಾಂ ಕೀಸಲ್‌ಗರ್ ಪುಡಿಯ ಮೇಲ್ಮೈ ವಿಸ್ತೀರ್ಣ 15–30 ಚದರ ಮೀಟರುಗಳು. ಗಿರಣಿಯಾಡಿಸಿದ ಪುಡಿಯ ಸಾಂದ್ರತೆ ಘನ ಅಡಿಗೆ 5–15 ಪೌಂಡುಗಳಷ್ಟು ಕಡಿಮೆ. 1 ಗ್ರಾಂ ಉತ್ತಮ ದರ್ಜೆಯ ಪುಡಿ 3 ಮಿಲೀ. ಅಥವಾ ಹೆಚ್ಚುದ್ರವವನ್ನು ಹೀರಿಕೊಳ್ಳುವಷ್ಟು ಸರಂಧ್ರವಾಗಿರುವುದು. ನೀರಿನಲ್ಲಿ ಅದ್ರಾವ್ಯವೆನ್ನಬಹುದು. ಕರಗುವ ಉಷ್ಣತೆ 1.000°–1.600° ಸೆಂ. ಮಿತಿಯಲ್ಲಿರುತ್ತದೆ. ಹೈಡ್ರೊಫ್ಲೋರಿಕ್ ಆಮ್ಲದ ಹೊರತು ಇತರ ಆಮ್ಲೀಯ ವಸ್ತುಗಳಿಂದ ಪ್ರಭಾವಿತವಾಗುವುದಿಲ್ಲ. ಸುಟ್ಟ ಸುಣ್ಣದಂಥ ಕ್ಷಾರಗಳೊಡನೆ ಸಾಮಾನ್ಯ ಉಷ್ಣತೆಯಲ್ಲಿ ನಿಧಾನವಾಗಿಯೂ ಅಧಿಕ ಉಷ್ಣತೆಯಲ್ಲಿ ಕ್ಷಿಪ್ರವಾಗಿಯೂ ವರ್ತಿಸುವುದು, ಉದಾಹರಣೆಗೆ, ಕೀಸಲ್‌ಗರ್ ಸುಣ್ಣ ಮತ್ತು ಕಲ್ನಾರುಗಳ ತೇವವಾದ ಮಿಶ್ರಣವನ್ನು ಒತ್ತಡದಲ್ಲಿ ಕಾಯಿಸಿ ಉಷ್ಣನಿರೋಧಕ ಇಟ್ಟಿಗೆಗಳನ್ನು ತಯಾರಿಸಲು ಈ ಕ್ರಿಯೆ ನೆರವಾಗುತ್ತದೆ.

ಉತ್ಪಾದಿಸಿದ ಕೀಸಲ್‌ಗರ್‌ನ ಸುಮಾರು ಅರ್ಧಭಾಗದಷ್ಟು ವಿನಿಯೋಗವಾಗುವುದು. ಸೋಸುವ ಸಾಧನಗಳಲ್ಲಿ ಸಕ್ಕರೆಯ ದ್ರಾವಣ, ಜೀವಿ ವಿರೋಧಕಗಳ ತಯಾರಿಕೆಯಲ್ಲಿ ಒದಗುವ ಹುಳಿತದ್ರವ (ಫರ್ಮೆಂಟೆಡ್ ಲಿಕ್ಕರ್), ಬಟ್ಟೆಗಳ ನಿರ್ಜಲ ಮಾರ್ಜನದಲ್ಲಿ ಉಪಯೋಗಿಸುವ ನ್ಯಾಫ್ತಾ, ದಂತಧಾವನ ಅಂಜನಗಳು, ಪೆಟ್ರೋಲಿಯಂ ಉತ್ಪನ್ನಗಳು, ಕೊಬ್ಬಿನ ತೈಲಗಳು ಮೊದಲಾದವನ್ನು ಸೋಸುವ ಉಪಕರಣಗಳಲ್ಲಿ ಕೀಸಲ್‌ಗರ್ ಇರುತ್ತದೆ. ಫೋರ್ ಡ್ರಿನಿಯರ್ ಯಂತ್ರದ ಮೇಲೆ ಕಾಗದದ ರಾಶಿ ತನ್ನ ತೇವಾಂಶವನ್ನು ಬೇಗ ಕಳೆದುಕೊಳ್ಳುವಂತೆ ಮಾಡುವಲ್ಲಿಯೂ, ಆಲ್ಕೊಹಾಲ್ ಪಾನೀಯಗಳು ಮತ್ತು ಹಣ್ಣಿನ ರಸಗಳಲ್ಲಿ ಇರುವ ವಿಲಂಬಿತ ವಸ್ತುಗಳ ನಿವಾರಣೆಯಲ್ಲಿಯೂ ಕೀಸಲ್‌ಗರ್‌ನ ಉಪಯೋಗ ಉಂಟು, ಪ್ಲಾಸ್ಟಿಕ್ಕುಗಳು, ಕಾಗದ, ರಬ್ಬರ್ ಮತ್ತು ಕೃತಕ ಗೊಬ್ಬರಗಳಿಗೆ ಇದು ಫಿಲ್ಲರ್ ಆಗಿ ವರ್ತಿಸುವುದು, ಪೆಯಿಂಟುಗಳಿಗೆ ಕೂಡಿಸಿದರೆ ಅವುಗಳ ಆಚ್ಛಾದನಾ ಸಾಮರ್ಥ್ಯವನ್ನು ಹೆಚ್ಚಿಸಬಲ್ಲುದು. ಅದರ ಗಣನೀಯ ಮೇಲ್ಮೈ ವಿಸ್ತೀರ್ಣದ ಫಲವಾಗಿ ಕೀಸಲ್‌ಗರ್‌ನ ಮೇಲೆ ಹರಡಿರುವ ವೇಗವರ್ಧಕ ಉತ್ತಮವಾಗಿ ಕಾರ್ಯನಿರ್ವಹಿಸುವುದು. ನೈಟ್ರೇಟ್ ಗೊಬ್ಬರಗಳೊಂದಿಗೆ ಬೆರೆಸಿದರೆ ಕಣಗಳು ಹೆಂಟೆಗಳಂತಾಗಿ ತೊಂದರೆ ಕೊಡುವುದಿಲ್ಲ. ಫಿಲ್ಲರಾಗಿ ಬಳಸಿದ ಕೀಸಲ್‌ಗರ್‌ನ್ನು ಮುಂಚೆಯೇ ಸುಣ್ಣ ಅಥವಾ ಮ್ಯಾಗ್ನೀಸಿಯ ಸ್ರಾವಕದೊಡನೆ ಸುಟ್ಟಿದ್ದರೆ ಉತ್ತಮ ಫಲಿತಾಂಶ ದೊರೆಯುವುದು.

ಕೀಸಲ್‌ಗರ್‌ನ ಉಷ್ಣನಿರೋಧಕ ಸಾಮರ್ಥ್ಯವು ಅದರ ಅಲ್ಪಸಾಂದ್ರತೆ, ರಂಧ್ರಗಳ ಸೂಕ್ಷ್ಮತೆ. 800°–1900° ಸೆಂ. ಉಷ್ಣತಾ ಮಿತಿಯಲ್ಲೂ ಹೆಚ್ಚು ಸಂಕುಚಿತವಾಗದೆ ಉಳಿಯುವ ಸಾಮರ್ಥ್ಯ ಈ ಗುಣಗಳನ್ನು ಅವಲಂಬಿಸಿದೆ. ಇದಕ್ಕಾಗಿ ಕೀಸಲ್‌ಗರ್‌ಯುಕ್ತ ಶಿಲೆಯನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ಉಪಯೋಗಿಸುತ್ತಿದ್ದರು. ಅನಂತರ ಕೀಸಲ್‌ಗರ್ ಪುಡಿಯನ್ನು ಜೇಡಿಮಣ್ಣು ಮತ್ತು ನೀರಿನೊಡನೆ ಕಲಸಿ ಸಾಮಾನ್ಯ ಇಟ್ಟಿಗೆಗಳನ್ನು ರೂಪಿಸುವಂತೆ ನಿರ್ದಿಷ್ಟ ಆಕಾರಕ್ಕೆ ಕತ್ತರಿಸಿ ಒಣಗಿಸಿ ಸುಟ್ಟು ಉಪಯೋಗಿಸುವುದು ರೂಢಿಗೆ ಬಂತು. ಈಗ ಅದನ್ನು ಅಗಲವಾದ ಹಲಗೆಗಳ ರೂಪದಲ್ಲಿ ಬಳಸುತ್ತಾರೆ. ಇಂಥ ಉಷ್ಣನಿರೋಧಕ ಹಾಳೆಗಳನ್ನು ಮಾಡಲು ಕೀಸಲ್‌ಗರ್ ಕಲ್ನಾರು ಮತ್ತು ಬೆಂಟೊನೈಟ್ ಅಥವಾ ಮಾಗ್ನಸೈಟ್ ಅಥವಾ ಸುಣ್ಣದ ಹಾಲಿನೊಡನೆ ಕುದಿಸಿ ಪಡೆದ ಸಿಲಿಕೇಟಿನಂಥ ಬಂಧನ ವಸ್ತುವಿರುವ ಮಿಶ್ರಣ ಅಗತ್ಯ. ಪುಡಿಯಾದ ಕೀಸಲ್‌ಗರ್‌ನ್ನು ಕುಲುಮೆಯ ಗೋಡೆಗಳ ನಡುವೆ ತುಂಬಿದಾಗಲೂ ಅದು ಯಶಸ್ವಿಯಾಗಿ ಕುಲುಮೆಯ ಉಷ್ಣವನ್ನು ಕಾಪಾಡಿಕೊಂಡು ಬರಬಲ್ಲದು.

ಆಲ್ಫ್ರೆಡ್ ನೊಬೆಲ್ **(ನೋಡಿ– ನೊಬೆಲ್, ಆಲ್ಫ್ರೆಡ್ ಬೆರ್ನಾರ್ಡ್)** ನೈಟ್ರೊಗ್ಲಿಸರಿನನ್ನು ಕಂಡುಹಿಡಿದ ಅನಂತರ ಕೀಸಲ್‌ಗರಿನ ಪ್ರಾಮುಖ್ಯ ಹೆಚ್ಚಿತು. ನೈಟ್ರೊಗ್ಲಿಸರಿನ್ ತೀವ್ರ ಸ್ಫೋಟಕ ಗುಣವುಳ್ಳ ವಸ್ತು. ಅದನ್ನಿಟ್ಟಿರುವ ಪಾತ್ರೆ ಸ್ವಲ್ಪ ಅಲುಗಾಡಿದರೂ ಸಾಕು ಭಯಂಕರ ಸ್ಫೋಟವಾಗುತ್ತದೆ. ಆದ್ದರಿಂದ ಅದನ್ನು ದ್ರವರೂಪದಲ್ಲಿ ಸಾಗಿಸುವಂತಿಲ್ಲ. ಆದರೆ ಅದನ್ನು ಕೀಸಲ್‌ಗರ್‌ನಿಂದ ಅವಶೋಷಿಸಿ ಉತ್ಪನ್ನ ವಸ್ತುವನ್ನು ನಿರಾತಂಕವಾಗಿ ಊರಿಂದೂರಿಗೆ ರವಾನಿಸಬಹುದು. ಹೀಗೆ ನೈಟ್ರೊಗ್ಲಿಸರಿನ್ ಹೀರಿಕೊಂಡು ಕೀಸಲ್‌ಗರನ್ನು ಡೈನಮೈಟ್ ಎಂದು ಕರೆಯುತ್ತಾರೆ. ಈಗ ಕೀಸಲ್‌ಗರಿಗಿಂತ ಉತ್ತಮ ಅವಶೋಷಕಗಳು ದೊರೆಯುವುದರಿಂದ ಡೈನಮೈಟಿನ ತಯಾರಿಕೆಯಲ್ಲಿ ಅದರ ಉಪಯೋಗ ನಿಂತುಹೋಗಿದೆ. ಆದಾಗ್ಯೂ, ಇತರ ದ್ರವಗಳನ್ನು ಹೀರಲು ಕೀಸಲ್‌ಗರ್ ಬಳಸಲ್ಪಡುತ್ತಿದೆ. ಉದಾಹರಣೆಗೆ, ಯಂತ್ರಾಗಾರಗಳ ಮೆಷಿನ್ ಷಾಪುಗಳ ನೆಲದ ಮೇಲೆ ಎಣ್ಣೆಚೆಲ್ಲಿರುವುದು ಸಾಮಾನ್ಯ. ಅಂಥ ನೆಲದ ಮೇಲೆ ಕೀಸಲ್‌ಗರ್ ಪುಡಿಯನ್ನು ಉದುರಿಸಿ ಗುಡಿಸಿದರೆ ಸ್ವಚ್ಛವಾಗುತ್ತದೆ. ಸಹಸ್ರಾರು ಟನ್ನುಗಳಷ್ಟು ಕೀಸಲ್‌ಗರ್ ಇದರ ಸಲುವಾಗಿ ವಿನಿಯೋಗವಾಗುತ್ತಿದೆ. **(ಎಚ್.ಜಿ.ಎಸ್.; ಎಂ.ಎಸ್.ಎಸ್.ಎಚ್.)**

**ಕೀಳು ವಜ್ರ :** ಮಚ್ಚೆಗಳು ಮತ್ತು ರೇಖೆಗಳಿಂದ ಕೂಡಿರುವ, ಈ ಕಾರಣದಿಂದ ಒಡವೆ ಆಭರಣಗಳಿಗೆ ಯೋಗ್ಯವಲ್ಲದ, ಆದರೆ ಕೈಗಾರಿಕೆಗಳಲ್ಲಿ ಉಪಯೋಗವಿರುವ, ವಜ್ರಪ್ರಭೇದ. ಕೈಗಾರಿಕಾವಜ್ರ, ಒರಟುವಜ್ರ ಪರ್ಯಾಯಪದಗಳು. ಕೀಳುವಜ್ರದಲ್ಲಿ ಎರಡು ಬಗೆಗಳಿವೆ: ಕಾರ್ಬನಾಡೊ, ಬೋರ್ಟ್. ಕಾರ್ಬನಾಡೊ ಬಹುಗಟ್ಟಿಯಾದ ಗಡುಸಾದ ಬೂದು ಅಥವಾ ಕಂದು ಬಣ್ಣದ ಹರಳು ವಜ್ರ, ಬೋರ್ಟ್ ಅಂದರೆ ಸ್ವಚ್ಛವಾಗಿರದೆ ಮಸಕು ಬಣ್ಣದ ಹಾಗೂ ಮಚ್ಚೆ ರೇಖೆಗಳಿಂದ ಕೂಡಿದ ಸಣ್ಣ ಸಣ್ಣ ಹರಳು ಚೂರುಗಳು. ಬೆಲೆಯಲ್ಲಿ ಕಾರ್ಬನಾಡೊಗಳಿಗಿಂತ ಕಡಿಮೆಯಾದುದರಿಂದ ಕೈಗಾರಿಕೆಗಳಲ್ಲಿ ಬೋರ್ಟನ್ನು ಹೆಚ್ಚಾಗಿ ಅಪೇಕ್ಷಿಸುತ್ತಾರೆ.

ಕೀಳುವಜ್ರಗಳನ್ನು ಬಹು ಹಿಂದಿನಿಂದಲೂ ಗಾಜನ್ನು ಕತ್ತರಿಸುವುದಕ್ಕೆ ಉಪಯೋಗಿಸುವುದು ಬಳಕೆಯಲ್ಲಿದೆ. ಇದಕ್ಕೆ ಕಾರಣ ಬಳಕೆಯಲ್ಲಿರುವ ವಸ್ತುಗಳಲ್ಲೆಲ್ಲ ವಜ್ರಕ್ಕಿರುವ ಕಾಠಿಣ್ಯ ಮತ್ತೊಂದಕ್ಕಿಲ್ಲ. ಅಮೂಲ್ಯವಾದ ವಜ್ರದ ಹರಳುಗಳನ್ನು ಕತ್ತರಿಸುವುದಕ್ಕೂ ಸಾಣೆ ಹಿಡಿಯುವುದಕ್ಕೂ ಮೆರುಗು ಕೊಡುವುದಕ್ಕೂ ಕೀಳುವಜ್ರವಾಗಲಿ ಅದರ ಪುಡಿಯಾಗಲಿ ಬೇಕೇ ಬೇಕು. ಆಧುನಿಕ ಯಂತ್ರ ಯುಗದಲ್ಲಿ ಕೀಳು ವಜ್ರದ ಉಪಯುಕ್ತತೆ ಬಹುಮುಖವಾಗಿದೆ. ತಂತಿಗಳನ್ನು ಎಳೆಯಲು ಉಪಯೋಗಿಸುವ ಅಚ್ಚುಗಳಲ್ಲಿಯೂ ಅದುರು ಮತ್ತು ಪೆಟ್ರೋಲ್ ಅನ್ವೇಷಣೆಯಲ್ಲಿ ಬೇಕಾಗುವ ಕೊರೆಯುವ ಉಪಕರಣಗಳಲ್ಲಿಯೂ ಸಾಣೆ ಹಿಡಿಯುವುದಕ್ಕೆ ಸಹಾಯಕವಾದ ಘರ್ಷಕ ಚಕ್ರಗಳನ್ನು ತಯಾರಿಸುವ ಸಲಕರಣೆಗಳಲ್ಲಿಯೂ ಕಾರ್ಬನಡೊ ಬಗೆಯ ಕೀಳುವಜ್ರ ಅಗತ್ಯವಾಗಿ ಬೇಕೇಬೇಕು. ಬೋರ್ಟನ್ನು ಮೋಟಾರು ಕಾರು ವಿಶೇಷವಾಗಿ ಬಳಸುತ್ತಾರೆ. ಬಂಡೆ ಉಕ್ಕು ಇತ್ಯಾದಿಗಳನ್ನು ಕೊಯ್ಯುವ ಮತ್ತು ಕೊರೆಯುವ ಉಪಕರಣಗಳ ತಯಾರಿಕೆಯಲ್ಲಿ ವಜ್ರದ ಮೊನೆ ಬಹಳ ಆವಶ್ಯಕ. ಇಂಥ ಕೊರೆಯುವ ಒಂದೊಂದು ಉಪಕರಣದಲ್ಲೂ ಸುಮಾರು 7 ಕ್ಯಾರಟ್ ತೂಕವಿರುವ 150–180 ಸಣ್ಣ ಸಣ್ಣ ಬೋರ್ಟ್ ಬಗೆಯ ಕೀಳು ವಜ್ರಗಳಿರುತ್ತವೆ. ಅಲ್ಲದೆ ಕೀಳು ವಜ್ರವನ್ನು ಚೆನ್ನಾಗಿ ಅರೆದು ತಯಾರಿಸಿದ ವಜ್ರದ ಪುಡಿಯನ್ನು ಘರ್ಷಕ ವಸ್ತುವಾಗಿ ಅಮೂಲ್ಯ ರತ್ನಗಳನ್ನು ಹಾಗೂ ಇತರ ಗಡುಸಾದ ಖನಿಜಗಳನ್ನು ಸಾಣೆ ಹಿಡಿಯಲು ಉಪಯೋಗಿಸುತ್ತಾರೆ: ಪುಡಿಪುಡಿಯಾದ ವಜ್ರದ ಅತಿ ಸಣ್ಣ ಚೂರುಗಳು ಸಹ ಕರ್ತನಚಕ್ರಗಳನ್ನು (ಕಟಿಂಗ್ ವ್ಹೀಲ್ಸ್) ತಯಾರಿಸಲು ಬೇಕಾಗುತ್ತದೆ.

ಪ್ರಕೃತಿಯಲ್ಲಿ ವಜ್ರ ಮುಖ್ಯವಾಗಿ ದೊರಕುವುದು ಕಿಂಬರ್‌ಲೈಟ್ ಎಂಬ ಅಗ್ನಿಶಿಲೆಗಳಲ್ಲಿ ಅಥವಾ ಸಿಲಿಕಾಂಶ ಕಡಿಮೆ ಪ್ರಮಾಣದಲ್ಲಿರುವ (ಅಲ್ಟ್ರಾ ಬೇಸಿಕ್ಸ್) ಅಗ್ನಿಶಿಲೆಗಳಲ್ಲಿ. ಕೀಳುವಜ್ರದ ಉತ್ಪತ್ತಿಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ ದೇಶಗಳೆಂದರೆ ಆಫ್ರಿಕಖಂಡದ ಬೆಲ್ಜಿಯನ್ ಕಾಂಗೋ, ದಕ್ಷಿಣ ಆಫ್ರಿಕ, ಘಾನ, ಗೋಲ್ಡ್ ಕೋಸ್ಟ್, ಅಂಗಾಲಾ, ಸಿಯಾರಾ ಲಿಯೋನ್ ಮತ್ತು ರಷ್ಯದೇಶದ ಸೈಬೀರಿಯ. 1968ರ ವಿಶ್ವದ ಅಂಕಿ ಅಂಶಗಳ ಪ್ರಕಾರ ಕೀಳು ವಜ್ರದ ಉತ್ಪತ್ತಿ ಸುಮಾರು 2.58 ಕೋಟಿ ಕ್ಯಾರಟ್‌ಗಳು. ಅದರಲ್ಲಿ ಶೇ.44 ರಷ್ಟು ಬೆಲ್ಜಿಯನ್ ಕಾಂಗೋದಿಂದಲೂ ಶೇ. 22ರಷ್ಟು ಸೈಬೀರಿಯದಿಂದಲೂ ಶೇ. 16ರಷ್ಟು ದಕ್ಷಿಣ ಆಫ್ರಿಕದಿಂದಲೂ ಶೇ. 9ರಷ್ಟು ಘಾನದಿಂದಲೂ ಉತ್ಪತ್ತಿಯಾಗಿವೆ. ವಿಶ್ವದ ಕೀಳುವಜ್ರದ ನಿಕ್ಷೇಪ ಸುಮಾರು 60 ಕೋಟಿ ಕ್ಯಾರೆಟ್‌ಗಳೆಂದೂ ಅದರಲ್ಲಿ 50 ಕೋಟಿ ಕ್ಯಾರೆಟ್ ಕಾಂಗೋ ದೇಶವೊಂದರಲ್ಲೇ ಇದೆಯೆಂದೂ ಅಂದಾಜು ಮಾಡಲಾಗಿದೆ. ಭಾರತದಲ್ಲಿ ವಿಶ್ವದ ಅಂಕಿ ಅಂಶಗಳಿಗೆ ಅಳವಡಿಸಿಕೊಳ್ಳುವಷ್ಟು ವಜ್ರದ ಉತ್ಪತ್ತಿಯಿಲ್ಲದಿದ್ದರೂ ಅಮೂಲ್ಯ ವಜ್ರಗಳ ಜೊತೆಯಲ್ಲಿ ಕೀಳುವಜ್ರವೂ ದೊರೆಯುವ ಸ್ಥಳಗಳಿವೆ. ಮಧ್ಯಪ್ರದೇಶದ ಪನ್ನಾ ಎಂಬ ಸ್ಥಳದಲ್ಲೂ ಆಂಧ್ರ ಪ್ರದೇಶದ ವಜ್ರಕರೂರು ಎಂಬ ಸ್ಥಳದಲ್ಲೂ ವಜ್ರದ ಗಣಿಗಳಿವೆ. ಸ್ವಾಭಾವಿಕವಾಗಿ ದೊರೆಯುತ್ತಿರುವ ಕೀಳುವಜ್ರದ ಪ್ರಮಾಣ. ದಿನೇ ದಿನೇ ವೃದ್ಧಿಯಾಗುತ್ತಿರುವ ಕೈಗಾರಿಕೆಗಳ ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಇದರಿಂದ 1955 ರಿಂದೀಚೆಗೆ ಕೀಳು ವಜ್ರಗಳನ್ನು ಕೃತಕವಾಗಿ ತಯಾರಿಸಿ ಬೇಕಾದ ಕೈಗಾರಿಕೆಗಳಿಗೆ ಒದಗಿಸಲಾಗುತ್ತಿದೆ. ಈ ವಜ್ರದ ಇಂದಿನ ಉತ್ಪಾದನೆ ಬಹು ಅಧಿಕವಾಗಿ ಹೆಚ್ಚಿದೆ. (ಎಂ.ಎನ್.ವಿ.)

**ಕುಂಕುಮ ಕೇಸರಿ :** ಇರಿಡೇಸೀ ಕುಟುಂಬಕ್ಕೆ ಸೇರಿದ ಕ್ರೋಕಸ್ ಸಟೈವಸ್ ಎಂಬ ಶಾಸ್ತ್ರೀಯ ಹೆಸರಿನ ಮೂಲಿಕೆ ಸಸ್ಯಕ್ಕೂ ಅದರಿಂದ ಬೇರ್ಪಡಿಸಿ ಒಣಗಿಸಿದ ಶಲಾಕಾಗ್ರಗಳಿಗೂ ಇರುವ ಸಾಮಾನ್ಯ ಹೆಸರು (ಸ್ಯಾಫ್ರನ್). ಗ್ರೀಸ್ ಮತ್ತು ಏಷ್ಯ ಮೈನರ್ ಕುಂಕುಮ ಕೇಸರಿಯ ಮೂಲನೆಲೆಗಳು. ಭಾರತದಲ್ಲಿ ಇದನ್ನು ಕಾಶ್ಮೀರದ ಪಾಂಪೂರ್ ಮತ್ತು ಜಮ್ಮುವಿನ ಕಿಶ್ತವಾರ್ ಎಂಬಲ್ಲಿ ಮಾತ್ರ ಹೆಚ್ಚು ವಿಸ್ತಾರವಾಗಿ ಬೆಳೆಸಲಾಗುತ್ತಿದೆ. ಚೀನ, ಪಾಕಿಸ್ತಾನ, ಸ್ಪೇನ್, ಫ್ರಾನ್ಸ್‌ಗಳಲ್ಲೂ ಇದನ್ನು ಕಾಣಬಹುದು. ಕುಂಕಮಕೇಸರಿ ಗಿಡ 6"–10" ಎತ್ತರಕ್ಕೆ ಬೆಳೆಯುವ ಬಹುವಾರ್ಷಿಕ ಮೂಲಿಕೆ ಸಸ್ಯ. ಇದರಲ್ಲಿ ನೆಲದೊಳಗೆ ಹುದುಗಿರುವ ಈರುಳ್ಳಿಯಂಥ ಗೆಡ್ಡೆಯೂ ಉದ್ದವಾದ ಹುಲ್ಲಿನ ಎಸಳಿನಂಥ ಎಲೆಗಳೂ ಇವೆ. ಹೂಗಳ ಬಣ್ಣ ನೀಲಿ. ಅವಕ್ಕೆ ನವಿರಾದ ವಾಸನೆಯಿದೆ. ಒಂದೊಂದು ಹೂವಿನಲ್ಲೂ ಎಸಳಿನಂಥ ಶಲಾಕೆಯೂ ಮೂರು ಭಾಗಗಳಾಗಿ ವಿಂಗಡಿಸಿದ ಶಲಾಕಾಗ್ರಗಳೂ ಇವೆ. ಹೂವಿನಿಂದ ಬೇರ್ಪಡಿಸಿ ಒಣಗಿಸಿದ ಶಲಾಕಾಗ್ರಗಳೇ ಕುಂಕುಮಕೇಸರಿ. ಶಲಾಕಾಗ್ರಗಳಿಂದಲೇ ದೊರೆತ ಕೇಸರಿ ಉತ್ತಮ ಮಟ್ಟದ್ದು. ಇದಕ್ಕೆ ಕೇಕ್ ಸ್ಯಾಫ್ರನ್ ಎಂದು ಹೆಸರು. ಶಲಾಕಾಗ್ರದ ಕೆಳಗಿನ ಭಾಗದಿಂದ ತೆಗೆದ ಕೇಸರಿ ಸಾಧಾರಣ ಮಟ್ಟದ್ದು. ಇದಕ್ಕೆ ಹೇ ಸ್ಯಾಫ್ರನ್ ಎಂದು ಹೆಸರು.

ಕೇಸರಿ ಬಹಳ ಬೆಲೆ ಬಾಳತಕ್ಕ ವಸ್ತುಗಳಲ್ಲೊಂದು, ಭಾರತದಲ್ಲಿ ಈಗ ಉತ್ಪನ್ನವಾಗುತ್ತಿರುವ ಕೇಸರಿ ಇಲ್ಲೇ ಬಳಕೆಯಾಗುತ್ತಿದೆ. ಅಲ್ಲದೆ ಸ್ಪೇನ್ ಮತ್ತು ಫ್ರಾನ್ಸಿನಿಂದ ಹೆಚ್ಚಿನ ಪ್ರಮಾಣದಲ್ಲಿ ಕೇಸರಿಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಒಂದು ಪೌಂಡಿನಷ್ಟು ಕೇಸರಿಯನ್ನು ಪಡೆಯಲು ಕೊನೆಯ ಪಕ್ಷ 75,000 ಹೂಗಳನ್ನಾದರೂ ಶೇಖರಿಸಬೇಕಾಗುತ್ತದೆ. ಕಾಶ್ಮೀರದಲ್ಲಿ ಒಂದೊಂದು ಹೆಕ್ಟೇರಿಗೆ 140 ಪೌಂಡುಗಳಷ್ಟು ಹೂವನ್ನು ಪಡೆಯಲಾಗುತ್ತಿದೆ. ಇದರಿಂದ 5 ಪೌಂಡುಗಳಷ್ಟು ಕೇಸರಿ ದೊರೆಯುತ್ತದೆ. ಭಾರತದಲ್ಲೇ ಹೆಚ್ಚಿನ ಇಳುವರಿ ಪ್ರಮಾಣವಿದು.

ಕೇಸರಿಯಲ್ಲಿ ಕ್ರೋಸಿನ್ ಎಂಬ ಪ್ರಮುಖ ವರ್ಣಪದಾರ್ಥವಿದೆ. ಈ ಬಣ್ಣ ಸುಲಭವಾಗಿ ನೀರಿನಲ್ಲಿ ಕರಗುವುದರಿಂದ ಇದನ್ನು ಬಟ್ಟೆಗಳಿಗೆ ಬಣ್ಣ ಕೊಡಲು ಬಳಸಲಾಗದು. ಕೇಸರಿಯನ್ನು ಬೆಣ್ಣೆ, ಪಾನೀಯಗಳು, ಅನೇಕ ಬಗೆಯ ಸಿಹಿತಿಂಡಿಗಳಿಗೆ ಬಣ್ಣಕೊಡಲೂ, ವಿಶೇಷರುಚಿಯನ್ನು ಕೊಡಲೂ ಬಳಸುತ್ತಾರೆ. ಇದಕ್ಕೆ ಹಲವಾರು ಔಷಧೀಯಗುಣಗಳೂ ಇವೆ. ಇದನ್ನು ಉತ್ತೇಜಕ, ಸೆಳವುರೋಗ ನಿರೋಧಕ, ಕಾಮೋದ್ದೀಪಕ, ಜಠರೋತ್ತೇಜಕವಾಗಿ ಬಳಸುವುದುಂಟು. ಗೆಡ್ಡೆಗಳಿಂದ ಕುಂಕುಮ ಕೇಸರಿಯ ಸಂತತಿಯನ್ನು ಹೆಚ್ಚಿಸಬಹುದು. ಗಿಡ 10 ರಿಂದ 15 ವರ್ಷಗಳ ಕಾಲದವರೆಗೂ ಬದುಕಿರುತ್ತದೆ. ವರ್ಷ ವರ್ಷಕ್ಕೂ ಹೊಸ ಹೊಸ ಗೆಡ್ಡೆಗಳು ರೂಪಿತವಾದಂತೆಲ್ಲ ಹಳೆಯವು ಕೊಳೆತು ಹೋಗುತ್ತಿರುತ್ತವೆ. ಅಕ್ಟೋಬರ್ ಮತ್ತು ಡಿಸೆಂಬರ್ ನಡುವಣ ಕಾಲದಲ್ಲಿ ಕುಂಕುಮಕೇಸರಿ ಹೂಬಿಡುತ್ತದೆ. ಪ್ರತಿ ಮುಂಜಾನೆ ಇಬ್ಬನಿ ಕಾಣೆಯಾದ ತರುವಾಯ ಇದರ ಶಲಾಕಾಗ್ರಗಳನ್ನು ಬಿಡಿಸುವುದು ವಾಡಿಕೆ. ಈ ಕಾಲದಲ್ಲಿ ಮಳೆ ಹಿಡಿದರೆ ಇಳುವರಿ ಕಡಿಮೆಯಾಗುತ್ತದೆ. (ಪಿ.ಬಿ.)

**ಕುಂಕುಮದ ಮರ :** ಯುಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಮೆಲೋಟಸ್ ಫಿಲಿಪೆನ್ಸಿಸ್ ಎಂಬ ವೈಜ್ಞಾನಿಕ ಹೆಸರಿನ ಸಣ್ಣಪ್ರಮಾಣದ ನಿತ್ಯ ಹರಿದ್ವರ್ಣದ ಮರ. ಭಾರತದ ಆದ್ಯಂತವೂ ಕಂಡುಬರುವ ಈ ಮರ ಉತ್ತರ ಪ್ರದೇಶ ಮತ್ತು ಒರಿಸ್ಸ ರಾಜ್ಯಗಳಲ್ಲಿ ಹೆಚ್ಚಾಗಿಯೂ ಬಂಗಾಳ, ಕಾಶ್ಮೀರ, ಅಸ್ಸಾಂ, ಹಿಮಾಚಲ ಪ್ರದೇಶ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಸಾಧಾರಣವಾಗಿಯೂ ಕಂಡುಬರುತ್ತದೆ. ಕರ್ನಾಟಕ ರಾಜ್ಯದ ಉತ್ತರ ಕನ್ನಡ ಮತ್ತು ಬೆಳಗಾಂವಿ ಜಿಲ್ಲೆಗಳ ತೇವಮಯ ಪ್ರದೇಶಗಳಲ್ಲೂ ಕುರುಚಲು ಗಿಡದ ಕಾಡುಗಳಲ್ಲೂ ಸ್ವಲ್ಪಮಟ್ಟಿಗೆ ಬೆಳೆಯುತ್ತದೆ. ಯಥೇಚ್ಛವಾಗಿ ಕವಲೊಡೆದ ಇದರ ಕೊಂಬೆಗಳ ಮೇಲೆ ತೆಳುವಾದ ಚಕ್ಕೆಯಿರುತ್ತದೆ. ಹೆಚ್ಚುಕಡಿಮೆ ದೀರ್ಘ ವೃತ್ತಾಕಾರದ ಇದರ ಎಲೆಗಳ ಮೇಲೆ ರೋಮಗಳಿದ್ದು ಅವುಗಳ ತಳದಲ್ಲಿ ಕೆಂಪು ಗ್ರಂಥಿಗಳಿರುತ್ತವೆ. ಹೂಗಳು ಸ್ಪೈಕ್ ಮಾದರಿಯ ಗೊಂಚಲಾಗಿ ಜೋಡಿಸಿಕೊಂಡಿರುತ್ತವೆ. ಸಂಪುಟ ಮಾದರಿಯ ಇದರ ಕಾಯಿಗಳೊಳಗೆ ಕಪ್ಪುಬಣ್ಣದ ನಯವಾದ ಬೀಜಗಳಿರುತ್ತವೆ.

ಏಪ್ರಿಲ್–ಮೇ ತಿಂಗಳುಗಳಲ್ಲಿ ಬಲಿತು ಸುರಿಯುವ ಬೀಜಗಳು ಮಳೆಗಾಲದಲ್ಲಿ ಸ್ವಾಭಾವಿಕವಾಗಿ ಮೊಳೆತು ಗಿಡಗಳಾಗುತ್ತವೆ. ಏಪ್ರಿಲ್ ತಿಂಗಳಲ್ಲಿ ಬೀಜಗಳನ್ನು ಬಿತ್ತಿ ಬೆಳೆಸಿ ವ್ಯವಸಾಯ ಮಾಡುವುದುಂಟು. ಮೊದಲ ಎರಡು ವರ್ಷಗಳಲ್ಲಿ ಕಳೆ ಕಿತ್ತು ಗೊಬ್ಬರ ಹಾಕಿ ಚೆನ್ನಾಗಿ ಬೇಸಾಯ ಮಾಡಬೇಕು. ಗಿಡದ ಬೇರುಗಳಿಂದಲೂ ಹೊಸ ಗಿಡಗಳು ಹುಟ್ಟುವುದುಂಟು.

ಹಿಂದಿನಿಂದಲೂ ಕುಂಕುಮದ ಮರ ಬಣ್ಣದ ತಯಾರಿಕೆಗಾಗಿ ಉಪಯುಕ್ತವೆನಿಸಿದೆ. ಬಲಿತ ಕಾಯಿಗಳಲ್ಲಿರುವ ಕೆಂಪು ಗ್ರಂಥಿಗಳಿಂದ ಬಣ್ಣ ತಯಾರಿಸುತ್ತಾರೆ. ಕಾಯಿಗಳನ್ನು ಬಡಿದು ಕೆಂಪು ಬಣ್ಣದ ಪುಡಿಯನ್ನು ಸಂಗ್ರಹಿಸುತ್ತಾರೆ. ಕಾಯಿಗಳನ್ನು ನೀರಿನಲ್ಲಿ ನೆನೆಸಿ ಕೆಂಪುದ್ರವವನ್ನಾಗಿ ಮಾಡಿ ಅದನ್ನು ಹಿಂಗಿಸಿ ಪುಡಿಯನ್ನು ತಯಾರಿಸುವುದೂ ಉಂಟು. ಈ ಪುಡಿಯನ್ನೆ ಕುಂಕುಮವೆಂದು ಬಳಸುವುದು. ಶುದ್ಧರೂಪದಲ್ಲಿ ಅದಕ್ಕೆ ಯಾವ ವಾಸನೆಯೂ ಇಲ್ಲ. ಆದರೆ ಮಾರಾಟಕ್ಕೆ ಬರುವ ಕುಂಕುಮದಲ್ಲಿ ಇತರ ಅಂಶಗಳನ್ನು ಸೇರಿಸಿ ಕಲಬೆರಕೆ ಮಾಡಿರುವುದುಂಟು. ನೈಸರ್ಗಿಕ ಕುಂಕುಮದಲ್ಲಿ ರಾಟ್ಲೆರಿನ್ ಮತ್ತು ಐಸೋರಾಟ್ಲೆರಿನ್ ಎಂಬ ಅಂಶಗಳು ಉಂಟು. ಟ್ಯಾನಿನ್ ಗೋಂದು, ಆಕ್ಸಾಲಿಕ್ ಮತ್ತು ಸಿಟ್ರಿಕ್ ಆಮ್ಲಗಳೂ ಇರುತ್ತವೆ. ಕುಂಕುಮ ತಣ್ಣೀರಿನಲ್ಲಿ ಕರಗುವುದಿಲ್ಲ. ಬಿಸಿನೀರಿನಲ್ಲಿ ಸ್ವಲ್ಪ ಮಟ್ಟಿಗೆ ಕರಗುತ್ತದೆ. ಆಲ್ಕೊಹಾಲಿನಲ್ಲಿ ಚೆನ್ನಾಗಿ ಕರಗಿ ಕೆಂಪು ದ್ರಾವಣವಾಗುತ್ತದೆ. ಭಾರತದಲ್ಲಿ ಕುಂಕುಮವನ್ನು ಅನಾದಿಕಾಲದಿಂದ ಶುಭಕಾರ್ಯಗಳಲ್ಲೂ ಮಹಿಳೆಯರ ಅಲಂಕಾರವಸ್ತುವನ್ನಾಗಿಯೂ ಬಳಸಲಾಗುತ್ತಿದೆ. ಇತ್ತೀಚಿನವರೆಗೂ ಅದನ್ನು ಉಣ್ಣೆ ಮತ್ತು ರೇಷ್ಮೆಬಟ್ಟೆಗಳಿಗೆ ಬಣ್ಣಕಟ್ಟಲು ಬಳಸಲಾಗುತ್ತಿತ್ತು. ಅದರ ಕಿತ್ತಳೆಗೆಂಪು ಅಥವಾ ಜ್ವಾಲಾವರ್ಣ ಸಾಬೂನು, ಕ್ಷಾರ, ಆಮ್ಲ ಇತ್ಯಾದಿಗಳ ಪ್ರಭಾವಕ್ಕೆ ಕುಂದುವುದಿಲ್ಲವಾದರೂ ಬಿಸಿಲಿಗೆ ಬಿಳಿಚಿಕೊಳ್ಳುತ್ತದೆ. ಹಿಂದೆ ಈ ಬಣ್ಣವನ್ನು ಪರದೇಶಗಳಿಗೆ ರಫ್ತುಮಾಡಲಾಗುತ್ತಿತ್ತು. ಕುಂಕುಮವನ್ನು ಹೋಲುವ ಕೃತಕವರ್ಣಗಳು ರಾಸಾಯನಿಕವಾಗಿ ತಯಾರಾದಂತೆ ಕುಂಕುಮದ ವಾಣಿಜ್ಯಪ್ರಾಮುಖ್ಯ ಕಡಮೆಯಾಗುತ್ತಿದೆ. ತುಪ್ಪ ಮತ್ತು ವನಸ್ಪತಿ ತೈಲಗಳನ್ನು ರಕ್ಷಿಸಿಡುವುದಕ್ಕೂ ಅವುಗಳಲ್ಲಿರುವ ಎ ಜೀವಸತ್ತ್ವವನ್ನು ಉಳಿಸಿಕೊಳ್ಳುವುದಕ್ಕೂ ಕುಂಕುಮವನ್ನು ಸೇರಿಸುವುದುಂಟು.

ಕುಂಕುಮದ ಪುಡಿಗೆ ವಿರೇಚಕ ಗುಣವಿದೆ. ಪಟ್ಟೆಹುಳುಗಳ ನಿವಾರಣೆಗೂ ಇದನ್ನು ಬಳಸುವುದುಂಟು. ಚರ್ಮವ್ಯಾಧಿಗಳಲ್ಲಿ ಬಳಸುವ ಮುಲಾಮುಗಳ ತಯಾರಿಕೆಗೂ ಪಶುವೈದ್ಯದಲ್ಲೂ ಇದನ್ನು ಬಳಸುವರು. ಇದರಲ್ಲಿರುವ ರಾಟ್ಲೆರಿನ್ಗೆ ಗರ್ಭನಿರೋಧಕ ಗುಣ ಇದೆ ಎಂದು ತಿಳಿದುಬಂದಿದೆ.

ಕುಂಕುಮದ ಬೀಜಗಳಿಂದ ನಸುಬಿಳಿ ತೈಲವೊಂದನ್ನು ತಯಾರಿಸುತ್ತಾರೆ. ಇದರ ಬಹುಭಾಗ ಸಂಕೀರ್ಣರೀತಿಯ ಟ್ರೈಗ್ಲಿಸರೈಡ್‌ಗಳನ್ನು ಒಳಗೊಂಡಿದೆ. ಇದನ್ನು ಬೇಗ ಆರಬೇಕಾದ ಬಣ್ಣ ಮತ್ತು ವಾರ್ನಿಷ್‌ಗಳ ತಯಾರಿಕೆಯಲ್ಲೂ ಮುಲಾಮು ಮತ್ತು ಸುಗಂಧ ದ್ರವ್ಯಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಎಣ್ಣೆ ತೆಗೆದ ಮೇಲೆ ಉಳಿಯುವ ಹಿಂಡಿಯೊಡನೆ ಮರದಪುಡಿಯನ್ನು ಬೆರೆಸಿ ಬಿರಡೆ (ಕಾರ್ಕ್) ಮತ್ತು ವಿದ್ಯುನ್ನಿರೋಧಕ (ಇನ್ಸುಲೇಟಿಂಗ್) ವಸ್ತುಗಳನ್ನು ತಯಾರಿಸುವರು.

ಇದರ ತೊಗಟೆ ಮತ್ತು ಎಲೆಗಳಿಂದಲೂ ಸ್ವಲ್ಪಮಟ್ಟಿಗೆ ಕುಂಕುಮವನ್ನು ತಯಾರಿಸಬಹುದು. ಎಲೆಗಳು ದನಗಳಿಗೆ ಒಳ್ಳೆಯ ಮೇವು. ಮರ ಗಟ್ಟಿಯಲ್ಲವಾದ್ದರಿಂದ ಅದನ್ನು ಸೌದೆಯಾಗಿ ಮಾತ್ರ ಬಳಸಬಹುದು. (ಎ.ಕೆ.ಎಸ್.; ಎನ್.ಆರ್.ಆರ್.; ಎಚ್.ಕೆ.ಎಂ.)

**ಕುಂಜನ್ ನಂಬಿಯಾರ್ :** ಸು. 18ನೆಯ ಶತಮಾನ. ಸುಮಾರು ಅರುವತ್ತನಾಲ್ಕು ತುಳ್ಳಲ್ ಕಾವ್ಯಗಳನ್ನೂ ಸಂಸ್ಕೃತದಲ್ಲೂ ಕೆಲವು ಕಾವ್ಯಗಳನ್ನೂ ರಚಿಸಿ ಮಲಯಾಳ ಸಾಹಿತ್ಯದಲ್ಲಿ ಹೆಸರುವಾಸಿಯಾಗಿರುವ ಒಬ್ಬ ಕವಿ. ಚಂಪೂ ಗ್ರಂಥಗಳಲ್ಲಿನ ಗದ್ಯ ಕುಂಜನ್ ನಂಬಿಯಾರನೇ ಮೊದಲಾದ ಕವಿಗಳಿಗೆ ಸ್ಫೂರ್ತಿದಾಯಕವಾಗಿ ಪರಿಣಮಿಸಿತು. ನಂಬಿಯಾರ್ ನಿರ್ಮಿಸಿದ ಓಟ್ಟಂ ತುಳ್ಳಲ್ (ಕನ್ನಡದ ಬಯಲಾಟಕ್ಕೆ ಇದನ್ನು ಹೋಲಿಸಬಹುದು) ಎಂಬ ಕಾವ್ಯಪ್ರಕಾರದಲ್ಲಿ ಬಳಸಲಾದ ವೃತ್ತಗಳು ಆ ಗದ್ಯದ ಪ್ರಭಾವದಿಂದಲೇ ಮೂಡಿಬಂದುವು. ಮಲೆಯಾಳ ಸಾಹಿತ್ಯ ಪ್ರಪಂಚದಲ್ಲಿ ಮೊಟ್ಟಮೊದಲು ಹಾಸ್ಯಪ್ರವೃತ್ತಿಯನ್ನು ವಿಪುಲವಾಗಿ ಬಳಕೆಗೆ ತಂದವನೆಂದು ಕುಂಜನ್ ನಂಬಿಯಾರ್ ಪ್ರಸಿದ್ಧನಾಗಿದ್ದಾನೆ.

ಕುಂಜನ್ ನಂಬಿಯಾರ್ ಕಿಳ್ಳಿಕುರುಶ್‌ಮಂಗಲಂ ಕ್ಷೇತ್ರದ ಸಮೀಪದಲ್ಲಿರುವ ಕಲಕ್ಕತ್ತು ಭವನದಲ್ಲಿ 1705ರಲ್ಲಿ ಹುಟ್ಟಿದ. ಅಂಬಲಪ್ಪು ರಾಜನ ಆಶ್ರಯದಲ್ಲಿದ್ದು ತನ್ನ ಕೃತಿಗಳನ್ನು ರಚಿಸಿದ.

ಅಸಾಧಾರಣ ಸಾಮರ್ಥ್ಯ ಅತುಲ್ಯವಾದ ಪ್ರತಿಭಾಶಕ್ತಿಗಳನ್ನೊಳಗೊಂಡ ಉತ್ತಮ ಕವಿಯೀತ. ಸಾಮಾಜಿಕ ಪ್ರಜ್ಞೆಯುಳ್ಳ ಕವಿಗಳಲ್ಲಿ ಈತ ಬಹು ಮುಖ್ಯನಾದವ. ಈತನ ಕಾವ್ಯ ಆದ್ಯಂತವಾಗಿ ಸಾಮಾಜಿಕ ವಿಮರ್ಶನಪ್ರಧಾನವಾದುದು. ಆ ವಿಮರ್ಶೆಯಾದರೋ ಸಂಪೂರ್ಣವಾಗಿ ಹಾಸ್ಯರಸಲಿಪ್ತವಾದುದು. ಕೇರಳದ ಸಾಮಾಜಿಕ ಪರಿಸ್ಥಿತಿ ತೀರ ಹದಗೆಟ್ಟ ಕಾಲದಲ್ಲಿ ನಂಬಿಯಾರ್ ತನ್ನ ಕೃತಿಗಳನ್ನು ರಚಿಸಿದ. ಕೇರಳದ ರಾಜರು ತಮ್ಮ ತಮ್ಮಲ್ಲೇ ಕಚ್ಚಾಡುತ್ತಿರಬೇಕಾದರೆ ಜನಜೀವನ ಹದಗೆಟ್ಟು ಹೋಗಿತ್ತು. ನಾಡಿನಾದ್ಯಂತ ನೀತಿಮಾರ್ಗ ಕುಸಿದು ಕೆಳಕ್ಕಿಳಿದಿತ್ತು. ಈ ಪರಿಸ್ಥಿತಿ ನಂಬಿಯಾರನ ಸಾಮಾಜಿಕ ವಿಡಂಬನೆಯ ಹಾಸ್ಯಕೃತಿಗಳಿಗೆ ಯಥೇಚ್ಛವಾಗಿ ನೀರನ್ನೆರೆಯಿತು. ಜನಪದ ಗೀತೆಗಳ ಧಾಟಿಯನ್ನನುಸರಿಸಿ, ಅದನ್ನು ಪರಿಷ್ಕರಿಸಿ ಈತ ಒಂದು ಹೊಸ ಕಾವ್ಯ ಪ್ರಭೇದವನ್ನೇ ರೂಪಿಸಿದ. ತಾನು ಸಾಮಾನ್ಯ ಜನರಿಗಾಗಿ ಕಾವ್ಯ ರಚಿಸುತ್ತಿರುವುದಾಗಿ ನಂಬಿಯಾರ್ ತಾನೇ ಮುಕ್ತಕಂಠದಿಂದ ಹೇಳಿಕೊಂಡಿದ್ದಾನೆ. ಸಂಸ್ಕೃತಕ್ಕಿಂತಲೂ ಚಾರು ಕೇರಳ ಭಾಷೆಯನ್ನೇ ತಾನು ಒಲಿದಿರುವುದಾಗಿ ಈತನ ಬಣ್ಣನೆ:

*ಭಟಸಮೂಹದ ನಡುವಿನೊಳಗಡಗಿರುವ ಪಡೆಯೊಡನೆ ತಾ ಸೇರಲು*
*ಗಾಡಿಯಿಂದೆಸೆವ ಚಾರು ಕೇರಳ ಭಾಷೆಯೇ ಸಮುಚಿತ ಸುಂದರ;*
*ತಾಡಾಘಣ ಕಠಿಣ ಸಂಸ್ಕೃತ ವಿಕಟಕವಿಯೇ ನಾನುಮಲ್ಲಿಗೆಹೋಗಲು*
*ಭಟಜನರೆಂದೂ ಸಹಿಸಲಾರರು; ಕೇಳಿ ಮೆತ್ತನೆ ಹೊರಟೇ ಬಿಡುವರು.*

ಪುರಾಣ ಕಥೆಗಳನ್ನು ಜನಪದ ಕಥೆಗಳಂತೆ ಸುಲಲಿತವಾಗೆ ನಂಬಿಯಾರ್ ಹೇಳಿದ್ದಾನೆ. ಸುಮಾರು ಅರುವತ್ತನಾಲ್ಕು ತುಳ್ಳಲ್ ಕಾವ್ಯಗಳನ್ನು ಈತ ರಚಿಸಿದ್ದಾನೆಂದು ಪ್ರತೀತಿ. ಇವಲ್ಲದೆ ಕಿಳಿಪಾಟ್ಟುಗಳ್, ಅಟ್ಟಕಥಗಳ್ ಮತ್ತು ಇತರ ಅನೇಕ ಕವಿತೆಗಳನ್ನೂ ಈತ ರಚಿಸಿದ್ದಾನೆ. ಸಂಸ್ಕೃತದಲ್ಲಿ ರಾಘವೀಯಂ ಮಹಾಕಾವ್ಯಂ, ಸೀತಾರಾಘವ ನಾಟಕಂ, ಚಂದ್ರಿಕಾವೀಥಿ, ಲೀಲಾವತಿ ವೀಥಿ–ಮೊದಲಾದ ಕೃತಿಗಳ ರಚನೆಯೂ ಈತನಿಂದ ಆಗಿದೆಯೆಂದು ಅನೇಕ ವಿದ್ವಾಂಸರು ಊಹಿಸಿದ್ದಾರೆ.

ಹುಚ್ಚುನಾಯಿ ಕಚ್ಚಿದುದರ ಪರಿಣಾಮವಾಗಿ ಹುಚ್ಚುಹಿಡಿದು ಈತ ನಿಧನ ಹೊಂದಿದನೆಂದು ಪ್ರತೀತಿ. (ಕೆ.ಕೆ.ಎಸ್.)

**ಕುಂಜಪಕ್ಷಿ :** ಪ್ಯಾಸೆರಿಫಾರ್ಮೀಸ್ ಗಣದ ಟೈಲನೋರಿಂಕಿಡೀ ಕುಟುಂಬಕ್ಕೆ ಸೇರಿದ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು (ಬೌವರ್ ಬರ್ಡ್). ಗಂಡು ಹಕ್ಕಿ ಹೆಣ್ಣಿನೊಡನೆ ನಡೆಸುವ ಪ್ರಣಯಾಚರಣೆಯ ಅಂಗವಾಗಿ ಸುಂದರವಾದ ಮತ್ತು ಆಕರ್ಷಕವಾದ ಲತಾ ಕುಂಜಗಳನ್ನು ನಿರ್ಮಿಸುವುದರಿಂದ ಇವಕ್ಕೆ ಈ ಹೆಸರು ಬಂದಿದೆ. ಟೈಲನೋರಿಂಕಿಡೀ ಕುಟುಂಬದಲ್ಲಿ ಸುಮಾರು 17 ಪ್ರಭೇದಗಳಿವೆ. ಇವುಗಳಲ್ಲಿ ಮುಖ್ಯವಾದವು ಟೈಲನೋರಿಂಕಸ್ ವಯೊಲೇಸಿಯಸ್ (ಸ್ಯಾಟಿನ್ ಬೌವರ್ ಬರ್ಡ್). ಸೆರಿಕ್ಯುಲಸ್ ಅರಿಯಸ್ (ಗೋಲ್ಡನ್ ಬೌವರ್ ಬರ್ಡ್), ಸೆರಿಕ್ಯುಲಸ್ ಕ್ರೈಸೋಸಿ ಫ್ಯಾಲಸ್ (ರೀಜೆಂಟ್ ಬೌವರ್ ಬರ್ಡ್) ಕ್ಲಾಮಿಡೀರ ಮ್ಯಾಕ್ಯುಲೇಟ (ಸ್ಪಾಟೆಡ್ ಬೌವರ್ ಬರ್ಡ್). ಅಂಬಿಬಿಯಾರ್ನಿಸ್ ಇನಾರ್ನೇಟಸ್ (ಕ್ರೆಸ್ಟ್‌ಲೆಸ್ ಗಾರ್ಡನರ್) ಮುಂತಾದವು. ಎಲ್ಲ ಪ್ರಭೇದಗಳೂ ಆಸ್ಟ್ರೇಲಿಯ ಮತ್ತು ನ್ಯೂಗಿನಿಗಳಲ್ಲಿ ಮಾತ್ರ ಕಾಣಬರುತ್ತವೆ.

ಕುಂಜಪಕ್ಷಿ
(ಟೈಲನೋರಿಂಕಸ್ ವಯೊಲೇಸಿಯಸ್)

ಎಲ್ಲ ಪ್ರಭೇದಗಳ ಹಕ್ಕಿಗಳೂ ಸುಮಾರು 8"–14" ಉದ್ದವಿರುವ ಮಧ್ಯಮ ಗಾತ್ರದವು. ಹೆಣ್ಣು ಹಕ್ಕಿಗೆ ಆಕರ್ಷಕವಾದ ಬಣ್ಣವಿಲ್ಲ. ಗಂಡುಗಳು ಮಾತ್ರ ಅತ್ಯಂತ ವರ್ಣರಂಜಿತವಾಗಿವೆ. ನೇರಳೆ, ಕೆಂಪು, ಕಿತ್ತಳೆ, ಕಪ್ಪು, ಬಂಗಾರ, ಹಸಿರು ಇತ್ಯಾದಿ ಬಣ್ಣಗಳ ವೈವಿಧ್ಯವಲ್ಲದೆ ತಲೆಯ ಮೇಲೆ ಹಲವಾರು ಬಣ್ಣಗಳ ಕಿರೀಟಗಳಿರುವುದೂ ಉಂಟು. ಈ ಲಕ್ಷಣದಲ್ಲಿ ಕುಂಜಪಕ್ಷಿಗಳು ತಮ್ಮ ಹತ್ತಿರದ ಸಂಬಂಧಿಗಳಾದ ದಿವ್ಯಪಕ್ಷಿಗಳನ್ನು (ಬರ್ಡ್ಸ್ ಆಫ್ ಪ್ಯಾರಡೈಸ್) ಹೋಲುತ್ತವೆ.

ಕುಂಜಪಕ್ಷಿಗಳ ಗಂಡುಗಳು ತಮ್ಮ ಪ್ರಣಯಕೇಳಿಗಾಗಿ ಸುಂದರವಾದ ಲತಾ ಕುಂಜಗಳನ್ನು ಕಟ್ಟುತ್ತವೆ. ಮತ್ತು ಕಡ್ಡಿ ಎಲೆಗಳಿಂದ ನಿರ್ಮಿಸುವ ಕುಂಜಗಳನ್ನು ಮೂಳೆ ಚೂರುಗಳು, ಜರೀಗಿಡಗಳು, ಆರ್ಕಿಡ್‌ಸಸ್ಯಗಳು, ಗರಿಗಳು, ಗಾಜಿನಚೂರುಗಳು, ಹೂಗಳು, ಬಸವನ ಹುಳುವಿನ ಚಿಪ್ಪು, ಹೊಳೆಯುವ ಬಣ್ಣದ ಕಾಯಿಗಳು ಮುಂತಾದುವುಗಳಿಂದ ಅಲಂಕರಿಸುತ್ತವೆ. ಇವನ್ನು ಜೋಡಿಸುವಲ್ಲಿ ಒಪ್ಪ ಓರಣವನ್ನು ಪ್ರದರ್ಶಿಸುತ್ತವೆ. ಕುಂಜವನ್ನು ನಿರ್ಮಿಸುವ ಮೊದಲು ಅದಕ್ಕೆ ಸರಿಯಾದ ಸ್ಥಳವನ್ನು ಆಯ್ದು, ಶುಚಿಗೊಳಿಸಿ, ಸುಮಾರು 4 ಚದರಡಿ ಸ್ಥಳದಲ್ಲಿ ಕಡ್ಡಿಗಳನ್ನು ಹರಡಿ ಅನಂತರ 1½' ಎತ್ತರದ ಎರಡು ದಪ್ಪ ಕಡ್ಡಿಗಳನ್ನು ಆಚೀಚೆ ಸಿಕ್ಕಿಸಿ ಅದರ ಮೇಲೆಲ್ಲ ಓರೆಯಾಗಿ ಚಾವಣಿಯನ್ನು ನಿರ್ಮಿಸುತ್ತವೆ. ರೀಜೆಂಟ್ ಮತ್ತು ಸ್ಯಾಟಿನ್ ಬೌವರ್ ಹಕ್ಕಿಗಳು ತಮ್ಮ ಜೊಲ್ಲಿನೊಂದಿಗೆ ಸಸ್ಯಜನ್ಯಬಣ್ಣಗಳನ್ನು ಸೇರಿಸಿ ಕುಂಜಗಳಿಗೆ ಬಳಿಯುವುದೂ ಉಂಟು. ಬಣ್ಣ ಬಳಿಯುವಾಗ ಯಾವುದಾದರೂ ಮರದ ತೊಗಟೆಯನ್ನೊ ಎಲೆಗಳ ಕಂತೆಯನ್ನೊ ಕುಂಚದಂತೆ ಉಪಯೋಗಿಸುತ್ತವೆ. ಈ ಎಲ್ಲ ಲಕ್ಷಣಗಳಲ್ಲಿ ಮಾನವನಿಗೂ ಕಡಿಮೆಯಿಲ್ಲದ ಜಾಣ್ಮೆ, ಕೌಶಲವನ್ನು ಪ್ರದರ್ಶಿಸುತ್ತವೆ. ಲತಾಕುಂಜಗಳನ್ನು ನಿರ್ಮಿಸುವುದೊಂದೇ ಅಲ್ಲದೆ ಅವನ್ನು ಅತ್ಯಂತ ಶ್ರದ್ಧೆ, ಉತ್ಸಾಹಗಳಿಂದ ಕಾಯುವುದು, ಬೇರೆ ಯಾವ ಗಂಡುಹಕ್ಕಿಯೂ ಇದರ ಹತ್ತಿರ ಬರದಂತೆ ನೋಡಿಕೊಳ್ಳುವುದು, ಬಾಡಿದ ಎಲೆ ಹೂಗಳನ್ನು ಬದಲಿಸುವುದು ಮುಂತಾದ ಕಾರ್ಯಗಳನ್ನು ನಡೆಸುತ್ತದೆ. ಹೀಗೆ ನಿರ್ಮಿಸುವ ಕುಂಜಗಳು ಒಂದೊಂದು ಪ್ರಭೇದದಲ್ಲೂ ಭಿನ್ನವಾಗಿವೆ. ಈ ಕುಂಜಗಳನ್ನು ಗಂಡು ಹೆಣ್ಣುಗಳೆರಡೂ ತಮ್ಮ ಪ್ರಣಯಾಚರಣೆಯ ರಂಗಭೂಮಿಯಾಗಿ ಉಪಯೋಗಿಸುತ್ತವೆ. ಗಂಡು ಹೆಚ್ಚು ಕಡಿಮೆ ಇಂಥ ಗೂಡಿನಬಳಿಯೇ ಯಾವಾಗಲೂ ಇದ್ದು ಬೇರೆ ಗಂಡುಗಳೊಂದಿಗೆ ಜಗಳವಾಡುತ್ತಲೊ ಹೆಣ್ಣು ಹಕ್ಕಿಗಳನ್ನು ಆಕರ್ಷಿಸುವ ಸಲುವಾಗಿ ಕುಣಿಯುತ್ತಲೊ ಕಾಲಕಳೆಯುತ್ತದೆ. ವರ್ಷ ವರ್ಷವೂ ಒಂದೇ ಕುಂಜವನ್ನು ಉಪಯೋಗಿಸುವುದು ವಾಡಿಕೆ. ಅದನ್ನೆ ರಿಪೇರಿಮಾಡುವುದು, ಹೆಚ್ಚಿಸುವುದು ನಡೆದೇ ಇರುತ್ತದೆ. ಇಷ್ಟೆಲ್ಲ ಶ್ರದ್ಧೆ ಉತ್ಸಾಹಗಳಿಂದ ಕುಂಜಗಳನ್ನು ನಿರ್ಮಿಸುವ ಜಾಣ್ಮೆ ಗಂಡುಹಕ್ಕಿಗಿದ್ದರೂ ಈ ಸಾಮರ್ಥ್ಯವನ್ನು ಮೊಟ್ಟೆಯಿಡುವುದಕ್ಕಾಗಿ ಗೂಡುಕಟ್ಟಲು ಉಪಯೋಗಿಸುವುದಿಲ್ಲ. ಮೊಟ್ಟೆಯಿಡುವ ಕಾಲದಲ್ಲಿ ಹೆಣ್ಣು ಹಕ್ಕಿ ಬೇರೆ ಹೋಗಿ ಮರಗಳಮೇಲೆ ಕಡ್ಡಿಗಳನ್ನು ಬಳಸಿಕೊಂಡು ಒರಟಾದ ಗೂಡನ್ನು ನಿರ್ಮಿಸಿ 2–4 ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳ ಮೇಲೆ ಕಾವುಕೂರುವ ಕೆಲಸ, ಮರಿಗಳ ಪಾಲನೆ ಹೆಣ್ಣಿಗೆ ಸೇರಿದ್ದು.

ಕುಂಜಪಕ್ಷಿಗಳ ಆಹಾರ ಹಣ್ಣು, ಬೀಜ, ಜೀರುಂಡೆ ಮುಂತಾದವು

(ಬಿ.ಎಚ್.ಎಂ.)

**ಕುಂಟು ಮಿಡತೆಗಳು :** ಡಿಕ್ಟಿಯಾಪ್ಟಿರ ಗಣದ ಮ್ಯಾಂಟಾಯ್ಡಿಯ ಗುಂಪಿಗೆ ಸೇರಿದ ಕೀಟಗಳು. ಇವುಗಳ ವದನಾಂಗಗಳು ಆಹಾರವನ್ನು ಕಡಿಯುವುದಕ್ಕೆ ಅನುಕೂಲವಾಗಿವೆ. ಕುಂಟುಮಿಡತೆಗಳ ಕುಡಿಮೀಸೆಗಳು ಬಲು ಉದ್ದ; ಹಿಂದಿನ ಕಾಲುಗಳು ಉದ್ದ ಮತ್ತು ದಪ್ಪವಾಗಿವೆ; ನೆಗೆಯುವುದಕ್ಕೆ ಅನುಕೂಲಿಸುವಂತೆ ಕಾಲಿನ ಕೊನೆಯ ಭಾಗ ಮೂರು ತುಂಡುಗಳನ್ನೊಳಗೊಂಡಿದೆ. ಮುಂದಿನ ರೆಕ್ಕೆಗಳು ದಪ್ಪವಾಗಿವೆ. ವಿಶೇಷ ತರದ ಧ್ವನಿ ಉತ್ಪಾದಕ ಮತ್ತು ಧ್ವನಿ ಗ್ರಾಹಕ ಅಂಗಗಳೇ ಕುಂಟುಮಿಡಿತೆಗಳ ವೈಶಿಷ್ಟ್ಯ. ಧ್ವನಿಗ್ರಾಹಕ ಅಂಗಗಳು ಮುಂಗಾಲುಗಳ ಮೇಲೆ ಇವೆ. ಕುಂಟುಮಿಡಿತೆಗಳು ತಾವು ಮಾಡುವ ಜಿರ್ರೆಂಬ ಶಬ್ದಕ್ಕೆ ಹೆಸರಾಗಿವೆ. ಧ್ವನಿ ಉತ್ಪಾದಕ ಅಂಗಗಳೇ ಈ ಶಬ್ದಕ್ಕೆ ಕಾರಣ. ಮುಂದಿನ ಎರಡು ರೆಕ್ಕೆಗಳ ಮೇಲೆ ಇರುವ ಅರದಂಥ ಅಂಗಕ್ಕೆ ರೆಕ್ಕೆಗಳನ್ನು ಉಜ್ಜುವುದರಿಂದ ಈ ತರಹ ಶಬ್ದ ಉಂಟಾಗುತ್ತದೆ. ಕೆಲವು ಕುಂಟುಮಿಡತೆಗಳು (ಉದಾ: ಬ್ರಾಕಿಟ್ರೈಪಿಸ್ ಮೆಗಸಿಫಾಲಸ್) ಮಾಡುವ ಶಬ್ದ ಸುಮಾರು ಒಂದು ಮೈಲಿಯವರೆಗೂ ಕೇಳಿಬರುವುದುಂಟು. (ಜಿ.ಪಿ.ಪಿ.)

**ಕುಂಟುಹುಣ್ಣು :** ಸಾಮಾನ್ಯವಾಗಿ ಹಾಸಿಗೆ ಹಿಡಿದು ಮಲಗಿರುವ ರೋಗಿಗಳಲ್ಲಿ ಕಂಡುಬರುವ ಒಂದು ರೀತಿಯ ವ್ರಣ (ಬೆಡ್ ಸೋರ್, ಡಕ್ಯುಬೈಟಸ್ ಅಲ್ಸರ್). ಇದು

ಎರಡು ರೀತಿಯದಾಗಿರಬಹುದು: (i) ದೀರ್ಘಕಾಲದ್ದಲ್ಲದುದು ಅಥವಾ ಪೋಷಣೆ ಸಂಬಂಧವಾದುದು. (ii) ದೀರ್ಘವಾದುದು ಅಥವಾ ನಿಲುವಿಗೆ ಸಂಬಂಧಿಸಿದುದು.

ದೀರ್ಘಕಾಲದ್ದಲ್ಲದ ಕುಂಟುಹುಣ್ಣು: ಇದು ನರಹುರಿ ಅಥವಾ ಮಿದುಳು ಬಳ್ಳಿಯ ರೋಗ ಅಥವಾ ಅಪಘಾತಕ್ಕೆ ಸಂಬಂಧಿಸಿದುದು. ಕೆಲವು ವೇಳೆ ಎಷ್ಟು ಎಚ್ಚರಿಕೆ ವಹಿಸಿ ಶುಶ್ರೂಷೆ ಮಾಡಿದರೂ ಈ ಹುಣ್ಣು ತೀವ್ರವಾಗಿ ವಿಷಮಿಸುತ್ತದೆ.

ದೀರ್ಘಕಾಲದ ಕುಂಟುಹುಣ್ಣು: ಇಂಥ ವ್ರಣ ಸಾಮಾನ್ಯವಾಗಿ ನಾಲ್ಕು ಅಂಶಗಳಿಂದ ಉಂಟಾಗುತ್ತದೆ–ಒತ್ತಡ, ಅಪಘಾತ, ನ್ಯೂನ ಪೋಷಣೆ, ತೇವ.

ವ್ರಣ ಯಾವ ಬಗೆಯದೇ ಆಗಿರಲಿ, ಅದನ್ನು ಗುಣಪಡಿಸುವಲ್ಲಿ ರೋಗ ನಿರೋಧಕ ಚಿಕಿತ್ಸೆ ಅತ್ಯಂತ ಮುಖ್ಯವಾದುದು. ಎಚ್ಚರಿಕೆ ಮತ್ತು ಕೌಶಲವಹಿಸಿ ನಡೆಸುವ ಶುಶ್ರೂಷೆಯಿಂದ ಒತ್ತಡ, ಅಪಘಾತ ಮತ್ತು ಬೆವರು, ಮೂತ್ರ ಅಥವಾ ಕೀವಿನಿಂದುಂಟಾಗುವ ತೇವವನ್ನು ಪರಿಹರಿಸಬಹುದು. ಚರ್ಮದ ಪೋಷಣೆಯನ್ನು ಕೊಲೋನ್ ಪರಿಮಳದ್ರವ ಅಥವಾ ಸ್ಪಿರಿಟ್ ಮೊದಲಾದುವನ್ನು ಉಪಯೋಗಿಸಿ ನೋಡಿಕೊಳ್ಳಬಹುದು. ಚರ್ಮದ ಉರಿಯೂತ ಅಥವಾ ಗೆಂಡೆಯುಂಟಾದಾಗ ಕುಂಟುಹುಣ್ಣು ಬರಬಹುದೆಂದು ಊಹಿಸಬಹುದು. ಒತ್ತಡದ ಪರಿಣಾಮವೇನೂ ಇಲ್ಲಿ ಬೀಳಲಾರದು. ಈ ಘಟ್ಟದಲ್ಲಿ ಚರ್ಮಮೃದುವಾಗಿದ್ದಲ್ಲಿ ಆಸವಿಸಿದ ನೀರಿನಲ್ಲಿ ತಯಾರಿಸಿದ ಶೇ. 5 ಬೆಳ್ಳಿಯ ನೈಟ್ರೇಟ್ ದ್ರಾವಣದಿಂದ ಪಟಿಕದ ದ್ರಾವಣದಿಂದ ಚಿಕಿತ್ಸೆ ನಡೆಸಬಹುದು. ಚರ್ಮ ಸ್ವಲ್ಪ ಒಣಗಿ ಒರಟಾಗಿದ್ದಲ್ಲಿ ಶೇ. 5 ಟ್ಯಾನಿಕ್ ಆಮ್ಲವನ್ನು ಜಲೀಯ ದ್ರಾವಣದಲ್ಲಿ ತಯಾರಿಸಿ ಉಪಯೋಗಿಸಿದರೆ ಪರಿಣಾಮಕಾರಿಯಾಗಬಹುದು. ಇಲಾಸ್ಟೊಪ್ಲಾಸ್ಟ್ ತುಂಡುಗಳಿಂದಲೂ ಹೊದಿಕೆ ಮಾಡಿ ರಕ್ಷಿಸಬಹುದು. ಹುಣ್ಣು ಗುಣಮುಖವಾಗತೊಡಗಿದಾಗ ಶೇ. 10 ಇಕ್‌ಥ್ಯಾಲ್ (ಮತ್ಸ್ಯ ಸಂಬಂಧಿ) ಗ್ಲಿಸರಿನ್ ಉಪಯೋಗಿಸಿದಲ್ಲಿ ಒಳ್ಳೆಯ ಫಲಿತಾಂಶಗಳು ಕಂಡುಬರುವುವು. ಕೊಳೆತಭಾಗವನ್ನು ಎಚ್ಚರಿಕೆಯಿಂದ ಛೇದಿಸುವುದೂ ಸೂಕ್ತವಾದುದು. ಇನ್ನೂ ಯುವಕರಾದ ಹಾಗೂ ಆರೋಗ್ಯವಂತರಾದ ರೋಗಿಗಳ ಚಿಕಿತ್ಸೆಯಲ್ಲಿ ಇಳಿಜಾರು ಚರ್ಮದ ಕಸಿಗಳನ್ನು ಉಪಯೋಗಿಸಿದಲ್ಲಿ ಬಹುಮಟ್ಟಿಗೆ ಸಫಲವಾಗುತ್ತದೆ. ಪ್ರತಿನಿರೋಧಕವಾಗಿ ಪೆನ್ಸಿಲಿನ್ ಅಥವಾ ಸಲ್ಫಾನೊಮೈಡ್‌ಗಳನ್ನು ಉಪಯೋಗಿಸಬಹುದು. (ಎಸ್.ಎ.ಕೆ.)

**ಕುಂಟೆ :** ಮಳೆಯ ನೀರು ಭೂಮಟ್ಟದ ತಗ್ಗಾದ ಜಾಗದಲ್ಲಿ ತಂಗಿರುವ ಸಣ್ಣಪುಟ್ಟ ಜಲಸ್ಥಾಯಿ (ಪಾಂಡ್), ಒಳಭೂಮಿಯ ಜಲಫಲಕದ (ವಾಟರ್‌ಟೇಬಲ್) ಮಟ್ಟ ಹೆಚ್ಚು ಆಳದಲ್ಲಿದ್ದಲ್ಲಿ ಕುಂಟೆಯ ನೀರು ಮಳೆಗಾಲದಲ್ಲಿ ಮಾತ್ರವಿದ್ದು ಬೇಸಗೆಯಲ್ಲಿ ಬತ್ತಿ ಹೋಗುತ್ತದೆ. ಜಲಫಲಕದ ಮಟ್ಟ ಭೂಮಿಯ ಮೇಲ್ಮೈಗೆ ಸಮೀಪವಾಗಿದ್ದ ಕಡೆ ಮಣ್ಣನ್ನು ತೋಡಿ ಕುಂಟೆಗಳನ್ನು ನಿರ್ಮಿಸಬಹುದು. ಅನೇಕ ಕಡೆಗಳಲ್ಲಿ ಇಂಥ ಕುಂಟೆಗಳಿಗೆ ನಾಲ್ಕು ಕಡೆಗಳಲ್ಲಿಯೂ ಸೋಪಾನಗಳನ್ನು ನಿರ್ಮಿಸಿ ಸ್ನಾನ, ಬಟ್ಟೆ ಒಗೆಯುವುದು ಮುಂತಾದ ಕೆಲಸಗಳಿಗೆ ಉಪಯೋಗವಾಗುವಂತೆ ಮಾಡಿರುತ್ತಾರೆ. (ಕೆ.ಎಸ್.ಕೆ.)

**ಕುಂಡಲಪುರ :** ಮಧ್ಯಪ್ರದೇಶದ ಸಾಗರ ಜಿಲ್ಲೆಯಲ್ಲಿರುವ ಜೈನಕ್ಷೇತ್ರ. ಕುಂಡಲಾಕೃತಿಯಲ್ಲಿರುವ ಇಲ್ಲಿಯ ಬೆಟ್ಟದ ಮೇಲೆ ಅನೇಕ ಜಿನಮಂದಿರಗಳಿವೆ. ಮಹಾವೀರ ತೀರ್ಥಂಕರ ಕುಂಡಲಪುರದಲ್ಲಿ ಜನಿಸಿದನೆಂಬ ಒಂದು ಅಭಿಪ್ರಾಯವೂ ಉಂಟು.

ಬಿಹಾರ ಪ್ರಾಂತ್ಯದಲ್ಲಿ ಪಾವಾಪುರಿ ಮತ್ತು ರಾಜಗೃಹದ ಮಾರ್ಗದ ನಡುವೆ ಒಂದು ಕುಂಡಲಪುರವಿದೆ. ಇದರ ಸಮೀಪದಲ್ಲಿ ನಾಲಂದ ವಿಶ್ವವಿದ್ಯಾನಿಲಯದ ಅವಶೇಷಗಳಿವೆ. (ಬಿ.ಜಿ.)

**ಕುಂಡಲಿಗಿರಿಯಾಚಾರ್ಯ :** 1865–1904. ಭಟ್ಟಾಕಳಂಕನ ಕರ್ಣಾಟಕ ಶಬ್ದಾನುಶಾಸನವನ್ನು ಕನ್ನಡದಲ್ಲಿ ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ ಎಂಬ ಹೆಸರಿನಲ್ಲಿ ತಂದವ. ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದ ಬ್ರಹ್ಮವೆಂಕಟಾಚಾರ್ಯನ ಮಗ. ಬಾಲ್ಯದಲ್ಲಿ ತಿರುಮಕೊಡಲು ನರಸೀಪುರದ ತಿರುಮಕೂಡಲಿನಲ್ಲಿ ವೇದಾಧ್ಯಯನ ಮಾಡಿ, ಬಳಿಕ ಮೈಸೂರಿಗೆ ಬಂದು, ಅರಮನೆಯ ವಿದ್ಯಾರ್ಥಿವೇತನ ಪಡೆದು, ಪೆರಿಸ್ವಾಮಿ ತಿರುಮಲಾಚಾರ್ಯರ ಪಾಠಶಾಲೆಯಲ್ಲಿ ಎಂಟು ವರ್ಷಗಳ ಕಾಲ ಸಾಹಿತ್ಯ ವ್ಯಾಕರಣ ಶಾಸ್ತ್ರಗಳನ್ನು ಅಧ್ಯಯನ ಮಾಡಿದ. ಅನಂತರ ಮೈಸೂರಿನಲ್ಲಿ ಆಸ್ಥಾನ ಪಂಡಿತನಾದ. ಶ್ರವಣಬೆಳಗೊಳ, ಬೆಂಗಳೂರು, ಮೈಸೂರು, ಶಿವಮೊಗ್ಗ ಈ ಸ್ಥಳಗಳಲ್ಲಿ ಸಂಸ್ಕೃತ ಮತ್ತು ಕನ್ನಡ ಅಧ್ಯಾಪಕನಾಗಿ ಕೆಲಸ ಮಾಡಿದ. ತಿರುವಾಂಕೂರು ಮಹಾರಾಜರಿಂದ ವರ್ಷಾಶನವನ್ನೂ ಬರೋಡ ಸಂಸ್ಥಾನದಿಂದ ರಾಜ ಮರ್ಯಾದೆಯನ್ನೂ ಪಡೆದ. ನಲವತ್ತನೆಯ ವಯಸ್ಸಿನಲ್ಲಿ ದೈವಾಧೀನನಾದ.

ಜೀವಂಧರ ಚರಿತಂ (1895– ವಾದೀಭಸಿಂಹಸೂರಿಕೃತ ಕ್ಷೇತ್ರ ಚೂಡಾಮಣಿ), ಹರ್ಷಚರಿತ್ರೆ (1900–ಬಾಣಕವಿಯ ಹರ್ಷಚರಿತ್ರೆ) ಇವುಗಳ ಭಾಷಾಂತರವನ್ನೂ ಜೈಮಿನಿ ಭಾರತ ಕಥಾಸಂಗ್ರಹ, ಧರ್ಮಶರ್ಮಾಭ್ಯುದಯ (1901) ಎಂಬ ಗ್ರಂಥಗಳನ್ನೂ ರಚಿಸಿದ.

1904ರಲ್ಲಿ ಭಟ್ಟಾಕಳಂಕನ ಕರ್ಣಾಟಕ ಶಬ್ದಾನುಶಾಸನವನ್ನು ಕನ್ನಡಿಗರಿಗೆ ಸುಬೋಧವಾಗುವಂತೆ ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಿಸಿದ. ಇದು ಕೇವಲ ಅನುವಾದ ಗ್ರಂಥವಾಗಿಲ್ಲ; ಸಂಸ್ಕೃತ ಸೂತ್ರಗಳನ್ನು ಇದ್ದಂತೆಯೇ ಇಟ್ಟು, ವೃತ್ಯರ್ಥವನ್ನು ಹೊಸಗನ್ನಡ ವಾಕ್ಯರೂಪದಿಂದ ರಚಿಸಿ ಪ್ರತಿಸೂತ್ರದಲ್ಲಿಯೂ ಕನ್ನಡಿಗರಿಗೆ ಅನುಪಯುಕ್ತವಾದ ವ್ಯಾಖ್ಯಾನಾಂಶವನ್ನು ಬಿಟ್ಟು, ಪತಂಜಲಿಯ ಮಹಾಭಾಷ್ಯದಿಂದಲೂ ಇತರ ಸಂಸ್ಕೃತ ಕನ್ನಡ ವ್ಯಾಕರಣಗಳಿಂದಲೂ ಭಟ್ಟಾಕಳಂಕ ಉದಾಹರಿಸದಿದ್ದ ಹೆಚ್ಚಿನ ಆಧಾರಗಳನ್ನು ತೆಗೆದು ಸೇರಿಸಿ, ವಿಚಾರವೆಂದು ಹೆಸರಿಸಿ ಬರೆದುದಾಗಿದೆ. ಈ ಕಾರಣಗಳಿಂದ ಕನ್ನಡ ಭಾಷಾಭ್ಯಾಸಿಗಳಿಗೆ ಇದು ಉಪಯುಕ್ತ ಗ್ರಂಥವಾಗಿದೆ. (ಎನ್.ವಿ.ಪಿ.)

**ಕುಂಡಲಿನಿ :** ಮನುಷ್ಯಶರೀರದಲ್ಲಿ ಸುಪ್ತವಾಗಿರುವ ಪರಮಾಶಕ್ತಿಗೆ ಈ ಹೆಸರಿದೆ. ಬೆನ್ನುಮೂಳೆಯ ಕೆಳಗಿರುವ ಆಧಾರಚಕ್ರದಲ್ಲಿ ಈ ಶಕ್ತಿ ಹಾವಿನ ಹಾಗೆ ಸುತ್ತಿಕೊಂಡು ಬ್ರಹ್ಮದ್ವಾರವೆನಿಸಿದ ಸುಷುಮ್ನಾ ನಾಡಿಯನ್ನು ತನ್ನ ಬಾಯಿಂದ ಮುಚ್ಚಿ ಸುಪ್ತವಾಗಿರುತ್ತದೆ. ಷಟ್ಚಕ್ರನಿರೂಪಣದ ಹನ್ನೆರಡನೆಯ ಶ್ಲೋಕ ಕುಂಡಲಿಯನ್ನು ನಾದಶಕ್ತಿರೂಪದಲ್ಲಿರುವ ಪರವಾಕಲೆಯೆಂದೂ ಪರಮೇಶ್ವರಿಯೆಂದೂ ನಿತ್ಯಪ್ರಬೋಧನವನ್ನು ಉಂಟುಮಾಡುವವಳೆಂದೂ ತಿಳಿಸುತ್ತದೆ. ಸೂಕ್ಷ್ಮಾತಿಸೂಕ್ಷ್ಮಳಾದ ಈ ದೇವಿ ನಿರ್ಗುಣಬ್ರಹ್ಮದಿಂದ ಹರಿಯುವ ಅಮೃತಧಾರೆಯನ್ನು ಧರಿಸಿರುತ್ತಾಳೆ. ಇವಳಿಗೆ ವಿದ್ಯಾಶಕ್ತಿ ಅವಿದ್ಯಾಶಕ್ತಿ ಎಂಬ ಎರಡು ಹೆಸರುಗಳುಂಟು; ಏಕೆಂದರೆ ಹಠಯೋಗಪ್ರದೀಪಿಕಾ ಹೇಳುವಂತೆ, ದೇವಿಯೋಗಿಗಳಿಗೆ ಮೋಕ್ಷವನ್ನೂ ಅಜ್ಞಾನಿಗಳಿಗೆ ಬಂಧನವನ್ನೂ ನೀಡುತ್ತಾಳೆ.

ಸಾಧಕ ಮುಚ್ಚಿಕೊಂಡಿರುವ ಸುಷುಮ್ನಾ ನಾಡಿಯ ಬಾಗಿಲನ್ನು ತೆರೆದು ಆಧಾರ ಚಕ್ರದಲ್ಲಿ ಸುಪ್ತಾಗಿರುವ ಕುಂಡಲಿನೀಶಕ್ತಿಯನ್ನು ಯೋಗಬಲದಿಂದ ಎಬ್ಬಿಸಿ ಮೇಲೆಮೇಲಿರುವ ಸ್ವಾಧಿಷ್ಠಾನ, ಮಣಿಪೂರ, ಅನಾಹುತ, ಅಶುದ್ಧ, ಅಜ್ಞಾ ಎಂಬ ಚಕ್ರಗಳ ಮೂಲಕ ಒಯ್ದು ಸಹಸ್ರಾರದಲ್ಲಿರುವ ಪರಮಶಿವನೊಂದಿಗೆ ಐಕ್ಯಮಾಡಬೇಕು. ಜೀವರೂಪದಲ್ಲಿರುವ ಕುಂಡಲಿನಿ ಪರಮಶಿವನೊಂದಿಗೆ ಐಕ್ಯವನ್ನು ಪಡೆದಾಗ ಯೋಗಿ ಮುಕ್ತನಾಗುತ್ತಾನೆ. ಈ ಯೋಗಕ್ಕೆ ಷಟ್ಚಕ್ರಭೇದವೆಂದು ಹೆಸರು. **(ನೋಡಿ– ಚಕ್ರಗಳು, ಯೋಗದಲ್ಲಿ)** (ಎಸ್.ಡಬ್ಲ್ಯು.ಎ.)

**ಕುಂಡುಜ಼್ :** ಪ್ರಾಚೀನ ಆಫ್ಘಾನಿಸ್ತಾನದ ಪ್ರಮುಖ ಕಲಾಕೇಂದ್ರ. ಟೊಖಾರಿಸ್ತಾನದ ರಾಜಧಾನಿಯಾಗಿತ್ತು. ಈಗ ಇದು ಒಂದು ಸಣ್ಣ ಗ್ರಾಮ. ಹಾಕಿನ್ ಎಂಬ ಪುರಾತತ್ವಜ್ಞ ಇಲ್ಲಿ ಅನೇಕ ಉತ್ಖನನಗಳನ್ನು ನಡೆಸಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ಹಲವು ವಿಹಾರಗಳನ್ನು ಮತ್ತು ಸ್ತೂಪಗಳನ್ನು ಬೆಳಕಿಗೆ ತಂದ. ಇಲ್ಲಿಯ ಬೌದ್ಧ ವಿಹಾರಗಳಲ್ಲಿ ಭಾರತೀಯ ಮತ್ತು ಗ್ರೀಕ್ ಪ್ರಭಾವಗಳು ಸುಂದರವಾಗಿ ಮಿಳಿತವಾಗಿವೆ. ಇಲ್ಲಿಯ ಸ್ತಂಭಗಳು ತಕ್ಷಶಿಲೆಯಲ್ಲಿಯ ಕಂಬಗಳನ್ನು ವಿಶೇಷವಾಗಿ ಹೋಲುತ್ತವೆ. ಕುಷಾಣರ ಕಾಲದಲ್ಲಿ ಗಾಂಧಾರ ಶಿಲ್ಪಶೈಲಿ ಇಲ್ಲಿಯೂ ಅಭಿವೃದ್ಧಿ ಹೊಂದಿತು. ಇಲ್ಲಿಯ ಚತುರ್ಭುಜದ ಹೆರಾಕ್ಲಿಸ್–ಈಶ್ವರ ವಿಗ್ರಹದಲ್ಲಿ ಭಾರತೀಯ ಪ್ರಭಾವಗಳು ಚೆನ್ನಾಗಿ ಕಾಣುತ್ತವೆ. ಬೌದ್ಧಸ್ತೂಪದ ಸುತ್ತಲೂ ಉಪಯೋಗಿಸಿರುವ ಅಲಂಕಾರ ಪಟ್ಟಿಕೆಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಿಸಿದ ಕಥೆಗಳು ಶಿಲ್ಪಿತವಾಗಿವೆ. ಬೋಧಿಸತ್ತ್ವನ ವಿಗ್ರಹಗಳಲ್ಲಿ ಗ್ರೀಕ್ ಪ್ರಭಾವಗಳು ವಿಶೇಷವಾಗಿ ಕಂಡರೂ ಮುಖಭಾವದಲ್ಲಿ ಮಾತ್ರ ಭಾರತೀಯತೆ ಎದ್ದು ಕಾಣುವುದು ಇಲ್ಲಿಯ ವೈಶಿಷ್ಟ್ಯ. ಕಲ್ಲಿನ ಶಿಲ್ಪಗಳ ಜೊತೆಗೆ ಜೇಡಿಮಣ್ಣಿನ ಬೊಂಬೆಗಳೂ ಇಲ್ಲಿ ವಿಶೇಷವಾಗಿ ದೊರಕಿವೆ. ತಕ್ಷಶಿಲೆಯ ಕಲಾಕಾರರೇ ಇವನ್ನೂ ನಿರ್ಮಿಸಿದರೋ ಎನ್ನುವಷ್ಟು ಮಟ್ಟಿಗೆ ಇವುಗಳಲ್ಲಿ ಭಾರತೀಯತೆ ಕಾಣಬರುತ್ತದೆ. ಈ ಸಣ್ಣ ಬೊಂಬೆಗಳ ಕೇಶಾಲಂಕಾರ ಮತ್ತು ಆಭರಣಗಳು ವೈವಿಧ್ಯಪೂರ್ಣವೂ ಆಕರ್ಷಕವೂ ಆದ್ದು. ಪ್ರಾಚೀನ ಆಫ್ಘಾನಿಸ್ತಾನದಲ್ಲಿ ಭಾರತೀಯ ಕಲೆಯನ್ನು ಪೋಷಿಸಿದ ಕೇಂದ್ರಗಳಲ್ಲಿ ಕುಂಡುಜ಼್ ಪ್ರಾಮುಖ್ಯ ಪಡೆದಿದೆ. (ಎ.ವಿ.ಎನ್.)

**ಕುಂಡೆ ಕುಸುಕ :** ಪ್ಯಾಸೆರಿಫಾರ್ಮೀಸ್ ಗಣದ ಓಸ್ಸೆನ್ ಗುಂಪಿನ ಮೋಟಸಿಲ್ಲಿಡೀ ಕುಟುಂಬದ ಹಕ್ಕಿ (ವ್ಯಾಗ್ ಟೈಲ್). ದಾಸರ ಹಕ್ಕಿ, ಕಾಡಿಗೆ ಸೊಗಸಿನ ಹಕ್ಕಿ, ಸಿಪಿಲೆ ಇದರ ಪರ್ಯಾಯ ನಾಮಗಳು. ಮೋಟಸಿಲ ಎಂಬ ವೈಜ್ಞಾನಿಕ ಹೆಸರಿನ ಜಾತಿಗೆ ಸೇರಿದೆ. ಇದರಲ್ಲಿ ಹಲವಾರು ಪ್ರಭೇದಗಳಿವೆ. ಮುಖ್ಯವಾದುವು ಮೋಟಸಿಲ ಕ್ಯಾಸ್ಪಿಕ, ಮೋ. ಸಿಟ್ರಿಯೋಲ ಮತ್ತು ಮೋ. ಆಲ್ಬ. ಸಾಧಾರಣವಾಗಿ ಎಲ್ಲ ಪ್ರಭೇದಗಳೂ ಗುಬ್ಬಚ್ಚಿಯ ಗಾತ್ರದವು. ಮೈಬಣ್ಣ ಕಪ್ಪು, ಬಿಳಿ, ಬೂದು, ಹಳದಿ ಇತ್ಯಾದಿ ವೈವಿಧ್ಯಪೂರ್ಣ. ಕೊಕ್ಕಿನ ಬಣ್ಣ ಕಪ್ಪು. ಅಂಗಾಲು ಉದ್ದವಾಗಿ ತೆಳುವಾಗಿದೆ. ಹಿಂದಿನ ಉಗುರು ಬಾಗಿಕೊಂಡಿದೆ.

ಕುಂಡೆ ಕುಸುಕಗಳು ಸಾಮಾನ್ಯವಾಗಿ ಹೊಳೆ ಮತ್ತು ನಿಂತಿರುವ ನೀರಿನ ಪ್ರದೇಶಗಳಲ್ಲಿರುತ್ತವೆ. ಕೆಲವು ಪ್ರಭೇದಗಳು ಹೊಲಗಳಲ್ಲಿ ಹುಲ್ಲುಗಾವಲುಗಳಲ್ಲಿರುವುದೂ ಉಂಟು. ಓಲಾಡುತ್ತ ಇವು ಹಾರಾಡುವ ನೋಟ ಆಕರ್ಷಕವಾಗಿದೆ. ಇವುಗಳ ಆಹಾರ ಕೀಟಗಳು, ಹುಳುಗಳು, ಸಣ್ಣ ಮೃದ್ವಸ್ಥಿಮೀನುಗಳು ಮತ್ತು ಕಠಿಣ ಚರ್ಮಿಗಳು. ದನಗಳ ಮೈಮೇಲಿರುವ ಕೀಟಗಳಿಗೋಸ್ಕರ ಸುತ್ತ ಹಾರಾಡುವುದೂ ಉಂಟು.

ಗೂಡುಗಳನ್ನು ಬಂಡೆಗಳ ಬಿರುಕು, ಮರದ ಪೊಟರೆ ಅಥವಾ ಗೋಡೆಯ ಸಂದು, ರಂಧ್ರ, ದೊಡ್ಡ ಕಿಟಕಿಗಳ ಮೇಲೆ ಅಥವಾ ನೆಲದ ಮೇಲೆ ಸಸ್ಯಗಳ ಮಧ್ಯೆ

ಮಾಡುತ್ತವೆ. ಪಾಚಿ, ಹುಲ್ಲು ಮತ್ತು ಬೇರುಗಳನ್ನು ಉಪಯೋಗಿಸಿ ಅವುಗಳ ಮೇಲೆ ಕೂದಲಿನ ಮತ್ತು ಪುಕ್ಕಗಳ ಹೊದಿಕೆಯನ್ನು ಮುಚ್ಚಿ ಗೂಡುಕಟ್ಟುತ್ತವೆ. ಗೂಡುಕಟ್ಟಲು ಅನುಕೂಲವಾದ ಪ್ರದೇಶದ ಆಯ್ಕೆ ಹೆಣ್ಣುಹಕ್ಕಿಗೆ ಸೇರಿದ್ದು. ಸಾಮಾನ್ಯವಾಗಿ 4–6 ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಯ ಬಣ್ಣ ವಿವಿಧ ಪ್ರಭೇದಗಳಲ್ಲಿ ಬೇರೆ ಬೇರೆಯಾಗಿರುವುದು. ಕೆಲವು ಪ್ರಭೇದಗಳಲ್ಲಿ ಮೊಟ್ಟೆಗಳ ಬಣ್ಣ ತಿಳಿಮೇಘ ವರ್ಣ ಅಥವಾ ಕಂದು. ಅವುಗಳ ಮೇಲೆ ಬೂದು, ಕಪ್ಪು, ಅಥವಾ ಕಂದು ಬಣ್ಣದ ಚುಕ್ಕೆಗಳಿರುತ್ತವೆ. ಇನ್ನು ಕೆಲವು ಬಗೆಗಳಲ್ಲಿ ಹಳದಿ ಬಣ್ಣದವಿದ್ದು ಮೇಲೆ ಗಾಢ ಹಳದಿ ಮತ್ತು ಹಸುರು ಮಿಶ್ರಿತ ಕಂದು ಚುಕ್ಕೆಗಳಿರುತ್ತವೆ. ಭಾರತದಲ್ಲಿ ಕಂಡುಬರುವ ಸಿಪಿಲೆ ಹಕ್ಕಿಗಳಲ್ಲಿ ದಾಸ ಸಿಪಿಲೆ ಬಿಟ್ಟು ಉಳಿದವು ವಲಸೆ ಬರುವಂತಹವು. (ಎನ್.ವಿ.ಎ.)

**ಕುಂತಳ :** ಪ್ರಾಚೀನ ಕಾಲದಲ್ಲಿ ಪ್ರಖ್ಯಾತಿ ಪಡೆದಿದ್ದ ಕರ್ನಾಟಕದ ಒಂದು ರಾಜ್ಯ. ಸಾತವಾಹನ ಮನೆತನದ ಒಬ್ಬ ರಾಜ ಕುಂತಲ ವಿಷಯದಲ್ಲಿ ಹುಟ್ಟಿದ್ದರಿಂದ ಇವನಿಗೆ ಕುಂತಲ ಸಾತಕರ್ಣಿ ಎಂಬ ಹೆಸರಿತ್ತೆಂದು ತಿಳಿದುಬಂದಿದೆ. 4–5ನೆಯ ಶತಮಾನಗಳ ವಾಕಾಟಕರ ಶಾಸನಗಳಲ್ಲಿ ಕುಂತಳದ ಉಲ್ಲೇಖವಿದೆ. ಮಾನಾಂಕನೆಂಬ ರಾಷ್ಟ್ರಕೂಟ ಅರಸ ಸು. 5ನೆಯ ಶತಮಾನದಲ್ಲಿ ಕುಂತಳ ದೇಶವನ್ನು ಆಳುತ್ತಿದ್ದ. 6ನೆಯ ಶತಮಾನದ ವರಾಹಮಿಹಿರನ ಬೃಹತ್‌ಸಂಹಿತೆಯಲ್ಲಿಯೂ ಇದರ ಹೆಸರು ಉಕ್ತವಾಗಿದೆ. ಕುಂತಲವಿಷಯ ಕರ್ಣಾಟಧರಾ ಮಂಡಲದ ಮಧ್ಯದಲ್ಲಿತ್ತೆಂದು ಹಂಪಿಯ ಒಂದು ಶಾಸನ ಹೇಳುತ್ತದೆ. ಕನ್ನಡ ನಾಡಿನಲ್ಲಿ ದೊರೆತ 10ನೆಯ ಶತಮಾನದಿಂದೀಚಿನ ಶಾಸನಗಳಿಂದ ಶಿವಮೊಗ್ಗೆಯಿಂದ ಉತ್ತರಕ್ಕೆ ಘಟ್ಟದ ಮೇಲಿನ ಕರ್ನಾಟಕದ ಎಲ್ಲ ಜಿಲ್ಲೆಗಳೂ ಕುಂತಳ ದೇಶಕ್ಕೆ ಸೇರಿದ್ದುವೆಂದು ವ್ಯಕ್ತವಾಗುತ್ತದೆ. ಇದಕ್ಕೆ ಶಾಸನಗಳಲ್ಲಿ ಕುಂತಲ ಸಪ್ತಾರ್ಧ ಲಕ್ಷ (ಏಳೂವರೆ ಲಕ್ಷ ಗ್ರಾಮಗಳನ್ನೊಳಗೊಂಡ ದೇಶ) ಎಂಬ ಹೆಸರಿದೆ. ಚಾಳುಕ್ಯರು ಕಲ್ಯಾಣ ರಾಜಧಾನಿಯಿಂದ ಈ ದೇಶವನ್ನು ಆಳುತ್ತಿದ್ದರು. ಮೇಲೆ ಹೇಳಿರುವ ರಾಷ್ಟ್ರಕೂಟ ಮಾನಾಂಕನ ರಾಜಧಾನಿಯಾಗಿದ್ದ ಮಾನಪುರ ಈಗಿನ ಸಾತಾರ ಜಿಲ್ಲೆಯಲ್ಲಿರುವ ಮಾಣ್ ಎಂಬುದು. ಆದ್ದರಿಂದ ಸಾತಾರ ಜಿಲ್ಲೆಯವರೆಗಾದರೂ ಕುಂತಳ ದೇಶ ವ್ಯಾಪಿಸಿತ್ತೆಂಬುದು ಸ್ಪಷ್ಟ. ಆಶ್ಮಕ ಮತ್ತು ವಿದರ್ಭ ರಾಜರುಗಳನ್ನು ಸೋಲಿಸಿದುದಾಗಿ ಮಾನಾಂಕ ಹೇಳಿಕೊಂಡಿರುವುದರಿಂದಲೂ ವಿದರ್ಭದ ಒಡೆಯರಾಗಿದ್ದ ವಾಕಾಟಕರು ಕುಂತಳ ರಾಜರನ್ನು ಜೈಸಿರುವುದಾಗಿ ಕೇಳಿಕೊಂಡಿರುವುದರಿಂದಲೂ ಕುಂತಳ ರಾಜ್ಯ ಆಶ್ಮಕ (ಈಗಿನ ಅಹಮದ್ ನಗರ ಮತ್ತು ಬೀಡ್ ಜಿಲ್ಲೆಗಳು) ಮತ್ತು ವಿದರ್ಭಗಳಿಗೆ ನೆರೆ ರಾಜ್ಯವಾಗಿದ್ದಿರಬೇಕು. ಸೊಡ್ಡಲ ದೇವನೆಂಬ ಸಂಸ್ಕೃತಕವಿ ತನ್ನ ಉದಯ ಸುಂದರೀಕಥೆಯಲ್ಲಿ ಗೋದಾವರೀ ತೀರದ ಪ್ರತಿಷ್ಠಾನ (ಈಗಿನ ಔರಂಗಾಬಾದ್ ಜಿಲ್ಲೆಯ ಪೈಠಣ) ಕುಂತಲದ ರಾಜಧಾನಿಯಾಗಿತ್ತೆಂದು ಹೇಳಿದ್ದಾನೆ. (ಎನ್.ಎಲ್.ಆರ್.)

**ಕುಂತಿ :** ಮಹಾಭಾರತದ ಪ್ರಮುಖ ಸ್ತ್ರೀಪಾತ್ರಗಳಲ್ಲೊಬ್ಬಳು. ಲೋಕೈಕ ವೀರರಾದ ಪಾಂಡವರಿಗೆ ಜನ್ಮ ಕೊಟ್ಟ ಮಹಾಮಾತೆ. ಸಾಕ್ಷಾತ್ ಶ್ರೀಕೃಷ್ಣನ ಸೋದರತ್ತೆ. ಕರ್ಣನಂಥ ಸುಪುತ್ರನಿಧಿಯನ್ನು ಸನ್ನಿವೇಶ ಪ್ರಭಾವದಿಂದ ಅನಿವಾರ್ಯವಾಗಿ ಗಂಗೆಯಲ್ಲಿ ತೇಲಿಬಿಟ್ಟ ನತದೃಷ್ಟೆ. ಜೀವನದುದ್ದಕ್ಕೂ ಕಷ್ಟವನ್ನೇ ಅನುಭವಿಸಿ ಧೈರ್ಯ, ತಾಳ್ಮೆ ಹಾಗೂ ಸಹಿಷ್ಣುತೆಗಳಿಗೆ ಹೆಸರಾದವಳು. ಕುಂತಿ ಯದುವಂಶದ ಶೂರರಾಜನ ಮಗಳು. ವಸುದೇವನ ಸೋದರಿ. ಮೂಲತಃ ಇವಳ ಹೆಸರು ಪೃಥೆ ಎಂದು. ಶೂರರಾಜನ ಸೋದರತ್ತೆಯ ಮಗನೂ ಕುಂತಿ ದೇಶದ ಅರಸನೂ ಆದ ಕುಂತಿಭೋಜ ತನಗೆ ಮಕ್ಕಳಿಲ್ಲದ ಕಾರಣ ಪೃಥೆಯನ್ನೇ ದತ್ತು ತೆಗೆದುಕೊಂಡು ಸಾಕಿದ. ಈ ಕಾರಣದಿಂದಾಗಿ ಪೃಥೆಗೆ ಕುಂತಿ ಎಂಬ ಅಡ್ಡ ಹೆಸರೂ ರೂಢಿಯಾಯಿತು. ಈಕೆ ಸಿದ್ಧಿಯ ಅಂಶದಿಂದ ಜನಿಸಿದವಳು. ಶ್ರುತದೇವಾ, ಶ್ರುತಕೀರ್ತಿ, ರಾಜಾಧಿದೇವಿ ಮತ್ತು ಶ್ರುತಶ್ರವೆ ಎಂಬ ನಾಲ್ವರು ಈಕೆಯ ತಂಗಿಯರು.

ಕುಂತಿ ಇನ್ನೂ ಚಿಕ್ಕವಳಾಗಿದ್ದಾಗ ದೂರ್ವಾಸಮುನಿ ಈಕೆಯ ತಂದೆಯ ಮನೆಯಲ್ಲಿ ಬಂದು ಕೆಲಕಾಲ ತಂಗಿದ. ಆ ಸಮಯದಲ್ಲಿ ಆತನನ್ನು ಅತ್ಯಂತ ಭಯಭಕ್ತಿಯಿಂದ ಕುಂತಿ ಶುಶ್ರೂಷೆ ಮಾಡಿದಳು. ಇದರಿಂದ ಸಂತುಷ್ಟನಾದ ಮಹರ್ಷಿ ಕುಂತಿಗೆ ದಿವ್ಯ ಮಂತ್ರಗಳನ್ನು ಉಪದೇಶಿಸಿ ಅವುಗಳ ಸಹಾಯದಿಂದ ತನಗೆ ಇಷ್ಟ ಬಂದ ದೇವತೆಗಳನ್ನು ಬರಮಾಡಿಕೊಳ್ಳಬಹುದೆಂದು ಹೇಳಿ ಹೊರಟುಹೋದ. ಈ ವರಗಳು ಫಲಿಸುತ್ತವೋ ಇಲ್ಲವೋ ಪರೀಕ್ಷಿಸಬೇಕೆಂಬ ತವಕ ಕುಂತಿಗೆ ಅಧಿಕವಾಯಿತು. ಒಮ್ಮೆ ಮುಂಜಾನೆ, ಉದಯಿಸುತ್ತಿದ್ದ ಸೂರ್ಯದೇವನನ್ನು ಕಂಡು ದೂರ್ವಾಸನಿಂದ ಉಪದೇಶವಾಗಿ ಬಂದ ಸೂರ್ಯಮಂತ್ರವನ್ನು ಉಚ್ಚರಿಸಿದಳು. ತತ್‌ಕ್ಷಣವೇ ಸೂರ್ಯದೇವ ಪ್ರತ್ಯಕ್ಷನಾದ. ಆತನ ಸಾನ್ನಿಧ್ಯದಿಂದ, ಕುಂತಿಗೆ ಮಹಾ ತೇಜಸ್ಸಿನಿಂದ ಹೊಳೆಯುವ ಸಹಜ ಕವಚ ಕರ್ಣಕುಂಡಲಗಳಿಂದ ಕೂಡಿದ ಮಗುವೊಂದು ಲಭ್ಯವಾಯಿತು.

ಕನ್ಯೆಯಾದ ಕುಂತಿಗೆ ಹೀಗೆ ಅಕಾಲದಲ್ಲಿ ದೊರೆತ ಮಗುವನ್ನು ಕಂಡು ಭಯವಾಯಿತು. ಲೋಕಾಪವಾದಕ್ಕೆ ಹೆದರಿದ ಆಕೆ ನಿಧಿಯನ್ನು ಈಡಾಡುವ ಹಾಗೆ ಅದನ್ನು ಗಂಗೆಯಲ್ಲಿ ತೇಲಿಬಿಟ್ಟುಬಿಟ್ಟಳು. ಆ ಮಗುವಿನ ಸಕಲ ಸಂರಕ್ಷಣೆಯ ಭಾರವನ್ನೂ ಗಂಗೆಗೇ ವಹಿಸಬೇಕಾಯಿತು. ಮುಂದೆ ಅ ಮಗು ಸೂತನೊಬ್ಬನಿಗೆ ದೊರೆತು, ಕರ್ಣನೆಂಬ ಅಭಿಧಾನವನ್ನು ಪಡೆದು ಲೋಕವಿಖ್ಯಾತಿಯನ್ನು ಪಡೆಯಿತು. ಕುಂತಿಯ ಬಾಳಿನಲ್ಲಿ ಇದೊಂದು ಅತ್ಯಂತ ಪ್ರಮುಖವಾದ, ಮರೆಯಲಾಗದ ಘಟನೆ; ಮುಂದಿನ ಮಹಾಭಾರತ ಕಥೆಯ ಮೇಲೆ ಮಹತ್ತಾದಂಥ ಪರಿಣಾಮವನ್ನು ಬೀರಿದ ಘಟನೆ. ಕರ್ಣಂಗೊಡ್ಡಿತ್ತುದಲ್ ಭಾರತಂ ಎಂದು ಪಂಪ ಹೇಳುವ ಹಾಗೆ ಕರ್ಣನ ಜನನದ ರಹಸ್ಯ, ಅವನ ಕುಲದ ವಿಷಯ, ಕೌರವನು ಅವನಲ್ಲಿ ತೋರಿದ ಆದರ, ಪಾಂಡವ ಕೌರವರ ಯುದ್ಧದಲ್ಲಿ ಕರ್ಣನ ಪಾತ್ರ, ಕರ್ಣನ ಸಾವು–ಈ ಎಲ್ಲ ಕರ್ಣ ವೃತ್ತಾಂತವನ್ನೂ ನೋಡಿದಾಗ ಈ ಮೊದಲ ಘಟನೆಯ ಪ್ರಾಮುಖ್ಯ ಎದ್ದು ಕಾಣುತ್ತದೆ.

ಕುಂತಿ ತನಗೆ ಮಗುವಾದ ವಿಷಯವನ್ನು ಯಾರಿಗೂ ತಿಳಿಸದೆ ರಹಸ್ಯವಾಗಿಯೇ ಇಟ್ಟುಬಿಡುತ್ತಾಳೆ. ಇದು ಆಕೆಗಿಂತ ಹೆಚ್ಚಾಗಿ ಕರ್ಣನ ಬದುಕಿನ ಮೇಲೆ ಘೋರವಾದ ಪರಿಣಾಮವನ್ನು ಉಂಟುಮಾಡುತ್ತದೆ. ಪ್ರಖ್ಯಾತ ಚಂದ್ರವಂಶದಲ್ಲಿ, ಸೂರ್ಯನ ವರಬಲದಿಂದ, ಕುಂತಿಯ ಗರ್ಭದಲ್ಲಿ ಜನಿಸಿದರೂ ಸೂತಪುತ್ರ ಕುಲಹೀನ ಮೊದಲಾಗಿ ಮೂದಲಿಕೆಗೆ ಒಳಗಾಗಿ ಕರ್ಣ ಬಾಳಬೇಕಾಗುತ್ತದೆ. ಕುಂತಿಯ ಈ ಒಂದು ಅಚಾತುರ್ಯದಿಂದ ಕರ್ಣ ತನ್ನ ಒಡಹುಟ್ಟಿದ ಸೋದರರೊಂದಿಗೇ ಯುದ್ಧಮಾಡಿ ಅವರಿಂದಲೇ ಮೃತನಾಗಬೇಕಾಗುತ್ತದೆ.

ತರುವಾಯ, ಭೀಷ್ಮ ಕುಂತಿಯನ್ನು ತಂದು ಪಾಂಡುರಾಜನಿಗೆ ಮದುವೆ ಮಾಡುತ್ತಾನೆ. ಪಾಂಡು ತನಗೆ ಬಹಳ ಕಾಲ ಮಕ್ಕಳಾಗದೆ ಇದ್ದುದರಿಂದ ತುಂಬ ಚಿಂತಾಕ್ರಾಂತನಾಗುತ್ತಾನೆ. ಅವನು ಒಮ್ಮೆ ಕುಂತಿಯನ್ನು ಏಕಾಂತದಲ್ಲಿ ಕರೆದು, ಯಾವನಾದರೂ ಒಬ್ಬ ತಪಸ್ವಿಯಾದ ಬ್ರಾಹ್ಮಣನಿಂದ ಪುತ್ರನನ್ನು ಪಡೆಯುವುದಕ್ಕೆ ಯತ್ನಿಸು ಎಂಬುದಾಗಿ ಸೂಚಿಸುತ್ತಾನೆ. ಆದರೆ ಪತಿವ್ರತೆಯಾದ ಕುಂತಿ ಅದಕ್ಕೆ ಸಮ್ಮತಿಸುವುದಿಲ್ಲ. ಅದಕ್ಕೆ ಬದಲಾಗಿ ಬಾಲ್ಯದಲ್ಲಿ ತನಗೆ ದೊರೆತ ದೂರ್ವಾಸ ಮಂತ್ರಗಳನ್ನು ತಿಳಿಸಿ ಅದರ ಸಹಾಯದಿಂದ ಮಕ್ಕಳನ್ನು ಪಡೆಯಬಹುದು ಎಂಬುದಾಗಿ ತಿಳಿಸುತ್ತಾಳೆ. ಅನಂತರ ಪಾಂಡುವಿನ ಆಜ್ಞೆಯಂತೆ ಧರ್ಮನನ್ನು ನೆನೆದು ಅವನ ನೆರವಿನಿಂದ ಯುಧಿಷ್ಠಿರನನ್ನು ಪಡೆಯುತ್ತಾಳೆ; ಕ್ರಮೇಣ ವಾಯುವಿನ ನೆರವಿನಿಂದ ಭೀಮನನ್ನೂ ದೇವೇಂದ್ರನ ನೆರವಿನಿಂದ ಅರ್ಜುನನನ್ನೂ ಪಡೆಯುತ್ತಾಳೆ. ಮಹಾದೈವ ಶಕ್ತಿಗಳ ವರಬಲದಿಂದ ಜನಿಸಿದ ಈ ಮಕ್ಕಳು ಮುಂದೆ ಅಪ್ರತಿಮ ಸಾಹಸಿಗಳಾಗಿ, ತೇಜೋವಂತರಾಗಿ ಶೋಭಿಸುತ್ತಾರೆ. ಪಾಂಡುವಿನ ಕಿರಿಯ ಹೆಂಡತಿಯಾದ ಮಾದ್ರಿ ಕುಂತಿಗೆ ಮಕ್ಕಳಾಗಿ ತನಗೆ ಮಕ್ಕಳಾಗದೆ ಇದ್ದುದರಿಂದ ಸಂಕಟಕ್ಕೆ ಒಳಗಾಗುತ್ತಾಳೆ. ಪಾಂಡು ಅವಳಿಗೂ ಮಂತ್ರವನ್ನು ಉಪದೇಶಿಸುವಂತೆ ಕುಂತಿಯನ್ನು ಕೇಳಿಕೊಳ್ಳುತ್ತಾನೆ. ಕುಂತಿ ಮಾದ್ರಿಗೆ ಮಂತ್ರವೊಂದನ್ನು ಉಪದೇಶಿಸಿ ಇದರ ಸಹಾಯದಿಂದ ಒಬ್ಬ ಮಗನನ್ನು ಪಡೆಯುವಂತೆ ಹೇಳುತ್ತಾಳೆ. ಆದರೆ ಬುದ್ಧಿವಂತೆಯಾದ ಮಾದ್ರಿ ಆ ಮಂತ್ರದ ಬಲದಿಂದ ಅಶ್ವಿನೀದೇವತೆಗಳನ್ನು ನೆನೆದು ಅವಳಿ ಮಕ್ಕಳನ್ನು ಪಡೆಯುತ್ತಾಳೆ. ಅವರೇ ನಕುಲ, ಸಹದೇವರು.

ಇದಲ್ಲದೆ, ಪಾಂಡು ಕುಂತಿಯನ್ನು ಇನ್ನೂ ಒಬ್ಬ ಮಗನನ್ನು ಪಡೆಯುವಂತೆ ಪ್ರೇರೇಪಿಸಿದ್ದುಂಟು. ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಪಡೆಯಲು ಯಾವ ಆಪದ್ಧರ್ಮವೂ ಒಪ್ಪುವುದಿಲ್ಲವಾದ್ದರಿಂದ ನಾಲ್ಕನೆಯ ಮಗನನ್ನು ಪಡೆದರೆ ತಾನು ಸ್ವೇಚ್ಛಾಚಾರಿಣಿಯಾದೇನು ಎಂದು ಕುಂತಿ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಾಳೆ.

ಒಮ್ಮೆ ಪಾಂಡು ಅರಣ್ಯದಲ್ಲಿ ಮಾದ್ರಿಯನ್ನು ಭೋಗಿಸಿ, ಋಷಿ ಶಾಪದಂತೆ ಮೃತನಾದ್ದರಿಂದ, ಮಾದ್ರಿ ಅವನ ಜೊತೆಯಲ್ಲೇ ಸಹಗಮನ ಮಾಡುತ್ತಾಳೆ. ಕುಂತಿ ಐವರು ಮಕ್ಕಳ ಪೋಷಣೆಯ ಹೊರೆಯನ್ನು ಹೊತ್ತು ಹಸ್ತಿನಾಪುರ ಸೇರುತ್ತಾಳೆ.

ಮುಂದೆ, ವಾರಣಾವತದಲ್ಲಿ ಅರಗಿನ ಮನೆಯಿಂದ ತಪ್ಪಿಸಿಕೊಂಡ ಪಾಂಡವರು ಕೆಲವು ಸಮಯದ ಮೇಲೆ ಬ್ರಾಹ್ಮಣ ವೇಷವನ್ನು ಧರಿಸಿ ಏಕಚಕ್ರನಗರವನ್ನು ಸೇರಿ ಅಲ್ಲಿನ ಒಬ್ಬ ಬ್ರಾಹ್ಮಣನ ಮನೆಯಲ್ಲಿ ವಾಸವಾಗಿರುತ್ತಾರೆ. ಆ ಮನೆಯಲ್ಲಿ ಸರದಿಯಂತೆ ಯಾರಾದರೊಬ್ಬರು ಆ ದಿನ ಬಕಾಸುರನಿಗೆ ಬಲಿಯಾಗಬೇಕಾದ್ದರಿಂದ ತುಂಬ ದುಃಖಿಸುತ್ತಿರುತ್ತಾರೆ. ಇದನ್ನು ತಿಳಿದ ಕುಂತಿ ಅವರನ್ನು ಸಮಾಧಾನಪಡಿಸಿ ಬಂಡಿ ಅನ್ನದ ಜೊತೆಯಲ್ಲಿ ಭೀಮನನ್ನು ಕಳುಹಿಸುತ್ತಾಳೆ. ಭೀಮನಿಂದ ಬಕಾಸುರನ ಸಂಹಾರವಾಗುತ್ತದೆ. ಏಕಚಕ್ರ ನಗರಕ್ಕೆ ಒದಗಿದ್ದ ಮಹಾವಿಪತ್ತು ಹೀಗೆ ಪರಿಹಾರವಾಗುತ್ತದೆ. ಇಲ್ಲಿ ಕುಂತಿಯ ದಯಾಪರತೆ, ಕೃತಜ್ಞತೆ ಮತ್ತು ಪರೋಪಕಾರ ಬುದ್ಧಿ ಎದ್ದು ಕಾಣುತ್ತವೆ. ಭೀಮ ರಾಕ್ಷಸನಿಗಿಂತ ಬಲಶಾಲಿ ಎಂಬುದು ಕುಂತಿಗೆ ಗೊತ್ತಿದ್ದರೂ ರಾಕ್ಷಸನ ಬಳಿಗೆ ಮಗನನ್ನು ಕಳಿಸುವುದು ಸಾಮಾನ್ಯ ಸ್ತ್ರೀಗೆ ಅಸಾಧ್ಯವಾದುದು. ಕುಂತಿ ಅಸದೃಶ ಧೈರ್ಯಶಾಲಿ ಎಂಬುದೂ ಇಲ್ಲಿ ವ್ಯಕ್ತವಾಗುತ್ತದೆ. ದ್ರುಪದ ಏರ್ಪಡಿಸಿದ್ದ ಸ್ವಯಂವರದಲ್ಲಿ ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ಗೆದ್ದು ತಂದ ಪಾಂಡವರು ತಾಯಿಯ ಮಾತನ್ನು ಮೀರಲಾರದೆ ಐವರೂ ಆಕೆಯನ್ನು ವರಿಸಬೇಕಾಗುತ್ತದೆ.

ಮುಂದೆ ಪಾಂಡವರು ಜೂಜಿನಲ್ಲಿ ಸೋತು ರಾಜ್ಯವನ್ನು ಕಳೆದುಕೊಂಡು ಕಾಡಿಗೆ ಹೋಗಬೇಕಾಗಿ ಬಂದಾಗ ಕುಂತಿ ವಿದುರನ ಮನೆಯಲ್ಲಿಯೇ ಉಳಿದುಕೊಳ್ಳುತ್ತಾಳೆ. ವನವಾಸ ಕಳೆದ ಮೇಲೆ ಪಾಂಡವರ ರಾಯಭಾರಿಯಾಗಿ ದುರ್ಯೋಧನನಲ್ಲಿಗೆ ಬಂದ ಶ್ರೀಕೃಷ್ಣ ವಿದುರನ ಮನೆಯಲ್ಲಿ ಉಳಿದುಕೊಂಡಾಗ ಕುಂತಿ ಅವನನ್ನು ಸಂದರ್ಶಿಸುತ್ತಾಳೆ. ಉಪ್ಪರಿಗೆಗಳಲ್ಲಿ ಹಂಸತೂಲಿಕಾತಲ್ಪದ ಮೇಲೆ ಮಲಗಿ ನಿದ್ರೆಮಾಡಿ ಬೆಳಗ್ಗೆ ಮಂಗಳವಾದ್ಯಗಳಿಂದಲೂ ವಂದಿಮಾಗಧರ ಸ್ತೋತ್ರದಿಂದಲೂ ಎಚ್ಚರಗೊಳ್ಳುತ್ತಿದ್ದ ನನ್ನ ಮಕ್ಕಳು ಕೃಷ್ಣಾಜಿನದ ಮೇಲೆ ಮಲಗಿ ಕಾಡುಮೃಗಗಳ ಕೂಗಿನಿಂದ ಎಚ್ಚರಗೊಳ್ಳುವ ಹಾಗಾಯಿತಲ್ಲ–ಎಂದು ದುಃಖಿಸುತ್ತಾಳೆ. ಕೃಷ್ಣ ಪಾಂಡವರ ಕ್ಷೇಮವನ್ನೂ ಮುಂದಿನ ಶುಭವನ್ನೂ ತಿಳಿಸಿ ಆಕೆಯನ್ನು ಸಮಾಧಾನಪಡಿಸುತ್ತಾನೆ. ಸಂಧಿಯ ಪ್ರಯತ್ನ ವಿಫಲವಾಗಲಾಗಿ ಅರಮನೆಯಿಂದ ಹೊರಟುಬಂದ ಕೃಷ್ಣನ ಕೈಲಿ ತನ್ನ ಮಕ್ಕಳು ಕ್ಷತ್ರಿಯೋಚಿತವಾಗಿ ಕೌರವರ ಮೇಲೆ ಯುದ್ಧ ಮಾಡುವುದೇ ನ್ಯಾಯವೆಂದು ಕುಂತಿ ಹೇಳಿಕಳುಹಿಸುತ್ತಾಳೆ.

ಬಳಿಕ ಕುಂತಿ ವ್ಯಾಪಾರ ಮನೋಭಾವನೆಯಿಂದ ಗಂಗಾತೀರದಲ್ಲಿ ಕರ್ಣನನ್ನು ಸಂಧಿಸುತ್ತಾಳೆ. ಕರ್ಣ ನೀನು ನನ್ನ ಮಗ, ಪಾಂಡವರು ನಿನ್ನ ಸೋದರರು. ಸೂರ್ಯದೇವನೇ ನಿನ್ನ ತಂದೆ, ಆದ್ದರಿಂದ ಈಗ ನೀನು ನಮ್ಮ ಕಡೆ ಬಂದುಬಿಡು ಎಂದು ಕರೆಯುತ್ತಾಳೆ. ಮಹಾಸ್ವಾಮಿಭಕ್ತನಾದ ಕರ್ಣ ಅದನ್ನು ನಿರಾಕರಿಸುವುದು ತಿಳಿದಿರುವ ವಿಷಯವೇ ಆಗಿದೆ. ಆದರೆ ಅರ್ಜುನನನ್ನುಳಿದು, ಉಳಿದ ನಾಲ್ವರನ್ನು ಕೊಲ್ಲುವುದಿಲ್ಲ ಎಂಬುದಾಗಿ ಕರ್ಣ ಮಾತು ಕೊಡುತ್ತಾನೆ. ಕೊನೆಗೆ ತೊಟ್ಟ ಬಾಣವನ್ನು ತೊಡಬೇಡ ಎಂಬುದಾಗಿ ಹೇಳಿ ಕರ್ಣನಿಂದ ಆಶ್ವಾಸನೆ ಪಡೆದು ಕುಂತಿ ಹಿಂತಿರುಗುತ್ತಾಳೆ. ಇಲ್ಲೆಲ್ಲ ಕುಂತಿಯ ಒಳತೋಟಿಯ ಚಿತ್ರಣ ಹೃದಯ ವಿದ್ರಾವಕವಾಗಿ ವರ್ಣಿತವಾಗಿದೆ.

ಕುರುಕ್ಷೇತ್ರದ ಯುದ್ಧ ಮುಗಿದ ತರುವಾಯ ಕರ್ಣನ ಕಳೇಬರವನ್ನು ಕಂಡು ಕುಂತಿ ಅತೀವವಾಗಿ ದುಃಖಿಸುತ್ತಾಳೆ. ಅಲ್ಲದೆ ಯುದ್ಧದಲ್ಲಿ ಮಡಿದ ಜ್ಞಾತಿ, ಬಂಧುಗಳಿಗೆಲ್ಲ ತಿಲೋದಕವನ್ನು ಕೊಡುವ ಸಮಯದಲ್ಲಿ ಕರ್ಣ ತನ್ನ ಹಿರಿಯ ಮಗನೆಂದೂ ಅವನಿಗೆ ಮೊತ್ತಮೊದಲು ಜಲತರ್ಪಣವನ್ನು ಕೊಡಬೇಕೆಂದೂ ಧರ್ಮರಾಯನಿಗೆ ಕುಂತಿ ತಿಳಿಸುತ್ತಾಳೆ; ಧರ್ಮರಾಯ ಪಟ್ಟಾಭಿಷಿಕ್ತನಾದ ಮೇಲೆಯೂ ಕರ್ಣನ ವಧೆಯಿಂದ ಸಂತಾಪ ಪಡುತ್ತಲೇ ಇರುತ್ತಾಳೆ. ಇದೇ ವ್ಯಥೆಯಿಂದ ಧೃತರಾಷ್ಟ್ರ ಮತ್ತು ಗಾಂಧಾರಿಯರೊಂದಿಗೆ ಅರಣ್ಯಕ್ಕೆ ತಪಸ್ಸಿಗಾಗಿ ಹೋಗುತ್ತಾಳೆ. ಪಾಂಡವರು ಎಷ್ಟೇ ವಿಧದಿಂದ ತಡೆದರೂ ಪ್ರಯೋಜನವಾಗುವುದಿಲ್ಲ. ಮಕ್ಕಳೆಲ್ಲ ಅರಣ್ಯಕ್ಕೇ ಹೋಗಿ ಅಂಗಲಾಚಿ ಕರೆದರೂ ಆಕೆ ಹಿಂತಿರುಗುವುದಿಲ್ಲ. ತನ್ನ ಕೈಲಾದ ಮಟ್ಟಿಗೂ ಧೃತರಾಷ್ಟ್ರ ಮತ್ತು ಗಾಂಧಾರಿಯನ್ನು ಸೇವಿಸಿಕೊಂಡು ತಪಸ್ಸಿನಲ್ಲಿ ನಿರತಳಾಗಿದ್ದುಬಿಡುತ್ತಾಳೆ. ಒಮ್ಮೆ ವ್ಯಾಸ ಅವಳಿದ್ದ ಆಶ್ರಮಕ್ಕೆ ಬರುತ್ತಾನೆ. ಕುಂತಿಯ ಬಯಕೆಯಂತೆ ಕರ್ಣನನ್ನು ನೀರಿನ ಮಧ್ಯದಲ್ಲಿ ಮತ್ತೆ ತೋರಿಸುತ್ತಾನೆ. ಇದಾದ ಕೆಲವು ದಿವಸಗಳ ತರುವಾಯ ವ್ಯಾಸರ ಅನುಮತಿಯಂತೆ ಕುಂತಿ ದಾವಾಗ್ನಿಯನ್ನು ಹೊಕ್ಕು ಮೃತಳಾಗುತ್ತಾಳೆ.

ಅಂತೂ ಇಂತೂ ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ ಎಂಬ ಗಾದೆಗೆ ಬದಲಾಗಿ ಅಂತೂ ಇಂತೂ ಕುಂತಿಗೆ ಸುಖವಿಲ್ಲ ಎಂದು ಹೇಳಿದರೆ ಹೆಚ್ಚು ನಿಜವಾಗುತ್ತದೆ ಎಂದಿರುವ ಎ.ಆರ್.ಕೃ. ಅವರ ಮಾತು ಸತ್ಯವಾದುದು. ಕುಂತಿ ಜೀವನದುದ್ದಕ್ಕೂ ಕಷ್ಟಪಡುವುದೇ ಆಯಿತು. ಪಾಂಡವರು ವನವಾಸವೆಲ್ಲ ಮುಗಿದಮೇಲೆ ಯುದ್ಧದಲ್ಲಿ ಶತ್ರುಗಳನ್ನು ಗೆದ್ದು ರಾಜ್ಯಭಾರ ಮಾಡುವ ಸಮಯದಲ್ಲಿ ಕುಂತಿ ಸುಖಪಡಬಹುದಿತ್ತು. ಆದರೆ ಅದನ್ನು ಬಯಸದೆ ಆಕೆ ಅರಣ್ಯಕ್ಕೆ ಹೋಗುತ್ತಾಳೆ. ಹೀಗೆ ಧೈರ್ಯ, ತಾಳ್ಮೆ, ಪರೋಪಕಾರ, ತ್ಯಾಗ ಮತ್ತು ಕಷ್ಟಸಹಿಷ್ಣುತೆಗಳಿಗೆ ಕುಂತಿ ಹೆಸರಾದವಳು; ಗೌರವಕ್ಕೆ ಪಾತ್ರಳಾದವಳು.

ಇಪ್ಪತ್ತನೆಯ ಶತಮಾನದಲ್ಲೂ ಈಕೆ ಆರಾಧ್ಯಮೂರ್ತಿಯಾಗಿದ್ದಾಳೆ. ಜನಪದದಲ್ಲಿ ಕುಂತಿ ಎಂದರೆ ತುಂಬ ಗೌರವ. ಪೌರಾಣಿಕ ವ್ಯಕ್ತಿಯಾದ ಕುಂತಿಯನ್ನು ದೇವತೆಯನ್ನಾಗಿ ಕಲ್ಪಿಸಿಕೊಂಡು ಪೂಜಿಸುವ ಸಂಪ್ರದಾಯ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ರೂಢಿಯಲ್ಲಿದೆ. ಡಿ. ಲಿಂಗಯ್ಯನವರು ತಮ್ಮ ಕೊಂತಿ ಪೂಜೆ ಎಂಬ ಪ್ರಬಂಧದಲ್ಲಿ ವಿವರವಾಗಿ ಈ ಬಗ್ಗೆ ಚರ್ಚಿಸಿದ್ದಾರೆ. ಕುಂತಿಯನ್ನು ಹಳ್ಳಿಗರು ಕೊಂತಿ ಎಂಬುದಾಗಿ ಕರೆಯುತ್ತಾರೆ. ಈ ಸಂಬಂಧವಾದ ಪೂಜೆಯೇ ಕೊಂತಿ ಪೂಜೆ. ಪ್ರತಿವರ್ಷದ ಕಾರ್ತಿಕದಲ್ಲಿ ಬೆಳದಿಂಗಳಿರುವ ರಾತ್ರಿಗಳಲ್ಲಿ ನಿರಂತರವಾಗಿ ಹದಿನಾರು ದಿವಸಗಳು ಈ ಪೂಜೆ ನಡೆಯುತ್ತದೆ. ಯಾರಾದರೊಬ್ಬರ ಮನೆಯಲ್ಲಿ ಎರೆಯ ಮಣ್ಣಿನಿಂದ ಮಾಡಿದ ಸ್ತ್ರೀವಿಗ್ರಹವನ್ನು ಕೂರಿಸಿ ಪೂಜಿಸುತ್ತಾರೆ. ಊರ ಸ್ತ್ರೀಯರು ಸೇರಿ ಕುಂತಿಗೆ ಸಂಬಂಧಪಟ್ಟ ಹಾಡುಗಳನ್ನು ಹಾಡುತ್ತಾರೆ. ಹೀಗೆ ಹದಿನಾರು ದಿವಸಗಳು ಕಳೆದ ಮೇಲೆ ಗಣಪತಿಯನ್ನು ವಿಸರ್ಜಿಸುವಂತೆ ಕೆರೆಗೋ ಹರಿಯುವ ಹಳ್ಳಕ್ಕೋ ತೆಗೆದುಕೊಂಡು ಹೋಗಿ ವಿಸರ್ಜಿಸುತ್ತಾರೆ. (ಎಂ.ಸಿ.ವಿ.)

**ಕುಂತುರ :** ಮಧ್ಯ ಏಷ್ಯದ ಕುಚಿ ರಾಜ್ಯದಲ್ಲಿ ಚೀನ ಮತ್ತು ಪಶ್ಚಿಮ ಏಷ್ಯಗಳ ಮಧ್ಯದ ಪ್ರಾಚೀನ ಮಾರ್ಗದಲ್ಲಿರುವ ಒಂದು ಸ್ಥಳ; ಆ ಸುತ್ತಿನಲ್ಲಿ ಭಾರತೀಯ ಸಂಸ್ಕೃತಿ ಪ್ರಸರಿಸಿದ ಕಾಲದಲ್ಲಿ ಪ್ರಸಿದ್ಧವಾಗಿದ್ದ ಕಲಾಕೇಂದ್ರ. ಕುಚಿ ರಾಜ್ಯ ಭಾರತೀಯ ಸಂಸ್ಕೃತಿಯನ್ನು ಚೆನ್ನಾಗಿ ರೂಢಿಸಿಕೊಂಡಿದ್ದುದರಿಂದ ಕುಂತುರ, ಕಿಜಿಲ್ ಮುಂತಾದ ಕಲಾಕೇಂದ್ರಗಳ ಬೆಳವಣಿಗೆಗೆ ಅವಕಾಶವಾಯಿತು. ಅಖಂಡ ಶಿಲೆಗಳನ್ನು ಕೊರೆದು ನಿರ್ಮಿಸಿರುವ ಗುಹಾಲಯ ಇಲ್ಲಿವೆ. ಇವು ಆಯಾಕಾರದವು. ಇವುಗಳ ಪೈಕಿ ನಾಗರಾಜಗುಹೆ, ನಿರ್ವಾಣ ಗುಹೆ, ಅಪ್ಸರ ಗುಹೆ, ಮತ್ತು ಕಿನ್ನರ ಗುಹೆ ಮುಖ್ಯವಾದುವು. ಈ ಗುಹೆಗಳ ಕೆಲವು ಶಿಲ್ಪಗಳಲ್ಲಿ ಗುಪ್ತರ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ಶಿಲ್ಪಗಳಿಗಿಂತ ವರ್ಣಚಿತ್ರಗಳಿಗೆ ಇವು ಹೆಚ್ಚು ಪ್ರಸಿದ್ಧವಾಗಿವೆ. ಗುಹಾಲಯಗಳ ಗೋಡೆಗಳ ಮೇಲಣ ಚಿತ್ರ ಬಿಡಿಸಲು ಹಸುರು, ಕಂದುಗೆಂಪು, ಕಪ್ಪು ಮುಂತಾದ ಬಣ್ಣಗಳನ್ನು ಬಳಸಲಾಗಿದೆ. ಬುದ್ಧನ ವರ್ಣಚಿತ್ರ ಶೈಲಿಯಲ್ಲಿ ಮೂರು ಮುಖ್ಯ ಹಂತಗಳನ್ನು ಗುರುತಿಸಬಹುದು. ಮೊದಲನೆಯ ಹಂತದಲ್ಲಿ ಅಷ್ಟೇನೂ ಉತ್ತಮ ಮಟ್ಟದ ಚಿತ್ರಗಳಿಲ್ಲ. ಎರಡನೆಯ ಹಂತದಲ್ಲಿ ಭಾರತೀಯ ಚಿತ್ರ ಸಂಪ್ರದಾಯದ ಪ್ರಭಾವ ವಿಶೇಷವಾಗಿದೆ. ಗುಪ್ತರ ಕಾಲದ ಛಾಯೆ ಪ್ರಧಾನವಾಗಿದೆ. ಇದೇ ಕಾಲದಲ್ಲಿ ಇರಾನಿಯನ್ ಪ್ರಭಾವವೂ ಉಂಟಾದಂತೆ ತೋರುತ್ತದೆ. ಮೂರನೆಯ ಹಂತದಲ್ಲಿ ಚೀನೀ ಪ್ರಭಾವ ವಿಶೇಷವಾಗಿದೆ. ಆದ್ದರಿಂದ ಇದನ್ನು ಭಾರತೀಯ, ಇರಾನಿಯನ್ ಮತ್ತು ಚೀನೀ ಪ್ರಭಾವಗಳ ಉತ್ತಮ ಸಂಗಮವೆಂದು ವಿದ್ವಾಂಸರು ಭಾವಿಸುತ್ತಾರೆ. ಇಲ್ಲಿಯ ನಿರ್ವಾಣ ಗುಹೆಯಲ್ಲಿ, ಹೆಬ್ಬಾಗಿಲಿನ ಎರಡು ಕಡೆಗಳಲ್ಲೂ ಬೌದ್ಧಭಿಕ್ಷುಗಳ ಮತ್ತು ಇತರರ ಚಿತ್ರಗಳಿವೆ. ಒಳಗಿನ ಗೋಡೆಯ ಮಧ್ಯದಲ್ಲಿ ದೇವತೆಗಳ ಸಮೂಹದಲ್ಲಿರುವ ಬುದ್ಧನ ಅಂದವಾದ ವರ್ಣಚಿತ್ರವುಂಟು. ಗೋಡೆಗಳಲ್ಲಿಯ ಗೂಡುಗಳಲ್ಲಿ ಬೋಧಿಸತ್ತ್ವನ ವಿಗ್ರಹಗಳಿವೆ. ಮಧ್ಯ ಏಷ್ಯದಲ್ಲಿ ಭಾರತೀಯ ಕಲೆಯನ್ನು ರೂಢಿಸಿಕೊಂಡಿದ್ದ ಕೇಂದ್ರಗಳಲ್ಲಿ ಕುಂತುರ ಮುಖ್ಯವಾದ್ದು. (ಎ.ವಿ.ಎನ್.)

**ಕುಂಥಲಗಿರಿ :** ಮಹಾರಾಷ್ಟ್ರ ರಾಜ್ಯದಲ್ಲಿ ಸೊಲ್ಲಾಪುರದ ಬಳಿ ಇರುವ ಒಂದು ಜೈನಕ್ಷೇತ್ರ. ಅನೇಕ ಜೈನ ಯತಿಗಳು ಇಲ್ಲಿ ತಪಸ್ಸು ಮಾಡಿದ್ದಾರೆ. 1955ರಲ್ಲಿ ಶಾಂತಿಸಾಗರ ದಿಗಂಬರ ಮುನಿಗಳು ಈ ಕ್ಷೇತ್ರದಲ್ಲಿ ಯಮ ಸಲ್ಲೇಖನ ತೆಗೆದುಕೊಂಡು ಅಂತ್ಯವಾದರು. (ಬಿ.ಜಿ.)

**ಕುಂದಕುಂದಾಚಾರ್ಯ :** ಪ್ರಾಚೀನ ಜೈನ ದಿಗಂಬರ ಆಚಾರ್ಯರಲ್ಲಿ ಬಹು ಪ್ರಸಿದ್ಧ. ಈತನ ಕಾಲ ಹಾಗೂ ಮನೆತನದ ವಿಚಾರವಾಗಿ ಭಿನ್ನಾಭಿಪ್ರಾಯವಿದೆ. ಕಾಲದ ಬಗ್ಗೆ ಪ್ರ.ಶ.ಪೂ. 8, ಪ್ರ.ಶ.ಪೂ. 52, ಪ್ರ.ಶ.ಪೂ. 92 ಪ್ರ.ಶ.ಪೂ. 243 ಎಂಬ ನಾಲ್ಕು ಅಭಿಪ್ರಾಯಗಳಿವೆ. ಪ್ರಾಭೃತಸಾರದಲ್ಲಿ ಕುಂದಕುಂದಾಚಾರ್ಯನ ಶಿಷ್ಯ ಶಿವಕುಮಾರ ಎಂಬ ಉಲ್ಲೇಖವಿದೆ. ಈತ ಕದಂಬ ವಂಶದ ಶ್ರೀವಿಜಯ ಶಿವಮೃಗೇಶ ಮಹಾರಾಜನೆಂದು ತಿಳಿದರೆ ಈತನ ಕಾಲ 5ನೆಯ ಶತಮಾನವಾಗುತ್ತದೆ. ಈ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈತನ ಕಾಲ ಪ್ರ.ಶ. 1 ರಿಂದ 5ನೆಯ ಶತಮಾನವೆನ್ನಬಹುದು. ಆದರೆ ಉಪಾಧ್ಯೆ ಅವರು ಅನೇಕ ಪ್ರಮಾಣಗಳನ್ನು ನೀಡಿ ಈತನ ಕಾಲ ಒಂದನೆಯ ಶತಮಾನವೆಂದು ನಿರ್ಣಯಿಸಿದ್ದಾರೆ. ಪುಣ್ಯಾಶ್ರವ ಕಥೆಯ ಆಧಾರದ ಮೇಲೆ ಈತನ ತಂದೆ ಕರ್ಮಮುಂಡ ತಾಯಿ ಶ್ರೀಮತಿ ಎಂದು ಚಕ್ರವರ್ತಿಯವರೂ ತಂದೆ ಕುಂದ ಶ್ರೇಷ್ಠಿ ತಾಯಿ ಕುಂದಲತಾ ಎಂದು ಪಂಡಿತ ಪ್ರೇಮಿಯವರೂ ತಿಳಿಸುತ್ತಾರೆ. ಈತನ ಗುರು ಯಾರು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಈತನ ಗುರು ಜಿನಚಂದ್ರನೆಂದು ಪ್ರೇಮಿಯವರೂ ಕುಮಾರನಂದಿ ಸಿದ್ಧಾಂತದೇವರು ಎಂದು ಜಿನಸೇನರೂ ತಿಳಿಸುತ್ತಾರೆ. ಬೋಧಪಾಹುಡದ ಕೊನೆಯಲ್ಲಿ ತಾನು ಭದ್ರಬಾಹುವಿನ ಶಿಷ್ಯನೆಂದು ಕುಂದಾಚಾರ್ಯನೇ ಹೇಳಿಕೊಂಡಿರುತ್ತಾನೆ. ಭದ್ರಬಾಹು ನೇರವಾಗಿ ಈತನ ಗುರುವಾಗಿರದಿದ್ದರೂ ಪರಂಪರೆಯಿಂದ ಗುರುವಾಗಿರಬಹುದೆಂದು ಆ. ನೇ. ಉಪಾಧ್ಯೆ ಅವರು ಅಭಿಪ್ರಾಯಪಡುತ್ತಾರೆ.

ಈತನ ಪೂರ್ವಾಶ್ರಮದ ಹೆಸರು ಪದ್ಮನಂದಿ. ಕುಂದಪುರದವನಾದ್ದರಿಂದ ಈತನಿಗೆ ಕುಂದಕುಂದಾಚಾರ್ಯ ಎಂಬ ಹೆಸರು ಅನಂತರದಲ್ಲಿ ಬಂದಿರಬಹುದು. ಇವಲ್ಲದೆ ಈತನಿಗೆ ಏಲಾಚಾರ್ಯ, ಗೃಧ್ರಪಿಚ್ಛ, ವಕ್ರಗ್ರೀವ ಎಂಬ ಹೆಸರುಗಳೂ ಇವೆ. ಈತ ದ್ರಾವಿಡ ದೇಶದವನೆಂದು ನಂಬಲರ್ಹವಾದ ಆಧಾರಗಳಿವೆ.

ಈತನ ಹೆಸರಿನಲ್ಲಿ ಎಂಬತ್ತುನಾಲ್ಕು ಗ್ರಂಥಗಳಿವೆ. ಇವುಗಳ ಭಾಷೆ ಪ್ರಾಕೃತ. ಷಟ್ ಖಂಡಾಗಮ ಟೀಕೆ, ಮೂಲಾಚಾರ, ಪ್ರಾಕೃತಭಕ್ತಿಗಳಿಗೆ ಸಂಬಂಧಪಟ್ಟ ಹತ್ತು ಗ್ರಂಥಗಳು. ದಂಸನಪಾಹುಡ (ಸಮ್ಯಕ್‌ದರ್ಶನ), ಚಾರಿತ್ತ ಪಾಹುಡ (ಸಚಾರಿತ್ರ್ಯ), ಬೋಧಪಾಹುಡ, ಭಾವಪಾಹುಡ (ಭಾವಶುದ್ಧಿ), ಮೇಖ್ಖಪಾಹುಡ (ಮೋಕ್ಷ), ಲಿಂಗಪಾಹುಡ (ಭಾವಲಿಂಗ) ಶೀಲಪಾಹುಡ–ಈ ಎಂಟು ಪಾಹುಡಗಳು, ಸಂನ್ಯಾಸಿಗಳ ಮತ್ತು ಗೃಹಸ್ಥರ ಜೀವನ ನಿಯಮಗಳನ್ನು ಕುರಿತು ಬರೆದಿರುವ ಪಯಣಸಾರ, ಕರ್ಮವನ್ನು ತಡೆಯುವುದಕ್ಕೆ ಅಗತ್ಯವಾದ ಹನ್ನೆರಡು ಅನುಪೇಕ್ಷೆಗಳನ್ನು ಕುರಿತ ಬಾರಸಅಣುವೇಖ್ಖಾ, ತ್ರಿರತ್ನಗಳನ್ನು ಕುರಿತ ನಿಯಮಸಾರ–ಇವು ಎಂಭತ್ತು ನಾಲ್ಕರಲ್ಲಿ ಕೆಲವು. ಇವೆಲ್ಲದರ ಕರ್ತೃ ಕುಂದಕುಂದಾಚಾರ್ಯನೇ ಎಂಬ ವಿಚಾರದಲ್ಲಿ ಸಂಶಯಕ್ಕೆ ಅವಕಾಶವಿದೆ.

ಆದರೆ ಪಂಚಾಸ್ತಿಕಾಯ ಸಾರ, ಸಮಯಸಾರ, ಪ್ರವಚನಸಾರ–ಈ ಮೂರು ಗ್ರಂಥಗಳ ವಿಚಾರವಾಗಿ ಕುಂದಕುಂದಾಚಾರ್ಯನೇ ಇವನ್ನು ಬರೆದ ಎಂಬ ವಿಷಯದಲ್ಲಿ ಸಂದೇಹಕ್ಕೆ

ಅವಕಾಶವಿಲ್ಲ. ಇವು ಮೂರು ಪ್ರಮಾಣ ಗ್ರಂಥಗಳು. ಪಂಚಾಸ್ತಿಕಾಯಸಾರ, ಜೀವ, ಅಜೀವ, ಧರ್ಮ ಅಧರ್ಮ ಮುಂತಾದ ಜೈನತತ್ತ್ವಗಳಿಗೆ ಸಂಬಂಧಪಟ್ಟದ್ದು. ಸಮಯಸಾರ ಸ್ವಸಮಯ ಮತ್ತು ಪರಸಮಯಗಳನ್ನು, ಆತ್ಮದ ಮೋಕ್ಷವನ್ನು ವಿಚಾರ ಮಾಡುವ ಗ್ರಂಥ. ಈ ಗ್ರಂಥವನ್ನು ಶ್ವೇತಾಂಬರ, ದಿಗಂಬರ, ಸ್ಥಾವರವಾಸಿಗಳು ತಮ್ಮಲ್ಲಿನ ಭೇದ ಭಾವವನ್ನು ತೊರೆದು ಆದರದಿಂದ ಅಧ್ಯಯನ ಮಾಡುತ್ತಾರೆ. ವೈದಿಕರು ಉಪನಿಷತ್ತುಗಳನ್ನೂ ಭಗವದ್ಗೀತೆಯನ್ನೂ ಬ್ರಹ್ಮಸೂತ್ರವನ್ನೂ ಪ್ರಸ್ಥಾನತ್ರಯವೆಂದು ಗಣಿಸಿರುವಂತೆ ಜೈನರು ಈ ಮೂರು ಗ್ರಂಥಗಳನ್ನೂ ಪ್ರಾಭೃತತ್ರಯವೆಂದು ಪರಿಗಣಿಸಿದ್ದಾರೆ. ಸಮಯಸಾರ ಸಂಸಾರವನ್ನು ನಾಟಕಕ್ಕೆ ಹೋಲಿಸುತ್ತದೆ. ಈ ಗ್ರಂಥದ ಭಾಗಗಳನ್ನು ನಾಟಕದಂತೆ ಪೂರ್ವ ರಂಗ, ಅಂಕ ಮುಂತಾಗಿ ವಿಂಗಡಿಸಲಾಗಿದೆ. ಉಳಿದ ಎರಡು ಗ್ರಂಥಗಳ ಭಾಗಗಳನ್ನು ಈ ರೀತಿ ವಿಂಗಡಿಸದಿದ್ದರೂ ಇವನ್ನೂ ಸೇರಿಸಿ ನಾಟಕತ್ರಯವೆಂದು ಜೈನರು ಸಾಂಪ್ರದಾಯಿಕವಾಗಿ ಕರೆದಿರುತ್ತಾರೆ.

ಜೈನ ಸಂಪ್ರದಾಯದ ಪ್ರಕಾರ ತಮಿಳರಿಗೆ ಅತ್ಯಂತ ಮೆಚ್ಚಿಕೆಯಾದ ಕುಱಳ್ ಗ್ರಂಥವನ್ನು ಏಲಾಚಾರ್ಯ ರಚಿಸಿ ತಿರುವಳ್ಳುವರ್‌ಗೆ ಕೊಟ್ಟನೆಂದು ಹೇಳಲಾಗಿದೆ. (ಜಿ.ಎಚ್.)

**ಕುಂದಗೋಳ** : ಧಾರವಾಡ ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು; ಮತ್ತು ಆ ತಾಲ್ಲೂಕಿನ ಮುಖ್ಯಸ್ಥಳ. ಹುಬ್ಬಳ್ಳಿ ತಾಲ್ಲೂಕಿನ ಆಗ್ನೇಯಕ್ಕಿದೆ. ತಾಲ್ಲೂಕಿನ ವಿಸ್ತೀರ್ಣ 608 ಚ. ಕಿಮೀ. ಜನಸಂಖ್ಯೆ 1,57,039 (2001). 1948ರಲ್ಲಿ ಇದು ಧಾರವಾಡ ಜಿಲ್ಲೆಯಲ್ಲಿ ಸಮಾವೇಶವಾಗುವ ಮೊದಲು ಜಮಖಂಡಿ ಸಂಸ್ಥಾನದ ಆಡಳಿತದಲ್ಲಿತ್ತು. ಇಲ್ಲಿಯದು ಶುಷ್ಕ ವಾಯುಗುಣ; ಕಪ್ಪುಮಿಶ್ರಿತ ಮಣ್ಣು. ತುಂಬ ಫಲವತ್ತಾಗಿದೆ. ಹತ್ತಿ ಮತ್ತು ಜೋಳ ಇಲ್ಲಿಯ ಮುಖ್ಯ ಬೆಳೆಗಳು. ಮಳೆ ಸಾಮಾನ್ಯವಾಗಿ 50–60 ಸೆಂ.ಮೀ.

ಮೊದಲು ಈ ತಾಲ್ಲೂಕಿನಲ್ಲಿದ್ದ ಹಳ್ಳಿಗಳ ಸಂಖ್ಯೆ 58. ಪ್ರಾದೇಶಿಕ ಬದಲಾವಣೆಗಳ ಅನಂತರ 51ಕ್ಕೆ ಇಳಿಯಿತು. ಪಟ್ಟಣವೆಂದರೆ ಕುಂದಗೋಳವೊಂದೇ. ಎರಡು ದೊಡ್ಡ ಪಂಚಾಯಿತಿ ಹಳ್ಳಿಗಳಿವೆ. ಉಳಿದವು ಕಿರಿಯವು.

ತಾಲ್ಲೂಕಿನ ಮುಖ್ಯಸ್ಥಳವಾದ ಕುಂದಗೋಳ ಇತಿಹಾಸ ಪ್ರಸಿದ್ಧವಾದ್ದು. ಅದು ಮೊದಲು ಬ್ರಹ್ಮಪುರವಾಗಿದ್ದಿರಬೇಕೆಂದು ಸ್ಥಳಪುರಾಣದಿಂದ ವ್ಯಕ್ತವಾಗುತ್ತದೆ. ಹುಬ್ಬಳ್ಳಿಯಿಂದ ಆಗ್ನೇಯಕ್ಕೆ 14 ಕಿಮೀ ಮೇಲಿರುವ ಈ ಪಟ್ಟಣ ಹುಬ್ಬಳ್ಳಿ–ಬೆಂಗಳೂರು ಮುಖ್ಯ ರೈಲುಮಾರ್ಗದ ಮೇಲಿದೆ. ಇಲ್ಲಿಯ ಪುರಸಭೆ ಹಳೆಯದು. 1877ರಲ್ಲಿ ಅದು ಸ್ಥಾಪಿತವಾಯಿತು. ಇಲ್ಲಿಯ ಶಂಭುಲಿಂಗ ದೇವಾಲಯ ಪ್ರಸಿದ್ಧವಾದ್ದು. ಇದು ಬಂಕಾಪುರ ಕೋಟೆಯಲ್ಲಿರುವ 60 ಕಂಬಗಳ ದೇವಾಲಯದ ಮಾದರಿಯಲ್ಲಿದೆ. ಚಾಳುಕ್ಯ ಶೈಲಿಯಲ್ಲಿ ನಿರ್ಮಿತವಾದ ಈ ದೇವಾಲಯದ ಮೂಲ ಗುಡಿಯ ಸಭಾಮಂಟಪ ಮತ್ತು ಗರ್ಭಗುಡಿಗಳು ಮಾತ್ರ ಉಳಿದಿವೆ. ಸಭಾಮಂಟಪದ ವೃತ್ತಿನಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಹೊರಬದಿಯಲ್ಲಿ ಕೀರ್ತಿ ಮುಖಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗವೂ ಮುಂಭಾಗದ ಕೋಣೆಯ ಎಡಬಲಗಳಲ್ಲಿ ಪಾರ್ವತಿ ವಿಘ್ನೇಶ್ವರರ ವಿಗ್ರಹಗಳೂ ಇವೆ. ದ್ವಾರದ ಮೇಲ್ಭಾಗದಲ್ಲಿ ಲಕ್ಷ್ಮಣ ರಾಮ ಸೀತೆಯರನ್ನು ಕೆತ್ತಲಾಗಿದೆ. ದೇವಾಲಯದ ಕೆಲಭಾಗದ ಜೀರ್ಣೋದ್ಧಾರವಾಗಿದೆ. ಬ್ರಹ್ಮದೇವರ ಗುಡಿ, ದತ್ತಾತ್ರೇಯಗುಡಿ, ಶಂಕರಾಚಾರ್ಯರ ಗುಡಿ ಹಾಗೂ ಮಲ್ಲಕಾರ್ಜುನ ಗುಡಿಗಳು ಇಲ್ಲಿಯ ಇತರ ದೇವಾಲಯಗಳು. ಇಲ್ಲಿ ಹನ್ನೊಂದು ಶಿಲಾಶಾಸನಗಳಿವೆ. 1040ರದು ಅತಿ ಹಳೆಯದು. ಈ ಶಿಲಾಶಾಸನಗಳು ಚಾಳುಕ್ಯ, ಕಳಚುರಿ ಮತ್ತು ವಿಜಯನಗರ ಕಾಲಗಳಿಗೆ ಸೇರಿದವು. ಇಲ್ಲಿ ಒಂದು ಪ್ರೌಢಶಾಲೆ ಮತ್ತು ನಾಲ್ಕು ಪ್ರಾಥಮಿಕ ಶಾಲೆಗಳಿವೆ.

ಕುಂದಗೋಳ ಭಾರತದ ಸಂಗೀತ ನಕ್ಷೆಯಲ್ಲಿ ತನ್ನ ಹೆಸರನ್ನು ಮೂಡಿಸಿಕೊಂಡಿದೆ. ಸವಾಯಿಗಂಧರ್ವರು ಇಲ್ಲಿದ್ದಾಗ ಅವರು ಭೀಮಸೇನ ಜೋಶಿ ಮತ್ತು ಗಂಗೂಬಾಯಿಹಾನಗಲ್ಲರಂಥ ಅಖಿಲ ಭಾರತ ಖ್ಯಾತಿಯ ಶಿಷ್ಯರನ್ನು ತಯಾರಿಸಿದರು. ಸವಾಯಿಗಂಧರ್ವರ ಸಂಗೀತದಿಂದಾಗಿ ಕುಂದಗೋಳ ಪಟ್ಟಣ ಸಂಗೀತದ ನೆಲೆವೀಡಾಗಿ ಪರಿಣಮಿಸಿತು. ಇಲ್ಲಿಯ ನಾನಾಸಾಹೇಬ ನಾಡಗೀರರು ಅವರ ಶಿಷ್ಯರಲ್ಲೊಬ್ಬರು. ಅವರೀಗ ತಮ್ಮ ಗುರುಗಳ ಪುಣ್ಯತಿಥಿಯಂದು ಕುಂದಗೋಳದಲ್ಲಿ ಸಂಗೀತ ಸಮಾರೋಹ ಜರುಗಿಸುತ್ತಾರೆ. ಭಾರತದ ನಾನಾ ಮೂಲೆಗಳಿಂದ ಬರುವ ಸಂಗೀತಗಾರರ ಕಾರ್ಯಕ್ರಮಗಳಿಂದ ಕೂಡಿದ ಈ ಸಂಗೀತಾರಾಧನೆ ಜನಾಕರ್ಷಕವಾಗಿ ಪರಿಣಮಿಸಿದೆ.

ಇಲ್ಲಿ ದೊಡ್ಡಕೈಗಾರಿಕೆ ಯಾವುದೂ ಇಲ್ಲ. ಹತ್ತಿ ಎಕ್ಕುವ ಒಂದು ಕಾರ್ಖಾನೆಯಿದೆ. ಕೃಷಿಯೇ ಮುಖ್ಯ ಕಸಬು. (ಎಸ್.ವಿ.ಪಿ.ಎ.)

**ಕುಂದಣಗಾರ, ಕಲ್ಲಪ್ಪ ಗಿರಿಯಪ್ಪ** : 1895–1965. ಕನ್ನಡ ಸಾಹಿತ್ಯ ಸಂಸ್ಕೃತಿ, ನಾಡುನುಡಿಗೆ ಅಪ್ರತಿಮ ಸೇವೆ ಸಲ್ಲಿಸಿದ ವಿದ್ವಾಂಸರು. ಬೆಳಗಾಂವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೌಜಲಗಿಯಲ್ಲಿ ಜನಿಸಿದರು. ಇವರದು ಅಕ್ಕಸಾಲಿಗ ಮನೆತನ. ಇದ್ದದ್ದು ಸಣ್ಣಗ್ರಾಮವಾದ್ದರಿಂದ ಚಿನ್ನದ ಕೆಲಸ ಮಾಡಿಸುವವರು ಬಹಳ ಮಂದಿ ಇರುತ್ತಿರಲಿಲ್ಲ. ಇಂಥ ಬಡಕುಟುಂಬದಲ್ಲಿ ಜನಿಸಿದ ಕುಂದಣಗಾರರು ಚಿಕ್ಕಂದಿನಲ್ಲೇ ಸ್ವಾವಲಂಬಿಯಾಗಿ ಬಾಳಬೇಕಾಯಿತು. ಪ್ರಾಥಮಿಕ ಶಿಕ್ಷಣ ಕೌಜಲಗಿಯಲ್ಲಿ ನಡೆದು ಬೆಳಗಾಂವಿಯ ಸರದಾರ್ ಹೈಸ್ಕೂಲಿಗೆ ಸೇರಿದರು. ಅಲ್ಲಿ ಒಬ್ಬ ಸರಾಫನ ಲೆಕ್ಕ ಬರೆದು ಬಂದ ಹಣದಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಅನಂತರ ಧಾರವಾಡದ ವಿಕ್ಟೋರಿಯ ಹೈಸ್ಕೂಲಿನಲ್ಲಿ ಮೆಟ್ರಿಕ್ ಪಾಸು ಮಾಡಿದರು. ಜೀವನದ ದುರ್ಭರ ಸನ್ನಿವೇಶಗಳಿಗೆ ಸಿಲುಕಿದರಾಗಿ ಪದವಿಯನ್ನು ಪಡೆಯಲು ಹತ್ತು ವರ್ಷ ಬೇಕಾಯಿತು. ಮಧ್ಯೆ ಮಧ್ಯೆ, ಬಿಟ್ಟು ಬಿಟ್ಟು ಕಾಲೇಜು ಸೇರಿ ಪದವಿ ಪಡೆದರು. ಕೊಲ್ಲಾಪುರದ ರಾಜಾರಾಮ್ ಹೈಸ್ಕೂಲ್ ಮತ್ತು ಗೋಕಾಕದ ಎ.ವಿ. ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ನಿಂತರು. ಅನಂತರ ಕನ್ನಡ ಎಂ. ಎ. ಪರೀಕ್ಷೆಗೆ ಕೂರಲು ನಿರ್ಧರಿಸಿ ಹಳಗನ್ನಡ ಕಾವ್ಯಗಳ ವ್ಯಾಸಂಗ ಹಾಗೂ ಸಂಸ್ಕೃತ ಭಾಷೆಗಳ ಅಭ್ಯಾಸಕ್ಕೆ ತೊಡಗಿದರು. ಬಿಡುವಿನ ವೇಳೆಯಲ್ಲಿ ತಾಮ್ರ ಶಾಸನ, ಶಿಲಾಶಾಸನಗಳನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದರು. ಈ ಮಧ್ಯೆ ಗುಡಿ–ಗೋಪುರ, ಪ್ರಾಚೀನ ಅವಶೇಷಗಳ ಕಡೆಗೆ ಆಸಕ್ತಿ ಬೆಳೆಸಿಕೊಂಡರು. ತಮ್ಮ 31ನೆಯ ವಯಸ್ಸಿನಲ್ಲಿ ಎಂ.ಎ. (1925) ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬಳಿಕ ಎರಡು ವರ್ಷ (1925–27) ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾದರು. ಅನಂತರ ಧಾರವಾಡವನ್ನು ಬಿಟ್ಟು ಕೊಲ್ಲಾಪುರದ ರಾಜಾರಾಮ್ ಕಾಲೇಜನ್ನು ಸೇರಿದರು. 1927 ರಿಂದ 1948ರ ವರೆಗೂ ರಾಜಾರಾಮ್ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರಾಗಿ ಉಳಿದು ಕನ್ನಡ ಸರಸ್ವತಿಯ ಸೇವೆ ಮಾಡಿದರು. 1930ರಲ್ಲಿ ಇವರ ಪ್ರಥಮ ಕೃತಿ ಸರಸ್ವತಿ ಎಂಬ ಕಾದಂಬರಿ ಪ್ರಕಟವಾಯಿತು. 1957ರಲ್ಲಿ ಪ್ರಕಟವಾದ ಪಂಪನ ಆದಿಪುರಾಣದ ಎರಡನೆಯ ಆವೃತ್ತಿಯಲ್ಲಿ ಇವರ ಗ್ರಂಥ ಸಂಸ್ಕರಣ ಪಾಂಡಿತ್ಯ, ಪರಿಶ್ರಮ ಪಡಿಮೂಡಿಬಂದಿದೆ. ಇವರ ಹರಿಹರ ದೇವ ಎಂಬುದು ಕನ್ನಡ ಕವಿಪ್ರಶಸ್ತಿ ಗ್ರಂಥದಲ್ಲಿ ಗಣ್ಯವಾದುದು. ಮಹಾಲಕ್ಷ್ಮಿ ದೇವಾಲಯದ ಮೇಲೆ ಇವರು ಬರೆದ ಇಂಗ್ಲಿಷ್ ಪುಸ್ತಕ ಪ್ರಮಾಣಭೂತವಾಗಿದೆ. ಕೊಲ್ಲಾಪುರದ ಬ್ರಹ್ಮಪುರಿಯಲ್ಲಿ ಇವರು ನಡೆಯಿಸಿದ ಉತ್ಖನನ ಐತಿಹಾಸಿಕ ದೃಷ್ಟಿಯಿಂದ ಮಹತ್ತ್ವಪೂರ್ಣದ್ದಾಗಿದೆ. ಅಲ್ಲಿ ದೊರೆತ ಅವಶೇಷಗಳು ಸಾತವಾಹನ ಕಾಲದ ವ್ಯಾಪಾರದ ಸಂಬಂಧವನ್ನು ಸೂಚಿಸುತ್ತವೆ.

ಕುಂದಣಗಾರರದು ಸಾಮಾನ್ಯ ಎತ್ತರದ ಸಾಧಾರಣ ಮೈಕಟ್ಟು, ಬಣ್ಣ ಸಾದುಗಪ್ಪು. ಮಂದಹಾಸ, ಮೃದುವಚನ, ಸದ್ವಿನಯ, ಗಾಂಭೀರ್ಯಗಳನ್ನುಳ್ಳ ಅಪೂರ್ವ ವ್ಯಕ್ತಿತ್ವ. ವಿಶ್ವಾಸನೀಯ ಮಿತ್ರರಾಗಿದ್ದರಲ್ಲದೆ ಇವರು ಅಭ್ಯಾಸದಲ್ಲಿ ಸಹಕಾರಿಗಳಾಗಿದ್ದರು. ಅರ್ಧ ಶತಮಾನಕ್ಕೂ ಮಿಕ್ಕ ನಿರಪೇಕ್ಷ ಭಾವನೆಯಿಂದ ಕನ್ನಡಕ್ಕೆ ದುಡಿದ ಅಪೂರ್ವ ವ್ಯಕ್ತಿಗಳಿವರು. ರಗಳೆ ಷಟ್ಪದಿ, ವಚನ ಸಾಹಿತ್ಯ, ವ್ಯಾಕರಣ, ಛಂದಸ್ಸು, ಧರ್ಮ, ಕಲೆ ಹೀಗೆ ಎಲ್ಲ ಭಾಗಗಳಲ್ಲೂ ಅವರ ಲೇಖಣಿ ಹರಿದಿದೆ. ಕುಂದಣಗಾರರ ಬೆಲೆಯುಳ್ಳ ಲೇಖನಗಳು ಸಂಶೋಧಕರಿಗೆ ಸ್ಫೂರ್ತಿಯನ್ನು ನೀಡಿವೆ. ಪಂಪನ ಕಾಲದ ಆಭರಣಗಳು, ಚಾಳುಕ್ಯರ ಪೂರ್ವದ ಕತೆಗಳು ಮೊದಲಾದ ಲೇಖನಗಳು ಇವರ ಸಂಶೋಧನ, ವಿಮರ್ಶನ ಪರಿಶ್ರಮಗಳನ್ನು ಸೂಚಿಸುತ್ತವೆ. ಕುಂದಣಗಾರರು ಸ್ವಭಾವತಃ ಅಧ್ಯಾಪಕರು, ಆಚಾರ್ಯರು. ಇವರ ಶಿಷ್ಯಕೋಟಿ ಅಪಾರ. ಉತ್ತರ ಕರ್ನಾಟಕದ ಶಾಲಾಕಾಲೇಜುಗಳಲ್ಲಿ ಕನ್ನಡದ ಸೇವೆ ಮಾಡುತ್ತಿರುವ ಶಿಕ್ಷಕರು. ಪ್ರಾಧ್ಯಾಪಕರು ಒಂದಿಲ್ಲೊಂದು ದೃಷ್ಟಿಯಲ್ಲಿ ಕುಂದಣಗಾರರ ಶಿಷ್ಯವರ್ಗಕ್ಕೆ ಸೇರಿದವರು. ವಿದ್ಯಾರ್ಥಿಗಳು ಇವರಿಗೆ ಮನೆ ಮಕ್ಕಳಂತೆ. ಕುಂದಣಗಾರರು ಕೊಲ್ಲಾಪುರದಲ್ಲಿ ಕನ್ನಡಕ್ಕೆ ಬೆನ್ನೆಲುಬಾಗಿ ನಿಂತರು. ಅಲ್ಲದೆ ಅಲ್ಲಿನ ಸಾಮಾಜಿಕರಲ್ಲೂ ಕನ್ನಡದ ದೀವಿಗೆಯನ್ನು ಹತ್ತಿಸಿ ಬೆಳಗಿಸಿದರು. ಮುಂಬಯಿ, ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯಗಳೊಡನೆ ಅನೇಕ ರೀತಿಯ ಸಂಬಂಧವನ್ನಿಟ್ಟುಕೊಂಡಿದ್ದರು. ಮುಂಬಯಿ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡದ ಹಿರಿಯ ನೇತಾರರಾಗಿ ಇವರು ಕೆಲಸ ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ ರೂಪಿತವಾಗುವಾಗ ವಿಶೇಷ ಆಸ್ಥೆ ವಹಿಸಿದ ಮಹನೀಯರಲ್ಲಿ ಇವರೂ ಒಬ್ಬರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟುವಿನ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಪರಿಷತ್ತಿನ ಕನ್ನಡ–ಕನ್ನಡ ನಿಘಂಟು ಇವರ ವಿದ್ವತ್ತಿನ ಲಾಭ ಪಡೆದಿದೆ. 1962ರಲ್ಲಿ ಗದಗಿನಲ್ಲಿ ನಡೆದ 43ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಚುನಾಯಿಸಿ ಕನ್ನಡ ಜನ ಇವರನ್ನು ಗೌರವಿಸಿದರು. ವಿದ್ಯಾವಿನಯ ಸಂಪನ್ನರಾದ ಕುಂದಣಗಾರರು 1948 ರಿಂದ ತಮ್ಮ ಕೊನೆಯ ದಿನಗಳವರೆಗೂ ಬೆಳಗಾಂವಿಯ ರಾಣಿ ಪಾರ್ವತಿದೇವಿ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿದ್ದರು.

**ಇವರ ಕೃತಿಗಳು:** ಸರಸ್ವತಿ (1930) ಕಾದಂಬರಿ. ಮಹಾದೇವಿಯಕ್ಕ (1930), ಹರಿಹರದೇವ (1937) ವಿಮರ್ಶಾಗ್ರಂಥಗಳು. ಲೀಲಾವತಿ ಪ್ರಬಂಧ (1937), ಪೂರ್ವಪುರಾಣ (1943), ಆದಿಪುರಾಣ (1953), ಕುಮುದೇಂದು ರಾಮಾಯಣ– ಇವು ಸಂಪಾದಿತ ಕೃತಿಗಳು. ಶ್ರೀಯುತರಿಗೆ ಸಮರ್ಪಿಸಿದ ಕುಂದಣ ಗ್ರಂಥದಲ್ಲಿ ಇವರ ಬಿಡಿ ಹಾಗೂ ಸಂಶೋಧನ ಲೇಖನಗಳಿವೆ. *

**ಕುಂದಣಗಾರಿಕೆ** : ಒಡವೆಗಳಲ್ಲಿ ಹರಳುಗಳನ್ನು ಮೆಟ್ಟಿ ಹುದುಗಿಸುವ, ಹರಳಿಗೆ ಮೆರುಗು ಕೊಡುವ ಕಲೆಗೆ ಈ ಹೆಸರಿದೆ. ಸಾಮಾನ್ಯವಾಗಿ ಚಿನ್ನ ಬೆಳ್ಳಿಯ ಕೆಲಸಮಾಡುವವರು ಈ ಪದವನ್ನು ಬಳಸುತ್ತಾರೆ. ಅಂದಕ್ಕೆ ಕುಂದಣವಿಟ್ಟಂತೆ ಎಂಬ ಮಾತು ಕನ್ನಡದಲ್ಲಿ

ಪ್ರಸಿದ್ಧವಾದುದು. ವಜ್ರಗಳನ್ನು ಕ್ರಮವಾಗಿ ಕತ್ತರಿಸಿ ನಯಗೊಳಿಸಿ ಕೊರೆದು ಪ್ರಕಾಶಿಸುವಂತೆ ಮಾಡಿ ಒಡವೆಗಳಲ್ಲಿ ಕೂಡಿಸುವ ಕ್ರಿಯೆಯನ್ನು ಪಾಶ್ಚಾತ್ಯರು ಜೆಮ್‌ಸೆಟಿಂಗ್ ಎಂಬ ಪದದಿಂದ ನಿರ್ದೇಶಿಸುತ್ತಾರೆ. ಇದಕ್ಕೂ ಕುಂದಣಗಾರಿಕೆಯ ವಿಶೇಷ ಅರ್ಥ ಇರುವಂತಿದೆ.

ನವರತ್ನಗಳೆಲ್ಲ ಮೊದಲಿಗೆ ಒಂದೇ ಗುಂಪಿಗೆ ಸೇರಿರುತ್ತವೆ. ಅವುಗಳ ನಿಜ ಸ್ವರೂಪ ಮತ್ತು ಹೊಳಪು ಅವುಗಳ ಯೋಗ್ಯತೆ, ನಿಜಮೌಲ್ಯ ತಿಳಿಯುವುದು ಕುಶಲಕರ್ಮಿಗಳು ಅವನ್ನು ವಿವಿಧಾಕಾರಗಳಲ್ಲಿ ಕೊಯ್ದು ಮೆರುಗು ಕೊಟ್ಟಾಗಲೆ. ಜನತೆಯ ಅಭಿರುಚಿ, ರಸಿಕತೆ, ಶ್ರೀಮಂತಿಕೆಗಳಿಗೆ ತಕ್ಕಂತೆ ವಜ್ರ ಮತ್ತು ಹರಳುಗಳ ಬೆಲೆ ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ಬದಲಾಗಿರುವುದನ್ನು ಕಾಣಬಹುದು. ಒಡವೆಯ ಅಂತಿಮ ಮೆರುಗಿಗೆ ಕಾರಣವಾದ ವಜ್ರ ಮತ್ತು ಹರಳುಗಳ ಉಪಯೋಗ ಬಹಳ ಪ್ರಾಚೀನವಾದುದು. ಭಾರತದಲ್ಲಿಯಂತೂ ಇದರ ವ್ಯಾಪ್ತಿ ರಾಮಾಯಣ, ಮಹಾಭಾರತಗಳ ಕಾಲಕ್ಕೆ ಹೋಗುತ್ತದೆ. ಭಾರತದ ಚಕ್ರವರ್ತಿಗಳ ವಜ್ರದ ಆಯ್ಕೆ, ಸಂಗ್ರಹ ಮತ್ತು ಅವುಗಳಿಗೆ ಕುಶಲಕರ್ಮಿಗಳಿಂದ ಮೆರುಗು ಕೊಡಿಸಿ ಉಂಗುರ, ಕಿರೀಟಾದಿಗಳಲ್ಲಿ ಕೂರಿಸುತ್ತಿದ್ದ ಸಂಗತಿ ಲೋಕ ಪ್ರಸಿದ್ಧ. ಉಜ್ಜಯಿನಿಯ ವಿಕ್ರಮಾದಿತ್ಯನ ಸಿಂಹಾಸನದಿಂದ ಇಂದಿನ ಮೇಲುಕೋಟೆಯ ವೈರಮುಡಿಯವರೆಗೆ ಉದಾಹರಣೆಗಳಿವೆ. ಭಾರತದ ದಕ್ಷಿಣ ತುದಿಯಲ್ಲಿ ಇಂದಿಗೂ ವಿರಾಜಿಸುತ್ತಿರುವ ಕನ್ಯಾಕುಮಾರಿ ವಿಗ್ರಹದ ಕಂಠವನ್ನಲಂಕರಿಸಿರುವ ವಜ್ರವನ್ನು ಇಲ್ಲಿ ನೆನೆಯಬಹುದು.

ಪ್ರಾಣಿಗಳ ಮೂಳೆಗಳನ್ನು ಒಡವೆಯ ರೂಪದಲ್ಲಿ ಉಪಯೋಗಿಸುತ್ತಿದ್ದ ಮಾನವ ಪ್ರವೃತ್ತಿಗೆ ಹರಳಿನ ಉಪಯೋಗ ಎರಡನೆಯದಾಗಿ ಬರುತ್ತದೆ. ಕೆಲವು ಕಾಲ ಮೂಳೆಯ (ದಂತ) ಒಡವೆಗಳ ಮೇಲೆ ಹರಳು ಸಿಕ್ಕಿಸಿ ಉಪಯೋಗಿಸುವ ಪದ್ಧತಿಯೂ ಜಾರಿಯಲ್ಲಿದ್ದಿತು. ಹಿಂದಿನ ಕಾಲದಲ್ಲಿ ಬಣ್ಣಬಣ್ಣದ ಹರಳುಗಳ ಉಪಯೋಗ ಹೆಚ್ಚು ಆಕರ್ಷಕವಾಗಿತ್ತು. ಬಣ್ಣದ ಮೆರುಗು ಒಮ್ಮೊಮ್ಮೆ ಸಾಮಾನ್ಯವಾದುದನ್ನೂ ಅಸಾಮಾನ್ಯಗೊಳಿಸಿ ಮೋಸಕ್ಕೆ ಗುರಿ ಮಾಡುತ್ತಿದ್ದುದರಿಂದಲೋ ಏನೋ ಬಣ್ಣದ ಹರಳುಗಳ ಬಳಕೆ ಕ್ರಮೇಣ ಕುಗ್ಗಿದಂತೆ ಕಂಡು ಬರುತ್ತದೆ. ಹದಿನೈದನೆಯ ಶತಮಾನದಿಂದೀಚೆಗೆ ಬಣ್ಣರಹಿತ ವಜ್ರ ಮತ್ತು ಹರಳುಗಳಿಗೆ ಪ್ರಪಂಚದಾದ್ಯಂತ ಬೇಡಿಕೆ ಹೆಚ್ಚಾಗಿ ಕಂಡುಬರುತ್ತಿದೆಯೆಂದು ವಿವಿಧ ಮೂಲಗಳ ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

ಒರಟಾಗಿರುವ ಖನಿಜವನ್ನು ಕತ್ತರಿಸಿ ಉಜ್ಜಿ ಪ್ರಕಾಶಮಾನವಾಗುವಂತೆ ಮಾಡುವ ಕಲೆ ಪ್ರಸಕ್ತಶಕ ಪೂರ್ವದ ಅನೇಕ ಶತಮಾನಗಳಿಂದಲೂ ಜಾರಿಯಲ್ಲಿತ್ತು. ಪ್ರಪಂಚದ ಅತ್ಯಂತ ಪ್ರಾಚೀನ ನಾಗರಿಕತೆಗಳಾದ ಭಾರತ, ಚೀನ, ಈಜಿಪ್ಟ್, ಬ್ಯಾಬಿಲೋನಿಯಾಗಳಲ್ಲೆಲ್ಲ ಈ ಉದ್ಯಮ ಬಳಕೆಯಲ್ಲಿತ್ತೆಂದು ತಿಳಿದುಬರುತ್ತದೆ. ಖನಿಜರೂಪದ ವಜ್ರವನ್ನು ಕತ್ತರಿಸಿ, ಉಜ್ಜಿ, ನಯಗೊಳಿಸಿದ ಅನಂತರ ಅದರ ಬೆಲೆಯನ್ನು ನಿರ್ಧರಿಸಲಾಗುತ್ತಿತ್ತು. ಇದರಿಂದ ಕುಂದಣಗಾರಿಕೆ ಅಥವಾ ಮೆರುಗು ಕೊಡುವಿಕೆಯ ಪ್ರಾಮುಖ್ಯ ಎಷ್ಟೆಂದು ತಿಳಿಯಬಹುದು. ರಾಜರು ಉಪಯೋಗಿಸುತ್ತಿದ್ದ ವಜ್ರದ ಮುದ್ರೆಯುಂಗುರಗಳ ಕೊರೆಯುವಿಕೆಗೆ ವಿಶೇಷ ತಜ್ಞರಿರುತ್ತಿದ್ದರು. ಇದರ ವೈಶಿಷ್ಟ್ಯ ಹೇಗಿತ್ತೆಂದರೆ ಒಬ್ಬ ಕೊರೆದುದನ್ನು ಮತ್ತೊಬ್ಬ ಅನುಕರಿಸಿ ಖೋಟ ಮಾಡದಷ್ಟು ಇದು ವೈಯಕ್ತಿಕ ಸಾಧನೆಯಾಗಿತ್ತು. ಇಂಥ ಕುಶಲಕರ್ಮಿಗಳ ತರಬೇತಿಗಾಗಿ ಚಕ್ರವರ್ತಿಗಳ ಆಸ್ಥಾನದಲ್ಲಿ ಆಯಾ ರಾಷ್ಟ್ರದ ಅತ್ಯುತ್ತಮ ಕುಂದಣಗಾರನ ನೇಮಕವಾಗುತ್ತಿತ್ತು. ಈತ ಪ್ರಧಾನಿ, ಸೇನಾಪತಿಗಳಷ್ಟೆ ಪ್ರಾಮುಖ್ಯ ಪಡೆದಿರುತ್ತಿದ್ದ.

ವೈವಿಧ್ಯಮಯ ಆಭರಣಗಳ ರಚನೆಯಲ್ಲಿ ಹರಳುಗಳ ಸ್ಥಾನ ಮಹತ್ತ್ವಪೂರ್ಣವಾದುದು. ರಚನೆಯಾದ ಆಭರಣದ ಯಾವ ಯಾವ ಸ್ಥಾನದಲ್ಲಿ ಯಾವ ಗಾತ್ರದ, ಯಾವ ಬಣ್ಣದ ಹರುಳು ಕೂರಿಸಬೇಕೆಂಬುದೇ ನಿಜವಾದ ಕುಂದಣಗಾರಿಕೆ. ಹರಳುಗಳನ್ನು ಮನಬಂದಂತೆ ಕೂರಿಸುವಂತಿಲ್ಲ. ಅದರಿಂದ ಒಡವೆಯ ಅಂದ ಕೆಡುತ್ತದೆ. ಹರಳು ಕೂರಿಸುವಾಗ ಒಡವೆಯ ಒಟ್ಟು ಅಂದವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅದು ಇನ್ನೂ ಹೆಚ್ಚುವಂತೆ ಯೋಜಿಸಿ ಕೂರಿಸಬೇಕಾಗುತ್ತದೆ. ಯಾವ ಹರಳನ್ನು ಎಲ್ಲಿ ಕೂರಿಸಬೇಕು ಎಂಬ ಬಗ್ಗೆ ಭಾರತೀಯ ಕುಶಲಕರ್ಮಿಗಳಿಗೆ ಕೆಲವು ಧಾರ್ಮಿಕ ನಂಬಿಕೆಗಳೂ ಉಂಟು. ಉದಾಹರಣೆಗೆ ನವರತ್ನಗಳ ಉಂಗುರದ ಮಧ್ಯದ ಹರಳು ಮಾಣಿಕ್ಯವಾಗಿರಬೇಕು. (ಕೆಂಪು). ಮಾಣಿಕ್ಯ ಸರ್ಪದ ಹೆಡೆಯಲ್ಲಿ ದೊರೆಯುವ ಅಮೋಘವಾದ ಹರಳೆಂಬುದು ಭಾರತೀಯ ನಂಬಿಕೆ. ಈ ಧಾರ್ಮಿಕ ನಂಬುಗೆಯ ಸತ್ಯಾಸತ್ಯತೆ ಏನೇ ಇರಲಿ ಒಂಬತ್ತು ಹರಳುಗಳ ಮಧ್ಯೆ ಕೆಂಪು ಎದ್ದು ಕಾಣುತ್ತದೆ. ಇದರಿಂದ ತೊಟ್ಟಿರುವ ಉಂಗುರ ಹಲವರ ದೃಷ್ಟಿಸೆಳೆಯುತ್ತದೆ ಎಂಬುದು ವಾಣಿಜ್ಯ ಕುಶಲತೆಯ ಲೋಕಸತ್ಯವಂತೂ ನಿಜ.

ಆಭರಣಗಳಿಗೆ ಹರಳು ಕೂರಿಸುವುದರಲ್ಲಿ ಎರಡು ವಿಧಗಳಿವೆ ಎಂದು ಹೇಳುತ್ತಾರೆ. ಒಂದು ಖುಲ್ಲಕಟ್ಟಡ, ಮತ್ತೊಂದು ಬಂದುಕಟ್ಟಡ ಎಂದು ಹರಳನ್ನು ಉದ್ದವಾಗಿ ಕೊಯ್ದು ಕೂರಿಸುವ ವಿಧಾನಕ್ಕೆ ಖುಲ್ಲ ಕಟ್ಟಡವೆಂದೂ ಹರಳಿನ ಮೇಲ್ಭಾಗ ಮಾತ್ರ ಕಾಣುವಂತೆ ಆಳವಾಗಿ ಹರಳನ್ನು ಹೂಳುವ ವಿಧಾನಕ್ಕೆ ಬಂದು ಕಟ್ಟಡವೆಂತಲೂ ಕರೆಯುತ್ತಾರೆ. ನವರತ್ನದ ಒಡವೆಗಳೆಲ್ಲ ಖುಲ್ಲಕಟ್ಟಡ ವಿಧಾನದಿಂದಲೆ ರಚಿತವಾಗಬೇಕೆಂಬುದು ಭಾರತೀಯ ನಂಬಿಕೆ. ಇದಕ್ಕೆ ಕಾರಣ ನವರತ್ನಗಳ ಮೇಲೆ ಸೂರ್ಯಕಿರಣಗಳು ಹಾದುಹೋಗುವಾಗ, ವಾಯು ಸಂಚಲನೆಯಾಗುವಾಗ ಅವು ಮನುಷ್ಯನ ದೇಹಕ್ಕೆ ತಗಲಿದರೆ ಅದರಿಂದ ಆಯುರಾರೋಗ್ಯ, ಮನಶ್ಶಾಂತಿ ಮತ್ತು ಐಶ್ವರ್ಯ ಹೆಚ್ಚುತ್ತದೆ–ಎಂಬುದು.

ಕುಂದಣಗಾರಿಕೆ ಅಪಾರ ಪರಿಶ್ರಮದಿಂದ ಮಾತ್ರ ಲಭಿಸುವ ವಿಶೇಷ ಶಕ್ತಿ ಎಂಬುದು ಎಲ್ಲ ಅಕ್ಕಸಾಲಿಗರ ಮತ. ಇದು ಅಕ್ಕಸಾಲಿಗರ ಮೂಲಪುರುಷ ವಿಶ್ವಕರ್ಮನ ಅನುಗ್ರಹದಿಂದ ಸಿದ್ಧಿಸುವ ಒಂದು ಅಪೂರ್ವಶಕ್ತಿ ಎಂಬುದೂ ಕೆಲವರ ನಂಬಿಕೆ. ರತ್ನಖಚಿತವಾದ ಒಂದು ಕೊರಳಹಾರದ ಸಿದ್ಧತೆಯಲ್ಲಿ ಅಪಾರವಾದ ಕುಂದಣಗಾರಿಕೆಯ ಕುಶಲತೆ ಅಡಗಿರುತ್ತದೆ ಎಂಬುದು ತಜ್ಞರ ಅಭಿಮತ. ಪ್ರಪಂಚಾದ್ಯಂತ ಉಪಲಬ್ಧವಿರುವ ವೈವಿಧ್ಯಮಯವಾದ ವಜ್ರ ಮತ್ತು ಹರಳಿನ ಆಭರಣಗಳು ಕುಂದಣಗಾರಿಕೆಯ ಕಲಾವಂತಿಗೆಗೆ ಸಾಕ್ಷಿಯಾಗಿವೆ. ಒಂದು ಕಾಲಕ್ಕೆ ಈ ಕುಶಲಕರ್ಮಿಗಳನ್ನು ತಮ್ಮ ಆಸ್ಥಾನದಲ್ಲಿ ಇರಿಸಿಕೊಳ್ಳುವ ಬಗ್ಗೆ ಚಕ್ರವರ್ತಿಗಳು, ರಾಜಮಹಾರಾಜರುಗಳ ಮಧ್ಯೆ ದೊಡ್ಡ ಸ್ಪರ್ಧೆಯೇ ನಡೆಯುತ್ತಿದ್ದುದುಂಟು. ಇಂದೂ ಅದು ಲಕ್ಷಾಧಿಪತಿಗಳ, ಐಶ್ವರ್ಯವಂತ ಮಹಿಳೆಯರ ಮಧ್ಯೆ ಉಳಿದುಕೊಂಡಿದೆ ಎನ್ನಬಹುದು. (ಎಚ್.ಕೆ.ಆರ್.ಜಿ.)

**ಕುಂದಮಾಲಾ :** ರಾಮಾಯಣ ಕಥೆಯ ಆಧಾರದ ಮೇಲೆ ರಚಿತವಾದ ಆರಂಕಗಳ ಸಂಸ್ಕೃತ ನಾಟಕ. ಕರ್ತೃ ವೀರನಾಗನೆಂದು ಊಹೆ. ನಾಟ್ಯದರ್ಪಣದಲ್ಲಿ "ವೀರನಾಗ ನಿಬದ್ಧಾಯಾಂ ಕುಂದಮಾಲಾಯಾಂ ಸೀತಾಯಾಸ್ತದಪತ್ಯಯೋಶ್ಚಪಾಲನ ಸಂಯೋಜನಾಭ್ಯಾಂ ಸ್ವಫಲನಿರಪೇಕ್ಷಸ್ಯ ವಾಲ್ಮೀಕೇಃ" ಎಂದಿದೆ. ಈ ಹೆಸರು ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಲ್ಲ. ಈ ನಾಟಕವನ್ನು ಸಂಪಾದಿಸಿ ಪ್ರಕಟಿಸಿರುವ ಕೆಲವು ವಿದ್ವಾಂಸರು ಇದನ್ನು ದಿಙ್ನಾಗ ಕರ್ತೃಕವೆಂದೂ ಧೀರನಾಗ ಕರ್ತೃಕವೆಂದೂ ಅಭಿಪ್ರಾಯಪಡುತ್ತಾರೆ. ವೀರನಾಗನನ್ನೇ ಧೀರನಾಗ, ದಿಙ್ನಾಗ ಎಂದು ಓದಿ ಬರೆದಿರುವಂತೆಯೂ ತೋರುತ್ತದೆ. ಕುಂದಮಾಲೆಯನ್ನು ಕನ್ನಡಕ್ಕೆ ಅನುವಾದ ಮಾಡಿರುವ ಬಿ ಎಚ್. ಶ್ರೀಧರರು ದಿಙ್ನಾಗನನ್ನೇ ಕರ್ತೃವೆಂದು ಅಂಗೀಕರಿಸಿದ್ದಾರೆ. ಸದ್ಯಕ್ಕೆ ನಾಟ್ಯದರ್ಪಣದಲ್ಲಿ ಹೇಳಿರುವಂತೆ ಇದರ ಕರ್ತೃ ವೀರನಾಗನೆಂದು ಇಟ್ಟುಕೊಳ್ಳಬಹುದು. ಈತನ ಕಾಲ, ಸ್ಥಳ ಮುಂತಾದುವು ಖಚಿತವಾಗಿ ತಿಳಿದುಬಂದಿಲ್ಲ. ಭಾಸ ಕಾಳಿದಾಸರ ಸ್ಪಷ್ಟವಾದ ಅನುಕರಣವಿರುವುದರಿಂದ ಅವರಿಗಿಂತ ಈತ ಈಚೆ ಇದ್ದವನಿರಬೇಕು. ನಾಟಕದ ಅಂತರ್ಗತ ಸಾಕ್ಷ್ಯಗಳ ಆಧಾರದಿಂದ ವಿಮರ್ಶಕರು ಈತನ ಕಾಲವನ್ನು ಆರು ಅಥವಾ ಏಳನೆಯ ಶತಮಾನವೆಂದು ಊಹಿಸಿದ್ದಾರೆ.

ರಾಮಾಯಣದ ಉತ್ತರಕಾಂಡದ ಕಥೆಯೇ ಈ ನಾಟಕದ ವಸ್ತು. ಕವಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಕಥಾಸಾರಂಶ ಹೀಗಿದೆ: ಗರ್ಭಿಣಿಯಾದ ಸೀತೆಯನ್ನು ಲಕ್ಷ್ಮಣ ಗಂಗಾತೀರದ ಕಾಡಿನಲ್ಲಿ ಬಿಟ್ಟುಹೋಗುತ್ತಾನೆ. ಸಂಜೆಯ ಮಬ್ಬಿನಲ್ಲಿ ಅಲ್ಲಿಗೆ ಬಂದ ವಾಲ್ಮೀಕಿ ಅವಳನ್ನು ಗುರುತಿಸಿ ತನ್ನ ಆಶ್ರಮಕ್ಕೆ ಕರೆದೊಯ್ಯುತ್ತಾನೆ. ತನಗೆ ಸುಖಪ್ರಸವವಾದರೆ ಪ್ರತಿದಿನವೂ ಕುಂದಮಾಲೆಯಿಂದ ಅರ್ಚಿಸುವೆನೆಂದು ಸೀತೆ ಗಂಗೆಗೆ ಹರಕೆ ಕಟ್ಟಿಕೊಳ್ಳುತ್ತಾಳೆ. 1. ಕುಶಲವರು ಹುಟ್ಟಿ ಬೆಳೆದು ಎಲ್ಲರಿಗೂ ಅಚ್ಚುಮೆಚ್ಚಾಗಿ ವೀಣೆಯೊಂದಿಗೆ ರಾಮಾಯಣವನ್ನು ಹಾಡಲು ಕಲಿಯುತ್ತಾರೆ. ಇತ್ತ ರಾಮ ವಾಲ್ಮೀಕಿಯ ಆಶ್ರಮದ ಸಮೀಪದ ನೈಮಿಶಾರಣ್ಯದಲ್ಲಿ ಅಶ್ವಮೇಧಯಜ್ಞಕ್ಕೆ ಅಣಿಮಾಡುತ್ತಾನೆ. 2. ಗಂಗಾ ನದಿಯಲ್ಲಿ ಅರ್ಪಣೆ ಮಾಡಿದ್ದ ಕುಂದಮಾಲೆಯನ್ನು ರಾಮಲಕ್ಷ್ಮಣರು ನೋಡುತ್ತಾರೆ. ಅದು ಸೀತೆಯ ಕೈಯಿನ ರಚನೆಯೇ ಎಂದು ರಾಮನಿಗನಿಸುತ್ತದೆ. ಆಯಾಸ ಪರಿಹಾರಕ್ಕಾಗಿ ಲತಾಕುಂಜವೊಂದರಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಸೀತೆಯು ರಾಮ ಲಕ್ಷ್ಮಣರ ಸಂಭಾಷಣೆಯನ್ನು ಮರೆಯಲ್ಲಿ ನಿಂತು ಆಲಿಸಿ ರಾಮನ ವಿರಹತಾಪದುರಿಯನ್ನು ಅರಿಯುತ್ತಾಳೆ. 3. ಆಶ್ರಮದ ಕೊಳವೊಂದರಲ್ಲಿ ರಾಮನಿಗೆ ಸೀತೆಯ ಪ್ರತಿಬಿಂಬ ಮಾತ್ರ ಕಾಣುತ್ತದೆ. ಅದನನ್ನುಸರಿಸಿ ಸೀತೆಯನ್ನು ಹಿಡಿದುಕೊಳ್ಳಲೆತ್ನಿಸಿದ ರಾಮನಿಗೆ ಆಶಾಭಂಗವಾಗಿ ಮೂರ್ಛೆ ಹೋಗುತ್ತಾನೆ. ಸೀತೆಯ ಆಲಿಂಗನದಿಂದ ಪುನಃ ರಾಮನಿಗೆ ಪ್ರಜ್ಞೆ ಬರುತ್ತದೆ. ಸೀತೆಯ ಉತ್ತರೀಯ ಮಾತ್ರ ಕೈಗೆ ಸಿಕ್ಕಿ ಅದನ್ನು ಗುರುತಿಸಿ ಹೊದ್ದುಕೊಳ್ಳುತ್ತಾನಾದರೂ ಶ್ರೀರಾಮ ಸಂಕೋಚದಿಂದ ಅದನ್ನಲ್ಲಿ ಬಿಸುಟು ಬಿಡುತ್ತಾನೆ. ಇದೆಲ್ಲ ಊರ್ವಶೀಯ ಮಾಯಾಜಾಲವೆಂದು ಅಲ್ಲಿಗೆ ಬಂದ ವಿದೂಷಕ ಒಡೆಯನನ್ನು ಸಂತೈಸುತ್ತಾನೆ. 4. ಶ್ರೀರಾಮನ ಸಭೆಗೆ ಗಾಯಕರಾದ ಕುಶಲವರ ಪ್ರವೇಶವಾಗುತ್ತದೆ. ಅವರ ಕುಲಗೋತ್ರಾದಿಗಳನ್ನು ಅರಿಯಲು ರಾಮ ಪ್ರಯತ್ನಿಸುತ್ತಾನೆ. ಅವರು ತನ್ನ ಮಕ್ಕಳೇ ಎಂದವನಿಗೆ ಸಂದೇಹ ಬಂದರೂ ಅದು ಆಗ ಪರಿಹಾರವಾಗುವುದಿಲ್ಲ. 5. ರಾಮಲಕ್ಷ್ಮಣರು ಕುಶಲವರಿಂದ ರಾಮಾಯಣ ಕೇಳಿ ಸೀತೆಯ ವೃತ್ತಾಂತವನ್ನು ಅರಿಯುತ್ತಾರೆ. ಕುಶಲವರಿಗೂ ತಮ್ಮ ತಾಯಿತಂದೆ ಯಾರೆಂದು ತಿಳಿಯುತ್ತದೆ. ಸಂತಸದ ಭರದಲ್ಲವರು ಮೂರ್ಛೆ ಹೋಗುತ್ತಾರೆ. ಸೀತೆಯಿಂದ ಅವರ ಸಾಂತ್ವನವಾಗುತ್ತದೆ. ಸೀತಾಪರಿಗ್ರಹಣ ಮಾಡೆಂದು ರಾಮನಿಗೆ ವಾಲ್ಮೀಕಿಯ ಆದೇಶ ಬರುತ್ತದೆ. ರಾಮನಾದರೋ ಅಲಕ್ಷ್ಯದಿಂದಿರುತ್ತಾನೆ. ಸೀತಾಪಾತಿವ್ರತ್ಯ ಪರೀಕ್ಷೆಯಾಗುತ್ತದೆ. ಭೂದೇವಿ ಪ್ರತ್ಯಕ್ಷಳಾಗಿ ರಾಮನಿಗದನ್ನು ತಿಳಿಸಿ ಅಂತರ್ಧಾನಳಾಗುತ್ತಾಳೆ.

ಪರಿಗೃಹೀತಳಾದ ಸೀತೆ ಯಜ್ಞದಲ್ಲಿ ಸಹಭಾಗಿನಿಯಾಗುತ್ತಾಳೆ. ಕುಶನಿಗೆ ರಾಜ್ಯ ಪಟ್ಟಾಭಿಷೇಕವಾಗುತ್ತದೆ. ಲವನಿಗೆ ಯೌವರಾಜ್ಯ ಪದವಿ ದೊರೆಯುತ್ತದೆ. 6. ಎಲ್ಲವೂ ಸುಖಸಂತೋಷದಲ್ಲಿ ಪರ್ಯವಸಾನವಾಗುತ್ತದೆ. ಹೀಗೆ ಮಾರ್ಪಟ್ಟ ಉತ್ತರರಾಮಚರಿತೆ ಇಲ್ಲಿಯ ವಸ್ತುವಾಗಿದೆ.

ನಾಟಕದ ಸಂವಾದ ಶೈಲಿ ಲಲಿತ ಮನೋಹರವಾಗಿದೆ; ಪದ್ಯಗಳು ನಿರರ್ಗಳವಾಗಿಯೂ ಸರಸವಾಗಿಯೂ ಸಾಗುತ್ತವೆ. ಪಾತ್ರಚಿತ್ರಣದಲ್ಲಿ ಕೂಡ ಭವಭೂತಿಗೆ ಸರಿದೊರೆಯಾದ ಕೌಶಲವಿಲ್ಲಿದೆ. ಪಾತ್ರಗಳ ಸಂಖ್ಯೆಯಲ್ಲಿ ಮಿತಿ ಇದೆ. ಕೌಸಲ್ಯಾದಿಗಳು ಅಂತಃಪುರಸ್ತ್ರೀಯರಾಗಿ ಪರದೆಯ ಹಿಂದೆ ಇರುತ್ತಾರೆ. ಪದ್ಧತಿಯನ್ನು ಅನುಸರಿಸಿ ವಿದೂಷಕ ಬರುತ್ತಾನೆ. ಆದರೆ ಹೆಚ್ಚು ಹಾಸ್ಯವನ್ನು ಅವನಿಂದ ನಿರೀಕ್ಷಿಸುವಂತಿಲ್ಲ. ವಾಲ್ಮೀಕಿಯೇ ಅಧಿದೇವತೆ. ಇಡೀ ನಾಟಕವೆಲ್ಲ ಅವನ ಆಶ್ರಮದ ಹತ್ತಿರವೇ ನಡೆಯುತ್ತದೆ.

ಕಥೆ ಕರುಣದಿಂದ ಆರಂಭವಾದರೂ ಅದ್ಭುತದಲ್ಲಿ ಮುಗಿಯುತ್ತದೆ. ಈ ನಾಟಕವನ್ನು ಕುರಿತ 'ಮಲ್ಲಿಗೆಯ ಹೂವಿನಂಥ ದಾಂಪತ್ಯ ಪ್ರೇಮವನ್ನೂ ಪುತ್ರವಾತ್ಸಲ್ಯವನ್ನೂ ಮಾಲೆ ಕಟ್ಟಿ ಸಂಸಾರದ ಹೊಳೆಯಲ್ಲಿ ತೇಲಿಬಿಟ್ಟಂತಿದೆ." ಎಂಬ ಎ.ಆರ್.ಕೃ. ಅವರ ವಿಮರ್ಶೆ ಬಹು ಉಚಿತವಾಗಿದೆ. (ಸಿ.ಜಿ.ಪಿ.)

**ಕುಂದಾಣ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಹೋಬಳಿ ಕೇಂದ್ರ. ದೇವನಹಳ್ಳಿಯ ಪಶ್ಚಿಮಕ್ಕೆ 10ಕಿಮೀ ದೂರದಲ್ಲಿದೆ.

ಈ ಗ್ರಾಮದ ಬಳಿ 61ಮೀ ಎತ್ತರದ ಸಮತಟ್ಟಿನ ಶಿಖರವುಳ್ಳ ದೊಡ್ಡಕಲ್ಲುಬಂಡೆಯಿಂದಾಗಿರುವ ಒಂದು ಬೆಟ್ಟವಿದೆ. ಇದರ ಪೂರ್ವಭಾಗ ಮಾತ್ರ ಇಳಿಜಾರಾಗಿದ್ದು ಉಳಿದ ಮೂರು ಕಡೆ ಕಡಿದಾಗಿದೆ. ಇಲ್ಲಿ ವಿಜಯನಗರ ಮತ್ತು ಪಾಳೆಯಗಾರರ ಕಾಲದ್ದೆಂದು ಹೇಳುವ ನಾಲ್ಕು ಸುತ್ತಿನ ಕೋಟೆಯಿದೆ. ಪೂರ್ವದಿಕ್ಕಿನ ನಾಲ್ಕು ಕಲ್ಲಿನಬಾಗಿಲುಗಳ ಮುಖಾಂತರ ಇಲ್ಲಿಗೆ ಪ್ರವೇಶವಿದೆ. ಮೇಲಿನ ಕೋಟೆಯೊಳಗಿನ ಪ್ರದೇಶ ಸು.100ಮೀ ಉದ್ದ 50ಮೀ ಅಗಲವಾಗಿದ್ದು ಅಂಡಾಕಾರವಾಗಿದೆ. ಪೂರ್ವದಿಕ್ಕಿಗೆ ಎದುರಾಗಿ ಇರುವುದು ಚನ್ನರಾಯಸ್ವಾಮಿ ದೇವಾಲಯ. ಇಲ್ಲಿನ ಜನಾರ್ದನ ವಿಗ್ರಹ 2' ಎತ್ತರವಿದೆ. ಇದು ಪಾಳೆಯಗಾರರ ಕಾಲದ್ದೆಂದು ತಿಳಿದುಬರುತ್ತದೆ. ಒಂದು ಚಿಕ್ಕ ಆಂಜನೇಯ ದೇವಾಲಯವೂ ಇಲ್ಲಿದೆ. ಕುಂದಾಣ ಹೊಯ್ಸಳ ರಾಮನಾಥನ ರಾಜಧಾನಿಯಾಗಿತ್ತು. *

**ಕುಂದಾದ್ರಿ :** ಶಿವಮೊಗ್ಗ ಜಿಲ್ಲೆಯಲ್ಲಿರುವ ಒಂದು ಬೆಟ್ಟ. ಇಲ್ಲೊಂದು ಜಿನಾಲಯವಿದೆ. ನಾಗಕುಮಾರ ಚರಿತ್ರೆಯಲ್ಲಿ ಬಾಹುಬಲಿ ಕವಿ (16ನೆಯ ಶತಮಾನ) ಈ ಗಿರಿಯನ್ನು ಮನಸಾರೆ ಬಣ್ಣಿಸಿದ್ದಾನೆ. ಈಗ ಇಲ್ಲೊಂದು ಜೈನ ಬ್ರಹ್ಮಚರ್ಯಾಶ್ರಮವೂ ಇದೆ. (ಬಿ.ಜಿ.)

**ಕುಂದಾಪುರ :** ಉಡುಪಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿದೆ. ವಾರ್ಷಿಕ ಸರಾಸರಿ ಮಳೆ 285 ಸೆಂಮೀ. ಮುಂಗಾರು ಮಾರುತಗಳ ಪ್ರಭಾವದಿಂದ ವಿಶೇಷ ಮಳೆಯಾಗುತ್ತದೆ. ಎತ್ತರ ಪ್ರದೇಶದಲ್ಲಿರುವ ದಟ್ಟವಾದ ಕಾಡುಗಳಲ್ಲಿ ತೇಗ, ಹೊನ್ನೆ, ಬೀಟೆ, ಕರಿ ಮರ, ಬೆಳನಂದಿ, ಮತ್ತಿ, ಹಲಸು ಮುಂತಾದ ಮರಗಳಿವೆ. ತಾಲ್ಲೂಕಿನ ಕೇಂದ್ರವಾದ ಕುಂದಾಪುರದಲ್ಲಿ ನಾಲ್ಕು ಮತ್ತು ಬಸ್ರೂರಿನಲ್ಲಿ ಎರಡು ಮರಕೊಯ್ಯುವ ಕಾರ್ಖಾನೆಗಳಿವೆ. ಪಟ್ಟಣದ ವಿಸ್ತೀರ್ಣ 14 ಚ.ಕಿಮೀ. ಜನಸಂಖ್ಯೆ 28,595 (2001).

ಭೂಮಿ ಫಲವತ್ತಾಗಿದೆ. ಜನರ ಮುಖ್ಯ ವೃತ್ತಿ ಕೃಷಿ. ಬೇಸಾಯಕ್ಕೆ ಮಳೆಯ ನೀರೇ ಆಧಾರ. ನೀರಾವರಿಗಾಗಿ ಅಲ್ಲಲ್ಲಿ ನದಿಗಳಿಗೆ ಸಣ್ಣ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ತಾಲ್ಲೂಕಿನಲ್ಲಿ ಬೆಳೆಯುವ ಮುಖ್ಯ ಆಹಾರ ಬೆಳೆಗಳು ಬತ್ತ ಮತ್ತು ರಾಗಿ, ಉದ್ದು, ಹೆಸರು, ಹುರುಳಿ, ಅವರೆ, ಅಡಕೆ, ತೆಂಗು, ಬಾಳೆ, ಕಬ್ಬು, ಗೇರುಬೀಜ, ಮೆಣಸು ಮತ್ತು ಗೆಣಸು ಇತರ ಬೆಳೆಗಳು. ಬುಟ್ಟಿ ಮತ್ತು ಚಾಪೆಗಳನ್ನು ಹೆಣೆಯುವುದು, ಬೆತ್ತದ ಕೆಲಸ, ನೆಯ್ಗೆ, ಚರ್ಮದ ಸಾಮಾನು, ಕೊಬ್ಬರಿ ಎಣ್ಣೆ ಮತ್ತು ಹೆಂಚು ತಯಾರಿಕೆ ಮೀನುಗಾರಿಕೆ-ಇವು ಇಲ್ಲಿಯ ಮುಖ್ಯ ಉದ್ಯೋಗಗಳು. ಹೆಂಚು, ಬೆಲ್ಲ, ತೆಂಗಿನಕಾಯಿ ಮತ್ತು ಮಡಕೆ ಇವು ತಾಲ್ಲೂಕಿನಿಂದ ಹೊರಗೆ ವ್ಯಾಪಾರವಾಗುವ ವಸ್ತುಗಳು.

ಈ ತಾಲ್ಲೂಕಿನಲ್ಲಿ ಕಾಲೇಜು, ಹನ್ನೊಂದು ಪ್ರೌಢಶಾಲೆಗಳು ಮತ್ತು 330 ಇತರ ಶಾಲೆಗಳು ಇವೆ. ಈ ತಾಲ್ಲೂಕು ರಾಷ್ಟ್ರೀಯ ವಿಸ್ತರಣ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮ ಪ್ರದೇಶಗಳು ಅಭಿವೃದ್ಧಿ ಹೊಂದುತ್ತಿವೆ. ಈ ಯೋಜನೆಯ ಆಶ್ರಯದಲ್ಲಿ ವಯಸ್ಕರ ಶಿಕ್ಷಣವೂ ನಡೆಯುತ್ತಿದೆ.

ತಾಲ್ಲೂಕಿನ ಕೇಂದ್ರವಾದ ಪಟ್ಟಣ ಒಂದು ಬಂದರು ಮತ್ತು ಮುಖ್ಯ ವ್ಯಾಪಾರ ಕೇಂದ್ರ. ಹಾಲಾಡಿ (ಗರ್ಗತ), ಚಕ್ರ, ಕೊಲ್ಲೂರು, ಜಿಂಬೂ ಮತ್ತು ಸೂಕ್ತಿಮತಿಗಳೆಂಬ ಐದು ನದಿಗಳು ಸಂಗಮವಾಗಿ ನಿರ್ಮಾಣವಾದ ವಿಶಾಲವಾದ ಪಂಚಗಂಗಾವಳಿ (ಗಂಗೊಳ್ಳಿ) ನದೀ ಅಳಿವೆಯ ದಕ್ಷಿಣಕ್ಕೆ ಸಮತಟ್ಟಾದ ಪ್ರದೇಶದಲ್ಲಿದೆ. ಪಂಚ ಗಂಗಾವಳಿಯ ಅಳಿವೆಯ ಉತ್ತರ ತೀರದಲ್ಲಿರುವ ಗಂಗೊಳ್ಳಿ ಹಿಂದಿನ ಕಾಲದಿಂದಲೂ ಬಳಕೆಯಲ್ಲಿದ್ದ ಬಂದರು. ಅಳಿವೆಯಿಂದ 5 ಕಿಮೀ. ದೂರದೊಳಗೆ ನದಿಯಲ್ಲಿ ಹಲವು ಚಿಕ್ಕ ಫಲವತ್ತಾದ ದ್ವೀಪಗಳು ಇವೆ. ಅವುಗಳಲ್ಲಿ ಉಪ್ಪಿನ ಕುದುರು, ಹಿರಿ (ಹೇರಿ) ಕುದುರು ಮತ್ತು ಹಟ್ಟಿ ಕುದುರು ಮುಖ್ಯವಾದವು.

ಕುಂದವರ್ಮನೆಂಬ ಅರಸ ಪಂಚಗಂಗಾವಳಿಯ ಹತ್ತಿರ ಕಟ್ಟಿಸಿದ ಕುಂದೇಶ್ವರ ದೇವಾಲಯದಿಂದ ಇದಕ್ಕೆ ಕುಂದಾಪುರವೆಂಬ ಹೆಸರಾಯಿತೆಂದು ಪ್ರತೀತಿ. ಈ ದೇವಾಲಯದಲ್ಲಿ ಆಳುಪರ ಕಾಲದ ಶಿಲಾಶಾಸನಗಳಿವೆ. ವಿಜಯನಗರ ಸಾಮ್ರಾಜ್ಯನಾಶವಾದ ಮೇಲೆ ಈ ಜಿಲ್ಲೆಯನ್ನಾಳಿದ ಇಕ್ಕೇರಿ ನಾಯಕರ ಕಾಲದಲ್ಲಿ, ಪೋರ್ಚುಗೀಸರು ಇಲ್ಲಿ ಕಟ್ಟಿಸಿದ ಕೋಟೆ ಈಗಲೂ ಇದೆ. ಆಮೇಲೆ ಆಳಿದ ಹೈದರ್ ಅಲಿ ಇಲ್ಲಿ ರಚಿಸಿದ ಕೊತ್ತಳದ ಮೇಲೆ ಈಗ ಸರ್ಕಾರಿ ಆಡಳಿತ ಕಚೇರಿಗಳಿವೆ. ಟಿಪ್ಪುವಿನ ಕಾಲದಲ್ಲಿ ಗಂಗೊಳ್ಳಿ ಹಡಗು ಕಟ್ಟುವ ಒಂದು ಮುಖ್ಯ ಕೇಂದ್ರವಾಗಿತ್ತು. ಅವನನ್ನು ಸೋಲಿಸಲು ಮುಂಬಯಿಯಿಂದ ಕಳುಹಿಸಲಾದ ಇಂಗ್ಲಿಷ್ ಸೈನ್ಯ ಕುಂದಾಪುರದಲ್ಲಿಳಿದು, ಅನಂತರ 45 ಕಿಮೀ ದೂರದ ಹೊಸಂಗಡಿ ಘಾಟಿಯ ದಾರಿಯಾಗಿ ಬಿದನೂರಿಗೆ ಸಾಗಿತ್ತು. ಈಗ ಈ ಘಾಟಿ ಮೋಟರ್ ವಾಹನಗಳ ಸಂಚಾರ ಮಾರ್ಗವಾಗಿ ಉಪಯೋಗದಲ್ಲಿದೆ.

ಪಶ್ಚಿಮ ಕರಾವಳಿಯ ಹೆದ್ದಾರಿ ನಿರ್ಮಾಣದ ಅಂಗವಾಗಿ ಗಂಗಾವಳಿಗೆ ಹಾಕಲಾದ ಹೊಸ ಮಾದರಿಯ ಸೇತುವೆಗಳಿಂದ ಕುಂದಾಪುರದ ದಕ್ಷಿಣೋತ್ತರ ಭಾಗಗಳಿಗೆ ನೇರ ಸಂಚಾರ ಸಂಪರ್ಕವುಂಟಾಗಿದೆ. ಕುಂದಾಪುರ ಹೆಂಚು ಮತ್ತು ಕೆಲವು ಚಿಕ್ಕ ಕೈಗಾರಿಕೆಗಳ ಕೇಂದ್ರವಾಗಿಯೂ ಹೆಸರಾಗಿದೆ. ಇಲ್ಲಿ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳಿವೆ. ಕುಂದಾಪುರದಲ್ಲಿ ಪ್ರತಿ ಶನಿವಾರ ನಡೆಯುವ ಸಂತೆ ಈ ಭಾಗದಲ್ಲೆಲ್ಲ ಪ್ರಸಿದ್ಧವಾದ್ದು.

ಕೊಡಚಾದ್ರಿ ವಲಯದ ಕಬ್ಬಿಣದ ಅದಿರಿನ ಸ್ವಲ್ಪ ಭಾಗ ಗಂಗೊಳ್ಳಿ ಬಂದರಿನ ಮೂಲಕ ರಫ್ತಾಗುತ್ತದೆ.

ಕುಂದಾಪುರದಿಂದ 6 ಕಿಮೀ ದೂರಕ್ಕೆ ಪೂರ್ವದಲ್ಲಿರುವ ಬಸರೂರು ಒಂದು ಚಾರಿತ್ರಿಕ ಸ್ಥಳ.

ಯಕ್ಷಗಾನ, ನಾಟಕ ಮತ್ತು ಕುಣಿತ ಈ ತಾಲ್ಲೂಕಿನ ಮುಖ್ಯ ಕಲೆಗಳು. ಗ್ರಾಮಪ್ರದೇಶದಲ್ಲಿ ಕಂಬಳ ಮತ್ತು ಕೋಳಿಕಾಳಗ ಜನಪ್ರಿಯವಾಗಿವೆ. (ಎಂ.ವಿ.; ಎಂ.ಜಿ.ಕೆ.)

**ಕುಂದಿಲಿ :** ಮೊಲವನ್ನು (ಹೇರ್) ಹೋಲುವ ಒಂದು ಬಿಲವಾಸಿ ಸ್ತನಿ (ರ್‍ಯಾಬಿಟ್). ಲ್ಯಾಗೊಮಾರ್ಫ ಗಣದ ಲೆಪೋರಿಡೀ ಕುಟುಂಬಕ್ಕೆ ಸೇರಿದೆ. ಸಾಮಾನ್ಯವಾಗಿ ಇದನ್ನೂ ಮೊಲವೆಂದೇ ನಿರ್ದೇಶಿಸುವುದುಂಟಾದರೂ ಇದಕ್ಕೂ ಮೊಲಕ್ಕೂ ಹಲವಾರು ವ್ಯತ್ಯಾಸಗಳಿವೆ. ಕುಂದಿಲಿ ಗಾತ್ರದಲ್ಲಿ ಮೊಲಕ್ಕಿಂತ ಚಿಕ್ಕದು; ಬಿಲಗಳಲ್ಲಿ ವಾಸಿಸುತ್ತದೆ; ಅದೇ ತಾನೇ ಜನಿಸಿದ ಮರಿಗಳ ಮೈಮೇಲೆ ಕೂದಲಿರುವುದಿಲ್ಲ; ಕಣ್ಣುಗಳು ತೆರೆದಿರುವುದಿಲ್ಲ. ಮರಿಗಳು ಬಹಳ ಅಸಹಾಯ ಸ್ಥಿತಿಯಲ್ಲಿರುತ್ತವೆ. ಮೊಲ ದೊಡ್ಡ ಗಾತ್ರದ್ದು; ಪೊದೆಗಳಲ್ಲಿ ಅಡಗಿಕೊಂಡಿರುವುದಾದರೂ ಸಾಮಾನ್ಯವಾಗಿ ಇದರವಾಸ ಮೈದಾನಗಳಲ್ಲಿ. ಮರಿಗಳು ಹುಟ್ಟಿದಾಗ ಅವಕ್ಕೆ ಮೈತುಂಬ ಕೂದಲುಂಟು. ಕಣ್ಣು ತೆರೆದಿರುತ್ತವೆ. ಹುಟ್ಟಿದ ಕೆಲವೇ ಮಿನಿಟುಗಳಲ್ಲಿ ಓಡಾಡುವಷ್ಟು, ಆಹಾರಾನ್ವೇಷಣೆಯಲ್ಲಿ ತೊಡಗುವಷ್ಟು ಶಕ್ತಿಯುತವಾಗಿರುತ್ತವೆ.

ಯುರೋಪ್ ಮತ್ತು ಏಷ್ಯದಲ್ಲಿ ಆರಿಕ್ಟಲ್ಯಾಗಸ್ ಕ್ಯುನಿಕ್ಯುಲಸ್ ಎಂಬ ಪ್ರಭೇದಕ್ಕೂ ಉತ್ತರ ಅಮೆರಿಕದ ಸಿಲ್ವಿಲ್ಯಾಗಸ್ ಜಾತಿಗೆ ಸೇರಿದ ಪ್ಯಾಲುಸ್ಟ್ರಸ್, ಏಕ್ವಾಟಿಕಸ್, ಫ್ಲಾರಿಡೇನಸ್, ನುಟಾಲಿಯೈ ಮತ್ತು ಆಡುಬಾನಿಯೈ ಪ್ರಭೇದಗಳಿಗೂ ಕುಂದಿಲಿಗಳೆಂದು ಹೆಸರಿದೆ. ಆರಿಕ್ಟಲ್ಯಾಗಸ್ ಕ್ಯುನಿಕ್ಯುಲಸ್ ಪ್ರಭೇದವನ್ನು ಹಲವು ಶತಮಾನಗಳಿಂದ ಸಾಕುಪ್ರಾಣಿಯಾಗಿಯೂ ಬೆಳೆಸಲಾಗಿದೆ. ಸ್ವಾಭಾವಿಕವಾಗಿ ಸಿಕ್ಕುವ ಕುಂದಿಲಿ ಪೊದೆಗಳಲ್ಲಿ, ಬೇಲಿಯ ಸಾಲುಗಳಲ್ಲಿ, ನೆಲದಲ್ಲಿ ಪೊಟರೆಗಳನ್ನು ಮಾಡಿಕೊಂಡು ವಾಸಿಸುತ್ತದೆ. ಸಂಘಜೀವಿಯಾದ ಇದು ಸಣ್ಣ ಸಣ್ಣ ಗುಂಪುಗಳಲ್ಲಿರುವುದೇ ವಾಡಿಕೆ. ಬಲು ಸೌಮ್ಯವಾದ ಮತ್ತು ಪುಕ್ಕಲು ಸ್ವಭಾವದ ನಿಶಾಚರ ಪ್ರಾಣಿಯಿದು. ಎಳೆ ಚಿಗುರು, ಬೇರು, ಗೆಡ್ಡೆಗೆಣಸು, ತೊಗಟೆ, ಕಾಯಿಗಳು ಇದರ ಪ್ರಧಾನ ಆಹಾರ.

ಬೂದು ಅಥವಾ ಬಿಳಿಯ ಬಣ್ಣದ ದೇಹ, ಒತ್ತಾದ ಮತ್ತು ನಯವಾದ ತುಪ್ಪುಳು, ಸೀಳಿದ ಮೇಲ್ತುಟಿ, ಮುಂಗಾಲಿಗಿಂತ ಉದ್ದವಾದ ಹಿಂಗಾಲುಗಳು ಮೂಗಿನ ಹೊಳ್ಳೆಯ ತುದಿಯಲ್ಲಿದ್ದು ಕೂದಲಿನಿಂದ ಆವೃತವಾಗಿರುವ ಸಂವೇದನಾ ಗ್ರಾಹಿ ಮೆತ್ತೆಗಳು, ಅಂಗಾಲುಗಳಲ್ಲಿರುವ ರೋಮಾವೃತ ಮೆತ್ತೆಗಳು, ಬಾಚಿ ಹಲ್ಲುಗಳು, ತಲೆಗಿಂತ ಬಲು ಉದ್ದವಾದ ಕಿವಿಗಳು, ಮೋಟು ಬಾಲ ಇವು ಕುಂದಿಲಿಯ ಪ್ರಮುಖ ಲಕ್ಷಣಗಳು.

ದೃಷ್ಟಿ ಮಂದವಾಗಿದ್ದರೂ ಇದರ ಶ್ರವಣೇಂದ್ರಿಯ ಹಾಗೂ ಘ್ರಾಣೇಂದ್ರಿಯಗಳು ಬಹಳ ಚುರುಕು. ಶತ್ರುವಿನ ಸುಳಿವನ್ನು ದೂರದಿಂದಲೇ ತಿಳಿದು ಕುಪ್ಪಳಿಸುತ್ತ ಓಡುತ್ತದೆ. ಆದರೆ ಓಡುವುದರಲ್ಲಿ ಮೊಲಗಳಷ್ಟು ಚುರುಕಲ್ಲ. ಬಹಳ ದೂರ ಒಂದೇ ಸಮನಾಗಿ ಓಡಲಾರದ ಇದು ಬಲುಬೇಗ ಶತ್ರುವಿನ ಕೈಗೆ ಸಿಕ್ಕಿ ಬೀಳುತ್ತದೆ. ಕೆಲವೊಮ್ಮೆ ಶತ್ರುವಿನ ಸುಳಿವು ತಿಳಿದಾಗ ಕಡೆದ ಪ್ರತಿಮೆಯಂತೆ ಒಂದು ಕಡೆ ನಿಶ್ಚಲವಾಗಿ ಕುಳಿತಿದ್ದು ಇದ್ದಕ್ಕಿದ್ದಂತೆಯೆ

ನೆಗೆದು ಓಡಿಬಿಡುತ್ತದೆ. ಹೆದರಿದಾಗ ಹೆಪ್ಪುಗಟ್ಟಿ ಕೂತು ಬಿಡುವುದು ಇಂಥ ಅನೇಕ ಪ್ರಾಣಿಗಳ ಸಹಜ ವರಸೆಗಳಲ್ಲೊಂದು.

ತನ್ನ ಸಂತಾನೋತ್ಪತ್ತಿಯ ಸಾಮರ್ಥ್ಯಕ್ಕೆ ಹೆಸರಾದ ಇದು ಸೂಲಿಗೆ 4–7 ಮರಿಗಳಂತೆ ವರ್ಷಕ್ಕೆ 6–7 ಸೂಲು ಮರಿ ಹಾಕುತ್ತದೆ. ಗರ್ಭಧಾರಣೆಯ ಅವಧಿ ಸುಮಾರು 30 ದಿವಸಗಳು. ಮರಿ ಹಾಕುವ ಮುನ್ನ ಹೆಣ್ಣು ಕುಂದಿಲಿ ನೆಲದಲ್ಲಿ ಬಿಲ ತೋಡಿ ಕಡ್ಡಿ, ಹುಲ್ಲು ಮುಂತಾದವನ್ನು ಹರಡಿ ಗೂಡನ್ನು ನಿರ್ಮಿಸುತ್ತದೆ. ಮರಿಗಳ ಪಾಲನೆ ಹೆಣ್ಣಿಗೆ ಮಾತ್ರ ಸೇರಿದ್ದು. ಮರಿಗಳು ಸುಮಾರು 40 ವಾರಗಳಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ.

ಕುಂದಿಲಿಗಳನ್ನು ಮಾಂಸ, ತುಪ್ಪುಳುಗಳಿಗಾಗಿ ಬೇಟೆಯಾಡುವುದು, ಮುದ್ದಿಗಾಗಿ ಪಳಗಿಸಿ ಸಾಕುವುದು ಉಂಟು (**ನೋಡಿ– ಮೊಲ**). (*)

**ಕುಂಬಳ :** ಕುಕರ್ಬಿಟೇಸೀ ಕುಟುಂಬಕ್ಕೆ ಸೇರಿದ ಕುಕರ್ಬಿಟ ಮೊಕ್ಚಾಟಾ ಎಂಬ ವೈಜ್ಞಾನಿಕ ಹೆಸರಿನ ಏಕವಾರ್ಷಿಕ ಹರಡು ಬಳ್ಳಿ. ಗ್ವಾಟೆಮಾಲ, ಕೊಲಂಬಿಯ ಮೆಕ್ಸಿಕೊ ಮುಂತಾದ ಅಮೆರಿಕದ ಉಷ್ಣವಲಯದ ಪ್ರದೇಶ ಇದರ ಉಗಮಸ್ಥಾನ. ಮಾನವನಿಗೆ ಇದರ ಪರಿಚಯ ನಾಲ್ಕು ಸಹಸ್ರವರ್ಷಗಳಿಂದಲೂ ಇರುವುದು ಕಂಡುಬಂದಿದೆ. ಈ

ಕುಂಬಳ ಬಳ್ಳಿಯ ಒಂದು ಭಾಗ

ಜಾತಿಯಲ್ಲಿ ಕುಕರ್ಬಿಟ ಮ್ಯಾಕ್ಸಿಮ ಮತ್ತು ಕುಕರ್ಬಿಟ ಪಿಪೋ ಎಂಬ ಇನ್ನೆರಡು ಪ್ರಭೇದಗಳು ಇವೆ. ಭಾರತದಲ್ಲಿ ಮೇಲಿನ ಮೂರು ಪ್ರಭೇದಗಳನ್ನೂ ಕುಂಬಳ ಎಂಬ

ಬೂದುಗುಂಬಳ ಬಳ್ಳಿಯ ಒಂದು ಭಾಗ

ಒಂದೇ ಹೆಸರಿನಿಂದ ಕರೆಯಲಾಗುತ್ತಿದೆ. ಇವುಗಳ ಬೇಸಾಯ ಮತ್ತು ಉಪಯೋಗ ಒಂದೇ ರೀತಿಯವಾಗಿವೆ. ಬಹುತೇಕ ಬಗೆಗಳು ಕುಕರ್ಬಿಟ ಮಾಸ್ಕೇಟಕ್ಕೆ ಸೇರಿದವಾಗಿವೆ.

ಕುಂಬಳಕಾಯಿ ಎಲ್ಲರಿಗೂ ಪರಿಚಿತವಾಗಿರುವ ತರಕಾರಿ. ಇದನ್ನು ಹುಳಿ, ಪಲ್ಯ ಮತ್ತು ಸಿಹಿತಿಂಡಿಗಳಲ್ಲಿ ಉಪಯೋಗಿಸುತ್ತಾರೆ. ಸುಲಭವಾಗಿ ಬೆಳೆದು, ಹೆಚ್ಚು ದಿವಸಗಳ ಕಾಲ ಇಟ್ಟು ಉಪಯೋಗಿಸಬಹುದಾದುದರಿಂದ ಇದು ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದೆ. ಕುಂಬಳಕಾಯಿ ರುಚಿಕರವಾದ ತರಕಾರಿ ಮಾತ್ರವಲ್ಲದೆ ಮನುಷ್ಯನಿಗೆ ಪುಷ್ಟಿಕರವಾದ ಆಹಾರಾಂಶಗಳನ್ನೂ ಒಳಗೊಂಡಿದೆ. ನೂರುಗ್ರಾಂ ಕುಂಬಳ ಕಾಯಿಯಲ್ಲಿರುವ ಆಹಾರ ಅಂಶಗಳು ಹೀಗಿವೆ: ತೇವಾಂಶ 92.6 ಗ್ರಾಂ; ಕಾರ್ಬೊಹೈಡ್ರೇಟ್ 4.6 ಗ್ರಾಂ; ವಿಟಮಿನ್‌ಗಳು 1.4 ಗ್ರಾಂ; ಕೊಬ್ಬು 0.1 ಗ್ರಾಂ; ಲವಣ 0.6 ಗ್ರಾಂ; ನಾರು 0.7 ಗ್ರಾಂ ಅಲ್ಲದೆ ಶಕ್ತಿ 25 ಕೆಲೋರಿಗಳು, ಮೆಗ್ನೀಸಿಯಂ 14 ಮಿಗ್ರಾಂ; ರಂಜಕ 30 ಮಿಗ್ರಾಂ; ಕಬ್ಬಿಣ 0.7 ಮಿಗ್ರಾಂ; ಸೋಡಿಯಮ್ 5.6 ಮಿಗ್ರಾಂ; ಪೊಟ್ಯಾಸಿಯಂ 139.0 ಮಿಗ್ರಾಂ; ತಾಮ್ರ 0.20 ಮಿಗ್ರಾಂ; ಗಂಧಕ 1.6 ಮಿಗ್ರಾಂ; ಕ್ಲೋರಿನ್ 4.0 ಮಿಗ್ರಾಂ; ಥಯಾಮಿನ್ 0.06 ಮಿಗ್ರಾಂ; ರಿಬೋಫ್ಲೇವಿನ್ 0.04 ಮಿಗ್ರಾಂ; ನಿಕೊಟಿನಿಕ್ ಅಮ್ಲ 0.5 ಮಿಗ್ರಾಂ; ಸಿ ವಿಟಮಿನ್ 2.0 ಮಿಗ್ರಾಂ; ಎ ವಿಟಮಿನ್ 84 ಐಯು–ಇವನ್ನು ಸಹ ವಿಶ್ಲೇಷಣೆಯಿಂದ ಶೋಧಿಸಲಾಗಿದೆ.

ಕುಂಬಳದ ಹಂಬು ಮತ್ತು ಎಲೆಗಳ ಮೇಲೆ ಒರಟಾದ ಬಿಳಿಯ ರೋಮಗಳಿವೆ. ನಾಲ್ಕು ಮುಖದ (ಕ್ವಾಡ್ರ್ಯಂಗ್ಯುಲರ್) ಕಾಂಡ ಬುಡದಲ್ಲಿ ಕವಲೊಡೆದು ವಿಶಾಲವಾಗಿ ಹರಡಿಕೊಂಡಿದೆ. ಗೆಣ್ಣುಗಳಲ್ಲಿ ತೊಟ್ಟಿರುವ ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ. ಎಲೆ ಸರಳ, ಅಂಚು ಬಾಗಿದೆ. ಬಣ್ಣ ಹಸಿರು, ಹೂ ಎಲೆಗಳ ಕಂಕುಳಲ್ಲಿವೆ. ಗಂಡು ಮತ್ತು ಹೆಣ್ಣು ಹೂಗಳು ಪ್ರತ್ಯೇಕವಾಗಿವೆ. ಗಂಡು ಹೂವಿಗೆ ಉದ್ದವಾದ ತೊಟ್ಟೂ ಹೆಣ್ಣು ಹೂವಿಗೆ ಚಿಕ್ಕದಾದ ತೊಟ್ಟೂ ಇವೆ. ಪುಷ್ಪಪತ್ರ ಸಂಯುಕ್ತವಾಗಿದ್ದು ತುದಿಯಲ್ಲಿ 5 ಭಾಗವಾಗಿದೆ; ದಳಗಳು ಕೂಡಿಕೊಂಡಿದ್ದು ತುದಿಯಲ್ಲಿ 5 ಭಾಗವಾಗಿದ್ದು ಚಕ್ರಾಕಾರವಾಗಿ ವಿಸ್ತರಿಸಿವೆ. ಎರಡು ಕೇಸರಗಳಿರುವ ಎರಡು ಗುಂಪು ಮತ್ತು ಒಂದು ಬಿಡಿ ಕೇಸರ–ಒಟ್ಟು 5 ಕೇಸರಗಳು ಇವೆ. ಪರಾಗಕೋಶ ಎರಡು ಕೋಶಗಳಿಂದ ಕೂಡಿದೆ. ಎರಡು ಭಾಗವಾಗಿರುವ ಶಲಾಕಾಗ್ರ 3ರಿಂದ 5 ಉಪಭಾಗಗಳಿಂದ ಕೂಡಿರುತ್ತದೆ. ಬಹು ಅಂಡಕಗಳನ್ನೊಳಗೊಂಡ ನೀಚಸ್ಥಾನದ ಅಂಡಾಶಯವಿದೆ. ಹಣ್ಣು ಬಹುಬೀಜವಿರುವ, ಒಡೆಯದ ಪೆಪೊ ಮಾದರಿಯದು.

ಕುಂಬಳ ಬೇಸಾಯಕ್ಕೆ ಕಡಿಮೆ ಉಷ್ಣತೆ ಮತ್ತು ಹೆಚ್ಚು ತೇವಾಂಶವಿರುವ ಹವಾಗುಣ ಶ್ರೇಷ್ಠವಾದದ್ದು. ಇದು ಅಧಿಕ ಚಳಿಯನ್ನು ಸಹಿಸದು; ಚಳಿ ವಾತಾವರಣದಲ್ಲಿ ಬೆಳೆದ ಕುಂಬಳ ಸಸ್ಯ ಫಲ ಕೊಡಲು ಹೆಚ್ಚು ಕಾಲ ತೆಗೆದುಕೊಳ್ಳುತ್ತದಲ್ಲದೆ ಇಳುವರಿ ಕಡಿಮೆ. ಅಂತೆಯೇ ಈ ಸಸ್ಯ ಹೆಚ್ಚು ಉಷ್ಣವನ್ನೂ ಸಹಿಸುವುದಿಲ್ಲ; ಹೆಚ್ಚು ಉಷ್ಣದ ವಾತಾವರಣದಲ್ಲಿ ಬೆಳೆದ ಸಸ್ಯದಲ್ಲಿ ಹೂ ಮತ್ತು ಹೀಚುಗಳು ಉದುರಿಹೋಗುತ್ತವೆ. ಗುಡ್ಡಗಾಡು ಪ್ರದೇಶಗಳಲ್ಲಿ ಬೇಸಗೆ ಕಾಲ ಕುಂಬಳ ಬೇಸಾಯಕ್ಕೆ ಯೋಗ್ಯ. ಮೈದಾನ ಪ್ರದೇಶಗಳಲ್ಲಿ ಇದರ ಬೇಸಾಯವನ್ನು ವರ್ಷಪೂರ್ತಿ ಮಾಡಬಹುದು.

ಜೌಗಿಲ್ಲದ ಮತ್ತು ಫಲವತ್ತಾದ ಎಲ್ಲ ವಿಧವಾದ ಮಣ್ಣುಗಳಲ್ಲಿ ಕುಂಬಳ ಬೇಸಾಯವನ್ನು ಮಾಡಬಹುದು. ಜಿಗಟಾದ ಕಪ್ಪು ಮಣ್ಣೂ ಬೇರು ಬಿಡಲು ಎಡೆ ಕೊಡುವುದಿಲ್ಲವಾದ್ದರಿಂದ

ಸಿಹಿಗುಂಬಳ ಬಳ್ಳಿ

ಕುಂಬಳ ಬೇಸಾಯಕ್ಕೆ ಅದು ಯೋಗ್ಯವಲ್ಲ. ಫಲವತ್ತಾಗಿರುವ ಮತ್ತು ಸಡಿಲವಾಗಿರುವ ಮರಳುಗೋಡು ಮಣ್ಣು ಇದಕ್ಕೆ ಶ್ರೇಷ್ಠವಾದದ್ದು. ಹೆಚ್ಚು ಫಲವತ್ತಾದ ಮಣ್ಣಿನಲ್ಲಿ ಈ

ಸಸ್ಯವನ್ನು ಬೆಳೆಸಿದರೆ ಹೆಚ್ಚಿನ ಹಸಿರು ಭಾಗ ಬೆಳೆದು ಫಲದ ಇಳುವರಿ ತೀರ ಕಡಿಮೆಯಾಗುತ್ತದೆ. ಮಧ್ಯಮ ಆಮ್ಲತೆ ಇರುವ ಮಣ್ಣಿನಲ್ಲಿ ಇದರ ಬೇಸಾಯ ಸಾಧ್ಯವಿದ್ದರೂ ಕ್ಷಾರತೆಯನ್ನಿದು ಸಹಿಸುವುದಿಲ್ಲ. ಕುಂಬಳ ಬೇಸಾಯಕ್ಕೆ ಮಣ್ಣಿನಲ್ಲಿ 6.0ರಿಂದ 6.5 ಅಡಿ ಅಂತರ ಸೂಕ್ತವಾದದ್ದು.

ಕರ್ನಾಟಕ ರಾಜ್ಯದಲ್ಲಿ ಕುಂಬಳವನ್ನು ಸಾಮಾನ್ಯವಾಗಿ ಮಿಶ್ರ ಬೆಳೆಯಾಗಿ ಬೆಳೆಸುತ್ತಾರೆ. ಶುದ್ಧ ಬೆಳೆಯಾಗಿ ಬೆಳೆಸುವುದು ತೀರ ಕಡಿಮೆ. ಆಲೂಗೆಡ್ಡೆ, ಮೆಣಸಿನಕಾಯಿ ಮತ್ತು ಇತರ ಬೆಳೆಗಳ ಸುತ್ತಲೂ ಇದನ್ನು ಬೆಳೆಸುತ್ತಾರೆ. ವಾಣಿಜ್ಯ ದೃಷ್ಟಿಯಿಂದ ಕುಂಬಳ ಬೇಸಾಯವನ್ನು ಮಾಡುವಾಗ ಮಾತ್ರ ಇದನ್ನು ಶುದ್ಧ ಬೆಳೆಯಾಗಿ ಬೆಳೆಸುತ್ತಾರೆ. ಇದರ ಬೆಳೆಯನ್ನು ಇತರ ತರಕಾರಿಗಳೊಡನೆ ಪರ್ಯಾಯವಾಗಿಯೂ ಬೆಳೆಸಬಹುದು. ಯೋಗ್ಯ ನೀರಾವರಿ ವಸತಿ ಇರುವ ಕಡೆಗಳಲ್ಲಿ ಕುಂಬಳ ಬೇಸಾಯವನ್ನು ವರ್ಷದ ಎಲ್ಲ ಕಾಲಗಳಲ್ಲೂ ಮಾಡಬಹುದು. ಮಳೆಗಾಲದಲ್ಲಿ ಈ ಬೆಳೆಗೆ ನೀರಾವರಿ ಅಗತ್ಯ ಕಡಿಮೆ ಇರುವುದರಿಂದ ಆ ಕಾಲದಲ್ಲಿ ಬೆಳೆಸುವುದೇ ವಾಡಿಕೆ.

**ತಳಿಗಳು :** ಕುಂಬಳದ ಒಂದೊಂದು ಪ್ರಭೇದದಲ್ಲೂ ಅನೇಕ ತಳಿಗಳಿವೆ. ಕಾಯಿಯ

ಬೂದುಗುಂಬಳಕಾಯಿ

ಆಕಾರ ಮತ್ತು ಬಣ್ಣದ ಆಧಾರದ ಮೇಲೆ ಗುಂಡು ಮತ್ತು ಉದ್ದ, ಹಸುರು, ಬಿಳುಪು ಮತ್ತು ಕೆಂಪು ಎಂದು ವಿಂಗಡಣೆಮಾಡಲಾಗಿದೆ. ಬೇಸಾಯದಲ್ಲಿರುವ ಸಾಮಾನ್ಯ ತಳಿಗಳಲ್ಲಿ ಲಾರ್ಜ್‌ರೆಡ್, ರೌಂಡ್, ಎಲ್ಲೋಫ್ಲೇಸ್, ಅರ್ಲಿಎಲ್ಲೊ ಪ್ರೋಲಿಫಿಕ್ ಅಸ್ಟ್ರೇಲಿಯನ್ ಗ್ರೀನ್, ಬಟರ್‌ನಟ್, ಗ್ರೀನ್ ಹಬರ್ಡ್, ಗೋಲ್ಡನ್ ಹಬರ್ಡ್ ಇವು ಮುಖ್ಯವಾದವು.

**ಬೀಜ ಪ್ರಮಾಣ :** ಕುಂಬಳದ ಎಕರೆಯ ಬೀಜ ಪ್ರಮಾಣ ಬೆಳೆಯ ಅಂತರವನ್ನು ಅನುಸರಿಸುತ್ತದೆ. ಹೆಕ್ಟೇರಿಗೆ 3.5ರಿಂದ 4.5 ಕೆಜಿಯಷ್ಟು ಬೀಜ ಬೇಕಾಗುತ್ತದೆ. ಉತ್ತಮ ದರ್ಜೆಯ ಬೀಜ ಶೇ. 75ರಷ್ಟು ಮೊಳೆಯುತ್ತದೆ. ಚೆನ್ನಾಗಿ ಬಲಿತ ಕುಂಬಳ ಕಾಯಿಗಳ ಬೀಜಗಳನ್ನು ಮಾತ್ರ ಬಿತ್ತನೆಗೆ ಉಪಯೋಗಿಸಬೇಕು. ಯೋಗ್ಯ ರೀತಿಯಲ್ಲಿ ಶೇಖರಣೆ ಮಾಡಿದ ಬಿತ್ತನೆ ಬೀಜಗಳು ಸುಮಾರು ನಾಲ್ಕು ವರ್ಷಗಳ ಕಾಲ ತಮ್ಮ ಮೊಳೆಯುವ ಸಾಮರ್ಥ್ಯವನ್ನು ಉಳಿಸಿಕೊಂಡಿರುತ್ತವೆ.

**ಬೇಸಾಯ :** ಕುಂಬಳ ಬೇಸಾಯ ಮಾಡುವ ತೋಟವನ್ನು 3–4 ಸಾರಿ ಉಳುಮೆ ಅಥವಾ ಅಗೆತ ಮಾಡಿ ಕಳೆ, ಕಸ ಇತ್ಯಾದಿಗಳನ್ನು ತೆಗೆದು ಹೆಂಟೆ ಪುಡಿಮಾಡಿ ಮಟ್ಟಸ ಮಾಡಬೇಕು. ಅನಂತರ ಎಕರೆಗೆ 25 ರಿಂದ 30 ಗಾಡಿ ಚೆನ್ನಾಗಿ ಕೊಳೆತಿರುವ ಕೊಟ್ಟಿಗೆ ಗೊಬ್ಬರವನ್ನು ಮಿಶ್ರ ಮಾಡಬೇಕು. ಬೀಜವನ್ನು ಎರಡು ರೀತಿಯಲ್ಲಿ ಬಿತ್ತಬಹುದು. 10' ಸಾಲುಗಳಲ್ಲಿ 8' ಅಂತರದಲ್ಲಿ 2' ಅಗಲದ ಗುಂಡಿಗಳನ್ನು ಮಾಡಿ ಬೀಜ ಬಿತ್ತಬೇಕು. 8' ಅಂತರದಲ್ಲಿ 1' ಎತ್ತರದ ದಿಂಡುಗಳನ್ನು ಮಾಡಿ, ಅವುಗಳ ಮೇಲೆ ಬಿತ್ತುವುದೊಳ್ಳೆಯದು. ಗುಂಡಿಗಳಲ್ಲಿ 4–5 ಬೀಜಗಳನ್ನು ದಿಂಡುಗಳ ಮೇಲೆ 1 ಅಂತರದಲ್ಲಿ ಆಳವಾಗಿ ಬಿತ್ತಬೇಕು. ಹೆಚ್ಚು ಆಳದಲ್ಲಿ ಬಿತ್ತಿದ ಬೀಜಗಳು ಮೊಳೆಯುವುದಿಲ್ಲ. ಬಿತ್ತಿದ ಒಂದು ವಾರದಲ್ಲಿ ಅವು ಮೊಳೆಯುತ್ತವೆ; ನಾಲ್ಕು ವಾರಗಳ ಅನಂತರ ಸಸಿಗಳು ದಾಂಗುಡಿಯಿಡಲು ಮೊದಲು ಮಾಡುತ್ತವೆ. ಆಗ ಸಸಿಗಳ ಸುತ್ತಲೂ ಕಳೆ ತೆಗೆದು ವಿಶಾಲವಾಗಿ ಪಾತಿ ಮಾಡಿ, ಮಣ್ಣನ್ನು ಸಸಿಗಳ ಬುಡಕ್ಕೆ ಏರು ಹಾಕಬೇಕು. ಕುಂಬಳ ಹಂಬುಗಳ ಬೇರು

ಸಿಹಿಗುಂಬಳಕಾಯಿ

ಮೇಲಿನ ಆರು ಅಂಗುಲ ಮಣ್ಣಿನಲ್ಲಿರುವುದರಿಂದ, ಬೀಜ ಬಿತ್ತಿದ ಒಂದು ತಿಂಗಳ ಅನಂತರ ಮೇಲಿನ ಮಣ್ಣು ಬೇಸಾಯ ಮಾಡಬಹುದು. ಬೆಳೆಗೆ ಮಳೆಗಾಲದಲ್ಲಿ ಹೆಚ್ಚಿನ ನೀರಾವರಿ ಆವಶ್ಯಕತೆ ಇರುವುದಿಲ್ಲ. ಬೇಸಗೆಯಲ್ಲಿ ದಿನ ಬಿಟ್ಟು ದಿನ ನೀರು ಹಾಯಿಸಬೇಕು. ಎರಡು ತಿಂಗಳ ಅನಂತರ ಸಸಿ ಹೂ ಬಿಡುತ್ತದೆ. 4–5 ವಾರಗಳಲ್ಲಿ ಕಾಯಿಗಟ್ಟುತ್ತದೆ. ಅನಂತರ ಕಾಯಿ ಬಲಿತು ಹಣ್ಣಾಗಲು ಒಂದು ತಿಂಗಳು ಬೇಕು. ಬಲಿತ ಕಾಯ ಮೇಲುಸಿಪ್ಪೆ ಒರಟಾಗಿ ಗಟ್ಟಿಯಾಗಿ ಬಣ್ಣ ಬದಲಾಗುತ್ತದೆ. ಕಾಯಿಗಳನ್ನು ಕೀಳುವಾಗ ಹರಿತವಾದ ಚಾಕುವಿನಿಂದ ಕತ್ತರಿಸಿ ತೆಗೆಯಬೇಕಾಗುತ್ತದೆ. ಇಲ್ಲದಲ್ಲಿ ಹಂಬಿಗೆ ನೋವಾಗುವ ಸಂಭವ ಉಂಟು. ಕುಂಬಳದ ಇಳುವರಿ ತಳಿಗಳನ್ನು ಅನುಸರಿಸುತ್ತದೆ. ಎಕರೆಗೆ 30 ರಿಂದ 85 ಕ್ವಿಂಟಾಲಿನ ವರೆಗೆ ಕಾಯಿ ದೊರೆಯಬಹುದು. ಬೇಸಗೆ ಬೆಳೆಯ ಇಳುವರಿ ಇತರ ಕಾಲದ ಬೆಳೆಗಿಂತ ಕಡಿಮೆ. ಚೆನ್ನಾಗಿ ಬಲಿತ ಕುಂಬಳಕಾಯಿಯನ್ನು ಸುಮಾರು ಆರು ತಿಂಗಳವರೆಗೆ ಶೇಖರಿಸಿಡಬಹುದು.

**ಕೀಟಗಳು :** ಒಂದು ಬಗೆಯ ಕೆಂಪು ಚಿಪ್ಪಿನ ಹುಳುಗಳು ಕುಂಬಳದ ಎಲೆಗಳಲ್ಲಿರುವ ನಾಳಗಳ ಮಧ್ಯ ಭಾಗದ ಹಸುರು ಭಾಗವನ್ನು ಕಡಿದು ತಿನ್ನುತ್ತವೆ. ಕೀಟಗಳ ಸಂಖ್ಯೆ ಕಡಿಮೆ ಇದ್ದಲ್ಲಿ, ಅವನ್ನು ಕೈಯಿಂದಲೇ ನಾಶಮಾಡಬಹುದು. ಅಥವಾ ಶೇ. 1 ಲಿಂಡನ್ ಶೇ. 2 ಬಿ.ಎಚ್.ಸಿ. ಅಥವಾ ಡಿ.ಡಿ.ಟಿ. ಪುಡಿಯನ್ನು ಎರಚಿ ನಿವಾರಿಸಬಹುದು. ಹಸಿರು ಬಣ್ಣದ ಸಣ್ಣ ಹೇನುಗಳು ಗಿಡಕ್ಕೆ ಹತ್ತುವುದುಂಟು. ಅವು ಸಸ್ಯದ ತುದಿ ಭಾಗದಲ್ಲಿ ಅಗಾಧ ಸಂಖ್ಯೆಯಲ್ಲಿದ್ದು ಸಸ್ಯರಸವನ್ನು ಹೀರಿ ತೊಂದರೆಪಡಿಸುತ್ತವೆ. ಈ ಪಿಡುಗನ್ನು ನಿವಾರಿಸಲು ಶೇ. 0.025 ಮ್ಯಾಲಥಿಯಾನ್ ಅಥವಾ ಫಾಲಿಡಾಲ್ ದ್ರಾವಣವನ್ನು ಸಿಂಪಡಿಸಬೇಕು. ಹಣ್ಣಿನ ನೊಣಗಳೂ ಕುಂಬಳಕಾಯಿಗಳ ಮೇಲೆ ಮೊಟ್ಟೆ ಇಡುತ್ತವೆ. ಈ ಮೊಟ್ಟೆಗಳಿಂದ ಹೊರ ಬಂದ ಕೀಟದ ಡಿಂಭಗಳು ಎಳೆಯ ಕಾಯಿಗಳನ್ನು ಕೊರೆದು ತಿಂದುಹಾಕುತ್ತವೆ. ಕುಂಬಳ ಹಂಬು ಹೂ ಬಿಡುವುದಕ್ಕೆ ಪ್ರಾರಂಭಿಸುತ್ತಲೇ ಬೆಳೆಗೆ ಶೇ. 0.025 ಮ್ಯಾಲಥಿಯಾನ್ ದ್ರಾವಣ ಸಿಂಪಡಿಸಿ, ಅನಂತರ ಪ್ರತಿ ಎರಡು ವಾರಗಳಿಗೆ ಒಂದು ಸಾರಿ ಕ್ರಮವಾಗಿ ಸಿಂಪಡಿಕೆಯನ್ನು ಮುಂದುವರಿಸುವುದರಿಂದ ಈ ಪಿಡುಗನ್ನು ತಡೆಗಟ್ಟಬಹುದು.

**ರೋಗಗಳು:** ಕುಂಬಳ ಬೆಳೆಗೆ ಬ್ಯಾಕ್ಟೀರಿಯಲ್ ವಿಲ್ಟ್, ಆಂತ್ರಕ್ನೋಸ್, ಡ್ಡನಿಮಿಲ್ಡ್ಯೂ, ಪೌಡರಿಮಿಲ್ಡ್ಯೂ ಮುಂತಾದವು ಸಾಮಾನ್ಯವಾಗಿ ಬರುವ ರೋಗಗಳು. ಎರಡು ವಾರಗಳಿಗೆ ಒಂದು ಸಾರಿ ಶೇ.1 ಬೋರ್ಡೊ ದ್ರಾವಣವನ್ನು ಕ್ರಮವಾಗಿ ಸಿಂಪಡಿಸುವುದರಿಂದ ಅವನ್ನು ತಡೆಯಬಹುದು.

ಕುಂಬಳವನ್ನೇ ಹೋಲುವ ಬೂದುಗುಂಬಳಕ್ಕೂ (ಬೆ ನ್‌ಕಾಸ ಸೆರಿಫೆರ) ಕುಂಬಳಕ್ಕೂ ಅವುಗಳ ಹೊರ ಒಳರಚನೆಗಳಲ್ಲಿ ಕೆಲವು ಮುಖ್ಯ ವ್ಯತ್ಯಾಸಗಳಿವೆ. ಬೂದುಗುಂಬಳದ ಕುಡಿಬಳ್ಳಿಗಳು (ಟೆಂಡ್ರಿಲ್ಸ್) ತುದಿಯಲ್ಲಿ ಕೇವಲ ಎರಡು ಭಾಗಗಳಾಗಿ ಕವಲೊಡೆದಿವೆ. ಆದರೆ ಕುಂಬಳದಲ್ಲಿ 3–5 ಭಾಗಗಳಾಗಿವೆ. ಬೂದುಗುಂಬಳದ ಕಾಂಡದಲ್ಲಿನ ನಾಳಕೂರ್ಚಗಳ ಸಂಖ್ಯೆ ಕೇವಲ 4 (ಕುಂಬಳದಲ್ಲಿ 7–9). ಬೂದುಗುಂಬಳದ ಕಾಯಿಯ ಹೊರಮೈ ನಯವಾಗಿದ್ದು ಬಿಳಿಯ ಮೇಣದಂಥ ವಸ್ತುವಿನಿಂದ ಆವೃತವಾಗಿದೆ. ತಿರುಳು ಬಿಳಿ. ಕುಂಬಳದಲ್ಲಿ ಕಾಯಿ ಹಲವಾರು ಏಣುಗಳಿಂದ ಕೂಡಿದೆ. ಅದರ ಮೇಲೆ ಮೇಣದ

ಲೇಪವಿಲ್ಲ. ತಿರುಳಿನ ಬಣ್ಣ ಗಾಢ ಹಳದಿ. ಬೂದುಗುಂಬಳದ ಬೀಜಗಳಿಗೆ ಜಂತುಹುಳುನಾಶಕ ಗುಣವಿದೆ. ಕಾಯಿ ಬಹಳ ಪುಷ್ಟಿದಾಯಕವೆಂದೂ ಮೂತ್ರೋತ್ತೇಜಕವೆಂದೂ ಹೇಳಲಾಗಿದೆ. ಕಾಯಿಯಿಂದ ಅದೇ ತಾನೇ ತೆಗೆದು ರಸವನ್ನು ಅಂತರ್ ರಕ್ತಸ್ರಾವವನ್ನು ತಡೆಯಲು ಬಳಸುವುದುಂಟು. ಇದು ಪ್ರತಿವಿಷವೂ ಹೌದು. ಕ್ಷಯರೋಗ ಮುಂತಾದ ರೋಗಗಳಲ್ಲಿ ಇದನ್ನು ಶಕ್ತಿದಾಯಕವಾಗಿ ಉಪಯೋಗಿಸುತ್ತಾರೆ. ಬಲಿತ ಬೂದುಗುಂಬಳ ಇತರ ಕುಂಬಳಗಳಂತೆ ನಾಲ್ಕಾರು ತಿಂಗಳು ನಿಲ್ಲುತ್ತದೆ. ಇದನ್ನು ತರಕಾರಿಯಾಗಿ ಬಳಸುತ್ತಾರೆ. ಕೊದ್ದಲು, ಕಾಯಿ ಹುಳಿಗೆ ಇದು ಪ್ರಶಸ್ತ. ಇದರ ತಿರುಳಿನಿಂದ ರುಚಿಕರವಾದ ದಂರೋಟನ್ನು ಮಾಡುತ್ತಾರೆ. ಅರಳು ಸಂಡಿಗೆಗೆ ಇದರ ತಿರುಳು ಮತ್ತು ಹೋಳು ಒದಗುತ್ತವೆ. ಇದರ ತ್ವಚೆಯನ್ನು ದಪ್ಪಗೆ ತೆಗೆದು ಒಣಗಿಸಿ ಬಾಳಕ ಮಾಡುತ್ತಾರೆ. (ಡಿ.ಎಂ.ಕೆ.ಎಂ.)

**ಕುಂಬಿಕ್ :** ಏರೇಸೀ ಕುಟುಂಬಕ್ಕೆ ಸೇರಿದ ಜಲಸಸ್ಯ. ಪಿಸ್ಟಿಯ ಸ್ಟ್ರಾಟಿಯೋಟಿಸ್ ಇದರ ವೈಜ್ಞಾನಿಕ ನಾಮ. ಅಂತರಗಂಗೆ ಎಂದೂ ಕರೆಯುವುದುಂಟು. ಇಂಗ್ಲಿಷಿನಲ್ಲಿ ವಾಟರ್ ಲೆಟಿಸ್ ಎಂದು ಕರೆಯಲಾಗುತ್ತದೆ. ಇದು ಸಾಧಾರಣವಾಗಿ ಕೊಳ, ಕುಂಟೆ, ಕೆರೆ ಮತ್ತು ನಿಧಾನವಾಗಿ ಹರಿಯುವ ನೀರಿನಲ್ಲಿ ಬೆಳೆಯುತ್ತದೆ. ಭಾರತದಾದ್ಯಂತ ಕಾಣಬರುತ್ತದೆ. ನೀರಿನಲ್ಲಿ ತೇಲುವ ಈ ಗಿಡ ಬಹಳ ಚಿಕ್ಕದು. ಮುಖ್ಯಕಾಂಡದಿಂದ ಎಲ್ಲ ದಿಕ್ಕಿಗೂ ಕೊಂಬೆಗಳು ಉತ್ಪತ್ತಿಯಾಗುತ್ತವೆ. ಕೊಂಬೆಗಳು ಒಂದು ಅಂತರಗಣ್ಣಿನಷ್ಟು ಮಾತ್ರ ಬೆಳೆಯುತ್ತವೆ. ಇವಕ್ಕೆ ಆಫ್‌ಸೆಟ್‌ಗಳೆಂದು ಹೆಸರು. ಆಗಾಗ್ಗೆ ಆಫ್‌ಸೆಟ್‌ಗಳು ಮುಖ್ಯಕಾಂಡದಿಂದ ಬೇರ್ಪಟ್ಟು ಹೊಸ ಗಿಡಗಳಾಗಿ ಬೆಳೆಯುತ್ತವೆ. ಇದರಿಂದ ಕುಂಬಿಕ್ ಗಿಡದ ಸಂತಾನ ವೃದ್ಧಿಯಾಗುತ್ತದೆ. ಹೀಗೆ ಆಫ್‌ಸೆಟ್‌ಗಳು ಮುಖ್ಯಕಾಂಡದಿಂದ ಬೇರ್ಪಟ್ಟು ಹೊಸ ಗಿಡಗಳಾಗಿ ಬೆಳೆಯುತ್ತವೆ. ಇದರಿಂದ ಕುಂಬಿಕ್ ಗಿಡದ ಸಂತಾನ ವೃದ್ಧಿಯಾಗುತ್ತದೆ. ಹೀಗೆ ಆಫ್‌ಸೆಟ್‌ಗಳ ಅಬೀಜಸಂತಾನೋತ್ಪತ್ತಿಯ ಮುಖ್ಯ ಸಾಧನಗಳಾಗಿವೆ. ಇವುಗಳ ಸಹಾಯದಿಂದ ಸಂತಾನವೃದ್ಧಿ ಅತ್ಯಂತ ಕ್ಷಿಪ್ರವಾಗಿ ನಡೆಯುವುದರಿಂದ ಅತ್ಯಲ್ಪಕಾಲದಲ್ಲಿಯೇ ಕುಂಬಿಕ್ ಗಿಡಗಳು ಕೊಳ, ನದಿಗಳ ಮೇಲೆಲ್ಲ ಹರಡಿ ನೀರೇ ಕಾಣದಂತಾಗುವುದುಂಟು. ಕೆಲವೇಳೆ ದೋಣಿಗಳ ಸಂಚಾರಕ್ಕೂ ಅಡ್ಡಿಯಾಗುವುದುಂಟು.

ಕುಂಬಿಕ್‌ನ ಎಲೆಗಳು ಅಗಲ ಮತ್ತು ಚಪ್ಪಟೆಯಾಗಿವೆ. ಇವುಗಳ ಆಕಾರ ಹೃದಯದಂತೆ ಅಥವಾ ಬೆಣೆಯಂತೆ. ಎಲೆಗಳು ರೆಂಬೆಗಳ ತುದಿಯಲ್ಲಿ ಕಮಲದ ದಳಗಳಂತೆ ಸುತ್ತುಗಳಲ್ಲಿ ಜೋಡಣೆಯಾಗಿವೆ. ಇವುಗಳ ಮೇಲೆ ದಟ್ಟವಾಗಿ ಕೂದಲುಗಳು ಬೆಳೆದಿರುವುದುಂಟು. ಹೂಗೊಂಚಲು ತಾಳಗುಚ್ಛ ಮಾದರಿಯದು. ಇದು ಸುಮಾರು 1"–2" ಉದ್ದ ಇದೆ. ಹೂಗೊಂಚಲಿನ ಬುಡದಲ್ಲಿ ಕೊಳವೆಯಂತಿರುವ ಕವಚ (ಸ್ಪೇದ್) ಇದೆ. ಹೂಗಳು ಬಹಳ ಚಿಕ್ಕಗಾತ್ರದವು. ಇವುಗಳಲ್ಲಿ ಪುಷ್ಪ ಪತ್ರಗಳಾಗಲೀ ಇಲ್ಲ. ಹೂಗಳು ಏಕಲಿಂಗಿಗಳು,

ಕುಂಬಿಕ್ – ಎಲೆ ಮತ್ತು ಹೂ

ಗಂದುಹೂಗಳು ಹೂಗೊಂಚಲಿನ ಮೇಲ್ಭಾಗದಲ್ಲಿಯೂ ಹೆಣ್ಣುಹೂಗಳು ತಳಭಾಗದಲ್ಲಿಯೂ ಇವೆ. ಪ್ರತಿ ಗಂಡುಹೂವಿನಲ್ಲಿ 2 ಕೇಸರಗಳಿದ್ದು ಅವು ಒಂದಕ್ಕೊಂದು ಅಂಟಿಕೊಂಡಿವೆ. ಹೆಣ್ಣುಹೂವಿನಲ್ಲಿ ಒಂದೇ ಕಾರ್ಪೆಲಿನಿಂದಾದ ಅಂಡಾಶಯವಿದೆ. ಸಂತಾನಾಭಿವೃದ್ಧಿ ಆಫ್‌ಸೆಟ್ಟುಗಳ ಸಹಾಯದಿಂದ ಮಾತ್ರವಲ್ಲದೆ ಬೀಜಗಳಿಂದಲೂ ನಡೆಯುತ್ತದೆ.

ಕುಂಬಿಕ್ ತನ್ನ ಶೀಘ್ರ ಬೆಳೆವಣಿಗೆಯಿಂದ ಕೊಳವನ್ನೆಲ್ಲ ಆವರಿಸಿ ಅಲ್ಲಿ ಸೊಳ್ಳೆಗಳು ಹೆಚ್ಚುವಂತೆ ಮಾಡುತ್ತದೆ. ಇದರಿಂದ ಇದನ್ನು ಕೊಂಚ ಹಾನಿಕರ ಸಸ್ಯವೆಂದೇ ಹೇಳಬಹುದು. ಆದರೂ ಇದಕ್ಕೆ ಉಪಯುಕ್ತ ಗುಣಗಳು ಇಲ್ಲದೆ ಇಲ್ಲ. ಕ್ಷಾಮ ಕಾಲದಲ್ಲಿ ಈ ಗಿಡವನ್ನು ಆಹಾರವಾಗಿ ಉಪಯೋಗಿಸುವುದುಂಟು. ಮೀನುಗಳಿಗೆ ಇದು ಉತ್ತಮ ಆಹಾರವೆಂದು ತಿಳಿದುಬಂದಿದೆ. ಉಷ್ಣಪಕ್ಷಿಗಳಿಗೂ ಹಂದಿಗಳಿಗೂ ಮೇವಾಗಿ ಇದನ್ನು ಉಪಯೋಗಿಸುತ್ತಾರೆ. ಎಲೆಗಳಲ್ಲಿ ಸುಣ್ಣ, ರಂಜಕ, ಎ,ಬಿ,ಸಿ, ವಿಟಮಿನ್‌ಗಳು ಹೇರಳವಾಗಿವೆ. ಇದರ ಬೂದಿಯಿಂದ ಸಾಬೂನನ್ನು ತಯಾರಿಸುತ್ತಾರೆ. ಪೊಟ್ಯಾಷ್ ಅಂಶ ಹೆಚ್ಚಾಗಿರುವುದರಿಂದ ಇದನ್ನು ಉತ್ತಮ ಗೊಬ್ಬರವಾಗಿ ಬಳಸಬಹುದು. ಬೂದಿಯನ್ನು ಬಿಳಿತೊನ್ನು, ಹುಣ್ಣು, ಮೂಲವ್ಯಾಧಿ, ಇಸಬು ಮುಂತಾದ ರೋಗಗಳಿಗೆ ಔಷಧಿಯಾಗಿ ಉಪಯೋಗಿಸುವುದುಂಟು. ಕೊಳಗಳಲ್ಲಿ ನೀರಿನ ಮೇಲೆಲ್ಲ ಹರಡಿ ಕೊಳ ಮುಚ್ಚಿ ಹೋಗುವಂತೆ ಮಾಡಿ ಅಲ್ಲಿ ಇತರ ಗಿಡಗಳು ಬೆಳೆಯಲು ಈ ಗಿಡ ಅನುಕೂಲ ಮಾಡಿಕೊಡುತ್ತದೆ. ಈ ವಿಧವಾದ ನೈಸರ್ಗಿಕ ಸಸ್ಯಾಭಿವೃದ್ಧಿಗೆ ಸಸ್ಯ ಅನುಕ್ರಮ (ಪ್ಲಾಂಟ್ ಸಕ್ಸೆಷನ್) ಎಂದು ಹೆಸರು. ನೀರಿನಲ್ಲಿ ನಡೆಯುವ ಅನುಕ್ರಮ ವಿಧಾನಕ್ಕೆ ಈ ಗಿಡ ಬಹಳ ಸಹಾಯಕಾರಿ. (ಎಂ.ಸಿ.ಆರ್.)

**ಕುಂಭ :** ಪುರಾಣೇತಿಹಾಸಗಳಲ್ಲಿ ಈ ಹೆಸರಿನ ಮೂವರಿದ್ದಾರೆ. ಅವರಲ್ಲಿ ಕುಂಭಕರ್ಣ ಮತ್ತು ವೃತ್ರಜ್ವಾಲೆಯರ ಹಿರಿಯ ಮಗ ಒಬ್ಬ. ಮಹಾ ಪರಾಕ್ರಮಶಾಲಿ. ರಾಮರಾವಣರ ಯುದ್ಧದಲ್ಲಿ ಭಯಂಕರ ರೀತಿಯಲ್ಲಿ ಕಾದು ವಾನರ ಸೇನೆಯನ್ನು ಕ್ಷೋಭೆಗೀಡುಮಾಡಿ ಸುಗ್ರೀವನಿಂದ ಹತನಾದನೆಂದು ರಾಮಾಯಣದಿಂದ ತಿಳಿದುಬರುತ್ತದೆ. ಮಹಾಭಾರತದ ಹೇಳಿಕೆಯ ಪ್ರಕಾರ ಎರಡನೆಯ ಕುಂಭ ಪ್ರಹ್ಲಾದನ ಮಗ.

ಮೂರನೆಯವ ಈಶ್ವರನ ಪ್ರಮಥಗಣದಲ್ಲಿ ಒಬ್ಬ. ಶಿವ ಪಾರ್ವತಿಯನ್ನು ಮದುವೆಯಾದ ಹೊಸದರಲ್ಲಿ ಮಾವನ ಮನೆಯಲ್ಲಿಯೇ ನಿಂತಾಗ ಅತ್ತೆ ಮೇನಾದೇವಿ ಶಿವನನ್ನು ಹುಟ್ಟುದರಿದ್ರನೆಂತಲೂ ನಿಲ್ಲಲು ಮನೆಯೂ ಗತಿಯಿಲ್ಲದವನಂತಲೂ ನಿಂದಿಸಿದಳು. ತಾಯಿಯ ಮಾತಿಗೆ ನೊಂದ ಪಾರ್ವತಿ ಇದನ್ನು ಶಿವನಿಗೆ ಹೇಳಿದಳು. ಶಿವ ತನ್ನ ಪರಿವಾರದಲ್ಲಿದ್ದ ಕುಂಭನನ್ನು ಕರೆದು ಏನಾದರೊಂದು ಉಪಾಯ ಹೂಡಿ ಕಾಶೀರಾಜ ದಿವೋದಾಸನನ್ನು ಕಾಶಿಯಿಂದ ಬಿಡಿಸಿದರೆ ನಾವು ಪರಿವಾರದೊಂದಿಗೆ ಅಲ್ಲಿರಬಹುದೆಂದು ತಿಳಿಸಿದ. ಕುಂಭ ಕಾಶೀನಗರದ ನಿಕುಂಭನೆಂಬ ಬ್ರಾಹ್ಮಣನ ಕನಸಿನಲ್ಲಿ ಮೈದೋರಿ ಶಿವನಿಗೆ ಒಂದು ಗುಡಿ ಕಟ್ಟಿಸಿ, ಪೂಜಿಸೆಂದ. ಆ ಬ್ರಾಹ್ಮಣ ಕಾಶೀರಾಜನಿಗೆ ತನ್ನ ಕನಸಿನ ಮಾತನ್ನು ಹೇಳಲಾಗಿ ಆತ ಒಂದು ಶಿವಗುಡಿಯನ್ನು ಕಟ್ಟಿಸಿದ. ದಿನದಿನಕ್ಕೆ ಆ ಗುಡಿಯ ಮಹಿಮೆ ಹೆಚ್ಚತೊಡಗಿತಾದರೂ ದಿವೋದಾಸನ ಒಂದು ಇಷ್ಟಾರ್ಥವೂ ಕೈಗೂಡಲಿಲ್ಲ. ಇದರಿಂದ ಬೇಸತ್ತ ರಾಜ ಗುಡಿಯನ್ನು ಒಡೆಸಿದ. ಸಿಟ್ಟುಗೊಂಡ ಶಿವ ಕಾಶೀನಗರ ಹಾಳುಬೀಳಲೆಂದು ಶಾಪವಿತ್ತಾಗ ದಿವೋದಾಸ ಕಾಶೀನಗರ ತ್ಯಜಿಸಿದ. ಅನಂತರ ಶಿವ ಕಾಶೀಪಟ್ಟಣದಲ್ಲಿ ತನ್ನ ಪರಿವಾರದೊಂದಿಗೆ ನೆಲೆಯಾಗಿ ನಿಂತ. ಈ ಕಾರಣದಿಂದ ಕಾಶೀಪಟ್ಟಣ ಅವಿಮುಕ್ತ ಕ್ಷೇತ್ರವೆನಿಸಿತೆಂದು ಹರಿವಂಶದಿಂದ ತಿಳಿದುಬರುತ್ತದೆ. (ಬಿ.ಎಚ್.ಎಸ್.)

**ಕುಂಭಕ :** ಪತಂಜಲಿ ಮಹರ್ಷಿ ಪ್ರೋಕ್ತವಾದ ಯೋಗದರ್ಶನದ ಪ್ರಕಾರ ಅಷ್ಟಾಯೋಗದ ನಾಲ್ಕನೆಯ ಅಂಗವಾದ ಪ್ರಾಣಾಯಾಮದ ಒಂದು ಕ್ರಿಯೆ. ಪ್ರಾಣಾಯಾಮ ಎಂದರೆ ಶ್ವಾಸೋಚ್ಛ್ವಾಸಗಳ ಮೂಲಕ ಉಸಿರಾಡುವ ವಾಯುವನ್ನು ನಮ್ಮ ಅಂಕೆಯಲ್ಲಿಟ್ಟುಕೊಳ್ಳುವುದು. ಯೋಗ ಸಾಧನಾಸಕ್ತರು ಯಮ, ನಿಯಮ ಮತ್ತು ಆಸನ ಎಂಬ ಮೂರು ಯೋಗಾಂಗಗಳನ್ನು ಸಿದ್ಧಿಸಿಕೊಂಡ ಮೇಲೆ ನಾಲ್ಕನೆಯದಾದ ಪ್ರಾಣಾಯಾಮವನ್ನು ಅಭ್ಯಸಿಸಬೇಕು.

ಪ್ರಾಣಾಯಾಮಕ್ಕೆ ಪೂರಕ, ಕುಂಭಕ ಮತ್ತು ರೇಚಕಗಳೆಂದು ಮೂರು ಕ್ರಿಯೆಗಳಿವೆಯೆಂದು ಯಾಜ್ಞವಲ್ಕ್ಯ ಸ್ಮೃತಿ ಹೇಳುತ್ತದೆ. ವಾಯುವನ್ನು ಮೂಗಿನ ಮೂಲಕ ಒಳಗೆ ತೆಗೆದುಕೊಳ್ಳುವುದಕ್ಕೆ ಪೂರಕವೆಂದೂ ಹಾಗೆ ತೆಗೆದುಕೊಂಡ ವಾಯುವನ್ನು ಒಳಗೇ ತಡೆಹಿಡಿಯುವುದಕ್ಕೆ ಕುಂಭಕವೆಂತಲೂ ಅನಂತರ ಅದನ್ನು ಹೊರಗೆ ಬಿಡುವುದಕ್ಕೆ ರೇಚಕವೆಂತಲೂ ಕರೆಯುವರು.

ಮೇಲಿನ ಮೂರು ಕ್ರಿಯೆಗಳಲ್ಲಿ ಕುಂಭಕ ಸ್ಥಿತಿಯನ್ನು ಅಂದರೆ ಕುಂಭದಂತೆ ನಿಶ್ಚಲ ಸ್ಥಿತಿಯನ್ನು ಸಿದ್ಧಿಸಿಕೊಳ್ಳುವುದೆ ಯೋಗಾಭ್ಯಾಸಿಗಳ ಉದ್ದೇಶ. ಈ ಸ್ಥಿತಿಯಲ್ಲಿ ಶ್ವಾಸೋಚ್ಛ್ವಾಸವಿಲ್ಲದುದರಿಂದ ಶರೀರ ಮತ್ತು ಮನಸ್ಸು ನಿಶ್ಚಲವಾಗಿರುತ್ತವೆ. ವಾಯುಚಲನೆಯಿಂದ ಚಿತ್ತ ಚಲಿಸುತ್ತದೆ. ವಾಯು ನಿಶ್ಚಲವಾಗಿದ್ದರೆ ಚಿತ್ತವೂ ನಿಶ್ಚಲವಾಗಿರುತ್ತದೆ. ಉಚ್ಛ್ವಾಸ ಮಾಡಿದ ವಾಯುವನ್ನು ಶ್ವಾಸಕೋಶಗಳೊಳಗೆ ತಡೆದು ನಿಲ್ಲಿಸುವುದು ಒಂದು ಬಗೆಯ ಕುಂಭಕ. ಇದಕ್ಕೆ ಸಹಿತಕುಂಭಕವೆನ್ನುವರು. ಗಾಳಿಯನ್ನು ಹೊರಗೆ ರೇಚಿಸಿದ ಮೇಲೆ ಮತ್ತೆ ಒಳಗೆ ತೆಗೆದುಕೊಳ್ಳದೆ ಶ್ವಾಸಕೋಶಗಳನ್ನು ಒಂದು ವಿಧವಾದ ಶೂನ್ಯಸ್ಥಿತಿಯಲ್ಲಿಡುವುದು ಕೇವಲ ಕುಂಭಕವೆಂಬ ಎರಡನೆಯ ಬಗೆ. ಪ್ರಾಣಗತಿಯನ್ನು ರೋಧಮಾಡಿ ನಿಶ್ಚಲ ಸ್ಥಿತಿಯನ್ನು ಸಾಧಿಸಿಕೊಳ್ಳುವುದೇ ಯೋಗಿಗಳ ಗುರಿ.

ಕುಂಭಕದಲ್ಲಿ ಸೂರ್ಯಭೇದನ, ಉಜ್ಜಾಯೀ, ಸೀತ್ಕಾರೀ, ಸೀತಲೀ, ಭಸ್ತ್ರಿಕಾ, ಭ್ರಾಮರೀ, ಮೂರ್ಛಾ ಮತ್ತು ಪ್ಲಾವಿನೀ ಎಂಬುದಾಗಿ ಎಂಟು ಬಗೆಯಾಗಿರುತ್ತದೆಯೆಂದು ಹಠಯೋಗ ಪ್ರದೀಪಿಕೆಯಲ್ಲಿ ಹೇಳಿದೆ. ಆದ್ದರಿಂದ ಕುಂಭಕವೇ ಪ್ರಾಣಾಯಾಮದಲ್ಲಿ ಬಹು ಮುಖ್ಯವಾದ ಕ್ರಿಯೆ, ಸ್ಥಿತಿ. ಮೊದಮೊದಲು ಸಹಿತ ಕುಂಭಕವನ್ನು ಅಭ್ಯಾಸ ಮಾಡಿ ಕ್ರಮಕ್ರಮವಾಗಿ ಕೇವಲ ಕುಂಭಕವನ್ನು ಸಿದ್ಧಿಸಿಕೊಂಡ ಯೋಗಿಗೆ ರಾಜಯೋಗ

ಪದ ಲಭ್ಯವಾಗುತ್ತದೆ. ನಿತ್ಯತೃಪ್ತ ಸ್ಥಿತಿಯನ್ನು ಆರ್ಜಿಸಿಕೊಂಡ ಆ ಯೋಗಿಗೆ ಲೋಕದಲ್ಲಿ ದುರ್ಲಭವಾದುದಿರುವುದಿಲ್ಲ.

ಪೂರಕ, ಕುಂಭಕ ಮತ್ತು ರೇಚಕಗಳನ್ನು ಮಾಡುವ ಕ್ರಮ: ಈ ಮೂರು ಕ್ರಿಯೆಗಳೂ ಒಟ್ಟಿಗೆ ಸೇರಿ ಒಂದು ಪ್ರಾಣಾಯಾಮವಾಗುತ್ತದೆ. ಉದಾಹರಣೆಗೆ ನಾಲ್ಕು ಸೆಕೆಂಡುಗಳ ಕಾಲ ಶ್ವಾಸವನ್ನು ಒಳಗೆ ತೆಗೆದುಕೊಂಡು ಹದಿನಾರು ಸೆಕೆಂಡುಗಳು ಕುಂಭಕಮಾಡಿ ಆಮೇಲೆ ಎಂಟು ಸೆಕೆಂಡುಗಳ ಕಾಲ ನಿಧಾನವಾಗಿ ರೇಚಕ ಮಾಡಿದರೆ ಅಲ್ಲಿಗೆ ಒಂದು ಪ್ರಾಣಾಯಾಮ ಮಾಡಿದಂತಾಯಿತು. ಇದೇ ಅತಿ ಕಡಿಮೆ ಕಾಲ ತೆಗೆದುಕೊಳ್ಳುವುದು ಕನಿಷ್ಟಪ್ರಾಣಾಯಾಮ. ಈ ಕಾಲವನ್ನು ಎಂಟು, ಮೂವತ್ತೆರಡು ಮತ್ತು ಹದಿನಾರು ಸೆಕೆಂಡುಗಳಿಗೆ ಪರಿಮಿತಗೊಳಿಸಿದರೆ ಉತ್ತಮ ಪ್ರಾಣಾಯಾಮವಾಗುವುದು.

ಆದರೆ ಹೀಗೆ ಪ್ರಾಣಾಯಾಮ ಮಾಡಬೇಕಾದರೆ ಮೇಲೆ ಸೂಚಿಸಿರುವಂತೆ ಯೋಗಾಸನಗಳ ಸಿದ್ಧಿಯಾಗಿರಬೇಕು. ಶರೀರದ ಮಾಂಸಖಂಡಗಳ ಮತ್ತು ಶ್ವಾಸಕೋಶಗಳ ಸಂಕೋಚನ, ವಿಕಾಸನ ಕ್ರಿಯೆಗಳನ್ನು ಸಾಧಿಸಿಕೊಳ್ಳಬೇಕು. ಇದಕ್ಕೆ ಮೂಲಬಂಧ, ಜಾಲಂಧರ ಬಂಧ ಮತ್ತು ಉದ್ಯಾನ (ಉಡ್ಯಾಣ) ಬಂಧ ಎಂಬ ಕ್ರಿಯೆಗಳು ಅನಿವಾರ್ಯ ಮತ್ತು ಅವಶ್ಯಕವಾಗಿ ಮಾಡಲೇಬೇಕು. ಇಲ್ಲದಿದ್ದರೆ ಕುಂಭಕಾದಿಕ್ರಿಯೆಗಳಿಂದ ಆಗಬೇಕಾದ ಸತ್ಪರಿಣಾಮಗಳಿಗೆ ಬದಲಾಗಿ ದುಷ್ಪರಿಣಾಮಗಳಿಗೆ ಪಕ್ಕಾಗಬೇಕಾದೀತು. **(ನೋಡಿ– ಪ್ರಾಣಾಯಾಮ)** (ಸಿ.ಜೆ.ಪಿ.)

**ಕುಂಭಕರ್ಣ :** ರಾವಣನ ತಮ್ಮ, ವಿಭೀಷಣನ ಅಣ್ಣ, ವಿಶ್ರವಸ ಮತ್ತು ಕೈಕಸಿಯರ ಮಗ. ಬಲಿ ಚಕ್ರವರ್ತಿಯ ಮಗಳು ವೃತ್ರಜ್ವಾಲೆಯ ಪತಿ. ಕುಂಭ, ನಿಕುಂಭರು ಮಕ್ಕಳು, ಬೃಹದ್ಗಾತ್ರದ ಕಿವಿಗಳನ್ನು ಪಡೆದಿದ್ದರಿಂದ ಕುಂಭಕರ್ಣನೆಂದು ಕರೆಯಲಾಯಿತು. ಈತ ಹುಟ್ಟುವಾಗಲೇ ಭಯಂಕರ ರೂಪದಿಂದಿದ್ದು ಸಾವಿರಾರು ಮಂದಿಯನ್ನು ನುಂಗಿದ. ಇದನ್ನು ಕೇಳಿದ ಇಂದ್ರ ಐರಾವತವನ್ನೇರಿ ಬಂದು ವಜ್ರಾಯುಧದಿಂದ ಹೊಡೆದ. ಐರಾವತದ ಒಂದು ದಂತವನ್ನು ಮುರಿದುಕೊಂಡು ಯುದ್ಧ ಮಾಡುತ್ತಿದ್ದ ಕುಂಭಕರ್ಣನ ಸಾಹಸವನ್ನು ಕಂಡು ಇಂದ್ರ ಪಲಾಯನ ಮಾಡಿ ಬ್ರಹ್ಮನನ್ನು ಮೊರೆ ಹೊಕ್ಕ. ಬ್ರಹ್ಮ ಗಾಢನಿದ್ರೆಯಲ್ಲಿರುವಂತೆ ಕುಂಭಕರ್ಣನಿಗೆ ಶಾಪ ನೀಡಿದ. ಇದನ್ನು ತಿಳಿದ ಕುಂಭಕರ್ಣನ ತಂದೆ ಬ್ರಹ್ಮನ ಬಳಿಗೆ ಹೋಗಿ ಬೇಡಿದಾಗ ವರ್ಷದಲ್ಲಿ ಒಂದು ದಿನ ಎಚ್ಚರದಿಂದಿರಲೆಂದು ಅನುಗ್ರಹಿಸಿದ. ಅನಂತರ ಕುಂಭಕರ್ಣ ಗೋಕರ್ಣದಲ್ಲಿ ನಿರ್ದೇವತ್ವ ಪಡೆಯಲು ಬ್ರಹ್ಮನನ್ನು ಕುರಿತು ತಪವನ್ನಾಚರಿಸಿದ. ಇದರಿಂದ ಹೆದರಿದ ದೇವತೆಗಳಗೆ ಬ್ರಹ್ಮ ಅಭಯ ನೀಡಿ, ಅವನ ಬುದ್ಧಿಗೆ ಮರಳು ಹಿಡಿಸುವಂತೆ ಸರಸ್ವತಿಗೆ ಹೇಳಿದ. ಮರುಳುಗೊಂಡ ಕುಂಭಕರ್ಣ ನಿರ್ದೇವತ್ವದ ಬದಲಿಗೆ ನಿದ್ರೆಯನ್ನು ಬೇಡಿದ. ರಾವಣ ಕುಬೇರನನ್ನು ಗೆದ್ದು ಲಂಕಾನಗರವನ್ನು ಸ್ವಾಧೀನಪಡಿಸಿಕೊಳ್ಳುವವರೆಗೂ ಈತ ಶ್ಲೇಷ್ಮಾತಕವನದಲ್ಲಿ ವಾಸವಾಗಿದ್ದ. ರಾವಣ ಸೀತೆಯನ್ನು ಅಪಹರಿಸಿ ತಂದ ಬಳಿಕ, ಹನುಮಂತ ಲಂಕೆಯನ್ನು ಸುಟ್ಟಾಗ ಎಚ್ಚೆತ್ತ ಕುಂಭಕರ್ಣ ರಾವಣನ ನೀಚಕೃತ್ಯಕ್ಕೆ ಮರುಗಿ ಸೀತೆಯನ್ನು ರಾಮನಿಗೆ ಒಪ್ಪಿಸಿ ಶರಣು ಹೋಗೆಂದು ಬುದ್ಧಿ ಹೇಳಿದ. ಕುಂಭಕರ್ಣನ ಬುದ್ಧಿವಾದ ರಾವಣನಿಗೆ ರುಚಿಸಲಿಲ್ಲ. ರಾಮರಾವಣರ ಯುದ್ಧ ಪ್ರಾರಂಭವಾಯಿತು. ರಾವಣನ ಸೇನಾಪರಿವಾರವೆಲ್ಲವೂ ಹತವಾಯಿತು. ಕುಂಭಕರ್ಣನ ಇಬ್ಬರು ಮಕ್ಕಳೂ ಮಡಿದರು. ವಿಧಿಯಿಲ್ಲದೆ ಬಹು ಪ್ರಯಾಸದಿಂದ ಕುಂಭಕರ್ಣನನ್ನು ಎಚ್ಚರಗೊಳಿಸಲಾಯಿತು. ಎಚ್ಚರಗೊಂಡ ಕುಂಭಕರ್ಣ ಭಯಂಕರ ರೀತಿಯಲ್ಲಿ ಯುದ್ಧಮಾಡಿ ರಾಮನಿಂದ ಹತನಾದ. *

**ಕುಂಭಕಲಾತಂತ್ರ :** ವಿಜ್ಞಾನ ಮತ್ತು ಎಂಜಿನಿಯರಿಂಗಿನಿಂದ ಲಭಿಸಿದ ಫಲಿತಾಂಶಗಳನ್ನು ಪ್ರಯೋಗಿಸಿ ಅಲೋಹನಿರವಯವ ಮೃತ್ತಿಕೆಗಳಿಂದ ಉಪಯುಕ್ತ ಪದಾರ್ಥಗಳ ನಿರ್ಮಾಣ (ಸಿರ್‍ಯಾಮಿಕ್ ಟೆಕ್ನಾಲಜಿ). ಈ ತಂತ್ರ ಸಿಲಿಕೇಟ್ ಉದ್ಯಮದ ಅಂಗ. ಆ ಉದ್ಯಮದ ಪ್ರಧಾನ ಘಟಕಗಳನ್ನು ಮುಂದಿನ ಪುಟದ ಕೊನೆಯಲ್ಲಿ ಬರೆದಿರುವ ಯಾದಿ ತೋರಿಸುತ್ತದೆ.

ಕುಂಭಕಲಾ ಉದ್ಯಮದಲ್ಲಿ ತಯಾರಾಗುವ ವಸ್ತುಗಳನ್ನು ಅವಲಂಬಿಸಿ ಅವುಗಳಲ್ಲಿ ಏಳು ಮುಖ್ಯ ವಿಭಾಗಗಳಿವೆ:

1. ಕಿಡಿಬೆಣೆಗಳಿಗೆ ಉಪಯೋಗಿಸುವ ಕಾಚೀಕೃತ (ವಿಟ್ರಿಫೈಡ್) ಛಿದ್ರಿತ ಅಲ್ಯುಮಿನಿಯದ ಕವಚ. ಇದನ್ನು ಸಾಮಾನ್ಯವಾಗಿ 1600°–1700° ಸೆಂ. ಉಷ್ಣತೆಯಲ್ಲಿ ಸುಡುತ್ತಾರೆ. ಇದರ ದಗ್ಧವಿಚ್ಛೇದನ ಮಾಡ್ಯುಲಸ್ (ಫೈಅರ್ಡ್ ಮಾಡ್ಯುಲಸ್ ಆಫ್ ರಪ್ಚರ್) 30,000–40,000 ಪಿಎಸ್‌ಐ (ಚದರ ಇಂಚಿಗೆ ಪೌಂಡುಗಳು) ವರೆಗೆ ಇದೆ. ಇದನ್ನು ಸರಂಧ್ರತಾ ಪರೀಕ್ಷೆಗೆ (ಪೊರೋಸಿಟಿ ಟೆಸ್ಟ್) ಒಡ್ಡಿದಾಗ ಇದು 24 ಗಂಟೆಗಳ ಪರ್ಯಂತ ಆ ಆಲ್ಕೊಹಾಲಿಕ್ ಪುಕ್ಸಿನ್ ದ್ರಾವಣದಲ್ಲಿ ಬಿಎಸ್‌ಎಸ್ (ಬ್ರಿಟಿಷ್ ಸ್ಟಾಂಡರ್ಡ್ ಸ್ಪೆಸಿಫಿಕೇಷನ್) ಪ್ರಕಾರ ಸುಮಾರು 10,000 ಕೆಜಿಗಳ ಒತ್ತಡವನ್ನು ತಡೆದುಕೊಳ್ಳುವಂತಿರಬೇಕು.

2. ಇನ್ನೊಂದು ತರಹದ ಕುಂಭಕಲೆಯ ವಸ್ತುವನ್ನು ಕೈನೈಟಿನಿಂದ ತಯಾರಿಸುತ್ತಾರೆ. ಇದನ್ನು ಸಹ ಕಾಚೀಕರಿಸಿ ಕಿಡಿಬೆಣೆ ಮುಂತಾದವುಗಳ ನಿರ್ಮಾಣದಲ್ಲಿ ಬಳಸುವರು. ಮೇಲೆ ಹೇಳಿದ ಸರಂಧ್ರತಾ ಪರೀಕ್ಷೆಯನ್ನು ಈ ವಸ್ತು ಸಹ ತಡೆದುಕೊಳ್ಳಬೇಕಾಗುತ್ತದೆ. ಇದನ್ನು ಸುಡುವ ಉಷ್ಣತೆ ಸಾಧಾರಣವಾಗಿ 1500°–1600° ಸೆಂ.

3. ಶ್ವೇತ ಸಾಮಗ್ರಿ (ವೈಟ್ ವೇರ್): ಸುಟ್ಟ ಬಳಿಕ ವಸ್ತುಗಳ ಬಣ್ಣ ಸಾಮಾನ್ಯವಾಗಿ ಬಿಳಿ, ಉಚ್ಚ ಮತ್ತು ನಿಮ್ನ ಕರ್ಷಣ ಪಿಂಗಾಣಿ ವಿದ್ಯುನ್ನಿರೋಧಕಗಳು ಮೃದು (1300° ಸೆಂ.) ಮತ್ತು ಕಠಿಣ (1410° ಸೆಂ.). ಪಿಂಗಾಣಿ ಸಾಮಾನುಗಳು, ದಿನಬಳಕೆಯ ಪಿಂಗಾಣಿ ಜಾಡಿಗಳು, ಪಾಕೀಜು ಪಾತ್ರೆಗಳು, ಮೂಳೆ ಚೈನ ಮತ್ತು ದಂತಪಿಂಗಾಣಿ ಈ ವಿಭಾಗದವು. ಕಾಚೀಕೃತವಾದ ತರುವಾಯ ಮೃದು ಪಿಂಗಾಣಿ ವಸ್ತುಗಳನ್ನು ಸುಮಾರು 1300° ಸೆಂ. ಉಷ್ಣತೆಯಲ್ಲಿಯೂ ಕಠಿಣ ಪಿಂಗಾಣಿ ವಸ್ತುಗಳನ್ನು ಸುಮಾರು 1410° ಸೆಂ. ಉಷ್ಣತೆಯಲ್ಲೂ ಸುಡುತ್ತಾರೆ. ಪ್ರಯೋಗಮಂದಿರದಲ್ಲಿ ಉಪಯೋಗಿಸುವ ಕ್ರೂಸಿಬಲ್ಲುಗಳೇ ಮೊದಲಾದ ವಸ್ತುಗಳನ್ನು ಸುಡುವ ಉಷ್ಣತೆ $1410^0$ಸೆಂ. ಕಾಚೀಕೃತ ಮತ್ತು ಅರ್ಧಕಾಚೀಕೃತ ಪಾಕೀಜು ಪಾತ್ರೆಗಳನ್ನು 1250°–1350° ಸೆಂ. ಉಷ್ಣತೆಯಲ್ಲಿ ಸುಡುತ್ತಾರೆ. ದಂತ ಪಿಂಗಾಣಿಯೂ ಕಾಚೀಕೃತವೇ. ಅದನ್ನು ಸುಡುವ ಉಷ್ಣತೆ 1200°–1250° ಸೆಂ. ಉಚ್ಚ ಹಾಗೂ ನಿಮ್ನಕರ್ಷಣ ಪಿಂಗಾಣಿ ವಿದ್ಯುನ್ನಿರೋಧಕಗಳು ಈ ಮೊದಲೇ (1) ರಲ್ಲಿ ಹೇಳಿರುವ ಸರಂಧ್ರತಾ ಪರೀಕ್ಷೆಯಲ್ಲಿ ಸಹ ಉತ್ತೀರ್ಣವಾಗಬೇಕು.

4. ತಾಪಧಾರಕಗಳು (ರಿಫ್ರ್ಯಾಕ್ಟರೀಸ್): ಕುಲುಮೆಗಳಲ್ಲಿ ಇವುಗಳ ವಿಶೇಷ ಬಳಕೆಯುಂಟು. ಉಷ್ಣನಿರೋಧ (ಹೀಟ್ ಇನ್ಸುಲೇಷನ್) ಬೇಕಾದ ಎಲ್ಲ ಉದ್ಯಮಗಳಲ್ಲಿ ತಾಪಧಾರಕಗಳು ಅವಿಭಾಜ್ಯ ಅಂಗಗಳು. ಇವುಗಳ ಬಹುತೇಕ ತಾಪಧಾರಕಗಳು ಸರಂಧ್ರವಸ್ತುಗಳು. ಅವುಗಳ ದಗ್ಧ ಉಷ್ಣತೆಯ ವ್ಯಾಪ್ತಿ 1300°–1650° ಸೆಂ.

5. ಕಲ್ಲುಮಡಕೆ ಕುಡಿಕೆಗಳು (ಸ್ಟೋನ್‌ವೇರ್): ಕಾಚೀಕೃತ ಹಾಗೂ ಅರ್ಧ ಕಾಚೀಕೃತ ರಾಸಾಯನಿಕ ಜಾಡಿಗಳು ಮತ್ತು ಪಾಕೀಜು ವಸ್ತುಗಳು ಈ ವಿಭಾಗದವು. ಇವೆಲ್ಲವೂ ಸಾಮಾನ್ಯವಾಗಿ ಸರಂಧ್ರಗಳು. ಇವುಗಳ ಬಣ್ಣ ಬಿಳಿಯಲ್ಲ. ದಗ್ಧ ಉಷ್ಣತೆಯ ವ್ಯಾಪ್ತಿ 1200°–1300° ಸೆಂ.

6. ಪಾಕೀಜು ಪಾತ್ರೆಗಳು, ದಿನಬಳಕೆಯ ಪಿಂಗಾಣಿ ವಸ್ತುಗಳು ಮುಂತಾದ ಮೃದ್ವಸ್ತುಗಳು: ಇವು ಸರಂಧ್ರವಾಗಿವೆ. ಬಣ್ಣ ಬಿಳಿಯಲ್ಲ. ದಗ್ಧ ಉಷ್ಣತೆಯ ವ್ಯಾಪ್ತಿ 1200°–1250° ಸೆಂ.

7. ಟೆರಕೋಟ ಮತ್ತು ಮಜೋಲಿಕ ವಸ್ತುಗಳು: ದಿನಬಳಕೆಯ ಪಿಂಗಾಣಿ ಪಾತ್ರೆಗಳು, ಮೃತ್ಪ್ರತಿಮೆಗಳು, ಕಲಾವಸ್ತುಗಳು ಇವುಗಳಲ್ಲಿ ಸೇರಿವೆ. ಇವುಗಳ ಬಣ್ಣ ಸಾಮಾನ್ಯವಾಗಿ ಬಿಳಿಯಲ್ಲ. ಇವು ಕಾಚೀಕೃತವಾಗಿರಬಹುದು, ಅರ್ಧ ಕಾಚೀಕೃತವಾಗಿರಬಹುದು ಮತ್ತು ಸರಂಧ್ರವಾಗಿರಬಹುದು. ಕೆಲವು ವೇಳೆ ಈ ಸಾಮಗ್ರಿಗಳನ್ನು ಗಾಜಿನಂತೆ ಮಾಡಿ ಕೆಲವು ವೇಳೆ ನುಣುಪು ಮಾಡದೆ 600°–1000° ಸೆಂ. ಉಷ್ಣತೆಯಲ್ಲಿ ಸುಡುತ್ತಾರೆ.

ಮೇಲಿನ ವಿವರಣೆಯಿಂದ ಕುಂಭಕಲಾ ಉದ್ಯಮದಲ್ಲಿ ಕಾಚೀಕರಣ ಹಾಗೂ ದಗ್ಧ ಉಷ್ಣತಾಮಾನಗಳ ಪ್ರಾಧಾನ್ಯದ ಅರಿವಾಗುತ್ತದೆ.

**ಕಾಚೀಕರಣ:** ಒಂದು ಕುಂಭ ಕಲಾವಸ್ತುವನ್ನು ಉಷ್ಣಸಂಸ್ಕರಣೆಗೆ ಒಳಪಡಿಸಿ ಅದರ ಸರಂಧ್ರತೆಯನ್ನು ಕ್ರಮೇಣ ಕಡಿಮೆಮಾಡುವಿಕೆ (ವಿಟ್ರಿಫಿಕೇಶನ್). ಇದರ ಐದು ವಿವಿಧ ಮಟ್ಟಗಳನ್ನು ಮುಂದೆ ಬರೆದಿದೆ.

1 ಅಭೇದ್ಯ (ಇಂಪರ್ವಿಯಸ್): ಆಲ್ಕೊಹಾಲಿನಲ್ಲಿ ಕರಗಿಸಿದ ಶೇ.0.1 ಪುಕ್ಸಿನ್ ಬಣ್ಣದಲ್ಲಿ ಕುಂಭ ಕಲಾವಸ್ತುವನ್ನು 15 ಗಂಟೆಗಳ ಕಾಲ 4,000 ಪಿ.ಎಸ್.ಐ ಒತ್ತಡದಲ್ಲಿ ಶಿಷ್ಟಪರೀಕ್ಷೆಯಲ್ಲಿ ( ಎ.ಎಸ್.ಟಿ.ಎಂ.ಡಿ–116–44) ನೆನೆಹಾಕಿ ಅದರ ಹೀರಿಕೆ ಶೂನ್ಯವಾದಾಗ ಆ ವಸ್ತು ಅಭೇದ್ಯವೆನ್ನಿಸುತ್ತದೆ.

2. ಕಾಚೀಕೃತ (ವಿಟ್ರಿಯಸ್): ಶಿಷ್ಟ ಪರೀಕ್ಷೆಯಲ್ಲಿ (ಎ.ಎಸ್.ಟಿ.ಎಂ.ಸಿ0242–toT) ಶೇ.0.5 ಹೆಚ್ಚಿನ ಮಟ್ಟದವರೆಗೆ ನೀರನ್ನು ಹೀರಿಕೊಳ್ಳುವಿಕೆ.

3. ಉಪಕಾಚೀಕೃತ (ನಿಯರ್ ವಿಟ್ರಿಯಸ್): ಶಿಷ್ಟ ಪರೀಕ್ಷೆಯಲ್ಲಿ (ಎ.ಎಸ್.ಟಿ.ಎಂ.ಸಿ–242–50T) ಶೇ.0.5–3 ವರೆಗೆ ನೀರನ್ನು ಹೀರಿಕೊಳ್ಳುವಿಕೆ.

4. ಅರ್ಧಕಾಚೀಕೃತ (ಸೆಮಿ–ವಿಟ್ರಿಯಸ್): ಶಿಷ್ಟಪರೀಕ್ಷೆಯಲ್ಲಿ (ಎ.ಎಸ್.ಟಿ.ಎಂ.ಸಿ–242–50T) ಶೇ.3–10 ರ ವರೆಗೆ ನೀರನ್ನು ಹೀರಿಕೊಳ್ಳುವಿಕೆ.

5. ಅಕಾಚೀಕೃತ (ನಾನ್–ವಿಟ್ರಿಯಸ್): ಶಿಷ್ಟಪರೀಕ್ಷೆಯಲ್ಲಿ (ಎ.ಎಸ್.ಟಿ.ಎಂ.ಸಿ–242–50T) ಶೇ.10 ಹೆಚ್ಚಿನ ಬನಿ ಭಾಗ ನೀರನ್ನು ಹೀರಿಕೊಳ್ಳುವಿಕೆ.

ಹೆಚ್ಚಿನ ಕುಂಭಕಲಾವಸ್ತುಗಳನ್ನು ಸಾಮಾನ್ಯವಾಗಿ ಈ ಕೆಳಗೆ ಕಾಣಿಸುವ ವಿಧಾನದಲ್ಲಿ ತಯಾರಿಸುತ್ತಾರೆ. 1 ಒದ್ದೆ ವಿಧಾನ, 2 ಎರಕ ಹುಯ್ಯುವುದು (ಕ್ಯಾಸ್ಟಿಂಗ್) 3 ಒಣಒತ್ತಡ (ಡ್ರೈ ಪ್ರಸ್ಸಿಂಗ್) ವಿಧಾನ.

**1 ಒದ್ದೆ ವಿಧಾನ:** ಇದರಲ್ಲಿ ಅನುಸರಿಸುವ ಎರಡು ಕ್ರಮಗಳು ಹೀಗಿವೆ : (i) ಬಿಸಿಮಾಡಿದ ಮುದ್ದೆಯನ್ನು ಅಮುಕುವುದು (ಹಾಟ್ ಪ್ಲಾಸ್ಟಿಕ್ ಪ್ರೆಸಿಂಗ್). ಇದರಲ್ಲಿ ಗಾಳಿ ತೆಗೆದ ಮತ್ತು ಗಾಳಿಯನ್ನು ತೆಗೆಯದೆ ಇರುವ ಮುದ್ದೆಗಳನ್ನು ಉಚ್ಚಕರ್ಷಣ ವಿದ್ಯುನ್ನಿರೋಧ

ವಸ್ತುಗಳ ತಯಾರಿಕೆಗಾಗಿ ಉಪಯೋಗಿಸುತ್ತಾರೆ. ಗಾಳಿ ತೆಗೆದ ಮಣ್ಣು ಮುದ್ದೆಯನ್ನು ಉಪಯೋಗಿಸುವುದರಿಂದ ಆ ಕಾಯಗಳ ಛೇದ ವೋಲ್ಟೇಜ್ (ಪಂಕ್ಚರ್‌ವೋಲ್ಟೇಜ್) ಮತ್ತು ಯಾಂತ್ರಿಕ ಸಾಮರ್ಥ್ಯ ಹೆಚ್ಚುತ್ತವೆ ಎಂದು ಗೊತ್ತಾಗಿದೆ. ಈ ವಿಧಾನದಿಂದ ಉತ್ಪನ್ನ ಶೀಘ್ರವಾಗಿ ಆಗುವುದು. ಅಲ್ಲದೆ ಆ ಉತ್ಪನ್ನಗಳ ಗಾತ್ರಗಳು ಶೇ. ±3 ಪರಿಮಿತಿಗಳಲ್ಲಿ ತಿಳಿದುಬಂದರೆ ಅದನ್ನು ಇತರ ಮಣ್ಣುಗಳೊಡನೆ ಸೂಕ್ತವಾಗಿ ಬೆರೆಸಿ ಯುಕ್ತ ವಸ್ತುಗಳನ್ನು ತಯಾರಿಸಲು ಈ ಮಿಶ್ರಣವನ್ನು ಕಚ್ಚಾ ಸಾಮಗ್ರಿಯಾಗಿ ಬಳಸಬಹುದು.

ವಿದ್ಯುತ್ ವಿರೋಧಿ ವಸ್ತುಗಳಾಗಿ ಉಪಯೋಗ: ವಿದ್ಯುದ್ರೋಧಿ ವಸ್ತುಗಳಾಗಿ (ಇನ್ಸುಲೇಟರ್ಸ್) ಕುಂಭಕಲಾ ಸಾಮಗ್ರಿಗಳಿಗೆ ವಿಪುಲವಾದ ಉಪಯೋಗಗಳಿವೆ. ತಂತಿಗಳ

**ಸಿಲಿಕೇಟ್ ಉದ್ಯಮ**

| ಕುಂಭಕಲೆ | ಗಾಜು | | ಸಿಮೆಂಟ್ | ಗಾಜುಲೇಪನ |
|---|---|---|---|---|
| ತಾಪಧಾರಕಗಳು (ರಿಫ್ರ್ಯಕ್ಟರೀಸ್)<br><br>ಕೃತಕ ಕಾರ್ಬೊರಂಡಂ ತಾಪಧಾರಕಗಳು<br>ಮ್ಯಾಗ್ನಸೈಟ್ ತಾ.<br>ಕ್ರೋಮೈಟ್ ತಾ.<br>ಕಯನೈಟ್ ತಾ.<br>ಜಿರ್ಕಾನ್ ತಾ.<br>ಅಲ್ಯೂಮಿನ ತಾ.<br>ಜೇಡಿಮಣ್ಣು ತಾ.<br>ಸಿಲೊಸೆಲ್ ತಾ.<br>ಸಿಲ್ಲಿಮನೈಟ್ ತಾ.<br>ಸಿಲಿಕಾ ತಾ.ಪರಾವೈದ್ಯುತಗಳು<br>ತೋರಿಯಂ(ಹೈ ಫ್ರೀಕ್ವೆನ್ಸಿ ಡೈ ಎಲೆಕ್ಟ್ರಿಕ್ಸ್).<br>ಮತ್ತು ಸೆರಿಯಂ ತಾ. ಎಲೆಕ್ಟ್ರಕ್ಸ್).<br>ಡೋಲೋಮೈಟ್ ತಾ. | ಪಿಂಗಾಣಿ (ಪೋರ್ಸಲೈನ್)<br><br>ಉಚ್ಚ ಮತ್ತು ನಿಮ್ನ ಕರ್ಷಣದ ವಿದ್ಯುನ್ನಿರೋಧಕಗಳು,<br>ದಿನಬಳಕೆಯ ಪಿಂಗಾಣಿ ಸಾಮಾನುಗಳು<br>ಪಿಂಗಾಣಿಯ ಪಾಕೀಜು ಸಾಮಾನುಗಳು (ಸ್ಯಾನಿಟರಿ ವೇರ್),<br>ರಾಸಾಯನಿಕ ಪಿಂಗಾಣಿ,<br>ಉನ್ನತಾವೃತ್ತಿಯ ಪರಾವೈದ್ಯುತಗಳು (ಹೈ ಫ್ರೀಕ್ವೆನ್ಸಿಡೈ ಎಲೆಕ್ಟ್ರಿಕ್ಸ್) | ಕಲ್ಲುಮಡಕೆ ಸಾಮಾನುಗಳು (ಸ್ಟೋನ್‌ವೇರ್)<br>ಮಡಕೆ ಕುಡಿಕೆಗಳು,<br>ಆಮ್ಲ ಭರಣಿಗಳು<br>ಇತ್ಯಾದಿ. | ಮೃದ್ವಸ್ತುಗಳು (ಅರ್ದನ್‌ವೇರ್)<br>ಮಡಕೆ ಕುಡಿಕೆಗಳು,<br>ಗೋಡಿಬಿಲ್ಲೆಗಳು,<br>ಪಾಕೀಜು ಪಾತ್ರೆಗಳು<br>ಇತ್ಯಾದಿ. | ಟೆರಕೋಟ ಮತ್ತು ಮಜೋಲಿಕ ಮೃತ್ಪ್ರತಿಮೆಗಳು,<br>ಇತ್ಯಾದಿ. |

ಇರುತ್ತದೆ. ಉಚ್ಚಕರ್ಷಣ ವಿದ್ಯುನ್ನಿರೋಧಕಗಳಲ್ಲಿ ವಿಚ್ಛೇದನ ಮಾಡ್ಯುಲಸ್ (ಮಾಡ್ಯುಲಸ್ ಆಫ್ ರಪ್ಚರ್) 12,000 ಪಿ.ಎಸ್.ಐ. ಗಳಿಗಿಂತ ಹೆಚ್ಚಾಗಿರಬೇಕು ಮತ್ತು ಛೇದ ವೋಲ್ಟೇಜ್ ಒಂದು ದಶಲಕ್ಷಕ್ಕೆ 200 ಮತ್ತು 250 ವೋಲ್ಟುಗಳ ನಡುವೆ ಇರಬೇಕು (ii) ಎರಡನೆಯದು ಕುಂಬಾರ ಚಕ್ರ ಮತ್ತು ಗೂಟ (ಜಿಗರ್ ಅಂಡ್ ಜಾಲಿಂಗ್). ಇಲ್ಲಿ ಮುದ್ದೆಯನ್ನು ಗಾಳಿ ತೆಗೆದೋ ತೆಗೆಯದೆಯೋ ಉಪಯೋಗಿಸಬಹುದು. ಈ ವಿಧಾನ ತಯಾರು ಮಾಡುವವನ ಕರಕೌಶಲವನ್ನು ಅವಲಂಬಿಸಿದೆ.

2. ಎರಕ ಹುಯ್ಯುವ ವಿಧಾನ: ಇದರಲ್ಲಿ ದ್ರವರೂಪದಲ್ಲಿರುವ ಮೂಲ ವಸ್ತುವನ್ನು ಗಾಳಿ ತೆಗೆದೋ ತೆಗೆಯದೆಯೋ ಉಪಯೋಗಿಸಬಹುದು. ಇಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸಿನ ಎರಕದ ಅಚ್ಚು ಬೇಕಾಗುತ್ತದೆ. ಈ ವಿಧಾನದಲ್ಲಿ ಬೇರೆ ವಿಧಾನಗಳಲ್ಲಿ ರಚಿಸಲಾಗದ ಸಂಕೀರ್ಣ ಆಕೃತಿಗಳನ್ನು ರಚಿಸಬಹುದು. ಟೀ ಕೆಟಲುಗಳನ್ನು ಈ ವಿಧಾನದಿಂದ ನಿರ್ಮಿಸುತ್ತಾರೆ.

3. ಒಣಒತ್ತಡ ವಿಧಾನ: ಇದರಲ್ಲಿ ಉಕ್ಕು ಅಥವಾ ಮಿಶ್ರಲೋಹದ ಅಚ್ಚುಗಳನ್ನು ಉಪಯೋಗಿಸುತ್ತಾರೆ. ಅವುಗಳಲ್ಲಿ ದೂಳಿನಂತಿರುವ ಮೂಲದ್ರವ್ಯವನ್ನು ಹಾಕಿ ಒಂದು ಒತ್ತುಯಂತ್ರದ ಮೂಲಕ ಒತ್ತುತ್ತಾರೆ. ವಿದ್ಯುನ್ನಿರೋಧಕ ವಸ್ತುಗಳು, ಗೋಡೆಬಿಲ್ಲೆಗಳು ಮುಂತಾದವನ್ನು ಈ ವಿಧಾನದಿಂದ ತಯಾರಿಸಬಹುದು. ಮೂಲ ಸಾಮಗ್ರಿಗಳನ್ನು ಹೇಗೆ ತಯಾರಿಸಲಾಗುತ್ತದೆ ಎಂಬುದನ್ನು ಅವಲಂಬಿಸಿ ಮೂಲದ್ರವಗಳನ್ನು ಬೆರೆಸಲಾಗುತ್ತದೆ. ಹೀಗೆ ಮಾಡುವುದರಿಂದ ತಯಾರಿಕೆಯ ಕಾಲದಲ್ಲಿ ಸಾಮಗ್ರಿಗಳ ಅಪವ್ಯಯ ತಪ್ಪುತ್ತದೆ.

**ಜೇಡಿಮಣ್ಣಿನ ಪರೀಕ್ಷೆ:** ಕುಂಭಕಲಾವಸ್ತುಗಳನ್ನು ತಯಾರಿಸಲು ಬೇಕಾದ ಜೇಡಿಮಣ್ಣನ್ನು ಈ ಕೆಳಗಿನಂತೆ ಪರೀಕ್ಷಿಸುತ್ತಾರೆ: 1 ಜೇಡಿಮಣ್ಣಿನ ಬಣ್ಣ, 2 ಸ್ಪರ್ಶಕ್ಕೆ ಮೃದುತ್ವ, 3 ಪರಿಷ್ಕರಣ ಪರಿಶೀಲನೆ (ಸ್ವಲ್ಪ ಮಣ್ಣನ್ನು ಆಯ್ದು ಅದನ್ನು ತೊಳೆದು ಮಣ್ಣಿನ ಬಣ್ಣವನ್ನು ಪರಿಶೀಲಿಸಬಹುದು.)

ತೊಳೆದ ಜೇಡಿಮಣ್ಣನ್ನು ಎರಡು ಉಷ್ಣತೆಗಳಿಗೆ, ಎಂದರೆ 1250° ಸೆಂ. ಮತ್ತು 1450° ಸೆಂ. ಒಡ್ಡಲಾಗುವುದು. ಮಣ್ಣನ್ನು ಸುಟ್ಟ ತರುವಾಯ ಅದರ ಬಣ್ಣವನ್ನೂ ಸರಂಧ್ರತೆಯನ್ನೂ ಗಮನಿಸಲಾಗುತ್ತದೆ. ಇಂಥ ಪರಿಶೀಲನೆಯಿಂದ ಆ ಜೇಡಿಮಣ್ಣಿನಿಂದ ತಯಾರಿಸಬಹುದಾದ ಕುಂಭಕಲಾ ವಸ್ತುಗಳನ್ನು ಪೂರ್ವಭಾವಿಯಾಗಿ ನಿರ್ಧರಿಸಬಹುದು. ಒಂದು ವೇಳೆ, ಜೇಡಿಮಣ್ಣು ತೀರ ಕನಿಷ್ಠ ದರ್ಜೆಯದು ಎಂದು ಪರಿಶೀಲನೆಯಲ್ಲಿ ಮೂಲಕ ರವಾನಿಸಬೇಕಾದ ವಿದ್ಯುಚ್ಛಕ್ತಿಯ ವೋಲ್ಟೇಜು ಹಾಗೂ ಪರಿಸರದ ಹವಾ ಪರಿಸ್ಥಿತಿಗಳನ್ನು ಅವಲಂಬಿಸಿ ವಿದ್ಯುದ್ರೋಧವಸ್ತುಗಳ ರಚನೆಯಲ್ಲಿ ವ್ಯತ್ಯಾಸಗಳಾಗುತ್ತವೆ.



ಪಿನ್ ಮಾದರಿಯ ವಿದ್ಯುದ್ರೋಧಕ

ಮೂರು ವಿದ್ಯುದ್ರೋಧಕಗಳಿವೆ: (i) ಪಿನ್ ಮಾದರಿಯ ವಿದ್ಯುದ್ರೋಧಕ: (ii) ಕೊಂಡಿ (ಷ್ಯಾಕಲ್) ವಿದ್ಯುದ್ರೋಧಕ, (iii) ತೂಗು (ಸಸ್ಪೆನ್ಷನ್) ವಿದ್ಯುದ್ರೋಧಕ. ಇವನ್ನು ತಯಾರಿಸಲು ಸಾಮಾನ್ಯವಾಗಿ ಉಪಯೋಗಿಸುವ ದ್ರವ್ಯಗಳೆಂದರೆ ಪಿಂಗಾಣಿ ಮತ್ತು ಗಾಜು. ಪಿಂಗಾಣಿ ವಿದ್ಯುದ್ರೋಧಕಗಳ ಬಳಕೆಯೇ ಹೆಚ್ಚು. ವಾತಾವರಣದಿಂದ ಇವುಗಳ ಮೇಲೆ ಆಗುವ ಪ್ರಭಾವ ಬಲು ಕಡಿಮೆ ಇರುವುದೊಂದು ವಿಶೇಷ ಅನುಕೂಲ. ಒಂದು ವಿದ್ಯುದ್ರೋಧಕವನ್ನು ತಯಾರಿಸುವ ಮೊದಲು ಈ ಕೆಳಗಿನ ಅಂಶಗಳನ್ನು ಸಾಮಾನ್ಯವಾಗಿ ಪರಾಂಬರಿಸುತ್ತಾರೆ: (i) ಒಣಫ್ಲಾಷ್ ಓವರ್ ವೋಲ್ಟೇಜ್, (ii) ಒದ್ದೆ ಫ್ಲಾಷ್ ಓವರ್ ವೋಲ್ಟೇಜ್, (iii) ತಂತಿಯ ವೋಲ್ಟೇಜ್, (iv) ಸ್ರವಣದೂರ (ಲೀಕೇಜ್ ಡಿಸ್ಟೆನ್ಸ್). (v) ಹವಾಪರಿಸ್ಥಿತಿಗಳು. (vi) ವಿದ್ಯುದ್ಯಾಂತ್ರಿಕ ಸಾಮರ್ಥ್ಯ, (vii) ಆಘಾತಸಾಮರ್ಥ್ಯ (ಇಂಪ್ಯಾಕ್ಟ್ ಸ್ಟ್ರೆಂತ್).

ಉಚ್ಚಕರ್ಷಣ (ಹೈಟೆನ್ಷನ್) ಪಿಂಗಾಣಿಯ ಗುಣಗಳನ್ನು ಮುಂದಿನ ಯಾದಿಯಲ್ಲಿ ಬರೆದಿದೆ:

| | | |
|---|---|---|
| ಸಾಪೇಕ್ಷ ಸಾಂದ್ರತೆ | ... | 2.3–2.5 |
| ಮೆರುಗಿನದರ ಕರ್ಷಣ | ... | 300–500 ಕೆಜಿ/ಸೆಂಮೀ$^2$ |

| | | |
|---|---|---|
| ಮೆರುಗಿಲ್ಲದುದರ ಕರ್ಷಣ | ... | 240–320 ಕೆಜಿ/ಸೆಂಮೀ$^2$ |
| ಮೆರುಗಿನದರ ಸಂಪೀಡನ | ... | 4000–5500 ಕೆಜಿ/ಸೆಂಮೀ$^2$ |
| ಮೆರುಗಿಲ್ಲದುದರ ಸಂಪೀಡನ | ... | 4000–4500 ಕೆಜಿ/ಸೆಂಮೀ$^2$ |
| ಮೋ ಮಾನಕದಲ್ಲಿ ಗಡುಸುತನ | ... | 7–8 |
| ಆಮ್ಲನಿರೋಧ ಬಲ | ... | ಹೈಡ್ರೋಫ್ಲೋರಿಕ್ ಆಮ್ಲ ಒಂದರ ವಿನಾ ಮಿಕ್ಕ ಎಲ್ಲ ಆಮ್ಲಗಳನ್ನು ತಡೆದುಕೊಳ್ಳಬಲ್ಲುದು. |



ತೂಗು ವಿದ್ಯುದ್ರೋಧಕ

ಮೇಲಿನ ನಿರೂಪಣೆಯಿಂದ ಪಿಂಗಾಣಿಯ ಕರ್ಷಣದಲ್ಲಿ ನಿಮ್ನ ಮತ್ತು ಸಂಪೀಡನದಲ್ಲಿ ಉಚ್ಚ ಸಾಮರ್ಥ್ಯವಿದ್ದು ಎಂದು ತಿಳಿಯುತ್ತದೆ. ಪ್ಲಾಸ್ಟಿಕ್ ಸ್ಥಿತಿಯಿಂದ ದಗ್ಧಸ್ಥಿತಿಗೆ ಪಿಂಗಾಣಿ ರೂಪಾಂತರಿಸುವಾಗ ಅದು ಸರಿಸುಮಾರಾಗಿ ತನ್ನ ಗಾತ್ರದ ಶೇ. 18 ರಷ್ಟು ಕುಗ್ಗುತ್ತದೆ. ಇದಾದರೂ ಸಿದ್ಧ ವಸ್ತುವಿನ ಮೇಲೆ ಎಲ್ಲ ದಿಶೆಗಳಲ್ಲೂ ಸಮಪ್ರಮಾಣದಲ್ಲಿ ಆಗಿರುವುದೆಂದೇನೂ ಇಲ್ಲ. ಆದ್ದರಿಂದ ಪಿಂಗಾಣಿ ಪದಾರ್ಥಗಳ ಉದ್ದಗಳನ್ನು ಹೇಳುವಾಗ ಶೇ. ±3 ರಷ್ಟು ಗಾತ್ರ ವ್ಯತ್ಯಾಸಗಳಿಗೆ ಅನುಮಾಡಿಕೊಡಬೇಕಾಗುತ್ತದೆ. (ಎನ್.ವಿ.ಆರ್.ಎನ್.)

**ಕುಂಭಕೋಣಂ :** ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ, ಕಾವೇರಿ ನದಿಯ ದಂಡೆಯಲ್ಲಿ, ಚೆನ್ನೈನಿಂದ 315 ಕಿಮೀ ದೂರದಲ್ಲಿರುವ ಒಂದು ಪುರಾತನ ನಗರ. ಹಿಂದೆ ಇದು ಚೋಳರ ರಾಜಧಾನಿಯಾಗಿತ್ತು. ವಿಸ್ತೀರ್ಣ 12 ಚ.ಕಿಮೀ. ಜನಸಂಖ್ಯೆ 140021 (2001). ಇಲ್ಲಿ ಕುಂಭೇಶ್ವರ ದೇವಾಲಯವಿರುವುದರಿಂದ ಇದಕ್ಕೆ ಈ ಹೆಸರು

ಕುಂಭಕೋಣದ ಮೂರ್ತಿಶಿಲ್ಪಿಗಳು

ಬಂದಿರುವುದಾಗಿ ಹೇಳಲಾಗಿದೆ. ಕಾವೇರಿಯ ಎರಡು ಶಾಖೆಗಳ ಮಧ್ಯದಲ್ಲಿ ಪೂರ್ವ ಪಶ್ಚಿಮವಾಗಿ ಹರಡಿದೆ. 5 ಕಿಮೀ ಉದ್ದದ ತಗ್ಗು ಪ್ರದೇಶದಲ್ಲಿ ಉ. ಅ. 10° 58' ಮತ್ತು ಪೂ. ರೇ. 79° 25' ಮೇಲಿದೆ. ಇದರ ಪುರಾತನ ಐತಿಹಾಸಿಕ ದಾಖಲೆಗಳು ಅಪೂರ್ಣವಾಗಿವೆ. ಆದಿಶಂಕರರಿಂದ ಸ್ಥಾಪಿತವಾದುದೆಂದು ಹೇಳಲಾದ ಕಾಶೀಮಠ ಇಲ್ಲಿದೆ. ಇಲ್ಲಿ 12 ಶಿವದೇವಸ್ಥಾನಗಳೂ 4 ವಿಷ್ಣುದೇವಸ್ಥಾನಗಳೂ ದಕ್ಷಿಣ ಭಾರತದಲ್ಲೆ ಏಕೈಕವಾದ ಒಂದು ಬ್ರಹ್ಮದೇವ ಸ್ಥಾನವೂ ಇದೆ. ಇಲ್ಲಿಯ ದೇವಾಲಯಗಳಲ್ಲಿ ಪ್ರಮುಖವಾದ್ದು ವಿಜಯನಗರ ಕಾಲದಲ್ಲಿ ನಿರ್ಮಿಸಲಾದ, 44.5 ಮೀ ಎತ್ತರದ ಸುಂದರ ಗೋಪುರವಿರುವ ಸಾರಂಗಪಾಣಿ ಸ್ವಾಮಿ (ವಿಷ್ಣು) ದೇವಸ್ಥಾನ. ಕುಂಭೇಶ್ವರ ದೇವಸ್ಥಾನದ (ಶಿವ) ಮೂರ್ತಿಗಳಿಗಾಗಿ ನಿರ್ಮಿಸಲಾಗಿರುವ ಬೆಳ್ಳಿಯ ವಾಹನಗಳು ಸೌಂದರ್ಯ ಹಾಗೂ ವೈವಿಧ್ಯಕ್ಕೆ ಹೆಸರಾಗಿವೆ. ಇಲ್ಲಿಯ ಚೋಳರ ಕಾಲದ ನಾಗೇಶ್ವರ ದೇವಾಲಯದಲ್ಲಿ ವರ್ಷದ ಕೆಲವು ದಿನಗಳಲ್ಲಿ ಲಿಂಗದ ಮೇಲೆ ಸೂರ್ಯನ ಕಿರಣಗಳು ಬೀಳುವುದರಿಂದ, ಇಲ್ಲಿ ಸೂರ್ಯನಿಗೂ ಒಂದು ದೇವಾಲಯವನ್ನು ನಿರ್ಮಿಸಲಾಗಿದೆ. ಚಕ್ರಪಾಣಿಯ ದೇವಾಲಯದಲ್ಲಿ ಚಿತ್ರರೂಪದಲ್ಲಿ ವಿಷ್ಣುವನ್ನು ರೂಪಿಸಲಾಗಿದೆ. ಸುತ್ತಲೂ ದೇವಸ್ಥಾನಗಳನ್ನುಳ್ಳ ಪವಿತ್ರವಾದ ಮಹಾಮಘಮ್ ಕೆರೆ ಸುಮಾರು 20 ಎಕರೆಗಳಷ್ಟು ವಿಸ್ತಾರವಾದ್ದು. ಇದರ ನಾಲ್ಕು ಮೂಲೆಗಳಲ್ಲೂ ಸುಂದರವಾದ ಮಂಟಪಗಳಿವೆ. ಇಲ್ಲಿ ಪ್ರತಿವರ್ಷ ಫೆಬ್ರುವರಿಯಲ್ಲಿ ನಡೆಯುವುದಾದರೂ 12 ವರ್ಷಗಳಿಗೊಮ್ಮೆ ನಡೆಯುವ ಮಹಾಮಘಮ್ ಉತ್ಸವ ಬಹು ಪ್ರಸಿದ್ಧವಾದ್ದು. ಆಗ ಸು. 5 ಲಕ್ಷ ಜನ ಯಾತ್ರಾರ್ಥಿಗಳು ಇಲ್ಲಿಗೆ ಬರುತ್ತಾರೆ.

ಕುಂಭಕೋಣ ಪ್ರಮುಖ ಕೈಗಾರಿಕಾ ಕೇಂದ್ರವೂ ಹೌದು. ಇಲ್ಲಿ ರೇಷ್ಮೆಸೀರೆ, ಹತ್ತಿಬಟ್ಟೆ, ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳು, ಗಂಟೆ ಮುಂತಾದವುಗಳ ತಯಾರಿಕೆಯಾಗುತ್ತದೆ. ಅಕ್ಕಿ ಗಿರಣಿ, ತೆಂಗಿನ ಎಣ್ಣೆಯ ತಯಾರಿಕೆ ಇವು ಇಲ್ಲಿಯ ಎರಡು ದೊಡ್ಡ ಕೈಗಾರಿಕೆಗಳು. ಬತ್ತ, ತೆಂಗು, ವೀಳೆಯದೆಲೆ ಮತ್ತು ಬಾಳೆ ಹಣ್ಣು ಇಲ್ಲಿಯ ಮುಖ್ಯ ಕೃಷಿ ಉತ್ಪನ್ನಗಳು. ಸರ್ಕಾರಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಶಾಲೆಗಳೂ ಇತರ ಹಲವಾರು ಶಾಲೆಗಳೂ ಇವೆ. ಇದು ರೈಲ್ವೆ ಮತ್ತು ರಸ್ತೆಗಳ ಸಂಧಿಸ್ಥಳ. (ಯು.ಜಿ.ಎಂ.ಜಿ.ಎಚ್.)

**ಕುಂಭಮೇಳ :** ಹಿಂದೂ ಧಾರ್ಮಿಕ ಸಂಪ್ರದಾಯಕ್ಕೆ ಸೇರಿದ ಅತಿ ದೊಡ್ಡ ಮೇಳ. ಉತ್ತರ ಭಾರತದ ಪ್ರಯಾಗ ಮತ್ತು ಹರದ್ವಾರಗಳಲ್ಲಿ ನಡೆಯುವ ಈ ಮೇಳದಲ್ಲಿ ಹೆಚ್ಚಾಗಿ ಸಂನ್ಯಾಸಿಗಳು ಭಾಗವಹಿಸುವರು. ಭಾರತದ ಎಲ್ಲ ಕಡೆಗಳಿಂದಲೂ ಲಕ್ಷಾಂತರ ಯಾತ್ರಿಕರು ಇಲ್ಲಿಗೆ ಬರುತ್ತಾರೆ. ಗಂಗಾ, ಯಮುನಾ ಮತ್ತು ಸರಸ್ವತೀ ನದಿಗಳು ಸೇರುವ ತ್ರಿವೇಣಿ ಸಂಗಮವಾದ ಪ್ರಯಾಗವೇ ಕುಂಭಮೇಳದ ಕೇಂದ್ರ. ಇಲ್ಲಿ ಎರಡು ಬಗೆಯ ಮೇಳಗಳು ನಡೆಯುತ್ತವೆ. ವರ್ಷಂಪ್ರತಿ ನಡೆಯುವ ಮೇಳಕ್ಕೆ ಮಾಘ್ ಮೇಳವೆನ್ನುತ್ತಾರೆ. ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಮೇಳಕ್ಕೆ ಕುಂಭಮೇಳವೆನ್ನುತ್ತಾರೆ. ಸೂರ್ಯ ಮೇಷ, ಗುರು ಮತ್ತು ಕುಂಭ ರಾಶಿಗಳನ್ನು ಪ್ರವೇಶಿಸಿದ ಅಪೂರ್ವ ಸಮಯದಲ್ಲಿ ಈ ಮೇಳ ನಡೆಯುತ್ತದೆ.

ಬಿತ್ತನೆ ಕಾಲದಲ್ಲಿ ಒಳ್ಳೆಯ ಫಸಲು ಪಡೆಯಲು ಒಂದು ಫಲೋತ್ಪಾದಕ ಹಬ್ಬವನ್ನಾಗಿ ಇದನ್ನು ಉತ್ತರಭಾರತದಲ್ಲಿ ಆಚರಿಸುತ್ತಿದ್ದರೆಂದು ಕಾಣಬರುತ್ತದೆ. ಸಾಮಾನ್ಯವಾಗಿ ಈ ಹಬ್ಬಗಳು ನದೀ ತೀರದಲ್ಲಿ ನಡೆಯುತ್ತಿದ್ದುವು. ಸೂರ್ಯ ಕುಂಭರಾಶಿಯನ್ನು ಪ್ರವೇಶಿಸುವ ಪ್ರಶಸ್ತ ಕಾಲದಲ್ಲಿ ಮಡಕೆಯ ತುಂಬ ಬಿತ್ತನೆ ಧಾನ್ಯಗಳನ್ನು ತುಂಬಿಕೊಂಡು ಬಂದ ಜನ ನದೀತೀರದಲ್ಲಿ ಕಲೆತು, ನೀರಿನಲ್ಲಿ ಅವನ್ನು ಅದ್ದಿ ಊರಿಗೆ ತೆಗೆದುಕೊಂಡು ಹೋಗಿ ಅವುಗಳಲ್ಲಿನ ಬೀಜಗಳನ್ನು ಇತರ ಬೀಜಗಳೊಂದಿಗೆ ಬೆರೆಸಿ ಮಾಡುತ್ತಿದ್ದರು. ಈ ರೀತಿ ಮಾಡಿದರೆ ಅತಿ ಹೆಚ್ಚಿನ ಬೆಳೆ ಪಡೆಯಬಹುದೆಂಬ ಬಯಕೆಯೂ ಇಂಥ ಹಬ್ಬಗಳನ್ನು ಆಚರಿಸಲು ಹಿನ್ನಲೆಯಾಗಿರಬೇಕು. (ಜಿ.ಎಚ್.)

ದೇವತೆಗಳು ಮತ್ತು ರಾಕ್ಷಸರು ಕ್ಷೀರಸಮುದ್ರವನ್ನು ಕಡೆದಾಗ ಬಂದಂಥ ಅಮೃತದ ಕುಂಭವನ್ನು ರಾಕ್ಷಸರು ಕದ್ದು ಓಡುತ್ತಿರುವಾಗ ದೇವಾಸುರರಲ್ಲಿ ಯುದ್ಧ ನಡೆಯಿತು. ಆ ಸಮಯದಲ್ಲಿ ರಾಕ್ಷಸರು ನಾಲ್ಕು ಸ್ಥಳಗಳಲ್ಲಿ ಆ ಕುಂಭವನ್ನು ಇಟ್ಟರೆಂದು ಒಂದು ಹೇಳಿಕೆಯೂ ನಾಲ್ಕು ಕಡೆ ಅಮೃತವನ್ನು ಚೆಲ್ಲಿದರೆಂದು ಇನ್ನೊಂದು ಹೇಳಿಕೆಯೂ ಪುರಾಣಗಳಲ್ಲಿದೆ.

ಈ ಮೇಳಗಳ ಪ್ರಾಚೀನತೆ ಬುದ್ಧನ ಕಾಲಕ್ಕೆ ಹೋಗುವುದಾದರೂ ಏಳನೆಯ ಶತಮಾನಕ್ಕೆ ಹಿಂದಿನಿಂದಲೂ ಈ ಮೇಳಗಳು ನಡೆದು ಬರುತ್ತಿರುವುದಕ್ಕೆ ಸಾಕಷ್ಟು ಆಧಾರಗಳಿವೆ. ಚಕ್ರವರ್ತಿ ಶ್ರೀಹರ್ಷ ಚೀನದ ಯಾತ್ರಿಕ ಯುವಾನ್‌ಚಾಂಗ್ ಅಲಹಾಬಾದಿನಲ್ಲಿ ನಡೆದ ಮೇಳಕ್ಕೆ ಬರಮಾಡಿಕೊಂಡು ಆತನ ಸಮ್ಮುಖದಲ್ಲಿ ಎಲ್ಲ ಧರ್ಮದ ಸಂನ್ಯಾಸಿಗಳಿಗೂ ದೀನದಲಿತರಿಗೂ ಯಥೇಚ್ಛವಾಗಿ ದಾನಧರ್ಮ ಮಾಡಿದನೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಅದ್ವೈತದ ಅಧ್ವರ್ಯುಗಳಾದ ಶಂಕರಾಚಾರ್ಯರಿಗೂ ಈ ಮೇಳಕ್ಕೂ ನಿಕಟ ಸಂಬಂಧವಿದೆ ಎನ್ನಲಾಗಿದೆ. ಆಚಾರ್ಯರು ತಮ್ಮ ದಿಗ್ವಿಜಯ ಯಾತ್ರೆಯ ಕಾಲದಲ್ಲಿ ತ್ರಿವೇಣಿ ಸಂಗಮಕ್ಕೆ ಬಂದು ಅಲ್ಲಿನ ಸಂನ್ಯಾಸಿಗಳಲ್ಲಿ ದಶನಾಮೀ ಸಂಪ್ರದಾಯ ಏರ್ಪಡಿಸಿ ಕುಂಭಮೇಳವನ್ನು ವ್ಯವಸ್ಥೆ ಮಾಡಿದರಂತೆ. ಲೋಕಹಿತಕ್ಕಾಗಿ ಶ್ರಮಿಸುವುದು ಈ ದಶನಾಮೀ ಸಂಪ್ರದಾಯದವರ ಗುರಿ. ಈ ಸಂನ್ಯಾಸಿಗಳು ತಮ್ಮ ಇಷ್ಟ ಸಿದ್ಧಿಗಾಗಿ ತಮ್ಮ ಹೆಸರಿನ ಮುಂದೆ ತೀರ್ಥ, ಆಶ್ರಮ, ವನ, ಅರಣ್ಯ, ಗಿರಿ, ಪರ್ವತ, ಸಾಗರ, ಸರಸ್ವತೀ, ಭಾರತೀ, ಪುರೀ ಎಂಬ ಪದಗಳನ್ನು ಸೇರಿಸಿಕೊಳ್ಳುತ್ತಾರೆ. ಕುಂಭಮೇಳಗಳಲ್ಲಿ ಇವರುಗಳ ಪಾತ್ರ ವಿಶಿಷ್ಟವಾದುದು.

ಕುಂಭಮೇಳಗಳು ಧಾರ್ಮಿಕ ದೃಷ್ಟಿಯಿಂದ ಎಷ್ಟು ಪ್ರಖ್ಯಾತವಾಗಿವೆಯೋ ಅಪಖ್ಯಾತಿಗೂ ಅಷ್ಟೇ ಹೆಸರಾಗಿವೆ. ಕೊಲೆ, ಸುಲಿಗೆ, ಮಾನಭಂಗ, ಅಪಹರಣ ಮುಂತಾದುವುಗಳಿಗೆ ಈ ಮೇಳಗಳು ಪ್ರಸಿದ್ಧಿ ಪಡೆದಿವೆ. ಲಕ್ಷಾಂತರ ಜನ ಇಲ್ಲಿ ಸೇರುವುದರಿಂದ ಪ್ಲೇಗು, ಕಾಲರ ಮುಂತಾದ ಅಂಟುಜಾಡ್ಯಗಳು ಸುಲಭವಾಗಿ ಹರಡುತ್ತವೆ. 1760ರಲ್ಲಿ

ಹರಿದ್ವಾರದಲ್ಲಿ ನಡೆದ ಕುಂಭಮೇಳದಲ್ಲಿ ಗೋಸಾಯಿಗಳು ಮತ್ತು ಬೈರಾಗಿಗಳಿಗೆ ಯುದ್ಧವಾಗಿ 18,000ಜನ ಸತ್ತರು. ಅದೇ ಸ್ಥಳದಲ್ಲಿ 1795ರಲ್ಲಿ ಸಿಖ್ ಯಾತ್ರಿಕರು 5,000 ಗೋಸಾಯಿಗಳನ್ನು ಕೊಂದರು.

ಈ ಮೇಳದ ಒಂದು ಅಂಗವಾಗಿ ಹಿಂದೂಪಂಥದ ಎಲ್ಲ ವರ್ಗದ ಬೈರಾಗಿಗಳೂ ಸಂನ್ಯಾಸಿಗಳೂ ಸೇರಿ ಹಿಂದೂಧರ್ಮದ ಸಮ್ಮೇಳನ ನಡೆಸುವರು. ಇಲ್ಲಿ ಆಧ್ಯಾತ್ಮಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಮಂಥನ ನಡೆಯುವುದು. ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ದಿಗಂಬರ ಸಾಧುಗಳ ಮೆರವಣಿಗೆ, ಭಕ್ತಾದಿಗಳ ಕೈಂಕರ್ಯ–ಇವು ಅದ್ದೂರಿಯಾಗಿ ನಡೆಯುತ್ತವೆ. *

**ಕುಂಭರಾಶಿ :** ರಾಶಿಚಕ್ರದ ಮೇಲಿನ ಹನ್ನೆರಡು ರಾಶಿಗಳಲ್ಲಿ ಹನ್ನೊಂದನೆಯದು (ಅಕ್ವೇರಿಯಸ್). ಮೊದಲನೆಯದು ಮೇಷರಾಶಿ. ಇದರ ವ್ಯಾಪ್ತಿ ವಿಷುವದಂಶ 20 ಗಂ. 35 ಮಿ.–20 ಗಂ. 55 ಮಿ. ಘಂಟಾವೃತ್ತಾಂತ 3°ಉ–25° ದ. ಇದು ದಕ್ಷಿಣಾಕಾಶದ ಒಂದು ನಕ್ಷತ್ರಪುಂಜ. ರಾಶಿಚಕ್ರದ ಮೇಲಿರುವುದರಿಂದ ಮಾತ್ರ ಇದಕ್ಕೆ ಪ್ರಾಧಾನ್ಯ ಬಂದಿದೆ. ಮಂದ ಪ್ರಕಾಶದ ನಕ್ಷತ್ರಗಳು ಇದನ್ನು ರಚಿಸುವುದರಿಂದ ಈ ರಾಶಿಯನ್ನು ಖಚಿತವಾಗಿ ಗುರುತಿಸುವುದು ಕಷ್ಟ. *

**ಕುಂಭೀಪಾಕ :** ಶಾಸ್ತ್ರೋಕ್ತವಾದ ಇಪ್ಪತ್ತೊಂದು ನರಕಗಳಲ್ಲಿದು ಹತ್ತೊಂಬತ್ತನೆಯದು. ಮನುವಿನ ಪ್ರಕಾರ ಇದಕ್ಕೆ ಸಂಪ್ರತಾಪನವೆಂದು ಹೆಸರು.

ತಾವು ಮಾಡಿದ ಪಾಪ ನಿವಾರಣೆಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳದವರೂ ಪಶ್ಚಾತ್ತಾಪ ಪಡದವರೂ ದುಸ್ಸಹ ಭಯಂಕರ ನರಕಗಳನ್ನು ಹೊಂದುತ್ತಾರೆಂದು ಯಾಜ್ಞವಲ್ಕ್ಯನ ಅಭಿಪ್ರಾಯ.

ಬ್ರಾಹ್ಮಣವಧೆ, ಮದ್ಯಪಾನ, ಕಳ್ಳತನ, ಗುರುಧಾಪತ್ನಿಸಂಗ–ಇವೇ ಮೊದಲಾದ ಮಹಾಪಾತಕಗಳನ್ನು ಮಾಡಿದವರು ಕುಂಭೀಪಾಕ ನರಕಭಾಜನರಾಗುತ್ತಾರೆ. ಪಾತಕಿಯನ್ನು ಮರಣಾನಂತರ ಸೆಳೆದೊಯ್ದು, ಆವಿಗೆಯಲ್ಲಿ ಕುಂಬಾರ ಮಡಕೆಯನ್ನು ಬೇಯಿಸುವಂತೆ, ಕಾಯ್ದ ಎಣ್ಣೆಯ ಗಡಿಗೆಯಲ್ಲಿ ಹಾಕಿ ಬೇಯಿಸುವುದೇ ಇಲ್ಲಿನ ಶಿಕ್ಷೆಯ ಕ್ರಮ.

ಭಾಗವತದ ಪ್ರಕಾರ ಪಶುಪಕ್ಷಿಗಳ ಪ್ರಾಣಾಪಹರಣ ಮಾಡಿದವರಿಗೂ ಇದೇ ಶಿಕ್ಷೆಯಾಗುತ್ತದೆಂದಿದೆ.

ಪದ್ಮಪುರಾಣದ ಪ್ರಕಾರ ವಾಚಾದತ್ತ, ಮನೋದತ್ತ, ಕುಶೋದಕ ಪೂರ್ವಕ ದತ್ತವಾದುದನ್ನು ಕೊಡದಿದ್ದಲ್ಲಿ ದಾನಮಾಡಿದವನ ನಾಲಗೆಯನ್ನು ಕಿತ್ತು ಕುಂಭೀಪಾಕ ನರಕದ ಶಿಕ್ಷೆಯನ್ನು ಕೊಡಲಾಗುತ್ತದೆ ಎಂದಿದೆ. (ಎಸ್.ಎನ್.ಕೆ.)

**ಕುಂವರಸಿಂಹ, ಬಾಬೂ :** ಸು. 1777–1858. ಭಾರತದ 1857ರ ಸಂಗ್ರಾಮದ ವೀರ. ಬಿಹಾರದ ಜಗದೀಶಪುರ ಗ್ರಾಮದಲ್ಲಿ ಜನ್ಮವೆತ್ತಿದ. ಉತ್ತಮ ರಜಪೂತನಾದ ಈತನಿಗೆ ಬಾಲ್ಯದಲ್ಲಿಯೇ ಶಸ್ತ್ರಾಭ್ಯಾಸವಾಯಿತು. ಪಾರ್ಸಿ, ಹಿಂದಿ ಮತ್ತು ಸಂಸ್ಕೃತಗಳ ಸಾಮಾನ್ಯ ಶಿಕ್ಷಣ ಈತನಿಗೆ ದೊರಕಿತ್ತು.

ಕುಂವರಸಿಂಹನ ತಂದೆ ಬಾಬೂ ಸಾಹಬಜಾದಾಸಿಂಹ ಜಗದೀಶಪುರದ ಅಧಿಪತಿಯಾಗಿದ್ದ. ಷಹಜಹಾನನ ಕಾಲದಲ್ಲಿ ಈ ಮನೆತನಕ್ಕೆ ರಾಜಾ ಎಂಬ ಉಪಾಧಿ ದೊರಕಿತ್ತು. ಅಂದಿನಿಂದ ಈತ ಜಗದೀಶಪುರದ ರಾಜನಾದ. ಬಿಹಾರದ ಆರಾ ಜಿಲ್ಲೆಯ ಜಗದೀಶಪುರ, ಪೀರೋಪರಗಣೆ, ನೋನಾರ, ಆರಾ ಮತ್ತು ಬಾಹರ್‌ಗಾಂವ್ ಮೊದಲಾದ ಪ್ರದೇಶಗಳು ಈ ರಾಜ್ಯಕ್ಕೆ ಸೇರಿದ್ದುವು. ತಂದೆಯ ಮರಣದ ತರುವಾಯ (1830) ಕುಂವರಸಿಂಹ ಜಗದೀಶಪುರದ ಸಿಂಹಾಸನವನ್ನೇರಿದ. 1857ರ ಸಮರದ ಜ್ವಾಲೆ ರಾಷ್ಟ್ರವನ್ನೆಲ್ಲ ವ್ಯಾಪಿಸಿದಾಗ ಈತ ಸುಮಾರು 80 ವರ್ಷದ ಮುದುಕ. ಬಂಡಾಯದ ಸಮಯದಲ್ಲಿ ಪಾಟ್ನದ ಕಮಿಷನರ್ ಟೇಲರ್ ಕರೆದ ಎರಡು ಸಭೆಗಳಿಗೂ ಕುಂವರಸಿಂಹ ಹೋಗಲಿಲ್ಲವಾಗಿ, ಬ್ರಿಟಿಷರು ಇವನನ್ನು ವಿದ್ರೋಹಿಯೆಂದು ನಿರ್ಣಯಿಸಿದರು. ಕುಂವರಸಿಂಹ ಬಂಡಾಯ ಗುಂಪಿಗೆ ಸೇರಿದ. ಅಲ್ಲಿಂದ ಮುಂದೆ ಒಂದು ವರ್ಷಕಾಲ ಸತತವಾಗಿ ಬ್ರಿಟಿಷರ ಸೈನ್ಯಕ್ಕೆ ಕಂಟಕಪ್ರಾಯವಾಗಿ ಕಿರುಕುಳ ಕೊಡುತ್ತಿದ್ದ. ಬ್ರಿಟಿಷ್ ಸೇನೆ ಅನೇಕ ಬಾರಿ ಇವನನ್ನು ಎದುರಿಸಿ ಸೋಲುಗಳನ್ನು ಅನುಭವಿಸಿತು.

ಕುಂವರಸಿಂಹ ಕಾನ್‌ಪುರದಲ್ಲಿ ತಾಂತಿಯಾಟೋಪೀ, ನಾನಾಸಾಹೇಬ ಮತ್ತು ಝಾನ್ಸಿ ಲಕ್ಷ್ಮೀಬಾಯಿಯರೊಂದಿಗೆ ಸೇರಿ, ಕ್ರಾಂತಿಯ ಯೋಜನೆ ತಯಾರಿಸಿದ. ಇದರಿಂದ ಕ್ರುದ್ಧರಾದ ಇಂಗ್ಲಿಷರು ಮೇಜರ್ ಆಯರನ ನೇತೃತ್ವದಲ್ಲಿ ದೊಡ್ಡ ಸೈನ್ಯವನ್ನು ಕಳಿಸಿದರು. ಬೀಬೀಗಂಜ್ ಬಳಿ ನಡೆದ ಘೋರ ಸಂಗ್ರಾಮದಲ್ಲಿ ಕುಂವರಸಿಂಹ ಪರಾಜಿತನಾಗಿ ಜಗದೀಶ್‌ಪುರವನ್ನು ಸೇರಿದ. ಇಂಗ್ಲಿಷರ ಸೇನೆ ಜಗದೀಶ್‌ಪುರವನ್ನೂ ಮುತ್ತಿತು. ಕುಂವರಸಿಂಹ ಅಲ್ಲಿಂದಲೂ ಪಲಾಯನ ಮಾಡಿದ. ಆದರೆ ಈತ ಎದೆಗುಂದಲಿಲ್ಲ. 1858ರ ಮಾರ್ಚಿ 18ರಂದು ಸುತ್ತಲಿನ ಕ್ರಾಂತಿಕಾರಿ ವೀರರನ್ನು ಸೇರಿಸಿಕೊಂಡು ಅಜಮಗಢದ ಹತ್ತಿರ ಅತರೌಲಿಯಾದಲ್ಲಿ ತಳ ಊರಿದ. ಇದನ್ನರಿತ ಇಂಗ್ಲಿಷರು ದೊಡ್ಡ ಸೈನ್ಯವನ್ನು ಕಳಿಸಿದರು. ಕುಂವರಸಿಂಹನಿಗೇ ಜಯವಾಯಿತು.

ಈ ವಿಜಯ ದೊರೆತ ಮೇಲೆ ಲಖನೌದಿಂದ ಅನೇಕ ಕ್ರಾಂತಿವೀರರು ಬಂದು ಕುಂವರಸಿಂಹನ ಸೈನ್ಯವನ್ನು ಸೇರಿದರು. ಅನಂತರ ನಡೆದ ಅನೇಕ ಯುದ್ಧಗಳಲ್ಲೂ ಕುಂವರಸಿಂಹನೇ ಗೆದ್ದ. ಕಳೆದುಹೋದ ಜಗದೀಶ್‌ಪುರವನ್ನು ವಶಪಡಿಸಿಕೊಳ್ಳಲು ಈತ

ಭಾರತ ಸರ್ಕಾರ ಹೊರಡಿಸಿದ ಕುಂವರಸಿಂಹನ ಸ್ಮಾರಕ ಅಂಚೆ ಚೀಟಿ

ಗಂಗಾನದಿಯನ್ನು ದಾಟುತ್ತಿದ್ದಾಗ ಶತ್ರುವಿನ ಗುಂಡು ಇವನ ಬಲಗೈ ಮಣಿ ಕಟ್ಟಿಗೆ ತಾಗಿತು. ಆಗ ಕುಂವರಸಿಂಹ ಎಡಗೈಯಿಂದ ಕತ್ತಿ ಹಿರಿದು, ಬಲಗೈಯನ್ನು ಕತ್ತರಿಸಿ ಗಂಗೆಗೆ ತನ್ನ ಕೊನೆಯ ಕಾಣಿಕೆಯಾಗಿ ಅರ್ಪಿಸಿದ. ಜಗದೀಶಪುರವನ್ನು ತಲುಪಿ ಅದನ್ನು ಇಂಗ್ಲಿಷರಿಂದ ಮತ್ತೆ ವಶಪಡಿಸಿಕೊಂಡ.

ಪದೇಪದೇ ಪರಾಭವಗಳಿಗೆ ಒಳಗಾದ ಇಂಗ್ಲಿಷರು 1858ರಲ್ಲಿ ಲೀಗ್ರಂಡನ ನೇತೃತ್ವದಲ್ಲಿ ಸುಸಜ್ಜಿತವಾದ ಸೈನ್ಯವೊಂದನ್ನು ಕಳಿಸಿದರು. ಈ ಯುದ್ಧ 1857–59ರ ಅವಧಿಯ ಯುದ್ಧಗಳಲ್ಲೇ ಅತ್ಯಂತ ಘೋರವಾದ್ದು. ಆಗಲೂ ಇಂಗ್ಲಿಷರಿಗೆ ಭಾರಿ ಸೋಲಾಯಿತು. ಆದರೆ ಕುಂವರಸಿಂಹ ಯುದ್ಧದಲ್ಲಿ ಗಾಯಗೊಂಡು ಮರುದಿನ ಮರಣ ಹೊಂದಿದ.

1966ರಲ್ಲಿ, ಕುಂವರ ಸಿಂಹನ ಕೊನೆಯ ವಿಜಯದ ವಾರ್ಷಿಕ ದಿನವಾದ ಏಪ್ರಿಲ್ 23 ರಂದು, ಭಾರತ ಸರ್ಕಾರ ಆ ದಿನದ ಸ್ಮಾರಕಾರ್ಥ ಅಂಚೆ ಚೀಟಿಯೊಂದನ್ನು ಹೊರಡಿಸಿತು. (ಆರ್.ಜಿ.ಕೆ.)

**ಕುಂಸಿ :** ಶಿವಮೊಗ್ಗ ಜಿಲ್ಲೆಯ ತಾಲ್ಲೂಕಿನ ಒಂದು ಪಟ್ಟಣ, ಹೋಬಳಿ ಕೇಂದ್ರ. ಶಿವಮೊಗ್ಗ ಜೋಗ ಮಾರ್ಗದಲ್ಲಿ ಶಿವಮೊಗ್ಗಕ್ಕೆ ವಾಯವ್ಯದಲ್ಲಿ 27ಕಿಮೀ ದೂರದಲ್ಲಿದೆ. ಇದು ಶಿವಮೊಗ್ಗ ಸಾಗರ ರೈಲ್ವೆ ಮಾರ್ಗದ ಒಂದು ನಿಲ್ದಾಣ.

ಈ ಊರಿಗೆ ಹಿಂದೆ ಕುಂಬಸೆ ಎಂಬ ಹೆಸರಿತ್ತೆಂದೂ ಹುಂಚದ ಜಿನದತ್ತರಾಯ ಇಲ್ಲಿಯ ಜೈನಬಸದಿಗೆ ಗ್ರಾಮವನ್ನು ದಾನವಾಗಿ ಕೊಟ್ಟನೆಂದೂ ಐತಿಹ್ಯವಿದೆ. ಇಲ್ಲಿನ ಪಕ್ಷಿರಂಗನಾಥ ದೇವಸ್ಥಾನದಲ್ಲಿ ಹರಡಿದ ರೆಕ್ಕೆಯುಳ್ಳ ಗರುಡನ ಮೇಲೆ ಕುಳಿತಿರುವ ವಿಷ್ಣು ವಿಗ್ರಹವಿದೆ.

ಕುಂಸಿ ಮ್ಯಾಂಗನೀಸ್ ಗಣಿಗಳಿಗೆ ಪ್ರಸಿದ್ಧ. ಈ ಊರಿನ ಬಳಿ ಧಾರವಾಡ ಶಿಲಾಸ್ತೋಮಕ್ಕೆ ಸೇರಿದ ಸುಣ್ಣಕಲ್ಲು, ಸಿಲಿಕಯುಕ್ತ ಕಬ್ಬಿಣದ ಶಿಲೆಗಳು, ಮ್ಯಾಂಗನೀಸ್ ಅದಿರು, ಜೇಡು ಶಿಲೆ ಹಾಗೂ ಗ್ರಾನೈಟ್ ಶಿಲೆಗಳು ದೊರಕುತ್ತವೆ. ಈ ಪ್ರದೇಶದಲ್ಲಿ ಮ್ಯಾಂಗನೀಸ್ ನಿಕ್ಷೇಪ, ರೂಪಾಂತರ ಶಿಲೆಗಳಾದ ಫಿಲೈಟ್ ಹಾಗೂ ಶಿಸ್ಟ್ ಶಿಲೆಗಳಲ್ಲಿ ದೊರೆಯುವುದು. ಬಹುತೇಕ ಪ್ರದೇಶದಲ್ಲಿ ಸುಣ್ಣಕಲ್ಲಿನ ಪದರಗಳು ನಿಕ್ಷೇಪದ ಮೇಲ್ಭಾಗವನ್ನು ಮತ್ತು ಸಿಲಿಕಯುಕ್ತ ಕಬ್ಬಿಣ ಶಿಲೆಗಳು ನಿಕ್ಷೇಪದ ಕೆಳಭಾಗವನ್ನು ಆಕ್ರಮಿಸಿವೆ. ಮ್ಯಾಂಗನೀಸ್ ನಿಕ್ಷೇಪ ಸುಮಾರು 303 ಮೀ ಉದ್ದದವರೆಗೆ ಪ್ರಸರಿಸಿದ್ದು, 6–9 ಮೀ ಆಳದ ವರೆಗೆ ದೊರೆಯುತ್ತದೆ. ಕೆಲವೆಡೆ ಅತಿ ವಿರಳವಾಗಿ 24 ಮೀ ಆಳದವರೆಗೂ ದೊರೆಯುತ್ತದೆ. ಮ್ಯಾಂಗನೀಸ್ ನಿಕ್ಷೇಪ ಬಂಡೆಗಳ ರೂಪದಲ್ಲಿವೆ. ಅವುಗಳ ವ್ಯಾಸ 0.9 ರಿಂದ 1

ಮೀಟರ್‌ನಷ್ಟು ಮೂರು ಅಡಿಗಳಷ್ಟು. ಇಲ್ಲಿಯ ನಿಕ್ಷೇಪದಲ್ಲಿ ರಂಜಕ ಮತ್ತು ಸಿಲಿಕದ ಅಂಶ ಅತ್ಯಂತ ಕಡಿಮೆ. ಮ್ಯಾಂಗನೀಸ್ ಲೋಹದ ಅಂಶ ಶೇಕಡ 40 ರಿಂದ 50 ರಷ್ಟಿದೆ. ಕಬ್ಬಿಣದ ಅಂಶ ಶೇ.11ರಷ್ಟು. ಕುಂಸಿಯ ಬಳಿ ಸು.50,000 ಟನ್‌ಗಳಷ್ಟು ಮ್ಯಾಂಗನೀಸ್ ನಿಕ್ಷೇಪವಿದೆಯೆಂಬುದು ಅಂದಾಜು. ಈ ಪ್ರದೇಶದ ಅದಿರನ್ನು ಭದ್ರಾವತಿಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಗಳಿಗೆ ಮತ್ತು ಜಪಾನ್ ದೇಶಕ್ಕೆ ಕಳುಹಿಸಲಾಗುತ್ತಿದೆ. ಜೇಡಿಮಣ್ಣನ್ನು ಬೆಂಗಳೂರಿನಲ್ಲಿರುವ ಪಿಂಗಾಣಿ ಕಾರ್ಖಾನೆಗೆ ಸರಬರಾಜು ಮಾಡಲಾಗುತ್ತಿದೆ. (ಟಿ.ಆರ್.ಎಸ್.)

**ಕುಈ ಭಾಷೆ :** ಮಧ್ಯದ್ರಾವಿಡ ಭಾಷೆಗಳಲ್ಲೊಂದು. ಇದನ್ನು ಕುಯೀ ಎಂದೂ ಕರೆವುದಿದೆ. ಇದರ ಕ್ಷೇತ್ರ ಆಂಧ್ರಪ್ರದೇಶದಿಂದ ಹಿಡಿದು ಒರಿಸ್ಸ, ಮಧ್ಯಪ್ರದೇಶ ಮತ್ತು ಅಸ್ಸಾಮ್‌ಗಳವರೆಗೂ ವ್ಯಾಪಿಸಿದೆಯಾದರೂ ಇದು ಮುಖ್ಯವಾಗಿ ಆಂಧ್ರಪ್ರದೇಶದ ವಿಶಾಖಪಟ್ಟಣ, ಒರಿಸ್ಸದ ಫಲ್ಬನಿ, ಕಾಲಹಂಡಿ, ಕೊರಾಪುಟ್ ಮತ್ತು ಗಂಜಾಮ್ ಜಿಲ್ಲೆ, ಮಧ್ಯಪ್ರದೇಶದ ಕೆಲವು ಕಡೆಗಳಲ್ಲಿ ಕಂಡುಬರುತ್ತದೆ. 1961ನೆಯ ಜನಗಣತಿಯ ಪ್ರಕಾರ ಇದು 5,12,161 ಜನರ ಭಾಷೆಯಾಗಿತ್ತು. ಈ ಭಾಷೆಯನ್ನು ಆಡುವ ಜನ ಒರಿಸ್ಸ ಮತ್ತು ಆಂಧ್ರಪ್ರದೇಶದ ಕೆಲವು ಬೆಟ್ಟಗುಡ್ಡ ಪ್ರದೇಶಗಳಲ್ಲಿ ಹೆಚ್ಚು ವಾಸಿಸುತ್ತಿದ್ದಾರೆ. ಆದುದರಿಂದಲೇ ಇದರಲ್ಲಿ ಒರಿಯ ಮತ್ತು ತೆಲುಗು ಭಾಷೆಗಳ ಪ್ರಭಾವ ಹೆಚ್ಚು. ಇದು ಇತರ ಮಧ್ಯದ್ರಾವಿಡ ಭಾಷೆಗಳಾದ ಕೊಲಾಮಿ, ನಾಯ್ಕಿ, ಪರ್ಜಿ, ಗೋಂಡಿ, ಖೊಂಡ ಮುಂತಾದ ಭಾಷೆಗಳನ್ನೇ ಸರ್ವವಿಧಗಳಲ್ಲೂ ಹೋಲುತ್ತದೆ. ಇವೆಲ್ಲ ಸಾಹಿತ್ಯಲಿಪಿರಹಿತ ಭಾಷೆಗಳು. ಈಗಲೂ ಇದು ಬೆಟ್ಟಗುಡ್ಡ ನಿವಾಸಿಗಳ ಭಾಷೆಯಾಗಿಯೇ ಉಳಿದಿದೆ.

ಕುಯೀ, ಕುಈ, ಕಉವಿ, ಕಂಧ್, ಕೊಂದ್, ಖೊಂಡಿ, ಖೊಂಧಿ, ದಾಸಪಲ್ಲಾಸ್, ಕೊಡು, ಕೊಯಿಂಗ್, ಕೊವಿಂಗ್, ಕುಯಿಂಗ್, ಕುವಿಂಗ್–ಇತ್ಯಾದಿ ಹೆಸರುಗಳಿಂದ ಈ ಭಾಷೆಯನ್ನಾಡುವ ಜನರನ್ನು ಕರೆಯಲಾಗಿದೆ. ಆದರೂ ಖಚಿತವಾಗಿ ಯಾರು ಈ ಭಾಷೆಯನ್ನು ಬಳಸುವವರು ಎಂಬ ವಿಷಯ ಇನ್ನೂ ತಿಳಿದುಬಂದಿಲ್ಲ; ಕುಯಿಂಗರೇ ಇರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಕುವಿ ಭಾಷೆಯನ್ನು ಮಾತನಾಡುವವರು ಕುವಿಂಗರಿರಬಹುದು. ಈ ಎರಡು ಭಾಷೆಗಳ ಕ್ಷೇತ್ರ ಒಂದೇ ಆದುದರಿಂದ ಇವುಗಳಲ್ಲಿ ಕುಈ ಮತ್ತು ಕುವಿ ಭಾಷೆಗಳನ್ನಾಡುವ ಜನ ಯಾರು ಎಂದು ವಿಂಗಡಿಸಿ ಹೇಳುವುದು ಕಠಿಣ. ಈ ನಿಟ್ಟಿನಲ್ಲಿ ಅನೇಕ ವಾದಗಳುಂಟು. ಕುಈ ಮತ್ತು ಕುವಿ ಭಾಷೆಗಳು ಒಂದೇ ಭಾಷೆ. ಅವು ಬೇರೆ ಬೇರೆ ಭಾಷೆಗಳಲ್ಲ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಮೊದಲು ಹೇಳಿರುವಂತೆ ಒರಿಸ್ಸದ ಮಹಾನದಿ ತೀರಪ್ರದೇಶದಲ್ಲಿ, ಆಂಧ್ರಪ್ರದೇಶದ ವಿಶಾಖ ಪಟ್ಟಣದ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುವ ಕುಯಿಂಗರೇ ಕುಈ ಭಾಷೆಯನ್ನು ಆಡುವ ಜನ, ಇದೇ ಕ್ಷೇತ್ರದಲ್ಲಿ ಕುವಿಂಗರೆಂದು ಕರೆದುಕೊಳ್ಳುತ್ತಿರುವವರೇ ಕುವಿಭಾಷೆಯನ್ನು ಮಾತನಾಡುವ ಜನ ಇರಬೇಕೆಂದು ಕೆಲವು ವಿದ್ವಾಂಸರು ಭಾವಿಸಿದ್ದಾರೆ.

ವಿನ್‌ಫೀಲ್ಡ್ ಎಂಬಾತ ಕುಈ ಭಾಷೆಯ ವ್ಯಾಕರಣವನ್ನು ಸಿದ್ಧಪಡಿಸುವುದರ ಜೊತೆಗೆ ಇದರ ಪದಕೋಶವನ್ನೂ ಸಂಗ್ರಹಿಸಿ ಪಟ್ಟಿಮಾಡಿದ್ದಾನೆ. ಆ ಸಮಯಕ್ಕಾಗಲೇ ಲಿಂಗಮ್ ಲೆಚ್ಮಜಿ ಮತ್ತು ಫ್ರೆಂಡ್ ಪೆರೈರ್ ಎಂಬ ವಿದ್ವಾಂಸರು ಇದರ ಪರಿಚಯವನ್ನು ತಕ್ಕಮಟ್ಟಿಗೆ ಮಾಡಿಕೊಟ್ಟಿದ್ದರು. ಕುಈ ಭಾಷೆಯ ಪದಸಮೂಹ, ಧ್ವನಿವ್ಯವಸ್ಥೆ, ವಾಕ್ಯರಚನೆ ಮತ್ತು ವ್ಯಾಕರಣಾಂಶಗಳು ಸರ್ವವಿಧಗಳಲ್ಲೂ ಕುವಿಭಾಷೆಯನ್ನೇ ಹೆಚ್ಚಾಗಿ ಹೋಲುತ್ತವೆ. ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ತಮಿಳು ಮತ್ತು ಮಲಯಾಳಂ ಭಾಷೆಗಳ ಸಂಬಂಧವಿರುವಂತೆ ಮಧ್ಯದ್ರಾವಿಡ ಭಾಷೆಗಳಲ್ಲಿ ಕುಈ ಮತ್ತು ಕುವಿ ಭಾಷೆಗಳ ಸಂಬಂಧ.

ಗೋಂಡಿ, ಖೊಂಡ್, ಮಲ್ಟೊ, ಕುರುಖ್ ಮತ್ತು ತೆಲುಗು ಭಾಷೆಗಳಲ್ಲಿ ಸ್ತ್ರೀವಾಚಕ ಏಕವಚನ ಸರ್ವನಾಮ ಪ್ರತ್ಯೇಕವಾಗಿಲ್ಲ. ಅದರ ಬದಲು ಅವರು ನಪುಂಸಕಲಿಂಗದ ಏಕವಚನ ರೂಪವನ್ನೇ ಬಳಸುವರು. ವಚನ, ವಿಭಕ್ತಿ ಪ್ರತ್ಯಯಗಳು ಕೂಡ ಕುವಿ, ಗೋಂಡಿ, ಕುರುಖ್ ಭಾಷೆಗಳಂತೆಯೇ ಕಂಡುಬರುತ್ತವೆ. ಇದರಲ್ಲಿ ಮಹಾಪ್ರಾಣ ವ್ಯಂಜನಗಳಿಲ್ಲ. ಇದನ್ನು ಬರೆಯುವ ಸೌಲಭ್ಯಕ್ಕಾಗಿ ಕೆಲವು ಜನ ತೆಲುಗು ಮತ್ತು ರೋಮನ್ ಲಿಪಿಗಳನ್ನೂ ಮತ್ತೆ ಕೆಲವು ಜನರು ಒರಿಯ ಲಿಪಿಯನ್ನೂ ಉಪಯೋಗಿಸುತ್ತಿದ್ದಾರೆ. ಕಾಲ್ಡ್‌ವೆಲ್ ಕುಈ ಮತ್ತು ಕುವಿ ಭಾಷೆಗಳೆರಡನ್ನೂ ಒಂದೇ ಎಂದು ಪರಿಗಣಿಸಿ ಅದನ್ನು ಕುಭಾಷೆ ಎಂದು ಕರೆದು ಪರಿಚಯ ಮಾಡಿಕೊಟ್ಟಿದ್ದಾನೆ. ಗ್ರಿಯರ್‌ಸನ್ ಇದನ್ನು ಖೊಂಡ್ ಭಾಷೆಯ ಜೊತೆಯಲ್ಲಿಯೇ ಸೇರಿಸಿದ್ದಾನೆ. ಆದರೆ ಕೆಲವು ಆಧುನಿಕ ಭಾಷಾವಿಜ್ಞಾನಿಗಳು ಇದನ್ನು ಆಳವಾಗಿ ಅಧ್ಯಯನ ನಡೆಸಿ ಅವು ಬೇರೆ ಬೇರೆ ಸ್ವತಂತ್ರ ಭಾಷೆಗಳೆಂದು ಕರೆಯುವುದು ಉಚಿತವೆಂದಿದ್ದಾರೆ. ಇದರ ಬಗ್ಗೆ ಹೆಚ್ಚಿನ ಸಾಮಗ್ರಿಗಳೇನೂ ಇನ್ನೂ ದೊರೆತಿಲ್ಲ. ಇದರ ಧ್ವನಿವ್ಯವಸ್ಥೆ, ಆಕೃತಿಮಾರಚನೆ, ವಾಕ್ಯರಚನೆ, ಮತ್ತು ವ್ಯಾಕರಣಾಂಶಗಳನ್ನು ಗಮನಿಸಿದಾಗ ಇದು ದಕ್ಷಿಣದ್ರಾವಿಡ ಭಾಷೆಯಾದ ತೆಲುಗನ್ನು ಹೋಲುವುದು ಕಂಡುಬರುತ್ತದೆ. ಆದುದರಿಂದ ಇದು ತೆಲುಗು, ಖೊಂಡ್, ಕುವಿ, ಕುರುಖ್ ಭಾಷೆಗಳ ಮಿಶ್ರಣವಿರಬಹುದೆಂಬ ಅನುಮಾನ ಬರುತ್ತದೆ. ಕುವಿ ಮತ್ತು ಕುಈ ಭಾಷೆಗಳ ಕೆಲವು ಪದಗಳನ್ನು ಗಮನಿಸಿದಾಗ ಅನು (ನಾನು), ಆಜು (ನಾವು), ಮಾರೋ (ನಾವು), ಈನು (ನೀನು), ನೀನ್ (ನೀನು), ಈರು (ನೀವು), ಅಂಜು (ಅವನು), ಅರು (ಅವರು), ಈರು (ಅದು), ಅವಿ (ಅವು), ತಾರು (ತಾವು)–ಎಂಬ ರೂಪಗಳು ಕಂಡುಬರುತ್ತವೆ.

ಕೆಲವು ಪದಗಳನ್ನು ವಾಕ್ಯಗಳನ್ನಾಗಿ ರಚಿಸಿದಾಗ: ಅನ್ ಅಂಜು (ಯಾವ ಮನುಷ್ಯ), ಅನ್ ಅರಿ (ಯಾವ ಹೆಂಗಸು), ಅನ್ ಅರು (ಯಾವ ಮನುಷ್ಯರು), ಮಾ ಬ (ನನ್ನ ತಂದೆ), ಮೀ ಬ (ನಿನ್ನ ತಂದೆ)–ಇಂಥ ಅಂಶಗಳು ಕಂಡುಬರುತ್ತವೆ. ಹೀಗೆ ಎಷ್ಟೋ ಅಂಶಗಳಲ್ಲಿ ಮಧ್ಯದ್ರಾವಿಡ ಭಾಷೆಗಳ ಸಂಬಂಧ ಕಂಡುಬರುತ್ತದೆ.

–ಙ್ಕ್–>ಙ್ಗ್–,–ನ್ಚ್–>–ನ್ಜ್–,–ನ್ತ್–>ನ್ದ್–,–ಣ್ಟ್–>–ಣ್ಡ್–,

–ಮ್ಪ್–>–ಮ್ಬ್–,–ನ್ರ್–>–ನ್ಜ್–,–ಳ್–>–ಲ್–,–ಳ್ಳ್–>–ಲ್ಲ್–.

ಇಂಥ ಧ್ವನಿಪರಿವರ್ತನೆ ಮೂಲದ್ರಾವಿಡ ಭಾಷೆಗಳಲ್ಲಿ ಕಂಡುಬರುವುದಿಲ್ಲವೆಂಬ ಅಂಶ ಗಮನಾರ್ಹವಾದುದು. (ಕೆ.ಕೆ.ಜಿ.)

**ಕುಕ್, ಜೇಮ್ಸ್ :** 1728–79. ಇಂಗ್ಲೆಂಡಿನ ಪ್ರಸಿದ್ಧ ನಾವಿಕ, ಸಂಶೋಧಕ ಮತ್ತು ಜಲರಾಶಿವಿರಣಶಾಸ್ತ್ರಜ್ಞ (ಹೈಡ್ರೊಗ್ರಾಫರ್). ಯಾರ್ಕ್‌ಷೈರಿನ ಮಾರ್ಟನ್‌ನಲ್ಲಿ ಕೃಷಿಕೂಲಿಗಾರನೊಬ್ಬನ ಮಗನಾಗಿ ಹುಟ್ಟಿ ಅಲ್ಲೇ ವಿದ್ಯಾಭ್ಯಾಸ ಪಡೆದ. ತನ್ನ 17ನೆಯ ವಯಸ್ಸಿನಲ್ಲಿ ಕಿರಾಣಿ ಅಂಗಡಿಯೊಂದರಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದರೂ ಇವನ ಒಲವು ಸಮುದ್ರಯಾನದ ಕಡೆಗಿತ್ತು. ಆದ್ದರಿಂದ 1746ರಲ್ಲಿ ಜಾನ್ ವಾಕರ್ ಎಂಬ ನೌಕಾಯಜಮಾನನ ಬಳಿ ಕೆಲಸಕ್ಕೆ ಸೇರಿ ಪರಿಶ್ರಮ ಗಳಿಸಿದ. ಚಳಿಗಾಲದಲ್ಲಿ ಗಣಿತ ಮತ್ತು ನೌಕಾಯಾನದ ಬಗ್ಗೆ ಅಭ್ಯಾಸ ನಡೆಸುತ್ತಿದ್ದ. ಸುಮಾರು 10 ವರ್ಷಗಳ ಅನಂತರ, 1755 ರಲ್ಲಿ ಬ್ರಿಟನ್ ಫ್ರಾನ್ಸ್‌ಗಳ ನಡುವೆ ಯುದ್ಧ ಸಂಭವಿಸಿದಾಗ, ಕುಕ್ ನೌಕಾಸೈನ್ಯ ಸೇರಿ ವಿವಿಧ ಮಟ್ಟಗಳಲ್ಲಿ ಸೇವೆ ಸಲ್ಲಿಸಿ ಪಡೆದ ಅನುಭವ ಅಪಾರವಾದ್ದು. ಅಲ್ಲಿ ಈತನ ಸಾಮರ್ಥ್ಯ ದಕ್ಷತೆಗಳು ಮೆಚ್ಚುಗೆಗಳಿಸಿದುವು. ಇವನಿಗೆ ಶೀಘ್ರವಾಗಿ ಬಡತಿಗಳು ಲಭ್ಯವಾದುವು. 1759–1767 ರಲ್ಲಿ ಸೇಂಟ್ ಲಾರೆನ್ಸ್ ನದಿ, ಲ್ಯಾಬ್ರಡಾರ್ ಮತ್ತು ನ್ಯೂಫೌಂಡ್‌ಲೆಂಡ್ ತೀರಪ್ರದೇಶಗಳ ಪರಿಶೋಧನೆಯಲ್ಲಿ ಕುಕ್ ತೊಡಗಿದ್ದ. ಈತ ತಯಾರಿಸಿದ ಭೂಪಟಗಳೂ ನೀಡಿದ ಭೌಗೋಳಿಕ ಮಾಹಿತಿಗಳೂ ಲಂಡನ್ನಿನ ರಾಯಲ್ ಸೊಸೈಟಿಯ ಮೆಚ್ಚುಗೆಗಳಿಸಿದುವು. ಕುಕ್‌ಗೆ ಆ ಸಂಸ್ಥೆಯ ಸದಸ್ಯತ್ವದ ಗೌರವ ಲಭ್ಯವಾಯಿತು. ತಹೀತಿ ದ್ವೀಪದಿಂದ ಶುಕ್ರಗ್ರಹವನ್ನು ವೀಕ್ಷಿಸಲು ಮತ್ತು ದಕ್ಷಿಣ ಪೆಸಿಫಿಕ್ ಸಾಗರ ಪ್ರದೇಶದಲ್ಲಿ ಸಂಶೋಧನೆ ನಡೆಸಲು 1768 ರಲ್ಲಿ ಎಂಡೆವರ್ ನೌಕೆಯ ಕಪ್ತಾನನಾಗಿ ಕುಕ್ ತೆರಳಿದ. ನ್ಯೂಜಿಲೆಂಡ್, ಆಸ್ಟ್ರೇಲಿಯ ಮತ್ತು ನ್ಯೂ ಗಿನಿ ತೀರಪ್ರದೇಶಗಳ ಪರಿಶೋಧನೆಯ ಅನಂತರ 1771 ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿ ಪುನಃ ಮರುವರ್ಷ ಅಂಟಾರ್ಕ್‌ಟಿಕ್ ಖಂಡದ ಪರಿಶೋಧನೆಗಾಗಿ ತೆರಳಿ 1775 ರ ವರೆಗೂ ಆ ಕಾರ್ಯದಲ್ಲಿ ನಿರತನಾಗಿದ್ದ. ಪೆಸಿಫಿಕ್ ಸಾಗರದ ಉತ್ತರ ಭಾಗದಿಂದ ಅಟ್ಲಾಂಟಿಕ್ ಸಾಗರಕ್ಕೆ ಹತ್ತಿರದ ಮಾರ್ಗಾನ್ವೇಷಣೆ ಮಾಡಲು ಹೊರಟು ಹವ್ಯೆಯಿ ದ್ವೀಪಗಳ ಮಾರ್ಗವನ್ನು ಕಂಡು ಹಿಡಿದದ್ದು (1776) ಕುಕ್‌ನ ಇನ್ನೊಂದು ಸಾಧನೆ. ಕುಕ್ ಆ ದ್ವೀಪಗಳಲ್ಲಿ ತಂಗಿದ್ದಾಗ ದೇಶೀಯರೊಡನೆ ಘರ್ಷಣೆ ಸಂಭವಿಸಿ, 1779 ಫೆಬ್ರುವರಿ 14 ರಂದು ಅವರಿಂದ ಕೊಲೆಗೀಡಾದ.

1768 ರಿಂದ ತನ್ನ ಮರಣದವರೆಗೆ ಕುಕ್ ಮೂರು ಸಾರಿ ಸಮುದ್ರಯಾನ ಮಾಡಿ ನಾವಿಕರ ಅನೇಕ ಭೌಗೋಳಿಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಕಾರಣನಾದ. ಸಮುದ್ರಯಾನವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿದವರಲ್ಲಿ ಕುಕ್ ಮೊದಲಿಗ. ಪೆಸಿಫಿಕ್ ಸಾಗರದ ಉತ್ತರ ಅಮೆರಿಕನ್ ತೀರಪ್ರದೇಶದ ಭೌಗೋಳಿಕ ಪರಿಚಯ ಮಾಡಿಕೊಟ್ಟದ್ದು ಕುಕ್‌ನ ಅತ್ಯಂತ ಮುಖ್ಯ ಕೊಡುಗೆಗಳಲ್ಲೊಂದು. (ಎಸ್.ಎಚ್.ಐ.)

**ಕುಕರ್ಬಿಟೇಸೀ :** ದ್ವಿದಳಸಸ್ಯಗಳ ಗುಂಪಿಗೆ ಸೇರಿದ ಒಂದು ಪ್ರಮುಖ ಕುಟುಂಬ. ಇದರಲ್ಲಿ ಸುಮಾರು 100 ಜಾತಿಗೆ ಸೇರಿದ 850 ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ಪ್ರಭೇದಗಳು ಉಷ್ಣದೇಶಗಳ ನಿವಾಸಿಗಳು. ಸಾಮಾನ್ಯವಾಗಿ ಎಲ್ಲ ಪ್ರಭೇದಗಳೂ ಮೃದುಕಾಂಡವುಳ್ಳ ವಾರ್ಷಿಕ ಬಳ್ಳಿಗಳು. ಅಪೂರ್ವವಾಗಿ ಕೆಲವು ಬಗೆಗಳು ಚಿಕ್ಕ ಮರಗಳಾಗಿ ಬೆಳೆಯುವುದುಂಟು. ಉದಾಹರಣೆಗೆ ಸೊಕೋತ್ರ ದ್ವೀಪದಲ್ಲಿ ಬೆಳೆಯುವ ಡೆಂಡ್ರೋಸಿಯಾಸ್ ಮತ್ತು ನೈಋತ್ಯ ಆಫ್ರಿಕದ ಮರುಭೂಮಿಯಲ್ಲಿ ಬೆಳೆಯುವ ಅಕ್ಯಾಂತೊಸಿಯಾಸ್ ಎಂಬ ಜಾತಿಯ ಸಸ್ಯಗಳು.

ಈ ಕುಟುಂಬದ ಸಸ್ಯಗಳ ಕಾಂಡಕ್ಕೆ ಸಾಮಾನ್ಯವಾಗಿ ಐದು ಮೂಲೆಗಳಿವೆ. ಇವುಗಳ ಗೆಣ್ಣುಗಳು ಗಟ್ಟಿ, ಅಂತರಗೆಣ್ಣುಗಳು ಟೊಳ್ಳು, ಎಲೆಗಳ ಕಂಕುಳಲ್ಲಿ ಒಂದು ಪಕ್ಕದಿಂದ ಕುಡಿಬಳ್ಳಿಗಳು (ಟೆಂಡ್ರಿಲ್ಸ್) ಹುಟ್ಟುತ್ತವೆ. ಇವುಗಳ ಸಹಾಯದಿಂದ ಸಸ್ಯಗಳು ಆಸರೆಯನ್ನು ಸುತ್ತಿಕೊಂಡು ಬೆಳೆಯುತ್ತವೆ. ಕುಡಿಬಳ್ಳಿಗಳ ನಿಜವಾದ ಪ್ರಕೃತಿಯ ಬಗ್ಗೆ ಅಭಿಪ್ರಾಯಭೇದವಿದೆ. ಇವನ್ನು ಮಾರ್ಪಾಡಾದ ಬೇರು, ಕಾಂಡ, ಎಲೆ, ರೆಂಬೆ, ಹೂತೊಟ್ಟು ಮುಂತಾಗಿ ವಿವರಿಸಲಾಗಿದೆ. ಸೇನ್ ಶರ್ಮ ಎಂಬುವರ ಪ್ರಕಾರ (1955) ಇವು ಬಳ್ಳಿ ಹಬ್ಬಲು ಅನುಕೂಲವಾಗುವಂತೆ ಮಾರ್ಪಾಡಾದ ವೃಂತಪರ್ಣಗಳು, ಮೆಡಿಟರೇನಿಯನ್ ಪ್ರದೇಶದಲ್ಲಿ

ಬೆಳೆಯುವ ಎಕ್‌ಬಾಲಿಯಮ್ ಎಂಬ ಜಾತಿಯ ಸಸ್ಯದಲ್ಲಿ ಮಾತ್ರ ಕುಡಿಬಳ್ಳಿಗಳಿಲ್ಲ. ಕುಡಿಬಳ್ಳಿಗಳು ಕವಲೊಡೆದಿರಬಹುದು ಅಥವಾ ಇಲ್ಲದಿರಬಹುದು. ಎಲೆಗಳು ಸರಳ; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಇವಕ್ಕೆ ಉದ್ದವಾದ ತೊಟ್ಟುಗಳಿವೆ. ಎಲೆಗಳ ಆಕಾರ ಹೃದಯದಂತೆ. ಅದರ ಮೇಲೆ ಸ್ಪಷ್ಟವಾದ ನಾಳಗಳೂ ಕೂದಲುಗಳೂ ಇವೆ. ಹೂಗಳು ಎಲೆಗಳು ಕಂಕುಳಲ್ಲಿ ಒಂಟೊಂಟಿಯಾಗಿಯೊ ಹೂಗೊಂಚಲುಗಳಲ್ಲಿಯೊ ಹುಟ್ಟುತ್ತವೆ, ಹೂಗಳು ಸಾಮಾನ್ಯವಾಗಿ ಏಕಲಿಂಗಿಗಳು. ಅಪೂರ್ವವಾಗಿ ದ್ವಿಲಿಂಗಿಗಳು. ಒಂದೊಂದು ಹೂವಿನಲ್ಲೂ 5 ಪುಷ್ಪಗಳೂ 5 ದಳಗಳೂ ಇವೆ. ಸಾಧಾರಣವಾಗಿ ಎರಡೂ ಸಂಯುಕ್ತ ಮಾದರಿಯವು. ಗಂಡುಹೂವಿನಲ್ಲಿ 5 ಕೇಸರಗಳಿವೆ. ಕೇಸರಗಳು ತಮ್ಮ ರಚನೆಯಲ್ಲಿ ವೈವಿಧ್ಯವನ್ನು ಪ್ರದರ್ಶಿಸುತ್ತವೆ. ಫೆವಿಲಿಯ ಎಂಬ ಜಾತಿಯ ಸಸ್ಯದಲ್ಲಿ ಐದು ಕೇಸರುಗಳೂ ಬಿಡಿಬಿಡಿಯಾಗಿದ್ದರೆ ಕುಕರ್ಬಿಟ, ಕುಕು ಮಿಸ್, ಬ್ರೈಯೋನಿಯ ಮುಂತಾದವುಗಳಲ್ಲಿ ಕೇಸರದಂಡಗಳು ಒಂದರೊಡನೊಂದು ಕೂಡಿದ್ದು ತಮ್ಮ ರಚನೆಯಲ್ಲಿ ಜಟಿಲತೆಯನ್ನು ಪ್ರದರ್ಶಿಸುತ್ತವೆ. ಕೊನೆಗೆ ಸೈಕ್ಲಾಂತಿರ ಎಂಬ ಜಾತಿಯಲ್ಲಿ ಕೇಸರಗಳು ಒಂದರೊಡನೊಂದು ಸಂಪೂರ್ಣವಾಗಿ ಕೂಡಿಕೊಂಡು ಸ್ತಂಭಾಕೃತಿಯ ಬುಡವನ್ನೂ ಉಂಗುರಾಕಾರದ ಪರಾಗಕೋಶವನ್ನೂ ಒಳಗೊಂಡಿವೆ.

ಹೆಣ್ಣು ಹೂವಿನಲ್ಲಿ 3 ಕಾರ್ಪೆಲ್‌ಗಳಿಂದಾದ ನೀಚಸ್ಥಾನದ ಅಂಡಾಶಯವಿದೆ. ಅಂಡಕೋಶದಲ್ಲಿ ಸಾಧಾರಣವಾಗಿ ಒಂದೇ ಕೋಣೆಯಿದ್ದು ಅದರೊಳಗೆ ಒಳಗೋಡೆಗೆ ಅಂಟಿಕೊಂಡ ಹಲವಾರು ಅಂಡಕಗಳಿವೆ. ಅಂಡಕೋಶದಲ್ಲಿ ಅಪೂರ್ವವಾಗಿ 3 ಕೋಣೆಗಳಿರಬಹುದು. ಶಲಾಕೆ ಕೊಳವೆಯಂತಿದೆ. ಶಲಾಕಾಗ್ರ ಕವಲೊಡೆದಿದೆ. ಬಹುಪಾಲು ಪ್ರಭೇದಗಳಲ್ಲಿ ಫಲ ಬೆರಿಯಂತೆ ಕಾಣುವ ರಸಭರಿತ ಫಲ. ಇದನ್ನು ಪೆಪೊ ಎಂದು ಕರೆಯಲಾಗುತ್ತದೆ. ಕೆಲವು ಪ್ರಭೇದಗಳಲ್ಲಿ ಸಂಪುಟ ಮಾದರಿಯ ಫಲವಿರುವುದುಂಟು. ಬೀಜಗಳು ಅಸಂಖ್ಯವಾಗಿದೆ. ಆದರೆ ಸೀಚಿಯಮ್ ಎಡ್ಯೂಲ್ (ಸೀಮೆಬದನೆ) ಎಂಬ ಪ್ರಭೇದದಲ್ಲಿ ಒಂದೇ ಬೀಜ ಇದೆ.

ಕುಕರ್ಬಿಟೇಸೀ ಕುಟುಂಬಕ್ಕೆ ಹಲವಾರು ಉಪಯುಕ್ತ ಸಸ್ಯಗಳು ಸೇರಿವೆ. ಫಲಸಸ್ಯಗಳಾದ ಕುಕುಮಿಸ್ ಮೆಲೊ (ಕರಬೂಜ), ಕುಕುಮಿಸ್ ಸಟೈವಸ್ (ಸೌತೆ), ಸಿಟ್ರಲಸ್ ವಲ್ಗ್ಯಾರಿಸ್ (ಕಲ್ಲಂಗಡಿ), ಕುಕರ್ಬಿಟ ಮಾಸ್ಕೇಟ (ಸೀಗುಂಬಳ), ಬೆನಿನ್ ಕಾಸ ಸೆರಿಫೆರ (ಬೂದುಗುಂಬಳ) ಲ್ಯಾಜೆನೇರಿಯ (ಸೋರೆ) ಲೂಫ ಅಕ್ಯುಟ್ಯಾಂಗ್ಯುಲ (ಹೀರೆ), ಮೊಮೊರ್ಡಿಕ ಚರಂಶಿಯ (ಹಾಗಲ), ಸಿಫಲ್ಯಾಂಡ್ರ ಇಂಡಿಕ (ತೊಂಡೆ), ಸೀಚಿಯಮ್ ಎಡ್ಯೂಲ್ (ಸೀಮೆಬದನೆ), ಟ್ರೈಕೊಸ್ಯಾಂತಸ್ (ಪಡವಲ) ಇತ್ಯಾದಿ ಸಸ್ಯಗಳು ಮುಖ್ಯವಾದವು. (ಟಿ.ಎನ್.ಎಸ್.)

**ಕುಕಿ :** ಚಿಂದ್ವಿನ್ ಕಣಿವೆಯಿಂದ ಬಂದು ನಾಗಾಜನರೊಂದಿಗೆ ಬೆರೆತ ಒಂದು ಪಂಗಡ. ಈ ಜನ ಮಯನ್ಮಾರ್ ಮತ್ತು ಅಸ್ಸಾಂಗಳನ್ನು ಪ್ರತ್ಯೇಕಿಸುವ ಬೆಟ್ಟಪ್ರದೇಶದಲ್ಲಿ ನಾಮತಲೀಕ್ ನದಿಯ ದಕ್ಷಿಣಭಾಗದಲ್ಲಿ ವಾಸಿಸುತ್ತಾರೆ. ಇವರಲ್ಲಿ ಬಹುಪತ್ನೀತ್ವವೂ ನಿಯೋಗಪದ್ಧತಿಯೂ ರೂಢಿಯಲ್ಲಿವೆ. ಸೃಷ್ಟಿಕರ್ತನಲ್ಲಿ ನಂಬಿಕೆಯಿಟ್ಟು ಈ ಜನ ಸತ್ತವರ ಆತ್ಮಗಳು ಭಗವಂತನ ನಿಲಯವನ್ನು ಸೇರಿ ಸುಖದಿಂದಿರುತ್ತಾರೆ ಎಂದು ನಂಬುತ್ತಾರೆ. ಇವರಲ್ಲಿ ಕೆಲವರು ಸತ್ತವರನ್ನು ಹೂಳುತ್ತಾರೆ. ಕೆಲವರು ಸುಡುತ್ತಾರೆ. (ಜಿ.ಎಚ್.)

**ಕುಕ್ಕಿಲಕೃಷ್ಣಭಟ್ಟ:** 1911–88. ಸಂಗೀತಶಾಸ್ತ್ರ, ನಾಟ್ಯಶಾಸ್ತ್ರ, ಯಕ್ಷಗಾನ, ಛಂದಸ್ಸು, ಗ್ರಂಥಸಂಪಾದನೆ, ಅನುವಾದ, ಸಂಶೋಧನೆಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಹೆಸರಾಂತ ಕನ್ನಡ ವಿದ್ವಾಂಸರು. ದಕ್ಷಿಣ ಕನ್ನಡದ ವಿಟ್ಲ ಪಡ್ನೂರಿನ ಕುಕ್ಕಿಲ ಎಂಬ ಹಳ್ಳಿಯಲ್ಲಿ 1911 ಜುಲೈ 3ರಂದು ಜನಿಸಿದರು. ತಂದೆ ನಾರಾಯಣ ಭಟ್ಟ, ತಾಯಿ ಗೌರಮ್ಮ. ಇವರದು ಕೃಷಿಕ ಮನೆತನ. ಅಜ್ಜ ಕೃಷ್ಣಭಟ್ಟರಿಂದ ಕನ್ನಡ ಮತ್ತು ಸಂಸ್ಕೃತದ ಅಭ್ಯಾಸ ನಡೆಸಿದರು. ಸೋದರಮಾವ ಬಡೆಕ್ಕಿಲ ವೆಂಕಟರಮಣಭಟ್ಟರ ಒತ್ತಾಸೆ ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ಓದುವಾಗ ದೊರಕಿತು. ಹಾಗೆಯೇ ಕಡವ ಶಂಭುಶರ್ಮ, ಕನ್ನೆಪ್ಪಾಡಿ ಪರಮೇಶ್ವರಶಾಸ್ತ್ರಿಗಳ ಶಿಷ್ಯತ್ವ ದೊರಕಿತು. ಕಡವ ಶಂಭುಶರ್ಮರಲ್ಲಿ ಭರತನ ನಾಟ್ಯಶಾಸ್ತ್ರವನ್ನು ವ್ಯಾಖ್ಯಾನಸಮೇತ ಹಲವು ವರ್ಷಗಳ ಕಾಲ ದೀರ್ಘ ವ್ಯಾಸಂಗ ಮಾಡಿದರು. ಎಂಟನೆಯ ತರಗತಿಗೆ ಶಾಲೆಯ ಓದು ನಿಂತಿತು. ಆದರೆ ಓದುವ ಆಸಕ್ತಿ ಕಡಿಮೆಯಾಗಲಿಲ್ಲ. ಸ್ವಾಧ್ಯಾಯದ ಮೂಲಕ ಕಲಿತು, ವಿದ್ವಾಂಸರಾದರು. ಸೇಡಿಯಾಪು ಕೃಷ್ಣಭಟ್ಟರು ಇವರ ಹತ್ತಿರದ ಸಂಬಂಧಿ. ಅವರ ಸಲಹೆಯಂತೆ ಮಂಗಳೂರಿಗೆ ಬಂದು ಬನಾರಸಿನ ಪ್ರವೇಶ ಪರೀಕ್ಷೆಗೆ ತಯಾರಿ ನಡೆಸಿದರು. ಆದರೆ ಸ್ವಾತಂತ್ರ್ಯ ಹೋರಾಟದ ಚಳವಳಿಯಿಂದಾಗಿ ಪರೀಕ್ಷೆ ನಡೆಯಲಿಲ್ಲ. ಸ್ವಲ್ಪ ಸಮಯ ಕನ್ನಡವಿದ್ವಾನ್ ಪರೀಕ್ಷೆಗೆಂದು ಅಭ್ಯಾಸ ಮಾಡಿದರು. ರಾಷ್ಟ್ರಬಂಧು ಪತ್ರಿಕೆಯಲ್ಲಿ ಕೆಲಕಾಲ ಉದ್ಯೋಗಿಯಾಗಿದ್ದರು. ಇವರಿಗೆ ಕಾವ್ಯವಾಚನ, ತಾಳಮದ್ದಳೆಯಲ್ಲಿ ವಿಶೇಷ ಅಭಿರುಚಿ; ಸಂಗೀತ, ಯಕ್ಷಗಾನ ಮತ್ತು ನಾಟ್ಯಶಾಸ್ತ್ರದಲ್ಲಿ ಒಲವು. ಮಂಗಳೂರಿನ ಸಂಗೀತ ವಿದ್ವಾಂಸರಾದ ಎಚ್.ಕೃಷ್ಣಉಡುಪರಲ್ಲಿ ಸಂಗೀತವ್ಯಾಸಂಗ ಮಾಡಿದರು. ಇವರಿಗೆ ಗಮಕ ಹಾಗೂ ಭಾಗವತಿಕೆಯಲ್ಲಿಯೂ ಪ್ರವೇಶವಿತ್ತು.

ಭಾರತೀಯ ಸಂಗೀತಶಾಸ್ತ್ರ (1971), ಪಾರ್ತಿಸುಬ್ಬನ ಯಕ್ಷಗಾನಗಳು (1975), ನಾಗವರ್ಮನ ಛಂದೋಂಬುಧಿ (1975), ಸಿಲಪ್ಪದಿಗಾರಂ (2000), ದ್ರಾವಿಡ ಛಂದಸ್ಸು (2002) ಇವರ ಮುಖ್ಯ ಕೃತಿಗಳು. ಇವರು ಸಂಪಾದಿಸಿದ ನಾಗವರ್ಮನ ಛಂದೋಂಬುಧಿ ಗ್ರಂಥಸಂಪಾದನೆಯ ಕ್ಷೇತ್ರಕ್ಕೊಂದು ಮಾದರಿ. ಛಂದಸ್ಸಿನ ಮೂಲತತ್ತ್ವಗಳು, ಲೌಕಿಕ ಸಂಸ್ಕೃತ ಛಂದಸ್ಸು, ಕರ್ನಾಟಕ ಭಾಷಾಜಾತಿಗಳು, ಗಣಗಳ ಹುಟ್ಟು, ಕನ್ನಡದ ಗಣ ಮತ್ತು ಅಶ್ವೆಗಳ ನಡುವಿರುವ ವ್ಯತ್ಯಾಸ, ಲಯ, ಗತಿ, ಯತಿ, ಪ್ರಾಸ, ಮೂಜುವಜೆ ಭಾಷೆಗಳು, ರಗಳೆ ಮೊದಲಾದ ಛಂದಸ್ಸಿನ ಅಧ್ಯಯನದ ಪ್ರವೇಶಕ್ಕೆ ಅಗತ್ಯವಿರುವ ಮೂಲಭೂತ ವಿಷಯಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಭಾರತೀಯ ಸಂಗೀತಶಾಸ್ತ್ರ ಗಾತ್ರದಲ್ಲಿ ಚಿಕ್ಕದಾದರೂ ಪುರಾತನ ಸಂಗೀತ ಸ್ವರೂಪದ ವಿವೇಚನೆಯುಳ್ಳ ಕೃತಿ. ಸ್ವರ – ಗ್ರಾಮ, ಸಾಮಗಾನ– ಗಾಂಧರ್ವ, ಭರತನ ಶ್ರುತಿ ನಿರ್ಣಯ, ಶ್ರುತಿ ಸಮಸ್ಯೆ, ಸಂಗೀತ ರತ್ನಾಕರ, ದೇಶೀಯ ಅಶಾಸ್ತ್ರೀಯತೆ, ಶಾರ್ಙ್ಗದೇವನ ಸ್ವರ ಸಮೀಕರಣ, ಸಂಗೀತ ರತ್ನಾಕರದ ಕನ್ನಡ ವ್ಯಾಖ್ಯಾನ ಎಂಬ ಅಧ್ಯಯನಗಳು ಈ ಕೃತಿಯಲ್ಲಿವೆ. ಭರತನ ಶ್ರುತಿ ನಿರ್ಣಯ, ಶ್ರುತಿ ಸಮಸ್ಯೆ, ಇಪ್ಪತ್ತೆರಡು ಶ್ರುತಿಗಳ ಬಗೆಗೆ ಅಪೂರ್ವ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

'ಪಾರ್ತಿಸುಬ್ಬನ ಯಕ್ಷಗಾನಗಳು' ಪಾರ್ತಿಸುಬ್ಬನ ಎಲ್ಲಾ ಯಕ್ಷಗಾನ ಪ್ರಸಂಗಗಳನ್ನುಳ್ಳ ಇನ್ನೊಂದು ಸಂಪಾದಿತ ಕೃತಿ. ಯಕ್ಷಗಾನ ಪ್ರಸಂಗಸಾಹಿತ್ಯದಲ್ಲಿ ಬಳಕೆಯಾಗುವ ಬತ್ತೀಸರಾಗವನ್ನು, ಬತ್ತೀಸತಾಳಕ್ಕೆ ಅಳವಡಿಸಿ ಇಲ್ಲಿ ನೀಡಿದ್ದಾರೆ. ಪಾರ್ತಿಸುಬ್ಬ ಪ್ರಸ್ತಾಪಿಸುವ ಸಭಾಲಕ್ಷಣ ಭಾಗ ಇಲ್ಲಿ ಸೇರಿದೆ. ಶಿವರಾಮ ಕಾರಂತರು ತಮ್ಮ ಯಕ್ಷಗಾನ ಬಯಲಾಟ ಕೃತಿಯಲ್ಲಿ ಪ್ರಸ್ತಾಪಿಸಿದ ಹಲವು ಅಂಶಗಳನ್ನು ಕುಕ್ಕಿಲರು ಇಲ್ಲಿ ಮರುವಿಮರ್ಶಿಸಿದ್ದಾರೆ. ಪಾರ್ತಿಸುಬ್ಬನ ಬಗೆಗೆ ವಿದ್ವಾಂಸರಲ್ಲಿದ್ದ ಹಲವು ಸಂದೇಹಗಳಿಗೆ ತಮ್ಮ ಆಳವಾದ ಅಧ್ಯಯನದ ಮೂಲಕ ಪರಿಹಾರಗಳನ್ನು ಸೂಚಿಸಿದ್ದಾರೆ. ಈ ಕೃತಿಗೆ ಬರೆದಿರುವ ವಿಸ್ತಾರವಾದ ಪೀಠಿಕೆ ಇವರ ವಿದ್ವತ್ತಿಗೆ ಸಾಕ್ಷಿಯಾಗಿದೆ. ಒಟ್ಟು 32 ತಾಳಗಳನ್ನು ಗುರುತಿಸಿ ಇವುಗಳಿಗೆ ಸಂಗೀತಶಾಸ್ತ್ರದಲ್ಲಿ ನೀಡಿರುವ ಪರ್ಯಾಯ ಹೆಸರುಗಳನ್ನು ನೀಡಿದ್ದಾರೆ.

ಸಿಲಪ್ಪದಿಗಾರಂ ತಮಿಳು ಮಹಾಕಾವ್ಯದ ಕನ್ನಡ ಗದ್ಯ ಕಥಾರೂಪ. ಸಂಘಂ ಸಾಹಿತ್ಯದ ಅನಂತರ ತಮಿಳಿನಲ್ಲಿ ಬಂದ ಪಂಚ ಮಹಾಕಾವ್ಯಗಳಲ್ಲಿ ಇದು ಮೊದಲಿನದು. ದ್ರಾವಿಡ ಸಂಸ್ಕೃತಿಯ ವಸ್ತು ಕೃತಿಯ ಕೇಂದ್ರದಲ್ಲಿದೆ. ಸರಳವಾದ ಭಾಷೆ, ಲಲಿತವಾದ ಶೈಲಿ ಈ ಅನುವಾದಿತ ಕೃತಿಯ ವೈಶಿಷ್ಟ್ಯ.

ದ್ರಾವಿಡ ಛಂದಸ್ಸು ಎಂಬ (ಸಂ: ಶತಾವಧಾನಿ ಆರ್ ಗಣೇಶ್) ಕೃತಿಯಲ್ಲಿ ಮುಖ್ಯವಾಗಿ ತಮಿಳು ಛಂದಸ್ಸಿನ ವಿವೇಚನೆ ಮತ್ತು ತೊಲ್ಕಾಪ್ಪಿಯಮ್ ಕೃತಿಯ ಭಾವಾನುವಾದವಿದೆ. ದ್ರಾವಿಡ ಛಂದಸ್ಸು ಸಾಮಾನ್ಯ ಪರಿಚಯ, ಉಗಮ, ವಿಕಾಸ, ವ್ಯಾಪ್ತಿ – ತೊಲ್ಕಾಪ್ಪಿಯಮ್, ಎಮಿತ್ತದಿಕಾರಮ್, ವರ್ಣಾಧಿಕಾರ; ತೊಲ್ಕಾಪ್ಪಿಯಮ್, ಚೆಯ್‌ಯುಳಿಯಲ್ ಛಂದೋವಿಲಾಸ; ಯಾಪ್ಪರುಂಕಲಮ್‌ಕಾರಿಕೈ ಲಕ್ಷ್ಯೋದಾಹರಣೆಗಳು ಎಂಬ ನಾಲ್ಕು ಅಧ್ಯಾಯಗಳಿವೆ. ತಮಿಳು ವರ್ಣಮಾಲೆ ಮತ್ತು ಸಂಜ್ಞೆಯ ವಿವರಣೆಯ ಹಿನ್ನೆಲೆಯಲ್ಲಿ ಅನಾವರಣಗೊಳ್ಳುವ ದ್ರಾವಿಡ ಛಂದಸ್ಸು ಕುಕ್ಕಿಲರ ವಿಸ್ತಾರವಾದ ಓದು, ಪಾಂಡಿತ್ಯಕ್ಕೆ ಇನ್ನೊಂದು ನಿದರ್ಶನ.

ಕುಕ್ಕಿಲ ಸಂಪುಟ (ಸಂ: ಎಂ.ಪ್ರಭಾಕರ ಜೋಶಿ) ಬೇರೆ ಬೇರೆ ಸಂದರ್ಭಗಳಲ್ಲಿ ಕುಕ್ಕಿಲರು ಯಕ್ಷಗಾನ, ಛಂದಸ್ಸು, ನಾಟ್ಯಶಾಸ್ತ್ರ, ಸಂಗೀತಶಾಸ್ತ್ರ, ವ್ಯಾಕರಣ, ಕಾವ್ಯ, ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ಬರೆದ 25 ಬಿಡಿ ಲೇಖನಗಳ ಸಂಗ್ರಹ. ಇವರು 1988 ಜುಲೈ 21ರಂದು ನಿಧನಹೊಂದಿದರು. (ಎಸ್.ಎಚ್.ಜಿ.)

**ಕುಕುಂಧ :** ಗರ್ಭದಲ್ಲಿರುವ ಎಳೆಗೂಸಿಗೂ ಗರ್ಭಧರಿಸಿದ ಸ್ತ್ರೀಗೂ ತೊಂದರೆ ಕೊಡುವ ಒಂದು ಬಗೆಯ ಪಿಶಾಚಗಳಿವು. ಕೃಕಂದ ಎಂದೂ ಕರೆವುದಿದೆ. ಸಾಮಾನ್ಯವಾಗಿ ಯಾವುದೇ ಬಗೆ ಊನಗಳಿಲ್ಲದೇ ಒಂಬತ್ತು ತಿಂಗಳ ಕಾಲ ಬೆಳೆದು ಹತ್ತನೆಯ ತಿಂಗಳಲ್ಲಿ ಜನನವಾಗಿ ತಾಯಿ, ಮಗು ಇಬ್ಬರೂ ಆಯುಷ್ಮಂತರೂ ಆರೋಗ್ಯ ದೃಢಕಾಯರೂ ಆಧಿರಹಿತರೂ ಆಗಿ ಬಾಳಬೇಕು. ಇಂಥ ಬಾಳನ್ನು ನಾಶಮಾಡಲು ಈ ದುಷ್ಟಶಕ್ತಿಗಳು ಸದಾ ಕಾಯುತ್ತಿರುತ್ತವೆ. ಇವು ಗರ್ಭವತಿಯರಾದ ಸ್ತ್ರೀಯರ ಸುತ್ತಮುತ್ತಲೂ ಜಾಗ್ರತ್, ಸ್ವಪ್ನ, ಸುಷುಪ್ತಿ ಕಾಲಗಳಲ್ಲಿಯೂ ಮನೆಯ ಒಳಗೆ ಹೊರಗೆ ಊರಿನಲ್ಲಿ ಮತ್ತು ಕಾಡಿನಲ್ಲಿ ಪಿಶಾಚ ರಾಕ್ಷಸಾದಿ ರೂಪದಲ್ಲಿ, ನೆಂಟರಿಷ್ಟರ ರೂಪದಲ್ಲಿ, ಪಶುಪಕ್ಷಿಗಳ ರೂಪಗಳಲ್ಲಿ ಸುತ್ತಾಡುತ್ತ ಬಗೆಬಗೆಯಾದ ಧ್ವನಿ, ಬಗೆಬಗೆಯ ಆಕಾರ, ಬಗೆಬಗೆಯ ನರ್ತನಗಳೊಡನೆ ಗರ್ಭವನ್ನೂ ಗರ್ಭವತಿಯರನ್ನೂ ತಮ್ಮ ದುಷ್ಟಕೃತ್ಯಗಳಿಂದ ಹಿಂಸೆ ಮಾಡುತ್ತವೆ. ಅದರಿಂದ ಗರ್ಭಸ್ಥ ಶಿಶುವಿನಲ್ಲಿ ಅಂಗವೈಕಲ್ಯ, ಇಂದ್ರಿಯನಾಶ, ಆಯುರ್ನಾಶ ಕಾಣಬರುತ್ತವಲ್ಲದೆ ಗರ್ಭಪಾತ, ಪ್ರಸವವಾದ ಮೇಲೆ ಮೃತ್ಯು, ಸೂತಿಕಾಗೃಹದಲ್ಲಿರುವಾಗ ಮೃತ್ಯು ಬುದ್ಧಿವೈಕಲ್ಯಗಳುಂಟಾಗುತ್ತವೆ. ಅಂತೆಯೇ ತಾಯಿಯಲ್ಲೂ ವಿವಿಧವಾದ ಉಪದ್ರವಗಳು

ತಲೆದೋರುತ್ತವೆ. ಇಂಥ ಶಕ್ತಿಗಳು ಅನೇಕ. ಅಥರ್ವವೇದದ 8ನೆಯ ಕಾಂಡದಲ್ಲಿ ಅವುಗಳ ಪ್ರಸ್ತಾಪವಿದೆ. ಅವುಗಳ ಪೈಕಿ ಕುಕುಂಧಗಳ ವಿಚಾರ 11ನೆಯ ಮಂತ್ರದಲ್ಲಿದೆ.

ಯೇ ಕುಕುಂಧಾಃ ಕುಕೂರವಾಃ (ಭಾಃ) ಕೃತ್ತೀರ್ದೂರ್ಶಾನಿಬಿಭ್ರತಿ

ಕ್ಲೀಬಾ ಇವ ಪ್ರನೃತ್ಯನ್ತೋ ವನೇ ಯೇ ಕುರ್ವತೇ ಘೋಷಂ ತಾನಿತೋ ನಾಶಯಾಮಸಿ.॥

ಯಾವ ಪಿಶಾಚಗಳು ಕುಕೂ ಕುಕೂ ಎಂದು ಕೋಳಿಯಂತೆ ವಿಕಾರವಾದ ಧ್ವನಿ ಮಾಡುತ್ತ ಕೆಟ್ಟದಾದ ಹಿಂಸಾಕಾರ್ಯವನ್ನು ಮಾಡುತ್ತ ನಪುಂಸಕರಂತೆ ತಲೆ ಮತ್ತೆ ಕಾಲುಗಳನ್ನು ಅಲ್ಲಾಡಿಸುತ್ತ, ಕಾಡಿನಲ್ಲಿ ಭಯಂಕರ ಧ್ವನಿಮಾಡುತ್ತ, ಗರ್ಭಿಣಿಯರಿಗೆ ತೊಂದರೆ ಕೊಡುತ್ತವೆಯೋ, ಅಂಥ ದುಷ್ಟಪಿಶಾಚಗಳನ್ನು ಬಿಳುಪು ಮತ್ತು ಹಳದಿ ಸಾಸುವೆಗಳಿಂದ, ಮೇಲಿನ ಮಂತ್ರವನ್ನುಚ್ಚರಿಸಿ ಅಗ್ನಿಯಲ್ಲಿ ಹೋಮವಾಡಿ ನಾಶಗೊಳಿಸಬೇಕೆಂದು ಈ ಪ್ರಾರ್ಥನೆಯ ಅರ್ಥ. ಇದರಿಂದ ಗರ್ಭರಕ್ಷಣೆಯಾಗುವುದು ಎಂದಿದೆ. (ಎನ್.ಎಸ್.ಆರ್.ಬಿ.)

**ಕುಕ್ಕನೂರು :** ಕೊಪ್ಪಳ ಜಿಲ್ಲೆ ಯಲಬುರ್ಗ ತಾಲ್ಲೂಕಿನಲ್ಲಿ, ಕಸಬೆಯಿಂದ ದಕ್ಷಿಣಕ್ಕೆ ಗುಂತಕಲ್ಲು – ಹುಬ್ಬಳ್ಳಿ ರೈಲುಮಾರ್ಗದ ಬನ್ನಿಕೊಪ್ಪ ನಿಲ್ದಾಣದಿಂದ 11 ಕಿಮೀ ಉತ್ತರಕ್ಕಿರುವ ಗ್ರಾಮ.

ಈ ಊರು ಪ್ರಾಚೀನ ದೇವಾಲಯಗಳಿಗೆ ಪ್ರಸಿದ್ಧವಾಗಿದೆ. ಸ್ಥಳಪುರಾಣದ ಪ್ರಕಾರ ಈ ಊರು ಕುಂತಳಪುರ. ಲಕ್ಷ್ಮೀಶನೂ ಈ ಊರಿಗೆ ಇದೇ ಹೆಸರನ್ನು ಬಳಸಿದ್ದನೆನ್ನಲಾಗಿದೆ. ಚಂದ್ರಹಾಸ ದುಷ್ಟಬುದ್ಧಿಯ ಮಗಳನ್ನು ಭೇಟಿ ಮಾಡಿದ ಸ್ಥಳವೆಂದು ಇಲ್ಲಿನ 'ಶ್ರೀಂಗೇರ ತೋಟವನ್ನು' ತೋರಿಸುತ್ತಾರೆ.

ಊರಿನ ಮಧ್ಯದಲ್ಲಿ ದೊಡ್ಡ ಪ್ರಾಕಾರದ ಒಳಗೆ ಹಲವು ದೇವಾಲಯಗಳಿವೆ. ಇವುಗಳಲ್ಲಿ ಸ್ಥಳೀಯವಾಗಿ ಪ್ರಮುಖವಾದುದು ಮಹಾಮಾಯಾ ದೇವಾಲಯ. ಪ್ರಾಯಶಃ ವಿಜಯನಗರದ ಕಾಲದಲ್ಲಿ ಮಾರ್ಪಾಡುಗೊಂಡಿದೆ. ಇದೇ ಆವರಣದಲ್ಲಿರುವ ನವಲಿಂಗ ಎಂಬ 9 ಚಿಕ್ಕ ಶಿವದೇವಾಲಯಗಳ ಗುಂಪಿನಲ್ಲಿ ಮೂರು ನವರಂಗ ಮಂಟಪಗಳು ಮತ್ತು ಅವಕ್ಕೆ ಹೊಂದಿಕೊಂಡಂತೆ 9 ಗರ್ಭಗುಡಿಗಳಿವೆ. ಪ್ರಾಯಶಃ 10–11ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿರಬಹುದಾದ ಈ ಗುಡಿಗಳು ಬಾದಾಮಿ ಚಳುಕ್ಯ ವಾಸ್ತುಶೈಲಿ ಕಲ್ಯಾಣ ಚಾಳುಕ್ಯ ವಾಸ್ತುಶೈಲಿಯತ್ತ ಪರಿವರ್ತನೆ ಹೊಂದುತ್ತಿದ್ದ ಘಟ್ಟದ ಸೂಚಕಗಳಾಗಿವೆ. ಈ ಕಟ್ಟಡಗಳು ದ್ರಾವಿಡ ಶೈಲಿಯವು. ಪಟ್ಟದಕಲ್ಲಿನವುಗಳಂತೆ ಮರಳುಗಲ್ಲಿನಲ್ಲಿ ಅದೇ ಹೊರಮೈ ಅಲಂಕರಣ ಮತ್ತು ಶಿಖರವಿನ್ಯಾಸಗಳೊಡನೆ ಕಟ್ಟಲಾದುವು. ಆದರೆ ಒಳಗಿನ ಕಂಬಗಳು ಸ್ವಲ್ಪಮಟ್ಟಿಗೆ ತಿರುಗಣಿಯಲ್ಲಿ ಮಾಡಿದ ರೀತಿಯವು. ಇಲ್ಲಿರುವ 11–12ನೆಯ ಶತಮಾನದ ಅನೇಕ ಶಾಸನಗಳಲ್ಲಿ ಗಂಗಾ, ಕಾಳಿಕಾ, ಮಹಾಮಾಯಿ, ಸರಸ್ವತಿ ಮೊದಲಾದ ದೇವತೆಗಳಿಗೆ ಕೊಟ್ಟ ದತ್ತಿಗಳ ಪ್ರಸ್ತಾಪವಿರುವುದರಿಂದ ಈ ನವಲಿಂಗಗುಡಿ ದೇವಿಗುಡಿಗಳಾಗಿದ್ದಿರಬಹುದು ಎಂದು ಊಹಿಸಲು ಅವಕಾಶವಿದೆ.

ಗ್ರಾಮದ ನೈಋತ್ಯ ಭಾಗದಲ್ಲಿರುವ ಪ್ರಾಯಶಃ 11ನೆಯ ಶತಮಾನದ ಆದಿ ಭಾಗದ ಕಲ್ಲೇಶ್ವರ ದೇವಾಲಯ ಕಲ್ಯಾಣ ಚಾಳುಕ್ಯ ಶೈಲಿಯತ್ತಣ ನಡೆಯ ಇನ್ನೊಂದು ಘಟ್ಟವನ್ನು ಸೂಚಿಸುವಂತಿದೆ. ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖ ಅಥವಾ ನಂದಿಮಂಟಪವಿರುವ ಈ ಗುಡಿಯ ತಲವಿನ್ಯಾಸ ಪಟ್ಟದಕಲ್ಲಿನ ಗುಡಿಗಳಂತೆಯೇ ಇದೆ. ಇದೂ ಮರಳುಗಲ್ಲಿನಲ್ಲಿ ಕಟ್ಟಿದ ದ್ರಾವಿಡ ಶೈಲಿಯ ಗುಡಿ. ಆದರೆ ಶಿಖರ ಹಿಂದಿನ ದ್ರಾವಿಡ ಶಿಖರಗಳಂತೆ ಭಾರವಾದ ನಿರ್ದಿಷ್ಟವಾಗಿ ಹಂತಗಳಲ್ಲೇರುವ ಘಟ್ಟಗಳಲ್ಲಿ ಕಾಣಿಸದೆ, ಆ ಘಟ್ಟಗಳಿದ್ದರೂ ಹಲವು ಮಾರ್ಪಾಡುಗಳಿಂದ ಸ್ವಲ್ಪಮಟ್ಟಿನ ಏರುಗೆರೆಗಳ ಧಾಟಿಯನ್ನೂ ಹೊಂದಿದೆ; ಕಲ್ಯಾಣ ಚಾಳುಕ್ಯ ಶಿಖರರೀತಿಯ ಮೊಳಕೆಯ ಘಟ್ಟದಲ್ಲಿ ತೋರುತ್ತದೆ. ಮುನಃ ಹೊರಗೋಡೆಗಳಲ್ಲಿ ಶಿಲ್ಪಾಲಂಕರಣ ಕಾಣಿಸದೆ ಕೇವಲ ದ್ರಾವಿಡ ಅಥವಾ ನಾಗರ ಸಂಪ್ರದಾಯದ ಶಿಖರಗಳನ್ನು ಹೊತ್ತ ಒಂಟಿ ಅರೆಗಂಬ ಅಥವಾ ಕೋಷ್ಠಗಳಿಂದ ಅಲಂಕೃತವಾಗಿದೆ. ಒಳಗಿನ ಕಂಬಗಳು ನವಲಿಂಗ ದೇವಾಲಯಕ್ಕಿಂತಲೂ ಸ್ವಲ್ಪ ಮುಂದಣ ಘಟ್ಟದವೆನಿಸುತ್ತವೆ. ದೇವಾಲಯದ ಒಳಗೆ ಶಿವ ಮತ್ತು ಬ್ರಹ್ಮನ ಒಂದೊಂದು ಶಿಲ್ಪಗಳುಂಟು. ಇವು ಸ್ಪಷ್ಟವಾಗಿ ಬೆಳೆದ ಕಲ್ಯಾಣ ಚಾಳುಕ್ಯ ಶೈಲಿಯವು. ಆ ದೇವಾಲಯದ ಕಾಲಕ್ಕಿಂತ ಇವು ಈಚಿನವಿರಬಹುದೆಂದೂ ಭಾವಿಸಲಾಗಿದೆ.
*

**ಕುಕ್ಕೆ, ಎಸ್.ಎಸ್.:** 1918–91. ಪ್ರಸಿದ್ಧ ಚಿತ್ರಕಲಾವಿದ; ಲಲಿತಕಲಾತಜ್ಞ. ಕುಕ್ಕೆ ಶ್ರೀಕಂಠಶಾಸ್ತ್ರಿ ಇವರ ಪೂರ್ಣ ಹೆಸರು. ತಂದೆ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ, ತಾಯಿ ಸಂಕಮ್ಮ. 1918 ಜೂನ್ 8ರಂದು ಶಿವಮೊಗ್ಗದಲ್ಲಿ ಜನಿಸಿದರು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಇವರು ಪಂಡಿತರ ಮನೆತನದಲ್ಲಿ ಹುಟ್ಟಿದರೂ ಶೈಕ್ಷಣಿಕ ವಿದ್ಯಾಭ್ಯಾಸದಲ್ಲಿ ಹಿಂದುಳಿದರು. ತಮ್ಮ ಒಂಬತ್ತನೆಯ ವಯಸ್ಸಿನಲ್ಲಿ ಶಾಲೆಯಲ್ಲಿ ಉಪಾಧ್ಯಾಯರ ಪಾಠಕ್ಕೆ ಗಮನಕೊಡದೆ ಅವರ ಭಾವಚಿತ್ರವನ್ನು ರಚಿಸಿದರು. ಇದರಿಂದ ಉಪಾಧ್ಯಾಯರ ಕೋಪಕ್ಕೆ ಒಳಗಾಗಿ ಬೆತ್ತದ ರುಚಿಕಂಡು ಶಾಲೆಯಿಂದ ಹೊರಹಾಕಲಾಗಿದ್ದರಿಂದ ಇವರ ಸಾಮಾನ್ಯ ಶಿಕ್ಷಣ ಕೊನೆಗೊಂಡಿತು.

ಶಿವಮೊಗ್ಗದ ಚಿತ್ರಕಲಾ ಶಿಕ್ಷಕರಾದ ರಾಮಕೃಷ್ಣ ಮತ್ತು ಎ.ಜಿ. ಮೂರ್ತಿಯವರ ಸ್ನೇಹ ಸಹವಾಸದಿಂದ ಇವರ ಚಿತ್ರಕಲಾಸಕ್ತಿ ಮೊಳಕೆಯೊಡೆಯಿತು. ಮದರಾಸಿನ ಎಲ್.ಎ. (ಲೋಯರ್) ಆರ್ಟ್ಸ್ ಪರೀಕ್ಷೆಯಲ್ಲಿ ಇವರು ಪ್ರಥಮಶ್ರೇಣಿಯಲ್ಲಿ ತೇರ್ಗಡೆಯಾದರು. ತಂದೆಯವರೊಂದಿಗೆ ಶೃಂಗೇರಿಗೆ ಹೋಗಿದ್ದ ಸಂದರ್ಭದಲ್ಲಿ ತುಂಗಾನದಿ ದಡದಲ್ಲಿದ್ದ ವಿದ್ಯಾಶಂಕರ ದೇವಾಲಯದ ಪೆನ್ಸಿಲ್ ಸ್ಕೆಚ್ ಮಾಡಿ ಗುರುಗಳಾದ ಚಂದ್ರಶೇಖರ ಭಾರತಿ ಸ್ವಾಮಿಗಳಿಗೆ ಸಮರ್ಪಿಸಿ ಅವರ ಆಶೀರ್ವಾದ ಪಡೆದರು. ಶೃಂಗೇರಿಯ ಮಠದಲ್ಲಿ ಸಂಸ್ಕೃತ ಅಧ್ಯಯನ ನಡೆಸಿ ಪಂಡಿತೋತ್ತಮನಾಗುವುದನ್ನು ಬಿಟ್ಟು ಕುಟುಂಬದ ಹಿರಿಯರ ವಿರೋಧವನ್ನು ಎದುರಿಸಿ ಮೈಸೂರಿನ ರೈಲು ಹತ್ತಿದರು. ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆ ಸೇರಲು ಅರ್ಹತಾ ಪ್ರವೇಶ ಪರೀಕ್ಷೆಗೆ ಕುಳಿತರು. ಕಲಾ ಶಾಲೆಯ ಅಧೀಕ್ಷಕರಾಗಿದ್ದ ರಾಮಸ್ವಾಮಿ ಐಯ್ಯಂಗಾರ್ ಮತ್ತು ಸಹಾಯಕ ಅಧೀಕ್ಷರಾಗಿದ್ದ ಎನ್.ಜಿ.ಪಾವಂಜೆಯವರು ಇವರ ಚಿತ್ರಕಲಾ ಪ್ರೌಢಿಮೆಯನ್ನು ಕಂಡು ಮೊದಲನೆಯ ತರಗತಿಗೆ ಸೇರಬೇಕಾಗಿದ್ದ ವಿದ್ಯಾರ್ಥಿಯನ್ನು ನೇರವಾಗಿ ನಾಲ್ಕನೆಯ ತರಗತಿಗೆ ಸೇರಿಸಿಕೊಳ್ಳಲು ಶಿಫಾರಸು ಮಾಡಿದರು. ಇವರ ಹಿನ್ನೆಲೆ ಮತ್ತು ಆರ್ಥಿಕ ಪರಿಸ್ಥಿತಿ ಅರಿತು ವಿದ್ಯಾರ್ಥಿ ವೇತನ ಕೊಡಿಸಿ ಅನುಕೂಲ ಮಾಡಿಕೊಟ್ಟರು. ಆದರೆ ತಿಂಗಳಿಗೆ ಹನ್ನೆರಡು ರೂಪಾಯಿ ವಿದ್ಯಾರ್ಥಿವೇತನದಲ್ಲಿ ಊಟ, ವಸತಿ, ಬಣ್ಣ ಬ್ರಷ್ ಎಲ್ಲದಕ್ಕೂ ಹಣ ಸಾಲದಾದಾಗ ಅಧ್ಯಾಪಕ ಕೇಶವಯ್ಯ ಇವರ ಕಷ್ಟವನ್ನು ಗಮನಿಸಿ ಸ್ವಂತಕ್ಕೆ ಚಿತ್ರಗಳನ್ನು ರಚಿಸುವಾಗ ಸಹಾಯಕನಾಗಿ ಕೆಲಸಮಾಡುವಂತೆ ತಿಳಿಸಿ, ಆ ಕೆಲಸಕ್ಕೆ ದಿನಕ್ಕೆ ಹನ್ನೆರಡಾಣೆ ಮಜೂರಿ ಕೊಟ್ಟು ನೆರವಾದರು.

ಪ್ರತಿಭಾನ್ವಿತ ಕಲಾವಿದ್ಯಾರ್ಥಿಯಾಗಿದ್ದ ಕುಕ್ಕೆಯವರು ಮದರಾಸಿನ ಹೈಯರ್ ಕಲಾಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಹೊಂದಿದರು. ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಐದು ವರ್ಷಗಳ ಡಿಪ್ಲೊಮ ಶಿಕ್ಷಣವನ್ನು ಪ್ರಥಮ ಶ್ರೇಣಿಯಲ್ಲಿ ಪೂರೈಸಿದರು. ಅನಂತರ ಶಿವಮೊಗ್ಗದಲ್ಲಿ ಚಿತ್ರಕಲೆ ಮತ್ತು ಅಂಗಸಾಧನೆಯನ್ನು ಕಲಿಸಲಾರಂಭಿಸಿದರು. ಉತ್ತಮ ದೇಹದಾರ್ಢ್ಯ ಹೊಂದಿದ್ದ ಇವರಿಗೆ ಜಿಲ್ಲಾ ಆರೋಗ್ಯ ಇಲಾಖೆ ಮಲ್ನಾಡ್ ಬೆಸ್ಟ್ ಎಂಬ ಬಿರುದು ನೀಡಿತ್ತು. ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಿಂದ ಕ್ರಾಫ್ಟ್‌ಮನ್ ಹುದ್ದೆಗೆ ಆದೇಶಗೊಂಡು ಸೇರಿದರಾದರೂ ಆ ಕೆಲಸ ಇವರಿಗೆ ಹಿಡಿಸಲಿಲ್ಲವಾದ್ದರಿಂದ ಕೆಲಸ ತ್ಯಜಿಸಿದರು. ಬಳಿಕ ಗುರುಗಳಾದ ಕೇಶವಯ್ಯನವರೊಂದಿಗೆ ಅರಮನೆಯಲ್ಲಿ ದಸರಾ ಪ್ಯಾನಲ್ ಕೆಲಸ ಪ್ರಾರಂಭಿಸಿದರು. ಅನಾರೋಗ್ಯದ ಕಾರಣ ಶಿವಮೊಗ್ಗೆಗೆ ಮರಳಿದವರಿಗೆ ಅಣ್ಣ ಸೀತಾರಾಮಶಾಸ್ತ್ರಿಗಳು ಕ್ಯಾಮರಾ ಕೊಡಿಸಿ ಫೋಟೋ ಸ್ಟುಡಿಯೋ ಪ್ರಾರಂಭಿಸಲು ನೆರವಾದರು. ಆದರೆ ಲಾಭವಿಲ್ಲದ ಕಾರಣ ಸ್ಟುಡಿಯೋ ಮುಚ್ಚಬೇಕಾಯಿತು. ವಿವಾಹನಂತರ ಮಾವನವರೊಂದಿಗೆ ಬೆಂಗಳೂರಿಗೆ ಬಂದು ಚಿಕ್ಕಪೇಟೆಯಲ್ಲಿ ಕುಕ್ಕೆ ಬ್ರದರ್ಸ್ ಎಂಬ ಹೆಸರಿನಲ್ಲಿ ಫೋಟೋ ಸ್ಟುಡಿಯೋ ಸ್ಥಾಪಿಸಿದರು. ಅದರಲ್ಲಿ ಚಿತ್ರಕಲಾ ಸ್ಟುಡಿಯೋ ಸಹ ಹೊಂದಿದ್ದರು. ವಾಣಿಜ್ಯ ಕಲಾವಿದರಾಗಿ ವೃತ್ತಿ ಜೀವನ ಆರಂಭಿಸಿದ ಇವರಿಗೆ ಒಂದಾದ ಮೇಲೊಂದು ಕೆಲಸಗಳು ಸಿಕ್ಕಿ ಪರಿಸ್ಥಿತಿ ಸುಧಾರಿಸಿತು.

ಚಲನಚಿತ್ರ ಕ್ಷೇತ್ರದಲ್ಲಿ ಹೆಸರಾಗಿದ್ದ ನಟ, ಸಂಗೀತಗಾರ ಹೊನ್ನಪ್ಪ ಭಾಗವತರ್ ಮತ್ತು ಕು.ರಾ.ಸೀತಾರಾಮಶಾಸ್ತ್ರಿಗಳ ಸಂಪರ್ಕ ಇವರಿಗೆ ಒಂತು. ಇವರನ್ನು ಮಹಾಕವಿ ಕಾಳಿದಾಸ ಚಲನಚಿತ್ರ ಕಲಾನಿರ್ದೇಶಕರಾಗಿ ಹೊನ್ನಪ್ಪ ಭಾಗವತರು ಆಹ್ವಾನಿಸಿದರು. ಈ ಕೆಲಸದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಚಿತ್ರ ಹೆಸರು ಗಳಿಸಲು ಸಹಾಯಕರಾದರು. ಅನಂತರ ಕೈವಾರ ಮಹಾತ್ಮೆ ಚಿತ್ರದ ಕಲಾನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.

ಕಲಾ ಮಾಧ್ಯಮದ ವಿವಿಧ ತಂತ್ರಗಳು ಇವರಿಗೆ ಸಿದ್ಧಿಸಿದ್ದವು. ಬ್ರಷ್‌ನಿಂದಲ್ಲದೆ, ಬ್ಲೇಡಿನಿಂದ, ದಾರದಿಂದ ಬಣ್ಣಲೇಪನ ಮಾಡುವುದು, ಕಾಲ್ಬೆರಳಿನಿಂದ, ಒಂದೇ ಕೈಯಿಂದ, ಎರಡೂ ಕೈಯಿಂದ ಚಿತ್ರರಚನೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಚಿತ್ರರಚನೆ ಮಾಡುವುದು ಇವರು ತೋರಿಸುತ್ತಿದ್ದ ಕೆಲವು ಚಮತ್ಕಾರಗಳು. ಚಿತ್ರ ಮಾಧ್ಯಮವೇ ಅಲ್ಲದೇ ಇವರು ಶಿಲ್ಪಕೃತಿಗಳ ರಚನೆಯನ್ನೂ ದಂತದಲ್ಲಿ, ತೇಗ, ಬೀಟೆ ಮರಗಳಲ್ಲಿ, ಪ್ಲಾಸ್ಟರ್ ಆಫ್ ಪ್ಯಾರೀಸ್ ಮಿಶ್ರಣದಲ್ಲಿ ಮಾಡಿದರು. ಶೀಘ್ರ ರೇಖಾ ರಚನೆ ಮತ್ತು ವ್ಯಕ್ತಿ ಚಿತ್ರಣ ಇವರಿಗೆ ಪ್ರಿಯವಾದ ಮಾಧ್ಯಮಗಳಾಗಿದ್ದವು.

ಮೈಸೂರು ಚಿತ್ರಕಲಾ ಪರಿಷತ್‌ನ (ಇಂದಿನ ಕರ್ನಾಟಕ ಚಿತ್ರ ಕಲಾ ಪರಿಷತ್ತು) ಸಂಸ್ಥಾಪಕ ಸದಸ್ಯರಾಗಿ ಮಹತ್ತರ ಪಾತ್ರವಹಿಸಿದರು. ಸಿದ್ದವನಹಳ್ಳಿ ಕೃಷ್ಣಶರ್ಮರ ಸಹಾಯದಿಂದ ಚಿತ್ರಕಲಾ ವಿದ್ಯಾಲಯ ಪ್ರಾರಂಭಿಸಿ ಕಲಾ ಶಿಕ್ಷಣಶಾಲೆಗೆ ಪ್ರಥಮ ಪ್ರಾಂಶುಪಾಲರಾಗಿ ನಿಯೋಜಿತರಾದರು. ಈ ಅವಧಿಯಲ್ಲಿ ಇವರು ಅನೇಕ ಕಲಾವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿ ಉತ್ತಮ ಕಲಾವಿದರನ್ನಾಗಿ ರೂಪಿಸಿದರು. 22 ಮಂದಿ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಕಲಾಶಾಲೆ ನೂರಾರುಕಲಾ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿಯನ್ನು ನೀಡುವ ಚಿತ್ರಕಲಾ ಮಹಾವಿದ್ಯಾಲಯವಾಗಿ ಬೆಳೆದಿದೆ. ಇವರ ಕಲಾ ಪ್ರದರ್ಶನಗಳು ಹಲವು ಸಂಘ ಸಂಸ್ಥೆಗಳು ಹಾಗೂ ಅಕಾಡೆಮಿಗಳ ಮೂಲಕ ನಡೆದಿವೆ. ಚಿತ್ರಕಲಾ ಪರಿಷತ್ತು ಏರ್ಪಡಿಸಿದ್ದ ಕಲಾ ಶಿಬಿರಗಳಲ್ಲಿ ಇವರು

ಪ್ರಮುಖ ಪಾತ್ರವಹಿಸುತ್ತಿದ್ದರು. ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಲಲಿತಾ ಕಲಾ ಅಕಾಡೆಮಿ ನೆರವಿನಿಂದ ಇವರೇ ಏರ್ಪಡಿಸಿದ್ದ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಲ್ಲಿ ಉಗುರಿನಿಂದ, ಚಾಕು ಅಲುಗಿನಿಂದ, ಕುಂಚದಿಂದ ರಚಿತವಾಗಿದ್ದ ಸುಮಾರು 46 ಕೃತಿಗಳನ್ನು ಪ್ರದರ್ಶಿಸಿದ್ದರು. ಪರಂಪರಾಗತ ಸಾಹಿತ್ಯ ಕಲಾಸಂಸ್ಕಾರಗಳು ಇವರಲ್ಲಿ ಸ್ವಾಭಾವಿಕವಾಗಿಯೆ ಬಂದಿದ್ದುವು. ಕಾವ್ಯ ಸನ್ನಿವೇಶಗಳನ್ನು ದೃಶ್ಯ ರೂಪಗಳಲ್ಲಿ ಚಿತ್ರಕಲೆಯ ಮೂಲಕ ಚಿತ್ರಿಸಿದರು. ಸಂಸ್ಕೃತ ಕಾವ್ಯ ಶ್ಲೋಕಗಳ ಸೂಕ್ಷ್ಮ ವರ್ಣನೆಗಳನ್ನು ಆಧರಿಸಿ ರಚಿಸಿದ ಇವರ ಪ್ರತಿಯೊಂದು ಕೃತಿಯೂ ಅಪಾರ ಶ್ರಮದ ಕುಸುರಿ ಕೆಲಸದಿಂದ ಸಾಮಾನ್ಯ ವೀಕ್ಷಕರನ್ನೂ ತಲಪುವಲ್ಲಿ ಯಶಸ್ವಿಯಾಯಿತು. ಬೆಂಗಳೂರಿನ ವೆಂಕಟಪ್ಪ ಕಲಾಭವನ, ಮೈಸೂರು ದಸರ ವಸ್ತುಪ್ರದರ್ಶನಗಳಲ್ಲಿ ಪುರಾಣ, ಇತಿಹಾಸಗಳಿಗೆ ಸಂಬಂಧಿಸಿದ ವ್ಯಕ್ತಿ ಚಿತ್ರಗಳು, ಪ್ರಾಚೀನ ಕಾವ್ಯಗಳನ್ನಾಧರಿಸಿದ ಮೇನಕಾ ವಿಶ್ವಾಮಿತ್ರ, ಕುಮಾರ ಸಂಭವ ಮೊದಲಾದ ಕಲಾಕೃತಿಗಳು ಪ್ರದರ್ಶನಗೊಂಡಿವೆ.

ಇವರಿಗೆ ಅನೇಕ ಸನ್ಮಾನ ಗೌರವಗಳು ಲಭಿಸಿವೆ. ಹಿಂದೆ ಮೈಸೂರು ದಸರ ವಸ್ತುಪ್ರದರ್ಶನದ ಚಿತ್ರಕಲಾ ಪ್ರದರ್ಶನದಲ್ಲಿ ಬಹುಮಾನ ಗಳಿಸುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಇವರಿಗೆ 1940ರಿಂದ ಸತತವಾಗಿ 30ಕ್ಕೂ ಹೆಚ್ಚು ಬಹುಮಾನಗಳು ಬಂದವು. ಸತತ ಏಳು ವರ್ಷಗಳು ಪ್ರಥಮ ಬಹುಮಾನ ಪಡೆದರು. ಬೆಂಗಳೂರಿನಲ್ಲಿ ಜರುಗಿದ ಅಖಿಲ ಭಾರತ ಕಲಾ ಪ್ರದರ್ಶನದಲ್ಲಿ ಪ್ರಜಾವಾಣಿಯವರ ವಿಶೇಷ ಬಹುಮಾನ ಲಭ್ಯವಾಗಿತ್ತು. ನಲವತ್ತೊಂಬತ್ತನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಸನ್ಮಾನಿಸಿತು. ವಿಧಾನಸೌಧದಲ್ಲಿ ನಾಡಿನ ಖ್ಯಾತ ಚಿತ್ರಕಲಾವಿದರನ್ನು ಸನ್ಮಾನಿಸುವ ಸಮಾರಂಭದಲ್ಲಿ ಸನ್ಮಾನವಾಯಿತು. (1973). ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1982), ರಾಜ್ಯೋತ್ಸವ ಪ್ರಶಸ್ತಿ (1976) ಇವರಿಗೆ ಲಭಿಸಿವೆ.

ಇವರ ಕಲಾಕೃತಿಗಳನ್ನು ಕರ್ನಾಟಕದ ಅನೇಕ ಕಡೆ ಪ್ರದರ್ಶಿಸಲಾಗಿದೆ. ಬೆಂಗಳೂರಿನ ಜಯನಗರದಲ್ಲಿರುವ ಇವರ ನಿವಾಸದಲ್ಲಿ ತಮ್ಮ ತಂದೆಯವರ ಹೆಸರಿನಲ್ಲಿ ಸ್ಥಾಪಿಸಿದ ಸುಬ್ರಹ್ಮಣ್ಯ ಆರ್ಟ್ ಗ್ಯಾಲರಿಯಲ್ಲಿಯೂ ಇವರ ಕಲಾ ಕೃತಿಗಳಿವೆ. ಇವರು 1991 ಜನವರಿ 1ರಂದು ನಿಧನರಾದರು. (ಎಸ್‌ಯು.ಎಂ.)

**ಕುಚಿ :** ಮಧ್ಯ ಏಷ್ಯದಲ್ಲಿ ಡಾರೀಮಾ ನದಿಯ ದಡದಲ್ಲಿರುವ ಒಂದು ಸ್ಥಳ (ಈಗಿನ ಹೆಸರು ಕುಚಾರ್). ಭಾರತೀಯ ಸಂಸ್ಕೃತಿಯ ವಿಸ್ತರಣಕಾರ್ಯದಲ್ಲಿ ಪ್ರಮುಖಪಾತ್ರ ವಹಿಸಿತ್ತು. ಪುರಾತನ ಭಾರತ–ಚೀನಗಳ ವಾಣಿಜ್ಯಕ–ಸಾಂಸ್ಕೃತಿಕ ಮಾರ್ಗಗಳಲ್ಲೊಂದರ ಮೇಲಿದ್ದ ಈ ಸ್ಥಳ ಬೌದ್ಧ ಧರ್ಮದ ಕೇಂದ್ರಗಳಲ್ಲೊಂದಾಗಿದ್ದು ಚೀನದಲ್ಲಿ ಬೌದ್ಧಧರ್ಮ ಪ್ರಚಾರವಾಗಲು ಬಹಳಮಟ್ಟಿಗೆ ಕಾರಣವಾಯಿತು. ಚೀನೀ ಇತಿಹಾಸಕಾರರಿಂದ ಕುಚಿಯ ಒಂದು ಸಾವಿರ ವರ್ಷಗಳ ಇತಿಹಾಸ ತಿಳಿದು ಬರುತ್ತದೆ. ಇದು ಆಗಾಗ್ಗೆ ಚೀನದೊಂದಿಗೆ ಹೋರಾಡಿ ಅದರ ಅಧೀನವಾಗಬೇಕಾಗಿ ಬಂದರೂ ಪುನಃಪುನಃ ಶೀಘ್ರವಾಗಿ ಸ್ವಾತಂತ್ರ್ಯ ಗಳಿಸಿಕೊಳ್ಳುತ್ತಿತ್ತು.

ಮೊದಲಿನಿಂದಲೂ ಇಲ್ಲಿಯ ಅರಸರು ಸುವರ್ಣಪುಷ್ಪ, ಹರದೇವ, ಸುವರ್ಣ ದೇವ ಮುಂತಾದ ಭಾರತೀಯ ಹೆಸರುಗಳನ್ನು ಧರಿಸುತ್ತಿದ್ದರು. ಇಂಡೋಯುರೋಪಿಯನ್ ಭಾಷಾಸಂತತಿಗೆ ಸೇರಿದ ಕುಚಿ ಭಾಷೆ ಬೌದ್ಧಧರ್ಮದ ಮೂಲಕ ಸಂಸ್ಕೃತದ ಪ್ರಭಾವಕ್ಕೊಳಗಾಯಿತು. ಇಲ್ಲಿಯ ಬೌದ್ಧ ಭಿಕ್ಷುಗಳಿಗೆ ಸಂಸ್ಕೃತ ಭಾಷೆಯ ಪರಿಚಯವಿತ್ತು. ಅವರು ಆ ಭಾಷೆಯಲ್ಲಿ ಮಾತನಾಡುತ್ತಿದ್ದುದಾಗಿ ಚೀನೀ ಬರೆಹಗಾರರು ತಿಳಿಸುತ್ತಾರೆ. ಇಲ್ಲಿ ದೊರಕಿರುವ ಸಂಸ್ಕೃತ ಮತ್ತು ಕುಚಿ–ಸಂಸ್ಕೃತ ದ್ವಿಭಾಷೆಗಳ ಗ್ರಂಥಗಳ ಹಸ್ತಪ್ರತಿಗಳು ಈ ವಿಷಯವನ್ನು ಸಿದ್ಧಪಡಿಸುತ್ತವೆ. ಈ ಜನ ಉಪಯೋಗಿಸುತ್ತಿದ್ದ ಲಿಪಿಯೂ ಭಾರತೀಯ ಲಿಪಿಸಂತತಿಗೆ ಸೇರಿದ್ದೇ. ಅಜಂತ ಮತ್ತು ಬಮಿಯಾನ್ ಬಳಿಯ ಗುಹೆಗಳಲ್ಲಿದ್ದಂತೆ ಕುಚಾರ್ ಪಟ್ಟಣದ ಬಳಿಯ ಪರ್ವತ ಗುಹೆಗಳಲ್ಲೂ ಬೌದ್ಧ ಭಿಕ್ಷುಗಳು ಧ್ಯಾನ ಮತ್ತು ಧರ್ಮಗ್ರಂಥಾಭ್ಯಾಸಗಳಲ್ಲಿ ನಿರತರಾಗಿ ಪ್ರಶಾಂತ ಜೀವನ ನಡೆಸುತ್ತಿದ್ದರು. 3–4–5ನೆಯ ಶತಮಾನಗಳಲ್ಲಿ ಚೀನೀಯರಲ್ಲಿ ಬೌದ್ಧಧರ್ಮ ಪ್ರಚಾರ ಮಾಡಿದ ಬೌದ್ಧಭಿಕ್ಷುಗಳಲ್ಲಿ ಮೊದಲನೆಯವನಾದ ಕುಮಾರಜೀವನ ತಂದೆ ಕುಮಾರಾಯಣ ಕುಚಾರ್ ನಗರವಾಸಿಯಾಗಿದ್ದ. ಈತ ಭಾರತೀಯ, ಅಲ್ಲಿಯ ರಾಜಗುರು. ಕುಮಾರಜೀವನ ತಾಯಿ ಜೀವಾ ಕುಚಿ ರಾಜಮನೆತನಕ್ಕೆ ಸೇರಿದ್ದವಳು. ಕುಮಾರ ಜೀವನ ಜನನಾಂತರ ಅವಳು ಬೌದ್ಧಭಿಕ್ಷುಣಿಯಾದಳು. ಕುಚಿಯನ್ನು ಯುದ್ಧದಲ್ಲಿ ಸೋಲಿಸಿದ ಚೀನೀ ಸೈನಿಕರು ಕುಮಾರಜೀವನನ್ನು ಸೆರೆ ಹಿಡಿದು, 383 ರಲ್ಲಿ ತಮ್ಮ ದೇಶಕ್ಕೆ ಕರೆದುಕೊಂಡು ಹೋದರು. ಅಲ್ಲಿ ಈತ ಚಕ್ರವರ್ತಿಯ ಆಸ್ಥಾನ ಪಂಡಿತನಾದ. ಈತ ಚೀನ–ಭಾರತಗಳ ಮಧ್ಯೆ ಏರ್ಪಟ್ಟ ಸಾಂಸ್ಕೃತಿಕ ಸಂಪರ್ಕಗಳದ್ಯೋತಕ. ಈ ಕಾಲದಲ್ಲಿ ಕುಚಿ ಮತ್ತು ಕಾಶ್ಮೀರಗಳ ಮಧ್ಯೆ ನಿಕಟಸಂಪರ್ಕವೇರ್ಪಟ್ಟು ಕಾಶ್ಮೀರದ ಅನೇಕ ಬೌದ್ಧಭೀಕ್ಷುಗಳೂ ಪಂಡಿತರೂ ಕುಚಿಯಿಂದ ಆಕರ್ಷಿತರಾಗಿ ಅಲ್ಲಿ ನೆಲೆಸಿದುದರಿಂದ ಅಲ್ಲಿ ಭಾರತೀಯ ಸಂಸ್ಕೃತಿ ಬಹುಮುಖವಾಗಿ ಬೆಳೆಯಿತು. ಭಾರತದಿಂದ ಚೀನಕ್ಕೆ ಹೋಗುತ್ತಿದ್ದ ಅನೇಕ ಬೌದ್ಧಭಿಕ್ಷುಗಳು ಮಾರ್ಗಮಧ್ಯದಲ್ಲಿ ಕುಚಿಯಲ್ಲಿ ಕೆಲಕಾಲ ತಂಗುತ್ತಿದ್ದುದರಿಂದ ಅವರ ಮೇಲೆ ಭಾರತೀಯ ಸಂಸ್ಕೃತಿಯ ಪ್ರಭಾವ ಇನ್ನೂ ಅಧಿಕವಾಯಿತು. (ಬಿ.ಕೆ.ಜಿ.)

**ಕುಚೇಲ :** ಶ್ರೀಕೃಷ್ಣನ ಬಾಲ್ಯದ ಸಹಪಾಠಿ; ಮೆಚ್ಚಿನ ಸ್ನೇಹಿತ. ಈತನ ನಿಜವಾದ ಹೆಸರು ಸುದಾಮ. ಗುರು ಸಾಂದೀಪರಲ್ಲಿ ಇಬ್ಬರೂ ವಿದ್ಯಾಭ್ಯಾಸ ಮಾಡಿದರು.

ವಿದ್ಯಾಭ್ಯಾಸ ಪೂರೈಸಿದ ಮೇಲೆ ಶ್ರೀಕೃಷ್ಣ ಮಥುರೆಗೆ ಹಿಂತಿರುಗಿ ತನ್ನ ರಾಜಕಾರ್ಯಗಳಲ್ಲಿ ಮಗ್ನನಾದ; ಸುದಾಮ ತನ್ನ ಅಗ್ರಹಾರಕ್ಕೆ ಹಿಂತಿರುಗಿ ವೇದಕರ್ಮಗಳಲ್ಲಿ ನಿರತನಾದ. ಕಾಲಕ್ರಮದಲ್ಲೀತನಿಗೆ ಮದುವೆಯಾಗಿ ಮನೆ ತುಂಬ ಮಕ್ಕಳಾದುವು. ವೇದವೇದಾಂತಪಾರಂಗತನಾದರೂ ಕುಚೇಲನ ಬಡತನ ಮಾತ್ರ ಹಾಗೇ ಉಳಿದು ಬಂತು. ಬಡತನವಿದ್ದರೂ ಇವನಿಗೆ ಬೇಡಿ ಗೊತ್ತಿರಲಿಲ್ಲ. ಬಂದದ್ದರಲ್ಲೇ ಇವನಿಗೆ ಪರಮತೃಪ್ತಿ. ಉಡಲು ಬಟ್ಟೆ ಇಲ್ಲ, ತಿನ್ನಲು ಗಂಜಿ ಇಲ್ಲ, ಹೀಗಾಗಿ ಹಸಿವಿನಿಂದ ಬಳಲಿ, ಹರುಕು ಚಿಂದಿಗಳನ್ನು ಧರಿಸಿ ಕಾಲಯಾಪನೆ ಮಾಡುತ್ತಿದ್ದುದರಿಂದ ಜನ ಸುದಾಮನಿಗೆ ಕುಚೇಲ (ಕೆಟ್ಟ ಬಟ್ಟೆಯವ) ಎಂಬ ಅಡ್ಡಹೆಸರಿಟ್ಟರು.

ದೈವವಶಾತ್ ಕುಚೇಲನಿಗೆ ಸಿಕ್ಕ ಮಡದಿ ಪುಣ್ಯವಂತೆ. ಗಂಡನ ಮಾರ್ಗದಲ್ಲಿ ಸಹಾಯಕಾರಿ, ಗಂಡ ತಂದುದನ್ನು ಒಪ್ಪ ಓರಣವಾಗಿ ಬಳಸಿ, ಪತಿಸುತರ ಪೋಷಣೆಗೇ ವಿನಿಯೋಗಿಸಿ, ತಾನು ಎಷ್ಟೋ ವೇಳೆ ಉಪವಾಸವಿರುತ್ತಿದ್ದಳು. ಅದರಿಂದ ಜನ ಅವಳನ್ನು ಕ್ಷುತ್‌ಕ್ಷಾಮೆ ಎಂದು ಕರೆಯುತ್ತಿದ್ದರು.

ಆಕೆ ಒಂದು ದಿನ ತನ್ನ ಪತಿಗೆ 'ನೀವೂ ಶ್ರೀಕೃಷ್ಣನ ಪರಮ ಸ್ನೇಹಿತರು. ಆತನೋ ಕರುಣಿ, ದಯಾಮಯ, ನೀವು ಆತನಲ್ಲಿಗೆ ಹೋದರೆ ಆತ ನಿಮಗೆ ಸಹಾಯ ಮಾಡಲಾರನೆ. ಸಮುದ್ರದೊಡನೆ ನೆಂಟು, ಉಪ್ಪಿಗೆ ಬಡತನವೆ? ಎಂದು ಕೇಳಿದಳು.

ಈ ಮಾತು ಕೇಳಿ ಕುಚೇಲನಿಗೆ ತುಂಬ ಸಂತೋಷವಾಯಿತು. 'ಆವುದಾಗಲಿ ನೆಪಂ, ಫಲದಾಯಕಂ ತಪಂ' ಎಂಬಂತೆ ಶ್ರೀಕೃಷ್ಣನ ದರ್ಶನಭಾಗ್ಯ ಲಭಿಸುತ್ತದೆಂದು ದ್ವಾರಕೆಗೆ ಹೊರಟ, ಬರಿಗೈಯಲ್ಲಿ ಹೋಗುವುದು ಬೇಡೆಂದು ಮಡದಿ ತಂದ ಅವಲಕ್ಕಿಯನ್ನು ತನ್ನ ಚಿಂದಿಯಲ್ಲಿ ಕೊಂಡೊಯ್ದ.

ಭಗವಂತನಾದ ಶ್ರೀಕೃಷ್ಣನನ್ನು ಸ್ತೋತ್ರಮಾಡುವ ಮಾತುಗಳೆ ನಿಜವಾದ ಮಾತುಗಳು. ಆತನ ಸೇವೆ ಮಾಡುವ ಕೈಗಳೆ ಕೈಗಳು, ಆತನನ್ನು ಧ್ಯಾನಿಸುವ ಮನಸ್ಸೆ ಮನಸ್ಸು, ಆತನ ಪುಣ್ಯಕಥೆಯನ್ನು ಕೇಳುವ ಕಿವಿಗಳೆ ಕಿವಿಗಳು, ಆತನಿಗೆ ನಮಸ್ಕರಿಸುವ ತಲೆಯೆ ತಲೆ. ಆತನನ್ನು ನೋಡುವ ಕಣ್ಣೇ ಕಣ್ಣು! ಆದರೆ ಅರಮನೆಯಲ್ಲಿರುವ ಆತನನ್ನು ಕಾಣುವ ಬಗೆ ಹೇಗೆ ? – ಎಂದು ಚಿಂತಿಸುತ್ತ ದ್ವಾರಕೆಯನ್ನು ಸೇರಿ ಶ್ರೀಕೃಷ್ಣನ ಅರಮನೆಯ ಒಳಗೆ ಬಂದು ತನ್ನ ಆಗಮನದ ವಾರ್ತೆಯನ್ನು ತಿಳಿಸಿದ.

ಕುಚೇಲನ ಆಗಮನದ ವಾರ್ತೆ ತಿಳಿದ ಕೂಡಲೇ ಶ್ರೀಕೃಷ್ಣ ಅತಿ ಆದರದಿಂದ ಅವನನ್ನು ಇದಿರ್ಗೊಂಡು ತನ್ನ ಅಂತಃಪುರಕ್ಕೆ ಕರೆದೊಯ್ದು, ಸತ್ಕಾರ ಮಾಡಿದ ಕುಶಲಕ್ಷೇಮ ವಿಚಾರಿಸಿದ. ವಿನೋದಕ್ಕಾಗಿ ಮನೆಯಿಂದ ನನಗೇನು ತಂದಿರುವೆ? ಎಂದು ವಿಚಾರಿಸಿದ.

ಬಡ ಕುಚೇಲನಿಗೆ ತಂದಿರುವ ಅವಲಕ್ಕಿಯನ್ನು ತೋರಿಸಲು ನಾಚಿಕೆ. ಆದರೆ ಕೃಷ್ಣ ಬಿಡುವನೆ! ಕಂಕುಳಲ್ಲಿರುವ ಆ ಪುಟ್ಟ ಗಂಟೇನು–ಎನ್ನುತ್ತ ಅದನ್ನು ಸೆಳೆದು ಓಹೋ, ನನಗೆ ಪ್ರಿಯವಾದ ಅವಲಕ್ಕಿ ಎಂದು ಅದರಲ್ಲಿ ಒಂದು ಹಿಡಿಮುಕ್ಕಿದ. ಎರಡನೆಯ ಹಿಡಿಗೆ ಕೈಹಾಕಿದ ಕೂಡಲೇ ರುಕ್ಮಿಣಿ ಆತನ ಕೈಹಿಡಿದು 'ಸ್ವಾಮಿ, ನೀನು ತಿಂದ ಒಂದು ಹಿಡಿ ಈತನ ಇಹ ಪರಗಳೆರಡರ ಸುಖಕ್ಕೊ ಸಾಕಾಗಿದೆ. ಸಾಕು ನಿಲ್ಲಿಸು' ಎಂದು ಆತನನ್ನು ತಡೆದಳು.

ಕುಚೇಲ ಕೆಲವು ದಿನಗಳವರೆಗೆ ಸಂತೋಷದಿಂದ ಕೃಷ್ಣನೊಡನಿದ್ದು, ಅನಂತರ ಅವನಿಂದ ಬೀಳ್ಕೊಂಡು ತನ್ನ ಅಗ್ರಹಾರಕ್ಕೆ ಹೊರಟ. ಸರ್ವಜ್ಞನಾದ ಶ್ರೀಕೃಷ್ಣ ಕುಚೇಲನ ಗೃಹಕೃತ್ಯಗಳನ್ನು ವಿಚಾರಿಸಲಿಲ್ಲ. ಪರಯಾಚನಾವಿಮುಖನಾದ ಕುಚೇಲನೂ ತನ್ನ ದುಃಸ್ಥಿತಿಯನ್ನು ಹೇಳಿಕೊಳ್ಳಲಿಲ್ಲ. ಅದರ ಬದಲು ನಿಶ್ಚಿಂತನಾಗಿ ಮನೆಯ ದಾರಿ ಹಿಡಿದ. ಹಾಗೆ ಬರುತ್ತ ತನ್ನ ಮನಸ್ಸಿನಲ್ಲಿ ಆಹಾ, ಲಕ್ಷ್ಮೀಪತಿಯಾದ ಶ್ರೀಕೃಷ್ಣ ದಟ್ಟದರಿದ್ರನಾದ ನನ್ನನ್ನು ಆಲಂಗಿಸಿದನಲ್ಲಾ! ನನ್ನನ್ನು ತನ್ನ ಮಂಚದ ಮೇಲೆ ಕೂಡಿಸಿಕೊಂಡು ತನ್ನ ಪಟ್ಟದ ರಾಣಿಯಿಂದ ಗಾಳಿ ಹಾಕಿಸಿದನಲ್ಲಾ! ದೇವದೇವನಾದ ಆತ ನನ್ನ ಕಾಲನ್ನು ತೊಳೆದು ನಾನೇ ದೇವರೇನೋ ಎಂಬಂತೆ ಉಪಚರಿಸಿದನಲ್ಲಾ! ಸರ್ವಾಂತರ್ಯಾಮಿಯಾದ ಆತನಿಗೆ ನನ್ನ ಮನಸ್ಸಿನ ಆಸೆ ಗೊತ್ತಿರಬೇಕು. ಆದರೂ ಆತ ನನಗೆ ಧನವನ್ನೇನೂ ಕೊಡದಿದ್ದುದನ್ನು ನೋಡಿದರೆ ನನ್ನ ಉದ್ಧಾರಕ್ಕಾಗಿಯೇ ಆತ ಹಾಗೆ ಮಾಡಿರಬೇಕು. ಭಾಗ್ಯವಂತನಾದರೆ ಭಗವಂತ ಮರೆತು ಹೋಗುತ್ತಾನೆ'– ಎಂದುಕೊಳ್ಳುತ್ತ ತನ್ನ ಅಗ್ರಹಾರವನ್ನು ಸಮೀಪಿಸಿದ. ಅದನ್ನು ಕಂಡು ಅಚ್ಚರಿಪಟ್ಟ!

ಅಷ್ಟರಲ್ಲಿ ಕೃಷ್ಣನ ಅಪ್ಪಣೆಯಂತೆ ವಿಶ್ವಕರ್ಮ ಆ ಅಗ್ರಹಾರವನ್ನೆಲ್ಲ ದಿವ್ಯನಗರಿಯಾಗಿ ಮಾರ್ಪಡಿಸಿದ್ದ. ಕುಚೇಲನ ಮನೆಯ ಗುರುತೇ ಸಿಗಲಿಲ್ಲ. ಅಂಥ ಭವ್ಯ ಭವನವೊಂದು

ಅವನದಾಗಿತ್ತು. ಆಗ ಕುಚೇಲನ ಮಡದಿ ದಿವ್ಯವಸ್ತ್ರಾಭರಣ ಭೂಷಿತೆಯಾಗಿ ಬಂದು ಅವನನ್ನು ಇದಿರ್ಗೊಂಡು ಒಳಕ್ಕೆ ಕರೆದೊಯ್ದಳು.

ಆಗ ಕುಚೇಲ ಇದೆಲ್ಲವನ್ನೂ ಕಂಡು 'ಆಹಾ! ಶ್ರೀಕೃಷ್ಣ! ನಾನು ಕೇಳದೆಯೇ ನೀನಿಷ್ಟು ಐಶ್ವರ್ಯವನ್ನಿತ್ತೆ. ಅರೆಕಾಸಿನ ಭಕ್ತಿಗೆ ಅರಮನೆಯನ್ನೇ ಕೊಡುವ ಉದಾರಿ ನೀನು. ಹಿಡಿ ಅವಲಕ್ಕಿಗೆ ಹಿರಿಹಿರಿ ಹಿಗ್ಗಿ ಈ ಒಡೆತನವಿತ್ತೆಯಲ್ಲ! ನಾನು ಇದನ್ನು ಕಟ್ಟಿಕೊಂಡು ಏನು ಮಾಡಲಿ? ಈ ಭೋಗಭಾಗ್ಯಗಳಿಂದ ನನಗೆ ಅಹಂಕಾರ ಮೂಡದಂತೆ ನನ್ನನ್ನು ಅನುಗ್ರಹಿಸು. ನಿನ್ನ ಮೇಲಿನ ಭಕ್ತಿ ನನ್ನಲ್ಲಿ ನಿರಂತರವಾಗಿರಲಿ' ಎಂದು ಭಗವಂತನನ್ನು ಬೇಡಿದ.

ಜ್ಞಾನಿಯಾದ ಆತ ತನಗೆ ಮಹದೈಶ್ವರ್ಯ ಬಂದರೂ ಅವಿವೇಕಿಯಾಗಲಿಲ್ಲ. ಸಕಲ ಭೋಗಭಾಗ್ಯಗಳ ಮಧ್ಯದಲ್ಲಿಯೂ ಆ ಬ್ರಹ್ಮಜ್ಞಾನಿ ತಾವರೆ ಎಲೆಯ ಮೇಲಿನ ಜಲಬಿಂದುವಿನಂತೆ ಪರಮಾತ್ಮನ ಧ್ಯಾನದಲ್ಲೇ ಮಗ್ನನಾಗಿ ಸಂತೋಷದಿಂದ ಜೀವಿಸಿದ.

ಕುಚೇಲೋಪಾಖ್ಯಾನ ಬಹು ಹಿಂದಿನಿಂದಲೂ ಕವಿಗಳಿಗೆ, ಕಥಾ ಕಾಲಕ್ಷೇಪ ಮಾಡುವವರಿಗೆ ಬಹು ಪ್ರಿಯವಾದ ವಸ್ತುವಾಗಿದೆ. (ಪಿ.ವಿ.ಸಿ.)

**ಕುಚ್ಚುಮೀನು** : ಓಫಿಯೋಸೆಫಾಲಿಡೆ ಅಥವಾ ಚಾನಿಡೆ ಕುಟುಂಬಕ್ಕೆ ಓಫಿಯೊಸೆಫಾಲಸ್ ಸ್ಟ್ರೈಯೇಟಸ್ ಎಂಬ ವೈಜ್ಞಾನಿಕ ಹೆಸರಿನ ಮೀನು. ಇದನ್ನು ಮರಲ್ ಎಂದೂ ಕರೆಯುವುದುಂಟು. ಇದಕ್ಕೆ ಹಾವಿನ ತಲೆಯಂಥ ತಲೆಯಿದೆ. ಇದರಿಂದಲೇ ಇದಕ್ಕೆ ಓಫಿಯೊಸೆಫಾಲಸ್ ಎಂಬ ಹೆಸರು ಬಂದಿದೆ (ಓಪಿಯೋಸ್ ಎಂದರೆ ಹಾವು, ಸೆಫಾಲಸ್ ಎಂದರೆ ತಲೆ), ಈ ಮೀನಿನ ತಲೆಯಲ್ಲಿ ಅನೇಕ ಕುಹರಗಳಿದ್ದು ಅವು ಹೆಚ್ಚುಕಡಿಮೆ ಶ್ವಾಸಕೋಶಗಳಂತೆಯೇ ನೇರವಾಗಿ ಗಾಳಿಯ ಉಸಿರಾಟಕ್ಕೆ ಸಹಕಾರಿಯಾಗಿವೆ. ಇದರಿಂದಾಗಿ ಈ ಮೀನು ನೀರಿನಿಂದ ಹೊರಗೂ ಬಹಳ ಕಾಲ ಜೀವಂತವಾಗಿರಬಲ್ಲುದು. ಕುಚ್ಚುಮೀನಿನ ದೇಹ ನೀಳವಾಗಿದೆ. ದೇಹದ ಬಣ್ಣ ಬೆನ್ನುಭಾಗದಲ್ಲಿ ಕಂದು, ಪಕ್ಕೆ ಹಾಗೂ ತಳಭಾಗದಲ್ಲಿ ಮಾಸಲು ಬಿಳಿ. ಪಕ್ಕೆಗಳಲ್ಲಿ ಮಚ್ಚೆಗಳೂ ಇವೆ. ದೇಹದುದ್ದಕ್ಕೂ ಎರಡು ಪಕ್ಕೆಗಳಲ್ಲೂ ಪಾರ್ಶ್ವರೇಖೆ ಇದೆ. ಈ ರೇಖೆ ಬೆನ್ನಿನ ಈಜು ರೆಕ್ಕೆಯ 12ನೆಯ ರೆಕ್ಕೆಕಡ್ಡಿಯ (ರೇ) ಬಳಿ ಕೊಂಚ ಡೊಂಕಾಗಿದೆ. ತಲೆ ಅಗಲ, ಅದರ ಮೇಲೆಲ್ಲ ಹುರುಪೆಗಳಿವೆ. ಬಾಯಿ ದೊಡ್ಡದು. ನಾಲ್ಕು ಕಿವಿರುಗಳೂ ಅಗಲವಾದ ಕಿವಿರುರಂಧ್ರಗಳೂ ಇವೆ.

ಸಿಹಿನೀರು ಮೀನುಗಳಲ್ಲೆಲ್ಲ ಹೆಸರುವಾಸಿಯಾದ ಕುಚ್ಚುಮೀನು ಆಳವಿಲ್ಲದ ಮತ್ತು ಜೊಂಡು ಬೆಳೆದ ಕೆರೆ, ಕುಂಟೆ ಮತ್ತು ಹೊಂಡಗಳಲ್ಲಿ ವಾಸಿಸುತ್ತದೆ. ಆಹಾರಮೀನುಗಳಲ್ಲಿ ಬಹಳ ರುಚಿಯಾದ ಮೀನೆಂದು ಪರಿಗಣಿಸಲ್ಪಟ್ಟಿರುವ ಇವನ್ನು ಕೆರೆಗಳಲ್ಲಿ ಬೆಳೆಸುವುದು ಉಂಟು. ಸ್ವಜಾತಿಯ ಹಾಗೂ ಕಾರ್ಪ್ ಜಾತಿಯ ಮೀನುಗಳು, ಕಪ್ಪೆ ಸೀಗಡಿ, ಕೀಟಗಳು ಮುಂತಾದವು ಇದರ ಪ್ರಧಾನ ಆಹಾರ.

ಕುಚ್ಚುಮೀನಿನ ವಂಶಾಭಿವೃದ್ಧಿ ಮೊಟ್ಟೆಗಳ ಮೂಲಕ, ನೀರಿನ ಮೇಲೆ ತೇಲುವ ಮೊಟ್ಟೆಗಳನ್ನಿಡುವುದು ಇದರ ವೈಶಿಷ್ಟ್ಯ. ವರ್ಷಪೂರ್ತಿ ಮೊಟ್ಟೆಯಿಡುವುದಾದರೂ ಮಳೆಗಾಲದಲ್ಲಿ ಈ ಚಟುವಟಿಕೆ ಹೆಚ್ಚು. ಮೊಟ್ಟೆಗಳು ಒಂದೆರಡು ದಿನಗಳಲ್ಲಿ ಒಡೆದು ಮರಿಯಾಗುತ್ತವೆ. ಮೊಟ್ಟೆ ಮತ್ತು ಮರಿಗಳ ಸಂರಕ್ಷಣೆಯನ್ನು ತಾಯಿಮೀನು ನೋಡಿಕೊಳ್ಳುತ್ತದೆ. ಮರಿಗಳು 2"–3" ಉದ್ದ ಬೆಳೆದಾಗ ಅವುಗಳ ಬಣ್ಣ ಕಿತ್ತಳೆಗೆಂಪು. ಸುಮಾರು ಒಂದು ಅಡಿ ಉದ್ದವಾದಾಗ ಪ್ರೌಢಾವಸ್ಥೆಗೆ ಬರುತ್ತವೆ.

ಅತಿರುಚಿಯಾದ ಆಹಾರ ಮೀನಾದ ಕುಚ್ಚುಮೀನಿಗೆ ಬೇಡಿಕೆಯೂ ಅಧಿಕ, ಇದರ ಬೆಲೆಯೂ ಹೆಚ್ಚು. ಇದನ್ನು ಹಿಡಿಯಲು ಬಲೆ, ದಾವಣಿಗಾಳ, ಕುಚ್ಚು ಉರಲು ಮತ್ತು ಇರ್ಗುಳಿ (ಪ್ಲಂಜ್ ಬ್ಯಾಸ್ಕೆಟ್) ಮುಂತಾದವನ್ನು ಉಪಯೋಗಿಸುತ್ತಾರೆ. (ಬಿ.ಎನ್.)

**ಕುಜ್ನೆಟ್ಸ್, ಸೈಮನ್** : 1901–1985. ಅಮೆರಿಕ ಸಂಯುಕ್ತ ಸಂಸ್ಥಾನದ ಹಾರ್ವರ್ಡ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದಲ್ಲಿ ಪ್ರಾಧ್ಯಾಪಕನಾಗಿದ್ದ; ಅರ್ಥಶಾಸ್ತ್ರ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ವಿಜೇತ. ಸಮೀಕ್ಷಾತ್ಮಕ ಪ್ರಾಯೋಗಿಕ ಆರ್ಥಿಕ ಬೆಳವಣಿಗೆಯ ವಿಶ್ಲೇಷಣೆ ಮತ್ತು ಫಲಿತಾಂಶ ವಿವರಣೆಗಾಗಿ ಈತನಿಗೆ ನೊಬೆಲ್ ಪ್ರಶಸ್ತಿ ದೊರಕಿತು (1971) ಕುಜ್ನೆಟ್ಸ್ 1901 ರ ಏಪ್ರಿಲ್ 30ರಂದು ರಷ್ಯದ ಖಾರ್ಕಾಫಿನಲ್ಲಿ ಜನಿಸಿದ. ಈತ ತನ್ನ 20ನೆಯ ವಯಸ್ಸಿನಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಆಗಮಿಸಿದ. ಅಲ್ಲಿಯ ಕೊಲಂಬಿಯ ವಿಶ್ವವಿದ್ಯಾಲಯದಿಂದ ಬಿ.ಎಸ್. (1923), ಎಂ.ಎ. (1924) ಮತ್ತು ಡಾಕ್ಟೊರೇಟ್ (1926) ಪದವಿಗಳನ್ನು ಪಡೆದ. ಚಿಲ್ಲರೆ ಹಾಗು ಸಗಟು ವ್ಯಾಪಾರದಲ್ಲಿ ಆವರ್ತಕ ಚಲನಗಳು ಎಂಬುದು ಈತ ತನ್ನ ಪ್ರೌಢ ಪ್ರಬಂಧಕ್ಕೆ ಆರಿಸಿಕೊಂಡು ವಿಷಯ. ಡಾಕ್ಟೊರೇಟ್ ಪದವಿ ಪಡೆದ ಅನಂತರ 1927 ರಲ್ಲಿ ಕುಜ್ನೆಟ್ಸ್‌ಗೆ ನ್ಯೂಯಾರ್ಕಿನ ನ್ಯಾಷನಲ್ ಬ್ಯೂರೋ ಆಫ್ ಎಕನಾಮಿಕ್ ರಿಸರ್ಚ್‌ನಲ್ಲಿ ಒಂದು ಹುದ್ದೆ ಪ್ರಾಪ್ತವಾಯಿತು. 1936–54ರ ಅವಧಿಯಲ್ಲಿ ಈತ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕನಾಗಿಯೂ 1954–60 ರಲ್ಲಿ ಜಾನ್ ಹಾಪ್ ಕಿನ್ಸ್ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿಯೂ ಕೆಲಸ ಮಾಡಿದ. ಕುಜ್ನೆಟ್ಸ್ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿದ್ದ 1960 ರಲ್ಲಿ.

ಕುಜ್ನೆಟ್ಸ್‌ನದು ಅರ್ಥಶಾಸ್ತ್ರ ಪ್ರಪಂಚದಲ್ಲಿ ದೊಡ್ಡ ಹೆಸರು. ಈತನ ಸಂಶೋಧನೆ ವಿಶಿಷ್ಟವಾದ್ದು. ಇದು ಅನುಭವೈಕ ಕ್ರಮ. ಈ ಕ್ರಮದ ಸಂಶೋಧನೆ ಬಹಳ ಕಠಿಣವಾದ್ದು. ಈ ಕ್ರಮದ ಪ್ರಕಾರ ಯಾವುದೇ ಸಿದ್ಧಾಂತವನ್ನು ಮಂಡಿಸಬೇಕಾದರೂ ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಅಂಕಿ–ಅಂಶಗಳನ್ನೂ ಸಂಗ್ರಹಿಸಿ, ಅವನ್ನು ಕ್ರಮಬದ್ಧವಾಗಿ ವಿಶ್ಲೇಷಿಸಿ, ಅನುಭವಸತ್ಯವಾದಿ ಸಿದ್ಧಾಂತವನ್ನು ರೂಪಿಸಿ, ಅವುಗಳ ಅನ್ವಯದಿಂದ ದೊರಕಬಹುದಾದ ಫಲಿತಾಂಶವನ್ನು ಪತ್ತೆ ಹಚ್ಚಬೇಕಾಗುತ್ತದೆ. ಈ ಕ್ರಮದ ಅನ್ವೇಷಣೆಗೆ ಆಕರ್ಷಿತರಾಗಿರುವ ಅರ್ಥವಿಜ್ಞಾನಿಗಳು ವಿರಳ. ಕುಜ್ನೆಟ್ಸ್ ಇಂಥ ಅನ್ವೇಷಣೆಯಲ್ಲಿ ಅತ್ಯಂತ ಯಶಸ್ಸನ್ನು ಸಾಧಿಸಿ ಪ್ರಶಸ್ತಿ ಪಡೆದಿದ್ದಾನೆ.

ನೊಬೆಲ್ ಪ್ರಶಸ್ತಿಯೇ ಅಲ್ಲದೆ ಇನ್ನೂ ಅನೇಕ ಪ್ರಶಸ್ತಿಗಳು ಕುಜ್ನೆಟ್ಸ್‌ಗೆ ದೊರಕಿವೆ. ಜೆರೂಸಲೆಂನ ಹೀಬ್ರೂ ವಿಶ್ವವಿದ್ಯಾಲಯದ ಡಾಕ್ಟೊರೇಟ್ ಪದವಿ, ಇಂಗ್ಲೆಂಡಿನ ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿಯ ಗೌರವ ಫೆಲೊಷಿಪ್, ಪ್ರಿನ್ಸ್ ಟನ್, ಪೆನ್‌ಸಿಲ್‌ವೇನಿಯ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯಗಳ ಗೌರವ ಎಸ್ ಸಿ.ಡಿ., ಕೊಲಂಬಿಯ ವಿಶ್ವವಿದ್ಯಾಲಯದ ಡಿ.ಎಚ್.ಎಲ್–ಇವು ಅಂಥ ಪ್ರಶಸ್ತಿಗಳಲ್ಲಿ ಕೆಲವು.

ಅಮೆರಿಕನ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್, ಅಮೆರಿಕ ಸ್ಟ್ಯಾಟಿಸ್ಟಿಕಲ್ ಅಸೋಸಿಯೇಷನ್, ಇಂಟರ್ ನ್ಯಾಷನಲ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್, ಅಮೆರಿಕನ್ ಫಿಲಸಾಫಿಕಲ್ ಸೊಸೈಟಿ, ಎಕಾನೊಮಿಟ್ರಿಕ್ ಸೊಸೈಟಿ ಮತ್ತು ಸ್ವೀಡಿಷ್ ರಾಯಲ್ ಅಕೆಡಮಿ ಆಫ್ ಸೈನ್ಸಸ್ ಮುಂತಾದ ಸಂಸ್ಥೆಗಳ ಸದಸ್ಯತ್ವ ಕುಜ್ನೆಟ್ಸ್‌ಗೆ ದೊರಕಿದೆ. ಕುಜ್ನೆಟ್ಸ್ 1954 ರಲ್ಲಿ ಅಮೆರಿಕನ್ ಎಕೊನಾಮಿಕ್ ಅಸೋಸಿಯೇಷನ್‌ನ ಅಧ್ಯಕ್ಷನಾಗಿದ್ದ.

ಕುಜ್ನೆಟ್ಸ್ ಪ್ರಸಿದ್ಧನಾಗಿರುವ ಮುಖ್ಯವಾಗಿ ಆರ್ಥಿಕ ಬೆಳವಣಿಗೆ ಮತ್ತು ರಾಷ್ಟ್ರೀಯ ಆದಾಯ ವಿಶ್ಲೇಷಣೆಗಳಿಗಾಗಿ. ಈತ 30ಕ್ಕೂ ಹೆಚ್ಚು ಗ್ರಂಥಗಳನ್ನು ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ರಚಿಸಿದ್ದಾನೆ. ಇವುಗಳ ಪೈಕಿ ಮಾಡರ್ನ್ ಎಕೊನಾಮಿಕ್ ಗ್ರೋತ್; ರೇಟ್ ಸ್ಟ್ರಕ್ಚರ್ ಅಂಡ್ ಸ್ಪ್ರೆಡ್ (1966) ಮತ್ತು ಎಕೊನಾಮಿಕ್ ಗ್ರೋತ್ ಆಫ್ ನೇಷನ್ಸ್; ಟೋಟಲ್ ಔಟ್‌ಪುಟ್ ಅಂಡ್ ಪ್ರೊಡಕ್ಷನ್ ಸ್ಟ್ರಕ್ಚರ್ (1971) ಎಂಬ ಎರಡು ಗ್ರಂಥಗಳು ಬಹಳ ಪ್ರಸಿದ್ಧವಾದವು. ಇವು ಅಂತಾರಾಷ್ಟ್ರೀಯ ಉತ್ಪನ್ನ ಮತ್ತು ರಾಷ್ಟ್ರೀಯ ವರಮಾನಗಳ ಹೆಚ್ಚಳ ಹಂಚಿಕೆಗಳ ಅಂತಾರಾಷ್ಟ್ರೀಯ ಹೋಲಿಕೆಗಳನ್ನು ಕುರಿತು ಹೊಸ ವಿಷಯವನ್ನೂ ವಿನೂತನ ವಿಶ್ಲೇಷಣೆ ಮತ್ತು ವಿತರಣೆಗಳನ್ನೂ ನೀಡುತ್ತವೆ ಎಂದು ಅಕಾಡೆಮಿ ಅಭಿಪ್ರಾಯಪಟ್ಟಿದೆ.

ತನ್ನ ಗ್ರಂಥಗಳಲ್ಲಿ ಮತ್ತು ಅಸಂಖ್ಯಾತ ಲೇಖನಗಳಲ್ಲಿ ಕುಜ್ನೆಟ್ಸ್ ರಾಷ್ಟ್ರೀಯ ಆದಾಯ ಮತ್ತು ದೇಶದ ಅರ್ಥವ್ಯವಸ್ಥೆಯ ಲೆಕ್ಕಾಚಾರಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನು ನಿರೂಪಿಸಿದ್ದಾನೆ. ಈತನ ಈ ವಿಧಾನಗಳನ್ನು ಪ್ರಪಂಚದ ಅನೇಕ ರಾಷ್ಟ್ರಗಳು ತಮ್ಮ ದೇಶಗಳ ಆರ್ಥಿಕ ಭವಿಷ್ಯದ ಮುನ್ನರಿವು ಪಡೆಯುವುದಕ್ಕಾಗಿ ಬಳಸಿವೆ. ಪ್ರೊಫೆಸರ್ ಕುಜ್ನೆಟ್ಸ್ ರಾಷ್ಟ್ರೀಯ ವರಮಾನಕ್ಕೆ ಸಂಬಂಧಿಸಿದಂತೆ ಅನೇಕ ಪರಿಮಾಣ ವಿಶ್ಲೇಷಣೆಗಳನ್ನು ನಡೆಸಿದ್ದಾನೆ. ಈತ ಅವಿರತವಾಗಿ ಸಂಶೋಧನೆ ನಡೆಸಿ ಆರ್ಥಿಕ ಪರಿಕಲ್ಪನೆಗಳಿಗೆ ನಿರ್ದಿಷ್ಟವಾದ ಅರ್ಥ ನಿರೂಪಣೆಗಳನ್ನು ಒದಗಿಸಿದ್ದಾನೆ. ಒಂದು ರಾಷ್ಟ್ರದ ಆದಾಯದ ಬೆಳವಣಿಗೆಗಿಂತ ಮತ್ತೊಂದು ರಾಷ್ಟ್ರದ ಆದಾಯದ ಬೆಳವಣಿಗೆ ಹೇಗೆ ಮತ್ತು ಏಕೆ ಭಿನ್ನವಾಗಿರುತ್ತದೆ ಎಂಬುದನ್ನು ಈತ ಸಾಧರವಾಗಿ, ಅಂಕಿ–ಅಂಶಗಳ ನೆರವಿನಿಂದ ಹಾಗೂ ಆಯಾ ರಾಷ್ಟ್ರಗಳ ದೀರ್ಘಕಾಲದ ಅನುಭವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾನೆ. ಇಷ್ಟೇ ಅಲ್ಲದೆ ಗೌಣವಾದ ಅನೇಕ ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು ಆರ್ಥಿಕ ಬೆಳವಣಿಗೆಯಲ್ಲಿ ಹೇಗೆ ಪ್ರಭಾವಪೂರ್ಣ ಪಾತ್ರವಹಿಸಬಲ್ಲವು ಎಂಬುದನ್ನು ಸಹ ಬೆಳಕಿಗೆ ತಂದಿದ್ದಾನೆ. ಕುಜ್ನೆಟ್ಸ್ ರಚಿಸಿದ ಸ್ಥೂಲ ರಾಷ್ಟ್ರೀಯ ಉತ್ಪನ್ನ ಎಂಬ ಆರ್ಥಿಕ ಪರಿಕಲ್ಪನೆ ಬಹಳ ಪ್ರಖ್ಯಾತವಾದ್ದು ಅನಭಿವೃದ್ಧ ರಾಷ್ಟ್ರ ಎಂಬುದಕ್ಕೆ ಈತ ನೀಡಿರುವ ವ್ಯಾಖ್ಯೆಯೂ ಗಮನಾರ್ಹವಾದ್ದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಂದರೆ ತಾವು ಪಡೆಯಬೇಕಾದ ಆರ್ಥಿಕ ಪ್ರಗತಿಯನ್ನು ಇನ್ನೂ ಸಾಧಿಸಿದೆ. ತಮ್ಮ ಸಂಪತ್ತನ್ನು ಇನ್ನೂ ಪೂರ್ಣವಾಗಿ ಉಪಯೋಗಿಸಿಕೊಂಡಿಲ್ಲದಿರುವ

ರಾಷ್ಟ್ರಗಳು; ಅವಕ್ಕೆ ಬೆಳೆಯುವ ಚೈತನ್ಯವಿದೆ–ಎನ್ನುವುದು ಕುಜ್ನೆಟ್ಸನ ವ್ಯಾಖ್ಯೆ. ಅಕಾಡೆಮಿ ಅಭಿಪ್ರಾಯಪಟ್ಟಿರುವಂತೆ, ಆರ್ಥಿಕ ಪ್ರಗತಿಯನ್ನು ಡಾಲರ್–ಸೆಂಟುಗಳಲ್ಲಿ ಅಳತೆ ಮಾಡಬಹುದು ಮತ್ತು ರಾಷ್ಟ್ರೀಯ ಆದಾಯಕ್ಕೆ ಬಂಡವಾಳದ ಚಲನವಲನಗಳು ಪ್ರಮುಖ ಅಂಶ–ಎಂಬ ನಂಬಿಕೆಯನ್ನು ಪ್ರೊಫೆಸರ್ ಕುಜ್ನೆಟ್ಸ್ ಉರುಳಿಸಿದ್ದಾನೆ. ಬಂಡವಾಳದ ಗಳಿಕೆಗಿಂತ ದುಡಿಮೆಯಿಂದ ಬಂದ ಗಳಿಕೆ ಮುಖ್ಯವೆಂದೂ ಆರ್ಥಿಕ ವ್ಯವಸ್ಥೆಗೆ, ಅದರಲ್ಲೂ ಅಭಿವೃದ್ಧಿಶೀಲ ದೇಶಗಳಲ್ಲಿ, ತರಬೇತಿ ಹೊಂದಿದ ಕಾರ್ಮಿಕ ವರ್ಗ ಅಗತ್ಯವೆಂದೂ ಕುಜ್ನೆಟ್ಸ್ ತನ್ನ ವಿಶ್ಲೇಷಣೆಯಿಂದ ತೋರಿಸಿದ್ದಾನೆ. ನಾನಾ ದೇಶಗಳ ವಿಭಿನ್ನ ಸಾಮಾಜಿಕ, ರಾಜಕೀಯ ಅಭಿವೃದ್ಧಿಯ ಸ್ಪಷ್ಟ ವಿಶ್ಲೇಷಣೆ ಕುಜ್ನೆಟ್ಸನ ಅಧ್ಯಯನದಿಂದ ಸಾಧ್ಯವಾಗಿದೆ. ಈತನ ಅಧ್ಯಯನ ಅಭಿವೃದ್ಧಿ ಹೊಂದುತ್ತಿರುವ ಅನೇಕ ರಾಷ್ಟ್ರಗಳಿಗೆ ದಾರಿದೀಪವಾಗಿದೆ.

ಕುಜ್ನೆಟ್ಸ್ ತನ್ನ ಬುದ್ಧಿಶಕ್ತಿ ಪ್ರಯೋಜನವನ್ನು ಇಡೀ ವಿಶ್ವಕ್ಕೆ ಒದಗಿಸಿ ಕೊಟ್ಟಿದ್ದಾನೆ. 1926–58 ರಲ್ಲಿ ಕುಜ್ನೇಟ್ಸ್ ನ್ಯೂ ಯಾರ್ಕಿನ ರಾಷ್ಟ್ರೀಯ ಆರ್ಥಿಕ ಸಂಶೊಧನ ಬ್ಯೂರೋವಿನ ಸದಸ್ಯನಾಗಿದ್ದ. ಈತ ತನ್ನ ಬಹುತೇಕ ಸಂಶೋಧನೆಗಳನ್ನು ನಡೆಸಿದ್ದು ಈ ಕಾಲದಲ್ಲೇ. 1960 ರಿಂದ ಮತ್ತೆ ಅದೇ ಬ್ಯೂರೋವಿನ ಸದಸ್ಯನಾಗಿ ಕೆಲಸ ಮಾಡುತ್ತಿದ್ದಾನೆ. ಕುಜ್ನೆಟ್ಸ್ 1942–44 ರಲ್ಲಿ ವಾಷಿಂಗ್‌ಟನ್ನಿನ ಬ್ಯೂರೋ ಆಫ್ ಪ್ಲಾನಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ್‌ನ ಸಹನಿರ್ದೇಶಕನಾಗಿಯೂ 1946ರಲ್ಲಿ ಚೀನದ ನ್ಯಾಷನಲ್ ರಿಸೋರ್ಸಸ್ ಕಮಿಟಿಯ ಸಲಹೆಗಾರನಾಗಿಯೂ 1950–51ರಲ್ಲಿ ಭಾರತದ ರಾಷ್ಟ್ರೀಯ ವರಮಾನ ಸಮಿತಿಯ ಸದಸ್ಯನಾಗಿಯೂ ಇದ್ದ. 1985 ಜುಲೈ 8ರಂದು ನಿಧನ ಹೊಂದಿದ. (ಸಿ.ಕೆ.ಆರ್.)

**ಕುಟಿಲ ಲಿಪಿ :** ಒಂದು ವಿಶೇಷ ರೀತಿಯ ನಾಗರೀ ಲಿಪಿ. ಸು.6ನೆಯ ಶತಮಾನದಿಂದ 9ನೆಯ ಶತಮಾನದವರೆಗೆ ಇದು ಉತ್ತರ ಭಾರತದಲ್ಲಿ ಪ್ರಚಲಿತವಾಗಿತ್ತು. ಅಕ್ಷರಗಳ ನೇರ ಗೆರೆಗಳೆಲ್ಲ ಕೆಳಭಾಗದಲ್ಲಿ ಬಲಕ್ಕೆ ಬಾಗಿದಂತಿರುವುದೂ ಸಂಯುಕ್ತ ಸ್ವರಚಿಹ್ನೆಗಳು ಉದ್ದಕ್ಕೆ ಅಂಕುಡೊಂಕಾಗಿರುವುದೂ ಇದರ ವೈಶಿಷ್ಟ್ಯ. ಈ ರೀತಿಯ ಅಕ್ಷರಗಳ ವಕ್ರರೂಪದಿಂದಲೇ ಈ ಲಿಪಿಗೆ ಕುಟಿಲ ಎಂಬ ಹೆಸರು ರೂಢವಾದಂತೆ ಕಾಣುತ್ತದೆ. ಕುಟಿಲ ಲಿಪಿಯ ಪ್ರಾರಂಭಿಕ ಘಟ್ಟವನ್ನು ಯಶೋವರ್ಮನ ಮಂಡಸೋರ್ ಶಿಲಾಲೇಖದಲ್ಲೂ ಮಹಾನಾಮನ ಬುದ್ಧಗಯೆಯ ಶಾಸನಗಳಲ್ಲೂ ಕಾಣಬಹುದು. ಮೌಖರಿ ಅರಸರ ಶಾಸನಗಳು, ಹರ್ಷವರ್ಧನನ ತಾಮ್ರಪಟಗಳು, ಚಂಬಾದ ಮೇರುವರ್ಮನ ಶಾಸನಗಳು, ಮಾಳವ ಮತ್ತು ರಾಜಸ್ತಾನದಲ್ಲಿ ದೊರಕಿರುವ ಪ್ರತೀಹಾರ ರಾಜರ ಶಾಸನಗಳು, ಜಪಾನಿನಲ್ಲಿ ಹೊರ್ಯುಜೀ ಬೌದ್ಧ ಮಂದಿರದಲ್ಲಿಟ್ಟಿರುವ ಪ್ರಜ್ಞಾಪಾರಮಿತ, ಹೃದಯ ಸೂತ್ರ ಮತ್ತು ಉಷ್ಣೀಪ ವಿಜಯ ಎಂಬ ಹಸ್ತಪತ್ರಿಗಳು–ಇವೆಲ್ಲ ಈ ಲಿಪಿಯಲ್ಲೇ ಇವೆ. ಇಂದಿನ ದೇವನಾಗರೀ ಅಕ್ಷರಗಳ ಮೂಲರೂಪಗಳು ಈ ಲಿಪಿಯಲ್ಲಿ ಕಂಡುಬರುತ್ತವೆ. (ಎಸ್.ಎನ್.)

**ಕುಟುಂಬ :** ತಂದೆತಾಯಿಯರನ್ನೂ ಅವರ ಮಕ್ಕಳನ್ನೂ, ಅನೇಕ ವೇಳೆ ಅವರ ಹತ್ತಿರದ ಬಂಧುಗಳನ್ನೂ, ಮನೆ ಸೇವಕರನ್ನೂ ಒಳಗೊಂಡ, ವಸತಿ ಭೋಜನಗಳೇ ಮುಂತಾದ ವಿಚಾರಗಳಲ್ಲಿ ಸಹಭಾಗಿಗಳಾಗಿರುವವರ ಒಂದು ಮುಖ್ಯ ಸಾಮಾಜಿಕ ಆರ್ಥಿಕ ಜೈವಿಕ ಘಟಕ (ಫ್ಯಾಮಿಲಿ). ಒಬ್ಬ ಗಂಡಸು, ಒಬ್ಬ ಹೆಂಗಸು ಮತ್ತು ಅವರ ಮಕ್ಕಳು–ಇದು ಆಧುನಿಕ ಕುಟುಂಬದ ಸಾಮಾನ್ಯ ರಚನೆ. ಒಂಟಿಯಾಗಿ ಬಾಳುವುದು ಮಾನವನ ಸ್ವಭಾವವಲ್ಲ. ಹಿಂದಿನಿಂದಲೂ ಅವನು ಸಂಘಜೀವಿ. ಇದಕ್ಕಾಗಿ ಹಲವಾರು ಸಂಬಂಧಗಳನ್ನು ಬೆಳಸಿಕೊಂಡಿದ್ದಾನೆ. ಹಲಬಗೆಯ ಸಹಜ ಪ್ರವೃತ್ತಿಗಳನ್ನು ನಿಯಂತ್ರಿಸುವ ಸಲುವಾಗಿ ಅನೇಕ ಸಾಧನಗಳನ್ನು ಏರ್ಪಡಿಸಿಕೊಂಡಿದ್ದಾನೆ. ಇವೆಲ್ಲ ಸಮಾಜದ ಮನ್ನಣೆ ಪಡೆದಿವೆ. ಈ ಸಾಧನಗಳು ಸಂಪ್ರದಾಯಬದ್ಧವಾಗಿ, ಅನೂಚಾನವಾಗಿ ಒಂದು ತಲೆಮಾರಿನಿಂದ ಇನ್ನೊಂದಕ್ಕೆ ವರ್ಗವಾಗಿ ಸ್ಥಿರವಾಗಿ ಉಳಿದಿವೆ. ಈ ಸಾಧನಗಳೇ ಸಂಸ್ಥೆಗಳು. ಇವು ವ್ಯಕ್ತಿಗಳಿಗೆ ಸಹಾಯಕವಾಗಿ, ಸಮಾಜದಿಂದ ಸಂರಕ್ಷಿತವಾಗಿ ಬೆಳೆದುಬಂದಿವೆ.

ಕುಟುಂಬ ಒಂದು ಸಂಸ್ಥೆ, ಸಮಾಜ ರಚನೆಯಲ್ಲಿ ಕುಟುಂಬ ಸಂಸ್ಥೆ ಅತ್ಯಂತ ಚಿಕ್ಕ ಘಟಕವಾದರೂ ಮಹತ್ತ್ವದ ಸ್ಥಾನ ಪಡೆದಿದೆ. ಕುಟುಂಬ ವ್ಯವಸ್ಥೆಯನ್ನು ಸಂಘವೆಂದೂ ಕರೆಯಬಹುದು. ಅದೊಂದು ಚಿಕ್ಕ ಸಮಾಜ; ತಾಯಿ, ತಂದೆ, ಮಕ್ಕಳು, ಬಂಧುಗಳು–ಹೀಗೆ ಒಬ್ಬೊಬ್ಬರಿಗೂ ಸಾಂಘಿಕ ಜೀವನದ ಎಲ್ಲ ಸೌಲಭ್ಯಗಳೂ ಇದರಲ್ಲಿ ದೊರೆಯುತ್ತವೆ. ಅತ್ಯಂತ ಅನಾಗರಿಕ ಜನರಲ್ಲೂ ಕುಟುಂಬದ ಅರಿವು ಮತ್ತು ಸಾಮೂಹಿಕ ಜೀವನಾಭಿಲಾಷೆ ಕಂಡುಬರುತ್ತದೆ.

ಕುಟುಂಬ ಮೂಲ ಅಥವಾ ಆರಂಭವನ್ನು ಐತಿಹಾಸಿಕವಾಗಿ ಹುಡುಕುವುದು ಸಾಧ್ಯವಿಲ್ಲ. ಕುಟುಂಬವಿಲ್ಲದ ವ್ಯಕ್ತಿಗಳೇ ಇಲ್ಲ. ವ್ಯಕ್ತಿಗಳಿಲ್ಲದೆ ಕುಟುಂಬವೇ ಇಲ್ಲ. ಮಾನವನೇ ಕುಟುಂಬದ ಮೂಲವಾಗುತ್ತಾನೆ. ವ್ಯಕ್ತಿ ಒಬ್ಬೊಂಟಿಗನಾಗಿ ಇದ್ದಾಗ ಕುಟುಂಬ ಎನಿಸಿಕೊಳ್ಳಲಾರ. ಪ್ರತಿಯೊಬ್ಬ ವ್ಯಕ್ತಿಯೂ ಕುಟುಂಬದ ಅನಿವಾರ್ಯ ಅಂಗ. ನಾಗರಿಕತೆ ಬೆಳೆಯದಿದ್ದ ಕಾಲದಲ್ಲಿಯೇ ಕುಟುಂಬ ಇತ್ತೆಂಬುದು ಅನೇಕ ಸಂಶೋಧನೆಗಳಿಂದ ವ್ಯಕ್ತಪಟ್ಟಿದೆ. ಅದು ಬಹು ಹಿಂದಿನಿಂದ ಇತ್ತಲ್ಲದೆ ಕಾಲಕಾಲಕ್ಕೆ ಮಾನವ ಸಮಾಜವನ್ನು ರೂಪಿಸುವಲ್ಲಿ, ಮಾರ್ಪಡಿಸುವಲ್ಲಿ ಬಹು ಮುಖ್ಯ ಪಾತ್ರವನ್ನೂ ವಹಿಸುತ್ತ ಬಂದಿತ್ತು.

ಸಮಾಜದಲ್ಲಿ ಅನೇಕಾನೇಕ ಚಟುವಟಿಕೆಗಳು ಹುಟ್ಟಿರುವುದೂ ಮಾನವನ ಕುಟುಂಬದಿಂದ ಮಾತ್ರವೇ ಎನ್ನುವುದು ದೃಢಪಟ್ಟಿರುವ ಸಂಗತಿಯಾಗಿದೆ. ಜಾತಿ ಪದ್ಧತಿಗಳೂ, ಬಡತನ ಸಿರಿತನಗಳೂ, ಬಂಧು ಬಳಗವೂ, ಸ್ನೇಹಿತ ಮತ್ತು ಶತ್ರುಗಳೂ, ಧಣಿ ಮತ್ತು ಸೇವಕರೂ, ನೆರೆಹೊರೆ ಮತ್ತು ಸಹೋದ್ಯೋಗಿ ಭಾವನೆಗಳೂ, ಕುಟುಂಬದಿಂದ ಉದ್ಭವಿಸುವ, ಕುಟುಂಬಕ್ಕೆ ಅಂಟಿಕೊಂಡಿರುವ, ಜೀವನ ಯಾತ್ರೆಗೇ ಸಂಬಂಧಪಟ್ಟ ಅಂಶಗಳಾಗಿವೆ. ಜೀವನದ ಅತಿ ಮುಖ್ಯ ಉದ್ಯಮಗಳಾದ ಕೃಷಿ, ವ್ಯಾಪಾರ, ಕೈಗಾರಿಕೆ ಮುಂತಾದವೂ ಕುಟುಂಬ ಜೀವನದಿಂದ ಉದ್ಭವಿಸಿವೆ. ಆಸ್ತಿ ಪಾಸ್ತಿಗಳೂ, ಅಂದರೆ ಕಮ್ಮಾರಿಕೆ, ವ್ಯಾಪಾರ, ಬಡಗಿತನ, ಮಡಿವಾಳತನ, ಹಜಾಮ ಕಸಬು, ಯೋಧಜೀವನ, ಕುಂಬಾರಿಕೆ–ಮೊದಲಾದವು ಕುಟುಂಬ ಜೀವನದ ಧ್ಯೇಯವನ್ನು ಸಾಧಿಸುವ ಅಂಶಗಳಾಗಿವೆ. ಕುಟುಂಬ ವ್ಯಕ್ತಿ ಸಂಬಂಧವನ್ನು ಬಾಂಧವ್ಯದ ರೀತಿಯಲ್ಲಿ ರೂಪುಗೊಳಿಸಿದೆ. ಅಮ್ಮ, ಅಪ್ಪ, ಅಣ್ಣ, ತಮ್ಮ, ಅಕ್ಕ, ತಂಗಿ, ಅತ್ತಿಗೆ, ನಾದಿನಿ, ಸೋದರತ್ತೆ, ಸೋದರಮಾವನೆಂಬ ಬಾಂಧವ್ಯಗಳನ್ನು ಕಲ್ಪಿಸಿ, ಪರಸ್ಪರ ಸಮ್ಮಿಲನಕ್ಕೆ ತಳಹದಿ ಹಾಕಿ, ಜೀವನದ ಘರ್ಷಣೆಗಳಿಗೆ ಹೆಚ್ಚು ಅವಕಾಶವನ್ನುಂಟುಮಾಡದೆ ವ್ಯಕ್ತಿವ್ಯಕ್ತಿಗೂ ಪರಸ್ಪರ ಸಂಬಂಧವನ್ನು ಕಲ್ಪಿಸಿ ಸಮಾಜ ಭದ್ರತೆಗೆ ಅಡಿಪಾಯವಾಗಿದೆ. ಮನುಷ್ಯನ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಸಾಧನೆಗಳಗೆ ಅತಿ ಸಹಾಯಕವಾಗಿರುವ ಸಂಸ್ಥೆಯೆಂದರೆ ಕುಟುಂಬ ಒಂದೇ. ಪೂಜೆ ಪುನಸ್ಕಾರ, ತೀರ್ಥಯಾತ್ರೆ, ವ್ರತನೇಮ ಮೊದಲಾದ ಮತಾಚಾರಗಳನ್ನು ಮಾನವ ಸಮಾಜದಲ್ಲಿ ಉಳಿಸಿ ಬೆಳೆಸಿರುವುದೂ ಇದೇ.

ಇಷ್ಟು ಪ್ರಾಮುಖ್ಯ ಪಡೆದಿರುವ ಕುಟುಂಬ ಸಂಸ್ಥೆಯನ್ನು ಸಮಾಜಶಾಸ್ತ್ರಜ್ಞರು ಶಾಸ್ತ್ರೋಕ್ತವಾಗಿ ಸ್ಪಷ್ಟಗೊಳಿಸಲು ಪ್ರಯತ್ನಿಸಿದ್ದಾರೆ. ರಕ್ತಸಂಬಂಧಕ್ಕೊಳಪಟ್ಟ ಜನ ಒಂದು ಕುಟುಂಬಕ್ಕೆ ಸೇರಿದವರೆಂದೂ ಗಂಡ ಹೆಂಡತಿ, ತಾಯಿ, ತಂದೆ, ಅಣ್ಣ, ತಂಗಿ, ಪುತ್ರ, ಪುತ್ರಿ ಮೊದಲಾದ ಸಂಬಂಧಗಳನ್ನು ಹೊಂದಿ ಒಂದೇ ತೆರನಾದ ಸಂಸ್ಕೃತಿಯನ್ನು ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬರುವ ಸಂಸ್ಥೆ ಕುಟುಂಬವೆಂದೂ ಬರ್ಜಸ್ ಮತ್ತು ಲಾಕರ ಅಭಿಪ್ರಾಯ. ಕುಟುಂಬ ಲೈಂಗಿಕ ಜೀವನವನ್ನು ಕ್ರಮಬದ್ಧವಾಗಿ ಮಾಡಿ, ಮಕ್ಕಳನ್ನು ಬೆಳೆಸಿ, ಅವರನ್ನು ಸುಸಂಸ್ಕೃತರನ್ನಾಗಿ ಮಾಡಿ ಮಾನವನ ವಂಶಪಾರಂಪರ್ಯವನ್ನು ಬೆಳೆಸಿಕೊಂಡು ಬರುವ ಒಂದು ಸಂಸ್ಥೆಯೆಂಬುದು ಮೆಕೈವರ್ ಮತ್ತು ಪೇಜರ ಅಭಿಪ್ರಾಯ. ಶಾಸ್ತ್ರೋಕ್ತವಾಗಿ ಸ್ಪಷ್ಟಪಡಿಸಿರುವ ಅಭಿಪ್ರಾಯಗಳಲ್ಲಿ ಮೇಲ್ಕಂಡಿಸಿರುವ ಎರಡು ಅಭಿಪ್ರಾಯಗಳೂ ಬೆಲೆಯುಳ್ಳವು. ಈ ಅಭಿಪ್ರಾಯಗಳನ್ನು ಪರಿಶೀಲಿಸಿದರೆ, ಕೆಳಗೆ ಕಂಡ ಅಂಶಗಳು ಹೊರಬೀಳುತ್ತವೆ;

1. ಕುಟುಂಬ ಲೈಂಗಿಕ ಜೀವನವನ್ನು ಕ್ರಮಬದ್ಧಗೊಳಿಸಿ, ಅದರಿಂದುಂಟಾದ ಸಂತಾನ ಸೌಲಭ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡಲು ಸೂಕ್ತ ಏರ್ಪಾಡನ್ನು ಮಾಡುತ್ತದೆ. 2. ದಾಂಪತ್ಯ ಜೀವನವನ್ನು ಸುಗಮವಾಗಿ ನಡೆಸಿಕೊಂಡು ಬರಲು ತಳಹದಿಯನ್ನು ಹಾಕಿಕೊಡುತ್ತದೆ. 3. ಜೀವನವನ್ನು ಸುಗಮವಾಗಿ ನಡೆಸಲು ಅಗತ್ಯವಾದ ಆಸ್ತಿ ಪಾಸ್ತಿಗಳ ಆವಶ್ಯಕತೆಯ ಅಂಶವನ್ನು ಒತ್ತಿ ಹೇಳುತ್ತದೆ. 4. ಸಾಮೂಹಿಕ ಜೀವನಕ್ಕೆ ಕುಟುಂಬವೇ ಆಧಾರ ಸ್ತಂಭವೆಂದು ದೃಢೀಕರಿಸುತ್ತದೆ. 5. ಸಂಸಾರದ ವ್ಯಕ್ತಿಗಳೆಲ್ಲರೂ ಒಂದೇ ಕಡೆ ಒಟ್ಟಿಗೆ ಸೇರಿ ಬಾಳುವುದರಿಂದ ಮನುಷ್ಯನ ಕುಹಕ ನೀತಿಯನ್ನು ಹೊರದೂಡಲು ಸಹಾಯವಾಗುತ್ತದೆ. ಈ ಅಂಶಗಳನ್ನು ಸಮಾಜಶಾಸ್ತ್ರಜ್ಞರು ಕುಟುಂಬದ ಮುಖ್ಯ ಲಕ್ಷಣಗಳೆಂದೂ ಹೇಳಿದ್ದಾರೆ.

ಸತಿಪತಿಗಳೊಡಗೂಡಿ ಸಾಂಗವಾಗಿ ನಡೆಸುವ ದಾಂಪತ್ಯಜೀವನ, ಸಂತಾನ ವಾತ್ಸಲ್ಯ, ಪಿತೃ ಮತ್ತು ಪುತ್ರ ವಾತ್ಸಲ್ಯ ಮತ್ತು ಅವರ ಪೋಷಣೆ ಕುಟುಂಬ ಜೀವನದ ಮೂಲಭೂತ ಬಾಧ್ಯತೆಗಳು. ಕುಟುಂಬ ಗಂಡಹೆಂಡಿರ ಆಕರ್ಷಣೆಗೂ ಪರಸ್ಪರ ಸಮ್ಮಿಲನಕ್ಕೂ ಸಹಜೀವನಕ್ಕೂ ಅಂಥ ಜೀವನದಿಂದ ಒದಗುವ ದೈಹಿಕ ಮತ್ತು ಮಾನಸಿಕ ತೃಪ್ತಿಗೂ ಆಧಾರವಾಗಿದೆ.

ಪ್ರಾಚೀನ ಮಾನವ ಅವ್ಯವಸ್ಥಿತ ಲೈಂಗಿಕ ಜೀವನವನ್ನ ಅವಲಂಬಿಸಿದ್ದನೆಂದೂ ಅಕ್ಕತಂಗಿಯರೆಂಬ ಭೇದಭಾವವಿಲ್ಲದೆ ಸಂಭೋಗವನ್ನು ನಡೆಸಿ, ಹುಟ್ಟಿದ ಸಂತಾನಕ್ಕೆ ತಾನು ಹೊಣೆಗಾರನಾಗದೆ ಸ್ವೇಚ್ಛೆಯಿಂದ ವರ್ತಿಸುತ್ತಿದ್ದನೆಂದೂ ಪ್ರಾಣಿಗಳಂತೆ ಲೈಂಗಿಕ ಜೀವನವನ್ನು ನಡೆಸುತ್ತಿದ್ದನೆಂದೂ ಒಂದು ವಾದವಿದೆ. ಮಾನವಶಾಸ್ತ್ರಜ್ಞರು ಇಂಥ ವಾದ ನಿರಾಧಾರವೆಂದಿದ್ದಾರೆ. ಆದಿಯಿಂದ ಮಾನವ ಸಾಮಾಜಿಕ ಸಂಪ್ರದಾಯಗಳನ್ನೂ ಕಟ್ಟಳೆಗಳನ್ನೂ ಬೆಳೆಸಿಕೊಂಡು ಬಂದಿದ್ದಾನೆ. ತನ್ನ ಜೀವನ ಸಾಂಗವಾಗಿ ನಡೆಯಲೂ ಸಂತಾನ ಸುರಕ್ಷಿತವಾಗಿರಲೂ ಅನೇಕ ಕಾಯಿದೆ ಕಟ್ಟಳೆಗಳನ್ನು ವಿಧಿಸಿಕೊಂಡು ಅವಕ್ಕೆ ಅನುಗುಣವಾಗಿ ನಡೆದುಕೊಂಡು, ತನ್ನ ಸುಖವನ್ನೂ ತನ್ನ ಸಂತಾನದ ರಕ್ಷಣೆಯನ್ನೂ ಭದ್ರಗೊಳಿಸಿಕೊಂಡು ಬಂದಿದ್ದಾನೆ. ಇದು ಒಂದೇ ದಿನಕ್ಕೆ ಆದಂಥದಲ್ಲ. ಶತಮಾನಗಟ್ಟಲೆ

ಅನುಭವ ತನಗೆ ಕಲಿಸಿದ ಪಾಠದಿಂದ ಮಾನವ ತನ್ನ ಜೀವನದ ರೀತಿ ನೀತಿಗಳನ್ನು ಮಾರ್ಪಡಿಸಿಕೊಳ್ಳುತ್ತ ಬಂದಿದ್ದಾನೆ. ಸರಿಯೆಂದು ರುಜುವಾತಾದ ಕಟ್ಟಳೆಗಳಿಗೆ ತಲೆಬಾಗಿದ್ದಾನೆ, ಕಾಯಿದೆ ಕಟ್ಟಳೆಗಳನ್ನು ಮೀರಿದವರಿಗೆ ಉಗ್ರ ಶಿಕ್ಷೆಗಳನ್ನೂ ಕೆಲವು ಬಾರಿ ಮರಣದಂಡನೆಯನ್ನೂ ಆತ ವಿಧಿಸಿರುವ ನಿದರ್ಶನಗಳನ್ನೂ ಕಾಣಬಹುದು. ಇದೂ ಅಲ್ಲದೆ ಲೈಂಗಿಕ ಜೀವನದ ಕಟ್ಟಳೆಗಳನ್ನು ಮೀರಿದವರಿಗಂತೂ ಊಹಿಸಲಾರದಂಥ ಕಠಿಣ ಶಿಕ್ಷೆಗಳನ್ನು ಕೊಡುವುದು ಒಂದು ಕಾಲದಲ್ಲಿ ವಾಡಿಕೆಯಲ್ಲಿತ್ತು. ಈ ಕಾಯಿದೆ ಕಟ್ಟಳೆಗಳನ್ನೂ ಅವುಗಳ ಉಲ್ಲಂಘನೆಗಾಗುತ್ತಿದ್ದ ಪರಿಣಾಮಗಳನ್ನೂ ಪರಿಶೀಲಿಸಿ ನೋಡಿದರೆ ಲೈಂಗಿಕ ಜೀವನದ ಅವ್ಯವಸ್ಥೆ ನಿರಾಧಾರವೆಂದು ಕಂಡುಬರುತ್ತದೆ.

ಲೈಂಗಿಕ ಜೀವನ ಅವ್ಯವಸ್ಥಿತವಾಗಿದ್ದಿತೆಂದು ಹೇಳಲು ಕೆಲವರು ಹಲವಾರು ಕಾರಣಗಳನ್ನೊದಗಿಸುತ್ತಾರೆ. ಪ್ರಾಚೀನ ಕುಟುಂಬ ಜೀವನದ ಆದಿಯಲ್ಲಿ ಬಹುಪತಿ ಮತ್ತು ಬಹುಪತ್ನೀ ವಿವಾಹಗಳೂ ಸರ್ವೇಸಾಮಾನ್ಯವಾಗಿ ರೂಢಿಯಲ್ಲಿದ್ದುವು. ಅಲ್ಲದೆ ಆಪ್ತರಿಗೂ ಅತಿಥಿಗಳಿಗೂ ಪತ್ನಿಯರನ್ನೊಪ್ಪಿಸುವುದು ಒಂದು ದೊಡ್ಡ ಗೌರವವೆಂದು ನಂಬಿ ಅದನ್ನು ಅನೇಕ ಗುಂಪುಗಳಲ್ಲಿ ಜಾರಿಗೆ ತಂದಿದ್ದರು. ಜೊತೆಗೆ ಒಂದು ಗುಂಪಿನ ಗಂಡಸರೆಲ್ಲರೂ ಇನ್ನೊಂದು ಗುಂಪಿನ ಹೆಂಗಸರನ್ನು ಮದುವೆಯಾಗಿ ಜೀವನ ನಡೆಸುತ್ತಿದ್ದರು. ಆದರೆ ಬಹುಪತ್ನೀ ವಿವಾಹಗಳಲ್ಲಿ ಸರ್ವೇಸಾಧಾರಣವಾಗಿ ಸಮಾಜದಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದ ಸಂಸಾರಗಳಲ್ಲಿ ಮತ್ತು ಹೆಚ್ಚಿಗೆ ಆಸ್ತಿಪಾಸ್ತಿಗಳನ್ನು ಗಳಿಸಿದ್ದ ಕುಟುಂಬಗಳಲ್ಲಿ ಮಾತ್ರ ರೂಢಿಯಲ್ಲಿದ್ದುವು. ಬೇರೆ ಗುಂಪುಗಳು ಈ ತೆರನಾದ ವಿವಾಹಗಳನ್ನು ರೂಢಿಮಾಡಿಕೊಳ್ಳುವುದು ಕಠಿಣವಾಗುತ್ತಿತ್ತು. ಬಹುಪತಿ ವಿವಾಹ ಪದ್ಧತಿ ಗಂಡಸರ ಸಂಖ್ಯೆ ಕಡಿಮೆಯಾದ ಗುಂಪಿನವರಲ್ಲಿ ಮಾತ್ರ ವಾಡಿಕೆಯಲ್ಲಿತ್ತು. ಹೆಂಡತಿಯನ್ನು ಬೇರೆಯವರಿಗೊಪ್ಪಿಸುವುದು, ಅಸಂಖ್ಯಾತ ಹೆಂಡತಿಯರನ್ನು ಮದುವೆಯಾದ ಕೆಲವೇ ಗುಂಪುಗಳಲ್ಲಿ ಅಂದರೆ ಹೇರಳವಾದ ಆಸ್ತಿ ಪಾಸ್ತಿಗಳನ್ನಿಟ್ಟುಕೊಂಡಿದ್ದ ಶ್ರೀಮಂತ ಗುಂಪುಗಳಲ್ಲಿ ವಾಡಿಕೆಯಲ್ಲಿತ್ತು. ಇವುಗಳ ಜೊತೆಗೆ ಸಾರೊರೇಟ್ ಮತ್ತು ಲೆವಿರೇಟ್ ಪದ್ಧತಿಗಳನ್ನು ಆಚರಣೆಯಲ್ಲಿಟ್ಟುಕೊಂಡಿದ್ದ ಹಲವಾರು ಗುಂಪುಗಳಲ್ಲೂ ಈ ಪದ್ಧತಿ ರೂಢಿಯಲ್ಲಿತ್ತು. ಸಾರೊರೇಟ್ ಪದ್ಧತಿಯ ಪ್ರಕಾರ ಒಂದು ಗುಂಪಿನ ಒಬ್ಬ ಗಂಡು ಇನ್ನೊಂದು ಗುಂಪಿನ ಒಬ್ಬ ಹೆಣ್ಣನ್ನು ಮದುವೆಯಾದರೆ ಆ ಹೆಣ್ಣಿನ ತಂಗಿಯರನ್ನೆಲ್ಲ ಆ ಗಂಡು ಮದುವೆಯಾಗುವ ಹಕ್ಕು ಪಡೆಯುತ್ತಿದ್ದ. ಲೆವಿರೇಟ್ ಪದ್ಧತಿಯ ಪ್ರಕಾರ ಮದುವೆಯಾದ ಹೆಣ್ಣು ವಿಧವೆಯಾದರೆ ತನ್ನ ಗಂಡನ ಅಣ್ಣತಮ್ಮಂದಿರನ್ನು ಮದುವೆಯಾಗುವ ಹಕ್ಕನ್ನು ಪಡೆಯುತ್ತಿದ್ದಳು. ನಿಜವಾಗಿ ನೋಡಿದರೆ ಸಾರೊರೇಟ್ ಪದ್ಧತಿಯ ಪ್ರಕಾರ, ಒಂದು ಕುಟುಂಬದ ಗಂಡಸರೆಲ್ಲರಿಗೂ ಮದುವೆಯಾಗುವುದು ಅಸಂಭವವಾಗಿ ಕಂಡುಬಂದಾಗ ಮಾತ್ರ ಗಂಡನ ಅನುಮತಿಯಿಂದ ಹೆಂಡತಿ ಗಂಡನ ಒಡಹುಟ್ಟಿದವರಲ್ಲಿ ಸಂಭೋಗ ಮಾಡುವ ಪದ್ಧತಿಯಿತ್ತು. ಹೀಗೆ ಲೈಂಗಿಕ ಜೀವನದಲ್ಲಿ ಅನೇಕ ಕಟ್ಟುಪಾಡುಗಳು ಅಲ್ಲಲ್ಲಿ ಆಚರಣೆಯಲ್ಲಿದ್ದುವಾದರೂ ಅವು ಕುಟುಂಬ ಜೀವನಕ್ಕೆ ಕೇವಲ ಅಪವಾದ ಮಾತ್ರವಾಗಿದ್ದುವೆಂಬುದನ್ನು ಮರೆಯಲಾಗದು.

ಮಾನವಶಾಸ್ತ್ರಜ್ಞರ ಪ್ರಕಾರ ಕುಟುಂಬದಲ್ಲಿ ಪಿತೃಪ್ರಧಾನ ಕುಟುಂಬ ಮತ್ತು ಮಾತೃಪ್ರಧಾನ ಕುಟುಂಬ ಎಂಬೆರಡು ಬಗೆಗಳಿವೆ. ಈ ಎರಡೂ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿವೆ.

ಮಾತೃಪ್ರಧಾನ ಕುಟುಂಬದಲ್ಲಿ ಸ್ತ್ರೀಗೆ ಹೆಚ್ಚಿನ ಪ್ರಾಧಾನ್ಯ, ಮನೆಯ ಯಜಮಾನಿಕೆ ತಂದೆಯದಲ್ಲ. ತಾಯಿಯದು. ಆಕೆಯೇ ಆಸ್ತಿಪಾಸ್ತಿಗಳಿಗೆಲ್ಲ ಒಡೆಯಳಾಗಿರುತ್ತಾಳೆ. ಕುಟುಂಬದಲ್ಲಿ ಏನು ಕಾರ್ಯವಾಗಬೇಕಾದರೂ ತಾಯಿಯ ಮಾತಿಲ್ಲದೆ ಆಗುವಂತಿಲ್ಲ. ಮದುವೆಯಾದ ಗಂಡನೂ ಹೆಂಡತಿಯ ಮನೆಗೆ ಬಂದು ವಾಸಿಸುವುದು ರೂಢಿ. ಹುಟ್ಟಿದ ಮಕ್ಕಳೆಲ್ಲರೂ ತಾಯಿಯ ಮನೆಗೆ ಸೇರಿರುತ್ತಾರೆ. ಆಸ್ತಿ ಹಕ್ಕೆಲ್ಲವೂ ಹೆಣ್ಣುಮಕ್ಕಳಿಗೇ ಸೇರಿರುತ್ತದೆ. ಗಂಡಸಿಗೆ ಪ್ರಾಧಾನ್ಯ ತೀರ ಕಡಿಮೆ. ಉದಾಹರಣೆಗೆ, ಪುಯಿಬ್ಲೂ ಜನರಲ್ಲಿ ಮದುವೆಯಾದ ಮೇಲೆ ಹೆಣ್ಣು ತಾಯಿಯ ಮನೆಯಲ್ಲಿಯೇ ಇರುತ್ತಾಳೆ. ತಾಯಿಯ ಮನೆಯ ಆಸ್ತಿಗೂ ಆಕೆಗೆ ಹಕ್ಕುಂಟು. ತನ್ನ ಪುರೋಭಿವೃದ್ಧಿ ತನ್ನ ತಾಯಿಯ ಮನೆಯಲ್ಲಿಯೇ ಎಂದು ಆಕೆ ಮನದಟ್ಟುಮಾಡಿಕೊಂಡು ತಾಯಿಯ ಬಳಗದ ಕಡೆಗೇ ಹೆಚ್ಚು ಅಭಿಮಾನ ತೋರುತ್ತಾಳೆ; ತಾಯಿಯ ತಂಗಿಯರು, ಅಕ್ಕಂದಿರು, ಅಣ್ಣಂದಿರು ಮತ್ತು ತಮ್ಮಂದಿರ ಏಳಿಗೆಗೇ ಹೆಚ್ಚು ಗಮನ ಕೊಡುತ್ತಾಳೆ, ಗಂಡನ ಸ್ಥಿತಿ ತದ್ವಿರುದ್ಧ. ಆತ ತಾನು ಅತ್ತೆಯ ಮನೆಯಲ್ಲಿದ್ದೇನೆಂದೂ ಆ ಕುಟುಂಬದಲ್ಲಿ ತನಗೆ ಯಾವ ಹಕ್ಕುಗಳೂ ಇಲ್ಲವೆಂದೂ ತನಗೆ ಹುಟ್ಟಿದ ಮಕ್ಕಳು ತನ್ನ ಮೇಲೆ ಅವಲಂಬಿಗಳಾಗಿರುವುದಿಲ್ಲವೆಂದೂ ಅತ್ತೆಯ ಮನೆಯಲ್ಲಿ ತನ್ನ ಸ್ಥಾನ ಸುಭದ್ರವಲ್ಲವೆಂದೂ ತನ್ನ ಮಕ್ಕಳು ತನಗಿಂತ ತನ್ನ ಅತ್ತೆಯ ಮಕ್ಕಳನ್ನು ಹೆಚ್ಚಾಗಿ ಅವಲಂಬಿಸುತ್ತವೆಯೆಂದೂ ಅಕಸ್ಮಾತ್ತಾಗಿ ಹೆಂಡತಿಯೇನಾದರೂ ತನ್ನನ್ನು ಹೊರದೂಡಿದರೆ ಮಕ್ಕಳುಮರಿಯೆಲ್ಲವನ್ನೂ ಬಿಟ್ಟು ತಾನು ತನ್ನ ತಾಯಿಯ ಮನೆಗೆ ಹಿಂದಿರುಗಬೇಕಾಗುವ ಸಂಭವವೇ ಹೆಚ್ಚೆಂದೂ ಆತ ತಿಳಿದಿರುತ್ತಾನೆ. ಸ್ತ್ರೀಗೆ ಪ್ರಾಧಾನ್ಯವಿರುವ ನಿದರ್ಶನಗಳನ್ನು ಇರಕಾಯ್, ಹುರಾನ್, ಜಿರಾಕೆ, ಮಿನಿಟೌರಿ ಮೊದಲಾದ ಅಮೆರಿಕದ ಪ್ರಾಚೀನ ಕುಟುಂಬಗಳಲ್ಲೂ ಖಾಸಿ ಜನಾಂಗದಲ್ಲೂ ಭಾರತದಲ್ಲಿ ಮಲಯಾಳಿಗಳಲ್ಲೂ ಕಾಣಬಹುದು.

ಪಿತೃಪ್ರಭುತ್ವ ಕುಟುಂಬಗಳಿಗೂ ಸಾಕಷ್ಟು ಪ್ರಾಚೀನ ಇತಿಹಾಸವಿದೆ. ಇಂಥ ಕುಟುಂಬದಲ್ಲಿ ಗಂಡಸಿಗೇ ಹೆಚ್ಚಿನ ಪ್ರಾಧಾನ್ಯ, ಆಸ್ತಿಯ ಹಕ್ಕು, ಶಾಸ್ತ್ರ ಮಾಡಿಸುವಿಕೆ, ಮನೆಯ ಯಜಮಾನಿಕೆ, ಮದುವೆ, ಮುಂಜಿಗಳಲ್ಲಿ ಪ್ರಾಧಾನ್ಯ ಗಂಡಸಿಗೇ ಸೇರಿದ್ದು. ಮದುವೆಯಾದ ಮೇಲೆ ಹೆಂಡತಿ ಗಂಡನ ಮನೆಗೆ ಹೋಗಿ ಸಂಸಾರ ನಡೆಸಬೇಕು. ಆಕೆ ಗಂಡನ ಮನೆಗೇ ಸೇರಿಹೋಗುತ್ತಾಳೆ. ಪೂಜೆ ಪುನಸ್ಕಾರಗಳಲ್ಲಿ ಗಂಡನನ್ನೇ ಹಿಂಬಾಲಿಸುತ್ತಾಳೆ. ಹುಟ್ಟಿದ ಮಕ್ಕಳೆಲ್ಲರೂ ಗಂಡನ ಮನೆತನಕ್ಕೆ ಸೇರುತ್ತಾರೆ. ಆಸ್ತಿಪಾಸ್ತಿಗಳ ಹಕ್ಕು ಗಂಡುಮಕ್ಕಳಿಗೇ ಅಧಿಕವಾಗಿರುತ್ತದೆ. ಇದೂ ಅಲ್ಲದೆ ಗಂಡು ಕೆಚ್ಚೆದೆಯಿಂದ ಇತರರ ಹಂಗಿಲ್ಲದೆ ತನ್ನ ದಿನಚರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಬಾಳುವ ದಿಟ್ಟತನವನ್ನು ಸಂಪಾದಿಸಿಕೊಳ್ಳುತ್ತಾನೆ. ಆದರೆ ಆತನ ಹೆಂಡತಿ ತನ್ನ ಆಪ್ತರನ್ನೂ ಬಂಧುಬಳಗವನ್ನೂ ಬಿಟ್ಟು ಗಂಡನೊಡಗೂಡಿ, ಗಂಡನ ಜನಗಳೊಂದಿಗೆ ಭಯಭೀತಿಗಳಿಂದಲೂ ನಯ ನೀತಿಗಳಿಂದಲೂ ಬಾಳಬೇಕಾಗುತ್ತದೆ. ಆಕೆಗೆ ತವರಿನ ಕಡೆಗೇ ಹಂಬಲ ಹೆಚ್ಚುವುದು. ಅದು ಕಾಲಕ್ರಮೇಣ ಕಡಿಮೆಯಾಗಿ ಗಂಡನ ಮನೆಯೇ ತನ್ನ ಮನೆಯೆಂದು ಪರಿಗಣಿಸಲು ಸಾಧ್ಯವಾದೀತು. ಪಿತೃಪ್ರಭುತ್ವವಿರುವ ಕುಟುಂಬಗಳು ಆಧುನಿಕ ಕಾಲದಲ್ಲಿಯೂ ತಮ್ಮ ಪ್ರಾಧಾನ್ಯ ಕಳೆದುಕೊಂಡಿಲ್ಲ. ಸಮಾಜ ಉದ್ಭವಿಸಿದ ಆದಿಯಿಂದಲೂ ಗಂಡಸು ದೃಢಕಾಯನಾಗಿಯೂ ಧೀರನಾಗಿಯೂ ಬಾಳಿ ಆಸ್ತಿಪಾಸ್ತಿಗಳನ್ನು ಮಾಡಿ ತನ್ನ ಬಂಧುಬಳಗವನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬರಲು ಇರಬಹುದಾದ ಅನೇಕ ಎಡರುತೊಡರುಗಳನ್ನು ಲೆಕ್ಕಿಸದೆ, ಶತ್ರುಗಳನ್ನು ಹಿಮ್ಮೆಟ್ಟಿಸಿ ಅಥವಾ ಧ್ವಂಸಮಾಡಿ ತನ್ನ ಪೀಳಿಗೆಯನ್ನು ಕಾಪಾಡಿಕೊಂಡು ಬಂದು ತನ್ನನ್ನು ಆಶ್ರಯಿಸಿದ ಹೆಣ್ಣು ಪೀಳಿಗೆಯನ್ನೂ ಸಂರಕ್ಷಿಸಿಕೊಂಡು ಬಂದಿದ್ದಾನೆ. ಕುಟುಂಬ ಆರ್ಥಿಕ ಸ್ಥಿತಿಗತಿಗಳಿಗೆ ಪುರುಷನೇ ಕಾರಣನೆನಿಸಿಕೊಂಡು ಭಯಭೀತಿಗಳಿಲ್ಲದೆ ಹೋರಾಡಿ ಕುಟುಂಬ ಸಂರಕ್ಷಣೆಯನ್ನು ಮಾಡಿಕೊಂಡು ಬಂದಿದ್ದಾನೆ. ಸ್ತ್ರೀಯಾದರೋ ಮನೆಯಲ್ಲಿದ್ದುಕೊಂಡು ಅವನಿಗೆ ಸಹಾಯಕಳಾಗಿ ಸಂತಾನವನ್ನು ಪಡೆದು ಅದನ್ನು ಸಂರಕ್ಷಿಸಿಕೊಂಡು ಬಂದಿದ್ದಾಳೆ. ಈ ದೆಸೆಯಿಂದಾಗಿ ಪಿತೃಮೂಲ ಕುಟುಂಬಗಳೇ ಸ್ತ್ರೀಮೂಲ ಕುಟುಂಬಗಳಿಗಿಂತ ಜನಪ್ರಿಯವಾದುವು. ಇದನ್ನು ಮನಗಂಡ ಮೆಕೈವರ್ ಈ ರೀತಿ ನುಡಿದಿದ್ದಾನೆ; ಸಮಾಜದಲ್ಲಿ ಆಸ್ತಿ ಪಾಸ್ತಿಗಳಿಗಿರುವ ಮೌಲ್ಯಗಳೂ ವ್ಯವಸಾಯೋತ್ಪಾದನೆಯೂ ಅದರ ಬೆಳವಣಿಗೆಗೆ ಸಂಬಂಧಪಟ್ಟ ಸಕಲ ಸೌಲಭ್ಯಗಳೂ, ಆಡಳಿತ ವ್ಯವಸ್ಥೆಯೂ, ಕಾರ್ಯನಿಪುಣತೆಯೂ, ಕಾರ್ಯಚಟುವಟಿಕೆಗಳೂ, ಆಧುನಿಕ ಸಮಾಜದಲ್ಲಿ ನೈಪುಣ್ಯ ಪಡೆದಿರುವ ಸಕಲ ಕಸುಬುಗಳೂ, ಪಿತೃಪ್ರಾಧಾನವುಳ್ಳ ಕುಟುಂಬದಿಂದ ಉದ್ಭವಿಸಿವೆ. ಇದರ ಜೊತೆಗೆ ಪಿತೃಪ್ರಾಧಾನವುಳ್ಳ ಕುಟುಂಬದ ದೆಸೆಯಿಂದ ಜನಗಳ ಒಕ್ಕೂಟವೂ, ಒಗ್ಗಟ್ಟೂ ಹೆಚ್ಚಾಗಿ ಮಾನವ ಸಮಾಜದ ಭದ್ರತೆಗೆ ಕಾರಣವಾಗಿದೆಯೆಂದೂ ಪ್ರತಿಯೊಬ್ಬ ಮಾನವನೂ ತನ್ನ ಸಹೋದ್ಯೋಗಿಗಳೊಂದಿಗೆ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಶಕ್ತಿಸಾಮರ್ಥ್ಯಗಳನ್ನೊಳಗೊಂಡವನಾಗಿ ತನ್ನ ರಕ್ತಸಂಬಂಧಿಗಳ ನಡವಳಿಕೆಗಳನ್ನು ಭದ್ರಗೊಳಿಸಲು ಪಿತೃಪ್ರಾಧಾನ್ಯ ಕುಟುಂಬ ನೆರವಾಗಿದೆಯೆಂದೂ ನವೀನ ಸಮಾಜದ ಭದ್ರತೆಗೆ, ಪುರುಷತ್ವಕ್ಕೆ ತಕ್ಕ ಮನ್ನಣೆಯನ್ನು ಕೊಟ್ಟು ಮಾನವ ಪೀಳಿಗೆಯ ಸರ್ವೋದ್ಧಾರಕ್ಕೆ ಕಾರಣವಾಗಿದೆಯೆಂದೂ ತಿಳಿಯಲಾಗಿದೆ.

ಪಿತೃಪ್ರಧಾನ ಕುಟುಂಬಗಳಲ್ಲಿ ಸ್ತ್ರೀಯ ಸ್ಥಾನಮಾನಗಳು ಸುಭದ್ರವಾಗಿ ಕಂಡುಬರದೆ ಪುರುಷನ ಸ್ಥಾನಮಾನಗಳಿಗಿಂತ ಕೆಳಮಟ್ಟದಲ್ಲಿಯೇ ಇರುತ್ತವೆ. ಕಾನೂನನ್ನು ಒಕ್ಕಣಿಸುವಾಗಲೂ ಇದೇ ಮೇಲ್ಪಂಕ್ತಿಯನ್ನು ಅನುಸರಿಸಿರುವ ಸಂದರ್ಭಗಳು ಅನೇಕ ಬಾರಿ ಉದ್ಭವಿಸಿವೆ. ಇಂಥ ಪರಿಸ್ಥಿತಿ ಭಾರತದಲ್ಲಿ ಬಹುಕಾಲದಿಂದ ರೂಢಿಯಲ್ಲಿದೆ. ಬಹುಕಾಲ ಸ್ತ್ರೀಯರನ್ನು ಪುರುಷರಿಗೆ ಸಮಾನರೆಂದು ಜನತೆ ಭಾವಿಸಿರಲಿಲ್ಲ. ಸಮಾನ ಹಕ್ಕುಗಳೂ ಅವರಿಗೆ ಇರಲಿಲ್ಲ. ಈಗಿನ ಈ ಭಾವನೆಗಳು ಕಡಿಮೆಯಾಗುತ್ತಿವೆ. ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರು ಮುನ್ನುಗ್ಗಿ ಸಮಾನತೆಯ ಹಕ್ಕನ್ನು ಪಡೆಯುತ್ತಿದ್ದಾರೆ. ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲುಂಟಾದ ಚಟುವಟಿಕೆಗಳ ಪರಿಣಾಮವಾಗಿ ಕುಟುಂಬದಲ್ಲಿ ಸ್ತ್ರೀಗೆ ಇರುವ ಹಕ್ಕನ್ನು ಉತ್ತಮಪಡಿಸಿ, ಕುಟುಂಬದ ಆರ್ಥಿಕಸ್ಥಿತಿಯ ಉತ್ತಮಿಕೆಗೆ ಸ್ತ್ರೀಯೂ ದುಡಿದು, ಕುಟುಂಬದ ಆಸ್ತಿಗೂ ಹಕ್ಕನ್ನು ಪಡೆದು, ಪಿತೃಪ್ರಾಧಾನ್ಯವುಳ್ಳ ಕುಟುಂಬದ ರೀತಿನೀತಿಗಳನ್ನು ಸಡಿಲಗೊಳಿಸಿದ್ದಾಳೆ, ಮಧ್ಯಮವರ್ಗದವರ ಕುಟುಂಬಗಳಲ್ಲೂ ಇದಕ್ಕೂ ಹೆಚ್ಚಿನದಾಗಿ ಕೆಳದರ್ಜೆಯ ಕುಟುಂಬಗಳಲ್ಲಿಯೂ ಈ ತೆರನಾದ ಮಾರ್ಪಾಡು ದಿನೇದಿನೇ ಹೆಚ್ಚಾಗಿ ಕಂಡುಬರುತ್ತಿದೆ.

ಸಮಾಜದ ಅನುಕೂಲತೆಗೂ ಭದ್ರತೆಗೂ ಆಧಾರವಾದ ತನ್ನ ಪರಾಕ್ರಮವನ್ನೂ ಪುರುಷತ್ವವನ್ನೂ ಹೆಚ್ಚಿಸಿಕೊಳ್ಳಲು ಮಾತೃಪ್ರಧಾನ ಕುಟುಂಬವನ್ನು ಹಿಂದಕ್ಕೆ ತಳ್ಳಿ ಪಿತೃಪ್ರಾಧಾನ್ಯವುಳ್ಳ ಕುಟುಂಬಕ್ಕೆ ಮಾನವ ಉತ್ತೇಜನ ಕೊಟ್ಟುಕೊಂಡು ಬಂದಿದ್ದಾನಾದರೂ ಆಧುನಿಕ ಸಮಾಜದಲ್ಲಿ ಪಿತೃಪ್ರಾಧಾನ್ಯವುಳ್ಳ ಕುಟುಂಬ ರೀತಿನೀತಿಗಳೂ ಸರಿಯಾಗಿ

ನಿಲ್ಲದೆ ಮಾರ್ಪಾಡಾಗುತ್ತಿರುವುದನ್ನು ನಾವು ಕಾಣಬಹುದು. ಅಂತೂ ಡಾರ್ವಿನ್ ಸ್ಪಷ್ಟಪಡಿಸಿರುವಂತೆ ಸ್ತ್ರೀವರ್ಗ ಅಬಲವೆಂದೂ ಅದು ಕಷ್ಟ ಕಾರ್ಯಗಳನ್ನು ನಿರ್ವಹಿಸಲಾರದೆಂದೂ ಮನೆಯಲ್ಲಿ ನಿಂತು ವಿಶ್ರಾಂತಿ ಪಡೆಯಲು ಅರ್ಹವಾದ ಗುಣವುಳ್ಳದ್ದಾಗಿರುವುದೆಂದೂ ಕಷ್ಟಕಾರ್ಪಣ್ಯಗಳಿಂದ ಅದರ ದೇಹ ಕೃಶವಾಗುವುದೆಂದೂ ಅದರ ಮಾನಸಿಕ ಪ್ರವೃತ್ತಿ ಕಠಿಣಾವಸ್ಥೆಯಲ್ಲಿ ಸ್ಥಿರವಾಗಿ ನಿಲ್ಲಲಾರದೆಂದೂ ಸಮಯಕ್ಕೆ ತಕ್ಕ ಚುರುಕಾದ ನಿರ್ಣಯಗಳನ್ನದು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದೂ ತಿಳಿದಲ್ಲಿ ಪಿತೃಮೂಲ ಕುಟುಂಬ ವ್ಯವಸ್ಥೆಯನ್ನು ಒಪ್ಪಬೇಕಾಗುತ್ತದೆ.

ಗಂಡು ಹೆಣ್ಣುಗಳ ಸಮ್ಮಿಲನವನ್ನು ಶಾಸ್ತ್ರೋಕ್ತವಾಗಿ ಅಂಗೀಕರಿಸಿ ಸಂತಾನೋತ್ಪತ್ತಿಗೂ ಪುರೋಭಿವೃದ್ಧಿಗೂ ಅವಕಾಶ ಕಲ್ಪಿಸಿಕೊಡುವ ವಿವಾಹವನ್ನು ಆಧಾರವನ್ನಾಗಿಟ್ಟುಕೊಂಡು ಕುಟುಂಬವನ್ನು ವಿವಿಧ ರೀತಿಯಲ್ಲಿ ವಿಂಗಡಿಸುವುದು ವಾಡಿಕೆಯಲ್ಲಿದೆ. ಇವುಗಳಲ್ಲಿ ಏಕಪತ್ನಿ ಕುಟುಂಬ, ಬಹುಪತ್ನಿ ಕುಟುಂಬ ಮತ್ತು ಬಹುಪತಿ ಕುಟುಂಬಗಳು ಮುಖ್ಯವಾದವು. ಏಕಪತ್ನಿ ಕುಟುಂಬದಲ್ಲಿ ಒಬ್ಬ ಗಂಡಸು ಒಬ್ಬ ಹೆಂಗಸನ್ನು ಮದುವೆಯಾಗಿ, ಆಕೆಯೇ ತನ್ನ ಸಹಚರಿ ಸಹಧರ್ಮಚರಿ ಎಂದು ಪರಿಗಣಿಸಿ, ಸಾಯುವ ಪರ್ಯಂತರವೂ ಒಡಗೂಡಿ, ಸಂತಾನವನ್ನು ಪಡೆದು, ಯಾವುದೇ ಪ್ರಬಲ ಕಾರಣಗಳಿದ್ದರೂ ಗಂಡ ಹೆಂಡಿರುಗಳು ಬೇರ್ಪಡದೇ ಸಂಸಾರ ನಡೆಸಿಕೊಂಡು ಹೋಗುವುದು ಸಂಪ್ರದಾಯ. ಈ ತೆರನಾದ ಕುಟುಂಬ ಪ್ರಾಚೀನ ಮಾನವ ಸಮಾಜದ ಆದಿಯಿಂದಲೂ ಬಹಳ ಪ್ರಬಲವಾದ ಕುಟುಂಬವೆಂದು ಪರಿಗಣಿಸಲ್ಪಟ್ಟಿದೆ. ಅಂಡಮಾನ್ ದ್ವೀಪದ ಆದಿವಾಸಿ ಜನಾಂಗವೂ ಸೆಮಾಂಗೆ ಜನರೂ ಇಂಕ ಜನರೂ ಇರಕಾಯರೂ ಹೋಸಿಗಳೂ ಏಕಪತ್ನಿ ಕುಟುಂಬವೇ ಸಮಾಜದ ಭದ್ರತೆಗೆ ಕಾರಣವೆಂದು ಸಾರಿ ಅದನ್ನೇ ಮುಂದುವರೆಸಿಕೊಂಡು ಬಂದಿದ್ದಾರೆ, ಭಾರತದಲ್ಲಿ ಇಂಥ ಕುಟುಂಬ ಜೀವನವೇ ಪರಮಪವಿತ್ರವೆಂದು ನಂಬಲಾಗಿದೆ. ಪುರಾಣಗಳಲ್ಲಿಯೂ ಇದಕ್ಕೆ ಹೆಚ್ಚಿನ ಪುರಸ್ಕಾರ ದೊರಕಿದೆ. ಪ್ರಪಂಚದ ಬಹುಭಾಗದ ಜನ ಇದೇ ವ್ಯವಸ್ಥೆಯನ್ನು ಒಳ್ಳೆಯದೆಂದು ನಂಬಿ ಜಾರಿಗೆ ತಂದುಕೊಂಡಿದ್ದಾರೆ. ಇಂಥ ಸಂಸಾರಗಳು ಸರ್ವೇಸಾಧಾರಣವಾಗಿ ರೂಢಿಯಲ್ಲಿರಲು ಹಲವಾರು ಕಾರಣಗಳೂ ಇವೆ. ಪ್ರಾಚೀನ ಕಾಲದಲ್ಲಿ ಆರ್ಥಿಕ ದುಃಸ್ಥಿತಿ ಅತಿ ಪ್ರಬಲವಾಗಿದ್ದಿತೆಂದೂ ಒಬ್ಬ ಗಂಡು ಮತ್ತು ಒಬ್ಬ ಹೆಣ್ಣಿನ ಸಂಸಾರಜೀವನ ಬೇರೆ ತೆರನಾದ ಕುಟುಂಬ ಜೀವನಕ್ಕಿಂತ ತೃಪ್ತಿಕರವಾಗಿಯೂ ಸುಲಭವಾಗಿಯೂ ಇತ್ತೆಂದು ಒಂದು ಕಾರಣವನ್ನು ಸೂಚಿಸಲಾಗಿದೆ. ಇದರ ಜೊತೆಗೆ ಏಕಪತ್ನೀ ಕುಟುಂಬ ಲೈಂಗಿಕ ಸ್ವೈರವೃತ್ತಿಯನ್ನು ಕಡಿಮೆ ಮಾಡುತ್ತದೆ. ಅನೇಕ ಸಮಾಜಗಳಲ್ಲಿ ಗಂಡು ಹೆಣ್ಣುಗಳ ಸಂಖ್ಯೆ ಸ್ವಲ್ಪ ಹೆಚ್ಚುಕಡಿಮೆ ಒಂದೇ ಸಮಾನಾಗಿರುವುದರಿಂದ ಒಂದು ಗಂಡಿಗೆ ಒಂದು ಹೆಣ್ಣು ಎನ್ನುವ ಸಂಪ್ರದಾಯದ ಕುಟುಂಬವೇ ಶ್ರೇಯಸ್ಕರವೆಂದು ಪರಿಗಣಿಸಲ್ಪಟ್ಟಿದೆ. ಇದೂ ಅಲ್ಲದೆ ಏಕಪತ್ನಿ ಕುಟುಂಬವೇ ಸ್ಥಿರವಾಗಿ ನಿಲ್ಲಬಹುದಾದ ಸಂಸ್ಥೆಯೆಂದೂ ಮಾನವನಿಗೆ ಅನುಭವದಿಂದ ಮನದಟ್ಟಾಗಿದೆ.

ಬಹುಪತಿ, ಬಹುಪತ್ನಿ ಕುಟುಂಬಗಳ ಪ್ರಕಾರ ಒಬ್ಬ ಗಂಡಸು ಅನೇಕ ಹೆಂಗಸರನ್ನು, ಇಲ್ಲವೇ ಅನೇಕ ಹೆಂಗಸರು ಒಬ್ಬ ಗಂಡನನ್ನು ಮದುವೆ ಮಾಡಿಕೊಂಡು ಸಂಸಾರವನ್ನು ಸಾಗಿಸಬಹುದು. ಪ್ರಾಚೀನ ಸಮಾಜದಲ್ಲಿ ಈ ಪದ್ಧತಿಗಳು ಜಾರಿಯಲ್ಲಿದ್ದವು. ಆರ್ಥಿಕ ಸ್ಥಿತಿ ಉತ್ತಮಗೊಂಡ ಸಂದರ್ಭದಲ್ಲಿ ಮನುಷ್ಯ ಹೆಚ್ಚು ಜನ ಹೆಂಗಸರನ್ನು ಮದುವೆ ಮಾಡಿಕೊಳ್ಳುವ ಪದ್ಧತಿ ರೂಢಿಗೆ ಬಂದಿರಬೇಕು. ಪುರುಷತ್ವವನ್ನು ತೋರ್ಪಡಿಸಲೂ ಆರ್ಥಿಕ ಸ್ಥಿತಿಯ, ಸ್ಥಾನಮಾನಗಳ ಉತ್ತಮಿಕೆಯನ್ನು ಮೆರೆಯಲೂ ಪರಾಕ್ರಮವನ್ನು ವ್ಯಕ್ತಪಡಿಸುವ ಸಲುವಾಗಿಯೂ ಶ್ರೀಮಂತರೂ ಪರಾಕ್ರಮಿಗಳೂ ವೀರರೂ ಶೂರರೂ ಹೆಚ್ಚು ಹೆಚ್ಚು ಹೆಣ್ಣುಗಳನ್ನು ಸೇರಿಸಿಕೊಂಡು ಸಂಸಾರವನ್ನು ನಡೆಸುವ ಪದ್ಧತಿಯನ್ನು ಜಾರಿಗೆ ತಂದರೆಂದು ತೋರುತ್ತದೆ. ರಿವರ್ಸ್ ಹೇಳಿರುವಂತೆ ಇಂಥ ಕುಟುಂಬ ವೀರರಿಗೂ ಶ್ರೀಮಂತರಿಗೂ ಮಾತ್ರ ಸಾಧ್ಯ. ಹಿಂದೂ ಸಮಾಜದಲ್ಲಿಯೂ ಈ ತೆರನಾದ ಕುಟುಂಬಗಳು ಇವೆ. ಆದರೆ ಬಹಳ ವಿರಳ. ಮಹಮ್ಮದೀಯರಲ್ಲಿ ಇಂಥ ಕುಟುಂಬಗಳು ಅತಿಯಾಗಿವೆ. ಹೆಚ್ಚು ಜನರನ್ನು ಮದುವೆಯಾದರೆ ತಮ್ಮ ಕೃಷಿಜೀವನ ಉತ್ತಮಗೊಳ್ಳುವುದೆಂದು ರೈತ ಜನರ ನಂಬಿಕೆ. ಇಂಥ ಸಂದರ್ಭದಲ್ಲಿ ಹೆಂಡತಿಯೇ ಹೆಚ್ಚಿನ ಜನರನ್ನು ಮದುವೆಯಾಗಲು ತನ್ನ ಗಂಡನನ್ನು ಪ್ರೇರೇಪಿಸುತ್ತಾಳೆ. ಈ ಕಾರಣಗಳಲ್ಲದೆ ಕೆಲವು ಗುಂಪುಗಳಲ್ಲಿ ಗಂಡಸರ ಸಂಖ್ಯೆಗಿಂತ ಹೆಂಗಸರ ಸಂಖ್ಯೆಯೇ ಹೆಚ್ಚಾಗಿರುವ ಪ್ರಮೇಯಗಳು ಬರುತ್ತವೆ. ಹಲವು ಬಾರಿ ಶತ್ರುಗಳು ಗಂಡಸರನ್ನೆಲ್ಲ ಕೊಂದು ಹೆಚ್ಚು ಜನ ಹೆಂಗಸರಿರುವ ಗುಂಪುಗಳನ್ನು ಸೆರೆಹಿಡಿದು ಆ ಹೆಂಗಸರನ್ನೆಲ್ಲ ಮದುವೆಯಾಗಿ ತಮ್ಮ ಗುಂಪಿನ ಪ್ರಾಬಲ್ಯವನ್ನು ಉತ್ತಮಗೊಳಿಸಿಕೊಳ್ಳುವ ಸಂದರ್ಭದಲ್ಲಿಯೂ ಬಹುಪತ್ನೀ ಕುಟುಂಬಗಳು ಹೆಚ್ಚುವ ಸಂಭವವಿತ್ತು. ಇದಕ್ಕೂ ಮಿಗಿಲಾಗಿ ಮನಶಾಸ್ತ್ರಜ್ಞರ ಪ್ರಕಾರ ಗಂಡಸು ಹೆಚ್ಚು ಹೆಂಗಸರೊಡಗೂಡಿ ಸಂಸಾರ ಮಾಡುವುದು ಅವನಿಗೆ ಹೆಚ್ಚಿನ ಲೈಂಗಿಕ ತೃಪ್ತಿಯನ್ನುಂಟುಮಾಡುವುದೆಂಬುದೂ, ಅದಕ್ಕಾಗಿಯೇ ಅವನು ಬಹುಪತ್ನಿ ಕುಟುಂಬಗಳನ್ನು ಕಟ್ಟಿದ್ದಾನೆಂಬುದೂ ದೃಢಪಟ್ಟ ಸಂಗತಿಯಾಗಿದೆ. ಇದರ ಜೊತೆಗೆ ಗಂಡು ಸಂತಾನವಾಗಬೇಕೆಂಬ ಆಕಾಂಕ್ಷೆಯಿಂದಲೂ ಹೆಚ್ಚು ಜನ ಸ್ತ್ರೀಯರನ್ನು ಮದುವೆಯಾಗುವ ಪದ್ಧತಿಯಿದೆ. ಏನೇ ಇರಲಿ, ಬಹುಪತ್ನಿ ಕುಟುಂಬಗಳಲ್ಲಿ ಸಂಸಾರಸುಖ ಕಡಿಮೆಯೆಂದೇ ಹೇಳಬಹುದು. ಹೆಂಗಸರ ವ್ಯಾಜ್ಯಗಳು ಅತಿಯಾಗಿರುತ್ತವೆ.

ಮೇಲ್ಕಂಡ ಕುಟುಂಬಗಳ ಜೊತೆಗೆ ಬಹುಪತಿ ಕುಟುಂಬಗಳೂ ಇವೆ. ಆದರೆ ಇವುಗಳ ಸಂಖ್ಯೆ ಬಹಳ ಅಪೂರ್ವ. ಈ ಕುಟುಂಬ ರಚನೆಯ ಪ್ರಕಾರ ಒಬ್ಬ ಹೆಂಗಸು ಅನೇಕ ಗಂಡಸರನ್ನು ಮದುವೆ ಮಾಡಿಕೊಳ್ಳುವಳು. ಗಂಡಸರು ಅಭಾವವಾಗಿರುವ ಗುಂಪುಗಳಲ್ಲಿ ಮಾತ್ರ ಈ ತೆರನಾದ ಕುಟುಂಬ ರಚನೆ ಇರಲು ಸಾಧ್ಯವೆಂದು ಊಹಿಸಬಹುದು. ಆರ್ಥಿಕ ಮುಗ್ಗಟ್ಟಿನಿಂದಾಗಿ ಹೆಂಡತಿಯನ್ನು ಸಾಕಲು ಬಹುಕಷ್ಟವಾದ ಸಂದರ್ಭದಲ್ಲಿ ಇಂಥ ಕುಟುಂಬದ ಆವಶ್ಯಕತೆ ಕಂಡುಬರುತ್ತದೆ. ಇಂಥ ವ್ಯವಸ್ಥೆಯನ್ನು ಟಿಬೆಟ್ಟಿನಲ್ಲಿಯ ಹಲವಾರು ಗುಂಪುಗಳಲ್ಲಿಯೂ ಎಸ್ಕಿಮೋ ಜನರಲ್ಲಿಯೂ ಹೆಚ್ಚಾಗಿ ಕಾಣಬಹುದು. ಹಿಮಾಲಯ ಪರ್ವತದ ಹಲವಾರು ಗುಂಪುಗಳಲ್ಲಿಯೂ ಈ ಪದ್ಧತಿ ರೂಢಿಯಲ್ಲಿತ್ತು. ಈಗೀಗ ಕಡಿಮೆಯಾಗುತ್ತಿದೆ. ಮೆಕ್‌ಲೆನನ ವರದಿಯ ಪ್ರಕಾರ ಕೇರಳದ ನಾಯರ್ ಜನಾಂಗದಲ್ಲಿಯೂ ಈ ಪದ್ಧತಿ ಇತ್ತೆಂದು ತಿಳಿದಿದೆ. ಎಲ್.ಕೆ.ಎ ಅಯ್ಯರ್, ಕಣ್ಣನ್ ನಾಯರ್ ಇವರು ಕೆಲವು ಉದಾಹರಣೆಗಳನ್ನು ಕೊಟ್ಟು ನಾಯರ್ ಜನಾಂಗದಲ್ಲಿ ಈ ತರಹೆಯ ಕುಟುಂಬಗಳಿದ್ದುವೆಂದು ಸೂಚಿಸಿದ್ದಾರೆ. ಅದರಲ್ಲೂ ಕೇರಳದ ನಂಬೂದರಿಗಳಲ್ಲಿ ಈ ಪದ್ಧತಿ ವಿಶೇಷವಾಗಿ ರೂಢಿಯಲ್ಲಿತ್ತು. ನಂಬೂದರಿಗಳಲ್ಲಿ ದೊಡ್ಡಣ್ಣ ತನ್ನ ಜಾತಿಯವರನ್ನು ಮದುವೆಯಾಗುತ್ತಾನೆ. ಆತನ ತಮ್ಮಂದಿರು ನಾಯರರ ಹೆಂಗಸರೊಡನೆ ಸಂಬಂಧ ಬೆಳೆಸುತ್ತಾರೆ. ಇದರಿಂದ ನಂಬೂದರಿಗಳ ಹೆಂಗಸರು ಹೆಚ್ಚಿ ಬಹುಪತ್ನಿತ್ವ ಹೆಚ್ಚಿತ್ತು. ಹೀಗೆಯೇ ನಾಯರರ ಹೆಂಗಸರು ಕಡಿಮೆಯಾಗಿ ನಾಯರರ ಗಂಡಸರು ಬಹುಪತಿತ್ವವನ್ನು ಅವಲಂಬಿಸುತ್ತಿದ್ದರು. ಆದರೆ ಇದು ಈಗೀಗ ಕಡಿಮೆ ಆಗುತ್ತಿದೆ. ಇಂಥ ಕುಟುಂಬಗಳು ನೀಲಗಿರಿಯ ತೋಡರಲ್ಲಿಯೂ ಆಚರಣೆಯಲ್ಲಿದ್ದುವು. ಕೊಡಗಿನಲ್ಲಿಯೂ ಈ ತೆರನಾದ ಕುಟುಂಬಗಳಿದ್ದುವೆನ್ನುವುದಕ್ಕೆ ಆಧಾರಗಳಿವೆ.

ಇನ್ನೊಂದು ಬಗೆ ಅವಿಭಕ್ತ ಕುಟುಂಬ. ಇಲ್ಲಿ ಗಂಡಸಿಗೇ ಹೆಚ್ಚು ಪ್ರಾಧಾನ್ಯ. ಪಿತೃವೇ ಆ ಕುಟುಂಬಕ್ಕೆ ಯಜಮಾನ. ಹುಟ್ಟಿದ ಮಕ್ಕಳಲ್ಲಿ ಗಂಡುಮಗುವಿಗೇ ಹೆಚ್ಚಿನ ಪುರಸ್ಕಾರ ಸಿಕ್ಕುತ್ತದೆ. ಹೆಣ್ಣು ಮಕ್ಕಳು ದೊಡ್ಡವರಾದ ಮೇಲೆ ಅವಿಭಕ್ತ ಕುಟುಂಬವನ್ನು ಬಿಟ್ಟು ಗಂಡನ ಮನೆಯನ್ನು ಸೇರುವುದು ವಾಡಿಕೆ. ಉಳಿದ ಕಡೆಗಳಲ್ಲಿರುವಂತೆ ಗಂಡುಮಕ್ಕಳು ಮದುವೆಯಾದ ಮೇಲೂ ಬೇರೆ ಬಾಳದೆ ಮೂಲ ಸಂಸಾರದ ಸದಸ್ಯರಾಗಿಯೇ ಉಳಿಯುತ್ತಾರೆ. ಎಲ್ಲ ಗಂಡುಮಕ್ಕಳೂ ಒಂದೇ ಮನೆಯಲ್ಲಿದ್ದುಕೊಂಡು, ಒಂದೇ ಅಡಿಗೆಯ ಮನೆಯಲ್ಲಿ ತಯಾರಾದ ಊಟವನ್ನು ಒಟ್ಟಿಗೆ ಉಂಡು ಒಟ್ಟಿಗೆ ಬಾಳುತ್ತಾರೆ. ಕಷ್ಟ ನಷ್ಟ ಸುಖದುಃಖಗಳಲ್ಲಿ ಮನೆಯವರೆಲ್ಲರೂ ಭಾಗಿಗಳಾಗಿ, ಸಂಸಾರವನ್ನು ಸಾಗಿಸುತ್ತಾರೆ. ಜನ್ಯಸಂಸ್ಕಾರ, ಅತಿಥಿಸತ್ಕಾರ, ಶವಸಂಸ್ಕಾರಗಳನ್ನೂ ಒಟ್ಟಿಗೆ ನಿರ್ವಹಿಸಿಕೊಂಡು. ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಎಲ್ಲರೂ ಭಾಗಿಗಳಾಗಿರುತ್ತಾರೆ. ಆಸ್ತಿಪಾಸ್ತಿಗಳ ಹಕ್ಕೆಲ್ಲವೂ ಗಂಡು ಮಕ್ಕಳಿಗೇ ಸೇರಿರುತ್ತದೆ. ಆಸ್ತಿಯನ್ನು ಸಂಪಾದಿಸುವ ಹಕ್ಕು ಎಲ್ಲರಿಗೂ ಇದ್ದು, ಅದರ ಆಗುಹೋಗುಗಳನ್ನೂ, ಆಸ್ತಿಯನ್ನು ಹೆಚ್ಚಿಸಿಕೊಳ್ಳುವ ಅಧಿಕಾರವನ್ನೂ, ವರಮಾನವನ್ನು ಖರ್ಚುಮಾಡುವ ಅಧಿಕಾರವನ್ನೂ ಅವಿಭಕ್ತ ಕುಟುಂಬದ ಯಜಮಾನನೇ ಹೊತ್ತಿರುತ್ತಾನೆ. ಯಜಮಾನನಾದರೋ ಎಲ್ಲರ ಮನಸ್ಸನ್ನರಿತು, ಅವರವರಿಗೆ ಬೇಕಾದ ಸೌಲಭ್ಯಗಳನ್ನೊದಗಿಸಿಕೊಂಡು, ಅವರ ಶ್ರೇಯಸ್ಸನ್ನೇ ಸದಾ ಗಮನದಲ್ಲಿಟ್ಟುಕೊಂಡು ಅವಿಭಕ್ತ ಕುಟುಂಬದ ಏಳಿಗೆಗೇ ದುಡಿದು, ಕುಟುಂಬದ ಜನರೆಲ್ಲರಿಗೂ ಪ್ರೀತಿ ಪಾತ್ರನಾಗಲು ಪ್ರಯತ್ನಪಡುತ್ತಾನೆ. ಈ ಬಗೆಯ ಕುಟುಂಬಗಳು ಬಹುಕಾಲದಿಂದಲೂ ಮಾನವ ಸಮಾಜದಲ್ಲಿದ್ದುವು. ಗ್ರೀಸ್ ದೇಶದಲ್ಲಿಯೂ ಇಂಗ್ಲೆಂಡ್ ಮತ್ತು ಇತರ ಐರೋಪ್ಯ ದೇಶಗಳಲ್ಲಿಯೂ ಇಂಥ ಕುಟುಂಬಗಳಿದ್ದುವೆನ್ನುವುದಕ್ಕೆ ನಿದರ್ಶನಗಳಿವೆ. ಯಂತ್ರಯುಗದ ಪ್ರಭಾವದಿಂದ ವ್ಯಕ್ತಿ ಸ್ವಾತಂತ್ರ್ಯಪ್ರಿಯನಾಗಿ, ಅವಿಭಕ್ತ ಕುಟುಂಬದಲ್ಲಿರಲು ಒಪ್ಪದೆ ಹೋದಾಗ, ಅದು ಸಾಧ್ಯವಾಗದಂಥ ಪರಿಸ್ಥಿತಿ ಉದ್ಭವಿಸಿದಾಗ, ಸಂಕೀರ್ಣ ನಗರಜೀವನ ಬೆಳೆದ ಮೇಲೆ, ಅವಿಭಕ್ತ ಕುಟುಂಬಗಳ ಪ್ರಾಧಾನ್ಯ ಕಡಿಮೆಯಾಗುತ್ತ ಬಂದಿದೆ. ಭಾರತದಲ್ಲೂ ಹೀಗಾಗುತ್ತಿರುವುದನ್ನು ಗಮನಿಸಬಹುದು.

ಆಸ್ತಿಯ ಹಕ್ಕು ಸಾಮಾನ್ಯವಾಗಿ ಅವಿಭಕ್ತ ಕುಟುಂಬದಲ್ಲಿ ಹುಟ್ಟಿದ ಗಂಡು ಸಂತತಿಗೆ ಇರುತ್ತದೆ. ಇವರು ಒಟ್ಟು ಕುಟುಂಬದ ಆಸ್ತಿಗೆ ಹಕ್ಕುದಾರರಾಗಿರುತ್ತಾರೆ. ತಂದೆ, ಮುತ್ತಾತಂದಿರಿಂದ ನಡೆದುಬಂದ ಆಸ್ತಿಯಲ್ಲಿಯೂ ಇವರಿಗೆ ಅಧಿಕಾರವಿರುತ್ತದೆ. ಆದರೆ ಪುತ್ರಿ ಸಮಭಾಗವನ್ನು ಪಡೆಯಲು ಅನರ್ಹಳು. ಸ್ತ್ರೀಧನವಾಗಿ ಬಂದ ಆಸ್ತಿಗೆ ಮಾತ್ರ ಆಕೆ ಹಕ್ಕುದಾರಳು. ಗಂಡ ಸಕಲೈಶ್ವರ್ಯವಂತನಾಗಿ ದುಡಿದು ಸಂಪಾದಿಸಿದರೂ ಅದರಲ್ಲಿ ಪತ್ನಿಗೆ ಹಕ್ಕಿರುವುದಿಲ್ಲ. ಆಕೆಗೆ ಕೇವಲ ಜೀವನಾಂಶಕ್ಕೆ ಹಕ್ಕುಂಟು. ತಂದೆಯ ಮರಣಾನಂತರ ಆಸ್ತಿಯ ಹಕ್ಕೆಲ್ಲವೂ ಮಗನಿಗೇ ಸೇರುತ್ತದೆ. ಇದು ಭಾರತದ ಮಿತಾಕ್ಷರ ನ್ಯಾಯದ ವಿಧಿಗಳು.

ಆಧುನಿಕ ಕಾಲದಲ್ಲಿ ವ್ಯಕ್ತಿಗೇ ಸ್ವಾತಂತ್ರ್ಯ ಹೆಚ್ಚಾಗಿರುವುದರಿಂದ ತನ್ನ ಸ್ವಂತ ಶ್ರಮದಿಂದ ಗಳಿಸಿದ ಆಸ್ತಿಗೆ ತಾನೇ ಹಕ್ಕುದಾರನಾಗುತ್ತಾನೆ. ಇದಕ್ಕೆ ಸ್ವಯಾರ್ಜಿತ ಆಸ್ತಿಯೆಂದು ಹೆಸರು. ಸ್ವಯಾರ್ಜಿತ ಆಸ್ತಿಯಲ್ಲಿ ಪಾಲು ಕೇಳಲು ಅವಿಭಕ್ತ ಕುಟುಂಬದ ಸದಸ್ಯರಿಗೆ ಹಕ್ಕು ಇರುವುದಿಲ್ಲ. ಹಿಂದಿನ ಕಾಲದಲ್ಲಿ ಅವಿಭಕ್ತ ಕುಟುಂಬದಿಂದ ಸ್ವಲ್ಪ ಸಹಾಯ ಪಡೆದು ಒಬ್ಬ ವ್ಯಕ್ತಿ ಆಸ್ತಿ ಮಾಡಿದ್ದರೂ ಅಂತಹ ಆಸ್ತಿಯಲ್ಲಿ ಇತರ ಅವಿಭಕ್ತ ಕುಟುಂಬದ ಸದಸ್ಯರಿಗೂ ಹಕ್ಕು ಇತ್ತು. ಇಂಥ ತೊಡರುಗಳು ಈಗ ಇಲ್ಲ. ಅವಿಭಕ್ತ ಕುಟುಂಬದಿಂದ ಸಹಾಯ ಪಡೆದು ವ್ಯಕ್ತಿ ಆಸ್ತಿ ಸಂಪಾದನೆ ಮಾಡಿದ್ದರೂ ಅಂಥ ಆಸ್ತಿ ಆ ವ್ಯಕ್ತಿಗೆ ಸೇರಿದ್ದೆಂದು ಕಾನೂನು ಹೇಳುತ್ತದೆ. ಇದರಿಂದ ವ್ಯಕ್ತಿಗೆ ಸ್ವಾತಂತ್ರ್ಯ ಹೆಚ್ಚಿ ವ್ಯಕ್ತಿಯ ಮನೋಭಾವವೂ ಮಾರ್ಪಾಡಾಗಲು ಅವಕಾಶವಾಗಿದೆ. ಕುಟುಂಬದ ಆಸ್ತಿಯಲ್ಲಿ ಸ್ತ್ರೀಯರಿಗೂ ಭಾಗ ಲಭ್ಯವಾಗುವಂತೆ ಭಾರತದಲ್ಲಿ ಈಚೆಗೆ ಕಾನೂನು ಜಾರಿಗೆ ಬಂದಿದೆ.

ಅವಿಭಕ್ತ ಕುಟುಂಬ ತನಗೆ ಸೇರಿದ ಎಲ್ಲ ವ್ಯಕ್ತಿಗಳ ರಕ್ಷಣೆಯ ಹೊಣೆಯನ್ನೂ ತಾನೇ ಹೊತ್ತು ಅದನ್ನು ಅತಿ ಸಾಂಗವಾಗಿ ನೆರವೇರಿಸಿಕೊಂಡು ಬರುತ್ತಿತ್ತು. ಶಕ್ತಿಯೇ ಪ್ರಬಲ, ಅದೇ ಕಾಯಿದೆ ಕಟ್ಟಳೆಗಳ ಮೂಲ–ಎಂಬ ಸಂದರ್ಭದಲ್ಲಂತೂ ಅವಿಭಕ್ತ ಕುಟುಂಬ ತನ್ನ ಕುಟುಂಬದ ಜನರನ್ನೂ ಕುಟುಂಬದ ಜನರು ಸಂಪಾದಿಸಿದ ಆಸ್ತಿಯನ್ನು ಸುಭದ್ರವಾಗಿ ಕಾಪಾಡಿಕೊಂಡು ಬರಲು ಸಹಾಯಕವಾಗಿದ್ದು ಪ್ರಮುಖ ಪಾತ್ರ ವಹಿಸುತ್ತಿತ್ತು.

ವಂಶಪಾರಂಪರ್ಯವಾಗಿ ಸಂಪಾದಿಸಿದ ಆಸ್ತಿ ಬೇಜವಾಬ್ದಾರಿಯಿಂದ ಪೋಲಾಗದಂತೆಯೂ ವಿವೇಕಿಗಳಲ್ಲದ ಯುವಕರು ಅಂಥ ಆಸ್ತಿಯನ್ನು ಹಾಳುಮಾಡದಂತೆಯೂ ಅಂಥ ಆಸ್ತಿಯಿಂದ ಪುತ್ರ, ಪುತ್ರಿ, ಕಳತ್ರರೆಲ್ಲರು ಸುಖಪಡುವಂತೆ ಚಿರಕಾಲ ಅದನ್ನು ಕಾಪಾಡಿಕೊಂಡು ಬರುವಂತೆಯೂ ಮನೆಯ ಯಜಮಾನ ದಕ್ಷತೆಯಿಂದ ನೋಡಿಕೊಳ್ಳುವವರೆಗೆ ಅವಿಭಕ್ತ ಕುಟುಂಬ ಪ್ರಯೋಜನಕಾರಿಯಾಗಿತ್ತು.

ಆದರೆ ಅವಿಭಕ್ತ ಕುಟುಂಬ ತನ್ನದೇ ಆದ ಒಂದು ತರಹೆಯ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದರಿಂದಲೂ ಯಜಮಾನನಿಗೇ ಹೆಚ್ಚಿನ ಹಕ್ಕನ್ನು ಕೊಟ್ಟಿದ್ದರಿಂದಲೂ ಉಳಿದ ಸದಸ್ಯರಲ್ಲಿ ಬುದ್ಧಿವಂತರಾದವರಿಗೂ ಚಟುವಟಿಕೆಯಿಂದಿದ್ದ ಇತರ ಯುವಕರಿಗೂ ಸ್ವಾತಂತ್ರ್ಯವಿಲ್ಲದಿದ್ದುದರಿಂದಲೂ ಅನೇಕ ಎಡರುತೊಡರುಗಳಿಗೆ ಕಾರಣವಾಯಿತು; ಕಿರಿಯರು ಅಜಾಗರೂಕರಾಗಲೂ ಸೋಮಾರಿಗಳಾಗಿ ಜೀವನ ಮಾಡಲೂ ಅವಕಾಶವಿತ್ತು.

ಆಧುನಿಕ ಕಾಲದಲ್ಲಿ ಇತರ ಸಂಸ್ಥೆಗಳು ಬದಲಾವಣೆ ಹೊಂದುತ್ತಿರುವಂತೆ ಕುಟುಂಬ ಸಂಸ್ಥೆಯೂ ಮಾರ್ಪಾಡಾಗುತ್ತಿದೆ. ಇದರಿಂದ ಕುಟುಂಬ ವ್ಯವಸ್ಥೆ ಒಂದು ಸಂದಿಗ್ಧ ಸ್ಥಿತಿಯಲ್ಲಿ ಸಿಕ್ಕಿಬಿದ್ದಿದೆ. ಅದರ ರಚನೆಯೂ ಕಾರ್ಯಚಟುವಟಿಕೆಗಳೂ ರೀತಿನೀತಿಗಳೂ ಸದಸ್ಯರಿಗಿದ್ದ ಸಂಬಂಧಗಳೂ ಮಿಗಿಲಾಗಿ ಧ್ಯೇಯಗಳೂ ಮಾರ್ಪಾಡಾಗುತ್ತಿವೆ. ಯಂತ್ರ ಯುಗದಿಂದಾಗಿರುವ ಆರ್ಥಿಕ ಕ್ರಾಂತಿಯೂ, ನವೀನ ರೀತಿಯ ಜೀವನ ವ್ಯವಸ್ಥೆಯೂ, ಕೈಗಾರಿಕಾ ಸಂಸ್ಕೃತಿಯೂ ಪಿತೃಪ್ರಾಧಾನ್ಯವಿದ್ದ ಕುಟುಂಬದಲ್ಲಿ ವ್ಯತ್ಯಾಸಗಳನ್ನು ಕಲ್ಪಿಸಿ ಕುಟುಂಬ ಜೀವನದಲ್ಲಿಯೇ ಕ್ರಾಂತಿಯನ್ನುಂಟು ಮಾಡಿವೆ. ಕುಟುಂಬದಲ್ಲಿನ ಹಳೆಯ ಪದ್ಧತಿಗಳು ಸಡಿಲವಾಗಿ, ಕ್ರಾಂತಿಕಾರಕ ಆರ್ಥಿಕ ಮತ್ತು ಆಡಳಿತ ಪ್ರಭಾವ ಕುಟುಂಬದ ಮೇಲೆ ಬಿದ್ದು, ಹಲವಾರು ಶತಮಾನಗಳಿಂದ ನಡೆದು ಬಂದ ಕುಟುಂಬ ಪದ್ಧತಿಗಳು ಮಾರ್ಪಡುತ್ತಿವೆ. ಈ ಕ್ರಾಂತಿಕಾರಕ ಸನ್ನಿವೇಶಗಳು ಸ್ತ್ರೀಯರಿಗೂ ಪುರುಷರಿಗೂ ಕುಟುಂಬದಲ್ಲಿದ್ದ ಸಾಮರಸ್ಯವನ್ನು ಕಡಿಮೆ ಮಾಡಿದುವೆಂದರೆ ತಪ್ಪಾಗಲಾರದು. ಜೊತೆಗೆ ಪ್ರಾಚೀನ ಕುಟುಂಬದಲ್ಲಿಯ ಅನೇಕ ಹೊಣೆಗಳನ್ನು ಸಮಾಜ ಮತ್ತು ಸರ್ಕಾರ ಹೊರುತ್ತಿದೆಯಾಗಿ, ತಾಯಿ ತಂದೆಗಳೇ ನಿರ್ವಹಿಸಬೇಕಾಗಿದ್ದ ವಿದ್ಯೆ, ಮದುವೆ ಮುಂಜಿಗಳ ಹೊಣೆಯೂ ಕಾಲಕ್ರಮೇಣ ಕಡಿಮೆಯಾಗುತ್ತಿದೆ. ನಗರಗಳ ಸಂಪರ್ಕದಿಂದ ಸ್ತ್ರೀಯೂ ಕಲಿತು, ಸಾರ್ವಜನಿಕ ಜೀವನಕ್ಕಿಳಿದು ಉದ್ಯೋಗ ಸಂಪಾದಿಸಿ, ತನ್ನ ಕುಟುಂಬದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಿಕೊಂಡು ಸ್ಥಾನಮಾನಗಳಲ್ಲಿ ಗಂಡಸಿನ ಎತ್ತರಕ್ಕೆ ಏರುತ್ತಿದ್ದಾಳೆ. ಹೀಗಾಗಿ ನವೀನ ಕುಟುಂಬ ಪಿತೃಪ್ರಧಾನವೂ ಅಲ್ಲ, ಮಾತೃಪ್ರಧಾನವೂ ಅಲ್ಲ, ಉಭಯಪ್ರಧಾನವಾಗುತ್ತಿದೆ.

ಅಲ್ಲದೆ ಮದುವೆ, ತಂದೆತಾಯಿಗಳ ಕರ್ತವ್ಯ, ಮಕ್ಕಳು, ಅವರ ಪಾಲನೆ ಇತ್ಯಾದಿ ವಿಷಯಗಳಲ್ಲೂ ಕ್ರಾಂತಿಕಾರಿ ಬದಲಾವಣೆಗಳಾಗಿದೆ. ಅವ್ಯವಸ್ಥಿತ ಲೈಂಗಿಕಜೀವನ ಕುಟುಂಬದ ಪ್ರಾಧಾನ್ಯವನ್ನು ಮತ್ತಷ್ಟು ಕುಗ್ಗಿಸಿದೆ. ಮದುವೆಗಳಿಗೆ ಮೊದಲೇ ಗಂಡು ಹೆಣ್ಣುಗಳು ಲೈಂಗಿಕ ಜೀವನದ ಅನುಭವವನ್ನು ಪಡೆಯುವುದು ಹೆಚ್ಚಾಗಿ ಪ್ರೇಮಿಸಿ ಮದುವೆಯಾಗುವುದು ಹೆಚ್ಚುತ್ತಿದೆ. ಹಾಗೆಯೇ ಮಾನಸಿಕ ಉಲ್ಲಣಗಳಿಂದಾಗಿ ವಿಚ್ಛೇದಗಳೂ ಹೆಚ್ಚುತ್ತಿವೆ.

ಈ ಕಾರಣಗಳಿಂದ ಕುಟುಂಬದ ರಚನೆಯಲ್ಲಿಯೂ ಅದರ ದಿನಚರಿಯ ಕರ್ತವ್ಯಗಳಲ್ಲಿಯೂ, ಅದರ ಮೌಲ್ಯಗಳಲ್ಲಿಯೂ ಅತ್ಯಧಿಕ ಮಾರ್ಪಾಡುಗಳಾಗಿ ಕುಟುಂಬದ ರೀತಿನೀತಿಯೇ ಇಂದಿನ ದಿವಸ ಬದಲಾಗಿದೆ. ಆಧುನಿಕ ಸಂಸಾರ ಕೆಳಗೆ ಕಂಡ ಮೂರು ಕಾರ್ಯಗಳನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಿಲ್ಲ. ಮೊದಲನೆಯದಾಗಿ ನ್ಯಾಯವಾದ ಲೈಂಗಿಕ ಜೀವನಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದು. ಎರಡನೆಯದಾಗಿ ಮಕ್ಕಳನ್ನು ಪಡೆದು ಅವುಗಳ ಪುರೋಭಿವೃದ್ಧಿಗೆ ತಾಯಿತಂದೆಗಳು ಶ್ರಮಿಸುವುದು, ಮತ್ತು ಮೂರನೆಯದಾಗಿ ಕುಟುಂಬವೇ ಸಮಾಜಕ್ಕೆ ಆಧಾರಸ್ತಂಭವಾಗಿ, ಸಮಾಜದ ಚಟುವಟಿಕೆಗಳಿಗೆ ಮೇಲ್ಪಂಕ್ತಿಯಾಗಿರುವುದು. ಈ ಕಾರಣಗಳಿಂದ ಆಧುನಿಕ ಕುಟುಂಬ ಹೆಚ್ಚಿನ ಬದಲಾವಣೆಗೊಳಗಾಗುತ್ತಿದೆ. ಈ ಬದಲಾವಣೆಗಳನ್ನು ಕುರಿತು ಆಗ್‍ಬರ್ನ್ ಕಿಂಗ್ಸ್ಲೆ ಡೇವಿಸ್ ಜಿಮ್ಮರ್ ಮನ್, ಕಪಾಡಿಯಾ, ಇರಾವತಿ ಕರ್ವೆ, ಸಾರೋಕಿನ್, ಆಟಿಸ್ ಡಡ್ಲಿ ಡಂಕನ್, ಆರ್ನಾಲ್ಡ್ ರೋಜ್, ಅಂಡರ್ ಸನ್ ಮೊದಲಾದ ಸಮಾಜಶಾಸ್ತ್ರಜ್ಞರು ಬದಲಾಗುತ್ತಿರುವ ಸಮಾಜದಲ್ಲಿ ಕುಟುಂಬದ ಸ್ಥಾನವನ್ನೂ ಅದರ ಮುಂದಿನ ಪಾತ್ರವನ್ನೂ ವಿವೇಚಿಸಲು ಪ್ರಯತ್ನಿಸಿದ್ದಾರೆ.

ಕುಟುಂಬ ವ್ಯವಸ್ಥೆಗೆ ಆಧುನಿಕ ಯುಗದಲ್ಲೂ ಸಾಕಷ್ಟು ಪ್ರಾಧಾನ್ಯವಿದೆಯೆಂಬುದು ತಜ್ಞರ ಮತ. ಅದು ಮಿಕ್ಕೆಲ್ಲ ಸಾಮಾಜಿಕ ವ್ಯವಸ್ಥೆಗಳ ಅಡಿಗಲ್ಲು. ಅದು ಚೊಕ್ಕದಾಗಿ ಚೊಕ್ಕವಾಗಿ ಇದ್ದಲ್ಲಿ ಅದರ ಸದಸ್ಯರೆಲ್ಲರ ಶ್ರೇಯೋಭಿವೃದ್ಧಿಯೂ ತನ್ಮೂಲಕ ಇಡೀ ದೇಶದ ಪ್ರಗತಿಯೂ ಉಂಟಾಗುತ್ತದೆ. ಅದರ ಕಟ್ಟುಪಾಡನ್ನು ಸಡಿಲಿಸಿದಲ್ಲಿ ಅಥವಾ ಅದನ್ನು ನಿರಾಕರಿಸಿದಲ್ಲಿ ಮನುಷ್ಯನ ಬಾಳು ಗೊಂದಲಕ್ಕೊಳಗಾಗುತ್ತದೆ. ಮನುಷ್ಯನ ಸ್ವಾರ್ಥ, ವೈಯಕ್ತಿಕ ಏರುಪೇರುಗಳು, ದುರಭಿಲಾಷೆಗಳು– ಇವೆಲ್ಲ ಹದಗೊಂಡು ಪ್ರೇಮ, ನಿಸ್ವಾರ್ಥತೆ, ಸ್ನೇಹ, ಪರೋಪಕಾರಬುದ್ಧಿ, ನಯ, ಸಂಸ್ಕೃತಿ ಇವೆಲ್ಲ ಬೆಳೆಯಲು ಕುಟುಂಬ ವ್ಯವಸ್ಥೆ ಅಗತ್ಯ. ಅದರ ಒಳರಚನೆ ಎಷ್ಟೇ ಮಾರ್ಪಾಡಾಗಲಿ, ಅದರ ಉದ್ದೇಶ ಮಾತ್ರ ಎಂದಿನಂತೆಯೇ ನಡೆದುಬಂದಿದೆ. ಅದರ ಅಡಿಪಾಯ ನಲುಗಿದಲ್ಲಿ ಇಡೀ ಸಮಾಜ ಜರ್ಝರಿತವಾಗುತ್ತದೆ. ಅದನ್ನು ಉಳಿಸಿಕೊಂಡು ಬರುವುದೇ ಮಾನವ ಕುಲಕ್ಕೆ ಶ್ರೇಯಸ್ಕರವೆಂಬುದು ತಜ್ಞರ ಅಭಿಪ್ರಾಯ. (ಕೆ.ಎಸ್.ವಿ.; ಯು.ಎಲ್.)

**ಕುಟುಂಬಯೋಜನೆ :** ಗಂಡ ಹೆಂಡತಿ ತಮಗೆ ಆಗಬೇಕಾಗುವ ಮಕ್ಕಳ ಸಂಖ್ಯೆಯನ್ನು ತಮ್ಮ ಯೋಗ್ಯತೆಗೆ ತಕ್ಕಂತೆ ಮೊದಲೇ ನಿರ್ಧರಿಸಿಕೊಂಡು ತಮ್ಮ ದಾಂಪತ್ಯಜೀವನದ ಸೌಖ್ಯಕ್ಕೆ ಭಂಗಬರದಂತೆ ಆಚರಿಸುವ ಒಂದು ವೈಜ್ಞಾನಿಕ ವಿಧಿ (ಫ್ಯಾಮಿಲಿ ಪ್ಲಾನಿಂಗ್). ವೈಯಕ್ತಿಕವಾಗಿ ಸಂಸಾರದಲ್ಲಿ ನೆಮ್ಮದಿ ನೆಲೆಸಲು ಮಕ್ಕಳು ಸಂಖ್ಯೆ ಮಿತಿಯೊಳಗೆ ಇರಬೇಕು. ತಾಯಿಯ ಆರೋಗ್ಯ, ತಂದೆಯ ಸಂಪಾದನೆ, ಮಕ್ಕಳ ವಿದ್ಯಾಭ್ಯಾಸ ಮತ್ತು ಯೋಗಕ್ಷೇಮ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು 2 ಅಥವಾ 3 ಮಕ್ಕಳು ಸಾಕೆಂದು ಯೋಚಿಸಿ ಸಂಸಾರವನ್ನು ಮಿತಗೊಳಿಸಬೇಕು. ಆ ಮಕ್ಕಳಲ್ಲಿಯೂ 3–4 ವರ್ಷಗಳ ಅಂತರವಿರಬೇಕು. ರಾಷ್ಟ್ರದ ಹಿತದೃಷ್ಟಿಯಿಂದ ಸಹ ದೇಶದ ಜನಸಂಖ್ಯೆಯನ್ನು ಮಿತಿಯಲ್ಲಿಡುವುದು ಅಗತ್ಯ. ಹೊಸ ಹೊಸ ಯೋಜನೆಗಳನ್ನು ಕೈಗೊಂಡು ದೇಶದ ಆಹಾರ, ಉದ್ಯೋಗ, ವಸತಿಗಳನ್ನು ನಿರ್ಮಾಣ ಮಾಡುತ್ತಿರುವಾಗ ಪ್ರಜೆಗಳ ಸಂಖ್ಯೆ ಮಿತಿ ಮೀರುತ್ತ ಹೋದರೆ ಯಾವ ಯೋಜನೆಯೂ ಸಫಲವಾಗಲಾರದು. ವಿಶ್ವಶಾಂತಿಯ ದೃಷ್ಟಿಯಿಂದಲೂ ಜನಸಂಖ್ಯೆಯನ್ನು ಹಿಡಿತದಲ್ಲಿಡುವುದು ಅಗತ್ಯವೆಂದು ತೋರುತ್ತದೆ. ಜೀವಕಣಗಳನ್ನೇ ಒಂದುಗೂಡಿಸಿ ಒಂದು ಸೂಕ್ಷ್ಮಗ್ರಂಥಿಯನ್ನು ಉಂಟುಮಾಡುತ್ತದೆ. ಈ ಗ್ರಂಥಿಗೆ ಕಾರ್ಪಸ್ ಲ್ಯೂಟಿಯಂ ಎಂದು ಹೆಸರು. ಇದರ ಬಣ್ಣ ಹಳದಿ. ಇದು ಕೂಡ ನೀರ್ನಾಳಗ್ರಂಥಿಯಂತೆ ಕೆಲಸಮಾಡಿ ಪ್ರೊಜೆಸ್ಟಿರಾನ್ ಎಂಬ ಹಾರ್ಮೋನನ್ನು ಉತ್ಪತ್ತಿಮಾಡುತ್ತದೆ. ಬೆಳೆಯುವ ಭ್ರೂಣಕ್ಕೆ ಸುಖಾಗಮನ ಬಯಸಲು ಪ್ರೊಜೆಸ್ಟಿರಾನ್ ಹಾರ್ಮೋನ್ ಗರ್ಭಕೋಶವನ್ನು ಸಿದ್ಧಪಡಿಸುತ್ತದೆ. ತೆಳ್ಳಗಿದ್ದ ಗರ್ಭಕೋಶ ಈಗ ದಪ್ಪವಾಗುತ್ತದೆ. ಅದರ ಗೋಡೆಗಳು ರಕ್ತನಾಳಗಳಿಂದ ತುಂಬುತ್ತವೆ. ಗರ್ಭಾಂಕುರ ಕ್ರಿಯೆ ನಡೆದು ಭ್ರೂಣದ ಬೆಳವಣಿಗೆ ನಡೆದರೆ ಆಗ ಈ ಭ್ರೂಣ ಒಂದು ಗರ್ಭಕೋಶದ ಗೋಡೆಗೆ ಅಂಟಿಕೊಳ್ಳುತ್ತದೆ. ತನ್ನ ಸುತ್ತಲಿರುವ ರಕ್ತ ನಾಳಗಳ ಮೂಲಕ ತನಗೆ ಬೇಕಾದ ಆಹಾರ ಆಮ್ಲಜನಕಗಳನ್ನು ಪಡೆಯುತ್ತದೆ. ಈ ಕೆಲಸವನ್ನು ಮಾಡಲು ಭ್ರೂಣದ ಕೆಲವು ಅಂಗಾಂಶಗಳು ಹಾಗೂ ಗರ್ಭಕೋಶದ ಕೆಲವು ಅಂಗಾಂಶಗಳು ಸೇರಿ ಒಂದು ಸಂಯುಕ್ತ ರಚನೆಯನ್ನು ಏರ್ಪಡಿಸುತ್ತವೆ. ಇದಕ್ಕೆ ಗರ್ಭವೇಷ್ಟಿ ಅಥವಾ ಸೆತ್ತೆ ಅಥವಾ ಮಾಸು ಎಂದು ಹೆಸರು (ಪ್ಲಾಸೆಂಟ). ಇದರ ಮೂಲಕ ಭ್ರೂಣಕ್ಕೆ ಬೇಕಾದ ಆಹಾರ, ಆಮ್ಲಜನಕ ಮತ್ತು ಭ್ರೂಣದಿಂದ ವಿಸರ್ಜಿತವಾದ ಇಂಗಾಲದ ಡೈಆಕ್ಸೈಡ್ ಮತ್ತು ಮಲಿನ ವಸ್ತುಗಳ ವಿನಿಮಯ ನಡೆಯುತ್ತದೆ. ಗರ್ಭವೇಷ್ಟಿ ಭ್ರೂಣವನ್ನು ಆವರಿಸಿ ರಕ್ಷಿಸುತ್ತದೆ ಮತ್ತು ಭ್ರೂಣದ ಬೆಳವಣಿಗೆಯ ಚಟುವಟಿಕೆಗಳಿಗೆ ಬೇಕಾದ ಹಾರ್ಮೋನುಗಳನ್ನು ಉತ್ಪತ್ತಿ ಮಾಡುತ್ತದೆ.

ಆದರೆ ಹೊರಬಿದ್ದ ಅಂಡಾಣು ವೀರ್ಯಾಣುಗಳನ್ನು ಸೇರದೇ ಗರ್ಭಾಂಕುರ ಕ್ರಿಯೆ ನಡೆಯದಿದ್ದರೆ ಇದುವರೆಗೆ ನಡೆದ ಸಿದ್ಧತೆಗಳೆಲ್ಲ ವ್ಯರ್ಥವಾಗುತ್ತವೆ. ಅಂಡಾಶಯದಲ್ಲಿ ಕಾರ್ಪಸ್ ಲ್ಯೂಟಿಯಂ ಬಾಡಿ ಕರಗಿಹೋಗುತ್ತದೆ. ದಪ್ಪವಾದ ರಕ್ತ ನಾಳಪೂರಿತವಾದ ಗರ್ಭಕೋಶದ ಗೋಡೆಗಳೆಲ್ಲವೂ ಕಿತ್ತು ಹೋಗುತ್ತವೆ. ಮತ್ತು ತಮ್ಮ ಹಿಂದಿನ ಸ್ಥಿತಿಗೆ ಬರುತ್ತವೆ. ಆಗ ರಕ್ತಸ್ರಾವವಾಗುತ್ತದೆ. ಇದಕ್ಕೆ ಮುಟ್ಟು ಎಂದು ಹೆಸರು. ಪ್ರತಿ 28 ದಿವಸಗಳಿಗೆ ಒಂದಾವರ್ತಿ ಈ ರೀತಿ ಮುಟ್ಟು ಬರುತ್ತದೆ. ಆಗ 3 ರಿಂದ 5 ದಿವಸಗಳವರೆಗೆ

ಯೋನಿಯಿಂದ ರಕ್ತಸ್ರಾವವಾಗಿ ಆಮೇಲೆ ನಿಲ್ಲುತ್ತದೆ. ಇದು ನಿಂತಮೇಲೆ ಪುನಃ ಹೊಸ ಚಕ್ರ ಆರಂಭವಾಗುತ್ತದೆ. ಈ ಚಕ್ರದಲ್ಲಿ ಎರಡು ಕಾಲಗಳಿವೆ. ಒಂದು ಈಸ್ಟ್ರೋಜೆನ್ನಿನಿಂದ ನಿಯಂತ್ರಿತವಾದ ಕಾಲ. ಈ ಕಾಲದಲ್ಲಿ ಎಲ್ಲವೂ ಸ್ರಾವವಾಗಿ ತೆಳ್ಳಗಾಗಿದ್ದ ಗರ್ಭಕೋಶದ ಗೋಡೆಗಳು ಚೇತರಿಸಿಕೊಂಡು ಪುನಃ ದಪ್ಪವಾಗಿ ಬೆಳೆಯತೊಡಗುತ್ತವೆ. ಎರಡನೆಯ ಕಾಲ ಪ್ರೊಜೆಸ್ಟಿರಾನ್‌ನಿಂದ ನಿಯಂತ್ರಿತವಾದುದು. ಈಗ ರಕ್ತನಾಳಗಳು ಬೆಳೆದು ಹೇರಳವಾಗಿ ಕವಲೊಡೆದು ಭ್ರೂಣವನ್ನು ಸ್ವೀಕರಿಸಲು ಸಿದ್ಧವಾಗುತ್ತವೆ. ಈ ಚಕ್ರದ ಮಧ್ಯಭಾಗದಲ್ಲಿ ಅಂದರೆ ಒಂದು ಚಕ್ರದ ಹದಿನಾಲ್ಕನೆಯ ದಿವಸ ಅಂಡಾಣು ಅಂಡಾಶಯದಿಂದ ಕಳಚಿಕೊಂಡು ಹೊರಬೀಳುತ್ತದೆ. ಅಂಡಾಣು ವೀರ್ಯಾಣುಗಳ ಮಿಲನದಿಂದ ಗರ್ಭಧಾರಣೆ ಆಗುತ್ತದೆ. ಇದು ಸಂಕ್ಷೇಪವಾಗಿ ಗರ್ಭೋತ್ಪತ್ತಿಯಾಗುವ ವಿಧಾನ. ಇದರ ಜ್ಞಾನ ಎಲ್ಲರಿಗೂ ಅಗತ್ಯ. ನಿಯೋಜಿತ ಸಂತಾನವೆಂದರೆ ಕೇವಲ ಮಿತಸಂತಾನವಲ್ಲ. ಒಂದು ಮಗುವಿಗೂ ಮತ್ತೊಂದು ಮಗುವಿಗೂ ನಡುವಣ ಅಂತರವನ್ನು ನಿರ್ದೇಶಿಸುವುದು. ಆರ್ಥಿಕಸ್ಥಿತಿ ಸುಧಾರಿಸುವವರೆಗೆ ಸಂತಾನವನ್ನು ನಿರೋಧಿಸುವುದು. ಸಂಸಾರವನ್ನು ಸುಖಮಯವನ್ನಾಗಿ ಮಾಡುವುದು. ಹೆಣ್ಣನ್ನು ಕೇವಲ ಹೆರವು ಯಂತ್ರವನ್ನಾಗಿ ಮಾಡದೆ ಅವಳನ್ನು ಪ್ರೀತಿಯ ತಾಯಿಯಾಗುವಂತೆ ನೋಡಿಕೊಳ್ಳುವುದು. ಯಜಮಾನ ಬರಿಯ ದುಡಿತದ ಮನುಷ್ಯನಾಗದೆ ಅಕ್ಕರೆಯ ತಂದೆಯಾಗುವಂತೆ ಮಾಡುವುದು. ಇವು ಕುಟುಂಬ ಯೋಜನೆಯ ಮೂಲ ಉದ್ದೇಶಗಳು.

**ಗರ್ಭನಿರೋಧಕ ಉಪಾಯಗಳು :** ಗರ್ಭನಿರೋಧ ಸತಿಪತಿಗಳಿಬ್ಬರಿಗೂ ಸಂಬಂಧಿಸಿದ ಸಮಸ್ಯೆಯಾದ್ದರಿಂದ ಇಬ್ಬರೂ ಪರಸ್ಪರ ಯೋಚಿಸಿಕೊಂಡು ಇಬ್ಬರಿಗೂ ಒಪ್ಪಿಗೆಯಾಗುವ ಉಪಾಯವನ್ನು ಕೈಗೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಪರಸ್ಪರ ಸಹಕಾರ ಸಹಾನುಭೂತಿಗಳು ಅತ್ಯಗತ್ಯ. ಇವನ್ನು ಮೊದಲು ಸಾಧಿಸಿ ಕೊಳ್ಳಬೇಕು.

**ಸುರಕ್ಷಿತಕಾಲ :** ಇದೊಂದು ಸಾಮರಸ್ಯವಿಧಾನ. ಇದಕ್ಕೆ ಯಾವರೀತಿಯ ಕೃತಕ ನಿರೋಧಕಗಳನ್ನೂ ಉಪಯೋಗಿಸಬೇಕಾಗಿಲ್ಲ. ತಮ್ಮ ಲೈಂಗಿಕ ಜೀವನದಲ್ಲಿ ಸ್ವಲ್ಪ ಆತ್ಮಸಂಯಮವನ್ನು ಅಭ್ಯಾಸಮಾಡಿದರೆ ಸಾಕು. ಸ್ತ್ರೀಪುರುಷರು ತಮ್ಮ ಸಂಬಂಧವನ್ನು ಸುರಕ್ಷಿತಕಾಲದಲ್ಲಿ ಮಾತ್ರವೇ ಮಾಡಿಕೊಂಡಿರುವುದು ಈ ಉಪಾಯದ ಮೂಲವಾಗಿದೆ.




**ಚಿತ್ರ 1 ಸ್ತ್ರೀಯ ಋತುಚಕ್ರ**

ಸ್ತ್ರೀಯರ ಮಾಸಿಕ ಋತುಚಕ್ರವನ್ನು ಮೂರು ಭಾಗ ಮಾಡಬೇಕು. ಅದರಲ್ಲಿ ಒಂದನೆಯ ಮತ್ತು ಮೂರನೆಯ ಭಾಗ ಎಂದರೆ ಮೊದಲ ಹತ್ತು ದಿವಸಗಳು ಮತ್ತು ಕೊನೆಯ ಹತ್ತು ದಿವಸಗಳು ಸುರಕ್ಷಿತ ಕಾಲಗಳು. ಅವನ್ನು ಬಿಟ್ಟು ಮಧ್ಯದ ಹತ್ತು ದಿವಸಗಳು ಗರ್ಭಸಂಭವದ ಕಾಲ. ಈ ಕಾಲದಲ್ಲಿ ಪತಿಪತ್ನಿಯರ ಸಂಪರ್ಕವಾದರೆ ಗರ್ಭಧಾರಣವಾಗಬಹುದು. ಉಳಿದ ದಿವಸಗಳಲ್ಲಿ ಸ್ತ್ರೀಪುರುಷ ಸಂಪರ್ಕದಿಂದ ಗರ್ಭಸಂಭವದ ಭಯವಿಲ್ಲದೆ ಸತಿಪತಿಗಳು ಸುರಕ್ಷಿತರಾಗಿರಬಹುದು. ಸ್ತ್ರೀಯರ ಈ ಗರ್ಭಸಂಭವದ ನಿಶ್ಚಿತ ಕಾಲವನ್ನು ನಿರ್ಣಯಿಸಲು ದಂಪತಿಗಳು ವೈದ್ಯರ ಸಲಹೆಯನ್ನು ಪಡೆಯಬೇಕು. ದಿನವೂ ಬೆಳಗ್ಗೆ ಎದ್ದು ಮತ್ತಾವ ಕಾರ್ಯಗಳಲ್ಲಿ ತೊಡಗುವ ಮೊದಲು ಉಷ್ಣ ಮಾಪಿಯ ನೆರವಿನಿಂದ ಸ್ತ್ರೀಯ ದೇಹದ ಉಷ್ಣತೆಯನ್ನು ತಿಳಿದುಕೊಳ್ಳಬೇಕು. ಇದನ್ನು ಉಷ್ಣತಾಸೂಚಿ ಪಟ್ಟಿಯಲ್ಲಿ ಗುರುತುಮಾಡಬೇಕು. ಆ ಪಟ್ಟಿಯಲ್ಲಿ ರಜಸ್ವಲೆಯಾದ ದಿವಸಗಳನ್ನು ಬರೆಯಬೇಕು. ದೇಹದ ಉಷ್ಣತೆ ಪ್ರತಿದಿವಸವೂ ಹೆಚ್ಚು ಕಡಿಮೆ ಒಂದೇ ರೀತಿಯಾಗಿರುತ್ತದೆ. ಆದರೆ ಚಕ್ರದ ಮಧ್ಯಭಾಗದಲ್ಲಿ ಅಂದರೆ ಸುಮಾರು ಹದಿನಾಲ್ಕನೆಯ ದಿವಸ ದೇಹದ ಉಷ್ಣತೆ ಹೆಚ್ಚಾಗಿರುತ್ತದೆ. ಹೀಗೆ ಉಷ್ಣತೆ ಹೆಚ್ಚಾದ ದಿವಸ ಅಂಡಾಶಯದಿಂದ ಅಂಡಾಣು ಹೊರಬೀಳುತ್ತದೆ. ಅಂಡಾಣು ಸುಮಾರು ನಲವತ್ತೆಂಟು ಗಂಟೆಗಳ ಕಾಲ ಗರ್ಭಾಂಕುರ ಕ್ರಿಯೆಗೆ ಅನುವಾಗಿರುತ್ತದೆ. ಆ ಕಾಲದಲ್ಲಿ ವೀರ್ಯಾಣುಗಳು ಆಕೆಯ ಅಂಗಗಳಲ್ಲಿ ಇಲ್ಲದೆ ಹೋದರೆ ಗರ್ಭಾಂಕುರ ಕ್ರಿಯೆ ನಡೆಯುವುದಿಲ್ಲ. ವೀರ್ಯಾಣು ಕೂಡ ನಲವತ್ತೆಂಟುರಿಂದ ಎಪ್ಪತ್ತೆರಡು ಗಂಟೆಗಳವರೆಗೆ ಜೀವಂತವಾಗಿರುತ್ತದೆ. ಆದ್ದರಿಂದ ನಾಲ್ಕೈದು ಚಕ್ರಗಳನ್ನು ಪರೀಕ್ಷಿಸಿ ಆ ನಿರ್ದಿಷ್ಟ ದಿವಸವನ್ನು ತಿಳಿದುಕೊಳ್ಳಬಹುದು. ಅಂದಿಗೆ ಮೊದಲ ಮತ್ತು ತರುವಾಯದ ಐದು ದಿವಸಗಳ ಕಾಲ ಸಂಭೋಗಕ್ಕೆ ಎಡೆಕೊಡದೇ ಹೋದರೆ ಸಾಮಾನ್ಯವಾಗಿ ಗರ್ಭಧಾರಣ ಕ್ರಿಯೆಯನ್ನು ತಡೆಗಟ್ಟಬಹುದು. ಈ ವಿಧಾನಕ್ಕೆ ಸುರಕ್ಷಿತಕಾಲ ವಿಧಾನ ಎಂದು ಹೆಸರು. ಬೇರೆಬೇರೆ ತರದ ಋತುಚಕ್ರವಿರುವ ಸ್ತ್ರೀಯರ ಗರ್ಭಸಂಭವ ದಿವಸಗಳು ಬೇರೆಬೇರೆ ರೀತಿಯಲ್ಲಿ ಇರಬಹುದಾದ್ದರಿಂದ ಸ್ತ್ರೀಯರು ತಮ್ಮ ದಿವಸಗಳನ್ನು ವಿಮರ್ಶಿಸಿ ಮೊದಲೇ ನಿರ್ಣಯಿಸಿಕೊಳ್ಳಬೇಕು. ಅಂಡಾಣು ಹೊರಬೀಳುವ ಕಾಲ ಪ್ರತಿಯೊಬ್ಬರಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ. ಇದರಲ್ಲಿ ವ್ಯಕ್ತಿಗತ ವ್ಯತ್ಯಾಸವಿದೆ. ಆದ್ದರಿಂದ ಸುರಕ್ಷಿತಕಾಲ ವಿಧಾನ ಕೆಲವು ವೇಳೆ ಇದು ಬಯಸಿದ ರಕ್ಷಣೆಯನ್ನು ಕೊಡದಿರಬಹುದು.

**ವಿಚ್ಛಿತ ಸಂಭೋಗ (ಕಾಯ್ಟಸ್ ಇಂಟರಪ್ಟಸ್) :** ಸಂಭೋಗ ಮಾಡುತ್ತಿರುವಾಗ ಇಂದ್ರಿಯಸ್ಖಲನವಾಗಬಹುದೆಂಬ ಸೂಚನೆ ಪತಿಗೆ ಅರಿವಾದ ಒಡನೆ ಇಬ್ಬರೂ ಒಪ್ಪಿ ಅವನು ತನ್ನ ಶಿಶ್ನವನ್ನು ಭಗದ್ವಾರದಿಂದ ಹೊರಕ್ಕೆಳೆದುಕೊಂಡು ಒಂದು ಬಟ್ಟೆಯ ಮೇಲೆ ಇಂದ್ರಿಯಸ್ಖಲನ ಮಾಡಿಕೊಳ್ಳುವುದು. ಸ್ತ್ರೀಯ ಸುಖ ಅನುಭವಿಸಿ ಶಿಶ್ನವನ್ನು ಬಹಳ ತ್ವರಿತದಿಂದ ತೆಗೆಯಬಹುದೆಂಬ ಸೂಚನೆ ಬಂದಕೂಡಲೆ ಶಿಶ್ನವನ್ನು ತೆಗೆಯಬೇಕು. ಈ ವಿಚ್ಛಿತ ಸಂಭೋಗದಲ್ಲಿ ನರಮಂಡಲ ಮತ್ತು ಮನಸ್ಸಿನ ಮೇಲೆ ಪರಿಣಾಮವಾಗುವ ಸಂಭವ ಉಂಟು.

**ಗರ್ಭನಿರೋಧಕ ಪುರುಷ ಸಲಕರಣೆಗಳು :** ಫ್ರೆಂಚ್ ಲೆಟರ್ (ಎಫ್.ಎಲ್.), ಅಮೆರಿಕನ್ ಟಿಪ್ ಮತ್ತು ಕ್ಯಾಪ್, ಮೆಟಲ್ ಸ್ಟಡ್ ಮುಂತಾದವು ಸ್ಖಲನವಾದ ವೀರ್ಯವನ್ನು ಸಂಗ್ರಹಿಸಿ ಯೋನಿಗೆ ಸೇರದಂತೆ ತಡೆಯುತ್ತವೆ. ಎಫ್.ಎಲ್. ಲಿಂಗಕವಚವನ್ನು ರಬ್ಬರ್,



**ಚಿತ್ರ 2 ಗರ್ಭನಿರೋಧಕ ಪುರುಷ ಸಲಕರಣೆಗಳು ಮತ್ತು ತತ್ಸಂಬಂಧಿ ಕೈಹೊತ್ತಗೆಗಳು**

ಲ್ಯಾಟೆಕ್ಸ್, ಸೆಲ್ಯುಲಾಯಿಡ್ ಮತ್ತು ತೊಗಲುಗಳಿಂದ ತಯಾರಿಸುತ್ತಾರೆ. ಇದರಲ್ಲಿ ರಬ್ಬರ್ ಸ್ಥಿತಿಸ್ಥಾಪಕ ಶಕ್ತಿಯಿರುವುದರಿಂದ ಇದು ಶಿಶ್ನಕ್ಕೆ ಮೃದುವಾಗಿ ಕಚ್ಚಿಕೊಳ್ಳುತ್ತದೆ. ಲಿಂಗಕವಚ 6–8 ಇಂಚು ಉದ್ದವಿರುವ ಮತ್ತು ಮೂಲೆಗಳಿಲ್ಲದ ಚೀಲ. ಇದರ ಅಗಲ 1–2 ಇದಕ್ಕೆ ಒಂದು ಕಡೆ ಬಾಯಿ ಇದೆ. ಇನ್ನೊಂದು ಕಡೆ ಮುಚ್ಚಿದೆ. ಅದರ ಮೇಲುಭಾಗ ಮಂದ. ಬಾಕಿ ಭಾಗ ತೆಳ್ಳಗೆ ಮತ್ತು ಮೃದುವಾಗಿದೆ. ಇದನ್ನು ಸುತ್ತಿ ಇಡುತ್ತಾರೆ. ಧರಿಸುವಾಗ ಶಿಶ್ನದ ಮಣಿಗೆ ಹಾಕಿಕೊಂಡು ಅದನ್ನು ಶಿಶ್ನದ ಬುಡದವರೆಗೂ ಎಳೆದುಕೊಳ್ಳಬೇಕು. ಶಿಶ್ನಕ್ಕೆ ಲಿಂಗಕವಚ ಬಿಗಿಯಾಗಿ ಕೂಡಬೇಕು. ಇದನ್ನು ಧರಿಸುವ ಮುನ್ನ ನೀರುತುಂಬಿ ಇದರಲ್ಲಿ ರಂಧ್ರಗಳೇನಾದರೂ ಇವೆಯೇ ಎಂದು ಪರೀಕ್ಷಿಸಬೇಕು. ವೀರ್ಯಾಣುನಾಶಕ ಜೆಲ್ಲಿಯನ್ನು ಲಿಂಗದ ಮೇಲೆ ಸವರಿದ್ದರೆ ಧಾರಣೆ ಸುಲಭ ಮತ್ತು ವೀರ್ಯಾಣುಗಳು ಸಾಯುವುವು. ಲಿಂಗದ ಮೇಲೆ ಧರಿಸಿದ ಕವಚದ ಮೇಲೆ ಜೆಲ್ಲಿಯನ್ನು ಸವರುವುದರಿಂದ ಯೋನಿಪ್ರವೇಶ ಸುಲಭವಾಗಿ ಗರ್ಭನಿರೋಧಕ್ಕೆ ಮತ್ತಷ್ಟು ಸಹಾಯವಾಗುವುದು. ಸಂಪರ್ಕದ ಅನಂತರ ಯೋನಿಯಿಂದ ಶಿಶ್ನವನ್ನು ಕವಚದ ಸಹಿತ ವೀರ್ಯ ಚೆಲ್ಲದಂತೆ ಹುಷಾರಿನಿಂದ ತೆಗೆಯಬೇಕು. ಈ ಕೆಳಗಿನ ಕವಚಗಳು ಸಾಮಾನ್ಯವಾಗಿ ದೊರೆಯುತ್ತವೆ – ಡ್ಯುರಪೇಕ್, ಗೋಲ್ಡ್ ಕಾಯಿನ್ ಪ್ರೈಮರ್ಸ್, ಡ್ಯೂರೆಕ್ಸ್, ಪ್ರೊಟೆವಿಚ್, ಸಿಲ್ವರ್‌ಟೇಕ್ಸ್ ವಾಷಬಲ್ ಪ್ಯಾರಗನ್

ಮತ್ತು ನಿರೋಧ್. ಲಿಂಗಕವಚದ ಉಪಯೋಗ ಸರಳ. ವೈದ್ಯ ಸಹಾಯ ಬೇಕಾಗಿಲ್ಲ. ಸರಿಯಾಗಿ ಉಪಯೋಗಿಸಿದರೆ ಗರ್ಭನಿರೋಧ ಫಲಕಾರಿ. ಪ್ರಯಾಣಗಳಲ್ಲಿ ತೆಗೆದುಕೊಂಡು ಹೋಗಲು ಸುಲಭ. ಇದರ ಅನನುಕೂಲತೆ ಎಂದರೆ ಸಂಪರ್ಕಕಾಲದಲ್ಲಿ ಲಿಂಗ




**ಚಿತ್ರ 3 ಲಿಂಗ ಕವಚದ ಬಗೆಗಳು : 1 ಅಮೆರಿಕನ್ ಫ್ರೆಂಚ್ ಲೆಟರ್ 2. ಯುರೋಪಿಯನ್ ಫ್ರೆಂಚ್ ಲೆಟರ್, 3 ಅಂಚು ಸುತ್ತಿರುವ ಯುರೋಪಿಯನ್ ಫ್ರೆಂಚ್ ಲೆಟರ್ 4 ಅಮೆರಿಕನ್ ಕ್ಯಾಪ್, 5 ಅಮೆರಿಕನ್ ಟಿಪ್**

ಘರ್ಷಣೆಯಿಂದ ಇದು ಹರಿದರೆ ವೀರ್ಯಯೋನಿಯನ್ನು ಸೇರಬಹುದು. ಯೋನಿಲಿಂಗಗಳ ನೇರ ಸಂಪರ್ಕ ಇಲ್ಲದಿರುವುದರಿಂದ ದಂಪತಿಗಳ ಸಂಪೂರ್ಣ ಲೈಂಗಿಕ ಸುಖಕ್ಕೆ ಇಲ್ಲಿ ಅವಕಾಶವಿಲ್ಲ.

**ಧಾರಾಧಾವನ (ಪಿಚಕಾರಿ) :** ಸಂಭೋಗವಾದ ಕೂಡಲೇ ಸ್ತ್ರೀಯ ಭಗದ್ವಾರವನ್ನು ಪಿಚಕಾರಿಯಿಂದ ತೊಳೆಯಬೇಕು. ಪಿಚಕಾರಿಯನ್ನು ರಬ್ಬರ್ ಬಲ್ಬ್ ಹಾಕಿರುವ ಸಿರಿಂಜಿನಿಂದಲೂ ಮಾಡಬಹುದು. ನೀರಿಗೆ ಸಾಬೂನಿನ ಬುರುಗಳನ್ನು ಉಪಯೋಗಿಸಬಹುದು. ಹಿಂದಿನ ಕಾಲದಲ್ಲಿ ಸ್ತ್ರೀಯರು ಪಿಚಕಾರಿಗೆ ಬಳಸುತ್ತಿದ್ದ ಕೆಲವು ವಸ್ತುಗಳು ಇವು: 20 ಔನ್ಸ್ ನೀರಿನಲ್ಲಿ 1 ಚಮಚದಷ್ಟು ನಿಂಬೆ ಹಣ್ಣಿನ ರಸದ ಮಿಶ್ರಣ, 2 ಪೈಂಟ್ ನೀರಿನಲ್ಲಿ 1 ಡ್ರಾಮ್ ಪಟಿಕದ ಮಿಶ್ರಣ, ಬೇವಿನ ಎಲೆಯನ್ನು ನೀರಿನಲ್ಲಿ




**ಚಿತ್ರ 4 : ಯೋನಿ ಪ್ರಕ್ಷಾಳನದ ಸಾಧನಗಳು : 1 ಬಲ್ಬ್ ಪಿಚಕಾರಿ 2 ಮೋಟಾರ್ ಹಾರ್‍ನ್ಸ್ ಬಲ್ಬ್ ಪಿಚಕಾರಿ, 3 ಪಂಪ್ ಪಿಚಕಾರಿ**

ಬೇಯಿಸಿ ತಯಾರಿಸಿದ ಕಷಾಯ, 20 ಔನ್ಸ್ ನೀರಿನಲ್ಲಿ 2 ಚಮಚ ವಿನಿಗರ್ ಮಿಶ್ರಣ. ಇವಲ್ಲದೆ ಉಪ್ಪುನೀರು, ಲ್ಯಾಕ್ಟಿಕ್ ಆಮ್ಲ, ಪೊಟಾಸಿಯಂ ಪರ್‌ಮ್ಯಾಂಗನೇಟ್‌ಗಳನ್ನು ಸಹ ಉಪಯೋಗಿಸಬಹುದು. ಭಗದ್ವಾರದಲ್ಲಿ ಪದರಗಳು ಇರುವುದರಿಂದ ವೀರ್ಯಾಣು ಅದರ ಒಳಭಾಗದಲ್ಲಿ ಸೇರಿರುತ್ತದೆ. ಆದ್ದರಿಂದ ಪಿಚಕಾರಿ ತೆಗೆದುಕೊಳ್ಳುವಾಗ ಮಹಾಭಗೋಷ್ಠಗಳನ್ನು ಬೆರಳಿನಲ್ಲಿ ಅದುಮಿ ಹಿಡಿದುಕೊಳ್ಳಬೇಕು. ಪಿಚಕಾರಿ ಅಗಾಗ್ಗೆ ತೆಗೆದುಕೊಳ್ಳುತ್ತಿದ್ದರೆ ಭಗದ್ವಾರದ ಆಮ್ಲೀಯತೆ ಅಲ್ಲದೆ ಅಲ್ಲಿರುವ ಉಪಯುಕ್ತವಾದ ಕೆಲವು ಕ್ರಿಮಿಗಳು ಮತ್ತು ಅಲ್ಲಿ ಸ್ರವಿಸುವ ರಸಗಳು ಹೋಗುವುದೂ ಅಲ್ಲದೆ ಆ ಜಾಗವೆಲ್ಲ ಒರಟಾಗುತ್ತದೆ. ಇದರಿಂದ ಸಂಭೋಗ ಮಾಡುವಾಗ ಆಗುವ ಸುಖ ಸಂತೋಷ ಸ್ತ್ರೀಗೆ ಇರುವುದಿಲ್ಲ.

**ಗರ್ಭನಿರೋಧಕ ಸ್ತ್ರೀ ಸಲಕರಣೆಗಳು :** ಮೇರಿ ಸ್ಟೋಪ್ಸ್ ಹೇಳಿರುವಂತೆ ಹತ್ತಿಯನ್ನು ಅಥವಾ ಶುಭ್ರವಾದ ಚಿಂದಿ ಬಟ್ಟೆ ಅಥವಾ ಹತ್ತಿಯನ್ನು ದಾರದಲ್ಲಿ ಸುತ್ತಿ ಇದಕ್ಕೆ ತೆಂಗಿನ ಎಣ್ಣೆ ಅಥವಾ ಎಳ್ಳೆಣ್ಣೆಯಲ್ಲಿ ಅದ್ದಿ ಯೋನಿಯ ಒಳಭಾಗದಲ್ಲಿ ಗರ್ಭಾಶಯದ ಬಾಯಿಯವರೆಗೂ ಒಳಕ್ಕೆ ತಳ್ಳಿ ಇಟ್ಟುಕೊಂಡು ಅರ್ಧ ಗಂಟೆಯ ಅನಂತರ ಸಂಭೋಗ ಮಾಡಿದರೆ ಪುರುಷ ವೀರ್ಯಾಣುಗಳು ಒಳಗೆ ಹೋಗುವುದಿಲ್ಲ. ಹತ್ತಿಯ ಬದಲು ಸ್ಪಂಜನ್ನು ಸಹ ಉಪಯೋಗಿಸಬಹುದು. ತಣ್ಣೀರಿನಲ್ಲಿ ಸ್ಪಂಜನ್ನು ಅದ್ದಿ ಭಗದ್ವಾರದಲ್ಲಿ ಒಳಗಿನವರೆಗೂ ತಳ್ಳಿ ಗರ್ಭಾಶಯದ ಬಾಯಲ್ಲಿಟ್ಟರೆ ವೀರ್ಯಾಣುಗಳಿಗೆ ಚಲನಸಾಮರ್ಥ್ಯ ಕುಂದಿ ಅವು ನಾಶವಾಗುತ್ತದೆ.

**ರೆಂಡೆಲ್ ಕ್ವಿನೀನ್ ಮಾತ್ರೆಗಳು :** ಸಂಭೋಗ ಮಾಡುವ ಅರ್ಧ ಗಂಟೆ ಮುಂಚೆ ಭಗದ್ವಾರದ ಒಳಭಾಗದ ತುದಿಯಲ್ಲಿ ಈ ಮಾತ್ರೆಗಳು ಇಟ್ಟು ಸ್ವಲ್ಪ ಕಾಲ ಬಿಟ್ಟು ಸಂಭೋಗ ಮಾಡಿದರೆ ವೀರ್ಯಾಣುಗಳು ಸಾಯುವುವು. ನೊರೆ ಮಾತ್ರೆಗಳನ್ನು ಭಗದ್ವಾರದ ಒಳಗಿಟ್ಟರೆ ಸೋಪಿನ ಬುರುಗು ಬಂದಂತೆ ಬರುತ್ತದೆ. ಆಗ ಸಂಭೋಗ ಮಾಡಿದರೆ ವೀರ್ಯಾಣುಗಳ ಚಲನ ಸಾಮರ್ಥ್ಯ ಕಡಿಮೆಯಾಗಿ ಅವು ನಶಿಸುತ್ತವೆ. ಸಂಭೋಗಕ್ಕೆ ಐದು ಹತ್ತು ಮಿನಿಟುಗಳ ಮೊದಲು ನೊರೆ ಮಾತ್ರೆಯನ್ನು ನೀರಿನಲ್ಲಿ ಅದ್ದಿ ಸ್ತ್ರೀಯ ಯೋನಿಯೊಳಗೆ ಸೇರಿಸಬೇಕು.

**ಹಣ್ಣುಗಳು :** ನಿಂಬೆಹಣ್ಣು, ಕಿತ್ತಳೆಹಣ್ಣನ್ನು ಅರ್ಧಕ್ಕೆ ಭಾಗ ಮಾಡಿ ಗರ್ಭಾಶಯದ ಬಾಯನ್ನು ಮುಚ್ಚುವಂತೆ ನಮ್ಮ ಪೂರ್ವಿಕರು ಬಹುಕಾಲದಿಂದಲೂ ಉಪಯೋಗಿಸುತ್ತಿದ್ದರು. ಜೇನುತುಪ್ಪ, ಬೇವಿನ ಎಣ್ಣೆಯನ್ನು ಸ್ತ್ರೀಪುರುಷರು ಬಳಸುತ್ತಿದ್ದರು.



**ಚಿತ್ರ 5 : ಗರ್ಭನಿರೋಧಕ ಸ್ತ್ರೀ ಸಲಕರಣೆಗಳು ಮತ್ತು ತತ್ಸಂಬಂಧಿ ಕೈಹೊತ್ತಗೆಗಳು**

**ಡಯಾಫ್ರಮ್ :** ಇದು ತೆಳ್ಳಗೆ ಪೊರೆಯಂತಿರುವ ರಬ್ಬರ್ ಟೋಪಿ. ಇದನ್ನು ಗರ್ಭಾಶಯದ ಬಾಯಿಗೆ ಮುಚ್ಚುವಂತೆ ಹಾಕಿಕೊಳ್ಳುವುದು. ವೈದ್ಯರಿಂದ ಸರಿಯಾದ ಅಳತೆ ನೋಡಿಸಿ ಆ ಟೋಪಿಯಲ್ಲಿ ರಂಧ್ರಗಳೇನಾದರೂ ಇವೆಯೇ ಎಂದು. ಅದರಲ್ಲಿ ನೀರು ತುಂಬಿ ನೋಡಬೇಕು. ಅದನ್ನು ಸ್ವಚ್ಛವಾಗಿ ಸಾಬೂನಿನಿಂದ ತೊಳೆದು ಅನಂತರ ಇದಕ್ಕಾಗಿ ಸಿಕ್ಕುವ ಜೆಲ್ಲಿ, ಮುಲಾಮು ಸವರಿ ತರುವಾಯ ಧರಿಸಕೊಳ್ಳಬೇಕು. ಕಾಂಡಮನ್ನು ಮಡಿಸಿ, ಗರ್ಭಾಶಯದ ಬಾಯಿಯ ಮುಂದೆ ತಳ್ಳಿ ಸುತ್ತಲೂ ಸರಿಯಾಗಿ ಕುಳಿತಿದೆಯೋ ಇಲ್ಲವೋ ಎಂದು ಬೆರಳು ಹಾಕಿಕೊಂಡು ನೋಡಿ ಸರಿಯಾಗಿದೆ ಎಂದು ಮನವರಿಕೆಯಾದ ಅನಂತರ ಪತಿಯೊಡನೆ ಸಮಾಗಮ ಮಾಡಬೇಕು. ಮಾರನೆಯ ಮಧ್ಯಾಹ್ನ ತೆಗೆಯಬೇಕು. ನಾನಾ ಬಗೆಯ ಕಾಂಡಮ್‌ಗಳು ಉಪಯೋಗದಲ್ಲಿವೆ. ಡಚ್ ಪೀಸರಿ, ರ್‍ಯಾಮ್ಸೆ ಪೀಸರಿ, ಸರ್ವಿಕಲ್ ಕ್ಯಾಪ್, ವಲ್ಕನೈಟ್ ಕ್ಯಾಪ್, ಪೋರಸ್ ಕ್ಯಾಪ್ ಇತ್ಯಾದಿ ಇವು ಗರ್ಭಾಶಯದ ಮುಖವನ್ನು ಮುಚ್ಚುತ್ತವೆ. ಪೇಟೆಯಲ್ಲಿ ಸಿಗುವ ಡಯಾಫ್ರಮ್‌ಗಳಲ್ಲಿ ಮುಖ್ಯವಾದವು ಡ್ಯೂರೆಕ್ಸ್, ಕೊರೊಮೆಕ್ಸ್, ಕೆಮಿ ಮತ್ತು ಆರ್ಥೊ ಡಯಾಫ್ರಮ್.

**ಗರ್ಭಾಶಯದೊಳಗೆ ಉಪಯೋಗಿಸುವ ಸಲಕರಣೆ :** 1 ಚಿಂದಿ ಬಟ್ಟೆ ಉಂಡೆ, 2 ಗರ್ಭಾಶಯದಲ್ಲಿ ಹಾಕುವ ಬಂಗಾರದ ಸ್ಟಡ್, 3 ಗ್ರಾಫನ್ ಬರ್ಗ್ ಸ್ಪ್ರಿಂಗ್ ಬೆಳ್ಳಿಯದು. ಸಂಭೋಗ ಮಾಡಿ ವೀರ್ಯಾಣುಗಳು ಗರ್ಭಾಶಯದ ಒಳಕ್ಕೆ ಹೋದರೂ ಅವು

ಮುಂದೆ ಹೋಗದಂತೆ ತಡೆಯಲು ಗರ್ಭಾಶಯದ ಒಳಗೆ ಹಾಕುವ ಸಲಕರಣೆಗಳನ್ನು ಹಿಂದಿನ ಕಾಲದಲ್ಲೂ ಉಪಯೋಗಿಸುತ್ತಿದ್ದರು. ಗ್ರಾಪನ್‌ಬರ್ಗ್ ಎಂಬಾತ ಸಣ್ಣಗೆ ತೆಳ್ಳಗಿರುವ



**ಚಿತ್ರ : ಸ್ತ್ರೀಯ ವಂಧ್ಯಾಕರಣ ಚಿಕಿತ್ಸೆ : ಲೂಪ್ ವಿಧಾನ**

ಬೆಳ್ಳಿ ಉಂಗುರವನ್ನು ಗರ್ಭಾಶಯದೊಳಗೆ ಇಟ್ಟು ಒಂದು ವರ್ಷದ ತರುವಾಯ ತೆಗೆಯುತ್ತಿದ್ದ. ಇದನ್ನು ಧರಿಸಿದ 98 ರಷ್ಟು ಸ್ತ್ರೀಯರು ಗರ್ಭವತಿಯರಾಗಲಿಲ್ಲ. ಅಮೇರಿಕ, ಯುರೋಪಿನಲ್ಲಿ ಚಿನ್ನದಲ್ಲಿ ಕೈಗುಂಡಿಗಳಂತೆ ಮಾಡಿಸಿ ಉಪಯೋಗಿಸುತ್ತಿದ್ದರು.

**ವಂಕಿ (ಲೂಪ್) :** ಸಂತಾನನಿರೋಧಕ್ಕೆ ಇದೊಂದು ಸರಳ ಹಾಗೂ ಸುರಕ್ಷಿತ ಸಾಧನ. ಹೆಚ್ಚು ಮಕ್ಕಳು ಬೇಡವೆನ್ನುವವರು ಮತ್ತು ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಕಾಲಾವಕಾಶ ಬಯಸಿ ಇಷ್ಟಪಟ್ಟಾಗ ಮಕ್ಕಳನ್ನು ಪಡೆಯಲು ಇಚ್ಛಿಸುವವರು ಈ ಸಾಧನವನ್ನು ಬಳಸಬಹುದಾಗಿದೆ. ಈಗ ಲೇಪಜ್ ಎಂಬ ವೈದ್ಯ ಪ್ಲಾಸ್ಟಿಕ್‌ವಲ್ಲಿ ವಂಕಿಯ ಮಾದರಿ ಮಾಡಿದ್ದಾನೆ. ಇದು 6' ಉದ್ದ 1' ದಪ್ಪವಾಗಿ ಬೆಳ್ಳಗಿದೆ. ಇದನ್ನು ಪ್ಲಾಸ್ಟಿಕ್‌ನಲ್ಲಿ ಮಾಡಿದೆ. ಇದರ ಒಂದು ಕೊನೆಯಲ್ಲಿ ನೈಲಾನ್ ದಾರ ಕಟ್ಟಿದೆ. ಇದನ್ನು ವೈದ್ಯರೇ ಹಾಕಬೇಕು. ವಂಕಿಯನ್ನು ಗರ್ಭಾಶಯದೊಳಗೆ ಹಾಕಲು ಅದಕ್ಕೆ ಒಂದು ಪಿಚಕಾರಿ ಇದೆ. ಅದರಲ್ಲಿ ಪ್ಲಾಸ್ಟಿಕ್ ಕೊಳವೆ ಇದೆ. ಅದರೊಳಗೆ ಹಾಕುವ ಕಡ್ಡಿ ಉಂಟು. ವಂಕಿ ಮತ್ತು ಪಿಚಕಾರಿಯನ್ನು ಜೀವಿಮಡಿ (ಸ್ಟರ್ಲೈಸ್) ಮಾಡಬೇಕು. ವಂಕಿಯನ್ನು ನೇರವಾಗಿ ಮಾಡಿ ಕೊಳವೆಯೊಳಗೆ ಪೂರ್ತಿ ತಳ್ಳಬೇಕು. ಸ್ತ್ರೀಯನ್ನು ನಿರ್ವಾಣದಲ್ಲಿ ಬೆನ್ನಿನ ಮೇಲೆ ಮಲಗಿಸಿ, ಆಕೆ ಆರೋಗ್ಯವಾಗಿದ್ದಾಳೆಂದು ಪರೀಕ್ಷಿಸಿ, ವಂಕಿ ಹಾಕಿಸಿಕೊಳ್ಳಲು ಕಾಯಿಲೆ ತೊಂದರೆಗಳು ಇಲ್ಲದಿದ್ದರೆ ಅವಕಾಶ ಕೊಡಬೇಕು. ಯೋನಿ ಭಾಗವನ್ನೆಲ್ಲ ಶುಚಿಯಾಗಿ ತೊಳೆಯಬೇಕು. ಭಗೋಷ್ಠಗಳನ್ನು ಚೆನ್ನಾಗಿ ಅಗಲಿಸಿ ಗರ್ಭಾಶಯದ ಬಾಯಿ ಕಾಣುವಂತೆ ಮಾಡಿ ಈ ಸಿರಿಂಜನ್ನು ಭಗದ್ವಾರದ ಒಳಗೆ ಹಾಕಿ ಮುಂಭಾಗವನ್ನು ಅದಕ್ಕೆ ಕೊಟ್ಟಿರುವ ತಡೆಯವರೆಗೂ ಗರ್ಭಾಶಯದೊಳಕ್ಕೆ ತಳ್ಳಬೇಕು. ಅನಂತರ ಕೊಳವೆಯಲ್ಲಿ ವಂಕಿಯ ಹಿಂದಿರುವ ಕಡ್ಡಿಯನ್ನು ಅದುಮಬೇಕು. ಆಗ ಆ ವಂಕಿ ಗರ್ಭಾಶಯದೊಳಕ್ಕೆ ಹೋಗಿ ಅಲ್ಲಿ ಸರಿಯಾಗಿ ಕೂರುವುದು. ನೈಲಾನುದಾರ ಗರ್ಭಾಶಯದ ಬಾಯಿಯಿಂದ ಹೊರಗಡೆ ಭಗದ್ವಾರದಲ್ಲಿ ಇರುವುದು. ವಂಕಿ ಗರ್ಭಾಶಯದೊಳಗೆ ಇರುವಷ್ಟು ಕಾಲ ಗರ್ಭಧಾರಣೆಯಾಗುವ ಸಂಭವವಿಲ್ಲ. ಇದನ್ನು ಕೂಡಿಸಲು ಕೆಲವೇ ಮಿನಿಟುಗಳು ಸಾಕು. ಇದು ಎಷ್ಟು ವರ್ಷ ಗರ್ಭಾಶಯದೊಳಗೆ ಇದ್ದರೂ ತೊಂದರೆಯಿಲ್ಲ. ವಂಕಿಧಾರಣೆಯಿಂದ ಲೈಂಗಿಕ ಸುಖಕ್ಕೆ ಯಾವ ಅಡ್ಡಿಯೂ



**ಚಿತ್ರ 7 : ಗರ್ಭಾತ್ರಯದಲ್ಲಿ ಲೂಪು**

ಆಗುವುದಿಲ್ಲ. ಹೆಂಡತಿಗಾಗಲಿ ಗಂಡನಿಗಾಗಲಿ ಅದು ಇದೆ ಎಂಬ ಅರಿವೂ ಆಗಲಾರದು. ಇನ್ನೊಂದು ಮಗು ಬೇಕೆಂದಾಗ ವೈದ್ಯರಿಗೆ ತಿಳಿಸಿ ವಂಕಿಯನ್ನು ತೆಗೆಸಿ ಬಿಡಬಹುದು. ವಂಕಿಧಾರಣೆ ಮಾಡಿದ ಬಳಿಕ ಕೆಲವು ಸ್ತ್ರೀಯರಿಗೆ ಹೆಚ್ಚು ರಕ್ತಸ್ರಾವವಾಗಬಹುದು. ಬೆನ್ನು ನೋವು ಬರಬಹುದು. ಮೊದಲನೆಯ ಕೆಲವು ಮಾಸಿಕ ಸ್ರಾವ ಮಾಮೂಲಿಗಿಂತ ಕೊಂಚ ಹೆಚ್ಚಾಗಿ ಆಗುವ ಸಂಭವವುಂಟು. ಅನಂತರ ಈ ಋತುಸ್ರಾವ ತನ್ನ ಪೂರ್ವಸ್ಥಿತಿಗೆ ಬರುತ್ತದೆ. ವಂಕಿ ಒಳಗೆ ಇದ್ದಂತೆಯೇ ಕೆಲವರು ಗರ್ಭವತಿಯರಾಗಿದ್ದಾರೆ. ಇದು ಬಹಳ ಕಾಲ ಒಳಗಿದ್ದರೆ ಏಡಿಗಂತಿ ಬರಬಹುದೆಂಬ ಅಭಿಪ್ರಾಯ ಕೆಲವರಿಗಿದೆ. ಗರ್ಭಕೋಶದಲ್ಲಿರಬೇಕಾದ ವಂಕಿ ಅದರ ಸ್ಥಾನದಲ್ಲಿರದೆ ಹೊರಗೆ ಬಂದು, ಪೆರಿಟೋನಿಯಲ್ ಕುಹರದಿಂದ ಅದನ್ನು ಶಸ್ತ್ರಚಿಕಿತ್ಸೆ ಮಾಡಿ ಹೊರತೆಗೆದಿರುವ ಪ್ರಸಂಗಗಳೂ ಉಂಟು.

**ಶಸ್ತ್ರಚಿಕಿತ್ಸೆ ಅಥವಾ ವಂಧ್ಯಾಕರಣ (ಸ್ಟರಿಲೈಸೇಷನ್) :** ಕೆಲವು ಮಕ್ಕಳಾಗಿ ಇನ್ನು ಮುಂದೆ ಮಕ್ಕಳೇ ಬೇಡ ಎನ್ನುವವರು ಈ ಉಪಾಯವನ್ನು ಕೈಗೊಳ್ಳಬಹುದಾಗಿದೆ. ಈ ವಿಚಾರದಲ್ಲಿ ಸತಿಪತಿಗಳು ವಿಚಾರವಿನಿಮಯ ಮಾಡಿಕೊಂಡು ಯಾರಾದರೊಬ್ಬರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಸಾಕು. ಮುಂದೆ ಎಂದೂ ಗರ್ಭವಾಗುವ ಸಂಭವವಿರುವುದಿಲ್ಲ.

**ವಾಸೆಕ್ಟಮಿ :** ತಮಗೆ ಇನ್ನು ಮಕ್ಕಳು ಬೇಡವೆನ್ನುವ ಗಂಡಸರು ಸುಲಭ ಮತ್ತು ಸುರಕ್ಷಿತವಾದ ಈ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು. ಪುರುಷನ ವೀರ್ಯದಲ್ಲಿರುವ



**ಚಿತ್ರ 8 ವಾಸೆಕ್ಟಮಿ : ಪುರುಷ ವಂಧ್ಯಾಕರಣ ಚಿಕಿತ್ಸೆ**

ವೀರ್ಯಾಣು ಸ್ತ್ರೀಯ ಅಂಡಾಣುವಿನೊಡನೆ ಸೇರುವುದೇ ಗರ್ಭೋತ್ಪತ್ತಿಗೆ ಕಾರಣವೆಂದು ಹೇಳಿದೆ. ವೀರ್ಯಾಣುಗಳು ಉತ್ಪತ್ತಿಯಾಗದಂತೆ ಮಾಡುವುದೇ ಈ ಉಪಾಯದ ಮೂಲ. ಇದರಿಂದ ಗಂಡಸಿಗೆ ಕಾಮಪ್ರವೃತ್ತಿಯಲ್ಲಾಗಲಿ ಸಂಭೋಗ ಶಕ್ತಿಯಲ್ಲಾಗಲಿ ಯಾವ ಕೊರತೆಯೂ ಉಂಟಾಗಲಾರದು. ಗಂಡಸಿನ ವೀರ್ಯನಾಳವನ್ನು ಕತ್ತರಿಸುವ ಈ ಉಪಾಯವನ್ನು ತಜ್ಞವೈದ್ಯರಿಂದ ಮಾಡಿಸಬೇಕು. ತೊಡೆಯ ಮೇಲು ಭಾಗದಲ್ಲಿರುವ ಅಂಡಕೋಶದ ಮೇಲುಭಾಗದಲ್ಲಿ ನೋವು ಕಾಣದಂತೆ ಚುಚ್ಚುಮದ್ದು ಕೊಟ್ಟು ಚರ್ಮದ ಮೇಲೆ ಅದರ ಕೆಳಗಿನ ಪದರವನ್ನು ಚಾಕುವಿನಿಂದ ಒಂದು ಇಂಚಿನಷ್ಟು ಕೊಯ್ದು ಬಿಳಿನಾಳವನ್ನು (ವಾಸ್‌ಡೆಫರೆನ್ಸ್) ಅದರ ಜೊತೆಗಿರುವ ರಕ್ತನಾಳ, ನರಗಳಿಂದ ಬಿಡಿಸಿಕೊಂಡು ಚಿಮಟಗಳಲ್ಲಿ ಅದುಮಿ ಹಿಡಿದು, ಎರಡು ಇಂಚು ಉದ್ದ ಕತ್ತರಿಸಿ ಹಾಕಿ, ಎರಡು ಕೊನೆಗಳನ್ನೂ ಕಟ್ಟಿ, ಒಳಕ್ಕೆ ಸೇರಿಸಿ, ಮೇಲೆ ಚರ್ಮ ಹೊಲಿಯುತ್ತಾರೆ. ಹೀಗೆಯೇ ಎರಡು ಭಾಗದಲ್ಲೂ ಮಾಡುತ್ತಾರೆ. ಇದರಿಂದಾಗಿ ಅಂಡಾಶಯದಲ್ಲಿ ಸಿದ್ಧವಾಗುತ್ತಿರುವ ವೀರ್ಯಾಣುಗಳು ವೀರ್ಯನಾಳಗಳ ಮೂಲಕ ಮುಂದೆ ಬರಲಾಗದಂತಾಗುತ್ತವೆ. ಹೀಗಾಗಿ ವೀರ್ಯಾಣುಸೃಷ್ಟಿಯೇ ನಿಂತು ಹೋಗುವುದು. ಆದರೆ ವೀರ್ಯಾಶಯ, ಕೂಪರ್ಸ್‌ಗ್ರಂಥಿ, ಪ್ರಸ್ಥಿತಿ ಗ್ರಂಥಿಗಳ ರಸಗಳು ಯಥಾಪ್ರಕಾರ ಸ್ರವಿಸುವುದರಿಂದ ಸಂಭೋಗದಲ್ಲಿ ಸುಖ ಮತ್ತು ವೀರ್ಯಸ್ಖಲನದ ತೃಪ್ತಿ ಒದಗುವುದು. ಆದರೆ ಇದರಲ್ಲಿ ವೀರ್ಯಾಣುಗಳು

ಮಾತ್ರ ಇರುವುದಿಲ್ಲವಾದ್ದರಿಂದ ಆ ವೀರ್ಯದಿಂದ ಹೆಂಗಸಿಗೆ ಗರ್ಭ ನಿಲ್ಲಲಾರದು. ಈ ಶಸ್ತ್ರ ಚಿಕಿತ್ಸೆ ಮಾಡುವ ಮೊದಲು ಪುರುಷನ ಪ್ರಜ್ಞೆ ತಪ್ಪಿಸುವ ಅಗತ್ಯವಿಲ್ಲ. 4–5 ದಿವಸಗಳ ವಿರಾಮದ ಅನಂತರ ಆತ ತನ್ನ ಕಾರ್ಯಗಳಲ್ಲಿ ಮಗ್ನನಾಗಬಹುದು. ಮುಂದಿನ ಐದಾರು ದಿವಸಗಳು ಆತ ಸೈಕಲ್ ತುಳಿಯುವುದಾಗಲೀ ಭಾರ ಎತ್ತುವುದಾಗಲೀ ಮಾಡಬಾರದು. 8–10 ದಿವಸಗಳಲ್ಲಿ, ಗಾಯ ಗುಣವಾದ ಬಳಿಕ ಸ್ತ್ರೀಸಂಗ ಮಾಡಬಹುದು. ಸಂತತಿ ನಿರೋಧ ಶಸ್ತ್ರಚಿಕಿತ್ಸೆಯಲ್ಲಿ ವೀರ್ಯನಾಳದಲ್ಲಿ ಪ್ರವಹಿಸುವ ವೀರ್ಯದ ದಾರಿಯನ್ನು ಮುಚ್ಚಿದ ಅನಂತರವೂ ಮೊದಲೇ ಶೇಖರಗೊಂಡಿದ್ದ ವೀರ್ಯಪೂರ್ಣವಾಗಿ ಖಾಲಿಯಾಗುವವರೆಗೆ ಪುರುಷರು ನಿರೋಧ ಅಥವಾ ಇನ್ನಾವುದಾದರೂ ಗರ್ಭನಿರೋಧಕ ಸಾಧನವನ್ನು ಉಪಯೋಗಿಸಬೇಕಾಗುತ್ತದೆ. ಈ ಶೇಖರಗೊಂಡ ವೀರ್ಯ ಬರಿದಾಗಬೇಕಾದರೆ ಎರಡು ಮೂರು ತಿಂಗಳುಗಳಾದರೂ ಬೇಕು. ಅನಂತರ ಯಾವ ಗರ್ಭನಿರೋಧಕ ಸಾಧನವನ್ನೂ ಉಪಯೋಗಿಸುವ ಅಗತ್ಯವಿಲ್ಲ.

**ಟ್ಯೂಬೆಕ್ಟಮಿ ಶಸ್ತ್ರಚಿಕಿತ್ಸೆ** : ಸ್ತ್ರೀಯ ವಂಧ್ಯಾಕರಣ. ಆಕೆಯ ಡಿಂಬನಾಳವನ್ನು ಕತ್ತರಿಸಿ ಅದರ ಎರಡೂ ಭಾಗಗಳನ್ನು ಪ್ರತ್ಯೇಕವಾಗಿ ಹೊಲೆದು ಬಿಡುವುದು ಇಲ್ಲಿನ ವಿಧಾನ. ಇದರಿಂದಾಗಿ ಡಿಂಬಾಶಯದಿಂದ ಹೊರಟ ಡಿಂಬಾಣು ಮುಂದೆ ಸಾಗದಂತಾಗಿ ಅಂಡಾಣು ವೀರ್ಯಾಣುಗಳ ಸಂಪರ್ಕವೇ ಅಸಾಧ್ಯವಾಗುತ್ತದೆ. ಈ ಶಸ್ತ್ರಚಿಕಿತ್ಸೆಯನ್ನು ಪ್ರಸವವಾದ ಒಂದು ವಾರದೊಳಗೆ ಮಾಡುವುದು ಸುಲಭವಾದ್ದರಿಂದ ಹೆಚ್ಚಿನ ಜನರು ಆಗಲೇ ಮಾಡಿಸುತ್ತಾರೆ. ಸುಮಾರು ಒಂದು ವಾರದವರೆಗೆ ಆಕೆ ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆಯಬೇಕಾಗುತ್ತದೆ. ಆಕೆಯ ಆರೋಗ್ಯಕ್ಕೆ ಯಾವ ರೀತಿಯಿಂದಲೂ ಹಾನಿಯಾಗುವುದಿಲ್ಲ. ನಿತ್ಯದ ಕೆಲಸಗಳಿಗೂ ಏನೂ ಅಡ್ಡಿಯಾಗುವುದಿಲ್ಲ. ಆಕೆಗೆ ಯಥಾಪ್ರಕಾರ ಮುಟ್ಟಾಗುವುದು. ಆದರೆ ಗರ್ಭಧಾರಣೆಯಾಗುವುದಿಲ್ಲ. ಯಾವುದೇ ಕುಟುಂಬಯೋಜನಾ ಕೇಂದ್ರಗಳಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಮತ್ತು ಪ್ರಸೂತಿ ಗೃಹದಲ್ಲಿ ಹೆಂಗಸರಿಗೆ ಟ್ಯೂಬೆಕ್ಟಮಿ ಶಸ್ತ್ರಚಿಕಿತ್ಸೆ ಮಾಡುವ ಅನುಕೂಲವಿದೆ. ಶಸ್ತ್ರಚಿಕಿತ್ಸೆಗಾಗಿಯೇ ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರತ್ಯೇಕವಾಗಿ ಆಗಾಗ ಶಿಬಿರಗಳನ್ನೂ ನಡೆಸುವುದೂ ಉಂಟು. ಇದಕ್ಕೆ ಯಾವ ಶುಲ್ಕವನ್ನೂ ವಿಧಿಸುವುದಿಲ್ಲ. ಮತ್ತೊಂದು ಅನುಕೂಲವೆಂದರೆ ಈ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಬರುವ ಸ್ತ್ರೀಪುರುಷರಿಗೆ ದಾರಿ ಖರ್ಚು, ಆಹಾರ ಇತ್ಯಾದಿಗಳಿಗಾಗಿ ಸ್ವಲ್ಪ ಹಣವನ್ನು ಸಹ ಕೊಡಲಾಗುತ್ತದೆ.

**ಗರ್ಭನಿರೋಧಕ ಮಾತ್ರೆಗಳು** : ನೂತನವಾಗಿ ಹಲವಾರು ಕಂಪೆನಿಯವರು ಗರ್ಭನಿರೋಧಕ ಮಾತ್ರೆಗಳನ್ನು ತಯಾರಿಸಿದ್ದಾರೆ. ಇವನ್ನು ಸೇವಿಸುವುದರಿಂದ ಅಂಡಾಶಯ ಪಕ್ವವಾಗಿ ಅಂಡ ಹೊರಬೀಳುವುದು ತಪ್ಪುತ್ತದೆ. ಮುಟ್ಟು ಆರಂಭವಾದ 5ನೆಯ ದಿವಸದಿಂದ ಪ್ರಾರಂಭಿಸಿ 22 ದಿವಸಗಳು ಸೇವಿಸಿ 6 ದಿವಸ ಹಾಗೇ ಬಿಡಬೇಕು. ಈ ಆರು, ಏಳು ದಿವಸಗಳಲ್ಲಿ ಸ್ತ್ರೀ ಮುಟ್ಟಾಗುತ್ತಾಳೆ. ಪುನಃ ಮುಟ್ಟಾದ ದಿವಸವನ್ನು ಮೊದಲನೇ ದಿವಸವೆಂದು ತಿಳಿದು 5ನೆಯ ದಿವಸದಿಂದ ಮಾತ್ರೆಗಳನ್ನು ಉಪಯೋಗಿಸಲು ಪ್ರಾರಂಭಿಸಬೇಕು. ಕೆಲವು ವೇಳೆ 22 ದಿವಸ ಮಾತ್ರೆ ತೆಗೆದುಕೊಂಡು 6–7 ದಿವಸಗಳಾದ ಮೇಲೂ ಮುಟ್ಟಾಗದೇ ಹೋದರೆ ಪುನಃ 21–22ನೆಯ ದಿವಸ ಆರಂಭಿಸಿ 6–7 ದಿವಸ ಬಿಡಬೇಕು. ಹೀಗೆ 3 ಸಾರಿ ಮಾಡಬೇಕು. ಮಧ್ಯದಲ್ಲಿ ಒಂದು ವಾರ ಮಾತ್ರೆ ಸೇವಿಸಕೂಡದು. ಈ ಮಾತ್ರೆಗಳನ್ನು ರಾತ್ರಿ ಮಲಗುವ ಮುಂಚೆ ತೆಗೆದುಕೊಳ್ಳುವುದು ಒಳ್ಳೆಯದು. ಯಾವ ಕಾರಣಕ್ಕಾಗಿಯೂ ಇದನ್ನು ಒಂದು ದಿವಸವೂ ಮಧ್ಯೆ ತಪ್ಪಿಸಬಾರದು. ಒಂದು ದಿವಸ ಮರೆತರೆ ಮಾರನೆಯ ದಿವಸ ಜ್ಞಾಪಕ ಬಂದಕೂಡಲೆ ಮಾತ್ರೆಯನ್ನು ಸೇವಿಸಿ ರಾತ್ರಿ ಮತ್ತೆ ಆ ದಿವಸದ ಮಾತ್ರೆಯನ್ನು ಸೇವಿಸಬೇಕು. ಹೀಗೆ ಮಾಡಿದರೆ ಶೇ. 100 ಗರ್ಭವತಿಯರಾಗುವುದಿಲ್ಲವೆಂಬ ಭರವಸೆ ಕೊಡುತ್ತಾರೆ. ಕಾರಣಾಂತರದಿಂದ ಮುಟ್ಟಾಗುವುದನ್ನು ಕೆಲವು ದಿವಸಗಳು ಅಥವಾ ವಾರಗಳು ಮುಂದೆ ತಳ್ಳಬೇಕೆಂದಿದ್ದರೆ ಮಾತ್ರ ಸೇವಿಸುತ್ತಿರುವವರು ಮೂರು ವಾರದ ಅನಂತರವೂ ಪ್ರತಿದಿನವೂ ಸೇವಿಸಬೇಕು. ಮಾತ್ರೆ ನಿಲ್ಲಿಸಿದ 3, 4 ದಿವಸದಲ್ಲಿ ಮುಟ್ಟಾಗುತ್ತಾರೆ. ಈ ಮಾತ್ರೆಗಳ ಜೊತೆಯಲ್ಲಿ ಕಾರ್ಡು ಇರುತ್ತದೆ. ಅದರಲ್ಲಿ ವಾರದ ದಿವಸಗಳನ್ನು ಬರೆದಿರುತ್ತಾರೆ. ಆರಂಭ ಮಾಡಿದ ದಿವಸವನ್ನು ಗುರುತಿಟ್ಟುಕೊಂಡು ಅಂದಿನಿಂದ ಮಾತ್ರೆ ಸೇವಿಸುತ್ತ ಬರಬೇಕು. ಅನೇಕ ಸ್ತ್ರೀಯರಿಗೆ ಹೆರಿಗೆಯಾಗಿ ಒಂದು ಮುಟ್ಟಾಗುವವರೆಗೂ ತಾವು ಗರ್ಭಿಣಿಯರಾಗುವುದಿಲ್ಲವೆಂಬ ತಪ್ಪು ಭಾವನೆ ಇದೆ. ಹೆರಿಗೆಯಾದ 42 ದಿವಸಗಳಲ್ಲಿ ಅಂಡಕೋಶ ಪಕ್ವವಾಗಿ ಅಂಡಗಳು ಹೊರ ಬೀಳಲಾರಂಭಿಸುವುದೂ ಉಂಟು. ಆದ್ದರಿಂದ ಹೆರಿಗೆಯಾದ ಐದನೆಯ ವಾರದಿಂದ ಮಾತ್ರೆಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು. ಈ ಕಾಲದಲ್ಲಿ ಮುಟ್ಟಾದರೆ ಬಟ್ಟೆ ಹೆಚ್ಚಾಗಿ ಆದರೂ ನಿಲ್ಲುತ್ತದೆ. ಆದರೆ ಹಾಲು ಸ್ವಲ್ಪ ಕಡಿಮೆ ಆಗುತ್ತದೆ. ತೂಕವೂ ಹೆಚ್ಚಬಹುದು. ಗರ್ಭವತಿಯೇ ಆಗಿದಿದ್ದ ಹೆಂಗಸರು ಇದರ ಸೇವನೆಯಿಂದ ಗರ್ಭವತಿ ಆಗಲು ಸಹಕಾರಿ. ಈ ಮಾತ್ರೆಗಳನ್ನು ಉಪಯೋಗಿಸುವ ಮೊದಲು ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅಲ್ಲದೆ ಸೇವಿಸಲಾರಂಭಿಸಿ 6 ತಿಂಗಳಿಗೊಮ್ಮೆ ಪರೀಕ್ಷೆ ಮಾಡಿಸಿಕೊಳ್ಳಬೇಕು. ಭಾರತದಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ ಕೆಲವು ಮಾತ್ರೆಗಳು ಇವು ; ನಾರ್‌ಲೆಸ್ಟ್ರಿನ್, ಓವ್ಯುಲಿನ್, ನೋರೋ ಸ್ಟೈಕಿನ್, ಲಿನ್‌ಡಿಯಾಲ್, ಆರ್‌ಗನಾನ್ ಮತ್ತು ಓವರಾಲ್–28. ಈ ಕೆಳಗಿನ ಕಾಯಿಲೆಗಳಿದ್ದರೆ ಮಾತ್ರೆಗಳನ್ನು ಸೇವಿಸಬಾರದು ; ಸಕ್ಕರೆ ಕಾಯಿಲೆ, ಪಿತ್ತಕೋಶದ ಕಾಯಿಲೆ, ಥೈರಾಯಿಡ್ ಕಾಯಿಲೆ, ಅರಿಸಿನ ಕಾಮಾಲೆ ಕಾಯಿಲೆ, ಆಸ್ತಮ ಮತ್ತು ಹೃದಯರೋಗ. ಮಾತ್ರೆಗಳನ್ನು ಉಪಯೋಗಿಸಿದ ಕೆಲವು ದಿವಸಗಳು ವಾಕರಿಕೆ, ಮೈನೋವು ಉಂಟಾಗಬಹುದು. ಗರ್ಭಿಣಿಯಾದಾಗ ಸ್ತನಗಳು ತುಂಬಿದಂತಾಗಿ ನೋವು ಬರುವಂತೆ ಆಗುತ್ತದೆ. ಆದರೆ ಇವೆಲ್ಲ ನಿಲ್ಲುತ್ತವೆ. ಮೊದಲೇ ತಲೆನೋವು ಬರುತ್ತಿದ್ದವರಿಗೆ ಇನ್ನೂ ಜೋರಾಗುತ್ತದೆ. ಮಾತ್ರೆಯನ್ನು ಸೇವಿಸಲಾರಂಭಿಸಿದರೆ ಮುಟ್ಟಾದಾಗ ಬಟ್ಟೆ ಹೆಚ್ಚಾಗುವುದು. ಮುಟ್ಟಾದಾಗ ಆಗುವ ಹೊಟ್ಟೆನೋವು ನಿಲ್ಲುತ್ತದೆ. ಮಾತ್ರೆ ಸೇವಿಸುವಾಗ ಮೂತ್ರ ಬಹಳ ಕೆಂಪೋ ಹಳದಿಯೋ ಆದರೆ ತತ್‌ಕ್ಷಣ ಮಾತ್ರೆ ಸೇವಿಸುವುದನ್ನು ನಿಲ್ಲಿಸಿ ವೈದ್ಯರು ಸಲಹೆ ಪಡೆಯಬೇಕು.

**ಅನ್ಯರೀತಿಗಳು** : ಅಂಡಾಣು ಉತ್ಪನ್ನವಾಗದಂತೆ ಸ್ತ್ರೀಯ ಅಂಡಕೋಶಕ್ಕೆ ಡೀಪ್ ಕಿರಣ ಬಿಡುವುದುಂಟು. ಸ್ತ್ರೀಗೆ ಪುರುಷ ಶುಕ್ರಧಾತುವನ್ನು ದೇಹಕ್ಕೆ ಚುಚ್ಚುಮದ್ದುವಾಗಿ ಕೊಟ್ಟು ಸಂಭೋಗ ಮಾಡಿದಾಗ ವೀರ್ಯಾಣು ಗರ್ಭಾಶಯದಲ್ಲಿ ಬಂದಾಗ ಅದರ ಶಕ್ತಿ ಕುಂದಿಸಲು ಎದುರು ಜೀವಾಣುಗಳನ್ನು ಉತ್ಪತ್ತಿ ಮಾಡಲು ಯತ್ನಿಸಿದ್ದಾರೆ. ಈ ವಿಧಾನದಿಂದ ಕೆಲವು ವರ್ಷಗಳವರೆಗೆ ಆಕೆ ಗರ್ಭವತಿ ಆಗುವುದಿಲ್ಲವೆಂದು ತಿಳಿದಿದೆ. ಅಮೆರಿಕದ ಸ್ತ್ರೀಯರು ಅಂಡಕೋಶ ಮತ್ತು ವೃಷಣ ಗ್ರಂಥಿಗಳ ಹಾರ್‌ಮೋನಿನಲ್ಲಿ ತಯಾರಿಸಿದ ಏನ್‌ವಾಯಿಡ್ ಎಂಬ ಮಾತ್ರೆಗಳನ್ನು ಸೇವಿಸಿ ಗರ್ಭನಿರೋಧ ಸಾಧಿಸಿಕೊಂಡಿದ್ದರು. ಈ ಹಾರ್‌ಮೋನಿನಲ್ಲಿ ಸ್ವಲ್ಪ ಬದಲಾವಣೆ ಮಾಡಿ ಈಗ ಚುಚ್ಚುಮದ್ದು ಮಾಡಿದ್ದಾರೆ. ಅದನ್ನು ತೋಳಿಗೆ ತಿಂಗಳಿಗೊಮ್ಮೆ ಸ್ತ್ರೀಗೆ ಕೊಟ್ಟರೆ ಆಕೆ ಗರ್ಭವತಿ ಆಗುವುದಿಲ್ಲ. ಇದನ್ನು ಉಪಯೋಗಿಸಿದ ಸ್ತ್ರೀಯರಲ್ಲಿ ಶೇ. 100 ಅನುಕೂಲವಾಗಿದೆ ಎಂದು ವರದಿ ಆಗಿದೆ.

**ಗರ್ಭಪತನ** : ಮಕ್ಕಳು ಸಾಕಾದಾಗ ಅಥವಾ ಬೇಡವಾದಾಗ ಕಳ್ಳತನದಲ್ಲಿ ಮೈ ಇಳಿಸುವುದು ಜನರ ವಾಡಿಕೆ. ಆದರೆ ವೈದ್ಯರು ಗರ್ಭಪಾತ ಚಿಕಿತ್ಸೆಯನ್ನು ಗರ್ಭದಿಂದ ಪ್ರಾಣಭಯವಿರುವ ಸ್ತ್ರೀಗೆ ಕೊಡುವರೇ ಹೊರತು ಸಾಮೂಹಿಕ ಸಂತಾನ ಮಿತಿಗಲ್ಲ. ಡೈಲೆಟೇಷನ್ ಅಂಡ್ ಕ್ಯೂರೆಟೇಜ್ (ಡಿಅಂಡ್‌ಸಿ) ಶಸ್ತ್ರ ಕ್ರಿಯೆಯಲ್ಲಿ ಸಾಮಾನ್ಯವಾಗಿ ಸ್ತ್ರೀಯ ಪ್ರಜ್ಞೆ ತಪ್ಪಿಸಿ ಗರ್ಭಕಂಠವನ್ನು ಉಪಾಯದಿಂದ ದೊಡ್ಡದು ಮಾಡಿ ಕೋಶದೊಳಗಿರುವ ದುರ್ಮಾಂಸವನ್ನು ಕೆರೆದು ಶುಚಿ ಮಾಡುತ್ತಾರೆ. ಈಗ ವ್ಯಾಕ್ಯೂಮ್ ಆಸ್ಪಿರೇಟರ್ ಉಪಯೋಗಿಸಿ ಗರ್ಭಪಾತ ಮಾಡುತ್ತಿದ್ದಾರೆ. ಈ ಆಸ್ಪಿರೇಟರ್‌ನಿಂದ ಗರ್ಭಪಾತ ಮಾಡಿಸಿಕೊಂಡ ಸ್ತ್ರೀ ಎರಡು ಗಂಟೆಯ ಅನಂತರ ನಡೆದುಕೊಂಡು ಹೋಗಬಹುದು. **(ಎಸ್.ಎಚ್.ಸಿ)**

**ಕುಟುಂಬಯೋಜನೆ, ಭಾರತದಲ್ಲಿ** : ಕುಟುಂಬಯೋಜನೆಯನ್ನು ಭಾರತ ಸರ್ಕಾರದ ಅಧಿಕೃತ ನೀತಿಯನ್ನಾಗಿ ಅನುಸರಿಸಿ, ರಾಷ್ಟ್ರೀಯ ಯೋಜನೆಯಲ್ಲಿ ಒಂದು ಮುಖ್ಯ ಅಂಗವನ್ನಾಗಿ ಪರಿಗಣಿಸಿದೆ. ದೇಶದಲ್ಲಿ ಅಗಾಧವಾಗಿ ಬೆಳೆಯುತ್ತಿರುವ ಜನಸಂಖ್ಯೆ, ಕೃಷಿನೆಲದ ಮೇಲಣ ಅತಿಯಾದ ಒತ್ತಡ, ಅಭಿವೃದ್ಧಿಗೆ ಅಗತ್ಯವಾದ ಬಂಡವಾಳದ ಅಭಾವ, ಅವಲಂಬಿಗಳ ಸಂಖ್ಯೆಯ ಹೆಚ್ಚಳ, ಕಾಕುಪೋಷಣೆ, ಅನಕ್ಷರತೆ, ಆಹಾರಾಭಾವ, ಪಟ್ಟಣಗಳ ಗಾತ್ರದ ಅತಿಯಾದ ಬೆಳವಣಿಗೆ, ನಿರುದ್ಯೋಗ, ಅಶಾಂತಿ – ಈ ಸಮಸ್ಯೆಗಳ ಪರಿಹಾರಕ್ಕೆ ಕುಟುಂಬದ ಗಾತ್ರಕ್ಕೆ ಮಿತಿ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

**ಚಿತ್ರ 9 ಭಾರತದ ಕುಟುಂಬಯೋಜನಾ ಪ್ರಚಾರದ ಒಂದು ಭಿತ್ತಿ ಚಿತ್ರ**

1961–66ರ ನಡುವೆ ಜನಸಂಖ್ಯೆಯ ಏರಿಕೆ ವರ್ಷಕ್ಕೆ ಸೇ. 2.4ರಷ್ಟಿದ್ದು ಅಲ್ಲಿಂದಾಚೆಗೆ ಸೇ. 2.5ರಂತೆ ಬೆಳೆಯುತ್ತಿರುವುದೂ ರಾಷ್ಟ್ರದ ಅಭಿವೃದ್ಧಿಯ ಫಲಗಳು ಉತ್ತಮಜೀವನಮಟ್ಟದ ರೂಪದಲ್ಲಿ ಜನಕ್ಕೆ ಅಧಿಕವಾಗಿ ದೊರಕದಂತಾಗಿರುವುದೂ ಕುಟುಂಬಯೋಜನೆಯ ಪ್ರಾಮುಖ್ಯವನ್ನು ಹೆಚ್ಚಿಸಿವೆ.

ಭಾರತದ ಮೊದಲನೆಯ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಕುಟುಂಬ ಯೋಜನೆಗೆ ಹೆಚ್ಚಿನ ಹಣ ಒದಗಿಸಿರಲಿಲ್ಲ. ಕುಟುಂಬಯೋಜನೆಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣ, ಪ್ರಚಾರ, ಜನಸಂಖ್ಯೆಯ ವಿತರಣೆಯ ಬಗ್ಗೆ ಸಂಶೋಧನೆ, ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸಾ ಸೌಲಭ್ಯಗಳ ವಿಸ್ತರಣೆ – ಈ ವಿಷಯಗಳಿಗೆ ಮಾತ್ರ ಸರ್ಕಾರದ ಕಾರ್ಯಕ್ರಮ ಸೀಮಿತವಾಗಿತ್ತು. ಸರ್ಕಾರ ಈ ಅವಧಿಯಲ್ಲಿ ಕುಟುಂಬಯೋಜನೆಯನ್ನು ಜಾರಿಗೆ ತರಲು ಮೂರು ಮುಖ್ಯ ಕ್ರಮಗಳನ್ನು ಕೈಗೊಂಡಿತು: 1 ಮಿತಕುಟುಂಬದ ಅನುಕೂಲಗಳ ಬಗ್ಗೆ ಜನರಲ್ಲಿ ಪ್ರಚಾರ, 2 ಕುಟುಂಬಯೋಜನೆಯ ನಾನಾ ವಿಧಾನಗಳ ಬಗ್ಗೆ ತಿಳಿವಳಿಕೆ ನೀಡಿಕೆ ಮತ್ತು 3 ಸಂತಾನನಿಯಂತ್ರಣಕ್ಕೆ ಅವಶ್ಯವಾದ ಸಾಧನಗಳು ಅವರಿಗೆ ಸುಲಭವಾಗಿ ದೊರೆಯುವಂತೆ ಕ್ರಮ. ಮೊದಲನೆಯ ಎರಡು ಯೋಜನೆಗಳಲ್ಲಿ ಸರ್ಕಾರದ ಪ್ರಯತ್ನ ಅಷ್ಟೇನೂ ಯಶಸ್ವಿಯಾಗಲಿಲ್ಲ. 1962–63ರಲ್ಲಿ ಇಡೀ ಯೋಜನೆಯನ್ನು ಪುನರ್ವಿಮರ್ಶಿಸಿ, ವ್ಯಾಪಕ ಕಾರ್ಯಕ್ರಮವೊಂದನ್ನು ಜಾರಿಗೆ ತರಲಾಯಿತು.

ಮೂರನೆಯ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಕುಟುಂಬಯೋಜನೆಗೆ ಸರ್ಕಾರ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದೆ. 1966ರ ಏಪ್ರಿಲ್‌ನಲ್ಲಿ ಆರೋಗ್ಯಮಂತ್ರಿ ಶಾಖೆಯಲ್ಲಿ ಕುಟುಂಬಯೋಜನೆಗೆ ಮೀಸಲಾದ ಒಂದು ಖಾತೆ ಆರಂಭವಾಯಿತು. ಭಾರತದ ಅಭಿವೃದ್ಧಿ ಯೋಜನೆಗಳಲ್ಲಿ ಕುಟುಂಬಯೋಜನೆಗಾಗಿ ನಿಗದಿಯಾದ ಹಣ ಮತ್ತು ಮಾಡಲಾದ ವೆಚ್ಚವನ್ನು ಕೆಳಗೆ ಕೊಟ್ಟಿದೆ. : (ಲಕ್ಷ ರೂ.ಗಳಲ್ಲಿ)

| | ನಿಗದಿಯಾದ ಹಣ | ವಾಸ್ತವವಾಗಿ ಮಾಡಲಾದ ವೆಚ್ಚ ಲಕ್ಷ ರೂ.ಗಳಲ್ಲಿ |
|---|---|---|
| 1ನೆಯ ಪಂಚವಾರ್ಷಿಕ ಯೋಜನೆ (1951–56) | 65 | 14.5 |
| 2ನೆಯ ಪಂಚವಾರ್ಷಿಕ ಯೋಜನೆ (1956–61) | 497 | 215.6 |
| 3ನೆಯ ಪಂಚವಾರ್ಷಿಕ ಯೋಜನೆ (1961–66) | 2,700 | 2,486.0 |
| 1966–67 | 1,500 | 1,338.0 |
| 1967–68 | 3,100 | 2,553.5 |
| 1968–69 | 3,700 | 3,051.5 |
| 4ನೆಯ ಪಂಚವಾರ್ಷಿಕ ಯೋಜನೆ (1969–74) | 31,500 | |

ಕುಟುಂಬಯೋಜನೆಯ ಕಾರ್ಯಕ್ರಮಗಳು ಮುಖ್ಯವಾಗಿ ಕೇಂದ್ರಸರ್ಕಾರದಿಂದ ಯೋಜಿತವಾಗಿ ನಿರ್ದೇಶಿತವಾಗುತ್ತವೆ. ರಾಜ್ಯಸರ್ಕಾರಗಳು ಕಾರ್ಯಕ್ರಮಗಳನ್ನು ಜಾರಿಗೆ ತರುವ ಜವಾಬ್ದಾರಿ ಹೊರುತ್ತವೆ.

ವಂಕಿ–ಧಾರಣೆ ಹಾಗೂ ಶಸ್ತ್ರಕ್ರಿಯೆಗಳಿಗಾಗಿ ಸಂಚಾರಿ ಹಾಗೂ ಸ್ಥಾಯೀ ಕುಟುಂಬಯೋಜನಾಕೇಂದ್ರಗಳನ್ನು ರಚಿಸಲಾಗಿದೆ. ಶಿಬಿರಗಳಲ್ಲಿ ಸ್ತ್ರೀಪುರುಷರಿಗೆ ಕುಟುಂಬ ಯೋಜನೆಯ ಶಸ್ತ್ರಕ್ರಿಯೆಗಳನ್ನು ನಡೆಸುವುದು ಮತ್ತು ಯೋಜನೆಯ ಬಗ್ಗೆ ಪ್ರಚಾರ ನಡೆಸುವುದು ಸಹ ಈ ಯೋಜನೆಯ ಪ್ರಮುಖ ಅಂಶ. ಭಾರತದಲ್ಲಿ ಕಾನ್‌ಪುರದಲ್ಲಿರುವ ವಂಕಿ ತಯಾರಿಕೆ ಕಾರ್ಖಾನೆಗೆ ದಿನಕ್ಕೆ 30,5000 ವಂಕಿಗಳನ್ನು ತಯಾರಿಸುವ ಸಾಮರ್ಥ್ಯವಿದೆ. ನಿರೋಧ್ ಅನ್ನು ಬಹಳವಾಗಿ ಪ್ರಚಾರಕ್ಕೆ ತಂದು, ಅದರ ಮೂಲಕ ಸಂತಾನ ನಿಯಂತ್ರಣ ಮಾಡುವ ಕಾರ್ಯ ಸಹ ತ್ವರಿತಗತಿಯಿಂದ ಸಾಗಿದೆ. ಇದಕ್ಕಾಗಿ ಸರ್ಕಾರ ನಿರೋಧ್ ಅನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರುವ ಯೋಜನೆಯನ್ನು ಕಾರ್ಯಗತ ಮಾಡಿದೆ. ನಿರೋಧ್ ತಯಾರಿಸುವ ಜವಾಬ್ದಾರಿ ತ್ರೀವೇದ್ರಂದಲ್ಲಿರುವ, ಸರ್ಕಾರಿ ವಲಯದ ಕೈಗಾರಿಕೆಯಾದ ಹಿಂದೂಸ್ತಾನ್ ಲ್ಯಾಟಿಕ್ಸ್ ಲಿಮಿಟೆಡ್‌ದು.

ಕುಟುಂಬಯೋಜನೆಯ ಪ್ರಚಾರಕಾರ್ಯವನ್ನು ಸರ್ಕಾರ ತೀವ್ರಗೊಳಿಸಿದೆ. ಆಕಾಶವಾಣಿ 36 ನಿಲಯಗಳಲ್ಲಿ ಪ್ರತ್ಯೇಕವಾದ ಕುಟುಂಬಯೋಜನ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇತರ ಪ್ರಚಾರಸಾಧನಗಳೂ ಬಳಕೆಗೆ ಬಂದಿವೆ.

ಶಸ್ತ್ರಕ್ರಿಯೆಯನ್ನು ಜನಪ್ರಿಯಗೊಳಿಸುವ ದೃಷ್ಟಿಯಿಂದ ಸರ್ಕಾರ ಇದಕ್ಕಾಗಿ ಹಣ ಕೊಟ್ಟು ಪ್ರೋತ್ಸಾಹಿಸುತ್ತಿದೆ. ವ್ಯವಸ್ಥಿತ ಕೈಗಾರಿಕೆಗಳು ಕಾರ್ಮಿಕ ವರ್ಗದ ಕುಟುಂಬ ಯೋಜನೆಗಾಗಿ ಮಾಡಿದ ಖರ್ಚಿನ ಹಣಕ್ಕೆ ವರಮಾನ ತೆರಿಗೆ ವಿನಾಯಿತಯುಂಟು. ತೆರಿಗೆ ವಿನಾಯಿತಿಯಲ್ಲದೆ, ಕುಟುಂಬ ಯೋಜನೆಯ ಕಾರ್ಯಕ್ರಮಕ್ಕಾಗಿ ಕೈಗಾರಿಕೆಗಳಿಗೆ ಸಹಾಯಧನವನ್ನು ಸಹ ಸರ್ಕಾರ ನೀಡುತ್ತಿದೆ.

ಕುಟುಂಬಯೋಜನೆಗೆ ಪೂರಕವಾಗುವಂತೆ ಸಂಶೋಧನೆಗಳನ್ನೂ ಸರ್ಕಾರ ಪ್ರೋತ್ಸಾಹಿಸುತ್ತಿದೆ. ಬೊಂಬಾಯಿಯ ಅಂತರರಾಷ್ಟ್ರೀಯ ಜನಸಂಖ್ಯಾ ಅಧ್ಯಯನ ಸಂಸ್ಥೆಗೆ ವಿಶ್ವಸಂಸ್ಥೆಯ ಮನ್ನಣೆ ಪ್ರಾಪ್ತವಾಗಿದೆ. ಭಾರತೀಯರೇ ಅಲ್ಲದೆ ಇಕಾಫೆ ರಾಷ್ಟ್ರಗಳಿಂದ ಬಂದವರೂ ಇಲ್ಲಿ ಜನಸಂಖ್ಯಾಶಾಸ್ತ್ರದಲ್ಲಿ ಅಧ್ಯಯನ ನಡೆಸುತ್ತಾರೆ. ಕಉಟುಂಬ ಯೋಜನೆಗೆ ಸಂಬಂಧಿಸಿದ ಸಂಶೋಧನೆ ಇದರ ಕಾರ್ಯಭಾರಗಳಲ್ಲೊಂದು. ಈ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಸಂಶೋಧನೆ ನಡೆಸುತ್ತಿರುವ ಮತ್ತೊಂದು ಸಂಸ್ಥೆಯೆಂದರೆ ನವದೆಹಲಿಯ ಕೇಂದ್ರಿಯ ಕುಟುಂಬ ಯೋಜನಾ ಸಂಸ್ಥೆ. ಇನ್ನೂ ಅನೇಕ ಶಿಕ್ಷಣಸಂಸ್ಥೆಗಳು ಕುಟುಂಬಯೋಜನೆಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿವೆ. ಇವು ಕೇಂದ್ರಸರ್ಕಾರದ ಅನುದಾನ ಪಡೆಯುತ್ತಿವೆ.

ಭಾರತದ ಕುಟುಂಬಯೋಜನಾ ಸಂಸ್ಥೆ, ಮೆಡಿಕಲ್ ಅಸೋಸಿಯೇಷನ್ ಆಫ್ ಇಂಡಿಯ, ಕೇಂದ್ರೀಯ ಭಾರತ ಸೇವಕ ಸಮಾಜ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ತರಬೇಕಾದ ದಾದಿಯರ ಸಂಸ್ಥೆ, ಭಾರತದ ಗ್ರಾಮಸ್ಥ ಮಹಿಳಾಸಂಘ, ಇಂಡಿಯನ್ ಕಾನ್ಫರೆನ್ಸ್ ಆಫ್ ಸೋಷಿಯಲ್ ವರ್ಕ್, ಕ್ರಿಶ್ಚಿಯನ್ ಮೆಡಿಕಲ್ ಅಸೋಸಿಯೇಷನ್ – ಇವು ಕುಟುಂಬಯೋಜನೆಯ ಯಶಸ್ವಿಗಾಗಿ ಶ್ರಮಿಸುತ್ತಿರುವ ಕೆಲವು ಖಾಸಗಿ ಸಂಸ್ಥೆಗಳು, ಈ ಸಂಸ್ಥೆಗಳಲ್ಲಿ ಹಲವು ರಾಜ್ಯ ಹಾಗೂ ಕೇಂದ್ರ ಕುಟುಂಬ ಯೋಜನಾ ಸಮಿತಿಗಳಲ್ಲಿ ಪ್ರಾತಿನಿಧ್ಯ ಪಡೆದಿವೆ.

ಕುಟುಂಬಯೋಜನೆ ಸಂಬಂಧಿಸಿದಂತೆ ಭಾರತಸರ್ಕಾರ 1965ರಲ್ಲಿ ಲೆವು ನಿರ್ದಿಷ್ಟ ಗುರಿಗಳನ್ನು ಗೊತ್ತುಮಾಡಿಕೊಂಡಿತು. 1980–81ರ ವೇಳೆಗೆ ಭಾರತದಲ್ಲಿ ಜನನ ದರವನ್ನು ಪ್ರತಿ ಸಹಸ್ರಕ್ಕೆ 41ರಿಂದ ಪ್ರತಿ ಸಹಸ್ರಕ್ಕೆ 25ಕ್ಕೆ ಇಳಿಸುವುದು ಗುರಿ. 1973–74ರ ವರೆಗೆ ಪ್ರತಿ ಸಾವಿರಕ್ಕೂ ಜನನಸಂಖ್ಯೆ 32ರಂತೆ ಆಗುವಂತೆ ಮಾಡಬೇಕೆಂಬುದು ತತ್‌ಕ್ಷಣದ ಗುರಿ. 4ನೆಯ ಯೋಜನೆಯ ಅವಧಿಯಲ್ಲಿ 180 ಲಕ್ಷ ಜನನಗಳನ್ನು ತಡೆಗಟ್ಟಲಾಗುವುದೆಂದು ಅಂದಾಜು ಮಾಡಲಾಯಿತು. ಇಪ್ಪತ್ತೊಂದನೆ ಶತಮಾನದ ಪ್ರಾರಂಭಕ್ಕೆ ಜನಸಂಖ್ಯಾ ಹೆಚ್ಚಳದ ಪ್ರಮಾಣ ಪ್ರತಿ ಸಾವಿರಕ್ಕೆ 20 ಜ ಆಸುಪಾಸಿಗೆ ಬಂದಿದೆ.

ಭಾರತ ಜನನ ನಿಯಂತ್ರಣ ಯೋಜನೆಯಲ್ಲಿ ಮಹತ್ವದ ಪ್ರಗತಿ ಸಾಧಿಸಿದೆ. 1960ರಲ್ಲಿ ಜನನ ಪ್ರಮಾಣ ಶೇಕಡ 5.7ರಷ್ಟಿದ್ದು 2009ರಲ್ಲಿ 2.7ಕ್ಕೆ ಇಳಿದಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನನ ನಿಯಂತ್ರಣಕ್ಕೆ ಆದ್ಯತೆ ನೀಡಿವೆ. ಸ್ವಯಂಸೇವಾ ಸಂಘಗಳ ಮೂಲಕವು ಈ ಕಾರ್ಯ ನಡೆಯುತ್ತಿದೆ. ವಿದ್ಯಾವಂತ ಸಮುದಾಯ ಬೆಳೆದಂತೆ ಕುಟುಂಬ ಯೋಜನೆ ಬಗ್ಗೆ ಅರಿವು ಹೆಚ್ಚುತ್ತಿದೆ. ಇದಕ್ಕಾಗಿ ಸಾವಿರಾರು ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ. ಸಮಾಜದಲ್ಲಿ ಅನಕ್ಷರತೆ ಮತ್ತು ಸಂಪ್ರದಾಯ ಶರಣತೆ ಇನ್ನೂ ಕೆಲವೆಡೆ ಕುಟುಂಬ ಯೋಜನೆಯ ಪ್ರಗತಿಗೆ ಅಡ್ಡಿಯಾಗಿವೆ. ಪ್ರತಿವರ್ಷದ ಸೆಪ್ಟಂಬರ್ 26ನೇ ದಿನಾಂಕವನ್ನು ವಿಶ್ವ ಜನನ ನಿಯಂತ್ರಣ ದಿನವಾಗಿ ಆಚರಿಸಲಾಗುತ್ತಿದೆ.

ಕುಟುಂಬಯೋಜನೆಯ ಯಶಸ್ಸು ಬಹಳಮಟ್ಟಿಗೆ ಜನರ ಸಹಕಾರವನ್ನು ಅವಲಂಬಿಸಿದೆ. ಸರ್ಕಾರದ ಕ್ರಮಗಳು ಯಶಸ್ವಿಯಾಗಬೇಕಾದರೆ ಜನರು ಕುಟುಂಬ ಯೋಜನೆಯ ಮಹತ್ತ್ವವನ್ನು ಅರಿತು ವರ್ತಿಸಬೇಕಾದುದು ಅವಶ್ಯಕವಾಗುತ್ತದೆ. ಈಗಾಗಲೇ ಕೈಗೊಂಡಿರುವ ಕಾರ್ಯಕ್ರಮಗಳ ಜೊತೆಗೆ ಜನನ ಸಂಖ್ಯೆಯನ್ನು ತಡೆಗಟ್ಟಲು ಸರ್ಕಾರ ಇನ್ನೂ ಅನೇಕ ಕ್ರಮಗಳನ್ನು ಕೈಗೊಳ್ಳುವ ವಿಚಾರವಿದೆ. ವಿವಾಹದ ಕನಿಷ್ಠವಯಸ್ಸಿನ ನಿಗದಿ ಗರ್ಭಪಾತಕ್ಕೆ ಕಾನೂನಿನ ಅವಕಾಶ ಕಲ್ಪನೆ ಇವು ಇನ್ನೆರಡು ಮುಖ್ಯ ಕ್ರಮಗಳು. ಜನ ಈಗ ಚಿಕ್ಕ ಕುಟುಂಬದ ಉಪಯುಕ್ತತೆಯನ್ನು ಕಂಡುಕೊಂಡು ಸ್ವಯಂಪ್ರೇರಿತರಾಗಿ ಅದಕ್ಕೆ ಒಳಗಾಗುತ್ತಿದ್ದಾರೆ.

ಕುಟುಂಬಯೋಜನೆಗೂ ಆರ್ಥಿಕ ಬೆಳೆವಣಿಗೆಗೂ ಇರುವ ಕ್ರಿಯಾತ್ಮಕ ಸಂಬಂಧದ ಬಗ್ಗೆ ಆರ್ಥಿಕ ತಜ್ಞರಲ್ಲಿ ಇನ್ನೂ ಭಿನ್ನಾಭಿಪ್ರಾಯಗಳಿವೆ. ಮಿತ ಕುಟುಂಬದಿಂದಾಗಿ ಅನೇಕ ಆರ್ಥಿಕ ಲಾಭಗಳಿದ್ದರೂ ದೀರ್ಘಾವಧಿಯಲ್ಲಿ ದೇಶದ ಮೇಲೂ ಮುಂದಿನ ಜನಾಂಗದ ಮೇಲೂ ಆಗಬಹುದಾದ ಪರಿಣಾಮಗಳ ಬಗ್ಗೆ ನಿರ್ದಿಷ್ಟವಾದ ಅಧ್ಯಯನ ನಡೆದಿಲ್ಲ. ಬೆಳೆವಣಿಗೆಯ ವಿವಿಧ ಹಂತಗಳಲ್ಲಿರುವ 56 ರಾಷ್ಟ್ರಗಳಲ್ಲಿಯ ಕುಟುಂಬ ಯೋಜನೆಯ ಸಮೀಕ್ಷೆಯನ್ನು ವಿಶ್ವಸಂಸ್ಥೆ ನಡೆಸಿತು. ಕುಟುಂಬಯೋಜನೆ ಇಲ್ಲದಿದ್ದರೆ ಉಂಟಾಗಬಹುದಾದ ಆರ್ಥಿಕ ಪರಿಣಾಮಗಳೇನೆಂಬುದರ ಬಗ್ಗೆ ಈ ರಾಷ್ಟ್ರಗಳಲ್ಲಿ ಒಮ್ಮತವಿದ್ದರೂ ಕುಟುಂಬಯೋಜನೆಯ ಪರಿಣಾಮಗಳ ಬಗ್ಗೆ ಏಕಾಭಿಪ್ರಾಯವಿಲ್ಲ. (ಸಿ.ಕೆ.ಆರ್.)

**ಕುಟುಕುಕಣವಂತಗಳು :** ಅಂಬಲಿ ಮೀನು, ಹೈಡ್ರ, ಗಾರ್ಗೋನಿಯ (ಕಡಲ ಬೀಸಣಿಗೆ) ಪೆರಿಫಿಲ್, ಪೋರ್ಚುಗೀಸ್ ಯುದ್ಧಪೋತ (ಪೋರ್ಚುಗೀಸ್ ಮ್ಯಾನ್ ಆಫ್ ವಾರ್ ಫೈಸೇಲಿಯ), ಕಡಲ ಹೂ (ಸೀ ಆನಿಮೋನೆ), ಹವಳದ ಹುಳು ಮುಂತಾದವನ್ನೊಳಗೊಂಡ ಒಂದು ಅಕಶೇರುಕಪ್ರಾಣಿ ವಂಶ. ಈ ವಂಶಕ್ಕೆ ಕೊಟ್ಟಿರುವ ಸೀಲೆಂಟರೇಟ ಎಂಬ ಗ್ರೀಕ್ ಹೆಸರು ಆ ಪ್ರಾಣಿಗಳಲ್ಲಿ ಜಠರಾವಕಾಶದ ಸುತ್ತ ಅವುಗಳ ದೇಹ ವ್ಯವಸ್ಥೆಯಾಗಿರುವುದೆಂಬುದನ್ನು ಸೂಚಿಸುತ್ತದೆ. ಮೊದ ಮೊದಲು ಈ ವಂಶದಲ್ಲಿ ಸ್ಪಂಜುಗಳನ್ನು ಕೋಮ್‌ಜೆಲ್ಲಿಗಳನ್ನೂ ಸೇರಿಸಾಗುತ್ತಿತ್ತು. ಈಚೆಗೆ ಅವನ್ನು ಬೇರೆಬೇರೆ ವಂಶಗಳಾಗಿ ವಿಂಗಡಿಸಿರುವುದರಿಂದ ಕುಟುಕುಕಣವಂತಗಳನ್ನು ಮಾತ್ರ ಒಳಗೊಂಡ ವಂಶವನ್ನು ಸೂಚಿಸಲು ನೈಡೇರಿಯ ಎಂಬ ಹೆಸರನ್ನೂ ಬಳಸುವುದುಂಟು.

ಸೂಕ್ಷ್ಮವೇದಿಯೂ ಬಳುಕುವ ರಚನೆಯವೂ ಆದ ಟೆಂಟಕಲ್ ಎಂಬ ಸ್ಪರ್ಶತಂತುಗಳೂ, ಬಾಹ್ಯಚರ್ಮದಲ್ಲಿ ಕುಟುಕುಕಣಗಳೂ (ನಿಮ್ಯಾಟೊಸಿಸ್ಟ್) ಇರುವುದು, ಈ ವಂಶದ ಪ್ರಾಣಿಗಳ ವಿಶಿಷ್ಟ ಲಕ್ಷಣಗಳು. ದೇಹ ಸಾಮಾನ್ಯವಾಗಿ ತ್ರಿಜ್ಯ ಸಮ್ಮಿತಿಯನ್ನು (ರೇಡಿಯಲ್ ಸಿಮೆಟ್ರಿ) ಪ್ರದರ್ಶಿಸುತ್ತದೆ. ಕೆಲವು ಪ್ರಾಣಿಗಳಲ್ಲಿ ದ್ವಿಪಾರ್ಶ್ವಸಮ್ಮಿತಿ (ಬೈಲ್ಯಾಟರಲ್ ಸಿಮೆಟ್ರಿ) ಕಂಡುಬರುತ್ತದೆ. ಗಾತ್ರದಲ್ಲಿ 1/25" ದಷ್ಟು ಸಣ್ಣದಾದ ಪಾಲಿಪ್‌ಗಳಿಂದ ಹಿಡಿದು ಮೂರಡಿ ವ್ಯಾಸವುಳ್ಳ ಪಾಲಿಪ್‌ಗಳ ವರೆಗೂ ಇರುವುದುಂಟು. ಹಾಗೆಯೆ, ಅಷ್ಟಾಗಿ ಕಣ್ಣಿಗೆ ಬೀಳದ ಬಹು ಸಣ್ಣ ಅಂಬಲಿಮೀನುಗಳಿಂದ ಹಿಡಿದು ಆರಡಿ ವ್ಯಾಸದ ದೈತ್ಯಾಕಾರದ ಅಂಬಲಿ ಮೀನುಗಳವರೆಗೂ ಇರುವುದುಂಟು.

**ಪರ್ಯಾಯ ಸಂತತಿ ಕ್ರಮ:** ಬಹುತೇಕ ಪ್ರಾಣಿಗಳ ಜೀವನಚರಿತ್ರೆಯಲ್ಲಿ ಪಾಲಿಪ್ ಮತ್ತು ಮೆಡೂಸ ಎಂಬ ಎರಡು ಅವಸ್ಥೆಗಳು ಪರ್ಯಾಯವಾಗಿ ಬರುವುದು ಕುಟುಕುಕಣವಂತಗಳ ಮತ್ತೊಂದು ಲಕ್ಷಣ. ಪಾಲಿಪ್‌ರೂಪ ವಸ್ತುವೊಂದಕ್ಕೆ ಅಂಟಿಕೊಂಡು ನೆಟ್ಟಗೆ ಓಲಾಡುತ್ತಿರುತ್ತದೆ. ಅದರ ತುದಿಯಲ್ಲಿ ಬಾಯಿಯೂ ಬಾಯಿಯ ಸುತ್ತ



ಹೈಡ್ರ ಎಡಗಡೆಯದು ಗಂಡು; ಬಲಗಡೆಯದು ಹೆಣ್ಣು

ಸ್ಪರ್ಶತಂತುಗಳೂ ಇರುತ್ತವೆ. ಇದು ಆ ಪ್ರಾಣಿಯ ಸ್ಥಾವರರೂಪ ಮೆಡೂಸ ಆ ಪ್ರಾಣಿಯ ಚಲಿಸುವ ರೂಪ ಸಾಮಾನ್ಯವಾಗಿ ಇದನ್ನು ಅಂಬಲಿ ಮೀನು (ಜೆಲ್ಲಿ ಫಿಷ್) ಎಂದು ಕರೆಯುವರು. ಅದರ ಕೊಡೆಯಾಕೃತಿಯ ದೇಹವನ್ನು ಗಂಟೆ (ಬೆಲ್) ಎಂದು ಕರೆಯುವರು. ಅದರ ಮೇಲ್ದವಡೆಯ ಮಧ್ಯದಿಂದ ದೇಹದೊಳಕ್ಕೆ ಇಳಿಯುವ ಮೆನೂಬ್ರಿಯಂ ಎಂಬ ನಾಳವಿದೆ. ಆ ನಾಳದ ತುದಿಯಲ್ಲಿ ಬಾಯಿಯಿದೆ. ಗಂಟೆಯ ಸುತ್ತಣ ಅಂಚಿನಲ್ಲಿ ಸ್ಪರ್ಶತಂತುಗಳಿವೆ. (ಟೆಂಟಕಲ್ಸ್) ಈ ವಂಶದ ಹೈಡ್ರೋಜೋವ ಮತ್ತು ಸ್ಕೈಫೋಜೋವ ಎಂಬ ಎರಡು ವರ್ಗಗಳ ಕುಟುಕುಕಣವಂತಗಳಲ್ಲಿ ಲಿಂಗರೀತಿಯ ವಂಶಾಭಿವೃದ್ಧಿಯಿಂದ ಪ್ಲಾನುಲ ಎಂಬ ಲಾರ್ವ ಉದ್ಭವಿಸುತ್ತದೆ. ಇದು ಯಾವುದಾದರೂ ವಸ್ತುವಿಗೆ ಕಚ್ಚಿಕೊಂಡು ವೃದ್ಧಿಯಾಗಿ ಪಾಲಿಪ್ ರೂಪವನ್ನು ತಾಳುತ್ತದೆ. ಇದು ಏಕಾಂಗಿಯಾಗಿ ಉಳಿಯಬಹುದು ಅಥವಾ ಅಲಿಂಗರೀತಿಯಿಂದ ಕವಲೊಡೆದ ಆ ಮೂಲಕ ವಂಶಾಭಿವೃದ್ಧಿಮಾಡಿ ಸಾಂಘಿಕ ಸ್ವರೂಪವನ್ನು ತಾಳಬಹುದು. ಸ್ಥಾವರ ಜೀವನವನ್ನು ನಡೆಸುವ ಪಾಲಿಪ್ ಆ ಪ್ರಾಣಿಯ ಕಿಶೋರಾವಸ್ಥೆ ಮಾತ್ರ. ಕೊನೆಗೆ ಅದು ಅಲಿಂಗರೀತಿಯಿಂದ ಮೊಗ್ಗೊಡೆದು ಮೆಡೂಸಗಳನ್ನು ಉತ್ಪತ್ತಿಮಾಡುತ್ತದೆ. ಅವು ನೀರಿನಲ್ಲಿ ಚಲಿಸುತ್ತ ಬೆಳೆದು ಲೈಂಗಿಕವಾಗಿ ಪ್ರೌಢಾವಸ್ಥೆಗೇರುತ್ತವೆ. ಎಂದರೆ, ಕುಟುಕು ಕಣವಂತಗಳ ಜೀವನ ಚರಿತ್ರೆಯಲ್ಲಿ ವಂಶಾಭಿವೃದ್ಧಿ ಮಾಡುವ ಪಾಲಿಪ್ ರೂಪವೂ ಅನಂತರ ಅದರಿಂದ ಲಿಂಗರೀತಿಯಲ್ಲಿ ಸಂತಾನೋತ್ಪತ್ತಿ ಮಾಡುವ ಮೆಡೂಸ ರೂಪವೂ ಬರುವುದರಿಂದ ಇಲ್ಲಿ ಪರ್ಯಾಯ ಸಂತಾನೋತ್ಪತ್ತಿ (ಅಲ್ಟರ್ನೇಷನ್ ಆಫ್ ಜನರೇಷನ್ಸ್) ಕಂಡುಬರುತ್ತದೆ.

**ದೇಹರಚನೆ:** ಕುಟುಕುಕಣವಂತಗಳ ದೇಹ ಒಂದೇ ದ್ವಾರವಿರುವ ಕೋಶದಂತಿರುತ್ತದೆ. ಈ ದ್ವಾರವೇ ಬಾಯಿ. ಅದು ಆಹಾರಸೇವನೆಗೂ ಮಲವಿಸರ್ಜನೆಗೂ ಇರುವ ಏಕೈಕ ಮಾರ್ಗ. ಬಾಯಿಯ ಸುತ್ತಲೂ ಸ್ಪರ್ಶತಂತುಗಳಿವೆ. ಇವು ಪ್ರಾಣಿಯ ಆತ್ಮರಕ್ಷಣೆಗೂ ಸ್ವಲ್ಪ ಮಟ್ಟಿಗೆ ಅದರ ಚಲನೆಗೂ ನೆರವಾಗುವ ಅಂಗಗಳು. ಈ ತಂತುಗಳ ಮೇಲಿರುವ ಕುಟುಕು ಕಣಗಳು ಮೊದಲೆರಡು ಕಾರ್ಯಗಳಿಗೆ ನೇರವಾಗಿ ಪಾತ್ರವಹಿಸುತ್ತವೆ. ದೇಹದಲ್ಲಿ ಎರಡು ಪದರದ ಕೋಶಗಳ ಕವಚ ಮಾತ್ರ ಇದೆ. ಹೊರಮೈಯನ್ನು ಆವರಿಸಿರುವ ಹೊರಚರ್ಮದ ವರಿಸೆಯಲ್ಲಿ ಹಲವು ಬಗೆಯ ಕೋಶಗಳಿವೆ. ಕುಟುಕುಕಣಗಳನ್ನು ರೂಪಿಸುವ ನೈಡೋಬ್ಲಾಸ್ಟ್‌ಗಳು, ಸಂವೇದಿ ಕಣಗಳು, ನರಕೋಶಗಳು (ನ್ಯೂರಾನ್ಸ್), ರಸಸ್ರಾವಕ ಕೋಶಗಳು, ಅಂತರಾಳದ ಕೋಶಗಳು (ಇಂಟರ್‌ಸ್ಟಿಷಿಯಲ್ ಸೆಲ್ಸ್), ಹೊರತೊಕ್ಕಿನ ಕೋಶಗಳು ಇವೇ ಮುಂತಾದ ಕಣಗಳನ್ನು ಅದರಲ್ಲಿ ಕಾಣಬಹುದು.



ಹೈಡ್ರದ ಭಿತ್ತಿಯ ಅಡ್ಡಸೀಳಿಕೆ

ಹೊರತೊಕ್ಕಿನ ಕೋಶಗಳು ರೋಮಗಳನ್ನು (ಸೀಲಿಯ) ತಳೆದಿರಬಹುದು. ಅವುಗಳ ತಳದಲ್ಲಿ ಆಕುಂಚಕ ಕಣಗಳ ಅಥವಾ ಸ್ನಾಯುವಿನ ರಚನೆಗಳಿರುತ್ತವೆ. ದೇಹದ ಒಳಮೈಯನ್ನು ಇನ್ನೊಂದು ವರಿಸೆ ಕಣಗಳು ಆವರಿಸಿರುವ ತೊಕ್ಕಿನಲ್ಲಿರುವಂಥ ವಿವಿಧ ರೀತಿಯ ಕಣಗಳಿರುತ್ತವೆ. ಜಠರಾವಕಾಶವನ್ನು ಆವರಿಸಿರುವ ತೊಕ್ಕು ಜೀರ್ಣಕೋಶಗಳ ವರಿಸೆಯಾಗಿ ಮಾರ್ಪಟ್ಟಿದೆ. ಇವು ಸ್ರವಿಸುವ ಜೀರ್ಣರಸದಲ್ಲಿರುವ ಕಿಣ್ವಕ್ಕೆ ಸಸಾರಜನಕಾದಿವಸ್ತುಗಳನ್ನು (ಪ್ರೋಟಿನ್ಸ್) ವಿಭಜಿಸುವ ಶಕ್ತಿಯಿದೆ. ಅದು ಆಹಾರವನ್ನು ಅಣುರೂಪಕ್ಕೆ ಒಡೆಯುತ್ತದೆ. ಜಠರಾವಕಾಶವನ್ನು ಆವರಿಸಿರುವ ಆ ಕೋಶಗಳು ಅನಂತರ ಅದನ್ನು ಅಂತರ್ಗತಮಾಡಿಕೊಳ್ಳುತ್ತವೆ. ಆಹಾರದ ಅಂತಿಮ ಜೀರ್ಣಕಾರ್ಯವೂ ಆ ಕೋಶಗಳೊಳಗೇ ನಡೆಯುತ್ತದೆ. ಹಾಗೆ ಜೀರ್ಣವಾದ ಪೋಷಕಾಂಶಗಳು ದೇಹದ ಬೇರೆ ಬೇರೆ ಭಾಗಗಳಿಗೆ ಪ್ರಸರಿಸುವುವು. ಹೊರ ಮತ್ತು ಒಳವರಿಸೆಗಳ ನಡುವೆ ಇರುವ ಅಮೀಬೊಸೈಟ್ಸ್ ಎಂಬ ಸಂಚಾರಿಕೋಶಗಳೂ ಪೋಷಕಾಂಶಗಳನ್ನು ದೇಹದ ಬೇರೆ ಬೇರೆ ಭಾಗಗಳಿಗೆ ಕೊಂಡೊಯ್ಯಲು ನೆರವಾಗುತ್ತವೆ. ಸಾಮಾನ್ಯವಾಗಿ ಜಠರ ಸರಳವಾದ ಒಂದೇ ಕೋಶದ ರೂಪದಲ್ಲಿರಬಹುದು ಅಥವಾ ಮಧ್ಯದಲ್ಲಿ ಗೋಡೆಗಳಂಥ ರಚನೆಯಿದ್ದು ಹಲವು ಭಾಗಗಳಾಗಿರಬಹುದು.

**ಚಲನೆ:** ಹೈಡ್ರೋಜೋವ ವರ್ಗದ ಪಾಲಿಪ್‌ಗಳಂಥ ಸೂಕ್ಷ್ಮ ರೂಪದ ಕುಟುಕ ಕಣವಂತಗಳಲ್ಲಿ ಚಲನೆಗೆ ನೆರವಾಗತಕ್ಕ ವಿಶಿಷ್ಟ ರಚನೆಗಳಾಗಲೀ, ನಿರ್ದಿಷ್ಟ ಸ್ನಾಯುಗಳಾಗಲೀ ಇರುವುದಿಲ್ಲ. ಆದರೆ ಹೊರತೊಕ್ಕಿನಲ್ಲೂ ಜಠರಾವಕೋಶದ ಒಳಪೊರೆಯಲ್ಲೂ ಎಪಿಥೀಲಿಯಲ್ ಸ್ನಾಯುಕೋಶಗಳುಂಟು. ಅವುಗಳ ತಳಭಾಗ ಮೀಸೊಗ್ಲಿಯಕ್ಕೆ ಬಂಧಿಸಿದೆ.




ಹೈಡ್ರದ ಚಲನೆಯ ವಿವಿಧ ಹಂತಗಳು : **A.** ಕುಣಿತ ಚಲನೆ, **B.** ಪಲ್ಟಿ ಚಲನೆ

ಅವು ಹೊರಚರ್ಮದಲ್ಲಿ ನೀಳವಾಗಿಯೂ ಜಠರಾವಕಾಶದ ಒಳಪೊರೆಯಲ್ಲೂ ವರ್ತುಲಾಕಾರದ ಪಟ್ಟಿಯಂತೆ ಅಡ್ಡಡ್ಡಲಾಗಿಯೂ ಜೋಡಿಸಿಕೊಂಡಿರುತ್ತವೆ. ವೃತ್ತಸ್ನಾಯುಕೋಶಗಳ ಸಂಕೋಚದಿಂದ ದೇಹ ನೀಳವಾಗುತ್ತದೆ. ನೀಳಸ್ನಾಯು ಕೋಶಗಳ ಸಂಕೋಚದಿಂದ ದೇಹ ಕಿರಿದಾಗುತ್ತದೆ. ದೇಹವನ್ನು ಬಾಗಿಸುವುದಕ್ಕೂ ಇದರಿಂದ ಸಾಧ್ಯವಾಗುತ್ತದೆ. ಕಡಲ ಹೂವಿನಂಥ ದೊಡ್ಡ ಪಾಲಿಪ್‌ಗಳಲ್ಲಿ ಸ್ನಾಯುಕೋಶಗಳಿಲ್ಲದಿದ್ದರೂ

ಅವುಗಳ ಕಾರ್ಯವನ್ನು ನಿರ್ವಹಿಸಬಲ್ಲ ವಿಶಿಷ್ಟ ಸ್ನಾಯುಕ್ಷೇತ್ರಗಳುಂಟು. ಜಠರಾವಕಾಶವನ್ನು ವಿಭಾಗಿಸುವ ಗೋಡೆಗಳ ಮುಖದುದ್ದಕ್ಕೂ ನೀಳಸ್ನಾಯುಕೋಶಗಳ ವರಿಸೆ ಕಂಡುಬರುತ್ತದೆ. ಈ ಪ್ರಾಣಿಗಳ ಮೀಸೋಗ್ಲಿಯಕ್ಕೆ ಹೆಚ್ಚು ಸ್ಥಿತಿಸ್ಥಾಪನಶಕ್ತಿ ಇದೆ. ಜಠರಾವಕಾಶ ವಿಸ್ತಾರವಾಗಿದ್ದು ನೀರಿನಿಂದ ತುಂಬಿರುತ್ತದೆ. ನೀರಿನ ಒತ್ತಡಕ್ಕೆ ಒದೆಕೊಟ್ಟುಕೊಂಡು ಈ ಸ್ನಾಯು ಕೋಶಗಳು ಕ್ರಿಯಾಮುಖವಾಗುತ್ತವೆ. ಇವುಗಳಲ್ಲಿ ಪ್ರತ್ಯೇಕ ಸ್ನಾಯುಗಳಿದ್ದರೂ ಇವು ಕೇವಲ ಒಂದು ವರಿಸೆಕೋಶಗಳಿಂದ ಮಾತ್ರ ರಚನೆಯಾಗಿರುತ್ತವೆ.

ಮೆಡೂಸಗಳಲ್ಲಿ ಸ್ನಾಯುಗಳು ಎಪಿಥೀಲಿಯಲ್ ಕೋಶಗಳ ರೂಪದಲ್ಲಿವೆ. ಕೊಡೆಯಂಥ ಮೆಡೂಸಗಳ ದೇಹದ ನಿಮ್ನ ಪ್ರದೇಶದಲ್ಲಿ ಮಾತ್ರವಿರುವ ಇವು ವೃತ್ತಾಕಾರವಾಗಿ ತ್ರಿಜ್ಯಮುಖದಲ್ಲಿ ಜೋಡಿಸಿಕೊಂಡಿವೆ. ಇವುಗಳ ಸಂಕೋಚನದಿಂದ ಕೊಡೆಯ ಮೇಲ್ಭಾಗದ ದೇಹದಲ್ಲಿ ಸ್ಪಂದನ ಚಲನೆಗಳಾಗುತ್ತವೆ. ಇವು ದೃಢವಾಗಿರುವ ಸ್ಥಿತಿಸ್ಥಾಪನ ಶಕ್ತಿಯುಳ್ಳ ಮೀಸೋಗ್ಲಿಯಕ್ಕೆ ಒದೆಕೊಟ್ಟುಕೊಂಡು ಕೆಲಸಮಾಡುತ್ತವೆ. ಕೊಡೆಯ ತಳಭಾಗದ ದೇಹಾವಕಾಶದಿಂದ ನೀರನ್ನು ಬಿರುಸಾಗಿ ಎರಚುವುದರಿಂದ ಮೆಡೂಸ ನೀರಿನಲ್ಲಿ ವೇಗವಾಗಿ ಈಜಿಕೊಂಡು ಹೋಗುತ್ತಿರುತ್ತದೆ. ಪ್ರತಿ ಸಂಕೋಚನದ ಅನಂತರ ಮೀಸೋಗ್ಲಿಯ ತನಗಿರುವ ಸಂಕೋಚನ ಶಕ್ತಿಯಿಂದ ದೇಹವನ್ನು ಮತ್ತೆ ಹಿಂದಿನ ಘಂಟಾಕೃತಿಗೆ ತಿರುಗಿಸುತ್ತದೆ.

ಕುಟುಕುಕಣವಂತಗಳ ಚಲನೆ ಬಹುಮಟ್ಟಿಗೆ ಮೈ ಮತ್ತು ಸ್ಪರ್ಶತಂತುಗಳನ್ನು ಚಾಚುವುದು, ಬಾಗಿಸುವುದು, ಕಿರಿದುಮಾಡುವುದು ಇತ್ಯಾದಿ ಕಾರ್ಯಗಳ ರೂಪದಲ್ಲಿರುತ್ತದೆ. ಮೆಡೂಸಗಳೂ ಕೆಲವು ಕಡಲಹೂಗಳೂ ನಿರಾಯಾಸವಾಗಿ ಈಜಬಲ್ಲವು. ಕಡಲಹೂವಿನಲ್ಲಿ ಚಲನೆ ಬಾಯಿಯಬಿಲ್ಲೆ (ಓರಲ್ ಡಿಸ್ಕ್) ಮತ್ತು ಸ್ಪರ್ಶತಂತುಗಳ ಬಡಿತ ಮತ್ತು ಮುಲುಕುವಿಕೆಗಳಿಂದ ನಡೆಯುತ್ತದೆ. ಸೈಫನೋಫೊರ ವರ್ಗದ ಹೈಡ್ರಾಯಿಡ್‌ಗಳು ತಮ್ಮ ದೇಹದಲ್ಲಿ ಮೆಡೂಸಗಳನ್ನು ಅಳವಡಿಸಿಕೊಂಡಿರುವುದರಿಂದ, ಮೆಡೂಸಗಳಿಗಿರುವ ಚಲನೆಯ ಸೌಲಭ್ಯವನ್ನು ತಾವೂ ಬಳಸಿಕೊಳ್ಳುತ್ತವೆ. ಕೆಲವು ಪಾಲಿಪ್‌ಗಳು ಪದಾರ್ಥಗಳಿಗೆ ಅಂಟಿಕೊಂಡಿರುವ ತಮ್ಮ ತಾಳಿನ ತಳದ ಬಿಲ್ಲೆಯ ಕೋಶಗಳ ಅಮೀಬಾಯಿಡ್ ಚಲನೆಯ ಸಹಾಯದಿಂದ ಸ್ಥಳದಿಂದ ಸ್ಥಳಕ್ಕೆ ಸ್ವಲ್ಪ ಮಟ್ಟಿಗೆ ಚಲಿಸಬಲ್ಲವು.

**ಆಹಾರಸೇವನೆ :** ಕುಟುಕುಕಣವಂತಗಳು ಮಾಂಸಾಹಾರಿಗಳು. ಅವು ತಮ್ಮ ಕುಟುಕುಕಣಗಳ ಸಹಾಯದಿಂದ ಸಾಗರದ ಹುಳುಗಳು, ಕ್ರಿಮಿಕೀಟಗಳು, ಡಿಂಭಗಳು ಮುಂತಾದ ಸಣ್ಣಪುಟ್ಟ ಜೀವಿಗಳನ್ನೂ ಮರಿಮೀನುಗಳನ್ನೂ ಇತರ ಕುಟುಕು ಕಣವಂತಗಳನ್ನೂ ಕುಟುಕಿ ಕೊಂದು ಭಕ್ಷಿಸುತ್ತವೆ. ಸ್ಕೈಫೋಜೋವ ವರ್ಗದ ಅಂಬಲಿ ಮೀನುಗಳಂಥ ಕೆಲವು ಪ್ರಾಣಿಗಳು ಆಹಾರವನ್ನು ಸಂಪಾದಿಸಲು ಕುಟುಕುಕಣಗಳನ್ನು ಬಳಸುವುದಿಲ್ಲ. ತಮ್ಮ ರೋಮಗಳ ಚಲನೆಯಿಂದ ಬರುವ ಜಲ ಪ್ರವಾಹದಲ್ಲಿರುವ ಸೂಕ್ಷ್ಮಜೀವಿಗಳನ್ನೂ, ಸಣ್ಣ ಸಣ್ಣ ಸಾವಯವ ವಸ್ತುಗಳನ್ನೂ ಸೆಳೆದುಕೊಂಡು ಲೋಳೆಗೆ ಅಂಟಿಸಿಕೊಂಡು, ರೋಮಗಳ ಮತ್ತು ಸ್ಪರ್ಶತಂತುಗಳ ಸಹಾಯದಿಂದ ಬಾಯೊಳಕ್ಕೆ ತಳ್ಳಿಕೊಳ್ಳುತ್ತವೆ. ಕೆಲವು ಕುಟುಕುಕಣವಂತಗಳು ಬಾಯನ್ನು ಮೇಲಕ್ಕೆ ನೀಡಿ ಆಹಾರವನ್ನು ಸೆಳೆದುಕೊಳ್ಳುತ್ತವೆ. ಪಾಲಿಪ್‌ಗಳಲ್ಲಿ ಕೆಲವು ತಮಗಿಂತಲೂ ದೊಡ್ಡ ಜೀವಿಗಳನ್ನು ಈ ರೀತಿಯಾಗಿ ಸೆಳೆದುಕೊಂಡು ಭಕ್ಷಿಸಬಲ್ಲವು. ಆಳವಿಲ್ಲದ ಸಮುದ್ರದಲ್ಲಿ ವಾಸಿಸುವ ಹವಳಗಳು ತಮ್ಮ ದೇಹದ ಕೋಶಗಳ ನಡುವೆ ಶೈವಲಗಳನ್ನೂ ಹೊಂದಿರುತ್ತವೆ. ಶೈವಲಗಳು ನಡೆಸುವ ದ್ಯುತಿಸಂಶ್ಲೇಷಣ ಕ್ರಿಯೆಯ ಫಲವಾಗಿ ಮೂಡುವ ಉತ್ಪನ್ನಗಳನ್ನು ಹವಳಗಳನ್ನು ಸೇವಿಸುತ್ತವೆ. ತಾವು ಆಶ್ರಯಪಡೆದಿರುವ ಹವಳಗಳಿಗೆ ಈ ರೀತಿ ಸಹಾಯ ಮಾಡುತ್ತ ಶೈವಲಗಳು ಒಂದು ರೀತಿಯ ಸಹಜೀವನ ನಡೆಸುತ್ತವೆ.

**ಉಸಿರಾಟ:** ಕುಟುಕುಕಣವಂತಗಳಲ್ಲಿ ಉಸಿರಾಟಕ್ಕಾಗಲಿ ಶುದ್ಧೀಕರಣಕ್ಕಾಗಲಿ ನಿರ್ದಿಷ್ಟ ಅಂಗಗಳಿಲ್ಲ. ಜಠರಾವಕಾಶದಲ್ಲಿ ತುಂಬಿರುವ ದ್ರವದಲ್ಲಿರುವ ಅಥವಾ ವಾತಾವರಣದಲ್ಲಿರುವ ಆಮ್ಲಜನಕವನ್ನು ದೇಹಭಾಗಗಳು ಹೀರಿಕೊಂಡು ದೇಹದ ಕಶ್ಮಲಗಳನ್ನು ಹೊರದೂಡುತ್ತವೆ. ಮೇಲ್ವರ್ಗದ ಪ್ರಾಣಿಗಳಲ್ಲಿ ಕಂಡು ಬರುವ ರಕ್ತದಂಥ ದ್ರವ ಇಲ್ಲ. ಆದರೆ ದೇಹಾಂತರಾಳದಲ್ಲಿ ತುಂಬಿರುವ ದ್ರವ ಸ್ನಾಯುಕೋಶಗಳ ಸಂಕೋಚವಿಕಾಸಗಳಿಂದಲೂ, ರೋಮಗಳ ಚಲನೆಯಿಂದಲೂ ದೇಹದ ಎಲ್ಲ ಭಾಗಗಳಿಗೆ ಸಂಚರಿಸುವುದು. ಕಡಲ ಹೂವಿನಂಥ ಕೆಲವು ಪಾಲಿಪ್ ಜಾತಿಗಳ ದೇಹದಲ್ಲಿರುವ ನಾಳಗಳು ದ್ರವದ ಚಲನೆಗೆ ಸಹಕಾರಿಯಾಗಿವೆ. ಮೆಡೂಸಗಳಲ್ಲಿ ದೇಹಾಂತರಾಳ ಕಾಲುವೆಗಳಂತೆ ವಿಭಾಗವಾಗಿದ್ದು, ಇಡೀ ದೇಹದಲ್ಲೆಲ್ಲ ದ್ರವದ ಪರಿಚಲನೆಗೆ ವಿಶಿಷ್ಟ ರೀತಿಯಲ್ಲಿ ಸಹಕಾರಿಯೆನಿಸಿದೆ. **(ನೋಡಿ– ಅಂಬಲಿ ಮೀನು (ಅರಿಲಿಯಾ))**

**ನರವ್ಯೂಹ:** ನಿರ್ದಿಷ್ಟವೂ ಸುಸ್ಪಷ್ಟವೂ ಆದ ನರಗಳಿಲ್ಲದ್ದರಿಂದ ಕುಟುಕುಕಣವಂತಗಳ ನರವ್ಯೂಹ ತೀರ ಕೆಳಮಟ್ಟದ್ದಾಗಿದೆ. ಅಲ್ಲದೆ. ದೇಹದಲ್ಲಿ ಅಲ್ಲಲ್ಲಿ ಕಂಡುಬರುವ ಮೂಲರೂಪದ ನರಗಳಲ್ಲಿ ನರದ ಉದ್ರೇಕ ನಿರ್ದಿಷ್ಟ ಮುಂಬಿನಲ್ಲಿ ಹಾಯುವುದೂ ಇಲ್ಲ. ಅವುಗಳ ಬಹುಧ್ರುವೀ (ಮಲ್ಟಿಪೋಲಾರ್) ನರಕೋಶಗಳು ಅಲ್ಲಲ್ಲಿ ಜಾಲದಂತೆ ಒಟ್ಟುಗೂಡಿರುತ್ತವೆ. ಪಾಲಿಪ್‌ಗಳಲ್ಲಿ ಸಾಮಾನ್ಯವಾಗಿ ಇಂಥ ಒಂದೇ ಒಂದು ಜಾಲವಿರುತ್ತದೆ. ಮೆಡೂಸಗಳಲ್ಲಿ ಇಂಥ ಎರಡು ಜಾಲಗಳಿರುತ್ತವೆ. ಅದರಲ್ಲಿ ಒಂದು ಅದರ ಈಜು ಚಲನೆಗಳಿಗೂ ಇನ್ನೊಂದು ದೇಹದ ಇತರ ಚಲನೆಗಳಿಗೂ ಸಂಬಂಧಿಸಿವೆ. ಮೆಡೂಸಗಳಲ್ಲಿ ಜ್ಞಾನೇಂದ್ರಿಯಗಳುಂಟು. ಇವುಗಳಲ್ಲಿ ಸರಳರೀತಿಯ ನೇತ್ರೇಂದ್ರಿಯ (ಆಸೆಲಸ್) ಮತ್ತು ಸ್ಥಿತಿಜ್ಞಾನೇಂದ್ರಿಯ (ಸ್ಟ್ಯಾಟೊಸಿಸ್ಟ್) ಮುಖ್ಯವಾದವು. ಪದಾರ್ಥಗಳಿಗೆ ಕಚ್ಚಿಕೊಂಡು ಜೀವಿಸುವ ಸ್ಥಾವರ ರೂಪಿಗಳಾದ ಪಾಲಿಪ್‌ಗಳಲ್ಲಿ ಜ್ಞಾನೇಂದ್ರಿಯಗಳಿಲ್ಲ. ಆದರೆ ಅವುಗಳಲ್ಲಿ ನರಕೋಶಗಳ ಜಾಲ ಹೆಚ್ಚು ವ್ಯಾಪಕವಾಗಿರುವುದು ಕಂಡುಬರುತ್ತದೆ. ಅಂಬಲಿಮೀನಿನಂಥ ಕೆಲವು ಮೆಡೂಸಗಳ ಬಾಯಿಯ ಸುತ್ತಣ ಅಂಚಿನಲ್ಲಿ ನರಗಳ ರಚನೆಯಂಥ ಉಂಗುರವುಂಟು. ಯಾವುದಾದರೂ ಪ್ರಚೋದನೆ ಒದಗಿದಾಗ ಉದ್ರೇಕ ಎಲ್ಲ ಮುಖಗಳಿಗೂ ಹರಡುತ್ತದೆ. ಉದ್ರೇಕದ ತೀವ್ರತೆ ಪ್ರಚೋದನೆಯ ತೀವ್ರತೆಯನ್ನೂ ಪುನರಾವರ್ತನೆಯನ್ನೂ ಅವಲಂಬಿಸಿರುತ್ತದೆ. ಒಮ್ಮೆ ದೊರಕಿದ ಪ್ರಚೋದನೆ ಯಾವ ಗಣನೀಯ ಉದ್ರೇಕವನ್ನೂ ಮೂಡಿಸದಿರಬಹುದು. ಆದರೆ ಅದೇ ಪ್ರಚೋದನೆ ಮತ್ತೆಮತ್ತೆ ದೊರೆತಾಗ ಉದ್ರೇಕ ಸಾಗಿ ನರಕೋಶಗಳ ಇಡೀ ಜಾಲಕ್ಕೇ ವ್ಯಾಪಿಸುವುದು.

**ಕುಟುಕುಕಣಗಳು:** ಈ ವಂಶದ ಪ್ರಾಣಿಗಳು ಜೀವನದ ಹೋರಾಟದಲ್ಲಿ ಯಶಸ್ವಿಯಾಗಿ ಉಳಿದುಕೊಂಡು ಬಂದಿರುವುದಕ್ಕೆ ಅವುಗಳಲ್ಲಿರುವ ಕುಟುಕುಕಣಗಳೇ ಮುಖ್ಯಕಾರಣವೆಂದು ಭಾವಿಸುವುದುಂಟು. 5ರಿಂದ 100 ಮೈಕ್ರಾನುಗಳಷ್ಟು ಸೂಕ್ಷ್ಮವಾಗಿರುವ ಈ ಕುಟುಕುಕಣಗಳು ಕೋಶಗಳಲ್ಲಿ ಅಡಗಿವೆ. ಅವು ರಚನೆಯಲ್ಲಿ ತುಂಬ ವೈವಿಧ್ಯವನ್ನು ಪ್ರದರ್ಶಿಸುತ್ತವೆ. ಸುಮಾರು ಇಪ್ಪತ್ತು ವಿಧದ ಕುಟುಕು ಕಣಗಳನ್ನು ಗುರುತಿಸಬಹುದು. ನೀಡೋಬ್ಲಾಸ್ಟ್ ಎಂಬ ವಿಶಿಷ್ಟ ಕಣಗಳು ಕುಟುಕು ಕಣಗಳಾಗಿ ಮಾರ್ಪಟ್ಟಿರುತ್ತವೆ. ಪ್ರತಿಯೊಂದು ಕುಟುಕುಕಣವೂ ಒಂದೊಂದು ಕೋಶದಲ್ಲಿ ಹುದುಗಿರುವುದರಿಂದ ಅದಕ್ಕೆ ಎರಡು ಆವರಣಗಳಿರುತ್ತವೆ. ಹೊರಕೋಶದೊಳಗೆ ಅಡಗಿರುವ ಟೊಳ್ಳುಕೋಶದ ತುದಿ ಆವರಣಗಳಿರುತ್ತವೆ ಹೊರಕೋಶದೊಳಗೆ ಅಡಗಿರುವ ಟೊಳ್ಳುಕೋಶದ ತುದಿ ಚುಚ್ಚುಮೊನೆಯುಳ್ಳ ದೀರ್ಘನಾಳವಾಗಿ ವರ್ಧಿಸಿರುತ್ತದೆ. ಆ ನಾಳದ ಆರಂಭದಲ್ಲಿ ಒಳಮುಖವಾಗಿ ಚಾಚಿಕೊಂಡಿರುವ ಮುಳ್ಳುಗಳಿರುತ್ತವೆ. ಸಾಧಾರಣಸ್ಥಿತಿಯಲ್ಲಿ ಆ ನಾಳ ಸುರುಳಿಸುತ್ತಿಕೊಂಡು ಕೋಶದೊಳಗೆ ಅಡಗಿರುತ್ತದೆ. ಅದರ ಮೇಲೆ ಒಂದು ಮುಚ್ಚಳ ಮುಚ್ಚಿರುತ್ತದೆ. ನಾಳದ ಆದಿಯಲ್ಲಿ ಮುಳ್ಳಿರುವುದರಿಂದ ಕುಟುಕುಕಣವಂತಗಳ ಮೈ ಮುಟ್ಟಲು ತುರುಚಾಗಿರುತ್ತದೆ.

ಯಾವುದಾದರೂ ಅನ್ಯವಸ್ತು (ಪ್ರಾಣಿ) ಸೋಂಕಿತೆಂದರೆ ಕುಟುಕುಕಣದ ಮೇಲಿನ ಮುಚ್ಚಳ ಮೇಲ್ಮುಖವಾಗಿ ಹಾರಿ ಅದು ಆಸ್ಫೋಟಿಸುತ್ತದೆ. ತತ್‌ಕ್ಷಣದ ಕೋಶದೊಳಗೆ




**ಹೃದ್ರದ ಸಿಮ್ಯೂಟೀಸಿಸ್ಟ್ : ಒಳಗಿರುವ ಸಿಮ್ಯೂಟೀಸಿಸ್ಟ್ ಹೊರಬಂದಿರುವ ಸಿಮ್ಯೂಟೀಸಿಸ್ಟ್**

ಅಡಗಿರುವ ನಾಳ ಸ್ಪ್ರಿಂಗಿನಂತೆ ಹೊರಚಾಚುತ್ತದೆ. ಅದರ ತಳದಲ್ಲಿರುವ ಮುಳ್ಳುಗಳು ವಿರುದ್ಧ ದಿಕ್ಕಿಗೆ ತಿರುಗಿ ಪ್ರಾಣಿಯ ದೇಹವನ್ನು ಚುಚ್ಚಿ ನಾಳದ ತುದಿ ಒಳ ನುಗ್ಗಲು ಸಹಾಯಮಾಡುತ್ತದೆ. ಕುಟುಕುಕಣದೊಳಗೆ ಸ್ರವಿಸುವ ವಿಷದ್ರವ ನಾಳದ ಮೂಲಕ

ಧಾರೆಯಂತೆ ಪ್ರಾಣಿಯ ದೇಹಕ್ಕೆ ನುಗ್ಗುತ್ತದೆ. ಆಗ, ನಿಸ್ತೇಜವಾಗುವ ದೇಹವನ್ನು ಅದು ನುಂಗಿಕೊಳ್ಳುತ್ತದೆ. ಕುಟುಕುಕಣ ಆಸ್ಫೋಟಿಸಲು ಅಗತ್ಯವಾಗಿರುವ ಶಕ್ತಿಯ ಸ್ವರೂಪ ಇನ್ನೂ ಸ್ಪಷ್ಟವಾಗಿ ಅರಿವಾಗಿಲ್ಲ. ಅದು ಸ್ಫೋಟಿಸುವಾಗ ಕೋಶದೊಳಗೆ ತುಂಬಿರುವ ನೀರು ಮೇಲೇರಿ ಕೋಶ ಸಂಕುಚಿಸುವುದು. ಕುಟುಕು ಕಣಗಳು ಯಾವ ನರದ ನಿಯಂತ್ರಣದಲ್ಲೂ ಕೆಲಸಮಾಡುವಂತೆ ತೋರುವುದಿಲ್ಲ. ತಟಸ್ಥ ರಸಾಯನ ವಸ್ತುಗಳ ಸಂಪರ್ಕದಿಂದ ಅವು ಸ್ಫೋಟಿಸುವುದಿಲ್ಲ. ಆದರೆ ಸ್ವಾಭಾವಿಕ ಸನ್ನಿವೇಶದಲ್ಲಿ ಆಸ್ಫೋಟಿಸಬೇಕಾದರೆ ಪ್ರಾಣಿಗಳ ಸ್ಪರ್ಶದಂಥ ಯಾವುದಾದರೂ ಬಾಹ್ಯ ಸಂಪರ್ಕ ಅಗತ್ಯವೆನಿಸುತ್ತದೆ.

ಕುಟುಕುಕಣಗಳು ವಿವಿಧ ರೀತಿಯಲ್ಲಿ ಉಪಯುಕ್ತವೆನಿಸುತ್ತವೆ. ಸಣ್ಣಪುಟ್ಟ ಪ್ರಾಣಿಗಳನ್ನು ಕೊಂದು ನುಂಗಲು ಇವು ಸಹಾಯ ಮಾಡುತ್ತವೆ. ಕೆಲವು ಪ್ರಾಣಿಗಳ ಕುಟುಕುಕಣಗಳಲ್ಲಿ ಮುಳ್ಳುಗಳಿಲ್ಲ. ಇವು ಆಹಾರ ವಸ್ತುಗಳನ್ನು ಸುಮ್ಮನೆ ಅಂಟಿಸಿಕೊಂಡು ಜೀರುಗುಣಿಕೆಯಂತೆ ಹಿಡಿದುಕೊಳ್ಳುತ್ತವೆ. ಸೆರೆಹಿಡಿಯುವುದರ ಆಹಾರವನ್ನು ಹಿಡಿಯಲು ನೆರವಾಗುತ್ತವೆ. ಅಲ್ಲದೆ ಅವು ಕುಟುಕುಕಣವಂತಗಳ ಆತ್ಮರಕ್ಷಣೆಗೂ, ಪದಾರ್ಥಗಳಿಗೆ ಕಚ್ಚಿಕೊಂಡು ಸ್ಥಾವರಸ್ಥಿತಿಯಲ್ಲಿ ಇರುವುದಕ್ಕೂ ಸಹಾಯಮಾಡುತ್ತವೆ. ಒಮ್ಮೆ ಆಸ್ಫೋಟಿಸಿದ ಕುಟುಕುಕಣ ತನ್ನ ಸ್ವಾಭಾವಿಕಸ್ಥಾನದಿಂದ ಹೊರಬೀಳುತ್ತವೆ. ಅನಂತರ ಅದರ ಸ್ಥಾನವನ್ನು ಮತ್ತೊಂದು ನೀಡೊಬ್ಲಾಸ್ಟ್ ಕೋಶ ಆಕ್ರಮಿಸಿ ನೂತನವಾಗಿ ಕುಟುಕುಕಣವನ್ನು ಉತ್ಪಾದಿಸುತ್ತವೆ.

ಆಹಾರವಸ್ತು ಜಠರಾಕೋಶವನ್ನು ಪ್ರವೇಶಿಸಿದ ಮೇಲೂ ಅಗತ್ಯವೆನಿಸಿದರೆ ಅದರ ಒಳಪೊರೆಯಲ್ಲಿರುವ ಕುಟುಕುಕಣಗಳು ಆಹಾರವನ್ನು ಮತ್ತೆ ಮತ್ತೆ ಚುಚ್ಚಿ ನಿಸ್ತೇಜ ಮಾಡಿ ಜೀರ್ಣಕಾರ್ಯಕ್ಕೆ ಅಣಿಗೊಳಿಸುತ್ತವೆ.

ಕುಟುಕುಕಣಗಳು ಸ್ರವಿಸುವ ವಿಷದ್ರವದ ರಾಸಾಯನಿಕ ಸ್ವರೂಪದ ಬಗ್ಗೆ ನಿರ್ದಿಷ್ಟ ಅಂಶಗಳು ಇನ್ನೂ ತಿಳಿದುಬಂದಿಲ್ಲ. ಅದರೂ ಕೆಲವು ಪ್ರಾಣಿಗಳಲ್ಲಿ ಈ ವಿಷ ವಸ್ತು ತೀವ್ರಸ್ವರೂಪದ್ದಾಗಿರುವುದೆಂದು ದೃಢಪಟ್ಟಿದೆ. ಫೈಸೇಲಿಯದಂಥ ದೊಡ್ಡ ಕುಟುಕುಕಣವಂತಗಳ ವಿಷದ್ರವ ಮಾನವನಿಗೆ ತೀವ್ರತರವಾದ ಯಾತನೆಯನ್ನುಂಟುಮಾಡಬಲ್ಲದು. ಚುಚ್ಚುವಿಕೆಗೆ ಒಳಗಾದ ಅಂಗ ತಾತ್ಕಾಲಿಕ ನಿಷ್ಕ್ರಿಯೆಗೆ ಒಳಗಾಗಬಹುದು. ಅಪರೂಪಕ್ಕೆ ಸಾವೂ ಸಂಭವಿಸಬಹುದು.

**ವಂಶಾಭಿವೃದ್ಧಿ:** ಎಲ್ಲ ಕುಟುಕುಕಣವಂತಗಳಲ್ಲೂ ಲಿಂಗರೀತಿಯ ವಂಶಾಭಿವೃದ್ಧಿ ಜೀವನದ ಒಂದು ಅಂತಸ್ತಿನಲ್ಲಿ ನಡೆಯುತ್ತದೆ. ಬಹುಸಂಖ್ಯಾತ ಪ್ರಾಣಿಗಳಲ್ಲಿ ಲಿಂಗ ಪ್ರತ್ಯೇಕವಾಗಿದ್ದರೂ ಅಪರೂಪವಾಗಿಯಾದರೂ ಉಭಯಲಿಂಗಿಗಳು ಇರುವುದುಂಟು. ತತ್ತಿ ಮತ್ತು ಶುಕ್ಲಾಣುಗಳನ್ನು ತಾಯಿ ಅಥವಾ ತಂದೆ ಪ್ರಾಣಿ ಬಾಯಿಯ ಮೂಲಕ ಹೊರದೂಡುವುದು. ದೇಹದಿಂದ ಹೊರಗೆ ತತ್ತಿ ಶುಕ್ಲಾಣುವಿನೊಡನೆ ಸಂಯೋಗವಾಗಿ ಗರ್ಭಧರಿಸುವುದು. ಗರ್ಭಧರಿಸಿದ ತತ್ತಿ ವಿಭಾಗವಾಗಿ ಉದ್ಭವಿಸುವ ಬ್ಲಾಸ್ಟುಲ ಅಷ್ಟಾಗಿ ಟೊಳ್ಳಾಗಿರದೆ ತುಂಬಿಕೊಂಡಂತಿರುತ್ತದೆ. ಬ್ಲಾಸ್ಟುಲದಿಂದ ಗ್ಯಾಸ್ಟ್ರುಲ ಅವಸ್ಥೆ ಬೆಳೆಯುವ ವಿಧಾನ ಬೇರೆಬೇರೆ ಪ್ರಾಣಿಗಳಲ್ಲಿ ಬೇರೆಬೇರೆಯಾಗಿರುತ್ತದೆ. ಗ್ಯಾಸ್ಟ್ರುಲ ಕೊನೆಗೆ ಪ್ಲಾನುಲ ಎಂಬ ಡಿಂಬಾವಸ್ಥೆಯ ರೂಪವನ್ನು ತಳೆಯುತ್ತದೆ. ಅದರ ಮೈತುಂಬ ರೋಮಗಳಿದ್ದು ನೀರಿನಲ್ಲಿ ಅದು ಈಜುತ್ತಿರುತ್ತದೆ. ಪಾಲಿಪ್‌ನ ಅವಸ್ಥೆಯಿರುವ ಪ್ರಾಣಿಗಳಲ್ಲಿ ಈ ಡಿಂಬ ಸ್ವಲ್ಪಕಾಲದ ಅನಂತರ ತನ್ನ ಮುಂಭಾಗದ ತುದಿಯಿಂದ ಪದಾರ್ಥಕ್ಕೆ ಕಚ್ಚಿಕೊಳ್ಳುತ್ತದೆ. ಕಚ್ಚಿಕೊಂಡಿರುವ ಆ ಭಾಗ ಪಾಲಿಪ್ಪ್‌ನ ತಾಳಾಗುತ್ತದೆ. ಅದರ ಇನ್ನೊಂದು ತುದಿಯಲ್ಲಿ ಬಾಯಿಯೂ ಅದರ ಸುತ್ತ ಸ್ಪರ್ಶ ತಂತುಗಳೂ ಹುಟ್ಟುತ್ತವೆ. ಈ ಅವಸ್ಥೆಯನ್ನು ಆಕ್ಟಿನ್ಯೂಲ ಎನ್ನುವರು. ಸ್ವಲ್ಪ ಹೆಚ್ಚು ಕಡಿಮೆ ಇದು ಪಾಲಿಪ್ ರೂಪದಂತೆಯೇ ಇರುತ್ತದೆ. ಇದರ ಹಿಂದಿನ ತುದಿಯಲ್ಲಿ ಮೆನ್ಯೂಬ್ರಿಯಂ ಕೊಳವೆಯೂ ಆ ಕೊಳವೆಯ ತುದಿಯಲ್ಲಿ ಬಾಯಿಯೂ ಮೂಡುತ್ತವೆ. ಬಾಯಿಯ ಅಪಮುಖದ ಮಧ್ಯಭಾಗ ಮೆಡೂಸದ ಗಂಟೆಯಾಗಿ ರೂಪುಗೊಳ್ಳುತ್ತದೆ.

**ಕೂಡುಜೀವನ ಮತ್ತು ಬಹುರೂಪತೆ:** ಮೆಡೂಸಗಳು ಕೂಡುಜೀವನವನ್ನು ನಡೆಸುವುದು ಕಂಡುಬಂದಿಲ್ಲವಾದರೂ ಈ ವಂಶಗಳ ಎಲ್ಲ ಜೀವಿಗಳ ಪಾಲಿಪ್‌ನಲ್ಲೂ ಕೂಡುಜೀವನ (ಕಲೋನಿಯಲ್ ಲೈಫ್) ಪ್ರಧಾನವಾಗಿ ಕಂಡುಬರುತ್ತದೆ. ಅಲಿಂಗ ರೀತಿಯ ವಂಶಾಭಿವೃದ್ಧಿಯಿಂದ ಪಾಲಿಪ್ ಕವಲೊಡೆದು ಸಮುದಾಯ ಜೀವನವನ್ನು ರಚಿಸಿಕೊಳ್ಳುತ್ತದೆ. ದೇಹಾಂತರಾಳದ ಜಠರಾವಕಾಶ ಎಲ್ಲ ಪಾಲಿಪ್‌ಗಳಿಗೂ ಸಾಗಿ ಬಂದಿರುತ್ತದೆ. ಒಂದು ಪಾಲಿಪ್ ಗಳಿಸಿದ ಆಹಾರ ಆ ಮೂಲಕ ಎಲ್ಲ ಪಾಲಿಪ್‌ಗಳಿಗೂ ಬೇರೆಬೇರೆ ಕ್ರಿಯೆಗಳನ್ನು ನಿರ್ವಹಿಸಲು ಅನುಕೂಲಿಸುವಂಥ ದೇಹರಚನಾ ವೈಶಿಷ್ಟ್ಯವನ್ನು ತಳೆದಿರುತ್ತವೆ. ಹೈಡ್ರೊಜೋವನ್ ಪಾಲಿಪ್‌ಗಳ ಸಮುದಾಯದಲ್ಲಿ ಕೆಲವು ಪಾಲಿಪ್‌ಗಳು ರಕ್ಷಣಾಕಾರ್ಯವನ್ನೂ ಇನ್ನು ಕೆಲವು ಆಹಾರಾನ್ವೇಷಣೆಯನ್ನೂ ಮತ್ತೆ ಕೆಲವು ಸಂತಾನೋತ್ಪತ್ತಿಯನ್ನೂ ನಿರ್ವಹಿಸುತ್ತವೆ. ಕೆಲವು ಹೈಡ್ರೋಝೋವನ್ ಸಮುದಾಯದಲ್ಲಿ ಗೋಚರಿಸುವ ಮೆಡೂಸಗಳು ಸಂಘದ ಪಾಲನೆಗೆ ನೆರವಾಗುತ್ತವೆ. ಹೀಗೆ ಒಂದು ಪ್ರಭೇದದಲ್ಲಿ ಹಲವು ವಿಧದ ಜೀವಿಗಳಿದ್ದು ಜೀವಿಸುವುದನ್ನು ಬಹುರೂಪತೆ (ಪಾಲಿಮಾರ್ಫಿಸಂ) ಎನ್ನುವರು.

**ಇತರ ಜೀವಿಗಳೊಡನೆ ಸಹಜೀವನ ಮತ್ತು ಪರಾವಲಂಬನೆ:** ಕುಟುಕುಕಣವಂತಗಳು ಮಾಂಸಾಹಾರಿಗಳಾದರೂ ಇತರ ಪ್ರಾಣಿಗಳೊಡನೆ ಹೊಂದಿಕೊಂಡು ಸಹಜೀವನ ನಡೆಸುತ್ತವೆ. ಫೈಸೇಲಿಯವೂ ಅಂಬಲಿಮೀನುಗಳೂ ಸಣ್ಣ ಮೀನುಗಳೊಡನೆ ಸಂಬಂಧ ಹೊಂದಿರುತ್ತವೆ. ಆ ಮೀನುಗಳು ಮೇಲಿನ ಕುಟುಕುಕಣವಂತಗಳ ಸ್ಪರ್ಶ ತಂತುಗಳಲ್ಲಿ ಅಡಗಿ ಆಶ್ರಯಪಡೆದಿರುತ್ತವೆ. ಅದಕ್ಕೆ ಪ್ರತಿಯಾಗಿ ಆಶ್ರಯದಾತಕ್ಕೆ ಒದಗಬಹುದಾದ ಶತ್ರುಭೀತಿಯ ಬಗ್ಗೆ ಸಕಾಲದಲ್ಲಿ ಎಚ್ಚರಿಕೆ ನೀಡುತ್ತವೆ. ಸ್ಪರ್ಶ ತಂತುವಿನಲ್ಲಿ ಮೀನುಗಳು ಆಶ್ರಯ ಪಡೆದಿದ್ದರೂ ಅಲ್ಲಿರುವ ಕುಟುಕುಕಣಗಳು ಆಸ್ಫೋಟಿಸುವುದಿಲ್ಲ. ಎಂದರೆ ಅವುಗಳ ಇರವಿಗೆ ಆಶ್ರಯದಾತ ಒಗ್ಗಿಕೊಂಡಿರುತ್ತದೆ. ಹೀಗೆ ಎರಡು ಜೀವಿಗಳು ಒಂದಕ್ಕೊಂದಕ್ಕೆ ಸಹಾಯವಾಗಿದ್ದುಕೊಂಡು ನಡೆಸುವ ಜೀವನವನ್ನು ಸಹಜೀವನ (ಸಿಂಬಿಯೋಸಿಸ್) ಎಂದು ಕರೆಯುವರು. ಹೀಗೆಯೇ, ಕೆಲವು ಕಡಲ ಹೂಗಳು ಸಂನ್ಯಾಸಿ ಏಡಿ ಧರಿಸಿರುವ ರಕ್ಷಣೆಯ ಚಿಪ್ಪಿನ ಮೇಲೆ ಆಶ್ರಯ ಪಡೆದಿರುತ್ತದೆ. ಏಡಿ ಹೋದ ಕಡೆಗೆ ಅವೂ ಸಾಗುತ್ತಿರುತ್ತವೆ. ಇನ್ನು ಕೆಲವು ಸ್ಪಂಜುಗಳ ಬುಡದಲ್ಲೊ ಕಡಲಬೀಸಣಿಗೆಗಳ (ಸೀ ಫ್ಯಾನ್) ಮೇಲೊ ವಾಸಿಸುತ್ತವೆ. ಕೆಲವು ಹೈಡ್ರಾಯಿಡ್ ಪ್ರಾಣಿಗಳು ಮೀನು, ಹುಳು, ಚಿಪ್ಪುಮೀನು ಮುಂತಾದ ಪ್ರಾಣಿಗಳೊಡನೆ ಸಹಜೀವನ ನಡೆಸುತ್ತವೆ. ಅವು ಆಶ್ರಯದಾತಕ್ಕೆ ಯಾವ ತೊಂದರೆಯನ್ನೂ ಕೊಡದೆ ಅದರೊಡನೆ ಹೊಂದಿಕೊಂಡು ಜೀವಿಸುತ್ತವೆ. ಆಶ್ರಯದಾತ ಸಂಗ್ರಹಿಸುವ ಆಹಾರದ ಸೇವನೆಯಲ್ಲಿ ತಾವೂ ಭಾಗಿಯಾಗುತ್ತವೆ. ಇಂಥ ಸಂಬಂಧವನ್ನು ಸಹಭೋಜನ ಜೀವನ (ಕಮೆನ್ಸಾಲ್) ಎನ್ನುವರು.

ಕೆಲವು ಕುಟುಕುಕಣವಂತಗಳು ಪರಾವಲಂಬಿಗಳು. ಹೈಡ್ರಿಕ್ಟಿಸ್ ಎಂಬ ಪ್ರಾಣಿ ಕೆಲವು ಮತ್ಸ್ಯಪ್ರಭೇದಗಳಲ್ಲೂ ಪಾಲಿಪೋಡಿಯಂ ಎಂಬುದು ಸ್ಟರ್ಜನ್ ಎಂಬ ದೊಡ್ಡ ಮೀನಿನ ತತ್ತಿಯಲ್ಲೂ ಆಶ್ರಯ ಪಡೆದು ಪರಾವಲಂಬಿ ಜೀವನ ನಡೆಸುತ್ತವೆ.

ಕೆಲವು ಹೈಡ್ರಗಳಲ್ಲಿ ಶೈವಲಗಳು ಇರುವುದನ್ನು ಆಗಲೆ ಉಲ್ಲೇಖಿಸಿದೆ. ಹೈಡ್ರ ಶೈವಾಲದ ದ್ಯುತಿಸಂಶ್ಲೇಷಣಕ್ರಿಯೆಯಿಂದ; ಬಿಡುಗಡೆಯಾಗುವ ಆಮ್ಲಜನಕವನ್ನು ಬಳಸಿಕೊಳ್ಳುತ್ತದೆ.

**ವಿಕಾಸಕ್ರಮದಲ್ಲಿ ಕುಟುಕುಕಣವಂತಗಳ ಸ್ಥಾನ:** ಪ್ರಾಣಿಪ್ರಪಂಚದ ವಿಕಾಸದ ನಿಚ್ಚಣಿಕೆಯಲ್ಲಿ ಕುಟುಕು ಕಣವಂತಗಳ ಸ್ಥಾನವನ್ನು ಇನ್ನೂ ನಿರ್ದಿಷ್ಟವಾಗಿ ನಿರ್ಧರಿಸಿಲ್ಲ, ಕೂಡುಏಕಾಣುಜೀವಿಗಳಿಂದ (ಕಲೋನಿಯಲ್ ಪ್ರೊಟೊಝೋವ) ಈ ವಂಶದ ಪ್ರಾಣಿಗಳು ಉದಿಸಿವೆಯೆಂದು ಕೆಲವರು ಸೂಚಿಸುವರು. ಇನ್ನು ಕೆಲವರು ಇವು ಚಪ್ಪಟೆಹುಳುಗಳಂಥ (ಫ್ಲಾಟ್‌ವರ್ಮ್) ಆದಿಪೂರ್ವಜರಿಂದ ವಿಕಾಸವಾಗಿದೆಯೆಂದು ವಾದಿಸುವರು. ಇವೆರಡೂ ಸಾಧುವಾಗಿ ತೋರುವುದಿಲ್ಲ. ಇವು ಏಕಾಣುಜೀವಿಗಳಿಂದ ಉದಿಸಿದುವೆಂದು ನಂಬುವುದಾದರೆ ಇವು ಬಹುಕೋಶ ಜೀವಿಗಳ ವಿಕಾಸದ ನಿಚ್ಚಣಿಕೆಯಲ್ಲಿ ಮೊದಲಮೆಟ್ಟಿಲಲ್ಲಿ ತಮ್ಮ ಸ್ಥಾನವನ್ನು ಪಡೆಯುತ್ತವೆ. ಈ ಪ್ರಾಣಿಗಳ ದೇಹದಲ್ಲಿ ಕೇವಲ ಎರಡು ವರಿಸೆ ಜೀವ ಕಣಗಳು ಮಾತ್ರ ಇವೆ. ಅವುಗಳ ಹೊರ ಮತ್ತು ಒಳಚರ್ಮದ ವರಿಸೆಗಳಿಗೆ ರಚನೆ ಮತ್ತು ಕ್ರಿಯೆಯ ದೃಷ್ಟಿಯಲ್ಲಿ ಹೋಲಿಸಬಹುದು. ಎಂದರೆ, ಈ ವಂಶದ ಪ್ರಾಣಿಗಳು ಮೇಲ್ವರ್ಗದ ಪ್ರಾಣಿಗಳ ಬೆಳವಣಿಗೆಯಲ್ಲಿ ಕಂಡುಬರುವ ಗ್ಯಾಸ್ಟ್ರುಲ ಅವಸ್ಥೆಗೆ ರಚನಾದಿ ವೈಶಿಷ್ಟ್ಯಗಳ ಸಮವೆನಿಸುತ್ತವೆ. ಚಪ್ಪಟೆಹುಳುಗಳಂಥ ಪೂರ್ವಜರಿಂದ ಉದಯವಾದವೆಂದು ಪರಿಗಣಿಸುವವರು ಆಂಥೊಝೋವದಲ್ಲಿ ಕಂಡುಬರುವ ದ್ವಿಪಾರ್ಶ್ವ ಸಮ್ಮಿತಿಯನ್ನು ಆಧಾರ ಮಾಡಿಕೊಂಡಿರುವರು. ಕಾಲಕ್ರಮದಲ್ಲಿ ಕಂಡುಬರುವ ದ್ವಿಪಾರ್ಶ್ವ ಸಮ್ಮಿತಿ ಒಂದೇ ಸ್ಥಳದಲ್ಲಿ ಸ್ಥಾವರವಾಗುಳಿದುದರ ಪರಿಣಾಮವಾಗಿ ಕೆಲವು ವರ್ಗಗಳ ಕುಟುಕುಕಣವಂತಗಳ ದೇಹ ತ್ರಿಜ್ಯ ಸೌಷ್ಠವವನ್ನು ಪಡೆಯಿತೆಂದು ವಾದಿಸಿರುವರು. ಅವರು ತಮ್ಮ ವಾದವನ್ನು ಮುಂದುವರಿಸುತ್ತ ಕುಟುಕುಕಣಗಳನ್ನು ಚಪ್ಪಟೆ ಹುಳುಗಳಲ್ಲಿ ಕಂಡುಬರುವ ರಾಬ್ಡೈಟ್‌ಕೋಶಗಳಿಗೆ ಹೋಲಿಸುವರು. ಮೇಲಿನ ಎರಡು ವಾದಗಳಲ್ಲಿ ಯಾವುದಕ್ಕೂ ಭ್ರೂಣಶಾಸ್ತ್ರದ ಆಧಾರಗಳು ದೊರೆತಿಲ್ಲ. ಕೆಲವು ಕುಟುಕುಕಣವಂತಗಳಲ್ಲಿ ಕಂಡು ಬರುವ ಮಧ್ಯದ ಜೀವಕಣಗಳ ವರಿಸೆಯೆನ್ನಬಹುದಾದ ಮೀಸೋಗ್ಲಿಯ ಚಪ್ಪಟೆ ಹುಳುಗಳಲ್ಲಿ ಕಂಡುಬರುವಂತೆ ಹೊರವರಿಸೆ ಜೀವಕಣಗಳಿಂದ ಉದ್ಭವವಾಗುತ್ತದೆ. ಅಲ್ಲದೆ, ಬಹುರೂಪತೆಯನ್ನು ಪ್ರದರ್ಶಿಸುವ ಈ ಪ್ರಾಣಿವಂಶದ ಆದಿಸ್ವರೂಪ ಪಾಲಿಪ್, ಮೆಡೂಸ, ಪ್ಲಾನುಲ–ಇವು ಮೂರರಲ್ಲಿ ಯಾವುದೆಂಬುದು ಇನ್ನೂ ನಿರ್ಧಾರವಾಗಿಲ್ಲ, ಆದ್ದರಿಂದ ಕುಟುಕುಕಣವಂತಗಳ ಸ್ಥಾನ ಅನಿರ್ದಿಷ್ಟವಾಗಿಯೇ ಉಳಿದಂತಾಗಿದೆ.

**ವರ್ಗೀಕರಣ:** ಕುಟುಕುಕಣವಂತಗಳನ್ನು ಹೈಡ್ರೊಝೋವ, ಸ್ಕೈಫೊಝೋವ ಮತ್ತು ಆಂಥೊಝೋವ ಎಂಬ ಮೂರುವರ್ಗಗಳಾಗಿ ವಿಂಗಡಿಸಿರುವರು. ಇವುಗಳಲ್ಲಿ ಮೊದಲವರ್ಗದ ಪ್ರಾಣಿಗಳು ಅತ್ಯಂತ ಸರಳರೀತಿಯ ದೇಹರಚನೆಯನ್ನೂ ಕೊನೆಯ ವರ್ಗದವು ಸಂಕೀರ್ಣರೀತಿಯ ದೇಹರಚನೆಯನ್ನೂ ಹೊಂದಿರುತ್ತವೆ. ಅಲ್ಲದೆ ಅವುಗಳ

ಜಠರಾವಕಾಶ ವ್ಯಕ್ತಪಡಿಸುವ ರಚನೆಯನ್ನೂ ಆಧಾರಮಾಡಿಕೊಂಡು ಮೇಲಿನ ವರ್ಗೀಕರಣವನ್ನು ಮಾಡಿದೆ.

*1 ಹೈಡ್ರೊಜ಼ೋವ:* ಸಾಗರದ ಹೈಡ್ರಾಯಿಡ್‌ಗಳು, ಹೈಡ್ರೊಮೆಡೂಸಗಳು (ಹೈಡ್ರೊಜ಼ೋವನ್ ಅಂಬಲಿಮೀನು), ಸಿಹಿನೀರಿನ ಹೈಡ್ರಾಯಿಡ್‌ಗಳನ್ನು ಫೈಸೇಲಿಯ ಇತ್ಯಾದಿ ಪ್ರಾಣಿಗಳು ಈ ವರ್ಗಕ್ಕೆ ಸೇರಿವೆ. ಇವುಗಳ ಜಠರಾವಕಾಶ ಸರಳವಾಗಿದ್ದು ಅದರ ಟೊಳ್ಳುಭಾಗ ಸ್ಪರ್ಶ ತಂತುಗಳಿಗೂ ಹಾದು ಹೋಗಿರುತ್ತದೆ; ಜಠರಾವಕಾಶ ನಾಲ್ಕು ಅಥವಾ ಹೆಚ್ಚು ನಾಳಗಳಾಗಿ ಕವಲೊಡೆದಿರುತ್ತದೆ. ಈ ನಾಳಗಳು ಜಠರದ ಕೇಂದ್ರದಿಂದ ತ್ರಿಜ್ಯಮುಖವಾಗಿ ಹಾದು ಹೋಗುತ್ತವೆ; ಸಾಮಾನ್ಯವಾಗಿ ಗಂಟೆಯಂಥ ಅವುಗಳ ದೇಹದ ಅಂಚಿನಲ್ಲಿ ಸುತ್ತಲೂ ಉಂಗುರದಂತೆ ಹಾದಿರುವ ನಾಳವಿದ್ದು ಎಲ್ಲ ತ್ರಿಜ್ಯನಾಳಗಳನ್ನೂ ಅದು ಕೂಡಿಸಿಕೊಂಡಿರುತ್ತದೆ. ಹೈಡ್ರಾಯಿಡ್ ರೂಪವೇ ಕೆಲವು ಪ್ರಾಣಿಗಳ ಪ್ರೌಢಾವಸ್ಥೆಯೆನಿಸುತ್ತದೆ. ಇನ್ನುಳಿದ ಪ್ರಾಣಿಗಳಲ್ಲಿ ಹೈಡ್ರಾಯಿಡ್ ರೂಪ ಅವುಗಳ ಕಿಶೋರಾವಸ್ಥೆ ಮಾತ್ರವಾಗಿರುತ್ತದೆ. ಅದು ಅಲಿಂಗ ರೀತಿಯಲ್ಲಿ ಅಂಬಲಿಮೀನುಗಳನ್ನು ಉತ್ಪತ್ತಿಮಾಡಿ ವಂಶಾಭಿವೃದ್ಧಿ ಮಾಡುತ್ತದೆ. ಸಾಗರದಲ್ಲಿ ವಾಸಿಸುವ ಅನೇಕ ಹೈಡ್ರೊಜ಼ೋವಗಳು ಬಹುರೂಪಿ ಜೀವಿಗಳಾಗಿರುತ್ತವೆ.



ಒಬೀಲಿಯ

*2 ಸ್ಕೈಫೊಜ಼ೋವ:* ಇವೆಲ್ಲ ಆಳವಿಲ್ಲದ ಸಮುದ್ರದಲ್ಲಿ ವಾಸಿಸುವ ದೊಡ್ಡ ಅಂಬಲಿಮೀನುಗಳು, ಒಂದು ಜಾತಿಮಾತ್ರ ಆಳವಾದ ಸಾಗರದಲ್ಲೂ ವಾಸಿಸುತ್ತದೆ. ಆದರೆ ಸಿಹಿನೀರಿನಲ್ಲಿ ಜೀವಿಸುವ ಪ್ರಾಣಿಗಳಾವುವೂ ಇದರಲ್ಲಿ ಸೇರಿಲ್ಲ. ಜಠರಾವಕಾಶ ದೇಹದ ಗೋಡೆಗಳಿಂದ ನಾಲ್ಕು ಭಾಗವಾಗಿ ವಿಭಾಗವಾಗಿದೆ. ಈ ಗೋಡೆಗಳ ಪಕ್ಕದ ಚಾಚುಭಾಗಗಳಲ್ಲಿ ಅಲ್ಲಲ್ಲಿ ಸ್ಪರ್ಶತಂತುಗಳ ಗುಂಪುಗಳಿರುತ್ತವೆ. ಜಠರ ಕೋಶದಲ್ಲಿ ಕುಟುಕುಕಣಗಳಿವೆ. ಈ ಪ್ರಾಣಿಗಳ ಅಂಬಲಿಮೀನುಗಳ ಕೊಡೆಯ ಅಂಚಿನಲ್ಲಿ ಎಂಟು ಅಥವಾ ಹೆಚ್ಚು ರೋಪೇಲಿಯ ಎಂಬ ಸಂವೇದ ನಾಂಗಗಳಿವೆ (ಜ್ಞಾನೇಂದ್ರಿಯ). ಬಾಯಿಯನ್ನು ಹೊತ್ತಿರುವಂತೆ ವೀಲಂ ಕೊಳವೆಯಿರುವುದಿಲ್ಲ. ಜಠರದ ಮಧ್ಯದಿಂದ ತ್ರಿಜ್ಯನಾಳಗಳು ಕೊಡೆಯಾಕೃತಿಯ ದೇಹದ ಅಂಚಿಗೆ ಸಾಗಿ ಅಂಚಿನ ಸುತ್ತ ಹಾದಿರುವ ಉಂಗುರದ ನಾಳಕ್ಕೆ ಸೇರುತ್ತವೆ. ತ್ರಿಜ್ಯನಾಳಗಳು ಬೇಕಾದ ಹಾಗೆ ಕವಲೊಡೆದಿದ್ದು ಒಂದಕ್ಕೊಂದಕ್ಕೆ ಸಂಬಂಧಿಸಿ ಕೊಂಡಿರುತ್ತವೆ. ಈ ವರ್ಗದ ಎಲ್ಲ ಪ್ರಾಣಿಗಳೂ ನೀರಿನಲ್ಲಿ ಈಜಿಕೊಂಡು ಹೋಗಬಲ್ಲವು. ಸ್ಟಾರೊಮೆಡೂಸವೆಂಬ ಒಂದು ಪ್ರಾಣಿ ಮಾತ್ರ ಪಾಲಿಪ್‌ಗಳಂತೆ ಪದಾರ್ಥಗಳಿಗೆ ಅಂಟಿಕೊಂಡು ಸ್ಥಾವರ ಜೀವನವನ್ನು ನಡೆಸುತ್ತದೆ. ಜೀವನಚರಿತ್ರೆಯಲ್ಲಿ ಪಾಲಿಪ್ ಕಿಶೋರಾವಸ್ಥೆಯಾಗಿದ್ದು (ಸ್ಕೈಫೊಸ್ಟೋಮ) ಅದರಿಂದ ಪ್ರೌಢಜೀವಿಗಳು ಮೊಗ್ಗೊಡೆದು ಬರುತ್ತವೆ.



ಫೈಸೇಲಿಯೆ

*3 ಆಂಥೊಜ಼ೋವ:* ಕಡಲಹೂ, ನೈಜಹವಳದ (ರಿಯಲ್ ಕಾರಲ್) ಹುಳು, ಕಡಲಬೀಸಣಿಗೆ, ಕಡಲಗರಿಗಳು (ಸೀ ಫೆದರ್ಸ್), ಕಡಲ ಸಸ್ಯಗಳು (ಸೀ ಪ್ಯಾನ್ಸಿ) ಮುಂತಾದ ಜೀವಿಗಳು ಈ ವರ್ಗದಲ್ಲಿ ಸೇರಿವೆ. ಇವೆಲ್ಲ ವಸ್ತುಗಳಿಗೆ ಅಂಟಿಕೊಂಡು ಸಾಗರದ ತಳದಲ್ಲಿ ಸ್ಥಾವರ ಜೀವನವನ್ನು ನಡೆಸುವ ಪಾಲಿಪ್‌ರೂಪಿಗಳು. ಜಠರದ ಒಳಗೋಡೆಯಲ್ಲಿ ಕುಟುಕುಕಣಗಳಿರುತ್ತವೆ. ಜಠರಾವಕಾಶ ತ್ರಿಜ್ಯಮುಖವಾಗಿ 6, 8 ಅಥವಾ ಹೆಚ್ಚು ವಿಭಾಗಗಳಾಗಿರುತ್ತದೆ. ತಾವು ಕಚ್ಚಿಕೊಂಡಿರುವ ಪದಾರ್ಥದ ಮೇಲೆ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಲು ಅವುಗಳ ತಳದಲ್ಲಿರುವ ಕಾಲುಬಿಲ್ಲೆ (ಪೀಡಲ್ ಡಿಸ್ಕ್) ಸಹಕಾರಿಯಾಗಿದೆ. ಕೆಲವು ಪ್ರಭೇದದ ಕಡಲಹೂಗಳು ನೀರಿನಲ್ಲಿ ತೇಲು ಜೀವನ (ಪೆಲ್ಯಾಜಿಕ್) ನಡೆಸುತ್ತವೆ. ಮತ್ತೆ ಕೆಲವು ಪ್ರಭೇದಗಳು ನೀರಿನಲ್ಲಿ ಸುತ್ತಮುತ್ತ ತಿರುಗುತ್ತ ಅನಿರ್ದೇಶಿತ ರೀತಿಯಲ್ಲಿ ಮಾತ್ರ ಚಲಿಸಬಲ್ಲವು. ಡಿಂಭಾವಸ್ಥೆಯಲ್ಲಿ ಈ ವರ್ಗದ ಪ್ರಾಣಿಗಳೆಲ್ಲ ನೀರಿನಲ್ಲಿ ಈಜುತ್ತವೆ. ಲಿಂಗರೀತಿಯಲ್ಲಿ ಉತ್ಪನ್ನವಾಗುವ ಪಾಲಿಪ್‌ಗಳು ಮೊಗ್ಗೊಡೆದು ಕವಲುಗಳನ್ನು ಮೂಡಿಸಿಕೊಂಡು ಆ ಮೂಲಕ ಕೂಡುಜೀವನವನ್ನು ಆರಂಭಿಸುತ್ತವೆ. ಕೆಲವು ಪಾಲಿಪ್ ಸಮುದಾಯಗಳು ಬಹುರೂಪತೆಯನ್ನು ಪ್ರದರ್ಶಿಸುತ್ತವೆ. ಹವಳದ ಹುಳುಗಳು ಎಲುಬುಗೂಡನ್ನು ಸುಣ್ಣದಿಂದಲೂ ಕಡಲಬೀಸಣಿಗೆಗಳು ಕಠಿಣವಾದರೂ ಬಳುಕುವಂಥ ಸಸಾರಜನಕ ವಸ್ತುಗಳಿಂದಲೂ ರಚಿಸಿಕೊಳ್ಳುತ್ತವೆ. (ಎನ್.ಎಸ್.ವಿ.)



ಕಡಲ ಲೇಖಣಿ

**ಕುಟ್ಟಿ ಕೃಷ್ಣನ್, ಪಿ ಸಿ :** 1915–. ಮಲಯಾಳಂ ಭಾಷೆಯ ಕಥೆಗಾರ. ಕಾದಂಬರಿಗಳನ್ನೂ ಕವಿತೆಗಳನ್ನೂ ಬರೆದಿದ್ದಾರೆ. ಇವರು ಪಾಲ್‌ಘಾಟ್ ಜಿಲ್ಲೆಯ ಪೊನ್ನಾನಿ ಗ್ರಾಮದ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದರು. ಗ್ರಾಮದ ಪ್ರೌಢಶಾಲೆಯಲ್ಲಿ ಓದು ಮುಗಿಸಿ ವಿವಿಧ ಸ್ಥಳಗಳಲ್ಲಿ ನಾನಾರೀತಿಯ ಕೆಲಸ ಮಾಡಿ ಅಮೂಲ್ಯ ಅನುಭವ ಗಳಿಸಿಕೊಂಡರು. ಭಾರತದ ಆಕಾಶವಾಣಿಯ ಕೋಳಿಕೋಡ್ ಕೇಂದ್ರದಲ್ಲಿ ಕಲಾವಿದರಾಗಿ ಸೇರಿ ಮುಂದೆ ನಿರ್ಮಾಪಕರಾಗಿ ಕೆಲಸ ಮಾಡಿದರು.

ಇವರ ಮೊದಲ ಒಲವು ಕವಿತೆಗಳತ್ತ. ಅನಂತರ ಸಣ್ಣ ಕಥೆಗಳಲ್ಲಿ ತಮ್ಮ ಪ್ರೌಢಿಮೆಯನ್ನು ತೋರಿದರು. ನೀರ್‌ಚಲುಗಳ್ (ನೀರ ದಾರಿಗಳು) ಎನ್ನುವ ಸಣ್ಣ ಕಥೆಯಿಂದ ಹಿಡಿದು ಇದುವರೆಗೆ ಇವರ ಸಣ್ಣ ಕಥೆಗಳು ಹದಿನೈದು ಸಂಪುಟಗಳಲ್ಲಿ ಬಂದಿವೆ. ವ್ಯಕ್ತಿಗಳ ಮನಹೊಕ್ಕು ನೋಡುವ ಚೈತನ್ಯ, ಹಾಸ್ಯ ಮತ್ತು ಪ್ರಾಸಬದ್ಧ ಪದ್ಯಶೈಲಿಯ ಬರೆಹ ಇವರ ವೈಶಿಷ್ಟ್ಯ. ಕವಿ ಹೃದಯವಿಲ್ಲದವರು ಉತ್ತಮ ಕಥೆ, ಕಾದಂಬರಿಗಳನ್ನು ಬರೆಯಲಾರರು ಎಂದು ಇವರ ಅಭಿಮತ. ಇವರ ಕಥೆಗಳಲ್ಲಿ ಗ್ರಾಮಕ್ಕೆ ಸಂಬಂಧಪಟ್ಟ ವಸ್ತುವಿಷಯಗಳೇ ಹೆಚ್ಚು.

ಇವರ ಮೊದಲ ಮತ್ತು ಅತ್ಯುತ್ತಮ ಕಾದಂಬರಿ ಉಮ್ಮಚು (1954) ಪ್ರೀತಿ, ಅಪರಾಧ ಮತ್ತು ದಂಡನೆಗಳಿಂದ ಕೂಡಿದ ಕಥೆಯಿದು.

ಅನಂತರ ಸುಂದರನ್ ಮಾರುಮ್ ಮತ್ತು ಸುಂದರಿಹಳುಮ್ ಎಂಬ ಕಾದಂಬರಿ 1958ರಲ್ಲಿ ಬಂತು. ಇದರಲ್ಲಿ ಕಥೆ ಗ್ರಾಮದಿಂದ ಪಟ್ಟಣ ಮತ್ತು ಪಟ್ಟಣದಿಂದ ಗ್ರಾಮಕ್ಕೆ ಓಡಾಡುತ್ತದೆ. ಇದು ಉಮ್ಮಚುಗಿಂತಲೂ ಹೆಚ್ಚು ವೈವಿಧ್ಯದಿಂದ ಕೂಡಿದೆ. ಇವರು ಇನ್ನೂ ಮೂರು ಕಾದಂಬರಿಗಳನ್ನು ರಚಿಸಿದ್ದಾರೆ. 1959–60ರಲ್ಲಿ ಸುಂದರನ್ ಮಾರುಮ್ ಮತ್ತು ಸುಂದರಿಹಳುಮ್ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಬಂತು. ಇವರು ಕೆಲವು ನಾಟಕಗಳನ್ನೂ ಬರೆದಿದ್ದಾರೆ.

ಕೃಷ್ಣನ್ ನಾಸ್ತಿಕರೂ ಅಲ್ಲ, ಯೋಗಿಗಳೂ ಅಲ್ಲ. ಇವರೊಬ್ಬ ಆಶಾವಾದಿ, ವಾಸ್ತವಿಕತೆಗೆ ಹೆಚ್ಚು ಬೆಲೆ ಕೊಡುತ್ತಾರೆ–ಎಂದು ಇವರನ್ನು ತಿಳಿದವರು ಹೇಳುತ್ತಾರೆ. ಮನುಷ್ಯರಲ್ಲಿ ಇವರಿಗಿರುವ ಆಸ್ಥೆ ಅಪಾರ. ಇವರ ಕೃತಿಗಳಲ್ಲಿ ರಾಕ್ಷಸಪಾತ್ರಗಳೇ ಇಲ್ಲ. (ಸಿ.ಆರ್.ಕೆ.)

**ಕುಟ್ಟೆಹುಳು, ಹಿಟ್ಟಿನ :** ಬೂಸ, ಹಿಟ್ಟು, ರವೆ, ಅಟ್ಟ, ಮೈದ, ನುಚ್ಚು ಮುಂತಾದ ಒಡೆದ ಮತ್ತು ಬೀಸಿದ ಆಹಾರಧಾನ್ಯಗಳಿಗೆ ಬೀಳುವ ಕೀಟ (ಫ್ಲೋರ್ ಬೀಟಲ್). ದ್ವಿದಳಧಾನ್ಯಗಳ ನುಚ್ಚು, ಹಿಟ್ಟಿಗೂ ಬೀಳುವುದುಂಟು, ಉಂಡೆ ಕಾಳುಗಳಿಗೆ, ಬೇಳೆಗಳಿಗೆ ಸಾಮಾನ್ಯವಾಗಿ ಇವುಗಳ ಕಾಟವಿಲ್ಲ. ಧಾನ್ಯಗಳನ್ನು ಬೀಸುವ ಕಾರ್ಖಾನೆಗಳಲ್ಲೂ ಬೀಸಿದ ವಸ್ತುಗಳನ್ನು ದಾಸ್ತಾನು ಮಾಡುವ ಉಗ್ರಾಣಗಳಲ್ಲೂ ಇವುಗಳ ಹಾವಳಿ ವಿಶೇಷ. ಇವು ಕೋಲಿಯಾಪ್ಟಿರ ಗಣದ ಟೆನಿಬ್ರಿಯಾನಿಡೀ ಕುಲದ ಟ್ರೈಬೋಲಿಯಂ ಕ್ಯಾಸ್ಟೇನಿಯಂ ಹಾಗೂ ಟ್ರೈ ಕನ್ಫ್ಯೂಸಂ ಪ್ರಭೇದಗಳಿಗೆ ಸೇರಿವೆ. ಪ್ರಾಯದ ಕೀಟ ಇಟ್ಟಿಗೆ ಬಣ್ಣದ, ಚಪ್ಪಟೆಯಾದ ಬಹಳ ಚಟುವಟಿಕೆಯಿಂದ ಕೂಡಿದ ಸುಮಾರು 1/6" ಉದ್ದದ ಚಿಪ್ಪಿನ ಕೀಟ. ತಾಯಿಕೀಟ ಸುಮಾರು 1000 ಮೊಟ್ಟೆಗಳನ್ನು ಆಹಾರ ಸಾಮಗ್ರಿಯೊಳಗೆ ಇಡುತ್ತದೆ. ಮರಿಹುಳುಗಳು ತೆಳ್ಳನೆ ತಂತಿ ತುಂಡಿನಂತಿರುತ್ತವೆ; ಬೆಳೆದ ಹಾಗೆ ಇವು ಹಳದಿ ವರ್ಣಕ್ಕೆ ತಿರುಗುತ್ತವೆ. ಇವು ಸುಮಾರು 3/16" ದಷ್ಟು ಉದ್ದ ಬೆಳೆಯುತ್ತವೆ. ಒಂದು ತಲೆಮಾರಿನ ಜೀವಾವಧಿ 4–6 ವಾರ; ವರ್ಷಕ್ಕೆ 6–8 ತಲೆಮಾರುಗಳು. ಹುಳುಬಿದ್ದ ಹಿಟ್ಟು ವಗೈರೆಯನ್ನು ಜರಡಿಯಾಡಿ ಮರಿ, ಪ್ರಾಯಕೀಟಗಳನ್ನು ಬೇರ್ಪಡಿಸಬಹುದೇ ಹೊರತು ಮೊಟ್ಟೆ, ಪಿಚಿಕೆಗಳನ್ನು ಬೇರೆ ಮಾಡಲು ಸಾಧ್ಯವಿಲ್ಲ. ಈ ಕಾರಣದಿಂದ ಹುಳು ಬಿದ್ದ ಆಹಾರಕ್ಕೆ ಮುಗ್ಗಲು ವಾಸನೆ, ಒಗರು ರುಚಿ ಬರುತ್ತದೆ. ಆದ್ದರಿಂದ ಬೀಸುವ ಕಾರ್ಖಾನೆ ಮತ್ತು ಉಗ್ರಾಣಗಳನ್ನು ನಿಯಮಾನುಸಾರ ಶುಚಿಪಡಿಸಿ ಈ ಕೀಟಗಳ ಪ್ರವೇಶವನ್ನು ತಡೆಗಟ್ಟುವುದು ಉತ್ತಮ. (ಡಿ.ಎಸ್.)

**ಕುಡಚಿ:** ಬೆಳಗಾಂವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ ಕಸಬೆಯಿಂದ ಸು.18ಕಿಮೀ ಉತ್ತರ ಈಶಾನ್ಯದಲ್ಲಿ ಕೃಷ್ಣಾನದಿಯ ಬಲದಂಡೆಯಲ್ಲಿರುವ ಊರು. ಹುಬ್ಬಳ್ಳಿ – ಪುಣೆ ರೈಲುಮಾರ್ಗದ ಒಂದು ನಿಲ್ದಾಣ. ಕೃಷ್ಣಾನದಿಗೆ ಈ ಊರಿನ ಬಳಿ ದೊಡ್ಡ ಸೇತುವೆಯೊಂದನ್ನು ರಚಿಸಲಾಗಿದ್ದು ಇದು ಮಹಾರಾಷ್ಟ್ರದ ಮೀರಜ್ ಮೊದಲಾದೆಡೆಗಳಿಂದ ರಾಯಭಾಗ ತಾಲ್ಲೂಕಿಗೆ ಸಂಪರ್ಕ ಒದಗಿಸುತ್ತದೆ.

ಈ ಊರನ್ನು ಮಹಮ್ಮದ್ ತುಗಲಕನಿಂದ ಬಹಮನೀ ರಾಜ್ಯದ ಸ್ಥಾಪಕನಾದ ಹಸನ್ ಗುಂಗುವಿಗೆ ಜಹಗೀರಾಗಿ ಕೊಡಲಾಗಿತ್ತು. ಹಸನ್ ಗಂಗು ತುಗಲಕನಿಂದ ಗಳಿಸಿದ್ದ ಜಹಗೀರುಗಳಲ್ಲಿ ಇದೇ ಮೊದಲನೆಯದು ಎಂದು ಫೆರಿಸ್ತ ತಿಳಿಸಿದ್ದಾನೆ. ಕುಡಚಿಯ ಸಮೀಪದಲ್ಲಿ ಕೃಷ್ಣಾ ನದಿಯ ನಡುಗಡ್ಡೆಯೊಂದರಲ್ಲಿ ಶೇಖ್ ಮಹಮ್ಮದ್ ಸಿರಾಜ್ಜೀನ ದಿ ಪೀರ್ದಾದಿ ಎಂಬ ಸಂತನ ಗೋರಿ ಇದೆ. ಈತ ಅನೇಕ ಜನರನ್ನು ಇಸ್ಲಾಮಿಗೆ ಮತಾಂತರಗೊಳಿಸಿದನೆಂದೂ ಅವರಲ್ಲಿ ಬಾಲ್ಕ್ ದೇಶದ ರಾಜಕುಮಾರಿ ಮಸಿಲ್ಲಿ ಎಂಬುವಳು ಒಬ್ಬಳೆಂದೂ ಹೇಳಲಾಗಿದೆ. ಈತ ಗುಲ್ಬರ್ಗದಲ್ಲಿ ನಿಧನನಾದ. ಆದರೆ ಇವನ ಗೌರವಾರ್ಥ ಕುಡಚಿಯಲ್ಲಿ ಮಸಲ್ಲಿಯ ಗೋರಿಯ ಬಳಿ ದರ್ಗಾವನ್ನು ರಚಿಸಲಾಯಿತು. ಈ ಗೋರಿಗಳ ಬಳಿ ಪ್ರತಿ ವರ್ಷ ಉರ್ಸ್ ನಡೆಯುತ್ತದೆ.

ಕುಡಚಿಯ ಬಳಿಯಲ್ಲಿ ಶಿಲಾ –ತಾಮ್ರಯುಗದ ಪ್ರಾಚೀನ ನೆಲೆಯೊಂದನ್ನು ಈಚೆಗೆ ಗುರುತಿಸಲಾಗಿದೆ. *

**ಕುಡಿಮಿಯಾ ಮಲೈ :** ತಮಿಳುನಾಡಿನ ತಿರುಚಿರಾಪಳ್ಳಿ ಜಿಲ್ಲೆಯಲ್ಲಿರುವ ಒಂದು ಬೆಟ್ಟ ; ಆ ಬೆಟ್ಟಕ್ಕೆ ಹೊಂದಿಕೊಂಡಿರುವ ಅದೇ ಹೆಸರಿನ ಗ್ರಾಮ. ಪ್ರಾಚೀನ ಇತಿಹಾಸವುಳ್ಳ ಈ ಗ್ರಾಮ ಹಿಂದೆ ಪುದುಕೋಟೆ ಸಂಸ್ಥಾನಕ್ಕೆ ಸೇರಿತ್ತು. ಪ್ರಾಚೀನ ಶಾಸನಗಳಲ್ಲಿ ಇದನ್ನು ತಿರುನಲಕುನ್ರಂ ಮತ್ತು ಶಿಖಾನಲ್ಲೂರು ಎಂದು ಸಂಬೋಧಿಸಲಾಗಿದೆ. ದೇವಾಲಯದ ಅರ್ಚಕ ಅನಿರೀಕ್ಷಿತವಾಗಿ ಅಲ್ಲಿಗೆ ಆಗಮಿಸಿದ ರಾಜನಿಗೆ ತನ್ನ ಹೆಂಡತಿಯ ತಲೆಯಲ್ಲಿದ್ದ ಪುಷ್ಪವನ್ನು ಕೊಟ್ಟಾಗ ಅದರಲ್ಲಿದ್ದ ಕೂದಲು ಎಲ್ಲಿಂದ ಬಂತೆಂದು ರಾಜ ಕೇಳಿದ. ಅರ್ಚಕ ಅದು ದೇವರ ತಲೆಯ ಕೂದಲೆಂದು ಹೇಳಿದಾಗ ಕರುಣಾಶಾಲಿಯಾದ ದೇವರು ತನ್ನ ಶಿಖೆಯಲ್ಲಿ ಕೂದಲಿರುವಂತೆ ಭಾಸವಾಗುವ ಹಾಗೆ ಮಾಡಿ ಅರ್ಚಕನ ಆಪತ್ತನ್ನು ಬಗೆಹರಿಸಿದ. ಆದ್ದರಿಂದ ಇದಕ್ಕೆ ಕುಡಿಮಿಯಾಮಲೈ (ಶಿಖೆ: ಕುಡಿಮಿ) ಎಂಬ ಹೆಸರು ಬಂತು–ಎಂದು ಪ್ರತೀತಿ. ಹಿಂದಿನ ಇತಿಹಾಸ ಕಾಲದಲ್ಲಿ ಈ ಸ್ಥಳ ಎಂದೂ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿರಲಿಲ್ಲ. ಪಲ್ಲವ, ಪಾಂಡ್ಯ, ಚೋಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ಇದು ಒಂದು ಮುಖ್ಯಸ್ಥಳವಾಗಿತ್ತು. ಬೆಟ್ಟದ ಮೇಲೆ ಸುಬ್ರಹ್ಮಣ್ಯ ಮತ್ತು ಬುಡದಲ್ಲಿ ಶಿಖಾನಾಥ ಮತ್ತು ಅಖಿಲಾಂಡೇಶ್ವರಿ ದೇವಾಲಯಗಳಿವೆ. ಪ್ರಸಿದ್ಧವಾದ ಶಿಖಾನಾಥೇಶ್ವರ ದೇವಾಲಯಕ್ಕೆ ಈ ಪ್ರದೇಶವನ್ನಾಳಿದ ರಾಜಮನೆತನಗಳೆಲ್ಲವೂ ತಮ್ಮ ಕೊಡುಗೆಗಳನ್ನು ನೀಡಿವೆ.

ಶಿಖಾನಾಥೇಶ್ವರ ದೇವಾಲಯದ ದ್ವಾರಮಂಟಪ ಸಹಸ್ರ ಕಂಬಗಳ ಮಂಟಪವೆಂದು ಪ್ರಸಿದ್ಧವಾಗಿದೆ. ಅದು ಈಗ ಜೀರ್ಣಾವಸ್ಥೆಯಲ್ಲಿದೆ. ಈ ಮಂಟಪದ ಕಂಬಗಳಲ್ಲಿ ರಾಮಾಯಣದ ವಾನರಮುಖ್ಯರಾದ ವಾಲಿ, ಸುಗ್ರೀವ ಮತ್ತು ಹನುಮಾನ್‌ಗಳ, ವಿಷ್ಣುವಿನ ಅವತಾರಗಳಾದ ಮತ್ಸ್ಯ, ಕೂರ್ಮ, ವರಾಹ ಮತ್ತು ನೃಸಿಂಹರ, ಗಿಳಿಯ ಮೇಲೆ ಕುಳಿತು ಹಾರುತ್ತಿರುವ ರತಿಮನ್ಮಥರ ಸುಂದರವಾದ ಕೆತ್ತನೆಯ ಶಿಲ್ಪಗಳಿವೆ. ಅದರ ಸಮೀಪದ ಮತ್ತೊಂದು ದೊಡ್ಡ ಮಂಟಪದ ಕಂಬಗಳ ಮೇಲೆ ಗಣಪತಿ, ಸುಬ್ರಹ್ಮಣ್ಯ, ರಾವಣ, ಉಗ್ರನರಸಿಂಹ, ರಾಮ, ಮೋಹಿನಿ, ಶಿವ, ವೀರಭದ್ರ, ಕಾಳಿ, ನಟರಾಜ ಮತ್ತು ಗರುಡವಾಹನನಾದ ವಿಷ್ಣು ವಿಗ್ರಹಗಳನ್ನು ಸುಂದರವಾಗಿ ಕೊರೆಯಲಾಗಿದೆ. ಈ ಮಂಟಪಗಳಲ್ಲದೆ ಚೋಳರ ಕಾಲದಲ್ಲಿ ನಿರ್ಮಿತವಾದ ಮಹಾಮಂಟಪ ಮತ್ತು ಸಭಾಮಂಟಪಗಳಲ್ಲೂ ಅನೇಕ ಸುಂದರ ವಿಗ್ರಹಗಳಿವೆ.

ಮೂರು ಹಂತಗಳ ವಿಮಾನವನ್ನು ಗಾರೆ ಮತ್ತು ಇಟ್ಟಿಗೆಗಳಿಂದ ರಚಿಸಲಾಗಿದೆ. ಗರ್ಭಗೃಹ ಪಲ್ಲವರ ಕಾಲದಲ್ಲಿ ನಿರ್ಮಾಣವಾದ್ದು. ಚೋಳರ ಕಾಲದಲ್ಲಿ ಇದರ ಜೀರ್ಣೋದ್ಧಾರವಾಯಿತು. ಮೂಲ ವಿಗ್ರಹಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಲಾಗಿದೆ. ಅಖಿಲಾಂಡೇಶ್ವರಿ ಅಮ್ಮನ ಗರ್ಭಗೃಹವೂ ಪ್ರಾಚೀನವಾದ್ದು.

ಮುಖಮಂಟಪದ ಒಂದು ಪಾರ್ಶ್ವದಲ್ಲಿ ಒಂದು ದೊಡ್ಡ ಕೊಳವುಂಟು ಮತ್ತೊಂದು ಪಾರ್ಶ್ವದಲ್ಲಿ ಶಿವ, ಸುಂದರನಾಯಕಿ ಮತ್ತು ಗಣೇಶರ ಗುಹಾಲಯಗಳಿವೆ. ಇವು ಪಲ್ಲವರ 1ನೆಯ ಮಹೇಂದ್ರವರ್ಮನಿಂದ ನಿರ್ಮಾಣಗೊಂಡವು. ಇವುಗಳ ಪಕ್ಕದಲ್ಲಿ 63 ಜನ ಶೈವ ಮುನಿಗಳ ವಿಗ್ರಹಗಳಿವೆ.

ಚೋಳರ ಕಾಲದಲ್ಲೂ ಈ ಗ್ರಾಮ ಪ್ರಖ್ಯಾತವಾಗಿತ್ತು. ಅವರು ಇಲ್ಲಿ ಸೈನ್ಯದ ತುಕಡಿಗಳನ್ನು ನೆಲೆಗೊಳಿಸಿದ್ದುದಾಗಿಯೂ, ಇಲ್ಲಿಯ ದೇವಾಲಾಯಗಳ ವಿಸ್ತರಣ ಕಾರ್ಯವನ್ನು ಮುಂದುವರಿಸಿದುದಾಗಿಯೂ ಶಾಸನಗಳಿಂದ ತಿಳಿದು ಬರುತ್ತದೆ. ಮಧುರೆಯ ಪಾಂಡ್ಯ ಸಂತತಿಯ ಅರಸರು ಕೂಡ ಇಲ್ಲಿಯ ದೇವಾಲಯಗಳಿಗೆ ವಿಶೇಷ ದತ್ತಿಗಳನ್ನು ಕೊಟ್ಟುದಾಗಿ ಇಲ್ಲಿ ಸಿಕ್ಕಿರುವ ಪಾಂಡ್ಯಶಾಸನಗಳಿಂದ ತಿಳಿದು ಬರುತ್ತದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲೂ ಕುಡಿಮಿಯಾಮಲೈಗ್ರಾಮ ಉನ್ನತಸ್ಥಿತಿಯಲ್ಲಿತ್ತು. ವೀರ ಕಂಪಣ್ಣನೂ ಅನಂತರ ಗೋಪತಿಮ್ಮನೂ ಈ ಪ್ರದೇಶದ ಮಂಡಲಾಧಿಕಾರಿಗಳಾಗಿದ್ದರೆಂದೂ ಆ ಕಾಲದಲ್ಲೂ ದೇವಾಲಯದ ಭಾಗಗಳನ್ನು ವಿಸ್ತರಣೆ ಮಾಡಲಾಯಿತೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಅನಂತರ ಆಳಿದ ಮಧುರೆಯ ನಾಯಕರೂ ಪುದುಕೋಟೆ ರಾಜಮನೆತನದವರೂ ಇಲ್ಲಿಯ ದೇವಾಲಯಗಳ ಮೇಲ್ಮೆಗಾಗಿ ದಾನದತ್ತಿಗಳನ್ನು ಕೊಟ್ಟರು. (ಜಿ.ಆರ್.ಆರ್.)

**ಕುಡಿಮಿಯಾಮಲೈ ಸಂಗೀತಶಾಸನ :** ಕುಡಿಮಿಯಾಮಲೈಯಲ್ಲಿ 120 ಶಾಸನಗಳು ಸಿಕ್ಕಿವೆ. ಇವು 7ನೆಯ ಶತಮಾನದ ಪ್ರಾರಂಭದಿಂದ 17ನೆಯ ಶತಮಾನದವರೆಗೆ ಬೇರೆಬೇರೆ ರಾಜಮನೆತನಗಳಿಂದ ಕೆತ್ತಿಸಿದವು. ಅವುಗಳಲ್ಲೆಲ್ಲಾ ಅತಿ ಪ್ರಾಚೀನವಾದುದು ಮತ್ತು ಅತಿ ಮುಖ್ಯವಾದುದು ಮೇಲಕ್ಕೋವಿಲ್ ಮುಂದೆ ಎರಡು ಪಲ್ಲವ ಗಣೇಶ ವಿಗ್ರಹಗಳ ಮಧ್ಯೆ ದೊಡ್ಡ ಬಂಡೆಯ ಮೇಲೆ ಕೆತ್ತಲಾಗಿರುವ, ಸಂಗೀತಕ್ಕೆ ಸಂಬಂಧಿಸಿದ, ಶಾಸನ. ಇದನ್ನು 1904ರಲ್ಲಿ ಎಚ್. ಕೃಷ್ಣಶಾಸ್ತ್ರಿ ಕಂಡುಹಿಡಿದರು. ಇದು 1914ರಲ್ಲಿ ಡಿ.ಆರ್. ಭಂಡಾರ್ಕರರಿಂದ ಸಂಪಾದಿತವಾಗಿ ಎಪಿಗ್ರಾಫಿಯ ಇಂಡಿಕದ 12ನೆಯ ಸಂಪುಟದಲ್ಲಿ ಪ್ರಕಟವಾಯಿತು. ಪುನಃ 1929ರಲ್ಲಿ ಪುದುಕೋಟೆ ಸಂಸ್ಥಾನದ ಶಾಸನಗಳು ಎಂಬ ಗ್ರಂಥದಲ್ಲಿ ಸ್ವಲ್ಪ ತಿದ್ದುಪಡಿಗಳೊಡನೆ ಇದನ್ನು ಪ್ರಕಟಿಸಲಾಯಿತು. ಸಂಗೀತಕ್ಕೆ ಇದರ ಕೊಡುಗೆಯನ್ನು ಪರಿಶೀಲಿಸಿದ ಆರ್. ಸತ್ಯನಾರಾಯಣರು ಸಂಗೀತ ಶಾಸನ ಆಕರಗಳು ಎಂಬ ಗ್ರಂಥದಲ್ಲಿ ಮೂರನೆಯ ಬಾರಿಗೆ ಪ್ರಕಟಿಸಿದರು (1957).

ಈ ಶಾಸನವನ್ನು ಪಲ್ಲವರ ಮೊದಲನೆಯ ಮಹೇಂದ್ರವರ್ಮ 7ನೆಯ ಶತಮಾನದ ಆದಿಭಾಗದಲ್ಲಿ ರಚಿಸಿದ. ಶಾಸನಕಾರ ತಾನು ರುದ್ರಾಚಾರ್ಯನ ಶಿಷ್ಯನೆಂದೂ ಪರಮ ಮಾಹೇಶ್ವರನೆಂದೂ ಶಿಷ್ಯಹಿತಾರ್ಥವಾಗಿ ಈ ಸ್ವರಾಗಮದ ಚತುಷ್ಪ್ರಹಾರಗಳನ್ನು ರೂಢಿಸಿ (ಕೆತ್ತಿಸಿ)ದನೆಂದೂ ಹೇಳಿಕೊಂಡಿದ್ದಾನೆ. ಪ್ರಾಚೀನ ಭಾರತೀಯ ಸಂಗೀತದ ಲಕ್ಷ್ಯವನ್ನು ಸ್ವರಪಡಿಸಿರುವುದೇ ಇದರ ವೈಶಿಷ್ಟ್ಯ. ಲೌಕಿಕ ಸಂಗೀತದಲ್ಲಿ ಸ್ವರಲಿಪಿಗೆ ಭಾರತದಲ್ಲಿ ಇದೇ ಪ್ರಾಚೀನತಮ ಪ್ರಾಥಮಿಕ ಪುರಾವೆ.

ಈ ಶಾಸನದಲ್ಲಿ ಏಳು ರಾಗಗಳ ಆಲಾಪನೆಯನ್ನು ಸ್ವರಪಡಿಸಿದೆ. ರಾಗಾಲಾಪನೆಗೆ ಸ್ವರಲಿಪಿಯನ್ನು ಇಷ್ಟು ವಿಸ್ತಾರವಾಗಿ ಕೊಟ್ಟಿರುವುದು ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಪ್ರಾಚೀನ ಭಾರತೀಯ ಸಂಗೀತದಲ್ಲಿ ಬಳಕೆಯಲ್ಲಿದ್ದ ಗ್ರಾಮರಾಗಗಳ ಐದು ಅವಾಂತರ ಭೇದಗಳಲ್ಲಿ ಆಧಾರಭೂತವಾದ ಷಡ್ಜಗ್ರಾಮ, ಮಧ್ಯಮ ಗ್ರಾಮ, ಷಾಡವ, ಸಾಧಾರಿತ, ಪಂಚ, ಕೈಶಿಕಮಧ್ಯಮ ಮತ್ತು ಕೈಶಿಕ ಎಂಬ ರಾಗಗಳ ಆಲಪ್ತಿಯನ್ನು ಇಲ್ಲಿ ಕೊಟ್ಟಿದೆ. ರಾಗದಲ್ಲಿ ಪ್ರತಿಯೊಂದು ಸ್ವರವನ್ನೂ ಹ್ರಸ್ವವಾಗಿಯೇ ಕೊಟ್ಟಿದ್ದು ನಾಲ್ಕು ನಾಲ್ಕು ಸ್ವರಗಳ ಗುಂಪುಗಳನ್ನಾಗಿ ವಿಂಗಡಿಸಿ ಇವನ್ನು ಚತುಷ್ಪ್ರಹಾರ ಸ್ವರಾಗಮಗಳೆಂದು ಕರೆದಿದೆ. ಸ, ರಿ, ಗ, ಮ, ಪ, ಧ, ನಿ ಎಂಬ ಏಳನ್ನು ಮಾತ್ರವಲ್ಲದೆ ಅಂತರ ಗಾಂಧಾರವನ್ನು ಆಕಾರದಿಂದಲೂ ಕಾಕಲೀನಿಷಾದವನ್ನು ಕಕಾರದಿಂದಲೂ ಇಲ್ಲಿ ನಿರ್ದೇಶಿಸಿದೆ. ಆದ್ದರಿಂದ ಮೇಲೆ ಹೇಳಿದ ಸರಿಗಾದಿ ಏಳೂ ಶುದ್ಧಸ್ವರಗಳೆಂಬುದು ಸ್ಪಷ್ಟವಾಗಿದೆ. ಈ ಒಟ್ಟು ಒಂಬತ್ತರಲ್ಲಿ ಪ್ರತಿಯೊಂದನ್ನೂ ಅ, ಇ, ಉ, ಎ ಎಂಬ ನಾಲ್ಕು ಸ್ವರ ಸಂಯೋಜನೆಯಿಂದ ಪೃಥಕ್ಕರಿಸಲಾಗಿದೆ ; ಇವುಗಳಲ್ಲಿ ಇ, ಕಿಗಳ ಪ್ರಯೋಗವಿಲ್ಲ ; ಇಕಾರಾಂತವಾದ ಸ್ವರಗಳ ಪ್ರಯೋಗ ಅತ್ಯಲ್ಪವಾಗಿದೆ. ಯಾವುದೇ ಚತುಷ್ಪ್ರಹಾರದಲ್ಲಿ ಕಡೆಯ ಮೂರು ಸ್ವರಗಳು ಬೇರೆಬೇರೆಯಾಗಿ ಇದ್ದೇ

ಇರುತ್ತವೆ – ನಾಲ್ಕು ಅಪವಾದಗಳಲ್ಲಿ ಮಾತ್ರ ಎರಡೇ ಸ್ವರಗಳಿವೆ. ಯಾವುದೇ ಚತುಷ್ಪ್ರಹಾರದಲ್ಲಿ ಅ, ಇ, ಉ, ಎಗಳ ಪೈಕಿ ಕಡೆಯ ಪಕ್ಷ ಎರಡರ ಬಳಕೆಯಿರುತ್ತದೆ ; ಒಂದೇ ಒಂದನ್ನು ಇಡೀ ಚತುಷ್ಪ್ರಹಾರದಲ್ಲಿ ಬಳಸಿರುವುದು ಎಲ್ಲಿಯೂ ಇಲ್ಲ.

ಶಾಸನದಲ್ಲಿ ಮೇಲೆ ಹೇಳಿದ ಏಳು ರಾಗಗಳನ್ನು ಕ್ರಮವಾಗಿ 5, 7, 4, 5, 6, 4 ಮತ್ತು 7 ಸಾಲುಗಳಾಗಿ ವಿಂಗಡಿಸಿದೆ. ಇಂಥ ರಾಗಖಂಡಗಳಿಗೆ ಆಕ್ಷಿಪ್ತಿಕಾ ಎನ್ನುತ್ತಾರೆ. ಇಲ್ಲಿ ಒಟ್ಟು 38 ಆಕ್ಷಿಪ್ತಿಕೆಗಳು ಇವೆ ; ಪ್ರತಿಯೊಂದರಲ್ಲೂ ಸರಿಯಾಗಿ 64 ಅಕ್ಷರಗಳಿದ್ದು, ಇವುಗಳಲ್ಲಿ ಕೊನೆಯ ಕೆಲವು ತ್ರುಟಿತವಾಗಿವೆ ಅಥವಾ ಹೂತು ಹೋಗಿವೆ. ಪ್ರತಿಯೊಂದು ಆಕ್ಷಿಪ್ತಿಕೆಯ ಕೊನೆಯಲ್ಲೂ ಊರ್ಧ್ವಸರಳರೇಖೆಗಳು, ತಿರ್ಯಗ್ ಸರಳರೇಖೆಗಳು ಒಂದರ ಮೇಲೊಂದರಂತೆ ಇಟ್ಟ ಬಿಂದುಗಳು ಮುಂತಾದವನ್ನು ವಿವಿಧ ಸಂಖ್ಯೆ ಮತ್ತು ಕ್ರಮಗಳಲ್ಲಿ ಬಳಸಿಕೊಂಡು ಬೇರೆಬೇರೆ ಗುರುತುಗಳನ್ನು ಮಾಡಿದೆ. ಕೆಲವು ಸ್ವರಗಳ ಮೇಲೆ ಮಾತ್ರ ಚುಕ್ಕೆಯಿಟ್ಟಿದೆ.

ಭರತಮುನಿ ನಾಟ್ಯಶಾಸ್ತ್ರದಲ್ಲಿ ಈ ರಾಗಗಳಿಗೆ ನಾಟಕದ ಹಲವು ಸಂಧ್ಯಂಗಗಳಲ್ಲಿ ವಿನಿಯೋಗಿಸುವ ವಿಧಿಯನ್ನು ಹೇಳಿದ್ದಾನೆ. ಇವುಗಳನ್ನು ಪರಿವಾದಿನೀ ಎಂಬ ಹಾರ್ಪ್ ವಾದ್ಯವನ್ನು ಹೋಲುವ ತಂತಿವಾದ್ಯದಲ್ಲಿಯೇ ನುಡಿಸಬೇಕೆಂಬ ವಿಧಿ ಶಾಸನದಲ್ಲಿಯೇ ದೊರೆಯುವುದರಿಂದ, ಅ, ಇ, ಉ, ಎ ಎಂಬ ಸ್ವರಸಂಕೇತಗಳನ್ನು ಇಂತಿಂಥ ಬೆಟ್ಟಿನಿಂದ ತಂತಿಯನ್ನು ಮಿಡಿಯಬೇಕೆಂಬ ಅಂಗುಲಿ ನಿರ್ದೇಶನಕ್ಕಾಗಿಯೂ ಚುಕ್ಕೆಗಳನ್ನು ಒತ್ತು, ದೀರ್ಘ, ಕಂಪನ ಮುಂತಾದ ಯಾವುದೋ ಒಂದು ಸ್ವರಾಲಂಕರಣ ಕ್ರಿಯೆಗಾಗಿಯೂ ಬಳಸಿದೆಯೆಂದೂ ಚತುಷ್ಪ್ರಹಾರಗಳನ್ನು ಪ್ರಸ್ತಾಕ್ಷರಗಳಲ್ಲಿ ಹೇಳಿ, ಪ್ರತಿ ಆಕ್ಷಿಪ್ತಿಕೆಯಲ್ಲೂ ಹದಿನಾರು ಚತುಷ್ಪ್ರಹಾರಗಳನ್ನೇ ಕೊಟ್ಟಿರುವುದರಿಂದ ಅಂತ್ಯಚಿಹ್ನೆಗಳನ್ನು ತಾಳಸಂಬಂಧಿಯಾದ ಸಂಕೇತಗಳೆಂದೂ (ಅಥವಾ ಕೆತ್ತಿದವರ ಗೂಢವಾದ ರುಜುಗಳೆಂದೂ) ಇಟ್ಟುಕೊಳ್ಳುವುದು ಸಾಧುವಾಗಿ ಕಾಣುತ್ತದೆ.

ಸಮಕಾಲೀನ ಸಂಗೀತದ ಲಕ್ಷ್ಯದಲ್ಲಿ ದೊರೆಯುವ ಈ ಏಕೈಕ ಪ್ರಾಥಮಿಕ ಆಧಾರ ನಾಡಿನ ಸಂಗೀತದ ಇತಿಹಾಸರಚನೆಗೆ ಅತ್ಯಮೂಲ್ಯ ಸಾಮಗ್ರಿಯಾಗಿದೆ. (ಆರ್.ಎಸ್.ಎನ್.)

**ಕುಡಿವ ಗೀಳು :** ಅತಿಯಾಗಿ ದ್ರಾಕ್ಷಾಮದಿರೆ ಮತ್ತು ಇತರ ಮದ್ಯಗಳ ಸೇವನೆಯ ಅಭ್ಯಾಸವುಳ್ಳವರಿಗೆ ಆಗಾಗ ಉಂಟಾಗುವ ಕುಡಿಯಲೇಬೇಕೆಂಬ ಅತ್ಯಾಸೆ (ಡಿಪ್ಸೊಮೇನಿಯ). ಇದನ್ನು ಕುಡಿತದ ಹುಚ್ಚು ಅಥವಾ ಉನ್ಮತ್ತತೆ ಎಂದೂ ಕರೆಯಬಹುದು. ಇದೊಂದು ರೋಗ. ಅನೇಕ ವರ್ಷಗಳ ಕಾಲ ಅತಿಯಾಗಿ ಮದ್ಯಪಾನ ಮಾಡುವುದರಿಂದ ಇದು ಉಂಟಾಗುವುದು. ಆಗಾಗ ಮರುಕಳಿಸುವ ಈ ಸ್ಥಿತಿಯಲ್ಲಿ ರೋಗಿ ಸ್ವತಃ ಅಥವಾ ಹಿತೈಷಿಗಳು ಎಷ್ಟು ಪ್ರಯತ್ನ ಮಾಡಿದರೂ ಮದ್ಯವನ್ನು ಸೇವಿಸದೆ ಇರಲಾಗುವುದಿಲ್ಲ. ಮನೋದೌರ್ಬಲ್ಯ ಮತ್ತು ವೈಕಲ್ಯವೇ ಈ ಸ್ಥಿತಿಗೆ ಕಾರಣ. ಇದು ಮುಂದುವರಿದಲ್ಲಿ ರೋಗಿ ಮದ್ಯಪಾನವಿಲ್ಲದೆ ಜೀವಿಸುವುದೇ ಅಸಾಧ್ಯವೆಂದು ತಿಳಿದು ಹೆಚ್ಚು ಮದ್ಯಪಾನಕ್ಕೆ ತೊಡಗುತ್ತಾನೆ. ಶರೀರದಲ್ಲಿ ಅದರಲ್ಲೂ ಪಿತ್ತಜನಕಾಂಗ, ಹೃದಯ, ಮಿದುಳು ಮತ್ತು ನರಗಳ ದೌರ್ಬಲ್ಯ ಉಂಟಾಗಿ ಸತ್ತ್ವ ಹೀನತೆ ಕ್ರಮೇಣ ಕಾಣಿಸಿಕೊಳ್ಳುತ್ತದೆ. ದೈಹಿಕ ಮತ್ತು ಮಾನಸಿಕ ಚಿಕಿತ್ಸೆಯಿಂದ ಈ ದೌರ್ಬಲ್ಯವನ್ನು ಕೊನೆಗಾಣಿಸಬಹುದು. (ಎ.ಜಿ.ಕೆ.ಆರ್.)

**ರೋಗಲಕ್ಷಣಗಳು :** ಜೀರ್ಣಾಂಗಗಳ ಮೇಲೂ ನರಮಂಡಲದ ಮೇಲೂ ಕುಡಿತದ ಪರಿಣಾಮಗಳು ಎದ್ದುತೋರುತ್ತವೆ. ಜೀರ್ಣಾಂಗಗಳ ಮೇಲಣ ಪ್ರಭಾವಗಳು ಈ ಕೆಳಗಿನಂತಿವೆ.

1 ಬೆಳಗ್ಗೆ ವಾಕರಿಕೆ ಮತ್ತು ವಾಂತಿಯಾಗುವುದು. 2 ಜಠರದ ಉರಿತದಿಂದ ಹೊಟ್ಟೆ ಉಬ್ಬರಣೆ, ಮೇಲು ಹೊಟ್ಟೆಯಲ್ಲಿ ಒಂದು ಬಗೆಯ ಬಳಲಿಕೆ, ತೇಗು ಜಠರದ ಹುಣ್ಣಿನ ಚಿಹ್ನೆಗಳು. ವಾಂತಿಯಲ್ಲಿ ರಕ್ತ ಬೀಳುವುದು. 3 ಜಠರದ ಹುಣ್ಣು. 4 ಪಿತ್ತಕೋಶದಲ್ಲಿ ಕೊಬ್ಬಿನ ಶೇಖರಣೆ. 5 ಪಿತ್ತಜನಕಾಂಗದ ಸಿರೋಸಿಸ್. 6 ಮೇದೋಜೀರಕ ಗ್ರಂಥಿಯ ಉರಿತ.

**ನರಮಂಡಲದ ಮೇಲಣ ಪ್ರಭಾವ :** 1 ಸಾರಾಯಿ ಕುಡಿದಾಗ ಮತ್ತೇರಿ ಶರೀರದ ಮೇಲೆ ಹತೋಟಿ ತಪ್ಪುವಿಕೆ, ನಡವಳಿಕೆಯಲ್ಲಿ ಏರುಪೇರು, ತೊದಲುನುಡಿ. ಅಸಂಬದ್ಧ ಪ್ರಲಾಪ, ಜೋಮು ಹಿಡಿಯುವಿಕೆ, ಮೂರ್ಛಾವಸ್ಥೆ ಮುಂತಾದ ಪರಿಣಾಮಗಳು ಕಂಡುಬರುತ್ತದೆ. 2 ಸಾರಾಯಿ ಸೇವನೆಯನ್ನು ನಿಲ್ಲಿಸಿದಾಗ ಒಂದು ಬಗೆಯ ನಡುಕ ಬರುತ್ತದೆ. ಚಿತ್ತವಿಭ್ರಮಣ, ಸನ್ನಿ, ಡಿಲೇರಿಯಮ್ ಟ್ರೆಮನ್ಸ್– ಈ ಮುಂತಾದ ಪರಿಣಾಮಗಳು ಉಂಟಾಗುತ್ತವೆ. 3 ಈ ಜಾಡ್ಯದಿಂದ ಪೋಷಣ ಸತ್ತ್ವಗಳ ಕೊರತೆಯಿಂದ ನರಮಂಡಲದ ಮೇಲೆ ದುಷ್ಟ ಪರಿಣಾಮಗಳುಂಟಾಗುತ್ತವೆ. ನರಗಳ ಮೇಲಣ ದುಷ್ಪರಿಣಾಮ. ದೃಷ್ಟಿಮಂದಾಗುವಿಕೆ, ಪೆಲಾಗ್ರ ಕಾಯಿಲೆ ಮತ್ತೆ ಕೆಲವು ಕಾಯಿಲೆಗಳು ಈ ಜಾಡ್ಯದಿಂದ ನರಳುವವರಲ್ಲಿ ಕಂಡುಬರುತ್ತವೆ. ಆದರೆ ಅವುಗಳ ಹುಟ್ಟು ಮತ್ತು ಬೆಳವಣಿಗೆಗಳು ಖಚಿತವಾಗಿ ಗೊತ್ತಿಲ್ಲ.

ಮೇಲೆ ಹೇಳಿದ ಎಲ್ಲ ದುಷ್ಪರಿಣಾಮಗಳಿಗೂ ತಕ್ಕ ಚಿಕಿತ್ಸಾಕ್ರಮಗಳುಂಟು. ಆದರೆ ಇವೆಲ್ಲಕ್ಕೂ ಮೂಲವಾದ ಕುಡಿವ ಗೀಳನ್ನು ತಪ್ಪಿಸುವುದು ತುಂಬ ಕಷ್ಟಸಾಧ್ಯ. ಅದು ಆಯಾ ವ್ಯಕ್ತಿಯ ಮಾನಸಿಕ ಶಕ್ತಿಯನ್ನು ಅವಲಂಬಿಸಿರುತ್ತದೆ. ಕೆಲವು ವೇಳೆ ವ್ಯಕ್ತಿ ತನ್ನ ಸ್ವಂತ ಇಚ್ಛೆಯಿಂದ ಅದನ್ನು ಬಿಟ್ಟುಬಿಡಲು ಶಕ್ತನಾಗಬಹುದು. ಆದರೆ ಕೆಲವರಲ್ಲಿ ತಾವು ಆ ಗೀಳಿನಿಂದ ಮುಕ್ತರಾಗಬೇಕೆಂಬ ಆಸೆಯಿದ್ದರೂ ಅದರಿಂದ ಪಾರಾಗುವ ಸಾಮರ್ಥ್ಯ ಅವರಲ್ಲಿರುವುದಿಲ್ಲ. ಅಂಥ ವೇಳೆಯಲ್ಲಿ ವೈದ್ಯರು ಮತ್ತು ಮನೋರೋಗತಜ್ಞರು ಅವರ ನೆರವಿಗೆ ಬರುತ್ತಾರೆ. ಸಾಮಾನ್ಯವಾಗಿ ಚಿಕಿತ್ಸಾಕ್ರಮಗಳು ನಾಲ್ಕು ಬಗೆಯಾಗಿವೆ.

1 ವ್ಯಕ್ತಿ ಸಾರಾಯಿಯನ್ನು ಸೇವಿಸುವ ಮುನ್ನ ಎಮಿಟೀನ್ ಅಥವಾ ಅಪೊಮಾರ್ಫಿನ್ ಕೊಡುವುದು. ಇದರಿಂದ ವಾಕರಿಕೆ ಹಾಗೂ ವಾಂತಿಗಳುಂಟಾಗುತ್ತವೆ. ಸಾರಾಯಿ ಸೇವಿಸುವುದರಿಂದ ಈ ಪರಿಣಾಮವುಂಟಾಗುತ್ತದೆಂಬ ಭಾವನೆ ರೋಗಿಯ ಮನಸ್ಸಿಗೆ ಬಂದು ಅವನು ಕ್ರಮೇಣ ಸಾರಾಯಿಯನ್ನು ತ್ಯಜಿಸಲು ಪ್ರಯತ್ನ ಪಡುತ್ತಾನೆ. ಈ ಚಿಕಿತ್ಸೆ ಕೆಲವು ವಿಶೇಷ ಸುಸಜ್ಜಿತ ಸಂಸ್ಥೆಗಳಲ್ಲಿ ಮಾತ್ರ ಸಾಧ್ಯವಾಗುವುದರಿಂದ ಇದು ಅಷ್ಟು ಸಾರ್ವತ್ರಿಕವಾಗಿ ಪ್ರಯೋಗಿಸಲ್ಪಡುವುದಿಲ್ಲ.

2 ಆಂಟಬ್ಯೂಸ್ ಔಷಧದ ಬಳಕೆ : ರೋಗಿಗೆ ಪ್ರತಿದಿನವೂ ಐದು ಗ್ರಾಂ ಆಂಟಬ್ಯೂಸ್‌ನ್ನು ಸೇವಿಸಲು ಕೊಡುವುದು. ಈ ಔಷಧ ದೇಹದಲ್ಲಿದ್ದಾಗ ಸಾರಾಯಿ ಸೇವಿಸಿದರೆ ರಕ್ತದ ಒತ್ತಡ ಕಡಿಮೆಯಾಗಿ ತಲೆಸುತ್ತು, ವಾಕರಿಕೆ ಮತ್ತು ವಾಂತಿಗಳು ಉಂಟಾಗುತ್ತವೆ. ಈ ಪರಿಣಾಮಗಳನ್ನೆಲ್ಲ ರೋಗಿಗೆ ಮೊದಲೇ ಮನವರಿಕೆ ಮಾಡಿಕೊಡುತ್ತಾರೆ. ಇವುಗಳಿಗೆ ಹೆದರಿ ಅವನು ತನ್ನ ಚಟವನ್ನು ಬಿಡುತ್ತಾನೆ.

3 ಮಾನಸಿಕ ಚಿಕಿತ್ಸೆ: ವ್ಯಕ್ತಿ ಕೌಟುಂಬಿಕ ಅಥವಾ ಸಾಮಾಜಿಕ ಜೀವನದಲ್ಲುಂಟಾದ ಅತೃಪ್ತಿ ಅಸಂತೋಷಗಳನ್ನು ಮರೆಯಲು ವ್ಯಕ್ತಿ ಕುಡಿಯುವ ಗೀಳಿಗೆ ಬಲಿಯಾಗಿರುತ್ತಾನಷ್ಟೆ ಈ ಅತೃಪ್ತಿ ಅಸಂತೋಷಗಳಿಗೆ ಕಾರಣಗಳನ್ನು ಹುಡುಕಿ ಅವನ್ನು ಸರಿಪಡಿಸುವುದರಿಂದ ವ್ಯಕ್ತಿ ಕುಡಿವ ಗೀಳನ್ನು ತ್ಯಜಿಸಬಹುದು. ಇದರ ಜೊತೆಗೆ ಅವನ ದೇಹದ ಆರೋಗ್ಯವನ್ನು ಉತ್ತಮಪಡಿಸುವುದರ ಕಡೆಗೂ ಗಮನ ಕೊಡಬೇಕು.

4 ಕೆಲವು ಸಾಮಾಜಿಕ ಸಂಸ್ಥೆಗಳು ಸಾರಾಯಿ ಗೀಳನ್ನು ತಪ್ಪಿಸಲು ನೆರವಾಗುತ್ತವೆ. ಆ ಸಂಸ್ಥೆಗಳಲ್ಲಿ ಒಮ್ಮೆ ಈ ಗೀಳಿನಿಂದ ನರಳಿ ಮುಕ್ತರಾದ ವ್ಯಕ್ತಿಗಳು ಸದಸ್ಯರಾಗಿರುತ್ತಾರೆ. ಅವರಿಗೆ ಅದರ ಸಕಲ ದುಷ್ಪರಿಣಾಮಗಳ ಅರಿವೂ ಚೆನ್ನಾಗಿರುತ್ತದೆ. ಅಂಥ ಜನರೊಡನೆ ಸೇರುವುದರಿಂದ ವ್ಯಕ್ತಿ ತನ್ನ ಗೀಳನ್ನು ಬಿಟ್ಟುಬಿಡಲು ಮನಸ್ಸು ಮಾಡಬಹುದು. (ಜೆ.ಇ.ಸಿ.ಎಚ್.)

**ಕುಡುಗತ್ತಿ ಮೀನು :** ಟ್ರೈಕೆಯುರಿಡೆ ಕುಟುಂಬಕ್ಕೆ ಸೇರಿದ ಟ್ರೈಕೆಯುರಸ್ ಲೆಪ್ಟ್ಯೂರಸ್ ಎಂಬ ವೈಜ್ಞಾನಿಕ ಹೆಸರಿನ ಮೀನು (ಕಟ್‌ಲ್ಯಾಸ್ ಫಿಷ್, ಹೇರ್ ಟೈಲ್ಸ್). ಈ ಕುಟುಂಬದಲ್ಲಿ ಸುಮಾರು 22 ಪ್ರಭೇದಗಳಿವೆ. ಉಷ್ಣವಲಯದ ಸಮುದ್ರಗಳ ನಿವಾಸಿ ಇದು. ರಿಬ್ಬನ್ ಮೀನೆಂಬ ಹೆಸರೂ ಇದೆ. ಸುಮಾರು 1.5ಮೀ ಅಡಿ ಉದ್ದ ಬೆಳೆಯುತ್ತದೆ. ಇದರ ದೇಹ ಪಟ್ಟಿಯಂತೆ ಇದೆ. ಬಾಲದ ರೆಕ್ಕೆ ಇಲ್ಲ. ದೇಹದುದ್ದಕ್ಕೂ ಹರಡಿರುವ ಬೆನ್ನಿನ ರೆಕ್ಕೆಯೊಂದುಂಟು. ಬಾಯಲ್ಲಿ ಕೋರೆಹಲ್ಲುಗಳಿವೆ. ಭಾರತದ ನೆರೆಹೊರೆಯಲ್ಲಿ ಈ ಪ್ರಭೇದವೂ ಇದನ್ನು ಹೋಲುವ ಇನ್ನಿತರ ಮೂರು ಪ್ರಭೇದಗಳೂ ಕಾಣಬರುತ್ತವೆ. ಭಾರತದ ಪೂರ್ವ ಕರಾವಳಿಯಲ್ಲಿ ಇವುಗಳ ಮೀನುಗಾರಿಕೆ ಮುಖ್ಯ ಉದ್ಯೋಗವಾಗಿದೆ. (ಸಿ.ಜಿ.ಕೆ.)

**ಕುಡುಗೊಕ್ಕು :** ಪ್ಯಾಸೆರಿಫಾರ್ಮೀಸ್ ಗಣದ ಪ್ಯಾರಡೈಸಿಡೀ ಕುಟುಂಬದ ಡ್ರೆಪ್ಯಾನಾರ್ನಿಸ್ ಜಾತಿಯ ಹಕ್ಕಿ. ವೈಜ್ಞಾನಿಕ ಹೆಸರು *ಡೆಪ್ಯಾನಾರ್ಗಿಸ್ ಆಲ್ಬರ್ಟಿಸಿ* ಕುಡುಗೋಲಿನಂಥ ಕೊಕ್ಕಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ವರ್ಣರಂಜಿತವಾದ ಈ ಹಕ್ಕಿಯ ತಲೆ ಕಂದುಗೆಂಪಾಗಿಯೂ ಗಂಟಲಿನ ಭಾಗ ಹಸುರಾಗಿಯೂ ಹೊಟ್ಟೆ ಬೆಳ್ಳಗೂ ಎದೆಯ ಭಾಗ ಬೂದುಬಣ್ಣವಾಗಿಯೂ ಇದೆ. ಕಾಲಿನ ಹಿಂದೆ ಇರುವ ಗರಿಗಳು ಬೀಸಣಿಗೆಯಂತೆ ತೆರೆದುಕೊಂಡಿವೆ. ಕಣ್ಣಿನ ಸುತ್ತ ನೀಲಿಯ ಬಣ್ಣದ ಚಿಕ್ಕಚಿಕ್ಕ ಪುಕ್ಕಗಳು ಇದ್ದು ಕಣ್ಣಿನ ಹಿಂದೆ ಅಗಲವಾಗಿ ಜೋಡಿಸಿಕೊಂಡಿವೆ. (ಎಲ್.ಎಸ್.ಜಿ.)

**ಕುಣಿಂದರು :** ಹಿಮಾಲಯದ ಸಿವಾಲಿಕ್ ಪರ್ವತ ಪ್ರದೇಶದಲ್ಲಿ ಯಮುನಾ ಸಟ್ಲೆಜ್ ನದಿಗಳ ಮಧ್ಯಪ್ರದೇಶದಲ್ಲಿ ಪ್ರಸ್ತಕಶಕದ ಆರಂಭ ಕಾಲದಲ್ಲಿ ರಾಜ್ಯವಾಳುತ್ತಿದ್ದ ಒಂದು ಪಂಗಡದ ಜನ. ಇಂಡೋ–ಗ್ರೀಕರ ನಾಣ್ಯಗಳನ್ನು ಹೋಲುವ ಇವರ ನಾಣ್ಯಗಳು ಆ ಪ್ರದೇಶದಲ್ಲಿ ದೊರಕಿವೆ. ಅವುಗಳಲ್ಲೊಂದರ ಮೇಲೆ ಮಹಾರಾಜ ಎಂಬ ಬಿರುದಿದ್ದ ಅಮೋಘಭೂತಿಯೆಂಬ ಕುಣಿಂದ ರಾಜನ ಉಲ್ಲೇಖವಿದೆ. ಈ ನಾಣ್ಯಗಳ ಮೇಲೆ ಕೆಲವೊಮ್ಮೆ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳಲ್ಲೂ ಕೆಲವು ಬಾರಿ ಬ್ರಾಹ್ಮಿಯಲ್ಲಿ ಮಾತ್ರವೂ ಬರೆಹಗಳಿರುತ್ತಿದ್ದುವು. ಅನಂತರ ಕಾಲದ ಕುಣಿಂದ ನಾಣ್ಯಗಳು ಕುಷಾಣರ ತಾಮ್ರದ

ನಾಣ್ಯಗಳನ್ನು ಹೋಲುತ್ತಿದ್ದುವು. ಅವುಗಳ ಮೇಲೆ ಭಾಗವತಃ. ಛತ್ರೇಶ್ವರ ಮಹಾತ್ಮನಃ ಎಂಬ ಲೇಖನಗಳಿರುತ್ತಿದ್ದವು. ಛತ್ರ ಅಥವ ಅಹಿಚ್ಛತ್ರ ಇವರ ರಾಜಧಾನಿಯಾಗಿದ್ದಿರ ಬಹುದೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. ಇವರಲ್ಲಿ ಪ್ರಸಿದ್ಧನಾದ ದೊರೆ ಅಮೋಘಭೂತಿ. ಕುಣಿಂದರ ನೆರೆಯವರಾದ ಕುಲೂತರು (ಕುಲುಕಣಿವೆಯ ಆಳರಸ ಪಂಗಡ) ಮೂರನೆಯ ಶತಮಾನದ ಸುಮಾರಿನಲ್ಲಿ ಇವರನ್ನು ಸೋಲಿಸಿ ನಾಶಗೊಳಿಸಿದರೆಂದು ತಿಳಿದುಬರುತ್ತದೆ. (ಜಿ.ಆರ್.ಆರ್.; ಕೆ.ಬಿ.ಸಿ.ಎಚ್.)

**ಕುಣಿಕೆ ಹುಳುಗಳು :** ಇನ್ಸೆಕ್ಟ ವರ್ಗ, ಲೆಪಿಡಾಪ್ಟಿರ ಗಣದ ಜಿಯೋ ಮೆಟ್ರಿಡೀ ಮತ್ತು ನಾಕ್ಟುಯಿಡೀ ಕುಟುಂಬಗಳಿಗೆ ಸೇರಿದ ಕೀಟಗಳ ಡಿಂಬಗಳು. ಇವುಗಳ ವಿಶಿಷ್ಟ ಚಲನೆಯ ರೀತಿಯಿಂದಾಗಿ ಇವಕ್ಕೆ ಈ ಹೆಸರು ಬಂದಿದೆ. ಕೊಂಡಲಿ ಹುಳುಗಳು ಎಂದೂ ಹೆಸರಿದೆ. ಈ ಡಿಂಬಗಳು ಚಲಿಸುವಾಗ ತಮ್ಮ ಮೈಯನು ಕುಣಿಕೆಯಂತೆ ಕೊಂಕಿಸಿ ದೇಹದ ಹಿಂದಿನ ತುದಿಯನ್ನು ಮುಂದಿನ ತುದಿಯ ಹತ್ತಿರ ತಂದು ಊರಿ ಅನಂತರ ಮುಂತುದಿಯನ್ನು ಮುಂದಕ್ಕೆ ಚಾಚಿ ಸಾಗುತ್ತವೆ. ಈ ಚಲನೆ ಗೇಣುಹಾಕುವುದನ್ನು ಹೋಲುತ್ತದೆ. ಚಲನೆಯ ವೈಚಿತ್ರ್ಯಕ್ಕೆ ಕಾರಣ ಇವುಗಳಲ್ಲಿ ಸಾಮಾನ್ಯವಾಗಿ ಇರಬೇಕಾದ ಐದು ಜೊತೆ ಉಪಪಾದಗಳಲ್ಲಿ ಮುಂದಿನ ನಾಲ್ಕು ಜೊತೆಗಳು ಪೂರ್ತಿ ಅಥವಾ ಭಾಗಶಃ ಇಂಗಿಹೋಗಿರುವುದು. ಇದರಿಂದಾಗಿ ಹುಳು ಮೈಕೊಂಕಿಸದೆ ಚಲಿಸಲೆತ್ನಿಸಿದರೆ ದೇಹದ ನಡುಭಾಗ ಕೆಳಕ್ಕೆ ಜಗ್ಗುವ ಸಾಧ್ಯತೆ ಇದೆ. ಉದಾಹರಣೆ : ಟೀ ಗಿಡಕ್ಕೆ ಹತ್ತುವ ಬಿಸ್ಟನ್ ಸಪ್ರೆಸೇರಿಯ ಮತ್ತು ಅಗಸೆಗಿಡಕ್ಕೆ ಅಂಟುವ ಹೈಪೋಸಿಡ್ರ ಸಕ್ಸೇಸೆರಿಯ.

ನಾಕ್ಟುಯಿಡೀ ಕುಟುಂಬದ ಡಿಂಭಗಳನ್ನು ಅರೆಕುಣಿಕೆ ಹುಳುಗಳೆಂದು ಕರೆಯಲಾಗುತ್ತದೆ. ಇವುಗಳಲ್ಲಿ ದೇಹದ ಮುಂಭಾಗದ ಒಂದು, ಎರಡು ಅಥವಾ ಮೂರು ಜೊತೆ ಕಾಲುಗಳು ಕ್ಷೀಣವಾಗಿದ್ದು ಹಿಂಭಾಗದ ನಾಲ್ಕು ಜೊತೆ (ಅಪೂರ್ವವಾಗಿ ಎರಡು ಮತ್ತು ಮೂರು ಜೊತೆಗಳು) ಕಾಲುಗಳು ಇರುವುದರಿಂದ, ಇವು ಚಲಿಸುವಾಗ ದೇಹದ ನಡುಭಾಗ ಮಾತ್ರ ಕುಣಿಕೆಯಂತೆ ಬಾಗುತ್ತದೆ. ಉದಾಹರಣೆ: ಹರಳುಗಿಡದ ಪಿಡುಗಾದ ಏಕಿಯ ಜೇನೇಟ, ಪಡವಲಕಾಯಿಗೆ ಬೀಳುವ ಫೈಟೋಮೆಟ್ರ ಪೆಪೋನಿಸ್ ಮುಂತಾದವು. (ಡಿ.ಎಸ್.)

**ಕುಣಿಗಲ್ :** ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಆಡಳಿತ ಕೇಂದ್ರ ; ಪಟ್ಟಣ. ಈ ತಾಲ್ಲೂಕನ್ನು ಪೂರ್ವದಲ್ಲಿ ಮಾಗಡಿ, ಉತ್ತರದಲ್ಲಿ ಗುಬ್ಬಿ, ತುಮಕೂರು, ವಾಯವ್ಯ, ಪಶ್ಚಿಮದಲ್ಲಿ ತುರುವೇಕೆರೆ ನಾಗಮಂಗಲ ತಾಲ್ಲೂಕುಗಳು ಸುತ್ತುವರೆದಿದೆ. ತುಮಕೂರಿನ ದಕ್ಷಿಣಕ್ಕೆ 35 ಕಿಮೀ. ದೂರದಲ್ಲಿದೆ. ಬೆಂಗಳೂರು–ಹಾಸನ ರಸ್ತೆಯಲ್ಲಿ ಸಮುದ್ರಮಟ್ಟದಿಂದ 774 ಮೀ. ಎತ್ತರದಲ್ಲಿದೆ. ಶಿವ ಇಲ್ಲಿಯ ಕಲ್ಲುಬಂಡೆಯ ಮೇಲೆ ನೃತ್ಯ (ಕುಣಿದ) ಮಾಡಿದನೆಂದೂ ಆದ್ದರಿಂದ ಇದಕ್ಕೆ ಕುಣಿಗಲ್ಲೆಂಬ ಹೆಸರು ಬಂತೆಂದೂ ಇದನ್ನು ಕುರಿತ ಐತಿಹ್ಯವಿದೆ. ಆದರೆ ಶಾಸನಗಳಲ್ಲಿ ಇದರ ಹೆಸರನ್ನು ಕುಣಿಗಿಲ್ ಅಥವಾ ಕುಣಿಂಗಿಲ್ ಎಂದು ಹೇಳಲಾಗಿದೆ. ಶಿವಗಂಗೆಯಲ್ಲಿ ಹುಟ್ಟುವ ನಳಿನಿ. ನಾಗಿನಿ ಮತ್ತು ಕಮಲಾ ನದಿಗಳು ಈ ಸ್ಥಳದಲ್ಲಿ ಸಂಗಮವಾಗುವುವೆಂದು ಜನರ ನಂಬಿಕೆ. ನೃಗನೆಂಬ ಒಬ್ಬ ಚಕ್ರವರ್ತಿ ಇಲ್ಲಿ ಸ್ನಾನ ಮಾಡಿ ತನ್ನ ಕುಷ್ಠರೋಗವನ್ನು ಕಳೆದುಕೊಂಡನೆಂಬುದಾಗಿ ಸ್ಥಳಪುರಾಣ ಹೇಳುತ್ತದೆ. ಇಲ್ಲಿರುವ ಭಾರಿ ಕೆರೆಯನ್ನು ಅವನೇ ಕಟ್ಟಿಸಿದ್ದಂತೆ. ಅನಂತರ ಹಿಮಾಲಯದಿಂದ ಏಳು ಮಂದಿ ಲಿಪಿ–ಜೋಗಿಗಳು ಬಂದು ಕೆರೆಯ ಅಡಿಯಲ್ಲಿ ಹುದುಗಿದ್ದ ಐಶ್ವರ್ಯವನ್ನು ಕಾಯುತ್ತಿದ್ದ ಏಳು ಹೆಡೆಗಳ ಘಟಸರ್ಪವನ್ನು ಕೊಂದು ಆ ಐಶ್ವರ್ಯವನ್ನೆಲ್ಲ ಎತ್ತಿಕೊಂಡು ಹೋದರಂತೆ.

ಸಂಪೂರ್ಣ ತುಂಬಿದಾಗ ಸುಮಾರು 22 ಕಿಮೀ ಸುತ್ತಳತೆಯುಳ್ಳದ್ದಾಗಿರು ವುದೆಂದು ಹೇಳಲಾದ ಕುಣಿಗಲ್ ಕೆರೆಯೇ ಅಲ್ಲದೆ ಇಲ್ಲಿ ಒಂದು ಹಳೆಯ ಕೋಟೆಯೂ ಕೆಲವು ದೇವಾಲಯಗಳೂ ಇವೆ. ಹೊಯ್ಸಳರ ಕಾಲದಲ್ಲಿ ಕಟ್ಟಲಾದ ನರಸಿಂಹ ದೇವಾಲಯವನ್ನು ವಿಜಯನಗರ ಕಾಲದಲ್ಲಿ ಪುನರ್ನಿರ್ಮಿಸಲಾಯಿತು. ಇದಕ್ಕೆ ನರಸಿಂಹ ದೇವಾಲಯವೆಂಬ ಹೆಸರಿರುವುದಾದರೂ ಇಲ್ಲಿರುವುದು ಜನಾರ್ದನ ಮೂರ್ತಿ. ಇದನ್ನು ಹುಲಿಯೂರುದುರ್ಗದಿಂದ ತರಲಾಯಿತಂತೆ. ದೇಗುಲದ ಮುಂಗಡೆಯಲ್ಲಿ ಚಕ್ರ ಶಂಖ ಕಲಶಪಾಣಿಯಾದ ಚತುರ್ಭುಜ ಗರುಡವಿಗ್ರಹವಿದೆ. ಇಂಥ ಗುರುಡವಿಗ್ರಹ ವಿರಳವಾದ್ದು. ಸೋಮೇಶ್ವರ ದೇವಸ್ಥಾನವೂ ವಿಸ್ತಾರವಾಗಿದೆ. ಇಲ್ಲಿರುವ ಲಿಂಗ ಸ್ವಯಂಉದ್ಭವವಾದ್ದೆಂದು ನಂಬಿಕೆಯಿದೆ. ಪದ್ಮೇಶ್ವರ ದೇವಾಲಯ ಹೊಯ್ಸಳ ಶೈಲಿಯದು. ಇದಕ್ಕೆ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ಇನ್ನೊಂದು ದೇವಸ್ಥಾನ ವೆಂಕಟರಮಣನದು. ಇಲ್ಲಿ ಸಾಲಾಗಿರುವ ಮೂರು ಸನ್ನಿಧಿಗಳಲ್ಲಿ ಮಧ್ಯದ್ದರಲ್ಲಿ ಸು. 1 ಮೀ ಎತ್ತರದ ಶ್ರೀನಿವಾಸನ ಭವ್ಯ ವಿಗ್ರಹವಿದೆ. ಶಿವರಾಮೇಶ್ವರ ದೇಗುಲ ಉಳಿದ ಎಲ್ಲಕ್ಕಿಂತ ಈಚಿನದು. ಇಲ್ಲಿರುವ ಮಹಿಷಸುರ ಮರ್ದಿನಿಯ ವಿಗ್ರಹ ಗಂಗಶೈಲಿಯದು. ಕೊಟ್ಟಗೆರೆಯಲ್ಲಿ ಶಿಥಿಲವಾಗಿದ್ದ ದೇವಸ್ಥಾನದಿಂದ ಈ ಮೂರ್ತಿಯನ್ನು ತರಲಾಯಿತೆಂದು ಹೇಳಲಾಗಿದೆ.

ಕುಣಿಗಲಿನಲ್ಲಿ ಅಖಿಲಭಾರತ ಖ್ಯಾತಿಯ ಕುದುರೆಕಾವಲಿದೆ (ಸ್ಟಡ್–ಫಾರ್ಮ್). ಬೆಂಗಳೂರಿನ ಕಡೆಯಿಂದ ಕುಣಿಗಲಿಗೆ ಪ್ರವೇಶಿಸುವಾಗಲೇ ಕಾಣಬರುವ ಈ ಕಾವಲು ಭಾರತದಲ್ಲಿ ಅತ್ಯಂತ ಹಳೆಯದು ಮತ್ತು ಶ್ರೇಷ್ಠವಾದ್ದು. ಮೈಸೂರು ಸೈನ್ಯಕ್ಕೆ ಅಗತ್ಯವಾದ ಕುದುರೆ ತಳಿಗಳನ್ನು ಬೆಳೆಸುವ ಉದ್ದೇಶದಿಂದ 170 ವರ್ಷಗಳ ಹಿಂದೆ ಇದನ್ನು ಸ್ಥಾಪಿಸಲಾಯಿತು. 1886ರಿಂದೀಚೆಗೆ ಜೂಜಿನ ಕುದುರೆಗಳ ತಳಿಗಳನ್ನು ಇಲ್ಲಿ ಬೆಳೆಸಲಾಗುತ್ತಿದೆ. ವಿದೇಶೀ ತಳಿಗಳಿಗೆ ಕಡಿಮೆಯಿಲ್ಲದ ಶ್ರೇಷ್ಠ ದರ್ಜೆಯ ತಳಿಗಳು ಇಲ್ಲಿವೆ. ರೇಷ್ಮೆ ಸಾಕಣೆ ಇಲ್ಲಿಯ ಇನ್ನೊಂದು ಉದ್ಯಮ. ಇಲ್ಲಿಯ ರೇಷ್ಮೆ ಕ್ಷೇತ್ರದಲ್ಲಿ ಸಂಶೋಧನೆಯ ಕಾರ್ಯ ನಡೆಯುತ್ತಿದೆ. ಕುಣಿಗಲ್ ಕೆರೆಯಿಂದ ಬತ್ತದ ಗದ್ದೆಗಳಿಗೂ ಅಡಕೆ ತೆಂಗು ತೋಟಗಳಿಗೂ ನೀರಾವರಿ ಸೌಲಭ್ಯ ಒದಗಿದೆ.

ವೀರಶೈವ ಮತ್ತು ಅದ್ವೈತ ಮತಗಳಿಗೆ ಸಂಬಂಧಿಸಿದ ಅನೇಕ ಕನ್ನಡ–ಸಂಸ್ಕೃತ ಪ್ರಾಚೀನ ಗ್ರಂಥಗಳು ಇಲ್ಲಿ ದೊರಕಿವೆ. ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುಪ್ಪೆ ಪಾಳ್ಯದ ಸು. 785ರ ದಾಖಲೆಯೊಂದರಲ್ಲಿ ಈ ಸ್ಥಳದ ಉಲ್ಲೇಖವಿದೆ. ಈಗಿನ ಕುಣಿಗಲ್ ಪಟ್ಟಣವಿರುವ ಪ್ರದೇಶವಾದ ಕುಣಿಗಲ್ ನಾಡನ್ನು ಗಂಗ ದೊರೆ ಶಿವರಾಮ ಆಳುತ್ತಿದ್ದನೆಂದು ಅದರಲ್ಲಿ ಹೇಳಲಾಗಿದೆ. ಇಲ್ಲಿಯ ಕೋಟೆಯನ್ನು ಸ್ಥಾಪಿಸಿದವನು (1290) ವೀರ ಕಂಬಲರಾಯ. ಹೊಯ್ಸಳರ ಕಾಲದಲ್ಲಿ ಇದು ಒಂದು ಅಗ್ರಹಾರವಾಗಿದ್ದಿರಬಹುದು. ಮಾಗಡಿ ಒಡೆಯನ ಅಧೀನಕ್ಕೆ ಬಂದಾಗ ಪಟ್ಟಣ ಬೆಳೆಯಿತು. ಕೋಟೆಯೂ ವಿಸ್ತಾರಗೊಂಡಿತು.

ಕುಣಿಗಲ್ ಪುರಸಭೆಯ ಸ್ಥಾಪನೆಯಾದ್ದು 1918ರಲ್ಲಿ. 1951ರ ಪುರಸಭಾ ಕಾಯಿದೆಯ ಪ್ರಕಾರ 1957ರಲ್ಲಿ ಇದನ್ನು ಪುನರ್ರಚಿಸಲಾಯಿತು. ಪುರಸಭೆಯ ಅಧಿಕಾರವ್ಯಾಪ್ತಿ ಸು 8 ಚ.ಕಿಮೀ ಪುರಸಭೆಯ ಪ್ರದೇಶವನ್ನು ಐದು ವಿಭಾಗಗಳಾಗಿ ಮಾಡಿದ್ದು ಈಗ ಇನ್ನಷ್ಟು ವಿಸ್ತಾರವಾಗಿದೆ. ಕುಣಿಗಲ್ ತಾಲ್ಲೂಕಿನ ವಿಸ್ತೀರ್ಣ 9984 ಚ.ಕಿಮೀ. ಪಟ್ಟಣ ಜನಸಂಖ್ಯೆ 30,291 (2001). (ಎಂ.ಜಿ.ಕೆ.)

**ಕುತರ್ಕ :** ಒಂದು ವಾದ ವಿಧಾನ. ಇದರ ಉದ್ದೇಶ ಸತ್ಯವನ್ನು ಸ್ಥಾಪಿಸುವುದಲ್ಲ; ಸತ್ಯವನ್ನು ಮರೆ ಮಾಡುವುದು; ಸತ್ಯವಲ್ಲದ್ದನ್ನು ಸತ್ಯದಂತೆ ತೋರಿಸುವುದು. ಕುತರ್ಕದಲ್ಲಿ ವಾದದ ಸೋಗಿರುತ್ತದೆ. ಆದರೆ ಈ ವಾದ ಸರಿಯಲ್ಲವೆಂಬುದು ಸುಲಭವಾಗಿ ಕಾಣುವುದಿಲ್ಲ. ಇಂಥ ವಾದವನ್ನು ಭಾರತೀಯ ತಾರ್ಕಿಕರು ಜಲ್ಪ, ವಿತಂಡ ಮತ್ತು ಆಭಾಸಗಳೆಂದು ಕರೆದಿರುತ್ತಾರೆ. ಪ್ರಾಚೀನ ಗ್ರೀಸ್‌ನಲ್ಲಿ ಇಂಥ ವಾದ ವಿಧಾನವನ್ನೇ ಒಂದು ಜೀವನ ವೃತ್ತಿಯಾಗಿ ಇಟ್ಟುಕೊಂಡಿದ್ದವರನ್ನು ಸಾಫಿಸ್ಟರೆಂದು ಕರೆಯುತ್ತಿದ್ದರು. (ಜಿ.ಎಚ್.)

**ಕುತುಬ್ ಉದ್ ದೀನ್ ಐಬಕ್ :** ಭಾರತದಲ್ಲಿ ಮುಸ್ಲಿಂ ಆಳ್ವಿಕೆಯ ಸ್ಥಾಪಕ. ಇವನ ದೇಶ ತುರ್ಕಿಸ್ತಾನ. ಬಾಲ್ಯದಲ್ಲಿ ಈತ ಗುಲಾಮನಾಗಿದ್ದ. ಮಹಮ್ಮದ್ ಘೋರಿ ಇವನನ್ನು ಕೊಂಡುಕೊಂಡ. ಇವನ ಬುದ್ಧಿ ಸಾಮರ್ಥ್ಯಗಳು ಘೋರಿಯನ್ನಾಕರ್ಷಿಸಿದುವು. ಅವನ ಅನುಗ್ರಹದಿಂದಾಗಿ ಐಬಕ್ ಕ್ರಮಕ್ರಮವಾಗಿ ಮೇಲೇರಿ ಅಶ್ವದಳದ ಅಧಿಪತಿಯಾದ. ಪಾಟಿಯಾಲದ ಒಂದು ಪ್ರದೇಶದ ಅಧಿಕಾರ ಇವನಿಗೆ ಲಭ್ಯವಾಯಿತು. ಮಹಮ್ಮದ್ ಘೋರಿ 1192ರಲ್ಲಿ ತರೇನ್ ಯುದ್ಧದಲ್ಲಿ ವಿಜಯ ಗಳಿಸಿ ಖುರಾಸಾನಿಗೆ ಹಿಂದಿರುಗಿದಾಗ ಭಾರತದಲ್ಲಿ ಯುದ್ಧ ಮುಂದುವರಿಸಲು ತನ್ನ ನಂಬಿಕೆಯ ಬಂಟನಾದ ಐಬಕನನ್ನು ಬಿಟ್ಟು ಹೋದ. ಐಬಕ್ ಭಾರತದಲ್ಲಿ ಅವನ ಮುಖ್ಯ ಪ್ರತಿನಿಧಿಯಾಗಿದ್ದು 1193ರಲ್ಲಿ ದೆಹಲಿಯನ್ನು ತನ್ನ ಕ್ರೇಂದ್ರವನ್ನಾಗಿ ಮಾಡಿಕೊಂಡ. 1194ರ ವೇಳೆಗೆ ಗಂಗಾ–ಯಮುನಾ ನದಿಗಳ ನಡುವಣ ಪ್ರದೇಶ ಇವನ ವಶವಾಯಿತು. ಅನಂತರ 1202–03ರ ವರೆಗೂ ಈತ ಘೋರಿ ಮಹಮ್ಮದನ ದಾಳಿಗಳಲ್ಲಿ ಭಾಗವಹಿಸುತ್ತಿದ್ದು, 1206ರಲ್ಲಿ ಘೋರಿ ಮಹಮ್ಮದನ ಕೊಲೆಯಾದಾಗ ಲಾಹೋರನ್ನು ವಶಪಡಿಸಿಕೊಂಡು ಸ್ವತಂತ್ರನಾಗಿ ಆಳತೊಡಗಿದ. ಮುಸ್ಲಿಮರ ಅಧಿಕಾರ ಭಾರತದಲ್ಲಿ ನೆಲೆಗೊಂಡಿತು. ಈತ ತೀರಿಕೊಂಡಿದ್ದು 1210ರಲ್ಲಿ. ದೆಹಲಿಯ ಬಳಿ ಇರುವ ಕುತುಬ್‌ಮಿನಾರನ್ನು **(ನೋಡಿ)** ಕಟ್ಟಿಸಲು ಉಪಕ್ರಮಿಸಿದವನೀತ. (ಎಸ್.ವಿ.ಡಿ.)

**ಕುತುಬ್ ಮಿನಾರ್ :** ದೆಹಲಿಯಲ್ಲಿರುವ ಈ ಗೋಪುರವನ್ನು 1199ರ ಸುಮಾರಿನಲ್ಲಿ ಗುಲಾಮೀ ಸಂತತಿಯ ಕುತುಬ್ ಉದ್ ದೀನ್ ಐಬಕ್ ದೊರೆ ಉಷ್ ನಗರದ ಬಖ್ತ್ಯಾರ್ ಕಾಕಿ ಎಂಬ ಸಂತನ ಸ್ಮಾರಕಾರ್ಥವಾಗಿ ಕಟ್ಟಿಸಲಾರಂಭಿಸಿದ. ಐಬಕ್ ಅಡಿಪಾಯವನ್ನು ಮುಗಿಸುವುದರೊಳಗಾಗಿ ಮರಣ ಹೊಂದಲು ಅನಂತರ ಆಳಿದ ಇಲ್ತುಮಿಷನ ಕಾಲದಲ್ಲಿ ನಾಲ್ಕು ಅಂತಸ್ತುಗಳುಳ್ಳ ಈ ಗೋಪುರ ಪೂರ್ಣವಾಯಿತು.

ಮೊದಲು ಸ್ವಲ್ಪಕಾಲ ಮುಸಲ್ಮಾನರನ್ನು ಪ್ರಾರ್ಥನೆಗೆ ಕರೆಯಲು ಉಪಯೋಗಿಸಲ್ಪಟ್ಟರೂ ಅದು ಮುಂದೆ ಸ್ಮಾರಕಸ್ತಂಭವೆಂದು ಪರಿಗಣಿತವಾಯಿತು. ಇದು ಮೊದಲು 225 ಅಡಿಗಳೆತ್ತರವಿತ್ತು. ಫಿರೋಜ್‌ಷಾ ತುಘಲಖನ ಕಾಲದಲ್ಲಿ ಸಿಡಿಲು ಹೊಡೆತದಿಂದ ನಾಲ್ಕನೆಯ ಅಂತಸ್ತು ಹಾಳಾಗಲು, ಅವನು ಸಣ್ಣದಾದ 4 ಮತ್ತು 5ನೆಯ ಅಂತಸ್ತುಗಳನ್ನು ಕಟ್ಟಿಸಿದ. 1503ರಲ್ಲಿ ಸಿಕಂದರ್ ಲೋದಿ ಪುನಃ ಅದನ್ನು ಜೀರ್ಣೋದ್ಧಾರ ಮಾಡಿದ. ಕೆಳಗಿನ ಮೂರಂತಸ್ತುಗಳು ಬೆಣಚುಕಲ್ಲಿನಿಂದ ಕಟ್ಟಲ್ಪಟ್ಟು ಕೆಮ್ಮರಳುಶಿಲೆಯ ಹೊದಿಕೆಯಿಂದ ಕೂಡಿದ್ದರೆ, 4–5ನೆಯ ಅಂತಸ್ತುಗಳು ಕೆಂಪು ಶಿಲೆಯಿಂದ ನಿರ್ಮಿತವಾಗಿ ಅಮೃತ ಶಿಲೆಯ ಹೊದಿಕೆಯನ್ನು ಹೊಂದಿವೆ. ಈ ಸ್ತಂಭ ವಿವಿಧ ಅಂತಸ್ತುಗಳಾಗಿ ಬೇರ್ಪಟ್ಟಿದ್ದು ಶಾಸನಗಳ ಸಾಲುಗಳಿಂದಲೂ ಹೂವಿನ ಕೆತ್ತನೆ ಕೆಲಸದಿಂದಲೂ ಅಲಂಕೃತವಾಗಿದೆ. ಗೋಪುರದಲ್ಲಿರುವ ಶಾಸನಗಳಿಂದ ಇದರ ಇತಿಹಾಸ ತಿಳಿದುಬಂದಿದೆ. (ಬಿ.ಕೆ.ಜಿ.)



**ಕುತುಬ್‌ಷಾಹಿ ಮನೆತನ :** 16–17ನೆಯ ಶತಮಾನದಲ್ಲಿ ಸ್ವತಂತ್ರ ಗೋಲ್ಕೊಂಡ ರಾಜ್ಯವನ್ನಾಳಿದ ಮನೆತನ. ಈ ಮನೆತನದವರ ರಾಜ್ಯ ವಾರಂಗಲ್ಲಿನ ಹಿಂದೂ ರಾಜ್ಯದ ಅವನತಿಯ ತರುವಾಯ ಬೆಳೆಯಿತು. ಈ ರಾಜ್ಯವನ್ನು ಬಹಮನಿ ಅರಸರು 1424ರಲ್ಲಿ ಗೆದ್ದರು. ಕುತುಬ್‌ಷಾಹಿ ವಂಶದ ಸ್ಥಾಪಕ ಮಲಿಕ್ ಕುಲಿ ಕುತುಬ್ ಉಲ್ ಮುಲ್ಕ್ ಎಂಬ ತುರ್ಕಿ ಅಧಿಕಾರಿ. ಈತ ಮಹಮದ್ ಷಹನ ಆಳ್ವಿಕೆಯಲ್ಲಿ ಬಹಮನಿ ರಾಜ್ಯದಲ್ಲಿ ಅಧಿಕಾರಿಯಾಗಿದ್ದ. ಮಹಮೂದ್ ಗವಾನ್ ಇವನನ್ನು ತೆಲಂಗಾಣದ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದ. ಕುಲಿಷಹ ಅನೇಕ ವರ್ಷಗಳ ಕಾಲ ವಿಧೇಯನಾಗಿ ವರ್ತಿಸುತ್ತಿದ್ದರೂ ಬಹಮನಿ ರಾಜ್ಯ ಒಡೆದು 5 ಸಣ್ಣ ರಾಜ್ಯಗಳಾದಾಗ ಬಾರಿದ್‌ಷಾಹಿಯವರ ಅಧಿಕಾರ ದರ್ಪಗಳನ್ನು ನೋಡಿ ತಡೆಯಲಾರದೆ 1512 ರಲ್ಲಿ ಅಥವಾ 1518ರಲ್ಲಿ ಸ್ವತಂತ್ರನಾದ. ಇವನ 25 ವರ್ಷದ ಆಳ್ವಿಕೆಯಲ್ಲಿ ರಾಜ್ಯ ಸಂಪತ್ಸಮೃದ್ಧಿ ಹೊಂದಿತು. ಇವನೂ ಇವನ ಮಗ ಮಹಮದ್ ಕುಲಿ ಕುತುಬ್‌ಷಹನೂ ಗೋಲ್ಕೊಂಡ ರಾಜ್ಯವನ್ನು ವಿಸ್ತರಿಸಿ ಅಭಿವೃದ್ಧಿಗೆ ತಂದರು. ಮಹಮ್ಮದ್ ಕುಲಿ ಕುತುಬ್‌ಷಹ ಹೈದರಾಬಾದ್ ಪಟ್ಟಣವನ್ನು ನಿರ್ಮಿಸಿದ.

ಮಲಿಕ್ ಕುಲಿ ಕುತುಬ್ ಉಲ್‌ಮುಲ್ಕ್ ತನ್ನ 90ನೆಯ ವಯಸ್ಸಿನಲ್ಲಿ (1543) ತನ್ನ ಮಗ ಜಮ್‌ಷೀದನಿಂದ ಕೊಲೆಯಾದ. ಅನಂತರ ಜಮ್‌ಷೀದ್ 7 ವರ್ಷಗಳ ಕಾಲ ಆಳಿದ. ತರುವಾಯ, ಈತನ ಸಹೋದರ ಇಬ್ರಾಹಿಂ ಪಟ್ಟಕ್ಕೆ ಬಂದು, ಇವನು 1565ರಲ್ಲಿ ಇತರ ಷಾಹೀ ರಾಜ್ಯಗಳನ್ನು ಒಟ್ಟುಗೂಡಿಸಿ ವಿಜಯನಗರ ಸಾಮ್ರಾಜ್ಯದ ಮೇಲೆ ಯುದ್ಧ ಮಾಡಿದ. ಇಬ್ರಾಹಿಂ ಉತ್ತಮ ಆಡಳಿತಗಾರ ; ಹಿಂದೂ ಜನರನ್ನು ಧಾರಾಳವಾಗಿ ಮೇಲ್ಮಟ್ಟದ ಅಧಿಕಾರ ಸ್ಥಾನಕ್ಕೆ ನೇಮಿಸಿಕೊಂಡಿದ್ದ.

ಕುತುಬ್‌ಷಾಹಿ ಸುಲ್ತಾನರಲ್ಲಿ ಅಬ್ದುಲ್ ಹಸನ್ ಕುತುಬ್‌ಷಹ 1672ರಿಂದ 10 ವರ್ಷ ರಾಜ್ಯವಾಳಿದಾಗ ಹಿಂದೂಧರ್ಮಕ್ಕೆ ಪ್ರೋತ್ಸಾಹವಿತ್ತು. ಭಕ್ತ ರಾಮದಾಸರ ಕಥೆಯಲ್ಲಿ ಇವನನ್ನು ತಾನೇಷಾ ಎಂದು ಹೆಸರಿಸಲಾಗಿದೆ. ಈತ ಹಿಂದೂ ಮುಸ್ಲಿಂ ಭೇದವೆಣಿಸಲಿಲ್ಲ. ಸಾಹಿತ್ಯ ವೇದಗಳು ಮತ್ತು ಪುರಾಣಗಳಲ್ಲಿ ಪರಿಶ್ರಮ ಪಡೆದಿದ್ದ ಪಂಡಿತರಿಗೆ ಅಗ್ರಹಾರಗಳನ್ನೂ ದೇವಾಲಯಗಳನ್ನೂ ಕಟ್ಟಿಸಿಕೊಟ್ಟು ಭೂಮಿಗಳನ್ನು ದಾನವಾಗಿ ಕೊಟ್ಟುದಲ್ಲದೆ ಕವಿಗಳಿಗೂ ಉತ್ತೇಜನ ನೀಡಿ, ತೆಲುಗು ಸಾಹಿತ್ಯದಲ್ಲಿ ಇಬಾರಾಮ ಎಂಬ ಹೆಸರು ಪಡೆದಿದ್ದಾನೆ.

ಅಬ್ದುಲ್ ಹಸನ್ ಕುತುಬ್‌ಷಹನ ಮತಸಹಿಷ್ಣುತೆಯನ್ನು ಔರಂಗ್‌ಜೇಬ್ ಕೇಳಿದ್ದ. ಈ ನೀತಿಯನ್ನು ಆತ ಸಹಿಸದೆ ಗೋಲ್ಕೊಂಡದ ಮೇಲೆ ದಂಡೆತ್ತಿ ಬಂದ. 8 ತಿಂಗಳ ಕಾಲ ಕೋಟೆಗೆ ಮುತ್ತಿಗೆ ಹಾಕಿದರೂ ಉಪಯೋಗವಾಗಲಿಲ್ಲ. ಅಂತ್ಯದಲ್ಲಿ ಮೀರ್ ಜುಮ್ಲಾ ಎಂಬವನಿಗೆ ಸುಲ್ತಾನ ಪದವಿಯನ್ನು ಕೊಡಿಸುವೆನೆಂದು ಆಶೆ ತೋರಿಸಿ ಕೋಟೆಯನ್ನು ಸ್ವಾಧೀನಪಡಿಸಿಕೊಂಡ. ತಾನೇ ಷಹನನ್ನೂ ಅವನ ಹಿಂದೂ ಮಂತ್ರಿಗಳಾದ ಅಕ್ಕನ್ನ ಮತ್ತು ಮಾದನ್ನರನ್ನೂ ಸೆರೆಹಿಡಿದು ಕೋಟೆಯನ್ನು ನಾಶ ಮಾಡಿ ನಗರದಿಂದ ರತ್ನ ಮತ್ತು ವಜ್ರಗಳನ್ನು ಸಾಗಿಸಿದ. ಮೊಗಲ್ ಚಕ್ರಾಧಿಪತ್ಯದ ಅವನತಿಗೆ ಈ ಆಕ್ರಮಣವೂ ಒಂದು ಕಾರಣವಾಯಿತು.

ಕುತುಬ್‌ಷಾಹಿ ಅರಸರ ರಾಜಧಾನಿ ಗೋಲ್ಕೊಂಡ. ಹೈದರಾಬಾದಿಗೆ 10 ಕಿಮೀ ದೂರದಲ್ಲಿದೆ. ಪ್ರಪಂಚದ ವಜ್ರದ ಗಣಿಯೆಂದು ಸರ್ ಥಾಮಸ್ ಮನ್ರೋ ಇದನ್ನು ಹೊಗಳಿದ್ದಾನೆ; ಕವಿಗಳು ಇದನ್ನು ರತ್ನಗರ್ಭ ಎಂದು ಕರೆದಿದ್ದಾರೆ. ವಿಜಯನಗರದಲ್ಲಿ ಈ ಪಟ್ಟಣದ ವಜ್ರಗಳು ಮಾರಾಟವಾಗುತ್ತಿದ್ದವು. ಈ ಕೋಟೆ ಹಿಂದೂ ಮುಸ್ಲಿಂ ಮೈತ್ರಿಯ ಗುರುತಾಗಿ ಈಗಲೂ ನಿಂತಿದೆ. (ಸಿ.ವಿ.ಆರ್.)

**ಕುತೂಹಲ :** ಪರಿಸರದಲ್ಲಿ ತನಗರ್ಥವಾಗದ್ದನ್ನು ತಿಳಿಯಲು ವ್ಯಕ್ತಿ ತೋರಿಸುವ ಆಶೆ, ಆಸಕ್ತಿ, ಹೊಸತನ್ನು ಅರಿವ ಸಹಜ ಗುಣ (ಕ್ಯೂರಿಯಾಸಿಟಿ) . ಉನ್ನತವರ್ಗದ ಪ್ರಾಣಿ ಮತ್ತು ಮನುಷ್ಯ ಜೀವಿಗಳಲ್ಲಿ ತೋರಿಬರುವ ಒಂದು ಸಹಜ ಪ್ರವೃತ್ತಿಯಿದು. ಅಪರಿಚಿತ ಸ್ಥಳದಲ್ಲಿ ನಾಯಿ ಹೇಗೆ ವರ್ತಿಸುತ್ತದೆಂಬುದನ್ನು ನೋಡಬಹುದು. ಅತ್ತಿತ್ತ ಸುತ್ತುತ್ತ, ಅಲ್ಲಿನ ವಸ್ತುಗಳನ್ನು ಮೂಸಿನೋಡುತ್ತ, ಹೊಸ ವಾತಾವರಣದ ಅನ್ವೇಷಣೆಯಲ್ಲಿ ಅದು ಕ್ಷಣದಲ್ಲಿ ಮಗ್ನವಾಗಿಬಿಡುತ್ತದೆ. ಚಿಕ್ಕಮಕ್ಕಳು ಹಿರಿಯರನ್ನು ಕುರಿತು ಯಾವುದಾದರೊಂದು ವಸ್ತು ಅಥವಾ ವಿಚಾರದ ಬಗೆಗೆ ಏನು, ಏಕೆ, ಹೇಗೆ ಮುಂತಾಗಿ ಪ್ರಶ್ನೆಗಳನ್ನು ಹಾಕುವುದರ ಮೂಲಕ ತಮ್ಮ ಕುತೂಹವನ್ನು ಪ್ರದರ್ಶಿಸುತ್ತಾರೆ. ಈ ಕುತೂಹಲಪ್ರವೃತ್ತಿ ಮಾನವನ ನಾಗರಿಕತೆಯ ವಿಕಾಸದ ಹಾದಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ಆದಿಮಾನವ ಬೆಂಕಿಯನ್ನು ಕಂಡು ಹಿಡಿದಿದ್ದು, ಕೊಲಂಬಸ್ ಅಮೆರಿಕವನ್ನು ಕಂಡುಹಿಡಿದಿದ್ದು, ಆಧುನಿಕ ಮಾನವ ಚಂದ್ರಲೋಕಕ್ಕೆ ಹೋದದ್ದು–ಇವೆಲ್ಲವೂ ಕುತೂಹಲ ಪ್ರೇರಿತ ಅನ್ವೇಷಣೆ, ಸಂಶೋಧನೆಗಳ ಪರಿಣಾಮ, ಸತ್ಫಲ. ಕುತೂಹಲ ಪ್ರವೃತ್ತಿ ಜೀವಿಯ ಅಗತ್ಯಗಳ ಪೂರೈಕೆಗೆ ಸಹಕಾರಿಯಾಗಬಹುದಾದರೂ ಇದನ್ನು ಒಂದು ದೈಹಿಕ ಅಗತ್ಯ ಅಥವಾ ಆವಶ್ಯಕತೆ ಎಂದು ಪರಿಗಣಿಸಲಾಗದು. ಕೋತಿಯಿರುವ ಪಂಜರದೊಳಕ್ಕೆ ಒಂದು ಸಲಕರಣೆ ಅಥವಾ ಸಾಧನವನ್ನು ಇರಿಸಿದರೆ ಕೋತಿ ಅದರೊಂದಿಗೆ ಆಟವಾಡುತ್ತದೆ. ಅದನ್ನು ಬಿಡಿ ಬಿಡಿಯಾಗಿ ಬಿಚ್ಚುತ್ತದೆ. ಪುನಃ ಜೋಡಿಸುವ ಪ್ರಯತ್ನ ಮಾಡುತ್ತದೆ. ಈ ಒಂದು ಪರಿಪಾಠ ಅನೇಕ ಗಂಟೆಗಳವರೆಗೆ ನಡೆಯಬಹುದು. ಈ ವರ್ತನೆಯಿಂದಾಗಿ ಅದಕ್ಕೆ ಆಹಾರವಾಗಲಿ, ಇನ್ನಾವುದೇ ಬಗೆಯ ಪ್ರತಿಫಲವಾಗಲಿ ದೊರಕುವುದಿಲ್ಲ. ಇಂಥಲ್ಲೆಲ್ಲ ಕುತೂಹಲ ತೃಪ್ತಿಯಷ್ಟೇ ಪ್ರತಿಫಲವಾಗಿರುತ್ತದೆ. ಎಂದಮೇಲೆ, ಜೀವಿಗಳು ತಮ್ಮ ಪರಿಸರದ ಬಗೆಗೆ ಸಹಜವಾಗಿ ಕುತೂಹಲವನ್ನು ಹೊಂದಿರುತ್ತವೆ. ಹಾಗೂ ತಮ್ಮ ಪರಿಸರವನ್ನು ಯಾವುದೇ ಉಪಯೋಗದ ಪ್ರಚೋದನೆಯಿಂದ ಪ್ರೇರಿತವಾಗದೆ, ಕುತೂಹಲ ತೃಪ್ತಿಗಾಗಿಯೇ ಅನ್ವೇಷಿಸುತ್ತವೆ. ಉನ್ನತ ಪ್ರಾಣಿವರ್ಗದಲ್ಲಿ, ಅದರಲ್ಲೂ ಮಾನವ ಜೀವಿಗಳಲ್ಲಿ, ಕುತೂಹಲ ಪ್ರವೃತ್ತಿ ಅಭಿಪ್ರೇರಣೆಯ ಪ್ರಮುಖ ನಿರ್ಧಾರಕವಾಗಿದೆ.

ವಿಲಿಯಂ ಮೆಗ್ಡುಗಲ್ ಎಂಬ ಮನೋವಿಜ್ಞಾನಿ ಮಾನವನಲ್ಲಿ ಕುತೂಹಲದ ಪ್ರಾಮುಖ್ಯವನ್ನು ಗುರುತಿಸಿದನಷ್ಟೇ ಅಲ್ಲದೆ, ಹುಟ್ಟಿನಿಂದ ಬಂದ ಕುತೂಹಲ ಸಾಮರ್ಥ್ಯದಲ್ಲಿ ವ್ಯಕ್ತಿಗತ ವ್ಯತ್ಯಾಸಗಳು ಇವೆಯೆಂದೂ ಹೇಳಿದ್ದಾನೆ. ಸ್ವಭಾವತಃ ಕೆಲವರು ಇತರರಿಗಿಂತ ಹೆಚ್ಚು ಕುತೂಹಲಿಗಳಾಗಿರುತ್ತಾರೆ. ಹುಟ್ಟಿನಿಂದ ಬಂದಂಥ ಈ ವ್ಯತ್ಯಾಸಗಳು ಜೀವನದ ಗತಿಯಲ್ಲಿ ವೃದ್ಧಿಯಾಗುತ್ತ ಹೋಗುತ್ತವೆ. ಎಂದರೆ, ಯಾರಲ್ಲಿ ಕುತೂಹಲ ಶಕ್ತಿ ಕಡಿಮೆಯಿರುತ್ತದೆಯೋ ಅವರಲ್ಲಿ ಅದು ಅಷ್ಟಾಗಿ ಬಳಕೆಗೆ ಒದಗದ ಕಾರಣ ಇದ್ದ ಶಕ್ತಿಕೂಡ ಕ್ರಮೇಣ ಕುಂದುತ್ತ ಹೋಗುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ಯಾರಲ್ಲಿ ಕುತೂಹಲಶಕ್ತಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆಯೋ ಆತನಲ್ಲಿ, ಅದು ಹೆಚ್ಚು ಹೆಚ್ಚು ಬಳಕೆಗೆ ಒದಗುತ್ತದಾಗಿ ಇನ್ನೂ ವೃದ್ಧಿಯಾಗುತ್ತ ಹೋಗುತ್ತದೆ. ಈ ಎರಡನೆಯ ಗುಂಪಿನ ಜನರ ಬುದ್ಧಿಶಕ್ತಿ ಕುದುರುವುದಕ್ಕೂ ಅವರು ಪ್ರತ್ಯಾಶೆಯಿಲ್ಲದ ಹೆಚ್ಚಿನ ದುಡಿಮೆಗಳಿಗೂ ಅವರಲ್ಲಿರುವ ಹೆಚ್ಚಿನ ಕುತೂಹಲಶಕ್ತಿ ಪ್ರಮುಖ ಆಧಾರವಾಗಿರಲಿಕ್ಕೂ ಸಾಕು. ಅಷ್ಟೇ ಅಲ್ಲದೆ, ಕುತೂಹಲ ವಿಜ್ಞಾನ ಹಾಗೂ ಮತ ಧರ್ಮಗಳಿಗೂ ಪ್ರಮುಖ ಆಧಾರವಾಗಿದೆ–ಎನ್ನುವುದು ಮೆಗ್ಡುಗಲನ ಅಭಿಪ್ರಾಯ.

ಕುತೂಹಲ ಸಾಮರ್ಥ್ಯ ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುತ್ತದೆ–ಎನ್ನುವ ಅಂಶವನ್ನು ರೇಮಾಂಡ್ ಕೆಟೆಲ್ ಎಂಬ ಸಂಶೋಧಕನೂ ಪ್ರತಿಪಾದಿಸಿದ್ದಾನೆ. ಆತ ನಡೆಸಿದ ಅಭಿಪ್ರೇರಣೆಯ ಮೇಲಿನ ಅಧ್ಯಯನಗಳಲ್ಲಿ ಅನ್ವೇಷಣೆ ಎಂದು ಕರೆಯಲಾಗುವ ಒಂದು ಆಕಾಂಕ್ಷೆಯನ್ನು (ವಾಂಟ್) ಗುರುತಿಸಿದ್ದಾನೆ. ಈ ಅನ್ವೇಷಣೆ ಅಥವಾ ಕುತೂಹಲಾಕಾಂಕ್ಷೆ ನಮ್ಮ ನಿತ್ಯಜೀವನದಲ್ಲಿ ನಾನಾ ರೀತಿಯಾಗಿ ಅಭಿವ್ಯಕ್ತಗೊಳ್ಳುತ್ತದೆ. ಪುಸ್ತಕ ಓದುವುದು, ಸುದ್ದಿ ಸಂಗ್ರಹಿಸುವುದು, ಸಂಗೀತ ಕೇಳುವುದು, ವಿಜ್ಞಾನದ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಪ್ರಯತ್ನಿಸುವುದು, ಸಿನೆಮಾ ಮತ್ತು ನಾಟಕಗಳನ್ನು ನೋಡುವುದು–ಇವುಗಳೆಲ್ಲ ಅನ್ವೇಷಣಾಕಾಂಕ್ಷೆಯನ್ನು ಪ್ರತಿಬಿಂಬಿಸುತ್ತವೆ.

ಬರ್ಲೈನ್ ಎಂಬ ಪ್ರಾಯೋಗಿಕ ಮನೋವಿಜ್ಞಾನಿ ಅನ್ವೇಷಣಾ ವರ್ತನೆಯನ್ನು ಮೂರು ಮುಖ್ಯ ಗುಂಪುಗಳಾಗಿ ವಿಭಾಗಿಸಿದ್ದಾನೆ: ಅಭಿಮುಖ ಪ್ರತಿಕ್ರಿಯೆಗಳು (ಓರಿಯೆಂಟಿಂಗ್ ರೆಸ್ಪಾನ್ಸಸ್), ಚಲನಾತ್ಮಕ ಅನ್ವೇಷಣೆ (ಲೋಕೊಮೋಟಾರ್) ತನ್ನ ಪರಿಸರದಲ್ಲಿ ಉದ್ಭವಿಸುವ ಅಲ್ಪ ಬದಲಾವಣೆಗಳಿಗೆ ಸಹ ಸಂಬಂಧಪಟ್ಟ ತನ್ನ ಜ್ಞಾನೇಂದ್ರಿಯಗಳನ್ನು ನಿರ್ದೇಶಿಸುವ ಜೀವಿಯ ಹೊಂದಾಣಿಕೆಯ ಒಂದು ಪ್ರವೃತ್ತಿಯನ್ನು ಅಭಿಮುಖ ಪ್ರತಿಕ್ರಿಯೆಗಳಲ್ಲಿ ಕಾಣಬಹುದು. ಶಬ್ದ ಬಂದ ದಿಕ್ಕಿನತ್ತ ಜೀವಿ ತನ್ನ ಕತ್ತನ್ನು ತಿರುಗಿಸಬಹುದು. ಅದರ ಕಣ್ಣಿನ ಪಾಪೆ ಹಿಗ್ಗಬಹುದು. ಇದೇ ಮೊದಲಾದ ಇನ್ನೂ ಅನೇಕ ದೈಹಿಕ ಹೊಂದಾಣಿಕೆಗಳು ಉಂಟಾಗಬಹುದು. ಈ ಹೊಂದಾಣಿಕೆಗಳಿಂದಾಗಿ ಜೀವಿಯ ಅವಧಾನ ಮತ್ತು ಸಂವೇದನಾ ತೀಕ್ಷ್ಣತೆ ಹೆಚ್ಚಾಗುತ್ತದೆ. ಈ ಅಭಿಮುಖ ಪ್ರತಿಕ್ರಿಯೆಗಳು ಜೀವಿ ತನ್ನ ಪರಿಸರದ ಬಗೆಗೆ ಹೆಚ್ಚು ತಿಳಿವಳಿಕೆ ಪಡೆಯಲು ಸಹಕಾರಿಯಾಗುತ್ತವೆ. ಚಲನಾತ್ಮಕ ಅನ್ವೇಷಣೆಯಲ್ಲಿ ಭೌತಿಕ ಚಲನೆಯಿರುತ್ತದೆ. ಬಗೆಬಗೆಯ ವಸ್ತುಗಳನ್ನೊಳಗೊಂಡಿರುವ ಕ್ಲಿಷ್ಟವಾದ ವ್ಯೂಹವೊಂದರ ಅನ್ವೇಷಣೆಯ ಸಲುವಾಗಿ, ವಿದ್ಯುತ್ ಘಾತ ಕೊಡುವ ನೋವನ್ನು ಸಹ ಸಹಿಸಿಕೊಂಡು ವಿದ್ಯುತ್ ಜಾಲವನ್ನು ದಾಟಿಕೊಂಡು ಹೋಗುವ ಇಲಿಗಳ ವರ್ತನೆ ಚಲನಾತ್ಮಕ ಅನ್ವೇಷಣೆಗೆ ಒಂದು ಉತ್ತಮ ನಿದರ್ಶನವಾಗಿದೆ.

ಅಭಿಮುಖಪ್ರತಿಕ್ರಿಯೆ ಹಾಗೂ ಚಲನಾತ್ಮಕ ಅನ್ವೇಷಣೆಗಳಲ್ಲಿ ತೊಡಗಿದ ಜೀವಿಯಲ್ಲಿ ಬದಲಾವಣೆ ಉಂಟಾಗುತ್ತದೆ. ಉದಾಹರಣೆಗೆ, ಕಣ್ಣಿನ ಪಾಪೆ ಹಿಗ್ಗುವಿಕೆ, ಪ್ರಚೋದವಸ್ತುವನ್ನು ಸಮೀಪಿಸುವುದು, ಇತ್ಯಾದಿ, ಅದರೆ ಕುತೂಹಲವನ್ನು ಪ್ರಚೋದಿಸುವ ವಸ್ತುವಿನಲ್ಲಾಗಲಿ ಅಂಥ ವಸ್ತು ಇರುವ ವಾತಾವರಣದಲ್ಲಿಯಾಗಲಿ ಯಾವುದೇ ಬಗೆಯ ಬದಲಾವಣೆಗಳು ಉಂಟಾಗುವುದಿಲ್ಲ. ಆದರೆ ಸಂಶೋಧನ ಪ್ರತಿಕ್ರಿಯೆಗಳ ವಿಚಾರವೇ ಬೇರೆ. ಈ ಪ್ರತಿಕ್ರಿಯೆಗಳು ಕುತೂಹಲವನ್ನು ಪ್ರಚೋದಿಸುವ ವಸ್ತುವಿನಲ್ಲಿ ಅಥವಾ ಆ ವಸ್ತುವಿಗೂ ಮತ್ತು ಜೀವಿಗೂ ನಡುವೆ ಇರುವ ಇನ್ನಾವುದೋ ವಸ್ತುವಿನಲ್ಲಿ ಬದಲಾವಣೆಯನ್ನುಂಟು ಮಾಡುತ್ತವೆ. ಕತ್ತಲೆಯಲ್ಲಿ ಯಾವುದೋ ಶಬ್ದವನ್ನು ಕೇಳಿದಾಗ, ಆ ಶಬ್ದದತ್ತ ಕಿವಿಯನ್ನು ತಿರುಗಿಸುವುದು ಅಭಿಮುಖ ಪ್ರತಿಕ್ರಿಯೆ. ಆ ಶಬ್ದ ಬಂದ ಸ್ಥಳದತ್ತ ಧಾವಿಸುವುದು ಚಲನಾತ್ಮಕ ಪ್ರತಿಕ್ರಿಯೆ, ಆದರೆ ಅದು ಏನು ಶಬ್ದ ಎಂದು ಖಚಿತವಾಗಿ ನಿರ್ಧರಿಸುವ ಸಲುವಾಗಿ ದೀಪವನ್ನು ಹಚ್ಚುವುದು ಅಥವಾ ರೇಡಿಯೋದ ಧ್ವನಿಯನ್ನು ಕಡಿಮೆ ಮಾಡುವುದು ಸಂಶೋಧನ ಪ್ರತಿಕ್ರಿಯೆ. ಕುತೂಹಲವನ್ನು ಕೆರಳಿಸುವ ವಸ್ತುವನ್ನು ಅಥವಾ ಅದಕ್ಕೆ ಸಂಬಂಧಿಸಿದ ವಾತಾವರಣವನ್ನು ಬಗೆಬಗೆಯಾಗಿ ನಿರ್ವಹಿಸಿ ಅವನ್ನು ಪರೀಕ್ಷಿಸುವ ಕೆಲಸ ಸಂಶೋಧನ ವರ್ತನೆಯಲ್ಲಿ ನಡೆಯುತ್ತದೆ.

ತಮ್ಮ ಪರಿಸರದಲ್ಲಿ ತೋರಿಬರುವ ನವೀನ ವಸ್ತುಗಳನ್ನು ಬಗೆಬಗೆಯಾಗಿ ಪ್ರಯೋಗಿಸುವುದನ್ನು ಕೋತಿಗಳಲ್ಲಿ ಕಾಣುತ್ತೇವೆ. ಶಿಶುಗಳಲ್ಲಿ ಹಾಗೂ ಸ್ವಲ್ಪ ಬೆಳೆದ ಮಕ್ಕಳಲ್ಲಿ ಈ ಸಂಶೋಧನ ವರ್ತನೆ ಎಷ್ಟು ಸಾಧಾರಣವಾಗಿದೆಯೆಂದರೆ, ಅದಕ್ಕೆ ನಿದರ್ಶನಗಳು ಬೇಕಿಲ್ಲ. ಪಿಯಾಜೆ ಎಂಬ ಸಿದ್ಧಾಂತಿ ಹೇಳುವಂತೆ, ಮಗು ವಾತಾವರಣದಿಂದ ಪ್ರಭಾವಿತವಾಗುವುದೇ ಅಲ್ಲದೆ, ಅದು ವಾತಾವರಣದ ಮೇಲೆ ತನ್ನ ಪ್ರಭಾವವನ್ನು ಸಹ ಬೀರುತ್ತದೆ. ಸುಮಾರು ಐದರಿಂದ ಏಳು ತಿಂಗಳಿನ ಮಗು ತನ್ನ ದೃಷ್ಟಿಗೆ ಅಡ್ಡಬರುವ ಬಟ್ಟೆಯ ತುಂಡನ್ನು ಹಿಡಿದು ಎಳೆಯುತ್ತದೆ. ಸುಮಾರು ಎಂಟರಿಂದ ಹತ್ತು ತಿಂಗಳಿನ ಮಗು ತನ್ನ ಕಣ್ಣಿಗೆ ಬೀಳದ ವಸ್ತುವನ್ನು, ಅದು ಸಾಮಾನ್ಯವಾಗಿ ಕಂಡುಬರುವ ಸ್ಥಳದಲ್ಲಿಗೆ ಅರಸಿಕೊಂಡು ಹೋಗುತ್ತದೆ. ಸುಮಾರು ಹನ್ನೊಂದು ತಿಂಗಳಿನ ಸಮಯಕ್ಕೆ ಇನ್ನೂ ಹೆಚ್ಚು ಕ್ರಮಬದ್ಧವಾದ ಅನ್ವೇಷಣೆಯಲ್ಲದು ತೊಡಗುತ್ತದೆ. ಯಾವುದೋ ಒಂದು ಪ್ರಚೋದಕ ವಸ್ತುವಿನ ಮೇಲೆ ಬಗೆಬಗೆಯ ಪ್ರತಿಕ್ರಿಯೆಗಳ ಪರಿಣಾಮವನ್ನು ಅದು ಪರೀಕ್ಷಿಸುತ್ತದೆ. ಅಪರಿಚಿತ ವಸ್ತುವೊಂದನ್ನು ತಳ್ಳುತ್ತದೆ, ಒದೆಯುತ್ತದೆ, ಎತ್ತಿಎಸೆಯುತ್ತದೆ. ಹೀಗೆಲ್ಲ ಮಾಡುವುದರಿಂದ ಏನಾಗುತ್ತದೆ ಎಂದು ಕುತೂಹಲದಿಂದ ವೀಕ್ಷಿಸುತ್ತದೆ. ತನ್ನ ಪ್ರತಿಕ್ರಿಯೆಯಿಂದ ಉಂಟಾಗುವ ಪರಿಣಾಮದ ಸ್ಥಿರತೆಯನ್ನು ಪರೀಕ್ಷಿಸಲು ಪುನಃ ಒಂದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಅದರ ಪರಿಣಾಮವನ್ನು ಅವಲೋಕಿಸುತ್ತದೆ. ಇನ್ನೂ ಹೆಚ್ಚಿನ ಮಟ್ಟದ ಬೆಳೆವಣಿಗೆಯನ್ನು ತಲಪಿದಾಗ ಕಾರ್ಯಕಾರಣ ಸಂಬಂಧಗಳನ್ನು ಹುಡುಕಿ ನೋಡುತ್ತದೆ.

ಜೀವಿಯ ಕುತೂಹಲಬುದ್ಧಿ ಕೆರಳುವುದಕ್ಕೂ ಅದು ಬದುಕುವ ವಾತಾವರಣಕ್ಕೂ ಬಹುಮಟ್ಟಿನ ಸಂಬಂಧವಿದೆ. ಬಗೆಬಗೆಯ ವಸ್ತುಗಳಿಂದ ಕೂಡಿದ ಕ್ಲಿಷ್ಟವಾದ ಸಂದರ್ಭಗಳು ಆಶ್ಚರ್ಯವನ್ನು ಕೆರಳಿಸುತ್ತವೆ. ಮೆಗ್ಡುಗಲನ ಪ್ರಕಾರ ಆಶ್ಚರ್ಯ ಕುತೂಹಲಕ್ಕೆ ಸಂಬಂಧಿಸಿದ ಸಂವೇಗವಾಗಿದೆ. ಜೀವಿ ತಾನು ಅನುಭವಿಸುವ ಆಶ್ಚರ್ಯಕ್ಕೆ ವಿವರಣೆಗಳನ್ನು ಅದು ಅರಸುತ್ತದೆ. ಪ್ರಚೋದಕ ವಸ್ತುವಿನ ಯಾವ ಅಂಶಗಳು ಕುತೂಹಲ ಪ್ರತಿಕ್ರಿಯೆಯನ್ನು ಕೆರಳಿಸುತ್ತವೆ ಎನ್ನುವ ಬಗೆಗೆ ಅಧ್ಯಯನಗಳು ನಡೆದಿವೆ. ಪ್ರಚೋದಕವಸ್ತು ನವೀನವಾದಷ್ಟೂ ಕೂತೂಹಲ ಹೆಚ್ಚುತ್ತದೆ ಎಂಬುದು ಆ ಎಲ್ಲ ಅಧ್ಯಯನದ ತಿರುಳು. ನವೀನತೆ ಎನ್ನುವುದು ವೈಯಕ್ತಿಕ ವಿಚಾರ. ಯಾರಿಗೆ ಯಾವುದು ನವೀನವಾಗಿರುತ್ತದೆ ಎಂದು ಖಚಿತವಾಗಿ ಹೇಳಲಾಗದು. ಮುಖ್ಯವಾಗಿ, ಜೀವಿಯ ಜ್ಞಾನೇಂದ್ರಿಯಗಳಿಗೆ ಅಪರಿಚಿತವಾಗಿರುವ ವಸ್ತು ಅದಕ್ಕೆ ಹೊಸತಾಗಿ ಕಾಣುವುದು ಸಹಜ. ಬಹಳ ಸಮಯದಿಂದ ಅನುಭವಕ್ಕೆ ಬಾರದ ವಸ್ತುಗಳು ಸಹ ಹೊಸದಾಗಿ ಕಾಣುತ್ತವೆ. ಪರಿಚಯವಿಲ್ಲದುದರ ಜೊತೆಗೆ ವಸ್ತುವಿನ ಅಸಾಧಾರಣ ವಿನ್ಯಾಸಗಳು ಕೂಡ ಅವು ನವೀನವಾಗಿ ಕಾಣುವಂತೆ ಮಾಡುತ್ತವೆ. ನಾಲ್ಕು ಕಾಲಿನ ಪಕ್ಷಿ ಅಸಾಧಾರಣ ವಿನ್ಯಾಸಕ್ಕೊಂದು ಉದಾಹರಣೆಯಾಗಿದೆ. ಬರ್ಲೈನನ ಅಧ್ಯಯನಗಳಲ್ಲಿ ಪ್ರಚೋದಕವಸ್ತುವಿನ ನಾಲ್ಕು ಲಕ್ಷಣಗಳನ್ನು ಕುತೂಹಲ ಕೆರಳಿಕೆಯ ಪ್ರಮುಖ ನಿರ್ಧಾರಕಗಳಾಗಿ ಗುರುತಿಸಲಾಗಿದೆ. ಅವು ಅಸಂಬದ್ಧತೆ (ಇನ್‌ಕಾಂಗ್ರುಯಿಟಿ), ಸಂಕೀರ್ಣತೆ (ಕಾಂಪ್ಲೆಕ್ಸಿಟಿ), ಅನಿರೀಕ್ಷತೆ (ಸರ್‌ಪ್ರೈಸ್) ಮತ್ತು ಅವ್ಯವಸ್ಥೆ (ಇರ್‍ರೆಗ್ಯುಲ್ಯಾರಿಟಿ).

ಪ್ರಚೋದಕ ವಸ್ತುವಿನಿಂದಾಗಲಿ ಅನ್ವೇಷಣೆಯ ಗತಿಯಲ್ಲಿ ಇನ್ನಾವುದೇ ವಸ್ತುವಿನಿಂದಲಾಗಲಿ ಸಂಭವಿಸಬಹುದಾದ ನೋವು ಅಥವಾ ಭಯ ಸಂಶೋಧನೆಯ ಮುಂದುವರಿಯುವಿಕೆಗೆ ಅಡ್ಡಿಯಾಗುತ್ತದೆ. ಮಾಂಟೆಗೋಮರಿ ಮತ್ತು ಮಾಂಕ್‌ಮನ್ ಎಂಬ ಸಂಶೋಧಕರು ನವೀನ ತೆರನಾದ ವ್ಯೂಹವೊಂದಕ್ಕೆ ವಿದ್ಯುತ್‌ಘಾತವನ್ನು ಹರಿಯಬಿಟ್ಟಾಗ ಆ ವ್ಯೂಹದ ಅನ್ವೇಷಣೆಯಲ್ಲಿ ತೊಡಗಿದ್ದ ಪ್ರಾಣಿಗಳ ಅನ್ವೇಷಣಾ ವರ್ತನೆ ಕಡಿಮೆಯಾಯಿತು. ಇದೇ ರೀತಿಯಾಗಿ ಹೆದರಿಕೆಯೂ ಕುತೂಹಲವನ್ನು ಕುಗ್ಗಿಸುತ್ತದೆ. ಬಾಗಿಲನ್ನು ತೆರೆದು ಹೊರಕ್ಕೆ ನೋಡುತ್ತಿದ್ದ ಕೋತಿಗಳು ನಾಯಿಗಳು ಬೊಗಳಿದೊಡನೆ ಹಾಗೆ ಮಾಡುವುದನ್ನು ನಿಲ್ಲಿಸಿದುದಾಗಿ ಬಟ್ಲರ್ ಎಂಬ ಸಂಶೋಧಕ ವರದಿ ಮಾಡಿದ್ದಾನೆ. ಅಪರಿಚಿತ ಪ್ರಾಣಿಯನ್ನು ನೋಡುವುದು ಅಥವಾ ಅದರ ಶಬ್ದವನ್ನು ಕೇಳುವುದು ಭಯೋತ್ಪಾದನೆಗೆ ಕಾರಣವಾಗುತ್ತದೆ. ಅನ್ವೇಷಣೆಯ ಗತಿಯಲ್ಲಿ ನೋವನ್ನು ಎದುರಿಸಿದಾಗ ಮಕ್ಕಳು ಮತ್ತು ವಯಸ್ಕರಲ್ಲಿ ಸಹ ಕುತೂಹಲದ ಅಭಿವ್ಯಕ್ತಿ ನಿಂತು ಹೋಗುತ್ತದೆ. ಆದರೆ ಹಾನಿ ಅಷ್ಟಾಗಿ ಉಂಟಾಗದಿದ್ದರೆ, ಬೇರೆ ಮಾರ್ಗಗಳನ್ನು ಅನುಸರಿಸಿ ಕುತೂಹಲಕಾರಿ ವಸ್ತುವಿನ ಅನ್ವೇಷಣೆಯನ್ನು ಜೀವಿ ಮುಂದುವರಿಸಬಹುದು. ಅಷ್ಟೇ ಅಲ್ಲದೆ, ನೋವಿಗೆ ಕಾರಣವಾದ ವಸ್ತುವಿನ ಬಗೆಗೆ ಇನ್ನೂ ಹೆಚ್ಚಿನ ಕುತೂಹಲವನ್ನು ತಳೆಯಲೂಬಹುದು. (ಎಚ್.ಎಸ್.ಐ.)

**ಕುದಿಪ್ಪು :** ಬಂಗುಡೆ ಜಾತಿಗೆ ಸೇರಿದ ಎಲುಬು ಮೀನು (ಲ್ಯಾಕ್ಟೇರಿಯಸ್). ಭಾರತ ಮಲಯದ್ವೀಪ, ಮಲೇಷ್ಯ ಸಮುದಾಯ ಹಾಗೂ ಚೀನ ಸಮುದ್ರಗಳಲ್ಲಿ ಇದರ ವಾಸ. ಪೆಸಿಫಿಕ್ ಮಹಾಸಾಗರದ ಬಂಡೆ ದ್ವೀಪಗಳಲ್ಲೂ ಇದನ್ನು ಕಾಣಬಹುದು. ಈ ಸಮುದ್ರತೀರಗಳಲ್ಲಿ ವಾಸಿಸುವ ಜನರು ಕುದಿಪ್ಪು ಮೀನನ್ನು ಹಸಿಯಾಗಿಯೋ ಉಪ್ಪುಹಾಕಿ ಒಣಗಿಸಿಯೋ ಆಹಾರವಾಗಿ ಉಪಯೋಗಿಸುತ್ತಾರೆ. ಈ ಮೀನು ಸ್ವಲ್ಪ ಸಪ್ಪೆಯಾಗಿರುವುದರಿಂದ ತಿನ್ನಲು ಅಷ್ಟು ರುಚಿಯಾಗಿರುವುದಿಲ್ಲ. ಮಲಬಾರಿನ ಕ್ವಿಲಾನ್ ಸಮುದ್ರತೀರದಲ್ಲಿ ಫೆಬ್ರುವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಮಾತ್ರ ಈ ಮೀನುಗಳು ಹಿಂಡು ಹಿಂಡಾಗಿ ಬರುತ್ತವೆ. ಉಳಿದ ತಿಂಗಳುಗಳಲ್ಲಿ ಅವು ಅತಿ ವಿರಳ. ಮೀನಿನ ಶರೀರ ಸ್ವಲ್ಪಮಟ್ಟಿಗೆ ನೀಳ ಚಪ್ಪಟೆ. ಇದರ ಉದ್ದ ಸುಮಾರು 10", ತಲೆಯ ಉದ್ದ 1/4", ಬಾಲ 1/4". ಶರೀರದ ಎತ್ತರ ಆ ಪ್ರಾಣಿಯ ಒಟ್ಟು ಉದ್ದದ 2/7 ಭಾಗದಷ್ಟಿರುತ್ತದೆ. ಮೀನಿನ ರೂಪರೇಖೆ ಬೆನ್ನಿನ ಮೇಲಿರುವ ಈಜುರೆಕ್ಕೆಯ ತನಕ ಕ್ರಮವಾಗಿ ಉಬ್ಬಿರುತ್ತದೆ. ಬಾಯಿ ದೊಡ್ಡದು ಮತ್ತು ಓರೆ. ಮೇಲುದವಡೆ ಕಣ್ಣಿನ ಮಧ್ಯದ ಕೆಳಭಾಗದ ತನಕ ಚಾಚಿಕೊಂಡಿದೆ. ಮೀನು ತನ್ನ ಬಾಯಿಯನ್ನು ಮುಚ್ಚಿಕೊಂಡಿರುವಾಗ ಅದರ ಕೆಳದವಡೆಯ ತುದಿ ಮೇಲ್ಭಾಗದಲ್ಲಿರುವಂತೆ ಕಾಣುತ್ತದೆ. ತಲೆಯ ಹಿಂಭಾಗದ ಶಿಖೆ ಪರಿಪೂರ್ಣವಾಗಿ ಬೆಳೆದಿರುತ್ತದೆ. ಕೆಳದವಡೆಯ ಪಾರ್ಶ್ವದಲ್ಲಿ ಒಂದೇ ಪಙ್ತಿಯ ಬಾಗಿರುವ ಹಲ್ಲುಗಳಿವೆ. ನಾಲಗೆ, ಪಾಲಟೈನ್ ಮತ್ತು ವೋಮರ್ (ಬಾಯಂಗಳ) ಮೂಳೆಗಳಲ್ಲಿ ಹಲ್ಲುಗಳಿರುತ್ತವೆ. ಮ್ಯಾಕ್ಸಿಲ ಮೂಳೆಗಳಲ್ಲಿ ಹಲ್ಲುಗಳಿರುವುದಿಲ್ಲ. ನೀರಿನಲ್ಲಿ ಸರಾಗವಾಗಿ ಚಲಿಸಲು ಈ ಮೀನಿಗೆ ಮುಳ್ಳುಗಳಿರುವ ಈಜುರೆಕ್ಕೆಗಳಿವೆ. ಇವು ಪಾರದರ್ಶಕ. ಬೆನ್ನಿನ ಮೇಲಿರುವ ಮೊದಲನೆಯ ಈಜುರೆಕ್ಕೆಯ ಮುಳ್ಳು ಬಲಹೀನವಾಗಿದೆ; ಮೂರನೆಯದು ಉದ್ದವಾಗಿದೆ. ಈಜುರೆಕ್ಕೆಯ ಪೊರೆ ಕಚ್ಚುಕಚ್ಚಾಗಿದೆ. ಎರಡನೆಯ ಈಜುರೆಕ್ಕೆ ಮುಂಭಾಗದಲ್ಲಿ ಎತ್ತರವೂ ಮೊದಲನೆಯ ಈಜುರೆಕ್ಕೆಗೆ ಸಮವೂ ಆಗಿದೆ; ಇದರ ಎತ್ತರ ಇಡೀ ಶರೀರದ ಎತ್ತರದಲ್ಲಿ ಅರ್ಧದಷ್ಟಿದೆ. ಗುದದ್ವಾರದ ಬಳಿ ಇರುವ ಈಜುರೆಕ್ಕೆ ಬೆನ್ನಿನ ಮೇಲಿರುವ ಎರಡನೆಯ ಈಜುರೆಕ್ಕೆಯನ್ನು ಹೋಲುತ್ತದೆ. ಮೀನಿನ ಶರೀರದ ಹೊರಗಡೆ ಸೂಕ್ಷ್ಮವಾದ ಸೈಕ್ಲಾಯಿಡ್ ಹುರುಪೆಗಳಿವೆ. ಇವುಗಳ ಹೊದಿಕೆ ಎಲ್ಲ ಮೀನುಗಳಲ್ಲಿರುವಂತೆ ಈ ಮೀನಿನಲ್ಲಿಯೂ ತ್ವರಿತ ಚಲನೆಗೆ ಸಹಾಯಕವಾಗಿರುವುದಲ್ಲದೆ ಶರೀರಕ್ಕೆ ರಕ್ಷಣೆಯನ್ನೂ ನೀಡುತ್ತದೆ. ಪಾರ್ಶ್ವಿಕ ಜ್ಞಾನೇಂದ್ರಿಯಗಳು ಚಿಕ್ಕ ಹಾಗೂ ಪ್ರತ್ಯೇಕವಾದ ಕೊಳವೆಗಳಲ್ಲಿ ಇವೆ. ಹೊಟ್ಟೆಯಲ್ಲಿ ಹತ್ತು ಬೆನ್ನೆಲುಬುಗಳೂ ಬಾಲದಲ್ಲಿ ಹದಿನಾಲ್ಕು ಬೆನ್ನೆಲುಬುಗಳೂ ಇವೆ. ಇವು ಪೋಣಿಸಿದ ಮಣಿಗಳಂತೆ ಕಾಣುತ್ತವೆ. ಸಮುದ್ರದಲ್ಲಿ ತೇಲುತ್ತಿರುವ ಅಸಂಖ್ಯಾತ ಜೀವರಾಶಿಗಳು ಈ ಮೀನುಗಳ ಆಹಾರ. (ಕೆ.ಪಿ.ಆರ್.)

**ಕುದುರೆ :** ಏಕ ಖುರಗಳ ಗುಂಪಿಗೆ ಸೇರಿದ ಸ್ತನಿ; ಶಾಸ್ತ್ರೀಯನಾಮ ಈಕ್ವಸ್ ಕೆಬಲ್ಲಸ್. ಇದರ ಪ್ರಾಣಿಶಾಸ್ತ್ರ ವೃತ್ತಾಂತಕ್ಕೆ (**ನೋಡಿ– ಈಕ್ವಿಡೇ**). ಪ್ರಾಚೀನ ಕಾಲದಿಂದಲೂ ಕುದುರೆ ಮನುಷ್ಯನ ಜೀವನದೊಡನೆ ಹಾಸುಹೊಕ್ಕಾಗಿ ಬೆಸೆದು ಹೋಗಿದೆ. ಇತಿಹಾಸವೇ ಆಗಲಿ ನಾಗರಿಕತೆಯ ವಿಕಾಸದ ವಿಶ್ಲೇಷಣೆಯೇ ಆಗಲಿ ಕುದುರೆಯ ಪ್ರಸ್ತಾಪದ ವಿನಾ ಅಪೂರ್ಣ. ಅನಾಗರಿಕತೆಯಿಂದ ನಾಗರಿಕತೆಯೆಡೆಗಿನ ಮಾನವನ ನಡೆಯಲ್ಲಿ ಆತನ ಹೆಜ್ಜೆಯ ಗುರುತುಗಳೊಡನೆ ಕುದುರೆ ಗೊರಸಿನ ಗುರುತುಗಳೂ ಎರಕಗೊಂಡಿವೆ ಎಂಬ ಪ್ರಚಲಿತ ಹೇಳಿಕೆ ಈ ಕಾರಣದಿಂದ ಬಂದುದಾಗಿರಬೇಕು. ಭಾರ ಹೊರಲು, ಸವಾರಿ ಮಾಡಲು, ವ್ಯವಸಾಯದಲ್ಲಿ ನಾನಾ ಬಗೆಯ ಕೆಲಸಗಳನ್ನು ನಿರ್ವಹಿಸಲು ಕುದುರೆಯಂಥ ಉಪಯುಕ್ತ ಹಾಗೂ ಸರ್ವಶಕ್ತ ಪ್ರಾಣಿ ಇನ್ನೊಂದಿಲ್ಲ.

ಕುದುರೆಯ ಪ್ರಾಚೀನ ಚರಿತ್ರೆಯನ್ನು ಅಪ್ರತ್ಯಕ್ಷ ನಿದರ್ಶನಗಳಿಂದ ಊಹಿಸಬೇಕಷ್ಟೆ. ಭೂಮಿಯ ಮೇಲೆ ಕುದುರೆ ಮಾನವನ ಉಗಮಕ್ಕಿಂತ ಅವೆಷ್ಟೋ ಶತಮಾನಗಳ ಮೊದಲೇ ಆಗಮಿಸಿದ್ದರೂ ಸು. 2000–3000 ವರ್ಷಗಳಿಂದಾಚೆಗೆ ಕುದುರೆಯ ವೃತ್ತಾಂತವನ್ನು ಖಚಿತವಾಗಿ ಹೇಳಬರುವುದಿಲ್ಲ. ದೊರೆತಿರುವ ಪಳೆಯುಳಿಕೆಗಳನ್ನು ಕ್ರಮಬದ್ಧವಾಗಿ ಅಳವಡಿಸಿ ಕುದುರೆಯ ಉಗಮವನ್ನು ವಿವರಿಸಲು ಮಾಡಿರುವ ಹಲವಾರು ಪ್ರಯತ್ನಗಳೂ ಕರಾರುವಾಕ್ಕಾಗಿ ನಿರ್ಧಾರವನ್ನು ನೀಡಲು ಸಮರ್ಥವಾಗಿಲ್ಲ. ಇದು ಹೇಗೂ ಇರಲಿ. ಆಧುನಿಕ ಕುದುರೆಯ ಪೂರ್ವಜ ಏಷ್ಯಖಂಡದಲ್ಲಿತ್ತೆಂದು ನಂಬಲಾಗಿದೆ. ಉತ್ತರ ಮಧ್ಯ ಏಷ್ಯದಲ್ಲಿ ಕುದುರೆಯ ಪೂರ್ವ ಪೀಳಿಗೆಯ ಉಗಮವಾಗಿ ಅಲ್ಲಿಂದ ಮೂರು ಪ್ರಧಾನ ಕವಲುಗಳಾಗಿ ಒಡೆದು ಒಂದು ಪೂರ್ವಕ್ಕೂ, ಇನ್ನೊಂದು ಪಶ್ಚಿಮಕ್ಕೂ, ಮೂರನೆಯದು ನೈಋತ್ಯಕ್ಕೂ ವಲಸೆ ಹೋದವು. ಪೂರ್ವಕ್ಕೆ ಹೋದ ಕವಲು ಮುಂದೆ ಚೀನ ಹಾಗೂ ಇತರ ಮಂಗೋಲಿಯ ಜಾತಿಯ ಕುದುರೆಗಳಿಗೆ ಜನ್ಮನೀಡಿತು. ಪಶ್ಚಿಮದ ಕವಲು ಇಡೀ ಯುರೋಪ್ ಖಂಡವನ್ನು ವ್ಯಾಪಿಸಿ ಅಲ್ಲಿ ಹಲವಾರು ಬಗೆಯ ಕುದುರೆ ಜಾತಿಗಳು ರೂಪುಗೊಂಡವು. ನೈಋತ್ಯದ ಕವಲು ಏಷ್ಯ ಮೈನರ್, ಇರಾನ್, ಭಾರತ, ಅರೇಬಿಯ, ಆಫ್ರಿಕ–ಈ ವಲಯಗಳಲ್ಲಿ ಕುದುರೆಯ ನಾನಾ ತಳಿಗಳ ಜನ್ಮಕ್ಕೆ ಕಾರಣವಾಯಿತು.

ಮುಂದೆ ಮಾನವನ ಉಗಮವಾದ ಮೇಲೆ ನಾಗರಿಕತೆ ವರ್ಧಿಸಿದಂತೆ ಕುದುರೆ ಆತನ ನಿಕಟ ಸಹವರ್ತಿಯಾಗಿ ವಿಕಾಸಗೊಂಡಿತು. ಅಂದು ಸ್ವಚ್ಛಂದಜೀವಿಯಾಗಿ ಅಲೆಯುತ್ತಿದ್ದ ಕುದುರೆಗಳು ಬಹುಶಃ ಇಂದು ಎಲ್ಲಿಯೂ ಇಲ್ಲ. ಪಳಗಿದ ಆಧುನಿಕ ಕುದುರೆ ಹವೆಯ ತೀವ್ರ ಏರಿಳಿತಗಳನ್ನು ನಿರೋಧಿಸಿ ಯಾವ ಸನ್ನಿವೇಶಕ್ಕೂ ಹೊಂದಿಕೊಳ್ಳಬಲ್ಲುದಾದ್ದರಿಂದ ಅದನ್ನು ಮನುಷ್ಯಾವೃತ ಪ್ರಪಂಚವಿಡೀ ನೋಡಬಹುದು.

**ವರ್ಗೀಕರಣ:** ಇಂದು ಪ್ರಪಂಚದಲ್ಲಿರುವ ಕುದುರೆಯ ಎಲ್ಲ ತಳಿಗಳನ್ನೂ ವರ್ಗೀಕರಿಸುವ ಪ್ರಯತ್ನ ನಡೆದಿಲ್ಲ. ಗಾತ್ರ, ಮಾದರಿ, ಉಗಮಸ್ಥಳ, ಉಪಯೋಗ ಮುಂತಾದ ಹಲವಾರು ದೃಷ್ಟಿಕೋನಗಳಿಂದ ವರ್ಗೀಕರಣ ಮಾಡುವುದು ಸಾಧ್ಯವಿದೆ. ಕುದುರೆಗಳನ್ನು ಸಾಮಾನ್ಯವಾಗಿ ಹೇರುಕುದುರೆ (ಡ್ರಾಫ್ಟ್‌ಹಾರ್ಸ್), ಲಘುಕುದುರೆ ಮತ್ತು ಸಣ್ಣತಳಿ ಕುದುರೆ (ಪೋನಿ, ಎತ್ತರ 56" ಮೀರದ ಕುದುರೆ) ಎಂದು ವರ್ಗೀಕರಿಸುವುದುಂಟು. ಈ ವರ್ಗೀಕರಣ ಬಲು ನಿಷ್ಕೃಷ್ಟವೆಂದೇನೂ ಭಾವಿಸಬೇಕಾಗಿಲ್ಲ. ಆರಂಭದ ಕುದುರೆಗಳು ಎತ್ತರದಲ್ಲಿ (ಭುಜಾಸ್ಥಿಗಳ ಸಮೀಪ) ಸರಿ ಸುಮಾರಾಗಿ 48" ಇದ್ದುವು. 56" ಎತ್ತರವಿದ್ದ ಕುದುರೆಗಳು ತೀರ ವಿರಳ. ಆದರೆ ಅವುಗಳ ಇಂದಿನ ಪೀಳಿಗೆಯಾದರೋ 68"–80" ಎತ್ತರ ಬೆಳೆಯುತ್ತವೆ. ಆದಿ ಹಯಗಳ ಬಣ್ಣ ಮಬ್ಬುಕಂದು. ಆದರೆ ಇಂದು ಕಪಿಲ, ಕಂದು, ಚೆಸ್ಟ್‌ನಟ್, ಬೂದು, ಕೆಂಗಂದು, ಬಿಳಿಬೂದು ಮುಂತಾದ ನಾನಾ ಬಣ್ಣಗಳ ಕುದುರೆಗಳಿವೆ. ಒಳ್ಳೆಯ ಕುದುರೆಗೆ ಬಣ್ಣವೂ ಇದೆ ಎಂಬ ಜನಪ್ರಿಯ ಹೇಳಿಕೆ ನಿಜವಾದ ಮಾತು.

**ಕುದುರೆ ಪಂದ್ಯ:** ಓಟದ ಪರಿಣತಿಯನ್ನು ಪಡೆದ ಕುದುರೆಗಳದೇ ಒಂದು ತಳಿ. ಕುದುರೆ ಪಂದ್ಯವೂ ಕೋಳಿಪಂದ್ಯದಷ್ಟೇ ಹಳತಾದುದು. ಬ್ಯಾಬಿಲೋನಿಯದವರು ಕುದುರೆ ಕಟ್ಟಿ ರಥಗಳ ಓಟದ ಸ್ಪರ್ಧೆ ನಡೆಸುತ್ತಿದ್ದರು. ಯಾವಾಗ ಹೇಗೆ ಇದು ಆರಂಭವಾಯಿತೆಂದು ನಿರ್ಧರಿಸಲಾಗದಿದ್ದರೂ ಇದು ಬಹಳ ಪ್ರಾಚೀನವಾದುದೆಂದು ಹೇಳಬಹುದು. ಇಂಗ್ಲೆಂಡ್ ಅಮೆರಿಕ ಭಾರತಗಳಲ್ಲಿ ಕುದುರೆ ಪಂದ್ಯ ಬಹಳ ಜನಪ್ರಿಯ ಕ್ರೀಡೆ, ಬೆಂಗಳೂರು, ಮೈಸೂರು, ಮುಂಬಯಿ, ಪುಣೆ, ದೆಹಲಿ, ಚೆನ್ನೈ, ಸಿಕಂದರಾಬಾದು, ಉದಕಮಂಡಲ, ಕೋಲ್ಕತ್ತಗಳಲ್ಲಿ ನಡೆಯುವ ಕುದುರೆ ಪಂದ್ಯಗಳು ಹೆಚ್ಚು ಜನರನ್ನು ಆಕರ್ಷಿಸುತ್ತವೆ. ಜಾತಿಯ ಕುದುರೆಗಳನ್ನು ಆರಿಸಿ ಬೆಳೆಸುವ ಬ್ರೀಡರ್, ಅವಕ್ಕೆ ಶಿಕ್ಷಣಕೊಡುವ ಟ್ರೈನರ್ ಮತ್ತು ಪಂದ್ಯಕುದುರೆಗಳನ್ನು ಸವಾರಿಮಾಡುವ ಜಾಕಿಗಳು ಇವರ ಉದ್ಯೋಗಕ್ಕೆ ಈ ಕ್ರೀಡೆ ಕಾರಣವಾಗಿದೆ. ಪಂದ್ಯದ ಕುದುರೆಗಳನ್ನು ಬೆಳೆಸುವ ಕೇಂದ್ರಗಳಿಗೆ ಸ್ಟಡ್ ಫಾರಮ್‌ಗಳೆನ್ನುತ್ತಾರೆ. ಇಂಥದೊಂದು ಸ್ಟಡ್ ಫಾರಮ್ ಕರ್ನಾಟಕದ ತುಮಕೂರು ಜಿಲ್ಲೆಯ ಕುಣಿಗಲ್ ಬಳಿ ಇದೆ.

ಕುದುರೆ ಹಿಂದೂಧರ್ಮದ ಅನುಸಾರ ಪೂಜ್ಯವಾದ ಪ್ರಾಣಿಯೂ ಹೌದು. ರಾಜನ ಪೂಜ್ಯವಸ್ತುಗಳಲ್ಲಿ ಪಟ್ಟದ ಕುದುರೆಯೂ ಒಂದು ಮುಖ್ಯ ಅಂಶ. ಕುದುರೆ ಕೇವಲ ಮನುಷ್ಯನ ನಾಗರಿಕತೆಯೇ ಅಲ್ಲದೆ, ಇತಿಹಾಸದಲ್ಲಿ ರಾಜ್ಯಗಳ ಚಕ್ರಾಧಿಪತ್ಯಗಳ ಏಳ್ಗೆ ಬೀಳ್ಗೆಗಳಲ್ಲಿಯೂ ಮಹತ್ತರ ಪಾತ್ರವಹಿಸಿದೆ. ಟ್ಯಾಂಕು, ವಿಮಾನಗಳು ಬಳಕೆಗೆ ಬರುವ ಮೊದಲು ಕುದುರೆ ಅತಿಮುಖ್ಯ ವಾಹನವಾಗಿತ್ತು.

ಇದೇ ಅಲ್ಲದೇ ಕುದುರೆ ಇನ್ನೊಂದು ರೀತಿಯಲ್ಲಿಯೂ ಉಪಯುಕ್ತವಾದ ಪ್ರಾಣಿ. ಇದರ ಮಾಂಸವನ್ನು ತಿನ್ನುತ್ತಾರೆ. ಚರ್ಮವನ್ನು ಹದಗೊಳಿಸಿ ಬಳಸುತ್ತಾರೆ. ಚರ್ಮ ಮತ್ತು ಕೂದಲಿನಿಂದ ಉಡುಪು, ಮೆಟ್ಟು ಮುಂತಾದವನ್ನು ತಯಾರಿಸುತ್ತಾರೆ. ದೇಹದ ಅಂಗಾಂಶಗಳಿಂದ ಅಂಟು, ಸೀರಮ್ ತಯಾರಿಸುತ್ತಾರೆ. ಕುದುರೆ ಹಾಲನ್ನು ಕುಡಿಯುತ್ತಾರೆ. ಕುದುರೆ ಮತ್ತು ಕತ್ತೆಗಳ ನಡುವೆ ತಳಿಸಂಮಿಶ್ರಣದಿಂದ ಹುಟ್ಟುವ ಹೇಸರಗತ್ತೆ ಸಾಮಾನು ಹೊರಲು ಹೆಸರಾಗಿದೆ. (ಎಚ್.ಬಿ.ಡಿ.)

**ಕುದುರೆ ತಳಿ ಅಭಿವೃದ್ಧಿ :** ನಾಗರಿಕತೆಯ ಪ್ರಗತಿಯೊಡನೆ ಕುದುರೆಯಿಂದ ಮನುಷ್ಯ ಪಡೆಯುವ ಸೇವೆಗಳ ವ್ಯಾಪ್ತಿ ಬಹುವಾಗಿ ವಿಸ್ತರಿಸಿತು. ತನ್ನ ಸ್ವಚ್ಛಂದ ಸ್ಥಿತಿಯಲ್ಲಿ ಕುದುರೆ ತಳಿ ವಿಕಸಿಸುವ ಪರಿಸ್ಥಿತಿ ಬಲುಮಟ್ಟಿಗೆ ಉಳಿಯಲಿಲ್ಲ. ಆಗ ಭಿನ್ನ ಉದ್ದೇಶಗಳಿಗೆ ಅನುಸಾರವಾಗಿ ಪ್ರಾದೇಶಿಕ ಸೌಕರ್ಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ತಳಿಸಂಕರ ಮಾಡಿ ಹೊಸತಳಿಯ ಕುದುರೆಗಳನ್ನು ಪಡೆಯುವ ಕಲೆಯನ್ನು ಮನುಷ್ಯ ಕರಗತಮಾಡಿಕೊಂಡ. ಆಫ್ರಿಕ, ಏಷ್ಯ ಮತ್ತು ಯುರೋಪ್ ಭಾಗಗಳಲ್ಲಿ ಅಶ್ವಸಂಖ್ಯೆಯ ಕ್ರಮಬದ್ಧ ವಿಸ್ತರಣೆ ಬಹಳ ಹಿಂದಿನ ಕಾಲದಲ್ಲೇ ಆರಂಭವಾಯಿತು. ಗ್ರೀಸ್ ದೇಶದಲ್ಲಿ ಕೆಲವು ತರಹೆಯ ಕ್ರೀಡಾ ಚಟುವಟಿಕೆಗಳಿಗಾಗಿ ವಿಶ್ವದ ನಾನಾ ಭಾಗಗಳಿಂದ ಹೇರಳವಾಗಿ ಕುದುರೆಗಳು ಆಮದಾಗುತ್ತಿದ್ದುವು. ಅಲ್ಲಿ ಕುದುರೆ ಅಭಿವೃದ್ಧಿ ಕೇಂದ್ರಗಳು ಸ್ಥಾಪಿತವಾದುವು; ತರಬೇತಿ ಲಾಯಗಳು ಕಟ್ಟಲ್ಪಟ್ಟುವು. ಹೀಗಾಗಿ ಆ ದೇಶ ಕುದುರೆ ಅಭಿವೃದ್ಧಿಗೆ ಅತಿ ಪುರಾತನ ಕಾಲದಲ್ಲೇ ಹೆಸರುವಾಸಿಯಾಯಿತು. ಅಂತೆಯೇ ಕುದುರೆ ಮತ್ತು ಅಶ್ವರಥಗಳ ಜೂಜು. ಆಗಿನ ರೋಮ್ ದೇಶದಲ್ಲಿ ಆಧುನಿಕ ಕುದುರೆ ಜೂಜಿನಂತೆಯೇ ನಡೆಯುತ್ತಿತ್ತು. ಬರ್ಬರ ಮತ್ತು ಅರಬ್ಬಿವಂಶಸ್ಥ ತಳಿಗಳಿಂದ ಉತ್ಪನ್ನವಾದ ಬ್ರಿಟಿಷ್ ಶುದ್ಧ ಅಥವಾ ಥರೋಬ್ರೆಡ್ ತಳಿ ಅಶ್ವಜಾತಿಯ ಸಾಮ್ರಾಟ ಸ್ಥಾನವನ್ನು ಗಳಿಸುವವರೆಗೂ ಆಫ್ರಿಕ ದೇಶದ ಕುದುರೆಗಳೇ ಅತಿಮುಖ್ಯ ತಳಿಗಳಾಗಿದ್ದುವು. ಹಿಂದೆ ಇದ್ದುದಕ್ಕಿಂತಲೂ ಉತ್ತಮವಾದ ಕುದುರೆ ತಳಿಯನ್ನು ಪಡೆಯುವ ಪ್ರಯತ್ನಕ್ಕೆ ಗಮನ ಕೊಟ್ಟವರಲ್ಲಿ ಮೊದಲಿಗರು ಇಂಗ್ಲಿಷರು; ಇದು 1550ರ ಅನಂತರವೇ ಆದರೂ ಈ ದಿಶೆಯಲ್ಲಿ ಪರಿಷ್ಕರಣ ಕ್ರಮೇಣ ಆಯಿತಷ್ಟೆ. ಒಂದನೆಯ ಜೇಮ್ಸ್ ಇಂಗ್ಲೆಂಡಿಗೆ ಶುದ್ಧ ಅರಬ್ಬಿಜಾತಿಯ ವೈಟ್ ಟರ್ಕ್ ಎಂಬ ಕುದುರೆಯನ್ನು ಆಮದುಮಾಡಿಕೊಂಡ. ಇದಾದ ಅನಂತರ ಥರೋಬ್ರೆಡ್ ಎಂಬ ಹೆಸರುವಾಸಿಯಾದ ತೆಳ್ಳನೆ ಮೈಕಟ್ಟಿನ ಜೂಜು ಕುದುರೆ ತಳಿಯ ಅಭಿವೃದ್ಧಿಕಾರ್ಯ ಪ್ರಾರಂಭವಾಯಿತು. ಇಂಗ್ಲೆಂಡ್ ವಿಶ್ವದ ಅತ್ಯುತ್ತಮ ಕುದುರೆ ತಳಿಗಳ ತವರೂರು. ಅಲ್ಲಿ ಮೊದಲಿದ್ದ ಕುದುರೆ ಜಾತಿಗಳು ಎರಡು. ಒಂದು ಓಡುವ ಜಾತಿ ಕುದುರೆ, ಮತ್ತೊಂದು ಯುದ್ಧ ಅಥವಾ ಪಂದ್ಯದ ಕುದುರೆ. ಓಡುವ ಜಾತಿ ಕುದುರೆಗಳನ್ನು ಗಾಡಿ ಎಳೆಯುವುದು ಬೇಸಾಯ ಮುಂತಾದ ಕಾರ್ಯಗಳಿಗೂ ಪಂದ್ಯದ ಕುದುರೆಗಳನ್ನು ಯುದ್ಧ, ಜೂಜು ಕ್ರೀಡೆ ಮುಂತಾದ ಚಟುವಟಿಕೆಗಳಿಗೂ ಉಪಯೋಗಿಸುತ್ತಿದ್ದರು. ಮೂರನೆಯ ವಿಲಿಯಂ ದೊರೆ ಕುದುರೆ ಮತ್ತು ಕ್ರೀಡೆಗಳ ಅಭಿಮಾನಿ. ಈತ ಅರಬ್ಬಿ ಜಾತಿಯಲ್ಲಿ ಅತ್ಯುತ್ತಮ ತಳಿಯೊಂದಾದ ಬೈರ್ಲಿಟರ್ಕ್ ಎಂಬ ಜಾತಿಯ ಕುದುರೆಯನ್ನು ಇಂಗ್ಲೆಂಡಿಗೆ ತರಿಸಿಕೊಂಡ. ಪ್ರಖ್ಯಾತವಾದ ಗೆಡಾಲ್ಫಿನ್ ಅರೇಬಿಯನ್ ಬೀಜದ ಕುದುರೆ 1725ರಲ್ಲಿ ಇಂಗ್ಲೆಂಡಿಗೆ ಬಂತು. ಈಗಿನ ಬಹುಭಾಗ ಶುದ್ಧ ತಳಿಗಳೆಲ್ಲ ಇದರ ವಂಶದವು.

ವೇಗವಾಗಿಯೂ ಸುಲಭವಾಗಿಯೂ ಸಂಚರಿಸಲು ಉಪಯೋಗವಾದ ಮೋಟಾರು, ಟ್ರಾಕ್ಟರು ಮುಂತಾದ ಯಾಂತ್ರಿಕ ಸಾಧನಗಳು ಬಳಕೆಗೆ ಬಂದ ಮೇಲೆ ಗಾಡಿಗಳಿಗೆ ಮತ್ತು ಬೇಸಾಯಕ್ಕೆ ಹೇರುಕುದುರೆಗಳ ಆವಶ್ಯಕತೆ ಕಡಿಮೆಯಾಗಿ ಅವುಗಳ ಸಂತತಿ ಕ್ಷೀಣಿಸಿದೆ. ಜನರಲ್ಲಿ ಜೂಜಿನಲ್ಲಿನ ಆಸಕ್ತಿ ಒಂದೇ ರೀತಿ ಇರುವುದರಿಂದ ಜೂಜಿನ ಶುದ್ಧತಳಿ ಕುದುರೆಗಳ ಅಭಿವೃದ್ಧಿ ಯಥೇಚ್ಛವಾಗಿ ಸಾಗಿದೆ. ಈ ಕುದುರೆಗಳ ವೇಗ ಮತ್ತು ಜೂಜಾಂಗಣದಲ್ಲಿ ಇವುಗಳ ಶ್ರಮಸಹಿಷ್ಣುತೆ ಇವುಗಳ ಏಳ್ಗೆಗೆ ಪ್ರಯತ್ನ ನಡೆಯುತ್ತಲೇ ಇದೆ. ಆದರೂ ಕುದುರೆಗಳ ಮೇಲಿನ ಶ್ರದ್ಧೆ ಪ್ರಪಂಚದ ಎಲ್ಲ ದೇಶಗಳಲ್ಲೂ ಇಲ್ಲ. ರಷ್ಯ, ಚೀನ, ಸಿಂಹಳ ಮುಂತಾದ ದೇಶಗಳಲ್ಲಿ ಕುದುರೆ ಜೂಜು ನಿಷಿದ್ಧ. ಇದರಿಂದ ಕುದುರೆ ತಳಿ ಅಭಿವೃದ್ಧಿ ಆ ದೇಶಗಳಲ್ಲಿ ಹಿಂದಿದೆ.

ಭಾರತ ಪ್ರಾಚೀನಕಾಲದಿಂದಲೂ ಉತ್ತಮಜಾತಿಯ ಅಶ್ವಗಳಿಗೆ ಹೆಸರಾಗಿದೆ. ಕಾಥೇವಾರಿ, ಮಾರವಾರಿ ಮತ್ತು ಮಣಿಪುರಿ ಜಾತಿಗಳು ಅವುಗಳಲ್ಲಿ ಮುಖ್ಯವಾದವು. ಇವಲ್ಲದೆ ಭುಟಿಯೊ, ಹಿರ್ವಾಯಿ, ಸ್ಪಿತಿ, ಉಸ್ಮಾಯಿ ಮುಂತಾದವೂ ಇರುವುದು ಕಂಡುಬರುತ್ತದೆ. ಬ್ರಿಟಿಷರ ಕಾಲದಲ್ಲಿ ಅಶ್ವಸೈನ್ಯಕ್ಕೆ ಬೇಕಾದ ಕುದುರೆಗಳನ್ನು ಆಸ್ಟ್ರೇಲಿಯದಿಂದಲೂ, ಜೂಜಿಗೆ ಅಗತ್ಯವಾದ ಬೀಜದ ಕುದುರೆ ಮತ್ತು ಹೆಣ್ಣು ಕುದುರೆಗಳನ್ನು ಇಂಗ್ಲೆಂಡಿನಿಂದಲೂ ತರಿಸಿಕೊಂಡರು. ಮೊಗಲರು ಮತ್ತು ಮರಾಠರು ಸ್ಥಳೀಯ

ಕುದುರೆಗಳನ್ನು ಅವರ ಯುದ್ಧದ ಅಗತ್ಯಗಳಿಗೋಸ್ಕರ ಅಭಿವೃದ್ಧಿಪಡಿಸಿಕೊಂಡರು. ಭಾರತದಲ್ಲಿ ಅಶ್ವಗಳ ಅಭಿವೃದ್ಧಿಕಾರ್ಯ ಬಹುವಾಗಿ ಬ್ರಿಟಿಷರಿಂದಲೇ ಆದದ್ದು. ದೇಶಾದ್ಯಂತ ಅನೇಕ ಅಶ್ವಾಭಿವೃದ್ಧಿಶಾಲೆಗಳನ್ನು ತೆರೆದು ಭಾರತದ ಶುದ್ಧತಳಿ ಕುದುರೆಗಳನ್ನು ಅಸ್ತಿತ್ವಕ್ಕೆ ತಂದರು.

ಭಾರತದಲ್ಲಿ ಕುದುರೆ ಜಾತಿಗಳ ವಿವಿಧ ತಳಿಗಳನ್ನು ಪರಿಶೀಲಿಸುವುದಕ್ಕೆ ಮುಂಚೆ ಅವುಗಳ ಸ್ಪಷ್ಟ ಅರ್ಥ ವಿವರಣೆ ತಿಳಿದುಕೊಳ್ಳುವುದು ಆವಶ್ಯಕ.

**ಶುದ್ಧತಳಿ ಅಶ್ವ (ಥರೋಬ್ರೆಡ್ ಹಾರ್ಸ್):** ಇಂಗ್ಲಿಷ್ ಕುದುರೆಯ ಸಂತತಿ ಪುಸ್ತಕದಲ್ಲಿ ದಾಖಲಾದ ಶುದ್ಧ ಇಂಗ್ಲಿಷ್ ಜಾತಿ ಇಲ್ಲವೇ ಅರಬ್ಬಿ ಮತ್ತು ಪರ್ಷಿಯ ಜಾತಿಯ, ತಂದೆ ತಾಯಿಗಳ ಹಲವಾರು ತಲೆಮಾರುಗಳ ಸಂತತಿಯನ್ನು ಪತ್ತೆಹಚ್ಚಲು ಸಾಧ್ಯವಿರುವ ಕುದುರೆಗೆ ಶುದ್ಧತಳಿ ಎಂಬ ಹೆಸರು ರೂಢಿಯಲ್ಲಿದೆ.

**ವೇಲರ್:** ಇದೊಂದು ಆಸ್ಟ್ರೇಲಿಯದಿಂದ ಬಂದ ಕುದುರೆ. ಇಂಗ್ಲಿಷ್ ಶುದ್ಧತಳಿ ಮತ್ತು ಕೇಪ್ ತಳಿಗಳ ಮಿಶ್ರಣದಿಂದ ಹೊರಬಂದ ಜಾತಿ. ಭಾರತದ ಸೈನ್ಯದಲ್ಲಿ ಮೊದಲು ಇವು ಹೇರಳವಾಗಿ ಬಳಕೆಯಲ್ಲಿದ್ದುವು.

**ಕುದುರೆತಟ್ಟು ಅಥವಾ ಟಾಕಣ ಅಥವಾ ಪೋನಿ ಕುದುರೆ:** ಇದು ಒಂದು ಗಿಡ್ಡ ಜಾತಿಯ ಕುದುರೆ. ಇದರ ಎತ್ತರ 14–2 ಹ್ಯಾಂಡ್ಸ್ ಇಲ್ಲವೇ 58". ಮುಂದಿನ ಕಾಲಿನ ಗೊರಸಿನ ಕೆಳತುದಿಯಿಂದ ಭುಜದ ಉಬ್ಬು ಏಣಿನ ವರೆಗಿನ ಎತ್ತರ 58" ಕ್ಕಿಂತ ಕಡಿಮೆ.

**ರೀಮೌಂಟ್:** ತರಬೇತಿ ಇಲ್ಲದ ಕುದುರೆ. ಸಾಮಾನ್ಯವಾಗಿ ಅಶ್ವದಳದಲ್ಲಿ ಈ ಜಾತಿಯನ್ನು ಉಪಯೋಗಿಸುತ್ತಾರೆ.

**ಪ್ಯಾಕ್ ಪೋನಿ ಅಥವಾ ಹೇರುಕುದುರೆ:** ಇದು ಒಂದು ಗಿಡ್ಡ ದಪ್ಪನೆಯ ಆಕಾರದ ಕಷ್ಟಸಹಿಷ್ಣುವಾದ ಕುದುರೆ. ಇದನ್ನು ಪದಾತಿ ದಳದಲ್ಲಿ ಹೇರು ಸಾಗಾಣಿಕೆಗೆ ಬಳಸುತ್ತಾರೆ.

**ಕುದುರೆಯ ವರ್ಣಗಳು:** ಕಪಿಲವರ್ಣ(ಬೇ), ದಟ್ಟಕೆಂಗಂದು (ಚೆಸ್ಟ್‌ನಟ್), ಕಂದು, ಬೂದು, ಕಪ್ಪು, ಕರಿಬೂದು ಬಣ್ಣ, ಕಪ್ಪುಬಿಳುಪು ಮಿಶ್ರ ಬಣ್ಣದ ಕುದುರೆಗಳು ಸಾಮಾನ್ಯ.

ಭಾರತದಲ್ಲಿನ ಕುದುರೆ ತಳಿಗಳು: ಭಾರತದಲ್ಲಿರುವ ಕುದುರೆಗಳು ಶುದ್ಧ ಜಾತಿಗೆ ಸೇರಿಲ್ಲ. ಹೆಚ್ಚುಪಾಲು ಅರಬ್ಬಿ ರಕ್ತದವು.

**ಭುಟಿಯಾ:** ಹಿಮಾಲಯ ಪ್ರದೇಶದಲ್ಲಿ ಕಾಣಬರುವ ಬೂದು ಇಲ್ಲವೇ ದಟ್ಟ ಕೆಂಗಂದು ಬಣ್ಣದ ಕುದುರೆ. ಈ ಜಾತಿಯ ಸಾಮಾನ್ಯ ಲಕ್ಷಣ ಅಚ್ಚುಕಟ್ಟಾದ ಮೈಕಟ್ಟು, ವಿಶಾಲವಾದ ಎದೆಯುಳ್ಳ ದೇಹ, ಮಾಂಸವತ್ತಾದ ಚಪ್ಪೆಗಳು, ಒರಟುಕೂದಲಿನಿಂದ ಆವೃತವಾದ ಕಾಲುಗಳು. ಕತ್ತಿನ ಮೇಲೂ ಬಾಲದಲ್ಲೂ ಉದ್ದವಾದ ಕೂದಲು. ಸಾಮಾನ್ಯವಾಗಿ ಅಗಲವಾದ ಹಿಮ್ಮಡಿಗಳುಳ್ಳ ಪಾದಗಳು. ಸವಾರಿಗೆ ಮತ್ತು ಸಾಮಾನು ಸಾಗಾಣಿಕೆಗೆ ಈ ಜಾತಿಯ ಕುದುರೆಗಳ ಬಳಕೆ ಸಾಮಾನ್ಯ.

**ಹಿರ್‌ಜಾಯ್:** ಇದೊಂದು ಅರಬ್ಬಿ ಮಿಶ್ರಜಾತಿಯ ಕುದುರೆ. ಬಣ್ಣ ಬಿಳಿ ಇಲ್ಲವೆ ಬೂದು. ಅಡಕವಾದ ಮೈ, ಮೋಟಾದ ಬೆನ್ನು, ಮಾಂಸದಿಂದ ತುಂಬಿಕೊಂಡ ಸೊಂಟ, ಚಪ್ಪಟೆಯಾದ ಪೃಷ್ಠ, ಸುಂದರವಾದ ತಲೆ, ಅಗಲವಾದ ಹಣೆ, ತುಂಬಿದ, ಕುಳ್ಳೂ ಅಲ್ಲ ಉದ್ದವೂ ಅಲ್ಲದ ಬಲವಾದ ಕತ್ತು, ದೃಢವಾದ ಇಳಿಜಾರುಳ್ಳ ಭುಜ, ಬಲವಾದ ಮುಂಗಾಲು, ಮೂಳೆ ಎದ್ದುಕಾಣದ ಮೊಣಕಾಲು–ಇವೇ ಈ ಜಾತಿಯ ಲಕ್ಷಣಗಳು. ಕುದುರೆಯ ಎತ್ತರ 15 ಹ್ಯಾಂಡ್ಸ್ ಅಥವಾ 60', ತೂಕ 800–900 ಪೌಂಡ್. ವೇಗಗತಿಯ ಕಷ್ಟತರ ಕೆಲಸಕ್ಕೆ ಸಾಮಾನ್ಯವಾಗಿ ಇದರ ಬಳಕೆ.

**ಕಾಥೇವಾರಿ:** ರಾಜಸ್ತಾನ ಮತ್ತು ಗುಜರಾತ್ ರಾಜ್ಯಗಳು ಈ ತಳಿಗಳ ತವರೂರು. ಕಾಥೇವಾರಿ ಮತ್ತು ಮಾರಮಾರಿ ಇವುಗಳ ಅನೇಕ ಲಕ್ಷಣಗಳು ಒಂದೇ ತರಹವಿರುವುದರಿಂದ ಈ ಎರಡು ಜಾತಿಗಳೂ ಒಂದೇ ಮೂಲದಿಂದ ಬಂದವೆಂದು ಹೇಳಬಹುದು. ಈ ತಳಿಯ ವಿಶೇಷ ಲಕ್ಷಣ ಹಿಂಗಾಲಿನಲ್ಲಿ ಮಂಡಿ ಮತ್ತು ಚುಂಚುಕಾಲಿನ ಮಧ್ಯೆ ಕುಡುಗೋಲಿನಾಕಾರದ ಕೀಲು ಮತ್ತು ತುದಿಗಳೆರಡೂ ಸೇರಿರುವಂತೆ ಬಾಗಿರುವ ಕಿವಿ. ಸವಾರಿಗೆ ಬಳಸುವ ಈ ಕುದುರೆ ಹಿಂದೆ ಪಂದ್ಯಕ್ಕೆ ಹೆಸರುವಾಸಿಯಾಗಿತ್ತು.

**ಮಾರವಾರಿ:** ಇದು ರಾಜಸ್ತಾನದಲ್ಲಿರುವ ಭಾರತದ ಮೂಲ ತಳಿ. ಈ ಜಾತಿಯ ಕುದುರೆ ದಟ್ಟ ಕೆಂಗಂದು, ಬೂದು, ಕಂದು ಕಪಿಲವರ್ಣ, ಕರಿಬೂದು ಮುಂತಾದ ಅನೇಕ ಬಣ್ಣದ್ದಾಗಿರುತ್ತದೆ. ಸುಮಾರು ಶೇ.50 ಭಾಗದಷ್ಟು ತಳಿ ತಿಳಿಕೆನೆ ಬಣ್ಣ. ಈ ಜಾತಿ ಕುದುರೆ ಶೀವಿ, ಗೌರವ ಮತ್ತು ಸೌಂದರ್ಯಕ್ಕೆ ಹೆಸರಾದದ್ದು. ಇದರ ನಡಿಗೆ ಬಲುಗಂಭೀರ. ವೇಗ ಮತ್ತು ಕಷ್ಟ ಸಹಿಷ್ಣುತೆ ಇದರ ವೈಶಿಷ್ಟ್ಯ.

**ಮಣಿಪುರಿ:** ಇದು ಕೂಡ ಭಾರತದ ಅಶ್ವತಳಿಗಳಲ್ಲಿ ಪುರಾತನವಾದದ್ದು. ಅಸ್ಸಾಮಿನಲ್ಲಿ ಹೆಚ್ಚು ಪ್ರಚಲಿತ. ನಯ, ವೇಗ, ಕಷ್ಟಸಹಿಷ್ಣುತೆ ಈ ಗುಣಗಳಿಗೆ ಈ ಜಾತಿಯ ಕುದುರೆ ಪ್ರಸಿದ್ಧಿ. ಸಣ್ಣ ಹುಟ್ಟು, ಮಾಟವಾದ ದೇಹ, ದೃಢವಾದ ನಡಿಗೆ, ಉದ್ದನೆಯ ಮುಖ, ಅಗಲವಾದ ಮುಖ, ಅರಳಿದ ಹೊಳ್ಳೆ, ವಿಶಾಲವಾದ ಎದೆಗೂಡು, ದೇಹದ ಪ್ರಮಾಣಕ್ಕೆ ಅನುಗುಣವಾದ ಕಾಲು, ದೃಢವಾದ ಮಂಡಿ ಮತ್ತು ಕಾಲು, ಕೀಲು ನಯವಾಗಿ ಬಾಗಿದ ಚುಂಚು ಕಾಲು–ಇವೇ ಈ ತಳಿಯ ಲಕ್ಷಣಗಳು. ಇದರ ಎತ್ತರ 11 ರಿಂದ 13 ಹ್ಯಾಂಡ್‌ಗಳು (44"–52"); ತೂಕ 650 ಪೌಂಡ್. ಈ ಕುದುರೆಗಳನ್ನು ಪೋಲೋ ಪಂದ್ಯ, ಹೇರು, ಸಾಗಾಣಿಕೆ, ಸೈನ್ಯ ಸಾಮಾನು ಸರಂಜಾಮುಗಳ ಸಾಗಾಣಿಕೆ ಮುಂತಾದವುಗಳಿಗೆ ಬಳಸುತ್ತಾರೆ.

**ಸ್ಪಿತಿ:** ಕಂಗಾ ಜಿಲ್ಲೆಯಲ್ಲಿ ಈ ತಳಿ ಪ್ರಚಲಿತವಾಗಿದೆ. ಬಹುವಾಗಿ ಈ ತಳಿಯ ವೃದ್ಧಿ ರೈತರಿಂದಲೇ ಆದದ್ದು. ಈ ಜಾತಿಯ ಲಕ್ಷಣಗಳಲ್ಲಿ ಮುಖ್ಯವಾದದ್ದು ಕಷ್ಟ ಸಹಿಷ್ಣುತೆ. ದೃಢವಾದ ನಡೆ. ಗಟ್ಟಿಯಾದ ಮೂಳೆ, ಅಡಕವಾದ ಮೈ. ಎತ್ತರ 12 ಹ್ಯಾಂಡ್‌ಗಳು (48"). ಬೆಟ್ಟಗಾಡಿಗೆ ಬಹಳ ಅನುಕೂಲವಾದ ಜಾತಿ. ನೀಳವಾದ ಒರಟಾದ ಕೂದಲುಗಳುಳ್ಳ ಮಾಟವಾದ ತಲೆ, ಮೊನಚಾದ ಕಿವಿ, ಅಗಲವಾದ ಭುಜ, ದೃಢವಾದ ಬೆನ್ನು, ಗಿಡ್ಡನೆ ಕಾಲು, ಬಲವಾದ ಗೊರಸು, ಸಣ್ಣ ಕತ್ತು–ಇವೇ ಇದರ ಲಕ್ಷಣಗಳು. ಸವಾರಿಗೆ ಮತ್ತು ಹೇರುತಟ್ಟಾಗಿ ಈ ಜಾತಿ ಕುದುರೆಗಳನ್ನು ಬಳಸುತ್ತಾರೆ.

**ಅರಬ್ಬೀ ಜಾತಿಯ ಕುದುರೆ:** ಒಂದೆರಡು ದಶಕಗಳ ಹಿಂದೆ ಅರಬ್ಬೀ ಕುದುರೆಗಳು ಭಾರತದಲ್ಲಿ ಹೆಚ್ಚಾಗಿದ್ದುವು. ಜೂಜಿನಲ್ಲಿ ಇವುಗಳ ಬಳಕೆ ತಪ್ಪಿದ್ದರಿಂದ ಒಳ್ಳೇ ಅರಬ್ಬೀ ಕುದುರೆ ಈಗ ವಿರಳ. ಅಶ್ವಗಳಲ್ಲಿ ರಾಜಸಂತತಿ ಎಂದು ಪ್ರಮುಖವಾಗಿವೆ. ಎತ್ತರ 14–15 ಹ್ಯಾಂಡ್‌ಗಳು (56"–60"). ಗಾತ್ರದಲ್ಲಿ ದೊಡ್ಡದಾಗಿರುವ ತಲೆಯಲ್ಲಿ ಕಿವಿಯಿಂದ ಕಣ್ಣಿನ ವರೆಗಿನ ಮೇಲ್ಭಾಗದ ಉದ್ದ ಹೆಚ್ಚು, ಅಗಲವಾದ ಉಬ್ಬಿದ ಹಣೆ, ಉದ್ದವಾದ ಮೊನಚಾದ ಕಿವಿ, ಅಗಲವಲ್ಲದ ಕಣ್ಣು. ಮೃದುವಾದ ನೋಟ, ಬೆದರಿದಾಗ ಉದ್ವಿಗ್ನದೃಷ್ಟಿ ಇವು ಇನ್ನಿತರ ಲಕ್ಷಣಗಳು. ತಲೆ ಮುಂಭಾಗ ಮತ್ತು ಮೂತಿಯ ಹತ್ತಿರ ಚೂಪಾಗಿ ಕೆಂಪಾಗಿ ಕೆಳತುಟಿ ಸ್ವಲ್ಪ ಮುಂದಿದ್ದು ಸುಂದರವಾಗಿ ಕಾಣಿಸುತ್ತದೆ. ಚೆನ್ನಾಗಿ ಬೆಳೆದ ಗಂಟಲು, ಶಕ್ತಿಯುತವಾದ ಮತ್ತು ಬಿಲ್ಲಿನಾಕಾರವುಳ್ಳ ಕತ್ತು, ಸ್ವಲ್ಪ ಸಣ್ಣದಾದರೂ ಮುಂಗಾಲಿನ ಹಿಂದೆ ಉಬ್ಬಿ ಕಾಣುವ ಪಕ್ಕೆಲುಬುಳ್ಳ ಎದೆ, ಇದರಿಂದ ಒಟ್ಟಿನಲ್ಲಿ ತುಂಬಿಕಾಣುವ ಮೈ, ಅಡಕವಾದ ಬೆನ್ನು, ಬಲಿಷ್ಠವಾದ ಟೊಂಕ ಮತ್ತು ರೊಂಡಿ, ಮಂಡಿಯವರೆಗು ನೀಳವಾಗಿದ್ದು ಅನಂತರ ಚಿಕ್ಕದಾಗುವ ಮುಂಗಾಲು, ನೀಳವಾದ ಜಗಿಯುವ ಕಾಲ್ಗೆಣ್ಣಿನ ಭಾಗ, ದೃಢವಾದ ಅಗಲವಾದ ಪಾದ, ದೊಡ್ಡ ತೊಡೆ, ದೃಢವಾಗಿ ರೂಪಗೊಂಡ ಅಸ್ಥಿಸಂಧಿಗಳು, ಮೃದುವಾದ ಹೊಳಪಾದ ಮೈಚರ್ಮ, ಎತ್ತಿಬೀಸಿದ ಬಾಲ–ಇವೇ ಈ ಜಾತಿಯ ಉಳಿದ ಲಕ್ಷಣಗಳು.

ಈ ಕುದುರೆಗಳ ಬಣ್ಣ ವಿವಿಧ; ಕುರಿಬೂದು, ದಟ್ಟ ಕೆಂಗಂದು, ಬೂದಿಕಪ್ಪು ಕಂದು ಮುಂತಾದವು. ಈ ಅನೇಕ ಬಣ್ಣಗಳು ಅಷ್ಟು ಪ್ರಿಯವಲ್ಲ.

**ಮೈಸೂರು ರಾಜ್ಯದಲ್ಲಿ ಕುದುರೆ ತಳಿ ಅಭಿವೃದ್ಧಿ:** ಮೈಸೂರಿನ ಒಡೆಯರ್ ರಾಜಮನೆತನದವರು ಕುಣಿಗಲ್ಲಿನಲ್ಲಿ ಈಗ್ಗೆ 150 ವರ್ಷಗಳಿಗೂ ಹಿಂದೆಯೇ ಸೈನ್ಯದ ಕುದುರೆ ತಳಿ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಿದರು. 1850ನೆಯ ವರ್ಷದಲ್ಲಿ, ಈ ಕೇಂದ್ರಕ್ಕೆ ಆಫ್ರಿಕ ತಳಿಗಳನ್ನು ತರಿಸಿದರು. ಆ ಕಾಲದಲ್ಲಿ ಉಪಯೋಗಿಸಿದ ಬೀಜದ ಕುದುರೆಗಳು ಮುಖ್ಯವಾಗಿ ಶುದ್ಧತಳಿ ಅಂದುಕೊಂಡಿದ್ದ ಅರಬ್ಬೀ ಮತ್ತು ವೇಲರ್ ಜಾತಿಯವು. 1936ರಲ್ಲಿ ಜೆ.ಜೆ. ಮಲ್ಲಿಕ್ ಎಂಬ ಬ್ರಿಟಿಷ್ ಅಧಿಕಾರಿ ಈ ಕೇಂದ್ರವನ್ನು ಉತ್ತಮಗೊಳಿಸಲು ನಿಯಮಿತನಾದ ಆತ ಸ್ಥಳೀಯ ಹೆಣ್ಣು ಕುದುರೆಗಳನ್ನೆಲ್ಲ ವಿಸರ್ಜಿಸಿ ಈ ಕೇಂದ್ರವನ್ನು ಜೂಜುಕುದುರೆ ಅಭಿವೃದ್ಧಿಕಾರ್ಯಕ್ಕೆ ಮಾತ್ರ ಉಳಿಸಿಕೊಂಡ. 1940ರಿಂದ ಅಭಿವೃದ್ಧಿ ಗತಿ ಚೆನ್ನಾಗಿದ್ದು ಇಲ್ಲಿಂದ ಹೊರಬಂದ ಕುದುರೆಗಳು ಅನೇಕ ಜೂಜಿನಲ್ಲಿ ಪ್ರಸಿದ್ಧಿಗೆ ಬಂದಿವೆ. ಸರ್ಕಾರದವರು ಈಚಿನ ದಿನಗಳಲ್ಲಿ ಈ ಕೇಂದ್ರದ ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿವಹಿಸಿ ಹೊರದೇಶದಿಂದ ಶುದ್ಧ ತಳಿಗಳನ್ನು ತರಿಸಿದ್ದಾರೆ. ಈ ಕೇಂದ್ರದಿಂದ ಹೊರಬಂದ ಜಾತಿಗಳಿಗೆ ಪ್ರಪಂಚದ ಅಶ್ವತಳಿಗಳಲ್ಲಿ ಮುಖ್ಯಸ್ಥಾನವಿದೆ.

**ತಳಿ ಅಭಿವೃದ್ಧಿ:** ಎಲ್ಲ ಪ್ರಾಣಿ ತಳಿ ಅಭಿವೃದ್ಧಿ ಕಾರ್ಯದಲ್ಲಿ ಇರುವಂತೆಯೇ ಕುದುರೆ ತಳಿ ಅಭಿವೃದ್ಧಿಯಲ್ಲೂ ಒಂದು ಜೀವಿಯಿಂದ ಹೊರಬರುವ ಶಿಶು ಅದರ ತಂದೆ ತಾಯಿಯರ ಲಕ್ಷಣವನ್ನೇ ಇಲ್ಲವೇ ಅದರ ಪೂರ್ವಜರ ಲಕ್ಷಣವನ್ನೇ ಹೊಂದಿರುತ್ತದೆ ಎಂಬ ಸ್ಥಿತಿಯನ್ನು ಗುರುತಿಸುವುದು ಅಗತ್ಯ. ಅಂದರೆ ತಳಿಶುದ್ಧತೆ ನಿಜವಾಗಿಯೂ ಅತಿಮುಖ್ಯ. ಈ ಕಾರಣದಿಂದ ತಳಿ ಅಭಿವೃದ್ಧಿ ಕೆಲಸದಲ್ಲಿ ತೊಡಗಿರುವ ಜನರ ಮೊದಲ ಯೋಚನೆ ಕುದುರೆಗಳ ವಂಶವೃಕ್ಷದ ಕೂಲಂಕಷ ಅರಿವು. ಜೂಜು ಕುದುರೆಯ ತಳಿ ಅಭಿವೃದ್ಧಿಕಾರ್ಯಕ್ಕೆ ತೊಡಗಲು ಪ್ರಯತ್ನಿಸುವವರು ತಳಿಯ ಶುದ್ಧತೆಯಲ್ಲಿ ಲವಲೇಶದಷ್ಟು ಸಂದೇಹ ಬಂದರೂ ಅಂಥ ಕುದುರೆಗಳನ್ನು ಖಂಡಿತ ಬಳಸರು.

**ಕುದುರೆ ಆಯ್ಕೆ:** ತಳಿವೃದ್ಧಿಗೆ ಬೇಕಾದ ಗಂಡು ಕುದುರೆಯ ವಯಸ್ಸು 4ರಿಂದ 6 ವರ್ಷ ಇರಬೇಕು. ಗಟ್ಟಿಯಾದ ಕೈಕಾಲುಗಳು, ದೃಢಕಾಯ ಮತ್ತು ಸ್ಥಿಮಿತ ಸ್ವಭಾವ ಇರುವುದು ಅತ್ಯಾವಶ್ಯಕ. ತಾಯಿ ತಂದೆ ಎರಡು ಕಡೆಗಳಿಂದಲೂ ಉತ್ತಮ ವಂಶ ಅಗತ್ಯ. ತಳಿಗುಣಗಳು ವಂಶಪರಂಪರೆಯಿಂದ ಬರುವುದರಿಂದ ಒಳ್ಳೆಯ ಬೀಜದ ಕುದುರೆ ಆವಶ್ಯಕ ಮಾತ್ರವಲ್ಲ ಆ ಕುದುರೆಯ ಪೀಳಿಗೆಯೂ ಯಾವ ಸಂದೇಹಕ್ಕೂ ಎಡೆ ಇಲ್ಲದೆ ನಿಷ್ಕಳಂಕವಾಗಿರಬೇಕು. ಥರೋಬ್ರೆಡ್ ಜಾತಿ ಬೀಜದ ಕುದುರೆ ಎತ್ತರ 15–3ರಿಂದ 16–1 ಹ್ಯಾಂಡ್ಸ್ ಇರಬೇಕು. ಮೊಣಕಾಲು ಅಗಲವಿದ್ದು ಕಾಲು ಮತ್ತು ಪಾದಗಳ ಮೇಲಿನ ದೃಢನಿಲವು ಆದ್ಯ. ಮಂಡಿಯ ಕೆಳಗೆ ಮೊಣಕಾಲಿನ ಭಾಗ ಗಡುಸಾದ

ಮೂಳೆಯಿಂದಾಗಿರುತ್ತದೆ. ಮೊಣಕಾಲಿನ ಹಿಂದಿನ ಮೂಳೆ ಚಾಚಿದ್ದು ದೊಡ್ಡದಾಗಿರುವುದು ಆವಶ್ಯಕ. ಮಂಡಿ ಮತ್ತು ಚುಂಚುಕಾಲಿನ ಮಧ್ಯದ ಭಾಗ ದೃಢವಾಗಿ ಮತ್ತು ರೋಗ ವಿಮುಕ್ತವಾಗಿರಬೇಕು. ಗೊರಸು ದೊಡ್ಡದೂ ಅಲ್ಲದೆ ಚಿಕ್ಕದೂ ಅಲ್ಲದೆ ಕುದುರೆಯ ಗಾತ್ರಕ್ಕನುಗುಣವಾಗಿ ಮಾಟವಾಗಿರಬೇಕು. ಗೊರಸಿನ ತುದಿ ಅಥವಾ ಕೊಂಬು ಗಡುಸಾಗಿ ಗಟ್ಟಿಯಾಗಿರುವುದು ಅಗತ್ಯ. ಚುಂಚುಕಾಲು ಮತ್ತು ಗೊರಸಿನ ಮಧ್ಯದ ಭಾಗ ಗೊರಸಿನ ಮೇಲ್ಭಾಗದ ಕೀಲಿನ ಮೇಲೆ ಬಾಗಿ ಕೂತಿರುವುದಲ್ಲದೆ ಹ್ರಸ್ವವಾಗಿದ್ದರೆ ಒಳ್ಳೆಯದು. ಶಕ್ತಿಯುತವಾದ ದಪ್ಪ ಮೇಲ್ಭುಜ; ಅದು ಬಾಗಿರಬಾರದು, ಆದರೆ ಕಡಿದಾಗಿಯೂ ಇರಬಾರದು. ಮೊಣಕೈತುದಿ ದೊಡ್ಡದಾಗಿ ಎದ್ದುಕಾಣುತ್ತಿರುವುದು ಲಕ್ಷಣ. ಮೈ ಸುತ್ತು ಅಗಲವಾಗಿದ್ದು, ಎದೆಯ ಸುತ್ತ ಗುಂಡಾಗಿರುವುದು ಸೊಗಸು. ಹ್ರಸ್ವಬೆನ್ನು, ಶಕ್ತಿಯುತವಾದ ಮಾಂಸದಿಂದ ತುಂಬಿದ ಟೊಂಕ, ಶಕ್ತಿಯುತವಾದ ಹಿಂಬದಿ ಮತ್ತು ದಷ್ಟಪುಷ್ಟವಾದ ತೊಡೆ–ಇವು ಕೆಲವು ಸಲ್ಲಕ್ಷಣಗಳು. ಪಿರ್ರೆಯಿಂದ ಚುಂಚುಕಾಲಿನ ವರೆಗಿನ ಭಾಗ ನೀಳವಾಗಿದ್ದರೆ ಲಕ್ಷಣ. ಉದ್ದ ಮತ್ತು ಅಗಲವಾದ ಕತ್ತು; ತೆಳ್ಳಗೆ ಉದ್ದವಾದ ಮತ್ತು ಅಗಲವಾದ ತಲೆ, ಕಣ್ಣುಗಳ ಮಧ್ಯೆ ಸಾಕಷ್ಟು ಜಾಗ ಇದ್ದು ಉಬ್ಬಿದ ಹಣೆ, ಹೆಚ್ಚು ಮೊನಚಲ್ಲದ ಮೂತಿ, ಸಣ್ಣದಾಗಿ ಕಂಡರೂ ಬೇಕಾದಾಗ ಅರಳಬಲ್ಲ ಮೂಗಿನ ಹೊಳ್ಳೆ, ತೆಳುವಾದ ಅಗಲವಾದ ಕೆಳದವಡೆ, ಕತ್ತು ಮತ್ತು ತಲೆ ಸೇರುವೆಡೆ ತೆಳುವಾಗಿ ಅಗಲವಾಗಿದ್ದರೂ ಗಾಳಿ ಸುಲಭವಾಗಿ ತೂರುವುದಕ್ಕೆ ಅನುಕೂಲವಾಗುವಂತೆ ಸಾಕಷ್ಟು ವ್ಯಾಸಹೊಂದಿ ಸ್ಫುಟವಾದ ಉಸಿರುನಾಳ–ಇವು ಬೀಜದ ಕುದುರೆಯ ಇನ್ನೂ ಕೆಲವು ಲಕ್ಷಣಗಳು. ಬಣ್ಣ ಅಷ್ಟೇನೂ ಪ್ರಾಮುಖ್ಯವಲ್ಲದಿದ್ದರೂ ಜನ ಸಾಮಾನ್ಯವಾಗಿ ಯಾವುದೇ ಮಸಕು ಬಣ್ಣಗಳನ್ನು ಇಷ್ಟಪಡುವುದಿಲ್ಲ. ದಟ್ಟವಾದ ಸ್ಪಷ್ಟವಾದ ಬಣ್ಣದ ಕುದುರೆಗಳಿಗೆ ಗಿರಾಕಿ ಹೆಚ್ಚು.

**ಹೆಣ್ಣುಕುದುರೆ ಆಯ್ಕೆ:** ಬೀಜದ ಕುದುರೆಯ ಆಯ್ಕೆಯ ಆಧಾರಗಳೇ ಹೆಣ್ಣು ಕುದುರೆಯ ಆಯ್ಕೆಗೂ ಅನ್ವಯಿಸುತ್ತವೆ. ಸುಮಾರು 4 ವರ್ಷ ವಯಸ್ಸಿನಲ್ಲಿ ಇದು ಗರ್ಭಧಾರಣೆ ಮಾಡುತ್ತದೆ. ಇದರ ಎತ್ತರ 15–2ರಿಂದ 15–3 ಹ್ಯಾಂಡುಗಳು. ಹೆಣ್ಣು ಅಥವಾ ಗಂಡುಕುದುರೆಗಳ ಜೀವಮಾನ 25ರಿಂದ 30 ವರ್ಷಗಳು.

**ಕೂಡಿಸುವಿಕೆ:** ಸ್ಥಳೀಯ ಜಾತಿಯ ಹೆಣ್ಣು ಕುದುರೆಗಳು ಗರ್ಭಧಾರಣೆಗೆ ವರ್ಷದ ಎಲ್ಲ ಕಾಲದಲ್ಲೂ ಹದವಾಗಿರುತ್ತವೆ. ಶುದ್ಧ ತಳಿಗಳು ಜನವರಿಯಿಂದ ಫೆಬ್ರವರಿ ತಿಂಗಳ ಕಾಲದಲ್ಲಿ ಮಾತ್ರ ಗರ್ಭತಾಳಬಲ್ಲವು. ಸುಮಾರು 3 ರಿಂದ ಒಂದು ವಾರ ಇಲ್ಲವೇ 9 ದಿವಸಗಳ ಕಾಲ ಇರುವ ಗರ್ಭಕಾಲದ ಸೂಚನೆಗಳು : ಒಂದು ತರಹ ಮಂಕು, ಕಿರಿಕಿರಿ, ಮನೋವಿಕಾರ, ಹಸಿವು ಕಾಣಿಸದೆ ಇರುವಿಕೆ, ಇತರ ಕುದುರೆಗಳ ಅದರಲ್ಲೂ ಗಂಡುಗಳ ಸಹವಾಸ ಬಯಸುವಿಕೆ, ಆಗಾಗ ಮೂತ್ರ ವಿಸರ್ಜನೆ, ಯೋನಿಮುಖದ ಚಲನೆ ಮತ್ತು ಬಿಟ್ಟುಬಿಟ್ಟು ಹೊರಸೂಸುವ ಬಿಳಿದ್ರವ–ಈ ಸ್ಥಿತಿಯಲ್ಲಿ ಬಹುಹೆಣ್ಣುಗಳು ಗಂಡುಕುದುರೆ ಸಂಭೋಗಕ್ಕೆ ಹಸನಾಗಿರುತ್ತವೆ. ಸಂಭೋಗದ ಅನಂತರ ಗರ್ಭಧಾರಣೆ ಆಗುವುದು ಖಚಿತ. ಆದರೆ ಕೆಲವು ಕುದುರೆಗಳಲ್ಲಿ ಈ ಪರಿಸ್ಥಿತಿ ಹಾಗೆಯೇ ಮುಂದುವರಿದು ಸಂಭೋಗದಿಂದ ಗರ್ಭಧಾರಣೆ ಆಗುವುದಿಲ್ಲ. ಗರ್ಭಕೋಶ ಇಲ್ಲವೆ ಅಂಡಾಶಯದ ಅವ್ಯವಸ್ಥೆ ಅಥವಾ ಸೋಂಕು ಇದಕ್ಕೆ ಕಾರಣ. ಆಗ ಪಶುವೈದ್ಯರಿಂದ ಚಿಕಿತ್ಸೆ ಅಗತ್ಯ. ತಳಿ ಅಭಿವೃದ್ಧಿಯಲ್ಲಿ ಕುದುರೆಗಳ ನೈರ್ಮಲ್ಯಕ್ಕೆ ಗಮನ ಬಹಳ ಅಗತ್ಯ. ಗಂಡು ಕುದುರೆಯ ಶಿಶ್ನ ಸ್ವಚ್ಛವಾಗಿದ್ದು ಕಪ್ಪು ಕೊಳೆ ಶೇಖರವಾಗದಂತಿರಬೇಕು. ಹೆಣ್ಣಿನ ಹಿಂಭಾಗವನ್ನು ಮತ್ತು ಯೋನಿಮುಖದಿಂದ ಸ್ರಾವವಾಗಿರುವ ವಸ್ತುಗಳನ್ನೂ ಚೆನ್ನಾಗಿ ತೊಳೆಯಬೇಕು. ಇದಕ್ಕೆ ಗಮನ ಕೊಡದಿದ್ದರೆ ಗರ್ಭಸ್ರಾವ ಅಥವಾ ಪೂರ್ಣ ಬೆಳವಣಿಗೆಯಾಗದ ಮರಿಗಳ ಜನನ ಅಥವಾ ಗರ್ಭಕೋಶದ ಸೋಂಕು ಆಗಿ ತೊಂದರೆ ಉಂಟಾಗುತ್ತದೆ.

**ಗರ್ಭಿಣಿ ಕುದುರೆಗಳ ಆರೈಕೆ:** ಗರ್ಭಧಾರಣೆಯಾದ ಕೂಡಲೆ ಹೆಣ್ಣು ಕುದುರೆಯಲ್ಲಿ ಕಾಮೋದ್ರೇಕ ಇಳಿದು ಅದು ಮುಂದೆ ಪ್ರಸವವಾಗುವವರೆಗೂ ಕಂಡು ಬರುವುದಿಲ್ಲ. ಗರ್ಭಧಾರಣೆ ಕಾಲ ಭಾರತ ದೇಶದ ಹವಾಪರಿಸ್ಥಿತಿಯಲ್ಲಿ ಸುಮಾರು 340 ದಿವಸಗಳು. ಗರ್ಭಿಣಿ ಕುದುರೆಗೆ ಮೊದಲ ಕೆಲವು ತಿಂಗಳುಗಳಲ್ಲಿ ಲಾಯದ ಸೂಕ್ತ ಮೇಲ್ವಿಚಾರಣೆ ವಿನಾ ಅಂಥ ಹೆಚ್ಚು ಗಮನ ಬೇಕಾಗುವುದಿಲ್ಲ. 6ನೆಯ ತಿಂಗಳಿನಿಂದ ಎಚ್ಚರಿಕೆ ಅಗತ್ಯ. ಹೆಚ್ಚು ಆಹಾರ ಕೊಟ್ಟು ಮೈ ಕೊಬ್ಬಿಸಬಾರದು. ಒಳ್ಳೆ ಒಣಗಿಸಿದ ಹಸಿ ಮೇವು ಮತ್ತು ಓಟ್ಸ್ ಧಾನ್ಯ ಇವುಗಳಿಗಿಂತ ಹೆಚ್ಚೇನೂ ಅಗತ್ಯವಿಲ್ಲ. ಹೆರಿಗೆ ಹತ್ತಿರ ಬಂದ ವೇಳೆಯಲ್ಲಿ ನಾರಗಸೆಯ ಬೀಜದ ಗಂಜಿಗೆ ಗೋದಿಹೊಟ್ಟು ಮತ್ತು ಉಪ್ಪು ಸೇರಿಸಿ ಕೊಡುವುದು ಒಳ್ಳೆಯದು. ನೆಕ್ಕುವುದಕ್ಕೆ ಕಲ್ಲುಪ್ಪು ಇಡುವುದು ಅಗತ್ಯ. ಕುಡಿಯಲು ಸಿಹಿನೀರು ಸದಾ ಸಿಗುವಂತೆ ಇರಬೇಕು. ಹೆರಿಗೆ ಸಮಯದಲ್ಲಿ ಸೂಕ್ತ ಎಚ್ಚರಿಕೆ ಅಗತ್ಯ. ಉತ್ತಮ ತಳಿಕುದುರೆಗಳಿಗೆ ದೇಶೀ ಕುದುರೆಗಳಿಗಿಂತ ಹೆರಿಗೆ ಕಾಲದಲ್ಲಿ ಅಪಾಯ ಸಂಭವ ಹೆಚ್ಚು. ಮೊಲೆತುದಿಯಲ್ಲಿ ಅಂಟು ಕಾಣಿಸಿ ಅನಂತರ ಹಾಲು ಬರುವುದು ಹೆರಿಗೆ ಇನ್ನೇನು ಕೆಲವೇ ಗಂಟೆಗಳಲ್ಲೇ ಆಗುತ್ತದೆ ಎನ್ನುವುದಕ್ಕೆ ಸೂಚನೆ. ಕೆಲವು ಕುದುರೆಗಳಲ್ಲಿ ಇದು ಹೆರಿಗೆಗೆ ಒಂದೆರಡು ದಿವಸಗಳ ಮುಂದೆ ಆಗಬಹುದು. ಸೂಚನೆ ಕಂಡ ಕೂಡಲೆ ಗರ್ಭಿಣಿ ಕುದುರೆಯನ್ನು ಹಿತವಾದ ತಂಪಾದ ಗಾಳಿ ಸಂಚಾರ ಸಮರ್ಪಕವಾಗಿರುವ ಕೊಠಡಿಗೆ ಸಾಗಿಸಬೇಕು. ಉದ್ರೇಕಕ್ಕೆ ಎಡೆ ಇಲ್ಲದ ನಿಶ್ಶಬ್ದ ವಾತಾವರಣವನ್ನು ಅಳವಡಿಸುವುದು ಆವಶ್ಯಕ. ಅಪರಿಚಿತ ಜನರನ್ನು ಸೇರಿಸಬಾರದು. ಸಾಧಾರಣವಾಗಿ ಕುದುರೆಗೆ ಅದು ಮಲಗಿದಾಗ ಹೆರಿಗೆಯಾಗುತ್ತದೆ. ವ್ಯತ್ಯಾಸಸ್ಥಿತಿ ಕಂಡುಬಂದರೆ ಪಶುವೈದ್ಯರಿಗೆ ಕರೆಕಳಿಸುವುದು ಉತ್ತಮ. ಮರಿ ಹೊರಬಂದ ತತ್‍ಕ್ಷಣ ಹೊಕ್ಕಳು ಬಳ್ಳಿಯನ್ನು ಒಂದೆರಡು ಅಂಗುಲ ಉದ್ದದಷ್ಟು ಬಿಟ್ಟು ಶುಭ್ರವಾದ ಟ್ವೈನ್ ದಾರದಿಂದ ಕಟ್ಟಬೇಕು. ಕ್ರಮೇಣ ಬಳ್ಳಿ ಅದಾಗಿ ಅದೇ ಬಿದ್ದು ಹೋಗುತ್ತದೆ. ಹೆರಿಗೆ ಕಸ ಹೊರಬಂದ ಮೇಲೆ ಕುದುರೆಗೆ ತಿಳಿಯಾದ ಹೊಟ್ಟುಗಂಜಿ ಕುಡಿಸಬೇಕು. ಕೆಚ್ಚಲು ಸ್ವಚ್ಛವಾಗಿ ತೊಳೆಯುವುದು ಬಹಳ ಅಗತ್ಯ. ಇವೆಲ್ಲ ಆದಮೇಲೆ ಮರಿಯನ್ನು ತಾಯಿ ಬಳಿ ಇರಿಸಬೇಕು. ಅದು ಸ್ವಲ್ಪ ಹೊತ್ತಿನಲ್ಲಿಯೇ ಎದ್ದುನಿಂತು ಮೊಲೆ ಉಣ್ಣುವುದಕ್ಕೆ ಪ್ರಾರಂಭಿಸುತ್ತದೆ. ಮೊಲೆಯುಣ್ಣಲು ಅದಕ್ಕೆ ಆಗದಿದ್ದಾಗ ಸಹಾಯ ಮಾಡುವುದು ಆವಶ್ಯಕ. ಮರಿ ಕುದುರೆಗೆ ಮಲಬದ್ಧತೆ ಆಗಿದೆ ಎಂದು ಕಂಡುಬಂದಾಗ ಹರಳೆಣ್ಣೆ ಎನಿಮಾ ಅಗತ್ಯವಾಗಬಹುದು. ಕಾಲಪ್ರವೃತ್ತಿಯಾದ ಅನಂತರ ಮರಿಗೆ ಏನೂ ಹೆಚ್ಚಿನ ಗಮನ ಬೇಕಾಗುವುದಿಲ್ಲ. ಗಂಡು ಕುದುರೆಮರಿಯನ್ನು ಕೋಲ್ಟ್ ಫೋಲ್ ಎಂದೂ ಹೆಣ್ಣು ಕುದುರೆ ಮರಿಯನ್ನು ಫಿಲ್ಲಿ ಎಂದೂ ಕರೆಯುತ್ತಾರೆ. 6 ತಿಂಗಳಾದ ಮೇಲೆ ತಾಯಿ ಹಾಲು ನಿಲ್ಲಿಸುತ್ತಾರೆ. ಒಂದು ವರ್ಷವಾದ ಅನಂತರ ಹೆಣ್ಣು ಗಂಡುಗಳನ್ನು ಬೇರ್ಪಡಿಸಿ ಹುಲ್ಲುಗಾವಲು–ಲಾಯ ಅಲಾಯಿದೆ ಏರ್ಪಾಡುಮಾಡುತ್ತಾರೆ.

**ಕುದುರೆ ವಯಸ್ಸು ನಿರ್ಣಯಿಸುವುದು:** ಹಲ್ಲುಗಳ ಎಣಿಕೆಯ ಆಧಾರದ ಮೇಲೆ ಕುದುರೆಯ ವಯಸ್ಸನ್ನು ನಿರ್ಧರಿಸಬಹುದು. ಈ ಲೆಕ್ಕಾಚಾರ 9 ವರ್ಷದ ಒಳಗಿನ ಕುದುರೆಗಳಿಗೆ ನಿಖರವಾಗಿ ಅನ್ವಯಿಸುತ್ತದೆ. ಅದಕ್ಕೂ ಹೆಚ್ಚಿನ ವಯಸ್ಸಿನ ಕುದುರೆಗಳ ವಯೋಮಿತಿ ನಿರ್ಧಾರಕ್ಕೆ ಅನುಭವಬೇಕು. ಕುದುರೆ ಹುಟ್ಟಿದಾಗ ಮಧ್ಯದ ಎರಡು ಬಾಚಿ ಹಲ್ಲುಗಳಿರುತ್ತವೆ. 9 ತಿಂಗಳ ಹೊತ್ತಿಗೆ ಉಳಿದೆರಡು ಮುಂದಿನ ಹಲ್ಲುಗಳು ಒಂದು ಬಾಚಿ ಹಲ್ಲೆಲ್ಲ ಅಸ್ತಿತ್ವಕ್ಕೆ ಬಂದಹಾಗಾಗುತ್ತದೆ. 2 1/2 ವರ್ಷ ಸುಮಾರಿನಲ್ಲಿ, ಈ ಹಲ್ಲುಗಳು ಬಿದ್ದು ಸ್ಥಿರವಾದ ಹಲ್ಲುಗಳು ಹುಟ್ಟಲು ಪ್ರಾರಂಭವಾಗುತ್ತವೆ. 3 ವರ್ಷಕ್ಕೆ ಮಧ್ಯದ ಹಲ್ಲುಗಳೆಲ್ಲ ಬಿದ್ದು ಹೊಸಹಲ್ಲು ಹುಟ್ಟಿರುತ್ತದೆ. 4 ನೆಯ ವರ್ಷಕ್ಕೆ 4 ಸ್ಥಿರಹಲ್ಲುಗಳೂ 5ನೆಯ ವರ್ಷಕ್ಕೆ ಎಲ್ಲ ಬಾಚಿ ಹಲ್ಲುಗಳೂ ಕಳೆದು ಸ್ಥಿರಹಲ್ಲುಗಳು ಬಂದಿರುತ್ತವೆ. ಇಂಥ ಕುದುರೆಗೆ ಪೂರ್ಣಬಾಯಿಯ ಕುದುರೆ ಎನ್ನುತ್ತಾರೆ. 6ನೆಯ ವರ್ಷದಿಂದ ಬಾಚಿಹಲ್ಲುಗಳ ಮೇಲಿನ ಭಾಗ ಸವೆಯುವುದಕ್ಕೆ ಪ್ರಾರಂಭವಾಗಿ 9 ವರ್ಷದ ವೇಳೆಗೆ ಅವುಗಳಲ್ಲಿ ಗುಣಿಗಳು ಏನೂ ಇರುವುದಿಲ್ಲ. ಇಂಥ ಕುದುರೆಯನ್ನು ವಯಸ್ಸಾದ ಕುದುರೆ ಎಂದು ಪರಿಗಣಿಸುತ್ತಾರೆ. ಇದಾದ ಮೇಲೆ ಹಲ್ಲುಗಳಿಂದ ವಯೋಮಿತಿ ಗೊತ್ತಾಗುವುದಿಲ್ಲ. ಬೀಜ ಒಡೆಯುವುದಕ್ಕೆ ವಯಸ್ಸು ಮತ್ತು ಕಾಲ ಬೇರೆ ಬೇರೆ ತಳಿಗಳಿಗೆ ವ್ಯತ್ಯಾಸ. ಈ ಶಸ್ತ್ರಚಿಕಿತ್ಸೆಗೆ ಸೂಕ್ತ ವಯಸ್ಸು ಮತ್ತು ಸಮಯಗಳ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟು. 6 ತಿಂಗಳಿಗೂ ಕಡಿಮೆ ವಯಸ್ಸಿಳ್ಳ ಗಂಡು ಮರಿಗಳ ಬೀಜ ಒಡೆಯುವುದು ಅಸಮಂಜಸ. ಒಂದು ವರ್ಷ ಸೂಕ್ತ ಕಾಲ. ಇದು ಒಂದು ಸುಲಭ ಮತ್ತು ಶೀಘ್ರವಾದ ಶಸ್ತ್ರಚಿಕಿತ್ಸೆ. ಗಾಯ, ತೊಂದರೆ ಇಲ್ಲದೆ ಮಾಯುತ್ತದೆ. ನೊಣಗಳ ಕಾಟವಿಲ್ಲದೆ ತಂಪಾಗಿರುವ ವಸಂತಕಾಲ ಇದಕ್ಕೆ ಅತ್ಯುತ್ತಮ. ಚಳಿಗಾಲದಲ್ಲಿ ಮಾಯುವುದಕ್ಕೆ ತೊಂದರೆ.

**ಬಾಣಂತಿ ಕುದುರೆ ಮತ್ತು ಮರಿಗಳ ಪೋಷಣೆ:** ಮರಿ ಉಳ್ಳ ಕುದುರೆಗೆ ಒಳ್ಳೆ ಹಸುರುಹುಲ್ಲು, ರುಬ್ಬಿದ ಓಟ್‍ಧಾನ್ಯ, ಕುದುರೆ ಮಸಾಲೆಸೊಪ್ಪು, ಕೆಂಪು ಮೂಲಂಗಿ ಇವೆಲ್ಲ ಅಗತ್ಯವಾಗಿ ಕೊಡಬೇಕಾದ ಆಹಾರ. ಹಸಿಮೇವು ಯಥೇಚ್ಛವಾಗಿದ್ದಲ್ಲಿ, ಓಟ್ ದಿವಸಕ್ಕೆ ಎರಡು ಬಾರಿ ಸಾಕು. ಮರಿಗೆ 2–3 ವಾರಗಳಾಗಿ ಅದು ಮೇವು ತಿನ್ನಲು ಪ್ರಾರಂಭಿಸಿದಾಗ ಸ್ವಲ್ಪ ಆಹಾರವನ್ನು ನೇರವಾಗಿ 2–3 ಬಾರಿ ಅದಕ್ಕೆ ಕೊಡಬಹುದು. ಮರಿ ಚೆನ್ನಾಗಿ ಬೆಳೆಯಬೇಕಾದರೆ ಪುಷ್ಟಿಯಾದ ಆಹಾರ ಆವಶ್ಯಕ.

**ಮರಿಗಳ ನಿರ್ವಹಣೆ:** ಮರಿ ಸಣ್ಣದಾಗಿದ್ದಾಗಿನಿಂದ ಅದರ ಮೈ ಕೈಯನ್ನು ಕೈಯಿಂದ ಚೆನ್ನಾಗಿ ನೇವರಿಸಿ ಅದಕ್ಕೆ ಒಂದು ಮಮತೆಯ ವಾತಾವರಣವನ್ನು ಉಂಟುಮಾಡುವುದು ಒಳ್ಳೆಯದು. ಸಾಧಾರಣವಾಗಿ 6 ತಿಂಗಳ ಮರಿಗೆ ಮೊಲೆಯುಣ್ಣುವುದನ್ನು ಬಿಡಿಸುತ್ತಾರೆ. ತಾಯಿ ಗಬ್ಬವಾಗಿಲ್ಲದಿದ್ದರೆ ಮರಿಗೆ 9 ತಿಂಗಳಿನವರೆಗೂ ಹಾಲು ಕುಡಿಯಲು ಬಿಡಬೇಕು. ಮರಿಗೆ ಹಾಲು ಬಿಡಿಸಿದಾಗ ಕುದುರೆ ಕೆಚ್ಚಲು ಊದಿ ನೋವಾದಲ್ಲಿ ಹಾಲು ಹಿಂಡುವುದು ಉತ್ತಮ. ಕೆಚ್ಚಲು ತೊಳೆದು ಕೊಬ್ಬರಿ ಎಣ್ಣೆ ಹಚ್ಚಿದರೆ ಕೆಚ್ಚಲು ಮತ್ತು ಮೊಲೆ ಬಿಗಿಯುವುದಿಲ್ಲ. ತಾಯಿ ಹಾಲು ಕಡಿಮೆಯಾದಲ್ಲಿ ಮರಿಗೆ ಸ್ವಲ್ಪ ಬಿಸಿಮಾಡಿದ ಬೆಣ್ಣೆತೆಗೆದ ಹಸುವಿನ ಹಾಲು ಕೊಡಬಹುದು. ತಾಯಿ ಹಾಲಿದ್ದಲ್ಲಿ ಬೇರೆ ಹಾಲು ಅನಗತ್ಯ. ತಾಯಿ ಹಾಲು ಬಿಡಿಸಿದ ಮೇಲೆ ಎಮ್ಮೆ ಅಥವಾ ಹಸುವಿನ ಹಾಲು ಕೊಟ್ಟಲ್ಲಿ ಮರಿ ಚೆನ್ನಾಗಿ ಬೆಳೆಯುತ್ತದೆ. (ಟಿ.ಕೆ.ಆರ್.)

**ಕುದುರೆ ಪಂದ್ಯ :** ಪಳಗಿಸಿದ ಓಟದ ಕುದುರೆಗಳನ್ನು ಅವುಗಳ ಸವಾರರ (ಜಾಕಿಗಳ) ಸಮೇತ ಪೂರ್ವಸಿದ್ಧ ಪಥದ ಮೇಲೆ ಓಡಿಸುವ ಆಟ ಹಾಗೂ ಇದರ ಅಂಗವಾಗಿ ಬೆಳೆದುಬಂದಿರುವ ಜೂಜು. ಮನುಷ್ಯ ಕುದುರೆಯನ್ನು ಪಳಗಿಸಿ ಅದನ್ನೊಂದು

ಶೀಘ್ರಗಾಮಿ ವಾಹನವನ್ನಾಗಿ ಉಪಯೋಗಿಸಲು ಆರಂಭಿಸಿದಾಗಲೇ, ಎಂದರೆ ಅಸ್ಪಷ್ಟ ಪ್ರಾಚೀನ ಕಾಲದಲ್ಲೇ, ಕುದುರೆ ಪಂದ್ಯದ ಆರಂಭವೂ ಆಗಿರಬೇಕು. ವೇದಕಾಲದ ಜನರಲ್ಲಿ ಕುದುರೆ ರಥಗಳ ಓಟಗಳೂ ಕುದುರೆ ಓಟಗಳೂ ಪ್ರಿಯವಾಗಿದ್ದುವೆಂಬುದಕ್ಕೆ ಆಧಾರಗಳಿವೆ. ಪ್ರ.ಶ.ಪೂ. ಸು. 624ರಲ್ಲಿ ನಡೆದ ಮೂವತ್ತಮೂರನೆಯ ಒಲಂಪಿಯಡ್‌ನಲ್ಲಿ ಜಾಕಿಸಮೇತ ಕುದುರೆಗಳ ಓಟಗಳನ್ನು ಏರ್ಪಡಿಸಿದ್ದರೆನ್ನುವುದಕ್ಕೆ ದಾಖಲೆಗಳು ಉಂಟು. ಏಷ್ಯ ಹಾಗೂ ಇಟಲಿಗಳಲ್ಲಿ ಸಾರ್ವತ್ರಿಕವಾಗಿ ಆ ಮೊದಲೇ ಹಲವಾರು ಶತಮಾನಗಳವರೆಗೂ ಕುದುರೆ ಪಂದ್ಯಗಳು ಇದ್ದಿರಬೇಕೆಂದು ಈ ಆಧಾರಗಳಿಂದ ತರ್ಕಿಸಲಾಗಿದೆ. ಆದರೆ ಇಲ್ಲೆಲ್ಲ ಪಂದ್ಯಕ್ಕಾಗಿಯೇ ಕುದುರೆಗಳನ್ನು, ಎಂದರೆ ಕುದುರೆಗಳ ವಿಶಿಷ್ಟವಾದ ತಳಿಗಳನ್ನು ಸಿದ್ಧಪಡಿಸುತ್ತಿದ್ದರೇ ಅಥವಾ ಸುಲಭವಾಗಿ ಎದುರಿಗೆ ದೊರೆತಂಥ ಆರೋಗ್ಯವಂತ ಕುದುರೆಗಳನ್ನು ಓಟಕ್ಕಾಗಿ ಬಳಸುತ್ತಿದ್ದರೇ ಎಂಬುದು ಖಚಿತವಾಗಿ ತಿಳಿದಿಲ್ಲ. ಹಾಗಿದ್ದರೂ ಅಂದಿನ ಮಧ್ಯಪ್ರಾಚ್ಯದ ನಾಗರಿಕತೆಗಳ ಮಧ್ಯೆ ಬೆಳೆದ ಕುದುರೆಗಳು ಓಟಕ್ಕೆ ಹೇಳಿ ಮಾಡಿಸಿದಂತಿದ್ದುವು. ಇಂದಿನ ಶುದ್ಧ ತಳಿ (ಥರೋ ಬ್ರೆಡ್) ಕುದುರೆಗಳ ಮುಂಚಿನ ತಳಿಯನ್ನು ಈ ಕುದುರೆಗಳಲ್ಲಿ ಕಾಣಬಹುದು.

ವ್ಯವಸ್ಥಿತವಾದ ಆಧುನಿಕ ರೀತಿಯ ಕುದುರೆ ಪಂದ್ಯ ಆರಂಭವಾದದ್ದು ಗ್ರೇಟ್ ಬ್ರಿಟನ್ನಿನಲ್ಲಿ. ರಾಜರ ಆಟ ಎಂದು ಅಲ್ಲಿ ಇದಕ್ಕೆ ಹೆಸರಿತ್ತು. ಎರಡನೆಯ ಹೆನ್ರಿಯ ಆಳ್ವಿಕೆಯಲ್ಲಿ (1174ರಲ್ಲಿ) ನಡೆದ ಕುದುರೆಪಂದ್ಯಕ್ಕಾಗಿ ವಿಶಾಲವಾದ ತೆರೆದ ಮೈದಾನವನ್ನು ಸಿದ್ಧಪಡಿಸಲಾಗಿತ್ತು. ಅಲ್ಲಿ ಕುದುರೆಗಳು ಓಡಬೇಕಾದ ಪಥವನ್ನು ನಿರ್ಧರಿಸಿದ್ದರು. ಓಟವನ್ನು ಬೇರೆ ಬೇರೆ ಅನುಕೂಲ ಸ್ಥಾನಗಳಿಂದ ನೋಡಲು ಪ್ರತಿಷ್ಠಿತರು ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದರು. ಕುದುರೆಗಳ ಮೇಲೆ ಮಂಡಿಸಿದ್ದ ಜಾಕಿಗಳು ಜನಜಂಗುಳಿಯಿಂದ ದೊರೆತ ಕುಮ್ಮಕ್ಕಿನಿಂದ ಉತ್ಸಾಹಿತರಾಗಿ ತಮ್ಮ ಕುದುರೆಗಳನ್ನು ದೌಡಾಯಿಸಿಕೊಂಡು ಪಥದ ಮೇಲೆ ಓಡಿಸಿದುದರ ವರದಿ ಉಲ್ಲೇಖಿತವಾಗಿದೆ.

ಕುದುರೆ ಪಂದ್ಯದಲ್ಲಿ ಜೂಜು ತೊಡಗಿದ್ದು ಸ್ವಲ್ಪ ತಡವಾಗಿ, ಓಟವನ್ನು ನೋಡಲು ನೆರೆದಿರುವ ಪ್ರೇಕ್ಷಕರಲ್ಲಿ ಯಾವ ಕುದುರೆ ಒಂದನೆಯ ಸ್ಥಾನ ಗಳಿಸಬಹುದು ಎಂಬ ಪ್ರಶ್ನೆ ಮೂಡುತ್ತದೆ. ಒಂದು ನಿರ್ದಿಷ್ಟ ಕುದುರೆ ಗೆದ್ದೇ ತೀರುತ್ತದೆ ಎಂದು ಕೆಲವು ಪ್ರೇಕ್ಷಕರು ಪಣತೊಡಬಹುದು. ಇದರ ಸಂಕೇತವಾಗಿ ಅವರು ಒಂದಿಷ್ಟು ಹಣವನ್ನು ಮುಂಗಡವಾಗಿ ಸಲ್ಲಿಸುತ್ತಾರೆ. ಈ ಹಣವನ್ನು ಪಡೆದುಕೊಳ್ಳಲು ಅಂದರೆ ಪಣಗಳನ್ನು ವ್ಯವಸ್ಥೆಗೊಳಿಸಲು ಒಂದು ಸಂಸ್ಥೆ ಬೇಕಾಗುತ್ತದೆ. ಪಣಕಟ್ಟಿದ ಕುದುರೆ ಗೆದ್ದರೆ ಮುಂಗಡ ಹಣ ಸಲ್ಲಿಸಿದವರಿಗೆ ನಿಗದಿಯಾದಷ್ಟು ಪಟ್ಟು ಹಣವನ್ನು ಸಂಸ್ಥೆ ತೆರಬೇಕಾಗುವುದು; ಆಗದಿದ್ದರೆ ಪ್ರೇಕ್ಷಕರು ಕೊಟ್ಟ ಹಣ ಸಂಸ್ಥೆಯ ಪಾಲಾಗುತ್ತದೆ. ಪಂದ್ಯದ ಮತ್ತು ಜೂಜಿನ ನಿಯಮಗಳು ಕಾಲ ಸ್ಥಳಾನುಸಾರ ಬದಲಾಗುತ್ತ ಬಂದಿವೆ, ವ್ಯವಸ್ಥಿತವಾಗಿವೆ, ಸರ್ಕಾರದ ಕಾನೂನು ಕಾಯಿದೆಗಳಿಂದ ಬಂಧಿತವಾಗಿವೆ. 16ನೆಯ ಶತಮಾನದ ಹೊತ್ತಿಗೆ ಕುದುರೆ ಪಂದ್ಯ ಹಾಗೂ ಜೂಜುಗಳ ವ್ಯವಸ್ಥಿತ ರೂಪ ಮೈದಳೆಯಲಾರಂಭಿಸಿತ್ತು. ಅದೇ ವೇಳೆಗೆ ಪಂದ್ಯದ ಕುದುರೆಗಳನ್ನು ಆಯುವ, ವಿಶಿಷ್ಟ ತಳಿಗಳನ್ನು ಅಭಿವೃದ್ಧಿಪಡಿಸುವ ಅಂಥ ಕುದುರೆಗಳಿಗೆ ಶಿಕ್ಷಣ ಕೊಡುವ ಕ್ರಮಗಳೂ ಕ್ರಮೇಣ ರೂಪುಗೊಳ್ಳತೊಡಗಿದುವು.

ಪಂದ್ಯದ ಕುದುರೆಗಳನ್ನು ಸಾಕಿ ಪೋಷಿಸಿ ಪಂದ್ಯಗಳಲ್ಲಿ ಭಾಗವಹಿಸಲು ಕಳಿಸುವುದು ನಾಡಿನ ಶ್ರೀಮಂತ ವರ್ಗದವರ ಒಂದು ಹವ್ಯಾಸ. ಗೆಲ್ಲುವ ಕುದುರೆ ತರುವ ಬಹುಮಾನಗಳ ಜೊತೆಗೆ ಹೆಚ್ಚಿನ ಕೀರ್ತಿ, ಪ್ರತಿಷ್ಠೆಗಳೂ ದೊರೆಯುತ್ತವೆ. ಉತ್ತಮ ತಳಿಯ ಒಂದು ಪಂದ್ಯದ ಕುದುರೆಯ ಬೆಲೆ ಮೂವತ್ತು ಸಾವಿರ ರೂ.ಗಳಿಂದ 30 ಲಕ್ಷದವರೆಗೂ ಇರುವುದುಂಟು.

ಭಾರತದಲ್ಲಿ ಕುದುರೆ ಪಂದ್ಯ ಮತ್ತು ಜೂಜುಗಳಲ್ಲಿ ಮುಂಬಯಿಯ ಬಳಿಕ ಬೆಂಗಳೂರಿನದೇ ಪ್ರಧಾನ ಆಕರ್ಷಣೆ. ಮೊದಲು ಮೈಸೂರಿನ ಮಹಾರಾಜರಿಂದ ಮೈಸೂರು ನಗರದಲ್ಲಿ ಪ್ರಾರಂಭಗೊಂಡ ಪಂದ್ಯಗಳು ಈಗ ದೊಡ್ಡ ಪ್ರಮಾಣದಲ್ಲಿ ಬೆಂಗಳೂರು ನಗರದಲ್ಲಿ (ಮೇ–ಜುಲೈ) ಸ್ವಲ್ಪ ಕಿರಿಯ ಪ್ರಮಾಣದಲ್ಲಿ ಮೈಸೂರು ನಗರದಲ್ಲಿ (ಆಗಸ್ಟ್–ಸೆಪ್ಟೆಂಬರ್) ಪಂದ್ಯಗಳು ನಡೆಯುತ್ತವೆ. ಬೆಂಗಳೂರಿನ ಪಂದ್ಯಗಳಲ್ಲಿ ಸಾಮಾನ್ಯ ದಿವಸಗಳಲ್ಲಿ ದಿನವೊಂದರ ಸುಮಾರು 15,000 ಪ್ರೇಕ್ಷಕರು ಭಾಗವಹಿಸಿದರೆ ಜೂಜು ಮತ್ತು ಬಹುಮಾನಗಳ ವಿಶೇಷ ಆಕರ್ಷಣೆಗಳು ಇರುವ ದಿವಸಗಳಲ್ಲಿ ಈ ಸಂಖ್ಯೆ 50,000ಕ್ಕೂ ಹೆಚ್ಚು. ಕುದುರೆ ಪಂದ್ಯ ಕೋಟ್ಯಾಂತರ ರೂಪಾಯಿಗಳ ವಹಿವಾಟು ಹೊಂದಿದೆ. ಅದರಿಂದ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಅಧಿಕ ಆದಾಯ ಬರುತ್ತದೆ. ಕುದುರೆ ಬಾಲಕ್ಕೆ ಹಣ ಕಟ್ಟಿ ಹಾಳಾದವರೂ ಇದ್ದಾರೆ. (ಡಿ.ಎಸ್.ಜೆ.)

**ಕುದುರೆಬಾಲದ ಗಿಡ :** ಪುಷ್ಪರಹಿತ ಬಹುವಾರ್ಷಿಕ ಗಿಡ (ಈಕ್ವಿಸಿಟಮ್). ಟೆರಿಡೋಫೈಟ ವಿಭಾಗ, ಈಕ್ವಿಸಿಟೆನೀ ವರ್ಗ, ಈಕ್ವಿಸಿಟೇಲಿಸ್ ಗಣ, ಈಕ್ವಿಸಿಟೇಸೀ ಕುಟುಂಬಕ್ಕೆ ಸೇರಿದೆ. ಇಪ್ಪತ್ತೈದು ಪ್ರಭೇದಗಳಿವೆ. ಕೊಳಗಳಲ್ಲಿ ಅಥವಾ ಜಿನುಗುಪ್ರದೇಶಗಳಲ್ಲಿ ಕೆಲವು ಮತ್ತೆ ಕೆಲವು ಹುಲ್ಲುಗಾವಲುಗಳಲ್ಲಿ ಅಥವಾ ಒಣಪ್ರದೇಶಗಳಲ್ಲಿ ಬೆಳೆಯುತ್ತವೆ. ಆಸ್ಟ್ರೇಲಿಯ, ನ್ಯೂಜಿ಼ಲೆಂಡ್ ಬಿಟ್ಟು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಕುದುರೆಬಾಲದ ಗಿಡ ಹರಡಿದೆ. ಭಾರತದಲ್ಲಿರುವ ಈಕ್ವಿಸಿಟಮ್ ಡಿಬೈಲ್ ಎಂಬ ಪ್ರಭೇದ ಮೈಸೂರಿನ ಹತ್ತಿರ ಕಾವೇರಿ ನದಿ ದಡದಲ್ಲಿ ಹೇರಳವಾಗಿ ಬೆಳೆಯುತ್ತದೆ.

ಈಕ್ವಿಸಿಟಮ್ ಜೈಗಾಂಶಿಯಮ್ ಪ್ರಭೇದ ಸುಮಾರು ಹನ್ನೆರಡು ಮೀಟರುಗಳವರೆಗೆ ಬಳ್ಳಿಯಂತೆ ಬೆಳೆಯುತ್ತದೆ. ಮಿಕ್ಕ ಪ್ರಭೇದಗಳು ಸಾಮಾನ್ಯವಾಗಿ ಒಂದು ಮೀಟರು ಎತ್ತರಕ್ಕೆ ಬೆಳೆಯುತ್ತವೆ. ಈ ಗಿಡಗಳು ಹೇರಳವಾಗಿ ಕವಲೊಡೆದು ಕುದುರೆಬಾಲದಂತೆ ಕಾಣುವುದರಿಂದ ಗಿಡದ ಹೆಸರು ಅನ್ವರ್ಥಕವಾಗಿದೆ. ಕವಲುಗಳು ಎಲೆಗಳು ಅಕ್ಷರೇಖೆ ಬಿಟ್ಟು ಪಕ್ಕದಲ್ಲಿ ಹುಟ್ಟಿರುವುದು ವ್ಯಾಸ್ಕ್ಯುಲರ್ ಗಿಡಗಳಲ್ಲಿಯೇ ಒಂದು ಅಸಾಧಾರಣ ಗುಣ. ದುರ್ಬಲವಾದ ಬೇರುಕಾಂಡ ತೆಳ್ಳಗಿದೆ. ಇದು ಭೂಮಿಯ ಸುಮಾರು ಆಳದಲ್ಲಿ ಹುದುಗಿರುತ್ತದೆ. ಗೆಣ್ಣುಗಳನ್ನು ಬಿಟ್ಟು ಗಿಡದ ಎಲ್ಲ ಭಾಗ ಟೊಳ್ಳು. ಸಾಲ್ಗೊಳವೆಯಂತೆ ಜೋಡಿಸಲ್ಪಟ್ಟಿರುವ ಕಾಂಡ ಗೆಣ್ಣುಗಳ ಹತ್ತಿರ ಒಡೆದು ಸಣ್ಣ ತುಂಡುಗಳಾಗಿ ಬೇರ್ಪಡುವುದು ಒಂದು ಸೋಜಿಗದ ಸಂಗತಿ. ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ತೊಡಗಿ ಆಹಾರ ತಯಾರುಮಾಡುವ ಹಸಿರುಕಾಂಡ ಇಂಟರ್‌ಕ್ಯಾಲರಿ ಮೆರಿಸ್ಟೆಮ್ ಸಹಾಯದಿಂದ ಬೆಳೆಯುತ್ತದೆ. ಹಳ್ಳದಿಂಡುಗಳಿಂದ ಆವೃತವಾದ ಹೊರಮೈ ಸಿಲಿಕ ಎಂಬ ಲೋಹದ ಪೊರೆಯಿಂದ ಒರಟಾಗಿದೆ. ಪೊರೆಯಂತಿರುವ ಸಣ್ಣ ಎಲೆಗಳು ಅತಿ ಸರಳ, ಹಾಗೂ ಸೂಕ್ಷ್ಮ. ಒಂದೇ ಗುಂಪಿನಲ್ಲಿದ್ದು ಗೆಣ್ಣುಗಳ ಸುತ್ತಲೂ ಬೆಸೆದುಕೊಂಡಿವೆ. ಗೆಣ್ಣುಗಳ ಇಕ್ಕಡೆಗಳಲ್ಲಿರುವ ಮೆರಿಸ್ಟೆಮ್ ಅನ್ನು ರಕ್ಷಿಸುವುದು ಮಾತ್ರ ಅವುಗಳ ಕೆಲಸ. ಬೇರುಗಳು ಸಹ ಬೇರುಕಾಂಡದ ಗೆಣ್ಣುಗಳಿಂದ ಹುಟ್ಟಿವೆ.

ಸಂತಾನವೃದ್ಧಿಗಾಗಿ ಈ ಗಿಡ ಗೆಡ್ಡೆಗಳನ್ನು ಬಿಡುತ್ತದೆ. ಬೀಜಕಣಗಳು ನಿರ್ಲಿಂಗ ಸಂತಾನಾಭಿವೃದ್ಧಿಯನ್ನು ನಡೆಸಿಕೊಡುತ್ತವೆ. ಏಕರೂಪದ ಈ ಕಣಗಳು ಅಂಡಾಕಾರದ ಬೀಜಕೋಶದಲ್ಲಿ ಹೇರಳವಾಗಿ ಉತ್ಪತ್ತಿಯಾಗುತ್ತವೆ. 8ರಿಂದ 10ರ ವರೆಗಿನ ಬೀಜಕೋಶದ ಗುಂಪು ಸ್ಪೊರಾಂಜಿಯೋಫೋರ್‌ನ ಬಿಲ್ಲೆಗಳಿಗೆ ಅಂಟಿಕೊಂಡಿವೆ. ತೊಟ್ಟುಗಳನ್ನೊಳಗೊಂಡ ಕೋನಾಕೃತಿಯ ಬಿಲ್ಲೆಗಳ ಸ್ಪೊರಾಂಜಿಯೋಫೋರ್ಸ್ ಕಾಂಡಗಳ ತುದಿಯಲ್ಲಿ ಒತ್ತಾಗಿ ಬೆಳೆದು ಶಂಕುವಿನಾಕಾರದ ಒಂದು ಮುಖ್ಯ ಭಾಗವಾಗಿದೆ. ಅದಕ್ಕೆ ಸ್ಟ್ರೊಬೈಲಸ್ ಅಥವಾ ಕೋನ್ ಎಂದು ಹೆಸರು. ಬೀಜಕಣ ಮೊಳೆತು ಅದು ಗ್ಯಾಮಿಟೋಫೈಟ್ ಆಗಿ ವೃದ್ಧಿಸುತ್ತದೆ. ನೆಟ್ಟಗೆ ಬೆಳೆದ ಹಸಿರು ಸೀಳಿಕೆಗಳ ಗ್ಯಾಮಿಟೋಫೈಟ್ ಉದ್ದವಾಗಿರುವುದಲ್ಲದೆ ಗೋಳಾಕಾರದ ಮೆತ್ತನೆಯಂತೆ ಕಾಣುವುದು. ಲೈಂಗಿಕ ಸಂತಾನದ ಅಂಗಾಂಗಗಳಾದ ಆಂಥೆರಿಡಿಯ, ಆರ್ಚಿಗೋನಿಯ ಎರಡು ಅದರಲ್ಲಿರುವುವು. ಮುಂದೆ ಈ ಸಂತಾನೋತ್ಪತ್ತಿಯಲ್ಲಿ ಸ್ಪೋರೋಫೈಟ್ ಎಂಬ ಮೂಲಗಿಡ ಹುಟ್ಟುತ್ತದೆ.

ಈ ಗಿಡವನ್ನು ತಟ್ಟೆ, ಪಾತ್ರೆ, ಮಡಕೆ ಮುಂತಾದುವನ್ನು ಉಜ್ಜಿ ಶುಭ್ರ ಮಾಡಲು ಉಪಯೋಗಿಸುತ್ತಿದ್ದರು. ಇದು ತೊಡಕನ್ನು ಉಂಟುಮಾಡುವ ಹಲುಬು ಕಳೆಯೂ ಹೌದು. (ಕೆ.ಎಂ.)

**ಕುದುರೆಮುಖ :** ಕರ್ನಾಟಕ ರಾಜ್ಯದಲ್ಲಿ ಪಶ್ಚಿಮ ಘಟ್ಟಗಳ ಉನ್ನತ ಶಿಖರ. ಸಮುದ್ರಮಟ್ಟದಿಂದ 1881 ಮೀ ಎತ್ತರದಲ್ಲಿರುವ ಈ ಶಿಖರ ಚಿಕ್ಕಮಗಳೂರು ಜಿಲ್ಲೆಯ ನೈರುತ್ಯ ಅಂಚಿನಲ್ಲಿ, ಘಟ್ಟದ ಸಾಲು ಒಳಕ್ಕೆ ಚಾಚಿಕೊಂಡಿರುವ ಎಡೆಯಲ್ಲಿದೆ. ಪಶ್ಚಿಮದಲ್ಲಿ ಸಮುದ್ರದ ಕಡೆಯಿಂದ ಇದು ಕುದುರೆಮುಖದಂತೆ ತೋರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಚಿಕ್ಕಮಗಳೂರಿನಿಂದ ಇಲ್ಲಿಗೆ ಸುಮಾರು 85 ಕಿಮೀ. ಮಂಗಳೂರು ಕಾರ್ಕಳ ಮಾರ್ಗವಾಗಿ (80 ಕಿಮೀ) ಇಲ್ಲಿಗೆ ಹೆದ್ದಾರಿ ಇದೆ. ಮೂಡಿಗೆರೆ ತಾಲ್ಲೂಕಿನ ಕಳಸದಿಂದ ಇಲ್ಲಿಗೆ 15 ಕಿಮೀಗಳು.

ಕುದುರೆಮುಖ ಪರ್ವತಸಾಲು ಕರ್ನಾಟಕದ ರಮಣೀಯ ತಾಣಗಳಲ್ಲೊಂದು. ಈ ಎತ್ತರದ ಗಿರಿ ಶಿಖರಗಳು ಹೆಬ್ಬುಲ್ಲಿನಿಂದ ಮುಚ್ಚಲ್ಪಟ್ಟಿದೆ. ತಪ್ಪಲಿನಲ್ಲಿ ಕಾಡುಗಳಿವೆ. ಈ ವಲಯ ಏಷ್ಯದಲ್ಲಿಯೇ ಅತಿ ದೊಡ್ಡ ಕಬ್ಬಿಣ ಅದಿರಿನ ನಿಕ್ಷೇಪವೆಂದು ತಿಳಿದುಬಂದಿತು. 1970ರ ದಶಕದಲ್ಲಿ ಇಲ್ಲಿ ಕಬ್ಬಿಣ ಅದಿರು ತೆಗೆದು ಸಾರೀಕರಿಸಿ ವಿದೇಶಗಳಿಗೆ ರಫ್ತು ಮಾಡುವ ಕಾರ್ಯ ಆರಂಭವಾಯಿತು. ಮುಂದೆ ಹಲವಾರು ವರ್ಷಗಳ ಕಾಲ ಈ ಯೋಜನೆ ನಡೆಯಿತು. ಇತ್ತೀಚೆಗೆ ಇಲ್ಲಿ ಪರಿಸರ ಹಾನಿ ಸಮಸ್ಯೆ ಉದ್ಭವಿಸಿ ಅದಿರು ತೆಗೆಯುವ ಯೋಜನೆಯನ್ನು ಎರಡು ಸಾವಿರದ ಮೊದಲನೆಯ ದಶಕದ ಕೊನೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಸೂಚನೆಯ ಮೇರೆಗೆ ನಿಲ್ಲಿಸಲಾಯಿತು. ಭದ್ರಾನದಿ ಇದರ ಒಡಲಲ್ಲಿ ಹುಟ್ಟಿ ಹರಿಯುತ್ತದೆ. ಹಿಂದೆ ಮೈಸೂರು ಮಹಾರಾಜರು ಇಲ್ಲಿಗೆ ವಿಶ್ರಾಂತಿಗಾಗಿ ಬರುತ್ತಿದ್ದರು. ಈಗ ಈ ವಲಯವನ್ನು ಅಭಯಾರಣ್ಯವಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. (ಡಿ.ಎಸ್.ಜೆ.)

**ಕುದುರೆ ರೋಗಗಳು :** ಕುದುರೆಗೆ ಬರುವ ಕೆಲವು ಮುಖ್ಯ ರೋಗಗಳನ್ನು ಇಲ್ಲಿ ದಾಖಲಿಸಿದೆ.

1 **ಆಫ್ರಿಕದ ಕುದುರೆ ರೋಗ:** ಕುದುರೆ ಜಾತಿ ಪ್ರಾಣಿಗಳಿಗೆ ವೈರಸ್ ಸೋಂಕಿನಿಂದ ಬರುವ ಶ್ವಾಯವ್ಯಾಧಿ (ಹಾರ್ಸ್ ಸಿಕ್‌ನೆಸ್). ಮಿಡತೆಗಳು, ಕೀಟಗಳು ಈ ರೋಗದ ವಾಹಕಗಳು. ಪ್ರಾರಂಭದಲ್ಲಿ ಈಜಿಪ್ಟ್, ಆಫ್ರಿಕ ದೇಶಗಳಲ್ಲಿ ಇದ್ದ ಈ ರೋಗ ಈಗ ಮಧ್ಯಪ್ರಾಚ್ಯ, ಪಾಕಿಸ್ತಾನ, ಭಾರತ ಇಲ್ಲೆಲ್ಲ ವ್ಯಾಪಿಸಿದೆ, ಇದು ಶ್ವಾಸಕೋಶಗಳಿಗೂ ರಕ್ತನಾಳಗಳಿಗೂ ತೀವ್ರವಾಗಿ ಅಂಟುವ ಕಾಯಿಲೆ. ರೋಗ ಕಠಿನವಾದರೆ ಅಂಥ ಕುದುರೆಗಳು ಉಳಿಯುವುದು ಕಷ್ಟ. ರೋಗದ ಆರಂಭದಲ್ಲಿ ಯುಕ್ತ ಚಿಕಿತ್ಸೆ ಮಾಡಿ ರೋಗಗ್ರಸ್ತ ಕುದುರೆಯ ಜೀವವನ್ನು ರಕ್ಷಿಸಬಹುದು. ಲಸಿಕೆಯನ್ನು ಚುಚ್ಚುಮದ್ದು ಹಾಕಿ ಆರೋಗ್ಯವಂತ ಕುದುರೆಗಳಲ್ಲಿ ಈ ಕಾಯಿಲೆಯ ವಿರುದ್ಧ ಆಂತರಿಕ ರಕ್ಷಣೆ ನೀಡುವ ಸಾಧ್ಯತೆ ಉಂಟು. ಲಸಿಕೆ ಹಾಕಿದ ಮೇಲೆ ರೋಗನಿರೋಧ ಸಾಮರ್ಥ್ಯ ಬರಲು ಮೂರು ತಿಂಗಳ ಕಾಲಾವಕಾಶ ಬೇಕು. ಒಂದು ಸಲ ಚುಚ್ಚಿದ ಲಸಿಕೆಯ ಪ್ರಭಾವ ಸುಮಾರು 6–7 ವರ್ಷಗಳ ಕಾಲ ಉಳಿಯುವುದು.

2 **ಸಿಂಬಳರೋಗ:** ಶ್ವಾಸನಾಳಗಳಲ್ಲಿ ಮತ್ತು ಚರ್ಮದಲ್ಲಿ ಗಂಟುಗಳಾಗುವುದು ಅಥವಾ ಹುಣ್ಣುಗಳಾಗುವುದು ಈ ರೋಗದ ಮುಖ್ಯ ಲಕ್ಷಣ. ಕುದುರೆ ಜಾತಿಯ ಪ್ರಾಣಿಗಳಿಗೆ ಈ ರೋಗ ಬಲು ಅಪಾಯಕಾರಿ. ಕುದುರೆಸಿಂಬಳರೋಗ ಪೂರ್ವ ಯುರೋಪ್, ಏಷ್ಯ ಮೈನರ್, ಏಷ್ಯ ಮತ್ತು ಉತ್ತರ ಆಫ್ರಿಕ ದೇಶಗಳಲ್ಲಿ ಕಂಡುಬರುತ್ತದೆ. ಈ ರೋಗದಿಂದ ಸತ್ತ ಕುದುರೆಗಳ ಮಾಂಸವನ್ನು ನಾಯಿ, ನರಿ, ತೋಳ ಮುಂತಾದವು ತಿಂದರೆ ಅವುಗಳಿಗೂ ರೋಗ ಅಂಟಿಕೊಳ್ಳುತ್ತದೆ. ಕುರಿ ಮತ್ತು ಮೇಕೆಗಳಲ್ಲಿಯೂ ಈ ರೋಗ ಕಂಡುಬಂದಿದೆ. ಮನುಷ್ಯನಿಗೂ ಇದು ಅಂಟುವುದುಂಟು. ಇದರಿಂದಾಗಿ ಅವನಿಗೆ ಪ್ರಾಣಾಪಾಯ ಖಂಡಿತ. ಕುದುರೆಸಿಂಬಳ ರೋಗಕ್ಕೆ ಮೂಲಕಾರಣ. ಒಂದು ಏಕಾಣುಜೀವಿ (ಆಕ್ಟಿನೋಬ್ಯಾಸಿಲ್ಲಸ್). ಲೋಫ್‌ಲರ್ ಮತ್ತು ಶುಟ್ಜ್ ಎಂಬ ವಿಜ್ಞಾನಿಗಳು 1882ರಲ್ಲಿ ಈ ಕಾರಕವನ್ನು ಕಂಡುಹಿಡಿದರು. ಶ್ವಾಸನಾಳಗಳಲ್ಲಿ ಅಥವಾ ಚರ್ಮದಲ್ಲಿನ ಗಂಟುಗಳಲ್ಲಿ ಅಥವಾ ಹುಣ್ಣುಗಳಲ್ಲಿ ಅಥವಾ ಸಿಂಬಳದಲ್ಲಿ ಅಥವಾ ಸೋರುವ ರಸದಲ್ಲಿ ಈ ಜೀವಿ ಇರುತ್ತದೆ.

**ರೋಗ ಪಸರಿಸುವ ರೀತಿ:** ಸಿಂಬಳ ರೋಗದಿಂದ ಬಳಲುವ ಅಥವಾ ಈ ರೋಗದಿಂದ ಗುಣಹೊಂದಿದ ಪ್ರಾಣಿಗಳು ಬೇರೆ ಪ್ರಾಣಿಗಳಿಗೆ ಪಸರಿಸುವ ಮುಖ್ಯ ಆಕರಗಳು. ಕುದುರೆಸಿಂಬಳರೋಗದ ಏಕಾಣುಜೀವಿಗಳಿಂದ ಕೂಡಿದ ಆಹಾರವಾಗಲಿ ತಿಂಡಿ ತಿನ್ನಿಸುವ ಪಾತ್ರೆಗಳಿಂದಾಗಲಿ ಈ ರೋಗ ಪಸರಿಸುತ್ತದೆ. ಕೆಲವು ಸಲ ಅಕಸ್ಮಾತ್ತಾಗಿ ಚರ್ಮದ ಗಾಯಗಳಿಂದ ಅಥವಾ ಚರ್ಮದಿಂದ ಮಾಡಿದ ಮಿಣಿಗಳಿಂದ ಜೀನುಗಳಿಂದ ಅಥವಾ ಕುದುರೆ ಮಾಲೀಸುಮಾಡುವ ಸಾಧನಗಳಿಂದ ಪ್ರಾಣಿಯ ಚರ್ಮದಲ್ಲಿ ಜೀವಿಗಳು ಸೇರಿ ರೋಗೋತ್ಪನ್ನ ಮಾಡುವುದುಂಟು.

**ರೋಗ ಲಕ್ಷಣಗಳು:** ರೋಗ ತೀವ್ರವಾದಾಗ ಜ್ವರ, ಕೆಮ್ಮು ಬರುತ್ತವೆ. ಮೂಗಿನ ಹೊಳ್ಳೆಗಳಿಂದ ಸಿಂಬಳಸುರಿಯುವುದು, ಮೂಗಿನ ಒಳಭಾಗದಲ್ಲಿ ಹುಣ್ಣುಗಳಾಗುತ್ತವೆ. ಮತ್ತು ಕಾಲುಗಳ ಕೆಳಭಾಗಗಳಲ್ಲಿ ಅಥವಾ ಹೊಟ್ಟೆಯ ಮೇಲೆ ಗಂಟುಗಳು ತಲೆದೋರುತ್ತವೆ. ಇದರಿಂದಾಗಿ ರೋಗ ದೇಹದಲ್ಲಿ ಪಸರಿಸಿ ಕೆಲವೇ ದಿವಸಗಳಲ್ಲಿ ಪ್ರಾಣಿ ಸಾಯುತ್ತದೆ.

**ರೋಗ ಪರೀಕ್ಷೆ:** ಕುದುರೆಸಿಂಬಳ ರೋಗವನ್ನು ಕಂಡುಹಿಡಿಯಲು ಮೂರು ವಿಧಾನಗಳಿವೆ:

(i) **ಮೆಲೀನ್ ಪರೀಕ್ಷೆ:** ಕುದುರೆಸಿಂಬಳ ರೋಗದ ಏಕಾಣುಜೀವಿಗಳಿಂದ ತಯಾರಿಸಿದ ಪದಾರ್ಥವನ್ನು ರೋಗದಿಂದ ಬಳಲುವ ಪ್ರಾಣಿಯ ಕುತ್ತಿಗೆ ಚರ್ಮದಲ್ಲಿ ಅಥವಾ ಚರ್ಮದ ಅಡಿಯಲ್ಲಿ ಅಥವಾ ಕೆಲವು ಹನಿಗಳನ್ನು ಒಂದು ಕಣ್ಣಿನ ಕೆಳರೆಪ್ಪೆಯಲ್ಲಿ ಚುಚ್ಚಿದರೆ, ಆ ಪ್ರಾಣಿ 24ರಿಂದ 36 ಗಂಟೆಗಳ ಅನಂತರ ಚುಚ್ಚಿದ ಜಾಗದಲ್ಲಿ ನೋವು ಕಾಣಿಸುತ್ತದೆ.

(ii) ಈ ರೋಗದಿಂದ ಬಳಲುವ ಪ್ರಾಣಿಯ ರಕ್ತದಲ್ಲಿರುವ ರಸ (ಸೀರಂ) ಪರೀಕ್ಷೆಯನ್ನು ಪ್ರಯೋಗಶಾಲೆಯಲ್ಲಿ ಮಾಡಿಕಂಡುಹಿಡಿಯುವುದು

(iii) ಹುಣ್ಣುಗಳಿಂದ ಕೀವು ಬರುವುದನ್ನು ಹಿಡಿದು ಪ್ರಯೋಗಶಾಲೆಯಲ್ಲಿ ಉಪಯೋಗಿಸುವ ಗಂಡು ಗಿನಿ ಹಂದಿಗೆ ಚುಚ್ಚಿದರೆ ಮುಂದೆ 2 ಅಥವಾ 3 ದಿವಸಗಳಲ್ಲಿ ಅದರ ತರಡು ಬೀಜಗಳಲ್ಲಿ ಬಾವು ಬಂದು ನೋವಾಗುತ್ತವೆ.

**ಚಿಕಿತ್ಸಾ ಕ್ರಮ:** ಪೆನಿಸಿಲಿನ್ ಮತ್ತು ಸ್ಟ್ರೆಪ್ಟೊಮೈಸಿನ್ ಪ್ರಯೋಗ ಈ ರೋಗದಲ್ಲಿ ಉಪಯೋಗಕಾರಿಗಳಲ್ಲ. ಸೋಡಿಯಂ ಸಲ್ಫಾಡೈಯೋಜಿನ್ ಪ್ರಯೋಗ ಪರಿಣಾಮಕಾರಿ. ಇಂಥ ಪ್ರಸಂಗದಲ್ಲಿ ಸೋಡಿಯಂ ಸಲ್ಫಾಡೈಯೋಜಿನನ್ನು 20 ದಿವಸಗಳ ವರೆಗೆ ದಿವಸಂಪ್ರತಿ ಕೊಟ್ಟರೆ ಪ್ರಾಣಿ ಸಂಪೂರ್ಣ ಗುಣಹೊಂದುತ್ತದೆ. ಫಾರ್ಮಲಿನ್‌ನಲ್ಲಿ ಕೂಡಿಸಿದ ಕುದುರೆಸಿಂಬಳ ರೋಗದ ಏಕಾಣುಜೀವಿ ಮತ್ತು ಸಲ್ಫಾಡೈಯೋಜಿನ್ ಅಥವಾ ಸಲ್ಫಾಡಿಮಿಡಿನ್ ಚುಚ್ಚಿದರೆ ಬಹಳ ಗುಣವನ್ನು ತರುತ್ತದೆಂದು ತಿಳಿದುಬಂದಿದೆ. ಟೆರಮೈಸಿನನ್ನು ರಕ್ತದಲ್ಲಿ ಅಥವಾ ಸ್ನಾಯುಗಳಲ್ಲಿ ಚುಚ್ಚಿದರೆ ಮತ್ತು ಹೊಟ್ಟೆಯೊಳಗೆ ಸೇವಿಸಲು ಈ ರೋಗದಿಂದ ಗುಣಹೊಂದುವ ಸಂಭವವಿದೆ. ಈ ಔಷಧಿಯನ್ನು ಚರ್ಮದ ಮೇಲೆ ಆದ ಹುಣ್ಣುಗಳಿಗೂ ಹಚ್ಚಬಹುದು.

ರೋಗವನ್ನು ಹತೋಟಿಗೆ ತರುವ ಕ್ರಮ: ಮೇಲೆ ಕಾಣಿಸಿದ ಔಷಧಿಗಳಿಂದ ಪ್ರಾಣಿ ಗುಣಹೊಂದಿದರೂ ಈ ರೋಗಕ್ಕೆ ಮುಕ್ತವಾಗಿ ಉಳಿಯುವುದಿಲ್ಲ. ಕೃತಕವಾಗಿ ಈ ರೋಗದ ವಿರುದ್ಧ ರಕ್ಷಣೆಯನ್ನು ಒದಗಿಸುವುದು ಸಾಧ್ಯವಾಗಿಲ್ಲ. ರೋಗದಿಂದ ಬಳಲುತ್ತಿರುವ ಪ್ರಾಣಿಯನ್ನು ಕೂಡಲೇ ಬೇರೆ ಯಾವ ಪ್ರಾಣಿಗಳ ಸಂಪರ್ಕವೂ ಬಾರದಂತೆ ಪ್ರತ್ಯೇಕಿಸಬೇಕು. ರೋಗದಿಂದ ಬಳಲುತ್ತಿರುವ ಪ್ರತಿಯೊಂದು ಪ್ರಾಣಿಯನ್ನು ನಾಶ ಮಾಡುವುದು ಸರ್ವೋತ್ಕೃಷ್ಟ ಅಲ್ಲದೆ ಪ್ರತಿ ಮೂರು ತಿಂಗಳಿಗೊಮ್ಮೆ ಎಲ್ಲ ಕುದುರೆಗಳನ್ನೂ ಮೆಲಿನ್ ಪರೀಕ್ಷೆಗೆ ಒಳಪಡಿಸಬೇಕು. ಆಹಾರ ಕೊಡುವ ಮತ್ತು ಕುದುರೆಗೆ ಮಾಲೀಸುಮಾಡುವ ಸಾಧನಗಳನ್ನು ಮತ್ತು ಪಾತ್ರೆಗಳನ್ನು ಚೆನ್ನಾಗಿ ಕ್ರಿಮಿನಾಶಕಗಳಿಂದ ತೊಳೆಯಬೇಕು. ರೋಗ ತಗುಲಿದ ಕುದುರೆಗಳ ವಠಾರದಿಂದ ಯಾವ ಕುದುರೆಗಳೂ ಹೊರಗಡೆ ಹೋಗದಂತೆ ಎಚ್ಚರಿಕೆ ಇಡಬೇಕು.

3 **ಬಾಯಿಹುಣ್ಣು :** ಕುದುರೆಗಳಿಗೆ ಬರುವ ಚರ್ಮದ ಹೊರ ಪೊರೆಯ ರೋಗ. ಲೋಳೆಗೂಡಿದ ನಯಚರ್ಮ ಅಥವಾ ಪಾದದ ಚರ್ಮದ ಮೇಲೆ ಗುಳ್ಳೆಗಳು ಮತ್ತು ಹುಣ್ಣುಗಳು ಕಾಣಿಸಿಕೊಳ್ಳುತ್ತವೆ. ಕೀವಿನ ಎರಡು ವೈರಸ್‌ಗಳು ಈ ಸ್ಥಿತಿಗೆ ಕಾರಣವಾಗಿವೆ.

**ಲಕ್ಷಣಗಳು:** ತುಟಿಗಳಿಂದ ಜೊಲ್ಲು ಹರಿಯುವುದು ಮತ್ತು ಈ ಜೊಲ್ಲು ಆಹಾರದ ಮೇಲೆ ಇರುವುದು ಕಂಡುಬರುತ್ತದೆ. ಮೈ ಉಷ್ಣತೆ 104$^{o}$ ಫ್ಯಾಗೆ ಏರಿದಾಗ ಕುದುರೆ ಮಂಕಾಗುತ್ತದೆ. ನೀರಿನ ದಾಹ ಹೆಚ್ಚಾಗಿ, ರೋಗಕ್ಕೆ ತುತ್ತಾದ ಪ್ರಾಣಿ ಆಹಾರ ತಿನ್ನುವುದನ್ನು ಕಡಿಮೆಗೊಳಿಸುತ್ತದೆ. ಬಾಯಿ ಮತ್ತು ನಾಲಗೆಗಳ ಮೇಲೆ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಗಾಯ ದೊಡ್ಡದಾಗುತ್ತ ಹೋಗಿ, ಸತ್ತ ಚರ್ಮದ ಹೊರಪೊರೆ ರಕ್ತ ಮಿಶ್ರಿತವಾಗಿ ಬಾಯಿಯ ಅಂಚುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಭುಜವನ್ನು ಒತ್ತಿದಾಗ ನೋವುಂಟಾಗಿ ಕುಂಟಲು ಪ್ರಾರಂಭಿಸುತ್ತದೆ.

ರೋಗಚಿಹ್ನೆಗಳ ಆಧಾರದ ಮೇಲೆ ಚಿಕಿತ್ಸಾಕ್ರಮಗಳನ್ನು ತೆಗೆದುಕೊಳ್ಳಬೇಕು. ರೋಗ ತಗುಲಿದ ಕುದುರೆಗಳಿಗೆ ಸಾಕಷ್ಟು ನೀರನ್ನು ಮತ್ತು ಮೃದುವಾದ ಆಹಾರವನ್ನು ಕೊಡಬೇಕು. ಕುದುರೆಗಳನ್ನು ಕೀಟಗಳು ಕಚ್ಚದಂತೆ ಕಾಪಾಡಬೇಕು.

4 **ಎನ್‌ಸೆಫಲೋಮೈಲಿಟಿಸ್ ಎಂಬ ಸೋಂಕು ವೈರಸಿನಿಂದುಂಟಾಗುವ ರೋಗ :** ಅಸ್ತವ್ಯಸ್ತವಾದ ಪ್ರಜ್ಞೆ, ಚಾಲಕ ನಗರಗಳ ಇರಿತ ಮತ್ತು ಪಾರ್ಶ್ವವಾಯು (ಲಕ್ವ) ಇದರ ಲಕ್ಷಣಗಳು. ಪ್ರಾರಂಭದಲ್ಲಿ 24ರಿಂದ 48ಗಂಟೆಗಳ ವರೆಗೆ ಮಾತ್ರ 106$^{\circ}$ ಫ್ಯಾ. ಜ್ವರವಿರುತ್ತದೆ. ಅನಂತರ ಕಂಪನ ಲಕ್ಷಣಗಳು ಕಂಡುಬರುತ್ತವೆ. ಶಬ್ದವಾದರೆ ಮುಟ್ಟಿದರೆ ಮತ್ತು ಉದ್ರೇಕವಾದರೆ ಕುದುರೆ ತುಂಬ ಸೂಕ್ಷ್ಮಪ್ರತಿಕ್ರಿಯೆ ತೋರುತ್ತದೆ. ಸ್ಪಷ್ಟವಾಗಿ ಕಣ್ಣು ಕಾಣದಿರುವುದರಿಂದ ಕುದುರೆಯಲ್ಲಿ ತೀವ್ರ ಅಸ್ವಾಸ್ಥ್ಯ ಎದ್ದುಕಾಣುತ್ತದೆ. ಪಾರ್ಶ್ವವಾಯುವಿನ ಒಂದು ಹಂತ ಮುಂದುವರಿಯುತ್ತದೆ. ತಲೆಯನ್ನು ಎತ್ತಿನಿಲ್ಲಲು ಸಾಧ್ಯವಾಗದೆ ಯಾವುದಾದರೂ ವಸ್ತುವಿನ ಮೇಲೆ ಇಡಲು ಹವಣಿಸುತ್ತದೆ. ಕೆಳತುಟಿ ತೂಗಾಡುತ್ತ ನಾಲಿಗೆ ಹೊರಕ್ಕೆ ಜೋತುಬೀಳುತ್ತದೆ. ಪ್ರಾಣಿ ತನ್ನ ಎಲ್ಲ ಭಾರವನ್ನು ಮುಂದಿನ ಕಾಲುಗಳಲ್ಲಿ ಹೊರುತ್ತದೆ. ನಡೆಯುವಾಗ ಹಿಂದಿನ ಕಾಲುಗಳನ್ನು ಅಪ್ಪಿತಪ್ಪಿ ಹಾಕುತ್ತ ತೊಡರುತ್ತ ಸುತ್ತುಹಾಕುತ್ತದೆ. ಮಲಮೂತ್ರವಿಸರ್ಜನೆ ಕಡಿಮೆಯಾಗುತ್ತ ಹೋಗಿ ಆಹಾರ ತಿನ್ನುವುದು ಕಷ್ಟವಾಗುತ್ತದೆ. ಪೂರ್ಣ ಪಾರ್ಶ್ವವಾಯು ಕಂಡುಬರುವುದು ರೋಗದ ಕೊನೆಯ ಹಂತ. ಕುದುರೆ ದಿನೇ ದಿನೇ ಕ್ಷೀಣಿಸುತ್ತ ಚೇತರಿಸಿಕೊಳ್ಳಲು ಸಾಧ್ಯವಾಗದೆ, ಕಾಯಿಲೆ ಕಾಣಿಸಿಕೊಂಡ ಎರಡು ಮೂರು ದಿವಸಗಳಲ್ಲಿ ಸತ್ತುಹೋಗುತ್ತದೆ.

**ಚಿಕಿತ್ಸೆ :** ಇದಕ್ಕೆ ಹೈಪರ್ ಇಮ್ಯೂನ್ ಸೀರಂ ನಿರ್ದಿಷ್ಟವಾದ ಚಿಕಿತ್ಸೆ. ಕುದುರೆಗೆ ತನ್ನ ಭಾರವನ್ನು ಹೊತ್ತುನಿಲ್ಲಲು ಆಸರೆಮಾಡಿಕೊಡಬೇಕು. ಮಲವಿಸರ್ಜನೆಗೆ ಸಹಾಯಕವಾದ ಔಷಧಿ ಮತ್ತು ಪೌಷ್ಟಿಕವಾದ ಆಹಾರವನ್ನು ಕೊಡಬೇಕು. ಕುದುರೆಗಳನ್ನು ನೆರಳಿನಲ್ಲಿಟ್ಟು, ನೊಣ ಮತ್ತು ಶಾಖದಿಂದ ಕಾಪಾಡಬೇಕು. ಕೀಟನಿವಾರಕಗಳ ಉಪಯೋಗದಿಂದ ಕೀಟಗಳ ಹಾವಳಿಯನ್ನು ತಡೆಗಟ್ಟಬೇಕು. ಒಂದು ಮಿಲಿಲೀಟರ್ ಪ್ರಮಾಣದ ಮೊಟ್ಟೆ ಗ್ರಹಿಸಿದ ಹೈಪರ್ ಇಮ್ಯೂನ್ ಸೀರಂ ಅನ್ನು ವಾರದಲ್ಲಿ ಎರಡು ಬಾರಿ ಚರ್ಮದೊಳಗೆ ಚುಚ್ಚುವುದರಿಂದ ಪ್ರಾಣಿಗೆ ಒಂದು ವರ್ಷದ ವರೆಗೆ ರೋಗ ಬರದಂತೆ ನೋಡಿಕೊಳ್ಳಬಹುದು.

5 **ರಕ್ತಕ್ಷಯ :** ವೈರಸ್‌ನಿಂದ ಉಂಟಾಗುವ ಅಂಟುಜಾಡ್ಯ. ಪ್ರಾರಂಭದಲ್ಲಿ ವಿಪರೀತ ತೊಂದರೆ ಕೊಟ್ಟು ಅನಂತರ ಕಾಯಿಲೆ ಬೇರೂರುತ್ತದೆ. ಇದರ ಲಕ್ಷಣಗಳು ಹೀಗಿವೆ: ಪ್ರಾರಂಭದಲ್ಲಿ ಕುದುರೆ ಹೆಚ್ಚು ನಿಶ್ಶಕ್ತಿ ಹೊಂದಿ ಸವೆಯುತ್ತ ಹೋಗುತ್ತದೆ. ಮಧ್ಯೆ ಮಧ್ಯೆ 106$^{0}$ ಫ್ಯಾ. ವರೆಗೂ ಏರುವ ಜ್ವರ ಬರುತ್ತದೆ. ಕಾಮಾಲೆ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತದೆ. ಮೇಲು ಹೊಟ್ಟೆ, ಕಾಲು ಶಿಶ್ನಾಗ್ರದ ಮುಂದೊಗಲು, ಕಣ್ಣಿನ ಅರ್ಧಚರ್ಮ ಇವುಗಳಲ್ಲಿ ಊತ ಪ್ರಾರಂಭವಾಗುತ್ತದೆ. ಗರ್ಭಿಣಿ ಕುದುರೆಗಳಲ್ಲಿ ಗರ್ಭಸ್ರಾವವಾಗುವುದು. ಇಷ್ಟಾದರೂ ಕೆಲವು ಕುದುರೆಗಳು ತಾತ್ಕಾಲಿಕವಾಗಿ ಚೇತರಿಸಿಕೊಳ್ಳುತ್ತವೆ. ಆದರೆ ದಿನೇ

ದಿನೇ ನಿಶ್ಶಕ್ತಿ ಹೊಂದುತ್ತ ಹೋಗಿ ಕಾಯಿಲೆ ಬಂದ 10–14 ದಿವಸಗಳಲ್ಲಿ ಅಸುನೀಗುತ್ತದೆ. ಈ ಕಾಯಿಲೆಗೆ ಸರಿಯಾದ ಅಥವಾ ನಿರ್ದಿಷ್ಟವಾದ ಚಿಕಿತ್ಸೆ ಇನ್ನೂ ಕಂಡುಬಂದಿಲ್ಲ. ಕುದುರೆಯ ಮಲಮೂತ್ರ ಮತ್ತು ಇತರ ಉಳಿಕೆಗಳನ್ನು ಒಟ್ಟುಗೂಡಿಸಿ ನಾಶಗೊಳಿಸಬೇಕು. ಉಷ್ಣತಾಮಾಪಿಯಿಂದ ಜ್ವರ ನೋಡಿಕೊಂಡು, ಕುದುರೆಗಳನ್ನು ಎಚ್ಚರಿಕೆಯಿಂದ ಕಾಪಾಡಬೇಕು. ಕಚ್ಚುವ ಕೀಟಗಳ ಹತೋಟಿ ಅಗತ್ಯ.

6 **ಇನ್‌ಫ್ಲುಯೆನ್‌ಜ಼ :** ಇದು ಹಂದಿಗೆ ಮತ್ತು ಮನುಷ್ಯನಿಗೆ ಬರುವಂಥ ಇನ್‌ಫ್ಲುಯೆನ್‌ಜ಼ ಕಾರಕ ವೈರಸ್‌ನಂಥ ಮೈಕೊ ವೈರಸ್‌ನಿಂದ ಕುದುರೆಗೆ ಬರುವ ತೀವ್ರಜ್ವರ. ಜ್ವರದಿಂದ ಪ್ರಾರಂಭವಾಗಿ ಅನಂತರ ಜಡತೆ, ಹಸಿವಾಗದಿರುವಿಕೆ ಮತ್ತು ಬಳಲಿಕೆ ಮುಂತಾದವು ಕಾಣಿಸಿಕೊಳ್ಳುತ್ತವೆ. ಮೈ ಉಷ್ಣತೆ 106$^o$ ಫ್ಯಾ಼ಗೆ ಏರಿ, ಹಾಗೆಯೇ 7ರಿಂದ 10 ದಿವಸಗಳ ವರೆಗೆ ಮುಂದುವರಿಯುತ್ತದೆ: ನಾಡಿ ಮತ್ತು ಉಸಿರಾಡುವ ವೇಗ ಹೆಚ್ಚಾಗುತ್ತದೆ. ಮೂಗಿನ ಒಳಚರ್ಮ ಸಂಕುಚಿತವಾಗುತ್ತದೆ. ಜ್ವರದೊಡನೆ ಒಣಕೆಮ್ಮು ಇರುತ್ತದೆ. ಸ್ವಲ್ಪ ದಿವಸಗಳ ಅನಂತರ ಮೂಗಿನಲ್ಲಿ ಸಿಂಬಳ ಸುರಿಯುವುದು ಪ್ರಾರಂಭವಾಗುತ್ತದೆ. ಇನ್ನೇನು ತೊಂದರೆ ಇಲ್ಲದಿದ್ದಲ್ಲಿ ಕುದುರೆ ಒಂದು ಎರಡು ವಾರಗಳಲ್ಲಿ ಚೇತರಿಸಿಕೊಳ್ಳುತ್ತದೆ. ಯುಕ್ತ ವೈದ್ಯಕೀಯ ಚಿಕಿತ್ಸೆ ಹಾಗೂ ವಿಶ್ರಾಂತಿಗಳಿಂದ ಈ ರೋಗವನ್ನು ಗುಣಪಡಿಸಬಹುದು.

7 **ಸೋಂಕು ಕೆಮ್ಮು :** ಶ್ವಾಸಕೋಶದ ಮೇಲಿನ ನಾಳಗಳಲ್ಲಿ ಸಾಧಾರಣವಾದ ಶೀತ ಮತ್ತು ಸತತವಾದ ಕೆಮ್ಮುವಿಕೆ ಈ ರೋಗದ ಸಾಮಾನ್ಯ ಲಕ್ಷಣಗಳು. ಒಂದು ರೀತಿಯ ವೈರಸ್‌ನಿಂದ ಈ ರೋಗ ಉಂಟಾಗುತ್ತದೆ ಎಂದು ನಂಬಿಕೆಯಿದೆ. ನೆಗಡಿ ಹನಿ ಉಸಿರಿನೊಡನೆ ಒಳಹೋಗಿ ಈ ರೋಗ ಹರಡುತ್ತದೆ.

8 **ಗರ್ಭಪಾತ:** ಗರ್ಭಪಾತವೆಂದರೆ ಭ್ರೂಣವಸ್ತು ಜೀವಶಕ್ತಿಬರುವ ಮೊದಲೇ ಹೊರದೂಡಲ್ಪಡುವುದು. ಕುದುರೆಗೆ ಗರ್ಭಧಾರಣೆಯಾಗಿರುವುದನ್ನು ಕಂಡುಕೊಳ್ಳಬೇಕಾದರೆ ಕೊನೆಯ ಪಕ್ಷ 30 ದಿವಸಗಳಾದರೂ ಬೇಕು. ಗರ್ಭಧಾರಣೆಯ ಒಂದು ತಿಂಗಳ ಅನಂತರದಿಂದ ಹತ್ತು ತಿಂಗಳುಗಳ ಕಾಲದಲ್ಲಿ ಜೀವವಿರುವ ಅಥವಾ ಜೀವವಿಲ್ಲದಿರುವ ಭ್ರೂಣ ನಷ್ಟವಾಗಿ ಹೋಗುವುದನ್ನು ಗರ್ಭಪಾತವೆಂದು ಪರಿಗಣಿಸಲಾಗುತ್ತದೆ.

**ಕಾರಣಗಳು :** (i) ಕುದುರೆ ಇನ್‌ಫ್ಲುಯೆನ್‌ಜ಼ ; (ii) ಸಾಲ್‌ಮೊನೆಲ್ಲ. ಅಬಾರ್‍ವಸ್ ಈಕ್ವೈ, ಸ್ಟ್ರೆಪ್ಟೊಕಾಕಸ್ ಈಕ್ವೈ, ಎಷರೀಕಿಯಾ ಕೋಲೈ, ಸ್ಟಾಫಿಲೋಕಾಕೈ, ಷಿಗೆಲ್ಲಾ ಈಕ್ವೆವೇಲಿಸ್, ಇವೇ ಮೊದಲಾದ ಏಕಾಣುಜೀವಿಗಳು; (iii) ಆಸ್ಪರ್‌ಜಿಲಸ್ ಬೂಷ್ಟು ; (iv) ಟ್ರಿಪ್ಯಾನಸೋಮ ಎಂಬ ಪ್ರೋಟೋಜೋವ–ಇವು ಗರ್ಭಪಾತಕ್ಕೆ ಕಾರಕಗಳು. ಕಡಿಮೆ ಪೌಷ್ಟಿಕ ಆಹಾರವನ್ನು ಪಡೆಯುವ ಪ್ರಾಣಿಗಳು ತಮ್ಮ ದೇಹಸ್ಥಿತಿಯನ್ನು ಕಾಪಾಡಿಕೊಳ್ಳಲಾಗದೆ ಗರ್ಭಪಾತಕ್ಕೆ ಈಡಾಗುತ್ತವೆ. ಎ ಮತ್ತು ಡಿ ಜೀವಸತ್ತ್ವ, ಸುಣ್ಣ ಮತ್ತು ರಂಜಕದ ಕೊರತೆ ಕೂಡ ಗರ್ಭಪಾತಕ್ಕೆ ಕಾರಣವಾಗಬಹುದು. ಅನುವಂಶೀಯ ವೈಪರೀತ್ಯ, ಉದ್ರೇಕ ಮುಂತಾದವು ಗರ್ಭಪಾತದ ಇತರ ಕಾರಣಗಳು.

9 **ನೆರಡಿರೋಗ ಅಥವಾ ಕೆಟ್ಟಕುರು :** ಇದು ಎಲ್ಲ ಕುದುರೆಗಳಿಗೂ ಬರಬಹುದಾದ ತೀವ್ರವಾದ ರಕ್ತವಿಷದ ಅಂಟುರೋಗ. ಆಂತ್ರಾಕ್ಸ್ ಎಂಬ ದಂಡಾಣು ಜೀವಿಯಿಂದ ಈ ರೋಗ ಉಂಟಾಗುತ್ತದೆ.

**ಲಕ್ಷಣಗಳು :** ರೋಗದ ತೀವ್ರತೆ ರೋಗ ಹೇಗೆ ತಗುಲಿತು ಎಂಬುದನ್ನು ಅವಲಂಬಿಸಿದೆ. ಮೇವಿನ ಮೂಲಕ ರೋಗ ಹರಡಿದರೆ, ರಕ್ತ ವಿಷವಾಗಿ ಕರುಳಿನ ಊತ ಮತ್ತು ಹೊಟ್ಟೆಶೂಲೆಯಾಗುತ್ತದೆ. ಕೀಟಗಳಿಂದ ರೋಗ ಹರಡಿದರೆ ಗಂಟಲು, ಕುತ್ತಿಗೆಯ ಕೆಳಭಾಗ, ಎದೆಯ ಮತ್ತು ಹೊಟ್ಟೆಯ ಮೇಲೆ ನೋವನ್ನುಂಟುಮಾಡುವ ಬಿಸಿಯಾದ ಊದುಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಹೆಚ್ಚು ಜ್ವರ ಬಂದ ಕುದುರೆ ಕ್ಷೀಣಿಸುತ್ತದೆ. ಗಂಟಲಿನಲ್ಲಿ ಊದುಗುಳ್ಳೆಗಳು ಬೆಳೆಯುವುದರಿಂದ ಉಸಿರು ಕಟ್ಟಿಬಿಡುತ್ತದೆ. ಕರುಳಿನ ಉರಿತ, ಹೊಟ್ಟೆಯ ಶೂಲೆ ಕಾಣಿಸಿಕೊಳ್ಳಬಹುದು. ಕಾಯಿಲೆಯ ಅವಧಿ 48ರಿಂದ 96 ಗಂಟೆಗಳು.

**ಚಿಕಿತ್ಸೆ :** ರೋಗಾಣು ಮಾದಕಗಳನ್ನು ಮತ್ತು ಆಂತ್ರಾಕ್ಸ್ ಮಾದಕ ಸೀರಂಗಳನ್ನು ಈ ರೋಗದ ಚಿಕಿತ್ಸೆಗೆ ಬಹಳವಾಗಿ ಉಪಯೋಗಿಸುತ್ತಾರೆ. ಕಾಯಿಲೆಗೆ ತುತ್ತಾಗಿ ಸತ್ತಿರುವ ಪ್ರಾಣಿಯ ದೇಹವನ್ನು ಸುಡುವುದರ ಅಥವಾ ಸುಣ್ಣವನ್ನು ಬೆರೆಸಿ ಹೂಳುವುದರ ಮುಖಾಂತರ ರೋಗ ಹರಡುವುದನ್ನು ತಡೆಗಟ್ಟಬಹುದು. ಸಂಪರ್ಕ ನಿಷೇಧಕ್ರಮಗಳಿಂದ ಮತ್ತು ಕುದುರೆ ಸುತ್ತಮುತ್ತಲಿನ ಪ್ರದೇಶವನ್ನು ಸೋಂಕು ನಿವಾರಕ ಔಷಧಿಗಳಿಂದ ಶುಚಿಗೊಳಿಸಬೇಕು. ರೋಗವಾಹಕಗಳನ್ನು ಮತ್ತು ಕೀಟಗಳನ್ನು ಹತೋಟಿಮಾಡುವುದು ಮತ್ತು ರೋಗದ ಸೋಂಕು ತಗುಲಿದ ಗೊಬ್ಬರವನ್ನು ನಾಶಮಾಡುವುದು ಆವಶ್ಯಕ. ಕಾಯಿಲೆಯಿರುವಂಥ ಕುದುರೆಗಳನ್ನು ಗುರುತಿಸಿ ಅವನ್ನು ಚಿಕಿತ್ಸೆಗೆ ಬೇರ್ಪಡಿಸಬೇಕು. ಆರೋಗ್ಯದಿಂದಿರುವ ಪ್ರಾಣಿಗಳಿಗೆ ಮುನ್ನೆಚ್ಚರಿಕೆಯ ಚಿಕಿತ್ಸೆಗೆ ವ್ಯವಸ್ಥೆಮಾಡಬೇಕು.

10 **ದುಗ್ಧರಸಶ್ರವಣ ವ್ಯಾಧಿ :** ಇದು ಕುದುರೆಗಳಿಗೆ ಬರುವ ಸಾಧಾರಣವಾದ ಸಾಂಕ್ರಾಮಿಕ ರೋಗ. ಕೆಳಕಾಲಿನ ಚರ್ಮ ಬಿಳಿಚಿಕೊಳ್ಳುವುದರಿಂದ ಈ ರೋಗ ಬಂದಿದೆ ಎನ್ನುವುದು ವ್ಯಕ್ತವಾಗುತ್ತದೆ. ಕೋರಿನಿಬ್ಯಾಕ್ಟೀರಿಯಂ ಸ್ಯೂಡೋಟ್ಯುಬರ್ ಕ್ಯುಲೋಸಿಸ್ ಇದಕ್ಕೆ ಕಾರಣ. ಈ ರೋಗ ಹಿಂದಿನ ಕಾಲಿನಲ್ಲಿ ದುಗ್ಧರಸನಾಳಗಳಿಗೆ ಸೀಮಿತವಾಗಿರುವುದು. ಸ್ಥಳೀಯ ದುಗ್ಧನಾಳ ಗೆಣ್ಣುಗಳಲ್ಲಿ ಗೆಡ್ಡೆಗಳು ಅಂಕುರವಾಗಿ ಹುಣ್ಣು, ಊತ ಹೆಚ್ಚುತ್ತವೆ. ಈ ಸ್ಥಿತಿ ಸಾಮಾನ್ಯವಾಗಿ ಗೊರಸಿನ ಕುಚ್ಚಗೂದಲ ಪ್ರದೇಶದಲ್ಲಿ ಕಂಡುಬರುತ್ತದೆ. ಆದರೆ ಇದು ವಿರಳವಾಗಿ ಕಾಲಿನ ಮೇಲ್ಭಾಗಕ್ಕೆ ಹಬ್ಬಬಹುದು. ಬಿರುಕುಬಿಟ್ಟ ಗೆಣ್ಣಿನಿಂದ ಸುರಿಯುವ ಕೀವು ಹಳದಿಮಿಶ್ರಿತ ಬಿಳಿಯಾಗಿದ್ದು ರಕ್ತದಿಂದ ತೋಯ್ದಿರುತ್ತದೆ, ರೋಗ ಹಬ್ಬುವುದು ನಿಧಾನ ಮತ್ತು ಸಾಮಾನ್ಯವಾಗಿ ಹಿಂದಿನ ಕಾಲಿನ ಕೆಳಭಾಗದಲ್ಲಿ ನೋವಾಗುವಂಥ ಊತದಿಂದ ಮೊದಲಾಗುತ್ತದೆ. ಈ ಕಾಯಿಲೆ ಬಂದಾಗ ಐದು ದಿವಸಗಳಿಗೊಂದರಂತೆ ಒಂದು ಪೌಂಡು ದೇಹದ ತೂಕಕ್ಕೆ 2 ಮಿಲಿಗ್ರಾಂಗಳಷ್ಟು ಆಕ್ಸಿಟೆಟ್ರಸೈಕ್ಲಿನ್ ಕೊಡುವುದರಿಂದ ಒಳ್ಳೆಯ ಪರಿಣಾಮವಾಗುತ್ತದೆ. ಹುಣ್ಣು ಜಾಗವನ್ನು ಸ್ವಚ್ಛಗೊಳಿಸಿ ಆಕ್ಸಿಟೆಟ್ರಸೈಕ್ಲಿನ್ ಮುಲಾಮನ್ನು ಹಚ್ಚಬಹುದು.

11 **ಸಾಂಕ್ರಾಮಿಕ ದುಗ್ಧರಸವ್ರಣವ್ಯಾಧಿ :** ಇದು ಕುದುರೆಗಳ ತೀವ್ರ ಸಾಂಕ್ರಾಮಿಕ ರೋಗ. ಸದಾ ಕೀವು ತುಂಬಿದ ಬಿರುಕುಗಳು, ಚರ್ಮ ವ್ರಣ ಇಲ್ಲವೇ ನ್ಯೂಮೋನಿಯ ಇದರ ಕುರುಹುಗಳು. ಹಿಸ್ಟೋಪ್ಲಾಸ್ಮ ಫಾರ್ಸಿಮಿನೋಸಮ್ ಎಂಬ ಬೂಷ್ಟು ಇದಕ್ಕೆ ಕಾರಣ. ಈ ರೋಗ ಚರ್ಮರೂಪದಲ್ಲಿದ್ದಾಗ ದುಗ್ಧರಸನಾಳದ ಪ್ರದೇಶದೆಡೆಯಲ್ಲಿ ಹುಣ್ಣು ಬೆಳೆಯುತ್ತದೆ. ಹುಣ್ಣು ಮುಂದುವರಿದು ದುಗ್ಧರಸದ ನಾಳಗಳು ದಪ್ಪವಾಗುತ್ತ ಉಬ್ಬಿ ನಾಳಗಳ ಉದ್ದಕ್ಕೂ ಗಂಟುಗಳು ಬೆಳೆಯುತ್ತವೆ. ಈ ಗಂಟುಗಳು ಗಟ್ಟಿಯಾದ ಹಳದಿಯ ಎಣ್ಣೆಯಂಥ ಕೀವು ತುಂಬಿದ ಒಳಕುರುಗಳಾಗಿ ಮಾರ್ಪಾಡಾಗುತ್ತವೆ. ದುಗ್ಧರಸನಾಳದ ಗಂಟುಗಳು ಉಬ್ಬಿ ಹರಿದುಹೋಗಬಹುದು. ರೋಗಕ್ಕೆ ತುತ್ತಾದ ಕಾಲಿನ ಆವರಣ ದಪ್ಪವಾಗಬಹುದು. ಪೂರ್ಣ ಕಾಲು ಉಬ್ಬುವುದು ಸ್ವಾಭಾವಿಕ. ಗಾಯದ ಭಾಗದಲ್ಲಿ ನೋವಿರುವುದಿಲ್ಲ. ಗಾಯ ಕಾಲಿನಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಇದು ಬೆನ್ನು, ಹೊಟ್ಟೆ, ಕತ್ತು ಮತ್ತು ಜನನೇಂದ್ರಿಯಗಳಲ್ಲಿಯೂ ಕಂಡುಬರಬಹುದು. ಈ ರೋಗಕ್ಕೆ ಪರಿಣಾಮಕಾರಿಯಾದ ಚಿಕಿತ್ಸೆ ತಿಳಿದಿಲ್ಲ.

12 **ಕ್ಷಯ :** ಮೈಕೋ ಬ್ಯಾಕ್ಟೀರಿಯಂ ಟ್ಯುಬರ್‌ಕ್ಯುಲೊಸಿಸ್‌ನಿಂದ ಉಂಟಾಗುವ ಈ ರೋಗ ಯಾವ ಅಂಗಾಂಗಗಳಲ್ಲಿಯಾದರೂ ದಿನೇ ದಿನೇ ಬೆಳೆಯುತ್ತಿರುವ ಕ್ಷಯಗ್ರಂಥಿಗಳಿಂದ ವ್ಯಕ್ತವಾಗುತ್ತದೆ. ಕುತ್ತಿಗೆಯ ಬಳಿಯ ಬೆನ್ನುಮೂಳೆ ಗಾಯಕ್ಕೆ ತುತ್ತಾಗುವುದು ತೀರ ಸಾಮಾನ್ಯ. ಮೂಳೆ ಮೆದುವಾಗಿ ನೋವು ಕಂಡು ಕುತ್ತಿಗೆಯನ್ನು ಅಲುಗಾಡಿಸಲು ಆಗುವುದಿಲ್ಲ. ಕುದುರೆ ಭೂಮಿಗೆ ಬಗ್ಗಿ ಹುಲ್ಲು ಮೇಯಲು ಆಗದಂತೆ ಆಗುತ್ತದೆ. ಶ್ವಾಸಕೋಶದ ಗಾಯದಿಂದ ಕೆಮ್ಮು, ದುಗ್ಧನಾಳ ಗೆಣ್ಣುಗಳ ಉಬ್ಬುವಿಕೆ, ಮೂಗಿನಿಂದ ಹರಿಯುವುದು ಮತ್ತು ಏರಿಳಿಯುವ ಜ್ವರ ಮುಂತಾದವು ಈ ರೋಗದ ಇತರ ಲಕ್ಷಣಗಳು. ರೋಗವಿರುವ ಕುದುರೆಗಳನ್ನು ಚಿಕಿತ್ಸೆಗೆ ಒಳಪಡಿಸಬಾರದು. ಏಕೆಂದರೆ ಇದು ರೋಗಹರಡುವಿಕೆಗೆ ಒಂದು ಮೂಲವಾಗಬಹುದು. ಕ್ಷಯರೋಗದ ಪರೀಕ್ಷೆಯ ಅನಂತರ ರೋಗವಿರುವ ಕುದುರೆಗಳನ್ನು ಬೇರ್ಪಡಿಸಬೇಕು.

13 **ಡೌರಿನ :** ಇದು ಕುದುರೆಗಳ ಒಂದು ರತಿರೋಗ ಅಥವಾ ಗುಹ್ಯರೋಗ. ಬಾಹ್ಯಜನನೇಂದ್ರಿಯ ಊದಿಕೊಳ್ಳುವಿಕೆ, ಚರ್ಮದಲ್ಲಿ ಗಾಯಗಳು ಆಗುವಿಕೆ, ಮತ್ತು ಪಾರ್ಶ್ವವಾಯು ಈ ಕಾಯಿಲೆಯ ಮುಖ್ಯ ಲಕ್ಷಣಗಳು. ಪ್ರೋಟೋಝೋವನ್ ಪರತಂತ್ರಜೀವಿ ಇದಕ್ಕೆ ಕಾರಣ. ಗಂಡುಕುದುರೆಗಳಿಗೆ ವೃಷಣ ಊದಿಕೊಳ್ಳುತ್ತದೆ ಮತ್ತು ಅಂಗಶೋಫವಾಗುತ್ತದೆ. ಸುಮಾರಾಗಿ ಚರ್ಮ ಹಂತಗಳೊಡಗೂಡಿದ ಮೂತ್ರ ವಿಸರ್ಜನೆ ಆಗುತ್ತದೆ. ಹೆಣ್ಣುಕುದುರೆಗಳಲ್ಲಿ ಅಂಗಶೋಫ, ಯೋನಿಯಿಂದ ಹೇರಳವಾಗಿ ಹರಿಯುವಿಕೆ ಮತ್ತು ಯೋನಿಯ ಮುಖಚರ್ಮದಲ್ಲಿ ಹುಣ್ಣಾಗುವಿಕೆ ತಲೆದೋರಬಹುದು. ಅಂಗಶೋಫ ಮೊಲೆ ಮತ್ತು ಹೊಟ್ಟೆಯ ಕೆಳಭಾಗಗಳಿಗೂ ಹರಡುತ್ತದೆ. ಅಲುಗಾಡದಿರುವಿಕೆ ಮತ್ತು ಕಾಲುಗಳಲ್ಲಿ ನಿಶ್ಶಕ್ತಿ ಕಂಡುಬಂದು, ನಡೆಯುವಾಗ ಕುದುರೆಗಳು ಕಾಲುಗಳನ್ನು ಅನ್ಯೋನ್ಯವಾಗಿ ಹಾಕುವುದಿಲ್ಲ. ಹಿಂದಿನ ಕಾಲಿನ ಕ್ಷೀಣತೆಯಿಂದ ಕುದುರೆ ಬಡಕಲಾಗಿ ಕ್ಷೀಣಿಸುತ್ತದೆ. ರೋಗಗ್ರಸ್ತ ಪ್ರಾಣಿಯನ್ನು ಚಿಕಿತ್ಸೆಗೆ ಒಳಪಡಿಸಿ ಪ್ರಯೋಜನವಿಲ್ಲ.

14 **ಸುರ್ರಾ :** ಕುದುರೆಗಳಿಗೆ ಮತ್ತು ಒಂಟೆಗಳಿಗೆ ಬರುವ ಪ್ರಧಾನರೋಗ. ಆನೆ, ಕುರಿ, ಮೇಕೆ ಮತ್ತು ವಿರಳವಾಗಿ ನಾಯಿಗಳಿಗೂ ಈ ರೋಗ ಬರುತ್ತದೆ. ಇದು ಟ್ರಿಪ್ಯಾನಸೋಮ ಈವಾನ್ಸ್ ಎಂಬ ಏಕಾಣುಜೀವಿಯಿಂದ ಉಂಟಾಗುತ್ತದೆ. ರಕ್ತದ ಮೂಲಕ ಹರಡುವ ಈ ರೋಗದ ಮೂಲವಾಹಕಗಳು ಕಚ್ಚುವ ನೊಣ, ಸ್ಟೊಮ್ಯಾಕ್ಸಿಸ್ ಮತ್ತು ಲೈಪ್‌ರೋಸಿಯ. ಚಿಕಿತ್ಸೆ ಮಾಡದಿದ್ದಲ್ಲಿ ಈ ರೋಗದಿಂದ ವಿಪರೀತ ಪ್ರಾಣನಷ್ಟವಾಗುತ್ತದೆ. ಪದೇ ಪದೇ ಜ್ವರ ಬಂದು ಕುದುರೆ ಇಳಿಮುಖವಾಗುತ್ತದೆ. ಆಧಾರ ಭಾಗಗಳಲ್ಲಿ ಕೀವಾಗುವುದು, ಕುರು ಆಗಿ ವೇದನೆಯಾಗುವುದು, ರಕ್ತಹೀನತೆ, ಕರುಳಿನ ತೊಂದರೆ, ಜನನಾಂಗ ಊದಿಕೊಳ್ಳುವುದು ಇವೇ ಇನ್ನಿತರ ಲಕ್ಷಣಗಳು. ಯುಕ್ತಚಿಕಿತ್ಸೆಯಿಂದ ಈ ರೋಗವನ್ನು ಗುಣಪಡಿಸಬಹುದು.

**15 ಕುದುರೆಯ ಆಂತರಿಕ ಪರೋಪಜೀವಿಗಳು:** ಕುದುರೆಗಳು ನಾನಾ ತರಹದ ಪರೋಪಜೀವಿಗಳನ್ನು ಅಂಟಿಸಿಕೊಳ್ಳುತ್ತವೆ. ದೇಹದ ಒಳಭಾಗದಲ್ಲಿ ಕಂಡು ಬರುವ ಪರೋಪಜೀವಿಗಳಾದ ನೆಮಟೋಡ್ಸ್, ಸೆಸ್ಟೋಡ್ಸ್, ಟ್ರೆಮಟೋಡ್‌ಗಳಿಗೆ ಅವಕಾಶಮಾಡಿಕೊಡುತ್ತವೆ. ನೆಮಟೋಡ್‌ಗಳು ತುಂಬ ತೊಂದರೆಯನ್ನುಂಟುಮಾಡುತ್ತವೆ. ಅವುಗಳಲ್ಲಿ ಮುಖ್ಯವಾದವು : (i) ಸ್ಟ್ರಾಂಜಿಲಸ್ ವಲ್ಗ್ಯಾರಿಸ್ : ಇದರ ಮರಿ ಹುಳ ರಕ್ತನಾಳದ ಮೂಲಕ ಹರಡುತ್ತದೆ. ಈ ರಕ್ತನಾಳದ ಚರ್ಮ ಕೆಲವೆಡೆ ನಾರುನಾರಾಗಿ ದಪ್ಪಗಟ್ಟಿಕೊಂಡು ತೊಂದರೆಕೊಡುತ್ತದೆ. (ii) ಸ್ಟ್ರಾಂಜಿಲಸ್ ಎಡೆಂಟೇಟಸ್ : ಪೂರ್ಣವಾಗಿ ಬೆಳೆದ ಈ ಪರೋಪಜೀವಿ ದೊಡ್ಡಕರುಳಿನಲ್ಲಿ ವಾಸ ಮಾಡಿಕೊಂಡು ಎಸ್. ವಲ್ಗಾರಿಸ್‌ಗಳಂತೆ ಚರ್ಮದ ಅಂಗಾಂಶಗಳಿಂದ ಆಹಾರವನ್ನು ಹೀರುತ್ತದೆ. (iii) ಸ್ಟ್ರಾಂಜಿಲಸ್ ಈಕ್ವಿನಸ್ : ಪೂರ್ಣಬೆಳೆದ ಈ ಪರೋಪಜೀವಿ ದೊಡ್ಡಕರುಳಿನಲ್ಲಿ ವಾಸಮಾಡುತ್ತದೆ. (iv) ಸಣ್ಣ ಸ್ಟ್ರಾಂಜಿಲಸ್ : ಪೋಟಿರಿಯೋ ಸ್ಟಮಸ್, ಸ್ಪೀ ; ಟ್ರೈಯಾಡೋಫರಸ್, ಸ್ಪೀ ; ಒಸೋಫೇಗೆ ಡೊಂಟಸ್ ರೋಬಸ್ಟಸ್ ಈ ಹುಳುಗಳು ದೊಡ್ಡಕರುಳು ಮತ್ತು ಮಲದ್ವಾರಗಳಲ್ಲಿ ಕಂಡುಬರುತ್ತವೆ. (v) ಸ್ಟೈಕೊಸ್ಟ್ರಾಂಜಿಲಸ್ ಆಕ್ಸೈ : ಜಠರದಲ್ಲಿ ವಾಸಿಸುತ್ತದೆ. (vi) ಆಕ್ಸಿಯಾರಸ್ ಈವಿನೈ : ಆಹಾರ ನಾಳದ ಹಿಂದಿನ ಭಾಗಗಳಲ್ಲಿ ವಾಸಿಸುತ್ತದೆ. (vii) ಪೋರೋಸೀರಸ್ ಈಕ್ವೆರಮ್ : ದಪ್ಪನಾದ ಬಿಳಿಯ ಈ ಹುಳುಗಳು 6"–9"ಗಳಿದ್ದು ಸಣ್ಣ ಕರುಳಿನಲ್ಲಿ ವಾಸಿಸುತ್ತವೆ. ಈ ಹುಳುಗಳು ಹೆಚ್ಚಾಗಿ ಕಂಡುಬಂದಲ್ಲಿ ಕರುಳನ್ನು ತೂತುಗೊಳಿಸುತ್ತವೆ. ಮರಿಹುಳುಗಳು ಶ್ವಾಸಕೋಶವನ್ನು ತೊಂದರೆಗೀಡುಮಾಡುತ್ತವೆ. (viii) ಸ್ಟ್ರಾಂಜಿಲಸ್ ವೆಸ್ಟರಿ : ಈ ಪರೋಪಜೀವಿ ಚಿಕ್ಕದಾಗಿದ್ದು ಸಣ್ಣಕರುಳಿನಲ್ಲಿ ಹುದುಗಿಕೊಂಡು ಜೀವಿಸುತ್ತದೆ. (ix) ಥೆಲಿಸಿಯ ಲಾಕ್ರಿಮೇಲಿಸ್: ಈ ಹುಳು ಕಣ್ಣಿನ ನಾಳದಲ್ಲಿ ವಾಸಿಸುತ್ತದೆ. ಇದರಿಂದ ಗುಡ್ಡೆಹುಣ್ಣಾಗಿ ವ್ರಣವಾಗುತ್ತದೆ.

**16. ಕುದುರೆಗಳ ಬಾಹ್ಯ ಪರೋಪಜೀವಿಗಳು :** ಹಲವು ವಿಧಾನಗಳಲ್ಲಿ ಕುದುರೆ ಹಲವು ಕೀಟಗಳ ಹಾವಳಿಗೆ ತುತ್ತಾಗುತ್ತದೆ. ಅವುಗಳಲ್ಲಿ ಬಹುಮುಖ್ಯವಾದವು: (i) ಸೊಳ್ಳೆ, ಕರಿನೊಣ, ಕುದುರೆನೊಣ, ಕೊಟ್ಟಿಗೆನೊಣ, ಹೇನು ಮತ್ತು ಉಣ್ಣೆಗಳು. (ii) ತಿರುವುಹುಳ, ಕುದುರೆ ಬಾಟನೊಣ ಮತ್ತು ಇತರ ನೊಣಗಳು (iii) ಪರತಂತ್ರಜೀವಿಗಳ ಮತ್ತು ರೋಗಗಳ ಸಾಗಾಣಿಕೆ. ಕ್ರಿಮಿನಾಶಕಗಳನ್ನು ಉಪಯೋಗಿಸಿ ಅವನ್ನು ಹತೋಟಿಯಲ್ಲಿ ಇಡಬೇಕು.

**17. ಸಾಂಕ್ರಾಮಿಕ ನೆಗಡಿ :** ಕುದುರೆ ಮರಿಗಳಿಗೆ, ವಿಶೇಷವಾಗಿ 6 ತಿಂಗಳಿನಿಂದ 5 ವರ್ಷ ವಯಸ್ಸಿನವುಗಳಲ್ಲಿ, ಸಾಂಕ್ರಾಮಿಕವಾಗಿ ಹರಡುವ ಒಂದು ತೀವ್ರವ್ಯಾಧಿ. ಮಲಿನ ಆಹಾರ ಹಾಗೂ ನೀರು ಈ ರೋಗ ಹುಟ್ಟಿ ಹರಡಲು ಪ್ರಮುಖ ಕಾರಣಗಳು. ಕೆಚ್ಚಲಿನಿಂದ ಹಾಲು ಕುಡಿಯುವಾಗ ಕುದುರೆ ಮರಿಗಳಿಗೆ ಈ ಬೇನೆ ತಗಲುವುದು. ವರ್ಷವಿಡೀ ಇದು ಸುಪ್ತವಾಗಿದ್ದರೂ ವಸಂತಋತುವಿನ ಶೀತಮಾರುತಕ್ಕೆ ಕುದುರೆಗಳು ಒಳಗಾದಾಗ ರೋಗ ಉಲ್ಬಣಿಸುತ್ತದೆ. ಈ ಕಾಯಿಲೆಯ ಕಾರಕ ಸ್ಟ್ರೆಪ್ಟೊಕಾಕಸ್ ಈಕ್ವೈ ಎನ್ನುವ ಏಕಾಣುಜೀವಿಗಳು. ಇವು ಪೋಣಿಸಿದ ಮಣಿಹಾರದಂತಿರುವ ಸೂಕ್ಷ್ಮ ದರ್ಶಕೀಯ ಜೀವಿಗಳು. ಹೊಲಸು ಮಲಿನತೆಯಲ್ಲಿ ಇವು ವೃದ್ಧಿಗೊಂಡು ಶೀತವಾತಾವರಣದಲ್ಲಿರುವ ಪ್ರಾಣಿಯ ದೇಹದಲ್ಲಿ ಒಮ್ಮೆಗೆ ವರ್ಧಿಸುತ್ತವೆ. ಸೋಂಕು ತಟ್ಟಿದ ಕುದುರೆಯಲ್ಲಿ 4 ಮತ್ತು 8 ದಿವಸಗಳಲ್ಲಿ ರೋಗ ಹೊರಹೊಮ್ಮುವುದು. ಮೂಗಿನ ಮೃದು ಚರ್ಮದಲ್ಲಿ ಉರಿಯೂತವಾಗಿ ಕುದುರೆಗೆ ಜ್ವರಬರುವುದು. ಅದರ ದೇಹಸ್ಥಿತಿ ಕೆಟ್ಟು ಮನಸ್ಸಿನ ಮೇಲೆ ಆಘಾತವಾಗುವುದು. ನಾಸಿಕ ದ್ವಾರದ ಬದಿಯಲ್ಲಿರುವ ದುಗ್ಧರಸಗ್ರಂಥಿಗಳು ಊದಿಕೊಂಡು ಅವುಗಳ ಮೇಲೆ ಸಣ್ಣ ಸಣ್ಣ ಕುರುಗಳು ಹುಟ್ಟುತ್ತವೆ. ಕುರುಗಳಲ್ಲಿ ಕೀವಾಗಿ ನಂಜಾಗಿ ಅದರಿಂದ ರಕ್ತಪರಿಚಲನೆಯ ಮೇಲೆ ದುಷ್ಪರಿಣಾಮವಾಗುತ್ತದೆ. ಮುಂದೆ ಕರುಳಿನ ಪಟಲದ ಮೇಲಿರುವ ದುಗ್ಧರಸಗ್ರಂಥಿಗಳಲ್ಲಿ ಸಣ್ಣ ಸಣ್ಣ ಕುರುಗಳೆದ್ದು ಕೀವುಕುರುಗಳಾಗಿ ಸುತ್ತಮುತ್ತಲಿನ ಅಂಗಾಂಗಗಳ ಮೇಲೆ ರೋಗ ಸೇಚನೆಯಾಗುವುದು. ಅಣುಜೀವಿಗಳು ಸ್ಥಾನಾಂತರಗೊಂಡು ಅನೇಕ ರೀತಿಯ ತೊಡಕುಗಳನ್ನು ಉಂಟುಮಾಡುವುವು. ಶ್ವಾಸಕೋಶರೋಗದಿಂದ ನರಳುತ್ತಿರುವ ಹಾಗೂ ಕಾಲಕಾಲಕ್ಕೆ ಪ್ರಯಾಣದಲ್ಲಿ ತೊಡಗಿರುವ ಕುದುರೆಗಳಲ್ಲಿ ಮುನ್ನರಿವು ಹೇಳಲು ಬಾರದು.

**ಚಿಕಿತ್ಸೆ :** ಸಮತೂಕದ ಆಹಾರ, ಶೀತದಿಂದ ರಕ್ಷಣೆ ಹಾಗೂ ಸಾಕಷ್ಟು ವಿಶ್ರಾಂತಿ ನೀಡುವುದು ಈ ರೋಗಕ್ಕೆ ಮುನ್ನೆಚ್ಚರಿಕೆಗಳು. ರೋಗ ಸ್ಪಷ್ಟವಾಗಿ ಕಾಣಿಸಿಕೊಂಡಾಗ ಪೊಟ್ಯಾಷ್ ಕ್ಲೋರೇಟನ್ನು ಕುಡಿಯುವ ನೀರಿನಲ್ಲಿ ಬೆರೆಸುವುದು, ಕುರುಗಳಿಂದ ಸ್ರವಿಸುವ ಕೀವನ್ನು ತೊಳೆಯುವುದು, ಸಲ್ಫಾ ಔಷಧ ನೀಡುವುದು, ಹಾಗೂ ಚುಚ್ಚಿ ಚಿಕಿತ್ಸಕಗಳನ್ನು ಉಪಯೋಗಿಸುವುದು ಕೆಲವು ಚಿಕಿತ್ಸಾ ವಿಧಾನಗಳು. (ಆರ್.ಎಫ್.ಪಿ.)

**18. ಚುಂಚುಕಾಲಿನ ಉಸುಬುಕೀಲು (ಬಾಗ್ ಸ್ಪಾವಿನ್) :** ಈ ಬೇನೆಯಿಂದ ಮೊಣಕಾಲಿನ ಕೀಲಿನ ಪೊರೆಯ ಮುಚ್ಚಳ ಊದಿಕೊಂಡು ಕೀಲಿನ ಪೊರೆಯ ಒಳಗೆ ಉರಿಯೂತವಾಗುವುದು. ಕೀಲಿನ ಮೂರು ಕಡೆ ಊತ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಊತದ ಒಂದು ಕಡೆ ಕೈಯಿಂದ ಒತ್ತಿದರೆ ಉಳಿದೆರಡು ಕಡೆಗಳಲ್ಲಿ ಉಬ್ಬರ ಕಾಣಿಸಿಕೊಳ್ಳುವುದು. ಇಂಥ ಲಕ್ಷಣಗಳಿಂದ ಅತಿ ಸುಲಭವಾಗಿ ಈ ರೋಗವನ್ನು ಗುರುತಿಸಬಹುದು. ಅಲ್ಲಿಯ ಮಲಿನ ರಕ್ತನಾಳ (ಸಫಿನ) ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು ರಕ್ತದ ಒತ್ತಡ ಕೀಲಿನ ಭಾಗದಲ್ಲಿ ವಿಪರೀತವಾಗಿ ಕಾಣುವುದರಿಂದ ಕುದುರೆಯ ಲಾಲನೆ ಪಾಲನೆ ಮಾಡುವವರು ಇದನ್ನು ಒಮ್ಮೊಮ್ಮೆ ನೆತ್ತರ ಕೀಲು ಎಂದು ಕರೆಯುವುದುಂಟು. ಕುದುರೆಯ ದೇಹಶಕ್ತಿ ನಶಿಸಿ, ದೇಹಶ್ರಮ ಜಾಸ್ತಿಯಾದಾಗ ಹಿಂಗಾಲುಗಳು ಶ್ರಮಗೊಳ್ಳುವುವು. ಚುಂಚುಕಾಲು ಮತ್ತು ಮಂಡಿಯ ಮಧ್ಯೆಯ ಕೀಲು ದುರ್ಬಲಗೊಳ್ಳುವುದು. ಸ್ವಾಭಾವಿಕವಾಗಿ ನಸುಬಾಗಿದಂತೆ ಕಾಣುವ ಹಿಂಗಾಲು ಅದರ ನೈಜಸ್ಥಿತಿಯನ್ನು ಕಳೆದುಕೊಂಡು ನೇರವಾಗುವುದು. ಆಗ ಉಸುಬುಕೀಲಿನ ಕಾಲಿನಲ್ಲಿ ಶಕ್ತಿ ಕಡಿಮೆಯಾಗುವುದರಿಂದ ಉಳಿದ ಕಾಲನ್ನು ಕುದುರೆ ಕೆಲಸದಲ್ಲಿ ಬಹಳ ಉಪಯೋಗಿಸಿಕೊಂಡಾಗ ಎರಡು ಕಾಲಿನ ಕೀಲುಗಳು ಈ ರೋಗಕ್ಕೊಳಗಾಗುವುವು. ಹಿಂಗಾಲಿನಲ್ಲಿ ಕುಂಟುಕಾಣಿಸಿಕೊಂಡರೆ ರೋಗದ ಮುನ್ನರಿವು ಅಷ್ಟೇನು ಆಶಾದಾಯಕವಾಗುವುದಿಲ್ಲ. ಆದರೂ ಒಮ್ಮೊಮ್ಮೆ ಕೀಲಿನಲ್ಲಿ ಈ ರೋಗವಿದ್ದರೂ ಕುದುರೆ ಕುಂಟದೆ ಕೆಲಸದಲ್ಲಿ ಭಾಗಿಯಾಗುವುದು ಸಹಜ.

ಉಸುಬುಕೀಲು ಕುದುರೆಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಬೇನೆ. ಚಿಕಿತ್ಸೆಯನ್ನು ವಿವಿಧ ರೂಪದಲ್ಲಿ ನೀಡಬಹುದು. ಆದರೂ ದೇಹದಾರ್ಢ್ಯ ಹಾಗೂ ಹಿಂಗಾಲುಗಳ ನೈಜತೆಯನ್ನು ವೈದ್ಯಕೀಯ ಸಲಹೆಯಿಂದ ಕಾಪಾಡುವುದು ಒಳ್ಳೆಯದು. ಉಸುಬುಕೀಲಿನ ಚಿಕಿತ್ಸೆಯ ಔಷಧಿ ಟಿಂಚರ್ ಅಯೋಡಿನ್ 4 ಔನ್ಸ್, ಟರ್ಪೆಂಟೈನ್ 1 ಔನ್ಸ್, ಜಾಪಾಳತೈಲ 10 ಹನಿಗಳು ಇವುಗಳ ಮಿಶ್ರಣ. ಪ್ರತಿದಿನ ಈ ಔಷಧಿಯನ್ನು ಉಸುಬಿರುವ ಜಾಗಕ್ಕೆ ಹಚ್ಚಿ ಚೆನ್ನಾಗಿ ಉಜ್ಜಬೇಕು. ಆಗ ಕೀಲಿನ ಚರ್ಮದ ಮೇಲೆ ಉಜ್ಜುಬೊಬ್ಬೆ ಏಳುವುವು. ಬೊಬ್ಬೆಗಳ ಮೂಲಕ ಕೀಲಿನ ದ್ರವ ಹೊರಗೆ ಬಂದು ಉಸುಬು ಕಡಿಮೆಯಾಗುವುದು. ಬಹಳ ಬೊಬ್ಬೆಗಳು ಮೂಡಿಬಂದರೆ ಔಷಧಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕು. ಕೀಲಿನ ಉಸುಬು ತಗ್ಗುವವರೆಗೂ ಈ ಚಿಕಿತ್ಸೆಯನ್ನು ಮುಂದುವರಿಸಬೇಕು. ಇತ್ತೀಚಿನ ದಿನಗಳಲ್ಲಿ ಪಶುವೈದ್ಯರು ಮೇಲೆ ಹೇಳಿದ ಚಿಕಿತ್ಸೆಗೆ ಬದಲಾಗಿ ಕಾರ್ಟಿಕೊಸ್ಟೀರಾಯ್ಡ್ ಔಷಧಿಗಳನ್ನು ಬಳಸುತ್ತಾರಲ್ಲದೆ, ಹೆಚ್ಚಿನ ದ್ರವವನ್ನು ಕೀಲಿನಿಂದ ಹೊರತೆಗೆದು ಚಿಕಿತ್ಸೆಯನ್ನು ಸಹ ಮಾಡುತ್ತಾರೆ.

**19. ಚುಂಚುಕಾಲಿನ ಕೀಲಿನ ಜಡ್ಡು (ಬೋನ್‌ಸ್ಪಾವಿನ್):** ಕೀಲಿನ ರೂಪದಲ್ಲಿ ತೊಡಕಾದಾಗ ಹಿಂಗಾಲಿನ ನೈಜರೂಪ ಬದಲಾಯಿಸಿದಾಗ ಮುಖ್ಯವಾಗಿ ಈ ಜಡ್ಡು ಬರುವುದು. ಆಹಾರದಲ್ಲಿ ಅನ್ನಾಂಗಗಳ ಕೊರತೆ, ರಂಜಕ ಅಂಶವಿಲ್ಲದಿರುವುದು, ಕೆಲವೊಮ್ಮೆ ಆನುವಂಶಿಕ ಕಾರಣಗಳಿಂದ ಕೂಡಿ ವ್ಯಾಧಿ ಕಾಣಿಸಿಕೊಳ್ಳುವುದು. ಇದರ ಲಕ್ಷಣಗಳು ಹೀಗಿವೆ : (i) ಹೆಚ್ಚಾಗಿ ಹೊರಗೆ ಕಾಣುವಂತೆ ಕಾಲಿನ ತುಂಡುಮೂಳೆ ಬೆಳೆಯುವುದು ವ್ಯಕ್ತಜಡ್ಡು ; (ii) ಮೇಲೆ ಹೇಳಿದ ರೀತಿ ಕಾಣದೆ ಕೀಲಿನೊಳಗೆ ಜಡ್ಡುಮೂಡುವುದು–ಅವ್ಯಕ್ತಜಡ್ಡು. (iii) ಚುಂಚುಕಾಲಿಗೂ ಮಂಡಿಗೂ ಮಧ್ಯೆ ಇರುವ ಕೀಲಿನ ಸಮೀಪದಲ್ಲಿಯೇ–ಕಡುಜಡ್ಡು (iv) ಕೀಲಿನ ಪೊರೆಯನ್ನುಳಿದು ಮಿಕ್ಕ ಕಡೆ ಬೆಳೆಯುವುದು–ಮೊಳಕಾಲ ಜಡ್ಡು. ಈ ರೀತಿ ಅನೇಕ ರೂಪವಾಗಿ ಕಾಣಿಸಿಕೊಳ್ಳುವ ಜಡ್ಡಿನಿಂದ ಕುದುರೆ ನಡೆಯುವಾಗ ಮೊದಲ ಕೆಲವು ಹೆಜ್ಜೆಗಳಲ್ಲಿ ಕುಂಟುಕಾಣಿಸಿಕೊಂಡು ಅನಂತರ ಕಾಣದಾಗುವುದು. ಹಿಂಗಾಲಿಗೆ ಕೆಲಸದಿಂದ ಬಿಸಿ ತಟ್ಟಿದರೆ ಜಡ್ಡಿನ ನಿಲುವೇ ಇಲ್ಲದಂತಾಗುವುದು. ಆದರೆ ಕುದುರೆ ವಿಶ್ರಾಂತಿಗೊಂಡು ಮತ್ತೆ ನಡೆಯಲು ಆರಂಭಿಸಿದರೆ ಹಿಂದಿನಂತೆ ಕುಂಟುಕಾಣಿಸಿಕೊಳ್ಳುವುದು. ಜಡ್ಡುರೋಗದಿಂದ ಮೂಡುವ ಕುಂಟು ಕೆಲವೊಮ್ಮೆ ಕಂಡು ಮುಂದೆ ಅದು ಕಾಣದೆ ಹೋದರೂ ಕೆಲವಾರು ಕುದುರೆಗಳಲ್ಲಿ ಯಾವಾಗಲೂ ಕುಂಟುಕಾಣಬಹುದು. ಅಂಥ ಬೇನೆಯನ್ನು ನೀರಸ ಜಡ್ಡು ಎಂದು ಕರೆಯುತ್ತಾರೆ.

ಈ ಜಡ್ಡಿನ ಕುಂಟನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕೀಲುಗಳನ್ನು ಮಡಚುವುದರಲ್ಲಿ ಕಾಣುವ ಅಸಂಬದ್ಧತೆ, ಮೇಲೆದ್ದು ಕಾಣುವ ರೊಂಡಿಯ ಭಾಗ, ಆಗಾಗ್ಗೆ ಕಾಲನ್ನು ಎತ್ತಿ ಎತ್ತಿ ಇಡುವುದನ್ನು ಗುರುತಿಸಬಹುದು. ಹಿಂಗಾಲನ್ನು ಸೂಕ್ಷ್ಮವಾಗಿ ಎಲ್ಲ ಕಡೆಯಿಂದಲೂ ನೋಡಿ, ಕಾಲಿನ ಒಳಭಾಗವನ್ನು ಪರೀಕ್ಷಿಸಿ, ಮತ್ತೊಂದು ಕಾಲಿಗೆ ಹೋಲಿಸಿ ಚುಂಚುಕಾಲಿನ ಮೇಲೆ ಮೂಡುವ ಊತವನ್ನು ಗಮನಿಸಬಹುದು. ಈ ನರಳಿಕೆಯನ್ನು ಸ್ಪಷ್ಟಪಡಿಸಲು ಜಡ್ಡುಪರೀಕ್ಷೆಯನ್ನು ಪಶುವೈದ್ಯರು ಮಾಡುವರು. ಹಿಂಗಾಲಿನ ಕೀಲನ್ನು ಮಡಿಚಿ, ಸ್ವಲ್ಪ ಹೊತ್ತಿನಲ್ಲಿಯೇ ಕುಕ್ಕುಲೋಟದಲ್ಲಿ ಕುದುರೆಯನ್ನು ಓಡಿಸಿದಾಗ, ಸ್ವಲ್ಪ ದೂರದವರೆಗೆ ಸ್ಪಷ್ಟವಾಗಿ ಕುಂಟುತೋರುವುದರಿಂದ ಚುಂಚುಕಾಲಿನ ಜಡ್ಡಿನ ಇರವನ್ನು ಕಂಡುಹಿಡಿಯಬಹುದು. ಆದರೆ ಪರೀಕ್ಷೆ ಪೂರ್ಣ ಸಾಧ್ಯವಿಲ್ಲ. ಮೇಲಾಗಿ ವಯಸ್ಸಾದ ಕುದುರೆಗಳಲ್ಲಿ ಫಲಕಾರಿಯೂ ಅಲ್ಲ. ಈ ರೋಗದ ಮುನ್ನರಿವು ಸಮಾಧಾನವನ್ನುಂಟುಮಾಡುವುದು. ಪಶುವೈದ್ಯ ಶಸ್ತ್ರಚಿಕಿತ್ಸಕರಿಂದ ಕುಂಟಿಗೆ ಸಂಬಂಧಿಸಿದ ಸ್ನಾಯುತಂತನ್ನು ಶಸ್ತ್ರದಿಂದ ತೆಗೆಸುವುದರಿಂದ ಜಡ್ಡು ನಿವಾರಣೆಯಾಗುವುದು.

ಕುದುರೆಗೆ ಬರುವ ಇತರ ರೋಗಗಳು ಕಜ್ಜಿ, ಬಿಗಿದುಕೊಳ್ಳುವ ಸಿಂಡ್ರೋಮ್, ಪರ್ಪ್ಯುರ ಹೆಮೊರೇಜಿಕ, ಜಂತುಹುಳು, ಬೇಬಿಯಾಸಿಸ್, ಇತ್ಯಾದಿ. (ಜಿ.ಆರ್.ಆರ್.ಎಸ್.)

**ಕುದುರೆ ಸವಾರಿ :** ಸವಾರಿಯನ್ನು ಚಾತುರ್ಯದಿಂದ ನಿರ್ವಹಿಸುವುದು, ಕುದುರೆಯ ಚಲನವಲನಗಳನ್ನೂ ದಿಕ್ಕು, ಮಾರ್ಗ, ವೇಗಗಳನ್ನೂ ಹತೋಟಿಯಲ್ಲಿಡುವುದು ರಾವುತವಿದ್ಯೆ. ಕುದುರೆಯ ಸಂಪೂರ್ಣ ಸಹಕಾರವನ್ನು ಪಡೆದು ಆದಷ್ಟು ಕಡಿಮೆ ಪರಿಶ್ರಮದಿಂದ ಅತ್ಯಂತ ಫಲಕಾರಿಯಾಗುವಂತೆ ಅದಕ್ಕೆ ಮಾರ್ಗದರ್ಶನ ಕೊಡುವುದು ನಿಪುಣ ಸವಾರನ ಲಕ್ಷಣ. ಮ್ಯಾಸಿಡೋನಿಯ ದೇಶದ ರಾಜನ ಕುದುರೆಯನ್ನು ಅಂಕೆಯಲ್ಲಿಡಲು ಯಾರಿಗೂ ಸಾಧ್ಯವಾಗದಿದ್ದಾಗ ಅವನ ಚಿಕ್ಕ ಮಗ ಅದನ್ನು ನಿಯಂತ್ರಿಸಿದ. ಅವನೇ ವಿಶ್ವವಿಜೇತ ಅಲೆಗ್ಸಾಂಡರ್ ಮಹಾಶಯ. ಅಮೆರಿಕದ ರೆಡ್ ಇಂಡಿಯನರು ಎರಡು ಕೈಗಳಲ್ಲೂ ಬಿಲ್ಲು, ಬಾಣಗಳನ್ನು ಹಿಡಿದುಕೊಂಡು ಲಗಾಮು, ಜೀನುಗಳಿಲ್ಲದೆ ಸವಾರಿ ಮಾಡುತ್ತಿದ್ದರು. ಚೆಂಗಿಜ್‌ಖಾನನ ಕುದುರೆ ಸವಾರಿ ಲೋಕವನ್ನು ಬೆರಗುಗೊಳಿಸಿತು.

ಕುದುರೆಗೂ ಸವಾರನಿಗೂ ಸಂಪೂರ್ಣ ಐಕ್ಯ, ಪ್ರೀತಿ, ಹೊಂದಾಣಿಕೆ ಅನ್ವಯ ಇರಬೇಕು. ಯಜಮಾನನಿಗೆ ತನ್ನ ಮೇಲೆ ಮಮತೆಯಿದೆ, ಅವನು ತನಗೆ ಕೇಡುಕು ಮಾಡುವುದಿಲ್ಲವೆಂದು ಕುದುರೆಗೆ ನಂಬಿಕೆ ಬಂದರೆ ಅದು ವಿಶ್ವಾಸದಿಂದ ವಿಧೇಯವಾಗಿರುತ್ತದೆ. ಆಜ್ಞಾಪಾಲನೆ ಅದಕ್ಕೆ ಮನಃಪ್ರವೃತ್ತಿಯಾಗುವಂತೆ ವಿವೇಕದ ಒತ್ತಾಯ, ಶಿಸ್ತಿನಿಂದ ರೂಢಿ ಮಾಡಿಸಬೇಕು. ತಪ್ಪು ಮಾಡಿದಾಗ ಅದಕ್ಕೆ ಸೌಮ್ಯವಾಗಿ ಪ್ರೋತ್ಸಾಹಗಳ (ರಿವಾರ್ಡ್ ಅಂಡ್ ಪನಿಷ್‌ಮೆಂಟ್) ಮೂಲಕ ತಿದ್ದಬೇಕು; ಸಿಡುಕು, ಚಾವಟಿ, ಮುಳ್ಳುಕಂಟಕಗಳಿಂದಲ್ಲ. ಭೀತಿ ಅದರ ವಿವೇಚನೆಯನ್ನು ಕುಗ್ಗಿಸುತ್ತದೆ. ಪ್ರತಿಯೊಂದು ವಿಧೇಯತೆಗೂ ಕೂಡಲೇ ಬಹುಮಾನ ಕೊಡಬೇಕು. ಶಿಕ್ಷೆಯನ್ನು, ಅತ್ಯಾವಶ್ಯಕವಿದ್ದಾಗ ಮಾತ್ರ, ಔಷಧಿಯಂತೆ ಕೊಡಬೇಕು. ಲಗಾಮನ್ನು ಎಳೆದ ಕೂಡಲೇ ಅದು ನಿಂತರೆ, ಲಗಾಮನ್ನು ಸಡಿಲಿಸಿ ಹೆಗಲ ಮೇಲೆ ತಟ್ಟಿ ಮೆಚ್ಚಿಗೆಯನ್ನು ತೋರಿಸಬೇಕು. ವಿಧೇಯತೆಗೆ ಅಂಥ ಬಹುಮಾನವನ್ನು ಅದು ಸದಾ ನಿರೀಕ್ಷಿಸುತ್ತದೆ. ತಪ್ಪು ಮಾಡಿದ ಕೂಡಲೆ ಶಿಕ್ಷಿಸಬೇಕು. ಅವಿಧೇಯತೆಗೆ ಲಗಾಮನ್ನು ಬಿಗಿಹಿಡಿದು ಬಾಯಿ ಎಳೆದರೆ ಶಿಕ್ಷೆ. ತಡಮಾಡಿ ಶಿಕ್ಷಿಸಿದರೆ ತಪ್ಪೇನೆಂಬುದು ಅದಕ್ಕೆ ಅರ್ಥವಾಗುವುದಿಲ್ಲ. ಕುದುರೆ ಮೊಂಡತನದಿಂದ ಅವಿಧೇಯವಾಗಿದ್ದರೆ ಮಾತ್ರ ಚಾವಟಿಯ ಪ್ರಯೋಗ. ಅದೂ ಒಂದು ಸಾರಿ ಮಾತ್ರ; ಪದೇ ಪದೇ ಹೊಡೆಯಬಾರದು.

ಹೊಸ ವಿಲಕ್ಷಣ ಪರಿಸ್ಥಿತಿಗಳಲ್ಲಿ ಕುದುರೆ ಗಾಬರಿಯಿಂದ ಹೆದರುತ್ತದೆ. ಆಗ ಅದನ್ನು ದಕ್ಷತೆಯಿಂದ ಸಂತೈಸಿ ಧೈರ್ಯ ಕೊಟ್ಟರೆ ಅದು ಎಂಥ ಸಾಹಸಕ್ಕೂ ಸಿದ್ಧವಾಗುತ್ತದೆ. ಸುಡುವ ಮರುಭೂಮಿಯಲ್ಲಿ ಬಹುಕಾಲ ನೀರಿಲ್ಲದೆ ನಾಗಾಲೋಟದಲ್ಲಿ ಹೋಗುತ್ತದೆ. ಹಿಮದ ಕೊರೆತದಲ್ಲಿ ಜಾರುಬಂಡಿಯನ್ನೆಳೆಯುತ್ತದೆ. ಕಗ್ಗತ್ತಲ ರಾತ್ರಿಯಲ್ಲಿ ಸವಾರನನ್ನು ನೆನಪಿನಿಂದ ಕಡಿದಾದ ಪರ್ವತ ಜಾಡಿಯಲ್ಲಿ ಒಯ್ಯುತ್ತದೆ. ಉರಿಯುತ್ತಿರುವ ಬೆಂಕಿಯಲ್ಲಿ ಸವಾರನೊಡನೆ ನೆಗೆದು ಪಾರಾಗುತ್ತದೆ. ಗಾಯಗೊಂಡ ರಾವುತನನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುತ್ತದೆ.

ಸವಾರಿಗೆ ತಕ್ಕ ಕುದುರೆಯ ಆಯ್ಕೆ ಬಹು ಮುಖ್ಯ. ಶ್ರೇಷ್ಠ ಕುದುರೆಯ ಲಕ್ಷಣಗಳಿವು: ತಲೆ, ಕತ್ತು, ಶರೀರಗಳ ಸಮಕಟ್ಟು ; ತೆಳ್ಳನೆ ಚರ್ಮ, ಭಾರ ತಡೆಯಲು ಬಲಿಷ್ಠ ಸ್ನಾಯುಗಳ ಅಡಕ ಬೆನ್ನು; ಮಧುರ ಆಕಾರ; ಎದೆಯವರೆಗೂ ಬಾಗಿರುವ ಅಗಲವಾದ ಹೆಗಲು, ಜಿಂಕೆಯಂತೆ ಚೂಪಾದ ತಲೆ, ತೆಳುವಾದ ಕಾಲುಗಳು; ಅಗಲವಾದ ಹಣೆ, ಚೂಪಾಗುವ ಚಿಕ್ಕ ಬಾಯಿ, ಚುರುಕಾದ ದೊಡ್ಡ ಕಣ್ಣುಗಳು, ಹಿಗ್ಗುವ ಮೂಗಿನ ಹೊಳ್ಳೆಗಳು, ದಪ್ಪಗಿರದೆ ಮೊನೆಯಾಗುವ ಕತ್ತು; ಶೀಘ್ರಗ್ರಾಹಿ ಬುದ್ಧಿ. ಸವಾರಿ ಕುದುರೆಗಳಲ್ಲಿ ವಂಶಾವಳಿ ಬಹು ಮುಖ್ಯ. ಥರೋಬ್ರೆಡ್ ಎಂಬ ಜಾತಿಯ ಕುದುರೆ ಪರಮಶ್ರೇಷ್ಠ.

ರಾವುತ ಕುದುರೆಯನ್ನು ಪೂರ್ತಿ ಹತೋಟಿಯಲ್ಲಿಟ್ಟು ತನ್ನ ಮನೋಗತವನ್ನು ಅದಕ್ಕೆ ತಿಳಿಸಿ ಅದನ್ನು ತನ್ನ ಇಚ್ಛೆಯಂತೆ ನಡೆಯಿಸಲು ನಾಲ್ಕು ನೆರವುಗಳಿವೆ. ಕೈಯಿಂದ ಲಗಾಮು. ಕಡಿವಾಣಗಳನ್ನು ನಿಯಂತ್ರಿಸುವುದು; ಕಾಲುಗಳಿಂದ ಕುದುರೆಯನ್ನು ಒತ್ತುವುದು; ಮೈ ಹವಣಿಕೆಯನ್ನು ಬದಲಿಸುವುದು; ಬಾಯಿಮಾತು. ಸವಾರನ ಕೈಕಾಲುಗಳ ಸೂಕ್ಷ್ಮ ಚಲನೆಯ ಸಂಜ್ಞೆಗಳಿಂದ ಕುದುರೆ ನಿಲ್ಲುತ್ತದೆ, ಹೊರಡುತ್ತದೆ, ತಿರುಗುತ್ತದೆ, ನಡಿಗೆಗಳನ್ನು ಬದಲಿಸುತ್ತದೆ.

ಸವಾರ ಎಡಗಾಲನ್ನು ಕುದುರೆಯ ಪಕ್ಕಕ್ಕೆ ಒತ್ತಿದರೆ ಅದು ಬಲಕ್ಕೆ ತಿರುಗಿಹೋಗುತ್ತದೆ. ಬಲಗಾಲನ್ನು ಒತ್ತಿದರೆ ಎಡಕ್ಕೆ ಹೋಗುತ್ತದೆ. ಕುದುರೆಯ ಬಾಯಲ್ಲಿರುವ ಕಡಿವಾಣಕ್ಕೆ ಜೋಡಿಸಿರುವ ಲಗಾಮನ್ನು ಬಲಕ್ಕೆ ಎಳೆದರೆ ಕಡಿವಾಣ ಕುದುರೆಬಾಯಿಯ ಮೇಲೆ ಎಳೆದು ತನ್ನ ತಲೆ ಶರೀರಗಳನ್ನು ಆ ದಿಕ್ಕಿಗೆ ತಿರುಗಿಸುತ್ತದೆ. ಸವಾರ ಕುದುರೆ ಚಲಿಸುವ ದಿಕ್ಕಿಗೆ ತನ್ನ ಭಾರವನ್ನು ಸರಿಸುತ್ತಾನೆ. ಅದು ಮುಂದೆ ಹೋಗುವಾಗ ಅವನು ಕುದುರೆಯ ಬೆನ್ನಿನ ಮೇಲೆ ಮುಂದಕ್ಕೆ ಸರಿಯುತ್ತಾನೆ. ಅದು ತಿರುಗುವಾಗ ಬಲಕ್ಕೂ ಎಡಕ್ಕೂ ಸರಿಯುತ್ತಾನೆ. ನಡಿಗೆಯನ್ನು ನಿಧಾನ ಮಾಡುವಾಗ ಅಥವಾ ನಿಲ್ಲಿಸುವಾಗ ಜೀನಿನ ಮೇಲೆ ಸ್ವಲ್ಪ ಹಿಂದಕ್ಕೆ ಸರಿಯುತ್ತಾನೆ. ಚತುರವಾದ ಸವಾರ ಇವನ್ನೆಲ್ಲ ಎಷ್ಟು ಸೂಕ್ಷ್ಮವಾಗಿ ಮಾಡುತ್ತಾನೆಂದರೆ ಅವು ಕುದುರೆಗೆ ವಿನಾ ಮತ್ತಾರಿಗೂ ಅರಿವಾಗುವುದಿಲ್ಲ. ಕುದುರೆಯನ್ನು ನಿಲ್ಲಿಸಲು ಅವನು ಜೀನಿನ ಮೇಲೆ ಸ್ವಲ್ಪ ಬಾಗಿ ಬೆಟ್ಟುಗಳಿಂದ ಹಿಸುಕಿ ಲಗಾಮಿನ ಒತ್ತಡವನ್ನು ಸಡಿಲಿಸುತ್ತಾನೆ; ಲಗಾಮನ್ನು ಜಗ್ಗಿ ಎಳೆಯುವುದಿಲ್ಲ. ಕುದುರೆಯನ್ನು ದೊಡ್ಡ ವರ್ತುಲ, ಚಿಕ್ಕ ವರ್ತುಲಗಳಲ್ಲಿ ಎಡಕ್ಕೂ ಬಲಕ್ಕೂ ತಿರುಗಿಸುವುದು; ವೇಗವನ್ನು ಬದಲಿಸುವುದು; ತೊಡಕಾದ ಕೋನಗಳಲ್ಲಿ ತಿರುಗಿಸುವುದು; ಮುಂತಾದವುಗಳನ್ನು ರಾವುತ ಕೇವಲ ತನ್ನ ಕೈಚಳಕದಿಂದ ನಿರ್ವಹಿಸುತ್ತಾನೆ. ಅಶ್ವ ಶಿಕ್ಷಣಕ್ಕೆ ತಾಳ್ಮೆ, ಕೌಶಲ, ಅನುಭವ, ಕುದುರೆಗಳ ಸ್ವಭಾವ ವೈಚಿತ್ರ್ಯಗಳ ತಿಳಿವಳಿಕೆ ಇರಬೇಕು. ಕುದುರೆಗೆ ಪ್ರಬಲವಾದ, ದೀರ್ಘ ಜ್ಞಾಪಕಶಕ್ತಿಯಿದೆ.

ನಾನಾ ಬಗೆಯ ಜೀನುಗಳಿವೆ. ಸವಾರನಿಗೆ ಆರಾಮಕರವಾದ, ಸವಾರಿಯ ಉದ್ದೇಶಕ್ಕೆ ತಕ್ಕುದಾದುವುಗಳನ್ನು ಉಪಯೋಗಿಸಬೇಕು. ಜೀನು ಕುದುರೆಯ ಬೆನ್ನೆಲುಬನ್ನು ಮುಟ್ಟದಂತೆ, ಬೆನ್ನಿಗೂ ಪಕ್ಕಗಳಿಗೂ ಗಾಯವಾಗದಂತೆ ಮೆತ್ತೆ ಹಾಕಬೇಕು. ನಾನಾ ಬಗೆಯ ಕಡಿವಾಣಗಳಿವೆ. ಕುದುರೆಯ ಬಾಯಿಗೆ ಹೊಂದಿಕೆಯಾಗಿ, ನೋವು ಮಾಡದಂಥವುಗಳನ್ನು ಹಾಕಬೇಕು.

**ಕುದುರೆಗೆ ನಾನಾ ಬಗೆಯ ನಡಿಗೆಗಳಿವೆ:** (1) ಹೆಜ್ಜೆ ಇಡುತ್ತ ನಡೆಯುವುದು. (2) ಗಂಟೆಗೆ 14 ಕಿಮೀ ವೇಗದ ಕುಕ್ಕೋಟ. ರಾವುತ ರಿಕಾಬುಗಳಲ್ಲಿ ನಿಂತು, ತಗ್ಗಿ ಜೀನಿನ ಮೇಲೆ ಕೂತು, ಪುನಃ ಮೇಲೇರಿ ಅಂಗವಿನ್ಯಾಸಗಳಿಂದ ಸವಾರಿ ಮಾಡುತ್ತಾನೆ. (3) ಗಂಟೆಗೆ 20–60 ಕಿಮೀ ವೇಗದ ಬಲವಾದ ಜಿಗಿತಗಳಲ್ಲಿ ದೂಡಿಕೊಂಡು ಹೋಗುವ ನಾಗಾಲೋಟ. ಉಯ್ಯಾಲೆಯನ್ನು ನೂಕಿ ಹೆಚ್ಚು ಹೆಚ್ಚು ಎತ್ತರಕ್ಕೆ ಹೋಗುವಂತೆ ಸವಾರ ಕುದುರೆಯನ್ನು ತನ್ನ ಹಿಂಬದಿಯಿಂದ ದೂಡುತ್ತಾನೆ. (4) ಆಯಾಸವಿಲ್ಲದ ನಾಗಾಲೋಟ. (5) ಕುಕ್ಕೋಟಕ್ಕಿಂತ ವೇಗವಾದ ರಭಸ. ಸವಾರ ಇವುಗಳಲ್ಲೆಲ್ಲ ಪಾರಂಗತನಾಗಿರಬೇಕು. ಸವಾರಿಯಲ್ಲಿ ಪ್ರವೀಣರಾದ ಸ್ತ್ರೀಯರೂ ಅನೇಕರಿದ್ದಾರೆ. ಝಾನ್ಸಿ ರಾಣಿ ಲಕ್ಷ್ಮೀಬಾಯಿ, ರಜಿಯಾ ಬೇಗಂರ ಸವಾರಿ ಚಾತುರ್ಯ ಇತಿಹಾಸ ಪ್ರಸಿದ್ಧವಾದದ್ದು.

ಪೋಲೋ ಆಟದಲ್ಲಿ ಸವಾರ ಲಗಾಮನ್ನು ಎಡಗೈಯಲ್ಲಿ ಮಾತ್ರ ಹಿಡಿದು, ಕುದುರೆಯನ್ನು ಗಂಟೆಗೆ 96 ಕಿಮೀ ವೇಗದಲ್ಲಿ ಓಡಿಸುತ್ತ, ಥಟ್ಟನೆ ನಿಲ್ಲಿಸಿ, ಎದುರಾಳಿ ರಾವುತರನ್ನು ಆಕ್ರಮಿಸಿ, ಬಲಗೈಯ ಕೋಲಿನಿಂದ ಚೆಂಡನ್ನು ಹೊಡೆಯುತ್ತ ಕುದುರೆಯನ್ನು ಓಡಿಸಿಕೊಂಡು ನುಗ್ಗಲು ವಿಚಕ್ಷಣನಾಗಿರಬೇಕು. ಬೇಟೆಗಾರ ಕುದುರೆಗಳನ್ನು ಕಣಿವೆ, ಕಾಲುವೆ, ಎತ್ತರದ ಬೇಲಿ, ಗೋಡೆಗಳ ಮೇಲೆಲ್ಲ ಹಾರಿಸಿಕೊಂಡು ಸವಾರಿ ಮಾಡುತ್ತಾನೆ. ಕುದುರೆಗಳನ್ನು ಚಿಕ್ಕಂದಿನಿಂದ ತರಬೇತಿ ಮಾಡಿ ಎರಡನೆಯ ವಯಸ್ಸಿನಲ್ಲೇ ಕುದುರೆ ಜೂಜಿನಲ್ಲಿ ಓಡಿಸುತ್ತಾರೆ. ಗೆದ್ದ ಕುದುರೆಗೆ ಒಂದು ಲಕ್ಷ ಡಾಲರ್ ಬಹುಮಾನ ಬಂದಿದೆ. ಸಹಿಷ್ಣುತೆ, ದೀರ್ಘ ದೂರದ ದಾಳಿ, ಗ್ರಾಮಾಂತರ ಪ್ರದೇಶಗಳ ಓಟ ಮತ್ತು ಅಶ್ವದಳಗಳು ಇಲ್ಲೆಲ್ಲ ರಾವುತರು ಭಾಗಿಯಾಗಿದ್ದಾರೆ. ನಾಗಾಲೋಟದ ಕುದುರೆಯ ಮೇಲಿರುವವನು ಟೆನ್ಟ್ ಪೆಗ್ ಎಂಬ ಕ್ರೀಡೆಯಲ್ಲಿ ಭೂಮಿಯಲ್ಲಿ ನೆಟ್ಟಿರುವ ಗೂಟವನ್ನು ಭಲ್ಲೆಯಿಂದ ಚುಚ್ಚಿ ಎತ್ತುತ್ತಾನೆ; ನೆಲದ ಮೇಲಿರುವ ಕೈವಸ್ತ್ರವನ್ನು ಹಿಡಿಯುತ್ತಾನೆ; ಪಿಗ್‌ಸ್ಟಿಕಿಂಗ್ ಎಂಬ ಕ್ರೀಡೆಯಲ್ಲಿ ಕಾಡುಹಂದಿಯನ್ನು ಈಟಿಯಿಂದಿರಿಯುತ್ತಾನೆ. ನಿಪುಣ ರಾವುತ ಕುದುರೆಯ ಮೇಲೆ ನಿಂತುಕೊಂಡು ಸವಾರಿ ಮಾಡುತ್ತ ಥಟ್ಟನೆ ಮಗ್ಗುಲಲ್ಲಿ ಓಡುತ್ತಿರುವ ಕುದುರೆಯ ಮೇಲೆ ನಿಂತು ಸವಾರಿ ಮಾಡಬಲ್ಲ.

ರಾಣಾ ಪ್ರತಾಪಸಿಂಹನನ್ನು ಅವನ ಶತ್ರುಗಳು ಸುತ್ತುವರಿದಿದ್ದಾಗ ಅವನ ವೀರ ಕುದುರೆ ಚೇತಕ್ ದೆಹಲಿಯ ಕೋಟೆಯನ್ನೂ ಪಕ್ಕದ ಕಂದಕವನ್ನೂ ಒಂದೇ ಜಿಗಿತದಲ್ಲಿ ಹಾರಿ ತನ್ನ ಒಡೆಯನನ್ನು ಶತ್ರುಗಳಿಂದ ಪಾರು ಮಾಡಿದ್ದು ಪ್ರಚಂಡ ಸಾಹಸ. ಇಂಗ್ಲೆಂಡಿನ ಎಡ್ವರ್ಡ್ ಸ್ಟೋಕ್ಸ್ ಪೂರ್ತಿ ಕುರುಡನಾಗಿ ಹೋದರೂ ಬೇಟೆ ನಾಯಿಗಳೊಡನೆ ಕುದುರೆಸವಾರಿ ಮಾಡುತ್ತಾ ಬೇಟೆಯಾಡುತ್ತಿದ್ದ. ದಾರಿಯಲ್ಲಿದ್ದ ವಿಘ್ನಗಳನ್ನು ಅವನ ಸಂಗಾತಿ ಗಂಟೆ ಬಾರಿಸಿ ಸೂಚಿಸಿದಾಗ ಅವನು ಕುದುರೆಯನ್ನು ಹಾರಿಸಿ ತೊಡರುಗಳನ್ನು ದಾಟುತ್ತಿದ್ದ. ಪ್ರೌಢ ಶಿಕ್ಷಣದಿಂದ ಅಶ್ವಗಳಿಗೆ ಎಂಥ ಅದ್ಭುತ ವಿಧೇಯತೆಯನ್ನು ಕಲಿಸಬಹುದು ಮತ್ತು ಪ್ರವೀಣ ಸವಾರರು ಎಷ್ಟರಮಟ್ಟಿಗೆ ಹಿಡಿತವಿಡಬಲ್ಲರು ಎಂಬುದನ್ನು ಒಲಿಂಪಿಕ್ ಅಶ್ವಕ್ರೀಡಾ ಪಂದ್ಯಗಳೂ ಅಂತಾರಾಷ್ಟ್ರೀಯ ಅಶ್ವಪ್ರದರ್ಶನಗಳೂ ನಿರ್ದೇಶಿಸುತ್ತವೆ. ಅಗ್ರೇಸರ ರಾವುತರೂ ಸರ್ವೋತ್ತಮ ಕುದುರೆಗಳೂ ಜೊತೆಗೂಡಿ ಪ್ರದರ್ಶಿಸುವ ಆಶ್ಚರ್ಯಚಕಿತ ಸಾಹಸಗಳು ರೋಮಾಂಚಗೊಳಿಸುತ್ತವೆ. (ಎಂ.ಜಿ.ಕೆ.ಎಂ.)

**ಕುದ್ಮುಲ್ ರಂಗರಾವ್:** 1859–1928. ದಲಿತರ ಕಲ್ಯಾಣಕ್ಕಾಗಿ, ಸಮಾಜ ಸುಧಾರಣೆಗಾಗಿ ಬದುಕನ್ನು ಮುಡುಪಾಗಿಟ್ಟಿದ್ದ ಸಮಾಜ ಸೇವಕರು. 'ನಾನು ಜೀವಂತನಾಗಿರುವಾಗಲೇ, ಓರ್ವ ಪರಿಶಿಷ್ಟ ಜಾತಿಯ ಪಂಗಡದ ವಿದ್ಯಾರ್ಥಿ ತನ್ನ ವಿದ್ಯಾಸಂಸ್ಥೆಯ ಮೂಲಕ ವಿದ್ಯಾವಂತ ಪದವೀಧರನಾಗಿ ಜೀವನದಲ್ಲಿ ಉನ್ನತ ಉದ್ಯೋಗ ಹೊಂದಿ ಅವನದೇ ಆದ ಮೋಟಾರು ವಾಹನದಲ್ಲಿ ಹೋಗುತ್ತಿರುವಾಗ ರಸ್ತೆಯಲ್ಲಿ ಎದ್ದ ಧೂಳನ್ನು ನಾನು ಪ್ರತ್ಯಕ್ಷ ಕಾಣಬೇಕು' ಎಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದವರು. ಸರಳ ಜೀವನ ಇವರ ಬದುಕಿನ ವೈಶಿಷ್ಟ್ಯವಾಗಿತ್ತು. ಬದುಕಿನುದ್ದಕ್ಕೂ ಸಾಂಪ್ರದಾಯಿಕ

ಸಮಾಜದ ಆಚಾರ ವಿಚಾರಗಳ ವಿರುದ್ಧ ಈಜುವ ಎದೆಗಾರಿಕೆಯನ್ನು ತೋರಿದ ಧೀಮಂತ ವ್ಯಕ್ತಿಯಾಗಿ ದೀನದಲಿತರ ಉದ್ಧಾರಕ್ಕಾಗಿ, ಅಸ್ಪೃಶ್ಯ ಜನಾಂಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಸಮರ್ಪಣ ಭಾವದಿಂದ ಪ್ರಾಮಾಣಿಕ ಸೇವೆಸಲ್ಲಿಸಿದರು. ಇವರು ಕಾಸರಗೋಡಿನ ಕುದ್ಮುಲ್ ಎಂಬ ಹಳ್ಳಿಯಲ್ಲಿ ಸಾರಸ್ವತ ಬ್ರಾಹ್ಮಣ ಮನೆ ತನದಲ್ಲಿ 1859 ಜೂನ್ 29ರಂದು ಹುಟ್ಟಿದ್ದರು. ತಂದೆ ದೇವಪ್ಪಯ್ಯ, ತಾಯಿ ಗೌರಿ. ಈ ದಂಪತಿಗಳ ಏಳು ಮಂದಿ ಮಕ್ಕಳಲ್ಲಿ ರಂಗರಾಯರು ಹಿರಿಯರು. ಕಷ್ಟದಲ್ಲಿ ಕಾಸರಗೋಡಿನಲ್ಲಿ ಬಾಲ್ಯ ಶಿಕ್ಷಣ ಮುಗಿಸಿ ತಮ್ಮ 16ನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ಉದ್ಯೋಗಾರ್ಥಿಯಾಗಿ ಮಂಗಳೂರಿಗೆ ಬಂದರು. ಆರ್ಥಿಕ ತೊಂದರೆಯಿಂದಾಗಿ ಓದಿಗೆ ವಿದಾಯ ಹೇಳಿದರು. ಖಾಸಗಿಯಾಗಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಬರೆದು ತೇರ್ಗಡೆಯಾದರು. ವಕಾಲತ್ತಿನ ಪ್ಲೀಡರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವಕಾಲತ್ತು ವೃತ್ತಿಯನ್ನು ಆರಂಭಿಸಿದರು. ರುಕ್ಮಿಣಿ ಇವರ ಸಹಧರ್ಮಿಣಿ. ಬಾಳಿನುದ್ದಕ್ಕೂ ರಾಯರ ಎಲ್ಲಾ ಚಟುವಟಿಕೆಗಳಿಗೆ ಬೆನ್ನೆಲುಬಾಗಿ ನಿಂತರು.



ಹಿಂದು ಸಮಾಜದಲ್ಲಿದ್ದ ಅಸ್ಪೃಶ್ಯತೆ, ಜಾತೀಯತೆ, ಬಾಲ್ಯವಿವಾಹ, ವಿಧವಾ ಸಮಸ್ಯೆ, ದೇವದಾಸಿ ಪದ್ಧತಿಗಳು ರಂಗರಾಯರ ಮನಸ್ಸನ್ನು ಕಲಕಿದುವು. ಹೀಗಾಗಿ ಇವರು ಸಮಾನತೆಯನ್ನು ಸಾರುವ ಆಶಯವಿಟ್ಟುಕೊಂಡ ಬ್ರಹ್ಮಸಮಾಜದ ಕಾರ್ಯಕರ್ತರಾದರು. ವಕಾಲತ್ತಿನ ಸಂದರ್ಭದಲ್ಲಿಯೂ ಇವರು ಬಡವರಿಗೆ ಸಾಕಷ್ಟು ನೆರವೀಯುತ್ತಿದ್ದರು. ವೃತ್ತಿಯಲ್ಲಿ 'ಬಡವರ ವಕೀಲರು' ಎಂದೇ ಪ್ರಸಿದ್ಧರಾಗಿದ್ದರು. 1887–88ರ ವೇಳೆಗೆ ನಡೆದ 'ಬೆಂದೂರು ಬಾಬು ಪ್ರಕರಣ' ಇವರ ಬದುಕಿನ ದಿಕ್ಕನ್ನು ಬದಲಿಸಿತು. ಇವರು ಸಾಗಬೇಕಾದ ದಾರಿ ಸ್ಪಷ್ಟವಾಯಿತು; ಹೊಸ ಅಧ್ಯಾಯಕ್ಕೆ ನಾಂದಿ ಹಾಡಿತು. ಅಸ್ಪೃಶ್ಯ ಪಂಗಡಕ್ಕೆ ಸೇರಿದ ಬೆಂದೂರು ಬಾಬು ಎಂಬಾತ ಕೋರ್ಟಿನಲ್ಲಿ ಪೇದೆಯಾಗಿ ನೇಮಕಗೊಂಡಾಗ ಸವರ್ಣೀಯ ನೌಕರರು ಇದನ್ನು ಪ್ರತಿಭಟಿಸಿದರು. ಸವರ್ಣೀಯರ ಸಂಕುಚಿತ ಭಾವನೆ ರಂಗರಾಯರ ಮನಸ್ಸನ್ನು ಕಲಕಿತು. ಆಗಲೇ ಇವರು ದೀನದಲಿತರ ಏಳಿಗೆಗೆ ಶ್ರಮಿಸಲು ನಿರ್ಧರಿಸಿ ತಮ್ಮ 34ನೆಯ ವಯಸ್ಸಿನಲ್ಲಿ ವಕೀಲಿ ವೃತ್ತಿ ತ್ಯಜಿಸಿ ಸಮಾಜಸೇವೆಯ ಸಂಕಲ್ಪ ಮಾಡಿದರು.

ಮೊದಲ ಹೆಜ್ಜೆಯಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಶಿಕ್ಷಣಕ್ಕಾಗಿ ಪ್ರಾಥಮಿಕ ಶಾಲೆ ಮತ್ತು ಆಶ್ರಮಗಳನ್ನು ಸ್ಥಾಪಿಸಲು ಇವರು ನಿರ್ಧರಿಸಿದರು. ದಲಿತರನ್ನು ಶೋಷಣೆಯಿಂದ ಬಿಡುಗಡೆಗೊಳಿಸಬಲ್ಲದ್ದೆಂದರೆ ಶಿಕ್ಷಣ ಮತ್ತು ಸಂಘಟನೆ ಎಂಬುದನ್ನರಿತರು. ದಲಿತರಿಗೆ ವಿದ್ಯೆಯನ್ನು ನೀಡಿದರೆ ಅವರು ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳಬಲ್ಲರೆಂಬುದು ಇವರ ದೂರದೃಷ್ಟಿಯ ಚಿಂತೆಯಾಗಿತ್ತು. ಹೀಗಾಗಿ 1892ರಲ್ಲಿ ಮಂಗಳೂರಿನ ಉರ್ವ ಚಿಲಿಂಬಿ ಎಂಬಲ್ಲಿ ದಲಿತರಿಗಾಗಿ ಹುಲ್ಲು ಛಾವಣಿಯ ಮನೆಯಲ್ಲಿ ಪ್ರಾಥಮಿಕ ಶಾಲೆಯೊಂದನ್ನು ತೆರೆದರು. ಭಾರತದ ಇತಿಹಾಸದಲ್ಲಿ ಇದೊಂದು ಚಾರಿತ್ರಿಕ ಘಟನೆ. ಇಡೀ ನಾಡಿನಲ್ಲಿಯೇ ಇವರು ತಳೆದ ಈ ನಿರ್ಧಾರ ಅತ್ಯಂತ ಕ್ರಾಂತಿಕಾರಕವಾದುದು. ಇದರಿಂದಾಗಿ ಇವರು ಹಲವರ ವಿರೋಧವನ್ನು ಎದುರಿಸಿದರು. ಉರ್ವ ಚಿಲಿಂಬಿ ಶಾಲೆ ಹೆಚ್ಚು ಸಮಯ ಬದುಕಲಿಲ್ಲ. ಆದರೆ ಇದರಿಂದ ವಿಚಲಿತರಾಗದ ಇವರು ಮಂಗಳೂರಿನ ಕಂಕನಾಡಿ, ಶೇಡಿಗುಡ್ಡೆ ಮತ್ತು ಬೋಳೂರುಗಳಲ್ಲಿ ಎಲಿಮೆಂಟರಿ ಶಾಲೆಗಳನ್ನು ಆರಂಭಿಸಿದರು. ಅಲ್ಲದೆ ದಲಿತರಿಗೆ ವೃತ್ತಿಪರ ಶಿಕ್ಷಣವನ್ನು ಕಲಿಸುವ ಉದ್ದೇಶದಿಂದ ಕೈಗಾರಿಕಾ ತರಬೇತಿ ಶಾಲೆಯನ್ನು ಶೇಡಿಗುಡ್ಡೆಯಲ್ಲಿ ಸ್ಥಾಪಿಸಿದರು. ಹೀಗೆ ಮೂಲಶಿಕ್ಷಣದ ಮಹತ್ವವನ್ನು ಗಾಂಧೀಜಿಗಿಂತ ಮೊದಲೇ ಇವರು ಮನಗಂಡಿದ್ದರು. ತಾವು ಸ್ಥಾಪನೆ ಮಾಡಿದ ಶಾಲೆಗಳಲ್ಲಿ ಬಡಗಿ, ನೇಯ್ಗೆ, ತೋಟಗಾರಿಕೆ, ಕಸೂತಿ, ರೇಷ್ಮೆಸಾಕಣೆ ಇತ್ಯಾದಿ ವಿಷಯಗಳಲ್ಲಿ ತರಬೇತಿ ನೀಡುತ್ತಿದ್ದರು.

ದಲಿತರ ಸಾಂಪ್ರದಾಯಿಕ ಕಾರ್ಯಕ್ರಮಗಳಿಗಾಗಿ ಸ್ವಾರ್ ಹೋಲ್ ಎಂಬ ಭವನವನ್ನು ಇವರು ಕಾಪಿಕಾಡಿನಲ್ಲಿ ಕಟ್ಟಿಸಿದರು. ಕೊರಗ ಜನಾಂಗದವರಿಗೆ ಆಶ್ರಯ ನೀಡಿ ಅವರ ಕುಲಕಸುಬಾದ ಗುಡಿಗಾರಿಕೆಯ ಅಭಿವೃದ್ಧಿಗೆ ಸಾಕಷ್ಟು ನೆರವಿತ್ತರು. ಅತ್ತಾವರ, ಬಾಬುಗುಡ್ಡೆ, ದಡ್ಡಲಕಾಡು, ಉಳ್ಳಾಲ, ಮೂಲ್ಕಿ, ಉಡುಪಿಯ ಬನ್ನಂಜೆ ಮೊದಲಾದ ಕಡೆಗಳಲ್ಲಿ ದಲಿತರಿಗಾಗಿ ಶಾಲೆಗಳನ್ನು ತೆರೆದರು. ಈ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಅಧ್ಯಾಪಕರನ್ನೇ ನೇಮಕ ಮಾಡಿದರು. ಇವರು ಸ್ಥಾಪನೆ ಮಾಡಿದ ಶಾಲೆಗಳನ್ನು ಪಂಚಮರ ಶಾಲೆಗಳು ಎಂದು ಕರೆಯುತ್ತಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಮಕ್ಕಳಿಗೆ ಮಧ್ಯಾಹ್ನದ ಊಟವನ್ನೂ ದಿನಕ್ಕೆ 2ರಿಂದ 6ಕಾಸಿನವರೆಗೆ ನಗದು ಹಣವನ್ನೂ ನೀಡುತ್ತಿದ್ದರು. ತಾವು ಸ್ಥಾಪನೆ ಮಾಡಿದ ಶಾಲೆಗಳನ್ನು ನಡೆಸಿಕೊಂಡು ಹೋಗುವುದು ದುಸ್ತರವಾದಾಗ ಇವರು ಉಳ್ಳಾಲ ರಘುನಾಥಯ್ಯನವರ ಸಹಕಾರದಿಂದ 'ಡಿಪ್ರೆಸ್ಡ್ ಕ್ಲಾಸಸ್ ಮಿಶನ್, ಕೊಡಿಯಾಲ ಬೈಲು, ಮಂಗಳೂರು' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. (1897).

ಹೀಗೆ ಹಲವು ವರ್ಷಗಳ ಕಾಲ ಇವರು ಮಾಡಿದ ಕೆಲಸಗಳಿಂದ ಸಾರ್ವಜನಿಕರು ಮತ್ತು ಜನಸಾಮಾನ್ಯರಲ್ಲಿ ಜಾಗೃತಿ ಉಂಟಾಯಿತು. ಕ್ರಮೇಣ ಇದು ಸಾಮಾಜಿಕ ಬದಲಾವಣೆಗೆ ದಾರಿಮಾಡಿತು. ಇವರ ಒತ್ತಡದ ಪರಿಣಾಮವಾಗಿ ಜಿಲ್ಲಾ ಬೋರ್ಡು ಮತ್ತು ಮಂಗಳೂರು ಪುರಸಭೆಯಲ್ಲಿ ಪರಿಶಿಷ್ಟ ಪಂಗಡದವರಿಗೆ ಪ್ರಾತಿನಿಧ್ಯ ದೊರೆಯಿತು. ದಲಿತರ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸುವುದಕ್ಕಾಗಿ 'ಕೋರ್ಟುಹಿಲ್ ಆದಿದ್ರಾವಿಡ ಸಂಘ' ಅಸ್ತಿತ್ವಕ್ಕೆ ಬಂತು.

ಹಿಂದು ಸಮಾಜದಲ್ಲಿ ವಿಧವೆಯರ ಬದುಕಿನ ದುಃಸ್ಥಿತಿಯನ್ನು ಕಂಡ ಇವರು ಅವರ ಕಲ್ಯಾಣಕ್ಕಾಗಿ ಆಶ್ರಮವನ್ನು ತೆರೆದರು. ಅಲ್ಲಿ ಸಮಾಜದಿಂದ ದೂರವಾದ ಎಲ್ಲ ಜಾತಿಯ ವಿಧವೆಯರಿಗೆ ಆಶ್ರಯ ನೀಡಿ ಜೀವನೋಪಾಯದ ಮಾರ್ಗಗಳನ್ನು ತೋರಿದರು. 1922ರ ಹೊತ್ತಿಗೆ ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸಂಸ್ಥೆ ಆರ್ಥಿಕ ತೊಂದರೆಗೆ ಸಿಲುಕಿತು. ಬೇರೆ ದಾರಿ ಕಾಣದೆ ಇವರು ಈ ಸಂಸ್ಥೆಯನ್ನು ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಗೆ ಹಸ್ತಾಂತರಿಸಿದರು. ಆದರೂ ರಂಗರಾಯರ ಸಂಸ್ಥೆಗಳನ್ನು ಬಹುಕಾಲ ನಡೆಸಿಕೊಂಡು ಹೋಗುವುದು ದುಸ್ತರವಾಯಿತು. ಇದರಿಂದಾಗಿ 1953ರ ಹೊತ್ತಿಗೆ ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸಂಸ್ಥೆ ತನ್ನ ಆಡಳಿತದಲ್ಲಿದ್ದ ಎಲ್ಲಾ ವಿದ್ಯಾಸಂಸ್ಥೆಗಳನ್ನು ಮದರಾಸು ಸರ್ಕಾರಕ್ಕೆ ಒಪ್ಪಿಸಿತು.

ಇವರು ತಮ್ಮ 68ನೆಯ ವಯಸ್ಸಿನಲ್ಲಿ ಸುವಿಚಾರಾನಂದ ಸ್ವಾಮೀಜಿಯವರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದರು. 'ಈಶ್ವರಾನಂದ ಸಂನ್ಯಾಸಿ' ಎನಿಸಿಕೊಂಡರು. ಇವರು ಸಮಾಜದ ಉನ್ನತಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಆಗಿನ ಸರ್ಕಾರ ಇವರಿಗೆ 'ರಾವ್‌ಸಾಹೇಬ್' ಬಿರುದನ್ನಿತ್ತು ಗೌರವಿಸಿತು. ಬದುಕಿನ ಕೊನೆಗಾಲದಲ್ಲಿ ಹೃದಯದ ಕಾಯಿಲೆಯಿಂದ ಬಳಲಿದ ಇವರು 1928 ಜನವರಿ 30ರಂದು ನಿಧನರಾದರು.

ಸಮಾಜಸೇವಾ ಕಾರ್ಯಗಳಿಂದಾಗಿ ಇವರು ಆ ಕಾಲಕ್ಕೆ ಸಾರಸ್ವತ ಸಮಾಜದ ತೀವ್ರ ವಿರೋಧವನ್ನು ಎದುರಿಸಬೇಕಾಯಿತು. ಬಹಿಷ್ಕಾರಕ್ಕೂ ಒಳಗಾದರು. ಇದರ ನಿವೃತ್ತಿಗಾಗಿ ಇವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಜಯಶೀಲರಾದರು. ಇವರು ನಿಧನ ಹೊಂದಿದ 6 ವರ್ಷಗಳ ಅನಂತರ ಮಂಗಳೂರಿಗೆ ಬಂದ (24–2–1934) ಗಾಂಧೀಜಿಯವರು ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸಂಸ್ಥೆಗೆ ಭೇಟಿ ನೀಡಿದರು. ಇವರು ಅಸ್ಪೃಶ್ಯತಾ ನಿವಾರಣೆ ಹಾಗೂ ದಲಿತೋದ್ಧಾರದ ಕಾಯಕದಲ್ಲಿ ಮಾಡಿದ ಸಾಧನೆಯನ್ನು ಪರಿಶೀಲಿಸಿ 'ಈ ವಿಷಯದಲ್ಲಿ ರಂಗರಾಯರು ನನ್ನ ಗುರುಗಳು' ಎಂದು ಗಾಂಧೀಜಿ ಹೇಳಿದ್ದರು. ರಂಗರಾಯರ ಸೇವೆಗೆ ಇದಕ್ಕಿಂತ ಹೆಚ್ಚಿನ ಗೌರವ ಇನ್ನೊಂದಿರಲಾರದು. (ಎಸ್.ಎಚ್.ಜಿ.)

**ಕುನ್ನತ್ತೂರು** : ತಮಿಳುನಾಡಿನ ಚೆಂಗಲ್‌ಪಟ್ಟು ಜಿಲ್ಲೆಯಲ್ಲಿರುವ ಒಂದು ಗ್ರಾಮ. ತಮಿಳು ಶೈವ ಸಾಹಿತ್ಯದ ಪೆರಿಯ ಪುರಾಣದ ಕರ್ತೃ ಶೇಕ್ಕಿಳಾರರ ಜನ್ಮ ಸ್ಥಳ. ಚೋಳರ ಮತ್ತು ವಿಜಯನಗರ ಕಾಲದ ದೇವಾಲಯಗಳೂ ಇಲ್ಲಿವೆ. ಪ್ರಶ.ಪೂ. 1ನೆಯ ಸಹಸ್ರಮಾನದಲ್ಲಿ ದಕ್ಷಿಣ ಭಾರತದಲ್ಲಿ ಪ್ರಸರಿಸಿದ್ದ ಬೃಹತ್ ಶಿಲಾ ಸಮಾಧಿ ಸಂಸ್ಕೃತಿಯ ಅವಶೇಷಗಳು ಇಲ್ಲಿ ನಡೆಸಲಾದ ಉತ್ಖನನಗಳಿಂದ ಬೆಳಕಿಗೆ ಬಂದಿವೆ. (ಬಿ.ಕೆ.ಜಿ.)

**ಕುನ್‌ಲುನ್** : ಆಗ್ನೇಯ ಏಷ್ಯದಲ್ಲಿ ವಾಸವಾಗಿದ್ದ, ಕಪ್ಪು ಚರ್ಮ ಮತ್ತು ಗುಂಗುರು ಕೂದಲಿನ ಜನಕ್ಕೆ ಪುರಾತನ ಚೀನೀ ಬರೆಹಗಳಲ್ಲಿ ಬಳಸಲಾಗಿರುವ ಶಬ್ದ. ಇವರು ಕುನ್‌ಲುನ್ ಪರ್ವತವಾಸಿಗಳಾಗಿದ್ದುದರಿಂದ ಈ ಹೆಸರು ಬಂದಿದೆ. ಈ ಜನ ಆಗ್ನೇಯ ಏಷ್ಯದ ಮೈದಾನ ಪ್ರದೇಶಗಳಲ್ಲಿದ್ದ ಇಂಡೋನೇಷ್ಯನ್ ಜನರೆಂದೇ ಹೇಳಬಹುದು. ಖ್ಮೆರ್ ಜನರೊಂದಿಗೆ ದೈಹಿಕ ಸಾಮ್ಯಗಳಿದ್ದು ಆಫ್ರಿಕದ ನೀಗ್ರೋಗಳಿಗೂ ಕಾಲಕ್ರಮದಲ್ಲಿ ಈ ಪದವನ್ನುಪಯೋಗಿಸುತ್ತಿದ್ದುದುಂಟು. ಸಮುದ್ರ ತೀರಗಳಲ್ಲಿ ಇವರು ವಾಸವಾಗಿದ್ದುದರಿಂದ ಇವರು ಸಮುದ್ರಯಾನದಲ್ಲಿ ನಿಷ್ಣಾತರಾಗಿದ್ದು ಪೂರ್ವ–ಪಶ್ಚಿಮ ದೇಶಗಳ ವ್ಯಾಪಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ತಮ್ಮ ರಾಜ್ಯದಲ್ಲಿ ಇವರು ಅನೇಕ ರೇವುಪಟ್ಟಣಗಳನ್ನೂ ವ್ಯಾಪಾರ ಕೇಂದ್ರಗಳನ್ನೂ ಸ್ಥಾಪಿಸಿದ್ದರು. ಆದ್ದರಿಂದ ಇವರು ವಿದೇಶೀ ಸಂಸ್ಕೃತಿಗಳ, ಮುಖ್ಯವಾಗಿ ಭಾರತೀಯ ಸಂಸ್ಕೃತಿಯ, ಸಂಪರ್ಕ ಹೊಂದಿ ಒಳನಾಡು ಪ್ರದೇಶಗಳಿಗೆ ಆ ಸಂಸ್ಕೃತಿಯನ್ನು ಒಯ್ದರು. ಮುಂದೆ ಖ್ಮೆರ್ ಜನ ಭಾರತೀಯ

ಸಂಸ್ಕೃತಿಯನ್ನು ಅನುಸರಿಸಿದ್ದಕ್ಕೆ ಈ ಸಂಪರ್ಕಗಳೇ ಕಾರಣ. ಕ್ರಿಸ್ತಶಕದ ಆರಂಭದ 3–4 ಶತಮಾನಗಳಲ್ಲಿ ಆಗ್ನೇಯ ಏಷ್ಯದ ಇತಿಹಾಸ ಕುನ್‌ಲುನ್ ಸಂಸ್ಕೃತಿಯಿಂದ ಪ್ರಭಾವಿತವಾಗಿ ಬೆಳೆಯಿತೆಂದು ಚೀನೀ ಆಧಾರಗಳು ತಿಳಿಸುತ್ತವೆ. (ಬಿ.ಕೆ.ಜಿ.)

**ಕುನ್‌ಲುನ್ ಪರ್ವತಗಳು :** ಏಷ್ಯ ಖಂಡದ ಅತ್ಯಂತ ಉದ್ದವಾದ ಪರ್ವತ ವ್ಯವಸ್ಥೆ. ಜರ್ಮನಿಯ ಭೂಗೋಳಶಾಸ್ತ್ರಜ್ಞ ಫರ್ಡಿನಾಂಡ್ ವಾನ್ ರಿಚ್ ಥೋಫೇನ್ ಇದನ್ನು ಏಷ್ಯದ ಬೆನ್ನೆಲುಬು ಎಂದು ಕರೆದಿದ್ದಾನೆ. ಇದು ಡಾರೀಮ್ ನದೀಪ್ರದೇಶದಲ್ಲಿ ದಕ್ಷಿಣದಲ್ಲಿ, ಟಿಬೆಟ್ ಪ್ರಸ್ಥಭೂಮಿಯ ಉತ್ತರದ ಮೇರೆಯಾಗಿ, ಪೂರ್ವ ಅಕ್ಷಾಂಶ 74$^{o}$ ಮತ್ತು 103$^{o}$ ಗಳಿಗೂ ಉತ್ತರ ಅಕ್ಷಾಂಶ 34$^{o}$ ಮತ್ತು 40$^{o}$ಗಳಿಗೂ ನಡುವೆ ಹಬ್ಬಿದೆ. ಟ್ಸಿನ್‌ಲಿಂಗ್ ಷಾ ಪರ್ವತ ಇದರ ಪೂರ್ವದ ವಿಸ್ತರಣ. ಆದರೆ ಅದೊಂದು ಪ್ರತ್ಯೇಕ ಪರ್ವತವೆಂದೇ ಸಾಮಾನ್ಯವಾಗಿ ಪರಿಗಣಿತವಾಗಿದೆ. ಡಾರೀಮ್ ನದಿಯ ದಕ್ಷಿಣಕ್ಕಿರುವ ತಾಕ್ಲಾಮಾಕಾನ್ ಮರುಭೂಮಿಗೂ ಟಿಬೆಟ್ ಪ್ರಸ್ಥಭೂಮಿಗೂ ನಡುವೆ, ಪಾಮಿರ್ ಪರ್ವತಗ್ರಂಥಿಯಿಂದ ಕಾರ ಮೂರಾನ್ ದಾರ್ಯ ನದಿಯವರೆಗಿನ ಭಾಗವನ್ನಷ್ಟೆ ಕುನ್‌ಲುನ್ ಎಂದು ಪರಿಭಾವಿಸುವುದೂ ಉಂಟು. ಆದರೆ ಇದು ವಾಸ್ತವವಾಗಿ ಕುನ್‌ಲುನ್ ಪರ್ವತ ವ್ಯವಸ್ಥೆಯ ಪಶ್ಚಿಮ ಭಾಗ ಮಾತ್ರ. ಇದರ ಪೂರ್ವ ಭಾಗ ಟ್ಸೈಡಾಂ ತಗ್ಗು ಪ್ರದೇಶದ ವರೆಗೂ ಹಬ್ಬಿದೆ. ಪೂರ್ವದಿಂದ ಪಶ್ಚಿಮಕ್ಕೆ ಈ ವ್ಯವಸ್ಥೆಯ ಉದ್ದ 2,800 ಕಿಮೀ.

ಪಶ್ಚಿಮದಲ್ಲಿ ಈ ಪರ್ವತ ಭಾಗಗಳು ಬಹಳವಾಗಿ ಮಡಿಸಿ ಮುದುರಿಕೊಂಡಿವೆ. ಆದರೆ ಪೂರ್ವಭಾಗದಲ್ಲಿ ಹೀಗಿಲ್ಲ. ಈ ಪರ್ವತ ವ್ಯವಸ್ಥೆಯ ಮಧ್ಯಕ ಎತ್ತರ 60,60 6 ಮೀ. ಇದರಲ್ಲಿ ಕೆಲವು ಉನ್ನತ ಶಿಖರಗಳಿವೆ. ಇವುಗಳಲ್ಲಿ ಉಲೂ ಮುಜ್‌ತಾ ಅತ್ಯಂತ ಎತ್ತರವಾದ್ದು (7678 ಮೀ). ಕುನ್‌ಲುನ್ ಪರ್ವತಗಳ ಪಶ್ಚಿಮದ ತುದಿಯಲ್ಲಿ, ಕಾಷಾಗಾರ್ ಶ್ರೇಣಿಯಲ್ಲಿ ಇರುವ ಎರಡು ಉನ್ನತ ಶಿಖರಗಳು ಕುಂಗರ್ (7678 ಮೀ) ಮತ್ತು ಮೂಸ್‌ಟಾ ಆಟಾ (7502 ಮೀ).

ಪಶ್ಚಿಮ ಕುನ್‌ಲುನ್ ಪರ್ವತಗಳಲ್ಲಿ ಒಂದೇ ಬಗೆಯ ಎರಡು ಶ್ರೇಣಿಗಳಿವೆ. ಇವುಗಳ ನಡುವೆ ಕಿರಿದಾದ ಹಾಗೂ ಆಳವಾದ ಕಣಿವೆಗಳಿವೆ. ಪೂರ್ವ ಕುನ್‌ಲುನ್ ಪರ್ವತಗಳಲ್ಲೂ ಟಿಬೆಟ್ ಪ್ರಸ್ಥಭೂಮಿಯಲ್ಲೂ ಇದೇ ಬಗೆಯ ಕಣಿವೆಗಳುಂಟು. ಇವುಗಳ ನಡುವೆ ಆಳದಲ್ಲಿ ಸರೋವರಗಳಿರುವುದು ಇಡೀ ಟಿಬೆಟ್ ಪ್ರದೇಶದ ಒಂದು ವೈಶಿಷ್ಟ್ಯ. ಯಾರ್ ಕಂಡದ ಪೂರ್ವಕ್ಕೆ ಕುನ್‌ಲುನ್ ಪರ್ವತಗಳು ಕ್ರಮೇಣ ಹೆಚ್ಚು ಅಗಲವಾಗುತ್ತವೆ. ಇವುಗಳ ಉತ್ತರದ ಕವಲುಗಳಿಗೆ ಅನುಕ್ರಮವಾಗಿ ಟಿಜ್‌ನಾಥ್. ಸಾಂಜುಟಾ ಮತ್ತು ಕಾರಂಘು ಎಂಬ ಹೆಸರುಗಳಿವೆ. ದಕ್ಷಿಣದ ಕವಲುಗಳು ರಾಸ್ ಕೆಮ್, ಕಾರ್‌ಲಿಕ್ ತಾ ಮತ್ತು ಸುಗೆಟ್ ತಾ. ಇವು ಪಶ್ಚಿಮದಿಂದ ಪೂರ್ವದ ಕಡೆಗೆ ತಗ್ಗುತ್ತ ಸಾಗುತ್ತವೆ. ಆದರೆ ಅವುಗಳ ಮಹೌನ್ನತ್ಯ 5757 ಮೀ ಕೆಲವು ಶಿಖರಗಳು 6363.6 ಮೀಗಳವರೆಗೂ ಉಂಟು. ಉತ್ತರದ ಪರ್ವತಗಳು ಹೆಚ್ಚು ಕಡಿದಾಗಿವೆ. ಕಣಿವೆ ದಾರಿಗಳಾದ ಕಾರ್ಲಿಕ್, ಸುಗೇಟ್ ಮತ್ತು ಹಿಂದೂ ಟಾಷ್‌ಗಳ ಎತ್ತರ 4849 ಮೀಗಿಂತ ಹೆಚ್ಚು. ಯಾಂಗಿ ಕಣಿವೆದಾರಿ 5757 ಮೀಗಿಂತಲೂ ಎತ್ತರದಲ್ಲಿದೆ.

ಪೂ.ರೇ. 86$^{o}$ ಪ್ರದೇಶದಿಂದ ಕುನ್‌ಲುನ್ ಪರ್ವತಗಳು ಅಗಲವಾಗುತ್ತಾ ಹೋಗಿ ಪುನಃ ಎರಡು ಶ್ರೇಣಿಗಳಾಗಿ ಒಡೆಯುತ್ತವೆ. ಉತ್ತರದಲ್ಲಿರುವ ರಷ್ಯನ್, ಆಸ್ಟಿನ್ ಟಾ, ನಾನ್ ಷಾನ್‌ಗಳೂ ದಕ್ಷಿಣದಲ್ಲಿರುವ ಅರ್ಕಾಟಾ, ಕಾಲ್ಟಾಲಾಘಾನ್ ಮತ್ತು ಬೊಕಾಲಿಕ್ ಟಾಗಳೂ ಇವುಗಳ ಕವಲುಗಳು. ಈ ಎರಡು ಪರ್ವತಶ್ರೇಣಿಗಳನ್ನು ಟ್ಸೈಡಾಂ ಕಣಿವೆ ಪ್ರತ್ಯೇಕಿಸುತ್ತದೆ. ಪೂರ್ವದಲ್ಲಿಯ ಮುಖ್ಯ ಶಿಖರಗಳು 6970 ಮೀಗಿಂತ ಎತ್ತರದಲ್ಲಿವೆ. ಉಲೂಮುಜ್ ತಾ ಮತ್ತು ಷಪ್ಕವೋನೋ ಮುಖ ಶಿಖರಗಳು 7666 ಮೀಗಿಂತ ಉನ್ನತವಾದುವು. ಕಾರಾ ಮುರನ್ ರೆಕ್ವಿಯೆಮ್ ಕಣಿವೆಗಳ ಎತ್ತರ ಅನುಕ್ರಮವಾಗಿ 5900 ಮೀ ಮತ್ತು 5545 ಮೀ. ಇಲ್ಲಿಯ ಕಣಿವೆಗಳೆಲ್ಲವೂ ಶಿಲಾನಿಚಯಗಳಿಂದ ತುಂಬಿವೆ. ಪರ್ವತಪಾರ್ಶ್ವಗಳು ಮುರಕಲುಗುಪ್ಪೆಗಳಿಂದ ಮುಚ್ಚಿಹೋಗಿರುವುದರಿಂದ ಇಲ್ಲಿ ಸಸ್ಯ ಯಾವುದೂ ಬೆಳೆಯುವುದಿಲ್ಲ.

ಟ್ಸೈಡಾಂ ತಗ್ಗುನೆಲದ ಈಶಾನ್ಯಕ್ಕಿರುವ ಮುಖ್ಯ ಶ್ರೇಣಿಗಳು ವಾಯವ್ಯದಿಂದ ಆಗ್ನೇಯಕ್ಕೆ ಹಬ್ಬಿವೆ. ಇವುಗಳಲ್ಲಿ ರಿಚ್‌ಥೋಫೇನ್ ಹಂಬೋಲ್ಟ್, ದಕ್ಷಿಣ ಟ್ಸಿಂಗ್ ಹೈ ಮತ್ತು ಮುಷ್ಕೆಟೋವ್ ಶ್ರೇಣಿಗಳು ಪ್ರಮುಖವಾದವು. ಮಷ್ಕೆಟೋವ್ ಶ್ರೇಣಿ ದಕ್ಷಿಣದಲ್ಲಿ ಲಾಂಚೌ ವರೆಗೂ ಹಬ್ಬಿದೆ. ಈ ಶ್ರೇಣಿಗಳ ಪ್ರದೇಶದಲ್ಲಿಯ ಕಣಿವೆಗಳು ಸಮತಟ್ಟಾಗಿದ್ದು ಅಗಲವಾಗಿವೆ. ಈ ಕಣಿವೆಗಳೆಲ್ಲವೂ 3030–3636 ಮೀ ಎತ್ತರದಲ್ಲಿವೆ. ಈ ಪ್ರದೇಶದಲ್ಲಿ ಬಾರಾ ನೂರ್ ಸಿಹಿ ನೀರಿನ ಸರೋವರ ಮತ್ತು ಕೋಕೊ ನಾರ್ ಉಪ್ಪು ನೀರಿನ ಸರೋವರ ಇವೆ. ಕೋಕೊ ನಾರ್ 3186 ಮೀ ಎತ್ತರದಲ್ಲಿದೆ. ಇದರ ವಿಸ್ತೀರ್ಣ 4221 ಚ.ಕಿಮೀ. ಇದರಲ್ಲಿ ಮೀನುಗಳು ಹೇರಳವಾಗಿವೆ. ಆದರೆ ಇದು ನವೆಂಬರಿನಿಂದ ಮಾರ್ಚಿಯ ವರೆಗೆ ಹೆಪ್ಪುಗಟ್ಟಿರುತ್ತದೆ.

ನಾನ್ ಷಾನ್ ಪ್ರಸ್ಥಭೂಮಿಯ ಎತ್ತರ 3636–4242 ಮೀ. ಇದರ ಅನೇಕ ಭಾಗಗಳಲ್ಲಿ ಎತ್ತರವಾದ ಪರ್ವತಶ್ರೇಣಿಗಳಿವೆ. ಇವು 13–27 ಮೀ ಅಗಲವಾಗಿವೆ. ಪಾಮಿರ್ ಬಳಿಯಿರುವ ಪಶ್ಚಿಮ ಕುನ್‌ಲುನ್ ಪರ್ವತಗಳು ಹಾಗೂ ಉತ್ತರದ ತುದಿಯಲ್ಲಿರುವ ಆಸ್ಟಿನ್ ಟಾ ಮತ್ತು ನಾನ್ ಷಾನ್ ಪರ್ವತಗಳ 4242–4242 ಮೀ ಎತ್ತರದಲ್ಲಿ ಹಿಮರೇಖೆ ಸಾಗುತ್ತವೆ. ಆದರೆ ದಕ್ಷಿಣಕ್ಕಿರುವ ಶ್ರೇಣಿಗಳಲ್ಲಿ ಹಿಮರೇಖೆ ಸಾಗಿರುವುದು 6060.6 ಮೀ ಎತ್ತರದಲ್ಲಿ.

ಕುನ್‌ಲುನ್ ಪರ್ವತ ಪ್ರದೇಶದಲ್ಲಿ ಕಬ್ಬಿಣದ ಅದುರು, ತಾಮ್ರ, ಚಿನ್ನ ಮತ್ತು ಕಲ್ಲಿದ್ದಲು ನಿಕ್ಷೇಪಗಳು ಅಲ್ಪ ಪ್ರಮಾಣದಲ್ಲಿ ಅಲ್ಲಲ್ಲಿವೆ. ತಾಮ್ರ ಮತ್ತು ಲವಣಗಳು ಉತ್ತರ ಕುನ್‌ಲುನ್‌ನ ತಪ್ಪಲುಗಳಲ್ಲಿ, ಯಾರ್‌ಕಂಡ್ ಮತ್ತು ಖೋಟಾನ್‌ಗಳ ನಡುವಣ ಪ್ರದೇಶದಲ್ಲಿ ಕಂಡುಬರುತ್ತದೆ. ಯಾರ್‌ಕಂಡ್ ಒಂದು ಮುಖ್ಯ ವಾಣಿಜ್ಯ ಕೇಂದ್ರ. ಖೋಟಾನ್ ಜಿಲ್ಲೆಯಲ್ಲಿ ಸತು ದೊರಕುತ್ತದೆ. ಕ್ವಾರ್ಟ್ಸ್ ಕಲ್ಲನ್ನು ಗಣಿಯಿಂದ ತೆಗೆಯುತ್ತಾರೆ.

ಕುನ್‌ಲುನ್ ಪ್ರದೇಶದಲ್ಲಿ ಜನಸಂಖ್ಯೆ ಅತ್ಯಂತ ವಿರಳ. ಉಯಿಗರ್ಸ್ ಜನ ಮುಖ್ಯವಾಗಿ ಅಲೆಮಾರಿ ಪಶುಪಾಲಕರು. ಅಲ್ಪಸ್ವಲ್ಪ ಕೃಷಿ ಮಾಡುವುದೂ ಉಂಟು. ಪಶ್ಚಿಮ ಕುನ್‌ಲುನ್ ಮತ್ತು ಪೂರ್ವ ನಾನ್ ಷಾನ್ ಪ್ರದೇಶಗಳಲ್ಲಿ ಸಾಕಷ್ಟು ನೀರಿನ ಆಸರೆಯುಂಟು. ಇಲ್ಲಿ ಹುಲ್ಲುಗಾವಲುಗಳೂ ಮೊನಚು ಎಲೆ ಮರಗಳ ಕಾಡುಗಳೂ ಇವೆ. ಪಶ್ಚಿಮ ಭಾಗದಲ್ಲಿ ಅನೇಕ ಚಿಕ್ಕಪುಟ್ಟ ನದಿಗಳು ಕಡಿದಾದ ಕಣಿವೆಗಳಲ್ಲಿ ಬಹು ವೇಗವಾಗಿ ಹರಿಯುತ್ತವೆ. ಕುನ್‌ಲುನ್‌ನ ಕಣಿವೆಗಳಲ್ಲಿ ಪ್ರಾಣಿಗಳ ಮೂಲಕ ಮಾತ್ರ ಸಂಚಾರ ಸಾಧ್ಯ. ಲಾನ್‌ಚಾನಿಂದ ಕಾಷ್‌ಗರ್ ವರೆಗೆ ಒಂದು ಮೋಟಾರ್ ರಸ್ತೆಯುಂಟು. ಪ್ರ.ಶ.ಪೂ. 100 ರಿಂದಲೂ ಈ ಮಾರ್ಗವನ್ನು ಚೀನೀಯರು ರೇಷ್ಮೆ ವ್ಯಾಪಾರಕ್ಕಾಗಿ ಉಪಯೋಗಿಸುತ್ತಿದ್ದರು. (ಕೆ.ಎನ್.ಸಿ.)

**ಕುಪ್ಪಳುಕೀಟ :** ಕುಪ್ಪಳಿಸುತ್ತ ಹಾರುವ ಮಧ್ಯಮಗಾತ್ರದ ಕೀಟ (ವಿಭಾಗ: ಆರ್ಥ್ರೊಪೊಡ, ವರ್ಗ: ಇನ್ಸೆಕ್ಟ, ಗಣ : ಆರ್ಥಾಪ್ಟೆರ, ಕುಟುಂಬ: ಗ್ರಿಲ್ಲಿಡೀ). ಚಿಮ್ಮಂಡೆ ಎಂಬ ಹೆಸರೂ ಇದೆ. ಇದರ ವದನಾಂಗಗಳು ಕಚ್ಚುವುದಕ್ಕೆ ಅನುಕೂಲವಾಗಿವೆ. ಉದ್ದನೆಯ ಕುಡಿಮೀಸೆಗಳಿವೆ. ಹಿಂದಿನ ಕಾಲುಗಳು ಉದ್ದವಾಗಿ ಮತ್ತು ದಪ್ಪನಾಗಿ ನೆಗೆಯುವುದಕ್ಕೆ ಮಾರ್ಪಾಟ್ಟಿವೆ. ಕಾಲಿನ ಕೊನೆಯ ಖಂಡ (ಟಾರ್ಸಸ್) ಮೂರು ತುಂಡುಗಳನ್ನೊಳಗೊಂಡಿದೆ. ಮುಂದಿನ ರೆಕ್ಕೆಗಳು ದಪ್ಪವಾಗಿವೆ, ಹೆಣ್ಣಿಗೆ ಸಾಮಾನ್ಯವಾಗಿ ಪ್ರಬಲವಾದ ಬಾಹ್ಯ ಅಂಡೋಪಕರಣವಿದೆ (ಓವಿಪಾಸಿಟರ್). ವಿಶೇಷ ತರದ ಧ್ವನಿ ಉತ್ಪಾದಕ ಮತ್ತು ಧ್ವನಿಗ್ರಾಹಕ ಅಂಗಗಳೇ ಕುಪ್ಪಳುಕೀಟಗಳ ವೈಶಿಷ್ಟ್ಯ. ಧ್ವನಿಗ್ರಾಹಕ ಅಂಗಗಳು ಮುಂಗಾಲುಗಳ ನಾಲ್ಕನೆಯ ಖಂಡದ (ಟಿಬಿಯ) ಮೇಲೆ ಇವೆ.

ಕುಪ್ಪಳುಕೀಟಗಳು ತಾವು ಮಾಡುವ ಜಿರ‍್ರೆಂಬ ಶಬ್ದಕ್ಕೆ ಹೆಸರಾಗಿವೆ. ಧ್ವನಿ ಉತ್ಪಾದಕ ಅಂಗಗಳೇ ಈ ಶಬ್ದಕ್ಕೆ ಕಾರಣ. ಮುಂದಿನ ಎರಡು ರೆಕ್ಕೆಗಳ ಮೇಲೆ ಅರದಂತಿರುವ ಪ್ರದೇಶಗಳ ಮೇಲೆ ರೆಕ್ಕೆಗಳನ್ನು ಪರಸ್ಪರ ಉಜ್ಜುವುದರಿಂದ ಈ ತರಹ ಶಬ್ದ ಉಂಟಾಗುತ್ತದೆ. ಕೆಲವು ಕುಪ್ಪಳುಕೀಟಗಳು (ಉದಾ: ಬ್ರಾಕಿಟ್ರೈಪಿಸ್ ಮೆಗಸಿಫ್ಯಾಲಸ್) ಮಾಡುವ ಶಬ್ದ ಸುಮಾರು ಒಂದು ಕಿಲೋ ಮೀಟರ್‌ಗೂ ದೂರ ಕೇಳುವುದುಂಟು.

ಉಷ್ಣವಲಯದಲ್ಲಿ ಕುಪ್ಪಳುಕೀಟಗಳು, ಹೆಚ್ಚು. ಇವು ಸಿಕ್ಕದ್ದನ್ನೆಲ್ಲ ತಿಂದುಕೊಂಡು ಬೆಚ್ಚನೆಯ ಸ್ಥಳಗಳಲ್ಲಿನ ಪೊಟರೆಗಳು, ಭೂಮಿಯಲ್ಲಿರುವ ಬಿರುಕುಗಳು, ಮರದ ದಿಮ್ಮಿ, ಕಸಕಡ್ಡಿ ಮುಂತಾದವುಗಳಲ್ಲಿ ವಾಸಿಸುತ್ತವೆ. ಮೋಲ್ ಕುಪ್ಪಳು ಕೀಟದಲ್ಲಿ ತೀವವಾದ ಮರಳು ನೆಲದಲ್ಲಿ ತೋಡಿಕೊಂಡು ಹೋಗುವುದಕ್ಕೆ ಅನುಕೂಲವಾಗಿ, ಮುಂಗಾಲುಗಳು ಮಾರ್ಪಾಟ್ಟಿವೆ. ಅಗಲವಾದ ಈ ಕಾಲುಗಳ ಮೇಲೆ ಮೊಟಕಾದ ಮುಳ್ಳುಗಳಿವೆ.

ಕುಪ್ಪಳುಕೀಟಗಳು ಸಾಮಾನ್ಯವಾಗಿ ಭೂಮಿಯೊಳಗೆ ಒಂದು ಅಥವಾ ಹಲವಾರು ಮೊಟ್ಟೆಗಳನ್ನಿಡುತ್ತವೆ. ಕೆಲವು ಪ್ರಭೇದಗಳು ಸಸ್ಯಗಳ ಕಾಂಡದೊಳಗೂ ಇಡುವುದುಂಟು. (ಜಿ.ಪಿ.ಸಿ.)

**ಕುಪ್ಪಿಗಿಡ :** ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಪುಟ್ಟ ಏಕವಾರ್ಷಿಕ ಸಸ್ಯ. ಅಕ್ಯಾಲಿಫ ಇಂಡಿಕ ಎಂಬುದು ಇದರ ವೈಜ್ಞಾನಿಕ ನಾಮ. ಕನ್ನಡದಲ್ಲಿ ತುಪ್ಪಕೀರೆ ಎಂಬ ಹೆಸರೂ ಇದೆ. ಭಾರತದ ಬಯಲುಸೀಮೆಯಲ್ಲೆಲ್ಲ ಇದು ಬಹು ಸಾಮಾನ್ಯವಾಗಿ ಬೆಳೆಯುತ್ತದೆ. ಬೇಸಾಯದ ಭೂಮಿಯಲ್ಲಿ, ರಸ್ತೆಗಳ ಅಕ್ಕಪಕ್ಕದಲ್ಲಿ, ತೋಟಗಳಲ್ಲಿ ಕಳೆಯುವ ಮೂಲಿಕೆ ಸಸ್ಯವಿದು. ಇದರ ಎತ್ತರ ಸು. 1–2. ಎಲೆಗಳು ಸರಳ, ಪರ್ಯಾಯವಾಗಿ ಜೋಡಣೆಗೊಂಡಿವೆ. ಅವಕ್ಕೆ ಉದ್ದನೆಯ ತೊಟ್ಟಿದೆ. ಎಲೆಗಳ ಅಂಚುಗರಗಸದಂತೆ. ಹೂಗಳು ಏಕಲಿಂಗಿಗಳು, ಚಿಕ್ಕ ಗಾತ್ರದವು, ಎಲೆಗಳ ಕಂಕುಳಲ್ಲಿ ಹುಟ್ಟುವ ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಗಂಡು ಮತ್ತು ಹೆಣ್ಣು ಹೂಗಳೆರಡಲ್ಲೂ 4 ಪತ್ರಗಳಿಂದಾದ ಪುಷ್ಪಪಾತ್ರೆಯಿದೆ. ದಳಗಳಿಲ್ಲ. ಗಂಡುಹೂವಿನಲ್ಲಿ ಬಿಡಿಬಿಡಿಯಾದ 8 ಕೇಸರಗಳೂ ಹೆಣ್ಣುಹೂವಿನಲ್ಲಿ 3 ಕಾರ್ಪೆಲ್ಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ಕಾಯಿ 3 ಬೀಜಗಳುಳ್ಳ ಸಂಪುಟ ಮಾದರಿಯದು. ಒಣಗಿದಾಗ ಒಡೆಯುತ್ತದೆ. ಕುಪ್ಪಿಗಿಡಕ್ಕೆ ಔಷಧೀಯ ಮಹತ್ವವಿದೆ. ಇದರ ಎಲೆ, ಎಳೆಯ ಕುಡಿಗಳು,

ಬೇರು ಮತ್ತು ಹೂವುಗಳನ್ನು ಕಷಾಯ, ಪುಡಿ, ಹೊಸರಸ ಇವುಗಳ ರೂಪದಲ್ಲಿ ಜಂತುಹುಳುನಾಶಕವಾಗಿ, ಅಸ್ತಮ, ಕೆಮ್ಮು ಮುಂತಾದ ಶ್ವಾಸಕೋಶಸಂಬಂಧಿ ರೋಗಗಳ



ನಿವಾರಕವಾಗಿ, ವಿರೇಚಕವಾಗಿ, ಮನಶ್ಯಾಂತಿಕಾರಕವಾಗಿ, ವಾಂತಿಕಾರಕವಾಗಿ, ಸುಪ್ತ್ಯಾವಾಹಕವಾಗಿ ಬಳಸುತ್ತಾರೆ. (ಎಚ್.ಕೆ.ಎಂ.)

**ಕುಪ್ಪುಸ್ವಾಮಿಶಾಸ್ತ್ರಿ, ಎಸ್ :** 1880–1943. ಸಂಸ್ಕೃತ ಭಾಷೆ ಮತ್ತು ತರ್ಕಶಾಸ್ತ್ರಗಳಲ್ಲಿ ಉದ್ದಾಮ ಪಂಡಿತರಾಗಿದ್ದು ಅವುಗಳ ಏಳಿಗೆಗಾಗಿ ದುಡಿದವರಲ್ಲಿ ಅಗ್ರಗಣ್ಯರು. ಅನೇಕ ಸಂಶೋಧನ ಲೇಖನಗಳು ಮತ್ತು ಸಂಪಾದನ ಕಾರ್ಯದಿಂದ ಮನ್ನಣೆಗೆ ಪಾತ್ರರಾಗಿ ಮಹಾಮಹೋಪಾಧ್ಯಾಯ ಎಂಬ ಬಿರುದನ್ನು ಪಡೆದ ಹಿರಿಯರು. ತಂಜಾವೂರು ಜಿಲ್ಲೆಯಲ್ಲಿ ಕಾವೇರಿ ನದಿತೀರದಲ್ಲಿರುವ ಗಣಪತಿ ಅಗ್ರಹಾರದಲ್ಲಿ ವಾಸಿಸುತ್ತಿದ್ದ ಸೇತುರಾಮ ಅಯ್ಯರೆಂಬುವವರ ನಾಲ್ಕನೆಯ ಮಗನಾಗಿ ಕುಪ್ಪುಸ್ವಾಮಿಶಾಸ್ತ್ರಿ 1880 ಡಿಸೆಂಬರ್ 15ರಂದು ಜನಿಸಿದರು.

ತಿರುವಾಡಿಯಲ್ಲಿ ಸಂಸ್ಕೃತ ಭಾಷೆ ಮತ್ತು ಶಾಸ್ತ್ರಗಳನ್ನು ಸಂಪ್ರದಾಯ ರೀತಿಯಲ್ಲಿ ಅಭ್ಯಸಿಸಿ ಆಂಗ್ಲಭಾಷೆಯನ್ನೂ ಚೆನ್ನಾಗಿ ಕಲಿತು. ತಂಜಾವೂರಿನ ಎಸ್.ಪಿ.ಜಿ. ಕಾಲೇಜಿನಲ್ಲಿ ತತ್ತ್ವಶಾಸ್ತ್ರವನ್ನು ವಿಶೇಷ ವಿಷಯವನ್ನಾಗಿ ಆರಿಸಿಕೊಂಡು ಓದಿ 1900ರಲ್ಲಿ ಪದವೀಧರರಾದರು. ಅನಂತರ 1905ರಲ್ಲಿ ಎಂ.ಎ.ಡಿಗ್ರಿಯನ್ನು ಗಳಿಸಿದರು. 1906–10 ತನಕ ಮದ್ರಾಸ್ ಸಂಸ್ಕೃತ ಕಾಲೇಜಿನ ಮುಖ್ಯಾಧಿಕಾರಿಗಳಾಗಿಯೂ ಅನಂತರ 1910–14ರ ವರೆಗೆ ತಿರುವಾಡಿಯ ರಾಜಾ ಕಾಲೇಜಿನ ಮುಖ್ಯಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದರು.

1913ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ನ್ಯಾಯ ವೈಶೇಷಿಕ ದರ್ಶನಗಳಿಗೆ ವಿಶೇಷವಾಗಿ ಸಂಬಂಧಿಸಿದಂತೆ ಭಾರತೀಯ ತತ್ತ್ವಶಾಸ್ತ್ರ ಎಂಬ ವಿಷಯವನ್ನು ಕುರಿತು 20 ಉಪನ್ಯಾಸಗಳನ್ನಿತ್ತರು.

1914–36ರ ವರೆಗೆ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಂಸ್ಕೃತ ಮತ್ತು ತುಲನಾತ್ಮಕ ಭಾಷಾಶಾಸ್ತ್ರದ ಪ್ರಾಧ್ಯಾಪಕರೂ ಮತ್ತು ಮದ್ರಾಸ್ ಗೌರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯ ಕ್ಯೂರೇಟರರೂ ಆಗಿ ಅಲ್ಲಿನ ತಾಳಪತ್ರಲೇಖಗಳ ವಿವರಣಾತ್ಮಕ ಹಾಗೂ ತ್ರೈವಾರ್ಷಿಕ ಗ್ರಂಥಪಟ್ಟಿ ಮತ್ತು ಅಕಾರಾದಿ ಪದಸೂಚಿಗಳ 8 ಭಾಗಗಳನ್ನು ಪ್ರಾಧ್ಯಾಪಕ ರಂಗಾಚಾರ್ಯರ ಜೊತೆಯಲ್ಲಿಯೂ 58 ಭಾಗಗಳನ್ನು ಸ್ವತಂತ್ರವಾಗಿಯೂ ಪರಿಷ್ಕರಿಸಿದರು.

1918ರಲ್ಲಿ ಇಂಡಿಯನ್ ಎಪಿಸ್ಟೊಮಾಲಜಿ (ಭಾರತೀಯ ಪ್ರಮಾಣಶಾಸ್ತ್ರ) ಎಂಬ ವಿಷಯದ ಮೇಲೆ 20 ಉಪನ್ಯಾಸಗಳನ್ನು ಕೊಟ್ಟರು. 1919ರಲ್ಲಿ ಸಂಸ್ಕೃತ ಸಾಹಿತ್ಯ ವಿಮರ್ಶೆಯ ವಿಧಾನಗಳು ಮತ್ತು ಸಾಮಗ್ರಿಗಳು ಎಂಬ ವಿಷಯದ ಮೇಲೆ 20 ಉಪಸ್ಯಾಸಗಳನ್ನೂ ಭಾರತೀಯ ದೇವಾಸ್ತಿಕ್ಯ (ಥೀಯಿಸಮ್) ಎಂಬ ವಿಷಯವಾಗಿ ಕೆಲವು ಉಪನ್ಯಾಸಗಳನ್ನೂ ಕೊಟ್ಟರು. 1921ರಲ್ಲಿ ಪ್ರಾಧ್ಯಾಪಕ ರಂಗಾಚಾರ್ಯರೊಡನೆ ಪದ್ಯಚೂಡಾಮಣಿಯನ್ನು ಪರಿಷ್ಕರಿಸಿದರು. ಅನಂತರ 1922ರಲ್ಲಿ ಕಲ್ಕತ್ತೆಯಲ್ಲಿ ನಡೆದ ದ್ವಿತೀಯ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಭಾರತೀಯ ತತ್ತ್ವಶಾಸ್ತ್ರ ಭಾಗದ ಅಧ್ಯಕ್ಷತೆ ವಹಿಸಿ ಪ್ರಭಾಕರರ ಕರ್ಮಮೀಮಾಂಸಾ ಸಂಪ್ರದಾಯ ಎಂಬ ವಿಷಯವನ್ನು ಕುರಿತು ಅಧ್ಯಕ್ಷ ಭಾಷಣ ಕೊಟ್ಟರು.

ಅನಂತರ 1924ರಲ್ಲಿ ಬಾಲಮನೋರಮಾ ಪ್ರೆಸ್‌ನವರಿಂದ ಪ್ರಕಾಶಿತವಾದ ನೀಲಕಂಠ ವಿಜಯ ಚಂಪೂವಿಗೆ ಇಂಗ್ಲಿಷಿನಲ್ಲಿ ಉಪೋದ್ಘಾತವನ್ನು ಬರೆದರು. 1925ರಲ್ಲಿ ಮದ್ರಾಸಿನಲ್ಲಿ ನಡೆದ ತೃತೀಯ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಏರ್ಪಾಟಿನಲ್ಲಿ ಭಾಗವಹಿಸಿ ಅದಕ್ಕಾಗಿ ಫರ್ದರ್ ಲೈಟ್ ಆನ್ ದಿ ಪ್ರಾಭಾಕರ ಪ್ರಾಬ್ಲಮ್ ಮತ್ತು ಬೋಧಾಯನ ಅಂಡ್ ದ್ರಮಿಡಾಚಾರ್ಯ, ಪ್ರೀಸಪೋಸ್ಡ್ ಬೈ ರಾಮಾನುಜ ಎಂಬ ಎರಡು ಲೇಖನಗಳನ್ನು ಬರೆದರು. 1925–26ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ದಿ ಓರಿಯೆಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟನ್ನು ಸ್ಥಾಪಿಸುವುದರಲ್ಲಿ ಪ್ರಮುಖಪಾತ್ರ ವಹಿಸಿದರು. ಅದೇ ವರ್ಷ ಬಾಲಮನೋರಮಾ ಪ್ರೆಸ್‌ನವರಿಂದ ಪ್ರಕಾಶಿತವಾದ ಶಕ್ತಿಭದ್ರನ ಆಶ್ಚರ್ಯ ಚೂಡಾಮಣಿಗೆ ಉಪೋದ್ಘಾತ ಬರೆದರು. ಕಲ್ಕತ್ತೆಯಲ್ಲಿ ನಡೆದ ಹತ್ತನೆಯ ಅಖಿಲ ಭಾರತ ಸಂಸ್ಕೃತ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಸಂಸ್ಕೃತದಲ್ಲಿ ಅಧ್ಯಕ್ಷ ಭಾಷಣವನ್ನಿತ್ತರು.

1926ರಲ್ಲಿ ಅಲಹಾಬಾದಿನಲ್ಲಿ ನಡೆದ ನಾಲ್ಕನೆಯ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ಅದೇ ವರ್ಷ ವಾರಾಣಸಿಯ ಭಾರತಧರ್ಮ ಮಹಾಮಂಡಲ ವಿದ್ಯಾವಾಚಸ್ಪತಿ ಎಂಬ ಬಿರುದನ್ನು ನೀಡಿ ಇವರನ್ನು ಸನ್ಮಾನಿಸಿತು. ಶಾಸ್ತ್ರಿಗಳು ಮದ್ರಾಸ್ ಸ್ಯಾನ್‌ಸ್ಕ್ರಿಟ್ ಅಕಾಡೆಮಿಯನ್ನು ಸ್ಥಾಪಿಸಿ ಅದರ ಪ್ರಥಮಾಧ್ಯಕ್ಷರಾದುದೂ ಅದೇ ವರ್ಷ.

1927ರಲ್ಲಿ ಸರ್ಕಾರ ಇವರಿಗೆ ಮಹಾಮಹೋಪಾಧ್ಯಾಯ ಎಂಬ ಬಿರುದನ್ನು ಕೊಟ್ಟಿತು. ಅದೇ ವರ್ಷ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಮೀಮಾಂಸಾ ಸಂಪ್ರದಾಯದಲ್ಲಿ ತತ್ತ್ವದರ್ಶನ ಮತ್ತು ವಿವರಣಶಾಸ್ತ್ರ ಎಂಬ ವಿಷಯವಾಗಿ ಶಾಸ್ತ್ರಿಗಳು ರೀಡರ್‌ಷಿಪ್ ಉಪನ್ಯಾಸಗಳನ್ನಿತ್ತರು. ಶಿವಸ್ವಾಮಿ ಅಯ್ಯರ್ ಮತ್ತು ಇನ್ನಿತರರೊಡನೆ ಜರ್ನಲ್ ಆಫ್ ದಿ ಓರಿಯಂಟಲ್ ರೀಸರ್ಚ್ ಮದ್ರಾಸ್ ಎಂಬ ಪತ್ರಿಕೆಯನ್ನು ಹೊರಡಿಸಿದರು. ಅದೇ ಪತ್ರಿಕೆಯಲ್ಲಿ ಇವರು ಸುಂದರ ಪಾಂಡ್ಯ, ಭದನ್ತ ಇತ್ಯಾದಿ ನಾಲ್ಕು ವಿಷಯಗಳನ್ನು ಕುರಿತು ಪ್ರತ್ಯೇಕವಾದ ನಾಲ್ಕು ಲೇಖನಗಳನ್ನು ಬರೆದರು. ಮೀಮಾಂಸಾ ದರ್ಶನದಲ್ಲಿ ವಾಕ್ಯಭೇದ, ಉಪಕ್ರಮ ಮತ್ತು ಉಪಸಂಹಾರ ಎಂಬ ವಿಷಯದ ಮೇಲೆ ರೀಡರ್‌ಷಿಪ್ ಉಪನ್ಯಾಸಗಳನ್ನು ಕೊಟ್ಟರು.

1929ರಲ್ಲಿ ರಾವಣ ಭಾಷ್ಯ ಎಂಬ ವಿಷಯದ ಮೇಲೆ ಮದ್ರಾಸಿನ ಜೆ. ಓ. ಆರ್. ಪತ್ರಿಕೆಯಲ್ಲಿ ಒಂದು ಲೇಖನವನ್ನೂ ಮದ್ರಾಸ್ ಲೈಬ್ರರಿ ಅಸೋಸಿಯೇಷನ್ನಿನ ಎಸ್ಸೇಸ್ ಬೈ ಡೈವರ್ಸ್ ಹ್ಯಾಂಡ್ಸ್ ಎಂಬ ಗ್ರಂಥಭಾಗದಲ್ಲಿ ಕೋಶವಾನ್ ಆಚಾರ್ಯ ಎಂಬ ವಿಷಯದ ಮೇಲೆ ಒಂದು ಲೇಖನವನ್ನೂ ಇವರು ಬರೆದಿದ್ದಾರೆ. ಅಲ್ಲದೆ ನ್ಯಾಯಶಾಸ್ತ್ರದ ಮೇಲೆ ಥಾಟ್ ಮೆಷರಿಂಗ್ ಡಿವೈಸಸ್ ಇನ್ ಇಂಡಿಯನ್ ಡಯಲೆಕ್ಟಿಕ್ಸ್ ಎಂಬ ವಿಷಯವಾಗಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ರೀಡರ್‌ಷಿಪ್ ಉಪನ್ಯಾಸಗಳನ್ನು ಕೊಟ್ಟಿದ್ದಾರೆ.

1930ರಲ್ಲಿ ಪಾಲ್ಘಾಟಿನ ಪಂಡಿತ ವ್ಯಾಸರಾಯಶಾಸ್ತ್ರೀ ವಾಧ್ಯಾರ್ ಅಂಡ್ ಸನ್ಸ್‌ರವರಿಂದ ಪರಿಷ್ಕೃತವಾದ ನೈಷಧೀಯ ಚರಿತೆಗೆ ಮುನ್ನುಡಿ ಬರೆದುಕೊಟ್ಟರು. ಅನಂತರ 1931ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಹೈವೇಸ್ ಅಂಡ್ ಬೈವೇಸ್ ಆಫ್ ಲಿಟರೆರಿ ಕ್ರಿಟಿಸಿಸ್ಮ್ ಇನ್ ಸ್ಯಾನ್‌ಸ್ಕ್ರಿಟ್ ಎಂಬ ವಿಷಯದ ಮೇಲೆ ನಾಲ್ಕು ಉಪನ್ಯಾಸಗಳನ್ನಿತ್ತರು. ಅಲ್ಲದೆ ಅದೇ ವರ್ಷ ಮದ್ರಾಸಿನ ಜೆ. ಓ. ಆರ್.ನಲ್ಲಿ ಪ್ರಕಾಶಿತವಾದ ವೀಣಾವಾಸವದತ್ತೆಯನ್ನು ಪರಿಷ್ಕರಿಸಿದರು.

1932ರಲ್ಲಿ ಟಿ.ವಿ. ರಾಮಚಂದ್ರ ದೀಕ್ಷಿತರೊಡನೆ ಮಂಡನ ಮಿಶ್ರರ ವಿಭ್ರಮ ವಿವೇಕವನ್ನು ಪರಿಷ್ಕರಿಸಿದರು. ಅದೇ ವರ್ಷ ಪ್ರೈಮರ್ ಆಫ್ ಇಂಡಿಯನ್ ಲಾಜಿಕ್ ಎಂಬ ಪುಸ್ತಕವನ್ನು ಬರೆದರು. ಅಲ್ಲದೆ ಧ್ವನ್ಯಾಲೋಕ ಮತ್ತು ಲೋಚನಗಳನ್ನೂ ಕೌಮುದಿ ಮತ್ತು ತಮ್ಮದೇ ಆದ ಉಪಲೋಚನಗಳೊಡನೆ ಪರಿಷ್ಕರಿಸಲು ಪ್ರಾರಂಭಿಸಿದರು. ಅದೇ ವರ್ಷ ಕಾಮಕೋಟಿ ಪೀಠದ ಶಂಕರಾಚಾರ್ಯರಿಂದ ದರ್ಶನಕಲಾನಿಧಿ ಎಂಬ ಬಿರುದನ್ನೂ 1933ರಲ್ಲಿ ಪೂರಿಯ ಗೋವರ್ಧನ ಮಠದ ಶಂಕರಾಚಾರ್ಯರಿಂದ ಕುಲಪತಿ ಎಂಬ ಬಿರುದನ್ನೂ ಪಡೆದರು. ಅದೇ ವರ್ಷ ಮದ್ರಾಸ್ ಲಾ ಜರ್ನಲ್ ಪ್ರೆಸ್‌ನವರ ವಾಲ್ಮೀಕಿ ರಾಮಾಯಣದ ಪರಿಷ್ಕರಣದಲ್ಲಿ ಸಹಾಯಕರಾಗಿ ದುಡಿದು ಅದಕ್ಕೆ ಮುನ್ನುಡಿ ಬರೆದರು. ಅಲ್ಲದೆ ಆಲ್ಮೋರದ ಮಾಯಾವತೀ ಆಶ್ರಮದ ಬೃಹದಾರಣ್ಯಕ ಭಾಷ್ಯಕ್ಕೆ ಮಾಧವಾನಂದರು ಬರೆದ ಭಾಷಾಂತರಕ್ಕೆ ಉಪೋದ್ಘಾತವನ್ನು ಬರೆದುಕೊಟ್ಟರು.

1934ರಲ್ಲಿ ವಾಲ್ಟೇರಿನಲ್ಲಿ ನಡೆದ ಹತ್ತನೆಯ ಅಖಿಲಭಾರತ ತತ್ತ್ವಶಾಸ್ತ್ರ ಸಮ್ಮೇಳನದ ಭಾರತೀಯ ತತ್ತ್ವಶಾಸ್ತ್ರ ಭಾಗದ ಅಧ್ಯಕ್ಷತೆ ವಹಿಸಿ ಪುರಾಣಇಸ್ಮ್ ಇನ್ ಇಂಡಿಯನ್ ಥಾಟ್ ಎಂಬ ವಿಷಯದ ಮೇಲೆ ಅಧ್ಯಕ್ಷ ಭಾಷಣವನ್ನು ಕೊಟ್ಟರು.

1935ರಲ್ಲಿ ನ್ಯಾಯವೈಶೇಷಿಕ ಮತದಲ್ಲಿ ಪ್ರಕೃತಿ, ಜೀವಾತ್ಮ ಮತ್ತು ಪರಮಾತ್ಮ ಎಂಬ ವಿಷಯದ ಮೇಲೆ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ರೀಡರ್‌ಷಿಪ್ ಉಪನ್ಯಾಸಗಳನ್ನಿತ್ತರು.

ಮದ್ರಾಸಿನ ಲೈಬ್ರರಿ ಅಸೋಸಿಯೇಷನ್ನಿನ ವಾರ್ಷಿಕ ವರದಿಯಲ್ಲಿ ಲೈಬ್ರರಿ ಸೈನ್ಸ್ ಆಸ್ ವ್ಯೂಡ್ ಬೈ ಎ ಕ್ಲ್ಯಾಸಿಸ್ಟ್ ಎಂಬ ಲೇಖನವನ್ನು ಬರೆದರು.

ಮೈಸೂರಿನಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಪಂಡಿತ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿ ಸಿಂಥೆಸಿಸ್ ಆಫ್ ಲರ್ನಿಂಗ್ ಅಂಡ್ ರೀಸರ್ಚ್ ಎಂಬ ವಿಷಯದ ಮೇಲೆ ಸಂಸ್ಕೃತದಲ್ಲಿ ಭಾಷಣವನ್ನಿತ್ತರು.

ಅದೇ ವರ್ಷವೇ ಅವರು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದದ್ದು. ಅನಂತರ ಮದ್ರಾಸ್ ವಿಶ್ವವಿದ್ಯಾಲಯದ ಹೊಸ ಕ್ಯಾಟಲಾಗಸ್ ಕ್ಯಾಟಲಾಗೊರಮ್ಮಿಗೆ ಮುಖ್ಯಸಂಪಾದಕರಾಗಿ ಕಾರ್ಯವನ್ನಾರಂಭಿಸಿದರು.

ಅದೇ ವರ್ಷ ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ ಸೀರೀಸಿನಲ್ಲಿ ವಿಮರ್ಶಾತ್ಮಕವಾದ ಉಪೋದ್ಘಾತಾದಿಗಳನ್ನು ಬರೆದು ಶಂಖಪಾಣಿಯ ಭಾಷ್ಯದೊಡನೆ ಮಂಡನಮಿಶ್ರರ ಬ್ರಹ್ಮಸಿದ್ಧಿಯನ್ನು ಪರಿಷ್ಕರಿಸಿದರು. ಪುಣೆಯಲ್ಲಿನ ಭಂಡಾರಕರ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟಿನ ಹನ್ನೆಂದನೆಯ ವಾರ್ಷಿಕೋತ್ಸವದಲ್ಲಿ ಅದ್ವೈತ ಚರಿತ್ರೆಯಲ್ಲಿ ಮಂಡನ–ಸುರೇಶ್ವರರ ಸಮೀಕರಣ ಎಂಬ ವಿಷಯವನ್ನು ಕುರಿತು ಭಾಷಣಮಾಡಿದರು. ಅದೇ ವರ್ಷ ಚಿದಂಬರದ ಅಣ್ಣಾಮಲೈ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ ಗೌರವ ಪ್ರಾಧ್ಯಾಪಕರಾದರು. 1937ರಲ್ಲಿ ಶ್ರೀರಾಮಕೃಷ್ಣ ಮತ್ತು ಹಿಂದೂ ಧರ್ಮದ ಸಂದೇಶ ಎಂಬ ವಿಷಯವನ್ನು ಕುರಿತು ತ್ರಿವೇಣಿಯಲ್ಲಿ ಒಂದು ಬರೆದರು.

1940ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಏರ್ಪಾಡಾಗಿದ್ದ ಕೃಷ್ಣಸ್ವಾಮಿ ರಾವ್ ಉಪನ್ಯಾಸಮಾಲೆಯಲ್ಲಿ ಕಾಮ್ಪ್ರೊಮೈಸಸ್ ಇನ್ ದಿ ಹಿಸ್ಟರಿ ಆಫ್ ಅದ್ವೈತಿಕ್ ಥಾಟ್ ಎಂಬ ವಿಷಯದ ಮೇಲೆ ಉಪನ್ಯಾಸಗಳನ್ನಿತ್ತರು. ಅನಂತರ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ನಿವೃತ್ತರಾಗಿ ತಮ್ಮ ಹಳ್ಳಿಯಲ್ಲಿ ನೆಲಸಿದರು.

ಇವರು ಗಣಪತಿ ಅಗ್ರಹಾರದಲ್ಲಿ 5 ಸೆಪ್ಟಂಬರ್ 1943ರಂದು ನಿಧನರಾದರು.

(ಸಿ.ಆರ್.ಎ.)

**ಕುಫಿ ಲಿಪಿ :** ಒಂದು ವಿಶೇಷ ರೀತಿಯ ಅರಬ್ಬೀ ಲಿಪಿ. ಇದು ಹಳೆಯ ನಬತೀಯ ಲಿಪಿಯಿಂದ, ಪಶ್ಚಿಮ ಏಷ್ಯದಲ್ಲಿ ಇಸ್ಲಾಂ ಸಂಸ್ಕೃತಿಯ ಕೇಂದ್ರಗಳಾಗಿದ್ದ ಕುಫ ಮತ್ತು ಬಸ್ರಾಗಳಲ್ಲಿ ಸು. 7ನೆಯ ಶತಮಾನದ ಕೊನೆಯಲ್ಲಿ ಬೆಳೆಯಿತು. ಇದರ ಮುಖ್ಯ ಕೇಂದ್ರ ಕುಫ ಆದ್ದರಿಂದ ಈ ಲಿಪಿಗೆ ಕುಫಿ ಎಂಬ ಹೆಸರು ಬಂದಿದೆ. ಅಕ್ಷರಗಳು ಗುಚ್ಛಾಗಿ ನೇರ ದಪ್ಪ ಗೆರೆಗಳಿಂದ ಕೂಡಿರುತ್ತವೆ. ಇವು ಸುಂದರವಾಗಿದ್ದು, ಕಲ್ಲು ಮತ್ತು ಲೋಹಗಳ ಮೇಲೆ ಇವನ್ನು ಅಲಂಕಾರವಾಗಿ ಮೂಡಿಸುವುದು ಸುಲಭವಾದ್ದರಿಂದ, ಕುಫಿ ಲೇಖಗಳು ಹೆಚ್ಚಾಗಿ ಇಸ್ಲಾಮೀ ನಾಣ್ಯಗಳ ಮತ್ತು ಸ್ಮಾರಕಗಳ ಮೇಲೆ ಕಂಡುಬರುತ್ತವೆ. ಕಾಲಕ್ರಮೇಣ ಈ ಲಿಪಿ ಪವಿತ್ರವೆಂಬ ಭಾವನೆ ಬೆಳೆದದ್ದರಿಂದ ಕೊರಾನಿನ ಅನೇಕ ಹಸ್ತಪ್ರತಿಗಳಲ್ಲಿ ಈ ಲಿಪಿಯನ್ನೇ ಬಳಸಿರುವುದು ಕಂಡುಬರುತ್ತದೆ. ಭಾರತದಲ್ಲಿ ದೆಹಲಿ ಮುಂತಾದೆಡೆಗಳಲ್ಲಿದ್ದ ಗುಲಾಮೀ, ಖಿಲ್ಜಿ ಮತ್ತು ಅನಂತರದ ಇಸ್ಲಾಮೀ ಅರಸರ ಕಾಲದ ಸ್ಮಾರಕಗಳಲ್ಲಿ ಈ ಲಿಪಿಯಲ್ಲಿ ಬರೆದ ಶಾಸನಗಳು ದೊರಕಿವೆ. (ಎಸ್.ಎನ್.)

**ಕುಫು :** ಪ್ರ.ಶ.ಪೂ. ಸು. 2590–2567, ಈಜಿಪ್ಟಿನ ಇತಿಹಾಸದ ಪ್ರಾರಂಭ ಕಾಲದಲ್ಲಿ ಆಳುತ್ತಿದ್ದ ನಾಲ್ಕನೆಯ ರಾಜವಂಶದ ಎರಡನೆಯ ದೊರೆ ಮತ್ತು ನೈಲ್ ನದೀದಡದಲ್ಲಿ ಗೀಜ ಎಂಬಲ್ಲಿರುವ ಜಗತ್ಪ್ರಸಿದ್ಧ ಬೃಹತ್ ಪಿರಮಿಡಿನ ನಿರ್ಮಾತೃ. ಆ ವಂಶದ ಮೂಲಪುರುಷ ಸ್ನೆಫೆರು ಮತ್ತು ರಾಣಿ ಹೆಟೆಫಿರಿಸ್–ಇವರ ಪುತ್ರ. ಪ್ರಾಚೀನರಾಜ್ಯದ ಕಾಲದಲ್ಲಿ ಆಳಿದ ಈಜಿಪ್ಟಿನ ದೊರೆಗಳೆಲ್ಲ ಅತ್ಯಂತ ಬುದ್ಧಿಶಾಲಿ, ಸಾಹಸಿ ಮತ್ತು ದಕ್ಷನೆಂದು ಹೆಸರಾಗಿದ್ದಾನೆ. ಈತ ಬಹುಶಃ ನಾಲ್ಕು ಬಾರಿ ಮದುವೆಯಾಗಿದ್ದನೆಂದು ತಿಳಿದುಬರುತ್ತದೆ. ಇವರಲ್ಲಿ ಕಡೆಯವಳಾದ ನೆಪೆರ್ಟ್–ಕೌ ಇವನ ಹಿರಿಯ ಸೋದರಿ. ಈಜಿಪ್ಟಿನ ರಾಜಮನೆತನದಲ್ಲಿ ಉತ್ತರಾಧಿಕಾರ ಸ್ತ್ರೀಯರ ಮೂಲಕವಾಗಿದ್ದುದರಿಂದ ರಾಜಕುಮಾರರು ತಮ್ಮ ಸೋದರಿಯರನ್ನು ವಿವಾಹವಾಗುವ ಪದ್ಧತಿ ರೂಢಿಯಲ್ಲಿತ್ತು.

ಕುಫು ಅನೇಕ ಮತೀಯ ಸುಧಾರಣೆಗಳನ್ನು ಮಾಡಿ ಯಜ್ಞಯಾಗಾದಿಗಳನ್ನು ನಿಲ್ಲಿಸಿದ್ದರಿಂದ ಈಜಿಪ್ಟಿನ ಮತೀಯ ಪಂಡಿತರ ದ್ವೇಷ ಕಟ್ಟಿಕೊಳ್ಳಬೇಕಾಯಿತು. ಕ್ರೂರಿ, ಪಾಷಂಡಿ ಎಂದೆಲ್ಲ ಅವರು ಕುಫುವನ್ನು ಹಿಯ್ಯಾಳಿಸಿದ್ದಾರೆ. ಇದು ಸತ್ಯ ದೂರವೂ ದ್ವೇಷಪೂರಿತವೂ ಆದುದ್ದೆಂದು ಇತಿಹಾಸದ ಪಿತನಾದ ಹಿರಾಡೊಟಸ್ (ಪ್ರ.ಶ.ಪೂ.ಸು. 5ನೆಯ ಶತಮಾನ) ಹೇಳಿದ್ದಾನೆ.

ಕುಫು ಕಟ್ಟಿಸಿದ ಪಿರಮಿಡ್ ಪ್ರಪಂಚದ ಅತ್ಯಂತ ದೊಡ್ಡ ಕಟ್ಟಡ. 13 ಎಕರೆ ಭೂಮಿಯನ್ನು ಆವರಿಸಿಕೊಂಡಿರುವ ಈ ಕಟ್ಟಡಕ್ಕೆ 25,00,000 ಕಲ್ಲುಗಳನ್ನು ಬಳಸಲಾಗಿದೆ. ಇವುಗಳಲ್ಲಿ ಯಾವುದೂ 2½ ಟನ್‌ಗಳಿಗಿಂತ ಕಡಿಮೆ ತೂಕವಿಲ್ಲ. ಕೆಲವು 15 ಟನ್‌ಗಳಷ್ಟು ತೂಕವಾಗಿವೆ. ಅಡಿಪಾಯದ ಉದ್ದ 775', ಎತ್ತರ 450'. ಈ ಭಾರವಾದ ಕಲ್ಲುಗಳನ್ನು ದಿಮ್ಮಿಗಳ ಸಹಾಯದಿಂದ ಸಾಗಿಸಲಾಗುತ್ತಿತ್ತಂತೆ. ನೈಲ್ ನದಿಯ ಪ್ರವಾಹದ ಕಾಲದಲ್ಲಿ ಕೆಲಸವಿಲ್ಲದಿದ್ದಾಗ ಲಕ್ಷಾಂತರ ವ್ಯವಸಾಯಗಾರರನ್ನು ಉಪಯೋಗಿಸಿಕೊಂಡು 20 ವರ್ಷಗಳ ದೀರ್ಘ ಅವಧಿಯಲ್ಲಿ ಇದನ್ನು ಕಟ್ಟಿಸಿ ಮುಗಿಸಲಾಯಿತೆಂದು ಹೇಳಲಾಗಿದೆ (**ನೋಡಿ– ಪಿರಮಿಡ್ಡುಗಳು**). (ಎಚ್.ಎಸ್.ಆರ್.ಎ.)

**ಕುಬಟೂರು :** ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಶಿರಾಳ ಕೊಪ್ಪದಿಂದ 9ಕಿಮೀ ಉತ್ತರಕ್ಕಿರುವ ಇತಿಹಾಸಪ್ರಸಿದ್ಧ ಗ್ರಾಮ. ಇದು ಚಂದ್ರಹಾಸನ ರಾಜಧಾನಿಯಾಗಿದ್ದ ಕುಂತಳನಗರ ಎಂದು ಸ್ಥಳಪ್ರತೀತಿ. 10–11ನೆಯ ಶತಮಾನದಲ್ಲಿ ಬನವಾಸಿ ಪ್ರಾಂತ್ಯದ

ಮಹಿಷಾಸುರ ಮರ್ದಿನಿ : ರಾಮೇಶ್ವರ ದೇವಾಲಯ

ಒಂದು ಮುಖ್ಯ ಸ್ಥಳವಾಗಿತ್ತು. ಇದರ ಪ್ರಾಚೀನತೆ ರಾಷ್ಟ್ರಕೂಟರ ಆಳ್ವಿಕೆಯ ಕಾಲದಷ್ಟು ಹಿಂದಿನದು. ಇಲ್ಲಿ ಆ ಕಾಲದ ಶಾಸನಗಳಲ್ಲದೆ ಹಲವು ವಾಸ್ತುಕಲಾ ಅವಶೇಷಗಳೂ



ಕೈಟಭೇಶ್ವರ ದೇವಾಲಯ

ಉಳಿದುಬಂದಿವೆ. ಸು. 8–9ನೆಯ ಶತಮಾನಗಳಲ್ಲಿ ಕಟ್ಟಲಾದ ರಾಮೇಶ್ವರ ದೇವಾಲಯ ಅಂಥ ಕಟ್ಟಡಗಳಲ್ಲೊಂದು; ಗರ್ಭಗೃಹ, ಪ್ರದಕ್ಷಿಣಪಥ ಮತ್ತು ರಂಗಮಂಟಪವಷ್ಟೇ ಇರುವ ಈ ಚಿಕ್ಕಗುಡಿಯ ಒಳಚಾವಣಿಯಲ್ಲಿ ಅಷ್ಟದಿಕ್ಪಾಲಕರ ಮತ್ತು ತಾಂಡವಮೂರ್ತಿಯ ವಿಗ್ರಹಗಳೂ ನವರಂಗದಲ್ಲಿ ಸಪ್ತಮಾತೃಕೆಯರು, ಮಹಿಷಾಸುರಮರ್ದಿನಿ ಮುಂತಾದ ವಿಗ್ರಹಗಳೂ ಇವೆ. ಮೋಹಕವಾದ ಈ ಶಿಲ್ಪಗಳೆಲ್ಲ ರಾಷ್ಟ್ರಕೂಟರ ಕಾಲದವು. 1077ರಲ್ಲಿ ಕಟ್ಟಲಾದ ಪಾರ್ಶ್ವನಾಥ ಬಸದಿ ಚಾಳುಕ್ಯ ಶೈಲಿಯ ಸಣ್ಣ ಗುಡಿ; ಇದರಲ್ಲಿಯ ಪಾರ್ಶ್ವನಾಥ

ವಿಗ್ರಹ ಒಂದು ಉತ್ತಮ ಕಲಾಕೃತಿ. ಸು. 1100 ರ ಕೈಟಭೇಶ್ವರ ದೇವಾಲಯ ಈ ಊರಿನಲ್ಲಿರುವ ಅತ್ಯಂತ ಭವ್ಯ ಕಟ್ಟಡ. ಗರ್ಭಗೃಹ, ಸುಖನಾಸಿ ಮತ್ತು ಮುಖಮಂಟಪವಿರುವ ಈ ಗುಡಿ ಚಾಳುಕ್ಯ ಶೈಲಿಯ ಅತಿದೊಡ್ಡ ದೇವಾಲಯಗಳಲ್ಲಿ ಒಂದು. ಪರಿಷ್ಕೃತ ತಲವಿನ್ಯಾಸ, ಕಟ್ಟಡದ ವಿವಿಧಾಂಗಗಳ ಸೂಕ್ತಪ್ರಮಾಣ, ಆಕರ್ಷಕ ವಿಮಾನ, ನಾಜೂಕಿನ ಕಂಬಗಳು ಮತ್ತು ಸುಂದರ ಕೆತ್ತನೆ-ಇವುಗಳಿಂದ ಕೂಡಿರುವ ಈ ದೇವಾಲಯ ಕರ್ನಾಟಕದ ಉತ್ತಮ ವಾಸ್ತುಕೃತಿಗಳಲ್ಲೊಂದೆಂದು ಪರಿಗಣಿತವಾಗಿದೆ. ಮುಂದೆ ಹೊಯ್ಸಳ ಶೈಲಿಯಲ್ಲಿ ಪ್ರಚಲಿತವಾದ ಹಲವು ವಾಸ್ತುವೈಶಿಷ್ಟ್ಯಗಳ ಮೂಲ ಮಾದರಿಗಳು ಈ ದೇವಾಲಯದಲ್ಲಿವೆಯೆಂಬುದು ಕಲಾಚರಿತ್ರಕಾರರ ಅಭಿಪ್ರಾಯ. (ಎಸ್.ಎನ್.)

**ಕುಬೇರ :** ನವನಿಧಿಗಳ ಒಡೆಯ. ಅತುಲೈಶ್ವರ್ಯಸಂಪನ್ನ. ಉತ್ತರ ದಿಕ್ಪಾಲಕ. ಇವನ ವೃತ್ತಾಂತ ರಾಮಾಯಣ, ಭಾಗವತಗಳಲ್ಲಿದೆ. ಈತ ವಿಶ್ರವಸ ಮತ್ತು ಇಲಬಿಲೆಯರ ಮಗ. ರಾವಣ, ಕುಂಭಕರ್ಣರು ಮಲಸಹೋದರರು. ಸೋಮನೆಂಬುದು ಇನ್ನೊಂದು ಹೆಸರು. ಆದುದರಿಂದಲೇ ಉತ್ತರ ದಿಕ್ಕಿಗೆ ಸೌಮ್ಯ ಎಂದೂ ಹೆಸರುಂಟು. ಯಕ್ಷರು

ಮೇಷಾರೂಢ ಕುಬೇರ ಪತ್ನಿಯೊಂದಿಗೆ - ಕಲ್ಲೇಶ್ವರ ದೇವಾಲಯ : ಅರಳಗುಪ್ಪೆ

ಇವನ ಪ್ರಜೆಗಳು. ಈತ ನರವಾಹನ. ಋದ್ಧಿ ಮತ್ತು ಯಕ್ಷಿಯರು ಇವನ ಹೆಂಡತಿಯರು. ನಳಕೂಬರ ಮಗ. ಈತ ಪರಮೇಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿ ಅವನ ಸ್ನೇಹಿತನಾಗಿ ಪುಷ್ಪಕವಿಮಾನ ಹಾಗೂ ಲಂಕಾಧಿಪತ್ಯವನ್ನು ಪಡೆದು ಲಂಕೆಯಲ್ಲಿ ಆಳುತ್ತಿದ್ದ. ರಾವಣ, ಕುಂಭಕರ್ಣರು ಇವನನ್ನು ಸೋಲಿಸಿ ಲಂಕೆ ಮತ್ತು ಪುಷ್ಪಕವಿಮಾನವನ್ನು ಕಸಿದುಕೊಂಡರು. ಅನಂತರ ಶಿವನ ಅನುಮತಿಯಂತೆ ಕೈಲಾಸಪರ್ವತದಲ್ಲಿ ಅಲಕಾನಗರಿಯನ್ನು ನಿರ್ಮಿಸಿಕೊಂಡು ಯಕ್ಷರಿಗೆ ಅಧಿಪತಿಯಾದ. ಮಂತ್ರಿ ಪ್ರಹಾಸ, ಮಣಿಭದ್ರ, ಮಣಿಮಂತ, ಪೂರ್ಣಭದ್ರ, ಮಣಿಕಂಧರ, ಮಣಿಭೂಷ-ಇವರು ಇವನ ಅನುಚರರು.

ಮಹಾಭಾರತದ ಪ್ರಕಾರ ಕುಬೇರ ಪುಲಸ್ತ್ಯ ಮಹರ್ಷಿ ಮತ್ತು ಗೋ ಎಂಬುವವರ ಮಗ. ಅರ್ಜುನ ಇಂದ್ರಕೀಲ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದಾಗ ಅಲ್ಲಿಗೆ ಬಂದು ಅನೇಕ ದಿವ್ಯಾಸ್ತ್ರಗಳನ್ನು ಅವನಿಗೆ ಕೊಟ್ಟು ಹೋದ. ಭೀಮ ಸೌಗಂಧಿಕಾಪಹರಣಾರ್ಥವಾಗಿ ಹೋದಾಗ ಅವನಿಗೂ ಕುಬೇರನ ಅನುಚರರಿಗೂ ಯುದ್ಧವಾಗಿ ಕುಬೇರನ ಅನುಚರರೆಲ್ಲರೂ ಮಡಿದರು. ಈ ಸಮಾಚಾರ ತಿಳಿದ ಕುಬೇರ ಭೀಮನಲ್ಲಿಗೆ ಬಂದು ಸೌಗಂಧಿಕಪುಷ್ಪವನ್ನು ಕೊಂಡೊಯ್ಯಲು ಅನುಮತಿ ನೀಡಿದ. ಸಮುದ್ರಮಥನ ಕಾಲದಲ್ಲಿ ಬಂದ ರಂಭೆ ಇವನ ಹೆಂಡತಿ. (ಡಿ.ಎಸ್.ಜ.)

**ಕುಬ್ಜೆ :** ಪ್ರಾಚೀನ ಸಾಹಿತ್ಯದಲ್ಲಿ ಈ ಹೆಸರಿನ ಇಬ್ಬರು ಪ್ರಸಿದ್ಧರು. ಒಬ್ಬಳು ರಾಮಾಯಣದ ಮಂಥರೆ, ಕೈಕೆಯ ದಾಸಿ. ಈಕೆಗೆ ತ್ರಿವಕ್ರೆ ಎಂಬ ಹೆಸರೂ ಇತ್ತು. ಈಕೆಯ ದುರ್ಬೋಧನೆಯಿಂದ ಕೈಕೆ ರಾಮನನ್ನು ವನಕ್ಕೆ ಕಳುಹಿಸಿದಳು. ಕುವೆಂಪು ವಿರಚಿತ ಶ್ರೀ ರಾಮಾಯಣದರ್ಶನಂ ಮಹಾಕಾವ್ಯದಲ್ಲಿ ಮಂಥರೆಯನ್ನು ದುರಂತ ಪಾತ್ರವನ್ನಾಗಿ ಚಿತ್ರಿಸಲಾಗಿದೆ.

ಭಾಗವತದಲ್ಲಿ ಬರುವ ಕುಬ್ಜೆ ಕಂಸನಿಗೆ ಸುಗಂಧ ದ್ರವ್ಯಗಳನ್ನು ಕೊಡುತ್ತಿದ್ದ ಸೇವಕಿ. ಕಂಸನ ವಧಕ್ಕಾಗಿ ಬಲರಾಮ ಮತ್ತು ಕೃಷ್ಣ ಮಧುರೆಗೆ ಬಂದಾಗ ರಾಜವೀಧಿಯಲ್ಲಿ ಅವರನ್ನು ಕಂಡು ಸುಗಂಧ ದ್ರವ್ಯಗಳಿಂದ ಉಪಚರಿಸಿದಳು. ಅದರಿಂದ ಪ್ರಸನ್ನನಾದ ಶ್ರೀಕೃಷ್ಣ ಇವಳ ಗೂನನ್ನು ತೊಲಗಿಸಿದ. (ಡಿ.ಎಸ್.ಜ.)

**ಕುಬ್ಲೈಖಾನ್ :** 1215-94. ಮಂಗೋಲ್ ರಾಜ್ಯಸ್ಥಾಪಕ ಮತ್ತು ಚಂಘಿಸ್‌ಖಾನನ ವಂಶದವರಲ್ಲಿ ಅತ್ಯಂತ ಪ್ರಸಿದ್ಧ. ಸಮರ್ಥನೂ ಪರಾಕ್ರಮಿಯೂ ಆದ ಈತ 1252-56ರಲ್ಲಿ ಪೆಜ್‌ವಾನ್ ಪ್ರಾಂತ್ಯ ಮತ್ತು

ಥೈಲೆಂಡುಗಳನ್ನು ಗೆದ್ದು ಮಂಗೋಲರ ಅಧಿಕಾರವನ್ನು ಅವರು ಒಪ್ಪಿಕೊಳ್ಳುವಂತೆ ಮಾಡಿದ. 1259ರಲ್ಲಿ ಇವನ ಅಣ್ಣನೂ ಚಕ್ರವರ್ತಿಯೂ ಆದ ಮಂಗೂಖಾನ್ ಪಶ್ಚಿಮ ಚೀನದಲ್ಲಿ ಯುದ್ಧನಿರತನಾಗಿದ್ದಾಗ ಸತ್ತಾಗ ಇವನೇ ಚಕ್ರವರ್ತಿಯಾದ. ಇವನ ತಮ್ಮ ಅರಿಕ್ ಬೋಗೆ ಕಾರಕೋರಂ ಪ್ರಾಂತ್ಯದಲ್ಲಿ ತನ್ನ ಕೊನೆಗಾಲದ ವರೆಗೂ (1301) ಸ್ವತಂತ್ರನಾಗಿಯೇ ಇದ್ದ. ಕುಬ್ಲೈಖಾನ್ 1267ರಲ್ಲಿ ಸುಂಗ್ ಚಕ್ರವರ್ತಿಯ ವಿರುದ್ಧ ಯುದ್ಧ ಸಾರಿ 1276ರ ವೇಳೆಗೆ ಅಂತಿಮ ಜಯ ಗಳಿಸಿ ಇಡೀ ಚೀನದ ಪ್ರಭುವಾದ. ಕ್ರಮ ಕ್ರಮವಾಗಿ ಕೊರಿಯದಿಂದ ಅರೇಬಿಯದ ಮರಳ್ಗಾಡಿನ ವರೆಗೂ ಇವನು ತನ್ನ ಆಡಳಿತ ವಿಸ್ತರಿಸಿದ. ಬಲಾತ್ಕಾರದಿಂದ ಧನವನ್ನು ಸಂಗ್ರಹಿಸಿ ದುಂದುವೆಚ್ಚಮಾಡಿ ವೈಭವದಿಂದ ರಾಜ್ಯಭಾರ ಮಾಡಿದರೂ ವ್ಯಾಪಾರವನ್ನು ಊರ್ಜಿತಗೊಳಿಸಿದ.

ಈತನಿಗೆ ಜ್ಞಾನಾರ್ಜನೆಯಲ್ಲಿ ವಿಶೇಷವಾದ ಆಸಕ್ತಿ ಇತ್ತು. ಚೀನದ ಸಾಹಿತ್ಯ ಸಂಸ್ಕೃತಿಗಳನ್ನು ಪ್ರೋತ್ಸಾಹಿಸಿದನ್ನಲ್ಲದೆ ಬೌದ್ಧಧರ್ಮವನ್ನು ಪುರಸ್ಕರಿಸಿದ. ವಿದೇಶಗಳ ಪ್ರತಿಷ್ಠಿತ ಜನರೊಂದಿಗೆ ಸಂಪರ್ಕ ಬೆಳೆಸಿದುದರಿಂದ ಈತನ ಖ್ಯಾತಿ ಹೆಚ್ಚಿತು.

ಚೀನದ ನೆರೆಯ ರಾಜ್ಯಗಳು ತನ್ನ ಅಧಿಕಾರವನ್ನೊಪ್ಪಬೇಕೆಂದು ಕೇಳಿ, ಅವರು ಒಪ್ಪದಿದ್ದಾಗ ಅವರ ಮೇಲೆ ಈತ ಯುದ್ಧ ಮಾಡಿದನಾದರೂ ಹೆಚ್ಚಿನ ಜಯಗಳಿಸಲಿಲ್ಲ. 1274-81ರಲ್ಲಿ ಎರಡು ಬಾರಿ ಜಪಾನಿನೊಡನೆ ಯುದ್ಧ ಮಾಡಿದ. ಅದು ವ್ಯರ್ಥವಾಯಿತು. 1283-87ರಲ್ಲಿ ಚಂಪಾ ರಾಜ್ಯದ ಮೇಲಣ ದಾಳಿಯಲ್ಲಿ ಜಯಲಭಿಸಲಿಲ್ಲ. 1277-87ರ ನಡುವೆ ನಡೆಸಿದ ಬರ್ಮಿ ಯುದ್ಧಗಳಿಂದಲೂ ಹೆಚ್ಚಿನ ಫಲ ದೊರಕಲಿಲ್ಲ. ಕಂಬುಜ ರಾಜ್ಯ ಇವನ ಪ್ರಭುತ್ವವನ್ನು ಹೆಸರಿಗೆ ಮಾತ್ರ ಒಪ್ಪಿಕೊಂಡಿತು. 1293ರಲ್ಲಿ ಮಜಪಹಿತ್ ರಾಜ್ಯದ ಮೇಲಣ ಆಕ್ರಮಣ ವಿಫಲಗೊಂಡಿತು. ಈತ ದಕ್ಷಿಣಭಾರತಕ್ಕೆ ತನ್ನ ದೂತರನ್ನು ವ್ಯಾಪಾರ ಸಂಪರ್ಕ ಬೆಳೆಸುವ ಸಲುವಾಗಿ ಕಳುಹಿಸಿದ.

ಕುಬ್ಲೈಖಾನ್ ಉತ್ತಮ ಆಡಳಿತಗಾರ. ತಾನು ಚೀನದ ನಿಜವಾದ ಚಕ್ರವರ್ತಿ ಎಂದು ಭಾವಿಸಿ ಅದರ ಏಳಿಗೆಗಾಗಿ ದುಡಿದ. ಪೀಕಿಂಗ್ ಚೀನದ ರಾಜಧಾನಿಯಾದ್ದು ಇವನ ಕಾಲದಲ್ಲಿ. ದಕ್ಷಿಣ ಮಂಗೋಲಿಯದ ಷಾಂಗ್-ಟು ಬೇಸಗೆ ರಾಜಧಾನಿಯಾಗಿತ್ತು. ಈತ ಆಡಳಿತವನ್ನು ವ್ಯವಸ್ಥೆಗೊಳಿಸಿ ಚೀನದ ಪರಂಪರಾಗತ ಸಂಪ್ರದಾಯಗಳನ್ನು ಮುಂದುವರಿಸಿದ. ಸಾಮಾಜಿಕ ವ್ಯವಸ್ಥೆಯ ಸುಧಾರಣೆಯೂ ಆಯಿತು. ಅದರಲ್ಲಿ ಮಂಗೋಲರಿಗೆ ಪ್ರಾಧಾನ್ಯ ದೊರಕುವಂತಾಯಿತು. ಆದರೆ ದಕ್ಷಿಣ ಚೀನದ ಜನರಿಗೆ ಹೆಚ್ಚಿನ ಪ್ರಾಮುಖ್ಯ ದೊರಕದಂತೆ ಮಾಡಲಾಯಿತು; ಕಾಗದದ ಹಣ ಚಲಾವಣೆಯಲ್ಲಿತ್ತು. ಈತನ ಕಾಲದಲ್ಲಿ ಮತಸಹಿಷ್ಣುತೆಯಿತ್ತು. ಚೀನದ ಸಾಹಿತ್ಯ ಸಂಸ್ಕೃತಿಗಳಿಗೆ ಪ್ರೋತ್ಸಾಹ ದೊರಕಿತು. ಇವನ ಆಜ್ಞೆಯ ಮೇರೆಗೆ ಚೀನೀ ಗ್ರಂಥಗಳು ಮಂಗೋಲ್ ಭಾಷೆಗೆ ಅನುವಾದವಾದುವು. ಲಾಮಾ ಬೌದ್ಧಧರ್ಮದಲ್ಲಿ ಈತ ಆಸಕ್ತಿ ತೋರಿ ಕೊನೆಗೆ ತಾನೂ ಅದಕ್ಕೆ ಮತಾಂತರ ಹೊಂದಿದ. ಟಿಬೆಟಿನ ಫಗ್‌ಸ್ಪಾ ಎಂಬ ಭಿಕ್ಷು ಆಗ ಬೌದ್ಧಧರ್ಮ ಆಚಾರ್ಯನಾಗಿದ್ದ. ಆತ 1269ರಲ್ಲಿ ಮಂಗೋಲ್ ಭಾಷೆಗೆ ಹೊಸ ಲಿಪಿಯನ್ನು ಹೊಂದಿಸಿದ. ಆದರೆ ಈ ಲಿಪಿ ಜನಪ್ರಿಯವಾಗಲಿಲ್ಲ. ಉಯಿಘುರ್ ಲಿಪಿಯೇ ಮುಂದುವರಿಯಿತು. ಮಾರ್ಕೊಪೋಲೋನ ಬರೆಹಗಳಿಂದ ಇವನ ಆಸ್ಥಾನದ ವೈಭವ, ಆಡಳಿತಪದ್ಧತಿ, ಮತ್ತಿತರ ವಿಷಯಗಳ ಬಗ್ಗೆ ಅನೇಕ ಸಂಗತಿಗಳು ತಿಳಿದುಬರುತ್ತವೆ.

ಕುಬ್ಲೈಖಾನ್ ವಿಶ್ವದ ಇತಿಹಾಸದ ಪ್ರಧಾನ ವ್ಯಕ್ತಿಗಳಲ್ಲೊಬ್ಬನೆಂದು ಪರಿಗಣಿಸಬಹುದು. ಕ್ರೂರ, ಅನಾಗರಿಕ, ಅಲೆಮಾರಿ ಜನಾಂಗದಲ್ಲಿ ಹುಟ್ಟಿದರೂ ಸುಸಂಸ್ಕೃತವಾದ ಬೃಹತ್ ರಾಷ್ಟ್ರವೊಂದನ್ನು ದೀರ್ಘಕಾಲ ದಕ್ಷತೆಯಿಂದ ಆಳಿದ ಕೀರ್ತಿ ಈತನಿಗೆ ಸಲ್ಲುತ್ತದೆ. (ಪಿ.ಬಿ.ಡಿ.)

**ಕುಮಟ :** ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯ ಪಟ್ಟಣ. ಕುಮಟ ತಾಲ್ಲೂಕು ಉ.ಅ. 14°21' ಉ.ಅ. 14° 37' ವರೆಗೂ ಪೂ.ರೇ. 74° 20' ನಿಂದ 74° 44' ವರೆಗೂ ಹಬ್ಬಿದೆ. ವಿಸ್ತೀರ್ಣ



ಜಹಜು ನಿಲ್ಲುತ್ತಿದ್ದ ಸ್ಥಳ : ಕುಮಟ

582.75 ಚ.ಕಿಮೀ. ತಾಲ್ಲೂಕಿನಲ್ಲಿ 112 ಹಳ್ಳಿಗಳಿವೆ. ಕುಮಟ, ಗೋಕರ್ಣ-ಇವು ಪಟ್ಟಣಗಳು. ಬಂಡೆಕಲ್ಲುಗಳಿಂದ ಕೂಡಿದ ಕೆಲವುಬೆಟ್ಟಗಳೂ ಕೆಲವು ಸಣ್ಣಪುಟ್ಟ ಅಳಿವೆ ಕೋಡಿಗಳೂ ಇರುವ ಈ ತಾಲ್ಲೂಕಿನ ಅಗಲ ಸು. 19 ಕಿಮೀ. ಗಂಗಾವಳಿ ನದಿಯ ದಕ್ಷಿಣಕ್ಕಿರುವ ಈ ತಾಲ್ಲೂಕಿನ ತೀರಭಾಗ ಮರಳಿನಿಂದ ಕೂಡಿದೆ. ಒಳಭಾಗದಲ್ಲಿ ಗೋಡು ಅಥವಾ ಮರಳು ಗೋಡುಮಣ್ಣು ಸಾಮಾನ್ಯ. ಈ ತಾಲ್ಲೂಕಿನ ವಾರ್ಷಿಕ ಮಳೆ ಸು. 300 ಸೆಂಮೀ.



ಶ್ರೀವೆಂಕಟರಮಣ ದೇವಸ್ಥಾನ ; ಕುಮಟ

ತಾಲ್ಲೂಕಿಗೆ ಹಿನ್ನೆಲೆಯಂತಿರುವ ಪಶ್ಚಿಮ ಘಟ್ಟದ ಮೇಲೆ ದಟ್ಟವಾದ ಕಾಡುಗಳು ಬೆಳೆದಿವೆ. ಬತ್ತ, ತೆಂಗು, ಅಡಕೆ, ಮೆಣಸು, ಕಬ್ಬು-ಇವು ಈ ತಾಲ್ಲೂಕಿನ ಬೆಳೆಗಳು.

ಕುಮಟ ಪಟ್ಟಣ ಕಾರವಾರದಿಂದ 64 ಕಿಮೀ ದಕ್ಷಿಣಕ್ಕೆ, ಹೊನ್ನಾವರದಿಂದ 16 ಕಿಮೀ ಉತ್ತರಕ್ಕೆ ಇದೆ. ಜನಸಂಖ್ಯೆ 27,598 (2001). ಇದೊಂದು ರೇವುಪಟ್ಟಣ. ಸಮುದ್ರಯಾನ ಮಾಡುವವರ ನೆರವಿಗಾಗಿ ಇಲ್ಲೊಂದು ದೀಪಸ್ತಂಭವಿದೆ. ಕುಂಭೇಶ್ವರ ದೇವಾಲಯದಿಂದಾಗಿ ಇದನ್ನು ಕುಂಬಟುಂ ಎಂದು ಕರೆಯುತ್ತಿದ್ದುದಾಗಿಯೂ ಅದರಿಂದ ಕುಮಟವೆಂಬ ಹೆಸರು ಬಂತೆಂದೂ ಹೇಳಲಾಗಿದೆ. 19ನೆಯ ಶತಮಾನದಲ್ಲಿ ದಕ್ಷಿಣ ಮಹಾರಾಷ್ಟ್ರ ಮತ್ತು ಬಳ್ಳಾರಿ ಪ್ರದೇಶಗಳಿಂದ ಹತ್ತಿಯನ್ನು ಇಲ್ಲಿಗೆ ತಂದು ಇಲ್ಲಿಂದ ಮುಂಬಯಿಗೆ ಕಳುಹಿಸಲಾಗುತ್ತಿತ್ತು. ಇದು ಹಿಂದೆ ಜೈನ ಕೇಂದ್ರವಾಗಿತ್ತು. ಈಗಲೂ ಇಲ್ಲಿ ಅನೇಕ ಜೈನ ಬಸದಿಗಳಿವೆ. ಪೋರ್ಚುಗೀಸರು ಇಲ್ಲಿಯ ಜನರಿಂದ ತೆರಿಗೆ ವಸೂಲಿ ಮಾಡುತ್ತಿದ್ದರೆಂದು ಹೇಳಲಾಗಿದೆ. ಟಿಪ್ಪು ಈ ಪಟ್ಟಣದ ಮೇಲೆ ಎರಡು ಸಾರಿ ಆಕ್ರಮಣ ನಡೆಸಿದ್ದ. ಕುಮಟ ಒಂದು ವ್ಯಾಪಾರ ಕೇಂದ್ರ. ಅನೇಕ ರಸ್ತೆಗಳ ಸಂಧಿಸ್ಥಳ. ಇಲ್ಲಿಂದ ಕಾರವಾರ, ಭಟ್ಕಳ, ಯಲ್ಲಾಪುರ, ಶಿರಸಿ, ಶಿವಮೊಗ್ಗಗಳಿಗೆ ರಸ್ತೆಗಳಿವೆ. ಗಂಧದ ಕುಸುರಿ ಕೆಲಸಕ್ಕೆ ಈ ಪಟ್ಟಣ ಪ್ರಸಿದ್ಧವಾಗಿದೆ. ಮೀನುಗಾರಿಕೆ ಒಂದು ಕಸಬು. ಇಲ್ಲಿ ತಾಲ್ಲೂಕು ಕಚೇರಿ, ಆಸ್ಪತ್ರೆ ಮತ್ತು ಶಾಲಾಕಾಲೇಜುಗಳಿವೆ. (ಎ.ಕೆ.)

**ಕುಮರ ಗುರುಪರನ್ :** 17ನೆಯ ಶತಮಾನದ ಮೊದಲ ಭಾಗದಲ್ಲಿ ಇದ್ದ ತಮಿಳು ಪಂಡಿತ. ತಮಿಳು ನಾಡಿನ ದಕ್ಷಿಣ ಭಾಗದ ತಿರುನೆಲ್ವೇಲಿಯಲ್ಲಿ ಜನಿಸಿದ. ಈತ ಶೈವ ವೇಳಾಳ ಕುಲಕ್ಕೆ ಸೇರಿದವ, ತಂದೆ ಷಣ್ಮುಗ ಶಿಖಾಮಣಿ; ತಾಯಿ ಶಿವಗಾಮಸುಂದರಿ. ಹುಟ್ಟಿ ಐದು ವರ್ಷವಾದರೂ ಈತನಿಗೆ ಮಾತು ಬರುತ್ತಿರಲಿಲ್ಲ. ಆದುದರಿಂದ ಸಮೀಪದಲ್ಲಿದ್ದ ತಿರುಚೆಂದೂರಿನ ದೇವಾಯಲಕ್ಕೆ ಕರೆದುಕೊಂಡು ಹೋದರು. ಅಲ್ಲಿಯ ಸುಬ್ರಹ್ಮಣ್ಯಸ್ವಾಮಿಯ ದಯದಿಂದ ಈತನಿಗೆ ಮಾತು ಬಂತು. ಈ ಬಗ್ಗೆ ಈತ ಕಂದರ್ ಕಲಿವೆಣ್ಬಾ ಎಂಬ ಗ್ರಂಥವನ್ನು ರಚಿಸಿದ್ದಾನೆ

ತಮಿಳು ವ್ಯಾಕರಣ ಹಾಗೂ ಸಾಹಿತ್ಯಾಭ್ಯಾಸವನ್ನು ಈತ ಮುಂದುವರಿಸಿದ. ಭಕ್ತಿ, ಜ್ಞಾನ, ವೈರಾಗ್ಯವಶನಾಗಿ ಹಲವು ಶಿವಕ್ಷೇತ್ರಗಳನ್ನು ಸಂದರ್ಶಿಸಿದ. ಮಧುರೆಗೆ ಹೋದಾಗ ಅಲ್ಲಿ ಮೀನಾಕ್ಷಿಯಮ್ಮೈ ಪಿಳ್ಳೈ ತಮಿಳ್ ಎಂಬ ಗ್ರಂಥವನ್ನು ರಚಿಸಿ ಅದನ್ನು ಮಧುರೈ ಮೀನಾಕ್ಷಿ ದೇವಾಲಯದಲ್ಲಿ ನೆರೆದ ವಿದ್ವತ್ಸಭೆಯ ಮುಂದೆ ಓದಿದ. ಆಗ ಮೀನಾಕ್ಷಿ ದೇವಿಯೇ ಹೆಣ್ಣುಮಗುವಿನ ರೂಪದಲ್ಲಿ ಬಂದು ಆ ಕಾವ್ಯವನ್ನು ಕೇಳಿ, ಸಂತೋಷಗೊಂಡು, ಮುತ್ತುಮಾಲೆಯೊಂದನ್ನು ಕುಮರ ಗುರುಪರನಿಗೆ ಮೆಚ್ಚುಗೊಟ್ಟಳೆಂಬುದೊಂದು ಕಥೆಯಿದೆ. ಮತ್ತೆ ಮೀನಾಕ್ಷಿ ಅಮ್ಮೈಕುರಂ, ಇರಟ್ಟೈ ಮಣಿಮಾಲೈ, ಮದುರೈ ಕಲಂಬಗಂ, ನೀದಿ ನೆರಿವಿಳಕ್ಕಂ-ಮುಂತಾದ ಗ್ರಂಥಗಳನ್ನೀತ ರಚಿಸಿದ ಅಮೇಲೆ ಹಲವು ಊರುಗಳಿಗೆ ಹೋಗಿ ಹಲವು ಗ್ರಂಥಗಳನ್ನು ಬರೆದನಾದರೂ ತನಗೊಬ್ಬ ಗುರು ಬೇಕೆಂಬ ಹಂಬಲ ಈತನಲ್ಲಿ ಬೆಳೆಯಿತು. ಧರ್ಮಪುರಾಧೀನವೆಂಬ ಮಠದಲ್ಲಿ ಗುರುಮೂರ್ತಿಯಾಗಿದ್ದ ಶ್ರೀ ಮಾಸಿಲಾಮಣಿ ದೇಶಿಕರನ್ನು ತನಗೆ ಸಂನ್ಯಾಸದೀಕ್ಷೆ ನೀಡಬೇಕೆಂದು ಪ್ರಾರ್ಥಿಸಿದ. ದೇಶಿಕರೂ ಅದಕ್ಕೆ ಒಪ್ಪಿಕೊಂಡು, ಚಿದಂಬರಂ ವರೆಗೆ ಹೋಗಿಬರಬೇಕೆಂದು ಇವನಿಗೆ ಅಪ್ಪಣೆ ಮಾಡಿದರು. ಅದಕ್ಕೊಪ್ಪಿದ ಈತ ಬರುತ್ತ ದಾರಿಯಲ್ಲಿದ್ದ ವೈದೀಶ್ವರನ್ ಆಲಯಕ್ಕೆ ಹೋಗಿ, ಅಲ್ಲಿ ಮುತ್ತುಕುಮಾರಸ್ವಾಮಿ ಪಿಳ್ಳೆ ತಮಿಳ್ ಎಂಬ ಗ್ರಂಥವನ್ನು ರಚಿಸಿ, ಮತ್ತೆ ಚಿದಂಬರಂಗೆ ಬಂದು ಅಲ್ಲಿ ಕೆಲವು ಕಾಲ ನೆಲೆಸಿದ. ಆ ಸಮಯದಲ್ಲಿಯೇ ಚಿದಂಬರಂ ಮುಮ್ಮಣಿಕೋವೈ, ಚಿದಂಬರಂ ಶೆಯ್ಯುಳ್ ಕೋವೈ ಎಂಬೆರಡು ಗ್ರಂಥಗಳನ್ನು ರಚಿಸಿದ. ಮತ್ತೆ ಧರ್ಮಪುರಕ್ಕೆ ಹೋಗಿ ದೇಶಿಕರಿಂದ ಕಾಷಿವಸ್ತ್ರವನ್ನು ಸ್ವೀಕರಿಸಿದ. ಗುರುಗಳ ಪರವಾಗಿ ಪಂಡಾರಮುಮ್ಮಣಿಕೋವೈ ಎಂಬ ಕೃತಿಯನ್ನು ರಚಿಸಿದ.

ಅನಂತರ ಹಲವು ಶಿವಕ್ಷೇತ್ರಗಳನ್ನು ಸಂದರ್ಶಿಸಿ, ಕೊನೆಯಲ್ಲಿ ಕಾಶಿಗೆ ಹೋಗಿ ಕಾಶಿಕಲಂಬಗಂ ಎಂಬುದನ್ನು ರಚಿಸಿದ. ಹಿಂದೀ ಭಾಷೆಯನ್ನು ಕಲಿತುಕೊಳ್ಳಬೇಕೆಂದು ನೆನೆಸಿ ಸರಸ್ವತಿಯನ್ನು ಸ್ತುತಿಸಿ, ಸಕಲಕಲಾವಲ್ಲಿ ಮಾಲೈ ಎಂಬ ಹತ್ತು ಹಾಡುಗಳನ್ನು ಹಾಡಿ. ಹಿಂದೀ ಭಾಷೆಯ ತಿಳಿವಳಿಕೆ ಪಡೆದ. ಅಲ್ಲಿಯ ಅರಸನೊಡನೆ ಹಿಂದಿಯಲ್ಲಿ ಮಾತನಾಡಿ ಸಂತೋಷಪಡಿಸಿ, ಅಲ್ಲಿ ನೆಲೆಸಲು ಯೋಗ್ಯವಾದ ಮಠವನ್ನು ಕಟ್ಟಲು ಬೇಕಾದ ಸ್ಥಳವನ್ನು ಪಡೆದ. ತಾನು ಬಾಳಿದ ಕುಮಾರಸ್ವಾಮಿ ಮಠದಲ್ಲಿಯೇ ಪುರಾಣಶಾಲೆಯೊಂದನ್ನು ಏರ್ಪಡಿಸಿ. ಹಿಂದಿಯಲ್ಲಿಯೂ ತಮಿಳಿನಲ್ಲಿಯೂ ಪುರಾಣ ಪ್ರವಚನ ಮಾಡಿದ. ಶ್ರೇಷ್ಠ ಕವಿಯಾದ ತುಳಸಿದಾಸ ಈತನ ರಾಮಾಯಣ ಪ್ರಸಂಗವನ್ನು ಕೇಳಿದರೆಂದೂ ಅದರಿಂದಾಗಿಯೇ ಕಂಬರಾಮಾಯಣದಲ್ಲಿ ಕಂಡು ಬರುವ ಕೆಲವು ಸಂದರ್ಭಗಳು ತುಳಸಿರಾಮಾಯಣದಲ್ಲಿಯೂ ಕಂಡುಬರುತ್ತವೆಂದೂ ಹೇಳುತ್ತಾರೆ. ಈತ ಕಾಶಿಗೆ ಹೋದ ಅನಂತರ ತಮಿಳುನಾಡಿಗೆ ಒಮ್ಮೆ ಬಂದಿದ್ದು ಮತ್ತೆ ಕಾಶಿಗೆ ಹೋಗಿ ಅಲ್ಲಿಯೇ ನೆಲಸಿ ಅಲ್ಲಿಯೇ ಕಾಲವಾದನೆನ್ನಲಾಗಿದೆ.

ಈತ ಬರೆದ 13 ಗ್ರಂಥಗಳು ಉಪಲಬ್ಧವಿವೆ. ಇನ್ನೂ ಮೂರು ಗ್ರಂಥಗಳು ಈತನ ಹೆಸರಲ್ಲಿವೆ. ಇವನ್ನು ಸ್ವಾಮಿನಾಥ ಅಯ್ಯರ್ ಸಂಪಾದಿಸಿದ್ದಾರೆ.

ಸು. 30 ವರ್ಷಗಳ ಹಿಂದೆ ತಮಿಳಿನಲ್ಲಿ ಪಾಂಡಿತ್ಯ ಗಳಿಸಲು ಬಯಸುವಂಥವರು ಸಣ್ಣ ಗ್ರಂಥಗಳನ್ನು ಓದುವ ರೂಢಿಯಿತ್ತು. ಅವುಗಳಲ್ಲಿ ಕುಮರಗುರುಪರನ ಮೀನಾಕ್ಷಿಯಮ್ಮೈ ಪಿಳ್ಳೈ ತಮಿಳ್, ಮದುರೆ ಕಲಂಬಗಂ ಎಂಬೆರಡು ಹೊತ್ತಗೆಗಳು ಸೇರಿದ್ದುವು. ಈತನ ನೀದಿ ನೆರಿ ವಿಳಕ್ಕಂ ಎಂಬುದು ಶಾಲಾ ಬಾಲಕರಿಗೆ ಪಠ್ಯಪುಸ್ತಕವಾಗಿದ್ದುದೂ ಉಂಟು. ಸುಬ್ರಹ್ಮಣ್ಯ ಸ್ವಾಮಿಯ ಭಕ್ತರು ಕಂದರ್ ಕಲಿವೆಣ್ಬಾ, ಮುತ್ತುಕುಮಾರಸ್ವಾಮಿ ಪಿಳ್ಳೆ ತಮಿಳ್ ಎಂಬುವುಗಳನ್ನು ಪಾರಾಯಣ ಮಾಡುತ್ತಾರೆ.

ಈತನ ಗ್ರಂಥಗಳಲ್ಲಿ ತಮಿಳು ಪಾಂಡಿತ್ಯ ಹೊರಹೊಮ್ಮುತ್ತದೆ. ಕೃತಿಗಳಲ್ಲಿ ಅತಿಶಯೋಕ್ತಿಗಳು ತುಂಬಿವೆ. 'ಮಾಣಿಕ್ಯವೆಂಬ ಬೆಂಕಿಯನ್ನು ಒಲೆಯಲ್ಲಿಟ್ಟು, ಹವಳದ ಸೌದೆಯನ್ನು ಒಟ್ಟಿ, ಶಂಖದ ಪಾತ್ರೆಯಲ್ಲಿ ಜೇನಿನ ಎಸರಿಕ್ಕಿ, ಮುತ್ತೆಂಬ ಅಕ್ಕಿಯನ್ನು ಹಾಕಿ, ಅನ್ನ ಮಾಡುತ್ತಾರೆ'-ಎಂದು ಮಕ್ಕಳ ಅಡುಗೆಯ ಆಟವನ್ನೀತ ಬಣ್ಣಿಸಿದ್ದಾನೆ.

ಶೃಂಗಾರವನ್ನೂ ಶೈವಸಿದ್ಧಾಂತ ವಿಷಯಗಳನ್ನೂ ಜತೆಗೂಡಿಸಿ ಹಾಡಿರುವುದು ಗಮನಿಸತಕ್ಕ ವಿಷಯ. ಜ್ಞಾನಗುರುವೇ ಪ್ರಿಯನೆಂದೂ ಶಿಷ್ಯ ಪ್ರೇಯಸಿಯೆಂದೂ ಈತನ ಕಲ್ಪನೆ.

ತಮಿಳು ಭಾಷೆಯ ಮೇಲೆ ಈ ಕವಿಗೆ ಅಗಾಧಪ್ರೇಮ. ಹಾಗಾಗಿ ತಮಿಳಿಗೆ ದೈವತಮಿಳ್, ತೇನ್‌ತಮಿಳ್, ಪಸುಂದಮೀಳ್ ಎಂಬಿತ್ಯಾದಿ 30ಕ್ಕೂ ಮೇಲ್ಪಟ್ಟು ವಿಶೇಷಣಗಳನ್ನು ಈತ ಕೊಟ್ಟಿದ್ದಾನೆ. ಅಂತೆಯೇ ತನ್ನ ಕೃತಿಗಳಲ್ಲಿ ಸಂಸ್ಕೃತಕ್ಕೂ ಈತ ಸಾಕಷ್ಟು ಗೌರವ ಕೊಟ್ಟಿದ್ದಾನೆ; ವೇದಗಳ ಪ್ರಾಚೀನತೆಯನ್ನೂ ದೈವಿಕ ಪರಂಪರೆಯನ್ನೂ ಹೊಗಳಿದ್ದಾನೆ. ಸಂಸ್ಕೃತ ಪದಗಳನ್ನೂ ಸಮಾಸಗಳನ್ನೂ ಅಲ್ಲಲ್ಲಿ ಪ್ರಯೋಗಿಸಿದ್ದಾನೆ, ವ್ಯಾವಹಾರಿಕ ಪದಗಳಂತೂ ಹೇರಳವಾಗಿವೆ. ಗುತ್ತಿಗೆ, ಸಲಾಂ, ಮುಂತಾದ ಹಿಂದೀ ಶಬ್ದಗಳನ್ನೂ ಈತ ಸ್ವೀಕರಿಸಿರುವುದು ಗಮನಾರ್ಹವಾದ ವಿಷಯ. (ಎಸ್.ಪಿ.ಎಸ್.)

**ಕುಮಾಂವ್ :** ಭಾರತದ ಉತ್ತರ ಪ್ರದೇಶದ ಒಂದು ಆಡಳಿತ ವಿಭಾಗ, ಆ ರಾಜ್ಯದ ವಾಯವ್ಯದಲ್ಲಿದೆ. ಅಲ್ಮೋರ, ಘರ್ವಾಲ್, ನೈನಿತಾಲ್, ಚಾಮೋಲಿ ಮತ್ತು ಉತ್ತರ ಕಾಶಿ–ಇವು ಇದರಲ್ಲಿರುವ ಜಿಲ್ಲೆಗಳು. ಡೆಹ್ರಾ–ಡೂನ್ ಜಿಲ್ಲೆ, ಹಿಂದೆ ಸಂಸ್ಥಾನವಾಗಿದ್ದು ಉತ್ತರ ಪ್ರದೇಶದಲ್ಲಿ ವಿಲೀನಗೊಂಡ ತೆಹ್ರಿ ಘರ್‌ವಾಲ್–ಇವೂ ಸೇರಿದ ವಿಸ್ತಾರ ಪ್ರದೇಶವನ್ನು ಹಿಂದಿನಿಂದಲೂ ಕುಮಾಂವ್ ಎಂದು ಕರೆಯುವ ರೂಢಿಯಿದೆ. ಯಮುನಾ ನದಿಯ ಉಪನದಿಯಾದ ಟೋನ್ಸ್ ಮತ್ತು ಶಾರದಾದ ಉಪನದಿಯಾದ (ಮಹಾ) ಕಾಳಿ–ಇವುಗಳ ನಡುವೆ ಈ ಪ್ರದೇಶ ಹಬ್ಬಿದೆ. (ಮಹಾ) ಕಾಳಿ ನೇಪಾಳದ ಪಶ್ಚಿಮ ಎಲ್ಲೆ. ಯಮುನಾ, ಗಂಗಾ, ರಾಮಗಂಗಾ ಮತ್ತು ಶಾರದಾ ನದಿಗಳ ಹಿಮಾಲಯನ್ ಜಲಾನಯನ ಪ್ರದೇಶವನ್ನು ಇದು ಒಳಗೊಂಡಿದೆ. ಉಪಶಿವಾಲಿಕ್ ಶ್ರೇಣಿಗಳಿಂದ ಕ್ರಮವಾಗಿ ಎತ್ತರವಾಗುತ್ತ ಸಾಗಿ, ಹಿಮನದಿಗಳ ಮಾಲೆಧರಿಸಿರುವ ಧವಳ ಶಿಖರಗಳಿಂದೊಡಗೂಡಿದ ಈ ಪರ್ವತಪ್ರದೇಶದಲ್ಲಿ ಭಾಗೀರಥಿ ಮತ್ತು ಅಲಕನಂದಾಗಳು ಉಗಮಿಸುತ್ತವೆ. ಕೇದಾರನಾಥ ಬದರೀನಾಥ ಶಿಖರಗಳ ಗೊಂಚಲುಗಳು ಇರುವುದು ಇಲ್ಲಿ. ಪೂರ್ವದಲ್ಲಿರುವ ತ್ರಿಶೂಲ, ನಂದ, ಕೋಟ್ ಮತ್ತು ನಂದಾದೇವಿ ಶಿಖರಗಳಿಗಿಂತ ಎತ್ತರವಾದ ಶಿಖರಗಳು ಭಾರತದಲ್ಲಿ ಕಾಶ್ಮೀರವನ್ನು ಬಿಟ್ಟರೆ ಬೇರೆಲ್ಲೂ ಇಲ್ಲ. ಇಡೀ ಪ್ರದೇಶದಲ್ಲಿ ಅನೇಕ ಕಣಿವೆಗಳಿವೆ.

ಕುಮಾಂವ್ ಪ್ರದೇಶದ್ದು ಪರ್ವತ ವಾಯುಗುಣ. ತಗ್ಗಿನ ಕಣಿವೆಗಳಲ್ಲಿ ಬೇಸಗೆಯಲ್ಲಿ ಉಷ್ಣತೆ ಹೆಚ್ಚು, ಚಳಿಗಾಲದಲ್ಲಿ ಹೆಚ್ಚು ಚಳಿ. ಮೇ–ಜೂನ್ ಗರಿಷ್ಠ ಉಷ್ಣತೆ 43.30 ಸೆ. 1818–2122 ಮೀ ಎತ್ತರದಲ್ಲಿ ಚಳಿಗಾಲದ ಮಧ್ಯಕ ಉಷ್ಣತೆ 4.4°ಸೆ. ಆದರೆ ಇನ್ನೂ 2727–3030 ಮೀ ಎತ್ತರದಲ್ಲಿ ಉಷ್ಣತೆ ಹಿಮಬಿಂದುವಿಗಿಂತ ಕಡಿಮೆಯಾಗಿರುತ್ತದೆ. 3788 ಮೀಗಿಂತ ಕೆಳಗಿನ ಪ್ರದೇಶ ಬಹುತೇಕ ಅರಣ್ಯಮಯ. ಎತ್ತರಕ್ಕನುಗುಣವಾಗಿ ಸಸ್ಯದಲ್ಲಿ ಪ್ರಭೇದಗಳಿವೆ.

ಇಡೀ ಪ್ರದೇಶದಲ್ಲಿ ಪಶುಪಾಲನೆ ಮತ್ತು ವ್ಯಾಪಾರಕ್ಕಿಂತ ಕೃಷಿ ಪ್ರಧಾನವಾದ್ದು. ಧೂಪ, ರಾಳ ಇವು ಮುಖ್ಯ ಅರಣ್ಯೋತ್ಪನ್ನಗಳು. ರಾಳ ಸಂಗ್ರಹಣೆ ಬಹು ಮುಖ್ಯ ಕಸಬು. ಕಬ್ಬಿಣ, ತಾಮ್ರ, ಸ್ಫಟಿಕ, ಜಿಪ್ಸಂ, ಸೀಸ ಮತ್ತು ಗ್ರಾಫೈಟ್ ಖನಿಜನಿಕ್ಷೇಪಗಳಿವೆ. ಆದರೆ ಆರ್ಥಿಕವಾಗಿ ಇವು ಮುಖ್ಯವಲ್ಲ.

ಕುಮಾಂವ್ ಆಡಳಿತವಿಭಾಗದ ಕೇಂದ್ರ ನೈನಿತಾಲ್.

ಈ ಪ್ರದೇಶಕ್ಕೆ ಕುಮಾಂವ್ ಎಂಬ ಹೆಸರು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವಂತೆ ಕಾಣುತ್ತದೆ. ಸ್ಕಂದಪುರಾಣದಲ್ಲಿ ಬರುವ ಕುಮಾರವನ ಅಥವಾ ಕೂರ್ಮವನವೇ ಕುಮಾಂವ್ ಎಂದು ಪರಿವರ್ತನೆಗೊಂಡಿರಬಹುದೆಂಬುದು ಕೆಲವರ ಮತ. ಸ್ಥಳೀಯ ಭಾಷೆಯೊಂದರ ಹೆಸರಾದ ಕುಮುನೊ ಎನ್ನುವುದರಿಂದ ಈ ಹೆಸರು ಬಂತೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ.

ಕುಮಾಂವ್ ಪ್ರದೇಶದಲ್ಲಿ ಅಲ್ಲಲ್ಲಿ ಕೈಕೊಡಲಿಗಳೂ ಬಾಚಿಗಳೂ ದೊರಕಿದ್ದರೂ ಈ ಪ್ರದೇಶದ ಇತಿಹಾಸಪೂರ್ವಕಾಲದ ನಿರ್ದಿಷ್ಟ ಸ್ವರೂಪವಿನ್ನೂ ತಿಳಿದಿಲ್ಲ. ಆರ್ಯರು ಕುಮಾಂವಿನ ಮೂಲಕ ಭಾರತಕ್ಕೆ ಬಂದರು ಎನ್ನುವ ಸಿದ್ಧಾಂತಕ್ಕೆ ವಿದ್ವಾಂಸರ ಮನ್ನಣೆ ದೊರಕಿಲ್ಲ. ಪ್ರಾಚೀನ ಕಾಲದಿಂದ ಇಲ್ಲಿ ಕಿರಾತರು ಮತ್ತು ಖಾಸಿಗಳೆಂಬ ಅನಾಗರಿಕ ಜನ ಇದ್ದರೆಂಬುದು ಖಚಿತ. ಬುದ್ಧನ ಮತ್ತು ಅಶೋಕನ ಕಾಲಗಳಿಗೆ ಸಂಬಂಧಿಸಿದಂತೆಯೂ ಕುಮಾಂವಿನ ವಿಚಾರವಾಗಿ ಹೆಚ್ಚು ಮಾಹಿತಿಗಳು ದೊರಕಿಲ್ಲ. ಪ್ರ.ಶ.ಪೂ. 2ನೆಯ ಶತಮಾನದ ಸಮಯದಲ್ಲಿ ಕುಣಿಂದರು ಇಲ್ಲಿ ಆಳುತ್ತಿದ್ದರೆಂದು ಗೊತ್ತಾಗುತ್ತದೆ. ಈ ವಂಶದ ರಾಜ ಅಮೋಘಭೂತಿಯ ಮತ್ತು ಇತರ ಮೂವರು ರಾಜರ ನಾಣ್ಯಗಳು ದೊರಕಿರುವುದರಿಂದ, ಕುಮಾಂವಿನ ಇತಿಹಾಸ ಅವರ ಕಾಲದಿಂದ ಪ್ರಾರಂಭವಾಯಿತೆಂದು ಹೇಳಬಹುದು. ಕುಣಿಂದವಂಶದ ಪತನಾನಂತರ ಕುಮಾಂವಿನ ಕೆಲವು ಭಾಗಗಳು ಯೌಧೇಯ ವಂಶದವರಿಗೆ ಸೇರಿದ್ದುವು. ಅನಂತರ ಸಮುದ್ರಗುಪ್ತನ ಅಲಹಾಬಾದ್ ಶಾಸನದಲ್ಲಿ ಮಾಹಿತಿಗಳು ದೊರಕುತ್ತವೆ. ಈ ಶಾಸನದಲ್ಲಿ ಹೇಳಲಾಗಿರುವ ಕರ್ತೃಪುರವೇ ಕುಮಾಂವ್ ಎಂದು ಅನೇಕ ವಿದ್ವಾಂಸರು ಭಾವಿಸುತ್ತಾರೆ. ಯುವಾನ್‌ಚಾಂಗನ ಬರೆವಣಿಗೆಗಳಲ್ಲಿ ಕುಮಾಂವನ್ನು ಕುರಿತ ಉಲ್ಲೇಖಗಳಿವೆ. ಆದರೆ ಆ ಕಾಲದ ಇತಿಹಾಸರಚನೆಗೆ ಇವುಗಳಿಂದ ಹೆಚ್ಚು ಸಹಾಯವಾಗುವುದಿಲ್ಲ. 7ನೆಯ ಶತಮಾನದ ಅನಂತರ ಕತ್ಯೂರಿ ವಂಶದ ಅರಸರು ಕುಮಾಂವಿನಲ್ಲಿ ಅಧಿಕಾರಕ್ಕೆ ಬಂದರು. ಆ ವಂಶದ ಸ್ಥಾಪಕ ಬಸಂತ.

ಲಕುಲೀಶ ಮತ್ತು ನಟರಾಜ ಮಂದಿರಗಳು : ಜಾಗೇಶ್ವರ

ನಿಂಬರ್ತದೇವ, ಇಷ್ಟಗಣ, ಲಲಿತಶೂರದೇವ, ಭೂದೇವ ಮುಂತಾದ ರಾಜರು 11ನೆಯ ಶತಮಾನದ ವರೆಗೆ ಆಳಿದರು. ಅನಂತರ ಚಂದ್ ವಂಶದ ಅರಸರು ಅಧಿಕಾರಕ್ಕೆ ಬಂದರು. ಇವರಲ್ಲಿ ಸೋಮಚಂದ್ (ಆಳ್ವಿಕೆ: 1000–1020) ಮತ್ತು ಆತ್ಮಚಂದ್ ಮುಖ್ಯರು.

ದ್ವಾರಪಾಲಕ : ಲಾಖಾಮಂಡಲ

ಸು. 14ನೆಯ ಶತಮಾನದ ಸಮಯಕ್ಕೆ ಘರ್‌ವಾಲ್ ರಾಜರು ಅಧಿಕಾರಾರೂಢರಾದರು. ಇವರಲ್ಲಿ ಅಜಯಪಾಲ ಮತ್ತು ಮಾನ್‌ಷಾ ಮುಖ್ಯರು. ಅನಂತರ ನೇಪಾಳದ ಘೂರ್ಖ ರಾಜರ ವಶಕ್ಕೆ ಅನೇಕ ಭಾಗಗಳು ಸೇರಿದುವು. 19ನೆಯ ಶತಮಾನದ ಪ್ರಾರಂಭದಲ್ಲಿ ಇವರಿಂದ ಬ್ರಿಟಿಷರು ಕುಮಾಂವ್ ರಾಜ್ಯವನ್ನು ವಶಪಡಿಸಿಕೊಂಡರು. ಇದರ ಆಡಳಿತಕ್ಕೆ ಕಮಿಷನರೊಬ್ಬನನ್ನು ಬ್ರಿಟಿಷರು ನಿಯಮಿಸಿದರು. ಕುಮಾಂವ್ ಒಂದು ವಿಭಾಗವಾಯಿತು.

ಇದರಲ್ಲಿ ಬೆಟ್ಟಗುಡ್ಡಗಳ ನಾಲ್ಕು ಜಿಲ್ಲೆಗಳು ಸೇರಿವೆ. ಕುಮಾಂವ್ ರೆಜಿಮೆಂಟ್ ಎಂದು ಪ್ರಸಿದ್ಧವಾಗಿರುವ ಸೈನ್ಯದ ತುಕಡಿ ಇಲ್ಲಿಯ ವೀರರ ದ್ಯೋತಕವಾಗಿದೆ.

ಸು. 7ನೆಯ ಶತಮಾನದವರೆಗಿನ ಕುಮಾಂವಿನ ವಾಸ್ತುಶಿಲ್ಪದ ವಿಷಯದಲ್ಲಿ ನಮಗೆ ತಿಳಿದಿರುವುದು ಬಹು ಕಡಿಮೆ. ಈ ಕಾಲದಲ್ಲಿ ದೇವಾಲಯಗಳು ಮರದಿಂದ ನಿರ್ಮಿತವಾಗುತ್ತಿದ್ದುದು ನಿಜವಾದಲ್ಲಿ ಅವು ನಾಶವಾಗಿವೆ. ಜಗತ್‌ಗ್ರಾಮ ಎಂಬಲ್ಲಿ ನಡೆದ ಉತ್ಖನನಗಳಿಂದ ಅಶ್ವಮೇಧಯಾಗದ ನೆಲೆಯೊಂದನ್ನು ಗುರುತಿಸಲಾಗಿದೆ. ಇಲ್ಲಿ ಶೀಲವರ್ಮನೆಂಬ ಮಹಾರಾಜ ಆ ಯಾಗ ಮಾಡಿದನೆಂದು ತಿಳಿಯುತ್ತದೆ. ಇಲ್ಲಿರುವ ತಳಪಾಯಗಳ ಅವಶೇಷಗಳಿಂದ ಇಲ್ಲಿ ದೇವಾಲಯಗಳು ಇದ್ದುವೆಂದು ಮಾತ್ರ ಹೇಳಬಹುದು.

ಕತ್ಯೂರಿ ವಂಶದ ಅರಸರ ಆಡಳಿತದ ಪ್ರಾರಂಭದೊಡನೆ ವಾಸ್ತುಶಿಲ್ಪದಲ್ಲಿ ಪ್ರಗತಿಯಾಗಿರುವುದನ್ನು ಕಾಣಬಹುದು. ಈ ಕಾಲದ ದೇವಾಲಯಗಳಲ್ಲಿ ಗುಪ್ತ ಶೈಲಿಯ ಪ್ರಭಾವವೂ ಇದೆ. ಇವಕ್ಕೆ ಜಾಗೇಶ್ವರ ದೇವಾಲಯ ಸಮೂಹ ಉತ್ತಮ ನಿದರ್ಶನ. ಜಾಗೇಶ್ವರ ಆಲ್ಮೋರಕ್ಕೆ ಸು. 37 ಕಿಮೀ. ದೂರದಲ್ಲಿದೆ. ಇಲ್ಲಿಯ ವಾಸ್ತುಶಿಲ್ಪ ಮುಖ್ಯವಾಗಿ ಮೂರು ಹಂತಗಳದು. ಜಾಗೇಶ್ವರ, ಮೃತ್ಯುಂಜಯ ಮತ್ತು ದಂಡೇಶ್ವರ ದೇವಾಲಯಗಳು



ನವದುರ್ಗ ಮಂದಿರ : ಜಾಗೇಶ್ವರ

ಮೊದಲನೆಯ ಹಂತದವು. ಸು. 15.15 ಮೀ ಎತ್ತರವುಳ್ಳ ಈ ದೇವಾಲಯಗಳಲ್ಲಿ ಚೌಕಾಕಾರದ ಗರ್ಭಗೃಹ, ಸುಖನಾಸಿ ಮತ್ತು ಮಂಟಪಗಳಿವೆ. ಮೂರ್ತಿಶಿಲ್ಪಗಳು ಕಡಿಮೆ. ಈ ದೇವಾಲಯಗಳಲ್ಲಿ ಪ್ರತೀಹಾರ ಶೈಲಿಯ ಪ್ರಭಾವ ಕಾಣಬರುತ್ತದೆ. ಇವುಗಳ ಕಾಲ 7–8ನೆಯ ಶತಮಾನಗಳು. ನವದುರ್ಗಾ, ಲಕುಲೀಶ ಮತ್ತು ನಟರಾಜ ದೇವಾಲಯಗಳು ಎರಡನೆಯ ಹಂತದವು. ಇವು ಐಹೊಳೆ, ಮಹಾಬಲಿಪುರ ಮತ್ತು ಮಧ್ಯಭಾರತ ಶೈಲಿಯ ದೇವಾಲಯಗಳನ್ನು ಹೋಲುತ್ತವೆ. ಬಾಗೇಶ್ವರ, ಗೋಪೇಶ್ವರ ಮತ್ತು ಲಾಖಾಮಂಡಲ ದೇವಾಲಯಗಳು ಮೂರನೆಯ ಹಂತದವು. ಬಾಗೇಶ್ವರ ದೇವಾಲಯ ಕುಮಾಂವಿನಲ್ಲಿಯ ಅತ್ಯಂತ ಪ್ರಸಿದ್ಧ ದೇವಾಲಯ. ಕೆತ್ತನೆಯ ಕೆಲಸ, ಅಲಂಕೃತ ಕಂಬಗಳು. ನಾಗರರೀತಿಯ ಶಿಖರ ಇವುಗಳಿಂದ ಕೂಡಿದ ಈ ದೇವಾಲಯ ಸಣ್ಣದಿದ್ದರೂ ಸುಂದರವಾಗಿದೆ. ಅನಂತರದ ದೇವಾಲಯಗಳು ಮಧ್ಯಕಾಲಕ್ಕೆ ಸೇರಿದವು. ದ್ವಾರಾಹಾಟಿನ ಗುಜರ ದೇವಾಲಯ, ಬೈಜನಾಥದ ಲಕ್ಷ್ಮೀನಾರಾಯಣ ದೇವಾಲಯ, ಬಲೀಶ್ವರ ದೇವಾಲಯ–ಇವು ಈ ಕಾಲದವು. ಇವುಗಳಲ್ಲಿ ಶಿಲ್ಪಗಳು ಹೆಚ್ಚು; ಅಲಂಕಾರಗಳೂ ವಿಶೇಷ. ಬಲೀಶ್ವರ, ದೇವಾಲಯದಲ್ಲಿ ಎರಡು ಗರ್ಭಗೃಹಗಳಿವೆ. ಇವು ಗುಜರಾತ್ ಮತ್ತು ರಾಜಸ್ಥಾನದ ದೇವಾಲಯಗಳನ್ನು ಹೋಲುತ್ತವೆ.

ಕುಮಾಂವಿನ ಶಿಲ್ಪಗಳಲ್ಲಿ ಶೈವ ಶಿಲ್ಪಗಳೇ ಹೆಚ್ಚು. ಈಶ್ವರನ ವಿವಿಧ ರೂಪಗಳು, ತ್ರಿಮೂರ್ತಿ, ಗಣೇಶ, ನಟರಾಜ, ದಕ್ಷಿಣಾಮೂರ್ತಿ, ತ್ರಿಪುರಾಂತಕ, ಅಂಧಕಾಸುರ, ಉಮಾಮಹೇಶ್ವರ, ಕಲ್ಯಾಣಸುಂದರ ಮುಂತಾದ ಶಿಲ್ಪಗಳು ಮಧ್ಯಕಾಲೀನ ದೇವಾಲಯಗಳಲ್ಲಿ ವಿಶೇಷವಾಗಿವೆ. ಮಹಿಷಾಸುರಮರ್ದಿನಿಯ ಕಂಚಿನ ಮೂರ್ತಿಗಳು ಹೇರಳವಾಗಿ ದೊರಕಿವೆ. ಇವು ವಿಶೇಷವಾಗಿ 15ನೆಯ ಶತಮಾನದ ಅನಂತರದ ಕಾಲದವು.

ಇತ್ತೀಚಿನ ದೇವಾಲಯಗಳಲ್ಲಿ ಕೇದಾರನಾಥ ಮತ್ತು ಬದರೀನಾಥ ದೇವಾಲಯಗಳು ಬಹು ಮುಖ್ಯವಾದವು. ಕೇದಾರನಾಥ ದೇವಾಲಯದ ಒಳಭಾಗಗಳು 10–11ನೆಯ ಶತಮಾನಗಳಿಗೆ ಸೇರಿದವೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಆದರೆ ಅವು 17–18ನೆಯ ಶತಮಾನಗಳಲ್ಲಿ ನಿರ್ಮಿತವಾಗಿರಬಹುದು. ಬದರೀನಾಥ ದೇವಾಲಯ ಇನ್ನೂ ಈಚಿನದು. ಇವು ಭಾರತೀಯರಿಗೆ ಪ್ರಮುಖ ಯಾತ್ರಾಸ್ಥಳಗಳಾಗಿ ಸಹಸ್ರಾರು ಜನರನ್ನು ಇಂದಿಗೂ ಆಕರ್ಷಿಸುತ್ತಿವೆ.

ನೃತ್ಯಗಣಪತಿ : ಜೋಶಿಮಠ

ಕುಮಾಂವಿನಲ್ಲಿ ದೊರಕಿರುವ ಶಾಸನಗಳಲ್ಲಿ 6ನೆಯ ಶತಮಾನದ ತಾಳೇಶ್ವರ ತಾಮ್ರಶಾಸನವೇ ಅತ್ಯಂತ ಪ್ರಾಚೀನವಾದ್ದು. ಅಶೋಕನ ಕಾಲ್ಸಿ ಶಾಸನ ಕುಮಾಂವಿನ ಹೊರಗಡಿಯಲ್ಲಿ ದೊರಕಿದ್ದರೂ ಕುಮಾಂವಿನಲ್ಲಿ ಅಷ್ಟು ಪ್ರಾಚೀನವಾದ ಶಾಸನವಿನ್ನೂ ದೊರಕಿಲ್ಲ. ಲಿಪಿಶಾಸ್ತ್ರದ ದೃಷ್ಟಿಯಿಂದ ಕುಮಾಂವಿನಲ್ಲಿ ಉತ್ತರಭಾರತದ ಲಿಪಿಯ ಛಾಯೆಗಳೇ ಇವೆ. ಅನೇಕ ತಾಮ್ರಪತ್ರಗಳ ಶೈಲಿ ಪಾಲರ ತಾಮ್ರಶಾಸನಗಳ

ಉಮಾಮಹೇಶ್ವರ : ಅಡ್‌ಬದರಿ

ಶೈಲಿಯನ್ನು ಹೋಲುತ್ತವೆ. ಕುಮಾಂವಿನಲ್ಲಿ ಅತ್ಯಂತ ಪ್ರಾಚೀನವೆನ್ನಲಾದ ತಾಳೇಶ್ವರ ತಾಮ್ರಪಟಗಳಲ್ಲಿ ಗುಪ್ತರ ಶೈಲಿಯ ಲಿಪಿ ಎದ್ದು ಕಾಣುತ್ತದೆ. ಪಾಂಡುಕೇಶ್ವರದಲ್ಲಿ ದೊರಕಿರುವ

ಕತ್ಯೂರಿ ವಂಶದ ಅರಸರಿಗೆ ಸೇರಿದ ತಾಮ್ರಶಾಸನಗಳು ಚರಿತ್ರೆಯ ದೃಷ್ಟಿಯಿಂದ ಬಹು ಮುಖ್ಯವಾದವು. ಇವು ಉತ್ತರಭಾರತದ 9ನೆಯ ಶತಮಾನದ ಲಿಪಿಯಲ್ಲಿವೆ. ಬಾಗೇಶ್ವರ ಮತ್ತು ಲಾಖಾಮಂಡಲಗಳಲ್ಲಿ ದೊರಕಿರುವ ತಾಮ್ರ ಪಟಗಳು ಉತ್ತಮ ಸಂಸ್ಕೃತ ಕಾವ್ಯ ಶೈಲಿಯಲ್ಲಿವೆ. ಬಾರ್ಹಾಟ್ ಮತ್ತು ಗೋಪೇಶ್ವರಗಳಲ್ಲಿ 6.3 ಮತ್ತು 4.8 ಮೀ ಎತ್ತರದ ತ್ರಿಶೂಲಗಳ ಮೇಲೆ ಶಾಸನಗಳಿರುವುದು ಗಮನಾರ್ಹವಾದುದು. ಕುಮಾಂವಿನ ಶಾಸನಗಳಲ್ಲಿ ನಾಂದಿ ಪದ್ಯ, ಓಂ ಸ್ವಸ್ತಿ. ಶ್ರೀಮತ್ ಮುಂತಾದ ಪದಗಳಿವೆ. ಇಲ್ಲಿಯ ಶಾಸನಗಳಲ್ಲಿ ಸಾಮಾನ್ಯವಾಗಿ ಆಳುವ ರಾಜನ ಕಾಲದ ಉಲ್ಲೇಖವಿರುತ್ತದೆ. ಕುಮಾಂವಿನಲ್ಲಿ ಶಾಸನಸಂಗ್ರಹಣ ಕಾರ್ಯ ಇನ್ನೂ ನಡೆಯಬೇಕಾಗಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಾಸನಗಳು ದೊರಕುವ ನಿರೀಕ್ಷೆಯಿದೆ.

ಕುಮಾಂವಿನಲ್ಲಿ ದೊರಕಿರುವ ನಾಣ್ಯಗಳು ಬಹು ಕಡಿಮೆ. ಕುಣಿಂದ ವಂಶದ ಅರಸುಗಳೇ ಕುಮಾಂವಿನಲ್ಲಿ ಮೊಟ್ಟಮೊದಲು ನಾಣ್ಯಗಳನ್ನು ಬಳಕೆಗೆ ತಂದವರು. ಅನಂತರದ ಕುಷಾಣರ ತಾಮ್ರನಾಣ್ಯಗಳು ಕುಮಾಂವಿನಲ್ಲಿ ದೊರಕಿವೆ. ಕುಮಾಂವಿನಲ್ಲಿ ರಾಜ್ಯಭಾರ ಮಾಡಿದ ಯೌಧೇಯರ ನಾಣ್ಯಗಳು ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಕುಮಾಂವಿನ ಚರಿತ್ರೆಗೆ ಇವು ಬಹು ಮುಖ್ಯವಾದವು. ಕುಣಿಂದ ವಂಶದ ಅರಸರು ಅಚ್ಚುಹಾಕಿದವೆಂದು ಹೇಳಲಾದ ಬೆಳ್ಳಿಯ ನಾಣ್ಯಗಳು ಗುಂಡಗಿದ್ದು 327, 304 ಮತ್ತು 281 ಗ್ರೇನ್ ತೂಕದವಾಗಿವೆ. ಇವುಗಳ ಮುಂಬದಿಯಲ್ಲಿ ಮರದ ಪಕ್ಕದಲ್ಲಿ ನಿಂತಿರುವ ಗೂಳಿಯ ಚಿತ್ರವೂ ಶಿವದತ್ತನ, ಹರದತ್ತನ ಎಂಬ ಬರೆಹಗಳೂ ಹಿಂಬದಿಯಲ್ಲಿ ನಂದಿಪಾದವೂ ವೃತ್ತದಲ್ಲಿ ಮರವೂ ಇವೆ. ಯೌಧೇಯರ ನಾಣ್ಯಗಳು ತಾಮ್ರದವು. ಅವು ಗುಂಡಾಗಿವೆ. ಅವುಗಳ ತೂಕ 82–195 ಗ್ರೇನ್‌ಗಳು. ಇವುಗಳ ಮುಂಬದಿಯಲ್ಲಿ ಭರ್ಜಿಯನ್ನು ಹಿಡಿದು ನಿಂತಿರುವ, ಆರು ಮುಖಗಳ ಕಾರ್ತಿಕೇಯನ ಚಿತ್ರ, ಕೆಳಗಡೆ ಬ್ರಾಹ್ಮೀಲಿಪಿಯಲ್ಲಿ ಬರೆಹ, ಹಿಂಬದಿಯಲ್ಲಿ ದೇವತೆಯ ಚಿತ್ರ, ಚೈತ್ಯ, ಮತ್ತು ನಿಂತಿರುವ ಗೂಳಿಯ ಚಿತ್ರಗಳಿವೆ. ಮತ್ತೆ ಕೆಲವು ನಾಣ್ಯಗಳು ಕುಮಾಂವಿನಲ್ಲಿ ಇನ್ನೂ ದೊರೆಕಿಲ್ಲ. (ಎ.ವಿ.ಎನ್.)

**ಕುಮಾರ ಕಂಪಣ್ಣ :** ವಿಜಯನಗರದ ಸಂಗಮ ವಂಶದ ಎರಡನೆಯ ಚಕ್ರವರ್ತಿ. ಬುಕ್ಕರಾಯ ಮತ್ತು ರಾಣಿ ದೇವಾಯಿಯರ ಪುತ್ರ. ವಿಜಯನಗರ ಸಾಮ್ರಾಜ್ಯ ತಮಿಳು ದೇಶದಲ್ಲಿ ವಿಸ್ತರಿಸಲು ಈತ ಮುಖ್ಯ ಕಾರಣ. ಆ ಕಾಲದ ಹಲವಾರು ಶಾಸನಗಳಿಂದಲೂ ಈತನ ಪತ್ನಿಯರಲ್ಲೊಬ್ಬಳಾದ ಕವಯಿತ್ರಿ ಗಂಗಾದೇವಿಯಿಂದ ರಚಿತವಾದ ಮಧುರಾವಿಜಯಮ್ ಅಥವಾ ವೀರಕಂಪಣರಾಯ ಚರಿತೆಯಿಂದಲೂ ಇವನ ಜೀವನವೃತ್ತಾಂತ ದೊರಕುತ್ತದೆ. ಸುಶಿಕ್ಷಿತನಾಗಿದ್ದ ಕುಮಾರ ಕಂಪಣ್ಣನನ್ನು ಬುಕ್ಕರಾಯ ಮುಳಬಾಗಿಲು ಪ್ರದೇಶದ ಅಧಿಕಾರಿಯನ್ನಾಗಿ ನೇಮಿಸಿದ್ದ. ಸಾಮ್ರಾಜ್ಯಕ್ಕೆ ಕಿರುಕುಳ ಕೊಡುತ್ತಿದ್ದ ತೊಂಡಮಂಡಲದ ಸಾಂಬುವ ರಾಯರ ವಿರುದ್ಧ 1362ರಲ್ಲಿ ಯುದ್ಧಕ್ಕೆ ಹೋಗುವಂತೆ ಆಜ್ಞಾಪಿಸಿದ. ಚೆಂಗಲ್‌ಪೇಟೆಯನ್ನೂ ಉತ್ತರ ಮತ್ತು ದಕ್ಷಿಣ ಆರ್ಕಾಟು ಪ್ರದೇಶಗಳನ್ನೂ ರಾಜಧಾನಿಯಾದ ಕಂಚಿಯಿಂದ ಆಳುತ್ತಿದ್ದ ಸಾಂಬುವರಾಯ ಮನೆತನದ ಆಗಿನ ದೊರೆ ರಾಜ ಗಂಭೀರ ರಾಜನಾರಾಯಣ. ಉತ್ತರ ಆರ್ಕಾಟು ಜಿಲ್ಲೆಯಲ್ಲಿದ್ದ ಇವನ ಬಲಯುತವಾದ ಪಡ್ಮೈವೀಡು ಕೋಟೆಯನ್ನು ಕುಮಾರ ಕಂಪಣ್ಣ ಗೆದ್ದ. ಅನಂತರ ರಾಜ ಗಂಭೀರನ್ ಮಲ್ಯೆಕೋಟೆಯನ್ನೂ ಕಂಚಿಯನ್ನೂ ವಶಪಡಿಸಿಕೊಂಡು ರಾಜ ನಾರಾಯಣನನ್ನು ಕೊಂದುಹಾಕಿದ. ಕಂಚಿ ಮುಳುಬಾಗಿಲು ರಾಜ್ಯಕ್ಕೆ ಸೇರಿಸಿತು.

ಹಿಂದೂಧರ್ಮ ಮತ್ತು ಪ್ರಜೆಗಳ ವಿರುದ್ಧ ಅತ್ಯಾಚಾರಗಳನ್ನೆಸಗುತ್ತಿದ್ದ ಮಧುರೆಯ ಮುಸ್ಲಿಮರ ವಿರುದ್ಧ ಕಂಪಣ್ಣ ದಾಳಿ ಮಾಡಿದ; ಮಧುರೆಯ ಮಾರ್ಗದಲ್ಲಿ ತಂಜಾವೂರು ಮತ್ತು ತಿರುಚ್ಚಿ ಪ್ರದೇಶಗಳನ್ನು ವಶಪಡಿಸಿಕೊಂಡು ಮಧುರೆಯ ಸುಲ್ತಾನನಾದ ಫಕ್ರುದ್ದೀನ ಮುಬಾರಕ್ ಷಾನನ್ನು ಪ್ರಾಯಶಃ 1370ರಲ್ಲಿ ಎದುರಿಸಿದ. ಈ ಕದನದಲ್ಲಿ ಕುಮಾರ ಕಂಪಣ್ಣನ ಸೇನಾಪತಿಯಾದ ಸಾಳುವ ಮಂಗು ಬಹು ಧೈರ್ಯ ಸಾಹಸಗಳಿಂದ ಹೋರಾಡಿ ಸುಲ್ತಾನನ ಮರಣಕ್ಕೂ ಹಿಂದೂಗಳ ವಿಜಯಕ್ಕೂ, ಕಾರಣನಾದ. ಅನಂತರ ವಿಜಯನಗರದಲ್ಲಿ ಸಾಳುವ ವಂಶದ ಅಧಿಕಾರ ಸ್ಥಾಪಿಸಿದ. ಸಾಳುವ ನರಸಿಂಹನ ಮೂಲಪುರುಷನೇ ಈ ಮಂಗು ದಳಪತಿ. ಈ ವಿಜಯದಿಂದ ಕುಮಾರ ಕಂಪಣ್ಣ ಮುಸ್ಲಿಮರ ಆಡಳಿತವನ್ನು ಕೊನೆಗೊಳಿಸಿ ಕನ್ಯಾಕುಮಾರಿಯಿಂದ ತುಂಗಭದ್ರೆಯವರೆಗೂ ವಿಜಯನಗರದ ಆಡಳಿತವನ್ನು ನೆಲೆಗೊಳಿಸಿದೆ. ಮುಸ್ಲಿಮರ ದಾಳಿಯ ಸಮಯದಲ್ಲಿ ಶ್ರೀರಂಗದ ರಂಗನಾಥಸ್ವಾಮಿಯ ವಿಗ್ರಹವನ್ನು ತಿರುಪತಿಗೆ ಸಾಗಿಸಲಾಗಿತ್ತು. ಆ ವಿಗ್ರಹವನ್ನು ಮರಳಿ ತರಬೇಕೆಂದು ಜಿಂಜಿಯ ಸಾಮಂತನೂ ವಿಜಯನಗರದ ದಳಪತಿಯೂ ಆಗಿದ್ದ ಗೋಪಣಾರ್ಯನಿಗೆ ಕುಮಾರ ಕಂಪಣ್ಣ ಆಜ್ಞಾಪಿಸಿದ. ಆತ ಅದನ್ನು ತಂದು ಕೆಲವು ದಿನ ಜಿಂಜಿಯಲ್ಲಿರಿಸಿಕೊಂಡಿದ್ದು ಅನಂತರ ಶ್ರೀರಂಗದಲ್ಲಿ ಪುನಃ ಪ್ರತಿಷ್ಠಾಪಿಸಿದ. ಕುಮಾರ ಕಂಪಣ್ಣ ಆ ಸಮಯದಲ್ಲಿ ಸ್ವತಃ ಹಾಜರಿದ್ದು ದೇವಾಲಯಕ್ಕೆ ಅನೇಕ ದತ್ತಿಗಳನ್ನು ಬಿಟ್ಟುದಾಗಿ ಶಾಸನಗಳು ತಿಳಿಸುತ್ತವೆ. ತಮಿಳು ದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತರಾಜನಾಗಿದ್ದುಕೊಂಡು ಶಾಂತಿಯುತ ಸುಭದ್ರ ಆಡಳಿತವನ್ನು ಸ್ಥಾಪಿಸಿ ಹಿಂದೂ ಧರ್ಮದ ಪುನರುತ್ಥಾನಕ್ಕೆ ಕಾರಣನಾದ. ಇವನ ಆಳ್ವಿಕೆಯನ್ನು ತಮಿಳು ದೇಶದ ಇತಿಹಾಸದಲ್ಲಿ ಒಂದು ಉಜ್ಜ್ವಲ ಯುಗವೆಂದು ವರ್ಣಿಸಲಾಗಿದೆ. ಕುಮಾರ ಕಂಪಣ್ಣ 1374ರಲ್ಲಿ ತೀರಿಕೊಂಡ. ಇವನ ಮಗ ಹೇಮಣ್ಣ ಉಡ್ಯೆಯರ್ ಮತ್ತು ಅಳಿಯ ಪೊರ್ಕಾಸು ಉಡ್ಯೆಯರ ಇವರು 1402 ರ ವರೆಗೂ ಈ ಪ್ರಾಂತ್ಯದಲ್ಲಿ ಸಾಮಂತರಾಗಿದ್ದರು. (ಬಿ.ಕೆ.ಜಿ.)

**ಕುಮಾರ ಗಂಧರ್ವ :** 1924–92. ಸೃಜನಶೀಲ ಗಾಯಕರು, ನವರಾಗಗಳ ಸೃಷ್ಟಿಕರ್ತರು, ಸಂಗೀತ ಶಾಸ್ತ್ರ ಪರಿಣತರು, ಉಪನ್ಯಾಸಕಾರರು, ಭಾರತೀಯ ಸಂಗೀತ ಲೋಕ ಕಂಡ ಅಪರೂಪದ ವ್ಯಕ್ತಿ.

ಬೆಳಗಾವಿಯಿಂದ 19.2 ಕಿಮೀ ಪೂರ್ವಕ್ಕಿರುವ ಸೂಳೆಭಾವಿ ಎಂಬ ಕುಗ್ರಾಮದಲ್ಲಿ 8 ಏಪ್ರಿಲ್ 1924 ರಂದು ಜನಿಸಿದರು. ತಾಯಿ ಗುರುಸಿದ್ದವ್ವ. ತಂದೆ ಸಿದ್ರಾಮಯ್ಯ ವೃತ್ತಿಯಿಂದ ಸರಾಫರಾದರೂ, ಪ್ರವೃತ್ತಿಯಿಂದ ಸಂಗೀತಗಾರರು. ಸಂಪ್ರದಾಯಸ್ಥ ಜಂಗಮರು. ಕುಮಾರರ ಮೊದಲಿನ ಹೆಸರು ಶಿವಪುತ್ರಯ್ಯ. ಬಾಲಕ ಶಿವಪುತ್ರಯ್ಯನಲ್ಲಿ ಅದ್ಭುತವಾದ ಪ್ರತಿಭೆ ಹಾಗೂ ಸ್ಮರಣಶಕ್ತಿಯಿತ್ತು. ಅನುಕರಣ ಮಾಡುವ ಕಲೆಯಂತೂ ಬೆರಗಾಗುವಂತಿತ್ತು. ಈ ತ್ರಿವೇಣಿ ಸಂಗಮದ ಫಲವಾಗಿ ಬಾಲಕ ಶಿವಪುತ್ರ ಆಗಿನ ಪ್ರಖ್ಯಾತ ಗಾಯಕರಾಗಿದ್ದ ಉಸ್ತಾದ ಅಬ್ದುಲ್ ಕರೀಂಖಾನ್, ಸವಾಯಿ ಗಂಧರ್ವ, ಉಸ್ತಾದ ಬಡೇಗುಲಾಂ ಅಲಿಖಾನರಂಥ ವಿದ್ವಾಂಸರ ಹಾಡುಗಾರಿಕೆಯನ್ನು ಗ್ರಾಮೋಫೋನ್‌ಗಳಲ್ಲಿ ಕೇಳಿ, ಲವಲೇಶವೂ ವ್ಯತ್ಯಾಸವಿಲ್ಲದಂತೆ ಹಾಡಿ ಕೇಳುಗರನ್ನು ಬೆರಗುಗೊಳಿಸಿದ. ಒಂಬತ್ತು ವರ್ಷದ ಬಾಲಕನ ಸಂಗೀತ ಕಛೇರಿ ಕೇಳಲು ಜನ ಟಿಕೆಟುಕೊಂಡು ಬರುತ್ತಿದ್ದರು. ಎಚ್.ಎಂ.ವಿ. ಕಂಪನಿ ಹೊರ ತಂದ ಗಾನ ಮುದ್ರಿಕೆಯೂ ಜನಪ್ರಿಯವಾಯಿತು. ಬಾಲಕನ ಈ ಪ್ರತಿಭೆಯನ್ನು ಕಂಡು ಗುರುಮಠಕಲ್‌ನ ಶಾಂತವೀರ ಮಹಾಸ್ವಾಮಿಗಳು ಹರಸಿ 'ಕುಮಾರಗಂಧರ್ವ' ನೆಂಬ ಸ್ವರ್ಣ ಪದಕ ನೀಡಿದರು. ಆ ಪ್ರಶಸ್ತಿಯೇ ಇವರ ಶಾಶ್ವತ ಹೆಸರಾಯಿತು.

ಕುಮಾರನಿಗೆ 11ನೆಯ ವಯಸ್ಸಿನಲ್ಲಿಯೇ ಅಲಹಾಬಾದ್ ಸಂಗೀತ ಸಮ್ಮೇಳನದಲ್ಲಿ ಹಾಡುವಂತೆ ಕರೆಬಂದಿದ್ದು (1935) ಸಾಮಾನ್ಯವಲ್ಲ. ಅಲಹಾಬಾದ್ ಸಂಗೀತ ಸಮ್ಮೇಳನ ನಂತರ ಬನಾರಸ ಸಂಗೀತ ಸಮ್ಮೇಳನ, ಮುಂಬೈನ ಜಿನ್ನಾ ಹಾಲ್‌ನಲ್ಲಿ 1936 ಹಾಡಿದ ಕಾರ್ಯಕ್ರಮಗಳೆಲ್ಲ ಬಾಲ ಪ್ರತಿಭೆಯ ನಾದಯಾತ್ರೆಯ ದಿಗ್ವಿಜಯಗಳು.

ಮುಂಬೈನ ಜಿನ್ನಾ ಹಾಲ್‌ನಲ್ಲಿಯ ಕಾರ್ಯಕ್ರಮವನ್ನಂತೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ತನ್ನ 2–3–1936ರ ಸಂಚಿಕೆಯಲ್ಲಿ ಹಾಡಿ ಹೊಗಳುತ್ತ 'ಮುಂಬರುವ ದಿನಗಳಲ್ಲಿ ಈತ, 'ಅಸಾಧಾರಣ ಪ್ರತಿಭಾಶಾಲಿ'ಯಾಗುತ್ತಾನೆ. ಎಂದು ಭವಿಷ್ಯ ನುಡಿಯಿತು. ಆ ಭವಿಷ್ಯ ನಿಜವಾಯಿತು.

ಕುಮಾರರೆಂಬ ಬಂಗಾರದ ಗಟ್ಟಿಯನ್ನು ಸರ್ವಾಂಗ ಸುಂದರ ಆಭರಣವನ್ನಾಗಿ ಮಾಡಿದ ಕೀರ್ತಿ ಪಂಡಿತ.ಬಿ.ಆರ್. ದೇವಧರರಿಗೆ ಸಲ್ಲುತ್ತದೆ. ಅಖಂಡ 12 ವರ್ಷಗಳ ಕಾಲ ಕುಮಾರರಿಗೆ ಪಾಂಡಿತ್ಯದ ಹಾಲುಣಿಸಿ ಬೆಳೆಸಿದವರು ದೇವಧರರು. ತಾವು ಸ್ಥಾಪಿಸಿದ ಸ್ಕೂಲ್ ಆಫ್ ಇಂಡಿಯನ್ ಮ್ಯೂಸಿಕ್ ನ ವಿದ್ಯಾರ್ಥಿಗಳಲ್ಲಿ ಒಬ್ಬನೆಂದು ಬಗೆಯದೇ, ವಿಶೇಷ ಅಕ್ಕರತೆಯಿಂದ, ತಮ್ಮ ಮಗನಂತೆ ಸಾಕಿ ಸಲುಹಿ, ಕುಮಾರನನ್ನು ಪ್ರತಿಭಾವಂತ ಗಾಯಕನನ್ನಾಗಿ ರೂಪಿಸಿದ ಮೂರ್ತಿಕಾರ ಅವರು. ಕೇವಲ ಅನುಕರಣೆಯೇ ಗಾಯನವಲ್ಲ, ಅದೊಂದು ಸೃಜನಶೀಲ ಪ್ರಕ್ರಿಯೆ ಎಂದರುಹಿ, ಸಂಗೀತಶಾಸ್ತ್ರದ ಸಾರಸರ್ವಸ್ವವನ್ನು ಪರಿಚಯಿಸಿದರು. ಕುಮಾರನನ್ನು ನಿಜವಾದ 'ಗಂಧರ್ವ' ನನ್ನಾಗಿಸಿದವರು ದೇವಧರ ಮಾಸ್ತರರು.

ಅಲ್ಲಿಂದ ಮುಂದೆ, ಕುಮಾರರಿಗೆ ಹಿಂದಿರುಗಿ ನೋಡುವ ಪ್ರಮೇಯ ಒದಗಲಿಲ್ಲ. ಹಿಂದೂಸ್ಥಾನಿ ಶಾಸ್ತ್ರೀಯ ಹಾಡುಗಾರಿಕೆಗೆ, ಅಂದರೆ ಖಯಾಲ್ ಗಾಯನಕ್ಕೆ ಹೊಸ ಆಯಾಮ ತಂದು ಕೊಟ್ಟಿದ್ದು, ಸಂಗೀತಶಾಸ್ತ್ರದ ಚೌಕಟ್ಟನ್ನು ಮೀರದೆಯೇ ರಾಗದ ಇನ್ನೊಂದು ಮುಖದರ್ಶನ ಮಾಡಿಸಿದ್ದು, ಮತ್ತೆ ಕೆಲವು ಸಲ ಶಾಸ್ತ್ರದ ಚೌಕಟ್ಟನ್ನೂ ಮೀರಿ ವಿಮರ್ಶಕರನ್ನು ಗೊಂದಲದಲ್ಲಿ ಸಿಲುಕಿಸಿದ್ದು ಅವರ ಪ್ರಯೋಗಶೀಲತೆಗೆ, ಸೃಜನಶೀಲತೆಗೆ ಸಾಕ್ಷಿ. ಕುಮಾರರನ್ನು ಹಿಂದುಸ್ತಾನಿ ಸಂಗೀತದ 'ಬಂಡಾಯಗಾರ' ನೆಂದು ಕರೆದರು. ವಿಮರ್ಶಕರ ಆಕ್ಷೇಪಣೆಗಳಿಗೆ ಶಾಸ್ತ್ರ ಸಮ್ಮತವಾದ ತಕ್ಕ ಉತ್ತರವನ್ನು ಕೆಚ್ಚೆದೆಯಿಂದ ಹೇಳಿದವರು ಕುಮಾರರು.

ಮುಂಬೈ ಶಹರದ ಉಪನಗರ ದಾದರ್‌ನಲ್ಲಿ ಬ್ರಾಹ್ಮಣ ಸಹಾಯಕ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುಮಾರರು ಭೂಪರಾಗ ಹಾಡುತ್ತಿದ್ದರು. ಶ್ರೋತೃಗಳೆಲ್ಲ ರಾಗಾನಂದದಲ್ಲಿ ಮೈಮರೆತಿದ್ದಾರೆ. ಭೂಪರಾಗದ ಉತ್ತುಂಗವನ್ನು ಕುಮಾರರು ತಲುಪಿದ್ದಾರೆ ಎಂದುಕೊಂಡಾಗ ತೀರ ಅನಿರೀಕ್ಷಿತವಾಗಿ 'ಮಧ್ಯಮ' ಸ್ವರದ ಸ್ಪರ್ಶ ಮಾಡಿಬಿಟ್ಟರು. ಶಾಸ್ತ್ರವು ಭೂಪರಾಗದಲ್ಲಿ ಮಧ್ಯಮ ಸ್ವರವು ವರ್ಜ್ಯವೆಂದು ಹೇಳುತ್ತದೆ. ಕುಮಾರರು ಶಾಸ್ತ್ರದ ಈ ಚೌಕಟ್ಟನ್ನು ಮೀರಿದಾಗ ನೆರೆದವರೆಲ್ಲ 'ವಾಹ್' ಎಂಬ ದಾದ್ ನೀಡಿದರು. ಆದರೆ ಸಂಗೀತ ವಿಮರ್ಶಕರು ಮಾತ್ರ 'ಭೂಪರಾಗದಲ್ಲಿ ಮಧ್ಯಮ ಸ್ವರವೇಕೆ?' ಎಂದು

ಯೋಚನಾಮಗ್ನರಾದರು. ಮುಂದೆ ಈ ಪ್ರಯೋಗ ದೊಡ್ಡ ವಿವಾದಕ್ಕೆ ಕಾರಣವಾಯಿತು. ಆಗ, ಕುಮಾರರು ಎದೆಸೆಟಿಸಿ ನಿಂತು ತಮ್ಮ ಪ್ರಯೋಗ ಒಂದು ಆವಿಷ್ಕಾರವೆಂದೂ, ಆ ರಾಗಕ್ಕೆ ತಾವು 'ಚೌತಿಭೂಪ' (ಚೌತಿ – ನಾಲ್ಕನೆಯ ಸ್ವರ – ಮಧ್ಯಮಸ್ವರ)ವೆಂದು ಹೆಸರಿಟ್ಟಿರುವುದಾಗಿಯೂ ಸಾರಿದರು. ಶಾಸ್ತ್ರನಿಷ್ಠರು, ಸಂಪ್ರದಾಯ ಪ್ರಿಯರು ಈ ಉತ್ತರದಿಂದ ತಣ್ಣಗಾದರು. ಕುಮಾರರ ಈ ಬಂಡಾಯ ಪ್ರವೃತ್ತಿ ಹೊಸ ಹೊಸ ಆವಿಷ್ಕಾರಗಳಿಗೆ ಕಾರಣವಾಗಿದೆ.

ಅವರು ಸೃಜನಶೀಲ ಗಾಯಕರು. ಒಮ್ಮೆ ಹಾಡಿದ್ದನ್ನೇ ಮತ್ತೆಂದೂ ಹಾಡಲಿಲ್ಲ. "ಒಮ್ಮೆ ಹಾಡಿದ್ದನ್ನು ಮತ್ತೊಮ್ಮೆ ಹಾಡುವ ಸ್ಥಿತಿಗೆ ಬರುವ ಮೊದಲೇ ಕುಮಾರ ಹಾಡುವುದನ್ನು ನಿಲ್ಲಿಸಿರುತ್ತಾನೆ" ಎಂದು ಸಾರಿ, ನುಡಿದಂತೆ ನಡೆದರು. ಒಂದೇ ರಾಗವನ್ನು ನೂರು ಸಲ ಹಾಡಿದರೂ ಅದು ಬೇರೆಯದೇ ಆಗಿರುತ್ತಿತ್ತು. ಇವರ ಪ್ರೀತಿಯ ರಾಗ ಮಾಲವತಿ. 1975ರಲ್ಲಿ ಇದರ ಧ್ವನಿ ಸುರಳಿ ಸಿದ್ಧವಾಗಿದೆ. ಇದನ್ನು ಇವರೇ ನಿರ್ಮಾಣ ಮಾಡಿದ್ದಾರೆ. ಅದೆಷ್ಟೋ ಸಲ ಮಾಲವತಿಯನ್ನು ಕುಮಾರರು ಹಾಡಿದ್ದರೂ, ಪ್ರತಿಸಲವೂ ಅದು ಬೇರೆಯದೇ ಆಗಿರುತ್ತಿತ್ತು. ಇವರು ಹಾಡುವ ಶೈಲಿ, ಸ್ವರಗಳ ಲಗಾವ್, ತಾನ್‌ಗಳು, ರಾಗಚಿತ್ರಣ ಇವೆಲ್ಲ ಸಮಕಾಲೀನ ಶ್ರೇಷ್ಠರಿಗಿಂತ ತೀರ ಭಿನ್ನವಾಗಿದ್ದವು.

ಕುಮಾರರಂಥ ಛಲವಾದಿ ದೊರೆಯುವುದು ವಿರಳ. ಶ್ವಾಸಕೋಶದ ತೊಂದರೆಯಿಂದ ಒಮ್ಮೆ ಐದು ವರ್ಷಗಳ ಕಾಲ (ನವೆಂಬರ್ 1947 ರಿಂದ ಮಾರ್ಚ್ 1952) ಹಾಗೂ ಮತ್ತೊಮ್ಮೆ ಒಂದು ವರ್ಷದ ಕಾಲ (ಡಿಸೆಂಬರ್ 1957ರಿಂದ ಜನವರಿ 1959) ವೈದ್ಯರು ಹಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಿದರು. ಆದರೆ ಕುಮಾರರು ತಮ್ಮ ಛಲಮಾತ್ರದಿಂದ ಅದಮ್ಯವಾದ ಆತ್ಮವಿಶ್ವಾಸದಿಂದ, ಜೀವನ ಕುರಿತಾದ ಅಪಾರವಾದ ಪ್ರೀತಿಯಿಂದ ಅನಾರೋಗ್ಯವನ್ನು ಗೆದ್ದು, ಸಂಗೀತವೇ ತಮ್ಮ ಉಸಿರು ಎಂಬಂತೆ ಹಾಡತೊಡಗಿದರು. ಅಗ್ನಿ ಪಕ್ಷಿಯಂತೆ ಮರುಹುಟ್ಟು ಪಡೆದು ಮೊದಲಿಗಿಂತಲೂ ಸಶಕ್ತವಾಗಿ ಹಾಡಿ ನಲಿದ ಹಾಡುಹಕ್ಕಿ ಇವರು. ತಮ್ಮ ಸುದೀರ್ಘ ಅನಾರೋಗ್ಯದ ಕಾಲದಲ್ಲಿ ಸಂಗೀತದಿಂದ ವಿಮುಖರಾಗದೇ ಸಂಗೀತಶಾಸ್ತ್ರದ ಆಳವಾದ ಅಧ್ಯಯನ ನಡೆಸಿದ ನಾದಯೋಗಿ ಕುಮಾರರು.

ಹಿಂದೂಸ್ತಾನಿ ಸಂಗೀತದ ರಾಗಗಳಿಗೂ, ನಿಸರ್ಗಕ್ಕೂ ಇರುವ ನಿಕಟ ಸಂಬಂಧವನ್ನು ಬಿಂಬಿಸುವ 'ಋತು' ಆಧಾರಿತ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮವನ್ನು ಮೊಟ್ಟಮೊದಲ ಬಾರಿಗೆ ಸಂಯೋಜಿಸಿದ ಕೀರ್ತಿ ಕುಮಾರರಿಗೆ ಸಲ್ಲುತ್ತದೆ. ಗೀತವರ್ಷ, ಗೀತಹೇಮಂತ, ಗೀತವಸಂತ ಇತ್ಯಾದಿ ಕಾರ್ಯಕ್ರಮಗಳೆಲ್ಲ ಇವರ ಕಲ್ಪನೆಯಲ್ಲಿ ಅರಳಿದ ಸುಮಗಳೇ, ಹಿಂದೂಸ್ಥಾನಿ ಹಾಡುಗಾರಿಕೆಯ ವಿವಿಧ ಅಂಗಗಳನ್ನು ಕೇಂದ್ರವಾಗಿಟ್ಟುಕೊಂಡು ರೂಪಿಸಿದ 'ಠುಮರಿ–ಟಪ್ಪಾ–ತರಾನಾ' ಇವರ ಪ್ರೌಢ ಚಿಂತನೆಯ ಪ್ರತೀಕ. 'ತುಕಾರಾಮ ಏಕದರ್ಶನ', 'ತುಲಸೀದಾಸ ಏಕದರ್ಶನ' ಹಾಗೂ ಕಬೀರ ಸೂರದಾಸ, ತುಲಸಿದಾಸ ಸಂತಮೀರಾರ ಹಿಂದಿ ಭಜನೆಗಳನ್ನು ದೋಹಗಳನ್ನು ಬಳಸಿಕೊಂಡು ರೂಪಿಸಿದ ಕಾರ್ಯಕ್ರಮಗಳು ಸಂಗೀತದ ನೆಲೆಗಟ್ಟಿನ ಮೇಲೆ ಆಧ್ಯಾತ್ಮ ಚಿಂತನೆಯನ್ನು ಬಿಂಬಿಸುವ ಪ್ರಯತ್ನಗಳಾಗಿದ್ದವು.

ಅನಾರೋಗ್ಯದ ಕಾರಣದಿಂದ ಮುಂಬೈಯಿಂದ ದೇವಾಸಕ್ಕೆ ವಲಸೆ ಬಂದು, ಅಲ್ಲಿಯೇ ನೆಲೆ ನಿಂತ ಬಳಿಕ, ಸುತ್ತಲಿನ ಜನಪದ ಸಂಗೀತವನ್ನು ಬಹು ಆಸಕ್ತಿಯಿಂದ ಆಲಿಸಿದರು. ಅದನ್ನು ತಮ್ಮದಾಗಿಸಿಕೊಂಡು ಅದಕ್ಕೊಂದು ಶಾಸ್ತ್ರೀಯ ರೂಪ ನೀಡಿದರು. ತತ್ಪರಿಣಾಮವಾಗಿ 'ಹಿಂದುಸ್ತಾನಿ ಸಂಗೀತಕ್ಕೆ 'ಧುನ್' ಉಗಮರಾಗಗಳ ಸೇರ್ಪಡೆಯ ಲಾಭವಾಯಿತು. ಅಹಿಮೋಹಿನಿ, ಮಾಲವತಿ, ಮಧಸೂರಜಾ ಮೊದಲಾದ ಧುನ್ ಉಗಮ ರಾಗಗಳನ್ನು ಕುಮಾರರು ನಿರ್ಮಿಸಿ, ಹಿಂದುಸ್ತಾನಿ ಸಂಗೀತದ ರಾಗಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ. 'ಮಾಲವಾಕೆ ಲೋಕ್‌ಧುನ್' ಎಂಬ ವಿಶೇಷ ಕಾರ್ಯಕ್ರಮವನ್ನು ನಡೆಸಿದರು. ಚೌತಿಭೂಪ, ಸಹೇಲಿತೋಡಿ, ಗಾಂಧಿಮಲ್ಲಾರ ರಾಗಗಳನ್ನು ಶಾಸ್ತ್ರ ಆಧಾರದಿಂದ ನಿರ್ಮಿಸಿ ಹಾಡಿದ್ದಾರೆ. ದುರ್ಗಾಕೇದಾರ, ನಂದಕೇದಾರ, ಗೌರಿಬಸಂತ, ಸೋಹನಿಭಟಿಯಾರ ಮೊದಲಾದ ಜೋಡುರಾಗಗಳಿಗೂ ಕುಮಾರರೇ ನಿರ್ಮಾತೃ. ಇವೆಲ್ಲ ಹಿಂದುಸ್ಥಾನಿ ಸಂಗೀತದಲ್ಲಿ ಕುಮಾರರ ಅಳಿಸಲಾಗದ ಹೆಜ್ಜೆ ಗುರುತುಗಳು.

'ಅನೂಪರಾಗವಿಲಾಸ' ಕುಮಾರರು ನೀಡಿದ ಅಪರೂಪದ ಶಾಸ್ತ್ರೀಯ ಗ್ರಂಥ. ಸಂಗೀತದ ಕುರಿತು ಇವರು ನೀಡಿದ ಉಪನ್ಯಾಸಗಳೂ ಅಷ್ಟೇ. ಸಂಗೀತಶಾಸ್ತ್ರವನ್ನು ಮಥಿಸಿ ತಂದ ನವನೀತಗಳವು.

ಮಗ ಮುಕುಲ, ಪತ್ನಿ ವಸುಂಧಾರಾ ತಾಯಿ, ಶಿಷ್ಯ ವಿಜಯ ಸರದೇಶಮುಖರು ಕುಮಾರರ ಹಾಡಿನ ಪರಂಪರೆಯನ್ನು ಮುಂದುವರಿಸಿದ್ದಾರೆ. ನೂರಾರು ಗಾನತಟ್ಟೆಗಳು, ಧ್ವನಿಸುರುಳಿಗಳು, ಹತ್ತಾರು ವೀಡಿಯೋಗಳ ರೂಪದಲ್ಲಿ ಕುಮಾರರು ಈಗಲೂ ನಮ್ಮೊಂದಿಗಿದ್ದಾರೆ.

ಕುಮಾರರಿಗೆ ಸಂದ ಪ್ರಶಸ್ತಿಗಳು ಅನೇಕ. ಉಜ್ಜಯಿನಿ ವಿಶ್ವವಿದ್ಯಾನಿಲಯದ ಡಿ.ಲಿಟ್ ಪದವಿ (1973), ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದಿಂದ ಗೌರವ ಡಾಕ್ಟರೇಟ್ (1962), ಮಧ್ಯಪ್ರದೇಶ ಕಲಾ ಪರಿಷತ್ತಿನ ಸನ್ಮಾನ (1973), ಕೇಂದ್ರನಾಟಕ ಅಕಾಡೆಮಿ ಸನ್ಮಾನ (1972), ಪದ್ಮಭೂಷಣ ಪ್ರಶಸ್ತಿ (1977), ಮಧ್ಯ ಪ್ರದೇಶ ಸರಕಾರದ ಶಿಖರ ಸನ್ಮಾನ್ (1983), ಪದ್ಮವಿಭೂಷಣ (1990) ಪ್ರಶಸ್ತಿ ಇವು ಕೆಲವು ಕುಮಾರ ಗಂಧರ್ವರಿಗೆ ಸಂದ ಗೌರವಗಳು. ಪುಣೆಯ ಸವಾಯಿ ಗಂಧರ್ವ ಉತ್ಸವದಲ್ಲಿ ಕುಮಾರರ ಕೊನೆಯ ಸಾರ್ವಜನಿಕ ಬೈಠಕ್ ನಡೆಯಿತು. ಇವರು 1992 ಜನವರಿ 12 ರಂದು ನಾದಲೀನರಾದರು. (ಎಸ್.ಜಿ.)

**ಕುಮಾರ ಗುಪ್ತ** : ಭಾರತವನ್ನಾಳಿದ ಗುಪ್ತ ಸಂತತಿಯ ಅರಸರಲ್ಲಿ ಈ ಹೆಸರಿನವರು ನಾಲ್ವರಿದ್ದಾರೆ.

**ಕುಮಾರಗುಪ್ತ I** : ಗುಪ್ತ ಸಾರ್ವಭೌಮರಲ್ಲಿ ಪ್ರಸಿದ್ಧನಾದ ಎರಡನೆಯ ಚಂದ್ರಗುಪ್ತ ಮತ್ತು ಆತನ ಪಟ್ಟದ ರಾಣಿ ಧ್ರುವಾ ದೇವಿಯ ಮಗ. ಇವನಿಗೆ ಮಹೇಂದ್ರಾದಿತ್ಯನೆಂಬ ಬಿರುದಿತ್ತು. ತನ್ನ ತಂದೆಯ ತರುವಾಯ ಈತ ಸಿಂಹಾಸನವನ್ನೇರಿ 415–55 ವರೆಗೆ 40 ವರ್ಷಕಾಲ ರಾಜ್ಯವಾಳಿದ. ಈತ ಸ್ಕಂಧ ಕಾರ್ತಿಕೇಯನ ಭಕ್ತ. ಆ ದೇವತೆಯ ಚಿತ್ರವಿದ್ದ ನಾಣ್ಯಗಳನ್ನು ಹೊರಡಿಸಿದ. ಕಾಳಿದಾಸ ಮಹಾಕವಿಯ ಕುಮಾರಸಂಭವ ಕಾವ್ಯದ ನಾಯಕ ಕುಮಾರಗುಪ್ತನೆಂಬುದು ವಿದ್ವಾಂಸರ ಅಭಿಪ್ರಾಯ. ಇವನು ಅನೇಕ ಜೈತ್ರಯಾತ್ರೆಗಳನ್ನು ಕೈಗೊಂಡು ಅಶ್ವಮೇಧ ಯಾಗ ಮಾಡಿದ. ಕುಮಾರಗುಪ್ತನ ಆಡಳಿತ ಕಾಲದಲ್ಲಿ ಶಾಂತಿ ಸುಭದ್ರತೆಗಳು ನೆಲಸಿದ್ದುವು. ಆದರೆ ಇವನ ಆಳ್ವಿಕೆಯ ಕೊನೆಯ ಭಾಗದಲ್ಲಿ ಹೂಣರ ದಾಳಿ ಆರಂಭವಾಯಿತು. ಇವನೂ ಇವರ ಮಗ ಸ್ಕಂಧಗುಪ್ತನೂ ಪರಾಕ್ರಮದಿಂದ ಹೋರಾಡಿ ಹೂಣರ ದಾಳಿಯನ್ನು ಹಿಮ್ಮೆಟ್ಟಿಸಿದರು. ಕುಮಾರ ಗುಪ್ತನ ಮರಣಾನಂತರ ಸ್ಕಂಧಗುಪ್ತ ಪಟ್ಟಕ್ಕೆ ಬಂದ. (ಜಿ.ಆರ್.ಆರ್.)

**ಕುಮಾರಗುಪ್ತ II**; ಗುಪ್ತ ಸಾಮ್ರಾಜ್ಯದ ಒಬ್ಬ ಚಕ್ರವರ್ತಿ. ಸ್ಕಂಧಗುಪ್ತನ ಮೊಮ್ಮಗ. 473–74ರಲ್ಲಿ ಆಳುತ್ತಿದ್ದ, ಆ ಸಾಮ್ರಾಜ್ಯದ ಅವನತಿಯ ಕಾಲದಲ್ಲಿ ಪೂರ್ವದ ಕೆಲವು ಭಾಗಗಳು ಮಾತ್ರ ಈತನ ಆಳ್ವಿಕೆಗೆ ಸೇರಿದ್ದುವು.

ಉತ್ತರಕಾಲೀನ ಗುಪ್ತಸಂತತಿಗೆ ಸೇರಿದ ಇನ್ನಿಬ್ಬರು ಕುಮಾರಗುಪ್ತರ ಹೆಸರುಗಳು ಉಲ್ಲೇಖವಾಗಿದ್ದರೂ ಅವರ ವಿಷಯವಾಗಿ ಏನೂ ತಿಳಿದುಬಂದಿಲ್ಲ. (ಡಿ.ಎಸ್.ಜಿ.)

**ಕುಮಾರ ಜೀವ** : ಚೀನದಲ್ಲಿ ಬೌದ್ಧಧರ್ಮದ ಪ್ರಸಾರಕ್ಕೆ ಮುಖ್ಯ ಕಾರಣನಾದ ಬೌದ್ಧಭಿಕ್ಷು. 4ನೆಯ ಶತಮಾನದವ. ತಂದೆ ಕುಮಾರಾಯನ, ಭಾರತೀಯ; ತಾಯಿ ಜೀವಾ, ಕುಚಿನಗರದ ರಾಜಕುಮಾರಿ. ಬಂಧುದತ್ತನ ಮಾರ್ಗದರ್ಶನದಲ್ಲಿ ಕಾಶ್ಮೀರ ಮತ್ತು ಕ್ಯಾಷ್ಗರ್‌ಗಳಲ್ಲಿ ಬೌದ್ಧಸಾಹಿತ್ಯ–ತತ್ತ್ವಶಾಸ್ತ್ರಗಳನ್ನೂ ಗೊಕ್ಕುಕದಲ್ಲಿ ಮಹಾಯಾನ ಬೌದ್ಧದರ್ಶನವನ್ನೂ ಅಧ್ಯಯನ ಮಾಡಿ ಅನಂತರ ಕುಚಿನಗರದ ವಿಹಾರದಲ್ಲಿ ಭಿಕ್ಷುವಾಗಿದ್ದ. ಮಧ್ಯ ಏಷ್ಯದಲ್ಲೆಲ್ಲ ಇವನ ಪಾಂಡಿತ್ಯ ಪ್ರಸಿದ್ಧವಾಗಿತ್ತು. 383 ರಲ್ಲಿ ಚೀನೀಯರು ಕುಚಿನಗರದ ಮೇಲೆ ದಾಳಿ ಮಾಡಿದಾಗ ಕುಮಾರ ಜೀವನನ್ನು ಸೆರೆ ಹಿಡಿದು ಚೀನಕ್ಕೊಯ್ದರು. ಅಲ್ಲಿಯ ಚಕ್ರವರ್ತಿ ಇವನ ವಿದ್ವತ್ತಿಗೆ ಮಾರು ಹೋಗಿ ಇವನನ್ನು 401 ರಲ್ಲಿ ತನ್ನ ರಾಜಧಾನಿಗೆ ಕರೆಸಿಕೊಂಡು ತನ್ನ ಗುರುವಾಗಿ ನೇಮಿಸಿಕೊಂಡ, ಅಲ್ಲಿ ಇವನು 412 ರ ವರೆಗೆ ಇದ್ದು ನೂರಕ್ಕೂ ಹೆಚ್ಚು ಸಂಸ್ಕೃತ ಬೌದ್ಧ ಗ್ರಂಥಗಳನ್ನು ಚೀನೀಭಾಷೆಗೆ ಪರಿವರ್ತಿಸಿದ. ಮಹಾಯಾನ ತತ್ತ್ವಗಳನ್ನು ಚೀನೀಯರಿಗೆ ಬೋಧಿಸಿದವರಲ್ಲಿ ಈತ ಮೊದಲಿಗ. ಸದ್ಧರ್ಮ ಪುಂಡರೀಕ, ಸೂತ್ರಾಲಂಕಾರ, ವಜ್ರಚ್ಛೇದಿತಾ ಗ್ರಂಥಗಳ ಅನುವಾದಗಳು ಪ್ರಸಿದ್ಧವಾಗಿವೆ. ಮಧ್ಯಶಾಖೆಯ ಹಲವು ಗ್ರಂಥಗಳನ್ನೂ ಪರಿವರ್ತನೆ ಮಾಡಿದ್ದಾನೆ. ಕುಮಾರಜೀವ 413 ರಲ್ಲಿ ಚೀನದಲ್ಲಿ ನಿಧನನಾದ. ಸೆಂಗ್‌ಚ ಓ (384–414) ಮತ್ತು ತ ಓ–ಷೆಂಗ್ (ಸು.434)– ಇವರು ಕುಮಾರಜೀವನ ಪ್ರಮುಖ ಶಿಷ್ಯರು. (ಎಸ್.ಕೆ.ಎಸ್.; ಎಸ್.ಕೆ.ಆರ್.)

**ಕುಮಾರದಾಸ** : ಜಾನಕೀಹರಣವೆಂಬ ಸಂಸ್ಕೃತ ಕಾವ್ಯದ ಕರ್ತೃ. ಈ ಕಾವ್ಯ ಮೊದಲು ದೊರೆತದ್ದು ಸಿಂಹಳೀ ಭಾಷೆಯ ಭಾಷಾಂತರದ ರೂಪದಲ್ಲಿ. ಸಂಸ್ಕೃತ ಮೂಲರೂಪ ಪೂರ್ಣವಾಗಿ ಉಪಲಬ್ಧವಿಲ್ಲ. ಕೇವಲ 14 ಸರ್ಗಗಳು ಮಾತ್ರ ಸಿಕ್ಕಿವೆ. ಸಿಂಹಳದ ಐತಿಹ್ಯದಂತೆ ಈತ 6ನೆಯ ಶತಮಾನದಲ್ಲಿ (517–26) ಸಿಂಹಳ ದ್ವೀಪದ ರಾಜನಾಗಿದ್ದನೆಂದೂ ಈತನೇ ಕಾವ್ಯ ಬರೆದನೆಂದೂ ತಿಳಿದುಬರುತ್ತದೆ. ಇತ್ತೀಚಿನ ವಿಮರ್ಶಕರು ಈತನ ಕಾಲವನ್ನು 8ನೆಯ ಶತಮಾನದ ಕೊನೆ ಅಥವಾ 9ನೆಯ ಶತಮಾನದ ಆದಿಯೆಂದು ನಿಷ್ಕರ್ಷಿಸಿದ್ದಾರೆ.

ಈತ ಅಂಧನಾಗಿ ಜನಿಸಿ ತನ್ನ ಇಬ್ಬರು ಸೋದರಮಾವಂದಿರ ಸಹಾಯದಿಂದ ರಾಜ್ಯ ಪಡೆದು ಕೆಲಕಾಲದ ಮೇಲೆ ಕಾವ್ಯವನ್ನು ರಚಿಸಿದನೆಂದು ತಿಳಿಸುವ ಒಂದು ಕಥೆಯೂ ಇದೆ. ಜಾನಕೀಹರಣ ರಾಮಾಯಣ ಹಾಗೂ ರಘುವಂಶ ಕಾವ್ಯಗಳಲ್ಲಿ ಬರುವ ಶ್ರೀರಾಮಚಂದ್ರನ ಕಥೆ. ಈ ಕಾವ್ಯ ಅಯೋಧ್ಯೆ, ದಶರಥ ಮತ್ತು ಅವನ ಹೆಂಡತಿಯರ ವರ್ಣನೆಯಿಂದ ಪ್ರಾರಂಭವಾಗಿ ಶ್ರೀರಾಮನ ಜಯದೊಂದಿಗೆ ಮುಕ್ತಾಯವಾಗುತ್ತದೆ. ಜಾನಕಿಯ ಅಪಹರಣದ ವೃತ್ತಾಂತ ಕಾವ್ಯದ ಮಧ್ಯದಲ್ಲಿ ಎಂದರೆ ಹತ್ತನೆಯ ಸರ್ಗದಲ್ಲಿ ಬರುತ್ತದೆ.

ಕವಿ ತನ್ನನ್ನು ಕುಮಾರ ಪರಿಚಾರಕ ಎಂದು ಕರೆದುಕೊಂಡಿದ್ದಾನೆ, ಈತನ ರಚನೆ, ಶೈಲಿಗಳಲ್ಲೂ, ಕಾವ್ಯವಸ್ತುವಿನ ವಿನ್ಯಾಸದಲ್ಲೂ ವೈದರ್ಭೀ ರೀತಿಯ ರಚನಾ ಕ್ರಮದಲ್ಲೂ ಕಾಳಿದಾಸನ ಪ್ರಭಾವ ಎದ್ದುಕಾಣುತ್ತದೆ. ಅನುಪ್ರಾಸ ಪ್ರಿಯನಾದರೂ ಎಲ್ಲಿಯೂ ಎಲ್ಲೆ ಮೀರಿಲ್ಲ. ಛಂದಸ್ಸಿನ ಪ್ರಯೋಗದಲ್ಲಿ ಕೌಶಲ ತೋರಿದ್ದಾನೆ. ದ್ರುತವಿಲಂಬಿತ, ಪ್ರಮಿತಾಕ್ಷರಾ, ಉಪಜಾತಿ, ವೈಶಾಲೀಯ, ಶಾರ್ದೂಲ ವಿಕ್ರೀಡಿತ, ಸ್ರಗ್ಧರಾ ಮುಂತಾದ ವೃತ್ತಗಳಲ್ಲಿ ಪದ್ಯಗಳನ್ನು ಕಾವ್ಯದ ಉದ್ದಕ್ಕೂ ರಚಿಸಿದ್ದಾನೆ. ಮುರಜಬಂಧ, ಜಾಲಬಂಧಗಳಲ್ಲೂ ತನ್ನ ಕೌಶಲ ಪ್ರದರ್ಶಿಸಿದ್ದಾನೆ. ನೀತಿ ಪ್ರತಿಪಾದನೆಗೂ ಅವಕಾಶ ಕಲ್ಪಿಸಿಕೊಂಡಿದ್ದಾನೆ. ಈ ಕಾವ್ಯದ ಅನೇಕ ಪದ್ಯಗಳನ್ನು ಪ್ರಾಚೀನ ಆಲಂಕಾರಿಕರು ಉದಾಹರಿಸಿದ್ದಾರೆ. ರಾಮಾಯಣದ ವಿಸ್ತೃತ ಕಥಾಭಾಗದ ದೃಷ್ಟಿಯಿಂದ ನೋಡಿದಾಗ ಕುಮಾರದಾಸನ ಕಾವ್ಯದಲ್ಲಿ ಕೆಲವು ವೇಳೆ ಕಥೆಯ ಓಟ ಹೆಚ್ಚಾದಂತೆ ಕಾಣುತ್ತದೆ. ಬಹುಶಃ ಕವಿಗೆ ಇದು ಅನಿವಾರ್ಯವಾಗಿತ್ತೆಂದು ಕಾಣುತ್ತದೆ. ಸಂಸ್ಕೃತ ಕವಿಗಳ ಶ್ರೇಣಿಯಲ್ಲಿ ಈತನಿಗೆ ಉತ್ತಮ ಸ್ಥಾನವಿದೆ. (ಜಿ.ಎಸ್.)

**ಕುಮಾರದೇವ :** ತಮಿಳು ನಾಡಿನಲ್ಲಿದ್ದು ಶೈವಪಂಥವನ್ನು ಪ್ರಬಲಗೊಳಿಸಿದ ಕನ್ನಡಿಗ. ಬೋಧಕನೂ ಲೇಖಕನೂ ಆಗಿ ಪ್ರಸಿದ್ಧನಾಗಿದ್ದಾನೆ. ಈತನ ಪೂರ್ಣ ಹೆಸರು ಕುಮಾರದೇವ ಶಿವಪ್ರಕಾಶ. ಪೂರ್ವಜನ್ಮ ಸುಕೃತದಿಂದ ಶಿವತತ್ತ್ವದ ಪರಮ ಅನುಭವವನ್ನು ಸಹಜವಾಗಿಯೇ ಪಡೆದ ಅನಂತರ ಔಪಚಾರಿಕ ರೀತಿಯಲ್ಲಿ ಶಿವದೀಕ್ಷೆಯನ್ನು ಸ್ವೀಕರಿಸಿ ಕುಮಾರದೇವ ಶಿವಪ್ರಕಾಶನೆಂದು ಲೋಕದಲ್ಲಿ ಪ್ರಸಿದ್ಧನಾಗಿದ್ದಾನೆ. ತಮಿಳುನಾಡಿಗೆ ಮತ್ತು ತಮಿಳುನಾಡಿನ ಆಧ್ಯಾತ್ಮ ಪರಂಪರೆಗೆ ಕನ್ನಡ ನಾಡು ನೀಡಿದ ಮಹಾ ಕಾಣಿಕೆಯೇ ಕುಮಾರದೇವನೆನ್ನಬಹುದು. ಕನ್ನಡಿಗನಾದರೂ ಈತನ ಜೀವನ ವಿಚಾರ ಕನ್ನಡಿಗರಿಗೇ ಹೆಚ್ಚಾಗಿ ತಿಳಿದಿಲ್ಲ. ಈತನ ಕಾಲದ ವಿಚಾರವಾಗಿ ನಿರ್ದಿಷ್ಟವಾಗಿ ತಿಳಿದುಬರುವುದಿಲ್ಲವಾದರೂ ಕುಮಾರದೇವನಿಂದಲೇ ರಚಿತವಾದ ಮಹಾರಾಜ ತುರುವು (ಮಹಾರಾಜನ ಕಥೆ) ಎಂಬ ಗ್ರಂಥದಿಂದ ಈತ ಹದಿನೇಳನೆಯ ಶತಮಾನಕ್ಕೆ ಸೇರಿದವನೆಂದು ಗೊತ್ತು ಮಾಡಬಹುದು. ಈ ಗ್ರಂಥದ ಸಹಾಯದಿಂದಲೇ ಈತನ ಜೀವನ ವೃತ್ತಾಂತ ನಮಗೆ ತಿಳಿದುಬರುತ್ತದೆ. ಕನ್ನಡ ನಾಡಿನ ಪೂರ್ವ ಭಾಗದಲ್ಲಿ ಈತ ರಾಜನಾಗಿದ್ದವ. ಆದರೆ ವೈರಾಗ್ಯ ಪ್ರವೃತ್ತಿಯಿಂದ ತನ್ನ ರಾಜ್ಯ, ಜನ ಮತ್ತು ಆತ್ಮಬಂಧುಗಳು–ಎಲ್ಲರನ್ನೂ ಬಿಟ್ಟು ತಮಿಳು ದೇಶಕ್ಕೆ ಹೋಗಿ ಆಗ್ಗೆ ಪ್ರಖ್ಯಾತರಾಗಿದ್ದ ಪೆರೂರು ಮಠದ ಸ್ವಾಮಿಗಳ ಸನ್ನಿಧಿಗೆ ಅಧ್ಯಾತ್ಮ ಭಿಕ್ಷೆಗಾಗಿ ಹೋಗುತ್ತಾನೆ. ಮಠದ ಅಧಿಪತಿಗಳಾದ ಶಾಂತಲಿಂಗಸ್ವಾಮಿಗಳು ತತ್ತ್ವಾರ್ಜನೆಗಾಗಿ ತಮ್ಮಲ್ಲಿಗೆ ಬಂದವರನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿ ಅನಂತರ ಶಿಷ್ಯನನ್ನಾಗಿ ಪರಿಗ್ರಹಿಸತಕ್ಕವರಾದುದರಿಂದ ಬಹಿರಂಗವಾಗಿ ಕುಮಾರದೇವನನ್ನು ಅಲಕ್ಷಿಸಿದಂತೆ ಕಂಡುಬಂದರೂ ಈತನ ತತ್ತ್ವ ಮತ್ತು ಜ್ಞಾನ ನಿಷ್ಠೆಗಳನ್ನು ಅಳೆಯಲು ತೊಡಗಿದರು. ಶಿಷ್ಯ ಗುರುಸೇವಾವೃತ್ತಿಯಲ್ಲಿ ನಿಂತ. ಗುರುಕುಲದ ಗೋಸಂವರ್ಧನಕಾರ್ಯ ಈತನ ಪಾಲಿಗೆ ಬಂತು. ಹುಲ್ಲು ತರುವಲ್ಲಿ ಒಮ್ಮೆ ಕತ್ತಿಯಿಂದ ತನ್ನ ಕೈಯನ್ನು ಘಾಯಪಡಿಸಿಕೊಂಡನಾದರೂ ಕುಮಾರದೇವ ಕಾರ್ಯತತ್ಪರನಾಗಿ ಗುರುಶುಶ್ರೂಷೆಗೆ ಭಂಗತರದಂತೆ ನಡೆದುಕೊಂಡ. ಹೀಗೆ ಅನೇಕ ಕಷ್ಟಕರವಾದ ಪರೀಕ್ಷೆಗಳಿಗೆ ಒಳಪಟ್ಟು ಗುರುಗಳ ಪ್ರೇಮಕ್ಕೆ ಪಾತ್ರನಾದ, ಈ ಹೊಸ ಶಿಷ್ಯ ರಾಜಕುಮಾರನಾಗಿದ್ದರೂ ಸಾಮಾನ್ಯನಂತೆ ದೇಹವನ್ನು ದಂಡಿಸಿಕೊಂಡು ಗುರುಗಳ ಕೃಪಾಕಟಾಕ್ಷವನ್ನು ಸಂಪಾದಿಸಲು ತೊಡಗಿದ್ದುದನ್ನು ಕಂಡ ಗುರುಗಳು ಈತನ ಅಧ್ಯಾತ್ಮ ಅರ್ಹತೆಯ ಬಗ್ಗೆ ಆನಂದಪಟ್ಟರು. ಕೊನೆಯ ಸಲ ಅನುಗ್ರಹಿಸುವ ರೀತಿಯಲ್ಲಿ ಶಿಷ್ಯನನ್ನು ಒಂದು ಕಾರ್ಯದಲ್ಲಿ ನಿಯಮಿಸಿದರು. ಅವನಿಗೆ ಗೊತ್ತಾಗದಂತೆ, ಎರಡು ಗಂಟುಗಳಲ್ಲಿ ಆಹಾರವನ್ನು ಕಟ್ಟಿಸಿಕೊಂಡು ಶಿಷ್ಯನ ಹೆಗಲ ಮೇಲಿರಿಸಿಕೊಂಡು ದೂರದ ಯಾತ್ರೆಗೆಂದು ಹೊರಟರು. ಗಂಟುಗಳ ಭಾರ ಹೆಚ್ಚಾದ್ದರಿಂದ ಗುರುಗಳನ್ನು ಅನುಸರಿಸಲು ಕುಮಾರದೇವನಿಗೆ ಆಗದೆ ಹೋಯಿತು. ಹಿಂದೆ ಬಿದ್ದದ್ದು ಏಕೆ ಎಂದು ಗುರುಗಳು ಕೇಳಿದರು. ಗುರುಗಳ ನೆರಳಿನಲ್ಲೇ ನಡೆಯಬೇಕೆಂದು ಮನಸ್ಸು ಎಷ್ಟು ತವಕಪಟ್ಟರೂ ಬಳಲಿದ ದೇಹ ತನಗೆ ಅಡ್ಡಬರುತ್ತಿದೆ ಎಂದು ಶಿಷ್ಯ ಉತ್ತರಿಸಿದ. ಆತನ ವಿನಯ ಮತ್ತು ಶ್ರದ್ಧೆಗಳು ಸಂತಸ ತಂದುವು. ಪರೀಕ್ಷೆ ಸಾಕೆನ್ನುವಂತೆ ಗುರುಗಳು ಅಲ್ಲೇ, ತೋಟವೊಂದರ ಬಳಿ, ತಂಗಿ ಊಟದ ಗಂಟುಗಳನ್ನು ಬಿಚ್ಚಿ, ಶಿಷ್ಯನಿಗೆ ಉಣಲು ಬಡಿಸಿ ತಾವೂ ಸ್ವೀಕರಿಸಿದರು–ತಮ್ಮ ಅನುಭವವನ್ನು ಶಿಷ್ಯನೊಂದಿಗೆ ಪಾಲುಗೊಳ್ಳಲು ತಾವು ಸಿದ್ಧರೆಂದು ತೋರಿಸಿಕೊಳ್ಳುವಂತೆ.

ಹೀಗೆ ಗುರುಗಳು ಕುಮಾರದೇವನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿ ಈಗ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿರುವ ವೃದ್ಧಾಚಲಂ ಎನ್ನುವ ಸ್ಥಳಕ್ಕೆ ಹೋಗುವಂತೆ ಅಣತಿ ನೀಡಿದರು. ದುರ್ಗಮವಾದ ಹಾದಿಯಲ್ಲಿ ನಡೆಯುತ್ತಿದ್ದ ಕುಮಾರದೇವನಿಗೆ ಆಯಾಸವಾಗಲು ವೃದ್ಧಾಚಲೇಶ್ವರನೇ ಒಬ್ಬ ಬ್ರಾಹ್ಮಣನ ರೂಪದಲ್ಲಿ ಬಂದು ಕುಮಾರದೇವನಿಗೆ ಹಸಿವು ಮತ್ತು ನೀರಡಿಕೆಗಳನ್ನು ನೀಗಿಸಿ, ವೃದ್ಧಾಚಲಕ್ಕೆ ದಾರಿಯನ್ನು ತೋರಿಸಿ ಕಣ್ಮರೆಯಾದ. ದೂರದ ಹಾದಿಯನ್ನು ಸವೆಸಿ ವೃದ್ಧಾಚಲವನ್ನು ಸೇರಿ ಆಯಾಸಗೊಂಡಿದ್ದ ಕುಮಾರದೇವನಿಗೆ ಸ್ಥಳದ ಅಧಿಷ್ಠಾನ ದೇವತೆಯಾದ ಪೆರಿಯನಾಯಕಿಯೇ ವೃದ್ಧ ಬ್ರಾಹ್ಮಣಿಯ ರೂಪದಲ್ಲಿ ಬಂದು ಹಾಲು ನೀಡಿ ಸಂತೈಸಿದಳು. ವೃದ್ಧಾಚಲದ ಹತ್ತಿರ ಕುಮಾರದೇವ ಅನೇಕ ದಿನಗಳ ಕಾಲ ಧ್ಯಾನದಲ್ಲಿದ್ದು ಅಪರಿಚಿತನಾದವನೊಬ್ಬ ಈತನ ಶುಶ್ರೂಷೆಗೆ ತಾನೇ ತಾನಾಗಿ ಬಂದು ನಿಂತುದು ಪವಾಡವೇ. ತಾನು ಮಾಡಿದ ಶುಶ್ರೂಷೆಯ ಫಲವಾಗಿಯೋ ಕುಮಾರದೇವನ ಮಹಿಮೆಯ ಫಲವಾಗಿಯೋ ಎಂಬಂತೆ ಬಡವನಾದ ಆತ ತನ್ನ ದಾರಿದ್ರ್ಯವನ್ನು ಕಳೆದುಕೊಂಡು ಶ್ರೀಮಂತನಾದ. ತನ್ನ ಕೃತಜ್ಞತೆಯನ್ನು ತೋರಿಸಿಕೊಳ್ಳಲು ಕುಮಾರದೇವನನ್ನು ಕುರಿತು ಆತನಿಗೆ ಇಷ್ಟವಾದ ಯಾವುದಾದರೂ ಕಾರ್ಯವಿದ್ದಲ್ಲಿ ಅದನ್ನು ಮಾಡಿಕೊಡುವುದಾಗಿ ನಿವೇದಿಸಿಕೊಂಡ. ಅದಕ್ಕೆ ಕುಮಾರದೇವ ಪೆರಿಯನಾಯಕಿ ಅಮ್ಮನ ದೇವಸ್ಥಾನಕ್ಕೆ ತಾಗಿದಂತೆ ವಿಶಾಲವಾದ ಅಂಗಳವನ್ನು ಕಟ್ಟಿಕೊಡಬೇಕೆಂದು ಹೇಳಿದ. ಶಿಲಾಮಯವಾದ ಆ ಕಟ್ಟಡದ ಕೆಲಸ ನಡೆಯುತ್ತಿದ್ದಾಗ ಕಲ್ಲಿನ ತೊಲೆಗಳನ್ನು ಮೇಲಕ್ಕೆ ಎತ್ತುವುದು ತೀರ ಕಷ್ಟವಾಯಿತು. ಆಗ ಕುಮಾರದೇವ ಅವುಗಳ ಮೇಲೆ ವಿಭೂತಿಯನ್ನು ಚೆಲ್ಲಲಾಗಿ ಅವು ಭಾರ ರಹಿತವಾದವು. ಈ ಸಂದರ್ಭದಲ್ಲಿ ಕುಮಾರದೇವನ ಮಹಿಮೆಯನ್ನು ಕಂಡ ಅನೇಕ ಭಕ್ತಾದಿಗಳು ಆತನ ಕೃಪೆಯನ್ನು ಯಾಚಿಸಿದರು. ಇದಾದ ಸ್ವಲ್ಪ ಕಾಲದಲ್ಲಿಯೇ ಅನೇಕ ತಪಸ್ಸಿದ್ಧಿಗಳನ್ನು ಗಳಿಸಿದ್ದ ಕುಮಾರದೇವ ದಟ್ಟದರಿದ್ರನಾದ ಕುಷ್ಠ ರೋಗಿಯೊಬ್ಬನನ್ನು ಭಸ್ಮಲೇಪನದಿಂದಲೇ ರೋಗ ಮುಕ್ತನನ್ನಾಗಿ ಮಾಡಿದ. ಕುಮಾರದೇವನ ಕೀರ್ತಿ ಜನಜನಿತವಾಯಿತು.

ವೃದ್ಧಾಚಲದಿಂದ ತಿರುವಾಯೂರು ಎಂಬಲ್ಲಿಗೆ ಕುಮಾರದೇವ ಹೋದ ಸಂದರ್ಭದಲ್ಲಿ ಅಲ್ಲಿ ತ್ಯಾಗರಾಜರ ಉತ್ಸವ ವಿಜೃಂಭಣೆಯಿಂದ ನಡೆಯುತ್ತಿತ್ತು. ಧ್ಯಾನಾಸಕ್ತನಾಗಿದ್ದ ಕುಮಾರದೇವನನ್ನು ಹಲವರು ಶೈವನೆಂದು ಮೂದಲಿಸಿದರು. ತನ್ನ ಶೈವ ಮತ ಸತ್ಯವೆಂದಾದರೆ ದೇವರ ಉತ್ಸವವೇ ಮುಂದೆ ಹೋಗದಂತಾಗಲಿ ಎಂದು ಕುಮಾರದೇವ ಪ್ರಾರ್ಥಿಸಿದ. ಅದರ ಪರಿಣಾಮವಾಗಿ ಉತ್ಸವ ಮುಂದೆ ಹೊರಡಲಿಲ್ಲ. ತಂಜಾವೂರಿನ ಅಂದಿನ ರಾಜ ಉತ್ಸವ ನಡೆದು ದೇವರು ಯಥಾಸ್ಥಾನಕ್ಕೆ ಸೇರಿದ ಹೊರತು ಊಟ ಮಾಡುತ್ತಿರಲಿಲ್ಲವಾಗಿ, ಪ್ರಸಂಗ ದಿಕ್ಕು ತೋಚದಂತಾಯಿತು. ಘಟನೆಗೆ ಕಾರಣವೇನಿರಬಹುದೆಂದು ವಿಚಾರ ಮಾಡಲಾಗಿ ಶೈವಭಕ್ತನೊಬ್ಬನಿಗೆ ಅಪಚಾರ ನಡೆದಿದೆ ಎಂದು ತಿಳಿದುಬಂತು. ಕುಮಾರದೇವನಲ್ಲಿಗೆ ರಾಜ ಬಂದು ದೀರ್ಘಪ್ರಣಾಮ ಮಾಡಿ ಕ್ಷಮಾಪಣೆ ಕೇಳಿದ, ಶೈವಮತ ಸತ್ಯವೆಂದಾದರೆ ರಥೋತ್ಸವ ಮುಂದೆ ಸಾಗಲಿ ಎಂದು ಕುಮಾರದೇವ ಪ್ರಾರ್ಥಿಸಲಾಗಿ ರಥ ಮುಂದೆ ಸರಿಯುವಂತಾಯಿತು. ಹೀಗೆ ಕುಮಾರದೇವನ ದೈವಭಕ್ತಿ ಮತ್ತು ಮಹಿಮೆಗಳು ಪ್ರಕಟಗೊಂಡುವು.

ತನ್ನ ಗುರುವಿನ ಆದೇಶದಂತೆ ಚಿದಂಬರನೆಂಬ ಭಕ್ತನಿಗೆ ಕುಮಾರದೇವ ಶೈವ ಮತವನ್ನು ಉಪದೇಶ ಮಾಡಿದ. ಚಿದಂಬರ ಕೆಲಕಾಲಾನಂತರ ಚಿದಂಬರ ಸ್ವಾಮಿಯಾಗಿ ಮದ್ರಾಸಿನ ಹತ್ತಿರವಿರುವ ತಿರಪ್ಪರೂರ್ ಮಠದ ಪೀಠಸ್ಥನಾಗಿ ಪ್ರಸಿದ್ಧನಾದ.

ಕುಮಾರದೇವ ತನ್ನ ಹೆಚ್ಚಿನ ಯೋಗಸಾಧನೆಯನ್ನು ವೃದ್ಧಾಚಲದಲ್ಲಿ ನಡೆಸಿದ. ದೇವಿ ಪೆರಿಯನಾಯಕಿ ಈತನ ಕನಸಿನಲ್ಲಿ ಕಾಣಿಸಿಕೊಂಡು ಶೈವಮತದ ಅನೇಕ ನಿಗೂಢ ತತ್ತ್ವಗಳನ್ನು ಬೋಧಿಸಿ ಅದನ್ನು ಪ್ರಕಟಿಸಲು ಪ್ರೇರೇಪಿಸಿದಳು. ಆಕೆ ಸ್ವತಃ ಬೋಧಿಸಿದ ತತ್ವಗಳನ್ನು ಪ್ರಕಟಗೊಳಿಸಲು ತನ್ನ ಅಲ್ಪಮತಿಗೆ ಅಸಾಧ್ಯವಾಗುತ್ತದೆಂದು ಕುಮಾರ ಬಿನ್ನವಿಸಿಕೊಂಡಾಗ, ಸುಪ್ರಸನ್ನಳಾದ ದೇವಿ ಕುಮಾರನ ಕಾರ್ಯಮುಗಿಯುವವರೆಗೂ ಆತನ ನಾಲಗೆಯಲ್ಲೇ ನಿಲ್ಲುವೆನೆಂದು ಅಭಯ ನೀಡಿದಳು. ಹೀಗೆ ಆ ದೇವಿಯ ಪೂರ್ಣ ಅನುಗ್ರಹಕ್ಕೆ ಪಾತ್ರನಾದ ಈ ಶೈವಭಕ್ತ ಶಿಖಾಮಣಿ ಹದಿನಾಲ್ಕು ಶೈವತತ್ತ್ವ ಪರವಾದ ಶಾಸ್ತ್ರಗ್ರಂಥಗಳನ್ನು ತಮಿಳಿನಲ್ಲಿ ಅಭಿವ್ಯಕ್ತಗೊಳಿಸಿದ. ಜೊತೆಗೆ ಆ ನಿಗೂಢ ತತ್ತ್ವದಲ್ಲಿ ಶಿಷ್ಯರಿಗೆ ಉಪದೇಶ ಕೊಟ್ಟ . ಉಪದೇಶ ಪಡೆದ ಚಿದಂಬರ ಸ್ವಾಮಿ ಗುರುವಿನ ಸ್ಮರಣೆಗಾಗಿ ವೃದ್ಧಾಚಲದಲ್ಲಿ ಒಂದು ಮಠವನ್ನು ಸ್ಥಾಪಿಸಿದ. ಅದು ಈಗಲೂ ಕುಮಾರದೇವ ಮಠ ಎಂದು ಪ್ರಸಿದ್ಧವಾಗಿದೆ. ಈ ಮಠ ಅಲ್ಲಿನ ಪವಿಮಲೈನಾದರ್ ದೇವಸ್ಥಾನದ ಹತ್ತಿರವಿದೆ. ಕುಮಾರದೇವ ಆ ಮಠದಲ್ಲಿಯೇ ಬಹಳ ಕಾಲ ಯೋಗಸಮಾಧಿಯಲ್ಲಿದ್ದು ಅಲ್ಲಿಯೇ ಶಿವೈಕ್ಯನಾದ, ಆತನ ಸಮಾಧಿ ಇಂದಿಗೂ ಶ್ರದ್ಧಾಳುಗಳಿಗೆ ಶಿವಸ್ಫೂರ್ತಿಯನ್ನು ನೀಡುತ್ತ ಆಧ್ಯಾತ್ಮಿಕ ಸಾಧನೆಗಳಿಗೆ ಪೋಷಕವಾಗಿದೆ.

ಶೈವ ಸ್ವಾಮಿಗಳ ಪರಂಪರೆಯಲ್ಲಿ ಮಹಾಮಹಿಮರೆನಿಸಿಕೊಂಡವರಲ್ಲಿ ಕುಮಾರದೇವ ಐದನೆಯವನೆಂದು ತಿಳಿದುಬರುತ್ತದೆ. ಶಿವನಿಂದ ಪ್ರಬೋಧಿತವಾದ ಶೈವಮತ ನಂದಿದೇವ, ಸನತ್ಕುಮಾರ, ಸತ್ಯಯಜ್ಞದರ್ಶಿನಿಗಳ ಮೂಲಕ ಬಂದು ಪರಂಜ್ಯೋತಿ ಸ್ವಾಮಿಗಳವರಿಂದ ಧರೆಗೆ ಇಳಿದು ಬಂತು. ಪರಂಜ್ಯೋತಿ ಸ್ವಾಮಿಗಳು ಮೈಕಂಡದೇವನಿಗದನ್ನು ಬೋಧಿಸಿದರು. ಅಲ್ಲಿಂದ ಮುಂದೆ ಅರುಳನಂದಿ ಶಿವಾಚಾರ್ಯರಿಗದು ಲಭಿಸಿ, ಅನಂತರ ಮರೆಯಜ್ಞಾನ ಸಂಬಂಧರ್, ಉಮಾಪತಿ ಶಿವಾಚಾರ್ಯ, ಉಮಾಪತಿ ನಮಶ್ಶಿವಾಯಸ್ವಾಮಿ, ಶಿವಪ್ರಕಾಶ ಸಿದ್ಧರ್, ನಮಶ್ಶಿವಾಯ ಮೂರ್ತಿ, ಶಿವಪ್ರಕಾಶ ದೇಶಿಕರ್, ಅನಂತರ ಇವರ ಶಿಷ್ಯರಾದ ಪೆರೂರಿನ ಶಾಂತ ಲಿಂಗಸ್ವಾಮಿಗಳ ಮೂಲಕ ಶ್ರೀಕುಮಾರದೇವನಿಗದು ಲಭ್ಯವಾಯಿತು.

ಕುಮಾರದೇವ ಮದ್ರಾಸು ಪ್ರಾಂತ್ಯಕ್ಕೆ ಬಂದಾಗ ಮೈಲಾಪುರವೆಂಬಲ್ಲಿ ತನ್ನ ಮಠದ ಒಂದು ಕವಲನ್ನು ಸ್ಥಾಪಿಸಿದ. ಈ ಮಠದಲ್ಲಿ ಈಗ ಶ್ರೀಸುಬ್ರಹ್ಮಣ್ಯ ಶಿವಪ್ರಕಾಶ ಸ್ವಾಮಿಗಳು ಪರಂಪರೆಯಲ್ಲಿ 21 ನೆಯ ಗುರುಗಳಾಗಿ ಪೀಠಸ್ಥರಾಗಿದ್ದಾರೆ (1942).

ಕುಮಾರದೇವನಿಂದ ರಚಿತವಾದ ಕೃತಿಗಳು ಹದಿನೈದು. ಅವುಗಳಲ್ಲಿ ಮುಖ್ಯವಾದವು ಶುದ್ಧ ಶತಕ ಮತ್ತು ಅದ್ವೈತ ಉನ್ಮೈ ಎನ್ನುವ ಗ್ರಂಥಗಳು. ಶ್ರೀಸುಬ್ರಹ್ಮಣ್ಯ ಶಿವಪ್ರಕಾಶ ಸ್ವಾಮಿಗಳು ಕುಮಾರದೇವನ ಶುದ್ಧ ಶತಕ ಮತ್ತು ವೃದ್ಧಾಚಲ ಪುರಾಣಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿಸುತ್ತಿದ್ದಾರೆ. ಮದ್ರಾಸಿನ ತಮಿಳು ವಿದ್ವಾಂಸರೂ ಶೈವಸಿದ್ಧಾಂತದಲ್ಲಿ ಉನ್ನತ ಪಾಂಡಿತ್ಯವನ್ನು ಪಡೆದಿರುವವರೂ ಆದ ರಾವ್‌ಬಹದ್ದೂರ್ ಶ್ರೀ ಮುರುಗೇಶ ಮೊದಲಿಯಾರ್ ಎನ್ನುವವರು ಮೇಲಿನ ಗ್ರಂಥಗಳನ್ನು ಭಾಷಾಂತರಗೊಳಿಸಿ ಪ್ರಕಾಶಕ್ಕೆ ಸಿದ್ಧಗೊಳಿಸಿದ್ದಾರೆ.

ಕುಮಾರದೇವನ ಗ್ರಂಥಗಳ ವಿವರ ಹೀಗಿದೆ; ಮಹಾರಾಜ ತುರವು, ಶುದ್ಧ ಶತಕಮ್, ವಿಜ್ಞಾನಸಾರಂ, ಅದ್ವೈತ ಉನ್ಮೈ, ಬ್ರಹ್ಮಾನುಭೂತಿ ವಿಲಕ್ಕಂ, ಜ್ಞಾನ ಅಮ್ಮೈ, ದಶಾವಸ್ಥೈ ಕಟ್ಟಳೈ, ದಶಾಕಾರ್ಯೈ ಕಟ್ಟಳೈ, ಸಿದ್ಧಾಂತ ಕಟ್ಟಳೈ, ಸಹಜನಿಷ್ಠೈ, ಬ್ರಹ್ಮಸಿದ್ಧಿ ಆಹವಲ್, ಶಿವದರ್ಶನ ಆಹವಲ್, ಆಗಮನೇರಿ ಆಹವಲ್, ವೇದನೇರಿ ಆಹವಲ್, ಬ್ರಹ್ಮಾನುಭವ ಆಹವಲ್, ಶಿವಸಮರಸವಾದ ಆಹವಲ್–ಮುಂತಾದವು ಮುಖ್ಯವಾದುವು. ಇವುಗಳಲ್ಲಿ ಮೊದಲನೆಯದು ಶ್ರೀ ಕುಮಾರದೇವನ ಆತ್ಮಕಥನ. ಮಹಾರಾಜನಾಗಿದ್ದವ ಇಹಜೀವನವನ್ನು ತೊರೆದು ಪಾರಮಾರ್ಥಿಕ ಸತ್ವವನ್ನು ಅರಸುತ್ತ ಸಾರ್ಥಕ್ಯವನ್ನುಗಳಿಸಿ ಲೋಕಕ್ಕೆ ಆಧ್ಯಾತ್ಮ ಮಾರ್ಗದರ್ಶನ ನೀಡಿದ ಕುಮಾರದೇವನ ಕಥೆ ಇಲ್ಲಿದೆ. ಮಿಕ್ಕಿದ್ದೆಲ್ಲವೂ ಶೈವಮತಕ್ಕೆ ಸಂಬಂಧಪಟ್ಟಂತೆ ವೃದ್ಧಾಚಲದೇವಿಯ ಕೃಪೆಯಿಂದ ಬಂದ ಗ್ರಂಥಗಳು. ಕುಮಾರದೇವನಿಂದ ರಚಿತವಾದ ಆರು ಆಹವಲ್ ಗ್ರಂಥಗಳು ವೀರಶೈವ ಧರ್ಮದ ವಿವಿಧ ಅಂಶಗಳನ್ನು ವಿವರಿಸುತ್ತವೆ. ಪಂಡಿತರ ಅಭಿಪ್ರಾಯದಲ್ಲಿ ಎಲ್ಲ ಗ್ರಂಥಗಳಿಗೂ ಮಕುಟಪ್ರಾಯವಾಗಿರುವುದೆಂದರೆ ಶುದ್ಧ ಶತಕ. ತತ್ತ್ವಜ್ಞಾನಿಯಾದ ಕುಮಾರದೇವ ಭಕ್ತಾಗ್ರೇಸರನೂ ಆಗಿದ್ದ. ಇದಕ್ಕೆ ನಿದರ್ಶನ ಪೆರಿಯ ನಾಯಕಿ ಅಮ್ಮನ್ ಪಾದುಕಂ ಎನ್ನುವ, ಭಕ್ತಿ ರಸಪೂರ್ಣ ಮತ್ತು ತಾತ್ತ್ವಿಕದರ್ಶನವನ್ನು ಒಳಗೊಂಡ, ದಶಶ್ಲೋಕಗಳು.

ಕನ್ನಡ ನಾಡಿನ ವಿಶಿಷ್ಟಧರ್ಮವಾದ ವೀರಶೈವ ಧರ್ಮವನ್ನು ತಮಿಳುನಾಡಿನಲ್ಲಿ ಎತ್ತಿಹಿಡಿದ ಸಂದರ್ಭವೊಂದೇ ಅಲ್ಲದೆ. ಅದಕ್ಕೆ ಕಾರಣಭೂತನಾದವನೂ ಕನ್ನಡಿಗನಾದ ಕುಮಾರದೇವನೇ ಆಗಿದ್ದಾನೆ ಎನ್ನುವ ಅಂಶ ಗಮನಾರ್ಹವಾದುದು. ಅಧ್ಯಾತ್ಮದ ಮೇರು ಶಿಖರವನ್ನು ಏರಿದ ಈ ಮಹಾಮಹಿಮನ ಶೈವಧರ್ಮ ಪ್ರಬೋಧಕ ಕೃತಿಗಳು ವ್ಯಾಸಂಗಾರ್ಹವೆನಿಸಿವೆ. (ಕೆ.ಬಿ.ಆರ್.)

**ಕುಮಾರಧಾರಾ :** ಒಂದು ನದಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮಾರ ಪರ್ವತವೆಂದು ಪ್ರಸಿದ್ಧಿ ಪಡೆದಿರುವ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಹುಟ್ಟುತ್ತದೆ. ದಟ್ಟ ಅರಣ್ಯದಲ್ಲಿ ಹರಿದು ಬರುವ ಈ ನದಿ ಮಳೆಗಾಲದಲ್ಲಿ ಪ್ರವಾಹದಿಂದ ರಭಸವಾಗಿ ಹರಿಯುತ್ತದೆ. ಇದು ಉಪ್ಪಿನ ಅಂಗಡಿಯ ಬಳಿ ನೇತ್ರಾವತಿ ನದಿಯೊಂದಿಗೆ ಬೆರೆತು ಮಂಗಳೂರಿನ ಬಳಿ ಅರಬ್ಬೀ ಸಮುದ್ರವನ್ನು ಸೇರುತ್ತದೆ.

ಮಹಾಭಾರತದಲ್ಲಿ ಉಕ್ತವಾಗಿರುವ ಒಂದು ತೀರ್ಥಕ್ಕೂ ಈ ಹೆಸರಿದೆ. (ಡಿ.ಎಸ್.ಜೆ.)

**ಕುಮಾರನ್ ಆಶಾನ್ :** 1873–1924. ಮಲಯಾಳ ರಮ್ಯಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಂತ ಕವಿಗಳಲ್ಲಿ ಒಬ್ಬ. ಈವಿವ (ಈಡಿಗ) ಕುಲಕ್ಕೆ ಸೇರಿದ ಈತ ಕುಲ ಗುರುವಾದ ನಾರಾಯಣ ಗುರುಗಳ ಆಶ್ರಯದಲ್ಲಿದ್ದು ಸಾಹಿತ್ಯ ಸೇವೆ ಮಾಡಿದ. ಚಿತ್ರಾಪೌರ್ಣಿಮೆಯಂದು ನಾರಾಯಣನ್ ಎಂಬವರ ಮಗನಾಗಿ ಕಾಯಿಕ್ಕರ ಎಂಬ ಸ್ಥಳದಲ್ಲಿ ಆಶಾನ್ ಹುಟ್ಟಿದ. 18ನೆಯ ವಯಸ್ಸಿನಲ್ಲಿ ನಾರಾಯಣ ಗುರುವನ್ನು ಭೇಟಿಮಾಡಿ ಅವರ ಆಶೀರ್ವಾದ ಪಡೆದು ಬೆಂಗಳೂರಿಗೆ ಬಂದು (1895) ಈತ ವಿದ್ಯಾಭ್ಯಾಸವನ್ನು ಮುಂದುವರಿಸಿದ. ಗುರು ಇವನನ್ನು ಪ್ರೀತಿಯಿಂದ ಕುಮಾರು ಎಂದು ಕರೆಯುತ್ತಿದ್ದರು. 1898 ರಲ್ಲಿ ಕಲ್ಕತ್ತಕ್ಕೆ ಪ್ರಯಾಣ ಮಾಡಿ ಅಲ್ಲಿ ಆಶಾನ್ ವಿದ್ಯಾಭ್ಯಾಸ ಪಡೆದ. ಸೌಂದರ್ಯಲಹರಿ (1901), ಶಿವಸ್ತೋತ್ರ ಮಾಲ (1902), ಮೇಘಸಂದೇಶ (1902), ವಿಚಿತ್ರವಿಜಯ (1902), ಪ್ರಬೋಧ ಚಂದ್ರೋದಯ ಮೊದಲಾದವು ಈ ಕವಿಯ ಅನುವಾದ ಕೃತಿಗಳು. 1908 ರಲ್ಲಿ ವೀಣ ಪೂ (ಬಿದ್ದ ಹೂ) ಪ್ರಕಟವಾದೊಡನೆ ಈತನ ಹೆಸರು ಮಲಯಾಳ ಕವಿಗಳ ಅಗ್ರಪಂಕ್ತಿಗೆ ಸೇರಿತು. ತರುವಾಯದಲ್ಲಿ ನಳಿನಿ (1910), ಲೀಲ (1913), ಶ್ರೀಬುದ್ಧಚರಿತಂ (1914), ಬಾಲರಾಮಾಯಣಂ–ಮೂರು ಭಾಗಗಳು (1915), ಗ್ರಾಮವೃಕ್ಷತ್ತಿಲೆ ಕುಯಿಲ್ (1918), ಪ್ರರೋಧನ (1918), ಚಿಂತಾವಿಷ್ಟೆಯಾದ ಸೀತೆ (1919), ಪುಷ್ಪವಾಟಿ(1919), ದುರವಸ್ಥ (1922), ಚಂಡಾಲ ಭಿಕ್ಷುಕಿ (1923), ಕರುಣ (1923)– ಮೊದಲಾದ ಅತ್ಯುತ್ತಮ ಕೃತಿಗಳನ್ನು ರಚಿಸಿ ರಮ್ಯ ಕವಿಗಳ ಸಾಲಿನಲ್ಲಿ ಆಶಾನ್ ಶಾಶ್ವತ ಸ್ಥಾನ ಪಡೆದಿದ್ದಾನೆ.

1924 ರಲ್ಲಿ ಒಂದು ದೋಣಿ ಅಪಘಾತಕ್ಕೆ ತುತ್ತಾಗಿ ಈ ಕವಿ ಮರಣಹೊಂದಿದ. ಆಶಾನ್ ಕವಿಯ ಕೃತಿಗಳನ್ನು ಓದದೆ ಮಲೆಯಾಳ ಕಾವ್ಯವನ್ನು ಓದಿದಂತಾಗುವುದಿಲ್ಲ. ಈತನ ಸ್ನೇಹಸಂದೇಶವನ್ನೂ ವಿಶ್ವವಿಶಾಲವಾದ ಮನೋಧರ್ಮವನ್ನೂ ಮೃದುಮಧುರ ಭಾವಗಳನ್ನೂ ತಿಳಿದುಕೊಳ್ಳುವ ಸಲುವಾಗಿಯಾದರೂ ಮಲಯಾಳ ಕವಿತೆಯನ್ನು ಅಧ್ಯಯನ ಮಾಡಲೇಬೇಕು. ಈತನ ಕವಿತಾಪ್ರತಿಭೆಯನ್ನು ಕಂಡು 1922 ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ರೇಷ್ಮೆ ಶಾಲನ್ನೂ ಚಿನ್ನದ ಕಡಗವನ್ನೂ ಕೊಟ್ಟು ಸನ್ಮಾನಿಸಿದ. 1923 ರಲ್ಲಿ ಆಶಾನ್ ರವೀಂದ್ರನಾಥ ಠಾಕೂರರನ್ನು ಭೇಟಿಯಾಗಿದ್ದ. ಜೀವನ ಉತ್ಸಾಹ ಬತ್ತದ ಮೊದಲೇ ಮರೆಯಾದ ಆಶಾನ್ ಮಲಯಾಳದ ಅತ್ಯಂತ ಜನಪ್ರಿಯ ಕವಿಯಾಗಿದ್ದಾನೆ. ಮಲಯಾಳ ಭಾಷೆಗೆ ರಮ್ಯ ಕಾವ್ಯಸತ್ತ್ವವನ್ನು ಪಾಕವಿಳಿಸುವುದರಲ್ಲಿ ಈತನ ಶ್ರಮ ಅನನ್ಯಸಾಧಾರಣವೂ ಆದುದು. (ಕೆ.ಕೆ.ಎಸ್.)

**ಕುಮಾರ ಪದ್ಮರಸ :** ಸಾನಂದ ಚರಿತೆಯನ್ನು ಬರೆದ ಕನ್ನಡ ಕವಿ. ಮಾದೇವಿ ಮತ್ತು ಕೆರೆಯ ಪದ್ಮರಸರ ಮಗ. ಕಾಲ ಸು. 1180 ಎಂದು ಕರ್ಣಾಟಕ ಕವಿ ಚರಿತೆಕಾರರು ಹೇಳಿದರೆ 13ನೆಯ ಶತಮಾನದ ಆದಿಭಾಗವೆಂದು ಬೇರೆ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶರಣಕವಿಯೆಂಬ ಪರ್ಯಾಯನಾಮವನ್ನು ಪಡೆದಿದ್ದ ಈತ ವೀರಶೈವ ಕವಿ.

ಈತನ ಏಕಮಾತ್ರ ಕೃತಿ ಸಾನಂದಚರಿತ್ರೆ ಸ್ಕಾಂದ ಪುರಾಣದಿಂದ ಆಯ್ದುದಾಗಿದೆ. ಪಂಚಾಕ್ಷರೀ ಮಹಿಮೆಯನ್ನು ಬಿತ್ತರಿಸುವುದೇ ಕೃತಿಯ ಉದ್ದೇಶ. ತಂದೆ ಸಂಸ್ಕೃತದಲ್ಲಿ ಬರೆದ ಸಾನಂದಚರಿತ್ರೆಯನ್ನೇ ಮಗ ಕನ್ನಡಿಸಿದನೆಂದೂ ಹೇಳುವವರಿದ್ದಾರೆ. ನಾನಾ ಷಟ್ಪದಿಗಳಲ್ಲಿ ಇದನ್ನು ಬರೆದಿದ್ದರೂ ಕುಸುಮ ಷಟ್ಪದಿ ವಿಶೇಷವಾಗಿದ್ದು ಎರಡು ರಗಳೆಗಳೂ ಇವೆಯೆಂದು ಕವಿಚರಿತೆಕಾರರು ಹೇಳಿದರೆ ಇದರಲ್ಲಿ ಕುಸುಮ ಭಾಮಿನೀ ಷಟ್ಪದಿಗಳನ್ನು ಮಾತ್ರ ಬಳಸಲಾಗಿದೆಯೆಂದು ಡಿ.ಎಲ್. ನರಸಿಂಹಾಚಾರ್ಯರು ಹೇಳಿದ್ದಾರೆ.

ರಾಘವಾಂಕ ಬಳಸದ ಇತರ ಷಟ್ಪದಿಗಳೂ ಸಾನಂದಚರಿತ್ರೆಯಲ್ಲಿ ದೊರೆಯುತ್ತಿರುವುದು ಅದಕ್ಕೊಂದು ವೈಶಿಷ್ಟ್ಯವನ್ನು ತಂದಿದೆ. ಅಲ್ಲದೆ ಪಂಚಾಕ್ಷರೀ ಮಂತ್ರ ಮಹಿಮೆಯನ್ನು ಪ್ರಪ್ರಥಮವಾಗಿ ಕನ್ನಡದಲ್ಲಿ ಬಣ್ಣಿಸಿದ ಹೆಗ್ಗಳಿಕೆಯೂ ಅದಕ್ಕಿದೆ. ಸಂಕ್ರಮಣ ಯುಗದ ಕವಿಯಾದ ಕುಮಾರ ಪದ್ಮರಸನ ಈ ಕೃತಿಯಲ್ಲಿ ಆ ಯುಗದ ಗತಿಶೀಲತೆಯ ಗುರುತು ಸಿಕ್ಕುತ್ತಿರುವುದೂ ಸಹಜವಾದುದೇ.

9 ಸಂಧಿಗಳನ್ನೂ 791 ಪದ್ಯಗಳನ್ನೂ 2 ರಗಳೆಗಳನ್ನೂ ಒಳಗೊಂಡಿರುವ ಈ ಕೃತಿಯ ಶೈಲಿ ಸುಕುಮಾರವಾಗಿದೆ. ತಂದೆಯೂ ಗುರುವೂ ಆಗಿದ್ದ ಕೆರೆಯ ಪದ್ಮರಸನ ಪ್ರೇರಣೆಯಿಂದ ರಚಿತವಾದ ಈ ಕಾವ್ಯದಲ್ಲಿ ಕನ್ನಡ ಛಂದಸ್ಸಿನ ದೇಶೀಯ ಪ್ರಭೆ ಪ್ರಕಟವಾಗಿದೆ. ಈ ಕೃತಿ ಇನ್ನೂ ಪ್ರಕಟವಾಗಿಲ್ಲ. ಕವಿಯೇ ಹೇಳಿಕೊಂಡಿರುವಂತೆ ಇದು ಪಂಚಾಕ್ಷರೀ ಮಹಿಮೆಯ ಚರಿತೆ:

ಚರಿತೆ ಸಾನಂದೇಶ । ಚರಿತೆ ಜಗದಾನಂದ । ಚರಿತೆ ಪಂಚಾಕ್ಷರೀ ವರ ಮಹಿಮೆಯ
ಚರಿತೆ ಶಿವಭಕ್ತಿಗಿದು । ಚರಿತೆ ಗುರುನಿಷ್ಠೆಗಿದು । ಚರಿತೆ ಸತ್ಪಥಕೆ ತಾನೆಂತೆಂತೆನೆ

ಮುಂದೆ ಇವನ ವಂಶದಲ್ಲಿಯೇ ಉದಿಸಿದ ಪದ್ಮಣಾಂಕ (ಸು.1385) ಸಾನಂದ ಚರಿತ್ರೆ 'ಶ್ರುತಿಸ್ಮೃತಿ ವಿಮಲ ಪುರಾಣಾಗಮೋಪನಿಷತ್ಪ್ರಭೃತಿ ಶಾಸ್ತ್ರಕುಳದ ಸಾರಂದೆಗೆದು ದೃಷ್ಟಕೆ ಬರೆದು ಸರ್ವರಣಿಯೆ ಕರ್ಣಾಟಮಾಗಿ ಅಲಘು ವರ್ಣಕ ರೀತಿಯಿಂರಸಂ ಮುಸುಕಿಯುಜ್ಜ್ವಳಿಪಂತೆ' ಬರೆದ 'ಸಾನಂದ ಚರಿತಾಖ್ಯಶಾಸ್ತ್ರ' ವೆಂದು ನಿರೂಪಿಸಿದ್ದಾನೆ. ತಂದೆಯ ಪರವಾಗಿ ತ್ರಿಭುವನ ತಾತನೊಡನೆ ವಾದ ಮಾಡಿ ಕುಮಾರ ಪದ್ಮರಸ ವಿಜಯಿಯಾದನೆಂದು ಪದ್ಮಪುರಾಣದಲ್ಲಿ ಹೇಳಿದೆ. ವೇದಾಗಮ ಪುರಾಣಗಳ ಜ್ಞಾನವೇ ಸಾಕಾರವಾದಂತಿದ್ದ ಘನ ಪಂಡಿತನೂ ಜ್ಞಾನ ರತ್ನಾಕರನೂ ಆಗಿದ್ದ ಪದ್ಮರಸ ತನ್ನ ಕೃತಿ ಪದ್ಮಣಾಂಕ ಹೇಳಿರುವಂತೆ 'ಸಾನಂದ ಚರಿತಾಖ್ಯಶಾಸ್ತ್ರ' ವಾಗಬೇಕೆಂದು ಬಯಸಿರಬಹುದಾದರೂ ಶಾಸ್ತ್ರವೂ ಸಾಹಿತ್ಯವಾಗುವಂತೆ' ರಸಂ ಮುಸುಕಿಯುಜ್ಜ್ವಳಿಪಂತೆ' ಕೃತಿರಚನೆ ಮಾಡಿ ಕೃತಕೃತ್ಯನಾಗಿರುವನೆಂದು ಹೇಳಬಹುದು. ಇದಕ್ಕೆ ನಿದರ್ಶನವಾಗಿ ಸಾನಂದ ನರಕಕ್ಕೆ ಹೋದುದರ ವರ್ಣನೆಯನ್ನೂ ಪಂಚಾಕ್ಷರೀ ಮಹಿಮೆಯ ನಿರೂಪಣೆಯನ್ನೂ ನೋಡಬಹುದಾಗಿದೆ. ಧರೆಯೊಳು ಒಳುಗನ್ನಡದಿ ಪಸರಿಸಲೆಂದು ಸ್ತ್ರೀಬಾಲಸಾಧ್ಯವಾಗುವಂತೆ ಕೃತಿರಚನೆ ಮಾಡುವ ಸಂಕಲ್ಪದಿಂದ ಹೊರಟ ಕುಮಾರ ಪದ್ಮರಸ ಉದ್ದೇಶಿತ ಸಂಕಲ್ಪದಲ್ಲಿ ಬಹುಮಟ್ಟಿಗೆ ಸಫಲನಾಗಿರುವನೆಂದು ಹೇಳಬಹುದು. (ಎಸ್.ಪಿ.ಯು.)

**ಕುಮಾರಪಾಲ :** ಭಾರತದ ಇತಿಹಾಸದಲ್ಲಿ ಈ ಹೆಸರಿನಿಂದ ಪ್ರಸಿದ್ಧರಾದ ದೊರೆಗಳು ಇಬ್ಬರುಂಟು. ಒಬ್ಬ, ಬಂಗಾಳದ ಪಾಲವಂಶಸ್ಥ; ಇನ್ನೊಬ್ಬ, ಗುಜರಾತನ್ನಾಳುತ್ತಿದ್ದ ಅನ್ಹಿಲ್ವಾಡದ ಚೌಳುಕ್ಯ ವಂಶದ ಅರಸು.

**ಅನ್ಹಿಲ್ವಾಡದ ಚೌಳುಕ್ಯ ವಂಶದ ಕುಮಾರಪಾಲ :** 1143 ರಿಂದ 1171–72 ರವರೆಗೆ ಗುಜರಾತಿನಲ್ಲಿ ಆಳುತ್ತಿದ್ದ ಪ್ರಸಿದ್ಧ ದೊರೆ. ಆ ವಂಶದ ಮೊದಲ ಅರಸರಲ್ಲೊಬ್ಬನಾದ ಕ್ಷೇಮರಾಜನ ಮೊಮ್ಮಗನಾದ ತ್ರಿಭುವನಮಲ್ಲನ ವೇಶ್ಯೆಯ ಪುತ್ರ. ಇವನಿಗೆ ಮುಂಚೆ

ಆಳುತ್ತಿದ್ದ ಜಯಸಿಂಹ ಸಿದ್ಧರಾಜನಿಗೆ ಗಂಡು ಸಂತತಿಯಿರಲಿಲ್ಲ. ಆತ ತನ್ನ ಮಂತ್ರಿಯಾದ ಉದಯನನ ಮಗ ಬಾಹಡನನ್ನು ಉತ್ತರಾಧಿಕಾರಿಯಾಗಿ ಆರಿಸಿದ್ದ. ಕುಮಾರಪಾಲ ಆ ಸಿಂಹಾಸನದ ಹಕ್ಕುದಾರಲ್ಲೊಬ್ಬನಾದರೂ ಆತ ವೇಶ್ಯಾಪುತ್ರನೆಂಬ ಕಾರಣದಿಂದ ಅವನನ್ನು ದೇಶಭ್ರಷ್ಟನನ್ನಾಗಿ ಮಾಡಿ ಅವನ ತಂದೆಯನ್ನು ಕೊಲ್ಲಲಾಯಿತು. ಆದರೆ ಜಯಸಿಂಹನ ಮರಣಾನಂತರ ಕುಮಾರಪಾಲ ಬಾಹಡನನ್ನು ಸೋಲಿಸಿ ಸಿಂಹಾಸನವನ್ನೇರಿದ. ಶಕ್ತನಾದ ಕುಮಾರಪಾಲ ಚೌಳುಕ್ಯ ರಾಜ್ಯದ ಗಡಿಗಳನ್ನು ವಿಸ್ತರಿಸಿದುದಲ್ಲದೆ ತನ್ನ ವಿರೋಧಿಗಳಾಗಿದ್ದ ಮಂತ್ರಿಗಳನ್ನು ಕೊಲ್ಲಿಸಿದ.

ಇವನ ಆಳ್ವಿಕೆಯ ಪೂರ್ವಾರ್ಧದಲ್ಲಿ ರಾಜ್ಯದ ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿದ್ದ ಶತ್ರುಗಳು ತೊಂದರೆಯನ್ನುಂಟು ಮಾಡಿದರು. ಶಾಕಂಬರೀ ವಂಶದ ಚಾಹಮಾನ ಅರ್ಣೋರಾಜ ಉಜ್ಜಯಿನಿಯ ಬಲ್ಲಾಳ ಮುಂತಾದವರು ಬಾಹಡನ ಪಕ್ಷವಹಿಸಿ ಕುಮಾರಪಾಲನ ವಿರುದ್ಧವಾಗಿ ಯುದ್ಧ ಹೂಡಿದರು. ಕುಮಾರಪಾಲ ಅರ್ಣೋರಾಜನನ್ನು ಸೋಲಿಸಿ ಅವನ ಮಗಳನ್ನು ಮದುವೆಯಾಗಿ ಸ್ನೇಹ ಬೆಳೆಸಿದ. ಅನಂತರ ಪಾರಮಾರವಂಶದ ವಿಕ್ರಮಸಿಂಹನನ್ನು ರಾಜ್ಯಚ್ಯುತನನ್ನಾಗಿ ಮಾಡಿ ಅವನ ಸೋದರನ ಮಗನಾದ ಯಶೋಧವಲನನ್ನು ಪಟ್ಟಕ್ಕೆ ತಂದ. ತರುವಾಯ ಬಲ್ಲಾಳನನ್ನು ಎದುರಿಸಿ ಅವನನ್ನು ಕೊಂದ. 1150ರಲ್ಲಿ ತನ್ನ ರಾಣಿಯನ್ನು ಅವಮಾನಿಸಿದನೆಂದು ಪುನಃ ಚಾಹಮಾನ ಅರ್ಣೋರಾಜನನ್ನು ಸೋಲಿಸಿದರೂ ರಾಜನಾಗಿ ಮುಂದುವರಿಯಲು ಅನುಮತಿ ನೀಡಿದ. 1160–62ರ ಸುಮಾರಿನಲ್ಲಿ ಕೊಂಕಣದ ಮಲ್ಲಿಕಾರ್ಜುನ ಇವನಿಂದ ಹತನಾದ. ಅವನ ರಾಜ್ಯ ಕುಮಾರಪಾಲನ ವಶವಾಯಿತು. ಕುಮಾರಪಾಲ ತನ್ನ ಆಸ್ಥಾನಪಂಡಿತನಾದ ಹೇಮಚಂದ್ರನ ಪ್ರಭಾವಕ್ಕೊಳಗಾಗಿ ಜೈನಧರ್ಮ ಸ್ವೀಕರಿಸಿದನೆಂದು ಜೈನಕೃತಿಗಳು ತಿಳಿಸುತ್ತವೆ. 1164ಕ್ಕೆ ಮೊದಲೇ ಈ ಮತಾಂತರ ನಡೆದಿರಬೇಕೆಂದು ಆ ಕಾಲದ ಶಾಸನಗಳಿಂದ ತಿಳಿದುಬರುತ್ತದೆ. ಈತ ತನ್ನ ರಾಜ್ಯದಲ್ಲಿ ಪ್ರಾಣಿವಧೆಯನ್ನು ನಿಷೇಧಿಸಿದ್ದರಿಂದ ಬ್ರಾಹ್ಮಣರು ಧಾನ್ಯಗಳನ್ನು ಆಹುತಿಯಾಗಿ ಅರ್ಪಿಸಬೇಕಾಗಿತ್ತಂತೆ. ಈತ ಮತಾಂತರ ಹೊಂದಿದ ಮೇಲೂ ಜೈನ–ಬ್ರಾಹ್ಮಣ ಮತಗಳೆರಡಕ್ಕೂ ಸಮಾನ ಪ್ರೋತ್ಸಾಹ ನೀಡುತ್ತಿದ್ದ. ಉಯಿಲು ಬರೆದಿಡದೆ ಸತ್ತವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಪದ್ಧತಿಯನ್ನೂ ಹೆಚ್ಚು ಪ್ರಚಾರದಲ್ಲಿದ್ದ ಜೂಜುಗಾರಿಕೆಯನ್ನೂ ನಿಷೇಧಿಸಿ ಈತ ಶಾಸನಗಳನ್ನು ಹೊರಡಿಸಿದ. ಕುಮಾರಪಾಲ 1171–72ರಲ್ಲಿ ಮೃತನಾದನೆಂದು ತಿಳಿದುಬರುತ್ತದೆ.

**ಬಂಗಾಳದ ಪಾಲವಂಶದ ಕುಮಾರಪಾಲ:** ಈತ ಸು. 1120ರಲ್ಲಿ ಪಟ್ಟಕ್ಕೆ ಬಂದ. ಇವನು ರಾಮಪಾಲನ ಮಗ: ತಂದೆ ಗಂಗಾನದಿಯಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡಾಗ ಸಿಂಹಾಸನಕ್ಕೆ ಬಂದ. ಬಂಗಾಲದ ಹೆಚ್ಚು ಪ್ರದೇಶಗಳೂ ಬಿಹಾರ ಮತ್ತು ಅಸ್ಸಾಮಿನ ಕೆಲವು ಭಾಗಗಳೂ ಇವನ ಆಳ್ವಿಕೆಗೆ ಸೇರಿದ್ದುವು. ಇವನ ಆಳ್ವಿಕೆಯ ಕಾಲದಲ್ಲಿ ಹಲವು ಮಾಂಡಲಿಕರು ಸ್ವತಂತ್ರರಾದರು. ಮಿಥಿಲೆಯ ನಾನ್ಯದೇವ ಇವನನ್ನು ಸೋಲಿಸಿದ. ಗಹಡವಾಲವಂಶದ ಗೋವಿಂದಚಂದ್ರ, ಕಳಚುರಿ ರತ್ನದೇವನ ಸಾಮಂತ ವಲ್ಲಭರಾಜ, ಕಳಿಂಗದ ಪೂರ್ವಗಂಗವಂಶದ ಅನಂತವರ್ಮ ಚೋಡಗಂಗ–ಇವರೂ ಕುಮಾರಪಾಲನನ್ನು ಸೋಲಿಸಿ ಈತನ ರಾಜ್ಯದ ಬಹುಭಾಗವನ್ನು ಕಬಳಿಸಿದರು. ಸೇನವಂಶದ ವಿಜಯಸೇನನೂ ಪ್ರಬಲನಾಗುತ್ತಿದ್ದ. ಕುಮಾರಪಾಲನ ದಳಪತಿಯಾಗಿದ್ದ ವೈದ್ಯದೇವ ಇವನಿಗೆ ದ್ರೋಹ ಬಗೆದ. ಮೊದಲು ಆತ ಕುಮಾರಪಾಲನಿಗೆ ವಿಧೇಯನಾಗಿಯೇ ಇದ್ದ. ಕಾಮರೂಪದ ದಂಗೆಯನ್ನಡಗಿಸಿದ ಮೇಲೆ ಅಲ್ಲಿಯ ಅಧಿಕಾರಿಯಾಗಿದ್ದು ಕ್ರಮೇಣ ಸ್ವತಂತ್ರನಾದ. ಹೀಗೆ ಎಲ್ಲ ಸುತ್ತಿನಿಂದಲೂ ಆವರಿಸಿದ ಕಷ್ಟಪರಂಪರೆಗಳನ್ನು ಎದುರಿಸುವ ಶಕ್ತಿಯಿಲ್ಲದ ಕುಮಾರಪಾಲ 1125ರ ಸುಮಾರಿನಲ್ಲಿ ಮೃತನಾದಾಗ ಪಾಲರಾಜ್ಯ ಮುಂದುಗಾಣದ ಸ್ಥಿತಿಗೆ ಬಂದಿತ್ತು. (ಡಿ.ಎಸ್.ಜಿ.)

**ಕುಮಾರರಾಮ :** ಕನ್ನಡನಾಡಿನ ಜನಪ್ರಿಯ ನಾಯಕರಲ್ಲೊಬ್ಬ. ಪೌರುಷ, ಶೌಚ ಗುಣಗಳಿಗೆ ಹೆಸರಾದವ. ಅತಿ ಚಿಕ್ಕ ವಯಸ್ಸಿನಲ್ಲೆ ಮಹಮ್ಮದೀಯರ ದಾಳಿಯನ್ನೆದುರಿಸಿ ತನ್ನ ಅಪ್ರತಿಮ ಸಾಹಸ, ಶೌರ್ಯ, ತ್ಯಾಗಗಳನ್ನು ಪ್ರದರ್ಶಿಸಿದವ. ವಿಜಯನಗರ ಸ್ರಾಮ್ರಾಜ್ಯ ಸ್ಥಾಪನೆಗೆ ತಳಹದಿ ಹಾಕಿ ಖಿಲವಾಗುತ್ತಿದ್ದ ಆರ್ಷೇಯ ಧರ್ಮವನ್ನು ಉದ್ಧಾರ ಮಾಡಿದವ. ಈ ಮಹಾನುಭಾವನ ಕಥೆ ನಾಡಿನ ಮೂಲೆಮೂಲೆಯಲ್ಲಿ ಹರಡಿದೆ. ಕೆಲವು ಕಡೆ ಇವನ ವಿಗ್ರಹಗಳನ್ನು ಪೂಜಿಸುತ್ತಾರಲ್ಲದೆ ಇವನ ಕಥೆಯನ್ನು ಓದಿಸಿ ಕೇಳಿ ನಾಟಕಗಳನ್ನು ಬರೆಸಿ ಆಡುತ್ತಾರೆ.

ಕುಮಾರರಾಮನ ಹೆಸರು ಇಂದಿಗೂ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಲಿತವಾಗಿದೆ. ಸ್ಫುರದ್ರೂಪಿಯೂ ಪರಾಕ್ರಮಿಯೂ ಆದವನನ್ನು 'ಏನು ಈ ಮಗ ಕೊಮರಾಮ ಆಗ್ಯಾನಾ' ಎಂದು ಕರೆಯುವುದುಂಟು. ಒಮ್ಮೊಮ್ಮೆ ಬಡಾಯಿ ಕೊಚ್ಚಿಕೊಳ್ಳುವನನ್ನೂ 'ಮಹಾ ಕೊಮರಾಮ ಬಂದ' ಎಂದು ಆಡಿಕೊಳ್ಳುವುದೂ ಉಂಟಂತೆ. ಈತನನ್ನು ಕುರಿತು ನಂಜುಂಡ, ಪಾಂಚಾಳಗಂಗ ಮತ್ತು ಮಹಲಿಂಗಸ್ವಾಮಿ ಎಂಬ ಕವಿಗಳು ಸಾಂಗತ್ಯದಲ್ಲಿ ಕಾವ್ಯಗಳನ್ನು ರಚಿಸಿರುತ್ತಾರೆ. ಇಷ್ಟೇ ಅಲ್ಲದೆ ಈತನ ಬಗ್ಗೆ ಅನೇಕ ಜನಪದ ಗೀತೆಗಳೂ ಕಥೆಗಳೂ ಜನರಲ್ಲಿ ಪ್ರಚಾರದಲ್ಲಿವೆ; ಕೆಲವು ಕೈಫಿಯತ್ತುಗಳೂ ದೊರೆತಿವೆ. ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಮೀಪದಲ್ಲಿರುವ ಕುಮ್ಮಟದುರ್ಗದಲ್ಲಿ ಪ್ರತಿವರ್ಷವೂ ವೈಶಾಖ ಶುಕ್ಲ ಪೂರ್ಣಿಮೆಯಂದು ಬೇಡರು ಈತನ ಜಾತ್ರೆಯನ್ನು ನಡೆಸುವರೆಂದು ತಿಳಿದುಬರುತ್ತದೆ. ಅವರ ಪಾಲಿಗೆ ಈತ ಪರದಾರಸೋದರತ್ವದ ಪ್ರತೀಕವಾದ ದೈವಾಂಶಪುರುಷನೇ ಆಗಿದ್ದಾನೆ.

ಕುಮಾರರಾಮನ ಬಗ್ಗೆ ಇತ್ತೀಚೆಗೆ ಸಾಕಷ್ಟು ಸಂಶೋಧನೆ ನಡೆದಿದೆ. ಈ ಮೂಲಕ ಈತ ವಿಜಯನಗರದ ಸ್ಥಾಪನೆಗೆ ಪೂರ್ವದಲ್ಲಿ ಬದುಕಿ ಬಾಳಿದ ಬಬ್ಬ ವೀರಪುರುಷನೆಂತಲೂ ಆಗಿನ ಕಾಲದಲ್ಲಿ ಉತ್ತರದಿಂದ ದಂಡೆತ್ತಿ ಬಂದ ಮಹಮ್ಮದೀಯರನ್ನು ಮೂರು ಬಾರಿ ಪ್ರತಿಭಟಿಸಿ, ಕಡೆಯ ಕಾಳಗದಲ್ಲಿ ಪ್ರಾಣ ತೆತ್ತು ಹುತಾತ್ಮನಾದನೆಂತಲೂ ವ್ಯಕ್ತವಾಗುತ್ತದೆ. ಮಾನವನಾಗಿದ್ದ ಕುಮಾರರಾಮು ತನ್ನ ಹಿರಿಮೆಯಿಂದ ಅತ್ಯಲ್ಪಕಾಲದಲ್ಲೆ ಮಹಿಮಾಪುರುಷನೆಂಬ ಪ್ರಶಸ್ತಿಗೆ ಪಾತ್ರನಾಗಿ ಹಿಂದು ಜನಾಂಗದ ಆರಾಧ್ಯದೇವತೆಯಾಗಿರಬೇಕೆಂದು ತೋರುತ್ತದೆ. ಈತನ ಪೂಜೆಗಾಗಿ ದೇವಾಲಯಗಳನ್ನು ನಿರ್ಮಿಸಿ ದಾನದತ್ತಿಗಳನ್ನು ನೀಡಿರುವ ವಿಚಾರಗಳು ಶಾಸನಗಳಲ್ಲಿ ಉಕ್ತವಾಗಿರುವುದೇ ಇದಕ್ಕೆ ನಿದರ್ಶನ.

ಪ್ರಕೃತ ಪರದಾರ ಸೋದರನಾದ ಕುಮಾರರಾಮನ ಕಥೆಯನ್ನೂ ಅವನು ಎಷ್ಟರಮಟ್ಟಿಗೆ ಐತಿಹಾಸಿಕ ವ್ಯಕ್ತಿಯೆಂಬುದನ್ನೂ ಸಂಗ್ರಹವಾಗಿ ಪರಿಚಯ ಮಾಡಿಕೊಡಲಾಗಿದೆ.

ಕುಮಾರರಾಮ ಕಂಪಿಲ ಮತ್ತು ಹರಿಹರದೇವಿಯರ (ಹರಿಯಾಲದೇವಿ) ಪುತ್ರ. ಈತನಿಗೆ ರಾಮನಾಥ, ರಾಮುಗ, ಚೆನ್ನಿಗರಾಮ ಎಂಬ ಹೆಸರುಗಳೂ ಉಂಟು. ಈತನನ್ನು ಅರ್ಜುನನ ಅವತಾರವೆಂದು ನಂಜುಡನೂ ಜಟ್ಟಂಗಿರಾಮನ ಅವತಾರವೆಂದು ಪಾಂಚಾಳಗಂಗನೂ ಪರಶುರಾಮನ ಅವತಾರವೆಂದು ಮಹಾಲಿಂಗ ಸ್ವಾಮಿಯೂ ಚಿತ್ರಿಸಿರುತ್ತಾರೆ. ಚಿಕ್ಕಂದಿನಿಂದಲೇ ಆಟ, ಪಾಠ, ಬೇಟೆ ಮುಂತಾದ ಸಮಸ್ತ ವಿದ್ಯೆಗಳಲ್ಲಿಯೂ ಪ್ರವೀಣನಾಗಿ ಈತ ಕಂಪಿಲನಿಗೆ ಬಲಗೈಯಂತಿದ್ದ. ಹೊಸಮಲೆದುರ್ಗ ಮತ್ತು ಕುಮ್ಮಟದುರ್ಗಗಳಲ್ಲಿ ಪಾಳೆಯವನ್ನು ಸ್ಥಾಪಿಸಿಕೊಂಡು ಪ್ರಬಲನಾಗಿದ್ದ ಕಂಪಿಲನಿಗೆ ಹೊಯ್ಸಳ ವೀರಬಲ್ಲಾಳ, ಕಾಕತೀಯ ಪ್ರತಾಪರುದ್ರ ಮೊದಲಾದ ನೆರೆಹೊರೆಯ ರಾಜರು ಶತ್ರುಗಳಾಗಿದ್ದರು. ಕುಮಾರರಾಮ ಈ ಅರಸರನ್ನೆಲ್ಲ ಹಿಮ್ಮೆಟ್ಟಿಸಿ ಚಿಕ್ಕ ವಯಸ್ಸಿನಲ್ಲಿಯೇ ತುಂಬ ಯಶೋವಂತನಾದ. ಕ್ರಮಕ್ರಮವಾಗಿ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡು ಬಲಿಷ್ಠನಾಗುತ್ತಿದ್ದ. ಈ ಕಂಪಿಲನ ಮೇಲ್ಮೆಯನ್ನೂ ದೆಹಲಿಯ ಸುಲ್ತಾನ ಸಹಿಸದೆ ಹೋದ. ಆದರೂ ಸಾಹಸಿಯೂ ಸ್ಫುರದ್ರೂಪಿಯೂ ಆದ ಕುಮಾರರಾಮನ ವೃತ್ತಾಂತವನ್ನು ಕೇಳಿ ಸುಲ್ತಾನನ ಮಗಳಾದ ಬಾಬಮ್ಮ ಆತನನ್ನೇ ವರಿಸಬೇಕೆಂದು ಹಟತೊಟ್ಟಳು. ಸುಲ್ತಾನ ತನ್ನ ವಜೀರರ ಮೂಲಕ ಕಂಪಿಲನಿಗೆ ಹೇಳಿ ಕಳುಹಿಸಿ, ಅವನೊಂದಿಗೆ ಬಾಂಧವ್ಯ ಬೆಳೆಸಲು ಅಪೇಕ್ಷಿಸಿದ. ಕುಮಾರರಾಮನಾಗಲಿ ಕಂಪಿಲನಾಗಲಿ ಈ ಸಲಹೆಗೆ ಒಪ್ಪಲಿಲ್ಲ. ಈ ನಿರಾಕರಣೆಯಿಂದ ಸುಲ್ತಾನನಿಗೆ ಅಸಮಾಧಾನವಾಯಿತು. ಕಂಪಿಲ ಮತ್ತು ಅವನ ಮಗನ ಅಹಂಕಾರವನ್ನು ಅಡಗಿಸಬೇಕೆಂದು ಆತ ನಿಶ್ಚಯಿಸಿಕೊಂಡ. ಈ ವೇಳೆಗೆ, ಸುಲ್ತಾನನ ಆಶ್ರಯದಲ್ಲಿದ್ದ ಬಾದೂರಖಾನನೆಂಬ ಸರದಾರ ತನ್ನ ಒಡೆಯನೊಂದಿಗೆ ವೈಮನಸ್ಯ ಕಟ್ಟಿಕೊಂಡು, ತಲೆತಪ್ಪಿಸಿಕೊಂಡು ಬಂದು ಹಿಂದೂ ರಾಜರಲ್ಲಿ ಆಶ್ರಯ ಕೋರಿದ. ಆದರೆ ಸುಲ್ತಾನನ ನಿಷ್ಠುರಕ್ಕೆ ಹೆದರಿದ ಹಿಂದೂ ರಾಜರು ಅವನಿಗೆ ಆಶ್ರಯವೀಯಲು ಹಿಂದೆಗೆದರು. ಕುಮಾರರಾಮನ ಸಲಹೆಯ ಮೇರೆಗೆ ಕಂಪಿಲ ಮುಂದೆ ಬಂದು ಬಾಹದೂರಖಾನನಿಗೆ ಆಶ್ರಯವಿತ್ತ. ಇದೀಗ ಸುಲ್ತಾನನಿಗೆ ಕಂಪಿಲನ ಮೇಲೆ ದಂಡೆತ್ತಿ ಬರಲು ಸಾಕಷ್ಟು ಕಾರಣವನ್ನೊದಗಿಸಿತು.

ಸುಲ್ತಾನನ ಅಪ್ಪಣೆಯ ಮೇರೆಗೆ, ನೇಮಿ ಎಂಬಾತ ಸುತ್ತಮುತ್ತಲಿನ ಪಾಳೆಯಗಾರರನ್ನು ಕೂಡಿಸಿಕೊಂಡು ಕುಮ್ಮಟದುರ್ಗವನ್ನು ಮುತ್ತಿದ. ಕಡುಗಲಿಯಾದ ಕುಮಾರರಾಮನೂ ಆತನ ಸಹೋದರ ಸಮಾನನಾದ ಕಾಟಣ್ಣನೂ ವೀರಾವೇಶದಿಂದ ಹೋರಾಡಿ ಮುಸಲ್ಮಾನರನ್ನು ಹಿಂದಟ್ಟಿದರು. ಆಶಾಭಂಗಕ್ಕೊಳಗಾದ ಸುಲ್ತಾನ ಸುಸಮಯವನ್ನು ಎದುರು ನೋಡುತ್ತಿದ್ದ. ಈ ಮಧ್ಯೆ ಕುಮಾರರಾಮನ ರೂಪಿಗೆ ಮರುಳಾದ ಆತನ ಚಿಕ್ಕಮ್ಮ ರತ್ನಾಜಿಗೆ ಆತನಲ್ಲಿ ವ್ಯಾಮೋಹವಂಕುರಿಸಿತು. ಒಮ್ಮೆ ಕಂಪಿಲ ಬೇಟೆಗಾಗಿ ಅರಣ್ಯಕ್ಕೆ ತೆರಳಿದ್ದಾಗ ಊರಿನಲ್ಲಿಯೇ ಇದ್ದ ಕುಮಾರರಾಮ ತನ್ನ ಸಂಗಡಿಗರೊಂದಿಗೆ ಮುತ್ತಿನ ಚೆಂಡಿನ ಲಗ್ಗೆಯಾಟವನ್ನು ಆಡುತ್ತಿರುವಾಗ ಚೆಂಡು ಕೈ ಮೀರಿ ರತ್ನಾಜಿಯ ಅರಮನೆಯಲ್ಲಿ ಬಿತ್ತು. ಅದನ್ನು ಕೇಳಿ ಪಡೆಯಲು ಹೋಗಿದ್ದ ಕುಮಾರರಾಮನನ್ನು ಆಕೆ ನಾನಾ ಬಗೆಯಾಗಿ ಮರುಳುಮಾಡಿ ಒಲಿಸಿಕೊಳ್ಳಲು ಪ್ರಯತ್ನಿಸಿದಳು. ಕುಮಾರರಾಮ ಕಂಗೆಟ್ಟು ಆಕೆ ತನಗೆ ಮಾತೃಸಮಾನಳೆಂದೂ ಹಾಗೆ ವರ್ತಿಸುವುದು ಉಚಿತವಲ್ಲವೆಂದೂ ಎಚ್ಚರಿಸಿದ. ಆದರೆ ಕಾಮಪರವಶಳಾಗಿದ್ದ ರತ್ನಾಜಿಗೆ ಆತನ ಹಿತವಚನಗಳು ಹಿಡಿಸಲಿಲ್ಲ. ಹೊರ ಹೊರಟ್ಟಿದ್ದ ಆತನನ್ನು ಅಡ್ಡಗಟ್ಟಿ, ಮೈಮೇಲೆ ಬಿದ್ದು ಬಲತ್ಕಾರಗೊಳಿಸಲು ಮುಂದುವರಿದಳು. ಪರದಾರ ಸೋದರನಾದ ಕುಮಾರರಾಮ ಚಿಕ್ಕಮ್ಮನನ್ನು ಅಲ್ಲಗಳೆದು

ಆಕೆಯನ್ನು ಅತ್ತ ನೂಕಿ, ಕೈಕೊಡವಿಕೊಂಡು ಹೊರಟುಬಂದ. ರತ್ನಾಜಿ ಈರ್ಷ್ಯೆಯಿಂದ ಹೆಮ್ಮಾರಿಯಾಗಿ ಕುಮಾರರಾಮನ ಮೇಲೆ ಸೇಡು ತೀರಿಸಿಕೊಳ್ಳಲು ಬಗೆದಳು. ಕಂಪಿಲ ಬೇಟೆ ಮುಗಿಸಿ ಹಿಂತಿರುಗಿ ಬಂದ ಕೂಡಲೆ ಕುಮಾರರಾಮನ ಮೇಲೆ ಸಲ್ಲದ ಆರೋಪವನ್ನು ಹೊರಿಸಿ ದೂರು ಹೇಳಿದಳು. ಮೋಹಗ್ರಸ್ತನಾಗಿದ್ದ ಕಂಪಿಲ ನಿಜವಾದ ಸಂಗತಿಯನ್ನು ಕೇಳಿ ತಿಳಿಯದೆ ತನ್ನ ಆಪ್ತಸಚಿವನಾಗಿದ್ದ ಬೈಚಪ್ಪನನ್ನು ಬರಮಾಡಿಕೊಂಡು ಕುಮಾರರಾಮನ ಅನುಚಿತ ವರ್ತನೆಯನ್ನು ಖಂಡಿಸಿ ಕೂಡಲೆ ಆತನ ತಲೆಯನ್ನು ಕಡಿದು ತರುವಂತೆ ಆಜ್ಞಾಪಿಸಿದ. ವಿಚಾರಪರನಾದ ಬೈಚಪ್ಪ ಎಷ್ಟು ಬುದ್ಧಿವಾದ ಹೇಳಿದರೂ ರಾಜ ಕೇಳಲಿಲ್ಲ. ಚತುರನಾದ ಬೈಚಪ್ಪ ನಿರುಪಾಯನಾಗಿ ಕುಮಾರರಾಮನ ಬಳಿಗೆ ಬಂದು ಎಲ್ಲ ಸಂಗತಿಗಳನ್ನೂ ವಿವರವಾಗಿ ಕೇಳಿ ತಿಳಿದುಕೊಂಡು, ರಾಜಕುಮಾರನನ್ನು ಕೊಲ್ಲಲು ಮನಸ್ಸು ಬಾರದೆ, ಆತನನ್ನೂ ಆತನ ಮಿತ್ರರನ್ನೂ ನೆಲಮಾಳಿಗೆಯಲ್ಲಿ ಬಚ್ಚಿಟ್ಟು, ಬೇರೊಬ್ಬನ ರುಂಡವನ್ನು ತೆಗೆದುಕೊಂಡು ಹೋಗಿ ರಾಜನಿಗೆ ಒಪ್ಪಿಸಿದ. ರುಂಡವನ್ನು ಕಂಡ ರತ್ನಾಜಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಅತ್ತ ಕಂಪಿಲನ ಮೇಲೆ ದಂಡೆತ್ತಿ ಬರಲು ಸಮಯ ಕಾಯುತ್ತಿದ್ದ ಸುಲ್ತಾನನಿಗೆ ಕುಮಾರರಾಮನ ಮರಣವೃತ್ತಾಂತ ಕೇಳಿ ಕಿವಿ ನೆಟ್ಟಗಾಯಿತು. ಎರಡನೆಯ ಬಾರಿ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಲು ನೇಮಿಯನ್ನು ಕಳುಹಿಸಿಕೊಟ್ಟ. ಮುಸಲ್ಮಾನರು ದಂಡೆತ್ತಿಬರುತ್ತಿರುವ ಸುದ್ದಿಯನ್ನು ಗಡಿಕಾಯುತ್ತಿದ್ದ ಚಾರರು ಕಂಪಿಲನಿಗೆ ತಿಳಿಸಿದ ಒಡನೆಯೇ ವೃದ್ಧರಾಜ ಕಂಗೆಟ್ಟ. ಕುಮಾರರಾಮನೂ ಸಂಗಡಿಗರೂ ಸತ್ತುಹೋಗಿರುವರೆಂದು ಭಾವಿಸಿದ್ದ ಆತನಿಗೆ ಮುಂದೆ ಗತಿಯೇನೆಂದು ತೋಚದಂತಾಯಿತು. ಬೈಚಪ್ಪನನ್ನು ಕರೆಸಿ ಮಂತ್ರಾಲೋಚನೆ ಮಾಡಿದ. ಇದೇ ಸಮಯವೆಂದರಿತ ಸಚಿವ ಅಕಾರ್ಯಕ್ಕಾಗಿ ಒಡೆಯನನ್ನು ಪರಿಪರಿಯಾಗಿ ಹಂಗಿಸಿದ. ಕಡೆಗೆ ನಿರ್ವಾಹವಿಲ್ಲದೆ ತಾನು ಬೇರೊಬ್ಬ ಕಲಿಯನ್ನು ಕರೆದುಕೊಂಡು ಬಂದು ಶತ್ರುಗಳನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸುವುದಾಗಿ ಭರವಸೆಯಿತ್ತ. ಅನಂತರ ಕುಮಾರರಾಮನನ್ನು ಅಡಗಿಸಿಟ್ಟಿದ್ದ ನೆಲಮಾಳಿಗೆಯ ಬಳಿಗೆ ಬಂದು ರಾಜ್ಯಕ್ಕೆ ಒದಗಿರುವ ಆಪತ್ತನ್ನು ತಿಳಿಸಿದ. ಬೈಚಪ್ಪನ ಹಿತೋಕ್ತಿಗಳನ್ನು ಅಲ್ಲಗಳೆಯಲಾರದೆ ಕುಮಾರರಾಮ ವೇಷ ಮರೆಸಿಕೊಂಡು, ತನ್ನ ನೆಚ್ಚಿನ ಕುದುರೆಯಾದ ಬೊಲ್ಲನನ್ನು ಏರಿ ರಣರಂಗದತ್ತ ಧಾವಿಸಿದನಲ್ಲದೆ ಶತ್ರುಸೈನಿಕರೊಂದಿಗೆ ವೀರಾವೇಶದಿಂದ ಕಾದಾಡಿ, ಅವರನ್ನು ಬಡಿದೋಡಿಸಿ ಕುಮ್ಮಟದುರ್ಗಕ್ಕೆ ಪ್ರಾಪ್ತವಾಗಿದ್ದ ಕಂಟಕವನ್ನು ಪರಿಹರಿಸಿದ. ಕುಮಾರರಾಮನ ಚಹರೆಯನ್ನು ಗುರುತಿಸಿದ ಮುಸಲ್ಮಾನ ಸರದಾರರಿಗಾದರೋ ಆತ ಸತ್ತಿರುವುದು ಸುಳ್ಳಿರಬೇಕು ಎನ್ನಿಸಿತು. ಯುದ್ಧದಲ್ಲಿ ಜಯವಾದ ಬಳಿಕ ಬೈಚಪ್ಪ ವೇಷ ಮರೆಸಿಕೊಂಡಿದ್ದ ಹೊಸ ರಾಹುತನನ್ನು ಕಂಪಿಲನ ಬಳಿಗೆ ಕರೆತಂದ. ಹೊಸ ರಾಹುತ ತಲೆಯ ಮೇಲಿನ ಟಾಳಿಯನ್ನು ತೆಗೆಯುವುದೇ ತಡ ಆತ ಕುಮಾರರಾಮನೆಂದು ಕಂಪಿಲನಿಗೆ ಗೊತ್ತಾಗಿ ಹಿರಿಹಿರಿ ಹಿಗ್ಗಿದ: ಸಮಯೋಚಿತವಾದ ಚಾತುರ್ಯಕ್ಕೆ ಬೈಚಪ್ಪನನ್ನು ಮನವಾರೆ ಶ್ಲಾಘಿಸಿದ. ರತ್ನಾಜಿಗಾದರೋ ಈ ವೃತ್ತಾಂತವನ್ನೆಲ್ಲ ಕೇಳಿದ ಕೂಡಲೆ ತನ್ನ ಕಪಟವೆಲ್ಲ ಬಯಲಾಗುವುದೆಂದು ಹೆದರಿಕೆಯುಂಟಾಗಿ ನೇಣುಹಾಕಿಕೊಂಡು ಸತ್ತಳು. ಪರಾಭವ ಹೊಂದಿದ ನೇಮಿ ದೆಹಲಿಗೆ ಹಿಂತಿರುಗಲು ಅವನನ್ನು ಕಂಡು ಸುಲ್ತಾನನಿಗೆ ಕಾವೇರಿತು. ಎಲ್ಲರನ್ನೂ ಬಾಯಿಗೆ ಬಂದಂತೆ ಹೀಯಾಳಿಸಿದ್ದಲ್ಲದೆ, ಕಂಪಿಲನ ಹೆಸರನ್ನೇ ಅಳಿಸುವುದಾಗಿ ಆತ ಶಪಥ ಮಾಡಿದ.

ಸುಲ್ತಾನ ತನ್ನ ದಳಪತಿಗಳನ್ನೆಲ್ಲ ಬರಮಾಡಿಕೊಂಡು, ಕಂಪಿಲನ ಅಹಂಕಾರವನ್ನು ಹೇಗೆ ಮುರಿಯಬೇಕೆಂದು ದೀರ್ಘವಾಗಿ ಮಂತ್ರಾಲೋಚನೆ ನಡೆಸಿದ. ಆಗ ಅಲ್ಲಿಯೇ ಇದ್ದ ಮಾತಂಗಿ ಎಂಬಾಕೆ ಮುಂದೆ ಬಂದು ಸಾಕಷ್ಟು ಸೈನ್ಯವನ್ನು ಸಜ್ಜುಗೊಳಿಸಿಕೊಟ್ಟರೆ ತಾನು ಕೂಡಲೆ ಕುಮಾರರಾಮನನ್ನು ಸಂಹರಿಸಿ ಆತನ ತಲೆಯನ್ನು ತಂದುಕೊಡುವುದಾಗಿ ಪ್ರತಿಜ್ಞೆ ಮಾಡಿದಳು. ಅಲ್ಲಿದ್ದ ವೀರಾಧಿವೀರರು ಅವಳ ಮಾತುಗಳನ್ನು ಕೇಳಿ ಆಶ್ಚರ್ಯಚಕಿತರಾದರು. ಸುಲ್ತಾನನಾದರೋ ಇದೇನೋ ಸೋಜಿಗವಿರಬೇಕೆಂದು ಎಣಿಸಿ, ಆಕೆಯ ಮಾತಿಗೆ ಸಮ್ಮತಿಸಿ, ಅಪಾರವಾದ ಸೈನ್ಯವನ್ನು ಶೇಖರಿಸಿ ಆಕೆಯ ನೇತೃತ್ವದಲ್ಲಿ ಕಳುಹಿಸಿಕೊಟ್ಟ. ಸುಲ್ತಾನನ ಸೇನೆ ದಾರಿ ಯುದ್ಧಕ್ಕೂ ಹಾವಳಿ ಮಾಡುತ್ತ ಬಂದು ಕುಮ್ಮಟಕ್ಕೆ ಮುತ್ತಿಗೆ ಹಾಕಿತು. ಇತ್ತ ಕುಮಾರರಾಮನೂ ಯುದ್ಧಸನ್ನದ್ಧನಾದ. ಉಭಯಪಕ್ಷಗಳಿಗೂ ಬಿರುಸಾದ ಕಾಳಗ ನಡೆಯಿತು. ಮೊದಮೊದಲು ಮಹಮ್ಮದೀಯರಿಗೆ ತತ್ತರಿಸುವಂತಾಯಿತು. ಸುಲ್ತಾನನ ಸರದಾರರು ಮಾತಂಗಿಯನ್ನು ಹೀಯಾಳಿಸತೊಡಗಿದರು. ಆಕೆ ಯಾವುದಕ್ಕೂ ಸಗ್ಗದೆ, ಗಂಡುಡುಗೆಯನ್ನು ಧರಿಸಿ ತಾನೇ ರಣರಂಗವನ್ನು ಪ್ರವೇಶಿಸಿ ವೀರಾವೇಶದಿಂದ, ಮೈಮರೆತು ಹೋರಾಡುತ್ತ ಮುನ್ನುಗ್ಗಿದಳು. ಶತ್ರುಸೈನ್ಯದಲ್ಲಿ ದಾರಿಮಾಡಿಕೊಂಡು ಮುಂದುವರಿಯುತ್ತ ಕುಮಾರರಾಮನಿದ್ದಲ್ಲಿಗೆ ಬಂದಳು. ಆ ವ್ಯಕ್ತಿಯ ಕೆಚ್ಚನ್ನು ಕಂಡು ಕುಮಾರರಾಮ ಬೆರಗಾಗಿ ಮುಂದೆ ಬಂದು ಕಾಳಗಕ್ಕೆ ಅಣಿಯಾದ. ಕ್ಷಣಕಾಲ ಇಬ್ಬರಿಗೂ ಬಿರುಸಾದ ಕಾಳಗ ಸಾಗಿತು. ಆವೇಶಗೊಂಡು ಕತ್ತಿಯನ್ನು ಮೇಲಕ್ಕೆತ್ತಿ ಹೊಡೆಯಲು ಹೋದಾಗ ಎದುರಿನಲ್ಲಿರುವ ವ್ಯಕ್ತಿ ಸ್ತ್ರೀಯೆಂದು ಅವನಿಗೆ ವಿದಿತವಾಯಿತು. ತತ್‌ಕ್ಷಣವೇ ಕೈ ಹಿಂದೆ ಸರಿಯಿತಲ್ಲದೆ ಕ್ಷಣಕಾಲ ಆತ ತಟಸ್ಥನಾದ. ಪರಸ್ತ್ರೀಯೊಬ್ಬಳ ಮೇಲೆ ಕತ್ತಿಹಿರಿದು ಯುದ್ಧಕ್ಕೆ ನಿಂತಿದ್ದಕ್ಕಾಗಿ ಆತನ ಮನಸ್ಸು ವ್ಯಾಕುಲಗೊಂಡಿತು. ಅದೇ ಸುಸಮಯವೆಂದು ತಿಳಿದ ಮಾತಂಗಿ ಮುನ್ನುಗ್ಗಿ ಕುಮಾರರಾಮನನ್ನು ಸಂಹರಿಸಿದಳು. ಈ ದುರಂತವನ್ನು ನೋಡಿದ ಬೇಡರ ಪಡೆ ದಿಗ್ಭ್ರಾಂತವಾಗಿ ಚದುರಿತು. ಕಂಪಿಲ ಹತಾಶನಾದ. ಶತ್ರುಸೈನಿಕರು ವಿಜಯೋನ್ಮತ್ತರಾಗಿ ಕೋಟೆಯ ಕಡೆ ನುಗ್ಗಿದರು. ಇತರ ವೀರಾಧಿವೀರರು ಎಷ್ಟು ಅಡ್ಡಗಟ್ಟಿ ಹೋರಾಡಿದರೂ ಸಫಲವಾಗಲಿಲ್ಲ. ಕೋಟೆ ಶತ್ರುಗಳ ವಶವಾಯಿತು. ವೀರಪತ್ನಿಯರು ತಮ್ಮ ಧರ್ಮಕ್ಕೆ ಕಟ್ಟುಬಿದ್ದು ಚಿತಾಪ್ರವೇಶ ಮಾಡಿದರು. ಶತ್ರುರಾಜರಿಗೆಲ್ಲ ಸಿಂಹಸ್ವಪ್ನವಾಗಿದ್ದ ಕುಮ್ಮಟದುರ್ಗ, ಮುಸಲ್ಮಾನರ ದಾಳಿಗೆ ಸಿಕ್ಕಿ ಹೇಳಹೆಸರಿಲ್ಲದಂತಾಗಿ ಹಾಳು ಬೀಡಾಯಿತು. ಮಾತಂಗಿ ಕುಮಾರರಾಮನ ರುಂಡವನ್ನು ಚಾರರ ಮೂಲಕ ದೆಹಲಿಗೆ ಕಳುಹಿಸಿಕೊಟ್ಟಳು. ಅದನ್ನು ಕಂಡು ಸುಲ್ತಾನನಿಗೆ ಪರಮಾನಂದವಾಯಿತು. ಆದರೆ ಆತನ ಮಗಳಾದ ಬಾಬಮ್ಮ ಈ ದಾರುಣ ವೃತ್ತಾಂತವನ್ನು ಕೇಳಿದ ಕೂಡಲೆ ವಿರಹೋದ್ರೇಕದಿಂದ ಹತಾಶಳಾಗಿ ಪ್ರಾಣ ತ್ಯಜಿಸಿದಳು. ಕುಮಾರರಾಮನ ರುಂಡ ದೆಹಲಿಯಲ್ಲಿದ್ದಷ್ಟು ಕಾಲವೂ ಅನೇಕ ಅಪಶಕುನಗಳಾಗತೊಡಗಿದುವು. ಆದ್ದರಿಂದ ಅದನ್ನು ಮತ್ತೆ ಕುಮ್ಮಟಕ್ಕೇ ಕಳುಹಿಸಿಕೊಟ್ಟರು. ಅಂದಿನಿಂದ ಕುಮಾರರಾಮನನ್ನು ಜನ ದೈವಾಂಶ ಪುರುಷನೆಂದು ಭಾವಿಸಿ ಪೂಜಿಸಲು ಆರಂಭಿಸಿದರು. ಇಂದಿಗೂ ಆತ ಪರದಾರ ಸೋದರನೆಂದೂ ಅಪ್ರತಿಮ ಪರಾಕ್ರಮಶಾಲಿಯೆಂದೂ ಜನಮನದಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿದ್ದಾನೆ. ಕನ್ನಡ ಕವಿಗಳು ಈ ಮಹಿಮಾಪುರುಷನ ಕಥೆಯನ್ನು ಬಗೆಬಗೆಯಾಗಿ ನಿರೂಪಿಸಿ ತಮ್ಮ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಚಿತ್ತಾಕರ್ಷಕವಾಗಿರುವ ಈ ಕುಮಾರರಾಮನ ಕಥೆಯಲ್ಲಿ ಹಾಸು ಹೊಕ್ಕಾಗಿರುವ ಒಂದೆರಡು ಐತಿಹಾಸಿಕ ಎಳೆಗಳನ್ನು ಬಿಡಿಸಲು ಇಂದಿನ ಚರಿತ್ರಕಾರರು ಪ್ರಯತ್ನಿಸಿದ್ದಾರೆ. ಇಬ್ನ್ ಬತೂತ, ನ್ಯೂನಿಜ್, ಬಾರ್ನಿ ಫೆರಿಸ್ತಾ ಮತ್ತು ಇಸಾಮಿ ಮೊದಲಾದವರ ಉಲ್ಲೇಖನಗಳಲ್ಲಿ ಕುಮ್ಮಟದುರ್ಗದ ದುರಂತ ವೃತ್ತಾಂತದ ಕಥೆ ಅಲ್ಪ ಸ್ವಲ್ಪ ತಿಳಿದುಬರುತ್ತದೆ. ಕಂಪಿಲ ಮತ್ತು ಅವನ ತಂದೆ ಮುಮ್ಮಡಿ ಸಿಂಗನ ಹೆಸರುಗಳು ಶಾಸನಗಳಲ್ಲಿ ಉಕ್ತವಾಗಿರುವುವಲ್ಲದೆ, ಇವರಿಗೂ ಹೊಯ್ಸಳ ವೀರಬಲ್ಲಾಳನ ದಂಡನಾಯಕರಿಗೂ ನಡೆದ ಯುದ್ಧದ ಪ್ರಸಂಗಗಳೂ ನಿರೂಪಿತವಾಗಿವೆ. ಕುಮಾರರಾಯನ ಸಾಂಗತ್ಯವನ್ನು ಬರೆದಿರುವ ಪ್ರತಿಯೊಬ್ಬ ಕವಿಯೂ ತನ್ನ ಕಾವ್ಯವನ್ನು ನರಚರಿತ್ರೆಯೆಂದು ಅಲ್ಲಗಳೆಯಬಾರದೆಂದೂ ಅದು ಪರದಾರ ಸೋದರನೊಬ್ಬನ ವೀರಕಥಾನಕವೆಂದೂ ಅಲ್ಲಿ ಪ್ರತಿಪಾದಿತವಾಗಿರುವ ಶೌರ್ಯ ಮತ್ತು ಶುಚಿತ್ವಗಳು ಆದರ್ಶಪ್ರಾಯವಾದ ಸದ್ಗುಣಗಳೆಂದೂ ಬಿನ್ನವಿಸಿಕೊಂಡಿರುವುದನ್ನು ಗಮನಿಸಿದರೆ ಕುಮಾರರಾಮ ಕಲ್ಪಿತವ್ಯಕ್ತಿಯಲ್ಲವೆಂಬುದು ದೃಢವಾಗುತ್ತದೆ. ಈ ಮಹಿಮಾಪುರುಷನನ್ನು ಕುರಿತ ಶಾಸನಗಳು ಧಾರವಾಡ ಜಿಲ್ಲೆಯ ಸಂಗೂರು, ಬಳ್ಳಾರಿ ಜಿಲ್ಲೆಯ ರಾಮಘಡ, ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮೊದಲಾದ ಎಡೆಗಳಲ್ಲಿ ಲಭಿಸಿವೆ. ರಾಮಘಡದ ಶಾಸನದಲ್ಲಿ ಮುಮ್ಮಡಿ ಸಿಂಗನ ಮಗನಾದ ಕಂಪಿಲರಾಯ ಮತ್ತು ಆತನ ಹೆಂಡತಿ ಹರಿಹರದೇವಿಯರ ಪುತ್ರ ರಾಮನಾಥವೊಡೆಯರು ಎಂಬ ವಂಶಾವಳಿ ಸ್ಪಷ್ಟವಾಗಿ ಕಂಡುಬರುವುದರಿಂದ ಈತನೊಬ್ಬ ಐತಿಹಾಸಿಕ ವ್ಯಕ್ತಿಯಾಗಿರಬೇಕೆಂದು ಇತಿಹಾಸಕಾರರು ಭಾವಿಸಿರುತ್ತಾರೆ. ಕಾವ್ಯಗಳಲ್ಲಿ ಉಕ್ತವಾಗಿರುವ ಬಾದೂರನ ಪಲಾಯನಕ್ಕೂ ಐತಿಹಾಸಿಕ ಆಧಾರ ದೊರೆಯುತ್ತದೆ. ಮಹಮ್ಮದ್ ಬಿನ್ ತೊಗಲಕ್ ಪಟ್ಟಕ್ಕೆ ಬಂದ ಕೂಡಲೆ, ಪ್ರಾಂತ್ಯಾಧಿಕಾರಿಯಾಗಿದ್ದ ಆತನ ಬಂಧುವಾದ ಬಹಾಉದೀನ್ ಘುಸ್ತಾಫ ಎಂಬಾತ ಯಾವುದೋ ವೈಮನಸ್ಯದಿಂದ ರಾಜ್ಯಭ್ರಷ್ಟನಾಗಿ ಹಿಂದೂ ರಾಜನಾದ ಕಂಪಿಲನ ಆಶ್ರಯವನ್ನು ಪಡೆದನೆಂದೂ ಸುಲ್ತಾನನ ಸೇನೆ ಬೆನ್ನಟ್ಟಿ ಬರಲು ಹಿಂದೂ ರಾಜ ಆತನನ್ನು ಬೇರೊಬ್ಬ ರಾಜನ ಬಳಿಗೆ ಕಳುಹಿಸಿದನೆಂದೂ ಅಲ್ಲಿಯೂ ಸೈನಿಕರು ಹಿಂಬಾಲಿಸಲು, ಆ ದೊರೆ ಬಹಾಉದೀನನ್ನು ಮುಸಲ್ಮಾನರಿಗೆ ಒಪ್ಪಿಸಲು ಅವರು ಆತನನ್ನು ಚಿತ್ರಹಿಂಸೆಗೆ ಗುರಿಮಾಡಿಕೊಂದನೆಂದೂ ಮಹಮ್ಮದೀಯ ಇತಿಹಾಸಕಾರರು ವಿವರಿಸಿರುತ್ತಾರೆ. ಈ ಘಟನೆಯೇ ಇಲ್ಲಿ ಸಂದರ್ಭೋಚಿತವಾಗಿ ಮಾರ್ಪಟ್ಟಿರುವಂತಿದೆ. ಕಂಪಿಲ ಹತನಾದ ಬಳಿಕ ಅವನ ಆಸ್ಥಾನದ ಕೆಲವರು ಕೈಸೆರೆಯಾದರೆಂದೂ ಅವರಲ್ಲಿ ಜೀವಸಹಿತ ಉಳಿದ ಒಬ್ಬೊಬ್ಬರೇ ಮುಂದೆ ವಿಜಯನಗರದ ಸ್ಥಾಪನೆಗೆ ಕಾರಣರಾದರೆಂದೂ ವಾದವಿದೆ. ಒಟ್ಟಿನಲ್ಲಿ, ಐತಿಹಾಸಿಕವಾಗಿದ್ದ ಕೆಲವು ಸಂಗತಿಗಳು ಹೇಗೆ ಕಾಲಕ್ರಮದಲ್ಲಿ ಐತಿಹ್ಯವಾಗಿ ಪರಿಣಮಿಸಿವೆಯೆಂಬುದನ್ನು ವ್ಯಾಸಂಗಮಾಡಲು ಕುಮಾರರಾಮನ ಕಥೆ ಉತ್ತಮ ಸಾಧನವಾಗಿದೆ. ನಂಜುಂಡನ ನಿರೂಪಣೆಯಲ್ಲಿ ವಿದಿತವಾಗುವಂತೆ ಕುಮಾರರಾಮನ ವೃತ್ತಾಂತ ಇಂದಿನವರಿಗೆ ಪುಣ್ಯಕಥೆ, ಪೂರ್ವಚರಿತ್ರ ಮತ್ತು ಪುರಾಣವೆನ್ನಿಸಿ ಪ್ರಶಸ್ತಿಪಡೆದಿರುತ್ತದೆ.

ಕುಮಾರರಾಮನ ಕಥೆ ಕನ್ನಡ ನಾಡಿನಲ್ಲಿ ಎಷ್ಟು ಜನಪ್ರಿಯವಾಗಿದೆ ಎನ್ನಲಿಕ್ಕೆ ಇಂದಿಗೂ ಮೇಲಿಂದ ಮೇಲೆ ಬರುತ್ತಿರುವ ಗ್ರಂಥಗಳೇ ಸಾಕ್ಷಿ. ಹಲ್ಲೂರು ಶ್ರೀನಿವಾಸ ಜೋಯಿಸರ ಗಂಡುಗಲಿ ಕುಮಾರರಾಮ, ಆಲೂರು ವೆಂಕಟರಾಯರ ರಣರಂಗಸಿಂಗನಾದ

ಕುಮಾರರಾಮ, ಹುಯಿಲಗೋಳ ನಾರಾಯಣರಾಯರ ಕುಮಾರರಾಮನನ್ನು ಕುರಿತ ನಾಟಕ, ವಸುದೇವ ಭೂಪಾಲಂ ಅವರ ಕುಮ್ಮಟವಲ್ಲಭ, ವರದರಾಜ ಹುಯಿಲಗೋಳರ ರತ್ನಾಜಿ, ಎಂ. ಎಚ್. ರಾಮಶರ್ಮರ ರಣಧೀರ ರಾಮನಾಥ, ದೇಸಾಯಿ ಪಾಂಡುರಂಗರಾಯರ ಕಂಪಿಲ ಕುಮಾರ ಎಂಬ ಸಣ್ಣ ಕಥೆ, ದೇಜಗೌ ಅವರ ಕಡುಗಲಿ ಕುಮಾರರಾಮ ಹಾಗೂ ನಂಜುಂಡಕವಿ, ಜಿ. ವರದರಾಜರಾಯರ ಕುಮ್ಮಟಕೇಸರಿ ಹಾಗೂ ಕುಮಾರರಾಮನ ಸಾಂಗತ್ಯಗಳು ಎಂಬ ಪ್ರೌಢ ನಿಬಂಧ–ಈ ಸಾಹಿತ್ಯಸಂಪತ್ತನ್ನು ನೋಡಬಹುದು. (ವಿ.ಜಿ.; ಎಂ.ವಿ.ಕೆ.)

**ಕುಮಾರವಾಲ್ಮೀಕಿ :** ಸುಪ್ರಸಿದ್ಧ ತೊರವೆ ರಾಮಾಯಣದ ಕರ್ತೃ. ಈತನ ಕಾವ್ಯದಲ್ಲಿ ಕಾಲನಿರ್ದೇಶಕ ಅಂಶಗಳಾವುವೂ ಕಂಡುಬಾರದಿರುವುದರಿಂದ ಖಚಿತವಾಗಿ ಈತನ ಕಾಲವನ್ನು ನಿರ್ಧರಿಸಲು ಸಾಧ್ಯವಿಲ್ಲವಾಗಿದೆ. ಈತ ಸ್ತುತಿಸಿರುವ ಕುಮಾರವ್ಯಾಸನ ಕಾಲವೂ ಖಚಿತವಾಗಿಲ್ಲ. ಕುಮಾರವಾಲ್ಮೀಕಿಯನ್ನು ಸ್ಮರಿಸುವ ಕನಕದಾಸರ ಕಾಲವೂ ನಿರ್ಧಾರವಾಗಿಲ್ಲ. ಆದುದರಿಂದ ಕುಮಾರವ್ಯಾಸ, ಕನಕದಾಸ ಈ ಇಬ್ಬರು ಮಧ್ಯಕಾಲದಲ್ಲಿ ಜೀವಿಸಿದ್ದಿರಬಹುದಾದ ಕುಮಾರವ್ಮಾಲೀಕಿಯ ಕಾಲವೂ ಸ್ಪಷ್ಟವಾಗಿಲ್ಲ. ಕವಿಚರಿತ್ರೆಕಾರರು ಈತನ ಕಾಲವನ್ನು 1500 ಎಂದಿದ್ದಾರೆ. ಈಚಿನ ಅಭಿಪ್ರಾಯದಂತೆ ಈತನ ಕಾಲ ಹದಿನಾರನೆಯ ಶತಮಾನದ ಅಂತ್ಯಭಾಗವೆಂದು ಭಾವಿಸಬಹುದಾಗಿದೆ.

ಕುಮಾರವ್ಮಾಲೀಕಿ ಎಂಬುದು ಕವಿಯ ಬಿರುದೇ ಹೊರತು ನಿಜವಾದ ಹೆಸರಲ್ಲ. ವ್ಯಾಸಭಾರತವನ್ನು ಕನ್ನಡಿಸಿದ ನಾರಣಪ್ಪ ತನ್ನನ್ನು ಕುವಮಾರವ್ಯಾಸನೆಂದು ಸಂಭೋಧಿಸಿಕೊಂಡಿರುವಂತೆ ವಾಲ್ಮೀಕಿ ರಾಮಾಯಣವನ್ನು ಕನ್ನಡಿಸಿದ ನರಹರಿ ತನ್ನನ್ನು ಕುಮಾರವ್ಮಾಲೀಕಿ ಎಂದು ಸಂಭೋಧಿಸಿಕೊಂಡಿದ್ದಾನೆ. ಆದುದರಿಂದ ಕವಿಯ ನಿಜವಾದ ಹೆಸರು ನರಹರಿ. ಈತನಿಗೆ ಕವಿರಾಜಹಂಸ ಎಂಬ ಬಿರುದಿದ್ದಂತೆ ಈತನ ಕಾವ್ಯದಿಂದಲೇ ತಿಳಿದುಬರುತ್ತದೆ. ನರಹರಿಯ ಜನಸ್ಥಳ ತೊರವೆ. ಈ ತೊರವೆ ಬಿಜಾಪುರದ ಪಶ್ಚಿಮಕ್ಕೆ 6 ಕಿಮೀ. ದೂರದಲ್ಲಿದೆ. ಎರಡನೆಯ ಇಬ್ರಾಹಿಮ್ ಆದಿಲ್‌ಶಹ ಅಲ್ಲಿ ದೊಡ್ಡ ಅರಮನೆಗಳನ್ನೂ ಮಸೀದಿಗಳನ್ನೂ ಕಟ್ಟಿಸಿ ವಾಸಿಸುತ್ತಿದ್ದಂತೆ ತಿಳಿದುಬರುತ್ತದೆ. ಅಲ್ಲಿ ಅರ್ವಾಚೀನಕಾಲದ ಕೆಲವು ಗುಡಿಗಳಿವೆ. ಅವುಗಳಲ್ಲಿ ನರಸಿಂಹ ದೇವರ ಗುಡಿ ಮುಖ್ಯವಾದುದು. ಆ ಗುಡಿಯನ್ನು ಇಟ್ಟಿಗೆಗಳಿಂದ ಚಚ್ಚೌಕವಾಗಿ ಕಟ್ಟಿದ್ದಾರೆ. ನರಹರಿ ತನ್ನ ಗ್ರಂಥವನ್ನು ತೊರವೆಯ ನರಸಿಂಹದೇವರ ಅಂಕಿತದಲ್ಲಿ ಬರೆದಿದ್ದಾನೆ. ಆದುದರಿಂದಲೇ ಈತನ ರಾಮಾಯಣಕ್ಕೆ ತೊರವೆ ರಾಮಾಯಣ ಎಂಬ ಹೆಸರೇ ರೂಢಿಯಲ್ಲಿದೆ. ಮೈರಾವಣನ ಕಾಳಗ ಎಂಬ ಮತ್ತೊಂದು ಗ್ರಂಥವನ್ನೂ ಈತನೇ ಬರೆದನೆಂಬ ಪ್ರತೀತಿ ಇದೆ. ಆದರೆ ತೊರವೆ ರಾಮಾಯಣದ ಶೈಲಿಗೂ ಮೈರಾವಣನ ಕಾಳಗದ ಶೈಲಿಗೂ ವಿಶೇಷ ವ್ಯತ್ಯಾಸ ಕಂಡುಬರುವುದರಿಂದ ಇವೆರಡನ್ನೂ ಕುಮಾರ ವಾಲ್ಮೀಕಿಯೇ ರಚಿಸಿದನೋ ಇಲ್ಲವೋ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಸದ್ಯಕ್ಕೆ ಈತ ತೊರವೆ ರಾಮಾಯಣವನ್ನು ಮಾತ್ರ ಬರೆದಿದ್ದಾನೆ ಎಂದಿಟ್ಟುಕೊಳ್ಳಬಹುದು.

ತೊರವೆ ರಾಮಯಣದಲ್ಲಿ ಕವಿ ಕುಮಾರವ್ಯಾಸನೊಬ್ಬನನ್ನು ಬಿಟ್ಟು ಮತ್ತಾವ ಕನ್ನಡಕವಿಯನ್ನೂ ಸ್ಮರಿಸಿಲ್ಲ, ಹೊಗಳಿಲ್ಲ.

**ಸರಸವರ್ಣಕ ಕವಿಗಳೊಳು ಭಾ**
**ಸುರ ಕುಮಾರವ್ಯಾಸನೊಬ್ಬನು**
**ಪರಿಕಿಸುವೊಡಾನೊಬ್ಬ ಮಗುಳೆಣಿಸುವರೆ ವರ್ಣಕಕೆ**
**ವರಕುಮಾರವ್ಯಾಸನೊಬ್ಬನು**
**ಯೆರಡನೆಯನಾಲಾನೊಬ್ಬ ಮಿಕ್ಕಿನ**
**ಬರಡು ಕವಿಗಳ ಲೆಕ್ಕಿಸುವನೆ ಕುಮಾರವಾಲ್ಮೀಕಿ**

ಎಂಬ ಈ ಪದ್ಯದಲ್ಲಿ ತನ್ನ ಅಭಿಪ್ರಾಯವನ್ನು ಕವಿ ಸ್ಪಷ್ಟಪಡಿಸಿದ್ದಾನೆ.

ತೊರವೆ ರಾಮಾಯಣದಲ್ಲಿ ಆರು ಕಾಂಡಗಳೂ ಸು. 5,100 ಪದ್ಯಗಳೂ ಇವೆ. ಕಾವ್ಯ ಭಾಮಿನೀ ಷಟ್ಪದಿಯಲ್ಲಿದೆ. ಇಲ್ಲಿನ ಯುದ್ಧಕಾಂಡ ಉಳಿದ ಐದು ಕಾಂಡಗಳ ಮೊತ್ತಕ್ಕಿಂತಲೂ ದೊಡ್ಡದಾಗಿದೆ. ತೊರವೆ ರಾಮಾಯಣ ವಾಲ್ಮೀಕಿ ರಾಮಾಯಣದ ಕಥಾಸರಣಿಯನ್ನೇ ಅನುಸರಿಸಿ ರಚಿತವಾಗಿದೆ. ಆದರೆ ಕವಿ ಅಲ್ಲಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅವುಗಳಲ್ಲಿ ಪ್ರಮುಖವಾದ ಒಂದೆರಡಂಶಗಳನ್ನು ಇಲ್ಲಿ ಗಮನಿಸಬಹುದಾಗಿದೆ. ತೊರವೆರಾಮಾಯಣದ ಪ್ರಾರಂಭದಲ್ಲಿ ಈಶ್ವರ ಪಾರ್ವತಿಗೆ ಶ್ರೀರಾಮನ ಚರಿತ್ರೆಯನ್ನು ವಿವರಿಸುತ್ತಾನೆ. ಇಲ್ಲಿಯ ಶ್ರೀರಾಮ ಸಾಮಾನ್ಯ ಮಾನವನಲ್ಲ. ವಿಷ್ಣುವಿನ ಅವತಾರ. ಮಂಥರೆ ಮಾಯೆಯ ಪ್ರತೀಕ. ಇಲ್ಲಿಯ ರಾವಣ ಸ್ವಲ್ಪಮಟ್ಟಿಗೆ ದುರಂತನಾಯಕನಾಗಿ ಕಾಣುತ್ತಾನೆ. ಈ ಕೆಲವು ಮಾರ್ಪಾಡುಗಳನ್ನು ಕವಿ ಅಧ್ಯಾತ್ಮ ರಾಮಾಯಣವನ್ನನುಸರಿಸಿ ಮಾಡಿಕೊಂಡಿರಬಹುದೆಂದು ಊಹಿಸಬಹುದಾಗಿದೆ

ವಾಲ್ಮೀಕಿ ರಾಮಾಯಣದ ಕಥಾಸರಣೀಯನ್ನೇ ಅನುಸರಿಸಿ ರಚಿತವಾದ ವೈದಿಕ ರಾಮಾಯಣಗಳು ಕುಮಾರವಾಲ್ಮೀಕಿಗಿಂತ ಮುಂಚೆ ಯಾವುದೂ ಕಂಡುಬರುವುದಿಲ್ಲ. ತೊರವೆ ರಾಮಾಯಣದಲ್ಲಿ ಕವಿ ಸರಸವರ್ಣಕ; ಕವಿಗಳಲ್ಲಿ ಮೊದಲು ಕುಮಾರವ್ಯಾಸ ಆಮೇಲೆ ತಾನು, ಉಳಿದವರೆಲ್ಲರೂ ಜರಡು ಕವಿಗಳು, ಶಬ್ದಾಕ್ಷರದರಿದ್ರರು, ಬಂಧುರರಸವಿವರ್ಜಿತರು ಎಂದು ಹೇಳಿಕೊಂಡಿದ್ದಾನೆ. ಈ ಹೇಳಿಕೆ ತುಸು ಕೆಚ್ಚಿನ ಮಾತಾದರೂ ಭಕ್ತಕವಿಯಾದ ಕುಮಾರವಾಲ್ಮೀಕಿ ತನ್ನ ಕೃತಿಯ ಮಹಿಮೆಯ ಭರದಲ್ಲಿ ಹೇಳಿದ ಮಾತು–ಎಂದಿಟ್ಟುಕೊಳ್ಳಬಹುದು. ಈತ ತನ್ನ ಕೃತಿಯನ್ನು ರಾಜಾಸ್ಥಾನಕ್ಕಾಗಲಿ ಪಂಡಿತಮಂಡಲಿಗಾಗಲಿ ಬರೆಯಲಿಲ್ಲ. ಜನಸಾಮಾನ್ಯರ ಉದ್ಧಾರಕ್ಕಾಗಿ ವಾಲ್ಮೀಕಿ ರಾಮಾಯಣದ ಕಥೆಯನ್ನು ಕನ್ನಡ ಷಟ್ಪದಿಗಳಲ್ಲಿ ಭಕ್ತಿಪರವಶನಾಗಿ ಹಾಡಿದ. ಈತ ಮಧ್ಯಮವರ್ಗದ ಕವಿ. ಈತನ ಕೃತಿ ಪಂಡಿತರಂಜಕವಲ್ಲದಿದ್ದರೂ ಪಾಮರರಿಗೆ ಪ್ರಿಯವೆನಿಸಿದೆ. ಕಾವ್ಯದಲ್ಲಿ ಭಕ್ತಿಯಷ್ಟು ತೀವ್ರವಾಗಿ ಕಾವ್ಯಗುಣ ವ್ಯಕ್ತವಾಗಿಲ್ಲವೆಂಬ ವಿಷಯ ಸ್ಪಷ್ಟ. ಹೃದ್ಯ ಸಂದರ್ಭಗಳು ಬಂದಾಗ ಕವಿ ಉಚಿತ ರೀತಿಯಲ್ಲಿ ಅವನ್ನು ನಿರ್ವಹಿಸಿ ಪಾತ್ರಗಳ ಮನೋಧರ್ಮವನ್ನು ಹೊರಪಡಿಸುತ್ತಾನೆ. ಕಥೆಗಾರಿಕೆಯಲ್ಲಿ ನಿರರ್ಗಳವಾದ ಓಟವಿದೆ, ಅಚ್ಚುಕಟ್ಟಿದೆ, ಆದರೆ ಕಾವ್ಯತೆ ಉಜ್ಜ್ವಲವಾಗಿ ತೀಕ್ಷ್ಣವಾಗಿ ಮುಂದುವರಿಯುವುದಿಲ್ಲ. ಕವಿಯ ಭಾಷೆ ಮತ್ತು ಛಂದೋರಚನೆ ಬಹಳ ಬಿಗಿಯಾದದ್ದು. ಇಲ್ಲೆಲ್ಲ ಕುಮಾರವ್ಯಾಸನ ಪ್ರಭಾವ ಎದ್ದುತೋರುತ್ತದೆ. ಅಲ್ಲಲ್ಲಿ ಕಾಳಿದಾಸನ ಪ್ರಭಾವವೂ ಕಾಣುತ್ತದೆ. ಒಟ್ಟಿನಲ್ಲಿ ಅಂದಿನ ಕಾಲಕ್ಕೆ ಕುಮಾರವ್ಯಾಸಭಾರತ ಎಷ್ಟರಮಟ್ಟಿಗೆ ಜನಪ್ರಿಯವಾಗಿತ್ತೋ ಬಹುಶಃ ಅಷ್ಟರಮಟ್ಟಿಗೇ ತೊರವೆ ರಾಮಾಯಣವೂ ಜನಪ್ರಿಯವಾಗಿತ್ತೆಂದು ಭಾವಿಸಬಹುದಾಗಿದೆ. ಕುಮಾರವಾಲ್ಮೀಕಿ ಜನ ಸಾಮಾನ್ಯದ ಕವಿ. ಅದಕ್ಕಿಂತ ಮಿಗಿಲಾಗಿ ಭಕ್ತಕವಿ. ವಾಲ್ಮೀಕಿ ರಾಮಾಯಣವನ್ನು ಮೊದಲಬಾರಿಗೆ ಸಂಗ್ರಹಿಸಿದ ಕನ್ನಡ ಕವಿ. (ಎನ್.ಬಿ.)

**ಕುಮಾರವಿಷ್ಣು :** ಪಲ್ಲವ ಸಂತತಿಯಲ್ಲಿ ಈ ಹೆಸರಿನ ಮೂವರು ರಾಜರಿದ್ದರು. ಓಂಗೋಡು, ಚಂದಲೂರು, ವೇಲೂರು, ಪಾಳಯಂ ಮೊದಲಾದ ಸ್ಥಳಗಳಲ್ಲಿ ಸಿಕ್ಕಿರುವ, ಪಲ್ಲವರ ಸಂಸ್ಕೃತ ಭಾಷೆಯ ತಾಮ್ರಶಾಸನಗಳಲ್ಲಿ ಬರುವ, ಪಲ್ಲವರಾಜರ ವಂಶಾನುಕ್ರಮಣಿಕೆಯಲ್ಲಿ ಈ ಹೆಸರುಗಳು ಕಾಣಬರುತ್ತವೆ. ಇವರು ಸಿಂಹವಿಷ್ಣುವಿಗಿಂತ ಹಿಂದೆ ಆಳಿದವರು. ಇವರ ಕಾಲ ಮತ್ತು ಸಾಧನೆಗಳ ಬಗ್ಗೆ ಹೆಚ್ಚು ವಿವರಗಳಿಲ್ಲ. 1ನೆಯ ಕುಮಾರವಿಷ್ಣು ಇವರಲ್ಲಿ ಮೊದಲಿಗ. ಕುಮಾರವಿಷ್ಣುವಿಗೆ ಅಶ್ವಮೇಧಿನ್ ಎಂಬ ಬಿರುದು ಇದ್ದುದಾಗಿಯೂ ತಿಳಿದುಬರುತ್ತದೆ. ಇವನ ಆಳ್ವಿಕೆ ಅವಧಿ ಸು.350–370. 2ನೆಯ ಕುಮಾರವಿಷ್ಣು ಸುಮಾರು 510ರಲ್ಲಿ ನಂದಿವರ್ಮನ ತರುವಾಯ ಸಿಂಹಾಸನಕ್ಕೆ ಬಂದ. ಕಂಚಿ ಆ ಕಾಲದಲ್ಲಿ ಪಲ್ಲವರ ಕೈ ಬಿಟ್ಟುಹೋಗಿದ್ದುದಾಗಿಯೂ ಅದನ್ನು ಪುನಃ 2ನೆಯ ಕುಮಾರವಿಷ್ಣು ವಶಪಡಿಸಿಕೊಂಡನೆಂದೂ ತಿಳಿದುಬರುತ್ತದೆ. ಈತ 511 ರಿಂದ 153 ಆಳಿರಬಹುದು. 3ನೆಯ ಕುಮಾರವಿಷ್ಣು ಇವರ ಮೊಮ್ಮಗ. ಸಂಸ್ಕೃತ ಶಾಸನಗಳಲ್ಲಿ ಉಲ್ಲೇಖಿತರಾದ. ಪಲ್ಲವರಲ್ಲಿ ಕಡೆಯವ. ಈತ ಸು. 151ರಿಂದ 10 ವರ್ಷಕಾಲ ಆಳಿದಂತೆ ಕಾಣಬರುತ್ತದೆ. (ಜಿ.ಆರ್.ಆರ್.)

**ಕುಮಾರವ್ಯಾಸ :** ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿದ್ದು, ಜನಪ್ರಿಯ ಗದುಗಿನ ಭಾರತವನ್ನು ಬರೆದ ಕವಿ. ಈತ ಕನ್ನಡ ಸಾಹಿತ್ಯದ ಉನ್ನತೋನ್ನತ ಕವಿ: ಉನ್ನತೋನ್ನತರೆನ್ನಬಹುದಾದ ನಾಲ್ವರೊ ಐವರೊ ಮಹಾಕವಿಗಳಲ್ಲಿ ಒಬ್ಬ. ಕುಮಾರವ್ಯಾಸ ಎಂಬ ಪದ ಈಗ ಇವನ ಹೆಸರು ಎಂಬಂತೆ ಬಳಕೆಯಲ್ಲಿದೆ. ದಿಟ್ಟದಲ್ಲಿ ಇದು ಕವಿಯ ಕಾವ್ಯನಾಮ; ಪ್ರಾಯಶಃ ಮೊದಲಲ್ಲಿ ಬಿರುದಾಗಿ ಬಂದದ್ದು. ಕವಿ ತನ್ನನ್ನು ತಾನು ಕುಮಾರವ್ಯಾಸ ಎಂದು ಕರೆದುಕೊಂಡಿದ್ದರೆ ಅದನ್ನು ನಾವು ಕಾವ್ಯನಾಮ ಎನ್ನಬೇಕು; ಹಿರಿಯರು ಅಭಿಮಾನಿಗಳು ಇವನನ್ನು ಈ ಹೆಸರಿನಿಂದ ಹೊಗಳಿದರೆಂದು ತಿಳಿದವಾದರೆ ಅದು ಒಂದು ಬಿರುದು ಎನ್ನಬೇಕಾಗುತ್ತದೆ. ಕುಮಾರವ್ಯಾಸ ಎಂದು ಹೆಸರಾಗಿರುವ ಈ ಕವಿಯ ವಾಡಿಕೆಯ ಹೆಸರು ಏನಾಗಿತ್ತು ಎಂದು ಖಂಡಿತವಾಗಿ ಹೇಳುವಂತಿಲ್ಲ. ನಾರಣಪ್ಪ ಎಂದಿತ್ತು ಎಂದು ಪ್ರತೀತಿ. ಕವಿ ಗದುಗಿನ ವೀರನಾರಾಯಣದೇವರ ಉಪಾಸಕ: ಆ ದೇವರನ್ನು ತನ್ನ ಕಾವ್ಯದಲ್ಲಿ ನಾರಾಯಣ, ನಾರಾಯಣ, ನಾರಣ ಎಂದು ಕರೆದಿದ್ದಾನೆ. ಇದರ ಆಧಾರದ ಮೇಲೋ ಇಲ್ಲ ಪೂರ್ವದಿಂದ ಹಾಗೆಂದು ಬಂದದ್ದರಿಂದಲೋ ಜನ ಎಂದೋ ಇವನ ಹೆಸರು ನಾರಣಪ್ಪ ಎಂದು ನಿರ್ಧರಿಸಿದರು. ಈಗ ನಾವು ಈ ಭಾರತ ಗದುಗಿನ ನಾರಣಪ್ಪ ಬರೆದದ್ದು ಎಂದು ಹೇಳುತ್ತೇವೆ. ಇದರಲ್ಲಿ ತಪ್ಪೇನೂ ಇಲ್ಲ; ಆದರೆ ಇದಕ್ಕೆ ಸರಿಯಾದ ಆಧಾರ ಇಲ್ಲ ಎನ್ನುವುದು ನೆನಪಿನಲ್ಲಿರಬೇಕು. ಸ್ಥಳೀಯ ಪ್ರತೀತಿಯಂತೆ ಕುಮಾರವ್ಯಾಸ ಗದುಗಿನ ಬಳಿಯ ಕೋಳಿವಾಡದ ಕರಣಿಕರ ವಂಶಸ್ಥ. ಕೋಳಿವಾಡದ ಈ ಮನೆತನದವರ ಇತಿಹಾಸದಿಂದ ಮಾಧವ ಎಂಬ ಹಿರಿಯರೊಬ್ಬರ ಮಗ ಲಕ್ಷ್ಮಣ ಎಂಬಾತ ವಿಜಯನಗರದ ಅರಸರಲ್ಲಿ ಮಂತ್ರಿಯಾಗಿದ್ದನೆಂದೂ ಅವನ ಐದು ಜನ ಗಂಡುಮಕ್ಕಳಲ್ಲಿ ಹಿರಿಯವ ವೀರನಾರಾಯಣ ಎಂದೂ ತಿಳಿಯುತ್ತದೆ. ವಿಜಯನಗರದ ಅರಸರಲ್ಲಿ ಲಕ್ಷ್ಮಣ ಎಂಬ ಹೆಸರ ಮಂತ್ರಿ ಒಬ್ಬ ಇದ್ದದ್ದು ಒಂದನೆಯ ದೇವರಾಯನಲ್ಲಿ. ಅರಸ ತೀರಿಕೊಂಡ ಮೇಲೆ ಮಂತ್ರಿ ತನ್ನ ಉಂಬಳಿಯ ಕೋಳಿವಾಡಕ್ಕೆ ಬಂದನಂತೆ.

ಈ ಅರಸ ತೀರಿಕೊಂಡದ್ದು 1424ರಲ್ಲಿ. ಎಂದರೆ ಕವಿ 1430 ಸುಮಾರಿನಲ್ಲಿ ಜೀವಿಸಿದ್ದನೆಂದು ಹೇಳಬಹುದು. ವೀರಶೈವ ಗ್ರಂಥ ಎರಡರಲ್ಲಿ ಈತ ಚಾಮರಸನ ತಂಗಿಯ ಗಂಡ, ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಇಬ್ಬರೂ ಎರಡು ಭಾರತವನ್ನು ಬರೆದರು



ಕುಮಾರವ್ಯಾಸನ ಆರಾಧ್ಯದೈವ, ಗದುಗಿನ ವೀರನಾರಾಯಣ

ಎಂದು ಮೊದಲಾಗಿ ಹೇಳುವ ಒಂದು ಕಥೆ ಇದೆ. ಈ ಕಥೆ ಈ ಕವಿಯೂ ಚಾಮರಸನೂ ಸಮಕಾಲಿಕರೆಂಬ ಊಹೆಯನ್ನು ಸಮರ್ಥಿಸುತ್ತದೆಯೆಂದು ಕವಿಚರಿತಕಾರರು ಅಭಿಪ್ರಾಯಟ್ಟಿದ್ದಾರೆ. ಚಾಮರಸನ ಕಾಲ ಸುಮಾರು 1430. ಈ ಕಥೆಯನ್ನು ಹೇಳುವ ಗ್ರಂಥಗಳು ಚಾಮರಸನ ಅನಂತರ ಇನ್ನೂರು ಮುನ್ನೂರು ವರ್ಷಗಳ ಆಚೆಗೆ ಬರೆದ ಗ್ರಂಥಗಳು. ಭೋಜ, ಕಾಳಿದಾಸ, ಭವಭೂತಿ, ದಂಡಿ, ಅಭಿನವಪಂಪ, ಕಂತಿ. ಮುಂತಾದವರನ್ನು ಕುರಿತ ಹಲವು ಕಥೆಗಳಂತೆ ಇದು ಕವಿಗಳನ್ನು ಕುರಿತು ಆಮೇಲೆ ಜನ ಕಟ್ಟಿದ ಒಂದು ಸ್ವಾರಸ್ಯವಾದ ಕಥೆ ಅಷ್ಟೇ ಎಂದು ತೋರುತ್ತದೆ. ಕಾವ್ಯದಲ್ಲಿ ಬಂದಿರುವ ಸಂಗತಿಗಳನ್ನೂ ಪದಗಳನ್ನೂ ಪರಿಶೀಲಿಸಿ ಮಂಜೇಶ್ವರ ಗೋವಿಂದ ಪೈಗಳು ಈ ಕವಿ ಇದಕ್ಕಿಂತ ಎರಡು ಶತಮಾನದಷ್ಟು ಹಿಂದೆ ಆಗಿ ಹೋಗಿರಬೇಕೆಂದು ಊಹಿಸಿದ್ದಾರೆ. ಇಂಥ ಆಧಾರದ ಮೇಲೆ ಕಾವ್ಯದ ಕಾಲವನ್ನು ನಿರ್ಧರಿಸುವುದು ಅಸಾಧ್ಯ ಅಲ್ಲ; ಆದರೂ ಇದು ಸ್ವಲ್ಪ ಅತಂತ್ರ. ಕುಮಾರವ್ಯಾಸನ ಭಾರತ ಧರ್ಮರಾಜನ ಪಟ್ಟಾಭಿಷೇಕದಿಂದ ಮುಗಿಯುತ್ತದೆ. ಕೃಷ್ಣದೇವರಾಯನ ಆಸ್ಥಾನದ ತಿಮ್ಮಣ ಕವಿ ಇದರ ಕಥೆಯನ್ನು ಮುಂದುವರಿಸಿ ಇನ್ನೆಂಟು ಪರ್ವಗಳನ್ನು ರಚಿಸಿದ್ದಾನೆ. ಆ ಕಾವ್ಯದ ಪೀಠಿಕೆಯಲ್ಲಿ ಆತ ಮೊದಲು ಕುಮಾರವ್ಯಾಸನ ಕಾವ್ಯವನ್ನು ಪೂರ್ತಿಮಾಡು ಎಂದು ಅರಸ ಅಪ್ಪಣೆ ಮಾಡಿದ್ದಾಗಿ ಹೇಳಿದ್ದಾನೆ. ಕೃಷ್ಣದೇವರಾಯನ ಕಾಲ 1509–20. ಈ ಮಾತಿನ ಆಧಾರದ ಮೇಲೆ ರೈಸ್ ಮತ್ತು ಕಿಟ್ಟೆಲರು ಕುಮಾರವ್ಯಾಸ ಸು. 1500ರ ಕಾಲಕ್ಕೆ ಜೀವಿಸಿದ್ದಿರಬಹುದೆಂದು ಊಹಿಸಿದರು. ಕೋಳಿವಾಡದ ಕರಣಿಕರ ಮನೆತನದ ಲಕ್ಕರಸನ ಹಿರಿಯ ಮಗ ವೀರನಾರಾಯಣ ಈ ಕಾವ್ಯವನ್ನು ರಚಿಸಿದ ಎನ್ನುವುದಾದರೆ ಕಾವ್ಯ 1430–1500ರ ಅಂತರದಲ್ಲಿ ರಚಿತವಾಯಿತೆನ್ನಬೇಕು. ದೊರೆ ಎಂಬತ್ತು ವರ್ಷಗಳ ಹಿಂದೆ ರಚಿತವಾಗಿದ್ದ ಗ್ರಂಥವನ್ನು ಪೂರ್ತಿಮಾಡು ಎಂದು ಹೇಳಿದನೆನ್ನುವುದು ದೂರಾನ್ವಯ. ಅದು ತನ್ನ ಎಳೆತನದಲ್ಲಿ ರಚಿತವಾಗಿ ತನ್ನ ಪರಿಚಯಕ್ಕೆ ಬಂದಿದ್ದ ಗ್ರಂಥವಾಗಿರಬೇಕು ಎನ್ನುವುದು ಹೆಚ್ಚು ಸಂಭವನೀಯ. ಕುಮಾರವ್ಯಾಸನ ಕಾವ್ಯದಲ್ಲಿ ಅರಮನೆಯ ಜೀವನದ ಸಮೀಪ ಪರಿಚಯದ ಕುರುಹು ಇದೆ. ಅರಮನೆಯ ನಾಯ್ಗಳು ಎಂದು ಆತ ಒಂದು ಕಡೆ ಪ್ರಯೋಗಿಸಿರುವ ಶಬ್ದವನ್ನು ನೋಡಿದರೆ ಅವನಿಗೆ ಅರಮನೆಯನ್ನು ಕುರಿತು ಏನೋ ಕಾರಣದಿಂದ ಬೇಸರವೂ ಇದ್ದಿತು ಎಂದೂ ಕಾಣುತ್ತದೆ. ಕಾವ್ಯ ಸುಮಾರು 1480–90ರ ಸುಮಾರಿನಲ್ಲಿ ರಚಿತವಾಗಿದ್ದಿರಬಹುದು ಎಂದು ಊಹಿಸಬಹುದು. ಕವಿ ಜಾತಿಯಿಂದ ಬ್ರಾಹ್ಮಣ. ಮತ ವೈದಿಕ ಎಂದು ಊಹಿಸಬಹುದು. ಚಾಮರಸನ ತಂಗಿಯ ಗಂಡ ಎಂಬ ಕಥೆಯ ಆಧಾರದ ಮೇಲೆ ಇವನು ವೀರಶೈವನಾಗಿದ್ದಿರಬೇಕು ಎಂದು ಈಚೆಗೆ ಕೆಲವರು ಸೂಚಿಸಿದ್ದಾರೆ. ಇವನ ಜೊತೆಗೆ ಚಾಮರಸನೂ ಒಂದು ಭಾರತ ಬರೆದ ಎನ್ನುವುದಾದರೆ ಈ ಕಥೆ ಇವನು ವೀರಶೈವನಾಗಿದ್ದ ಎನ್ನುವುದಕ್ಕಿಂತ ಹೆಚ್ಚಾಗಿ ಚಾಮರಸ ಆಗ ಇನ್ನೂ ವೀರಶೈವನಾಗಿರಲಿಲ್ಲ ಎಂದು ಸೂಚಿಸುತ್ತದೆ. ಏಕೆಂದರೆ ಆತ ಪ್ರಭುಲಿಂಗಲೀಲೆಯನ್ನು ಬರೆದ ಮೇಲೆ ಭಾರತ ಸತ್ತವರ ಕಥೆ, ಪ್ರಭುಲಿಂಗಲೀಲೆ ಸಾಯದ ಪುಣ್ಯಾತ್ಮರ ಕಥೆ ಎಂದು ಹೇಳಿದನಂತೆ. ಕವಿ ನಾರಾಣಪ್ಪ ದಿನವೂ ವೀರನಾರಾಯಣ ದೇವಾಲಯದ ಆವರಣದಲ್ಲಿರುವ ಕೊಳದಲ್ಲಿ ಸ್ನಾನಮಾಡಿ ಒದ್ದೆಯಲ್ಲಿ ದೇವರೆದುರು ಕುಳಿತು ಕಾವ್ಯವನ್ನು ಹೇಳುತ್ತಿದ್ದನೆಂದು ಒಂದು ಸಂಪ್ರದಾಯದ ಮಾತು. ಒದ್ದೆಯಲ್ಲಿ ಕುಳಿತು ಎನ್ನುವುದು ಆಮೇಲಿನ ಜನ ಕಲ್ಪಿಸಿದ ಭಕ್ತಿಯ ಅತಿರೇಕ ಎಂದು ಕಾಣುತ್ತದೆ. ಬ್ರಾಹ್ಮಣ್ಯದಲ್ಲಿ ಒದ್ದೆಯಲ್ಲಿರುವುದೆನ್ನುವುದು ಪ್ರೇತಕಾರ್ಯದಲ್ಲಿ ಕಾಣುವ ಸಂಗತಿ; ದೇವತಾಕಾರ್ಯದಲ್ಲಿ ಅಲ್ಲ. ಕಾವ್ಯವನ್ನು ಓದಿದರೆ ಅದು ಕವಿ ದೈವಸನ್ನಿಧಿಯಲ್ಲಿ ಆವೇಶದಿಂದ ತುಂಬಿದ ವೇಳೆ ಬರೆದದ್ದಾಗಿರಬೇಕು ಎಂದು ತೋರುವುದು ದಿಟ. ಅಂತೇ ಈತ ಒಬ್ಬ ವಿಷ್ಣು ಭಕ್ತ. ಮಹಾಭಕ್ತ; ಹೀಗಿದ್ದೂ ಶಿವವಿರೋಧಿ ಅಲ್ಲ; ಶಿವನನ್ನೂ ರೂಪಗಳ ಐಕ್ಯ ಸಮಾನತೆಗಳನ್ನು ಒಪ್ಪಿದ ಒಂದು ಪಂಥದವನಾಗಿರಬೇಕು. ಕರ್ನಾಟಕದ ಭಾಗವತಪಂಥ ಇಂಥ ಒಂದು ಪಂಥ. ತೊರವೆಯ ರಾಮಾಯಣ. ವಿಠಲನಾಥನ ಭಾಗವತ, ಜೈಮಿನಿ ಭಾರತ ಗ್ರಂಥಗಳ ರಚಯಿತರು ಇದೇ ಪಂಥದ ಅನುಯಾಯಿಗಳು.

ಕವಿಯನ್ನೂ ಕಾವ್ಯವನ್ನೂ ಕುರಿತ ಇದಿಷ್ಟು ವಿಚಾರ ಸಾಹಿತ್ಯದ ಅಭ್ಯಾಸದ ದೃಷ್ಟಿಯಿಂದ ಆವಶ್ಯಕ; ಆದರೆ ಅದರ ರಸದ ಅನುಭವದ ದೃಷ್ಟಿಯಿಂದ ಅವಾಂತರ. ಆಂಗ್ಲ ಸಾಹಿತ್ಯದ ವೇಳೆ ಕಲಿತ ಕ್ರಮವನ್ನು ಅನುಸರಿಸಿ ಈ ಐವತ್ತು ವರ್ಷಗಳೀಚಿನಲ್ಲಿ ಈ ವಿವರಗಳಿಗೆ ನಾವು ಹೆಚ್ಚು ಗಮನ ಕೊಡುತ್ತಿದ್ದೇವೆ. ಇದು ಸರಿಯೆ. ಆದರೆ ಇದು ಅತಿಯಾಗುವುದು ಸಾಧ್ಯ. ಇದರ ಕಾರಣದಿಂದಾಗಿ ಕಾವ್ಯವನ್ನು ಸರಿಯಾಗಿ ಅನುಭವಿಸದೆ ಹೋಗುವ ಅಪಾಯ ಇದೆ. ನಮ್ಮ ಪೂರ್ವಿಕರು ಇಂಥ ಮಾತಿಗೆ ಬಹಳ ಗಮನ ಕೊಡದೆ ಕಾವ್ಯವನ್ನು ಸವಿದು ಸಂತೋಷಪಟ್ಟರು. ನೀತಿ ಕಲಿತರು. ಭಕ್ತಿಯನ್ನನುಭವಿಸಿದರು, ಬಾಳನ್ನೇ ಹಸನು ಮಾಡಿಕೊಂಡರು. ಕುಮಾರವ್ಯಾಸನ ಕಾವ್ಯ ಈ ಎಲ್ಲವನ್ನೂ ಸಾಧಿಸಲು ಪರ್ಯಾಪ್ತವಾದ ಒಂದು ಸಾಧನೆ. ಅಕ್ಷರವಿದ್ಯೆ ಅಷ್ಟೇನೂ ಹರಡದಿದ್ದ ಅವನ ಕಾಲದಲ್ಲಿ, ಅವನಾಚಿನ ಕಾಲದ ನಾಲ್ಕು ಶತಮಾನಗಳಲ್ಲಿ ಜನತೆ ಈ ಕಾವ್ಯವನ್ನು ಪುರಾಣಶ್ರವಣ ಕ್ರಮದಲ್ಲಿ ಗಮಕಿಗಳಿಂದ ಕೇಳಿ ಅನುಭವಿಸಿತು. ನಮ್ಮಲ್ಲಿ ಉಪಾಧ್ಯಾಯ. ಶಿಷ್ಯ, ಕಾವ್ಯವನ್ನು ಪಾಠ ಹೇಳುತ್ತಿದ್ದದ್ದು ಕಲಿಯುತ್ತಿದ್ದದ್ದು ಗಮಕದ ಕ್ರಮದಲ್ಲಿಯೇ, ಕವಿಯೇ ಗಮಕಿಯೂ ಆಗಿದ್ದದ್ದು ಸಂಪ್ರದಾಯದಲ್ಲಿ ಉಂಟು. ಕುಮಾರವ್ಯಾಸ ತನ್ನ ಕಾವ್ಯವನ್ನು ಗಮಕದಲ್ಲಿ ಹೇಳುತ್ತಿದ್ದನೆಂದೇ ಗದುಗಿನ ಪ್ರಾಂತದಲ್ಲಿ ಪ್ರತೀತಿ. ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಹೆಸರಾಂತು ಬಾಳಿದ ಮಹಾಕವಿ ಬಸವಪ್ಪಶಾಸ್ತ್ರಿಗಳು ಈ ಗ್ರಂಥವನ್ನೂ ಇತರ ಗ್ರಂಥಗಳನ್ನೂ ಬಹು ಚೆನ್ನಾಗಿ ಓದಿ ಹೇಳುತ್ತಿದ್ದರಂತೆ. ಹೊಸ ಕಾಲದ ವಿದ್ಯೆಯಲ್ಲಿ ಗಮಕಕ್ಕೆ ಎಡೆ ದೊರೆಯದೆ ಗಮಕ ನಮ್ಮಲ್ಲಿ ಅಪೂರ್ವ ಆಯಿತು. ಆದರೆ ಸ್ವಾತಂತ್ರ್ಯದ ಭಾವ ಬೆಳೆದು ಸಂಸ್ಕೃತಿಯ ಪುನರುಜ್ಜೀವನ ಒಂದು ಧ್ಯೇಯ ಆದ ಒಡನೆಯೇ ಗಮಕ ಕಲೆಗೆ ಮತ್ತೆ ಉಸಿರು ಬಂದಿತು. ಈ ಶತಮಾನದ ಮೂರನೆಯ ದಶಕದಲ್ಲಿ ಸಂ. ಗೋ. ಬಿಂದೂರಾಯರು ಈ ಕಾವ್ಯವನ್ನು ಸಭೆಗಳ ಮುಂದೆ ಓದಲು ಆರಂಭಿಸಿ ನಮ್ಮ ಜನತೆಗೆ ಅದರ ಆಸ್ತಿಯನ್ನು ಉಳಿಸಿಕೊಡುವ ಕಾರ್ಯವನ್ನು ಮೊದಲು ಮಾಡಿದರು. ಇಲ್ಲಿಂದೀಚೆಗೆ ಅನೇಕ ಪ್ರತಿಭಾವಂತರಾದ ಗಮಕಿ ಶ್ರೇಷ್ಠರು ಈ ಕಾವ್ಯವನ್ನೂ ಇತರ ಕಾವ್ಯಗಳನ್ನೂ ಸಭೆಗಳಲ್ಲಿ ಹಾಡಿ ಕಾವ್ಯಗಳನ್ನೂ ಜೊತೆಗೆ ಕಲೆಯನ್ನೂ ಉಳಿಸಿದ್ದಾರೆ. ಹೀಗಾಗಿ ಈ ನಲವತ್ತು ವರ್ಷದಲ್ಲಿ ಕುಮಾರವ್ಯಾಸ ಕವಿ ಕನ್ನಡ ಜನತೆಯ ಅತ್ಯಂತ ಜನಪ್ರಿಯ ವರಕವಿ, ಮಹಾಕವಿ ಆಗಿ ಮರಳಿ ಪ್ರತಿಷ್ಠಿತನಾಗಿದ್ದಾನೆ.

ಇವನ ಕಾವ್ಯ ಜನರ ಮನಸ್ಸನ್ನು ಸೂರೆಗೊಂಡಿರುವುದರ ಮುಖ್ಯ ಕಾರಣ ಮೂರು. ಮೊದಲಾಗಿ ಅದು ಬಹುಪಾಲು ಓದುತ್ತಿದ್ದಂತೆ, ಕೇಳುತ್ತಿದ್ದಂತೆ. ಅರ್ಥವಾಗುತ್ತದೆ. ಎರಡನೆಯದಾಗಿ ವಿಸ್ತಾರವಾಗಿ ಒಂದು ಕಥೆಯನ್ನು ಹೇಳುವಲ್ಲಿ ಅದು ಮತ್ತೆ ಮತ್ತೆ ರಸಸ್ಥಾನಗಳನ್ನು ಮುಟ್ಟುತ್ತದೆ. ಮೂರನೆಯದಾಗಿ ಅದು ಜನರ ಮನೋಧರ್ಮದ ಹಲವು ಮುಖಗಳನ್ನು ಪ್ರತಿಬಿಂಬಿಸುತ್ತದೆ. ಕಾವ್ಯಸುಲಭವಾಗಿ ಅರ್ಥವಾಗುವುದಕ್ಕೆ ಕಾರಣ ಅದು ಷಟ್ಪದಿಯಲ್ಲಿರುವುದು, ಹತ್ತಿರ ಹತ್ತಿರ ಬಳಕೆಯ ಭಾಷೆಯಲ್ಲಿರುವುದು. ಪಂಪಭಾರತ ನಿಸ್ಸಂದೇಹವಾಗಿ ಮಹಾಕಾವ್ಯ. ಆದರೆ ಅದನ್ನು ವಿದ್ಯಾವಂತರು ಮಾತ್ರ ತಿಳಿದುಕೊಳ್ಳಬಹುದು;

ಮೇಲಾಗಿ ಅದು ಎಂಥ ರಸಪೂರ್ಣ ಸನ್ನಿವೇಶವನ್ನೂ ಬೇಗ ಹೇಳಿ ಮುಗಿಸುತ್ತದೆ. ಅದರ ಪದ್ಧತಿ ಸೂಚನೆ ಪದ್ಧತಿ. ಕವಿ ಹೇಳಿದ ಎರಡು ಮಾತಿನಿಂದ ಓದುವವ ರಸವನ್ನು ಬೆಳೆಸಿಕೊಳ್ಳಬೇಕು. ಅಲ್ಲಿ ಕಣವಾಗಿ ಕಾಣಿಸಿಕೊಳ್ಳುವ ಕಸ್ತೂರಿ ಇಲ್ಲಿ ಪನ್ನೀರ ಸೋನೆಯಾಗಿ ಮೇಲೆ ಹಾಯುತ್ತದೆ. ಇದರ ಮೇಲೆ ಅಲ್ಲಿ ವ್ಯವಹಾರ ಮುಖ್ಯ ವಿಷಯ, ಇಲ್ಲಿ ಕೃಷ್ಣಭಕ್ತಿ ಮುಖ್ಯ ವಿಷಯ. ಕುಮಾರವ್ಯಾಸನ ಕಾಲ ನಾಡಿನಲ್ಲಿ ಶಿವಭಕ್ತಿ ವಿಷ್ಣುಭಕ್ತಿ ಮಹಾಪೂರವಾಗಿ ತುಂಬಿ ಬಂದ ಕಾಲ; ಶಿವಶರಣರ, ಹರಿದಾಸರ, ವಚನದಲ್ಲಿ ನಾಮಾಮೃತ ತುಂಬಿದ ಕಾಲ. ಇಂಥ ವಚನಗಳ ರಚನೆಯ ಪ್ರವೃತ್ತಿ, ಚದುರು, ಕುಮಾರವ್ಯಾಸನಲ್ಲಿ ಉಸಿರಾಟದಂತೆ ಸಹಜವಾಗಿತ್ತಲ್ಲದೆ ತುಂಬ ತುಂಬಿ ಮೇಲೆ ಹರಿಯಿತು. ಅವನ ಭಕ್ತಿ ಅವನ ಮಾತಿನಲ್ಲಿ ಹೊನಲಾಗಿ ಹರಿದಾಗ ಜನ ಆ ಭಕ್ತಿ ತಮ್ಮ ಹೃದಯವನ್ನು ತುಂಬಿರುವ ಭಕ್ತಿ ಎಂದು ಗುರುತಿಸಿದರು; ಅವನ ಮಾತು ತಾವು ಆಡಬಹುದಾಗಿದ್ದ, ಆದರೆ ಆಡಲು ಆಗದ, ಮಾತು ಎಂದು ಕಂಡರು. ಕವಿಯ ಕೃತಿ ಜನರ ಹೃದಯದ ಪ್ರತಿಬಿಂಬ ಆಯಿತು; ಅವನು ಅವರ ಸಂವೇದನೆಯನ್ನು ಪ್ರಕಟಿಸುವ ನಾಲಗೆ ಆದ. ಇಂಥ ಕಾವ್ಯಗಳಲ್ಲಿ ಕೃಷ್ಣಭಕ್ತಿ, ಶಿವಭಕ್ತಿ, ಇಂಥ ಹಿರಿಯ ವಸ್ತು ಆಗಿದೆ. ಆಧುನಿಕರಲ್ಲಿ ಕೆಲವರು ಇವು ಕಾವ್ಯಗಳೇ ಪುರಾಣಗಳೇ ಎಂದು ಕೇಳುತ್ತಾರೆ. ಪುರಾಣ ಆಗಿದ್ದು ಕಾವ್ಯ ಅಲ್ಲ ಎಂದು ಈ ಪ್ರಶ್ನೆಯ ಗ್ರಹಿಕೆ. ದಿಟದಲ್ಲಿ ಪುಣ್ಯಮಾಡಿ ಪುರಾಣಕವಿಯಾದವನ ಕೈಗೆ ಬಂದರೆ ಕಾವ್ಯವಾಗುತ್ತದೆ. ಕಾವ್ಯ ಕವಿಯಾದವನ ಕರ್ಮ; ರೀತಿ ಕಾವ್ಯದ ಆತ್ಮ ಎಂಬ ಪುರಾತನ ಸಾಹಿತ್ಯಸೂತ್ರಗಳ ಅರ್ಥ ಇದೇ. ಪಂಪನೂ ಭಾರತವನ್ನೇ ಬರೆದ. ಅದರಲ್ಲಿ ಲೌಕಿಕವನ್ನು ಬೆಳಗುವುದಾಗಿ ಹೇಳಿದ. ತನ್ನ ದಿನದ ಜನಜೀವನದ ನೂರು ಭಾವಗಳ ನೆಲೆಯಾಗಿ ಕವಿ ಆ ಜನದ ಒಂದು ಕನಸಿಗೆ, ಒಂದು ಧ್ಯೇಯಕ್ಕೆ, ಧರ್ಮಬುದ್ಧಿಗೆ, ಆಸೆ ಆಕಾಂಕ್ಷೆಗಳಿಗೆ, ವಿಲಾಸವಿನೋದಗಳಿಗೆ, ಉತ್ಕರ್ಷ ಉತ್ಥಾನಗಳಿಗೆ, ಒಂದು ಆಕಾರವನ್ನು ಕೊಡುತ್ತಾನೆ. ಅವನಲ್ಲಿ ಕಾವ್ಯಶಕ್ತಿ ಎಷ್ಟು ಹೆಚ್ಚು ಅಷ್ಟು ಹೆಚ್ಚಾಗಿ ಅವನ ಕೃತಿ ಆ ಜನದ ಜೀವನದ ಆದರ್ಶಬಿಂಬ ಆಗುತ್ತದೆ. ಈ ಅರ್ಥದಲ್ಲಿ ಕುಮಾರವ್ಯಾಸ ಕವಿ ಭಾರತದ ಕಥೆಯನ್ನು ಹೇಳ ಹೊರಟಿದ್ದರಲ್ಲಿಯೇ ಜನತೆಯ ಪ್ರತಿನಿಧಿಯೆನಿಸಿದ್ದಾನೆ. ಅವನು ಪುರಾಣದ ಸಂಗತಿಯನ್ನು ಹೇಳಿದ. ಅದನ್ನು ಕೃಷ್ಣಕಥೆ ಎಂದೇ ವರ್ಣಿಸಿದ. ಅದು ಜಾರುಕವಿತೆಯ ಬಳಕೆಯಲ್ಲ ಎಂದು ಮೊದಲೆಯನ್ನೂ ನುಡಿದ. ಅದನ್ನು ನುಡಿವಲ್ಲಿಯೇ ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ ಎಂದ; ತಾನು ಬರಿಯ ಬರೆದಾತ; ಕೃತಿಕಾರ ದೇವರು. ಅಂತೇ 'ಹರಿಯ ಬಸಿರೊಳಗಖಿಲ ಲೋಕದ ವಿರಡ ಅಡಗಿಹವೋಲು ಭಾರತ ಶರಧಿಯೊಳಗಡಗಿಹವು ಅನೇಕ ಪುರಾಣಶಾಸ್ತ್ರಗಳು' ; 'ಅರಸುಗಳಿಗಿದುವೀರ, ದ್ವಿಜರಿಗೆ ಪರಮವೇದದ ಸಾರ, ಯೋಗೀಶ್ವರರ ತತ್ತ್ವ ವಿಚಾರ, ಮಂತ್ರಿಜನಕೆ ಬುದ್ಧಿಗುಣ. ವಿರಹಿಗಳ ಶೃಂಗಾರ, ವಿದ್ಯಾಪರಿಣತರಲಂಕಾರ, ಕಾವ್ಯಕೆ ಗುರು' ಎಂದ. ಇದು ಜಾರುಕವಿತೆಯ ಬಳಕೆಯಲ್ಲ; ಆದರೂ ಕಾವ್ಯಕೆ ಗುರು.

ಮೂಲ ಭಾರತದ ಕಥೆಯನ್ನು ಕಾವ್ಯಕುಲಕ್ಕೆ ಗುರುವಾಗುವಂತೆ ಕನ್ನಡಿಸುವಲ್ಲಿ ಕುಮಾರವ್ಯಾಸ ವ್ಯಾಸಮಹರ್ಷಿ ಹೇಳಿದ ವಿಷಯ ಅಷ್ಟನ್ನೇ ಸಂಗ್ರಹಿಸಿ ಮುಗಿಸಲಿಲ್ಲ. ಕಥೆಯನ್ನು ತನ್ನದಾಗಿ ಮಾಡಿಕೊಂಡು ಅದನ್ನು ತನ್ನ ರುಚಿಯನ್ನನುಸರಿಸಿ ಮತ್ತೆ ಹೇಳಿದ; ಅದನ್ನು ಭಾರತಕಥಾಮಂಜರಿ ಎಂದು ಕರೆದ. ಈ ಪದ್ಧತಿ ಕನ್ನಡದಲ್ಲಿ ಹೊಸತಲ್ಲ; ಪಂಪ, ಅಭಿನವಪಂಪ ಹಿಂದೆ ಅನುಸರಿಸಿದ್ದೇ. ಮಹಾಭಾರತ ಮೂಲತಃ ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳ ಗ್ರಂಥ ಆಗಿದ್ದು ಆಮೇಲೆ ಆಖ್ಯಾನಗಳು ಇತರ ಸಂಗತಿಗಳು ಸೇರಿ ಒಂದು ಲಕ್ಷ ಶ್ಲೋಕಗಳ ಗ್ರಂಥ ಆಯಿತು ಎಂದು ಅದರಲ್ಲೇ ಉಕ್ತವಾಗಿದೆ. ಮಹಾಭಾರತವನ್ನು ಸಂಗ್ರಹಿಸುವಲ್ಲಿ ಕವಿ ಮುಖ್ಯವಾಗಿ ಮೂಲ ಭಾರತದ ಕಥೆಯನ್ನು, ಜೊತೆಗೆ ಕೃಷ್ಣನ ಮಹಿಮೆಯನ್ನು ಪ್ರಕಟಿಸುವ ಪ್ರಸಂಗಗಳನ್ನು ಎತ್ತಿಕೊಂಡಿದ್ದಾನೆ. ಸಂಗ್ರಹದ ಸುಮಾರು ಎಂಟುಸಾವಿರ ಷಟ್ಪದಿ ಮೂಲದ ಲಕ್ಷ ಶ್ಲೋಕದ ಎಂಟರಲ್ಲಿ ಒಂದು ಭಾಗ ಆಗುತ್ತದೆ. ಹೀಗಿದ್ದೂ ಕವಿ ಇಷ್ಟಪಟ್ಟಿರುವಲ್ಲಿ ಮೂಲಕ್ಕಿಂತ ವಿಸ್ತಾರವಾಗಿಯೇ ಕಥೆಯನ್ನು ವಿಸ್ತರಿಸುತ್ತಾನೆ. ದ್ರೌಪದೀ ಸ್ವಯಂವರದ ಪ್ರಸಂಗ, ಅರ್ಜುನ ಪಾಶುಪತಾಸ್ತ್ರವನ್ನು ಪಡೆದ ಕಥೆ. ಉತ್ತರನ ಪ್ರತಾಪದ ಕಥೆ, ಅಭಿಮನ್ಯುವಿನ ವಿವಾಹದ ಕಥೆ–ಇವು ಈ ವಿಸ್ತಾರಕ್ಕೆ ಉದಾಹರಣೆಗಳು. ಕೃಷ್ಣಭಕ್ತಿಯನ್ನು ಪ್ರಕಟಿಸಲು ಆರಿಸಿರುವ ಪ್ರಸಂಗಗಳ ಉದಾಹರಣೆಗಳು ಎಂದರೆ–ಶಿಶುಪಾಲವಧೆ, ದ್ರೌಪದೀವಸ್ತ್ರಾಪಹರಣ, ಸಂಧಾನಕ್ಕಾಗಿ ಬಂದ ಕೃಷ್ಣ ಹಸ್ತಿನಾಪುರವನ್ನು ಹೊಕ್ಕ ಸಂದರ್ಭ, ಸಂಧಾನವನ್ನು ನಡೆಸಿದ ಸಂದರ್ಭ–ಇವುಗಳ ಕಥನ. ಕೃಷ್ಣ ಸಭೆಯನ್ನು ಹೊಕ್ಕಾಗ ದುರ್ಯೋಧನ ಪೀಠದಿಂದ ಏಳಲಿಲ್ಲ. ಕೃಷ್ಣ ನೆಲವನ್ನು ಉಂಗುಟದಿಂದ ಮೀಟಿದ. ಪೀಠದ ಗೋಣಸು ಮುರಿದು ದುರ್ಯೋಧನ ಕೃಷ್ಣನ ಪಾದದ ಮೇಲೆ ಬಿದ್ದ. ಮಹಾಭಾರತದಲ್ಲಿಲ್ಲದ ಇಂಥ ಸಂಗತಿಗಳು ಜನರಲ್ಲಿ ಪ್ರಚಾರದಲ್ಲಿದ್ದವಾಗಿರಬಹುದು, ಇಲ್ಲ ಕವಿ ಕಲ್ಪಿಸಿದವೂ ಆಗಿರಬಹುದು. ಎಂದರೆ ಮೊತ್ತದ ಮಾತು ಇಷ್ಟು. ಕುಮಾರವ್ಯಾಸನ ಕಾವ್ಯ ವ್ಯಾಸನ ಕಾವ್ಯದ ಪ್ರತಿಮಾತ್ರ, ಸಂಗ್ರಹ ಮಾತ್ರ ಅಲ್ಲ, ವ್ಯಾಸನ ಕುಮಾರ ಎನ್ನಬಹುದಾದ ಒಬ್ಬ ಉದ್ದಾಮ ಕವಿಯ ಸುಸ್ವತಂತ್ರ ಕೃತಿ. ಮಗ ತಂದೆಯಂತೆ ಇದ್ದೂ ತಾನೇ ಪೂರ್ಣವ್ಯಕ್ತಿ ಆಗಿರುವಂತೆ ಭಾರತ ಕಥಾಮಂಜರಿ ಸುವ್ಯಕ್ತವಾಗಿ, ಮೂಲವನ್ನು ಕೇವಲ ಅವಲಂಬಿಸಿ ಬರೆದ ಸ್ವಸಂಪೂರ್ಣ ಕಾವ್ಯ.

ಜನ್ಮತಃ ಕವಿ ಆದವನು ಮಹಾ ಅನುಭಾವಿಯಾಗಿ ಬರೆದ ಈ ಕಾವ್ಯದಲ್ಲಿ ಭಕ್ತಿ ಮುಖ್ಯ ರಸವಾಗಿ ಮತ್ತೆ ಮತ್ತೆ ಮಡುಗಟ್ಟಿ, ಮತ್ತೆ ಮತ್ತೆ ಹೊನಲಾಗಿ ಹರಿಯುವುದು ಸಹಜವಾಗಿದೆ. ಪಂಡಿತರ ಪ್ರಪಂಚವನ್ನು ಬಲ್ಲ ರಸಿಕಚೇತನ ಆದುದರಿಂದ ಇವನ ದೈವಸ್ತವಗಳಲ್ಲಿ ವೇದ ಉಪನಿಷತ್ತುಗಳ ಉಪದೇಶ ಕೆನೆ, ಗಿಣ್ಣು, ಜೇನು ಎಂಬಂತೆ ಸಿಹಿಯಾಗುತ್ತದೆ. ವಿಸ್ತಾರವೇ ಈ ಸ್ತವಗಳ ಹೃದಯ. ಗಾಯನದಲ್ಲಿ ಸಂಗತಿಗಳಂತೆ ಹೊಸ ವಿವರಗಳನ್ನು ಒಂದರ ಮೇಲೊಂದನ್ನು ಪೇರಿಸಿ ಪೇರಿಸಿ ಕವಿ ನಮ್ಮ ಮನಸ್ಸನ್ನು ಒಂದು ಮೋಡಿಗೆ ಅಧೀನ ಮಾಡುತ್ತಾನೆ. ಇದನ್ನು ಉದಾಹರಣೆಗಳಿಂದ ತೋರುವುದು ಸಾಧ್ಯವಲ್ಲ. ಉದಾಹರಣೆಯಾಗಿ ಅಲ್ಲ, ಕವಿಯಕ್ರಮದ ಕುರುಹಾಗಿ. ಈ ಪದ್ಯಗಳನ್ನು ಹೇಳಬಹುದು. ಭೀಷ್ಮ ಕೃಷ್ಣನನ್ನು ಬಣ್ಣಿಸುವ ಬಗೆ ಹೀಗಿದೆ: ಭೂತಭವ್ಯಭವತ್ಪ್ರಧಾನ ಖ್ಯಾತತತ್ತ್ವ ಪ್ರಕೃತಿ ಪುರುಷನೀತ ಸಚ್ಚಿನ್ಮಾತ್ರಲಿಂಗನು ಪರಶಿವಾತ್ಮಕನು ಸೋತ ನುಡಿ ಮನದೊಡನೆ ಮರಳಿದಡಾತ ಸತ್ಯಜ್ಞಾನಮಯ ನಿರ್ಧೂತ ಮಾಯಾತೀತನೀ ಹರಿ ಎಂದನಾ ಭೀಷ್ಮ'. ವಿಷ್ಣುಸಹಸ್ರನಾಮಸ್ತೋತ್ರದ ಭೂತಭವ್ಯಭವತ್ಪ್ರಭುಃ, ಉಪನಿಷತ್ತಿನ ಯತೋ ವಾಚೋ ವರ್ತಂತೇ ಅಪ್ರಾಪ್ಯ ಮನಸಾ ಸಹ ಎಂಬ ಭಾವನೆಗಳು ಇದರಲ್ಲಿ ಅಡಗಿರುವ ರೀತಿ ಗಮನಾರ್ಹ. ಹೀಗೆ ಕೃಷ್ಣನನ್ನು ಮುಖ್ಯಮೂರ್ತಿಯಾಗಿ ನಿಲ್ಲಿಸಿ ಕವಿ ಅವನ ಸುತ್ತ ಭೀಷ್ಮ, ಯುಧಿಷ್ಠಿರ, ಭೀಮ, ಅರ್ಜುನ, ಧೃತರಾಷ್ಟ್ರ, ದುರ್ಯೋಧನ, ಶಕುನಿ, ಕರ್ಣ, ವಿದುರ, ಕುಂತಿ, ಗಾಂಧಾರಿ, ದ್ರೌಪದಿ ಮುಂತಾದವರನ್ನು ಕಲ್ಪಿಸಿದ್ದಾನೆ. ಇವರೆಲ್ಲ ಇವನೇ ಶಿಲ್ಪಿಸಿದ ಮೂರ್ತಿಗಳು. ಎಲ್ಲರೂ ಸಹಜವಾಗಿ ಸ್ವತಂತ್ರವಾಗಿ ವರ್ತಿಸುತ್ತಾರೆ. ಉತ್ತರೆಯ ವಿವಾಹಕ್ಕೆ ಕೃಷ್ಣನನ್ನು ಕರೆದು ಯುಧಿಷ್ಠಿರ ಬರೆದ ಓಲೆ ಕವಿಯ ದಿನದ ಬಲ್ಲ ಜನರ ನಯವನ್ನು ರೂಪಿಸುತ್ತದೆ. ಜನತೆಗೆ ಮೇಲ್ಪಂಕ್ತಿ ಹಾಕುತ್ತದೆ. ಸ್ವಸ್ತಿ ದಾನವರಾಯ ಕುಂಜರ ಮಸ್ತಕಾಂಕುಶ ಖೇಲನಾ ಪರಿಯಸ್ತ ಯದುಕುಲಸಿಂಹ ಸಂಹೃತಜನ್ಮ ದುರಿತಭಯ ಹಸ್ತಕಲಿತ ಸುದರುಶನೋರ್ದ್ವಗಭಸ್ತಿಲವಶಮಿತಾರ್ಕ ಪರಿವೃಢ ವಿಸ್ತರಣ ಚಿತ್ತೈಸು ಕುಂತಿಯು ಸುತರ ಬಿನ್ನಪವ. ದೇವ ನಿಮ್ಮಡಿಗಳ ಕೃಪಾಸಂಜೀವನಿಯಲೆಮ್ಮಸುಗಳೊಡಲಿನ ಠಾವ ಮೆಚ್ಚಿದವೊದೆದು ಹಾಯ್ದವು ವಿಪಿನಮಂದಿರವ.... ಮದುವೆಯೆಂಬುದು ನೆವ ನಿಜಶ್ರೀಪದವ ತೋರಿಸಬೇಕು........ ಹದುಳವಿಟ್ಟೆಮಗುಚಿತವಚನದ ಹದವಳೆಯಲುತ್ಸಾಹ ಸಸಿಯನ್ನು ದೇವ ಸಲಹುವುದು.' ಇವನ ಕೃಷ್ಣಮೂರ್ತಿ ವಾತ್ಸಲ್ಯವೇ ಎರಕವಾದ ದಿವ್ಯಮಂಗಳ ಮೂರ್ತಿ; 'ಹೆತ್ತ ಮಕ್ಕಳು ನಿಲಲಿ. ಭಕ್ತರನಿತ್ತ ಕರೆ, ನೆನೆವರಿಗೆ ತನ್ನನ್ನು ತೆತ್ತು ಬದುಕುವ' ನೆಂಬ ಬೋಳೆಯರರಸ. ಭಕ್ತಿರಸದಷ್ಟೇ ಕವಿಗೆ ಹಾಸ್ಯವೂ ಸಹಜವಾಗಿ ಬಂದಿತ್ತು. ಅರ್ಜುನ ಮತ್ಸ್ಯಯಂತ್ರ ಭೇದನಕ್ಕೆ ಎದ್ದಾಗ ಜನ ಆಡಿದ, ಆಡಿಕೊಂಡ ಮಾತು ಇದಕ್ಕೆ ನಿದರ್ಶನ. ಧನುವನ್ನು ಹಿಡಿಯಲು ಎದ್ದ ವಿಪ್ರನನ್ನು ನೋಡಿ ಅವರು, 'ಧನು ತನಗೆ ನೆಗಹಲ್ಕೆ ಕೃಷ್ಣಾಜಿನವೊ ಸಾಲಗ್ರಾಮದೇವರೋ..........ಬಣಗು ವಿಪ್ರನ ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ.' ದ್ರೌಪದಿಯ ಪರಿವಾರದ ಹೆಣ್ಣುಮಕ್ಕಳು, ಎಲವೋ ಮಟ್ಟಿಯ ಮದನ. ದರ್ಭೆಯ ತಿಲದ ಮನ್ಮಥ. ವಿಮಲ ಧೋತ್ರದ ತಳಿರುಗಾಸೆಯ ಕಾಮ. ಕೃಷ್ಣಾಜಿನದ ಕಂದರ್ಪ, ನಳಿನ ಮುಖಿಯನು ವರಿಸು ಬಾ. ನಿನಗಳವಡುವನೆಲೆ ಅಕ್ಕ ಕೇಳೌ ತಲೆವಿಡಿವೆವಾವ್ಯೋಡು ಎಂದರು ನಗುತ ಚಪಲೆಯರು. ಸೌಗಂಧಿಕಾಹರಣ ಮಾಡಿದ ಅನಂತರ ಹಿಂದಿರುಗುವ ಮುನ್ನ ಭೀಮ ಅದರ ಕಾವಲ ಜನಕ್ಕೆ 'ನಿಮ್ಮ ಕೊಳ ಇಲ್ಲೇ ಇದೆ. ನಾವು ತೆಗೆದುಕೊಂಡು ಹೋಗಲಿಲ್ಲ, ನಮ್ಮನ್ನು ದೂರಬೇಡಿ' ಎಂದನಂತೆ. ಅರ್ಜುನ ಉತ್ತರನಿಗೆ 'ಯುದ್ಧದಲ್ಲಿ ಸಾಯಲು ಹಿಂಜರಿಯಬೇಡ. ಸ್ವರ್ಗದ ಸುಂದರಿಯರ ಸಹವಾಸ ದೊರೆಯುತ್ತದೆ' ಎನ್ನುತ್ತಾನೆ. ಅದಕ್ಕಿವನು 'ನನಗೆ ಸ್ವರ್ಗದ ಸುಂದರಿಯರು ಬೇಡ. ನಮ್ಮ ರಾಣೀವಾಸದ ಚೆಲುವೆಯರು ಸಾಕು' ಎಂದು ಉತ್ತರಿಸುತ್ತಾನೆ. ಇವನ ಮಾತು ಇಂಥವು ಹಲವು. ಈ ಪ್ರಸಂಗದಲ್ಲಿ. ಭಕ್ತಿಯಷ್ಟೇ ಹಾಸ್ಯದಷ್ಟೆ ಕರುಣ ಮಡುಗಟ್ಟುವುದು ವಸ್ತ್ರಾಪಹರಣ ಪ್ರಸಂಗದಲ್ಲಿ ಕಾಣುತ್ತದೆ. ಗಂಡಂದಿರು ರಕ್ಷಿಸುವವರಲ್ಲ ಎಂಬುದನ್ನು ಕಂಡ ದ್ರೌಪದಿ ಭೀಷ್ಮ ಗುರು ಕೃಪರತ್ತ ಮರಳಿ ನೋಡಿದಳು. ಅಕಟ ಗಂಗಾ ವರಕುಮಾರ ದ್ರೋಣ ಕೃಪರೀ ಸೆರಗ ಬಿಡಿಸಿರೆ ತಂದೆಗಳಿರಾ ಎಂದೊರಲಿದಳು ತರಳೆ'. 'ಕ್ರೂರನಿವ ದುಶ್ಯಾಸನನು; ಗಾಂಧಾರಿ ಬಿಡಿಸೌ ಸೆರಗ; ಸೊಸೆ ಅಲ್ಲಾ? ಆರು ಹೇಳೌ ತಂಗಿಯಲ್ಲಾ ನಿಮಗೆ ಭಾನುಮತಿ? ವೀರ ಸೈಂಧವನರಸಿ, ರಾಜಕುಮಾರಿ. ನೀ ನಾದಿನಿಯಲಾ–ಖಳ ಕೌರವದೊಳದ್ದುವನು; ಬಿಡಿಸು; ಎಂದೊರಲಿದಳು ತರಳೆ'. ಅವರು ಯಾರೂ ರಕ್ಷಿಸಲಿಲ್ಲವಾಗಿ ಅಬಲೆ ಕೃಷ್ಣನಿಗೆ ಮೊರೆಯಿಟ್ಟಳು. 'ಗತಿವಿಹೀನರಿಗಕಟ ನೀನೇ ಗತಿಯಲಲ್ಲೆ ಗೋವಿಂದ ರಿಪುಬಾಧಿತರಿಗಬಲರಿಗಾರ್ತರಿಗೆ ನೀ ಪರಮ ಬಂಧುವಲಾ... .....ನಾಥರಿಲ್ಲದ ಶಿಶುಗಳಿಗೆ ನೀ ನಾಥನೈ ಗೋವಿಂದ ಸಲಹೈ... ...ನಾಥರಿಲ್ಲೆನಗಿಂದು ದೀನಾನಾಥಬಾಂಧವ ನೀನಲೈ ವರಮೈಥಿಲೀ ಪತಿಮನ್ನಿಸೆಂದೊದರಿದಳು ಮೃಗನಯನೆ'. ವಸ್ತ್ರಾಪಹರಣದ ಕಥೆ ಮೂಲ

ಭಾರತದಲ್ಲಿರಲಿಲ್ಲ, ಪ್ರಕ್ಷಿಪ್ತವಾಗಿ ಬಂದದು-ಎನಿಸುತ್ತದೆ. ಹೀಗಿದ್ದೂ ಈ ಭಾಗವನ್ನೋದಿದಾಗಲೆಲ್ಲ ತಟ್ಟನೆ ಕಣ್ಣಲ್ಲಿ ನೀರು ತುಂಬುತ್ತದೆ. ಕಲ್ಲೆದೆಯಾದರೆ ಎಂತೋ ಹೇಳುವಂತಿಲ್ಲ. ಕಲ್ಲೆದೆಯಾದರೂ ಇಲ್ಲಿಯ ಗೋಳಿಗೆ ಕರಗಲೇಬೇಕು-ಹಾಗಿದೆ ಈ ಕವಿಯ ರಸಸಾಮರ್ಥ್ಯ. ವೀರರಸದ ಮಾತನ್ನು ಬೇರೆಯಾಗಿ ಹೇಳಲೇನು? ಕಾವ್ಯದ ತುಂಬ ವೀರರಸ ತುಂಬಿದೆ. ಸೆಣಸುವಧಟರ ಗಂಡ, ಸಮರಾಂಗಣದತುಲಭೇರುಂಡ ದಿನಮಣಿಯ ಮಗ ಉದ್ದಂಡ ಕರ್ಣ ಕವಿಯ ಒಲುಮೆಯ ವೀರ, ಮಕ್ಕಳು ನೂರು ಮಂದಿಯಲ್ಲಿ ಒಬ್ಬ. ಇಷ್ಟೆಲ್ಲ ಸಂಗತಿಯನ್ನು ಇಷ್ಟು ವಿಸ್ತಾರವಾಗಿ ಹೇಳುವಲ್ಲಿ ಕಾವ್ಯದಲ್ಲಿ ಕಾಣುವ ಶಬ್ದ ಸಂಪತ್ತು ಈ ಕವಿಗೇ ಮೀಸಲು. ರಾಜನ ಅರಮನೆ. ಕಾಳೆಗದ ಕಣ, ಜೂಜಿನ ಆಟ, ಮದುವೆಯ ಸಂಭ್ರಮ, ಪಾಳೆಯದ ಬಾಳು, ಸ್ವಯಂವರ ಮಂಟಪ, ಮಲ್ಲಯದ್ಧ, ಮಕ್ಕಳಾಟ, ಬೇಟೆ, ರಥದ ಭಾಗಗಳು, ಆಯುಧಗಳ ಬಗೆಗಳು, ನಾಯಿ, ಕುದುರೆ-ಇವುಗಳ ಜಾತಿಗಳು, ವೀರವಸನ, ಇತ್ಯಾದಿ, ಇತ್ಯಾದಿ. ಈ ಕವಿತೆಯಲ್ಲಿ ಬರುವ ಸಂಗತಿ ಒಂದು ಸಾವಿರ. ಅದನ್ನು ಹೇಳುವುದಕ್ಕೆ ಲಕ್ಷ ಶಬ್ದ ಕವಿಯನ್ನು ಓಲೈಸುತ್ತಿವೆ. ಹಿಂದೆ ಒಬ್ಬರು ಕುಮಾರವ್ಯಾಸನ ಸಲುವಾಗಿಯೇ ಒಂದು ಶಬ್ದ ಕೋಶವನ್ನು ಮಾಡಿದ್ದರು; ಈಗ ಒಂದನ್ನು ಮಾಡುವುದು ಒಳಿತೆ. ಇವನ ನುಡಿ ಅಷ್ಟು ವಿಪುಲ ಅಷ್ಟು ವಿಶಿಷ್ಟ. ಇಷ್ಟು ವಿಷಯವನ್ನು ಹೀಗೆ ಹೇಳಿದವನಿಗೆ ಶಬ್ದ ಬೇಕಾಗುವುದಿಲ್ಲ. ಇಷ್ಟು ಶಬ್ದ ಇಲ್ಲದೆ ಇಷ್ಟು ವಿಷಯವನ್ನು ಹೀಗೆ ಹೇಳುವುದು ಸಾಧ್ಯವಲ್ಲ. ಪಂಪ, ರನ್ನ ಹರಿಹರ, ರತ್ನಾಕರವರ್ಣಿ-ಇವರು ವಾಕ್‌ಸಾರ್ವಭೌಮರು. ಶಬ್ದಾರ್ಣವರು, ಸರಸ್ವತಿಯ ಭಂಡಾರದ ಮುದ್ರೆಯನ್ನೊಡೆದ ಧೀರರು. ಅಡ್ಡಿ ಇಲ್ಲ. ಕುಮಾರವ್ಯಾಸ ಅಂತೇ ಸಾರ್ವಭೌಮ; ಅಂತೇ ಅರ್ಣವ. ಇಷ್ಟೇ ಭೇದ: ಇವನು ಭಂಡಾರದ ಮುದ್ರೆಯನ್ನೊಡೆಯ ಬೇಕಾಗಲಿಲ್ಲ. ಅದು ಇವನಿಗೆ ತೆರೆದೇ ಇತ್ತು. ಮೇಲಾಗಿ ಈ ಸಂಪತ್ತಿನಲ್ಲಿ ಇದು ಸಂಸ್ಕೃತ, ಇದು ಕನ್ನಡ, ಇದು ಹೆಚ್ಚು, ಇದು ಕಡಿಮೆ ಎನ್ನದೆ ಸಮಸಮವಾಗಿ ಸೇರಿತ್ತು. ಇಲ್ಲಿ ಸಂಸ್ಕೃತ ಸೇರಿರುವುದೂ ಹೀಗೇ ಇದೆ. ಮನೆಗೆ ಬಂದ ಸೊಸೆಯಂತೆ ಅದು ಕನ್ನಡದಲ್ಲಿ ಕನ್ನಡವಾಗಿ ಸೇರಿಹೋಗಿದೆ. ಕವಿಯ ಚತುರ ಉಕ್ತಿಯೋ ಧಾರಾಳವೆಂದರೆ ಧಾರಾಳ. ಅದರ ಬೀಸು ಅದರ ಹರಹು ಇವನದೇ. ಇವನ ವರ್ಣನೆಗಳ ಅಂದವೇ ಅಂದ. ಕವಿ ವಸಂತಕಾಲವನ್ನು ವರ್ಣಿಸುತ್ತಾನೆ: 'ತೆಗೆದುದಗ್ಗದ ತಂಪು' ಎಂದು ಆರಂಭಿಸಿ 'ಸೊಗಸಿದುವು ನೆಳಲುಗಳು ದೂರಕೆ ಸೆಗಳಿಗೆಳೇರಿದುವು ತಂಗಾಳಿಗೆ ವಿಹಾರಿಸಿ ಮೈಯ ತೆತ್ತುದು ಕೂಡೆ ಜನನಿಕರ' ಎಂದು ಆ ಕಾಲದ ನಾಲ್ಕು ವಿವರಗಳನ್ನು ಬರೆದು ಒಂದು ಚಿತ್ರವನ್ನು ಕವಿ ಕಟ್ಟುತ್ತಾನೆ. ಚೆಲುವೆಯನ್ನು ವರ್ಣಿಸುತ್ತಾನೆ-'ಹೊರೆಯ ಸಖಿಯರ ನೋಟ ಮೈಯಲಿ ಹರಿದು ಬಳಲದು. ಕಿವಿಗಳಿಗೆ ಮೆಲ್ನುಡಿಯ ಸವಿಸವಿದು ಅರುಚಿ ಆಗದು, ನಾಸಿಕವು ಮೈಪರಿಮಳದ ಪೂರದಲಿ ಗಂಧಾಂತರಕೆ ನೆರೆಯದು.' ವನವನ್ನು ವರ್ಣಿಸುತ್ತಾನೆ-'ಗಿಳಿಯ ತುಂಬಿಯ ಹಂಸೆಗಳ ಕೋಗಿಲೆಯ ಕೊರಲ್ವಕ್ಕಿಗಳ ಕೊಂಚೆಯ ಕೊಳಲುವಕ್ಕಿಯ ನವಿಲು ಪಾರಿವದ ಕಳ ರುಚಿಯ ಕರ್ಣಾಮೃತದ ತನಿಮಳೆಯ ಸುರಿದುದು ಯಾದವೇಂದ್ರನ ಬಳದ ಕಿವಿಯಲ್ಲಿ ಇಭಪುರಿಯ ಹೊರವಳೆಯದುದ್ಯಾನ' ಆ ಪುರಿಗೆ ಸಂಧಿಕಾರನಾಗಿ ಬಂದ ಕೃಷ್ಣನನ್ನು 'ಸಿರಿಮೊಗದ ಕಿರುಬೆಮರ, ತೆಜಿಯ ಖುರಪುಟದ ಕೆಂದೂಳಿ ಸೋಕಿದ ಸಿರಿಮುಡಿಯ ಕುಡಿಮೀಸೆಯಲಿ ಕೆಂಪಡರ್ದ ರೇಣುಗಳ ಖರಮರೀಚಿಯ ಝಳಕೆ ಬಾಡಿದ ತರುಣ ತುಳಸಿಯ ದಂಡೆ ಒಪ್ಪುವ ಗುರುವದೇವ ಎಂದು ವರ್ಣಿಸುತ್ತಾನೆ. ಇಲ್ಲಿಯ ಔಚಿತ್ಯ ಕೌಶಲ್ಯ ಹುಟ್ಟಾಚಿತ್ರಕಾರನಾದವನ ಲಕ್ಷಣಗಳು. ಎಳೆದದ್ದು ನಾಲ್ಕು ಗೆರೆ, ಆಗಿರುವುದು ಒಂದು ಮುಖ. ಈ ಕವಿತೆಯ ಶಕ್ತಿ ಇರುವುದು ಸಹಜೋಕ್ತಿಯಲ್ಲಿ. ಅಲಂಕಾರಕ್ಕೆ ಕಡಿಮೆ ಇಲ್ಲ: ಆದರೆ ಅದು ಮೇಲೆ ತೊಡಿಸಿದ ಆಭರಣವಲ್ಲ. ಮೈಯಲ್ಲಿ ತಳಿತ ಚೆಲುವು. ಉತ್ಪ್ರೇಕ್ಷ ಇದ್ದರೂ ಉತ್ಪ್ರೇಕ್ಷೆ ಎನ್ನಿಸುವುದಿಲ್ಲ. ಉಪಮೆ ಇರುತ್ತದೆ. ರೂಪಕವಾಗಿ ಮರೆಗಿರುತ್ತದೆ. ದುಷ್ಕೃತಿಗೆ ಹಂಗಿಗರು, ವಿಧಿಯ ಕಣ್ಣಿಯ ಹುರಿ, ಸಿಡಿಲ ಶಿಷ್ಯ, ಆಲಿಯಲಿ ನುಂಗಿದನು, ಕಪಟದ ನಿರಿಗೆ, ಭಕುತಿಯ ಹೊರಿಗೆ; 'ಅಂಜದಿರು ಭಯಬೇಡ ನರರಿಗೆ ನಂಜು ಪಥ್ಯವೆ ಗಿಳಿಯ ಮರಿಗಳು ಮಂಜರನ ಮೇಲ್ವಾಯ್ದು ಬದುಕುವವೇ ಮಹೀಪತಿಯೇ ಮಂಜು ಮಧ್ಯಾಹ್ನದ ದಿನೇಶನನೆಂಜಲಿಸುವುದೇ?' ಉಪಮೆ ಉಪಮೆಯಾಗಿ ಕಂಡಿತೋ ವಿವರವಿವರದಲ್ಲಿ ಬಳುಕಿ ಕಾಣುತ್ತದೆ. ಕೌಸ್ತುಭಾಲಂಕೃತನಾದ ಕೃಷ್ಣ ಹೊನ್ನ ತೇರಿಂದ ಇಳಿದದ್ದು ಮಿಂಚಿನಿಂದ ಕೂಡಿದ ಕರಿಮುಗಿಲು ಹೊನ್ನ ಬೆಟ್ಟದಿಂದ ಇಳಿದಂತಿತ್ತು. ಮಗ ಸತ್ತ ಎಂದು ಧೀರ ಅತ್ತ ಕಣ್ಣಹನಿ ಉರಿಯುತ್ತಿರುವ ಹಸಿಯ ಮರದ ತುದಿಯಲ್ಲಿ ನೀರು ಕಾಣಿಸುವಂತಿತ್ತು. ಹಲವು ಕಾಲಮೇಲೆ ನಿಂತು ಕುಂಟದೆ ಇರುವ ಈ ಉಪಮಾನಗಳು ವಾಲ್ಮೀಕಿ ಕಾಳಿದಾಸರ ಉಪಮೆಗಳಿಗೆ ಸಮನಾಗುತ್ತವೆ. ಇದರ ಮೇಲೆ ಈ ವಾಣಿಯ ವ್ಯಂಗ್ಯ-ಸಂಧಾನಕ್ಕೆಂದು ಬಂದ ಕೃಷ್ಣಕುಂತಿಗೆ ನಿನ್ನ ಮಕ್ಕಳಿಗೆ ಈ ಕುಠಾರನಲ್ಲಿ ಭಾಗಬೇಡುವ ವಿವೇಕದಲ್ಲಿ ಬಂದಿದ್ದೇನೆ-ಎನ್ನುತ್ತಾನೆ. ಇಲ್ಲಿ ಕೆಲವರು ಅವಿವೇಕ ಎಂದು ಸಂಧಿ ಬಿಡಿಸುವುದುಂಟು. ಈ ಮಾತನ್ನಾಡುವ ಕೃಷ್ಣನನ್ನು ಕಲ್ಪಿಸಿಕೊಂಡವರು ಹೀಗೆ ಮಾಡಲಾರರು. ಇಲ್ಲಿ ವಿವೇಕ ಶಬ್ದವೇ ಇರಬೇಕು. ಅದನ್ನು ಯುಕ್ತವಾದ ಧ್ವನಿಯಿಂದ ಹೇಳಬೇಕು. ಇಷ್ಟಾಗಿಯೂ ಈ ಕವಿತೆ ಸಾವಿರ ಪಂಕ್ತಿಯಲ್ಲಿ ಒಂದೊಂದು ಸಲ ಸ್ವರ ತಪ್ಪುತ್ತದೆಂದು ಹೇಳಬೇಕು. ವಿಪ್ರನಂತಿದ್ದ ಅರ್ಜುನ ಮತ್ಸ್ಯಯಂತ್ರ ಭೇದನಕ್ಕೆ ಎದ್ದಾಗ 'ಚಪಲೆಯರು' ಆಡಿದರೆಂದು ಈ ಮುನ್ನ ಉದ್ಧರಿಸಿರುವ ಪದ್ಯ ಇದಕ್ಕೆ ಉದಾಹರಣೆ. ಇವರು ಅವರು ಇದನ್ನು ಅದನ್ನು ಮಾಡಿದವರು ಎನ್ನುವಲ್ಲಿ ಕವಿ ಆಗಾಗ ಹೀಗೆ 'ನಗುತ' ಎಂಬ ಶಬ್ದವನ್ನು ಹಾಕುತ್ತಾನೆ. ಅಂಥಲ್ಲಿ ಆ ಪದಕ್ಕೆ ಏನೂ ಕೆಲಸವಿರುವುದಿಲ್ಲ; ಅದು ಕವಿಯ ಬಳಕೆ ಅಷ್ಟೆ. ಇವನ ದ್ರೌಪದಿ ಭೀಮನಿಗೆ ಐದು ಜನ ಒಬ್ಬಳನ್ನು ಆಳಲಾರಿರಿ ನೀವು ಗಂಡರೋ ಭಂಡರೋ ಎನ್ನುತ್ತಾಳೆ. ಅರ್ಥ ಅಲ್ಲಿ ಸಾಧುವೆ; ಮಾತು ಆ ಮಹಾರಾಜ್ಞಿಯ ಪದವಿಗೆ ತಕ್ಕದಾಗಲಿಲ್ಲ. ಉತ್ತರ ಅಂಜಿ ಓಡಿದಾಗ ಅರ್ಜುನ ಅವನ ಹುಟ್ಟಿನ ಮಾತನ್ನೆತ್ತುತ್ತಾನೆ. ಇದು ಹಳ್ಳಿಗರ ಕೊಚ್ಚೆಮಾತು. ಅರ್ಜುನನಿಗೆ ತಗವುದಲ್ಲ. ಪ್ರಾಯಶಃ ಇಂಥ ಮಾತು ಬಂದದ್ದರ ಕಾರಣ ಕವಿ ಸ್ವತಃ ಹಳ್ಳಿಗನಾಗಿದ್ದದು ಎನ್ನಬಹುದು. ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ ಬರೆದುದನು ಅಳಿಪದೊಂದಗ್ಗಳಿಕೆ, ಕವಿ ಹೇಳಿಕೊಂಡಿರುವ ಹಲವು ಅಗ್ಗಳಿಕೆಗಳಲ್ಲಿ ಎರಡು. ಎರಡೂ ಕೇವಲ ಆತ್ಮಪ್ರಶಂಸೆಯ ಮಾತುಗಳಲ್ಲ. ಒಂದೆರಡೆಡೆ ತಿದ್ದಿದ್ದರೆ ಇನ್ನೂ ಚೆನ್ನಾಗುತ್ತಿತ್ತು ಅನಿಸಿದರೂ ತಿದ್ದದಿರುವುದರಿಂದ ಕಾವ್ಯ ಎಲ್ಲೂ ಕೆಟ್ಟಿಲ್ಲ ಎಂಬ ಮಾತು ನಿಜ. ಇದು ವರಕವಿ ಲಕ್ಷಣ ಎಂದು ಕಾಣುತ್ತದೆ.

ಕಾವ್ಯದಲ್ಲಿ ಉನ್ನತಿಯನ್ನು ಸಾಧಿಸಿ ತಮ್ಮ ದೇಶದಿಂದ ಹೊರಗೆ ಹೆಸರುಗಳಿಸಿರುವ ಕವಿಗಳನ್ನು ಲೋಕಕವಿ ಎಂದು ಹೊಗಳುವುದು ಈಚೆಗೆ ವಾಡಿಕೆಯಾಗಿದೆ. ಇತರ ದೇಶಗಳಲ್ಲಿ ಹೆಸರಾಗುವುದು ಕಾವ್ಯಕ್ಕೆ ಅಸ್ವಾಯತ್ತ. ಅದಕ್ಕೆ ಸ್ವಾಯತ್ತ ಅದರ ಉನ್ನತಿ. ಹೊರಗಿನ ಜನಕ್ಕೆ ತಿಳಿಯಲಿಲ್ಲವೆಂದಷ್ಟಕ್ಕೆ ಉನ್ನತಕಾವ್ಯ ಲೋಕಕಾವ್ಯ ಆಗದೆ ನಿಲ್ಲುವುದಿಲ್ಲ. ಉತ್ಕೃಷ್ಟಕಾವ್ಯವೆಲ್ಲ ಒಂದಲ್ಲ ಒಂದು ಜನಾಂಗದ ಹೃದಯದ ಲೋಕೋತ್ತರ ಆವಿಷ್ಕರಣ. ಆ ಕಾರಣದಿಂದ ಅದರ ಕವಿ ಲೋಕಕವಿ, ಕುಮಾರವ್ಯಾಸ ಮಹಾಭಾರತದಿಂದ ದಿವ್ಯದೃಷ್ಟಿಯನ್ನು ಪಡೆದು ತನ್ನ ಒಳಗೆ ತನ್ನ ಹೊರಗೆ ಅದರ ಮಹಾಶಕ್ತಿಗಳನ್ನು ಕಂಡು ತನ್ನ ಪಾಲಿಗೆ ಬಂದ ಭಾಗವನ್ನು ತನ್ನ ಜನಕ್ಕೆ ಹಂಚಿದ ಉರ್ದೀರ್ಣ ಚೇತನ; ಉದಾತ್ತ ಭಾವುಕ. ಕನ್ನಡ ನಾಡಿನ ಸಂಸ್ಕೃತಿ ಭರತವರ್ಷದ ಬೇರೆ ಯಾವ ಭಾಗದ ಸಂಸ್ಕೃತಿಗೂ ಸಮವಾಗಿ ಮೇಲೇರಿತ್ತು. ಭರತವರ್ಷದ ಸಂಸ್ಕೃತಿ ಬೇರೆ ಯಾವ ದೇಶದ ಸಂಸ್ಕೃತಿಗೂ ಕಡಿಮೆಯೆನ್ನಲು ಕಾರಣವಿಲ್ಲ ಎಂದು ಕುಮಾರವ್ಯಾಸ ತನ್ನ ಕಾವ್ಯದಿಂದ ಸಿದ್ಧಾಂತ ಮಾಡಿದ್ದಾನೆ. ಈ ಅರ್ಥದಲ್ಲಿ ಈತ ಲೋಕದ ಸಂಸ್ಕೃತಿ ಈವರೆಗೆ ಮುಟ್ಟಿರುವ ಮಹಾಪೂರವೊಂದರ ಎತ್ತರವನ್ನು ಗುರುತಿಸುವ ಸಾಕ್ಷಿರೇಖೆಯಾಗಿದ್ದಾನೆ. (ಎಂ.ವಿ.ಐ.)

**ಕುಮಾರಾಮಾತ್ಯ :** ಗುಪ್ತ ಸಾಮ್ರಾಜ್ಯದಲ್ಲಿ ಉನ್ನತ ಅಧಿಕಾರಿಗಳಿಗೆ ನೀಡಲಾಗುತ್ತಿದ್ದ ಒಂದು ಪದಾಭಿಧಾನ (ಅಫಿಷಿಯಲ್ ಡೆಸಿಗ್ನೇಷನ್). ಗುಪ್ತ ಸಾಮ್ರಾಜ್ಯದ ಆರಂಭ ದೆಸೆಯಲ್ಲಿ ರಾಜರು ಆಡಳಿತ ನಡೆಸುವ ಸಲುವಾಗಿ ಅನೇಕ ಮಂದಿ ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಮಂತ್ರಿ, ಸಂಧಿವಿಗ್ರಹಿಕ, ಅಕ್ಷಪಟಲಾಧಿಕೃತ-ಇವರು ಕೆಲವು ಅಧಿಕಾರಿಗಳು. ಮಹಾಬಲಾಧಿಕೃತ ಮತ್ತು ಮಹಾದಂಡನಾಯಕ-ಇವರು ಸೇನಾಧಿಕಾರಿಗಳು. ಆದರೆ ಅನೇಕ ವೇಳೆ ಆಡಳಿತ ಮತ್ತು ಸೈನಿಕ ಕಾರ್ಯಭಾರಗಳು ಒಬ್ಬನೇ ಅಧಿಕಾರಿಯಲ್ಲಿ ಏಕೀಭವಿಸಿದ್ದುದೂ ಉಂಟು. ಮಂತ್ರಿಯಾದಾತ ಮಹಾಬಲಾಧಿಕೃತನ ಕಾರ್ಯಭಾರವನ್ನೂ ಅಮಾತ್ಯನೇ ಮಹಾದಂಡನಾಯಕನ ಕರ್ತವ್ಯವನ್ನೂ ನಿರ್ವಹಿಸುತ್ತಿದ್ದುದು ಅಪರೂಪವೇನಲ್ಲ. ಸಚಿವ ಹುದ್ದೆ ಸಾಮಾನ್ಯವಾಗಿ ವಂಶಪಾರಂಪರ್ಯವಾಗಿತ್ತು. ಅರ್ಥಶಾಸ್ತ್ರ ಮತ್ತು ಜಾತಕಗಳಲ್ಲಿ ಅಮಾತ್ಯವರ್ಗದ ಅಧಿಕಾರಿಗಳ ಉಲ್ಲೇಖವಿದೆ. ಗುಪ್ತರು ಅಮಾತ್ಯವರ್ಗದ ಅಧಿಕಾರಿಗಳಲ್ಲಿ ಕುಮಾರಾಮಾತ್ಯರು ಸಮಯೋಚಿತವಾಗಿ ಸಂಧಿವಿಗ್ರಹಕಾರ್ಯವನ್ನೂ ಸೈನ್ಯಾಧಿಕಾರಗಳನ್ನೂ ಮಂತ್ರಾಲೋಚನೆಯನ್ನೂ ಸಾಮಂತರ ಮತ್ತು ಜಿಲ್ಲಾಧಿಕಾರಿಗಳ ಕಾರ್ಯವನ್ನೂ ನಿರ್ವಹಿಸುತ್ತಿದ್ದರು. ಇವರಲ್ಲಿ ಕೆಲವರು ನೇರವಾಗಿ ರಾಜನ ಅಧೀನದಲ್ಲಿದ್ದರು. ಇನ್ನು ಕೆಲವರು ರಾಜಕುಮಾರರಿಗೂ ಮತ್ತೆ ಕೆಲವರು ಪ್ರಾಂತ್ಯಾಧಿಕಾರಿಗಳಿಗೂ ಅಧೀನರಾಗಿದ್ದರು. ಕುಮಾರಾಮಾತ್ಯ ಎಂಬ ಶಬ್ದದ ಕುಮಾರ ಎಂಬುದು ದಕ್ಷಿಣಭಾರತದಲ್ಲಿ ರೂಢಿಯಲ್ಲಿದ್ದ ಎಳೆಯ, ಚಿಕ್ಕ ಎಂಬವಕ್ಕೆ ಸಮನಿರಬಹುದೆಂದು ಹೇಳಲಾಗಿದೆ.

ಮೌರ್ಯರ ಕಾಲದಲ್ಲಿ ಸಾಮ್ರಾಜ್ಯವನ್ನು ಹಲವು ಭುಕ್ತಿಗಳಾಗಿ (ಪ್ರಾಂತ್ಯ) ವಿಂಗಡಿಸಲಾಗಿತ್ತು. ಈ ಆಡಳಿತ ವಿಭಾಗದ ಅಧಿಕಾರಿ ಉಪರಿಕ. ಭುಕ್ತಿಯನ್ನು ವಿಷಯ ಅಥವಾ ಮಂಡಲಗಳಾಗಿ ಪುನರ್ವಿಭಾಗಿಸಲಾಗಿತ್ತು. ವಿಷಯದ ಅಧಿಕಾರಿಯ ಹೆಸರು ವಿಷಯಪತಿ. ಈ ಸ್ಥಾನಕ್ಕೆ ಕುಮಾರಾಮಾತ್ಯರನ್ನು ನೇಮಕಮಾಡುತ್ತಿದ್ದುದೂ ಉಂಟು.

ಸಮುದ್ರಗುಪ್ತನ ಅಲಹಾಬಾದ್ ಸ್ತಂಭದ ಶಾಸನದ ಸಾಹಿತ್ಯವನ್ನು ರಚಿಸಿದ ಹರಿಷೇಣನಿಗೆ ಮಹಾದಂಡನಾಯಕನೇ ಮುಂತಾದವುಗಳ ಜೊತೆಗೆ ಕುಮಾರಾಮಾತ್ಯನೆಂಬ ಪದಾಭಿಧಾನವೂ ಇತ್ತು. ಈತ ಸಮುದ್ರಗುಪ್ತನ ಮಂತ್ರಿಯಾಗಿದ್ದ. 2ನೆಯ ಚಂದ್ರಗುಪ್ತನ ಪ್ರಮುಖ ಅಧಿಕಾರಿಗಳಾಗಿದ್ದ ಶಿಖರಸ್ವಾಮಿ ಪೃಥ್ವಿಷೇಣ-ಇವರೆಲ್ಲರೂ ಕುಮಾರಾಮಾತ್ಯರಾಗಿದ್ದವರು.

ಬಸಾರಾ ಮುದ್ರಿಕೆಗಳಲ್ಲಿ ಕುಮಾರಾಮಾತ್ಯ, ಮಹಾದಂಡನಾಯಕ, ಮಹಾಪ್ರತಿಹಾರ ಈ ಹೆಸರುಗಳು ಕಂಡುಬರುತ್ತವೆ. ಅಧಿಷ್ಠಾನಾಧಿಕರಣದ (ನಗರಾಡಳಿತ ಮಂಡಲಿ) ಮತ್ತು ವಿಷಯಾಧಿಕರಣದ (ಜಿಲ್ಲಾ ಕಚೇರಿ) ಸಹಾಯ ಸಹಕಾರಗಳಿಂದ ಕುಮಾರಾಮಾತ್ಯರು ಸರ್ಕಾರದ ಜಮೀನುಗಳನ್ನು ವಿಕ್ರಯ ಮಾಡುವ ಕೆಲಸವನ್ನು ನಿರ್ವಹಿಸುತ್ತಿದ್ದರು. (ಎಚ್.ಎಸ್.ಎ.ಎನ್.)

**ಕುಮಾರಿಲಭಟ್ಟ :** ಸುಪ್ರಸಿದ್ಧ ಮೀಮಾಂಸಕನಾದ ಈತ ದಕ್ಷಿಣ ದೇಶದವ; ಆಂಧ್ರನೆಂದು ಹೇಳುತ್ತಾರೆ. ಬಿಹಾರ್ ಪ್ರಾಂತ್ಯದವನಾಗಿದ್ದ ಈತನನ್ನು ಶಂಕರಾಚಾರ್ಯರು ಬಿಹಾರದಲ್ಲೇ ಸಂಧಿಸಿದರೆಂದೂ ಪ್ರಯಾಗದಲ್ಲಿ ಸಂಧಿಸಿದರೆಂದೂ ಹೇಳುವವರಿದ್ದಾರೆ. ಈತನ ಕಾಲನಿರ್ಣಯವೂ ಸಮರ್ಪಕವಾಗಿ ಆಗಿಲ್ಲ. ಪ್ರಸಕ್ತಶಕದ 590–650ರವರೆಗೆ ಎಂದು ಕೆಲವು ಪಂಡಿತರು ನಿರ್ಧರಿಸಿದ್ದಾರೆ. ಈತ ಬೌದ್ಧಭಿಕ್ಷುಗಳ ಬಳಿ ಇದ್ದು ಅವರ ಧರ್ಮವನ್ನೆಲ್ಲ ಅಭ್ಯಾಸಮಾಡಿ ಮುಂದೆ ಆ ವಾದಗಳನ್ನೆಲ್ಲ ನಿರಸನ ಮಾಡಿ ವೈದಿಕ ಧರ್ಮವನ್ನು ಸಮರ್ಥಿಸಿದನೆಂದೂ ಹೀಗೆ ಗುರು ದ್ರೋಹದ ಪಾಪ ಸಂಘಟಿತವಾಗಲು ಅದರ ಪರಿಹಾರಕ್ಕೆಂದು ತುಷಾಗ್ನಿ ಪ್ರವೇಶಮಾಡಿ ತೀರಿಕೊಂಡನೆಂದೂ ಕಥೆಯಿದೆ. ಇನ್ನೇನು ಬೆಂಕಿಯಲ್ಲಿ ಬೀಳಬೇಕೆನ್ನುವಾಗಲೇ ಶಂಕರಾಚಾರ್ಯರು ಇವನನ್ನು ಕಾಣಲು ಬಂದಿದ್ದರೆಂದೂ ಐತಿಹ್ಯ. ವೈದಿಕ ಧರ್ಮದ ವಿರೋಧಿಗಳು (ಬೌದ್ಧರು, ಜೈನರು, ಲೋಕಾಯತರು ಇತ್ಯಾದಿ) ಪ್ರಬಲರಾಗಿದ್ದ ಕಾಲದಲ್ಲಿ ವೈದಿಕ ಧರ್ಮದ ಪಕ್ಷವನ್ನು ಹಿಡಿದು ಅದನ್ನು ನಾಡಿನಾದ್ಯಂತ ಪ್ರಚಾರ ಮಾಡಿ ಸ್ಥಿರಪಡಿಸಿದ ಪ್ರಾಚೀನರಲ್ಲಿ ಕುಮಾರಿಲಭಟ್ಟ ಮತ್ತು ಶಂಕರಾಚಾರ್ಯರು ಪ್ರಖ್ಯಾತರು. ವೈದಿಕ ಸಂಪ್ರದಾಯದ ಕರ್ಮಕಾಂಡವನ್ನು ಹಿಡಿದು ಕುಮಾರಿಲನೂ ಜ್ಞಾನಕಾಂಡವನ್ನು ಹಿಡಿದು ಶಂಕರರೂ ತಮ್ಮ ತಮ್ಮ ದಾರ್ಶನಿಕ ನಿಲುವನ್ನು ರೂಪಿಸಿಕೊಂಡರು.

ಮಧ್ಯಕಾಲಿಕ ಭಾರತದಲ್ಲಿ ಕುಮಾರಿಲಭಟ್ಟನ ಕೀರ್ತಿ ತುಂಬ ಪ್ರಚಲಿತವಾಗಿದ್ದಿತು. ಇವನ ದಾರ್ಶನಿಕ ನಿಲುವನ್ನು ಇದಿರಾಳಿಗಳು ಕೂಡ 'ಭಾಟ್ಟಮತ'ವೆಂದು ಮರ್ಯಾದೆಯಿಂದ ವ್ಯವಹರಿಸುತ್ತಿದ್ದರು. ಇವರ ಅಭಿಪ್ರಾಯಗಳನ್ನು ಋಗ್ವೇದಕ್ಕೆ ಭಾಷ್ಯ ಬರೆದ ಸ್ಕಂದಸ್ವಾಮಿಯೂ ಅವನ ಶಿಷ್ಯ ಹರಿಸ್ವಾಮಿಯೂ (ಶತಪಥ ಬ್ರಾಹ್ಮಣದ ಮೇಲೆ ಭಾಷ್ಯ ಬರೆದವ, ಪ್ರ.ಶ. 639) ನಿರುಕ್ತದ ಮೇಲೆ ಭಾಷ್ಯವನ್ನು ಬರೆದ ಮಹೇಶ್ವರಾಚಾರ್ಯನೂ (ಇವನೂ ಸ್ಕಂದಸ್ವಾಮಿಯ ಶಿಷ್ಯನೇ) ಉಲ್ಲೇಖಿಸಿದ್ದಾರೆ. ಆ ಕಾಲಕ್ಕೆ ಪ್ರಚುರವಾಗಿದ್ದ ಎಲ್ಲ ದರ್ಶನಗಳನ್ನೂ ವಿವೇಕದಿಂದ ತನ್ನೊಂದು ದರ್ಶನದಲ್ಲಿ ಈತ ಅಡಗಿಸಿರುವುದನ್ನು ಕಾಣಬಹುದು. ಇವನಿಗೆ ವೈದಿಕ ಧರ್ಮದಲ್ಲಿ ಮಾತ್ರವಲ್ಲದೆ ಬೌದ್ಧ, ಜೈನ, ಸಾಂಖ್ಯ ಮುಂತಾದ ಹಲವಾರು ದರ್ಶನಗಳ ನಿಕಟ ಪರಿಚಯವಿದ್ದುದು ಇವನ ಗ್ರಂಥಗಳಲ್ಲಿ ಸ್ಪಷ್ಟವಾಗುತ್ತದೆ. ಈತನ ಗ್ರಂಥಗಳು ಎಷ್ಟಿದ್ದುವೆಂಬುದು ತಿಳಿದುಬಂದಿಲ್ಲ. ಶ್ಲೋಕವಾರ್ತಿಕ, ತಂತ್ರವಾರ್ತಿಕ, ಟುಪ್‍ಟೀಕಾ ಇವು ಮಾತ್ರ ಉಳಿದುಬಂದಿವೆ. ಈ ಮೂರು ಗ್ರಂಥಗಳೂ ಪೂರ್ವಮೀಮಾಂಸಾ ಸೂತ್ರಗಳಿಗೆ ಶಬರಸ್ವಾಮಿ (ಪ್ರಸಕ್ತಶಕ ಮೊದಲನೆಯ ಶತಮಾನ) ಭಾಷ್ಯವನ್ನು ಸಿದ್ಧಮಾಡಿ ನಾಸ್ತಿಕ ಅವೈದಿಕ ಪಂಥಗಳ ಆಕ್ಷೇಪಗಳಿಗೆ ಸಮಾಧಾನ ಹೇಳಿ ವೈದಿಕ ಧರ್ಮದ ನಿಷ್ಠೆಯನ್ನು ಊರ್ಜಿತಗೊಳಿಸಿದ್ದ. ಶಬರಸ್ವಾಮಿಯ ಭಾಷ್ಯದಲ್ಲಿ ಪ್ರಸಕ್ತವಾದ ವಿಚಾರಗಳನ್ನೆತ್ತಿಕೊಂಡು ಕುಮಾರಿಲಭಟ್ಟ ತರ್ಕದಿಂದ, ಯುಕ್ತಿಯಿಂದ, ತನ್ನ ಪ್ರತಿಭೆಯಿಂದ ಪೂರ್ವಮೀಮಾಂಸಾದರ್ಶನವನ್ನು ಸ್ಫುಟಗೊಳಿಸಿದ. ಶಬರಸ್ವಾಮಿಯ ಭಾಷ್ಯಕ್ಕೆ ಕುಮಾರಿಲ ಬರೆದ ವಾರ್ತಿಕಗಳು ಸುಪ್ರಸಿದ್ಧವಾಗಿವೆ. ಶಬರಭಾಷ್ಯದ ಮೊದಲ ಪ್ರಕರಣದ ಮೊದಲ ಪಾದದ ಮೇಲೆ ಶ್ಲೋಕರೂಪವಾಗಿ ಸಿದ್ಧಪಡಿಸಿದ ವಾರ್ತಿಕವೇ ಶ್ಲೋಕವಾರ್ತಿಕ; ಮೊದಲ ಪ್ರಕರಣದ ಉಳಿದ ಪಾದಗಳ ಮೇಲೂ ಎರಡು, ಮೂರನೆಯ ಪ್ರಕರಣಗಳ ಮೇಲೂ ಮಾಡಿದ ವಾರ್ತಿಕವೇ ತಂತ್ರವಾರ್ತಿಕ; ಉಳಿದ ಪ್ರಕರಣಗಳ ಮೇಲಿನ ಟೀಕೆಯೇ ಟುಪ್‍ಟೀಕೆ. ಈ ಮೂರು ಗ್ರಂಥಗಳಿಗೆ ಏಕಸೂತ್ರವಿರುವುದರಿಂದ ಇವನ್ನು ಒಂದೇ ಬೃಹತ್ ಟೀಕೆಯ ಭಾಗಗಳೆಂದು ವ್ಯವಹರಿಸುತ್ತಾರೆ; ಈ ಮೂರು ಟೀಕೆಗಳನ್ನು ಬರೆಯುವ ಮುನ್ನ ಕುಮಾರಿಲ ಬೃಹತ್ ಟೀಕೆಂಬ ಬೇರೊಂದು ಗ್ರಂಥವನ್ನು ಬರೆದಿದ್ದನೆಂದು ಕೆಲವರು ಹೇಳುತ್ತಾರೆ. ಬೃಹತ್ ಟೀಕೆ ಎಂದು ಸ್ಪಷ್ಟವಾಗಿ ಕರೆಸಿಕೊಳ್ಳುವ ಗ್ರಂಥವೇನೋ ಇಂದಿಗೆ ಉಳಿದು ಬಂದಿಲ್ಲ.

ಕುಮಾರಿಲಭಟ್ಟನ ಗ್ರಂಥಗಳಿಗೆ ಹಲವಾರು ವ್ಯಾಖ್ಯಾನಗಳೂ ಟಿಪ್ಪಣಿಗಳೂ ಇವೆ. ಶ್ಲೋಕವಾರ್ತಿಕಕ್ಕೆ ಸುಚರಿತಮಿತ್ರ (ಕಾಶಿಕೆಯ ರಚಯಿತ), ಪಾರ್ಥಸಾರಥಿ ಮಿಶ್ರ (ನ್ಯಾಯರತ್ನಾಕರವನ್ನು ಬರೆದವ) ಇಬ್ಬರೂ ಉತ್ತಮ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಶ್ಲೋಕವಾರ್ತಿಕ, ತಂತ್ರವಾರ್ತಿಕಗಳೆರಡಕ್ಕೂ ಉಂವೇಕನೆಂಬ ಕುಮಾರಿಲರ ಶಿಷ್ಯ ಬರೆದಿರುವ ಟೀಕೆ ಸುಪ್ರಸಿದ್ಧವಾಗಿದೆ. ಉಂವೇಕ (ಪ್ರ.ಶ. 620–680) ಕವಿಯಾದ ಭವಭೂತಿಯೇ ಎಂದು ಹೇಳುತ್ತಾರೆ. ಭವಭೂತಿಯ ಮಾಲತೀಮಾಧವದ ಒಂದು ಪ್ರತಿಯ ಆರನೆಯ ಅಂಕದ ಕೊನೆಯಲ್ಲಿ 'ಶ್ರೀ ಕುಮಾರಿಲಸ್ವಾಮಿ ಪ್ರಸಾದ ಪ್ರಾಪ್ತವಾಗ್ವೈಭವ ಶ್ರೀಮದುಂವೇಕಾಚಾರ್ಯ ವಿರಚಿತ' ಎಂಬ ಮಾತಿದೆ. ಕುಮಾರಿಲನ ಶ್ಲೋಕವಾರ್ತಿಕದಲ್ಲಿ ವನವಾದದವರೆಗೂ ಉಂವೇಕನ ವ್ಯಾಖ್ಯೆಯಿದೆ; ಉಳಿದ ಭಾಗಗಳಿಗೆ ಕುಮಾರಿಲಭಟ್ಟನ ಮಗ ಜಯಮಿಶ್ರನ ವ್ಯಾಖ್ಯೆಯಿದೆ. ಮುಂದೆ ಶಂಕರಾಚಾರ್ಯರ ಶಿಷ್ಯನಾದ ಮಂಡನಮಿಶ್ರ (ಪ್ರ.ಶ. 633–680) ಎಂಬುವನೂ ಮೊದಲಿಗೆ ಕುಮಾರಿಲಭಟ್ಟನ ಶಿಷ್ಯನೆಂದು ಪ್ರತೀತಿ. ಮಾಂಡೂಕ್ಯಕಾರಿಕೆಗಳನ್ನು ರಚಿಸಿದ ಗೌಡಪಾದಾಚಾರ್ಯನೂ ಕುಮಾರಿಲಭಟ್ಟನ ಬಳಿ ಅಧ್ಯಯನ ಮಾಡಿದ್ದನೆಂದು ಒಂದು ಮತವಿದೆ. ಆದರೆ ಇದಕ್ಕೆ ಆಧಾರ ಸಾಲದು.

ಕುಮಾರಿಲಭಟ್ಟ ತನ್ನ ಶ್ಲೋಕವಾರ್ತಿಕದಲ್ಲಿ ವಾಸ್ತವವಾದವನ್ನು ಹಿಡಿದು ಪುಷ್ಟಿಮಾಡಿದ. ಯೋಗಾಚಾರ–ವಿಜ್ಞಾನವಾದಿಗಳ ಮತ್ತು ಮಾಧ್ಯಮಿಕರ ನಿರಾಲಂಬವಾದ ಮತ್ತು ಶೂನ್ಯತಾವಾದಗಳನ್ನು ಖಂಡಿಸಿ, ವೇದಪ್ರಾಮಾಣ್ಯವನ್ನು ಸಮರ್ಥಿಸಿದ. ವೈದಿಕಧರ್ಮದ ಪುನರುಜ್ಜೀವನ ಮಾಡಿ ಆಧುನಿಕ ಹಿಂದೂಧರ್ಮದ ರೂಪುರೇಷೆಗಳನ್ನು ನಿರ್ಧರಿಸಲು ಯತ್ನಿಸಿದ ಮಹಾಪುರುಷರಲ್ಲಿ ಕುಮಾರಿಲಭಟ್ಟ ಆದ್ಯನೆನ್ನಬಹುದು. ಮುಖ್ಯವಾಗಿ ಪ್ರಮಾಣಗಳ ಪ್ರಸ್ತಾಪವನ್ನು ಎತ್ತಿಕೊಂಡು ಪ್ರತ್ಯಕ್ಷ, ಅನುಮಾನ, ಆಗಮ, ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ ಈ ಆರು ಪ್ರಮಾಣಗಳನ್ನು ಸಾಧುವೆಂದು ಈತ ವಾದ ಮಾಡಿದ. ಈ ಜಾಡನ್ನೇ ಹಿಡಿದು ಸಿದ್ಧವಾದ ತತ್ತ್ವದ ವಿರೋಧಿಗಳಾದ ಅದ್ವೈತಿಗಳೂ ವ್ಯವಹಾರದಲ್ಲಿ ಒಪ್ಪಿಕೊಂಡರು. ವ್ಯವಹಾರೇ ಭಾಟ್ಟನಯಃ ಎನ್ನುವ ಮಾತು ಅದ್ವೈತಿಗಳ ವಿಚಾರವಾಗಿ ಬಂದದ್ದು. (ಎಸ್.ಕೆ.ಆರ್.)

**ಕುಮುದೇಂದು :** ಸು.1275. ಷಟ್ಪದಿಯಲ್ಲಿ ರಾಮಾಯಣವೊಂದನ್ನು ಬರೆದ ಕನ್ನಡ ಕವಿ. ಅದಕ್ಕೆ ಕುಮುದೇಂದು ರಾಮಾಯಣವೆಂಬ ಹೆಸರೇ ಉಳಿದು ಬಂದಿದೆ. ಈತನ ವಿಷಯಕವಾದ ಎಲ್ಲ ಸಂಗತಿಗಳೂ ದೊರೆಯುವುದಿಲ್ಲ. ತನ್ನ ಗ್ರಂಥದಲ್ಲಿ ಕವಿ ತಂದೆ ಮತ್ತು ದೊಡ್ಡಪ್ಪಂದಿರ ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳಿಕೊಂಡಿದ್ದಾನೆ. ತಂದೆ ಪದ್ಮನಂದಿವ್ರತಿ, ಬಾಣಸಕುಲತಿಲಕ, ಸಾಹಿತ್ಯವಿಶಾರದ, ಚತುರ್ವಿಧ ಪಾಂಡಿತ್ಯಕಳಾಕುಶಲ, ವಾದಿಗಳಲ್ಲಿ ಶ್ರೇಷ್ಠ; ಹೆಸರು ವಾಸಿಯಾದ ಕವಿಯೂ ಆಗಿದ್ದನೆಂದು ಕವಿಮುಖಮಣಿಮುಕುರಂ ಎಂಬ ಆತನ ಬಿರುದಿನಿಂದ ತಿಳಿಯುತ್ತದೆ. ಕವಿಯ ದೊಡ್ಡಪ್ಪ ಆಗಮ, ನಾಟಕ, ತರ್ಕ, ವ್ಯಾಕರಣ, ಛಂದೋಲಂಕೃತಿ, ಶ್ರುತಿ, ಸ್ಮೃತಿ, ವೇದಾಂತ, ಮಂತ್ರೌಷಧಿ, ರತ್ನಪರೀಕ್ಷೆ–ಮುಂತಾದ ಶಾಸ್ತ್ರಗಳಲ್ಲಿ ಪಂಡಿತನಾದ ಅರ್ಹಣಂದಿವ್ರತಿ.

ಹೀಗೆ ಕವಿ ಘನವಿದ್ವಾಂಸರ ವಂಶದಲ್ಲಿ ಹುಟ್ಟಿದವ. ಈತನ ಗುರು ಸಿದ್ಧಾಂತ ಚಕ್ರವರ್ತಿಯೆನಿಸಿದ ಮಾಘನಂದಾಚಾರ್ಯ. ಇಂಥ ಪಂಡಿತವಂಶದಲ್ಲಿ ಹುಟ್ಟಿ ಸಿದ್ಧಾಂತ ಚಕ್ರವರ್ತಿಯೆನಿಸಿದ ಗುರುವಿನ ಅಡಿಯಲ್ಲಿ ಅಧ್ಯಯನ ಮಾಡಿದ ಕುಮುದೇಂದು ಅಸಾಮಾನ್ಯ ಪಂಡಿತನಾಗಿರುವುದು ಸ್ವಾಭಾವಿಕವೇ. ಪರವಾದಿ ಗಿರಿವಜ್ರ, ವಾದಿಗಜಕೇಸರಿ, ವಾದಿಭಾಳಲೋಚನ, ವಾದಿಧರಾಧರಕುಳಿಶ, ಪರವಾದಿಗಂಡಭೇರುಂಡ, ಕವಿರಾಜಶಿಖಾಮಣಿ, ಸರಸಕವಿತಿಲಕ, ಸರಸಕವಿಮುಖತಿಲಕ, ಕವಿಕುಳಭಾಳಲಲಾಮ– ಮುಂತಾದ ಈತನ ಬಿರುದುಗಳು ಈತನ ವೈದುಷ್ಯವನ್ನು ಪುಷ್ಟೀಕರಿಸುತ್ತವೆ. ಈ ಬಿರುದುಗಳ ಮೇಲಿಂದ ಈತ ವಾದದಲ್ಲಿ ಅನೇಕ ಪಂಡಿತರನ್ನು ಗೆದ್ದಿರಬೇಕು ಎಂದು ಕಂಡುಬರುವುದು. ಈತನ ರಾಮಾಯಣ ರಾವಣವಧೆಯಾದ ಮೇಲೆ ರಾಮಚಂದ್ರ ಸೀತಾಲಕ್ಷ್ಮಣರೊಡನೆ ಅಯೋಧ್ಯೆಗೆ ಬರುವಮಟ್ಟಿಗೆ ಇದೆ. ಪಂಪರಾಮಾಯಣದಂತೆ ರಾಮಕೇವಲಿಯ ಮೋಕ್ಷದವರೆಗೆ ಸಂಪೂರ್ಣವಾಗಿಲ್ಲ. ಬಹುತರವಾಗಿ ಅದು ಅಲ್ಲಿಗೇ ನಿಂತುಹೋಗಿ, ಕವಿ ಗತಿಸಿರಬಹುದು. ಈಗ ಪ್ರಕಟವಾಗಿರುವ ಗ್ರಂಥದಲ್ಲಿ ಒಂದರಿಂದ ಎಂಟು ಸಂಧಿಗಳು ಮಾತ್ರ ಇವೆ.

ಇದರಲ್ಲಿನ ರಾಮಕಥೆ ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದ್ದು. ಅಂದರೆ ಇದು ಪಂಪರಾಮಾಯಣವನ್ನು ಬಹುತೇಕ ಅನುಸರಿಸಿದೆ. ಆದರೆ ಕಥಾ ಸ್ವಾರಸ್ಯಕ್ಕಾಗಿ ಅಲ್ಲಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡದ್ದು ಕಂಡುಬರುತ್ತದೆ.

ಎಲ್ಲ ಜಾತಿಯ ಷಟ್ಪದಿಗಳೂ ಇದ್ದು ಗ್ರಂಥ ಛಂದೋವೈವಿಧ್ಯದಿಂದ ಕೂಡಿದುದಾಗಿದೆ. ಅಲ್ಲಲ್ಲಿ ಕೆಲವು ರಗಳೆಗಳೂ ದೊರೆಯುತ್ತವೆ. ಪ್ರತಿ ಸಂಧಿಯೂ ಷಟ್ಪದಿಯ ಒಂದೊಂದು ಪ್ರಕಾರದಲ್ಲಿದೆಯಲ್ಲದೆ ಒಂದೊಂದು ಸಂಧಿಗೂ ಒಂದೊಂದು ರಾಗವನ್ನು ಸೂಚಿಸಲಾಗಿದೆ. ಎರಡು ಸಂಧಿಗಳಿಗೆ ತಾಳಸೂಚನೆಯೂ ಇದೆ. ವಿಶೇಷವೆಂದರೆ ಪರಿವರ್ಧಿನಿಯ ಆರನೆಯ ಪಾದಗಳಲ್ಲಿ ಇರಬೇಕಾದುದಕ್ಕಿಂತ ಒಂದು ಗಣ ಹೆಚ್ಚಾಗಿದೆ, ಇಲ್ಲವೆ ಅರ್ಧ ಗಣ ಹೆಚ್ಚಾಗಿದ್ದು ಆಂತರಿಕಯತಿ–ಪ್ರಾಸಗಳನ್ನು ಒಮ್ಮೆ ಬಳಸಿದೆ, ಒಮ್ಮೆ ಬಿಟ್ಟಿದೆ. ಇದರಿಂದಾಗಿ ಛಂದಸ್ಸಿನ ಶೈಥಿಲ್ಯ ಎದ್ದು ಕಾಣುತ್ತದೆ. ಇದನ್ನು ನೋಡಿದರೆ ಕುಮುದೇಂದುವಿನ ಸಂಗೀತಜ್ಞಾನ ಪದ್ಯರಚನೆಯಲ್ಲಿ ಗುಣದೋಷಗಳೆರಡಕ್ಕೂ ಎಡೆಮಾಡಿದೆಯೆನ್ನಬೇಕು. ಆದರೂ ಅರ್ಥ, ರಸ, ಗುಣ, ಅಲಂಕಾರ, ಮೃದುಪದ ಭಾವಗಳನ್ನು ಕಾವ್ಯದಲ್ಲಿ ಕಾಣಬಹುದು. ಹಾಡುಗಬ್ಬದಲ್ಲಿ ಪ್ರೌಢಕಾವ್ಯದ ಲಕ್ಷಣ ತಂದು ಹಳೆಯ ಹೊಸ ಶೈಲಿಗಳ ಮಿಶ್ರಣ ಮಾಡಿದ್ದಾನೆ, ಕವಿ. ಭಾಷೆಯ ಮೇಲೆ ಇವನಿಗಿರುವ ಪ್ರಭುತ್ವ ಎಲ್ಲೆಡೆಯೂ ಸುಲಭವಾಗಿ ಗೋಚರಿಸುತ್ತದೆ. ಮತ್ಕೃತಿ ಮಾಡುವುದು ಚಮತ್ಕೃತಿಯಂ ಎಂಬ ಕವಿವಾಣಿ ಕಾವ್ಯದಲ್ಲಿ ಸಾಕಷ್ಟು ಸಮರ್ಥನೆಯನ್ನು ಪಡೆದಿದೆ. (ಕೆ.ಜಿ.ಕೆ.)

**ಕುಮ್ರಹಾರ :** ಪಾಟಲೀಪುತ್ರದ (ಈಗಿನ ಪಟ್ಟಣ) ಒಂದು ಉಪನಗರ. ಪಾಟಲೀಪುತ್ರ ಪ್ರ.ಶ.ಪೂ. 5ನೆಯ ಶತಮಾನದಿಂದ ಪ್ರ.ಶ.ಪೂ. 600ರ ವರೆಗೆ ಒಳ್ಳೆಯ ಬಂದರಾಗಿ,

ವ್ಯಾಪಾರ ಕೇಂದ್ರವಾಗಿ, ಸೈನ್ಯದ ಆಯಕಟ್ಟಿನ ಸ್ಥಳವಾಗಿ, ಭದ್ರ ಕೋಟೆಯುಳ್ಳ ಪಟ್ಟಣವಾಗಿ ಮೆರೆಯಿತು–ಎಂಬ ವಿಷಯ ಕುಮ್ರಹಾರದಲ್ಲಿ ಡಿ. ಬಿ. ಸ್ಪೂನರ್ 1912–19ರಲ್ಲೂ ಮತ್ತು ಎ.ಎಸ್. ಅಳ್ತೇಕರ ಮತ್ತು ವಿ. ಮಿಶ್ರರು 1951–55ರಲ್ಲೂ ನಡೆಸಿದ ಉತ್ಖನನಗಳಿಂದ ತಿಳಿದುಬರುತ್ತದೆ.

ಕುಮ್ರಹಾರದ ದಕ್ಷಿಣಕ್ಕೆ ಸೋಣ ನದಿಯ ಹಳೆಯ ಪಾತ್ರವಿದೆ. ಗಂಗಾ ನದಿ ಇದರ ಈಶಾನ್ಯಕ್ಕೆ ಹರಿಯುತ್ತದೆ. ಕುಮಾರ ಮಹೇಂದ್ರನ ಸಲುವಾಗಿ ಈ ಪ್ರದೇಶದಲ್ಲಿ ಅಶೋಕ ಮೌರ್ಯ ಒಂದು ವಿಹಾರವನ್ನು ಕಟ್ಟಿಸಿದ್ದಿರಬಹುದೆಂದೂ ಕುಮಾರ ವಿಹಾರವೇ ಕುಮ್ರಹಾರವಾಗಿರಬಹುದೆಂದೂ ಹೇಳುತ್ತಾರೆ.

ಡಿ. ಬಿ. ಸ್ಪೂನರ್ ಕುಮ್ರಹಾರದಲ್ಲಿ ಉತ್ಖನನ ನಡೆಸಿದಾಗ ಅಲ್ಲಿ 72 ಅಖಂಡ ಕಲ್ಲಿನ ಕಂಬಗಳ ಅದ್ಭುತ ಸಭಾಂಗಣವೊಂದು ಪತ್ತೆಯಾಯಿತು. ಮುಂದೆ ಅಳ್ತೇಕರ ಮತ್ತು ಮಿಶ್ರರು ಇನ್ನೂ 8 ಕಂಬಗಳನ್ನು ಪತ್ತೆಹಚ್ಚಿದರು. ಈ ಮಂಟಪಕ್ಕೆ 80 ಕಂಬಗಳಿದ್ದುವೆಂದೂ ಇದಕ್ಕೆ ದಕ್ಷಿಣ ದಿಕ್ಕಿನಲ್ಲಿ ಪ್ರವೇಶಿಸಲು ನಾಲ್ಕು ಕಂಬಗಳ ಒಂದು ಮುಖಮಂಟಪ ಇತ್ತೆಂದೂ ಅವರು ಸಿದ್ಧಪಡಿಸಿದರು.

ಇಟ್ಟಿಗೆಯಲ್ಲಿ ಕಟ್ಟಿದ ಬೌದ್ಧವಿಹಾರಗಳು ಮತ್ತು ಚೈತ್ಯಗಳು ಇಲ್ಲಿ ಕಂಡುಬಂದಿವೆ.

ಇವಲ್ಲದೆ ಬೂದು ಬಣ್ಣದ ಮಣ್ಣಿನ ಪಾತ್ರೆಗಳು, ಉತ್ತರ ಭಾರತದ ಕಪ್ಪು ಹೊಳಪಿನಿಂದ ಕೂಡಿದ ಪಾತ್ರೆಗಳು, ಕುಷಾಣರ ಮತ್ತು ಗುಪ್ತರ ನಾಣ್ಯಗಳು, ಸಂಗರ, ಕುಷಾಣರ ಮತ್ತು ಗುಪ್ತರ ಕಾಲದ ಸುಟ್ಟಮಣ್ಣಿನ ಮುದ್ರೆ ಮುದ್ರಿಕೆಗಳು ಮತ್ತು ಕುಷಾಣಪೂರ್ವ ಕಾಲದ ಅಕ್ಷರಗಳನ್ನು ಕೊರೆದ ಮಡಕೆಯ ಚೂರುಗಳು ದೊರೆತಿವೆ.

ಹೀಗೆ ದೊರೆತ ವಸ್ತುಗಳಲ್ಲಿ ಗುಪ್ತರ ಕಾಲದ ಒಂದು ಮುದ್ರೆಯ ಮೇಲೆ 'ಶ್ರೀ ಆರೋಗ್ಯ ವಿಹಾರೇ ಭಿಕ್ಷು ಸಂಘಸ್ಯ' ಎಂಬ ಶಾಸನವಿದೆ. ಇದೇ ರೀತಿ ಇತರ ಶಾಸನಗಳುಳ್ಳ ಮುದ್ರೆಗಳೂ ಸಿಕ್ಕಿವೆ. (ಎ.ಎಂ.ಎ.)

**ಕುಮುದ್ವತಿ[1]:** ಉತ್ತರ ಪಿನಾಕಿನಿಯ ಉಪನದಿ. ಕುಂದಾರ್ ಎಂದೂ ಹೆಸರು. ಬೆಂಗಳೂರು ಜಿಲ್ಲೆಯ ಮಾಕಳಿದುರ್ಗದ ಪಶ್ಚಿಮದ ಉಜನಿ ಬೆಟ್ಟದಲ್ಲಿ ಹುಟ್ಟಿ, ದೊಡ್ಡಬಳ್ಳಾಪುರ, ಗೌರಿಬಿದನೂರು ತಾಲ್ಲೂಕುಗಳ ಮೂಲಕ ಉತ್ತರಕ್ಕೆ ಸಾಗಿ, ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳ ಮೂಲಕ ಅನಂತಪುರ ಜಿಲ್ಲೆಗೆ ಹರಿದು ಹಿಂದುಪುರದ ಬಳಿ ಉತ್ತರ ಪಿನಾಕಿನಿ (ಪೆನ್ನಾರ್) ನದಿಗೆ ಸೇರುವುದು. ನದಿಯ ಉದ್ದ ಸು.72ಕಿಮೀ. ನದಿಯಲ್ಲಿ ಮಳೆಗಾಲದಲ್ಲಷ್ಟೇ ನೀರು ಹರಿಯುತ್ತದೆ. ಬೇಸಗೆಯಲ್ಲಿ ಒಣಗಿದ್ದರೂ ಪಾತ್ರದಲ್ಲಿನ ಮರಳು ಬಗೆದರೆ ನೀರುಕ್ಕುತ್ತದೆ. ನದಿಯ ಓಟದುದ್ದಕ್ಕೂ ಚಿಕ್ಕ ಕೆರೆಕಟ್ಟೆಗಳನ್ನು ಕಟ್ಟಿ ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ. (ಎ.ಕೆ.)

**ಕುಮುದ್ವತಿ[2]:** ತುಂಗಭದ್ರೆಯ ಉಪನದಿ. ಶಿಕಾರಿಪುರ ತಾಲ್ಲೂಕಿನ ಹುಮಚದ ಹತ್ತಿರ ಅಗಸ್ತ್ಯ ಪರ್ವತದಲ್ಲಿ (ಬಿಳೇಶ್ವರ ಬೆಟ್ಟ) ಹುಟ್ಟಿ ಕುಂಸಿ ಮತ್ತು ಶಿಕಾರಿಪುರಗಳ ಮೂಲಕ ಉತ್ತರಕ್ಕೆ ಹರಿದು ಹಿರೇಕೆರೂರು ತಾಲ್ಲೂಕನ್ನು ಪ್ರವೇಶಿಸಿ ಹರಿಹರದಿಂದ ಸ್ವಲ್ಪ ಮೇಲೆ ಮುದೇನೂರು ಗ್ರಾಮದ ಹತ್ತಿರ ತುಂಗಭದ್ರಾ ನದಿಯನ್ನು ಸೇರುತ್ತದೆ. ಇದಕ್ಕೆ ಚೊರಾಡಿ ನದಿ ಎಂಬ ಹೆಸರೂ ಇದೆ. ನದಿಯ ಉದ್ದ ಸು.96 ಕಿಮೀ. ಈ ನದಿ ಮಾಸೂರು ಮದಗ ಕೆರೆಗೆ ನೀರನ್ನೊದಗಿಸುವುದು. ಇದಕ್ಕೆ ಅನೇಕ ಕಡೆಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಿ ನೀರಾವರಿಗಾಗಿ ನೀರನ್ನು ಉಪಯೋಗಿಸುವರು. (ಎ.ಕೆ.)

**ಕುಮ್ಮಟಗಿ:** ಬಿಜಾಪುರ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಐತಿಹಾಸಿಕ ಸ್ಥಳ. ಬಿಜಾಪುರ ನಗರದಿಂದ ಸು.15 ಕಿಮೀ ದೂರದಲ್ಲಿದೆ. ಬಿಜಾಪುರದ ಸುಲ್ತಾನರಾದ ಆದಿಲ್ ಷಾಹಿ ದೊರೆಗಳು ಮತ್ತು ಅವರ ಅಧಿಕಾರಿಗಳು ಇಲ್ಲಿಗೆ ಬಂದು ಇಲ್ಲಿನ ಕೆರೆಯ ಆಸುಪಾಸಿನಲ್ಲಿ ಇದ್ದ ಅರಮನೆಗಳಲ್ಲಿ ತಂಗಿ ವಿಶ್ರಾಂತಿ ಪಡೆಯುತ್ತಿದ್ದರು. ಇದೊಂದು ಸುಖಸಂಕಥಾ ವಿನೋದದ ಸ್ಥಳ. ಇಲ್ಲಿನ ಜಲಕ್ರೀಡಾ ಮಂಟಪಗಳು, ನೀರಿನ ತೊಟ್ಟಿಗಳು, ಕಾರಂಜಿಗಳು ಮತ್ತು ನೀರು ಚಿಮ್ಮಿ ಜೋರಾಗಿ ಬರುವ ನೀರನಳಿಕೆಗಳು, ಭವನಗಳ ಅವಶೇಷಗಳು ಹಿಂದಿನ ಸುಂದರ, ಭವ್ಯ ಪ್ರವಾಸಿ ತಾಣವನ್ನು ನೆನಪಿಸುತ್ತವೆ. ಮಂಟಪಗಳ ಗೋಡೆಯ ಮೇಲೆ ಅಲ್ಲಲ್ಲಿ ಸುಂದರವಾದ, ಮಬ್ಬಾದ ಭಿತ್ತಿಚಿತ್ರಗಳಿವೆ. ಒಂದು ಚಿತ್ರದಲ್ಲಿ ಅಶ್ವಕಂದುಕದಾಟದ (ಪೋಲೋ) ಚಿತ್ರವಿದೆ. ಇನ್ನೊಂದು ಚಿತ್ರದಲ್ಲಿ ಕುಸ್ತಿ ನಡೆಯುತ್ತಿರುವುದನ್ನೂ ಆ ಕುಸ್ತಿಯನ್ನು ನೋಡಲು ಸುತ್ತ ಕುಳಿತ ಹಾಗೂ ನಿಂತ ಪ್ರೇಕ್ಷಕರನ್ನೂ ಚಿತ್ರಿಸಿದೆ. ಮತ್ತೊಂದು ಚಿತ್ರ ಶ್ರೀಮಂತ ಸ್ತ್ರೀಯರಿಗೆ ಮತ್ತು ಅಧಿಕಾರಿಗಳ ಪತ್ನಿಯರಿಗೆ ರಸಾನಂದವನ್ನು ಉಣಿಸುತ್ತಿರುವ ಸಂಗೀತಗಾರನ ಚಿತ್ರವನ್ನೊಳಗೊಂಡಿದೆ. ಈ ಭಿತ್ತಿಚಿತ್ರಗಳು ಅನಂತರ ಕಾಲದ ಚಿತ್ರಕಲೆಯ ಮೇಲೆ ಪ್ರಭಾವ ಬೀರಿವೆ ಎಂದು ಹೇಳಲಾಗಿದೆ.

ಈ ಊರು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿತ್ತು. ಇಲ್ಲಿ ಭೋಗೇಶ್ವರ, ಚೆನ್ನಬ್ರಹ್ಮೇಶ್ವರ ಎಂಬ ದೇವಾಲಯಗಳು ಇದ್ದುದರ ಬಗ್ಗೆ ಶಾಸನೋಲ್ಲೇಖವಿದೆ. (ಎಸ್.ಜಿ.ಎ.)

**ಕುಮ್ಮಟದುರ್ಗ:** ಕೊಪ್ಪಳ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗಿರಿದುರ್ಗ. ಸಮುದ್ರಮಟ್ಟದಿಂದ ಸು.650ಮೀ ಎತ್ತರದಲ್ಲಿದೆ. ದುರ್ಗದ ಕೆಳಭಾಗದಲ್ಲಿ ಹೊಸಕುಮ್ಮಟ ಮತ್ತು ಸ್ವಲ್ಪ ದೂರದಲ್ಲಿ ಹಳೆಯ ಕುಮ್ಮಟ ಎಂಬ ಹಳ್ಳಿಗಳಿವೆ. ಆದರೆ ಜನವಸತಿ ಅತಿ ಕಡಿಮೆ.

ಕುಮಾರರಾಮ **(ನೋಡಿ)** ವೀರ ಕಂಪಿಲದೇವ ಮತ್ತು ಹರಿಯಾಲದೇವಿಯರ ಮಗ. ಆತನ ಇತಿಹಾಸ ಮತ್ತು ಐತಿಹ್ಯಗಳಿಗೆ ಸಂಬಂಧಪಟ್ಟ ಈ ಸ್ಥಳ ಕಂಪಿಲಿರಾಜ್ಯದ (ನೋಡಿ) ಒಂದು ರಾಜಧಾನಿ. ಇನ್ನೊಂದು ರಾಜಧಾನಿ ಕಂಪ್ಲಿ.

ತುಂಗಭದ್ರಾ ದಾಟಿ ಮೊಗಲಾಯಿ ಸೀಮೆ ಎಮ್ಮಿಗುಡ್ಡಕ್ಕೆ ಐದು ಹರದಾರಿ ದೂರದಲ್ಲಿ ಗುಮ್ಮಟ ಎಂಬ ಕೋಟೆ ಇದೆ ಎಂದು ಕೈಫಿಯತ್ತೊಂದು ತಿಳಿಸುತ್ತದೆ. ನ್ಯೂನಿಜ್ ಎಂಬ ವಿದೇಶಿ ಪ್ರವಾಸಿ ಉಲ್ಲೇಖಿಸುವ 'ಕ್ರಿನಮಟ' ಕುಮ್ಮಟವೆ ಎಂದು ಗುರುತಿಸಲಾಗಿದೆ. ಈ ದುರ್ಗವನ್ನು ಎಂ. ಎಚ್. ರಾಮಶರ್ಮ ಅವರು 1930ರ ವೇಳೆಗೆ ಪತ್ತೆಮಾಡಿದರು.

ಕೋಟೆ ಮೂರು ಪ್ರಾಕಾರಗಳಿಂದ ಕೂಡಿದ್ದು ಹೊರಗೋಡೆ 4ಮೀ ಎತ್ತರವಿದೆ. ತೋಪುಕಿಂಡಿ ಅಥವಾ ಕೋಟೆತೆನೆಗಳು ಕಂಡುಬರುವುದಿಲ್ಲ. ಕೋಟೆಯ ಸುತ್ತಳತೆ ಸು.5 ಕಿಮೀ. ಕೋಟೆಯೊಳಗೆ ಮುರಿದ ಕಂಬಗಳು, ಚಿಂತಾಲಕಲ್ಲು, ಭಗ್ನಶಿಲ್ಪ, ಬಂಡೆಗಲ್ಲುಗಳು ಚೆಲ್ಲಾಡಿವೆ. ಮೊದಲನೆಯ ಪ್ರಾಕಾರದೊಳಗೆ ಬೈಚಪ್ಪನಗುಡಿ ಇದೆಯಾದರೂ ಒಳಗೆ ಇರುವುದು ಲಿಂಗಾಕಾರದ ಶಿಲೆ. ಕುದುರೆಯ ಸವಾರಿ ಮಾಡುತ್ತಿರುವ ಶಿಲ್ಪ ಕುಮಾರರಾಮನದೆಂದು ಪ್ರತೀತಿ. ಅವನು ಶೀಲಕ್ಕೆ ಮತ್ತು ಶೌರ್ಯಕ್ಕೆ ಹೆಸರಾಗಿ ಮಹಮ್ಮದೀಯ ಸೈನ್ಯದ ವಿರುದ್ಧ ಹೋರಾಡಿ ಹುತಾತ್ಮನಾದುದು ಜನಮನದಲ್ಲಿ ಸಾಂಗತ್ಯವಾಗಿ ಹಾಡಾಗಿ ಹರಿದಿದೆ. ಕೋಟೆಯ ಎರಡನೆಯ ಪೌಳಿ ದಾಟಿದ ಮೇಲೆ ಗುಡ್ಡ ಕಡಿದಾಗುತ್ತ ಹೋಗುತ್ತದೆ. ಇಲ್ಲಿ ಕಾಟಪ್ಪನಗುಡಿ, ಆನೆಯಪಾಗ್ ಎಂಬ ಗಜಾಲಯ ಕಟ್ಟಡ ಕಾಣಸಿಗುತ್ತವೆ. ಮೂರನೆಯ ಪ್ರಾಕಾರದ ಅನಂತರ ಗುಡ್ಡದ ನೆತ್ತಿಯಲ್ಲಿ ರಾಮಸ್ವಾಮಿಗುಡಿ ಇದೆ. ಜೈನಬಸದಿ, ರಾಮನ ದೋಣೆ, ಕಟ್ಟಿಗೆ ದೋಣೆ ಮತ್ತು ಕೊತ್ತಳ ಇತರ ಪ್ರೇಕ್ಷಣೀಯ ಸ್ಥಳಗಳು. ಕೊತ್ತಳದಿಂದ ತುಂಗಭದ್ರಾನದಿ ಮನೋಹರವಾಗಿ ಕಾಣುತ್ತದೆ.

ಪ್ರತಿವರ್ಷ ವೈಶಾಖ ಹುಣ್ಣಿಮೆಯ ದಿನ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಕೊಪ್ಪಳದ ದುರ್ಗ, ಉಚ್ಚಂಗಿ ದುರ್ಗ ಮತ್ತು ಚಿತ್ರದುರ್ಗಗಳಂತೆಯೇ ಕುಮ್ಮಟದುರ್ಗವೂ ದುರ್ಗಮವಾದ ಕೋಟೆಯಾಗಿದ್ದಿತು. ವಿಜಯನಗರ ಅಸ್ತಿತ್ವಕ್ಕೆ ಬರುವವರೆಗೂ ಈ ದುರ್ಗ ಶತಮಾನಗಳ ಕಾಲ ತನ್ನ ಮಹತ್ವವನ್ನು ಮೆರೆದಿತ್ತು. ವಿಜಯನಗರ ಕಾಲದಲ್ಲೂ ಇಲ್ಲಿ ಸಾಮಂತರು ನೆಲೆಸಿದ್ದು ತಿಳಿದುಬರುತ್ತದೆ. ಇಲ್ಲಿ ನಾಲ್ಕು ಶಾಸನಗಳು ಶೋಧಿತವಾಗಿವೆ. ಬೈಚಪ್ಪನ ಅರಮನೆಯ ಮುಂದಿನ ವೀರಗಲ್ಲು ಶಾಸನಗಳಿಂದ 1315ರಲ್ಲಿ ಸುಲ್ತಾನನ ಸೈನ್ಯದ ದಾಳಿಯ ಸಂದರ್ಭದಲ್ಲಿ ಕಾಮಿನಾಯಕ ಮತ್ತು ಕಾತ್ರುನಾಯಕರು ಹೋರಾಡಿ ಮೃತರಾದ ವಿಷಯ ತಿಳಿದುಬರುತ್ತದೆ. ಆನೆಗೊಂದಿಯಲ್ಲಿ ಸಿಂಗೆನಾಯಕ ಮತ್ತು ಹನುಮನಾಯಕರು ರಾಮನಾಥದೇವರಿಗೆ ಮನೆಯೊಂದನ್ನು ದಾನವಾಗಿತ್ತುದು ಮೂರನೆಯ ಅತೇದಿ ಶಾಸನದ ವಸ್ತು. ಇನ್ನೊಂದು ಅತೇದಿ ಶಾಸನ ರಾಮನ ಮಗಳು ಗೋಪಾಯಿಯನ್ನು ಹೆಸರಿಸುತ್ತದೆ.

ಕುಮಾರರಾಮ ತನ್ನ ಕೊನೆಗಾಲದಲ್ಲಿ ಕುಮ್ಮಟದುರ್ಗವನ್ನು ಆಶ್ರಯಿಸಿದನೆಂದು ಆತನನ್ನು ಕುರಿತು ರಚಿತವಾದ ಕೆಲವು ಸಾಂಗತ್ಯ ಕಾವ್ಯಗಳಿಂದ ತಿಳಿದುಬರುತ್ತದೆ. (ಎಚ್.ಎಂ.ಎನ್.ಆರ್.)

**ಕುರಂದ :** $Al_2O_3$ ರಚನೆ ಇರುವ ಮತ್ತು ಷಡ್ಭುಜಾಕೃತಿಯ ವ್ಯವಸ್ಥೆಯ ಹರಳುಗಳಾಗಿ ಸ್ಫಟಿಕೀಕರಿಸುವ ಒಂದು ಖನಿಜ (ಕೊರಂಡಂ). ಹರಳು ಸಾಧಾರಣವಾಗಿ ಪೀಪಾಯಿ ಆಕಾರದಲ್ಲಿ ಸಿಗುತ್ತದೆ. ಕೆಲವೆಡೆಗಳಲ್ಲಿ ಹರಳುರೂಪವಲ್ಲದ ತುಂಡುಗಳಂತೆಯೂ ಮುದ್ದೆಗಳಂತೆಯೂ ಸಿಗುವುದುಂಟು.

ಕುರಂದ ವಿವಿಧ ವರ್ಣಗಳಲ್ಲಿ ಸಿಗುತ್ತದೆ; ಮುಖ್ಯವಾಗಿ ಕೆಂಪು, ಕಂದು, ನೀಲಿ, ಕಪ್ಪು, ಬೂದು ಹಸಿರು ಮತ್ತು ಬಿಳಿಯ ಬಣ್ಣಗಳಲ್ಲಿ ಇರುತ್ತದೆ. ಸಾಮಾನ್ಯವಾಗಿ ಮಂಕು ಮತ್ತು ಅಪಾರದರ್ಶಕ. ಆದರೆ ಹೊಸದಾಗಿ ಒಡೆದ ಬಿರುಕಿನ ಸಮತಲದಲ್ಲಿ ವಜ್ರದ ಪ್ರಕಾಶದಂತೆ ಹೊಳಪಿರುತ್ತದೆ. ಕೆಲವು ವರ್ಣರಂಜಿತ ಕುರಂದಗಳು ಪಾರದರ್ಶಕ ಮತ್ತು ಮಿತಪಾರದರ್ಶಕ ರೂಪದಲ್ಲಿಯೂ ಸಿಗುವುದುಂಟು. ಕುರಂದ ಬಹಳ ಕಠಿಣ. ಮೋಮಾನದಲ್ಲಿ ಅದರ ಕಾಠಿಣ್ಯಾಂಕ 9. ಕಾಠಿಣ್ಯದಲ್ಲಿ ಇದು ವಜ್ರಕ್ಕೆ ಮಾತ್ರ ಎರಡನೆಯದಾಗಿದೆ. ಸಾಪೇಕ್ಷಸಾಂದ್ರತೆ 3.95 ರಿಂದ 4.1ರ ವರೆಗೆ.

ರತ್ನದ ವೈವಿಧ್ಯವಿರುವ ಕುರಂದವನ್ನು ಅದರ ವರ್ಣದ ಮೇಲೆ ಅನೇಕ ಹೆಸರಿನಿಂದ ಕರೆಯುವುದುಂಟು. ನೀಲಿಬಣ್ಣದ ಕುರಂದವನ್ನು ನೀಲಿ ಎಂಬುದಾಗಿಯೂ ಹಳದಿಬಣ್ಣದ್ದನ್ನು ಗೋಮೇಧಿಕ ಎಂದೂ ಹಸಿರುಬಣ್ಣದ್ದನ್ನು ಪಚ್ಚೆ ಎಂದೂ ಕೆಂಪು ಬಣ್ಣದ್ದನ್ನು ಕೆಂಪು ಎಂದೂ ಕರೆದು ನವರತ್ನದ ಗುಂಪಿಗೆ ಸೇರಿಸಿದ್ದಾರೆ. ವರ್ಣ ರಂಜಿತವಾದ ಕುರಂದದ ರತ್ನಗಳಿಗೆ ಬಹಳ ಬೆಲೆ.

ಕುರಂದದ ಉತ್ಪತ್ತಿ ಕ್ರಮವನ್ನು ಮೂರು ವಿಧವಾಗಿ ವಿಂಗಡಿಸಬಹುದು. 1 ಸಿಲಿಕರಹಿತವಾದ ಅಗ್ನಿ ಶಿಲೆಗಳಲ್ಲಿ ಸಂಚಯನವಾಗಿ ಸಯನೈಟ್ ನೆಫಿಲೀನ್ ಸಯನೈಟ್,

ಶಿಲೆಯಲ್ಲಿ ಕುರಂದದ ಇರುವಿಕೆ

ಪೆರಿಡೊಟೈಟ್ ಮತ್ತು ಅನಾರ್ಥೊಸೈಟ್ ಎಂಬ ಶಿಲೆಗಳಲ್ಲಿ ದೊರೆಯುತ್ತದೆ. 2 ಮೆಗ್ನೀಸಿಯಂ ಅಧಿಕವಾಗಿರುವ ಕ್ಷಾರ ಮತ್ತು ಅತಿಕ್ಷಾರ ವರ್ಗಗಳ ಅಗ್ನಿ ಶಿಲೆಗಳಿಗೂ ಪೆಗ್ಮಟೈಟ್, ಗ್ರಾನೈಟ್ ಮುಂತಾದ ಆಮ್ಲಿಕ ಶಿಲೆಗಳಿಗೂ ಸಂಪರ್ಕವಾದೆಡೆಗಳಲ್ಲಿ ಜನಿಸಿದ ಖನಿಜವಾಗಿ ದೊರೆಯುತ್ತದೆ. 3 ರೂಪಾಂತರ ಹೊಂದಿದ ಅಲ್ಯುಮಿನ ಅಧಿಕವಾಗಿರುವ ಸುಣ್ಣಶಿಲೆಗಳಲ್ಲಿಯೂ ಜನಿಸಿ ಖನಿಜವಾಗಿ ದೊರೆಯುತ್ತದೆ. ಕುರಂದ ಶಿಲೆಗಳ ನಗ್ನೀಕರಣದಿಂದ ಉತ್ಪತ್ತಿಯಾದ ಗರಸಿನಲ್ಲಿ ಸಹ ದೊರೆಯುತ್ತದೆ.

**ನಿಕ್ಷೇಪಗಳು :** ಭಾರತದಲ್ಲಿ ಕುರಂದ ಅನೇಕ ರಾಜ್ಯಗಳಲ್ಲಿ ಉಂಟು. ಆದರೆ ದೊಡ್ಡ ನಿಕ್ಷೇಪಗಳು ಮುಖ್ಯವಾಗಿ ಅಸ್ಸಾಂ ರಾಜ್ಯದ ಖಾಸಿ ಮತ್ತು ಜಯಂತಿಯಾ ಬೆಟ್ಟದ ಜಿಲ್ಲೆ, ಜಮ್ಮು ಮತ್ತು ಕಾಶ್ಮೀರ್ ರಾಜ್ಯದ ರಿಸ್ತವಾದ ಜಿಲ್ಲೆ, ಮಧ್ಯಪ್ರದೇಶದ ಸಿದಿ ಜಿಲ್ಲೆ ಮತ್ತು ರೀವಾ ಪ್ರದೇಶ, ತಮಿಳುನಾಡಿನ ಕೊಯಮತ್ತೂರು ಮತ್ತು ಸೇಲಂ ಜಿಲ್ಲೆ, ಮಹಾರಾಷ್ಟ್ರದ ಭಂಡಾರಾ ಜಿಲ್ಲೆ ಮತ್ತು ಕರ್ನಾಟಕ ರಾಜ್ಯದ ಕೋಲಾರ, ತುಮಕೂರು, ಹಾಸನ, ದಕ್ಷಿಣ ಕನ್ನಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ಇವೆ. ಆಂಧ್ರ ಪ್ರದೇಶದ ಅನಂತಪುರ ಮತ್ತು ಹೈದರಾಬಾದ್ ಜಿಲ್ಲೆಗಳು, ಬಿಹಾರ್ ರಾಜ್ಯದ ಸಿಂಗ್‍ಭೂಮ್ ಜಿಲ್ಲೆ. ಮತ್ತು ಒರಿಸ್ಸ ರಾಜ್ಯದ ಕಟಕ್ ಜಿಲ್ಲೆಗಳಲ್ಲಿ ಸಹ ಕುರಂದ ಉಂಟೆಂದು ವರದಿಯಾಗಿದೆ. ಅಸ್ಸಾಂ ಮತ್ತು ಮಧ್ಯಪ್ರದೇಶದ ಕುರಂದ ನಿಕ್ಷೇಪಗಳು ಬಹು ಮುಖ್ಯವಾದವು.

ಕರ್ನಾಟಕ ರಾಜ್ಯದಲ್ಲಿ ಕುರಂದ ನಿಕ್ಷೇಪಗಳು ಅನೇಕ ಪ್ರದೇಶಗಳಲ್ಲಿ ಹರಡಿರುವುವಾದರೂ ಅವು ಕೆಳಗೆ ವಿವರಿಸಿರುವ ನಿರ್ದಿಷ್ಟ ಪ್ರದೇಶಗಳಲ್ಲಿ ಹಂಚಿರುವಂತೆ ಕಂಡುಬರುತ್ತದೆ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಭೈಚಾಪುರದಿಂದ ಉತ್ತರಾಭಿಮುಖವಾಗಿ ಸುಮಾರು 64 ಕಿಮೀ ಉದ್ದವಾದ ಪಾವಗಡದಿಂದ ಕೊಂಚಮುಂದಕ್ಕೆ ಇರುವ ಶಿಲಾಜಾಡಿನಲ್ಲಿ ಬೂದು ಬಣ್ಣದ ಅಥವಾ ಬಿಳಿಬಣ್ಣದ ಕುರಂದ ನಿಕ್ಷೇಪಗಳಿವೆ. ಮಂಡ್ಯ ಜಿಲ್ಲೆಯ ಮಳವಳ್ಳಿಗೆ ಕೊಂಚ ದಕ್ಷಿಣದಿಂದ ಉತ್ತರಾಭಿಮುಖವಾಗಿ ಸುಮಾರು 64 ಕಿಮೀ ಉದ್ದವಿರುವ ತುಮಕೂರು ಜಿಲ್ಲೆಯ ಹುಲಿಯೂರುದುರ್ಗದಿಂದ ಆಚೆವರೆಗೂ ಹರಡಿರುವ ವಲಯದಲ್ಲಿ ಕೆಂಪು ಬಣ್ಣದ ಕುರಂದ ನಿಕ್ಷೇಪಗಳಿವೆ. ಮೈಸೂರು ಜಿಲ್ಲೆಯ ತಿರುಮಕೂಡ್ಲು ನರಸೀಪುರದ ತಾಲ್ಲೂಕಿನಲ್ಲಿರುವ ಕುಪ್ಪದಿಂದ ಮಂಡ್ಯದ ಜಿಲ್ಲೆಯ ಮಂಡ್ಯದ ವರೆಗೆ ಉತ್ತರ ದಕ್ಷಿಣವಾಗಿ 32 ಕಿಮೀ ಉದ್ದವಿರುವ ಪ್ರದೇಶಗಳಲ್ಲಿ ಕೆಂಪು ಬಣ್ಣದ ಕುರಂದ ಸಿಗುತ್ತದೆ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಸರಗೂರಿನಿಂದ ಉತ್ತರಾಭಿಮುಖವಾಗಿ ಹಾಸನ ಜಿಲ್ಲೆಯ ಅರಸೀಕೆರೆಯ ವರೆಗೆ 144 ಕಿಮೀ ಉದ್ದ 16–19 ಕಿಮೀ ಅಗಲವಿರುವ ಪ್ರದೇಶದಲ್ಲಿ ವಿರಳವಾಗಿ ಹರಡಿರುವ ಬೂದು ಮತ್ತು ಕೆಂಪು ಬಣ್ಣದ ಕುರಂದದ ನಿಕ್ಷೇಪಗಳಿವೆ. ಹಾಸನ ಜಿಲ್ಲೆಯ ಬಾಣಾವರ, ಕಲ್ಯಾಡಿ ಮತ್ತು ಬಾಗೇಶಪುರಗಳಲ್ಲಿ ಬೂದು, ಕೆಂಪು ಮತ್ತು ನೀಲಿವರ್ಣದ ಕುರಂದ ನಿಕ್ಷೇಪಗಳಿವೆ. ಕೋಲಾರ ಜಿಲ್ಲೆಯ ಬಂಗಾರುಪೇಟೆ ತಾಲ್ಲೂಕಿನ ದೊಡ್ಡೇರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನ ಅಂಗಡಿ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಕುರಂದದ ಸಣ್ಣ ನಿಕ್ಷೇಪಗಳಿವೆ.



ಕುರಂದದ ವಿವಿಧ ಬಗೆಗಳು

**ಖನಿಜ ಸಂಸ್ಕರಣ ಮತ್ತು ಉಪಯೋಗ :** ಕುರಂದವನ್ನು ಕುಟ್ಟಿ, ಪುಡಿಮಾಡಿ ಅನೇಕ ವರ್ಗದ ಜರಡಿಗಳಲ್ಲಿ ಸೋಸಿ ಗಾತ್ರಾನುಸಾರ ದಪ್ಪ ಮಧ್ಯಮವರ್ಗ, ಸಣ್ಣ ಮತ್ತು ಅತಿಸಣ್ಣ ಎಂದು ವಿಂಗಡಿಸಿ ಮಾರುತ್ತಾರೆ ಈ ರೀತಿ ಪುಡಿಮಾಡಿದ ಕುರಂದವನ್ನು ಕುರಂದದ ರತ್ನಗಳನ್ನು ಸಾಣೆಹಿಡಿಯುವುದಕ್ಕೂ ಹೊಳಪು ಕೊಡುವುದಕ್ಕೂ ಉಪಯೋಗಿಸುತ್ತಾರೆ. ಸಾಣೆಕಲ್ಲು, ಅರೆಯುವ ಚಕ್ರ, ಉಪ್ಪುಕಾಗದ ಮತ್ತು ಉಪ್ಪುಬಟ್ಟೆ ಮುಂತಾದುವುಗಳ ತಯಾರಿಕೆಯಲ್ಲಿಯೂ ಕುರಂದದ ದೂಳನ್ನು ಜೇಡಿ ಮಣ್ಣಿನೊಡನೆ ಬೆರೆಸಿ ಮೊಳೆಗಳನ್ನೂ ಉಷ್ಣನಿರೋಧಕ ಇಟ್ಟಿಗೆಗಳನ್ನೂ ತಯಾರಿಸುತ್ತಾರೆ. ಗಾಜು ಮತ್ತು ಇತರ ಪಾರದರ್ಶಕ ಉಪಕರಣಗಳನ್ನು ಸಾಣೆ ಹಿಡಿಯುವಾಗಲೂ ದೂರವನ್ನು ಕಂಡುಹಿಡಿಯಲು ಉಪಯೋಗಿಸುವ ಉಪಕರಣಗಳ ತಯಾರಿಕೆಯಲ್ಲೂ ಕುರಂದವನ್ನು ಬಳಸುತ್ತಾರೆ. ಇದರ ಕಾಠಿಣ್ಯದ ಪ್ರಭಾವದಿಂದ ರತ್ನವರ್ಗಕ್ಕೆ ಸೇರಿದ ಕುರಂದವನ್ನು ಗಡಿಯಾರ ಮತ್ತು ಇತರ ಸೂಕ್ಷ್ಮಯಂತ್ರಗಳಲ್ಲಿ ಚಕ್ರಗಳನ್ನು ತಯಾರುಮಾಡಲು ಉಪಯೋಗಿಸುತ್ತಾರೆ. ಇತ್ತೀಚೆಗೆ ಕೃತಕ ಪದಾರ್ಥಗಳ ಉಪಯೋಗ ಹೆಚ್ಚಾಗಿ ಕುರಂದವನ್ನು ಸಾಣೆಹಿಡಿಯುವ ಪದಾರ್ಥಗಳ ತಯಾರಿಕೆಯಲ್ಲಿ ಅಷ್ಟಾಗಿ ಬಳಸುತ್ತಿಲ್ಲ, ವರ್ಣರಂಜಿತವಾದ ಕುರಂದವನ್ನು ಜವಾಹಿರಿಯಲ್ಲಿ ಉಪಯೋಗಿಸುತ್ತಾರೆ.

**ಭಾರತದಲ್ಲಿ ಕುರಂದದ ಉತ್ಪತ್ತಿ :** ವರ್ಷ ವರ್ಷವೂ ಒಂದೇ ಸಮ ಇರಲಿಲ್ಲ. 1909ರಲ್ಲಿ ಕೇವಲ 40 ಟನ್ ದೊರೆತರೆ 1913ರಲ್ಲಿ 446 ಟನ್ ಸಿಕ್ಕಿತು. ಅಲ್ಲಿಂದ ಮುಂದೆ 5 ವರ್ಷಗಳ ಸರಾಸರಿ ಉತ್ಪತ್ತಿ ವರ್ಷಕ್ಕೆ 1226 ಟನ್‍ಗೆ ಏರಿತು. ಮುಂದೆ ಸುಮಾರು 30 ವರ್ಷ ಕುರಂದ ದೊರೆಯಲೇ ಇಲ್ಲ. ಇತ್ತೀಚೆಗೆ ಭಾರತದಲ್ಲಿ ಕುರಂದದ ಉತ್ಪತ್ತಿ ಮಧ್ಯ ಪ್ರದೇಶದಿಂದ ಮಾತ್ರ. 1964ರಲ್ಲಿ 3,03,000 ರೂಪಾಯಿ ಬಾಳುವ 540 ಟನ್ ಮತ್ತು 1965ರಲ್ಲಿ 2,11,000 ರೂಪಾಯಿ ಬಾಳುವ 481 ಟನ್ ಕುರಂದ ಭಾರತದಲ್ಲಿ ದೊರೆತಿತ್ತು.

(ಎಂ.ಎಸ್.ಎಸ್.; ಎಂ.ಎ.ಎಸ್.ಆರ್.)

**ಕುರಾನು :** ಇಸ್ಲಾಂ ಧರ್ಮದ ಮೂಲಾಧಾರ ಗ್ರಂಥ, ಕುರಾನು ಎಂಬುದು ಕುರ್ ಆನ್ ಎಂಬ ಪದಗಳಿಂದಾಗಿದ್ದು ಮೂಲ ಅರಬ್ಬೀ ಶಬ್ದವಾದ ಕರಾ– ಓದು ಎಂಬುದಕ್ಕೆ ಸಂಬಂಧಿಸಿದೆ. ಅರಬ್ಬಿ ಭಾಷೆಯಲ್ಲಿ ಇದಕ್ಕೆ ಅಲ್–ಫರ್ಕ್ವಾನ್ (ಪ್ರಸಿದ್ಧಗ್ರಂಥ), ಕಲಮುಲ್ಲಾ (ದೇವನ ನುಡಿ), ಕಿತಾಬ್ (ಪವಿತ್ರ ಗ್ರಂಥ), ನೂರ್ (ದಿವ್ಯಜ್ಯೋತಿ) ಮತ್ತು ಅಲ್‍ಹುದಾ (ಮಾರ್ಗದರ್ಶಕ) ಎಂಬ ಹೆಸರುಗಳಿವೆ. ಇದಕ್ಕಿರುವ ಹಲವಾರು ಹೆಸರುಗಳಲ್ಲಿ ಕೆಲವನ್ನು ಕುರಾನಿನಲ್ಲಿ ಸೂಚಿಸಿದೆ; ಮತ್ತೆ ಕೆಲವನ್ನು ಮುಸಲ್ಮಾನರು ಕೊಟ್ಟಿರುತ್ತಾರೆ. ಕುರಾನನ್ನು ಇಸ್ಲಾಂ ಧರ್ಮದ ಎಲ್ಲ ಪಂಗಡದವರೂ ಅತ್ಯಂತ ಪೂಜ್ಯಭಾವನೆಯಿಂದ ಕಾಣುತ್ತಾರೆ. ಶುಚಿ ಸ್ನಾನವಿಲ್ಲದೆ, ಕೈತೊಳೆಯದೆ ಇದನ್ನು ಓದುವಂತಿಲ್ಲ, ಮುಟ್ಟುವಂತೆಯೂ ಇಲ್ಲ, ಇದರ ವಚನಗಳನ್ನು ಬರೆದು ತಾಯಿತವಾಗಿ ಅಥವಾ ರಕ್ಷಾಬಂಧನವಾಗಿ ಉಪಯೋಗಿಸುತ್ತಾರೆ. ಇದು ಇಸ್ಲಾಂ ಧರ್ಮದ ಶಾಶ್ವತ ಪವಾಡ ಗ್ರಂಥವೆಂದೂ ಉದಾತ್ತ ಸತ್ಯವನ್ನು ವ್ಯಾಖ್ಯಾನಿಸುವ ಗ್ರಂಥವೆಂದೂ ಹಿಂದಿನ ಸಮಸ್ತ ಧರ್ಮಗಳೂ ಪರಿಗಣಿಸಿರುವ ತತ್ತ್ವಗಳಿಗಿಂತಲೂ ಉತ್ತಮ ತತ್ತ್ವಗಳನ್ನು ಸಾರುವ ಗ್ರಂಥವೆಂದೂ ಪರಮಾತ್ಮನನ್ನು ಕಾಣಲು, ಮುಕ್ತಿಯನ್ನು ಪಡೆಯಲು ಶ್ರೇಷ್ಠಮಾರ್ಗದರ್ಶಿಯೆಂದೂ ಪರಿಗಣಿತವಾಗಿದೆ.

ಇದನ್ನು ಎಲ್ಲ ಧರ್ಮಶಾಸ್ತ್ರಗಳ ಪರಿಪೂರ್ಣತೆಯೆಂದೂ ಮೂಲವಾಗಿ ಸೃಷ್ಟಿಯಾದ ಹಾಗೂ ಪೈಗಂಬರನಿಗೆ ಒಪ್ಪಿಸುವುದಕ್ಕೆ ಮುಂಚೆ ದೇವ ಲಿಪಿಕಾರರಿಂದ ಲಿಖಿತವಾದ, ಶ್ರೀಮಂತವಾದ ಮತ್ತು ಸ್ವಯಂಪೂರ್ಣವಾದ ಗ್ರಂಥವೆಂದೂ ಹೇಳಲಾಗಿದೆ. ಇಡೀ ಗ್ರಂಥ ಪೂರ್ಣವಾಗಿ ಸ್ವರ್ಗದಲ್ಲಿ ಇರಿಸಲ್ಪಟ್ಟಿದ್ದು, ತರುವಾಯ ಆವಶ್ಯಕತೆ ಉಂಟಾದಾಗಲೆಲ್ಲ ಇಪ್ಪತ್ತಮೂರುವರ್ಷಗಳ ವಿವಿಧ ಕಾಲಗಳಲ್ಲಿ, ಇದನ್ನು ಪಡೆಯುವುದಕ್ಕಾಗಿಯೇ ವಿವಿಧ ರೂಪಗಳಲ್ಲಿ, ಧರೆಗಿಳಿದ ಪ್ರಮುಖ ದೇವದೂತ ಗ್ಯಾಬ್ರಿಯಲನ ಮೂಲಕ, ಪರಮಾತ್ಮನಿಂದ ದೊರಕಿತೆಂದು ಮುಸಲ್ಮಾನರು ತಿಳಿಯುತ್ತಾರೆ. ಈ ಪುಣ್ಯಗ್ರಂಥದ ಕೆಲವು ಅಧ್ಯಾಯಗಳು ಪೂರ್ತಿಯಾಗಿ ಸಾಕ್ಷಾತ್ಕಾರವಾದವು, ಉಳಿದವು ಭಾಗಗಳಲ್ಲಿ ದೊರೆತವು.

ಕುರಾನು ಮೂವತ್ತು ಭಾಗಗಳಾಗಿ ವಿಂಗಡಣೆಯಾಗಿದ್ದು 144 ಸುರಾ (ಅಧ್ಯಾಯ) ಗಳನ್ನೊಳಗೊಂಡಿದೆ. ಕೆಲವು ಅಧ್ಯಾಯಗಳು ದೀರ್ಘವಾಗಿಯೂ ಉಳಿದವು ಸಂಕ್ಷಿಪ್ತವಾಗಿಯೂ ಇವೆ. ಪ್ರತಿಯೊಂದು ಭಾಗವೂ ನಾಲ್ಕು ಉಪವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಪೈಗಂಬರನ ನಿರ್ದೇಶನದಲ್ಲಿ ಅಧ್ಯಾಯಗಳು ಜೋಡಣೆಯಾದುವು, ಸಾಕ್ಷಾತ್ಕಾರವಾದ ವಚನಗಳನ್ನು ನಿರ್ದಿಷ್ಟ ಅಧ್ಯಾಯಗಳಲ್ಲಿಯೇ ಸೇರಿಸುವಂತೆ ಆತ ಲಿಪಿಕಾರರಿಗೆ ಸೂಚನೆ ಕೊಡುತ್ತಿದ್ದ. ಹೀಗೆ, ಕುರಾನಿನ ವಿಷಯ ಕಾಲಾನುಕ್ರಮವಿಲ್ಲದೆ ಜೋಡಣೆಯಾಗಿರುವುದು ಪೈಗಂಬರನ ಆದೇಶದಂತೆಯೇ ಹೊರತು ನೋಟತಪ್ಪಿ ಅಲ್ಲ. ಕುರಾನಿನ ವಿಷಯಸಂಗ್ರಹಣ ಕಾರ್ಯವನ್ನು ಅಬುಬಕರನ ಅಪ್ಪಣೆಯಂತೆ ಕೈಗೊಳ್ಳಲಾಯಿತು. ಈ ಉದ್ದೇಶಕ್ಕಾಗಿಯೇ ಗ್ರಂಥದ ಒಂದು ಪ್ರತಿಯನ್ನು ಪೈಗಂಬರನ ವಿಧವೆ ಹಾಪ್ಸಾಳ ವಶಕ್ಕೆ ಕೊಡಲಾಗಿತ್ತು. ಕುರಾನಿನ ಪ್ರಥಮ ಸಂಗ್ರಹಕಾರನಾಗಿದ್ದ ಸಾಬಿತ್ ಎಂಬಾತನ ಮಗ ಜೈಯದ್, ಜಿಬೇರ್ ಎಂಬಾತನ ಮಗ ಅಬ್ದುಲ್ಲಾ, ಆಸ್ ಎಂಬಾತನ ಮಗ ಸೈಯದ್ ಮತ್ತು ಹ್ಯಾರಿಸ್ ಎಂಬಾತನ ಮಗ ಅಬ್ದುಲ್ ರಹಮಾನ್–ಈ ತಜ್ಞರ ಮೇಲ್ವಿಚಾರಣೆಯಲ್ಲಿ ಮೂರನೆಯ ಕಲೀಫ್ ಉಸ್ಮಾನನ ಅನುಜ್ಞೆಯಂತೆ ಕುರಾನಿನ ಪರಿಷ್ಕರಣ ಪ್ರಾರಂಭವಾಯಿತು. ಮೂಲ ಪ್ರತಿಯೊಡನೆ ಸಂಗ್ರಹಿಸಿದ ತುಣುಕುಗಳನ್ನು ಹೋಲಿಸಿ ಇಡೀ ಗ್ರಂಥವನ್ನು ಅಧ್ಯಾಯಗಳಾಗಿ ವಿಂಗಡಿಸಲಾಯಿತು.

ಪರಿಷ್ಕೃತ ಗ್ರಂಥವನ್ನು ಕಲೀಫನಿಗೆ ಒಪ್ಪಿಸಲಾಯಿತು. ಕಲೀಫ ಗ್ರಂಥದ ಅನೇಕ ಪ್ರತಿಗಳನ್ನು ಮಾಡಿಸಿ ಅವನ್ನು ಇಸ್ಲಾಂ ಧರ್ಮದ ವಿವಿಧ ಕೇಂದ್ರಗಳಿಗೆ ಕಳುಹಿಸಿದ. ಆ ಪ್ರತಿಗಳು ಈ ಪವಿತ್ರ ಗ್ರಂಥದ ತರುವಾಯದ ಪ್ರತಿಗಳಿಗೆ ಆಧಾರವಾದವು. ಹಳೆಯ ಗ್ರಂಥದ ಅವಶಿಷ್ಟಗಳನ್ನು ವಶಪಡಿಸಿಕೊಂಡು ಸುಡಲಾಯಿತು. ಮಸೂದ್ ಎಂಬಾತನ ಮಗ ಅಬ್ದುಲ್ಲಾ, ಸಲೀಂ, ಅಲಿ, ನಾಲ್ಕನೆಯ ಕಲೀಫ್ ಜಬಾಲ್ ಎಂಬಾತನ ಮಗ ಮೌಜ್, ಕಾಬ್ ಎಂಬಾತನ ಮಗ ಉಬಯಜ್, ಉಮರ್ ಎಂಬಾತನ ಮಗ ಅಬ್ದಲ್ಲಾ ಇವರೇ ಮೊದಲಾದ ಪೈಗಂಬರನ ಒಡನಾಡಿಗಳು ಕುರಾನನ್ನು ಪೂರ್ತಿಯಾಗಿ ನೆನಪಿಟ್ಟುಕೊಂಡಿದ್ದುದರಿಂದಲೂ ಮತ್ತೆ ಹಲವರು ಅದರ ಭಾಗಗಳನ್ನು ಕಂಠಪಾಠಮಾಡಿದ್ದರಿಂದಲೂ ತಪ್ಪಿಲ್ಲದಂತೆ ವಿಷಯಗಳನ್ನು ಪಡೆದುಕೊಳ್ಳಲು ಮತ್ತು ಸಂಗ್ರಹಿಸಿದ ವಿಷಯಗಳನ್ನು ಅಗತ್ಯವಿದ್ದಂತೆ ಜೋಡಿಸಲು ತೊಂದರೆಯಾಗಲಿಲ್ಲ. ಪೈಗಂಬರ್ ಸುರಾಗಳಲ್ಲಿನ ವಚನಗಳನ್ನು ಬರೆಯುವಂತೆ ಮತ್ತು ಕಂಠಪಾಠ ಮಾಡುವಂತೆ ತನ್ನ ಒಡನಾಡಿಗಳಿಗೆ ಉತ್ತೇಜನವಿತ್ತ. ಈ ಗ್ರಂಥದ ಬಗ್ಗೆ ಮುಸಲ್ಮಾನರಿಗೆ ಆಸಕ್ತಿ ಅಪಾರವಾದ್ದರಿಂದ, ಅದು ಕಳೆದ ಸಾವಿರದ ನಾನೂರು ವರ್ಷಗಳಿಂದಲೂ ಯಾವ ಬದಲಾವಣೆಯೂ ಇಲ್ಲದೆ ತನ್ನ ಪವಿತ್ರತೆಯನ್ನು ಉಳಿಸಿಕೊಂಡು ಬಂದಿದೆ. ಕುರಾನು ಮಕ್ಕಾ ಭಾಷೆಯಾದ ಕೊರೈಷ್ ದೇಸಿನುಡಿಯಲ್ಲಿ ಸಾಕ್ಷಾತ್ಕಾರವಾಯಿತು. ಅದೇ ಪ್ರಾಂತ್ಯ ಭಾಷೆಯಲ್ಲಿ ಜನ ಅದನ್ನು ಓದುವಂತೆ ಮಾಡುವುದೇ ಉಸ್ಮಾನನ ಉದ್ದೇಶವಾಗಿತ್ತು. ಕುರಾನಿನ ಅಧ್ಯಾಯಗಳಿಗೆ ಕೊಟ್ಟಿರುವ ಶಿರೋನಾಮೆಗಳು ಮುಖ್ಯ ಹೆಸರುಗಳಿಗೆ, ದೃಷ್ಟಾಂತ ಕಥೆಗಳಿಗೆ ಅಥವಾ ಅಧ್ಯಾಯಗಳ ಪ್ರಾರಂಭದಲ್ಲಿ ಸೂಚಿಸಿರುವ ವರ್ಣಮಾಲೆಯ ಅಕ್ಷರ ಅಥವಾ ಅಕ್ಷರಗಳಿಗೆ ಸಂಬಂಧಪಟ್ಟಂತಿವೆ. ಉದಾಹರಣೆಗೆ ಅಲ್–ಫತೆ–ಹ ಅಥವಾ ಪ್ರಾರಂಭಿಕ ಅಧ್ಯಾಯ ಎಂದು ಒಂದನೆಯ ಅಧ್ಯಾಯವನ್ನು ಹೆಸರಿಸಿದೆ. ಅದರ ಪ್ರಾರಂಭದ ಪದಗಳು ಅಲ್ ಅಹಮದ್ ಇತ್ಯಾದಿಯಾಗಿರುವುದರಿಂದ ಅದನ್ನು 'ಅಲ್ ಅಹಮದ್' ಎಂದು ಸಹ ಕರೆಯಲಾಗಿದೆ.

ಕುರಾನ್ ಪರಮಾತ್ಮನ ಅಮರವಾಣಿ. ಅಪ್ರತಿಮ ಭಾಷಾ ಸೌಂದರ್ಯದಿಂದ ಈ ಅಮರವಾಣಿ ಹೊರಟಿದೆ. ಈ ಗ್ರಂಥದಲ್ಲಿ ಮೂರ್ತವಾಗಿರುವ ತತ್ತ್ವಗಳು ಸತ್ಯದ ಘೋಷಣೆ ಎಂದು ಪ್ರತಿಯೊಬ್ಬ ಮುಸಲ್ಮಾನನೂ ನಂಬುತ್ತಾನೆ. ಮುಸ್ಲಿಮೇತರರು ಹಾಗೂ ಯುರೋಪಿನ ವಿಮರ್ಶಕರು ಇದರ ಸಾಹಿತ್ಯ ಪ್ರತಿಭೆಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಶ್ರೋತೃಗಳಿಗೆ ಕುರಾನಿನ ವಚನಗಳು ಎಷ್ಟು ಆಕರ್ಷಣೀಯವಾಗಿದ್ದುವೆಂದರೆ, ಪೈಗಂಬರನ ವಿರೋಧಿಗಳನೇಕರು ಅವು ಮಾಟದ ಇಲ್ಲವೆ ಮಾಯೆಯ ಜಾಲವೆಂದು ತಿಳಿದರು ಎಂದು ಕುರಾನನ್ನು ಅನುವಾದ ಮಾಡಿ ಪ್ರಸಿದ್ಧರಾದ ಮ್ಯಿಸೇಲ್ ಅವರು ಹೇಳುತ್ತಾರೆ. ಮೆಕ್ಕನಗರದಲ್ಲಿ ಪಂಡಿತರೆಂದೂ ಕೊರೈಷ್ ಪಂಗಡದ ಮುಖಂಡರೆಂದೂ ಗಣ್ಯಸ್ಥಾನ ಪಡೆದಿದ್ದ ಪೈಗಂಬರನ ಉಗ್ರ ವಿರೋಧಿಗಳು ಸಹ ಹೀಗೆ ಟೀಕಿಸಿರುವುದನ್ನು ಕುರಾನು ಸ್ವತಃ ವ್ಯಕ್ತಿಪಡಿಸುತ್ತದೆ. ಈ ವಿರೋಧಿಗಳಲ್ಲಿ ಮುಘೀರನ ಮಗ ವಾಲೀದ್ ಒಬ್ಬ. ಈತ ಖ್ಯಾತಿವೆತ್ತ ಸೇನಾಧಿಪತಿ ಖಲೀದನ ತಂದೆ. ಕುರಾನಿನ ಕೆಲವು ವಚನಗಳನ್ನು ಕೇಳಿದ ವಾಲೀದ್ ಮಾಡಿದ ಕೆಲವು ಟೀಕೆಗಳನ್ನು ಕುರಾನಿನ ಈ ಕೆಳಕಂಡ ಸುರಾದಲ್ಲಿ ಸೊಗಸಾಗಿ ವರ್ಣಿಸಲಾಗಿದೆ.

'ಆತ (ವಾಲೀದ್) ಅವನಿಗಾಗಿ ಓದಿದ ವಚನಗಳನ್ನು ತೂಗಿಸಿ ನೋಡಿದವನಂತೆ ಅಲ್ಲಗಳೆದು ಟೀಕಿಸಿದ. ಆ ವಚನಗಳನ್ನು ಎಷ್ಟೇ ಕೀಳಾಗಿ ಟೀಕಿಸಿದರೂ ಅವನು ಸಾವಿಗೆ ಪಾತ್ರ. ಅಷ್ಟೇ ಅಲ್ಲ, ಅವನು ಎಷ್ಟೇ ತಪ್ಪಾಗಿ ಅವುಗಳನ್ನು ಪರಿಗಣಿಸಿದರೂ ಅವನಿಗೆ ಸಾವೇ ಸರಿ. ಅವನು ಸುತ್ತಲೂ ನೋಡಿ, ತರುವಾಯ ಹುಬ್ಬುಗಂಟಿಕ್ಕಿ (ಮತ್ತು ವಿಷಣ್ಣವದನನಾಗಿ) ಹಿಂತಿರುಗಿ, ಗರ್ವದಿಂದ ಉಬ್ಬಿ ಹೇಳಿದ: ಇದು ಮಾಯಾಜಾಲವಲ್ಲದೆ ಮತ್ತೇನು?'

ಎರಡನೆಯ ಕಲೀಫ್ ಉಮರ್, ಇಸ್ಲಾಂ ಧರ್ಮವನ್ನು ಸ್ವೀಕರಿಸುವುದಕ್ಕೆ ಮುಂಚೆ ಪೈಗಂಬರನ ವಿರೋಧಿಯಾಗಿದ್ದು, ಒಮ್ಮೆ ಪೈಗಂಬರನನ್ನು ಕೊಲೆಮಾಡಲು ತನ್ನ ನೆಲೆಯಿಂದ ಹೊರಟ. ಹಾದಿಯಲ್ಲಿ ಅವನಿಗೆ ಇಸ್ಲಾಂ ಧರ್ಮವನ್ನು ಆಗಲೇ ಅವಲಂಬಿಸಿದ್ದ ತನ್ನ ತಂಗಿಯನ್ನು ಸಂಧಿಸುವ ಸಂದರ್ಭವೊದಗಿ, ಆಕೆ ಕುರಾನಿನ ಕೆಲವು ವಚನಗಳನ್ನು ಓದುತ್ತಿದ್ದುದನ್ನು ಕಂಡ. ಆ ವಚನಗಳನ್ನು ತಾನು ಸಹ ಓದಿ ಕೂಡಲೆ ಮುಸಲ್ಮಾನನಾಗುವಷ್ಟರ ಮಟ್ಟಿಗೆ ಅವುಗಳಿಂದ ಪ್ರಭಾವಿತನಾದ. ಅದೇ ವಚನಗಳ ಅನುವಾದವನ್ನು ಇಲ್ಲಿ ಕೊಟ್ಟಿದೆ:

ಎಲೆ ಮಾನವ, ನೀನು ದುಃಖಿಸುತ್ತಲೇ ಇರಬೇಕೆಂಬ ಉದ್ದೇಶದಿಂದ ಕುರಾನನ್ನು ನಾವು ನಿನಗೆ ಸಾಕ್ಷಾತ್ಕಾರ ಮಾಡಿಕೊಟ್ಟಿಲ್ಲ. ಅದು ಭಗವಂತನಿಗೆ ಹೆದರಿ ನಡೆಯಬೇಕೆಂಬುದಕ್ಕೆ ಜ್ಞಾಪನ; ಭೂಮ್ಯಾಕಾಶಗಳನ್ನು ಸೃಷ್ಟಿಸಿದ ಮಹಾನುಭಾವನಿಂದ ಸಾಕ್ಷಾತ್ಕಾರವಾದ ಅಮರವಾಣಿ. ಅವನೇ ರಹಮಾನ್, ಅಂದರೆ ದಯಾಸಾಗರ. ಅವನೇ ಧರ್ಮಪೀಠವನ್ನಲಂಕರಿಸಿರುವಾತ. ಅವನೇ ಭೂಮ್ಯಾಕಾಶಗಳಲ್ಲಿನ, ಭೂತಳದಲ್ಲಿನ ಸಮಸ್ತವನ್ನೂ ವ್ಯಾಪಿಸಿರುವಾತ. ನಿನ್ನ ಮಾತು ಉಚ್ಚಧ್ವನಿಯಿಂದ ಕೂಡಿದ್ದರೆ ನಿನ್ನ ಹೃದಯಾಂತರಾಳದಲ್ಲಿರುವುದನ್ನು ಗ್ರಹಿಸುವ ಶಕ್ತಿ ಅವನದು. ಅಂಥ ಸರ್ವಶಕ್ತನೇ ಅಲ್ಲಾ. ಅವನಿಗಿಂತ ಬೇರೊಬ್ಬ ದೇವನಿಲ್ಲ. ಅವನದೇ ಸರ್ವೋತ್ಕೃಷ್ಟ ನಾಮಾವಳಿ.

ಇಂಥ ಶೈಲಿ ಕುರಾನಿನದು. ಇದು ಸುಂದರ, ಸ್ಪಷ್ಟ, ಸಂಕ್ಷಿಪ್ತ ಹಾಗೂ ಮನವೊಲಿಸುವ ಶೈಲಿ. ವಿಷಯವನ್ನು ಸುಲಭವಾಗಿ ತಿಳಿಸುವ ಸಾಮರ್ಥ್ಯ ಈ ಶೈಲಿಯಲ್ಲಿದೆ. ಕೆಲವು ಸಂದರ್ಭಗಳಲ್ಲಿದು ಓದುವುದಕ್ಕಿಂತ ಕೇಳುವುದಕ್ಕಾಗಿಯೇ ಸೃಷ್ಟಿಯಾದ ಶೈಲಿಯಾಗಿದೆ. ಪರಮಾತ್ಮನ ಪವಿತ್ರ ಗುಣಗಳನ್ನು ವರ್ಣಿಸುವ ಮತ್ತು ಯೋಧರಿಗೆ, ಸತ್ಯಶೋಧಕರಿಗೆ, ಎದೆಗುಂದಿದವರಿಗೆ ಮಾರ್ಗದರ್ಶನ ನೀಡುವ ಸಂದರ್ಭಗಳಲ್ಲಿ ಶೈಲಿ ಭವ್ಯವಾಗಿದೆ. ಕುರಾನು ಪದ್ಯರೂಪದಲ್ಲಾಗಲಿ, ಸರಳ ಗದ್ಯದಲ್ಲಾಗಲಿ ರಚಿತವಾಗಿಲ್ಲ. ಪದಗಳು ಯುಕ್ತವಾಗಿ ಆಯ್ಕೆಯಾಗಿ ಸುಂದರವಾಗಿ ಜೋಡಿಸಲ್ಪಟ್ಟಿದ್ದು ವಾಕ್ಯಗಳು ಲಯಬದ್ಧವಾಗಿವೆ. ಪ್ರತಿಯೊಂದು ಅಧ್ಯಾಯವೂ ಲಯಬದ್ಧ ಪದಗಳೊಂದಿಗೆ ಮುಕ್ತಾಯವಾಗುತ್ತದೆ.

ರಚನಾ ಸೌಂದರ್ಯವಷ್ಟೇ ಅಲ್ಲದೆ ಕುರಾನಿನಲ್ಲಿ ಸೃಷ್ಟಿಯ ಐಕ್ಯ ಹಾಗೂ ಪರಮಾತ್ಮನ ಏಕಸ್ವರೂಪದ ವಿಷಯದಲ್ಲಿ ಮೂಲ ಕಲ್ಪನೆಗಳಿವೆ. ವಿಧರ್ಮಿಗಳಾದ ಅರಬರು ಅನೇಕ ವಿಗ್ರಹಗಳನ್ನು ಪೂಜಿಸುತ್ತಿದ್ದರೂ ಒಬ್ಬ ಹಿರಿಯ ದೇವನಿದ್ದಾನೆಂದು ನಂಬಿ, ಅವನನ್ನು ಅಲ್ಲಾ ಎಂದು ಕರೆಯುತ್ತಿದ್ದರು ; ಭೂಮ್ಯಾಕಾಶಗಳನ್ನು ಸೃಷ್ಟಿಸಿದವ, ಸ್ವಯಂ ಅಸ್ತಿತ್ವ ಹೊಂದಿ ದೇವತೆಗಳನ್ನೂ ಮಾನವರನ್ನೂ ಜಗತ್ತಿನ ಎಲ್ಲ ಜೀವರಾಶಿಗಳನ್ನೂ ಸೃಷ್ಟಿಸಿದವ ಅಲ್ಲಾ ಎಂದು ಅವರು ಭಾವಿಸಿದ್ದರು. ಕುರಾನು ಹೀಗೆ ತಿಳಿಸುತ್ತದೆ:

ಭೂಮ್ಯಾಕಾಶಗಳನ್ನು ಸೃಷ್ಟಿಸಿದವ ಯಾವನೆಂದು ಅವರನ್ನು ಕೇಳಿರಿ, ಅವರು ಉತ್ತರಿಸುತ್ತಾರೆ ಅವನ್ನು ಸೃಷ್ಟಿಸಿದವ ಅಲ್ಲಾ ಎಂದು. ಅದರೂ ಪರಮಶ್ರೇಷ್ಠನಾದ ಅಲ್ಲಾನ ಜೊತೆಗೆ ಕಿರುದೇವತೆಗಳಲ್ಲಿಯೂ ಅವರು ನಂಬಿಕೆಯಿಟ್ಟಿದ್ದರು. ಅಲ್ಲಾನ ಹೊರತು ಬೇರೊಬ್ಬ ದೇವರಿಲ್ಲ ಎಂದು ಘೋಷಿಸಿದಾಗ ಅದನ್ನು ಕೇಳಿ ಅವರು ವಿಸ್ಮಿತರಾದರು. ಕುರಾನಿನ ಪ್ರಕಾರ ಅವರು ನುಡಿದ ಮಾತುಗಳಿವು: 'ಏನು? ಮಹಮ್ಮದನು ಅನೇಕ ದೇವತೆಗಳನ್ನು ಒಬ್ಬನೇ ದೇವರನ್ನಾಗಿ ಮಾಡುತ್ತಾನೆಯೇ? ಆಶ್ಚರ್ಯ, ಆಶ್ಚರ್ಯ!'

ಕುರಾನಿನ ಅಧ್ಯಾಯಗಳನ್ನು ಮೆಕ್ಕ ಅಧ್ಯಾಯಗಳು, ಮದಿನ ಅಧ್ಯಾಯಗಳು ಎಂದು ವಿಂಗಡಿಸಿದೆ. ಮೆಕ್ಕ ಅಧ್ಯಾಯಗಳು ಉತ್ಸಾಹ ಕೆರಳಿಸುವ ಕಾವ್ಯಶೈಲಿಯಲ್ಲಿವೆ. ತೇಜೋಮಯವಾದ ವಾಕ್ಯಗಳಿಂದ ಕೂಡಿವೆ. ವಿಗ್ರಹಾರಾಧನೆಯನ್ನು ಖಂಡಿಸಿ, ನಂಬಿದವರಿಗೆ ಸ್ವರ್ಗವೂ ದುರುಳರಿಗೆ ಘೋರ ನರಕವೂ ಕಾದಿದೆಯೆಂದು ತಿಳಿಸಿ, ಪರಮಾತ್ಮನ ಏಕಸ್ವರೂಪವನ್ನೂ ಪವಿತ್ರ ಗುಣಗಳನ್ನೂ ವಿವರಿಸಿ, ಪ್ರವಾದಿಗಳಲ್ಲಿ ಕೆಲವರ ಬಗ್ಗೆ ಉಲ್ಲೇಖಿಸಿ ಅವರ ಕಾಲದಲ್ಲಿ ನಡೆದ ಘಟನೆಗಳನ್ನೂ ದೇವರು ನಡೆಸುವ ಕೊನೆಯ ವಿಚಾರಣೆಯ ದಿನವನ್ನೂ ವರ್ಣಿಸುತ್ತವೆ. ಈ ಅಧ್ಯಾಯಗಳು ಪ್ರಕೃತಿಯಲ್ಲಿನ ವಸ್ತುಗಳ ಮೆಚ್ಚಿಗೆಯೊಂದಿಗೆ ವಾಗ್ವೈಖರಿಯಲ್ಲಿ ಶ್ರೀಮಂತವಾಗಿವೆ. ಅವುಗಳಲ್ಲಿ ಅನೇಕವು

ಒಂದು ಅಥವಾ ಹೆಚ್ಚಿನ ಶಪಥಗಳಿಂದ ಪ್ರಾರಂಭವಾಗಿ ಅರಬರಿಗೆ ಮನ ಮುಟ್ಟುವ ಮಾದರಿಯಲ್ಲಿವೆ.

'ಸೂರ್ಯ ಮತ್ತು ಅವನ ತೇಜಸ್ಸಿನಿಂದ, ಅವನನ್ನು ಹಿಂಬಾಲಿಸುವ ಮಧ್ಯಾಹ್ನದಿಂದ ಅವನನ್ನು ಕಾಣಿಸುವ ಹಗಲಿನಿಂದ, ಅವನನ್ನು ವ್ಯಾಪಿಸಿಕೊಳ್ಳುವ ನಿಶೆಯಿಂದ, ಅವನು ಸೃಷ್ಟಿಸಿದ ಆಕಾಶದಿಂದ ಅವನು ವಿಸ್ತರಿಸಿದ ಭೂಮಿಯಿಂದ ಯಾವುದು ಸತ್ಯ, ಯಾವುದು ಅಸತ್ಯವೆಂಬ ಅರಿವನ್ನು ತುಂಬಿ ಅವನು ಸೃಷ್ಟಿಸಿ ಪರಿಪೂರ್ಣಗೊಳಿಸಿರುವ ಆತ್ಮನಿಂದ ಪರಮಾತ್ಮ ಸಾಕ್ಷಾತ್ಕಾರವಾಗುತ್ತಾನೆ.'

ಮದಿನ ಅಧ್ಯಾಯಗಳು ಅದೇ ವಿಷಯಗಳನ್ನು ತಿಳಿಸುವುದಾದರೂ ಅವನ್ನು ಸಾಮಾನ್ಯವಾಗಿ ಹೆಚ್ಚು ವಿವರವಾಗಿ ವರ್ಣಿಸುತ್ತವೆ. ಅಧ್ಯಾಯಗಳು ದೀರ್ಘವಾಗಿದ್ದು ವಿಷಯ ಗದ್ಯರೂಪದಲ್ಲಿದೆ. ಈ ಅಧ್ಯಾಯಗಳಲ್ಲಿರುವ ಹೆಚ್ಚಿಗೆ ವಿಷಯಗಳಿವು : 1. ವ್ಯಾವಹಾರಿಕ ಹಾಗೂ ಅಪರಾಧ ಸಂಬಂಧಿ ಕಾಯಿದೆಗಳು, 2. ಪ್ರಾರ್ಥನೆ, ಉಪವಾಸ, ಧ್ಯಾನ, ತೀರ್ಥಯಾತ್ರೆ ಮೊದಲಾದ ಸಂಸ್ಕಾರ ಪದ್ಧತಿಗಳ ಬಗ್ಗೆ ಸೂಚನೆಗಳು, 3. ಸಮಾಜ ಸುಧಾರಣೆ, 4. ನೈತಿಕ ನಿಯಮಗಳು, 5. ಕೊರೈಷ್ ಮತ್ತು ಯಹೂದಿ ಜನರ ವಿರುದ್ಧ ನಡೆಸಿದ ಮುಖ್ಯ ಯುದ್ಧಗಳ ಸಂಕ್ಷಿಪ್ತ ವಿವರಣೆ, 6. ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಅದಕ್ಕೆ ವಿರುದ್ಧವಾಗಿ ಕೆಲಸ ಮಾಡಿದ ಕಪಟಿಗಳ ಬಗ್ಗೆ ಟೀಕೆ ಮತ್ತು ಖಂಡನೆ, 7. ಇಸ್ಲಾಂ ಧರ್ಮವನ್ನು ರಕ್ಷಿಸಲು ಪ್ರಬೋಧನೆ ಮತ್ತು 8. ಇಸ್ಲಾಂ ಧರ್ಮದ ಮೂಲತತ್ತ್ವಗಳನ್ನು ವಿಶದಗೊಳಿಸುವ ಪೂರ್ವ ಘಟನೆಗಳು. ಅಲ್ಲಲ್ಲಿ ಕೆಲವು ವಾಕ್ಯಗಳನ್ನು ಬಿಟ್ಟರೆ ಉಳಿದ ಭಾಗವೆಲ್ಲ ಛಂದಸ್ಸಿನ ನಿಯಮಕ್ಕೊಳಗಾಗದಿದ್ದರೂ ಕುರಾನಿನ ಶ್ಲೋಕಗಳು ಇತರ ಪವಿತ್ರ ಶ್ಲೋಕಗಳಂತೆ ಕಾವ್ಯಶೈಲಿಯಲ್ಲಿವೆ **(ನೋಡಿ– ಇಸ್ಲಾಂ)**. (ಎಸ್.ಜಿ.ಎಂ.)

**ಕುರಿ :** ಟೊಳ್ಳು ಕೊಂಬಿನ ಮೆಲುಕು ಹಾಕುವ ಸಸ್ಯಾಹಾರಿ. ಬೋವಿಡೀ ಕುಟುಂಬದ ಕ್ಯಾಪ್ರಿನೀ ಎಂಬ ಉಪಕುಟುಂಬಕ್ಕೆ ಸೇರಿದ ಸ್ತನಿ. ಕುರಿಗಳು ಆಡುಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಸಾಮಾನ್ಯವಾಗಿ, ಗಂಡುಹೆಣ್ಣುಗಳೆರಡಕ್ಕೂ ಕೊಂಬಿರಬಹುದಾದರೂ ಹೆಣ್ಣಿನ ಕೊಂಬು ಚಿಕ್ಕದು. ಕೆಲವು ಪ್ರಭೇದಗಳಲ್ಲಿ ಹೆಣ್ಣಿಗೆ ಕೊಂಬೇ ಇರುವುದಿಲ್ಲ. ಕೊಂಬು ಹೊರಮುಖವಾಗಿ ಸುರುಳಿ ಸುತ್ತಿಕೊಂಡಿರುತ್ತದೆ. ಗಂಡು ಕುರಿಗಳ ಗಲ್ಲದ ತಳದಲ್ಲಿ ಗಡ್ಡಗಳಿಲ್ಲ; ಆಡುಗಳಲ್ಲಿ ಕಂಡು ಬರುವ ಕಟುವಾಸನೆ ಇವುಗಳ ದೇಹದಲ್ಲಿ ಇರುವುದಿಲ್ಲ. ಬಾಲ ಮೊಟಕು. ಆಡಿನಂತೆ ಕುರಿಗೂ ಮೇಲ್ದವಡೆಯಲ್ಲಿ ಕಿರಿದಾದ ದವಡೆ ಹಲ್ಲುಗಳಿವೆ. ದನ ಅಥವಾ ಎಮ್ಮೆಗಳಲ್ಲಿ ಅವು ಅಗಲವಾಗಿವೆ. ಕಾಲಿನ ಮಧ್ಯದ ಎರಡು ಬೆರಳುಗಳ ನಡುವೆ ಇರುವ ಗ್ರಂಥಿಯೊಂದರಿಂದ ಕಟುವಾಸನೆಯ ದ್ರವ ಒಸರುತ್ತಿರುತ್ತದೆ. ಆ ದ್ರವದ ವಾಸನೆ ಅದು ಹೋದೆಡೆಯಲ್ಲೆಲ್ಲ ಹರಡುವುದರಿಂದ ಕುರಿಗಳು ತಮ್ಮ ಮಂದೆ ಹೋಗಿರುವ ಮಾರ್ಗವನ್ನು ಗುರುತಿಸಬಲ್ಲುವು, ಅದಕ್ಕೆ ಅನುಕೂಲಿಸುವಂತೆ ಅವುಗಳ ಘ್ರಾಣೇಂದ್ರಿಯ ತುಂಬ ಪಟುವಾಗಿದೆ.

ಆದಿಮಾನವನ ಕಾಲದಿಂದಲೂ ಕುರಿಗಳು ಮಧ್ಯ ಏಷ್ಯದಿಂದ ಐರ್ಲೆಂಡಿನವರೆಗೂ ಹರಡಿಕೊಂಡು ಜೀವಿಸುತ್ತಿದ್ದುವೆಂಬ ಅಂಶ ಅವುಗಳ ಪಳೆಯುಳಿಕೆಗಳಿಂದ ಸ್ಪಷ್ಟಪಟ್ಟಿದೆ. ನಿಯೋಲಿತಿಕ್ ಯುಗದ ವೇಳೆಗೆ ಮಾನವ ಕುರಿಗಳನ್ನು ಪಳಗಿಸಿ ಸಾಕಲಾರಂಭಿಸಿದ್ದ. ಪ್ರಾಚೀನ ಕಾಲದಿಂದಲೂ ದೇವತೆಗಳಿಗೆ ಈ ಪ್ರಾಣಿಯನ್ನು ಬಲಿಕೊಡುವುದು ಆಚರಣೆಯಲ್ಲಿದೆ.

ಕುರಿಗಳನ್ನು ಮೊದಲು ಏಷ್ಯ ಖಂಡದಲ್ಲಿ ಪಳಗಿಸಲಾಯಿತೆಂದು ಹೇಳುವರು. ಆದಿಕಾಲದ ಕುರಿಗಳು ಅಫ್ಘಾನಿಸ್ತಾದ ಬಲೂಚಿಸ್ತಾನಗಳಲ್ಲಿ ಈ ದಿನ ಕಂಡುಬರುವ ಓವಿಸ್ ವಿಗ್ನೇ ಎಂಬ ಪ್ರಭೇದಕ್ಕೆ ಅತ್ಯಂತ ಹೆಚ್ಚಿನ ಹೋಲಿಕೆಯನ್ನು ವ್ಯಕ್ತಪಡಿಸುವಂತಿದ್ದುವು. ತಾಮ್ರಯುಗದ ಹೊತ್ತಿಗೆ ಯುರೋಪಿನಲ್ಲಿ ಕುರಿಗಳ ನೂತನ ಪೀಳಿಗೆಯೊಂದು ಅಸ್ತಿತ್ವಕ್ಕೆ ಬಂದಿತು. ಈ ದಿನ ಮಾನವ ಪಳಗಿಸಿರುವ ವಿವಿಧ ಪೀಳಿಗೆಯ ಕುರಿಗಳೆಲ್ಲ ತಾಮ್ರಯುಗದಲ್ಲಿ ಕಾರ್ಸಿಕ, ಸಾರ್ಡೀನಿಯ ಮುಂತಾದೆಡೆ ಜೀವಿಸಿದ್ದ ಮೌಫ್ಲಾನ್ ಎಂಬ ಕಾಡುಕುರಿಯ (ಓವಿಸ್ ಮ್ಯೂಸಿಮನ್) ಪ್ರಭೇದದಿಂದ ವಿಕಾಸವಾದವೆಂದು ಊಹಿಸಿಲಾಗಿದೆ.

**ಕಾಡುಕುರಿ:** ಇಂದಿಗೂ ಅನೇಕ ಪ್ರದೇಶಗಳಲ್ಲಿ ಕುರಿಗಳು ಕಾಡಿನಲ್ಲಿ ಕಾಡುಪ್ರಾಣಿಗಳಾಗಿ ಜೀವಿಸುತ್ತಿವೆ. ಮಧ್ಯ ಏಷ್ಯದಲ್ಲಿ ಅವು ಹೆಚ್ಚಾಗಿವೆ. ಅವು ಕಾಡಿನಲ್ಲಿ ದೊಡ್ಡ ಮಂದೆಗಳಲ್ಲಿ ಜೀವಿಸುತ್ತವೆ. ಕಾಡುಕುರಿಗಳು ಆಗಾಗ ಆಹಾರಕ್ಕಾಗಿ ಬಯಲು ಪ್ರದೇಶಗಳಿಗೆ ಬಂದು ಹೋಗುವುದೂ ಉಂಟು. ತುರ್ಕಿಸ್ತಾನದ ಪಾಮಿರ್ ಪ್ರಸ್ಥಭೂಮಿಯ ಕಾಡುಗಳಲ್ಲಿ ವಾಸಿಸುವ ಓವಿಸ್ ಪೋಲೈ ಎಂಬ ಪ್ರಭೇದದ ಕಾಡುಕುರಿಗಳು ಪ್ರಸಿದ್ಧವಾಗಿವೆ. ಅವಕ್ಕೆ ಅಗಲವಾಗಿ ಬಾಗಿರುವ ದೊಡ್ಡ ಕೊಂಬುಗಳಿವೆ. ಇವು ಈ ಪ್ರಭೇದದ ವಿಶಿಷ್ಟ ಲಕ್ಷಣ. ಓವಿಸ್ ಕರೇಲಿನಿ ಎಂಬ ಮತ್ತೊಂದು ಪ್ರಭೇದ ಟಿಯೆನ್‌ಷಾನ್ ಪರ್ವತಶ್ರೇಣಿಗಳಲ್ಲಿ ವಾಸಿಸುತ್ತದೆ. ಮಧ್ಯ ಏಷ್ಯದಲ್ಲೂ ತುರ್ಕಿಸ್ತಾನದ ಬೆಟ್ಟಗುಡ್ಡಗಳಲ್ಲೂ ಇತರ ಪ್ರಭೇದಗಳು ಇವೆ. ಇವಕ್ಕೂ ದೊಡ್ಡ ಆಕೃತಿಯ ಓವಿಸ್ ಅಮ್ಮಾನ್ ಎಂಬ ಇನ್ನೊಂದು ಪ್ರಭೇದ ಲಡಕ್, ಟಿಬೆಟ್, ಗೋಬಿಮರುಭೂಮಿ, ಮಂಗೋಲಿಯ ಮುಂತಾದೆಡೆಗಳಲ್ಲಿ ವಾಸಿಸುತ್ತದೆ. ಅದರ ಎತ್ತರ 4', ತೂಕ 300 ಪೌಂಡುಗಳು. ಇವುಗಳಲ್ಲಿ ಕೊಂಬು ಓವಿಸ್ ಪೋಲೈ ಪ್ರಭೇದದ ಕೊಂಬಿನಷ್ಟು ಅಗಲವಾಗಿ ಪಕ್ಕಕ್ಕೆ ಹರಡಿಕೊಂಡಿಲ್ಲ. ಪೂರ್ವ ಸೈಬೀರಿಯಾದಲ್ಲಿ ಓವಿಸ್ ಬೋರಿಮೂಲಿಸ್ ಎಂಬುದೂ ಕಾಂಚಾಟ್ಕದಲ್ಲಿ ಓವಿಸ್ ನಿವಿಕೋಲ ಎಂಬುದೂ ವಾಸಿಸುತ್ತವೆ. ರಾಕಿ ಪರ್ವತ ಶ್ರೇಣಿಯಲ್ಲೂ ಬ್ರಿಟಿಷ್ ಕೊಲಂಬಿಯದ ಭಾಗಗಳಲ್ಲೂ ಕಪ್ಪು ತುಪ್ಪಳದ ಕಾಡುಕುರಿಗಳಿವೆ. ಅಲಾಸ್ಕದಲ್ಲಿ ಈ ಪ್ರಭೇದದ ಬಿಳಿಯ ತುಪ್ಪಳದ ಕುರಿಗಳಿವೆ. ಮೆಕ್ಸಿಕೊ ಮತ್ತು ಕ್ಯಾಲಿಫೋರ್ನಿಯ ದೇಶಗಳಲ್ಲೂ ಅವುಗಳ ಬಳಗಗಳು ವಾಸಿಸುತ್ತವೆ.

ಲಡಕ್, ಆಫ್ಘಾನಿಸ್ತಾನ, ಪಂಜಾಬ್ ಮುಂತಾದ ದೇಶಗಳಲ್ಲಿ ಇರುವ ಕಾಡುಕುರಿಗಳು ತೀರ ಚಿಕ್ಕವು. ಪಂಜಾಬಿನ ಕುರಿಗೆ ಊರಿಯಲ್ ಎಂಬ ಹೆಸರುಂಟು. ಇವು ಪರ್ಷಿಯ, ಆರ್ಮೀನಿಯ, ಸಾರ್ಡೀನಿಯ ಮತ್ತು ಕಾರ್ಸಿಕದ ಕಾಡುಕುರಿಗಳಷ್ಟು ಎತ್ತರವಾಗಿರುತ್ತವೆ. ಹಿಮಾಲಯದ ನೀಲ ತುಪ್ಪಳದ ಕಾಡುಕುರಿಗಳು (ಸೂಡೂನಾಹುರ) 10,000' ಮೀ.ಗೆ ಪರಿವರ್ತಿಸಿ ಎತ್ತರದ ಪರ್ವತ ಪ್ರದೇಶಗಳಲ್ಲಿ 10–50 ಸಂಖ್ಯೆಯ ಗುಂಪುಗಳಲ್ಲಿ ವಾಸಿಸುತ್ತವೆ. ಈ ಪ್ರಭೇದದ ಟಗರಿನ ಉದರದ ಭಾಗದ ಬಣ್ಣ ಬಿಳಿ, ಬೆನ್ನಿನಬಣ್ಣ ನೀಲಿನರೆ. ಅವೆರಡಕ್ಕೂ ಮಧ್ಯ ಒಂದು ಕಪ್ಪು ಪಟ್ಟಿಯಿದೆ; ಕೊಂಬು ಹಿಂದಕ್ಕೆ ಅರ್ಧ ಚಂದ್ರಾಕೃತಿಯಲ್ಲಿ ಬಾಗಿ ನುಲಿದುಕೊಂಡಿದೆ. ಆಫ್ರಿಕದಲ್ಲಿ ಒಂದೇ ಪ್ರಭೇದದ ಕಾಡುಕುರಿ ಜೀವಿಸುತ್ತದೆ. ಅದು ಉತ್ತರದಲ್ಲಿ ಸೂಡಾನಿನವರೆಗೂ ಹರಡಿಕೊಂಡು ಜೀವಿಸುತ್ತದೆ. ಅದರ ಗಂಟಲ ಮೇಲೂ ಮುಂಗಾಲುಗಳ ತುದಿಯಲ್ಲೂ ದಟ್ಟವಾದ ಉದ್ದನೆಯ ತುಪ್ಪಳ ಉಂಟು. ಕೊಂಬು ನಯವಾಗಿ ನೆಟ್ಟಗಿದೆ. ಇವೆರಡು ಲಕ್ಷಣಗಳೂ ಆಡಿನ ಲಕ್ಷಣಗಳನ್ನು ಹೋಲುತ್ತವೆ. (ಎಸ್.ಎಸ್.ಪಿ.)

**ಕುರಿಗಳ ಸಾಕು ತಳಿಗಳು:** ಅತಿ ಸಭ್ಯ ಸಾಕುಪ್ರಾಣಿ ಎನಿಸಿದ ಕುರಿ ಸಾವಿರಾರು ವರ್ಷಗಳಿಂದ ಮಾನವನೊಂದಿಗೆ ಬೆಳೆದು ಬಂದಿದೆ. ಆದಿಮಾನವ ಕುರಿಯ ಚರ್ಮದಿಂದ ಹೊದಿಕೆಗಳನ್ನು ತಯಾರಿಸುತ್ತಿದ್ದ. ಅದರ ಮಾಂಸ ಮತ್ತು ಹಾಲು ಅವನ ಆಹಾರದ ಮುಖ್ಯ ಭಾಗಗಳಾಗಿದ್ದುವು. ಭೂಮಂಡಲದ ಮೇಲೆ ಮಾನವ ವಸತಿಗೆ ಯೋಗ್ಯವಾದ ಎಲ್ಲ ಪ್ರದೇಶಗಳಲ್ಲೂ ಕುರಿಸಾಕುವರು. ಅದರಲ್ಲಿಯೂ ಆರ್ಥಿಕ ದೃಷ್ಟಿಯಿಂದ ಮುಂದುವರಿದ ರಾಷ್ಟ್ರಗಳಲ್ಲಿ ಕುರಿಸಂಗೋಪನೆಗೆ ವಿಶೇಷ ಗಮನವನ್ನೀಯಲಾಗುತ್ತಿದೆ. ಕುರಿಯಿಂದ ನಮಗೆ ಉಣ್ಣೆ ದೊರಕುತ್ತದೆ. ಪ್ರಾಣಿಜನ್ಯ ನಾರುದಾರಗಳಲ್ಲಿ ಕುರಿಯ ಉಣ್ಣೆಗೆ ವಿಶಿಷ್ಟ ಸ್ಥಾನವಿದೆ. ಅದರಿಂದ ತಯಾರಿಸಿದ ಹೊದಿಕೆಗಳು ಬಾಳಿಕೆ ಬರತಕ್ಕ ಬೆಚ್ಚನೆಯ ಆರೋಗ್ಯಕರವಾದ ಉಡುಪೆನಿಸಿವೆ. ಈ ಕಾರಣದಿಂದ ಬೇರೆ ಯಾವುದೇ ನಾರುದಾರಗಳಿಂದ ತಯಾರಿಸಿದ ಹೊದಿಕೆಗಳಿಗಿಂತ ಇವು ಶ್ರೇಷ್ಠವಾಗಿವೆ.

ಕುರಿಗಳು ಬೆಳಸನ್ನು ತಿಂದು ಹಾಳುಮಾಡುವುದಿಲ್ಲ. ಹೊಲಗಳಲ್ಲಿ ಬೆಳೆಯುವ ನಿರುಪಯುಕ್ತ ಕಸಕಡ್ಡಿಗಳನ್ನೂ ಸಾಗುವಳಿಗೆ ಬಾರದ ಬರಡು ಭೂಮಿಯಲ್ಲಿ ಬೆಳೆಯುವ

ಕುರಿ ಮಂದೆ

ಕಿರಿದಾದ ಹುಲ್ಲನ್ನು ತಿಂದು ಕುರಿ ಜೀವಿಸಬಲ್ಲುದು. ಹೀಗಾಗಿ ನಾಯಿಯನ್ನು ಬಿಟ್ಟರೆ ಆಯಾ ಪ್ರದೇಶದ ಮಳೆ, ಹವೆ ಮೊದಲಾದ ವೈವಿಧ್ಯಕ್ಕೆ ಹೊಂದಿಕೊಂಡು, ಭೂಮಂಡಲದ ಎಲ್ಲ ವಲಯಗಳಲ್ಲೂ ವೃದ್ಧಿಯಾಗಿರುವ ಸಾಕುಪ್ರಾಣಿ ಕುರಿ. ಜಗತ್ತಿನಲ್ಲಿ ಕುರಿಯ ಸುಮಾರು 200 ಬೇರೆ ಬೇರೆ ತಳಿಗಳಿವೆಯೆಂದು ಕಂಡುಬಂದಿದೆ. ಆಯಾ ವಿಭಾಗಗಳ ಭೂಗುಣ, ಹವೆ ಮೊದಲಾದ ಲಕ್ಷಣಗಳಿಗೆ ಒಗ್ಗುವ ಮತ್ತು ಹಾಲು, ಮಾಂಸ ಮತ್ತು ಉಣ್ಣೆ ಕೊಡುವಂಥ ವೈವಿಧ್ಯಪೂರ್ಣ ತಳಿಗಳನ್ನು ಉತ್ಪಾದಿಸಲಾಗಿದೆ. ಪ್ರಾಚೀನ ಕಾಲವನ್ನು ಕುರಿತ ವೈಜ್ಞಾನಿಕ ದಾಖಲೆಗಳ ಅಭಾವವಿದ್ದರೂ ಇತಿಹಾಸದ ಸಹಾಯದಿಂದ ಜಗತ್ತಿನ ಕುರಿಯ ತಳಿಗಳನ್ನು ನಾಲ್ಕು ಮುಖ್ಯ ಗುಂಪುಗಳಲ್ಲಿ ವಿಂಗಡಿಸಬಹುದು: 10 ಉತ್ತಮ ಉಣ್ಣೆಯನ್ನು ಕೊಡುವ ಮೆರಿನೋ ಜಾತಿಯ ಕುರಿಗಳು ಹಾಗೂ ಮೆರಿನೋ ಮೂಲದಿಂದ

ಹುಟ್ಟಿದ ಮಿಶ್ರತಳಿಗಳು: 20 ಮಧ್ಯಮ ತರಗತಿಯ ಉಣ್ಣೆಯನ್ನು ಕೊಡುವ ಯುರೋಪ್ ಮತ್ತು ಬ್ರಿಟನ್ನಿನ ಕುರಿಗಳು: 30 ಉದ್ದ ಹಾಗೂ ಹೊಳಪುಳ್ಳ ಉಣ್ಣೆಯನ್ನು ಕೊಡುವ ಬ್ರಿಟನ್ನಿನ ಕುರಿಗಳು: 40 ಕಂಬಳಿ ಮತ್ತು ಕಾರ್ಪೆಟ್ ಮಾಡಬಹುದಾದ ಕೆಳದರ್ಜೆಯ ಉಣ್ಣೆ ಕೊಡುವ ಏಷ್ಯ ಖಂಡದ ಕುರಿಗಳು.

**ಭಾರತದ ವಿವಿಧ ತಳಿಗಳು ಮತ್ತು ಅವುಗಳ ವಿಸ್ತರಣೆ:** ಭಾರತದಲ್ಲಿ ಸುಮಾರು 6 ಕೋಟಿ ಕುರಿಗಳಿದ್ದು (2008) ಸಂಖ್ಯಾ ದೃಷ್ಟಿಯಿಂದ ಜಗತ್ತಿನಲ್ಲಿ 5ನೆಯ ಸ್ಥಾನವಿದೆ. ಶುಷ್ಕ ಹವೆಯ ಉತ್ತರ ಭಾರತದ ಬಯಲು ಪ್ರದೇಶ ಮತ್ತು ಹಿಮಾಲಯದ ಪಕ್ಕದ ಪ್ರದೇಶಗಳಲ್ಲಿಯ ಕುರಿಗಳು ಉತ್ತಮ ಉಣ್ಣೆಯ ತಳಿಗಳೆಂದು ಪ್ರಸಿದ್ಧವಾಗಿವೆ. ರಾಜಸ್ತಾನ, ಕಚ್, ಸೌರಾಷ್ಟ್ರ ಮತ್ತು ಉತ್ತರ ಗುಜರಾತಿನ ಕುರಿಗಳು ಉತ್ತಮ ಉಣ್ಣೆಯನ್ನು ಕೊಡುತ್ತವೆ. ಈ ಕುರಿಗಳಿರುವ ಪ್ರದೇಶ ಟೋರಿಯೊ ವಲಯದಿಂದ ಹೆಸರು ಪಡೆದಿದೆ. ವಿಂಧ್ಯ ಪರ್ವತದಿಂದ ನೀಲಗಿರಿಯವರೆಗೆ ಹಬ್ಬಿದ, ಡೆಕ್ಕನದ ತಪ್ಪಲು ಪ್ರದೇಶದಲ್ಲಿ ಅದರಲ್ಲೂ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಕುರಿಗಳ ಸಂಖ್ಯೆ ಹೆಚ್ಚಾಗಿದೆ. ಈ ತಳಿಗಳು ಕೆಳವರ್ಗದ ಉಣ್ಣೆಯನ್ನು ಕೊಡುವುವಲ್ಲದೆ ಅವುಗಳಲ್ಲಿ ಉಣ್ಣೆಯ ಉತ್ಪಾದನೆಯ ಪ್ರಮಾಣವೂ ಬಹಳ ಕಡಿಮೆ. ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಘರ್‌ವಾಲ ಪರ್ವತ ಶ್ರೇಣಿಯ ಪಕ್ಕದ ಪ್ರದೇಶಗಳಲ್ಲಿ, ಉತ್ತಮ ತರಗತಿಯ ಉಣ್ಣೆಯನ್ನು ಕೊಡುವ ಕುರಿಗಳನ್ನು ಸಾಕಲು ಹೆಚ್ಚು ಅವಕಾಶವಿದೆ. ಭಾರತದ ಕುರಿ ಸಂಗೋಪನೆಯ ಪ್ರದೇಶಗಳನ್ನು ಭೌಗೋಳಿಕ ದೃಷ್ಟಿಯಿಂದ 3 ವಲಯಗಳಾಗಿ ವಿಂಗಡಿಸಬಹುದು.

1.ಸಮಶೀತೋಷ್ಣ ಹವೆಯ ಹಿಮಾಲಯ ವಲಯ: ಇದರಲ್ಲಿ ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ಉತ್ತರ ಪ್ರದೇಶದ ಗುಡ್ಡಗಾಡು ವಿಭಾಗಗಳು ಸಮಾವೇಶವಾಗುತ್ತವೆ.

2.ರಾಜಸ್ತಾನ, ಆಗ್ನೇಯ ಪಂಜಾಬ್, ಸೌರಾಷ್ಟ್ರ, ಕಚ್, ಉತ್ತರ ಗುಜರಾತ್ ಮತ್ತು ಉತ್ತರಪ್ರದೇಶದ ಕೆಲಭಾಗಗಳನ್ನೊಳಗೊಂಡ, ಶುಷ್ಕ ಹವೆಯ ಪಶ್ಚಿಮ ವಲಯ.

3. ಮಹಾರಾಷ್ಟ್ರ ರಾಜ್ಯದ ತಪ್ಪಲು ಪ್ರದೇಶ, ಕರ್ನಾಟಕ. ಆಂಧ್ರ, ತಮಿಳುನಾಡು, ಮಧ್ಯಪ್ರದೇಶದ ಕೆಲಭಾಗಗಳಿಂದ ಕೂಡಿದ ದಕ್ಷಿಣ ವಲಯ.

**ಸಮಶೀತೋಷ್ಣ ಹವೆಯ ಹಿಮಾಲಯ ಪರ್ವತ ವಲಯ:** ಇದು ಕಾಶ್ಮೀರದಿಂದ ಉತ್ತರಪ್ರದೇಶದ ಘರ್‌ವಾಲ ಜಿಲ್ಲೆಯವರೆಗೆ ಹರಡಿದೆ. ವರ್ಷದ ಎಲ್ಲ ಋತುಗಳಲ್ಲೂ ಮೇಯಲು ಕುರಿಗಳಿಗೆ ಹಸುರುಹುಲ್ಲು ಈ ಭಾಗದಲ್ಲಿ ದೊರಕುತ್ತದೆ. ಚಳಿಗಾಲದಲ್ಲಿ ಕುರಿಗಳು ಬಯಲು ನಾಡಿನಲ್ಲಿ ಮೇಯುತ್ತವೆ. ಬೇಸಗೆ ಪ್ರಾರಂಭವಾದೊಡನೆ ಎತ್ತರ ಪ್ರದೇಶಗಳಿಗೆ ಹೋಗುತ್ತವೆ. ಈ ಪ್ರದೇಶ ಸಮುದ್ರ ಮಟ್ಟದಿಂದ 8000'–12,000' ಎತ್ತರವಾಗಿದ್ದು ಇಲ್ಲಿ ಕುರಿಗಳನ್ನು ಮೇಯಿಸಲು ಸಾಕಷ್ಟು ಹುಲ್ಲುಗಾವಲುಗಳಿವೆ. ಕಾಂಗ್ರಾ, ಚೌಬಾ, ಕುಲು ಮತ್ತು ಕಾಶ್ಮೀರ ಕಣಿವೆಗಳ ಕುರಿಗಳು ಮೇಲ್ತರಗತಿಯ ಉಣ್ಣೆಯನ್ನು ಕೊಡುತ್ತವೆ. ಇಲ್ಲಿ ಬಡವರು ಮಾತ್ರ ಕುರಿಸಾಕುವ ಉದ್ಯೋಗದಲ್ಲಿ ತೊಡಗಿರುವುದರಿಂದ ಉಣ್ಣೆ ಹಾಗೂ ಮಾಂಸದ ದೃಷ್ಟಿಯಿಂದ ತಳಿಗಳ ಅಭಿವೃದ್ಧಿ ಅಷ್ಟಾಗಿ ಆಗಿಲ್ಲ. ಅಲ್ಲದೆ ಈಚೆಗೆ ಹೆಚ್ಚು ನೆಲವನ್ನು ಸಾಗುವಳಿಗೆ ತಂದದ್ದರಿಂದ ಕುರಿಗಳಿಗೆ ಮೇಯಲು ಹುಲ್ಲುಗಾವಲು ಪ್ರದೇಶ ಕಡಿಮೆಯಾಗಿದೆ.

ಈ ವಲಯದ ಕುರಿಗಳು ಶುದ್ಧ ತಳಿಗಳಲ್ಲ. ಹಿಮಾಲಯ ಪರ್ವತ ಪ್ರದೇಶದ ಮತ್ತು ಉಸುಕಿನ ಬಯಲಿನ ಕುರಿಗಳಿಂದ ಹುಟ್ಟಿದ ಮಿಶ್ರತಳಿ. ಅಲ್ಲದೆ ಕೆಲ ಪ್ರದೇಶದ ಕುರಿಗಳಲ್ಲಿ ವಿಶಿಷ್ಟ ಆನುವಂಶೀಯ ಲಕ್ಷಣಗಳು ಕಂಡು ಬರುತ್ತವೆ. ಹೀಗಾಗಿ ಈ ತಳಿಗಳಲ್ಲಿ ಏಕರೂಪತೆಯನ್ನು ಕಾಣುವುದು ಸಾಧ್ಯವಾಗಿಲ್ಲ.

ಕಾಶ್ಮೀರದಲ್ಲಿ ಮುಖ್ಯವಾಗಿ ಮೂರು ಜಾತಿಯ ಕುರಿಗಳಿವೆ: ಪೂಂಚ್, ಕಾರ್ನಾ, ಕಾಶ್ಮೀರ ಕೊಳ್ಳದ ಕುರಿಗಳು. ಪೂಂಚ್ ಮತ್ತು ಕಾರ್ನಾ ಜಾತಿಯ ಕುರಿಗಳು ಮೃದುವಾದ ಉಣ್ಣೆಯನ್ನು ಹೆಚ್ಚು ಪ್ರಮಾಣದಲ್ಲಿ ಕೊಡುತ್ತವೆ. ಇವಲ್ಲದೆ ಗದ್ದಿ ಮತ್ತು ಭಾಕರವಾಲ್ ಜಾತಿಯ ಕುರಿಗಳು ಕೂಡ ಸಾಕಷ್ಟು ಹೆಸರುವಾಸಿಯಾಗಿವೆ. ಇವುಗಳ ಮೂಲಸ್ಥಾನ ಹಿಮಾಲಯದ ಅಡಿಪ್ರದೇಶ. ಆದರೂ ಋತುಮಾನಕ್ಕೆ ಅನುಸಾರವಾಗಿ ಕಾಶ್ಮೀರ, ಕುಲು ಮತ್ತು ಕಾಂಗ್ರಾ ಕಣಿವೆಗಳ ಕಡೆಗೆ ಸ್ಥಾನಾಂತರವಾಗುತ್ತಿರುತ್ತವೆ.

ಹಿಮಾಚಲ ಪ್ರದೇಶದ ರಾಮ್‌ಪುರ್‌ಭುಶಾಯರ್ ತಳಿ ಉತ್ತಮ ತರಗತಿಯದಾಗಿದೆ. ಇವು ಹಿಮಾಲಯದ ಅಡಿ ಪ್ರದೇಶದಲ್ಲಿ ಇದ್ದರೂ ಟಿಬೆಟ್ಟಿನ ಸರಹದ್ದಿನವರೆಗೂ ಮೇಯಲು ಹೋಗುತ್ತವೆ. ಈ ಕುರಿಗಳಲ್ಲೂ ತಳಿಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳಲಾಗಿಲ್ಲ. ಇವು ಮುಖ್ಯವಾಗಿ ಕಂದುಬಣ್ಣದ ಉಣ್ಣೆಯನ್ನು ಕೊಡುತ್ತವೆ.

**ಕಾರ್ನಾ ಜಾತಿಯ ಕುರಿ:** ಉತ್ತರ ಕಾಶ್ಮೀರದ ಕಾರ್ನಾ ತಾಲ್ಲೂಕಿನಿಂದ ಈ ತಳಿಗೆ ಕಾರ್ನಾ ಎಂಬ ಹೆಸರು ಬಂದಿದೆ. ಈ ಪ್ರದೇಶ ಸಮುದ್ರ ಪಾತಳಿಯಿಂದ 4,000'–15,000' ಎತ್ತರದಲ್ಲಿದೆ. ಇಲ್ಲಿ ಕುರಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಸಾಕುತ್ತಾರೆ. ಬೇಸಗೆಯಲ್ಲಿ ಅಂದರೆ ಮೇ ನಿಂದ ಸೆಪ್ಟೆಂಬರ್‌ವರೆಗೆ ಎತ್ತರ ಹಾಗೂ ಇಳಿಜಾರಾದ ಪರ್ವತ ಪ್ರದೇಶಗಳಲ್ಲಿ ಚೆನ್ನಾಗಿ ಹುಲ್ಲು ಬೆಳೆಯುತ್ತಿದ್ದು ಕುರಿಗಳನ್ನು ಮೇಯಿಸಲು ಅನುಕೂಲವಾಗಿರುತ್ತದೆ. ಚಳಿಗಾಲದಲ್ಲಿ ಮಾತ್ರ ಕುರಿಗಳನ್ನು ಅಡವಿಗೆ ಒಯ್ಯದೆ ಕೊಳ್ಳಪ್ರದೇಶದಲ್ಲಿ ಬೆಳೆಯುವ ಗಿಡಗಳ ಎಲೆಗಳನ್ನು ತಂದು ದೊಡ್ಡಿಗಳಲ್ಲಿಯೇ ಮೇಯಿಸುತ್ತಾರೆ. ಈ ಕುರಿಗಳ ದೇಹದಾರ್ಢ್ಯ ಉತ್ತಮವಾಗಿರುತ್ತದೆ. ಟಗರುಗಳ ಕೋಡುಗಳು ಕೆಳಕ್ಕೆ ಬಾಗಿರುತ್ತವೆ. ಮೂಗು ನೀಳ. ಮೈಬಣ್ಣ ಬಿಳಿ. ಈ ತಳಿಯಿಂದ ದೊರಕುವ ಉಣ್ಣೆ ಮಧ್ಯಮ ತರಗತಿಯದು. ತುಪ್ಪಟ ಮೃದು. ತಂತುಗಳ ಉದ್ದ ಸಾಮಾನ್ಯವಾಗಿ 4"–5". ತುಪ್ಪಳವನ್ನು ವರ್ಷದಲ್ಲಿ ಎರಡು ಸಲ ಕತ್ತರಿಸುತ್ತಾರೆ. ಇಲ್ಲಿ ಉತ್ಪಾದಿಸಿದ ಉಣ್ಣೆಯ ಬಹುಭಾಗ ಸ್ಥಳೀಯವಾಗಿಯೇ ಉಪಯೋಗವಾಗುತ್ತದೆ.

**ಗುರೇಜ ಜಾತಿಯ ಕುರಿ:** ಉತ್ತರ ಕಾಶ್ಮೀರದ ಗುಡ್ಡಗಾಡು ಪ್ರದೇಶದಲ್ಲಿ, ಅಂದರೆ ಕಾರ್ನಾ ತಹಶೀಲಿನ ಪಕ್ಕದಲ್ಲಿರುವ ಗುರೇಜ ತಹಶೀಲಿನಿಂದ ಈ ಜಾತಿಗೆ ಈ ಹೆಸರು ಬಂದಿದೆ. ಇಲ್ಲಿಯ ಜಮೀನುದಾರರು ದೊಡ್ಡ ದೊಡ್ಡ ಸಂಖ್ಯೆಯಲ್ಲಿ ಈ ಕುರಿಗಳನ್ನು ಸಾಕುತ್ತಾರೆ. ಈ ಪ್ರದೇಶ ಹುಲ್ಲು ಹಾಗೂ ಗಿಡಗಂಟಿಗಳಿಂದ ಸಮೃದ್ಧವಾಗಿರುವುದರಿಂದ ಕುರಿಗಳಿಗೆ ಸಾಕಷ್ಟು ಆಹಾರ ದೊರಕುತ್ತದೆ. ಆದರೆ ಚಳಿಗಾಲದಲ್ಲಿ ಕುರಿಗಳನ್ನು ಮನೆಯಲ್ಲಿಯೇ ಮೇಯಿಸಬೇಕಾಗುತ್ತದೆ. ಈ ಜಾತಿಯ ಕುರಿಗಳು ಗುಡ್ಡಗಾಡು ಪ್ರದೇಶದಲ್ಲೇ ಅತ್ಯುತ್ತಮ ದೇಹದಾರ್ಢ್ಯವುಳ್ಳವುಗಳೆಂದು ಹೆಸರಾಗಿವೆ. ಬಹು ಸಂಖ್ಯಾತ ಕುರಿಗಳಿಗೆ ಕೋಡುಗಳಿರುವುದಿಲ್ಲ. ಇವುಗಳ ಬಣ್ಣ ಬಿಳುಪು. ಬೇರೆ ಬಣ್ಣದ ಕುರಿಗಳು ಕೂಡ ಅಲ್ಪ ಪ್ರಮಾಣದಲ್ಲಿ ಕಾಣಸಿಗುತ್ತವೆ.

**ಹಿಸ್ಸಾರ ಡೇಲ್ ಜಾತಿಯ ಕುರಿ:** ಇದು ಬಿಕನೀರ್ ಕುರಿ ಹಾಗೂ ಮೆರಿನೋ ಟಗರುಗಳಿಂದಾದ ಮಿಶ್ರ ತಳಿ, ಪಂಜಾಬದ ಹಿಸ್ಸಾರದ ಪಶು ಅಭಿವೃದ್ಧಿ ಕೇಂದ್ರದಲ್ಲಿ ಇದನ್ನು ಬೆಳೆಸಿ ಕುಲುಕಣಿವೆಯಲ್ಲಿ ಸಾಕುತ್ತಾರೆ. ಈ ಕುರಿಗಳು ಮೃದುವಾದ ಉಣ್ಣೆಯನ್ನು ಹೆಚ್ಚು ಪ್ರಮಾಣದಲ್ಲಿ ಕೊಡುತ್ತವೆ. ತೊಡೆಯ ಭಾಗದ ಉಣ್ಣೆ ಕೊಂಚ ಒರಟಾಗಿರುತ್ತದೆ. ಸಾಮಾನ್ಯವಾಗಿ ಇವು ಬಿಳಿ ಉಣ್ಣೆಯನ್ನು ಕೊಡುತ್ತವೆ. ಕೆಲವು ಕುರಿಗಳು ಹಳದಿಮಿಶ್ರಿತ ಉಣ್ಣೆಯನ್ನೂ ಕೊಡುವುದುಂಟು. ಉಣ್ಣೆ ಮತ್ತು ಮಾಂಸಗಳ ಉತ್ಪಾದನೆಯ ದೃಷ್ಟಿಯಿಂದ ಇದು ಉತ್ತಮವಾದ ತಳಿ. ಪ್ರತಿಕೂಲ ಹವೆ ಹಾಗೂ ರೋಗರುಜಿನಗಳನ್ನು ತಾಳಿಕೊಳ್ಳುವ ಶಕ್ತಿ ಈ ಜಾತಿಯಲ್ಲಿ ಕಂಡು ಬರುತ್ತದೆ. ಸ್ಥಳೀಯ ಕುರಿಗಳ ಮಾಂಸಕ್ಕಿಂತ ಈ ತಳಿಯ ರಾಸುಗಳ ಮಾಂಸ ಉತ್ತಮ. ವರ್ಷದಲ್ಲಿ 23 ಸಾರಿ ಉಣ್ಣೆಯನ್ನು ಕತ್ತರಿಸಲಾಗುವುದು. ಉಣ್ಣೆ ಹೊಳಪಾಗಿದ್ದು ಉದ್ದವಾದ–ಎಳೆಗಳಿಂದ ಕೂಡಿರುತ್ತದೆ. ಇದರ ಉಣ್ಣೆಯನ್ನು ಸ್ಥಳೀಯವಾಗಿ ಉಪಯೋಗಿಸಲಾಗುತ್ತದೆ.

**ಭಾಕರ್‌ವಾಲ್ ಜಾತಿಯ ಕುರಿ:** ಭಾಕರ್‌ವಾಲ್ ಎಂಬ ಸಂಚಾರಿ ಜನಾಂಗಗಳು ಸಾಕುವ ಕುರಿಗಳಿವು. ಬೇಸಗೆಯಲ್ಲಿ ಈ ಕುರಿಗಳನ್ನು ಕಾಶ್ಮೀರ ಕಣಿವೆಯಲ್ಲಿ ಮೇಯಿಸುತ್ತಾರೆ. ಚಳಿಗಾಲದಲ್ಲಿ ಬೆಚ್ಚಗಿನ ಹವೆಯ ದಕ್ಷಿಣದ ಪ್ರದೇಶಗಳಿಗೆ ಒಯ್ಯುತ್ತಾರೆ. ಈ ಕುರಿಗಳು ಗಟ್ಟಿಮುಟ್ಟಾಗಿದ್ದು ಎತ್ತರ ಪರ್ವತಗಳನ್ನು ಏರಿ ಮೇಯಬಲ್ಲವು. ಟಗರುಗಳಿಗೆ ಕೋಡುಗಳುಂಟು, ಹೆಣ್ಣಿಗೆ ಕಿವಿಗಳು ದೊಡ್ಡವಿದ್ದು ನೇತಾಡುತ್ತಿರುತ್ತವೆ. ಉಣ್ಣೆ ಸಾಮಾನ್ಯವಾಗಿ ಬಿಳುಪಾಗಿದ್ದರೂ ಕೆಲವು ಪ್ರದೇಶಗಳ ಕುರಿಗಳು ಬೇರೆ ಬೇರೆ ವರ್ಣದ ಉಣ್ಣೆ ಕೊಡುವುದುಂಟು. ಉಣ್ಣೆ ಒರಟಾಗಿದ್ದು, ತಂತುಗಳು ಸುಮಾರು 6" ಉದ್ದವಿರುತ್ತವೆ. ಮಾರ್ಚ್, ಜೂನ್ ಹಾಗು ಸೆಪ್ಟೆಂಬರ್ ತಿಂಗಳುಗಳಲ್ಲಿ ಉಣ್ಣೆಯನ್ನು ಕತ್ತರಿಸುವರು. ಒಂದು ಕುರಿ ವರ್ಷಕ್ಕೆ ಸುಮಾರು 3ರಿಂದ 4ಪೌಂಡ್ ಉಣ್ಣೆ ಕೊಡುತ್ತದೆ. ಅಲ್ಲಿ ಉತ್ಪಾದಿಸಿದ ಎಲ್ಲ ಉಣ್ಣೆಯನ್ನು ಸ್ಥಳೀಯ ನೇಕಾರರು ಕಂಬಳಿ ನೇಯಲು ಉಪಯೋಗಿಸುತ್ತಾರೆ.

**ಜಲೌನಿ ಜಾತಿಯ ಕುರಿ:** ಉತ್ತರ ಪ್ರದೇಶದ ಜಲೌನಾ ಜಿಲ್ಲೆಯಲ್ಲಿ ಕಂಡುಬರುತ್ತದೆ. ದಷ್ಟಪುಷ್ಟವಾದ ಈ ಕುರಿಗಳು ಗಾತ್ರದಲ್ಲಿ ಮಧ್ಯಮ ತರಗತಿಯವು. ಇದರ ಲಕ್ಷಣಗಳು ಹೀಗಿವೆ: ಕೋಡುಗಳಿಲ್ಲ, ಮೂಗು ಚಪ್ಪಟೆ, ಮೂಗಿನ ಹೊರಳೆಗಳು ದೊಡ್ಡವು, ದೇಹದ ಹಿಂಭಾಗ ಅಗಲ ಮತ್ತು ದೊಡ್ಡ ಹಾಗೂ ಅಗಲವಾದ ಕಿವಿಗಳು. ಮೈಮೇಲೆ ಉಣ್ಣೆ ಒಂದೇ ಸಮವಾಗಿ ಬೆಳೆಯುವುದಿಲ್ಲ. ಉಣ್ಣೆ ಬಿಳಿಯಾಗಿದ್ದು ಒರಟು ಹಾಗು ಸಣ್ಣ ಎಳೆಗಳಿಂದ ಕೂಡಿರುತ್ತದೆ. ಮುಖ ಹಾಗೂ ಕಣ್ಣಿನ ಸುತ್ತಲಿನ ಭಾಗ ಕಪ್ಪಾಗಿರುತ್ತದೆ. ಇದು ಮಾಂಸ ಕೊಡುವ ಅತ್ಯುತ್ತಮ ತಳಿ.

**ಶುಷ್ಕ ಹವಾಮಾನದ ಪಶ್ಚಿಮ ವಲಯ:** ಈ ವಲಯದಲ್ಲಿ ವಿವಿಧ ಜಾತಿಯ ಕುರಿಗಳನ್ನು ಸಾಕಲಾಗುತ್ತಿದೆ. ಭಾರತದಿಂದ ಹೊರದೇಶಗಳಿಗೆ ರಫ್ತಾಗುವ ಉಣ್ಣೆಯಲ್ಲಿ 1/3 ಭಾಗ ಈ ವಲಯದ್ದೇ. ಇಲ್ಲಿ ಒಂದೊಂದು ಹಿಂಡಿನಲ್ಲಿ 50–1000 ಕುರಿಗಳಿರುತ್ತವೆ. ಇಲ್ಲಿನ ಕುರಿಗಾಹಿಗಳು ಒಂದೇ ಕಡೆಗೆ ನಿಲ್ಲದೆ ಹುಲ್ಲುಗಾವಲುಗಳನ್ನು ಹುಡುಕುತ್ತ ನೆರೆಹೊರೆಯ ಪ್ರದೇಶಗಳಿಗೆ ಹೋಗುತ್ತಾರೆ. ರಾಜಸ್ತಾನದ ಸರಸ್ವತೀ ನದಿಯ ಪ್ರದೇಶ, ಉತ್ತರ ಗುಜರಾತ್ ಕಚ್ಛ ಮುಂತಾದವುಗಳನ್ನೊಳಗೊಂಡ ಪ್ರದೇಶ, ಭಾರತದಲ್ಲಿ ಕುರಿ ಸಂಗೋಪನೆಯ ಮುಖ್ಯ ವಲಯ. ಇಲ್ಲಿಯ ಕುರಿಗಳಿಂದ ಉತ್ತಮ ತರಗತಿಯ ಕಾರ್ಪೆಟ್ ಉಣ್ಣೆ ದೊರಕುತ್ತದೆ. ಅದು ಜೋರಿಯಾ ಉಣ್ಣೆಯೆಂದು ಪ್ರಸಿದ್ಧಿ ಪಡೆದಿದೆ. ಅದರ ಎಳೆಗಳು ಸಾಮಾನ್ಯವಾಗಿ ಬಿಳುಪು ಮತ್ತು ಒರಟು. ಈ ವಲಯದಲ್ಲಿ ಸಾಕುವ ಪ್ರಮುಖ ತಳಿಗಳು ಐದು.

**1. ಲೋಹಿ ಜಾತಿಯ ಕುರಿಗಳು:** ಬಲೂಚಿಸ್ತಾನದ ತಳಿ. ಆದರೆ ಈ ಜಾತಿಯ ಸಣ್ಣ ಹಿಂಡುಗಳು ಪಂಜಾಬಿನಲ್ಲೂ ಕಂಡುಬರುತ್ತದೆ. ಗಾತ್ರದಲ್ಲಿ ಇವು ದೊಡ್ಡವು. ಮೈ ಬಣ್ಣ ಸಾಮಾನ್ಯವಾಗಿ ಬಿಳಿ. ಮೈಮೇಲೆ ಕಂದು ಅಥವಾ ಕಪ್ಪು ಚುಕ್ಕೆಗಳುಳ್ಳ ಕುರಿಗಳೂ ಉಂಟು. ಮುಖದ ಬಣ್ಣ ಕಪ್ಪು ಅಥವಾ ಕಂದು. ಮುಖದ ಮೇಲೆ ಉಣ್ಣೆ ಇರುವುದಿಲ್ಲ. ಕಿವಿಗಳು ಉದ್ದವಾಗಿದ್ದು, ಮೇಯುವಾಗ ನೆಲಕ್ಕೆ ತಾಗುತ್ತವೆ. ಸಾಮಾನ್ಯವಾಗಿ ಈ ಜಾತಿಯ ಕುರಿಗಳಿಗೆ ಕೋಡುಗಳಿರುವುದಿಲ್ಲ. ಕಾಲುಗಳು ಬಹಳ ಬಲವಾಗಿದ್ದು ಖಿರಗಳು ಕಪ್ಪಾಗಿರುತ್ತವೆ. ಕೆಚ್ಚಲು ಹಾಗೂ ಮೊಲೆತೊಟ್ಟುಗಳು ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ಈ ಕುರಿಗಳ ಉಣ್ಣೆ ಎಳೆ ಉರುಟು, ಉದ್ದ 3"–4". ಕಂಬಳಿ ಹಾಗೂ ಉಣ್ಣೆಬಟ್ಟೆಗಳನ್ನು ತಯಾರಿಸಲು ಇದರ ಉಪಯೋಗ. ಇದು ಉತ್ತಮ ದರ್ಜೆಯ ಮಾಂಸವನ್ನು ಹೆಚ್ಚು ಪ್ರಮಾಣದಲ್ಲಿ ಕೊಡುವ ಜಾತಿಯೆಂದು ಪ್ರಸಿದ್ಧಿ ಪಡೆದಿದೆ. ಇದನ್ನು ದೊಡ್ಡಿಯಲ್ಲಿ ಕಟ್ಟಿ ಮೇಯಿಸಿದರೂ ಚೆನ್ನಾಗಿ ಬೆಳೆದು ಮಾಂಸಖಂಡಗಳಿಂದ ತುಂಬಿಕೊಳ್ಳುತ್ತದೆ. ಹಾಲನ್ನು ಕೂಡ ಹೆಚ್ಚಿನ ಪ್ರಮಾಣದಲ್ಲಿ ಕೊಡುತ್ತದೆ. ಹಾಲಿನಲ್ಲಿ ಕೊಬ್ಬಿನ ಪ್ರಮಾಣ ಹೆಚ್ಚು ಇರುವುದರಿಂದ, ಎಮ್ಮೆಯ ಹಾಲು ಮತ್ತು ಈ ಕುರಿಗಳ ಹಾಲು ಮಿಶ್ರಮಾಡಿ ತುಪ್ಪ ತಯಾರಿಸಲು ಉಪಯೋಗಿಸುತ್ತಾರೆ. ಒಂದು ಕುರಿ ದಿನಕ್ಕೆ 8 ಪೌಂಡಿನವರೆಗೆ ಹಾಲು ಕೊಡುತ್ತದೆ. ಇವು ನಿಯತಕಾಲಗಳಲ್ಲಿ ಗರ್ಭಧರಿಸಿ ಒಂದು ಸಾರಿಗೆ 2 ಮರಿಗಳನ್ನು ಹಾಕುತ್ತವೆ.

**2. ಬಿಕನೀರ್ ಜಾತಿಯ ಕುರಿಗಳು :** ಮೂಲತಃ ಬಿಕನೀರಿನ ಮರುಭೂಮಿ ಪ್ರದೇಶದವು. ಆದರೂ ಇವನ್ನು ಪಂಜಾಬಿನ ಹಿಸ್ಸಾರ್, ರೋಹಚಕ್, ಗುರುಗಾಂವ್, ಅಂಬಾಲ, ಫಿರೋಜಪುರ ಮತ್ತು ಲೂಧಿಯಾನ ಜಿಲ್ಲೆಗಳಲ್ಲಿ ಕಾಣಬಹುದು. ತಳಿಸಂಕರಣ ಇಲ್ಲಿ ವಿಶೇಷವಾಗಿಲ್ಲ. ಈ ಕುರಿಗಳ ಮೂಲ ಸ್ಥಾನವಾದ ಬಿಕನೀರ್‌ನಲ್ಲಿ ಇವುಗಳನ್ನು ಕಾಯ್ದಿಟ್ಟ ಹುಲ್ಲುಗಾವಲುಗಳಲ್ಲಿ ಸಾಕಲಾಗುತ್ತದೆ. ದೃಢಕಾಯದ ಈ ಕುರಿಗಳು ಬರಗಾಲದ ಅತ್ಯಂತ ಕಠಿಣ ಪರಿಸ್ಥಿತಿಯನ್ನು ತಾಳಿಕೊಳ್ಳಬಲ್ಲವು. ಮರುಭೂಮಿಯಂಥ ಬಯಲು ಪ್ರದೇಶಗಳಲ್ಲಿ ಸಹ ಲಾಭದಾಯಕವಾಗುವಂತೆ ಸಾಕಬಹುದು. ಇವು ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ತಮಿಳುನಾಡಿನ ಕೆಲ ಪ್ರದೇಶಗಳಲ್ಲೂ ಸಿಗುತ್ತವೆ. ಈ ಕುರಿಗಳ ಗಾತ್ರ ಮಧ್ಯಮ ತರಗತಿಯದು; ತಲೆ ಸಣ್ಣ; ಮುಖ ಉದ್ದ, ಮೂಗು ನೀಳವಾಗಿ ತುದಿಯಲ್ಲಿ ಬಗ್ಗಿದೆ. ಕೋಡುಗಳಿಲ್ಲ. ಮುಖದ ಬಣ್ಣ ಬಿಳಿ, ಕಂದು ಅಥವಾ ಕಪ್ಪು, ಕೆಲವೊಮ್ಮೆ ಈ ಬಣ್ಣ ಕೇವಲ ಕಣ್ಣುಗಳ ಸುತ್ತ ಇರಬಹುದು. ಮೈ ಚರ್ಮ ಬಿಗಿಯಾಗಿರುತ್ತದೆ. ಉಣ್ಣೆಯ ಬಣ್ಣ ಬಿಳುಪು. ಉಣ್ಣೆ ಕೆಲವು ಕುರಿಗಳಿಗೆ ಚಪ್ಪೆ ಹಾಗೂ ಹೊಟ್ಟೆಯ ಭಾಗಗಳಲ್ಲಿ ಕಪ್ಪು ಚುಕ್ಕೆಗಳಿವೆ. ಕಪ್ಪು ಮುಖದ ಕುರಿಗಳಿಗೆ ಕಪ್ಪಾದ ಖುರಗಳಿದ್ದರೆ ಕಂದು ಮತ್ತು ಬಿಳಿ ಕುರಿಗಳಿಗೆ ಬಿಳಿ ಬಣ್ಣದ ಖುರಗಳಿರುತ್ತವೆ. ಉಣ್ಣೆ ಉರುಟಾಗಿದ್ದು ಎಳೆಗಳು ಉದ್ದವೂ ಸಹಜವಾಗಿ ತುಂಡಾಗುವಂಥವೂ ಆಗಿವೆ. ಈ ಉಣ್ಣೆಯಿಂದ ರತ್ನಗಂಬಳಿ, ಜಮಖಾನಗಳನ್ನು ಮಾಡಬಹುದಾದ್ದರಿಂದ ಇದಕ್ಕೆ ಬಹಳ ಬೇಡಿಕೆ ಇದೆ. ಉತ್ಪಾದಿಸಲಾದ ಉಣ್ಣೆಯ ಬಹುಭಾಗ ಇಂಗ್ಲೆಂಡ್, ಅಮೆರಿಕ ದೇಶಗಳಿಗೆ ರಫ್ತಾಗುತ್ತದೆ. ಈ ಉಣ್ಣೆಯಿಂದ ಟ್ವಿಲ್ ಮಾದರಿ ಬಟ್ಟೆಗಳನ್ನು ಸಹ ಮಾಡಲಾಗುತ್ತದೆ. ಈ ಜಾತಿಯ ಕುರಿ ಸಾಮಾನ್ಯವಾಗಿ ವರ್ಷಕ್ಕೆ ಒಮ್ಮೆ ಒಂದು ಮರಿಯನ್ನು ಈಯುತ್ತದೆ. ಕೆಲವು ಕುರಿಗಳು ವರ್ಷದಲ್ಲಿ ಎರಡು ಬಾರಿ ಈಯುವುದೂ ಉಂಟು.

**3. ಮಾರವಾಡೀ ಜಾತಿಯ ಕುರಿಗಳು :** ಈ ಜಾತಿಯ ಕುರಿಗಳನ್ನು ಜೋಧ್‌ಪುರ ಹಾಗೂ ಜೈಪುರ ಜಿಲ್ಲೆಗಳಲ್ಲಿ ಸಾಕಲಾಗುತ್ತಿದೆ. ಇವು ಪ್ರಪುಷ್ಟವಾಗಿವೆ. ಕಾಲುಗಳು ಬಲಿಷ್ಠ ಮತ್ತು ಉದ್ದವಾಗಿವೆ. ಮುಖದ ಬಣ್ಣ ಕಪ್ಪು. ಈ ತಳಿಗಳು ಉರುಟಾದ ಬಿಳಿ ಉಣ್ಣೆಯನ್ನು ಕೊಡುತ್ತವೆ. ವಾರ್ಷಿಕ ತಲಾ ಉತ್ಪಾದನೆ 2–4 ಪೌಂಡು.

**4. ಚೋಕಲಾ ಜಾತಿಯ ಕುರಿಗಳು :** ಇವು ರಾಜಸ್ಥಾನ, ಚೊ ಹಾಗೂ ಶಿಕಾರ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಎತ್ತರ ಕಿರಿದು, ಗಾತ್ರ ಸಣ್ಣ. ಮುಖದ ಮೇಲಿನ ಕಪ್ಪು ಅಥವಾ ಕಂದು ಕಲೆಗಳು ಈ ತಳಿಯ ವಿಶಿಷ್ಟ ಲಕ್ಷಣ; ಉಣ್ಣೆ ಮೇಲ್ದರಗತಿಯ ಕಾರ್ಪೆಟ್ ಉಣ್ಣೆಯೆಂದು ಪ್ರಸಿದ್ದಿ ಪಡೆದಿದೆ. ಒಂದು ಕುರಿಯಿಂದ ವರ್ಷಕ್ಕೆ ಸುಮಾರು 2–4 ಪೌಂಡು ಉಣ್ಣೆ ದೊರಕುತ್ತದೆ.

**5. ಕಾಠಿಯಾವಾಡ್ ಜಾತಿಯ ಕುರಿಗಳು :** ಕಾಠಿಯಾವಾಡ್, ಕಚ್ ಹಾಗೂ ಉತ್ತರ ಗುಜರಾತ್‌ಗಳಲ್ಲಿ ಈ ತಳಿಗಳನ್ನು ಕಾಣಬಹುದು. ಮುಖ ಕಂದು ಅಥವಾ ಕಪ್ಪಾಗಿದ್ದರೂ ದೇಹ ಮಾತ್ರ ಬಿಳಿ ಉಣ್ಣೆಯಿಂದ ಆಚ್ಛಾದಿತವಾಗಿರುವುದು. ಕಂದು ಬಣ್ಣದ ಮುಖ ಕಾಠಿಯಾವಾಡ್ ಕುರಿಗಳ ಪ್ರಧಾನ ಲಕ್ಷಣವಾಗಿದ್ದರೆ ಕಪ್ಪು ಮುಖ ಕಚ್ ವಲಯದ ಕುರಿಗಳ ಮುಖ್ಯ ಲಕ್ಷಣ. ಇವು ಎತ್ತರವಾದ ಕುರಿಗಳು. ಉತ್ತಮ ಜಾತಿಯ ಉಣ್ಣೆಯನ್ನು ಕೊಡುತ್ತವೆ. ಎಳೆಗಳ ಉದ್ದ ಸಾಮಾನ್ಯವಾಗಿ 4"–5".ವಿದೇಶಗಳಲ್ಲಿ ಜೋರಿಯಾ ಉಣ್ಣೆಯೆಂದು ಇದು ಪ್ರಸಿದ್ಧಿ ಹೊಂದಿದೆ. ಉಣ್ಣೆಯನ್ನು ವರ್ಷದಲ್ಲಿ ಎರಡು ಸಾರಿ ಜನವರಿ ಹಾಗೂ ನವಂಬರ್ ತಿಂಗಳುಗಳಲ್ಲಿ ಕತ್ತರಿಸುತ್ತಾರೆ. ಇವು ಮೇಲ್ದರಗತಿಯವು. ಹಾಲು ಕೂಡ ಈ ಜಾತಿಗೆ ಅಧಿಕ. ವರ್ಷದಲ್ಲಿ ಸಾಮಾನ್ಯವಾಗಿ ಈ ಕುರಿಗಳು ಎರಡುಸಾರಿ ಈಯುತ್ತವಾದರೂ ಒಂದು ಸೂಲಿಗೆ ಒಂದೇಮರಿ ಇರುವುದು ಸಾಮಾನ್ಯ.

**ದಕ್ಷಿಣ ವಲಯ :** ಉತ್ತರದಲ್ಲಿ ಮಧ್ಯ ಪರ್ವತಾವಳಿಗಳಿಂದ ದಕ್ಷಿಣದ ನೀಲಗಿರಿ ಪರ್ವತಗಳವರೆಗೆ ಹಬ್ಬಿದ ಪ್ರದೇಶಕ್ಕೆ ದಕ್ಷಿಣ ವಲಯ ಎಂದು ಹೇಳಬಹುದು. ಉತ್ತರದ ಬಯಲು ನಾಡಿಗಿಂತ ಈ ಪ್ರದೇಶದಲ್ಲಿ ಕುರಿಗಳ ಸಂಖ್ಯೆ ಹೆಚ್ಚಾಗಿದ್ದು ಅವು ಹೆಚ್ಚು ನಿಬಿಡವಾಗಿ ಹರಡಿವೆ. ಇವನ್ನು ಎರಡು ಮುಖ್ಯ ವರ್ಗಗಳನ್ನಾಗಿ ವಿಂಗಡಿಸಬಹುದು. ಕರ್ನಾಟಕ, ಆಂಧ್ರದ ಕೆಲವು ಭಾಗ, ಮಹಾರಾಷ್ಟ್ರ ರಾಜ್ಯದ ತಪ್ಪಲು–ಈ ಪ್ರದೇಶಗಳ ಕುರಿಗಳು ಒಂದು ವರ್ಗದವು. ಇವು ರಾಜಸ್ಥಾನೀ ಕುರಿ ಹಾಗೂ ಕೂದಲು ವರ್ಗದ ಉಣ್ಣೆಯನ್ನು ಕೊಡುವ ತಮಿಳುನಾಡಿನ ಕುರಿಗಳ ಮಿಶ್ರಣದಿಂದ ಹುಟ್ಟಿದವು. ಇವನ್ನು ದಖನೀ ಜಾತಿಯ ಕುರಿಗಳೆಂದು ನಾಮಕರಣಮಾಡಲಾಗಿದೆ. ಇವುಗಳಿಂದ ಬೇರೆ ಬೇರೆ ವರ್ಣದ ಉಣ್ಣೆ ದೊರಕುತ್ತದೆ. ಅದರಲ್ಲೂ ಕಪ್ಪು ಅಥವಾ ಬೂದು ಬಣ್ಣದ ಉಣ್ಣೆ ಹೆಚ್ಚಾಗಿರುವುದು. ಉಣ್ಣೆ ಕೂದಲು ಮತ್ತು ನಯವಾದ ತಂತುಗಳ ಮಿಶ್ರಣ. ಕುರಿಗಳು ಗಾತ್ರದಲ್ಲಿ ಚಿಕ್ಕವಾಗಿದ್ದರೂ ಬಲಿಷ್ಠವಾಗಿರುತ್ತವೆ. ಮೇಲಿಂದ ಮೇಲೆ ಒದಗುವ ಬರಗಾಲ ಹಾಗೂ ಅಭಾವ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬಲ್ಲವು. ಉಣ್ಣೆಯ ವಾರ್ಷಿಕ ತಲಾ ಉತ್ಪಾದನೆ ಒಂದು ಪೌಂಡು. ದಖನಿನ ತಪ್ಪಲಿನ ಪೂರ್ವ ಭಾಗದಲ್ಲಿ ಕುರಿಗಳ ಸಂಖ್ಯೆ ನಿಬಿಡವಾಗಿದೆ. ಇಲ್ಲಿಯ ಹವೆ ಉಷ್ಣ ಮತ್ತು ಆರ್ದ್ರತೆಯುಳ್ಳದ್ದು. ಕುರಿಗಳು ಕೂದಲು ವರ್ಗದ ಉಣ್ಣೆಯನ್ನು ಕೊಡುತ್ತವೆ. ಉದ್ದ ಕಾಲಿನ, ಬಡಕಲು ದೇಹದ ಈ ಕುರಿಗಳು ಅಲ್ಪ ಪ್ರಮಾಣದಲ್ಲಿ ಉಣ್ಣೆ ಕೊಡುತ್ತವೆ. ಈ ವಲಯದಲ್ಲಿ ಮುಖ್ಯವಾಗಿ ಕೆಳಗೆ ಕಾಣಿಸಿದ ಐದು ತಳಿಗಳನ್ನು ಸಾಕಲಾಗುತ್ತದೆ.

**1. ದಖನಿ ಕುರಿಗಳು :** ಸು. 15"–20" ಮಳೆಯಾಗುವ ದಖನಿನ ಎತ್ತರವಾದ ತಪ್ಪಲು ಪ್ರದೇಶ ಈ ತಳಿಗಳ ಮೂಲಸ್ಥಾನ. ಇಲ್ಲಿನ ಬಹುಸಂಖ್ಯಾತ ಕುರಿ ಸಾಕುವವರು ವರ್ಷದ ಬಹುಭಾಗದಲ್ಲಿ ತಮ್ಮ ಹಿಂಡುಗಳೊಂದಿಗೆ ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಾರೆ. ಮಾನ್ಸೂನ್ ಮಳೆಗಳ ಕಾಲದಲ್ಲಿ ಅಂದರೆ ಜೂನ್‌ನಿಂದ ನವಂಬರ್ ವರೆಗೆ ಬೀಳು ಭೂಮಿಯಲ್ಲಿ ಅಥವಾ ಗುಡ್ಡಗಾಡು ಪ್ರದೇಶಗಳಲ್ಲಿ ಕುರಿಗಳನ್ನು ಮೇಯಿಸುತ್ತಾರೆ. ನವಂಬರ್ ಅನಂತರ ಹುಲ್ಲು ನೀರಿನ ಆಸರೆ ಹುಡುಕುತ್ತ ಹೆಚ್ಚು ಮಳೆಯಾಗುವ ಪ್ರದೇಶಗಳಿಗೆ ಹೋಗುತ್ತಾರೆ. ಇದೊಂದು ಪ್ರತ್ಯೇಕ ಜಾತಿಯೆಂದು ಪರಿಗಣಿಸಲ್ಪಟ್ಟಿದ್ದರೂ ಇದರಲ್ಲಿ ತಳಿಯ ಪರಿಶುದ್ಧತೆ ಇಲ್ಲ. ಇದರ ಮೈ ಬಣ್ಣ ಬಿಳಿ ಅಥವಾ ಕಪ್ಪು. ಬಿಳಿಯಾಗಿದ್ದು ಮುಖ ಮಾತ್ರ ಕಪ್ಪಾಗಿರುವುದೂ ಉಂಟು. ಮೈ ಬಣ್ಣ ಬಿಳಿಯಾಗಿದ್ದು ಮೂಗು, ಬಾಯಿ ಗುಲಾಬಿ ವರ್ಣದ್ದಿದ್ದರೆ ಅಂಥ ಕುರಿಗಳು ಸಾಮಾನ್ಯವಾಗಿ ದುರ್ಬಲವಾಗಿರುತ್ತವೆ. ಕಪ್ಪು ಮುಖದ ಬಿಳಿ ಕುರಿಯನ್ನು ತಳಿವೃದ್ಧಿಗಾಗಿ ಆಯ್ಕೆ ಮಾಡಲಾಗುತ್ತದೆ. ಕುರಿಗಳು ಗಾತ್ರದಲ್ಲಿ ಚಿಕ್ಕವಾಗಿದ್ದರೂ ದೃಢವಾಗಿರುತ್ತವೆ. ಉಣ್ಣೆ ಕೆಳದರ್ಜೆಯದಾಗಿದ್ದು ಉರುಟಾಗಿರುತ್ತದೆ. ಇದರಲ್ಲಿ ಕೂದಲು ಹಾಗೂ ಉಣ್ಣೆಯ ತಂತುಗಳು ಬೇರೆ ಬೇರೆ ಪ್ರಮಾಣದಲ್ಲಿ ಮಿಶ್ರವಾಗಿರುತ್ತವೆ. ಉಣ್ಣೆ ಸ್ಥಳೀಯವಾಗಿ ವಿನಿಯೋಗವಾಗುತ್ತದೆ.

**2. ನೆಲ್ಲೂರು ಜಾತಿಯ ಕುರಿಗಳು :** ಮೂಲತಃ ಆಂಧ್ರಪ್ರದೇಶದ ನೆಲ್ಲೂರಿನವಾದರೂ ಈಗ ತೀರ ದಕ್ಷಿಣದ ಎಲ್ಲ ಪ್ರದೇಶಗಳಲ್ಲಿಯೂ ಇವು ಹರಡಿವೆ. ಮಸಾರಿ ಮತ್ತು



ಬನ್ನೂರು ತಳಿ, ಮರಿಯೊಂದಿಗೆ

ಎರೆನಾಡುಗಳೆರಡರಲ್ಲಿಯೂ ಈ ಕುರಿಗಳನ್ನು ಸಾಕುತ್ತಾರೆ. ಮಳೆಗಾಲದಲ್ಲಿ ಗುಡ್ಡದ ಜಾತಿಗಳಲ್ಲಿ ಮತ್ತು ಅಡವಿಗಳಲ್ಲಿ ಹಾಗೂ ನದಿಗಳ ದಂಡೆಗಳಲ್ಲಿ ಮೇಯಿಸಲಾಗುತ್ತದೆ.

ಇವು ಗಾತ್ರದಲ್ಲಿ ದೊಡ್ಡವಾದ ಬಲಿಷ್ಠ ಮೈಕಟ್ಟಿನ ಕುರಿಗಳು. ಇವುಗಳಿಂದ ಕೂದಲು ವರ್ಗದ ಉಣ್ಣೆ ದೊರೆಯುತ್ತದೆ. ಈ ಪ್ರದೇಶದ ಉತ್ತರ ಭಾಗದಲ್ಲಿ ಸಂಪೂರ್ಣ ಬಿಳಿಯಾದ ಇಲ್ಲವೆ ಮುಖ, ಹೊಟ್ಟೆ, ಕಾಲುಗಳ ಮೇಲೆ ಕಪ್ಪು ಮತ್ತು ಕಂದು ಕಲೆಗಳಿರುವ ಬಿಳಿಯ ಕುರಿಗಳು ಕಾಣಸಿಗುತ್ತವೆ. ಮೈಮೇಲೆ ದಟ್ಟವಾಗಿ ಬೆಳೆದ ಕಿರಿದಾದ ಕೂದಲುಗಳಿವೆ. ಎಲ್ಲ ಕುರಿಗಳಿಗೆ ಕೊರಳು ಮೊಲೆಗಳುಂಟು. ಟಗರುಗಳಿಗೆ ಮುರಿಗೆಕೋಡುಗಳಿವೆ. ಕುರಿಗಳಿಗೆ ಕೋಡುಗಳಿರುವುದಿಲ್ಲ. ತೀರ ದಕ್ಷಿಣದಲ್ಲಿರುವ ಕುರಿಗಳು ಗಾತ್ರದಲ್ಲಿ ಸಣ್ಣವಿದ್ದು ನಸುಗೆಂಪು ಬಣ್ಣದವಿರುತ್ತವೆ. ಈ ಕುರಿಗಳು ಸುಮಾರು 9 ತಿಂಗಳು ಅಂತರದಲ್ಲಿ ಮರಿಹಾಕುತ್ತವೆ. ಒಂದುವೇಳೆಗೆ ಒಂದೇಮರಿ. ಟಗರುಮರಿಗಳಿಗೆ ಕೊಬ್ಬು ಬೆಳೆಯುವಂತೆ ಪ್ರಯತ್ನಿಸಿ ಒಂದು ವರ್ಷವಾದೊಡನೆ ಮಾಂಸಕ್ಕಾಗಿ ಮಾರುತ್ತಾರೆ. ಕುರಿಗಳನ್ನು ಮಾತ್ರ 5–6ಮರಿಗಳನ್ನು ಹಾಕಿದ ಅನಂತರ ಮಾರಿಬಿಡುತ್ತಾರೆ. ಇದು ಉತ್ತಮವಾದ ಮಾಂಸದ ತಳಿಯೆಂದು ಪ್ರಸಿದ್ಧಿಪಡೆದಿದೆ.

**3. ಮಂಡ್ಯ ಜಾತಿಯ ಕುರಿ:** ಕರ್ನಾಟಕ ರಾಜ್ಯದಲ್ಲಿ ಇದು ಮಾಂಸದ ಜಾತಿಯ ತಳಿಯೆಂದು ಪ್ರಸಿದ್ಧಿ ಪಡೆದಿದೆ. ಈ ತಳಿಯಿಂದ ಕೂದಲು ವರ್ಗದ ಉಣ್ಣೆ ದೊರಕುತ್ತಿದೆ. ಅದರಲ್ಲಿ ಉಣ್ಣೆಯ ಅಂಶ ಬಹಳ ಕಡಿಮೆ. ಒಳ್ಳೆಯ ಮೇವು ದೊರಕಿದಲ್ಲಿ ಈ ಕುರಿಗಳು ಬಹು ಬೇಗ ಕೊಬ್ಬುತ್ತವೆ. ಇದರಿಂದ ಈ ಕುರಿಗಳಿಗೆ ಪೇಟೆಯಲ್ಲಿ ಬೇಡಿಕೆ ಬಹಳ. ಸಾಮಾನ್ಯವಾಗಿ ಇವುಗಳ ಬಣ್ಣ ಬಿಳುಪು. ಆದರೂ ಕಂದು ತಲೆಯ ಕಪ್ಪು ಕಲೆಗಳಿರುವ ಕುರಿಗಳೂ ಕಂಡುಬರುತ್ತವೆ.

**4. ಹಾಸನ ಜಾತಿಯ ಕುರಿ:** ಈ ತಳಿಯನ್ನು ಮಲೆನಾಡನ್ನು ಬಿಟ್ಟು ಕರ್ನಾಟಕ ರಾಜ್ಯದ ಮಿಕ್ಕ ದಕ್ಷಿಣ ಭಾಗದಲ್ಲಿ ಸಾಕಲಾಗುತ್ತದೆ. ಇವು ಸಣ್ಣ ಗಾತ್ರದ ಗಿಡ್ಡಕುರಿಗಳಾಗಿದ್ದು ಚೆನ್ನಾಗಿ ಮೈ ತುಂಬಿಕೊಂಡು ಬೆಳೆಯುತ್ತವೆ. ಬಣ್ಣ ಕಪ್ಪು, ಬಿಳಿ ಅಥವಾ ಕಂದು. ಸಾಮಾನ್ಯವಾಗಿ ದೇಹದ ಬಹು ಭಾಗದಲ್ಲಿ ಉಣ್ಣೆ ಬೆಳೆಯುತ್ತವೆ. ಉಣ್ಣೆ ಉರುಟಾಗಿದ್ದು ಎಳೆಗಳು 2½ – 3½" ಉದ್ದವಾಗಿರುತ್ತವೆ. ಜನವರಿ ಮತ್ತು ಜೂನ್‌ನಲ್ಲಿ ಹೀಗೆ ವರ್ಷದಲ್ಲಿ 2 ಸಾರಿ ಉಣ್ಣೆಯನ್ನು ಕತ್ತರಿಸುತ್ತಾರೆ. ಉತ್ಪಾದಿಸಲಾಗುವ ಈ ಉಣ್ಣೆಯ ಬಹು ಭಾಗವನ್ನು ಗೃಹ ಕೈಗಾರಿಕೆಗಳಿಗೆ ಬಳಸಲಾಗುತ್ತದೆ; ಮಿಲ್ಲುಗಳಿಂದಲೂ ಈ ಉಣ್ಣೆಗೆ ಬೇಡಿಕೆ ಇದೆ.

**5. ಬಳ್ಳಾರಿ ಜಾತಿಯ ಕುರಿ :** ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿಯೂ ಕರ್ನೂಲ್ ಜಿಲ್ಲೆಯ ಕೆಲ ತಾಲ್ಲೂಕುಗಳಲ್ಲಿಯೂ ಈ ಕುರಿಗಳನ್ನು ಹೆಚ್ಚಾಗಿ ಸಾಕಲಾಗುತ್ತದೆ. ಸಾಮಾನ್ಯವಾಗಿ ಒಂದು ಹಿಂಡಿನಲ್ಲಿ 100ರ ವರೆಗೆ ಕುರಿಗಳಿರುತ್ತವೆ. ರಾತ್ರಿಯ ವೇಳೆಯಲ್ಲಿ ಕುರಿಗಳನ್ನು ಗ್ರಾಮದ ಸುತ್ತು ಮುತ್ತಲಿನ ಬಯಲು ಪ್ರದೇಶದಲ್ಲಿ ಕೂಡಿ ಹಾಕುತ್ತಾರೆ. ಬೀಳು ಭೂಮಿಯಲ್ಲಿ ಹಾಗೂ ಸಮೀಪದ ಗುಡ್ಡಗಾಡು ಪ್ರದೇಶದಲ್ಲಿ ಬೆಳೆದ ಗಿಡಗಂಟಿಗಳನ್ನೂ ಹುಲ್ಲನ್ನೂ ತಿಂದು ಈ ಕುರಿಗಳು ಜೀವಿಸುತ್ತವೆ. ಇದೊಂದು ಮಿಶ್ರತಳಿ, ಬಣ್ಣ ಸಾಮಾನ್ಯವಾಗಿ ಕಪ್ಪು, ಬೂದು ಇಲ್ಲವೆ ಬಿಳಿ. ಬಿಳಿಯ ಕುರಿಗಳ ಮುಖ ಕಪ್ಪು. ಬೇರೆ ಬಣ್ಣಗಳ ಕುರಿಗಳೂ ಇವೆ. ಆದರೆ ಕಪ್ಪು ಕುರಿಗಳೇ ಹೆಚ್ಚು. ಟಗರುಗಳಿಗೆ ಮುರಿಗೆಕೋಡುಗಳಿರುತ್ತವೆ. ಹೆಣ್ಣಿಗೆ ಕೋಡು ಇರುವುದಿಲ್ಲ. ಉಣ್ಣೆ ಉರುಟು. ತಂತುಗಳು ಗುಂಗುರಾಗಿರದೆ ನೆಟ್ಟಗೆ ಇರುತ್ತವೆ. ಉತ್ಪಾದಿಸಲಾಗುವ ಉಣ್ಣೆಯ ಸುಮಾರು ಅರ್ಧ ಭಾಗ ಸ್ಥಳೀಯವಾಗಿ ಕಂಬಳಿ ಮಾಡಲು ಉಪಯೋಗಿಸಲ್ಪಡುತ್ತದೆ. ಈ ಕುರಿಯ ಮಾಂಸದಲ್ಲಿ ಕೊಬ್ಬಿನ ಪ್ರಮಾಣ ಕಡಿಮೆ. ಮಾಂಸಕ್ಕಾಗಿ ಇದನ್ನು ಸಾಕುವುದು ಅಷ್ಟೊಂದು ಲಾಭದಾಯಕವಾಗಿಲ್ಲ.

**ವಿದೇಶಿ ತಳಿಗಳು:** ಉತ್ತಮ ದರ್ಜೆಯ ಉಣ್ಣೆ, ಯಥೇಚ್ಛವಾಗಿ ಮಾಂಸ ಮತ್ತು ಹಾಲನ್ನು ಪಡೆಯುವುದಕ್ಕಾಗಿ, ಸ್ವದೇಶೀ ತಳಿಗಳ ಮೇಷ್ಟಿಗಳೊಡನೆ ಅನ್ಯ ತಳಿಗಳಾದ ಮೆರಿನೋ, ರ್‍ಯಾಂಬುಲಿ, ಶೆವಿಯೋ, ಸೌತ್‌ಡಾನ್, ಲೀಸೆಸ್ಟರ್ ಮತ್ತು ಲಿಂಕನ್‌ಗಳ ಟಗರುಗಳನ್ನು ಅಡ್ಡಹಾಯಿಸುವ ಪದ್ಧತಿಯನ್ನು ಅನೇಕ ವರ್ಷಗಳಿಂದಲೂ ಭಾರತದಲ್ಲಿ ಅನುಸರಿಸುತ್ತಿದ್ದಾರೆ.

**ಮೆರೀನೋ:** ಇದು ಪ್ರಪಂಚದಲ್ಲೆಲ್ಲ ಅತ್ಯುತ್ತಮ ದರ್ಜೆಯ ಉಣ್ಣೆಯನ್ನು ಕೊಡಬಲ್ಲ ಸ್ಪೇನ್ ದೇಶದ ತಳಿ. ಕುರಿಗಳ ಪಾದ ಮತ್ತು ಮುಖಗಳೆರಡೂ ಸಮೃದ್ಧಿಯಾಗಿ ಬೆಳೆದ ಬಿಳುಪಾದ ಉಣ್ಣೆಯಿಂದ ಆವರಿಸಲ್ಪಟ್ಟಿವೆ. ಇವು ಅತ್ಯಂತ ಗಟ್ಟಿಯಾದ್ದರಿಂದ ಎಂಥ ವಿಷಮ ವಾತಾವರಣ ಅಥವಾ ಬರಗಾಲವನ್ನೂ ಸಹಿಸಬಲ್ಲವು.

**ರ್‍ಯಾಂಬುಲೀ:** ಇದು ವಾಸ್ತವವಾಗಿ ಫ್ರಾನ್ಸಿನ ತಳಿಯಾದರೂ ಮೆರೀನೋ ತಳಿಯ ವಂಶಜ ಎಂದು ಊಹಿಸಲಾಗಿದೆ. ದಪ್ಪವಾದ ತಲೆಯುಳ್ಳ ಈ ಕುರಿಗಳ ಮೂಗು ಮತ್ತು ಕಿವಿಗಳ ಸುತ್ತ ಬಿಳಿ ಕೂದಲುಗಳಿವೆ. ಭಾರವಾದ ತುಪ್ಪಟ ಶರೀರವನ್ನೆಲ್ಲ ಒತ್ತಾಗಿ ಆವರಿಸಿದೆ. ಆದ್ದರಿಂದ ಉತ್ತಮ ದರ್ಜೆಯ ಮಾಂಸ ದೊರಕದಿದ್ದರೂ ಸುಂದರವಾದ ಮರಿಗಳೂ ನಾಜೂಕಾದ ಉಣ್ಣೆಯೂ ಈ ತಳಿಯಿಂದ ಸಿಗುತ್ತವೆ. ಟಗರುಗಳು 125 ಕೆ.ಜಿ ಮತ್ತು ಮೇಷ್ಟಿಗಳು 90 ಕೆಜಿ ತೂಗುತ್ತವೆ. ಇದು ಅತಿ ಫಲಪ್ರದ ತಳಿ. ಸಾಮಾನ್ಯ ದರ್ಜೆಯ ಸ್ವದೇಶೀ ಕುರಿಗಳೊಡನೆ ಅಡ್ಡಹಾಯಿಸುವುದರಿಂದ ಹುಟ್ಟುವ ಮರಿಗಳು ಹೆಚ್ಚು ಪ್ರಮಾಣದಲ್ಲಿ ಮಾಂಸವಿರುವ ಉತ್ತಮ ಪೀಳಿಗೆಯನ್ನು ಸೃಷ್ಟಿಸುತ್ತವೆ.

**ಶೇವಿಯೋ :** ಇದು ಸ್ಕಾಟ್ಲೆಂಡ್ ತಳಿ. ಸೆಟೆದು ನಿಂತ ಕಿವಿ, ಕಪ್ಪಾದ ಮೂಗು, ತುಟಿ ಮತ್ತು ಪಾದ, ಬಿಳಿಯ ಮುಖ ಮತ್ತು ಕಾಲುಗಳು ಇದರ ಮುಖ್ಯ ಲಕ್ಷಣಗಳು. ಇವು ಮಧ್ಯಮ ದರ್ಜೆಯ ಹಗುರವಾದ ಉಣ್ಣೆಗೆ ಪ್ರಸಿದ್ಧಿಯಾದವು.

**ಸೌತ್‌ಡೌನ್ :** ಇದು ಇಂಗ್ಲೆಂಡಿನ ಪ್ರಾಚೀನ ತಳಿಗಳಲ್ಲೊಂದು. ಅಗಲವಾದ ತಲೆ ಮತ್ತು ನಸು ಕಂದುಬಣ್ಣದ ಮುಖವುಳ್ಳ ಈ ಕುರಿಗಳ ಶರೀರ ನೀಳವಾಗಿದ್ದರೂ ಎತ್ತರ ಕಡಿಮೆ. ಕಾಲುಗಳು ಚಿಕ್ಕವು. ಪ್ರೌಢಾವಸ್ಥೆಯಲ್ಲಿ ಟಗರುಗಳು 80 ಕೆಜಿ, ಮೇಷ್ಟಿಗಳು 55



ರ್‍ಯಾಂಬುಲೀ ಟಗರು

ಕೆಜಿ ತೂಗುತ್ತವೆ. ಪ್ರತಿ ಕುರಿಯೂ 2–3 ಕೆಜಿಗಳಷ್ಟು ತುಪ್ಪಟ ಕೊಡುತ್ತದೆ. ಇತರ ಉಪತಳಿಗಳ ಉಗಮ ಕಾರ್ಯದಲ್ಲಿ ಈ ತಳಿ ಪ್ರಶಂಸನೀಯ ಪಾತ್ರವಹಿಸುತ್ತದೆ.

**ಲೀಸೆಸ್ಟರ್:** ಇದೂ ಸಹ ಇಂಗ್ಲಿಷ್ ತಳಿ. ಸಾಧಾರಣ ಗಾತ್ರದ ಈ ಕುರಿಗಳ ಮುಖ ಮತ್ತು ಕಾಲುಗಳಲ್ಲಿ ಕೂದಲಿರುವುದಿಲ್ಲ. ನೀಳವಾದ ತುಪ್ಪಟಕ್ಕೆ ಈ ತಳಿ ಪ್ರಸಿದ್ಧಿಯಾದುದು.

**ಲಿಂಕನ್:** ಇದು ಇಂಗ್ಲೆಂಡಿನ ನಾಡು ತಳಿ. ದಪ್ಪವಾದ ಕಿವಿಗಳು ಅಗಲವಾದ ತಲೆ ಮತ್ತು ಮಾಂಸಭರಿತ ಸ್ಥೂಲ ಶರೀರ ಈ ತಳಿಯ ವೈಶಿಷ್ಟ್ಯ. ಅತಿ ಫಲವತ್ಕಾರಿಯಾದ ಪ್ರತಿ ಮೇಷ್ಟಿಯಿಂದಲೂ ವರ್ಷಕ್ಕೆ 5–7 ಕೆಜಿಗಳಷ್ಟು ಉತ್ತಮ ದರ್ಜೆಯ ಉಣ್ಣೆ ಪಡೆಯುತ್ತಾರೆ. ಈ ತಳಿಯ ಟಗರುಗಳನ್ನು ವಿಶೇಷವಾಗಿ ತಳೀ ಕರಣಕ್ಕಾಗಿ ಉಪಯೋಗಿಸುತ್ತಾರೆ.

ಪ್ರಪಂಚದ ಒಟ್ಟು ಉಣ್ಣೆಯಲ್ಲಿ 1/8 ಭಾಗದಷ್ಟು ತುಪ್ಪಟ ಆಸ್ಟ್ರೇಲಿಯದ ಮೆರೀನೋ ತಳಿಯೊಂದರಿಂದಲೇ ದೊರಕುತ್ತದೆ. ಇವಲ್ಲದೆ ನ್ಯೂಜೀಲೆಂಡಿನ ರೋಮ್ನಿ ಮಾರ್ಷ್ ಮತ್ತು ಕಾರಿಡೇಲ್ಸ್ ತಳಿಗಳು ಉತ್ತಮ ದರ್ಜೆಯ ತುಪ್ಪಟಕ್ಕೂ ಮತ್ತು ತಳೀಕರಣ ಸಾಮರ್ಥ್ಯಕ್ಕೂ ಪ್ರಸಿದ್ಧಿಯಾಗಿವೆ.

**ಕುರಿ ತಳೀಕರಣ :** ತಳೀಕರಣಕ್ಕಾಗಿ ಆರಿಸುವ ಟಗರಿಗೆ ಅದರ ಪಿತೃತಳಿಯ ಎಲ್ಲ ಒಳ್ಳೆಯ ಗುಣಗಳೂ ಇರಬೇಕು. ಅದರಲ್ಲಿ ಯಾವ ನ್ಯೂನತೆಗಳೂ ಇರಬಾರದು. ವರ್ಷದ ಎಲ್ಲ ಕಾಲಗಳಲ್ಲೂ ದೃಢಕಾಯವಾಗಿರಬೇಕು. ಅಗಲವಾದ ಕಟಿ, ದಪ್ಪವಾದ ಕತ್ತು ,ಹೊರಹೊಮ್ಮಿದ ಎಲುಬುಳ್ಳ ಅಂದವಾದ ಶರೀರ ವಿಶಾಲವಾದ ಎದೆ, ಮಟ್ಟಸವಾದ ಬೆನ್ನು, ಚಂದದ ಪಾದ ಮತ್ತು ಸುಂದರ ಆಕಾರದ ತಲೆ ಇರುವ ಟಗರನ್ನು ಆರಿಸಿ ಪೋಷಿಸಬೇಕು. ಅಡ್ಡಹಾಯಿಸಲು ಬಿಡುವುದಕ್ಕೆ ಮೊದಲು ಕುರಿ ಮಂದೆಗೆ ಚೆನ್ನಾಗಿ ಒಗ್ಗಿಸಬೇಕು. ಟಗರಿನಷ್ಟೇ ವಯಸ್ಸಾದ ಸಮಕಾಲೀನ ಕುರಿಮಂದೆಗೆ ಬಿಡಬಾರದು. ಮೇಷ್ಟಿಗಳ ವಯಸ್ಸು ಟಗರಿನ ವಯಸ್ಸಿಗಿಂತ ಅಧಿಕ ಅಥವಾ ಕಡಿಮೆ ಇದ್ದರೆ ಉತ್ತಮ ಫಲ ದೊರೆಯುವುದೆಂದು ತಿಳಿದುಬಂದಿದೆ. ಬೆದೆಗಾಲದಲ್ಲಿ ಟಗರುಗಳು ಸಾಮಾನ್ಯವಾಗಿ ಮೇಯುವುದನ್ನು ನಿಲ್ಲಿಸುವುದರಿಂದ ಅವುಗಳಿಗೆ ಪೌಷ್ಟಿಕ ಆಹಾರವನ್ನು ಕೊಟ್ಟು ಕಾಪಾಡಬೇಕು. ಒಳ್ಳೆಯ ಮೈಕಟ್ಟುಳ್ಳ ಒಂದು ಟಗರು ಸುಮಾರು 30–40 ಕುರಿಗಳಿಗೆ ಗರ್ಭಾದಾನ ಮಾಡಬಲ್ಲದು. ಬೆದೆಕಾಲದ ಅನಂತರ ಟಗರನ್ನು ಮಂದೆಯಿಂದ ಬೇರ್ಪಡಿಸಬೇಕು. ಉತ್ತಮ ತಳಿಯ ಪ್ರಾಯದ ಕುರಿಗಳು ಅಗ್ಗವಾಗಿ ದೊರಕುವುದು ಅಸಂಭವವಾದ್ದರಿಂದ, ತಳಿಯ ಹೆಣ್ಣುಮರಿಗಳು ಹಾಲುಣ್ಣುವುದನ್ನು ಬಿಟ್ಟಕೂಡಲೇ ತಂದು ಸಾಕುವುದು ಉತ್ತಮ. ಹುಟ್ಟಿದ ಮೇಲೆ 7–14 ತಿಂಗಳೊಳಗೆ ಕುರಿ ಬೆದೆಗೆ ಬರಲು ಪ್ರಾರಂಭಿಸಿ, 7 ವರ್ಷಗಳವರೆಗೂ ಗರ್ಭಧರಿಸಬಲ್ಲುದು. ಉತ್ಕೃಷ್ಟವಾದ ಫಲ ಪಡೆಯಲು 2½–2 ವರ್ಷದ, ಅಂದರೆ ನಾಲ್ಕು ಹಲ್ಲಿಕ್ಕಿದ ಕುರಿಯನ್ನು ಆರಿಸಬೇಕು. ಕ್ಷಾಮಪೀಡಿತ ಪ್ರದೇಶಗಳಲ್ಲಿ 3–4 ಮರಿಗಳನ್ನು ಹಾಕಿದ ಮೇಲೆ ಕುರಿಗಳು ಪುನರ್ಗರ್ಭಧಾರಣೆಗೆ ಯೋಗ್ಯವಲ್ಲ. ತಳದೂಗುವ ನೀಳವಾದ ಮೈಕಟ್ಟು, ಚೆನ್ನಾಗಿ ರೂಪುಗೊಂಡ ಕೆಚ್ಚಲು,

ಚಟುವಟಿಕೆಯಿಂದ ಮೇಯುವ ಹಾಗು ಮರಿಗಳಿಗೆ ಹಾಲುಣಿಸುವುದರಲ್ಲಿ ಅತ್ಯುತ್ಸಾಹ ತೋರುವ ಕುರಿಗಳನ್ನು ಆರಿಸುವುದರಿಂದ ಉತ್ತಮ ಫಲ ದೊರಕುವುದು. ಉಣ್ಣೆಗಾಗಿ ಉಪಯೋಗಿಸುವ ಕುರಿಗಳನ್ನು ಉಣ್ಣೆಗೆ ಪ್ರಸಿದ್ಧಿಯಾದ ತಳಿಗಳಿಂದಲೇ ಆಯ್ಕೆ ಮಾಡಬೇಕು. ಬೆದೆಗೆ ಬರುವುದಕ್ಕೆ ಎರಡು ವಾರ ಮೊದಲೇ ಕಾಳು ಮುಂತಾದ ಧಾನ್ಯಗಳಿಂದ ಪೋಷಿಸಬೇಕು. ಗರ್ಭಧರಿಸಿದ ಕುರಿಗಳಿಗೆ ಪೌಷ್ಟಿಕಾಹಾರವನ್ನು ಕೊಟ್ಟರೆ, ಊನ ಹಾಗು ದುರ್ಬಲವಾದ ಮರಿಗಳು ಕಡಿಮೆಯಾಗಿ ರೋಗರುಜಿನಗಳಿಲ್ಲದೆ ಉತ್ತಮವಾದ ಮರಿಗಳ ಸಂಖ್ಯೆ ಹೆಚ್ಚುತ್ತದೆ. ಶ್ರೇಷ್ಠದರ್ಜೆಯ ಉಣ್ಣೆಯು ಹೆಚ್ಚುತ್ತದೆ. ಈಯುವ ಕಾಲ ಬಂದಾಗ ಕುರಿಗಳನ್ನು ವಾತವರಣದ ವೈಪರೀತ್ಯದಿಂದ ರಕ್ಷಿಸಿದ ಕುರಿಹಟ್ಟಿಗಳಲ್ಲಿಡಬೇಕು. ಬಾಣಂತಿ ಕುರಿಗಳನ್ನು ಕೆಲವು ದಿನಗಳವರೆಗೆ ಬಹು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಅಂತೆಯೇ ಮೊದಲ 48 ಗಂಟೆಗಳ ಕಾಲ ಅಥವಾ ತಾವೇ ಹಾಲುಣ್ಣಲು ಪ್ರಯತ್ನಿಸುವ ತನಕ ಮರಿಗಳಿಗೆ ಆರೈಕೆ ಮಾಡುವುದು ಉತ್ತಮ. ಹುಟ್ಟಿದ 7–14 ದಿವಸಗಳ ಅವಧಿಯ ಮರಿಗಳಿಗೆ ಹಿಡ ಮಾಡಲು ಯೋಗ್ಯವಾದ ಕಾಲ. ಈ ಅವಧಿಯಲ್ಲೇ ಚಾಕು ಅಥವಾ ಕಾದ ಕಬ್ಬಿಣದಿಂದ ಬಾಲವನ್ನು ಕತ್ತರಿಸಬಹುದು(ಡಾಕಿಂಗ್). ಇದರಿಂದ ಮಲ ಶೇಖರಣೆಯಿಂದ ಉದ್ಭವಿಸುವ ಕೀಟವ್ಯಾಧಿಗಳಿಂದ ಕುರಿಗಳನ್ನು ರಕ್ಷಿಸಬಹುದು. ಕುರಿಹಟ್ಟಿಗಳ ನಿರ್ಮಾಣಕ್ಕೆ ಅಷ್ಟೇನೂ ಖರ್ಚು ತಗುಲುವುದಿಲ್ಲ. ಎತ್ತರವಾದ ಪ್ರದೇಶಗಳಲ್ಲಿ ಹಗುರವಾದ ಗೂಟಗಳನ್ನು ನೆಟ್ಟು ರಕ್ಷಿಸಬಹುದು. ಕೂಡಿಟ್ಟು ಸಾಕುವ ಕುರಿಗಳಿಗೆ ಕುರಿಹಟ್ಟಿಗಳಲ್ಲಿ ಚರಣಿಗೆ ಮತ್ತು ತೊಟ್ಟಿ ಮುಂತಾದ ಸೌಲಭ್ಯಗಳಿರಬೇಕು.

**ಕುರಿಗಳ ಆಹಾರ:** ಸಸಾರಜನಕ ವಸ್ತುಗಳು, ಕ್ಯಾಲ್ಸಿಯಂ ಮತ್ತು ರಂಜಕವೇ ಮುಂತಾದ ಖನಿಜಾಂಶಗಳು, ಶರ್ಕರ ಪಿಷ್ಟಾದಿಗಳು, ಕೊಬ್ಬು ಮತ್ತು ಜೀವಸತ್ವಗಳು ಕುರಿಗಳ ಬೆಳವಣಿಗೆಗೆ ಅತ್ಯವಶ್ಯಕವಾದ ಪದಾರ್ಥಗಳು. ಸಾಮಾನ್ಯವಾಗಿ ತೇವಾಂಶವಿಲ್ಲದ ಎಳಸಾದ ಹುಲ್ಲು, ಗರಿಕೆ, ಚಿಗುರು, ದ್ವಿದಳ ಧಾನ್ಯ, ತವುಡು, ಹಿಂಡಿ ಮುಂತಾದ ವಸ್ತುಗಳನ್ನು ಕೊಡಬೇಕು. ದ್ವಿದಳ ಸಸ್ಯಗಳಾದ ಅಲಸಂದೆ, ಹುರುಳಿ, ಹೆಸರು, ಉದ್ದು, ಕುದುರೆಮಸಾಲೆಸೊಪ್ಪು, ಮುಂತಾದ ಗಿಡಗಳ ಎಲೆಗಳನ್ನೂ ಅಗಸೆ ಮತ್ತು ಗೊಬ್ಬಳಿಯ ಕಾಯಿ ಮತ್ತು ಎಲೆಗಳೆರಡನ್ನೂ ಕಂಡರೆ ಕುರಿಗಳಿಗೆ ಬಲು ಪ್ರೀತಿ. ಗೆಣಸಿನ ಬಳ್ಳಿಗಳು ಕುರಿಮರಿಗಳಿಗೆ ಬಲು ಅಚ್ಚುಮೆಚ್ಚಿನ ಆಹಾರ.

ವಯಸ್ಸು ಮತ್ತು ತೂಕಕ್ಕನುಗುಣವಾಗಿ ದಿನಕ್ಕೆ ತಲಾ 1–2 ಕೆ.ಜಿ.ಗಳಷ್ಟು ದ್ವಿದಳಸಸ್ಯಗಳ ಸೊಪ್ಪು ಬೇಕಾಗುವುದು. ಅಭಾವ ಕಾಲದಲ್ಲಿ 110–225 ಗ್ರಾಂ ಗಳಷ್ಟು ಕಡಲೇಕಾಯಿ ಮತ್ತು ಎಳ್ಳು ಹಿಂಡಿಯನ್ನುಕೊಟ್ಟು ಸಾಕಬಹುದು. ಸುಣ್ಣ ಮತ್ತು ಉಪ್ಪನ್ನು ಸಮಪ್ರಮಾಣದಲ್ಲಿ ಬೆರಸಿ, ಹುಲ್ಲು ಮತ್ತು ಚಿಗುರೆಲೆಗಳೊಡನೆ ಮಿಶ್ರಾಹಾರವಾಗಿ ಕೊಡುವುದು ಉತ್ತಮ. ಹುಲ್ಲು ಬಲಿತಿದ್ದರೆ ಸಸಾರಜನಕಾಂಶ ಕಡಿಮೆಯಾಗಿಯೂ ತೇವದಿಂದ ಕೂಡಿದ್ದರೆ ಪರತಂತ್ರ ಜೀವಿಗಳ ಕಾಟ ಅತಿಯಾಗಿಯೂ ಇರುವುದರಿಂದ ಯಾವಾಗಲೂ ತೇವರಹಿತವಾದ ಮತ್ತು ಎಳಸಾದ ಹುಲ್ಲನ್ನೇ ಕೊಡಬೇಕು. ಗರ್ಭಾದಾನಕ್ಕಾಗಿ ಉಪಯೋಗಿಸುವ ಟಗರುಗಳಿಗೆ ದಿನಕ್ಕೆ 200–450 ಗ್ರಾಂ ಮಿಶ್ರಾಹಾರ ಕೊಡಬೇಕು. ಪ್ರಾಯದ ಕುರಿಗಳು ಬೇಗ ಬೆದೆಗೆ ಬರುವುದಕ್ಕಾಗಿ ದಿನಕ್ಕೆ 200–250 ಗ್ರಾಂ ಗಳಷ್ಟು ಬಾರ್ಲಿ, ಓಟ್ಸ್, ಮತ್ತು ಜೋಳವನ್ನು ಕೊಡಬೇಕು. ಕುರಿಗಳು ಬಹು ಸ್ಥೂಲವಾಗಿದ್ದರೆ ಮೊದಲು ಶರೀರವನ್ನು ಕ್ಷೀಣಿಸಿ, ಅನಂತರ ಬೆದೆಗೆ ಬರಲು ಅನುಕೂಲವಾಗುವ ಆಹಾರವನ್ನು ಕೊಡುವುದು ಉತ್ತಮ. ಎಲ್ಲ ಕುರಿಗಳಿಗೂ ಕುಡಿಯಲು ದಿನವೂ ಸಾಕಷ್ಟು ನೀರನ್ನು ಒದಗಿಸಬೇಕು. ಗರ್ಭ ಧರಿಸಿದ ಕುರಿಗೆ ಮೊದಲು ಕೊಡುತ್ತಿದ್ದ ಆಹಾರದ ಜೊತೆಗೆ, 110 ಗ್ರಾಂನಿಂದ ಕ್ರಮೇಣ 225 ಗ್ರಾಂ ಗಳಷ್ಟು ಹೆಚ್ಚುವರಿ ಧಾನ್ಯ ಕೊಡಬೇಕು. ಮಾಂಸಕ್ಕಾಗಿಯೇ ಬೆಳೆಸುವ ಪ್ರತಿ ಕುರಿಮರಿಗೆ ದಿನಕ್ಕೆ 110–450 ಗ್ರಾಂಗಳಷ್ಟು ಮಿಶ್ರಾಹಾರವನ್ನು (1 ಭಾಗ ತವುಡು + 2 ಭಾಗ ಧಾನ್ಯ + 3 ಭಾಗ ಹಿಂಡಿಯ ಮಿಶ್ರಣ) ಕೊಡುವುದು ಉತ್ತಮ.

ಭಾರತೀಯ ತಳಿಗಳ ಗುಣಮೌಲ್ಯ ಹಾಗೂ ಸಂಖ್ಯಾಭಿವೃದ್ಧಿಗಾಗಿ ಕೆಳಕಂಡ ಮೂರು ವಿಧಾನಗಳನ್ನು ಅನುಸರಿಸುವರು. 1. ಸ್ವಕೀಯ ತಳೀಕರಣ, 2. ಪರಕೀಯ ತಳೀಕರಣ, 3. ಅಂತಸ್ತು ಗೊಳಿಸುವಿಕೆ(ಗ್ರೇಡಿಂಗ್).

**1. ಸ್ವಕೀಯ ತಳೀಕರಣ:** ಶ್ರೇಷ್ಠ ಗುಣಗಳುಳ್ಳ ಅನೇಕ ಟಗರುಗಳನ್ನಾರಿಸಿ ಒಂದು ಮಂದೆಗೆ ಒಂದರಂತೆ ಅದೇ ತಳಿಯ ವಿವಿಧ ಕುರಿಮಂದೆಗಳಿಗೆ ಬಿಡುವುದರಿಂದ, ತಾಯಿಕುರಿಗಳಿಗಿಂತಲೂ ಶ್ರೇಷ್ಠಗುಣಗಳುಳ್ಳ ಉತ್ಕೃಷ್ಟ ಮರಿಗಳನ್ನು ಯಾವ ಟಗರಿನಿಂದ ಪಡೆಯಬಹುದೆಂಬ ಅಂಶವನ್ನು ನಿರ್ಧರಿಸಬಹುದು. ಅನಂತರ ಅಂಥ ಉತ್ತಮ ಟಗರುಗಳನ್ನೇ ತಳೀಕರಣಕ್ಕಾಗಿ ಉಪಯೋಗಿಸಿದರೆ ಮುಂಬರುವ ಪೀಳಿಗೆಯ ಗುಣಮೌಲ್ಯ ಉತ್ತಮಗೊಳ್ಳುತ್ತದೆ. ಈ ಬಗೆಯ ಸ್ವಕೀಯ ತಳೀಕರಣದಿಂದ ದುರ್ಬಲ ಮರಿಗಳು ಆಕಸ್ಮಿಕವಾಗಿ ಉದ್ಭವಿಸಿದರೆ ಅವನ್ನು ತ್ಯಜಿಸುವುದು ಒಳ್ಳೆಯದು.

**2. ಪರಕೀಯ ತಳೀಕರಣ:** ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ ಪಂಜಾಬು, ಜಮ್ಮು ಮತ್ತು ಕಾಶ್ಮೀರಗಳಲ್ಲಿ ನಾಜೂಕಾದ ಉಣ್ಣೆಗಾಗಿ ನವ್ಯ ತಳಿಯನ್ನು ಪಡೆಯಲು ಈ ವಿಧಾನವನ್ನು ಅನುಸರಿಸುತ್ತಾರೆ. ಸ್ವದೇಶಿ ತಳಿಯ ಕುರಿಗಳಿಗೆ ಅನ್ಯ ತಳಿಯಾದ ಮೆರಿನೋ ಟಗರನ್ನು ಅಡ್ಡ ಹಾಯಿಸುವರು. ಇದರಿಂದ ತಾಯಿ ತಳಿಗಿಂತಲೂ ಶ್ರೇಷ್ಠದರ್ಜೆಯ ಉಣ್ಣೆ ನೀಡುವ ಮೊದಲ ಪೀಳಿಗೆಯ ಮರಿಗಳು ಹುಟ್ಟುತ್ತವೆ. ಈ ಪೀಳಿಗೆಯ ಮರಿಗಳಿಗೆ ಮೆರಿನೋ ಟಗರುಗಳನ್ನು ಮತ್ತೆ ಹಾಯಿಸುವುದರಿಂದ ಉದ್ಭವಿಸುವ ಎರಡನೆ ಪೀಳಿಗೆ ಮೊದಲ ಪೀಳಿಗೆಗಿಂತ ಶ್ರೇಷ್ಠವಾಗಿರುತ್ತವೆ. ಈ ಬಗೆಯ, ಅಡ್ಡಹಾಯುವಿಕೆಯನ್ನು ಮುಂದುವರಿಸಿದರೆ, ಕ್ರಮೇಣ ಸ್ವದೇಶೀ ಮತ್ತು ಅನ್ಯ ತಳಿಗಳ ಶ್ರೇಷ್ಠ ಗುಣಗಳುಳ್ಳ ಒಂದು ನೂತನ ಮಿಶ್ರತಳಿ ಉದ್ಭವವಾಗುತ್ತದೆ. ಈ ರೀತಿಯ ಪರಕೀಯ ತಳೀಕರಣದಿಂದ ನಾಜೂಕಾದ ತುಪ್ಪಟವೀಯುವ ಹಿಸಾರ್ಡೇಲ್ ಎಂಬ ವಿನೂತನ ತಳಿಯನ್ನು ಹರಿಯಾಣದ ಹಿಸ್ಸಾರ್ ಪಟ್ಟಣದಲ್ಲಿ ಪಡೆಯಲಾಗಿದೆ.

**3. ಅಂತಸ್ತುಗೊಳಿಸಿಕೆ:** ಯಾವುದಾದರೊಂದು ತಳಿಯ ಕುರಿಗಳ ಮಾಂಸ ಅಥವಾ ತುಪ್ಪಟವನ್ನು ಸುಧಾರಿಸಲು ಈ ಕ್ರಮವನ್ನು ಅನುಸರಿಸುತ್ತಾರೆ. ಯಾವ ತಳಿಯಲ್ಲಿ ಇಚ್ಛಿಸಿದ ಗುಣ ವೃದ್ಧಿಯಾಗಬೇಕೋ ಆ ತಳಿಯ ಕುರಿಮಂದೆಗೆ ಉತ್ಕೃಷ್ಟ ಗುಣವುಳ್ಳ ಒಂದು ಶುದ್ಧ ತಳಿಯ ಟಗರನ್ನು ಬಿಡುತ್ತಾರೆ. ಇದರಿಂದ ಪ್ರಥಮ ಪೀಳಿಗೆಯ ಶೇ. 50ರಷ್ಟು ಸುಧಾರಿಸುತ್ತದೆ. ಆದರೂ ಐದನೆಯ ಪೀಳಿಗೆಯ ತನಕವೂ ಎಲ್ಲ ಪೀಳಿಗೆಯ ಕುರಿಗಳಿಗೂ ಸತತವಾಗಿ ಶುದ್ಧ ತಳಿಯ ಟಗರನ್ನು ಅಡ್ಡ ಹಾಯಿಸುತ್ತಾರೆ. ನಿರೀಕ್ಷಿಸಿದ ಮಟ್ಟಕ್ಕೆ ಎಲ್ಲ ಕುರಿಗಳ ಗುಣವರ್ಧನೆಯಾಗುವವರೆಗೂ ಪ್ರತಿ ಪೀಳಿಗೆಯ ಗಂಡು ಮರಿಗಳಿಗೆ ಅವು ಪ್ರಾಯಕ್ಕೆ ಬರುವುದಕ್ಕೆ ಮೊದಲೇ ಗರ್ಭದಾನಕ್ಕೆ ಅವಕಾಶಕೊಡುವುದಿಲ್ಲ.

**ಕೃತಕ ಗರ್ಭದಾನ:** ಕುರಿಗಳ ಪಾಲನೆ, ಪೋಷಣೆ ಮತ್ತು ಸಂತಾನಕ್ರಿಯೆಗಳನ್ನು ಮೇಲ್ಕಂಡ ಸುಧಾರಿತ ಕ್ರಮಗಳಿಂದ ಉತ್ತಮಪಡಿಸಿದರೂ ಸ್ವದೇಶೀ ತಳಿಗಳ ದೇಹ ಪ್ರಕೃತಿಯನ್ನು ಸುಧಾರಿಸಿದ ಹೊರತೂ ಭಾರತದಲ್ಲಿ ಕುರಿಕೃಷಿ ಏಳಿಗೆ ಹೊಂದಲಾರದು. ಉತ್ತಮವಾದ ವಿದೇಶೀ ತಳಿಗಳು ಭಾರತದ ಹವೆಗೆ ಒಗ್ಗದಿರುವುದರಿಂದಲೂ ಉತ್ಕೃಷ್ಟಗುಣವುಳ್ಳ ಟಗರುಗಳ ಸಂಖ್ಯೆ ಅತ್ಯಲ್ಪವಾದ್ದರಿಂದಲೂ ಅಧಿಕ ಸಂಖ್ಯೆಯ ಕುರಿಗಳು ಏಕಕಾಲದಲ್ಲಿ ಬೆದೆಗೆ ಬರುವುದರಿಂದಲೂ ಕೃತಕ ಗರ್ಭಾಧಾನ ಕ್ರಮ ಅನಿವಾರ್ಯ. ಟಗರು ಸ್ಖಲಿಸಿದ ವೀರ್ಯವನ್ನು ಕಡಿಮೆ ಉಷ್ಣತೆಯಲ್ಲಿಟ್ಟರೆ ಒಂದು ವಾರದವರೆಗೂ ಕೆಡದಂತೆ ರಕ್ಷಿಸಬಹುದು. ಅಲ್ಲದೆ ವೀರ್ಯಕಾರಕಗಳಾದ ಎಗ್–ಯೋಕ್ ಸಿಟ್ರೇಟ್ ಮತ್ತು ಬೈಕಾರ್ಬೊನೇಟ್–ಫಾಸ್ಫೇಟ್‌ಗಳಲ್ಲಿ 1–0°ಸೆ. ಅಥವಾ 15°–20° ಸೆ. ಉಷ್ಣತೆಯಲ್ಲಿ ಶೇಖರಿಸಿಟ್ಟರೆ ಬಹು ದೀರ್ಘಕಾಲ ರಕ್ಷಿಸಬಹುದೆಂದು ತಿಳಿದುಬಂದಿದೆ. ಹೀಗೆ ಶೇಖರಿಸಿಟ್ಟ ವೀರ್ಯದ ಪ್ರಮಾಣವನ್ನು ಹೆಚ್ಚಿಸಿ ಕುರಿಗಳು ಬೆದೆಗೆ ಬಂದಾಗ ಯೋನಿಯ ಮೂಲಕ ಕೃತಕವಾಗಿ ಸೇರಿಸಿ ಗರ್ಭದಾನ ಮಾಡಬಹುದು. ಒಂದು ಶ್ರೇಷ್ಠ ಟಗರು ಒಮ್ಮೆ ಸ್ಖಲಿಸಿದ ವೀರ್ಯದಿಂದ ಸುಮಾರು 30–40 ಕುರಿಗಳಿಗೆ ಗರ್ಭದಾನ ಮಾಡಬಹುದು.

**ಕುರಿಸಾಕಣೆಯ ಉದ್ಯೋಗ:** ಕುರಿಯಿಂದ ನಮಗೆ ಮಾಂಸ, ಹೊದಿಕೆ ತಯಾರಿಸಲು ಉಣ್ಣೆ, ದೊರಕುತ್ತವೆ; ಇವಲ್ಲದೆ ಗೊಬ್ಬರ, ಚರ್ಮ, ಹಾಲು ಮುಂತಾದವುಗಳೂ ದೊರಕುತ್ತವೆ. ಭಾರತದ ಒಟ್ಟು ಉಣ್ಣೆಯ ವಾರ್ಷಿಕ ಉತ್ಪಾದನೆ 54 ದಶಲಕ್ಷ ಪೌಂಡುಗಳಷ್ಟಾಗುವುದು. ಉಣ್ಣೆ ಸಾಮಾನ್ಯವಾಗಿ ಕೆಳದರ್ಜೆಯದಾಗಿದ್ದು ಕೂದಲು ಮಿಶ್ರಿತವಾಗಿರುತ್ತದೆ. ಅಲ್ಲದೆ ಅದರಲ್ಲಿ ಕಪ್ಪು ಮತ್ತು ಬೇರೆಬೇರೆ ಬಣ್ಣದ ಉಣ್ಣೆಯೇ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಉಣ್ಣೆಯ ತಲಾವಾರ್ಷಿಕ ಉತ್ಪಾದನೆ ಬೇರೆ ಬೇರೆ ತಳಿಗಳಲ್ಲಿ ಬೇರೆಬೇರೆಯಾಗಿರುತ್ತದೆ. ಅಂದರೆ ಸುಮಾರು 8/3 ಪೌಂಡಿನಿಂದ 4 ಪೌಂಡಿನವರೆಗೆ ಇರುತ್ತದೆ. ಬಿಳಿಯ ಉಣ್ಣೆಗೆ ವಿದೇಶಗಳಿಂದ ಚೆನ್ನಾಗಿ ಬೇಡಿಕೆ ಇದ್ದು ಜಮಖಾನೆ, ರತ್ನಗಂಬಳಿಗಳನ್ನು ತಯಾರಿಸಲು ಅದನ್ನು ಬಳಸಲಾಗುತ್ತಿದೆ. ದೇಶದ ಬಟ್ಟು ಉತ್ಪಾದನೆಯಲ್ಲಿ ಸುಮಾರು ಅರ್ಧದಷ್ಟು ಎಂದರೆ ಸುಮಾರು 8 ಕೋಟಿ ರೂಪಾಯಿಗಳ ಬೆಲೆಯ ಉಣ್ಣೆಯನ್ನು ಪರದೇಶಗಳಿಗೆ ರಫ್ತುಮಾಡಲಾಗುತ್ತದೆ. ದೇಶದ ಆಂತರಿಕ ಬೇಡಿಕೆ ಅಂದರೆ ಮಿಲ್ಲುಗಳಿಗೆ ಹಾಗೂ ಗೃಹಕೈಗಾರಿಕೆಗಳಿಗೆ ವರ್ಷಕ್ಕೆ ಸುಮಾರು 32–63 ದಶಲಕ್ಷ ಪೌಂಡು ಉಣ್ಣೆಯ ಆವಶ್ಯಕತೆ ಇದೆ. ದೇಶದ ಬಹು ಸಂಖ್ಯಾತ ಜನರಿಗೆ ಉಣ್ಣೆಯ ಆವಶ್ಯಕತೆ ಇರುವುದಲ್ಲದೆ ನಮ್ಮ ಸಂರಕ್ಷಣಾ ಪಡೆಗಳಿಗೂ ಉಣ್ಣೆಯ ಬಟ್ಟೆಗಳ ಆವಶ್ಯಕತೆ ಅಧಿಕವಾಗಿದೆ. ದೇಶದ ಉಣ್ಣೆಯ ಆಂತರಿಕ ಬಳಕೆಯ ಶೇಕಡಾ ಪ್ರಮಾಣವನ್ನು ಕೆಳಗಿನಂತೆ 5 ಭಾಗಗಳಾಗಿ ವರ್ಗೀಕರಿಸಬಹುದು. (i) ಕಂಬಳಿಗಳ ತಯಾರಿಕೆಗೆ 49.6, (ii) ಬಟ್ಟೆ ಹಾಗೂ ಹೆಣೆಯುವ ನೂಲು ತಯಾರಿಸಲು 28.7, (iii) ಜಮಖಾನೆ ಹಾಸುಗಂಬಳಿಗಳಿಗೆ 11.6, (iv) ಗೃಹಕೈಗಾರಿಕೆಗೆ ಬೇಕಾದ ನೂಲು ತಯಾರಿಕೆಗೆ 6.8 (v) ಶಾಲು ತಯಾರಿಕೆ ಮುಂತಾದ ಇತರ ಉದ್ಯೋಗಗಳಿಗೆ 3.3.

ಉಣ್ಣೆಯ ಗಿರಣಿಗಳು ಪಂಜಾಬ್, ಉತ್ತರ ಪ್ರದೇಶ, ಮುಂಬಯಿ, ಬೆಂಗಳೂರು ಮತ್ತು ಕಾಶ್ಮೀರಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ.

ಕುರಿಯ ಮಾಂಸ ಒಳ್ಳೆಯ ಪೌಷ್ಟಿಕ ಆಹಾರವಾಗಿದ್ದು ಭಾರತದ ಬಹುಸಂಖ್ಯಾತ ಜನರಿಗೆ ಅತ್ಯವಶ್ಯವಾಗಿದೆ. ಕೇವಲ ಮಾಂಸದ ಮಾರಾಟದಿಂದ ಕುರಿವ್ಯವಸಾಯಕ್ಕೆ ಬಹು

ಕೋಟಿ ರೂಪಾಯಿ ವಾರ್ಷಿಕ ಆದಾಯವಿದೆಯೆಂದು ಅಂದಾಜು ಮಾಡಲಾಗಿದೆ. ಭಾರತದ ಆಂತರಿಕ ಬೇಡಿಕೆ ದಿನೇ ದಿನೇ ಹೆಚ್ಚುತ್ತ ನಡೆದಿದೆ. ಕುರಿಯಿಂದ ದೊರೆವ ಮತ್ತೊಂದು ಹುಟ್ಟುವಳಿಯೆಂದರೆ ಅದರ ಗೊಬ್ಬರ. ಕುರಿಯ ಗೊಬ್ಬರ ಬೆಳೆಗಳಿಗೆ ಮಹತ್ವದ ಆಹಾರಘಟಕಗಳನ್ನು ಒದಗಿಸುತ್ತದೆ. ಸಾಗುವಳಿ ಪ್ರದೇಶಗಳಲ್ಲಿ ಇದಕ್ಕೆ ಬಹಳ ಬೇಡಿಕೆಯುಂಟು. ಒಂದು ಕುರಿಯಿಂದ ವರ್ಷಕ್ಕೆ ಸುಮಾರು 0.5 ಟನ್ನಿನಿಂದ 0.7 ಟನ್ನಿನಷ್ಟು ಗೊಬ್ಬರ ದೊರಕುತ್ತದೆ. ಕುರಿಯ ಗೊಬ್ಬರದಲ್ಲಿ ಸಾರಜನಕ ಮತ್ತು ರಂಜಕಗಳ ಪ್ರಮಾಣ ದನಗಳ ಗೊಬ್ಬರದಲ್ಲಿರುವ ಪ್ರಮಾಣಕ್ಕಿಂತ ಇಮ್ಮಡಿ. ಕುರಿಗಳ ಹಾಲು, ಚರ್ಮದಿಂದಲೂ ಕೊಂಚಮಟ್ಟಿಗೆ ಉತ್ಪನ್ನ ಬರುತ್ತದೆ. ಕುರಿಗಳು ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ಜೀವಿಸಲಾರವು. ಕಡಿಮೆ ಮಳೆಯಾಗುವ ಮತ್ತು ಒಣಹವೆಯ ಪ್ರದೇಶಗಳಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದುತ್ತವೆ. ಮೂವತ್ತು ಅಂಗುಲಕ್ಕಿಂತ ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿಯೇ ಕುರಿಗಳ ಸಂಖ್ಯೆ ನಿಬಿಡವಾಗಿದೆ. ಮಳೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕುರಿಗಳ ರಕ್ಷಣೆಗೆ ಕೊಟ್ಟಿಗೆ ಅವಶ್ಯವಾಗಿ ಬೇಕು. ಜೌಗು ಪ್ರದೇಶ ಕುರಿಗಳಿಗೆ ಮಾರಕವೆನಿಸುವುದು. ತಮ್ಮ ಮುಂದಾಳನ್ನು ಹಿಂಬಾಲಿಸಿ ಹೋಗುವುದು ಕುರಿಗಳಲ್ಲಿ ಬಂದ ರಕ್ತಗತ ಗುಣ. ಈ ಕಾರಣದಿಂದ ಕುರಿಸಾಕುವವರು ತಮ್ಮ ಹಿಂಡುಗಳಲ್ಲಿ ಕೆಲವು ಆಡುಗಳನ್ನು ಸಾಕುತ್ತಾರೆ. ಸ್ಥಳದಿಂದ ಸ್ಥಳಕ್ಕೆ ಹೋಗುವಾಗ ಕುರಿಗಳು ಈ ಆಡುಗಳನ್ನು ಹಿಂಬಾಲಿಸಿ ಹೋಗುತ್ತವೆ. ಸಾಗುವಳಿ ಪ್ರದೇಶಗಳಲ್ಲಿ ಕುರಿಗಳನ್ನು ಸಾಕಿದವರು, ಕುರಿಗಳ ಈ ಸ್ವಭಾವದ ಲಾಭವನ್ನು ಚೆನ್ನಾಗಿ ಮಾಡಿಕೊಳ್ಳುತ್ತಾರೆ. ಕುರಿಗಳ ಆಯುರ್ಮಾನ ಸಾಮಾನ್ಯವಾಗಿ 10–12 ವರ್ಷಗಳು. ಆದರೆ ಕುರಿ ಸಹಜವಾಗಿ ಸಾಯುವವರೆಗೆ ಅದನ್ನು ಯಾರೂ ಇರಗೊಡುವುದಿಲ್ಲ. ಅದರಿಂದ ಉತ್ಪಾದನೆ ಕಡಿಮೆಯಾದೊಡನೆ ಅದನ್ನು ಮಾಂಸಕ್ಕಾಗಿ ಮಾರುವುದುಂಟು. ಚೆನ್ನಾಗಿ ಸಾಕಿದ ನಿರೋಗಿ ಕುರಿಯನ್ನು 7 ವರ್ಷ ವಯಸ್ಸಿನವರೆಗೆ ಸಾಕುವರು. ಆದರೆ ಅಭಾವ ಪ್ರದೇಶಗಳಲ್ಲಿ 4 ಅಥವಾ 5 ವರ್ಷಗಳ ಅನಂತರ ಮಾರಿಬಿಡುವರು. ಟಗರು ಸರಿಯಾಗಿ ಬೆಳವಣಿಗೆ ಹೊಂದಿದ ಮೇಲೆ ಅಂದರೆ ಸುಮಾರು 10–12 ತಿಂಗಳ ವಯಸ್ಸಿಗೆ ಮಾರಲು ಯೋಗ್ಯವಾಗುತ್ತದೆಂದು ಹೇಳಬಹುದು.

**ಸಂತಾನೋತ್ಪತ್ತಿ :** ಕುರಿ ಸು. 9–14 ತಿಂಗಳು ವಯಸ್ಸಿನಲ್ಲಿ ಮೊದಲನೆಯ ಬಾರಿ ಗರ್ಭಧರಿಸುತ್ತದೆ. ಈ ವಯೋಮಿತಿ ವಿವಿಧ ತಳಿಗಳಲ್ಲಿ ವಿವಿಧ ರೀತಿ, ಆದರೆ ಇಷ್ಟು ಚಿಕ್ಕ ವಯಸ್ಸಿನಲ್ಲಿ ಗರ್ಭ ಧರಿಸುವುದರಿಂದ ಅವುಗಳ ಬೆಳವಣಿಗೆ ಸರಿಯಾಗಿ ಆಗುವುದಿಲ್ಲ. ಅಲ್ಲದೆ ಹುಟ್ಟಿದ ಮರಿಯೂ ಸದೃಢವಾಗಲಾರದು. ಕಾರಣ ವಯಸ್ಸಿನ 15 ನೆಯ ತಿಂಗಳ ಅನಂತರ ಟಗರು ಕೊಡುವುದು ಒಳ್ಳೆಯದು. ಒಂದು ವರ್ಷ ವಯಸ್ಸಿಗೆ ಟಗರು ಗರ್ಭದಾನ ಮಾಡಲು ಸಮರ್ಥವಾಗುತ್ತದೆ. ಆದರೆ ಟಗರನ್ನು 2 ವರ್ಷ ವಯಸ್ಸಿನವರೆಗೆ ಬೀಜಕ್ಕಾಗಿ ಉಪಯೋಗಿಸುವುದು ಒಳ್ಳೆಯದಲ್ಲ. ಮುಂದೆ 7 ವರ್ಷ ವಯಸ್ಸಿನವರೆಗೆ ಬೀಜಕ್ಕಾಗಿ ಉಪಯೋಗಿಸಬಹುದು. ಸುಮಾರು 30 ರಿಂದ 50 ಕುರಿಗಳಿಗೆ ಒಂದು ಟಗರು ಬೇಕಾಗುವುದು. ಕುರಿ ಗರ್ಭಧರಿಸಿದ ಅನಂತರ 147 ರಿಂದ 152 ದಿವಸಗಳಲ್ಲಿ ಮರಿಹಾಕುವುದು. ಕುರಿಗಳಲ್ಲಿ ಗರ್ಭೋತ್ಪತ್ತಿ ಕಾಲಗಳು ಈ ಕೆಳಗಿನಂತೆ 3 ಇವೆಯೆಂದು ಕಂಡುಬರುತ್ತದೆ.

| | | |
|---|---|---|
| 1. ಬೇಸಗೆ ಕಾಲ | .... | ಮಾರ್ಚ್ – ಏಪ್ರಿಲ್ |
| 2. ಶರದೃತುವಿನ ಕಾಲ | .... | ಜೂನ್ – ಜುಲೈ |
| 3. ಚಳಿಗಾಲ | .... | ಅಕ್ಟೋಬರ್ – ನವೆಂಬರ್ |

ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ಹಿಂಡಿನಲ್ಲಿಯ ಕುರಿಗಳ ಶೇ.15–20 ಕುರಿಗಳು ಗರ್ಭ ಧರಿಸುವುವು. ಬಹುಸಂಖ್ಯಾತ ಕುರಿಗಳು ಅಂದರೆ ಹಿಂಡಿನಲ್ಲಿಯ ಶೇ. 50–80 ಕುರಿಗಳು ಜೂನ್ ಜುಲೈ ತಿಂಗಳುಗಳಲ್ಲಿ ಬೆದೆಗೆ ಬರುತ್ತವೆ. ಉಳಿದ ಅಲ್ಪಸ್ವಲ್ಪ ಕುರಿಗಳು ಅಕ್ಟೋಬರಿನಲ್ಲಿ ಗರ್ಭಧರಿಸುವುವು. ಕುರಿಗಳ ಗರ್ಭಧಾರಣೆಯ ಮೇಲೆ ಹತೋಟಿ ಇರುವುದು ಒಳ್ಳೆಯದು. ಆಹಾರದ ಅಭಾವದ ಮೂಲಕ ಕುರಿಗಳು ಅಶಕ್ತವಾದರೆ ವೇಳೆಗೆ ಸರಿಯಾಗಿ ಬೆದೆಗೆ ಬಾರದೆ ಗರ್ಭಧಾರಣೆ ವಿಲಂಬವಾಗಬಹುದು. ತಡವಾಗಿ ಗರ್ಭಧರಿಸಿದ ಕುರಿಗಳು ಚಳಿಗಾಲದ ಮಧ್ಯದ ಸುಮಾರಿಗೆ ಇಲ್ಲವೆ ಬೇಸಗೆ ಆರಂಭವಾದ ಮೇಲೆ ಮರಿಹಾಕುವುವು. ಆ ವೇಳೆಗೆ ಹುಲ್ಲುಗಾವಲುಗಳಲ್ಲಿ ಹುಲ್ಲು ಒಣಗಿರುತ್ತದೆ. ಮರಿಹುಟ್ಟಿದಾಗ ತಾಯಿಕುರಿಗೆ ಸಾಕಷ್ಟು ಹಸಿರು ಹುಲ್ಲು ಸಿಗದಿದ್ದರೆ ಹಾಲು ಕಡಿಮೆಯಾಗಿ ಮರಿಗಳ ಬೆಳವಣಿಗೆ ಕುಂಠಿತವಾಗುತ್ತದೆ. ಬೇಸಗೆಯಲ್ಲಿ ಮೇವಿನ ಅಭಾವದ ಮೂಲಕ ಸಾಕುವವರು ತಮ್ಮ ಕುರಿಹಿಂಡುಗಳೊಂದಿಗೆ ದೂರದವರೆಗೆ ಪ್ರಯಾಣಕ್ಕೆ ಅಲೆಯಬೇಕಾಗುವುದು. ಚಿಕ್ಕ ಚಿಕ್ಕ ಮರಿಗಳೊಂದಿಗೆ ದೂರದ ವರೆಗೆ ಪ್ರಯಾಣ ಮಾಡುವುದು ಹಿತಕರವಲ್ಲ. ಈ ಕಾರಣದಿಂದ ಬೆದೆಯಕಾಲದ ಮೇಲೆ ಹತೋಟಿ ಇಟ್ಟರೆ ಕುರಿಗಳಿಗೆ ಸಾಕಷ್ಟು ಹುಲ್ಲು ಲಭ್ಯವಿದ್ದಾಗಲೇ ಮರಿಗಳು ಹುಟ್ಟಿ ಕುರಿಸಂಗೋಪನೆ ಲಾಭದಾಯಕವಾಗುವುದು.

ಬೆದೆಯ ಕಾಲ ಕುರಿಗಳಲ್ಲಿ ಸರಾಸರಿ 27 ಗಂಟೆಗಳ ವರೆಗೆ ಇರುವುದು. ಗರ್ಭೋತ್ಪತ್ತಿಯಾದ 5ನೆಯ ತಿಂಗಳ ಅನಂತರ ಈಯುವುವು. ಗರ್ಭಕಾಲದ ಅವಧಿಯಲ್ಲಿ ಕುರಿಗಳಿಗೆ ಸರಿಯಾದ ಆಹಾರದ ಅಭಾವ ಮತ್ತಿತರ ಕಾರಣಗಳ ಮೂಲಕ ಕುರಿಗಳು ಅಶಕ್ತವಾದರೆ ಗರ್ಭಪಾತವಾಗುವ ಸಂಭವ ಹೆಚ್ಚು. ಗಬ್ಬವಿದ್ದ ಕುರಿಯನ್ನು ಚೆನ್ನಾಗಿ ಆರೈಕೆಮಾಡಿದರೆ ಗರ್ಭಸ್ಥ ಮರಿ ಸರಿಯಾಗಿ ಬೆಳೆಯುವುದು; ಹುಟ್ಟಿದ ಮೇಲೂ ಅದಕ್ಕೆ ಸಾಕಷ್ಟು ಹಾಲು ಲಭ್ಯವಾಗಿ ಬೆಳವಣಿಗೆ ಚೆನ್ನಾಗಿ ಆಗುವುದು. ಈಯುವ ವೇಳೆ ಸಮೀಪಿಸಿದಂತೆ ಕುರಿಯ ನಡಿಗೆ ಮಂದವಾಗುತ್ತದೆ; ಬಾಲವನ್ನು ವಿಚಿತ್ರರೀತಿಯಲ್ಲಿ ಅಲ್ಲಾಡಿಸುತ್ತದೆ. ಮರಿಹಾಕುವಾಗ ಹಿಂಡಿನಿಂದ ಬೇರೆಯಾಗಿಬಿಡುತ್ತದೆ. ಮುಂಗಾಲಿನಿಂದ ನೆಲವನ್ನು ಕೆರೆಯುತ್ತ ಮಲಗುವುದು, ಏಳುವುದು, ಹೊರಳಾಡುವುದು, ಒದರುವುದು, ನಾಲ್ಕು ಕಾಲುಗಳನ್ನು ನೆಟ್ಟಗೆ ಚಾಚುವುದು ಸಾಮಾನ್ಯ. ನೀರಿನ ಚೀಲ ಕಂಡಮೇಲೆ ಮರಿ ಹಾಕುವ ವೇಳೆ ಸಮೀಪಿಸಿತೆಂದು ತಿಳಿಯಬೇಕು. ಆ ವೇಳೆಗೆ ಕುರಿ ಮಗ್ಗುಲಾಗಿ ಮಲಗಿ ನಾಲ್ಕೂ ಕಾಲು ಚಾಚಿ ಮರಿಯನ್ನು ಹೊರಗೆ ಹಾಕಲು ಪ್ರಯತ್ನಿಸುತ್ತದೆ. ಸಾಮಾನ್ಯವಾಗಿ ಮರಿ ಜನಿಸುವಾಗ ತನ್ನ ತಲೆಯನ್ನು ಎರಡೂ ಮುಂಗಾಲುಗಳ ಮಧ್ಯದಲ್ಲಿಟ್ಟುಕೊಂಡಿರುತ್ತದೆ. ಈ ರೀತಿಯಾಗದಿದ್ದಲ್ಲಿ ಅನುಭವಿ ಮನುಷ್ಯನ ಸಹಾಯ ಕೂಡಲೇ ಪಡೆದುಕೊಳ್ಳಬೇಕು. ಇಲ್ಲವಾದರೆ ಈಯುವಾಗ ಕುರಿಗಳಿಗೆ ಯಾವ ಸಹಾಯವೂ ಬೇಕಾಗುವುದಿಲ್ಲ. ಆರೋಗ್ಯಕರವಾದ ಮರಿ ಹುಟ್ಟಿದ ಕೆಲವೇ ಮಿನಿಟುಗಳಲ್ಲಿ ನಿಂತು ಮೊಲೆ ಉಣ್ಣಲಾರಂಭಿಸುತ್ತದೆ. ಮರಿಗಳು ಅಶಕ್ತವಿದ್ದರೆ ಮೊಲೆ ಕುಡಿಯಲು ಸಹಾಯ ಮಾಡಬೇಕಾಗುವುದು. ಬಹಳ ಚಳಿ ಇದ್ದರೆ ಅದೇ ಹುಟ್ಟಿದ ಮರಿಯನ್ನು ಬೆಚ್ಚಗಿನ ಸ್ಥಳದಲ್ಲಿ ಇಡಬೇಕು. ರಾತ್ರಿಯ ಕಾಲದಲ್ಲಿ ಕುರಿ ಈಯುವುದಿದ್ದರೆ ಅದನ್ನು ಸಾಕಷ್ಟು ಸ್ಥಳಾವಕಾಶ ಇರುವಲ್ಲಿಗೆ ಸ್ಥಳಾಂತರಿಸುವುದು ಒಳ್ಳೆಯದು. ಏಕೆಂದರೆ ತಾಯಿಕುರಿಗೆ ಬೇರೆಯಾಗಲು ಮತ್ತು ಮರಿಯನ್ನು ಆರೈಕೆ ಮಾಡಲು ಸಾಕಷ್ಟು ಸ್ಥಳ ಬೇಕಾಗುತ್ತದೆ. ಅದೇ ಹುಟ್ಟಿದ ಮರಿಯ ತೂಕ ಸು. 5–8 ಪೌಂಡ್ ಇರುತ್ತದೆ. ಮೊದಲ ಮೂರು ತಿಂಗಳುಗಳಲ್ಲಿ ಮರಿ ಶೀಘ್ರಗತಿಯಿಂದ ಬೆಳೆಯುತ್ತದೆ. ಮುಂದೆ 12 ತಿಂಗಳ ವಯಸ್ಸಿನ ವರೆಗೆ ಬೆಳವಣಿಗೆ ಸಾಮಾನ್ಯವಾಗಿರುತ್ತದೆ. 1½–2 ವರ್ಷಗಳ ನಡುವೆ ದೇಹದ ಸಂಪೂರ್ಣ ಬೆಳವಣಿಗೆಯಾಗುತ್ತದೆಂದು ಹೇಳಬಹುದು. ಪೂರ್ಣಬೆಳೆದ ಕುರಿಯ ತೂಕ 18–20 ಕೆ.ಜಿ. ಇದ್ದರೆ, ಟಗರಿನ ತೂಕ 25–30 ಕೆ.ಜಿ.ಗಳವರೆಗೆ ಇರುತ್ತದೆ. ಕುರಿ ಸಂಗೋಪನೆಯಲ್ಲಿ ಮರಿಗಳ ಆರೈಕೆಯ ಕಡೆ ತಕ್ಕಷ್ಟು ಗಮನ ಕೊಡಬೇಕು. ಎಳೆಯವಿದ್ದಾಗ ಮರಿಗಳಿಗೆ ಸಹಜವಾಗಿ ಪಚನವಾಗುವಂಥ ರಸಭರಿತ ಮತ್ತು ಪೌಷ್ಟಿಕ ಆಹಾರವನ್ನು ಒದಗಿಸಬೇಕು. ತಾಯಿಕುರಿಗಳಿಗೆ ಉತ್ತಮ ಆಹಾರ ಪೂರೈಸಿದರೆ ಮರಿಗಳಿಗೆ ಸಾಕಷ್ಟು ಹಾಲು ದೊರಕುವುದು. ಮರಿಗಳು ಪುಷ್ಟವಾಗಿ ಕುರಿ ಸಾಕುವಿಕೆ ಲಾಭದಾಯಕವಾಗಿ ಪರಿಣಮಿಸುವುದು.

(ಎಸ್.ಬಿ.ಎಚ್.; ಎಸ್.ಎಚ್.ಓ.)

**ಕುರಿ ರೋಗಗಳು :** ಕುರಿಗಳಿಗೆ ನೂರಕ್ಕೂ ಮೇಲ್ಪಟ್ಟು ಸೋಂಕು ರೋಗಗಳೂ ದೇಹದ ಆಂತರಿಕ ಪರಿಸ್ಥಿತಿಯಿಂದ ಉಲ್ಬಣಿಸುವ ಅನೇಕ ಬೇನೆಗಳೂ ಕಾಣಿಸಿಕೊಳ್ಳುವುದಾಗಿ ತಿಳಿದುಬಂದಿದೆ. ಅವುಗಳ ಸಾಂಕ್ರಾಮಿಕ ರೋಗಗಳಿಗೆ ಬ್ಯಾಕ್ಟೀರಿಯ, ವೈರಸ್, ಬೂಷ್ಟು, ಏಕಾಣುಜೀವಿಗಳ (ಪ್ರೋಟೋಜೋವ), ಹುಳುಗಳು (ವರ್ಮ್ಸ್) ಕೀಟಗಳು ಮುಂತಾದವು ಕಾರಣವೆನಿಸಿವೆ.

**ಬ್ಯಾಕ್ಟೀರಿಯದಿಂದ ಬರುವ ರೋಗಗಳು :** ಮೂವತ್ತಕ್ಕೂ ಹೆಚ್ಚು ಜಾತಿಯ ಬ್ಯಾಕ್ಟೀರಿಯಗಳು ಕುರಿಗಳ ರೋಗಗಳಲ್ಲಿ ವಿವಿಧ ರೋಗಗಳನ್ನು ಉಂಟುಮಾಡುತ್ತವೆ. ನೆರಡಿ (ಆಂತ್ರಾಕ್ಸ್), ಚಪ್ಪೆರೋಗ (ಬ್ಲ್ಯಾಕ್‌ಲೆಗ್), ಅತ್ಯುಗ್ರ ಊತ (ಮಲಿಗ್ನೆಂಟ್‌ಈಡಿಪಸ್), ಬ್ರ್ಯಾಕ್ಸಿ, ಕಪ್ಪುರೋಗ, ಕುರಿಮರಿಗಳ ಭೇದಿ, ಕರುಳಿನ ವಿಷಬೇನೆ (ಎಂಟರೊಟಾಕ್ಸಿಮಿಯ), ಧನುರ್ವಾಯು (ಟೆಟ್ಯಾನಸ್), ವಿಷರೋಗ (ಬಾಟುಲಿಸಂ), ಕ್ಷಯ, ಕೆಚ್ಚಲಬಾವು (ಮ್ಯಾಸ್ಟೈಟಿಸ್), ಸಂಧಿವಾತ (ಪಾಲಿಆರ್ಥ್ರೈಟಿಸ್). ದುಗ್ಧನಾಳದ ಉರಿಯೂತದ ರೋಗ (ಕೇಸಿಯಸ್ ಲಿಂಫ್ಯಾಡೆನಿಟಿಸ್), ಗೊರಸು ರೋಗ (ಫುಟ್‌ರಾಟ್) – ಇವು ಕುರಿಗಳಿಗೆ ಬರುವ ಮುಖ್ಯ ಸಾಂಕ್ರಾಮಿಕ ರೋಗಗಳು, ಪಾಶ್ಚುರೆಲ್ಲ, ಬ್ರೂಸೆಲ್ಲ, ವಿಬ್ರಿಯೊ, ಸಾಲ್ಮೊನೆಲ್ಲಾ, ಲಿಸ್ಟಿರಿಯ, ಎರಿಸೆಫೆಲೊತ್ರಿಕ್ಸ್, ಟ್ಯುಲರೀಮೀಯ, ನೆಕ್ರೊಬೆಸಿಲ್ಲೊಸಿಸ್, ಆಕ್ಟಿನೊಬ್ಯಾಸಿಲೋಸಿಸ್ ಮುಂತಾದವುಗಳಿಂದಲೂ ರೋಗಬರುವುದುಂಟು. ರೋಗಕಾರಕ ಬ್ಯಾಕ್ಟೀರಿಯಗಳು ಅನೇಕ ರೀತಿಯಲ್ಲಿ ಕುರಿಯ ದೇಹವನ್ನು ಹೊಕ್ಕು ಅಲ್ಲಿ ವೃದ್ಧಿಯಾಗಿ ವಿವಿಧರೀತಿಯ ರೋಗಗಳನ್ನು ತರುವುವು. ಪ್ರತಿಯೊಂದು ರೋಗಕ್ಕೂ ಒಂದೊಂದು ವಿಶಿಷ್ಟ ಏಕಾಣು ಜೀವಿ ಕಾರಣ. ಇವು ದೇಹದ ವಿವಿಧಭಾಗಗಳಲ್ಲಿ ಪಸರಿಸಬಲ್ಲವು. ಆದ್ದರಿಂದ ದೇಹದ ಸಂಪೂರ್ಣಭಾಗ ರೋಗದ ಛಾಯೆಗೆ ಒಳಗಾಗುವುದು. ಜ್ವರ, ಭೇದಿ, ಕೆಮ್ಮು ಇತ್ಯಾದಿ ರೋಗಲಕ್ಷಣಗಳೂ ದೇಹದ ಒಳಗಡೆ ವಿವಿಧ ಅಂಗಾಂಗಗಳಲ್ಲಿ ವಿಶಿಷ್ಟ ಬದಲಾವಣೆಗಳೂ ಕಾಣಿಸಿಕೊಳ್ಳುವುವು. ಅವುಗಳಲ್ಲಿ ಮುಖ್ಯವಾದವನ್ನು ಕೆಳಗೆ ವಿವರಿಸಿದೆ.

ನೆರಡಿ ರೋಗ ಕುರಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದು. ಇದಕ್ಕೆ ಬ್ಯಾಸಿಲಸ್ ಆಂತ್ರಾಸಿಸ್ ಎಂಬ ಬ್ಯಾಕ್ಟೀರಿಯ ಕಾರಣ. ಈ ರೋಗಕ್ಕೆ ತುತ್ತಾದ ಕುರಿಗಳು ಒಮ್ಮೆಲೆ ರಕ್ತಕಾರಿ ಸಾಯುವುವು. ಸತ್ತ ಕುರಿಯ ದೇಹದಲ್ಲೆಲ್ಲ ರೋಗಾಣುಗಳು ತುಂಬಿರುವುದರಿಂದ ಅದರ ದೇಹವನ್ನು ಸೀಳದೆ ಆಳವಾದ ಗುಂಡಿಯಲ್ಲಿ ಸುಡಬೇಕು. ಇಲ್ಲದೆ ಹೋದರೆ ರೋಗಾಣುಗಳು ದೇಹದಿಂದ ಹೊರಗೆ ಚೆಲ್ಲಿ ಅನೇಕ ವರ್ಷಗಳ ಕಾಲ ಜೀವಂತವಾಗಿದ್ದು ಇತರ ಕುರಿಗಳಿಗೆ ಸುಲಭವಾಗಿ ಹರಡಬಹುದು. ಕುರಿಯ ಮೈಯಲ್ಲಿ ಯಾವುದಾದರೂ ಕಾರಣದಿಂದ ಆಗುವ ಗಾಯಗಳ ಮೂಲಕ ಕ್ಲಾಸ್ಟ್ರಿಡಿಯಂ ಚಾವೆ, ಕ್ಲಾಸ್ಟ್ರಿಡಿಯಂ ಸೆಪ್ಟಿಕಂ ಎಂಬ ಬ್ಯಾಕ್ಟೀರಿಯಗಳೂ ಕ್ಲಾಸ್ಟ್ರಿಡಿಯಂ ಪರ್‌ಫ್ರಿಂಜಿಸ್, ಕ್ಲಾಸ್ಟ್ರಿಡಿಯಂ ಸೋವಿಯೈ ಮುಂತಾದವೂ ದೇಹವನ್ನು ಸೇರಿ ಚಪ್ಪೆರೋಗ, ಅತ್ಯುಗ್ರಊತ, ಬ್ರ್ಯಾಕ್ಸಿ ಹಾಗೂ ಕಪ್ಪುರೋಗವನ್ನು ಉಂಟುಮಾಡುವುವು. ಚಪ್ಪೆರೋಗದಲ್ಲಿ ಕುರಿ ಹಿಂಗಾಲು ಮುಂಗಾಲಿನ ಮಾಂಸ ಖಂಡದ ಉಬ್ಬರದಿಂದ ನರಳಿ ಸಾಯುವುದು. ಅತ್ಯುಗ್ರ ಊತದ ರೋಗದಲ್ಲಿ ದೇಹದಲ್ಲೆಲ್ಲ ಊತ ಕಾಣಬರುವುದು. ಬ್ರ್ಯಾಕ್ಸಿಯಂತೂ ಆರೋಗ್ಯವಂತ ಕುರಿಮರಿಯಲ್ಲಿ ಒಮ್ಮಿಂದೊಮ್ಮೆಗೆ ಕಾಣಿಸಿಕೊಳ್ಳುವ ರೋಗ. ಅದರ ಜಠರದ ನಾಲ್ಕನೆಯ ಕೋಣೆಯಲ್ಲಿ (ಅಬೊಮೇಸಂ) ಉರಿಯೂತವಾಗಿ ರೋಗಾಣುಗಳು ವೃದ್ಧಿಯಾಗಿ, ಮರಿಗಳಿಗೆ ಒಮ್ಮೆಗೆ ಸಾವನ್ನು ಉಂಟುಮಾಡುವುವು. ಕಪ್ಪು ರೋಗದಲ್ಲಿ ಕಾರಲುಹುಳುವಿನ ಶೈಶವ ರೂಪ ಯಕೃತ್ತನ್ನು ಭೇದಿಸುವುದರಿಂದ ಅಲ್ಲಿ ರೋಗಾಣುಗಳು ವೃದ್ಧಿಯಾಗಿ ಕಪ್ಪುರೋಗವುಂಟಾಗುವುದು. ಕುರಿಮರಿಗಳಿಗೆ ಹುಟ್ಟಿದಾಗಲೆ ಭೇದಿರೋಗ ಸಾಮಾನ್ಯ. ಕ್ಲಾಸ್ಟ್ರಿಡಿಯಂ ಪರ್‌ಫ್ರಿಂಜಿಸ್ ಟೈಪ್ ಎಂಬ ರೋಗಾಣು ಈ ರೋಗ ತರುವುದು. ವಯಸ್ಕ ಕುರಿಗಳಲ್ಲೂ ಈ ಭೇದಿರೋಗ ಬರುವುದುಂಟು. ಕರುಳಿನಲ್ಲಿ ಕ್ಲಾಸ್ಟ್ರಿಡಿಯಂ ಪರ್‌ಫ್ರಿಂಜಿಸ್ ಟೈಪ್ ಸಿ ಮತ್ತು ಡಿ ಎಂಬ ರೋಗಾಣುಗಳಿಂದ ವಿಷ ಉತ್ಪಾದನೆಯಾಗಿ ಕರುಳಿನ ವಿಷಬೇನೆ ಬರುವುದು. ಇದರಿಂದ ಭೇದಿಕಾರಕ ಲಕ್ಷಣಗಳು ತಲೆದೋರಿ ಕುರಿಗಳು ಸಾಯುವುವು.

ಕುರಿಗಳಿಗೆ ಬರುವ ಇನ್ನೊಂದು ರೋಗ ಧನುರ್ವಾಯು. ಮಾಂಸಖಂಡಗಳು ಬಿಗಿದು ದೇಹ ಬಿಲ್ಲಿನಾಕಾರವಾಗುವ ಈ ರೋಗಕ್ಕೆ ಕ್ಲಾಸ್ಟ್ರಿಡಿಯಂ ಟೆಟನಿ ಎಂಬ ರೋಗಾಣು ಕಾರಣ. ಮುಂದೆ ಈ ರೋಗದಿಂದ ಕುರಿ ಸಾಯುವುದು. ಕುರಿಯ ದೇಹದಲ್ಲಿ ರಂಜಕದ ಅಂಶ ಕಡಿಮೆಯಾದಾಗ ಸತ್ತಪ್ರಾಣಿಗಳ ದೇಹವನ್ನು ತಿನ್ನಬೇಕೆಂಬ ಆಸೆಯಾಗಿ ತಿಂದಾಗ ಅದರಲ್ಲಿರುವ ಕ್ಲಾಸ್ಟ್ರಿಡಿಯಂ ಬಾಟೂಲಿನಂ ಟೈಪ್ ಎಂಬ ರೋಗಾಣು ಕುರಿಯ ದೇಹವನ್ನು ಸೇರಿ ವಿಷ ಉತ್ಪತ್ತಿಮಾಡುದರಿಂದ ಕುರಿಗಳು ಸಾಯುವುವು. ಪ್ಯಾಸ್ಚುರೆಲ್ಲ ಮಲ್ಟೋಸಿಡ ಎಂಬ ರೋಗಾಣುವಿನಿಂದ ವಿಶಿಷ್ಟ ರೀತಿಯ ಆಂತರಿಕ ಬೇನೆ ಬರುವುದು. ಶ್ವಾಸಕೋಶ, ಹೃದಯ ಹಾಗೂ ಕೀಲುಗಳಲ್ಲಿ ಈ ರೋಗದ ಛಾಯೆ ಕಂಡುಬರುವುದು. ಕುರಿಗಳ ದೇಹದ ಮೇಲೆ ವಾಸಮಾಡುವ ಉಣ್ಣೆಗಳ ಮೂಲಕ ಪ್ಯಾಸ್ಚುರೆಲ್ಲ ಟುಲರೆನ್ಸಿಸ್ ಎಂಬ ರೋಗಾಣು ದೇಹಕ್ಕೆ ಸೇರಿ ಟ್ಯುಲರೀಮಿಯ ಎಂಬ ರೋಗವನ್ನು ತರುವುದು. ಕುರಿಗಳ ಮೊಲೆಯ ಮೂಲಕ ಅನೇಕ ರೀತಿಯ ರೋಗಾಣುಗಳು ಕೆಚ್ಚಲನ್ನು ಸೇರಿ ವೃದ್ಧಿಯಾಗಿ ಕೆಚ್ಚಲುಬಾವು ಬರುವುದು. ಸ್ಟ್ಯಾಫಿಲೊಕಾಕಸ್ ಸ್ಟ್ರೆಪ್ಟೊಕಾಕಸ್ ಪ್ಯಾಸ್ಚುರೆಲ್ಲ , ಕೊರಿನಿ ಬ್ಯಾಕ್ಟೀರಿಯಂ ಮುಂತಾದವು ಈ ರೋಗಕ್ಕೆ ಕಾರಣ. ಈ ಬೇನೆ ಕುರಿಸಾಕಣಿಗೆ ಒಂದು ಮಾರಕವಾಗಿದೆ. ಕೆಚ್ಚಲು ಊದಿ ಹಾಲು ರಕ್ತಮಯವಾಗುವುದು. ಕೆಚ್ಚಲಿನಲ್ಲಿ ಉರಿಯೂತ ಉಲ್ಬಣಿಸಿ ಕೊನೆಗೆ ಕೆಚ್ಚಲು ಒಣಗಿ ಹೋಗುವುದು. ಕುರಿಗಳು ಗರ್ಭಧರಿಸಿದ ಮೇಲೆ ಕಂದು ಹಾಕುವುದು ಸಾಮಾನ್ಯ. ಬ್ರುಸೆಲ್ಲ ವಿಬ್ರಿಯೊ ಮತ್ತು ಸಾಲ್ಮೊನೆಲ್ಲ ಎಂಬ ರೋಗಾಣುಗಳಿಂದ ಈ ರೋಗ ಬರುವುದು. ಅದರ ಫಲವಾಗಿ ಸಂತಾನಹರಣವಾಗುವುದು. ಲಿಸ್ಟಿರಿಯ ಮಾನೊಸೈಟೊಜೀನ್ಸ್ ಎಂಬ ರೋಗಾಣುವಿನಿಂದ ಪ್ರಧಾನವಾಗಿ ತಲೆತಿರುಗಿ ಬಂದು ಇತರ ರೋಗಲಕ್ಷಣಗಳಿಂದ ಕುರಿಗಳು ಸಾಯುವುವು. ಲೆಪ್ಟೊಸ್ಪೈರ ಎಂಬ ರೋಗಾಣು ಯಕೃತ್ತು, ಮೂತ್ರಪಿಂಡಗಳಲ್ಲಿ ರೋಗಛಾಯೆಯನ್ನು ಬರಿಸಿ ರಕ್ತರೋಗಮಯವಾಗಿ ಕುರಿಗಳು ಸಾಯುವುವು. ಮುಖ್ಯ ಕೆನ್ನೆ , ತುಟಿ, ಒಸಡುಗಳಲ್ಲಿ ವ್ರಣಗಳನ್ನು ಉಂಟುಮಾಡುವ ಆಕ್ಟಿನೊಬ್ಯಾಸಿಲಸ್ ಎಂಬ ರೋಗಾಣುವಿನಿಂದ ಕುರಿ ದೀರ್ಘಕಾಲ ನರಳಿ ಸಾಯುವುದು. ಕ್ಷಯರೋಗವೂ ಕುರಿಗಳಲ್ಲಿ ಕಾಣಿಸಿಕೊಳ್ಳುವುದುಂಟು. ಇದು ದೀರ್ಘಾವಧಿಯ ರೋಗ. ಯಕೃತ್ತು, ಮೂತ್ರಪಿಂಡ, ಗುಲ್ಮ, ಶ್ವಾಸಕೋಶ ಹಾಗೂ ದೇಹದ ಇತರ ಭಾಗಗಳಲ್ಲಿ ಕ್ಷಯದ ಗೆಡ್ಡೆಗಳಾಗಿ ಅದರಿಂದ ಸಾವು ಬರುವುದು ಎರಿಸೆಫೆಲೊತ್ರಿಕ್ಸ್ ಎಂಬ ರೋಗಾಣುವಿನಿಂದ ಕೀಲುಗಳಲ್ಲಿ ರೋಗುವುಂಟಾಗಿ ಸಂಧಿವಾತ ಬರುವುದು. ಕುರಿ ಕುಂಟುತ್ತ ನರಳುತ್ತ ಸಾಯುವುದು. ಈ ರೀತಿಯಾಗಿ ಬ್ಯಾಕ್ಟೀರಿಯಗಳು ವಿವಿಧರೀತಿಯ ರೋಗಗಳನ್ನು ತರುವುವು.

ರಿಕೆಟ್‌ಸಿಯ ರೋಗಗಳು (ರಿಕೆಟ್ಸಿಯಲ್ ಡಿಸೀಸಸ್): ಬ್ಯಾಕ್ಟೀರಿಯಗಳಿಗಿಂತ ದೊಡ್ಡದಾದ ರಿಕೆಟ್‌ಸಿಯದಿಂದ ಕುರಿಗಳಲ್ಲಿ ಅನೇಕ ರೋಗಗಳು ಉಂಟಾಗುವುವು. ಸಾಂಕ್ರಾಮಿಕ ಕಣ್ಣಿನ ಉರಿಯೂತ (ಪಿಂಕ್ ಐ) ತೀವ್ರತರವಾದ ರೋಗ; ಕಣ್ಣಿನ ಪೊರೆಯಲ್ಲಿ ಉರಿಯೂತವಾಗುವುದು. ಕುರಿ ಇರುವೆಡೆಯಲ್ಲಿ ಈ ರೋಗ ಕಂಡುಬರುವುದು. ಈ ರೋಗದಲ್ಲಿ ಕುರಿಯ ಕಣ್ಣು ಕೆಂಪಾಗಿ ಸದಾ ನೀರು ಹರಿಯುತ್ತಿರುವುದು. ಒಮ್ಮೊಮ್ಮೆ ಕುರುಡು ಸಂಭವಿಸುವುದು. ನೊಣಗಳು ರೋಗದ ಹರಡುವಿಕೆಗೆ ಕಾರಣ. ಕುರಿಗಳ ದೇಹದ ಮೇಲೆ ವಾಸಿಸುವ ಉಣ್ಣೆಗಳು ರಿಕೆಟ್‌ಸಿಯ ರೋಗಾಣುಗಳನ್ನು ಕುರಿಯ ದೇಹದೊಳಗೆ ಸೇರಿಸುವುದರಿಂದ ಉಣ್ಣೆಯ ಮೂಲಕ ಬರುವ ಜ್ವರ (ಟಿಕ್‌ಬಾನ್ ಫೀವರ್) ಕ್ಯೂಜ್ವರ, ಎಪೆರಿಟ್ರೋಜೊವನ್ ಇತ್ಯಾದಿ ರೋಗಗಳು ಬರುವುವು. ಕುರಿಗಳು ಈ ಜ್ವರಗಳಿಂದ ನರಳಿ ಸಾಯುವುವು.

**ವೈರಸ್ ರೋಗಗಳು:** ಬ್ಯಾಕ್ಟೀರಿಯಗಳಿಗಿಂತ ಚಿಕ್ಕದಾಗಿರುವ ವೈರಸ್ ರೋಗಾಣುಗಳು ಕುರಿಗಳಲ್ಲಿ ಅನೇಕ ರೀತಿಯ ರೋಗಗಳನ್ನು ಉಂಟುಮಾಡುವುವು. ಅವುಗಳಲ್ಲಿ ಸಿಡುಬು, ಕಾಲುಬಾಯಿರೋಗ, ಸಾಂಕ್ರಾಮಿಕ ಚರ್ಮರೋಗ (ಕಂಟೀಜಿಯಸ್ ಪುಸ್ಟುಲಾರ, ಡರ್ಮಟೈಟಿಸ್) ನೀಲಿನಾಲಗೆ (ಬ್ಲೂ ಟಂಗ್), ದೊಡ್ಡರೋಗ (ರಿಂಡರ್‌ಪೆಸ್ಟ್) ಪಿ.ಪಿ.ಆರ್. ಮತ್ತು ಹುಚ್ಚುರೋಗ ಮುಖ್ಯವಾದವು. ಸಿಡುಬುರೋಗ ಬಂದಾಗ ಚರ್ಮದ ಮೇಲೆ ದದ್ದು ಹಾಗೂ ವ್ರಣಗಳೇಳುವುವು. ಜ್ವರಬರುವುದು, ದೇಹದ ಒಳಗಡೆ ರೋಗದ ಛಾಯೆಯ ಫಲದಿಂದ ಜ್ವರವೂ ಇರುವುದು. ಇತರ ಕುರಿಗಳಿಗೆ ಬೇಗನೆ ಹರಡುವುದು, ಆದ್ದರಿಂದ ಇದು ಬಹಳ ಮಾರಕವಾದುದು ಕಾಲು ಮತ್ತು ಬಾಯಿ ರೋಗ (ಫುಟ್ ಅಂಡ್ ಮೌತ್ ಡಿಸೀಸ್ ) ಕುರಿಗಳಲ್ಲೂ ಬರುವುದು. ಬಾಯಿಯಲ್ಲಿ ನಾಲಗೆಯ ಮೇಲೆ ವ್ರಣಗಳೇಳುವುವು. ಇದರಿಂದ ಏನನ್ನೂ ತಿನ್ನಲಾಗುವುದಿಲ್ಲ. ಕಾಲಿನ ಗಾಯಗಳು ಅಷ್ಟೇನೂ ಕಾಣಬರುವುದಿಲ್ಲ. ಜ್ವರದ ತಾಪದಿಂದ ಕುರಿಗಳು ಬಳಲುವುವು. ಇದರಂತೆ ಕುರಿಗಳ ತುಟಿಯ ಮೇಲೆ, ನಾಲಗೆಯ ಮೇಲೆ ಬೊಕ್ಕೆಗಳೇಳುವುವು. ಬಾಯಿ ಹಾಗೂ ಮೂಗಿನ ದ್ವಾರದ ಅದಿಬದಿಯಲ್ಲಿಯೂ ವ್ರಣಗಳೇಳುವುವು. ನೀಲಿನಾಲಗೆ ರೋಗ ಇತರ ದೇಶದ ಕುರಿಗಳಲ್ಲಿ ಸಾಮಾನ್ಯ. ಹಲವು ಕೀಟಗಳು ಈ ರೋಗವನ್ನು ಹರಡುವುವು. ನಾಲಗೆಯ ಮೇಲೆ ಸೂಕ್ಷ್ಮವಾಗಿ ವ್ರಣಗಳಾಗುವುವು. ಕುರಿಗಳು ಮಂಕಾಗಿ ಜೊಲ್ಲುಸುರಿಸಿ, ಮೂಗಿನ ಮೂಲಕ ದ್ರವ ಹರಿಸುವುವು. ತುಟಿಗಳು ಊದಿಕೊಳ್ಳುವುವು. ಬಾಯಿಯ ಮೃದುಪೊರೆ ಊದಿಕೊಳ್ಳುವುದಲ್ಲದೆ ಮುಖವನ್ನೆಲ್ಲ ವ್ಯಾಪಿಸಿಕೊಳ್ಳವುದು.

ಹಸುಗಳಿಗೆ ಬರುವ ದೊಡ್ಡರೋಗ ಕುರಿಗಳಲ್ಲೂ ಬಂದು ಸಾವು ನೋವನ್ನುಂಟು ಮಾಡುವುದು. ಈ ರೋಗದ ವಿಷಾಣು ರಕ್ತದಲ್ಲಿ ಹಾಗೂ ದೇಹದಲ್ಲೆಲ್ಲ ಇರುತ್ತದೆ. ಸೋಂಕು ಪ್ರಾಣಿಯಿಂದ ಪ್ರಾಣಿಗೆ ತಗುಲಿ ರೋಗ ಹರಡುವುದು. ಕಣ್ಣುಮೂಗಿನಿಂದ ದ್ರವ ಹರಿಯುವುದಲ್ಲದೆ ಬಾಯಿಯಿಂದ ಅಪಾರವಾಗಿ ಜೊಲ್ಲು ಸುರಿಯುವುದು. ಕುರಿಗಳಿಗೆ ಹುಚ್ಚುರೋಗ ಸಹ ಬರುವುದು. ಈ ರೋಗಗಳಲ್ಲದೆ ವೈರಸ್‌ಗಳು ಮಿದುಳನ್ನು ಭೇದಿಸಿ ನರಮಂಡಲಕ್ಕೆ ವ್ಯಾಪಿಸಿ ಲೂಪಿಂಗ್ ಇಲ್, ಸ್ಕ್ರೇಪಿಸಿ, ರೈಡ್ ಬೋರ್ನ್ಸ ಎಂಬ ರೋಗಗಳನ್ನು ತರುವುದು ಸಹ ಉಂಟು. ಈ ರೋಗವನ್ನು ತಡೆಯಲು ಚುಚ್ಚು ಮದ್ದು ಹಾಕಿಸಬೇಕು.

**ಶಿಲೀಂಧ್ರ ಅಥವಾ ಬೂಷ್ಟು:** ಕುರಿಗಳಲ್ಲಿ ಶಿಲೀಂಧ್ರಗಳು ಕೆಲವು ರೋಗಗಳನ್ನು ತರುತ್ತವೆ. ಇವು ಸಾಮಾನ್ಯವಾಗಿ ಚರ್ಮರೋಗಗಳು, ಚರ್ಮದಲ್ಲಿ ಉರಿಯೂತವಾಗಿ ತುರಿ, ಕಜ್ಜಿ , ಗಜಕರ್ಣಗಳೇಳುವುವು. ಚರ್ಮದ ಉರಿಯೂತ ಇವುಗಳಲ್ಲಿ ಮುಖ್ಯವಾದದ್ದು. ಕುರಿಯ ಉಣ್ಣೆ ಹೊಳಪನ್ನು ಕಳೆದುಕೊಳ್ಳುವುದು. ಇದು ಆಕ್ಟಿನೊಮೈಸಿಸ್ ಡಿಮಾಟೊನವಸ್ ಎಂಬ ಶಿಲೀಂಧ್ರದಿಂದ ಬರುವುದು. ಕುರಿಯ ಬೆನ್ನು, ಪಕ್ಕೆ ತಲೆಭಾಗದಲ್ಲಿ ರೋಗದ ಲಕ್ಷಣಗಳು ಕಾಣುವುವು. ಉಣ್ಣೆ ಉಂಡೆಯಾಗುವುದು. ಚರ್ಮದ ಮೇಲೆ ಮೂಡುವ ಗಜಕರ್ಣದ ಕಲೆಗಳು ಟ್ರೈಕೊಫೈಟನ್ ಎಂಬ ಶಿಲೀಂಧ್ರದಿಂದ ಬರುವ ಕಲೆಗಳು. ಮುಖ, ಕಿವಿಗಳ ಬಳಿ ಈ ಕಲೆಗಳು ಸಾಮಾನ್ಯವಾಗಿ ಉಳಿಯುವುವು.

ಪ್ರೋಟೋಝೋವಗಳಿಂದ ಬರುವ ರೋಗಗಳು : ಮುಖ್ಯವಾದ ಕೆಲವನ್ನು ಇಲ್ಲಿ ವಿವರಿಸಿದೆ.

**ಕಾಕ್ಸಿಡಿಯ ರೋಗ:** ಐಮೀರಿಯ ಎಂಬ ಪ್ರೋಟೋಝೋವಗಳಿಂದ ಈ ರೋಗ ಬರುವುದು. ಇದು ಮರಿಗಳಲ್ಲಿ ಸಾಮಾನ್ಯವಾದದ್ದು. ಒಂದು ಮಂದೆಯಲ್ಲಿ ಕಾಣಿಸಿಕೊಂಡರೆ ಎಲ್ಲ ಕುರಿಗಳಿಗೂ ಹರಡುವುದು. ಇದರಿಂದ ಕುರಿಮರಿಗಳು ಸಾಯುವುವು. ಅವುಗಳ ಪಿಚಿಕೆಗಳಲ್ಲಿ ರೋಗದ ಕೋಶಾಣುಗಳು ಇರುವುವು. ನೀರಿನ ಅಂಶವಿರುವೆಡೆ ಬೀಜಕಣಗಳಾಗಿ ಪರಿವರ್ತನೆಗೊಂಡು ಆಹಾರ ಹಾಗೂ ನೀರಿನ ಮೂಲಕ ಇತರ ಮರಿಗಳ ದೇಹವನ್ನು ಸೇರುವುವು. ಕರುಳಿನ ಮೃದು ಪೊರೆಯನ್ನು ಭೇದಿಸಿ ಅಲ್ಲಿ ವೃದ್ಧಿಯಾಗಿ ರಕ್ತಮಿಶ್ರಿತ ಭೇದಿರೋಗವನ್ನುಂಟು ಮಾಡುವುವು. ಈ ರೋಗ ಕಾಣಿಸಿಕೊಂಡಾಗ ಕಾಲ ಕಾಲಕ್ಕೆ ಮಲವನ್ನು ತೆಗೆಯಬೇಕು. ಕುರಿಗಳ ರೊಪ್ಪವನ್ನು ಸ್ವಚ್ಛಮಾಡಬೇಕು. ರೋಗದಿಂದ ನರಳುವ ಪ್ರಾಣಿಗಳನ್ನು ಚಿಕಿತ್ಸೆ ಮಾಡಿಸಬೇಕು. ಇದರಿಂದ ಈ ರೋಗವನ್ನು ತಡೆಗಟ್ಟಬಹುದು.

ಬಬೇಸಿಯ ಹಾಗೂ ತೈಲೇರಿಯ ರೋಗಗಳು: ಬಬೇಸಿಯ ಮತ್ತು ತೈಲೇರಿಯ ಎಂಬ ಪ್ರೋಟೋಝೋವಗಳು ಕೆಂಪುರಕ್ತಕಣಗಳಲ್ಲಿ ಸೇರಿ ತಿಂದು ನಾಶ ಮಾಡಿ ರಕ್ತಹೀನತೆ ಉಂಟುಮಾಡುವುವು. ಬಬೇಸಿಯ ರೋಗದಲ್ಲಿ ಮೂತ್ರ ಕೆಂಪುಬಣ್ಣ ತಾಳುವುದು.

ಎರಡು ರೋಗಗಳಲ್ಲಿಯೂ ಜ್ವರವಿರುವುದು. ರೋಗ ಉಲ್ಬಣಿಸಿದಾಗ ಕುರಿಗಳು ಸಾಯುವುವು. ದೇಹದ ಮೇಲಿರುವ ಉಣ್ಣೆಗಳಿಂದ ಈ ರೋಗ ಹರಡುವುದು. ಕುರಿಮರಿಗಳಲ್ಲಿ ಈ ರೋಗ ಕಾಣಬರುವುದಿಲ್ಲ.

**ಟ್ರಿಪ್ಯಾನಸೋಮ ರೋಗ:** ರಕ್ತದಲ್ಲಿ ಟ್ರಿಪ್ಯಾನಸೋಮ ಎಂಬ ರೋಗಾಣುಗಳು ಹರಡಿ ಈ ರೋಗ ಉಂಟಾಗುತ್ತದೆ. ರಕ್ತ ಹೀರುವ ನೊಣಗಳು ಈ ರೋಗ ಹರಡಲು ಸಹಾಯಕವಾಗುವುವು. ರೋಗಲಕ್ಷಣ ಮುಖ್ಯವಾಗಿ ಜ್ವರ.

**ಟೊಕ್ಸೊಪ್ಲಾಸ್ಮ ರೋಗ :** ಟೊಕ್ಸೊಪ್ಲಾಸ್ಮ ಎಂಬ ರೋಗಾಣುಗಳಂದ ಈ ರೋಗ ಬರುವುದು. ಆಗ ಕುರಿ ಕಂದು ಹಾಕುವುದು. ನರಮಂಡಲದಲ್ಲಿ ಸ್ಪಷ್ಟ ಬದಲಾವಣೆಯೂ ಆಗುವುದು.

ಈ ರೋಗಗಳಲ್ಲದೆ ಕರುಳಿನಲ್ಲಿ ಗಯಾಆರ್ಡಿಯ, ಕೆಂಪುರಕ್ತಗಳಲ್ಲಿ ಅನಾಪ್ಲಾಸ್ಮ ಮಾಂಸಖಂಡಗಳಲ್ಲಿ ಸಾರ್ಕೋಸಿಸ್ಟ್ ಪ್ರೊಟೋಜ಼ೋವಗಳಿಂದ ಆಯಾ ರೋಗ ಬರುತ್ತದೆ.

**ಹುಳುಗಳಿಂದ ಬರುವ (ಹೆಲ್ಮಿಂತಿಕ್) ರೋಗಗಳು:** ಕುರಿಗಳಲ್ಲಿ ಅನೇಕ ಹುಳುಗಳು ಇರುವುವು. ದೇಹದ ವಿವಿಧಭಾಗಗಳಲ್ಲಿ ಅವು ಕಂಡುಬಂದರೂ ಅನ್ನನಾಳದಲ್ಲಿ ಇವುಗಳ ಇರವು ಹೆಚ್ಚು. ಚಪ್ಪಟೆಹುಳು, ಲಾಡಿಹುಳು ಮತ್ತು ದುಂಡುಹುಳು ಇವು ಕುರಿಯಲ್ಲಿ ಕಂಡುಬರುವುವು. ಫ್ಯಾಸಿಯೋಲ ಎಂಬ ಚಪ್ಪಟೆ ಹುಳು ಕಾರಲು ರೋಗವನ್ನು ಆಂಫಿಸ್ಟೋಮ ರೋಗವನ್ನು ತರುವುದು. ಕಾರಲು ರೋಗ ಕುರಿಗಳಿಗೆ ಒಂದು ಮಾರಕರೋಗ. ಈ ರೋಗಾಣುಗಳ ಶೈಶವರೂಪ ಬಸವನಹುಳುಗಳಲ್ಲಿರುವುದು. ಜೌಗುಪ್ರದೇಶ ಹಾಗೂ ಕಾಲುವೆಗಳ ಹಾದಿಬದಿಯಲ್ಲಿ ಕುರಿಗಳು ಮೇಯಲು ಹೋದಾಗ ಈ ರೋಗಕ್ಕೆ ಒಳಗಾಗುವುವು. ಮಾನೀಸಿಯ ಆವಿಟೆಲ್ಲಿನ, ಸೈಲೀಸಿಯ ಮುಂತಾದ ಲಾಡಿಹುಳುಗಳು ಕುರಿಗಳ ಕರುಳಿನಲ್ಲಿ ಕಾಣಬರುವುವು. ಇವುಗಳ ಶೈಶವ ರೂಪ ಹುಲ್ಲುಕಾವಲಿನಲ್ಲಿರುವ ಸೂಕ್ಷ್ಮಕೀಟಗಳಲ್ಲಿ (ಆರಿಬ್ಯಾಟಿಡ್‌ಮೈಟ್ಸ್) ಇರುತ್ತವೆ. ಕುರಿಗಳು ಮೇಯುವಾಗ ಈ ಸೂಕ್ಷ್ಮಕೀಟಗಳನ್ನು ಹುಲ್ಲಿನ ಜೊತೆಗೆ ತಿನ್ನುವುವು. ಮುಂದೆ ಲಾಡಿಹುಳುಗಳ ಶೈಶವ ರೂಪ ಕುರಿಯ ಕರುಳಿನಲ್ಲಿ ಬೆಳೆದು ದೊಡ್ಡದಾಗುವುದು. ಈ ಹುಳುಗಳಿಂದ ಕುರಿಗಳ ಆರೋಗ್ಯ ಕೆಡುವುದು. ಮಲ್ಟಿಸೆಪ್ಸ್ ಲಾಡಿಹುಳುವಿನ ಶೈಶವ ರೂಪ ಸೀನೋರಸ್ ರೋಗ ಕುರಿಗಳಲ್ಲಿ ತಲೆಸುತ್ತುವಿಕಯನ್ನು ಉಂಟುಮಾಡುವುದು. ಅನೇಕ ರೀತಿಯ ದುಂಡು ಹುಳುಗಳು ಕುರಿಯ ಅನ್ನನಾಳ ಹಾಗೂ ಶ್ವಾಸಕೋಶಗಳಲ್ಲಿ ಮನೆಮಾಡಿಕೊಂಡಿರವುವು. ಅನ್ನನಾಳದಲ್ಲಿ ವಾಸಿಸುವ ಹೆಮಾಂಖಸ್, ಮೆಸಿಸ್ಟೊಸಿರಸ್, ಟ್ರೈಕೊಸ್ಟ್ರಾಂಗೈಲಿಸ್ ಬ್ಯೂನೋಸ್ಟೋಮಮ್ ಮುಂತಾದ ಹುಳುಗಳು ರಕ್ತಹೀರುವುವು. ಈಸಾಫೆಗಸ್ಟೋಮಮ್ ಹುಳುಗಳು ಕರುಳಿನಲ್ಲಿ ಗಂಟು ರೋಗವನ್ನು ಉಂಟುಮಾಡುವುವು. ಶ್ವಾಸಕೋಶದ ಹುಳುಗಳಾದ ಮ್ಯುಲ್ಲೆರಿಯಸ್, ಪ್ರೋಟೋಸ್ಟ್ರಾಂಗೈಲಸ್ ಮುಂತಾದವು ಕೆಮ್ಮನ್ನು ತರುವುವಲ್ಲದೆ ಶ್ವಾಸಕೋಶ ಸಂಬಂಧರೋಗಕ್ಕೆ ಕುರಿಗಳನ್ನು ಈಡುಮಾಡುವುವು.

**ಕೀಟಗಳಿಂದ ಬರುವ ರೋಗಗಳು:** ಅನೇಕ ರೀತಿಯ ಕೀಟಗಳು ಕುರಿಗಳಲ್ಲಿ ಕಾಣಬರುವುವು. ಇವು ಕುರಿಗಳ ಮೇಲೆ ಹಾವಳಿ ಮಾಡುವುವಲ್ಲದೆ ಇತರ ರೋಗಗಳು ಹರಡಲು ಸಹಾಯವಾಗುವುವು. ನೊಣಗಳ ಮರಿಹುಳುಗಳು, ಹೇನು, ಉಣ್ಣೆ ಇವು ಅಂಥ ಪ್ರಮುಖ ಕೀಟಗಳು. ಕೆಲವು ನೊಣಗಳು ರಕ್ತ ಹೀರುವುವು. ಕೆಲವು ನೊಣಗಳ ಮರಿ ಹುಳುಗಳು ಕುರಿಗಳ ದೇಹದ ಮೇಲೆ ವೃದ್ಧಿಯಾಗುವುದರಿಂದ ಮರಿಹುಳು ವ್ಯಾಧಿಯನ್ನು (ಮಯಾಸಿಸ್) ತರುವುವು. ಇದರಿಂದ ಉಣ್ಣೆಯ ಉತ್ಪಾದನೆ ನಿಂತು ಹೋಗಿ ಅಪಾರ ನಷ್ಟವಾಗುವುದು. ಕುರಿ ಕೆಡ್ .(ಶೀಪ್ ಕೆಡ್) ಎಂದು ಕರೆಯುವ ಮೆಲೊಫ್ಯಾಗಸ್ ಓವಿನಸ್ ಎಂಬುದು ಉಣ್ಣೆಯಲ್ಲಿ ಸೇರಿಕೊಂಡು ಹೋಗಲಾರದಂಥ ಕಪ್ಪು ಕಲೆಗಳನ್ನು ಉಂಟುಮಾಡುವುದು. ಇದರಿಂದ ಉಣ್ಣೆಯ ಬೆಲೆ ಕಡಿಮೆಯಾಗುವುದು. ಡಮೇಲಿನಿಯ, ಲೈನೊಗ್ನಾಥಸ್ ಎಂಬ ಹೇನುಗಳ ಹಾವಳಿಯಿಂದಲೂ ಕುರಿಯ ದೇಹಸ್ಥಿತಿ ಕೆಡುವುದು. ದೇಹದ ಮೇಲಿದ್ದು ಉಣ್ಣೆಗಳು (ಟಿಕ್ಸ್) ರಕ್ತ ಹೀರುವುವಲ್ಲದೆ ಅನೇಕ ರೀತಿಯ ಸೋಂಕು ರೋಗಗಳನ್ನು ಹರಡುವುವು. ತೊಗಲಿನಲ್ಲಿ ಮಚ್ಚೆ ತೂತುಗಳಾಗುವುವು. ಇವುಗಳ ಹಾವಳಿಯಿಂದ ಸೂಕ್ಷ್ಮ ಕೀಟಗಳು (ಮೈಟ್ಸ್) ಚರ್ಮದೊಳಗೆ ಸೇರಿ ಉರಿಯೂತದಿಂದ ಉಣ್ಣೆ ಬಿದ್ದು ಹೋಗಿ ಕುರಿ ಬರಡಾಗುವುದು. (ಜಿ.ಆರ್.ಆರ್.ಎಸ್)

**ಕುರಿಯವಿಠಲಶಾಸ್ತ್ರಿ:** 1912–72. ಹೆಸರಾಂತ ಯಕ್ಷಗಾನ ಕಲಾವಿದ. ಈಗ ಕೇರಳ ರಾಜ್ಯದಲ್ಲಿರುವ ಕಾಸರಗೋಡು ತಾಲ್ಲೂಕಿನ ಮಂಜೇಶ್ವರ ಫಿರ್ಕಾದ ಕುರಿಯ ಎಂಬಲ್ಲಿ 1912ರಲ್ಲಿ ಜನಿಸಿದರು. ತಂದೆ ವೆಂಕಟರಮಣ ಶಾಸ್ತ್ರಿಗಳಿಗೆ ಯಕ್ಷಗಾನ ಕಲೆಯಲ್ಲಿ ಆರಾಧನೆಯ ಭಾವವಿತ್ತು. ಹದಿವಯಸ್ಸಿನಲ್ಲೇ ತಂದೆಯ ಪ್ರೋತ್ಸಾಹ ಹಾಗೂ ಅವರೇ ಕಟ್ಟಿದ ಕೋಳ್ಯೂರು ಯಕ್ಷಗಾನ ಮಂಡಲಿಯಲ್ಲಿ ವಿಧಿವತ್ತಾಗಿ ಅಭಿನಯ ಆರಂಭಿಸಿದರು. ತಂದೆ ಹಿರಣ್ಯಕಶಿಪುವಾದರೆ ಮಗ ಪ್ರಹ್ಲಾದ, ತಂದೆ ಕಂಸನಾದರೆ ಮಗ ಕೃಷ್ಣನಾಗಿ ರಂಗದ ಮೇಲೆ ಅಭಿನಯಿಸುತ್ತಿದ್ದರು. ಪ್ರಸಿದ್ಧ ಬಣ್ಣದ ವೇಷಧಾರಿ ರಾವುಗೋಳಿ ಕಣ್ಣನ್ ಅವರಿಂದ ನೃತ್ಯ ಶಿಕ್ಷಣ ಪಡೆದರು. ಶಿವರಾಮ ಕಾರಂತರ ಯಕ್ಷಗಾನ ಮೂಕನೃತ್ಯದಲ್ಲೂ ಅಭಿನಯಿಸಿದರು. ಆಳಾಗಿ, ಅರಸಾಗಿ,ಭಕ್ತನಾಗಿ, ಸಾರಥಿಯಾಗಿ, ಹೆಣ್ಣಾಗಿ, ಗಂಡಾಗಿ ಪಾತ್ರ ನಿರ್ವಹಿಸಿದರು. ಕೃಷ್ಣ, ಹನುಮಂತ, ರಾಮ, ಕರ್ಣ, ಶಿವ, ಭಸ್ಮಾಸುರ, ಕಂಸ, ದುಷ್ಟಬುದ್ಧಿ, ರಾವಣ, ವಿಶ್ವಾಮಿತ್ರ, ರುಕ್ಮಿಣಿ, ಶಬರಿ, ಕೈಕೆ, ಗಿರಿಜೆ ಈ ಎಲ್ಲ ಪಾತ್ರಗಳಲ್ಲೂ ತಮ್ಮತನ ಮೆರೆದರು. ನವರಸಗಳಲ್ಲೂ ಪರಿಣತರೆನಿಸಿದರು.

ಇವರು ಯಕ್ಷಗಾನ, ಭರತನಾಟ್ಯಗಳೆರಡರ ಸಂಗಮವಾಗಿದ್ದರು. ಹಾಡು, ತಾಳ, ಚಂಡೆ, ಮುಂತಾದ ಹಿಮ್ಮೇಳನದ ಕ್ರಮಗಳಿಗೆ ಇಂತಿಷ್ಟೂ ಧಕ್ಕೆ ಬಾರದ ಹಾಗೆ ಎಲ್ಲರಿಗೂ ಅಭಿನಯದಿಂದಲೇ ಅರ್ಥವಾಗುವ ಹಾಗೆ ಭರತನಾಟ್ಯ ಕ್ರಮದಲ್ಲಿ ನರ್ತನ ಮಾಡುತ್ತಿದ್ದುದು ಇವರದೊಂದು ವಿಶೇಷ. ಬ್ರಹ್ಮಕಪಾಲದಿಂದ ಕಚ್ಚಿಸಿಕೊಂಡು ಮುಲುಗಾಡುವ ರಾವಣ, ಧೀರೋದಾತ್ತ ಗುಣಜಲಧಿ ಶ್ರೀರಾಮ– ಈ ಪಾತ್ರದಲ್ಲಿ ಶಾಸ್ತ್ರಗಳ ನೃತ್ಯಗತಿಯನ್ನೂ ವಾಗ್ವೈಭವವನ್ನೂ ನಯನಾಜೂಕುಗಳನ್ನೂ ಕಂಡವರಿಗೆ ರೋಮಾಂಚನ ವಾಗುತ್ತಿತ್ತು.

ಯಕ್ಷಗಾನವೊಂದು ಶಿಷ್ಟಕಲೆಯೇ ಅಲ್ಲ. ಸಂಭಾವಿತರು ಯಾರೂ ಅದರಲ್ಲಿ ಪಾಲ್ಗೊಳ್ಳುವುದು ತರವಲ್ಲ ಎಂಬ ಭಾವನೆಯಿದ್ದ ಕಾಲದಲ್ಲಿ ಅದರಲ್ಲಿ ಪ್ರವೇಶಿಸಿದ ಶಾಸ್ತ್ರಿಗಳು ಆ ಕ್ಷೇತ್ರದಲ್ಲಿ ನಡೆಸಿದ ಪ್ರಯೋಗಗಳೂ ಚಾಲ್ತಿಗೆ ತಂದ ಸುಧಾರಣೆಗಳೂ ಅನೇಕ. ಪಾತ್ರಕ್ಕೆ ತಕ್ಕ ವೇಷಭೂಷಣ(ಉದಾಹರಣೆ: ಗಿರಿಜಾ ಕಲ್ಯಾಣದಲ್ಲಿ ಕಾಮರತಿಯರಕೂಟ), ಪಾತ್ರಕ್ಕೆ ತಕ್ಕ ದೃಢಕಾಯ ಗುಣವಿಶೇಷಗಳಿರುವ ವ್ಯಕ್ತಿಗಳ ಆಯ್ಕೆಯ ವಿಧಾನ (ಉದಾಹರಣೆ: ಭಾರದ ಗದೆ ಎತ್ತಿ ಬೀಸಬಲ್ಲ ಶಕ್ತಿಯುತ ಹನುಮಂತ), ರಾವು ಬಡಿಸುವ ವೇಷಕ್ಕಿಂತ ಅಭಿನಯಕ್ಕೆ ಪ್ರಾಧಾನ್ಯ (ಉದಾಹರಣೆ: ಕುಂಭಕರ್ಣ)– ಹೀಗೆ ಎಷ್ಟೋ ವಿಚಾರಗಳಲ್ಲಿ ಇವರು ತಮ್ಮ ವಿಶೇಷತೆಯನ್ನು ಮೆರೆದರು. ವೇಷ, ಮಾತು, ಕುಣಿತ, ರಸ, ಭಾವ ಎಲ್ಲವೂ ಮೇಳೈಸಿದಾಗ ಮಾತ್ರವೇ ಯಕ್ಷಗಾನದ ಆವಿರ್ಭಾವ ಎಂಬುದು ಇವರ ಸೂತ್ರವಾಗಿತ್ತು.

ಕಟೀಲು ದುರ್ಗಾಪರಮೇಶ್ವರಿ, ಧರ್ಮಸ್ಥಳ ಮುಂತಾದ ಸುಪ್ರಸಿದ್ಧ ಮೇಳಗಳಲ್ಲಿ ಭಾಗವಹಿಸಿ ಕೀರ್ತಿಗಳಿಸಿದ ಇವರು ತಮ್ಮ ಪರಂಪರೆಯನ್ನು ಮುಂದುವರೆಸಲು ಕೈಗೊಂಡ ಪ್ರಯತ್ನ ಕಡಿಮೆಯಲ್ಲ. ಮೂವತ್ತಕ್ಕೂ ಹೆಚ್ಚು ಕಲಾವಿದರನ್ನು ಪರಿಪೂರ್ಣತೆಯ ಹತ್ತಿರಕ್ಕೆ ರೂಪಿಸಿದ್ದು ಇವರ ಮಹತ್ತರ ಸಾಧನೆ. ಇವರ ಮನೆಯೇ ಒಂದು ನಾಟ್ಯಶಾಲೆಯಾಗಿತ್ತು. ಹಣಕೊಟ್ಟು, ಊಟ ಹಾಕಿ, ಕುಣಿದು ಕಲಿಸಿದ ಶಾಸ್ತ್ರಿಗಳು ಉದಾರಿಯಾಗಿದ್ದರು. ಕಲೆಯ ವಿಚಾರದಲ್ಲಿ ಶಿಸ್ತಿನ ಮೂರ್ತಿ ಎನಿಸಿದ್ದ ಇವರು ಚಂದದ ರಂಗ, ವೇಷ–ಭೂಷಣ, ಚುರುಕು, ಸೊಬಗು, ಅಭಿಜ್ಞತೆ, ಔಚಿತ್ಯ ಇಂತಿಷ್ಟೂ ಕೆಡಬಾರದೆಂದು ಶಿಷ್ಯರಿಗೆ ಇವರ ಕಿವಿಮಾತಾಗಿತ್ತು. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಪೆರ್ಡೂರಿನಲ್ಲಿ ಧರ್ಮಸ್ಥಳ ಕ್ಷೇತ್ರ ಮಹಾತ್ಮೆಯ ಶಿವತಾಂಡವ ನೃತ್ಯ ಮಾಡುತ್ತಿರುವಾಗ ಹೃದಯಾಘಾತಕ್ಕೀಡಾಗಿ ನಿಧನರಾದರು (1972). (ಎಚ್.ಎಸ್.ಕೆ.)

**ಕುರು[1] :** ಕೌರವರ ಮೂಲಪುರುಷ. ಚಂದ್ರವಂಶದ ಸಂವರಣ ಮತ್ತು ತಪತಿಯರ ಪುತ್ರ. ಈತನಿಗೆ ಶುಭಾಂಗಿ ಮತ್ತು ವಾಹಿನಿ ಎಂದು ಇಬ್ಬರು ಪತ್ನಿಯರು. ಶುಭಾಂಗಿಯ ಮಗ ವಿದೂರಥ. ವಾಹಿನಿಯ ಸಂತತಿಯವರೇ ಕೌರವರು. (ಕೆ.ಎಸ್.ವಿ.)

**ಕುರು[2] :** ಕೀವಿನ ಸ್ಥಳಿಕ ಶೇಖರಣೆಯಿಂದ ಆಗುವ ಗುಳ್ಳೆ. ಗಾತ್ರದಲ್ಲಿ ಸಣ್ಣದಾದ ಕೀವು ಕುರುವಿಗೆ ಕೀವುಗುಳ್ಳೆ (ಪೂಸ್ಚೂಲ್) ಎನ್ನುತ್ತಾರೆ. ತೀರ ಆಳವಾಗಿ ಹಾಳುಗೆಡಿಸುವ ಹಲಕಡೆ ತೂತುಗಳಾಗಿ ಹರಡಿರುವುದು ರಾಜಕುರು (ಕಾರ್ಬಂಕಲ್), ಎಲ್ಲೆಲ್ಲೂ ಹರಡಿದಂತೆ ಕೀವಾಡುವುದು ವಿಸರ್ಪಿ (ಎರಿಸಿಪೆಲಾಸ್). ಚರ್ಮದ ವಿಸರ್ಪಿ, ಅಳಿಗೊಳಿಪಿನ (ಗ್ಯಾಂಗ್ರೀನಸ್) ವಿಸರ್ಪಿಗಳು ಉದಾಹರಣೆಗಳು. ಕೂದಲಿನ ಕೋಶಿಕಗಳ (ಪಾಲಿಕಲ್ಸ್) ಬೆವರು ಗ್ರಂಥಿಗಳ ಸೋಂಕಿನಿಂದ, ಕೀವುಗುಳ್ಳೆಯಂತಿರುವ ಮಿಟ್ಟೆದದ್ದು (ಪ್ಯಾಪ್ಯೂಲ್) ಎದ್ದಿರುವುದಕ್ಕೆ ಮೊಡವೆ ಅಥವಾ ಕಜ್ಜಿ (ಅಕ್ನಿ) ಎಂದು ಹೆಸರು. ಕುರು ಮೇಲ್ಮೇಲೊ ಆಳವಾಗೋ ಕೂರಾಗೋ ಬೇರೂರಿಯೇ ಇರಬಹುದು.

**ಕೂರಾದ ಕೀವುಕುರು:** ಬೇಗನೆ ರೂಪಗೊಂಡು, ಒಂದೆರಡು ದಿನಗಳಲ್ಲಿ ಮೂತಿತೋರಿ ಕೊನೆಗೆ ಒಡೆಯಬಹುದು. ಇಲ್ಲವೇ ಹಾಗೆಯೇ ಇಂಗಿ ಹೋಗಬಹುದು. ಸಾಮಾನ್ಯವಾಗಿ ಇದು ವಾಸಿಯಾಗಲು 7–10 ದಿವಸಗಳು ಹಿಡಿಯುವುವು. ಇದು ಎದ್ದಾಗ ಬಿಸಿ, ನೋವು, ಕೆಂಪೇರಿಕೆ, ಹೊಳಪಿನ ಊದು, ಕೆಲವೇಳೆ ತುಸು ಜ್ವರ ಇರುವುವು.

**ಕಾರಣಗಳು :** ಏಕಾಣುಜೀವಿ ಸೋಂಕುಗಳು ನೇರವಾದ ಕಾರಣಗಳು. ಗುತ್ತಿಕಾಯ್ಜೀವಿ (ಸ್ಟೆಫೈಲೊಕಾಕಸ್), ಸರಕಾಯ್ಜೀವಿ (ಸ್ಟ್ರೆಪ್ಟೊಕಾಕಸ್), ಕೀವುಜನಕ ಕದಿರುಜೀವಿ (ಕ್ಲಾಸ್ಟ್ರಿಡಿಯಂ ಪಯೋಜಿನಸ್), ಕ್ಷಯದ ಅಣಬೆ ಏಕಾಣುಜೀವಿ (ಮೈಕೋಬ್ಯಾಕ್ಟೀರಿಯಂ) ಉದಾರಣೆಗಳು. ಇವಲ್ಲದೆ ಮುಳ್ಳುಸಿಬರು, ಲೋಹಹ ಚೂರುಗಳು ಬಂದೂಕಿನ ಗುಂಡುಗಳು ಇತ್ಯಾದಿ ಊತಕದಲ್ಲಿ ಸೇರಿಕೊಂಡು ಕೆರಳಿಸಬಹುದು. ಅದೇ ಹೊತ್ತಿನಲ್ಲಿ ಪ್ರಾಣಿಯ ಬಲುಗುಂದಿಕೆ, ಒಂದು ಅಂಗದಲ್ಲಿ ಊತಕದ ಬಲಗುಂದಿರುವುದು. ಮೈಯ ಸೋಂಕು ತಡೆವ ಬಲದೆದುರಾಗಿ ನೆಲೆಯೂರುವಷ್ಟು ಏಕಾಣುಜೀವಿಗಳು ಇರುವಿಕೆ. ಕೆಲವೇಳೆ ಕೀವುಗೂಡಿಸುವ ಜೀವಾಣುಗಳಿಂದ ಸೋಂಕುಹತ್ತುವಂತೆ ಗೊತ್ತಾದ ವಿಷಕಣಗಳು ಮಾಡುವುದೂ ಕೀವುಕುರುಗಳು ಏಳಲು ನೆರವಾಗುತ್ತವೆ.

ಸಾಮಾನ್ಯವಾಗಿ, ಗಾಯ ಬಲಗುಂದಿದ ಇಲ್ಲವೇ ಉರಿತವಾದ ಚರ್ಮ, ಬೆವರಿನ ಗ್ರಂಥಿ ಇಲ್ಲವೇ ಹೊರಗಣ ಪರಿಸರದೊಂದಿಗೆ ನಿಕಟವಾಗಿ ತಾಕುವ ಉಸಿರಾಟದ, ಜಠರಕರುಳಿನ ನಾಳಿಯ (ಟ್ರಾಕ್ಸ್) ಬಲಗುಂದಿದ ಲೋಳೆಪೊರೆಗಳ ಮೂಲಕ ಕೀವುಕುರು ಏಳಿಸುವ ಏಕಾಣುಜೀವಿಗಳು ಮೈ ಒಳಹೊಗುತ್ತವೆ. ಒಳನುಗ್ಗಿದ ಏಕಾಣುಜೀವಿಗಳನ್ನು ಮೇಲಿಂದ ಮೇಲೆ ಬಿಳಿಯ ರಕ್ತಕಣಗಳೂ ರೋಧವಸ್ತುಗಳೂ (ಆಂಟಿ ಬಾಡೀಸ್) ಹಾಳುಮಾಡುತ್ತವೆ. ಕೆಲವೇಳೆ ದುರ್ಬಲವಾಗಿ ರೋಗ ತಡೆವ ಬಲಗುಂದಿರುವ ಊತಕದಲ್ಲಿ ಏಕಾಣುಜೀವಿಗಳು ತಳವೂರುತ್ತವೆ. ಹೀಗೆ ನೆಲೆಸಿದ ಸೋಂಕಿನ ಪದಾರ್ಥದ ಬಿಳಿಯ ರಕ್ತಕಣಗಳ ನಡುವೆ ಜರುಗುವ ಕದನದಲ್ಲಿ ಏಕಾಣುಜೀವಿಗಳೂ ಬಿಳಿಯ ರಕ್ತಕಣಗಳೂ ಸಾಯುತ್ತವೆ. ಜೀವಿವಿಷಗಳಿಂದ (ಟಾಕ್ಸಿನ್ಸ್) ಸತ್ತ ಊತಕಗಳು ಹಾಳಾದ ಬಿಳಿಯ ರಕ್ತರಸದಲ್ಲಿ (ಪ್ಲಾಸ್ಮ) ಬೆಳ್ಳಗೆ ಹಾಲಿನಂತಿರುವುದು. ಅದೇ ಕೀವು. ಕೀವುಗೂಳಿಕ ಜೀವಾಣು ಬೇರೆಡೆಗೆ ಪಸರಿಸದಂತೆ ಕೀವಿನ ಸುತ್ತಲೂ ಬಿಳಿಯ ರಕ್ತಕಣಗಳ ದಪ್ಪ ಪದರು ತಡೆಗಟ್ಟುತ್ತದೆ. ಹೀಗೆ ಸರಾಗವಾಗಿ ಹಬ್ಬಿಕೊಳ್ಳುತ್ತದೆ. ಒಳಗಿರುವ ಕೀವುಕುರು ಚರ್ಮದ ಮೇಲೆಮೂತಿ ತೋರಿ ಆಮೇಲೆ ಒಡೆದು ಕೀವು ಸುರಿಸುವುದೂ ಹೀಗೇ. ಬೆಚ್ಚಾರ (ಪೋಲ್ಟೀಸ್) ಕೊಡುವುದರಿಂದ ಬೇಗ ಗುಣವಾಗಬಹುದು.

**ಲಕ್ಷಣಗಳು :** ಕೀವುಕುರು ಎದ್ದಕಡೆ ಮುಖ್ಯವಾಗಿ ಕೆಂಪಗೆ ಉಬ್ಬಿರುವುದು, ಮುಟ್ಟಿದರೆ ಬೆಚ್ಚಗಿರುವುದು, ಒತ್ತಿದರೆ ನೋವು ಕಾಣುವುದು, ಅಲ್ಲದೆ ಮೈಯಲ್ಲಿ ಕೊಂಚ ಜ್ವರ ಇರಬಹುದು. ಇದು ಒಡೆದುಕೊಳ್ಳುವ ಕಡೆ ಒತ್ತಿದರೆ ಒಳಗೆ ಕೀವು ತುಂಬಿರುವುದು ಗೊತ್ತಾಗುವುದು. ಕೆಲವೇಳೆ ಕೀವುಕುರು ಇನ್ನೂ ಆಳಕ್ಕೆ ತೋಡಿಕೊಂಡು ನುಗ್ಗಿ ಕುರುಡು ದೊಗರಾಗುತ್ತದೆ (ಸೈನಸ್). ಕೀವುಕುರು ಎದ್ದಕಡೆಗೆ ಹತ್ತಿರದ ಹಾಲುರಸ ಗ್ರಂಥಿಗೂ ಸೊಂಕು ಸಾಗಿ ಅದರಲ್ಲೂ ಉರಿತವೆದ್ದು ಅಲ್ಲೂ ಕೀವುಕುರು ಒಡೆದುಕೊಂಡರೆ, ಶಸ್ತ್ರಕ್ರಿಯೆಯಿಂದ ಕೊಯ್ದರೆ, ನೋವು ಕಳೆದು, ಊತವಿಳಿದು, ಮೈಕಾವು ಕುಗ್ಗಿ, ಸುತ್ತುಮುತ್ತಣ ಊತರ ಎಂದಿನಂತೆ ಚೆನ್ನಾಗುವುದು.

**ಚಿಕಿತ್ಸೆ :** ಸಲ್ಫ ಮದ್ದುಗಳು, ಜೀವಿವಿರೋಧಕಗಳನ್ನು ಕೊಡುವುದರಿಂದ ಕೀವುಕುರು ಏಳದಂತೆ ಮಾಡಬಹುದು. ಕೀವುಕುರು ಬೇಗನೆ ವಾಸಿಯಾಗುವಂತೆ ಬೆಚ್ಚಾರ ಕೊಡಬೇಕು. ಆಮೇಲೆ ಮೇಲಕ್ಕೆ ಮೂತಿ ಇಡುವೆಡೆಯನ್ನು ಗುರುತಿಸಿ ಕೊಯ್ದು ಕೀವನ್ನು ಹೊರಡಿಸಬಹುದು. ಕೀವು ಸುರಿದುಹೋಗಿ ಮತ್ತೆ ಸೋಂಕು ಹತ್ತದಂತೆ ಮುದ್ದುಗಳನ್ನು ಹಾಕಿ ಗಾಯಪಟ್ಟಿ ಕಟ್ಟಬೇಕು. ಮೊಗ, ಕೀಲಿನ ಬಳಿ, ಎದೆ ಹೊಟ್ಟೆಗಳ ಮೇಲೆ, ಕೊರಳು ಈ ತಾವುಗಳಲ್ಲಿ ಕೀವುಕುರು ಎದ್ದರೆ ಕೂಡಲೇ ಚಿಕಿತ್ಸೆ ಮಾಡಿ ಜೀವಾಳದ ಅಂಗಗಳಿಗೆ ಹರಡುವುದನ್ನು ತಪ್ಪಿಸಬೇಕು.

ಬೇರೂರಿದ ಕೀವುಕುರು : ಇದು ನಿಧಾನವಾಗಿ ಏಳುವುದಲ್ಲದೆ, ಮೇಲಕ್ಕೆ ಮೂತಿ ಇಟ್ಟುಕೊಂಡು ಅದಕ್ಕದೇ ಒಡೆದುಕೊಳ್ಳದು. ಸುತ್ತಲೂ ತಂತುಕ ಊತಕ (ಫೈಬ್ರಸ್ ಟಿಷ್ಯೂ) ಸೇರಿಕೊಳ್ಳುವುದು. ಬೇರೂರಿದ ತಣ್ಣನೆಯ ಕೀವು ಕುರುವಿದ್ದಲ್ಲಿ ಒಳಗಡೆ ಕೀವು ಒಣಗಿ ಗಟ್ಟಿ ಮೊಸರಂತಿರುತ್ತದೆ. ಇನ್ನೂ ಬೇರೂರಿದ್ದರೆ, ಕಲ್ಲಿನಂತಾಗಿರುತ್ತದೆ.

ಹೊರಕ್ಕೆ ಕಾಣಿಸಿಕೊಂಡ ಹೊರತು ಇದನ್ನು ಗುರುತಿಸುವುದು ಕಷ್ಟ. ಕೆಲವೇಳೆ ಕಟುಕಶಾಲೆಯಲ್ಲಿ ಮಾಂಸವನ್ನು ಪರೀಕ್ಷಿಸುವಾಗಲೋ ಸತ್ತ ಪ್ರಾಣಿಯನ್ನು ಕೊಯ್ದು ನೋಡುವಾಗಲೋ ಕಾಣಲೂಬಹುದು. ಮೈಮೇಲೆ ಕಂಡುಬಂದರೆ ಆಗ ಇದು ಗಟ್ಟಿಯಾಗಿ ತಣ್ಣಗೆ ತುಸು ನೋವೊಂದಿಗೆ ಬೇಗನೆ ದೊಡ್ಡದಾಗದಿರುವುದು. ನುಂಗಣೆ, ಉಸಿರಾತ, ನಡಿಗೆಯೇ ಮುಂತಾದ ಯಾವುದಾದರೂ ಜೀವಾಳದ ಅಂಗದ ಕೆಲಸಕ್ಕೆ ಆತಂಕವಾದ ಹೊರತು, ಪ್ರಾಣಿಯ ಆರೋಗ್ಯ ಕೆಟ್ಟಿರದು.

ಕೂರಾದ ಕೀವುಕುರುವಿನ ಚಿಕಿತ್ಸೆಯೇ ಇದಕ್ಕೂ ಸಲ್ಲುತ್ತದೆ. ಕೀವುಕುರು ಮಾಯುವಂತೆ ಇಲ್ಲವೇ ಮೂತಿ ಇಡುವಂತೆ ಮಾಡಲು ಮದ್ದು, ಲೇಪಗಳನ್ನು ಹಚ್ಚಬೇಕಾಗಬಹುದು. ಆಮೇಲೆ ಶಸ್ತ್ರಕ್ರಿಯೆಯಿಂದ ಕೊಯ್ದು ಕೀವು ಹೊರಡಿಸಿ, ಬಾಯಿಬಿಟ್ಟ ಹುಣ್ಣಿನ ಹಾಗೆ ಚಿಕಿತ್ಸೆ ಆಗಬೇಕು. (ಬಿ.ಎಂ.ಎ.; ಕೆ.ವಿ.ಎಂ.; ಎ.ಕೆ.ಜಿ.)

**ಕುರುಕ್ಷೇತ್ರ[1] :** ಉತ್ತರ ಭಾರತದಲ್ಲಿ ಸರಸ್ವತೀ (ಇಂದಿನ ಘಗ್ಗರ್) ನದಿಯ ದಕ್ಷಿಣಕ್ಕೂ ದೃಷದ್ವತೀ (ಇಂದಿನ ಚಿತಂಗ್) ನದಿಯ ಉತ್ತರಕ್ಕೂ ಇರುವ ಪ್ರದೇಶ. ಇದರ ಪ್ರಾಚೀನತಮ ಉಲ್ಲೇಖ ವೈದಿಕಯುಗದಲ್ಲಿ ರಚಿತವಾದ ಬ್ರಾಹ್ಮಣಗಳಲ್ಲಿ ಕಂಡುಬರುತ್ತದೆ. ದೇವತೆಗಳು ಕುರುಕ್ಷೇತ್ರದಲ್ಲಿ ಸತ್ರಗಳನ್ನು (ಯಾಗ) ಮಾಡಿದ್ದರೆಂದು ಶತಪಥ ತೈತ್ತರೀಯ ಬ್ರಾಹ್ಮಣಗಳಲ್ಲೂ ಮೈತ್ರಾಯಣೀ ಸಂಹಿತೆಯಲ್ಲೂ ಹೇಳಲಾಗಿದೆ. ಬ್ರಹ್ಮಾವರ್ತ, ರಾಮಹ್ರದ, ಸಮಂತ (ಸ್ಯಮಂತ) ಪಂಚಕ, ವಿನಶನ, ಸನ್ನಿಹತಿ ಎಂಬೀ ಹೆಸರುಗಳಿಂದಲೂ ಪ್ರಸಿದ್ಧವಾಗಿದ್ದ ಕುರುಕ್ಷೇತ್ರವನ್ನು ಬ್ರಾಹ್ಮಣಗಳಲ್ಲಿ ಪುಣ್ಯಭೂಮಿಯೆಂದೂ ವಾಮನ ಪುರಾಣ ಮತ್ತು ಮಹಾಭಾರತಗಳಲ್ಲಿ ಧರ್ಮಕ್ಷೇತ್ರವೆಂದೂ ಕರೆಯಲಾಗಿದೆ. ಇದು ಅಭೀರ ದೇಶದ ಒಂದು ಭಾಗವಾಗಿತ್ತೆಂದು ವಾತ್ಸ್ಯಾಯನನ ಕಾಮಸೂತ್ರದಲ್ಲಿ ವರ್ಣಿಸಲಾಗಿದೆ. ಬೌದ್ಧ ಜಾತಕಗಳಲ್ಲಿ ಕೂಡ ಹಲವೆಡೆಗಳಲ್ಲಿ ಇದರ ಪ್ರಸ್ತಾಪವುಂಟು. 7ನೆಯ ಶತಮಾನದಲ್ಲಿ ಭಾರತದಲ್ಲಿ ಪ್ರವಾಸ ಕೈಗೊಂಡಿದ್ದ ಚೀನೀ ಯಾತ್ರಿಕ ಯುವಾನ್‌ಚಾಂಗನೂ ಕುರುಕ್ಷೇತ್ರವನ್ನು ಧರ್ಮಕ್ಷೇತ್ರವೆಂದೇ ವರ್ಣಿಸಿದ್ದಾನೆ.

ತೈತ್ತಿರೀಯ ಆರಣ್ಯಕದಿಂದ ತಿಳಿದು ಬರುವಂತೆ ದಕ್ಷಿಣದಲ್ಲಿ ಖಾಂಡವವನ, ಉತ್ತರದಲ್ಲಿ ತೂರ್ಘ್ನ, ಪಶ್ಚಿಮದಲ್ಲಿ ಪರೀಣ–ಇವು ಕುರುಕ್ಷೇತ್ರದ ಮೇರೆಗಳು. ದೃಷದ್ವತೀ, ಸರಸ್ವತೀ, ಅಪಯಾ ಮತ್ತು ಪಸ್ತ್ಯಾ ನದಿಗಳು ಹರಿಯುತ್ತಿದ್ದ ಆ ಪ್ರದೇಶದಲ್ಲಿ ಶರ್ಯಣಾವಂತವೆಂಬ ದೊಡ್ಡ ತಟಾಕವಿತ್ತು. ತರಂತುಕ, ಆರಂತುಕ ಮಚಕ್ರುಕ ಮತ್ತು ರಾಮಹ್ರದ–ಇವು ಕುರುಕ್ಷೇತ್ರದ ಮೇರೆಗಳೆಂದೂ ಆ ಪ್ರದೇಶದಲ್ಲಿ ದೃಷದ್ವತೀ, ಕೌಶಿಕೀ, ಮಧುಶ್ರವಾ, ಮಂದಾಕಿನೀ ಗಂಗಾ, ವೈತರಣೀ ಹಿರಣ್ಯವತೀ, ಆಪಗಾ, ಅಂಬುಮತೀ ಮತ್ತು ಸರಸ್ವತೀ ಎಂಬ ನದಿಗಳು ಹರಿಯುತ್ತಿದ್ದುವೆಂದೂ ಮಹಾಭಾರತ ತಿಳಿಸುತ್ತದೆ.

ಕಾಮ್ಯಕ, ಅದಿತಿವನ, ವ್ಯಾಸವನ, ಫಲಕೀವನ, ಸೂರ್ಯವನ, ಮಧುವನ ಮತ್ತು ಶೀತಾವನಗಳೆಂಬ ಏಳು ಪುಣ್ಯ ವನಗಳು ಕುರುಕ್ಷೇತ್ರದಲ್ಲಿದ್ದುವೆಂದು ವಾಮನ ಪುರಾಣ ಮತ್ತು ನಾರದೀಯಗಳಲ್ಲಿ ಹೇಳಲಾಗಿದೆ. ಹಸ್ತಿನಾಪುರ (ಇದು ದೆಹಲಿಯಿಂದ 100 ಕಿಮೀ. ವಾಯವ್ಯಕ್ಕಿದೆ), ಇಂದ್ರಪ್ರಸ್ಥ (ದೆಹಲಿಯ ಪುರಾಣಾಖಿಲಾದ ಪರಿಸರ), ಸ್ಥಾಣೇಶ್ವರ (ಇಂದಿನ ಥಾನೇಸರ್) ಹಾಗೂ ಪೃಥೂದಕ (ಇಂದಿನ ಪೆಹೋವ)–ಇವು ಕುರುಕ್ಷೇತ್ರದ ಪ್ರಧಾನ ಪ್ರಾಚೀನ ಪಟ್ಟಣಗಳು. ಮೇಲಿನ ಮಾಹಿತಿಗಳು ಸೂಚಿಸುವಂತೆ ಇಂದಿನ ಹರಿಯಾಣ ಪ್ರದೇಶದ ಕರ್ನಾಲ್–ಅಂಬಾಲ ಪ್ರಾಂತ್ಯವೇ ಇತಿಹಾಸ ಪ್ರಸಿದ್ಧವಾದ ಕುರುಕ್ಷೇತ್ರವೆಂಬುದು ಹೆಚ್ಚು ಮಂದಿ ವಿದ್ವಾಂಸರ ಅಭಿಪ್ರಾಯ.

ಸೋಮವಂಶದ ಅರಸು ಸಂವರಣ ಮತ್ತು ಅವನ ರಾಣಿ ತಪತೀ ಇವರಿಗೆ ಹುಟ್ಟಿದ ಕುರುವೆಂಬ ರಾಜರ್ಷಿ ಆ ಪ್ರದೇಶದಲ್ಲಿ ಅನೇಕ ಯಾಗಗಳನ್ನು ಮಾಡಿದುದರಿಂದ ಅದು ಕುರುಕ್ಷೇತ್ರವೆಂಬ ಹೆಸರನ್ನು ಪಡೆಯಿತೆಂದು ಮಹಾಭಾರತದ ಶಲ್ಯಪರ್ವದಲ್ಲಿ ಹೇಳಲಾಗಿದೆ. ಆದರೆ ಕುರುಜನಾಂಗದವರು ಅಲ್ಲಿ ಅನೇಕ ಶತಮಾನಗಳ ಕಾಲ ನೆಲಸಿದ್ದರೆಂಬ ಕಾರಣದಿಂದ ಆ ಪ್ರದೇಶಕ್ಕೆ ಕುರುಕ್ಷೇತ್ರವೆಂಬ ಹೆಸರು ಬಂತೆನ್ನುವುದು ಸಮಂಜಸವೆನಿಸುತ್ತದೆ.

ಭಾರತದ ಜನಕ್ಕೆ ಕುರುಕ್ಷೇತ್ರದ ಪರಿಚಯವಾಗಿರುವುದು ಅಲ್ಲಿ ಸಂಭವಿಸಿದ 18 ದಿನಗಳ ಮಹಾಭಾರತ ಯುದ್ಧದಿಂದ. ಆ ಯುದ್ಧ ನಡೆದ ಕಾಲವನ್ನು ನಿರ್ಣಯಿಸಲು ನಿರ್ದಿಷ್ಟ ಆಧಾರಗಳಾವುವೂ ದೊರೆತಿಲ್ಲ. ಪ್ರ.ಶ.ಪೂ. 1500 –1000ರ ಅವಧಿಯಲ್ಲಿ ಯಾವಾಗಲೋ ಸಂಭವಿಸಿರಬಹುದೆಂದು ಹೇಳಬಹುದು. ಕುರುಕ್ಷೇತ್ರ, ಹಸ್ತಿನಾಪುರ ಮೊದಲಾದ ಮಹಾಭಾರತ ಯುಗಕ್ಕೆ ಸಂಬಂಧಿಸಿದ, ಕೆಲವು ಸ್ಥಳಗಳಲ್ಲಿ ಆಗಿಂದಾಗ್ಗೆ ನಡೆಸಲಾದ ಪ್ರಾಕ್ತನ ಉತ್ಖನನಗಳಲ್ಲಿ ದೊರೆತಿರುವ ವರ್ಣ ಚಿತ್ರಿತವಾದ ಬೂದಿ ಬಣ್ಣದ ಮಡಕೆಗಳು ಪ್ರ.ಶ.ಪೂ. ಸು. 1100–600ರ ಅವಧಿಯವಾಗಿವೆ. ಅವು ಮಹಾಭಾರತದ ಕಾಲದವೆಂಬುದು ಪುರಾತತ್ತ್ವ ಸಂಶೋಧಕರ ಅಭಿಪ್ರಾಯ.

ಮಹಾಭಾರತದ ಅನಂತರ ಕಾಲದಲ್ಲಿ ಹುಟ್ಟಿದ ಹಲವು ಸಾಹಿತ್ಯ ಕೃತಿಗಳಲ್ಲೂ ಶಾಸನಗಳಲ್ಲೂ ಕುರುಕ್ಷೇತ್ರದ ಪ್ರಸ್ತಾಪವಿದೆಯಾದರೂ ಆಗಲೂ ಅದು ತನ್ನ ಹಿಂದಿನ ಪ್ರಾದೇಶಿಕ ಸಮಗ್ರತೆಯನ್ನು ಉಳಿಸಿಕೊಂಡಿತ್ತೆನ್ನಲಾಗುವುದಿಲ್ಲ. ಹಿಂದೂ ಧರ್ಮದ ದೃಷ್ಟಿಯಲ್ಲಿ ಇಂದಿನ ವರೆಗೂ ಭಾರತದ ಪುಣ್ಯಕ್ಷೇತ್ರಗಳಲ್ಲಿ ಕುರುಕ್ಷೇತ್ರ ಪ್ರಮುಖವಾದ್ದು. ಕರ್ನಾಟಕದಲ್ಲಿ ದೊರೆತಿರುವ ಬೇರೆ ಬೇರೆ ಶತಮಾನಗಳಲ್ಲಿ ಬರೆಯಲಾದ, ನೂರಾರು ಕನ್ನಡ ಶಾಸನಗಳಲ್ಲಿ ಕುರುಕ್ಷೇತ್ರವನ್ನು ಅರ್ಘ್ಯಕ್ಷೇತ್ರವೆಂದು ಕರೆಯಲಾಗಿದೆ. ಅಲ್ಲಿ ಧರ್ಮಕಾರ್ಯ ಮಾಡಿದರೆ ಅಶ್ವಮೇಧ ಯಾಗ ಮಾಡಿದಷ್ಟೇ ಫಲ ದೊರೆಯುವುದೆಂದೂ, ಅಲ್ಲಿ ಪಾಪಕಾರ್ಯಗಳಿಗೆ ಪಂಚಮಹಾ ಪಾತಕಗಳಷ್ಟು ಭೀಕರ ಫಲ ದೊರಕುವುದೆಂದೂ ಹೇಳಲಾಗಿದೆ. (ಕೆ.ವಿ.ಆರ್.)

**ಕುರುಕ್ಷೇತ್ರ[2] :** ಗ್ರಾಮಾಭಿವೃದ್ಧಿಯ ಸಂದೇಶ ಸಾರುವ ನವದೆಹಲಿಯಿಂದ ಪ್ರಕಟವಾಗುವ ಮಾಸಪತ್ರಿಕೆ. ಇಂಗ್ಲಿಷ್ ಮತ್ತು ಹಿಂದೀ ಎರಡು ಭಾಷೆಗಳಲ್ಲೂ ಪ್ರತ್ಯೇಕವಾಗಿ ಪ್ರಕಟವಾಗುತ್ತದೆ. ಇದು ಭಾರತ ಸರ್ಕಾರದ ಪ್ರಕಟಣ ವಿಭಾಗದಿಂದ ಪ್ರಕಾಶಿತ. 1970 ಮೇ ವರೆಗೂ ಇದು ಮಾಸಿಕವಾಗಿತ್ತು. ಜೂನ್ ತಿಂಗಳಿಂದ ಪಕ್ಷಪತ್ರಿಕೆಯಾಯಿತು. 1954ರಿಂದ ಭಾರತ ಸರ್ಕಾರದಿಂದ ಪ್ರಕಟವಾಗುತ್ತಿದ್ದ ಪಂಚಾಯತ್ ರಾಜ್ ಎಂಬ ಮಾಸ ಪತ್ರಿಕೆಯನ್ನು ಆಗ ಇದರಲ್ಲಿ ವಿಲೀನಗೊಳಿಸಲಾಯಿತು. ಕುರುಕ್ಷೇತ್ರದ ಇಂಗ್ಲಿಷ್ ಪ್ರಕಟಣೆ 1952ರಲ್ಲೂ ಹಿಂದೀ ಪ್ರಕಟಣೆ 1955ರಲ್ಲೂ ಆರಂಭವಾದುವು. ಈಗ ಮಾತ್ರ ಮಾಸಪತ್ರಿಕೆಯಾಗಿದೆ. ವ್ಯವಸಾಯ, ವಾಣಿಜ್ಯ, ಸಹಕಾರ, ಆರ್ಥಿಕ, ಸಾಮಾಜಿಕ ವಿಚಾರಗಳು, ಪಂಚಾಯತ್ ರಾಜ್ಯ–ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತ ಲೇಖನಗಳಿರುತ್ತವೆ. (ಎಸ್.ಬಿ.ಎಸ್.)

**ಕುರುಖ್ ಭಾಷೆ :** ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ್ದು ಮಧ್ಯ ಹಾಗೂ ಉತ್ತರ ಭಾರತದ ಅನೇಕ ಪ್ರದೇಶಗಳಲ್ಲಿ ಪ್ರಚಾರದಲ್ಲಿರುವ ಮೂರು ಭಾಷೆಗಳಲ್ಲೊಂದು. ಉಳಿದೆರಡು ಮಾಲ್ತೋ ಮತ್ತು ಬ್ರಾಹುಈ, ಇವೆಲ್ಲವನ್ನೂ ಉತ್ತರ ದ್ರಾವಿಡ ಭಾಷೆಗಳು ಎಂದು ಕರೆವುದಿದೆ. ಕುರುಖ್ ಭಾಷೆ ಛೋಟಾನಾಗಪುರ, ಒರಿಸ್ಸ, ಬಂಗಾಲ ಮತ್ತು ಅಸ್ಸಾಂಪ್ರದೇಶಗಳ ಗುಡ್ಡಗಾಡುಗಳಲ್ಲಿ ವಾಸಮಾಡುವ ಕೆಲವು ಮೂಲನಿವಾಸಿಗಳಲ್ಲಿ

ಬಳಕೆಯಲ್ಲಿದೆ. ಇದನ್ನು ಕುಡುಖ್ ಎಂದೂ ಓರಾನ್ ಎಂದೂ ಕರೆಯುತ್ತಾರೆ. ಕುರುಖ್ ಮಾತಾಡುವವರ ಸಂಖ್ಯೆ ಸಮಾರು ಹನ್ನೊಂದು ಲಕ್ಷ. ಕುರುಖ಼ ಎಂಬ ಶಬ್ದಕ್ಕೆ ಮಾತಾಡುವವರು ಎಂದೂ ಓರಾನ್ ಎಂಬ ಶಬ್ದಕ್ಕೆ ಮನುಷ್ಯರು ಎಂದೂ ಅರ್ಥ ಹೇಳಬಹುದು. ಈ ಜನಾಂಗದವರು ಬ್ರಾಹುಈ ಭಾಷೆ ಮಾತಾಡುವ ಪ್ರದೇಶವಾದ ಬಲೂಚಿಸ್ತಾನದಿಂದ ದಕ್ಷಿಣಕ್ಕೆ ಬಂದು ಉತ್ತರ ಕರ್ನಾಟಕ ರಾಜ್ಯಗಳಲ್ಲಿ ನೆಲೆಸಿರಬೇಕೆಂದೂ ಅಲ್ಲಿಂದ ನರ್ಮದಾ ನದಿಯ ಮಾರ್ಗವಾಗಿ ಶಹಾಬಾದ್ ಜಿಲ್ಲೆಯ ಕಡೆ ಹೋಗಿರಬೇಕೆಂದೂ ಅಲ್ಲಿಂದ ಮುಸಲ್ಮಾನರಿಂದ ಓಡಿಸಲ್ಪಟ್ಟು ಛೋಟಾನಾಗಪುರ, ರಾಜಮಹಲ್ ಬೆಟ್ಟಗಳ ಕಡೆಗೆ ಹೋಗಿರಬೇಕೆಂದೂ ಊಹಿಸಲಿಕ್ಕೆ ಕೆಲವು ಆಧಾರಗಳಿವೆ. ಮುಂಡಾ ಮತ್ತು ಭೋಜಪುರಿ ಹಿಂದಿಯ ಪ್ರಭಾವ ಈ ಭಾಷೆಯ ಮೇಲೆ ಸಾಕಷ್ಟು ಬಿದ್ದಿದೆ. ಅಲ್ಲದೆ ಒರಿಯಾ ಮತ್ತು ಬಂಗಾಳಿಯ ಪ್ರಭಾವವೂ ಸ್ವಲ್ಪಮಟ್ಟಿಗೆ ಕಂಡುಬರುತ್ತದೆ.

ಮೂಲದ್ರಾವಿಡ ಸ್ಪರ್ಶ ಕಕಾರ ಘರ್ಷ ಖ಼ ಕಾರವಾಗಿರುವುದು ಈ ಭಾಷೆಯ ಒಂದು ಪ್ರಧಾನ ವೈಶಿಷ್ಟ್ಯ. ಉದಾ: ಖ಼ನ್ (ಕಣ್ಣು) , ಖ಼ಾಖ಼ (ಕಾಗೆ) ಇತ್ಯಾದಿ. ಆದರೆ ಇ ಕಾರ ಪರವಾದ ಕ ಕಾರ ಹಾಗೆಯೇ ಉಳಿದಿದೆ. ಕೀಯ (ಕೆಳಗೆ). ಮೂಲದ ಚಕಾರಗಳಿಗೆ ಎ, ಉ ಪರವಾದಾಗ ಕ ಕಾರವಾಗುತ್ತದೆ. ಕುಡ್ (ಸುಡು) (<ಚುಡು). ವರ್ತ್ಸ್ಯ ಕಂಪಿತ ರೇಫ ಸಕಾರವಾಗಿದೆ. ಕೇಸ್ (ಕೇರು) ದ್ವಿತ್ವ ರೇಫ (ಕಂಪಿತ) ದ್ವಿತ್ವ ತ ಕಾರವಾಗಿಯೂ ಱಳ (ಳಿ) ಸ ಕಾರವಾಗಿಯೂ ವ ಕಾರ ಬ ಕಾರವಾಗಿಯೂ ಮಾರ್ಪಾಟಾಗಿರುವುದು ಕಂಡುಬರುತ್ತದೆ. ಬತ್ತ್ (ಒಣಗು) (<ವಱ್ಱು), ಜೋಸ್ (ಕೊಳೆ) (<ಕುೞಿಯ್), ಬಯಿ (ಬಾಯಿ) ಇತ್ಯಾದಿ. ನ–ಣಗಳ ಭೇದ ಮಾಯವಾಗಿ ಒಂದೇ ಆಗಿದೆ. ಹಾಗೆಯೇ ಲ–ಳ ಭೇದವೂ ಕಂಡಬರುವುದಿಲ್ಲ.

ನಾಮಪದದಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಎರಡು ವಿಧದ ಲಿಂಗವ್ಯವಸ್ಥೆ ಕಂಡುಬರುತ್ತದೆ. ನಮ್ಮ ಸ್ತ್ರೀಲಿಂಗವಾಚಕ ಶಬ್ದಗಳು ಈ ಭಾಷೆಯಲ್ಲಿ ನಪುಂಸಕ ಲಿಂಗವಾಚಕ ಶಬ್ದಗಳೊಡನೆ ಸೇರಿ ಪುಲ್ಲಿಂಗೇತರ ಗುಂಪಿಗಲ್ಲಿರುತ್ತವೆ. ಉತ್ತಮ ಪುರುಷ ಸರ್ವನಾಮದ ಬಹುವಚನ ರೂಪದಲ್ಲಿ ಸಮಾವಿಷ್ಟ, ಅಸಮಾವಿಷ್ಟ ಎಂಬ ಎರಡು ಭೇದಗಳಿವೆ. ಎಮ್ (ನಾವು) ನಾಮ್ (ನಾವು–ಕೇಳುವವನನ್ನೂ ಸೇರಿಸಿ). ಈ ಭಾಷೆಯ ವಿಭಕ್ತಿ ಪ್ರತ್ಯಯಗಳು ಹೀಗಿವೆ: ದ್ವಿತೀಯಾ–ಅನ್, ತೃತೀಯಾ–ತ್ರಿ, ಚತುರ್ಥಿ–ಗೆ, ಪಂಚಮಿ–ತಿ, ಷಷ್ಠಿ–ತ, ನಿ, ಸಪ್ತಮಿ–ಮ ಕ್ರಿಯಾಪದಗಳಲ್ಲಿ ವರ್ತಮಾನ, ಭೂತ, ಭವಿಷ್ಯತ್ ಎಂಬ ಮೂರು ಕಾಲಭೇದಗಳಿವೆ. (ಯು.ಪಿ.ಯು.)

**ಕುರುಡರ ಶಿಕ್ಷಣ** : ಜ್ಞಾನಸಂಗ್ರಹಣೆಯಲ್ಲಿ ಪ್ರಧಾನೇಂದ್ರಿಯವಾದ ದೃಷ್ಟಿ ಶೂನ್ಯವಾದಾಗ ಅಥವಾ ಸಮರ್ಪಕವಾಗಿ ಕ್ರಿಯಾಶೀಲವಾಗಲು ಅಸಮರ್ಥವಾದಾಗ ಅಂಥ ವ್ಯಕ್ತಿಗೆ ಪ್ರಧಾನವಾಗಿ ಶ್ರವಣ ಮತ್ತು ಸ್ಪರ್ಶೇಂದ್ರಿಯಗಳ ಮೂಲಕ ಒದಗಿಸುವ ಶಿಕ್ಷಣ. 1960ರಲ್ಲಿ ಮಾಡಿದ ಒಂದು ಅಂದಾಜಿನ ಪ್ರಕಾರ ಪ್ರಪಂಚದ ಕುರುಡರ ಸಂಖ್ಯೆ ಸುಮಾರು 14 ದಶಲಕ್ಷ. ಇಂದಿನವರೆಗೆ (2012) ಈ ಸಂಖ್ಯೆ 37 ಮಿಲಿಯನ್‌ಗೆ ಏರಿದೆ. ಅದರಲ್ಲಿ ಭಾರತ ಒಂದರಲ್ಲೇ 15 ಮಿಲಿಯನ್ ಕುರುಡರಿದ್ದಾರೆ. ಇಷ್ಟು ಭಾರೀ ಸಂಖ್ಯೆಯ ಮನುಷ್ಯಶಕ್ತಿಯಲ್ಲಿ ಸುಪ್ತವಾಗಿರುವ ಪ್ರತಿಭೆ ವಿಕಸಿಸಿ ಹೊರಸೂಸಲು ಯುಕ್ತ ಸನ್ನಿವೇಶವನ್ನು ಒದಗಿಸುವುದು ಮತ್ತು ತನ್ಮೂಲಕ ಕುರುಡರ ಜೀವನವನ್ನು ಅರ್ಥಪೂರ್ಣವನ್ನಾಗಿಸುವುದು ಕುರುಡರ ಶಿಕ್ಷಣದ ಉದ್ದೇಶ. ಕುರುಡರಿಗೆ ಜೀವನನಿರ್ವಹಣೆ ಮಾಡಲು ಮೊದಲು ಇದ್ದದ್ದು ಎರಡೇ ಮಾರ್ಗಗಳು–ಜನ್ಮದಾತರನ್ನು ಮತ್ತು ಸಂಬಂಧಿಗಳನ್ನು ಆಶ್ರಯಿಸಿ ಬಾಳುವುದು; ತಿರುಪೆಯೆತ್ತಿ ಹೊಟ್ಟೆ ಹೊರೆಯುವುದು. ಉಭಯ ಮಾರ್ಗಗಳಲ್ಲೂ ಅಂತಿಮ ಫಲ ಒಂದೇ–ಸಮಾಜದ ಮೇಲೆ ಪರಾನ್ನ ಜೀವಿಗಳಾಗಿ ಹೊರೆಯಬಾಳು. ಇಂಥ ಸನ್ನಿವೇಶವನ್ನು ತಪ್ಪಿಸಿ ಕುರುಡರಿಗೆ ಸಹ ತಮ್ಮ ಅನ್ನವನ್ನು ಸ್ವಸಾಮರ್ಥ್ಯದಿಂದ ಸಂಪಾದಿಸಲು ಆಸ್ಪದ ಮಾಡಿಕೊಡುವಲ್ಲಿ ಕುರುಡರ ಶಿಕ್ಷಣದ ಪಾತ್ರ ಮಹತ್ತ್ವ ಪೂರ್ಣವಾದದ್ದು.

**ಇತಿಹಾಸ** : ಕುರುಡರ ವಿಚಾರದಲ್ಲಿ ಸಮಾಜ ಮೊದಲಿನಿಂದಲೂ ದಯೆ, ದಾಕ್ಷಿಣ್ಯ ತೋರಿರುವುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಅಶೋಕ ಸಾಮ್ರಾಟನ ಆಳ್ವಿಕೆಯಷ್ಟು ಪ್ರಾಚೀನದಲ್ಲಿಯೇ ಭಾರತದಲ್ಲಿ ಕುರುಡರ ರಕ್ಷಣಾಲಯಗಳು, ಪುನರ್ನಿವೇಶನ ವಸತಿಗಳು ಏರ್ಪಟ್ಟಿದ್ದುವು. ಕುರುಡರಲ್ಲಿ ಪ್ರತಿಭಾನ್ವಿತರಾಗಿ ಸಂಗೀತಗಾರರೋ ಕವಿಗಳೋ ಆಗಿದ್ದವರನ್ನು ರಾಜರೂ ಶ್ರೀಮಂತರೂ ಪ್ರೋತ್ಸಾಹಿಸುತ್ತಿದ್ದುದಕ್ಕೆ ಸಾಕ್ಷ್ಯಗಳಿವೆ. 10ನೆಯ ಶತಮಾನದಿಂದೀಚೆಗೆ ಪ್ರಪಂಚದ ಬೇರೆಬೇರೆ ರಾಷ್ಟ್ರಗಳಲ್ಲಿ ಕುರುಡರ ಸೇವಾರ್ಥ ಆಸ್ಪತ್ರೆಗಳು, ಶಾಲೆಗಳು, ನಿಲಯಗಳು ಇತ್ಯಾದಿ ಆರಂಭವಾದುವು. ಆದರೆ ಕುರುಡರ ಶಿಕ್ಷಣ ಒಂದು ವ್ಯವಸ್ಥಿತ ವಿಧಾನದಲ್ಲಿ ಮೈದಳೆಯಲು ಆರಂಭವಾದದ್ದು 18ನೆಯ ಶತಮಾನದಲ್ಲಿ . ವೇಲೆಂಟೀನ್ ಆವುಈ (1745–1822) ಅಂಧಶಿಕ್ಷಣ ವ್ಯವಸ್ಥೆಯ ಪಿತಾಮಹ. ಸ್ಪರ್ಶ ಮತ್ತು ಶ್ರವಣ ಇಂದ್ರಿಯಗಳ ಮೂಲಕ ಕುರುಡರಿಗೆ ಯುಕ್ತ ಶಿಕ್ಷಣ ನೀಡಲು ಇವನು ಮೊದಲಿಗೆ 12 ಜನ ಕುರುಡರನ್ನು ಆಯ್ದು ಪ್ಯಾರಿಸಿನಲ್ಲಿ ಒಂದು ಶಾಲೆಯನ್ನು ತೆರೆದ. ಆವುಈಯ ಪ್ರಥಮ ಪ್ರಯತ್ನದ ಗಮನಾರ್ಹ ಯಶಸ್ಸಿಗೆ ಯುರೋಪ್ ಖಂಡವಿಡೀ ಪ್ರಚಾರ ಲಭಿಸಿತು. ಬೇರೆ ಬೇರೆ ಸರ್ಕಾರಗಳು ಈ ದಿಶೆಯಲ್ಲಿ ವ್ಯವಸ್ಥಿತ ಯೋಜನೆಗಳನ್ನು ರೂಪಿಸಿ ಕಾರ್ಯೋದ್ಯುಕ್ತವಾದುವು.

**ಮೊದಲ ಪಾಠಶಾಲೆ** : ತನ್ನ ಶಾಲೆಯಲ್ಲಿದ್ದ ಓರ್ವ ವಿದ್ಯಾರ್ಥಿ ಆ ಶಾಲೆಗೆ ಬಂದಿದ್ದ ಒಂದು ಮುದ್ರಿತ ಆಹ್ವಾನ ಪತ್ರವನ್ನು ಓದಲು ಪ್ರಯತ್ನಿಸುತ್ತಿದ್ದುದು ಆವುಈಯ ಗಮನಕ್ಕೆ ಅಕಸ್ಮಾತ್ತಾಗಿ ಬಂತು. ಆ ಅಂಧ ವಿದ್ಯಾರ್ಥಿ ಮುದ್ರಿತ ಪತ್ರದ ತಳಭಾಗದಲ್ಲಿ ಬಲು ಸೂಕ್ಷ್ಮವಾಗಿ ತನ್ನ ಅಂಗೈಯನ್ನು ಆಡಿಸುತ್ತಿದ್ದ. ಅಚ್ಚಿನಲ್ಲಿ ಅಕ್ಷರಗಳ ಮೇಲೆ ಬಿದ್ದ ಹೆಚ್ಚಿನ ಒತ್ತಡದ ಪರಿಣಾಮವಾಗಿ ಕಾಗದದ ತಳಭಾಗ ಸ್ವಲ್ಪ ಉಬ್ಬಿರುವುದನ್ನೂ ಈ ಉಬ್ಬುವಿಕೆಯ ಮೇಲೆ ಕೈಯ್ಯಾಡಿಸಿ ಅಕ್ಷರಗಳ ವಿಚಾರ ಮಾಹಿತಿ ತಿಳಿಯಬಹುದೆನ್ನುವುದನ್ನೂ ಆ ವಿದ್ಯಾರ್ಥಿ ಮನಗಂಡಿದ್ದ (ಅದಕ್ಕೆ ಮೊದಲೇ ಬಿಡಿಬಿಡಿಯಾದ ಅಕ್ಷರಗಳ ದೊಡ್ಡ ಅಚ್ಚುಗಳನ್ನು ಕುರುಡ ವಿದ್ಯಾರ್ಥಿಗಳಿಗೆ ಕೊಟ್ಟು ಅಕ್ಷರ ಪರಿಚಯವನ್ನು ಅವರಿಗೆ ಮಾಡಿಸುತ್ತಿದ್ದುದು ವಾಡಿಕೆ) ಅಂಧ ವಿದ್ಯಾರ್ಥಿಯ ಈ ಹಸ್ತಕೌಶಲವನ್ನು ಗ್ರಹಿಸಿದ ಆವುಈಗೆ ತತ್‌ಕ್ಷಣವೇ ಕುರುಡರ ವಾಚನಾರ್ಥ ತಯಾರಿಸಬೇಕಾದ ಪುಸ್ತಕದ ರೂಪರೇಖೆ ಸ್ಫುರಿಸಿತು–ಕಾಗದದ ಹಾಳೆಗಳ ಮೇಲೆ ಉಬ್ಬಕ್ಷರಗಳಿಂದ ವಿಷಯ ನಿರೂಪಣೆ ಮಾಡಿದರೆ ಅವನ್ನು ಸ್ಪರ್ಶಿಸಿ ಕುರುಡರು ಓದಬಲ್ಲರು ಎಂಬುದೇ ಈ ತೀರ್ಮಾನ.

**ಅಂಧರ ಲಿಪಿಯ ವಿಕಾಸ** : ಅಂಧರ ಲಿಪಿಯನ್ನು ಕುರಿತಂತೆ ಲಭ್ಯವಾಗಿರುವ ಮೊದಲ ದಾಖಲೆ 1517ನೆಯ ವರ್ಷದ್ದು. ಸ್ಪೇನಿನ ಒಬ್ಬ ಉತ್ಸಾಹಿ ಮರದ ತುಂಡುಗಳ ಮೇಲೆ ಸಾಂಪ್ರದಾಯಿಕ ಅಕ್ಷರಗಳನ್ನು ಕೊರೆದು ಕುರುಡರಿಗೆ ಓದಲು ಅನುಕೂಲವಾಗುವ ಸ್ಪರ್ಶಜ್ಞಾನವನ್ನು ಒದಗಿಸಿದ. ಆದರೆ ಇಂಥ ಒಂದು ಪುಸ್ತಕ ಒತ್ತಟ್ಟಿಗಿರಲಿ, ಒಂದು ಹಾಳೆಯನ್ನು ಸಹ ರಚಿಸುವುದು ಮತ್ತು ಕೊಂಡೊಯ್ಯುವುದು ಎಷ್ಟು ಕಷ್ಟ ಎಂಬುದನ್ನು ಊಹಿಸಿಕೊಳ್ಳಬಹುದು. ಈ ದಿಶೆಯಲ್ಲಿ ಮುಂದೆ ನಡೆದ ಸುಧಾರಣೆಗಳು ಹೀಗಿವೆ–ಚಲಿಸಬಲ್ಲ ಸೀಸದ ಅಕ್ಷರಗಳು ಉಪಯೋಗ, ಮೆತ್ತೆಗಳ ಮೇಲೆ ಚುಚ್ಚಿದ ಸೂಜಿಗಳು, ಮರದ ದೊಡ್ಡ ಅಕ್ಷರಗಳು, ಲೋಹನಿರ್ಮಿತ ದೊಡ್ಡ ಅಕ್ಷರಗಳು ಇತ್ಯಾದಿ. ಇವೆಲ್ಲ ವಿಧಾನಗಳೂ ಆವುಈ ಆವಿಷ್ಕರಿಸಿದ ಉಬ್ಬಕ್ಷರ ವಿಧಾನ ಬಳಕೆಗೆ ಬರುವ ಮೊದಲೇ ಪ್ರಚಲಿತವಿದ್ದವು. ಒಂದು ರೀತಿಯಲ್ಲಿ ಇವುಗಳ ಪರಿಣಾಮವಾಗಿಯೇ ಉಬ್ಬಕ್ಷರ ವಿಧಾನ ರೂಪುಗೊಂಡಿತು ಎನ್ನಬಹುದು. ಉಬ್ಬು ಅಕ್ಷರಗಳನ್ನು ಸ್ಪರ್ಶಿಸಿ ಕುರುಡರು ಓದುತ್ತಾರೆ.

ಅಂಧರ ವಾಚನಾರ್ಥವಾಗಿ ಮೊದಲ ಪುಸ್ತಕ ಪ್ರಕಟವಾದದ್ದು ಗ್ರೇಟ್ ಬ್ರಿಟನ್ನಿನಲ್ಲಿ (1827.) ಎಡಿನ್‌ಬರೋದ ಜೇಮ್ಸ್‌ಗಾಲ್ ಎಂಬಾತ ಅದರ ನಿರ್ಮಾಪಕ. ಅಲ್ಲಿಂದ



ಭಾರತೀ ಬ್ರೇಲ್ ಲಿಪಿಯಲ್ಲಿ ಸ್ವರಗಳು ವ್ಯಂಜನಗಳು ಕಾಗುಣಿತ ಮತ್ತು ಸಂಖ್ಯೆಗಳು

ಮುಂದೆ ಕುರುಡರ ಲಿಪಿಯಲ್ಲಿ ಸಾಕಷ್ಟು ಸುಧಾರಣೆಗಳಾದುವು. ಎದುರಿದ್ದ ಚಿತ್ರ ಭಾರತೀ ಬ್ರೇಲ್ ಲಿಪಿಯಲ್ಲಿ ಸ್ವರಗಳು ವ್ಯಂಜನಗಳು ಕಾಗುಣಿತ ಮತ್ತು ಸಂಖ್ಯೆಗಳು ಒಂದು ಮುಖ್ಯ ಸಮಸ್ಯೆ ಕುರುಡರ ಬರೆವಣಿಗೆ. ಸಾಂಪ್ರದಾಯಿಕ ಅಕ್ಷರಗಳನ್ನೇತದ್ವತ್ತಾಗಿ ಉಪಯೋಗಿಸಿದರೆ ಅವು ಕುರುಡರ ಎದುರೊಡ್ಡುವ ಪ್ರಾಯೋಗಿಕ ಸಮಸ್ಯೆಗಳು ಬಲು ಸಂಕೀರ್ಣ. ಮತ್ತೆ, ಒಂದೊಂದು ಭಾಷೆಯ ಲಿಪಿಯನ್ನು ಅವಲಂಬಿಸಿ ಈ ಸಮಸ್ಯೆಗಳ ರೂಪಗಳು ಬದಲಾಗುತ್ತವೆ. ಈ ದಿಶೆಯಲ್ಲಿ ಬಂದ ಉತ್ತಮ ಸುಧಾರಣೆ ಲೂಯಿ ಬ್ರೇಲ್ (1809–52) ಎಂಬಾತನದು. ಸ್ವತಃ ಅಂಧನಾಗಿದ್ದ ಈತ ಬೇರೆ ಎಲ್ಲರಿಗಿಂತ (ಅಂದರೆ ಅಂಧರಲ್ಲದವರಿಗಿಂತ) ಹೆಚ್ಚಾಗಿ ಅಂಧರ ಲಿಪಿಯಲ್ಲಿದ್ದ ಅಡಚಣೆಗಳನ್ನು ತಿಳಿದುಕೊಂಡು

ಅವುಗಳಿಗೆ ಪರಿಹಾರ ಸೂಚಿಸಲು ಸಮರ್ಥನಾಗಿದ್ದ. ಉಬ್ಬು ಚುಕ್ಕಿಗಳ ನೆರವಿನಿಂದ ಅಕ್ಷರಗಳನ್ನು ಸಂಕೇತಗಳನ್ನು ಕಾಗದದ ಮೇಲೆ ಗುರುತಿಸುವುದು–ಇವು ಓದಲು ಮತ್ತು ಬರೆಯಲು ಬ್ರೇಲ್ ಸೂಚಿಸಿದ ಪರಿಹಾರಗಳು. ಇಂದು ಪ್ರಪಂಚದಾದ್ಯಂತ ಪ್ರಚಲಿತವಿರುವ ಕುರುಡರ ಲಿಪಿ ಬ್ರೇಲ್ ಲಿಪಿಯ ಆಧಾರದ ಮೇಲೆ ರಚಿತವಾದವುಗಳೇ. ಬ್ರೇಲ್ ಲಿಪಿ ಮತ್ತು ಭಾರತೀ ಬ್ರೇಲ್ ಲಿಪಿಯ ವಿವರಗಳಿಗೆ (**ನೋಡಿ– ಬ್ರೇಲ್‌ಲಿಪಿ**).

**ಕುರುಡರಿಗೆ ಸೌಕರ್ಯಗಳು :** ಯಂತ್ರವಿಜ್ಞಾನದ ತೀವ್ರ ಪ್ರಗತಿ ಆಗಿರುವ ಈ ಶತಮಾನದಲ್ಲಿ ಕುರುಡರ ವಿಶೇಷ ಆವಶ್ಯಕತೆಗಳನ್ನು ಪೂರೈಸುವಂಥ ಸಾಧನಗಳು ತಯಾರಾಗಿವೆ. ಹೊಲಿಗೆ ಯಂತ್ರಗಳು, ಬೆರಳಚ್ಚು ಯಂತ್ರಗಳು, ವಿದ್ಯುನ್ಮಾಪನ ಯಂತ್ರಗಳು, ಗಡಿಯಾರಗಳು, ಹಲವಾರು ಸೂಕ್ಷ್ಮೋಪಕರಣಗಳು–ಇವೆಲ್ಲವೂ ಕುರುಡರ ಸುಪ್ತ ಸಾಮರ್ಥ್ಯಗಳನ್ನು ಪ್ರಕಟಗೊಳಿಸಲು ಇರುವ ಸಾಧನಗಳು ವೈಯಕ್ತಿಕ ಗಮನವನ್ನು ಕೊಡುವುದು ಕೂಡ ಈಗ ಸಾಧ್ಯವಾಗಿದೆ. ಪೂರ್ಣಾಂಧರಲ್ಲದವರಿಗೆ ಅವರ ಮಂದದೃಷ್ಟಿಯನ್ನು ಪುಷ್ಟೀಕರಿಸಲು ಸಾಕಷ್ಟುದೃಗುಪಕರಣಗಳು, ವೈದ್ಯಕೀಯ ಸಹಾಯ ಇಂದು ಲಭಿಸುತ್ತವೆ. ಸಂಗೀತ, ನೃತ್ಯ, ಶಿಲ್ಪ ಮುಂತಾದ ಕಲಾವಿಭಾಗಗಳಲ್ಲೂ ಬಗೆತರಹದ ಒಳಾಂಗಣ ಹಾಗೂ ಹೊರಾಂಗಣದ ಆಟಗಳಲ್ಲೂ ಕುರುಡರಿಗೋಸ್ಕರವಾಗಿಯೇ ವಿಶೇಷ ಕಾರ್ಯಕ್ರಮಗಳನ್ನು ರೂಪಿಸುವ ಸಾಧ್ಯವಾಗಿದೆ. ಕುರುಡರಿಗೆ ಮಾರ್ಗದರ್ಶನ ಮಾಡಲು ವಿಶೇಷವಾಗಿ ತರಬೇತುಗೊಂಡ ನಾಯಿಗಳು ಪಾಶ್ಚಾತ್ಯ ರಾಷ್ಟ್ರಗಳಲ್ಲಿವೆ.

**ಭಾರತದಲ್ಲಿ ಕುರುಡರ ಶಿಕ್ಷಣ :** ಅಮೃತಸರದಲ್ಲಿ ಮೊದಲ ಕುರುಡರ ಶಾಲೆಯನ್ನು ಸ್ಥಾಪಿಸಲಾಯಿತು (1887). 1905ರಲ್ಲಿ ಇದನ್ನು ಡೆಹರಾಡೂನಿಗೆ ಸ್ಥಳಾಂತರಿಸಲಾಯಿತು.



ಬ್ರೇಲ್ ಲಿಪಿ ಓದುವ ಕ್ರಮವನ್ನು ಹೇಳಿಕೊಡುವ ತರಗತಿ

ತಮಿಳುನಾಡಿನ ಪಾಳೆಯಂಕೋಟೆಯಲ್ಲಿನ ಶಾಲೆ (1890) ಮೈಸೂರಿನ ಕುರುಡ ಮತ್ತು ಮೂಗರ ಶಾಲೆ (1991), ಮುಂಬಯಿಯಲ್ಲಿರುವ ದಾದರ್ ಸ್ಕೂಲ್ ಫಾರ್ ದಿ ಬ್ಲೈಂಡ್ ಮತ್ತು ವಿಕ್ಟೋರಿಯಾ ಮೆಮೋರಿಯಲ್ ಸ್ಕೂಲ್ ಫಾರ್ ದಿ ಬ್ಲೈಂಡ್ – ಇವೇ ಮುಂತಾದವು ಭಾರತದಲ್ಲಿ ಮೊದಲಾಗಿ ಸ್ಥಾಪಿಸಲಾದ ಕುರುಡರ ಶಾಲೆಗಳು. ಇವುಗಳಲ್ಲಿ ಹೆಚ್ಚಿನವುಗಳಲ್ಲಿ ವಸತಿ, ಆಹಾರ ಮತ್ತು ವಿದ್ಯೆ ಉಚಿತವಾಗಿಯೆ ನೀಡಲಾಗುತ್ತದೆ. ವಯಸ್ಕ ಅಂಧರ ಶಿಕ್ಷಣ ಕೇಂದ್ರವೊಂದು ಡೆಹರಾಡೂನಿನಲ್ಲಿದೆ. ವಯಸ್ಕ ಕುರುಡರಿಗೆ ವಿಶಿಷ್ಟವಾದ ಶಿಕ್ಷಣ ನೀಡುವ ಏರ್ಪಾಡು ಇಲ್ಲಿ ಉಂಟು. ಶಿಕ್ಷಣ ಸಂಸ್ಥೆಗಳ ಸೇವೆಗೆ ಪೂರಕವಾಗಿರಲು ಹಾಗೂ ಅಂಧರಿಗೆ ಇತರ ಸೌಲಭ್ಯಗಳನ್ನು ಒದಗಿಸಲು ದೇಶಾದ್ಯಂತ ಹಲವಾರು ಅಂಧ ಪರಿಹಾರ ಸಂಸ್ಥೆಗಳು ಇವೆ. ಇವು ಹೆಚ್ಚಾಗಿ ಸ್ವಸಹಾಯ ಸಂಸ್ಥೆಗಳು. ಅನುಕಂಪಪೂರಿತ ವ್ಯಕ್ತಿಗಳ ಒಕ್ಕೂಟದಿಂದ ನಿರ್ಮಿತವಾದವು. ಇವುಗಳ ಪೈಕಿ ಚೆನ್ನೈ ಅಂಧಸಂಸ್ಥೆ 1920ರಲ್ಲಿ ಪ್ರಾರಂಭವಾಯಿತು. ಅದು ಅಂದಿನ ಮದ್ರಾಸು ಅಧಿಪತ್ಯವನ್ನಿಡೀ ತನ್ನ ಪರಿಧಿಯಲ್ಲಿ ಒಳಗೊಂಡಿತ್ತು. ಈಗ ಮುಂಬಯಿಯಲ್ಲಿರುವ ರಾಷ್ಟ್ರೀಯ ಅಂಧ ಸಂಸ್ಥೆ ಅಖಿಲ ಭಾರತೀಯ ಕಾರ್ಯಕ್ರಮ ರೂಪಿಸಿಕೊಂಡು ಕೆಲಸ ಮಾಡುತ್ತಿದೆ. ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಈ ಸ್ವಸಹಾಯ ಸಂಸ್ಥೆಗಳಲ್ಲಿ ಕೆಲಸಕ್ಕೆ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸುತ್ತಿವೆ.

ದೇಶಾದ್ಯಂತ ಅಂಧ ಶಿಕ್ಷಣವನ್ನು ವ್ಯವಸ್ಥಿತಗೊಳಿಸಲು ಯುಕ್ತ ಸಲಹೆ ನೀಡಲು ಒಂದು ಸಮಿತಿಯನ್ನು ಭಾರತ ಸರ್ಕಾರ 1943 ರಲ್ಲಿ ನೇಮಿಸಿತು. ಸಮಿತಿಯ ಸಲಹೆಗಳನ್ನು ತತ್ತ್ವಶಃ ಭಾರತ ಸರ್ಕಾರ ಅಂಗೀಕರಿಸಿ ಅವನ್ನು ಕಾರ್ಯಗತಗೊಳಿಸಲು ಉದ್ಯುಕ್ತವಾಗಿದೆ. ಭಾರತ ಸರ್ಕಾರದ ವಿದ್ಯಾ ಸಚಿವಾಲಯದಲ್ಲಿ ಕುರುಡರ ಹಾಗೂ ಇತರ ಅಂಗವಿಕಲರ ಯೋಗಕ್ಷೇಮಗಳನ್ನು ರೂಪಿಸಿ ನಿಯಂತ್ರಿಸಲು ಒಂದು ವಿಶೇಷ ಖಾತೆಯನ್ನು ರಚಿಸಲಾಗಿದೆ (1947). ಈಗ ಕಾರ್ಯಗತವಾಗಿರುವ ಕೆಲವು ಸಲಹೆಗಳು ಹೀಗಿವೆ: 1. ಡೆಹರಾಡೂನಿನಲ್ಲಿ ವಯಸ್ಕ ಅಂಧರ ಶಿಕ್ಷಣ ಕೇಂದ್ರದ ಸ್ಥಾಪನೆ. 2. ಡೆಹರಾಡೂನಿನಲ್ಲಿ ಬ್ರೇಲ್ ಮುದ್ರಣಾಲಯ. 3. ಅಂಧರ ಉಪಯೋಗಕ್ಕೋಸ್ಕರ ಒಂದು ಕೇಂದ್ರೀಯ ಪುಸ್ತಕ ಭಂಡಾರ ಸ್ಥಾಪನೆ. 4. ವಿಶೇಷ ಉಪಕರಣಗಳ ಆಮದು ಮತ್ತು ದೇಶದಲ್ಲಿ ಅವುಗಳ ನಿರ್ಮಾಣಕ್ಕೆ ಯುಕ್ತ ನಿರ್ದೇಶನ ಮತ್ತು ಪ್ರೋತ್ಸಾಹ. 5. ಸರ್ಕಾರದ ನೇತೃತ್ವದಲ್ಲಿ ದೇಶದ ಭಾಗಗಳಲ್ಲಿ ಅಂಧರ ಶಾಲೆಗಳ ಸ್ಥಾಪನೆ ಮತ್ತು ಪ್ರೌಢಶಿಕ್ಷಣವನ್ನು ಅಂಧರಿಗೆ ನೀಡುವಲ್ಲಿ ಪ್ರೋತ್ಸಾಹ.

**ಕರ್ನಾಟಕದಲ್ಲಿ ಕುರುಡರ ಶಿಕ್ಷಣ :** ಬ್ರಿಟಿಷ್ ಭಾರತದ ದೇಶ ಸಂಸ್ಥಾನಗಳಲ್ಲಿ ಕುರುಡರ ಶಿಕ್ಷಣಶಾಲೆ ಮೊದಲು ಪ್ರಾರಂಭವಾದ್ದು ಮೈಸೂರು ಸಂಸ್ಥಾನದಲ್ಲಿ. ಮೈಸೂರು



ಬ್ರೇಲ್ ಲಿಪಿ ಬರೆವಣಿಗೆಯನ್ನು ಹೇಳಿಕೊಡುವ ತರಗತಿ

ನಗರದಲ್ಲೇ ಪ್ರಾರಂಭವಾದ (1901) ಆ ಶಾಲೆಯ ಮೊದಲ ಪ್ರವರ್ತಕರು ಎಂ.ಶ್ರೀನಿವಾಸರಾಯರು. ಮೊದಲು ಒಬ್ಬ ಕುರುಡ ಮತ್ತು ಮೂರು ಜನ ಮೂಗರಿಂದ ಅವರ ಮನೆಯಲ್ಲಿಯೇ ತೆರೆಯಲಾದ ಈ ಶಾಲೆಗೆ ಮರುವರ್ಷವೇ (1902) ಸರ್ಕಾರದ ನೆರವು ಲಭಿಸಿತು. ಆ ವರ್ಷ ಒಬ್ಬ ಉಪಾಧ್ಯಾಯನ ನೇಮಕವನ್ನು ಸರ್ಕಾರ ಮಂಜೂರು ಮಾಡಿತು. ಏರುತ್ತಿದ್ದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ 1905 ರಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ಆರಂಭಿಸಿದರು. 1908ರ ಹೊತ್ತಿಗೆ ವಿದ್ಯಾರ್ಥಿಗಳ ಸಂಖ್ಯೆ 34 ಕ್ಕೆ ಏರಿತ್ತು. 1927ನೆಯ ಇಸವಿಯಲ್ಲಿ ಸರ್ಕಾರವೇ ಶಾಲೆಯನ್ನು ಪೂರ್ಣವಾಗಿ ವಹಿಸಿಕೊಂಡಿತು. 1932ರ ವರೆಗೆ ಈ ಶಾಲೆಯಲ್ಲಿ ಸಹವಿದ್ಯಾಭ್ಯಾಸ ಜಾರಿಯಲ್ಲಿತ್ತು. ಆ ವರ್ಷ ಈ ಶಾಲೆಯ ಓರ್ವ ಅಧ್ಯಾಪಕಿ ಮತ್ತು 7 ಮೂಕ ಹುಡುಗಿಯರನ್ನು ಮೈಸೂರು ನಗರದ ವೃತ್ತಿಶಿಕ್ಷಣ ಶಾಲೆಗೆ ವರ್ಗಾಯಿಸಿದರು. ಅಂದಿನಿಂದ 1968ರ ವರೆಗೆ ಈ ಶಾಲೆ ಕೇವಲ ಕುರುಡ ಬಾಲಕರಿಗಾಗಿ ಮಾತ್ರ ಇತ್ತು. 1968ರಿಂದ ಈಚೆಗೆ ಇಲ್ಲಿ ಪುನಃ ಸಹವಿದ್ಯಾಭ್ಯಾಸ ನಡೆಯುತ್ತಿದೆ. ಇಲ್ಲಿನ ವಿದ್ಯಾರ್ಥಿಗಳ ಬೌದ್ಧಿಕ, ಶೈಕ್ಷಣಿಕ ಮತ್ತು ವೃತ್ತಿ ತರಬೇತಿಯನ್ನು ಮೂಲಪಾಠಗಳಿಂದ ತೊಡಗಿ ಪ್ರೌಢಶಾಲೆಯ ಮಟ್ಟದವರೆಗೂ ನುರಿತ ಅಧ್ಯಾಪಕರು ನೀಡುತ್ತಾರೆ. ಶಾಲೆಗೆ ಲಗತ್ತಾಗಿ ಒಂದು ವಿದ್ಯಾರ್ಥಿ ನಿಲಯ, ಶಿಕ್ಷಣ ಯಂತ್ರಾಗಾರ, ಬ್ರೇಲ್ ಮುದ್ರಾಲಯ ಮತ್ತು ಪುಸ್ತಕ ಭಂಡಾರ ಇವೆ. ಇಲ್ಲಿ ಶಿಕ್ಷಣ ಸಾಮಾನ್ಯವಾಗಿ ಉಚಿತ. ಸರ್ಕಾರದ ವತಿಯಿಂದ ಕರ್ನಾಟಕದಲ್ಲಿ ನಡೆಯುತ್ತಿರುವ ಕುರುಡರ ಶಾಲೆಗಳು ಹುಬ್ಬಳ್ಳಿಯಲ್ಲೂ ಗುಲ್ಬರ್ಗದಲ್ಲೂ ಇವೆ. ಬೆಂಗಳೂರು ನಗರದ ಸಮೀಪದ ವೈಟ್‌ಫೀಲ್ಡಿನಲ್ಲಿ ಖಾಸಗೀ ಸಂಸ್ಥೆ ನಡೆಸುತ್ತಿರುವ ಕುರುಡ ವಿದ್ಯಾರ್ಥಿ ವಿದ್ಯಾರ್ಥಿನಿಲಯರ ಶಾಲೆ ಉಂಟು. ಇದರಲ್ಲಿ ಸಹ ಸಾಮಾನ್ಯವಾಗಿ ಶಿಕ್ಷಣ, ವಸತಿ, ಆಹಾರ ಉಚಿತ. (ಕೆ.ಎಂ.ಎ.)

**ಕುರುಡು:** ನೋಡಲು ಆಗದಿರುವಿಕೆ. ಪ್ರಪಂಚದ ಕುರುಡರಲ್ಲಿ 1/3ರಷ್ಟು ಅಂಶ ಭಾರತದಲ್ಲಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಈಜಿಪ್ಟನ್ನು ಬಿಟ್ಟರೆ ಅತ್ಯಧಿಕ ಸಂಖ್ಯೆಯ ಕುರುಡರಿರುವುದು ಭಾರತದಲ್ಲೇ.

ಕುರುಡಿನ ಕಾರಣಗಳು: ಎರಡು ಪ್ರಧಾನ ವರ್ಗಗಳಾಗಿ ವಿಂಗಡಿಸಬಹುದು: 1. ಪ್ರತ್ಯಕ್ಷ ಕಾರಣಗಳು 2. ಪರೋಕ್ಷ ಕಾರಣಗಳು.

1. ಪ್ರತ್ಯಕ್ಷ ಕಾರಣಗಳು: ಸಿಡುಬು, ಅರಿರೋಗ, ದಡಾರ, ಶಿಶುಗಳ ಕೀವುಗಣ್ಣು, ವಿಟಮಿನ್ನುಗಳ ಅಭಾವದಿಂದ ಉಂಟಾಗುವ ರಾತ್ರಿಕುರುಡು ಮತ್ತು ಹಿಂಗುರುಗಣ್ಣುಗಳು, ಮೇಹವ್ಯಾದಿಗಳು, ಪರಂಗಿರೋಗ, ಗೊನೋರಿಯ, ಅಪಾಯಕರವಾದ ಅಂಜನಗಳು ಮತ್ತು ಔಷಧಿಗಳನ್ನು ಕಣ್ಣಿಗೆ ಹಾಕುವುದರಿಂದ ಉಂಟಾಗುವ ಹಾನಿ, ಕಣ್ಣಿಗೆ ಒದಗುವ ಅಪಘಾತಗಳು, ಕಲ್ಲುಗಣ್ಣು (ಗಟ್ಟಿಗಣ್ಣು), ಕರಿಗುಡ್ಡೆಯ ವ್ರಣಗಳು, ಪರತಂತ್ರ ಜೀವಿಗಳಿಂದ ಆಗುವ ಹಾನಿ, ದೇಹದ ಆಂತರಿಕ ರೋಗಗಳು, ರಕ್ತಹೀನತೆ ಹುಟ್ಟುಕುರುಡು, ಅರೆವೈದ್ಯರ ಅವೈಜ್ಞಾನಿಕ ಪ್ರಯೋಗಗಳಿಂದ ಉಂಟಾಗುವ ಹಾನಿ ಇತ್ಯಾದಿ. ಪ್ರಪಂಚದ ಬಹುಪಾಲು

ಕುರುಡಿಗೆ ಅರಿರೋಗ ಒಂದು ಮುಖ್ಯ ಕಾರಣ. ಇದು ಈಜಿಪ್ಟ್, ಉತ್ತರ ಆಫ್ರಿಕ, ಮೆಡಿಟರೇನಿಯನ್ನಿನ ಸುತ್ತಮುತ್ತಲಿನ ಪ್ರದೇಶಗಳು, ಭಾರತ, ಈಸ್ಟ್ ಇಂಡಿಯಾ ದ್ವೀಪಗಳು, ಫ್ರೆಂಚ್ ಇಂಡೋಚೀನ, ಚೀನ, ಜಪಾನ್ ದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿದೆ. ಅರ್ಜೆಂಟೀನ, ಬ್ರೆಜ಼ಿಲ್, ಕೆನಡ, ಜರ್ಮನಿ, ಲಿಟ್ವಿಯ, ಪೋಲೆಂಡ್, ಪೋರ್ಚುಗಲ್, ರೂಮೇನಿಯ, ಸೋವಿಯತ್ ದೇಶ ಅಮೆರಿಕ ದೇಶಗಳು ಸಹ ಈ ರೋಗದಿಂದ ಹೊರಗಾಗಿಲ್ಲ. ಇದರ ಹತೋಟಿಯಲ್ಲಿ ಈಚೆಗೆ ಬೆಳಕಿಗೆ ಬಂದ ಸಲ್ಫ ಮತ್ತು ಜೀವಿವಿರೋಧಕ ಔಷಧಿಗಳು ಹೆಚ್ಚು ಫಲಪ್ರದವಾಗಿ ಕಂಡುಬಂದಿವೆ. ಸಿಡುಬನ್ನು ತಡೆಹಿಡಿದಿರುವ ದೇಶಗಳಲ್ಲಿ ಈ ರೋಗದಿಂದ ಕುರುಡಾದವರ ಸಂಖ್ಯೆ ಕಡಿಮೆಯಾಗಿದ್ದರೂ ಭಾರತ, ಮಲಯ, ಪರಗ್ವೆ, ವೆನಿಜ್ವೇಲ, ಆಫ್ರಿಕಗಳಲ್ಲಿ ಈ ರೋಗ ಕುರುಡಿಗೆ ಪ್ರಮುಖ ಕಾರಣವಾಗಿದೆ. ದೇವಿ ಹಾಕಿಸುವುದರಿಂದ ಸಿಡುಬಿನಿಂದಾಗುವ ಕುರುಡನ್ನು ತಡೆಗಟ್ಟಬಹುದು. ಹುಟ್ಟುಶಿಶುವಿನಲ್ಲಿ ಕೀವುಗಣ್ಣು 20ನೆಯ ಶತಮಾನದ ಆದಿಯಲ್ಲಿ ಕುರುಡಿಗೆ ಪ್ರಮುಖ ಕಾರಣವಾಗಿತ್ತು. 30%ರಷ್ಟು ಕುರುಡುಮಕ್ಕಳು ಈ ರೋಗದಿಂದ ಕುರುಡರಾಗಿದ್ದರು. 1946ರಲ್ಲಿ ಈ ರೋಗದಿಂದ ಕುರುಡಾದವರ ಸಂಖ್ಯೆ 90%ರಷ್ಟು ಕಡಿಮೆಯಾಯಿಯೆಂದು ತಿಳಿದುಬಂದಿದೆ. ಕಣ್ಣಿಗೆ ಒದಗುವ ಅಪಘಾತಗಳು ದೈನಂದಿನ ಜೀವನದಲ್ಲಿ ಸಾಧಾರಣವಾಗಿ ಒದಗುತ್ತವೆ. ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ, ಹೊಲಗದ್ದೆಗಳಲ್ಲಿ, ಆಟಪಾಠಗಳಲ್ಲಿ ಮನೆಯಲ್ಲಿ ಕೆಲಸ ಮಾಡುವಾಗ ಕಣ್ಣಿಗೆ ಅಪಘಾತಗಳು ಒದಗುತ್ತದೆ. ಸ್ಫೋಟಕ ವಸ್ತುಗಳು ಚೂಪಾದ ಮತ್ತು ಹರಿತವಾದ ಸಲಕರಣೆಗಳು ಹಾರುವ ಮತ್ತು ಸಿಡಿಯುವ ಲೋಹದ ಮತ್ತು ಕಲ್ಲಿನರವೆಗಳು, ಬಿಸಿನೀರು, ಹೊಗೆಬೂದಿ ಕ್ಷಾರ, ದ್ರವಣಗಳು ಮುಂತಾದ ವಸ್ತುಗಳಿಂದ ಕಣ್ಣುಗಳಿಗೆ ಅಪಘಾತಗಳು ಆಗುವುದುಂಟು. ತಲೆಗೆ ಅಥವಾ ಕಣ್ಣಿಗೆ ದೊಣ್ಣೆಗಳಿಂದ ಬೀಳುವ ಏಟುಗಳು ಕೂಡ ದೃಷ್ಟಿಗೆ ಅಪಾಯವನ್ನುಂಟುಮಾಡುತ್ತವೆ. ರಕ್ಷಣಾ ಕ್ರಮಗಳನ್ನು ಅನುಸರಿಸುವುದರಿಂದಲೂ ರಕ್ಷಣಾ ಗಾಜುಗಳನ್ನು ಕೆಲಸ ಮಾಡುವಾಗ ಧರಿಸುವುದರಿಂದಲೂ ಕೆಲಸಮಾಡುವ ಯಂತ್ರಗಳಿಗೆ ರಕ್ಷಣೆಗಳನ್ನು ಹಾಕುವುದರಿಂದಲೂ ಕಾರ್ಖಾನೆಗಳಲ್ಲಿ ಸರಿಯಾದ ಬೆಳಕು ಬೀಳುವಂತೆ ಮಾಡುವುದರಿಂದಲೂ ಈ ಬಗೆಯ ಅಪಘಾತಗಳನ್ನು ತಡೆಯಬಹುದು. ಹಬ್ಬದ ಕಾಲದಲ್ಲಿ ಮಕ್ಕಳು ಬಳಸುವ ಪಟಾಕಿ, ಸುರಸುರ ಬತ್ತಿ, ಚಿನ್ನಿಕೋಲು, ಬಿಲ್ಲುಬಾಣ, ಮೊದಲಾದ ಹಾನಿಯುಂಟುಮಾಡುವ ವಸ್ತುಗಳ ಬಳಕೆಯನ್ನು ಕಡಿಮೆ ಮಾಡುವುದರಿಂದ ಮಕ್ಕಳಲ್ಲಿ ಒದಗಬಹುದಾದ ಅಪಘಾತಗಳನ್ನು ಕಡಿಮೆ ಮಾಡಬಹುದು.

2. ಪರೋಕ್ಷ ಕಾರಣಗಳು: ದೇವಿಹಾಕಿಸಿಕೊಳ್ಳದೆ ಇರುವುದು, ದೂಳು ಹಾಗೂ ಅಶುಚಿ ಪ್ರದೇಶಗಳಲ್ಲಿ ವಾಸ, ಬೇನೆ ಕಾಲದಲ್ಲಿ ಸುಶಿಕ್ಷಿತರಲ್ಲದ ಸೂಲಗಿತ್ತಿಯರ ಮತ್ತು ವೈದ್ಯರ ನೆರವು ಪಡೆಯುವುದು, ಜೀವನಮಟ್ಟ ಕನಿಷ್ಠ ಮಿತಿಯಲ್ಲಿರುವುದರಿಂದ ಒದಗುವ ಅಭಾವ ಪರಿಸ್ಥಿತಿ, ಕಣ್ಣಿನ ವಿಚಾರ ಪ್ರಾಥಮಿಕ ಜ್ಞಾನವೂ ಇಲ್ಲದೇ ಮೂಢ ವ್ಯವಹಾರಗಳ ಆಚರಣೆ ಇತ್ಯಾದಿ.

ಅಂಕಿಅಂಶಗಳು: ಭಾರತದಲ್ಲಿ ಸುಮಾರು 2,000,000 ಕುರುಡರು ಇರುವರೆಂಬ ಅಂದಾಜು 1931ರಲ್ಲೇ ಇತ್ತು. ಕ್ರಮಬದ್ಧವಾದ ನೊಂದಣಿ ಇಲ್ಲಿ ರೂಢಿಯಲ್ಲಿ ಇಲ್ಲವಾದ್ದರಿಂದ ಕರಾರುವಾಕ್ಕಾಗಿ ಈ ಸಂಖ್ಯೆಯನ್ನು ಹೇಳುವಂತಿಲ್ಲ. ಗ್ರೇಟ್ ಬ್ರಿಟನ್ನಿನಲ್ಲಿ ಮಾಡಿದ ಒಂದು ಅಂದಾಜಿನ ಪ್ರಕಾರ ಚಿಕ್ಕವಯಸ್ಸಿನಲ್ಲಿ ಕಂಡುಬರುವ ಕುರುಡರ ಸಂಖ್ಯೆಗಿಂತಲೂ 70ರ ಮೇಲೆ ಕಾಣುವ ಕುರುಡರ ಸಂಖ್ಯೆಯೇ ಹೆಚ್ಚು. 21 ವರ್ಷದ ಒಳಗೆ ಕುರುಡರಾದವರು 3.6%, 21ರಿಂದ 50 ವರ್ಷದ ಒಳಗೆ ಕುರುಡಾದವರು 18.6%ಮ 50ರಿಂದ 70 ವರ್ಷದ ಒಳಗೆ ಕುರುಡಾದವರು 34.6%ಮ 70 ವರ್ಷ ಮೀರಿದವರು 43.2%, ಭಾರತದಲ್ಲಿರುವ ಕುರುಡರಲ್ಲಿ 30% ಮಂದಿ ತಮ್ಮ 21 ವಯಸ್ಸು ಮುಟ್ಟುವ ಮೊದಲೇ ಕುರುಡನ್ನು ಅಪ್ಪಿದವರು. ಇವರಲ್ಲಿ ಬಹುಮಂದಿ ಐದರ ವಯಸ್ಸು ಮುಟ್ಟುವ ಮೊದಲೇ ದೃಷ್ಟಿಹೀನರಾದವರು. ಮಹಾರಾಷ್ಟ್ರ ರಾಜ್ಯ ಒಂದರಲ್ಲಿ 100,000 ಮಂದಿಗೆ 516 ಮಂದಿ ಕುರುಡರಿರುವರೆಂದು ನಡೆದಿರುವ ತನಿಖೆಯಿಂದ ತಿಳಿದುಬಂದಿದೆ. 1944ರಲ್ಲಿ ಸರ್ಕಾರದವರು ನೇಮಿಸಿದ ವಿಶೇಷ ಸಮಿತಿ ಭಾರತದಲ್ಲಿ 10,000 ಮಂದಿಗೆ 250 ಮಂದಿ ಕುರುಡರಿರುವರೆಂದು ವರದಿಮಾಡಿದೆ. ಈ ಸಂಖ್ಯೆ ಸಹಾಯ ದೊರೆಯಬೇಕಾಗಿರುವ ಪೂರ್ಣ ಮತ್ತು ಅರೆ ಕುರುಡರ ಅಂಕಿಗಳನ್ನು ಒಳಗೊಂಡಿದೆ.

ಭಾರತದಲ್ಲಿ ಕುರುಡರ ಕ್ಷೇಮಾಭಿವೃದ್ಧಿ: 1877ರಲ್ಲಿ ಮೊದಲನೆ ಕುರುಡರ ವಿದ್ಯಾಶಿಕ್ಷಣ ಶಾಲೆಯನ್ನು ಬ್ರಿಟಿಷ್ ಮಿಷನರಿ ಸಂಸ್ಥೆಗೆ ಸೇರಿದ ಅನಿಷಾರ್ಪ್ ಎಂಬಾಕೆ ವ್ಯವಸ್ಥೆ ಮಾಡಿದಳು. ರೆವರೆಂಡ್ ಎಲ್.ಬಿ. ಷಾ 1897ರಲ್ಲಿ ಕಲ್ಕತ್ತೆಯಲ್ಲಿ ಕುರುಡರ ಶಾಲೆಯೊಂದನ್ನು ತೆರೆದ. 1900ರಲ್ಲಿ ಅಮೆರಿಕನ್ ಮಿಷನರಿಗಳ ಸಹಾಯದಿಂದ ಮುಂಬಯಿಯ ದಾದರ್‌ನಲ್ಲಿ ಕುರುಡರ ಶಾಲೆಯೊಂದು ಸ್ಥಾಪಿತವಾಯಿತು. 1901ರಲ್ಲಿ ಮೈಸೂರಿನಲ್ಲಿ ಕುರುಡರಿಗೆ ಮತ್ತು ಕಿವುಡರಿಗೆ ಒಂದು ಕೇಂದ್ರ ಸಂಸ್ಥೆ ರೂಪುಗೊಂಡಿತು. ಭಾರತದಲ್ಲಿ ಕುರುಡರ ವಸತಿಗೃಹಗಳಲ್ಲಿರುವವರ ಸಂಖ್ಯೆ ಕೇವಲ ನೂರುಗಳಲ್ಲಿ ಮಾತ್ರವಿದೆ. ಇಡೀ ದೇಶದಲ್ಲಿ ಕುರುಡರ ಶಾಲೆಗಳು ಸುಮಾರು 30 ಮಾತ್ರ ಇವೆ. ಇವುಗಳಲ್ಲಿ ಸುಮಾರು 50,000 ಹುಡುಗ ಹುಡುಗಿಯರು ಇರುವರು. ಈ ಶಾಲೆಗಳಲ್ಲಿ ಸರಿಯಾದ ಶಿಕ್ಷಕರ ಸಂಖ್ಯೆಯಂತೂ ಬಲು ಕಡಿಮೆ. ಕುರುಡು ವಿದ್ಯಾರ್ಥಿಗಳ ಉಪಯೋಗಕ್ಕೆ ಅಖಿಲ ಭಾರತಕ್ಕೆ ಒಪ್ಪುವಂಥ ಒಂದು ಪತ್ರಿಕೆ ಸಹ ಇರುವುದಿಲ್ಲ. ಉಚಿತ ವಾಚನಾಲಯಗಳು ಮತ್ತು ಮಾತಾಡುವ ಯಂತ್ರಗಳ ಉಪಯೋಗ ಇವರಿಗೆ ದೊರಕುವಂತಿಲ್ಲ. ಹಳ್ಳಿಗಳಲ್ಲಿ ಅಂಧಾಲಯ ಕೇಂದ್ರಗಳ ಸ್ಥಾಪನೆ ಆಗಬೇಕಷ್ಟೆ. ಕುರುಡರಿಗಾಗಿ ಇರುವ ಕೈಗಾರಿಕಾ ಶಾಲೆಗಳ ತೀರ ಕಡಿಮೆ. ಹೀಗಾಗಿ ಕುರುಡರು ತಮ್ಮ ಕೈಚಳಕವನ್ನೂ ಬುದ್ಧಿಶಕ್ತಿಯನ್ನೂ ವ್ಯಕ್ತಪಡಿಸಿ ಸಮಾಜದೊಂದಿಗೆ ಸಮಾನತೆಯಿಂದ ಬೆರೆಯಲು ಒದಗುವ ಅವಕಾಶಗಳು ಅತ್ಯಲ್ಪ.

ಇತರ ದೇಶಗಳಲ್ಲಿ: ಸಿಂಹಳ ದ್ವೀಪದಲ್ಲಿ ಮಿಷನರಿಗಳ ನೇತೃತ್ವದಲ್ಲಿ ಶಾಲೆಯೊಂದು ಕುರುಡರ ಕ್ಷೇಮಾಭಿವೃದ್ಧಿಯ ದಾರಿಯಲ್ಲಿ ರಚನಾತ್ಮಕ ಕಾರ್ಯವನ್ನು ಮಾಡುತ್ತದೆ. ದಕ್ಷಿಣ ಆಫ್ರಿಕದಲ್ಲಿ ಖಾಸಗೀ ಸಂಸ್ಥೆಗಳು ಕುರುಡರ ಕ್ಷೇಮವನ್ನು ನೋಡಿಕೊಳ್ಳುತ್ತಿವೆ. ಜೊಹಾನ್ಸ್‌ಬರ್ಗ್‌ನಲ್ಲಿ ಹಿರಿಯ ನೇತ್ರವೈದ್ಯ ಸಂಶೋಧನೆಯ ಭಾಗ ಜರ್‌ಸುಲಾನ ಸೇಂಟ್ ಜಾನ್ ಸಂಸ್ಥೆಯ ಆಡಳಿತದಲ್ಲಿ ರೂಪುಗೊಂಡಿದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕುರುಡರಿಗಾಗಿಯೂ ಕುರುಡುತನವನ್ನು ತಡೆಗಟ್ಟುವುದಕ್ಕಾಗಿಯೂ ಪ್ರತ್ಯೇಕವಾದ ಒಂದು ರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಧ್ಯೇಯಗಳಲ್ಲಿ ಮುಖ್ಯವಾದವು: i) ಸಾಮಾನ್ಯ ಜನರಿಗೆ ದೃಷ್ಟಿ ಮತ್ತು ನೇತ್ರ ರೋಗಗಳನ್ನು ಕುರಿತು ಮಾಹಿತಿ ನೋಡುವುದು. ದೃಷ್ಟಿ ಮತ್ತು ಕಣ್ಣುಗಳ ರಕ್ಷಣೆಯ ವಿಚಾರದಲ್ಲಿ ಎಚ್ಚರಿಸುವುದು. ಅವರಿಗಾಗಿ ಸುಲಭವಾಗಿ ತಿಳಿಯುವಂಥ ಪ್ರತ್ಯೇಕ ಕಿರುಹೊತ್ತಗೆಗಳನ್ನು ಪ್ರಕಟಿಸುವುದು. ii) ಹುಡುಗ ಹುಡುಗಿಯರಿಗೆ ಕಣ್ಣುಗಳ ಆರೋಗ್ಯ ವಿಷಯದಲ್ಲಿ ತಿಳಿಹೇಳುವುದು ಮತ್ತು ಬಾಲಕರ ದೃಷ್ಟಿ ರಕ್ಷಣಾ ಕೇಂದ್ರಗಳನ್ನು ನಡೆಸುವುದು. iii) ವಯಸ್ಕರ ದೃಷ್ಟಿ ರಕ್ಷಣಾ ಕೇಂದ್ರಗಳನ್ನು ನಡೆಸುವುದು. iv) ಟೆಲಿವಿಷನ್, ರೇಡಿಯೋ ಮೂಲಕ ಕಣ್ಣಿಗೆ ಸಂಬಂಧಿಸಿದ ಪ್ರಸಾರಭಾಷಣಗಳನ್ನು ಅನುಗೊಳಿಸುವುದು. ಭಿತ್ತಿಚಿತ್ರಗಳ ಮೂಲಕ ಸಾಮಾನ್ಯ ಜನರಿಗೆ ಮಾಹಿತಿ ನೀಡುವುದು. v) ಕಾರ್ಖಾನೆಗಳಲ್ಲಿ ದೃಷ್ಟಿರಕ್ಷಣೆಯ ಆವಶ್ಯಕತೆಯನ್ನು ಹೇಳುವಂಥ ವರ್ಣರಂಜಿತ ಚಿತ್ರಗಳನ್ನು ಪ್ರಕಟಿಸುವುದು. vi) ಕುರುಡರ ರಕ್ಷಣೆಯ ವ್ಯವಸ್ಥೆ ಮತ್ತು ಕುರುಡುತನದ ಕಾರಣಗಳನ್ನು ಕಂಡುಹಿಡಿದು ನಿವಾರಣಾ ಮಾರ್ಗವನ್ನು ರೂಪಿಸುವುದು. vii) ಕರಿಯ ಗುಡ್ಡೆಯ ಪುನಾರಚನೆಗೆ ಅಗತ್ಯವಾದ ಕಣ್ಣುಗಳ ಬ್ಯಾಂಕನ್ನು ನಡೆಸುವುದು. ಇಂಥ ಒಂದು ಸಂಸ್ಥೆಯನ್ನು 1930ರಲ್ಲಿ ಕಲ್ಕತ್ತೆಯಲ್ಲಿ ಸ್ಥಾಪಿಸಿದ್ದಾರೆ. ಸರ್ಕಾರದ ಹಾಗೂ ಉದಾರಿಗಳ ನೆರವಿನಿಂದ ಇದು ಬಹಳಮಟ್ಟಿಗೆ ಬೆಳೆದು ಕುರುಡುತನವನ್ನು ಹೋಗಲಾಡಿಸುವ ಮತ್ತು ಕುರುಡರಿಗೆ ಶಸ್ತ್ರಚಿಕಿತ್ಸೆಯನ್ನು ದೊರಕಿಸುವಂಥ ಚಲಿಸುವ ಕಣ್ಣು ಆಸ್ಪತ್ರೆಗಳ ನಿರ್ಮಾಣಕ್ಕೂ ಕಾರಣವಾಗಿದೆ. ಈಗ ಬಂಗಾಳದಲ್ಲಿ 5 ಚರ ನೇತ್ರಚಿಕಿತ್ಸಾಲಯಗಳಿವೆ. ಇವುಗಳಿಗಾಗಿ ಬಂಗಾಳ ಸರ್ಕಾರ ವರ್ಷಂಪ್ರತಿ 34.125 ರೂಪಾಯಿಗಳ ಸಹಾಯಧನವನ್ನು ಕೊಡುತ್ತಿದೆ. ಈ ಚರ ಆಸ್ಪತ್ರೆಗಳು ಹಳ್ಳಿಹಳ್ಳಿಗೂ ಹೋಗಿ ಅಲ್ಲಿಯ ಜನರಿಗೆ ನೇತ್ರಚಿಕಿತ್ಸಕರ ಸಲಹೆ ಮತ್ತು ನೆರವು ದೊರೆಯುವಂತೆ ಮಾಡಿವೆ. ಅಲ್ಲದೆ ಕುರುಡರ ಎಣಿಕೆಯ ತನಿಖೆಯನ್ನೂ ಕುರುಡುತನದ ಕಾರಣಗಳನ್ನೂ ಕಂಡುಹಿಡಿಯುವ ಕಾರ್ಯವನ್ನು ಕೈಗೊಂಡಿವೆ. ಮಹಾರಾಷ್ಟ್ರ ಕರ್ಣಾಟಕ ರಾಜ್ಯಗಳಲ್ಲೂ ಇಂಥ ಚರ ನೇತ್ರ ಆಸ್ಪತ್ರೆಗಳು ಇವರ. 1962ರಿಂದ ಈಚೆಗೆ ಅಖಿಲ ಭಾರತ ವ್ಯಾಪ್ತಿ ಇರುವ ಒಂದು ಸಂಸ್ಥೆ ಅಂಧತನದ ನಿವಾರಣೆಗಾಗಿ ದೆಹಲಿಯಲ್ಲಿ ಸ್ಥಾಪಿತವಾಗಿ ಕಾರ್ಯವೆಸಗುತ್ತದೆ. ಭಾರತದಲ್ಲಿ 15 ಮಿಲಿಯನ್ ಕುರುಡರಿದ್ದಾರೆ ಎಂಬ ಅಂದಾಜಿದೆ.

ಕುರುಡಿನ ಮಿತಿ: ದೃಷ್ಟಿ ಸಂಪೂರ್ಣ ಇಲ್ಲದಿರುವ ಮಕ್ಕಳು ಮತ್ತು ವಿದ್ಯಾಭ್ಯಾಸವನ್ನು ಪೂರೈಸಲು ಸಾಕಷ್ಟು ದೃಷ್ಟಿ ಇಲ್ಲದಿರುವ ಮಕ್ಕಳು ಪಾಶ್ಚಾತ್ಯ ದೇಶಗಳಲ್ಲಿ ಕುರುಡ ಮಕ್ಕಳ ಗುಂಪಿಗೆ ಸೇರುತ್ತಾರೆ. ಈ ಮಕ್ಕಳಿಗೆ ವಿದ್ಯಾಭ್ಯಾಸವನ್ನು ದೃಷ್ಟಿಯ ಸಹಾಯವಿಲ್ಲದ ಇತರ ಮಾರ್ಗಗಳಿಂದ ಬೋಧಿಸುವ ಏರ್ಪಾಡು ಮಾಡಿರುತ್ತಾರೆ. ಈ ತರಹ ಕುರುಡು ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿ ವಿದ್ಯಾ ಇಲಾಖೆಯದು. ಅಪಘಾತಗಳಿಂದ ದೃಷ್ಟಿ ಕಳೆದುಕೊಂಡ ಮತ್ತು ಸಹಾಯ ಅಗತ್ಯವಿದ್ದ ಸನ್ನಿವೇಶಗಳಲ್ಲಿ ಕುರುಡಿನ ಮಿತಿಯನ್ನು ನಿರ್ಧರಿಸಬೇಕಾದುದು ಅಗತ್ಯ. ಕುರುಡುತನದ ಮಿತಿ ದೇಶವಿದೇಶಗಳಲ್ಲಿ ವಿವಿಧ ರೀತಿಯಲ್ಲಿ ನಿರ್ಧಡಿಸಲ್ಪಟ್ಟಿದೆ. ಬ್ರಿಟನ್ನಿನಲ್ಲಿ ದೃಷ್ಟಿಯ ಅಳತೆಯ ಪ್ರಕಾರ 6/60 (ಸ್ನೆಲನ್ ಟೆಸ್ಟ್ ಚಾರ್ಟಿನ ಮೊದಲನೆಯ ಅಕ್ಷರವನ್ನು 20'ಗಳ ದೂರದಿಂದ ಗುರುತಿಸುವ ಶಕ್ತಿ) ಅಥವಾ ಇದಕ್ಕಿಂತ ಕಡಿಮೆ ಇರುವ ಮಕ್ಕಳು ಕುರುಡು ಮಕ್ಕಳಂತೆ ಪರಿಗಣಿಸಲ್ಪಡುವರು. ವಯಸ್ಕರ ಕೇಂದ್ರ ದೃಷ್ಟಿ 3/60ಕ್ಕಿಂತ (ಟೆಸ್ಟ್ ಚಾರ್ಟಿನ ಮೊದಲನೆಯ ಅಕ್ಷರವನ್ನು 10'ಗಳ ದೂರದಿಂದ ಗುರುತಿಸುವ ಶಕ್ತಿ) ಹೆಚ್ಚಿಲ್ಲದೆ ಇಲ್ಲವೆ 3/60 ರಿಂದ 6/60ರ ಒಳಗಿರುವ ವಯಸ್ಕರು ಕೂಡ ಅಂಧರಂತೆ ಪರಿಗಣಿಸಲ್ಪಡುವರು. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ದೃಷ್ಟಿಯ ಎಲ್ಲೆ $20^0$ ಸುತ್ತಳತೆಯನ್ನು ಮುಟ್ಟಿದರೆ ಕುರುಡೆಂದು ತಿಳಿಯುತ್ತಾರೆ. ಈಜಿಪ್ಟ್, ಜರ್ಮನಿ, ಹಂಗರಿ, ಜಪಾನ್, ಪೋಲೆಂಡ್ ಮತ್ತು ಸ್ವೀಡನ್‌ಗಳಲ್ಲಿ ಒಂದು ಮೀಟರ್ ದೂರದಲ್ಲಿ ಬೆರಳುಗಳನ್ನು ಗುರುತಿಸಲಾಗದಿದ್ದಲ್ಲಿ ಕುರುಡೆಂದು ನಿರ್ಧರಿಸುವರು. (ಎಸ್.ಟಿ.ಪಿ.)

**ಕುರುಡು ಮಲೆ :** ಕೋಲಾರ ಜಿಲ್ಲೆಯ ಮುಳಬಾಗಲು ತಾಲ್ಲೂಕಿನಲ್ಲಿ ಮುಳಬಾಗಲು ಪಟ್ಟಣದ ವಾಯವ್ಯಕ್ಕೆ 9.6 ಕಿಮೀ ದೂರದಲ್ಲಿರುವ ಇತಿಹಾಸಪ್ರಸಿದ್ಧ ಗ್ರಾಮ. ಇಲ್ಲಿ ಅನೇಕ ಪ್ರಾಚೀನ ಅವಶೇಷಗಳು ದೊರಕಿವೆ. ಈ ಪ್ರದೇಶ ಚೋಳರ ಆಳ್ವಿಕೆಗೆ ಒಳಪಟ್ಟಿದ್ದಾಗ ಇದೊಂದು ಪ್ರಮುಖಸ್ಥಳವಾಗಿದ್ದುದರಿಂದ ಇಲ್ಲಿ ಕೆಲವು ಉತ್ತಮ ದೇವಾಲಯಗಳನ್ನು ನಿರ್ಮಿಸಲಾಗಿತ್ತು. ಸ್ಥಳ ಪುರಾಣದ ರೀತ್ಯಾ ಇದು ಕೌಂಡಿನ್ಯಕ್ಷೇತ್ರ. ಕೃತ, ತ್ರೇತಾ ಮತ್ತು ದ್ವಾಪರಯುಗಗಳಲ್ಲಿ ಇದಕ್ಕೆ ಗಣೇಶಗಿರಿ, ಕೂಟಾಚಲ ಮತ್ತು ಯಾದವಾಚಲಗಳೆಂಬ ಹೆಸರುಗಳಿದ್ದುವೆಂದೂ ಕಲಿಯುಗದಲ್ಲಿ ಕೌಂಡಿನ್ಯಕ್ಷೇತ್ರವಾಗಿದೆಯೆಂದೂ ಪ್ರತೀತಿಯಿದೆ. ಮತ್ತೊಂದು ಐತಿಹ್ಯದ ರೀತ್ಯಾ ಕುರುಡುಮಲೆ ಎಂಬುದು ಕೂಡುಮಲೆಯ ರೂಪಾಂತರ.

ಸಕಲದೇವತೆಗಳೂ ಮಹಾಗಣಪತಿಯ ಅರ್ಚನೆಗಾಗಿ ಇಲ್ಲಿ ಸೇರುತ್ತಿದ್ದುದರಿಂದ ಇವಕ್ಕೆ ಕೂಡುಮಲೆಯೆಂದು ಹೆಸರಾಯಿತಂತೆ.



ಮಹಾಗಣಪತಿ ದೇವಾಲಯದ ಮುಂಭಾಗದಲ್ಲಿರುವ ಇಲಿಯ ಶಿಲ್ಪಾಕೃತಿ

ಮಹಾಗಣಪತಿ ಮಂದಿರ ಇಲ್ಲಿಯ ಪ್ರಾಚೀನತಮ ದೇವಾಲಯ. ಬಹುಶಃ ಚೋಳರ ಕಾಲದಲ್ಲಿ ನಿರ್ಮಿತವಾದ ಈ ಮಂದಿರ ಬಹಳ ಸುಂದರಕಲಾಕೃತಿ. ಹೊಯ್ಸಳ ಮತ್ತು ವಿಜಯನಗರ ಅರಸರ ಕಾಲದಲ್ಲಿ ಇದರ ಜೀರ್ಣೋದ್ಧಾರವಾಯಿತು. ಈ ದೇವಾಲಯದ ಮುಂದಿರುವ, ಗಣಪತಿಯ ವಾಹನವಾದ ಮೂಷಿಕದ ಶಿಲ್ಪ ಹಸುರುಕಲ್ಲಿನಲ್ಲಿ ಮಾಡಲಾದ



ಸೋಮೇಶ್ವರ ದೇವಾಲಯದ ಒಂದು ನೋಟ

ಬೃಹದ್ಗಾತ್ರದ ಉತ್ತಮ ಕಲಾಕೃತಿ. ದೇವಾಲಯದ ಗರ್ಭಗೃಹದ (6 ಮೀ ಉದ್ದ, 4.5 ಮೀ. ಅಗಲ ಮತ್ತು 4.8 ಮೀ ಎತ್ತರ) ಮುಂದಿನ ಹದಿನಾರು ಮೂಲೆಗಳ ಕಂಬಗಳ ಮೇಲಿನ ಶಿಲ್ಪಗಳು ಸಾಧಾರಣವಾಗಿವೆ. ಮಹಾಗಣಪತಿಯ ವಿಗ್ರಹ 0.6 ಮೀ. ಎತ್ತರದ ಪೀಠದಮೇಲೆ 45 ಮೀ ‘ಎತ್ತರದ ಆಸನದಲ್ಲಿ ಕುಳಿತಿದ್ದು 2.6 ಮೀ. ಎತ್ತರವಿದೆ. ಪಾಶಾಂಕುಶ ಹಸ್ತನಾದ ಗಣಪತಿ ತನ್ನ ಕೈಯಲ್ಲಿಯ ಮೋದಕವನ್ನು ಸವಿಯುತ್ತಿರುವಂತೆ ರೂಪಿಸಲಾಗಿದೆ. ವಿಗ್ರಹ ಹಾವಿನ ಉದರ ಬಂಧ ಮತ್ತು ಯಜ್ಞೋಪವೀತಗಳನ್ನು ಧರಿಸಿದೆ. ಅದರ ಹೊಟ್ಟೆಯ ಸುತ್ತಳತೆ 3.9 ಮೀ ಸುಕನಾಸಿ (3X2.4 ಮೀ) ಮತ್ತು ನವರಂಗ (7.5 X 7.5) ಇವು ಈ ಮಂದಿರದ ಇತರ ಭಾಗಗಳು. ನವರಂಗದ ದಕ್ಷಿಣಭಾಗದಲ್ಲಿ 1.5 ಮೀ ಎತ್ತರದ, ಹನ್ನೆರಡು ಕೈಗಳುಳ್ಳ, ಮಯೂರವಾಹನನಾದ ಕುಮಾರನ ಪ್ರತಿಮೆಯಿದೆ. ಇದೊಂದು ಸುಂದರಶಿಲ್ಪ.

ಇಲ್ಲಿಯ ಅತ್ಯಂತ ಸುಂದರ ಕಟ್ಟಡ ಸೋಮೇಶ್ವರ ದೇವಾಲಯ. ಇದರಲ್ಲಿ ಗರ್ಭಗುಡಿ (6 X 3 ಮೀ), ಸುಕನಾಸಿ (3 X 2 ಮೀ) ಮತ್ತು ನವರಂಗ (7.5 X 7.5 ಮೀ) ಇವೆ. ನವರಂಗದ ಅಷ್ಟಮುಖದ ನಾಲ್ಕು ಕಂಬಗಳ ಮೇಲೂ ಸುಂದರವಾದ ಶೈವ – ವೈಷ್ಣವ ವಿಗ್ರಹಗಳನ್ನು ಕೆತ್ತಲಾಗಿದೆ. ಒಂದು ಕಂಬದ ಮೇಲಿರುವ ಆನೆಯನ್ನು ಕೊಲ್ಲುತ್ತಿರುವ ಸಿಂಹದ ಶಿಲ್ಪ ಗಂಗರನ್ನು ಹೊಯ್ಸಳರು ಸೋಲಿಸಿದ ಸಂಕೇತವಿರಬಹುದೆಂದು ಊಹಿಸಲಾಗಿದೆ. ಹೊರಗೋಡೆಗಳ ಮೇಲೆ ಸ್ತಂಭಿಕ ಮತ್ತು ಗೂಡುಗಳ ಸುಂದರ ಅಲಂಕರಣವಿದೆ. ಗರ್ಭಗುಡಿಯಲ್ಲಿರುವ ಲಿಂಗದ ಮುಂಭಾಗದ ಕಿಟಕಿಯ ಬಳಿ ಮೂರು ವ್ಯಕ್ತಿಗಳ ಶಿಲ್ಪಗಳಿವೆ. ಇವು 13ನೆಯ ಶತಮಾನದಲ್ಲಿ ಚೋಳರ ಸಾಮಂತನಾಗಿದ್ದ ಇಳವಂಜಿ ವಾಸುದೇವರಾಯ ಮತ್ತು ಆತನ ರಾಣಿಯರ ಮೂರ್ತಿಗಳೆಂದು ಗುರುತಿಸಲಾಗಿದೆ. ಈ ದೇವಾಲಯದ ಪ್ರಾಕಾರದಲ್ಲಿ ಪಾರ್ವತಿ ಮತ್ತು ಕಾಮಾಕ್ಷಿ ಅಮ್ಮನವರ ಮಂದಿರಗಳೂ ಇವೆ.

ಪಾಳುಬಿದ್ದಿರುವ ಚೆನ್ನರಾಯಸ್ವಾಮಿ ದೇವಾಲಯ ಸಹ ಆ ಸುಮಾರಿಗೆ ಸೇರಿದ್ದಿರಬಹುದು. ಗ್ರಾಮದ ಉತ್ತರಕ್ಕೆ ಮುರಿದ ತೋರಣದ ಕಂಬಗಳೂ ಮಾಸ್ತಿಕಲ್ಲೊಂದೂ ಇವೆ. ಹೊಯ್ಸಳ ಮುಮ್ಮಡಿ ಬಲ್ಲಾಳ ಆ ಪ್ರದೇಶವನ್ನು ಆಳುತ್ತಿದ್ದನೆಂದೂ ಆಗ ಹೊರಡಿಸಿದ ವೀರರಾಯಿ ಹಣ ದೊರಕಿವೆಯೆಂದೂ ಹೇಳಲಾಗಿದೆ. ಈ ಪ್ರದೇಶದಲ್ಲಿ ಹಳೆಯ ಊರಿನ ಅವಶೇಷಗಳು ಕಾಣಬರುತ್ತವೆ. *

**ಕುರುಡು ಮೀನು :** ಉತ್ತರ ಅಮೆರಿಕದ ಮಧ್ಯ ಭಾಗಗಳ ಗುಹೆ ಮತ್ತು ಭೂಗರ್ಭದೊಳಗೆ ಹರಿಯುವ ನದಿಗಳಲ್ಲಿ ವಾಸಿಸುವ ಮೀನು. ಹಲವಾರು ಕುಟುಂಬಗಳಿಗೆ ಸೇರಿದ ಮೀನುಗಳು ಕುರುಡು ಮೀನುಗಳಾಗಿವೆ. ಆಂಬ್ಲಿಯೋಪ್ಸಿಡೆ ಕುಟುಂಬಕ್ಕೆ ಸೇರಿದ *ಆಂಬ್ಲಿಯೋಪ್ಲಿಸ್ ಸ್ಪೇಲಿಯ, ಆ. ರೋಸೆ* ಹಾಗೂ *ಚಿಲುಮೆಗಳಲ್ಲಿ* ಕಾಣಸಿಗುವ *ಕೋಲೊಗಾಸ್ಟರ್* ಜಾತಿಯ ಮೀನುಗಳನ್ನು ಸಾಮಾನ್ಯವಾಗಿ ಕುರುಡು ಮೀನುಗಳೆಂದು ಕರೆಯುತ್ತಾರೆ. ಈ ಕುಟುಂಬದ ಮೀನುಗಳಲ್ಲಿ ಕಣ್ಣುಗಳು ನಶಿಸುತ್ತ ಹೋಗಿ ಕೆಲವು ಪ್ರಭೇದಗಳಲ್ಲಿ ಸಂಪೂರ್ಣವಾಗಿ ಮಾಯವಾಗಿದೆ. ಗುದದ್ವಾರ ದೇಹದ ಮುಂದಿನ ಭಾಗದಲ್ಲಿರುವುದು ಇದರ ವೈಚಿತ್ರ್ಯ. ಈ ಕುಟುಂಬದ ಯಾವ ಮೀನೂ ಉದ್ದದಲ್ಲಿ 7.5 ಸೆಂಮೀಗಿಂತಲೂ ಹೆಚ್ಚಾಗಿ ಬೆಳೆಯುವುದಿಲ್ಲ. ದೇಹದ ಮೇಲೆ ತಲೆಯಿಂದ ಬಾಲದವರೆಗೆ ಇರುವ ಪ್ಯಾಪಿಲಗಳು (ಸ್ಪರ್ಶೇಂದ್ರಿಗಳು) ಆಹಾರಾನ್ವೇಷಣೆಯಲ್ಲಿ ನೆರವಾಗುತ್ತವೆ. ಕಣ್ಣುಗಳು ಭಾಗಶಃ ಇಲ್ಲವೇ ಸಂಪೂರ್ಣವಾಗಿ ನಶಿಸಿ ಹೋಗಿರುವ ಇತರ ಜಾತಿಯ ಅನೇಕ ಮೀನುಗಳೂ ಉಂಟು. ಉದಾಹರಣೆಗೆ ಕ್ಯೂಬದ ಕುರುಡು ಮೀನುಗಳು (ಬ್ರಾಟುಲಿಡೀ ಕುಟುಂಬ). ಇವು ಭೂಗರ್ಭದ ಅಂತರ್ಜಲ ಗವಿಗಳಲ್ಲಿ ವಾಸಿಸುತ್ತವೆ. ಸೂರ್ಯರಶ್ಮಿ ಹಾಯದ ಆಳ ಸಮುದ್ರದಲ್ಲಿನ ಇಪ್‌ನಾಪ್ಸ್ ಮರ್ರೇಯಿ ಮುಂತಾದವು. ಈ ಮೀನುಗಳಲ್ಲೂ ಆಹಾರನ್ವೇಷಣೆಗೆ ಅವುಗಳಲ್ಲಿರುವ ಪ್ಯಾಪಿಲ ಮುಂತಾದ ಸ್ಪರ್ಶೇಂದ್ರಿಯಗಳು ಸಹಾಯಕವಾಗಿರುತ್ತವೆ. ಇವಕ್ಕೂ ಸಾಮಾನ್ಯ ಬಳಕೆಯಲ್ಲಿ ಕುರುಡುಮೀನುಗಳೆಂದೇ ಹೆಸರಿದೆ. (ಸಿ.ಜಿ.ಕೆ.)

**ಕುರುಡು ವಿದ್ಯುತ್ ಮೀನು :** ಬೆಂಥೊಬೇಟಿಸ್ ಮೋರ್ಸ್ಟಿಯ್ಯೆ ಎಂಬ ವೈಜ್ಞಾನಿಕ ಹೆಸರಿನ ಆಳಕಡಲಿನ ಮೀನು (ಎಲೆಕ್ಟ್ರಿಕ್ ರೇ). ಮೃದ್ವಸ್ಥಿ ಮೀನುಗಳ ಗುಂಪಿನ ಎಲ್ಯಾಸ್ಮೊ ಬ್ರಾಂಕಿಯ ಗಣಕ್ಕೆ ಸೇರಿದೆ. ಅರೇಬಿಯನ್ ಸಮುದ್ರದಲ್ಲಿ ಕೇರಳದ ಪಶ್ಚಿಮಕ್ಕೆ ಸು. 180 ಮೀ ಆಳದಲ್ಲಿ ವಾಸಿಸುತ್ತದೆ. ಸು. 144 ಮೀ ಉದ್ದಕ್ಕೆ ಬೆಳೆಯುವ ಈ ಮೀನಿಗೆ ಬಹಳ ಕ್ಷೀಣವಾದ ಕಣ್ಣುಗಳಿವೆ. ತಲೆಯ ಎರಡು ಕಡೆ ಇರುವ ಸಣ್ಣ ಚುಕ್ಕೆಗಳೇ ಕಣ್ಣುಗಳಾಗಿವೆ. ಆಹಾರ ಯೋಗ್ಯವಲ್ಲದ್ದರಿಂದ ಇದಕ್ಕೆ ಆರ್ಥಿಕ ಪ್ರಾಮುಖ್ಯತೆಯಿಲ್ಲ. ಈ ಮೀನು ಬಲೆಗೆ ಬೇಗನೆ ಬೀಳುವುದಿಲ್ಲ. ಇದರ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬಂದಿಲ್ಲ. (ಬಿ.ಎಚ್.ಎಂ.)

**ಕುರುಡು ಹುಳು :** ಆಂಗ್ವಿಸ್ ಫ್ರಾಜಿಲಿಸ್ ಎಂಬ ವೈಜ್ಞಾನಿಕ ಹೆಸರಿನ ಸರೀಸೃಪ (ಬ್ಲೈಂಡ್ ವರ್ಮ್) ಹಲ್ಲಿಗಳನ್ನೊಳಗೊಂಡ ಲ್ಯಾಸರ್ಟೀಲಿಯ ಉಪ ಗಣಕ್ಕೆ ಸೇರಿದೆ. ಇದನ್ನು ಕುರುಡು ಹಲ್ಲಿ ಅಥವಾ ಮುದಹಲ್ಲಿ ಎಂದೂ ಕರೆಯುವುದುಂಟು. ಇದರ ದೇಹ ಹಾವಿನಂತೆ ಇದೆ. ಇದಕ್ಕೆ ಕಾಲಿಲ್ಲ. ಎದೆಯ ಮೂಳೆ ಮತ್ತು ಭುಜಕಟ್ಟು ಕ್ಷೀಣಿಸಿವೆ. ಬಾಲ ಬೇಕಾದಾಗ ತುಂಡಾಗಬಲ್ಲುದು. ಕುರುಡುಹುಳು ಜರಾಯುಜ. ಮೊಟ್ಟೆಗಳು ತಾಯಿ ದೇಹದಲ್ಲಿಯೇ ಒಡೆದು ಮರಿಗಳು ಹೊರಬೀಳುತ್ತವೆ. (ಎಂ.ಡಿ.ಪಿ.)

**ಕುರುಮಾಮ :** ಕರ್ನಾಟಕದ ಜನಪ್ರಿಯ ಜನಪದ ಭವಿಷ್ಯಕಾರರು. ಇವರು ಬೀದಿ ಬೀದಿ ತಿರುಗುತ್ತಾ ಶಾಸ್ತ್ರ ಹೇಳುವವರು. ವೀರಗಚ್ಚೆಯನ್ನು ಬಿಗಿದು, ಎದೆಗೆ ಕಾವಿ ಬಟ್ಟೆಕಟ್ಟಿಕೊಂಡು ಇಲ್ಲವೆ ಅರೆದೋಳಿನ ಕರಿಯ ಕುಪ್ಪಸವನ್ನು ತೊಟ್ಟು, ಕೈಕಾಲುಗಳಿಗೆಲ್ಲ ಬಿಳಿ ಎಕ್ಕದ ಬೇರಿನ ಬಳೆಗಳನ್ನು ಹಾಕಿ, ಮುಡಿಯನ್ನು ಎತ್ತಿ ಮುಕುಟದಂತೆ ಬಿಗಿದುಕಟ್ಟಿ, ಮುಡಿ ಹಾಗೂ ಕೈಯ ಏಕನಾದಕ್ಕೆ ನವಿಲುಗರಿಯನ್ನು ಸಿಕ್ಕಿಸಿ, ಕವಡೆಯ ನಡುಪಟ್ಟಿಯನ್ನು ಸುತ್ತಿ, ಬಿಳಿಯ ನಾಮದ ಮೇಲೆ ಕೆಂಪುನಾಮ ಧರಿಸಿ, ಬಿದಿರಿನ ದಬ್ಬೆಗೆ ನಾಲ್ಕು ಪದರಿನ ಚೀಲವನ್ನು ನೇತುಹಾಕಿಕೊಂಡು, ಮತ್ತೊಂದು ಕೈಯಲ್ಲಿ ಏಕನಾದ ಹಿಡಿದು, ಕಿವಿಗಳಲ್ಲಿ ಚಂದ್ರಮುರಿ ಇಟ್ಟುಕೊಂಡು, ಬೆನ್ನಿಗೆ ಬತ್ತಳಿಕೆ ನೇತುಹಾಕಿಕೊಂಡು ಗಡ್ಡ ಮೀಸೆ ಹೊತ್ತು ಬರುವ ಇವರನ್ನು ಕಂಡಾಗ ತ್ರೇತಾಯುಗದ ದಂಡಕಾರಣ್ಯದಿಂದ ಒಮ್ಮೆಗೇ ಅವತರಿಸಿ ಬಂದಂತೆ ಭಾಸವಾಗುತ್ತದೆ.

ಕುರುಮಾಮ ಎಂದರೆ ಕುರುಹನ್ನು ತೋರಿಸುವ ವ್ಯಕ್ತಿ ಎಂದಾಗುತ್ತದೆ. ಯಾವ ವ್ಯಕ್ತಿಯೇ ಆಗಲಿ ಆತನ ಮನಸ್ಸಿನಲ್ಲಿರುವುದನ್ನು ಕುರುಮಾಮ ಬಿಡಿಸಿ ಹೇಳುವ ಶಾಸ್ತ್ರಕಾರನಾಗಿದ್ದಾನೆ.

ಕುರುಮಾಮ ಜನಾಂಗದ ಮೂಲನಿವಾಸಿಗಳು ಆಂಧ್ರಪ್ರದೇಶದವರು. ಇವರ ಮಾತೃಭಾಷೆ ತೆಲುಗು. ಬೆಜವಾಡ, ಶ್ರೀಶೈಲ, ಭದ್ರಾಚಲ, ಬಳ್ಳಾರಿ ಕಡೆಯಿಂದ ಕನ್ನಡನಾಡಿಗೆ



ಕುರುಮಾಮ ಭವಿಷ್ಯ ನುಡಿಯುತ್ತಿರುವುದು

ವಲಸೆಬಂದು ಅಲ್ಲಲ್ಲಿವರು ನೆಲೆಸಿದ್ದಾರೆ. ಜೀವನೋಪಾಯಕ್ಕಾಗಿ ಕನ್ನಡ ಭಾಷೆಯನ್ನು ಕಲಿತಿದ್ದಾರೆ. ಈ ವಂಶೀಕರ ಮೂಲಗುರುಗಳು ಶ್ರೀಶೈಲದವರು ಶ್ರೀಮಲ್ಲಿಕಾರ್ಜುನನ ಪರಮ ಭಕ್ತರಾಗಿದ್ದರು. ಒಮ್ಮೆ ಇವರ ಮೂಲವಂಶದವರು ಭದ್ರಾಚಲಕ್ಕೆ ಸಂದರ್ಶನ ನೀಡಿದಾಗ ಶ್ರೀರಾಮದಾಸರ ಸಂದರ್ಶನವಾದುದರ ಫಲವಾಗಿ ಶ್ರೀರಾಮನ ಭಕ್ತರಾಗಿ ಪರಿವರ್ತನೆಯಾದರೆಂತಲೂ ಅಂದಿನಿಂದ ಶ್ರೀರಾಮನ ಧ್ಯಾನದಲ್ಲಿ ತಲ್ಲೀನರಾಗಿ ಶ್ರೀರಾಮಮುಡಿಕಟ್ಟಿ, ಏಕನಾದ, ಚಿಟಿಕೆ ಹಿಡಿದು ಭವಿಷ್ಯಕಾರರಾಗಿವರು ಜೀವನ ನಡೆಸುತ್ತಿದ್ದಾರೆ.

ಇವರು ಅಲೆಮಾರಿ ಪ್ರವೃತಿಯವರು. ಇವರ ಕುಲಕಸಬು ಭವಿಷ್ಯ ಹೇಳಿ ಭಿಕ್ಷೆ ಬೇಡಿ ಜೀವಿಸುವುದೇ: ಇದರ ಜೊತೆಗೆ ದನಕರು ಸಾಕುತ್ತಾರೆ. ಅವುಗಳ ಮೇಲೆ ತಮ್ಮ ಸಂಸಾರದ ಸಾಮಗ್ರಿ ಹೇರಿಕೊಂಡು ಹಳ್ಳಿಯಿಂದ ಹಳ್ಳಿಗೆ ಸಾಗುತ್ತಿರುತ್ತಾರೆ. ಊರ ಹೊರಗೆ ಚಾವಡಿಯಲ್ಲೋ ಇಲ್ಲವೆ ಮರದ ಕೆಳಗೋ ಇವರ ಬಿಡಾರ. ಗಂಡಸರು ಮಾತ್ರ ವೇಷಭೂಷಣಗಳಿಂದ ಅಲಂಕರಿಸಿಕೊಂಡು ಏಕನಾದ ಹಿಡಿದು ಮನೆಮನೆಗೂ ಹೋಗಿ ಭಿಕ್ಷೆ ಬೇಡುತ್ತಾರೆ. ಹೆಂಗಸರು ಭಿಕ್ಷೆ ಬೇಡುವುದಿಲ್ಲ. ಅಡಿಗೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು, ದನಕರುಗಳಿಗೆ ಮೇವು ತರುವುದು ಇಷ್ಟು ಕೆಲಸ ಹೆಂಗಸರದಾಗುತ್ತದೆ. ಭಿಕ್ಷಾಟನೆ ಮುಗಿದ ಮೇಲೆ ಗಂಡಸರು ಬಿಡುವು ಮಾಡಿಕೊಂಡು ಸಮೀಪದ ತೊರೆ, ಕೆರೆ, ಇಲ್ಲವೇ ಬಾವಿಗಳಿಗೆ ಹೋಗಿ ಬಲೆಗಳ ಸಹಾಯದಿಂದ ಮೀನು ಹಿಡಿಯುತ್ತಾರೆ.

ಗುಡ್ಡಗಾಡು ಪ್ರದೇಶದಲ್ಲಿ ವಾಸವಾಗಿದ್ದ ಈ ಜನಾಂಗದವರು ಮೊದಮೊದಲು ಬಿದರಗಂಜಿ, ಅಂಬಲಿ, ಜೊತೆಗೆ ಮಾಂಸ ಸೇವಿಸುತ್ತಿದ್ದರು. ಮೀನು, ಕುರಿ, ಮೇಕೆ, ಕೋಳಿಗಳ ಮಾಂಸವನ್ನು ಮಾತ್ರ ಇವರು ಉಪಯೋಗಿಸುತ್ತಾರೆ. ನವಿಲು, ಗಿಳಿ, ಪಾರಿವಾಳ, ಗರುಡ ಮುಂತಾದ ಪಕ್ಷಿಗಳ ಮಾಂಸವನ್ನು ಇವರೆಂದೂ ಮುಟ್ಟುವುದಿಲ್ಲ. ಸೇಂದಿ ಕುಡಿಯುವುದು ಇವರಿಗೆ ಮೊದಲಿನಿಂದಲೂ ಅಂಟಿಬಂದ ಒಂದು ಚಟ.

ಇವರಲ್ಲೂ ಲಗ್ನ ಮುಂತಾದುವು ಸಾಮಾನ್ಯವಾಗಿ ಇತರ ಹಿಂದೂ ಪಂಗಡದವರಂತೆಯೇ ನಡೆಯುತ್ತವೆ. ತಾಳಿಕಟ್ಟಿ ಸರಳರೀತಿಯಲ್ಲಿ ಲಗ್ನಮಾಡಿ ಮುಗಿಸುವುದು ಇವರ ಕ್ರಮ. ಅಂದು ಮಾಂಸದ ವಿಶೇಷ ಊಟವಿರುತ್ತದೆ. ಜೊತೆಗೆ ಲಗ್ನಕ್ಕೆ ಬಂದವರಿಗೆಲ್ಲ ಸೇಂದಿಪಾನ ದೊರಕುತ್ತದೆ. ಅಂದು ರಾತ್ರಿ ಆ ಬಯಲಲ್ಲೆ ಪುಟ್ಟ ನೆರಕೆ ಕಟ್ಟಿ ಮರೆಮಾಡಿ ಗಂಡುಹೆಣ್ಣುಗಳನ್ನು ಬಿಟ್ಟು ನಿಷೇಕಪ್ರಸ್ತದ ಶಾಸ್ತ್ರವನ್ನು ಮುಗಿಸುತ್ತಾರೆ. ಇವರಲ್ಲಿ ಮೊದಮೊದಲು ಬಾಲ್ಯವಿವಾಹ ಪದ್ಧತಿ ಹೆಚ್ಚಾಗಿ ಆಚರಣೆಯಲ್ಲಿತ್ತು. ಇವರಲ್ಲಿ ಮೃತರಾದವರನ್ನು ಮಣ್ಣುಮಾಡುವುದು, ಸಮಾಧಿಗೆ ಹಾಲುತುಪ್ಪ ಎರೆಯುವುದು ಉಂಟು.

ಅಲೆಮಾರಿಗಳಾದ ಇವರಿಗೆ ಈಗ ಮನೆಮಠಗಳೂ ಇವೆ. ಕೆಲವು ಕುಟುಂಬಗಳು ವ್ಯವಸಾಯದಲ್ಲಿ ತೊಡಗಿವೆ. ಮಕ್ಕಳಿಗೆ ವಿದ್ಯಾಭ್ಯಾಸ ಸಿಗುತ್ತಿದೆ. ಭವಿಷ್ಯ ಹೇಳುವ ಕುಲಕಸಬು ಮಾತ್ರ ಮುಂದುವರಿದು ಬರುತ್ತಿದೆ. ಹಸ್ತ ಸಾಮುದ್ರಿಕೆಯಲ್ಲಿ ಇವರದು ಎತ್ತಿದ ಕೈ. ವ್ಯಕ್ತಿಯ ಹೆಸರಿನ ಬಲದಿಂದಲೂ ಅವರವರ ಭವಿಷ್ಯವನ್ನಿವರು ನುಡಿಯುತ್ತಾರೆ. ವ್ಯಕ್ತಿಯ ಹಸ್ತರೇಖೆಗಳನ್ನು ಗಮನಿಸಿ ಮೊದಲು ಶ್ರೀರಾಮನ ನಾಮವನ್ನು ನೆನೆದು ಕೈಯಲ್ಲಿರುವ ಏಕನಾದವನ್ನು ನುಡಿಸಿಕೊಂಡು–

ರಾಮನಂದಂ, ರಾಮನಂದಂ, ಮಸ್ತಾನನ್ನ ಗುರುನಾದನ್ನ,

ಕೊಂಡದೇವತೆ, ಹೆಸರು ಯಾವುದು ಮಾಮ ನಿನ್ನದು?–ಎಂದು ಕುರುಮಾಮ ಮೊದಲು ವ್ಯಕ್ತಿಯ ಹೆಸರನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಮತ್ತೆ ಉತ್ತರಿಸುತ್ತ ಹುಟ್ಟಿದಗಳಿಗೆ ಒಳ್ಳೆಯದು, ದೊಡ್ಡ ಗುಂಪಿನಲ್ಲಿ ಹುಟ್ಟಿದೆ, ದೊಡ್ಡ ಗುಂಪಿನಲ್ಲಿ ಬೆಳೆದೆ, ಗುಂಪಿನಲ್ಲಿ ಸುಖವಿಲ್ಲ, ಅಣ್ಣ ತಮ್ಮಂದಿರಲ್ಲಿ ಸುಖವಿಲ್ಲ, ತಾಯಿತಂದೆ ಕಟ್ಟಿದ ಮನೆಯಲ್ಲಿ ಸುಖವಿಲ್ಲ, ನೀರಲ್ಲಿನ ಕಂಟಕ ಕಳೆದು ಹೋಯ್ತು. ಈಗ ಮುಂದುಹೋಗುವ ಪಯಣ ವಳ್ಳೇದುಂಟು. ಲಾಭವಾಗ್ತದೆ. ಗೋವು ಸಂಬಂಧವಾಗಿ ವಳ್ಳೆಯದು. ಭೂಮಿಯಲ್ಲಿ ಜಯವಾಗುತ್ತೆ, ಕುರಿತ ಕಾರ್ಯಕ್ರಮಗಳೆಲ್ಲ ಜಯವಾಗುತ್ತೆ ಕುರ್‍ರ್...ಮಾಮ ಇನ್ನೇನು ಕೇಳ್ತೀರಿ ಇನ್ನೇನು ಇದ್ದರೂ ಕೇಳಬಹುದು – ಎಂದು ನುಡಿಯುತ್ತಾನೆ.

ಕುರುಮಾಮ ಬರೀ ಭವಿಷ್ಯ ಹೇಳುವವ ಮಾತ್ರವಲ್ಲ ಒಳ್ಳೆಯ ವೈದ್ಯನೂ ಆಗಿರುತ್ತಾನೆ. ಇವನಲ್ಲಿ ನಾಲ್ಕು ಮೂಲೆಯ ಒಂದು ಚೀಲವಿರುತ್ತದೆ. ಅದರಲ್ಲಿ ಭವಿಷ್ಯ ಹೇಳಲು ಸಹಕಾರಿಯಾಗುವ ಸಚಿತ್ರ ಗ್ರಂಥವೇ ಮುಂತಾದ ಅನೇಕ ಚಿತ್ರ ವಸ್ತುಗಳು ಅಡಕವಾಗಿರುತ್ತವೆ. ದುಂಡಾಗಿ ಸುತ್ತಿದ ಬಿಳಿ ಎಕ್ಕದ ಬೇರಿನ ಒಂದು ಸಿಂಬೆ, ಕರಡಿಯ ಕಾಲಿನ ಪಂಜ, ಮೈವದನಿಕಿ, ತಾಂಮ್ರಸಿಖಿ, ಕಲ್ಲಂಭಿ, ಜಡಮೂಲಕಿ ಮುಂತಾದ ಗಿಡಮೂಲಿಕೆಗಳೂ ಇರುತ್ತವೆ. ಮಕ್ಕಳು ಹಲ್ಲು ಕಡಿಯುವುದಿದ್ದರೆ, ಬಾಲಗ್ರಹ, ನೆಲಗ್ರಹದ ಭೀತಿ ಇದ್ದರೆ ಅವೆಲ್ಲವನ್ನು ಈ ವಸ್ತುಗಳ ಬಳಕೆಯಿಂದ ಈತ ನಿವಾರಿಸುತ್ತಾನೆ. ಇಷ್ಟಲ್ಲದೆ ಭಂಗಿಸೊಪ್ಪಿನ ಚಿಲುಮೆ, ಅಡಿಕೆಲೆ ಚೀಲವೂ ಇವನಲ್ಲುಂಟು. ತಲೆಬಾಚುವ ಬಾಚಣಿಗೆಯೊಂದು ಅಲ್ಲಿ ಸೇರಿಕೊಂಡಿರುತ್ತದೆ.

ಗ್ರಾಮಗಳಲ್ಲಿ ಇವರು ಮನೆಯಿಂದ ಮನೆಗೆ ಭಿಕ್ಷಾಟನೆಗೆ ಹೋಗುವಾಗ ಏಕನಾದ ಹಿಡಿದು ನುಡಿಸುತ್ತ ಕಾಯಿಲೆಯವರಿಗಾಗಿ

ಹರಿಯೋ ಕಾಲ್ದಲ್ಲಿ ಒಂದು ಅಂಚಿಕಡ್ಡಿ<br>
ಕಳೆಯೋ ಕಾಲ್ದಲ್ಲಿ ಒಂದು ಹುಲ್ಲುಕಡ್ಡಿ<br>
ಮಾಡ್ತೀನಿ<br>
ಮಂಡಿ ಬಾದಿನಿ<br>
ಕೀಲು ಬಾದಿನಿ<br>
ಮುಂಗೈ ಬಾದಿನಿ<br>
ತಲೆ ಬಾದಿನಿ<br>
ಮೂಗಿಲಿಪಡಿಸು<br>
ನೆಗಡಿ ಕೆಮ್ಮಲು<br>
ಏನಾರ ಇರಲಿ ... ... ಜೀವಸ್ಥಾನ ಜನ್ಮಸ್ಥಾನ ಹಿಡಿದು<br>
ಕಳೀತೀನಿ<br>
ಹೊಟ್ಟೆಲಿ ಬಾಧಿ<br>
ಸುಸ್ತಿ ಸಂಕಟ<br>
ತಲೇಲಿ ಮಂಕು<br>
ಕಣ್ಣಲಿ ಮಂಜು<br>
ಏನಿದ್ದರೂ ಪರಹಾರ ಆಗ್ತದೆ.<br>
ಹಿಂದಿದ್ದ ಬಲಹೋಯ್ತು<br>
ಮುಂದಿದ್ದ ಸಿಂಗಾರ ಹೋಯ್ತು<br>
ಅದರಿಂದ ಕೊಂಚ ಕಷ್ಟ ಅದೆ ಕಳ್ಕೊಳ್ಳಿ<br>
ಮತ್ತೆ ಮತ್ತೆ ಕೇಳುವ ಹಿತವಾದ ಮಧುರವಾದ ಆ<br>
ನುಡಿಗಳ ಹಿನ್ನೆಲೆಯಲ್ಲಿ ಏಕನಾದ, ತಾಳಮೇಳ_<br>
ನೂರೊಂದು ಮೂಲಿಕೆ ಬೆರೆಸಿ<br>
ಅರಿಸಿನದ ಪುಡಿ ಆಗದೆ<br>
ಗಿಂಡಿ ನೀರಿಗೆ ಬೆರಸಿ, ಎಂಟುದಿನ ಕುಡಿಯಲಿ ಹರಿದೋಯ್ತದೆ

ಹೀಗೆ ಕಾಯಿಲೆಯವರನ್ನು ಕುರುಮಾಮ ತನ್ನ ಚಮತ್ಕಾರದ ನುಡಿಗಳಿಂದ ಸಂತೈಸುತ್ತಾನೆ, ಗುಣಪಡಿಸುವ ಭರವಸೆ ನೀಡುತ್ತಾನೆ.

ಈ ಜನ ತಮ್ಮ ಕುಲಕಸಬನ್ನು ಮರೆಯುವ ಮೊದಲೆ ಇವರ ಸಾಹಿತ್ಯ, ವೈದ್ಯ, ಭವಿಷ್ಯದ ರೀತಿನೀತಿಗಳನ್ನು ಗುರುತಿಸುವ ಅಗತ್ಯವಿದೆ. (ಪಿ.ಆರ್.ಟಿ.)

**ಕುರುವತ್ತಿ :** ದಾವಣಗೆರೆ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಹರಿಹರದ ವಾಯವ್ಯಕ್ಕೆ 32 ಕಿಮೀ ದೂರದಲ್ಲಿ ತುಂಗಭದ್ರಾನದಿಯ ದಂಡೆಯಲ್ಲಿರುವ ಗ್ರಾಮ. ಇಲ್ಲಿರುವ ಮಲ್ಲಿಕಾರ್ಜುನ ದೇವಾಲಯ ಕಲ್ಯಾಣ ಚಾಳುಕ್ಯ ಶಿಲ್ಪ ಶೈಲಿಯದು. ಗೋಡೆಗಳ ಮೇಲಿನ ಶಿಲ್ಪ ಸ್ವಲ್ಪಮಟ್ಟಿಗೆ ಇಟಗಿಯ ಮಹಾದೇವ ದೇವಾಲಯವನ್ನು ಹೋಲುತ್ತದೆ. ಬೇಲೂರು ಮತ್ತು ಹಳೇಬಿಡು ದೇವಾಲಯಗಳಂತೆ ಮಲ್ಲಿಕಾರ್ಜುನ ದೇವಾಲಯದಲ್ಲೂ ಮದನಿಕಾವಿಗ್ರಹಗಳಿವೆ. ಕುರುವತ್ತಿಯ ದೇವಾಲಯಕ್ಕೆ ಸೇರಿದ ಬ್ರಹ್ಮನ ಸುಂದರ ವಿಗ್ರಹವೊಂದು ಫಿಲಡೆಲ್ಫಿಯದ ಕಲಾಸಂಗ್ರಹದ ಶಾಲೆಯಲ್ಲಿದೆ. ಆ ವಿಗ್ರಹವನ್ನು ಚಾವುಣೋಜ ಕಡೆದನೆಂದು ಅದರ ಕೆಳಗಡೆ ಇರುವ ಶಾಸನದಿಂದ ಗೊತ್ತಾಗುತ್ತದೆ. (ಎಸ್.ಎಂ.)

**ಕುರುವೆಗಿಡ :** ಮಾಲ್ವೇಸೀ ಕುಟುಂಬಕ್ಕೆ ಸೇರಿದ ಅಬ್ಯುಟಿಲಾನ್ ಎಂಬ ಶಾಸ್ತ್ರೀಯ ಹೆಸರಿನ ಸಸ್ಯಜಾತಿ. ಇದರಲ್ಲಿ 120 ಪ್ರಭೇದಗಳೂ ಉಷ್ಣ ಮತ್ತು ಉಪೋಷ್ಣವಲಯಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತವೆ. ಆವಿಸೆನ್ನಿ, ಇಂಡಿಕಮ್ ಮತ್ತು ಏಷ್ಯಾಟಿಕಮ್ ಪ್ರಭೇದಗಳು ಭಾರತದಲ್ಲಿ ಕಾಣಬರುತ್ತವೆ. ಇಂಡಿಕಮ್ ಪ್ರಭೇದಕ್ಕೆ ಕನ್ನಡದಲ್ಲಿ ತುತ್ತಿ, ಶ್ರೀಮುದ್ರೆಗಿಡ ಮುಂತಾದ ಹೆಸರುಗಳೂ ಇವೆ. ಇಂಡಿಕಮ್ ಪ್ರಭೇದದ ಕುರುವೆಗಿಡ ಸುಮಾರು 1.22 ಮೀ – 1.82 ಮೀ ಎತ್ತರಕ್ಕೆ ಬೆಳೆಯುವ ಪೊದೆ ಸಸ್ಯ. ಸಸ್ಯದ ಮೇಲೆಲ್ಲ ಸಣ್ಣ ಕೂದಲುಗಳಿವೆ. ಎಲೆಗಳು ಸರಳ ; ಪರ್ಯಾಯವಾಗಿ ಜೋಡಣೆಗೊಂಡಿವೆ. ಅವುಗಳ ಆಕಾರ ಹೃದಯದಂತೆ, ತೊಟ್ಟು ಉದ್ದ ಮತ್ತು ಅಂಚು ಗರಗಸದಂತೆ. ಹೂಗಳು ಒಂಟೊಂಟಿಯಾಗಿ ಎಲೆಗಳ ಕಂಕುಳಲ್ಲಿ ಮೂಡುತ್ತವೆ. ಅವುಗಳ ಬಣ್ಣ ಹಳದಿ ಅಥವಾ ಕಿತ್ತಳೆ. ಒಂದೊಂದು ಹೂವಿನಲ್ಲೂ ಬಿಡಿಯಾದ 5 ಪುಷ್ಪಪತ್ರಗಳೂ 5 ದಳಗಳೂ ಅಸಂಖ್ಯಾತ ಕೇಸರಿಗಳೂ 5ರಿಂದ ಹಲವಾರು ಕಾರ್ಪೆಲುಗಳನ್ನೊಳಗೊಂಡ ಉಚ್ಚಸ್ಥಾನದ ಅಂಡಾಶಯವೂ ಇವೆ. ಕಾಯಿ ಒಣಗಿದಾಗ ಹಲವಾರು ವಿಭಾಗಗಳಾಗಿ ಒಡೆಯುತ್ತದೆ. ಇದಕ್ಕೆ ಕ್ಯಾರ್‌ಸೆರುಲಸ್ ಎಂಬ ಶಾಸ್ತ್ರೀಯ ಹೆಸರಿದೆ. ಈ ಸಸ್ಯದ ಎಲ್ಲ ಭಾಗಗಳಲ್ಲೂ ಲೋಳೆಯಂಥ ರಸ ಇದೆ. ಕುರುವೆ ಗಿಡದ ಕಾಂಡದಿಂದ ಒಂದು ಬಗೆಯ ನಾರನ್ನು ತೆಗೆಯಬಹುದು. ಇದರಿಂದ ಬರುವ ನಾರು ಉತ್ತಮದರ್ಜೆಯದೆಂದು ಹೆಸರಾಗಿದೆ. ರೇಷ್ಮೆಯನ್ನು ಹೋಲುವ ಈ ನಾರು ಬಲು ಉದ್ದವೂ ಹೌದು. ಸಸ್ಯಕ್ಕೆ 4 ಅಥವಾ 5 ತಿಂಗಳು ವಯಸ್ಸಾದಾಗ ಕಾಂಡವನ್ನು ಕತ್ತರಿಸಿ ನೀರಿನಲ್ಲಿ ಕೊಳೆಸಿ ನಾರನ್ನು ಹೊರತೆಗೆಯುತ್ತಾರೆ. ನಾರನ್ನು ಹಗ್ಗಮಾಡಲು ಉಪಯೋಗಿಸುತ್ತಾರೆ. ಔಷಧಿರೂಪದಲ್ಲಿ ಸಹ ಈ ನಾರುಸಸ್ಯ ಬಹಳ ಉಪಯುಕ್ತ. ಜ್ವರಬಂದಾಗ ಶರೀರವನ್ನು ತಂಪುಗೊಳಿಸಲು ಇದರ ರಸವನ್ನು ಕೊಡುತ್ತಾರೆ. ಸುಮಾತ್ರದಲ್ಲಿ ಈ ಸಸ್ಯದಿಂದ ಒಂದು ರೀತಿಯ ರಸವನ್ನು ತಯಾರಿಸಿ ಸಂಧಿವಾತಕ್ಕೆ ಬಳಸುತ್ತಾರೆ. ಭಾರತದಲ್ಲಿ ಇದರ ಬೇರಿನ ರಸವನ್ನು ತಂಪುಕಾರಕ ಔಷಧಿಯಾಗಿ ಉಪಯೋಗಿಸುವುದುಂಟು. (ಬಿ.ಪಿ.)

**ಕುರ್ಚಿಮೀನು :** *ಟೀಲಿಯೋಸ್ಟಿಯೈ* ಗಣದ ಲಿಯೋನ್ಯಾತಿಡೆ ಕುಟುಂಬಕ್ಕೆ ಸೇರಿದ ಸಣ್ಣ ಗಾತ್ರದ ಎಲುಬು ಮೀನು (ಸಿಲ್ವರ್ ಬೆಲ್ಲಿ ಅಥವಾ ಪೋನಿ ಫಿಶ್). ಲಿಯೋನ್ಯಾತಿಡೆ ಕುಟುಂಬಕ್ಕೆ ಸೇರಿದ ಲಿಯೋನ್ಯಾತಸ್ ಮತ್ತು *ಗಸ್ಸ* ಎಂಬ ಎರಡು ಜಾತಿಯ ಮೀನುಗಳಿಗೆ ಈ ಹೆಸರಿದೆ. ಸಮುದ್ರವಾಸಿಯಾದ ಈ ಮೀನು ಆಳ ಹೆಚ್ಚಾಗಿಲ್ಲದ ನೀರಿನಲ್ಲಿ ದೊಡ್ಡ ದೊಡ್ಡ ಗುಂಪುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಳಿವೆಗಳಿಂದ ನದಿಗಳೊಳಕ್ಕೂ ಈಜಿಬರುವುದುಂಟು. ಭಾರತದ ಕರಾವಳಿ ಪ್ರದೇಶಗಳಲ್ಲಿ ಲಿಯೋನ್ಯಾತಸ್ ಜಾತಿಯ ಸುಮಾರು 16 ಪ್ರಭೇದಗಳು ಸಿಕ್ಕುತ್ತವೆ. ಇವುಗಳಲ್ಲಿ ಮುಖ್ಯವಾದವು ಲಿ.ಸ್ಪ್ಲೆಂಡೆನ್ಸ್, ಲಿ.ಈಕ್ವಲಸ್, ಲಿ.ಬಿಂಡಸ್, ಲಿ.ಇನ್ಸಿಡೇಟರ್, ಲಿ.ರುಕೋನಿಯಸ್. ಇನ್ಸಿಡೇಟರ್ ಪ್ರಭೇದ ಮೈಸೂರು ಮತ್ತು ಮಹಾರಾಷ್ಟ್ರಗಳ ಕರಾವಳಿಯಲ್ಲಿ ಬಲುಸಾಮಾನ್ಯವಾಗಿ ಕಾಣಬರುತ್ತವೆ. ಬಿಂಡಸ್ ಪ್ರಭೇದದ ಈಜುರೆಕ್ಕೆಗಳು ಕಿತ್ತಳೆ ವರ್ಣದವಾಗಿರುವುದರಿಂದ ಇದನ್ನು ಕಿತ್ತಳೆ ರೆಕ್ಕೆಯ ಕುರ್ಚಿಮೀನು ಎಂದೂ ಕರೆಯುವುದುಂಟು. *ಗಸ್ಸ* ಜಾತಿಯ ಮೈನ್ಯೂಟ ಎಂಬ ಪ್ರಭೇದವೂ ಭಾರತದಲ್ಲಿ ಸಿಕ್ಕುತ್ತದೆ. ಕುರ್ಚಿಮೀನಿನ ದೇಹ ಸುಮಾರು 14 ಸೆಂಮೀ ಗಿಂತ ಉದ್ದವಿರುವುದಿಲ್ಲ. ಅಕ್ಕಪಕ್ಕಕ್ಕೆ ಚಪ್ಪಟೆಯಾಗಿದೆ. ದೇಹದ ಮೇಲಿರುವ ಹುರುಪೆಗಳು ಸೈಕ್ಲಾಯಿಡ್ ಮಾದರಿಯವು. ಕುರ್ಚಿಮೀನುಗಳು ತಮ್ಮ ಬಾಯನ್ನು ಬಹಳ ಮುಂದಕ್ಕೆ ಚಾಚಬಲ್ಲವು. ಬಾಯಿ ಅಂಗುಳಿನಲ್ಲಿ ಹಲ್ಲುಗಳಿಲ್ಲ. ದವಡೆಹಲ್ಲುಗಳು ಬಹಳ ಸಣ್ಣವು. ಈ ಮೀನುಗಳು ಬಹಳ ರುಚಿಯಾದ ಆಹಾರಮೀನುಗಳೆಂದು ಹೆಸರಾಗಿವೆ. ಕರ್ನಾಟಕದ ಕರಾವಳಿಯಲ್ಲಿ ಇವುಗಳನ್ನು ಗಣನೀಯ ಪ್ರಮಾಣದಲ್ಲಿ ಹಿಡಿದು ಮಾರಾಟ ಮಾಡಲಾಗುತ್ತದೆ. ಇವುಗಳ ದೇಹದಲ್ಲಿ ಕೊಬ್ಬು ಅತ್ಯಲ್ಪ ಪ್ರಮಾಣದಲ್ಲಿರುವುದರಿಂದ ಇವನ್ನು ಸುಲಭವಾಗಿ ಬಿಸಿಲಿನಲ್ಲಿ ಒಣಗಿಸಬಹುದು. ಒಣಗಿಸುವಾಗ ಉಪ್ಪು ಸೇರಿಸುವ ಕ್ರಮ ಇದೆ. ಸಂಸ್ಕರಿಸಿದ ಮೀನುಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಾರೆ. (ಎನ್.ವಿ.ಎ.)

**ಕುರ್ತಿಗೆ :** ಕ್ರೂಸಿಫೆರೀ ಕುಟುಂಬಕ್ಕೆ ಸೇರಿದ ಲೆಪಿಡಿಯಮ್ ಸೇಟಿವಂ ಎಂಬ ಶಾಸ್ತ್ರೀಯ ಹೆಸರಿನ ಮೂಲಿಕೆ ಸಸ್ಯ (ಗಾರ್ಡನ್ ಕ್ರೆಸ್). ಇದನ್ನೇ ಹೋಲುವ ಹಲವಾರು ಏಕವಾರ್ಷಿಕ ಮತ್ತು ಬಹುವಾರ್ಷಿಕ ಮೂಲಿಕೆ ಸಸ್ಯ ಅಥವಾ ಪೊದೆರೂಪದ ಪ್ರಭೇದಗಳೂ ಇದ್ದು ಭಾರತದಲ್ಲಿ ಲೆ. ಡ್ರಾಬ ಮತ್ತು ಲೆ. ಲ್ಯಾಟಿಫೋಲಿಯಮ್ ಎಂಬೆರಡು ಪ್ರಭೇದಗಳು ಸ್ವಾಭಾವಿಕವಾಗಿ ಬೆಳೆಯುತ್ತವೆ. ಇದನ್ನು ಹಸಿ ತರಕಾರಿಯ ಅಥವಾ ಕೋಸಂಬರಿ ಸಸ್ಯವನ್ನಾಗಿ (ಸ್ಯಾಲಡ್) ಭಾರತದಾದ್ಯಂತ ಬೆಳೆಸುತ್ತಾರೆ. ಇದರ ಅಂದವಾದ ಎಲೆಗಳಿಗಾಗಿ ಇದನ್ನು ತೋಟಗಳಲ್ಲಿ ಅಲಂಕಾರ ಸಸ್ಯವನ್ನಾಗಿ ಬೆಳೆಸುವುದೂ ಉಂಟು. ಸೈಬೀರಿಯದಲ್ಲಿ ಲೆಪಿಡಿಯಮ್ ಐಬೆರಿಸ್ ಎಂಬುದೂ ಭೂತಾನ್, ಸಿಕ್ಕಿಂಗಳಲ್ಲಿ ಲೆ. ರುಡರೇಲ್ ಎಂಬುದೂ ಬೆಳೆಯುತ್ತವೆ. ಕುರ್ತಿಗೆಯನ್ನು ಬಹುರೂಪಿ ಪ್ರಭೇದವೆಂದೂ ಇದರ ಉಗಮಸ್ಥಾನದ ಪ್ರಥಮ ಕೇಂದ್ರ ಇಥಿಯೋಪಿಯ ಎಂದೂ ಯುರೋಪ್ ಮತ್ತು ಪಶ್ಚಿಮ ಏಷ್ಯಗಳು ದ್ವಿತೀಯ ಕೇಂದ್ರಗಳೆಂದೂ ಪರಿಗಣಿಸಲಾಗಿದೆ.

ಕುರ್ತಿಗೆ ಸುಮಾರು 15–45 ಸೆಂಮೀ ಎತ್ತರದವರೆಗೆ ಬೆಳೆಯುವ ಒಂದು ವಾರ್ಷಿಕ ಸಸ್ಯ. ಇದರ ಎಲೆಗಳು ವಿವಿಧ ರೀತಿಯವುಗಳು. ಇವು ಸರಳವಾಗಿರಬಹುದು ಇಲ್ಲವೆ ಸಂಯುಕ್ತ ಮಾದರಿಯವಾಗಿರಬಹುದು. ಇವುಗಳ ಅಂಚು ಅಖಂಡವಾಗಿಯೊ ಇಲ್ಲವೆ ಅನೇಕ ಭಾಗಗಳಾಗಿ ವಿಂಗಡಣೆಯಾಗಿಯೊ ಇವೆ. ಕುರ್ತಿಗೆಯಲ್ಲಿ ಸಾಮಾನ್ಯವಾಗಿ ಬೇರಿನಿಂದಲೇ ಹೊರಡುವವು ಮತ್ತು ಕಾಂಡದ ಮೇಲಿನವು ಎಂಬ ಎರಡು ಬಗೆಯ ಎಲೆಗಳಿವೆ. ಬೇರಿನಿಂದ ಹುಟ್ಟುವ ಎಲೆಗಳಿಗೆ ಉದ್ದವಾದ ತೊಟ್ಟಿದೆ. ಕಾಂಡದ ಮೇಲಿನ ಎಲೆಗಳಿಗೆ ತೊಟ್ಟಿಲ್ಲ. ಹೂಗಳು ಚಿಕ್ಕವು ಮತ್ತು ದ್ವಿಲಿಂಗಿಗಳು. ಅವುಗಳ ಬಣ್ಣ ಬಿಳಿ, ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಒಂದೊಂದರಲ್ಲಿ 4 ಪತ್ರಪುಷ್ಪಗಳೂ 4 ದಳಗಳೂ 6 ಕೇಸರಗಳೂ ಎರಡು ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ಇರುವ 6 ಕೇಸರಗಳಲ್ಲಿ ನಾಲ್ಕರ ಕೇಸರದಂಡಗಳು ಹೆಚ್ಚು ಉದ್ದವಾಗಿವೆ. ಈ ಸ್ಥಿತಿಯನ್ನು ಟೆಟ್ರಡೈನಮಸ್ ಸ್ಥಿತಿ ಎನ್ನುತ್ತಾರೆ. ಅಂಡಕೋಶದಲ್ಲಿ ಎರಡು ಕೋಣೆಗಳಿದ್ದು ಒಂದೊಂದರಲ್ಲೂ ಒಂದು ಅಂಡಕ ಇದೆ. ಕಾಯಿ ಒಣಗಿದಾಗ ಒಡೆದು ಹೋಗುವ ಪಾಡ್ ಮಾದರಿಯದು.

ಕುರ್ತಿಗೆ ಯಾವುದೇ ಲಘುವಾದ ಹಾಗೂ ಫಲವತ್ತಾದ ಮಣ್ಣಿನಲ್ಲಿ ಬೆಳೆಯುವುದಾದರೂ ತೇವಪೂರಿತವಾದ ಗೋಡು ಮಣ್ಣಿನಲ್ಲಿ ಸಮೃದ್ಧಿಯಾಗಿ ಬೆಳೆಯುತ್ತದೆ. ಇದನ್ನು ಎಲ್ಲ ಭೂಮಟ್ಟಗಳಲ್ಲಿಯೂ ಬೆಳೆಸಬಹುದು. ಇದನ್ನು ವರ್ಷಪೂರ್ತಿ ಬೆಳೆಸಬಹುದಾದರೂ ಚಳಿಗಾಲದ ಬೆಳೆ ಉತ್ಕೃಷ್ಟ ಬಗೆಯದು. ಬಯಲು ಪ್ರದೇಶಗಳಲ್ಲಿ ಸೆಪ್ಟೆಂಬರಿನಿಂದ ಫೆಬ್ರವರಿಯ ವರೆಗೂ ಬೆಟ್ಟ ಪ್ರದೇಶಗಳಲ್ಲಿ ಮಾರ್ಚಿಯಿಂದ ಸೆಪ್ಟೆಂಬರ್ ತಿಂಗಳ ವರೆಗೂ ಬೀಜ ಬಿತ್ತಿ ಬೆಳೆಸಲಾಗುತ್ತದೆ. ಬೀಜಗಳನ್ನು ದಟ್ಟವಾಗಿ ಬಿತ್ತಿ ಮೊಳಕೆ ಬರುವ ತನಕ ಮುಚ್ಚಿಡಬೇಕು. ಬಿತ್ತನೆಯಾದ 4–6 ವಾರಗಳಲ್ಲಿ ಸಸಿಗಳು ಬೆಳೆದು ಎಲೆಗಳು ಕಟಾವಿಗೆ ಸಿದ್ಧವಾಗುತ್ತವೆ. ನಿರಂತರವಾಗಿ ಇದರ ಎಲೆಗಳನ್ನು ಪಡೆಯಲೆಂದು 8 ದಿನಗಳ ಅಂತರಕ್ಕೊಮ್ಮೆ ಬೀಜಬಿತ್ತನೆಯ ಕೆಲಸ ನಡೆಯಬೇಕು. ವಾರಕ್ಕೊಮ್ಮೆ ಕಳೆ ಕಿತ್ತು ನೀರು ಹಾಯಿಸಬೇಕು. ಬೀಜಗಳನ್ನು ಪಡೆಯುವುದಕ್ಕೆ ಗಿಡಗಳನ್ನು ಕತ್ತರಿಸದೆ ಹಾಗೆಯೇ ಬಿಟ್ಟು ಅವು ಬಲಿತ ಮೇಲೆಕಿತ್ತು ತೆಗೆದು ಒಣಗಿಸಿ ಆಮೇಲೆ ಬಡಿದು ಬೀಜಗಳನ್ನು ಬೇರ್ಪಡಿಸಬಹುದು.

ಕುರ್ತಿಗೆಯ ಎಲೆಗಳನ್ನು ಹಸಿಯಾಗಿಯೇ ಕೋಸುಂಬರಿಗಳಲ್ಲಿ ಉಪಯೋಗಿಸುತ್ತಾರೆ. ತರಕಾರಿಗಳ ಜೊತೆಯಲ್ಲಿ ಮೇಲೋಗರ ಪದಾರ್ಥವನ್ನಾಗಿಯೂ ಬಳಸುವುದುಂಟು. ಇದು ಕುದುರೆ ಮತ್ತು ಒಂಟೆಗಳ ಮೇವಾಗಿಯೂ ಉಪಯೋಗವಾಗುತ್ತದೆ. ಇದಕ್ಕೆ ಔಷಧೀಯ ಗುಣಗಳೂ ಉಂಟು. ಉಬ್ಬಸ, ಕೆಮ್ಮು ಮತ್ತು ಮೂಲವ್ಯಾಧಿ ಮುಂತಾದ ಕೆಲವು ರೋಗಗಳ ಚಿಕಿತ್ಸೆಗೆ ಇದನ್ನು ಉಪಯೋಗಿಸುತ್ತಾರೆ. ಎಲೆಗಳು ಸೌಮ್ಯ ಉತ್ತೇಜಕಗಳಾಗಿದ್ದು ರಕ್ತಪಿತ್ತರೋಗಗಳಿಗೆ ಮತ್ತು ಪಿತ್ತಕೋಶದ ಬೇನೆಗಳಿಗೆ ಮದ್ದು ಎನಿಸಿವೆ. ಇವು ಮೂತ್ರ ಉತ್ತೇಜಕಗಳೂ ಹೌದು. ಕುರ್ತಿಗೆಯ ಬೇರನ್ನು ಗುಹ್ಯರೋಗಗಳಲ್ಲಿ ಬಳಸಲಾಗುತ್ತದೆ. ಬೀಜಗಳಿಗೆ ಕರುಳನ್ನು ಸಡಿಲಗೊಳಿಸುವ, ಶಕ್ತಿವರ್ಧಕ, ವಿರೇಚಕ, ಕಾಮೋದ್ದೀಪಕ, ಮೂತ್ರೋತ್ತೇಜಕ ಗುಣಗಳಿವೆ. ಇವುಗಳನ್ನು ಹುಣ್ಣುಗಳಿಗೆ ಹಚ್ಚುವ ಬೆಚ್ಚಾರವಾಗಿಯೂ ಉಳುಕುಗಳಿಗೆ ಔಷಧವನ್ನಾಗಿಯೂ ಉಪಯೋಗಿಸುತ್ತಾರೆ.

ಕುರ್ತಿಗೆಯ ಎಲೆಗಳಲ್ಲಿ ಶೇ.82.3 ತೇವಾಂಶ, ಶೇ.5.8 ಪ್ರೋಟೀನು, ಶೇ.8.7 ಕಾರ್ಬೋಹೈಡ್ರೇಟ್, ಶೇ.1.0 ಕೊಬ್ಬು ಶೇ.2.2 ಲವಣಾಂಶ, ಶೇ.0.36 ಕ್ಯಾಲ್ಸಿಯಮ್, ಶೇ. 0.11 ರಂಜಕ ಇವೆ. ಅಲ್ಲದೆ ಅಲ್ಪಪ್ರಮಾಣದಲ್ಲಿ ಕಬ್ಬಿಣ, ಸತು, ಕೋಬಾಲ್ಟ್, ಅಯೋಡಿನ್‌ಗಳೂ ಪ್ರತಿ 100 ಗ್ರಾಮಿಗೆ 2970 ಐಯು 'ಎ' ಜೀವಸತ್ತ್ವ, 0.11 ಮಿಗ್ರಾಂ, ತಯಮಿನ್, 0.17 ಮಿಗ್ರಾಂ, ರೈಬೋಫ್ಲೇಮಿನ್, 87 ಮಿಗ್ರಾಂ, 'ಸಿ' ಜೀವಸತ್ತ್ವವೂ ಇವೆ. ಈ ಸಸ್ಯವನ್ನು ಆವಿ ಆಸವೀಕರಣಗೊಳಿಸಿ ಬಣ್ಣವಿಲ್ಲದ ಚಂಚಲತೈಲವೊಂದನ್ನು ಪಡೆಯಬಹುದು. ಇದಕ್ಕೆ ಅತಿಯಾದ ಘಾಟುವಾಸನೆಯೂ ಬ್ಯಾಕ್ಟೀರಿಯ ನಿರೋಧಕಗುಣವೂ ಇವೆ. ಕುರ್ತಿಗೆಯ ಬೀಜದಲ್ಲೂ ಈ ಎಣ್ಣೆಯಿದೆ. ಅಲ್ಲದೆ ಬೀಜಗಳಲ್ಲಿ ಶೇ.25.5ರಷ್ಟು ಹಳದಿಮಿಶ್ರಿತಕಂದು ಬಣ್ಣದ ಇನ್ನೊಂದು ಬಗೆಯ ಎಣ್ಣೆಯಿದೆ. ಇದನ್ನು ದೀಪ ಉರಿಸಲಿಕ್ಕೂ ಸಾಬೂನು ತಯಾರಿಕೆಯಲ್ಲಿಯೂ ಬಳಸುವರು. ಇದಕ್ಕೆ ಉತ್ಕರ್ಷಣ ಪ್ರತಿರೋಧಕ ಗುಣವೂ ಇದೆ. ಬೀಜಗಳಲ್ಲಿ ಲೋಳೆಯಂಥ ವಸ್ತುವೊಂದಿದೆ. ಇದನ್ನು ಗೋಂದಿನಂತೆ ಉಪಯೋಗಿಸಬಹುದು. ಅಲ್ಲದೆ ಇದನ್ನು ಆಮಶಂಕೆ ಮತ್ತು ಅತಿಸಾರಗಳಲ್ಲಿ ಕರುಳಿನ ಪೊರೆಯ ಕೆರೆಯುವಿಕೆಯನ್ನು ಶಾಂತಗೊಳಿಸಲು ಬಳಸುವುದುಂಟು.

ಲೆಪಿಡಿಯಮ್ ಐಬೆರಿಸ್ ಪ್ರಭೇದದ ಬೀಜಗಳನ್ನು ಭಾರತಕ್ಕೆ ಆಮದು ಮಾಡಿಕೊಂಡು ತೌದ್ರಿ ಎಂಬ ಹೆಸರಿನಿಂದ ಮಾರಲಾಗುತ್ತದೆ. ಇವುಗಳನ್ನು ರಕ್ತಶುದ್ಧಿ ಕಾರಕಗಳಾಗಿಯೂ ಶ್ವಾಸಕೋಶ ಸಂಬಂಧಿ ರೋಗ ನಿವಾರಣೆಗೂ ಬಳಸುವುದುಂಟು. (ಎಸ್.ಡಿ.ಕೆ.)

**ಕುರ್ದ್ ಜನಾಂಗ :** ಕುರ್ದಿಸ್ತಾನವೆಂದು ಹೆಸರಿಸಲಾಗಿರುವ ಭೂಭಾಗದಲ್ಲಿನ ನಿವಾಸಿಗಳು. ಇವರಿಂದಲೇ ನಾಡಿಗೆ ಆ ಹೆಸರು. ಸುಮಾರು ಏಳನೆಯ ಶತಮಾನದಿಂದ ಪಶ್ಚಿಮ ಇರಾನಿಯರಿಗೆ ಮತ್ತು ಜಾಗ್ರೋಸ್ ವಲಯದಲ್ಲಿರುವ ಇರಾನೀಕೃತ ಬೆಟ್ಟಗಾಡಿನ ಜನಗಳಿಗೆ ಈ ಹೆಸರನ್ನು ಬಳಸಲಾಗುತ್ತಿದೆ. ಆದರೆ ಇವರ ಇತಿಹಾಸ ಇನ್ನೂ ಪ್ರಾಚೀನವೆಂದು ನಂಬಲು ಸಾಕಷ್ಟು ಆಧಾರಗಳಿವೆ. ಪಾಲಿಬಿಯಸ್ (ಪ್ರ.ಶ.ಪೂ. 200ರಿಂದ120), ಸ್ಟ್ರಾಬೊ (ಪ್ರ.ಶ.ಪೂ. 64ರಿಂದ 20) ಮತ್ತಿತರರು ಹೆಸರಿಸಿರುವ ಕುರ್ತಿಯೋಯಿ ಡಕಾಯಿತ ತಂಡವೂ ಕಾರ್ದೂಚ್ಚೀ ತಂಡವೂ ಇದೇ ಜನಾಂಗದವರಾಗಿದ್ದಿರಬೇಕೆಂದು ನಂಬಲಾಗಿದೆ. ಶರಾಫ್‌ನಾಮಾ ಕುರ್ದ್ ಜನಾಂಗದ ಅತ್ಯಂತ ಪ್ರಾಚೀನ ಇತಿಹಾಸ ಗ್ರಂಥ (1596). ಈ ಗ್ರಂಥದಲ್ಲಿ ಶಿಯಾ ಮತ್ತು ಅಲ್ ಇಲಾಹಿ ಪಂಥಕ್ಕೆ ಸೇರಿದ ಲಕ್ ಮತ್ತು ಲೂರ್ ಪಂಗಡಗಳನ್ನು ಕುರ್ದ್ ಜನಾಂಗದ ಒಂದು ಭಾಗವೆಂದು ಹೇಳಲಾಗಿದೆಯಾದರೂ ಕುರ್ದ್ ಜನಾಂಗವೆಂದಾಗ ಸಾಮಾನ್ಯವಾಗಿ ಈ ಎರಡು ಪಂಗಡಗಳನ್ನು ಸೇರಿಸಿಕೊಳ್ಳುವುದಿಲ್ಲ. ಪೂರ್ವ ತುರ್ಕಿಸ್ತಾನ, ಈಶಾನ್ಯ ಇರಾಕ್, ವಾಯವ್ಯ ಪರ್ಷಿಯ ಹಾಗೂ ಸೋವಿಯತ್ ಟ್ರಾನ್ಸ್ ಕಾಕೇಸಿಯ ಮತ್ತು ಸಿರಿಯದ ಮೇರೆಯೊಳಗಿನ ಪ್ರಾಂತ್ಯಗಳಿಂದ ಆವೃತವಾಗಿರುವ ಕೆಲವು ಪ್ರದೇಶಗಳಲ್ಲಿ ಈಗ ಕುರ್ದ್ ಜನಾಂಗ ವಾಸಿಸುತ್ತಿದೆ. ಡಮಾಸ್ಕಸ್ (ಸಿರಿಯ), ಅಲೆಪ್ಪೊ (ಸಿರಿಯ), ಕಜ್ವೀನ್, ಕರಸಾನ್ ಮತ್ತು ಕೇರ್‌ಮಾನ್ (ಇರಾನ್) ಮತ್ತು ಅಂಕಾರದಂಥ (ತುರ್ಕಿಸ್ತಾನ) ದೂರದ ನಗರಗಳಲ್ಲಿಯೂ ಈ ಜನರಿರುವುದು ಕಂಡುಬಂದಿದೆ. ಈಚಿನ ವರದಿಗಳ ಪ್ರಕಾರ ಇವರ ಜನಸಂಖ್ಯೆ ಒಂದು ಕೋಟಿಗಿಂತಲೂ ಹೆಚ್ಚಾಗಿದೆ ಎಂದು ಹೇಳಲಾಗಿದ್ದರೂ ಈ ಸಂಖ್ಯೆ ಪ್ರಶ್ನಾತೀತವಾಗಿಲ್ಲ. ಕೆಲವು ವರದಿಗಳ ಪ್ರಕಾರ ಈ ಸಂಖ್ಯೆ ಅರುವತ್ತು ಲಕ್ಷಕ್ಕಿಂತ ಹೆಚ್ಚಾಗಿಲ್ಲ.

ಪ್ರ.ಶ.ಪೂ. 2400ರಿಂದ 2300ರ ನಡುವಣ ಅವಧಿಯಲ್ಲಿ ಈ ಪ್ರದೇಶದಲ್ಲಿ ವಾಸವಾಗಿದ್ದ ಗುತಿ ಅಥವಾ ಕುರ್ತಿ ಜನಾಂಗವೇ ಕುರ್ದ್ ಜನಾಂಗಕ್ಕೆ ಮೂಲವೆಂದು ಹೇಳಲಾಗಿದೆ. ಈ ಪ್ರದೇಶದಲ್ಲಿದ್ದ ಮೂಲನಿವಾಸಿಗಳು ಬಹುಮಟ್ಟಿಗೆ ತಮ್ಮ ಸುತ್ತ ಮುತ್ತ ಇದ್ದ ತುರ್ಕರು, ಆರ್ಮೇನಿಯನ್ನರು, ಸೆಮೈಟ್‌ಗಳು ಮತ್ತು ಇರಾನಿಯರೊಂದಿಗೆ ಬೆರೆತುಹೋಗಿದ್ದಾರೆ. ಇಂದು ನಮಗೆ ಕಾಣಸಿಗುವುದು ಮಿಶ್ರಜನಾಂಗ ಮಾತ್ರ. ಸುಮಾರು ಏಳನೆಯ ಶತಮಾನದಲ್ಲಿ (636) ಅರಬರು ಕುರ್ದಿಗಳ ಮೇಲೆ ಜಯಗಳಿಸಿ, ಅವರನ್ನು ಇಸ್ಲಾಮ್ ಧರ್ಮಕ್ಕೆ ಪರಿವರ್ತಿಸಿದರು. ಹೀಗಾಗಿ ಈ ಜನಾಂಗದ ಬಹುಭಾಗಸುನ್ನೀ ಸಂಪ್ರದಾಯದ ಮುಸ್ಲಿಮರಾಗಿದ್ದಾರೆ. ದರ್‌ವೇಶ್ ಅನುಭಾವ ಪಂಥದ ಅನುಯಾಯಿಗಳು ಅದರಲ್ಲೂ ಖಾದಿರಿ ಮತ್ತು ನಕ್ಷ್ ಬಂದಿ ಪಂಥದವರು ಕುರ್ದಿಸ್ತಾನದ ಎಲ್ಲ ಜಿಲ್ಲೆಗಳಲ್ಲೂ ಇದ್ದಾರೆ. ಭಿನ್ನಧರ್ಮೀಯರಾದ ಬೇಕ್‌ತಶೀಖಿ, ಜಿಲ್‌ಬಶ್, ಮತ್ತು ಅಹ್ಲ್ – ಇ – ಹಕ್ ಹಾಗೂ ಯಜೀದಿಗಳ ಸಂಖ್ಯೆ ಸುಮಾರು 40,000ಕ್ಕೂ ಹೆಚ್ಚಾಗಿದೆ ಎಂದು ಹೇಳಲಾಗಿದೆ. ಇಷ್ಟಾದರೂ ಇವರು ಅಲ್ಪಸಂಖ್ಯಾತರು ಎಂಬುದನ್ನು ಒಪ್ಪಬೇಕು.

ಕುರ್ದಿಗಳು ಕಪ್ಪುಬಣ್ಣದವರು; ಕೂದಲು ಕಂದು ಅಥವಾ ಕಪ್ಪು. ಕಣ್ಣು ಕಂದು ಅಥವಾ ಬೂದು. ಮಧ್ಯಮ ನಿಲವಿನ, ಧೀರಸ್ವಭಾವದ ಗಟ್ಟಿಮುಟ್ಟಾಗಿರುವ ಜನರಿವರು. ಈ ಬೃಹತ್ ಜನಸಮುದಾಯದ ಬಹುಭಾಗ – ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ – ಅನೇಕ ಸಣ್ಣ ಸಣ್ಣ ಪಂಗಡಗಳಾಗಿ ಹಂಚಿಹೋಗಿದೆ. ಪ್ರತಿಯೊಂದು ಪಂಗಡಕ್ಕೂ ಆನುವಂಶಿಕವಾಗಿ ನಾಯಕತ್ವದ ಜಮೀನುದಾರ್ ಅಥವಾ ದರ್ವೇಶ್ ಶೇಕ್ ಮುಖ್ಯಸ್ಥನಾಗಿರುತ್ತಾನೆ. ಇವರು ಪರಮಾಧಿಕಾರಿಗಳಂತೆ ಅಧಿಕಾರ ಚಲಾಯಿಸುತ್ತ ಬಂದಿದ್ದಾರೆ. ಆದರೆ ಈಚೆಗೆ ಕೇಂದ್ರ ಆಡಳಿತ ವ್ಯವಸ್ಥೆಯಲ್ಲಿ ಸಂಘಟನೆ ಹೆಚ್ಚುತ್ತ ಬಂದಂತೆ ಈ ಹಳೆಯ ಸಾಮಾಜಿಕ ವ್ಯವಸ್ಥೆ ಕಣ್ಮರೆಯಾಗುತ್ತ ನಡೆದಿದೆ.

ಕುರ್ದಿಸ್ತಾನದಲ್ಲಿ ವಾಯವ್ಯ ಇರಾನೀ ಭಾಷೆಯ ಪ್ರಭೇದವಾದ ಕುರ್ದಿಭಾಷೆ ಬಳಕೆಯಲ್ಲಿದೆ. ಇದರ ಉಪಭಾಷೆಗಳು, ಪರಸ್ಪರ ಅರಿವು ಅಸಾಧ್ಯವಾಗುವಷ್ಟರ ಮಟ್ಟಿಗೆ ತೀರ ಭಿನ್ನವಾಗಿವೆ. ಕಣಿವೆಯಿಂದ ಕಣಿವೆಗೆ ಉಪಭಾಷೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆಯಾದರೂ ಇವುಗಳಲ್ಲಿ ಕಾಣಬರುವ ಕೆಲವು ವಿಶಿಷ್ಟ ಲಕ್ಷಣಗಳು ಇವೆಲ್ಲ ಒಂದೇ ಮೂಲದಿಂದ ಉತ್ಪನ್ನವಾಗಿರುವ ಉಪಭಾಷೆಗಳು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಬಹುಶಃ ಮೀಡಿಯನ್ ಎಂಬುದು ಆ ಮೂಲಭಾಷೆಯಾಗಿದ್ದಿರಬೇಕೆಂದು ವಿದ್ವಾಂಸರ ಊಹೆ. ಕುರ್ದಿ ಅದರ ವಿಕಾಸದಲ್ಲಿನ ಒಂದು ಹಂತ. ಕುರ್ದಿಯ ಉಪಭಾಷೆಗಳನ್ನು ಕಿರ್‌ಮಾಂಜಿ ಎಂದು ಕರೆಯುತ್ತಾರೆ. ಇದರಲ್ಲಿಯೂ ಉತ್ತರ, ದಕ್ಷಿಣ ಎಂದು ಎರಡು ಉಪಭಾಷೆಗಳಿವೆ. ಇವುಗಳನ್ನು ಬೇರ್ಪಡಿಸುವ ವಿಭಾಜಕ ರೇಖೆ ಉರ್ಮಿಯ ಸರೋವರದ ದಕ್ಷಿಣ ದಡದಿಂದ ಹಿಡಿದು ಗ್ರೇಟ್‌ಜ಼ಾಬ್ ನದಿಯವರೆಗೆ ಮತ್ತು ಅಲ್ಲಿಂದ ಕೆಳಕ್ಕೆ ಟೈಗ್ರಿಸ್ ನದಿಯ ಸಂಗಮದವರೆಗೆ ಹರಿಯುತ್ತದೆ. ಇತ್ತ ಕೇರ್‌ಮಾನ್ ಶಾಹ್‌ನಿಂದ ಕರಂದ ಮೂಲಕ ಮಂದಾಲಿಯವರೆಗೆ ಹರಿಯುವ ಈ ವಿಭಾಜಕ ರೇಖೆ ದಕ್ಷಿಣ ಜಾಗ್ರೋಸ್ ಭಾಷೆಯ ಲಕ್ಕಿ ಮತ್ತು ಲೂರಿ ಉಪಭಾಷಾ ವಲಯದಲ್ಲಿ ಲೀನವಾಗುತ್ತದೆ. ಕಿರ್‌ಮಾಂಜಿ ಉಪಭಾಷಾವಲಯದಲ್ಲಿಯೇ ಮಧ್ಯ ಇರಾನಿ ಭಾಷಾವರ್ಗದ ಮತ್ತೆರಡು ಉಪಭಾಷೆಗಳ–ವಾಯವ್ಯದಲ್ಲಿ ಜ಼ಾಜ಼್ ಮತ್ತು ನೈಋತ್ಯದಲ್ಲಿ ಗೊರಾನಿ ಉಪಭಾಷೆಗಳ ಕಿರುಕೇಂದ್ರಗಳು ಇವೆ. ಈ ಜನಾಂಗ ನೆರೆಯ ಇತರ ರಾಷ್ಟ್ರಗಳಲ್ಲಿ ಹಂಚಿಹೋಗಿರುವುದರಿಂದ ಅನೇಕರು ಆಯಾ ರಾಷ್ಟ್ರಗಳ ರಾಷ್ಟ್ರಭಾಷೆಯನ್ನು ಉಪಯೋಗಿಸಬಲ್ಲವರಾಗಿದ್ದಾರೆ. ಸಾಕ್ಷರತಾ ಪ್ರಮಾಣ ಶೇಕಡ 10ರಷ್ಟು ಮಾತ್ರವಿದೆಯಾದರೂ ಅನೇಕರು ತುರ್ಕಿ, ಪಾರಸಿ, ಅರಬ್ಬಿ, ರಷ್ಯನ್ ಮತ್ತು ಇಂಗ್ಲಿಷ್ ಭಾಷೆಗಳನ್ನು ಬಳಸಬಲ್ಲವರಾಗಿದ್ದಾರೆ. ಸಿರಿಯದ ಬುದ್ಧಿಜೀವಿಗಳ ಒಂದು ಗುಂಪು ಕುರ್ದಿಭಾಷೆಗೆ ರೋಮನ್ ಲಿಪಿಯನ್ನು ಬಳಸುವ ಬಗ್ಗೆ ಕೆಲವು ಕುತೂಹಲಕರವಾದ ಪ್ರಯೋಗಗಳನ್ನು ನಡೆಸಿರುವುದಾಗಿಯೂ ವರದಿಯಾಗಿದೆ. ಸೋವಿಯತ್ ಟ್ರಾನ್ಸ್‌ಕಾಕೇಸಿಯದಲ್ಲಿ ರೋಮನ್ ಮತ್ತು ಸುಧಾರಿತ ಸಿರಿಲಿಕ್ ಲಿಪಿಗಳನ್ನು ಬಳಸಲಾಗುತ್ತಿದೆ.

ಕುರ್ದಿಭಾಷೆಯಲ್ಲಿ ಪತ್ರಿಕೋದ್ಯಮ ಚಟುವಟಿಕೆಗಳು ಸತತವಾಗಿ ನಡೆಯುತ್ತ ಬಂದಿವೆ. ಮೊಟ್ಟಮೊದಲ ಕುರ್ದಿ ವಾರ್ತಾಪತ್ರಿಕೆ ಪ್ರಕಟವಾದದ್ದು 1897ರಲ್ಲಿ ಇರಾನಿನಲ್ಲೂ 1943 ಮತ್ತು 1946ರ ನಡುವಣ ಅವಧಿಯಲ್ಲಿ ಕುರ್ದಿಪತ್ರಿಕೆಯನ್ನು ಪ್ರಾರಂಭಿಸಲಾಯಿತು. ಟೆಹರಾನಿನಿಂದ 1959ರಲ್ಲಿ ಅಧಿಕೃತ ವಾರಪತ್ರಿಕೆಯೊಂದನ್ನು ಆರಂಭಿಸಲಾಯಿತು. ಸಿರಿಯದಲ್ಲಿ 1932ರ ಅನಂತರ ಕೆಲವು ವರ್ಷಗಳವರೆಗೆ ಮಾಸಪತ್ರಿಕೆಯೊಂದನ್ನು ನಡೆಸಲಾಯಿತು. ಪುಸ್ತಕಗಳನ್ನು ಅರಬ್ಬೀ ಮತ್ತು ರೋಮನ್ ಲಿಪಿಗಳಲ್ಲಿ ಮುದ್ರಿಸಲಾಯಿತು. ಕುರ್ದಿ ಸಾಹಿತ್ಯವೂ ಸಾಕಷ್ಟಿದೆ. ಈಚೆಗಂತೂ ಧಾರ್ಮಿಕ ಗ್ರಂಥಗಳು, ಇತಿಹಾಸ ಗ್ರಂಥಗಳು, ಸಮಗ್ರ ಸಾಹಿತ್ಯ ಗ್ರಂಥಗಳು, ಸಮಕಾಲೀನ ಕಾವ್ಯ ಮತ್ತು ಸಾಹಿತ್ಯವನ್ನು ಕುರಿತ ಗ್ರಂಥಗಳು ಹೊರಬರುತ್ತಿವೆ.

ಕುರ್ದ್ ಜನಾಂಗದ ಶೇಕಡ 55ಕ್ಕೂ ಹೆಚ್ಚು ಭಾಗ ಅರ್ಧ ಅಲೆಮಾರಿ ಜೀವನವನ್ನು ನಡೆಸುತ್ತಿದೆ. ಋತುಮಾನವನ್ನು ಅನುಸರಿಸಿ ಪರ್ವತ ಶಿಖರಗಳಿಂದ ಕಣಿವೆಗಳತ್ತ ತಮ್ಮ ಹಸು–ಕರು, ಕುರಿ, ಮೇಕೆ ಮತ್ತು ಕತ್ತೆಗಳ ಮಂದೆಯೊಡನೆ ವಲಸೆ ಬರುವುದೂ ಉಂಟು. ಉಳಿದವರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಚಳಿಗಾಲದಲ್ಲಿ ಅವರು ಕಂಬಳಿ ನೇಯುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಪರ್ವತಶ್ರೇಣಿಗಳಿಂದಾಗಿ ಭೂಪ್ರದೇಶಗಳು ಬಹುಮಟ್ಟಿಗೆ ಬೇರ್ಪಟ್ಟಿರುವುದರಿಂದ ಸಂಪರ್ಕ ಕಡಿಮೆಯಾಗಿದೆಯಾದರೂ ತಂತಮ್ಮ ಪ್ರದೇಶಗಳಿಗೆ ಹತ್ತಿರವಾಗಿರುವ ನಗರಗಳಲ್ಲಿ ಇವರು ವ್ಯಾಪಾರ ನಡೆಸುತ್ತಾರೆ. ಕಿರ್‌ಕುಕ್ ತೈಲಕ್ಷೇತ್ರ ಕುರ್ದಿಸ್ತಾನದ ನೈಋತ್ಯ ಅಂಚಿನಲ್ಲಿದೆ. ಇಷ್ಟಾದರೂ ಕುರ್ದಿಸ್ತಾನದ ಆರ್ಥಿಕತೆ ಬಹುಮಟ್ಟಿಗೆ ವ್ಯವಸಾಯಾಶ್ರಿತವಾಗಿಯೇ ಇದೆ. ಇತರ ಮುಸ್ಲಿಮ್ ರಾಷ್ಟ್ರಗಳ ಸ್ತ್ರೀಯರು ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ. ಆಡಳಿತ ವ್ಯವಸ್ಥೆಯಲ್ಲಿ ಸ್ಥಳೀಯ ರಾಜಕೀಯ ಚಟುವಟಿಕೆಗಳಲ್ಲಿ, ರಾಷ್ಟ್ರೀಯ ಆಂದೋಳನಗಳಲ್ಲಿ ಮತ್ತು ಯುದ್ಧಗಳಲ್ಲಿ ಇವರು ಪ್ರಮುಖ ಪಾತ್ರವಹಿಸಿರುವುದನ್ನು ಇಲ್ಲಿ ಕಾಣಬಹುದು.

ಏಳನೆಯ ಶತಮಾನದಿಂದಲೂ ಪಶ್ಚಿಮ ಏಷ್ಯದ ಇತಿಹಾಸದಲ್ಲಿ ಕುರ್ದಿಗಳು ಗಮನಾರ್ಹ ಪಾತ್ರವಹಿಸುತ್ತ ಬಂದಿದ್ದಾರೆ. ಈ ಅವಧಿಯಲ್ಲಿ ತಲೆಯೆತ್ತಿದ ಅಲ್ಪಖ್ಯಾತಕುರ್ದ್ ವಂಶಗಳಲ್ಲಿ ಶದ್ದಾದೀದ್‌ಗಳು ಮುಖ್ಯರು. ಇವರು ಟ್ರಾನ್ಸ್‌ಕಾಕೇಸಿಯದ ಅನಿ ಮತ್ತು ಗಂಜ್ ಜಿಲ್ಲೆಗಳಲ್ಲಿನ ಆರ್ಮೇನಿಯನ್ ಜನತೆಯ ಮೇಲೆ, ಆಧಿಪತ್ಯ ನಡೆಸುತ್ತಿದ್ದರು (951–1174). ಇತರ ಮುಖ್ಯವಂಶಗಳೆಂದರೆ ದಿಯಾರ್ ಬಕೀರ್‌ನ ಮರ್ವಾನಿದ್‌ಗಳು (990–1096) ಮತ್ತು ಕೇರ್‌ಮಾನ್‌ಶಾಹ್ ವಲಯದ ದಿನಾವರ್‌ನ ಹಸನ್ ವೈಹಿದ್‌ಗಳು (959–1015). ಕುರ್ದರು ತಮ್ಮ ಅಧಿಕಾರದ ಉನ್ನತಿಯನ್ನು ಕಂಡದ್ದು 12ನೆಯ ಶತಮಾನದಲ್ಲಿ. ಧರ್ಮಯುದ್ಧದಲ್ಲಿ (ಕ್ರೂಸೇಡುಗಳು) ಹೋರಾಡುವಂತೆ ಎಲ್ಲ ಮಹಮದೀಯರನ್ನೂ ಒಂದುಗೂಡಿಸಿದ ಹಿರಿಯ ನಾಯಕ ಸಲಾದೀ (1169–1250). ಈತ ಈಜಿಪ್ಟ್ ಮತ್ತು ಸಿರಿಯದ ಅಯಬೀದ್ ಸಂತತಿಯ ಸ್ಥಾಪಕ. ಮೊದಲನೆಯ ರಿಚರ್ಡ್‌ನನ್ನು ವಿರೋಧಿಸಿದ ಕೀರ್ತಿಯೂ ಈತನಿಗೆ ದೊರೆಯಿತು. ಮಂಗೋಲರ ಮತ್ತು ತುರ್ಕರ ಅಧೀನದಲ್ಲಿದ್ದ ಕುರ್ದಿಗಳ ಬಗ್ಗೆ ಹೆಚ್ಚಿನ ವಿವರಗಳೇನೂ ತಿಳಿದುಬರುವುದಿಲ್ಲ. ಮುಂದೆ ಅರ್ಧ ಸ್ವತಂತ್ರ ಪಾಳೆಯಪಟ್ಟುಗಳ ಮತ್ತು ಪರಮಾಧಿಕಾರ ವ್ಯವಸ್ಥೆಯ ವಿಕಾಸಕ್ಕೆ ಅನುಕೂಲಕರವಾದ ಪರಿಸ್ಥಿತಿ ಒದಗಿದ ಅವಧಿಯಲ್ಲಿ ಆಟೋಮನ್ನರಿಗೂ ಸಫಾವಿದರಿಗೂ ನಡೆದ ಕದನದಲ್ಲಿ ಅವರು ಮುಖ್ಯವಾಗಿ ಪರಿಣಮಿಸಿದರು. ಕಾಲಕ್ರಮದಲ್ಲಿ ಅಧಿಕಾರ ಕೇಂದ್ರೀಕರಣ ನೀತಿಯಂತೆ ಈ ಪಾಳೆಯಪಟ್ಟುಗಳ ಸಂಖ್ಯೆ ಕಡಿಮೆಯಾಯಿತಾದರೂ ಕೆಲವು 19ನೆಯ ಶತಮಾನದ ಪ್ರಥಮಾರ್ಧದವರೆಗೂ ಅಸ್ತಿತ್ವದಲ್ಲಿದ್ದುವು. ತುರ್ಕಿಸ್ತಾನದ ಪ್ರದೇಶದಲ್ಲಿದ್ದ ಬೋಹ್ತಾನ್, ಹಕಾರಿ, ಬಾಹ್‌ದಿನಾನ್, ಸೋರನ್ ಮತ್ತು ಬ್ಯಾಬಿನ್ ಪಾಳೆಯಗಳೂ ಪರ್ಷಿಯದಲ್ಲಿದ್ದ ಮುಕ್ರಿ ಮತ್ತು ಅರ್ದೆಲಾನ್ ಪಾಳೆಯಗಳೂ ಈ ದೃಷ್ಟಿಯಿಂದ ಗಮನಾರ್ಹವಾಗಿವೆ.

ಈ ಜನಾಂಗದ ಸ್ವಾತಂತ್ರ್ಯಾಭೀಪ್ಸೆ ಪಾಳೆಯಗಳೂ ಅನೇಕ ರಾಷ್ಟ್ರೀಯ ಚಳವಳಿಗಳ ಅಥವಾ ಕ್ರಾಂತಿಗಳ ರೂಪದಲ್ಲಿ ಮೈದೋರಿದೆ. ಈ ಕಾರಣದಿಂದಾಗಿಯೇ ಸ್ವಾತಂತ್ರ್ಯಪ್ರೇಮಿಗಳೂ ಅಭಿಮಾನಿಗಳೂ ಕೆಚ್ಚೆದೆಯ ಹೋರಾಟಗಾರರೂ ಗೆರಿಲ್ಲ ಯುದ್ಧ ತಂತ್ರ ನಿಪುಣರೂ ಧೈರ್ಯಶಾಲಿಗಳೂ ಆಗಿರುವ ಈ ಜನಾಂಗದ ಬಗ್ಗೆ ಹಿಂಸಾಚಾರ ಪ್ರಿಯರೆಂಬ ಕುಪ್ರಥೆಯೂ ಇದೆ. 1832ರಿಂದ 1847ರ ವರೆಗೆ ಮತ್ತು 1925ರಲ್ಲಿ

ತುರ್ಕರ ವಿರುದ್ಧ, 1922ರಿಂದ 1924ರ ವರಗೆ ಇರಾಕಿಗೆ ವಿರುದ್ಧ, 1946ರಲ್ಲಿ ಇರಾನಿಗೆ ವಿರುದ್ಧ ಇವರು ನಡೆಸಿದ ಹೋರಾಟಗಳು ಮತ್ತು ಈ ಬಗೆಯ ಇತರ ಸಶಸ್ತ್ರ ಯುದ್ಧಗಳು ಇವರ ಸ್ವಾತಂತ್ರ್ಯಪ್ರೇಮದ ಪ್ರತೀಕವಾಗಿವೆ. ಈ ಬಗೆಯ ರಾಷ್ಟ್ರೀಯ ಜಾಗೃತಿ ಕುರ್ದಿಗಳಿಗೆ ಹೊಸ ವಿಚಾರವೇನೂ ಆಗಿರಲಿಲ್ಲ. ಪಾಳೆಯಗಳನ್ನು ಮೆಟ್ಟಿಹಾಕುವುದಕ್ಕೆ ಮೊದಲು ಮತ್ತು ಅನಂತರ ಸರ್ಕಾರದ ವಿರುದ್ಧ ಈ ಜನಾಂಗ ಅನೇಕ ಬಾರಿ ದಂಗೆಯೆದ್ದಿರುವುದಕ್ಕೆ ಇವರ ಇತಿಹಾಸವೇ ಸಾಕ್ಷಿಯಾಗಿದೆ. ಒಂದು ರೀತಿಯಲ್ಲಿ ಇವರ ಇತಿಹಾಸ ಹೋರಾಟದ ಇತಿಹಾಸ. ಇಂಥ ಸಂದರ್ಭಗಳಲ್ಲಿ ಜಾತೀಯ ಭಾವನೆಗಳನ್ನು ಬಡಿದೆಬ್ಬಿಸಿ, ಜನರನ್ನು ಒಂದುಗೂಡಿಸಿ ಹೋರಾಟ ನಡೆಸುತ್ತಿದ್ದರು. ಉತ್ತರದ ಉಪಭಾಷೆಯಲ್ಲಿ ತನ್ನ ರಚನೆಗಳನ್ನು ಮುಂದಿರಿಸಿರುವ ಬಯಾಜಿದ್‍ನ ಅಹ್ಮದ್–ಏ–ಖನಿಯನ್ (1651–1706) ಕೃತಿಗಳಲ್ಲಿ ತೀವ್ರದೇಶಪ್ರೇಮದ ಜೀವಂತಧ್ವನಿ ಮಾರ್ಮೊಳಗಿದೆ. ಈತನ ಅನಂತರ ಬಂದ ಕವಿಗಳ, ಅಂತೆಯೇ ರಚನೆಗಳಲ್ಲೂ ಇದೇ ಸ್ವರ ಕೇಳಿಬರುತ್ತಿದೆ. ರಾಷ್ಟ್ರೀಯ ಜಾಗೃತಿಯ ಆಧುನಿಕ ಸ್ವರೂಪದ ವಿಕಾಸಕ್ಕೆ ಆಟೋಮನ್, ಅರಬ್ಬಿ ಮತ್ತು ಆರ್ಮೇನಿಯನ್ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರ ಚಳವಳಿಗಳು ನೇರವಾದ ಪ್ರೇರಣೆಯನ್ನು ನೀಡಿದುವು ಎಂದು ಹೇಳಬಹುದಾಗಿದೆ.

ಒಂದನೆಯ ಮಹಾಯುದ್ಧ ಕುರ್ದ್ ಜನಾಂಗದ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಗಿ, ಕವಲು–ಬಿಂದುವಾಗಿ ಪರಿಣಮಿಸಿತು. ಆ ಅವಧಿಯಲ್ಲಿ ತುರ್ಕಿಸ್ತಾನಕ್ಕೂ ಸೋಲಾದುದರಿಂದ ಮತ್ತೆ ಇವರ ಆಸೆಗಳು ಚಿಗುರೊಡೆಯ ತೊಡಗಿದುವು. ಜೊತೆಗೆ ವುಡ್ರೋ ವಿಲ್ಸನ್ನನ ವಿಶ್ವಶಾಂತಿಯೋಜನೆಯ (ಜನವರಿ 1918) ಹನ್ನೆರಡನೆಯ ಕಲಮು ಇವರಿಗೆ ಮತ್ತಷ್ಟು ಸ್ಫೂರ್ತಿಯನ್ನು ನೀಡಿತು. ಇದಕ್ಕೆ ಕಾರಣ , ಆಟೊಮನ್ ಸಾಮ್ರಾಜ್ಯದಲ್ಲಿರುವ ತುರ್ಕೇತರ ರಾಷ್ಟ್ರೀಯರಿಗೆ ಸ್ವತಂತ್ರ, ಸ್ವಾಯತ್ತ ವಿಕಾಸಕ್ಕೆ ಅಗತ್ಯವಾದಂಥ ಅನಿರ್ಬಂಧಿತ ಅವಕಾಶಗಳನ್ನು ಒದಗಿಸಿಕೊಡಬೇಕೆಂಬ ಸಂಗತಿಯನ್ನು ಅದರಲ್ಲಿ ಸ್ಪಷ್ಟವಾಗಿ ಉದ್ಘೋಷಿಸಿದ್ದುದು. ಕುರ್ದ್ ಪ್ರತಿನಿಧಿಗಳು ಈ ಸಂಬಂಧವಾಗಿ ನಡೆದ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದರು. 1920ರ ಆಗಸ್ಟ್‌ನಲ್ಲಿ ಸರ್ವೆಸ್ ಒಪ್ಪಂದಕ್ಕೆ ಸಹಿ ಬಿತ್ತು . ಮೂರು ಅರಬ್ ಗಣರಾಜ್ಯಗಳ–ಅಂದರೆ ಹೆಜಾಜ್, ಸಿರಿಯ ಮತ್ತು ಇರಾಕ್ ರಾಜ್ಯಗಳ ಸ್ಥಾಪನೆ ಮತ್ತು ಮಾನ್ಯತೆಯ ವಿಚಾರವನ್ನೂ ಅದರಲ್ಲಿ ಪ್ರಸ್ತಾಪಿಸಲಾಗಿತ್ತು. ಜೊತೆಗೆ ಅಂದು ಬ್ರಿಟಿಷ್ ಆಧಿಪತ್ಯಕ್ಕೆ ಒಳಪಟ್ಟಿದ್ದ ಮೋಸುಲ್‌ವಿಲಾಯತ್‌ನಲ್ಲಿದ್ದ ಕುರ್ದಿಗಳೂ ಕುರ್ದಿಸ್ತಾನಕ್ಕೆ ಸೇರಿಕೊಳ್ಳಬಹುದೆಂಬುದನ್ನು ಸ್ಪಷ್ಟಪಡಿಸಲಾಗಿತ್ತು. ಆದರೆ ತುರ್ಕಿಯಲ್ಲಿ ಮಸ್ತಫ ಕೆಮಾಲ್ ಅಟಾಟರ್ಕನ ನೇತೃತ್ವದಲ್ಲಿ ಮತ್ತೆ ಸೈನಿಕ ಆಡಳಿತ ಸ್ಥಾಪಿತವಾದುದರ ಫಲವಾಗಿ ಈ ಒಪ್ಪಂದ ಜಾರಿಗೆ ಬರಲೇ ಇಲ್ಲ. ಅಷ್ಟೇ ಅಲ್ಲ, 1923ರಲ್ಲಿ ಮಾಡಿಕೊಂಡ ಲೌಸ್ಸೇನ್ ಒಪ್ಪಂದದಿಂದಾಗಿ ಈ ಒಪ್ಪಂದ ತಾನೇ ತಾನಾಗಿ ರದ್ದಾಯಿತು. ಲೌಸ್ಸೇನ್ ಒಪ್ಪಂದ ಆರ್ಮೇನಿಯ ಮತ್ತು ಕುರ್ದಿಸ್ತಾನ್ ರಾಜ್ಯಗಳ ವಿಚಾರವನ್ನು ಸಂಪೂರ್ಣವಾಗಿ ಕೈಬಿಟ್ಟು, ಮೂರು ಅರಬ್ಬಿ ರಾಜ್ಯಗಳ ಸ್ಥಾಪನೆಗೆ ಮಾತ್ರ ಅವಕಾಶ ಮಾಡಿಕೊಡುವ ವಿಧಿಗಳನ್ನೊಳಗೊಂಡಿತ್ತು. ಮೋಸುಲ್ ವಿಲಾಯತ್ ಪ್ರದೇಶವನ್ನು ಕುರ್ದಿಸ್ತಾನದ ವ್ಯಾಪ್ತಿಯಿಂದ ಹೊರಗಿರಿಸಿದ್ದು ಮಾತ್ರವಲ್ಲದೆ ಅದರ ಭವಿಷ್ಯದ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವ ಹೊಣೆಯನ್ನು ಅಂದು ಅಸ್ತಿತ್ವದಲ್ಲಿದ್ದ ಲೀಗ್ ಆಫ್ ನೇಷನ್ಸ್‌ಗೆ ವರ್ಗಾಯಿಸಲಾಯಿತು. 1925ರಲ್ಲಿ ಅದು ಇರಾಕಿನ ಪರವಾಗಿ ತೀರ್ಪುಕೊಟ್ಟಿತು. 1926ರಲ್ಲಿ ಸಹಿಮಾಡಲಾದ ಅಂಕಾರ ಒಪ್ಪಂದ ಈ ತೀರ್ಪನ್ನು ಸ್ಥಿರಪಡಿಸಿತು. ಹೀಗಾಗಿ ಮೃತಶಿಶುವಾಗಿ ಜನ್ಮತಳೆದ ಸರ್ವೆಸ್ ಒಪ್ಪಂದ ಇತಿಹಾಸದ ಮತ್ತೊಂದು ಮೃತಪತ್ರ ಮಾತ್ರವಾಗಿ ಪರಿಣಮಿಸಿತು.

ಇಷ್ಟಾದರೂ ಅಂತಾರಾಷ್ಟ್ರೀಯ ದಾಖಲೆಯೊಂದರಲ್ಲಿ ಸ್ವತಂತ್ರ ಕುರ್ದಿಸ್ತಾನದ ಉಲ್ಲೇಖವಾಗಿದ್ದುದನ್ನು ಕುರ್ದ್‌ಜನತೆ ಮರೆಯಲು ಸಿದ್ಧವಾಗಿರಲಿಲ್ಲ. 1922–23ರಲ್ಲಿ ಷೇಕ್ ಮಹಮೂದ್ ಸುಲೈಮಾನಿಯ ತನ್ನನ್ನು ಕುರ್ದಿಸ್ತಾನದ ರಾಜನೆಂದು ಘೋಷಿಸಿಕೊಂಡ. ತಮ್ಮ ಕನಸನ್ನು ನನಸಾಗಿಸಿಕೊಳ್ಳುವ ಪ್ರಯತ್ನದ ಅಂಗವಾಗಿ ಕುರ್ದಿಗಳು ಅನೇಕ ಬಾರಿ ಸಶಸ್ತ್ರ ಕ್ರಾಂತಿಗಳನ್ನು ನಡೆಸಿದರು. ಹೊರಗಿನ ಬೆಂಬಲ ಸಾಕಷ್ಟು ಇಲ್ಲದೆ ಹೋದುದರಿಂದ, ಆಂತರಿಕ ಸಂಘಟನೆ ಸಾಲದೆ ಇದ್ದುದರಿಂದ, ಅಧಿಕಾರಸ್ಥ ವರ್ಗಗಳ ಪ್ರಾಬಲ್ಯದಿಂದ ಈ ಕ್ರಾಂತಿಗಳು ಅಲ್ಪಾಯುಗಳಾಗಿ ಪರಿಣಮಿಸಿದುವು. ಇವುಗಳಲ್ಲೆಲ್ಲ ತುರ್ಕಿಸ್ತಾನದ ಖಾರ್‌ಪುತ್ ವಲಯದಲ್ಲಿ ಶೇಖ್‌ಸೈಯದ್ 1925ರಲ್ಲಿ ನಡೆಸಿದ ಯುದ್ಧವೇ ಅತ್ಯಂತ ತೀವ್ರವಾಗಿದ್ದುದು. ಮುಂದೆ 1930ರಲ್ಲಿ ಅರಾರತ್‌ನ ಬಳಿ ಇಂಥ ಮತ್ತೊಂದು ಯುದ್ಧ ನಡೆಯಿತು. ಇದು ಇರಾಕ್‌ನಲ್ಲಿ ತಲೆದೋರಿದ ವಿರೋಧದ ಪ್ರತೀಕವಾಗಿತ್ತು. 1931–32ರಲ್ಲಿ ಮತ್ತು 1940–45ರಲ್ಲಿ ಬಾರ್ಜಾನ್‌ನಲ್ಲಿ ನಡೆದ ತೀವ್ರ ಸ್ವರೂಪದ ಕ್ರಾಂತಿಗಳನ್ನು ಬಹಳ ಕಷ್ಟದಿಂದ ಹತ್ತಿಕ್ಕಲಾಯಿತು. 1922ರಲ್ಲಿ ಅನೇಕ ತಿಂಗಳುಗಳ ವರೆಗೆ ಮತ್ತು 1941ರಿಂದ ಎರಡನೆಯ ಮಹಾಯುದ್ಧ ಮುಗಿಯುವ ವರೆಗೆ ವಾಸ್ತವವಾಗಿ ಈ ಪ್ರದೇಶದಲ್ಲಿನ ಇರಾನೀ ಆಡಳಿತ ಅರೆಜೀವದಿಂದಿತ್ತು. 1946ರ ಜನವರಿಯಲ್ಲಿ ಖಾಜಿಮಹಮ್ಮದನ ನೇತೃತ್ವದಲ್ಲಿ ಅದು ಕಾರ್ಯಕಲಾಪಗಳನ್ನು ಪ್ರಾರಂಭಿಸಿತು. ಆದರೂ ಈ ಅಂತರ್ಯುದ್ಧಗಳು ಕೊನೆಗೊಂಡಿಲ್ಲ. 1958ರಲ್ಲಿ, 1961ರಲ್ಲಿ, ಭುಗಿಲೆದ್ದ ಯುದ್ಧಜ್ವಾಲೆಗಳು ಹಲವಾರು ವರ್ಷ ಈ ರಾಷ್ಟ್ರವನ್ನು ದಗ್ಧಗೊಳಿಸಿವೆಯಾದರೂ ಸಮಸ್ಯೆಗಳಿಗೆ ಇನ್ನೂ ಅಂತಿಮ ತೀರ್ಮಾನ ಸಿಕ್ಕಿಲ್ಲ.

ಸರ್ವೆಸ್ ಒಪ್ಪಂದದಲ್ಲಿ ಕಾಣಿಸಲಾಗಿದ್ದ ಕೆಲವು ಆದರ್ಶಪೂರ್ಣ ವಿಚಾರಗಳು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪ್ರಭಾವ ಬೀರತೊಡಗಿದ್ದುವು. ಲೀಗ್ ಆಫ್ ನೇಷನ್ಸ್ ಈ ದಿಕ್ಕಿನಲ್ಲಿ ಇರಾಕಿಗೆ ಸ್ಪಷ್ಟ ಆದೇಶಗಳನ್ನು ಕೊಟ್ಟಿತು. ಕಾರ್ಯಾಂಗ, ನ್ಯಾಯಾಂಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿನ ಹುದ್ದೆಗಳಿಗೆ ಕುರ್ದಿಗಳನ್ನೇ ಅಥವಾ ಕುರ್ದಿಭಾಷೆ ಬಲ್ಲವರನ್ನೇ ನೇಮಿಸಬೇಕು ಹಾಗೂ ಆ ಪ್ರದೇಶಗಳಲ್ಲಿ ಕುರ್ದಿ ಭಾಷೆಯೇ ಅಧಿಕೃತ ಭಾಷೆಯಾಗಿರಬೇಕು ಎಂಬುದೇ ಆ ಆದೇಶಗಳು. ಮುಂದೆ 1932ರಲ್ಲಿ ಇರಾಕ್ ಈ ಜಾಗತಿಕ ಸಂಸ್ಥೆಯ ಸದಸ್ಯತ್ವಕ್ಕಾಗಿ ಅಭ್ಯರ್ಥನ ಪತ್ರವನ್ನು ಸಲ್ಲಿಸಿದಾಗ ಈ ಬಗ್ಗೆ ಸಂವಿಧಾನಾತ್ಮಕ ಆಶ್ವಾಸನೆಯನ್ನು ನೀಡಬೇಕೆಂದು ಕೇಳಬೇಕಾಯಿತು ಎಂಬುದನ್ನು ಗಮನಿಸಬಹುದಾಗಿದೆ. ಇಷ್ಟಾದರೂ ಅತೃಪ್ತಿ ಹೊಗೆಯಾಡುತ್ತಲೇ ಇತ್ತು. ಸರ್ಕಾರ ಈ ಆದೇಶಗಳನ್ನು ಅರೆಮನಸ್ಸಿನಿಂದ ಜಾರಿಗೆ ಕೊಡುತ್ತಿದೆ ಎಂಬ ಅಸಮಾಧಾನ ಇದ್ದೇ ಇತ್ತು. ಹೀಗಾಗಿ 1958ರ ಸೈನಿಕ ಕ್ರಾಂತಿಯ ಅನಂತರದಲ್ಲಿ ಪ್ರಕಟಪಡಿಸಿದ ತಾತ್ಕಾಲಿಕ ಸಂವಿಧಾನದಲ್ಲಿ ಕುರ್ದಿಗಳು ಮತ್ತು ಅರಬ್ಬರು ರಾಜ್ಯದ ಕಾರ್ಯನಿರ್ವಹಣೆಯಲ್ಲಿ ಸಹಭಾಗಿಗಳಾಗುತ್ತಾರೆಂದು ಘೋಷಿಸಿದುದನ್ನು ಕುರ್ದಿಗಳು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಆದರೆ ಅಧಿಕಾರ ವಿಕೇಂದ್ರೀಕರಣ, ಅಭಿವೃದ್ಧಿ ಯೋಜನೆಗಳು ಮತ್ತು ಇತರ ಸಮಾಜಸೇವಾ ಕಾರ್ಯಗಳಲ್ಲಿ ನ್ಯಾಯೋಚಿತವಾದ ಪಾಲು ತಮಗೆ ದೊರೆಯಲಿಲ್ಲವೆಂಬ ಹಾಗೂ ತಮ್ಮ ಭಾಷೆಗೆ ಸೂಕ್ತ ಸ್ಥಾನಮಾನ ದೊರೆಯಲಿಲ್ಲವೆಂಬ ಕಾರಣಗಳಿಗಾಗಿ 1961ರಲ್ಲಿ ರಾಷ್ಟ್ರೀಯ ಸ್ವರೂಪದ ಕ್ರಾಂತಿಯೇ ನಡೆಯಿತು.

1914ರವರೆಗೂ ಕುರ್ದಿಗಳು ಕ್ರೈಸ್ತ ಸಮುದಾಯಗಳೊಡನೆ ಸಾಕಷ್ಟು ಚೆನ್ನಾಗಿ ಬಾಳುತ್ತಿದ್ದರು. ಆದರೆ ಹೊರಗಣ ಪ್ರಚೋದನೆಗಳಿಂದಾಗಿ ನಡೆಯುತ್ತಿದ್ದ ವಿದ್ವೇಷಕಾರಿ ಘಟನೆಗಳಿಂದಾಗಿ ಈ ಸಂಬಂಧಗಳು ಆಗಿಂದಾಗ್ಗೆ ರಕ್ತಕಲುಷಿತವಾಗ ತೊಡಗಿದುವು. ಒಂದನೆಯ ಮಹಾಯುದ್ಧದ ತರುವಾಯ ಅನೇಕ ಕ್ರೈಸ್ತಕುಟುಂಬಗಳು ತುರ್ಕಿಸ್ತಾನದಿಂದ ಬಂದ ಹಲವರೂ ಇರಾಕಿನ ಅಮದಿಯಾ ಜಿಲ್ಲೆಗಳಲ್ಲಿ ನೆಲಸಿದ್ದರು. ಯಹೂದ್ಯ ನೇಕಾರರು, ಬಣ್ಣಗಾರರು ಮತ್ತು ಚರ್ಮಹದ ಮಾಡುವವರು ಕೆಲವು ನಗರಗಳಲ್ಲಿ ಮತ್ತು ಮಾರುಕಟ್ಟೆ ಸೌಲಭ್ಯವಿದ್ದ ಹಳ್ಳಿಗಳಲ್ಲಿ ಅಲ್ಪಸಂಖ್ಯೆಯಲ್ಲಿ ವಾಸವಾಗಿದ್ದರು. ಆದರೆ, ಎರಡನೆಯ ಮಹಾಯುದ್ಧದ ತರುವಾಯ ಅವರೆಲ್ಲ ಇಸ್ರೇಲಿಗೆ ಸಾಮೂಹಿಕವಾಗಿ ವಲಸೆಹೋದರು.

ತುರ್ಕಿ, ಇರಾನ್ ಮತ್ತು ಇರಾಕ್ ಸರ್ಕಾರಗಳು ಕುರ್ದಿಗಳೊಂದಿಗೆ ಸ್ನೇಹ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತ ಬಂದಿವೆ. ಶಾಲೆಗಳು, ಆಸ್ಪತ್ರೆಗಳು, ಆಧುನಿಕ ಶೌಚ ಸೌಲಭ್ಯಗಳು ಮುಂತಾದುವನ್ನು ಒದಗಿಸಿ ಆಧುನಿಕ ಸಮುದಾಯಗಳು ಕುರ್ದಿಸ್ತಾನದಲ್ಲಿ ನೆಲೆಯಾಗುವಂತೆ ಮಾಡುವುದರ ಮೂಲಕ, ಈ ಪ್ರದೇಶದಲ್ಲಿ ರೈಲು ಮತ್ತು ಹೆದ್ದಾರಿ ಸಂಪರ್ಕ ಮತ್ತು ಸೌಲಭ್ಯಗಳನ್ನು ಹೆಚ್ಚಿಸುವುದರ ಮೂಲಕ, ಹಾಗೂ ಬೆಳೆದ ಧಾನ್ಯ, ಚರ್ಮ, ಕಚ್ಚಾ ಉಣ್ಣೆ, ಜಾನುವಾರುಗಳು, ಕೈಯಿಂದ ನೇಯ್ದ ರತ್ನಗಂಬಳಿಗಳು ಮತ್ತು ಕಂಬಳಿಗಳು ಇವೇ ಮೊದಲಾದುವನ್ನು ಮಾರಾಟಮಾಡಲು ಅಗತ್ಯವಾದ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅವರನ್ನು ಒಂದು ಕಡೆ ನೆಲಸಲು ಪ್ರೋತ್ಸಾಹಿಸಲಾಗಿದೆ. ಇವುಗಳ ಜೊತೆಗೆ ಆಧುನಿಕ ಬೇಸಾಯ ಪದ್ಧತಿಗಳ–ಅದರಲ್ಲೂ ಚಳಿಗಾಲದಲ್ಲಿ ಜಾನುವಾರುಗಳಿಗೆ ಅಗತ್ಯವಾಗುವ ಉತ್ತಮವಾದ ಮೇವನ್ನು ಬೆಳೆಸುವ ಬಗ್ಗೆ–ಪರಿಚಯ ಮಾಡಿಕೊಡಲಾಗುತ್ತಿದೆ. ಈ ಎಲ್ಲ ಕಾರ್ಯಕ್ರಮಗಳ ಫಲವಾಗಿ ಕುರ್ದಿಗಳಲ್ಲಿ ವಲಸೆಯ ಪ್ತವೃತ್ತಿ ಕಡಿಮೆಯಾಗಿ ಸ್ಥಾಯೀನೆಲೆಯನ್ನು ಸ್ಥಾಪಿಸಿಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇರಾಕಿನಲ್ಲಿ 1918 ರಿಂದಲೂ ಕುರ್ದುಭಾಷೆಯನ್ನು ಹೆಚ್ಚು ಹೆಚ್ಚಾಗಿ ಬಳಸಲಾಗುತ್ತಿದೆ. ಖಾಸಗಿ ವ್ಯವಹಾರದಲ್ಲಂತೂ ಇದೇ ವ್ಯಾಪಕವಾಗಿ ಬಳಕೆಯಲ್ಲಿದೆ. ಇರಾಕಿನಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತವರ್ಗವೆಂದು ಕಾನೂನುಬದ್ಧವಾಗಿ ಕುರ್ದಿ ಜನಾಂಗವನ್ನು ಮಾನ್ಯ ಮಾಡಲಾಯಿತು. ಜೊತೆಗೆ ಕುರ್ದಿಪ್ರಾಬಲ್ಯದ ಜಿಲ್ಲೆಗಳನ್ನು ಗುರಿತಿಸಿ ಅಲ್ಲೆಲ್ಲ ಆಡಳಿತ, ಶಿಕ್ಷಣ ಮತ್ತು ನ್ಯಾಯಾಂಗದ ಕ್ಷೇತ್ರಗಳಲ್ಲೆಲ್ಲ ಕುರ್ದಿ ಭಾಷೆಯನ್ನು ಬಳಸಬೇಕೆಂದು ಆಜ್ಞೆ ಮಾಡಲಾಯಿತು. ಸೋವಿಯತ್ ಆರ್ಮೇನಿಯದಲ್ಲಿ ಕುರ್ದಿ ಅಧ್ಯಯನಗಳಿಗೆ ಹಾಗೂ ಇರಾನ್, ಇರಾಕ್, ಆರ್ಮೇನಿಯ ಮತ್ತು ಈಜಿಪ್ಟ್‌ಗಳ ಬಾನುಲಿ ನಿಲಯಗಳಿಂದ ಕುರ್ದಿ ಕಾರ್ಯಕ್ರಮಗಳ ಪ್ರಸಾರಕ್ಕೂ ಅವಕಾಶಗಳನ್ನು ಕಲ್ಪಿಸಲಾಗಿದೆ. (ಪಿ.ಜಿ.ಡಿ.)

**ಕುರ್ದಿಸ್ತಾನ್ :** ನೈಋತ್ಯ ಏಷ್ಯದಲ್ಲಿ ವಿಶಾಲವಾದ ಪ್ರಸ್ಥಭೂಮಿ ಮತ್ತು ಪರ್ವತಶ್ರೇಣಿಯಿಂದ ಕೂಡಿದ ಒಂದು ಪ್ರದೇಶ. ಕುರ್ದ್ ಜನರಿಂದಾಗಿ ಕುರ್ದಿಸ್ತಾನ ಎಂಬ ಹೆಸರು ಬಂದಿದೆ. ರಾಜಕೀಯವಾಗಿಯಾಗಲಿ ಭೌಗೋಳಿಕವಾಗಿಯಾಗಲಿ ಈ ಪ್ರದೇಶವನ್ನು ಒಂದು ಘಟಕವಾಗಿ ಪರಿಗಣಿಸಿಲ್ಲವಾದಕಾರಣ ಇದರ ಎಲ್ಲೆಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ. ತುರ್ಕಿಯ ಪೂರ್ವ ಭಾಗದ ಪ್ರದೇಶ, ಇರಾನಿನ ವಾಯುವ್ಯ

ಭಾಗ, ಇರಾಕ್ ಮತ್ತು ಸಿರಿಯದ ಈಶಾನ್ಯ ಭಾಗ, ಇದರಲ್ಲಿ ಸೇರಿವೆಯೆಂದು ಸ್ಥೂಲವಾಗಿ ಹೇಳಬಹುದು. ವಾಯವ್ಯ–ಆಗ್ನೇಯಾಭಿಮುಖವಾಗಿ 960 ಕಿಮೀ ಉದ್ದವಾಗಿರುವ ಇದರ ಅಗಲ 200 ಕಿಮೀ ಕುರ್ದ್ ಜನರೆಲ್ಲ ಈ ಭಾಗದಲ್ಲಿದ್ದಾರೆಂದು ಹೇಳಲಾಗದು. ಏಕೆಂದರೆ ಹಲವರು ಆರ್ಮೇನಿಯನ್ ಸೋವಿಯತ್ ಗಣರಾಜ್ಯದಲ್ಲೂ ವಾಸಿಸುತ್ತಿದ್ದಾರೆ. 1920ರಲ್ಲಿ ಇದನ್ನೊಂದು ರಾಜಕೀಯ ಪ್ರದೇಶವನ್ನಾಗಿ ಮಾಡುವ ಉದ್ದೇಶವಿತ್ತಾದರೂ ಆ ವಿಚಾರವನ್ನು ಅಲ್ಲಿಗೆ ಕೈಬಿಡಲಾಯಿತು.

ಈ ಪ್ರದೇಶ ಜಾಗ್ರೋಸ್ ಪರ್ವತಶ್ರೇಣಿಯಿಂದ ಕೂಡಿದೆ. ಇಲ್ಲಿ 3939ಮೀ ಎತ್ತರದ ಪರ್ವತಗಳಿವೆ. ಅಧಿಕ ಮಳೆಯಾಗುತ್ತದೆ. ಇಲ್ಲಿ ಬೇಸಗೆಯಲ್ಲಿ ಹೆಚ್ಚು ಸೆಕೆ, ಚಳಿಗಾಲದಲ್ಲಿ ಹೆಚ್ಚು ಚಳಿ. ವರ್ಷದ 4–5 ತಿಂಗಳುಗಳ ಕಾಲ ಹಿಮ ಬೀಳುತ್ತದೆ. ಕೆಲವು ಪ್ರದೇಶಗಳಲ್ಲಿ ಬೇಸಗೆಯಲ್ಲಿ ಪರ್ವತಗಳ ಮೇಲಿನ ಹಿಮ ಕರಗಿ ನೀರಾಗಿ ಹರಿಯುವುದರಿಂದ ಇಳಿಜಾರಿನಲ್ಲಿ ಅಧಿಕವಾಗಿ ಹುಲ್ಲು ಬೆಳೆಯುತ್ತದೆ. ಇದು ಪಶುಪಾಲನೆ ಮತ್ತು ಕುರಿಪೋಷಣೆಗೆ ಸಹಾಯಕ. ಇಳಿಜಾರು ಪ್ರದೇಶಗಳಲ್ಲಿ ಓಕ್, ಆಷ್, ಎಲ್ಮ್ ಮರಗಳು ಬೆಳೆಯುತ್ತವೆ.

ಬತ್ತ, ಜೋಳ, ಹತ್ತಿ, ಹೊಗೆಸೊಪ್ಪು, ದ್ರಾಕ್ಷಿ, ಮತ್ತು ಎಣ್ಣೆಬೀಜಗಳು ಇಲ್ಲಿಯ ಮುಖ್ಯ ಬೆಳೆ. ನೇಯ್ಗೆ ಮತ್ತು ಚರ್ಮ ಹದಮಾಡುವ ಗೃಹಕೈಗಾರಿಕೆಗಳಿವೆ. ಇಲ್ಲಿಯ ರತ್ನಕಂಬಳಿಗಳು ಪ್ರಸಿದ್ಧವಾದವು. ಬಹುತೇಕ ಸುನ್ನಿಪಂಗಡದ ಮುಸ್ಲಿಮರಾದ ಈ ಜನ ಹೆಚ್ಚಾಗಿ ಪರ್ವತಾರೋಹಿಗಳು, ಇಲ್ಲವೇ ಅಲೆಮಾರಿಗಳು. ಇವರು ತಮ್ಮ ಕುರಿ ಮತ್ತು ಮೇಕೆಗಳೊಂದಿಗೆ ಬೇಸಗೆಯಲ್ಲಿ ಪರ್ವತಗಳಿಗೂ ಚಳಿಗಾಲದಲ್ಲಿ ಕಣಿವೆಗಳಿಗೂ ಅಲೆಯುತ್ತಿರುತ್ತಾರೆ. ಇತ್ತೀಚೆಗೆ ಕೆಲವರು ನೀರಾವರಿ ಯೋಜನೆಗಳಿಂದಾಗಿ ಒಂದು ಕಡೆ ನೆಲೆಸಿ ವ್ಯವಸಾಯ ಮಾಡುತ್ತಿದ್ದಾರೆ. ಹಲವರು ಕೆಲಸಗಳಿಗಾಗಿ ನೆರೆರಾಜ್ಯಗಳನ್ನು ಸೇರಿದ್ದಾರೆ.

ಯುದ್ಧಪ್ರಿಯರಾದ ಈ ಜನ ಆಟೋಮನ್ನರ ಕಾಲದಿಂದಲೂ ಸ್ವಾತಂತ್ರ್ಯವನ್ನು ಬಯಸಿ ಹೋರಾಡುತ್ತಿದ್ದಾರೆ. ತಮ್ಮ ಪ್ರದೇಶ ಮೂರು ರಾಜ್ಯಗಳ ಆಧಿಪತ್ಯಕ್ಕೆ ಒಳಗಾಗಿರುವುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುವುದಲ್ಲದೆ ತಮ್ಮ ಇಚ್ಛೆಯನ್ನು ಆಗಾಗ್ಗೆ ನಡೆಯುವ ಅಂತರ್ಯುದ್ಧಗಳಲ್ಲಿ ಸ್ಪಷ್ಟಪಡಿಸುತ್ತ ಬಂದಿದ್ದಾರೆ. ಕುರ್ದ್ ಜನ ವಾಸಿಸುವ ಎಲ್ಲ ಪ್ರದೇಶಗಳನ್ನೂ ಒಳಗೊಂಡಂತೆ ಸರ್ವತಂತ್ರ ಸ್ವತಂತ್ರವಾದ ಕುರ್ದಿಸ್ತಾನವನ್ನು ಸ್ಥಾಪಿಸುವುದೇ ಈ ಅಂತರ್ಯುದ್ಧಗಳ ಮುಖ್ಯೋದ್ದೇಶವಾಗಿತ್ತು. *

**ಪುರಾತತ್ತ್ವ :** ಕುರ್ದಿಸ್ತಾನದಲ್ಲಿ ದೊರೆತಿರುವ ಅನೇಕ ಇತಿಹಾಸಪೂರ್ವ ನೆಲೆಗಳು ಮಾನವನ ನಾಗರಿಕತೆಯ ಬೆಳವಣಿಗೆಯ ಘಟ್ಟಗಳನ್ನು ನಿರ್ಧರಿಸಲು ಸಹಾಯಕವಾಗಿವೆ. ಸುಲೈಮಾನಿಯಾ ನಗರದ ಸಮೀಪದಲ್ಲಿರುವ ಹಜೆರ್‌ಮರ್ದ್ ಮತ್ತು ಜಾರ್ಸಿ ಖೆಮ್ ಖೆಮಲ್ ಬಯಲಿನಲ್ಲಿರುವ ಬಾರ್ದಬಲ್ಕ ಮತ್ತು ಪಾಲೆಗಾವ್ರ, ಜಾಬ್ ನದೀದಂಡೆಯಲ್ಲಿರುವ ಶಕಫ್ತ್ ಶನಿದಾರ್ ಅಂಥ ಮುಖ್ಯ ನೆಲೆಗಳು. ಇವುಗಳಲ್ಲಿ ಅತ್ಯಂತ ಪ್ರಾಚೀನವಾದ ಬಾರ್ದಬಲ್ಕದಲ್ಲಿ ಹಳೆಯ ಶಿಲಾಯುಗಕ್ಕೆ ಸೇರುವ ಸಚೋಲಿಯನ್–ಲೆವಾಲ್ವಾ ರೀತಿಯ ಕೈಗೊಡಲಿಗಳು ಮತ್ತು ಚಕ್ಕೆಯ ಆಯುಧಗಳು ದೊರೆಕಿವೆ. ಇವುಗಳ ಜೊತೆಗೆ ಖಡ್ಗಮೃಗ ಮತ್ತು ಆನೆಯ ಪಳೆಯುಳಿಕೆಗಳೂ ಸಿಕ್ಕಿವೆ. ಅವುಗಳ ಆಧಾರದ ಮೇಲೆ ಈ ಸಂಸ್ಕೃತಿ ಪ್ಲೀಸ್ಟೋಸೀನಿನ ಮೂರನೆಯ ಹಿಮಯುಗದ ಅಂತ್ಯ ಅಥವಾ ಮೂರನೆಯ ಉಷ್ಣಯುಗದಲ್ಲಿ ಪ್ರಚಲಿತವಾಗಿದ್ದಿರಬೇಕೆಂದು ಊಹಿಸಲಾಗಿದೆ. ಹಜೆರ್ ಮರ್ದ್ ಮತ್ತು ಶನಿದಾರ್–ಡಿಗಳಲ್ಲಿ ವುರ್ಮ್ (ನಾಲ್ಕನೆಯ) ಹಿಮಯುಗದ ಆದಿಭಾಗಕ್ಕೆ ಸೇರುವ ಲೆವಾಲ್–ಮೌಸ್ಟೀರಿಯನ್ ರೀತಿಯ ಸಂಸ್ಕೃತಿಗಳಿದ್ದುವು; ಅನಂತರ ಅದೇ ಹಿಮಯುಗದ ಉತ್ತರಭಾಗದಲ್ಲಿ ಪ್ರಚಲಿತವಾಗಿದ್ದ ಕೂರಲಗು ಫಲಕಗಳ ಉಪಕರಣಗಳು ಬಳಕೆಯಲ್ಲಿದ್ದ ಸಂಸ್ಕೃತಿಗಳು ಹಜೆರ್ ಮರ್ದ್, ಶನಿದಾರ್–ಸಿ, ಜಾರ್ಸಿ ಮತ್ತು ಪಾಲೆಗಾವ್ರಗಳಲ್ಲಿ ದೊರಕಿವೆ. ಪ್ಲೀಸ್ಟೋಸೀನ್ ಯುಗದ ತರುವಾಯ ಇತ್ತೀಚಿನ ಉಷ್ಣಯುಗದ ಆದಿಭಾಗದಲ್ಲಿದ್ದ ಸೂಕ್ಷ್ಮಶಿಲಾಯುಗದ ಸಂಸ್ಕೃತಿಗಳಿಂದ ಹಿಡಿದು ಮೆಸಪೊಟೇಮಿಯದ ಅತ್ಯಂತ ಪ್ರಾಚೀನ ಲೋಹಯುಗದ ಸಾಂಸ್ಕೃತಿಕ ಘಟ್ಟದವರೆಗಿನ ಬೆಳವಣಿಗೆ ಜಾರ್ಸಿ ಮತ್ತು ಶನಿದಾರ್‌ಗಳಲ್ಲಿ ಕಂಡುಬರುತ್ತದೆ. ಕುರ್ದಿಸ್ತಾನ ಬಹುಮಟ್ಟಿಗೆ ಪರ್ವತ ಪ್ರದೇಶ ಮತ್ತು ಪ್ರಸ್ಥಭೂಮಿ ಪ್ರದೇಶವಾದ್ದರಿಂದ ಈ ಸಂಸ್ಕೃತಿಗಳಿಗೆ ಆವಶ್ಯಕವಾದ ನೈಸರ್ಗಿಕ ಪರಿಸರ ಇಲ್ಲಿತ್ತು. ಆದರೆ ಉಚ್ಚನಾಗರಿಕತೆ ಬೆಳೆದುದು ಬೇರೆ ನೈಸರ್ಗಿಕ ಪರಿಸರದಲ್ಲಿ, ಈ ಕಾಲದ ಸಾಂಸ್ಕೃತಿಕ ಕೇಂದ್ರಗಳು ನದೀ ಬಯಲುಗಳಲ್ಲಿರುವುದರಿಂದ, ಮುಂದಿನ ಇತಿಹಾಸದಲ್ಲಿ ಕುರ್ದಿಸ್ತಾನದ ಪಾತ್ರ ಕ್ಷೀಣವಾಯಿತು. ಈ ಕಾಲದಲ್ಲಿ ಕುರ್ದಿಸ್ತಾನ ಸಾಂಸ್ಕೃತಿಕವಾಗಿ ಪಕ್ಕದ ನದೀ ಬಯಲುಗಳಿಗಿಂತ ಹಿಂದುಳಿದಿದ್ದು ಅಲ್ಲಿಯ ನಾಗರಿಕತೆಯ ಅಂಶಗಳನ್ನು ಆಗಾಗ್ಗೆ ಸ್ವೀಕರಿಸುತ್ತಿತ್ತು. ಅಲ್ಲದೆ ಮುಂದಿನ ಇತಿಹಾಸದುದ್ದಕ್ಕೂ ಕುರ್ದಿಸ್ತಾನದ ಭಾಗಗಳು ಸುತ್ತ ಮೆರೆಯುತ್ತಿದ್ದ ಅನೇಕ ರಾಜಕೀಯ ಘಟಕಗಳ ಭಾಗವಾಗಿತ್ತು. ಅಕ್ಕಡ್, ಅಸ್ಸೀರಿಯ, ಸಿಟ್ಟೈಟ್, ಚಾಲ್ಡಿಯ, ಪರ್ಷಿಯ, ರೋಂ, ಸಸ್ಸಾನಿಯ ಮತ್ತು ಅರಬ್ ಚಕ್ರಾಧಿಪತ್ಯಗಳ ಭಾಗವಾಗಿತ್ತು. (ಎಸ್.ಎನ್.)

**ಕುರ್ನಾನ್, ಆಂಡ್ರೇ ಫ್ರೆಡರಿಕ್ :** 1895–. ಅಮೆರಿಕ ವೈದ್ಯ. ಜನನ 1895 ಸೆಪ್ಟೆಂಬರ್ 24ರಂದು. ಪ್ಯಾರಿಸಿನಲ್ಲಿ ಜನಿಸಿದ. ವಿದ್ಯಾಭ್ಯಾಸವನ್ನು ಅಲ್ಲಿನ ವಿಶ್ವವಿದ್ಯಾಲಯದಲ್ಲೇ ಮುಗಿಸಿ ವೈದ್ಯಪದವಿಯನ್ನು ಪಡೆದ (1930). ಹೃದಯರೋಗಗಳನ್ನು ಕುರಿತು ಇವನಿಗೆ ಅಧಿಕ ಕುತೂಹಲ. ಅಮೆರಿಕ ಸಂಯುಕ್ತಸಂಸ್ಥಾನಗಳ ಸುಪ್ರಸಿದ್ಧ ವೈದ್ಯ ಡಿಕಿನ್ಸನ್ ಡಬ್ಲ್ಯು, ರಿಚರ್ಡ್ಸ್ ಎಂಬಾತನೊಡನೆ 35 ವರ್ಷಗಳಿಗೂ ಮಿಕ್ಕಿ ಹೃದಯರೋಗಗಳನ್ನು ಕುರಿತು ಅಧ್ಯಯನ ಮತ್ತು ವ್ಯವಸಾಯ ನಡೆಸಿದ. ಹೃದಯ ಮತ್ತು ಶ್ವಾಸಕೋಶಗಳು ಹೇಗೆ ಕೆಲಸಮಾಡುತ್ತವೆ ಎಂಬುದನ್ನು ಕರಾರುವಾಕ್ಕಾಗಿ ಕಂಡುಹಿಡಿದುಕೊಳ್ಳಲು ಹೊಸಮಾರ್ಗಗಳನ್ನು ಕಲ್ಪಿಸಿಕೊಳ್ಳುವ ಆವಶ್ಯಕತೆ ಆಗ ಬಹಳವಾಗಿತ್ತು. ಆ ಹೊತ್ತಿಗಾಗಲೇ ವರ್ನರ್ ಫ್ರಸ್‌ಮನ್ ಎಂಬಾತ ಸ್ವಂತ ದೇಹದ ಮೇಲೆ ಒಂದು ಯಶಸ್ವೀ ಪ್ರಯೋಗ ನಡೆಸಿದ್ದ (1929); ರಬ್ಬರ್ ಕೊಳವೆಯೊಂದನ್ನು ತನ್ನ ತೋಳಿನ ಅಭಿಧಮನಿಯ ಮೂಲಕ ಹೃದಯದ ಬಲಹೃತ್ಕರ್ಣಕ್ಕೆ ಸಾಗಿಸಿ ಅಲ್ಲಿನ ರಕ್ತದ ಒತ್ತಡ ಮತ್ತು ಸಂಚಾರವನ್ನು ಕಂಡುಹಿಡಿಯುವುದೇ ಈ ಪ್ರಯೋಗ. ಇದನ್ನು ಕುರ್ನಾನ್ ಇನ್ನೂ ಉತ್ತಮಪಡಿಸಿ ಹೃದಯಕ್ಕೆ ಕೊಳವೆಯನ್ನು ಸಾಗಿಸುವ ವಿಧಾನವನ್ನು (ಕಾರ್ಡಿಯಕ್ ಕಥೀಟರೈಸೇಷನ್) ಪರಿಷ್ಕರಿಸಿ ಹೃದಯ ರೋಗ ಬಂದಾಗ ಹೃದಯ ಯಾವರೀತಿಯಲ್ಲಿ ಕೆಟ್ಟಿದೆ ಎಂಬುದನ್ನು ಕಂಡುಹಿಡಿಯಲು ಉಪಯೋಗವಾಗುವಂತೆ ಮಾಡಿದ. ಈ ರೀತಿ ಕೊಳವೆಯನ್ನು ಹೃದಯದೊಳಕ್ಕೆ ಸಾಗಿಸುವ ವಿಧಾನಕ್ಕೆ ಕುರ್ನಾನನ ಪ್ರಯೋಗಕ್ರಮವೆಂದು ಈಗಲೂ ಬಹಳ ಪ್ರಸಿದ್ಧವಾಗಿದೆ. ಹೃದಯಕ್ಕೆ ಸಂಬಂಧಿಸಿದ ಹೊಸ ಅಧ್ಯಾಯದ ಪ್ರವರ್ತನಕಾರರಲ್ಲಿ ಕುರ್ನಾನ್ ಒಬ್ಬ.

ವೈದ್ಯ ಮತ್ತು ದೇಹಶಾಸ್ತ್ರ ವಿಭಾಗಗಳಿಗೆ ಮೀಸಲಾಗಿಟ್ಟಿದ್ದ ನೊಬೆಲ್ ಪ್ರಶಸ್ತಿಯನ್ನು ರಿಚರ್ಡ್ಸ್ ಮತ್ತು ಫಾರ್ಸ್‌ಮನ್‌ರೊಡನೆ ಕುರ್ನಾನ್ 1956ರಲ್ಲಿ ಪಡೆದ. 1934ರಲ್ಲಿ ಇವನು ಕೊಲಂಬಿಯಾ ವಿಶ್ವವಿದ್ಯಾಲಯದ ವೈದ್ಯರುಗಳ ಸಭೆಗೆ ಸದಸ್ಯನಾಗಿ ಸೇರಿಸಲ್ಪಟ್ಟ. 1941ರಲ್ಲಿ ಸಂಯುಕ್ತ ಸಂಸ್ಥಾನದ ರಾಷ್ಟ್ರತ್ವವನ್ನು ಪಡೆದು ಅಲ್ಲಿಯೇ ಶಾಶ್ವತವಾಗಿ ನೆಲೆಸಿದ್ದ. (ಎಚ್.ಆರ್.ಡಿ.ಎಚ್.)

**ಕುಲಕರ್ಣಿ, ಎನ್.ಕೆ.:** 1913–2005. ಎನ್ಕೆ ಎಂಬ ಸಂಕ್ಷಿಪ್ತ ನಾಮದಿಂದ ಹೆಸರಾದ ಪರ್ತಕರ್ತರು, ಲಲಿತಪ್ರಬಂಧಕಾರರು. ನಾರಾಯಣ ಕೃಷ್ಣರಾವ್ ಕುಲಕರ್ಣಿ ಇವರ ಪೂರ್ಣ ಹೆಸರು. 1913 ಆಗಸ್ಟ್ 29ರಂದು ಜನಿಸಿದರು. ತಂದೆ ಕೃಷ್ಣರಾವ್, ತಾಯಿ ಸೋನುಬಾಯಿ. ಇವರು ಎಂ.ಎ., ಬಿ.ಟಿ. ಪದವೀಧರರು. ಇವರು ಆರಂಭದಲ್ಲಿ ಕೆ.ಇ. ಬೋರ್ಡ್‌ನ ಅಡಿಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದರು (1940–43). ಅನಂತರ ಬಾನುಲಿ ಪ್ರಸಾರ ಕಾರ್ಯನಿರ್ವಾಹಕ ರಾಗಿದ್ದರು. ಅಂದಿನ ಮುಂಬಯಿ ಸರ್ಕಾರದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಸಂಶೋಧನ ಸಹಾಯಕರಾಗಿಯೂ (1943–45) ಆ ಸರ್ಕಾರದ ಲೋಕರಾಜ್ಯ ಎಂಬ ಪತ್ರಿಕೆಯ ಉಪಸಂಪಾದಕರಾಗಿಯೂ (1946) ಮುಂಬಯಿಯಲ್ಲಿ ಕೆಲಸ ಮಾಡಿದರು. 1946ರಲ್ಲಿ ಆಕಾಶವಾಣಿಯನ್ನು ಸೇರಿ ಪ್ರಾರಂಭದಲ್ಲಿ ಸಿಬ್ಬಂದಿ ಕಲಾವಿದರಾಗಿ, ಪ್ರಸಾರ ಸಹಾಯಕರಾಗಿ, 1965ರಲ್ಲಿ ಪದೋನ್ನತಿ ಪಡೆದು ಮುಂಬಯಿ, ಧಾರವಾಡ, ಬೆಂಗಳೂರು ಕೇಂದ್ರಗಳಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ಕಾರ್ಯನಿರ್ವಹಿಸಿದರು. 1971 ಆಗಸ್ಟ್ 27ರಂದು ನಿವೃತ್ತರಾದರು. 1933 ಫೆಬ್ರುವರಿಯಲ್ಲಿ ಧಾರವಾಡದ ಬುರ್ಲಿ ಮನೆತನದ ಇಂದಿರಾ ಅವರೊಂದಿಗೆ ಇವರ ಮದುವೆಯಾಯಿತು. ಇಂದಿರಾ ನಿಧನರಾದ ಮೇಲೆ 1946ರಲ್ಲಿ (ಸೆಪ್ಟೆಂಬರ್) ಕುಂದಗೋಳದ ಹುದ್ದಾರ ಮನೆತನದ ನಾಗವೇಣಿಯರೊಂದಿಗೆ ದ್ವಿತೀಯ ವಿವಾಹವಾಯಿತು.

ಮುಂಬಯಿ ಆಕಾಶವಾಣಿಯಲ್ಲಿದ್ದಾಗಿನಿಂದಲೂ ಭಾಷಣ, ಕನ್ನಡ ನಾಟಕ, ಕನ್ನಡ ಗೀತೆಗಳ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಾವೇ ಕನ್ನಡ ಗೀತರಚನೆಮಾಡಿ, ಕಲಾವಿದರನ್ನು ಸಂಘಟಿಸಿ ಕಾರ್ಯಕ್ರಮ ರೂಪಿಸತೊಡಗಿದರು. ಗೃಹಗೋಷ್ಠಿ, ಚಕ್ರಗೋಷ್ಠಿ, ಬೆಳಕಿನ ಹೆಜ್ಜೆ (ಸಾಪ್ತಾಹಿಕ ರೂಪಕ), ಕರ್ನಾಟಕ ರಂಗಗೀತವೈಭವ ಮೊದಲಾದ ಸ್ಥಿರಶೀರ್ಷಿಕೆಗಳ ಅಡಿಯಲ್ಲಿ ವೈವಿಧ್ಯಮಯ ಕಾರ್ಯಕ್ರಮ ನೀಡಲು ಪ್ರಯತ್ನಿಸಿದರು. ಆ ಕಾಲದಲ್ಲಿ ಇವರು ಅನೇಕ ನಾಟಕಗಳನ್ನೂ ಭಾಷಣಗಳನ್ನೂ ಬರೆದರು. ಅವು ಜನಪ್ರಿಯವಾದವು.

ಇವರ ಮೇಲೆ ಪ್ರಭಾವ ಬೀರಿದವರೆಂದರೆ ಕವಿ ದ.ರಾ.ಬೇಂದ್ರೆ, ವಿದ್ಯಾಗುರು ಶ್ರೀರಂಗ, ರಂ.ಶ್ರೀ. ಮುಗಳಿ, ವಿ.ಕೃ.ಗೋಕಾಕ. ಇಂಥವರ ಪ್ರಭಾವದಿಂದಾಗಿ ಇವರು ಲೇಖಕರಾಗಿ ವಿಕಾಸಗೊಂಡರು. ವಿವಿಧ ಪ್ರಕಾರಗಳಲ್ಲಿ ಒಟ್ಟು 70 ಕೃತಿಗಳನ್ನು ಇವರು ರಚಿಸಿದ್ದಾರೆ. ಸಾವಿನ ಉಡಿಯಲ್ಲಿ (1944), ಎರಡನೆಯ ಸಂಬಂಧ (1951), ವೈನಿ (1957), ಕಲೋಪಜೀವಿ (1957), ಗೌರಿಶಂಕರ (1958), ಮೂರು ತಲೆಮಾರು (1973), ಭಾವಸಂಗಮ (1978), ವಿಧುರ ವೈರಾಗ್ಯ (1990), ಧಾರವಾಡದ ದತ್ತು ಮಾಸ್ತರ್ (1999), ಅಶ್ವತ್ಥಮರ (2002)– ಇವು ಕಾದಂಬರಿಗಳು. ಕುಮಾರವ್ಯಾಸನನ್ನು ಕುರಿತು ಇವರು ಕುಮಾರವ್ಯಾಸಭಾರತ ಎಂಬ ಕೃತಿಯನ್ನು ಬರೆದಿದ್ದಾರೆ. ನೂರು ಏಕಾಂಕ ನಾಟಕಗಳನ್ನೂ ನೂರಾರು ಲಲಿತ ಪ್ರಬಂಧಗಳನ್ನೂ ರಚಿಸಿದ್ದಾರೆ. ಇವರ

ಕೆಲವು ಹರಟೆಗಳು ಮುಂಗಾಲ್ ಪುಟಿಗೆ, ಎನ್ಕೆ ಲಲಿತ ಪ್ರಬಂಧಗಳು, ಎನ್ಕೇನ ಪ್ರಕಾರೇಣ, ಮೊಡಕಬಜಾರ್ ಎಂಬಸಂಗ್ರಹಗಳಲ್ಲಿ ಸಂಕಲಿತವಾಗಿವೆ. 'ಹಳೆಯ ಹವಳ ಹೊಸ ಮುತ್ತು' ಪ್ರಬಂಧಗಳ ಸಂಗ್ರಹ. ಕುಮಾರವ್ಯಾಸ ಸಾಹಿತ್ಯ, ವಿ.ಕೃ.ಗೋಕಾಕ ಮತ್ತು ಶ್ರೀರಂಗರಸಾಹಿತ್ಯದ ಆಳವಾದಅಧ್ಯಯನಮಾಡಿರುವ ಇವರು ಕುಮಾರವ್ಯಾಸ ಭಾರತದ ಗದ್ಯಾನುವಾದವನ್ನೂ ವಿನಾಯಕ ಮಹಾದರ್ಶನ, ಆದ್ಯ ರಂಗಾಚಾರ್ಯ ಎಂಬ ಗ್ರಂಥಗಳನ್ನೂ ಬರೆದಿದ್ದಾರೆ.

ಇವರು ಸಲ್ಲಿಸಿದ ಸಾಹಿತ್ಯ ಸೇವೆಗಾಗಿ ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1981), ಗೊರೂರು ಪ್ರಶಸ್ತಿ (1997), ಗಳಗನಾಥ ಪ್ರಶಸ್ತಿ (1998) ದೊರಕಿವೆ. ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಪುರಸ್ಕರಿಸಿತು. ಇವರು 2005 ಏಪ್ರಿಲ್ 23ರಂದು ಧಾರವಾಡದಲ್ಲಿ ನಿಧನಹೊಂದಿದರು. (ಎಸ್.ಎಂ.ಕೆ.)

**ಕುಲಕರ್ಣಿ, ದ ಬಾ :** 1916–63. ಕತೆಗಾರರಾಗಿ, ಪ್ರಬಂಧಕಾರರಾಗಿ, ಮನೋಹರ ಗ್ರಂಥ ಭಂಡಾರದ ಒಡೆಯರಾಗಿ ಸಾಹಿತ್ಯ ಪ್ರಪಂಚಕ್ಕೆ ಚಿರಪರಿಚಿತರಾದ ಇವರ ಸಂಕ್ಷಿಪ್ತನಾಮ ದ.ಬಾ.ಕು. ಪೂರ್ಣ ಹೆಸರು ದತ್ತಾತ್ರೇಯ ಬಾಲಕೃಷ್ಣ ಕುಲಕರ್ಣಿ.



ಹಿರಿಯ ಮಿತ್ರರಿಗೆ ದತ್ತನಾಗಿ, ಓರಗೆಯವರಿಗೆ ದ.ಬಾ.ಕು. ಆಗಿ, ಮನೆಯವರಿಗೆಲ್ಲ ದತ್ತಣ್ಣನಾಗಿ 47 ವರ್ಷಗಳ ಹರೆಯದಲ್ಲಿಯೆ ಮುಪ್ಪಿನ ತಂದೆತಾಯಿಗಳನ್ನೂ ಹೆಂಡತಿ ಮಕ್ಕಳನ್ನೂ ಬಾಳಮುನ್ನೀರಿನಲ್ಲಿ ನೂಕಿ ಕಣ್ಮರೆಯಾದರು. ಜನನ 23–3–1916ರಲ್ಲಿ, ಮರಣ 11–8–1963ರಲ್ಲಿ.

ಕೊಡಗಿನ ಪ್ರಮುಖ ಕತೆಗಾತಿ ಗೌರಮ್ಮನವರ ದುರಂತವನ್ನು ನೆನೆದು ದ.ಬಾ.ಕು. ತಮ್ಮ ಅಳಲನ್ನು ತೋಡಿಕೊಂಡುದೆ ಹೃದ್ಯವಾದ ವ್ಯಕ್ತಿಚಿತ್ರವಾಗಿ ಇವರನ್ನು ಉತ್ತಮ ಸಾಹಿತಿಯ ಮಟ್ಟಕ್ಕೆ ಏರಿಸಿತು. ಅಂದಿನಿಂದ ದ.ಬಾ.ಕು. ವ್ಯಕ್ತಿಚಿತ್ರಣದಲ್ಲಿ ಎತ್ತಿದ ಕೈಯೆನಿಸಿ ಹಕ್ಕಿಯ ನೋಟವೊಂದನ್ನು ಕನ್ನಡಕ್ಕೆ ನೀಡಿದರು. ಮುಂದೆ ಸೀಮಾಪುರುಷರು ಇದೇ ನಿಟ್ಟಿನಲ್ಲಿ ಇನ್ನೊಂದು ಉಡುಗೊರೆಯಾಗಿ ಬಂತು. ಸ್ಮೃತಿ ಚಿತ್ರಗಳು ಎಂಬ ಇನ್ನೊಂದು ವ್ಯಕ್ತಿ ಚಿತ್ರ ಸಂಗ್ರಹ ಸಿದ್ಧವಾಯಿತು–ಮೂಲ ಮರಾಠಿಯ ಅನುವಾದವಾಗಿ. ಇದು ಇನ್ನೂ ಅಪ್ರಕಟಿತ.

ಕನ್ನಡ ಪ್ರಾಥಮಿಕ ಶಿಕ್ಷಣದ ಮುಲ್ಕೀ ಪರೀಕ್ಷೆಯನ್ನು ಪಾಸುಮಾಡಿ ದ.ಬಾ.ಕುಲಕುರ್ಣಿಯವರು ಧಾರವಾಡಕ್ಕೆ ತಮ್ಮ ಸೋದರ ಮಾವನಾದ ಗೆಳೆಯರ ಗುಂಪಿನ ಖ್ಯಾತ ಸಾಹಿತಿ ಗೋವಿಂದರಾವ್ ಚುಳಕಿಯವರ ಬಳಿ ಬಾಲಾಗಸಿಯಾಗಿ ಬಂದು ನಿಂತರು. ದ.ಬಾ. ಅವರ ಅಣ್ಣ (ದೊಡ್ಡಮ್ಮನ ಮಗ) ಪ್ರಹ್ಲಾದನೂ ಸೋದರಮಾವನ ಸೆರಗಿಗೇ ಅಂಟಿಕೊಂಡ. ಉಭಯತ್ರರಿಗೂ ಉದ್ಯೋಗದ ದಾರಿ ತೋರಬೇಕೆಂದು ಚುಳಕಿಯವರು (ಚಾಳುಕ್ಯರು) ಅವರಿಗಾಗಿ ಮನೋಹರ ಗ್ರಂಥಭಂಡಾರ ತೆರೆದರು. ಗೆಳೆಯರ ಗುಂಪಿನ ತರುವಾಯ ಎರಡು ಸಾಹಿತ್ಯ ಸಂಸ್ಥೆಗಳು ಧಾರವಾಡದಲ್ಲಿ ಸ್ಥಾಪಿತವಾದುವು–ಒಂದು ಮನೋಹರ ಗ್ರಂಥಮಾಲಾ ಎಂಬ ಪ್ರಕಾಶನ ಸಂಸ್ಥೆ; ಇನ್ನೊಂದು ಮನೋಹರಗ್ರಂಥ ಭಂಡಾರ ಎಂಬ ಪುಸ್ತಕ ವ್ಯಾಪಾರಸಂಸ್ಥೆ. ಪ್ರಹ್ಲಾದ ಪುಸ್ತಕದ ಅಂಗಡಿಯಲ್ಲಿ ಕೂತು ವ್ಯಾಪಾರ ಮಾಡಿದರೆ ದ.ಬಾ. ಅದರ ಜಂಗಮ ಅಂಗವಾಗಿ ಹೆಗಲ ಮೇಲೆ ಸರಸ್ವತಿಯನ್ನು ಹೊತ್ತುಕೊಂಡು ಮೈಸೂರು, ಕೊಡಗು, ಹೈದರಾಬಾದು, ಮುಂಬಯಿ, ಮದ್ರಾಸುಗಳನ್ನೆಲ್ಲ ಸುತ್ತಿದರು. ಹೈಸ್ಕೂಲು, ಕಾಲೇಜು, ವಿಶ್ವವಿದ್ಯಾನಿಲಯಗಳಿಗೆಲ್ಲ ಅಲೆದದ್ದೆ ಅಲೆದದ್ದು. ಪ್ರವಾಸದ ವೆಚ್ಚ, ಊಟದ ವೆಚ್ಚ, ಪುಸ್ತಕದ ಮೂಲವೆಚ್ಚ ಕಳೆದು ಉಳಿಯುತ್ತಿದ್ದುದು ಅತ್ಯಲ್ಪ. ಇಂಥ ಬಡತನದಲ್ಲಿ ಉದರನಿರ್ವಾಹ ನಡೆಯುತ್ತಿತ್ತು. ಪುಸ್ತಕಗಳ ನಗದು ವ್ಯಾಪಾರವಾಗದಿದ್ದರೆ ಇತರ ಪ್ರಕಾಶಕರೊಂದಿಗೆ ಪುಸ್ತಕಗಳನ್ನು ವಿನಿಮಯ ಮಾಡಿಕೊಂಡು ವಿನಿಮಯದ ಸಾಹಿತ್ಯವನ್ನು ಮತ್ತೆ ಧಾರವಾಡದ ಅಂಗಡಿಯಲ್ಲಿಟ್ಟು ವ್ಯಾಪಾರ ಮಾಡುತ್ತ ಭಂಡಾರ ವೈವಿಧ್ಯಪೂರ್ಣವಾಗಿ ವಿಸ್ತಾರಗೊಂಡಿತು. ಯಾವುದೆ ಸಾಹಿತ್ಯ ಸಮ್ಮೇಳನದಲ್ಲಿ ಮ. ಗ್ರ. ಭಂಡಾರದ ಒಂದು ಅಂಗಡಿ ಇರುತ್ತಿತ್ತು. ಇದರಿಂದ ದ.ಬಾ.ಕು. ಸಾಹಿತ್ಯ ವ್ಯಾಪಾರದೊಡನೆ ಸ್ನೇಹ ಸಂಪಾದನೆಯನ್ನೂ ಮಾಡಿದರು. ತಮ್ಮ ಆಹ್ಲಾದಕ ವರ್ತನೆಯಿಂದ ಬೇಂದ್ರೆ, ಗೋಕಾಕ, ಕಾರಂತ, ಮಾಸ್ತಿ–ಅವರಂಥ ಹಿರಿಯ ಸಾಹಿತಿಗಳ ಪ್ರೀತಿಗೆ ಪಾತ್ರರಾದರು. ಸಾಹಿತಿಗಳ ಬಳಗವನ್ನೆ ಕಟ್ಟಿದರು. ಪುಸ್ತಕ ವ್ಯಾಪಾರಿಯಷ್ಟೆ ಆಗಿದ್ದರೆ ದ.ಬಾ.ಕು. ಅವರ ಹೆಸರು ಈ ಪರಿ ಹಸುರಾಗಿ ಉಳಿಯುತ್ತಿರಲಿಲ್ಲ. ಪುಸ್ತಕ ವ್ಯಾಪಾರದಿಂದ ಜೀವನವನ್ನು ಪ್ರಾರಂಭಿಸಿದ ಅನಂತರ ಈತ ಪ್ರಕಾಶಕರೂ ಆದರು. ಲೇಖಕರೂ ಆದರು. ಲಲಿತ ಸಾಹಿತ್ಯಮಾಲೆ ಎಂಬ ಪ್ರಕಾಶನ ಸಂಸ್ಥೆಯೂ ಪ್ರಾರಂಭವಾಯಿತು.

ಪುಸ್ತಕ ವ್ಯಾಪಾರ ಮಾಡುತ್ತಿದ್ದಂತೆಯೆ ಲೇಖಕ ದ.ಬಾ.ಕು. ಮಾನವ ಸ್ವಭಾವವನ್ನೂ ಅರಿತು ಅಳೆಯುತ್ತಿದ್ದರು. ಅವರ ಭಂಡಾರ ಲೇಖಕರ ಕ್ಲಬ್ಬೂ ಆಗುತ್ತಿತ್ತು. ಪುಸ್ತಕ ವ್ಯಾಪಾರಿಯ ಬಳಿ ಬರುವ ಸಾಹಿತ್ಯ ಗಿರಾಕಿಗಳ ಅಭಿರುಚಿಗಳು ಎಷ್ಟು ವಿಧ, ಎಷ್ಟೆಷ್ಟು ಹದವಾಗಿರುತ್ತವೆಂಬುದನ್ನು ಒಂದು ಕಥನದಲ್ಲಿ ಇವರು ಚಿತ್ರಿಸಿದ್ದಾರೆ. ಇವರ ಹಾಸುಹೊಕ್ಕು ಎಂಬ ಪ್ರಕಟಣೆ ಬಾಳಿನ ನೂಲು, ರೇಶಿಮೆ, ಜರಿ ಎಲ್ಲವನ್ನೂ ಬಳಸಿಕೊಂಡು ಕನ್ನಡತಾಯಿಗೆ ನೀಡಿರುವ ನಯನವಾದ ಉಡುಗೊರೆಯಾಗಿದೆ. ಹಕ್ಕಿಯ ನೋಟ ಸಂಗ್ರಹ ಕನ್ನಡನಾಡಿನ ಮಾದರಿಯ ಸಾಹಿತಿ, ಕಲಾವಿದ ವ್ಯಕ್ತಿಗಳ ಬಗ್ಗೆ ಇವರು ರಚಿಸಿದ ಉತ್ತಮ ಜೀವನ ಚಿತ್ರಣವಾಗಿದೆ.

ದ. ಬಾ. ಕು. ಅವರು ಕಲೆಗಾರಿಕೆಯಲ್ಲಿ ಹೆಚ್ಚು ಕೃಷಿ ಮಾಡಿದರು. ಕೊಡಗಿನ ಗೌರಮ್ಮ, ಧಾರವಾಡದ ಗೀತಾ ಕುಲಕರ್ಣಿ – ಇವರು ಕತೆಗಾರ್ತಿಯರಾಗಿ ಹೆಸರು ಗಳಿಸಿದುದು ದ.ಬಾ. ಅವರ ಪ್ರಕಾಶನ ಸ್ಫೂರ್ತಿಯಿಂದಲೆ. ಸ್ವತಃ ಕತೆಗಾರರಾಗಿ ದ.ಬಾ.ಕು. ಅವರು ಹಾಸುಹೊಕ್ಕು, ಕಪ್ಪು ಹುಡಿಗೆ, ನಾಳಿನ ಕನಸು ಎಂಬ ಮೂರು ಸಂಗ್ರಹಗಳಲ್ಲಿ ಅನೇಕ ಅಪೂರ್ವ ಮಾದರಿಯ ಕತೆಗಳನ್ನು ಪ್ರಕಟಿಸಿದ್ದಾರೆ. ಪರಿಹಾರ ಎಂಬ ಒಂದು ಕಾದಂಬರಿಯೂ ಪ್ರಕಟವಾಗಿದೆ. ಗೋವಾ ಎಂಬ ಕಾದಂಬರಿಯೊಂದನ್ನು ಅವರು ಬರೆಯಲು ಆಲೋಚಿಸಿದ್ದಂತೆ ತೋರುತ್ತದೆ. ಹೃದಯಾಘಾತದಿಂದ ಸಾಯುವ ಮುನ್ನ ಅದರ ಒಂದು ಪ್ಯಾರಾವನ್ನವರು ಬರೆದಂತೆ ತಿಳಿದುಬರುತ್ತದೆ.

ದ.ಬಾ.ಕು. ಅವರು ಕನ್ನಡ ಸಾಹಿತ್ಯದಲ್ಲಿ ಕತೆಗಾರರಾಗಿ, ವ್ಯಕ್ತಿಚಿತ್ರಕಾರರಾಗಿ ತಮ್ಮದೇ ಒಂದು ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಸಮಕಾಲೀನ ಸಾಮಾಜಿಕ ಪರಿಸ್ಥಿತಿ, ಇತರ ಸ್ಥಿತ್ಯಂತರಗಳು, ಆಧುನಿಕ ಜೀವನಕ್ರಮ, ಅನಿವಾರ್ಯವಾಗಿ ಸಡಿಲಗೊಂಡಿರುವ ಸಂಪ್ರದಾಯದ ಕಟ್ಟುಗಳು, ಬದಲಿಸುವ ನೀತಿಮೌಲ್ಯಗಳು ಇವೆಲ್ಲಾ ನಾಳಿನ ಕನಸು ಎಂಬ ಕಥಾಸಂಗ್ರಹದ ವೈಶಿಷ್ಟ್ಯಗಳೆಂದು ಮುನ್ನುಡಿಕಾರ ವ್ಯಾಸರಾಯ ಬಲ್ಲಾಳರು ಎತ್ತಿ ತೋರಿದ್ದಾರೆ. ನಮ್ಮನ್ನು ಕೆಣಕಿಕಾಡುತ್ತಿರುವ ಸಾಮಾಜಿಕ ಸಮಸ್ಯೆಗಳು, ಹಳ–ಹೊಸದರ ಲೆಕ್ಕಾಚಾರಗಳು, ದಾಂಪತ್ಯದ ಸರಸ–ವಿರಸಗಳು ಕತೆಯ ಸಾಮಗ್ರಿಯಾಗಿವೆಯೆಂದು ಕಪ್ಪು ಹುಡಿಗೆ ಎಂಬ ಕಥಾಸಂಗ್ರಹದಲ್ಲಿ ರಾ.ಕು. ಮುನ್ನುಡಿದಿದ್ದಾರೆ.

ದ.ಬಾ.ಕು. ಅವರು ಕೇವಲ ಹತ್ತು ಗ್ರಂಥಗಳನ್ನು ಬರೆದಿರುವರಾದರೂ ಯೋಗ್ಯತೆಯ ದೃಷ್ಟಿಯಿಂದ ಅವು ಗಮನಾರ್ಹ ಕೃತಿಗಳಾಗಿವೆ.

ಸಾವಧಾನವೆಂಬುದು ದ.ಬಾ. ಅವರ ಪ್ರಬಂಧ ಸಂಕಲನ. ಇವರು ಸಜ್ಜಾಗಿ ಹರಟೆ ಹೊಡೆಯಬಲ್ಲವರಾಗಿದ್ದರು. ಹಾಸ್ಯವೆ ಇವರ ಹರಟೆಯ ರಹಸ್ಯ. ಈ ಹಾಸ್ಯಗಾರಿಕೆಯನ್ನು ಜೀವನದಲ್ಲಿಯೂ ಬೆಳಸಿಕೊಂಡು, ಬಳಸಿಕೊಂಡು ಬಂದಿದ್ದರೂ ಬಡತನದ ಕಷಾಯಕ್ಕೆ ಇವರ ಹಾಸ್ಯ ಹಾಲು–ಸಕ್ಕರೆಯಂತಿತ್ತು. ದ.ಬಾ.ಕು. ಧಾರವಾಡದ ಸಾರ್ವಜನಿಕ ನಗೆಯ ಬೆಳಕಾಗಿದ್ದರು. (ಎನ್.ಕೆ.ಕೆ.)

**ಕುಲಕರ್ಣಿ, ಶಂಭುಲಿಂಗಪ್ಪ:** 1907–78. ಕನ್ನಡ ಪ್ರಾಥಮಿಕ ಪಠ್ಯಪುಸ್ತಕ ನಿರ್ಮಾಣಕಾರ್ಯದಲ್ಲಿ ಅಪಾರ ಸೇವೆ ಸಲ್ಲಿಸಿದವರು. ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ ಇವರ ಪೂರ್ಣ ಹೆಸರು. ಇವರ ತಂದೆ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ. ಅವರು ಶಿಕ್ಷಕರಾಗಿದ್ದರು. ಇವರು ಬೆಡಗಿನ ಕವಿತೆಗಳನ್ನು ಬರೆದಿದ್ದಾರೆ. ಇವರು ಬರೆದ ನನ್ನ ತಾಯಿ, ನಾಡನೆಲೆಗಾರ ಎಂಬ ನೂರು ನೀತಿಪರ ಕಥೆಗಳ ಸಂಗ್ರಹ ತುಂಬ ಜನಪ್ರಿಯವಾಗಿತ್ತು. ನಾಡನೆಲೆಗಾರ ಪ್ರತಿವರ್ಷ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗೆ ಪಠ್ಯವಾಗಿ ನೇಮಿಸಲ್ಪಡುತ್ತಿತ್ತು. ಶಂಭುಲಿಂಗಪ್ಪ ನವರು ವಿಶೇಷ ಶಿಕ್ಷಣ ಪಡೆಯದಿದ್ದರೂ ತಮ್ಮ ತಂದೆಯವರ ಕೆಲವು ಇತಿಹಾಸ ಮತ್ತು ಭೂಗೋಳ ಸಂಬಂಧವಾದ ಪುಸ್ತಕಗಳನ್ನು ಪ್ರಕಟಿಸಲು ಒಂದು ಸಂಪಾದಕ ಮಂಡಲಿಯನ್ನು ರಚಿಸಿದರು. ಆ ಮಂಡಲಿಯಲ್ಲಿ ಎಸ್.ಎಸ್.ಭೂಸನೂರಮಠ, ಆರ್.ಸಿ.ಹಿರೇಮಠ, ಬೆಟಗೇರಿ ಕೃಷ್ಣಶರ್ಮರಂತಹ ಸಾಹಿತಿಗಳೂ ಸಂಶೋಧಕರೂ ಸೇರಿದ್ದರು. ಕನ್ನಡ ಶಿಕ್ಷಣ ಲೋಕಕ್ಕೆ ಗೌರೀಶ ವಾಚನಮಾಲೆಯ ಮೂಲಕ ಪಠ್ಯ ಪುಸ್ತಕಗಳ ಅಪಾರ ಭಂಡಾರವನ್ನೂ ತಮ್ಮ ಸಮಸ್ತ ಆಸ್ತಿಯನ್ನೂ ಇವರು ಬಿಟ್ಟು ಹೋಗಿದ್ದಾರೆ. (ಎನ್.ಕೆ.ಕೆ.)

**ಕುಲಗೋಡ ತಮ್ಮಣ್ಣ:** ಸು.1860. ಯಕ್ಷಗಾನ ಕಲಾವಿದ ಹಾಗೂ ಕವಿ. ಬೆಳಗಾಂವಿ ಜಿಲ್ಲೆ ಕುಲಗೋಡ ಗ್ರಾಮದಲ್ಲಿ ಕುಲಕರ್ಣಿಯಾಗಿದ್ದ, ಸಂಗೀತ, ಸಾಹಿತ್ಯ ಮತ್ತು ಅಭಿನಯಗಳಲ್ಲಿ ಆಸಕ್ತಿಯನ್ನು ಹೊಂದಿದ್ದ ಇವನು ಅಪರಾಳ ತಮ್ಮಣ್ಣಕೃತ ಶ್ರೀಕೃಷ್ಣಪಾರಿಜಾತ ನಾಟಕವನ್ನು ಮನಸಾರೆ ಮೆಚ್ಚಿ ಅದನ್ನು ರಂಗದಮೇಲೆ ಪ್ರದರ್ಶಿಸಲು ಕೆಲವು ಸೂಕ್ತ ಬದಲಾವಣೆಗಳನ್ನು ಅಳವಡಿಸಿ ಆ ಮೇಳದ ಯಶಸ್ಸು ಹಾಗೂ ಜನಪ್ರಿಯತೆಗೆ ಕಾರಣನಾದ. ಕೆಲವೊಮ್ಮೆ ತಾನೇ ಭಾಗವತನಾಗಿ ದೂತ ಮತ್ತು ಕೃಷ್ಣನ ಪಾತ್ರವನ್ನೂ

ವಹಿಸಿ ಪಾರಿಜಾತ ಪ್ರಯೋಗಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದ. ಪಾರಿಜಾತ ಮೇಳದಲ್ಲಿ ಮೊದಲ ಬಾರಿಗೆ ಸ್ತ್ರೀಯರು ಪಾತ್ರವಹಿಸುವಂತೆ ಮಾಡಿದ. ಇವನ ಮೇಳದಲ್ಲಿ ನುರಿತ ನಟಿ ಕೌಜಲಗಿ ನಿಂಗಮ್ಮ ಪಾರಿಜಾತ ನಾಟಕದಲ್ಲಿ ಕೊರವಂಜಿ ಪಾತ್ರ ವಹಿಸುತ್ತಿದ್ದಳಲ್ಲದೆ ಮುಂದೆ ತನ್ನದೇ ಆದ ಆಟದ ಮೇಳವನ್ನು ಸ್ಥಾಪಿಸಿದಂತೆ ತಿಳಿದುಬರುತ್ತದೆ. ತಮ್ಮಣ್ಣನ ರಂಗಜೀವನದಲ್ಲಿ ವಿಸ್ಮಯಕರ ಹಾಗೂ ಮಹತ್ವದ ಘಟನೆಯೊಂದು ಜರುಗಿದಂತೆ ತಿಳಿಯುತ್ತದೆ. ಒಮ್ಮೆ ಇವನ ಪ್ರೇಯಸಿಯೊಬ್ಬಳು ಸತ್ಯಭಾಮೆಯ ಪಾತ್ರ ಅಭಿನಯಿಸುತ್ತಿದ್ದಾಗ, ನಾಟಕ ತುಂಬಾ ಸ್ವಾರಸ್ಯವಾಗಿ ಸಾಗುತ್ತಿರುವ ಸಂದರ್ಭದಲ್ಲಿ ತಾಳ ತಪ್ಪಿತು. ಇದರಿಂದ ಕುಪಿತನಾದ ತಮ್ಮಣ್ಣ ತನ್ನ ಕೈಯಲ್ಲಿದ್ದ ತಾಳವನ್ನೇ ಅವಳೆಡೆಗೆ ಎಸೆದಾಗ ಅದು ಅವಳ ತಲೆಗೆ ಬಡಿದು ಆಕೆ ಪ್ರಾಣ ಬಿಟ್ಟಳಂತೆ. ಆಗಿನ ಆಂಗ್ಲ ನ್ಯಾಯಾಧೀಶ ತಮ್ಮಣ್ಣನಿಗೆ ಸೆರೆಮನೆವಾಸವನ್ನು ವಿಧಿಸಿ ಕೊನೆಗೆ ಇವನಿಗೆ ಫಾಸೀ ಶಿಕ್ಷೆಗೆ ವಿಧಿಸಿದ. ಆದರೆ ಇವನಿಗೆ ಕೊನೆಯಾಸೆ ಏನೆಂದು ಕೇಳಿದಾಗ ತಮ್ಮಣ್ಣ ಪಾರಿಜಾತ ನಾಟಕವನ್ನು ಅಭಿನಯಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ. ಅದರಂತೆ ನಾಟಕ ಅಭಿನಯಿಸುತ್ತಿರುವಾಗ ತಾಳ ತಪ್ಪಿದಾಗ ಆಗುವ ಆಭಾಸವನ್ನು ನ್ಯಾಯಾಧೀಶರಿಗೆ ಮನದಟ್ಟು ಮಾಡಿಕೊಡಲಾಗಿ ಅವನ ಫಾಸೀ ಶಿಕ್ಷೆ ರದ್ದಾಯಿತು. ಇಂದಿಗೂ ಗೋಕಾಕ ಸೆರೆಮನೆಯ ಕೋಣೆಯಲ್ಲಿ ತಮ್ಮಣ್ಣನ ಹಸ್ತಾಕ್ಷರಗಳಿವೆಯೆಂದು ಹೇಳಲಾಗಿದೆ.

ಯಕ್ಷಗಾನ ಪರಂಪರೆಯಂತೆ ಪೂರ್ವರಂಗದಲ್ಲಿ ಬಾಲಗೋಪಾಲರ ಪ್ರವೇಶ, ಚೈತನ್ಯಪಂಥದ ನಾಟಕಗಳಲ್ಲಿ ರಾಧಾಕೃಷ್ಣರ ಪ್ರವೇಶ ಮತ್ತು ದೊಡ್ಡಾಟಗಳಲ್ಲಿ ಗೋಪಾಲನ ಪ್ರವೇಶವಿರುವಂತೆ ತಮ್ಮಣ್ಣ ತಾನು ಅಳವಡಿಸಿದ ಪಾರಿಜಾತಮೇಳದ ಪೂರ್ವರಂಗದಲ್ಲಿ ಗೋಪಾಲ ಗೊಲ್ಲತಿಯರನ್ನು ತಂದ. ಪ್ರಾರ್ಥನೆಯ ಅನಂತರ ಗೋಪಾಲ ಗೊಲ್ಲತಿಯರ ಪ್ರವೇಶ, ಅವರ ಲೀಲಾವಿನೋದ, ಹೆಪ್ಪು ಮುರಿಯದ ಮೊಸರು ಸುಂಕ ಕೊಡು ಎಂದು ಗೋಪಾಲ ಕೇಳುವುದು, 'ರಂಗ ಸೆರಗ ಬಿಡೊ' ಎಂದು ಗೊಲ್ಲತಿ ಬೇಡುವುದು–ಇವೇ ಮೊದಲಾದ ಶೃಂಗಾರ ರಸ ಸಂಭಾಷಣೆಗಳಿಂದ ಕೂಡಿದ ಗೋಕುಲ ದೃಶ್ಯ ಇವನ ಪಾರಿಜಾತದಲ್ಲಿ ಹೆಚ್ಚು ಮನರಂಜನೀಯವೂ ಜನಪ್ರಿಯವೂ ಆಗಿದೆ. ಪೂರ್ವರಂಗದ ಅನಂತರ ದ್ವಾರಕೆಗೆ ನಾರದರ ಆಗಮನ, ಕೃಷ್ಣನಿಗೆ ಪಾರಿಜಾತ ಕೊಡುವುದು, ನಾರದರು ಈ ಸುದ್ದಿಯನ್ನು ಸತ್ಯಭಾಮೆಗೆ ಮುಟ್ಟಿಸುವುದು, ರುಕ್ಮಿಣಿಗೆ ಪಾರಿಜಾತವನ್ನು ಕೊಟ್ಟಿದ್ದರಿಂದ ಸತ್ಯಭಾಮೆ ಕೋಪಗೊಳ್ಳುವುದು, ರುಕ್ಮಿಣಿ ಸತ್ಯಭಾಮೆಯರ ಜಗಳ, ಕೃಷ್ಣನ ಮನಸ್ಸನ್ನು ಪರಿವರ್ತಿಸಲು ಸತ್ಯಭಾಮೆ ಕೈಗೊಳ್ಳುವ ಪಾರ್ವತಿ ಆರಾಧನೆ, ಪರಿಣಾಮವಾಗಿ ಕೃಷ್ಣ ಕೊರವಂಜಿ ವೇಷದಲ್ಲಿ ಬಂದು ಸತ್ಯಭಾಮೆಗೆ ಕಣಿ ಹೇಳುವುದು, ಮರುದಿನ ಕೃಷ್ಣ ತನ್ನ ಹತ್ತು ಅವತಾರಗಳನ್ನು ಅವಳಿಗೆ ಪರಿಚಯಿಸುವುದು, ಸತ್ಯಭಾಮೆ ಮುಯ್ಯಿ ತೀರಿಸುವಂತೆ ವ್ಯಂಗ್ಯೋಕ್ತಿಗಳನ್ನಾಡುವುದು, ಅನಂತರ ಕೃಷ್ಣ ಸತ್ಯಭಾಮೆಯರ ಮಿಲನ, ಇಂದ್ರಲೋಕದಿಂದ ಪಾರಿಜಾತ ಪುಷ್ಪವನ್ನು ತಂದುಕೊಡುವ ಆಶ್ವಾಸನೆ, ಸತ್ಯಭಾಮೆಯ ಸಂತೃಪ್ತಿ ಇದು ಕುಲಗೋಡ ತಮ್ಮಣ್ಣ ಕ್ರಮವಾಗಿ ಅಳವಡಿಸಿ ಸಿದ್ಧಪಡಿಸಿದ ಪಾರಿಜಾತ ಆಟದ ಕಥಾವಸ್ತು.

ಈತನ ಪಾರಿಜಾತ ಮೇಳದಲ್ಲಿ ದೂತ ಎಂದು ಕರೆಯಲಾಗುವ ಸೂತ್ರಧಾರನ ಪಾತ್ರ ಪ್ರಮುಖ ಪಾತ್ರಗಳಲ್ಲೊಂದಾಗಿದೆ. ಸಭಿಕರಿಗೆ ಪಾತ್ರಗಳನ್ನು ಪರಿಚಯಿಸುವುದು, ಹಾಸ್ಯದ ವಾತಾವರಣ ಕಲ್ಪಿಸುವುದು ಮತ್ತು ಕಥೆಯನ್ನು ಸರಾಗವಾಗಿ ಮುಂದುವರಿಸಲು ಅನುವಾಗುವುದು ಇವಿಷ್ಟು ಸೂತ್ರಧಾರನ ಕೆಲಸ. ಹಾಡುಗಳನ್ನು ಆಧರಿಸಿದ ಸಂಭಾಷಣೆಯಲ್ಲದೆ ಅಲ್ಲಲ್ಲಿ ಬರುವ ಮಾತಿನ ಚಕಮಕಿ ತಮ್ಮಣ್ಣನ ಪಾರಿಜಾತ ನಾಟಕದ ಮುಖ್ಯ ಲಕ್ಷಣ. ಈತ ಅಳವಡಿಸಿದ ಕೆಲವು ಹಾಡುಗಳು ಸುಮಧುರವೂ ಹೆಚ್ಚು ಜನಪ್ರಿಯವೂ ಆಗಿದ್ದು ಅವು ಮರಾಠೀ ರಂಗಭೂಮಿಯ ಮೇಲೂ ತಮ್ಮ ಪ್ರಭಾವ ಬೀರಿದವು. ಇಂಥ ಹಾಡುಗಳ ಮಾಧುರ್ಯಕ್ಕೆ ಮನಸೋತ ಅಣ್ಣಾರಾವ್ ಕಿರ್ಲೋಸ್ಕರ ಎಂಬ ಮರಾಠಿ ನಾಟಕಗಳ ಪ್ರವರ್ತಕರು ಈತ ರಚಿಸಿದ ಕ್ಷೀರಸಾಗರ ತವರುಮನೆ, ದ್ವಾರಕಿ ನಮ್ಮತ್ತೇಮನೆ ಎಂಬ ಹಾಡನ್ನು ತಮ್ಮ 'ಸಂಗೀತ ಸೌಭದ್ರ'ದಲ್ಲಿ ಅದೇ ಧಾಟಿಯನ್ನು ಅನುಸರಿಸಿ ಪಾಂಡುನೃಪತಿಜನಕಜಯಾ ಮಾತಾ ಕುಂತಿ ಯದುತನಯಾ ಎಂಬ ಹಾಡಿಗೆ ಸಂಗೀತವನ್ನು ಅಳವಡಿಸಿದರು.

ಕರ್ನಾಟಕದ ಬಯಲಾಟಗಳ ಚರಿತ್ರೆಯಲ್ಲಿ ಚಿರಸ್ಮರಣೀಯ ಯುಗವೊಂದು ಕುಲಗೋಡ ತಮ್ಮಣ್ಣನಿಂದ ಆರಂಭವಾಯಿತೆನ್ನಬಹುದು. ಈತನ ಮೇಳ ಎಲ್ಲ ಕಡೆ ಪಾರಿಜಾತ ಮೇಳಗಳ ಉದಯಕ್ಕೆ ಪ್ರೇರಣೆಯನ್ನೊದಗಿಸಿತು. ಬರಬರುತ್ತ ಹೆಚ್ಚಿನ ಪ್ರಚಾರ ಹಾಗೂ ಜನಪ್ರಿಯತೆಯಿಂದಾಗಿ ಶ್ರೀಕೃಷ್ಣಪಾರಿಜಾತ ಕುಲಗೋಡ ತಮ್ಮಣ್ಣನದೇ ಎಂಬ ಭಾವನೆ ಮೂಡಿತು.

ಈತ ಪಾರಿಜಾತ ನಾಟಕವನ್ನು ಜನಪ್ರಿಯಗೊಳಿಸಿದ್ದರಿಂದ ಇದೇ ಮಾದರಿಯಲ್ಲಿ ಅನೇಕ ಪಾರಿಜಾತ ಸಂಬಂಧ ನಾಟಕಗಳು ರಚಿತವಾಗಿ ರಂಗದ ಮೇಲೆ ಬಂದವು. ನಾಟಕ ಕಲಿಸುವುದರಲ್ಲಿಯೂ ತಮ್ಮಣ್ಣ ಹೊಸ ಪರಂಪರೆಯೊಂದನ್ನು ಸೃಷ್ಟಿಮಾಡಿದ. ಈ ದಿಶೆಯಲ್ಲಿ ಶೂರಪಾಲಿ ಅಚ್ಯುತನದು ತಮ್ಮಣ್ಣನ ಅನಂತರದ ಒಂದು ಪ್ರಮುಖ ಹೆಸರು.

(ಎಸ್.ಎನ್.ಜಿ.)

**ಕುಲದೇವತಾ ಪದ್ಧತಿ :** ಸರ್ವಚೇತನವಾದವನ್ನು (ಆನಿಮಿಸಂ) ಒಪ್ಪುವ ಅನೇಕ ಮತಧರ್ಮಗಳವರು ಯಾವುದಾದರೂ ಒಂದು ವಸ್ತುವನ್ನು, ಅದರಲ್ಲೂ ಒಂದು ಪ್ರಾಣಿಯನ್ನು, ಕುಲದೇವತೆಯೆಂದು ತಿಳಿದು ಆರಾಧಿಸುವ ಪದ್ಧತಿ (ಟೋಟೆಮಿಸಂ). ಪ್ರಾಚೀನ ಸಮಾಜದಲ್ಲಿ ಪ್ರತಿಯೊಂದು ಸಂತತಿಯವರಿಗೂ ಒಂದೊಂದು ಕುಲದೇವತೆ ಇತ್ತು. ಮರ, ಗಿಡ, ಬಳ್ಳಿ, ಮೃಗ, ಇಲ್ಲವೇ ಪ್ರಕೃತಿ ಪ್ರಪಂಚದಲ್ಲಿನ ಅತಿಪ್ರಿಯವಾದ ಯಾವುದಾದರೊಂದು ವಸ್ತುವನ್ನವರು ಅತ್ಯಮೂಲ್ಯವಾದುದೆಂದೂ ಅತಿ ಪೂಜಾಯೋಗ್ಯವೆಂದೂ ಪರಿಗಣಿಸಿ ಅದನ್ನು ಆರಾಧಿಸುತ್ತಿದ್ದುದು ಸರ್ವೇ ಸಾಧಾರಣವಾಗಿ ರೂಢಿಯಲ್ಲಿತ್ತು. ಕುಲದೇವತೆ ತಮ್ಮ ವಂಶದ ಮೂಲಪುರುಷನೆಂದು ತಿಳಿದು, ಅದನ್ನು ನೋಯಿಸುವುದಾಗಲಿ, ಹೀಯಾಳಿಸುವುದಾಗಲಿ, ಇಲ್ಲವೇ ಭಕ್ಷಿಸುವುದಾಗಲಿ ಸರಿಯಲ್ಲವೆಂದು ಅವರು ನಂಬಿದ್ದರು. ಕುಲದೇವತೆಯನ್ನು ಪೂಜಿಸುವುದರಿಂದ ಶ್ರೇಯಸ್ಸು ದೊರಕುವುದೆಂದು ತಿಳಿದ ಅವರು ತಲೆಮಾರುಗಳಿಂದ ಅದನ್ನು ಉಳಿಸಿಕೊಂಡು ಬರುತ್ತಿದ್ದರು. ತಮ್ಮ ಆಭರಣಗಳಲ್ಲಿ ಅದರ ಚಿತ್ರವನ್ನು ಕೊರೆಸಿಕೊಳ್ಳುತ್ತಿದ್ದರು. ತಮ್ಮ ಮೈಮೇಲೆ ಅದನ್ನು ಹಚ್ಚೆಯಾಗಿ ಹುಯ್ಸಿಕೊಳ್ಳುತ್ತಿದ್ದರು. ರಕ್ತಸಂಬಂಧವುಳ್ಳ ಜನಗಳ ಒಂದೊಂದು ಗುಂಪನ್ನೂ ಆಯಾ ಕುಲದೇವತೆಯ ಆರಾಧನೆಯಿಂದ ಗುರುತಿಸಬಹುದಾಗಿತ್ತು.

ಹೀಗಾಗಿ ಕುಲದೇವತಾ ಪದ್ಧತಿ ಜನಗಳನ್ನು ಸಂಘಟಿಸುವ ಒಂದು ಸಾಧನೆಯಾಗಿತ್ತು. ಉದಾಹರಣೆಗೆ, ಡೆಲ್ಕಿಖಾರಿಯ ಜನಗಳಲ್ಲಿ ಎಂಟು ಕುಲಪಂಗಡಗಳಿವೆ. ಪ್ರತಿಯೊಂದು ಬುಡಕಟ್ಟೂ ಒಂದೊಂದು ಕುಲದೇವತೆಯನ್ನು ಆರಾಧಿಸುತ್ತದೆ. ಪ್ರತಿಯೊಂದರಲ್ಲೂ ಇರುವ ಜನಗಳಿಗೆ ಇದರಿಂದ ಸಾಮರಸ್ಯ ಹೆಚ್ಚಲು ಅವಕಾಶವಿದೆ. ಇವುಗಳಲ್ಲಿ ಮುರ ಎಂಬ ತಂಡ ಆಮೆಯನ್ನೂ ಸೊರನ್ ಎಂಬ ತಂಡ ಕಲ್ಲನ್ನೂ ಸಮದ್ ಎಂಬ ತಂಡ ಜಿಂಕೆಯನ್ನೂ ಕೇಜ್ ಎಂಬ ತಂಡ ಲಾವಕ್ಕಿಯನ್ನೂ ಕಾರ್ಲಿಹ ತಂಡ ಒಂದು ಹಣ್ಣನ್ನೂ ಜರ್ಡದ್ ಎಂಬ ಗುಂಪು ಒಂದು ಪಕ್ಷಿಯನ್ನೂ ಹನ್ಸ್ದ ಎಂಬ ಗುಂಪು ಹಾವು ಮೀನನ್ನೂ ಮೈಲ್ ಎಂಬ ತಂಡ ಮಣ್ಣನ್ನೂ ಕಿರೋ ಎಂಬ ತಂಡ ಹುಲಿಯನ್ನೂ ಟೊಪ್ಪೊ ಎಂಬ ಗುಂಪು ಒಂದು ತರಹೆಯ ಹಕ್ಕಿಯನ್ನೂ ಕುಲದೇವತೆಯೆಂದು ಆರಾಧಿಸುತ್ತವೆ. ಇಂಥ ಉದಾಹರಣೆಗಳನ್ನು ಪ್ರಪಂಚದ ಎಲ್ಲ ಜನಾಂಗಗಳಲ್ಲಿಯೂ ಕಾಣಬಹುದೆಂದು ಮಾನವಶಾಸ್ತ್ರಜ್ಞರು ನಿರ್ಧರಿಸಿದ್ದಾರೆ. ತೋಡರು ತಮ್ಮ ಕುಲದೇವತೆ ಎಮ್ಮೆ ಎಂದೂ ಅಮೆರಿಕದ ಆದಿವಾಸಿಗಳು ಕಾಗೆ ಮತ್ತು ಮೊಸಳೆಗಳನ್ನು ತಮ್ಮ ಕುಲದೇವರೆಂದೂ ಭಾರತದ ಕಾಡುಜನ ನಾಗರಹಾವು ತಮ್ಮ ಕುಲದೇವರು ಎಂದೂ ಆರಾಧಿಸುವುದು ವಾಡಿಕೆಯಲ್ಲಿತ್ತು. ಕುಲದೇವತೆಗಳನ್ನು ಹಿಂಸಿಸಿದವರನ್ನೂ ಕೊಂದವರನ್ನೂ ಇತರ ರೀತಿಯಲ್ಲಿ ಅವಮಾನಕ್ಕೀಡು ಮಾಡಿದವರನ್ನೂ ಕಠಿಣ ಶಿಕ್ಷೆಗೆ ಗುರಿಮಾಡುತ್ತಿದ್ದರು. ಇದರಿಂದಾಗಿ ಸಮಾಜದಲ್ಲಿ ಕೆಲವು ಕಟ್ಟಳೆಗಳನ್ನೂ ಬಹಿಷ್ಕಾರಾಜ್ಞೆಗಳನ್ನೂ ವಿಧಿಸಲಾಗಿತ್ತು. ಆಯಾ ಕುಲದೇವತೆಯ ಪೀಳಿಗೆಯವರು ತಾವೆಂದು ಒಂದೊಂದು ಗುಂಪಿನವರೂ ಹೇಳಿಕೊಳ್ಳುವ ರೂಢಿಯುಂಟು. ಒಂದೇ ಕುಲದೇವತೆಯ ಬಳಗದಲ್ಲಿ ಹೆಣ್ಣಿನ ಕೊಳುಕೊಡೆ ಇರುತ್ತಿರಲಿಲ್ಲ. ತೋಡರು ತಮ್ಮ ಕುಲದೇವತೆಯಾದ ಎಮ್ಮೆಯ ಸಗಣಿಯನ್ನು ಸಹ ತಮ್ಮ ಹೆಂಗಸರು ಮುಟ್ಟಕೂಡದೆಂದೂ ಎಮ್ಮೆ ಓಡಾಡಿದ ಕಡೆ ಓಡಾಡಕೂಡದೆಂದೂ ಹಾಗೆ ಮಾಡಿದರೆ ತಮ್ಮ ವಂಶಕ್ಕೆ ಕಳಂಕವಾಗುವುದೆಂದೂ ವಿಧಿಸಿದ್ದರು. ಇದರಂತೆಯೇ ಅನೇಕ ಪೂರ್ವಜರ ಗುಂಪುಗಳು ತಮ್ಮ ನೈತಿಕ ಬೆಳೆವಣಿಗೆಗೆ ಅನ್ವಯಿಸುವಂತೆ ಕುಲದೇವತೆಯ ಆರಾಧನೆಯನ್ನು ರೂಪಿಸಿಕೊಂಡಿದ್ದರು.

ಕುಲದೇವತಾಪದ್ಧತಿಯ ವಿಷಯವಾಗಿ ಗೋಲ್ಡನ್‌ವೀಸ್ ಎಂಬ ಶಾಸ್ತ್ರಜ್ಞ 1910ರಲ್ಲಿ ತನ್ನ ವ್ಯಾಖ್ಯಾನವನ್ನು ಬರೆಯುವ ತನಕ ಮಾನವಶಾಸ್ತ್ರಜ್ಞರು ಇದರ ಬಗ್ಗೆ ಯಾವ ನಿರ್ಧಾರಕ್ಕೂ ಬಾರದವರಾಗಿದ್ದರು. ಈವರೆವಿಗೆ ಪ್ರಖ್ಯಾತ ಮಾನವಶಾಸ್ತ್ರಜ್ಞರಾದ ಲ್ಯಾಂಗ್, ಡರ್ಕ್‌ಹೀಮ್, ಫ್ರೇಸರ್, ರಿವರ್ಸ್ ಮೊದಲಾದವರು ಇವರ ಬಗ್ಗೆ ವಿಚಾರ ನಡೆಸಿದ್ದಾರೆ. ಕೆಲವು ಶಾಸ್ತ್ರಜ್ಞರು ಕುಲದೇವತಾ ಪದ್ಧತಿಯಲ್ಲಿ ಸಮಾಜದ ಭದ್ರತೆಗೆ ಅನುಕೂಲವಾದ ಅಂಶಗಳೇನೂ ಇಲ್ಲವೆಂದೂ ಸಣ್ಣಪುಟ್ಟ ವ್ಯಾಪಾರಗಳಿಗನುಕೂಲವಾಗುವಂತೆ ಕುಲದೇವತಾ ಪದ್ಧತಿಯನ್ನು ಅವಲಂಬಿಸಿರಬಹುದೆಂದೂ ನಂಬಿದ್ದರು. ಮತ್ತೆ ಕೆಲವರು ಇದು ಸಮಾಜದ ಆವಶ್ಯಕತೆಗಳನ್ನು ಒದಗಿಸುವ ದುಡಿಮೆಗಳಿಗೆ ಅನ್ವಯಿಸಿದುದೆಂದು ತಿಳಿದಿದ್ದರು. ಗರ್ಭಧಾನಕ್ಕೆ ಲೈಂಗಿಕ ಸಮ್ಮಿಳನವನ್ನು ಬಿಟ್ಟು ಒಂದು ಗಿಡವೊ ಮೃಗವೊ ಕಾರಣವೆಂದು ತಿಳಿದು ಅವನ್ನು ಆರಾಧಿಸುತ್ತಿದ್ದ ಆಸ್ಟ್ರೇಲಿಯದ ಕಾಡುಜನರ ಬಗ್ಗೆ ಫ್ರೇಸರ್ ಬರೆದಿದ್ದಾನೆ. ಮಾನವನಿಗೆ ಆಹಾರಾದಿಗಳನ್ನು ಕೊಡುವ ಎಮ್ಮೆ ಮುಂತಾದುವನ್ನು ಕುಲದೇವತೆಗಳನ್ನಾಗಿ ಕೆಲವರು ಪೂಜೆ ಮಾಡುತ್ತಿರಬಹುದೆಂದು ಹಾಪ್‌ಕಿನ್ಸನ ಅಭಿಪ್ರಾಯ. ಮನುಷ್ಯನನ್ನು ಸಂಘಜೀವಿಯಾಗಿ ಮಾಡಲೋಸುಗವಾಗಿಯೇ ಕುಲದೇವತಾ ಪದ್ಧತಿ ಜಾರಿಗೆ ಬಂತೆಂದು ಡರ್ಕ್‌ಹೀಮನ ಅಭಿಮತ. ಪ್ರಾಚೀನ ಮಾನವ ಸತ್ತಾಗ ಆತನ ಜೀವ ಒಂದು ಮೃಗದಲ್ಲಿಯೊ ಇಲ್ಲವೆ ಒಂದು ಗಿಡದಲ್ಲಿಯೊ ಸೇರಿಕೊಳ್ಳುತ್ತದೆಂದೂ ಅವರೆಲ್ಲರೂ ಆ ಮೃಗವನ್ನೊ ಇಲ್ಲವೆ ಗಿಡವನ್ನೊ ಆರಾಧಿಸುವ ಪದ್ಧತಿ ಹುಟ್ಟಿ ಕಾಲಕ್ರಮೇಣ ಪವಿತ್ರತೆಯನ್ನು ಪಡೆದು ಮನುಷ್ಯನ

ಪರಸ್ಪರ ಸಂಘಜೀವನಕ್ಕೆ ಎಡೆಯಾಯಿತೆಂದು ಟೈಲರನ ಅಭಿಪ್ರಾಯ. ಮೃಗಗಳಿಗೂ ಮರಗಳಿಗೂ ಬಳ್ಳಿಗಳಿಗೂ ಪ್ರಕೃತಿನಿಯಮಗಳಿಗೂ ಸಂಬಂಧವನ್ನು ಗುರುತಿಸಿದ ಮಾನವ ಕುಲದೇವತಾ ಕಲ್ಪನೆಗೆ ಮನಗೊಟ್ಟಿರಬಹುದೆಂದು ಬೊವಾಸ್ ಪಂಡಿತನ ಅಭಿಪ್ರಾಯ. ಇವುಗಳೆಲ್ಲವನ್ನೂ ಪರಿಶೀಲಿಸಿ ಗೋಲ್ಡನ್‌ವೀಸ್ ಕುಲದೇವತಾಪದ್ಧತಿ ಸಮಾಜದಲ್ಲಿ ಮತಶ್ರದ್ಧೆಯನ್ನು ಕಲ್ಪಿಸಿ, ಒಡನಾಡಿಗಳೊಂದಿಗೆ ಸಹ ಜೀವನವನ್ನು ಮೂಡಿಸುವ ಒಂದು ಸಮಾಜಸಂಸ್ಥೆಯೆಂದು ಹೇಳಿದ್ದಾನೆ.

ಭಾರತದಲ್ಲಿ ಕುಲದೇವತಾ ಪದ್ಧತಿಯಲ್ಲಿ ಮತಶ್ರದ್ಧೆ ಅಷ್ಟು ಪ್ರಬಲವಾಗಿಲ್ಲವೆಂದೂ ಒಡನಾಡಿಗರೊಂದಿಗೆ ಸಹಜೀವನವನ್ನು ಮಾಡುವ ಸಂಸ್ಥೆಯಾಗಿ ಮಾತ್ರ ಅದು ಉಳಿದುಬಂದಿದೆಯೆಂದೂ ಹರ್ಬರ್ಟ್ ರಿಸ್ಲೆ ಅಭಿಪ್ರಾಯ ಪಟ್ಟಿದ್ದಾನೆ. ಇದು ಸಮಂಜಸವಾಗಿ ತೋರದು. ಆಕಸ್ಮಿಕವಾಗಿ ಮನುಷ್ಯನಿಗೂ ಮೃಗಬಳ್ಳಿಗಳಿಗೂ ಒಂದು ತೆರನಾದ ಸಂಬಂಧವೇರ್ಪಟ್ಟಾಗ ಈ ಪದ್ಧತಿ ಉದ್ಭವಿಸಿದೆಯೆಂದು ಹೇಳಬಹುದು. ಉದಾಹರಣೆಗಾಗಿ ಜಂಗ್ ಜನರ ಬಗ್ಗೆ ಎಲ್ವಿನ್ ಹೇಳಿರುವಂತೆ ಒಬ್ಬ ಒಂದು ಪಾರಿವಾಳವನ್ನು ಕೊಲ್ಲಬಹುದು, ಆದರೆ ಆತ ಕೊಂದ ಮೇಲೆ ಆಕಸ್ಮಿಕವಾಗಿ ಕುರುಡನಾಗಬಹುದು. ಕುರುಡನಾದ ಮೇಲೆ ಪಾರಿವಾಳವನ್ನು ಕೊಂದುದಕ್ಕೆ ತನಗೆ ಕುರುಡು ಬಂದಿತೆಂದು ತಿಳಿಯುವ ಆತ ಪಾರಿವಾಳಗಳನ್ನೇ ಆರಾಧಿಸಲು ಯತ್ನಿಸಬಹುದು. ಹೀಗೆ ಕಾಲಕ್ರಮೇಣ ಪಾರಿವಾಳಗಳೇ ಕುಲದೇವತೆಗಳಾಗುವ ಸಂಭವ ಉಂಟು. ಆದ್ದರಿಂದ ಕುಲದೇವತಾಪದ್ಧತಿ ಒಂದು ಆಕಸ್ಮಿಕ ಸನ್ನಿವೇಶದಲ್ಲಿ ಉದ್ಭವಿಸಿದೆಯೆಂದು ಹೇಳಿದರೆ ತಪ್ಪಾಗಲಾರದು. ಹರ್ಟ್, ಫ್ರೇಸರ್, ರಾಯ್ ಮೊದಲಾದವರು ಈ ವಾದವನ್ನು ಸ್ವಲ್ಪ ಹೆಚ್ಚುಕಡಿಮೆ ಸಮರ್ಥಿಸಿದ್ದಾರೆ. ಮಾನವ ತನ್ನ ಸುತ್ತುಮುತ್ತಲಿನ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗುವ ಸಲುವಾಗಿ ನೈತಿಕ ಪ್ರಪಂಚದಲ್ಲಿ ತನ್ನ ಚಟುವಟಿಕೆಗಳನ್ನು ಭದ್ರಗೊಳಿಸಲೂ ಅದರಿಂದ ಸಮಾಜದ ಭದ್ರತೆಯನ್ನು ಸಾಧಿಸಲೂ ಕುಲದೇವತಾ ಪದ್ಧತಿಯನ್ನು ರೂಢಿಗೆ ತಂದಂತಿದೆ ಎಂಬ ವಾದ ಅಸಮಂಜಸವಾಗಿ ಕಂಡುಬರುವುದಿಲ್ಲ-ಎಂಬುದು ಆಧುನಿಕ ಮತ. ಈ ವಿಷಯದಲ್ಲಿ ಖಚಿತವಾಗಿ ಏನನ್ನೂ ಹೇಳುಬರುವಂತಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಅಂಶ. (ಕೆ.ಎಸ್.ವಿ.)

**ಕುಲನಿಷ್ಠ ಜನಸಮುದಾಯಗಳು :** ನಾಗರಿಕತೆಯಲ್ಲಿ ತಮ್ಮವೇ ಆದ ವರ್ಣಭೇದ, ರಾಷ್ಟ್ರೀಯತೆ ಮತ್ತು ಸಾಂಸ್ಕೃತಿಕ ಭೇದಗಳನ್ನು ಹೊಂದಿರುವ ಜನ ಸಮುದಾಯಗಳಿಗೆ ಈ ಹೆಸರಿದೆ (ಎತ್ನಿಕ್ ಕಮ್ಯೂನಿಟೀಸ್). ಮೇಲಿನ ಗುಣಲಕ್ಷಣಗಳನ್ನು ಗಮನಿಸಿದರೆ ಇವುಗಳೊಂದೊಂದರ ಜೀವನ ಕ್ರಮವೂ ವಿಶಿಷ್ಟ ರೀತಿಯದೆಂಬ ಅಂಶ ಸ್ಪಷ್ಟವಾಗುತ್ತದೆ. ಇವುಗಳಲ್ಲಿ ಕೆಲವು ಇತರ ನಾಗರಿಕತೆಗಳೊಂದಿಗೆ ಸಂಪರ್ಕ ಇಟ್ಟುಕೊಂಡಿರಬಹುದು. ಕೆಲವು ಯಾವ ಸಂಪರ್ಕಕ್ಕೂ ಒಳಗಾಗದೆ ಇರಬಹುದು. ಕುಲನಿಷ್ಠ ಸಮುದಾಯದ ಶಬ್ದಶಃ ಅರ್ಥ ಜನಾಂಗ ಇಲ್ಲವೆ ವರ್ಣವೆಂದು (ಜಾತಿ) ಆಗುತ್ತಿದ್ದರೂ ವಿಶಾಲವಾದ ಅರ್ಥದಲ್ಲಿ ಸಂಸ್ಕೃತಿಯೆಂದೇ ಆಗುತ್ತದೆ.

ಕುಲನಿಷ್ಠ ಸಮುದಾಯಗಳು ತಮ್ಮ ಸಾಮಾಜಿಕ ಸಂಸ್ಥೆಗಳ ಏಕರೂಪತೆ ಮತ್ತು ವಿವಿಧತೆಗಳಿಂದ ಸ್ವಯಂಸ್ಫೂರ್ತಿಯನ್ನು ಪಡೆದು ಬದುಕಿವೆ. ಬಹುಸಂಖ್ಯೆಯ ಜನಸಮುದಾಯಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಾಯಂ ಆಗಿ ವಲಸೆ ಹೋದಾಗ ಅವುಗಳಲ್ಲೇ ಪ್ರತ್ಯೇಕತೆ ಏರ್ಪಟ್ಟು ಕುಲನಿಷ್ಠ ಸಮುದಾಯಗಳ ಜನನವಾಗಬಹುದು. ಇಂಥ ಘಟನೆಗಳಲ್ಲಿ ಮೂಲನಿವಾಸಿಗಳು ತಮ್ಮತನವನ್ನು ಕಳೆದುಕೊಳ್ಳುವುದಿಲ್ಲ. ಹೊರಗಿನಿಂದ ಬಂದವರೊಡನೆ ಒಂದು ವೇಳೆ ಕೂಡಿಕೊಂಡರೂ ತಮ್ಮ ಪುರಾತನ ರೀತಿ ನೀತಿಗಳನ್ನು, ತಮ್ಮ ಭಾಷೆಯನ್ನು , ತಮ್ಮ ಸಾಂಘಿಕ ಪ್ರಜ್ಞೆಯನ್ನು ಉಳಿಸಿಟ್ಟುಕೊಳ್ಳುತ್ತಾರೆ. ಆಧುನಿಕ ತುರ್ಕಿಸ್ತಾನ ತನ್ನ ರಾಷ್ಟ್ರೀಯ ಗುಣಧರ್ಮವನ್ನು ಬೆಳೆಯಿಸುವಲ್ಲಿ ಅಲ್ಲಿನ ಕುಲನಿಷ್ಠ ಸಮುದಾಯಗಳಿಂದ ಆಗುತ್ತಿದ್ದ ತೊಂದರೆಗಳನ್ನು ಗಮನಿಸಿ ಕೂಡಲೆ ಅಂಥ ಸಮುದಾಯಗಳ ವೈಶಿಷ್ಟ್ಯಗಳನ್ನು ಕಡಿಮೆ ಮಾಡಲುದ್ಯೋಗಿಸಿತು. ಇಡೀ ಜನತೆಯಲ್ಲಿ ಇಂಥ ಒಂದು ಸಮತೆಯನ್ನು ತರುವುದು ಹಳೆಯ ಸಾರ್ವಭೌಮ ಸರ್ಕಾರಕ್ಕೆ ಶಕ್ಯವಾಗಿರಲಿಲ್ಲ.

ಕುಲನಿಷ್ಠ ಸಮುದಾಯಗಳು ಬೇರೆ ಪ್ರದೇಶದಿಂದ ವಲಸೆ ಬಂದಿದ್ದಂಥವಾಗಿದ್ದರೆ ಅವು ತಮ್ಮತಮ್ಮಲ್ಲಿರುವ ಒಕ್ಕಟ್ಟನ್ನು ಬಲಪಡಿಸಿಕೊಳ್ಳುತ್ತವಲ್ಲದೆ ಉಳಿದ ಸಮುದಾಯಗಳೊಡನೆ ಕೂಡಿಕೊಳ್ಳದೆ ಪ್ರತ್ಯೇಕವಾಗಿರಲು ಯತ್ನಿಸುತ್ತವೆ. ವಲಸೆಗೆ ಕಾರಣಗಳು ಮುಖ್ಯವಾಗಿ ಎರಡು. ಒಂದು ಜೀವನೋಪಾಯಕ್ಕೆ ಸಂಬಂಧಿಸಿದ್ದು. ತನ್ನ ಜನಕ್ಕೆ ಅನ್ನ, ಆಹಾರ, ಉಡಿಗೆ, ತೊಡಿಗೆ, ದನಕರುಗಳಿಗೆ ಹುಲ್ಲು, ನೀರು ಬೇಕಾಗಿರುವುದರಿಂದ ಅದನ್ನು ಅರಸಿ ಇಡೀ ಪಾಳೆಯವೇ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆಯಬಹುದು. ಇನ್ನೊಂದು ಘರ್ಷಣೆ ಮತ್ತು ಯುದ್ಧಗಳಿಗೆ ಸಂಬಂಧಿಸಿದ್ದು. ಗೆದ್ದವರು ನೆಲವನ್ನು ಆಕ್ರಮಿಸಿದಾಗ ಸೋತವರು ಜಾಗ ಬಿಡಬೇಕಾಗುತ್ತದೆ. ಬ್ಯಾಬಿಲೋನದಲ್ಲಿನ ಜ್ಯೂ ಜನಕ್ಕೆ ಹೀಗಾಯಿತು. ಒಂದು ಜನಸಮೂಹ ಬಂಧಿಸಲ್ಪಟ್ಟಾಗ ಇಲ್ಲವೆ ಅಮೆರಿಕದಲ್ಲಿನ ನೀಗ್ರೋ ಜನರಂತೆ ಗುಲಾಮಗಿರಿಗೆ ತುತ್ತಾದಾಗ ನಿಷ್ಠ ಸಮುದಾಯಗಳು ತಮ್ಮವೇ ಆದ ರೀತಿಯಲ್ಲಿ ಬೆಳೆಯಬಹುದು.

ಪರದೇಶಗಳಲ್ಲಿ ಮುಖ್ಯವಾಗಿ ಹಿಂದುಳಿದ ದೇಶಗಳಲ್ಲಿ ಆಡಳಿತ ಹಾಗೂ ವ್ಯಾಪಾರಗಳನ್ನು ತಮ್ಮ ಕೈಲಿಟ್ಟುಕೊಂಡಿರುವ ಜನಸಮೂಹಗಳು ಕುಲನಿಷ್ಠ ಸಮುದಾಯಗಳೇ ಆಗಿವೆ. ಇಂಗ್ಲಿಷ್ ಜನ ಐರಿಷ್ ಜನರನ್ನು ಮದುವೆಯಾಗಬಾರದೆಂಬ ಕಾನೂನನ್ನು ಇಂಗ್ಲಿಷರು ತಂದದ್ದು ಐರಿಷ್ ಜನರ ಮೇಲೆ ತಮ್ಮ ಅಧಿಕಾರವನ್ನು ಉಳಿಸಿ ಕೊಳ್ಳುವುದಕ್ಕಾಗಿಯೇ. ಹಾಗೆಯೆ ದಕ್ಷಿಣ ಆಫ್ರಿಕೆಯಲ್ಲಿ ಮೂಲನಿವಾಸಿಗಳಿಂದ ಮತ್ತು ಇನ್ನಿತರ ಜನಾಂಗಗಳಿಂದ ತಮ್ಮ ಅಧಿಕಾರವನ್ನು ಕಾಪಾಡಿಕೊಳ್ಳುವುದಕ್ಕಾಗಿ ಬಿಳಿಯರು ವರ್ಣಭೇಧ ನೀತಿಯ ಕಾನೂನನ್ನು ಜಾರಿಗೆ ತಂದರು. ಇಂಗ್ಲಿಷರು ಭಾರತದಲ್ಲಿ ವ್ಯಾಪಾರಕ್ಕಾಗಿ ಬಂದಾಗ ಈಸ್ಟ್ ಇಂಡಿಯ ಕಂಪನಿಯಲ್ಲಿಯ ಕೆಲಸಗಾರರು ತಮ್ಮದೇ ಆದ ಪ್ರದೇಶಗಳನ್ನು ಹೊಂದಿ ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಯಿಸಿಕೊಂಡದ್ದು ತಮ್ಮ ಶ್ರೇಷ್ಠತೆಯನ್ನು ಕಾಯ್ದುಕೊಳ್ಳುವುದಕ್ಕಾಗಿಯೇ.

ಕೆಲವೊಮ್ಮೆ ಸೈನಿಕ ಸಮೂಹಗಳು ಯುದ್ಧ ಮುಗಿದ ಅನಂತರ ಆಕ್ರಮಿತ ಪ್ರದೇಶದಲ್ಲೇ ಶಾಶ್ವತವಾಗಿ ನೆಲೆಯೂರಿ ತಮ್ಮವೇ ಆದ ಕುಲನಿಷ್ಠ ಸಮುದಾಯಗಳನ್ನು ನಿರ್ಮಿಸುತ್ತವೆ. ತಮ್ಮ ಕುಟುಂಬಗಳೇ ಜೊತೆಗಿರದಿದ್ದಲ್ಲಿ ಇಂಥ ಸಮುದಾಯಗಳು ಸೋತ ಸಮುದಾಯಗಳಲ್ಲಿ ಮದುವೆಯಾಗಿ ಬಾಳು ನಡೆಸುತ್ತವೆ.

ಆಧುನಿಕ ರಾಷ್ಟ್ರೀಯವಾದಿ ರಾಜ್ಯಗಳು ತಮ್ಮ ಪ್ರದೇಶಕ್ಕೆ ಹೊಂದಿಕೊಂಡ ಪ್ರದೇಶಗಳನ್ನು ಆಕ್ರಮಿಸಿದಾಗ ತಮ್ಮ ಸಂಸ್ಕೃತಿಗೆ ಸಮೀಪವಾದ ಮತ್ತು ಪ್ರಾದೇಶಿಕ ಸಂಸ್ಕೃತಿಗೆ ಭಿನ್ನವಾದ ಸಂಸ್ಕೃತಿಯುಳ್ಳ ಕುಲನಿಷ್ಠ ಸಮುದಾಯಗಳನ್ನು ನಿರ್ಮಿಸುತ್ತವೆ.

ಸ್ವಯಂ ಪ್ರೇರಣೆಯಿಂದ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವಲಸೆ ಬಂದ ಜನಸಮೂಹಗಳು ಇಂದು ಅತ್ಯಂತ ಜನಪ್ರಿಯ ಕುಲನಿಷ್ಠ ಸಮುದಾಯಗಳಾಗಿವೆ. ಬೇರೆ ಕಾರಣಗಳಿಂದ ವಲಸೆ ಬಂದಿದ್ದಂಥವಾಗಿದ್ದರೆ ಅವು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ವಿಶೇಷ ಪ್ರಯತ್ನಗಳನ್ನು ಎಸಗುತ್ತವೆ. ಕುಲನಿಷ್ಠ ಸಮುದಾಯಗಳ ದೃಢತೆ ಜನಸಮೂಹಗಳ ಗಾತ್ರ ಮತ್ತು ಅವನ್ನು ಹಿಂದಾಗಿಸುವ ಅಂಶಗಳ ಗುಣಧರ್ಮಗಳನ್ನು ಅವಲಂಬಿಸಿದೆ. ಮೂಲತಃ ಈ ದೃಢಕ್ಕೆ ಜನಸಮೂಹ ಯಾವ ದೇಶದಲ್ಲಿ ವಲಸೆ ಹೋಗುತ್ತದೆಯೋ ಆ ದೇಶದ ಜನ ಅದಕ್ಕೆ ಕೊಡುವ ಮಹತ್ತ್ವ ಮತ್ತು ಅದಕ್ಕೆ ಸಿಗುವ ಸಾಮಾಜಿಕ ಸ್ಥಾನಮಾನಗಳನ್ನವಲಂಬಿಸಿದೆಯಲ್ಲದೆ ಅಂಥವುಗಳ ಅಸ್ತಿತ್ವ ದೇಶದ ಜನರ ಮನೋವೃತ್ತಿಗಳ ಮೇಲೂ ಅವಲಂಬನೆ ಪಡೆದಿರುತ್ತದೆ.

ಜನರ ಬಣ್ಣ ಅವರ ಐಕ್ಯದ ಮುಖ್ಯ ತಳಹದಿಗಳಲ್ಲೊಂದು. ಶಾರೀರಿಕ ಭೇದಗಳು ಬದಲಿಸಲಿಕ್ಕೆ ಇಲ್ಲವೆ ಬಚ್ಚಿಡಲಿಕ್ಕೆ ಬಾರವಾದ್ದರಿಂದ ಅವು ಆ ಜನರನ್ನು ಇತರರಿಂದ ಪ್ರತ್ಯೇಕಿಸುತ್ತವೆ. ಸವರ್ಣಪ್ರೇಮದ ಜೊತೆಗೆ ಪರವರ್ಣದ್ವೇಷವೂ ಪ್ರತ್ಯೇಕತೆಗೆ ಕಾರಣವಾಗಬಲ್ಲುದು. ಇದರೊಡನೆ ಸಾಂಸ್ಕೃತಿಕ ಇಲ್ಲವೆ ಸಾಮಾಜಿಕ ಸ್ಥಾನಮಾನಗಳ ಅಂಶಗಳೂ ಕೂಡಿಕೊಂಡರೆ ಪ್ರತ್ಯೇಕತೆ ನಿಷ್ಕೃಷ್ಟವಾಗುತ್ತದೆ.

ಎಲ್ಲಿ ಬಣ್ಣಗಳ ಭೇದ ಸ್ಪಷ್ಟವಾಗಿ ಇರುವುದಿಲ್ಲವೋ ಅಲ್ಲಿ ಕಂಡುಬರುವ ಸಾಂಸ್ಕೃತಿಕ ಭೇದಗಳು ಒಂದುಗೂಡಿಸುವ ಅಂಶಗಳಾದರೂ ಆಗಬಹುದು. ಭಾಷೆ ಮತ್ತು ಧರ್ಮಗಳು ರಾಷ್ಟ್ರೀಯತೆ ಮತ್ತು ಬಣ್ಣಗಳಂತೆ ಸಮುದಾಯಗಳನ್ನು ಒಂದುಗೂಡಿಸುವ ಅಂಶಗಳಾಗಿವೆ. ಭಾಷೆ ರಾಷ್ಟ್ರೀಯತೆಯ ಮತ್ತು ಸಂಪ್ರದಾಯದ ಒಂದು ಪ್ರತೀಕವಾಗಿದೆ. ಕುಲನಿಷ್ಠ ವರ್ಗಗಳು ತಮ್ಮ ಗುಂಪುಗಳ ಅಸ್ತಿತ್ವಕ್ಕಾಗಿ ತಮ್ಮ ಸಾಂಪ್ರದಾಯಿಕ ಭಾಷೆಯನ್ನು ಇಟ್ಟುಕೊಳ್ಳುತ್ತವೆ. ಧರ್ಮ ತನ್ನ ಸಂಸ್ಥೆಯ ಮತ್ತು ನಾಯಕತ್ವದ ಗುಣಧರ್ಮದಿಂದಾಗಿ ವಿಚಿತ್ರವಾದ ರೀತಿಯಲ್ಲಿ ಜನರನ್ನು ಒಂದುಗೂಡಿಸುತ್ತದೆ.

ಆರ್ಥಿಕ ಸಂಘಟನೆಯ ಭೇದಗಳು ಕೆಲವೊಂದು ಸಲ ಕುಲನಿಷ್ಠ ಸಮುದಾಯಗಳನ್ನು ಪ್ರತ್ಯೇಕಿಸುವಲ್ಲಿ ಮಹತ್ತ್ವದ ಅಂಶಗಳಾಗಿವೆ. ಆದಿವಾಸಿಗಳ ಸಂಘಟನಾ ವ್ಯವಸ್ಥೆಯನ್ನೂ ಅಲೆಮಾರಿ ಜನಗಳ ಜೀವನ ಪದ್ಧತಿಗಳನ್ನೂ ಮೂಲನಿವಾಸಿಗಳಲ್ಲಿರುವ ಆರ್ಥಿಕ ರೀತಿಗಳನ್ನೂ ಇಟ್ಟುಕೊಂಡು ಜಿಪ್ಸಿ ಜನ ಪ್ರತ್ಯೇಕವಾದ ಮಾನವಕುಲ ಸಮುದಾಯವೆನಿಸಿದೆ. ಬಹುತರವಾಗಿ ಆರ್ಥಿಕ ಸ್ಥಾನಮಾನಗಳು ಆರ್ಥಿಕ ಸಂಘಟನೆಗಳಿಗಿಂತ ಹೆಚ್ಚಾಗಿ ಪ್ರತ್ಯೇಕವಾದ ಗುಂಪುಗಳನ್ನು ನಿರ್ಮಿಸುತ್ತವೆ. ಉದಾಹರಣೆಗೆ ಮೆರಿಕೆಯಲ್ಲಿ ನೀಗ್ರೋ ಜನ.

ಕೆಲವು ಸಮೂಹಗಳು ವಿಶೇಷಗುಣ ಧರ್ಮಗಳನ್ನು ಹೊಂದಿದ ಸಂಸ್ಥೆಗಳಿಂದಾಗಿ ಒಂದಾಗಿ ಬಾಳುತ್ತವೆ. ಗಾಯನ, ನೃತ್ಯ, ವ್ಯಾಯಮ ಮುಂತಾದವುಗಳಲ್ಲಿ ಪರಿಣತಿ ಪಡೆದ ಸಮೂಹಗಳು ತಮ್ಮ ವಿಶೇಷ ತಲೆಗಳಿಂದ ಪ್ರತ್ಯೇಕ ಕುಲನಿಷ್ಠ ಸಮುದಾಯಗಳನ್ನು ನಿರ್ಮಿಸುತ್ತವೆ. ಪ್ರತ್ಯೇಕವಾದ ರೀತಿನೀತಿಗಳು-ಮುಖ್ಯವಾಗಿ ಹಬ್ಬಗಳು, ಮದುವೆ ಸಮಾರಂಭಗಳು, ಮರಣೋತ್ತರ ಕ್ರಿಯೆಯ ರೀತಿಗಳು-ಜನಸಮೂಹಗಳನ್ನು ವಿಭಜಿಸುತ್ತವೆ. ಭಿನ್ನ ಭಿನ್ನ ಆಹಾರ ರೂಢಿಗಳೂ ಅವುಗಳನ್ನೇ ಒದಗಿಸುವ ಸಮೂಹಗಳೂ ಇತರ ಜನ

ಸಮೂಹಗಳಿಂದ ಪ್ರತ್ಯೇಕಿಸಲ್ಪಡುತ್ತವೆ. ಇದರಂತೆ ವಾಙ್ಮಯ ಮತ್ತು ಸಾಹಿತ್ಯಗಳು ಜನಸಮೂಹಗಳನ್ನು ಪ್ರತ್ಯೇಕಿಸುವ ಮಹತ್ತ್ವದ ಅಂಶಗಳಾಗಿರುತ್ತವೆ.

ಕುಲನಿಷ್ಠ ಸಮುದಾಯಗಳ ಭವಿಷ್ಯ ಅವು ಪಡೆವ ನಾಯಕತ್ವ ಅವುಗಳ ಸಂಪರ್ಕ ಸಾಮರ್ಥ್ಯ ಅಥವಾ ನಿರ್ಬಂಧನೆಗಳು ಮತ್ತು ದೊಡ್ಡ ಜನಸಮೂಹಗಳು ಅವುಗಳ ಬಗ್ಗೆ ಇಟ್ಟುಕೊಂಡ ಮನೋಭಾವಗಳನ್ನವಲಂಬಿಸಿರುತ್ತವೆ.

ಯುರೋಪಿನ ರಾಷ್ಟ್ರಗಳಲ್ಲಿ, ಅಮೆರಿಕದಲ್ಲಿ ಮತ್ತು ರಷ್ಯದಲ್ಲಿ ಕುಲನಿಷ್ಠ ಸಮುದಾಯಗಳ ಅಸ್ತಿತ್ವ ಮತ್ತು ಬೆಳೆವಣಿಗೆ ಅಂಗೀಕೃತ ವಿಷಯವಾಗಿದೆ. ಅನೇಕ ಸರ್ಕಾರಗಳು ಅಲ್ಪಸಂಖ್ಯಾತ ಸಮುದಾಯಗಳ ರಕ್ಷಣೆಯ ಭರವಸೆಯನ್ನು ಕೊಟ್ಟಿವೆ.

ಆರ್ಥಿಕ ಒತ್ತಡ ಸಮುದಾಯಗಳಲ್ಲಿನ ಪ್ರತ್ಯೇಕತೆಯನ್ನು ಮುರಿದು ಹಾಕುತ್ತಿದೆ. ರಾಷ್ಟ್ರಗಳು ತಮ್ಮ ಪ್ರದೇಶಗಳಲ್ಲಿನ ಐಕ್ಯ ಭಾವನೆಯನ್ನು ಬೆಳೆಸಲು ಕುಲನಿಷ್ಠ ಸಮುದಾಯಗಳ ಪ್ರಾಬಲ್ಯವನ್ನು ಕಡಿಮೆಗೊಳಿಸುತ್ತಿವೆ. ಅಂತಾರಾಷ್ಟ್ರೀಯ ಭಾಷೆ, ಎಲ್ಲ ದೇಶಗಳಲ್ಲಿಯೂ ಏಕ ರೀತಿಯದಾಗುತ್ತಿರುವ ಸಂಸ್ಕೃತಿಯ ಬೆಳೆವಣಿಗೆ ಮತ್ತು ರಾಷ್ಟ್ರಗಳ ನಡುವಿನ ಸಂಪರ್ಕ ಸಾಧನಗಳಿಂದಾಗಿ ರಾಷ್ಟ್ರಗಳ ನಡುವಿನ ಅಂತರ ಕಡಿಮೆಯಾಗುತ್ತಿರುವುದರಿಂದ ಕುಲನಿಷ್ಠ ಸಮುದಾಯಗಳ ಕಲ್ಪನೆ ಸಂಕುಚಿತ ಮನೋವೃತ್ತಿಯದೆಂದು ಅನಿಸಹತ್ತಿದೆ.

ಭಾರತದಲ್ಲಿ ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳು ಜನರಲ್ಲಿ ಪ್ರತ್ಯೇಕತಾ ಭಾವನೆಗೆ ಎಡೆಮಾಡಿಕೊಟ್ಟಿವೆ. ದ್ರಾವಿಡ ಭಾಷೆಗಳು ಸಂಸ್ಕೃತ ಭಾಷೆಯಿಂದ ಬಹಳಷ್ಟು ಪ್ರಭಾವಿತವಾಗಿ ಈ ಪ್ರತ್ಯೇಕತೆಯನ್ನು ಬಹಳ ಮಟ್ಟಿಗೆ ಕಡಿಮೆಗೊಳಿಸಿವೆ. ಭಾರತದ ಹಿಂದುಳಿದ ಸಮಾಜಗಳು ಮೂಲನಿವಾಸಿಗಳು ಮತ್ತು ಹರಿಜನ ಗಿರಿಜನ ತಮ್ಮವೇ ಆದ ಸಂಸ್ಕೃತಿ, ರೀತಿನೀತಿ, ಸಂಪ್ರದಾಯಗಳಿಂದ ಪ್ರತ್ಯೇಕವಾದ ಕುಲನಿಷ್ಠ ಸಮುದಾಯಗಳಂತಾಗಿವೆ. ಆದರೆ ಇವುಗಳಲ್ಲಿಯ ಅಂತರ ಸುಧಾರಣೆ ಮತ್ತು ಸರ್ಕಾರದ ನೀತಿಯಿಂದಾಗಿ ಕಡಿಮೆಯಾಗಿ ಭಾರತದವರೆಲ್ಲ ಭಾರತೀಯರೆಂಬ ರಾಷ್ಟ್ರೀಯ ಮನೋವೃತ್ತಿ ಸಾವಕಾಶವಾಗಿಯಾದರೂ ಬರಬರುತ್ತ ಕುಲನಿಷ್ಠ ಸಮುದಾಯಗಳ ಕಟ್ಟು ಕಳಚಿ ಹೊಂದಾಣಿಕೆ ಏರ್ಪಡುವ ವಿಷಯ ಸ್ಥಿತಿ ಸ್ಪಷ್ಟವಾಗಿದೆ. (ಎನ್.ಕೆ.ಕೆ.ಟಿ.)

**ಕುಲನಿಷ್ಠ ವರ್ಗಗಳು :** ಕುಲನಿಷ್ಠ ವರ್ಗಗಳು ಜನಸಮುದಾಯಗಳ ಗುಣಲಕ್ಷಣಗಳನ್ನೇ ಪಡೆದಿದ್ದರೂ ಗಾತ್ರದಲ್ಲಿ ಬಹು ಚಿಕ್ಕವಾಗಿರುವುದರಿಂದ ಇಂಥ ಗುಂಪುಗಳನ್ನು ಕುಲನಿಷ್ಠ ವರ್ಗಗಳು (ಎತ್ನಿಕ್ ಗ್ರೂಪ್ಸ್) ಎನ್ನಲಾಗಿದೆ. ಇವು ತಮ್ಮದೇ ಆದ ನಾಗರಿಕತೆ, ಸಂಸ್ಕೃತಿ, ಜೀವನಕ್ರಮಗಳನ್ನು ಹೊಂದಿರುತ್ತವೆ. ಇಂಥ ವರ್ಗಗಳನ್ನು ಜಗತ್ತಿನಾದ್ಯಂತ ಕಾಣಬಹುದು. ಇವು ಇಂದು ನಿನ್ನೆ ಹುಟ್ಟಿದವಲ್ಲ; ಬಹಳ ಹಿಂದಿನಿಂದಲೂ ನಡೆದುಬಂದಂಥವು. ವರ್ಣ ಮತ್ತು ಸಂಸ್ಕೃತಿಗಳ ಆಧಾರದ ಮೇಲೆ ಮಾನವಕುಲಶಾಸ್ತ್ರವನ್ನು ಅಭ್ಯಾಸ ಮಾಡಿದವರು ವಿವಿಧ ಕುಲನಿಷ್ಠ ವರ್ಗಗಳನ್ನು ಗುರುತಿಸಿದ್ದಾರೆ. ಇತಿಹಾಸಕಾರರು ವಿವಿಧ ದೇಶಗಳ ಜೀವನವನ್ನು ವರ್ಣಿಸುವಾಗ ಇಂಥ ವರ್ಗಗಳನ್ನು ನಮೂದಿಸಿದರು. ಸಮಾಜ ಶಾಸ್ತ್ರಜ್ಞರು ಕೂಡ ಸಾಮಾಜಿಕ ಅಂಶಗಳನ್ನು ಅಭ್ಯಾಸ ಮಾಡುವಾಗ ಜನಾಂಗಗಳನ್ನು ಅರ್ಥಮಾಡಿಕೊಳ್ಳುವಾಗ ಈ ವರ್ಗಗಳ ಬಗ್ಗೆ ಸಂಶೋಧನೆ ನಡೆಸಿದರು. ಭಾರತದಂಥ ಬೃಹತ್ ದೇಶದಲ್ಲಿ ಅಸಂಖ್ಯ ಕುಲನಿಷ್ಠ ಸಮಾಜಗಳು ಕಂಡುಬರುತ್ತವೆ.

ಕುಲನಿಷ್ಠ ವರ್ಗಗಳ ವಿಭಜನೆ ಸಾಮಾಜಿಕವಾದುದು. ಆದ್ದರಿಂದ ಜನಸಂಖ್ಯಾ (ಪಾಪ್ಯುಲೇಷನ್) ವಿಭಾಗ ಕ್ರಮಕ್ಕೂ, ಇದಕ್ಕೂ ವ್ಯತ್ಯಾಸವಿದೆ. ಉದಾಹರಣೆಗೆ ಪೂರ್ವ ಆಫ್ರಿಕೆಯಲ್ಲಿರುವ ಯುರೋಪಿಯನ್ನರು, ಅರಬರು ಮತ್ತು ಭಾರತೀಯರು ಜನಸ್ಸಂಖ್ಯೆಯ ಒಂದು ವಿಭಾಗವೆಂದು ಹೇಳಬಹುದೇ ಹೊರತು ಅವರನ್ನು ಸಾಮಾಜಿಕ ವರ್ಗಗಳೆಂದು ಹೇಳಲಿಕ್ಕೆ ಆಗದು. ಅದೇ ಅಲ್ಲಿಯ ಭಾರತೀಯರು ತಾವು ಒಂದೇ ಬುಡಕಟ್ಟಿನವರೆಂಬ ಕಲ್ಪನೆಯನ್ನು ತಾಳಿದಲ್ಲಿ ಅವರದೊಂದು ಕುಲನಿಷ್ಠ ವರ್ಗವೆಂದು ಪರಿಗಣಿಸಬಹುದು. ಕೆಲವೊಂದು ಸಲ ಕುಲನಿಷ್ಠ ವರ್ಗಗಳು ಕೇವಲ ಜನಸಂಖ್ಯೆಯ ವಿಭಾಗಗಳೂ ಆಗಿರಬಹುದು. ಉದಾಹರಣೆಗೆ ಇಂಗ್ಲೆಂಡಿನಲ್ಲಿನ ಸ್ಕಾಟರು ಮತ್ತು ವೆಲ್ಷರು ಇಂಗ್ಲೆಂಡಿನ ಕೇವಲ ಜನಸಂಖ್ಯೆಯ ವಿಭಾಗವಾಗಿದ್ದರೂ ಕುಲನಿಷ್ಠ ವರ್ಗಗಳಂತೆ ಪರಿಗಣಿತವಾಗಿದ್ದಾರೆ.

ಸಾಮಾಜಿಕ ಸ್ತರೀಕರಣದಲ್ಲಿ ಕುಲನಿಷ್ಠ ವರ್ಗಗಳನ್ನು ಚಿಕ್ಕ ಸಾಂಸ್ಕೃತಿಕ ಸಮೂಹಗಳನ್ನು ಗಮನಿಸುತ್ತಾರೆ. ಸಾಂಪ್ರದಾಯಿಕವಾಗಿ ಸಮಾಜಶಾಸ್ತ್ರಜ್ಞರು ಜಾತಿ, ಸಂಪತ್ತು ಅಥವಾ ವರ್ಗಗಳ ಆಧಾರದ ಮೇಲೆ ಸಮಾಜವನ್ನು ಸ್ತರೀಕರಿಸುತ್ತಾರೆ.

ಭಾರತೀಯ ಸಮಾಜದಲ್ಲಿ ಕಂಡುಬರುವ ಜಾತಿ ಮತ್ತು ಉಪಜಾತಿ ಸಂಸ್ಥೆಗಳು ಕುಲನಿಷ್ಠ ವರ್ಗಗಳಂತಿವೆ. ವರ್ಣಾಶ್ರಮ ಧರ್ಮ ಪದ್ಧತಿಯಲ್ಲಿ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಗಗಳಲ್ಲಿ ವಿಭಾಗಿಸಲಾಗಿದೆ. ಇಂಥ ವರ್ಣ, ಜಾತಿ ಮತ್ತು ಉಪಜಾತಿಯ ಸಂಸ್ಥೆಗಳು ಹೆಚ್ಚಾಗಿ ಜನಸಂಖ್ಯೆಯ ವಿಭಾಗಗಳಂತೆ ಬೆಳೆದು ಬಂದಿದ್ದು ಸಮಾಜದಲ್ಲಿನ ಸ್ತರೀಕೃತ ಸಮೂಹಗಳಂತಲ್ಲ, ಭಾರತದಲ್ಲಿಯ ಜಾತಿ ಸಂಸ್ಥೆಗಳು ಇತರ ದೇಶಗಳಲ್ಲಿಯ ಜಾತಿ ಸಂಸ್ಥೆಗಳಿಗಿಂತ ಭಿನ್ನವಾಗಿದ್ದು ಕೆಲವು ಸಲ ಅತ್ಯಂತ ಚಿಕ್ಕ ಜನಸಮೂಹಗಳಾಗಿರುತ್ತವೆ.

ವೆಸ್ಟ್ ಇಂಡೀಸಿನಂಥ ಕೆಲವು ದೇಶಗಳಲ್ಲಿ ಸಾಮಾಜಿಕ ವರ್ಗಗಳೇ ಕುಲನಿಷ್ಠ ವರ್ಗಗಳಂತಿವೆ. ಸಮಾಜದಲ್ಲಿ ಒಂದೇ ತರದ ಸ್ಥಾನಮಾನವಿರುವ ಜನಸಮೂಹಗಳನ್ನು ಒಂದು ಸಾಮಾಜಿಕ ವರ್ಗವೆಂದು ಸಮಾಜಶಾಸ್ತ್ರಜ್ಞರು ಭಾವಿಸುತ್ತಾರೆ. ಇಂಥ ಸಾಮಾಜಿಕ ವರ್ಗಗಳಲ್ಲಿ ಉಳಿದ ವರ್ಗಗಳೊಡನೆ ಸ್ಪಷ್ಟವಾದ ಭಿನ್ನತೆ ಕಂಡು ಬರುತ್ತದೆಯಲ್ಲದೇ ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ ಸ್ಥಾನಮಾನ ಪರ್ಯಟನ ಕಂಡುಬರುತ್ತದೆ. ಕೇವಲ ಒಂದು ಜನಸಮೂಹಕ್ಕೆ ಸಾಮಾಜಿಕ ವರ್ಗವೆಂದು ಹೆಸರು ಸಲ್ಲದು. ಕುಲನಿಷ್ಠ ವರ್ಗಕ್ಕೆ ಇಲ್ಲವೆ ಜನಸಂಖ್ಯೆಯ ಒಂದು ಭಾಗಕ್ಕೆ ಸೇರಿದವರು ಮಾತ್ರ ಒಂದು ಸಾಮಾಜಿಕ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಒಂದು ಸಾಮಾಜಿಕ ವರ್ಗಕ್ಕೆ ಸೇರಿದ ಎಲ್ಲರೂ ಒಂದೇ ಕುಲನಿಷ್ಠ ವರ್ಗಕ್ಕೆ ಸೇರಿದವರೆಂದು ಹೇಳಲಿಕ್ಕೆ ಆಗದು. ಒಂದು ವೇಳೆ ಒಂದು ಕುಲನಿಷ್ಠವರ್ಗ ಒಂದೇ ತೆರನಾದ ಸಾಮಾಜಿಕ ವರ್ಗಕ್ಕೆ ಸೇರಿದ್ದಾಗಿದ್ದರೆ ಆಗ ಕುಲನಿಷ್ಠವರ್ಗ ಮತ್ತು ಸಾಮಾಜಿಕ ವರ್ಗ ಒಂದೇ ಗುಂಪಿನವಾಗುತ್ತವೆ.

ಯಾವುದೇ ಒಂದು ಸಮಾಜದಲ್ಲಿ ವರ್ಣ ಒಂದೇ ಆಗಿದ್ದು ಅನೇಕ ಸಂಸ್ಕೃತಿಗಳಿದ್ದರೆ ಅಂಥ ಗುಂಪುಗಳು ಸ್ಪಷ್ಟವಾಗಿ ಕುಲನಿಷ್ಠ ವರ್ಗಗಳಂತೆ ಕಂಡುಬರುತ್ತವೆ. ಆದರೆ ಅನೇಕ ವರ್ಣದವರಿದ್ದು ಒಂದೇ ಸಂಸ್ಕೃತಿಯನ್ನು ಹೊಂದಿದ್ದರೆ ವರ್ಣಭೇದ ಸ್ಪಷ್ಟವಾಗಿ ವರ್ಣದ ಆಧಾರದ ಮೇಲೆ ಜನಾಂಗಗಳು ಪ್ರತ್ಯೇಕ ಕುಲನಿಷ್ಠ ವರ್ಗಗಳಾಗಿ ಮೂಡಿಬರುತ್ತವೆ.

ಬರ್ಮ ಮತ್ತು ಇಂಡೋನೇಷ್ಯದಂಥ ರಾಷ್ಟ್ರಗಳು ಸ್ವಾತಂತ್ರ್ಯಪೂರ್ವದಲ್ಲಿ ಒಂದೇ ಆಳ್ವಿಕೆಗೆ ಒಳಪಟ್ಟಾಗ್ಯೂ ಅಲ್ಲಿ ಅನೇಕ ವರ್ಣಗಳ ಜನಾಂಗಗಳೂ ಅನೇಕ ಸಂಸ್ಕೃತಿಗಳ ಕುಲನಿಷ್ಠ ಸಮುದಾಯಗಳೂ ಕೂಡಿ ಬಾಳುತ್ತಿದ್ದವು. ಇಂಥ ಪರಿಸ್ಥಿತಿಯಲ್ಲಿ ಅನೇಕ ತರದ ಕುಲನಿಷ್ಠ ವರ್ಗಗಳೂ ಒಂದೇ ರಾಜಕೀಯ ಆಡಳಿತದಲ್ಲಿ ಬಾಳುವುದನ್ನು ಕಾಣಬಹುದು.

ಕುಲನಿಷ್ಠ ವರ್ಗಗಳನ್ನು ಹೊಂದಿದ ಎಲ್ಲ ಸಮಾಜಗಳೂ ಸಾಮಾಜಿಕ ಸ್ತರೀಕರಣದಲ್ಲಿ ಸೇರ್ಪಡೆಗೊಳ್ಳವು. ಅಲ್ಲದೆ ಕುಲನಿಷ್ಠ ವರ್ಗಗಳಲ್ಲಿಯೇ ಕಂಡು ಬರುವ ಸಂಬಂಧ ಬಹುಮಟ್ಟಿಗೆ ಸಂಯುಕ್ತ ಸಂಘದ ಮಾದರಿಯಾಗಿರುವುದೇ ಹೊರತು ಅಂತಸ್ತುಗಳನ್ನು ಹೊಂದಿರುವಂಥಾಗಿರದು.

ಸ್ವಿಟ್ಜರ್‌ಲೆಂಡ್, ಕೆನಡ ದೇಶಗಳಲ್ಲಿ ಸಾಂಸ್ಕೃತಿಕ ಸಾಮೂಹಿಕ ಸಮೂಹಗಳು ಸ್ಪಷ್ಟವಾಗಿ ಪ್ರತ್ಯೇಕಿಸಲ್ಪಟ್ಟಿವೆ. ಇಲ್ಲಿನ ಪ್ರತಿಯೊಂದು ಕುಲನಿಷ್ಠ ವರ್ಗಗಳನ್ನೂ ಸ್ತರೀಕರಿಸಬಹುದು. ಆದರೆ ಮಾನವಕುಲ ಶಾಸ್ತ್ರದೃಷ್ಟಿಯಿಂದ ಇಂಥ ಸಮೂಹಗಳ ಶಕ್ತಿ ವಿಶಾಲವಾದ ಸಮಾಜದಲ್ಲಿ ಸಾಕಷ್ಟು ಇರುವುದಿಲ್ಲ. ಅಥವಾ ಮೇಲು ಕೀಳು ಎಂದು ಮೌಲ್ಯಮಾಪನಕ್ಕೊದಗುವುದಿಲ್ಲ. ಮಲಯ ದೇಶದಲ್ಲಿ ಕುಲನಿಷ್ಠ ವರ್ಗಗಳಿದ್ದರೂ ಅವು ಒಂದಕ್ಕೊಂದು ಸಂಬಂಧ ಸೂಚಿಸುವಂತೆ ಸ್ತರೀಕರಿಸಲ್ಪಟ್ಟಿಲ್ಲ. ಇಲ್ಲಿಯ ಜನಸಂಖ್ಯೆ ಮಲಯ ದೇಶದವರಿಂದಲೂ ಚೀನದ ವಲಸೆಗಾರರಿಂದಲೂ ಭಾರತೀಯರಿಂದಲೂ ಕೂಡಿದೆ. ಇಲ್ಲಿ ಸರ್ಕಾರ ಚುನಾಯಿಸಲ್ಪಟ್ಟ ಜನರಿಂದ ನಡೆಯುತ್ತದೆ. ಸರ್ಕಾರದ ಹೊಣೆ ಮಲಯದ ಜನರ ಮೇಲಿದ್ದರೂ ದೇಶದ ಆರ್ಥಿಕ ಪರಿಸ್ಥಿತಿ ಚೀನೀಯರಿಂದ ನಿಯಂತ್ರಣಗೊಂಡಿದೆ. ಈ ಪ್ರಕಾರ ಮಾನವಕುಲ ವಿಭಾಗಗಳು ದೇಶದ ಅನೇಕ ಅಂಶಗಳ ಮೇಲೆ ಪ್ರತ್ಯೇಕವಾಗಿ ಪ್ರಭಾವ ಬೀರಬಹುದಾಗಿದೆ.

ಮೆಕ್ಸಿಕೊ ದೇಶದಲ್ಲಿ ಸಾಮಾಜಿಕ ಸಮೂಹಗಳನ್ನು ಪ್ರತ್ಯೇಕಿಸುವಾಗ ಕುಲನಿಷ್ಠ ವರ್ಗಗಳಿಗೆ ಪ್ರಾಧಾನ್ಯ ಕೊಡುವುದಿಲ್ಲ. ಇಲ್ಲಿ ಜನ ರಾಜಕೀಯ, ಆರ್ಥಿಕ ಮತ್ತು ಇನ್ನಿತರ ಮಹತ್ತ್ವದ ಸ್ಥಾನಮಾನಗಳನ್ನು ಪಡೆಯಬೇಕಾದರೆ ಕುಲನಿಷ್ಠ ವರ್ಗಗಳ ಅಥವಾ ಇನ್ನಿತರ ಯಾವುದೇ ಸಾಮಾಜಿಕ ಸಮೂಹದ ಆಧಾರದ ಅಗತ್ಯ ಇರುವುದಿಲ್ಲ. ಥೈಲ್ಯಾಂಡಿನಂಥ ದೇಶದಲ್ಲಿ ಬೌದ್ಧರು ಇನ್ನಿತರ ಅಲ್ಪಸಂಖ್ಯಾತ ಕುಲನಿಷ್ಠ ವರ್ಗಗಳನ್ನು ತಮ್ಮಲ್ಲಿ ಕೂಡಿಸಿಕೊಂಡು ಬಾಳುವುದನ್ನು ಚೆನ್ನಾಗಿ ಕಲಿತಿದ್ದಾರೆ.

ವಿಭಿನ್ನ ಧರ್ಮಗಳನ್ನು ಅನುಸರಿಸುತ್ತಿರುವ ಜನಸಮೂಹಗಳು ಒಂದೇ ಮಾನವಕುಲ ಮತ್ತು ಸಾಂಸ್ಕೃತಿಕ ವಿಭಾಗಕ್ಕೆ ಸೇರಿದವರಾಗಿದ್ದರೆ ಇಂಥ ಸಂಯುಕ್ತ ಸಂಘವನ್ನು ಹೊಂದಿದ ಸರ್ಕಾರ ಕೆಲವೊಂದು ಸಲ ಘರ್ಷಣೆಗಳಿಗೆ ಎಡೆಮಾಡಿಕೊಡಬಹುದು. ಇಂಥ ಘರ್ಷಣೆಗಳು ವಿಭಿನ್ನ ಕುಲನಿಷ್ಠ ಸಮಾಜಗಳಿರುವಲ್ಲಿ ಸಾಮಾನ್ಯ.

ಒಂದೇ ರಾಜಕೀಯ ಆಡಳಿತಕ್ಕೆ ಒಳಪಡದೆ ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಮತ್ತು ರಕ್ತಸಂಬಂಧದಿಂದ ಒಂದಕ್ಕೊಂದು ಸಂಬಂಧವನ್ನಿಟ್ಟುಕೊಂಡಿರುವ ಕುಲನಿಷ್ಠ ಸಮಾಜಗಳ ಬಗ್ಗೆ ಇನ್ನೂ ಅಧ್ಯಯನ ನಡೆಯಬೇಕಾಗಿದೆ.

ಕೆಲವೊಂದು ಸಲ ಕುಲನಿಷ್ಠ ವರ್ಗಗಳು ತಮ್ಮವೇ ಆದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಇಲ್ಲವೆ ರಾಜಕೀಯ ಪ್ರತ್ಯೇಕತೆಯನ್ನು ಎತ್ತಿ ತೋರಿಸುವಲ್ಲಿ ಪ್ರಸಿದ್ಧಿ ಪಡೆದಿವೆ.

ಇಂಥ ಪ್ರತ್ಯೇಕತೆಯನ್ನು ತೋರಿಸುವಲ್ಲಿ ಅವು ಸಮಾಜದಲ್ಲಿ ತಮ್ಮ ಸ್ಥಾನಮಾನವನ್ನು ಸಹ ತೋರಿಸುತ್ತವೆ.

ಐರೋಪ್ಯರು ಪೂರ್ವ ಆಫ್ರಿಕದಲ್ಲಿ ಆಡಳಿತವನ್ನು ಪ್ರಾರಂಭ ಮಾಡಿದಾಗ ಭಾರತದಿಂದ ವಲಸೆಗಾರರು ಬಂದು ಅಲ್ಲಿ ನೆಲೆಸಲಾರಂಭಿಸಿದರು. ಇವರು ಆಗಾಗಲೇ ಅಲ್ಲಿ ನೆಲೆಸಿದ್ದ ಆಫ್ರಿಕನ್‌ರಿಗಿಂತ ಮತ್ತು ಅರಬ್ಬೀ ಜನರಿಗಿಂತ ಮಾನವ ಕುಲದಲ್ಲಿ ಮತ್ತು ಸಂಸ್ಕೃತಿಯಲ್ಲಿ ಭಿನ್ನವಾಗಿದ್ದರು. ಆಗ ತಾನೆ ಬಂದ ಭಾರತೀಯರು ಮಧ್ಯಸ್ಥಗಾರರೆಂದೂ ನಿಪುಣ ಕೆಲಸಗಾರರೆಂದೂ ಗೊತ್ತಾದಾಗ ಉಳಿದ ಕುಲನಿಷ್ಠ ವರ್ಗಗಳಿಗೂ ಅವರಿಗೂ ಘರ್ಷಣೆ ಪ್ರಾರಂಭವಾಯಿತು. ಇಂಥಾ ಒಂದು ಘರ್ಷಣೆ ಕುಲನಿಷ್ಠ ವರ್ಗಗಳಲ್ಲಿ ಭಿನ್ನವಾದ ಸಂಸ್ಕೃತಿ ಮತ್ತು ಪ್ರತ್ಯೇಕತೆಗಳನ್ನು ಉಳಿಸಿಕೊಂಡು ಬರುವಲ್ಲಿ ಸಹಾಯಕವಾಗಿದೆ.

ಸಂಪರ್ಕ ಸಾಧನಗಳು ಮತ್ತು ಪ್ರಯಾಣ ಸೌಕರ್ಯಗಳು ಹೆಚ್ಚಾದರೂ ವರ್ಗಗಳ ವೈಶಿಷ್ಟ್ಯ, ಮತ್ತು ಪ್ರತ್ಯೇಕತಾ ಮನೋಭಾವಗಳು ಕಡಿಮೆಯಾಗವು. ಎಲ್ಲಿಯವರೆಗೆ ವಿವಿಧ ಸಾಮಾಜಿಕ ಸಮೂಹಗಳಲ್ಲಿ ತಮ್ಮ ವಿಭಿನ್ನ ಸಂಪ್ರದಾಯಗಳನ್ನೂ, ಸಂಸ್ಕೃತಿಯನ್ನೂ, ಮಾನವಕುಲವನ್ನು ವಿಭಾಗಿಸುವ ಇನ್ನಿತರ ಅಂಶಗಳನ್ನೂ ಕಾಯ್ದುಕೊಳ್ಳಬೇಕೆಂಬ ಲವಲವಿಕೆ ಇರುತ್ತದೋ ಅಲ್ಲಿಯವರೆಗೂ ಇಂಥ ಕುಲನಿಷ್ಠ ವರ್ಗಗಳು ಇದ್ದೇ ಇರುತ್ತವೆ.

ಕೆಲವೊಂದು ಸಲ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಇಂಥ ಕುಲನಿಷ್ಠ ಸಮಾಜಗಳು ತಾವಾಗಿಯೇ ಉದ್ಭವಿಸಿ ಮುಂದುವರೆಯಲು ಪ್ರಯತ್ನಿಸಿದ್ದುದು ಇತಿಹಾಸದಲ್ಲಿ ಕಂಡುಬಂದಿದೆ. ಇವುಗಳ ತೀವ್ರತೆಯನ್ನು ಕಡಿಮೆಮಾಡಲು ಇರುವುದು ಒಂದೇ ದಾರಿ; ಪರಸ್ಪರ ಅನುಕರಣೆ, ಸಹನೆ, ಸಹಜೀವನ, ಉದಾರ ಮನೋಭಾವ–ಇವು ಬೆಳೆಯಬೇಕು. (ಎನ್.ಕೆ.ಕೆ.ಟಿ.)

**ಕುಲಪತಿ :** 10,000 ಜನರನ್ನು ಅನ್ನವಸ್ತ್ರಾದಿಗಳಿಂದ ಪೋಷಿಸಿ, ಅವರಿಗೆ ವಿದ್ಯಾಪ್ರಧಾನ ಮಾಡುವ ಮಹರ್ಷಿ. ನಿದರ್ಶನ ಶೌನಕ. ಮಹಾಭಾರತದ ಆದಿಯಲ್ಲಿ ಇವನ ಉಲ್ಲೇಖವಿದೆ. ಹಿಮವತ್ಪರ್ವತದ ತಪ್ಪಲಲ್ಲಿದ್ದ ಬ್ರಹ್ಮಾಶ್ರಮದ ಅಧಿಪತಿಯನ್ನು, ಚಿತ್ರಕೂಟದಲ್ಲಿದ್ದ ಆಶ್ರಮದ ಪ್ರಧಾನಿಯನ್ನು ಕುಲಪತಿ ಎಂದು ನಿರ್ದೇಶಿಸಲಾಗಿದೆ.

ಈಗ ವಿಶ್ವವಿದ್ಯಾನಿಲಯದ ವೈಸ್–ಛಾನ್ಸಲರನ್ನು ಇದೇ ಹೆಸರಿನಿಂದ ಕರೆಯುವುದಿದೆ. (ಕೆ.ಎಸ್.ವಿ.)

ಕುಲಪತಿಗಳು ಆಧುನಿಕ ವಿಶ್ವವಿದ್ಯಾನಿಲಯಗಳಲ್ಲಿ ಪ್ರಮುಖ ಜ್ಞಾನ ಹೊಂದಿದ್ದಾರೆ. ಇವರು ಈ ಸಂಸ್ಥೆಗಳ ಶೈಕ್ಷಣಿಕ ಮತ್ತು ಆಡಳಿತಾಂಶಗಳ ಮುಖ್ಯರು. ಈ ಹುದ್ದೆಗೆ ಕಾನೂನಿನಲ್ಲಿ ವ್ಯಾಪಕ ಅಧಿಕಾರವಿದ್ದು ವಿದ್ಯಾಸಂಸ್ಥೆಗಳ ಆಗುಹೋಗುಗಳಲ್ಲಿ ನಿರ್ಣಾಯಕ ಪಾತ್ರವಹಿಸುವ ಅವಕಾಶವಿದೆ. ಇಂದು ಕುಲಪತಿ ಸ್ಥಾನ ಉನ್ನತಾದರ್ಶಗಳ ಪಾಲನೆಗೂ ಸಂಕೇತವಾಗಿದೆ. ಇದರ ಮೆರುಗು ಆ ಸ್ಥಾನವನ್ನು ಅಲಂಕರಿಸಿರುವ ವ್ಯಕ್ತಿಯ ವ್ಯಕ್ತಿತ್ವವನ್ನವಲಂಬಿಸಿರುತ್ತದೆ. (ಡಿ.ಎಸ್.ಜೆ)

**ಕುಲಪರ್ವತಗಳು :** ಒಂದು ದ್ವೀಪದ ಅಥವಾ ಭೂಪ್ರದೇಶದ ಎಲ್ಲೆಕಟ್ಟನ್ನು ತಿಳಿಸುವ ಮೂಲಪರ್ವತಗಳಿವು. ಜಂಬು, ಪಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರ ದ್ವೀಪಗಳಿಗೆ ಸಂಬಂಧಿಸಿದಂತೆ ವಿವಿಧ ಹೆಸರಿನ ಕುಲಪರ್ವತಗಳಿವೆ.

ಮಹೇಂದ್ರ, ಮಲಯ, ಸಹ್ಯ, ಶಕ್ತಿಮಾನ್, ರುಕ್ಷ, ಮತ್ತು ವಿಂಧ್ಯಗಳು ಜಂಬೂ ದ್ವೀಪದ ಭರತವರ್ಷದ ಸಪ್ತ ಕುಲಪರ್ವತಗಳು, ಅಷ್ಟದಿಗ್ಗಜಗಳು ಭೂಮಿಯನ್ನು ಕೆಳಕ್ಕೆ ಬೀಳದಂತೆ ಹೊತ್ತಿರುವಂತೆ ಕುಲಪರ್ವತಗಳು ಭೂಮಿಯನ್ನು ಹಾರಿ ಹೋಗದಂತೆ ಒತ್ತಿ ಹಿಡಿದಿವೆಯೆನ್ನಲಾಗಿದೆ.

ಜೈನಪುರಾಣಗಳಲ್ಲಿ ಹೇಳಿರುವ ಪರ್ವತಗಳು ಇವು; ಹಿಮವಂತ, ಮಹಾಹಿಮವಂತ, ನಿಷಧ, ನೀಲ, ರುಕ್ಮಿ, ಶಿಖರಿ. ಇವು ಜಂಬೂದ್ವೀಪದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತ ಕ್ರಮವಾಗಿ ಪೂರ್ವ–ಪಶ್ಚಿಮವಾಗಿ ಹಬ್ಬಿ ಭೂಭಾಗವನ್ನು ಸಪ್ತಕ್ಷೇತ್ರಗಳಾಗಿ ವಿಭಾಗಿಸಿವೆ. (ಬಿ.ಜಿ.)

**ಕುಲಶೇಖರ ಪಾಂಡ್ಯ :** ಮಧುರೆಯ ಒಬ್ಬ ಪಾಂಡ್ಯ ದೊರೆ. ವಿಕ್ರಮ ಪಾಂಡ್ಯನ ಮೂಲಪುರುಷ. 1182ರಿಂದ 1190ರ ವರೆಗೆ ಆಳಿದ. 1166ರಿಂದ ಕುಲಶೇಖರನಿಗೂ ಪರಾಕ್ರಮ ಪಾಂಡ್ಯನಿಗೂ ಪಟ್ಟಕ್ಕಾಗಿ ಕಲಹ ನಡೆದಿತ್ತು. ಪರಾಕ್ರಮ ಪಾಂಡ್ಯನನ್ನು ಕುಲಶೇಖರ ಕೊಂದು ಮಧುರೆಯನ್ನು ಆಕ್ರಮಿಸಿಕೊಂಡಾಗ ಪರಾಕ್ರಮ ಪಾಂಡ್ಯನ ಮಗನಾದ ವೀರಪಾಂಡ್ಯ ಸಿಂಹಳದ ದೊರೆಯಾದ ಪರಾಕ್ರಮ ಬಾಹುವಿನ ಸಹಾಯವನ್ನು ಯಾಚಿಸಿದ. ಕುಲಶೇಖರನಿಗೆ ಚೋಳರ ಬೆಂಬಲ ಸಿಕ್ಕಿತು. ಕುಲಶೇಖರ ಕೆಲಕಾಲದ ಅನಂತರ ಸಿಂಹಳದ ನೆರವಿನಿಂದ ಚೋಳರ ವಿರುದ್ಧ ಹೋರಾಡಿದ. ಆಗ ಚೋಳರು ವೀರಪಾಂಡ್ಯನಿಗೆ ನೆರವು ನೀಡಿ ಅವನಿಗೆ ಪಟ್ಟಕಟ್ಟಿದರು. 1182ರ ಹೊತ್ತಿಗೆ ಕುಲಶೇಖರ ತೀರಿಕೊಂಡ. ಚೋಳರು ವೀರಪಾಂಡ್ಯನನ್ನು ಪದಚ್ಯುತಗೊಳಿಸಿ ಕುಲಶೇಖರನ ಶಾಖೆಯ ವಿಕ್ರಮ ಪಾಂಡ್ಯನಿಗೆ ರಾಜ್ಯಾಭಿಷೇಕ ಮಾಡಿದರು. (ಎಸ್.ಎನ್.ಕೆ.ಎ.)

**ಕುಲು :** ಹಿಮಾಲಯ ಪ್ರದೇಶದಲ್ಲಿ, ಮಂಡಿಯ ಉತ್ತರಕ್ಕಿರುವ ಒಂದು ಕಣಿವೆ, ಕಾಂಗ್ರಾ ಜಿಲ್ಲೆಯ ಒಂದು ಉಪವಿಭಾಗ; ಇದೇ ಹೆಸರಿನ ಒಂದು ಪಟ್ಟಣ. ಪೀರ್ ಪಂಜಾಬ್ ಶ್ರೇಣಿಯಲ್ಲಿ ರೊಹ್ತಾಂಗ್ ಕಣಿವೆಯಲ್ಲಿ (3954 ಮೀ) ಹುಟ್ಟಿ, ಪೈನ್ ಮತ್ತು

ಕುಲುಕಣಿವೆ

ದೇವದಾರು ವೃಕ್ಷಗಳನ್ನು ಹೊದ್ದುನಿಂತ ಹಿಮಶಿಖರಗಳ ನಡುವೆ ಜಾರಿ, ಜಲಪಾತಗಳನ್ನು ನಿರ್ಮಿಸಿ, ಕಂದರಗಳಲ್ಲಿ ನುಸುಳಿ ಬರುವ ಬೀಯಾಸ್ ನದಿಯ ಮೇಲ್ಭಾಗದ ಸುಂದರ ಕಣಿವೆಯಿದು. ಬೀಯಾಸನ್ನು ಲಾರ್ಜೆಯಲ್ಲಿ ಕೂಡುವ ಸೇಜ್ ನದಿಯಿಂದಾಗಿ ಕುಲು ಸರಾಜ್ ಬೇರ್ಪಟ್ಟಿದೆ. ಹೆಚ್ಚಿನ ಜನವಸತಿಯಿರುವುದು 1515 ಮೀ ಎತ್ತರದ ಪ್ರದೇಶದಲ್ಲಿ, 2727 ಮಿ. ಎತ್ತರದವರೆಗೂ ಹಳ್ಳಿಗಳಿವೆ. ಕೃಷಿ ಇಲ್ಲಿಯ ಮುಖ್ಯ ಕಸಬು. ಉತ್ಪನ್ನವಾದ ಸೇಬು, ಬೆರಿ, ಪ್ಲಂ, ಮತ್ತು ಪರ್ಸಿಯನ್ ಹಣ್ಣುಗಳು ಇಲ್ಲಿ ಬೆಳೆಯುತ್ತವೆ. ಕಣಿವೆಯನ್ನು ಬೆಳ್ಳಿಕಣಿವೆ ಎಂದು ಕರೆಯುತ್ತಾರೆ. ಚಳಿಗಾಲದಲ್ಲಿ ಹಿಮ ಹರಡಿದಾಗ, ವಸಂತಕಾಲದಲ್ಲಿ ಹಣ್ಣಿನ ಮರಗಳು ಮಂಜು ಬಿಳುಪಿನ ಹೂಗಳಿಂದ ತುಂಬಿದಾಗ, ಬೆಳ್ಳಿಯಂತೆ ಕಂಗೊಳಿಸುತ್ತದೆ. ತನ್ನ ನಿಸರ್ಗ ಸೌಂದರ್ಯದಿಂದಾಗಿ ಈ ಕಣಿವೆ ಅನೇಕ ಪ್ರವಾಸಿಗಳ ಆಕರ್ಷಣೆಯಾಗಿದೆ. ಪಠಾಣಕೋಟೆಯಿಂದ ಮೋಟಾರಿನಲ್ಲಿ ಅಲ್ಲಿಗೆ ಹೋಗಬಹುದು. ಕುಲು ಕಣಿವೆಗೆ ಅತ್ಯಂತ ಹತ್ತಿರದ ರೈಲ್ವೆನಿಲ್ದಾಣ ಜೋಗಿಂದರ್. ಕುಲು ಪಟ್ಟಣ 1210 ಮೀ ಎತ್ತರದಲ್ಲಿದೆ. ಇದು ಕುಲು ಉಪವಿಭಾಗದ ಕೇಂದ್ರ . ಇಲ್ಲಿಯ ಶಾಲು ಕೈಗಾರಿಕೆ ಪ್ರಸಿದ್ಧವಾಗಿದೆ. ಇದು ವ್ಯಾಪಾರಕೇಂದ್ರವೂ ಹೌದು. ದಸರೆಯ ಸಮಯದಲ್ಲಿ ಇಲ್ಲೊಂದು ದೊಡ್ಡ ಜಾತ್ರೆ ನಡೆಯುತ್ತದೆ. ಆಗ ಪರ್ವತದೇವತೆಗಳ ಉತ್ಸವ ನಡೆಯುತ್ತದೆ. 1818 ಮೀಗಿಂತ ಎತ್ತರದಲ್ಲಿರುವ ಮನಾಲಿ ಇನ್ನೊಂದು ಆಕರ್ಷಕ ಪ್ರವಾಸಿ ಕೇಂದ್ರ. ಜವಹರ್‌ಲಾಲ್ ನೆಹರೂ ಇದನ್ನು ಬಹಳ ಮೆಚ್ಚಿದ್ದರು. ಕುಶಾಲು ನಡಿಗೆ (ಹೈಕಿಂಗ್) ಮತ್ತು ಪರ್ವತಾರೋಹಣದ ಅಭ್ಯಾಸಕ್ಕೆ ಇದು ಆದರ್ಶ ಪರಿಸರ. ಈಚೆಗೆ ಇಲ್ಲೊಂದು ಹಿಮಾಲಯನ್ ಪರ್ವತಾರೋಹಣ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. (ಎಸ್.ಎಲ್.ಕೆ.)

**ಕುಲುಕು ಮೆಲುಕಿನ ಬಾತು :** ಪಕ್ಷಿವರ್ಗದ ಆನ್ಸೆರಿಫಾರ್ಮೀಸ್ ಗಣದ ಅನಾಟಿಡೀ ಕುಟುಂಬಕ್ಕೆ ಸೇರಿದ ಡ್ಯಾಫಿಲ ಅಕ್ಯೂಟ ಅಥವಾ ಅನಾಸ್ ಅಕ್ಯೂಟ ಎಂಬ ವೈಜ್ಞಾನಿಕ



ಹೆಸರಿನ ಹಕ್ಕಿ (ಪಿನ್ ಟೇಲ್). ಇದರ ಬಾಲದಲ್ಲಿನ ಮಧ್ಯದ ಗರಿಗಳು ಬಲು ಉದ್ದ ಹಾಗು ಚೂಪಾಗಿದ್ದು ನೀರಿನಲ್ಲಿ ಹಕ್ಕಿ ಈಜುವಾಗ ಕುಲುಕಾಡುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಉತ್ತರ ಅಮೆರಿಕ, ಶ್ರೀಲಂಕ, ಭಾರತ, ಪನಾಮ ಮುಂತಾದೆಡೆಗಳಲ್ಲಿ

ಸಾಮಾನ್ಯವಾಗಿ ಕಾಣಬರುತ್ತದೆ. ಬಾತುಕೋಳಿಯನ್ನು ಹೋಲುತ್ತದೆ. ಇದರ ಉದ್ದ ಸುಮಾರು 2½–3' ಗಂಡುಹಕ್ಕಿಗೆ ಆಲಿವ್–ಕಂದು ಬಣ್ಣದ ಕತ್ತು ಮತ್ತು ತಲೆ, ಬೂದಿ ಬಣ್ಣದ ಬೆನ್ನುಭಾಗ ಹಾಗೂ ಬಿಳಿಯ ಹೊಟ್ಟೆಭಾಗ ಇವೆ. ಹೊಟ್ಟೆಭಾಗದ ಬಿಳಿಯ ಬಣ್ಣ ಕತ್ತಿನ ಎರಡು ಪಕ್ಕಗಳಲ್ಲಿ ವಿಸ್ತರಿಸಿದೆ. ಹೆಣ್ಣು ಹಕ್ಕಿ ಮಾಸಲು ಕಂದುಬಣ್ಣದ್ದು. ಗಂಡು ಸಿಳ್ಳು ಹಾಕುವಂತೆ ಕೂಗುತ್ತದೆ. (ಎಲ್.ಎಸ್.ಜಿ.)

**ಕುಲುಮೆ :** ಆವಿಗೆಯ ಆವರಣದೊಳಗೆ ಇಂಧನವನ್ನು ದಹಿಸುವುದಕ್ಕಾಗಿಯೇ ಇರುವ ಜಾಗ. ಅಂಥ ಆವರಣವನ್ನೊದಗಿಸಿ ಅದನ್ನು ಪ್ರತ್ಯೇಕಿಸಿರುವುದರಿಂದಲೆ ಅಪಾರ ಶಕ್ತಿಯುತವಾದದ್ದಾದರೂ ದಹನಕ್ರಿಯೆ ಇಲ್ಲಿ ಒಂದು ಹಿಡಿತಕ್ಕೆ ಒಳಪಟ್ಟಿರುವುದು. ಕುಲುಮೆಯ ಅಳತೆ ಆಕಾರಗಳು ಹಲವಾರು ಅಂಶಗಳನ್ನು ಗಣನೆಗೆ ತೆಗೆದುಕೊಂಡು ಇತ್ಯರ್ಥವಾಗಿರುತ್ತವೆ. ಸ್ವತಃ ಆವಿಗೆ, ಕಿಚ್ಚಿನ ಸಜ್ಜು ಮತ್ತು ಉರಿಸುವ ಇಂಧನ ಯಾವ ಬಗೆಯವು ಎಂಬುದು ಪ್ರಮುಖವಾದದ್ದು. ಗಾಳಿ ಮತ್ತು (ದ್ರವ ಅಥವಾ ಅನಿಲ) ಇಂಧನಗಳ ಸಂಯೋಗವಾಗುವಾಗ ಸಾಕಷ್ಟು ಪ್ರಕ್ಷುಬ್ಧತೆಯುಂಟಾಗುವಂತೆಯೂ ಅದರ ರಚನೆಯಿರಬೇಕು. ಕುಲುಮೆಯೊಳಗಿನ ಉರಿ ಸತತವಾಗಿದ್ದು ದಹನಕ್ರಿಯೆ ಪೂರ್ಣಗೊಳ್ಳುತ್ತ ಇರಬೇಕಾದರೆ ಕುಲುಮೆಯನ್ನು ಸುತ್ತುವರಿದ ಗೋಡೆಗಳ ಗುಣಲಕ್ಷಣಗಳು ಮುಖ್ಯ ಪಾತ್ರ ವಹಿಸುತ್ತವೆ. ಪರಸ್ಪರ ವಿರುದ್ಧವಾದ ಎರಡು ಗುಣಗಳ ಗಣನೆ ಇಲ್ಲಿ ಬೇಕಾಗುತ್ತದೆ : ದಹನಕ್ರಿಯೆ ಪೂರ್ಣಗೊಳ್ಳಲೂ ನೀರಿಗೆ ಉಷ್ಣಪ್ರವಾಹದ ವೇಗ ಹೆಚ್ಚಲೂ ಗೋಡೆಗಳು ಸಾಧ್ಯವಾದಷ್ಟು ಹೆಚ್ಚಿನ ಕಾವಿನಲ್ಲಿರಬೇಕು; ಹಾಗೆಯೇ ಕಟ್ಟಡದ ಬಲ ಕುಂದದಿರ ಬೇಕಾದರೆ ದುರಸ್ತಿನ ವೆಚ್ಚ ಕಡಿಮೆಯಿರಬೇಕಾದರೆ ಗೋಡೆಗಳು ಆದಷ್ಟು ತಂಪಿನಲ್ಲಿರಬೇಕು. ಹೀಗೆ ರಚಿತವಾಗುವ ಕುಲುಮೆಯ ಗೋಡೆಗಳಲ್ಲಿ ಮುಖ್ಯವಾಗಿ ಮೂರು ಬಗೆಗಳುಂಟು.

1. ಕಡಿಮೆ ಉತ್ಪಾದನೆಯ ಆವಿಗೆಗಳಿಗೆ ಉಪಯೋಗಿಸುವ ಕಾವಿಟ್ಟಿಗೆಯ ಸಾದಾ ಕಟ್ಟಡ. ಗೋಡೆಯ ಒಳಮುಖ ಸಾಮಾನ್ಯವಾಗಿ ಪ್ರಜ್ವಲಿಸುವ ಉಷ್ಣತೆಯಲ್ಲಿರುವುದರಿಂದ ಉಷ್ಣಶಕ್ತಿ ಗೋಡೆಯ ಮೂಲಕ ಹಾದು ವ್ಯಯವಾಗದಂತೆ ಗೋಡೆ ದಪ್ಪವಿರಬೇಕಾಗುತ್ತದೆ. ಕೆಲವೊಮ್ಮೆ ಕಾವಿಟ್ಟಿಗೆಯ ಒಳಗೋಡೆಯ ಮಗ್ಗುಲಿಗೆ ಬೂದಿಯಂಥ ಅವಾಹಕ ವಸ್ತುವನ್ನು ತುಂಬಲಾಗುವಂತೆ ಒಂದು ಕವಚ ಅಥವಾ ಸಾದಾ ಇಟ್ಟಿಗೆಯ ಒಂದು ಹೊರಗೋಡೆಯನ್ನು ಕಟ್ಟಿರುತ್ತಾರೆ.

2. ವಾಯುತಂಪಿನ ಗೋಡೆಗಳು : ಇಲ್ಲಿ ತೆಳುವಾದ ಕಾವಿಟ್ಟಿಗೆಯ ಒಳಗೋಡೆಗೂ ಹೊರಾವರಣದ ಗೋಡೆಗೂ ನಡುವೆ ತಂಪುಗೈಯುವ ಗಾಳಿಯ ಹರಿವನ್ನು ಏರ್ಪಡಿಸಿರುತ್ತದೆ. ಈ ಗಾಳಿ ಒಳಗಿನಿಂದ ತೂರಿಬರುವ ಉಷ್ಣಶಕ್ತಿ ವೃಥಾವ್ಯಯವಾಗಲೀಯದೆ ಪುನಃ ಕುಲುಮೆಯೊಳಕ್ಕೇ ತೂರಿಸಲ್ಪಡುವುದರಿಂದ ದಹನ ಕ್ರಿಯೆಗೆ ಸಹಾಯಕವಾಗುತ್ತದೆ.

3. ಜಲದಿಂದ ತಂಪಾಗಿಸಿದ ಗೋಡೆಗಳು: ಇಲ್ಲಿ ಕುಲುಮೆಯ ಕಾವಿಟ್ಟಿಗೆಯ ಗೋಡೆಗಳ ಒಳಮಗ್ಗುಲನ್ನು ಭಾಗಶಃ ಅಥವಾ ಎಲ್ಲ ಕಡೆಗೂ ಜಲನಾಳಗಳಿಂದ ಮುಚ್ಚಿರುವುದರಿಂದ ಕುಲುಮೆಯೊಳಗಿನ ಅತಿಕಾವಿನಿಂದ ಗೋಡೆಗಳಿಗೆ ಯಾವ ವಿಧದ ಅಪಾಯವೂ ಆಗದೆ ಇರುವುದಲ್ಲದೆ ವಿಸ್ತರಿಸುವ ಉಷ್ಣಶಕ್ತಿಯನ್ನು ಹೀರುವಲ್ಲಿ ಈ ನಾಳಗಳು ಬಹಳ ಪ್ರಯೋಜನಕಾರಿಯಾಗಿರುತ್ತವೆ. (ಕೆ.ವಿ.ಎಸ್.)

ಲೋಹಗಳ ಮತ್ತು ಅನೇಕ ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ ಬಳಸುವ ಕೆಲವು ಮುಖ್ಯ ಮಾದರಿಗಳನ್ನು ಮುಂದೆ ಬರೆದಿದೆ.

**ಪ್ರತಿವರ್ತಕ ಕುಲುಮೆ :** ಬೇರೊಂದು ಜ್ವಾಲಕದಲ್ಲಿ ಉರುವಲನ್ನು ಉರಿಸಿ ಪಡೆದ ಉನ್ನತ ಉಷ್ಣತೆಯಲ್ಲಿರುವ ಅನಿಲಗಳಿಂದ ಪರಿವರ್ತಕಗಳನ್ನು ಇದರಲ್ಲಿ ಕಾಯಿಸುವರು. ಕುಲುಮೆ ಉಷ್ಣನಿರೋಧಕ ಇಟ್ಟಿಗೆಗಳಿಂದ ರಚಿತವಾಗಿದ್ದು ಇದರಲ್ಲಿ ಎರಡು ಭಾಗಗಳಿವೆ. ಒಂದು ಜ್ವಾಲಕ. ಇಲ್ಲಿ ಕಲ್ಲಿದ್ದಲು ಅಥವಾ ಬೇರಾವುದಾದರೊಂದು ಉರುವಲನ್ನು ಉರಿಸುವರು. ಎರಡನೆಯದು ಪರಿವರ್ತಕವನ್ನು ಹರಡಲು ಅನುಕೂಲವಾದ ಚಪ್ಪಟೆಯಾದ ಒಂದು ಒಲೆ. ಈ ಎರಡು ಭಾಗಗಳೂ ಚಿಕ್ಕದಾದ ಒಂದು ಗೋಡೆಯಿಂದ ಪ್ರತ್ಯೇಕಿಸಲ್ಪಟ್ಟಿರುವುವು. ಜ್ವಾಲಕದ ಜ್ವಾಲೆಗಳು, ಕುಲುಮೆಯ ಮೇಲ್ಚಾವಣಿಗೆ ಹೊಡೆದು, ಪ್ರತಿಫಲಿತವಾಗಿ, ಒಲೆಯ ಮೇಲೆ ಹರಡಿರುವ ಪರಿವರ್ತಕದ ಮೇಲೆ ಬಿದ್ದು ಅದನ್ನು ಕಾಯಿಸುವುವು. ಆಮೇಲೆ ಈ ಅನಿಲಗಳ ತುದಿಯಲ್ಲಿರುವ ಒಂದು ಹೊಗೆಗಂಡಿಯ ಮೂಲಕ ಹೊರಸೂಸುವುವು. ಈ ಕುಲುಮೆಯನ್ನು ಸೀಸ, ತಾಮ್ರ, ತವರ ಮುಂತಾದ ಲೋಹಗಳ ತಯಾರಿಕೆಯಲ್ಲಿ ಉಪಯೋಗಿಸುವರು. ತಾಂಡವಾಳದಿಂದ ಮೆದುಕಬ್ಬಿಣವನ್ನೂ ಈ ವಿಧವಾದ ಕುಲುಮೆಯಲ್ಲಿಯೇ ತಯಾರಿಸುವರು.



ಚಿತ್ರ 1 ಪ್ರತಿವರ್ತಕ ಕುಲುಮೆ

**ಮುಸುಕು ಕುಲುಮೆ :** ಇದರಲ್ಲಿ ಕಾಯಿಸಬೇಕಾದ ಪರಿವರ್ತಕಗಳನ್ನು ಹೊರ ಸಂಪರ್ಕವಿಲ್ಲದ ಒಂದು ಮುಚ್ಚಿದ ಆವರಣದೊಳಗಿಟ್ಟು, ಆವರಣವನ್ನು ಹೊರಗಡೆಯಿಂದ ಕಾಯಿಸುವರು. ಬೇರೊಂದು ಜ್ವಾಲಕದಲ್ಲಿ ಉರುವಲವನ್ನು ಉರಿಸಿ ಇದರ ದಹನದಿಂದಾದ ಬಿಸಿ ಅನಿಲಗಳು ಆವರಣವನ್ನು ಹೊರಗಡೆಯಿಂದ ಕಾಯಿಸಿ ಆಮೇಲೆ ಒಂದು ಹೊಗೆಗಂಡಿಯ ಮೂಲಕ ಹೊರಸೂಸುವುವು. ಉರುವಲಾಗಲೀ ಉರುವಲಿನ ದಹನದಿಂದ ಉತ್ಪನ್ನವಾದ ಅನಿಲಗಳಾಗಲಿ ಪರಿವರ್ತಕಗಳೊಡನೆ ಸಂಪರ್ಕ ಹೊಂದಿರುವುದಿಲ್ಲ. ಇಂಥ ಮುಸುಕು ಕುಲುಮೆಗಳನ್ನು ಸತುವಿನ ತಯಾರಿಕೆಯಲ್ಲಿ ಉಪಯೋಗಿಸುವರು.



ಚಿತ್ರ 2 ಮುಸುಕು ಕುಲುಮೆ

**ಅಂತಸ್ತು ಒಲೆಯ ಕುಲುಮೆ :** ಇದನ್ನು ಸಾಮಾನ್ಯವಾಗಿ ಅದಿರುಗಳನ್ನು ಗಾಳಿಯಲ್ಲಿ ಸುಡಲು ಉಪಯೋಗಿಸುವರು (ಚಿತ್ರ 3). ಇದೊಂದು ಸಿಲಿಂಡರ್ ಆಕಾರದ ಉಷ್ಣನಿರೋಧಕ ಇಟ್ಟಿಗೆಗಳಿಂದ ಕಟ್ಟಿದ ದೊಡ್ಡ ಕೋಷ್ಠ. ಇದರೊಳಗೆ ಒಂದರ ಕೆಳಗೊಂದರಂತೆ ಸ್ವಲ್ಪ ಇಳಿಜಾರಾದ ಅಂತಸ್ತುಗಳಿವೆ. ಕೋಷ್ಠದ ಮೇಲೆ ಅದಿರನ್ನು ಒಳ ಸುರಿಯಲು ಒಂದು ತೆರಪು ಇದೆ. ಇದರ ಮೂಲಕ ಒಳಸುರಿದ ಅದಿರು ಮೇಲಿನ ಅಂತಸ್ತಿನ ಮೇಲೆ, ಅಲ್ಲಿಂದ ಎರಡನೆಯದಕ್ಕೆ ಆಮೇಲೆ ಮೂರನೆಯದಕ್ಕೆ– ಈ ರೀತಿಯಾಗಿ ಕಟ್ಟಕಡೆಯ ಅಂತಸ್ತಿನವರೆಗೆ ಬೀಳುತ್ತ ಹೋಗುವುದು. ಪ್ರತಿ ಅಂತಸ್ತಿನ ಮೇಲೆ, ಅಲ್ಲಿಂದ ಎರಡನೆಯದಕ್ಕೆ ಆಮೇಲೆ ಮೂರನೆಯದಕ್ಕೆ–ಈ ರೀತಿಯಾಗಿ ಕಟ್ಟಕಡೆಯ ಅಂತಸ್ತಿನ ವರೆಗೆ ಬೀಳುತ್ತ ಹೋಗುವುದು. ಪ್ರತಿ ಅಂತಸ್ತಿನಲ್ಲಿಯೂ ಯಾಂತ್ರಿಕವಾಗಿ ಚಲಿಸುವ ಗೋರುಕಡ್ಡಿಗಳು ಅದುರು ಒಂದು ಅಂತಸ್ತಿನಿಂದ ಇನ್ನೊಂದಕ್ಕೆ ಬೀಳಲು ಸಹಾಯ ಮಾಡುವುವು. ಸ್ವಲ್ಪ ಒತ್ತಡದಲ್ಲಿರುವ ಪೂರ್ವಭಾವಿಯಾಗಿ ಕಾಯಿಸಿದ ಗಾಳಿ ಕುಲುಮೆಯ ತಳದಿಂದ ಮೇಲಕ್ಕೆ ಅದಿರುಗಳಾದರೆ (ಉದಾ : ಜಿಂಕ್ ಸಲ್ಫೈಡ್, ಕಬ್ಬಿಣದ ಸಲ್ಫೈಡ್ ಇತ್ಯಾದಿ) ಅವು ಆಕ್ಸೈಡುಗಳಾಗಿ ಉತ್ಕರ್ಷಿತವಾಗಿ ಕೊನೆಯ ಅಂತಸ್ತಿನಿಂದ ಹೊರಸುರಿಯುವುವು.

**ಉರುಳು ಕುಲುಮೆ :** ವಿಶೇಷವಾಗಿ ಸಿಮೆಂಟಿನ ತಯಾರಿಕೆಯಲ್ಲಿ ಉಪಯೋಗಿಸುವರು. ಇದು ಒಂದು ದೊಡ್ಡ ಸಿಲಿಂಡರ್ ಆಕಾರದಲ್ಲಿ ಉಕ್ಕಿನ ತಗಡುಗಳಿಂದ ರಚಿತವಾದ್ದು ಇದರ ಒಳಗೆ ಒಂದು ಪದರ ಉಷ್ಣನಿರೋಧಕ ಇಟ್ಟಿಗೆಯ ಕಟ್ಟಡ ಕಟ್ಟಿರುವರು. ಸಾಮಾನ್ಯವಾಗಿ ಇದರ ಉದ್ದ 60'–80', ವ್ಯಾಸ 6'–8'. ಇದು ಸ್ವಲ್ಪ ಇಳಿಜಾರಾಗಿದ್ದು ಯಾಂತ್ರಿಕವಾಗಿ ನಿಧಾನವಾಗಿ ದುಂಡಗೆ ತನ್ನ ಅಕ್ಷದ ಸುತ್ತಲೂ ತಿರುಗಿಸಲ್ಪಡುವುದು. ಸಿಮೆಂಟಿನ ಸ್ಲರಿಯನ್ನು ಮೇಲ್ಭಾಗದಲ್ಲಿ ಸುರಿಯುವರು. ಕೆಳತುದಿಯಿಂದ ಕಲ್ಲಿದ್ದಲು ಪುಡಿ ಅಥವಾ ಪೆಟ್ರೋಲ್ ತುಂತುರನ್ನು ಸಿಂಪಡಿಸಿ ಅದನ್ನು ಉರಿಸಿ ಕುಲುಮೆಯನ್ನು ಕಾಯಿಸುವರು.

ಊದುಕುಲುಮೆ, ಬೆಸಿಮರ್ ಪರಿವರ್ತಕ, ತೆರೆದ ಒಲೆಯ ಕುಲುಮೆ ಇವುಗಳ ವಿವರಣೆಗೆ (**ನೋಡಿ– ಉಕ್ಕು**).

**ವಿದ್ಯುತ್ಕುಲುಮೆಗಳು :** ಇವುಗಳಲ್ಲಿ ಪರಿವರ್ತಗಳನ್ನು ವಿದ್ಯುಚ್ಛಕ್ತಿಯಿಂದ ಕಾಯಿಸುವರು. ವಿದ್ಯುತ್ಕುಲುಮೆಗಳಲ್ಲಿಯೂ ಅನೇಕ ವಿಧಗಳಿವೆ. ಮುಖ್ಯವಾದವು ಮೂರು–(i) ನಿರೋಧಕ ಮಾದರಿಯ ಕುಲುಮೆಗಳು, (ii) ಚಾಪದ ಮಾದರಿಯ ಕುಲುಮೆಗಳು ಮತ್ತು (iii) ಪ್ರಚೋದನ ಮಾದರಿಯ ಕುಲುಮೆಗಳು. ಇವುಗಳಲ್ಲಿ. ಪ್ರತಿಯೊಂದರಲ್ಲಿಯೂ ಉಪಭೇದಗಳಿವೆ. ಇವುಗಳ ಪೈಕಿ ಯಾವ ಕುಲುಮೆಯನ್ನು ಒಂದು ರಾಸಾಯನಿಕ ವಸ್ತುವಿನ ಸ್ವರೂಪ ಮತ್ತು ಅದರ ತಯಾರಿಕೆಯಲ್ಲಿ ಉಪಯೋಗಿಸಬೇಕು ಎನ್ನುವುದು ಆ ವಸ್ತುವಿನ ಸ್ವರೂಪ ಮತ್ತು ಅದರ ತಯಾರಿಕೆಯ ಸ್ಥಳದಲ್ಲಿನ ಸೌಲಭ್ಯಗಳು ಮತ್ತು ತಯಾರಕರ ಆಯ್ಕೆಗಳನ್ನು ಅವಲಂಬಿಸಿದೆ. ಉದಾಹರಣೆಗೆ ಉಕ್ಕಿನ ತಯಾರಿಕೆಯಲ್ಲಿ ಚಾಪದ ಮಾದರಿಯ ಕುಲುಮೆಗಳನ್ನು ಮತ್ತು ಪ್ರಚೋದನ ಮಾದರಿಯ ಕುಲುಮೆಗಳನ್ನು ಉಪಯೋಗಿಸುವರು. ಚಾಪದ ಕುಲುಮೆ ತೆರೆದ ಒಲೆಯ ವಿಧಾನದಲ್ಲಿ ಉಪಯೋಗಿಸುವ ಚಪ್ಪಟೆಯಾದ ಬಟ್ಟಲಿನಂತೆ ಇದೆ. ಅದರಲ್ಲಿ ಇಂಗಾಲದ ಎಲೆಕ್ಟ್ರೋಡುಗಳಿವೆ. ಇವು ಕರಗಿದ ತಾಂಡವಾಳದಿಂದ ಸ್ವಲ್ಪ ಮೇಲಿವೆ. ಆದ್ದರಿಂದ ಎಲೆಕ್ಟ್ರೋಡ್ ಮತ್ತು ಕರಗಿದ ಕಬ್ಬಿಣಗಳ ನಡುವೆ ವಿದ್ಯುಚ್ಚಾಪ ಉಂಟಾಗುವುದು. ವಿದ್ಯುಚ್ಚಾಪ ಕರಗಿದ ಕಬ್ಬಿಣವನ್ನು ಅಪೇಕ್ಷಿತ ಉನ್ನತ ಉಷ್ಣತೆಯಲ್ಲಿಡುವುದು.

ಇಂಡಕ್ಷನ್ ಮಾದರಿಯ ಕುಲುಮೆಗಳಲ್ಲಿ ತಾಮ್ರದ ತಂತಿಯಿಂದ ಮಾಡಿದ ಒಂದು ಪ್ರಾಥಮಿಕ ಮಂಡಲ ಉಂಟು. ಪರಿವರ್ತಕ – ಉದಾಹರಣೆಗೆ ಕರಗಿದ ಕಬ್ಬಿಣವಿರುವ



ಚಿತ್ರ 3 ಅಂತಸ್ತು ಒಲೆಯ ಕುಲುಮೆ

ಒಂದು ಮೂಸೆ–ದ್ವಿತೀಯಕ ವಲಯವಾಗಿರುವುದು. ಪ್ರಾಥಮಿಕದ ಮೂಲಕ ಪರ್ಯಾಯ ವಿದ್ಯುತ್ತು ಪ್ರವಹಿಸಿದಾಗ, ಪ್ರತಿ ಸಾರಿ ವಿದ್ಯುತ್ತನ್ನು ಹರಿಸಿದಾಗ ಮತ್ತು ನಿಲ್ಲಿಸಿದಾಗ ದ್ವಿತೀಯಕ ವಲಯದಲ್ಲಿ ವಿದ್ಯುತ್ತು ಹರಿಯುವುದು. ಇದು ಪರಿವರ್ತಕವನ್ನು ಅವಶ್ಯ ಉಷ್ಣತೆಯಲ್ಲಿ ಇಟ್ಟಿರುವುದು.

ಹೀಗೆ ರಾಸಾಯನಿಕ ಕೈಗಾರಿಕೆಗಳಲ್ಲಿ, ತಯಾರಿಸುವ ವಸ್ತುವಿನ ಸ್ವರೂಪ, ಅದು ತಯಾರಿಸಲ್ಪಡುವ ಪ್ರದೇಶದ ಸ್ಥಿತಿ, ವಸ್ತು ಎಷ್ಟರಮಟ್ಟಿಗೆ ಶುದ್ಧವಾಗಿರಬೇಕು ಎನ್ನುವುದು, ತಯಾರಕರ ಅನುಕೂಲ ಮುಂತಾದ ಅಂಶಗಳನ್ನವಲಂಬಿಸಿ ಬೇರೆ ಬೇರೆ ಕುಲುಮೆಗಳು ಉಪಯೋಗದಲ್ಲಿರುವುವು. (ಕೆ.ಎಸ್.ಬಿ.)

**ಕುಲೋತ್ತುಂಗ ಚೋಳ :** ಚೋಳ ರಾಜ್ಯವನ್ನಾಳಿದ ಈ ಹೆಸರಿನ ರಾಜರು ಮೂವರು. ಅವರ ಬಗ್ಗೆ ವಿವರಗಳನ್ನು ಮುಂದೆ ಕೊಡಲಾಗಿದೆ.

**ಕುಲೋತ್ತುಂಗ ಚೋಳ I :** ವೆಂಗಿ ಚಾಲುಕ್ಯ ಮನೆತನದಲ್ಲಿ ಹುಟ್ಟಿದ ಚೋಳದೊರೆ. 1ನೆಯ ರಾಜೇಂದ್ರ ಚೋಳನ (ಆಳ್ವಿಕೆ : 1012–44) ಮಗಳಾದ ಅಮ್ಮಂಗಾ ದೇವಿ ಪೂರ್ವ ಚಾಲುಕ್ಯ ದೊರೆ 1 ನೆಯ ರಾಜರಾಜ ನರೇಂದ್ರ (ಆಳ್ವಿಕೆ : 1022–63) ಇವರ ಮಗ. ಚೋಳ ದೊರೆ ಅಧಿರಾಜೇಂದ್ರನ (1067–70) ಮರಣಾನಂತರ ಚೋಳ ಸಿಂಹಾಸನವನ್ನೇರಿ ಹೊಸ ಚಾಳುಕ್ಯ – ಚೋಳ ವಂಶವನ್ನಾರಂಭಿಸಿ 1070 ರಿಂದ 1122ರ ವರೆಗೆ ರಾಜ್ಯಭಾರ ಮಾಡಿದ. ಇವನಿಗೆ ಮೊದಲು ರಾಜೇಂದ್ರನೆಂಬ ಹೆಸರಿತ್ತು. 1067ರಲ್ಲಿ 1ನೆಯ ವೀರರಾಜೇಂದ್ರನಿಗೆ ಕಲ್ಯಾಣ ಚಾಲುಕ್ಯರ ಮೇಲೆ ಯುದ್ಧ ಹೂಡಲು ಸಹಾಯ ಮಾಡಿದ್ದ. ಇವನೊಬ್ಬ ಸಮರ್ಥನಾದ ದೊರೆ. ಆದರೆ ಇವನು ಸದಾ ಯುದ್ಧಗಳಲ್ಲಿ ನಿರತನಾಗಬೇಕಾಗಿತ್ತು. ಚೋಳರ ಆಧಿಪತ್ಯದಲ್ಲಿದ್ದ ಸಿಂಹಳ 1075ರಲ್ಲಿ ಸ್ವತಂತ್ರವಾಯಿತು. ಕಲ್ಯಾಣ ಚಾಲುಕ್ಯ ದೊರೆಯಾಗಿದ್ದ 6ನೆಯ ವಿಕ್ರಮಾದಿತ್ಯ ಮರುವರ್ಷ ಕುಲೋತ್ತುಂಗನ ಮೇಲೆ ಯುದ್ಧ ಹೂಡಿದ. ಈತ ಸಿಂಹಳದ ದೊರೆಯೊಂದಿಗೆ ಮೈತ್ರಿಯ ಒಪ್ಪಂದ ಮಾಡಿಕೊಂಡ. ಪಾಂಡ್ಯ ಮತ್ತು ಚೇರರ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿದ. 1096–98ರಲ್ಲಿ ಕುಲೋತ್ತುಂಗ ಕಳಿಂಗರಾಜ್ಯದ ಮೇಲೆ ದಂಡೆತ್ತಿ ಹೋಗಿ ಅಲ್ಲಿ ಚೋಳ ರಾಜ್ಯದ ಗಡಿಗಳನ್ನು ಭದ್ರಪಡಿಸಿದ. ಆದರೆ 1117ರಲ್ಲಿ ಹೊಯ್ಸಳ ವಿಷ್ಣುವರ್ಧನನಿಗೆ ಗಂಗವಾಡಿ ವಶವಾಯಿತು. ಮರುವರ್ಷವೇ ಚಾಳುಕ್ಯ 6ನೆಯ ವಿಕ್ರಮಾದಿತ್ಯ ವೆಂಗಿಯನ್ನು ಗೆದ್ದುಕೊಂಡ. ಹೀಗಾಗಿ, ಸಿಂಹಳ, ಗಂಗವಾಡಿ ಮತ್ತು ವೆಂಗಿ ರಾಜ್ಯಗಳನ್ನು ಕುಲೋತ್ತುಂಗ ಕಳೆದುಕೊಳ್ಳಬೇಕಾಯಿತು. ಇಷ್ಟಾದರೂ ಕುಲೋತ್ತುಂಗನ ರಾಜ್ಯಭಾರ ಶಾಂತಿಯುತವಾಗಿತ್ತು. ಇವನ ಕಾಲದಲ್ಲಿ ಕಂಚಿ ವಿಶೇಷವಾಗಿ ಅಭಿವೃದ್ಧಿ ಹೊಂದಿತು.

**ಕುಲೋತ್ತುಂಗ ಚೋಳ II :** ವಿಕ್ರಮ ಚೋಳನ ಮರಣಾನಂತರ 1133 ರಿಂದ 1150ರ ವರೆಗೆ ಆಳಿದ ಚಕ್ರವರ್ತಿ. ಇವನ ಆಳ್ವಿಕೆಯಲ್ಲಿ ಗಮನಾರ್ಹವಾದ ರಾಜಕೀಯ ಘಟನೆಗಳಾವುವೂ ಸಂಭವಿಸಲಿಲ್ಲ. ಈತ ಶೈವಭಕ್ತನಾಗಿದ್ದು ಚಿದಂಬರ ದೇವಾಲಯಕ್ಕೆ ಅಪರಿಮಿತ ದತ್ತಿಗಳನ್ನು ಬಿಟ್ಟ. ಇವನು ವೈಷ್ಣವ ಮತವನ್ನು ಸಹಿಸದೆ ಚಿದಂಬರದಲ್ಲಿದ್ದ ಗೋವಿಂದರಾಜದೇವರ ವಿಗ್ರಹವನ್ನು ಸಮುದ್ರಕ್ಕೆ ಎಸೆಯುವಂತೆ ಆಜ್ಞೆಮಾಡಿದನೆಂದು ಪ್ರತೀತಿಯುಂಟು. ಈತ ಕಂಬನ್, ಒಟ್ಟ ಕುಟ್ಟಾನ್ ಮತ್ತು ಸೆಕ್ಕಿವಾರ್ ಮುಂತಾದ ತಮಿಳು ಕವಿಗಳಿಗೆ ಆಶ್ರಯ ನೀಡಿದ.

**ಕುಲೋತ್ತುಂಗ ಚೋಳ III :** 2ನೆಯ ರಾಜಾಧಿರಾಜನ ಅನಂತರದ ಚೋಳ ಚಕ್ರವರ್ತಿ. 1178 ರಿಂದ 1218ರ ವರೆಗೆ ಆಳಿದ. ಇವನು 1182ರಲ್ಲಿ ಪಾಂಡ್ಯವಂಶದ ವೀರಪಾಂಡ್ಯನನ್ನು ಸೋಲಿಸಿ, ವಿಕ್ರಮ ಪಾಂಡ್ಯನನ್ನು ಆ ಸಿಂಹಾಸನದಲ್ಲಿ ಕುಳ್ಳಿರಿಸಿದರೂ ಆತ ಅವಿಧೇಯನಾಗಿದ್ದನೆಂದು ಅವನನ್ನು 1189 ರಲ್ಲಿ ಪದಚ್ಯುತಿಗೊಳಿಸಿದ. ಈತ ಕೊಂಗು ರಾಜ್ಯವನ್ನು ವಶಮಾಡಿಕೊಂಡದ್ದಲ್ಲದೆ ನೆಲ್ಲೂರಿನ ತೆಲುಗು–ಚೋಳರಿಂದ ಕಂಚಿಯನ್ನು ಕಿತ್ತುಕೊಂಡ. 1205ರಲ್ಲಿ ಪಾಂಡ್ಯರೊಡನೆ ಮಾಡಿದ ಯುದ್ಧದಲ್ಲಿ ಇವನಿಗೆ ಜಯ ಲಭಿಸಿತು. ಆದರೆ ಕೊನೆಗೆ ಈತ ಮಾರವರ್ಮ ಸುಂದರಪಾಂಡ್ಯನಿಂದ ಸೋಲನ್ನನುಭವಿಸಬೇಕಾಯಿತು. ಈತನ ಕಾಲದಲ್ಲಿ ಪದೇ ಪದೇ ಸಂಭವಿಸಿದ ಯುದ್ಧಗಳಿಂದಾಗಿ ರಾಜ್ಯದಲ್ಲಿ ಕ್ಷಾಮ ತಲೆದೋರಿತು. ಈತ ಕ್ಷಾಮಪರಿಹಾರ ಕಾರ್ಯವನ್ನು ಯಶಸ್ವಿಯಾಗಿ ಕೈಕೊಂಡ. ಇವನ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ವಿಶೇಷ ಪ್ರೋತ್ಸಾಹ ದೊರಕಿತು. ಈತ ಚೋಳವಂಶದ ಕೊನೆಯ ದೊರೆಗಳ ಪೈಕಿ ಅತ್ಯಂತ ಸಮರ್ಥ. (ಎಂ.ಎಸ್.ಬಿ.)

**ಕುಲ್ನ್ ಲಿಂಡನ್ ಥಾಲ್ :** ಪಶ್ಚಿಮ ಜರ್ಮನಿಯ ಕೊಲೋನ್ ಬಳಿಯಿರುವ ಒಂದು ಸ್ಥಳ. ಮಧ್ಯ ಯುರೋಪಿನ ನವ ಶಿಲಾಯುಗಕ್ಕೆ ಸೇರಿದ ಡ್ಯಾನ್ಯೂಬ್ – ಮೊದಲನೆಯ ಹಂತದ ಸಂಸ್ಕೃತಿಯ ಮಾಹಿತಿಗಳನ್ನು ಈ ನೆಲೆಯಲ್ಲಿ ಅಗೆದು ತೆಗೆದಿದ್ದಾರೆ. ಇಲ್ಲಿ ಪ್ರ.ಶ.ಪೂ. 2,700 ರಿಂದ 400–500 ವರ್ಷ ಕಾಲ ಹಲವಾರು ತಲೆಮಾರುಗಳ ಜನ ಜೀವಿಸಿದ್ದರು. ಈ ದೀರ್ಘಕಾಲದ ಮೊದಲ ಭಾಗದಲ್ಲಿ ವಾಸಕ್ಕೆ ಸಾಮಾನ್ಯ ಗುಡಿಸಲುಗಳನ್ನೂ ಧಾನ್ಯ ಶೇಖರಣೆಗೆ ಮತ್ತು ಧಾನ್ಯವನ್ನು ಜೌಗಿನಿಂದ ರಕ್ಷಿಸಲು ಎತ್ತರವಾದ ಮರದ ದಿಮ್ಮಿಗಳ ಮೇಲೆ ಕಣಜಗಳನ್ನೂ ನಿರ್ಮಿಸಿಕೊಂಡಿದ್ದರು. ಅನಂತರ 'ಸ್ಟ್ರೋಕ್' ಅಲಂಕಾರ ಹೊಂದಿದ ಮಡಕೆಗಳನ್ನು ಪ್ರಯೋಗಿಸುತ್ತಿದ್ದ ಜನ ವಿವಿಧ ಮಾರ್ಗಗಳ ಸಂಗಮ ಸ್ಥಾನದಲ್ಲಿದ್ದ ಈ ನೆಲೆಯನ್ನು ಆಕ್ರಮಿಸಿ ಸ್ವಲ್ಪಕಾಲಾನಂತರ ಇದನ್ನು ತ್ಯಜಿಸಿದರು. ಮತ್ತೆ ಈ ಜನ ನಿರ್ಮಿಸಿಕೊಂಡಿದ್ದ ಗ್ರಾಮ ಬೆಂಕಿಯ ಆಕಸ್ಮಿಕದಿಂದ ನಾಶವಾಯಿತು. ಹಿಂದಿನವೆಲ್ಲಕ್ಕಿಂತ ದೊಡ್ಡದಾದ, 200–300 ಜನ ವಾಸಿಸುವ 30–35 ಮನೆಗಳುಳ್ಳ, ಕಂದಕ ಮತ್ತು ಬೇಲಿಗಳಿಂದ ರಕ್ಷಿತವಾದ ಗ್ರಾಮವೊಂದು ಕೊನೆಯದಾಗಿ ನಿರ್ಮಿತವಾಯಿತು. ಕಣಜಗಳು 100 ಅಡಿಗಳಷ್ಟು ಉದ್ದವಾಗಿದ್ದುವು. ಇವು ಸಾಕಷ್ಟು ಗಾಳಿ ಬೆಳಕು ಬರುವಂತೆ ನಿರ್ಮಿತವಾಗಿದ್ದುವಲ್ಲದೆ ತೇವ ಹತ್ತದಂತೆ ರಕ್ಷಿತವಾಗಿದ್ದುವು. ಧಾನ್ಯಗಳನ್ನು ಒಣಗಿಸಲು ಒಂದು ಅಟ್ಟವೂ ಇತ್ತು. ಮೊದಮೊದಲು ಈ ಜನ ಕಲ್ಲಿನ ಗುದ್ದಲಿಗಳಿಂದ ನೆಲವನ್ನು ಅಗೆದು ಬೇಸಾಯ ಮಾಡುತ್ತಿದ್ದರು. ಕ್ರಮೇಣ ನೇಗಿಲಿನ ಉಪಯೋಗ ಬಳಕೆಗೆ ಬಂದಂತೆ ಕಾಣುತ್ತದೆ. ಕಲ್ಲಿನ ಕುಡುಗೋಲುಗಳನ್ನೂ ಜೇನಿನಾಕಾರದ ಬೀಸುವ ಕಲ್ಲುಗಳನ್ನೂ ಉಪಯೋಗಿಸುತ್ತಿದ್ದರು. ಕುಟುಂಬ ಪ್ರಧಾನವಾದ ಈ ಸಮಾಜದಲ್ಲಿ ಪಂಗಡಗಳಿಗೆ ನಾಯಕನಿರುತ್ತಿದ್ದ. ಈ ಜನ ದೂರ ಪ್ರದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದರು. (ಬಿ.ಕೆ.ಜಿ.)

**ಕುವಲಯಾಪೀಡ :** ಕಂಸನ ಒಂದು ಆನೆ. ಇದು ಸಾವಿರ ಆನೆಗಳ ಬಲ ಪಡೆದಿತ್ತು. ಬಲರಾಮ, ಶ್ರೀಕೃಷ್ಣರು ಮಧುರೆಗೆ ಬಂದಾಗ ಕಂಸ ದುರಭಿಸಂಧಿಯಿಂದ ಅವರನ್ನು ಕೊಲ್ಲಲು ಯೋಚಿಸಿ ಈ ಆನೆಯನ್ನು ಊರಿನ ಮಹಾದ್ವಾರದಲ್ಲಿ ನಿಲ್ಲಿಸಿದ್ದ. ದ್ವಾರದ ಬಳಿ ಬಲರಾಮ, ಶ್ರೀಕೃಷ್ಣರು ಬಂದಾಗ ಮಾವುತ ಅವರ ಮೇಲೆ ಆನೆಯನ್ನು ಓಡಿಸಿದ. ಶ್ರೀ ಕೃಷ್ಣನ ಮುಂದೆ ಆನೆಯ ಸಾಹಸ ನಡೆಯದೆ ಅದು ಅವನಿಂದ ಹತವಾಯಿತು. *

**ಕುವಲಾಶ್ವ :** ಸೂರ್ಯವಂಶದ ರಾಜ. ಕುವಲಯ ವರ್ಣದ ಕುದುರೆ ಈತನ ವಾಹನವಾಗಿದ್ದುದರಿಂದ ಈ ಹೆಸರು. ಬಾಲ್ಯದ ಹೆಸರು ಋತಧ್ವಜ. ಕುವಲಯಾಶ್ವ ಎಂದೂ ದುಂಧುಮಾರ ಎಂದೂ ಕರೆಯುವುದಿದೆ. ತಂದೆ ಬೃಹದಶ್ವ (ಶತ್ರುಜಿತ್).

ಗಾಲವನೆಂಬ ಮುನಿಪುಂಗವ ತಪೋನಿರತನಾಗಿರಲು ಪಾತಾಳಕೇತುವೆಂಬ ಕಾಮರೂಪಿಯಾದ ರಾಕ್ಷಸ ಮಾಯಾವೇಷದಿಂದ ಅವರ ತಪಸ್ಸಿಗೆ ಭಂಗ ತಂದ. ಶಾಪವಿತ್ತು ಕಂಟಕ ಪರಿಹರಿಸಿಕೊಳ್ಳೋಣವೆಂದರೆ ತಪೋನಷ್ಟವಾಗುವುದೆಂದು ಬಗೆದ ಮುನಿ ಚಿಂತಾಮಗ್ನನಾಗಿರಲು ಕುವಲಯ ವರ್ಣದ ಕುದುರೆಯೊಂದು ತಾನಾಗಿ ಆತನ ಮುಂದೆ ಬಂದು ನಿಂತಿತು. ಇದನ್ನು ಬೃಹದಶ್ವನ ಮಗ ಕುವಲಾಶ್ವನಿಗೆ ಕೊಡು ಎಂದು ಅಶರೀರವಾಣಿಯಾಗಲು ಮುನಿ ಹಾಗೆಯೇ ಮಾಡಿ ತನ್ನ ಸಂಕಟವನ್ನು ಆತನಲ್ಲಿ ಹೇಳಿಕೊಂಡ. ಬೃಹದಶ್ವ ಕುವಲಯಾಶ್ವವನ್ನೇರಿ ರಾಕ್ಷಸನನ್ನು ಅಟ್ಟಿಸಿಕೊಂಡು ಹೊರಟ. ಆದರೆ ರಾಕ್ಷಸ ಹಂದಿಯ ವೇಷ ತಾಳಿ ಭೂಮಿಯಲ್ಲಿ ಬಿಲಮಾಡಿಕೊಂಡು ಪಾತಾಳವನ್ನು

ಹೊಕ್ಕ. ಹಿಂದಟ್ಟಿಹೋದ ಕುವಲಯಾಶ್ವ ಅಲ್ಲಿ ಈರ್ವರು ಸುಂದರಿಯರನ್ನು ಕಂಡು, ಅವರಲ್ಲಿ ಹಿರಿಯವಳು ಪುಷ್ಕರಶಾಲಿಯ ಪತ್ನಿ ಕುಂಡಲೆಯೆಂತಲೂ ಮತ್ತೊಬ್ಬಳು ಆಕೆಯ ಅವಿವಾಹಿತ ತಂಗಿ ಮದಾಲಸೆಯೆಂದೂ ತಿಳಿದುಕೊಂಡ; ಮಲ್ಲ ಯುದ್ಧದಲ್ಲಿ ಪಾತಾಳಕೇತುವನ್ನು ಜಯಿಸಿ, ಕೊಂದು ಮದಾಲಸೆಯನ್ನು ವಿವಾಹವಾಗಿ ತನ್ನ ರಾಜಧಾನಿಯಾದ ಅಯೋಧ್ಯೆಗೆ ಹಿಂದಿರುಗಿದ.

ಪಾತಾಳಕೇತುವಿನ ತಮ್ಮನಾದ ತಾಳಕೇತು ಸೇಡು ತೀರಿಸಿಕೊಳ್ಳಲು ಹೊಂಚು ಹಾಕುತ್ತ ಒಮ್ಮೆ ಕುವಲಾಶ್ವ ಅಶ್ವಾರೂಢನಾಗಿ ವಿಹರಿಸುತ್ತಿರಲು ಮುನಿರೂಪಧಾರಿಯಾಗಿ ತಾನು ಯಜ್ಞದೀಕ್ಷಿತನೆಂದು ಹೇಳಿಕೊಂಡು ದ್ರವ್ಯಯಾಚನೆ ಮಾಡಿದ. ನಂಬಿದ ರಾಜ ತನ್ನ ರತ್ನಹಾರವನ್ನೇ ದಾನವೀಯಲು, ಶೀಘ್ರವಾಗಿ ಅದನ್ನೊಯ್ದು ಆತನ ಪ್ರಿಯ ರಾಣಿ ಮದಾಲಸೆಗೆ ತೋರಿಸಿ ಪತಿ ಹತನಾದನೆಂದು ತಿಳಿಸಲು ಆಕೆ ದುಃಖಾತಿಶಯದಿಂದ ಕುಸಿದು ಸತ್ತಳು. ವಿಷಯ ತಿಳಿದ ಕುವಲಾಶ್ವ ಚಿಂತಾಕ್ರಾಂತನಾಗಿ ದುಃಖಿಸುತ್ತಿರಲು ನಾಗಕುಮಾರರು ಮದಾಲಸೆಯನ್ನು ಬದುಕಿಸಿಕೊಟ್ಟರು.

ಕುವಲಾಶ್ವನಿಗೆ ಧುಂಧುಮಾರನೆಂಬ ಹೆಸರು ಬಂದದು ಹೀಗೆ: ಮರಳಸಾಗರ ವಾಸಿಯಾದ ಧುಂಧುವೆಂಬ ರಾಕ್ಷಸನೊಬ್ಬ ಉತ್ತಂಕನೆಂಬ ಮಹರ್ಷಿಯ ತಪಸ್ಸಿಗೆ ಭಂಗವನ್ನುಂಟುಮಾಡುತ್ತಿದ್ದ. ಕುವಲಯಾಶ್ವ ತನ್ನ ಇಪ್ಪತ್ತೊಂದು ಸಹಸ್ರ ಸೈನ್ಯದೊಡನೆ ಅವನನ್ನು ಹುಡುಕಲು ಹೊರಟ. ಆ ರಾಕ್ಷಸಬಲದ ಪ್ರಖರತೇಜಸ್ಸಿನಿಂದ ಮೂವರನ್ನುಳಿದು ಎಲ್ಲರೂ ದಗ್ಧರಾದರು. ಆದರೆ ಧುಂಧು ಯುದ್ಧದಲ್ಲಿ ಸತ್ತ. ದೃಢಾಶ್ವ, ಕಪಿಲಾಶ್ವ ಮತ್ತು ಚಂದ್ರಾಶ್ವರೆಂಬ ಮೂವರು ಪುತ್ರರೊಡನೆ ಕುವಲಯಾಶ್ವ ತನ್ನ ಪಟ್ಟಣಕ್ಕೆ ಹಿಂದಿರುಗಿದ. ಈತನ ಪರಾಕ್ರಮವನ್ನು ಮೆಚ್ಚಿದ ಉತ್ತಂಕ ಮಹರ್ಷಿ ಧುಂಧುಮಾರ (ಧುಂಧುವನ್ನು ಕೊಂದವನು) ಎಂಬ ಬಿರುದನ್ನಿತ್ತ. ಕುವಲಾಶ್ವನ ಮಕ್ಕಳ ಸಂಖ್ಯೆ ಇಪ್ಪತ್ತೊಂದು ಸಹಸ್ರವೆಂತಲೂ ಒಂದುನೂರು ಎಂತಲೂ ಮೂರೇ ಎಂತಲೂ ಬೇರೆ ಬೇರೆ ಪಾಠಗಳಿವೆ.

(ಸಿ.ಜಿ.ಪಿ.)

**ಕುವಿ ಭಾಷೆ :** ಮಧ್ಯದ್ರಾವಿಡ ಭಾಷೆಗಳಲ್ಲೊಂದು, ಇದರ ಕ್ಷೇತ್ರ ಉರಿಯ ಮತ್ತು ತೆಲುಗು ಭಾಷೆಗಳ ನಡುವಿನದು. 1996 ನೆಯ ಜನಗಣತಿಯ ಪ್ರಕಾರ ಇದು ಮೂರುವರೆ ಲಕ್ಷಕ್ಕಿಂತ ಹೆಚ್ಚು ಜನರ ಭಾಷೆ ಎಂದು ಪರಿಗಣಿತವಾಗಿದೆ. ತೆಲುಗು ಮತ್ತು ಉರಿಯ ಭಾಷೆಗಳ ದಟ್ಟಪ್ರಭಾವ ಇದರ ಮೇಲುಂಟು. ಕುವಿ ಮತ್ತು ಕುಈ ಭಾಷೆಗಳು ಒಂದೇ ಕ್ಷೇತ್ರದಲ್ಲಿ ಕಂಡು ಬಂದರೂ ಭಿನ್ನಭಾಷೆಗಳು. ಈ ಭಾಷೆಗಳನ್ನು ನಿಶ್ಚಿತವಾಗಿ ಯಾವ ಜನ ಬಳಸುತ್ತಿದ್ದಾರೆ. ಎಂಬ ಅಂಶ ಇನ್ನೂ ಗೊತ್ತಾಗಿಲ್ಲ. ಕುಯಿಗರೇ ಕುಈ ಭಾಷೆ ಆಡುವ ಜನಾಂಗವೆಂದು ಕೆಲವರೂ ಕುವಿಂಗರೇ ಕುವಿಭಾಷೆ ಆಡುವ ಜನಾಂಗ ಇರಬಹುದೆಂದು ಮತ್ತೆ ಕೆಲವರೂ ಅಭಿಪ್ರಾಯ ಪಟ್ಟಿದ್ದಾರೆ. ಆಧುನಿಕ ಭಾಷಾವಿಜ್ಞಾನಿಗಳ ದೃಷ್ಟಿಯಲ್ಲಿ ಅವು ಬೇರೆ ಬೇರೆ ಸ್ವತಂತ್ರ ಭಾಷೆಗಳು ಎಂಬ ಅಭಿಪ್ರಾಯವಿದೆ. ಮಧ್ಯದ್ರಾವಿಡ ಭಾಷೆಗಳಲ್ಲಿ ಕೊಲಾಮಿ, ನಾಯ್ಕಿ ಭಾಷೆಗಳ ಸಂಬಂಧ ಇರುವಂತೆ ಕುಈ, ಕುವಿಭಾಷೆಗಳ ಸಂಬಂಧ ಎಂದು ಕೆಲವು ವಿದ್ವಾಂಸರು ಮನಗಂಡಿದ್ದಾರೆ. ಈ ಎರಡು ಭಾಷೆಗಳ ಧ್ವನಿವ್ಯವಸ್ಥೆ, ಆಕೃತಿಮಾರಚನೆ, ವಾಕ್ಯರಚನೆ, ಮತ್ತು ವ್ಯಾಕರಣಾಂಶಗಳನ್ನು ಹೋಲಿಸಿ ನೋಡಿದಾಗ ಇವುಗಳ ಸಾಮ್ಯ ತಿಳಿದು ಬರುವುದು. ಈ ಎರಡು ಭಾಷೆಗಳಿಗೂ ಲಿಪಿ ಇಲ್ಲ. ಈ ಭಾಷೆಯನ್ನು ಆಡುವ ಜನರು ಬೆಟ್ಟಗುಡ್ಡಗಳಲ್ಲಿಯೇ ಹೆಚ್ಚಾಗಿ ವಾಸಮಾಡುವಂಥವರು. ಕುವಿಭಾಷೆ ಉರಿಯಕ್ಕಿಂತಲೂ ಹೆಚ್ಚಾಗಿ ತೆಲುಗು ಭಾಷೆಯನ್ನೇ ಹೋಲುತ್ತದೆ. ಇಲ್ಲಿನ ಧ್ವನಿವ್ಯವಸ್ಥೆ ಕುಈ ಭಾಷೆಯನ್ನೂ ಲಿಂಗವಚನ, ವಿಭಕ್ತಿಪ್ರತ್ಯಯಗಳು ಗೋಂಡಿ, ಖೊಂಡ, ಕುರುಖ್ ಮತ್ತು ಕುಈ ಭಾಷೆಗಳನ್ನೂ ಪದಸಮೂಹ ಕುರುಖ್, ಗೋಂಡಿ, ಖೊಂಡ್, ಮತ್ತು ಕುಈ ಭಾಷೆಗಳನ್ನೂ ವ್ಯಾಕರಣಾಂಶಗಳು ಮುಖ್ಯವಾಗಿ ಗೋಂಡಿ, ಖೊಂಡ, ಕುರುಖ್, ಮಲ್ತೊ ಮತ್ತು ಕುಈ ಭಾಷೆಯನ್ನೂ ಹೆಚ್ಚಾಗಿ ಹೋಲುತ್ತವೆ. ಎಫ್.ವಿ.ಪಿ. ಶೂಲೆ (chulze) ಎಂಬಾತ ಕುವಿ ವ್ಯಾಕರಣವನ್ನು ರಚಿಸಿದ್ದಾನೆ. ಅಲ್ಲದೆ, ಎ.ಜಿ. ಫಿಟ್ಸ್‌ಜೆರಾಲ್ಡ್ ಎಂಬಾತ 1933ರಲ್ಲಿ ಕುವಿಂಗರ ಭಾಷೆ ಎಂಬ ಗ್ರಂಥವನ್ನು ಬರೆದು ಕುವಿಂಗರ ಪರಿಚಯ ಕೊಟ್ಟಿದ್ದಾನೆ. ಕುವಿಭಾಷೆಯ ವ್ಯಾಕರಣಕ್ಕೆ ಸಂಬಂಧಿಸಿದ ಹೆಚ್ಚಿನ ವಿಚಾರಗಳು ಬೆಳಕಿಗೆ ಬಂದಿಲ್ಲ. ಇದರಲ್ಲಿನ ಕೆಲವು ಮೂಲ ದ್ರಾವಿಡ ಧ್ವನಿಗಳನ್ನು ನೋಡಿದಾಗ ಈ ಕೆಲವು ಧ್ವನಿ ಪರಿವರ್ತನೆಗಳು ಕಂಡು ಬರುತ್ತವೆ:

–ಕ್–>–ಯ್–,–ಕ್ಕ್–>–ಕ್–,–ಚ್–>–ಹ್–,

–ಚ್–>–ಸ್–,–ಟ್–>–ಡ್–,–ಟ್ಟ್–ಟ್–,–ನ್ತ್–>–ನ್ದ್–,

–ಮ್ಪ್–>–ಮ್ಬ್–,–ರ್–>–ಜ್–,–ನ್ರ್–ನ್ಜ್–,–ಳ್–>–ಲ್–,

–ಳ್>–ಲ್ಲ್–,–ಡ್–>ದ್–,–ಡ್ಡ್–>ದ್ದ್– (ಕೆ.ಕೆ.ಜಿ.)

**ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ:** ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಚಟುವಟಿಕೆಗಳನ್ನೆಲ್ಲ ಕೇಂದ್ರೀಕರಿಸುವ ದೃಷ್ಟಿಯಿಂದ ರೂಪುಗೊಂಡ ಸಂಸ್ಥೆ (1966). ಇದು ಈ ವಿಶ್ವವಿದ್ಯಾನಿಲಯದಲ್ಲಿ ಆರಂಭವಾದ ಮೊದಲನೆಯ ಸಂಸ್ಥೆಯೂ (ಇನ್‌ಸ್ಟಿಟ್ಯೂಟ್) ಹೌದು. ತನ್ನ ಸ್ವರೂಪ ವ್ಯಾಪ್ತಿಗಳಲ್ಲಿ ಭಾರತೀಯ ಭಾಷೆಯೊಂದರ ಅಧ್ಯಯನಕ್ಕೆ ಈ ಸಂಸ್ಥೆ ವಿಶಿಷ್ಟವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಚರಿತ್ರೆಯಲ್ಲಿ ಮತ್ತು ಕನ್ನಡ ಭಾಷಾಸಾಹಿತ್ಯಗಳ ಚಟುವಟಿಕೆಗಳ ಇತಿಹಾಸದಲ್ಲಿ ಅಧ್ಯಯನ ಸಂಸ್ಥೆ ಅಸ್ತಿತ್ವಕ್ಕೆ ಬಂದದ್ದು ಮಹತ್ವಪೂರ್ಣವಾದ, ಪರಿಣಾಮಕಾರಿಯಾದ ಘಟನೆ. ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಿ, ಆಡಳಿತದ ಎಲ್ಲ ಸ್ತರಗಳಲ್ಲಿಯೂ ಆಡಳಿತ ಭಾಷೆಯಾಗಿ, ಕನ್ನಡನಾಡಿನ ಜನಜೀವನದಲ್ಲಿ ಪ್ರಥಮ ಭಾಷೆಯಾಗಿ ಕನ್ನಡಕ್ಕೆ ಗೌರವದ ಸ್ಥಾನಮಾನಗಳು ಲಭಿಸಬೇಕೆಂಬ ಸಂಕ್ರಮಣ ಕಾಲದಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಆರಂಭವಾಯಿತು. ಬೋಧನೆ, ಸಂಶೋಧನೆ, ಸಂಪಾದನೆಗಳೊಂದಿಗೆ ಬೇರೆ ಭಾಷೆಗಳಿಂದ ಬಗೆಬಗೆಯಾದ ಗ್ರಂಥಗಳನ್ನು ಕನ್ನಡಕ್ಕೆ ತರಬೇಕು, ಕನ್ನಡದ ಶ್ರೇಷ್ಠಕವಿ ಕೃತಿಗಳನ್ನು ಇತರ ಭಾಷೆಗಳವರಿಗೆ ಪರಿಚಯಿಸಬೇಕು, ಇನ್ನೂ ಬೆಳಕಿಗೆ ಬಾರದ ಪ್ರಾಚೀನ ಗ್ರಂಥಗಳನ್ನು ಶಾಸ್ತ್ರೀಯವಾಗಿ ಪ್ರಕಟಿಸಬೇಕು, ಜಾನಪದದಂಥ ಮೂಲೆಗುಂಪಾದ ವಿಷಯಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಬೇಕು, ಭಾರತೀಯ ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡದ ವಲಯವನ್ನು ವಿಸ್ತೃತಗೊಳಿಸಬೇಕು, ಕನ್ನಡ ಭಾಷೆಯನ್ನು ಆಧುನಿಕ ಕಾಲಕ್ಕೆ ಅನುಗುಣವಾಗಿ ಬಲಪಡಿಸಬೇಕು-ಇವೇ ಮೊದಲಾದ ಉದ್ದೇಶ ಗಳಿಗನುಗುಣವಾಗಿ ಸುವ್ಯವಸ್ಥಿತವಾದ ಯೋಜನೆಗಳನ್ನು ಕೈಗೊಂಡು, ಅವನ್ನು ಶ್ರದ್ಧಾನಿಷ್ಠೆಗಳಿಂದ ಕಾರ್ಯರೂಪಕ್ಕೆ ತರುವ, ಕನ್ನಡದ ಬಹುಮುಖ ಬೆಳವಣಿಗೆಗೆ ಉತ್ತೇಜನ ನೀಡುವ, ನಾನಾ ಕಡೆ ಹಂಚಿಹೋದ ಶಕ್ತಿಗಳನ್ನೆಲ್ಲ ಒಂದೆಡೆ ಸೇರಿಸುವ ರಂಗವಾಗಿ ಸಜ್ಜುಗೊಳಿಸಲು ಕನ್ನಡ ಅಧ್ಯಯನ ಸಂಸ್ಥೆ ರೂಪುಗೊಂಡಿತು.

ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವದ ಅಂಗವಾಗಿ ನಡೆದ ಕನ್ನಡ ಲೇಖಕರ ಸಮ್ಮೇಳನವನ್ನು ಉದ್ಘಾಟಿಸುವ ಸಮಯದಲ್ಲಿಯೇ (1966 ಡಿಸೆಂಬರ್ 8), ಆಗಿನ ಕುಲಪತಿ ಕೆ.ಎಲ್.ಶ್ರೀಮಾಲಿ ಅವರು ಕನ್ನಡ ಅಧ್ಯಯನ ಸಂಸ್ಥೆಯನ್ನೂ ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಅವರು ಕನ್ನಡ ಅಧ್ಯಯನ ಸಂಸ್ಥೆ ಈ ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಶೋಧನೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ನಂದಾ ದೀಪವಾಗಲೆಂದೂ ಸಾಹಿತ್ಯ ಕ್ಷೇತ್ರದ ಅಧ್ವರ್ಯುಗಳಾದ ತಾವೂ ತಮ್ಮ ಮುಂದಿನ ಪೀಳಿಗೆಗಳೂ ಅದಕ್ಕೆ ಸದಾ ಸಹಕಾರದ ಎಣ್ಣೆಯನ್ನು ತುಂಬುವ ಅವಕಾಶವಿರಲೆಂದೂ ತಾವು ಹೃತ್ಪೂರ್ವಕವಾಗಿ ಹಾರೈಸುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅವರ ಮಾತುಗಳು ಕನ್ನಡದ ಸರ್ವತೋಮುಖವಾದ ಅಭ್ಯುದಯಕ್ಕೆ ಇಂಥದೊಂದು ಸಂಸ್ಥೆಯ ಸ್ಥಾಪನೆಯ ಅಗತ್ಯವಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಇದೇ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾಗಿದ್ದ ದೇ.ಜವರೇಗೌಡರು, ಈ ಸಂಸ್ಥೆಯೊಂದು ಭೂಮ ಬಂಧುರ ವಿಸ್ಮಯವಾಗಿ, ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳ ತಲಕಾವೇರಿಯಾಗಿ, ಕನ್ನಡಿಗರ ಪವಿತ್ರ ಯಾತ್ರಾಸ್ಥಾನವಾಗಿ ನಾಡಿನ ಪುಣ್ಯವೇ ಸಾಕಾರಗೊಂಡಂತೆ ವಿಕಾಸಗೊಳ್ಳುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದ್ದರು. ಈ ಮಾತಿಗೆ ಸಾಕ್ಷಿಯಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅದ್ವಿತೀಯವಾಗಿ ರೂಪುತಳೆದಿದೆ. 1994ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಹೆಸರನ್ನು ಕುವೆಂಪು ಅವರ ಗೌರವಾರ್ಥ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಂದು ಪುನರ್ನಾಮಕರಣ ಮಾಡಲಾಯಿತು.

ವಿಶ್ವವಿದ್ಯಾನಿಲಯದ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಕನ್ನಡ ಸಂಪಾದನ ವಿಭಾಗವನ್ನು ಬೇರ್ಪಡಿಸಿ, ಕನ್ನಡ ಸ್ನಾತಕೋತ್ತರ ಬೋಧನ ಮತ್ತು ಸಂಶೋಧನ ವಿಭಾಗಗಳೊಡನೆ ಕೂಡಿಸುವುದರೊಂದಿಗೆ ಕನ್ನಡ ಅಧ್ಯಯನ ಸಂಸ್ಥೆ ಆರಂಭವಾಯಿತು. ಆಮೇಲೆ ಅದಕ್ಕೆ ಅನೇಕ ವಿಭಾಗಗಳು ಹೊಸದಾಗಿ ಕೂಡಿಕೊಂಡುವು.

ಅನಂತರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಸ್ತೃತಗೊಂಡಿತು. ಬೋಧನಾಂಗ, ಸಂಶೋಧನಾಂಗ, ಪ್ರಕಟಣಾಂಗ, ಕಾರ್ಯಾಂಗ ಹೀಗೆ ವಿಸ್ತಾರವಾದ ಹಾಗೂ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿತು. ವಿವಿಧ ಶಾಖೆಗಳ, ಉಪಶಾಖೆಗಳ ಸಾಧನೆಗಳನ್ನೂ ಕಾರ್ಯಚಟುವಟಿಕೆಗಳನ್ನೂ ಏಕಸೂತ್ರದಲ್ಲಿ ನಿಯಂತ್ರಿಸುತ್ತ ಮಾನಸಗಂಗೋತ್ರಿಯ ಭವ್ಯ ಆವರಣದಲ್ಲಿ ಅದರ ಹೃದಯಪ್ರಾಯವಾಗಿ ಸಂಸ್ಥೆ ತಲೆಯೆತ್ತಿ ನಿಂತಿತು. ಕನ್ನಡ ವಿಭಾಗ ಕುವೆಂಪು, ಡಿ.ಎಲ್.ನರಸಿಂಹಾಚಾರ್, ತೀ.ನಂ.ಶ್ರೀಕಂಠಯ್ಯ ಇಂಥ ಅನೇಕ ಗಣ್ಯ ವಿದ್ವಾಂಸರ ಬೋಧನೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆದು ಕನ್ನಡಅಧ್ಯಯನಸಂಸ್ಥೆಯಾಗಿ ರೂಪುಗೊಂಡು ದೇ.ಜವರೇಗೌಡ, ಹಾ.ಮಾ. ನಾಯಕ, ಎಚ್.ತಿಪ್ಪೇರುದ್ರಸ್ವಾಮಿ ಮುಂತಾದ ವಿದ್ವಾಂಸರ ನಿರ್ದೇಶನದಲ್ಲಿ ಹಲವಾರು ಬಗೆಯ ಬೋಧನೆ, ಸಂಶೋಧನೆ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ನಿರೀಕ್ಷೆಗೆ ತಕ್ಕಂತೆ ಬೆಳವಣಿಗೆಯನ್ನು ಸಾಧಿಸಿದೆ.

ಹಳಗನ್ನಡ, ನಡುಗನ್ನಡ, ವಚನಸಾಹಿತ್ಯ, ದಾಸಸಾಹಿತ್ಯ, ಛಂದಸ್ಸು, ದ್ರಾವಿಡಭಾಷಾವಿಜ್ಞಾನ, ಸಂಸ್ಕೃತಿ, ಶಾಸನ, ಜಾನಪದ, ಕಾವ್ಯಮೀಮಾಂಸೆ, ಸಾಹಿತ್ಯವಿಮರ್ಶೆ, ಭಾಷಾಂತರ, ಸಾಹಿತ್ಯ ಚರಿತ್ರೆ, ಸಂಶೋಧನೆ, ಆಧುನಿಕ ಸಾಹಿತ್ಯ ಮುಂತಾದ ವಿಷಯಗಳಲ್ಲಿ ವಿಶೇಷ ತಜ್ಞರಾದವರು ಇಲ್ಲಿನ ಬೋಧಕ ಹಾಗೂ ಬೋಧಕೇತರ ಶೈಕ್ಷಣಿಕ ವರ್ಗದಲ್ಲಿರುವಂತೆಯೇ ಅನ್ಯ ಭಾಷಾ ನಿಪುಣರನ್ನೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಪಡೆದುಕೊಂಡಿದೆ. ಇಂಗ್ಲಿಷ್, ತಮಿಳು, ತೆಲುಗು, ಮಲಯಾಳಂ ಭಾಷೆಗೆ ಸಂಬಂಧಿಸಿದಂತೆ ವಿಶೇಷ ಪರಿಣಿತರೂ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ಮೂರೂವರೆ ದಶಕಗಳಿಂದ ಹಲವಾರು ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳು ಸಂಸ್ಥೆಯ ಆಶ್ರಯದಲ್ಲಿ ನಡೆದು ಕನ್ನಡ ಭಾಷೆ ಹಾಗೂ ಸಾಹಿತ್ಯಗಳನ್ನು ಶ್ರೀಮಂತವಾಗಿಸುವಲ್ಲಿ ವಿಶೇಷವಾಗಿ ನೆರವಾಗಿವೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಜಾನಪದಗಳಿಗೆ ಸಂಬಂಧಪಟ್ಟಂತೆ ನಿರಂತರವಾಗಿ ನಡೆದ ಇಂಥ ಸಮ್ಮೇಳನ ಹಾಗೂ ವಿಚಾರಸಂಕಿರಣಗಳಲ್ಲಿ ಹೊರಬಂದ ಮೌಲಿಕವಾದ ಕೆಲವು ವಿಚಾರಗಳು ಪುಸ್ತಕರೂಪದಲ್ಲಿ ಹೊರಬಂದಿವೆ. ಸಂಸ್ಥೆಯಲ್ಲಿ ಈ ಹಿಂದೆ ಸೇವೆಸಲ್ಲಿಸಿದ ಹಾಗೂ ಸೇವೆಸಲ್ಲಿಸುತ್ತಿರುವ ಅನೇಕ ಪ್ರಾಧ್ಯಾಪಕ, ಸಂಶೋಧಕ ಮತ್ತು ಶೈಕ್ಷಣಿಕ ಉದ್ಯೋಗಿಗಳು ತಮ್ಮ ವಿಶಿಷ್ಟ ಸಾಧನೆ ಮತ್ತು ಕೊಡುಗೆಗಳಿಗಾಗಿ ರಾಷ್ಟ್ರಮಟ್ಟದ, ರಾಜ್ಯಮಟ್ಟದ ಬಹುಮಾನಗಳನ್ನೂ ಪ್ರಶಸ್ತಿ-ಗೌರವಗಳನ್ನು ಗಳಿಸಿದ್ದಾರೆ. ಶೈಕ್ಷಣಿಕ ಸಿಬ್ಬಂದಿ ಕಾಲೇಜಿನ ವತಿಯಿಂದ ನಡೆಯುತ್ತಿರುವ ಕನ್ನಡ ಪುನರ್ಮನನ ಶಿಕ್ಷಣದ (ರಿಫ್ರೆಶರ್‌ಕೋರ್ಸ್) ಹೊಣೆಯನ್ನು ಸಂಸ್ಥೆಯ ಸಿಬ್ಬಂದಿ ನಿರ್ವಹಿಸುತ್ತಿದ್ದು ಇಂಥ ಶಿಬಿರಗಳು ಯಶಸ್ವಿಯಾಗಿ ನಡೆದಿವೆ.

ಇಂಥ ಸಂಸ್ಥೆಯಲ್ಲಿ ಇಲ್ಲಿಯವರೆಗೆ ನಿರ್ದೇಶಕರಾಗಿ ಸೇವೆಸಲ್ಲಿಸಿರುವ ಪ್ರಾಧ್ಯಾಪಕರ ಹೆಸರುಗಳು ಹೀಗಿವೆ: ದೇ.ಜವರೇಗೌಡ (1966-69), ಹಾ.ಮಾ.ನಾಯಕ (1969-84), ಎಚ್.ತಿಪ್ಪೇರುದ್ರಸ್ವಾಮಿ (1984-87), ಜೀ.ಶಂ.ಪರಮಶಿವಯ್ಯ (1987-89), ಸಿ.ಪಿ.ಕೃಷ್ಣಕುಮಾರ್ (1989-91), ಟಿ.ವಿ.ವೆಂಕಟಾಚಲಶಾಸ್ತ್ರೀ (1991-93), ಎಚ್.ಎಂ.ಚನ್ನಯ್ಯ (1993-95), ಕೆ.ಕೆಂಪೇಗೌಡ (1995-97), ಡಿ.ಕೆ.ರಾಜೇಂದ್ರ (1997-99), ಸಿ.ಪಿ.ಸಿದ್ಧಾಶ್ರಮ (11-1-1999ರಿಂದ 2-1-2001), ಅರವಿಂದ ಮಾಲಗತ್ತಿ (2-1-2001ರಿಂದ 1-1-2002), ಡಿ.ಕೆ.ರಾಜೇಂದ್ರ (1-1-2002ರಿಂದ 12-4-2002), ಸಿ.ಪಿ.ಸಿದ್ಧಾಶ್ರಮ, (13-4-2002ರಿಂದ 14-4-2004) ಅರವಿಂದ ಮಾಲಗತ್ತಿ (15-4-2004 ರಿಂದ 31-5-2006), ಹಿ.ಶಿ. ರಾಮಚಂದ್ರೇಗೌಡ (1-6-2006 ರಿಂದ 14-11-2007), ಆರ್.ವಿ.ಎಸ್. ಸುಂದರಂ (15-11-2007 ರಿಂದ 21-4-2008), ಅಂಬಳಿಕೆ ಹಿರಿಯಣ್ಣ (21-4-2008 ರಿಂದ 20-4-2010), ಕೆ.ಎನ್. ಗಂಗಾನಾಯಕ್ (21-4-2010 ರಿಂದ 20-4-2012), ಎನ್.ಎಂ. ತಳವಾರ (21-4-2012 ರಿಂದ).

**ಬೋಧನಾಂಗಗಳು:** ಸಂಸ್ಥೆಯ ಬೋಧನಾಂಗದಲ್ಲಿ ಎರಡು ವರ್ಷದ ಕನ್ನಡ ಸ್ನಾತಕೋತ್ತರ ಶಿಕ್ಷಣ ಬಹಳ ಮುಖ್ಯವಾದುದು. ಜಾಗತೀಕರಣ, ಉದಾರೀಕರಣ, ಆಧುನೀಕರಣದೊಂದಿಗೆ ನಿಕಟ ಬಾಂಧವ್ಯ ಸಾಧಿಸುವ ಹಿನ್ನೆಲೆಯಲ್ಲಿ ಪಠ್ಯಕ್ರಮದಲ್ಲಿ ಈಗ ಸಂಪೂರ್ಣವಾಗಿ ಬದಲಾವಣೆ ಮಾಡಲಾಗಿದ್ದು, ಉದ್ಯೋಗಕ್ಕಾಗಿ ಶಿಕ್ಷಣ, ಜ್ಞಾನಕ್ಕಾಗಿ ಶಿಕ್ಷಣ ಎನ್ನುವುದಕ್ಕೆಂದು ಇವೆರಡರ ಸಂಯೋಜನಾತ್ಮಕ ಮಧ್ಯಂತರ ಶಿಕ್ಷಣ ಮಾರ್ಗವನ್ನು ತರಬೇಕೆಂಬುದು ಪಠ್ಯಕ್ರಮ ರೂಪಿಸುವುದರ ಹಿಂದಿನ ಆಶಯ. ಸಂಶೋಧನೆ ಹಾಗೂ ಗಣಕಜ್ಞಾನದ ವಿಷಯಗಳನ್ನು ಪಠ್ಯದ ಭಾಗಗಳಾಗಿ ಅಳವಡಿಸಲಾಗಿದೆ.

ಭಾಷಾವಿಜ್ಞಾನ ಅಂತಾರಾಷ್ಟ್ರೀಯ ಮನ್ನಣೆ ಪಡೆದಿರುವ ಪ್ರಮುಖ ಅಧ್ಯಯನ ವಿಷಯಗಳಲ್ಲೊಂದಾಗಿದೆ. ಅಧ್ಯಯನ ಸಂಸ್ಥೆಯಲ್ಲಿ ಈ ವಿಷಯದಲ್ಲಿ ಎಂ.ಎ. ಹಾಗೂ ಸ್ನಾತಕೋತ್ತರ ಡಿಪ್ಲೊಮಾ ಅಧ್ಯಯನ ಮಾಡುವ ಸೌಲಭ್ಯವನ್ನು ಒದಗಿಸಲಾಗಿದೆ. 1972ರಲ್ಲಿ ಎಂ.ಎ. ತರಗತಿ ಪ್ರಾರಂಭಗೊಂಡಿದೆ. ಸ್ನಾತಕೋತ್ತರ ಡಿಪ್ಲೊಮಾ ತರಗತಿ 1990ರಲ್ಲಿ ಪ್ರಾರಂಭವಾಯಿತು. ಈ ವಿಭಾಗದಲ್ಲಿ ಪಿಎಚ್.ಡಿ. ಅಧ್ಯಯನಕ್ಕೂ ಅವಕಾಶ ಕಲ್ಪಿಸಲಾಗಿದೆ. ಸಂಸ್ಥೆಯಲ್ಲಿ ಕನ್ನಡ ಕಲಿಕೆಗೆ ಬರುವ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಕನ್ನಡ ಸರ್ಟಿಫಿಕೇಟ್ ಶಿಕ್ಷಣದ ಪ್ರಾಯೋಗಿಕ ತರಗತಿಗಳಿಗಾಗಿ ಭಾಷಾವಿಜ್ಞಾನ ವಿಭಾಗದಲ್ಲಿ ಸುಸಜ್ಜಿತ ಭಾಷಾ ಪ್ರಯೋಗಾಲಯವನ್ನು ಸ್ಥಾಪಿಸಲಾಗಿತ್ತು (1975). ಕನ್ನಡೇತರರು, ವಿದೇಶೀಯರು ಹಾಗೂ ಸಂಶೋಧಕರ ಭಾಷಾ ಅಧ್ಯಯನ ಮತ್ತು ಬೋಧನಾ ಸೌಲಭ್ಯದ ಸುಗಮತೆಯ ದೃಷ್ಟಿಯಿಂದ ಪ್ರಾರಂಭವಾದ ಈ ಭಾಷಾ ಪ್ರಯೋಗಾಲಯ ಮಹತ್ವದ್ದು. ಈಗ ಸಂಪೂರ್ಣವಾಗಿ ಆಧುನಿಕಗೊಂಡಿದೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಸ್ಥಿರವಾದ ಬುನಾದಿಯನ್ನು ಪ್ರಪ್ರಥಮವಾಗಿ ಹಾಕಿಕೊಟ್ಟ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲುತ್ತದೆ. ಜಾನಪದ ಅಧ್ಯಯನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆ ದೊರೆತದ್ದು 1966ರಲ್ಲಿ. ಆಗ ಕನ್ನಡ ಎಂ.ಎ. ಪಠ್ಯಕ್ರಮದಲ್ಲಿ ಜಾನಪದ ಅಧ್ಯಯನ ಸೇರ್ಪಡೆಗೊಂಡಿತು. ಜಾನಪದ ಅಧ್ಯಯನದ ಮಹತ್ವವನ್ನು ಮನಗಂಡು ಅದರ ಅಧ್ಯಯನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆಯನ್ನು ದೊರಕಿಸಿಕೊಡಲು ಶ್ರಮಿಸಿದವರು ಆಗಿನ ನಿರ್ದೇಶಕರಾಗಿದ್ದ ದೇ. ಜವರೇಗೌಡರು. ಅವರೊಡನೆ ಜಾನಪದ ಅಧ್ಯಯನವನ್ನು ಬೆಳೆಸಲು ಹಾ.ಮಾ. ನಾಯಕ ಮತ್ತು ಜೀ.ಶಂ.ಪರಮಶಿವಯ್ಯನವರು ಶ್ರಮಿಸಿದರು. ಅನಂತರ ಜಾನಪದವನ್ನು ಐಚ್ಛಿಕ ವಿಷಯವಾಗಿ ಅಭ್ಯಾಸ ಮಾಡುವವರ ಮತ್ತು ಆಸಕ್ತರ ಅನುಕೂಲಕ್ಕಾಗಿ ಒಂದು ವರ್ಷದ ಸ್ನಾತಕೋತ್ತರ ಜಾನಪದ ಡಿಪ್ಲೊಮಾ ಶಿಕ್ಷಣವನ್ನೂ ಆರಂಭಿಸಲಾಯಿತು (1972). ಜಾನಪದ ಅಧ್ಯಯನಕ್ಕೇ ಪ್ರತ್ಯೇಕವಾದ ಪೂರ್ಣಪ್ರಮಾಣದ ಜಾನಪದ ಎಂ.ಎ. ಶಿಕ್ಷಣವನ್ನು ಭಾರತದಲ್ಲೇ ಮೊತ್ತಮೊದಲ ಬಾರಿಗೆ ಆರಂಭಿಸಿದ್ದು 1974ರಲ್ಲಿ.

ದಕ್ಷಿಣ ಭಾರತವನ್ನು ಒಂದು ಸಮಗ್ರ ಘಟಕವನ್ನಾಗಿ ತೆಗೆದುಕೊಂಡು ಅಧ್ಯಯನ ಮಾಡುವ ದೃಷ್ಟಿಯಿಂದ ಪ್ರಾರಂಭಗೊಂಡ (1971-72) ಎರಡು ವರ್ಷಗಳ ದಕ್ಷಿಣ ಭಾರತೀಯ ಅಧ್ಯಯನ ಎಂ.ಎ. ಇಡೀ ರಾಷ್ಟ್ರದಲ್ಲೇ ಈ ಬಗೆಯ ಶಿಕ್ಷಣದಲ್ಲಿ ಇದು ಮೊದಲನೆಯದು. ಈ ಅಧ್ಯಯನ ಕೇವಲ ಇತಿಹಾಸ ಅಥವಾ ಸಾಹಿತ್ಯಕ್ಕೆ ಮೀಸಲಾಗಿರದೆ ದಕ್ಷಿಣ ಭಾರತೀಯ ಸಾಹಿತ್ಯಗಳು, ಅದಕ್ಕೆ ಸಂಬಂಧಿಸಿದ ಪಠ್ಯಗಳು, ಇತಿಹಾಸ, ಪ್ರಾಚೀನ ಇತಿಹಾಸ, ಕಲೆ ಮತ್ತು ವಾಸ್ತುಶಿಲ್ಪ, ತತ್ವಶಾಸ್ತ್ರ ಮತ್ತು ದ್ರಾವಿಡ ಭಾಷಾ ವಿಜ್ಞಾನ ಸೇರಿ, ದಕ್ಷಿಣ ಭಾರತೀಯ ಅಧ್ಯಯನ ಅರ್ಥಪೂರ್ಣ ಶೈಕ್ಷಣಿಕ ಶಿಸ್ತಾಗಿ ವಿಶಿಷ್ಟತೆಯನ್ನು ಪಡೆದಿದೆ.

ಭಾಷಾಂತರದ ಮಹತ್ವ ದಿನೇದಿನೇ ಹೆಚ್ಚುತ್ತಿರುವುದನ್ನು ಮನಗಂಡು 1967-68ರಲ್ಲಿ ಭಾಷಾಂತರದಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ತರುವಾಯ ಭಾಷಾಂತರದಲ್ಲಿ ಎಂ.ಫಿಲ್ ಪದವಿ ಶಿಕ್ಷಣ ಜಾರಿಗೆ ಬಂದಿತು. ಭಾಷಾಂತರಕಾರರನ್ನು ಸಿದ್ಧಪಡಿಸುವಲ್ಲಿ ಇದು ಮುಖ್ಯ ಪಾತ್ರವಹಿಸಿತು.

ಭಾರತೀಯ ಭಾಷೆಗಳು ಹಲವಾದರೂ ಭಾರತೀಯ ಸಾಹಿತ್ಯ ಒಂದೇ ಎಂಬ ಪರಿಕಲ್ಪನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾರತೀಯ ಸಾಹಿತ್ಯದ ವಿವಿಧ ಮುಖಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಸ್ನಾತಕೋತ್ತರ ಭಾರತೀಯ ಸಾಹಿತ್ಯ ಡಿಪ್ಲೊಮಾವನ್ನು ಪ್ರಾರಂಭಿಸಲಾಯಿತು (1970-71).ಯಾವುದೇ ಪದವಿಯಲ್ಲಿ ಉತ್ತೀರ್ಣರಾದವರು ಈ ಶಿಕ್ಷಣಕ್ಕೆ ಸೇರಲು ಅರ್ಹರು.

ಕನ್ನಡ ಮಾತೃಭಾಷೆಯಲ್ಲದ, ಶಿಕ್ಷಣದ ಯಾವ ಹಂತದಲ್ಲಿಯೂ ಕನ್ನಡವನ್ನು ಅಭ್ಯಾಸ ಮಾಡದಿರುವ ಕನಿಷ್ಠ ಪಕ್ಷ ಎಸ್‌ಎಸ್‌ಎಲ್‌ಸಿ. ಮಟ್ಟದಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗಾಗಿ ಕನ್ನಡ ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಲಾಗಿದೆ (1968-69). ಕನ್ನಡ ಓದು ಬರೆಹಗಳಿಗೆ ಹಾಗೂ ಮಾತನಾಡುವುದಕ್ಕೆ ಮೊದಲ ಪ್ರಾಶಸ್ತ್ಯ ನೀಡಿ ಕನ್ನಡ ಸಾಹಿತ್ಯವನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವಂತೆ ಈ ಶಿಕ್ಷಣವನ್ನು ರೂಪಿಸಲಾಗಿದೆ. ಇದನ್ನು ಯಶಸ್ವಿಯಾಗಿ ಮುಗಿಸುವವರಿಗೆ ಒಂದು ಶೈಕ್ಷಣಿಕ ವರ್ಷ ಅವಧಿಯ ಕನ್ನಡ ಡಿಪ್ಲೊಮಾ ಶಿಕ್ಷಣ ನೀಡುವ ಮೂಲಕ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ.

1968-69ರಲ್ಲಿ ಅಮೆರಿಕದ ಬಫೆಲೋ ಸ್ಟೇಟ್ ಕಾಲೇಜಿನ ಒಂಬತ್ತು ವಿದ್ಯಾರ್ಥಿಗಳು ಅವರ ಶಿಕ್ಷಣದ ಅಂಗವಾಗಿ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಅನ್ವಯ ಕನ್ನಡ ಕಲಿಯಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದಂದಿನಿಂದ ಕನ್ನಡ ಶಿಕ್ಷಣ ಪ್ರಾರಂಭವಾಯಿತು. ಅಂದಿನಿಂದ ವಿವಿಧ ಶೈಕ್ಷಣಿಕ ಅವಧಿಗಳಲ್ಲಿ ಅಮೆರಿಕ, ರಷ್ಯ ಮೊದಲಾದ ದೇಶಗಳಿಂದ ವಿದೇಶೀಯರು ಬಂದು ಕನ್ನಡ ಕಲಿಯುತ್ತಿದ್ದಾರೆ. ಆರು ತಿಂಗಳ ಅವಧಿಯಲ್ಲಿ ಅವರು ಸ್ವತಂತ್ರವಾಗಿ ಓದಲು, ಬರೆಯಲು, ಮಾತನಾಡಲು ಕಲಿಯುತ್ತಾರೆ.

1996-97ರಲ್ಲಿ ಕರ್ನಾಟಕ ಸರ್ಕಾರದ ಆಶಯದಂತೆ ಆಡಳಿತ ತರಬೇತಿ ಸಹಕಾರದೊಂದಿಗೆ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ವರ್ಗದ ಪ್ರೊಬೇಷನರಿ ಅಧಿಕಾರಿಗಳಿಗಾಗಿ ಕರ್ನಾಟಕ ಸರ್ಕಾರ ನಡೆಸುವ ತತ್ಸಂಬಂಧವಾದ ಪರೀಕ್ಷೆಗಾಗಿ ಸರ್ಕಾರದ ಆರ್ಥಿಕ ನೆರವಿನಿಂದ ಸಂಸ್ಥೆಯ ವತಿಯಿಂದ ಕನ್ನಡ ತರಬೇತಿ ಕಾರ್ಯಕ್ರಮ ನಡೆಸಲಾಗಿದೆ.

**ಸಂಶೋಧನ ಸೌಲಭ್ಯ:** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನ ಅಭ್ಯರ್ಥಿಗಳು ಕನ್ನಡ ಭಾಷಾಸಾಹಿತ್ಯ, ಭಾಷಾವಿಜ್ಞಾನ, ಜಾನಪದ, ಭಾಷಾಂತರ, ದಕ್ಷಿಣ ಭಾರತೀಯ ಅಧ್ಯಯನಗಳಿಗೆ ಸಂಬಂಧಿಸಿದಂತೆ ಹಾಗೂ ಅಂತರಶಾಸ್ತ್ರೀಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಬೋಧನ ಸಿಬ್ಬಂದಿಯ ಹಾಗೂ ಶೈಕ್ಷಣಿಕ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಲು ಅವಕಾಶವಿದೆ. ಸಂಶೋಧನ ಅಭ್ಯರ್ಥಿಗಳು ಖಾಸಗಿಯಾಗಿ ಕೂಡ ವಿವಿಧ ವಿಷಯಗಳನ್ನು ಕುರಿತಂತೆ ಪಿಎಚ್.ಡಿ.ಗಾಗಿ ಸಂಶೋಧನೆ ನಡೆಸಲು ಅವಕಾಶವಿದೆ. ಸಂಸ್ಥೆಯಲ್ಲಿ ಕುವೆಂಪು ಕಾವ್ಯಾಧ್ಯಯನ ಪೀಠ, ಬಸವ ಪೀಠ ಸ್ಥಾಪಿತಗೊಂಡಿದ್ದು ಒಂದೊಂದು ವರ್ಷದ ಅವಧಿಗೆ ನಿವೃತ್ತ ವಿದ್ವಾಂಸರು ಈ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕವಾಗುತ್ತಾರೆ.

**ಗಣಕಶಾಖೆ:** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಲ್ಲ ವಿಭಾಗಗಳ ಗಣಕೀಕರಣದ ಮೊದಲ ಹಂತದ ಕೆಲಸಕ್ಕೆ ಮುಂದಾಗಿದೆ. ವಿದ್ಯಾರ್ಥಿಗಳಿಗಾಗಿ ಪಠ್ಯದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಗಣಕದ ವಿಷಯವನ್ನು ಕಡ್ಡಾಯವಾಗಿ ಸೇರಿಸಲಾಗಿದ್ದು ಬೋಧನಾಂಗಗಳಲ್ಲಿ ಏಕರೂಪತೆ ಮತ್ತು ಸಂಯುಕ್ತತೆಯನ್ನು ಕಾಪಾಡಲಾಗಿದೆ.

**ಭೌತಿಕಸ್ವರೂಪ:** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅಪರೂಪವಾದ ಕಟ್ಟಡ. ಎರಡು ಅಂತಸ್ತಿನ ಈ ಕಟ್ಟಡದಲ್ಲಿ ಒಟ್ಟು 35 ಕೊಠಡಿಗಳಿವೆ. ಸಂಸ್ಥೆಯಲ್ಲಿ ಸುಸಜ್ಜಿತ ಗ್ರಂಥಾಲಯವಿದೆ. ಇಲ್ಲಿ ಸುಮಾರು 35 ಸಾವಿರ ಗ್ರಂಥಗಳಿವೆ. ಕೇವಲ ಕನ್ನಡ ವಿಷಯಕ್ಕೆ ಸಂಬಂಧಿಸಿರದೆ ಬಗೆಬಗೆಯ ವಿಶ್ವಕೋಶಗಳೂ ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲಯಾಳಂ, ಮರಾಠಿ, ಭಾಷಾ ವಿಷಯಗಳ ಗ್ರಂಥಗಳೂ ಸೇರ್ಪಡೆಗೊಂಡಿವೆ.

ಸಭೆಸಮಾರಂಭಗಳನ್ನು ನಡೆಸಲು ವಿಭಿನ್ನ ಸ್ವರೂಪದ ಮೂರು ಸಂರಚನೆಗಳಿವೆ. ಐವತ್ತು ಆಸನಗಳಿರುವ ಸಮಿತಿ ಕೊಠಡಿ, ನೂರೈವತ್ತು ಆಸನಗಳಿರುವ ಸಭಾಂಗಣ, ನೂರು ಆಸನಗಳ ಸಭಾಮನೆ ಇವೆ. ಇವುಗಳಲ್ಲಿ ವಿಚಾರಸಂಕಿರಣ, ವಿಚಾರಗೋಷ್ಠಿ, ವಿಶೇಷ ಉಪನ್ಯಾಸ, ಶಿಬಿರಗಳು ಜರಗುತ್ತವೆ.

**ಪ್ರಕಟಣೆಗಳು:** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಇಲ್ಲಿಯ ವರೆಗೆ ಒಟ್ಟು 536 ಕೃತಿಗಳು ಪ್ರಕಟವಾಗಿವೆ. ಅನುವಾದಿತ ಕೃತಿಗಳು 230, ಸಂಪಾದಿತ ಕೃತಿಗಳು 131, ಜಾನಪದಕ್ಕೆ ಸಂಬಂಧಿಸಿದ ಕೃತಿಗಳು 73, ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ 13, ಇತರ ಪ್ರಕಟಣೆಗಳು 44, ಇಂಗ್ಲಿಷ್ ಕೃತಿಗಳು 10 –ಹೀಗೆ ಪ್ರಕಟಣೆಯಲ್ಲಿ ಸಂಸ್ಥೆ ತನ್ನದೇ ಆದ ಛಾಪನ್ನು ಮೂಡಿಸಿದೆ.

**ಕನ್ನಡ ವಿಶ್ವಕೋಶ ಮತ್ತು ವಿಷಯ ವಿಶ್ವಕೋಶ ಯೋಜನೆ:** ಕನ್ನಡ ವಿಶ್ವ ಕೋಶ ಮೈಸೂರು ವಿಶ್ವವಿದ್ಯಾನಿಲಯದ ಹಾಗೂ ಕನ್ನಡದ ಪ್ರತಿಷ್ಠಿತ ಯೋಜನೆಗಳಲ್ಲೊಂದು. ಸಾಮಾನ್ಯ ವಿಶ್ವಕೋಶ 14 ಸಂಪುಟಗಳ ಯೋಜನೆ. ಈ ಯೋಜನೆಯಂತೆ ಇದುವರೆಗೆ 14 ಸಂಪುಟಗಳು ಬಂದಿವೆ (2004). ಈಗ ಸಂಪುಟಗಳ ಪರಿಷ್ಕಾರ ಮತ್ತು ಪುಸ್ತಕ ಮುದ್ರಣ ಕಾಯ ನಡೆಯುತ್ತಿದೆ.

**ಕನ್ನಡ ವಿಷಯ ವಿಶ್ವಕೋಶ:** ಸಾಮಾನ್ಯ ವಿಶ್ವಕೋಶಗಳು ಗಳಿಸಿದ ಯಶಸ್ಸನ್ನು ಪರಿಗಣಿಸಿ 30 ಸಂಪುಟಗಳಲ್ಲಿ ವಿಷಯ ವಿಶ್ವಕೋಶಗಳನ್ನು ಹೊರತರಲು ಬೃಹತ್ ಯೋಜನೆಯೊಂದನ್ನು ಕೈಗೆತ್ತಿಕೊಂಡಿತು. ವಿಷಯದ ಆಯ್ಕೆ, ನಿರೂಪಣೆ, ತಾಂತ್ರಿಕತೆಗಳ ದೃಷ್ಟಿಯಿಂದ ಸಾಮಾನ್ಯ ವಿಶ್ವಕೋಶ ಹಾಗೂ ವಿಷಯ ವಿಶ್ವಕೋಶಗಳಲ್ಲಿ ಕೆಲವು ಭಿನ್ನತೆಗಳನ್ನು ಗುರುತಿಸಬಹುದು. ಸಾಮಾನ್ಯ ವಿಶ್ವಕೋಶ ಎಲ್ಲ ವರ್ಗದ ಆಸಕ್ತಿಯ ವಾಚಕರನ್ನು ಗಮನದಲ್ಲಿಟ್ಟುಕೊಂಡರೆ, ವಿಷಯ ವಿಶ್ವಕೋಶ ಆಯಾ ವಿಷಯಗಳಲ್ಲಿ ಆಸಕ್ತರನ್ನು ಮತ್ತು ಪರಿಣತರನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳುತ್ತದೆ. 16 ವಿಜ್ಞಾನ ವಿಷಯಗಳು, 14 ಮಾನವಿಕ ವಿಷಯಗಳು –ಹೀಗೆ ಒಟ್ಟು ಸಂಪುಟಗಳನ್ನು ಸಿದ್ಧಪಡಿಸಲು ಸು.99 ಲಕ್ಷ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಮಂಜೂರು ಮಾಡಿತ್ತು. ಈ ಹೊಣೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೇ ವಹಿಸಿಕೊಟ್ಟಿತ್ತು. ಕನ್ನಡ ವಿಷಯ ವಿಶ್ವಕೋಶದ ಮೊದಲ ಸಂಪುಟ ಕರ್ನಾಟಕ 1979ರಲ್ಲಿ ಪ್ರಕಟವಾಯಿತು. ಇದರ ಪರಿಷ್ಕಾರ ಹಾಗೂ ಪುನರ್ ಮುದ್ರಣ ಕಾರ್ಯವೂ ಎರಡು ಸಂಪುಟಗಳು ಪ್ರಕಟವಾಗಿವೆ. ಜೊತೆಗೆ ಜಾನಪದ (), ಪ್ರಾಣಿವಿಜ್ಞಾನ (), ಇತಿಹಾಸ ಮತ್ತು ಪುರಾತತ್ವ (), ಭೂಗೋಳ ವಿಜ್ಞಾನ () ಎಬ ವಿಷಯ ವಿಶ್ವಕೋಶ ಸಂಪುಟಗಳು ಪ್ರಕಟವಾಗಿವೆ. ಮಾಹಿತಿ ತಂತ್ರಜ್ಞಾನ, ವೈದ್ಯವಿಜ್ಞಾನ, ಭೂವಿಜ್ಞಾನ, ಮಾನವಶಾಸ್ತ್ರ– ಈ ಸಂಪುಟಗಳ ಪ್ರಕಟಣೆಯ ಕಾರ್ಯ ಪ್ರಗತಿಯಲ್ಲಿದೆ. **(ನೋಡಿ: ಕನ್ನಡದಲ್ಲಿ ವಿಶ್ವಕೋಶಗಳು)**.

**ಎಪಿಗ್ರಾಫಿಯಕರ್ನಾಟಿಕ:** ಕನ್ನಡನಾಡಿನಲ್ಲಿ ಸುಮಾರು ನಲವತ್ತು ಸಾವಿರ ಶಾಸನಗಳಿರಬಹುದೆಂದು ಅಂದಾಜು ಮಾಡಲಾಗಿದೆ. 'ಎಪಿಗ್ರಾಫಿಯ ಕರ್ನಾಟಿಕ' ಹಳೆಯ ಮೈಸೂರು ಮತ್ತು ಕೊಡಗು ರಾಜ್ಯಗಳಲ್ಲಿ ಲಭ್ಯವಾದ ಶಾಸನಗಳನ್ನು ಜಿಲ್ಲಾವಾರು ಸಂಕಲಿಸಿ, ಸಂಪಾದಿಸಿ, ಪ್ರಕಟಿಸಿದ ಸಂಪುಟಗಳಿಗೆ ನೀಡಲಾದ ಒಂದು ಶೀರ್ಷಿಕೆ. ಪಾಶ್ಚಾತ್ಯ ವಿದ್ವಾಂಸರಾದ ಬೆಂಜಮಿನ್ ಲೂಯಿ ರೈಸ್ 1984ರಿಂದ 1906ರ ಅವಧಿಯಲ್ಲಿ ಹನ್ನೆರಡು ಬೃಹತ್ ಸಂಪುಟಗಳನ್ನು ಹೊರತಂದರು. ಅವರು ಒಟ್ಟು 8669 ಶಾಸನಗಳನ್ನು ಲಿಪ್ಯಂತರ, ಸಂಕ್ಷಿಪ್ತ ಭಾಷಾಂತರ ಮತ್ತು ಪೀಠಿಕೆಗಳೊಡನೆ ಪ್ರಕಟಿಸಿದರು. ಅನಂತರ ಸುಮಾರು ಐದು ದಶಕಗಳಲ್ಲಿ ಸು.5000 ಶಾಸನಗಳು ಅನ್ವೇಷಿತವಾದವು. ಇವು ಎಂ.ಎ.ಆರ್. ವಾರ್ಷಿಕ ವರದಿಗಳಲ್ಲಿಯೂ ಎಪಿಗ್ರಾಫಿಯ ಕರ್ನಾಟಿಕ ಅನುಬಂಧ ಸಂಪುಟಗಳಲ್ಲಿಯೂ ಪ್ರಕಟಗೊಂಡವು. ಇವೆಲ್ಲವನ್ನೂ ಒಳಗೊಂಡಂತೆ ಪರಿಷ್ಕರಣದ ಕೆಲಸವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಲಾಯಿತು. ಪರಿಷ್ಕರಣಕಾರ್ಯ ಪ್ರಗತಿಯಲ್ಲಿದ್ದು ಈಗ 12 ಸಂಪುಟಗಳು ಪ್ರಕಟವಾಗಿವೆ. ಉಳಿದ ಸಂಪುಟಗಳ ಕಾರ್ಯ ನಡೆದಿದೆ (ನೋಡಿ: ಎಪಿಗ್ರಾಫಿಯ ಕರ್ನಾಟಿಕ).

**ಸಂಪಾದನ ವಿಭಾಗ:** ಪ್ರಾಚೀನ ಹಸ್ತಪ್ರತಿಗಳು ಯಾವುದೇ ನಾಡಿನ ಅಮೂಲ್ಯ ಆಸ್ತಿ; ಅವು ಆ ಜನಾಂಗದ ಸಾವಿರಾರು ವರ್ಷಗಳ ಸಂಸ್ಕೃತಿ ಮತ್ತು ಸಾಹಿತ್ಯ ಸಂಪತ್ತಿನ ವಾಹಕಗಳು. ಸುಮಾರು ಒಂದು ಸಾವಿರದ ಮುನ್ನೂರು ವರ್ಷಗಳ ಕನ್ನಡ ಸಾಹಿತ್ಯವಾಹಿನಿ ಹರಿದುಬಂದಿರುವುದು ಕೂಡ ಈ ಹಸ್ತಪ್ರತಿಗಳಿಂದಲೇ. ಇವುಗಳಿಲ್ಲದೇ ಹೋಗಿದ್ದಿದ್ದರೆ ನಮ್ಮ ಪ್ರಾಚೀನ ಸಾಹಿತ್ಯ ಯುಗ ಕಗ್ಗತ್ತಲೆಯ ಯುಗವಾಗಿಯೇ ಉಳಿದಿರುತ್ತಿತ್ತು.

1891ರಲ್ಲಿ ಬಿ.ಎಲ್.ರೈಸ್ ಅವರ ನೇತೃತ್ವದಲ್ಲಿ ಮೈಸೂರು ಪ್ರಾಚ್ಯಕೋಶಾಗಾರ ಪ್ರಾರಂಭವಾಯಿತು. ಇಲ್ಲಿ ಸಂಸ್ಕೃತ, ಕನ್ನಡ, ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳ ಅಧ್ಯಯನ ನಡೆಯತೊಡಗಿತು. ಜೊತೆಗೆ ಗ್ರಂಥ ಸಂಪಾದನ ಕಾರ್ಯವನ್ನೂ ಮಾಡತೊಡಗಿದರು. ಸರ್ಕಾರಿ ಇಲಾಖೆಯಾಗಿದ್ದ ಪ್ರಾಚ್ಯ ಕೋಶಾಗಾರ 1956ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಲೀನಗೊಂಡಿತು. ಅನಂತರ ಪ್ರಾಚ್ಯ ವಿದ್ಯಾಸಂಶೋಧನಾಲಯ ಎಂಬ ಹೆಸರಿನಲ್ಲಿ ಸಂಸ್ಥೆಯ ಕೆಲಸ ಮುಂದುವರಿಯಿತು. ಆಗ ಕನ್ನಡ ಮತ್ತು ಸಂಸ್ಕೃತ ವಿಭಾಗಗಳು ಒಟ್ಟಿಗೆ ಇದ್ದುವು.

ಕನ್ನಡದ ಕೆಲಸಗಳೆಲ್ಲ ಒಂದೇ ಸೂರಡಿಯಲ್ಲಿ ನಡೆಯಬೇಕು ಎಂಬ ಉದ್ದೇಶದಿಂದ ಮತ್ತು ಪರಸ್ಪರ ಸಂಬಂಧರಹಿತವಾಗಿದ್ದ ಭಿನ್ನಾಂಗಗಳನ್ನು ಒಂದೆಡೆ ಕೂಡಿಸಿ ಸಾವಯವ ಸಂಬಂಧವನ್ನು ಕಲ್ಪಿಸುವ ಉದ್ದೇಶದಿಂದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆ ಸ್ಥಾಪಿತವಾದ ಮೇಲೆ ಸಂಸ್ಕೃತದಿಂದ ಬೇರ್ಪಡಿಸಿ ಈ ಸಂಸ್ಥೆಯಲ್ಲಿ ಸೇರಿಸಲಾಯಿತು (1966). ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲ್ಪಟ್ಟು, ವಿಲೀನಗೊಂಡ ಬಳಿಕ ಸಂಪಾದನ ವಿಭಾಗ ಎಂಬ ಹೆಸರು ಪಡೆದು ಸಂಸ್ಥೆಯ ಪ್ರಧಾನ ವಿಭಾಗವಾಗಿದೆ.

ಪ್ರಾಚೀನ ಕನ್ನಡ ಹಸ್ತಪ್ರತಿಗಳ ಸಂಗ್ರಹಣೆ, ಸಂರಕ್ಷಣೆ, ಸಂಪಾದನೆ ಮತ್ತು ಪ್ರಕಟಣೆ ಸಂಪಾದನ ವಿಭಾಗದ ಕಾರ್ಯ. ಇಲ್ಲಿಯ ವಿದ್ವಾಂಸರು ಸಂಪಾದನಕಾರ್ಯದ ಜೊತೆಜೊತೆಯಲ್ಲಿಯೇ ಹಸ್ತಪ್ರತಿಗಳ ಸಂಗ್ರಹಣೆಗಾಗಿ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು ನಾಡಿನಲ್ಲೆಲ್ಲ ಸಂಚರಿಸಿ ಅವನ್ನು ಸಂಗ್ರಹಿಸಿ ತಂದು ವಿಭಾಗದ ಹಸ್ತಪ್ರತಿ ಭಂಡಾರವನ್ನು ತುಂಬುತ್ತ ಬಂದಿದ್ದಾರೆ. ಹೀಗಾಗಿ ಸಂಪಾದನ ವಿಭಾಗದ ಹಸ್ತಪ್ರತಿ ಭಂಡಾರ ಅಧಿಕ ಸಂಖ್ಯೆಯ ಹಾಗೂ ವೈವಿಧ್ಯಮಯ ಹಸ್ತಪ್ರತಿಗಳನ್ನು ಪಡೆದುಕೊಂಡು ಶ್ರೀಮಂತವಾಗಿದೆ. 19ನೆಯ ಶತಮಾನದಲ್ಲಿ ಕರ್ನಲ್ ಮೆಕೆಂಜಿಯಿಂದ ಆರಂಭವಾಗಿ ಬಿ.ಎಲ್.ರೈಸ್ ಮತ್ತು ಆರ್.ನರಸಿಂಹಾಚಾರ್ಯ ಮುಂತಾದವರು ಇಲ್ಲಿಯವರೆಗೆ ಸಂಗ್ರಹಿಸಿರುವ ಸು.10,000 ಹಸ್ತಪ್ರತಿಗಳು ಈ ಭಂಡಾರದಲ್ಲಿವೆ. ಅಲ್ಲದೆ ಸು.1,300 ಮೈಕ್ರೊ ಫಿಲ್ಮ್ ಪ್ರತಿಗಳು ಕೂಡ ಇವೆ. ಈ ಪ್ರತಿಗಳಲ್ಲಿ ಓಲೆಪ್ರತಿಗಳು, ಕಾಗದದ ಪ್ರತಿಗಳು, ಕಡತಗಳು ಮತ್ತು ಉದ್ಧರಣೆಯ ಪಟಲಗಳಿವೆ. ಇವುಗಳಲ್ಲಿ ರನ್ನ ಕವಿಯ ಗದಾಯುದ್ಧ, ಎರಡನೆಯ ನಾಗವರ್ಮನ ವರ್ಧಮಾನ ಪುರಾಣ, ಸಂಸ್ಕೃತಭಾಷೆ ಮತ್ತು ಮಲಯಾಳಂ ಲಿಪಿಯಲ್ಲಿ ಬರೆದಿರುವಂಥ ಕನ್ನಡ ವ್ಯಾಕರಣ ಶಾಸ್ತ್ರವನ್ನು ಹೇಳುವ ನಾಗವರ್ಮನ ಭಾಷಾಭೂಷಣ, ಹಸ್ತಪ್ರತಿಯ ಪ್ರತಿಯೊಂದು ಪುಟದ ನಾಲ್ಕೂ ಅಂಚುಗಳಲ್ಲಿ ವಿವಿಧ ಬಣ್ಣಗಳ ಹೂವುಗಳನ್ನು ಬಿಡಿಸಿರುವ ಬಸವಪುರಾಣ, ಕಾಲದ ದೃಷ್ಟಿಯಿಂದ ಕುಮಾರವ್ಯಾಸನಿಗೆ ತೀರ ಹತ್ತಿರವಾದ, 1544ರಲ್ಲಿ ಪ್ರತಿ ಮಾಡಲಾದ ಗದುಗಿನ ಭಾರತ, ಪಗಡೆಯಾಟ, ಅಶ್ವಶಾಸ್ತ್ರ ಮುಂತಾದ ಗ್ರಂಥಗಳ ಹಸ್ತಪ್ರತಿಗಳು ವಿಶಿಷ್ಟವಾಗಿವೆ. ಇವಲ್ಲದೆ 1852ರಲ್ಲಿ ಮಂಗಳೂರಿನ ಬಾಸೆಲ್ ಮಿಷನ್ನಿನಲ್ಲಿ ಮುದ್ರಣಗೊಂಡ ಕನ್ನಡ ಗಾದೆಗಳು ಕೃತಿಯ ಕಲ್ಲಚ್ಚಿನ ಪ್ರತಿ, ಇತ್ತೀಚಿನ ಅಳಿಯ ಲಿಂಗರಾಜನ ಪ್ರಭಾವತೀಪರಿಣಯ ಕಲಾತ್ಮಕ ಬರವಣಿಗೆಯ ಪ್ರತಿಗಳು ಮುಂತಾದ ವೈವಿಧ್ಯಮಯ ಹಸ್ತಪ್ರತಿಗಳನ್ನು ಈ ಭಂಡಾರ ಒಳಗೊಂಡಿದೆ. ವಸ್ತುವಿನ ದೃಷ್ಟಿಯಿಂದ ಇಲ್ಲಿ ಕಾವ್ಯ, ಇತಿಹಾಸ, ಪುರಾಣ, ವಿವಿಧಶಾಸ್ತ್ರವಿಷಯಗಳಾದ ವ್ಯಾಕರಣ, ಛಂದಸ್ಸು, ನಿಘಂಟು, ಅಲಂಕಾರ, ಜ್ಯೋತಿಷ, ಭಾಷಾಶಾಸ್ತ್ರ, ವೈದ್ಯಶಾಸ್ತ್ರ, ಯೋಗ, ಕಾಮಶಾಸ್ತ್ರ, ಅಶ್ವಶಾಸ್ತ್ರ, ಶಕುನಶಾಸ್ತ್ರ, ಮುಂತಾದವನ್ನೊಳಗೊಂಡ ಪ್ರತಿಗಳೂ ಸಂಕಲನ ಗ್ರಂಥಗಳೂ ನಾಟಕಗಳೂ –ಹೀಗೆ ಬಗೆಬಗೆಯ ಹಸ್ತಪ್ರತಿಗಳಿವೆ. ಇವೆಲ್ಲ ಜೈನ, ವೀರಶೈವ, ವೈದಿಕ ಮೊದಲಾದ ಧರ್ಮಕ್ಕೆ ಸೇರಿದವಾಗಿವೆ. ಸಂಗ್ರಹಿಸಿದ ಹಸ್ತಪ್ರತಿಗಳನ್ನು ಸಂರಕ್ಷಿಸುವುದು ಕೂಡ ಅಷ್ಟೇ ಅಗತ್ಯವಾದ ಮತ್ತು ಬಲು ಮುಖ್ಯವಾದ ಕಾರ್ಯ. ಹಾಗಾಗಿ ಇಲ್ಲಿ ಅತ್ಯಾಧುನಿಕ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಮೈಕ್ರೊ ಫಿಲಂ ಮಾಡಿದ ಅಪರೂಪದ ಹಸ್ತಪ್ರತಿಗಳನ್ನು ಓದುವುದಕ್ಕಾಗಿ ಇಲ್ಲಿ ಮೈಕ್ರೊ ಫಿಲ್ಮ್ ರೀಡರ್ ಸೌಲಭ್ಯವೂ ಇದೆ. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯನ್ನೂ (9 ಸಂಪುಟಗಳು; 1962–81) ಒಂದು ಮೈಕ್ರೊಫಿಲ್ಮ್ ಸೂಚಿಯನ್ನೂ (1989) ಪ್ರಕಟಿಸಲಾಗಿದೆ.

**ಹರಿದಾಸಸಾಹಿತ್ಯ ಯೋಜನೆ:** ಸಂಪಾದನ ವಿಭಾಗದ ಒಂದು ಉಪ ಶಾಖೆಯಾಗಿ ಇದು ಕೆಲಸ ಮಾಡುತ್ತಿದೆ. ಈ ಯೋಜನಾ ವಿಭಾಗದಿಂದ ಶಾಸ್ತ್ರೀಯ ಸಂಪಾದನ ಕಾರ್ಯದ ನಾಂದಿಯಾಯಿತು. ಅಂತೆಯೇ ಇದನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ 1963ರಲ್ಲಿ ಯೋಜನೆ ಸಿದ್ಧವಾಗಿ ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಸು.3,00,000 ರೂಪಾಯಿಗಳ ನೆರವಿನೊಡನೆ 1968ರ ಜುಲೈ ತಿಂಗಳಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇದು ಪ್ರಾರಂಭವಾಯಿತು. ಹರಿದಾಸ ಸಾಹಿತ್ಯಕ್ಷೇತ್ರದಲ್ಲಾಗಲೇ ಸಾಕಷ್ಟು ಕೆಲಸ ಮಾಡಿದ್ದ ಜಿ.ವರದರಾಜರಾಯರು **(ನೋಡಿ)** ಈ ಯೋಜನೆಯ ಮೇಲ್ವಿಚಾರಕರಾಗಿ ನಿಯೋಜಿತರಾಗಿದ್ದರು.

ವಾಕ್ಪರಂಪರೆಯಲ್ಲೇ ಉಳಿದಿದ್ದ ಸುಮಾರು ಇನ್ನೂರಕ್ಕೂ ಹೆಚ್ಚು ಮಂದಿ ಹರಿದಾಸರು ಹಾಡಿರುವ ಸಾವಿರಾರು ಕೀರ್ತನೆಗಳನ್ನು ಬರೆದಿಟ್ಟುಕೊಂಡಿದ್ದ ಆಸಕ್ತರಿಂದ ಈ ವಿಭಾಗದ ವಿದ್ವಾಂಸರು ನಾಡಿನ ಮೂಲೆಮೂಲೆಗಳಲ್ಲಿ ಸಂಚರಿಸಿ, ಕ್ಷೇತ್ರಕಾರ್ಯದ ಮೂಲಕ ಜನರ ಮನವೊಲಿಸಿ ಅಂತಹ ಹಸ್ತಪ್ರತಿಗಳನ್ನು ಸಂಗ್ರಹಿಸುವ ಕೆಲಸ ಮಾಡಿದರು. ಕಾಗದದ, ಓಲೆಯ ಹಾಗೂ ಹಳೆಯ ಮುದ್ರಿತ ಪ್ರತಿಗಳು ನೂರಾರು ಸಂಖ್ಯೆಯಲ್ಲಿ ಸಂಗ್ರಹವಾದವು.

ಅಪರೂಪದ ಹಾಡುಗಾರರನ್ನು ಹುಡುಕಿ ಕೀರ್ತನೆಗಳನ್ನು ಹಾಡುವ ಸಂಪ್ರದಾಯ ಹೇಗೆ ಉಳಿದುಬಂದಿದೆ ಎಂಬುದನ್ನು ಅಭ್ಯಾಸಮಾಡುವ ಸಲುವಾಗಿ ನೂರಾರು ಕೀರ್ತನೆಗಳನ್ನು ಹಾಡಿಸಿ ಧ್ವನಿಮುದ್ರಿಸಿಕೊಳ್ಳಲಾಯಿತು. ವೈಯಕ್ತಿಕವಾಗಿ ಕೆಲವು ವಿದ್ವಾಂಸರು ಹಸ್ತಪ್ರತಿಗಳನ್ನು ದಾನವಾಗಿಯೂ ಕೊಟ್ಟಿದ್ದಾರೆ. ಈ ಹಸ್ತಪ್ರತಿಗಳಲ್ಲಿ ದೊರೆತ ಕೀರ್ತನೆಗಳನ್ನು ವಿಂಗಡಿಸಿ, ಶಾಸ್ತ್ರೀಯ, ಗ್ರಂಥಸಂಪಾದನೆಯ ಕ್ರಮವನ್ನನುಸರಿಸಿ ದಾಸರ ಅಧಿಕೃತ ಪದ್ಯಗಳನ್ನು ಸಿದ್ಧಪಡಿಸಿಕೊಡುವ ಗುರುತರ ಜವಾಬ್ದಾರಿಯನ್ನು ಸಂಸ್ಥೆ ಹೊತ್ತು ನಿರ್ವಹಿಸುತ್ತಿದೆ. ಹೀಗೆ ಸಿದ್ಧವಾದ ಸಾಹಿತ್ಯವನ್ನು ವಿಷಯ, ಗಾತ್ರಗಳಿಗನುಗುಣವಾಗಿ ಬೇರೆ ಬೇರೆ ಸಂಪುಟಗಳಾಗಿ ಪ್ರಕಟಿಸುವುದು, ಪ್ರತಿಯೊಂದು ಸಂಪುಟಕ್ಕೂ ವಿದ್ವತ್ಪರಿಕರಗಳಾದ ಕವಿಕಾವ್ಯ ಸಂಬಂಧಿ ವಿಮರ್ಶಾತ್ಮಕ ಪೀಠಿಕೆ, ಅಭ್ಯಾಸಕ್ಕೆ ಅನುಕೂಲವಾಗುವ ಶಬ್ದಾರ್ಥಸೂಚಿ, ಲಘುಟಿಪ್ಪಣಿಗಳು, ಆಧಾರಗಳು, ಸಹಾಯಕ ಸಾಹಿತ್ಯದೊಂದಿಗೆ ಅನುಬಂಧ ಸಿದ್ಧಪಡಿಸಿ ಹರಿದಾಸ ಸಾಹಿತ್ಯವನ್ನು ಹೊರತರಲಾಗಿದೆ.

**ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ:** ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಜಾರಿಗೆ ತರಲು ಸಹಾಯಕವಾಗುವ ದೃಷ್ಟಿಯಿಂದ ಪಠ್ಯಪುಸ್ತಕ ಮತ್ತು ಆಕರ ಗ್ರಂಥಗಳನ್ನು ಕನ್ನಡದಲ್ಲಿ ತರುವ ಉದ್ದೇಶದಿಂದ 1966-67ರಲ್ಲಿ ಈ ವಿಭಾಗವನ್ನು ಸ್ಥಾಪಿಸಲಾಯಿತು. 1969ರಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿದ ಧನಸಹಾಯದಿಂದ ಕೆಲಸಕ್ಕೆ ಹೆಚ್ಚಿನ ಚಾಲನೆ ದೊರೆಯಿತು. ಈವರೆಗೆ ಈ ವಿಭಾಗ ನೂರಾರು ಪುಸ್ತಕಗಳನ್ನು ಹೊರತಂದಿದೆ. ಇವುಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣಗಳಿಗೆ ಸಂಬಂಧಿಸಿದ ಪಠ್ಯಪುಸ್ತಕಗಳು, ಪರಾಮರ್ಶನ ಗ್ರಂಥಗಳು ಮತ್ತು ಆಕರ ಗ್ರಂಥಗಳಿವೆ.

ಇಷ್ಟೇ ಅಲ್ಲದೆ ಕರ್ನಾಟಕ ಸರ್ಕಾರ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲ ನೆರವನ್ನೂ ಈ ವಿಭಾಗ ನೀಡುತ್ತಿದೆ ಹಾಗೂ ಭಾರತ ಸರ್ಕಾರದ ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಗಳ ಪರಿಷತ್ತು ವಿವಿಧ ವಿಷಯಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಕೋಶಗಳನ್ನು ತರಲು ಹಾಕಿಕೊಂಡ ಯೋಜನೆಯಲ್ಲಿ ಕನ್ನಡಕ್ಕೆ ಸಂಬಂಧಿಸಿದ ಕೆಲಸಗಳನ್ನು ಈ ವಿಭಾಗ ಮಾಡಿಕೊಟ್ಟಿದೆ. ಪಿ.ವಿ.ಕಾಣೆಯವರ ಧರ್ಮಶಾಸ್ತ್ರದ ಇತಿಹಾಸ, ಭಂಡಾರಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಮಹಾಭಾರತದ ಸಟೀಕಾ ಆವೃತ್ತಿ ಹಾಗೂ ಕಾನೂನು ಪುಸ್ತಕಗಳ ಕನ್ನಡ ಆವೃತ್ತಿ ಇವನ್ನು ಹೊರತರುವ ಯೋಜನೆಯನ್ನು ಕೂಡ ಈ ವಿಭಾಗ ಕೈಗೊಂಡಿದೆ.



ಜಾನಪದ ವಸ್ತುಸಂಗ್ರಹಾಲಯ

**ಜಾನಪದ ಸಂಶೋಧನೆ:** 1966ರಲ್ಲಿ ಜಾನಪದ ವಿಷಯವನ್ನು ಕನ್ನಡ ಸ್ನಾತಕೋತ್ತರ ವಿಷಯಗಳಲ್ಲಿ ಐಚ್ಛಿಕ ವಿಷಯವಾಗಿ ಸೇರಿಸಿದ್ದರ ಪರಿಣಾಮವಾಗಿ ಈ ವಿಷಯದ ಕುರಿತು ಹೆಚ್ಚಿನ ಅಧ್ಯಯನಗಳು ಆರಂಭವಾದವು. 1974ರಲ್ಲಿ ಮೊದಲ ಬಾರಿಗೆ ಜಾನಪದ ಎಂ.ಎ. ತರಗತಿಗಳನ್ನು ಆರಂಭಿಸಲಾಯಿತು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ಸಂಶೋಧನೆಗಾಗಿಯೇ ಕ್ಷೇತ್ರಜ್ಞರನ್ನೂ ನೇಮಕಗೊಳಿಸಿ ಜಾನಪದ ವಿಭಾಗದ ಸಂಶೋಧನಾಂಗವನ್ನು ಆರಂಭಿಸಲಾಯಿತು (1970). ಜಾನಪದ ಸಂಗ್ರಹ ಮತ್ತು ಸಂಪಾದನೆ ಇದರ ಮುಖ್ಯ ಗುರಿಯಾಗಿತ್ತು. ಇದರೊಂದಿಗೆ ಸಂಶೋಧನೆಗಳೂ ಆರಂಭವಾದವು.

ಜಾನಪದ ಸಂಗ್ರಹವೆಂದರೆ ಬರಿಯ ಸಾಹಿತ್ಯ ಕೃತಿಗಳ ಸಂಗ್ರಹವಲ್ಲ. ಜನಪದ ಸಂಸ್ಕೃತಿಗೆ ಸಂಬಂಧಿಸಿದ ಸಕಲ ಸಾಮಗ್ರಿಗಳ ಸಂಗ್ರಹ. ಈ ನಿಟ್ಟಿನಲ್ಲಿ ಜಾನಪದ ವಿಭಾಗ ಗಮನೀಯವಾದ ಕಾರ್ಯವನ್ನು ಸಾಧಿಸಿದೆ. ಅನೇಕ ಪ್ರದೇಶಗಳ ವೈವಿಧ್ಯಮಯವಾದ ಅಪಾರ ಜನಪದ ಗೀತೆಗಳನ್ನು ಧ್ವನಿಮುದ್ರಣ ಮಾಡಿಕೊಳ್ಳಲಾಗಿದೆ. ಜಾನಪದದ ಸಾಹಿತ್ಯಕಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆಗಳಿಗೆ ಸಂಬಂಧಿಸಿದಂತೆ ಕಥೆ, ಗೀತೆ, ಲಾವಣಿ, ಗಾದೆ, ರಂಗೋಲಿ, ಕಸೂತಿ, ವಾಸ್ತುಶಿಲ್ಪ, ವೃತ್ತಿ ಕಲೆಗಳು, ಬುಡಕಟ್ಟುಗಳು, ಒಗಟು, ನಂಬಿಕೆ, ಸಂಪ್ರದಾಯ, ವೈದ್ಯ, ಅಡುಗೆ, ಉಡುಗೆ, ತೊಡುಗೆ- ಹೀಗೆ ಜನಪದ ಜೀವನದ ಎಲ್ಲಾ ಸ್ತರಗಳ ಅಧ್ಯಯನ ನಡೆಯುತ್ತ ಬಂದಿದೆ.

**ಕನ್ನಡ ಸಾಹಿತ್ಯ ಚರಿತ್ರೆಯ ಯೋಜನೆ:** 1964ರಲ್ಲಿ ಸಮಗ್ರವಾದ ಕನ್ನಡ ಸಾಹಿತ್ಯ ಚರಿತ್ರೆಯ ರಚನೆಯ ಯೋಜನೆ ಹಾಕಿದವರು ದೇಜಗೌ ಅವರು. ಒಂದು ದಶಕದ ಅನಂತರ ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆಯ ಮೊದಲ ಸಂಪುಟ ಹೊರಬಂತು (1974). ಹಾ.ಮಾ.ನಾ. ಇದರ ಪ್ರಧಾನ ಸಂಪಾದಕರು. ಹತ್ತು ಸಂಪುಟಗಳ ಹರವುಳ್ಳ ಈ ಸಾಹಿತ್ಯ ಚರಿತ್ರೆಯ ಸಿದ್ಧತೆಯಲ್ಲಿ ತೀ.ನಂ.ಶ್ರೀ. ಹಾಕಿಕೊಟ್ಟ ರೂಪರೇಖೆಗಳ ಅನೇಕ ಅಂಶಗಳನ್ನು ಯಥಾವತ್ತಾಗಿ ಸ್ವೀಕರಿಸಿ, ಅಗತ್ಯವೆನಿಸಿದ ಅನೇಕ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಈವರೆಗೆ ಐದು ಸಂಪುಟಗಳು ಪ್ರಕಟಗೊಂಡಿವೆ.

**ಜಾನಪದವಸ್ತುಸಂಗ್ರಹಾಲಯ:** ಇದು ದಕ್ಷಿಣ ಮತ್ತು ಪೂರ್ವ ಏಷ್ಯದಲ್ಲಿಯೇ ಅತಿ ದೊಡ್ಡದಾದ ಮತ್ತು ಸುಸಜ್ಜಿತವಾದ ವಸ್ತು ಸಂಗ್ರಹಾಲಯವೆಂದು ಪ್ರಸಿದ್ಧಿ ಪಡೆದಿದೆ. ದೇಜಗೌ ಮತ್ತು ಹಾಮಾನಾ ಅವರ ದೂರದೃಷ್ಟಿಯ ಫಲವಾಗಿ ಇದು ಸ್ಥಾಪನೆಯಾಯಿತು (1968). 1964ರಲ್ಲಿ ಹಾಮಾನಾ ಅವರು ಇಂಡಿಯಾನ ವಿಶ್ವವಿದ್ಯಾಲಯದಲ್ಲಿದ್ದಾಗ ಅಲ್ಲಿಯ ಜಾನಪದ ವಸ್ತುಸಂಗ್ರಹಾಲಯದಿಂದ ಪ್ರಭಾವಿತರಾಗಿದ್ದರು. ದೇಜಗೌ ಅವರು ತಮ್ಮ ಮನೆಯಲ್ಲಿ ಸಂಗ್ರಹಿಸಿಕೊಂಡಿದ್ದ ವಸ್ತುಗಳನ್ನು ದಾನವಾಗಿ ವಸ್ತುಸಂಗ್ರಹಾಲಯಕ್ಕೆ ಕೊಡುವುದರ ಮೂಲಕ ವಸ್ತುಸಂಗ್ರಹಾಲಯವೊಂದು ಮಾನಸಗಂಗೋತ್ರಿಯ ಜಯಲಕ್ಷ್ಮೀವಿಲಾಸದ ಕಟ್ಟಡದಲ್ಲಿ ಸ್ಥಾಪನೆಯಾಗಲು ಅಸ್ತಿಭಾರ ಹಾಕಿದರು. ನಾಡಿನ ಹೆಸರಾಂತ ಜಾನಪದ ವಿದ್ವಾಂಸರಲ್ಲೊಬ್ಬರಾದ ಜೀ.ಶಂ. ಪರಮಶಿವಯ್ಯ **(ನೋಡಿ)** ಮತ್ತು ಪ್ರಸಿದ್ಧ ಚಿತ್ರ ಕಲಾವಿದರಾಗಿದ್ದ ಪಿ.ಆರ್.ತಿಪ್ಪೇಸ್ವಾಮಿ **(ನೋಡಿ)** ಅವರು ಸಂಗ್ರಹಾಲಯವನ್ನು ಕಟ್ಟುವ ಕಾರ್ಯದಲ್ಲಿ ದುಡಿದಿದ್ದಾರೆ. ಇವರು ನಾಡಿನ ಮೂಲೆಮೂಲೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಮಠಮಾನ್ಯಗಳನ್ನೂ ಹಳೆಯ ಮನೆಗಳನ್ನೂ ಶೋಧಿಸಿ ವಸ್ತುಗಳನ್ನು ಸಂಗ್ರಹಿಸಿದರು. ಹೀಗೆ ತಂದ ವಸ್ತುಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಿ ಪ್ರದರ್ಶನಕ್ಕೆ ಇಡಲಾಗಿದೆ. ಈ ಕೆಲಸವನ್ನು ಕ್ಯುರೇಟರ್ ಯು.ಎಸ್.- ರಾಮಣ್ಣನವರು ಮುಂದುವರಿಸಿಕೊಂಡು ಹೋಗಿದ್ದಾರೆ.

ಈಗ ವಸ್ತುಸಂಗ್ರಹಾಲಯದಲ್ಲಿ ಸು.600 ವಸ್ತುಗಳು ಸಂಗ್ರಹ ಗೊಂಡಿವೆ. ಇಷ್ಟು ದೊಡ್ಡ ಮೊತ್ತದ ವಸ್ತುಗಳು ಬೇರಾವ ಜಾನಪದ ವಸ್ತುಸಂಗ್ರಹಾಲಯದಲ್ಲಿಯೂ ಇಲ್ಲ. ಕರ್ನಾಟಕದ ಸಾಂಸ್ಕೃತಿಕ ಮಹತ್ತ್ವದ ಈ ಸಂಗ್ರಹಾಲಯ ಪ್ರಮುಖವಾಗಿ ಕರ್ನಾಟಕಕ್ಕೂ ಆ ಮೂಲಕ ಭಾರತದ ಸಂಶೋಧಕರಿಗೂ ವಿದ್ವಾಂಸರಿಗೂ ಮೂರು ದಶಕಗಳಿಂದ ಸ್ಫೂರ್ತಿದಾಯಕ ಆಶ್ರಯವನ್ನು ನೀಡುತ್ತ ಬಂದಿದೆ. ಇದಕ್ಕೆ ನಿದರ್ಶನವಾಗಿ 1985 ಮತ್ತು 1992ರಲ್ಲಿ ಇಂಗ್ಲೆಂಡಿನಲ್ಲಿ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯದ ವಸ್ತುಗಳು ಪ್ರದರ್ಶನಗೊಂಡಿದ್ದವು. ಬ್ರಿಟಿಷ್ ಸರ್ಕಾರ ಇದರ ವ್ಯವಸ್ಥೆ ಮಾಡಿತ್ತು. ಈ ವಿಭಾಗದಲ್ಲಿ ಸಾಹಿತಿಗಳ ಕೊಠಡಿ ಮತ್ತು 500ಕ್ಕೂ ಹೆಚ್ಚು ಕಲಾಕೃತಿಗಳುಳ್ಳ ಕಲಾಶಾಲೆಯೂ ಇದೆ. ಇನ್‌ಫೋಸಿಸ್ ಫೌಂಡೇಷನ್‌ನ ಮುಖ್ಯಸ್ಥರಾದ ಸುಧಾ ಮೂರ್ತಿ ಅವರ ಉದಾರ ದೇಣಿಗೆಯಿಂದಾಗಿ ಜಾನಪದ ವಸ್ತುಸಂಗ್ರಹಾಲಯವಿರುವ ಜಯಲಕ್ಷ್ಮೀವಿಲಾಸ ಕಟ್ಟಡ ಇತ್ತೀಚೆಗೆ ನವೀಕರಣಗೊಂಡಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಸ್ಥಾಪಿತವಾದ ಬಳಿಕ ಇದೇ ಮಾದರಿಯ ಸಂಸ್ಥೆಗಳು ಕರ್ನಾಟಕ, ಬೆಂಗಳೂರು, ಗುಲ್ಬರ್ಗ, ಮತ್ತು ಕುವೆಂಪು ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿತವಾದುವು. *

**ಕುವೆಂಪು ವಿದ್ಯಾವರ್ಧಕ ಟ್ರಸ್ಟ್ :** ಮೈಸೂರು ನಗರದ ಜಯಲಕ್ಷ್ಮೀಪುರಂ ಬಡಾವಣೆಯಲ್ಲಿರುವ ಶಿಕ್ಷಣ ಹಾಗೂ ಸಂಶೋಧನ ಸಂಸ್ಥೆ, ಕುವೆಂಪು ಅವರು ನಾಡುನುಡಿಗಳಿಗೆ ಸಲ್ಲಿಸಿರುವ ಅಪಾರ ಸೇವೆಗೆ ಕೃತಜ್ಞತೆಯಾಗಿ ಅವರಿಗೆ ಅಭಿನಂದನ ಗ್ರಂಥ ಸಲ್ಲಿಸಬೇಕೆಂಬ ಉದ್ದೇಶದಿಂದ 1964ರಲ್ಲಿ ಅಸ್ತಿತ್ವಕ್ಕೆ ಬಂತು. ತನ್ನ ಆರಂಭಿಕ ಉದ್ದೇಶಕ್ಕನುಗುಣವಾಗಿ ಕುವೆಂಪು ಅವರಿಗೆ ಗಂಗೋತ್ರಿ ಹಾಗೂ ಸಹ್ಯಾದ್ರಿ ಎಂಬ ಎರಡು ಬೃಹತ್ ಅಭಿನಂದನ ಗ್ರಂಥಗಳನ್ನು ಪ್ರಕಟಿಸಿದ ಟ್ರಸ್ಟ್ ಇಂದು ಶಿಕ್ಷಣ ವಿಭಾಗ, ಸಂಶೋಧನ ವಿಭಾಗ, ಪ್ರಕಟಣ ವಿಭಾಗ, ಜ್ಞಾನ ಪ್ರಸಾರ ವಿಭಾಗ, ಸೇವಾ ವಿಭಾಗ ಮುಂತಾದ ಹಲವು ಕ್ಷೇತ್ರಗಳಲ್ಲಿ ಗಣನೀಯ ಪಾತ್ರವಹಿಸುತ್ತಿದೆ. ಕರ್ನಾಟಕ ರತ್ನ ಪ್ರಶಸ್ತಿ ಪುರಸ್ಕೃತರಾದ ದೇ. ಜವರೇಗೌಡರು ಇದರ ರೂವಾರಿ.

ಸಾಮಾಜಿಕವಾಗಿ, ಆರ್ಥಿಕವಾಗಿ, ಬೌದ್ಧಿಕವಾಗಿ ಹಿಂದುಳಿದ ಹಾಗೂ ಬೇರೆ ಶಾಲೆಗಳಲ್ಲಿ ಪ್ರವೇಶ ದೊರೆಯದ, ಸಮಾಜದಿಂದ ನಿರ್ಲಕ್ಷಿತರಾದ ದೀನದಲಿತರ

ಮಕ್ಕಳ ಬೌದ್ಧಿಕ ಮಟ್ಟವನ್ನು ಉತ್ತಮಪಡಿಸಿ ಆ ಮೂಲಕ ಅವರನ್ನು ಸರ್ವತಂತ್ರ ಸ್ವತಂತ್ರ ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸಬೇಕೆಂಬ ಉದ್ದೇಶದಿಂದ ಟ್ರಸ್ಟ್ ಶೈಕ್ಷಣಿಕ ಕ್ಷೇತ್ರದಲ್ಲಿ ಕಾಲಿರಿಸಿದೆ. ಪ್ರಸ್ತುತ ಬೃಂದಾವನ ಪ್ರೌಢಶಾಲೆ (1975), ಕುವೆಂಪು ಪ್ರೌಢಶಾಲೆ (1980), ವಿವೇಕಾನಂದ ಪ್ರೌಢಶಾಲೆಗಳನ್ನೂ ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಟ್ರಸ್ಟ್‌ನ ವತಿಯಿಂದ ನಡೆಸಲಾಗುತ್ತಿದೆ. ವಿವೇಕಾನಂದ ಪ್ರೌಢಶಾಲೆ ಸಂಯುಕ್ತ ಕಿರಿಯ ಕಾಲೇಜಾಗಿ ಪರಿವರ್ತನೆಗೊಂಡಿದೆ (1990). ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜನ್ನು ಆರಂಭಿಸಲಾಗಿದೆ (1996).

ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಶೋಧಕರು ಪ್ರೌಢ ಅಧ್ಯಯನ ನಡೆಸಲು ಕೂಡ ಟ್ರಸ್ಟ್ ನೆರವು ನೀಡುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆಯನ್ನು ಪಡೆದುಕೊಂಡಿರುವ ಟ್ರಸ್ಟ್‌ನಿಂದ ಇದುವರೆಗೆ ಅನೇಕ ಆರು ಮಂದಿ ವಿದ್ವಾಂಸರು ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ತೌಲನಿಕ ಸಾಹಿತ್ಯ ಅಧ್ಯಯನ ಕೇಂದ್ರ ಮತ್ತು ಆಫ್ರೊ–ದ್ರವಿಡಿಯನ್ ಅಧ್ಯಯನ ಕೇಂದ್ರಗಳನ್ನು ತೆರೆಯಬೇಕೆಂದಬುದು ಟ್ರಸ್ಟ್‌ನ ಆಶಯವಾಗಿದೆ.

ಸಹ್ಯಾದ್ರಿ ಪ್ರಕಾಶನದ ಮೂಲಕ ಹಲವಾರು ಪುಸ್ತಕಗಳನ್ನು ಪ್ರಕಟಿಸಿರುವ ಟ್ರಸ್ಟ್ ಜ್ಞಾನಪ್ರಸಾರಕ್ಕೆ ಅನುವಾಗುವಂತೆ ಆಗಾಗ್ಗೆ ವಿಚಾರಗೋಷ್ಠಿ, ಕಾವ್ಯವಾಚನ, ದತ್ತಿ ಉಪನ್ಯಾಸಗಳನ್ನು ಏರ್ಪಡಿಸುತ್ತದೆ; ಕುವೆಂಪು ಸಾಹಿತ್ಯ ಪ್ರಸಾರಕ್ಕಾಗಿ ಯತ್ನಿಸುತ್ತಿದೆ. ಇಪ್ಪತ್ತು ಸಾವಿರಕ್ಕೂ ಅಧಿಕ ಗ್ರಂಥಗಳಿಂದ ಕೂಡಿದ ಗ್ರಂಥಭಂಡಾರ, ಕುವೆಂಪು ವಸ್ತುಸಂಗ್ರಹಾಲಯ, ಕುವೆಂಪು ಮಾಹಿತಿ ಕೇಂದ್ರ, ಶ್ರೀಕುವೆಂಪು ಸ್ಮಾರಕೋದ್ಯಾನ, ಪಂಪವನ– ಇಂಥ ಹಲವಾರು ರಚನಾತ್ಮಕ ಯೋಜನೆಗಳು ಟ್ರಸ್ಟಿನ ಸಾಧನೆಗಳಾಗಿವೆ.

ಅಜ್ಞಾನ, ಮೌಢ್ಯ, ಜಾತಿಮತ ಭಾವನೆಗಳಿಂದ ಮುಕ್ತವಾದ ಸಮಾಜದ ನಿರ್ಮಾಣ ಮತ್ತು ಜನಮನದಲ್ಲಿ ವೈಜ್ಞಾನಿಕ, ವೈಚಾರಿಕ ಅಂಶಗಳನ್ನು ಮೂಡಿಸುವುದು ಟ್ರಸ್ಟ್‌ನ ಆಶಯ. ಇದಕ್ಕಾಗಿ ವಿಶ್ವಧರ್ಮ ಮಂದಿರ. ಸಮುದಾಯಭವನ ಮುಂತಾದ ನಿರ್ಮಾಣಗಳ ಜೊತೆಗೆ ಸ್ವಉದ್ಯೋಗಕ್ಕೆ ಪ್ರೇರಣೆ ನೀಡುವ ಕಾರ್ಯಾಗಾರಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ.

**ಕುವೆಂಪು ವಿಶ್ವವಿದ್ಯಾಲಯ:** ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲೊಂದು. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳು ಇದರ ಪ್ರಾದೇಶಿಕ ವ್ಯಾಪ್ತಿಯಲ್ಲಿವೆ. ಇದರ ಆಡಳಿತ ಕೇಂದ್ರ ಬಿ.ಆರ್.ಪ್ರಾಜೆಕ್ಟ್. ಮೈಸೂರು ವಿಶ್ವವಿದ್ಯಾನಿಲಯ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಸ್ನಾತಕೋತ್ತರ ಶಿಕ್ಷಣದ ಸೌಲಭ್ಯವನ್ನು ವಿಸ್ತರಿಸುವ ಉದ್ದೇಶದಿಂದ ಬಿ.ಆರ್.ಪ್ರಾಜೆಕ್ಟ್‌ನಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಿತು(1973 ಸೆಪ್ಟೆಂಬರ್ 5). ಆಗ ಕರ್ನಾಟಕ ಸರ್ಕಾರದ ಉನ್ನತಶಿಕ್ಷಣ ಸಚಿವರಾಗಿದ್ದ ಎ.ಆರ್.ಬದರಿನಾರಾಯಣ ಹಾಗೂ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ದೇ.ಜವರೇಗೌಡ ಈ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಲು ವಿಶೇಷವಾಗಿ ಶ್ರಮಿಸಿದರು. ಪ್ರಾರಂಭದಲ್ಲಿ ಈ ಕೇಂದ್ರದಲ್ಲಿ ಕನ್ನಡ, ಕೈಗಾರಿಕಾ ರಸಾಯನಶಾಸ್ತ್ರ, ಅರ್ಥಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಭಾಗಗಳನ್ನು ಆರಂಭಿಸಲಾಯಿತು. ವಿಶ್ವವಿದ್ಯಾಲಯ ಸ್ಥಾಪನೆ ಕುರಿತಂತೆ ಟಿ.ಆರ್.ಜಯರಾಮನ್ ಆಯೋಗದ ವರದಿಯನ್ನು ಒಪ್ಪಿಕೊಂಡ ಕರ್ನಾಟಕ ಸರ್ಕಾರ ಈ ವಿಶ್ವವಿದ್ಯಾಲಯವನ್ನು 1987 ಜೂನ್ 29ರಂದು ಸ್ಥಾಪಿಸಿತು. ಸಹ್ಯಾದ್ರಿ ಶ್ರೇಣಿಯ ಪ್ರಾಕೃತಿಕ ಸೌಂದರ್ಯ ಮತ್ತು ಪ್ರಾಕೃತಿಕ ಸಂಪನ್ಮೂಲಗಳಿಂದ ಕೂಡಿದ ಈ ವಿಶ್ವವಿದ್ಯಾನಿಲಯ ಪರಿಸರ ಮಾಲಿನ್ಯದಿಂದ ದೂರದಲ್ಲಿದ್ದು ಉನ್ನತ ಶಿಕ್ಷಣಕ್ಕೆ ಸೂಕ್ತವಾದ ಸ್ಥಳದಲ್ಲಿದೆ. ಇದು ಶಿವಮೊಗ್ಗದಿಂದ 26ಕಿಮೀ ಭದ್ರಾವತಿಯಿಂದ 18ಕಿಮೀ ತರೀಕೆರೆಯಿಂದ 20ಕಿಮೀ ದೂರದಲ್ಲಿದೆ. ವಿಶ್ವವಿದ್ಯಾಲಯದ ಆವರಣಕ್ಕೆ ಜ್ಞಾನಸಹ್ಯಾದ್ರಿ ಎಂದು ನಾಮಕರಣ ಮಾಡಲಾಗಿದೆ. ನಾಲ್ಕು ಜಿಲ್ಲೆಗಳಲ್ಲಿರುವ 123 ಕಾಲೇಜುಗಳು ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿವೆ. ಇವುಗಳಲ್ಲಿ ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜು ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜು, ದಾವಣಗೆರೆಯ ಬಿ.ಡಿ.ಟಿ. ಎಂಜಿನಿಯರಿಂಗ್ ಮತ್ತು ಲಲಿತ ಕಲಾ ಕಾಲೇಜುಗಳು ಘಟಕ ಕಾಲೇಜುಗಳಾಗಿವೆ. ಇವು ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟಿವೆ. 28 ಸರ್ಕಾರಿ ಕಾಲೇಜುಗಳು, 29 ಅನುದಾನಿತ ಕಾಲೇಜುಗಳು ಮತ್ತು 62 ಅನುದಾನ ರಹಿತ ಕಾಲೇಜುಗಳು ಸಂಯೋಜಿತ ಕಾಲೇಜುಗಳಾಗಿವೆ. ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ, ಕಾನೂನು ಮತ್ತು ಎಂಜಿನಿಯರಿಂಗ್ ನಿಕಾಯಗಳಿಗೆ ಸೇರಿದ ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗೆ ಅವಕಾಶ ಕಲ್ಪಿಸಲಾಗಿದೆ. ಈ ಅಧ್ಯಯನಗಳಲ್ಲಿ ಈ ಪ್ರದೇಶದ ಸಾಂಸ್ಕೃತಿಕ ವೈವಿಧ್ಯ, ಜೀವ ವೈವಿಧ್ಯ ಹಾಗೂ ಪ್ರಾಕೃತಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ, ಅಭಿವೃದ್ಧಿಪಡಿಸುವ ಹಾಗೂ ಸಂಶೋಧಿಸುವ ಪ್ರಯತ್ನ ಮಾಡಲಾಗುತ್ತಿದೆ.

330 ಎಕರೆಗಳ ವ್ಯಾಪ್ತಿಯುಳ್ಳ ಜ್ಞಾನಸಹ್ಯಾದ್ರಿ ಆವರಣ ಸುಂದರವಾದ ಕಾಡಿನ ಪರಿಸರದಲ್ಲಿದೆ. ಈ ಆವರಣದಲ್ಲಿ ಆಡಳಿತ ಭವನ, ವಸ್ತುಸಂಗ್ರಹಾಲಯ, ಗ್ರಂಥಾಲಯ, ಶೈಕ್ಷಣಿಕ ಕಟ್ಟಡ, ವಿಜ್ಞಾನ ಭವನ, ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಪ್ರತ್ಯೇಕ ವಸತಿ ನಿಲಯ, ಕುಲಪತಿ ಭವನ, ಅತಿಥಿ ಗೃಹ, ಆರೋಗ್ಯ ಕೇಂದ್ರ ಮತ್ತು ಅಧ್ಯಾಪಕ, ಅಧ್ಯಾಪಕೇತರ ನಿವಾಸಗಳಿಗೆ ಅಗತ್ಯವಾಗಿ ಬೇಕಾಗಿರುವ ಹಲವಾರು ಕಟ್ಟಡಗಳನ್ನು ಕಟ್ಟಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕಲಾ ನಿಕಾಯದಲ್ಲಿ 5 ಭಾಷಾ ವಿಭಾಗಗಳು ಮತ್ತು 4 ಸಮಾಜವಿಜ್ಞಾನ ವಿಭಾಗಗಳಿವೆ. ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಾಗಿ ಅಭಿವೃದ್ಧಿಪಡಿಸಲಾಗಿದ್ದು ಇದಕ್ಕೆ ಕನ್ನಡ ಭಾರತಿ ಎಂದು ನಾಮಕರಣ ಮಾಡಲಾಗಿದೆ. ಜಾನಪದ, ಆಧುನಿಕ ಕನ್ನಡ ಸಾಹಿತ್ಯ, ಸಾಹಿತ್ಯ ತತ್ವ ಮತ್ತು ವಿಮರ್ಶೆ ಹಾಗೂ ತೌಲನಿಕ ಅಧ್ಯಯನ ವಿಷಯಗಳಲ್ಲಿ ವಿಶೇಷ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜಾನಪದ ವಸ್ತುಸಂಗ್ರಹಾಲಯ ಮತ್ತು ಕನ್ನಡ ಗಣಕ ಕೇಂದ್ರಗಳನ್ನು ಕನ್ನಡ ಭಾರತಿ ಒಳಗೊಂಡಿದೆ. ರಾಜ್ಯಶಾಸ್ತ್ರ ವಿಭಾಗದಲ್ಲಿ ಅಬ್ದುಲ್ ನಜೀರ್ ಸಾಬ್ ಪೀಠ, ಅಂಬೇಡ್ಕರ್ ಅಧ್ಯಯನ ಕೇಂದ್ರ ಹಾಗೂ ಶಾಂತವೇರಿ ಗೋಪಾಲಗೌಡ ಪೀಠಗಳು ಕಾರ್ಯ ನಿರ್ವಹಿಸುತ್ತಿವೆ. ಅನೇಕ ದತ್ತಿ ಉಪನ್ಯಾಸಗಳನ್ನು ವಿಶ್ವವಿದ್ಯಾಲಯ ಏರ್ಪಡಿಸುತ್ತಿದೆ.

ವಿಜ್ಞಾನ ನಿಕಾಯದ ಭೌತವಿಜ್ಞಾನ, ರಸಾಯನವಿಜ್ಞಾನ, ಕೈಗಾರಿಕಾ ರಸಾಯನವಿಜ್ಞಾನ, ಗಣಿತವಿಜ್ಞಾನ, ಗಣಕವಿಜ್ಞಾನ, ಎಂ.ಸಿ.ಎ., ಭೂವಿಜ್ಞಾನ ಮತ್ತು ಮಾನವಸಂಪನ್ಮೂಲ ವಿಭಾಗ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗಗಳಿವೆ. ಜೈವಿಕ ತಂತ್ರಜ್ಞಾನ, ಪರಿಸರವಿಜ್ಞಾನ, ಆನ್ವಯಿಕ ಸಸ್ಯವಿಜ್ಞಾನ ಮತ್ತು ಆನ್ವಯಿಕ ಪ್ರಾಣಿವಿಜ್ಞಾನ ಈ ನಾಲ್ಕು ಜೀವವಿಜ್ಞಾನ ವಿಭಾಗಗಳಿವೆ.

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸಹ್ಯಾದ್ರಿ ಪರ್ವತ ಶ್ರೇಣಿ ಜಗತ್ತಿನ ಅತ್ಯಂತ ಮಹತ್ವಪೂರ್ಣ ಜೀವ ವೈವಿಧ್ಯ ಕೇಂದ್ರಗಳಲ್ಲಿ ಒಂದಾಗಿದ್ದು ಜೀವವಿಜ್ಞಾನ ವಿಭಾಗಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಸುತ್ತಿವೆ. ರಸಾಯನವಿಜ್ಞಾನ ಮತ್ತು ಕೈಗಾರಿಕಾ ರಸಾಯನವಿಜ್ಞಾನ ವಿಭಾಗಗಳು ಕೈಗಾರಿಕೆಗಳೊಡನೆ ಸಂಪರ್ಕ ಹೊಂದಿ, ಅವುಗಳಿಗೆ ಸಲಹೆ ನೀಡುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯ ದಾವಣಗೆರೆಯಲ್ಲಿ ಆರಂಭ ಮಾಡಿದ ಸ್ನಾತಕೋತ್ತರ ಕೇಂದ್ರ (1979) ಈ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದು ಈಗ ಪ್ರತ್ಯೇಕ ವಿಶ್ವವಿದ್ಯಾಲಯವಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ,

ಸ್ನಾತಕೋತ್ತರ ಕೇಂದ್ರ, ದಾವಣಗೆರೆ

ಉರ್ದು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಗಣಿತವಿಜ್ಞಾನ, ರಾಜ್ಯಶಾಸ್ತ್ರ ವಾಣಿಜ್ಯಶಾಸ್ತ್ರ ಈ ವಿಷಯಗಳಲ್ಲಿ ಸ್ನಾತಕೋತ್ತರ ದೂರ ಶಿಕ್ಷಣ ಕೋರ್ಸುಗಳನ್ನು ಆರಂಭಿಸಲಾಗಿದೆ. ವಿಶ್ವವಿದ್ಯಾನಿಲಯ ದಲ್ಲಿದ್ದುಕೊಂಡು ಅಭ್ಯಾಸ ಮಾಡಲು ಸಾಧ್ಯವಾಗದವರಿಗೆ ಶಿಕ್ಷಣ ನೀಡುವುದು ಇದರ ಉದ್ದೇಶ.

ಪ್ರಸಾರಾಂಗ ಈ ವಿಶ್ವವಿದ್ಯಾನಿಲಯದ ಜ್ಞಾನವಿಸ್ತರಣೆ ಮತ್ತು ಪ್ರಕಟಣ ವಿಭಾಗ; ವಿಶ್ವವಿದ್ಯಾಲಯ ಮತ್ತು ಜನಸಾಮಾನ್ಯರ ನಡುವೆ; ಸಂಪರ್ಕ ಕಲ್ಪಿಸುವ ಸಾಧನ. ಇದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ನಾಲ್ಕು ಜಿಲ್ಲೆಗಳಲ್ಲಿ, ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಡನೆ ಅರಿವು ವಿಸ್ತರಣೋಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಈ ಉಪನ್ಯಾಸಗಳನ್ನು ವಿಸ್ತರಣೋಪನ್ಯಾಸ ಮಾಲೆಯಲ್ಲಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯಲ್ಲಿ ಇದುವರೆಗೂ ಹಲವಾರು ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಪಠ್ಯ ಪುಸ್ತಕ ಮಾಲೆಯಲ್ಲಿ ಅನೇಕ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ವಿಜ್ಞಾನ, ಮಾನವಿಕ ಹಾಗೂ ಸಮಾಜ ವಿಜ್ಞಾನಗಳಲ್ಲಿ ವಿದ್ವತ್ ಪತ್ರಿಕೆಗಳನ್ನು ಪ್ರಕಟಿಸಲು ವಿಶ್ವವಿದ್ಯಾಲಯ ಉದ್ದೇಶಿಸಿದೆ. ಈಗಾಗಲೇ ವಿಜ್ಞಾನದ

ವಿದ್ವತ್ ಪತ್ರಿಕೆ ಪ್ರಕಟಿಸಲಾಗಿದೆ. ತ್ರೈಮಾಸಿಕ ವಾರ್ತಾಪತ್ರವನ್ನು ಪ್ರಕಟಿಸಲಾಗುತ್ತಿದೆ. ಆಗಾಗ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಗ್ರಂಥಾಲಯಕ್ಕೆ ಸುಸಜ್ಜಿತವಾದ ಕಟ್ಟಡವಿದೆ. ಇದರಲ್ಲಿ ಆಧುನಿಕ ಗ್ರಂಥಾಲಯಕ್ಕೆ ಬೇಕಾಗಿರುವ



ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ

ಎಲ್ಲ ಸೌಲಭ್ಯಗಳನ್ನೂ ಒದಗಿಸಲಾಗಿದೆ. 52000 ಗ್ರಂಥಗಳು ಮತ್ತು 227 ನಿಯತಕಾಲಿಕೆಗಳಿವೆ. ಸಿಡಿ ರೋಂ ಡೇಟಾ ಬೇಸ್, ಇ ಮೇಲ್ ಮತ್ತು ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಲಾಗಿದೆ. ಡಿಜಿಟಲ್ ಲೈಬ್ರರಿಯನ್ನೂ ರೂಪಿಸಲು ಪ್ರಯತ್ನ ನಡೆಯುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಸುಸಜ್ಜಿತವಾದ ಗಣಕ ಕೇಂದ್ರವಿದೆ. ವಿಶ್ವವಿದ್ಯಾನಿಲಯದ ಆಡಳಿತ, ಹಣಕಾಸು ವ್ಯವಹಾರ ಹಾಗೂ ಪರೀಕ್ಷಾ ಸಂಬಂಧವಾದ ಮಾಹಿತಿಗಳನ್ನೂ ದಾಖಲೆಗಳನ್ನೂ ಕಂಪ್ಯೂಟರೀಕರಿಸಲಾಗಿದೆ. ಶಿವಮೊಗ್ಗ ನಗರದಲ್ಲಿರುವ ಪರೀಕ್ಷಾಂಗ ಕಚೇರಿಯಲ್ಲಿ ಪರೀಕ್ಷಾ ಸಂಬಂಧವಾಗಿ ಮಾಡಿರುವ ಕಂಪ್ಯೂಟರೀಕರಣ ವ್ಯವಸ್ಥೆ ತುಂಬ ಅಚ್ಚುಕಟ್ಟಾಗಿದೆ.

ಸಾಕ್ಷರತಾ ಯೋಜನೆ ಕುವೆಂಪು ವಿಶ್ವವಿದ್ಯಾನಿಲಯದ ವಿಶಿಷ್ಟವಾದ ಯೋಜನೆ. ಐದು ಜನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಸ್ನಾತಕ ತರಗತಿಯ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಅಂಕಗಳನ್ನು ನೀಡುವ ವ್ಯವಸ್ಥೆ ಮಾಡಲಾಗಿದ್ದು, ಸ್ನಾತಕೋತ್ತರ ತರಗತಿಗಳಿಗೆ ಈ ಅಂಕಗಳನ್ನು ಪರಿಗಣಿಸಿ ಪ್ರವೇಶ ನೀಡಲಾಗುತ್ತಿದೆ. ಈ ವಿಶಿಷ್ಟವಾದ ಯೋಜನೆಯನ್ನು ಇತರ ವಿಶ್ವವಿದ್ಯಾನಿಲಯಗಳಲ್ಲಿಯೂ ಅಳವಡಿಸಿಕೊಳ್ಳಲು ಶಿಫಾರಸು ಮಾಡಲಾಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಸ್ಥಾಪಿಸಲಾಗಿದೆ. ಇದಲ್ಲದೆ ವಿಶ್ವವಿದ್ಯಾನಿಲಯ ಉದ್ಯೋಗ ಮಾರ್ಗದರ್ಶಿ ಕೇಂದ್ರ ಸ್ಥಾಪಿಸಿದೆ. ಆ ಮೂಲಕ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಿ ಉಪಯುಕ್ತ ಸಲಹೆಗಳನ್ನು ನೀಡಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಸುಸಜ್ಜಿತವಾದ ಆರೋಗ್ಯ ಕೇಂದ್ರವಿದೆ.

ಇತಿಹಾಸ ಪ್ರಸಿದ್ಧ ಕೆಳದಿಯ ರಾಮೇಶ್ವರ ದೇವಾಲಯದ ಶಿಲ್ಪವೊಂದರ ಆಕೃತಿಯನ್ನು ವಿಶ್ವವಿದ್ಯಾನಿಲಯ ತನ್ನ ಲಾಂಛನವಾಗಿ ಬಳಸಿಕೊಂಡಿದೆ. ಹಂಸ ಮತ್ತು ಗಜದ ಅನ್ಯೋನ್ಯ ಹಾಗೂ ಅಭೇದ ಸಂಬಂಧವನ್ನು ಸೂಚಿಸುವ ಈ ಆಕೃತಿ ಸುಂದರವೂ ಅರ್ಥಪೂರ್ಣವೂ ಆಗಿದೆ. ಆನೆ ಶಕ್ತಿಯನ್ನೂ ಗಾಂಭೀರ್ಯವನ್ನೂ ಧೀಮಂತಿಕೆಯನ್ನೂ ಸೂಚಿಸಿದರೆ, ಹಂಸ ಪರಿಶುದ್ಧತೆಯನ್ನೂ ವಿವೇಕವನ್ನೂ ಪೂರ್ಣ ಜ್ಞಾನವನ್ನೂ ಪ್ರತಿಮಾತ್ಮಕವಾಗಿ ಸೂಚಿಸುತ್ತದೆ. ವ್ಯಕ್ತಿಯ ಪೂರ್ಣ ವಿಕಾಸ, ಜ್ಞಾನ–ವಿಜ್ಞಾನ–ಶಕ್ತಿ–ಗಾಂಭೀರ್ಯ–ಪರಿಶುದ್ಧತೆಗಳ ಅರ್ಥಪೂರ್ಣ ಸಂಯೋಗದ ಪರಿಣಾಮ ಫಲವಾಗಿರುತ್ತದೆ ಎಂಬ ಉನ್ನತ ಧ್ಯೇಯ ಈ ಶಿಲ್ಪಕೃತಿಯದು.

ಕುವೆಂಪು ವಿಶ್ವವಿದ್ಯಾನಿಲಯದ ಮೊದಲ ಕುಲಪತಿ ಶಾಂತಿನಾಥ ದೇಸಾಯಿ (1988–90). ಅನಂತರ ಎಂ.ಆರ್.ಗಜೇಂದ್ರಗಡ್ (1991–96), ಪಿ.ವೆಂಕಟರಾಮಯ್ಯ (1996–99), ಎಸ್.ಪಿ.ಹಿರೇಮಠ (1999–2002), ಸಿ.ಎಸ್.ಬಾಗೇವಾಡಿ (ಹಂಗಾಮಿ) ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಮುಂದಿನ ಕುಲಪತಿ ಪ್ರಸಿದ್ಧ ಗಣಕ ವಿಜ್ಞಾನಿ ಕೆ.ಚಿದಾನಂದಗೌಡ (2001–06) ಬಿ.ಎಸ್. ಶೆಂಗಾರ (2006–10); ಎಸ್.ಎ. ಬ್ಯಾರಿ (2010–)

ಈ ವಿಶ್ವವಿದ್ಯಾನಿಲಯಕ್ಕೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ನ್ಯಾಕ್ ಸಮಿತಿ ಮೂರು ನಕ್ಷತ್ರಗಳ ಮಾನ್ಯತೆ ನೀಡಿದೆ. (ಟಿ.ಎನ್.ಎಸ್.)

**ಕುವೈತ್ :** ಪಶ್ಚಿಮ ಏಷ್ಯದಲ್ಲಿ ಪರ್ಷಿಯನ್ ಕೊಲ್ಲಿಯ ವಾಯವ್ಯ ಭಾಗದಲ್ಲಿರುವ ಒಂದು ಸ್ವತಂತ್ರ ರಾಜ್ಯ. ಇದರ ಉತ್ತರದಲ್ಲಿ ಇರಾಕ್ ಮತ್ತು ದಕ್ಷಿಣದಲ್ಲಿ ಸೌದಿ ಅರೇಬಿಯ ಇವೆ. 28°–30°. ಉ.ಅ. ಹಾಗೂ 46°–49° ಪೂ. ರೇಖಾಂಶಗಳ ನಡುವೆ ಇರುವ ಇದರ ವಿಸ್ತೀರ್ಣ 17818. ಜನಸಂಖ್ಯೆ 25,96,799 (2009). ರಾಜಧಾನಿ ಕುವೈತ್. ಜನಸಂಖ್ಯೆ 12,22,000. ಕರಾವಳಿಯ ಬಳಿ ಇರುವ ಅನೇಕ ದ್ವೀಪಗಳು ಇದಕ್ಕೆ ಸೇರಿವೆ. ಇವುಗಳ ಪೈಕಿ ಫೇಲಕಾ ಮುಖ್ಯವಾದದ್ದು. ಈ ದ್ವೀಪದಲ್ಲಿ ಪ್ರ.ಶ.ಪೂ. 2500ರಷ್ಟು ಪ್ರಾಚೀನವಾದ ಅವಶೇಷಗಳು ದೊರಕಿವೆ. ಕುವೈತ್ ಮರಳುಗಾಡಿನಿಂದ ಕೂಡಿದ ಪ್ರದೇಶ. ಕುವೈತ್ ನಗರದ ಪಶ್ಚಿಮಕ್ಕೆ 30 ಕಿಮೀ ದೂರದಲ್ಲಿ ಅಲ್ ಜಹ್ರಾ ಎಂದು ಒಂದು ಸಣ್ಣ ಓಯಸಿಸ್ ಇದೆ. ಕುವೈತ್‌ನಲ್ಲಿ ಬೇಸಗೆಯಲ್ಲಿ ಸೆಕೆ ವಿಪರೀತ. ವಾತಾವರಣದಲ್ಲಿ ತೇವಾಂಶ ಬಲು ಕಡಿಮೆ, ಚಳಿಗಾಲದಲ್ಲಿ ವಾಯುಗುಣ ಹಿತಕರವಾಗಿದೆ. ಆದರೆ ಆಗಾಗ್ಗೆ ಬೀಸುವ ಬಿರುಗಾಳಿ ದೂಳಿನಿಂದ ಕೂಡಿರುತ್ತದೆ. ಮಳೆ ಸಾಮಾನ್ಯವಾಗಿ ಬಲು ಕಡಿಮೆ.

**ಚರಿತ್ರೆ :** ಕುವೈತ್ ಎನ್ನುವ ಹೆಸರು ಕುತ್ (ಸಣ್ಣಕೋಟೆ) ಎನ್ನುವುದರಿಂದ ಬಂದಿದೆ ಎಂದು ಪ್ರತೀತಿ. ಅನೇಕ ಬುಡಕಟ್ಟಿನ ಮೂರು ಗುಂಪುಗಳು ತಮ್ಮ ಅಲೆಮಾರಿ ಜೀವನವನ್ನು ತೊರೆದು ಕುವೈತ್‌ನಲ್ಲಿ ನೆಲಸಿದುವು. ಈಗಿನ ಅಸ್–ಸಬಾ ರಾಜವಂಶ ಆರಂಭವಾದ್ದು 1756ರಲ್ಲಿ. ಷೇಖ್ ಸಬಾ ಅಬ್ದುಲ್ ರಹೀಂ ಇದರ ಮೂಲಪುರುಷ. ಕುವೈತನ್ನು ತುರ್ಕಿಗಳು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಹವಣಿಸಿದಾಗ ಆಗ ಆಳುತ್ತಿದ್ದ ಷೇಖ್ 1899ರಲ್ಲಿ ಬ್ರಿಟನಿನೊಡನೆ ಒಂದು ಕೌಲು ಮಾಡಿಕೊಂಡ. ಬರ್ಲಿನ್–ಬಾಗ್ದಾದ್ ರೈಲ್ವೆಯನ್ನು ಅಲ್ಲಿಯ ವರೆಗೂ ವಿಸ್ತರಿಸಬೇಕೆಂಬ ಜರ್ಮನ್ ಅಪೇಕ್ಷೆಯನ್ನು ಆತ ತಳ್ಳಿಹಾಕಿದ. ತುರ್ಕಿಯೊಡನೆ 1914ರಲ್ಲಿ ಯುದ್ಧ ಆರಂಭವಾದಾಗ ಬ್ರಿಟನ್ನು ಕುವೈತನ್ನು ತನ್ನ ರಕ್ಷಣೆಗೆ ಒಳಪಟ್ಟ ಸ್ವತಂತ್ರರಾಜ್ಯವೆಂದು ಸಾರಿತು. ನಜ್ದ್ (ಇಂದಿನ ಸೌದಿ ಅರೇಬಿಯ) ಒಡನೆ ಕುವೈತಿನ ಸಂಬಂಧ ಸೌಹಾರ್ದಯುತವಾಗಿರಲಿಲ್ಲ. ಅದು ವಹಾಬಿಗಳ ಆಕ್ರಮಣಕ್ಕೆ ಒಳಗಾಗಿತ್ತು. ಕುವೈತಿಗೂ ನಜ್ದಿಗೂ ನಡುವೆ 1922ರಲ್ಲಿ ಉಕೇರ್ ಕೌಲು ಏರ್ಪಟ್ಟಿತ್ತು. ಕುವೈತಿನ ಆಗ್ನೇಯಕ್ಕೆ ಸು. 5676 ಚ.ಕಿಮೀ ನೆಲವನ್ನು ತಟಸ್ಥ ಪ್ರದೇಶವೆಂದು ಸಾರಲಾಯಿತು. ಇದೇ ರೀತಿ 1923 ರಲ್ಲಿ ಇರಾಕ್ ಮತ್ತು ಕುವೈತ್ ನಡುವಣ ಗಡಿಯ ನಿಷ್ಕರ್ಷೆಯೂ ಆಯಿತು. ಆದರೆ ಬ್ರಿಟನಿಗೂ ಕುವೈತಿಗೂ ನಡುವೆ 1899ರಲ್ಲಿ ಆಗಿದ್ದ ಕೌಲನ್ನು ಈ ದೇಶಗಳು ಪರಸ್ಪರ ಒಡಂಬಡಿಕೆಯಿಂದ ವಿಸರ್ಜಿಸಿ ಕುವೈತಿನ ಸಂಪೂರ್ಣ ಸ್ವಾತಂತ್ರ್ಯವನ್ನು ಸಾರಿದಾಗ (1961), ಕುವೈತ್ ಇರಾಕಿನ ಒಂದು ಭಾಗ ಎಂದು ಇರಾಕಿನ ಪ್ರಧಾನಿ ಘೋಷಿಸಿದ. ಕುವೈತಿಗೆ ಆಕ್ರಮಣದ ಅಪಾಯ ಒದಗಿ ಬಂತು. ಕುವೈತಿನ ದೊರೆ ಬ್ರಿಟನಿನ ಸೇನಾ ನೆರವು ಬೇಡಿದ. ಬ್ರಿಟನಿನ ನೆರವಿನ ಆಗಮನದಿಂದ ಇರಾಕಿನ ಕೈಕಟ್ಟಿದಂತಾಯಿತು. ಮುಂದೆ ಇರಾಕ್–ಕುವೈತ್ ಸಂಬಂಧ ಕ್ರಮೇಣ ಸುಧಾರಿಸಿತು.

1967ರ ಜೂನ್ 5ರಂದು ಇಸ್ರೇಲ್–ಈಜಿಪ್ಟ್‌ಗಳ ನಡುವೆ ಯುದ್ಧ ಸಂಭವಿಸಿತು. ಜೂನ್ 6ರಂದು ಇದು ಅಮೆರಿಕ ಮತ್ತು ಬ್ರಿಟನ್‌ಗಳಿಗೆ ಎಣ್ಣೆ ಸರಬರಾಜನ್ನು ನಿಲ್ಲಿಸಿತು. 1968ರಲ್ಲಿ ಇರಾನ್ ಮತ್ತು ಸಂಯುಕ್ತ ಅರಬ್ ಗಣರಾಜ್ಯಗಳ ನಡುವೆ ಮಧ್ಯಸ್ಥಿಕೆ ವಹಿಸಿತು. 1969ರ ಏಪ್ರಿಲ್‌ನಲ್ಲಿ ಸೌದಿ ಅರೇಬಿಯದ ದೊರೆ ಫೈಸಲ್ ಕುವೈತಿನ ವಿದೇಶಾಂಗ ಮಂತ್ರಿ ಅರಬ್ ರಾಜ್ಯಗಳ ಕೂಟಕ್ಕೆ ತಮ್ಮ ಬೆಂಬಲ ಸೂಚಿಸಿದ. ಕುವೈತನ್ನು ಇರಾಕ್ ಆಕ್ರಮಿಸಿದರೂ ಅಮೆರಿಕದ ನೆರವಿನಿಂದ ಅದು ಮತ್ತೆ ಸ್ವತಂತ್ರಗೊಂಡಿತು.

**ಆಡಳಿತ ಮತ್ತು ಸಾಮಾಜಿಕ ಸ್ಥಿತಿ :** ಕುವೈತ್ ರಾಜ್ಯದ ಹೆಚ್ಚು ಸಂಖ್ಯೆಯ ಜನ ರಾಜಧಾನಿಯಾದ ಕುವೈತ್‌ನಲ್ಲಿ ವಾಸಿಸುತ್ತಾರೆ. ಇವರಲ್ಲಿ ಅಕ್ಕಪಕ್ಕದ ರಾಜ್ಯಗಳಿಂದ ಬಂದ ಅರಬರೂ ಇರಾನಿಯನರೂ ಪಾಕಿಸ್ತಾನರೂ ಭಾರತದವರೂ ಬ್ರಿಟಿಷ್ ಮತ್ತು ಅಮೆರಿಕನರೂ ಇದ್ದಾರೆ. ಕುವೈತಿನ ಷೇಖನೇ ಆ ದೇಶದ ಪ್ರಧಾನ ಮಂತ್ರಿ. 4 ಮಂದಿ ಚುನಾಯಿತರೂ ಷೇಖರಿಂದ ನೇಮಕವಾದ 10 ಮಂದಿ ಸದಸ್ಯರೂ ಇರುವ ಒಂದು ಮಂತ್ರಿ ಮಂಡಲವಿದೆ. 21 ವರ್ಷ ತುಂಬಿದ ಗಂಡಸರೆಲ್ಲ ಓಟುಮಾಡುವ ಹಕ್ಕನ್ನು ಪಡೆದಿದ್ದಾರೆ. ಅಲ್ಲಿ ಚುನಾಯಿತ ಪ್ರಜಾಪ್ರತಿನಿಧಿ ಸಭೆಯಿದೆ. ರಾಜ್ಯವನ್ನು ಕುವೈತ್ (ರಾಜಧಾನಿ), ಅಹಮದಿ ಮತ್ತು ಹವಾಲಿ ಎಂಬುದಾಗಿ ಮೂರು ಆಡಳಿತ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿದೆ.

ಕುವೈತ್ ಆಯವ್ಯಯದ ಮುಂಗಡಪತ್ರವನ್ನು ಪ್ರಜಾಪ್ರತಿನಿಧಿಸಭೆಯಲ್ಲಿ ಮಂಡಿಸ ಬೇಕು. ಆದರೆ ಆಯವ್ಯಯದ ಮುಂಗಡ ಪತ್ರವನ್ನಾಗಲಿ, ಅಭಿವೃದ್ಧಿ ಕಾರ್ಯಕ್ರಮಗಳನ್ನಾಗಲಿ ಸಾರ್ವಜನಿಕವಾಗಿ ಪ್ರಕಟಪಡಿಸುವುದಿಲ್ಲ. ದೇಶದಲ್ಲಿ ಉಚಿತ ಶಿಕ್ಷಣವೂ ವೈದ್ಯಕೀಯ ಸೌಲಭ್ಯವೂ ಜಾರಿಯಲ್ಲಿವೆ. ರಾಜ್ಯಾದಾಯವನ್ನು ರಸ್ತೆಗಳು, ಬಂದರುಗಳು ಮತ್ತು ಕಟ್ಟಡಗಳ ನಿರ್ಮಾಣಕ್ಕೂ ವಿದ್ಯಾಭ್ಯಾಸ, ವೈದ್ಯಕೀಯ ಸೌಲಭ್ಯ, ನೀರು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸಲೂ ಬಳಸುತ್ತಾರೆ. ಕುವೈತ್‌ನ ನಾಣ್ಯ ಕುವೈತ್ ದೀನಾರ್.

ಕುವೈತ್ ನಗರ ಅತ್ಯಂತ ಆಧುನಿಕವಾದ್ದು. ಅಗಲವಾದ ರಸ್ತೆಗಳು, ಹೊಸ ಮಾರುಕಟ್ಟೆ ಮತ್ತು ದೊಡ್ಡ ಕಟ್ಟಡಗಳಿಂದ ಕೂಡಿದ ಈ ನಗರದ ಬಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇದು ಒಳ್ಳೆಯ ಬಂದರು. (ಬಿ.ಎಸ್.ಎಚ್.)

**ಕೃಷಿ:** ಕುವೈತಿನ ಕೃಷಿ ಬಹಳ ಸೀಮಿತವಾದುದು. ಇದು ಆಹಾರ ಹಣ್ಣು ತರಕಾರಿಗಳ ವಿಚಾರದಲ್ಲಿ ಬಹುಮಟ್ಟಿಗೆ ಪರವಾಲಂಬಿ. ಕೃಷಿ ಉತ್ಪನ್ನದಲ್ಲಿ ಹೆಚ್ಚಳ ಸಾಧ್ಯವಿಲ್ಲದಿರುವುದಕ್ಕೆ

ಈ ರಾಷ್ಟ್ರದ ಭೌಗೋಳಿಕ ಪರಿಸ್ಥಿತಿಯೇ ಕಾರಣ. ಹೆಚ್ಚಾಗಿ ಮರಳು ಕಾಡಿನಿಂದ ಆವೃತವಾಗಿರುವ ಈ ದೇಶದಲ್ಲಿ ಅಂಜೂರ, ಧಾನ್ಯ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ಸರ್ಕಾರ 36.42 ಹೆಕ್ಟೇರ್ ಎಕರೆಗಳ ಪ್ರಾಯೋಗಿಕ ಭೂಮಿಯಲ್ಲಿ ತಾನೇ ಕೃಷಿ ನಡೆಸುತ್ತಿದ್ದು, ಹೊಸ ಹೊಸ ವಿಧಾನಗಳ ಬಗ್ಗೆ ಪ್ರಚಾರಮಾಡುತ್ತಿದೆ. ತನ್ನ ಜಮೀನಿನಲ್ಲಿ ಹೈನು ಉದ್ಯಮವನ್ನು ಸಹ ಸರ್ಕಾರ ಕೈಗೊಂಡಿದೆ. ಇದರಿಂದ ಉತ್ತೇಜಿತರಾಗಿರುವ ಖಾಸಗಿ ಜನರು ಸಹ ಪಶುಪಾಲನೆಯ ಉದ್ಯಮವನ್ನು ಈಚೆಗೆ ಹೆಚ್ಚು ಹೆಚ್ಚಾಗಿ ಕೈಗೊಳ್ಳುತ್ತಿದ್ದಾರೆ ನೀರಿನ ಕೊರತೆಯೇ ಈ ದೇಶದ ಕೃಷಿ ವಿಸ್ತರಣೆಗಿರುವ ದೊಡ್ಡ ಸಮಸ್ಯೆ. ಆದರೆ ಷಾಟ್–ಅಲ್–ಅರಬ್ ನೀರಾವರಿ ಯೋಜನೆಯಿಂದಾಗಿ ನೀರು ದೊರೆಯುವಂತಾದಾಗ ಇಲ್ಲಿಯ ಕೃಷಿ ಉದ್ಯಮ ವಿಸ್ತಾರವಾಗುವ ಸಾಧ್ಯತೆ ಬಹಳ ಇದೆ. ಈ ಯೋಜನೆಯಿಂದಾಗಿ 7 ಕೋಟಿ ಗ್ಯಾಲನ್ ನೀರು ಕೃಷಿ ಹಾಗೂ ತೋಟಗಾರಿಕೆಗೆ ಸರಬರಾಜಾಗುವ ಸಾಧ್ಯತೆ ಇದೆ. ಅಂತರ್ಜಲ ನಿಕ್ಷೇಪಗಳನ್ನು ಪತ್ತೆಹಚ್ಚಲಾಗಿದೆ. ಕೃಷಿ ವಿಸ್ತರಣೆ, ಜಲ ಲಭ್ಯತೆ ಮತ್ತು ಭೂಸಾರಪರೀಕ್ಷೆಗಳಿಗಾಗಿ ಸರ್ಕಾರ ಒಂದು ತೀವ್ರ ಸಮೀಕ್ಷೆ ಕೈಗೊಂಡಿದೆ. ಮತ್ಸ್ಯೋದ್ಯಮಕ್ಕೆ ಪ್ರೋತ್ಸಾಹ ನೀಡುತ್ತಿದೆ.

**ಕೈಗಾರಿಕೆಗಳು :** ತೈಲಕೈಗಾರಿಕೆಗೆ ಕುವೈತಿನಲ್ಲಿ ಪ್ರಥಮಸ್ಥಾನ. ಇತರ ಉತ್ಪಾದನ ಕೈಗಾರಿಕೆಗಳು ಈ ಅರ್ಥವ್ಯವಸ್ಥೆಯಲ್ಲಿ ಹೇಳಿಕೊಳ್ಳುವಷ್ಟರ ಮಟ್ಟಿಗೆ ಬೆಳೆದಿಲ್ಲ. ಕುವೈತಿನಲ್ಲಿ ಉತ್ಪಾದಿತವಾಗುವ ತೈಲದಲ್ಲಿ ಸುಮಾರು ಶೇ. 92 ರಷ್ಟು ಬ್ರಿಟಿಷ್–ಅಮೆರಿಕನ್ ತೈಲಸಂಸ್ಥೆಗಳ ಅಧೀನದಲ್ಲಿದೆ. ತೈಲಕ್ಷೇತ್ರದಿಂದ ರಾಷ್ಟ್ರೀಯ ಉತ್ಪನ್ನಕ್ಕೆ ಶೇ. 61ರಷ್ಟು ಕಾಣಿಕೆ ಸಲ್ಲುತ್ತದೆ. ಸರ್ಕಾರದ ಆದಾಯದ ಶೇ. 94ರಷ್ಟು ಬರುವುದು ತೈಲಕ್ಷೇತ್ರದಿಂದ. ತೈಲ ಉತ್ಪಾದನೆ ಮತ್ತು ಅದರ ವಿತರಣೆಯಲ್ಲಿ 7,000 ಜನ ಉದ್ಯೋಗಿಗಳಿದ್ದಾರೆ. ಒಟ್ಟು ಕಾರ್ಮಿಕರಲ್ಲಿ ಶೇ.3.8ಕ್ಕೆ ಈ ರಂಗ ಉದ್ಯೋಗವನ್ನೊದಗಿಸುತ್ತಿದೆ.

1967ರಲ್ಲಿ ಕುವೈತಿನ ಪರಿಷ್ಕೃತ ತೈಲ ಉತ್ಪಾದನೆ 99,13.20.000 ಅಮೆರಿಕನ್ ಬ್ಯಾರೆಲ್‌ಗಳಷ್ಟಿತ್ತು. ಇದು ಪ್ರಪಂಚದ ಒಟ್ಟು ಉತ್ಪಾದನೆಯ ಶೇ. 8 ರಷ್ಟು. ಈ ಉತ್ಪಾದನೆಯಲ್ಲಿ ಸುಮಾರು 93.4 ಕೋಟಿ ಬ್ಯಾರೆಲ್‌ಗಳನ್ನು ರಫ್ತುಮಾಡಲಾಯಿತು. ತೈಲಕ್ಷೇತ್ರದಿಂದ 1966–67ರಲ್ಲಿ ಸರ್ಕಾರಕ್ಕೆ 23.19 ಕೋಟಿ ಕುವೈತ್ ದೀನಾರ್‌ಗಳ ವರಮಾನ ಬಂತು. ತೈಲ ಉತ್ಪಾದನೆಯಲ್ಲಿ ಕುವೈತಿನದು ವಿಶ್ವದಲ್ಲಿ ನಾಲ್ಕನೆಯ ಸ್ಥಾನ. ರಫ್ತಿನಲ್ಲಿ ಎರಡನೆಯ ಸ್ಥಾನ. ತೈಲ ಉತ್ಪಾದನ ವೆಚ್ಚ ಸಹ ಈ ದೇಶದಲ್ಲಿ ಬಹಳ ಕಡಿಮೆ.

ತೈಲಕೈಗಾರಿಕೆಯನ್ನುಳಿದು ಇತರ ಕೈಗಾರಿಕೆಗಳು ಕುವೈತಿನಲ್ಲಿ ಹೆಚ್ಚಾಗಿ ಪ್ರಗತಿ ಹೊಂದಿಲ್ಲ. ಕಚ್ಚಾಸಾಮಗ್ರಿಯ ಕೊರತೆ, ನೀರಿನ ಅಭಾವ, ಕಾರ್ಮಿಕರ ವೇತನದ ಹೆಚ್ಚಳ–ಇವು ಮುಖ್ಯ ಕಾರಣಗಳು. ಇತರ ಕೈಗಾರಿಕೆಗಳಲ್ಲಿ ಇಟ್ಟಿಗೆ, ಹೆಂಚು, ಶೀತೋಪಕರಣಗಳು, ಸಣ್ಣ ಎಂಜಿನಿಯರಿಂಗ್ ವಸ್ತುಗಳು, ಸಿಮೆಂಟ್, ಉಪ್ಪು, ಕ್ಲೋರಿನ್ ಮತ್ತು ಅಮೃತಶಿಲೆ–ಇವು ಮುಖ್ಯ. ಕೈಗಾರಿಕಾ ರಂಗದಲ್ಲಿ ಕುವೈತಿನ ಇತ್ತೀಚಿನ ಗಮನಾರ್ಹ ಸಾಧನೆಯೆಂದರೆ, ಅದು 1966ರಲ್ಲಿ ಸ್ಥಾಪಿಸಿದ ಪೆಟ್ರೋಕೆಮಿಕಲ್ ಗುಂಪಿನ ಈ ಬೃಹತ್ ಉದ್ಯಮ. ಈ ಗುಂಪಿನ ಕೈಗಾರಿಕೆಗಳು ಅಮೋನಿಯ, ಯೂರಿಯ, ಸಲ್ಫ್ಯೂರಿಕ್ ಆಮ್ಲ, ಅಮೋನಿಯಂ ಸಲ್ಫೇಟ್ ಉತ್ಪಾದಿಸುತ್ತವೆ. 1967ರಲ್ಲಿ ತೈಲಶುದ್ಧೀಕರಣ ಉದ್ಯಮವೊಂದು ಸ್ಥಾಪಿತವಾಯಿತು. ಕುವೈತ್‌ನಲ್ಲಿ ವಿಶ್ವದಲ್ಲಿಯೇ ದೊಡ್ಡದಾದ ಸಮುದ್ರಜಲಬಟ್ಟಿ ಇದೆ. ಹೊಸಕೈಗಾರಿಕೆಗಳಿಗೆ ಉತ್ತೇಜನ ನೀಡಲು ಸರ್ಕಾರ ಬಹುವಾಗಿ ಶ್ರಮಿಸುತ್ತಿದೆ. ಕಟ್ಟಡ ಉದ್ಯಮವೂ ಬೆಳೆಯುತ್ತಿದೆ. ದೋಣಿ ಕಟ್ಟುವುದು ಇನ್ನೊಂದು ಮುಖ್ಯಉದ್ಯಮ.

ರಸ್ತೆಸಾರಿಗೆ, ವಿಮಾನಸಾರಿಗೆ ಮತ್ತು ಜಲಸಾರಿಗೆ ಕುವೈತ್ ಅರ್ಥವ್ಯವಸ್ಥೆಯಲ್ಲಿ ಬಹಳ ಮುಖ್ಯವಾದವು. ರೈಲುಮಾರ್ಗವಿಲ್ಲ. ಪಶ್ಚಿಮ ಏಷ್ಯದ ಬಂದರುಗಳಲ್ಲಿ ಕುವೈತ್‌ಗೆ ಮುಖ್ಯವಾದ್ದು. ಅನೇಕ ಅಂತಾರಾಷ್ಟ್ರೀಯ ವಿಮಾನಸಂಸ್ಥೆಗಳು ಕುವೈತ್‌ಗೆ ಸಂಪರ್ಕ ಕಲ್ಪಿಸಿವೆ.

ವಿದೇಶೀ ವಾಣಿಜ್ಯರಂಗದಲ್ಲಿ ಕುವೈತ್ ಯಾವ ತೊಡಕನ್ನೂ ಎದುರಿಸುತ್ತಿಲ್ಲ. ತನ್ನ ಆಮದಿಗೆ ಬೇಕಾದ ಹಣಕ್ಕೆ ಯಾವ ಕೊರತೆಯೂ ಇಲ್ಲ. ಆಹಾರ, ಯಂತ್ರಸಾಮಗ್ರಿ ಮತ್ತು ಸಾರಿಗೆ ಸಲಕರಣೆಗಳನ್ನು ಮುಖ್ಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನ, ಗ್ರೇಟ್ ಬ್ರಿಟನ್, ಜಪಾನ್ ಮತ್ತು ಜರ್ಮನಿಗಳಿಂದ ಅದು ಆಮದು ಮಾಡಿಕೊಳ್ಳುತ್ತದೆ. ತೈಲ ಇದರ ಮುಖ್ಯ ರಫ್ತುವಸ್ತು.

ತೈಲಾದಾಯದ ವಿತರಣೆಯ ಮುಖ್ಯ ಮಾಧ್ಯಮ ಕುವೈತ್ ಸರ್ಕಾರ. ಸರ್ಕಾರವೇ ಅತ್ಯಂತ ಹೆಚ್ಚಿನ ಉದ್ಯೋಗಗಳನ್ನು ನೇಮಿಸಿಕೊಂಡಿರುವ ಸಂಸ್ಥೆ. ಉದ್ಯೋಗಸ್ಥರಲ್ಲಿ ಶೇ. 46ರಷ್ಟಕ್ಕೆ ಸರ್ಕಾರ ಉದ್ಯೋಗವನ್ನೊದಗಿಸಿದೆ. ಕುವೈತ್ ಸರ್ಕಾರ ವಿದ್ಯಾಭ್ಯಾಸ ಮತ್ತು ಆರೋಗ್ಯಕ್ಕಾಗಿ ತನ್ನ ಪ್ರಜೆಗಳ ಮೇಲೆ ಮಾಡುತ್ತಿರುವ ತಲಾ ವೆಚ್ಚ ಪ್ರಪಂಚದಲ್ಲೇ ಅತ್ಯಧಿಕವಾದ್ದು ಎಂದು ಅಂದಾಜುಮಾಡಲಾಗಿದೆ. ಇಡೀ ಪಶ್ಚಿಮ ಏಷ್ಯದಲ್ಲಿ ಕುವೈತ್‌ನ ನೌಕರರಿಗೆ ದೊರೆಯುವ ವೇತನ ಗರಿಷ್ಠ ಮಟ್ಟದ್ದು. ತನ್ನ ಕಾರ್ಯಕ್ರಮಗಳ ಪ್ರಗತಿಗಾಗಿ ಕುವೈತ್ ಪಂಚವಾರ್ಷಿಕ ಯೋಜನೆಯೊಂದನ್ನು ರೂಪಿಸಿಕೊಂಡಿದೆ. ವರ್ಷಕ್ಕೆ ಶೇ. 5ರ ಬೆಳವಣಿಗೆ ಸಾಧಿಸುವುದು ಯೋಜನೆಯ ಗುರಿ. (ಸಿ.ಕೆ.ಆರ್.)

**ಕುಶಧ್ವಜ :** ಒಬ್ಬ ರಾಜ. ವಿದೇಹ ವಂಶದ ಹ್ರಸ್ವರೋಮಜನಕನ ಮಗ. ಸೀರಧ್ವಜಜನಕನ ತಮ್ಮ. ಸೀರಧ್ವಜ ಇಂದ್ರದೇಶವನ್ನು ಗೆದ್ದು ಕುಶಧ್ವಜನನ್ನು ಅಲ್ಲಿಯ ರಾಜನನ್ನಾಗಿ ಮಾಡಿ ಸಾಂಕಾಶ್ಯ ನಗರಿಯನ್ನು ರಾಜಧಾನಿಯಾಗಿ ಮಾಡಿದ. ಈತನಿಗೆ ಮಾಂಡವೀ, ಶ್ರುತಕೀರ್ತಿಯರೆಂಬ ಮಕ್ಕಳಿದ್ದರು. ಇವರನ್ನು ಭರತ ಶತ್ರುಘ್ನರಿಗೆ ಕೊಟ್ಟು ಮದುವೆ ಮಾಡಲಾಯಿತು. ಈ ವೃತ್ತಾಂತ ರಾಮಾಯಣದಲ್ಲಿ ಬರುತ್ತದೆ.

ಇನ್ನೊಂದು ಹೇಳಿಕೆಯ ಪ್ರಕಾರ ಕುಶಧ್ವಜ ವೃಷಧ್ವಜ ಜನಕನ ಮಗನಾದ ರಥಧ್ವಜನ ಮಗ. ಈತನ ಮಗಳು ವೇದವತಿ ಲಕ್ಷ್ಮಿಯ ಅಂಶದಿಂದ ಜನಿಸಿದವಳು. ಆಕೆಯೇ ಮುಂದಣ ಜನ್ಮದಲ್ಲಿ ಸೀತೆಯಾಗಿ ಜನಿಸಿದಳು.

ಕಾಶೀರಾಜನ ಮಗನೊಬ್ಬನಿಗೆ ಕುಶಧ್ವಜನೆಂಬ ಹೆಸರಿದೆ. ಪೂರ್ವಜನ್ಮದಲ್ಲೀತ ಕಪಿಯಾಗಿದ್ದ. ಆ ಕಪಿ ಕಾಶೀವಿಶ್ವೇಶ್ವರನ ಮಂದಿರದ ಪ್ರಾಕಾರದಲ್ಲಿ ವಾಸವಾಗಿತ್ತು. ಒಮ್ಮೆ ಚೈತ್ರ ಶುಕ್ಲ 14 ಹರ್ಷಣಯೋಗದಲ್ಲಿ ವಿಶ್ವೇಶ್ವರನ ಉತ್ಸವಮೂರ್ತಿಯನ್ನು ಚಿನ್ನದ ತೊಟ್ಟಿಲಲ್ಲಿರಿಸಿ ದಮನೋತ್ಸವ ನೇರವೇರಿಸಿದ್ದರು. ಆ ರಾತ್ರಿ ಕಪಿ ಗರ್ಭಗುಡಿಯನ್ನು ಹೊಕ್ಕು ಚಾಪಲ್ಯದಿಂದ ಇರುಳೆಲ್ಲ ದೇವರ ಉಯ್ಯಾಲೆಯನ್ನು ತೂಗುತ್ತಿತ್ತು. ಉಯ್ಯಾಲೆಯ ಕಿರುಗಂಟೆಯ ನಾದವನ್ನು ಕೇಳಿ ಉಷಃಕಾಲದಲ್ಲಿಯೇ ಬಾಗಿಲು ತೆಗೆದ ಪೂಜಾರಿಗಳು ಕಪಿಯನ್ನು ಕೊಂದರು. ರಾತ್ರಿಯೆಲ್ಲ ಶಿವನಿಗೆ ಡೋಲೋತ್ಸವ ಮಾಡಿದ ಪುಣ್ಯದಿಂದದು ಕ್ಷತ್ರಿಯನಾಗಿ ಜನಿಸಿತು. ಕಪಿಯಾಗಿದ್ದ ಈತ ಹಿಂದಿನ ಜನ್ಮದ ಸ್ಮರಣೆ ಪಡೆದು ದೇಶದಲ್ಲೆಲ್ಲ ಚೈತ್ರ ಶುಕ್ಲ 14 ದಮನೋತ್ಸವ ನಡೆಯುವಂತೆ ಮಾಡಿದ. ಈ ಸೇವೆಗೆ ಮೆಚ್ಚಿದ ಶಿವ ಈತನನ್ನು ತನ್ನ ಗಣ ಸಮೂಹಕ್ಕೆ ಸೇರಿಸಿಕೊಂಡ.

ಒಮ್ಮೆ ತಪೋವನದ ತಾವರೆಯ ಕೊಳದಲ್ಲಿ ಕೆಳದಿಯರೊಂದಿಗೆ ಜಲಕೇಳಿಯಲ್ಲಿದ್ದ ಅಗ್ನಿವೇಶ್ಯಮುನಿಯ ಮಗಳನ್ನು ಕಂಡು ಮೋಹಭರಿತನಾಗಿ ಆಕೆಯನ್ನು ಅಪಹರಿಸಿ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೊರಟ. ಆ ಯುವತಿ ಆರ್ತನಾದ ಮಾಡಲು ಅದನ್ನು ಕೇಳಿದ ಅಗ್ನಿವೇಶ್ಯಮುನಿ ಈತನನ್ನು ಹಿಂಬಾಲಿಸಿ, ಹದ್ದಿನ ಜನ್ಮ ಪಡೆಯೆಂದು ಶಾಪವಿತ್ತ. ದುಃಖಗೊಂಡ ಕುಶಧ್ವಜ ಮುನಿಯನ್ನು ಮೊರೆಹೊಗಲು ಕನಿಕರ ಹುಟ್ಟಿ ಮುಂದೆ ಇಂದ್ರದ್ಯುಮ್ನ ರಾಜನ ಕೀರ್ತಿಯನ್ನು ಬೆಳಗಿಸಲು ಯತ್ನಿಸಿ ಮರಳಿ ಶಿವನ ಪಾದ ಸೇರುವಂತೆ ಶಾಪವಿಮೋಚನನೆ ನೀಡಿದ. *

**ಕುಶಲ ಕೈಗಾರಿಕೆ :** ಕರಕೌಶಲ ಪ್ರಯೋಗದಿಂದ, ಆಕರ್ಷಕವೂ ಉಪಯುಕ್ತವೂ ಆದ ಪದಾರ್ಥಗಳ ತಯಾರಿಕೆ (ಹ್ಯಾಂಡಿಕ್ರ್ಯಾಫ್ಟ್ಸ್). ಪ್ರಾಚೀನಕಾಲದಿಂದಲೂ ಬೆಳೆದುಬಂದಿರುವ ಕೈಕಸಬು. ದೈಹಿಕ ದುಡಿಮೆ, ಪ್ರಧಾನವಾದ ಸಣ್ಣ ಕೈಗಾರಿಕೆ, ಕರಕೌಶಲ ವಿನ್ಯಾಸ–ಎರಡಕ್ಕೂ ಈ ಶಬ್ದವನ್ನು ಅನ್ವಯಿಸಲಾಗುತ್ತದೆ. ಗೃಹಕೈಗಾರಿಕೆ ಮತ್ತು ಕರಕೌಶಲಗಳು ಪರಸ್ಪರ ಪೂರಕ. ಅನೇಕ ವೇಳೆ ಇವೆರಡರ ನಡುವೆ ಗೆರೆ ಎಳೆಯುವುದು ಅಸಾಧ್ಯ. ಆದರೆ ಒಂದೊಂದೂ ವೈಶಿಷ್ಟ್ಯಪೂರ್ಣವಾದವು. ಪ್ರಾಚೀನ ನಾಗರಿಕತೆಗಳಲ್ಲಿ ಕುಶಲಕಲೆ ಮತ್ತು ಕೈಗಾರಿಕೆಗಳಿಗೆ ಅಷ್ಟಾಗಿ ಭೇದ ಇರಲಿಲ್ಲ. ಗ್ರೀಕರ ಕಾಲದ ಕೆತ್ತನೆ ಮತ್ತು ವಾಸ್ತುಶಿಲ್ಪ ಕಲೆಗಳ ಪಳೆಯುಳಿಕೆಗಳು. ಚೀನದ ಕುಶಲ ಕೆಲಸಗಾರರ ಕಲಾನೈಪುಣ್ಯವನ್ನು ಪ್ರತಿಬಿಂಬಿಸುವ ಕೆಲವು ವಸ್ತುಗಳು ಮಧ್ಯಯುಗದವೆಂದು ಗುರುತಿಸಲಾಗಿರುವ ಗಾಜಿನ ಕಿಟಕಿಗಳು ಮೊದಲಾದವು ಕೈಕಸಬಿನ ಕಾರ್ಯನೈಪುಣ್ಯವನ್ನೂ ಕುಶಲಕಲೆಯ ಪ್ರೌಢಿಮೆಯನ್ನೂ

ಶಿಲ್ಪಕಲೆ : ಕರ್ನಾಟಕದಲ್ಲಿ ವಂಶಪಾರಂಪರ್ಯವಾಗಿ ಬೆಳೆದು ಬಂದಿರುವ ಕಸಬುಗಳಲ್ಲಿ ಒಂದು

ಎತ್ತಿ ತೋರಿಸುತ್ತವೆ. ಇಲ್ಲೂ ಕೈಗಾರಿಕೆ ಮತ್ತು ಕುಶಲಕಲೆಗಳಿಗಿರುವ ವ್ಯತ್ಯಾಸ ಕಂಡುಬರುವುದಿಲ್ಲ. ಆದರೆ ಕಾಲಕ್ರಮದಲ್ಲಿ ಕುಶಲಕಲೆಗಳೂ ಉಪಯುಕ್ತತೆ ಮತ್ತು ವಾಣಿಜ್ಯ ದೃಷ್ಟಿಯಿಂದ ಕೈಕೊಳ್ಳುವ ಕಲೆಗಳೂ ಬೆಳೆದುವು. ಅವುಗಳ ಕಾರ್ಯಕ್ಷೇತ್ರ ವಿಶಾಲವಾದಂತೆ



ಮೃತ್ತಿಕಾ ಗಣಪತಿ ನಿರ್ಮಾಪಕನ ಹಸ್ತದಲ್ಲಿ

ಅವುಗಳ ನಡುವಣ ವ್ಯತ್ಯಾಸಗಳೂ ಎದ್ದು ಕಾಣುವಂತಾಯಿತು. ಪ್ರಾಚೀನಕಾಲದ ಕೆಲವು ಕುಶಲವಸ್ತುಗಳು ಉಪಯುಕ್ತತೆ ಮತ್ತು ಸೌಂದರ್ಯಗಳ ದೃಷ್ಟಿಯಿಂದ ಆಧುನಿಕ ಸರಕುಗಳಿಗಿಂತ ಎಷ್ಟೋ ಪಾಲು ಕಳಪೆಯಾಗಿವೆ. ಆದರೂ ಅವುಗಳಲ್ಲಿ ಕಂಡುಬರುವ ಕುಶಲತೆ ಆಯಾ ಕೆಲಸಗಾರನ ಕರಕೌಶಲದ ಫಲವೇ ಆಗಿದೆ.

ಕೈಗಾರಿಕಾ ಕ್ರಾಂತಿ ಪ್ರಾರಂಭವಾಗುವುದಕ್ಕೆ ಮುಂಚೆ ಜನಕ್ಕೆ ಅವಶ್ಯವಾದ ಪದಾರ್ಥಗಳೆಲ್ಲ ಕೈಕೆಲಸದ ಫಲವೇ ಆಗಿದ್ದುವು. ಯಂತ್ರಗಳಿಂದ ಉತ್ಪಾದನೆ ಆರಂಭವಾದ ಮೇಲೆ ಉತ್ಪಾದನ ವ್ಯವಸ್ಥೆಯಲ್ಲಿ ಮನುಷ್ಯ ಹಾಗೂ ಪ್ರಾಣಿಗಳ ಶ್ರಮಶಕ್ತಿಯ ಪಾತ್ರ ಕಡಿಮೆಯಾಯಿತು. ಪ್ರಾಚೀನ ಜನಾಂಗಗಳ ಬಹುಮುಖ್ಯ ಕಸಬುಗಳೆಂದರೆ ಆಹಾರೋತ್ಪಾದನೆ, ಉಡುಪು ತಯಾರಿಕೆ ಮತ್ತು ವಸತಿನಿರ್ಮಾಣ ಕಾರ್ಯಗಳು. ಈ ಕೆಲಸಗಳನ್ನು ಪ್ರಥಮತಃ ಸ್ತ್ರೀಯರೇ ಪ್ರಾರಂಭಿಸಿದರೂ ಇವಕ್ಕೆ ಮನುಷ್ಯನ ಆರ್ಥಿಕ ವಿಕಾಸದ ವಿವಿಧ ಯುಗಗಳನ್ನು ಅವಲೋಕಿಸಿದಾಗ ಈ ಅಂಶ ಸ್ಪಷ್ಟಪಡುತ್ತದೆ. ಹಳೆ ಮತ್ತು ಹೊಸ ಶಿಲಾಯುಗಗಳಲ್ಲಿ ಮನುಷ್ಯ ಉಪಯೋಗಿಸುತ್ತಿದ್ದ ಸಲಕರಣೆಗಳು, ಬೇಟೆಗಾರಿಕೆಯ ಅಥವಾ ಅಲೆಮಾರಿ ಜೀವನದ ಹಂತದಲ್ಲಿ ಮಾನವ ತನ್ನ ಹಸಿವೆಯನ್ನು ಇಂಗಿಸಿಕೊಳ್ಳಲು ಪ್ರಾಣಿ ಹಾಗೂ ಮೀನುಗಳನ್ನು ಕೊಲ್ಲುತ್ತಿದ್ದ ವಿಧಾನ, ಅಲ್ಲಿ ಉಪಯೋಗಿಸಲಾಗುತ್ತಿದ್ದ ಸಾಧನಗಳು, ಪಶುಪಾಲನೆಯ ಯುಗದಲ್ಲಿ ಆತ ಪ್ರಾಣಿಗಳ ಚರ್ಮದಿಂದ ತಯಾರಿಸಿಕೊಳ್ಳುತ್ತಿದ್ದ ಕವಚ, ಹೂಡುತ್ತಿದ್ದ ಗುಡಾರ ಮತ್ತು ಅದಕ್ಕೆ ಅಗತ್ಯವಾದ ಸಲಕರಣೆ, ಕೃಷಿಯುಗದಲ್ಲಿ ಮನುಷ್ಯ ನೆಲವನ್ನು ಅಗೆದು ಕಾಳುಗಳನ್ನು ಚೆಲ್ಲಲು ಬಳಸಿಕೊಂಡ ಮರಮುಟ್ಟು ಹಾಗೂ ಅನುಸರಿಸಿದ ವಿಧಾನ–ಇವೆಲ್ಲವೂ ಮನುಷ್ಯನ ಕುಶಲ ಕೆಲಸದ ಜಾಣ್ಮೆಯನ್ನು ಎತ್ತಿ ತೋರಿಸುತ್ತವೆ. ಈ ಯುಗದಲ್ಲಿ ಸ್ತ್ರೀಯೇ ಹಲವಾರು ಕಲೆಗಳನ್ನು ಬೆಳಕಿಗೆ ತಂದರೂ ಅವನ್ನು ಅಭಿವೃದ್ಧಿಪಡಿಸಲು ವಿವಿಧ ವಿಧಾನ ಮತ್ತು ಸಲಕರಣೆಗಳನ್ನು ಕಂಡುಹಿಡಿದು ಅಳವಡಿಸಿದವನು ಪುರುಷ. ಹೀಗೆ ಕ್ರಮೇಣ ಆವಶ್ಯಕತೆಗನುಗುಣವಾಗಿ ಹಲವಾರು ವಸ್ತುಗಳ ಉತ್ಪಾದನೆ ಅನಿವಾರ್ಯವಾಯಿತು. ಇದು ಕರಕೌಶಲ ಸರಕುಗಳ ತಯಾರಿಕೆಗೆ ದಾರಿ ಮಾಡಿಕೊಟ್ಟಿತು. ಪೂರ್ವಕಾಲದಲ್ಲಿ ಕುಶಲ ಕೈಗಾರಿಕೆಗಳು ಬಹಳ ಮಟ್ಟಿಗೆ ಮಾಂತ್ರಿಕ ಹಾಗೂ ಧಾರ್ಮಿಕ ಪ್ರಭಾವಗಳಿಗೆ ಒಳಗಾಗಿದ್ದುವು. ಕುಶಲಕರ್ಮಿಗಳು ಪ್ರಾರಂಭಿಸುವ ಪ್ರತಿಯೊಂದು ಕೆಲಸವೂ ಕೆಲವು ನಿರ್ದಿಷ್ಟ ವಿಧಿಗಳಿಗೆ ಅನುಗುಣವಾಗಿ ನಡೆಯುತ್ತಿತ್ತು. ಪ್ರಾಚೀನ ನಾಗರಿಕತೆ ಹಾಗೂ ಸಂಸ್ಕೃತಿಗಳ ಕೇಂದ್ರಗಳೆನಿಸಿದ ಭಾರತ, ಚೀನ, ಜಪಾನ್, ಈಜಿಪ್ಟ್ ಮೊದಲಾದ ದೇಶಗಳ ಕುಶಲ ಕೆಲಸಗಳಲ್ಲಿ ಈ ಅಂಶವನ್ನು ಕಾಣಬಹುದು.

ಪ್ರಾಚೀನ ಸಮಾಜಗಳಲ್ಲಿ ಕುಶಲ ಕೆಲಸಗಾರ ತನ್ನ ಪ್ರತಿಭೆ ಕೌಶಲ ದಕ್ಷತೆಗಳನ್ನು ಕಲಾಕೃತಿ ರಚನೆ ಅಥವಾ ಸರಕು ಉತ್ಪಾದನೆಯಲ್ಲಿ ತೋರಿಸಿದರೆ ಅವನನ್ನು ಸನ್ಮಾನಿಸಿ ಪ್ರೋತ್ಸಾಹಿಸುವ ಸಂಪ್ರದಾಯ ಇತ್ತು. ಅವನಿಗೆ ಕಾಯಂ ಆದ ಕೆಲಸದ ಭರವಸೆ ಇರುತ್ತಿತ್ತು. ಇದರಿಂದ ಕುಶಲಕರ್ಮಿ ವಿವಿಧ ವಿನ್ಯಾಸ ಮತ್ತು ಆಕೃತಿಗಳ ರಚನೆಯಲ್ಲಿ ತನ್ನ ಗಮನವನ್ನು ಕೇಂದ್ರೀಕರಿಸುತ್ತಿದ್ದ. ಆತ ತಯಾರಿಸುತ್ತಿದ್ದ ವಸ್ತುಗಳಿಗೆ ಬೇಡಿಕೆ ಹೆಚ್ಚಿ ಉತ್ಪಾದನೆಯೂ ಹೆಚ್ಚುತ್ತಿತ್ತು. ಶ್ರಮವಿಭಜನೆ ಮತ್ತು ವಿಶೇಷ ಪ್ರಾವೀಣ್ಯ ಬೆಳೆದಂತೆ ಕುಶಲ ಕೈಗಾರಿಕೆಗಳ ವ್ಯಾಪ್ತಿಯೂ ಹೆಚ್ಚಿತು. ಕುಶಲ ಕೈಗಾರಿಕೆಗಳ ಬೆಳೆವಣಿಗೆಯಿಂದ ಮಾರುಕಟ್ಟೆ ವಿಸ್ತಾರಗೊಂಡಿತು. ವ್ಯಾಪಾರಾಭಿವೃದ್ಧಿಯಿಂದ ಕುಶಲ ಕೆಲಸಗಾರರ ಪ್ರಾಮುಖ್ಯ ಹೆಚ್ಚಿ ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳು ಉತ್ತಮಗೊಂಡುವು. ಕುಶಲ ಕೆಲಸಗಾರರು

ರೂವಾರಿ ವಿದ್ಯೆಯ ವರದ ಹಸ್ತ

ವೃತ್ತಿಸಂಘ ಅಥವಾ ಶ್ರೇಣಿಗಳನ್ನು ಸ್ಥಾಪಿಸಿಕೊಂಡು ಅವುಗಳ ಮೂಲಕ ತಮಗೂ ತಮ್ಮವರಿಗೂ ಎಲ್ಲ ರೀತಿಯ ರಕ್ಷಣೆಯನ್ನೂ ದೊರಕಿಸಿಕೊಂಡರು. ಈ ಶ್ರೇಣಿಗಳು ಕುಶಲಕೆಲಸಗಾರರ ಮಕ್ಕಳಿಗೆ ಆಯಾ ವೃತ್ತಿ ಅಥವಾ ಉದ್ಯೋಗಗಳಲ್ಲಿ ಅಗತ್ಯವಾದ ತರಬೇತಿ ಕೊಡುತ್ತಿದ್ದವು. ಕೈಕಸಬು ಶ್ರೇಣಿಗಳು ತಮ್ಮ ಸದಸ್ಯರಾದ ಕುಶಲ ಕೆಲಸಗಾರರು ತೀರಿಕೊಂಡಾಗ ಅವರ ಹೆಂಡತಿ ಮಕ್ಕಳ ಭವಿಷ್ಯದ ಹೊಣೆಯನ್ನು ಸಹ ವಹಿಸಿಕೊಳ್ಳುತ್ತಿದ್ದುವು. ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸ್ಥಾಪನೆ ಮಾಡಿದ್ದಲ್ಲದೆ ಬೇರೆ ಕಡೆಯಿಂದ ಬಂದ ಸ್ಪರ್ಧೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಕೆಲಸವನ್ನೂ ಮಾಡುತ್ತಿದ್ದುವು. ಹೀಗೆ ಕಲೆ, ಉದ್ಯೋಗ ಮತ್ತು ಕೈಗಾರಿಕೆಗಳು ವಂಶ ಪಾರಂಪರ್ಯವಾಗಿ ಬೆಳೆದುಕೊಂಡು ಬರಲು ಈ ಶ್ರೇಣಿಗಳು ಸಹಾಯಕವಾಗಿದ್ದುವು.

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭವಾದ ಯಂತ್ರಯುಗದಿಂದ ಕುಶಲ ಕೈಗಾರಿಕಾಭಿವೃದ್ಧಿ ತಡೆಬಿತ್ತು. ಆದರೂ ಕುಶಲ ಕೈಗಾರಿಕೆಯ ಪ್ರಮುಖ ಲಕ್ಷಣವಾದ ಕಲಾನೈಪುಣ್ಯ, ಜಾಣ್ಮೆ ಮತ್ತು ವಿನ್ಯಾಸ ಅಧಿಕ ಪ್ರಮಾಣದ ಉತ್ಪಾದನೆಯಲ್ಲಿ ಉಳಿದುಕೊಂಡುವು. ಇಂದು ಯಂತ್ರಶಕ್ತಿ ಅಥವಾ ವಿದ್ಯುಚ್ಛಕ್ತಿಯ ಸಹಾಯದಿಂದ ಸರಕುಗಳನ್ನು ಕೈಯಿಂದ ತಯಾರಿಸುವುದನ್ನೂ ಕುಶಲ ಕೆಲಸಗಾರನೆಂದು ಕರೆಯುವ ವಾಡಿಕೆಯಿದೆ. ಹೊಸ ಯಂತ್ರೋಪಕರಣಗಳನ್ನು ಕಂಡುಹಿಡಿದಂತೆಲ್ಲ ಕುಶಲ ಕೈಗಾರಿಕೆಯ ವಿಧಾನವೂ ಬದಲಾವಣೆಯಾಗುತ್ತ ಬಂದಿದೆ. ಕೈಗಾರಿಕೆ ಯಾಂತ್ರೀಕೃತವಾದಂತೆ ಕುಶಲ ಕೆಲಸದ ಅಸ್ತಿತ್ವ ಕುಗ್ಗುತ್ತ ಬಂದಿದೆಯಲ್ಲದೆ ಉತ್ಪಾದನ ವ್ಯವಸ್ಥೆಯಲ್ಲಿ ಕುಶಲಕರ್ಮಿಯ ಪ್ರಾಮುಖ್ಯ ಕಡಿಮೆಯಾಗುತ್ತ ನಡೆದಿದೆ. ಜಟಿಲವಾದ ಬೃಹತ್ ಕೈಗಾರಿಕಾ ವ್ಯವಸ್ಥೆಯಲ್ಲಿ ಕುಶಲಕರ್ಮಿಯ ಜಾಣ್ಮೆಗೆ ಸಾಕಷ್ಟು ಎಡೆ ಇಲ್ಲದಂತಾಗಿದೆ. ಆತ ಕೇವಲ ನಿಕೃಷ್ಟವಾದ ಅಲಕ್ಷ್ಯಕ್ಕೊಳಗಾದ ಅಂಶವಾಗಿ ಪರಿಣಮಿಸಿದ್ದಾನೆ.

ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕುಶಲ ಕೈಗಾರಿಕೆಗಳ ಸ್ಥಿತಿ ಹದಗೆಟ್ಟು, ಕುಶಲ ಕೆಲಸಗಳಿಂದ ಜೀವಿಸುತ್ತಿದ್ದವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳು ಶೋಚನೀಯ ಮಟ್ಟಕ್ಕಿಳಿದಾಗ ಇಂಥ ಪರಿಸ್ಥಿತಿಯನ್ನು ಗಮನಿಸಿದ ಕೆಲವು ಕುಶಲ

ಕೈಗಾರಿಕಾ ಪ್ರೇಮಿಗಳು ಅವುಗಳ ಉಳಿವಿಗಾಗಿ ಶ್ರಮಿಸಲು ಕರಕೌಶಲ ಚಳವಳಿಯೊಂದನ್ನು ನಡೆಸಿದರು. ಈ ಚಳವಳಿ ಪ್ರಾಚೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಲಾ ವೈವಿಧ್ಯವುಳ್ಳ ಕುಶಲ ಕೈಗಾರಿಕೆಗಳ ಪುನರುಜ್ಜೀವನದ ಬಗ್ಗೆ ಜನರ ಗಮನ ಸೆಳೆಯುವುದರಲ್ಲಿ ಮತ್ತು ಸರ್ಕಾರದ ನೆರವು ದೊರಕಿಸಿಕೊಡುವುದರಲ್ಲಿ ಬಹುಮಟ್ಟಿಗೆ ಯಶಸ್ಸುಗಳಿಸಿತು. ಇದು ಪ್ರಪಂಚದ ನಾನಾ ದೇಶಗಳಲ್ಲಿ ಒಂದೇ ಕಾಲದಲ್ಲಿ ಪ್ರಾರಂಭವಾಗಲಿಲ್ಲ. 19ನೆಯ ಶತಮಾನದ ಪ್ರಾರಂಭದ ವೇಳೆಗೆ ಎಲ್ಲ ದೇಶಗಳಲ್ಲೂ ವ್ಯಾಪಿಸಿತ್ತು. ಈ ಚಳವಳಿ ಯಾಂತ್ರೀಕರಣದ ತೀವ್ರತೆ ಹಾಗೂ ಅಬ್ಬರವನ್ನು ಸ್ವಲ್ಪಮಟ್ಟಿಗಾದರೂ ತಡೆಗಟ್ಟುವುದರಲ್ಲಿ ಯಶಸ್ವಿಯಾಯಿತು. ಇಂಗ್ಲೆಂಡಿನಲ್ಲಿ ಜಾನ್ ರಸ್ಕಿನ್, ವಿಲಿಯಂ ಮಾರಿಸ್ ಮೊದಲಾದವರು ಯಂತ್ರದಿಂದ ತಯಾರಾದ ಅಂದವಿಲ್ಲದ ಸರಕುಗಳ ಬಗ್ಗೆ ಆಗ್ರಹ ವ್ಯಕ್ತಪಡಿಸಿ ಆರೋಪಣೆಗಳನ್ನು ಮಾಡುತ್ತಾ ಅವುಗಳ ಬಳಕೆಯನ್ನು ಬಹಿಷ್ಕರಿಸುವಂತೆ ಜನರಿಗೆ ಮನವಿ ಮಾಡಿಕೊಳ್ಳುತ್ತಿದ್ದರು. ಸ್ವೀಡನಿನಲ್ಲಿ ಆರ್ಥರ್ ಹ್ಯಾಜೆಲಿಯಸ್ ಕರಕೌಶಲವಸ್ತು ತಯಾರಿಕೆಯ ಪುನರುಜ್ಜೀವನಕ್ಕಾಗಿ ದುಡಿದ ಪ್ರವರ್ತಕರಲ್ಲಿ ಮೊದಲಿಗ. ಈತ ಬಹು ಸುಂದರವಾದ ಪ್ರಾಚೀನ ಕುಶಲ ಮಾದರಿಗಳನ್ನು ಕಲೆಹಾಕಿದ. ಸ್ವೀಡನಿನ ರಾಷ್ಟ್ರೀಯ ಮತ್ತು ಸ್ಥಳೀಯ ಕೃಷಿ ಸಂಘಗಳು ಗೃಹ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಹೆಚ್ಚು ಆಸಕ್ತಿ ವಹಿಸತೊಡಗಿದುವು. ಇದರ ಫಲವಾಗಿ ಸ್ವೀಡಿಷ್ ಕುಶಲ ಕೈಗಾರಿಕಾ ಸಂಸ್ಥೆ ಸ್ಥಾಪಿತವಾಯಿತು. ಪ್ರಾಚೀನಕಾಲದ ನಮೂನೆಯ ಕರಕೌಶಲ ವಸ್ತುಗಳನ್ನು ಪುನಃ ಉತ್ಪಾದಿಸುವ ಪ್ರಯತ್ನಗಳನ್ನು ಇದು ತ್ವರಿತಗೊಳಿಸಿತು. ದೇಶಾದ್ಯಂತ ಹಲವಾರು ಕುಶಲ ಕೈಗಾರಿಕಾ ಸಂಘಗಳು ಹುಟ್ಟಿಕೊಂಡುವು. ಇವು ಗೃಹ ಕೈಗಾರಿಕಾಭಿವೃದ್ಧಿಯಲ್ಲಿ ಪ್ರಮುಖಪಾತ್ರವಹಿಸಿದುವು. 20 ನೆಯ ಶತಮಾನದ ಪ್ರಾರಂಭದಲ್ಲಿ ಕುಶಲ ಕೈಗಾರಿಕಾ ಚಳವಳಿ ಬಿರುಸಾಗಿ, ಸ್ವೀಡನ್ನಿನ ಕುಶಲ ಕೈಗಾರಿಕೆಗಳ ಮಹಾಸಂಸ್ಥೆ 1912ರಲ್ಲಿ ಸ್ಥಾಪಿತವಾಯಿತು. ಇದು ಗೃಹ ಕೈಗಾರಿಕಾಭಿವೃದ್ಧಿ ಚಳವಳಿಯಲ್ಲಿ ಪ್ರಶಂಸಾರ್ಹ ಪಾತ್ರ ವಹಿಸಿತು. ಈ ಸಂಸ್ಥೆ ಪದಾರ್ಥಗಳ ಉತ್ಪಾದನೆ, ಪೂರೈಕೆ, ಸರಬರಾಜು ಮೊದಲಾದ ವಹಿವಾಟುಗಳನ್ನು ಸುವ್ಯವಸ್ಥಿತ ರೀತಿಯಿಂದ ನಡೆಸಿಕೊಂಡು ಬರುವ ಸಾಮರ್ಥ್ಯ ಪಡೆದುಕೊಂಡಿತು. ವಿವಿಧ ಕುಶಲ ಕೆಲಸಗಳಲ್ಲಿ ತರಬೇತಿ ಪಡೆಯಲಪೇಕ್ಷೆಯುಳ್ಳವರಿಗೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡುತ್ತಿತ್ತು. ಇಂಥ ಏರ್ಪಾಡುಗಳಿಗಾಗಿ ಸರ್ಕಾರ ಅಗತ್ಯವಾದ ಹಣದ ನೆರವನ್ನು ನೀಡುತ್ತಿತ್ತು. ಹೀಗೆ ಸ್ವೀಡನಿನಲ್ಲಿ ಆರಂಭವಾದ ಪುನರುಜ್ಜೀವನ ಚಳವಳಿ ಅಲ್ಲಿಯ ಕುಶಲ ಕೈಗಾರಿಕೆಗಳಿಗೆ ಪ್ರೋತ್ಸಾಹಕವಾಗಿ ಪರಿಣಮಿಸಿ ಅವುಗಳ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ನೆರವಾಯಿತು.



ಬಳ್ಳಿ ಕೆಲಸ

ಜರ್ಮನಿಯಲ್ಲಿ ಕೈಗಾರಿಕೀಕರಣ ತಡವಾಗಿ ಪ್ರಾರಂಭವಾಯಿತು. ಆದ್ದರಿಂದ ಇಲ್ಲಿ ಕುಶಲ ಕೈಗಾರಿಕೆಗಳು ಉತ್ತಮ ಸ್ಥಿತಿಯಲ್ಲಿಯೇ ಇದ್ದುವು. ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದ ವೇಳೆಗೆ ಉತ್ಪಾದನೆಯ ಕ್ಷೇತ್ರದಲ್ಲಿ ಯಂತ್ರೋಪಕರಣಗಳ ಬಳಕೆ ಹೆಚ್ಚಿತು. ಆದರೂ ಕುಶಲ ಕಲಾವಸ್ತುಗಳಿಗೆ ಬೇಡಿಕೆ ಇದ್ದೇ ಇತ್ತು. ಕುಶಲ ಕೆಲಸಗಾರರು ತಮ್ಮ ಕೈಗಾರಿಕೆಗಳನ್ನು ರಕ್ಷಿಸಿಕೊಳ್ಳಲು ಹೂಡಿದ ಹೋರಾಟದಲ್ಲಿ ಜಯ ಗಳಿಸಿಕೊಂಡರು. ಸರ್ಕಾರ ಕುಶಲ ಕೈಗಾರಿಕಾ ಶ್ರೇಣಿಗಳ ಸ್ಥಾನಮಾನಗಳನ್ನು ನಿರ್ಧರಿಸುವ ಕಾಯಿದೆಯೊಂದನ್ನು ಜಾರಿಗೆ ತಂದಿತು. ಇದರ ಪರಿಣಾಮವಾಗಿ ಅನೇಕ ಕರಕೌಶಲ ಸಂಘಗಳು ತಲೆ ಎತ್ತಿದುವು. ಇವುಗಳ ಏಳಿಗೆಗಾಗಿ ದುಡಿಯುವ ಮಂಡಳಿಯೊಂದು ಸ್ಥಾಪಿತವಾಯಿತು. ಇದು ಜರ್ಮನಿಯ ಕುಶಲ ಕೈಗಾರಿಕಾ ಚಳವಳಿಯಲ್ಲಿ ಒಂದು ಮಹತ್ತ್ವದ ಪಾತ್ರ ವಹಿಸಿತು. ಇದಕ್ಕೆ ಸ್ಫೂರ್ತಿ ನೀಡಿದ ಸಹಕಾರ ಚಳವಳಿಯೂ ಜರ್ಮನಿಯ ಕುಶಲ ಕೈಗಾರಿಕೆಯ ಪುನರುದ್ಧಾರಕ್ಕಾಗಿ ಕೆಲಸಮಾಡಿತು. ಇದರಿಂದ ಕುಶಲ ಕೈಗಾರಿಕಾಭಿವೃದ್ಧಿ ತೀವ್ರ ಗೊಂಡಿತು. ನಗರಪ್ರದೇಶಗಳಲ್ಲಿ ಸ್ಥಾಪಿತವಾದ ಷೂಲ್ಸ್ – ಡಿಲಿಟ್ಸ್ ಸಹಕಾರ ಸಂಘಗಳಲ್ಲಿದ್ದ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಕುಶಲ ಕೆಲಸಗಾರರ ಸಂಖ್ಯೆ ನಾಲ್ಕನೆಯ ಒಂದು ಭಾಗದಷ್ಟಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿದ್ದ ರೈಫೇಸೇ ಸಹಕಾರ ಸಂಘಗಳಲ್ಲಿದ್ದ ಕುಶಲ ಕೆಲಸಗಾರರ ಸದಸ್ಯರ ಸಂಖ್ಯೆ ಅಷ್ಟೊಂದು ಅಧಿಕವಾಗಿಲ್ಲದಿದ್ದರೂ ಅವು ಕರಕೌಶಲ ಸಂಘದಲ್ಲಿದ್ದವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿತ್ತು. ಇದು 1926 ರ ವೇಳೆಗೆ 80 ಲಕ್ಷಕ್ಕೆ ಬೆಳೆದಿತ್ತು. ಅಂದರೆ ಒಟ್ಟಿನಲ್ಲಿ ಶೇ. 12.6 ರಷ್ಟು ಜನ ತಮ್ಮ ಜೀವನೋಪಾಯಕ್ಕೆ ಕುಶಲ ಕೈಗಾರಿಕೆಯನ್ನು ಅವಲಂಬಿಸಿದ್ದರು. ದೇಶದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು 1/5 ಭಾಗದಷ್ಟು ಜನ ಈ ಉದ್ಯೋಗದಲ್ಲಿ ನಿರತರಾಗಿದ್ದರು ಎಂಬ ಅಂದಾಜಿತ್ತು. 1930ರ ವೇಳೆಗೆ ಕುಶಲ ಕೈಗಾರಿಕಾಗಳ ವ್ಯವಹಾರದ ಮೌಲ್ಯ ದೇಶದ ಒಟ್ಟು ವ್ಯವಹಾರದ ಮೌಲ್ಯದ ಶೇ.16ರಷ್ಟಿತ್ತು. ಇದು ಕುಶಲ ಕೈಗಾರಿಕಾಗಳ ಪ್ರಾಬಲ್ಯ ಹಾಗೂ ಪ್ರಗತಿ ಎಷ್ಟರಮಟ್ಟಿಗೆ ನಡೆದಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಕುಸುರಿ ಕೆಲಸದ ಕೊನೆಯ ಹಂತ

ಭಾರತದಲ್ಲಿ ಕುಶಲ ಕೈಗಾರಿಕೆ ಪುರಾತನ ಕಾಲದಿಂದಲೂ ಬೆಳೆದು ಬಂದಿದೆ. ಇಲ್ಲಿಯ ಕರಕೌಶಲ ವಸ್ತುಗಳು ವಿಶ್ವಾದ್ಯಂತ ಜನರ ಮೆಚ್ಚಿಗೆ ಗಳಿಸಿದ್ದುವು. ಪೂರ್ವಕಾಲದಲ್ಲಿ ನಡೆಯುತ್ತಿದ್ದ ವಿದೇಶಿ ವ್ಯಾಪಾರದಲ್ಲಿ ರಫ್ತು ಸರಕಿನ ಪ್ರಮಾಣ ಹೆಚ್ಚಾಗಿಯೇ ಇತ್ತು. ತುಂಬು ನವಿರಾದ ಢಾಕಾ ಮಸ್ಲಿನ್ ಬಟ್ಟೆ , ಮನಮೋಹಕವಾದ ಕಾಶ್ಮೀರಿ ಶಾಲು, ಅಂದ ಚೆಂದದ ರಾಜಸ್ಥಾನದ ಬೊಂಬೆ, ಚಿತ್ರವಿಚಿತ್ರವಾದ ಲೋಹವಸ್ತು ಹಾಗೂ ಪಾತ್ರೆಗಳು, ಕರ್ಣಾಟಕದ ಸುಂದರವಾದ ದಂತದ ಹಾಗೂ ಗಂಧದ ಕೆತ್ತನೆ ಸಾಮಾನು–ಇವುಗಳ ಶ್ರೇಷ್ಠ ಗುಣಮೌಲ್ಯ ಹಾಗೂ ಕಲಾ ವಿನ್ಯಾಸಗಳು ಪ್ರಸಿದ್ಧವಾಗಿವೆ. ಇಲ್ಲಿ ತಯಾರಾದ ಅನೇಕ ಕರಕೌಶಲ ವಸ್ತುಗಳಿಗೆ ಪ್ರಪಂಚದ ಮಾರುಕಟ್ಟೆಗಳಲ್ಲಿ ಒಳ್ಳೆಯ ಬೇಡಿಕೆ ಇತ್ತು. ಗ್ರಾಮೋದ್ಯೋಗ ಮತ್ತು ಗುಡಿಗಾರಿಕೆ ವೃತ್ತಿಗಳು ಅನೇಕರಿಗೆ ಜೀವನೋಪಾಯಗಳಾಗಿದ್ದುವು. ಆದರೆ ಬ್ರಿಟನಿನ ಕೈಗಾರಿಕಾ ಕ್ರಾಂತಿಯ ಫಲವಾಗಿ ಭಾರತದ ಅನುವಂಶಿಕ ಗೃಹ ಕೈಗಾರಿಕೆಗಳು ಹೀನಸ್ಥಿತಿಗೆ ಬಂದುವು. ಇಂಗ್ಲಿಷರ ಆಡಳಿತ ಧೋರಣೆ, ಉತ್ಪಾದನ ವ್ಯವಸ್ಥೆಯಲ್ಲಿ ಯಂತ್ರೋಪಕರಣಗಳ ಬಳಕೆ, ವಿದೇಶಿ ವಸ್ತುಗಳ ಬಗ್ಗೆ ಜನರಿಗಿದ್ದ ವ್ಯಾಮೋಹ ಇವೇ ಮೊದಲಾದ ಅಂಶಗಳು ಭಾರತದಲ್ಲಿ ಕುಶಲ ಕೈಗಾರಿಕೆಯ ಪ್ರಾಮುಖ್ಯವನ್ನು ಕುಂಠಿತಗೊಳಿಸಿದುವು. ಕಾರ್ಖಾನೆಗಳ ಸ್ಥಾಪನೆಯಿಂದ ಗೃಹ ಕೈಗಾರಿಕೆಗಳು ಮೂಲೆಗೆ ಬಿದ್ದುವು. ಕುಶಲಕರ್ಮಿಗಳು ಪರಾವಲಂಬಿಗಳಾಗಿ ಕೂಲಿಗಾಗಿ ಕೆಲಸಮಾಡುವ ಸ್ಥಿತಿಗಿಳಿದರು. ಹೀಗೆ ಭಾರತದ ಕುಶಲಕೈಗಾರಿಕೆಗಳು ಕ್ರಮೇಣ ನಶಿಸಿದುವು. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ, ಎಂದರೆ 1947ಕ್ಕೆ ಹಿಂದೆಯೇ, ಕುಶಲ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಹಲವಾರು ಪ್ರಯತ್ನಗಳು ನಡೆದಿದ್ದುವು. ಆದರೆ ಅವು ಪರಿಣಾಮಕಾರಿ ಕ್ರಮಗಳಾಗಲಿಲ್ಲ. ಗೃಹ ಕೈಗಾರಿಕೆಗಳ ಅಭಿವೃದ್ಧಿ ಸಂಪೂರ್ಣವಾಗಿ ನಿಂತೇಬಿಟ್ಟಿತು. ಸ್ವಾತಂತ್ರ್ಯಾನಂತರ ಗ್ರಾಮಗಳ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಗತಿಯಲ್ಲಿ ಗ್ರಾಮೋದ್ಯೋಗಗಳ ಪ್ರಾಮುಖ್ಯವನ್ನು ಸರ್ಕಾರ ಗಮನಿಸಿತು. ಪ್ರತಿಯೊಂದು ಗ್ರಾಮದಲ್ಲೂ ತಲತಲಾಂತರದಿಂದ ಬೆಳೆದುಬಂದ ಕುಶಲಕೆಲಸವನ್ನು ಪುನರುಜ್ಜೀವನಗೊಳಿಸಲು ಹಲವಾರು ಪರಿಹಾರ ಕ್ರಮಗಳೂ ಸಮಗ್ರ ಯೋಜನೆಗಳೂ ಜಾರಿಗೆ ಬಂದಿವೆ. 1951ರಲ್ಲಿ ಪ್ರಾರಂಭವಾದ ಪಂಚವಾರ್ಷಿಕ ಯೋಜನೆಯಲ್ಲಿ ಕುಶಲ ಕೈಗಾರಿಕೆಗಳ ಅಭಿವೃದ್ಧಿಗೆ ಸಾಕಷ್ಟು ಪ್ರಾಶಸ್ತ್ಯ ನೀಡಲಾಗಿದೆ. ಕುಶಲ ಕೈಗಾರಿಕಾಭಿವೃದ್ಧಿಯ ಜವಾಬ್ದಾರಿಯನ್ನು ಅಖಿಲಭಾರತ ಕರಕೌಶಲ ಮಂಡಲಿಗೂ ಗ್ರಾಮ ಹಾಗೂ ಸಣ್ಣ ಕೈಗಾರಿಕೆಗಳ ಪ್ರಗತಿಯನ್ನು ತೀವ್ರಗೊಳಿಸುವ ಹೊಣೆಯನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೂ ವಹಿಸಿಕೊಡಲಾಗಿದೆ.

ಇವುಗಳ ಜೊತೆಗೆ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಸಂಸ್ಥೆ ಸಣ್ಣ ಉದ್ಯಮಗಳ ಸ್ಥಾಪನೆಗೆ ಸಹಾಯಮಾಡುತ್ತದೆ. ದೊಡ್ಡ ಕೈಗಾರಿಕೆಗಳಿಗೆ ಅಗತ್ಯವಾದ ಕೆಲವು ಸರಕುಗಳನ್ನು ಪೂರೈಸುವುದು ಮತ್ತು ಕುಶಲ ಕೆಲಸದ ಜಾಣ್ಮೆಯನ್ನು ಪದಾರ್ಥಗಳ ತಯಾರಿಕೆಯಲ್ಲಿ ಬಳಸಿಕೊಂಡ ಸರಕುಗಳ ಗುಣಮಟ್ಟವನ್ನು ಹೆಚ್ಚಿಸುವುದು ಇದರ ಮುಖ್ಯೋದ್ದೇಶ. ಗೃಹಕೈಗಾರಿಕೆಯ ಅಭಿವೃದ್ಧಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವ ವಿಶೇಷ ಸಂಸ್ಥೆಗಳೇ ಸ್ಥಾಪಿತವಾಗಿವೆ. ಇವೆಲ್ಲವೂ ಭಾರತದ ಕುಶಲ ಕೈಗಾರಿಕೆಗಳ ಪುನರುಜ್ಜೀವನ ಚಳವಳಿಯನ್ನು ಯಶಸ್ವಿಗೊಳಿಸುತ್ತವೆಯೆಂದು ನಂಬಲಾಗಿದೆ. ಸಹಕಾರ ಚಳವಳಿಗೆ ಕುಶಲಕೈಗಾರಿಕೆಗಳ ಅಭಿವೃದ್ಧಿಯನ್ನು ಹೊಂದಿಸುವ ಯತ್ನ ನಡೆಯುತ್ತಿದೆ.

ಯುರೋಪಿನ ಇತರ ದೇಶಗಳಲ್ಲೂ ಕುಶಲ ಕೈಗಾರಿಕೆಗಳ ಪ್ರಗತಿಗೆ ಯತ್ನಗಳು ನಡೆದುವು. ಕುಶಲ ಕೈಗಾರಿಕೆಗೆ ಮೀಸಲಾದ ಹಲವಾರು ಸಂಘಗಳು ಪುನರುಜ್ಜೀವನ ಚಳವಳಿಯಲ್ಲಿ ಪ್ರಶಂಸಾರ್ಹ ಪಾತ್ರ ವಹಿಸಿದುವು. ಯುರೋಪಿನಾದ್ಯಂತ ಪ್ರಾಥಮಿಕ ಕುಶಲ ಕೈಗಾರಿಕಾ ಘಟಕಗಳು ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಯನ್ನು ತ್ವರಿತಗೊಳಿಸುವುದರಲ್ಲಿ ಯಶಸ್ಸು ಸಾಧಿಸಿದುವು. ಆಯಾ ದೇಶಗಳಲ್ಲಿಯ ಕುಶಲ ಕೆಲಸಗಾರರ ಸಂಘಟನೆ ಸ್ವಾವಲಂಬನೆಗಳನ್ನು ಸಾಧಿಸುವ ದೃಷ್ಟಿಯಿಂದ ರಾಷ್ಟ್ರೀಯ ಸಂಯುಕ್ತ ಕುಶಲ ಕೆಲಸಗಾರರ ಮಂಡಳಿಗಳನ್ನು ರಚಿಸಿಕೊಳ್ಳಲಾಗುತ್ತಿತ್ತು. ಇಂಥ ಮಂಡಳಿಗಳು ಆಗಾಗ್ಗೆ ಒಂದೇ ಕಡೆ ಸೇರಿ ಕುಶಲ ಕೈಗಾರಿಕಾಭಿವೃದ್ಧಿ ಹಾಗೂ ಇತರ ಸಮಸ್ಯೆಗಳನ್ನು ಚರ್ಚೆ ಮಾಡುತ್ತಿದ್ದುವು. 1930 ರಲ್ಲಿ ಅಂತಾರಾಷ್ಟ್ರೀಯ ಕುಶಲ ಕೆಲಸಗಾರರ ಸಮ್ಮೇಳನವೊಂದು ರೋಂ ನಗರದಲ್ಲಿ ಸಮಾವೇಶಗೊಂಡಿತ್ತು. ಇದರಲ್ಲಿ ಯುರೋಪಿನ ಹದಿನಾಲ್ಕು ರಾಷ್ಟ್ರಗಳ ಇಪ್ಪತ್ತು ಕರಕೌಶಲ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕುಶಲ ಕೆಲಸಗಾರರ ಸಂಯುಕ್ತ ಮಂಡಳಿಗಳು ಸಹಕಾರ ತತ್ತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದುವು. ಏಕೆಂದರೆ ಕುಶಲ ಕೈಗಾರಿಕಾಭಿವೃದ್ಧಿಗೆ ಅಗತ್ಯವಾದ ವಿಶಿಷ್ಟ ಸೌಲಭ್ಯಗಳು ದೊರಕುವುದು ಸಾಧ್ಯವಾಗುವುದು ಸಹಕಾರ ವ್ಯವಸ್ಥೆಯೊಂದರಿಂದಲೇ ಎಂಬುದು ಮನದಟ್ಟಾಗಿತ್ತು. ಕುಶಲ ಕೆಲಸಗಾರರ ಸಂಸ್ಥೆಗಳ ಚಟುವಟಿಕೆಗಳು ಎಲ್ಲ ದೇಶಗಳಲ್ಲೂ ಒಂದೇ ತೆರನಾಗಿಲ್ಲದಿದ್ದರೂ ಕುಶಲ ಕೈಗಾರಿಕೋತ್ಪನ್ನಗಳ ಉತ್ಪಾದನ ವಿಧಾನ ಮತ್ತು ಸರಕುಗಳು ಗುಣಮಟ್ಟವನ್ನು ಉತ್ತಮಪಡಿಸುವುದೇ ಅವುಗಳ ಮುಖ್ಯೋದ್ದೇಶವಾಗಿದೆ.

ಕುಶಲ ಕೈಗಾರಿಕೆಯ ಬಗ್ಗೆ ನಿಖರವಾದ ಅಂಕಿ ಅಂಶಗಳನ್ನು ನೀಡುವುದು ಕಷ್ಟ ಸಾಧ್ಯ. ಪ್ರತಿಭಾ ಪ್ರಧಾನವಾದ ಕಾರ್ಯದಿಂದ ಆರಂಭವಾಗಿ ಯಂತ್ರೋಪಕರಣಗಳ ಜೋಡಣೆ ಮತ್ತು ಕಾರ್ಖಾನೆಯಲ್ಲಿಯ ಕೈಕೆಲಸದವರೆಗೂ, ತಾಂತ್ರಿಕ ಕಾರ್ಯದಿಂದ ಹಿಡಿದು ದುರಸ್ತಿ ಕೆಲಸದವರೆಗೂ, ಮನೆಯಲ್ಲಿ ತಾನೊಬ್ಬನೇ ಸರಕು ತಯಾರಿಸುವುದರಿಂದ ಹಿಡಿದು ಕಾರ್ಖಾನೆಯಲ್ಲಿ ಇತರರಿಗೆ ಸಹಾಯ ಮಾಡುವವರೆಗೂ ಕಲೆಗಾರನ, ಕುಶಲಕರ್ಮಿಯ ನೈಪುಣ್ಯ ವ್ಯಾಪಿಸಿರುವುದರಿಂದ ಕುಶಲ ಕೈಗಾರಿಕೆಯ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸುವುದು ಅಷ್ಟು ಸುಲಭವಲ್ಲ. ಆದರೂ ಕುಶಲಕರ್ಮಿಯ ಕೆಲಸದ ಕ್ಷೇತ್ರ, ಉದ್ಯಮದ ಗಾತ್ರ ಅಥವಾ ಆಕಾರದ ಆಧಾರದ ಮೇಲೆ ಯಾವುದು ಕುಶಲ ಕೈಗಾರಿಕೆ, ಯಾವುದು ಅಲ್ಲ ಎಂಬುದನ್ನು ನಿರ್ಧರಿಸಬಹುದು. ಅದೂ ಅಷ್ಟೊಂದು ತೃಪ್ತಿಕರ ವಿವರಣೆಯಾಗಲಾರದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ದೇಶಗಳಲ್ಲಿ ಸಾಧಾರಣವಾಗಿ ಹತ್ತು ಮಂದಿ ಕೆಲಸಗಾರರನ್ನೊಳಗೊಂಡ ಕೆಲಸ ವ್ಯವಸ್ಥೆಯನ್ನು ಕುಶಲ ಕೈಗಾರಿಕೆ ಎಂದು ಹೆಸರಿಸಿದ್ದಾರೆ. ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಕುಶಲಕರ್ಮಿ ಇರುವುದು ಕೈಗಾರಿಕೋದ್ಯಮದ ಒಂದು ಸಾಮಾನ್ಯ ಲಕ್ಷಣ. ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲೂ ಕುಶಲ ಕೆಲಸ ತನ್ನ ಪ್ರಾಮುಖ್ಯವನ್ನು ಉಳಿಸಿಕೊಂಡಿದೆ. ಏಷ್ಯದ ಬಹು ಪಾಲು ಜನ ಇಂದಿಗೂ ಹೆಚ್ಚಾಗಿ ಕುಶಲ ಕೈಗಾರಿಕೆಗಳ ಉತ್ಪನ್ನಗಳನ್ನೇ ಉಪಯೋಗಿಸುತ್ತಾರೆ. ಈ ಪ್ರದೇಶಗಳಲ್ಲಿ ಕಾರ್ಖಾನೆಗಳಲ್ಲಿ ತಯಾರಾದ ಪದಾರ್ಥಗಳ ಬಳಕೆ ಸ್ವಲ್ಪಮಟ್ಟಿಗೆ ಕಡಿಮೆಯೇ ಎಂಬುದು ಇತ್ತೀಚಿನ ಸಮೀಕ್ಷೆಯಿಂದ ಸ್ಪಷ್ಟಪಟ್ಟಿದೆ. ಜಪಾನ್ ಮತ್ತು ಇತರ ಪೌರಸ್ತ್ಯ ದೇಶಗಳಲ್ಲಿ ಕುಶಲ ಕೈಗಾರಿಕೆಗಳು ಹೆಚ್ಚು ಪ್ರಾಮುಖ್ಯ ಪಡೆದಿವೆ. ಹೆಚ್ಚು ಬೆಲೆಬಾಳುವ ವಿವಿಧ ವಿನ್ಯಾಸಗಳ ವಸ್ತುಗಳನ್ನು ಉತ್ಪಾದಿಸುವುದು ಕುಶಲ ಕೈಗಾರಿಕೆಗಳಿಂದ ಮಾತ್ರ ಸಾಧ್ಯವೆಂಬುದು ಸ್ಪಷ್ಟಪಟ್ಟಿದೆ. ಪಾಶ್ಚಾತ್ಯ ದೇಶಗಳಲ್ಲೂ ಕೈಯಿಂದ ನಡೆಸುವ ಸಣ್ಣ ಕೈಗಾರಿಕೆಗಳು ದೊಡ್ಡ ಕೈಗಾರಿಕೆಗಳಿಗೆ ಸಹಾಯಕವಾಗಿರುವುದು ಒಂದು ಗಮನಾರ್ಹ ಸಂಗತಿಯಾಗಿದೆ.

ರಷ್ಯದಲ್ಲಿ ಒಂದನೆಯ ಮಹಾಯುದ್ಧ ಮತ್ತು 1917ರ ಮಹಾಕ್ರಾಂತಿಗೆ ಮೊದಲು ಕುಶಲ ಕೈಗಾರಿಕೆಗಳೇ ಅನುಭೋಗಿ ಸರಕುಗಳನ್ನು ಉತ್ಪಾದಿಸುತ್ತಿದ್ದುವು. ಒಟ್ಟು ಕೆಲಸಗಾರರಲ್ಲಿ 2/3 ಭಾಗದಷ್ಟು ಜನ ಕುಶಲ ಕೆಲಸಗಾರರಾಗಿದ್ದರು. ಕಮ್ಯೂನಿಸ್ಟ್ ಕ್ರಾಂತಿಯ ಅನಂತರ ಆ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕುಶಲ ಕೈಗಾರಿಕೆಯ ಪ್ರಾಮುಖ್ಯವನ್ನು ಹೆಚ್ಚಿಸಲು 1927ರಲ್ಲಿ ಒಂದು ಕಾಯಿದೆಯನ್ನು ಜಾರಿಗೆ ತರಲಾಯಿತು. ನಿರುದ್ಯೋಗ ನಿವಾರಣೆ, ಆವಶ್ಯಕ ವಸ್ತುಗಳ ಪೂರೈಕೆ, ಗ್ರಾಮಪ್ರದೇಶದ ಆರ್ಥಿಕಾಭಿವೃದ್ಧಿಯಲ್ಲಿ ಮೊದಲಾದವನ್ನು ಸಾಧಿಸುವ ಉದ್ದೇಶದಿಂದ ಕುಶಲ ಕೈಗಾರಿಕಾಭಿವೃದ್ಧಿಗೆ ಸಕಲ ಸೌಲಭ್ಯಗಳನ್ನೂ ಒದಗಿಸಿಕೊಡಲಾಯಿತು. 1928 ರಿಂದ ಜಾರಿಗೆ ಬಂದ ಪಂಚವಾರ್ಷಿಕ ಯೋಜನೆಗಳಲ್ಲೂ ಕುಶಲ ಕೈಗಾರಿಕಾಭಿವೃದ್ಧಿಗೆ ವಿಶೇಷ ಗಮನ ಕೊಡಲಾಗಿದೆ. ರಷ್ಯದಲ್ಲಿ ವಿದ್ಯುಚ್ಛಕ್ತಿ ಬಳಸದೆ



**ದಂತ ಕೆತ್ತನೆ**

ಮೂವತ್ತು ಜನ ಕಾರ್ಮಿಕರಿಂದ ಅಥವಾ ವಿದ್ಯುಚ್ಛಕ್ತಿಯನ್ನು ಬಳಸಿಕೊಂಡು, ಹದಿನೈದಕ್ಕಿಂತ ಕಡಿಮೆ ಸಂಖ್ಯೆಯ ಕೆಲಸಗಾರರಿಂದ ಸರಕು ತಯಾರಿಕೆ ನಡೆಯುತ್ತಿದ್ದರೆ ಅಂಥ ಕೆಲಸ ಅಥವಾ ಉದ್ಯಮ ಅಥವಾ ಕೈಗಾರಿಕೆಯನ್ನು ಕುಶಲ ಕೈಗಾರಿಕೆ ಎಂದು ಕರೆಯಲಾಗಿದೆ. 'ರಷ್ಯದಲ್ಲಿ' 1930ರ ವೇಳೆಗೆ ಒಟ್ಟು ಕಾರ್ಮಿಕರಲ್ಲಿ ಶೇ. 60ರಷ್ಟು ಮಂದಿ ಸಣ್ಣ ಕೈಗಾರಿಕೆಗಳಲ್ಲಿ ಕೆಲಸಮಾಡುತ್ತಿದ್ದರು. ಅವರು ಉತ್ಪಾದಿಸುತ್ತಿದ್ದ ಸರಕುಗಳ ಮೌಲ್ಯ ದೇಶದ ಒಟ್ಟು ಕೈಗಾರಿಕಾ ಉತ್ಪಾದನೆಯ ಮೌಲ್ಯದ ಶೇ. 21.6 ರಷ್ಟಿತ್ತು. ಚರ್ಮದ ವಸ್ತುಗಳು, ಜವಳಿ, ಮರದ ಸಾಮಾನು, ಬಟ್ಟೆ ತಯಾರಿಕೆ, ಜಮಖಾನೆ ತಯಾರಿಕೆ ಮೊದಲಾದವು ಸಣ್ಣ ಕೈಗಾರಿಕೆಗಳಿಂದಲೇ ನಡೆಯುತ್ತಿದ್ದುವು. ಇವುಗಳಲ್ಲಿ ನಿರತರಾಗಿದ್ದವರಲ್ಲಿ ಶೇ. 25ರಷ್ಟು ಜನ ಗ್ರಾಮ ಪ್ರದೇಶಗಳ ಉದ್ಯಮಗಳಲ್ಲಿದ್ದರು. ಇಂದಿಗೂ ಕುಶಲ ಕೈಗಾರಿಕೆಗಳನ್ನು ಅವಲಂಬಿಸಿರುವವರು ಆರ್ಥಿಕವಾಗಿ ಸಬಲರಾಗಿಯೇ ಇದ್ದಾರೆ. ಸೋವಿಯತ್ ದೇಶದಲ್ಲೂ ಇತರ ದೇಶಗಳಲ್ಲಿರುವಂತೆಯೇ ಸಹಕಾರ ಚಳವಳಿ ಕುಶಲ ಕೈಗಾರಿಕೆಗಳಿಗೂ ನಿಕಟ ಸಂಬಂಧವಿದೆ. ಕುಶಲಕಾರ್ಮಿಗಳಿಗೆ ಅಗತ್ಯವಾದ ಸಮಸ್ತ ಸರಕುಗಳನ್ನೂ ಸಹಕಾರ ಸಂಘಗಳೇ ಒದಗಿಸಿಕೊಡುತ್ತವೆ. ಸಹಕಾರ ಸಂಘಗಳಲ್ಲಿ ಕುಶಲ ಕೆಲಸಗಾರರೇ ಹೆಚ್ಚು ಸದಸ್ಯತ್ವ ಪಡೆದುಕೊಂಡಿದ್ದಾರೆ. 1922 ರಲ್ಲಿ ಸ್ಥಾಪಿತವಾದ ಅಖಿಲ ಸೋವಿಯತ್ ಕುಶಲ ಕೆಲಸಗಾರರ ಸಂಘಗಳ ಸಂಯುಕ್ತ ಸಂಸ್ಥೆ ತನ್ನ ಅಂಗಸಂಸ್ಥೆಗಳಾದ ಆರ್ಟೆಲ್‌ಗಳ ಮೂಲಕ ಕುಶಲ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ವಸ್ತುಗಳಿಂದ ಹಿಡಿದು ಯಂತ್ರೋಪಕರಣಗಳವರೆಗೆ ಎಲ್ಲವನ್ನೂ ಪೂರೈಸುತ್ತದೆ. ಸೋವಿಯತ್ ದೇಶದಲ್ಲಿ ಕುಶಲ ಕೈಗಾರಿಕೆಗಳಿಗೆ ಒಳ್ಳೆಯ ಭವಿಷ್ಯವಿದೆ.

ಇಂದು ಸ್ವತಂತ್ರವಾಗಿ ಕೆಲಸ ಮಾಡುವ ಕುಶಲ ಕೆಲಸಗಾರ ತನ್ನ ಕಾರ್ಯದಕ್ಷತೆಯನ್ನು ನವೀನ ಯಂತ್ರ ಸಾಧನಗಳಿಂದ ಹೆಚ್ಚಿಸಿಕೊಳ್ಳುತ್ತಿದ್ದಾನೆ. ಆದರೆ ಈತ ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಅಧಿಕ ಮೊತ್ತದ ಒಂದೇ ನಮೂನೆಯ, ಬಾಳಿಕೆ ಬಾರದ, ಅಗ್ಗದ ಬೆಲೆಯ, ಪ್ರಮಾಣೀಕೃತ ವಸ್ತುಗಳ ಪೈಪೋಟಿಯನ್ನು ಎದುರಿಸಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾನೆ. ಸಹಕಾರ ಚಳವಳಿಯನ್ನು ತೀವ್ರಗೊಳಿಸುವುದರಿಂದ ಈ ತೊಂದರೆಗಳನ್ನು ನಿವಾರಿಸಬಹುದು. ಇತ್ತೀಚೆಗೆ ಕೆಲವು ದೇಶಗಳು ಕುಶಲಕೈಗಾರಿಕೆಗಳನ್ನು ಪುನರುಜ್ಜೀವನ ಗೊಳಿಸುವ ದೃಷ್ಟಿಯಿಂದ ಕರಕೌಶಲ ಉತ್ಪನ್ನಗಳ

ತಯಾರಿಕೆಯಲ್ಲಿ ನಿರತರಾಗಿರುವವರಿಗೆ ಅಗತ್ಯವಾದ ಎಲ್ಲ ನೆರವನ್ನೂ ಕೊಡುತ್ತಿವೆ. ಇದರಿಂದ ಗತಕಾಲದ ಕಲೆ, ಸಂಸ್ಕೃತಿ ಹಾಗೂ ನಾಗರಿಕತೆಯ ನೆನಪು ಅಲ್ಪಸ್ವಲ್ಪವಾದರೂ ಉಳಿದುಕೊಂಡಂತಾಗುತ್ತದೆ. ಮಧ್ಯಯುಗದಲ್ಲಿ ಕುಶಲ ಕೈಗಾರಿಕಾ ಶ್ರೇಣಿಗಳು ಕುಶಲ ಕೆಲಸಗಾರರಿಗೆ ದೊರಕಿಸಿ ಕೊಡುತ್ತಿದ್ದ ಎಲ್ಲ ಸೌಲಭ್ಯಗಳನ್ನೂ ಆಯಾ ದೇಶಗಳ ಸರ್ಕಾರಗಳು ಒದಗಿಸಿಕೊಡಲು ಪ್ರಯತ್ನ ನಡೆಸುತ್ತಿವೆ. ಆದರೆ ಇಂದು ಕಾರ್ಖಾನೆಯಲ್ಲಿಯ ಕಾರ್ಮಿಕರಿಗೆ ಕಾನೂನಿನ ಪ್ರಕಾರ ದೊರೆಯುವ ವಿಶಿಷ್ಟ ಸೌಲಭ್ಯಗಳಿಂದ ಕುಶಲ ಕೆಲಸಗಾರ ವಂಚಿತನಾಗಿದ್ದಾನೆ. ಸರ್ಕಾರ ಕುಶಲಕರ್ಮಿಗೂ ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಒದಗಿಸಿಕೊಡುವುದು ಅತ್ಯಗತ್ಯ. ಇದರಿಂದ ರಕ್ಷಣೆ ಹಾಗೂ ಭದ್ರತೆ ದೊರೆತು ಅವನ ಜೀವನ ಉತ್ತಮಗೊಳ್ಳುತ್ತದೆ. ಕಾರ್ಖಾನೆಯ ಕೆಲಸಗಾರ ಎದುರಿಸುವಂಥ ಸಮಸ್ಯೆಗಳಿಗಿಂತ ಹೆಚ್ಚಿನ ತೊಂದರೆಗಳನ್ನು ಪರಾವಲಂಬಿ ಕುಶಲ ಕೆಲಸಗಾರ ಎದುರಿಸಬೇಕಾಗಿದೆ. ಕಲಾಪ್ರತಿಭೆ ಇದ್ದರೂ ಪರಾಶ್ರಯದಲ್ಲಿ ಕೂಲಿಗಾಗಿ ಕೆಲಸಮಾಡಿ ಜೀವಿಸಬೇಕಾಗಿದೆ. ಸ್ವತಂತ್ರ ಉದ್ಯಮ ಪ್ರಾರಂಭಿಸಲು ಹಣದ ಕೊರತೆ ಎದುರು ನಿಲ್ಲುತ್ತದೆ. ಆದರೆ ಅನುಭೋಗಿ ತಾನು ಅಪೇಕ್ಷಿಸಿದಷ್ಟೇ ಉಪಯುಕ್ತತೆಯುಳ್ಳ ಸರಕುಗಳನ್ನು ಪಡೆಯಬಲ್ಲ. ಒಳ್ಳೆಯ ಸರಕಿಗೆ ತೀರ ಸಮವಾದ ಸರಕು ಕಡಿಮೆ ಬೆಲೆಗೆ ಸಿಕ್ಕಾಗ ಅದರಿಂದ ಅನುಭೋಗಿ ತೃಪ್ತನಾಗುವುದಲ್ಲದೆ ಉಳಿತಾಯವನ್ನೂ ಸಾಧಿಸಿದಂತೆ ಭಾವಿಸುತ್ತಾನೆ. ಸದ್ಯದ ಬಯಕೆ ಈಡೇರಿದರೆ ಸಾಕು: ಸರಕಿನ ಅಂದಚಂದ, ಬಾಳಿಕೆ, ಗುಣಮಟ್ಟಗಳೆಲ್ಲ ಅನಂತರದ ಮಾತು. ಹೀಗೆ ಇಂದು ತಳಕಿನ ಪದಾರ್ಥಗಳ ದಾಳಿಗೆ ತುತ್ತಾಗಿ ಕರಕೌಶಲ ವಸ್ತುಗಳಿಗೆ ಗಿರಾಕಿಗಳು ಕಡಿಮೆಯಾಗಿದ್ದಾರೆ. ಇದರಿಂದ ಕುಶಲ ಕೆಲಸಗಾರನ ಸ್ಥಿತಿ ಹದಗೆಡುತ್ತಿದೆ.

ಕರಕೌಶಲವನ್ನು ಪರಿಣಾಮಕಾರಿಯಾಗಿಯೂ ಧಾರಾಳವಾಗಿಯೂ ಉಪಯೋಗಿಸಿಕೊಳ್ಳಲು ಆಧುನಿಕ ಕೈಗಾರಿಕೋದ್ಯಮದಲ್ಲಿ ಹೆಚ್ಚು ಅವಕಾಶವಿದೆ. ಸೂಕ್ಷ್ಮತೆ, ಜಾಣ್ಮೆ, ಒಳ್ಳೆಯ ನಮೂನೆ, ಮೋಹಕ ವಿನ್ಯಾಸ, ನಯ, ಮತ್ತು ನಾಜೂಕಿನ ಸರಕುಗಳು ಎಲ್ಲಿ ಉತ್ಪಾದನೆಯಾಗಬೇಕೋ ಅಂಥ ಕಡೆ ಕರಕೌಶಲ ಹಾಗೂ ಯಾಂತ್ರಿಕ ವಿಧಾನ ಎರಡನ್ನು ಹೊಂದಿಸಿಕೊಳ್ಳಬಹುದು, ಉತ್ಪಾದನ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಬಹುದು. ಆಗ ತಯಾರಾಗುವ ಸರಕಿನ ಗುಣಮೌಲ್ಯ ಶ್ರೇಷ್ಠಮಟ್ಟದ್ದಾಗಿರುತ್ತದೆ. ಅದಕ್ಕೆ ಬೇಡಿಕೆಯೂ ಹೆಚ್ಚುತ್ತದೆ. ಇದರಿಂದ ಕುಶಲಕರ್ಮಿಗಳ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಈ ದೃಷ್ಟಿಯಿಂದಲೇ ನಾನಾ ದೇಶಗಳು ಉತ್ಪಾದನ ವಿಧಾನದಲ್ಲಿ ಮಾನವಶಕ್ತಿಯ ಮತ್ತು ಇತರ ಬಗೆಯ ಅಪವ್ಯಯಗಳನ್ನು ತಪ್ಪಿಸುವ ಸಲುವಾಗಿ ಸಮನ್ವಯ ವಿಧಾನ ಚಳವಳಿಯನ್ನು ಪ್ರಾರಂಭಿಸಿವೆ. ಉತ್ಪಾದನೆಯಲ್ಲಿ ಕೈ ಹಾಗೂ ಯಂತ್ರ ಶಕ್ತಿಯ ಸಮ್ಮಿಳನ ತುಂಬ ಯಶಸ್ವೀ ವಿಧಾನವಾಗಿದೆ. (ಕೆ.ಆರ್.ಎನ್.)

**ಕುಶಲ ಪತ್ರಗಳು :** ಕುಶಲಪತ್ರದ ಬಳಕೆಗೆ ಪ್ರ.ಶ.ಪೂ. ಎರಡನೆಯ ಮಿಲಿಯದಲ್ಲೇ ಪುರಾತನ ಬ್ಯಾಬಿಲೋನ್ ಸಾಮ್ರಾಜ್ಯದಲ್ಲಿ ರೂಢಿಗೊಂಡಿತ್ತು. ಆಗ ಓದುಬರೆಹ ಬಲ್ಲವರೆ ಅತಿ ಕಡಿಮೆಯಾಗಿದ್ದುದರಿಂದ ಬಲ್ಲ ದೂತನ ಮುಖಾಂತರ ಸುದ್ದಿ ಸಮಾಚಾರ ಯೋಗಕ್ಷೇಮ ವಿನಿಮಯ ನಡೆಯಬೇಕಾಗಿತ್ತು. ಆದ್ದರಿಂದ ಪತ್ರದ ಕ್ರಮ ಔಪಚಾರಿಕವಾಗಿ, ಒಂದು ರೀತಿಯ ನಿರ್ಬಂಧಕ್ಕೊಳಗಾಗಿ ಇರಬೇಕಾದ್ದು ಅನಿವಾರ್ಯವಾಗಿತ್ತು. ಮಧ್ಯವರ್ತಿಯ ನೆರವಿಲ್ಲದೆ ಇಬ್ಬರ ನಡುವೆ ನೇರ ಮಾತುಕತೆಗೆ ಅವಕಾಶ ದೊರಕಿಸುವ ಕುಶಲಪತ್ರ ಪ್ರಾಚೀನ ಗ್ರೀಸಿನಲ್ಲಿ ಪ್ರ.ಶ.ಪೂ. 5ನೆಯ ಶತಮಾನದಲ್ಲಿ ಇತ್ತು. ಅಲ್ಲಿಂದೀಚೆಗೆ ಕುಶಲಪತ್ರಕ್ಕೆ ಈಗ ಇರುವ ಅರ್ಥವೂ ಒದಗಿಬಂತು. ಅದರ ಲೇಖನ ಕಟ್ಟುನಿಟ್ಟಿನ ವಿಧಿನಿರ್ಬಂಧಗಳಿಂದ ಬಾಧಿತವಲ್ಲ. ಸರಳವೂ ಸುಂದರವೂ ಆದ ರೀತಿಯಲ್ಲಿ ಇಬ್ಬರು ಬಂಧುಗಳೂ ಸ್ನೇಹಿತರೂ ಆಪ್ತರಂತೆ ತಮಗೇ ಸಂಬಂಧಿಸಿದ ವಿಚಾರಗಳನ್ನು ಕುರಿತು ಸಂಭಾಷಣೆ ಮಾಡುವುದೇ ಕುಶಲಪತ್ರದ ಉದ್ದೇಶ. ಇಬ್ಬರಿಗೂ ಮಧ್ಯೆ ಇರುವ ದೂರದ ಸಲುವಾಗಿ ಸಂಭಾಷಣೆ ಪತ್ರ ಮುಖೇನ ಜರುಗುತ್ತವೆ ಅಷ್ಟೆ. ಇದು ಕುಶಲಪತ್ರದ ಸಾಮಾನ್ಯರೂಪ. ವಿಧಿವಿಹಿತವಾದ ಬಗೆಯಲ್ಲಿ ಪರಸ್ಪರ ವ್ಯವಹಾರ ನಡೆಸುವುದಕ್ಕೂ ಕುಶಲಪತ್ರ ಒದಗುತ್ತದೆ.

ಕುಶಲಪತ್ರಗಳಲ್ಲಿ ಹಲವು ವಿಧಗಳುಂಟೆಂದು ಬಲು ಹಿಂದೆಯೇ ವಿದ್ವಾಂಸರು ಹೇಳಿದರು. ಅವುಗಳಲ್ಲಿ ನಾಲ್ಕೈದು ಮುಖ್ಯ ವಿಧಗಳನ್ನು ಪರಿಭಾವಿಸಿದರೆ ಸಾಕು. ನಡೆದ ಸಂಗತಿಗಳ ಕಥನ, ವಿಷಯ ಪ್ರತಿಪಾದನೆ, ಹಿತವಚನ, ನೀಡುವಿಕೆ, ಸಮಾಧಾನ ಸೂಚನೆ, ಅನ್ಯೋನ್ಯ ಪ್ರೇಮ–ಇದಕ್ಕನುಸಾರವಾಗಿ ಕುಶಲಪತ್ರಗಳನ್ನು ವಿಂಗಡಿಸಬಹುದು. ಇವೆಲ್ಲಾ ಸ್ವಕೀಯವಾದವು, ಖಾಸಗಿಯಾದವು. ಖಾಸಗಿ ಕುಶಲಪತ್ರದ ಮರ್ಯಾದೆಯನ್ನನುಸರಿಸಿ ಒಬ್ಬಾನೊಬ್ಬ ವ್ಯಕ್ತಿಗೆ ಬರೆದಂತೆ ಹೊರಹೊರಗೆ ಕಾಣಬರುವ ಆದರೆ ದಿಟವಾದ ಇತರರಿಗೂ ತಿಳಿಯಬೇಕೆಂಬ ಬಯಕೆ ಉಳ್ಳ ಬಹಿರಂಗ ಪತ್ರವೂ ಉಂಟು. ಅದರಲ್ಲಿ ವಿಷಯ ಪ್ರತಿಪಾದನೆ, ವ್ಯಕ್ತಿಯ ಖಂಡನೆ, ವಾದವಿವಾದ ತುಂಬಿರುತ್ತದೆ. ಆದ್ದರಿಂದ ಅವು ಹೆಸರಿನಿಂದ ಮಾತ್ರ ಕುಶಲಪತ್ರಗಳು.

ಕುಶಲಪತ್ರ ಹೇಗಿರಬೇಕೆಂದು ತಿಳಿಸುವ ಪ್ರಬಂಧಗಳೂ ಅವನ್ನು ಬರೆಯಲು ಪಾಠಕಲಿಸುವ ಕೈಪಿಡಿಗಳೂ ಹೇರಳವಾಗಿವೆ. ಅವುಗಳಲ್ಲಿ ಮುಖ್ಯವಾದವು ಉತ್ಕೃಷ್ಟ ಕುಶಲಪತ್ರದ ಲಕ್ಷಣಗಳನ್ನು ಹೀಗೆ ವಿವರಿಸಿವೆ: 1. ಗೆಳೆತನದ ಸೌಹಾರ್ದಭಾವ 2. ಅನಿರ್ಬಂಧ ರೀತಿ 3. ಪ್ರಾಮಾಣಿಕತೆ 4. ಸರಳತೆ 5. ನೇರತನ ಅಥವಾ ಬಿಚ್ಚು ಮನಸ್ಸು 6. ನಿರಾಡಂಬರ. ಸಹಾನುಭೂತಿಯಿಂದ ತುಂಬಿದ ಎರಡು ಹೃದಯಗಳ ಪಕ್ಕಪಕ್ಕದಲ್ಲಿ ಕುಳಿತು ಭಾವನೆಗಳನ್ನು ತೋಡಿಕೊಳ್ಳುವಂತೆ ಇರಬೇಕು, ಲೇಖನದ ಸರಣಿ. ಈ ಗುಣಗಳಿಂದಲೇ ಕುಶಲಪತ್ರ ಸಾಹಿತ್ಯವಾಗಬಲ್ಲದು. ಪತ್ರಬರೆಯುವವನ ದಿನಚರಿ ಬಾಳಿನ ಸಾಮಾನ್ಯ ಸಂಗತಿ ಸ್ವಾರಸ್ಯಕರವಾಗಿ ಆಹ್ಲಾದ ನೀಡುವಂತಾಗುತ್ತದೆ. ವಿಲಿಯಂ ಕೂಪರ್ (1731–1800) ತನ್ನ ಒಂದು ಕುಶಲಪತ್ರದಲ್ಲಿ ಸಾಕಿದ ಮೊಲವೊಂದು ತಪ್ಪಿಸಿಕೊಂಡು ಹೋಗಿ ಆತಂಕ ಉಂಟುಮಾಡಿದ್ದನ್ನು ಚೆನ್ನಾಗಿ ನಿರೂಪಿಸಿದ್ದಾನೆ. ಅವನ ಸ್ವಚ್ಛವೂ, ಋಜುವೂ, ಮಾನವೀಯವೂ, ದಯಾಪೂರಿತವೂ ಆದ ಮನಸ್ಸು ಎದ್ದು ಕಾಣುತ್ತದೆ. ಅದರಲ್ಲಿ ತಾನು ಎಷ್ಟು ಉತ್ತಮವಾಗಿ ಕಾಗದ ಬರೆಯುತ್ತಿದ್ದೇನೆ ಎಂದು ಹಮ್ಮಿನ ತುಸು ಸೋಂಕೂ ಅಲ್ಲಿ ಕಾಣದು.

ಕುಶಲಪತ್ರ ಕವಿಯ ವ್ಯಕ್ತಿತ್ವದ ಪರಿಚಯಕ್ಕೂ ಅವನ ಜೀವನಚರಿತ್ರೆಯ ಪರಿಚಯಕ್ಕೂ ನೆರವಾಗುತ್ತದೆ. ಅಲ್ಲದೆ ಪಾತ್ರಗಳ ಕುಶಲಪತ್ರಗಳ ಮೂಲಕವೇ ಒಳ್ಳೆಯ ಕಾದಂಬರಿಯೂ ಸೃಷ್ಟಿಯಾಗಬಲ್ಲುದು. ಇಂಗ್ಲಿಷ್ ಕಾದಂಬರಿಯ ಸ್ಥಾಪಕರಲ್ಲೊಬ್ಬನಾದ ಸ್ಯಾಮ್ಯುಯಲ್ ರಿಚರ್ಡ್‌ಸನ್ ಕುಶಲಪತ್ರಗಳ ಮೂಲಕ ಕಾದಂಬರಿಯನ್ನು ರಚಿಸುವುದನ್ನು ಜಾರಿಗೆ ತಂದ. ಸ್ಕಾಟ್ ಮೊದಲಾದವರು ಈ ಪದ್ಧತಿಯನ್ನು ಅಲ್ಲಲ್ಲಿ ಬಳಸಿಕೊಂಡಿದ್ದಾರೆ. (ಎಸ್.ವಿ.ಆರ್.)

**ಕುಶಾಲನಗರ :** ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಒಂದು ಪಟ್ಟಣ. ಮಡಿಕೇರಿಯಿಂದ 30ಕಿಮೀ ಪೂರ್ವಕ್ಕಿದೆ. ಜನಸಂಖ್ಯೆ 13186 (2001). ಇದರ ಪೂರ್ವದ ಬದಿಗಾಗಿ ಕಾವೇರಿ ನದಿ ಹರಿಯುತ್ತದೆ. ಕಾವೇರಿ ನದಿಗೆ ಇಲ್ಲಿ ಕಳೆದ ಶತಮಾನದಲ್ಲೇ ಕಟ್ಟಿದ ಸೇತುವೆಯಿದೆ. ಮಡಿಕೇರಿ, ಮೈಸೂರು ಮುಖ್ಯ ರಸ್ತೆ ಈ ಊರ ಮೂಲಕ ಹಾದುಹೋಗುವುದಲ್ಲದೆ ಸಿದ್ಧಾಪುರ, ಹೆಬ್ಬಾಲೆ ಮತ್ತು ಸೋಮವಾರಪೇಟೆಗಳಿಗೂ ರಸ್ತೆಗಳಿವೆ. ಸಾರಿಗೆ ಸಂಚಾರದ ಸೌಲಭ್ಯ ಉತ್ತಮವಾಗಿರುವುದರಿಂದ ಇದೊಂದು ಮುಖ್ಯ ವ್ಯಾಪಾರಸ್ಥಳ. ಕೊಡಗಿನಲ್ಲಿ ಎರಡು ಸಂಸ್ಕರಣ ಸಹಕಾರಿ ಸಂಘ ಮತ್ತು ಕಾರ್ಖಾನೆಗಳಲ್ಲಿ ಒಂದು ಕುಶಾಲನಗರದಲ್ಲಿದೆ.

1773ರಲ್ಲಿ ಕೊಡಗಿಗೆ ಮೊದಲಬಾರಿಗೆ ದಂಡೆತ್ತಿ ಬಂದಿದ್ದ ಹೈದರ್ ಅಲಿ ಆಗ ಒಂದು ಹಳ್ಳಿಯಾಗಿದ್ದ ಈ ಸ್ಥಳಕ್ಕೆ, ತಾನು ಅಲ್ಲಿದ್ದಾಗ ತನಗೆ ದೊರೆತ ಒಂದು ಸಂತೋಷದ ವರ್ತಮಾನದ ನೆನಪಿಗಾಗಿ ಕುಶಾಲ್ ನಗರವೆಂದು ಹೆಸರಿಟ್ಟ. ಟಿಪ್ಪುಸುಲ್ತಾನ ಇಲ್ಲಿ ಒಂದು ಕೋಟೆಯನ್ನು ಕಟ್ಟಿಸಿ ಸೈನ್ಯ ಠಾಣ್ಯ ಮಾಡಿದ್ದ. 1789ರಲ್ಲಿ ದೊಡ್ಡ ವೀರರಾಜೇಂದ್ರ ಒಡೆಯ ಈ ಕೋಟೆಯನ್ನು ಹಿಡಿದುಕೊಂಡ. ಈಗಲೂ ಈ ಕೋಟೆಯ ಕೆಲವು ಅವಶೇಷಗಳನ್ನು ಕುಶಾಲನಗರದಲ್ಲಿ ಕಾಣಬಹುದು. 1834ರಲ್ಲಿ ಬ್ರಿಟಿಷರು ಕೊಡಗನ್ನು ತಮ್ಮ ಆಡಳಿತಕ್ಕೊಳಪಡಿಸಿದ ಮೇಲೆ ಆಗ ಬ್ರಿಟಿಷ್ ಆಡಳಿತಾಧಿಕಾರಿಯಾಗಿದ್ದ ಕರ್ನಲ್ ಫ್ರೇಸರ್, ಅದುವರೆಗೆ ನಂಜರಾಜಪಟ್ಟಣದಲ್ಲಿದ್ದ ತಾಲ್ಲೂಕು ಅಧಿಕಾರಿಗಳ ಕಚೇರಿಯನ್ನು ಇಲ್ಲಿಗೆ ವರ್ಗಾಯಿಸಿ ಇದಕ್ಕೂ ಫ್ರೇಸರ್‌ಪೇಟೆ ಎಂದು ತನ್ನ ಹೆಸರಿಟ್ಟ. 1895ರಲ್ಲಿ ತಾಲ್ಲೂಕು ಕಛೇರಿ ಇಲ್ಲಿಂದ ಸೋಮವಾರಪೇಟೆಗೆ ವರ್ಗಾವಣೆಯಾಯಿತು.

**ತೂಗುಸೇತುವೆ, ಕುಶಾಲನಗರ** ಇಲ್ಲಿ ಮಡಿಕೇರಿಗಿಂತ ಮಳೆ ಮತ್ತು ಚಳಿ ಕಡಿಮೆಯಾಗಿರುವುದರಿಂದ ಆ ಕಾಲಗಳಲ್ಲಿ ಬ್ರಿಟಿಷರು ತಮ್ಮ ಕಛೇರಿಗಳನ್ನು ಇಲ್ಲಿಗೆ ವರ್ಗಾಯಿಸುತ್ತಿದ್ದರು. ಕುಶಾಲನಗರಕ್ಕೆ ಹೊಂದಿಕೊಂಡಂತೆ ಕಾವೇರಿ ನಿಸರ್ಗಧಾಮವಿದೆ. 65 ಎಕರೆ ವಿಸ್ತಾರ ಪ್ರದೇಶದಲ್ಲಿರುವ ಈ ತಾಣ ಪ್ರಕೃತಿ ಪ್ರಿಯರಿಗೊಂದು ಆಕರ್ಷಕ ತಾಣ. ಹಸುರು ಬಿದಿರು ಮೆಳೆಗಳಿಂದ ಕಂಗೊಳಿಸುತ್ತಿರುವ ದ್ವೀಪದ ಸುತ್ತಲೂ ಕಾವೇರಿ ನದಿ ಹರಿಯುತ್ತಿದೆ. ದ್ವೀಪದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ತೂಗುಸೇತುವೆ ನಿರ್ಮಿಸಲಾಗಿದೆ. ನದಿಯಲ್ಲಿ ದೋಣಿ ವಿಹಾರದ ವ್ಯವಸ್ಥೆ ಇದೆ. ಈ ನಿಸರ್ಗಧಾಮದಲ್ಲಿ ಬಿದಿರು ಮೆಳೆ ಸೇರಿದಂತೆ ಅನೇಕ ಔಷಧ ಸಸ್ಯಗಳಿವೆ. ಇಲ್ಲಿ ಮರಗಳ ಮೇಲೆ ವಸತಿ ನಿರ್ಮಿಸಲಾಗಿದೆ. ಪ್ರವಾಸಿಗರಿಗಾಗಿ ಕೇವಲ ಮರದಿಂದಲೇ ನಿರ್ಮಿಸಿರುವ ಅತಿಥಿಗೃಹಗಳಿವೆ. ಕಾಡಿನಲ್ಲಿ ಜಿಂಕೆಗಳ ಹಿಂಡಿನ ದೃಶ್ಯ ಕಂಡುಬರುತ್ತದೆ. ಆನೆಸವಾರಿ ಇಲ್ಲಿಯ ಆಕರ್ಷಣೆಗಳಲ್ಲೊಂದಾಗಿದೆ. (ಡಿ.ಎನ್.ಕೆ.)

**ಕುಶಿಕ :** ಚಂದ್ರವಂಶದ ಕುಶನ ಮಗ. ಪುರು ಚಕ್ರವರ್ತಿ ಈ ವಂಶದ ಮೂಲಪುರುಷನಾದ್ದರಿಂದ ಅದಕ್ಕೆ ಪೌರವ ವಂಶವೆಂದೂ ಹೆಸರು ಬಂದಿದೆ. ಕುಶಿಕ ಗಾಧಿರಾಜನ ತಂದೆ. ವಿಶ್ವಾಮಿತ್ರನ ತಾತ. ಋಗ್ವೇದ ಮತ್ತು ಶಾಂಖಾಯನ ಗೃಹ್ಯಸೂತ್ರಾದಿಗಳಲ್ಲಿ ಕುಶಿಕ ಶಬ್ದ ಕಂಡುಬರದಿದ್ದರೂ ವಿವರವಾದ ಪ್ರಸ್ತಾಪ ಮಹಾಭಾರತ ಮತ್ತು ಹರಿವಂಶಗಳಲ್ಲಿದೆ.

ಮಹಾನ್ ಪಾರ್ಥಿವನಾದ ಈತ ಕಾನ್ಯಕುಬ್ಜದಲ್ಲಿ ರಾಜ್ಯವಾಳುತ್ತಿರಲು ಭೃಗುವಂಶವೂ ಕುಶಿಕ ವಂಶವೂ ಬೆರೆತು ಬ್ರಾಹ್ಮಣ ಕ್ಷತ್ರಿಯರ ನಡುವೆ ವರ್ಣಸಂಕರ ಉಂಟಾಗುವುದೆಂಬ

ಬ್ರಹ್ಮವಾಣಿಯನ್ನರಿತ ಭೃಗುವಂಶೋದ್ಭವ ಚ್ಯವನ ಕುಶಿಕವಂಶವನ್ನೇ ನಿರ್ಮೂಲಗೊಳಿಸುವ ಉದ್ದೇಶದಿಂದ ಅವನ ಅರಮನೆಗೆ ಬಂದ. ಬಂದವನು ಆಹಾರ ನಿದ್ರಾದಿಗಳನ್ನು ತೊರೆದು ಇಪ್ಪತ್ತೊಂದು ದಿನ ಒಂದೇ ಮಗ್ಗುಲಲ್ಲಿ ಮಲಗಿದ. ರಾಜದಂಪತಿಗಳು ನಿಶ್ಚಲ ಮನಸ್ಸಿನಿಂದ ಅವನನ್ನೇ ಅನುಸರಿಸಿದರು. ತರುವಾಯ ಇದ್ದಕ್ಕಿದ್ದಂತೆ ಚ್ಯವನ ಕಣ್ಣು ಕಾಣದಂತಾಗಲು ಇಬ್ಬರೂ ಅವನನ್ನು ಹುಡುಕಿ ಪ್ರೀತ್ಯಾದರಗಳಿಂದ ಮತ್ತೆ ಅರಮನೆಗೆ ಕರೆದೊಯ್ದರು. ಆದರೆ ಹಠಯೋಗಿ ಚ್ಯವನನಾದರೋ ಮತ್ತೆ ಇಪ್ಪತ್ತೊಂದು ದಿನ ಇನ್ನೊಂದು ಮಗ್ಗುಲಲ್ಲಿ ಮೊದಲಿನಂತೆಯೇ ಆಹಾರ ನಿದ್ರೆಗಳನ್ನು ತೊರೆದು ಮಲಗಲು ಅವರೂ ಆತಿಥೇಯ ಧರ್ಮವನ್ನನುಸರಿಸಿ ಆತನ ಶುಶ್ರೂಷೆ ಮಾಡಿದರು. ಇಷ್ಟಾದ ಮೇಲೆ ಚ್ಯವನ ಸ್ನಾನ ಮಾಡುವ ಅಪೇಕ್ಷೆಯನ್ನು ತಿಳಿಸಿ ರಾಜದಂಪತಿಗಳನ್ನು ತನ್ನ ಕೈಕಾಲುಗಳನ್ನುಜ್ಜಲು ಆಜ್ಞಾಪಿಸಿದ. ಪ್ರಶಾಂತ ಮನಸ್ಸಿನಿಂದ ಅವರು ಹಾಗೆಯೇ ಮಾಡಿದರು. ಅನಂತರ ಚ್ಯವನ ತಾನೇ ಸಿಂಹಾಸನಾರೂಢನಾಗಿ, ಕೊನೆಗೆ ಎಲ್ಲವನ್ನೂ ಸುಟ್ಟು ಬೂದಿ ಮಾಡಿದ. ರಾಜದಂಪತಿಗಳಲ್ಲಿ ಇದರಿಂದ ಲೇಶಮಾತ್ರವೂ ಕೋಪತಾಪಾದಿಗಳ ಕುರುಹೂ ಕಾಣಲಿಲ್ಲ. ಅಷ್ಟಕ್ಕೇ ತೃಪ್ತನಾಗದೆ ಚ್ಯವನ ತನ್ನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಇಬ್ಬರೂ ಕುದುರೆಗಳಂತೆ ರಾಜಬೀದಿಯಲ್ಲಿ ಎಳೆಯಲು ಆಜ್ಞಾಪಿಸಿ ರಥವನ್ನೆಳೆಯುತ್ತಿದ್ದ ದಂಪತಿಗಳನ್ನು ಚಾಟಿಯಿಂದ ಹೊಡೆದು ಘಾತಿಸಿದ. ಅದರಿಂದಲೂ ಅವರು ವಿಚಲಿತರಾಗಲಿಲ್ಲ. ಸ್ಥಿತಪ್ರಜ್ಞರಾದ ಅವರನ್ನು ಕಂಡು ಚ್ಯವನನಿಗೆ ತೀರ ಮುಖಭಂಗವಾಯಿತು. ಕೊನೆಗವನು ತನ್ನ ಶಪಥವನ್ನು ತೊರೆದು ತೀರ್ಥಯಾತ್ರೆಗೆ ಹೊರಟುಹೋದ.

ಕಾಲಕ್ರಮದಲ್ಲಿ ಕ್ಷತ್ರಿಯರು ಊರ್ವನೆಂಬೊಬ್ಬನನ್ನು ಬಿಟ್ಟು ಉಳಿದ ಭಾರ್ಗವ ವಂಶದವರನ್ನೆಲ್ಲ ನಾಶಪಡಿಸಿದರು. ಊರ್ವನ ಮಗ ಋಚೀಕ. ಈತನಿಗೆ ವಿಶ್ವಾಮಿತ್ರನ ತಂಗಿ ಸತ್ಯವತಿಯೊಡನೆ ವಿವಾಹವಾಗಿ ಜಮದಗ್ನಿ ಹುಟ್ಟಿದ. ಆತನ ಮಗನೇ ಪರಶುರಾಮ. ಬ್ರಹ್ಮನ ವಾಣಿಯಂತೆ ಬ್ರಾಹ್ಮಣ ಕ್ಷತ್ರಿಯ ಸಾಂಕರ್ಯ ನಿಯತವಾಯಿತು. ಕುಶಿಕನಿಗೆ ಬ್ರಾಹ್ಮಣನಾಗಬೇಕೆಂಬ ಹಂಬಲವಿದ್ದರೂ ತನ್ನ ಜೀವನದಲ್ಲಿ ಅದು ಫಲಿಸಲಿಲ್ಲ. ಆದರೆ ಆತನ ಮೊಮ್ಮಗ ವಿಶ್ವಾಮಿತ್ರನ ಕಾಲಕ್ಕೆ ಅದು ಫಲಿಸಿತು. (ಸಿ.ಜಿ.ಪಿ.)

**ಕುಶೀನಗರ :** ಉತ್ತರ ಪ್ರದೇಶದ ಗೋರಖ್‌ಪುರ ಜಿಲ್ಲೆಯಲ್ಲಿ ಘಂಡಕೀ ನದೀದಡದ ಮೇಲಿರುವ ಪ್ರಸಿದ್ಧ ಬೌದ್ಧಕ್ಷೇತ್ರ. ಈಗ ಕಾಸಿಯಾ ಎಂದು ಹೆಸರಾಗಿರುವ ಕುಶೀನಗರಕ್ಕೆ ಕುಶಿನಾರಾ ಎಂಬ ಹೆಸರೂ ಬಳಕೆಯಲ್ಲಿತ್ತು. ಇದು ಇತಿಹಾಸ ಪ್ರಾರಂಭಯುಗದಲ್ಲಿ ಮಹಾಸುದ್ದನನ ರಾಜಧಾನಿಯಾಗಿದ್ದ ಕುಶಾವತಿಯ ಪಾಳು ನಿವೇಶನದ ಮೇಲೆ ನಿರ್ಮಿತವಾಗಿ ಪ್ರ.ಶ.ಪೂ. 7–6ನೆಯ ಶತಮಾನಗಳಲ್ಲಿ ಮಲ್ಲವಂಶದವರ ರಾಜಧಾನಿಯಾಗಿತ್ತು. ಗೌತಮಬುದ್ಧ ಪ್ರಶ.ಪೂ. 486ರಲ್ಲಿ ತನ್ನ 80ನೆಯ ವಯಸ್ಸಿನಲ್ಲಿ ಮಹಾನಿರ್ವಾಣ ಪಡೆದ ಸ್ಥಳವಾದ್ದರಿಂದ ಇದು ಬೌದ್ಧರ ಪವಿತ್ರ ಕ್ಷೇತ್ರಗಳಲ್ಲೊಂದಾಗಿದೆ. ಇಲ್ಲಿ ಅಶೋಕನಿಂದ ನಿರ್ಮಿತವಾದುದೆಂದು ಹೇಳಲ್ಪಡುವ ಪರಿನಿರ್ವಾಣಚೈತ್ಯ ಬೆಳಕಿಗೆ ಬಂದಿಲ್ಲ. ಗುಪ್ತಕಾಲದ ಪರಿನಿರ್ವಾಣ ಚೈತ್ಯವಲ್ಲದೆ 'ಮಾತಾಕುನ್ವರ್ ಕಾ ಕೋಟ್' ಎಂಬ ಮಂದಿರದಲ್ಲಿರುವ ಬುದ್ಧನ ಪರಿನಿರ್ವಾಣಮೂರ್ತಿಯೂ ಈಗಿವೆ. ರಾಮಾಭಾರ್ ಎಂಬ ದಿಬ್ಬದಡಿಯಲ್ಲಿ ಬಹುಶಃ ಬುದ್ಧನಮರಣಾನಂತರ ಆತನ ದೇಹವನ್ನು ದಹಿಸಿ ಅಸ್ಥಿಗಳನ್ನು ಎಂಟು ಭಾಗಗಳನ್ನಾಗಿ ಹಂಚಿದೆಡೆಯಲ್ಲಿ ನಿರ್ಮಿತವಾದ ಸ್ತೂಪದ ಅವಶೇಷಗಳಿರಬಹುದು. 7ನೆಯ ಶತಮಾನದ ಮಧ್ಯಭಾಗದಲ್ಲಿ ಚೀನೀ ಯಾತ್ರಿಕ ಯುವಾನ್‌ಚಾಂಗ್ ಸಂದರ್ಶಿಸಿದಾಗ ಕುಶೀನಗರ ಪಾಳುಬಿದ್ದಿದ್ದುದಾಗಿ ಹೇಳಿದ್ದಾನೆ.

(ಬಿ.ಕೆ.ಜಿ.; ಜಿ.ಆರ್.ಆರ್.; ಸಿ.ಜಿ.ಪಿ.; ಡಿ.ಎಂ.ಜಿ.ಒ.)

**ಕುಷಾಣರು :** ಮಧ್ಯ ಏಷ್ಯದಿಂದ ಪ್ರಾಚೀನ ಭಾರತಕ್ಕೆ ವಲಸೆ ಬಂದ, ವಾಯುವ್ಯ ಭಾಗದಲ್ಲಿ ನೆಲಸಿದ ಒಂದು ರಾಜವಂಶ. ಭಾರತದ ರಾಜಕೀಯ, ಆರ್ಥಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಇವರ ಪಾತ್ರ ಗಮನಾರ್ಹ. ಇವರು ಯೂ–ಚಿ ಕುಲದವರು (ಚಂದ್ರವಂಶದವರು). ಈ ಅಲೆಮಾರಿ ತಂಡ ಪ್ರಶ.ಪೂ. 2ನೆಯ ಶತಮಾನದಲ್ಲಿ ಮಧ್ಯ ಏಷ್ಯದಲ್ಲಿ ಉದಯಿಸಿತೆಂದು ಚೀನೀ ಇತಿಹಾಸಕಾರರು ಹೇಳಿದ್ದಾರೆ. ಆದರೆ ಪ್ರಶ.ಪೂ. 165ರ ಸುಮಾರಿಗೆ ಮಧ್ಯ ಏಷ್ಯದ ಮತ್ತೊಂದು ಗಣಕ್ಕೆ ಸೇರಿದ ಮತ್ತು ಇವರ ನೆರೆಯವರಾದ ಹ್ಯೂಂಗ್‌ನುಗಳು ಇವರನ್ನು ಸೋಲಿಸಿದ್ದರಿಂದ ಯೂ–ಚಿಗಳು ತಮ್ಮ ನೆಲೆಯಾದ 'ಹುಲ್ಲುಗಾವಲನ್ನು ಬಿಟ್ಟು ಪಶ್ಚಿಮದ ಕಡೆಗೆ ಸರಿದರು. ಹೀಗೆ ನೆಲೆಗಾಗಿ ಅಲೆಯುತ್ತಿದ್ದ ಯೂ–ಚಿಗಳು ಇಲ್ಲಿ ನದೀಪ್ರದೇಶದ ಸನ್ ಜನಾಂಗವನ್ನು ಸೋಲಿಸಿದರು. ಇಷ್ಟರಲ್ಲಿ ಯೂ–ಚಿಗಳ ತಂಡದಲ್ಲಿ ಇಬ್ಭಾಗವಾಗಿ ಅವರ ಸಣ್ಣ ತಂಡ ದಕ್ಷಿಣಕ್ಕೆ ಸರಿದು ಟಿಬೆಟಿನತ್ತ ವಲಸೆ ಹೋಯಿತು. ಪ್ರಧಾನ ತಂಡ (ಟಯೂ–ಚಿ) ಪಶ್ಚಿಮಕ್ಕೆ ಪ್ರಯಾಣ ಬೆಳೆಸಿತು–ಸನ್ ರಾಜ್ಯದ ಪಶ್ಚಿಮದ ಮತ್ತು ಜಕ್ಸಾರ್ಟಿಸ್ ನದಿಯ ಉತ್ತರದ ಭಾಗಗಳನ್ನು ಆಕ್ರಮಿಸಿಕೊಂಡು ಶಕರನ್ನು ಸೋಲಿಸಿತು. ಶಕರು ಆಫ್ಘಾನಿಸ್ತಾನದ ದಕ್ಷಿಣ ಭಾಗಕ್ಕೆ ಹೋಗಿ ನೆಲೆಸಿದರು. ಇಷ್ಟರಲ್ಲಿ ಶತ್ರುಗಳು ಕೈಯಿಂದ ಪಾರಾಗಿದ್ದ ವು–ಸನ್ ರಾಜಪುತ್ರ ಹ್ಯೂಂಗ್–ನುಗಳ ಸಹಾಯದಿಂದ ಯೂ–ಚಿಗಳನ್ನು ಸೋಲಿಸಿ ಅವರನ್ನು ತನ್ನ ಮತ್ತು ಶಕರ ಪ್ರದೇಶಗಳಿಂದ ತರುಬಿದ. ಅನಂತರ ಪ್ರಧಾನ ಯೂ–ಚಿ ತಂಡ ಅಲೆಯುತ್ತ ಬ್ಯಾಕ್ಟ್ರಿಯದ ಆಕ್ಸಸ್ ನದೀ ಪ್ರದೇಶವನ್ನು ತಲುಪಿ ಅಲ್ಲಿ ನೆಲಸಿದ್ದ ಶಕರನ್ನು ಮತ್ತೆ ಓಡಿಸಿ ಹಲವಾರು ನೆರೆಹೊರೆಯ ಪ್ರದೇಶವನ್ನು ಗೆದ್ದುಕೊಂಡು ರಾಜ್ಯ ವಿಸ್ತಾರ ಮಾಡಿದರು. ಆಗ ಅವರ ಆಡಳಿತ ಬ್ಯಾಕ್ಟ್ರಿಯದಿಂದ ಆಕ್ಸಸ್‌ನ ದಕ್ಷಿಣದವರೆಗೂ ಹಬ್ಬಿತ್ತು. ಅವರ ರಾಜಧಾನಿ ಆಕ್ಸಸ್ ನದಿಯ ಉತ್ತರಕ್ಕಿದ್ದ ಕಿಯೆನ್–ಚಿ ಎಂದೂ ಅವರ ರಾಜ್ಯದ ದಕ್ಷಿಣದ ಗಡಿ ಕಿ–ಪಿನ್ ಬಳಿಯಿತ್ತೆಂದೂ ಪ್ರ.ಶ. 24ರವರೆಗಿನ ಇತಿಹಾಸವನ್ನು ತಿಳಿಸುವ ಚೀನೀ ಚರಿತ್ರಕಾರ ಪಾನ್–ಕುವಿನ ಬರೆಹಗಳಿಂದ ತಿಳಿದುಬರುತ್ತದೆ. ಐದು ಗುಂಪುಗಳನ್ನೊಳಗೊಂಡಿದ್ದ ಯೂ–ಚಿ ಪಂಗಡದಲ್ಲಿ ಕಾಲಕ್ರಮದಲ್ಲಿ ಒಂದು ಪಂಗಡ ಪ್ರಬಲವಾಗಿ ಇತರ ಗುಂಪುಗಳನ್ನು ಗೆದ್ದುಕೊಂಡಿತೆಂದು ಇನ್ನೊಬ್ಬ ಚೀನೀ ಚರಿತ್ರಕಾರ ಫಾನ್–ಯೆ ತಿಳಿಸಿದ್ದಾನೆ. ಅನಂತರ ಯೆನ್–ಕಾವೊ–ಚೆನ್ ಎಂಬ ನಾಯಕನ ಆಳ್ವಿಕೆಯಲ್ಲಿ ಭಾರತದ ಪಂಜಾಬ್ ಪ್ರದೇಶ ಇವರ ವಶವಾಯಿತು. ಪ್ರಬಲರಾದ ಯೂ–ಚಿಯರಿಗೆ ಆಗಿನಿಂದ ಕುಷಾಣರೆಂದು ಹೆಸರಾಯಿತು.

ಯಕ್ಷಿ : ಮಥುರಾ

ಭಾರತದಲ್ಲಿ ಆ ವಂಶದ ಮೊದಲ ದೊರೆ 1ನೆಯ ಕುಸುಲುಕ ಅಥವಾ ಕುಜುಲ ಕಡ್‌ಫೀಸಿಸ್. ಈತ ಉಳಿದ ಯೂ–ಚಿ ಬಣಗಳ ನೇತೃತ್ವವನ್ನು ಪ್ರಶ. 40ರ ಸುಮಾರಿನಲ್ಲಿ ಪಡೆದನೆಂದು ತಿಳಿದುಬರುತ್ತದೆ. ಬಹುಶಃ ಈತ 15ರಿಂದ 65ರವರೆಗೆ ಅಧಿಕಾರ ದಲ್ಲಿದ್ದಿರಬಹುದು. ಪಾರ್ಥಿಯದ ಗಡಿಯಿಂದ ಸಿಂಧ್‌ವರೆಗೆ ಇವನ ರಾಜ್ಯ ವಿಸ್ತರಿಸಿದ್ದಿರಬಹುದು. ಇವನ ನಾಣ್ಯಗಳು ಅಧಿಕ ಸಂಖ್ಯೆಯಲ್ಲಿ ದೊರಕಿವೆ. ಈತ ತನ್ನ ಜೀವಿತ ಕಾಲದ ಕೊನೆಯ ಭಾಗದಲ್ಲಿ ಬೌದ್ಧಧರ್ಮ ಸ್ವೀಕಾರ ಮಾಡಿದ್ದಿರಬಹುದೆಂದು ಹೇಳಲಾಗಿದೆ.

ಮೊದಲನೆಯ ಕಡ್‌ಫೀಸಿಸನ ತರುವಾಯ ಅವನ ಮಗ ವಿಮ ಕಡ್‌ಫೀಸಿಸ್ ಪಟ್ಟಕ್ಕೆ ಬಂದ. ಇವನ ಆಳ್ವಿಕೆಯ ಕಾಲ ಸು. 65–75. ಈ ವಿಷಯ ಅವನ ನಾಣ್ಯಗಳಿಂದ ತಿಳಿದುಬರುತ್ತದೆ. ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದ ಕುಷಾಣರ ಮೊದಲನೆ ದೊರೆ ಈತ. ಇತರ ಕುಷಾಣರೂ ಅನಂತರ ಕಾಲದ ಭಾರತೀಯ ರಾಜರೂ ಚಿನ್ನದ ನಾಣ್ಯಪದ್ಧತಿಯನ್ನು ಮುಂದುವರಿಸಿದರು. ತಾಮ್ರದ ನಾಣ್ಯಗಳೂ ಚಲಾವಣೆಯಲ್ಲಿದ್ದುವು. ಇವನ ನಾಣ್ಯಗಳ ಮೇಲೆ ಶಿವನ ಮತ್ತು ತ್ರಿಶೂಲದ ಚಿತ್ರಗಳಿರುವುದರಿಂದ ಈತ ಶೈವಮತಾನುಯಾಯಿಯಾಗಿದ್ದನೆಂದು ಹೇಳಬಹುದು. ಈತ ಭಾರತದ ಹಲವಾರು ಪ್ರದೇಶಗಳನ್ನು ಗೆದ್ದು ರಾಜ್ಯವಿಸ್ತಾರ ಮಾಡಿದಂತೆ ತಿಳಿದುಬರುತ್ತದೆ. ಪಂಜಾಬ್, ಕಾಂದಹಾರ್ ಹಾಗೂ ಕಾಬೂಲ್ ಕಣಿವೆಗಳಲ್ಲಿ ದೊರೆತ ನಾಣ್ಯಗಳ ಮೇಲೆ ಗ್ರೀಕ್ ಮತ್ತು ರೋಮನರ ಪ್ರಭಾವ ಎದ್ದುಕಾಣುತ್ತದೆ. ಎರಡನೆಯ ಕಡ್‌ಫೀಸಿಸನಿಗೆ ಮಹಾರಾಜ , ರಾಜಾಧಿರಾಜ, ಸರ್ವಲೋಗ ಈಶ್ವರ, ಮಹೇಶ್ವರ ಹಾಗೂ ಮಹಾರಕ್ಷಕ ಎಂಬ ಬಿರುದುಗಳಿದ್ದುವೆಂಬುದು ನಾಣ್ಯಗಳಿಂದ ತಿಳಿಯುತ್ತದೆ. ನಾಣ್ಯದ ಮುಂಭಾಗದಲ್ಲಿ ಅರಸರ ಸುಂದರ ಚಿತ್ರವೂ ಹಿಂಭಾಗದಲ್ಲಿ ನಂದಿಯೊಡನಿದ್ದ ಜಟಾಧಾರಿ ಶಿವನ ಚಿತ್ರವೂ ಇರುವುದು ಇವನ ನಾಣ್ಯಗಳ ವೈಶಿಷ್ಟ್ಯ. ನಾಣ್ಯಗಳ ಮೇಲ್ಮುಖದಲ್ಲಿ ಗ್ರೀಕ್ ಲಿಪಿಯ ಹಾಗೂ ಹಿಂಭಾಗದಲ್ಲಿ ಖರೋಷ್ಠೀ ಲಿಪಿಯ ಶಾಸನಗಳಿವೆ. ಈ ನಾಣ್ಯಗಳು ಗಾಂಧಾರ ಇಲ್ಲವೆ ಬ್ಯಾಕ್ಟ್ರಿಯದಲ್ಲಿ ಮುದ್ರಿತವಾದುವು. ರೋಂ ಸಾಮ್ರಾಜ್ಯದ ಟ್ರಾಜನನ (ಆಳ್ವಿಕೆ: 98–117) ಆಸ್ಥಾನಕ್ಕೆ ಕುಷಾಣರ ರಾಯಭಾರಿಗಳು

ಹೋಗಿದ್ದು, ತಮ್ಮೆರಡು ರಾಜ್ಯಗಳ ನಡುವೆ ಬೆಳೆಯುತ್ತಿದ್ದ ವ್ಯಾಪಾರ ಸಂಬಂಧವನ್ನು ಬಲಗೊಳಿಸಿದರು. ಭಾರತದಿಂದ ರೋಂ ಸಾಮ್ರಾಜ್ಯಕ್ಕೆ ಮೆಣಸು, ರೇಷ್ಮೆ, ಜರಿಬಟ್ಟೆ, ವಜ್ರ ವೈಡೂರ್ಯ ಮತ್ತು ಪರಿಮಳ ದ್ರವ್ಯಗಳು ಹೋಗುತ್ತಿದ್ದುವು. ಆ ದೇಶದಿಂದ ವಿಪುಲ ಸಂಪತ್ತು ಭಾರತಕ್ಕೆ ಬರುತ್ತಿತ್ತು.

ಕುಷಾಣರ ರಾಜವಂಶದಲ್ಲಿ ಅತ್ಯುನ್ನತ ಕೀರ್ತಿ ಗಳಿಸಿದ ಪ್ರಭಾವಶಾಲಿ ಚಕ್ರವರ್ತಿ ಕನಿಷ್ಕ. ಇವನು 78 ರಿಂದ 120 ರವರೆಗೆ ಆಳಿದ. ಇವನ ಕಾಲದಲ್ಲಿ ಸಾಮ್ರಾಜ್ಯ ವಿಸ್ತಾರವೂ ಬಲಾಢ್ಯವೂ ಆಗಿತ್ತು; ಉತ್ತರದಲ್ಲಿ ಖೋಟಾನ್ ಹಾಗೂ ದಕ್ಷಿಣದಲ್ಲಿ ಕೊಂಕಣ, ಪೂರ್ವದಲ್ಲಿ ಬಿಹಾರ ಹಾಗೂ ಪಶ್ಚಿಮದಲ್ಲಿ ಖೋರಾಸಾನ್‌ವರೆಗೆ ಹರಡಿತ್ತೆಂದು ಇವನ ಶಾಸನಗಳಿಂದ ತಿಳಿದುಬರುತ್ತದೆ. ಎರಡನೆಯ ಕಡ್‌ಫೀಸಿಸ್ ಹಾಗೂ ಅನಂತರ ಪಟ್ಟಕ್ಕೆ ಬಂದ ಕನಿಷ್ಕರ ಮಧ್ಯೆ ಸ್ವಲ್ಪ ಕಾಲಾಂತರವಿದ್ದರೂ ಕನಿಷ್ಕನೇ ಎರಡನೆಯ ಕಡ್‌ಫೀಸಿಸನ ತರುವಾಯದ ಕುಷಾಣ ದೊರೆಯೆಂಬುದು ಖಚಿತವಾಗಿದೆ. ಈತ ಕಾಶ್ಮೀರವನ್ನು ಗೆದ್ದು ಅಲ್ಲಿ ಕನಿಷ್ಕಪುರವನ್ನು ಕಟ್ಟಿಸಿದ. ಬುದ್ಧಗಯೆ ಹಾಗೂ ಪಾಟಲೀಪುತ್ರವನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡ. ಬೌದ್ಧಪಂಡಿತ ಅಶ್ವಘೋಷವನ್ನು ಕನಿಷ್ಕ ಪಾಟಲೀಪುತ್ರದಿಂದ ತನ್ನಲ್ಲಿಗೆ ಆಹ್ವಾನಿಸಿದ. ಪರುಷಪುರ ಅಥವಾ ಪೆಷಾವರ್ ಇವನ ರಾಜಧಾನಿ. ತನ್ನ ವಿಸ್ತಾರವಾದ ಸಾಮ್ರಾಜ್ಯವನ್ನು ರಾಜಕೀಯ ಅನುಕೂಲತೆಗಾಗಿ ಹಲವು ಪ್ರಾಂತ್ಯಗಳನ್ನಾಗಿ ವಿಂಗಡಿಸಿ ರಾಜಪ್ರತಿನಿಧಿಗಳ ಸಹಾಯದಿಂದ ರಾಜ್ಯಭಾರ ಸಾಗಿಸಿದ. ಕ್ಷತ್ರಪರ ರಾಜ್ಯಪದ್ಧತಿಯನ್ನೂ ಮುಂದುವರಿಸಿಕೊಂಡು ಬಂದ. ಕ್ಷತ್ರಪರು ಮತ್ತು ಮಹಾಕ್ಷತ್ರಪರೇ ಪ್ರಾಂತ್ಯಾಧಿಪತಿಗಳು. ಎರಡನೆಯ ಕಡ್‌ಫೀಸಿಸ್ ಧರಿಸಿದ ದೇವಪುತ್ರನೆಂಬ ಬಿರುದನ್ನು ಕನಿಷ್ಕನೂ ಧರಿಸುತ್ತಿದ್ದ. ಚೀನದ ದಳಪತಿ ಪಾನ್‌ಚಾವನೊಂದಿಗೆ ನಡೆದ ಕದನದಲ್ಲಿ ಕನಿಷ್ಕ ಸೋಲನ್ನನುಭವಿಸಿದರೂ ಅವನ ಮಗ ಪಾನಯಾಂಗನನ್ನು ಸೋಲಿಸಿ ಸೇಡು ತೀರಿಸಿಕೊಂಡು, ಕ್ಯಾಷ್‌ಘರ್, ಯಾರ್ಕಂಡ್ ಮತ್ತು ಖೋಟಾನುಗಳನ್ನು ವಶಪಡಿಸಿಕೊಂಡ. ಅನಂತರ ಪಾರ್ಥಿಯನರನ್ನೂ ಸೋಲಿಸಿದ. ಈ ಹಲವಾರು ವಿಜಯಗಳ ಸ್ಮಾರಕವಾಗಿ ಒಂದು ಹೊಸ ಶಕವನ್ನು ಪ್ರ.ಶ. 78ರಲ್ಲಿ ಪ್ರಾರಂಭಿಸಿದ. ರಾಜಧಾನಿಯಾದ ಪುರುಷಪುರದಲ್ಲಿ ಭವ್ಯವಾದ ಸಾರ್ವಜನಿಕ ಕಟ್ಟಡಗಳನ್ನೂ ಬೌದ್ಧವಿಹಾರಗಳನ್ನೂ ಬುದ್ಧನ ಅವಶೇಷಗಳನ್ನೊಳಗೊಂಡಿದ್ದ ಸ್ತೂಪವನ್ನೂ ಈತ ಕಟ್ಟಿಸಿದನೆಂದು ಹೇಳಲಾಗಿದೆ.

ದೇವತೆ : ಭೂತೇಸರ್

ಕನಿಷ್ಕನು ಅಶೋಕ ಚಕ್ರವರ್ತಿಯಂತೆ ಬೌದ್ಧ ಧರ್ಮಾನುಯಾಯಿ ಮತ್ತು ಪ್ರಸಾರಕನೆಂದು ಬೌದ್ಧಗ್ರಂಥಗಳಲ್ಲಿ ಕೀರ್ತಿ ಪಡೆದಿದ್ದಾನೆ. ಬೌದ್ಧಧರ್ಮದೊಂದಿಗೆ ಇತರ ಧರ್ಮಗಳಲ್ಲೂ ಕನಿಷ್ಕನಿಗೆ ನಿಷ್ಠೆಯಿತ್ತೆಂಬ ಸಂಗತಿ ಅವನ ನಾಣ್ಯಗಳ ಮೇಲಿರುವ ಗ್ರೀಕ್, ಸುಮೇರಿಯ, ಪರ್ಷಿಯ ಹಾಗೂ ಭಾರತದ ಹಿಂದೂ ದೇವತೆಗಳ ಲಾಂಛನಗಳಿಂದ ಕಂಡುಬರುತ್ತದೆ. ಬೌದ್ಧಧರ್ಮದ ವಸುಮಿತ್ರ ಮತ್ತು ಅಶ್ವಘೋಷ ಇವರಿಂದ ಪ್ರಭಾವಿತನಾಗಿ, ಬೌದ್ಧಧರ್ಮವನ್ನು ಸ್ವೀಕರಿಸಿದರೂ ಕನಿಷ್ಕ ಅನ್ಯಮತೀಯರನ್ನು ಹಿಂಸಿಸದೆ, ಪರಧರ್ಮ ಸಹಿಷ್ಣುವಾಗಿದ್ದ. ಬೌದ್ಧಧರ್ಮ ಪ್ರಚಾರಕರನ್ನು ಏಷ್ಯದ ಮೂಲೆಮೂಲೆಗೂ ಕಳಿಸಿದುದರ ಪರಿಣಾಮವಾಗಿ ಬೌದ್ಧಧರ್ಮ ಬಹುಬೇಗನೆ ಚೀನ, ಜಪಾನ್, ಟಿಬೆಟ್ ಹಾಗೂ ಮಧ್ಯ ಏಷ್ಯದಲ್ಲಿ ಪ್ರಸರಿಸಿತು.

ಕನಿಷ್ಕ ಕಾಲದಲ್ಲಿ ನಡೆದ ಒಂದು ಮಹತ್ವದ ಘಟನೆಯೆಂದರೆ ಬೌದ್ಧಧರ್ಮದ ನಾಲ್ಕನೆಯ ಮಹಾಸಭೆ. ಸು. 500 ಬೌದ್ಧ ಸಂನ್ಯಾಸಿಗಳು ಇದರಲ್ಲಿ ಭಾಗವಹಿಸಿದ್ದರು. ಉದ್ದಾಮ ಪಂಡಿತರೆನಿಸಿದ ವಸುಮಿತ್ರ, ಅಶ್ವಘೋಷ, ನಾಗಾರ್ಜುನ ಮತ್ತು ಪಾರ್ಶ್ವ ಈ ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಯ ಕಾರ್ಯಕಲಾಪಗಳನ್ನು ನಡೆಸಲು ವಸುಮಿತ್ರ ಅಧ್ಯಕ್ಷನಾಗಿಯೂ ಅಶ್ವಘೋಷ ಉಪಾಧ್ಯಕ್ಷನಾಗಿಯೂ ಇದ್ದರು. ಬೌದ್ಧಧರ್ಮದಲ್ಲಿ ಬೆಳೆದುಬಂದ ಕೆಲವು ವಿವಾದಾಸ್ಪದವಾದ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿ, ಆ ಧರ್ಮಕ್ಕೆ ಒಂದು ಹೊಸ ರೂಪ ಕೊಡುವುದೇ ಈ ಸಭೆಯ ಮೂಲ ಉದ್ದೇಶವಾಗಿತ್ತು. ಪಂಡಿತರು ಬೌದ್ಧ ಸಾಹಿತ್ಯವನ್ನು ಪರಿಶೀಲಿಸಿ ತ್ರಿಪಿಟಕಗಳ ಮೇಲೆ ಭಾಷ್ಯವನ್ನು ಬರೆದರು. ಅದೇ ಸಮಯದಲ್ಲಿ ಬೌದ್ಧಧರ್ಮೀಯರಲ್ಲಿದ್ದ ಭಿನ್ನಾಭಿಪ್ರಾಯಗಳಿಂದ ಮತದ ಏಕತೆಗೆ ಭಂಗ ಬಂದು ಇಬ್ಭಾಗವಾಗಿ, ಹೀನಯಾನ ಮತ್ತು ಮಹಾಯಾನಗಳೆಂಬ ಎರಡು ಪಂಗಡಗಳು ಹುಟ್ಟಿಕೊಂಡುವು.

ಬೋಧಿಸತ್ತ್ವ : ಮಥುರ

ಬುದ್ಧನಿಂದ ಪ್ರಾರಂಭವಾಗಿ ಅಶೋಕನ ರಾಜಾಶ್ರಯ ಪಡೆದು ಪ್ರಬಲವಾದ ಬೌದ್ಧಧರ್ಮ ಈ ಒಡಕಿನಿಂದಾಗಿ ಬಲಗುಂದಿತು. ಮೊದಲು ಬುದ್ಧನ ಲಾಂಛನವನ್ನು ಮಾತ್ರ ಪೂಜಿಸುತ್ತಿದ್ದರೆ, ಮಹಾಯಾನದ ಉಗಮದಿಂದಾಗಿ ಬುದ್ಧನನ್ನು ದೇವರ ಅವತಾರವೆಂದು ಬಗೆದು ಅವನ ಪ್ರತಿಮೆಯನ್ನು ಪೂಜಿಸತೊಡಗಿದರು. ಮಹಾಯಾನ ಪಂಗಡದವರು ಕೇವಲ ಭಗವಾನ್ ಬುದ್ಧನ ಹಾಗೂ ಅವನ ಭಕ್ತರ ನಡುವೆ ವಾಹಕರೆಂದು ನಂಬಲಾದ

ಬುದ್ಧನ ಶಿರಸ್ಸು : ಮಥುರ

ಬೋಧಿಸತ್ತ್ವರನ್ನೂ ಪೂಜಿಸತೊಡಗಿದರು. ಆದ್ದರಿಂದ ಮಹಾಯಾನವನ್ನು ಬೋಧಿಸತ್ತ್ವ ಯಾನವೆಂತಲೂ ಹೆಸರಿಸಲಾಗಿದೆ. ಜನಸಾಮಾನ್ಯರ ಭಾಷೆಯಾದ ಪಾಲಿಯಲ್ಲಿ ಮೊದಲು ಬೌದ್ಧಧರ್ಮದ ಗ್ರಂಥಗಳನ್ನು ಬರೆಯಲಾಗುತ್ತಿತ್ತು; ಆದರೆ ಮಹಾಯಾನ ಪಂಗಡದ ಉದಯದಿಂದಾಗಿ ಸಂಸ್ಕೃತ ಬಳಕೆಗೆ ಬಂತು. ಕನಿಷ್ಕ ಸ್ವತಃ ಮಹಾಯಾನ ಬೌದ್ಧಧರ್ಮವನ್ನು ಸ್ವೀಕರಿಸಿ ತನ್ನ ವಿಸ್ತಾರವಾದ ಸಾಮ್ರಾಜ್ಯದಲ್ಲಿ ಇದು ಹರಡಲು ಕಾರಣನಾದ.

ಕಲೆ ಮತ್ತು ವಿದ್ಯೆಗೂ ಕನಿಷ್ಕ ಆಶ್ರಯದಾತನಾಗಿದ್ದ. ಬೌದ್ಧ ತತ್ತ್ವಜ್ಞಾನಿಗಳಾದ ಅಶ್ವಘೋಷ, ಪಾಶ್ವ ಮತ್ತು ವಸುಮಿತ್ರ, ಮಹಾವಿದ್ವಾಂಸನಾದ ಸಂಘರಕ್ಷಕ, ಮಹಾಯಾನ ತತ್ತ್ವನಿರೂಪಕನಾದ ನಾಗಾರ್ಜುನ, ಚರಕನೆಂಬ ವೈದ್ಯ ವಿಶಾರದ, ಮಂತ್ರಿ ಮತ್ತು ರಾಜಕಾರಣಕುಶಲಿ, ಮಾಥರ ಹಾಗೂ ಎಜೆಸಿಲಾನ್‌ನೆಂಬ ವಾಸ್ತುಶಿಲ್ಪಿಗಳು– ಇವರೆಲ್ಲ ಕುಷಾಣ ದೊರೆಯ ಆಶ್ರಯ ಪಡೆದು ಸಾಹಿತ್ಯ, ಧರ್ಮ, ತತ್ತ್ವಜ್ಞಾನ, ಕಲೆ ಹಾಗು ವಿಜ್ಞಾನಗಳನ್ನು ಅಭಿವೃದ್ಧಿಪಡಿಸಿದರು. ಕನಿಷ್ಕ ವಾಸ್ತುಶಿಲ್ಪದಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದ. ಪೆಷಾವರ್, ಮಥುರ, ತಕ್ಷಶಿಲೆ ಹಾಗೂ ಕನಿಷ್ಕಪುರಗಳಲ್ಲಿರುವ ಹಲವಾರು ಬೌದ್ಧ ವಿಹಾರಗಳು ಮತ್ತು ಶಿಲ್ಪಗಳು ಆ ಕಾಲದ ಕಲಾಪ್ರೌಢಿಮೆಯ ಪ್ರತೀಕಗಳಾಗಿವೆ. ಕನಿಷ್ಕ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ್ದಲ್ಲದೆ, ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಜನಪ್ರಿಯತೆಗಳಿಸಿ ದೇಶವನ್ನು ಉಚ್ಛ್ರಾಯಸ್ಥಿತಿಗೆ ತಂದ. ಮಹಾಯಾನ ಬೌದ್ಧಧರ್ಮಾಭಿಮಾನಿಯಾದರೂ ಕನಿಷ್ಕ ಸರ್ವಧರ್ಮಸಹಿಷ್ಣುವಾಗಿದ್ದನೆಂಬುದಕ್ಕೆ ಅವನ ಕಾಲದಲ್ಲಿ ಮಥುರದಲ್ಲಿ ಊರ್ಜಿತಸ್ಥಿತಿಯಲ್ಲಿದ್ದ ಜೈನಸಂಘವೂ ಆತ ಮಾಡಿದ ಭಾರತೀಯ ಸಂಸ್ಕೃತಿಯ ಪುನರುಜ್ಜೀವನ ಕಾರ್ಯವೂ ದೃಷ್ಟಾಂತಗಳಾಗಿವೆ. ಆತ ರೋಂ ಹಾಗೂ ಚೀನದೊಂದಿಗೆ ವ್ಯಾಪಾರ ಸಂಬಂಧವನ್ನಿರಿಸಿಕೊಂಡಿದ್ದ.

ಬುದ್ಧ : ಮಥುರ

ಕನಿಷ್ಕನ ಅನಂತರ ಬಂದ ದೊರೆ ವಸಿಷ್ಕ. ಆದರೆ ಈ ದೊರೆ ಅಷ್ಟು ಪ್ರಬಲನಲ್ಲದ ಕಾರಣ ಇವನ ರಾಜ್ಯ ಕೇವಲ ಮಥುರ ಹಾಗೂ ಅದರ ಸುತ್ತಮುತ್ತಣ ಪ್ರದೇಶಗಳಿಗೇ ಸೀಮಿತವಾಗಿತ್ತು.

ಅನಂತರ ದೊರೆಯಾದ ಹುವಿಷ್ಕ ಕುಷಾಣರ ರಾಜ್ಯವನ್ನು ಸುಸ್ಥಿತಿಗೆ ಒಯ್ದ. ಬೌದ್ಧಧರ್ಮಕ್ಕೆ ಆಶ್ರಯ ನೀಡಿದ ಹುವಿಷ್ಕ 120–138ರಲ್ಲಿ ರಾಜ್ಯವಾಳಿದ. ಕನಿಷ್ಕ ಕಟ್ಟಿಸಿದ ವಿಪುಲವಾದ ಸ್ಮಾರಕಗಳಿಂದಾಗಿ ಪೆಷಾವರ್ ಅಲಂಕೃತವಾದರೆ ಹುವಿಷ್ಕ ಕಟ್ಟಸಿದ ವಿಪುಲವಾದ ಸ್ಮಾರಕಗಳಿಂದ ಮಥರ ಕಂಗೊಳಿಸಿತು.

ಕುಷಾಣರ ವಂಶಕ್ಕೆ ಸೇರಿದ ಕೊನೆಯ ಮುಖ್ಯ ಅರಸ 1ನೆಯ ವಾಸುದೇವ. ಇವನ ಆಳ್ವಿಕೆಯ ಕಾಲ 152–177. ಇವನ ಶಾಸನಗಳು ಮಥುರದಲ್ಲಿ ಲಭಿಸಿವೆ. ಇವನ ನಾಣ್ಯಗಳಲ್ಲಿ ಶಿವನ ಲಾಂಛನವಿದೆ. ಮೊದಲನೆಯ ವಾಸುದೇವ ವಿದ್ವಾಂಸರಿಗೆ ಆಶ್ರಯದಾತನಾಗಿದ್ದ. ಅನಂತರ ಬಂದ ಕುಷಾಣ ರಾಜರು ಅಶಕ್ತರಾಗಿದ್ದುದರಿಂದ ಕನಿಷ್ಕ ನಿರ್ಮಿಸಿದ ವಿಸ್ತಾರವಾದ ರಾಜ್ಯ ನಾಶವಾಯಿತು. ಕುಷಾಣ ವಂಶಕ್ಕೆ ಸೇರಿದ ಹಲವು ಪುಟ್ಟ ರಾಜರು ಭಾರತದ ವಾಯುವ್ಯ ಭಾಗದಲ್ಲಿ 9ನೆಯ ಶತಮಾನದವರೆಗೂ ಆಳುತ್ತಿದ್ದರು.

ಮೌರ್ಯ ಸಾಮ್ರಾಜ್ಯ ಅಳಿದ ಅನಂತರ ಇಳಿಮುಖವಾಗಿದ್ದ ಭಾರತದ ಸಂಸ್ಕೃತಿಯನ್ನು ಪುರಸ್ಕರಿಸಿ ಕುಷಾಣರು ಉತ್ತರ ಭಾರತದ ಹಲವಾರು ಭಾಗಗಳನ್ನು ಸು. 300 ವರ್ಷಗಳವರೆಗೆ ಸಮರ್ಪಕವಾಗಿ ಆಳಿ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಬೌದ್ಧಿಕ ಹಾಗೂ ಕಲಾಕ್ಷೇತ್ರಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದಲ್ಲದೆ ಹೊಸ ಚೈತನ್ಯವನ್ನೂ ನೀಡಿದರು.

ಮಹಾಯಾನ ಬೌದ್ಧಪಂಥದ ಉದಯ, ಗಾಂಧಾರ ಶೈಲಿಯ ವಾಸ್ತು ಶಿಲ್ಪಕಲೆ, ಬುದ್ಧನ ಪ್ರತಿಮೆಯ ನಿರ್ಮಾಣ, ವಿವಿಧ ದೇಶಗಳೊಂದಿಗೆ ರಾಜಕೀಯ ಹಾಗೂ ವ್ಯಾಪಾರ ಸಂಬಂಧ, ಪಂಡಿತರಿಗೆ ಆಶ್ರಯ ಹಾಗೂ ಪರಧರ್ಮ ಸಹಿಷ್ಣತೆ–ಇವು ಕುಷಾಣರ ಕಾಲದ ಗಮನಾರ್ಹ ಕೊಡುಗೆಗಳು. (ಎ.ಕೆ.ಎಸ್.ಎಚ್.ಎ.)



ಜೈನತೀರ್ಥಂಕರನ ಶಿರಸ್ಸು : ಮಥುರ

**ನಾಣ್ಯಗಳು:** ಕುಷಾಣರ ನಾಣ್ಯಗಳಿಂದ ಅವರ ಚರಿತ್ರೆಯನ್ನು ಪುನರ್ರಚಿಸಬಹುದು. ಕನಿಷ್ಕನಿಗಿಂತ ಹಿಂದಿನವರಾದ ಒಂದನೆಯ ಕುಜುಲ ಕಡ್‌ಫೀಸಿಸ್ ಮತ್ತು ಎರಡನೆಯ ವಿಮ ಕಡ್‌ಫೀಸಸ್ ಇವರ ಚರಿತ್ರೆಯನ್ನು ತಿಳಿಯಲು ನಾಣ್ಯಗಳಲ್ಲದೆ ಬೇರೆ ಆಧಾರಗಳೇ ಇಲ್ಲ. ಕುಜುಲ ಕಡ್‌ಫೀಸಿಸ್ ಭಾರತದಲ್ಲಿ ಆಳಿದ ಕೊನೆಯ ಗ್ರೀಕ್ ರಾಜ ಹರ್ಮಿಯಸನನ್ನು ಸೋಲಿಸಿ ಅವನ ರಾಜ್ಯವನ್ನು ಆಕ್ರಮಿಸುವ ಮುನ್ನ ಅವನ ಜೊತೆಯಲ್ಲೇ ಸ್ವಲ್ಪಕಾಲ ರಾಜ್ಯವನ್ನಾಳುತ್ತಿದ್ದನೆಂಬ ವಿಷಯ ನಾಣ್ಯಗಳಿಂದ ತಿಳಿದುಬಂದಿದೆ. ಒಂದು ನಾಣ್ಯದ ಮುಂಭಾಗದಲ್ಲಿ ಹರ್ಮಿಯಸನ ಎದೆ ವಿಗ್ರಹ ಮತ್ತು ಗ್ರೀಕ್ ಲಿಪಿಯಿಂದ ಕೂಡಿದ ಶಾಸನ ಇವೆ. ಹಿಂಭಾಗದಲ್ಲಿ ಬಲಗೈಯಲ್ಲಿ ದೊಣ್ಣೆ ಮತ್ತು ಎಡಗೈಯಲ್ಲಿ ಸಿಂಹದ ಚರ್ಮದೊಂದಿಗೆ ನಿಂತ ಹೆರಾಕ್ಲಿಸನ ಚಿತ್ರವಿದೆ. ಖರೋಷ್ಠಿ ಲಿಪಿಯಲ್ಲಿ ಕುಜಲಕಸ ಎಂಬ ಶಾಸನವಿದೆ. ಈ ತಾಮ್ರದ ನಾಣ್ಯದ ಕಾಲ ಸು. 40–50. ಇನ್ನೊಂದು ತಾಮ್ರದ ನಾಣ್ಯದಲ್ಲಿ ಅವನೊಬ್ಬನ ಚಿತ್ರ ಮಾತ್ರ ಇರುವುದರಿಂದ ಆತ ಹರ್ಮಿಯಸನನ್ನು ಸೋಲಿಸಿ ತಾನೊಬ್ಬನೇ ರಾಜ್ಯವನ್ನಾಳಲು ಪ್ರಾರಂಭಿಸಿದನೆಂದು ಊಹಿಸಬಹುದು. ಮುಂಭಾಗದ ಗ್ರೀಕ್ ಲಿಪಿಯ ಶಾಸನದಲ್ಲೂ ಹಿಂಭಾಗದ ಖರೋಷ್ಠಿ ಲಿಪಿಯ ಶಾಸನದಲ್ಲೂ ಅವನ ಹೆಸರಿದೆ. ಮೂರನೆಯ



ಬುದ್ಧನ ಜೀವನವನ್ನು ಚಿತ್ರಿಸುವ ಶಿಲ್ಪಗಳು : ಮಥುರ

ರೀತಿಯ ತಾಮ್ರದ ನಾಣ್ಯದಲ್ಲಿ ಮುಂಭಾಗದಲ್ಲಿ ರಾಜನ ತಲೆಯೂ ಗ್ರೀಕ್ ಶಾಸನವೂ ಹಿಂಭಾಗದಲ್ಲಿ ಆಸೀನ ರಾಜನ ಚಿತ್ರವೂ ಇವೆ.

ಸು. 85–120 ಆಳುತ್ತಿದ್ದ ವಿಮ ಕಡ್‍ಫೀಸಿಸನ ಚಿನ್ನದ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನ ನಾಣ್ಯಗಳಿಂದ ಈತ ಶಿವಭಕ್ತನೆಂದು ಕಾಣುತ್ತದೆ. ಚಿನ್ನದ ನಾಣ್ಯದ ಮುಂಬದಿಯಲ್ಲಿ ಅಂಕುಶ ಮತ್ತು ದೊಣ್ಣೆಗಳೊಂದಿಗೆ ರಾಜನ ಎದೆ ಚಿತ್ರವೂ ಹಿಂಬದಿಯಲ್ಲಿ ಬಲಗೈಯಲ್ಲಿ ತ್ರಿಶೂಲ–ಪರಶುಗಳೆರಡೂ ಕೂಡಿರುವ ಆಯುಧ ಹಿಡಿದ ಶಿವನ ಚಿತ್ರವೂ ಇವೆ. ಎಡಗೈಯ ಮೇಲೆ ಚರ್ಮವಿದೆ (ಬಹುಶಃ ಹುಲಿಯ ಚರ್ಮ). ಹಿಂಬದಿಯಲ್ಲಿ



ಪಾನಮತ್ತ ಯುವತಿ; ಮಥುರ

"ಮಹಾರಾಜನ ಸರ್ವಲೋಗ ಈಶ್ವರ ಮಹೇಶ್ವರಸ ವಿಮಾಕತ್ ಪಿಸಸ ತ್ರಾತರಸ" ಎಂದಿದೆ. ಚಿನ್ನದ ಇನ್ನೊಂದು ಚಿಕ್ಕ ನಾಣ್ಯದ ಮೇಲಿನ ಚೌಕದಲ್ಲಿ ರಾಜನ ತಲೆ ಇದೆ. ಹಿಂಬದಿಯಲ್ಲಿ ತ್ರಿಶೂಲಕ್ಕೆ ಸೇರಿಸಿದ ಪರಶುವುಂಟು. ಮಹಾ ರಾಜಾಧಿರಾಜ ವಿಮಾಕತ್ ಪಿಸಸ ಎಂಬ ಖರೋಷ್ಠಿ ಶಾಸನವಿದೆ. ತಾಮ್ರದ ನಾಣ್ಯದಲ್ಲಿ ನಿಂತಿರುವ ರಾಜನ ಚಿತ್ರದಲ್ಲಿ ಉದ್ದವಾದ ಕೋಟು ಷರಾಯಿಗಳಿವೆ. ಹಿಮ್ಮುಖದಲ್ಲಿ ಬಸವನೊಂದಿಗೆ ನಿಂತಿರುವ ಶಿವನ ಚಿತ್ರವಿದೆ.

ಕನಿಷ್ಕನ ನಾಣ್ಯಗಳ ಮೇಲೆ ಗ್ರೀಕರ ಮತ್ತು ಇರಾನಿನ ದೇವತೆಗಳೊಡನೆ ಬುದ್ಧ ಮತ್ತು ಈಶ್ವರ ಚಿತ್ರಗಳಿವೆ. ಮತೀಯ ವಿಚಾರಗಳಲ್ಲಿ ಆತ ಉದಾರ ನೀತಿ ತಳೆದಿದ್ದನೆಂಬುದಕ್ಕೆ ಇದು ದೃಷ್ಟಾಂತ. ಅವನ ಚಿನ್ನದ ನಾಣ್ಯವೊಂದರಲ್ಲಿ ಓಡುತ್ತಿರುವ ವಾಯುದೇವತೆಯ ಚಿತ್ರವಿದೆ. ಅವನ ಅನಂತರ ಬಂದ ಹುವಿಷ್ಕ ಮತ್ತು ವಾಸುದೇವರೂ ಇದೇ ಬಗೆಯ ನಾಣ್ಯಗಳನ್ನು ಅಚ್ಚು ಹಾಕಿಸಿದರು. (ಎಸ್.ಎಂ.)

**ಶಾಸನಗಳು :** ಕುಷಾಣರ ಶಾಸನಗಳು ಉತ್ತರ ಪ್ರದೇಶ, ಪಶ್ಚಿಮ ಪಾಕಿಸ್ತಾನ, ಕಾಬೂಲ್, ಬಲೂಚಿಸ್ತಾನ ಮತ್ತು ಮಧ್ಯ ತುರ್ಕಿಸ್ತಾನಗಳ ಅನೇಕ ಕಡೆಗಳಲ್ಲೂ ಒಂದು ಶಾಸನ ಸಾಂಚಿಯಲ್ಲೂ (ಮಧ್ಯಪ್ರದೇಶ) ಸಿಕ್ಕಿವೆ. ಇವನ್ನು ಶಿಲೆ, ತಾಮ್ರ ಬೆಳ್ಳಿ ಮತ್ತು ಕಂಚುಗಳ ಫಲಕಗಳ ಮೇಲೂ ತೆಳುವಾದ (ಬೆಳ್ಳಿಯ) ಹಾಳೆಗಳ ಮೇಲೂ ಬೌದ್ಧ ಹಾಗೂ ಜೈನ ಪ್ರತಿಮೆಗಳ ಪೀಠಗಳ ಮೇಲೂ ಪಾತ್ರೆ ಮತ್ತು ಯೂಪಕರಂಡಕಗಳ ಮೇಲೂ ಕೊರೆಯಲಾಗಿದೆ.

ಶಾಸನಗಳು ಅಂದು ಅತ್ಯಧಿಕ ಪ್ರಸಾರದಲ್ಲಿದ್ದ ಬ್ರಾಹ್ಮೀ ಹಾಗೂ ಖರೋಷ್ಠಿ ಲಿಪಿಗಳಲ್ಲಿವೆ. ಭಾಷೆ ಪ್ರಾಕೃತ ಮತ್ತು ಸಂಸ್ಕೃತದಿಂದ ಹೆಚ್ಚು ಪ್ರಭಾವಿತವಾದ್ದು ಕಂಡುಬರುತ್ತದೆ. ಶಾಸನಗಳ ಪಾಠಗಳು ಸಂಕ್ಷಿಪ್ತವಾಗಿವೆ. ಇವು ಸಾಮಾನ್ಯವಾಗಿ ಗದ್ಯದಲ್ಲಿವೆ. ಅಲ್ಲಲ್ಲಿ ಒಂದೆರಡು ಶ್ಲೋಕಗಳೂ ಕಾಣಸಿಗುತ್ತವೆ. ನಾಣ್ಯಗಳ ಮೇಲಿರುವ ಶಾಸನಗಳು ಖರೋಷ್ಠಿ ಅಥವಾ ಗ್ರೀಕ್ ಲಿಪಿಯಲ್ಲಿವೆ. ಅವುಗಳ ಭಾಷೆ ಪ್ರಾಕೃತ, ಪೂರ್ವ ಪರ್ಷಿಯನ್ ಅಥವಾ ಗ್ರೀಕ್.

ಶಾಸನಗಳು ಸಿದ್ಧಂ ಎಂಬ ಮಂಗಳವಾಚಕದಿಂದ, ಆಳುವ ರಾಜನ ಸಂವತ್ಸರದಿಂದ ಅಥವಾ ಅವನ ಪ್ರಶಸ್ತಿಗಳಿಂದ ಪ್ರಾರಂಭವಾಗುತ್ತವೆ. ಅನಂತರ ಶಾಸನದ ಉದ್ದೇಶ

ಮಥುರದ ಎರಡು ಶಿಲ್ಪ ಕೃತಿಗಳು, ಐರೋಪ್ಯ ಪ್ರಭಾವವನ್ನಿಲ್ಲಿ ಕಾಣಬಹುದು

ಹೇಳಲಾಗಿರುತ್ತದೆ. ಇವುಗಳಲ್ಲಿ ದಾನಶಾಸನಗಳೇ ಅಧಿಕ. ಸ್ತೂಪ ಹಾಗೂ ಚೈತ್ಯಗಳ ನಿರ್ಮಾಣ, ಶಾಕ್ಯಮುನಿಯ (ಬುದ್ಧ) ಶಾರೀರಿಕ ಅವಶೇಷಗಳ ಅಥವಾ ಜೈನಪ್ರತಿಮೆಗಳ ಪ್ರತಿಷ್ಠಾಪನೆ–ಇಂಥ ಸಂದರ್ಭಗಳಲ್ಲೆತ್ತ ದಾನಗಳ ವಿವರಗಳಿರುತ್ತವೆ. ದಾನಕೊಟ್ಟವರಿಗೆ, ಅವರ ಸಂಬಂಧಿಕರಿಗೆ ಅಥವಾ ಪ್ರಜಾಸಾಮಾನ್ಯರಿಗೆ ಶುಭಕೋರಿಕೆಯೊಂದಿಗೆ ಶಾಸನ ಅಂತ್ಯವಾಗುತ್ತದೆ. ಕೆಲವು ಶಾಸನಗಳಲ್ಲಿ ಅವುಗಳಲ್ಲಿ ಉಕ್ತವಾದ ವಿಗ್ರಹ ಮುಂತಾದವನ್ನು ನಿರ್ಮಿಸಿದ ಶಿಲ್ಪಿಗಳ, ಶಾಸನಗಳನ್ನು ಬರೆದವರ ಮತ್ತು ಕೊರೆದವರ ಹೆಸರುಗಳೂ ಕಂಡುಬರುತ್ತವೆ. ಈ ಶಾಸನಗಳು ಆ ಕಾಲದ ವಾಸ್ತುಶಿಲ್ಪದ ಅಧ್ಯಯನಕ್ಕೆ ಅತ್ಯಂತ ಸಹಾಯಕ.

ಶುಕಭಾಷಿಣಿ ಮಥುರ

ಶಾಸನಗಳಲ್ಲಿ ಕೊಡಲಾಗಿರುವ ತೇದಿಯ ವಿವರಗಳು ಕುಷಾಣರ ಪ್ರಖ್ಯಾತ ಚಕ್ರವರ್ತಿ 1ನೆಯ ಕನಿಷ್ಕನ ರಾಜ್ಯ ಸಂವತ್ಸರಕ್ಕೆ ಅಥವಾ ಆಯಾ ಕಾಲಗಳಲ್ಲಿ ಆಳುತ್ತಿದ್ದ ಇತರ ಕುಷಾಣ ಚಕ್ರವರ್ತಿಗಳ ರಾಜ್ಯಸಂವತ್ಸರಗಳಿಗೆ ಸಂಬಂಧಿಸಿವೆ. ಅವುಗಳಲ್ಲಿ ಸಂವತ್ಸರ ಮಾಸ ದಿವಸಗಳ, ಕೆಲವೊಮ್ಮೆ ಇವುಗಳ ಜೊತೆಗೆ ನಕ್ಷತ್ರದ ಉಲ್ಲೇಖ ಇರುತ್ತವೆ. ಸಂವತ್ಸರ ಮತ್ತು ದಿವಸ ಸಂಖ್ಯೆ ಸಾಮಾನ್ಯವಾಗಿ ಅಕ್ಷರ ಮತ್ತು ಅಂಕಿ ಎರಡರಲ್ಲೂ ಇರುತ್ತವೆ. ಈ ವಿವರಗಳನ್ನು ನೀಡುವಾಗ ಋತುಮಾನ ಅಥವಾ ಚಾಂದ್ರಮಾನ ಅಥವಾ ಯವನರ ಪದ್ಧತಿಯನ್ನು ಅನುಸರಿಸಲಾಗಿದೆ.

ಕುಷಾಣ ಎಂಬ ಪ್ರಯೋಗವೇ ಎಲ್ಲ ಶಾಸನಗಳಲ್ಲೂ ಇಲ್ಲ. ಮಧ್ಯ ತುರ್ಕಿಸ್ತಾನವನ್ನುಳಿದು ಇತರ ಪ್ರದೇಶಗಳಲ್ಲಿ ದೊರಕಿದ ಶಾಸನಗಳಲ್ಲಿ ಖುಷಣ, ಗುಷಣ ಮತ್ತು ಕುಷಾಣ ಎಂಬ ಪ್ರಯೋಗಗಳೂ ಮಧ್ಯ ತುರ್ಕಿಸ್ತಾನದಲ್ಲಿಯ ಶಾಸನಗಳಲ್ಲಿ ಕುಷಣ ಹಾಗೂ ಕುರ್ಷನ ಎಂಬ ಪ್ರಯೋಗಗಳೂ ಇವೆ. ನಾಣ್ಯಗಳ ಮೇಲಿರುವ ಶಾಸನಗಳಲ್ಲಿ ಕುಷನ ಮತ್ತು ಕೊಷಾನೊ ಎಂಬ ರೂಪಗಳುಂಟು.

ಹಂಸ ವಿನೋದಿನಿ : ಮಥುರ

ಭಾರತದಲ್ಲಿ ಇಂದಿಗೂ ಅಧಿಕ ಪ್ರಸಾರದಲ್ಲಿರುವ ಶಕಸಂವತ್ಸರ ಕುಷಾಣರ ಕೊಡುಗೆ. ಇದರ ಮೂಲಪುರುಷ ಒಂದನೆಯ ಕನಿಷ್ಕನೋ ಅವನ ಹಿಂದಿನವನಾದ ಎರಡನೆಯ ಕಡ್‌ಫೀಸಿಸನೊ ಎಂಬ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಕನಿಷ್ಕನೇ ಇದರ ಪ್ರವರ್ತಕನೆಂಬುದು ಶಾಸನಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ.

ಕುಷಾನ ರಾಜರಲ್ಲಿ 1ನೆಯ ಕನಿಷ್ಕನ ಪೂರ್ವಜರು ಅನೇಕ ವಿಷಯಗಳಲ್ಲಿ ಯವನ ರೀತಿಗಳನ್ನನುಸುತ್ತಿದ್ದರು. ಕನಿಷ್ಕ ಮತ್ತು ಅವನ ಅನಂತರದವರು ಹೆಚ್ಚುಹೆಚ್ಚಾಗಿ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗಳ ಪ್ರಭಾವಕ್ಕೊಳಗಾದರು. ಈ ರಾಜರಲ್ಲೊಬ್ಬ ವಾಸುದೇವ ಎಂಬ ಭಾರತೀಯ ಹೆಸರನ್ನಿಟ್ಟುಕೊಂಡಿದ್ದುದೂ ಕನಿಷ್ಕನ ಕಾಲದಿಂದ ಸಂಸ್ಕೃತ ಭಾಷೆಗೆ ಶಾಸನಗಳಲ್ಲಿ ಹೆಚ್ಚು ಪ್ರಾಧಾನ್ಯ ದೊರೆತಿತ್ತೆಂಬುದೂ ಭಾರತದಲ್ಲಿ ಹುಟ್ಟಿದ ಬೌದ್ಧ ಧರ್ಮ ಮಧ್ಯ ಏಷ್ಯದವರೆಗೆ ಹಬ್ಬಿತ್ತೆಂಬುದೂ ಇವರ ಶಾಸನಗಳ ಅಧ್ಯಯನದಿಂದ ವ್ಯಕ್ತವಾಗುತ್ತವೆ.

ಮಥುರದ ಒಂದು ಸ್ತ್ರೀಶಿಲ್ಪ

ಕುಷಾಣ ಅರಸರಿಗೆ ಅನೇಕ ಯವನ ಹಾಗೂ ಭಾರತೀಯ ಬಿರುದುಗಳಿದ್ದುವೆಂಬುದು ಇವರ (ನಾಣ್ಯಗಳ ಮೇಲಿನ ಶಾಸನಗಳೂ ಸೇರಿದಂತೆ) ಶಾಸನಗಳಿಂದ ತಿಳಿದುಬರುತ್ತದೆ. ಷಾಹಿ (ಶಾಹಿ) ಶಾವೊನನೊ ಶಾವೊ (ಶಾಹನ್‌ಶಾಹ್ : ರಾಜಾಧಿ ರಾಜ), ಮುರೋಡ ಶಕ ಮುರುಣ್ಣ:ಅಧಿಪತಿ), ಮರ್ಝುಕ, (ಶಕ:ಗೃಹಪತಿ), ಕಇಸರ ಇವು ಯವನ ಬಿರುದುಗಳು. ಬ್ಯಾಸಿಲಿಯಸ್ ಬ್ಯಾಸಿಲಿಯನ್ (ರಾಜಾಧಿರಾಜ) ಎಂಬುದು ಗ್ರೀಕ್ ಬಿರುದು. ಮಹರಜ (ಮಹಾರಾಜ), ರಜತಿರಜ (ರಾಜಾಧಿರಾಜ) ಮಹಿಶ್ವರ (ಮಹೇಶ್ವರ), ದೇವಪುತ್ರ , ಧ್ರಮಿಠಿದ (ಧರ್ಮಸ್ಥಿತ) ಅಥವಾ ಸಚಧ್ರ ಮಠಿದ (ಸತ್ಯಧರ್ಮಸ್ಥಿತ), ಸರ್ವಲೋಗ ಇಸ್ವರ (ಸರ್ವಲೋಕೇಶ್ವರ) ಹಾಗೂ ತ್ರತರ (ತ್ರಾತಾ) ಇವು ಭಾರತೀಯ ಬಿರುದುಗಳು. (ಎಂ.ಎನ್.ಕೆ.)

**ವಾಸ್ತು ಶಿಲ್ಪ:** ಭಾರತೀಯ ವಾಸ್ತುಶಿಲ್ಪದ ಚರಿತ್ರೆಯಲ್ಲಿ ಕುಷಾಣರ ಪಾತ್ರ ಮಹತ್ತರವಾದ್ದು. ಅವರ ಆಳ್ವಿಕೆಯಲ್ಲಿ ಮಥುರ ಮತ್ತು ಗಾಂಧಾರ ರೀತಿಯ ಶಿಲ್ಪಗಳು ಬಳಕೆಗೆ ಬಂದುವು. ಕನಿಷ್ಕ, ಹುವಿಷ್ಕ ಮತ್ತು ವಾಸುದೇವ ಇವರ ಕಾಲದಲ್ಲಿ ಮಥುರಾ ಶಿಲ್ಪ ಮತ್ತು ವಾಸ್ತುಶಿಲ್ಪ ಅತ್ಯಂತ ಉನ್ನತಮಟ್ಟಕ್ಕೇರಿದುವು. ಸುಮಾರು 5,000 ಪ್ರಾಚೀನ ಅವಶೇಷಗಳು ಮಥುರದಲ್ಲಿ ಸಿಕ್ಕಿವೆ. ಅವುಗಳಲ್ಲಿ ಹೆಚ್ಚಿನ ಸಂಖ್ಯೆಯವು ಕುಷಾಣರ ಕಾಲಕ್ಕೆ ಸೇರಿದವು.

ಮಥುರಶಿಲ್ಪಿಗಳು ಅನೇಕ ಸ್ತೂಪಗಳನ್ನು ಭಾರ್‌ಹುತ್ ಮತ್ತು ಸಾಂಚಿಗಳಲ್ಲಿಯ ಸ್ತೂಪಗಳ ಮಾದರಿಯಲ್ಲಿ ರಚಿಸಿದರು. ಕಂಕಾಲಿ ತೀಲಾದಲ್ಲಿದ್ದ ಸ್ತೂಪವೂ ಹುವಿಷ್ಕನ ಕಾಲದ ಭೂತೇಶ್ವರದ ಮತ್ತೊಂದು ಸ್ತೂಪವೂ ನಾಶವಾಗಿದ್ದರೂ ಅವಕ್ಕೆ ಸೇರಿದ ಅನೇಕ ಭಾಗಗಳು ಉಳಿದುಬಂದಿವೆ. ಪ್ರಾಕಾರದ ಕಂಬಗಳ ಮೇಲಿನ ಶಾಲಭಂಜಿಕಾವಿಗ್ರಹಗಳನ್ನು ಅತ್ಯಂತ ನಾಜೂಕಿನಿಂದ ಕೆತ್ತಲಾಗಿದೆ. ಶಾಲವೆಂಬ ಹೂಗಳನ್ನು ಮರಗಳ ಕೆಳಗೆ ನಿಂತು ಕೀಳುತ್ತಿರುವ ಬಾಲಕಿಯರ ಶಿಲ್ಪಗಳು ಥಳುಕು ವೈಯಾರಗಳಿಂದ ಕೂಡಿದೆ. ಯುವತಿ ಅಶೋಕವೃಕ್ಷವನ್ನು ಕಾಲಿನಿಂದ ಒದೆಯುತ್ತಿರುವಂತೆ ತೋರಿಸಲಾಗಿದೆ. ವೃಕ್ಷವನ್ನು ಒದ್ದರೆ ಅದು ಹೆಚ್ಚು ಹೂ ಬಿಡುವುದೆಂಬ ನಂಬಿಕೆ ಆಗ ಇತ್ತು. ಕೆಲವು ಶಿಲ್ಪಗಳಲ್ಲಿ ಯುವತಿಯರು ಹಕ್ಕಿಗಳ ಜೊತೆಯಲ್ಲಿ ಆಡುತ್ತಿರುವಂತೆ ಕೆತ್ತಲಾಗಿದೆ. ಯುವತಿಯೊಬ್ಬಳು ಸ್ನಾನಮಾಡಿ ತನ್ನ ತಲೆಕೂದಲನ್ನು ಹಿಂಡುವಾಗ ಬೀಳುವ ನೀರನ್ನು ಕುಡಿಯಲು ಬಾಯಿಬಿಟ್ಟು ಕೊಂಡಿರುವ ಹಕ್ಕಿಯ ಶಿಲ್ಪ ಅತ್ಯಂತ ಸುಂದರವಾದ್ದು. ಯುವತಿಯರು ಉಡುಪು ಧರಿಸುತ್ತಿರುವಂತೆ ಕಂಬಗಳ ಮೇಲಿನ ಕೆಲವು ಶಿಲ್ಪಗಳಲ್ಲಿ ತೋರಿಸಲಾಗಿದೆ.

ಬೋಧಿಸತ್ತ್ವಮೈತ್ರೇಯ : ಮಥುರ

ಮಥುರಶಿಲ್ಪಕ್ಕೆ ಆಧಾರವಾಗಿದ್ದದ್ದು ಜನಪದ ಕಲೆ. ಮಣ್ಣಿನಲ್ಲಿ ಮಾಡಿದ ನಮೂನೆಗಳೆ ಅದರ ತಯಾರಿಕಾ ತಂತ್ರಕ್ಕೆ ಆಧಾರ. ಶಿಲ್ಪಗಳನ್ನು ಚುಕ್ಕಿಚುಕ್ಕಿಯಿಂದ ಕೂಡಿದ ಕೆಂಪುಮರಳುಗಲ್ಲಿನಿಂದ ಮಾಡಲಾಗಿದೆ. ಅತ್ಯಂತ ಸುಂದರಿಯರೂ ಲಾವಣ್ಯವತಿಯರೂ ಬೆಡಗುಗಾರ್ತಿಯರೂ ಆದ ಯುವತಿಯರು, ಜೈನತೀರ್ಥಂಕರರು, ಬುದ್ಧ ಮತ್ತು ಬೋಧಿಸತ್ತ್ವರನ್ನು ಮಥುರ ಶಿಲ್ಪದಲ್ಲಿ ಹೆಚ್ಚಾಗಿ ಕಾಣಬಹುದು. ಈ ಕಾಲದಲ್ಲಿ ಜೈನರ ಸ್ತೂಪಗಳ ಅನೇಕ ಆಯಾಗಪಟಗಳೂ ಸಿಕ್ಕಿವೆ. ಜೈನ ತೀರ್ಥಂಕರರ ಶಿಲ್ಪಗಳು ಕಾಯೋತ್ಸರ್ಗ (ನಿಡಿದೋಳು ಮೂರ್ತಿಗಳು ಬೆತ್ತಲೆಯಾಗಿ ನಿಂತಿರುವ ಭಂಗಿ) ಮತ್ತು ಪದ್ಮಾಸನಗಳಲ್ಲಿವೆ. ಪ್ರಾರಂಭಕಾಲದ ವಿಗ್ರಹಗಳಲ್ಲಿ ಮುಖ್ಯ ಶಿಲ್ಪವನ್ನು ದೊಡ್ಡ ಆಕಾರದಲ್ಲೂ ಪರಿವಾರದ ಶಿಲ್ಪಗಳನ್ನು ಸಣ್ಣವಾಗಿಯೂ ರೂಪಿಸಿ ಪರಸ್ಪರ ಪ್ರಾಮುಖ್ಯವನ್ನು ತೋರಿಸುವ ತಂತ್ರ ಬಳಕೆಯಲ್ಲಿತ್ತು. ಅನಂತರ ಕಾಲದ ಸರಳ ಲಲಿತ ನಿರೂಪಣೆ ಕಾಣಬರದೆ, ಶಿಲ್ಪಗಳು ಒರಟಾಗಿಯೂ ಭಾರವಾಗಿಯೂ ಇವೆ. ಬುದ್ಧ, ಬೋಧಿಸತ್ತ್ವರ ಶಿಲ್ಪಗಳಲ್ಲಿ ಸಹ ಪುಷ್ಟವಾದ ಬಲಾಢ್ಯದೇಹ ಮತ್ತು ಅದರಲ್ಲಿ ಅಡಕವಾದ ಅಪರಿಮಿತ ಶಕ್ತಿಯ ರೂಪಣೆಯನ್ನು ಕಾಣಬಹುದಿತ್ತಲ್ಲದೆ ಸ್ನಿಗ್ಧತೆ ಮತ್ತು ದೈವೀಶಕ್ತಿಗಳು ಕಾಣುತ್ತಿರಲಿಲ್ಲ. ನಡುವಿನಿಂದ ತಳಭಾಗದ ದೇಹ ಸೆಡೆತು ನಿಂತಿರುವಂತಿತ್ತು. ಚಲನೆಯ ಸೂಚನೆಯಿರಲಿಲ್ಲ.

ಬುದ್ಧನ ಪ್ರತಿಮೆಗಳು ಮೊಟ್ಟಮೊದಲು ಮಥುರ ಶಿಲ್ಪದಲ್ಲಿ ಬಳಕೆಗೆ ಬಂದುವು. ವಾಸುದೇವ ಅಗ್ರವಾಲರ ಅಭಿಪ್ರಾಯದಂತೆ ಮೊಟ್ಟಮೊದಲಿನ ಬುದ್ಧನ ವಿಗ್ರಹಗಳು ಕನಿಷ್ಕನ ಕಾಲಕ್ಕೆ ಸೇರಿದವು. ಕುಳಿತಿರುವ ಅಥವಾ ನಿಂತಿರುವ ಬುದ್ಧನ ತಲೆಯ ಸುತ್ತಣ ಪ್ರಭಾಮಂಡಲ ಕುಷಾಣರ ಕಾಲದಲ್ಲಿ ಬಳಕೆಗೆ ಬಂತು.

ಭಿಕ್ಷುಬಲನೆಂಬ ವ್ಯಕ್ತಿ ಕನಿಷ್ಕನ ಆಳ್ವಿಕೆಯ 3ನೆಯ ವರ್ಷದಲ್ಲಿ ಬೋಧಿಸತ್ತ್ವನ ಮೂರ್ತಿಯನ್ನು (ನಿಂತ ಭಂಗಿಯಲ್ಲಿ) ಸಾರನಾಥದಲ್ಲಿ ಮಾಡಿಸಿದ. ಅವನ ಆಳ್ವಿಕೆಯ 2ನೆಯ ವರ್ಷಕ್ಕೆ ಸೇರಿದ ಮತ್ತೊಂದು ಮೂರ್ತಿ ಕೌಶಾಂಬಿಯಲ್ಲಿ ಸಿಕ್ಕಿದೆ. ಬೋಧಿಸತ್ತ್ವ ಮೈತ್ರೇಯನ ಮೂರ್ತಿ ಬಲಗೈಯ ಅಭಯಮುದ್ರೆ ಮತ್ತು ಎಡಗೈಯ ಅಮೃತಘಟದಿಂದ ಕೂಡಿ ನಿಂತಿದೆ.

ವಿಮ ಕಡ್‌ಫೀಸಿಸ್ ಮತ್ತು ಕನಿಷ್ಕನ ವಿಗ್ರಹಗಳು ಈ ಶೈಲಿಗೆ ಸೇರಿದ್ದರೂ ಉದ್ದನೆಯ ನಿಲುವಂಗಿ, ಪಾದರಕ್ಷೆ ಮುಂತಾದ ಉಡುಗೆಗಳ ಮತ್ತು ವಿಗ್ರಹಗಳ ಲಕ್ಷಣಗಳಿಂದ ಮಧ್ಯ ಏಷ್ಯದ ಶಕಶಿಲ್ಪಿಗಳು ಅವನ್ನು ನಿರ್ಮಿಸಿರಬಹುದೆಂಬುದು ನಿಹಾರ್‌ರಂಜನರ ಅಭಿಪ್ರಾಯ.

ವೈದಿಕ ಮತಕ್ಕೆ ಸೇರಿದ ಬ್ರಹ್ಮ, ಸೂರ್ಯ, ವಿಷ್ಣು, ಶಿವ, ಮಹಿಷಾಸುರಮರ್ದಿನಿ ಮೊದಲಾದ ಮೂರ್ತಿಗಳು ಕುಷಾಣರ ಕಾಲದಲ್ಲಿ ಮಥುರದಲ್ಲಿ ನಿರ್ಮಿತವಾದವು.

ಮಥುರ ಶೈಲಿಯ ಶಿಲ್ಪದ ಪ್ರಭಾವ ವಿದೇಶಗಳಿಗೂ ಹರಡಿತು. ಆಫ್ಘಾನಿಸ್ತಾನದ ಬೆಗ್ರಾಂನಲ್ಲೂ ಇಟಲಿಯ ಪಾಂಪೆಯಲ್ಲೂ ಸಿಕ್ಕಿದ ದಂತದ ಕೆತ್ತನೆಯ ಕೃತಿಗಳು ಮಥುರಶೈಲಿಗೆ ಸೇರಿದವೆಂಬುದು ವಿದ್ವಾಂಸರ ಅಭಿಪ್ರಾಯ.

ಮಥುರ ಶಿಲ್ಪ ಸ್ವಲ್ಪಮಟ್ಟಿಗೆ ಗಾಂಧಾರ ಶಿಲ್ಪದ ಪ್ರಭಾವಕ್ಕೆ ಒಳಗಾದಂತೆ ಕಾಣುತ್ತದೆ. ಸಿಂಹದೊಡನೆ ಹರ್ಕ್ಯುಲಿಸ್ ಹೋರಾಡುವ ಶಿಲ್ಪ ಇದಕ್ಕೊಂದು ನಿದರ್ಶನ. ಕುಬೇರನ ಶಿಲ್ಪದಲ್ಲೂ ಈ ಪ್ರಭಾವವನ್ನು ಸ್ವಲ್ಪಮಟ್ಟಿಗೆ ಕಾಣಬಹುದು. ಪಾನದಲ್ಲಿ ಪ್ರಮತ್ತರಾಗಿರುವಂತೆ ತೋರಿಸುವ ಶಿಲ್ಪಗಳು ಇದೇ ಪ್ರಭಾವದಿಂದ ಬಂದಿರಬಹುದು. ಕ್ರಮೇಣ ಇದರಲ್ಲಿಯೂ ಭಾರತೀಯತೆ ಹೆಚ್ಚಾಗುತ್ತದೆ. 1938ರಲ್ಲಿ ಸಿಕ್ಕಿದ ಬೋಗುಣಿಯೊಂದರ ತಳಭಾಗದಲ್ಲಿರುವ ಶಿಲ್ಪ ಇದಕ್ಕೆ ಒಳ್ಳೆಯ ಉದಾಹರಣೆ. ಅದರಲ್ಲಿ ಪಾನಮತ್ತಳಾದ ಯುವತಿಯೊಬ್ಬಳು ಮಂಡಿ ಊರಿ ಕುಳ್ಳಾದ ತನ್ನ ಸಖಿಯ ಹೆಗಲ ಮೇಲೆ ತನ್ನ ಕೈಯನ್ನು ಆಸರೆಗಾಗಿ ಇಟ್ಟುಕೊಂಡಿದ್ದಾಳೆ. ಪುರುಷನೊಬ್ಬ ಅವಳ ಬಲತೋಳನ್ನು ಹಿಡಿದುಕೊಂಡಿದ್ದಾನೆ. ಚಕಿತಳಾದ ಸ್ತ್ರೀ ಹಿಂದೆ ನಿಂತಿದ್ದಾಳೆ.

ಗಾಂಧಾರ ಪ್ರದೇಶದಲ್ಲಿ ತಕ್ಷಶಿಲ, ಪುಷ್ಕಲಾವತಿ, ಪೆಷಾವರ್ ಮತ್ತು ಕಪಿಶಾ- ಇವುಗಳಿದ್ದುವು. ಈಗ ಈ ಪ್ರದೇಶ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನಗಳಲ್ಲಿ ಹಂಚಿಹೋಗಿವೆ. ತಕ್ಷಶಿಲೆಯಲ್ಲಿ ಕನಿಷ್ಕನ ಕಾಲದಲ್ಲಿ ಸಿರ್‌ಸುಕ್ ಎಂಬ ಹೊಸ ಪಟ್ಟಣವಿತ್ತೆಂಬುದು ಜಾನ್ ಮಾರ್ಷಲ್ ಕೈಗೊಂಡ ಭೂಶೋಧನೆಯಿಂದ ಗೊತ್ತಾಗಿದೆ. ತಕ್ಷಶಿಲೆಯ ಜಾಲಿಯನ್ ಸ್ತೂಪದಲ್ಲಿ ಬುದ್ಧ ಮತ್ತು ಬೋಧಿಸತ್ತ್ವರ ಶಿಲ್ಪಗಳಿವೆ. ಧರ್ಮರಾಜಿಕ ಸ್ತೂಪ ಅಲ್ಲಿಯ ಬಹಳ ದೊಡ್ಡದಾದ ಪ್ರಸಿದ್ಧ ಸ್ತೂಪ (ಕಾಬೂಲ್ ನದಿಯ ಕೆಳಗೆ). ಭೂಶೋಧನೆಯಲ್ಲಿ ಕನಿಷ್ಕ ಕಟ್ಟಿಸಿದ ಸ್ತೂಪದ ಅವಶೇಷಗಳು ಕಾಣಬಂದಿವೆ. ಅವುಗಳಲ್ಲಿ 7¾ ಇಂಚುಗಳ ಉದ್ದದ ತಾಮ್ರದ ಕೊಳವೆಯಾಕಾರದ ಮತ್ತು ಮುಚ್ಚಳದಿಂದ ಕೂಡಿದ ಸಂಪುಟವೂ ಒಂದು. ಮುಚ್ಚಳದ ಮೇಲೆ ಬುದ್ಧ, ಇಂದ್ರ, ಬ್ರಹ್ಮ ಇವರ ಮೂರ್ತಿಗಳಿವೆ. ಸಂಪುಟದ ಮೇಲಿನ ಶಾಸನದಲ್ಲಿ ಕನಿಷ್ಕನ ಮತ್ತು ಅವನ ಗ್ರೀಕ್ ಶಿಲ್ಪಿ ಅಜಶಿಲನ ಹೆಸರುಗಳಿವೆ.

ಗಾಂಧಾರಶಿಲ್ಪ ಗ್ರೀಕ್ ಮತ್ತು ರೋಮನ್ ಪ್ರಭಾವದಿಂದ ಮೂಡಿಬಂತು. ಪರದೇಶದ ಪ್ರಭಾವಕ್ಕೆ ಒಳಗಾದ ಈ ಮೂರ್ತಿಗಳು ಭಾರತೀಯ ಪರಂಪರೆಗೆ ಅನುಗುಣವಾಗಿರಲಿಲ್ಲ. ಬುದ್ಧನಿಗೆ ಮೀಸೆಯಿದೆ. ರೋಮನರ ತೊಡಿಗೆಯಿದೆ. ಇವು ಅನ್ಯದೇಶಗಳ ಪ್ರಭಾವದ ಫಲ ; ಇವುಗಳ ವಸ್ತು ಮಾತ್ರ ಭಾರತೀಯ. ಬುದ್ಧನ ಭಾರಿ ಪ್ರತಿಮೆಗಳು ಗಾಂಧಾರ ಶಿಲ್ಪದಲ್ಲಿ ಉಳಿದುಬಂದಿವೆ. ಬಾಮಿಯನ್ (ಆಫ್ಘಾನಿಸ್ತಾನ) ಬಂಡೆಯಲ್ಲಿ ಕೆತ್ತಿದ ವಿಗ್ರಹದ ಎತ್ತರ 175' ಸಾಹ್ರಿಬಹಲೂಲ್‌ನಲ್ಲಿರುವ ವಿಗ್ರಹ 86' 8" ಎತ್ತರವಿದೆ. ಹಡ್ಡದಲ್ಲೂ ಬುದ್ಧನ ಅನೇಕ ಮೂರ್ತಿಗಳು ಸಿಕ್ಕಿವೆ. (ಎಸ್.ಎಂ.)

**ಕುಷ್ಟಗಿ :** ಕೊಪ್ಪಳ ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ತಾಲ್ಲೂಕಿನ ವಿಸ್ತೀರ್ಣ 1370.38 ಚ.ಕಿಮೀ. (536 ಚ.ಮೈ.) ಜನಸಂಖ್ಯೆ 2,39,331 (2001). ತಾಲ್ಲೂಕಿನಲ್ಲಿ ಒಟ್ಟು 164 ಹಳ್ಳಿಗಳಿವೆ. ಆಡಳಿತದ ದೃಷ್ಟಿಯಿಂದ 28 ಗ್ರಾಮ ಪಂಚಾಯಿತಿಗಳಿವೆ ಮತ್ತು ಒಂದು ಪುರಸಭೆಯಿದೆ. ತಾಲ್ಲೂಕನ್ನು ಕುಷ್ಟಗಿ, ಹನುಮಸಾಗರ, ಗುಡಡೂರು ಮತ್ತು ತಾವರಗೇರಿ ಎಂಬ ನಾಲ್ಕು ಹೋಬಳಿಗಳಾಗಿ ವಿಭಾಗಿಸಲಾಗಿದೆ. (ಎ.ಕೆ.)

ತಾಲ್ಲೂಕಿನ ಬಹುಭಾಗ ಪ್ರೀ-ಕೇಂಬ್ರಿಯನ್ ಯುಗದಲ್ಲಿ ನಿರ್ಮಾಣಗೊಂಡ ಭೂಪದರಗಳಿಂದ ಕೂಡಿದೆ. ಇಲ್ಲಿಯ ಬಹುಪಾಲು ಶಿಲೆಗಳು ಧಾರವಾಡ ಶಿಲಾವರ್ಗಕ್ಕೆ ಸೇರಿದವು. ಕಲಾದಗಿ ಶ್ರೇಣಿಗೆ ಸೇರಿದ ಕೆಲವು ಶಿಲೆಗಳು ತಾಲ್ಲೂಕಿನ ವಾಯವ್ಯಕ್ಕೆ ಹರಡಿವೆ. ಇವುಗಳಲ್ಲಿ ಪೆಂಟಿಶಿಲೆ ಮತ್ತು ಮರಳುಶಿಲೆಯ ಪದರಗಳನ್ನು ಕಾಣಬಹುದು. ತಾಲ್ಲೂಕಿನ ಬಹುಪಾಲು ಭೂಮಿ ಕಪ್ಪು. ಕೆಲವು ಕಡೆ ಮರಳುಮಿಶ್ರಿತವಾದ, ಕೆಂಪು ಛಾಯೆಯ ಮಣ್ಣನ್ನು ಕಾಣಬಹುದು. ವರ್ಷವಿಡೀ ಸಾಮಾನ್ಯವಾಗಿ ಒಣ ಹವೆ ಇರುತ್ತದೆ. ವಾರ್ಷಿಕ ಮಳೆ ಸರಾಸರಿ 600 ಮಿಮೀ. ಸಾಮಾನ್ಯವಾಗಿ ಮಳೆ ಕಡಿಮೆಯಾದರೂ ಕೆಲವು ಸಾರಿ ತಾಲ್ಲೂಕು ಅತಿವೃಷ್ಟಿಗೆ ಈಡಾದ್ದೂ ಉಂಟು. 1944ರ ಸುಮಾರಿನಲ್ಲಿ ಆದ ಅತಿವೃಷ್ಟಿಯಿಂದ ತಾಲ್ಲೂಕಿನ ಪ್ರಮುಖ ಆಹಾರ ಬೆಳೆಯಾದ ಜೋಳವೆಲ್ಲ ಹಾಳಾಗಿ ಬರ ಬಂದಿತ್ತು. ಇದನ್ನು ಇಂದಿಗೂ ಸಜ್ಜಿ ಬರ ಎಂದು ಅಲ್ಲಿಯವರು ನೆನೆಯುತ್ತಾರೆ. 1949ರಲ್ಲಿ ಮತ್ತೊಮ್ಮೆ ತಾಲ್ಲೂಕು ಭಾರಿ ಮಳೆಗೆ ಈಡಾಗಿತ್ತು. ಆಗ 20 ದಿವಸಗಳ ಕಾಲ ಸತತವಾಗಿ ಸಂಭವಿಸಿದ ವರ್ಷಧಾರೆಯಿಂದಾಗಿ ತಾಲ್ಲೂಕಿನ ಸಾಮಾನ್ಯ ಮನೆಗಳಲ್ಲಿ 70 ಕುಸಿದುವು.

ತಾಲ್ಲೂಕಿನಲ್ಲಿರುವ ಕೃಷಿಯೋಗ್ಯ ಭೂಮಿ 134348 ಹೆಕ್ಟೇರು ಖುಷ್ಕಿ ಬೆಳೆಯೇ ಹೆಚ್ಚು. ಜೋಳ, ಸಜ್ಜೆ, ಗೋದಿ, ಶೇಂಗ, ಹತ್ತಿ, ಎಳ್ಳು ಮತ್ತು ತೊಗರಿ ಇಲ್ಲಿಯ ಮುಖ್ಯ ಬೆಳೆಗಳು. ಕೃಷಿ ಭೂಮಿಯಲ್ಲಿ ಶೇ. 66 ಭಾಗ ಆಹಾರ ಧಾನ್ಯಗಳ ಬೆಳೆಗೆ ಬಳಕೆಯಾಗುತ್ತಿದೆ. ತೋಟಗಾರಿಕೆ ಬೆಳೆ ಗೌಣ. ಶೇ. 33.6 ಭಾಗದಲ್ಲಿ ವಾಣಿಜ್ಯ ಬೆಳೆ ಬೆಳೆಯಲಾಗುವುದು. 1962-63ರಲ್ಲಿ ತಾಲ್ಲೂಕಿನಲ್ಲಿ ನೀರಾವರಿ ಭೂಮಿಯೇ ಇರಲಿಲ್ಲ. ಆದರೆ ಗ್ರಾಮಾಂತರ ಅಭಿವೃದ್ಧಿ ಯೋಜನೆ ಜಾರಿಗೆ ಬಂದಾಗ ಇಲ್ಲಿ ಅನೇಕ ಬಾವಿಗಳನ್ನೂ ಕೆರೆಗಳನ್ನೂ ನಿರ್ಮಿಸಲಾಯಿತು. 2005ರ ಹೊತ್ತಿಗೆ 1,512 ಹೆಕ್ಟೇರುಗಳಷ್ಟು ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿತ್ತು. ಕಾಲುವೆ ನೀರಾವರಿ ಇಲ್ಲ. ಕೊಳವೆ ಬಾವಿ ನೀರಾವರಿಯೇ ಪ್ರಧಾನ. ಸ್ವಲ್ಪ ಕೆರೆ ನೀರಾವರಿವುಂಟು. ತರಿ ಜಮೀನಿನಲ್ಲಿ ಸಾಮಾನ್ಯವಾಗಿ ಬತ್ತವನ್ನೂ ಕೆಲವೆಡೆ ಕಬ್ಬನ್ನೂ ಬೆಳೆಯುತ್ತಾರೆ. ತಾಲ್ಲೂಕಿನಲ್ಲಿರುವ ಕೆರೆಗಳು ನಾಲ್ಕು. ಇವು ಸುಮಾರು 921 ಎಕರೆ ಜಮೀನಿನ ನೀರಾವರಿಗೆ ಸಹಾಯಕವಾಗಿವೆ. ಕಡೂರು ಗ್ರಾಮ ಸಮೀಪದಲ್ಲಿ 36 ಲಕ್ಷ ರೂಪಾಯಿ ವೆಚ್ಚದಲ್ಲಿ ಚಿತ್ತವಡಗಿ ಕೆರೆಯನ್ನು ಕಟ್ಟಲಾಗಿದೆ. ಇದರ ನೀರು ಸಂಗ್ರಹಣ ಸಾಮರ್ಥ್ಯ ಸು. 20.1 ಕೋಟಿ ಘನ ಅಡಿ. ಈ ಕೆರೆಯಿಂದ ಬಿಜಾಪುರ ಜಿಲ್ಲೆಯ ಹನಗುಂದ ತಾಲ್ಲೂಕಿನ ಸ್ವಲ್ಪ ಜಮೀನಿಗೂ ನೀರೊದಗಿಸಲಾಗಿದೆ. ತಾಲ್ಲೂಕಿನಲ್ಲಿ ಬಹಳ ಕಡೆ ಲಕ್ಷ್ಮೀ ಹತ್ತಿ ಬೆಳೆಯುತ್ತಾರೆ. ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳ ಬಳಕೆ ಅಷ್ಟಾಗಿಲ್ಲ. 1968ರ ಅಂಕಿಗಳ ಪ್ರಕಾರ ಇಡೀ ತಾಲ್ಲೂಕಿನಲ್ಲಿ 182 ಟ್ರ್ಯಾಕ್ಟರ್ ಬಳಕೆಯಲ್ಲಿದ್ದವು. 2002ರ ವರೆಗೆ ಎಲ್ಲಾ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿತ್ತು. 2002ರಲ್ಲಿದ್ದಂತೆ ತಾಲ್ಲೂಕಿನ ಒಟ್ಟು ಜಾನುವಾರು ಸಂಖ್ಯೆ 198818. ಇವುಗಳಲ್ಲಿ 57170 ದನಗಳು, 17338 ಎಮ್ಮೆ, 80027 ಕುರಿ ಮತ್ತು 44,283 ಮೇಕೆಗಳಾಗಿರುತ್ತವೆ.. ರೈತರಿಗೆ ಪಶುಪಾಲನೆ ಉಪಕಸಬು.

ಕೃಷಿಗೆ ಎರಡನೆಯದಾದ ಕಸಬೆಂದರೆ ನೇಯ್ಗೆ. ಹನುಮಸಾಗರ, ತಾವರಗೇರಿ ಮತ್ತು ದೋತಿಹಾಳಗಳು ನೇಯ್ಗೆಯ ಕೇಂದ್ರಗಳು. ಇಲ್ಲಿ ತಯಾರಾಗುವ ಇಳಕಲ ಸೀರೆಗಳಿಗೆ ಗ್ರಾಮ ಪ್ರದೇಶದಲ್ಲಿ ಬೇಡಿಕೆಯುಂಟು. ರಾಜ್ಯದ ವಿಧಾನ ಸಭೆಯಲ್ಲಿ ಈ ತಾಲ್ಲೂಕಿಗೆ ಒಂದು ಸ್ಥಾನವಿದೆ. ಒಟ್ಟು 5 ನೊಂದಾಯಿತ ಕಾರ್ಖಾನೆಗಳು ಮತ್ತು 479 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿವೆ. ಇವುಗಳಲ್ಲಿ ಸಾವಿರಾರು ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಕುಷ್ಟಗಿ ತಾಲ್ಲೂಕಿನಲ್ಲಿ ಸಾರಿಗೆ-ಸಂಪರ್ಕಮಾಧ್ಯಮವೂ ಇತ್ತೀಚೆಗೆ ಸಾಕಷ್ಟು ಅಭಿವೃದ್ಧಿಗೊಂಡಿದೆ. ಒಟ್ಟು 57 ಅಂಚೆಕಚೇರಿಗಳಿವೆ. 2712 ಟೆಂಪೋಸ್ ಸಂಪರ್ಕ (2000), 2046 ಕಿಮೀ ರಸ್ತೆಮಾರ್ಗಗಳಿವೆ. ಎಲ್ಲ ಹಳ್ಳಿಗಳಿಗೆ ರಸ್ತೆ ಸಂಪರ್ಕವಿಲ್ಲ. ಅದೇ ರೀತಿ ಸುಧಾರಿತ ಸರ್ವಋತುರಸ್ತೆಗಳ ಸಂಖ್ಯೆಯೂ ಕಡಿಮೆ. (24 ಕಿಮೀ.) ಯಾವುದೇ ರೈಲುಮಾರ್ಗವಿಲ್ಲ. ತಾಲ್ಲೂಕಿನ ಸಾಕ್ಷರತೆ ಶೇ. 51.62. ಇದು ಇನ್ನೂ ಸುಧಾರಿಸಬೇಕಾಗಿದೆ.

ತಾಲ್ಲೂಕಿನ ಕೇಂದ್ರವಾದ ಕುಷ್ಟಗಿ ಪಟ್ಟಣದ ಜನಸಂಖ್ಯೆ 21,183 (2001). ಇದೊಂದು ಮುಖ್ಯ ವ್ಯಾಪಾರಸ್ಥಳ. ತಾಲ್ಲೂಕಿನಲ್ಲಿ ಬೆಳೆದ ಹತ್ತಿ ಮತ್ತು ಶೇಂಗ ಹೊರ ಮಾರುಕಟ್ಟೆಗೆ ಹೋಗುವುದು ಇದರ ಮೂಲಕವೇ. ಇಲ್ಲೊಂದು ನಿಯಂತ್ರಿತ ಮಾರುಕಟ್ಟೆ ಸ್ಥಾಪಿತವಾಗಿದೆ. ಚಿತ್ರದುರ್ಗ- ಸೋಲಾಪುರ ರಾಷ್ಟ್ರೀಯ ಹೆದ್ದಾರಿಯೂ ಒಂದು ರಾಜ್ಯ ಹೆದ್ದಾರಿಯೂ ಕುಷ್ಟಗಿ ಪಟ್ಟಣವನ್ನು ಹಾದು ಹೋಗುತ್ತವೆ. ಪಟ್ಟಣದ ನಾಲ್ಕೂ ದಿಕ್ಕುಗಳಲ್ಲಿರುವ ಗುಂಬಜ್‌ಗಳು ಈ ಪಟ್ಟಣದ ಗಡಿ ಗುರುತುಗಳು. ಕುಷ್ಟಗಿಯಲ್ಲಿ ಒಂದು ಪ್ರೌಢಶಾಲೆಯೂ ಪದವಿ ಪೂರ್ವ ಕಾಲೇಜು ಸಾರ್ವಜನಿಕ ವಿದ್ಯಾರ್ಥಿನಿಲಯವೂ ಹಿಂದುಳಿದ ಪಂಗಡದ ಒಂದು ವಿದ್ಯಾರ್ಥಿನಿಲಯವೂ ಉಂಟು. ವ್ಯಾಸಪೂರ್ಣಿಮೆಯಂದು ನಡೆಯುವ ಅಡವಿರಾಯ ಜಾತ್ರೆ ಪಟ್ಟಣದ ಮುಖ್ಯ ವಾರ್ಷಿಕ ಆಕರ್ಷಣೆ.

ಕೃಷ್ಣದೇವರಾಯನ ಅಳಿಯ ರಾಮರಾಯ ಇಲ್ಲಿ ಆಡಳಿತ ನಡೆಸಿದನೆಂದು ತಿಳಿದುಬರುತ್ತದೆ. ಹಿಂದೆ ಇದಕ್ಕೆ 'ಕುಸ್ತಗಿ' ಅಥವಾ 'ಕೃಷ್ಣಗಿರಿ' ಎಂಬ ಹೆಸರುಗಳಿದ್ದವಂತೆ. ಇಲ್ಲಿ ಬುತ್ತಿ ಬಸವಣ್ಣ, ವೀರಭದ್ರ ಮತ್ತು ಅಡವಿರಾಯನ ದೇವಾಲಯಗಳಿವೆ. ಕೆಲವು ಮಸೀದಿಗಳೂ ಇವೆ. *

**ಕುಷ್ಠ :** ಮೈಕ್ರೊಬ್ಯಾಕ್ಟೀರಿಯ ಲೆಪ್ರೇ ಎಂಬ ಹೆಸರಿನ ಆಮ್ಲಸ್ಥಾಯಿ (ಆಸಿಡ್-ಫಾಸ್ಟ್) ದಂಡಾಣು ಜೀವಿಗಳಿಂದ (ಬ್ಯಾಸಿಲೈ) ಹರಡುವ ತೀವ್ರವ್ಯಾಧಿ (ಲೆಪ್ರಸಿ). ಹ್ಯಾನ್ಸನ್ನನ ವ್ಯಾಧಿ ಪರ್ಯಾಯನಾಮ. ಈ ರೋಗದಿಂದ ಗ್ರಸ್ತವಾಗುವ ಭಾಗಗಳು ಮುಖ್ಯವಾಗಿ ಚರ್ಮ, ಕಣ್ಣುಗಳು, ಮೂಗು ಮತ್ತು ಗಂಟಲಿನ ಲೋಳೆಪೊರೆಗಳು, ಕೆಲವು ಹೊರವಲಯದ ನರಗಳು ಮತ್ತು ವೃಷಣಗಳು. ರೋಗಿಯೊಡನೆ ನಿಕಟ ದೀರ್ಘಕಾಲಿಕ ಸಂಪರ್ಕವಿದ್ದಾಗ ಕುಷ್ಠರೋಗ ಸಾಂಕ್ರಾಮಿಕವೂ ಹೌದು.

**ಇತಿಹಾಸ :** ಕುಷ್ಠರೋಗ ಬಹು ಪುರಾತನ ಕಾಲದಿಂದ ಇರುವ ರೋಗ. ಉಷ್ಣವಲಯದಲ್ಲಿ ಇದರ ವ್ಯಾಪ್ತಿ ಹಾಗೂ ತೀವ್ರತೆ ಹೆಚ್ಚು. ಇದು ಹೇಗೆ ಅಂಕುರಿಸಿತು, ಹೇಗೆ ಹರಡಿತು-ಎಂಬುದು ಇನ್ನೂ ಊಹೆಯಾಗಿಯೇ ಇದೆ. ಇದು ಬಹುಶಃ ಆಫ್ರಿಕ ದೇಶದಲ್ಲಿ ಅಂಕುರಿಸಿ ಭಾರತ ಚೀನಗಳಿಗೂ ಈಜಿಪ್ಟಿನ ಮಾರ್ಗವಾಗಿ ಯುರೋಪಿಗೂ ಅನಂತರ ಅಮೆರಿಕ ದೇಶಗಳಿಗೂ ಹರಡಿರಬೇಕು. ಇಷ್ಟು ದೇಶಗಳನ್ನು ಈ ರೋಗ ಕಾಡಿದ್ದರೂ ಭಾರತದ ಪುರಾತನ ಗ್ರಂಥಗಳಲ್ಲಿ ಮಾತ್ರ ಇದರ ಬಗ್ಗೆ ವರದಿ ಉಂಟು. 1ನೆಯ ಶತಮಾನದಲ್ಲಿದ್ದ ಚರಕ ಸುಶ್ರುತರ ಕಾವ್ಯಗಳಲ್ಲೂ 6ನೆಯ ಶತಮಾನದ ವಾಗ್ಭಟ ಬರೆದ ಸಂಹಿತೆಗಳಲ್ಲಿಯೂ ರೋಗದ ಲಕ್ಷಣ ಮತ್ತು ಚಿಕಿತ್ಸಾ ಕ್ರಮಗಳನ್ನು ವಿವರಿಸಿದ್ದಾರೆ. ಪ್ರ.ಶ.ಪೂ. 5ನೆಯ ಶತಮಾನದ ಮನುಸ್ಮೃತಿ ಮತ್ತು ಅದಕ್ಕೂ ಹಿಂದಿನ ಅಥರ್ವವೇದದಲ್ಲಿ (ಪ್ರ.ಶ.ಪೂ. 10ನೆಯ ಶತಮಾನ) ಸಹ ಕುಷ್ಠರೋಗದ ಪ್ರಸ್ತಾಪ ಬಂದಿದೆ. ಚರಕ ಸಂಹಿತದಲ್ಲಿ ಕುಷ್ಠರೋಗದ ಏಳು ಭಿನ್ನರೂಪಗಳನ್ನು ವಿವರಿಸಲಾಗಿದೆ. ಇದರಲ್ಲಿ ಕೆಲವು

ರೂಪಗಳು ಆಧುನಿಕ ವೈದ್ಯಶಾಸ್ತ್ರದರೀತ್ಯಾ ಕುಷ್ಠರೋಗ ಚಿಹ್ನೆಗಳಿಗೆ ಹೋಲುತ್ತವೆ. ಮತ್ತೆ ಕೆಲವು ಬೇರೆ ಚರ್ಮರೋಗವಿದ್ದರೂ ಇರಬಹುದೆಂಬ ಶಂಕೆ ಬರುವುದು. ಚರ್ಮದ ಅರಿವಳಿಕೆ, ಬಣ್ಣಗುಂದಿಕೆ. ಕುಸಿದ ಮೂಗು, ಅಂಗವಿಕಾರ ಮೊದಲಾದ ಈ ರೋಗದ ಲಕ್ಷಣಗಳು. ಇದು ಅಂಟುರೋಗವೆಂಬುದನ್ನೂ ಆ ಕಾಲದಲ್ಲಿಯೇ ಜನ ಸ್ಪಷ್ಟವಾಗಿ ತಿಳಿದಿದ್ದರು. ಕುಷ್ಠರೋಗಿಯೊಬ್ಬ ಅಂದು ತನ್ನ ಸ್ವಂತ ಹಕ್ಕುಗಳನ್ನೂ ಮತಧರ್ಮವನ್ನೂ ಕಳೆದುಕೊಳ್ಳುತ್ತಿದ್ದ. ಆದರೆ ಜನಜೀವನದಿಂದ ಅವನನ್ನು ಬಹಿಷ್ಕರಿಸುತ್ತಿರಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಾದರೋ ಕುಷ್ಠರೋಗಿ ಜನ ಸಂಪರ್ಕಕ್ಕೆ ಬರುವಂತಿರಲಿಲ್ಲ ಅವನನ್ನು ಪ್ರತ್ಯೇಕಿಸುತ್ತಿದ್ದರು. ಮಧ್ಯಯುಗದ ಯುರೋಪು ಕುಷ್ಠರೋಗ ಪೀಡಿತವಾಗಿತ್ತು. ಆದರೆ ಬರಬರುತ್ತ ಇದು ವಿಮುಕ್ತಗೊಂಡದ್ದು ಒಂದು ಸೋಜಿಗ.

ಕೈಗಾರಿಕಾ ಕ್ರಾಂತಿಯಿಂದ ಜೀವನಮಟ್ಟ ಏರಿದ್ದೂ ಕುಷ್ಠರೋಗಗಳನ್ನೆಲ್ಲ ಕಡ್ಡಾಯವಾಗಿ ಅದಕ್ಕಾಗಿಯೇ ಊರ ಹೊರಗಡೆ ಕಟ್ಟಿದ ಕುಷ್ಠಗೃಹಗಳಲ್ಲಿ ಬೇರೆಯಾಗಿಡುತ್ತಿದ್ದ ಪದ್ಧತಿಗಳೂ ಇದಕ್ಕೆ ಸಹಾಯಕವಾಗಿರಬೇಕು. ಪ್ರಪಂಚದಲ್ಲಿ ಇಂದು ಮಿಲಿಯನ್ ಗಟ್ಟಲೆ ಜನ ಕುಷ್ಠರೋಗಿಗಳಿದ್ದಾರೆಂದು ಅಂದಾಜು. ಭಾರತದಲ್ಲಿ ಪ್ರತಿ 1,000 ಜನಸಂಖ್ಯೆಯಲ್ಲಿ 6.4 ಮಂದಿ ಕುಷ್ಠ ರೋಗಗ್ರಸ್ತರಾಗಿರುವರೆಂದು ತಿಳಿದಿದೆ.

**ಲಕ್ಷಣಗಳು :** ಕುಷ್ಠ ಮಂದಗತಿಯ ಆದರೆ ತೀವ್ರಪರಿಣಾಮದ ಅಂಟುರೋಗ. ನಾರ್ವೇದೇಶದ ಹ್ಯಾನ್ಸನ್ ಎಂಬಾತ ಈ ರೋಗಕ್ಕೆ ಕಾರಣವಾದ ಕುಷ್ಠದ ದಂಡಾಣು ಜೀವಿಯನ್ನು ಕುಷ್ಠ ಗಂತಿಗಳಲ್ಲಿ ಶೋಧಿಸಿದ್ದರಿಂದ (1871) ಆತನ ಹೆಸರಿನಿಂದಲೂ ಈ ರೋಗವನ್ನು ಕರೆಯುವುದುಂಟು. ಈ ರೋಗದ ಸೋಂಕು ಒಬ್ಬರಿಂದ ಇನ್ನೊಬ್ಬರಿಗೆ ಹರಡಲು ದೀರ್ಘವಾದ ನಿಕಟ ದೈಹಿಕ ಸಂಪರ್ಕ ಪದೇ ಪದೇ ಅಗತ್ಯ. ಚರ್ಮದ ಮೇಲಿರಬಹುದಾದ ಗೀಚಲು ಇಲ್ಲವೇ ಗಾಯಗಳ ಮೂಲಕ ರೋಗದ ಜೀವಿಗಳು ದೇಹವನ್ನು ಸೇರುತ್ತವೆ. ಇದಾಗಿ 2 ರಿಂದ 5 ವರ್ಷಗಳ ವರೆಗೆ ರೋಗಲಕ್ಷಣಗಳು ಪ್ರಕಟಗೊಳ್ಳಲು ಕಾಲಾವಕಾಶಬೇಕು. ಈ ಕಾಲಾವಧಿಗೆ ಕುಮಲುವ ಕಾಲ ಎಂದು ಹೆಸರು. ಕುಷ್ಠರೋಗದ ಮೂಲ ಬದಲಾವಣೆ ಹೊರ ಮೈ ಚರ್ಮದ ನರಗಳಲ್ಲಿದ್ದು, ಅವುಗಳ ಹತೋಟಿಯಲ್ಲಿರುವ ಸ್ಪರ್ಶಜ್ಞಾನ ಚಲನ ಶಕ್ತಿಯ ವ್ಯತ್ಯಾಸಗಳೇ ಮುಖ್ಯ ತೋರಿಕೆಗಳು. ರೋಗದ ಮೊಟ್ಟಮೊದಲ ಅಂಗದ ಗಾಯ (ಲೀಸಿಯನ್) ಸಾಮಾನ್ಯವಾಗಿ ಅಸ್ಪಷ್ಟವಾಗಿರುವುದು. ಅನೇಕ ವೇಳೆ ಇದು ರೋಗಿಗೆ ಗೋಚರವಾಗದೆ ಇರಬಹುದು. ಸಾಮಾನ್ಯವಾಗಿ ಆರೋಗ್ಯಮೋಜಣಿಗಳಲ್ಲಿ ದೇಹಪರೀಕ್ಷೆಮಾಡಿದಾಗ ಇವು ಕಂಡುಬರುವುದುಂಟು. ಒಂಟಿಯಾದ, ಮಂದ ಪ್ರತಿಕ್ರಿಯೆಯ ಈ ಸಣ್ಣ ಮಚ್ಚೆಗಳು ದೇಹದ ಯಾವ ಭಾಗದ ಮೇಲಾದರೂ ಕಾಣಬಹುದು. ಮಚ್ಚೆಗಳ ಅಂಚೂ ಇರವೂ ಬಲುಮಸಕು. ರೋಗದ ಪ್ರಾರಂಭದಿಶೆಯನ್ನು ಅನಿಶ್ಚಿತ ಕುಷ್ಠ ಎನ್ನುತ್ತಾರೆ. ಇದರ ಮುಂದಿನ ಗತಿ ರೋಗಿಯನಿಗ್ರಹಣ ಶಕ್ತಿಯ ಮಟ್ಟವನ್ನು ಅವಲಂಬಿಸಿದ್ದು. ಆ ಶಕ್ತಿ ಸಾಕಷ್ಟು ಇರುವವರಲ್ಲಿ ಅಸ್ಪಷ್ಟವಾದ ಮೊದಲ ಮಚ್ಚೆಗಳ ಅಂಚು ಮಂದವಾಗಿ, ಮಚ್ಚೆಯೂ ಮಂದವಾಗಿ, ಸ್ಪಷ್ಟವಾಗಿ ಕಾಣದಂತೆ ಬದಲಾಗುತ್ತದೆ. ಚರ್ಮದ ನರಗಳ ಅರಿವಳಿಕೆ ವ್ಯಕ್ತವಾಗುತ್ತದೆ. ಅವುಗಳ ಚರ್ಮದ ಬಣ್ಣ ಪಕ್ಕದ ಚರ್ಮಕ್ಕಿಂತ ಮಂದ. ರೋಗದ ದಂಡಾಣುಗಳು ಇಂಥ ಮಚ್ಚೆಗಳಲ್ಲಿ ಹೆಚ್ಚಾಗಿರುವುದಿಲ್ಲ. ಆದ್ದರಿಂದ ಕುಷ್ಠರೋಗದ ಮಚ್ಚೆಗಳಿಂದ ಸಾಮಾನ್ಯ ಪರಿಕ್ಷಾಕ್ರಮಗಳಿಂದ ದಂಡಾಣುಗಳನ್ನು ಪ್ರತ್ಯೇಕಿಸಿ ತೋರಿಸಲಾಗುವುದಿಲ್ಲ. ರೋಗದ ಈ ರೂಪ ಕೆಲವು ವೇಳೆ ತಾನಾಗಿ ಗುಣವಾಗುವುದು. ಚಿಕಿತ್ಸೆಯಿಂದ ಇದನ್ನು ಚೆನ್ನಾಗಿ ಗುಣಪಡಿಸಬಹುದು. ಕುಷ್ಠರೋಗದ ಇಂಥ ರೂಪಕ್ಕೆ ಕ್ಷಯಗತಿಯಂಥ ಕುಷ್ಠ ಎಂದು ಹೆಸರು. ಈ ರೋಗಕ್ಕೆ ಒಳಗಾದ ಊತಕಗಳ ರಚನೆ ಕ್ಷಯಗಂತಿಯ ಸೂಕ್ಷ್ಮ ರಚನೆಗೆ ಹೋಲುವುದರಿಂದ ಈ ಹೆಸರು ಬಂದಿದೆ. ಭಾರತದಲ್ಲಿ ಶೇ. 80ರಷ್ಟು ರೋಗ ಈ ರೂಪದ್ದು.

ರೋಗನಿಗ್ರಹಣ ಶಕ್ತಿ ಕಡಿಮೆ ಇರುವವರಲ್ಲಿ ಮೊದಲ ಮಚ್ಚೆಗಳು ಅಸ್ಪಷ್ಟವಾಗಿದ್ದರೂ ಅವು ಹೆಚ್ಚಾಗಿ ಇಡೀ ದೇಹವನ್ನು ಆವರಿಸಿ ಭಯಾನಕವಾಗಿ ಕಾಣುತ್ತವೆ. ಈ ರೂಪದಲ್ಲಿ ಚರ್ಮದ ಕಲೆಗಳಿಂದ ಸಾಮಾನ್ಯಪರೀಕ್ಷಾಕ್ರಮದಿಂದ ಅತಿ ಸುಲಭವಾಗಿ ಕುಷ್ಠರೋಗದ ದಂಡಾಣುಗಳನ್ನು ಪ್ರತ್ಯಕ್ಷವಾಗಿ ತೋರಿಸಬಹುದು. ರೋಗಿಗೂ ಸಮಾಜಕ್ಕೂ ಅಪಾಯಕರವಾದ ರೂಪವಿದು. ಅಗೋಚರವಾದ ಕಲೆಗಳು ರೋಗ ಮುಂದುವರಿದಂತೆ ರುಂಡ, ಮುಂಡ,ಕೈಕಾಲುಗಳ ಮೇಲೆ ಹರಡಿ ಅಂಗದ ಗಾಯ, ದಪ್ಪ ದಪ್ಪ ಗಂಟುಗಳು ಆಗುವುವು. ಮುಖದ ಚರ್ಮವೆಲ್ಲಾ ಅಂಗದ ಗಾಯದ ಒಳಪಸರಿಕೆಯಿಂದಲೂ ಗಂಟುಗಳಿಂದಲೂ ಮಂದವಾಗಿ ಸಿಂಹದ ಮುಖದಂತೆ ಕಾಣುವುದು. ಇಂಥ ಗಂಟುಗಳಲ್ಲಿ ಕುಷ್ಠ ದಂಡಾಣುಗಳು ತುಂಬಿರುವ ವಿಶಿಷ್ಟವಾದ ನೊರೆ ಜೀವಕಣಗಳಿರುತ್ತವೆ. ಆದ್ದರಿಂದ ಈ ತೆರನಾದ ರೋಗದ ರೂಪಕ್ಕೆ ಕುಷ್ಠಗತಿಯ ತೆರನ ಕುಷ್ಠ ಎಂದು ಹೆಸರು.

ಈ ಎರಡು ಪರಸ್ಪರ ವಿರುದ್ಧ ರೂಪಗಳ ಮಧ್ಯೆ ಮಧ್ಯವರ್ತಿ ರೂಪ ಇದೆ. ಇದನ್ನು ದ್ವಿರೂಪಿ ಕುಷ್ಠ ಎನ್ನಬಹುದು. ಇಂಥ ರೋಗ ಪೀಡಿತನ ದೇಹದಲ್ಲಿ ರೋಗದ ತೀವ್ರ ಮತ್ತು ಸೌಮ್ಯರೂಪದ ಲಕ್ಷಣಗಳು ಬೇರೆ ಬೇರೆ ಕಡೆಗಳಲ್ಲಿ ಕಾಣುಬಹುದು. ಮತ್ತು ಕಾಲಕ್ರಮೇಣ ರೋಗಿಯ ನಿಗ್ರಹಣಶಕ್ತಿಯ ಮಟ್ಟಕ್ಕೆ ಅನುಗುಣವಾಗಿ ಎರಡು ರೂಪಗಳಲ್ಲಿ ಯಾವುದಾದರೊಂದು ಕಡೆ ಸಾಗಬಹುದು. ನಿಗ್ರಹಣಶಕ್ತಿ ಅನೇಕ ಕಾರಣಗಳಿಂದ ಇಲ್ಲವೇ ಕಾರಣವಿಲ್ಲದೆಯೇ ಬದಲಾಯಿಸಿ ರೋಗದ ಲಕ್ಷಣಗಳು ಬದಲಾಗಬಹುದು. ತ್ರೀವವಾದ ನಿಗ್ರಹಣಶಕ್ತಿ ಇರುವ ಕ್ಷಯಗಂತಿಯಂಥ ಕುಷ್ಠರೋಗಿಯ ನಿಗ್ರಹಣಶಕ್ತಿ ಕುಗ್ಗಿದಾಗಲೂ ಅಲ್ಲದೇ ಇಳಿಮುಖದ ಪ್ರತಿಕ್ರಿಯೆಯಿಂದಲೂ ರೋಗಿ ಕುಷ್ಠಗಂತಿತೆರನ ರೂಪಕ್ಕೆ ಮಾರ್ಪಾಡಾಗಬಹುದು. ಹಾಗೆಯೇ ಮೇಲೆ ಹೇಳಿದ ಗುಂಪಿನ ರೋಗಿಯಲ್ಲಿ ನಿರೋಧಶಕ್ತಿ ಹೆಚ್ಚಿ ತಿರುಗುಪ್ರತಿ ಕ್ರಿಯೆಯಾಗಬಹುದು. ಈ ಎರಡು ಸಂದರ್ಭಗಳಲ್ಲಿ ಪ್ರತಿಕ್ರಿಯೆ ಒಂದೇ ರೀತಿಯದು – ಸ್ಥಳೀಯಲಕ್ಷಣಗಳಾದ ಚರ್ಮದ ಕೆಂಪೇರುವಿಕೆ. ಊತ ಮತ್ತು ನೋವು ಇರುತ್ತವೆ. ಸಾಮಾನ್ಯವಾಗಿ ಕುಷ್ಠಗಂತಿತೆರನ ಕುಷ್ಠದಲ್ಲಿ ಇನ್ನೂ ಎರಡು ರೀತಿಯ ಪ್ರತಿಕ್ರಿಯೆಗಳಾಗಬಹುದು. ಮೇಲಿನ ಎರಡು ಪ್ರತಿಕ್ರಿಯೆಗಳು ನಿರೋಧಶಕ್ತಿಯ ಏರಿಳಿತಗಳಿಂದಾದರೆ, ಇವು ದಂಡಾಣುಗಳ ಬದಲಾವಣೆಗಳಿಂದ ಆಗುವುವು. ಚಿಕಿತ್ಸೆಯಿಲ್ಲದ ರೋಗಿ ಅಥವಾ ಮರುಕಳಿಸಿದ ರೋಗಿಯಲ್ಲಿ ಹಿಡಿತಕ್ಕೆ ಸಿಕ್ಕದೆ ದಂಡಾಣುಗಳು ವೃದ್ಧಿಯಾಗಿ ಮೈ ಮೇಲೆ ಕಾಣುವ ಗಂಟುಗಳಿಗೆ ಉದ್ರೇಕಿತ ಕಿಗ್ಗಂಟುಗಳು ಎಂದು ಹೆಸರು. ಇದು ಒಂದು ತೆರನ ಪ್ರತಿಕ್ರಿಯೆ. ಎರಡನೆಯ ಪ್ರತಿಕ್ರಿಯೆ ಅತಿ ತೀವ್ರವಾದುದು. ಇದಕ್ಕೆ ಕೆಂಪು ಗಂಟು ಕುಷ್ಠಾಂದ ಎಂದು ಹೆಸರು. ಸ್ಥಳೀಯ ಅಂಗದ ಗಾಯಗಳು ಹೆಚ್ಚುವುವಲ್ಲದೆ ಇಡೀ ದೇಹಸ್ಥಿತಿ ಕಲಕಿ ಮೈನೋವು, ಜ್ವರ ಹೆಚ್ಚಾಗಿ ರೋಗಿ ತೆಗೆದುಕೊಳ್ಳುತ್ತಿದ್ದ ಔಷಧಿಗಳನ್ನು ನಿಲ್ಲಿಸಬೇಕಾಗಬಹುದು. ಈ ಪ್ರತಿಕ್ರಿಯೆ ಅಪೂರ್ವವಾಗಿ ಚಿಕಿತ್ಸೆ ಪಡೆಯದಿರುವವರಲ್ಲಿಯೂ ಬರಬಹುದು. ಇದಕ್ಕೆ ದಂಡಾಣುಗಳ ಮೇಲೆ ಡ್ಯಾಪಸೋನ್ ರಾಸಾಯನಿಕ ಮದ್ದುಗಳ ಪರಿಣಾಮವಾಗಿ ಅಥವಾ ಕೊಲ್ಲಲ್ಪಟ್ಟ ಮತ್ತು ಚೂರಾದ ದಂಡಾಣುಗಳಿಂದ ಬಿಡುಗಡೆಯಾದ ಪ್ರೋಟೀನ್ ವಸ್ತುಗಳು ದೇಹದ ಮೇಲೆ ಬೀರುವ ಪ್ರಭಾವವೇ ಕಾರಣ.

ಚರ್ಮದ ಅಂಗದ ಗಾಯಗಳ ಜೊತೆ ಹೊರ ಮೈನರಗಳ ಅಂಗದ ಗಾಯಗಳಿಂದ ರೋಗದ ಚಿಹ್ನೆಗಳು ಕಾಣಬರುವುವು. ನರದುರಿತದಿಂದ ನರಗಳು ದಪ್ಪವಾಗುತ್ತವೆ. ಕೈಯಿಂದ ಮುಟ್ಟಲು ಸುಲಭವಾಗಿ ಸಿಕ್ಕುವ ಕತ್ತಿನ ಪಕ್ಕದ ಕಿವಿಯ ಹಿಂದಿನ ನರಗಳೂ ಮೊಣಕೈ ಹಿಂದಿನ ನರಗಳೂ ಮೊಣಕಾಲಿನ ಪಕ್ಕದಲ್ಲಿರುವ ನರಗಳೂ ದಪ್ಪವಾಗಿ ಮುಟ್ಟಿದರೆ ನೋಯುತ್ತವೆ. ನರಗಳ ಸುತ್ತಲಿರುವ ಶ್ವಾನ್‌ಜೀವಕಣಗಳಲ್ಲಿ ಕುಷ್ಠ ದಂಡಾಣುಗಳು ಯಥೇಚ್ಛವಾಗಿ ಬೆಳೆಯುತ್ತವೆ. ಹೊರ ಮೈನರಗಳನ್ನು ರೋಗಾಣುಗಳು ಆಕ್ರಮಿಸುವುದರಿಂದ ಕುಷ್ಠ ರೋಗದ ಅತ್ಯಂತ ಕ್ರೂರ ಲಕ್ಷಣಗಳು ಪ್ರಕಟವಾಗುತ್ತವೆ. ಇದರಿಂದ ಎರಡು ಕೆಡಕುಗಳಾಗಬಹುದು. ಚಾಲಕ ನರಗಳ ಅರನಾರಿಯಿಂದ ಚಾಲನ ಕ್ರಿಯೆ ಸ್ಥಗಿತಗೊಂಡು ರೋಗಿ ಬೀಳುಪಾದನಾಗಬಹುದು. ಕಣ್ಣು ರೆಪ್ಪೆ ಆಡಿಸದಂತೆ ಕೆಳಬೀಳಬಹುದು, ಅಥವಾ ಪಂಜಗೈಯಾಗಬಹುದು. ಅರಿವಳಿಕೆಯಿಂದ ಚರ್ಮ ಮತ್ತು ಲೋಳೆಪೊರೆಗಳಿಗೆ ಪೆಟ್ಟುಗಳು ತಾಕಿ ದುಷ್ಪರಿಣಾಮಗಳಾಗುತ್ತವೆ. ಇವುಗಳಲ್ಲಿ ಸಹಿಸಲಾಗದ ಕಷ್ಟತರದ್ದು ಮಷ್ಟಿಗೇಡಿನ ಪಾದದ ಹುಣ್ಣು. ಅರಿವಳಿದ ಕರಿಗುಡ್ಡೆಯ ಜೊತೆಗೆ ಬೀಳುರೆಪ್ಪೆಯ ಪರಿಣಾಮದಿಂದ ಕಣ್ಣು ಸದಾ ಅಪಾಯಗಳಿಗೆ ಈಡಾಗಿ ಗಾಯಗೊಂಡು, ಕೀವು ಸೇರಿ, ತೂತಾಗಿ ಕೊನೆಗೆ ಕಣ್ಣು ಹಿಂಗಿ ಕುರುಡುತನ ಶೇ.25ರಷ್ಟು ರೋಗಿಗಳಿಗೆ ಸಂಭವಿಸಬಹುದು. ಇದನ್ನು ತಪ್ಪಿಸಬೇಕಾದರೆ ಎಲ್ಲ ಕುಷ್ಠ ರೋಗಿಗಳ ಕಣ್ಣುಗಳನ್ನು 6 ತಿಂಗಳಿಗೆ ಒಂದು ಸಲ ಪರೀಕ್ಷೆ ಮಾಡಿ ಸೂಕ್ತ ಚಿಕಿತ್ಸೆ ಕೊಡಬೇಕು.

ಕುಷ್ಠ ದಂಡಾಣು ಆವರಿಸುವ ದೇಹದ ಬೇರೆ ಭಾಗಗಳು ಮೂಳೆ ಮತ್ತು ತರಡು ಬೀಜಗಳು. ಮೂಗಿನ ಕಂಬಕುಸಿಯುವುದು, ಹಸ್ತದ ಮೂಳೆಗಳು ಟೊಳ್ಳಾಗುವುದು. ಇದಕ್ಕೆ ನಿದರ್ಶನ. ಮುಂದುವರಿದ ಕುಷ್ಠಗಂತಿ ತೆರನ ಕುಷ್ಠದಲ್ಲಿ ದೇಹಾದ್ಯಂತ ರೋಗ ಹರಡಿದ ಸೂಚನೆಗಳಿವೆ. ಆದರೆ ಈ ರೋಗದ ಇತರ ರೂಪಗಳಲ್ಲಿ ದೇಹದ ಕೆಲವೇ ಭಾಗಗಳಲ್ಲಿ ಚಿಹ್ನೆಗಳಿರುತ್ತವೆ. ಕುಷ್ಠ ದಂಡಾಣುಗಳು ದೇಹದ ತಂಪಾದ ಅಂಗಾಂಶಗಳನ್ನೇ ಆರಿಸಿಕೊಳ್ಳುವುವೆಂದು ಸೂಚನೆಗಳಿವೆ. ಚರ್ಮ, ತರಡು, ಕಣ್ಣಿನ ಮುಂದಿನ ಅರ್ಧಭಾಗ, ಹೊರ ಮೈ ನರಗಳು, ಶ್ವಾಸನಾಳದ ಲೋಳೆ ಪೊರೆ – ಈ ಭಾಗಗಳಲ್ಲಿ ದೇಹದ ಉಷ್ಣತೆಯ ಮಟ್ಟ ತಗ್ಗಾಗಿರುತ್ತದೆ. ಚರ್ಮದಲ್ಲಿ ಕಡಿಮೆ ಉಷ್ಣತೆ ಇರುವ ಕಡೆ ನರಗಳು ಮೊದಲು ನಾಶವಾಗುವುದೆಂದು ತಿಳಿಯಬಂದಿದೆ.

**ರೋಗ ನಿದಾನ :** ರೋಗ ತಗುಲಿದ ಮೇಲೆ ಚಿಹ್ನೆಗಳು ಕಾಣಿಸುವ ಮೊದಲು ಅಂದರೆ, ಕುಮಲುವ ಕಾಲದಲ್ಲಿ ರೋಗವನ್ನು ಗುರುತಿಸಲಾಗುವುದಿಲ್ಲ. ಇದಕ್ಕೆ ಯಾವ ಸುಲಭ ಪ್ರಯೋಗ ಪರೀಕ್ಷೆಯೂ ಇಲ್ಲ. ಕುಷ್ಠ ರೋಗದ ಕಲೆಗಳು ಅನೇಕ ಚರ್ಮರೋಗಗಳನ್ನು ಹೋಲುತ್ತವೆ. ಸಂಶಯವಾದ ಕಲೆಗಳಿದ್ದರೆ ವೈದ್ಯರಿಂದ ಪರೀಕ್ಷೆ ಅಗತ್ಯ. ಚರ್ಮ ಮತ್ತು ಹೊರ ಮೈ ನರಗಳ ಪರೀಕ್ಷೆಗಳಿಂದ ವೈದ್ಯರು ರೋಗದ ಚಿಹ್ನೆಗಳನ್ನು ಗುರುತಿಸುತ್ತಾರೆ. ಚರ್ಮದ ಕಲೆಗಳಿಂದ ಊತಕದ ತಿರುಳನ್ನು ಚಾಕುವಿನಿಂದ ತೆಗೆದು ಸವರಿ ಬಣ್ಣ ಕೊಟ್ಟು ಪರೀಕ್ಷೆ ಮಾಡುವುದರಿಂದ ಸೂಕ್ಷ್ಮ ದರ್ಶಕದಲ್ಲಿ ಕುಷ್ಠ

ದಂಡಾಣುಗಳನ್ನು ಕಂಡುಹಿಡಿಯಬಹುದು. ಕುಷ್ಠಗಂತಿ ತೆರನ ರೂಪದಲ್ಲಿ ದಂಡಾಣುಗಳು ಹೇರಳವಾಗಿ ಊತಕದ ಬಳಿತದಲ್ಲಿ ಕಂಡುಬರುವುವು. ದ್ವಿರೂಪ ಕುಷ್ಠದಲ್ಲಿ ಇದನ್ನು ಒಮ್ಮೊಮ್ಮೆ ಕಾಣಬಹುದು. ಆದರೆ ಕ್ಷಯಗಂತಿಯಂಥ ರೂಪದಲ್ಲಿ ಪ್ರತಿಕ್ರಿಯೆ ಸಮಯಗಳಲ್ಲಲ್ಲದೆ ಬೇರೆ ಕಾಲದಲ್ಲಿ ಕಾಣವು.

ರೋಗದ ವರ್ಗೀಕರಣಕ್ಕೆ ಮತ್ತು ರೋಗದ ಮುನ್ನರಿಕೆಗೆ ಕುಷ್ಠಾಣುಸಾರ ಸಹಾಯಕವಾಗಿದೆ. ರೋಗನಿದಾನಕ್ಕೆ ಉಪಯೋಗವಲ್ಲ. ಕುಷ್ಠಗಂತಿಗಳನ್ನು ರೋಗಿಗಳಿಂದ ತೆಗೆದು ಅದರಿಂದ ತಯಾರಿಸಿದ ರಸವನ್ನು ಚರ್ಮಕ್ಕೆ ಚುಚ್ಚಿ ಚರ್ಮದ ಪ್ರತಿಕ್ರಿಯೆಯನ್ನು ನೋಡುತ್ತಾರೆ. ನಿಗ್ರಹಣಶಕ್ತಿ ಹೆಚ್ಚಿರುವ ಕುಷ್ಠರೋಗದ ರೂಪಗಳಲ್ಲಿ ಇದೊಂದು ಶಿಷ್ಟ ಪರೀಕ್ಷೆ. ನಿಗ್ರಹಣ ಶಕ್ತಿ ಇಲ್ಲದ ಕುಷ್ಠಗಂತಿ ತೆರನ ರೂಪದಲ್ಲಿ ಈ ಪರೀಕ್ಷೆ ತರವಲ್ಲ.

**ಚಿಕಿತ್ಸೆ :** ಕಳೆದ 50 ವರ್ಷಗಳಲ್ಲಿ ರೋಗದ ಚಿಕಿತ್ಸೆ ಮತ್ತು ಚಿಕಿತ್ಸೆಯ ಫಲಿತಾಂಶ ಬಹುಮಟ್ಟಿಗೆ ಉತ್ತಮಗೊಂಡಿವೆ. ಹಿಂದೆ ಚಾಲಮೂಗ್ರ ಮತ್ತು ಹಿಡಿನೋಕಾರ್ಪಸ್ ಎಣ್ಣೆಗಳಿಂದ ತಯಾರಾದ ಔಷಧಿಗಳನ್ನು ಬಿಟ್ಟರೆ ಬೇರೆ ಯಾವ ಔಷಧಿಗಳೂ ಇರಲಿಲ್ಲ. ಇವೂ ಅಷ್ಟು ಪ್ರಯೋಜನಕಾರಿಗಳಾಗಿರಲಿಲ್ಲ. 50 ವರ್ಷಗಳಿಂದ ಬಳಕೆಯಲ್ಲಿರುವ ಡ್ಯಾಪ್‌ಸೋನ್ ಅತ್ಯುಪಯುಕ್ತವಾಗಿ ಕಂಡುಬಂದಿದೆ. ಈ ಸಣ್ಣ ಗುಳಿಗೆಗಳನ್ನು ನುಂಗಬಹುದು. ಬೆಲೆ ಸುಲಭ. ಕುಷ್ಠರೋಗದ ಔಷಧಿಗಳಿಗೆ ಇವೆರಡೂ ಮುಖ್ಯ ಗುಣಕಾರಿಗಳು. ಡ್ಯಾಪ್‌ಸೋನನ್ನು ಪ್ರಾರಂಭಾವಸ್ಥೆಯಲ್ಲಿ ಸೇವಿಸಿದರೆ ಆ ರೋಗಿ ತನ್ನ ಅಂಗವಿಕಾರವಾಗುವ ಮೊದಲೇ ಪೂರ್ಣವಾಗಿ ಗುಣ ಹೊಂದುವನು. ಸುಮಾರು 6 ರಿಂದ 12 ತಿಂಗಳ ಸೇವನೆಯಿಂದ ಅಂಟುರೋಗಿಗಳು ಅಂಟಿಲ್ಲದಂತೆ ಆಗುತ್ತಾರೆ. ರೋಗಮುಂದುವರಿದ ಮೇಲೆ ಚಿಕಿತ್ಸೆಯನ್ನು ಪ್ರಾರಂಭಿಸಿದರೆ ಅಂಗವಿಕಾರಗಳನ್ನು ಗುಣಪಡಿಸಲಾಗದು, ರೋಗ ಮಾತ್ರ ವಾಸಿಯಾಗಬಹುದು. ಈ ಔಷಧಿಯ ಉಪಯೋಗದಲ್ಲಿ ಕೆಲವು ಭಿನ್ನಾಭಿಪ್ರಾಯಗಳಿವೆ. ದಿನವಹಿ ಸೇವಿಸಬೇಕಾದ ಪರಿಮಾಣ ಎಷ್ಟು ಮತ್ತು ಸೇವನೆಯ ಕಾಲಾವಧಿ ಎಷ್ಟು ಎಂಬ ವಿಚಾರದಲ್ಲಿ ಒಮ್ಮತವಿಲ್ಲ. ಹಿಂದೆ ಕೊಡುತ್ತಿದ್ದ ಪರಿಮಾಣಕ್ಕಿಂತ ಬಹು ಕಡಿಮೆ ಸಾಕು ಎನ್ನುವುದು ಈಚಿನ ಮತ. ಈ ಔಷಧಿಗಳನ್ನು ವೈದ್ಯರ ಸಲಹೆಯಂತೆ ಸೇವಿಸಬೇಕು. ಡ್ಯಾಪ್‌ಸೋನ್ ಚಿಕಿತ್ಸೆಯಲ್ಲಿ ಎರಡು ಮುಖ್ಯ ತೊಡಕುಗಳಿವೆ. ಕೆಲವುವೇಳೆ ದಂಡಾಣುಗಳು ಈ ಔಷಧಿಗೆ ಪ್ರತಿರೋಧ (ರೆಸಿಸ್ಟೆನ್ಸ್) ಪಡೆಯಬಹುದು. ಅಂಥ ರೋಗಿಗಳಲ್ಲಿ ಬೇರೆ ಔಷಧಿ ಪ್ರಯೋಗ ಮಾಡಬೇಕಾಗಬಹುದು. ಮತ್ತೆ ಕೆಲವು ವೇಳೆ ಅದರಲ್ಲೂ ಕುಷ್ಠಗಂತಿ ತೆರನ ರೂಪದಲ್ಲಿ ಆಗುವ ಕೆಂಪು ಗಂತಿ ಕುಷ್ಠಾಂದ ಪ್ರತಿಕ್ರಿಯೆಯನ್ನು ಹತೋಟಿಗೆ ತರುವುದು ಕಷ್ಟಸಾಧ್ಯ. ಡ್ಯಾಪೊಸೋನ್ ಪ್ರತಿರೋಧವಿರುವ ರೋಗಿಗಳಲ್ಲಿ ಉಪಯೋಗಿಸಬಹುದಾದ ತಯಾಂಬುಟೋಸೋನ್, ತಯಾಸಿಟಾಮೈಡ್, ಇಟಿಸಲ್ ಮತ್ತು ಲ್ಯಾಮಾಪ್ರೀನ್ ಎಂಬ ಹೊಸ ಔಷಧಗಳಿವೆ. ಇವನ್ನೆಲ್ಲಾ ಡ್ಯಾಪ್‌ಸೋನ್ ಪ್ರತಿರೋಧದಲ್ಲಿ ಬದಲಿ ಔಷಧಿಗಳಾಗಿ ಉಪಯೋಗ ಮಾಡಬಹುದು. ಲ್ಯಾಮಪ್ರೀನ್ ಕೆಂಪುಗಂತಿ ಕುಷ್ಠಾಂದ ಪ್ರತಿಕ್ರಿಯೆ ಶಮನಕ್ಕೂ ಸಹಾಯಕ. ರೋಗದ ಪ್ರಾರಂಭದಲ್ಲಿ ಚಿಕಿತ್ಸೆ ಪಡೆಯುವವರಿಗೆ ಕಾಲು ಕೈ ಮತ್ತು ಮುಖದಲ್ಲಿ ಅಂಗವಿಕಾರಗಳಾಗುತ್ತವೆ. ಇಂಥ ರೋಗಿಗಳಿಗೆ ಶಸ್ತ್ರ ಚಿಕಿತ್ಸೆಯಿಂದ ಕೈ ಕಾಲುಗಳ ಬಳಕೆಯನ್ನು ತಕ್ಕಮಟ್ಟಿಗೆ ಮೊದಲ ಸ್ಥಿತಿಗೆ ತರಬಹುದು. ಮುಖದ ವಿಕಾರಗಳನ್ನು ಸರಿಪಡಿಸಬಹುದು. ಭೌತರೋಗ ಚಿಕಿತ್ಸೆಯಿಂದ ನಾಶವಾದ ನರಗಳಿಂದಾಗುವ ಪರಿಣಾಮಗಳನ್ನು ಸರಿಪಡಿಸಬಹುದು.

**ಕುಷ್ಠರೋಗ ನಿವಾರಣೆ ಮತ್ತು ಹತೋಟಿ:** ರೋಗ ಹರಡುವ ಮಾರ್ಗ ತಿಳಿಯದಾಗ ಅದರ ನಿವಾರಣೆ ಕಷ್ಟ. ಕುಷ್ಠರೋಗ ಹರಡುವ ಮಾರ್ಗ ನಿರ್ದಿಷ್ಟವಾಗಿ ಗೊತ್ತಿಲ್ಲ. ಆದರೂ ಬೇರೆ ದಂಡಾಣುಜೀವಿಗಳಿಂದ ಮನುಷ್ಯರಲ್ಲಿ ಹರಡುವ ಕ್ಷಯರೋಗದ ನಿವಾರಣೆಯಲ್ಲಿ ಉಪಯುಕ್ತವಾದ ಮೂರು ಮಾರ್ಗಗಳನ್ನು ಇಲ್ಲಿಯೂ ಅನುಸರಿಸಬಹುದು. 1. ಅಂಟುರೋಗಿಯನ್ನು ಬೇರೆಯಾಗಿಡುವುದು ಮತ್ತು ಚಿಕಿತ್ಸೆ : 2. ಲಸಿಕೆ ಹಾಕುವುದರಿಂದ ರೋಗ ನಿಗ್ರಹಣ ಶಕ್ತಿಯನ್ನು ಹೆಚ್ಚಿಸುವುದು : 3. ಔಷಧಿಗಳನ್ನು ಜನಸಾಮಾನ್ಯರಿಗೆ ಕೊಟ್ಟು ರೋಗವನ್ನು ಹತೋಟಿಗೆ ತರುವುದು.

ಇತರ ಸಾಂಕ್ರಾಮಿಕ ರೋಗಗಳೊಡನೆ ಹೋಲಿಸುವಾಗ ಕುಷ್ಠರೋಗಕ್ಕೆ ಅತಿ ಲಘುವಾದ ಅಂಟುತನವಿರುವುದರಿಂದ ಈ ರೋಗಿಗಳನ್ನು ಬೇರೆ ಆಸ್ಪತ್ರೆಗಳಲ್ಲಿಡಬೇಕಿಲ್ಲ. ಹೊರ ರೋಗಿಗಳಾಗಿ ಚಿಕಿತ್ಸೆ ಮಾಡಬಹುದು. ತೀವ್ರ ಪ್ರತಿಕ್ರಿಯೆ, ಶಸ್ತ್ರ ಚಿಕಿತ್ಸೆ, ಉಲ್ಬಣಾವಸ್ಥೆಗಳಲ್ಲಿ ಮಾತ್ರ ಆಸ್ಪತ್ರೆಗಳಿಗೆ ಸೇರಿಸಬೇಕು. ಬಾಕಿಯಂತೆ ಮನೆಯಲ್ಲಿದ್ದುಕೊಂಡೇ ಚಿಕಿತ್ಸೆ ಪಡೆಯಬಹುದು. ಕ್ಷಯರೋಗ ನಿವಾರಣೆಗೆ ಉಪಯೋಗವಾಡುವ ಬಿ.ಸಿ.ಜಿ. ಲಸಿಕೆಯನ್ನು ಕುಷ್ಠರೋಗ ತಡೆಗಟ್ಟಲು ಉಪಯೋಗಿಸಲಾಗಿದೆ. ಇದರ ಉಪಯುಕ್ತತೆ ಸಂಪೂರ್ಣವಾಗಿ ತಿಳಿದಿಲ್ಲ. ಆದರೂ ಆಶಾದಾಯಕವಾಗಿದೆ. ಅಂಟಾದ ಕುಷ್ಠರೋಗಿಯ ಮನೆಯಲ್ಲಿ ವಾಸಮಾಡುವವರಿಗೆ ಡ್ಯಾಪ್‌ಸೋನ್ ಗುಳಿಗೆಗಳನ್ನು ಕೊಡುವುದರಿಂದ ಅವರಿಗೆ ರೋಗ ತಗಲದಂತೆ ಮಾಡಬಹುದು. ಪ್ರಾದೇಶಿಕ ವ್ಯಾಪ್ತಿಯಿರುವ ಕುಷ್ಠರೋಗ ಕೆಲವು ಹಳ್ಳಿಗಳಲ್ಲಿ ಹೆಚ್ಚಾಗಿರುತ್ತದೆ. ಅಂಥ ಹಳ್ಳಿ ಕೇರಿಗಳಲ್ಲಿರುವ ಎಲ್ಲರಿಗೂ ಮುನ್ನೆಚ್ಚರಿಕೆಯಾಗಿ ಒಂದೆರಡು ವರ್ಷಕಾಲ ಡ್ಯಾಪ್‌ಸೋನ್ ಕೊಡುವುದರಿಂದ ರೋಗಿಗಳಿಗೆ ಗುಣವಾಗುವುದಲ್ಲದೇ ಬೇರೆಯವರಿಗೆ ರೋಗ ಹರಡುವುದೂ ತಡೆದಂತಾಗುವುದು. ಈ ಪ್ರಯೋಗವನ್ನು ಕೆಲವು ದೇಶಗಳಲ್ಲಿ ಪ್ರಪಂಚದ ಆರೋಗ್ಯ ಸಂಸ್ಥೆ ನಡೆಸಿದೆ. ಭಾರತದಲ್ಲಿಯೂ ನಡೆಸಿದ ಪ್ರಯೋಗದಿಂದ ಇದು ರೋಗನಿವಾರಣೆಗೆ ಪರಿಣಾಮಕಾರಿ ಎಂದು ತಿಳಿದುಬಂದಿದೆ. (ಡಿ.ಪಿ.ಜಿ.; ಬಿ.ಎಸ್.ವಿ.)

**ಕುಸೀದ ಪದ್ಧತಿ :** ಕಾನೂನು ಕಟ್ಟಳೆಗಳಲ್ಲಿ ಅವಕಾಶವಿರುವುದಕ್ಕಿಂತ ಹೆಚ್ಚು ಬಡ್ಡಿಗೆ ಸಾಲ ನೀಡುವುದನ್ನು ಕುಸೀದ ಪದ್ಧತಿ ಎನ್ನುತ್ತಾರೆ (ಯೂಸ್ಯುರಿ). ವೇದಗಳ ಕಾಲದಿಂದಲೂ ಭಾರತದಲ್ಲಿ ಕುಸೀದ ಪದ್ಧತಿ ಬಳಕೆಯಲ್ಲಿದೆ. ಬಡ್ಡಿಗಾಗಿ ಸಾಲ ಕೊಡುವುದು–ಎಂದಷ್ಟೇ ಆಗ ಇದಕ್ಕೆ ಇದ್ದ ಅರ್ಥ. ದೇಶದ ಅರ್ಥವ್ಯವಸ್ಥೆಯಲ್ಲಿ ಕುಸೀದಕ್ಕೂ ಒಂದು ಸ್ಥಾನವಿದ್ದುದನ್ನು ಶುಕ್ರನೀತಿಯಲ್ಲಿ ಪ್ರಸ್ತಾಪಿಸಲಾಗಿದೆ. ಕುಸೀದ ಕೃಷಿ ವಾಣಿಜ್ಯಂ ಗೋರಕ್ಷ ವಾರ್ತಯೋಚ್ಯತೇ ಎಂಬ ವಿವರಣೆ ಶುಕ್ರನೀತಿಯಲ್ಲಿ ದೊರಕುತ್ತದೆ. ರೂಢಿಯನ್ನು ಮೀರಿ ಬಂಡವಾಳವನ್ನು ಬಡ್ಡಿಗೆ ಕೊಟ್ಟರೆ ಕುಸೀದಪಥವಾಗುತ್ತದೆ ಎಂಬುದು ಇದಕ್ಕೆ ನೀಡಲಾಗಿರುವ ವಿವರಣೆ. ಹಣವನ್ನು ಅಥವಾ ಮೂಲಧನವನ್ನು ಬಡ್ಡಿಗಾಗಿ ಕೊಡುವುದು ಎಂಬುದು ಭಾಗವತ ಪುರಾಣಗಳಲ್ಲಿ ಈ ಶಬ್ದಕ್ಕಿರುವ ಅರ್ಥ.

ಬಡ್ಡಿ ತೆಗೆದುಕೊಳ್ಳುವುದು ನ್ಯಾಯಸಮ್ಮತವಾದರೂ ರೂಢಿಯನ್ನು ಮೀರಿದರೆ ಕುಸೀದವಾಗುತ್ತದೆ ಎಂಬ ಭಾವನೆ ಸಾಮಾನ್ಯವಾದ್ದು. ಯಾವ ನಿಂದೆಗೂ ಅಂಜದೆ ಬಂಡವಾಳವನ್ನು ಸುಲಭವಾಗಿ ಕೊಟ್ಟು ಆದಾಯ ಪಡೆಯುವುದನ್ನು ಕುಸೀದವೆಂದು ಕರೆಯಲಾಗಿದೆ. ಕಾಲಕ್ರಮದಲ್ಲಿ ಬಂಡವಾಳವನ್ನು ಸಾಲವಾಗಿ ಕೊಡಲು ಪ್ರಾರಂಭಿಸಿ ಕೊನೆಗೆ ಅತಿಯಾದ ಬಡ್ಡಿಯನ್ನು ವಿಧಿಸಿ ಹಿಂಸಿಸಲು ತೊಡಗಿದಾಗ, ಈ ಕ್ರಮದ ವ್ಯವಹಾರಕ್ಕೆ ಕುಸೀದ ಎಂಬ ಹೆಸರು ಬಂತು.

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಬಡ್ಡಿಗಾಗಿ ಹಣವನ್ನು ಕೊಡುವ ಕ್ರಿಯೆಗೆ ಕುಸೀದವೆಂದು ಕರೆದರೆ ಜರ್ಮನ್ ಸಾಹಿತ್ಯದಲ್ಲಿ ಎಲ್ಲ ರೀತಿಯ ಆರ್ಥಿಕ ದುರುಪಯೋಗವನ್ನೂ ಕುಸೀದವೆಂದು ಕರೆಯಲಾಗಿದೆ. ಕೂಲಿಯ ದುರುಪಯೋಗ ಬಾಡಿಗೆಯ ದುರುಪಯೋಗ–ಇವು ಕುಸೀದದ ಸಾಮಾನ್ಯ ವಿಧಿಗಳು.

ಕುಸೀದ ವ್ಯವಹಾರದಲ್ಲಿ ಯಾವುದು ನಿಖರವಾದದ್ದು ಅಥವಾ ಶಾಶ್ವತವಾದದ್ದು ಎಂದು ಹೇಳಲು ಕಷ್ಟವಾಗುತ್ತದೆ. ಆರ್ಥಿಕ ವ್ಯವಸ್ಥೆಯಲ್ಲಿ ಒಪ್ಪಂದ ಸ್ವಾತಂತ್ರ್ಯವಿಲ್ಲದಿದ್ದಾಗ ಯಾವುದು ನ್ಯಾಯ, ಯಾವುದು ಅನ್ಯಾಯವಾದುದು ಎಂದು ನಿರ್ಧರಿಸಲು ಕಷ್ಟವಾಗುತ್ತದೆ. ಮಧ್ಯಯುಗದಲ್ಲಿ ಇದನ್ನು ಅಧರ್ಮ ಎಂದು ಖಂಡಿಸಿದರೆ ಮುಂದಿನ ಶತಮಾನದಲ್ಲಿ ಇದು ಸಾಮಾನ್ಯ ನಡೆವಳಿಕೆಯಾಯಿತು. ಕೆಲವು ದೇಶಗಳಲ್ಲಿ ಈ ವ್ಯವಹಾರವನ್ನು ರದ್ದುಮಾಡಿದರೆ, ಮತ್ತೆ ಕೆಲವು ದೇಶಗಳಲ್ಲಿ ಇದಕ್ಕೆ ಅನುಮತಿ ಕೊಡಲಾಯಿತು. ಬೆಲೆ, ಕೂಲಿ, ಬಡ್ಡಿ, ಮತ್ತು ಲಾಭ ಇವು ವಿಶ್ವವ್ಯಾಪಿಯಾದ ಆರ್ಥಿಕ ರೂಪಗಳು. ಕುಸೀದ ಆಯಾ ಕಾಲಗಳಲ್ಲಿಯ ನೈತಿಕ ಮತ್ತು ಕಾನೂನಿನ ಕಟ್ಟಳೆಗಳ ಮೇಲೆ ರೂಪಗೊಳ್ಳುತ್ತಿತ್ತು.

ಕುಸೀದವನ್ನು ಕುರಿತ ಭಾವನೆಗಳು ಗ್ರೀಕ್, ರೋಮನ್, ಯಹೂದ್ಯ ಮತ್ತು ಕ್ರೈಸ್ತ ತತ್ವಜ್ಞರಿಂದ ಪಾಶ್ಚಾತ್ಯ ದೇಶಗಳಲ್ಲಿ ರೂಪಗೊಂಡುವು. ಪ್ರಾಚೀನ ಭಾರತದ ಮತ್ತು ಪ್ರಾಚೀನ ಕಾಲದ ಮೋಸಸನ ನ್ಯಾಯಸೂತ್ರಗಳು ಕುಸೀದ ವ್ಯವಹಾರವನ್ನು ನಿಷೇಧಿಸಿದ್ದುವು. ಪ್ರಾಚೀನ ಕಾಲದಲ್ಲಿ ಶೇ. 5 ಕ್ಕಿಂತ ಹೆಚ್ಚಿನ ಬಡ್ಡಿಯನ್ನು ನಿಷೇಧಿಸಲಾಗಿತ್ತು. ಪಂಚಕಂ ಶತಂ ಅರ್ಹತಿ ಎಂದು ಮನುಸ್ಮೃತಿ ಹೇಳುತ್ತದೆ. ಯಹೂದ್ಯರಲ್ಲಿ ವಿಚಿತ್ರವಾದ ಪದ್ಧತಿ ಇತ್ತು. ತಮ್ಮ ಜನರಿಂದ ಅವರು ಹೆಚ್ಚಿನ ಬಡ್ಡಿಯನ್ನು ತೆಗೆದುಕೊಳ್ಳುವಂತಿರಲಿಲ್ಲ. ಪರದೇಶೀಯರಿಂದ ವಿಪರೀತ ಬಡ್ಡಿಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿತ್ತು. ಅಥೆನ್ಸಿನಲ್ಲಿ ಸೋಲನ್ನನ ಶಾಸನಗಳು ಕೃಷಿಕರಿಗೆ ಹೆಚ್ಚಿನ ದರದ ಬಡ್ಡಿಯನ್ನು ವಿಧಿಸುವುದಕ್ಕೆ ಅವಕಾಶವಿರಲಿಲ್ಲ. ರೋಂ ಸಾಮ್ರಾಜ್ಯದಲ್ಲಿ ಬಡ್ಡಿಯ ಗರಿಷ್ಠಮಿತಿ ಶೇ. 10. ಅಲ್ಲಿ ಪ್ರ.ಶ.ಪೂ. 342ರಲ್ಲಿ ಸಾಲಕ್ಕೆ ಯಾವ ರೀತಿಯ ಪ್ರತಿಫಲವನ್ನೇ ಆಗಲಿ ತೆಗೆದುಕೊಳ್ಳುವುದನ್ನು ನಿಷೇಧಿಸುವ ಶಾಸನಗಳನ್ನು ರಚಿಸಲಾಗಿತ್ತು. ಆದರೆ ಈ ಶಾಸನದ ಜಾರಿ ಮಾತ್ರ ಆಗಲಿಲ್ಲ. ನೌಕಾ ವ್ಯಾಪಾರಕ್ಕೆ ವಿಪರೀತವಾದ ಬಡ್ಡಿ ವಿಧಿಸಲಾಗುತ್ತಿತ್ತು. ರೋಮಿನಲ್ಲಿ ಐಶ್ವರ್ಯವಂತರು ಅತಿಯಾದ ಬಡ್ಡಿಯನ್ನು ಗಳಿಸುತ್ತಿದ್ದುದರಿಂದಲೇ ಪ್ರಬಲರಾಗಿದ್ದರೆಂದು ಹೇಳಲಾಗಿದೆ. ಸಾಮಾನ್ಯ ಸಾಲಗಳಿಗೆ ಶೇ. 6ರಂತೆ, ವ್ಯಾಪಾರಿಗಳಿಗೆ ಮತ್ತು ಉದ್ಯಮಿಗಳಿಗೆ ಶೇ. 8ರಂತೆ, ಸಮಾಜದಲ್ಲಿ ಉನ್ನತಮಟ್ಟದಲ್ಲಿದ್ದವರಿಗೆ ಶೇ. 4ರಂತೆ, ನೌಕಾವ್ಯಾಪಾರಿಗಳಿಗೆ ಶೇ. 12ರಂತೆ, ಬಡ್ಡಿ ವಿಧಿಸಬೇಕೆಂದು ಅನಂತರಕಾಲದಲ್ಲಿ ಜಸ್ಟಿನಿಯನ್ ಗೊತ್ತು ಮಾಡಿದ್ದ.

ಪ್ರಾಚೀನ ತತ್ತ್ವಜ್ಞಾನಿಗಳ ಬೋಧನೆಯಿಂದ ಮತ್ತು ಕ್ರೈಸ್ತಪಂಥದ ಪ್ರಭಾವದಿಂದ ನಿಷ್ಠುರವಾದ ಪ್ರತಿಬಂಧಕಗಳು ಜಾರಿಗೆ ಬಂದುವು. ಆಟಿಕ ತತ್ತ್ವಜ್ಞಾನಿಗಳು ಕುಸೀದ ವ್ಯವಹಾರದ ವಿರುದ್ಧ ನಿಲುವು ತಳೆದಿದ್ದರು. ಗ್ರೀಕ್ ತತ್ತ್ವಜ್ಞಾನಿಗಳಾದ ಪ್ಲೇಟೊ ಮತ್ತು ಅರಿಸ್ಟಾಟಲರು ಆರ್ಥಿಕ ಅಭಿವೃದ್ಧಿಗೆ ಬ್ಯಾಂಕುಗಳು ಆವಶ್ಯಕವೆಂಬುದನ್ನು ಮನಗಂಡಿದ್ದರು.

ಅಲ್ಲದೆ ಕುಸೀದ ಪದ್ಧತಿಯಲ್ಲಿ ಅಂತರ್ಗತವಾಗಿರುವ ಸಾಮಾಜಿಕ ಅಪಾಯ ಅವರ ಅರಿವಿಗೆ ಬಂದಿತ್ತು. ಮಿತಿಮೀರಿ ಲಾಭಗಳಿಸುವುದಕ್ಕೆ ಸಮಾಜವು ವಿರೋಧವಾಗಿತ್ತು. ಸಾಲ ಕೊಡುವುದನ್ನು ಖಂಡಿಸಿ, ಲಾಭೋನ್ಮತ್ತವಾದ ಅರ್ಥ ವ್ಯವಸ್ಥೆಯನ್ನು ಬುಡಸಹಿತ ಕಿತ್ತೊಗೆಯಬಹುದೆಂದು ಅವರು ನಂಬಿದ್ದರು. ಲೇವಾದೇವಿಯ ಮೂಲಕ ಅಪಾರ ಬಡ್ಡಿ ಗಳಿಸಿ ಐಶ್ವರ್ಯವಂತರಾಗುವುದನ್ನು ತತ್ತ್ವಜ್ಞಾನಿಗಳು ಧಿಕ್ಕರಿಸಿದರು.

ಕುಸೀದಕ್ಕೆ ಗ್ರೀಕ್ ಸಮಾನಪದ ಟೋಕಸ್–ಜೀವಿಯ ಸಂತಾನ. ಹಣ ನಿರ್ಜೀವ ವಸ್ತುವಾದ್ದರಿಂದ ಅದು ವಿನಿಮಯ ಮಾಧ್ಯಮವೇ ಹೊರತು ಹೊಸ ನಾಣ್ಯಗಳನ್ನು ವೃದ್ಧಿಮಾಡುವುದಿಲ್ಲ ಎಂಬುದು ಅರಿಸ್ಟಾಟಲನ ಅಭಿಪ್ರಾಯವಾಗಿತ್ತು. ಸಾಲವಾಗಿ ಕೊಟ್ಟ ಹಣಕ್ಕೆ ಪ್ರತಿಫಲ ಬೇಡುವಾತ ಹಣದಿಂದ ಹಣಕ್ಕೆ ಜನ್ಮ ಕೊಡುತ್ತಾನೆ. ಈ ಕ್ರಿಯೆ ಪ್ರಕೃತಿನಿಯಮಕ್ಕೆ ವಿರೋಧವಾದ್ದು ಎಂದು ಆತ ಹೇಳಿದ್ದ. ಯಾವ ಪ್ರತಿಫಲವೂ ಇಲ್ಲದೆ ಸಾಲ ಕೊಡಬೇಕು ಎಂದು ಧರ್ಮಗ್ರಂಥಗಳು ಸಾರಿದ್ದರಿಂದ, ಕುಸೀದ ವ್ಯವಹಾರಕ್ಕೆ ಆ ಕಾಲದಲ್ಲಿ ಮನ್ನಣೆಯಿರಲಿಲ್ಲ. ರೋಮನ್ ಚರ್ಚ್ ಇದೇ ಧೋರಣೆ ತಳೆದಿತ್ತು. ಪ್ರಾಚೀನ ಅರ್ಥವ್ಯವಸ್ಥೆಯಲ್ಲಿ ಅನುಭೋಗಕ್ಕಾಗಿ ಸಾಲಮಾಡುತ್ತಿದ್ದುದೇ ಹೆಚ್ಚಾಗಿತ್ತು. ಸಾಲದ ಮೊತ್ತ ಕ್ರಮವಾಗಿ ಭಾರವಾಗಿ ಸಾಲಗಾರನಿಗೆ ದುರ್ಭರವಾಗಿ ಪರಿಣಮಿಸುತ್ತಿತ್ತು. ಮಧ್ಯಯುಗದಲ್ಲಿ ಐಶ್ವರ್ಯವಂತರು ಸಾಲ ಕೊಡುವಾಗ ಲಾಭ ಪಡೆಯದೆ ಕೊಡುತ್ತಿರಲಿಲ್ಲ. ಒಂದು ಲೇವಾದೇವಿಯ ಅಂಗವಾಗಿ ಹಣದ ಸ್ವೀಕರ್ತ(ಪೇಯೀ)ನಿಗೆ ಹಣ ಕೊಡುವುದು ಮಾರಾಟವಾಗುತ್ತದೆ. ಅದನ್ನು ಕೊಳ್ಳುವವನು ಅವಕ್ಕೆ ಕೊಡಬೇಕಾದ ಬೆಲೆಯೆಂದರೆ ಅಷ್ಟೇ ಹಣ; ಅದಕ್ಕಿಂತ ಹೆಚ್ಚುಕೊಡುವುದು ಸಲ್ಲದು. ಸಾಲದಾತ ತಾನು ಸಾಲವಾಗಿ ಕೊಟ್ಟಷ್ಟನ್ನೇ ವಾಪಸು ಪಡೆಯಬೇಕು. ಸಾಲವೆಂಬುದು ಪವಿತ್ರವಾದ್ದರಿಂದ ಅದಕ್ಕೆ ಬೆಲೆ ನಿಷ್ಕರ್ಷಿಸುವುದು ಅಕ್ಷಮ್ಯ ಅಪರಾಧ ಎಂದು ಆಗ ಸಾಮಾನ್ಯವಾಗಿ ಭಾವಿಸಲಾಗಿತ್ತು. ಗ್ರೀಸ್ ಮತ್ತು ರೋಂಗಳಲ್ಲೂ ಯಾವ ದರದಲ್ಲಿ ಹಣವನ್ನು ಕೊಟ್ಟರೆ ಅದು ಕುಸೀದವಾಗುತ್ತದೆ ಎಂದು ಹೇಳಬೇಕಾಗಿರಲಿಲ್ಲ. ಏಕೆಂದರೆ ಮೂಲತಃ ಅಸಲಿಗಿಂತ ಹೆಚ್ಚಿನದೆಲ್ಲ ಕುಸೀದ ಎಂದು ಭಾವಿಸಲಾಗಿತ್ತು. ಕಟ್ಟಳೆಯನ್ನು ಮೀರಿದ ಕುಸೀದ ವ್ಯವಹಾರ ಮಹಾಪರಾಧವೆನಿಸಿತ್ತು–ಅದಕ್ಕೆ ಗಡಿಪಾರು ಶಿಕ್ಷೆ ವಿಧಿಸಲಾಗುತ್ತಿತ್ತು. ಬಂಡವಾಳವನ್ನು ಕ್ರಯಕ್ಕೆ ಮಾರುವುದನ್ನು ಚರ್ಚ್ ಮಧ್ಯಯುಗದವರೆಗೂ ನಿಷೇಧಿಸಿಕೊಂಡು ಬಂದಿದ್ದರೂ ಹಣದ ಅವಶ್ಯಕತೆ ಇದ್ದವರು ಅದರ ವೆಚ್ಚವನ್ನು ಭರಿಸುವುದಾದರೆ ಅಂಥವರು ಹಣ ತೆಗೆದುಕೊಳ್ಳುವುದಕ್ಕೆ ಅಡ್ಡಿಯಿರಲಿಲ್ಲ. ಕ್ರೈಸ್ತರಲ್ಲಿ ಕುಸೀದದ ವಿರುದ್ಧ ಕಾನೂನುಗಳಿದ್ದರೂ ಯೆಹೂದ್ಯರು ಚರ್ಚಿನ ಅಧಿಕಾರಕ್ಕೆ ಒಳಪಡದಿದ್ದುದರಿಂದ ಅವರಿಗೆ ಇದು ಅನ್ವಯಿಸುತ್ತಿರಲಿಲ್ಲ. ಕೊನೆಗೆ ಕ್ರೈಸ್ತಮತೀಯ ವ್ಯಾಪಾರಿಗಳು ಬ್ಯಾಂಕಿಂಗ್ ಉದ್ಯಮದಲ್ಲಿ ತೊಡಗಿದಾಗ, ಅವರು ಕುಸೀದ ಪ್ರವರ್ತಕರೆಂದು ದೂಷಣೆಗೆ ಒಳಗಾದರಾದರೂ ಅವರು ಚರ್ಚಿನ ಮತ್ತು ರಾಜರ ಕೃಪೆಗೆ ಒಳಗಾಗಿದ್ದುದರಿಂದ, ದೋಷವಿಮುಕ್ತರಾಗಿದ್ದರು. ಅನಂತರ ಹಣಕಾಸಿನ ಆವಶ್ಯಕತೆಗಳು ಹೆಚ್ಚಾದಂತೆ ಚರ್ಚಿನ ಅಧಿಕಾರಿಗಳು ಹಣವ್ಯವಹಾರದ ಬಗ್ಗೆ ಸಡಿಲ ದೃಷ್ಟಿ ತಳೆಯಲಾರಂಭಿಸಿದರು. ಸಾಲದ ಹಣಕ್ಕೆ ಬಡ್ಡಿ ಹಾಕುವುದನ್ನು ನಿಷೇಧಿಸಿತ್ತಾದರೂ ಅವಧಿ ಮೀರಿದಾಗ ದಂಡ ವಿಧಿಸುವುದಕ್ಕೆ ಅವಕಾಶವಿತ್ತು. 16ನೆಯ ಶತಮಾನದ ಹೊತ್ತಿಗೆ ಚರ್ಚು ಕೂಡ ಸಾಲ ಕೊಡಲು ತೊಡಗಿದಾಗ ಈ ವ್ಯವಹಾರಕ್ಕೆ ತಗಲುವ ಖರ್ಚನ್ನು ಪಡೆಯುವ ಉದ್ದೇಶದಿಂದ ಅಲ್ಪ ಪ್ರಮಾಣದಲ್ಲಿ ಬಡ್ಡಿ ವಿಧಿಸಲು ತೊಡಗಿತು. 16ನೆಯ ಶತಮಾನದಲ್ಲಿ ಸರಳವಾದ ಕುಸೀದ ನೀತಿ ರಚಿತವಾಗಿ, ಬಡ್ಡಿ ವಿಧಿಸುವುದು ಅಕ್ಷಮ್ಯ ಅಪರಾಧವಲ್ಲ ಎಂಬ ನಿಲವನ್ನು ಕೆಲವು ಅಧಿಕಾರಿಗಳು ತಳೆದರು. ಅಲ್ಪವಾದ ಬಡ್ಡಿ ವಿಧಿಸಬಹುದೆಂದು ಪ್ರಚಾರಗಳೂ ನಡೆದುವು. 16–17ನೆಯ ಶತಮಾನಗಳಲ್ಲಿ ಕುಸೀದಕ್ಕೆ ಇದ್ದ ಪ್ರತಿಬಂಧಕಗಳನ್ನು ತೆಗೆದುಹಾಕುವ ಪ್ರಯತ್ನಗಳು ನಡೆದುವು.

18ನೆಯ ಶತಮಾನದಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಯಿಂದಾಗಿ ಬಂಡವಾಳ ವ್ಯವಸ್ಥೆ ಬೆಳೆದಂತೆಲ್ಲ ಚರ್ಚಿನ ನಿಬಂಧನೆಗಳು ಮೂಲೆಗೆ ಬಿದ್ದುವು. ಬಂಡವಾಳವನ್ನು ಎರವು ನೀಡಿದ್ದಕ್ಕೆ ಪ್ರತಿಫಲವಿರಬೇಕೆಂಬುದು ಅಂಗೀಕೃತವಾದರೂ ಯಾವ ದರದಲ್ಲಿ ಬಡ್ಡಿ ವಿಧಿಸಿದರೆ ಅದು ಕುಸೀದವಾಗುತ್ತದೆ ಎಂಬುದು ಮಾತ್ರ ಸ್ಪಷ್ಟಪಡಲಿಲ್ಲ. ಈ ಮಧ್ಯೆ ಕೆಲವು ಸರ್ಕಾರಗಳು ಬಡ್ಡಿಯ ಗರಿಷ್ಠಮಿತಿಯನ್ನು ನಿರ್ಧರಿಸಿದುವು. ನಿರಾತಂಕ ಸ್ವಾತಂತ್ರ್ಯ ನೀತಿ ಅನುಷ್ಠಾನಕ್ಕೆ ಬಂದಾಗ ಮೇಲಿನ ನಿರ್ಬಂಧ ಕಡಿಮೆಯಾಗತೊಡಗಿತು. 1682ರಲ್ಲಿ ವಿಲಿಯಂ ಪೆಟಿಯೂ ಒಂದು ಶತಮಾನದ ತರುವಾಯ ಫ್ರಾನ್ಸಿನ ಟರ್ಗೋನೂ ಸಾಲ ವ್ಯವಹಾರಗಳಲ್ಲಿ ಬಡ್ಡಿ ಇರಬೇಕೆಂದು ವಾದಿಸಿದರು. 1787ರಲ್ಲಿ ಬೆಂಥ್ಯಾಂ ಕುಸೀದವನ್ನು ಸಮರ್ಥಿಸಿ ಗ್ರಂಥ ಬರೆದ. ವಸ್ತುಗಳ ವ್ಯಾಪಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರುವಂತೆಯೆ ಹಣದ ವ್ಯವಹಾರದಲ್ಲೂ ಸ್ವಾತಂತ್ರ್ಯವಿರಬೇಕೆಂದು ವಾದಿಸಿದ. ಬಡಜನರ ಹಿತವನ್ನು ರಕ್ಷಿಸುವ ನೆಪದಿಂದ ಈ ಕಾನೂನುಗಳು ಅವರು ಸಾಲಪಡೆದು ಅಭಿವೃದ್ಧಿಯಾಗದಂತೆ ಮಾಡುತ್ತವೆ. ಆದ್ದರಿಂದ ಬಡಜನರ ಹಿತದೃಷ್ಟಿಯಿಂದ ಈ ನಿರ್ಬಂಧಗಳನ್ನು ರದ್ದುಮಾಡಬೇಕು ಎಂದು ಕೆಲವು ಮುಖಂಡರು ವಾದಿಸಿದರು. 19ನೆಯ ಶತಮಾನದಲ್ಲಿ ಕುಸೀದವಿರುದ್ಧವಾದ ಕಾನೂನುಗಳು ರದ್ದಾದುವು.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅತಿಯಾಗಿ ಬಡ್ಡಿ ವಿಧಿಸುವುದಕ್ಕೆ ವಿರೋಧವಿತ್ತು. ಒಮ್ಮೆ ತೆಗೆದುಕೊಂಡ ಹಣದ ಬಡ್ಡಿ ಅಸಲಿನ ಎರಡರಷ್ಟನ್ನು ಮೀರಬಾರದು, ಕಾಯಕ ಮತ್ತು ಚಕ್ರಬಡ್ಡಿ ವಸೂಲಿ ಕೂಡದು ಎಂದು ಹೇಳಲಾಗಿತ್ತು. ಆಧುನಿಕ ಭಾರತದಲ್ಲಿ ಕೆಲವು ಲೇವಾದೇವಿ ವರ್ಗದವರು ವಿಪರೀತವಾದ ಬಡ್ಡಿ ವಿಧಿಸುತ್ತಿದ್ದರು. ಸಾಹುಕಾರರು ಶೇ. 12–37½ ರಷ್ಟು ಬಡ್ಡಿ ವಿಧಿಸುತ್ತಿದ್ದರೆಂದು ಅನೇಕ ವರದಿಗಳು ತಿಳಿಸುತ್ತವೆ. ಭದ್ರತೆಯಿಲ್ಲದ ಸಾಲಕ್ಕೆ ಶೇ.300ರವರಗೆ ಬಡ್ಡಿ ವಿಧಿಸುತ್ತಿದ್ದುದೂ ಉಂಟು. ಈ ರೀತಿಯ ಅಕ್ರಮವಾದ ಬಡ್ಡಿಯನ್ನು ತಪ್ಪಿಸಲು ಭಾರತದಲ್ಲಿ 1918ರಲ್ಲಿ ಒಂದು ಕಾಯಿದೆ ಜಾರಿಗೆ ಬಂದು ಸರ್ಕಾರ ನ್ಯಾಯವಾದ ಬಡ್ಡಿಯನ್ನು ಗೊತ್ತುಮಾಡಲು ಅಧಿಕಾರ ನೀಡಲಾಯಿತು. ಭಾರತದ ಎಲ್ಲ ಪ್ರಾಂತ್ಯ ಸರ್ಕಾರಗಳೂ ಬಡ್ಡಿಯ ದರದ ಕನಿಷ್ಠ–ಗರಿಷ್ಠ ಮಿತಿಗಳನ್ನು ನಿರ್ಧರಿಸುವ ಕಾಯಿದೆಗಳನ್ನು ಮಾಡಿದುವು. ಸಾಹುಕಾರರು ಅತಿಯಾದ ಬಡ್ಡಿ ವಿಧಿಸಿ ಜನರನ್ನು ಶೋಷಿಸಲು ಇಂದಿನ ಕಾನೂನುಗಳು ಅವಕಾಶ ಕೊಡುವುದಿಲ್ಲ. ಆದರೂ ಖಾಸಗಿ ಕ್ಷೇತ್ರದಲ್ಲಿ ಇಂದಿಗೂ ಇದು ಚಾಲನೆಯಲ್ಲಿದೆ. ಇದು ಸಾರ್ವಜನಿಕವಾಗಿ ತಿಳಿಯದಂತೆ ನಡೆಯುತ್ತದೆ. ನಗರಗಳಲ್ಲಿ, ದೊಡ್ಡ ದೊಡ್ಡ ಉದ್ಯಮಗಳಲ್ಲಿ, ಚಲನಚಿತ್ರ, ಬೃಹತ್ ವಹಿವಾಟು ಕ್ಷೇತ್ರಗಳಲ್ಲಿ ಇದು ಇಂದಿಗೂ ನಡೆದು ಬರುತ್ತಿದೆ.

ಭಾರತದಲ್ಲಿ ಅಭದ್ರತೆಯ ಸ್ಥಿತಿಯೂ ಈ ಕುಸೀದದ ಅಸ್ತಿತ್ವಕ್ಕೆ ಕಾರಣೀಭೂತವಾಗಿದೆಯೆಂದು ಕೆಲವು ಹಿರಿಯ ಲೇಖಕರು ಪ್ರತಿಪಾದಿಸಿದ್ದಾರೆ. ಬಹುತೇಕ ಸಾಲಗಾರರ ಕನಿಷ್ಠ ಮಟ್ಟದ ಆರ್ಥಿಕ ಸ್ಥಿತಿಯು ಪ್ರಮುಖ ಲಕ್ಷಣವಾಗಿರುವುದರಿಂದ ಇವರಿಗೆ ಸಾಲ ನೀಡಿಕೆಯು ನಷ್ಟ ಸಂಭಾವ್ಯವಾಗಿರುವುದೂ ಕಾರಣವಾಗಿದೆ. ಇವು ಪ್ರಮುಖ ಕಾರಣವಾಗಿದ್ದರೂ ಅದಿಷ್ಟೇ ಕಾರಣವೇನಲ್ಲ. ಸ್ಥಳೀಯ, ಪ್ರಾಂತೀಯ ಆಚಾರ–ಸಂಸ್ಕೃತಿಗಳೂ ಪ್ರಮುಖ ಪಾತ್ರವಹಿಸಿವೆ. ನಗರ, ಪಟ್ಟಣಗಳಲ್ಲಿ ಕುಸೀದ ಪದ್ಧತಿ ಕುಸಿದಿದ್ದರೂ ಗ್ರಾಮಾಂತರಗಳಲ್ಲಿ ಖಾಸಗಿ ಲೇವಾಲೇವಿದಾರರು ಇಂದಿಗೂ ಕುಸೀದ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ.

ಒಟ್ಟಿನಲ್ಲಿ ಕುಸೀದ ಪದ್ಧತಿ ಸಮಾಜದ ಹಿತಕ್ಕೆ ವಿರೋಧವಾಗಿರುವುದರಿಂದ ಇಂದಿನ ವಿಶ್ವದ ಆರ್ಥಿಕತೆಯಲ್ಲಿ ಇದಕ್ಕೆ ಸ್ಥಾನವಿಲ್ಲ. ವ್ಯವಸ್ಥಿತವಾದ ಬ್ಯಾಂಕಿಂಗ್ ಪದ್ಧತಿ ಮತ್ತು ಸಹಕಾರ ಪದ್ಧತಿ ಬೆಳೆದಂತೆಲ್ಲ ಇದು ಕಣ್ಮರೆಯಾಗುತ್ತಿದೆ. (ಎನ್.ಜಿ.ಸಿ.)

**ಕುಸುಬೆ :** ಕಂಪಾಸಿಟೀ ಕುಟುಂಬಕ್ಕೆ ಸೇರಿದ ಕಾರ್ತಮಸ್ ಟಿಂಕ್ಟೋರಿಯಸ್ ಎಂಬ ವೈಜ್ಞಾನಿಕ ಹೆಸರಿನ ವಾರ್ಷಿಕ ಸಸ್ಯ. 30.47 ಸೆಂಮೀ.ನಿಂದ 0.91 ಮೀ ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳ ಅಂಚು ಮತ್ತು ತುದಿಗಳಲ್ಲಿ ಮುಳ್ಳುಗಳಿವೆ. ಹೂಗಳು ಹಳದಿ ಅಥವಾ ಕಿತ್ತಳೆ–ಕೆಂಪುವರ್ಣವಾಗಿದ್ದು ಗೋಳಾಕಾರದ ಚಂಡುಮಂಜರಿಗಳಲ್ಲಿ ಜೋಡಿಸಿಕೊಂಡಿರುತ್ತವೆ. ಇದರ ಕಾಯಿ ನಯವಾಗಿದ್ದು ನಾಲ್ಕು ಮೂಲೆಯ ಒಂದೇ ಬೀಜವುಳ್ಳ ಅಕೀನ್ ಮಾದರಿಯದಾಗಿರುತ್ತದೆ. ಕುಸುಬೆಯನ್ನು ಮುಖ್ಯವಾಗಿ ಮಳೆ ನೀರನ್ನು ಆಧಾರ ಮಾಡಿಕೊಂಡಿರುವ ಹೊಲಗಳಲ್ಲಿ ಬೆಳೆಸುವರು. ಕಾಡು ಪ್ರಭೇದಗಳಾದ ಕಾರ್ತಮಸ್ ಲ್ಯಾನೇಟಸ್ ಅಥವಾ ಕಾರ್ತಮಸ್ ಆಕ್ಸಿಅಕ್ಯಾಂತ ಎಂಬುವುಗಳಿಂದ ಕುಸುಬೆ ವಿಕಾಸವಾಗಿದೆಯೆಂದು ಊಹಿಸಲಾಗಿದೆ. ಇದನ್ನು ಭಾರತ, ಚೀನ, ಪರ್ಷಿಯ, ಕಾಕಸಸ್, ಈಜಿಪ್ಟ್, ಇಟಲಿ, ಸ್ಪೇನ್, ಅಮೆರಿಕ ಸಂಯುಕ್ತಸಂಸ್ಥಾನಗಳು, ಆಸ್ಟ್ರೇಲಿಯ ಮುಂತಾದ ದೇಶಗಳಲ್ಲಿ ಬೆಳೆಸಲಾಗುತ್ತಿದೆ. ಭಾರತದ ಎಲ್ಲ ರಾಜ್ಯಗಳಲ್ಲೂ ಇದರ ಬೇಸಾಯ ಇದೆ. ಕರ್ನಾಟಕ ರಾಜ್ಯದ ಉತ್ತರದ ಜಿಲ್ಲೆಗಳಾದ ಧಾರವಾಡ, ಬೆಳೆಗಾಂವಿ, ಗುಲ್ಬರ್ಗ, ರಾಯಚೂರು, ಬಿದರೆ ಮುಂತಾದೆಡೆಗಳಲ್ಲಿ ವ್ಯಾಪಕವಾಗಿ ಇದನ್ನು ಬೆಳೆಸುತ್ತಾರೆ.

ಕುಸುಬೆಯ ಸುಮಾರು 60 ತಳಿಗಳು ಸದ್ಯದಲ್ಲಿ ಬೇಸಾಯದಲ್ಲಿವೆ. ಅವುಗಳಲ್ಲಿ ಕೆಲವು ತಳಿಗಳ ಎಲೆಗಳ ತುದಿ ಮತ್ತು ಅಂಚುಗಳಲ್ಲಿ ಬಲವಾದ ಮುಳ್ಳುಗಳಿವೆ. ಮಿಕ್ಕ ತಳಿಗಳು ಮುಳ್ಳಿಲ್ಲದ ಎಲೆಗಳುಳ್ಳವು. ಮುಳ್ಳೆಲೆಯ ತಳಿಗಳನ್ನು ಮುಖ್ಯವಾಗಿ ಎಣ್ಣೆಗಾಗಿಯೂ ಮುಳ್ಳಿಲ್ಲದ ಎಲೆಗಳ ತಳಿಗಳನ್ನು ಬಣ್ಣ ತಯಾರಿಕೆಗಾಗಿಯೂ ಬೆಳೆಸುತ್ತಾರೆ. ಒಂದೊಂದು ರಾಜ್ಯದಲ್ಲೂ ಆಯಾ ರಾಜ್ಯದ ಹವಾಗುಣಕ್ಕೆ ಒಗ್ಗುವ ತಳಿಗಳನ್ನು ರೂಪಿಸಿ ವ್ಯವಸಾಯಕ್ಕೆ ಅಣಿಗೊಳಿಸುವ ಯತ್ನ ನಡೆಯುತ್ತಿದೆ. ತಮಿಳುನಾಡಿನಲ್ಲಿ ಪೂಸಾ ಮಾದರಿ 1,28 ಎಂಬ ತಳಿಗಳನ್ನೂ ಉತ್ತರ ಪ್ರದೇಶದಲ್ಲಿ ಮಾದರಿ 56ನ್ನೂ ಹೆಚ್ಚಾಗಿ ಬೆಳೆಸಲಾಗುತ್ತಿದೆ. ಅವು ಆಯಾ ಪ್ರದೇಶಕ್ಕೆ ಅತ್ಯಂತ ಚೆನ್ನಾಗಿ ಹೊಂದಿಕೊಂಡಿವೆ. ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ನಿಫಡ್–630 ಎಂಬ ತಳಿಯನ್ನು ಹೆಚ್ಚಾಗಿ ಬೆಳೆಸಿರುತ್ತಾರೆ. ಈಗ ಕುಸುಬೆಯನ್ನು ಎಣ್ಣೆಯ ಬೀಜಕ್ಕಾಗಿ ವ್ಯವಸಾಯ ಮಾಡಲಾಗುತ್ತಿದೆ. ಹಿಂದೆ ಇದರ ಹೂವಲದಿಂದ ತಯಾರಾಗುತ್ತಿದ್ದ ಬಣ್ಣಕ್ಕಾಗಿ ಸಹ ಇದನ್ನು ಬೆಳೆಸುತ್ತಿದ್ದರು. ಕೃತಕ ವರ್ಣಗಳ ತಯಾರಿಕೆಯಿಂದ ಕುಸುಬೆಯನ್ನು ಬಣ್ಣ ತಯಾರಿಸಲು ಅಷ್ಟಾಗಿ ಈಗ ಬಳಸುತ್ತಿಲ್ಲ. ಅಷ್ಟಾಗಿ ಮಳೆಯಾಗದ ಮತ್ತು ಅಷ್ಟಾಗಿ ಫಲವತ್ತಾಗಿರದ ಪ್ರದೇಶಗಳಲ್ಲೂ ಇದು ಬೆಳೆಯಬಲ್ಲದು. ಇದನ್ನು ಗೋದಿ, ಬಾರ್ಲಿ, ಹುರಳಿ, ಜೋಳ ಇತ್ಯಾದಿ ಬೆಳೆಗಳೊಡನೆ ಮಿಶ್ರಬೆಳೆಯಾಗಿ ಬೆಳೆಸುವರು.

ಇದನ್ನೆ ಪ್ರಧಾನ ಬೆಳೆಯನ್ನಾಗಿ ಇಡುವುದೂ ಉಂಟು. ಸಾಮಾನ್ಯವಾಗಿ ಅಕ್ಟೋಬರ್, ನವಂಬರ್, ಡಿಸಂಬರ್ ತಿಂಗಳುಗಳಲ್ಲಿ ಬೀಜ ಬಿತ್ತುವರು. ಇದನ್ನೇ ಶುದ್ಧ ಬೆಳೆಯನ್ನಾಗಿ ಬಿತ್ತಲು ಎಕರೆಗೆ 10–15 ಕೆಜಿ ಬೀಜ ಬೇಕಾಗುವುದು. ಗಿಡದಲ್ಲಿ ಮೊಗ್ಗುಗಳು ಕಾಣಿಸಿಕೊಳ್ಳುವ ಸುಮಾರಿಗೆ ಕೊಂಬೆಯನ್ನು ಜಿಗುಟಿ ಹಾಕುವರು. ಇದರಿಂದ ಕೊಂಬೆ ಬೇಕಾದ ಹಾಗೆ ಕವಲೊಡೆದು ಹೆಚ್ಚು ಹೂ ಮತ್ತು ಕಾಯಿಗಳನ್ನು ಬಿಡುವುದು. ಕೇವಲ ಬಣ್ಣ ತಯಾರಿಕೆಗೆ ಇದನ್ನು ಬೆಳೆಸುವಾಗ ಅರಳಿದ ಹೂಗಳನ್ನು ಬಾಡುವ ಮುನ್ನ ಸಂಗ್ರಹಿಸುವರು. ಎಣ್ಣೆಗಾಗಿ ಬೆಳೆಸುವಾಗ ಕಾಯಿಗಳು ಚೆನ್ನಾಗಿ ಬಲಿತೊಡನೆ ಗಿಡಗಳನ್ನು ಕಿತ್ತು ಒಣಗಿಸಿ, ಬಡಿದು ಕಾಳನ್ನು ಸಂಗ್ರಹಿಸುವರು. ಎಕರೆಯೊಂದಕ್ಕೆ 80–120 ಪೌಂಡು ಒಣ ಹೂದಳಗಳು ಅಥವಾ 100–250 ಪೌಂಡುಗಳಷ್ಟು ಕಾಳುಗಳು ದೊರಕುತ್ತವೆ.

**ಕುಸುಬೆಯ ಬಣ್ಣ:** ಹೂದಳಗಳಲ್ಲಿ ಕಾರ್ತಮಿನ್ ($C_{21}H_{22}O_{11}H_{22}$), ಕುಸುಬೆ ಹಳದಿ($C_{16}H_{20}O_{11}$) ಮತ್ತು ಐಸೊಕಾರ್ತಮಿನ್ ($C_{21}H_{22}O_{11}2H_2O$) ಎಂಬ ಮೂರು ವರ್ಣಾಂಶಗಳಿವೆ. ಕಾರ್ತಮಿನ್ನನ್ನು ಸಂಗ್ರಹಿಸಿ ರೇಷ್ಮ ಹತ್ತಿ ದಾರಗಳಿಗೆ ತೀವ್ರ ಕೆಂಪುವರ್ಣವನ್ನು ಕಟ್ಟಲು ಬಳಸುವರು. ದಳಗಳಲ್ಲಿ ಕುಸುಬೆ–ಹಳದಿ ಅಧಿಕವಾಗಿದ್ದರೂ ಅದು ಯಾವ ಉಪಯೋಗಕ್ಕೂ ಬರುವುದಿಲ್ಲ. ಅದನ್ನು ಪ್ರತ್ಯೇಕಿಸಿ ತೆಗೆದುಹಾಕಿಯೇ ಕಾರ್ತಮಿನ್ನಾಗಿ ಪರಿವರ್ತನೆ ಹೊಂದುವುದು. ಒಣಗಿದ ಹೂದಳಗಳನ್ನು ಆಮ್ಲಮಿಶ್ರಿತ ನೀರಿನಲ್ಲಿ ಚೆನ್ನಾಗಿ ತೊಳೆದು ಅದರಲ್ಲಿರುವ ಕುಸುಬೆ–ಹಳದಿಯನ್ನು ಬೇರ್ಪಡಿಸುವರು. ಅನಂತರ ಆ ದಳಗಳನ್ನು ಸುಮಾರಾಗಿ ಒಣಗಿಸಿ ಬಿಲ್ಲೆಗಳಾಗಿ ಕಟ್ಟಿ ಮಾರಾಟಕ್ಕಿಡುವರು. ಅಥವಾ, ತೊಳೆದ ದಳಗಳನ್ನು ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಸಂಗ್ರಹಿಸಿ ದುರ್ಬಲ ಆಮ್ಲದಿಂದ ಸಂಸ್ಕರಿಸಿ ಅಂಗಡಿಯಲ್ಲಿ ಮಾರುವ ಕಡುಗೆಂಪು ಬಣ್ಣದ ವಸ್ತುವನ್ನು ತಯಾರಿಸುವರು. ಇದನ್ನು ರೇಷ್ಮೆ ಮತ್ತು ಹತ್ತಿಗಳಿಗೆ ಬೇರೆ ಬೇರೆ ತೀವ್ರತೆಯ ಕೆಂಪುಬಣ್ಣ ಕಟ್ಟಲು ಬಳಸುವರು. ಕೃತಕವರ್ಣಗಳು ಪ್ರಚಾರಕ್ಕೆ ಬಂದಿರುವುದರಿಂದ ಈಗ ಇದನ್ನು ಬಟ್ಟೆಗೆ ಬಣ್ಣಕಟ್ಟಲು ಅಷ್ಟಾಗಿ ಬಳೆಸುತ್ತಿಲ್ಲ. ಆದರೆ ಭಾರತದಲ್ಲಿ ಶುಭಕಾರ್ಯಗಳಲ್ಲಿ ಬಳಸುವ ವಸ್ತ್ರಾದಿಗಳಿಗೆ ಬಣ್ಣ ಕಟ್ಟಲು ಇಂದಿಗೂ ಉಪಯೋಗ ಉಂಟು. ಎರಡನೆಯ ಮಹಾಯುದ್ಧದವರೆಗೂ ಬಂಗಾಲದಿಂದ ಈ ರಂಗು ಹಾಂಕಾಂಗ್, ಜಾವಾ, ಜಪಾನ್, ಮುಂತಾದ ದೇಶಗಳಿಗೆ ರಫ್ತಾಗುತ್ತಿತ್ತು. 1942ರಿಂದ ಅದಕ್ಕೆ ಗಿರಾಕಿಗಳು ಇಲ್ಲವಾಗಿದೆ.

**ಕುಸುಬೆಯ ಎಣ್ಣೆ :** ಕುಸುಬೆ ಎಣ್ಣೆ ಒಂದು ಪ್ರಮುಖ ವಾಣಿಜ್ಯವಸ್ತು, ಕಚ್ಚಾ ಕುಸುಬೆಯನ್ನು ಗಾಣದಲ್ಲಿ ಹಿಂಡಿ ಹಸಿ ಎಣ್ಣೆ ತೆಗೆಯುವರು ಅಥವಾ ಕಾಳನ್ನು ಹುರಿದು ಎಣ್ಣೆ ಬಟ್ಟಿಯಿಳಿಸುವುದೂ ಉಂಟು. ದೊಡ್ಡ ಪ್ರಮಾಣದಲ್ಲಿ ತಯಾರಿಸುವಾಗ ಎಕ್ಸ್‌ಪೆಲರ್‌ಗಳ ಸಹಾಯದಿಂದ ಎಣ್ಣೆ ತೆಗೆಯುವರು. ಕುಸುಬೆಯಲ್ಲಿ ಸುಮಾರು ಶೇ. 20 ರಿಂದ 30 ರಷ್ಟು ಎಣ್ಣೆಯಿರುತ್ತದೆ. ಹಸಿ ಬೀಜದಿಂದ ತೆಗೆದ ಎಣ್ಣೆಯ ಬಣ್ಣಹೊನ್ನುಹಳದಿ. ಅದನ್ನು ಮುಖ್ಯವಾಗಿ ಪದಾರ್ಥಗಳನ್ನು ಕರಿಯುವ ಖಾದ್ಯ ತೈಲವನ್ನಾಗಿ ಹಿಂದಿನಿಂದಲೂ ಬಳಸುತ್ತಾರೆ. ದೀಪಕ್ಕೂ ಉಪಯೋಗಿಸುತ್ತಾರೆ. ಈಚೆಗೆ ಸಾಬೂನು ತಯಾರಿಕೆಯಲ್ಲೂ ಬಳಸಲಾಗುತ್ತಿದೆ. ಕೆಲವು ಕೇಶತೈಲಗಳ ತಯಾರಿಕೆಯಲ್ಲೂ ಬಳಸುವುದುಂಟು. ಕುಸುಬೆ ಎಣ್ಣೆ ನಾರಗಸೆಯ (ಲಿನ್‌ಸೀಡ್) ಎಣ್ಣೆಯನ್ನು ಹೋಲುವುದಾದರೂ ಅದರಲ್ಲಿರುವ ಲಿನೊಲೆನಿಕ್ ಆಮ್ಲದ ಪ್ರಮಾಣ ತೀರ ಅಲ್ಪ. ನಾರಗಸೆ ಎಣ್ಣೆಗಿಂತ ನಿಧಾನವಾಗಿ ಇದು ಮಂದಗಟ್ಟುತ್ತದೆ. ಇದು ಬೇಗ ಆರುವ ವಸ್ತುವಾದ್ದರಿಂದ ಬಣ್ಣ, ವಾರ್ನಿಷ್, ಲಿನೋಲಿಯಂ ಮುಂತಾದವುಗಳ ತಯಾರಿಕೆಯಲ್ಲಿ ಇದನ್ನು ಬಳಸಲಾಗುತ್ತಿದೆ. ಇದನ್ನು ಬಳಸಿ ತಯಾರಿಸಿದ ಬಣ್ಣಗಳು ಬೇಗ ಆರುವುವಲ್ಲದೆ ಅವು ತುಂಬ ಹೊಳಪನ್ನೂ ಕೊಡುತ್ತವೆ. ಈ ಎಣ್ಣೆಯನ್ನು 300° ಸೆಂ. ಉಷ್ಣತೆಯಲ್ಲಿ ಎರಡು ಗಂಟೆಗಳ ಕಾಲ ಕಾಯಿಸಿ ತಣ್ಣೀರಿಗೆ ಸುರಿದಾಗ ಒಂದು ರೀತಿಯ ಪಾಕದಂಥ ವಸ್ತುವಾಗುತ್ತದೆ. ಇದನ್ನು ಗಾಜು, ಹರಳು, ಹಂಚು ಮುಂತಾದವನ್ನು ಕೂಡಿಸಲು ಪ್ಲಾಸ್ಟರ್ ಆಫ್ ಪ್ಯಾರಿಸ್‌ಗೆ ಬದಲಾಗಿ ಬಳಸುವರು. ಕುಸುಬೆ ಕಾಳನ್ನು ಹುರಿದು ತಯಾರಿಸಿದ ಎಣ್ಣೆ ಕಪ್ಪಾಗಿ ಅಂಟು ಅಂಟಾಗಿರುತ್ತದೆ. ಈ ಎಣ್ಣೆಯನ್ನು ಬಾವಿಯ ಹಗ್ಗ, ಚರ್ಮ ಮುಂತಾದವಕ್ಕೆ ಗ್ರೀಸಿಗೆ ಬದಲಾಗಿ ಬಳಸುವರು. ಕುಸುಬೆ ಎಣ್ಣೆಯನ್ನು ಈಚೆಗೆ ಕೆಲವು ಹೃದ್ರೋಗಗಳಿಗೆ (ಕರೋನರಿ ತ್ರಾಂಬೊಸಿಸ್, ಇತ್ಯಾದಿ) ನಡೆಸುವ ಚಿಕಿತ್ಸೆಯಲ್ಲೂ ಬಳೆಸುತ್ತಿದ್ದಾರೆ.

ಕುಸುಬೆಯ ಹಿಂಡಿ ಒಂದು ಮುಖ್ಯ ಉತ್ಪನ್ನ, ಬೀಜದ ಸಿಪ್ಪೆ ತೆಗೆದು ಎಣ್ಣೆ ತೆಗೆದ ಮೇಲೆ ಉಳಿಯುವ ಹಿಂಡಿಯನ್ನು ದನಗಳ ಮೇವಿಗೆ ಬಳಸುವರು. ಸಿಪ್ಪೆ ತೆಗೆಯುವ ಬೀಜಗಳಿಂದ ಎಣ್ಣೆ ತೆಗೆದ ಮೇಲೆ ಉಳಿಯುವ ಹಿಂಡಿಯನ್ನು ಗೊಬ್ಬರಕ್ಕೆ ಬಳಸುವರು. ಎಳೆಯವಾಗಿರುವಾಗ ಇದರ ಸೊಪ್ಪನ್ನು ಪಲ್ಯ, ಹುಳಿ ಮುಂತಾದವಕ್ಕೆ ಉಪಯೋಗಿಸುವರು. ಇದರ ಹೂದಳಗಳನ್ನು ಶಾಮಕ ಔಷಧವಾಗಿಯೂ (ಸಿಡೆಟೀವ್) ಉತ್ತೇಜಕ ವಸ್ತುವಾಗಿಯೂ ವಿರೇಚಕವಾಗಿಯೂ ಬಳಸುವರು. ಇದರ ದಳಗಳನ್ನು ಕುಂಕುಮ ಕೇಸರಿಯೊಡನೆ ಕಲಬೆರಕೆ ಮಾಡುವುದೂ ಉಂಟು. ಕುಸುಬೆ ಬೀಜಗಳನ್ನು ಮೂತ್ರಸ್ರಾವ ಉತ್ತೇಜಕವಾಗಿ ಮತ್ತು ಹುರಿದ ಬೀಜಗಳನ್ನು ಹುರಿಗಾಳಿನೊಡನೆ ಬೆರೆಸುವುದಕ್ಕೆ ಬಳಸುವರು. (ಎಸ್.ಎಸ್.ಎಸ್.ಐ.)

**ಕುಸುಮ ರೋಗ :** ಗಾಯವಾದಲ್ಲಿ ರಕ್ತ ಒಡನೆಯೇ ಹೆಪ್ಪುಗಟ್ಟದೆ ದೀರ್ಘಕಾಲ ರಕ್ತಸ್ರಾವವಾಗಲು ಕಾರಣವಾದ ಆನುವಂಶಿಕ ವ್ಯಾಧಿ (ಹೀಮೋಫೀಯ). ರಕ್ತದಲ್ಲಿ ಸ್ವಾಭಾವಿಕವಾಗಿ ಇರಬೇಕಾದ ಕುಸುಮರೋಗನಿವಾರಣಾ ಗ್ಲಾಬ್ಯುಲಿನ್ (ಏಂಟಿಹೀಮೋಫೀಲಿಕ್ ಗ್ಲಾಬ್ಯುಲಿನ್) ಕೊರತೆಯೇ ಈ ರೋಗದ ಕಾರಣ. ಇಂಥ ವಸ್ತು ಇರುವ ರಕ್ತವನ್ನು ಒಂದು ಗಾಜಿನ ಪಾತ್ರೆಯಲ್ಲಿ ಸಂಗ್ರಹಿಸಿ ಇಟ್ಟರೆ ಅದು 5–10 ಮಿನಿಟುಗಳ ಅಂತರದಲ್ಲಿ ಹೆಪ್ಪುಗಟ್ಟುತ್ತದೆ. ಕುಸುಮ ರೋಗಿಗಳಲ್ಲಿ ಅದೇ ರೀತಿ ಮಾಡಿದರೆ ರಕ್ತ ಅರ್ಧಗಂಟೆಯಾದರೂ ಹೆಪ್ಪಾಗದೆ ಅನೇಕ ಗಂಟೆಗಳಾದರೂ ಹೆಪ್ಪುಗಟ್ಟದೆ ಇರಬಹುದು. ಆದರೂ ಆ ರಕ್ತದಲ್ಲಿ ತಕ್ಕಷ್ಟು ರಕ್ತದ ಸೂಕ್ಷ್ಮತರ ಕಣಗಳು ಇದ್ದಲ್ಲಿ, ಅದಕ್ಕೆ ನೂತನ ರಕ್ತದ್ರವವನ್ನು ಸೇರಿಸಿದರೆ ಅದು ಹೆಪ್ಪುಗಟ್ಟುತ್ತದೆ. ರಕ್ತದ ಸೂಕ್ಷ್ಮತರ ಕಣಗಳು ಈಗ ವಿಳಂಬವಿಲ್ಲದೆ ಛಿದ್ರವಾಗಿ ಹೆಪ್ಪುಗಟ್ಟುವಿಕೆಯ ವಿಧಾನವನ್ನು ಪ್ರಾರಂಭಿಸುತ್ತವೆ. ಕುಸುಮ ರೋಗಿಗಳಲ್ಲಿ ರಕ್ತದ ಸೂಕ್ಷ್ಮತರ ಕಣಗಳು ಬಹಳ ನಿಧಾನವಾಗಿ ಛಿದ್ರಗೊಳ್ಳುವಂತೆ ಕಾಣುತ್ತದೆ. ರಕ್ತ ಸ್ವಾಭಾವಿಕವಾಗಿ ಹೆಪ್ಪುಗಟ್ಟಲಾರದ ಈ ಸ್ಥಿತಿ ಕುಸುಮರೋಗಿಗಳನ್ನು ಬಹಳ ಅನುಕೂಲತೆಗೆ ಎಡೆಮಾಡಿದೆ. ಅಗಣನೀಯ ಕೊಯ್ತ ಅಥವಾ ಅಗೆಯುವುದು, ಕಾಲ್ಚೆಂಡು ಆಡುವಂಥ ಸಾಧಾರಣ ಚಟುವಟಿಕೆಯಲ್ಲಿ ಆಗುವ ಘಾತ ಸಹ ಹತೋಟಿಗೆ ಬಾರದೆ ಪ್ರಾಯಶಃ ದಿನಗಟ್ಟಲೆ ಆಗುವ ರಕ್ತಸ್ರಾವದಿಂದ ಅವರು ನರಳಬೇಕಾಗುತ್ತದೆ. ಇಂಥವರಲ್ಲಿ ಶಸ್ತ್ರವೈದ್ಯವಿರಲಿ, ದಂತನಿರ್ಮೂಲನ ಸಹ ಪ್ರಾಣಾಂತಿಕವೇ ಆಗಬಹುದು. ದಂತವೈದ್ಯರು ಸ್ವಾಭಾವಿಕವಾಗಿಯೇ ಕುಸುಮ ರೋಗಗಳಿಗೆ ದಂತರೋಗ ಚಿಕಿತ್ಸೆ ಮಾಡಲು ಹಿಂಜರಿಯುತ್ತಾರೆ. ಅಂಥ ರೋಗಿಗಳಲ್ಲಿ ಹಲ್ಲು ಹುಳುಕು ಬೀಳುವುದು ಸಾಮಾನ್ಯ. ಬಹು ಜನರಿಗೆ ಸಾಧಾರಣವಾಗಿ ಅಗಣನೀಯವಾಗಿಯೇ ಇರುವ ಸಂದರ್ಭ ಕೂಡ ಯಾವ ಕ್ಷಣದಲ್ಲಿಯಾದರೂ ಪ್ರಾಣಾಂತಿಕವಾಗಬಹುದಾದ್ದರಿಂದ ಕುಸುಮರೋಗಿ ಸದಾ ಕಾಲವು ಘಾಸಿಗೆ ಒಳಪಟ್ಟವನೇ. ಓಡಾಡುವ ಹುಡುಗ ಬಿದ್ದು ಮಂಡಿ ಮೊಳಕೈಯನ್ನು ಒಡೆದುಕೊಂಡರೆ ಆ ಕೀಲುಗಳಲ್ಲಿ ಯಥೇಚ್ಛವಾಗಿ ರಕ್ತ ಸ್ರಾವವಾಗುತ್ತದೆ. ಶೈಶವದಿಂದ ಪದೇ ಪದೇ ಆಗುವ ಈ ರಕ್ತಸ್ರಾವ ಪ್ರಸಂಗಗಳು ಕೀಲುಗಳ ದೀರ್ಘಕಾಲಿಕ ಊತವನ್ನುಂಟು ಮಾಡಿ, ಪ್ರೌಢಾವಸ್ಥೆಗೆ ಬರುವುದರೊಳಗೆ ಈ ಪೀಡನೆಯ ಫಲಗಳು ಅಂಗವಿಕಲತೆಯಾಗಿ ಪರಿಣಮಿಸುತ್ತವೆ. ಕುಸುಮ ರೋಗಿಗಳು ಸಾಮಾನ್ಯವಾಗಿ ಅಲ್ಪಾಯುಗಳು. ಮಕ್ಕಳನ್ನು ಪಡೆಯುವಷ್ಟು ದೀರ್ಘ ವಯಸ್ಕರಾಗುವುದು ವಿರಳ. ಇದರ ಫಲವಾಗಿ ಮನೆತನದಿಂದ ಮತ್ತು ಜನತೆಯಿಂದಲೇ ಈ ರೋಗ ಅದೃಶ್ಯವಾಗುವ ಸಂದರ್ಭ ಸದಾ ಇರುತ್ತದೆ. ಹೀಗಾಗಿ ಕುಸುಮರೋಗ ಸಾಮಾನ್ಯವಾಗಿ ಮೂರು ತಲೆಮಾರುಗಳಲ್ಲಿ ನಿರ್ನಾಮವಾಗಬೇಕು. ಆದರೆ ಅನೇಕವೇಳೆ ಕುಸುಮರೋಗರಹಿತ ಮನೆತನಗಳಲ್ಲಿ ಇದ್ದಕಿದ್ದಂತೆ ಈ ರೋಗ ಮೂಡುವುದರಿಂದ ಜನತೆಯಲ್ಲಿ ಈ ರೋಗದ ಮರುಸೃಷ್ಟಿ ಆಗುತ್ತಲೇ ಇರುತ್ತದೆ. ಕುಸುಮರೋಗದ ಈ ಹೊಸ ಉದ್ಭವ ಮಿಕ್ಕ ಆನುವಂಶಿಕ ರೋಗಗಳ ಉದ್ಭವಕ್ಕಿಂತ ಹೆಚ್ಚಾಗಿ ಕಾಣಬರುತ್ತದೆ.

ಕುಸುಮರೋಗ ಪಾಶ್ಚಾತ್ಯರಲ್ಲಿ ಬೈಬಲ್ ಕಾಲದಿಂದಲೂ ಗಣನೆಗೆ ಬಂದಿದೆ. ಹೀಬ್ರೂ ಗ್ರಂಥಕಾರರ ಟಾಲ್‌ಮುಡ್ ಗ್ರಂಥದಲ್ಲಿ, ಶಿಶ್ನದ ಮುಂದೊಗಲನ್ನು ತೆಗೆಯುವ ಕರ್ಮ ಸಂಬಂಧದಲ್ಲಿ ಈ ರೋಗ ಉಕ್ತವಾಗಿದೆ. ಆಯುರ್ವೇದದಲ್ಲಿ ಇದನ್ನು ವಿಶೇಷರೀತಿಯ ರಕ್ತಸ್ರಾವವೆಂದು ಪರಿಗಣಿಸಿರುವುದು ಕಾಣುವುದಿಲ್ಲ. ಅಮೆರಿಕ ಸಂಯುಕ್ತಸಂಸ್ಥಾನದ ಫಿಲಡೆಲ್ಫಿಯದ ಜಾನ್.ಸಿ. ಆಟ್ಟೊ ಎಂಬುವನು ಮೊದಲಬಾರಿಗೆ (1803) ಈ ರೋಗದ ಪರಿಮಿತಿಯನ್ನು– ಕೆಲವು ಮನೆತನಗಳಲ್ಲಿ ಗಂಡಸರಲ್ಲಿ ಮಾತ್ರ ಕಾಣಬರುವ ಆದರೆ ತಾವೇ ನಿರುಪದ್ರವಿಗಳಾದ ಹೆಂಗಸರಿಂದ ಅವರ ಗಂಡುಮಕ್ಕಳಿಗೆ ದತ್ತಕವಾಗುವ ರಕ್ತಸ್ರಾವಸ್ವಭಾವ ಎಂದೂ ಖಚಿತಪಡಿಸಿದ್ದಾನೆ. ಸಕಾರಣವಾಗಿಯೇ ಇದನ್ನು ರಕ್ತಸ್ರಾವಿಗಳ ವ್ಯಾಧಿ ಎಂದು ಕರೆದಿದ್ದಾರೆ. ಯುರೋಪಿನಲ್ಲಿ 19ನೆಯ ಶತಮಾನದ ಕೊನೆ 20ನೆಯ ಶತಮಾನದ ಪ್ರಾರಂಭ ಕಾಲದಲ್ಲಿದ್ದು ಒಳಸಂಬಂಧವನ್ನೇ ಬೆಳಸುತ್ತಿದ್ದ ರಾಜಮನೆತನಗಳಲ್ಲಿ ಈ ರೋಗ ಅಧಿಕವಾಗಿ ಕಾಣಬಂದದ್ದರಿಂದ ಇದನ್ನು ರಾಜರೋಗವೆಂದೂ ಕರೆದಿದ್ದಾರೆ. ಈ ರೋಗ ಆನುವಂಶಿಕವೇ ಆಗದೆ ಒಂದು ಮನೆತನದಲ್ಲಿ ಮೊಟ್ಟಮೊದಲಿಗೆ ಇದ್ದಕಿದ್ದ ಹಾಗೆ ಮೂಡಬಹುದು. ಆನುವಂಶಿಕವೇ ಆಗಿ ಆ ಸಂಸಾರದ ಗಂಡುಮಕ್ಕಳಲ್ಲಿ ರೋಗ ಕಂಡುಬಂದಿದ್ದರೆ ಅದು ತಾಯಿಯ ಅಪ್ಪನೋ ಅಪ್ಪನ ಸಹೋದರರೋ ಸೋದರಮಾವಂದಿರೋ ಅಥವಾ ಅವಳ ಸಹೋದರರೋ ಈ ರೋಗದಿಂದ ಪೀಡಿತರಾಗಿರುವ ಮನೆತನದಿಂದ ಎನ್ನುವುದು ಸ್ಪಷ್ಟ. ಆ ತಾಯಿಗೆ ಮಾತ್ರ ಯಾವ ರಕ್ತಸ್ರಾವವೈಚಿತ್ರ್ಯವೂ ಇರುವುದಿಲ್ಲ. ಕುಸುಮರೋಗ ತಂದೆ ಮತ್ತು ನಿರೋಗಿ ತಾಯಿಯ ಗಂಡುಮಕ್ಕಳೆಲ್ಲ ಮತ್ತು ಅವರ ಮಕ್ಕಳು ಕುಸುಮ ರೋಗರಹಿತರಾಗಿಯೇ ಇರುತ್ತಾರೆ.

**ಉಪಶಮನ :** ಕುಸುಮರೋಗಿಗಳ ಗಾಯದಿಂದ ಆಗುವ ರಕ್ತಸ್ರಾವ ಥ್ರಾಂಬಿನ್ ಥ್ರಾಂಬೋಪ್ಲಾಸ್ಟಿನ್ ಅಥವಾ ಇದನ್ನುಳ್ಳ ಮಂಡಲ ಹಾವಿನವಿಷವನ್ನು (ಅದಕ್ಕೆ 10,000 ದಷ್ಟೂ ಇನ್ನೂ ಹೆಚ್ಚಾಗಿಯೋ ನೀರು ಬೆರೆಸಿರುವುದು) ಸ್ಥಳಿಕವಾಗಿ ಉಪಯೋಗಿಸಿದರೆ

ನಿಂತುಕೊಳ್ಳುತ್ತದೆ. ಒಗ್ಗುವ ರೋಗರಹಿತರ ನೂತನ ರಕ್ತ ಅಥವಾ ನೂತನ ರಕ್ತದ್ರವವನ್ನು ಬೇಕಾದಷ್ಟು ಸಾರಿ ಚುಚ್ಚು ಕ್ರಮದಲ್ಲಿ ಕೊಟ್ಟಲ್ಲಿ, ರೋಗಿಯಲ್ಲಿ ಲೋಪವಾಗಿರುವ ಕುಸುಮರೋಗನಿವಾರಣಾ ಗ್ಲಾಬ್ಯುಲಿನ್ ಒದಗುತ್ತದೆ ಮತ್ತು ರಕ್ತಹೆಪ್ಪುಗಟ್ಟುವಿಕೆಯ ಕಾಲವನ್ನು ಕಡಿಮೆ ಮಾಡಿ ರಕ್ತಸ್ರಾವದ ಉಪಶಮನಕ್ಕೆ ಸಹಾಯವಾಗುತ್ತದೆ. ಇದರ ಮುಖ್ಯ ಘಟಕವಾದ ಕುಸುಮರೋಗ ನಿವಾರಣಾ ಗ್ಲಾಬ್ಯುಲಿನನ್ನು ಹಂದಿ ಮತ್ತು ದನಗಳ ರಕ್ತದಿಂದ ಬೇರ್ಪಡಿಸಿ, ಚುಚ್ಚುಕ್ರಮದಲ್ಲಿ 100ರಿಂದ 300 ಮಿಲಿಗ್ರಾಂ ಪ್ರಮಾಣದಲ್ಲಿ ಕೊಟ್ಟರೆ ಪರಿಣಾಮಕಾರಿಯಾಗಿರುವಷ್ಟು ಶುದ್ಧಪಡಿಸಿ ಇಟ್ಟುಕೊಳ್ಳಬಹುದು. ಪರಿಣಾಮಖಾತರಿಯಾದ ವಸ್ತು ಹೆಚ್ಚಿಗೆ ಒದಗುವ ಹಾಗಿದ್ದರೆ, ಮಧುಮೂತ್ರರೋಗಿ ತನ್ನ ರಕ್ತದ ಶರ್ಕರಪ್ರಮಾಣವನ್ನು ಕಡಿಮೆಮಾಡಲು ಇನ್ಸುಲಿನ್ ಮದ್ದನ್ನು ಸ್ವತಃ ಚುಚ್ಚುಕ್ರಮದಿಂದ ತೆಗೆದುಕೊಳ್ಳುವಂತೆಯೇ ಕುಸುಮರೋಗಿಯೂ ತನಗೆ ಬೇಕಾದಾಗ ಬೇಕಾದಷ್ಟು ವಸ್ತುವನ್ನು ಸ್ವತಃ ಚುಚ್ಚುಕ್ರಮದಿಂದ ತೆಗೆದುಕೊಳ್ಳಬಹುದು. ಆದರೆ ಈ ವಸ್ತು ದೇಹಕ್ಕೆ ಹೊರತಾದ ಸಸಾರಜನಕ ಪದಾರ್ಥವಾದ್ದರಿಂದ ಅದನ್ನು ತೆಗೆದುಕೊಂಡಾಗ ರೋಗಿಯ ದೇಹದಲ್ಲಿ ಅದಕ್ಕೆ ಪ್ರತಿರೋಧಕ ವಸ್ತುಗಳು ಉತ್ಪತ್ತಿಯಾಗುವ ಅವಕಾಶವಿದೆ. ಹಾಗಾದಲ್ಲಿ ಚುಚ್ಚು ಕ್ರಮದಿಂದ ತೆಗೆದುಕೊಂಡ ಕುಸುಮರೋಗನಿವಾರಣ ಗ್ಲಾಬ್ಯುಲಿನ್ ಅದರ ಉಪಯುಕ್ತತೆಯನ್ನು ಕಳೆದುಕೊಳ್ಳುವುದೇ ಅಲ್ಲದೆ ಪ್ರಾಣಾಂತಕವಾಗುವಷ್ಟು ಕಂಟಕಕಾರಿಯೂ ಆಗಬಹುದು. ಆದ್ದರಿಂದ ಕುಸುಮರೋಗ ನಿವಾರಣ ಗ್ಲಾಬ್ಯುಲಿನ್ನನ್ನು ಸರ್ವೇಸಾಧಾರಣವಾಗಿ ತೆಗೆದುಕೊಳ್ಳುವ ಬದಲು ಪ್ರಾಣಸಂರಕ್ಷಣ ಸನ್ನಿವೇಶದಲ್ಲಿ ಮಾತ್ರ ತೆಗೆದುಕೊಳ್ಳುವುದು ಉತ್ತಮ.

ಕುಸುಮರೋಗಿಗಳಲ್ಲಿ ರಕ್ತಸ್ರಾವ ಸ್ವಭಾವ ಮೇಲೆಯೇ ಹೇಳಿದಂತೆ ಸ್ವತಃ ನಿರುಪದ್ರವಿಗಳಾದ ಹೆಂಗಸರಿಂದ ಅವರ ಗಂಡುಸಂತಾನಗಳಿಗೆ ದತ್ತಕವಾಗುತ್ತದೆ. ಈ ಆನುವಂಶಿಕತೆ ಮೆಂಡೆಲನ ಆನುವಂಶಿಕ ತತ್ತ್ವಗಳಿಗೆ ಪೂರ್ಣಾನುಸಾರವಾಗಿ ಇದ್ದು ಅನೇಕ ತಲೆಮಾರುಗಳಲ್ಲಿ ಕಂಡುಬರಬಹುದು. ಕುಸುಮರೋಗ ಸ್ವಭಾವ ರೋಗಿಷ್ಠ ವ್ಯಕ್ತಿಯಲ್ಲಿ X ಕ್ರೋಮೊಸೋಮಿನಲ್ಲಿ ಒಯ್ಯಲ್ಪಡುವ ಅಪ್ರಮುಖ ಗುಣ. ಮತ್ತು ಜೊತೆಗಾರ ಕ್ರೋಮೊಸೋಮಿನಲ್ಲಿ ಅದಕ್ಕೆ ವ್ಯತಿರಿಕ್ತ ಪ್ರಮುಖ ಗುಣದ ಗೈರುಹಾಜರಿಯಲ್ಲಿ ಮಾತ್ರ ಈ ಗುಣ ವ್ಯಕ್ತವಾಗುತ್ತದೆ. ವ್ಯತಿರಿಕ್ತ ಪ್ರಮುಖ ಗುಣಹೀನವಾದ Y ಕ್ರೋಮೊಸೋಮೇ ಜೊತೆಗಾರ ಕ್ರೋಮೊಸೋಮಾಗಿರುವ ಗಂಡಸರಲ್ಲಿ ಮಾತ್ರ ಕುಸುಮರೋಗ ವ್ಯಕ್ತವಾಗಿರುವುದಕ್ಕೆ ಕಾರಣ. ರೋಗವಾಹಕ ಸ್ತ್ರೀಯಲ್ಲಿ ಜೊತೆಗಾರ ಕ್ರೋಮೊಸೋಮ್ ಆದ ಇನ್ನೊಂದು X ಕ್ರೋಮೊಸೋಮ್ ಪ್ರಮುಖ ಗುಣವನ್ನು ಹೊಂದಿರುವುದರಿಂದ ಕುಸುಮ ರೋಗ ಆಕೆಯಲ್ಲಿ ವ್ಯಕ್ತವಾಗಿರದೆ ಅವ್ಯಕ್ತಸ್ಥಿತಿಯಲ್ಲಿರುತ್ತದೆ. ಅಪೂರ್ವವಾಗಿ ಸ್ತ್ರೀಯರಲ್ಲಿ ಜೋಡಿಯ ಎರಡು ಕ್ರೋಮೊಸೋಮಗಳು ಅಪ್ರಮುಖ ಗುಣವನ್ನೇ ಹೊಂದಿರಬಹುದು. ಅಂಥ ಸಂದರ್ಭದಲ್ಲಿ ಸ್ತ್ರೀಯೂ ರಕ್ತಸ್ರಾವ ಸ್ವಭಾವವನ್ನು ವ್ಯಕ್ತಪಡಿಸಬೇಕು.

ಕುಸುಮರೋಗದ ಆನುವಂಶಿಕತೆಯನ್ನು ಈ ಕೆಳಕಂಡ ನಕ್ಷೆಗಳಿಂದ ಅರಿಯಬಹುದು.

2 ಮತ್ತು 4ನೆಯ ಚಿತ್ರಗಳಿಂದ ತಂದೆ ನಿರೋಗಿಯಾಗಿರಲಿ ಕುಸುಮರೋಗಿಯಾಗಿರಲಿ ವಾಹಕಸ್ತ್ರೀಯ ಗಂಡುಮಕ್ಕಳ ಪೈಕಿ ಅರ್ಧಜನ ಕುಸುಮರೋಗಿಯಾಗಿಯೇ ತೀರುತ್ತಾರೆ. ಉಳಿದ ಅರ್ಧಜನ ನಿರೋಗಿಗಳಾಗಿರುತ್ತಾರೆ. ತಂದೆ ನಿರೋಗಿಯಾಗಿದ್ದರೆ ಹೆಣ್ಣು ಮಕ್ಕಳ ಪೈಕಿ ಅರ್ಧಜನ ತಾಯಂದಿರಂತೆಯೇ ವಾಹಕರಾಗಿರುತ್ತಾರೆ. ಉಳಿದ ಅರ್ಧಜನ ನಿರೋಗಿಗಳಾಗಿರುತ್ತಾರೆ. ತಂದೆಯೂ ಕುಸುಮರೋಗಿಯಾಗಿದ್ದರೆ ಹೆಣ್ಣುಮಕ್ಕಳಲ್ಲೆಲ್ಲ ರೋಗಗುಣ ಇದ್ದು ಲೆಕ್ಕಾಚಾರದ ಪ್ರಕಾರ ಅರ್ಧಜನರಲ್ಲಿ ಅದು ಅವ್ಯಕ್ತವಾಗಿದ್ದು ಅವರು ವಾಹಕರಾಗಿಯೂ ಉಳಿದರ್ಧ ಜನರಲ್ಲಿ ಅವರು ಹೆಂಗಸರಾದಾಗ್ಯೂ ಕುಸುಮರೋಗ ವ್ಯಕ್ತವಾಗಿರಬೇಕಾಗಿರುವುದೂ ಕಾಣಬಹುದು. ಆದರೆ ಇಂಥ ಸ್ತ್ರೀ ಕುಸುಮರೋಗಿಗಳು ಹುಟ್ಟುವುದೇ ಅಪೂರ್ವ. ಏಕೆಂದರೆ ಅಂಥ ಸಂತತಿಗಳು ಸಾಧಾರಣವಾಗಿ ಗರ್ಭಧಾರಣ ಕಾಲದಲ್ಲಿಯೇ ನಾಶವಾಗಿ ಬಿಡುತ್ತವೆ. ಹಾಗೆ ಹುಟ್ಟಿದರೆ ಚಿಕ್ಕ ವಯಸ್ಸಿನಲ್ಲಿ ಕುಸುಮರೋಗದಿಂದಲೋ ಬೇರೆ ರೋಗದಿಂದಲೋ ಮರಣಹೊಂದುತ್ತಾರೆ. ಕುಸುಮರೋಗಿ ತಂದೆಯಿಂದ ನಿರೋಗಿ ತಾಯಿಯಲ್ಲಿ ಹುಟ್ಟುವ ಗಂಡುಮಕ್ಕಳೆಲ್ಲ ನಿರೋಗಿಗಳಾಗಿಯೂ ಹೆಣ್ಣು ಮಕ್ಕಳೆಲ್ಲ ವಾಹಕವಾಗಿಯೂ ಹುಟ್ಟುವುದನ್ನು ಕಾಣಬಹುದು. ಯುರೋಪಿನ ರಾಜಮನೆತನಗಳಲ್ಲಿ ಒಳಸಂಬಂಧವೇ ರೂಢಿಯಾಗಿದ್ದುದರಿಂದ ರೋಗಿ ಗಂಡು ವಾಹಕ ಹೆಣ್ಣುಗಳ ಮಿಲನವೇ ಸಾಮಾನ್ಯವಾಗಿದ್ದು ಸಂತತಿಯಲ್ಲಿ ಅನೇಕ ತಲೆಮಾರುಗಳಾದರೂ ಕುಸುಮರೋಗ ವ್ಯಕ್ತವಾಗುತ್ತಿದ್ದುದನ್ನು 3ನೆಯ ಚಿತ್ರದಿಂದ ಅರಿಯಬಹುದು. ಕುಸುಮರೋಗ ಅಂಗಸಂಬಂಧವಾದ ಅಪ್ರಮುಖ ಸ್ವಭಾವದ ಆನುವಂಶಿಕತೆ ಪಡೆದಿರುವ ವಿಚಾರವೂ ಅಂತೆಯೇ ಮನದಟ್ಟಾಗುತ್ತದೆ.

ಕುಸುಮರೋಗದಂತೆಯೇ ಹೆಚ್ಚು ಕಡಿಮೆ ಆನುವಂಶಿಕ ರಕ್ತಸ್ರಾವ ಸ್ವಭಾವ ಪ್ಯಾರಾಹೀಮೋಫೀಲಿಯ ಎ (ಕ್ರಿಸ್‌ಮಸ್ ರೋಗ) ಮತ್ತು ಪ್ಯಾರಾಹೀಮೋಫೀಲಿಯ ಬಿ ಎಂಬ ರೋಗಗಳಲ್ಲಿ ಕಾಣಬರುತ್ತದೆ. ಪ್ಯಾರಾಹೀಮೋಫೀಲಿಯಗಳಲ್ಲಿ ಕುಸುಮರೋಗ ನಿವಾರಣ ಗ್ಲಾಬ್ಯುಲಿನ್ ಸ್ವಾಭಾವಿಕವಾಗಿ ಇರುವಂತೆಯೇ ಇರುತ್ತದೆ. ಆದರೆ ರಕ್ತದಲ್ಲಿ ಅದರಂತೆಯೇ ಸ್ವಾಭಾವಿಕವಾಗಿ ಇದ್ದು ರಕ್ತ ಹೆಪ್ಪುಗಟ್ಟುವುದಕ್ಕೆ ಸಹಾಯಕವಾಗಿರುವ



1 ಸಾಮಾನ್ಯ ಸಂತಾನಕ್ರಮ ; ನಿರೋಗಿ ತಂದೆ ತಾಯಿಗಳು; 2 ವಾಹಕ ತಾಯಿ ನಿರೋಗಿ ತಂದೆಯ ಸಂತತಿ; 3 ನಿರೋಗಿ ತಾಯಿ, ರೋಗಿ ತಂದೆಯ ಸಂತತಿ; 4 ವಾಹಕ ತಾಯಿ, ರೋಗಿ ತಂದೆಯ ಸಂತತಿ

ಪಿ.ಟಿ.ಸಿ. ಎಂಬ ವಸ್ತು ಪ್ಯಾರಾಹೀಮೋಫೀಲಿಯ ಎ ಯಲ್ಲಿಯೂ, ಪಿ.ಟಿ.ಎ. ಎಂಬ ವಸ್ತು ಪ್ಯಾರಾಹೀಮೋಫೀಲಿಯ ಬಿ ಯಲ್ಲಿಯೂ ಲೋಪವಾಗಿರುತ್ತದೆ. ಆದ್ದರಿಂದ ಇವುಗಳಲ್ಲಿ ರಕ್ತಸ್ರಾವ ಸ್ವಭಾವ ಕಂಡುಬರುತ್ತದೆ. ಪ್ಯಾರಾಹೀಮೋಫೀಲಿಯ ಎಯ ಆನುವಂಶಿಕತೆ ಕುಸುಮರೋಗದಂತೆಯೇ ಇರುವುದು. ಇದನ್ನು ಕ್ರಿಸ್‌ಮಸ್ ಎಂಬಾತನಲ್ಲಿ ಮೊದಲಿಗೆ ಗುರುತಿಸಿದಾಗ ಈ ರೋಗಕ್ಕೆ ಕ್ರಿಸ್‌ಮಸ್ ರೋಗವೆಂದು ಹೆಸರಾಯಿತು. ಪ್ಯಾರಾಹೀಮೋಫೀಲಿಯ ಬಿ ತಂದೆ ತಾಯಿ ಇಬ್ಬರಿಂದಲೂ ದತ್ತಕವಾಗುವ ರೋಗ. ಪ್ಯಾರಾಹೀಮೋಫೀಲಿಯಗಳು ಕುಸುಮರೋಗದಷ್ಟು ಹೇರಳವಾಗಿಯಾಗಲಿ ಅದರಷ್ಟು ಘಾಸಿಮಾಡುವಂತೆಯಾಗಲಿ ಸಾಮಾನ್ಯವಾಗಿ ಇರುವುದಿಲ್ಲ. (ಎಸ್.ಆರ್.ಆರ್.)

**ಕುಸ್ತಿ :** ಆಯುಧಗಳನ್ನು ಉಪಯೋಗಿಸದೆ ಒಬ್ಬನ ವಿರುದ್ಧ ಮತ್ತೊಬ್ಬ ಸೆಣಸಿ ಗೆಲ್ಲುವ ಒಂದು ಪಂದ್ಯಾಟ ಬಗೆ (ರೆಸ್ಲಿಂಗ್). ಇದರಲ್ಲಿ ವ್ಯಕ್ತಿಯ ಶಕ್ತಿ ಹಾಗೂ ಯುಕ್ತಿಗಳು ಪ್ರದರ್ಶಿತವಾಗುತ್ತದೆ. ಭಾರತದಲ್ಲಿ ಕುಸ್ತಿ ಅದರ ಲಿಖಿತ ಚರಿತ್ರೆಗಿಂತ ಪುರಾತನವಾದುದ್ದು. ಇಲ್ಲಿನ ಪುರಾಣಕಥೆಗಳಲ್ಲಿ ಅನೇಕ ಕುಸ್ತಿ ಪ್ರಸಂಗಗಳಿವೆ. ರಾಮಾಯಣ ಮತ್ತು ಮಹಾಭಾರತ ಕಾವ್ಯಗಳೂ ಕುಸ್ತಿಪಟುಗಳ ಶ್ಲಾಘನೀಯವಾದ ಸಾಹಸ ಕಾರ್ಯಗಳಿಂದ ತುಂಬಿವೆ. ಹನುಮಂತ, ವಾಲಿ, ಸುಗ್ರೀವ ಇವರು ಯಾರಿಗೂ ಸಗ್ಗದಿರುವ ಕುಸ್ತಿಪಟುಗಳಾಗಿದ್ದರು. ಭೀಮ ಮತ್ತು ಜರಾಸಂಧ ಇವರೀರ್ವರಿಗೂ ನಡೆದ ಕುಸ್ತಿಯೂ ಸ್ಮರಣೀಯವಾದದ್ದು. ಹನುಮಂತ ಭಾರತದಲ್ಲಿನ ಕುಸ್ತಿ ಪಟುಗಳ ಆರಾಧ್ಯದೈವವಾಗಿದ್ದಾನೆ. ಕುಸ್ತಿಗೆ ದ್ವಂದ್ವಯುದ್ಧ, ಮುಷ್ಟಿಯುದ್ಧ ಎಂಬ ಹೆಸರುಗಳೂ ಬಳಕೆಯಲ್ಲಿದ್ದುವು.

ಭಾರತದಲ್ಲಿ ಕುಸ್ತಿಕಲೆ ಪುರುಷಕ್ರೀಡೆಗಳಲ್ಲೆಲ್ಲ ಅತ್ಯಂತ ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದೆ. ಕುಸ್ತಿ ಶರೀರದ ಎಲ್ಲ ಭಾಗಗಳಿಗೂ ವ್ಯಾಯಾಮ ಒದಗಿಸಿ, ದೇಹವನ್ನು ಸಮಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿ, ಮಾಂಸಖಂಡಗಳನ್ನು ತುಂಬಿಕೊಳ್ಳುವಂತೆ ಮಾಡಿ, ದೇಹವನ್ನು ನೋಡಲು ಅಂದವಾಗಿ ಕಾಣುವಂತೆ ಮಾಡುತ್ತದೆ. ಜೊತೆಗೆ ಧೈರ್ಯ, ಮುನ್ನುಗ್ಗುವ ಶಕ್ತಿಗಳನ್ನು ಕೊಟ್ಟು ಆತ್ಮವಿಶ್ವಾಸವನ್ನು ಬಲಪಡಿಸುತ್ತದೆ. ಇದು ಗುರುಭಕ್ತಿಯನ್ನು ಹೆಚ್ಚಿಸುವ ಕ್ರೀಡೆ. ಬೇರೆ ಯಾವ ಕ್ರೀಡೆಯಲ್ಲಿಯೂ ಇಂಥ ಗುರುಭಕ್ತಿ ಕಂಡುಬರುವುದಿಲ್ಲ. ಶಿಷ್ಯನಾದವನು ಗುರುವಿನ ಕಾಲಿಗೆ ಬಿದ್ದು ನಮಸ್ಕರಿಸುವ ಪದ್ಧತಿ ಇಂದಿಗೂ ಗರಡಿಗಳಲ್ಲಿ ರೂಢಿಯಲ್ಲಿದೆ.

ಕುಸ್ತಿಯಲ್ಲಿ ಒಂದೊಂದು ಸಲಕ್ಕೆ ಇಬ್ಬಿಬ್ಬರಂತೆ ಜಟ್ಟಿಗಳು ಅಖಾಡಕ್ಕಿಳಿದು ಹೋರಾಡುತ್ತಾರೆ. ನಿಗದಿಯಾದ ಕಾಲಮಿತಿಯಲ್ಲಿ ಒಬ್ಬ ಇನ್ನೊಬ್ಬನನ್ನು ಚಿತ್ತು ಮಾಡಬೇಕು; ಅಂದರೆ ಸೋಲಿಸಬೇಕು. ಸೋತವನು ನೆಲಕ್ಕುರುಳಿದರೆ ಸಾಲದು. ಆತನ ಎರಡು

ಭುಜಗಳೂ ಏಕಕಾಲದಲ್ಲಿ ಮಣ್ಣಿಗೆ ತಗಲುವಂತೆ ಆತ ಅಂಗಾತವಾಗಿ ಬೀಳಬೇಕು. ಹೀಗೆ ಕುಸ್ತಿಯ ಸೋಲು ಗೆಲುವುಗಳು ನಿರ್ಧಾರವಾಗುತ್ತವೆ.

ಕಳಾವರ್ ಜಂಗ್, ಮೊದಲ ಪಟ್ಟು

ಕುಸ್ತಿ ವೈಯಕ್ತಿಕ ಕ್ರೀಡೆಗಳಲ್ಲಿ ಅತ್ಯುತ್ತಮವಾದುದು. ಓಡುವ ಪಂದ್ಯದಲ್ಲಿ ಸ್ಪರ್ಧಿ ತನ್ನ ಶಕ್ತಿ, ಓಡುವ ರೀತಿ, ತಾನು ಅದುವರೆಗೆ ಮಾಡಿದ ಅಭ್ಯಾಸ ಇವುಗಳ ಆಧಾರದ ಮೇಲೆ ತನ್ನ ಪಾಡಿಗೆ ತಾನು, ಕೈಲಾದಷ್ಟು ಪ್ರಯತ್ನ ಮಾಡಿ, ಓಡಿ ಜಯಗಳಿಸುತ್ತಾನೆ.



ಬಾರ್ಲಿ ಟಾಂಗ್

ಕುಸ್ತಿಮಾಡುವವನು ತನ್ನ ವೈಯಕ್ತಿಕಶಕ್ತಿ, ತನ್ನ ಕುಸ್ತಿ ಮಾಡುವ ರೀತಿ, ಬಳಸುವ ಪಟ್ಟುಗಳು, ಮಾಡಿದ ಸಾಧನೆ–ಇವುಗಳ ಆಧಾರದ ಮೇಲೆ ಜಯಗಳಿಸುತ್ತಾನಾದರೂ ಇವೆಲ್ಲವುಗಳ ಜೊತೆಗೆ ತನ್ನ ಎದುರಾಳಿಯು ಶಕ್ತಿಯನ್ನು ಉಪಯೋಗಿಸಿಕೊಂಡು ಹಾಕಿದ ಪಟ್ಟೇ ಅವನಿಗೆ ಮುಳುವಾಗುವಂತೆ ತೋಡು ಮಾಡಿ, ಎದುರಾಳಿಯನ್ನು ಕೆಡವಿ ಜಯಗಳಿಸುತ್ತಾನೆ.

**ಸಾಧನೆಯ ಆವಶ್ಯಕತೆ:** ಕುಸ್ತಿ ಮಾಡುವವನು ನಾಲ್ಕು ಮುಖ್ಯವಾದ ಅಂಶಗಳನ್ನು ಗಮನದಲ್ಲಿಡಬೇಕು: 1 ಶಕ್ತಿ, 2 ದಮ್ಮುಕಸ್ತು (ದಮ್ಮು ಮುರಿಯುವುದು), 3 ಪಟ್ಟುಗಳು ಅಥವಾ ಡಾವುಗಳು, 4 ಚತುರತೆ. ಈ ನಾಲ್ಕು ಅಂಶಗಳಲ್ಲಿ ಒಂದಿಲ್ಲದೆ ಹೋದರೂ ಜಯಗಳಿಸುವುದು ಕಷ್ಟವಾಗುತ್ತದೆ. ಕುಸ್ತಿಮಾಡುವವನಿಗೆ ದಮ್ಮುಕಸ್ತು ತುಂಬಾ ಅಗತ್ಯವಾದದ್ದು. ದಮ್ಮನ್ನು ಮುರಿಯಲು ಅಂಗಸಾಧನೆ ಮಾಡಬೇಕಾಗುತ್ತದೆ. ಎಷ್ಟು ಹೊತ್ತು ವ್ಯಾಯಾಮ ಮಾಡಿದರೂ ಏದುಸಿರು ಬರದಂತೆ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಅಖಾಡಕ್ಕಿಳಿದ ಒಂದೆರಡು ನಿಮಿಷಗಳಲ್ಲೆ ವ್ಯಕ್ತಿ ಸುಸ್ತು ಬೀಳಬೇಕಾಗುತ್ತದೆ. ಮೈಸೂರು ಮಟ್ಟಿ = ಗರಡಿಯಲ್ಲಿನ ಮಣ್ಣಿನಂಗಳ ಅರಸರಾದ ಕಂಠೀರವ ನರಸಿಂಹರಾಜ ಒಡೆಯರನ್ನು ಇಲ್ಲಿ ನೆನೆಯಬಹುದು. ಅವರು ಕುಸ್ತಿ ಪಟುಗಳಿಗೆ ಆಶ್ರಯದಾತರಾಗಿದ್ದುದಲ್ಲದೆ. ಸ್ವಯಂ ಕುಸ್ತಿ ಪಟುಗಳಾಗಿದ್ದು, ದಮ್ಮು ಮುರಿಯಲು ಪ್ರತಿದಿವಸ ಬೆಳಗಿನ ಜಾವ ಹೆಗಲಮೇಲೆ ಎಮ್ಮೆಕರುವನ್ನು ಹೊತ್ತುಕೊಂಡು ಚಾಮುಂಡಿ ಬೆಟ್ಟವನ್ನು ಹತ್ತಿ ಇಳಿಯುತ್ತಿದ್ದರಂತೆ. ಕುಸ್ತಿಯನ್ನು ಮಾಡಲು ಮಟ್ಟಿಯನ್ನು ಪ್ರವೇಶಿಸುವ ಮೊದಲು, ಹೊಸಬನಾದವ ಸಾಕಷ್ಟು ಅಂಗಸಾಧನೆ ಮಾಡಿದ್ದು ದಮ್ಮು ಮುರಿದು, ತನ್ನ ದೇಹಸಾಮರ್ಥ್ಯ ಹೆಚ್ಚಿಸಿಕೊಂಡಿರಬೇಕು. ಅನಂತರವೇ ಕುಸ್ತಿ ಮಾಡಲು ಮಟ್ಟಿಯ ಪ್ರವೇಶ ಮಾಡಬೇಕು. ಇದಕ್ಕಾಗಿ ಬಸ್ಕಿಹೊಡೆಯುವುದು, ದಂಡೆ ಹೊಡೆಯುವುದು, ಓಡುವುದು, ಮೆಟ್ಟಲು ಹತ್ತಿ ಇಳಿಯುವುದು, ಭಾರವಾದ ವಸ್ತುವನ್ನು ಕೈಯಿಂದ ತಿರುಗಿಸುವುದು. ಮಟ್ಟಿ ಕುರಾಯಿಸುವುದು, ಕುತ್ತಿಗೆಗೆ ಶಕ್ತಿ ಬರುವ ಸಲುವಾಗಿ ಕತ್ತು ತಿರುಗಿಸುವುದು, ಏಟು ತಿನ್ನುವುದು ಮತ್ತು ತೊಡೆಗಳಿಗೆ ಶಕ್ತಿ ಮತ್ತು ಬಿಗಿ ಬರಲು ಕಂಬ ಕಟ್ಟುವುದು ಮುಂತಾದ ಅಂಗಸಾಧನೆಗಳನ್ನು ಅಳವಡಿಸಲಾಗಿದೆ. ಎಲ್ಲ ಕುಸ್ತಿ ಪಟುಗಳೂ ಅಭ್ಯಾಸ ಕಾಲದಲ್ಲಿ ಮೈಗೆ ಸಾಸಿವೆ ಎಣ್ಣೆ ಅಥವಾ ಎಳ್ಳೆಣ್ಣೆ ಹಾಕಿ ಉಜ್ಜಿಕೊಂಡು ಸಾಧನೆ ಮಾಡುತ್ತಾರೆ. ಇದು ದೇಹದ ಮಾಂಸಖಂಡಗಳನ್ನು ಸಡಿಲಗೊಳಿಸಿ, ಕುಸ್ತಿ ಮಾಡಲು ಅನುಕೂಲವನ್ನು ಉಂಟುಮಾಡುತ್ತದಲ್ಲದೆ, ಚರ್ಮವನ್ನು ಮೃದುಗೊಳಿಸಿ, ಕಾಂತಿಯುಕ್ತವನ್ನಾಗಿಸುತ್ತದೆ.

**ಮಟ್ಟಿಯ ತಯಾರಿ:** ಪ್ರತಿಯೊಂದು ಗರಡಿ ಮನೆಯಲ್ಲಿನ ಮಟ್ಟಿಯೂ ಕೆಂಪುಮಣ್ಣಿನಿಂದ ಕೂಡಿರುತ್ತದೆ. ಇದರ ಜೊತೆಗೆ ಕುಂಕುಮ ಕೇಸರಿಗಳನ್ನೂ ಇನ್ನೂ ಅನೇಕ ಔಷಧ ವಸ್ತುಗಳನ್ನೂ ಹಾಕಿ ಆರೋಗ್ಯದಾಯಕವನ್ನಾಗಿ ಮಾಡಿರುತ್ತಾರೆ. ಅಲ್ಲದೆ ಈ ಮಣ್ಣು

ಎಕ್ಕೇರಿ ಹಾಕಿ ಕುಕ್ಕರಿಸುವುದು

ಪೂತಿನಾಶಕವಾಗಿರುತ್ತದೆ. (ಆಂಟಿಸೆಪ್ಟಿಕ್). ಕುಸ್ತಿ ಮಾಡುವಾಗ, ಯಾವ ಪೈಲ್ವಾನನಿಗಾದರೂ ಕೈ, ಕಾಲು, ಮಂಡಿ ಗಾಯವಾಗಿರುವ ಸ್ಥಳಕ್ಕೆ ಮೆತ್ತುತ್ತಾನೆ. ಕುಸ್ತಿಮಾಡಿದ ಮೇಲೆ ಕುಸ್ತಿಪಟು ಮಟ್ಟಿಯನ್ನು ಆಳವಾಗಿ ತೋಡಿ, ಅದರೊಳಕ್ಕೆ ಮಲಗಿ ಕತ್ತಿನವರೆಗೆ ಮಣ್ಣು ಮುಚ್ಚಿಕೊಂಡು ಮುಖಭಾಗವನ್ನು ಮಾತ್ರ ಹೊರಗೆ ಬಿಟ್ಟು ಸ್ವಲ್ಪ ಕಾಲ ಕಳೆಯುತ್ತಾನೆ.

ಹೀಗೆ ಮಲಗುವುದರಿಂದ ಅವನ ದೇಹದ ಕಾವು ಕಡಿಮೆಯಾಗುತ್ತದೆ. ಸಾಕಷ್ಟು ವಿಶ್ರಾಂತಿ ದೊರೆಯುತ್ತದೆ. ಮಣ್ಣುಸ್ನಾನದ (ಮಡ್ ಬಾತ್) ಎಲ್ಲ ಉಪಯೋಗಗಳೂ ಇದರಿಂದ ಅವನಿಗೆ ದೊರೆಯುತ್ತವೆ.

**ಆಹಾರ:** ಕುಸ್ತಿ ಮಾಡುವವನಿಗೆ ಸಾಧನೆ ಮಾಡುವುದು ಎಷ್ಟು ಆವಶ್ಯಕವೋ ಉತ್ತಮವಾದ ಆಹಾರಸೇವನೆಯೂ ಅಷ್ಟೇ ಆವಶ್ಯಕ. ಶ್ರಮಪಟ್ಟು ಮಾಡುವ ಸಾಧನೆಗೆ ಸರಿಯಾಗಿ ಪುಷ್ಟಿಕರವಾದ ಆಹಾರ ಒದಗದಿದ್ದರೆ, ದೇಹದ ಬೆಳೆವಣಿಗೆಯಾಗುವುದಿಲ್ಲ; ಶಕ್ತಿ ಕುಂದುತ್ತದೆ. ಕುಸ್ತಿಪಟುವಿಗಂತೂ ಪುಷ್ಟಿದಾಯಕವಾದ ಆಹಾರ ಬೇಕೇ ಬೇಕು. ಸಸ್ಯಾಹಾರಿಯಾದವರು ಉದ್ದಿನ ಅಂಶವಿರುವ ಆಹಾರ, ಹಾಲು, ಬಾದಾಮಿ ಹಣ್ಣು, ಬೆಣ್ಣೆ ಮುಂತಾದುವನ್ನು ತೆಗೆದುಕೊಳ್ಳಬೇಕು. ಮಾಂಸಾಹಾರಿಗಳು ಮಾಂಸ, ಮೊಟ್ಟೆ, ಮೀನು ಮುಂತಾದವನ್ನು ತೆಗೆದುಕೊಳ್ಳಬೇಕು.

ಇವುಗಳ ಜೊತೆಗೆ ಗರಡಿಮನೆಗಳಲ್ಲಿ ಬಾದಾಮಿ, ಗಸಗಸೆ, ಕಲ್ಲುಸಕ್ಕರೆ, ಮೆಣಸಿನಕಾಳು, ಬಡೇಸೋಪು ಮುಂತಾದುವನ್ನು ಅರೆದು, ಹಾಲಿನಲ್ಲಿ ಸೇರಿಸಿ ತಂಡಾ ಎಂಬ ಪಾನೀಯವನ್ನು ಸಿದ್ಧಗೊಳಿಸುತ್ತಾರೆ. ಇದು ಪೈಲ್ವಾನರುಗಳಿಗೆ ತುಂಬ ಅಗತ್ಯವಾದ ಪಾನೀಯ.

**ಸ್ಪರ್ಧೆಗಳು:** ಭಾರತದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ವರ್ಷಕ್ಕೆ ಒಂದು ಸಾರಿ **'ಹಿಂದ್ ಕೇಸರಿ'** ಎಂಬ ಬಿರುದಿಗೋಸ್ಕರ ಕುಸ್ತಿ ಸ್ಪರ್ಧೆಯೊಂದನ್ನು ನಡೆಸುತ್ತಾರೆ. ಭಾರತದ ಎಲ್ಲ ಭಾಗಗಳಿಂದಲೂ ಪೈಲ್ವಾನರು ಇದರಲ್ಲಿ ಭಾಗವಹಿಸುತ್ತಾರೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಕುಸ್ತಿ ಸ್ಪರ್ಧೆಗಳು ಹೀಗಿವೆ: 1. ಒಲಿಂಪಿಕ್ ಕುಸ್ತಿ ಸ್ಪರ್ಧೆ 2. ಏಷ್ಯನ್ ಗೇಮ್ಸ್‌ಕುಸ್ತಿ ಸ್ಪರ್ಧೆ 3. ಕಾಮನ್‌ವೆಲ್ತ್ ಕುಸ್ತಿ ಸ್ಪರ್ಧೆ ಮತ್ತು 4. ವಿಶ್ವಪ್ರಶಸ್ತಿ ಕುಸ್ತಿ ಸ್ಪರ್ಧೆ. ಇವುಗಳಲ್ಲಿ ವಿಶ್ವಪ್ರಶಸ್ತಿ ಕುಸ್ತಿ ಸ್ಪರ್ಧೆ ಕುಸ್ತಿಗೋಸ್ಕರವೇ ನಡೆಯುವಂಥದು. ಪ್ರತಿವರ್ಷವೂ ನಡೆಯುತ್ತದೆ.

**ಕುಸ್ತಿಯ ಅಖಾಡ:** ಹಿಂದೆ ಕೆಂಪುಮಣ್ಣಿನಿಂದ ಚಚ್ಚೌಕ ಕಣವನ್ನು ನಿರ್ಮಿಸಿ ಅದಕ್ಕೆ ಕುಸ್ತಿಯ ಅಖಾಡವೆಂದು ಕರೆಯುತ್ತಿದ್ದರು. ಈ ಅಖಾಡದಲ್ಲಿ ನಿಂತು ಪೈಲ್ವಾನರು ಕಾದಾಡುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕುಸ್ತಿಮಾಡಲು ಮೆತ್ತೆಗಳಿಂದ ಅಖಾಡ ನಿರ್ಮಿಸುತ್ತಾರೆ. ಪ್ರತಿಯೊಂದು ಮೆತ್ತೆಯ ಉದ್ದ 2 ಮೀಟರ್, ಅಗಲ 1 ಮೀಟರ್, ದಪ್ಪ 10 ಸೆಂಟಿಮೀಟರ್ ಅಥವಾ 4 ಅಂಗುಲ. ಇತ್ತೀಚಿಗೆ ಈ ಮೆತ್ತೆಗಳನ್ನು ಫೋಮ್ ರಬ್ಬರಿನಿಂದ ನಿರ್ಮಿಸಲಾಗುತ್ತಿದೆ. ಇಂಥ ಮೆತ್ತೆಗಳನ್ನು ಉಪಯೋಗಿಸಿಕೊಂಡು 6 ಮೀಟರ್ ಉದ್ದ ಹಾಗೂ 6 ಮೀಟರ್ ಅಗಲವಿರುವ ಚಚ್ಚೌಕ ಕಣವನ್ನು ನಿರ್ಮಿಸುತ್ತಾರೆ.

ರಾಷ್ಟ್ರೀಯ ಮಟ್ಟದಲ್ಲಿ ಅಖಾಡ ನಿರ್ಮಿಸುವಾಗ ಮೆತ್ತೆಗಳನ್ನು ಉಪಯೋಗಿಸಿಕೊಂಡು 6 ಮೀಟರ್ ಉದ್ದ ಹಾಗೂ 6 ಮೀಟರ್ ಅಗಲವಿರುವ ಚಚ್ಚೌಕ ಕಣವೊಂದನ್ನು ಏರ್ಪಡಿಸುತ್ತಾರೆ. ಈ ಕಣದ ಸುತ್ತಲೂ 2ಮೀಟರ್ ಉದ್ದ,



ಟಾಂಗ್ ಗಿಸ್ಸ ಎತ್ತಿ ಹೊಡೆಯುತ್ತಿರುವುದು

2 ಮೀಟರ್ ಅಗಲದಲ್ಲಿ ಇದೇ ರೀತಿಯ ಮೆತ್ತೆಗಳನ್ನು ಹಾಕಿರುತ್ತಾರೆ. ಈ ಚಚ್ಚೌಕ ಕಣದ ಮೇಲ್ಭಾಗವನ್ನು ಮೆದುವಾದ ಹೊದಿಕೆಯಿಂದ ಮುಚ್ಚಿರುತ್ತಾರೆ. ಈ ರೀತಿಯ ಅಖಾಡವನ್ನು ಎತ್ತರವಾದ ವೇದಿಕೆಯೊಂದರ ಮೇಲೆ ನಿರ್ಮಿಸಿರುವುದರಿಂದ ಪ್ರೇಕ್ಷಕರು ತೊಂದರೆ ಇಲ್ಲದೆ ಪಂದ್ಯವನ್ನು ವೀಕ್ಷಿಸಬಹುದು. ಮುಷ್ಟಿಯುದ್ಧದಲ್ಲಿರುವಂತೆ (ಬಾಕ್ಸಿಂಗ್) ಈ ಅಖಾಡದ ಸುತ್ತ ಕಂಬಗಳನ್ನು ನೆಟ್ಟು ಸುತ್ತಲೂ ಹಗ್ಗಗಳಿಂದ ಬಿಗಿದು ಕಟ್ಟಿರುವುದಿಲ್ಲ.

ಅಂತಾರಾಷ್ಟ್ರೀಯ ಮಟ್ಟದಲ್ಲಿನ ಅಖಾಡವನ್ನು ರಾಷ್ಟ್ರೀಯ ಮಟ್ಟದ ರೀತಿಯಲ್ಲಿಯೇ ನಿರ್ಮಿಸುತ್ತಾರೆ. ಇರುವ ಒಂದೇ ಒಂದು ವ್ಯತ್ಯಾಸ ಅಖಾಡದ ಉದ್ದ ಮತ್ತು ಅಗಲಕ್ಕೆ

ಸವಾರಿ ಹಾಕುತ್ತಿರುವಾಗ ಡೇಕ್ಲಿ ಹೊಡೆಯುತ್ತಿರುವುದು

ಸಂಬಂಧಿಸಿದ್ದು. ಈ ಅಖಾಡದ ಉದ್ದ 8 ಮೀಟರ್ ಮತ್ತು ಅಗಲ 8 ಮೀಟರ್ ಇದ್ದು ಸುತ್ತಲೂ 2 ಮೀಟರ್ ಉದ್ದ ಮತ್ತು 2 ಮೀಟರ್ ಅಗಲಕ್ಕೆ ಮೆತ್ತೆಗಳನ್ನು ಹಾಕಿರುತ್ತಾರೆ.

**ತೂಕ ವಿಂಗಡಣೆಗಳು:** ಕುಸ್ತಿಗಳೆಲ್ಲವೂ ಜಟ್ಟಿಗಳ ತೂಕದ ಆಧಾರದ ಮೇಲೆಯೇ ನಡೆಯುತ್ತವೆ. ಪೈಲ್ವಾನರನ್ನು ತೂಕದ ಆಧಾರದ ಮೇಲೆ ವಿಂಗಡಿಸಿ ಜೋಡಿ ಮಾಡಲಾಗುತ್ತದೆ. ಈ ತೂಕ ವಿಂಗಡಣೆಗಳು ಹೀಗಿರುತ್ತವೆ.

| | | |
|---|---|---|
| ಪಿನ್‌ವೇಟ್ | 48 | ಕೆಜಿಗಳ ವರೆಗೆ |
| ಫ್ಲೈವೇಟ್ | 48–52 | " |
| ಬ್ಯಾಂಟಮ್‌ವೇಟ್ | 52–57 | " |
| ಫೆದರ್‌ವೇಟ್ | 57–62 | " |
| ಲೈಟ್‌ವೇಟ್ | 62–68 | " |
| ವೆಲ್ಟರ್‌ವೇಟ್ | 68–74 | ಕೆಜಿಗಳ ವರೆಗೆ |
| ಮಿಡಲ್‌ವೇಟ್ | 74–82 | " |
| ಲೈಟ್‌ಹೆವೀ ವೇಟ್ | 82–90 | " |
| ಹೆವಿವೇಟ್ | 100 | ಕೆಜಿಗಳ ಮೇಲೆ |

**ನಿಲ್ಲುವ ರೀತಿ ಮತ್ತು ಪಟ್ಟುಗಳು :** ಕುಸ್ತಿ ಮಾಡುವಾಗ ನಿಂತುಕೊಳ್ಳುವ ರೀತಿ ಮತ್ತು ಹಾಕುವ ಪಟ್ಟುಗಳು ಗಮನೀಯವಾದ ಅಂಶಗಳು. ಜಟ್ಟಿ ನಿಲ್ಲುವ ರೀತಿಯಿಂದಲೇ, ಅವನು ಒಳ್ಳೆಯ ಕುಸ್ತಿಯ ಪಟು ಎಂದು ನಿರ್ಧರಿಸಬಹುದು. ಕುಸ್ತಿಯಲ್ಲಿ ನಿಲ್ಲುವ ರೀತಿ ಹಲವು ಬಗೆಯದು. ಇವುಗಳಲ್ಲೆಲ್ಲ ಭಾರತದಲ್ಲಿ ಅತ್ಯಂತ ಪ್ರಸಿದ್ಧವಾದ ರೀತಿಯೆಂದರೆ ಪವಿತ್ರ ರೀತಿ (ಕ್ಲೋಸ್ ಸ್ಟಾನ್ಸ್ ). ಈ ರೀತಿಯಲ್ಲಿ ಜಟ್ಟಿ, ಒಂದು ಕಾಲು ಹಿಂದೆ ಹಾಕಿ, ತನ್ನ ಶರೀರದ ಭಾರವನ್ನು ಕಾಲುಗಳ ಮೇಲೆ ಸರಿಸಮನಾಗಿ ಬೀಳುವಂತೆ ಮಾಡಿಕೊಂಡು ನಿಲ್ಲುತ್ತಾನೆ. ಹಾಗೆಯೇ ಜಟ್ಟಿಗೆ ಪಟ್ಟುಗಳ ಅಥವಾ ಡಾವುಗಳ ಆವಶ್ಯಕತೆ ಇರುತ್ತದೆ. ಈ ಡಾವುಗಳಲ್ಲಿ ಹಲವಾರು ವಿಧಗಳಿವೆ.

**ಎದುರುಬದುರು ನಿಂತಾಗ ಮಾಡುವ ಡಾವುಗಳು :** ಎದುರುಬದುರು ನಿಂತು ಕುಸ್ತಿ ಮಾಡುವಾಗ, ಜಟ್ಟಿ ಡಾಕ್ ಹೊಡೆಯುವುದು, ಏಕಲಾಂಗ್ ಹೊಡೆಯುವುದು, ದೋಬಿ ಶಾಟ್ ಹೊಡೆಯುವುದು, ಸಖೀ ಹೊಡೆಯುವುದು ಮುಂತಾದ ಡಾವುಗಳನ್ನು ಮಾಡುತ್ತಾನೆ. ಹಾಗೆಯೇ ತನ್ನ ಎದುರಾಳಿಯ ಹಿಂದೆ ಬಂದು, ಸೊಂಟಹಿಡಿದು, ಉಖ್ವಾಡು ಎತ್ತುವುದು ಮುಂತಾದ ಡಾವುಗಳನ್ನು ಮಾಡುತ್ತಾನೆ. ಎದುರಾಳಿಯೂ ತನ್ನ ಸೊಂಟ ಹಿಡಿದಿರುವ ಜಟ್ಟಿಗೆ, ಒಳಟಾಂಗು ಹೊಡೆಯುವುದು, ಹೊರಟಾಂಗು ಹೊಡೆಯುವುದು ಮುಂತಾದ ಡಾವುಗಳನ್ನು ಮಾಡುತ್ತಾನೆ.

**ಕುಳಿತು ಕುಸ್ತಿ ಮಾಡುವ ಡಾವುಗಳು :** ಕುಳಿತಿರುವಾಗ ಮೇಲಿರುವ ಜಟ್ಟಿ, ಕೆಳಗಿನ ತನ್ನ ಎದುರಾಳಿಗೆ ಒಂಟಿಗಾಲು ಸವಾರಿ, ಜೋಡಿಗಾಲು ಸವಾರಿ, ಮತ್ತು ಸಿವುಡುಕಾಲು ಸವಾರಿ (ಕ್ರೌಚ್ ಲಿಫ್ಟ್) ಮತ್ತು ನೆಲ್ಸನ್ ಮುರಿತ ಇತ್ಯಾದಿ ಡಾವುಗಳನ್ನು ಮಾಡುತ್ತಾನೆ. ಸಿವುಡುಕಾಲು ಸವಾರಿಗೆ ಫ್ರೀಸ್ಟೈಲ್ ಕುಸ್ತಿಯಲ್ಲಿ ಅವಕಾಶವಿಲ್ಲ. ಹಾಗೆಯೇ ಕೆಳಗೆ ಕುಳಿತಿರುವ ಜಟ್ಟಿ ತನ್ನ ಮೇಲಿರುವ ಜಟ್ಟಿಗೆ ಬಗಲಿ ಹೊಡೆಯುವುದು, ಗದ್ದಾಲೋಡ್ (ಒಂದು ಕೈ, ಒಂದು ಕಾಲು ಹಿಡಿದು ಮೂಟೆಯಂತೆ ಹಿಂದೆ ಉರುಳಿಸುವುದು), ರೂಮು ತಿರುಗುವುದು ಮುಂತಾದ ಡಾವುಗಳನ್ನು ಮಾಡುತ್ತಾನೆ.

ಸಾಮಾನ್ಯವಾಗಿ ಜಟ್ಟಿಗಳು ಒಬ್ಬರ ಕತ್ತನ್ನು ಮತ್ತೊಬ್ಬರು ಹಿಡಿದು ಕುಸ್ತಿ ಮಾಡುವುದುಂಟಷ್ಟೆ ಇದಕ್ಕೆ ಕಾರಣವೆಂದರೆ ಇತರ ಅಂಗಾಂಗಗಳಿಗೆ ಹೋಲಿಸಿ ನೋಡಿದಾಗ



ವಿಶ್ವವಿಖ್ಯಾತ ಕುಸ್ತಿ ಪಟುಗಳು : (ಎಡದಿಂದ ಬಲಕ್ಕೆ) ದಾರಾಸಿಂಗ್, ಕಿಂಗ್‌ಕಾಂಗ್, ಟೈಗರ್ ಜೋಗಿಂದರ್ ಸಿಂಗ್, ಗಾಮಾ

ಕತ್ತು ದುರ್ಬಲವಾಗಿರುತ್ತದೆ. ಆದ್ದರಿಂದಲೇ ಜಟ್ಟಿಗಳು ತಮ್ಮ ತಮ್ಮ ಎದುರಾಳಿಗಳ ಕತ್ತನ್ನು ಹಿಡಿದು ಕತ್ತನ್ನೇ ಆಧಾರವಾಗಿಟ್ಟುಕೊಂಡು ಹಲವಾರು ಡಾವುಗಳನ್ನು ಮಾಡುತ್ತಾನೆ.

ಭಾರತದಲ್ಲಿ ಕುಸ್ತಿಯ ಡಾವುಗಳನ್ನು ಮುಖ್ಯವಾಗಿ ಮೂರು ಭಾಗ ಮಾಡಬಹುದು: 1 ಭೀಮಸೇನೀ ಡಾವುಗಳು (ಈ ಬಗೆಯಲ್ಲಿ ಶಕ್ತಿಯ ಅಗತ್ಯವಿರುತ್ತದೆ). 2 ಹನುಮಂತೀ ಡಾವುಗಳು (ಈ ಬಗೆಯಲ್ಲಿ ಯುಕ್ತಿಯ ಅಗತ್ಯವಿರುತ್ತದೆ). 3. ಜಾಂಬವಂತೀ ಡಾವುಗಳು (ಈ ಬಗೆಯಲ್ಲಿ ಕೈಕಾಲುಗಳು ಮುರಿಯುವ ಸಂದರ್ಭವಿರುತ್ತದೆ).

ಪುರಾತನ ಕಾಲದಲ್ಲಿ ಕುಸ್ತಿಯಿಂದ ಪ್ರಾಣಹಾನಿಯಾಗುತ್ತಿತ್ತು. ರಾಮಾಯಣ ಮಹಾಭಾರತ ಕಾವ್ಯಗಳಲ್ಲಿ ಕಂಡುಬರುವ ಕುಸ್ತಿಪಂದ್ಯಗಳಲ್ಲಿ ಇಬ್ಬರಲ್ಲಿ ಯಾರಾದರೂ ಒಬ್ಬ ಸಾಯುವುದನ್ನು ಕಾಣಬಹುದು. ದಿನಗಳುರುಳಿದಂತೆ ಕುಸ್ತಿಯ ಉದ್ದೇಶದಲ್ಲಿ ಮಾರ್ಪಾಡಾಯಿತು. ಅಪಾಯ ಉಂಟುಮಾಡುವ ಡಾವುಗಳನ್ನು ನಿಷೇಧಿಸಲಾಯಿತು.

**ಬಗೆಗಳು:** ಇಂದು ವಾಡಿಕೆಯಲ್ಲಿರುವ ಕುಸ್ತಿಯ ಬಗೆಗಳು ಮೂರು. 1. ಭಾರತೀಯ ಮಾದರಿ, 2. ಬಿಂದಾಸ್ ಅಥವಾ ಸ್ವಚ್ಛಂದ (ಫ್ರೀಸ್ಟೈಲ್ ಅಥವಾ ಕ್ಯಾಚ್ ಆ್ಯಸ್ ಕ್ಯಾಚ್ ಕ್ಯಾನ್) ಮಾದರಿ, 3. ಗ್ರೀಕೋರೋಮನ್ ಮಾದರಿ.

**ಭಾರತೀಯ ಮಾದರಿ ಕುಸ್ತಿ:** ಈ ಬಗೆಯ ಕುಸ್ತಿ, ಕೆಂಪುಮಣ್ಣಿನ ಮೇಲೆ ನಡೆಯುವಂಥದಾಗಿದ್ದು, ಭಾರತದ ಎಲ್ಲ ಭಾಗಗಳಲ್ಲಿ ಪ್ರಸಿದ್ಧವಾಗಿದೆ. ಜಟ್ಟಿಗಳು ಬಿಗಿಯಾಗಿ ಕಾಚವನ್ನು ಕಟ್ಟಿ, ಅದರ ಮೇಲ್ಭಾಗದಲ್ಲಿ ಹನುಮಾನ್ ಚಡ್ಡಿಯನ್ನು ಧರಿಸುತ್ತಾರೆ. ಅನಧಿಕೃತವಾಗಿ ನಡೆಯುವ ಕುಸ್ತಿ ಸ್ಪರ್ಧೆಗಳಲ್ಲಿ ಜಟ್ಟಿಗಳು ಮೈಗೆ ಎಣ್ಣೆ ಬಳಿದುಕೊಂಡು ಅಖಾಡಕ್ಕಿಳಿಯಲು ಅವಕಾಶವಿರುತ್ತದೆ. ಅಖಾಡಕ್ಕಿಳಿಯುವ ಜಟ್ಟಿ ಸಾಮಾನ್ಯವಾಗಿ ತನ್ನ ತಲೆಯನ್ನು ನುಣ್ಣನೆ ಬೋಳಿಸಿಕೊಂಡಿರುತ್ತಾನಲ್ಲದೆ ಮೈಕೈ ಕಾಲುಗಳ ಮೇಲಿನ ಕೂದಲನ್ನು ತೆಗೆಸಿರುತ್ತಾನೆ. ಅವಿದ್ದಲ್ಲಿ ಎದುರಾಳಿಗೆ ಹಿಡಿತ ಸಿಕ್ಕುತ್ತದೆಂದೇ ಜಟ್ಟಿಗಳ ಭಾವನೆ. ಜಟ್ಟಿಗಳನ್ನು ಒಬ್ಬ ಕೆಳಕ್ಕುರುಳಿ ಅವನ ಎರಡು ಭುಜಗಳೂ ಒಮ್ಮೆಗೇ ನೆಲಕ್ಕೆ ಸೋಕಿದರೆ ಆತ ಸೋತಂತಾಗುತ್ತದೆ. ಯಾರೊಬ್ಬರೂ ಬೀಳದಿದ್ದರೆ ಪಂದ್ಯ ಸಮ ಆಟದಲ್ಲಿ ಮುಕ್ತಾಯವಾಗುತ್ತದೆ. ಈ ಬಗೆಯ ಕುಸ್ತಿಯಲ್ಲಿ ಹನುಮಾನ್ ಚಡ್ಡಿಯನ್ನು ಹಿಡಿಯಲು ಅವಕಾಶವಿರುತ್ತದೆ. ಭಾರತದ ಜಟ್ಟಿಗಳಲ್ಲಿ ಫ್ರೀಸ್ಟೈಲ್ ಕುಸ್ತಿಕಲೆಯಲ್ಲಿ ಪರಿಣಿತರನ್ನಾಗಿ ಮಾಡಲೋಸುಗ ಭಾರತೀಯ ರೀತಿಯ ಕುಸ್ತಿ ಸಂಘದವರು ನಿಯಮಗಳನ್ನು ಸ್ವಲ್ಪ ಬದಲಿಸಿ, ಕುಸ್ತಿಯ ರೀತಿಯಲ್ಲಿ ಹೊಸ ತಂತ್ರಗಳನ್ನು ಅಳವಡಿಸಿದ್ದಾರೆ. ಭಾರತೀಯ ಮಾದರಿ ಕುಸ್ತಿ ಸಂಘದ ನಿಯಮದ ಪ್ರಕಾರ ಲೈಟ್‌ವೇಟ್ ವಿಭಾಗಕ್ಕೆ 10 ನಿಮಿಷಗಳೂ ಮಿಡ್ಲ್‌ವೇಟ್ ವಿಭಾಗಕ್ಕೆ 15 ನಿಮಿಷಗಳೂ ಲೈಟ್ ಹೆವಿ ಮತ್ತು ಹೆವಿವೇಟ್ ವಿಭಾಗಗಳಿಗೆ 20 ನಿಮಿಷಗಳೂ ನಿಗದಿಯಾಗಿದೆ. ಪಂದ್ಯದಲ್ಲಿ ಯಾರೊಬ್ಬರೂ ನಿಗದಿಯಾದ ಕಾಲಾವಧಿಯಲ್ಲಿ ಸೋಲದಿದ್ದರೆ, ಇಡೀ ಕುಸ್ತಿ ನಡೆದ ಕಾಲಾವಧಿಯಲ್ಲಿ, ಯಾವ ಜಟ್ಟಿ ಉತ್ತಮವಾಗಿ ಕಾದಾಡಿದ, ಉತ್ತಮ ಡಾವುಗಳನ್ನು ಮಾಡಿದ, ಮತ್ತು ತನ್ನ ಎದುರಾಳಿ ಮಾಡಿದ ಡಾವುಗಳಿಗೆ ಪ್ರತಿಯಾಗಿ ತೋಡುಮಾಡಿ ಎದುರಾಳಿ ಮಾಡಿದ ಡಾವಿನಿಂದ ತಪ್ಪಿಸಿಕೊಂಡ, ಮುಕ್ಕಾಲುಭಾಗ ಕುಸ್ತಿ ಆಗುವವರೆಗೆ ಎಷ್ಟುಬಾರಿ ಚಿತ್ತುಮಾಡಿದ, ಎದುರಾಳಿಯೊಡ್ಡಿದ್ದ ಇಂಥ ಅಪಾಯದಿಂದ ಹೇಗೆ ಪಾರಾದ ಮುಂತಾದ ಎಲ್ಲ ಅಂಶಗಳನ್ನೂ ಪರಿಗಣಿಸಿ, ಯಾವ ಜಟ್ಟಿ ಹೆಚ್ಚು ಪಾಯಿಂಟು (ಅಂಕ) ಗಳಿಸಿದ ಎನ್ನುವ ಆಧಾರದ ಮೇಲೆ, ಅಖಾಡದ ಸುತ್ತ ಕುಳಿತಿರುವ ಮೂರು ಜನ ತೀರ್ಪುಗಾರರಿಂದ ಜಟ್ಟಿಯ ಸೋಲು ಗೆಲುವುಗಳು ನಿರ್ಧಾರವಾಗುತ್ತದೆ.

ಭಾರತದಲ್ಲಿನ ಅತ್ಯುತ್ತಮ ಕುಸ್ತಿಪಟುವನ್ನು ಆರಿಸಲು 'ಹಿಂದ್ ಕೇಸರಿ' ಪ್ರಶಸ್ತಿ ಸ್ಪರ್ಧೆಯನ್ನು ಪ್ರತಿವರ್ಷವೂ ನಡೆಸಲಾಗುತ್ತಿದೆಯಷ್ಟೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಭಾರತದ ಎಲ್ಲ ಭಾಗಗಳಿಂದಲೂ ಜಟ್ಟಿಗಳು ಬರುತ್ತಾರೆ. ಈ ಪಂದ್ಯ ಒಂದು ಗಂಟೆಯ ಕಾಲ ನಡೆಯುತ್ತದೆ. ಈ ಕೆಳಗೆ ಕಾಣಿಸಿರುವವರು ಹಿಂದ್ ಕೇಸರಿ ಪ್ರಶಸ್ತಿ ಗಳಿಸಿದ್ದಾರೆ: 1. ಮಧ್ಯಪ್ರದೇಶದ ರಾಮಚಂದ್ರ, 2. ಮಹಾರಾಷ್ಟ್ರದ ಶ್ರೀಪತಿ ಕಂಚಿನಾಳ್ 3. ಪಂಜಾಬಿನ ಕರಣ್‌ಸಿಂಗ್ 4. ಡೆಲ್ಲಿಯ ಚಾಂದ್‌ಗಿ ರಾಮ್, 5. ಮಹಾರಾಷ್ಟ್ರದ ಮಾರುತಿ ಮಾನೆ 6. ರಾಜಸ್ತಾನದ ಮೆಹರುದ್ದೀನ್.

**ಸ್ವಚ್ಛಂದ (ಕ್ಯಾಚ್ ಆ್ಯಸ್ ಕ್ಯಾಚ್ ಕ್ಯಾನ್ ಅಥವಾ ಫ್ರೀಸ್ಟೈಲ್) ಮಾದರಿ ಕುಸ್ತಿ:** ಈ ಮಾದರಿಯ ಕುಸ್ತಿ ಅಂತಾರಾಷ್ಟ್ರೀಯ ಕುಸ್ತಿ ಸಂಘದವರಿಂದ ಮತ್ತು ಒಲಿಂಪಿಕ್ಸ್ ಸಮಿತಿಯಿಂದ ಅಂಗೀಕರಿಸಲ್ಪಟ್ಟಿದೆ. ಇಲ್ಲಿ 8 ಅಧಿಕೃತ ತೂಕಗಳ ವಿಭಾಗಗಳಿವೆ. ಮೆತ್ತೆಗಳಿಂದ ನಿರ್ಮಿಸಲಾದ 8 ಮೀಟರ್ ಉದ್ದ ಮತ್ತು 8 ಮೀಟರ್ ಅಗಲವಿರುವ ಅಖಾಡದಲ್ಲಿ ಪಂದ್ಯ ನಡೆಯುತ್ತದೆ. ಜಟ್ಟಿಗಳನ್ನು ತೂಕದ ಆಧಾರದ ಮೇಲೆ ವಿಂಗಡಿಸಿ, ವೈದ್ಯಕೀಯ ಪರೀಕ್ಷೆ ನಡೆಸಿದ ಅನಂತರ ಜೋಡಿ ಮಾಡಲಾಗುತ್ತದೆ. ಈ ಮಾದರಿ ಕುಸ್ತಿಯಲ್ಲಿ ಎಣ್ಣೆ ಅಥವಾ ಜಿಡ್ಡು ಪದಾರ್ಥವನ್ನು ಮೈಗೆ ಸವರಿಕೊಳ್ಳುವ ಹಾಗಿಲ್ಲ. ಅಖಾಡಕ್ಕೆ ಬರುವಾಗ ಹಾ, ಹೂ ಎಂದು ಕೂಗಿಕೊಂಡು ಆರ್ಭಟಿಸುತ್ತ ಬರುವುದನ್ನು ನಿಷೇಧಿಸಿದೆ. ಪ್ರತಿಯೊಂದು ಕುಸ್ತಿಯಲ್ಲಿ ತೂಕದ ವಿಭಾಗಕ್ಕೂ ಕಾಲಾವಕಾಶವನ್ನು ನಿಗದಿಮಾಡಿದೆ. ಅಪಾಯ ಉಂಟುಮಾಡುವ ಉಂಗುರ ಅಥವಾ ಯಾವುದೇ ಬಗೆಯ ಒಡವೆ ವಸ್ತುಗಳನ್ನು ಧರಿಸಿಕೊಂಡು ಅಖಾಡಕ್ಕಿಳಿಯಲಾಗದು. ಜಟ್ಟಿಗಳು ನಿಗದಿಯಾದ ವೇಷವನ್ನು ತೊಟ್ಟು, ಕಾಲಿಗೆ ನಿಗದಿಯಾದ ಶೂಸ್ ಧರಿಸಿ, ಕುಸ್ತಿ ಅಖಾಡಕ್ಕಿಳಿಯಬೇಕು. ಕಾಲಾವಧಿ ಹಾಗೂ ಪಾಯಿಂಟು ಗಳಿಕೆ ಪದ್ಧತಿಯಲ್ಲಿ ಕ್ರಮಕ್ರಮವಾಗಿ ಬದಲಾವಣೆಗಳು ಆದಮೇಲೆ ಈ ಮಾದರಿ ಕುಸ್ತಿ ಈ ಕೆಳಗಿನ ಆಧಾರದ ಮೇಲೆ ನಡೆಯುತ್ತದೆ.

ಕೊಟ್ಟಿರುವ ಕಾಲಾವಧಿಯಾದ 11 ನಿಮಿಷದಲ್ಲಿ ಪ್ರತಿ ಮೂರು ನಿಮಿಷಕ್ಕೊಮ್ಮೆ ಕಾದಾಡುತ್ತಿರುವ ಜಟ್ಟಿಗಳನ್ನು ಬಿಡಿಸಿ ದಣಿವಾರಿಸಿಕೊಳ್ಳಲು ಒಂದು ನಿಮಿಷ ಬಿಡುವು ಮಾಡಿಕೊಡುತ್ತಾರೆ. ಅಂದರೆ ಕುಸ್ತಿ ನಡೆಯುವುದು ಒಟ್ಟು 9 ನಿಮಿಷ ಮಾತ್ರ. ಕುಸ್ತಿ ನಡೆಯುವ ಈ 9 ನಿಮಿಷದಲ್ಲಿ ಜಟ್ಟಿಗಳು ಸುಮ್ಮನೆ ಕುಳಿತಲ್ಲಿ ಕೂರದೆ, ನಿಂತಲ್ಲಿ ನಿಲ್ಲದೆ, ಏನಾದರೂ ಡಾವುಗಳನ್ನು ಮಾಡುತ್ತಿರಬೇಕು, ಅಂತೂ ಇಬ್ಬರೂ ಚಟುವಟಿಕೆಯಿಂದ ಕುಸ್ತಿಯಲ್ಲಿ ಭಾಗವಹಿಸಬೇಕು. ಯಾವ ಡಾವುಗಳನ್ನೂ ಮಾಡದೆ, ನಿಂತಲ್ಲಿ ನಿಂತ ಹಾಗೆಯೇ ಅಥವಾ ಕುಳಿತಲ್ಲಿ ಕುಳಿತ ಹಾಗೆಯೇ ಒಬ್ಬರಿಗೊಬ್ಬರು ಕಚ್ಚಾಡುತ್ತಿದ್ದರೆ, ಅವರಿಗೆ ರೆಫರಿ ಎಚ್ಚರಿಕೆ ನೀಡುತ್ತಾನೆ. ಎಚ್ಚರಿಕೆ ನೀಡಿದರೂ ಅದಕ್ಕೆ ಕಿವಿಗೊಡದೆ ಮತ್ತೆ ಅದೇ ರೀತಿ ಕಚ್ಚಾಡುತ್ತಿದ್ದರೆ ಅಥವಾ ನಿಯಮಕ್ಕೆ ವಿರುದ್ಧವಾದ ಡಾವುಗಳನ್ನು ಮಾಡುತ್ತಿದ್ದರೆ ಅಖಾಡದ ಸುತ್ತಲೂ ಕುಳಿತಿರುವ ಮೂರು ಜನ ನ್ಯಾಯಮೂರ್ತಿಗಳ ಸಲಹೆ ತೆಗೆದುಕೊಂಡು

ರೆಫರಿ ಅವರನ್ನು ಪಂದ್ಯದಿಂದ ಹೊರದೂಡಬಹುದು. ಈ ರೀತಿಯ ಕುಸ್ತಿಯಲ್ಲಿ ಜಟ್ಟಿಯ ಎರಡೂ ಭುಜಗಳು ಕೆಳಕ್ಕೆ ತಗಲಿದಾಗ, ರೆಫರಿ ಒಂದು ಎಣಿಸಿ ತನ್ನ ಕೈಯಿಂದ ಹಾಸಿಗೆಯನ್ನು ಬಡಿದ ಮೇಲೆ ಪಂದ್ಯ ಮುಕ್ತಾಯವಾಗುತ್ತದೆ. ರೆಫರಿ ಕೈತಟ್ಟುವವರೆಗೂ ಕುಸ್ತಿಯನ್ನು ಮುಂದುವರಿಸಬೇಕು.

ಭಾರತೀಯ ಕುಸ್ತಿಪಟುಗಳು ಕಾಮನ್‌ವೆಲ್ತ್ ಕ್ರೀಡಾಕೂಟ, ಏಷ್ಯನ್ ಗೇಮ್ಸ್‌ನಲ್ಲಿ ಈ ಮಾದರಿಯ ಕುಸ್ತಿಯಲ್ಲಿ ಭಾಗವಹಿಸಿ, ಉತ್ತಮ ಮಟ್ಟದಲ್ಲಿ ಹೋರಾಡಿ ಹೆಸರು ಗಳಿಸಿದ್ದಾರೆ. ದೇಶಕ್ಕೆ ಖ್ಯಾತಿ ತಂದ ಜಟ್ಟಿಗಳಲ್ಲಿ ಕೆಲವರನ್ನು ಈ ಕೆಳಗೆ ಹೆಸರಿಸಿದೆ:

1. ಕೆ.ಡಿ. ಜಾದವ್, 2. ಲೀಲರಾಮ್, 3. ಬಿಷಂಬರ್ ಸಿಂಗ್, 4. ಮಾಳ್ವ, 5. ಬಿ.ಜಿ.ಕಾಸಿದ್, 6. ಸೋಹಾನ್ ಸಿಂಗ್, 7. ಲಲಿತಾಪ್ರಸಾದ್,8. ಉದಯ ಚಂದ್, 9. ಲಕ್ಷ್ಮೀಕಾಂತ ಪಾಂಡೆ, 10. ಕುಮಾರ್ ವೇದಪ್ರಕಾಶ್

**ಗ್ರೀಕೋರೋಮನ್ ಸ್ಟೈಲ್ ಕುಸ್ತಿ:** ಈ ಮಾದರಿ ಕುಸ್ತಿಯೂ ಅಂತಾರಾಷ್ಟ್ರೀಯ ಕುಸ್ತಿ ಸಂಘ ಮತ್ತು ಒಲಂಪಿಕ್ ಸಮಿತಿಯಿಂದ ಅಂಗೀಕರಿಸಲ್ಪಟ್ಟಿದೆ. ಇದು ಫ್ರೀಸ್ಟೈಲ್ ಮಾದರಿ ಕುಸ್ತಿಯ ಪ್ರತಿರೂಪವಾಗಿದೆ. ಆದರೆ ಯಾವ ಡಾವುಗಳನ್ನೂ ಸೊಂಟದ ಕೆಳಗೆ ಮಾಡುವಂತಿಲ್ಲ. ಜಟ್ಟಿಯನ್ನು ಸಿಕ್ಕಿಸಿಕೊಳ್ಳಲು ಕಾವಲುಗಳನ್ನು ಉಪಯೋಗಿಸುವಂತಿಲ್ಲ. ಭಾರತದಲ್ಲಿ 1964ರಿಂದ ಈ ಬಗೆಯ ಕುಸ್ತಿ ನಡೆಯುತ್ತಿದೆ.

**ವಿಶ್ವ ಕುಸ್ತಿ ಪ್ರಶಸ್ತಿ ಸ್ಪರ್ಧೆಯಲ್ಲಿ ಭಾರತ :** 18ನೆಯ ಶತಮಾನದ ಕೊನೆಯಲ್ಲಿ ನಡೆದ ವಿಶ್ವಕುಸ್ತಿ ಸ್ಪರ್ಧೆ, ಅತ್ಯಂತ ಪ್ರಖ್ಯಾತವಾದ ಕುಸ್ತಿ ಸ್ಪರ್ಧೆಗಳಲ್ಲಿ ಒಂದು. ಇದರ ಹೊಣೆ ಹೊತ್ತಿದ್ದವರು ಮಹಾರಾಜ ನೃಪೇಂದ್ರ ನಾರಾಯಣ್ ಅವರು. ಈ ಸ್ಪರ್ಧೆಯಲ್ಲಿ ಭಾರತದ ಕುಸ್ತಿಪಟು ಕರೀಂ ಬಕ್ಷ್‌ರವರು ಅಂದು ವಿಶ್ವದಲ್ಲೆಲ್ಲಾ ಪ್ರಮುಖ ಕುಸ್ತಿ ಪಟುವಾಗಿದ್ದ ಟಾಮ್ ಕ್ಯಾನನ್ ಎಂಬಾತನನ್ನು ಸೋಲಿಸಿ ವಿಶ್ವ ಕುಸ್ತಿ ಪ್ರಶಸ್ತಿಯನ್ನು ಗೆದ್ದುಕೊಂಡು ಭಾರತಕ್ಕೆ ಕೀರ್ತಿತಂದರು. ಪಂಡಿತ್ ಮೋತಿಲಾಲ್ ನೆಹರೂ ಅವರು ಭಾರತೀಯ ಕುಸ್ತಿ ಪಟುಗಳಿಗೆ ಆಶ್ರಯದಾತರಾಗಿದ್ದರು. ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಕುಸ್ತಿ ಪ್ರಶಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಭಾರತದ ಖ್ಯಾತ ಪೈಲ್ವಾನ್ ಗುಲಾಂನನ್ನು ಅವರು ಕರೆದೊಯ್ದರು. ಗುಲಾಂನ ದೇಹದಾರ್ಢ್ಯ, ಸಾಮರ್ಥ್ಯ, ಚಾಕಚಕ್ಯತೆಗಳ ವಿಷಯದಲ್ಲಿ ಮೋತಿಲಾಲರಿಗೆ ಅಚಲ ವಿಶ್ವಾಸವಿತ್ತು. ಅಂತೆಯೇ ಗುಲಾಂ ತುರ್ಕಿಯ ಖಾದರ್ ಅಲಿಯನ್ನು ಸೋಲಿಸಿ ವಿಶ್ವಪ್ರಶಸ್ತಿ ಗೆದ್ದು ತಂದ.

1910ರಲ್ಲಿ, ಲಂಡನ್ನಿನಲ್ಲಿ ನಡೆದ ಜಾನ್ ಬುಲ್ ವಿಶ್ವ ಕುಸ್ತಿ ಪ್ರಶಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಗಾಮ ಮತ್ತು ಇಮಾಂ ಬಕ್ಷ್ ಎಂಬಿಬ್ಬರನ್ನು ಅವರಿಗೆ ತಗುಲುವ ಸಂಪೂರ್ಣ ಖರ್ಚಿನ ಹೊಣೆಯನ್ನು ವಹಿಸಿಕೊಂಡು ಬಂಗಾಲದ ದೊಡ್ಡ ಶ್ರೀಮಂತರಾದ ಶರತ್ ಕುಮಾರ್ ಮಿತ್ರರು ಲಂಡನಿಗೆ ಕರೆದೊಯ್ದರು. ಭಾರತದಲ್ಲೆಲ್ಲ ತುಂಬ ಪ್ರಖ್ಯಾತನಾಗಿದ್ದ ಗಾಮನಿಗೆ ವಿಶ್ವ ಕುಸ್ತಿ ಪ್ರಶಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಅಂದು ಅವಕಾಶ ನೀಡಲಿಲ್ಲ. ಕೇವಲ 5 ಅಡಿ 7 ಅಂಗುಲ ಎತ್ತರವಿದ್ದು, 250 ಪೌಂಡು ತೂಕವಿದ್ದ ಗಾಮ, ಇವನಿಗಿಂತ ಎತ್ತರ ಹಾಗೂ ಹೆಚ್ಚು ತೂಕವಿರುವ ಪ್ರಪಂಚದ ಇತರ ಖ್ಯಾತ ಕುಸ್ತಿ ಪಟುಗಳ ಎದುರಿನಲ್ಲಿ ನಿಲ್ಲಲಾರನೆಂಬುದೇ ಅದಕ್ಕೆ ಕಾರಣವಾಗಿತ್ತು.

ಕಡ್ಲೆಕಾಯಿಯನ್ನು ಹೊಸಕುವ ರೀತಿಯಲ್ಲಿ ಬಾದಾಮಿ ಕಾಯಿಗಳನ್ನು ಎರಡೇ ಎರಡು ಬೆರಳಿನಿಂದ ಹೊಸಕಿ ತಿನ್ನುತ್ತಿದ್ದ ಅಸಾಧಾರಣ ಶಕ್ತಿಶಾಲಿಯಾಗಿದ್ದ ಗಾಮ ಇದರಿಂದಾಗಿ ಸಿಡಿದೆದ್ದು, ಸ್ಪರ್ಧೆ ನಡೆಯಲಿದ್ದ ಕ್ರೀಡಾಂಗಣದಲ್ಲಿ ನಿಂತು, ಇಡೀ ಇಂಗ್ಲೆಂಡಿನಲ್ಲಿ, ಯಾರೇ ಆಗಲಿ, ತನ್ನ ಎದುರು ನಿಂತು 5 ನಿಮಿಷ ಹೋರಾಡಿದವರೆ ಅಂಥವರಿಗೆ 15 ಪೌಂಡ್ ಬಹುಮಾನ ಕೊಡುವುದಾಗಿ ಸವಾಲು ಹಾಕಿದ. ಇವನ ಸವಾಲನ್ನು ಎದುರಿಸಲು ಮೊದಲ ದಿವಸ ಮೂರು ಜನ ಪೈಲ್ವಾನರು ಮುಂದೆ ಬಂದರು. ಗಾಮ ಈ ಮೂರು ಜನರನ್ನೂ ಎರಡು ನಿಮಿಷದ ಒಳಗೇ ಮಣ್ಣು ಮುಕ್ಕಿಸಿದ. ಮಾರನೆಯ ದಿನ ಇವನನ್ನೆದುರಿಸಲು ಬಂದ 12 ಜನ ಕುಸ್ತಿ ಪಟುಗಳಿಗೂ ಅದೇ ಗತಿ ಕಾಣಿಸಿದ. ದಿಗ್ಭ್ರಮೆ ಹಿಡಿಸುವಂತೆ ಜಯದ ಮೇಲಿನ ಜಯವನ್ನು ಗಳಿಸುತ್ತ ಬಂದ ಗಾಮನಿಗೆ ವ್ಯವಸ್ಥಾಪಕರು ವಿಶ್ವ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲೇಬೇಕಾಯಿತು. ಅನಂತರ ಗಾಮ 12-1-1910ರಂದು, ಅಮೆರಿಕದ ಹೆಸರಾಂತ ಪೈಲ್ವಾನ್ ಇ. ರೋಲರ್‌ನನ್ನು ಎದುರಿಸಿ ನಿಂತನಲ್ಲದೆ ಆತನನ್ನು ಹದಿನೈದು ನಿಮಿಷಗಳಲ್ಲಿ ಹನ್ನೆರಡು ಬಾರಿ ಸೋಲಿಸಿ ಕ್ರೀಡಾಂಗಣದಲ್ಲಿ ನೆರೆದಿದ್ದ ಪ್ರೇಕ್ಷಕರಿಗೆ ಆಶ್ಚರ್ಯವುಂಟುಮಾಡಿದ. ಇದಾದ ಅನಂತರ ಅಂದು ವಿಶ್ವದಲ್ಲೆಲ್ಲ ಪ್ರಖ್ಯಾತಿ ಗಳಿಸಿ ವಿಶ್ವ ಕುಸ್ತಿ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದ ಆಸ್ಟ್ರೇಲಿಯದ ಜಿಬಿಸ್ಕೊನನ್ನು ಎದುರಿಸಿದ. ಮೂರು ಗಂಟೆಗಳ ಕಾಲ ಇಬ್ಬರಿಗೂ ಪಂದ್ಯ ನಡೆದು, ಯಾರೂ ಸೋಲದ ಕಾರಣ ಪಂದ್ಯವನ್ನು ಮುಂದಿನ ದಿವಸಕ್ಕೆ ಮುಂದೂಡಲಾಯಿತು. ಅಂದು ನಡೆದ ಕುಸ್ತಿ ಪಂದ್ಯದಲ್ಲಿ ಕೊನೆಯವರೆಗೂ ಗಾಮನದೇ ಮೇಲುಗೈಯಾಗಿತ್ತು. ಕುಸ್ತಿ ಪಂದ್ಯದ ನೀತಿ ನಿಯಮಗಳನ್ನು ಸರಿಯಾಗಿ ಪಾಲಿಸಿದ್ದರೆ ಅಂದೇ ಗಾಮನಿಗೆ ಜಯ ದೊರಕಬೇಕಿತ್ತು. ಇದರಿಂದ ಗಾಮ ಕೊಂಚವೂ ಸಹನೆಯನ್ನು ಕಳೆದುಕೊಳ್ಳಲಿಲ್ಲ. ಇದಕ್ಕೆ ಪ್ರತಿಯಾಗಿ ಮಾರನೆಯ ದಿವಸ ಅತ್ಯಂತ ಉತ್ಸಾಹದಿಂದ ಕುಸ್ತಿ ಅಖಾಡಕ್ಕಿಳಿದ. ಆದರೆ ಅವನ ಎದುರಾಳಿ ಹಿಂದಿನ ದಿವಸದ ಕುಸ್ತಿಪಂದ್ಯದಲ್ಲಿ ಮೈಮೂಳೆ ಮುರಿಸಿ ಕೊಂಡಿದ್ದರಿಂದ ನಿಶ್ಚೇತನನಾಗಿ ಸ್ಪರ್ಧೆಗೆ ಗೈರುಹಾಜರಾದ. ಅಂದೇ ಗಾಮ ವಿಶ್ವ ಕುಸ್ತಿ ಪ್ರಶಸ್ತಿಯನ್ನು ಸಂಪಾದಿಸಿ ಭಾರತದ ಕೀರ್ತಿಪತಾಕೆಯನ್ನು ಎತ್ತಿಹಿಡಿದ.

ಇದಾದ ಕೆಲವು ತಿಂಗಳುಗಳ ಅನಂತರ ವಿಶ್ವ ಕುಸ್ತಿ ಪ್ರಶಸ್ತಿಯನ್ನು ಮತ್ತೆ ವಾಪಸ್ಸು ಪಡೆಯಲು ತನ್ನ ದೇಶದ ಜನತೆಯಿಂದ ಪ್ರೇರಿತನಾದ ಜಿಬಿಸ್ಕೊ ಮತ್ತೆ ಗಾಮನನ್ನು ಎದುರಿಸಿದ. ಆದರೆ ಈ ಸಾರಿ ಗಾಮ, ಕೇವಲ ಎರಡು ಸೆಕೆಂಡಿನಲ್ಲಿ ಆತನನ್ನು ಸೋಲಿಸಿ, ಇಡೀ ವಿಶ್ವದಲ್ಲಿ ಅಜೇಯನೆಂದು ಕೀರ್ತಿ ಸಂಪಾದಿಸಿಕೊಂಡ.



ಫ್ರೀಸ್ಟೈಲ್ ಕುಸ್ತಿಯ ವರಸೆಗಳು

ಗಾಮ ಬೆಳಕಿಗೆ ಬರುವ ಮುಂಚೆ ಕಿಕಾರ್‌ಸಿಂಗ್ ಮತ್ತು ಗುಲಾಂ ಇವರ ಹೆಸರು ಕುಸ್ತಿ ಪ್ರಪಂಚದಲ್ಲಿ ಮನೆಮಾತಾಗಿತ್ತು. ಲಾಹೋರಿನ ಸತಾರ-ಎ-ಹಿಂದ್‌ನಲ್ಲಿದ್ದ ವಿದ್ದೊ

ಪೈಲ್ವಾನನ ಹೆಸರನ್ನು ಇಲ್ಲಿ ಸ್ಮರಿಸಬಹುದು. ಕುಸ್ತಿಯಲ್ಲಿ ಗಾಮ ಸ್ವಲ್ಪ ಹೆದರುತ್ತಿದ್ದುದು ಬಹುಷಃ ಇವನೊಬ್ಬನಿಗೇ, ಹೆಚ್ಚುಕಡಿಮೆ ಈತ ಗಾಮನಿಗೆ ಸರಿಸಮನಾಗಿ ನಿಲ್ಲುತ್ತಿದ್ದ.



ಕರೇಲಗಳು – ಕುಸ್ತಿ ತರಬೇತಿನ ಸಾಧನಗಳು

ಅನಂತರ ಬಂದ ಭಾರತದ ಹೆಸರಾಂತ ಕೆಲವು ಕುಸ್ತಿಪಟುಗಳೆಂದರೆ, ಭೂಲರ್, ಗೊಂಗಾಬಲಿವಾಲ, ಹರ್‌ಬಾನ್‌ಸಿಂಗ್, ಗುಟ್ಟಾಸಿಂಗ್, ಇಮಾಂಬಕ್ಸ್, ಗರ್ದಾವರ್, ಹಮೀದಾ, ಗಂಧಾಸಿಂಗ್, ಹಕೀಮ್, ಮಾಧೋಸಿಂಗ್, ಉಸ್ತಾದ್ ಕರೀಮ್ ಬಕ್ಸ್, ಪಲೇರ್‌ವಾಲ, ಗೋಬರ್‌ಬಾಬು, ಕಲ್ಲು, ರಹೀಂ ಸುಲ್ತಾನಿವಾಲಾ, ದಾರಾಸಿಂಗ್, ಜೋಗಿಂದರ್‌ಸಿಂಗ್–ಮುಂತಾದವರು. ಫ್ರೀಸ್ಟೈಲ್ ಕುಸ್ತಿಯಲ್ಲಿ ಇವರುಗಳು ಹೆಸರುವಾಸಿಯಾದವರು. ಭಾರತ ಕಾಮನ್‌ವೆಲ್ತ್ ರಾಷ್ಟ್ರಗಳ ಪೈಕಿ ಉನ್ನತ ಮಟ್ಟದ ಕುಸ್ತಿಯ ರಾಷ್ಟ್ರವೆಂದು ಹೆಸರುಗಳಿಸಿಕೊಂಡಿದೆ. (ಎಚ್.ಕೆ.ಎನ್.)

**ಕುಳಿಗಳು :** ವ್ಯಾಸ್ಕುಲರ್ (ನಾಳಮಯ) ಸಸ್ಯಗಳಲ್ಲಿನ ಕೆಲವು ಬಗೆಯ ಜೀವಕೋಶಗಳ ಆನುಷಂಗಿಕ ಕೋಶಭಿತ್ತಿಯಲ್ಲಿ ಕಾಣಬರುವ ವಿಶೇಷ ರೀತಿಯ ಗುಂಡಿಗಳು (ಪಿಟ್ಸ್). ಕಾಲೆಂಕಿಮ, ಸ್ಕ್ಲೀರೆಂಕಿಮ, ನೀರ್ನಾಳ ಹಾಗೂ ನೀರ್ನಳಿಕೆ(ವೆಸಲ್ ಮತ್ತು ಟ್ರೆಕೀಡ್), ಆಹಾರನಾಳಗಳಲ್ಲಿನ ನಾರುಗಳು ಮುಂತಾದ ಜೀವಕೋಶಭಿತ್ತಿಯ (ಪ್ರೈಮರಿ ವಾಲ್) ಮೇಲೆ ಆನುಷಂಗಿಕ (ಸೆಕೆಂಡರಿ) ಕೋಶಭಿತ್ತಿ ಸಂಗ್ರಹಗೊಳ್ಳುತ್ತದೆ. ಆಗ ಕೋಶಭಿತ್ತಿಯ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಈ ಸಂಗ್ರಹ ಇರುವುದಿಲ್ಲ. ಇಂಥ ಪ್ರದೇಶಗಳು ನಿರ್ದಿಷ್ಟ ಆಕಾರದ ತಗ್ಗು ಪ್ರದೇಶಗಳಾಗಿ ಉಳಿದು ಕುಳಿಗಳೆನಿಸಿಕೊಳ್ಳುತ್ತವೆ. ಈ ಕುಳಿಗಳ ಮೂಲಕ ಅಕ್ಕಪಕ್ಕದ ಜೀವಕೋಶಗಳಿಗೆ ಪರಸ್ಪರ ಸಂಪರ್ಕ ಕಲ್ಪಿತವಾಗಿ ನೀರು ಮತ್ತು ಕರಗಿದ ಲವಣ ಹಾಗೂ ಇತರ ವಸ್ತುಗಳು ಕೋಶದಿಂದ ಕೋಶಕ್ಕೆ ಹಾಯ್ದುಹೋಗಲು ಅನುಕೂಲವಾಗುತ್ತದೆ. ಒಂದೊಂದು ಕುಳಿಯಲ್ಲೂ ಮಧ್ಯದಲ್ಲಿ ಆನುಷಂಗಿಕ ಕೋಶಭಿತ್ತಿ ಸಂಗ್ರಹಗೊಳ್ಳದ ತೆಳುವಾದ ಭಾಗವಿದೆ. ಇದಕ್ಕೆ ಕುಳಿಕ್ಷೇತ್ರವೆಂದು ಹೆಸರು. ಈ ಕ್ಷೇತ್ರದಲ್ಲಿ ಪ್ರಥಮ ಕೋಶಭಿತ್ತಿ ಹಾಗೂ ಮಧ್ಯಪದರ ಮಾತ್ರ ಇವೆ. ಇವೆರಡನ್ನೂ ಒಟ್ಟಾಗಿ ಕುಳಿಪೊರೆ ಎನ್ನಲಾಗುತ್ತದೆ. ಸಾಮಾನ್ಯವಾಗಿ ಅಕ್ಕಪಕ್ಕದ ಎರಡು ಜೀವಕೋಶಗಳ ಕುಳಿಗಳು ಒಂದು ಜೀವಕೋಶದ ಕಡೆಗೆ ಒಂದು ಇನ್ನೊಂದರ ಕಡೆಗೆ ಇನ್ನೊಂದು ಹೀಗೆ ಜೊತೆಯಾಗಿರುತ್ತವೆ. ಇವನ್ನು ಕುಳಿಜೋಡಿ ಎನ್ನಲಾಗುತ್ತದೆ. ಕುಳಿಪೊರೆಯಿಂದ ಮುಂದಕ್ಕೆ ಚಾಚಿದ ಸೂಕ್ಷ್ಮವಾದ ಕುಳಿ ಅವಕಾಶ ಅಥವಾ ಕೋಣೆಯೂ ಅದರ ಹೊರಭಾಗದಲ್ಲಿ ಕುಳಿದ್ವಾರವೂ ಇವೆ.

ಕುಳಿಗಳಲ್ಲಿ ಸರಳ ಕುಳಿಗಳು (ಸಿಂಪಲ್ ಪಿಟ್ಸ್) ಮತ್ತು ಅಂಚುಳ್ಳ ಕುಳಿಗಳು (ಬಾರ್ಡರ್ಡ್‌ಪಿಟ್ಸ್) ಎಂದು ಎರಡು ಬಗೆಗಳಿವೆ. ಸರಳ ಕುಳಿಗಳಲ್ಲಿ ಕುಳಿಯ ಅವಕಾಶ ತನ್ನ ಅಗಲದಲ್ಲಿ ಏಕಪ್ರಕಾರವಾಗಿದೆ. ಸರಳ ಕುಳಿಯ ಆಕಾರ ದುಂಡು ಅಂಡದಂತೆ ಬಹುಮೂಲೆಯಂತೆ ಉದ್ದುದ್ದವಾಗಿ ಇರಬಹುದು. ಇಲ್ಲವೆ ನಿರ್ದಿಷ್ಟ ಆಕಾರವಿಲ್ಲದಿರಬಹುದು. ಕುಳಿಪೊರೆ ಒಂದೇ ಸಮವಾಗಿದ್ದು ಎಲ್ಲಿಯೂ ಉಬ್ಬಿರುವುದಿಲ್ಲ. ಕುಳಿಯ ದ್ವಾರದ ಮತ್ತು ಕುಳಿ ಅವಕಾಶದ ಅಗಲ ಒಂದೇ. ಪೆರೆಂಕಿಮ, ಕಾಲೆಂಕಿಮ, ಆಹಾರವಾಹಕ ಅಂಗಾಂಶದ ನಾರುಗಳು, ಕಲ್ಲುಕೋಶಗಳು (ಸ್ಕ್ಲೀರಿಡ್ಸ್), ಹೂ ಬಿಡುವ ಸಸ್ಯಗಳ ನೀರ್ನಾಳ ಹಾಗೂ ನೀರ್ನಳಿಕೆಗಳು ಮುಂತಾದ ಜೀವಕೋಶಗಳಲ್ಲಿ ಅಲ್ಲಲ್ಲಿ ಸೂಕ್ಷ್ಮವಾದ ನಾಳಗಳಂತೆ ಚಾಚಿ ಕವಲೊಡೆದಿರುತ್ತವೆ. ಇವಕ್ಕೆ ಕುಳಿ ಕಾಲುವೆಗಳೆಂದು (ಪಿಟ್ ಕೆನಾಲ್ಸ್) ಹೆಸರು. ಅಂಚುಳ್ಳ ಕುಳಿಗಳು ಜಟಿಲ ಬಗೆಯವು. ಇವು ಸರಳ ಕುಳಿಗಳಿಂದ ಹಲವು ಲಕ್ಷಣಗಳಲ್ಲಿ ಭಿನ್ನವಾಗಿವೆ. ಕುಳಿಯ ಅವಕಾಶ ಏಕಪ್ರಕಾರವಾಗಿಲ್ಲದೆ ಒಂದು ರೀತಿಯ ಆಲಿಕೆಯಂತಿದೆ. ಕುಳಿಪೊರೆಯ ಸಮೀಪದಲ್ಲಿ ಅವಕಾಶ ಅಗಲವಾಗಿಯೂ ದ್ವಾರದ ಬಳಿ ಕಿರಿದಾಗಿಯೂ ಇದೆ. ಆನುಷಂಗಿಕ ಕೋಶಭಿತ್ತಿ ಕುಳಿಯ ಅವಕಾಶದ ಸುತ್ತ ಬಾಗಿದ ಕಮಾನಿನಂತೆ ಚಾಚಿಕೊಂಡಿದ್ದು ಒಂದು ಬಗೆಯ ಅಂಚನ್ನು ನಿರ್ಮಿಸಿದೆ. ಇದರಿಂದಲೇ ಈ ರೀತಿಯ ಕುಳಿಗೆ ಅಂಚುಳ್ಳ ಕುಳಿ ಎಂದು ಹೆಸರು. ಕುಳಿಪೊರೆಯೂ ಏಕಪ್ರಕಾರವಾಗಿರದೆ ಕುಳಿದ್ವಾರಕ್ಕೆ ಅಭಿಮುಖವಾಗಿ ಕೇಂದ್ರ ಭಾಗದಲ್ಲಿ ಕೊಂಚ ಉಬ್ಬಿಕೊಂಡಿದೆ. ಉಬ್ಬಿರುವ ಈ ಭಾಗಕ್ಕೆ ಟೋರಸ್ ಎಂದು ಹೆಸರು. ಟೋರಸಿಗೆ ಆಚೀಚೆ ಚಲಿಸುವ ಶಕ್ತಿಯಿದ್ದು ಇದು ಕೋಶದಿಂದ ಕೋಶಕ್ಕೆ ದ್ರವಸಾಗಣೆಯನ್ನು ನಿಯಂತ್ರಿಸುತ್ತದೆ. ಕುಳಿಪೊರೆಯ ಸುತ್ತಲೂ ಒತ್ತಡ ಒಂದೇ ಸಮವಾಗಿದ್ದಿರೆ ಮಾತ್ರ ಟೋರಸ್ ಕೇಂದ್ರ ಭಾಗದಲ್ಲಿದ್ದು ದ್ರವಗಳ ವಹನ ಸರಾಗವಾಗಿ ನಡೆಯಬಲ್ಲುದು. ಹಾಗಲ್ಲದೆ ಒತ್ತಡ ಒಂದು ಕಡೆಗೆ ಹೆಚ್ಚಾದರೆ ಟೋರಸ್ ಒಂದು ಕಡೆವಾಲಿಕೊಂಡು ದ್ರವವಹನ ಕುಂಠಿತವಾಗುವಂತೆ ಮಾಡುತ್ತದೆ. ಅನಾವೃತ ಹಾಗೂ ಆವೃತಬೀಜ ಸಸ್ಯಗಳ ನೀರ್ನಾಳಗಳಲ್ಲೂ ಅಂಚುಳ್ಳ ಕುಳಿಗಳಿವೆ. ಟೆರಿಡೊಫೈಟ್ ಸಸ್ಯಗಳಲ್ಲೂ ಇವು ಕಾಣಬರುತ್ತವೆ.

ಕೆಲವು ಬಗೆಯ ಜೀವಕೋಶಗಳಲ್ಲಿ ಅಕ್ಕಪಕ್ಕದ ಜೀವಕೋಶಗಳಲ್ಲಿ ಒಂದು ಜೀವಕೋಶದ ಬದಿಗೆ ಅಂಚುಳ್ಳ ಕುಳಿಯೂ ಇನ್ನೊಂದು ಜೀವಕೋಶದ ಬದಿಗೆ ಸರಳಕುಳಿಯೂ ಇರುತ್ತವೆ. ಇಂಥ ಕುಳಿ ಜೋಡಿಗೆ ಅರೆಅಂಚುಳ್ಳ ಕುಳಿ ಎಂದು ಹೆಸರು. ಕುಳಿಯ ರಚನೆಯ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಸಲುವಾಗಿ ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಅಧ್ಯಯನವೂ ನಡೆದಿದೆ. ಫ್ರೆವೈಸ್ಲಿಂಗ್ ಎಂಬಾತ 1956ರಲ್ಲಿ ಈ ದಿಶೆಯಲ್ಲಿ ಹೆಚ್ಚಿನ ಅಧ್ಯಯನ ನಡೆಸಿ ಕುಳಿಪೊರೆ ಸೂಕ್ಷ್ಮವಾದ ಎಳೆಗಳಿಂದ ರಚಿತವಾದ ಪದರವೆಂದು ಈ ಎಳೆಗಳು ಅನಿರ್ದಿಷ್ಟ ಕ್ರಮದಲ್ಲಿ ಒಂದರೊಡನೊಂದು ಹೆಣೆದುಕೊಂಡಿವೆಯೆಂದೂ ತಿಳಿಸಿದ್ದಾನೆ. ಈ ರೀತಿಯ ಹೆಣೆಯುವಿಕೆಯಿಂದ ಒಂದು ಬಗೆಯ ಬಲೆಯುಂಟಾಗಿ ಅದರ ರಂಧ್ರಗಳ ಮೂಲಕ ದ್ರವವಸ್ತುವಿನ ಚಲನೆ ಸಾಗುತ್ತದೆಯೆಂದೂ ಹೇಳಿದ್ದಾನೆ. (ಎಂ.ಎಸ್.ಎಸ್.ಆರ್.)

**ಕುಳಿಬೀಳುವುದು (ಕುಹರೀಕರಣ) :** ದ್ರವದ ಬಾಷ್ಪ ಒತ್ತಡಕ್ಕಿಂತ (ವೇಪರ್ ಪ್ರೆಷರ್) ಸ್ಥಾನಿಕ ಒತ್ತಡಗಳು (ಲೋಕಲ್ ಪ್ರೆಷರ್ಸ್) ಕಡಿಮೆ ಇರುವ ಕಡೆಗಳಲ್ಲಿ ಕುಳಿಗಳ ರೂಪುಗೊಳ್ಳುವಿಕೆ, ಬೆಳೆಯುವಿಕೆ ಮತ್ತು ನಾಶ (ಕ್ಯಾವಿಟೇಶನ್). ಈ ಪರಿಸ್ಥಿತಿಯಲ್ಲಿ ದ್ರವದಲ್ಲಿ ಅಗಲಿಕೆಯಾಗಿ ಸಣ್ಣ ಕುಳಿಗಳಾಗುತ್ತವೆ. ಇವುಗಳೊಳಗೆ ಯಾವುದೇ ಅನಿಲ ಅಥವಾ ನೀರಿನ ಬಾಷ್ಪವಿರಬಹುದು ಅಥವಾ ಅದು ನಿರ್ವಾತವಾಗಿರಬಹುದು. ಕುಳಿಬೀಳುವುದರಿಂದಾದ ಗುಳ್ಳೆಗಳು ನೀರಿನೊಂದಿಗೆ ಸಾಗಿ ಸಂಚಾರದಲ್ಲೇ ಅಳತೆಯಲ್ಲಿ ಬೆಳೆದು ಸಾಮಾನ್ಯವಾಗಿ ಎಲ್ಲೆಯಲ್ಲಿರುವ ಅಧಿಕ ಒತ್ತಡಗಳನ್ನು ಎದುರಿಸಬೇಕಾಗಿ ಬಂದಾಗ ನಾಶವಾಗುತ್ತವೆ. ವಸ್ತುವಿನ ನಾಶ ಮತ್ತು ಇದರಿಂದಾಗುವ ಸಂರಚನೆಗಳ (ಸ್ಟ್ರಕ್ಚರ್ಸ್) ದುರ್ಬಲತೆಗಳು ಕುಳಿಬೀಳುವುದರ ಪರಿಣಾಮಗಳು. ದ್ರವಯಂತ್ರಗಳ ದಕ್ಷತೆ ತಗ್ಗಿ ಕೊನೆಗೆ ಯಂತ್ರಗಳು ಕುಸಿಯಬಹುದು. ಬಾಗಿಲು ಮತ್ತು ಕವಾಟಗಳಾದರೆ ಅವು ಹಾಳಾಗಬಹುದು ಮತ್ತು ಉತ್ಪತ್ತಿಯಾಗುವ ಕಂಪನಗಳಿಂದ ಸಂರಚನೆಗೇ ಅಪಾಯ ಒದಗಬಹುದು. ಸಾಮರ್ಥ್ಯ ಅಥವಾ ಪಂಪುಮಾಡುವ ಸಂಯಂತ್ರಗಳಲ್ಲಿ (ಪ್ಲಾಂಟ್ಸ್) ಕಾರ್ಯನಿರತ ಕಾರ್ಮಿಕರ ದೃಷ್ಟಿಯಿಂದ ಕುಳಿಬೀಳುವಿಕೆಯಿಂದ ಉತ್ಪತ್ತಿಯಾಗುವ ಸದ್ದು ಅನಪೇಕ್ಷಣೀಯ; ಟಾರ್ಪೆಡೊ ಹಾಗೂ ಜಲಾಂತರ್ಗಾಮಿಗಳಲ್ಲಂತೂ ಇದು ತೀವ್ರ ಆಕ್ಷೇಪಣಾರ್ಹ. ಈ ಪರಿಣಾಮಗಳನ್ನು ಪೂರ್ತಿ ನಿವಾರಿಸಲಾಗದಿದ್ದರೂ ತಗ್ಗಿಸಲಾದರೂ ಪ್ರಯತ್ನಿಸಬೇಕು.

ಅಧಿಕಶೀರ್ಷ ಟರ್ಬೈನು (ಹೈ ಹೆಡ್ ಟರ್ಬೈನು), ಪಂಪು, ಹಡಗು ನೋದಕ (ಪ್ರೊಪೆಲ್ಲರ್) ಮತ್ತು ಪ್ರಪಾತ ಸೂಸುಮಾರ್ಗ, ಅಧಿಕಶೀರ್ಷಬಾಗಿಲು ಮುಂತಾದ ಅಧಿಕಶೀರ್ಷಸಂರಚನೆ ಇತ್ಯಾದಿಗಳ ಪ್ರಗತಿಯಿಂದ ಈ ಮೂವತ್ತು, ನಲವತ್ತು ವರ್ಷಗಳಲ್ಲಿ ಪ್ರಪಂಚದಾದ್ಯಂತ ವಿಜ್ಞಾನಿ ಮತ್ತು ಶಿಲ್ಪಿಗಳನ್ನು ನೀರಿನ ಟರ್ಬೈನು, ಪಂಪು ಮತ್ತು ದ್ರವ ಸಂರಚನೆಗಳಲ್ಲಿ ಕುಳಿಬೀಳುವ ವಿಷಯ ಆಕರ್ಷಿಸಿದೆ. ರಕ್ಷಣಾ ಕ್ಷೇತ್ರದಲ್ಲಿ ಕುಳಿಬೀಳುವಿಕೆ ಬಹು ತೀವ್ರ ಸಮಸ್ಯೆಯನ್ನೊಡ್ಡಿದೆ. ಟಾರ್ಪೆಡೊ ನೀರಿಗೆ ಡಿಕ್ಕಿ ಹೊಡೆದಾಗ ಮತ್ತು ಜಲಾಂತರ್ಗಾಮಿ ದಿಢೀರನೆ ಮುಳುಗಿದಾಗ ಆಗುವ ಕುಳಿಬೀಳುವಿಕೆಯ ಸದ್ದು ಇವುಗಳ ಪಥಶೋಧನೆಯಲ್ಲಿ ಶತ್ರುಗಳಿಗೆ ಸಹಾಯಮಾಡುತ್ತವೆ. ಮುಖ್ಯವಾಗಿ ಎರಡನೆಯ ಮಹಾಯುದ್ಧ ಮತ್ತು ಅನಂತರದಲ್ಲಿ ಪ್ರಪಂಚದಾದ್ಯಂತ ಕುಳಿಬೀಳುವುದರ ಬಗ್ಗೆ ಗಮನ ಹರಿಸಲಾಗುತ್ತಿದೆ.

ಆಯ್ಲರ್ ಎಂಬ ವಿಜ್ಞಾನಿ ನೀರಿನ ಟರ್ಬೈನುಗಳ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಪ್ರಪ್ರಥಮವಾಗಿ ಕುಳಿಬೀಳುವ ವಿಷಯವನ್ನು ಅರಿತ (1754). ರೆನಾಲ್ಡ್ಸ್ ಎಂಬಾತ ಪ್ರಪ್ರಥಮವಾಗಿ ಈ ಬಗ್ಗೆ ಪ್ರಯೋಗಗಳನ್ನು ಪ್ರಾರಂಭಿಸಿದ (1894). ಅಟ್ಲಾಂಟಿಕವನ್ನು ಒಮ್ಮೆ ದಾಟುವಲ್ಲಿಯೇ ಆ ಹಡಗಿನ ನೋದಕಗಳು ಭಂಗವಾದಾಗ ಇಂಗ್ಲೆಂಡಿನ ನೌಕಾಶಿಲ್ಪಿಗಳು ಅದರ ಕಾರಣಗಳನ್ನು ಕುರಿತು ಯೋಚಿಸತೊಡಗಿದರು. ಈ ಬಗ್ಗೆ ನಡೆಸಿದ ವಿವರವಾದ ವಿಚಾರಣೆ ಮತ್ತು ಅಧ್ಯಯನದಿಂದ ಇದಕ್ಕೆ ಕುಳಿಬೀಳುವುದರ ಪರಿಣಾಮವೇ ಕಾರಣವೆಂದು ತಿಳಿಯಿತು. ಹೂವರ್ ಅಣೆಕಟ್ಟಿನ ಸೂಸುಮಾರ್ಗ ಸುರಂಗ ಮತ್ತು ಗ್ರಾಂಡ್‌ಕೂಲಿ ಅಣೆಕಟ್ಟಿನ ಸೂಸುಮಾರ್ಗದ ಮುಖಗಳಿಗಾದ ತೀವ್ರಹಾನಿ ಕುಳಿಬೀಳುವಿಕೆಯಿಂದಾಗುವ ತೀವ್ರ ಪರಿಣಾಮಗಳ ಬಗ್ಗೆ ಮತ್ತಷ್ಟು ಸ್ಪಷ್ಟನೆ ನೀಡಿತು. ಜೋಗ್ ಕಾರ್ಯಯೋಜನೆಯ ಹೀರೇಭಾಸ್ಕರ ಲಾಳಿಕೆಗಳ (ಸೈಫನ್ಸ್) ಅತೃಪ್ತಿಕರ ಕಾರ್ಯನಿರ್ವಹಣೆ, ವಿಫಲತೆ ಮತ್ತು

ಕಂಪನಗಳಿಗೆ ಕುಳಿಬೀಳುವಿಕೆಯ ಪರಿಣಾಮವೇ ಕಾರಣವೆಂದು ಹೇಳಲಾಗಿದೆ. ಪ್ರಥಮ ವಾಕ್ಯದಲ್ಲೇ ಹೇಳಿದಂತೆ ದ್ರವಸಂರಚನೆಗಳ ಪ್ರಗತಿಯ ಪ್ರವೃತ್ತಿ ಅಧಿಕ ಎತ್ತರ ಮತ್ತು ಅಧಿಕ ಪರಿಭ್ರಮಣ ವೇಗ ಯಂತ್ರಗಳತ್ತ ಸಾಗಿದೆ. ಇದರಿಂದ ಇಂಥ ಕಡೆ ಕುಳಿಬೀಳುವುದಿದ್ದು ನಿವಾರಣೋಪಾಯಗಳನ್ನು ಕೈಗೊಳ್ಳಬೇಕು. ಅಮೆರಿಕ ಸಂಯುಕ್ತ ಸಂಸ್ಥಾನಗಳು ಇಂಗ್ಲೆಂಡು, ರಷ್ಯ, ಜರ್ಮನಿ, ಫ್ರಾನ್ಸ್, ಜಪಾನ್ ಮತ್ತು ಇತ್ತೀಚೆಗೆ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಸಿವಿಲ್ ಎಂಜಿನಿಯರಿಂಗ್ ಮತ್ತು ದ್ರವ ಎಂಜಿನಿಯರಿಂಗ್ ಪ್ರಯೋಗಾಲಯಗಳಲ್ಲಿ ಈ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ.

ವಿವಿಧ ಸಂಶೋಧಕರು ಕುಳಿಬೀಳುವುದರ ಅಪಾಯವನ್ನು ಕುರಿತು ಅನೇಕ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ವಿದ್ಯುತ್ ರಾಸಾಯನಿಕ ಕ್ರಿಯೆ, ಯಾಂತ್ರಿಕ ಶ್ರಾಂತಿ, ಉಷ್ಣಚಲನಕ್ರಿಯೆ ಮತ್ತು ದಿಢೀರ್ ರಾಸಾಯನಿಕ ಕ್ರಿಯೆಗಳು ಇದಕ್ಕೆ ಕಾರಣವೆಂದು



ಸ್ಕ್ರೂ ನೋದಕದ ಮೇಲೆ ಹಚ್ಚಿಡ ಕುಳಿಬೀಳುವುದು

ಅನೇಕರು ಭಾವಿಸಿದ್ದಾರೆ. ಸಿವಿಲ್ ಮತ್ತು ದ್ರವ ಎಂಜಿನಿಯರಿಂಗ್ ಪ್ರಯೋಗಾಲಯಗಳಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿದ ಮೇಲೆ ಇತ್ತೀಚೆಗೆ ಕುಳಿಬೀಳುವುದರ ಅಪಾಯವನ್ನು ವಿವರಿಸಲು ವಿಕೃತಿಶಕ್ತಿಯ ಪರಿಕಲ್ಪನೆಯನ್ನು (ಸ್ಟ್ರೇನ್ ಎನರ್ಜಿ ಕಾನ್ಸೆಪ್ಟ್) ಮಂಡಿಸಲಾಗಿದೆ.

ಅನೇಕ ವಿಧವಾದ ಕುಳಿಗಳಿದ್ದು ಅವು ವಿವಿಧ ಪರಿಸ್ಥಿತಿಗಳಲ್ಲಿ ರೂಪುಗೊಳ್ಳುತ್ತವೆ. (i) ಅಸ್ಥಿರ ಕುಳಿಗಳು, (ii) ಸ್ವತಂತ್ರ ವೈಯಕ್ತಿಕ ಸಂಚಾರಿ ಕುಳಿಗಳು, (iii) ನಿಶ್ಚಲಸ್ಥಿತಿ ಕುಳಿಗಳು, (iv) ಏಕನಳಿಗೆಯ ಕುಳಿಗಳು, (v) ನಿಯತಕಾಲಿಕ ಕುಳಿಗಳು, (vi) ಸಂಚಾರಿ ಕುಳಿಗಳು. ಅನೇಕ ರೀತಿಯ ಕುಳಿ ಬೀಳುವಿಕೆಗಳಿದ್ದು ಅವುಗಳಲ್ಲಿ ಪ್ರತಿಯೊಂದನ್ನೂ ವಿವಿಧ ರೀತಿಯಲ್ಲಿ ಸಜ್ಜುಗೊಳಿಸಿ ಅಭ್ಯಾಸಮಾಡಬಹುದು. (i) ಹಚ್ಚಿಡ ಕುಳಿಬೀಳುವುದು



24" ವ್ಯಾಸದ ಜಲಸುರಂಗಗಳಲ್ಲಿರುವ ಅಧಿಕಕುಳಿ ಬೀಳಿಸುವ ನೋದಕ

(ಶೀಟ್ ಕ್ಯಾವಿಟೇಶನ್), (ii) ಪ್ರಣೋದಿತ (ವಾರ್ಟೆಕ್ಸ್) ಕುಳಿಬೀಳುವುದು, (iii) ಪಥ ಪಾತ (ವೇಕ್) ಕುಳಿಬೀಳುವುದು, (iv) ಶಾಬ್ದಿಕ (ಸಾನಿಕ್) ಕುಳಿಬೀಳುವುದು, (v) ನಾಭೀ (ಹಬ್) ಕುಳಿಬೀಳುವುದು, (vi) ಅಲಗು ಶೇಷಾವರಣ (ಬ್ಲೇಡ್ ಕ್ಲಿಯರೆನ್ಸ್) ಕುಳಿಬೀಳುವುದು, (vii) ಅಸಂಪೂರ್ತಿ (ರಫ್‌ನೆಸ್) ಕುಳಿಬೀಳುವುದು. ವಿವಿಧ ರೀತಿಯಲ್ಲಿ ಸಜ್ಜುಗೊಳಿಸಿ ಕುಳಿಬೀಳುವುದರ ಅಧ್ಯಯನ ನಡೆಸಬಹುದು. ಮುಂದಿನವು ಇವುಗಳಲ್ಲಿ ಹೆಚ್ಚು ಜನಪ್ರಿಯವಾದವು: (i) ಪ್ರಣೋದಿತ ರೀತಿಯ ಸಜ್ಜು, (ii) ಪರಿಭ್ರಮಣ ರೀತಿಯ ಸಜ್ಜು, (iii) ಬೇರಿಯಂ ಟಿಟನೇಟ್ ಟ್ರಾನ್ಸ್‌ಡ್ಯೂಸರ್ ಸಜ್ಜು.

ಜಲಸುರಂಗಗಳು ಕುಳಿಬೀಳುವಿಕೆಯ ವಿವಿಧ ಮುಖಗಳ ಅಭ್ಯಾಸದಲ್ಲಿ ಬಹು ಸತ್ವಶಾಲಿ ಉಪಕರಣಗಳಾಗಿದ್ದು ಅವನ್ನು ಹೆಚ್ಚಾಗಿ ಉಪಯೋಗಿಸುವರು. ಪ್ರಯೋಗಮಂದಿರಗಳಲ್ಲಿ (ಉದಾಹರಣೆಗೆ ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಆಫ್ ಯು.ಎಸ್.ಎ., ಜಪಾನಿನ ಹಿಟಾಚಿವರ್ಕ್ಸ್ ಇತ್ಯಾದಿ) ಬಹುದೊಡ್ಡ ಸುರಂಗಗಳಿವೆ. ಒಂದು 40 ಸೆಂ.ಮೀ. ಪ್ರಯೋಗಖಂಡದ ಜಲ ಸುರಂಗವನ್ನು ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಕಟ್ಟಲಾಗಿದೆ.

ಕುಳಿಬೀಳುವುದರ ಅಪಾಯವನ್ನು ಕುರಿತ ಅಧ್ಯಯನದ ಜೊತೆಗೆ ಅದನ್ನು ತಪ್ಪಿಸುವ ವಿಧಾನಗಳನ್ನು ಕುರಿತೂ ಅಧ್ಯಯನ ನಡೆಯುತ್ತಿದೆ. ದ್ರವ ಟರ್ಬೈನುಗಳು ಮತ್ತು ಪಂಪುಗಳಲ್ಲಿ ಕುಳಿಬೀಳುವುದನ್ನು ತಗ್ಗಿಸಲು ಯಂತ್ರದ ಕಡಿಮೆ ಸಜ್ಜು, ನುಣುಪು ಜಲಮಾರ್ಗಗಳು, ಗುಳ್ಳೆಗಳು ಒಡೆಯುವುದರಿಂದಾಗುವ ಆಘಾತಗಳನ್ನು ಹೀರಬಲ್ಲ ಪ್ರತ್ಯಾಸ್ಕಂದಿತ ಮತ್ತು ಲೇಪನಗಳು–ಇವನ್ನು ಅಭಿವೃದ್ಧಿಪಡಿಸಲಾಗಿದೆ. ಹಡಗುಗಳ ಸ್ಥೂಲಭಾಗಗಳ, ಜಲಾಂತರ್ಗಾಮಿ ಮತ್ತು ಟಾರ್ಪೆಡೊಗಳ ಆಕಾರಗಳ ಸರಿಯಾದ ಸಂಯೋಜನೆಯಿಂದ ಕುಳಿಬೀಳುವುದನ್ನು ಸಾಕಷ್ಟು ತಗ್ಗಿಸಬಹುದು. ಇತ್ತೀಚೆಗೆ ಕ್ಯಾಥೋಡ್ ರಕ್ಷಣೆಯನ್ನು ಅಭಿವೃದ್ಧಿಪಡಿಸಲಾಗಿದ್ದು ಇದು ದ್ರವ ಟರ್ಬೈನು, ಪಂಪು, ಹಡಗಿನ ನೋದಕ ಇತ್ಯಾದಿಗಳಲ್ಲಿ ಕುಳಿಬೀಳುವುದರ ಹಾನಿಯನ್ನು ಬಹಳ ಪರಿಣಾಮಕಾರಿಯಾಗಿ ತಗ್ಗಿಸುತ್ತದೆ. ಕುಳಿಬೀಳುವುದನ್ನು ನಿರೀಕ್ಷಿಸಬಹುದಾದ ದ್ರವಸಂರಚನೆಗಳಲ್ಲಿ ಸಂರಚನೆಗೆ ಸರಿಯಾದ ಅಂತರ್ಗಮ ಮತ್ತು ನಿರ್ಗಮ ಸ್ಥಿತ್ಯಂತರಗಳು, ಸಂಪೂರ್ತಿ ಮತ್ತು ಲೇಪನಗಳ ಉಪಯೋಗ ಇವುಗಳಿಂದ ಕುಳಿ ಬೀಳುವುದನ್ನು ತಪ್ಪಿಸಲಾಗದಿದ್ದರೂ ನಿಧಾನಗೊಳಿಸಬಹುದು. ಕುಳಿಬೀಳುವಿಕೆಯ ಕ್ಷೇತ್ರ ಇನ್ನೂ ಹೊಸತು. (ಕೆ.ಎಸ್.ಇ.)

**ಕುಳ್ದಿಮೀನು :** ಬಗಾರಿಯಸ್ ಯಾರೆಲ್ಲಿಯೈ ಎಂಬ ಶಾಸ್ತ್ರೀಯ ಹೆಸರಿನ ಮೀನು. ಭಾರತ, ಮಯನ್ಮಾರ್, ಮಲಯದ್ವೀಪ ಸಮುದಾಯ, ಸಯಾಂ ಮತ್ತು ಇಂಡೋಚೀನಗಳ ಸಿಹಿನೀರಿನಲ್ಲಿ ವಾಸಿಸುತ್ತವೆ. ದೊಡ್ಡ ನದಿಗಳಲ್ಲಿ ನೆಲೆಸುವ ಈ ಮೀನು ಸಾಮಾನ್ಯವಾಗಿ ಅಳಿವೆಗಳಿಗೆ ಪ್ರವೇಶಿಸುವುದುಂಟು. ಇದು ಸುಮಾರು 5"–6" ಉದ್ದದ ವರೆಗೆ ಬೆಳೆಯುತ್ತದೆ. ಇದರ ಹೊಟ್ಟೆಬಾಕತನದಿಂದಲೂ ಅನೇಕ ವೇಳೆ ಇದನ್ನು ಸಿಹಿನೀರಿನ ಶಾರ್ಕ್ ಎಂದು ಕರೆಯುವುದುಂಟು. ಇದರ ಕಣ್ಣುಗಳು ಚಿಕ್ಕವಾಗಿದ್ದು ತಲೆಯ ಮಧ್ಯಭಾಗದಲ್ಲಿವೆ. ಮೇಲಿನ ದವಡೆ ಉದ್ದವಾಗಿದೆ. ತೆರೆದಿರುವ ಬಾಯಿಯ ಬಿರುಕು ತಲೆಯ ಉದ್ದದ ಅರ್ಧದಷ್ಟಿದೆ. ಬಾಯಸುತ್ತ ಎಂಟು ದಾಡಿಗಳಂತಿರುವ ಸ್ಪರ್ಶಾಂಗಗಳಿವೆ. ಮೇಲುದವಡೆಯ ಸ್ಪರ್ಶಾಂಗಗಳು ತಲೆಗಿಂತ ಉದ್ದವಾಗಿವೆ; ನಾಸಿಕದ ಬಳಿಯಿರುವ ಸ್ಪರ್ಶಾಂಗಗಳು ಚಿಕ್ಕವು. ಹಲ್ಲುಗಳು ಚೂಪಾಗಿದ್ದು ಅಸಮ ಆಕಾರವುಳ್ಳವು. ಈ ಮೀನಿಗೆ ಅಂಗುಳಿನ ಹಲ್ಲುಗಳಿಲ್ಲ. ಬೆನ್ನಿನ ಈಜುರೆಕ್ಕೆಯ ಮುಳ್ಳು ನುಣುಪಾಗಿದೆ. ಎದೆಯ ಈಜುರೆಕ್ಕೆಯ ಮುಳ್ಳು ಬೆನ್ನಿನ ಈಜುರೆಕ್ಕೆಯ ಮುಳ್ಳಿನಷ್ಟೇ ಉದ್ದ ಇದೆ. ಆದರೆ ಅದಕ್ಕಿಂತ ಹೆಚ್ಚು ಬಲಯುತವಾಗಿದೆ. ಅದರ ಒಳಭಾಗದ ಅಂಚು ಗರಗಸದಂತಿದೆ. ಬಾಲದ ಈಜುರೆಕ್ಕೆ ವಿಪುಲವಾಗಿ ಕವಲೊಡೆದಿದೆ. ಕುಳ್ದಿಮೀನಿನ ಚರ್ಮ ಒರಟಾಗಿದ್ದು, ಬೂದಿ ಹಾಗೂ ಹಳದಿ ಬಣ್ಣದಿಂದ ಕೂಡಿದೆ; ಅಲ್ಲಲ್ಲಿ ಕಂದು ಮತ್ತು ಕರಿಯ ಬಣ್ಣದ ದೊಡ್ಡ ಮಚ್ಚೆಗಳಿವೆ. ಎಲ್ಲ ಈಜುರೆಕ್ಕೆಗಳ ತಳಭಾಗ ಕಪ್ಪು ಬಣ್ಣದ್ದಾಗಿದ್ದು ಕೆಲವು ವೇಳೆ ಅದರ ಮೇಲೆ ಕರಿಯ ಬಣ್ಣದ ಪಟ್ಟೆಯಿರುತ್ತದೆ. (ಬಿ.ಎಚ್.ಎಂ.)

**ಕೂಂಟ್, ಆಗಸ್ಟ್ ಅಡಾಲ್ಫ್ ಎಡೂಅರ್ಡ್ ಎಬರ್‌ಹಾಡ್:** 1839–94. ಜರ್ಮನಿಯ ಭೌತವಿಜ್ಞಾನಿ. ಜನನ 1839 ನವೆಂಬರ್18 ರಂದು. ಮೆಕ್ಲೆನ್ ಬರ್ಗಿನ ಷ್ವೇರಿನ್ ಎಂಬಲ್ಲಿ ವಿದ್ಯಾಭ್ಯಾಸ ಮಾಡಿ ಅನಂತರ ಬರ್ಲಿನ್ನಿಗೆ ಹೋದ. 1867ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪ್ರೈವೇಟ್ ಡೋಜೆಂಟ್ ಆಗಿದ್ದು ಮಾರನೆಯ ವರ್ಷ ಜ್ಯೂರಿಚಿನ ಪಾಲಿಟೆಕ್ನಿಕಿನಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕನಾದ. 1872ರಲ್ಲಿ ಸ್ಟ್ರಾಸ್‌ಬರ್ಗಿನ ಭೌತವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಿದ. ಬರ್ಲಿನ್ ಭೌತವಿಜ್ಞಾನ ಸಂಸ್ಥೆಯಲ್ಲಿ ಹೆಲ್ಮೋಲ್ಟ್ಜನ ಅನಂತರ ನಿರ್ದೇಶಕನಾಗಿ ಈತ ಆಯ್ಕೆಯಾದ (1888). 21 ಮೇ 1894 ರಂದು ನಿಧನನಾದ.

ಕೂಂಟನ ಪ್ರಧಾನ ಸಂಶೋಧನೆಗಳು ಶಬ್ದ ಮತ್ತು ಬೆಳಕುಗಳನ್ನು ಕುರಿತು. ಕೊಳವೆಯೊಳಗೆ ಸ್ಥಾಯೀ ತರಂಗಗಳನ್ನು ಪರಿಶೀಲಿಸುವ ಒಂದು ಹೊಸ ವಿಧಾನವನ್ನೀತ ಶೋಧಿಸಿದ. ಅತ್ಯಂತ ಹಗುರವಾದ ಲೈಕೋಪೋಡಿಯಂ ಪುಡಿಯನ್ನು ಒಂದೇ ಸಮನಾಗಿ ಕೊಳವೆಯೊಳಗೆ ಉದ್ದಕ್ಕೂ ಚೆಲ್ಲಿ ನಿಸ್ಪಂದಗಳನ್ನು (ನೋಡ್ಸ್) ಹೇಗೆ ಪ್ರದರ್ಶಿಸಬಹುದೆಂಬುದನ್ನು ತೋರಿಸಿಕೊಟ್ಟ. ಈ ವಿಧಾನದಿಂದ ಶಬ್ದದ ವೇಗವನ್ನು ಘನವಸ್ತುಗಳಲ್ಲೂ ಮತ್ತು ಅನಿಲಗಳಲ್ಲೂ ಕಂಡುಹಿಡಿಯಬಹುದು. ದ್ರವ ಮತ್ತು ಹಬೆಗಳಲ್ಲಿ ಬೆಳಕಿನ ಅಸಂಗತ ವರ್ಣವಿಭಜನೆಯನ್ನು (ಅನಾಮಲಸ್ ಡಿಸ್ಪರ್ಷನ್) ಕುರಿತು ನಡೆಸಿದ ಸಂಶೋಧನೆಗಳಿಗೆ ಈತನ ಹೆಸರು ಪ್ರಖ್ಯಾತವಾಗಿದೆ. ಕಾಂತದ್ಯುತಿಶಾಸ್ತ್ರದಲ್ಲೂ (ಮ್ಯಾಗ್ನೆಟೊ ಆಪ್ಟಿಕ್ಸ್) ಈತ ಸಂಶೋಧನೆಗಳನ್ನು ನಡೆಸಿದ್ದ. ಹಲವು

ಅನಿಲ ಮತ್ತು ಹಬೆಗಳಲ್ಲಿ ಕಾಂತಕ್ಷೇತ್ರದ ಫಲವಾಗಿ ಬೆಳಕಿನ ಪಾರ್ಶ್ವೀಕೃತ ಸಮತಲ ತಿರುಗುವುದೆಂಬುದನ್ನು ಪ್ರಯೋಗದಿಂದ ತೋರಿಸಿದ. (ಆರ್.ಎ.ಎ.)

**ಕೂಕೂ ಹಕ್ಕಿ :** ಕಾರಸ್ಯೈಯಿಫಾರ್ಮೀಸ್ ಗಣದ ಊಪೂಪಿಡೀ ಕುಟುಂಬಕ್ಕೆ ಸೇರಿದ ಕೀಟಭಕ್ಷಕ ಹಕ್ಕಿ (ಹೂಪೂ). ವೈಜ್ಞಾನಿಕ ನಾಮ ಊಪೂಪ ಎಪೋಪ್ಸ್. ಕೊಕ್ಕಿನ ತುದಿಯಿಂದ ಹಿಡಿದು ಬಾಲದ ಗರಿಯ ತುದಿಯವರೆಗೂ ಇದರ ಉದ್ದ ಸುಮಾರು 31 ಸೆಂಮೀ. ತಲೆ ಮತ್ತು ಕುತ್ತಿಗೆಯ ಬಣ್ಣ ಹಳದೀ ಮಿಶ್ರಿತ ಮಾಸಲು ಕೆಂಪು. ತಲೆಯ ಮೇಲಿರುವ ಸುಂದರವಾದ ಅರ್ಧ ಚಂದ್ರಾಕಾರದ, ನಿಮಿರಿ ನಿಲ್ಲುವ ಕಪ್ಪು ತುದಿಯ ಗರಿಶಿಖೆ, ತೆಳುವಾದ ಬಾಗಿದ ಕೊಕ್ಕು, ಬಹು ಚಿಕ್ಕ ನಾಲಗೆ, ಬಾಲದಲ್ಲಿನ ಉದ್ದನೆಯ ಹತ್ತು ಗರಿಗಳು, ಮೂರು ಮತ್ತು ನಾ

ಇವು ಈ ಹಕ್ಕಿಯ ವಿಶಿಷ್ಟ ಗ ತಲೆ ಪಿಕಾಸಿಯಂತೆ ಕಾಣುತ್ತದೆ. ಬಾಲದ ಗರಿಗಳ ಮಧ್ಯಭಾಗದಲ್ಲಿ ಒಂದು ಬಿಳಿಯ ಅಡ್ಡ ಪಟ್ಟೆಯಿದೆ. ದೇಹದ ಬಣ್ಣ ನಸುಗೆಂಪು. ಬೆನ್ನಿನ ಹಾಗೂ ರೆಕ್ಕೆಗಳ ಮೇಲೆ ಬಿಳಿಯ ಮತ್ತು ಕರಿಯ ಪಟ್ಟೆಗಳಿವೆ. ಕೆಲವು ಉಪಪ್ರಭೇದಗಳಲ್ಲಿ ಈ ವರ್ಣವಿನ್ಯಾಸ ಜೀಬ್ರಾದ ಮೈಮೇಲಿರುವಂತೆ ಕಾಣುತ್ತದೆ. ಹೆಣ್ಣು ಹಕ್ಕಿಯ ದೇಹದಿಂದ ಅಸಹ್ಯಕರವಾದ ಹಳಸಲು ವಾಸನೆ ಸೂಸುತ್ತದೆ. ಶತ್ರುಗಳನ್ನು ದೂರವಿಡಲು ಈ ವಾಸನೆ ಸಹಕಾರಿ ಎಂದು ಹೇಳಲಾಗಿದೆ. ಮಧ್ಯ ಮತ್ತು ದಕ್ಷಿಣ ಯೂರೋಪು, ಆಫ್ರಿಕ, ಏಷ್ಯಾ(ಸೈಬೀರಿಯಾ ಹೊರತಾಗಿ) ಖಂಡಗಳಲ್ಲೆಲ್ಲಾ ಈ ಹಕ್ಕಿ ವ್ಯಾಪಿಸಿದೆ. ಮರಗಿಡಗಳಿಂದ ಕೂಡಿದ ಬಯಲು ಮತ್ತು ಸಾಗುವಳಿ ಪ್ರದೇಶಗಳಲ್ಲಿ ಇದನ್ನು ಸಾಮಾನ್ಯವಾಗಿ ಕಾಣಬಹುದು. ಸ್ವಲ್ಪ ದೂರ ವಲಸೆ ಹೋಗುವ ಪರಿಪಾಠವಿದೆ. ಇದು ಸಾಮಾನ್ಯವಾಗಿ ಒಂಟೊಂಟಿಯಾಗಿ ವಾಸಿಸಿದರೂ ಕೆಲವು ವೇಳೆ ಸಣ್ಣ ಸಣ್ಣ ಗುಂಪು ಕೂಡಿಕೊಂಡು ಹಾರಾಡುವುದು ಉಂಟು. ಇದರ ಹಾರಾಟ ಮಂದಗತಿಯದು: ತರಂಗರೂಪದ್ದು. ಆದರೆ ಗಾಬರಿಗೊಂಡಾಗ ವೇಗವಾಗಿ ಹಾರಬಲ್ಲದು. ಕೀಟ, ಜೇಡ ಮತ್ತು ಕ್ರಿಮಿಗಳೇ ಇದರ ಮುಖ್ಯ ಆಹಾರ. ಸಗಣಿ, ಗೊಬ್ಬರಗುಂಡಿ, ನೆಲ ಮುಂತಾದೆಡೆ ತನ್ನ ಕೊಕ್ಕಿನಿಂದ ಕುಕ್ಕಿ ಕೀಟಗಳನ್ನು ಆರಿಸುತ್ತ ಸಾಗುತ್ತದೆ. ಕೂ–ಕೂ– ಕೂ–ಕೂ ಎಂದು ವಿಚಿತ್ರವಾಗಿ ಕೂಗುತ್ತದೆ. ಇದರಿಂದಲೇ ಇದಕ್ಕೆ ಕೂಕೂ ಹಕ್ಕಿ ಎಂದೂ ಕರೆಯುತ್ತಾರೆ. ಹೆಣ್ಣು ಗಂಡುಗಳ ಬಾಹ್ಯರೂಪದಲ್ಲಿ ವ್ಯತ್ಯಾಸ ಬಹಳ ಕಡಿಮೆ. ಇದು ಸಂತಾನೋತ್ಪತ್ತಿಕಾಲದಲ್ಲಿ ಮರಗಳ ಪೊಟರೆ, ಗೋಡೆಯ ಅಗಲವಾದ ಬಿರುಕು, ಗೆದ್ದಲುಗಳ ಗೂಡು, ಏರಿ, ಡೊಗರುಗಳಲ್ಲಿ ಗೂಡುಕಟ್ಟುತ್ತದೆ. ಗೂಡನ್ನು ಸ್ವಲ್ಪ ಮೆತ್ತಗೆ ಮಾಡಲು ಅಲ್ಪ ಸ್ವಲ್ಪ ಹುಲ್ಲು, ಗರಿ, ಎಲೆ, ಉಣ್ಣೆಗಳನ್ನು ಸೇರಿಸಿರುವುದುಂಟು. ಆದರೆ ತನ್ನ ಉಚ್ಚಿಷ್ಟವನ್ನಾಗಲಿ ಹಿಕ್ಕೆಯನ್ನಾಗಲಿ ಗೂಡಿನಿಂದ ತೆಗೆದು ಹಾಕುವುದಿಲ್ಲವಾಗಿ ಇದರ ಗೂಡು ಅತ್ಯಂತ ಕೊಳಕಾಗಿಯೂ ದುರ್ವಾಸನೆಯುಳ್ಳದ್ದೂ ಆಗಿರುತ್ತದೆ. ಗೂಡಿನಲ್ಲಿ 4–6 ಮೊಟ್ಟೆಗಳಿರುತ್ತವೆ. ಹೆಣ್ಣು ಹಕ್ಕಿ ಮಾತ್ರ 16–18 ದಿವಸಗಳವರೆಗೆ ಹಗಲಿರುಳು ಮೊಟ್ಟೆಗಳ ಮೇಲೆ ಕೂತು ಕಾವುಕೊಡುತ್ತದೆ. ಈ ಕಾಲದಲ್ಲಿ ಹಾಗೂ ಮೊಟ್ಟೆಯಿಡುವ ಮುನ್ನ ಪ್ರೇಮಾಚರಣೆಯ ಕಾಲದಲ್ಲಿ ಗಂಡು ತನ್ನ ಹೆಂಡತಿಗೆ ಆಹಾರವನ್ನು ಉಣಿಸುತ್ತದೆ. ಮರಿಗಳು ಕೊಂಚ ದೊಡ್ಡವಾದ ಅನಂತರ ಗಂಡು ಹೆಣ್ಣುಗಳೆರಡೂ ಆಹಾರವನ್ನು ಹುಡುಕಿ ತಂದು ಮರಿಗಳಿಗೆ ತಿನ್ನಿಸಿ ಪೋಷಣೆ ಮಾಡುತ್ತವೆ. (ಬಿ.ಎನ್.ಬಿ.)

**ಕೂಗರ್ :** ಅಮೆರಿಕ ಖಂಡಗಳಿಗೆ ಸೀಮಿತವಾಗಿರುವ ಒಂದು ಹೆಬ್ಬೆಕ್ಕು ಅಥವಾ ಸಿಂಹಬೆಕ್ಕು. ಕಾರ್ನಿವೋರ ಗಣದ ಫೆಲಿಡೀ ಕುಟುಂಬಕ್ಕೆ ಸೇರಿದೆ. ಇದಕ್ಕೆ ಪ್ಯೂಮ, ಮೌಂಟನ್ ಲಯನ್, ಪ್ಯಾಂಥರ್, ಕ್ಯಾಟಮೌಂಟ್, ಪಯಿಂಟರ್ (ಬಹುಶಃ ಪ್ಯಾಂಥರ್ ಎಂಬುದರ ಅಪಭ್ರಂಶ) ಎಂಬ ಹೆಸರುಗಳೂ ಇವೆ. ಫೆಲಿಸ್ ಕಾನ್‌ಕಲರ್ ಎಂಬ ವೈಜ್ಞಾನಿಕ ಹೆಸರಿನ ಈ ಜಾತಿಯಲ್ಲಿ ಸುಮಾರು 15 ಉಪಪ್ರಭೇದಗಳನ್ನು ಗುರುತಿಸಲಾಗಿದೆ. 19ನೆಯ ಶತಮಾನದ ಕೊನೆಯವರೆಗೂ ಕೆನಡದ ಬ್ರಿಟಿಷ್ ಕೊಲಂಬಿಯದಿಂದ ಹಿಡಿದು ದಕ್ಷಿಣ ಅಮೆರಿಕದ ಅರ್ಜೆಂಟೀನ, ಪಟಗೋನಿಯಗಳವರೆಗೂ ಕೂಗರ್ ಹರಡಿತ್ತು. ಆದರೆ ಬೇಟೆಯಿಂದಾಗಿ ಇದರ ವ್ಯಾಪ್ತಿ ಕುಗ್ಗಿದೆ. ಈಗ ಕೆನಡದ ಪಶ್ಚಿಮ ಪರ್ವತ ಪ್ರದೇಶಗಳಲ್ಲಿ ರಾಕಿ ಪರ್ವತಗಳಲ್ಲಿ ಮತ್ತು ದಕ್ಷಿಣ ಅಮೆರಿಕದ ಕಾಡುಗಳಲ್ಲಿ ಮಾತ್ರ ಕಂಡುಬರುತ್ತದೆ. ವಿವಿಧ ಬಗೆಯ ವಾಯುಗುಣಗಳಲ್ಲಿ ಜೀವಿಸಬಲ್ಲ ಪರಿಹೊಂದಾಣಿಕೆಯ ಸಾಮರ್ಥ್ಯವನ್ನು ಪಡೆದಿದೆ. ಸಮುದ್ರಮಟ್ಟದಿಂದ ಹಿಡಿದು 4500 ಮಿ. ಎತ್ತರದ ಪರ್ವತ ಪ್ರದೇಶಗಳಲ್ಲೂ ಬದುಕಬಲ್ಲದು.

ಅಮೆರಿಕದಲ್ಲಿ ಕಾಣಬರುವ ಬೆಕ್ಕಿನ ಜಾತಿಯ ಪ್ರಾಣಿಗಳಲ್ಲಿ ಗಾತ್ರದ ದೃಷ್ಟಿಯಿಂದ ಇದಕ್ಕೆ ಎರಡನೆಯ ಸ್ಥಾನ. ಮೊದಲನೆಯದು. ಜಾಗ್ವಾರ್ (**ನೋಡಿ**). ಬೆಳವಣಿಗೆಯ ಪೂರ್ಣಾವಸ್ಥೆಯನ್ನು ತಲುಪಿದ ಗಂಡು ಕೂಗರ್ 190–270 ಸೆಂಮೀ ಉದ್ದವೂ (ಬಾಲವೂ ಸೇರಿ) 60–75 ಸೆಂಮೀ ಎತ್ತರವೂ ಇರುತ್ತದೆ. 36–45 ಕೆಜಿ ತೂಗುತ್ತದೆ. ಕೆಲವು ಗಂಡುಗಳು 90 ಕೆಜಿ. ತೂಗಿರುವ ದಾಖಲೆಯೂ ಉಂಟು. ಹೆಣ್ಣು ಗಂಡಿಗಿಂತ ಚಿಕ್ಕದು. ಕೂಗರಿನ ಮೈಬಣ್ಣ ಕೆಂಪುಮಿಶ್ರಿತ ಕಂದು. ಕಾಲು, ಹೊಟ್ಟೆ, ಕತ್ತಿನ ತಳಭಾಗ ಮತ್ತು ಮೇಲ್ತುಟಿ ಮಾಸಲು ಬಿಳುಪು. ಕೂಗರ್ ಕೊಂಚಮಟ್ಟಿಗೆ ಸಿಂಹವನ್ನು ಹೋಲುವುದಾದರೂ ಸಿಂಹಕ್ಕಿರುವಂತೆ ಕೇಸರ ಇದರಲ್ಲಿಲ್ಲ. ಕಿವಿಗಳು ಅಗಲವಾಗಿ ದುಂಡು ಆಕಾರದವಾಗಿವೆ. ಬಾಲ ದಪ್ಪ ಹಾಗೂ ಉರುಳೆಯಂತಿದೆ. ಬಾಲದ ಮತ್ತು ಕಿವಿಯ ತುದಿಗಳು ಸ್ವಲ್ಪ ಕಪ್ಪುಬಣ್ಣದವು. ಬಾಲದ ತುದಿಯಲ್ಲಿ ಕೂದಲಿನ ಸಣ್ಣ ಗೊಂಡೆಯಿದೆ. ಕೂಗರ್ ಹಗಲಿನಲ್ಲಿ ಸಾಮಾನ್ಯವಾಗಿ ಬೆಟ್ಟಗಳ ಗುಹೆಗಳಲ್ಲಿ ನಿದ್ದೆ ಮಾಡುತ್ತಲೋ ಇಲ್ಲವೆ ಎತ್ತರವಾದ ಬಂಡೆಗಳ ಮೇಲೆ ಬಿಸಿಲಿಗೆ ಮೈಯೊಡ್ಡಿ ವಿಶ್ರಾಂತಿ ಪಡೆಯುತ್ತಲೋ ಕಾಲ ಕಳೆಯುತ್ತದೆ. ಸಂಜೆಯಾದ ಮೇಲೆ ಆಹಾರಾನ್ವೇಷಣೆಗೆ ಹೊರಡುತ್ತದೆ. ಜಿಂಕೆ, ಮೊಲ, ಕಾಡುಕುರಿ, ಗಿನಿಹಂದಿ ವಿವಿಧ ಬಗೆಯ ಹಕ್ಕಿಗಳು ಇದರ ಆಹಾರ. ದನ, ಕುರಿ, ಮುಂತಾದ ಸಾಕುಪ್ರಾಣಿಗಳನ್ನು ಬೇಟೆಯಾಡುವುದೂ ಉಂಟು. ಆಹಾರಕ್ಕಾಗಿ ತನ್ನ ವಾಸಸ್ಥಳದಿಂದ ಬಲುದೂರ ಸಂಚಾರ ಹೊರಡುವ ಇದು ಅಗಲವಾದ ನದಿಗಳನ್ನು ಸರಾಗವಾಗಿ ಈಜಿಕೊಂಡು ಸಾಗುತ್ತದೆ. ಹುಲಿ,



ಕೂಗರ್ : ಮರಿಗಳೊಂದಿಗೆ

ಸಿಂಹಗಳಂತೆಯೇ ಬೇಟೆಯಲ್ಲಿ ಬಹಳ ಕುಶಲಿ. ಎರೆ ಕಣ್ಣಿಗೆ ಬಿದ್ದರೆ ಅದಕ್ಕೆ ತನ್ನ ಸುಳಿವು ಸಿಕ್ಕದಂತೆ ನಿಶ್ಯಬ್ಧವಾಗಿ ಅದರ ಹತ್ತಿರ ಬರುತ್ತದೆ. ಸಾಕಷ್ಟು ಹತ್ತಿರ ಬಂದ ಮೇಲೆ ಎರೆಯ ಮೇಲೆ ಚಂಗನೆ ನೆಗೆದು ಅದರ ಎದೆ ಅಥವಾ ಕುತ್ತಿಗೆಗೆ ಬಾಯಿಹಾಕಿ ಹಿಡಿದು ನೆಲಕ್ಕುರುಳಿಸುತ್ತದೆ. ಸುಮಾರು 6ಮಿ. ದೂರಕ್ಕೆ ನೆಗೆಯಬಲ್ಲುದೆಂದು ಹೇಳಿಕೆಯಿದೆ. ತುಂಬ ಬಲಶಾಲಿಯಾದ ಇದು ತನಗಿಂತ ಐದುಪಟ್ಟು ಭಾರವಾದ ಚೀಟೆಯನ್ನು 90–100ಮೀ ದೂರದ ವರೆಗೂ ಎಳೆದೊಯ್ಯಬಲ್ಲುದು. ಸಂತೃಪ್ತಿಯಾಗಿ ತಿಂದ ಮೇಲೆ ಉಳಿಯುವ ಮಾಂಸವನ್ನು ಪೊದೆಯಲ್ಲಿ ಮುಚ್ಚಿಟ್ಟು ಮತ್ತೆ ಮಾರನೆಯ ದಿನ ಬಂದು ತಿನ್ನುವುದುಂಟು. ಮನುಷ್ಯನಿಗೆ ಉಪದ್ರವ ಕೊಡುವುದು ಬಲುವಿರಳ. ಅವನನ್ನು ಕಂಡರೆ ಹೆದರುತ್ತದೆ. ಆದರೂ ಕೆಲವೊಮ್ಮೆ ಮನುಷ್ಯನನ್ನು ಕೊಲ್ಲುವುದುಂಟು. ಬಹುಶಃ ರೇಗಿಸಿದರೆ ಘಾಸಿ ಮಾಡಿದರೆ ಮಾತ್ರ ದಾಳಿಮಾಡುತ್ತದೆ. ಕೂಗರ್‌ಗೆ ನಿರ್ದಿಷ್ಟವಾದ ಸಂತಾನೋತ್ಪತ್ತಿಯ ಕಾಲ ಇಲ್ಲ. ವರ್ಷದ ಯಾವ ತಿಂಗಳಿನಲ್ಲಾದರೂ ಮರಿ ಹಾಕಬಲ್ಲುದು. 2–3 ವರ್ಷಗಳಿಗೊಮ್ಮೆ ಮರಿ ಹಾಕುತ್ತದೆ. ಮರಿಗಳ ಸಂಖ್ಯೆ ಸೂಲಿಗೆ 1–6. ಗರ್ಭಧಾರಣೆಯ ಕಾಲ 90–96 ದಿವಸಗಳು. ಆಗತಾನೆ ಹುಟ್ಟಿದ ಮರಿ ಸುಮಾರು 30 ಸೆಂಮೀ ಉದ್ದವಿದ್ದು 500 ಗ್ರಾಂ ತೂಗುತ್ತದೆ. ಮರಿ ಕಣ್ಣು ತೆರೆದಿರುವುದಿಲ್ಲ. ಇದರ ಮೈಬಣ್ಣ ಹಳದಿ. ಅದರ ಮೇಲೆಲ್ಲ ಚಿಕ್ಕ ಕಪ್ಪು ಮಚ್ಚೆಗಳಿರುತ್ತವೆ. ಆರು ತಿಂಗಳ ಅನಂತರ ಮಚ್ಚೆಗಳು ಮಾಯವಾಗುತ್ತವೆ. ಮರಿಗಳು 1–2 ವರ್ಷ ವಯಸ್ಸಿನವರೆಗೂ ತಾಯಿಯೊಂದಿಗೇ ಇದ್ದು ಅನಂತರ ಸ್ವತಂತ್ರ ಜೀವನ ಆರಂಭಿಸುತ್ತವೆ. ಕೂಗರ್‌ನ ಆಯಸ್ಸು ಸುಮಾರು 20 ವರ್ಷಗಳು. (ಬಿ.ಎನ್.ಬಿ.)

**ಕೂಗುಸಿರು :** ಉಸಿರಾಡುವಾಗ ಶಬ್ದ ಬರುವಂಥ ಹದಗೆಟ್ಟ ಶ್ವಾಸಕ್ರಮ. ಮಕ್ಕಳಲ್ಲಿ ಸಾಮಾನ್ಯವಾಗಿ ಶೀತಸಂಬಂಧವಾಗಿ ಬರುವ ಗಂಟಲು ರೋಗದಲ್ಲಿ ಕೇಳಿಬರುವ ಶಬ್ದಸಹಿತವಾದ ಉಸಿರಾಟ, ಕೆಮ್ಮು ಉಬ್ಬಸ ರೋಗಿಗಳಲ್ಲಿ ಕೇಳಿ ಬರುವ ಗೊರೋ ಗೊರೋ ಎಂದು ಶಬ್ದ ಮಾಡಿಕೊಂಡು ಎಳೆದುಕೊಳ್ಳುವ ಉಸಿರು. ಇವೂ ಇನ್ನು ಬೇರೆ ಕೆಲವು ಕಾಯಿಲೆಗಳಲ್ಲಿ ಕೇಳಿಬರುವ ಕಷ್ಟವಾದ ಶ್ವಾಸಕ್ರಮದಿಂದ ಉಂಟಾಗುವ ಗೊರಗೊರ ಶಬ್ದ, ಉಸಿರೆಳೆದುಕೊಂಡಾಗ ಶಿಳ್ಳು ಹೊಡೆದಂತೆ ಶಬ್ದವಾಗುವುದು ಇವೆಲ್ಲವನ್ನೂ ಕೂಗುಸಿರು ಎನ್ನುವ ಅಸ್ವಸ್ಥ ಸ್ಥಿತಿಯ ವ್ಯಾಪ್ತಿಗೆ ಸೇರಿಸಬಹುದು. ಆರೋಗ್ಯಸ್ಥಿತಿಯಲ್ಲೂ ಶಬ್ದದಿಂದೊಡಗೂಡಿದ ಶೀನು, ಬಿಕ್ಕಳಿಕೆ, ಗೊರಕೆ ಮುಂತಾದ ಶ್ವಾಸಕ್ರಮಗಳನ್ನು ಸಹ ಕೂಗುಸಿರುಗಳೆಂದು ಪರಿಗಣಿಸಬಹುದು. ಈ ಬೇನೆಗಳಿಗೆಲ್ಲ ಬೇರೆ ಬೇರೆ ರೀತಿಯ ನಿರ್ದಿಷ್ಟ ಚಿಕಿತ್ಸೆಯನ್ನೇ ಮಾಡಬೇಕಾಗುತ್ತದೆ.

ಕೂಗುಸಿರಿನ ರೋಗಲಕ್ಷಣಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು: 1 ಸಾಮಾನ್ಯವಾಗಿ ಸುಮಾರು 6 ತಿಂಗಳಿನಿಂದ 2 ವರ್ಷ ವಯಸ್ಸಿನೊಳಗೆ ಇರುವ ಮಕ್ಕಳಲ್ಲಿ ತಲೆದೋರುವ ಕೂಗುಸಿರು. 2 ಮಕ್ಕಳಲ್ಲಿ ಕೇಳುವ ಊತಸಮೇತವಾದ ಗಂಟಲಿನ ಎಳೆತ. 3 ನಾನಾ ಖಾಯಿಲೆಗಳಲ್ಲಿ ತಲೆದೋರುವ ವಿವಿಧ ರೀತಿಯ ಶಬ್ದದಿಂದ ಒಡಗೂಡಿದ ಶ್ವಾಸಕ್ರಿಯೆ.

ಮೊದಲನೆಯ ವಿಧದ ಕೂಗುಸಿರು ಊತರಹಿತವಾದದ್ದು. ಅದರಲ್ಲಿ ಯಾವ ಜಟಿಲತೆಯೂ ಇರುವುದಿಲ್ಲ. ಇದು ಸಾಮಾನ್ಯವಾಗಿ ಮಿದು ಮೂಳೆ ರೋಗದಿಂದ ನರಳುವ ಮಕ್ಕಳಲ್ಲಿ ತಲೆದೋರುವುದು. ಇಂಥ ಮಕ್ಕಳಲ್ಲೆಲ್ಲ ನಾಸಾ ಗ್ರಂಥಿಗಳು (ಅಡಿನಾಯಿಡ್ಸ್) ಊದಿಕೊಂಡಿರುವುದು ಸಾಮಾನ್ಯ. ಆನುವಂಶಿಕ ದೌರ್ಬಲ್ಯ, ಮಲಬದ್ಧತೆ, ಭೇದಿ, ಕರುಳಿನಲ್ಲಿ ಹುಳುಗಳು ಮುಂತಾದವು ಸಹ ಕೂಗುಸಿರಿಗೆ ಕಾರಣಗಳು. ಮಗುವನ್ನು ಬೆಚ್ಚಗಿಟ್ಟು ಸರಿಯಾದ ಔಷಧಿಯಿಂದ ಉಪಚರಿಸಬೇಕು.

ಎರಡನೆಯ ವಿಧದ ಕೂಗುಸಿರು ಸಾಮಾನ್ಯವಾಗಿ 1–8 ವರ್ಷ ವಯಸ್ಸಿನ ಮಕ್ಕಳಲ್ಲಿ ವ್ಯಕ್ತವಾಗುತ್ತದೆ. ರಾತ್ರಿ ಕಾಲ ಶೀತ ಹೆಚ್ಚಾದಾಗ ಇದು ಉಲ್ಬಣಿಸಬಹುದು. ಮೇಲಿಂದ ಮೇಲೆ ಕೆಮ್ಮು ನೆಗಡಿ ಈ ಮಕ್ಕಳಲ್ಲಿ ತಲೆದೋರುತ್ತಿರುತ್ತವೆ. ಆಗ ಮಗುವಿನ ಮುಖಭಾವ ಕತ್ತನ್ನು ಹಿಸುಕಿದಂತೆ ಇರುತ್ತದೆ. ಚಳಿಯಿಂದ ರಕ್ಷಣೆ, ಶಾಖ ಕೊಡುವುದು, ಯುಕ್ತ ಔಷಧಿಯಿಂದ ಉಪಚರಿಸುವುದು ಇಲ್ಲಿ ಅನುಸರಿಸಬೇಕಾದ ಉಪಶಮನ ವಿಧಿ.

ಮೂರನೆಯ ವಿಧದ ಕೂಗುಸಿರಿನಲ್ಲಿ ಸಾಮಾನ್ಯವಾಗಿ ಶ್ವಾಸನಾಳದಲ್ಲಿ ಗಾಳಿಯಾಡಲು ಅಡಚಣೆ ಉಂಟಾಗುತ್ತದೆ. ಇದರ ಕಾರಣ ಏಕಾಣುಜೀವಿಗಳ ಸೋಂಕು. ಅವ್ಯಕ್ತ ವೈರಸ್ ಸೋಂಕಿನಿಂದಲೂ ಊತ ಉಂಟಾಗಬಹುದು. ಇದಲ್ಲದೇ ಉಬ್ಬಸ ರೋಗದಲ್ಲಿ ಆಹಾರ ಮತ್ತು ಗಾಳಿಗೆ ವ್ಯಕ್ತಿ ಅತಿಸೂಕ್ಷ್ಮ ಪ್ರತಿಕ್ರಿಯೆ ತೋರುವುದರಿಂದ ಉಂಟಾಗುವ ಶ್ವಾಸನಾಳಗಳ ಸೆಳತದಿಂದ ಸಹ ಕೂಗುಸಿರು ತಲೆದೋರುತ್ತದೆ. ಶ್ವಾಸನಾಳದಲ್ಲಿ ಯಾವುದಾದರೂ ವಸ್ತು ಸಿಕ್ಕಿಹಾಕಿಕೊಂಡಿದ್ದಾಗ, ಹೊರಗಡೆ ಯಾವ ಕಾರಣದಿಂದಲಾದರೂ ಉಂಟಾಗಿ ಉಸಿರಾಡಲು ಕಷ್ಟವಾದಾಗ ಅಡಚಣೆ ಒದಗಿದಂತೆ ಭಾವಿಸಬಹುದು. ನಾಯಿಕೆಮ್ಮಿನಲ್ಲಿ ಅತಿಜಿಗಟಾದ ಕಫ ಉತ್ಪತ್ತಿಯಾಗಿ ಹೊರಗೆ ಬರದೆ ಅತಿಯಾದ ಕೆಮ್ಮನ್ನೂ ಉಸಿರಾಟಕ್ಕೆ ಅಡಚಣೆಯನ್ನೂ ಉಂಟು ಮಾಡುತ್ತದೆ. ಡಿಫ್ತೀರಿಯಾ ಮತ್ತು ಸ್ಟ್ರೆಪ್ಟೋಕಾಕಸ್ ಏಕಾಣುಗಳು ಗಂಟಲಿನಲ್ಲಿ ಊತವನ್ನುಂಟು ಮಾಡಿದಾಗ ಅಲ್ಲಿ ಪೊರೆ ಕಂಡುಬಂದು ಅದು ಶ್ವಾಸನಾಳವನ್ನು ಹೆಚ್ಚು ಕಡಿಮೆ ಮುಚ್ಚಿಬಿಡುವುದರಿಂದ ಈ ರೋಗಿಗಳಿಗೆ ಉಸಿರಾಟಕ್ಕೆ ಅಡಚಣೆಯಾಗುತ್ತದೆ. ಇಂಥ ಸಂದರ್ಭಗಳಲ್ಲಿ ಉಸಿರು ಬಿಡುವುದು ಕಷ್ಟವಾಗಿ ನಿಧಾನವಾಗಿ ಮತ್ತು ಸ್ವಲ್ಪಸ್ವಲ್ಪವಾಗಿ ಜರುಗುತ್ತ ಪುನಃ ಉಸಿರೆಳೆದುಕೊಂಡಾಗ ಯಾವುದಾದರೂ ವಿಶಿಷ್ಟರೀತಿಯ ಶಬ್ದವಾಗುತ್ತದೆ. ಶ್ಲೇಷ್ಮವೂ ಇರುವ ಸಂದರ್ಭಗಳಲ್ಲಿ ಶ್ವಾಸಕ್ರಮದಲ್ಲಿ ಉಂಟಾಗುವ ಶಬ್ದದ ಸ್ವಭಾವದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಇವೆಲ್ಲವೂ ಕೂಗುಸಿರೇ, ಕೂಗುಸಿರಿಗೆ ಕಾರಣವೇನೆಂದು ನೋಡಿಕೊಂಡು ಚಿಕಿತ್ಸೆ ಮಾಡಬೇಕಾಗುತ್ತದೆ. ತುರ್ತು ಸಂದರ್ಭದಲ್ಲಿ ಶಸ್ತ್ರಕ್ರಿಯೆಯಿಂದ ಶ್ವಾಸನಾಳವನ್ನು ಭೇದಿಸಿ ಸುಲಭವಾಗಿ ಉಸಿರಾಡುವುದಕ್ಕೆ ಸಾಧ್ಯವಾಗುವಂತೆ ಮಾಡಬೇಕಾಗಬಹುದು. ಡಿಫ್ತೀರಿಯಾ ರೋಗದಲ್ಲಿ ಅನೇಕ ವೇಳೆ ಈ ಸಂದರ್ಭ ಒದಗುತ್ತದೆ. ಉಬ್ಬಸಕ್ಕೆ ನಾಯಿಕೆಮ್ಮಿಗೆ ತಕ್ಕ ಔಷಧಿಗಳನ್ನು ಕೊಟ್ಟು ಉಸಿರಾಟ ಸುಲಭವಾಗುವಂತೆ ಮಾಡಿಕೊಳ್ಳಬೇಕು. ಹೊರಗಡೆಯಿಂದ ಅಥವಾ ಒಳಗಡೆಯೇ ಏನಾದರೂ ಅಡಚಣೆ ಇದ್ದಲ್ಲಿ ಅದನ್ನು ನಿವಾರಿಸಬೇಕು. ಕೂಗುಸಿರಿಗೆ ಕಾರಣವಾದ ಅನೇಕ ರೋಗರುಜಿನಗಳು ಶೈಶವದಲ್ಲಿಯೇ ಅಲ್ಲದೆ ಬಾಲ್ಯದಲ್ಲಿಯೂ ವಿರಳವಾಗಿ ತಾರುಣ್ಯದಲ್ಲೂ ಕಂಡುಬರುತ್ತವೆ. (ಎಸ್.ಆರ್.ಆರ್.)

**ಕೂಚ್‌ಬಿಹಾರ್ ಟ್ರೋಫಿ :** ಭಾರತದ ಕ್ರಿಕೆಟ್ ನಿಯಂತ್ರಣ ಮಂಡಲಿಯವರು 1952–53ರಿಂದ ನಡೆಸುತ್ತಿರುವ ಅಖಿಲ ಭಾರತ ಅಂತರ ವಲಯ ಶಾಲೆಗಳ ಕ್ರಿಕೆಟ್ ಚಾಂಪಿಯನ್‌ಷಿಪ್ ಟೂರ್ನಿಯ ಪಾರಿತೋಷಕ. ಶಾಲಾ ಮಟ್ಟದಲ್ಲಿ ಕ್ರಿಕೆಟ್ ಆಟಕ್ಕೆ ಹೆಚ್ಚು ಪ್ರಸಾರ ನೀಡಿ, ಯುವಕರಿಗೆ ಕಿರಿಯ ವಯಸ್ಸಿನಲ್ಲಿ ಕ್ರಿಕೆಟ್‌ನಲ್ಲಿ ಆಸಕ್ತಿ ಮೂಡಿಸಿ ದೇಶದ ಭವಿಷ್ಯದ ಕ್ರೀಡಾಪಟುಗಳನ್ನು ರೂಪಿಸುವುದು ಈ ಸ್ಪರ್ಧೆಯ ಉದ್ದೇಶ. ಈ ಪಂದ್ಯ ನಡೆಯುವುದು ಭಾರತದ ರಾಷ್ಟ್ರೀಯ ಮಟ್ಟದಲ್ಲಿ. ಇದರಲ್ಲಿ ಪೂರ್ವ, ದಕ್ಷಿಣ, ಪಶ್ಚಿಮ, ಕೇಂದ್ರ ಹಾಗೂ ಉತ್ತರ ವಲಯಗಳ ಟೀಮುಗಳು ಪಾಲ್ಗೊಳ್ಳುತ್ತವೆ.

ಟೂರ್ನಿಯಲ್ಲಿ ಭಾಗವಹಿಸುವ ತಂಡಗಳನ್ನು ಆರಿಸುವುದಕ್ಕೆ ಪೂರ್ವಭಾವಿಯಾಗಿ ಪ್ರತಿ ವಲಯದಲ್ಲೂ ಚಾಂಪಿಯನ್‌ಶಿಪ್ ಸ್ಪರ್ಧೆ ನಡೆಯುತ್ತದೆ. ಆಯಾ ವಲಯಗಳಲ್ಲಿರುವ ರಾಜ್ಯಗಳ ತಂಡಗಳು ಅಂತರ ರಾಜ್ಯ ಶಾಲೆಗಳ ಕ್ರಿಕೆಟ್ ಕ್ರೀಡಾ ಸ್ಪರ್ಧೆಯೊಂದರಲ್ಲಿ ಭಾಗವಹಿಸುತ್ತವೆ. ವಲಯದ ಕ್ರೀಡಾಸ್ಪರ್ಧೆ ಮುಗಿದ ಅನಂತರ ವಲಯದ ರಾಜ್ಯ ಸಂಸ್ಥೆಗಳ ಪ್ರತಿನಿಧಿಗಳಿಂದ ಕೂಡಿದ ಸಮಿತಿ ಕೂಚ್ ಬಿಹಾರ್ ಟ್ರೋಫಿಯಲ್ಲಿ ಆ ವಲಯವನ್ನು ಪ್ರತಿನಿಧಿಸುವ ಪ್ರಾತಿನಿಧಿಕ ತಂಡವನ್ನು ಆರಿಸುತ್ತದೆ.

ಶಾಲಾ ಮಟ್ಟದಲ್ಲಿ ಅಂತಾರಾಷ್ಟ್ರೀಯ ಸ್ಪರ್ಧೆಗಳೂ ಇವೆ. ಭಾರತದ ಶಾಲಾ ಬಾಲಕ ತಂಡ ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಗಳಲ್ಲಿ ಪ್ರವಾಸ ಮಾಡಿ ಅಲ್ಲಿಯ ಪ್ರಾತಿನಿಧಿಕ ತಂಡಗಳ ವಿರುದ್ಧ ಟೆಸ್ಟ್ ಪಂದ್ಯಗಳನ್ನೂ ಇತರ ಪಂದ್ಯಗಳನ್ನೂ ಆಡಿದೆ. ಅಂತೆಯೇ ಆ ರಾಷ್ಟ್ರಗಳ ತಂಡಗಳು ಭಾರತಕ್ಕೆ ಬಂದು ಕೆಲವು ಪಂದ್ಯಗಳನ್ನು ಆಡಿವೆ.

ಹಿಂದೆ ಕೂಚ್ ಬಿಹಾರ್ ಟ್ರೋಫಿ ಪಂದ್ಯದಲ್ಲಿ ಆಡಿದ ಹಲವು ಆಟಗಾರರು ಇಂದು ರಾಷ್ಟ್ರದ, ಹಾಗೂ ಹಲವು ರಾಜ್ಯಗಳ ತಂಡಗಳಲ್ಲಿ ಇರುವುದೇ ಇದರ ಉದ್ದೇಶ ಸ್ವಲ್ಪ ಮಟ್ಟಿಗಾದರೂ ಸಾರ್ಥಕವಾಗಿದೆ ಎಂಬುದಕ್ಕೆ ನಿದರ್ಶನ. (ಎಚ್.ಎಸ್.ಎಸ್.ಎನ್.)

**ಕೂಚಿಪುಡಿ ನೃತ್ಯ :** ಆಂಧ್ರ ಪ್ರದೇಶದ ಕೂಚಿಪುಡಿಯಲ್ಲಿ ಮುಖ್ಯವಾಗಿ, ಮಿಕ್ಕಂತೆ ಅದರ ಸುತ್ತಣ ಪ್ರದೇಶಗಳಲ್ಲಿ ಸುಮಾರು 12 ಮತ್ತು 13ನೆಯ ಶತಕಗಳಲ್ಲಿ ರೂಪುಗೊಂಡು, ಕಾಲಕಾಲಕ್ಕೆ ಬದಲಾಗುತ್ತ ಬಂದಿರುವ ಒಂದು ನೃತ್ಯ ಪದ್ಧತಿ.

**ಹಿನ್ನೆಲೆ:** ನೃತ್ಯದಲ್ಲಿ ಧಾರ್ಮಿಕ ಮತ್ತು ಲೌಕಿಕ ಎಂಬುದಾಗಿ ಎರಡು ವಿಧಗಳಿವೆ. ಧಾರ್ಮಿಕ ನೃತ್ಯ ದೇವದಾಸಿಯರಿಂದ ಅನುಷ್ಠಾನದಲ್ಲಿದ್ದು, ದೇವಾಲಯಗಳಿಗೆ ಮಾತ್ರ ಪರಿಮಿತವಾಗಿತ್ತು. ಲೌಕಿಕ ನೃತ್ಯಗಳು ವೃತ್ತಿನರ್ತಕಿಯರಿಂದ ನಿರ್ವಹಿಸಲ್ಪಡುತ್ತಿದ್ದುವು. ನೃತ್ಯದ ಜೀವಾಳವಾದ ಪರಿಶುದ್ಧತೆ ಮತ್ತು ಉನ್ನತ ತಂತ್ರಕೌಶಲಗಳನ್ನು ವೃತ್ತಿನರ್ತಕಿಯರು ಕಾಪಾಡಿಕೊಂಡು ಬರಲಿಲ್ಲವಾಗಿ ಪ್ರ.ಶ.ಪೂ. ಸು. 1000ದ ಹೊತ್ತಿಗೆ ನೃತ್ಯಕಲೆಯ ಅತ್ಯುನ್ನತ ಗುಣವನ್ನು ಸಂರಕ್ಷಿಸಿಕೊಂಡು ಬರುವುದಕ್ಕಾಗಿ ವಿದ್ವಾಂಸರಿಂದ, ಕಲಾವಿದರಿಂದ ಚಳವಳಿಯೊಂದು ಆರಂಭವಾಯಿತು. ಕೂಚಿಪುಡಿ ಈ ಚಳವಳಿಯ ಒಂದು ಕೇಂದ್ರವಾಯಿತು.

ಕೂಚಿಪುಡಿ ಕೃಷ್ಣಾ ಜಿಲ್ಲೆಯ ದಿವಿ ತಾಲ್ಲೂಕಿನಲ್ಲಿದೆ. ಪ್ರ.ಶ.ಪೂ. 300ರ ಸಾತವಾಹನರ ಕಾಲದಿಂದ ಪ್ರ.ಶ. 16 ನೆಯ ಶತಮಾನದವರೆಗೆ ಆಂಧ್ರ ಸಂಸ್ಕೃತಿಯ ನೆಲೆಯಾಗಿದ್ದ ವಿಶಾಲ ಭೂವಲಯದಲ್ಲಿ ಇದು ನೆಲೆಗೊಂಡಿದೆ.

ಕಾಕತೀಯ ರಾಜರು ನೃತ್ಯಕಲೆಯನ್ನು ಪೋಷಿಸಿದರು. ಪ್ರ.ಶ.ಪೂ. 12ನೆಯ ಶತಮಾನದ ಕಾಕತೀಯ ಗಣಪತಿ ಮಹಾರಾಜರ ಆಳ್ವಿಕೆಯಲ್ಲಿ ಗುಂಡಾಮಾತ್ಯನೆಂಬ ಪ್ರಸಿದ್ಧ ವಿದ್ವಾಂಸನೂ ಕಲಾಚಾರ್ಯನೂ ಇದ್ದ. ಗುಂಡಾಮಾತ್ಯ, ಜಯಪ್ಪನಾಯಕನೆಂಬ ಗಜ ಸೈನ್ಯಾಧಿಪತಿಗೆ ನೃತ್ಯಕಲೆಯನ್ನು ಕಲಿಸಲು ರಾಜನಿಂದ ನಿಯೋಜಿತನಾಗಿದ್ದ. ಜಯಪ್ಪನಾಯಕ ಈ ಕಲೆಯಲ್ಲಿ ದೊಡ್ಡ ಪ್ರವೀಣನಾದುದಲ್ಲದೆ, ಭರತನಾಟ್ಯವನ್ನು ಕುರಿತು ವೃತ್ತ ರತ್ನಾವಳಿ ಎಂಬ ಉನ್ನತಮಟ್ಟದ ಗ್ರಂಥವೊಂದನ್ನು ರಚಿಸಿದ. ಇದು 12ನೆಯ ಶತಮಾನದಲ್ಲಿ ರೂಢಿಯಲ್ಲಿದ್ದ ಧಾರ್ಮಿಕ ಮತ್ತು ಲೌಕಿಕ ನೃತ್ಯಪ್ರಕಾರಗಳ ಪೂರ್ಣ ವಿವರಣೆಯನ್ನು ನೀಡುತ್ತದೆ. ಉದಾಹರಣೆಗೆ ಭುಜಂಗತ್ರಾಸ, ತಾಲಪುಷ್ಪ ಪುಟ, ಭೂಚಾರಿ, ಆಕಾಶಚಾರಿ, ಅಂಗಹಾರನೃತ್ಯ, ಸಪ್ತತಾಂಡವಗಳು ಇತ್ಯಾದಿ. ಇವುಗಳೆಲ್ಲ ಆ ಕಾಲದ ಶಾಸ್ತ್ರೀಯ ನೃತ್ಯದ ವಿವಿಧ ಮಾದರಿಗಳನ್ನು ಸ್ಪಷ್ಟಪಡಿಸುತ್ತವೆ. ಈ ಕಾಲದಲ್ಲಿ ಕಲಾವಿದರು ದಶವಿಧ ಶಿವಲೀಲೆಗಳ ನಾಟ್ಯಗಳನ್ನು ಅಭಿನಯಿಸುತ್ತಿದ್ದರು. ಜೊತೆಗೆ ರಾಮಾಯಾಣ, ಮಹಾಭಾರತಗಳಿಂದ ಆಯ್ದ ಕೆಲವು ಪ್ರಸಿದ್ಧ ಕಥೆಗಳ ಲಘು ವಿಷಯಗಳೂ ಅನುಷ್ಠಾನದಲ್ಲಿದ್ದುವು.

ಮೇಲಿನ ಮಾದರಿಯ ಮಾರ್ಗೀಯ ನೃತ್ಯ ಸಂಪ್ರದಾಯ ಕೂಚಿಪುಡಿಯಲ್ಲಿ ಪ್ರವರ್ಧಮಾನಕ್ಕೆ ಬಂದದ್ದು 12 ಮತ್ತು 13ನೆಯ ಶತಮಾನಗಳ ಅವಧಿಯಲ್ಲೆಂದು ಅನುಮಾನಿಸಬಹುದು. ಕೂಚಿಪುಡಿಯಲ್ಲಿ ರೂಪಿತವಾದ ಬ್ರಾಹ್ಮಣ ಮೇಳಗಳು ಮಾರ್ಗ ಸಂಪ್ರದಾಯದಿಂದ ತಮ್ಮ ಕಲೆಯನ್ನು ಅರಳಿಸಿಕೊಂಡವು. ಈ ಮೇಳಗಳಲ್ಲಿ ಹೆಂಗಸರು ಭಾಗವಹಿಸಲು ಅವಕಾಶ ಕೊಡುತ್ತಿರಲಿಲ್ಲ. ಬ್ರಾಹ್ಮಣ ಮೇಳಗಳ ಸದಸ್ಯರು ಶುದ್ಧ ಹಾಗೂ ಧಾರ್ಮಿಕ ಜೀವನವನ್ನು ನಡೆಸುತ್ತಿದ್ದರು. ಅವರು ಸಂಸ್ಕೃತ ಮತ್ತು ತೆಲುಗಿನಲ್ಲಿ ವಿಶಾಲ ಸಾಂಸ್ಕೃತಿಕ ಶಿಕ್ಷಣವನ್ನು ಹೊಂದಿರುತ್ತಿದ್ದರು. ಭರತನಾಟ್ಯ, ಸಂಗೀತ ಹಾಗೂ ಅಲಂಕಾರಶಾಸ್ತ್ರಗಳನ್ನು ಕುರಿತಾದ ಪ್ರಮಾಣಭೂತ ಗ್ರಂಥಗಳನ್ನವರು ಅಧ್ಯಯನ ಮಾಡಿದವರಾಗಿದ್ದು, ಹಲವು ವರ್ಷಗಳ ಕಾಲ ಪ್ರಾಯೋಗಿಕ ತರಬೇತನ್ನು ಪಡೆದವರಾಗಿರುತ್ತಿದ್ದರು.

**ಕೂಚಿಪುಡಿ ನೃತ್ಯಮಾರ್ಗದ ಆರಂಭ, ಬೆಳವಣಿಗೆ :** ಕೂಚಿಪುಡಿಯಲ್ಲಿ ಈ ಬ್ರಾಹ್ಮಣ ಮೇಳ ಚಳವಳಿ ಯಾವಾಗ ಆರಂಭವಾಯಿತೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಅಲ್ಲಿನ ಬ್ರಾಹ್ಮಣ ಭಾಗವತರನ್ನು ಕುರಿತಾದ ಪ್ರಾಚೀನ ಆಧಾರ ಪ್ರ.ಶ.ಪೂ. 1500ರಷ್ಟು ಹಿಂದಕ್ಕೆ, ವಿಜಯನಗರ ರಾಜ ವೀರನರಸಿಂಹರಾಯನ ಆಳ್ವಿಕೆಗೆ ಹೋಗುತ್ತದೆ. ಸ್ಥಳೀಯ ದಾಖಲೆಗಳ ಮಚುಪಲ್ಲಿ ಕೈಫಿಯತ್ತಿನಲ್ಲಿ ಅದು ಈ ರೀತಿ ಉಲ್ಲೇಖಿತವಾಗಿರುವುದನ್ನು ನೋಡಬಹುದು: 'ಕೂಚಿಪುಡಿಯ ಬ್ರಾಹ್ಮಣ ಭಾಗವತರ ನಾಟಕ ತಂಡವೊಂದು ವಿನುಕೊಂಡ ಮತ್ತು ಚಿಲ್ಲಮ್‌ಕೊಂಡದ ಮಾರ್ಗದಲ್ಲಿ ಬೀಡು ಬಿಟ್ಟಿದ್ದಾಗ,

ವೀರನರಸಿಂಹರಾಯನ ಆಳ್ವಿಕೆಯ ಅವಧಿಯಲ್ಲಿ ವಿಜಯನಗರಕ್ಕೆ ಬಂದಿತ್ತು. ಕೋರಿಕೆಯ ಮೇಲೆ ಅವರು ನಾಟಕವೊಂದನ್ನು ಆಡಲು ವ್ಯವಸ್ಥೆ ಮಾಡಿದರು.'

ಕೂಚಿಪುಡಿ ಮೇಳ ನುರಿತದ್ದೆಂದು ಪ್ರಸಿದ್ಧಿಪಡೆದಿದ್ದುದರಿಂದ, ವೀರ ನರಸಿಂಹರಾಯ ತನ್ನ ರಾಣಿ ಮತ್ತು ರಾಜಪರಿವಾರದ ಜೊತೆಯಲ್ಲಿ ಅರಮನೆಯೊಳಗೆ ನಾಟಕವನ್ನು ನೋಡಲು ಅಪೇಕ್ಷಿಸಿದ. ನಿಜವಾಗಿ ಈ ಮೇಳ ಸಂಚಾರೀ ತಂಡವಾಗಿದ್ದು, ಜನಪ್ರಿಯ ಪೌರಾಣಿಕ ಕಥೆಗಳನ್ನು ಅಭಿನಯಿಸುವುದರ ಮೂಲಕ ಜನತೆಯನ್ನು ರಂಜಿಸುತ್ತಿತ್ತಲ್ಲದೆ ದೇಶದಲ್ಲಿ ಧಾರ್ಮಿಕ ಹಾಗೂ ಭಕ್ತಿಯ ವಾತಾವರಣವನ್ನು ಕಾಪಾಡಿಕೊಂಡು ಬರುತ್ತಿತ್ತು.

ವೈಷ್ಣವ ತತ್ತ್ವದ ಉತ್ಕರ್ಷದಿಂದಾಗಿ ಈ ಸಂಚಾರೀ ತಂಡಗಳು ಭಾಗವತ ಪುರಾಣದಿಂದ ತೆಗೆದುಕೊಂಡ ಕಥೆಗಳನ್ನು ಅಭಿನಯಿಸಲು ಪ್ರಾರಂಭಿಸಿದುವು. ಇದರ ಪರಿಣಾಮವಾಗಿ ಈ ಕಲಾವಿದರಿಗೆ ಕೂಚಿಪುಡಿ ಭಾಗವತರು ಅಥವಾ ಕೂಚಿಪುಡಿ ಭಾಗವತ ಮೇಳ ಎಂದು ಹೆಸರಾಯಿತು. ಈ ನೃತ್ಯ ನಾಟಕದ ನಿಷ್ಕೃಷ್ಟ ರೂಪವೆಂಥದ್ದಾಗಿತ್ತು ಎಂಬುದನ್ನು ಯಾರೂ ಹೇಳುವಂತಿಲ್ಲವಾಗಿದೆ. ಅದು ಇಂದು ನಾವು ಯಕ್ಷಗಾನವೆಂದು ಕರೆಯುವ ಜನಪದ ಅಥವಾ ದೇಸೀ ಮಾದರಿಯಿಂದ ಬೆಳೆದುಬಂದುದೆಂದು ತೋರುತ್ತದೆ.

ಕೂಚಿಪುಡಿ ಕಲಾವಿದರಿಗೆ, ವಿದ್ವಾಂಸರಿಗೆ ವಿಜಯನಗರದ ದೊರೆಗಳ ಆಶ್ರಯವಿತ್ತು. ವಿಜಯನಗರದ ಪತನಾನಂತರ, ಈ ವಿದ್ವಾಂಸರು ಮತ್ತು ನಾಟಕ ತಂಡಗಳವರು ತಂಜಾವೂರಿಗೆ ವಲಸೆಬಂದು, ಅದರ ಸಮೀಪದಲ್ಲಿರುವ ಅಚ್ಯುತಪುರಂ ಎಂಬ ಹಳ್ಳಿಯಲ್ಲಿ ನೆಲೆಸಿದರು. ಇದು ತಂಜಾವೂರಿನ ರಾಜ ಅಚ್ಯುತಪ್ಪನಾಯಕನಿಂದ ದಾನವಾಗಿ ದೊರೆತ ಅಗ್ರಹಾರ. ಇಂದು ಇದನ್ನು ಮೇಳತ್ತೂರು ಎಂದು ಕರೆಯುವರು. ಈ ಸ್ಥಳದಲ್ಲಿ ಬ್ರಾಹ್ಮಣ ಮೇಳಗಳು ಪ್ರಹ್ಲಾದ ಚರಿತ್ರೆ, ಮೋಹಿನಿ ರುಕ್ಮಾಂಗದ, ಹರಿಶ್ಚಂದ್ರ ಮತ್ತು ರಾಮನಾಟಕದಂಥ ತಮ್ಮ ಸಾಂಪ್ರದಾಯಿಕ ನೃತ್ಯನಾಟಕಗಳನ್ನು ಆಡತೊಡಗಿದರು.

ಈ ಅವಧಿಯಲ್ಲಿ, ಸರಿಸುಮಾರು 1560ರಿಂದ 1660ರ ವರೆಗೆ ಕೂಚಿಪುಡಿ ಬಹು ದೊಡ್ಡ ಸಾಂಸ್ಕೃತಿಕ ಮತ್ತು ಕಲಾಕೇಂದ್ರವಾಗಿ ಮುಂದುವರಿಯಿತು; ನೃತ್ಯ ಹಾಗೂ ಸಂಗೀತ ಕಲೆಗಳಲ್ಲಿ ಕ್ಷೇತ್ರಜ್ಞ, ತೀರ್ಥನಾರಾಯಣ ಯತಿ ಹಾಗೂ ಸಿದ್ಧೇಂದ್ರಯೋಗಿಗಳಂಥ ಶ್ರೇಷ್ಠ ರಚನಕಾರರನ್ನು, ಶಿಕ್ಷಕರನ್ನು ಸೃಷ್ಟಿಸಿತು. ಇವರಲ್ಲಿ ಸಿದ್ಧೇಂದ್ರಯೋಗಿ ಈಗಾಗಲೇ ಅಸ್ತಿತ್ವದಲ್ಲಿದ್ದ ನೃತ್ಯಕಲೆಗೆ ಹೊಸ ತಿರುವೊಂದನ್ನು ತಂದುಕೊಟ್ಟ. ಯಾವುದನ್ನು ನಾವಿಂದು ಕೂಚಿಪುಡಿ ನೃತ್ಯಪಂಥವೆಂದು ಕರೆಯುತ್ತೇವೆಯೋ ಅದರ ಸ್ಥಾಪಕನೀತ. ಈ ನೃತ್ಯನಾಟಕದ ಅದ್ವಿತೀಯ ಮಾದರಿಯಾಗಿ ಈತ ಪಾರಿಜಾತಹರಣದ ಕಥೆಯನ್ನು ರಚಿಸಿ, ಆ ನಾಟಕವನ್ನು ಕೂಚಿಪುಡಿ ಕಲಾವಿದರಿಗೆ ಕಲಿಸಿದ. ಅದು ಕೂಚಿಪುಡಿ ಪಂಥದ ನಾಟಕ ಅಥವಾ ಸಂಗೀತ ಕೃತಿಗಳಲ್ಲಿ ಅತ್ಯುತ್ತಮ ಪ್ರಕರಣವಾಗಿ ಇಂದಿಗೂ ಉಳಿದುಕೊಂಡು ಬಂದಿದೆ.

ಪಾರಿಜಾತ ಹರಣ ಸತ್ಯಭಾಮೆಗೂ ಭಗವಾನ್ ಶ್ರೀಕೃಷ್ಣನಿಗೂ ಇದ್ದ ಗಾಢ ಪ್ರೀತಿಯ ಕಥೆಯಾಗಿದೆ. ಈ ಕಥೆ ರಸಭಾವಗಳನ್ನು ಗರ್ಭೀಕರಿಸಿಕೊಂಡಿದೆ. ಸತ್ಯಭಾಮೆ ಸ್ವಾಧೀನ ಪತಿಕಾ ನಾಯಿಕೆಯಾಗಿರುವುದರಿಂದ ಭಗವಾನ್ ಶ್ರೀಕೃಷ್ಣನನ್ನು ಆಜ್ಞಾನುವರ್ತಿಯನ್ನಾಗಿ ಮಾಡಬಹುದು ಮತ್ತು ಅವನ ಜೊತೆಯಲ್ಲಿ ಸ್ವಾತಂತ್ರ್ಯ ವಹಿಸಬಹುದು.

ರಹಸ್ಯಾರ್ಥದಲ್ಲಿ, ಇದು ಮಧುರಭಕ್ತಿಯ ಅಂದರೆ ಜೀವಾತ್ಮ ಪರಮಾತ್ಮ ಸಮಾಗಮದ ಪ್ರತಿಪಾದನೆಗೆ ಯುಕ್ತವಸ್ತುವಾಗಿದೆ. ಜೀವಾತ್ಮನ ಪ್ರಯತ್ನದ ಮೂಲಕ ಪರಿಹಾರವಾಗಬಲ್ಲ ಸಂಕಷ್ಟಗಳು ಮತ್ತು ಯಾತನೆಗಳನ್ನು ವಿಪ್ರಲಂಭ ಶೃಂಗಾರ ಚಿತ್ರಿಸುತ್ತದೆ.

ಕೂಚಿಪುಡಿ ಸಂಸಾರಗಳ ಪ್ರತಿಯೊಬ್ಬ ಪುರುಷ ಸದಸ್ಯನೂ ಈ ಕಲೆಯ ಅನುಷ್ಠಾನಕ್ಕಾಗಿ ತನ್ನನ್ನು ತಾನು ಒತ್ತೆಯಿಡುವಂತೆ ತನ್ನ ಜೀವಮಾನದಲ್ಲಿ ಕೊನೆಯ ಪಕ್ಷ ಒಂದು ಬಾರಿಯಾದರೂ ಸತ್ಯಭಾಮಾ ಪಾತ್ರವನ್ನು ಅಭಿನಯಿಸಲು ಪ್ರತಿಜ್ಞೆ ಮಾಡುವಂತೆ ಸಿದ್ಧೇಂದ್ರ ಯೋಗಿಗಳು ಸದಸ್ಯರ ಮನವೊಲಿಸಿದ್ದರು. ಇದಲ್ಲದೆ, ಈ ಪ್ರೌಢಕಲೆಗಾಗಿ, ತನ್ಮೂಲಕ ಧಾರ್ಮಿಕ ಪ್ರಚಾರಕ್ಕಾಗಿ ತಮ್ಮ ಜೀವನವನ್ನೇ ಮೀಸಲಿಟ್ಟ ಸಂಸಾರಗಳಿಗೆಂದು ಕೂಚಿಪುಡಿಯನ್ನು ಅಗ್ರಹಾರವಾಗಿ ಕೊಡಲು ಗೋಲ್ಕೊಂಡದ ನವಾಬ (1672–87) ಅಬ್ದುಲ್ ಹಸನ್ ಕುತಾಬ್ ಅವರಿಂದ ತಾಮ್ರ ಫಲಕ ದತ್ತಿಯನ್ನು ಹೊರಡಿಸಲು ಸಿದ್ಧೇಂದ್ರಯೋಗಿಗಳೇ ಕಾರಣರಾದರು. ಈ ವಾಗ್ದಾನವನ್ನು ಗೌರವಿಸುತ್ತ ಈ ಕಲೆ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿದೆ.

ಈಗಾಗಲೆ ತಿಳಿಸಿದಂತೆ, ಸಿದ್ಧೇಂದ್ರಯೋಗಿಯವರು ನೃತ್ಯನಾಟಕದ ವಸ್ತು ಮತ್ತು ರೂಪವನ್ನು ಬಹಳ ಮಟ್ಟಿಗೆ ಉತ್ತಮಪಡಿಸಿದರು. ಪಾರಿಜಾತಹರಣ ನಾಟಕ ಹೆಚ್ಚು ಪ್ರೌಢವಾದದ್ದು ಮತ್ತು ನಾಟ್ಯಶಾಸ್ತ್ರ, ಸಂಗೀತಶಾಸ್ತ್ರ ಹಾಗೂ ತಾಳಶಾಸ್ತ್ರಗಳ ಆವಶ್ಯಕ ಅಂಶಗಳನ್ನೆಲ್ಲ ಒಳಗೊಂಡಿರುವಂಥದು. ಕಾಲ ಕಳೆದಂತೆ ಕೂಚಿಪುಡಿ ಭಾಗವತರ ಸಂಚಾರೀ ಮೇಳಗಳು ವಿವಿಧ ದೇವಾಲಯಗಳಲ್ಲಿ ಮತ್ತು ದರ್ಬಾರುಗಳಲ್ಲಿ ನಡೆಯುತ್ತಿದ್ದ ದೇವದಾಸಿಯರ ಮತ್ತು ರಾಜನರ್ತಕಿಯರ ಪ್ರದರ್ಶನಗಳ ಜೊತೆ ಸಂಪರ್ಕ ಕಲ್ಪಿಸಿಕೊಂಡುವು. ಅದರ ಫಲವಾಗಿ, ಕೂಚಿಪುಡಿ ಪಂಥದ ಕಲೆ ಸಣ್ಣ ಪುಟ್ಟ ಮಾರ್ಪಾಡುಗಳಿಗೆ, ಭಿನ್ನತೆಗಳಿಗೆ ಒಳಗಾಗಬೇಕಾಯಿತು. ಕ್ಷೇತ್ರಜ್ಞರ ಮೂವ್ವ ಗೋಪಾಲ ಪದಗಳ ಗಾಯನ ಮತ್ತು ನರ್ತನದಿಂದ ದಕ್ಷಿಣ ಭಾರತಾದ್ಯಂತ ನೃತ್ಯಕಲೆಯ ಮೇಲಾದ ಬಹುದೊಡ್ಡ ಪ್ರಭಾವ ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ. ಇದರ ಫಲಿತಾಂಶವಾಗಿ, ಪಾರಿಜಾತ ಹರಣ ನಾಟಕದಲ್ಲಿನ ಸತ್ಯಭಾಮಾ ಪಾತ್ರ ಅಲಂಕಾರಶಾಸ್ತ್ರದಲ್ಲಿ ವರ್ಣಿತವಾದ ನಾಯಿಕೆಯ ಎಂಟು ಬಗೆಯ ಪೂರ್ಣ ನಿರೂಪಣೆಗೆ ಇಂಬುಕೊಟ್ಟು ಮಾರ್ಪಟ್ಟಿತು. ಹೀಗೆ ಕಥೆಯಲ್ಲಿ ಹಲವಾರು ಪಾತ್ರ ವೈಲಕ್ಷಣ್ಯಗಳನ್ನು ಒಳಗೊಂಡಿರುವ ಪಾರಿಜಾತ ಹರಣ ನಾಟಕದ ಮೂಲ ರೂಪ ಮಾರ್ಪಟ್ಟು ಪ್ರಮುಖವಾಗಿ ಸತ್ಯಭಾಮಾ ಮತ್ತು ಮಾಧವಿ ಎಂಬೆರಡು ಪಾತ್ರಗಳು ಮಾತ್ರ ಉಳಿದು ಬಂದುವು. ಸಮಸ್ತವೂ ಸತ್ಯಭಾಮೆಯ ಕಲಾಪವಾಯಿತು. ಹೀಗಾಗಿ ಪಾರಿಜಾತಹರಣ ನಾಟಕಕ್ಕೆ ಭಾಮಾಕಲಾಪ ಎಂದು ಹೆಸರಾಯಿತು. ಇಲ್ಲಿ ಮಾಧವಿ ಸತ್ಯಭಾಮೆಯ ಪ್ರಿಯ ಗೆಳತಿ, ಆಕೆಯ ಆತ್ಮಸಾಕ್ಷ್ಯ ರಕ್ಷಕಳು, ಒಂದು ದೃಷ್ಟಿಯಲ್ಲಿ ಆಕೆಯ ಆತ್ಮವಿವೇಕ ಸ್ವರೂಪಳು.

**ರಂಗಭೂಮಿ, ನಾಟಕ :** ಕೂಚಿಪುಡಿ ನೃತ್ಯನಾಟಕವನ್ನು ಕುರಿತಾದ ಕೆಲವು ಸ್ವಾರಸ್ಯಕರವಾದ ಅಂಶಗಳನ್ನೀಗ ನೋಡಬಹುದು. ಇವರ ರಂಗಭೂಮಿ ಸರಳವಾದುದು. ಗ್ರಾಮದ ದೇವಾಲಯವೊಂದರ ಮುಂದೆ ಸಮತಟ್ಟಾದ, ತೆಂಗಿನಗರಿಗಳಿಂದ ಮುಚ್ಚಿದ ಚಪ್ಪರವೇ ಸಾಮಾನ್ಯವಾಗಿ ಇವರ ನಾಟಕರಂಗ. ಪ್ರೇಕ್ಷಕರು ಎದುರಿನ ಬಯಲಿನಲ್ಲಿ ನೆಲದ ಮೇಲೆ ಕುಳಿತು ನಾಟಕವನ್ನು ನೋಡುತ್ತಾರೆ. ನಾಟಕ ರಾತ್ರಿ ಹತ್ತರಿಂದ ಬೆಳಗಿನ ನಾಲ್ಕು ಗಂಟೆಯವರೆಗೂ ನಡೆಯಬಹುದು. ಸುಂದರ ನಮೂನೆಯ ಬಣ್ಣದ ಪರದೆಯೊಂದನ್ನು ಇಬ್ಬರು ಯುವಕರು ರಂಗಭೂಮಿಗೆ ಅಡ್ಡಲಾಗಿ ಹಿಡಿದಿರುತ್ತಾರೆ. ಗ್ರಾಮದ ಅಗಸರಿಬ್ಬರು ರಂಗಸ್ಥಳದ ಎರಡು ಕಡೆಯಲ್ಲಿಯೂ ನಿಂತು ಹರಳೆಣ್ಣೆಯಿಂದ ಉರಿಯುವ ಪಂಜುಗಳನ್ನು ಹಿಡಿದಿದ್ದು ರಂಗಸ್ಥಳಕ್ಕೆ ಬೆಳಕನ್ನು ಒದಗಿಸುತ್ತಾರೆ. ನಾಟಕ ನಡೆಯುತ್ತಿದ್ದಾಗ ನಿರ್ದಿಷ್ಟ ಕ್ಷಣಗಳಲ್ಲಿ ಉದಾಹರಣೆಗೆ, ಪರದೆಯ ಹಿಂದಿನಿಂದ ಸತ್ಯಭಾಮೆ ಪ್ರವೇಶಿಸುತ್ತಿದ್ದಾಗ, ನಾಟಕೀಯ ಪರಿಣಾಮವನ್ನು ಅಧಿಕಗೊಳಿಸುವ ಸಲುವಾಗಿ, ಬೆಳಕನ್ನು ಹೆಚ್ಚಿಸಲು ಪಂಜಿನಮೇಲೆ ಗುಗ್ಗುಳ ಎಂಬ ರಾಳವನ್ನು ಎರಚುತ್ತಾರೆ. ಅದು ಭುಗ್ ಎಂದು ಹತ್ತಿ ಉರಿಯುತ್ತದೆ. ರಂಗಸ್ಥಳದ ಮೇಲೆ ಪಾತ್ರ ಪ್ರವೇಶಿಸುತ್ತಿದ್ದಂತೆ ದ್ವಾರದಲ್ಲಿನ ವಾದ್ಯಗಾನ ಹಠಾತ್ತನೆ ಪ್ರಾರಂಭವಾಗುತ್ತದಲ್ಲದೆ ತೆರೆ ಬಿದ್ದು ರಾಳದ ಉರಿ ಭುಗಿಲೆನ್ನುತ್ತದೆ.

ಇಲ್ಲಿ ಗಮನಿಸಬೇಕಾದ ಸ್ವಾರಸ್ಯವೆಂದರೆ ಪಾತ್ರ ತನ್ನನ್ನು ತಾನೆ ಪರಿಚಯಿಸಿಕೊಳ್ಳುವುದು. ನಟರ ಹಿಂದೆ, ಅವರನ್ನು ಸಮೀಪಿಸಿದಂತೆ, ಮೃದಂಗ, ಕೊಳಲು ಶ್ರುತಿಗಳನ್ನೊಳಗೊಂಡಂತಿರುವ ವಾದ್ಯಗಾರರು ಮತ್ತು ಇಬ್ಬರು ಹಿನ್ನೆಲೆ ಗಾಯಕರು ನಿಂತಿರುತ್ತಾರೆ. ತಂಡದ ಮುಖಂಡನಾದವ ಕೈಯ್ಯಲ್ಲಿನ ತಾಳಗಳ ಮೂಲಕ ಕಾಲ ವ್ಯವಸ್ಥೆ ಮಾಡುತ್ತ ನಾಟಕವನ್ನು ನಿಯಂತ್ರಿಸುತ್ತಾನೆ. ಆತ ಎತ್ತರವಾದ ಆಳಾಗಿದ್ದು ಸಂಪ್ರದಾಯ ಶುದ್ಧವಾದ ಮಂತ್ರಶಾಸ್ತ್ರದಲ್ಲಿ ನುರಿತವನಾಗಿರುತ್ತಾನೆ. ಕಲಾವಿದರ ಮೇಲೆ ಬೀಳಬಹುದಾದ ಕೆಟ್ಟದೃಷ್ಟಿಯನ್ನು ನಿವಾರಿಸಲು ಆತ ಸದಾ ಜಾಗರೂಕನಾಗಿರುತ್ತಾನೆ.

ಕಾಲ ಸರಿದಂತೆ ನೃತ್ಯ ನಾಟಕಗಳಲ್ಲಿ ನೂತನ ಪ್ರಕಾರಗಳು ನಿರ್ಮಿತವಾದುವು. ಅವುಗಳಲ್ಲಿ ಗೊಲ್ಲಕಲಾಪ ಒಂದು. ಇದು ಕೂಚಿಪುಡಿಯ ಇನ್ನೊಂದು ವಿಶೇಷ. ಇದು ಗೌಳಿಗಿತ್ತಿ ಮತ್ತು ಬ್ರಾಹ್ಮಣನೊಬ್ಬನ ನಡುವೆ ನಡೆದ ತಾತ್ತ್ವಿಕ ಸಂವಾದವೇ ಆಗಿದೆ. ಈ ಭಾಗಗಳನ್ನು ಸರಿಯಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂಸ್ಕೃತದ ಸ್ವಾಮ್ಯ ಅವಶ್ಯ ಇರಬೇಕಾಗುತ್ತದೆ. ಇದು ಕ್ರಮಬದ್ಧ ಕಥೆಯಾಗಿರದೆ ವಿಶದವಾದ ಮತಾನುಚರಣೆಯಲ್ಲಿನ ಯಜ್ಞಗಳ ನಿಷ್ಪ್ರಯೋಜಕತೆ, ಮಾನಸಿಕ ಯಜ್ಞದ ಶ್ರೇಷ್ಠತೆ, ಆದರ್ಶಪ್ರಾಯ ಸಾಂಸಾರಿಕ ಜೀವನ ಮತ್ತು ಪಿಂಡೋತ್ಪತ್ತಿ ಕರ್ಮಗಳಂತೆ ವಿವಿಧ ಸಾಂಸ್ಕೃತಿಕ ಪ್ರಕರಣಗಳನ್ನು ಕುರಿತ ಪ್ರವಚನವಾಗಿದೆ. ಇದೊಂದು ಸಾಮಾಜಿಕ ವಿಡಂಬನೆಯಾಗಿದ್ದು ಮನರಂಜನೆಗಿಂತ ಹೆಚ್ಚಾಗಿ ಬೋಧಪರವಾದುದಾಗಿದೆ. ಗೌಳಿಗಿತ್ತಿ, ತಾನು ಸಂಸ್ಕೃತಿ, ಜ್ಞಾನ, ಶಿಕ್ಷಣ ಹಾಗೂ ಗೌರವದಲ್ಲಿ ಬ್ರಾಹ್ಮಣನಿಗಿಂತ ಕೀಳಾದವಳಲ್ಲ ಎಂಬುದನ್ನು ಸಿದ್ಧಪಡಿಸುತ್ತಾಳಲ್ಲದೆ ಶೂದ್ರನಾಗಿ ಹುಟ್ಟಿದ ಮನುಷ್ಯನೊಬ್ಬ ದೀಕ್ಷೆಪಡೆದ ಅನಂತರ ಬ್ರಾಹ್ಮಣ್ಯವನ್ನು ಗಳಿಸಿಕೊಳ್ಳಬಹುದೆಂದು ವಾದಿಸುತ್ತಾಳೆ.

**ವೇಷಭೂಷಣ :** ಕೂಚಿಪುಡಿ ಕಲಾವಿದರ ವೇಷಭೂಷಣ ವಿಶದವಾದುದಲ್ಲ. ಪಾತ್ರಕ್ಕೆ ತಕ್ಕ, ಒಂದೇ ಬಣ್ಣ ಮತ್ತು ಒಂದೇ ಹುಡಿಯನ್ನು ಉಪಯೋಗಿಸಲಾಗುತ್ತದೆ. ಆಧುನಿಕ ವೇಷಭೂಷಣಗಳ ವಸ್ತುಗಳು ಬರುವ ಮುನ್ನ, ಅವಶ್ಯವಿದ್ದ ಬಣ್ಣ, ಹುಡಿಗಳನ್ನು ಖನಿಜ ಮತ್ತು ವನಸ್ಪತಿಗಳಿಂದ ಸಿದ್ಧಗೊಳಿಸಲಾಗುತ್ತಿತ್ತು.

ರಾಜ ಸುಂದರ ಕಿರೀಟ ಮತ್ತು ಅಲಂಕೃತ ಭುಜಕೀರ್ತಿಗಳನ್ನು ಧರಿಸುತ್ತಿದ್ದ. ಸತ್ಯಭಾಮೆಯ ಶೃಂಗಾರ ವಿಶದವಾಗಿರುತ್ತಿತ್ತು. ಅವಳ ಅಲಂಕಾರ ಸಾಧನಗಳು ಹಲವು. ಅವಳು ವಾರದ ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ರೀತಿಯ ಒಡವೆಗಳನ್ನು ಧರಿಸುತ್ತಿದ್ದಳು. ಇವು ಅಂದಿನ ಸಮಾಜದ ರಾಣಿ ಧರಿಸುವ ಒಡವೆಗಳ ಪಡಿಯಚ್ಚುಗಳಾಗಿರುತ್ತಿದ್ದುವು. ಅವನ್ನು ಹಗುರವಾದ ಮರದಿಂದ ಮಾಡಿ ಹೊಳೆವ ಬಣ್ಣದ ಕಾಗದಗಳಿಂದ ಅಲಂಕರಿಸುತ್ತಿದ್ದರು.

**ಸಂಗೀತ:** ಕೂಚಿಪುಡಿಯ ಸಂಗೀತದ ಸಂಪ್ರದಾಯ ಮಾರ್ಗೀಯವಾದುದೇ.

**ತೀರ್ಥನಾರಾಯಣ ಯತಿ :** ತರಂಗ ನೃತ್ಯಪದ್ಧತಿಗೆ ಕಾರಣನಾದ ಒಬ್ಬ ಕವಿ ಮತ್ತು ಕಲಾವಿದ. ಪೂರ್ಣಗೋದಾವರಿ ಜಿಲ್ಲೆಯ ಅಮಲಪುರಂನ ಕುಚಿಮಂಚಿವರಿ ಅಗ್ರಹಾರಕ್ಕೆ ಸೇರಿದ ಈತ ವೇದಾದ್ರಿ ನರಸಿಂಹಸ್ವಾಮಿಯ ಶ್ರೇಷ್ಠ ಭಕ್ತ. ಚಿಕ್ಕವನಿರುವಾಗಲೆ ಯತ್ಯಾಶ್ರಮವನ್ನು ಪ್ರವೇಶಿಸಿ ಸಂಸ್ಕೃತ, ಸಂಗೀತ, ನೃತ್ಯಕಲೆಗಳನ್ನು ಕಲಿತು, ತಂಜಾವೂರು ಜಿಲ್ಲೆಗೆ ವಲಸೆ ಬಂದ. ತೆಲುಗಿನಲ್ಲಿ ಪಾರಿಜಾತ ಹರಣ ನಾಟಕ ಎಂಬ ಚಿಕ್ಕ ಸಂಗೀತ ನಾಟಕವೊಂದನ್ನು

ಈತ ರಚಿಸಿ ಅಚ್ಯುತಪುರದ (ಇಂದಿನ ಮೇಳತ್ತೂರು) ವರದರಾಜಸ್ವಾಮಿಗೆ ಅರ್ಪಿಸಿದ್ದಾನೆ. ಕಾವೇರಿಯ ಉಪನದಿಯೊಂದರ ಮೇಲಿರುವ ವರಹೂರಿನಲ್ಲಿ ಈತ ಕಡೆಗೆ ನೆಲೆಸಿದ. ಅಲ್ಲಿದ್ದು ಕೃಷ್ಣಲೀಲಾ ತರಂಗಿಣಿ ಎಂಬ ಬಹುಪ್ರಸಿದ್ಧ ಯಕ್ಷಗಾನವನ್ನು ಸಂಸ್ಕೃತದಲ್ಲಿ ರಚಿಸಿದ. ವರಹೂರಿನ ದೇವಾಲಯದ ದೇವರ ಮುಂದೆ ತರಂಗಗಳನ್ನು ಭಾವಪರವಶತೆಯಲ್ಲಿ ಹಾಡಿದುದಾಗಿಯೂ ನೃತ್ಯಮಾಡಿದುದಾಗಿಯೂ ಈತ ಹೇಳಿಕೊಂಡಿದ್ದಾನೆ. ಲಯ ವಿನ್ಯಾಸದ ಜಟಿಲ ಉದಾಹರಣೆಗಳು, ವಿಶೇಷವಾಗಿ, ಕೆಲವು ತರಂಗಗಳ ಚರಣಗಳ ಅಂತ್ಯದಲ್ಲಿ ಬರುವ ಶಬ್ದಗಳು ನೃತ್ಯಕ್ಕೆ ಬಹಳ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಕೂಚಿಪುಡಿಯ ಕಲಾವಿದರು ತರಂಗ ನೃತ್ಯದ ತಂತ್ರವನ್ನು ಕರಗತಮಾಡಿಕೊಂಡಿದ್ದು ಉದ್ದಕ್ಕೂ ಅದು ಈ ಪಂಥದ ವಿಶೇಷತೆಯಾಗಿ ಮುಂದುವರಿದಿದೆ.

ಕೂಚಿಪುಡಿ ನೃತ್ಯಕ್ಕೂ ಮತ್ತು ಇಂದಿನ ಭರತನಾಟ್ಯಕ್ಕೂ ಇರುವ ವ್ಯತ್ಯಾಸವಿದು : ಕೂಚಿಪುಡಿ ಪಂಥದ ನೃತ್ಯ ಅವಶ್ಯವಾಗಿ, ಮೂಲಭೂತವಾಗಿ ಭರತಮುನಿಯಿಂದ ಪ್ರತಿಪಾದಿತವಾದ ನೃತ್ಯನಾಟಕವಾಗಿದೆ. ನಾಟ್ಯರೂಪದ ಇದು ವಾಚಿಕ, ಆಂಗಿಕ, ಆಹಾರ್ಯ ಮತ್ತು ಸಾತ್ವಿಕ ಮೊದಲಾದ ನಾಟ್ಯಾಂಶಗಳನ್ನು ಒಳಗೊಂಡಿದ್ದು, ಶೈಕ್ಷಣಿಕ ಹಾಗೂ ಮನರಂಜಕ ಉದ್ದೇಶಗಳುಳ್ಳದಾಗಿದೆ. ಇದು ಹೃದಯ ಮುಟ್ಟುವಂಥ ವಿವಿಧ ಭಾವಗಳ ಪ್ರದರ್ಶನಕ್ಕೆ ಆಸ್ಪದ ಕೊಟ್ಟಿದ್ದು, ಅತ್ಯುನ್ನತ ಸಾಂಸ್ಕೃತಿಕ ಮೌಲ್ಯವನ್ನು ಹೊಂದಿದೆ. ವಿಶೇಷವಾಗಿ ಉಲ್ಲೇಖಿಸಬಹುದಾದ್ದೆಂದರೆ, ಸ್ತ್ರೀಪಾತ್ರಗಳ ಕಾರ್ಯಭಾಗಗಳೆಲ್ಲವನ್ನೂ ಪುರುಷರು ವಹಿಸಿಕೊಂಡಿರುವುದೇ ಆಗಿದೆ. ಇಂದಿನ ಭರತನಾಟ್ಯ ಪ್ರಾಯಶಃ 120 ವರ್ಷಗಳಷ್ಟು ಹಿಂದಿನದು, ಅಷ್ಟೆ ಅಲರಿಪು, ಜತಿಸ್ವರ, ಶಬ್ದ, ವರ್ಣ, ಪದ ಮತ್ತು ತಿಲ್ಲಾನ ಮೊದಲಾದ ಅಂಶಗಳು ತರ್ಕಬದ್ಧ ಅನುಪೂರ್ವಿಯೊಂದನ್ನು ಅನುಸರಿಸಿದ್ದು, ನೃತ್ಯ ಮತ್ತು ಅಭಿನಯಗಳ ಮೂಲಕ ನೃತ್ಯಕಲೆ ಹೇಗೆ ಅಭಿವೃದ್ಧಿಹೊಂದಿತು ಎಂಬುದನ್ನು ತೋರಿಸುತ್ತವೆ. ಈ ಅಂಶಗಳು ವಿಷಯಾನುಕ್ರಮಣಿಕೆಯಲ್ಲಿ ಒಂದು ಮತ್ತೊಂದರ ಜೊತೆ ಸಂಬಂಧವಾವುದನ್ನೂ ಹೊಂದಿರುವುದಿಲ್ಲ. ಪ್ರತಿಯೊಂದು ಅಂಶವೂ ತನಗೆ ತಾನೆ ಪೂರ್ಣವಾದುದಾಗಿದ್ದು, ಉನ್ನತಮಟ್ಟದ ಚಿಕ್ಕದಾದರೂ ಚೊಕ್ಕವಾದ ಮನೋರಂಜನೆಯನ್ನು ಒದಗಿಸುತ್ತದೆ. ಈ ಭರತನಾಟ್ಯಯೋಜನೆ ತಂಜಾವೂರು ದರ್ಬಾರಿನಲ್ಲಿ ವಡಿವೇಲು ಮತ್ತು ಅವನ ಸೋದರರಿಂದ ರಚಿತವಾದುದು. ಸಾಮಾನ್ಯವಾಗಿ ಒಬ್ಬಳೇ ಒಬ್ಬ ಯುವಸ್ತ್ರೀ ಪ್ರವೀಣೆ ಈ ಎಲ್ಲ ಅಂಶಗಳನ್ನೂ ನಿರ್ವಹಿಸುತ್ತಾಳೆ.

ಇತ್ತೀಚಿನ ವರ್ಷಗಳಲ್ಲಿ ಕೂಚಿಪುಡಿ ಕಲಾವಿದರು ಕೂಡಿ ಮೇಲಿನಂತೆ ತರಂಗ ನೃತ್ಯವನ್ನು, ವಿಶೇಷವಾಗಿ ಬಾಲಗೋಪಾಲ ತರಂಗ, ಮುವ್ವಾ ಗೋಪಾಲಪಾದ ಅಭಿನಯ, ತಿಲ್ಲಾನ ಮತ್ತು ದಶಾವತಾರ ನೃತ್ಯಗಳನ್ನು ಒಳಗೊಂಡಂತೆ ವಿನೋದ ಪ್ರದರ್ಶನಗಳನ್ನು ಕೊಡುತ್ತಿದ್ದಾರೆ. ಪ್ರದರ್ಶನ ಪುಷ್ಪಾಂಜಲಿಯಿಂದ ಪ್ರಾರಂಭವಾಗಿ ತಿಲ್ಲಾನದಿಂದ ಮುಕ್ತಾಯವಾಗುತ್ತದೆ.

ಕೂಚಿಪುಡಿ ಕಲೆಯ ಭವ್ಯತೆಯನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಗಳು ನಡೆದಿವೆ. ಈ ವಿಷಯದಲ್ಲಿ ಆಂಧ್ರಪ್ರದೇಶ ಸಂಗೀತ ನಾಟಕ ಅಕಾಡಮಿ ಮಾರ್ಗದರ್ಶನವೀಯುತ್ತಿದೆ. ಕೂಚಿಪುಡಿಯ ವೆಂಕಟರಾಮ ನಾಟ್ಯ ಮಂಡಲಿಯ ಮುಖಂಡರಾದ ಚಿಂತಾಕೃಷ್ಣಮೂರ್ತಿಯವರು ತಮ್ಮ ತಂಡದೊಡನೆ ಸಾರ್ವಜನಿಕ ಪ್ರದರ್ಶನಗಳನ್ನು ಕೊಡುತ್ತಿದ್ದಾರೆ. ಪ್ರಮುಖ ಸ್ತ್ರೀಪಾತ್ರದಲ್ಲಿ ಭಾಗವಹಿಸುವ ವೇದಾಂತಂ ಸತ್ಯನಾರಾಯಣ ಅವರು 1961ರ ರಾಷ್ಟ್ರಪತಿ ಪಾರಿತೋಷಕವನ್ನು ಪಡೆದವರಾಗಿದ್ದಾರೆ. (ವಿ.ಎ.)

**ಕೂಟಯೋಧರು :** ಶತ್ರುಸೈನ್ಯಗಳಿಗೆ ಕಿರುಕುಳ ಕೊಟ್ಟು ಅಕ್ರಮ ಕಾಳಗಗಳಿಂದ ಅವರನ್ನು ಸದೆಬಡಿಯುವ ಸಾಹಸಿಗರು (ಸ್ನೈಪರ್ಸ್). ಹಸ್ತಕೌಶಲ, ಶೀಘ್ರಗಾಮಿತ್ವ ತಾವು ಕಾರ್ಯವೆಸಗುವ ವಲಯದ ನಿಕಟ ಪರಿಚಯ ಇವೆಲ್ಲವೂ ಕೂಟಯೋಧರಿಗೆ ಅತ್ಯಾವಶ್ಯಕ. ವೈರಿಗಳ ಚಲನವಲನಗಳನ್ನು ಗೂಢಚರ್ಯೆಯಿಂದ ಮೊದಲೇ ಅರಿತು ಆಯಕಟ್ಟಿನ ಭಾಗಗಳಿಗೆ ತೀವ್ರ ಘಾಸಿಯನ್ನು ಹಠಾತ್ತನೆ ಎಸಗಿ ವೈರಿಯ ಧೃತಿ ಕೆಡಿಸುವುದರಲ್ಲಿ ಕೂಟಯೋಧರದು ಎತ್ತಿದ ಕೈ. ಶತ್ರುವಿನ ಸರಬರಾಜುರೇಖೆ, ಸಂಪರ್ಕವ್ಯವಸ್ಥೆ, ಹಿಂಚೂಣಿಯ ಕೋಮಲ ಪ್ರದೇಶಗಳ ವಿರುದ್ಧ ಈ ಸಾಹಸಿಗರಿಗೆ ಸದಾ ಗೃಧ್ರದೃಷ್ಟಿ. ಕೂಟಯೋಧರು ಸಾಮಾನ್ಯವಾಗಿ ಕ್ರಮಬದ್ಧ ಶಿಕ್ಷಣಪಡೆದ ಸೈನಿಕರಲ್ಲ. ಆದರೆ ಇವರು ರಾಷ್ಟ್ರೀಯ ಸೈನ್ಯದ ಬೆಂಬಲ ಪಡೆಯಬಹುದು. (ಎಂ.ಜಿ.ಕೆ.ಎಂ.)

**ಕೂಡಕ್ಷರ :** ಸಾಮಾನ್ಯವಾಗಿ ಯಾವುದಾದರೂ ಹೆಸರನ್ನು ಪ್ರತಿನಿಧಿಸಲು ಎರಡು ಅಥವಾ ಹೆಚ್ಚಿನ (ಮೊದಲ) ಅಕ್ಷರಗಳನ್ನು ಪರಸ್ಪರ ಹೆಣೆದಂತೆ ರಚಿಸಿರುವ ಹಾಗೂ ಮೊಹರಿನ ಮುದ್ರೆಯಲ್ಲಿ ಅಥವಾ ಅಧಿಕೃತ ಪತ್ರಗಳಲ್ಲಿ ಉಪಯೋಗಿಸುವ ವಿಶೇಷ ಚಿಹ್ನೆ (ಮೊನೋಗ್ರ್ಯಾಮ್). ಗ್ರೀಕ್ ಮತ್ತು ರೋಮನರ ಕಾಲದಲ್ಲಿ ನಾಣ್ಯಗಳ ಮೇಲೆ, ಪದಕಗಳ ಮೇಲೆ ಹಾಗೂ ಸಾರ್ವಜನಿಕ ಸ್ಮಾರಕಗಳ ಮೇಲೆ ಈ ಸಾಂಕೇತಿಕ ಕೂಡಕ್ಷರಗಳನ್ನು ವಿಶೇಷವಾಗಿ ಬಳಸುತ್ತಿದ್ದರು. ಯಾವ ರಾಜರಿಗಾಗಿ, ಅಥವಾ ಯಾವ ಸ್ಥಳದಲ್ಲಿ ನಾಣ್ಯವನ್ನು ಮುದ್ರಿಸಿದೆಯೆಂಬ ಗುರುತು ಇದರಲ್ಲಿ ಇರುತ್ತಿತ್ತು. ಮುದ್ರಣದ ಆರಂಭ ಕಾಲದ ಪುಸ್ತಕಗಳಲ್ಲಿ ಮುದ್ರಕರ ವಿಶಿಷ್ಟ ಚಿಹ್ನೆಯಾಗಿ ಸಹ ಇವು ಬಳಸಲ್ಪಡುತ್ತಿದ್ದು, ಆ ಪುಸ್ತಕಗಳ ಸರಿಯಾದ ಪತ್ತೆಗೆ ಇವು ಉಪಯುಕ್ತವಾಗಿವೆ. ಚಿತ್ರಕಲೆಯಲ್ಲೂ ಕೆತ್ತನೆ ಕೆಲಸದಲ್ಲೂ ಕಲೆಗಾರರ ಅಂಕಿತವಾಗಿ ಇವು ಉಪಯೋಗಿಸಲ್ಪಟ್ಟಿವೆ. ಮಧ್ಯಯುಗದಲ್ಲಿಯೂ ಈ ಕೂಡಕ್ಷರಗಳ ಹೊಸ ಹೊಸ ಮಾದರಿಗಳು ಕ್ರೈಸ್ತ ಮತದ ಕಲೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಸಮೃದ್ಧವಾಗಿ ಹೊರಬರುತ್ತಿದ್ದವು. ಪ್ರತಿಯೊಬ್ಬ ಗಣ್ಯಪುರುಷನಿಗೂ ಸುಸಂಸ್ಕೃತನೆನ್ನಿಸಿಕೊಂಡವನಿಗೂ ಕಲಾವಿದನಿಗೂ ತನ್ನದೇ ಆದ ಇಂಥ ಸಂಕೇತವಿರುತ್ತಿತ್ತು. ವಂಶಲಾಂಛನ ದ್ಯೋತಕಗಳನ್ನು ಬಳಸಲು ಅಧಿಕಾರವಿರದಿದ್ದುದರಿಂದ ವರ್ತಕರು ಅವುಗಳ ಬದಲು ತಮ್ಮದೇ ಆದ ನಕ್ಷೆಯೊಡಗೂಡಿದ ಕೂಡಕ್ಷರದ ಮುದ್ರಿಕೆಗಳನ್ನು ಉಪಯೋಗಿಸುತ್ತಿದ್ದರು. ಚಂಡಮಾರುತಗಳಿಂದಲೂ ಆಕಸ್ಮಿಕ ಅನಾಹುತಗಳಿಂದಲೂ ರಕ್ಷಣೆಯಿರಲೆಂದೋ ಅಥವಾ ತಮ್ಮ ವಸ್ತುಗಳನ್ನು ಪ್ರಾಚ್ಯ ಮಹಮ್ಮದೀಯ ವರ್ತಕರ ವಸ್ತುಗಳಿಂದ ಭಿನ್ನವೆಂದು ತೋರಿಸಿಕೊಳ್ಳಲೋ ತಮ್ಮ ಕ್ರೈಸ್ತ ಕುರುಹಾಗಿ ಶಿಲುಬೆಯ ಗುರುತನ್ನು ಸಾಧಾರಣವಾಗಿ ಅದರಲ್ಲಿ ಅಳವಡಿಸಿರುತ್ತಿದ್ದರು. ಡಚ್ ವಾಣಿಜ್ಯ ಸಂಸ್ಥೆಗಳು ತಮ್ಮ ಇಂಥ ಸಂಕೇತಗಳನ್ನು ಬಾವುಟಗಳ ಮೇಲೆ ಪ್ರದರ್ಶಿಸುತ್ತಿದ್ದರು. ಹೀಗೆ ವರ್ತಕನೊಬ್ಬನ ಕುರುಹನ್ನುಳ್ಳ 16ನೆಯ ಶತಮಾನದ ಸೊಗಸಾದ ಚಿನ್ನದುಂಗುರವೊಂದು ಬ್ರಿಟಿಷ್ ಪ್ರಾಚೀನ ವಸ್ತುಸಂಗ್ರಹ ಶಾಲೆಯಲ್ಲಿ ಪ್ರದರ್ಶಿತವಾಗಿದೆ. ಅತ್ಯಂತ ಸುಪ್ರಸಿದ್ಧವಾದ ಧಾರ್ಮಿಕ ಕೂಡಕ್ಷರ ಚಿಹ್ನೆಯೆಂದರೆ ಗ್ರೀಕ್ ಭಾಷೆಯಲ್ಲಿ ಕ್ರಿಸ್ತ ಎಂಬ ಹೆಸರಿನ ಮೊದಲೆರಡಕ್ಷರಗಳು ಒಂದಕ್ಕೊಂದು ಹೆಣೆದುಕೊಂಡಿರುವುದು. ಲೌಕಿಕ ಚಿಹ್ನೆಗಳಲ್ಲಿ ಪ್ರಸಿದ್ಧವಾದವುಗಳಲ್ಲಿ ಎರಡನೆಯ ಹೆನ್ರಿ ಮತ್ತು ಡಯನಾ ಡಿ ಪೊಯಿಷರ್ಸ್ ಅವರ ಸಂಯೋಜಿತ ಕೂಡಕ್ಷರವನ್ನು ಹೆಸರಿಸಬಹುದು. ಆ ದೊರೆ ಕಟ್ಟಿಸಿದ ಕಟ್ಟಡಗಳ ಮೇಲೆ, ಅರಮನೆಯ ಪುಸ್ತಕ ಭಂಡಾರದ ಪುಸ್ತಕಗಳ ರಟ್ಟಿನ ಮೇಲೆ ಇವರ ಚಿಹ್ನೆಯನ್ನು ಬಿಲ್ಲು, ಬತ್ತಳಿಕೆ ಮತ್ತು ಡಯಾನ ಅಧಿದೇವತೆಯ ಬಾಲಚಂದ್ರಾಕಾರದ ಗುರುತುಗಳು ಇವುಗಳೊಡನೆ h ಮತ್ತು d ಅಕ್ಷರಗಳು ಹೆಣೆದು ಕೊಂಡಿರುವುದನ್ನು ಕಾಣಬಹುದು. ರೆಂಬ್ರಾಂಡ್ಟ್ ಮತ್ತು ಡ್ಯೂರರ್ ಇವರ ಚಿಹ್ನೆಗಳನ್ನು ಕಲಾವಿದರ ಕೂಡಕ್ಷರಗಳಲ್ಲಿ ಪ್ರಸಿದ್ಧವಾದದ್ದೆಂದು ಪರಿಗಣಿಸಬಹುದು. (ಕೆ.ವಿ.ಎಸ್.)

**ಕೂಡಲಸಂಗಮ :** ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ಒಂದು ಗ್ರಾಮ; ಸಂಗಮ. ಇಲ್ಲಿ ಮಲಪ್ರಭಾನದಿ ಕೃಷ್ಣಾನದಿಯೊಂದಿಗೆ ಸೇರುವುದು. ಇದೇ ಕೂಡಲಸಂಗಮವೆಂದು ಪ್ರಸಿದ್ಧಿ ಹೊಂದಿದ ಪವಿತ್ರ ಸ್ಥಳವಾಗಿದೆ. ಹುನಗುಂದದ ಉತ್ತರಕ್ಕೆ 16 ಕಿಮೀ ದೂರದಲ್ಲಿದೆ. ಇಲ್ಲಿ ಚಾಳುಕ್ಯ ಶೈಲಿಯಲ್ಲಿ ಕಟ್ಟಿದ ಸಂಗಮೇಶ್ವರ ದೇವಸ್ಥಾನವಿದೆ. ಇಲ್ಲಿರುವ ಶಿವಲಿಂಗ ಪ್ರಸಿದ್ಧವಾದುದು. ವರ್ಷಕ್ಕೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ. 12ನೆಯ ಶತಮಾನದಲ್ಲಿ ಕುಲಪತಿ ಜಾತವೇದಮುನಿ ಒಂದು ವಿದ್ಯಾಕೇಂದ್ರವನ್ನು ಇಲ್ಲಿ ಸ್ಥಾಪಿಸಿದ್ದನೆಂದೂ ಈತನ ಆಶ್ರಮದಲ್ಲಿ ಬಸವೇಶ್ವರ, ಚೆನ್ನಬಸವಣ್ಣ, ಅಕ್ಕನಾಗಮ್ಮ



ಮೊದಲಾದವರು ಇದ್ದರೆಂದೂ ಹೇಳಲಾಗಿದೆ. ವೀರಶೈವ ಧರ್ಮೋದ್ಧಾರಕ ಬಸವಣ್ಣನವರ ಆರಾಧ್ಯದೈವ ಸಂಗಮನಾಥ. ಇವರ ವಚನಗಳ ಅಂಕಿತವಾದ ಕೂಡಲಸಂಗಮದೇವ ಈ ದೇವನೇ. ಇವರ ಬಾಲ್ಯ ಹಾಗೂ ವಿದ್ಯಾಭ್ಯಾಸ ಇಲ್ಲಿ ನಡೆಯಿತೆಂದೂ ಕಲ್ಯಾಣದಲ್ಲಿ ಬಿಜ್ಜಳನ ರಾಜ್ಯದಲ್ಲಿ ಪ್ರಧಾನಿಯಾದ ಮೇಲೆ ಇವರು ಧಾರ್ಮಿಕ ಹಾಗೂ ರಾಜಕೀಯ ಒತ್ತಡಕ್ಕೆ ಸಿಲುಕಿದಾಗ ಸಂಗಮಕ್ಕೆ ಹಿಂದಿರುಗಿ ಕೂಡಲ ಸಂಗಮನಲ್ಲಿ ಐಕ್ಯರಾದರೆಂದೂ ಚರಿತ್ರೆಯಿಂದ ತಿಳಿದುಬರುತ್ತದೆ. ಐಹೊಳೆ, ಪಟ್ಟದಕಲ್ಲು, ರಕ್ಕಸತಂಗಡಿ, ಮಹಾಕೂಟ, ಬಾದಾಮಿ– ಇವು ಕೂಡಲ ಸಂಗಮದ ಸಮೀಪದಲ್ಲಿವೆ.

ಕರ್ನಾಟಕ ಸರ್ಕಾರದ ಕೊಡುಗೆಯಿಂದ ಮತ್ತು ಕೂಡಲಸಂಗಮದ ಅಭಿವೃದ್ಧಿಗೆ ಸೇವೆ ಸಲ್ಲಿಸುತ್ತಿರುವ ಮಠಮಾನ್ಯಗಳಿಂದ ಇಂದು ಕೂಡಲಸಂಗಮ ಒಂದು ಪವಿತ್ರಕ್ಷೇತ್ರವೆಂದು ಪ್ರಸಿದ್ಧಿಪಡೆದುಕೊಂಡು ದೇಶದ ಎಲ್ಲೆಡೆಯಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. (ಬಿ.ಎಸ್.)

# ಇಂಗ್ಲಿಷ್ ಪದಸೂಚಿ

**ಇದು ಮುಖ್ಯ ವಿಷಯಗಳ ಸೂಚಿ ಮಾತ್ರ. ಸಂಖ್ಯೆಯು ಪುಟವನ್ನೂ ಎ ಎನ್ನುವುದು ಪುಟದ ಎಡ ಅಂಕಣವನ್ನೂ ಬ ಎನ್ನುವುದು ಪುಟದ ಬಲ ಅಂಕಣವನ್ನೂ ಸೂಚಿಸುತ್ತವೆ.**


Abscess – ಕುರು ೮೪೭ಬ
Abutilon – ಕುರುವೆಗಿಡ ೮೫೩ಎ
Acalypha indica – ಕುಪ್ಪಿಗಿಡ ೮೧೯ಬ
Acridotheres fuscus – ಕಾಡು ಮೈನ ೪೨೮ಬ
Actinomycosis – ಕಿರಣಣಬೆ ಬೇನೆ ೬೯೪ಎ
Aetiology – ಕಾರ್ಯಕಾರಣಶಾಸ್ತ್ರ ೫೬೫ಎ
Albizzia chinensis – ಕಲ್ಬಾಗಿ ೨೫೮ಬ
Amaranthus – ಕೀರೆಸೊಪ್ಪಿನ ಗಿಡ ೭೫೬ಬ
Anamirta cocculus – ಕಾಗೆಮಾಂಬಳ್ಳಿ ೪೧೩ಎ
Andrographis paniculata – ಕಾಲಮೇಘ ೫೮೭ಎ
Ankylosis – ಕೀಲುಗಟ್ಟ ೭೬೧ಬ
Anthelmintics – ಕರುಳುಹುಳು ನಿರೋಧಕಗಳು ೫ಬ
Anthology – ಕಾವ್ಯಮಂಜರಿ ೬೩೦ಬ
Aphrodisiac – ಕಾಮೋತ್ತೇಜಕ ೪೮೭ಬ
Appendicitis – ಕರುಳುವಾಳುರಿತ ೫ಎ
Aquarius – ಕುಂಭರಾಶಿ ೭೮೬ಎ
Arisaema – ಕಾಡುಸುವರ್ಣಗೆಡ್ಡೆ ೪೨೯ಬ
Armour – ಕವಚ ೨೮೦ಎ
Art – ಕಲೆ ೨೩೫ಎ
Artefact, Making of – ಕಲಾವಸ್ತು ವಿರಚನೆ ೨೨೨ಎ
Art for art's sake – ಕಲೆಗಾಗಿ ಕಲೆ ೨೩೯ಎ
Art galleries – ಕಲಾಮಂದಿರಗಳು ೨೨೦ಎ
Arthritis – ಕೀಲುರಿತ ೭೬೫ಎ
Asbestos – ಕಲ್ನಾರು ೨೫೨ಎ
Auricular canal – ಕಿವಿಯ ಸಾಗಾಲುವೆ ೭೧೭ಎ
Bagarius yarellii – ಕುಳ್ದಿಮೀನು ೮೯೧ಬ
Barbus dubius – ಕಾವೇರಿಗೆಂಡೆ ೬೧೭ಬ
Bee eater – ಕಳ್ಳಿಪೀರ ೩೨೮ಬ
Bison – ಕಾಡುಕೋಣ ೪೨೦ಬ
Black house – ಕಾಹುಗೋಟೆ ೬೫೧ಬ
Black market – ಕಾಳಸಂತೆ ೬೫೩ಬ
Blind fish – ಕುರುಡು ಮೀನು ೮೫೧ಬ
Blind worm – ಕುರುಡು ಹುಳು ೮೫೧ಬ
Boehmeria – ಕಿತ್ತಾನಾರು ೬೮೫ಎ
Boil – ಕುರು ೮೪೭ಬ
Borer beetle – ಕಾಳು ಕೊರೆಯುವ ಕುಟ್ಟೆ ೬೬೩ಎ
Bort – ಕೀಳುವಜ್ರ ೭೭೧ಬ
Bower bird – ಕುಂಜಪಕ್ಷಿ ೭೭೩ಎ
Brocade – ಕಿನ್‌ಕಾಪು ೬೮೮ಎ
Buck wheat – ಕಾಡುಗೋದಿ ೪೨೨ಎ
Cactus – ಕಳ್ಳಿ ೩೨೬ಬ
Cairns – ಕಲ್ಲುಗುಡ್ಡೆ ಸಮಾಧಿಗಳು ೨೭೪ಎ
Caladium – ಕಲೇಡಿಯಮ್ ೨೪೫ಎ
Calculus – ಕಲನಶಾಸ್ತ್ರ ೧೯೨ಬ
Calculus – ಕಲ್ಲುಗಳು, ವೈದ್ಯದಲ್ಲಿ ೨೭೧ಬ
Caldera – ಕಾಲ್ಡೆರ ೬೧೧ಎ
Call money – ಕರೆಹಣ ೭ಎ
Camphor – ಕರ್ಪೂರ ೧೮೨ಎ
Camphor tree – ಕರ್ಪೂರದ ಮರ ೧೮೨ಬ
Canarium strictum – ಕಾಯಿಧೂಪ ೪೯೦ಎ
Cancer – ಕರ್ಕಾಟಕ ರಾಶಿ ೮ಬ
Canna indica – ಕಾಬಾಳೆ ೪೬೪ಎ
Canthium parviflorum – ಕಾರೇಗಿಡ ೫೦೭ಬ
Carbazole – ಕಾರ್ಬಝೋಲ್ ೫೩೩ಎ
Carbenes – ಕಾರ್ಬೀನುಗಳು ೫೩೫ಎ
Carbides – ಕಾರ್ಬೈಡುಗಳು ೫೩೬ಬ
Carbohydrates – ಕಾರ್ಬೋಹೈಡ್ರೇಟುಗಳು ೫೩೯ಎ
Carbomycin – ಕಾರ್ಬೊಮೈಸಿನ್ ೫೩೮ಎ
Carbonates – ಕಾರ್ಬೊನೇಟುಗಳು ೫೩೬ಬ
Carbon-14 dating – ಕಾರ್ಬನ್–14 ಕಾಲನಿರ್ಣಯ ೫೩೩ಎ
Carboniferous system – ಕಾರ್ಬನಿಫೆರಸ್ ಸ್ತೋಮ ೫೩೩ಬ
Carbonium ion – ಕಾರ್ಬೋನಿಯಂ ಅಯಾನ್ ೫೩೮ಬ
Carburettor – ಕಾರ್ಬ್ಯುರೇಟರ್ ೫೪೬ಎ
Cardium – ಕಾಕಲ್ ೩೯೧ಬ
Carludovica – ಕಾರ್ಲ್ಯುಡೊವೈಕ ೫೭೦ಎ
Carnosine – ಕಾರ್ನೊಸಿನ್ ೫೨೬ಬ
Carnotite – ಕಾರ್ನೊಟೈಟ್ ೫೨೬ಬ
Carnot's cycle – ಕಾರ್ನೋ ಚಕ್ರ ೫೨೭ಎ
Cartesianism – ಕಾರ್ಟೀಸಿಯನಿಸಂ ೫೧೬ಎ
Cassava flour – ಕಸಾವ ಪಿಷ್ಟ ೩೦೧ಎ
Cassie flower – ಕಸ್ತೂರಿ ಜಾಲಿ ೩೧೪ಎ
Catapult – ಕವಣೆ ೨೮೩ಬ
Catechu – ಕಾಚು ೪೧೫ಬ
Causality – ಕಾರ್ಯಕಾರಣಭಾವ ೫೬೨ಬ
Caustic – ಕಾಡಿಕಾರ ೪೧೯ಎ
Cavitation – ಕುಳಿಬೀಳುವುದು ೮೯೦ಬ
Centrantherum – ಕಾಡುಜೀರಿಗೆ ೪೨೩ಬ
Ceramic technique – ಕುಂಭಕಲಾತಂತ್ರ ೭೮೩ಎ
Ceribellum – ಕಿರುಮಿದುಳು ೭೦೪ಎ
Chaetopoda – ಕೀಟಾಪೊಡ ೭೪೨ಎ
Chenopodiaceae – ಕೀನೊಪೋಡಿಯೇಸೀ ೭೫೦ಬ
Chenopodium ambrosoides – ಕಾಡು ಓಮ ೪೧೯ಬ
Cholera – ಕಾಲರ ೫೮೭ಬ
Chopper – ಕಲ್ಲುಮಚ್ಚು ೨೭೫ಬ

Chordata – ಕಾರ್ಡೇಟ ೫೧೮ಬ
Chronaxie – ಕಾಲಾಂಕ ೫೯೯ಎ
Cronograph and Chronometer – ಕಾಕಲೇಖಿ ಮತ್ತು ಕಾಲಮಾಪಿ ೫೯೧ಎ
Cinnamomum tamala – ಕಾಡು ದಾಲ್ಚಿನ್ನಿ ೪೨೪ಎ
Civil disobedience – ಕಾನೂನುಭಂಗ ಚಳವಳಿ ೪೪೪ಎ
Coal – ಕಲ್ಲಿದ್ದಲು ೨೯೩ಎ
Coal, chemistry of – ಕಲ್ಲಿದ್ದಲಿನ ರಸಾಯನ ವೃತ್ತಾಂತ ೨೬೧ಬ
Coccidae – ಕಾಕ್ಸಿಡೀ ೩೯೮ಎ
Coccidiosis – ಕಾಕ್ಸೀಡಿಯ ರೋಗ ೩೯೯ಬ
Coccinelhdae – ಕಾಕ್ಸಿನೆಲ್ಲಿಡೀ ೩೯೯ಎ
Coccothrinax – ಕಾಕೊಥ್ರೈನ್ಯಾಕ್ಸ್ ೩೯೭ಎ
Coccus – ಕಾಯ್ಜೀವಿ ೪೯೦ಎ
Cochineal – ಕಾಚಿನಿಯಾಲ್ ೪೧೫ಎ
Cocks comb – ಕಾಕ್ಸ್ ಕೂಂಬ್ ೩೯೭ಎ
Cod fish – ಕಾಡ್ ಮೀನು ೪೧೮ಬ
Coelenterata – ಕುಟುಕು ಕಣವಂತಗಳು ೮೦೦ಬ
Coffee – ಕಾಫಿ ೪೫೬ಎ
Coffee trade – ಕಾಫಿ ವ್ಯಾಪಾರ ೪೬೧ಎ
Collodion – ಕಲೋಡಿಯನ್ ೨೪೬ಎ
Collagen – ಕಾಲಜನ್ ೫೭೬ಎ
Colchicum – ಕಾಲ್ಚಿಕಮ್ ೬೧೦ಎ
College – ಕಾಲೇಜು ೬೦೪ಎ
College education – ಕಾಲೇಜು ಶಿಕ್ಷಣ ೬೦೪ಎ
Colloid – ಕಲಿಲ ೨೨೭ಎ
Collotype printing – ಕಾಲೊಟೈಪ್ ಮುದ್ರಣ ೬೦೬ಬ
Colonel – ಕರ್ನಲ್ ೨೭ಬ
Combat fatigue – ಕಾದಾಟದ ಆಯಾಸ ೪೩೯ಎ
Commonwealth economy – ಕಾಮನ್‌ವೆಲ್ತಿನ ಆರ್ಥಿಕತೆ ೪೭೭ಬ
Commonwealth games – ಕಾಮನ್‌ವೆಲ್ತಿನ ಕ್ರೀಡೆಗಳು ೪೭೩ಎ
Commonwealth of Nations – ಕಾಮನ್‌ವೆಲ್ತ್ ರಾಷ್ಟ್ರಸಮುದಾಯ ೪೭೪ಎ
Commutator – ಕಾಮ್ಯುಟೇಟರ್ ೪೮೮ಎ
Comparettia – ಕಾಂಪರೆಟಿಯ ೩೮೪ಎ
Composite beam – ಕಾಂಪೊಸಿಟ್ ದೂಲ ೩೮೪ಬ
Compton effect – ಕಾಂಪ್ಟನ್ ಪರಿಣಾಮ ೩೮೫ಬ
Concrete – ಕಾಂಕ್ರೀಟ್ ೩೨೯ಎ
Concretions – ಕಲ್ಲುಂಡೆಗಳು ೨೭೧ಎ
Condor – ಕಾಂಡಾರ್ ಹಕ್ಕಿ ೩೫೭ಬ
Conflict of laws – ಕಾನೂನುಗಳ ಅಸಾಂಗತ್ಯ ೪೪೨ಬ
Congo red – ಕಾಂಗೋ ಕೆಂಪು ೩೩೩ಎ
Consul – ಕಾನ್ಸಲ್ ೪೪೮ಎ
Convent – ಕಾನ್ವೆಂಟ್ ೪೪೮ಎ
Coptic art – ಕಾಪ್ಟಿಕ್ ಕಲೆ ೪೫೨ಎ
Coptic church – ಕಾಪ್ಟಿಕ್ ಚರ್ಚ್ ೪೫೪ಎ
Copti Language and Literature – ಕಾಪ್ಟಿಕ್ ಭಾಷೆ ಮತ್ತು ಸಾಹಿತ್ಯ ೪೫೪ಬ
Coptic script – ಕಾಪ್ಟಿಕ್ ಲಿಪಿ ೪೫೬ಎ
Caracii formes – ಕಾರಸೈಯಿಫಾರ್ಮೀಸ್ ೪೯೯ಎ
Cordillers – ಕಾರ್ಡಿಲ್ಲೆರಾ ೫೧೭ಬ
Cordite – ಕಾರ್ಡೈಟ್ ೫೧೯ಬ
Corduroy – ಕಾರ್ಡುರಾಯ್ ೫೧೮ಎ
Cork – ಕಾರ್ಕ್ ೫೦೯ಎ
Corn flower – ಕಾರನ್ ಫ್ಲವರ್ ೪೯೬ಎ
Corn step liquor – ಕಾರನ್ ಸ್ಟೀಪ್ ಲಿಕ್ಕರ್ ೪೯೬ಬ
Corona discharge – ಕರೋನ ವಿಸರ್ಜನೆ ೮ಎ
Coronary thrombosis – ಕಿರೀಟಕ ಕೂಡುಗರಣೆಕೆ ೬೯೫ಬ
Corporation – ಕಾರ್ಪೊರೇಷನ್ ೫೨೯ಎ
Corporation tax – ಕಾರ್ಪೊರೇಷನ್ ತೆರಿಗೆ ೫೨೯ಬ
Cortisone – ಕಾರ್ಟಿಸೋನ್ ೫೧೬ಎ
Corundum – ಕುರಂದ ೮೩೭ಬ
Corvidae – ಕಾರ್ವಿಡೀ ೫೭೦ಬ
Cosmos – ಕಾಸ್‌ಮಾಸ್ ೬೫೦ಎ
Costus – ಕಾಸ್ಟಸ್ ೬೪೯ಎ
Cotinus – ಕಾಟಿನಸ್ ೪೧೭ಎ
Cotyledon – ಕಾಟಿಲೀಡನ್ ೪೧೭ಬ
Cougar – ಕೂಗರ್ ೮೯೨ಎ
Cowries – ಕವಡೆಗಳು ೨೮೨ಎ
Crow – ಕಾಗೆ ೪೧೨ಬ
Cucumis trigonus – ಕಾಡುಬುಡುಮೆ ೪೨೬ಎ
Cucurbitacae – ಕುಕರ್ಬಿಟೇಸೀ ೭೮೭ಬ
Curculigo – ಕರ್‌ಕ್ಯೂಲಿಗೊ ೯ಬ
Curculionidae – ಕರ್ಕ್ಯೂಲಿಯಾನಿಡೀ ೧೧ಎ
Curcumin – ಕರ್‌ಕ್ಯುಮಿನ್ ೯ಎ
Curiosity – ಕುತೂಹಲ ೮೦೮ಬ
Cutlass fish – ಕುಡುಗತ್ತಿ ಮೀನು ೮೦೬ಬ
Cutlery – ಕರ್ತನೋಪಕರಣಗಳು ೨೭ಎ
Dactyloctenium egypticum – ಕಾಡುರಾಗಿ ಹುಲ್ಲು ೪೨೮ಬ
Dating methods – ಕಾಲನಿರ್ಣಯ ವಿಧಾನಗಳು ೫೭೬ಬ
Deaf, Education of the – ಕಿವುಡರ ಶಿಕ್ಷಣ ೭೧೮ಬ
Deafness and impaired hearing – ಕಿವುಡು ಮತ್ತು ಅರೆಗಿವುಡು ೭೨೨ಎ
Decubitus ulcer – ಕುಂಟು ಹುಣ್ಣು ೭೭೩ಬ
Devitrification – ಕಾಚುಗುಣನಾಶ ೪೧೬ಎ
Diagonal – ಕರ್ಣ೨ ೧೫ಎ
Dillenia pentagyna – ಕಾಡು ಕಣಗಿಲು ೪೧೯ಬ
Dipsomania – ಕುಡುವ ಗೀಳು ೮೦೬ಎ
Drag – ಕರ್ಷಣ೧ ೧೯೧ಬ
Drongo – ಕಾಜಾಣ ೪೧೬ಬ
Dysoxylum binectraiferum – ಕಾಡುಗಂಧ ೪೨೧ಬ
Ear – ಕಿವಿ ೭೦೭ಬ
Ear, Diseases – ಕಿವಿಯ ರೋಗಗಳು ೭೧೩ಬ
Ear, nose and throat, Diseases – ಕಿವಿ, ಮೂಗು ಮತ್ತು ಗಂಟಲು ರೋಗಗಳು ೭೧೨ಎ

Ear wigs – ಕರ್ಣಕೀಟಗಳು ೧೬ಬ
Electric ray – ಕುರುಡು ವಿದ್ಯುತ್ ಮೀನು ೮೫೧ಬ
Embroidery – ಕಸೂತಿ ೩೦೩ಬ
Enteritis – ಕರುಳುರಿತ ೫ಎ
Entomology – ಕೀಟಶಾಸ್ತ್ರ ೭೩೯ಬ
Enzymes – ಕಿಣ್ವಗಳು ೬೭೭ಬ
Equisetum – ಕುದುರೆಬಾಲದ ಗಿಡ ೮೧೩ಎ
Erotic literature – ಕಾಮಲೇಖನ ೪೭೯ಎ
Erythrina suberosa – ಕಾಡುಪಾರಿವಾಳದ ಮರ ೪೨೫ಬ
Ethnic communities – ಕುಲನಿಷ್ಠ ಜನಸಮುದಾಯಗಳು ೮೫೯ಎ
Ethnic groups – ಕುಲನಿಷ್ಠ ವರ್ಗಗಳು ೮೬೦ಎ
Executive – ಕಾರ್ಯಾಂಗ ೫೬೭ಎ
Factory analysis – ಕಾರಕ ವಿಶ್ಲೇಷಣೆ ೪೯೫ಎ
Factorial experiments – ಕಾರಕ ಪ್ರಯೋಗಗಳು ೪೯೨ಬ
Factory organisation – ಕಾರ್ಖಾನೆಯ ಸಂಘಟನೆ ೫೧೧ಎ
Factory system – ಕಾರ್ಖಾನೆ ವ್ಯವಸ್ಥೆ ೫೧೪ಬ
Fairy tale – ಕಿನ್ನರ ಕಥೆ ೬೮೮ಬ
Family – ಕುಟುಂಬ ೭೯೨ಎ
Family planning – ಕುಟುಂಬ ಯೋಜನೆ ೭೯೫ಬ
Fighting fish – ಕಾಳಗ ಮೀನು ೬೫೧ಬ
Fire brick – ಕಾವಿಟ್ಟಿಗೆ ೬೧೫ಎ
Fire clay – ಕಾವು ಜೇಡು ೬೧೬ಎ
Flagellata – ಕಶಾಂಗಿಗಳು ೨೯೨ಬ
Flagellum – ಕಶಾಂಗ ೨೯೨ಎ
Flour Bettle – ಕುಟ್ಟೆಹುಳು, ಹಿಟ್ಟಿನ ೮೦೫ಎ
Fog – ಕಾವಳ ೬೧೪ಎ
Foot and mouth disease – ಕಾಲು, ಬಾಯಿ ಜ್ವರ ೬೦೩ಎ
Furnace – ಕುಲುಮೆ ೮೬೨ಎ
Furor Poeticus – ಕಾವ್ಯೋನ್ಮಾದ ೬೩೫ಬ
Garden cress – ಕುರ್ತಿಗೆ ೮೫೩ಎ
Garrison – ಕಾವಲು ಪಡೆ ೬೧೪ಎ
Gem-setting – ಕುಂದಣಗಾರಿಕೆ ೭೭೭ಬ
Gills – ಕಿವಿರುಗಳು ೭೧೭ಬ
Golden oriole – ಕಾಮಾಲೆ ಹಕ್ಕಿ ೪೮೭ಎ
Grafting (in plants) – ಕಸಿ ಮಾಡುವಿಕೆ (ಸಸ್ಯಗಳಲ್ಲಿ) ೩೦೧ಬ
Grocer – ಕಿರಾಣಿ ವ್ಯಾಪಾರಿ ೬೯೪ಬ
Gryllidae – ಕುಂಟು ಮಿಡತೆ ೭೭೩ಬ
Guazuma tomentosa – ಕಾಡು ರುದ್ರಾಕ್ಷಿ ೪೨೯ಎ
Guerilla warfare – ಕಿರುಕುಳ ಕಾಳಗ ೬೯೫ಬ
Gut tie – ಕರುಳುಗಂಟು ೪ಬ
Gymnoris – ಕಾಡು ಗುಬ್ಬಚ್ಚಿ ೪೨೨ಎ
Gyrocarpus americanus – ಕಾಡು ಬೆಂಡೆ ೪೨೬ಬ
Haemophilia – ಕುಸುಮರೋಗ ೮೮೪ಬ
Handicrafts – ಕುಶಲ ಕೈಗಾರಿಕೆ ೮೭೦ಬ
Hardwickia binata – ಕಾರಾಚಿ ೫೦೬ಎ
Helleborus niger – ಕಾಡುಕಟುಕರೋಹಿಣಿ ೪೧೯ಬ
Helminthology – ಕರುಳುಹುಳುಶಾಸ್ತ್ರ ೬ಎ
Hibiscus Abelmoschus – ಕಾಡುಕಸ್ತೂರಿ ೪೨೦ಎ
Hill myna – ಕಾಮಳ್ಳಿ ೪೮೬ಎ
Hoopoe – ಕೂಕೂ ಹಕ್ಕಿ ೮೯೨ಎ
Hopea parviflora – ಕಿರಲುಬೋಗಿ ೬೯೪ಎ
Horse – ಕುದುರೆ ೮೧೦ಎ
Horse breeding – ಕುದುರೆ ತಳಿ ಅಭಿವೃದ್ಧಿ ೮೧೦ಬ
Horse, Disease of – ಕುದುರೆ ರೋಗಗಳು ೮೧೩ಬ
Horse race – ಕುದುರೆ ಪಂದ್ಯ ೮೧೨ಬ
Horse riding – ಕುದುರೆ ಸವಾರಿ ೮೧೭ಎ
Ichnocarpus frutescens – ಕರೇ ಹಂಬು ೭ಬ
Ignorance of law and ignorance of fact – ಕಾನೂನಿನ ಅಜ್ಞಾನ ಮತ್ತು ವಸ್ತುಸ್ಥಿತಿಯ ಅಜ್ಞಾನ ೪೪೦ಬ
Imagination – ಕಲ್ಪನೆ ೨೫೩ಬ
Impatiens balsamina – ಕರ್ಣಕುಂಡಲ ೧೭ಎ
Indian squill – ಕಾಡು ಬೆಳ್ಳುಳ್ಳಿ ೪೨೭ಬ
Insecticides – ಕೀಟನಾಶಕಗಳು ೭೩೩ಬ
Insect bite – ಕೀಟದಂಶನ ೭೩೩ಬ
Insectivorous plants – ಕೀಟಭಕ್ಷಕ ಸಸ್ಯಗಳು ೭೩೮ಎ
Insect predators – ಕೀಟಭಕ್ಷಕ ಕೀಟಗಳು ೭೩೭ಬ
Insects – ಕೀಟಗಳು ೭೨೫ಎ
Intestinal obstruction – ಕರುಳಿನ ಆತಂಕ ೩ಬ
Jasminum pubescens – ಕಾಕಡ ೩೮೯ಬ
Jaundice – ಕಾಮಾಲೆ ೪೮೬ಎ
Joints and ligaments – ಕೀಲುಗಳು ಮತ್ತು ತಂತುಗಟ್ಟುಗಳು ೭೬೩ಎ
Joints and ligaments, Disease and disabilities of – ಕೀಲುಗಳ, ತಂತುಗಟ್ಟುಗಳ ರೋಗಗಳು ಮತ್ತು ಊನಗಳು ೭೬೧ಬ
Kabuki – ಕಾಬುಕೀ ೪೬೫ಎ
Kala azar – ಕಾಳಮಾರಿ ೬೫೩ಎ
Kaleidoscope – ಕಲೈಡೊಸ್ಕೋಪ್ ೨೪೫ಬ
Kandy's fluid – ಕಾಂಡಿದ್ರಾವಕ ೩೫೭ಬ
Kangaroo – ಕಾಂಗರೂ ೩೩೨ಎ
Kangaroo rat – ಕಾಂಗರೂ ಇಲಿ ೩೩೨ಬ
Karewa beds – ಕಾರೇವ ಸ್ತರಗಳು ೫೦೭ಬ
Karl fischer reagent – ಕಾರ್ಲ್ ಫಿಷರ್ ಅಭಿಕರ್ಮಕ ೫೯೮ಎ
Katla – ಕಾಟ್ಲಾ ೪೧೮ಎ
Kea; Nestor notabilis – ಕಿಯಾ ಗಿಣಿ ೬೯೩ಬ
Ketenes – ಕೀಟೇನುಗಳು ೭೪೨ಬ
Keto-acids – ಕೀಟೊ ಆಮ್ಲಗಳು ೭೪೩ಎ
Ketones – ಕೀಟೋನುಗಳು ೭೪೪ಎ
Kieselguhr – ಕೀಸಲ್‌ಗರ್ ೭೭೧ಎ
Kindergarten – ಕಿಂಡರ್‌ಗಾರ್ಟನ್ ೬೬೭ಬ
Kinkajou – ಕಿಂಕಜೂ ೬೬೩ಬ

Kipper fish – ಕಿಪ್ಪರ್ ಮೀನು ೬೯೨ಬ
Kipp's apparatus – ಕಿಪ್‌ನ ಉಪಕರಣ ೬೯೧ಬ
Knema attenuata – ಕಾಡುಪಿಂಡಿ ೪೨೬ಎ
Kolmogrov-smirnov test – ಕಾಲ್ಮಗ್ರಾಫ್–ಸ್ಮಿರ್ನಾಫ್ ಪರೀಕ್ಷಣ ೬೧೨ಬ
Kui language – ಕುಈ ಭಾಷೆ ೭೬೪ಎ
Kurnool system – ಕರ್ನೂಲು ಸ್ತೋಮ ೧೭೧ಬ
Labeo – ಕಲ್ಬಾಸು ೨೫೭ಬ
Labour day – ಕಾರ್ಮಿಕ ದಿನ ೫೫೨ಎ
Labour, Department of – ಕಾರ್ಮಿಕ ಇಲಾಖೆ ೫೪೭ಬ
Labour laws – ಕಾರ್ಮಿಕ ಕಾನೂನುಗಳು ೫೫೦ಬ
Labour Union – ಕಾರ್ಮಿಕ ಸಂಘ ೫೫೨ಬ
Labour turn over – ಕಾರ್ಮಿಕ ಆವರ್ತ ೫೪೮ಬ
Labour welfare – ಕಾರ್ಮಿಕ ಕಲ್ಯಾಣ ೫೪೯ಬ
Lactarius – ಕುದಿಪ್ಪು ೭೧೯ಬ
Law – ಕಾನೂನು ೪೪೨ಎ
Learning – ಕಲಿಕೆ ೨೨೩ಬ
Learning, Measurement of – ಕಲಿಕೆಯ ಅಳತೆ ೨೨೬ಬ
Legal fictions – ಕಾನೂನಿನ ಕಲ್ಪನೆಗಳು ೪೪೧ಬ
Leonotis Nepetaefolia – ಕಾಡುತುಂಬೆಗಿಡ ೪೨೩ಬ
Leprosy – ಕುಷ್ಠ ೭೭೦ಬ
Lichen – ಕಲ್ಲು ಹೂ ೨೮೬ಬ
Limitation, Law of – ಕಾಲಮಿತಿ ಕಾನೂನು ೫೭೪ಬ
Lintel – ಕಿಟಕಿಕಲ್ಲು ೬೮೨ಎ
Literature, Golden age of – ಕಾವ್ಯದ ಸುವರ್ಣಯುಗ ೬೨೪ಎ
Liver rot – ಕಾರಲುರೋಗ ೪೯೮ಎ
Lobelia nicotianifolia – ಕಾಡು ಹೊಗೆಸೊಪ್ಪು ೪೩೧ಎ
Loopers – ಕುಣಿಕೆ ಹುಳುಗಳು ೭೦೮ಎ
Loris – ಕಾಡುಪಾಪ ೪೨೪ಬ
Magnetic amplifier – ಕಾಂತಪ್ರವರ್ಧಕ ೩೮೦ಎ
Magnetic Circuit – ಕಾಂತಮಂಡಲ ೩೮೨ಎ
Magnetic lens – ಕಾಂತಮಸೂರ ೩೮೨ಬ
Magnetic materials – ಕಾಂತೀಯ ವಸ್ತುಗಳು ೩೭೧ಬ
Magnetic moment – ಕಾಂತಭ್ರಮಣಾಂಕ ೩೮೦ಬ
Magnetic mono poles – ಕಾಂತ ಏಕಧ್ರುವಗಳು ೩೫೭ಬ
Magnetic recording – ಕಾಂತ ಮುದ್ರಣ ೩೮೩ಬ
Magnetic relaxation – ಕಾಂತೀಯ ವಿರಾಮಗಾಮಿತ್ವ ೩೭೨ಎ
Magnetic separation – ಕಾಂತವಿಘಟನೆ ೩೮೮ಎ
Magnetic wire – ಕಾಂತ ತಂತಿ ೩೬೦ಬ
Magnetism – ಕಾಂತತ್ವ ೩೬೦ಬ
Magneto-Chemistry – ಕಾಂತರಸಾಯನಶಾಸ್ತ್ರ ೩೮೬ಎ
Magnetometer – ಕಾಂತಮಾಪಕ ೩೮೩ಎ
Magneto-Optics – ಕಾಂತ ದೃಕ್‌ಶಾಸ್ತ್ರ ೩೬೯ಬ
Magnetosphere – ಕಾಂತಗೋಳ ೩೫೯ಎ
Magneto-Statics – ಕಾಂತಸ್ಥಿತಿಶಾಸ್ತ್ರ ೩೮೮ಬ
Mallotus phillippensis – ಕುಂಕುಮದ ಮರ ೮೮೨ಬ
Malnutrition – ಕಾಕುಪುಷ್ಟಿ ೩೯೫ಬ
Marsupial mole – ಕಾಂಗರೂ ಹೆಗ್ಗಣ ೩೩೩ಎ
Masonry – ಕಲ್ಲುಗಾರೆಯ ಕೆಲಸ ೨೮೩ಬ
Melaeuca leucodendron – ಕಾಜಪುಟೆ ಎಣ್ಣೆಮರ ೪೧೬ಎ
Melilotus indica – ಕಾಡು ಲೂಸರ್ನ್ ಸೊಪ್ಪು ೪೨೯ಎ
Metasomatism – ಕಾಯಂತರೀಕರಣ ೪೭೭ಬ
Miniatures – ಕಿರುಚಿತ್ರಣ ೬೯೬ಎ
Molasses – ಕಾಕಂಬಿ ೩೭೯ಬ
Monogram – ಕೂಡಕ್ಷರ ೭೯೫ಎ
Monstrosity – ಕಿರಾತಗೂಸುತನ ೬೯೫ಎ
Murraya exotica – ಕಾಡು ಕರಿಬೇವು ೪೧೯ಬ
Muses – ಕಲಾಭಿಮಾನಿ ದೇವತೆಗಳು ೨೧೯ಬ
Musk – ಕಸ್ತೂರಿ ೩೧೩ಬ
Musk deer – ಕಸ್ತೂರಿ ಮೃಗ ೩೧೫ಬ
Musk ox – ಕಸ್ತೂರಿ ದನ ೩೧೪ಎ
Musk rat – ಕಸ್ತೂರಿ ಇಲಿ ೩೧೩ಬ
Novel – ಕಾದಂಬರಿ ೪೩೪ಎ
Ochre – ಕಾವಿಮಣ್ಣು ೬೧೬ಎ
Ocimum basilicum – ಕಾಮಕಸ್ತೂರಿ ೪೬೯ಎ
Oldenlandia corymbosa – ಕಲ್ಲು ಸಬ್ಬಸಿಗೆ ೨೮೫ಬ
Operationism – ಕಾರ್ಯಕಾರಿತ್ವ ೫೬೫ಎ
Ophiocephalus – ಕುಚ್ಚುಮೀನು ೮೯೧ಎ
Orange – ಕಿತ್ತಳೆ ೬೭೨ಬ
Paper – ಕಾಗದ ೪೦೦ಎ
Paper money – ಕಾಗದ ಹಣ ೪೧೦ಎ
Phyllanthus fraternus – ಕಿರುನೆಲ್ಲಿ ೮೦೪ಎ
Pellagra – ಕಾರ್ದೊಗಲು ೫೨೨ಎ
Pin tail – ಕುಲುಕು ಮೆಲುಕಿನ ಬಾತು ೭೬೧ಬ
Pistia; Water lettuce – ಕುಂಬಿಕ್ ೮೭೨ಎ
Pits – ಕುಳಿಗಳು ೭೯೦ಎ
Placenta – ಕಸ ೨೯೭ಬ
Pocket borough – ಕಿಸೆಯ ಮತಕ್ಷೇತ್ರ ೮೨೪ಎ
Poetic dramas – ಕಾವ್ಯರೂಪಕಗಳು ೬೩೨ಬ
Poetic justice – ಕಾವ್ಯನ್ಯಾಯ ೬೨೭ಎ
Pond – ಕುಂಟೆ ೮೮೪ಎ
Prison – ಕಾರಾಗೃಹ ೫೦೧ಎ
Prison education – ಕಾರಾಗೃಹದಲ್ಲಿ ಶಿಕ್ಷಣ ೫೦೪ಬ
Prison labour – ಕಾರಾಗೃಹ ದುಡಿಮೆ ೫೦೫ಬ
Pumpkin – ಕುಂಬಳ ೮೭೦ಎ
Pyorrhoea – ಕೀವೊಸಡು ೮೮೦ಬ
Quarry – ಕಲ್ಲುಗಣಿ ೨೮೧ಎ
Rabbit – ಕುಂದಿಲಿ ೮೮೯ಬ
Rainbow – ಕಾಮನಬಿಲ್ಲು ೪೮೩ಬ
Reserve Army – ಕಾದಿಟ್ಟ ಸೈನ್ಯ ೪೩೯ಬ
Resins – ಕರ್ಪೂರ ರಾಳಗಳು ೧೭೩ಎ

Revetment – ಕಲ್ಕಟ್ಟಣೆ ೨೪೬ಎ
Rockery – ಕಲ್ಲೇರಿ ೨೭೮ಬ
Rock salt – ಕಲ್ಲುಪ್ಪು ೨೭೫ಬ
Sabre fish – ಕರ್ಲಿಮೀನು ೧೮೯ಬ
Safflower – ಕುಸುಬೆ ೮೮೩ಬ
Safron – ಕುಂಕುಮ ಕೇಸರಿ ೭೭೨ಎ
Salvadora – ಕಿರಿ ಗೋಣಿಮರ ೬೯೫ಬ
Salvia – ಕಾಳಿತುಂಬೆ ೬೫೬ಬ
Sand grouse – ಕಲ್ಲುಗೌಜಲು ಹಕ್ಕಿ ೨೭೪ಎ
Sepsis – ಕೀವು ನಂಜು ೭೬೯ಎ
Sex education – ಕಾಮ ಶಿಕ್ಷಣ ೪೮೫ಬ
Sexual disorders – ಕಾಮ ವಿಕಾರಗಳು ೪೭೯ಬ
Sheep – ಕುರಿ ೮೪೦ಎ
Sheep, Diseases of – ಕುರಿ ರೋಗಗಳು ೮೪೬ಎ
Short play – ಕಿರುನಾಟಕ ೬೯೮ಬ
Shrike – ಕಳಿಂಗ ಪಕ್ಷಿ ೩೨೨ಬ
Silver belly or Pony fish – ಕುರ್ಚಿಮೀನು ೮೫೩ಎ
Sickle bill – ಕುಡುಗೊಕ್ಕು ೮೦೬ಬ
Slag – ಕಿಟ್ಟ ೬೭೨ಬ
Slaughter house – ಕಸಾಯಿಖಾನೆ ೩೦೦ಬ
Small sample theory – ಕಿರುನಿದರ್ಶನ ಸಿದ್ಧಾಂತ ೬೯೯ಬ
Snipers – ಕೂಟಯೋಧರು ೮೯೫ಎ
Solanum nigrum – ಕಾಚಿಹಣ್ಣಿನ ಗಿಡ ೪೧೫ಬ
Spark chamber – ಕಿಡಿಮಂದಿರ ೬೭೫ಎ
Spark, Electric – ಕಿಡಿ, ವಿದ್ಯುತ್ ೬೭೬ಬ
Spark ignition – ಕಿಡಿ ಪ್ರಜ್ವಲನೆ ೬೭೫ಬ
Stem-borer beetles – ಕಾಂಡಕೊರಕ ಜೀರುಂಡೆಗಳು ೩೫೬ಬ
Stem-borer fly – ಕಾಂಡಕೊರಕ ನೊಣ ೩೫೭ಎ
Stem-borer larvae – ಕಾಂಡಕೊರಕ ಹುಳುಗಳು ೩೫೭ಎ
Stone – ಕಲ್ಲು ೨೭೦ಎ
Stone cist – ಕಲ್ಲಿನ ಶವಪೆಟ್ಟಿಗೆ ೨೭೦ಎ
Strychnos num-vomica – ಕಾಜವಾರ ೪೧೬ಬ
Swallow – ಕವಲುತೋಕೆ ಹಕ್ಕಿ ೨೮೪ಬ
Tendinitis – ಕಸುಪಟ್ಟಿ ಉರಿತ ೩೦೩ಬ
Tension – ಕರ್ಷಣ ೧೯೨ಎ
Theft – ಕಳವು ೩೨೧ಬ
Thevetia neriifolia – ಕಾಡು ಕಾಸಿ ಕಣಗಿಲೆ ೪೨೦ಬ
Time – ಕಾಲ೨ ೫೭೨ಬ
Time, Measurement of – ಕಾಲಮಾಪನ ೫೭೯ಬ
Time series – ಕಾಲಸರಣಿ ೫೯೨ಎ
Time wage system – ಕಾಲಾನುಗುಣ ವೇತನ ಪದ್ಧತಿ ೫೯೯ಬ
Toddalia asiatica – ಕಾಡುಮೆಣಸಿನ ಗಿಡ ೪೨೮ಎ
Totemism – ಕುಲದೇವತಾ ಪದ್ಧತಿ ೮೫೮ಬ
Tractor – ಕರ್ಷಕ (ಯಾಂತ್ರಿಕ) ೧೯೦ಎ
Tractor (Electric) – ಕರ್ಷಕ (ವಿದ್ಯುತ್) ೧೯೦ಬ
Trade union – ಕಾರ್ಮಿಕ ಸಂಘ ೫೫೨ಬ
Transplataion – ಕಸಿ ಮಾಡುವಿಕೆ (ಪ್ರಾಣಿಗಳಲ್ಲಿ) ೩೦೧ಬ
Transplantation of Tissues and organs – ಕಸಿ ಮಾಡುವಿಕೆ, ಅಂಗಾಂಶದ ಮತ್ತು ಅಂಗದ
Tree pie – ಕಳ್ಳ ಹಕ್ಕಿ ೩೨೬ಎ
Trema orientalis – ಕರುಹಾಲೆ ೩ಎ
Trewia nudfllora – ಕಾಡುಗುಂಬಳ ೪೨೨ಎ
Troubadours – ಕವಿಗಾಯಕರು ೨೮೭ಬ
Usury – ಕುಸೀದ ಪದ್ಧತಿ ೮೮೨ಬ
Ut pictura poesis – ಕಾವ್ಯ ಮಾತಾಡುವ ಚಿತ್ರ ೬೬೯ಬ
Valve – ಕವಾಟ ೨೮೫ಬ
Valve gear – ಕವಾಟಯಂತ್ರ ೨೮೫ಬ
Vertebrata – ಕಶೇರುಕ ೨೯೩ಎ
Vertebrate embryology – ಕಶೇರುಕ ಭ್ರೂಣವಿಜ್ಞಾನ ೨೯೫ಎ
Vicia sativa – ಕಾಡು ಹುರುಳಿ ೪೩೧ಎ
Wag tail – ಕುಂಡೆಕುಸುಕ ೭೭೪ಬ
Wart – ಕಾರಳ್ಳು ೫೦೦ಬ
Water-melon – ಕಲ್ಲಂಗಡಿ ೨೫೬ಎ
Weed and weed control – ಕಳೆ ಮತ್ತು ಕಳೆ ಹತೋಟಿ ೩೨೭ಎ
Wild boar – ಕಾಡು ಹಂದಿ ೪೨೯ಬ
Wild cat – ಕಾಡು ಬೆಕ್ಕು ೪೨೬ಬ
Wild dog (Hunting dog) – ಕಾಡುನಾಯಿ ೪೨೪ಎ
Wood cook – ಕಾಡುಕೋಳಿ ೪೨೧ಬ

## ಲೇಖಕ ಸೂಚಿ

**ಎ.** ಅನಂತರಾಮಯ್ಯ, ಎಂ.ವಿ.
ಸೂಪರಿಂಟೆಂಡೆಂಟ್ (ವಿ)
ಪ್ರಾಣಿಸಂಗ್ರಹಾಲಯ, ಮೈಸೂರು

**ಎಬಿ.ಎ.** ಅಬ್ದುಲ್ ಅಜೀಜ್
ಅಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಎ.ಸಿ.** ಚಂದ್ರಶೇಖರಯ್ಯ, ಎ.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು
ಬೆಂಗಳೂರು

**ಎ.ಜಿ.ಕೆಆರ್.** ಕೃಷ್ಣ, ಎ.ಜಿ.
ಪ್ರಾಧ್ಯಾಪಕ, ವೈದ್ಯವಿಜ್ಞಾನ ವಿಭಾಗ
ಸೆಂಟ್‌ಜಾನ್ಸ್ ಮೆಡಿಕಲ್ ಕಾಲೇಜು
ಬೆಂಗಳೂರು

**ಎ.ಕೆ.** ಕುಮಾರಸ್ವಾಮಿ, ಎ.
ಅಧ್ಯಾಪಕ (ವಿ), ಭೂಗೋಳಶಾಸ್ತ್ರ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಎ.ಕೆ.ಜಿ.** ಗೋಪಾಲ್‌ರಾಜನ್, ಎ.ಕೆ.
ಗೌರವ ಸರ್ಜನ್ (ವಿ)
ಕೆ.ಆರ್. ಆಸ್ಪತ್ರೆ, ಮೈಸೂರು

**ಎ.ಕೆ.ಕೆ.** ಆನಂದ ಕಾರಂತ ಕಿಲಿಂಜರ್
ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎ.ಕೆ.ಎಸ್.** ಕೃಷ್ಣಸ್ವಾಮಿ, ಎ.
ಜಿಲ್ಲಾ ಅರಣ್ಯಾಧಿಕಾರಿ (ವಿ)
ಕೋಲಾರ

**ಎ.ಕೆ.ಎಸ್‌ಎಚ್.** ಅನಂತಕೃಷ್ಣಶರ್ಮ, ಎಂ.ಎಸ್.
ಕಾಸ್ಟ್ ಅಕೌಂಟೆಂಟ್ (ವಿ)
ಐಡಿಯಲ್ ಜಾವಾ ಪ್ರೈವೇಟ್ ಲಿಮಿಟೆಡ್
ಯಾದವಗಿರಿ, ಮೈಸೂರು

**ಎ.ಕೆ.ಎಸ್‌ಎಚ್‌ಎ.** ಶಾಸ್ತ್ರಿ, ಎ.ಕೆ.
ಅಧ್ಯಾಪಕ (ವಿ), ಇತಿಹಾಸ ವಿಭಾಗ
ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು
ಶಿರಸಿ (ಉ.ಕ.)

**ಎ.ಎಲ್.ಎ.** ಏರ್ಯ ಲಕ್ಷ್ಮೀನಾರಾಯಣ ಆಳ್ವ
ಏರ್ಯ ಹೌಸ್, ಬಂಟವಾಳ
ದಕ್ಷಿಣ ಕನ್ನಡ ಜಿಲ್ಲೆ

**ಎ.ಎಲ್.ಎಸ್.** ಶಿವರುದ್ರಪ್ಪ, ಎ.ಎಲ್. (ದಿ)
ರೀಡರ್, ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎ.ಎಂ.** ಮೈಲಾರ್‌ರಾವ್, ಎ. (ದಿ)
ಸಂಪಾದಕ, ಕನ್ನಡ ವಿಶ್ವಕೋಶ
ಮೈಸೂರು

**ಎ.ಎಂ.ಎ.** ಅಣ್ಣಿಗೇರಿ, ಎ.ಎಂ.
ಪಠ್ಯಪುಸ್ತಕ ಪ್ರಕಾಶನ ವಿಭಾಗ (ವಿ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎ.ಎಂ.ಆರ್.** ರಾಜಶೇಖರಯ್ಯ, ಎ.ಎಂ.
ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎ.ಎನ್‌ಎ.** ನಾರಾಯಣಪ್ಪ, ಎ. (ದಿ)
ವೈದ್ಯ, ಬೇಲೂರು ರೋಡ್
ಚಿಕ್ಕಮಗಳೂರು

**ಎ.ಎನ್.ಎಸ್.ಐ.** ಶ್ರೀನಿವಾಸ ಅಯ್ಯಂಗಾರ್, ಎ.ಎನ್.
ಶ್ರೀಶಾನುದಾಸ ಗ್ರಂಥಮಾಲಾ
ಮಲ್ಲೇಶ್ವರಂ, ಬೆಂಗಳೂರು

**ಎ.ಎನ್.ಎಸ್.ಎಂ.** ಮೂರ್ತಿ, ಎ.ಎನ್.ಎಸ್.
ಕ್ಯಾಪ್ಟನ್ (ವಿ), ಬೆಂಗಳೂರು

**ಎ.ಪಿಆರ್.** ಅಲೋಷಿಯಸ್ ಪ್ರಭು
ಸೇಂಟ್ ಜೋಸೆಫ್ಸ್
ಸೆಮಿನರಿ, ಮಂಗಳೂರು

**ಎ.ಪಿ.ಎಸ್.** ಶ್ರೀನಿವಾಸಮೂರ್ತಿ, ಎ.ಪಿ.
ರೀಡರ್ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎ.ಆರ್.ಸಿ.ಪಿ.** ಚಿಕ್ಕಪಾಪಯ್ಯ, ಎ.ಆರ್.
ಗೌರವ ಕಾರ್ಯದರ್ಶಿ
ಮೈಸೂರು ರಾಜ್ಯ ಒಲಿಂಪಿಕ್ ಅಸೋಸಿಯೇಷನ್
ಬೆಂಗಳೂರು

**ಎ.ಎಸ್.** ಸಂಪತ್ಕುಮಾರಾಚಾರ್ಯ, ಎ.
ದೊಡ್ಡಬೆಲೆ, ನಾಗಮಂಗಲ ಪೋಸ್ಟ್
ಮಂಡ್ಯ ಜಿಲ್ಲೆ

**ಎ.ಎಸ್.ಆರ್.** ಸುಬ್ಬರಾವ್, ಎ.
ಸಹ ಪ್ರಾಧ್ಯಾಪಕ (ವಿ)
ಜೀವರಸಾಯನವಿಜ್ಞಾನ ವಿಭಾಗ
ಬೌರಿಂಗ್ ಆಸ್ಪತ್ರೆ, ಬೆಂಗಳೂರು

**ಎ.ವಿ.ಎನ್.** ನರಸಿಂಹಮೂರ್ತಿ, ಎ.ವಿ.
ಪ್ರಾಧ್ಯಾಪಕ (ವಿ), ಪ್ರಾಕ್ತನಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎ.ವಿ.ಎನ್.ಎ.** ನಾವಡ, ಎ.ವಿ.
ಡೀನ್, ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಎ.ವಿ.ವಿ.** ವೆಂಕಟರತ್ನಂ, ಎ.ವಿ. (ದಿ)
ಅಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಬಿ.ಎ.ಸಿ.** ಚನ್ನಪ್ಪಗೌಡ, ಬಿ.ಎ.
ತಾಂತ್ರಿಕ ಸಹಾಯಕ (ವಿ)
ತೋಟಗಾರಿಕೆ ಇಲಾಖೆ
ಲಾಲ್‌ಬಾಗ್, ಬೆಂಗಳೂರು

| | |
|---|---|
| **ಬಿ.ಎ.ಆರ್.** | ರಾಜ್ಜಿ, ಬಿ.ಎ.<br>ಪ್ರಾಧ್ಯಾಪಕರು (ವಿ), ಸಸ್ಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಬಿ.ಸಿ.ಕೆ.** | ಚಂದ್ರಕಾಂತ, ಬಿ.<br>ಪ್ರಾಧ್ಯಾಪಕರು (ವಿ)<br>ಭೂಗೋಳವಿಜ್ಞಾನ ವಿಭಾಗ<br>ಜೆ.ಎಸ್.ಎಸ್. ಕಾಲೇಜು, ಮೈಸೂರು |
| **ಬಿ.ಸಿ.ಪಿ.** | ಪೊನ್ನಪ್ಪ, ಬಿ.ಸಿ.<br>ಪ್ರಿನ್ಸಿಪಾಲ್ (ವಿ)<br>ಸರ್ಕಾರಿ ಕಾಲೇಜು, ಮಡಿಕೇರಿ |
| **ಬಿ.ಡಿ.ಎಸ್.** | ಸುಬ್ಬಯ್ಯ, ಬಿ.ಡಿ.<br>ಇಂಡಿಯನ್ ಎಕ್ಸ್‌ಪ್ರೆಸ್ ಪ್ರತಿನಿಧಿ<br>ಮಡಿಕೇರಿ |
| **ಬಿ.ಜಿ.** | ಬ್ರಹ್ಮಪ್ಪ, ಜಿ.<br>ಪ್ರಿನ್ಸಿಪಾಲ್ (ವಿ)<br>ಶ್ರೀ ಗೊಮ್ಮಟೇಶ್ವರ ಕಾಲೇಜು<br>ಶ್ರವಣಬೆಳಗೊಳ |
| **ಬಿ.ಜಿ.ಆರ್.** | ರಮೇಶ್, ಬಿ.ಜಿ.<br>6ನೆಯ ಕ್ರಾಸ್, ಮಲ್ಲೇಶ್ವರಂ<br>ಬೆಂಗಳೂರು |
| **ಬಿ.ಜಿ.ಟಿ.** | ತಮಸ್ಕರ್, ಬಿ.ಜಿ.<br>ಪ್ರಾಧ್ಯಾಪಕ (ವಿ), ಭೂಗೋಳಶಾಸ್ತ್ರ ವಿಭಾಗ<br>ವಿದರ್ಭ ಮಹಾವಿದ್ಯಾಲಯ, ಅಮರಾವತಿ |
| **ಬಿ.ಎಚ್.ಎಂ.** | ಮನೋಹರರಾಮ್, ಬಿ.ಎಚ್.<br>ಸಹ ಪ್ರಾಧ್ಯಾಪಕ (ವಿ)<br>ಮತ್ಸ್ಯವಿಜ್ಞಾನ ಕಾಲೇಜು, ಮಂಗಳೂರು |
| **ಬಿ.ಎಚ್.ಎಸ್.** | ಶ್ರೀಧರ, ಬಿ.ಎಚ್.<br>ಪ್ರಿನ್ಸಿಪಾಲ್, ಗಾಂಧಿ ಸೆಂಟಿನರಿ ಮೆಮೋರಿಯಲ್<br>ಕಾಲೇಜು, ಸಿದ್ದಾಪುರ (ಉ.ಕ.) |
| **ಬಿ.ಕೆ.ಜಿ.** | ಗುರುರಾಜರಾವ್, ಬಿ.ಕೆ.<br>ಸಹ ಸಂಪಾದಕ (ವಿ)<br>ವಿಷಯ ವಿಶ್ವಕೋಶ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಬಿ.ಕೆಆರ್.** | ಬೆಟಗೇರಿ ಕೃಷ್ಣಶರ್ಮ<br>ಸಾಹಿತಿ, ಶಿವಾಜಿ ಬೀದಿ<br>ಧಾರವಾಡ |
| **ಬಿ.ಕೆ.ಎಸ್.** | ಶಿವರಾಮಯ್ಯ, ಬಿ.ಕೆ.<br>ರೀಡರ್ (ವಿ), ಸಂಸ್ಕೃತ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಬಿ.ಕೆ.ಟಿ.** | ತಿಮ್ಮಪ್ಪ, ಬಿ.ಕೆ. (ದಿ)<br>ಅಧ್ಯಾಪಕ, ಕನ್ನಡ ವಿಭಾಗ<br>ಸರ್ಕಾರಿ ಕಾಲೇಜು<br>ಕಾಸರಗೋಡು, ಕೇರಳ |
| **ಬಿ.ಎಂಎ.** | ಮರಿಯಪ್ಪ, ಬಿ.<br>ಸಹ ಪ್ರಾಧ್ಯಾಪಕ (ವಿ), ಶಸ್ತ್ರವೈದ್ಯ ವಿಭಾಗ<br>ಮೆಡಿಕಲ್ ಕಾಲೇಜು, ಬಳ್ಳಾರಿ |
| **ಬಿ.ಎನ್.** | ಬಸವಯ್ಯ, ಎನ್.<br>ವಿಶೇಷಾಧಿಕಾರಿ, ಮೀನುಗಾರಿಕೆ ಇಲಾಖೆ<br>ಬೆಂಗಳೂರು |
| **ಬಿ.ಎನ್.ಎಜಿ.** | ನಾಗಪ್ಪ, ಬಿ.<br>ಅಧ್ಯಾಪಕ (ವಿ)<br>ಗ್ರಂಥಾಲಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಬಿ.ಎನ್.ಬಿ.** | ಬೋಳೆಗೌಡ, ಬಿ.ಎನ್. (ದಿ)<br>ರೀಡರ್, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಬಿ.ಎನ್.ಸಿ.** | ಚಂದ್ರಯ್ಯ, ಬಿ.ಎನ್.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಬಿ.ಎನ್.ಸಿಎಚ್.** | ಚತುರ್ವೇದಿ, ಬಿ.ಎನ್.<br>ಶಾರದಾಭವನ್, 120–ಎ<br>ನೆಹರೂನಗರ, ಸಿಕಂದರಾಬಾದ್ |
| **ಬಿ.ಪಿ.** | ಪಾಲಾಕ್ಷ, ಬಿ. (ದಿ)<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಬಿ.ಆರ್.ಜಿ.** | ಗೋಪಾಲ್, ಬಿ.ಆರ್.<br>ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಬಿ.ಆರ್.ಎಂ.** | ಮೋದಕ್, ಬಿ.ಆರ್.<br>ಕರ್ನಾಟಕ ಆರ್ಟ್ಸ್ ಕಾಲೇಜು<br>ಧಾರವಾಡ |
| **ಬಿ.ಆರ್.ಎಂಒ.** | ಮೋರೆ, ಬಿ.ಆರ್.<br>ಪ್ರಾಧ್ಯಾಪಕ (ವಿ)<br>ಹೆರಿಗೆ ಶಾಸ್ತ್ರ ಮತ್ತು ಸ್ತ್ರೀರೋಗ ವಿಭಾಗ<br>ವಾಣೀವಿಲಾಸ ಆಸ್ಪತ್ರೆ, ಬೆಂಗಳೂರು |
| **ಬಿ.ಆರ್.ಪಿ.** | ಪ್ರಾಣೇಶ್‌ರಾವ್, ಬಿ.ಆರ್. (ದಿ)<br>13ನೆಯ ಮುಖ್ಯರಸ್ತೆ, ಸರಸ್ವತಿಪುರಂ<br>ಮೈಸೂರು |
| **ಬಿ.ಎಸ್.** | ಶಿವಮೂರ್ತಿಶಾಸ್ತ್ರೀ, ಬಿ. (ದಿ)<br>ಸಂಪಾದಕ, ಶರಣಸಾಹಿತ್ಯ<br>ಬೆಂಗಳೂರು |
| **ಬಿ.ಎಸ್.ಎ.** | ಷೇಕ್ ಆಲಿ, ಬಿ.<br>ಕುಲಪತಿ (ವಿ)<br>ಮಂಗಳೂರು ಮತ್ತು<br>ಗೋವ ವಿಶ್ವವಿದ್ಯಾಲಯಗಳು, ಮೈಸೂರು |
| **ಬಿ.ಎಸ್.ಎಚ್.** | ಶಾಮಸುಂದರ, ಬಿ.<br>ಕನ್ನಡ ವಿಶ್ವಕೋಶ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |

**ಬಿ.ಎಸ್.ಕೆ.** ಕೃಷ್ಣಸ್ವಾಮಿ ಅಯ್ಯಂಗಾರ್, ಬಿ.ಎಸ್. (ದಿ)
ಇತಿಹಾಸ ಪ್ರಾಧ್ಯಾಪಕ
ಕೃಷ್ಣಮೂರ್ತಿಪುರಂ, ಮೈಸೂರು

ಬಿ.ಎಸ್.ಪಿ. ಪಾಟೀಲ, ಬಿ.ಎಸ್.
ಇತಿಹಾಸ ವಿಭಾಗ (ವಿ)
ಮಹಾರಾಜ ಕಾಲೇಜು, ಮೈಸೂರು

**ಬಿ.ಎಸ್.ಎಸ್. (ಎಸ್.ಬಿ.ಎಸ್.)** ಸಣ್ಣಯ್ಯ, ಬಿ.ಎಸ್.
ಸಹಾಯಕ ನಿರ್ದೇಶಕ (ವಿ)
ಸಂಪಾದನಾ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಬಿ.ಎಸ್.ಎಸ್.ಆರ್.** ಶಂಕರನಾರಾಯಣರಾವ್, ಬಿ.ಎಸ್.
ನಂ. 24, ವಿಶ್ವಮಾನವ ಜೋಡಿರಸ್ತೆ
ಸರಸ್ವತಿಪುರಂ, ಮೈಸೂರು

**ಬಿ.ಎಸ್.ವಿ.** ವೆಂಕಟಶಾಮಣ್ಣ, ಬಿ.ಎಸ್.
ವೈದ್ಯಾಧಿಕಾರಿ (ವಿ)
ಸೆಂಟ್ರಲ್ ಸ್ಯಾನಿಟೋರಿಯಂ
ಮಾಗಡಿ ರೋಡು, ಬೆಂಗಳೂರು

**ಬಿ.ವಿ.ಬಿ.** ಬಾಲಾಜಿ, ಬಿ.ವಿ.
ಅಡ್ವೋಕೇಟ್
ಬೆಂಗಳೂರು

**ಬಿ.ವಿ.ಜಿ.** ಗೋವಿಂದರಾಜುಲು, ಬಿ.ವಿ. (ದಿ)
ರೀಡರ್, ಭೂವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಬಿ.ವಿ.ಆರ್.** ರಮಣ, ಬಿ.ವಿ.
ಪ್ರಾಧ್ಯಾಪಕ (ವಿ), ಶಿಕ್ಷಣಶಾಸ್ತ್ರ
ಮೈಸೂರು ಸರ್ಕಾರ, ಬಿಟ್ಟಂಗಾಲ
ಕೊಡಗು

**ಬಿ.ವೈ.ಎಂ.ಜಿ.** ಗೌಡರ್, ಬಿ.ವೈ.ಎಂ.
ಅಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

**ಸಿ.ಎ.ಎಂ.** ಆಂಜನಮೂರ್ತಿ, ಸಿ.
ಕುಲಪತಿ (ವಿ)
ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಸಿ.ಜಿ.ಕೆ.** ಕೃಷ್ಣಮೂರ್ತಿ, ಸಿ.ಜಿ.
ಸಹಾಯಕ ನಿರ್ದೇಶಕ (ವಿ)
ಮೀನುಗಾರಿಕೆ ಇಲಾಖೆ
ಬೆಂಗಳೂರು ಡಿವಿಷನ್, ಬೆಂಗಳೂರು

**ಸಿ.ಜಿ.ಪಿ.** ಪುರುಷೋತ್ತಮ, ಸಿ.ಜಿ.
ಪ್ರಾಧ್ಯಾಪಕ (ವಿ), ಸಂಸ್ಕೃತ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಸಿ.ಕೆ.** ಕೃಷ್ಣಮೂರ್ತಿ, ಸಿ.
ತಾಂತ್ರಿಕ ಸಹಾಯಕ, ಟಿಪ್ಪು ಮ್ಯೂಸಿಯಂ
ಕೋಟೆ, ಬೆಂಗಳೂರು

**ಸಿ.ಕೆಎ.** ಚೆನ್ನವೀರ ಕಣವಿ
ನಿರ್ದೇಶಕ (ವಿ), ಪ್ರಕಾಶನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಸಿ.ಕೆ.ಆರ್.** ರೇಣುಕಾರ್ಯ, ಸಿ.ಕೆ.
ಪ್ರಾಧ್ಯಾಪಕರು (ವಿ), ಅರ್ಥಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಸಿ.ಕೆ.ವೈ.ಡಿ.** ದೀಕ್ಷಿತ, ಸಿ.ಕೆ.ವೈ.
ಅಧ್ಯಾಪಕ (ವಿ), ಡಿ.ಆರ್.ಎಂ. ಕಾಲೇಜು
ದಾವಣಗೆರೆ

**ಸಿ.ಎಂ.** ಮ್ಯಾಕ್‌ಫ್ಯಾಡನ್, ಸಿ.
ಅಧ್ಯಕ್ಷ, ಭೂಗೋಳಶಾಸ್ತ್ರ ವಿಭಾಗ
ಲಾಸ್ ಆಂಜಲಿಸ್, ಕ್ಯಾಲಿಫೋರ್ನಿಯ
ಯು.ಎಸ್.ಎ.

**ಸಿ.ಎಂ.ಎಂ.** ಮುನಿರಾಮಪ್ಪ, ಸಿ.ಎಂ.
ಪ್ರಾಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಸಿ.ಎಂ.ಎಸ್.** ಮಹದೇವ ಶಂಕರಪ್ಪ, ಸಿ.
ಅಧ್ಯಾಪಕ (ವಿ), ಜೀವವಿಜ್ಞಾನ ವಿಭಾಗ
ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು

**ಸಿ.ಎನ್.ಎಸ್.** ಶ್ರೀನಿವಾಸ ಅಯ್ಯಂಗಾರ್, ಸಿ.ಎನ್. (ದಿ)
ಪ್ರಾಧ್ಯಾಪಕ, ಬೆಂಗಳೂರು
ಅಧ್ಯಕ್ಷ, ಗಣಿತಶಾಸ್ತ್ರ ಉಪಸಮಿತಿ
ಕನ್ನಡ ವಿಶ್ವಕೋಶ

**ಸಿ.ಪಿ.** ಚಂಬಿ ಪುರಾಣಿಕ
ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಿ.ಪಿ.ಕೆ.** ಕೃಷ್ಣಕುಮಾರ್, ಸಿ.ಪಿ.
ಪ್ರಾಧ್ಯಾಪಕರು (ವಿ), ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಸಿ.ಆರ್.** ರಂಗಾಚಾರ್, ಸಿ.
ಪ್ರಿನ್ಸಿಪಾಲ್ (ವಿ)
ಎಂ.ಇ.ಎಸ್. ಟೀಚರ್ಸ್ ಟ್ರೇನಿಂಗ್ ಕಾಲೇಜು
ಮಲ್ಲೇಶ್ವರಂ, ಬೆಂಗಳೂರು

**ಸಿ.ಆರ್ಎ.** ರಾಮಾಚಾರಿ, ಸಿ.
ಪ್ರಾಧ್ಯಾಪಕ (ವಿ), ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಸಿ.ಆರ್.ಕೆ.** ಕೇರಳವರ್ಮ, ಸಿ.ಆರ್.
ಸೇಂಟ್ ಅಲೋಷಿಯಸ್ ಕಾಲೇಜು
ಮಂಗಳೂರು

**ಸಿ.ಎಸ್.ಎನ್.ಆರ್.** ಸೂರ್ಯನಾರಾಯಣರಾವ್, ಸಿ.
ಪರಮಾಣು ಖನಿಜ ವಿಭಾಗ
ಭಾರತ ಸರ್ಕಾರ, ಪಟಾಂ ಭವನ
ರೇಸ್‌ಕೋಸ್ ರಸ್ತೆ, ಬೆಂಗಳೂರು

| | | |
|---|---|---|
| ಸಿ.ವಿ.ಆರ್. | ರಂಗಸ್ವಾಮಿ, ಸಿ.ವಿ.<br>ಪ್ರಿನ್ಸಿಪಾಲ್ (ವಿ), ಜೆ.ಟಿ. ಕಾಲೇಜು<br>ಗದಗ | |
| ಡಿ.ಎಂ. | ಮುನಿಸ್ವಾಮಿ, ಡಿ.<br>ಸಹಾಯಕ ಪ್ರಾಧ್ಯಾಪಕ (ವಿ)<br>ಪ್ರಕಟನ ವಿಭಾಗ, ಕೃಷಿ ವಿಶ್ವವಿದ್ಯಾಲಯ<br>ಹೆಬ್ಬಾಳ, ಬೆಂಗಳೂರು | |
| ಡಿ.ಎಂ.ಜಿಬಿ. | ಮುತ್ತೇಗೌಡ, ಡಿ. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ವಿಶ್ವವಿದ್ಯಾನಿಲಯ ಸಂಜೆ ಕಾಲೇಜು<br>ಮೈಸೂರು | |
| ಡಿ.ಎನ್‌ಎ. | ಧ್ರುವನಾರಾಯಣ<br>ಅಧ್ಯಾಪಕ (ವಿ), ಎಲ್.ವಿ.ಡಿ. ಕಾಲೇಜು<br>ರಾಯಚೂರು | |
| ಡಿ.ಎನ್.ಕೆ. | ಕೃಷ್ಣಯ್ಯ, ಡಿ.ಎನ್.<br>ಮುಖ್ಯೋಪಾಧ್ಯಾಯ (ವಿ)<br>ವಿರಾಜಪೇಟೆ, ಕೊಡಗು | |
| ಡಿ.ಎನ್.ಆರ್. | ರಾಯಕರ, ಡಿ.ಎನ್.<br>ಅಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ವಿಜಯ ಕಾಲೇಜು, ಮುಲ್ಕಿ (ದ.ಕ.) | |
| ಡಿ.ಪಿ.ಜೆ. | ಜಯರಾಮ್, ಡಿ.ಪಿ.<br>ಸಹ ಪ್ರಾಧ್ಯಾಪಕ (ವಿ),<br>ಚರ್ಮರೋಗ ವಿಭಾಗ<br>ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ | |
| ಡಿ.ಆರ್. | ರಂಗಯ್ಯ, ಡಿ.<br>ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು | |
| ಡಿ.ಎಸ್. | ಶೇಷಗಿರಿರಾವ್, ಡಿ.<br>ಕೀಟವಿಜ್ಞಾನಿ (ವಿ), ಪಾರಿಜಾತ<br>ವೆಸ್ಟ್‌ಪಾರ್ಕ್ ರೋಡ್, ಮಲ್ಲೇಶ್ವರಂ<br>ಬೆಂಗಳೂರು | |
| ಡಿ.ಎಸ್.ಜಿ. | ಗುರುಬಸವಪ್ಪ, ಡಿ.ಎಸ್.<br>ನಿರ್ದೇಶಕ (ವಿ)<br>ಸರ್ಕಾರಿ ಮುದ್ರಣಾಲಯ, ಬೆಂಗಳೂರು | |
| ಡಿ.ಎಸ್.ಜೆ. | ಜಯಪ್ಪಗೌಡ, ಡಿ.ಎಸ್.<br>57, 1ನೆಯ ಅಡ್ಡರಸ್ತೆ<br>4ನೆಯ ಹಂತ, ಟಿ.ಕೆ. ಬಡಾವಣೆ<br>ಮೈಸೂರು – 9 | |
| ಡಿ.ಎಸ್.ಎಂ. | ಮಹದೇವಪ್ಪ, ಡಿ.ಎಸ್.<br>ಪ್ರಾಧ್ಯಾಪಕ (ವಿ), ರಸಾಯನಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು | |
| ಡಿ.ಎಸ್‌ಒ. | ಡಿ'ಸೋಜ<br>ಪ್ರಿನ್ಸಿಪಾಲ್ (ವಿ)<br>ಸೇಂಟ್ ಜೋಸೆಫ್ಸ್ ಕಾಲೇಜು<br>ಬೆಂಗಳೂರು | |
| ಡಿ.ಎಸ್.ಎಸ್. | ಶಿವಪ್ಪ, ಡಿ.ಎಸ್. (ದಿ)<br>ಪ್ರಾಧ್ಯಾಪಕ, ಔಷಧವಿಜ್ಞಾನ ವಿಭಾಗ<br>ಬೆಂಗಳೂರು ಮೆಡಿಕಲ್ ಕಾಲೇಜು<br>ಬೆಂಗಳೂರು | |
| ಜಿ.ಬಿ. | ಬೋರಯ್ಯ, ಜಿ.<br>ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಕೃಷಿ ಕಾಲೇಜು, ಹೆಬ್ಬಾಳ<br>ಬೆಂಗಳೂರು | |
| ಜಿ.ಬಿ.ಕೆ. | ಕಡೇಮನಿ, ಜಿ.ಬಿ.<br>ಅಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | |
| ಜಿ.ಸಿ.ಎ. | ಗುಂಡ್ಮಿ, ಚಂದ್ರಶೇಖರ ಐತಾಳ (ದಿ)<br>ಅಧ್ಯಾಪಕ, ಕನ್ನಡ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ<br>ಮಂಗಳೂರು | |
| ಜಿ.ಜಿ.ಎಂ. | ಮಂಜುನಾಥನ್, ಜಿ.ಜಿ.<br>143 ಡಿ, 10ನೆಯ ಮುಖ್ಯರಸ್ತೆ<br>4ನೆಯ ಅಡ್ಡರಸ್ತೆ, ಕುವೆಂಪುನಗರ<br>ಮೈಸೂರು | |
| ಜಿ.ಎಚ್. | ಹನುಮಂತರಾವ್, ಜಿ. (ದಿ)<br>ಅಧ್ಯಕ್ಷ, ತತ್ತ್ವಶಾಸ್ತ್ರ ಉಪಸಮಿತಿ<br>ಕನ್ನಡ ವಿಶ್ವಕೋಶ, ಮೈಸೂರು | |
| ಜಿ.ಕೆಎ. | ಗೌರೀಶ ಕಾಯ್ಕಿಣಿ<br>ಗೋಕರ್ಣ (ಉ.ಕ.) | |
| ಜಿ.ಕೆ.ಜಿ. | ಘೋರಿ, ಜಿ.ಕೆ. (ದಿ)<br>ಪ್ರಿನ್ಸಿಪಾಲ್, ಮಹಾರಾಜ ಕಾಲೇಜು<br>ಮೈಸೂರು | |
| ಜಿ.ಕೆ.ಎಂ. | ಕೃಷ್ಣಮೂರ್ತಿ, ಜಿ.<br>ಸಂಶೋಧನಾಧಿಕಾರಿ (ವಿ)<br>ಡಿ.ಪಿ.ಐ. ರವರ ಕಚೇರಿ, ಬೆಂಗಳೂರು | |
| ಜಿ.ಎಂ.ಬಿ. | ಬಸವರಾಜ್, ಜಿ.ಎಂ.<br>ಅಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಸಹ್ಯಾದ್ರಿ ಕಾಲೇಜು, ಶಿವಮೊಗ್ಗ | |
| ಜಿ.ಎನ್.ಕೆ. | ಕೃಷ್ಣಮೂರ್ತಿ, ಜಿ.ಎನ್.<br>ಅಧ್ಯಾಪಕ (ವಿ)<br>ಎಂ.ಇ.ಎಸ್. ಆರ್ಟ್ಸ್ ಮತ್ತು ಕಾಮರ್ಸ್<br>ಕಾಲೇಜು, ಮಲ್ಲೇಶ್ವರಂ<br>ಬೆಂಗಳೂರು | |
| ಜಿ.ಎನ್.ಎಸ್. | ಶರ್ಮಾ, ಜಿ.ಎನ್.<br>ಮುಖ್ಯಾಧಿಕಾರಿ (ವಿ), ರಾಜ್ಯಶಾಸ್ತ್ರ ವಿಭಾಗ<br>ಮರಾಠವಾಡ ವಿಶ್ವವಿದ್ಯಾಲಯ<br>ಔರಂಗಾಬಾದ್, ಮಹಾರಾಷ್ಟ್ರ | |
| ಜಿ.ಪಿ.ಸಿ. | ಚೆನ್ನಬಸವಣ್ಣ, ಜಿ.ಪಿ.<br>ಪ್ರಾಧ್ಯಾಪಕ (ವಿ), ಕೀಟವಿಜ್ಞಾನ ವಿಭಾಗ<br>ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ<br>ಬೆಂಗಳೂರು | |

**ಜಿ.ಪಿ.ಎಂ.** ಗೋವಿಂದ ಪೈ ಮಂಜೇಶ್ವರ (ದಿ)
ಮಂಜೇಶ್ವರ (ದ.ಕ.)

**ಜಿ.ಆರ್.ಸಿ.** ಚಂದ್ರಶೇಖರ್, ಜಿ.ಆರ್.
ಪ್ರಾಧ್ಯಾಪಕ (ವಿ), ವೈದ್ಯವಿಭಾಗ
ಬೆಂಗಳೂರು ಮೆಡಿಕಲ್ ಕಾಲೇಜು
ಬೆಂಗಳೂರು

**ಜಿ.ಆರ್.ಕೆ.** ಕುಪ್ಪುಸ್ವಾಮಿ ಅಯ್ಯಂಗಾರ್, ಜಿ.ಆರ್.
ಕೆನರ ಕಾಲೇಜು, ಕುಮಟ

**ಜಿ.ಆರ್.ಆರ್.** ರಂಗಸ್ವಾಮಯ್ಯ, ಜಿ.ಆರ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ಆರ್.ಆರ್.ಎಸ್.** ರಾಜಶೇಖರಯ್ಯ, ಜಿ.ಆರ್.
ಪ್ರಾಧ್ಯಾಪಕ (ವಿ), ಪರೋಪಜೀವವಿಜ್ಞಾನ
ಪಶುವೈದ್ಯ ಕಾಲೇಜು, ಹೆಬ್ಬಾಳ
ಬೆಂಗಳೂರು

**ಜಿ.ಎಸ್.** ಸೀತಾರಾಮಯ್ಯ, ಜಿ.
ಪ್ರಾಧ್ಯಾಪಕ (ವಿ), ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ಎಸ್.ಎ.** ಅಣ್ಣಯ್ಯ, ಜಿ.ಎಸ್.
ಉಪನಿರ್ದೇಶಕ (ವಿ)
ಗಣಿ ಮತ್ತು ಭೂವಿಜ್ಞಾನ ಇಲಾಖೆ
ಬೆಂಗಳೂರು

**ಜಿ.ಎಸ್.ಡಿ.** ದೀಕ್ಷಿತ, ಜಿ.ಎಸ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಜಿ.ಎಸ್.ಜಿ.** ಗಾಯಿ, ಜಿ.ಎಸ್. (ದಿ)
ಪ್ರಧಾನ ಶಾಸನ ಸಂಶೋಧಕ
ಭಾರತ ಸರ್ಕಾರದ ಶಾಸನ ಸಂಶೋಧನ ಸಂಸ್ಥೆ
ಮೈಸೂರು

**ಜಿ.ಎಸ್.ಎಚ್.** ಹಾಲಪ್ಪ, ಜಿ.ಎಸ್. (ದಿ)
ಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಜಿ.ಟಿ.ಜಿ.** ಗುಬ್ಬಣ್ಣ, ಜಿ.ಟಿ.
ವೈಸ್ ಪ್ರಿನ್ಸಿಪಾಲ್ (ವಿ)
ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್
ಕಾಲೇಜು, ಮೈಸೂರು

**ಎಚ್.ಎ.ಆರ್.** ರಂಗನಾಥ, ಎಚ್.ಎ.
ಸಂಶೋಧಕ, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಬಿ.ಡಿ.** ದೇವರಾಜ ಸರ್ಕಾರ್, ಎಚ್.ಬಿ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಸಿ.ಕೆ.** ಕಪನೀಪತಿಭಟ್ಟ, ಎಚ್.ಸಿ. (ದಿ)
ಬೆಂಗಳೂರು

**ಎಚ್.ಜಿ.ಎಂ.** ಮುರಳೀಧರ, ಎಚ್.ಜಿ.
219/226, 3ನೆಯ ಮೇನ್
ಚಾಮರಾಜಪೇಟೆ, ಬೆಂಗಳೂರು

**ಎಚ್.ಜಿ.ಎಸ್.** ಸುಬ್ಬರಾವ್, ಎಚ್.ಜಿ.
ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಚ್.ಎಚ್.ಎಸ್.** ಷಣ್ಮುಖಮ್ಮ, ಎಚ್.ಎಸ್.
ಪ್ರಾಧ್ಯಾಪಕಿ (ವಿ), ರಸಾಯನವಿಜ್ಞಾನ ವಿಭಾಗ
ಜೆ.ಎಸ್.ಎಸ್. ಕಾಲೇಜು, ಮೈಸೂರು

**ಎಚ್.ಕೆ.ಎಂ.** ಮಲ್ಲಿಕಾರ್ಜುನಪ್ಪ, ಎಚ್.ಕೆ. (ದಿ)
ಸಸ್ಯವಿಜ್ಞಾನ ವಿಭಾಗ, ಸರ್ಕಾರಿ ಕಾಲೇಜು
ಚಿಕ್ಕಮಗಳೂರು

**ಎಚ್.ಕೆ.ಎನ್.** ನರಸಿಂಹೇಗೌಡ, ಎಚ್.ಕೆ.
ಉಪಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ
ಬೆಂಗಳೂರು

**ಎಚ್.ಕೆ.ಆರ್.** ರಾಮಚಂದ್ರಮೂರ್ತಿ, ಎಚ್.ಕೆ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ನ್ಯಾಷನಲ್ ಕಾಲೇಜು, ಬೆಂಗಳೂರು

**ಎಚ್.ಕೆ.ಆರ್.ಜಿ.** ರಾಜೇಗೌಡ, ಎಚ್.ಕೆ.
ಸಂಶೋಧನ ಸಹಾಯಕ (ವಿ)
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಕೆ.ಎಸ್.ಎಂ.** ಶ್ರೀನಿವಾಸಮೂರ್ತಿ, ಎಚ್.ಕೆ.
ಸರ್ಜನ್, ಗೀತ
38, ಸೌತ್‌ಎಂಡ್ ರೋಡ್
ಬಸವನಗುಡಿ, ಬೆಂಗಳೂರು

**ಎಚ್.ಎಲ್.ಎನ್.** ನಾಗೇಗೌಡ, ಎಚ್.ಎಲ್. (ದಿ)
ಶ್ರೀಪಾದ ನಿಲಯ, ಕುಮಾರಪಾರ್ಕ್ ಪಶ್ಚಿಮ
ಬೆಂಗಳೂರು

**ಎಚ್.ಎಂ.ಎನ್.ಆರ್.** ನಾಗರಾಜರಾವ್, ಎಚ್.ಎಂ.
ಶಾಸನತಜ್ಞರು (ವಿ), ಕು.ಕ.ಅ.ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಎನ್.ಸಿ.** ಚಾಮಯ್ಯ, ಎಚ್.ಎನ್. (ದಿ)
ರೀಡರ್, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಚ್.ಆರ್.ಡಿ.** ದಾಸೇಗೌಡ, ಎಚ್.ಆರ್. (ದಿ)
ಉಪಪರೀಕ್ಷಾಧಿಕಾರಿ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಚ್.ಆರ್.ಡಿಎಚ್.** ಧ್ರುವನಾರಾಯಣ್, ಎಚ್.ಆರ್.
ಉಪಪ್ರಾಧ್ಯಾಪಕ (ವಿ)
ಶರೀರಕ್ರಿಯಾವಿಜ್ಞಾನ ವಿಭಾಗ
ಕರ್ನಾಟಕ ಮೆಡಿಕಲ್ ಕಾಲೇಜು
ಹುಬ್ಬಳ್ಳಿ

**ಎಚ್.ಆರ್.ಆರ್.ಬಿ.** ರಘುನಾಥಭಟ್ಟ, ಎಚ್.ಆರ್. (ದಿ)
ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ, ಪುರಾತತ್ತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎಚ್.ಎಸ್.ಎಎನ್.** ಅನಂತಾಚಾರ್, ಎಚ್.ಎಸ್.
709, ಕತ್ವಾಡಿಪುರ
ಅಗ್ರಹಾರ, ಕೃಷ್ಣರಾಜ ಮೊಹಲ್ಲ
ಮೈಸೂರು

**ಎಚ್.ಎಸ್.ಎಚ್.** ಹರಿಶಂಕರ್, ಎಚ್.ಎಸ್.
ಪ್ರಾಧ್ಯಾಪಕ, ಭಾಷಾಂತರ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್.ಐ.** ಈಶ್ವರ, ಎಚ್.ಎಸ್.
ಪ್ರಾಧ್ಯಾಪಕ (ವಿ), ಮನಶ್ಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

**ಎಚ್.ಎಸ್.ಕೆ.** ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್. (ದಿ)
ಸಂಪಾದಕ ಮಾನವಿಕ ವಿಭಾಗ
ಕನ್ನಡ ವಿಶ್ವಕೋಶ, ಮಾನಸಗಂಗೋತ್ರಿ
ಮೈಸೂರು

**ಎಚ್.ಎಸ್.ಎನ್.** ನಾಗರಾಜಯ್ಯ, ಎಚ್.ಎಸ್.
ರೀಡರ್ (ವಿ), ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್ಆರ್.** ಶ್ರೀನಿವಾಸಯ್ಯ, ಎಚ್.
ಎಂಜಿನಿಯರ್ (ವಿ), ರೇಲ್‌ಕೋಚ್ ಡಿವಿಷನ್
ಭಾರತ್ ಅರ್ತ್ ಮೂವರ್ಸ್ ಲಿ., ಬೆಂಗಳೂರು

**ಎಚ್.ಎಸ್.ಆರ್.ಎ.** ರಾಮಣ್ಣ, ಎಚ್.ಎಸ್. (ದಿ)
ಅಧ್ಯಾಪಕ, ಪುರಾತನ ಇತಿಹಾಸ ಮತ್ತು
ಪ್ರಾಕ್ತನಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್.ಎಸ್.** ಶೇಷಾದ್ರಿ, ಎಚ್.ಎಸ್.
ಪ್ರಾಧ್ಯಾಪಕರು (ವಿ), ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್.ಎಸ್ಎಚ್.** ಶಾಮಾಶಾಸ್ತ್ರಿ, ಎಚ್.
ನಿರ್ದೇಶಕ (ವಿ)
ಸಾರ್ವಜನಿಕ ಆರೋಗ್ಯ ಇಲಾಖೆ
ಬೆಂಗಳೂರು

**ಎಚ್.ಎಸ್.ಎಸ್.ಕೆ.** ಶಾಂತಕುಮಾರಿ, ಎಚ್.ಎಸ್.
ಅಧ್ಯಾಪಕಿ (ವಿ), ಸಸ್ಯವಿಜ್ಞಾನ ವಿಭಾಗ
ಎಂ.ಡಿ.ಟಿ.ಡಿ.ಬಿ. ಕಾಲೇಜು
ಮೈಸೂರು

**ಎಚ್.ಎಸ್.ಎಸ್.ಎನ್.** ಸೂರ್ಯನಾರಾಯಣ, ಎಚ್.ಎಸ್.
ಸಂಪಾದಕ (ವಿ), ಕ್ರೀಡಾವಿಭಾಗ
ಸುಧಾ ವಾರಪತ್ರಿಕೆ
ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು

**ಎಚ್.ಎಸ್.ವಿ.** ವೆಂಕಟರಾಮಯ್ಯ, ಎಚ್.ಎಸ್.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

**ಎಚ್.ಟಿ.** ತಿಪ್ಪೇರುದ್ರಸ್ವಾಮಿ, ಎಚ್. (ದಿ)
ನಿರ್ದೇಶಕರು
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ವಿ.ಎಸ್.** ಸಾವಿತ್ರಮ್ಮ, ಎಚ್.ವಿ.
ಮಲ್ಲೇಶ್ವರಂ
ಬೆಂಗಳೂರು

**ಜೆ.ಇ.ಸಿ.** ಜೇಮ್ಸ್, ಇಕಾಲಿಯರ್
ಪ್ರಾಧ್ಯಾಪಕ (ವಿ), ಭೂಗೋಳಶಾಸ್ತ್ರ ವಿಭಾಗ
ಇಲಿನಾಯ್ ವಿಶ್ವವಿದ್ಯಾಲಯ, ಇಲಿನಾಯ್
ಯು.ಎಸ್.ಎ.

**ಜೆ.ಇ.ಸಿ.ಎಚ್.** ಚಂದ್ರಶೇಖರ್, ಜೆ.ಇ.
ಅಧ್ಯಾಪಕ
ಮೆಡಿಕಲ್ ಕಾಲೇಜು, ಮೈಸೂರು

**ಜೆ.ಎಚ್.** ಜವಹರಲಾಲ್ ಹಂಡೂ
ಪ್ರಾಧ್ಯಾಪಕ (ವಿ), ಕಾಶ್ಮೀರಿ ವಿಭಾಗ
ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ
ಪಂಜಾಬೀ ವಿಶ್ವವಿದ್ಯಾಲಯ
ಪಟಿಯಾಲ

**ಜೆ.ಕೆ.ಐ.** ಇರಾನಿ, ಜೆ.ಕೆ.
ಪ್ರಾಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜೆ.ಆರ್.** ರುದ್ರಪ್ಪ, ಜೆ.
ಜಿಲ್ಲಾ ಸೆಷನ್ಸ್ ಜಡ್ಜ್ (ವಿ)
ಬೆಂಗಳೂರು

**ಜೆ.ಆರ್.ಎಲ್.** ಲಕ್ಷ್ಮಣರಾವ್, ಜೆ.ಆರ್.
ಪ್ರಧಾನ ಸಂಪಾದಕ (ವಿ)
ಇಂಗ್ಲಿಷ್–ಕನ್ನಡ ನಿಘಂಟು
ಮಾನಸಗಂಗೋತ್ರಿ, ಮೈಸೂರು

**ಜೆ.ಎಸ್.** ಶಶಿಧರಪ್ರಸಾದ್
ಮಾಜಿ ಕುಲಪತಿ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

**ಜೆ.ಎಸ್.ಸಿ.** ಶಶಿಕಲಾ ಚಂದ್ರಶೇಖರ್, ಜೆ.
ಯು.ಎಸ್.ಎ.

**ಜೆ.ಎಸ್.ಎಲ್.** ಜೇನಹಳ್ಳಿ ಸಿದ್ದಲಿಂಗಪ್ಪ
18, 6ನೆಯ ಮುಖ್ಯರಸ್ತೆ
ಸರಸ್ವತಿಪುರಂ, ಮೈಸೂರು

**ಜೆ.ಎಸ್.ಪಿ.** ಪರಮಶಿವಯ್ಯ, ಜೆ.ಎಸ್. (ದಿ)
ನಿರ್ದೇಶಕರು, ಜಾನಪದ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

**ಜೆ.ಎಸ್.ಪಿ.ಎಂ.** ಪರಶಿವಮೂರ್ತಿ, ಜೆ.ಎಸ್.
ನಿರ್ದೇಶಕರು (ವಿ)
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಜೆ.ವಿ.ಎನ್.** ನೀರಜಾಕ್ಷಿ, ಜೆ.ವಿ.
ಪ್ರಾಧ್ಯಾಪಕಿ (ವಿ), ಪ್ರಾಣಿವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಕೆ.** ಕೃಷ್ಣಪ್ಪಗೌಡ
ಉಪನಿರ್ದೇಶಕ (ವಿ)
ತೋಟಗಾರಿಕೆ ಇಲಾಖೆ
ಮಡಿಕೇರಿ

**ಕೆ.ಬಿ.** ಬಸವಯ್ಯ, ಕೆ.
ಪ್ರಿನ್ಸಿಪಾಲ್ (ವಿ)
ಸೇಂಟ್ ಜೋಸೆಫ್ಸ್ ಟೀಚರ್ಸ್ ಕಾಲೇಜು
ಮೈಸೂರು

**ಕೆ.ಬಿ.ಸಿಎಚ್.** ಚನ್ನಬಸಪ್ಪ, ಕೆ.ಬಿ.
ಅಧ್ಯಾಪಕ (ವಿ), ಇತಿಹಾಸ ವಿಭಾಗ
ಶ್ರೀ ಗೊಮ್ಮಟೇಶ್ವರ ಕಾಲೇಜು
ಶ್ರವಣಬೆಳಗೊಳ

**ಕೆ.ಬಿ.ಪಿ.** ಪ್ರಭುಪ್ರಸಾದ್, ಕೆ.ಬಿ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಮಹಾರಾಣಿ ಕಾಲೇಜು
ಮೈಸೂರು

**ಕೆ.ಬಿ.ಆರ್.** ರಾಮಕೃಷ್ಣರಾವ್, ಕೆ.ಬಿ. (ದಿ)
ಪ್ರಾಧ್ಯಾಪಕ, ಹಿಂದೂ ತತ್ತ್ವಶಾಸ್ತ್ರ
ಮಾನಸಗಂಗೋತ್ರಿ, ಮೈಸೂರು

**ಕೆ.ಸಿ.** ಚೆನ್ನಬಸಪ್ಪ, ಕೆ.
ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ (ವಿ)
ಬೆಂಗಳೂರು

**ಕೆ.ಸಿ.ಬಿ.** ಭೀಮಯ್ಯ, ಕೆ.ಸಿ.
ಸಂಪಾದಕ (ವಿ)
ಮೈಸೂರು ಗೆಜೆಟಿಯರ್ ಪರಿಷ್ಕರಣ ಕಚೇರಿ
ಗುಟ್ಟಹಳ್ಳಿ, ಬೆಂಗಳೂರು

**ಕೆ.ಸಿ.ಜಿ.** ಚಿದಾನಂದಗೌಡ, ಕೆ.
ಕುಲಪತಿಗಳು (ವಿ)
ಕುವೆಂಪು ವಿಶ್ವವಿದ್ಯಾಲಯ
ಉದಯರವಿ, ಮೈಸೂರು

**ಕೆ.ಸಿ.ಆರ್.** ರೆಡ್ಡಿ, ಕೆ.ಸಿ.
ಪ್ರಾಧ್ಯಾಪಕ (ವಿ)
ಮಲೆನಾಡು ಎಂಜಿನಿಯರಿಂಗ್ ಕಾಲೇಜು
ಹಾಸನ

**ಕೆ.ಜಿ.** ಗೋಪಾಲ್, ಕೆ. (ದಿ)
ಕುಲಪತಿಗಳು
ಮಂಗಳೂರು ವಿಶ್ವವಿದ್ಯಾಲಯ

**ಕೆ.ಜಿ.ಬಿ.** ಗೋವಿಂದಭಟ್ಟ, ಕೆ.
ಅಡ್ವೊಕೇಟ್
ಮಂಗಳೂರು

**ಕೆ.ಜಿ.ಕೆ.** ಕುಂದಣಗಾರ, ಕೆ.ಜಿ. (ದಿ)
ಕನ್ನಡ ಪ್ರಾಧ್ಯಾಪಕ
ಬೆಳಗಾಂವಿ

**ಕೆ.ಜಿ.ಕೆಆರ್.** ಕೃಷ್ಣನ್, ಕೆ.ಜಿ.
ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್ (ವಿ)
ಚೀಫ್ ಎಪಿಗ್ರಫಿಸ್ಟ್‌ರವರ ಕಚೇರಿ
ಮೈಸೂರು

**ಕೆ.ಜಿ.ಆರ್.** ರಾಮಕೃಷ್ಣ, ಕೆ.ಜಿ.
ಪ್ರಾಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ
ಸೇಂಟ್ ಫಿಲೋಮಿನಾ ಕಾಲೇಜು
ಮೈಸೂರು

**ಕೆ.ಜೆ.** ಜೀವಣ್ಣರಾವ್, ಕೆ.
ಪತ್ರಿಕೋದ್ಯಮಿ
ಬೆಂಗಳೂರು

**ಕೆ.ಕೆ.** ಕೃಷ್ಣಮೂರ್ತಿ, ಕೆ.
ಪ್ರಾಧ್ಯಾಪಕ (ವಿ), ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಕೆ.ಕೆ.ಜಿ.** ಕೆಂಪೇಗೌಡ, ಕೆ.
ನಿರ್ದೇಶಕರು (ವಿ)
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಕೆ.ಕೆಆರ್‌ಐ.** ಕೃಷ್ಣಮೂರ್ತಿ, ಕೆ.
ವಾಣಿವಿಲಾಸ ರೋಡ್
ಬಸವನಗುಡಿ, ಬೆಂಗಳೂರು

**ಕೆ.ಕೆ.ಎಸ್.** ಕರುಣಾಕರನ್, ಕೆ.ಎಸ್.
ಅಧ್ಯಾಪಕ (ವಿ), ಕನ್ನಡ ವಿಭಾಗ
ಕಲ್ಪತರು ಕಾಲೇಜು, ತಿಪಟೂರು

**ಕೆ.ಎಂ.** ಮುನಿಯಪ್ಪ, ಕೆ.
ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಪ್ರಥಮದರ್ಜೆ ಕಾಲೇಜು
ಉರಿಗಾಂ, ಕೆ.ಜಿ.ಎಫ್.

**ಕೆ.ಎಂಎ.** ಮನೋಹರ, ಕೆ.
ಸೂಪರಿಂಟೆಂಡೆಂಟ್ (ವಿ)
ಕುರುಡರ ಮತ್ತು ಕಿವುಡರ ಶಾಲೆ
ಮೈಸೂರು

**ಕೆ.ಎಂ.ವಿ.** ವೀರಪ್ಪ, ಕೆ.ಎಂ.
ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಕೆ.ಎನ್.ಸಿ.** ಚೈತನ್ಯಪಂಡಿತಾರಾಧ್ಯ, ಕೆ.ಎನ್.
ಪ್ರಾಧ್ಯಾಪಕ (ವಿ), ಭೂಗೋಳಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು

**ಕೆ.ಎನ್.ವಿ.** ವೆಂಕಟರಾಯಪ್ಪ, ಕೆ.ಎನ್. (ದಿ)
ಪ್ರಾಧ್ಯಾಪಕ, ಸಮಾಜಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಕೆ.ಪಿ.ಆರ್.** ಪಾಂಡುರಂಗ, ಕೆ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಕೆ.ಆರ್.ಡಿ.** ರಾಮದಾಸ್, ಕೆ. (ದಿ)
ಕನ್ನಡ ವಿಭಾಗ, ಯುವರಾಜ ಕಾಲೇಜು
ಮೈಸೂರು

**ಕೆ.ಆರ್.ಜಿ.** ಕುಲಕರ್ಣಿ, ಆರ್.ಜಿ.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಸಾಯಿಬಾಬಾ ಕಾಲೇಜು
ವೈಟ್‌ಫೀಲ್ಡ್, ಬೆಂಗಳೂರು

**ಕೆ.ಆರ್.ಎಂಒ.** ಮೋಹನ್, ಕೆ.ಆರ್.
ಪ್ರಾಧ್ಯಾಪಕ (ವಿ)
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

**ಕೆಆರ್.ಎನ್.** ಕೃಷ್ಣನಾಯಕ್
ಪ್ರಾಧ್ಯಾಪಕ (ವಿ)
ಸರ್ಕಾರಿ ಆರ್ಟ್ಸ್ ಕಾಲೇಜು
ಬೆಂಗಳೂರು

**ಕೆ.ಆರ್.ಆರ್.** ರಂಗಾಚಾರ್, ಕೆ.ಆರ್.
ಉಪಾಧ್ಯಾಯ (ವಿ)
ಶಿಕ್ಷಕರ ತರಬೇತಿ ಕೇಂದ್ರ
ಮೈಸೂರು

**ಕೆ.ಆರ್.ಎಸ್.** ಶ್ರೀಕಂಠಮೂರ್ತಿ, ಕೆ.ಆರ್.
ಪ್ರಾಧ್ಯಾಪಕ (ವಿ)
ಸರ್ಕಾರಿ ಆಯುರ್ವೇದ ಕಾಲೇಜು
ಮೈಸೂರು

**ಕೆ.ಎಸ್.ಬಿ.** ಸುಬ್ಬಾಭಟ್ಟ, ಕೆ.
ಉಪಪ್ರಾಧ್ಯಾಪಕ (ವಿ)
ರಸಾಯನವಿಜ್ಞಾನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಕೆ.ಎಸ್.ಬಿ.ಜಿ.** ಬೋರೇಗೌಡ, ಕೆ.ಎಸ್. (ದಿ)
ಅಧ್ಯಾಪಕ, ಇಂಗ್ಲಿಷ್ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಕೆ.ಎಸ್.ಡಿ.** ಧರಣೇಂದ್ರಯ್ಯ, ಕೆ.ಎಸ್.
ಮುಖ್ಯಾಧಿಕಾರಿ (ವಿ)
ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ
ಬೆಂಗಳೂರು

**ಕೆ.ಎಸ್‌ಇ.** ಸೀತಾರಾಮಯ್ಯ, ಕೆ.
ಪ್ರಾಧ್ಯಾಪಕ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್
ಬೆಂಗಳೂರು

**ಕೆ.ಎಸ್.ಆರ್‌ಎ.** ಸಂಪದ್ಗಿರಿರಾವ್, ಕೆ.
ಬೆಂಗಳೂರು

**ಕೆ.ಎಸ್.ಜೆ.** ಜಗದೀಶಚಂದ್ರ, ಕೆ.ಎಸ್.
ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಕೆ.ಎಸ್.ಕೆ.** ಕೃಷ್ಣಸ್ವಾಮಿ, ಕೆ.ಎಸ್.
ಪ್ರಿನ್ಸಿಪಾಲ್ (ವಿ)
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

**ಕೆ.ಎಸ್.ಕೆ.ಎಂ.** ಕೃಷ್ಣಮೂರ್ತಿ, ಕೆ.ಎಸ್.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಸೇಂಟ್ ಫಿಲೋಮಿನಾ ಕಾಲೇಜು
ಮೈಸೂರು

**ಕೆ.ಎಸ್‌ಆರ್‌ಐ.** ಶ್ರೀನಿವಾಸನ್, ಕೆ.
ರೀಡರ್ (ವಿ), ಭೌತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಕೆ.ಎಸ್.ಎಸ್‌ಎಚ್.** ಷಡಕ್ಷರಪ್ಪ, ಕೆ.ಎಸ್.
38, ರಂಗರಾವ್ ರೋಡ್
ಶಂಕರಪುರಂ, ಬೆಂಗಳೂರು

**ಕೆ.ಎಸ್.ವಿ.** ವರದಾಚಾರ್ಯ, ಕೆ.ಎಸ್.
ಸಂಶೋಧನ ಸಹಾಯಕ (ವಿ)
ಪ್ರಾಚ್ಯ ವಿದ್ಯಾ ಸಂಶೋಧನಾಲಯ

**ಕೆ.ಎಸ್.ವಿ.ಆರ್.** ವೆಂಕಟರಾಮ್, ಕೆ.ಎಸ್.
ಇಂಡಿಯನ್ ಸ್ಕೂಲ್ ಆಫ್ ಮೈನ್ಸ್
ಧನ್‌ಬಾದ್

**ಕೆ.ಟಿ.ಬಿ.** ಬನಶಂಕರಮ್ಮ, ಕೆ.ಟಿ.
ಅಶೋಕ ಶಿಶುವಿಹಾರ, 3ನೆಯ ಮೇನ್
ಚಾಮರಾಜಪೇಟೆ, ಬೆಂಗಳೂರು

**ಕೆ.ಟಿ.ಎಸ್.** ಶ್ಯಾಮಸುಂದರ, ಕೆ.ಟಿ.
ಮ್ಯಾನೇಜರ್ (ವಿ)
ಪರಮಾಲಿ ವಾಲೇಸ್ ಲಿ.
ಭೂಪಾಲ್, ಮಧ್ಯಪ್ರದೇಶ

**ಕೆಯು.ವಿ.** ಕುಮಾರ ವೆಂಕಣ್ಣ
ಕಾರ್ಯನಿರ್ವಾಹಕ ಸಂಪಾದಕ
ಕಾಂಗ್ರೆಸ್ ಸಂದೇಶ
ರೇಸ್‌ಕೋರ್ಸ್ ರೋಡ್
ಬೆಂಗಳೂರು

**ಕೆ.ವಿಎ.** ಕೃಷ್ಣ ವಟ್ಟಂ
ಪತ್ರಿಕೋದ್ಯಮಿ
ಲಕ್ಷ್ಮೀಪುರಂ, ಮೈಸೂರು

**ಕೆ.ವಿ.ಜಿ.** ಘೋರ್ಪಡೆ, ಕೆ.ವಿ.
ಪ್ರಾಧ್ಯಾಪಕ (ವಿ), ಪೆಥಾಲಜಿ ವಿಭಾಗ
ಬೌರಿಂಗ್ ಆಸ್ಪತ್ರೆ, ಬೆಂಗಳೂರು

**ಕೆ.ವಿ.ಜಿ.ಆರ್.** ಗುಂಡೂರಾವ್, ಕೆ.ವಿ.
ರೀಡರ್ (ವಿ), ಯಂತ್ರಶಿಲ್ಪ ವಿಭಾಗ
ವಿಶ್ವವಿದ್ಯಾಲಯ ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

**ಕೆ.ವಿ.ಎಂ.** ವಿಠಲಮಲ್ಲಿ, ಕೆ.ವಿ.
ಪ್ರಾಧ್ಯಾಪಕ (ವಿ), ಶಸ್ತ್ರವೈದ್ಯ ವಿಭಾಗ
ಪಶುವೈದ್ಯ ಕಾಲೇಜು
ಹೆಬ್ಬಾಳ, ಬೆಂಗಳೂರು

**ಕೆ.ವಿ.ಆರ್.** ರಮೇಶ್, ಕೆ.ವಿ.
ಡೆಪ್ಯುಟಿ ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್ (ವಿ)
ಚೀಫ್ ಎಪಿಗ್ರಫಿಸ್ಟ್‌ರವರ ಕಚೇರಿ
ಮೈಸೂರು

| | |
|---|---|
| **ಕೆ.ವಿ.ಎಸ್.** | ಸುಬ್ಬರಾಯ, ಕೆ.ವಿ.<br>ಪ್ರಾಧ್ಯಾಪಕ (ವಿ)<br>ಬೆಂಗಳೂರು ವಿಶ್ವವಿದ್ಯಾಲಯ<br>ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| **ಎಲ್.ಎ.ಆರ್.** | ಅನಂತರೆಡ್ಡಿ, ಎಲ್.<br>ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಎಲ್.ಬಿ.** | ಲೀಲಾಭಟ್<br>ಕನ್ನಡ ಸಂಘ<br>ಪುತ್ತೂರು, ದಕ್ಷಿಣಕನ್ನಡ |
| **ಎಲ್.ಡಿ.** | ದೇಸಿಗೌಡ, ಎಲ್.<br>ಪ್ರಿನ್ಸಿಪಾಲ್ (ವಿ)<br>ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯಾಂಡ್‌ಲೂಮ್<br>ಟೆಕ್ನಾಲಜಿ, ಸೇಲಂ |
| **ಎಲ್.ಡಿ.ಎಂ.** | ಮೆರವಾಡೆ, ಎಲ್.ಡಿ.<br>ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಶ್ರೀ ಮಹಾವೀರ ಕಾಲೇಜು, ಮೂಡಬಿದ್ರಿ (ದ.ಕ.) |
| **ಎಲ್.ಎನ್.ಸಿ.** | ಚಕ್ರವರ್ತಿ, ಎಲ್.ಎನ್. (ದಿ)<br>ರೀಡರ್, ಗಣಿತಶಾಸ್ತ್ರ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಎಲ್.ಆರ್.ಎಚ್.** | ಹೆಗಡೆ, ಎಲ್.ಆರ್.<br>ಅಧ್ಯಾಪಕ (ವಿ), ಕನ್ನಡ ವಿಭಾಗ<br>ಡಾ. ಎ.ವಿ. ಬಾಳಿಗ ಕಾಲೇಜು<br>ಕುಮಟ (ಉ.ಕ.) |
| **ಎಲ್.ಆರ್.ಪಿ.** | ಲೀಲಾದೇವಿ ಆರ್. ಪ್ರಸಾದ್<br>ಮಾಜಿ ಸಚಿವರು<br>ಬೆಂಗಳೂರು |
| **ಎಲ್.ಎಸ್.ಜಿ.** | ಸಿದ್ದವೀರೇಗೌಡ, ಎಲ್. (ದಿ)<br>ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎಲ್.ಎಸ್.ಜೆ.** | ಜಾಗಿರ್‌ದಾರ್, ಎಲ್.ಎಸ್.<br>ವಿಭಾಗಾಧಿಕಾರಿ (ವಿ)<br>ನ್ಯಾಯಾಂಗ ವಿಭಾಗ<br>ವಿಧಾನಸೌಧ, ಬೆಂಗಳೂರು |
| **ಎಲ್.ಎಸ್.ಎಸ್.** | ಶೇಷಗಿರಿರಾವ್, ಎಲ್.ಎಸ್.<br>ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು |
| **ಎಂ.** | ಮೆಣಸಿನಕಾಯಿ, ಎಸ್.ಡಬ್ಲ್ಯು.<br>ಪ್ರಾಧ್ಯಾಪಕ (ವಿ), ಕೃಷಿಕಾಲೇಜು<br>ಧಾರವಾಡ<br>ಅಧ್ಯಕ್ಷ, ಕೃಷಿ ಉಪಸಮಿತಿ<br>ಕನ್ನಡ ವಿಶ್ವಕೋಶ |
| **ಎಂಎಚ್.** | ಮಹದೇವಯ್ಯ<br>ಸಹಾಯಕ ಗ್ರಂಥಪಾಲ (ವಿ)<br>ವಿಶ್ವವಿದ್ಯಾನಿಲಯ ಗ್ರಂಥಾಲಯ<br>ಮಾನಸಗಂಗೋತ್ರಿ, ಮೈಸೂರು |
| **ಎಂಎ.ಎಂ.** | ಮಾದಯ್ಯ, ಎಂ.<br>ಕುಲಪತಿಗಳು (ವಿ)<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು |
| **ಎಂ.ಎ.ಎನ್.** | ನರಸಿಂಹ ಐಯ್ಯಂಗಾರ್, ಎಂ.ಎ.<br>ಸಹಾಯಕ ವಾರ್ತಾಧಿಕಾರಿ (ವಿ)<br>ಬ್ರಿಗೇಡ್ ರೋಡ್, ಬೆಂಗಳೂರು |
| **ಎಂ.ಎ.ಎಸ್.ಆರ್.** | ಸೇತೂರಾವ್, ಎಂ.ಎ.<br>ರಸಾಯನವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ತುಮಕೂರು |
| **ಎಂ.ಬಿ.** | ಬಸವರಾಜು, ಎಂ.<br>ಪ್ರಾಧ್ಯಾಪಕ (ವಿ)<br>ಬೆಂಗಳೂರು ಮೆಡಿಕಲ್ ಕಾಲೇಜು<br>ಬೆಂಗಳೂರು |
| **ಎಂ.ಬಿ.ಆರ್‌ಯು.** | ರುದ್ರೇಗೌಡ, ಎಂ.ಬಿ.<br>ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| **ಎಂ.ಸಿಎಚ್.** | ಚನ್ನವೀರಯ್ಯ, ಎಂ.<br>ರೀಡರ್ (ವಿ), ಇಂಗ್ಲಿಷ್ ವಿಭಾಗ<br>ಮಹಾರಾಣಿ ಕಾಲೇಜು, ಮೈಸೂರು |
| **ಎಂ.ಸಿ.ಪಿ.** | ಪದ್ಮನಾಭಶರ್ಮ, ಎಂ.ಸಿ.<br>ಸಂಶೋಧನ ಸಹಾಯಕ (ವಿ)<br>ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಎಂ.ಸಿ.ಆರ್.** | ಚಿನ್ನಸ್ವಾಮಿರೆಡ್ಡಿ, ಎಂ.<br>ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| **ಎಂ.ಸಿ.ವಿ.** | ವಸಂತಕುಮಾರ್, ಎಂ.ಸಿ.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ ಕೇಂದ್ರ<br>ಮಂಡ್ಯ |
| **ಎಂ.ಡಿ.** | ದಯಾಕರ, ಎಂ.<br>ಪ್ರಾಧ್ಯಾಪಕ (ವಿ)<br>ಬೆಂಗಳೂರು ಮೆಡಿಕಲ್ ಕಾಲೇಜು<br>ಬೆಂಗಳೂರು |
| **ಎಂ.ಡಿ.ಪಿ.** | ಪಾರ್ಥಸಾರಥಿ, ಎಂ.ಡಿ.<br>ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು |
| **ಎಂ.ಜಿ.ಕೆ.** | ಕೃಷ್ಣಮೂರ್ತಿ, ಎಂ.ಜಿ.<br>ಉಪಾಧ್ಯಾಯ (ವಿ)<br>ಮುನಿಸಿಪಲ್ ಹೈಸ್ಕೂಲ್<br>ಶಿಕಾರಿಪುರ, ಶಿವಮೊಗ್ಗ ಜಿಲ್ಲೆ |
| **ಎಂ.ಜಿ.ಕೆ.ಎಂ.** | ಮೂರ್ತಿ, ಎಂ.ಜಿ.ಕೆ.<br>ಕ್ಯಾಪ್ಟನ್ (ವಿ), ಕರ್ಣಿಕ್ ರಸ್ತೆ<br>ಶಂಕರಪುರಂ, ಬೆಂಗಳೂರು |

**ಎಂ.ಜಿ.ಎನ್.** ನಂಜುಂಡಾರಾಧ್ಯ, ಎಂ.ಜಿ.
ಪ್ರಾಧ್ಯಾಪಕ (ವಿ)
ಶಕ್ತಿ ವಿಶಿಷ್ಟಾದ್ವೈತ ವೇದಾಂತ
ಮಹಾರಾಜ ಸಂಸ್ಕೃತ ಕಾಲೇಜು
ಮೈಸೂರು

**ಎಂ.ಎಚ್.** ಹನುಮಂತರಾವ್, ಎಂ.
ಸಂಪಾದಕ (ವಿ)
ಎಪಿಗ್ರಾಫಿಯ ಕರ್ನಾಟಿಕ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಂ.ಎಚ್.ಡಿ.** ಧನಂಜಯ, ಎಂ.ಎಚ್.
ಪ್ರಾಧ್ಯಾಪಕ (ವಿ)
ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗ
ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್
ಕಾಲೇಜು, ಮೈಸೂರು

**ಎಂ.ಎಚ್.ಎಂ.** ಮರಿಗೌಡ, ಎಂ.ಎಚ್. (ದಿ)
ನಿರ್ದೇಶಕ, ತೋಟಗಾರಿಕೆ ಇಲಾಖೆ
ಬೆಂಗಳೂರು
ಅಧ್ಯಕ್ಷ, ತೋಟಗಾರಿಕೆ ಉಪಸಮಿತಿ
ಕನ್ನಡ ವಿಶ್ವಕೋಶ

**ಎಂ.ಎಚ್.ಯು.** ಮಂಜುಳ ಹುಲ್ಲಹಳ್ಳಿ
ಕೆ.ಎ.ಎಸ್. ಅಧಿಕಾರಿ
ಕರ್ನಾಟಕ ಸರ್ಕಾರ

**ಎಂ.ಜೆ.** ಜಯಂತಿಬಾಯಿ, ಎಂ. (ದಿ)
ಭಾಷಾಂತರ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಂ.ಜೆ.ಎಸ್.ಆರ್.** ಸುಂದರರಾಮ್, ಎಂ.ಜೆ.
ಅಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ವಿಜಯ ಕಾಲೇಜು
ಜಯನಗರ, ಬೆಂಗಳೂರು

**ಎಂ.ಕೆ.ಬಿ.** ಕೇಶವಭಟ್, ಎಂ.
ಶುಭದ, 166, ಜಯನಗರ
5ನೆಯ ಬ್ಲಾಕ್, ಬೆಂಗಳೂರು

**ಎಂ.ಕೆ.ಬಿ.ಆರ್.** ಭಾರತೀರಮಣಾಚಾರ್ಯ, ಎಂ.ಕೆ.
ಅಧ್ಯಾಪಕ (ವಿ), ಹಿಂದಿ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

**ಎಂ.ಕೆ.ಕೆ.** ಕೇಶವಸ್ವಾಮಿ, ಎಂ.ಕೆ.
ಜಯನಗರ
ಬೆಂಗಳೂರು

**ಎಂ.ಕೆ.ಆರ್.** ಕೃಷ್ಣರೆಡ್ಡಿ, ಎಂ.
ಅಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು

**ಎಂ.ಕೆ.ಎಸ್‌ಡಬ್ಲ್ಯು.** ಕೃಷ್ಣಸ್ವಾಮಿ, ಎಂ.
ಅಡ್ವೊಕೇಟ್, 6ನೆಯ ಮೇನ್ ರಸ್ತೆ
ಮಲ್ಲೇಶ್ವರಂ, ಬೆಂಗಳೂರು

**ಎಂ.ಎಂ.ಎಚ್.** ಮೀರ್ ಮಹಮೂದ್ ಹುಸೇನ್
ಅಧ್ಯಾಪಕ (ವಿ), ಉರ್ದು ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಂ.ಎಂ.ಕೆ.** ಕಲಬುರ್ಗಿ, ಎಂ.ಎಂ.
ಕುಲಪತಿಗಳು (ವಿ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಎಂ.ಎನ್.ಸಿಎಚ್.** ಚೌಡಪ್ಪ, ಎಂ.ಎನ್.
ಪತ್ರಿಕೋದ್ಯಮಿ
ಜಯನಗರ, ಬೆಂಗಳೂರು

**ಎಂ.ಎನ್.ಎಚ್.** ಹೆಗ್ಡೆ, ಎಂ.ಎನ್.
ಅಧ್ಯಾಪಕ (ವಿ), ಮನಶ್ಶಾಸ್ತ್ರ ವಿಭಾಗ
ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ
ಮೈಸೂರು

**ಎಂ.ಎನ್.ಕೆ.** ಮಾಧವ, ಎನ್. ಕುಟ್ಟಿ (ವಿ)
ಚೀಫ್ ಎಪಿಗ್ರಫಿಸ್ಟ್‌ರವರ ಕಚೇರಿ
ಮೈಸೂರು

**ಎಂ.ಎನ್.ಎಂ.** ಮಾಲೂರ್, ಎಂ.ಎನ್.
ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಂ.ಎನ್.ವಿ.** ವಿಶ್ವನಾಥಯ್ಯ, ಎಂ.ಎನ್. (ದಿ)
ಕುಲಪತಿಗಳು
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

**ಎಂ.ಪಿ.ಎಸ್.** ಮಂಜಪ್ಪಶೆಟ್ಟಿ, ಎಂ.ಪಿ.
13ನೆಯ ಕ್ರಾಸ್, 4ನೆಯ ಹಂತ
ಟಿ.ಕೆ. ಬಡಾವಣೆ, ಮೈಸೂರು – 9

**ಎಂ.ಆರ್.ಎ.** ಆನಂದರಾಮಯ್ಯ, ಎಂ.ಆರ್.
ತೋಟಾಧಿಕಾರಿ (ವಿ)
ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯ
ಮೈಸೂರು

**ಎಂ.ಆರ್.ಆರ್.** ರಾಘವೇಂದ್ರರಾವ್, ಎಂ.ಆರ್.
ಅಧ್ಯಕ್ಷರು (ವಿ)
ಜೀವ ರಸಾಯನವಿಜ್ಞಾನ ವಿಭಾಗ
ಕೇಂದ್ರ ಆಹಾರ ಸಂಶೋಧನ ಸಂಸ್ಥೆ
ಮೈಸೂರು

**ಎಂ.ಆರ್.ಆರ್‌ಎ.** ರಾಮಯ್ಯ, ಎಂ.ಆರ್.
ವಿದ್ಯಾಧಿಕಾರಿ (ವಿ)
ವಸಂತನಗರ, ಬೆಂಗಳೂರು

**ಎಂ.ಆರ್.ಎಸ್.ಐ.** ಶ್ರೀನಿವಾಸ ಐಯ್ಯಂಗಾರ್, ಎಂ.ಆರ್.
ಪ್ರಿನ್ಸಿಪಾಲ್ (ವಿ)
ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು

**ಎಂ.ಎಸ್.** ಶಿವಲಿಂಗಯ್ಯ, ಎಂ.
ಪ್ರಾಧ್ಯಾಪಕರು (ವಿ), ಭೂಗೋಳಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಎಂ.ಎಸ್.ಬಿ.** ಮುತ್ತೇಗೌಡ, ಎಸ್.ಬಿ. (ದಿ)
ಆಡಳಿತಾಧಿಕಾರಿ
ಮಾನಸಗಂಗೋತ್ರಿ, ಮೈಸೂರು

| | |
|---|---|
| **ಎಂ.ಎಸ್‌ಎಚ್‌ಎ.** | ಶಂಕರ್, ಎಂ.<br>ಸಹಾಯಕ ನಿರ್ದೇಶಕ (ವಿ)<br>ಆಕಾಶವಾಣಿ ಕೇಂದ್ರ, ಮೈಸೂರು |
| **ಎಂ.ಎಸ್.ಎನ್.** | ನಾರಾಯಣರಾವ್, ಎಂ.ಎಸ್.<br>ಗೌರವ ವೈದ್ಯ, ಬೌರಿಂಗ್ ಆಸ್ಪತ್ರೆ<br>ಬೆಂಗಳೂರು |
| **ಎಂ.ಎಸ್.ಆರ್.** | ರಾಮರಾವ್, ಎಂ.ಎಸ್.<br>ಅಧ್ಯಾಪಕ (ವಿ)<br>ಶಾರದಾವಿಲಾಸ ಲಾ ಕಾಲೇಜು<br>ಬೆಂಗಳೂರು |
| **ಎಂ.ಎಸ್‌ಆರ್‌ಐ.** | ಶ್ರೀನಿವಾಸನ್, ಎಂ.<br>ಸಹಾಯಕ ನಿರ್ದೇಶಕ (ವಿ)<br>ಕೇಂದ್ರ ಆಹಾರ ಸಂಶೋಧನ ಸಂಸ್ಥೆ<br>ಮೈಸೂರು |
| **ಎಂ.ಎಸ್.ಎಸ್.** | ಸದಾಶಿವಯ್ಯ, ಎಂ.ಎಸ್.<br>ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| **ಎಂ.ಎಸ್.ಎಸ್‌ಎಚ್.** | ಸೂರ್ಯನಾರಾಯಣಶಾಸ್ತ್ರಿ, ಎಂ.<br>ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| **ಎಂ.ಎಸ್.ಎಸ್.ಆರ್.** | ರಾವ್, ಎಂ.ಎಸ್.ಎಸ್.<br>ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಬಸವೇಶ್ವರ ಸೈನ್ಸ್ ಕಾಲೇಜು<br>ಬಾಗಲಕೋಟೆ |
| **ಎಂ.ಯು.ಪಿ.** | ಪೈ, ಎಂ.ಯು.<br>ನ್ಯಾಷನಲ್ ಕೆಮಿಕಲ್ ಲ್ಯಾಬೊರೇಟರಿ<br>ಪುಣೆ |
| **ಎಂ.ವಿ.** | ವಾಸುದೇವರಾವ್, ಎಂ.<br>ಮುಖ್ಯೋಪಾಧ್ಯಾಯ (ವಿ)<br>ವಿದ್ಯಾದಾಯಿನಿ ಪ್ರೌಢಶಾಲೆ<br>ಸುರತ್ಕಲ್ (ದ.ಕ.) |
| **ಎಂ.ವಿ.ಎ.ಎಸ್.** | ಅರುಣಾಚಲಶಾಸ್ತ್ರಿ, ಎಂ.ವಿ.<br>ಪೇಲಿಯೆಂಟೊಲಾಜಿಸ್ಟ್ (ವಿ)<br>ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯ<br>ಕಲ್ಕತ್ತ |
| **ಎಂ.ವಿ.ಐ.** | ಮಾಸ್ತಿ ವೆಂಕಟೇಶ ಐಯ್ಯಂಗಾರ್ (ದಿ)<br>11ನೆಯ ತಿರುವು, ಗವಿಪುರಂ ವಿಸ್ತರಣ<br>ಬೆಂಗಳೂರು |
| **ಎಂ.ವಿ.ಜೆ.** | ಜಂಬುನಾಥನ್, ಎಂ.ವಿ. (ದಿ)<br>ಪ್ರಾಧ್ಯಾಪಕ<br>ಅಧ್ಯಕ್ಷ, ಸಂಖ್ಯಾಶಾಸ್ತ್ರ ಉಪಸಮಿತಿ<br>ಕನ್ನಡ ವಿಶ್ವಕೋಶ, ಮೈಸೂರು |
| **ಎಂ.ವಿ.ಕೆ.** | ಕೃಷ್ಣರಾವ್, ಎಂ.ವಿ. (ದಿ)<br>ಬೆಂಗಳೂರು |
| **ಎಂ.ವಿ.ಎನ್.** | ನೆಗಳೂರು, ಎಂ.ವಿ.<br>ಉಪನ್ಯಾಸಕ<br>ಸರ್ಕಾರಿ ಪದವಿಪೂರ್ವ ಕಾಲೇಜು<br>ತ್ಯಾಮಗೊಂಡ್ಲು |
| **ಎಂ.ವಿ.ಎಸ್.** | ಸೀತಾರಾಮಯ್ಯ, ಎಂ.ವಿ. (ದಿ)<br>ಕನ್ನಡ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು |
| **ಎಂ.ವಿ.ವಿ.** | ವೆಂಕಟೇಶಮೂರ್ತಿ, ಎಂ.ವಿ.<br>ಇ.ಎನ್.ಟಿ. ಸರ್ಜನ್ (ವಿ)<br>ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ |
| **ಎಂ.ವೈ.** | ಯಾಮುನಾಚಾರ್ಯ, ಎಂ. (ದಿ)<br>ಮೈಸೂರು |
| **ಎನ್.** | ನಾರಾಯಣಪ್ಪ<br>ತಾಂತ್ರಿಕ ಸಹಾಯಕ (ವಿ)<br>ತೋಟಗಾರಿಕೆ ಇಲಾಖೆ, ಬೆಂಗಳೂರು |
| **ಎನ್.ಎ.** | ಅನಂತಪದ್ಮನಾಭನ್, ಎನ್.<br>ಪ್ರಾಧ್ಯಾಪಕ (ವಿ), ಭೂಗೋಳಶಾಸ್ತ್ರ ವಿಭಾಗ<br>ಪ್ರೆಸಿಡೆನ್ಸಿ ಕಾಲೇಜು, ಮದ್ರಾಸು |
| **ಎನ್.ಬಿ.** | ಬಸವಾರಾಧ್ಯ, ಎನ್.<br>ಉಪನಿರ್ದೇಶಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **ಎನ್.ಬಿ.ಕೆ.** | ಕೃಷ್ಣಮೂರ್ತಿ, ಎನ್.ಬಿ.<br>ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎನ್.ಬಿ.ಎಲ್.** | ಬೋರಲಿಂಗಯ್ಯ, ಎನ್.<br>ಕನ್ನಡ ಪ್ರಾಧ್ಯಾಪಕ (ವಿ)<br>ಸರಸ್ವತಿಪುರಂ, ಮೈಸೂರು |
| **ಎನ್.ಬಿ.ಕೆ.ಆರ್.** | ರೆಡ್ಡಿ, ಎನ್.ಬಿ.ಕೆ.<br>ಭೂಗೋಳಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ<br>ಧಾರವಾಡ |
| **ಎನ್.ಜಿ.ಸಿ.** | ಚಂದ್ರಶೇಖರಯ್ಯ, ಎನ್.ಜಿ.<br>307, 3ನೆಯ ಕ್ರಾಸ್<br>ಎನ್.ಆರ್. ಕಾಲೋನಿ, ಬೆಂಗಳೂರು |
| **ಎನ್.ಕೆ.** | ನಾಡಿಗ ಕೃಷ್ಣಮೂರ್ತಿ (ದಿ)<br>ಪ್ರಾಧ್ಯಾಪಕ, ಪತ್ರಿಕೋದ್ಯಮ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎನ್.ಕೆ.ಕೆ.** | ಕುಲಕರ್ಣಿ, ಎನ್.ಕೆ.<br>ಹರಪನಹಳ್ಳಿ ಕಾಂಪೌಂಡ್<br>ಯು.ಬಿ. ಹಿಲ್ ರೋಡ್, ಧಾರವಾಡ |

ಎನ್.ಕೆ.ಕೆ.ಟಿ. ಕಡೇತೋಟದ, ಎನ್.ಕೆ.
ಸಂಶೋಧಕ (ವಿ), ಮಾನವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎನ್.ಕೆ.ಎಸ್. ಕೃಷ್ಣಸ್ವಾಮಿ, ಎನ್.
ಫೋರ್‌ಮನ್ (ವಿ)
ಎಲ್.ಆರ್.ಡಿ.ಇ., ಬೆಂಗಳೂರು

ಎನ್.ಎಲ್. ಲಕ್ಷ್ಮೀ, ಎನ್.
ಪ್ರಾಧ್ಯಾಪಕರು, ಶಿಕ್ಷಣ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು

ಎನ್.ಎಲ್.ಆರ್. ಲಕ್ಷ್ಮೀನಾರಾಯಣರಾವ್, ಎನ್.
ಶಾಸನಾಧಿಕಾರಿ (ವಿ)
ರವಿನಗರ, ನಾಗಪುರ

ಎನ್.ಎಂ. ಮುನಿಯಪ್ಪ, ಎನ್.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎನ್.ಆರ್.ಆರ್. ರಂಗನಾಥಯ್ಯ, ಎನ್.ಆರ್.
ಗ್ರಂಥಪಾಲ (ವಿ), ಲಾಲ್‌ಬಾಗ್
ಬೆಂಗಳೂರು

ಎನ್.ಎಸ್.ಎ. ಅನಂತರಂಗಾಚಾರ್, ಎನ್.ಎಸ್.
ಜಿಲ್ಲಾ ವಿದ್ಯಾಧಿಕಾರಿ (ವಿ)
ಬೆಂಗಳೂರು

ಎನ್.ಎಸ್.ಕೆ. ಶ್ರೀಕಂಠ, ಎನ್.
ರೀಡರ್ (ವಿ), ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎನ್.ಎಸ್.ಕೆ.ಆರ್. ಕೃಷ್ಣರಾವ್, ಎನ್.ಎಸ್.
5/8ನೆಯ ಮೇನ್, ಮಲ್ಲೇಶ್ವರಂ
ಬೆಂಗಳೂರು

ಎನ್.ಎಸ್.ಎಲ್. ಲಕ್ಷ್ಮೀನಾರಾಯಣಭಟ್ಟ, ಎನ್.ಎಸ್.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಎನ್.ಎಸ್.ಆರ್.ಬಿ. ರಾಮಭದ್ರಾಚಾರ್ಯ, ಎನ್.ಎಸ್.
ತರ್ಕ ಪ್ರಾಧ್ಯಾಪಕ (ವಿ)
ಮಹಾರಾಜ ಸಂಸ್ಕೃತ ಕಾಲೇಜು
ಮೈಸೂರು

ಎನ್.ಎಸ್.ವಿ. ವೀರಪ್ಪ, ಎನ್.ಎಸ್. (ದಿ)
ಗೌರವ ಸಂಪಾದಕ, ಕನ್ನಡ ವಿಶ್ವಕೋಶ
ಮಾನಸಗಂಗೋತ್ರಿ, ಮೈಸೂರು

ಎನ್.ಟಿ. ತಪಸ್ವಿಕುಮಾರ್, ಎನ್.
ಕನ್ನಡ ಪ್ರಾಧ್ಯಾಪಕ (ವಿ)
ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು

ಎನ್.ವಿ.ಎ. ಅಶ್ವತ್ಥನಾರಾಯಣ, ಎನ್.ವಿ.
ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎನ್.ವಿ.ಪಿ. ಪದ್ಮನಾಭಾಚಾರ್ಯ, ಎನ್.ವಿ.
ಶ್ರೀನಿವಾಸ, ಕೃಷ್ಣಮೂರ್ತಿಪುರಂ
ಮೈಸೂರು

ಎನ್.ವಿ.ಆರ್.ಎನ್. ರಘುನಾಥ್, ಎನ್.ವಿ.
ಕುಂಭಕಲಾ ಎಂಜಿನಿಯರ್
19ನೆಯ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು

ಪಿ.ಎ.ಆರ್. ರಾಮಕೃಷ್ಣ ಅಯ್ಯರ್, ಪಿ.ಎ.
ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಪಿ.ಬಿ.ಡಿ. ದೇಸಾಯಿ, ಪಿ.ಬಿ. (ದಿ)
ನಿರ್ದೇಶಕ, ಕನ್ನಡ ಸಂಶೋಧನ ಸಂಸ್ಥೆ
ಧಾರವಾಡ

ಪಿ.ಜಿ.ಡಿ. ಪ್ರಧಾನ್ ಗುರುದತ್ತ
ಪ್ರಾಧ್ಯಾಪಕ (ವಿ), ಭಾಷಾಂತರ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಪಿ.ಜಿ.ಆರ್. ರಾಮಪ್ಪ, ಪಿ.ಜಿ.
ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಪಿ.ಎಚ್. ಹಲಗೇಗೌಡ, ಪಿ.
ಅಧ್ಯಾಪಕ (ವಿ), ಭೂಗೋಳಶಾಸ್ತ್ರ ವಿಭಾಗ
ಡಿ. ಬನುಮಯ್ಯ ಕಾಲೇಜು, ಮೈಸೂರು

ಪಿ.ಕೆ.ಆರ್. ಕೃಷ್ಣರಾವ್, ಪಿ.
349, 1ನೆಯ ಬ್ಲಾಕ್
ಜಯನಗರ, ಬೆಂಗಳೂರು

ಪಿ.ಕೆ.ಆರ್.ಜಿ. ರಾಜಗೋಪಾಲ, ಪಿ.ಕೆ.
ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಎಂ.ಜಿ.ಎಂ. ಕಾಲೇಜು
ಉಡುಪಿ (ದ.ಕ.)

ಪಿ.ಕೆ.ಎಸ್.ಆರ್. ರಾಜ, ಪಿ.ಕೆ.ಎಸ್.
ಅಣ್ಣಾಮಲೈ ವಿಶ್ವವಿದ್ಯಾಲಯ
ಅಣ್ಣಾಮಲೈ ನಗರ, ತಮಿಳುನಾಡು

ಪಿ.ಎಂ. ಪುಟ್ಟರುದ್ರಯ್ಯ, ಎಂ.
ನಿರ್ದೇಶಕ (ವಿ), ಕೃಷಿ ಕಾಲೇಜು
ಹೆಬ್ಬಾಳ, ಬೆಂಗಳೂರು

ಪಿ.ಎಂ.ಯು.ಎಸ್. ಉಮಾಕಾಂತಶಾಸ್ತ್ರಿ, ಪಿ.ಎಂ.
ಪ್ರಿನ್ಸಿಪಾಲ್ (ವಿ)
ಶ್ರೀ ಗವಿಸಿದ್ದೇಶ್ವರ ಕಾಲೇಜು
ಕೊಪ್ಪಳ

**ಪಿ.ಆರ್.ಎಸ್.** ಶ್ರೀನಿವಾಸನ್, ಪಿ.ಆರ್.
ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್ (ವಿ)
ಮೈಸೂರು

**ಪಿ.ಆರ್.ಟಿ.** ತಿಪ್ಪೇಸ್ವಾಮಿ, ಪಿ.ಆರ್. (ದಿ)
ಕ್ಯೂರೇಟರ್, ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಪಿ.ಎಸ್.ಸಿ.** ಚಿಕ್ಕಣ್ಣಯ್ಯ, ಪಿ.ಎಸ್.
ರೀಡರ್ (ವಿ), ಸಸ್ಯವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಪಿ.ಎಸ್.ಎಚ್.** ಹಾನಗಲ್, ಪಿ.ಎಸ್.
ವರ್ಕ್ಸ್ ಮ್ಯಾನೇಜರ್
ದಿ ಆಂಧ್ರಪ್ರದೇಶ್ ಪೇಪರ್ ಮಿಲ್ಸ್, ಲಿ.
ರಾಜಮಹೇಂದ್ರಿ, ಆಂಧ್ರಪ್ರದೇಶ

**ಪಿ.ಎಸ್.ಆರ್.** ಶಾಂತಾರಾಮರಾವ್, ಪಿ.
ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಮಂಗಳೂರು

**ಪಿ.ಎಸ್.ಎಸ್.** ಶಂಕರ್, ಪಿ.ಎಸ್.
ಪ್ರಾಧ್ಯಾಪಕ (ವಿ), ವೈದ್ಯವಿಭಾಗ
ಮೆಡಿಕಲ್ ಕಾಲೇಜು, ಗುಲ್ಬರ್ಗ

**ಪಿ.ಎಸ್.ಎಸ್ಎಚ್.** ಶರ್ಮ, ಪಿ.ಎಸ್.
ಪ್ರಾಧ್ಯಾಪಕ (ವಿ)
ಜೀವ ರಸಾಯನವಿಜ್ಞಾನ ವಿಭಾಗ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್
ಬೆಂಗಳೂರು

**ಪಿ.ಟಿ.ಎನ್.** ನರಸಿಂಹಾಚಾರ್, ಪಿ.ಟಿ. (ದಿ)
ಸಂಪಾದಕ, ಇಂಗ್ಲಿಷ್–ಕನ್ನಡ ನಿಘಂಟು
ಮಾನಸಗಂಗೋತ್ರಿ, ಮೈಸೂರು

**ಪಿ.ವಿ.** ವೆಂಕಟರಾಮಯ್ಯ, ಪಿ.
ಕುಲಪತಿಗಳು (ವಿ)
ಕುವೆಂಪು ವಿಶ್ವವಿದ್ಯಾನಿಲಯ
ಶಿವಮೊಗ್ಗ

**ಪಿ.ವಿ.ಎ.** ಆಚಾರ್ಯ, ಪಿ.ವಿ.
ಸಹಸಂಪಾದಕ (ವಿ)
ಕಸ್ತೂರಿ ಮಾಸಪತ್ರಿಕೆ, ಹುಬ್ಬಳ್ಳಿ

**ಪಿ.ವಿ.ಸಿ.** ಚಂದ್ರಶೇಖರ, ಪಿ.ವಿ. (ದಿ)
ರೀಡರ್, ಕನ್ನಡ ವಿಭಾಗ
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

**ಆರ್ಎ.ಎ.** ರಂಗಣ್ಣ, ಎ.
ರೀಡರ್ (ವಿ), ಭೌತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಆರ್.ಎ.ಎಫ್.** ಫಣಿಶಾಯಿ, ಆರ್.ಎ.
ಅಧ್ಯಾಪಕ (ವಿ), ಮನಶ್ಶಾಸ್ತ್ರ ಮತ್ತು
ತರ್ಕ ವಿಭಾಗ, ನ್ಯಾಷನಲ್ ಕಾಲೇಜು
ಬೆಂಗಳೂರು

**ಆರ್.ಎ.ಎನ್.** ರತ್ನ, ಎನ್.
ಪ್ರಾಧ್ಯಾಪಕ (ವಿ)
ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಆರ್.ಬಿ.ಎಸ್.** ರಾಮಾಚಾರ್, ಬಿ.ಎಸ್.
ಗಮಕಿ, ಗುಡಿಬಂಡೆ
ಕೋಲಾರ ಜಿಲ್ಲೆ

**ಆರ್.ಡಿ.ಎಂ.** ಧನಂಜಯಮೂರ್ತಿ, ಆರ್.
ಉಪಪ್ರಾಧ್ಯಾಪಕ (ವಿ), ವೈದ್ಯ ವಿಭಾಗ
ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ

**ಆರ್.ಡಿ.ಆರ್.** ದಿನೇಶರಾವ್, ಆರ್.
ಪ್ರಾಧ್ಯಾಪಕ (ವಿ), ಭೂಗೋಳಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು

**ಆರ್.ಎಫ್.ಪಿ.** ಪಾಟೀಲ, ಆರ್.ಎಫ್.
ಪ್ರಾಧ್ಯಾಪಕ (ವಿ), ಬ್ಯಾಕ್ಟೀರಿಯಾಲಜಿ
ಮೈಸೂರು ಪಶುವೈದ್ಯ ಕಾಲೇಜು
ಬೆಂಗಳೂರು

**ಆರ್.ಜಿ.** ರಾಮೇಗೌಡ
ಪ್ರಾಧ್ಯಾಪಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಆರ್.ಜಿ.ಕೆ.** ಕುಲಕರ್ಣಿ, ಆರ್.ಜಿ.
ಸಂಶೋಧಕ, ಹಿಂದಿ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಆರ್.ಐ.** ರಾಜಶೇಖರ ಇಚ್ಚಂಗಿ
ಪ್ರಾಧ್ಯಾಪಕ, ಕನ್ನಡ ವಿಭಾಗ
ಕಲಾ ಮಹಾವಿದ್ಯಾಲಯ, ಹುಕ್ಕೇರಿ

**ಆರ್.ಕೆ.** ಕೃಷ್ಣಶೆಟ್ಟಿ, ಆರ್.
ಡಿಸ್ಟ್ರಿಕ್ಟ್ ಜಜ್ (ವಿ)
9ನೆಯ ಬ್ಲಾಕು, ಕುಮಾರ ಪಾರ್ಕ್
ಪಶ್ಚಿಮ ವಿಸ್ತರಣೆ, ಬೆಂಗಳೂರು

**ಆರ್.ಕೆ.ಎಸ್.** ಶ್ರೀಕಂಠಕುಮಾರಸ್ವಾಮಿ, ಆರ್.ಕೆ.
ಅಧ್ಯಾಪಕ, ಲೋಹಶಾಸ್ತ್ರ ವಿಭಾಗ
ಐ.ಐ.ಟಿ., ಮದ್ರಾಸು

**ಆರ್.ಎಲ್.** ಲಲಿತಾ, ಆರ್.
ಅಧ್ಯಾಪಕಿ (ವಿ), ಪ್ರಾಣಿವಿಜ್ಞಾನ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು
ಬೆಂಗಳೂರು

**ಆರ್.ಆರ್.ಆರ್.** ರಾಘವೇಂದ್ರರಾವ್
ಸಂಶೋಧಕ, ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಆರ್.ಆರ್.ಯು.** ಉಮರ್ಜಿ, ಆರ್.ಆರ್.
ಪ್ರಾಧ್ಯಾಪಕ (ವಿ), ಸಂಖ್ಯಾಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

**ಆರ್.ಎಸ್.ಬಿ.** ರಾಜಶೇಖರ ಭೂಸನೂರಮಠ
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಕರ್ನಾಟಕಸೈನ್ಸ್ ಕಾಲೇಜು, ಧಾರವಾಡ

**ಆರ್.ಎಸ್.ಎನ್.** ಸತ್ಯನಾರಾಯಣ, ಆರ್.
ಪ್ರಾಧ್ಯಾಪಕ (ವಿ), ಶ್ರೀ ವರಲಕ್ಷ್ಮಿ ಲಲಿತಕಲಾ
ಅಕಾಡೆಮಿ, ಮೈಸೂರು

**ಆರ್.ಎಸ್.ಪಿ.** ಪಂಚಮುಖಿ, ಆರ್.ಎಸ್. (ದಿ)
ನಿರ್ದೇಶಕ, ಕನ್ನಡ ಸಂಶೋಧನ ಸಂಸ್ಥೆ
ಧಾರವಾಡ

**ಆರ್.ಎಸ್.ವಿ.** ರಾಮರಾವ್ ಎಸ್.ವಿ.
ಪ್ರಾಧ್ಯಾಪಕ (ವಿ), ವೈದ್ಯವಿಜ್ಞಾನ ವಿಭಾಗ,
ಬೆಂಗಳೂರು ಮೆಡಿಕಲ್ ಕಾಲೇಜು
ಬೆಂಗಳೂರು

**ಆರ್.ವಿ.ಎಚ್.** ಹೆಗಡೆ, ಆರ್.ವಿ.
ಅಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ,
ಭದ್ರಾ ಕಾಲೇಜು, ಭದ್ರಾವತಿ

**ಆರ್.ವೈ.ಡಿ.** ಧಾರವಾಡಕರ, ಆರ್.ವೈ. (ದಿ)
ಪ್ರಾಂಶುಪಾಲ, ಜೆ.ಎಸ್.ಎಸ್.ಕಾಲೇಜು
ಧಾರವಾಡ

**ಎಸ್.ಎ.ಎಚ್.** ಸಂಜೀವಯ್ಯ, ಎಚ್. (ದಿ)
ಪ್ರಾಧ್ಯಾಪಕ, ಭೌತವಿಜ್ಞಾನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎ.ಕೆ.** ಸಾವಿತ್ರಿ ಕೃಷ್ಣಮೂರ್ತಿ
ಸ್ಥಳೀಯ ವೈದ್ಯಾಧಿಕಾರಿ, ಜನರಲ್ ಆಸ್ಪತ್ರೆ ಮಲ್ಲೇಶ್ವರ,
ಬೆಂಗಳೂರು

**ಎಸ್.ಬಿ.ಎಚ್.** ಸಿಂದಗಿ, ಬಿ.ಎಚ್.
ನೀರಾವರಿ ತಜ್ಞ, ಜಮಖಂಡಿ

**ಎಸ್.ಬಿ.ಕೆ.** ಸುರೇಭಾಂಕರ್, ಬಿ.ಕೆ.
ಜಾಯಿಂಟ್ ಡೈರೆಕ್ಟರ್ (ವಿ), ವಿದ್ಯಾಇಲಾಖೆ ಬೆಂಗಳೂರು

**ಎಸ್.ಬಿ.ಎಲ್.** ಶ್ರೀನಿವಾಸ್, ಬಿ.ಎಲ್.
ಅಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎಸ್.ಬಿ.ಎಲ್.ಬಿ.** ಭಾರದ್ವಾಜ, ಎಸ್.ಬಿ.ಎಲ್.
ಮನಶ್ಶಾಸ್ತ್ರೀಯ ಸಂಶೋಧನ ನಿರ್ದೇಶನಾಲಯ
ರಕ್ಷಣಾ ಸಚಿವಾಲಯ, ನವದೆಹಲಿ

**ಎಸ್.ಬಿ.ಎಂ.** ಮಠದ್, ಎಸ್.ಬಿ.
ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ
ಕರ್ನಾಟಕ ಸೈನ್ಸ್ ಕಾಲೇಜು, ಧಾರವಾಡ

**ಎಸ್.ಡಿ.ಕೆ.** ಸಬಿತಾದೇವಿ, ಕೆ.
ಅಧ್ಯಾಪಕಿ (ವಿ), ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಸ್.ಜಿ.ಕೆ.** ಕರಭಂಟನಾಳ ಎಸ್.ಜಿ.
ಅಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಕೆ.ಎಲ್.ಇ. ಸೊಸೈಟಿ ಆರ್ಟ್ಸ್ ಮತ್ತು ಸೈನ್ಸ್
ಕಾಲೇಜು, ನಿಪ್ಪಾಣಿ, ಬೆಳಗಾಂವಿ ಜಿಲ್ಲೆ

**ಎಸ್.ಜಿ.ಎಂ.** ಸೈಯದ್ ಘೌಸ್ ಮೊಹಿಯುದ್ದೀನ್
ಸಂಪಾದಕ, ಅಲ್ ಕಲಾಂ
ಕಲಾಸಿಪಾಳ್ಯಂ, ಬೆಂಗಳೂರು

**ಎಸ್.ಜಿ.ಪಿ.** ಗುರುಪ್ರಕಾಶ್, ಎಸ್.
ಪ್ರಾಂಶುಪಾಲರು, ನಂ. 724, 9ನೆಯ ಅಡ್ಡರಸ್ತೆ
4ನೆಯ ಕೂಡುರಸ್ತೆ, ಎಸ್.ಐ.ಟಿ. ಬಡಾವಣೆ
ತುಮಕೂರು

**ಎಸ್.ಎಚ್.ಎ.ಐ.** ಶಾಂತಾ ಇಮ್ರಾಪುರ
ಪ್ರವಾಚಕರು
ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

**ಎಸ್.ಎಚ್.ಇ.** ಶ್ರೀಧರ ಹೆಗಡೆ
ಮುಖ್ಯಸ್ಥ, ಹಿಂದಿ ವಿಭಾಗ
ಫೀಲ್ಡ್ ಮಾರ್ಷಲ್ ಕಾರಿಯಪ್ಪ ಕಾಲೇಜು
ಮಡಿಕೇರಿ

**ಎಸ್.ಎಚ್.ಐ.** ಶಿವಣ್ಣ
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎಚ್.ಜಿ.** ಶ್ರೀಧರ, ಎಚ್.ಜಿ.
ಕನ್ನಡ ವಿಭಾಗ, ವಿವೇಕಾನಂದ ಕಾಲೇಜು
ಪುತ್ತೂರು, ದ.ಕ.

**ಎಸ್.ಎಚ್.ಒ.** ಹೊನ್ನಯ್ಯ, ಎಸ್. (ದಿ)
ಪ್ರಾಧ್ಯಾಪಕ, ಜೈವಿಕವಿಜ್ಞಾನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ
ಮಂಗಳೂರು

**ಎಸ್.ಎಚ್.ಪಿ.** ಶಾಂತಾ ಪ್ರಭುಶಂಕರ (ದಿ)
ವೈದ್ಯಾಧಿಕಾರಿ, ವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರ
ಮಾನಸಗಂಗೋತ್ರಿ, ಮೈಸೂರು

**ಎಸ್.ಐ.** ಸೋಮಶೇಖರ ಇಮ್ರಾಪುರ
ಪ್ರಾಧ್ಯಾಪಕ (ವಿ), 12ನೆಯ ಕ್ರಾಸ್
ನಿರ್ಮಲನಗರ, ಧಾರವಾಡ

**ಎಸ್.ಐ.ಕೆ.** ಸೈಯದ್ ಇಕ್ಬಾಲ್ ಖಾದಿ
ಪ್ರಾಧ್ಯಾಪಕ (ವಿ), ಪತ್ರಿಕೋದ್ಯಮ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಜೆ.ಎ.** ಸೀತಾರಾಮ ಜಾಗೀರ್‌ದಾರ್, ಎಸ್.
ಶಾಸನತಜ್ಞ (ವಿ)
406ಬಿ, 3ನೆಯ ಮುಖ್ಯರಸ್ತೆ
ಸರಸ್ವತಿಪುರಂ, ಮೈಸೂರು

**ಎಸ್.ಕೆ.** ಸೂರ್ಯನಾಥ ಕಾಮತ್
ಪ್ರಾಧ್ಯಾಪಕ (ವಿ) ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್.ಕೆ.ಎಚ್.** ಕೃಷ್ಣನ್ ಹರವೆ ಎಸ್.
ಸಹಪ್ರಾಧ್ಯಾಪಕ (ವಿ)
ಮೆಡಿಕಲ್ ಕಾಲೇಜು, ಬೆಂಗಳೂರು

**ಎಸ್.ಕೆ.ಆರ್.** ರಾಮಚಂದ್ರರಾವ್, ಎಸ್.ಕೆ.
ಜಯನಗರ, ಬೆಂಗಳೂರು
ಅಧ್ಯಕ್ಷ, ಲಲಿತ ಕಲೆಗಳ ಉಪ–ಸಮಿತಿ
ಕನ್ನಡ ವಿಶ್ವಕೋಶ

**ಎಸ್.ಕೆ.ಆರ್.ಎ.** ರಾಮಣ್ಣ, ಎಸ್.ಕೆ. (ದಿ)
ಪ್ರಿನ್ಸಿಪಾಲ್, ಯುವರಾಜ ಕಾಲೇಜು
ಮೈಸೂರು

**ಎಸ್.ಕೆ.ಎಸ್.** ಶಿವಣ್ಣ ಕೆ.ಎಸ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಕೆ.ಟಿ.** ಶಿವಶಂಕರ್, ಕೆ.ಟಿ.
ಸಹಾಯಕ ಪ್ರಾಧ್ಯಾಪಕ (ವಿ)
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ
ಬೆಂಗಳೂರು

**ಎಸ್.ಎಲ್.** ಸಿಂಪಿ ಲಿಂಗಣ್ಣ
ಚಡಚಣ, ಬಿಜಾಪುರ ಜಿಲ್ಲೆ

**ಎಸ್.ಎಲ್.ಎ.** ಲಕ್ಷ್ಮೀನಾರಾಯಣ ಅರೋರ ಎಸ್.
ಪ್ರಾಧ್ಯಾಪಕ (ವಿ), ಭಾಷಾಂತರ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎಲ್.ಕೆ.** ಕಾಯಸ್ಥ. ಎಸ್.ಎಲ್.
ರೀಡರ್ (ವಿ), ಭೂಗೋಳವಿಜ್ಞಾನ ವಿಭಾಗ
ಬನಾರಸ್ ವಿಶ್ವವಿದ್ಯಾಲಯ, ವಾರಾಣಸಿ

**ಎಸ್.ಎಂ.** ಶೇಷಾದ್ರಿ, ಎಂ. (ದಿ)
ಪ್ರಾಧ್ಯಾಪಕ, ಪ್ರಾಕ್ತನಶಾಸ್ತ್ರ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎಂ.ಕೆ.** ಕೃಷ್ಣರಾಯ, ಎಸ್.ಎಂ.
500, 11ನೆಯ ಕ್ರಾಸ್, 2ನೆಯ ಹಂತ
ಗಿರಿನಗರ, ಬೆಂಗಳೂರು

**ಎಸ್.ಎಂ.ಒ.** ಸೈಯದ್ ಮೊಹಿಯುದ್ದೀನ್
ಪ್ರಾಧ್ಯಾಪಕ (ವಿ), ರೋಗನಿದಾನ ವಿಭಾಗ
ಪಶುವೈದ್ಯ ಕಾಲೇಜು. ಹೆಬ್ಬಾಳ, ಬೆಂಗಳೂರು

**ಎಸ್.ಎಂ.ಎಸ್.** ಶೈಲ, ಎಂ. ಎಸ್.
ಸಂಶೋಧಕಿ, ಮೈಕ್ರೊಬಯಾಲಜಿ ವಿಭಾಗ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್
ಬೆಂಗಳೂರು

**ಎಸ್.ಎನ್.** ನಾಗರಾಜು, ಎಸ್.
ಪ್ರಾಧ್ಯಾಪಕ (ವಿ), ಪ್ರಾಕ್ತನಶಾಸ್ತ್ರ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎನ್.ಎ.** ನಾಗರಾಜು, ಎಸ್. (ದಿ)
ರೀಡರ್, ಅರ್ಥಶಾಸ್ತ್ರ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎನ್.ಜಿ.** ಸಣ್ಣನಂಜೇಗೌಡ
ಉಪನಿರ್ದೇಶಕ (ವಿ)
ರಾಜ್ಯ ಪತ್ರಾಗಾರ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು

**ಎಸ್.ಎನ್.ಎ.ಜಿ.** ನಾಗರಾಜ್ ಎಸ್.
ಸಹಾಯಕ ನಿರ್ದೇಶಕ (ವಿ)
ಸಾರ್ವಜನಿಕ ಆರೋಗ್ಯ ಇಲಾಖೆ, ಬೆಂಗಳೂರು

**ಎಸ್.ಎನ್.ಬಿ.** ಶ್ರೀನಾಗಭೂಷಣ
ವಿಶೇಷಾಧಿಕಾರಿ (ವಿ)
ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್
ಕೋಲ್ಕತ

**ಎಸ್.ಎನ್.ಕೆ.** ಕೃಷ್ಣಜೋಯಿಸ್ ಎಸ್.ಎನ್. (ದಿ)
ಸಂಶೋಧನ ಸಹಾಯಕ, ಸಂಪಾದನ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎನ್. ಕೆ.ಎ.** ಸೂರ್ಯನಾಥ ಕಾಮತ್
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್.ಎನ್.ಕೆ.ಯು.** ನಿರ್ಮಲಕುಮಾರಿ, ಜಿ.ಎಸ್.
ರೀಡರ್ (ವಿ), ಪ್ರಾಣಿವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಎಸ್.ಎನ್.ಎಲ್.** ಲಕ್ಷ್ಮೀನಾರಾಯಣ, ಎಸ್.ಎನ್.
ಪ್ರಲೇಖನಾಧಿಕಾರಿ (ವಿ)
ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಪಿ.ಎ.** ಅಣಿಕರ್, ಎಸ್.ಪಿ.
ಪ್ರಾಧ್ಯಾಪಕ, ವೈದ್ಯವಿಜ್ಞಾನ ವಿಭಾಗ
ಮೆಡಿಕಲ್ ಕಾಲೇಜು, ಮೈಸೂರು

**ಎಸ್.ಪಿ.ಆರ್.** ಪಟ್ಟಾಭಿರಾಮನ್, ಎಸ್.
ಪ್ರಜಾವಾಣಿ ಪ್ರತಿನಿಧಿ, ಮೈಸೂರು

**ಎಸ್.ಪಿ.ಯು.** ಸಿದ್ದಯ್ಯ ಪುರಾಣಿಕ (ದಿ)
ಸಾರಿಗೆ ಕಮಿಷನರ್
ಆಲಿ ಆಸ್ಕರ್ ರಸ್ತೆ, ಬೆಂಗಳೂರು

**ಎಸ್.ಆರ್.ಎ.** ರಾಮಚಂದ್ರರಾವ್, ಎಸ್.
ಸಂಸ್ಕೃತ ಪ್ರಾಧ್ಯಾಪಕ (ವಿ)
ಜಯನಗರ, ಮೈಸೂರು

**ಎಸ್.ಆರ್.ಜಿ.** ಸಿದ್ದರಾಮೇಗೌಡ
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಆರ್.ಎಂ.** ಮಾಧುರಾವ್, ಎಸ್.ಆರ್.
ಮುಖ್ಯಸ್ಥ (ವಿ), ಗಣಿತವಿಜ್ಞಾನ ವಿಭಾಗ
ಜೆ.ಎಸ್.ಎಸ್.ಕಾಲೇಜು, ಮೈಸೂರು

**ಎಸ್.ಆರ್.ಎನ್.** ಶಾಲಿನಿರಘುನಾಥ್
ಪ್ರಾಧ್ಯಾಪಕಿ
ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

**ಎಸ್.ಆರ್.ಆರ್.** ರಾಮರಾವ್, ಎಸ್.
ಉಪ–ಪ್ರಾಧ್ಯಾಪಕ
ಶರೀರ ಕ್ರಿಯಾವಿಜ್ಞಾನ ವಿಭಾಗ
ಮೆಡಿಕಲ್ ಕಾಲೇಜು, ಮೈಸೂರು

**ಎಸ್.ಎಸ್.ಎ.** ಸವ್ಯಸಾಚಿ
2ನೆಯ ಬ್ಲಾಕು
ಜಯನಗರ, ಬೆಂಗಳೂರು

**ಎಸ್.ಎಸ್.ಐ.** ಸಿಲ್ವ, ಎಸ್.
ಅಡ್ವೊಕೇಟ್, ಹಿಲ್‌ಸೈಡ್
ಕಾರವಾರ

**ಎಸ್.ಎಸ್.ಆರ್.** ರಾಘವಾಚಾರ್, ಎಸ್.ಎಸ್.
ಪ್ರಾಧ್ಯಾಪಕ (ವಿ), ತತ್ತ್ವಶಾಸ್ತ್ರ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಎಸ್.ಎಸ್.ಎಸ್.ಐ.** ಸಿಂದಗಿ, ಎಸ್.ಎಸ್.
ತಳಿ ಅಭಿವೃದ್ಧಿ ಅಧಿಕಾರಿ
ರೀಜನಲ್ ರೀಸರ್ಚ್ ಸ್ಟೇಷನ್
ರಾಯಚೂರು

**ಎಸ್.ಟಿ.ಪಿ.** ಪುಟ್ಟಣ್ಣ, ಎಸ್.ಟಿ.
ನಿರ್ದೇಶಕ (ವಿ), ಮಿಂಟೋ ಕಣ್ಣಾಸ್ಪತ್ರೆ
ಬೆಂಗಳೂರು

**ಎಸ್.ಯು.** ಸುಧಾಕರ
ಅಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಯು.ಎಂ.** ಸುಧಾಮಂಜುನಾಥ್
8/2, ರಮಾವಿಲಾಸ ರಸ್ತೆ ಹಿಂಭಾಗ
ಮೈಸೂರು

**ಎಸ್.ವಿ.ಡಿ.** ವೆಂಕಟದೇಶಿಕಾಚಾರ್, ಎಸ್.
ಕಾರ್ನ್‌ವಾಲೀಸ್ ರಸ್ತೆ, ನವದೆಹಲಿ

**ಎಸ್.ವಿ.ಎಲ್.** ವೈದ್ಯಲಿಂಗಂ, ಎಸ್.
ನ್ಯೂ ಪಂಡಿತ್ ಕ್ವಾರ್ಟರ್ಸ್
ಅಣ್ಣಾಮಲೈ ನಗರ, ತಮಿಳುನಾಡು

**ಎಸ್.ವಿ.ಪಿ.ಎ.** ಪಾಟೀಲ, ಎಸ್.ವಿ.
ಸಹಾಯಕ ಸಂಪಾದಕ
ಕರ್ಮವೀರ ವಾರಪತ್ರಿಕೆ, ಹುಬ್ಬಳ್ಳಿ

**ಎಸ್.ವಿ.ಆರ್.** ರಂಗಣ್ಣ, ಎಸ್.ವಿ.
ಇಂಗ್ಲಿಷ್ ಪ್ರಾಧ್ಯಾಪಕ (ವಿ), ಅಧ್ಯಕ್ಷ
ಸೌಂದರ್ಯತತ್ತ್ವ ಉಪಸಮಿತಿ
ಕನ್ನಡ ವಿಶ್ವಕೋಶ, ಮೈಸೂರು

**ಎಸ್.ವಿ.ಎಸ್.** ಷಣ್ಮುಗಂ, ಎಸ್.ವಿ.
ರೀಡರ್, ಭಾಷಾಶಾಸ್ತ್ರ ವಿಭಾಗ,
ಅಣ್ಣಾಮಲೈ ನಗರ, ತಮಿಳುನಾಡು

**ಎಸ್.ವಿ.ಎಸ್.ಆರ್.** ಶ್ರೀನಿವಾಸರಾಘವಾಚಾರ್, ಎಸ್.ವಿ.
ರೀಡರ್, ಸಂಸ್ಕೃತ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಎಸ್.ಡಬ್ಲ್ಯೂ.ಎಸ್.** ಸ್ವಾಮಿ ಆದಿದೇವಾನಂದ
ಶ್ರೀರಾಮಕೃಷ್ಣಾಶ್ರಮ, ಮಂಗಳೂರು

**ಎಸ್.ಡಬ್ಲ್ಯು.ಎಸ್.** ಸ್ವಾಮಿ ಶಾಸ್ತ್ರಾನಂದಜಿ
ರಾಮಕೃಷ್ಣಾಶ್ರಮ
ಬಸವನಗುಡಿ, ಬೆಂಗಳೂರು

**ಟಿ.ಸಿ.** ಚನ್ನೇಗೌಡ, ಟಿ.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಎಂ.ಡಿ.ಟಿ.ಡಿ.ಬಿ. ಕಾಲೇಜು, ಮೈಸೂರು

**ಟಿ.ಇ.ಎಚ್.** ಹಿಲ್ಲನ್, ಟಿ.ಇ.
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಯೂನಿವರ್ಸಿಟಿ ಕಾಲೇಜು
ಅಕ್ಲುಮೋಟಘಾನ (ಆಫ್ರಿಕ)

**ಟಿ.ಕೆ.ಆರ್.** ಕೃಷ್ಣನ್ ಟಿ.
ಸೂಪರಿಂಟೆಂಡೆಂಟ್
ಸರ್ಕಾರಿ ಕುದುರೆ ತಳಿ ಅಭಿವೃದ್ಧಿ ಫಾರಂ
ಬೆಂಗಳೂರು

**ಟಿ.ಎನ್.ಎನ್.ಆರ್.** ನಾಗರತ್ನ ಟಿ.ಎನ್.
ಸಂಶೋಧನ ಸಹಾಯಕಿ (ವಿ)
ಹರಿದಾಸ ಸಾಹಿತ್ಯ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಟಿ.ಎನ್.ಎಸ್.** ಸ್ವಾಮಿ, ಟಿ.ಎನ್.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಚಿತ್ರದುರ್ಗ

**ಟಿ.ಎನ್.ಎಸ್.ಎನ್.** ಶಂಕರನಾರಾಯಣ, ಟಿ.ಎನ್.
ಪ್ರಾಧ್ಯಾಪಕ, ಕನ್ನಡ ವಿಭಾಗ
ಕುವೆಂಪು ವಿಶ್ವವಿದ್ಯಾಲಯ
ಶಿವಮೊಗ್ಗ

**ಟಿ.ಆರ್.ಎಸ್.** ಶ್ರೀಧರಮೂರ್ತಿ, ಟಿ.ಆರ್.
ಅಧ್ಯಾಪಕ, ಭೂವಿಜ್ಞಾನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಟಿ.ಟಿ.** ತಿಮ್ಮಯ್ಯ ಟಿ.
ಪ್ರಿನ್ಸಿಪಾಲ್ (ವಿ), ಸ್ಕೂಲ್ ಆಫ್ ಮೈನ್ಸ್
ಕೆ.ಜಿ.ಎಫ್, ಕೋಲಾರ

**ಟಿ.ಟಿ.ಎಸ್.** ತಿರುಮಲೆ ತಾತಾಚಾರ್ಯ ಶರ್ಮ (ದಿ)
ಪತ್ರಿಕೋದ್ಯಮಿ, ಶಂಕರ ಪುರಂ
ಬೆಂಗಳೂರು

**ಟಿ.ವಿ.ಎಸ್.ಎಚ್.** ಶಿವರುದ್ರಪ್ಪ, ಟಿ.ವಿ.
ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಟಿ.ವಿ.ಎಸ್.** ಸುಬ್ರಮಣ್ಯಂ, ಟಿ.ವಿ.
ಅಧ್ಯಾಪಕ (ವಿ), ಗ್ರಂಥಾಲಯಶಾಸ್ತ್ರ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

**ಟಿ.ವಿ.ವಿ.** ವೆಂಕಟಾಚಲಶಾಸ್ತ್ರೀ ಟಿ.ವಿ.
ಪ್ರಾಧ್ಯಾಪಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಯು.ಜೆ.ಎಂ.** ಜಮಾಲ್ ಮೊಹಮ್ಮದ್, ಯು.
ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಪ್ರೆಸಿಡೆನ್ಸಿ ಕಾಲೇಜು, ಮದ್ರಾಸು

**ಯು.ಎಲ್.** ಉಮಾ ಲಕ್ಷ್ಮಣ್
ಸಮಾಜಶಾಸ್ತ್ರ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

**ಯು.ಪಿ.ಯು.** ಉಪಾಧ್ಯಾಯ, ಯು.ಪಿ.
ಪ್ರಿನ್ಸಿಪಾಲ್ (ವಿ)
ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಯು.ಎಸ್.ಕೆ.** ಕೃಷ್ಣರಾವ್ ಯು.ಎಸ್. (ದಿ)
ರುಕ್ಮಿಣಿ. 2ನೆಯ ತಿರುವು
ಶೇಷಾದ್ರಿಪುರ, ಬೆಂಗಳೂರು

**ವಿ.ಎ.** ಅಪ್ಪರಾವ್, ವಿ.
ಪ್ರಿನ್ಸಿಪಾಲ್ (ವಿ), ಪಟ್ಟಾಭಿಪುರಂ
ಗುಂಟೂರ್, ಆಂಧ್ರಪ್ರದೇಶ

**ವಿ.ಬಿ.** ಭಾಸ್ಕರ್ ವಿ.
ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ವಿ.ಇ.** ವೆಂಕಟರಮಣಪ್ಪ
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ವಿ.ಜಿ.** ವರದರಾಜರಾವ್, ಜಿ. (ದಿ)
ಪ್ರಾಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

**ವಿ.ಜಿ.ಕೆ.** ಕೃಷ್ಣಮೂರ್ತಿ, ವಿ.ಜಿ. (ದಿ)
ಭಾಷಾಂತರ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

**ವಿ.ಕೆ.ಯು.** ವಸಂತಕುಮಾರಿ
ಅಧ್ಯಾಪಕಿ (ವಿ), ಇತಿಹಾಸ ವಿಭಾಗ
ಮುನಿಸಿಪಲ್ ಕಾಲೇಜು, ಚಿಕ್ಕಬಳ್ಳಾಪುರ

**ವಿ.ಕೆ.ವಿ.** ಕೆಂಪವೀರಯ್ಯ ವಿ.
ಅಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಎಂ.ಡಿ.ಟಿ.ಡಿ.ಬಿ. ಕಾಲೇಜು, ಮೈಸೂರು

**ವಿ.ಆರ್.ಟಿ.** ತಿರುವೆಂಕಟಾಚಾರ್, ವಿ.ಆರ್.
ಗಣಿತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ವಿ.ಎಸ್.ಎಂ.** ವೃಷಭೇಂದ್ರಸ್ವಾಮಿ, ಎಸ್.ಎಂ. (ದಿ)
ನಿರ್ದೇಶಕ, ಪಠ್ಯಪುಸ್ತಕ ನಿರ್ದೇಶನಾಲಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ವೈ.ಸಿ.ಬಿ.** ಭಾನುಮತಿ, ವೈ.ಸಿ.
ಸಂಪಾದನಾ ಸಹಾಯಕರು
ಸಂಪಾದನಾ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು


**ಕೃತಜ್ಞತೆ**

ಕೆಳಕಂಡ ಕಲಾವಿದರು ವಿಶ್ವಕೋಶದ ನಾಲ್ಕನೆಯ ಸಂಪುಟಕ್ಕೆ ಚಿತ್ರಗಳನ್ನು ಬರೆದುಕೊಟ್ಟು ಉಪಕರಿಸಿದ್ದಾರೆ.

ಇಟ್ಟಿಗಟ್ಟಿ, ಸಿ.ವಿ. (ವಿ), ಭೂವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ತಿಪ್ಪೇಸ್ವಾಮಿ, ಪಿ.ಆರ್. (ದಿ), ಜಾನಪದ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ನಾಗರಾಜು, ವೈ., ಕಲಾವಿದ, ಶ್ರೀಪರಮೇಶ್ವರ ಆರ್ಟ್ ಸ್ಟೂಡಿಯೋ, ಕೆ.ಆರ್. ಆಸ್ಪತ್ರೆ ರಸ್ತೆ, ಮೈಸೂರು

ಮುತ್ತಪ್ಪ ಗೌಡ, ಎಂ., ಗೀತಾ ರಸ್ತೆ, ಚಾಮರಾಜಪುರಂ, ಮೈಸೂರು

ರಘುನಾಥ ಭಟ್ಟ, ಎಚ್.ಆರ್ (ದಿ), ಪ್ರಾಕ್ತನಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ರಾಮಕೃಷ್ಣರಾಜು, ಕಲಾವಿದ ಮತ್ತು ಛಾಯಚಿತ್ರಗ್ರಾಹಕ (ವಿ), ಪ್ರಾಣಿಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಲಕ್ಷ್ಮೀಗೌಡ, ಬಿ.ಟಿ. ಡ್ರಾಫ್ಟ್ಸ್‌ಮನ್ (ವಿ), ಪ್ರಾಕ್ತನಶಾಸ್ತ್ರ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು

ವೆಂಕಟೇಶ್, ಕಲಾವಿದ, ಕಿರಣ ಆರ್ಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಶಶಿಕಲಾ, ಎ., ಕೃಷ್ಣರಾಜವನಂ, ಮೈಸೂರು

ಸುಂದರರಾಜ್, ಕೆ.ಆರ್. (ದಿ), ಕಲಾವಿದ ಮತ್ತು ಛಾಯಚಿತ್ರಗ್ರಾಹಕ, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಹನಸೋಗೆ, ಶ್ರೀಪ್ರಕಾಶನ, ಸರಸ್ವತೀಪುರಂ, ಮೈಸೂರು

**ನಾಲ್ಕನೆಯ ಸಂಪುಟದ ಚಿತ್ರಗಳಿಗಾಗಿ ವಿವಿಧ ಗ್ರಂಥಗಳಿಂದ ನೆರವು ಒದಗಿದೆ. ಅಂಥವನ್ನು ಕೆಳಗೆ ಕೃತಜ್ಞತೆಯಿಂದ ನೆನೆಯಲಾಗಿದೆ.**

ಆಫ್ಘಾನಿಸ್ತಾನ್ – ಕ್ರಾಸ್ ರೋಡ್ಸ್ ಆಫ್ ದಿ ಏಜಸ್ (1969), ಲೇ: ಮಸಾಟೋಷಿ ಕೋನಿಷಿ

ಆಫ್ಘಾನಿಸ್ತಾನ್ – ಲ್ಯಾಂಡ್ ಇನ್ ಟ್ರಾನ್ಸಿಷನ್ ಲೇ: ಮೇರಿ ಬ್ರ್ಯಾಡ್ಲಿ ವಾಟ್‌ಕಿನ್ಸ್

ಆಫ್ರಿಕ – ಎ ಸ್ಟಡಿ ಇನ್ ಟ್ರೋಪಿಕಲ್ ಡೆವಲಪ್‌ಮೆಂಟ್ (1963)

ಆಫ್ರಿಕಾಸ್ ಲ್ಯಾಂಡ್ಸ್ ಅಂಡ್ ನೇಷನ್ಸ್ ಲೇ: ಲ್ಯೂಸಿಲಿ ಕಾರ್ಲ್‌ಸನ್

ಆರ್ಟ್ ಆಫ್ ಇಂಡಿಯನ್ ಏಷ್ಯ (1955) ಲೇ: ಎಚ್. ಜಿಮ್ಮರ್

ಇಂಡಿಯ – ಎ ಪಿಕ್ಟೋರಿಯಲ್ ಸರ್ವೆ (1960). ಪ್ರಕಾಶನ ವಿಭಾಗ, ವಾರ್ತಾ ಮತ್ತು ಪ್ರಸಾರ ಇಲಾಖೆ, ಭಾರತ ಸರ್ಕಾರ, ನವದೆಹಲಿ

ಇಂಡಿಯನ್ ಪೇಂಟಿಂಗ್ (1970) ಲೇ: ಸಿ. ಶಿವರಾಮಮೂರ್ತಿ

ಇಲ್ಲಸ್ಟ್ರೇಟೆಡ್ ವರ್ಲ್ಡ್ ಜಿಯೋಗ್ರಫಿ (1960) ಸಂ: ಫ್ರಾಂಕ್ ಡೆಬೆನ್‌ಹ್ಯಾಂ

ಎ ನೇಷನ್ ಇನ್ ಮೇಕಿಂಗ್ (1963). ಲೇ: ಸುರೇಂದ್ರನಾಥ್ ಬ್ಯಾನರ್ಜಿ

ಎ ಹಿಸ್ಟೊರಿ ಆಫ್ ಇಂಡಿಯ (1961) ಲೆ: ಮೈಕೇಲ್ ಎಡ್ವರ್ಡ್ಸ್

ಕರ್ನಾಟಕ ಥ್ರೂದಿ ಏಜಸ್ (1968) ಮೈಸೂರು ರಾಜ್ಯ ಸರ್ಕಾರ

ಕಾಮಕಲ್ಪ ಆರ್ ದಿ ಹಿಂದೂ ರಿಚುಅಲ್ ಆಫ್ ಲವ್ ಲೇ: ಪಿ. ಥಾಮಸ್

ಕಾಲಿಯರ್ಸ್ ಎನ್‌ಸೈಕ್ಲೋಪಿಡಿಯ (1956)

ಕಿಂಗ್ ಸ್ಪೆಷಲ್ ಇಷ್ಯೂ ಆಫ್ ಸ್ಪ್ಯಾನ್ಸ್, ಯುನೈಟೆಡ್ ಸ್ಟೇಟ್ಸ್ ಇನ್‌ಫರ್ಮೇಷನ್ ಸರ್ವೀಸ್, ನವದೆಹಲಿ

ಗಾಂಧಿ – ಎ ಸ್ಟಡಿ ಇನ್ ರೆವೊಲ್ಯೂಷನ್ (1968) ಲೇ: ಜೆಫರಿ ಆಷೆ

ಛೇಂಬರ್ಸ್ ಡಿಕ್ಷನರಿ ಆಫ್ ಸೈನ್‌ಟಿಸ್ಟ್ಸ್ (1961) ಲೇ: ಎ.ವಿ. ಹೋವರ್ಡ್

ಜನರಲ್ ಆಫ್ ದಿ ಜಿಯೊಲಾಜಿಕಲ್ ಕರ್ನಾಟಕ, ಸರ್ವೇ ಆಫ್ ಇಂಡಿಯ ಸಂಪುಟ–2 (1970)

ಟ್ರಾವೆಲ್ಸ್ ಇನ್ ಆಫ್ಘಾನಿಸ್ತಾನ್ (1943) ಅರ್ನ್ಸ್ಟ್ ಎಫ್. ಫಾಕ್ಸ್

ದಿ ಆರ್ಕಿಯಾರ್ಲಾಜಿ ಆಫ್ ಕುಮಾಂವ್ (1969) ಲೇ: ಕೆ.ವಿ. ನೌಟಿಯಾಲ್

ದಿ ಇಂಟರ್‌ನ್ಯಾಷನಲ್ ಎನ್‌ಸೈಕ್ಲೋಪೀಡಿಯ ಆಫ್ ಸೈನ್ಸ್ (1965)

ದಿ ಇಂಡಾಮಿಟಬಲ್ ಸರ್ದಾರ್ (1962) ಲೇ: ಕೆ.ಎಲ್. ಪಂಜಾಬಿ

ದಿ ಏನ್ಷೆಂಟ್‌ಸ್ಕಲ್ಪ್‌ಚರ್ಸ್ ಫ್ರಂ ಇಂಡಿಯ (1964). ಪ್ರ: ದಿ ಕ್ಲೀವ್ ಲೆಂಡ್ ಮ್ಯೂಸಿಯಂ ಆಫ್ ಆರ್ಟ್

ದಿ ನ್ಯೂ ಕ್ಯಾಕ್ಸ್ಟನ್ ಎನ್‌ಸೈಕ್ಲೋಪೀಡಿಯ (1969)

ದಿ ಫ್ಲವರಿಂಗ್ ಆರ್ಟ್ ಆಫ್ ಇಂಡಿಯ (1964) ಲೇ: ರಾಧಾಕಮಲ್ ಮುಖರ್ಜಿ
ದಿ ಲೈಫ್ ಆಫ್ ಲಾರ್ಡ್ ಕರ್ಜನ್, ಸಂಪುಟ 3. ಲೇ: ಅರ್ಲ್ ಆಫ್ ರೊನಾಲ್ಡ್‌ಷಾಯ್

ಮಹಾತ್ಮಾ ಸಂಪುಟಗಳು 1–8 ಲೇ: ಡಿ.ಜಿ. ಟೆಂಡೂಲ್ಕರ್

ಮೈಸೂರು ಆರ್ಕಿಯೊಲಾಜಿಕಲ್ ರಿಪೋರ್ಟ್ಸ್, ಮೈಸೂರು ಸರ್ಕಾರ

ಮ್ಯಾಕ್‌ಗ್ರಾಹಿಲ್ ಎನ್‌ಸೈಕ್ಲೋಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ (1960)

ಮ್ಯಾಮಲ್ಸ್ ಆಫ್ ದಿ ವರ್ಲ್ಡ್ (1964), ಸಂಪುಟ 1, 2: ಲೇ: ಅರ್ನ್ಸ್ಟ್ ಪಿ. ವಾಕರ್

ಲಾರೌಸಿ ಎನ್‌ಸೈಕ್ಲೋಪೀಡಿಯ ಆಫ್ ವರ್ಲ್ಡ್ ಜಿಯೋಗ್ರಫಿ (1964)

ವ್ಯೂಸ್ ಆಫ್ ದಿ ಯು.ಎಸ್.ಎಸ್.ಆರ್. ಫಾರಿನ್ ಲ್ಯಾಂಗ್ವೇಜಸ್ ಪಬ್ಲಿಷಿಂಗ್ ಹೌಸ್, ಮಾಸ್ಕೊ

ಸ್ಟಡೀಸ್ ಇನ್ ಇಂಡಿಯನ್ ವೆಪನ್ಸ್ ಅಂಡ್ ವಾರ್‌ಫೇರ್ (1970), ಲೇ: ಜಿ.ಎನ್. ಪಂತ್

ಹಿಟಾಚಿ ರಿವ್ಯೂ, ಸಂಪುಟ 19 (1970), ಹಿಟಾಚಿ ಲಿಮಿಟೆಡ್, ಟೋಕಿಯೋ–100 (ಜಪಾನ್)

ಹಿಸ್ಟೊರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ (1962), ಸಂಪುಟ–1. ಸಂ: ಎಂ.ವಿ. ಕೃಷ್ಣರಾವ್ ಮತ್ತು ಜಿ.ಎಸ್. ಹಾಲಪ್ಪ

### ಚಿತ್ರ, ಛಾಯಚಿತ್ರ ಮತ್ತು ಪಡಿಯಚ್ಚುಗಳನ್ನು ಒದಗಿಸಿ ಉಪಕರಿಸಿದ ಮಹನೀಯರು ಮತ್ತು ಸಂಘ–ಸಂಸ್ಥೆಗಳು

ಆಚಾರ್ಯ, ಪಿ.ವಿ., ಸಹಸಂಪಾದಕ (ವಿ), ಕಸ್ತೂರಿ ಮಾಸಪತ್ರಿಕೆ, ಹುಬ್ಬಳ್ಳಿ

ಆಡಳಿತಾಧಿಕಾರಿ, ಛಾಯಾಚಿತ್ರ ವಿಭಾಗ, ವಾರ್ತಾ ಮತ್ತು ಪ್ರಸಾರ ಖಾತೆ, ಭಾರತ ಸರ್ಕಾರ, ನವದೆಹಲಿ

ಆಫೀಸರ್–ಇನ್–ಚಾರ್ಜ್, ಆಂಥ್ರೊಪೊಲಾಜಿಕಲ್ ಸರ್ವೇ ಆಫ್ ಇಂಡಿಯ ಸೌತ್ ಇಂಡಿಯ ಸ್ಟೇಷನ್, ಮೈಸೂರು

ಕಾರ್ಯದರ್ಶಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಕಾಳೆ, ಬಿ.ಪಿ., ಮದಿಹಾಳ, ಧಾರವಾಡ

ಕೇಸರಸಿಂಗ್, ಬಿ. (ದಿ), ಛಾಯಾಚಿತ್ರಗ್ರಾಹಕ 124, ಹನುಮಂತನಗರ, ಬೆಂಗಳೂರು

ಕೃಷ್ಣ, ಕೆ.ಆರ್. (ಕ್ಯಾಪ್ಟನ್), ಕಮ್ಯಾಂಡೆಂಟ್, ಎಂ.ಎ.ಆರ್.ಪಿ., ಮೈಸೂರು

ಕೃಷ್ಣಪ್ಪ, ಕೆ.ಟಿ., ಆಸಿಸ್ಟೆಂಟ್ ಡೈರೆಕ್ಟರ್, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು

ಗಣೇಶ್, ಡಿ. (ವಿ), ಕ್ಯೂರೇಟರ್ ಸಸ್ಯವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಗುರುರಾಜ ಹೂಗಾರ, ರಾಘವೇಂದ್ರ ಕಲಾಮಂದಿರ, ಸರಸ್ವತೀಪುರಂ, ಮೈಸೂರು

ಗೋಪಿನಾಥ್, ಕೆ. (ವಿ), ಅಧ್ಯಾಪಕ ಪ್ರಾಣಿವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಚೀಫ್ ಎಫಿಗ್ರಫಿಸ್ಟ್, ಚೀಫ್ ಎಫಿಗ್ರಫಿಸ್ಟ್‌ರವರ ಕಚೇರಿ, ವಿಶ್ವವಿದ್ಯಾನಿಲಯದ ಹಳೆಯ ಕಟ್ಟಡ, ಮೈಸೂರು

ಜನರಲ್ ಮ್ಯಾನೇಜರ್, ಭದ್ರಾವತಿ ಕಾಗದ ಕಾರ್ಖಾನೆ, ಪೇಪರ್ ಟೌನ್ ಪೋಸ್ಟ್, ಭದ್ರಾವತಿ

ನಾಗರಾಜು, ಎಸ್. ಪ್ರಾಧ್ಯಾಪಕ (ವಿ), ಪ್ರಾಕ್ತನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ನಿರ್ದೇಶಕ, ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ, ಮೈಸೂರು

ನಿರ್ದೇಶಕ, ಪ್ರಾಕ್ತನಶಾಸ್ತ್ರ ವಿಭಾಗ (ಕರ್ನಾಟಕ ರಾಜ್ಯ), ಲಕ್ಷ್ಮೀಪುರಂ, ಮೈಸೂರು

ಪಾಟೀಲ, ಎಸ್.ವಿ. ಸಹಾಯಕ ಸಂಪಾದಕ ಕರ್ಮವೀರ ಕನ್ನಡ ವಾರಪತ್ರಿಕೆ, ಹುಬ್ಬಳ್ಳಿ

ಮರಿಯಪ್ಪ ಭಟ್ಟ, ಎಂ. (ದಿ), ಪ್ರಾಧ್ಯಾಪಕ, ಕನ್ನಡ ವಿಭಾಗ, ಮದ್ರಾಸು ವಿಶ್ವವಿದ್ಯಾಲಯ, ಮದ್ರಾಸು

ರಾಮಕೃಷ್ಣರಾಜು, ಛಾಯಾಚಿತ್ರಗ್ರಾಹಕ, ಪ್ರಾಣಿವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ರಾಮಚಂದ್ರಸ್ವಾಮಿ, ಆರ್., ಕರ್ನಾಟಕ ನ್ಯೂಸ್ ಫೋಟೋಸ್, ಮಲ್ಲೇಶ್ವರಂ, ಬೆಂಗಳೂರು

ರಾಮಸ್ವಾಮಿ, ಟಿ.ಎಲ್., ಛಾಯಾಚಿತ್ರಗ್ರಾಹಕ, ಮೈಸೂರು ನ್ಯೂಸ್ ಫೋಟೋಸ್, ಸುಭೇದಾರ್ ಛತ್ರಂ ರಸ್ತೆ, ಬೆಂಗಳೂರು

ಲಕ್ಷ್ಮಣಪ್ಪ, ಛಾಯಾಚಿತ್ರಗ್ರಾಹಕ, ಗೀತಾ ಸ್ಟೂಡಿಯೋ, ಸಂತೇಪೇಟೆ, ಮೈಸೂರು

ವ್ಯವಸ್ಥಾಪಕ, ಜೈವಂತ್ ಸ್ಟೂಡಿಯೋ, ಸುಭಾಷ್ ರಸ್ತೆ, ಕುಮಟ (ಉ.ಕ)

ವ್ಯವಸ್ಥಾಪಕ, ದೀಪಕ್ ಆರ್ಟ್ ಸ್ಟೂಡಿಯೋ, ಕಾರ್ಕಳ (ದ.ಕ.)

ವ್ಯವಸ್ಥಾಪಕ, ರಾಮನ್ ಸ್ಟೂಡಿಯೋ, ಸರದಾರ್ ವಲ್ಲಭಾಯ್ ಪಟೇಲ್ ರಸ್ತೆ, ಮೈಸೂರು

ಶ್ರೀನಿವಾಸನ್, ಸಿ.ಎಸ್., ಛಾಯಾಚಿತ್ರಗ್ರಾಹಕ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

ಶ್ರೀ ವೀರನಾರಾಯಣ ಮತ್ತು ಶ್ರೀ ತ್ರಿಕೂಟೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ, ಗದಗ

ಸಂಪಾದಕ, ಕಲ್ಕತ್ತ ರಿವ್ಯೂ, ಕಲ್ಕತ್ತ ವಿಶ್ವವಿದ್ಯಾಲಯ, ಕೋಲ್ಕತ

ಸಿಂಗ್, ಎಂ.ಬಿ., ಸಹಾಯಕ ಸಂಪಾದಕ (ವಿ), 'ಸುಧಾ' ವಾರಪತ್ರಿಕೆ, ಮಹಾತ್ಮಾ ಗಾಂಧೀ ರೋಡ್, ಬೆಂಗಳೂರು

ಸುಂದರರಾಜ್, ಕೆ.ಆರ್. (ದಿ), ಛಾಯಾಚಿತ್ರಗ್ರಾಹಕ, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಸುರೇಂದ್ರ ಕ್ಷತ್ರಿ, ಕ್ಷತ್ರಿ ಆರ್ಟ್ ಸ್ಟುಡಿಯೋ, ಕೊಪ್ಪೀಕರ್ ರಸ್ತೆ, ಹುಬ್ಬಳ್ಳಿ

ಸೂಪರಿಂಟೆಂಡೆಂಟ್, ಕುರುಡರ ಮತ್ತು ಮೂಕರ ಪಾಠಶಾಲೆ, ತಿಲಕ್ ನಗರ, ಮೈಸೂರು

# ವಿಷಯ ಸೂಚಿ


ಕರೀಷಕ ೧
ಕರುಂ ೧
ಕರುಗಳ ಪಾಲನೆ ೧
ಕರುಣರಸ ೩
ಕರುಹಾಲೆ ೩
ಕರುಳಿನ ಆತಂಕ ೩
ಕರುಳುಗಂಟು ೪
ಕರುಳುವಾಳುರಿತ (ಅಪೆಂಡಿಕ್ಸ್) ೫
ಕರುಳುಹುಳು ನಿರೋಧಕಗಳು ೫
ಕರುಳುಹುಳುಶಾಸ್ತ್ರ ೬
ಕರೂರ್ ೬
ಕರೆಂಟ್ ೬
ಕರೆಂಟ್ ಇವೆಂಟ್ಸ್ ೬
ಕರೆಂಪುಡಿ ೭
ಕರೆನ್ ರಾಜ್ಯ ೭
ಕರೆನಿ ರಾಜ್ಯ ೭
ಕರೆಹಣ ೭
ಕರೇಣುಮತಿ ೭
ಕರೇ ಹಂಬು ೭
ಕರೋನ ಆಸ್ಟ್ರೇಲಿಸ್ ೮
ಕರೋನ ವಿಸರ್ಜನೆ ೮
ಕರೋಸ, ಹಾನ್ಸ್ ೮
ಕರ್ಕಾಟಕ ರಾಶಿ ೮
ಕರ್ಕೋಟಕ ೯
ಕರ್‌ಕ್ಯುಮಿನ್ ೯
ಕರ್‌ಕ್ಯೂಲಿಗೊ ೯
ಕರ್ಕ್ ಪ್ಯಾಟ್ರಿಕ್, ವಿಲಿಯಂ ೧೦
ಕರ್ಕಿ, ಡಿ.ಎಸ್. ೧೦
ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ ೧೦
ಕರ್ಕ್ಯೂಲಿಯಾನಿಡೀ ೧೧
ಕರ್ಝ, ಐಸೋಲ್ಡ್ ೧೨
ಕರ್ಝ, ಹರ್ಮನ್ ೧೨
ಕರ್ಜಗಿ ೧೨
ಕರ್ಝನ್, ಜಾರ್ಜ್‌ನ್ಯಾಥೆನಿಯಲ್, ಕೆಡ್ಲೆಸ್ಟನ್ ಮಾರ್ಕ್ವಿಸ್ ೧೨
ಕರ್ಣ ೧೩
ಕರ್ಣ (ಜ್ಯಾಮಿತಿ) ೧೫
ಕರ್ಣ (ಕಳಚುರಿ) ೧೬
ಕರ್ಣ (ಗುಹಿಲ) ೧೬
ಕರ್ಣ (ಚೌಳುಕ್ಯ) ೧೬
ಕರ್ಣ (ವಾಘೇಲ) ೧೬
ಕರ್ಣ (ಸೇವುಣ) ೧೬
ಕರ್ಣಕೀಟಗಳು ೧೬
ಕರ್ಣಕುಂಡಲ ೧೭
ಕರ್ಣಪಾರ್ಯ ೧೭
ಕರ್ಣಪ್ರಯಾಗ್ ೧೮
ಕರ್ಣಸುವರ್ಣ ೧೮
ಕರ್ಣಾಟಕ (ಪತ್ರಿಕೆ) ೧೮
ಕರ್ಣಾಟಕ ಕೇಸರಿ ೧೯
ಕರ್ಣಾಟಕ ಪ್ರಕಾಶಿಕಾ ೧೯
ಕರ್ಣಾಟಕ ಭಾಷೋಜ್ಜೀವಿನಿ ಸಭಾ ೧೯
ಕರ್ಣಾಟಕ ಸಂಗೀತ ೧೯
ಕರ್ಣಾವತಿ ೨೭
ಕರ್ತನೋಪಕರಣಗಳು ೨೭
ಕರ್ದಮ ೨೭
ಕರ್ನಲ್ ೨೭
ಕರ್ನಾಟಕ (ವ್ಯುತ್ಪತ್ತಿ) ೨೭
ಕರ್ನಾಟಕ ೩೦
ಕರ್ನಾಟಕ ಏಕೀಕರಣ ೬೬
ಕರ್ನಾಟಕ ಇತಿಹಾಸ ೭೪
ಕರ್ನಾಟಕ ಸ್ವಾತಂತ್ರ್ಯ ಚಳವಳಿ ೯೩
ಕರ್ನಾಟಕ ಗ್ಯಾಸೆಟಿಯರ್ ೧೦೦
ಕರ್ನಾಟಕ ಗ್ರಂಥಮಾಲೆ ೧೦೧
ಕರ್ನಾಟಕ ಚಿತ್ರಕಲಾ ಪರಿಷತ್ತು ೧೦೧
ಕರ್ನಾಟಕ ಜನಪದ ನೃತ್ಯ ೧೦೨
ಕರ್ನಾಟಕ ಜನಪದ ಸಂಗೀತ ೧೦೫
ಕರ್ನಾಟಕ ಜಾನಪದ ೧೦೯
ಕರ್ನಾಟಕ ಜಾನಪದ ಪರಿಷತ್ತು ೧೨೦
ಕರ್ನಾಟಕ ನಂದಿನಿ ೧೨೦
ಕರ್ನಾಟಕ ಬಂಧು ೧೨೧
ಕರ್ನಾಟಕ ಬ್ಯಾಂಕ್ ೧೨೧
ಕರ್ನಾಟಕ ಭಾರತಿ ೧೨೨
ಕರ್ನಾಟಕ ಯುದ್ಧಗಳು ೧೨೨
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ೧೨೫
ಕರ್ನಾಟಕ ವಿದ್ಯಾವರ್ಧಕ ಸಂಘ ೧೨೫
ಕರ್ನಾಟಕ ವಿಶ್ವವಿದ್ಯಾಲಯ ೧೨೭
ಕರ್ನಾಟಕ ವೃತ್ತ ೧೨೮
ಕರ್ನಾಟಕ ವೈಭವ ೧೨೮
ಕರ್ನಾಟಕ ಸಂಘಗಳು ೧೨೯
ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗಗಳು ೧೩೨
ಕರ್ನಾಟಕದ ಅರಣ್ಯ ಸಂಪತ್ತು ೧೩೪
ಕರ್ನಾಟಕದ ಆರ್ಥಿಕ ಪ್ರಗತಿ ೧೩೮
ಕರ್ನಾಟಕದ ಚಿತ್ರಕಲೆ ೧೩೯
ಕರ್ನಾಟಕದ ಧರ್ಮಗಳು ೧೪೨
ಕರ್ನಾಟಕದ ನಾಣ್ಯಗಳು ೧೪೭
ಕರ್ನಾಟಕದ ಪ್ರಾಣಿಸಂಪತ್ತು ೧೪೯
ಕರ್ನಾಟಕದ ಮೂರ್ತಿಶಿಲ್ಪ ೧೫೬
ಕರ್ನಾಟಕದ ವಾಸ್ತುಶಿಲ್ಪ ೧೫೮
ಕರ್ನಾಟಕದ ಶಾಸನಗಳು ೧೬೩
ಕರ್ನಾಟಕದ ಸಂಸ್ಕೃತಿ ೧೬೬
ಕರ್ನಾಟಕದ ಹಬ್ಬಗಳು ೧೬೮
ಕರ್ನಾಟಕದಲ್ಲಿ ವೈದ್ಯ ೧೭೨
ಕರ್ನಾಟಕದಲ್ಲಿ ಶಿಕ್ಷಣ ೧೭೩
ಕರ್ನೂಲು ೧೮೧
ಕರ್ನೂಲು ಸ್ತೋಮ ೧೮೧
ಕರ್ಪೂರ ೧೮೨
ಕರ್ಪೂರದ ಮರ ೧೮೨
ಕರ್ಪೂರರಾಳಗಳು ೧೮೩
ಕರ್ಪೂರ ಶ್ರೀನಿವಾಸರಾವ್ ೧೮೪
ಕರ್ಬಿ, ವಿಲಿಯಂ ೧೮೫
ಕರ್ಮ ೧೮೫
ಕರ್ಮತ್ರಯ ೧೮೬
ಕರ್ಮಯೋಗ ೧೮೭
ಕರ್ಮವೀರ ೧೮೮
ಕರ್ಮೇಂದ್ರಿಯ ೧೮೯
ಕರ್ಲಿ ಮೀನು ೧೮೯
ಕರ್ವೆ, ಧೋಂಡೊ ಕೇಶವ ೧೮೯
ಕರ್ಷಕ ಯಾಂತ್ರಿಕ ೧೯೦
ಕರ್ಷಕ (ವಿದ್ಯುತ್) ೧೯೦
ಕರ್ಷಣ೧ ೧೯೧
ಕರ್ಷಣ೨ ೧೯೨
ಕಲಘಟಗಿ ೧೯೨
ಕಲ್ಲತ್ತಗಿರಿ ೧೯೨
ಕಲನಶಾಸ್ತ್ರ ೧೯೨
ಕಲಬುರ್ಗಿ, ಎಂ ಎಂ ೨೧೩
ಕಲಹರಿ ಮರುಭೂಮಿ ೨೧೩
ಕಲಹಾ ೨೧೪
ಕಲಾ೧ ೨೧೪
ಕಲಾ೨ ೨೧೪
ಕಲಾಂ ಅಬ್ದುಲ್, ಎ.ಪಿ.ಜೆ. ೨೧೪

## ವಿಷಯ ಸೂಚಿ


ಕಲಾಡಿ, ಕಾರ್ಲೊ ೨೧೫
ಕಲಾತ್ ೨೧೫
ಕಲಾದಗಿ ಶ್ರೇಣಿ ೨೧೫
ಕಲಾಬತು ೨೧೭
ಕಲಾಬಾವಿ ೨೧೯
ಕಲಾಭಿಮಾನಿ ದೇವತೆಗಳು ೨೧೯
ಕಲಾಮಂದಿರಗಳು ೨೨೦
ಕಲಾಕ್ಷೇತ್ರ ೨೨೨
ಕಲಾವತಿ ೨೨೨
ಕಲಾವಸ್ತು ವಿರಚನೆ ೨೨೨
ಕಲಿಕೆ ೨೨೩
ಕಲಿಯುಗ ೨೨೭
ಕಲಿಲ ೨೨೭
ಕಲಿಸ್ಟೊ ೨೩೩
ಕಲೀಂ ೨೩೩
ಕಲೀನಿನ್‌ಗ್ರಾಡ್ ೨೩೩
ಕಲೀಫರು, ಅರೇಬಿಯದ ೨೩೩
ಕಲೂಗಾ ೨೩೫
ಕಲೆ ೨೩೫
ಕಲೆ ಮತ್ತು ಜೀವನ ೨೩೯
ಕಲೆ ಮತ್ತು ನೀತಿ ೨೪೦
ಕಲೆ ಮತ್ತು ಪ್ರಕೃತಿ ೨೪೧
ಕಲೆ ಮತ್ತು ಸತ್ಯ ೨೪೨
ಕಲೆ ಮತ್ತು ಸಮಾಜ ೨೪೨
ಕಲೇಡಿಯಮ್ ೨೪೫
ಕಲೈಡೊಸ್ಕೋಪ್ ೨೪೫
ಕಲೋಡಿಯನ್ ೨೪೬
ಕಲ್ಕಟ್ಟಣೆ ೨೪೬
ಕಲ್ಕತ್ತ ಜರ್ನಲ್ ೨೪೬
ಕಲ್ಕತ್ತ ರಿವ್ಯೂ ೨೪೭
ಕಲ್ಕತ್ತ ವಿಶ್ವವಿದ್ಯಾಲಯ ೨೪೭
ಕಲ್ಲರಸ ೨೫೧
ಕಲ್ಕಿ೧ ೨೫೧
ಕಲ್ಕಿ೨ ೨೫೧
ಕಲ್ಗಿ – ತುರಾಯಿ ೨೫೧
ಕಲ್ನಾರು ೨೫೨
ಕಲ್ಪ ೨೫೨
ಕಲ್ಪಗಳು ೨೫೩
ಕಲ್ಪನಾ ೨೫೩
ಕಲ್ಪನೆ ೨೫೩
ಕಲ್ಪಸೂತ್ರಗಳು ೨೫೪
ಕಲ್ಲಂಗಡಿ ೨೫೬
ಕಲ್ಲಟ ಭಟ್ಟ ೨೫೭
ಕಲ್ಲನ್ನು ತೆಗೆಯುವುದು ೨೫೭
ಕಲ್ಲರ್, ಜಾನ್ ೨೫೮
ಕಲ್ಬಾಗಿ ೨೫೮
ಕಲ್ಬಾಸು ೨೫೮
ಕಲ್ಮಾಷಪಾದ ೨೫೮
ಕಲ್ಯಾ ೨೫೯
ಕಲ್ಯಾಡಿ ೨೫೯
ಕಲ್ಯಾಣ್ ೨೫೯
ಕಲ್ಯಾಣ೧ ೨೫೯
ಕಲ್ಯಾಣ೨ ೨೫೯
ಕಲ್ಯಾಣಕೀರ್ತಿ ೨೫೯
ಕಲ್ಯಾಣಕುಮಾರ್ ೨೬೦
ಕಲ್ಯಾಣಮ್ಮ, ಆರ್ ೨೬೦
ಕಲ್ಯಾಣಸ್ವಾಮಿ ೨೬೧
ಕಲ್ಲಿದ್ದಲಿನ ರಸಾಯನ ವೃತ್ತಾಂತ ೨೬೧
ಕಲ್ಲಿದ್ದಲು ೨೬೩
ಕಲ್ಲಿದ್ದಲಿನ ನಿಕ್ಷೇಪಗಳು (ಭಾರತದ) ೨೬೪
ಕಲ್ಲಿನ ಆಯುಧಗಳು ೨೬೬
ಕಲ್ಲಿನ ಶವಪೆಟ್ಟಿಗೆ ೨೭೦
ಕಲ್ಲು ೨೭೦
ಕಲ್ಲುಂಡೆಗಳು ೨೭೧
ಕಲ್ಲುಗಣಿ ೨೭೧
ಕಲ್ಲುಗಳು, ವೈದ್ಯದಲ್ಲಿ ೨೭೧
ಕಲ್ಲುಗಾರೆಯ ಕೆಲಸ ೨೭೩
ಕಲ್ಲುಗುಡ್ಡೆ ಸಮಾಧಿಗಳು ೨೭೪
ಕಲ್ಲುಗೌಜಲು ಹಕ್ಕಿ ೨೭೪
ಕಲ್ಲುಪ್ಪು ೨೭೫
ಕಲ್ಲುಮಚ್ಚು ೨೭೫
ಕಲ್ಲುಮಠದ ಪ್ರಭುದೇವರು ೨೭೫
ಕಲ್ಲುಸಬ್ಬಸಿಗೆ ೨೭೫
ಕಲ್ಲು ಹುಯ್ಯಿಸುವುದು ೨೭೬
ಕಲ್ಲು ಹೂ ೨೭೬
ಕಲ್ಲೂರು ೨೭೮
ಕಲ್ಲೇರಿ ೨೭೮
ಕಲ್ಲೋಳಿ ೨೭೯
ಕಲ್ಹಣ ೨೭೯
ಕವಚ ೨೮೦
ಕವಡೆಗಳು ೨೮೨
ಕವಣೆ ೨೮೩
ಕವನಮುನಿ ೨೮೩
ಕವಲಾಹಾರ ೨೮೩
ಕವಲುತೋಕೆ ಹಕ್ಕಿ ೨೮೪
ಕವಲೆದುರ್ಗ ೨೮೫
ಕವಳೆಗವಿಗಳು ೨೮೫
ಕವಾಟ ೨೮೫
ಕವಾಟ ಯಂತ್ರ ೨೮೫
ಕವಾಯತು ೨೮೬
ಕವಿಕಾಮ ೨೮೭
ಕವಿಗಾಯಕರು ೨೮೭
ಕವಿತಾಲಂಕೇಶ್ ೨೮೯
ಕವಿತಾಳ ೨೮೯
ಕವಿಪರಮೇಷ್ಠಿ ೨೮೯
ಕವಿಯ ದರ್ಶನ ೨೯೦
ಕವಿರಾಜಮಾರ್ಗ ೨೯೦
ಕವಿಶಿಕ್ಷೆ ೨೯೧
ಕವಿಸಮಯ ೨೯೧
ಕವಿಸ್ವಾತಂತ್ರ್ಯ ೨೯೧
ಕವ್ರಾಲ್, ಪೇದ್ರೂ ಆಲ್ವಾರೆಸ್ ೨೯೨
ಕಶಾಂಗ ೨೯೨
ಕಶಾಂಗಿಗಳು ೨೯೨
ಕಶಾಪ್ರಹಾರ ೨೯೨
ಕಶೇರುಕ ೨೯೩
ಕಶೇರುಕ ಭ್ರೂಣವಿಜ್ಞಾನ ೨೯೫
ಕಶ್ಯಪ ೨೯೮
ಕಷಿಂಗ್, ಹಾರ್ವೆ ೨೯೮
ಕಸ ೨೯೮
ಕಸದ ವಿಲೇವಾರಿ ೨೯೯
ಕಸಾಯಿ ಖಾನೆ ೩೦೦
ಕಸಾವ ಪಿಷ್ಟ ೩೦೧
ಕಸಿಮಾಡುವಿಕೆ (ಪ್ರಾಣಿಗಳಲ್ಲಿ) ೩೦೧
ಕಸಿಮಾಡುವಿಕೆ (ಸಸ್ಯಗಳಲ್ಲಿ) ೩೦೧
ಕಸಿಮಾಡುವಿಕೆ, ಅಂಗಾಂಶದ ಮತ್ತು ಅಂಗದ ೩೦೨
ಕಸೀದಾ ೩೦೩
ಕಸುಪಟ್ಟಿ ಉರಿತ ೩೦೩
ಕಸೂತಿ ೩೦೩
ಕಸೂರ್ ೩೧೦
ಕಸೆನ್ಸ್ ಹೆನ್ರಿ ೩೧೦
ಕಸ್ತೂರ ಬಾ ೩೧೦
ಕಸ್ತೂರಿ೧ ೩೧೨
ಕಸ್ತೂರಿ೨ ೩೧೩
ಕಸ್ತೂರಿ ಇಲಿ ೩೧೩
ಕಸ್ತೂರಿ ಜಾಲಿ ೩೧೪
ಕಸ್ತೂರಿ ದನ ೩೧೪

## ವಿಷಯ ಸೂಚಿ

ಕಸ್ತೂರಿ, ನ. ೩೧೪
ಕಸ್ತೂರಿಮೃಗ ೩೧೫
ಕಸ್ತೂರಿ ರಂಗ ಐಯ್ಯಂಗಾರ್ ೩೧೬
ಕಸ್ಸಪ ೩೧೭
ಕಳಚುರಿಗಳು ೩೧೭
ಕಳಚುರಿ ನಾಣ್ಯಗಳು ೩೨೦
ಕಳಚುರಿ ಶಾಸನಗಳು ೩೨೦
ಕಳಭ್ರರು ೩೨೦
ಕಳಲೆ ೩೨೧
ಕಳವು ೩೨೧
ಕಳಸ ೩೨೨
ಕಳಿಂಗನಗರ ೩೨೨
ಕಳಿಂಗಪಕ್ಷಿ ೩೨೨
ಕಳಿಲೆ ೩೨೩
ಕಟುಗುಮಲ್ಲೈ ೩೨೩
ಕಳೆ ಮತ್ತು ಕಳೆ ಹತೋಟಿ ೩೨೪
ಕಳ್ಳಹಕ್ಕಿ ೩೨೬
ಕಳ್ಯಾ ೩೨೬
ಕಳ್ಳಿ ೩೨೬
ಕಳ್ಳಿಪೀರ ೩೨೮
ಕಾಂಕ್ರೀಟ್ ೩೨೯
ಕಾಂಗರೂ ೩೩೨
ಕಾಂಗರೂ ಇಲಿ ೩೩೨
ಕಾಂಗರೂ ಹೆಗ್ಗಣ ೩೩೩
ಕಾಂಗೋ ಕೆಂಪು ೩೩೩
ಕಾಂಗೋ ಗಣರಾಜ್ಯ ೩೩೩
ಕಾಂಗೋ ನದಿ ೩೩೫
ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ ೩೩೭
ಕಾಂಗ್ರಾ ಚಿತ್ರಕಲೆ ೩೪೧
ಕಾಂಗ್ರೀವ್, ವಿಲಿಯಂ ೩೪೧
ಕಾಂಗ್ರೆಸ್, ಭಾರತ ರಾಷ್ಟ್ರೀಯ ೩೪೨
ಕಾಂಗ್ರೆಸ್ ಸಂದೇಶ ೩೪೯
ಕಾಂಚನಗಂಗ ೩೪೯
ಕಾಂಟ್ ಇಮ್ಯಾನ್ಯುಅಲ್ ೩೫೦
ಕಾಂಟನ ಸೌಂದರ್ಯಮೀಮಾಂಸೆ ೩೫೬
ಕಾಂಟಿ ನಿಕ್ಕೊಲೊ ಡೆ ೩೫೬
ಕಾಂಡಕೊರಕ ಜೀರುಂಡೆಗಳು ೩೫೬
ಕಾಂಡಕೊರಕ ನೊಣ ೩೫೭
ಕಾಂಡಕೊರಕ ಹುಳುಗಳು ೩೫೭
ಕಾಂಡನ್, ಇ.ಯು. ೩೫೭
ಕಾಂಡಾರ್ ಹಕ್ಕಿ ೩೫೭
ಕಾಂಡಿ ದ್ರಾವಕ ೩೫೭
ಕಾಂಡ್ಲಾ ೩೫೭
ಕಾಂತ ಏಕಧ್ರುವಗಳು ೩೫೮
ಕಾಂತಗೋಳ ೩೫೯
ಕಾಂತ ತಂತಿ ೩೬೦
ಕಾಂತತ್ವ ೩೬೦
ಕಾಂತ ದೃಕ್‌ಶಾಸ್ತ್ರ ೩೬೯
ಕಾಂತ ಪ್ರವರ್ಧಕ ೩೭೦
ಕಾಂತ ಭ್ರಮಣಾಂಕ ೩೭೦
ಕಾಂತ ಮಂಡಲ ೩೭೨
ಕಾಂತ ಮಸೂರ ೩೭೨
ಕಾಂತ ಮಾಪಕ ೩೭೩
ಕಾಂತ ಮುದ್ರಣ ೩೭೩
ಕಾಂತ ರಸಾಯನಶಾಸ್ತ್ರ ೩೭೬
ಕಾಂತ ವಿಘಟನೆ ೩೭೭
ಕಾಂತ ಸ್ಥಿತಿವಿಜ್ಞಾನ ೩೭೭
ಕಾಂತೀಯ ಅನುರಣನ ಚಿತ್ರಣ ೩೭೮
ಕಾಂತೀಯ ವಸ್ತುಗಳು ೩೮೧
ಕಾಂತೀಯ ವಿರಾಮಗಾಮಿತ್ವ ೩೮೨
ಕಾಂದಹಾರ್ ೩೮೨
ಕಾಂಪರೆಟಿಯ ೩೮೪
ಕಾಂಪಾನೆಲ್ಲಾ, ತೊಮ್‌ಮಾಜೊ ೩೮೪
ಕಾಂಪಿಲ್ಯ ೩೮೪
ಕಾಂಪೊಸಿಟ್ ದೂಲ ೩೮೪
ಕಾಂಪ್ಟನ್, ಆರ್ಥರ್ ಹೋಲಿ ೩೮೫
ಕಾಂಪ್ಟನ್ ಪರಿಣಾಮ ೩೮೫
ಕಾಂಪ್ಟನ್ ಬರ್ನೆಟ್, ಐ.ವಿ. ೩೮೬
ಕಾಂಬೋಡಿಯ ೩೮೬
ಕಾಕ್, ರಾಬರ್ಟ್ ೩೮೯
ಕಾಕಂಬಿ ೩೮೯
ಕಾಕಡ ೩೮೯
ಕಾಕತೀಯರು ೩೯೦
ಕಾಕನಕೋಟೆ ೩೯೧
ಕಾಕರ್, ಎಮಿಲ್ ತಿಯೊಡೋರ್ ೩೯೧
ಕಾಕಲ್ ೩೯೧
ಕಾಕಸಸ್ ೩೯೨
ಕಾಕಿನಾಡ ೩೯೫
ಕಾಕುತ್ಸ್ಥವರ್ಮ ೩೯೫
ಕಾಕುಪುಷ್ಪಿ ೩೯೫
ಕಾಕೇಸಿಯನ್ ಭಾಷಾಪರಿವಾರ ೩೯೬
ಕಾಕೊಥ್ರೈನ್ಯಾಕ್ಸ್ ೩೯೭
ಕಾಕ್‌ರಾಫ್ಟ್, ಸರ್ ಜಾನ್ ಡಗ್ಲಾಸ್ ೩೯೭
ಕಾಕ್ಸ್ ಕೂಂಬ್ ೩೯೭
ಕಾಕ್ಸಿಡೀ ೩೯೮
ಕಾಕ್ಸಿನೆಲ್ಲಿಡೀ ೩೯೯
ಕಾಕ್ಸೀಡಿಯ ರೋಗ ೩೯೯
ಕಾಗದ ೪೦೦
ಕಾಗದದ ಉದ್ಯಮ ೪೦೯
ಕಾಗದ ಹಣ ೪೧೦
ಕಾಗಿಣಾ ೪೧೨
ಕಾಗಿನೆಲೆ ೪೧೨
ಕಾಗೆ ೪೧೨
ಕಾಗೆ ಮಾಂಬಳ್ಳಿ ೪೧೩
ಕಾಗೋಡು ಸತ್ಯಾಗ್ರಹ ೪೧೩
ಕಾಚಿನಿಯಾಲ್ ೪೧೫
ಕಾಚಿಹಣ್ಣಿನಗಿಡ ೪೧೫
ಕಾಚು ೪೧೫
ಕಾಚುಗುಣನಾಶ ೪೧೬
ಕಾಜಮುಟೆ ಎಣ್ಣೆಮರ ೪೧೬
ಕಾಜವಾರ ೪೧೬
ಕಾಜಾಣ ೪೧೬
ಕಾಜ಼ಿಪೇಟ್ ೪೧೭
ಕಾಟನ್ ನೆಥೇನಿಯಲ್ ೪೧೭
ಕಾಟನ್‌ವುಲ್ ೪೧೭
ಕಾಟಿನಸ್ ೪೧೭
ಕಾಟಿಲೀಡನ್ ೪೧೭
ಕಾಟ್ರೆಲ್, ಫ್ರೆಡರಿಕ್ ಗಾರ್ಡನರ್ ೪೧೮
ಕಾಟ್ಲಾ ೪೧೮
ಕಾಡ್ ಮೀನು ೪೧೮
ಕಾಡಸಿದ್ಧೇಶ೧ ೪೧೮
ಕಾಡಸಿದ್ಧೇಶ೨ ೪೧೯
ಕಾಡಿಕಾರ ೪೧೯
ಕಾಡು ಇಪ್ಪೆ ೪೧೯
ಕಾಡು ಓಮ ೪೧೯
ಕಾಡುಕಟುಕ ರೋಹಿಣಿ ೪೧೯
ಕಾಡು ಕಣಗಿಲು ೪೧೯
ಕಾಡು ಕರಿಬೇವು ೪೧೯
ಕಾಡು ಕಸ್ತೂರಿ ೪೨೦
ಕಾಡು ಕಾಸಿ ಕಣಗಿಲೆ ೪೨೦
ಕಾಡುಕೋಣ ೪೨೦
ಕಾಡು ಕೋಳಿ ೪೨೧
ಕಾಡುಗಂಧ ೪೨೧
ಕಾಡುಗುಂಬಳ ೪೨೨
ಕಾಡು ಗುಬ್ಬಚ್ಚಿ ೪೨೨
ಕಾಡುಗೋದಿ ೪೨೨

ಕಾಡುಚೆಂಡುಹೂ ೪೨೩
ಕಾಡುಜೀರಿಗೆ ೪೨೩
ಕಾಡುತುಂಬೆಗಿಡ ೪೨೩
ಕಾಡುದಾಲ್ಚಿನ್ನಿ ೪೨೪
ಕಾಡುನಾಯಿ ೪೨೪
ಕಾಡುಪಾಪ ೪೨೪
ಕಾಡು ಪಾರಿವಾಳದ ಮರ ೪೨೫
ಕಾಡು ಪಿಂಡಿ ೪೨೬
ಕಾಡುಬುಡುಮೆ ೪೨೬
ಕಾಡುಬೆಂಡೆ ೪೨೬
ಕಾಡುಬೆಕ್ಕು ೪೨೬
ಕಾಡು ಬೆಳ್ಳುಳ್ಳಿ ೪೨೭
ಕಾಡು ಮೆಣಸಿನ ಗಿಡ ೪೨೮
ಕಾಡು ಮೈನ ೪೨೮
ಕಾಡು ರಾಗಿಹುಲ್ಲು ೪೨೮
ಕಾಡು ರುದ್ರಾಕ್ಷಿ ೪೨೯
ಕಾಡು ಲೂಸರ್ನ್ ಸೊಪ್ಪು ೪೨೯
ಕಾಡು ಸುವರ್ಣಗೆಡ್ಡೆ ೪೨೯
ಕಾಡು ಹಂದಿ ೪೨೯
ಕಾಡು ಹುರುಳಿ ೪೩೧
ಕಾಡು ಹೊಗೆಸೊಪ್ಪು ೪೩೧
ಕಾಡ್ಯನಾಟ ೪೩೧
ಕಾಣೆ, ಪಾಂಡುರಂಗ ವಾಮನ ೪೩೨
ಕಾಣ್ವ ಮನೆತನ ೪೩೩
ಕಾತ್ಯಾಯನ ೪೩೩
ಕಾದಂಬರಿ ೪೩೪
ಕಾದಂಬರಿ ಸಂಗ್ರಹ ೪೩೯
ಕಾದಾಟದ ಆಯಾಸ ೪೩೯
ಕಾದಿಟ್ಟ ಸೈನ್ಯ ೪೩೯
ಕಾನಡಾ ಧುರೀಣ ೪೪೦
ಕಾನಡಾ ವೃತ್ತ ೪೪೦
ಕಾನಾಜಾವ ೪೪೦
ಕಾನೂನಿನ ಅಜ್ಞಾನ ಮತ್ತು ವಸ್ತುಸ್ಥಿತಿಯ ಅಜ್ಞಾನ ೪೪೦
ಕಾನೂನಿನ ಕಲ್ಪನೆಗಳು ೪೪೧
ಕಾನೂನು ೪೪೨
ಕಾನೂನುಗಳ ಅಸಾಂಗತ್ಯ ೪೪೨
ಕಾನೂನುಭಂಗ ಚಳವಳಿ ೪೪೪
ಕಾನ್ಪುರ ೪೪೫
ಕಾನ್‌ಫ್ಯೂಷಸ್ ೪೪೬
ಕಾನ್ರಾಡ್, ಮೈಕೇಲ್ ಜಾರ್ಜ್ ೪೪೭
ಕಾನ್ರಾಡ್, ಜೋಸೆಫ್ ೪೪೭
ಕಾನ್ವೆಂಟ್ ೪೪೮
ಕಾನ್ಸಲ್ ೪೪೮
ಕಾನ್‌ಸ್ಟಂಟೈನ್ ೪೪೮
ಕಾನ್‌ಸ್ಟಂಟೈನ್ (ಫ್ಲೇವಿಯಸ್) ೪೪೮
ಕಾನ್‌ಸ್ಟಂಟೈನ್ (ಪಾವ್ಲೊವಿಚ್) ೪೪೮
ಕಾನ್‌ಸ್ಟಂಟೈನ್, ಆಫ್ರಿಕದ ೪೪೯
ಕಾನ್‌ಸ್ಟಂಟೈನರು ೪೪೯
ಕಾನ್‌ಸ್ಟಾಂಟಿನೋಪಲ್ ೪೫೦
ಕಾನ್‌ಸ್ಟಾನ್‌ಷಸ್ ೪೫೧
ಕಾನ್‌ಹೀಮ್, ಜೂಲಿಯಸ್ ಫ್ರೀಡ್ರಿಕ್ ೪೫೧
ಕಾಪಾಲಿಕರು ೪೫೧
ಕಾಪ್ಟಿಕ್ ಕಲೆ ೪೫೨
ಕಾಪ್ಟಿಕ್ ಚರ್ಚ್ ೪೫೪
ಕಾಪ್ಟಿಕ್ ಭಾಷೆ ಮತ್ತು ಸಾಹಿತ್ಯ ೪೫೪
ಕಾಪ್ಟಿಕ್ ಲಿಪಿ ೪೫೬
ಕಾಫಿ ೪೫೬
ಕಾಫಿ ವ್ಯಾಪಾರ ೪೬೧
ಕಾಫ್ಕಾ, ಕರ್ಟ್ ೪೬೨
ಕಾಫ್ಕಾ, ಫ್ರಾನ್ಜ್ ೪೬೨
ಕಾಫ್‌ಮನ್, ಜಾರ್ಜ್ ಸೈಮನ್ ೪೬೨
ಕಾಬಟ್, ಜಾನ್ (ಜಿಯೊವನ್ನೆ ಕಾಬಾಟೊ) ೪೬೨
ಕಾಬಟ್, ವಿಲಿಯಂ ೪೬೨
ಕಾಬಾ ೪೬೪
ಕಾಬಾಳೆ ೪೬೪
ಕಾಬುಕೀ ೪೬೫
ಕಾಬೂಲ್ ೪೬೫
ಕಾಬ್ಡೆನ್, ರಿಚರ್ಡ್ ೪೬೭
ಕಾಮಂದಕಿ ೪೬೮
ಕಾಮ ೪೬೮
ಕಾಮಕಟಂಕಟೆ ೪೬೯
ಕಾಮಕಸ್ತೂರಿ ೪೬೯
ಕಾಮತ್, ಎಂ.ಎನ್. ೪೬೯
ಕಾಮತ್, ಎಂ.ವಿ. ೪೭೧
ಕಾಮದೇವ (ಕದಂಬರಾಜ) ೪೭೧
ಕಾಮದೇವ (ಪಾಂಡ್ಯರಾಜ) ೪೭೧
ಕಾಮಧೇನು೧ ೪೭೨
ಕಾಮಧೇನು೨ ೪೭೨
ಕಾಮನಬಿಲ್ಲು ೪೭೨
ಕಾಮನಹಬ್ಬ ೪೭೩
ಕಾಮನ್‌ವೆಲ್ತ್ ಕ್ರೀಡೆಗಳು ೪೭೩
ಕಾಮನ್‌ವೆಲ್ತ್ ರಾಷ್ಟ್ರಸಮುದಾಯ ೪೭೪
ಕಾಮಲಾಪುರ ೪೭೯
ಕಾಮಲೇಖನ ೪೭೯
ಕಾಮವಿಕಾರಗಳು ೪೭೯
ಕಾಮಶಾಸ್ತ್ರ ೪೮೨
ಕಾಮಶಿಕ್ಷಣ ೪೮೫
ಕಾಮಳ್ಳಿ ೪೮೬
ಕಾಮಾಕ್ಷಿ ೪೮೬
ಕಾಮಾಲೆ ೪೮೬
ಕಾಮಾಲೆ ಹಕ್ಕಿ ೪೮೭
ಕಾಮಿಡಿ ಆಫ್ ಮ್ಯಾಂಟಲ್ ಅಂಡ್ ಸ್ವೋರ್ಡ್ ೪೮೭
ಕಾಮೋತ್ತೇಜಕ ೪೮೭
ಕಾಮ್ಯುಟೇಟರ್ ೪೮೮
ಕಾಯಕ ೪೮೮
ಕಾಯವ್ವ ೪೮೮
ಕಾಯಾಂತರೀಕರಣ ೪೮೮
ಕಾಯಿಧೂಪ ೪೯೦
ಕಾಯ್ಜೀವಿ ೪೯೦
ಕಾರಂತ, ಕೆ.ಆರ್. ೪೯೦
ಕಾರಂತ, ಬಿ.ವಿ. ೪೯೦
ಕಾರಂತ ಉಲ್ಲಾಸ, ಕೆ. ೪೯೨
ಕಾರಕ ಪ್ರಯೋಗಗಳು ೪೯೨
ಕಾರ ಕಮರ್ ೪೯೫
ಕಾರಕ ವಿಶ್ಲೇಷಣೆ ೪೯೫
ಕಾರಕೋರಂ ೪೯೫
ಕಾರಖಾನೀಸ, ಗಣೇಶಗೋವಿಂದ ೪೯೬
ಕಾರನ್ ಫ್ಲವರ್ ೪೯೬
ಕಾರನ್ ಸ್ಟೀಪ್ ಲಿಕ್ಕರ್ ೪೯೬
ಕಾರರ್, ಪಾಲ್ ೪೯೭
ಕಾರಲು ರೋಗ ೪೯೭
ಕಾರವಾನ್ ೪೯೮
ಕಾರವಾರ ೪೯೮
ಕಾರಸ್ಸೈಯಿಫಾರ್ಮಿಸ್ ೪೯೯
ಕಾರಹುಣ್ಣಿಮೆ ೪೯೯
ಕಾರಳ್ಳು ೫೦೦
ಕಾರಾಗೃಹ ೫೦೧
ಕಾರಾಗೃಹದಲ್ಲಿ ಶಿಕ್ಷಣ ೫೦೪
ಕಾರಾಗೃಹ ದುಡಿಮೆ ೫೦೫
ಕಾರಾಚಿ ೫೦೬
ಕಾರೀಯಾತ್, ಥಾಮಸ್ ೫೦೬
ಕಾರುಗಹಳ್ಳಿಯ ಕಾಳಗ ೫೦೭
ಕಾರೆಗಿಡ ೫೦೭
ಕಾರೇವ ಸ್ತರಗಳು ೫೦೭
ಕಾರೈಕ್ಕಾಲ್ ೫೦೮

## ವಿಷಯ ಸೂಚಿ


ಕಾರೈಕ್ಕಾಲಮ್ಮೆ ೫೦೮
ಕಾರ್ರೊ, ಆನ್ನಿಬಾಲೆ ೫೦೯
ಕಾರ್ಕ್ ೫೦೯
ಕಾರ್ಕಳ ೫೦೯
ಕಾರ್ಕೋಟ ರಾಜಸಂತತಿ ೫೧೦
ಕಾರ್ಖಾನೆಯ ಸಂಘಟನೆ ೫೧೧
ಕಾರ್ಖಾನೆ ವ್ಯವಸ್ಥೆ ೫೧೪
ಕಾರ್ಟಿಸೋನ್ ೫೧೬
ಕಾರ್ಟೀಸಿಯನಿಸಂ ೫೧೬
ಕಾರ್ಟೆಸ್ ಹೆರ್ನಾಂಡೊ ೫೧೬
ಕಾರ್ಟ್‌ರೈಟ್, ಎಡ್ಮಂಡ್ ೫೧೭
ಕಾರ್ಟ್‌ರೈಟ್, ವಿಲಿಯಂ ೫೧೭
ಕಾರ್ಡಿಲ್ಲೆರಾ ೫೧೭
ಕಾರ್ಡುರಾಯ್ ೫೧೮
ಕಾರ್ಡೂಚೀ, ಜೋಸುವ ೫೧೮
ಕಾರ್ಡೇಟ ೫೧೮
ಕಾರ್ಡೈಟ್ ೫೧೯
ಕಾರ್ಡೋವ ೫೧೯
ಕಾರ್ತಿಕ ೫೨೦
ಕಾರ್ತಿಕೇಯ ೫೨೦
ಕಾರ್ಥೇಜ್ ೫೨೧
ಕಾರ್ದೋಗಲು ೫೨೨
ಕಾರ್ದೋವಾ ೫೨೨
ಕಾರ್ನ್‌ಫೋರ್ಡ್, ಫ್ರಾನ್ಸಸ್ ಕ್ರಾಫ್ಟ್ಸ್ ೫೨೨
ಕಾರ್ನ್‌ಬರ್ಗ್, ಆರ್ಥರ್ ೫೨೨
ಕಾರ್ನ್‌ವಾಲಿಸ್, ಲಾರ್ಡ್ ೫೨೩
ಕಾರ್ನಾಕ್೧ ೫೨೪
ಕಾರ್ನಾಕ್೨ ೫೨೪
ಕಾರ್ನಾಡು, ಸದಾಶಿವರಾವ್ ೫೨೪
ಕಾರ್ನೇಗಿ, ಆಂಡ್ರ್ಯೂ ೫೨೫
ಕಾರ್ನೇಗಿ, ಡೇಲ್ ೫೨೫
ಕಾರ್ನೇ, ಪ್ಯೇರ್ ೫೨೬
ಕಾರ್ನೊಟೈಟ್ ೫೨೬
ಕಾರ್ನೊಸೀನ್ ೫೨೬
ಕಾರ್ನೋಚಕ್ರ ೫೨೭
ಕಾರ್ನೋ, ನಿಕೊಲಾಸ್ ಲಿಯೊನಾರ್ಡ್ ಸಾಡಿ ೫೨೮
ಕಾರ್ಪೆಂಟರ್, ಎಡ್ವರ್ಡ್ ೫೨೯
ಕಾರ್ಪೊರೇಷನ್ ೫೨೯
ಕಾರ್ಪೊರೇಷನ್ ತೆರಿಗೆ ೫೨೯
ಕಾರ್ಪೊರೇಷನ್ ಬ್ಯಾಂಕ್ ೫೩೧
ಕಾರ್ಬಝೋಲ್ (ಡೈಬೆನ್‌ಝೋ ಪಿರೋಲ್) ೫೩೩
ಕಾರ್ಬನ್ – ೧೪ ಕಾಲನಿರ್ಣಯ ೫೩೩
ಕಾರ್ಬನಿಫೆರಸ್ ಸ್ತೋಮ ೫೩೩
ಕಾರ್ಬೀನುಗಳು ೫೩೫
ಕಾರ್ಬೆಟ್, ಜಿಮ್ ೫೩೬
ಕಾರ್ಬೆಟ್, ರಿಚರ್ಡ್ ೫೩೬
ಕಾರ್ಬೈಡುಗಳು ೫೩೬
ಕಾರ್ಬೊನೇಟುಗಳು ೫೩೬
ಕಾರ್ಬೋಮೈಸಿನ್ ೫೩೮
ಕಾರ್ಬೋನಿಯಂ ಅಯಾನ್ ೫೩೮
ಕಾರ್ಬೋಹೈಡ್ರೇಟುಗಳು ೫೩೯
ಕಾರ್ಬ್ಯುರೇಟರ್ ೫೪೬
ಕಾರ್ಮಿಕ ಆವರ್ತ ೫೪೭
ಕಾರ್ಮಿಕ ಇಲಾಖೆ ೫೪೮
ಕಾರ್ಮಿಕ ಕಲ್ಯಾಣ ೫೪೯
ಕಾರ್ಮಿಕ ಕಾನೂನುಗಳು ೫೫೦
ಕಾರ್ಮಿಕ ದಿನ ೫೫೨
ಕಾರ್ಮಿಕ ಸಂಘ ೫೫೨
ಕಾರ್ಮಿಕ ಸಂಘಟನೆ ಮತ್ತು ಕಲ್ಯಾಣ ೫೬೦
ಕಾರ್ಮೈಕೇಲ್, ಗ್ರೇಸ್ ಎಲಿಜಬೆತ್ ಜೆನ್ನಿಂಗ್ಸ್ ೫೬೨
ಕಾರ್ಯಕಾರಣಭಾವ ೫೬೨
ಕಾರ್ಯಕಾರಣಶಾಸ್ತ್ರ ೫೬೫
ಕಾರ್ಯಕಾರಿತ್ವ ೫೬೫
ಕಾರ್ಯಪ್ಪ, ಕೆ.ಎಂ. ೫೬೬
ಕಾರ್ಯಾಂಗ ೫೬೭
ಕಾರ್ಲ್ ಫಿಷರ್ ಅಭಿಕರ್ಮಕ ೫೬೮
ಕಾರ್ಲೆ ೫೬೮
ಕಾರ್ಲೈಲ್ ಥಾಮಸ್ ೫೬೯
ಕಾರ್ಲ್ಯುಡೊವೈಕ ೫೭೦
ಕಾರ್ವಿಡೀ ೫೭೦
ಕಾರ್ಷಾಪಣ ೫೭೦
ಕಾರ್ಸಿಕ ೫೭೦
ಕಾಲ೧ ೫೭೧
ಕಾಲ೨ ೫೭೨
ಕಾಲಂ, ಪಾಡ್ರಿಕ್ ೫೭೩
ಕಾಲಕಲಿ ೫೭೩
ಕಾಲಕವೃಕ್ಷೀಯ ೫೭೪
ಕಾಲಗಣನೆ, ಭಾರತೀಯ ೫೭೪
ಕಾಲಜನ್ ೫೭೬
ಕಾಲಜ್ಞಾನ ವಚನಗಳು ೫೭೬
ಕಾಲಟಿ ೫೭೬
ಕಾಲನಿರ್ಣಯ ವಿಧಾನಗಳು ೫೭೬
ಕಾಲನೇಮಿ ೫೭೮
ಕಾಲಪರಿಮಿತಿ ಕಾಯಿದೆ, ೧೯೬೩ ೫೭೮
ಕಾಲಭೈರವ ೫೭೯
ಕಾಲಮಾಪನ ೫೭೯
ಕಾಲಮಿತಿ ಕಾನೂನು ೫೮೪
ಕಾಲಮೇಘ ೫೮೭
ಕಾಲಯವನ ೫೮೭
ಕಾಲಯಶಸ್ ೫೮೭
ಕಾಲರ ೫೮೭
ಕಾಲರ್ಡ್ ೫೯೧
ಕಾಲಲೇಖಿ ಮತ್ತು ಕಾಲಮಾಪಿ ೫೯೧
ಕಾಲಸರಣಿ ೫೯೨
ಕಾಲಾಂಕ ೫೯೯
ಕಾಲಾನುಗುಣ ವೇತನ ಪದ್ಧತಿ ೫೯೯
ಕಾಲಾಹಂಡಿ ೬೦೦
ಕಾಲಿ ೬೦೧
ಕಾಲಿಂಜರ್ ೬೦೧
ಕಾಲಿನ್, ಹೈನ್‌ರೀಕ್ ಜೋಸೆಫ್ ಫಾನ್ ೬೦೧
ಕಾಲಿನ್ಸ್, ಜಾನ್ ೬೦೧
ಕಾಲಿನ್ಸ್, ಮೈಕಲ್ ೬೦೧
ಕಾಲಿನ್ಸ್, ವಿಲಿಯಂ ೬೦೧
ಕಾಲಿನ್ಸ್, ವಿಲಿಯಂ ವಿಲ್ಕಿ ೬೦೨
ಕಾಲಿಬಂಗನ್ ೬೦೨
ಕಾಲಿಯ ೬೦೩
ಕಾಲು, ಬಾಯಿ ಜ್ವರ ೬೦೩
ಕಾಲೇಜು ೬೦೪
ಕಾಲೇಜು ಶಿಕ್ಷಣ ೬೦೪
ಕಾಲೇವಾಲಾ ೬೦೫
ಕಾಲೊಟೈಪ್ ಮುದ್ರಣ ೬೦೬
ಕಾಲೊರಾಡೋ ೬೦೬
ಕಾಲೊರಾಡೋ ನದಿ ೬೦೯
ಕಾಲೊರಾಡೋ ಮರುಭೂಮಿ ೬೧೦
ಕಾಲ್ಚಿಕಮ್ ೬೧೦
ಕಾಲ್ಡೆರ ೬೧೧
ಕಾಲ್ಡೆರೋನ್, (ಡೇ ಲಾ ಬಾರ್ಕಾ) ಪೇಧ್ರೊ ೬೧೧
ಕಾಲ್ಡ್‌ವೆಲ್, ಎರ್‌ಸ್ಕಿನ್ ಪ್ರೆಸ್ಟನ್ ೬೧೧
ಕಾಲ್ಡ್‌ವೆಲ್, ರಾಬರ್ಟ್ ೬೧೧
ಕಾಲ್ಬೇರ್ ೬೧೨
ಕಾಲ್ಮೊಗ್ರಾಫ್ – ಸ್ಮಿರ್ನಾಫ್ ಪರೀಕ್ಷಣ ೬೧೨
ಕಾಲ್ಮೆಟ್, ಲಿಯಾನ್ ಚಾರಲ್ಸ್ ಆಲ್ಬರ್ಟ್ ೬೧೩
ಕಾವಲು ಪಡೆ ೬೧೪
ಕಾವಳ ೬೧೪
ಕಾವಾಲ್‌ಕಾಂಟೀ, ಜೋಡೋ ೬೧೫
ಕಾವಿಕಲೆ ೬೧೫

## ವಿಷಯ ಸೂಚಿ


ಕಾವಿಟ್ಟಿಗೆ ೬೧೫
ಕಾವಿಮಣ್ಣು ೬೧೬
ಕಾವುಜೇಡು ೬೧೬
ಕಾವೂರ್, ಡಿ. ಕ್ಯಾಮಿಯೊ ಬೆನ್ನೊ ೬೧೬
ಕಾವೇರಿಗೆಂಡೆ ೬೧೭
ಕಾವೇರಿನದಿ ೬೧೭
ಕಾವೇರಿ ಪೂಂಪಟ್ಟಿನಂ ೬೨೨
ಕಾವ್ಯ ೬೨೨
ಕಾವ್ಯದ ಸುವರ್ಣಯುಗ ೬೨೪
ಕಾವ್ಯದೋಷಗಳು ೬೨೬
ಕಾವ್ಯನ್ಯಾಯ ೬೨೮
ಕಾವ್ಯಪ್ರಭೇದಗಳು ೬೨೮
ಕಾವ್ಯಪ್ರಯೋಜನ ೬೩೦
ಕಾವ್ಯಮಂಜರಿ ೬೩೦
ಕಾವ್ಯ ಮಾತಾಡುವ ಚಿತ್ರ ೬೩೧
ಕಾವ್ಯಮೀಮಾಂಸೆ ೬೩೧
ಕಾವ್ಯ ರೂಪಕಗಳು ೬೩೨
ಕಾವ್ಯಲಕ್ಷಣ ೬೩೩
ಕಾವ್ಯಹೇತು ೬೩೫
ಕಾವ್ಯೋನ್ಮಾದ ೬೩೫
ಕಾಶಿ ೬೩೫
ಕಾಶಿನಾಥ್, ಕೆ ೬೩೬
ಕಾಶೀನಾಥ ಶಾಸ್ತ್ರಿ ೬೩೬
ಕಾಶ್ಮೀರ: ನೋಡಿ – ಜಮ್ಮು ಮತ್ತು ಕಾಶ್ಮೀರ ೬೩೭
ಕಾಶ್ಮೀರ ಶೈವದರ್ಶನ ೬೩೭
ಕಾಶ್ಮೀರೀ ಭಾಷೆ ೬೩೯
ಕಾಶ್ಮೀರೀ ಸಾಹಿತ್ಯ ೬೪೧
ಕಾಶ್ಯಪ ಮಾತಂಗ ೬೪೩
ಕಾಷ್‍ನಿಟೇ, ಮೇರಿ ಲೂಯಿಸೆ ೬೪೩
ಕಾಸರಗೋಡು ೬೪೩
ಕಾಸಲ್, ಆಲ್ಬ್ರೆಕ್ಟ್ ೬೪೬
ಕಾಸೀನಿ, ಜಿಯೊವಾನಿ ಡೊಮಿನಿಕೊ ೬೪೬
ಕಾಸ್ಪರೀಕ ೬೪೭
ಕಾಸ್ಪಸ್ ೬೪೯
ಕಾಸ್ಪಿನ್, ಮಿರಾನ್ ೬೪೯
ಕಾಸ್ಪಿಲ್ಯೋನಾ ಬಾಲ್ಡಾಸಾರೆ ಕಾಂಟೆ ೬೪೯
ಕಾಸ್ಪನರ್, ಎರಿಕ್ ೬೪೯
ಕಾಸ್‍ಬಕ್, ಜಾರ್ಜ್ ೬೫೦
ಕಾಸ್‍ಮಸ್ ೬೫೦
ಕಾಸ್ಮಾಸ್ ೬೫೦
ಕಾಸ್ಯಾಕರು ೬೫೦
ಕಾಹುಗೋಟೆ ೬೫೧
ಕಾಳಗಮೀನು ೬೫೧
ಕಾಳಗಿ ೬೫೨
ಕಾಳಪ್ಪ, ಎಸ್. ೬೫೨
ಕಾಳಮಾರಿ ೬೫೩
ಕಾಳವ್ವೆ ೬೫೩
ಕಾಳಸಂತೆ ೬೫೩
ಕಾಳಹಸ್ತಿ ೬೫೩
ಕಾಳಾಚಾರ್, ರು. ೬೫೫
ಕಾಳಾಮುಖ ೬೫೫
ಕಾಳಿಂಗರಾಯ ೬೫೫
ಕಾಳಿಂಗರಾವ್, ಪಿ. ೬೫೬
ಕಾಳಿತುಂಬೆ ೬೫೬
ಕಾಳಿದಾಸ ೬೫೭
ಕಾಳಿಂಗಸರ್ಪ ೬೬೨
ಕಾಳೀ ೬೬೨
ಕಾಳೀನದಿ ೬೬೨
ಕಾಳು ಕೊರೆಯುವ ಕುಟ್ಟೆ ೬೬೩
ಕಾಳೆ, ಭಿ.ಪ. ೬೬೩
ಕಿಂಕ್, ಹಾನ್ಸ್ ಅರ್ನ್ಸ್ಟ್ ೬೬೩
ಕಿಂಕಜೂ ೬೬೩
ಕಿಂಗ್, ಕೊರೆಟಾ ೬೬೪
ಕಿಂಗ್, ಮಾರ್ಟಿನ್ ಲ್ಯೂಥರ್ (ಜೂನಿಯರ್) ೬೬೪
ಕಿಂಗ್, ವಿಲಿಯಂ ೬೬೫
ಕಿಂಗ್, ವಿಲಿಯಂ ಮೆಕನ್‍ಜಿ ೬೬೫
ಕಿಂಗ್, ಹೆನ್ರಿ ೬೬೬
ಕಿಂಗ್‍ಸ್ಟನ್ನಿನ ಶ್ರೀಮಂತರು ೬೬೬
ಕಿಂಗ್ಸ್‍ಲಿ, ಚಾರ್ಲ್ಸ್ ೬೬೭
ಕಿಂಗ್ಸ್‍ಲಿ, ಹೆನ್ರಿ ೬೬೭
ಕಿಂಡರ್‍ಗಾರ್ಟನ್ ೬೬೭
ಕಿಂದಮ ೬೬೯
ಕಿಂಪುರುಷರು ೬೬೯
ಕಿಂಬರ್ಲಿ ೬೬೯
ಕಿಕೂಯೂ ೬೬೯
ಕಿಕ್ಕೇರಿ ೬೭೦
ಕಿಗೋಮ ಪ್ರದೇಶ ೬೭೧
ಕಿಗ್ಗ ೬೭೧
ಕಿಚ್‍ನರ್, ಹೋರೇಷಿಯೋ ಹರ್ಬರ್ಟ್ ೬೭೧
ಕಿಜ್ಜಿಲ್ ೬೭೨
ಕಿಟಕಿ ಕಲ್ಲು ೬೭೨
ಕಿಟಾ, ಕಿಯೊಶೂ ೬೭೨
ಕಿಟ್ಟ ೬೭೨
ಕಿಟ್ಟೆಲ್, ಫರ್ಡಿನೆಂಡ್ ೬೭೨
ಕಿಡ್, ಥಾಮಸ್ ೬೭೩
ಕಿಡ್, ವಿಲಿಯಂ ೬೭೩
ಕಿಡರ್ಲಿನ್ – ವಾಕ್ಟರ್, ಆಲ್ಫ್ರೆಡ್ ಫಾನ್ ೬೭೪
ಕಿಡಿ ಪತ್ರಿಕೆ ೬೭೪
ಕಿಡಿಕೋಷ್ಠ (ಕಿಡಿಮಂದಿರ) ೬೭೫
ಕಿಡಿಪ್ರಜ್ವಲನೆ ೬೭೫
ಕಿಡಿ ವಿದ್ಯುತ್ ೬೭೬
ಕಿಡ್ಡೂಷ್ ೬೭೭
ಕಿಣ್ವಗಳು ೬೭೭
ಕಿತ್ತಳೆ ೬೮೨
ಕಿತ್ತಾನಾರು ೬೮೫
ಕಿತ್ತೂರು೧ ೬೮೫
ಕಿತ್ತೂರು೨ ೬೮೬
ಕಿತ್ತೂರುಚೆನ್ನಮ್ಮ ೬೮೬
ಕಿತ್ತೂರು ದೇಸಾಯರು ೬೮೭
ಕಿನ್‍ವುಲ್ಫ್ ೬೮೮
ಕಿನ್‍ಕಾಪು ೬೮೮
ಕಿನ್ನರ ಕಥೆ ೬೮೮
ಕಿನ್ನರಿಜೋಗಿ ೬೯೧
ಕಿನ್ನರರು ೬೯೧
ಕಿನ್ಸೆ, ಆಲ್ಫ್ರೆಡ್ ಚಾರಲ್ಸ್ ೬೯೧
ಕಿಪ್‍ನ ಉಪಕರಣ ೬೯೧
ಕಿಪ್ಚಾಕ್ ೬೯೨
ಕಿಪ್ಪರ್ ಮೀನು ೬೯೨
ಕಿಪ್ಲಿಂಗ್, ಜೋಸೆಫ್ ರಡ್‍ಯಾರ್ಡ್ ೬೯೩
ಕಿಬ್ಬನಹಳ್ಳಿ ೬೯೩
ಕಿಯಾಗಿಣಿ ೬೯೩
ಕಿರಣಣಬೆ ಬೇನೆ ೬೯೪
ಕಿರಲುಬೋಗಿ ೬೯೪
ಕಿರಾಣಿ ವ್ಯಾಪಾರಿ ೬೯೪
ಕಿರಾತ ೬೯೪
ಕಿರಾತಗೂಸುತನ ೬೯೫
ಕಿರಿ ಗೋಣಿಮರ ೬೯೫
ಕಿರೀಟಿಕ ಕೂಡುಗರಣಿಕೆ ೬೯೫
ಕಿರುಕುಳ ಕಾಳಗ ೬೯೫
ಕಿರು ಚಿತ್ರಣ ೬೯೬
ಕಿರುನಾಟಕ ೬೯೮
ಕಿರುನಿದರ್ಶನ ಸಿದ್ಧಾಂತ ೬೯೯
ಕಿರುನೆಲ್ಲಿ ೭೦೩
ಕಿರುಮಿದುಳು ೭೦೪
ಕಿರ್ಗಿಸ್ತಾನ್ ೭೦೪
ಕಿರ್ಚಾಫ್, ಗಸ್ಟಾವ್ ರಾಬರ್ಟ್ ೭೦೫

## ವಿಷಯ ಸೂಚಿ


ಕಿರ್ಲೋಸ್ಕರ ೭೦೬
ಕಿಲಿಗ್ರ್ರೂ ಥಾಮಸ್ ೭೦೬
ಕಿಲಿಮಾಂಜಾರೊ ೭೦೬
ಕಿಲಿಮಾಂಜಾರೋ ಪ್ರದೇಶ ೭೦೭
ಕಿವಿ ೭೦೭
ಕಿವಿ, ಮೂಗು ಮತ್ತು ಗಂಟಲು ರೋಗಗಳು ೭೧೨
ಕಿವಿಯ ರೋಗಗಳು ೭೧೩
ಕಿವಿಯ ಸಾಗಾಲುವೆ ೭೧೭
ಕಿವಿರುಗಳು ೭೧೭
ಕಿವುಡರ ಶಿಕ್ಷಣ ೭೧೮
ಕಿವುಡು ಮತ್ತು ಅರೆಗಿವುಡು ೭೨೨
ಕಿಷ್ಕಿಂಧೆ ೭೨೪
ಕಿಸೆಯ ಮತಕ್ಷೇತ್ರ ೭೨೪
ಕೀಚಕ ೭೨೪
ಕೀಟಗಳು ೭೨೫
ಕೀಟದಂಶನ ೭೩೩
ಕೀಟನಾಶಕಗಳು ೭೩೩
ಕೀಟಭಕ್ಷಕ ಕೀಟಗಳು ೭೩೭
ಕೀಟಭಕ್ಷಕ ಸಸ್ಯಗಳು ೭೩೮
ಕೀಟಶಾಸ್ತ್ರ ೭೩೯
ಕೀಟಾಪೊಡ ೭೪೨
ಕೀಟೀನುಗಳು ೭೪೨
ಕೀಟೊ ಆಮ್ಲಗಳು ೭೪೩
ಕೀಟೋನುಗಳು ೭೪೪
ಕೀಟ್ಸ್, ಜಾನ್ ೭೪೭
ಕೀತ್, ಎ.ಬಿ. ೭೪೯
ಕೀತ್, ಸರ್ ಆರ್ಥರ್ ೭೫೦
ಕೀನೊ ಪೋಡಿಯೇಸೀ ೭೫೦
ಕೀನ್ಯ ೭೫೦
ಕೀನ್ಸಾಸ ೭೫೫
ಕೀಬಲ್, ಜಾನ್ ೭೫೫
ಕೀಬಲ್, ರಾಬರ್ಟ್ ೭೫೬
ಕೀರಫ್ ೭೫೬
ಕೀರೆಸೊಪ್ಪಿನ ಗಿಡ ೭೫೬
ಕೀರ್ಕೆಗಾರ್ಡ್, ಸೋರೆನ್ ಆಬ್ಯೆ ೭೫೬
ಕೀರ್ತನ ಕಲೆ ೭೫೭
ಕೀರ್ತಿನಾಥ ಕುರ್ತಕೋಟಿ ೭೫೯
ಕೀರ್ತಿಮತೀ ೭೫೯
ಕೀರ್ತಿವರ್ಮ ೭೫೯
ಕೀರ್ತಿವರ್ಮ (ಚಂದೆಲ) ೭೬೦
ಕೀರ್ತಿವರ್ಮ೧ ೭೬೦
ಕೀರ್ತಿವರ್ಮ೨ ೭೬೦
ಕೀಲ್ ೭೬೦
ಕೀಲ್ ಕಾಲುವೆ ೭೬೦
ಕೀಲುಕುದುರೆ ೭೬೧
ಕೀಲುಗಟ್ಟು ೭೬೧
ಕೀಲುಗಳ, ತಂತುಗಟ್ಟುಗಳ ರೋಗಗಳು ಮತ್ತು ಊನಗಳು ೭೬೧
ಕೀಲುಗಳು ಮತ್ತು ತಂತುಗಟ್ಟುಗಳು ೭೬೩
ಕೀಲುರಿತ ೭೬೫
ಕೀಲುವಾತಜ್ವರ ೭೬೭
ಕೀಲ್‌ಹಾರ್ನ್, ಫ್ರಾಂಜ್ ೭೬೭
ಕೀವ್ ೭೬೮
ಕೀವ್ ಸಮರ ೭೬೮
ಕೀವು ನಂಜು ೭೬೯
ಕೀವೂ ೭೭೦
ಕೀವೂ ಸರೋವರ ೭೭೦
ಕೀವೊಸಡು ೭೭೦
ಕೀಸಲ್‌ಗರ್ ೭೭೧
ಕೀಳುವಜ್ರ ೭೭೧
ಕುಂಕುಮ ಕೇಸರಿ ೭೭೨
ಕುಂಕುಮದ ಮರ ೭೭೨
ಕುಂಜನ್ ನಂಬಿಯಾರ್ ೭೭೩
ಕುಂಜಪಕ್ಷಿ ೭೭೩
ಕುಂಟು ಮಿಡತೆಗಳು ೭೭೩
ಕುಂಟುಹುಣ್ಣು ೭೭೩
ಕುಂಟೆ ೭೭೪
ಕುಂಡಲಪುರ ೭೭೪
ಕುಂಡಲಿಗಿರಿಯಾಚಾರ್ಯ ೭೭೪
ಕುಂಡಲಿನಿ ೭೭೪
ಕುಂಡುಜ಼್ ೭೭೪
ಕುಂಡೆ ಕುಸುಕ ೭೭೪
ಕುಂತಳ ೭೭೫
ಕುಂತಿ ೭೭೫
ಕುಂತುರ ೭೭೬
ಕುಂಥಲಗಿರಿ ೭೭೬
ಕುಂದಕುಂದಾಚಾರ್ಯ ೭೭೬
ಕುಂದಗೋಳ ೭೭೭
ಕುಂದಣಗಾರ ಕಲ್ಲಪ್ಪ ಗಿರಿಯಪ್ಪ ೭೭೭
ಕುಂದಣಗಾರಿಕೆ ೭೭೭
ಕುಂದಮಾಲಾ ೭೭೮
ಕುಂದಾಣ ೭೭೯
ಕುಂದಾದ್ರಿ ೭೭೯
ಕುಂದಾಪುರ ೭೭೯
ಕುಂದಿಲಿ ೭೭೯
ಕುಂಬಳ ೭೮೦
ಕುಂಬಿಕ್ ೭೮೨
ಕುಂಭ ೭೮೨
ಕುಂಭಕ ೭೮೨
ಕುಂಭಕರ್ಣ ೭೮೩
ಕುಂಭಕಲಾತಂತ್ರ ೭೮೩
ಕುಂಭಕೋಣಂ ೭೮೫
ಕುಂಭಮೇಳ ೭೮೫
ಕುಂಭರಾಶಿ ೭೮೬
ಕುಂಭೀಪಾಕ ೭೮೬
ಕುಂವರಸಿಂಹ, ಬಾಬೂ ೭೮೬
ಕುಂಸಿ ೭೮೬
ಕುಈ ಭಾಷೆ ೭೮೭
ಕುಕ್, ಜೇಮ್ಸ್ ೭೮೭
ಕುಕರ್ಬಿಟೇಸೀ ೭೮೭
ಕುಕಿ ೭೮೮
ಕುಕ್ಕಿಲ ಕೃಷ್ಣಭಟ್ಟ ೭೮೮
ಕುಕುಂಧ ೭೮೮
ಕುಕ್ಕನೂರು ೭೮೯
ಕುಕ್ಕೆ, ಎಸ್.ಎಸ್. ೭೮೯
ಕುಚಿ ೭೯೦
ಕುಚೇಲ ೭೯೦
ಕುಚ್ಚುಮೀನು ೭೯೧
ಕುಜ್ನೆಟ್ಸ್, ಸೈಮನ್ ೭೯೧
ಕುಟಿಲಲಿಪಿ ೭೯೨
ಕುಟುಂಬ ೭೯೨
ಕುಟುಂಬಯೋಜನೆ ೭೯೫
ಕುಟುಕುಕಣವಂತಗಳು ೮೦೦
ಕುಟ್ಟಿ ಕೃಷ್ಣನ್, ಪಿ.ಸಿ. ೮೦೪
ಕುಟ್ಟೆಹುಳು, ಹಿಟ್ಟಿನ ೮೦೫
ಕುಡಚಿ ೮೦೫
ಕುಡಿಮಿಯಾ ಮಲೈ ೮೦೫
ಕುಡಿಮಿಯಾ ಮಲೈ ಸಂಗೀತ ಶಾಸನ ೮೦೫
ಕುಡಿವ ಗೀಳು ೮೦೬
ಕುಡುಗತ್ತಿ ಮೀನು ೮೦೬
ಕುಡುಗೊಕ್ಕು ೮೦೬
ಕುಣಿಂದರು ೮೦೬
ಕುಣಿಕೆ ಹುಳುಗಳು ೮೦೭
ಕುಣಿಗಲ್ ೮೦೭
ಕುತರ್ಕ ೮೦೭
ಕುತುಬ್–ಉದ್‌ದೀನ್–ಐಬಕ್ ೮೦೭

## ವಿಷಯ ಸೂಚಿ


ಕುತುಬ್ ಮಿನಾರ್ ೮೦೭
ಕುತುಬ್‌ಷಾಹಿ ಮನೆತನ ೮೦೮
ಕುತೂಹಲ ೮೦೮
ಕುದಿಪ್ಪು ೮೦೯
ಕುದುರೆ ೮೧೦
ಕುದುರೆ ತಳಿ ಅಭಿವೃದ್ಧಿ ೮೧೦
ಕುದುರೆ ಪಂದ್ಯ ೮೧೨
ಕುದುರೆಬಾಲದ ಗಿಡ ೮೧೩
ಕುದುರೆಮುಖ ೮೧೩
ಕುದುರೆ ರೋಗಗಳು ೮೧೩
ಕುದುರೆ ಸವಾರಿ ೮೧೭
ಕುದ್ಮುಲ್‌ರಂಗರಾವ್ ೮೧೭
ಕುನ್ನತ್ತೂರು ೮೧೮
ಕುನ್‌ಲುನ್ ೮೧೮
ಕುನ್‌ಲುನ್ ಪರ್ವತಗಳು ೮೧೯
ಕುಪ್ಪಳುಕೀಟ ೮೧೯
ಕುಪ್ಪಿಗಿಡ ೮೧೯
ಕುಪ್ಪುಸ್ವಾಮಿ ಶಾಸ್ತ್ರಿ, ಎಸ್. ೮೨೦
ಕುಫಿಲಿಪಿ ೮೨೧
ಕುಫು ೮೨೧
ಕುಬಟೂರು ೮೨೧
ಕುಬೇರ ೮೨೨
ಕುಬ್ಜೆ ೮೨೨
ಕುಬ್ಲೈಖಾನ್ ೮೨೨
ಕುಮಟ ೮೨೩
ಕುಮರ ಗುರುಪರನ್ ೮೨೩
ಕುಮಾಂವ್ ೮೨೪
ಕುಮಾರ ಕಂಪಣ್ಣ ೮೨೬
ಕುಮಾರ ಗಂಧರ್ವ ೮೨೬
ಕುಮಾರಗುಪ್ತ ೮೨೭
ಕುಮಾರ ಜೀವ ೮೨೭
ಕುಮಾರದಾಸ ೮೨೭
ಕುಮಾರದೇವ ೮೨೮
ಕುಮಾರಧಾರ ೮೨೯
ಕುಮಾರನ್ ಆಶಾನ್ ೮೨೯
ಕುಮಾರ ಪದ್ಮರಸ ೮೨೯
ಕುಮಾರಪಾಲ ೮೨೯
ಕುಮಾರರಾಮ ೮೩೦
ಕುಮಾರವಾಲ್ಮೀಕಿ ೮೩೨
ಕುಮಾರವಿಷ್ಣು ೮೩೨
ಕುಮಾರವ್ಯಾಸ ೮೩೨
ಕುಮಾರಾಮಾತ್ಯ ೮೩೫
ಕುಮಾರಿಲಭಟ್ಟ ೮೩೬
ಕುಮುದೇಂದು ೮೩೬
ಕುಮ್ರಹಾರ ೮೩೬
ಕುಮುದ್ವತಿ೧ ೮೩೭
ಕುಮುದ್ವತಿ೨ ೮೩೭
ಕುಮ್ಮಟಗಿ ೮೩೭
ಕುಮ್ಮಟದುರ್ಗ ೮೩೭
ಕುರಂದ ೮೩೭
ಕುರಾನು ೮೩೮
ಕುರಿ ೮೪೦
ಕುರಿ ರೋಗಗಳು ೮೪೫
ಕುರಿಯ ವಿಠಲಶಾಸ್ತ್ರಿ ೮೪೭
ಕುರು೧ ೮೪೭
ಕುರು೨ ೮೪೭
ಕುರುಕ್ಷೇತ್ರ೧ ೮೪೮
ಕುರುಕ್ಷೇತ್ರ೨ ೮೪೮
ಕುರುಖ್ ಭಾಷೆ ೮೪೮
ಕುರುಡರ ಶಿಕ್ಷಣ ೮೪೯
ಕುರುಡು ೮೫೦
ಕುರುಡು ಮಲೆ ೮೫೧
ಕುರುಡು ಮೀನು ೮೫೨
ಕುರುಡು ವಿದ್ಯುತ್ ಮೀನು ೮೫೨
ಕುರುಡು ಹುಳು ೮೫೨
ಕುರುಮಾಮ ೮೫೨
ಕುರುವತ್ತಿ ೮೫೩
ಕುರುವೆಗಿಡ ೮೫೪
ಕುರ್ಚಿಮೀನು ೮೫೪
ಕುರ್ತಿಗೆ ೮೫೪
ಕುರ್ದ್ ಜನಾಂಗ ೮೫೫
ಕುರ್ದಿಸ್ತಾನ್ ೮೫೬
ಕುರ್ನಾನ್, ಆಂಡ್ರೇ ಫ್ರೆಡರಿಕ್ ೮೫೭
ಕುಲಕರ್ಣಿ, ಎನ್.ಕೆ. ೮೫೭
ಕುಲಕರ್ಣಿ, ದ.ಬಾ. ೮೫೮
ಕುಲಕರ್ಣಿ ಶಂಭುಲಿಂಗಪ್ಪ ೮೫೮
ಕುಲಗೋಡ ತಮ್ಮಣ್ಣ ೮೫೮
ಕುಲದೇವತಾ ಪದ್ಧತಿ ೮೫೯
ಕುಲನಿಷ್ಠ ಜನಸಮುದಾಯಗಳು ೮೬೦
ಕುಲನಿಷ್ಠ ವರ್ಗಗಳು ೮೬೧
ಕುಲಪತಿ ೮೬೨
ಕುಲಪರ್ವತಗಳು ೮೬೨
ಕುಲಶೇಖರ ಪಾಂಡ್ಯ ೮೬೨
ಕುಲು ೮೬೨
ಕುಲುಕು ಮೆಲುಕಿನ ಬಾತು ೮೬೨
ಕುಲುಮೆ ೮೬೩
ಕುಲೋತ್ತುಂಗ ಚೋಳ ೮೬೪
ಕುಲ್ಕ್–ಲಿಂಡನ್ ಥಾಲ್ ೮೬೪
ಕುವಲಯಾಪೀಡ ೮೬೪
ಕುವಲಾಶ್ವ ೮೬೪
ಕುವಿಭಾಷೆ ೮೬೫
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ೮೬೫
ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ೮೬೮
ಕುವೆಂಪು ವಿಶ್ವವಿದ್ಯಾನಿಲಯ ೮೬೯
ಕುವೈತ್ ೮೭೦
ಕುಶಧ್ವಜ ೮೭೧
ಕುಶಲ ಕೈಗಾರಿಕೆ ೮೭೧
ಕುಶಲ ಪತ್ರಗಳು ೮೭೫
ಕುಶಾಲನಗರ ೮೭೫
ಕುಶಿಕ ೮೭೫
ಕುಶೀನಗರ ೮೭೬
ಕುಷಾಣರು ೮೭೬
ಕುಷ್ಟಗಿ ೮೮೧
ಕುಷ್ಠ ೮೮೧
ಕುಸೀದ ಪದ್ಧತಿ ೮೮೩
ಕುಸುಬೆ ೮೮೪
ಕುಸುಮ ರೋಗ ೮೮೫
ಕುಸ್ತಿ ೮೮೬
ಕುಳಿಗಳು ೮೯೧
ಕುಳಿಬೀಳುವುದು (ಕುಹರೀಕರಣ) ೮೯೧
ಕುಳ್ಗಿಮೀನು ೮೯೨
ಕೂಂಟ್, ಆಗಸ್ಟ್ ಅಡಾಲ್ಫ್ ಯಡೂಅರ್ಡ್ ಎಬರ್‌ಹಾಡ್ ೮೯೨
ಕೂಕೂ ಹಕ್ಕಿ ೮೯೩
ಕೂಗರ್ ೮೯೩
ಕೂಗುಸಿರು ೮೯೪
ಕೂಚ್‌ಬಿಹಾರ್ ಟ್ರೋಫಿ ೮೯೪
ಕೂಚಿಪುಡಿ ನೃತ್ಯ ೮೯೪
ಕೂಟಯೋಧರು ೮೯೬
ಕೂಡಕ್ಷರ ೮೯೬
ಕೂಡಲ ಸಂಗಮ ೮೯೬

ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಶ್ವಕೋಶ

## ಸಂಪುಟ ಐದು

**ಕೂಡಲಿ :** ಕರ್ನಾಟಕ ರಾಜ್ಯದ ಶಿವಮೊಗ್ಗ ತಾಲ್ಲೂಕಿನಲ್ಲಿರುವ ಪ್ರಮುಖ ಯಾತ್ರಾಸ್ಥಳ ಹಾಗೂ ತುಂಗಾ ಮತ್ತು ಭದ್ರಾ ನದಿಗಳ ಸಂಗಮಸ್ಥಳ. ಸು. 500 ವರ್ಷಗಳ ಹಿಂದೆ ಮರಾಠ ಸ್ಮಾರ್ತರ ಸಲುವಾಗಿ ಇಲ್ಲಿ ಒಂದು ಶಂಕರಮಠವನ್ನು ಸ್ಥಾಪಿಸಲಾಯಿತು. ಅದು ಕೂಡಲಿ ಶೃಂಗೇರಿ ಮಠವೆಂಬ ಹೆಸರಿನಿಂದ ಮುಂದುವರಿಯುತ್ತಿದೆ. ಇಲ್ಲೊಂದು ಮಾಧ್ವಮಠವೂ ಉಂಟು. 1791ರಲ್ಲಿ ಮರಾಠರು ಈ ಊರನ್ನು ಲೂಟಿ ಮಾಡಿ ಇದಕ್ಕೆ ಬೆಂಕಿ ಇಟ್ಟರು. ಕೂಡಲಿಯ ಗುರುಗಳ ಅನುಯಾಯಿಗಳಾಗಿದ್ದ ಅವರು ಮಠದ ಬಹಿಷ್ಕಾರಕ್ಕೆ ಒಳಗಾಗಬೇಕಾಗಿಬಂದಾಗ ಯುಕ್ತ ಕಾಣಿಕೆಗಳನ್ನೊಪ್ಪಿಸಿದರು.

ರಾಮೇಶ್ವರ ದೇವಾಲಯ

ಇಲ್ಲಿ ಬ್ರಹ್ಮೇಶ್ವರ, ರಾಮೇಶ್ವರ ಮತ್ತು ನರಸಿಂಹ ದೇವಾಲಯಗಳಿವೆ. ಕದಂಬ, ಹೊಯ್ಸಳ, ವಿಜಯನಗರ, ಕೆಳದಿನಾಯಕ ಮುಂತಾದ ರಾಜಮನೆತನಗಳಿಗೆ ಸೇರಿದ ಶಾಸನಗಳೂ ದೊರಕಿವೆ. ಹೊಯ್ಸಳರಿಗೂ ಸೇವುಣರಿಗೂ ಇಲ್ಲಿ ಅನೇಕ ಯುದ್ಧಗಳು ನಡೆದುವೆಂಬ ಸಂಗತಿ ಶಾಸನಗಳಿಂದ ಗೊತ್ತಾಗುತ್ತದೆ. ಆ ಕಾಲದ ಕೋಟೆಯ ಅವಶೇಷಗಳು ಇಂದಿಗೂ ಕಾಣಬರುತ್ತವೆ. (ಎ.ವಿ.ಎನ್.)

**ಕೂಡಾವಳಿ :** ಗಂಡ ಬಿಟ್ಟ ಅಥವಾ ಗಂಡಸತ್ತ ಹೆಣ್ಣು ಒಪ್ಪಿದ ಬೇರೊಬ್ಬನೊಡನೆ ಸಂಸಾರ ನಡೆಸಲು ಅನುವು ಮಾಡಿಕೊಟ್ಟಿರುವ ಒಂದು ಪದ್ಧತಿ. ಕೂಟಿಕೆ, ಕೂಡಿಕೆ, ಸೀರುಡಿಕೆ, ಉಡಿಕೆ ಎಂಬ ಪದಗಳು ಇದೇ ಅರ್ಥದಲ್ಲಿ ಬಳಕೆಯಲ್ಲಿವೆ.

ಈ ಪದ್ಧತಿ ಸಮಾಜದ ಕೆಲವು ವರ್ಗಗಳಲ್ಲಿ ಮಾತ್ರ ಕಂಡುಬರುತ್ತದೆ. ಹೆಂಡತಿ ಸತ್ತಮೇಲೆ ಗಂಡಸು ಬೇರೊಬ್ಬಳನ್ನು ಮದುವೆಯಾಗಿ ಸಂಸಾರ ನಡೆಸಲು ಧರ್ಮಶಾಸ್ತ್ರದಲ್ಲಿ ಅನುವಿದೆ. ಹಾಗೆಯೆ ಹೆಂಗಸಿಗೂ ಒಂದು ರಹ ಇರಬೇಡವೇ ಎಂಬ ಪ್ರಶ್ನೆ ಹಿಂದಿನಿಂದಲೂ ಕಂಡುಬರುತ್ತಿದೆ. ಗಂಡ ಬಿಟ್ಟ ಹೆಂಗಸಿನ ಭವಿಷ್ಯವೇನು? ವಿಧವೆಯ ಪಾಡೇನು? ಒಂದು ಕಾಲದಲ್ಲಿ ಗಂಡನೊಡನೆ ಹೆಂಡತಿಯೂ ಚಿತೆಯನ್ನೇರುತ್ತಿದ್ದುದುಂಟು. ಅನೇಕ ಸ್ತ್ರೀಯರು ಸ್ವೇಚ್ಛೆಯಿಂದ ಮಾಂಗಲ್ಯಸೂಚಕವಾದ ಕುಂಕುಮ, ತಲೆಗೂದಲು, ಅಲಂಕರಣಾದಿಗಳನ್ನು ತ್ಯಜಿಸಿ ವೈರಾಗ್ಯ ಜೀವನವನ್ನು ಅಂಗೀಕರಿಸುತ್ತಿದ್ದರು. ಆದರೆ ಅಂಥ ಸಂನ್ಯಾಸಕ್ಕೆ ಮನಸ್ಸಿಲ್ಲದಾಗಲೂ ಗಂಡ ಸತ್ತೊಡನೆಯೇ ಆಕೆಯ ರೂಪನ್ನು ವಿಕೃತಗೊಳಿಸಿ ಸಂಸಾರಕ್ಕೆ ಆಕೆ ಹೊರತಾಗುವಂತೆ ಮಾಡುವ ಆಚಾರ ಇಂದಿಗೂ ಬಳಕೆಯಲ್ಲಿದೆ. ಒಂದು ವೇಳೆ ಆಕೆ ತಲೆ ಬೋಳಿಸಿಕೊಳ್ಳದೆ ಸಕೇಶಿಯಾಗಿ ಉಳಿದರೂ ಗೌರವಸ್ಥರ ನಡುವೆ, ಶುಭಾಶುಭ ಕಾರ್ಯಗಳಲ್ಲಿ ಆಕೆಗೆ ಸ್ಥಾನವಿರುವುದಿಲ್ಲ. ಕೂಡಾವಳಿ ಪದ್ಧತಿಯಲ್ಲಿ ಹೆಂಗಸಿನ ಈ ಮುಖ್ಯ ಜೀವನ ಸಮಸ್ಯೆಗೆ ಒಂದು ರೀತಿಯ ಉತ್ತರವನ್ನು ಕಾಣಬಹುದಾಗಿದೆ.

ಪ್ರಾಯವೂ ಅಭಿಲಾಷೆಯೂ ಇರುವ ಹೆಣ್ಣು ಮತ್ತೆ ಸಂಸಾರಿಯಾಗುವ ಸೌಲಭ್ಯವನ್ನು ಕೂಡಾವಳಿ ಒದಗಿಸಿದೆ. ಪ್ರಾಯ ಮಿತಿಮೀರಿದ್ದಾಗ ಅಥವಾ ಪ್ರಾಯದ ಮಕ್ಕಳಿದ್ದಾಗ ಕೂಡಾವಳಿ ಅವಕಾಶ ಉಂಟೆ ಎಂಬುದು ವೈಯಕ್ತಿಕ ಸಮಸ್ಯೆ. ಗಂಡು ಹೆಣ್ಣು ಒಪ್ಪಿದಲ್ಲಿ ಆಗಬಹುದು. ಕೆಲವು ಆದಿವಾಸಿ ಗುಂಪಿನವರಲ್ಲಿ ಪ್ರಾಯದ ಮಕ್ಕಳಿದ್ದಾಗಲೂ ಕೂಡಾವಳಿ ನಡೆಯುತ್ತದೆ.

ತಂದೆತಾಯಿಗಳು ಹಾಗೂ ಕುಲಸ್ಥರು ಒಪ್ಪಿಯೇ ವಿಧಿವತ್ತಾಗಿ ಕೂಡಾವಳಿ ಮಾಡಿಕೊಡುತ್ತಾರೆ. ಅಂದರೆ ಹೆಣ್ಣು ಗಂಡು ಕೂಡಿಸಿ ಹಸೆಹಚ್ಚುವುದು, ಮುತ್ತೈದೆಯರಿಂದ ಸೇಸೆ ಇಡಿಸಿ ಹರಸುವುದು, ಕುಲಸ್ಥರಿಗೆ ಊಟ ಹಾಕಿಸುವುದು – ಮುಂತಾದುವೆಲ್ಲ ಯಥಾವತ್ತಾಗಿಯೇ ಜರುಗುತ್ತದೆ. ಇಷ್ಟೆಲ್ಲ ಖರ್ಚುವೆಚ್ಚವನ್ನು ನಿಭಾಯಿಸಲಾಗದವರು ಕೇವಲ ಒಂದು ಸೀರೆ ಉಡಿಸಿ ಹಿರಿಯರ ಅನುಮತಿ, ಆಶೀರ್ವಾದಗಳೊಂದಿಗೆ ಹೆಣ್ಣನ್ನು ಕರೆದೊಯ್ಯುತ್ತಾರೆ.

ಹೀಗೆ ಎರಡನೆಯ ಸಂಬಂಧ ಬೆಳೆಸುವ ಮನೆತನದವರನ್ನು ಕೂಟಿಕೆ ಸಾಲಿನವರು ಎಂದು ಹೀಗಳೆದು ಕೊಡುಕೊಳೆ ಮಾಡದವರೂ ಇದ್ದಾರೆ. ಕೂಡಾವಳಿ ಪದ್ಧತಿಯಿಂದ ಸಾಮಾಜಿಕವಾಗಿ ಅನೇಕ ಅನುಕೂಲಗಳು ಏರ್ಪಟ್ಟಿವೆ ಎಂಬ ವಿಷಯ ಮನದಟ್ಟಾಗುವವರೆಗೂ ಇಂಥ ಆಕ್ಷೇಪಗಳು ಇದ್ದೇ ಇರುತ್ತವೆ. ಜನ ನಾಗರಿಕರಾದಂತೆಲ್ಲ ಮದುವೆಯ ಬಗೆಗಿನ ಅಭಿಪ್ರಾಯಗಳು ಮಾರ್ಪಡುತ್ತವೆ. ವಿವಾಹ ವಿಚ್ಛೇದ, ಮರುಮದುವೆಗಳು ಸಾಮಾನ್ಯವಾಗುತ್ತಿವೆ. ಹೀಗಾಗಿ ಕೂಡಾವಳಿಯ ಬಗೆಗಿರುವ ಸಂಕೋಚಗಳೂ ಕ್ರಮೇಣ ತಾವಾಗಿ ಮಾಯವಾಗುತ್ತವೆಯೆಂದು ತೋರುತ್ತದೆ. (ಎಸ್‌ಯು.)

**ಕೂಡಿ ಬಂದ ಲಾಭಾಂಶ :** ಕೂಡಿ ಬಂದ ಲಾಭಾಂಶ (ಅಕ್ಯೂಮಿಲೇಟೆಡ್ ಡಿವಿಡೆಂಡ್) ಎಂದರೆ ಒಂದು ಕಂಪನಿ, ಸಹಕಾರ ಬ್ಯಾಂಕ್ ಅಥವಾ ಸೊಸೈಟಿಯು ತನ್ನ ಪ್ರಸಕ್ತ ವರ್ಷದ ನಿವ್ವಳ ಲಾಭದಲ್ಲಿ ಶಾಸನಬದ್ಧ ನಿಧಿಗಳಿಗೆ ವರ್ಗಾಯಿಸಿದ ಅನಂತರದ ನಿವ್ವಳ ಲಾಭವನ್ನು ಇರುವ ಎಲ್ಲ ಅರ್ಹ ಸದಸ್ಯರಿಗೆ ಲಾಭಾಂಶವಾಗಿ ಹಂಚುವುದು ಕಂಪನಿ ಕಾಯಿದೆ, ಸಹಕಾರ ಕಾಯಿದೆಗಳ ಪ್ರಕಾರ ಶಾಸನಬದ್ಧ ನಿರ್ಬಂಧವಾಗಿದೆ. ಕಂಪನಿಗಳು ಸದರಿ ಸದಸ್ಯರಿಗೆ ಪೂರ್ವಾನುಮತಿಯಂತೆ ಅವರವರ ಪಾಲಿನ ಲಾಭಾಂಶವನ್ನು ಚೆಕ್ಕುಗಳ ಮೂಲಕ ಅವರವರ ವಿಳಾಸಕ್ಕೆ ಕಳಿಸಿಬಿಡುತ್ತವೆ. ಅವರುಗಳು ಅದನ್ನು ತಮ್ಮ ತಮ್ಮ ಬ್ಯಾಂಕಿನ ಖಾತೆಗಳಲ್ಲಿ ಜಮಾಮಾಡಿಕೊಂಡು ಹಣ ಪಡೆಯಬಹುದು. ಈ ಲಾಭಾಂಶ ಪಾವತಿ ಚೆಕ್ಕುಗಳು(ಡಿವಿಡೆಂಡ್ ವಾರೆಂಟ್ಸ್) ಮೂರು ತಿಂಗಳುಗಳ ಅವಧಿಗೆ ಮಾತ್ರ ಜೀವಂತವಾಗಿದ್ದು ಅನಂತರ ಅವು ಹಳತು(ಸ್ಟೇಲ್) ಎನ್ನಿಸಿಕೊಳ್ಳುತ್ತವೆ. ಹಾಗೆ ಹಳತಾದ ಲಾಭಾಂಶ ಚೆಕ್ಕುಗಳನ್ನು ಕಂಪನಿಗೆ ಕಳುಹಿಸಿ ನವೀಕರಿಸಿಕೊಳ್ಳಬಹುದು (ರಿವ್ಯಾಲಿಡೇಷನ್). ಸಾಮಾನ್ಯವಾಗಿ ಈ ಲಾಭಾಂಶದ ಚೆಕ್ಕುಗಳು ಎಲ್ಲೆಡೆಯೂ ಪೂರ್ಣಮೊತ್ತವನ್ನು ಪಾವತಿಸುವ ಷರತ್ತು (ಪೇಯಬಲ್ ಅಟ್ ಪಾರ್) ಇರುವುದರಿಂದ ದೇಶದ ಎಲ್ಲೆಡೆಯೂ ಇದನ್ನು ಬ್ಯಾಂಕಿನ ಖಾತೆಗೆ ಜಮಾಮಾಡಿಕೊಳ್ಳಬಹುದಾಗಿದೆ. ಹಲವಾರು ಕಾರಣಗಳಿಂದ ಈ ಲಾಭಾಂಶ ಚೆಕ್ಕುಗಳು ಪಾವತಿಯಾಗದೆಯೋ ವಿಳಾಸ ಕಾರಣದಿಂದ ಹಿಂತಿರುಗಿ ಬಂದಿರುವುದೋ ಆಗಿದ್ದಲ್ಲಿ ಅವುಗಳನ್ನು ಕೇಳಿ ಪಡೆಯದ ಲಾಭಾಂಶ (ಅನ್‌ಕ್ಲೇಮ್ಡ್ ಡಿವಿಡೆಂಡ್)ವೆಂಬ ಪ್ರತ್ಯೇಕ ಖಾತೆಯಲ್ಲಿಟ್ಟು ಆಸ್ತಿ–ಹೊಣೆ ತಃಖ್ತೆಯಲ್ಲಿ ಜವಾಬ್ದಾರಿಗಳು (ಲಯಬಿಲಿಟೀಸ್ ಸೈಡ್ ಆಫ್ ಬ್ಯಾಲೆನ್ಸ್ ಷೀಟ್) ಎಂದು ತೋರಿಸಲಾಗುವುದು.

ಆದರೆ ಸಹಕಾರ ಬ್ಯಾಂಕುಗಳು ಹಾಗು ಸೊಸೈಟಿಗಳಿಗೆ ಈ ರೀತಿಯ ಪಾವತಿಗೆ ಪೂರ್ವಾನುಮತಿ ಇರುವುದಿಲ್ಲ. ಸದಸ್ಯರುಗಳು ತಮ್ಮ ಲಾಭಾಂಶವನ್ನು ತಮ್ಮ ಬ್ಯಾಂಕಿನಿಂದಲೋ, ಸೊಸೈಟಿ ಕಛೇರಿಯಿಂದಲೋ ಪಡೆದುಕೊಳ್ಳಬೇಕಾಗಿರುತ್ತದೆ. ಹೀಗಾಗಿ ಸಾಮಾನ್ಯವಾಗಿ ಎಲ್ಲ ಸದಸ್ಯರೂ ತಮ್ಮ ಹೆಸರಿನಲ್ಲಿ ಒಂದು ಉಳಿತಾಯ ಖಾತೆಯನ್ನು ಬ್ಯಾಂಕಿನಲ್ಲಿ / ಸೊಸೈಟಿಯಲ್ಲಿ ತೆರೆದಿರುತ್ತಾರೆ. ಅವರವರ ಪಾಲಿನ ಲಾಭಾಂಶವನ್ನು ಖಾತೆಗೆ ವರ್ಗಾಯಿಸಲು ಕೇಳುತ್ತಾರೆ; ಕೆಲವರು ಅದನ್ನು ನಗದಾಗಿ ಪಡೆಯುತ್ತಾರೆ. ಆದರೆ ಬ್ಯಾಂಕಿಗೆ ಸಾಲ–ಬಡ್ಡಿ ಬಾಕಿ ಇಟ್ಟಿರುವ ಸದಸ್ಯರ ಪಾಲಿನ ಲಾಭಾಂಶವನ್ನು ಆ ಸಾಲದ ಬಾಕಿಗೆ ನೇರವಾಗಿ ಜಮಾ ಹಾಕಿಕೊಳ್ಳುವ ಅಧಿಕಾರ ಬ್ಯಾಂಕಿಗೆ/ಸೊಸೈಟಿಗೆ ಇರುತ್ತದೆ. ಹೀಗಾಗಿ ಅಂತಹವರ ಲಾಭಾಂಶವು ನೇರವಾಗಿ ಸಾಲಕ್ಕೆ ಜಮವಾಗಿಬಿಡುತ್ತದೆ. (ಕೆ.ಜಿ.ಆರ್.)

**ಕೂಡಿಸುವ ಅಂಗಾಂಶ ರೋಗಗಳು :** ಇವು ನಾನಾ ವಿಧವಾಗಿ ಮೈದೋರುತ್ತವೆ. ದೇಹದ ಯಾವ ಭಾಗದಲ್ಲಿಯಾದರೂ ಕಾಣಿಸಿಕೊಳ್ಳಬಹುದು. ಎಲ್ಲೆಂದರಲ್ಲಿ ಉರಿಯೂತಗಳುಂಟಾಗಬಹುದು. ಯಾವ ತರಹೆಯ ರೋಗಲಕ್ಷಣಗಳಾದರೂ ಕಾಣಿಸಿಕೊಳ್ಳಬಹುದು. ಈ ರೋಗಗಳಲ್ಲಿ ಮುಖ್ಯವಾಗಿ ಕೂಡಿಸುವ ಅಂಗಾಂಶಗಳು ಆಪತ್ತಿಗೆ ತುತ್ತಾಗುತ್ತವೆ. ಉದಾಹರಣೆಗೆ ರಕ್ತನಾಳಗಳು, ಹೃದಯ, ಕೀಲುಗಳು, ಮಾಂಸಖಂಡಗಳು, ಚರ್ಮ ಮತ್ತು ದೇಹದ ಮುಖ್ಯವಾದ ಅಂಗಾಂಗಳಿಗೆ ಸಹಾಯಕವಾಗಿ ನಿಲ್ಲುವ ಬಲೆಯಾಕಾರದ ಅಂಗಾಂಶಗಳು (ರೆಟಿಕ್ಯುಲರ್ ಟಿಷ್ಯೂಸ್) ತೊಂದರೆ ಗೊಳಗಾಗುತ್ತವೆ. ಈ ಕಾಯಿಲೆಗಳಲ್ಲಿ, ಮೂಲಭೂತವಾದ ಬದಲಾವಣೆ, ಕೂಡಿಸುವ ಅಂಗಾಂಶಗಳಲ್ಲಿ ಕಾಣಬರುತ್ತದೆ. ಇವುಗಳಲ್ಲಿ ನಾರುಗಡ್ಡೆಯ ಸವೆತ ತೋರುವುದು. ಕೂಡಿಸುವ ಅಂಗಾಂಶಗಳಲ್ಲಿ ಹಲವು ಜೀವರಸಾಯನ ಕಾರ್ಯಗಳಲ್ಲಿ ವೈಪರೀತ್ಯಗಳುಂಟಾಗಿ ಸ್ವಭಾವವ್ಯತಿರಿಕ್ತವಾದ ಕ್ರಿಯೆಗಳುಂಟಾಗುತ್ತವೆ. ಈ ಕಾಯಿಲೆಗಳಿಗೆ ನಿರ್ದಿಷ್ಟವಾದ ಯಾವ ಕಾರಣವೂ ತಿಳಿದು ಬಂದಿಲ್ಲ; ಒಗ್ಗದಿಕೆ ಒಂದು ಕಾರಣವಾಗಿರಬಹುದೆಂದು ಕೆಲವು ವಿಜ್ಞಾನಿಗಳ ಊಹೆ.

ರೋಗಲಕ್ಷಣಗಳು ಕಾಯಿಲೆಯಿಂದ ಕಾಯಿಲೆಗೆ ವ್ಯತ್ಯಾಸಗೊಳ್ಳುತ್ತ ಹೋಗುತ್ತವೆ. ಕೀಲುಗಳು, ಸ್ನಾಯುರಜ್ಜುವಿನ ಕೋಶ(ಟೆಂಡನ್ ಷೀತ್) ಹೃದಯ ಮತ್ತು ರಕ್ತನಾಳಗಳು ಸಾಮಾನ್ಯವಾಗಿ ಎಲ್ಲ ಕಾಯಿಲೆಗಳಲ್ಲಿಯೂ ತೊಂದರೆಗೊಳಗಾಗುತ್ತವೆ.

ಈ ಮುಂದಿನ ಕಾಯಿಲೆಗಳು ಕೂಡಿಸುವ ಅಂಗಾಂಶರೋಗದ ಗುಂಪಿಗೆ ಸೇರಿವೆ; ಸ್ಕ್ಲೀರೋಡರ್ಮ, ಡರ್ಮಟೊ ಮಯೊಸೈಟಿಸ್, ಟೆಂಪೊರಲ್ ಆರ್ಟರೈಟಿಸ್, ರ್‍ಯೂಮೆಟಾಯಿಡ್ ಆರ್ಥ್ರೈಟಿಸ್, ರ್‍ಯೂಮ್ಯಾಟಿಕ್ ಫೀವರ್, ಸೀರಂ ಸಿಕ್‌ನೆಸ್. (ಎ.ಎನ್.ಎ.)

**ಕೂಡಿಸುವ, ಆನಿಸುವ ಅಂಗಾಂಶಗಳು :** ಇದಕ್ಕೆ ಸಂಯೋಜಕ ಅಂಗಾಂಶಗಳು ಎಂದೂ ಕರೆಯುವುದುಂಟು.

ದೇಹದ ಅಂಗ ಮತ್ತು ಅಂಗಾಂಶಗಳನ್ನು ಒಂದರೊಡನೊಂದು ಕೂಡಿಸುವ ರಚನಾತ್ಮಕ ಅಂಗಾಂಶ ಸಮೂಹಕ್ಕೆ ಸಂಯೋಜಕ ಅಂಗಾಂಶಗಳೆಂದು ಹೆಸರು (ಕನೆಕ್ಟಿವ್ ಅಂಡ್ ಸಪೋರ್ಟಿಂಗ್ ಟಿಷ್ಯೂಸ್). ಈ ಅಂಗಾಂಶವು ಭ್ರೂಣದಲ್ಲಿಯ ಮೂಲ ನನೆಚೆಂಡು ಕುಡಿ ನಡುಪದರದಿಂದ ರೂಪುಗೊಳ್ಳುತ್ತದೆ. ಇದು ದೇಹದೆಲ್ಲೆಡೆ ಅತ್ಯಂತ ವ್ಯಾಪಕವಾಗಿ ಕಂಡು ಬರುವ ಅಂಗಾಂಶ. ಇವುಗಳ ಮೂಲ ಒಂದೇ ಆಗಿದ್ದರು ಸ್ಥಾನಕ್ಕೆ ತಕ್ಕಂತೆ ರಚನೆ, ರೂಪ ಮತ್ತು ಕಾರ್ಯದಲ್ಲಿ ಅನೇಕ ಮಾರ್ಪಾಟುಗಳನ್ನು ತೋರುತ್ತವೆ. ಈ ಅಂಗಾಂಶಗಳಿಗೆ ಹೆಚ್ಚಿನ ರಕ್ತ ಪೂರೈಕೆ ಇರುವುದರಿಂದ ಅವು ಉಳಿದ ಅಂಗಾಂಶಗಳಿಗೆ ಜೀವ ಪೋಷಕ ದ್ರವ್ಯಗಳನ್ನು ಒದಗಿಸುವ ಹಾಗೂ ಚಯಾಪಚಯ ಕಾರ್ಯದಲ್ಲಿ ಬಿಡುಗಡೆಯಾಗುವ ವಸ್ತುಗಳ ವಿನಿಮಯಕ್ಕೂ ಸಹಾಯಕ.

ರಚನೆ, ರೂಪ ಮತ್ತು ಕಾರ್ಯ ವೈವಿಧ್ಯತೆ ತೋರಿದರೂ ಸಂಯೋಜಕ ಅಂಗಾಂಶಗಳು ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿವೆ. ಅವುಗಳೆಂದರೆ,

1. ವೈವಿಧ್ಯಮಯ ರಾಸಾಯನಿಕ ಸಂಯೋಜನೆಯಿಂದಾದ ತಳವಸ್ತು ಅಥವಾ ಮಾತೃಕೆ. ಮಾತೃಕೆಯ ಆಧಾರದ ಮೇಲೆ ಈ ಅಂಗಾಂಶಗಳನ್ನು ವರ್ಗೀಕರಿಸಬಹುದು,

2. ಮಾತೃಕೆಯಲ್ಲಿ ವಿಶಿಷ್ಟ ತಂತು ರೇಖೆಗಳು (Fibrobtast) ಇವೆ. ಇವು ಮಾತೃಕೆಗೆ ಯಾಂತ್ರಿಕ ಬಲ ಒದಗಿಸುವ ತಂತುಗಳನ್ನು ಉತ್ಪಾದಿಸುತ್ತದೆ, ತಂತುಗಳಲ್ಲಿ ಮೂರು ವಿಧಗಳನ್ನು ಗುರುತಿಸಬಹುದು. ಅವೇ, ಬಿಳಿ ತಂತುಗಳು (ಕೊಲಾಜಿನ್), ಹಳದಿ ತಂತುಗಳು (ಇಲಾಸ್ಟಿನ್) ಮತ್ತು ಜಾಲರೂಪಿ ತಂತುಗಳು (Reticular).

**ಕಾರ್ಯಗಳು :–**

1. ಅಂಗ ಮತ್ತು ಅಂಗಾಂಶಗಳ ಜೋಡಣೆಗೆ ಅತ್ಯವಶ್ಯಕ. ಹಾಗೂ ಅವುಗಳಿಗೆ ರಕ್ಷಣೆಯನ್ನೂ ನೀಡುವುದು.
2. ದೇಹದ ಯಾವುದೇ ಖಾಲಿ ಸ್ಥಳವನ್ನು ತುಂಬಿಸಿ ಅಂಗಗಳಿಗೆ ಬೆಂಬಲ ಮತ್ತು ರಕ್ಷಣೆ ನೀಡುತ್ತದೆ.
3. ರಕ್ತ ಪೂರೈಕೆಯಿಲ್ಲದ ಅನುಲೇಪಕ ಅಂಗಾಂಶಗಳ ಕೆಳಗೆ ಕಂಡು ಬರುವ ಸಂಯೋಜಕಾ ಅಂಗಾಂಶವು ಅನುಲೇಪಕ ಕೋಶಗಳಿಗೆ ಅಗತ್ಯ ವಸ್ತುಗಳ ಪೂರೈಕೆ ಮಾಡುತ್ತದೆ.
4. ಶರೀರಕ್ಕೆ ರೂಪ ಮತ್ತು ಬೆಂಬಲ ನೀಡುವ ಅಸ್ತಿಪಂಜರ ಸಂಯೋಜಕಾ ಅಂಗಾಂಶದ ರಚನೆ.
5, ರಕ್ತ ರೂಪದಲ್ಲಿ ಅಗತ್ಯ ವಸ್ತುಗಳ ಸರಬರಾಜು ಮಾಡುವುದು.
6. ಸಂಯೋಜಕಾ ಅಂಗಾಂಶದಲ್ಲಿನ ಜೀವಕೋಶಗಳು ಹೆಪಾರಿನ್, ಹಿಸಯಮಿನ್ ಮುಂತಾದ ವಸ್ತುಗಳನ್ನು ಸ್ರವಿಸುತ್ತದೆ. ಹೆಪಾರಿನ್ ರಕ್ತ ಹೆಪ್ಪುಗಟ್ಟುವಿಕೆಯನ್ನು ತಡೆಯಲು ಸಹಾಯಕ ಹಿಸ್ಟಮಿನ್ ಅಲರ್ಜಿ ಅಥವಾ ಒಗ್ಗದಿರುವಿಕೆಯಲ್ಲಿ ಉರಿಯೂತ ಉಂಟಾಗಿಸುತ್ತದೆ.
7. ಮಾರ್ಪಾಟಾದ ಕೊಬ್ಬು ಕೋಶಗಳಲ್ಲಿ ಆಹಾರ ಸಂಗ್ರಹಣೆ ಮಾಡಿಕೊಂಡು ಅಗತ್ಯವಿದ್ದಾಗ ಶಕ್ತಿಯನ್ನು ಒದಗಿಸುತ್ತದೆ.
8. ಬಿಳಿ ರಕ್ತ ಕಣಗಳು ದೇಹ ರಕ್ಷಣೆಯಲ್ಲಿ ನೆರವಾಗುತ್ತದೆ.

**ವರ್ಗೀಕರಣ:**

ಸಂಯೋಜಕ ಅಂಗಾಂಶಗಳನ್ನು ಅವುಗಳ ರೂಪಕ್ಕನುಗುಣವಾಗಿ ಮೂರು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು. ಅವೇ

1. ನೈಜ ಸಂಯೋಜಕ ಅಂಗಾಂಶ
2. ಆಧಾರಕ ಸಂಯೋಜಕ ಅಂಗಾಂಶ
3. ದ್ರವ ರೂಪಿ ಸಂಯೋಜಕ ಅಂಗಾಂಶ

**ಸಂಯೋಜಕ ಅಂಗಾಂಶಗಳು**

ನೈಜ ಸಂಯೋಜಕ ಅಂಗಾಂಶ
ಆಧಾರಕ ಸಂಯೋಜಕ ಅಂಗಾಂಶ
ದ್ರವ ರೂಪಿ ಸಂಯೋಜಕ ಅಂಗಾಂಶ

ಅ. ಏರಿಯೋಲಾರ್ ಅಂಗಾಂಶ
ಮೃದ್ವಸ್ಥಿ ರಕ್ತ
ಆ. ಫೈಬ್ರಸ್ ಅಂಗಾಂಶ
ಎಲಬು/ಮೂಳೆ
ದುಗ್ಧರಸ
ಇ. ಎಲಾಸ್ಟಿಕ್ ಅಂಗಾಂಶ
ಈ. ಅಡಿಪೋಸ್ ಅಂಗಾಂಶ

**ನೈಜ ಸಂಯೋಜಕ ಅಂಗಾಂಶ :** ಇದರಲ್ಲಿ ಮಾತೃಕೆಯು ಸಮ ಜಾತೀಯ (Homogeneous) ವಾಗಿರುತ್ತದೆ. ವಿಶಿಷ್ಟ ಜೀವಕೋಶಗಳು, ವಿವಿಧ ರೀತಿಯ ತಂತುಗಳು ಮಾತೃಕೆಯಲ್ಲಿದ್ದು ಇದನ್ನು ಬಂಧಕ ಅಂಗಾಂಶ ಅಥವಾ ಸಡಿಲ ಸಂಯೋಜಕಾ ಅಂಗಾಂಶ ಎಂದೇ ಅದರ ಕಾರ್ಯ ಸೂಚಿಯಂತೆ ಗುರುತಿಸಲಾಗುತ್ತದೆ.

**ಸಂಯೋಜಕ ಅಂಗಾಂಶದ ಜೀವಕೋಶಗಳು :** ತಂತುಕೋಶಗಳು (ಫೈಬ್ರೋಸೈಟ್ಸ್):– ಚಪ್ಪಟೆಯಾದ ಹಲವು ಜೀವರಸ ಚಾಚುಕೆಗಳಿರುವ ಕೋಶ, ಇವು ತಂತುಗಳನ್ನು ಉತ್ಪಾದಿಸುವ ಕೋಶಗಳು.

ಭಕ್ಷಕ ಕೋಶಗಳು:– (ಮಾಕ್ರೋಪೇಜಸ್/ಹಿಸ್ಟಿಯೋಸೈಟ್ಸ್)

ಅಮೀಬಾಕಾರದ ಇವು ರೊಗಕಾರಕ ಜೀವಿಗಳನ್ನು ನೇರವಾಗಿ ಭಕ್ಷಿಸಿ ಶರೀರವನ್ನು ರಕ್ಷಿಸಲು ಸಹಾಯಕ.

**ಪ್ಲಾಸ್ಮಾ ಕೋಶಗಳು (ಮಾಸ್ಟೈಸೆಲ್ಸ್) :**

ಅಂಡಾಕೃತಿಯ ಈ ಕೋಶಗಳು ಹೆಪಾರಿನ್ ಎಂಬ ರಕ್ತ ಹೆಪ್ಪುಗಟ್ಟುವುದನ್ನು ತಡೆಯುವ ಮತ್ತು ರಕ್ತನಾಳದ ಮೇಲೆ ಪ್ರಭಾವ ಬೀರುವ ಹಿಸ್ಟೋಮಿನ್ ಮತ್ತು ಸೆರಟೋನಿನ್ ಎಂಬ ರಾಸಾಯನಿಕಗಳನ್ನು ಸ್ರವಿಸುತ್ತದೆ.

**ತಂತುಗಳು :** ಇವುಗಳಲ್ಲಿ ಮೂರು ಮುಖ್ಯ ಬಗೆಗಳಿವೆ: ಅಂಟುಜನಕ, ನವುರುಜಾಲಕ, ಹಿಂಪುಟಿಕ (ಎಲಾಸ್ಟಿಕ್). ಅಂಟುಜನಕ ತಂತುಗಳನ್ನು ಕಂಡರಗಳಲ್ಲಿ ಚೆನ್ನಾಗಿ ಕಾಣಬಹುದು. ಹಸಿಯಾಗಿದ್ದಾಗ ಬೆಳ್ಳಗಿದ್ದು ಕಿತ್ತರೆ ಹಿಗ್ಗದೆ ಬಲುಗಡುಸಾಗಿರುತ್ತವೆ. ನಿಜಚರ್ಮದ (ಡರ್ಮಿಸ್) ಕೂಡಿಸುವ ಅಂಗಾಂಶದಲ್ಲಿ ಇವೇ ಮುಖ್ಯವಾದವು. ನಿಜಚರ್ಮವನ್ನು ಹದಮಾಡಿದಾಗ ತೊಗಲು(ಲೆದರ್) ಆಗುತ್ತದೆ. ಅಂಟುಜನಕದ ತುಂಬ ಉದ್ದುದ್ದನೆಯ ತಂತು ತಂಡಗಳಿರುತ್ತವೆ. ಬಿಡಿ ತಂತುಗಳು ಕವಲೊಡೆಯವು. ತಂತುಗಳ ಕಟ್ಟುಗಳಲ್ಲಿ ನೀಳ ಪಟ್ಟಿಗಳಿರುವುವು. ಕ್ಷಾರದಲ್ಲಿ ನೆನೆಸಿದರೆ ಇನ್ನೂ ನವುರಾದ ಎಳೆಗಳನ್ನು ಬಿಡಿಸಬಹುದು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಇವುಗಳಲ್ಲಿ ಇನ್ನೂ ನವುರಾದ ಎಳೆಗಳಿರುತ್ತವೆ. ಚರ್ಮ, ಕಂಡರಗಳಲ್ಲಿರುವ ಅಂಟುಜನಕವನ್ನು ಸಾರರಿಕ್ತ ಅಸೆಟಿಕ್ ಆಮ್ಲ ಇಲ್ಲವೇ ಸೋಡಿಯಂ ಸಿಟ್ರೇಟಿನಲ್ಲಿ ಕರಗಿಸಿ ಈ ಎಳೆಗಳನ್ನು ಎಂದಿನಂತೆ ಸುತ್ತಿ ರೂಪಿಸಬಹುದು. ಬಿಸಿನೀರಿನಲ್ಲಿ ಕರಗಿದ ಅಂಟುಜನಕಕ್ಕೆ ಜೆಲಟಿನ್ ಎಂದು ಹೆಸರು. ಪೆಪ್ಸಿನ್, ಕೊಲ್ಲ್ಯಾಜಿನೇಸ್ ಮುಂತಾದ ಕಿಣ್ವಗಳಿಂದ ಆದರೆ ಟ್ರಿಪ್ಸನ್ನಲ್ಲಿ ಕರಗದು. ಅಂಟುಜನಕ ಪ್ರೋಟೀನಿಂದಾಗಿದೆ. ಇನ್ನಾವ ಪ್ರೋಟೀನುಗಳಲ್ಲೂ ಇರದ ಅಮ್ಮೈನೋ ಆಮ್ಲವಾದ ಹೈಡ್ರಾಕ್ಸಿಪೋಲೀನ್ ಇದರಲ್ಲಿ ಹೇರಳವಾಗಿದೆ. ಈ ಅಮ್ಮೈನೋ ಆಮ್ಲ ಸುರುಳಿ ಸರಪಣಿಯಂತೆ ಒಂದಕ್ಕೊಂದು ಜೋಡಿಸಿದೆ.

ಹಲವು ಅಂಗಗಳ ಆನಿಸುವ ರಚನಾಂಶದಲ್ಲಿ ನವುರಾದ ಜೀವಕಣದಾಚೆನ ತಂತುಗಳ ಹಾಗೆ ನವುರುಜಾಲಕ ತಂತುಗಳಿರುವುವು. ಇವು ಕವಲೊಡೆಯುತ್ತ ಒಂದಕ್ಕೊಂದು ಕೂಡಿಕೊಂಡು ಬಲೆಯ ಹಾಗಿರುತ್ತವೆ. ಅಂಟುಜನಕ ತಂತುಗಳ ಹಾಗೆ ಇವು ಬೈರೆಫ್ರಿಂಜೆಂಟ್. ನವುರುಜಾಲಕ ಕಣಗಳನ್ನೂ ಪೆಪ್ಸಿನ್ ಕಿಣ್ವ ಕರಗಿಸುತ್ತವೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನವುರುಜಾಲಕ ವಸ್ತು ಅಲ್ಲಲ್ಲಿ ಪದರುಗಳಂತೆ ತೋರುವುದು. ಇವೂ ಪ್ರೋಟೀನುಗಳೇ. ಇವಲ್ಲೂ ಹೈಡ್ರಾಕ್ಸಿಪ್ರೋಲೀನ್ ಅಮ್ಮೈನೋ ಆಮ್ಲವೇ ಹೆಚ್ಚು. ಬಿಸಿನೀರಿನಲ್ಲಿ ಕರಗಿದರೂ ತಣ್ಣಗಿಸಿದಾಗ ಇದು ಜೆಲಟಿನ್ ಆಗದು. ಅಂಟು ಜನಕಕ್ಕಿಂತ ಹೆಚ್ಚಿನ ಅಂಶ ನವುರುಜಾಲಕ ತಂತುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ನೆರೆದ ಪ್ರಾಣಿಗಳಲ್ಲಿ ಹಿಂಪುಟಿಕ ತಂತುಗಳು ಹಳದಿಯಾಗಿರುವುವು. ದೊಡ್ಡ ಧಮನಿಗಳಲ್ಲಿ ಇರುವಂತೆ ಈ ತಂತುಗಳು ಉದ್ದಕ್ಕೆ ತೆಳುವಾಗಿ ಕವಲೊಡೆಯುತ್ತ ತಟ್ಟೆಗಳು ಇಲ್ಲವೇ ತೂತುಗಳಿರುವ ಪೊರೆಗಳಾಗಿರುತ್ತವೆ. ತಂತುಗಳಿರುವುದು ಹೊರಗಾಣದು. ಹಿಡಿದು ಕೀಳದಿದ್ದರೆ ದ್ವಿರಿಪ್ರೇಕ್ಷಣೀಯವಾಗುವುದು. ಬಿಸಿನೀರು, ಸಾರಕ್ಷಾರಗಳಲ್ಲಿ ಕರಗವು. ಮಾಂಸಲಿಯಲ್ಲಿರುವ ಹಿಂಪುಟಿಕದೊಳೆಯಲ್ಲಿ ಮಾತ್ರ ಮಸೆದೊಳೆ ಕರಗುತ್ತವೆ. ಕರಗಿಸಿದಾಗ ಒಂದಕ್ಕೊಂದು ಹೆಣೆದುಕೊಂಡು ತಂತು ಎಳೆಗಳು ಕಾಣಬರುತ್ತವೆ. ಇವು ಹುರಿಗಟ್ಟಿ ಇನ್ನೂ ದೊಡ್ಡ ತಂತುಗಳಾಗಿರುವುವು. ಇವುಗಳಲ್ಲಿಯ ಪ್ರೋಟೀನೇ ಬೇರೆ ಬಗೆಯದು. ಕೊಬ್ಬೂ ಇದರಲ್ಲಿರುತ್ತದೆ. ಇವು ರಬ್ಬರಿನಂತೆ ಹಿಗ್ಗುತ್ತವೆ. ಪುಪ್ಪುಸ, ರಕ್ತನಾಳದ ಗೋಡೆಗಳು, ಕಂಡರಗಳು. ಮೆಲ್ಲೆಲುಬುಗಳು ರಬ್ಬರಿನಂತೆ ಹಿಗ್ಗಲು ಈ ತಂತುಗಳೇ ಕಾರಣ.

**ಕಚ್ಚಾ ನೆಲಗಟ್ಟು ವಸ್ತು:** ಇದು ತಂತುಗಳು, ಜೀವಕಣಗಳ ನಡುವೆ ಅಲ್ಲದೆ ಸುತ್ತಲೂ ಇರುವ ವಸ್ತು. ಮೆಲ್ಲೆಲುಬು, ಹೊಕ್ಕಳು, ಹುರಿಯ ಜೆಲ್ಲಿ, ಕಣ್ಣಿನ ಕಾಚಿದ್ರವದಲ್ಲೂ ಇದು ಚೆನ್ನಾಗಿ ಕಾಣುತ್ತದೆ. ಇದರಲ್ಲಿ ಮುಖ್ಯವಾಗಿ ಲೋಳೆಪಾಲಿಸ್ಯಾಕರೈಡುಗಳೆಂಬ ದೊಡ್ಡ ಹಿಟ್ಟುಸಕ್ಕರೆ ಅಣುಗಳಿರುವುವು. ಇವುಗಳಲ್ಲಿ ಹಯಲ್ಯೂರೋನಿಕ್ಆಮ್ಲ, ಕಾಂಡ್ರಾಯ್ಟಿನ್, ಸಲ್ಫ್ಯೂರಿಕ್ ಆಮ್ಲ ಮುಖ್ಯವಾದವು. ಹಯಲ್ಯುರೋನಿಕ್ ಆಮ್ಲದ ದ್ರಾವಣ ಮಂದವಾಗಿರುತ್ತದೆ. ಇದನ್ನು ಕರಗಿಸಿ ನೀರಾಗಿಸುವುದು ಹಯಲ್ಯೂರೋನಿಡೇ. ಇದು ಕೆಲವು ಏಕಾಣು ಜೀವಿಗಳು, ರೇತುಕಣ ಸಾರಕಗಳಲ್ಲಿರುವುದು. ಈ ಎಂಜೈಮಿನ ತಯಾರಿಕೆ ಮದ್ದನ್ನು ಚರ್ಮದಡಿ ಚುಚ್ಚಿದರೆ ಅಲ್ಲಿ ವಿಷಕಣಗಳು, ಏಕಾಣುಜೀವಿಗಳು, ಮತ್ತಿತರ ಸಣ್ಣ ಚೂರು ವಸ್ತುಗಳು ಅಲ್ಲಿಂದ ಎಲ್ಲ ದಿಕ್ಕುಗಳಿಗೂ ಹರಡಿಕೊಳ್ಳುವಂತೆ ಮಾಡುವುದು. ಈ ಸಕ್ಕರೆಯ ದೊಡ್ಡ ಕಣಗಳು, ಪ್ರೋಟೀನು ಲವಣಗಳಿರುವ ಜಲ್ಲಿಯೇ ನೆಲಗಟ್ಟು ವಸ್ತು. ಇದರಲ್ಲಿ ಏನು ವ್ಯತ್ಯಾಸವಾದರೂ ಒಂದೊಂದು ಜೀವಕಣ, ಅಂಗಾಂಶದ ಮೇಲೂ ಬಹಳ ಪ್ರಭಾವ ಬೀರುತ್ತದೆ.

**ಕೂಡಿಸುವ ಅಂಗಾಂಶದ ಬಗೆಗಳು:** ಜಾಳಾದ (ಏರಿಯೋಲಾರ್) ಅಂಗಾಂಶ ವಿರಳವಾಗಿರುವ ಅಲ್ಲಲ್ಲಿರುವ ಖಾಲಿ ಜಾಗಗಳಲ್ಲಿ ನೆಲಗಟ್ಟುವಸ್ತು ತುಂಬಿದ್ದು, ನಡುವೆ ಜೀವಕಣಗಳು, ಅಂಟು ಜನಕ, ಹಿಂಪುಟಿಕ ತಂತುಗಳು ಇರುವುವು. ವಿರಳವಾದ ಕೂಡಿಸುವ ಅಂಗಾಂಶ ಬೆಳ್ಳನೆಯ ಅಂಟುವಸ್ತುವಾಗಿ ಅಂಗಗಳ ನಡುವೆ, ರಕ್ತನಾಳಗಳೊಂದಿಗೆ ಅಂಗಗಳ ಒಳಗೂ ಇರುವುದು.

**ಕೊಬ್ಬಿನ ಅಂಗಾಂಶ:** ಇದರಲ್ಲಿ ವಿರಳವಾಗಿರುವ ಜಾಳಾದ ಅಂಗಾಂಶದಲ್ಲಿ ಕೊಬ್ಬಿನ ಜೀವಕಣಗಳೇ ಹೇರಳವಾಗಿರುವುವು.

**ದಟ್ಟ ತಂತುವಿನ ಅಂಗಾಂಶ:** ಅಂಟು ಜನಕದ ತಿರಿಗಳು ಇದರಲ್ಲಿ ದಟ್ಟವಾಗಿ ಅಡಕವಾಗಿದ್ದು, ಕೆಲವು ಹಿಂಪುಟಿಕ ಅಂಗಾಂಶಗಳ ತಂತುಗಳು ಅವುಗಳೊಂದಿಗಿನ ತಂತು ಮೊಳೆಕಣಗಳು ಇದರಲ್ಲಿ ಇರುತ್ತವೆ. ನೆಲಗಟ್ಟುವಸ್ತು ಇದರಲ್ಲಿಲ್ಲ. ಕಂಡರದಲ್ಲಿ ಇದ್ದ ಹಾಗೆ ಇದರ ತಂತುಗಳು ಉದ್ದುದ್ದವಾಗಿರಬಹುದು. ನಿಜಚರ್ಮದಲ್ಲೂ ಕೀಲುಗಳ ಸುತ್ತಲೂ ಇರುವ ಕೀಲುಗವಚಗಳಲ್ಲೂ ಇರುವುದು ಹೀಗೆ. ಮ್ಯಾಕ್ರೋಫೇಜುಗಳು ಕಚ್ಚಾ ನಡುರಚನಾಂಶದ (ಮಿಸೆಂಕೈಮಲ್) ಜೀವಕಣಗಳು ಇರುತ್ತವೆ.

**ಕೀಲೋಳಿನ ಪೊರೆಗಳು:** ಕೀಲುಗಳೊಳಗೆ ನಿಕಟವಾಗಿ ಅಂಟಿರುವ, ಕೀಲುಗಳ ಸುತ್ತುವರಿದ ಕೊಳವೆಯಂತಿರುವ ಪೊರೆಗಳಿವು. ರಕ್ತನಾಳಗಳಿರುವ ತೆಳುವಾದ ಕೂಡಿಸುವ ಅಂಗಾಂಶವಿದು. ಕೀಲೋಳಿನ ಜೀವಕಣಗಳು ಹಯಲ್ಯೂರೋನಿಕ್ ಆಮ್ಲ, ಪ್ರೋಟೀನು, ಲವಣಗಳಿರುವ ಮಂದವಾದ ಕೀಲೋಳಿನ (ಸೈನೋವಿಯಲ್) ದ್ರವವನ್ನು ಸುರಿಸುತ್ತವೆ. ಕೀಲಿನ ಮೊಗಗಳಿಗೆ ಇವು ಪುಷ್ಟಿ ನೀಡುವುವಲ್ಲದೆ ಮೆತುಚಾಲಕವು(ಲ್ಯೂಬ್ರಿಕೆಂಟ್) ಆಗಿರುವುವು. ಮೂಳೆಗಳ ಮೇಲೆ ಹಾದುಹೋಗುವೆಡೆಗಳಲ್ಲಿ ಕಂಡರಗಳ ಸುತ್ತಲೂ ಆವರಿಸಿರುವ ಒರೆಕವಚಗಳು(ಷೀತ್ಸ್) ಕೂಡ ಇಂಥ ಪೊರೆಗಳೆ. **(ನೋಡಿ– ಕೀಲುಗಳು– ಮತ್ತು–ತಂತುಗಟ್ಟುಗಳು)**

**ಮೆಲ್ಲೆಲುಬು:** ಎಷ್ಟು ಒತ್ತಡ ಹೇರಿದರೂ ತಡೆವಷ್ಟು ಬಲವಾಗಿರುವ ರಚನೆ ಇದು. ಇದರಲ್ಲಿ ಮೂರು ಬಗೆ ಉಂಟು: ಗಾಜಂದ (ಹಯಲೀನ್), ಹಿಂಪುಟಿಕ, ತಂತುಕ (ಫೈಬ್ರಸ್). ಗಾಜಂದ ಮೆಲ್ಲೆಲುಬು ಹಾಗೆ ಕಾಣಲು ಜೀವಕಣಗಳ ನಡುವೆ ತುಂಬಿರುವ ಭಾಗದ ಗುಣವೇ ಕಾರಣ. ತಂತುವಿನ ಭಾಗವಾದ ಅಂಟುಜನಕ ಬಿಗುವಾಗಿರುವ ಅರೂಪದ ಬೊಂಪಿನಲ್ಲಿ (ಜೆಲ್) ಇರುವುದು. ಇದರಲ್ಲಿ ಬಹುಪಾಲು ಕಾಂಡ್ರಾಯ್ಟಿನ್ ಸಲ್ಫೇಟ್. ಈ ರಚನಾಂಶದಲ್ಲಿಯ ಬಿಡುತಿಗಳೆಂಬ (ಲ್ಯಾಕ್ಯುನೆ) ತೆರಪುಗಳಲ್ಲಿ ಮೆಲ್ಲೆಲುಕಣಗಳು (ಕಾಂಡ್ರೋಸೈಟ್ಸ್) ಇರುವುವು. ಕೀಲುಗಳ ಮೇಲುತಳಗಳ ಹೊರತಾಗಿಯೂ ಮೆಲ್ಲೆಲುಬು ಎಲ್ಲಿದ್ದರೂ ಅದನ್ನು ಇಪ್ಪದರಗಳ ಮೆಲ್ಲೆಲು ಸುತ್ತುಪೊರೆ(ಪೆರಿಕಾಂಡ್ರಿಯಮ್) ಆವರಿಸಿರುತ್ತದೆ.

ಬಿಡುತಿಗಳಲ್ಲಿರುವ ಜೀವಕಣಗಳ ವಿಭಾಗದಿಂದ ಒಳಗಿಂದಲೊ ಮೆಲ್ಲೆಲು ಸುತ್ತು ಪೊರೆಯಿಂದ ಹೊಸ ಜೀವಕಣಗಳ ಗುಣಿತದಿಂದ ಹೊರಗಿಂದಲೊ ಹೊಸ ಮೆಲ್ಲೆಲುಬು ವಿಕಾಸವಾಗುವುದು. ಕಶೇರುಕಗಳ ವಿಕಾಸದಲ್ಲಿ ಎಲುಗಟ್ಟು ಮೊದಲು ಗಾಜಂದ ಮೆಲ್ಲೆಲುಬಾಗಿ ಅನಂತರ ಮೂಳೆಯಾಗಿ ಪರಿವರ್ತನೆ ಹೊಂದುತ್ತದೆ. ಕೀಲುಗಳೊಳಗಿನ ಮೆಲ್ಲೆಲುಬು ಮಾತ್ರ ಮೂಳೆಯಾಗದೆ ಗಾಜಂದ ಮೆಲ್ಲೆಲುಬಾಗೆ ಇರುವುದು. ಮೆಲ್ಲೆಲುಬುಗಳೊಳಗೆ ಎಲ್ಲೂ ರಕ್ತನಾಳಗಳಿರವು. ಆದರೆ ಅವುಗಳ ಜೀವಕಣಗಳಿಗೆ ಸಾಗುವ ಪುಷ್ಟಿ ವಸ್ತುಗಳು ಅವುಗಳಿಂದ ಹೊರಬೀಳುವ ವಿಸರ್ಜಕ ವಸ್ತುಗಳು ಮೆಲ್ಲೆಲು ಸುತ್ತುಪೊರೆಯಲ್ಲಿನ ರಕ್ತನಾಳಗಳು ಇಲ್ಲವೆ, ಕೀಲಲ್ಲಿರುವ ದ್ರವದಿಂದ ವಿತರಣೆಯಾಗುವುದು. ಇದರಿಂದಲೇ ಮೆಲ್ಲೆಲುಬಿನ ಗಾತ್ರ ಬೆಳೆವಣಿಗೆಗಳಿಗೆ ಮಿತಿಯಿರುತ್ತದೆ. ವಯಸ್ಸಾದಂತೆಲ್ಲಾ ಮೆಲ್ಲೆಲುಬು ಸುಣ್ಣಗೂಡಿ ಗಡುಸಾಗಬಹುದು. ಹೊರಗಿವಿ, ಕಿರುನಾಲಗೆಗಳಲ್ಲಿ ಇರುವಂಥ ಹಿಂಪುಟಿಕ ಮೆಲ್ಲೆಲುಬಿನಲ್ಲಿ ಅಂಟುಜನಕದೊಂದಿಗೆ ಹಿಂಪುಟಿಕ ತಂತುಗಳು ಇರುವುವು. ಶಾರ್ಕ್ ಮತ್ತು ರೇ ಮೀನುಗಳಲ್ಲಿ ಮೆಲ್ಲೆಲುಬೇ ಪ್ರಧಾನ ಆಧಾರಸ್ತಂಭವಾದ್ದರಿಂದ ಇವನ್ನು ಮೃದ್ವಸ್ಥಿ ಮೀನುಗಳೆನ್ನುವರು.

ತಂತು ಮೆಲ್ಲೆಲುಬು ಗಾಜಂದ ಮೆಲ್ಲೆಲುಬಿಗಿಂತಲೂ ಹೆಚ್ಚಾಗಿ ಅಂಟುಜನಕ ತಂತುಗಳಿರುತ್ತವೆ. ಸಾಮಾನ್ಯವಾಗಿ ಒತ್ತಡ, ಎಳತಗಳ ನೇರಕ್ಕೆ ಈ ತಂತುಗಳಿರುವುವು. ಇವುಗಳ ನಡುವೆ ಮೆಲ್ಲೆಲು ಕಣಗಳಿರುತ್ತವೆ. ಮೆಲ್ಲೆಲುಬುಗಳಲ್ಲೆಲ್ಲಾ ತೀರಾ ಗಟ್ಟಿಗಿರುವ ಬಗೆ ಇದು. ಬೆನ್ನೆಲುಬುಗಳ ನಡುವಣ ಬಟ್ಟುಗಳು, ಕೀಲುಗಳ ಮೇಲು ತಳಗಳ ಅಂಚುಗಳು. ಮೂಳೆಯ ಕಂಡರ ಒಳಸೇರುವೆಗಳಲ್ಲೂ ಈ ಮೆಲ್ಲೆಲುಬಿರುವುದು.

**ಮೂಳೆ:** ಕೂಡಿಸುವ ಅಂಗಾಂಶಗಳ ಸರಳ ರೂಪಗಳ ಅಂಶಗಳೇ ಮೂಳೆಯಲ್ಲಿ ನಾಜೂಕಾಗಿ ಜೋಡಣೆಯಾಗಿ ಕಶೇರುಕಗಳಲ್ಲಿ ಎಲುಬುಗಳು ದೊಡ್ಡ ಆನಿಸುವ ರಚನೆಗಳಾಗಿವೆ. ಒಂದು ಆನೆಯ ಭಾರವನ್ನು ಹೊತ್ತರು ಮುರಿಯದಿರುವ ಮೂಳೆಗಳಿವೆ. ಬೇರೆ ಮೂಳೆಗಳು ಹಗುರವಾಗಿದ್ದರೂ, ಗಡುಸಾಗಿದ್ದು, ದೊಡ್ಡ ಹಕ್ಕಿಗಳ ರೆಕ್ಕೆಗಳಿಗೆ ಸಾಕಾದಷ್ಟು ಸನ್ನೆ ಬಲವನ್ನು ನೀಡುವುವು.

ಮೂಳೆಗಳ ಹೊರಭಾಗವಾದ ರಗಟೆ (ಕಾರ್ಟೆಕ್ಸ್) ಸಾಮಾನ್ಯವಾಗಿ ಒತ್ತಾಗಿದ್ದು ಗಡುಸಾಗಿರುತ್ತದೆ. ಒಳಭಾಗವಾದ ಕುಸುರಿಯಲ್ಲಿ ಮೆಡುಲ ಸ್ಪಂಜಿನಂತೆ ಮೆತ್ತಗಿರುವುದೇ ಮಜ್ಜೆ. ಮಜ್ಜೆಯ ತುಂಬ ಕೊಳವೆಗಳು ಫಲಕಗಳು, ಸರಳುಗಳು ಬಲೆಯಂತೆ ಹಣೆದಿರುವುವು. ಇವಕ್ಕೆ ಎಳೆದೂಲಗಳು (ಟ್ರೆಬಿಕ್ಯುಲೆ) ಎಂದು ಹೆಸರು. ಮೂಳೆ ಫಲಕಗಳು ಒತ್ತೊತ್ತಾಗಿ ಜೋಡಿಸಿದಂತಿರುತ್ತವವೇ ಈ  ಎಳೆದೂಲಗಳು. ಈ ಬಲೆ ಹೆಣಿಗೆ ಹೆಚ್ಚು ಒತ್ತಡ ಬೀಳುವ ದಿಕ್ಕಿನಲ್ಲಿ ಬಲವಾಗಿರುತ್ತದೆ. ಅಂಗಾಂಶಾಂತರ ವಸ್ತುವಿನಲ್ಲಿರುವ ಸಣ್ಣ ಬಿಡತಿಗಳಲ್ಲಿ ಬಲಿತ ಎಲು ಕಣಗಳು (ಆಸ್ಟಿಯೋಸೈಟ್ಸ್) ಇರುವುವು. ಈ ಬಿಡುತಿಗಳೆಲ್ಲ ಬಲೆ ಹೆಣಿಗೆಯ ಹಾಗೆ ಕಿರು ಸಾಗುನಾಳಗಳ ಮೂಲಕ ಒಂದಕ್ಕೊಂದು ಸಂಬಂಧಿಸಿರುತ್ತವೆ. ಅಂಚಿನಲ್ಲಿರುವ ಬಿಡುತಿಗಳಲ್ಲಿ  ಕಿರುಸಾಗುನಾಳಗಳು ಎಳೆದೂಲಗಳ ಮೇಲುತಳದವರೆಗೆ ಇರುವುವು. ಸಣ್ಣ ಎಳೆದೂಲಗಳಲ್ಲಿ ರಕ್ತನಾಳಗಳಿಲ್ಲ.  ಆವರಿಸಿರುವ ಮಜ್ಜೆಯಲ್ಲಿಯ ಅಂಗಾಂಶ ದ್ರವದಲ್ಲಿ ಮುಳುಗಿ ಬಿಡುತಿಗಳಲ್ಲಿರುವ ಎಲುಕಣಗಳಿಗೆ ಕಿರುಸಾಗು ನಾಳಗಳ ಮೂಲಕ ಪುಷ್ಟಿ ದೊರೆಯುತ್ತದೆ.  ಈ ಕಿರುಸಾಗು ನಾಳಗಳು ಪುಷ್ಟಿವಸ್ತುವನ್ನು ಕೊಂಚ ದೂರ ಮಾತ್ರ ಸಾಗಿಸಬಲ್ಲವಾದ್ದರಿಂದ ರಕ್ತನಾಳಗಳಿಲ್ಲದ ಎಳೆದೂಲ ಬಹಳ ದಪ್ಪವಾಗಿ ಬೆಳೆಯಲಾರದು. ಇನ್ನೂ ದಪ್ಪವಾಗಿ ಬೆಳೆವಲ್ಲಿ ರಕ್ತನಾಳಗಳಿರುತ್ತವೆ.  ದಟ್ಟನೆಯ ಮೂಳೆಯ ತುಂಬ ಇರುವ ರಕ್ತನಾಳಗಳ ಜೋಡಣೆಗೆ ಹ್ಯಾವರ್ಸಿಯನ್ ಮಂಡಲ ಎಂದು ಹೆಸರು. ಇದು ತೆಳು ಪೊರೆಗಳ ಸುರಳಿಗಳಿಂದಾಗಿದೆ. ಇದರ ಸಾಗುನಾಳಗಳ ಗೋಡೆಗಳ ರಚನೆ ಎಳೆದೂಲಗಳಂತೆಯೇ ಇದೆ.

ಮೂಳೆಯ ಜೀವಕಣಗಳ ನಡುವಣ ವಸ್ತುವಿನಲ್ಲಿ ಸುಣ್ಣ ಲವಣಗಳಿರುವ ಅಂಟು ಜನಕವಿದೆ. ಸುಣ್ಣದ ಲವಣಗಳಲ್ಲಿ ಕ್ಯಾಲ್ಸಿಯಂ ಫಾಸ್ಫೇಟ್ ಮುಖ್ಯ.  ಈ ಹರಳುಗಳೊಂದಿಗೆ ಕಾರ್ಬೊನೇಟುಗಳು, ಮೆಗ್ನೀಷಿಯಂ ಲವಣಗಳು ಅಂಟು ವಸ್ತುವಿನಲ್ಲಿವೆ. ಎಲುಮೊಳೆ ಕಣಗಳು, ತಂತುಗಳು, ಅಂಟುವಸ್ತು, ಫಾಸ್ಫೇಟೇಸುಗಳನ್ನು ತಯಾರಿಸುತ್ತವೆ. ಅಂಗಾಂಶ ದ್ರವದಲ್ಲಿಯ ಸುಣ್ಣ ಧಾತು ಬಿಡಿಯಾದ ಫಾಸ್ಫೇಟಿನೊಂದಿಗೆ ಕೂಡಿ ಕರಗದ ಸುಣ್ಣದ  ಫಾಸ್ಫೇಟು ಹರಳುಗಳಾಗುತ್ತವೆ.  ಹೀಗೆ ಸುತ್ತಲೂ ಎಲುಬನ್ನು ಕಟ್ಟಿಕೊಂಡು ಕಿರು ಸಾಗುನಾಳಗಳಲ್ಲಿ ಎಲುಮೊಳೆಕಣಗಳು ಚಾಚುಗಳನ್ನು ತೂರಿಸಿರುವುವಲ್ಲದೆ ಬಲಿತ ಎಲುಕಣಗಳಾಗಿ ಮೂಳೆಯ ರಚನೆಗೆ ಕಾರಣವಾಗಿರುವುವು. ಮೂಳೆಗಳು ಯಾವಾಗಲೂ ಇದ್ದವು ಇದ್ದಹಾಗೆ ಉಳಿಯವು. ಎಲುಮೊಳೆ ಕಣಗಳು, ಎಲು ಕಣಗಳು ಇಲ್ಲದೆಡೆಗಳಲ್ಲಿ ಮೂಳೆ ಹೇಗೋ ಒಂದೇ ಸಮವಾಗಿ ಕರಗಿಹೋಗುತ್ತಿರುವುದು.  ಹೀಗೆ ಕರಗಲು ಕಾರಣವೆಂದಿದ್ದ ಎಲುತವಿಕಗಳು (ಆಸ್ಟಿಯೋಕ್ಲಾಸ್ಟ್ಸ್) ಹಾಳಾಗುತ್ತಿರುವ ಎಲು ಮೊಳೆಕಣಗಳು ಒಂದಕ್ಕೊಂದು ಕೂಡಿಕೊಂಡು ಹಲನಡು ಬೀಜಗಳಿರುವ ಈ ಬೃಹತ್ ಜೀವಕಣಗಳಾಗಿರುವುವು (ಜಯಂಟ್ ಸೆಲ್ಸ್).

ಮೂಳೆಯ ವಿಕಾಸ ಪೊರೆಯೊಳಗೂ ಮೆಲ್ಲೆಲುಬೊಳಗೂ ಮೊಳೆತರೂ ಮೂಲದ ಕ್ರಮ ಮಾತ್ರ ಒಂದೇ ಬಗೆ. ತಲೆಯೋಡಿನಲ್ಲಿ ಪೊರೆಯೊಳಗೆ ಎಲುಬು ಮೊಳೆಯುತ್ತದೆ. ಕೂಡಿಸುವ ಅಂಗಾಂಶದ ಪೊರೆಯೊಳಗಿಂದ ಎಲುಮೊಳೆಕಣಗಳಿದ್ದು ಎಲುಬು ತಯಾರಿಸುವುವು. ಕಂಕಾಲದ ಬಹುಪಾಲು ಮೊದಲಾಗಿ ಮೆಲ್ಲೆಲುಬಿನ ಅಡಿಪಾಯದ ಮೇಲೆ ವಿಕಾಸವಾಗುವ ಮೂಳೆಗಳೇ, ಮೆಲ್ಲೆಲು ಸುತ್ತುಪೊರೆಯಿಂದ ರಕ್ತನಾಳ ತುಂಬಿದ ಕೂಡಿಸುವ ಅಂಗಾಂಶದ ಮೆಲ್ಲೆಲುಬಿನೊಳಕ್ಕೆ ನುಗ್ಗಿ ಎಷ್ಟೋ ಬದಲಾವಣೆಗಳಾಗಿ ಮೂಳೆ ವಿಕಾಸವಾಗುವುದು. ಸುಣ್ಣಗೂಡದ ಮೆಲ್ಲೆಲುಬಿನ ಮೂಳೆ ಹೊಸ ಮೂಳೆ ಮೂಡುವುದು. ನೀಳ ಮೂಳೆಗಳ ಕಾವುಗಳಲ್ಲಿ ಹೀಗೆ ಎಲುಬು ವಿಕಾಸವಾಗಿ, ಗಂಡಸರಲ್ಲಿ 28ನೆಯ ವಯಸ್ಸಿನತನಕ ಮೂಳೆ ತುದಿಗಳು ಬೆಳೆಯುತ್ತಲೇ ಇರುವುವು. ಮೂಳೆ ಕೊನೆಗಳಲ್ಲಿ ಮೊದಲು ಆಚೆ ತುದಿಯಲ್ಲಿ ಹೊಸ ಮೆಲ್ಲೆಲುಬಾಗಿ ಆಮೇಲೆ ಒಳಗಿಂದ ಮೂಳೆಯಾಗುತ್ತಾ ಹೋಗುತ್ತದೆ. ಮೂಳೆಯ ದಪ್ಪನೆಯ ಸುತ್ತಳತೆಯು ಎಲುಸುತ್ತುಪೊರೆಯೊಳಗಿಂದ ಆಗುವುದು. ಮೂಳೆಗಳಲ್ಲಿ ಯಾವಾಗಲೂ ಜೀವವಿರುತ್ತದೆ. ಹೆಚ್ಚಿನ ಚಟುವಟಿಕೆ ಒಳಗೆ ನಡೆಯುತ್ತಿರುವುದು. ಅವುಗಳ ಮೇಲೆ ಬೀಳುವ ಒತ್ತಡಗಳಿಗೆ ತಕ್ಕ ಹಾಗೆ ಮೂಳೆಗಳು ಬೆಳೆಯುತ್ತಲೇ ಇರುವುವು.

ಎಲ್ಲ ಮೂಳೆಗಳೂ ಟೊಳ್ಳು. ಅವುಗಳ ಒಳಗಡೆ ಮಜ್ಜೆ ಇರುವುದು. ನೀಳ ಮೂಳೆಗಳಲ್ಲಿ ಕೊಬ್ಬುಗೂಡಿದ ಹಳದಿ ಮಜ್ಜೆ ವಿಕಾಸವಾಗುತ್ತದೆ. ರಕ್ತದ ಕೆಂಪು ಮತ್ತು ಬಿಳಿಯ ಕಣಗಳು ವಿಕಾಸವಾಗುವುದು ಕೆಂಪು ಮಜ್ಜೆಯಲ್ಲಿ. ಇದರೊಂದಿಗೆ ಕೊಂಚ ಕೊಬ್ಬು ಇರುತ್ತದೆ. ನೀಳ ಮೂಳೆಗಳ ತುದಿಗಳು, ಬೆನ್ನೆಲುಬುಗಳು, ಪಕ್ಕೆಲುಬುಗಳು, ಎದೆ ಚಕ್ಕೆಗಳಲ್ಲಿ ಕೆಂಪು ಮಜ್ಜೆ ಇರುತ್ತದೆ. **(ಡಿ.ಎಸ್.ಎಸ್.)**

**ಕೂಡು ಪೊರೆಯೂತ :** ಕೂಡುಪೊರೆಗೆ (ಅಂದರೆ ಕಣ್ಣುರೆಪ್ಪೆಯ ಒಳಮೈಯನ್ನು ಕಣ್ಣು ಗುಡ್ಡೆಯನ್ನು ಆವರಿಸಿರುವ ಅರ್ದ್ರಚರ್ಮ, ಕಂಜಂಕ್ಟೈವ) ಬರುವ ಊತ (ಕಂಜಂಕ್ಟಿವೈಟಿಸ್). ಈ ಉರಿಯೂತ ವಯೋಮಿತಿಯಿಲ್ಲದೆ ಮಕ್ಕಳಲ್ಲೂ ದೊಡ್ಡವರಲ್ಲೂ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಬೇಸಗೆ ಮತ್ತು ವಸಂತ ಋತುಗಳಲ್ಲಿ ಇದರ ತೀವ್ರತೆ ಅಧಿಕ. ಇದರಿಂದ ವಿಶೇಷ ತೊಂದರೆಯಾಗದಿದ್ದರೂ ಕೆಲವು ಉತ್ಕಟ ಬಗೆಯವೂ ದೃಷ್ಟಿನಾಶವನ್ನೂ ಕೂಡ ತರಬಲ್ಲವು. ಮನೆಯಲ್ಲಿ ಒಂದು ಮಗುವಿಗೆ ಬಂದರೆ ವರಸೆಯಾಗಿ ಮನೆಯಲ್ಲಿರುವವರಿಗೆಲ್ಲರಿಗೂ ಈ ರೋಗ ಹರಡುವುದುಂಟು. ಇದು ಒಂದು ಬಗೆಯ ಸೋಂಕು ರೋಗ. ಕಣ್ಣುರಿ, ಕಣ್ಣಿನ ರೆಪ್ಪೆಯೊಳಗೆ ಬಾಹ್ಯಪದಾರ್ಥ ಸೇರಿದಂತೆ ಭಾಸವಾಗುವಿಕೆ, ಕಣ್ಣು ಉಜ್ಜುವಿಕೆ, ಕಣ್ಣಲ್ಲಿ ನೀರು ಸುರಿಯುವುದು, ಕೆಂಗಣ್ಣು– ಇವು ರೋಗದ ಲಕ್ಷಣಗಳು. ಕಣ್ಣಿನ ರೆಪ್ಪೆಗಳು ಊದಿ ಪುಳುಕು ಕಟ್ಟಿ, ಬೆಳಗಿನ ಹೊತ್ತು ಕಣ್ಣನ್ನು ತೆರೆಯುವುದಕ್ಕೆ ಆಗುವುದಿಲ್ಲ. ಕೆಲವರು ಪ್ರಶ್ನಿಸಿದಾಗ ಮಾತ್ರ ಬೆಳಗಿನಲ್ಲಿ ಕಣ್ಣುರೆಪ್ಪೆಗಳು ಅಂಟಿಕೊಂಡಿರುತ್ತವೆ ಎಂದು ಹೇಳುವರು. ಪುಳುಕನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿ ನೋಡಿದಲ್ಲಿ ಈ ರೋಗವನ್ನು ಉಂಟುಮಾಡುವ ವಿಷಕ್ರಿಮಿಗಳು ಕಾಣಿಸುವುವು. ಇವುಗಳಲ್ಲಿ ಮುಖ್ಯವಾದುವು ಕಾಕ್‌ವೀಕನ ದಂಡಾಣು, ನ್ಯೂಮೋಕಾಕಸ್, ಸ್ಟೆಫಲೋಕಾಕಸ್, ಇನ್‌ಫ್ಲೂಯೆಂಜಾ ದಂಡಾಣು ಮತ್ತು ಗೊನಾಕಾಕಸ್.

ಮಕ್ಕಳಲ್ಲಿ ದಡಾರ ಕಾಣಿಸುವುದಕ್ಕೆ ಮುಂಚೆ ಕಣ್ಣು ಕೆಂಪಾಗಿ ನೀರು ಸುರಿಯುವುದುಂಟು, ಇದಕ್ಕೆ ಅತ್ಯಂತ ಸೂಕ್ಷ್ಮವಾದ ವೈರಸುಗಳು ಕಾರಣ. ಹುಟ್ಟುವ ಮಕ್ಕಳ ಕೀವುಗಣ್ಣಿಗೂ ಈ ವೈರಸೇ ಕಾರಣ. ಈಜು ಕೊಳದಲ್ಲಿ ಅನೇಕ ಮಂದಿ ಈಜುವುದರಿಂದ ಹಲವರಲ್ಲಿ ಕಣ್ಣು ಕೆಂಪಗಾಗುವುದುಂಟು. ಇಲ್ಲೂ ವೈರಸ್ಸಿನದೇ ಪಾತ್ರ. ಆದ್ದರಿಂದ ಈಜುವ ಕೊಳದ ನೀರನ್ನು ಪದೇ ಪದೇ ಬದಲಾಯಿಸುವುದು ಆವಶ್ಯಕ. ಅಲ್ಲದೆ ಈಜುವ ನೀರು ಶುದ್ಧವಾಗಿರಬೇಕು. ಅರಿರೋಗ ಕೂಡ ಒಂದು ಬಗೆಯ ವೈರಸ್‌ಜನ್ಯ.

ಬೇಸಗೆಯ ಮೊದಲಲ್ಲಿ ಮಕ್ಕಳಲ್ಲಿ ಉಜ್ಜುವಿಕೆಯಿಂದ ಆರಂಭವಾಗುವ ಕಣ್ಗೆಂಪು ಇನ್ನೊಂದು ಬಗೆಯದು. ಇದು ಚಳಿಗಾಲದ ಹೊತ್ತಿಗೆ ಪೂರ್ತಿಯಾಗಿ ಮಾಯವಾಗಿ ಮತ್ತೆ ಬೇಸಗೆಯಲ್ಲಿ ಮರುಕಳಿಸುವುದು ರೂಢಿ. ಕಣ್ಣುಗಳನ್ನು ಎಷ್ಟು ಉಜ್ಜಿಕೊಂಡರೂ ರೋಗಿಗೆ ಸಮಾಧಾನ ದೊರಕದು. ಕಣ್ಣಲ್ಲಿ ನೀರು ಸುರಿಯುವುದು, ಬೆಳಕಿನ ಭೀತಿ, ಕಣ್ಣು ಬೆಚ್ಚಗಿರುವಂತೆ ಭಾಸವಾಗುವುದು, ರೆಪ್ಪೆಯ ಒಳಗೆ ಒಂದೇ ಗಾತ್ರದ ಹಾಲುಬಣ್ಣದ ಹರಳುಗಳು ಉಕ್ಕುವುದು– ಇವೆಲ್ಲಾ ಲಕ್ಷಣಗಳು. ಕರಿಗುಡ್ಡೆಯ ಸುತ್ತ ಮಾಸಲು ಬೂದುಬಣ್ಣದ ರಾಶಿ ಕೆರೆಯ ದಂಡೆಯಂತೆ ಕಾಣುವುದು. ವಯಸ್ಸಾದವರಲ್ಲಿ ಕಣ್ಣಿನ ಅಂಚಿನ ಕೋನಗಳಲ್ಲಿ ಇನ್ನೊಂದು ಬಗೆಯ ಕಣ್ಗೆಂಪು ಕಾಣಿಸಿಕೊಳ್ಳುವುದುಂಟು. ಮೊರಾಕ್ಸ್, ಆಕ್ಸೆನ್ ಫೀಲ್ಡ್ ದಂಡಾಣು ಈ ಬಗೆಯ ರೋಗದ ಕಾರಕ. ಕಣ್ಣುಜ್ಜುವಿಕೆ, ಕಣ್ಣುರಿ, ಕಣ್ಣು ಒಣಗಿರುವಂತೆ ಭಾಸ ಕಣ್ಣು ರೆಪ್ಪೆಗಳು ಸ್ವಲ್ಪ ಅಂಟಿಕೊಂಡಿರುವುದು, ಕಣ್ಣಿನ ಕೋನಗಳ ಅಂಚು ಕೆಂಪಾಗಿರುವುದು ಈ ರೋಗದ ಲಕ್ಷಣಗಳು.

ಡಿಫ್ತೀರಿಯಾದ ಪರಿಣಾಮವಾಗಿ ಇಲ್ಲವೆ ಜೊತೆಯಲ್ಲಿಯೇ ಡಿಫ್ತೀರಿಯಾ ದಂಡಾಣುಗಳು ಕೂಡುಪೊರೆಯನ್ನು ಮುತ್ತಿ ಅಲ್ಲಿ ಉರಿಯೂತವನ್ನು ಉಂಟುಮಾಡುತ್ತವೆ. ಆಗ ಕೂಡುಪೊರೆ ಕೆಂಪಾಗಿ ಉರಿಯುವುದಲ್ಲದೆ ಅದರ ಮೇಲೆ ಬೂದು ಹಳದಿ ಮಿಶ್ರಿತ ಬಣ್ಣದ ಪೊರೆಯುಂಟಾಗುವುದು. ಡಿಫ್ತೀರಿಯಾ ದಂಡಾಣುಗಳು ಕಣ್ಣಿನ ಸ್ವಚ್ಛ ಮಂಡಲವನ್ನು ಹೊಕ್ಕು ಅಲ್ಲಿ ವ್ರಣವನ್ನುಂಟುಮಾಡುವುವು. ಅಂತಿಮಾವಸ್ಥೆಯಲ್ಲಿ ರೆಪ್ಪೆಗಳ ವಿಕಾರ ಕಾಣುವುದು. ವಯಸ್ಕರಲ್ಲಿ ಗೊನೊರಿಯಾ ಮೇಹವ್ಯಾಧಿಯ ಪರಿಣಾಮವಾಗಿ ನೇರವಾಗಿಯೋ ಇಲ್ಲವೆ ಸೋಂಕುತಗಲಿದ ಬಟ್ಟೆ ಕರವಸ್ತ್ರಗಳ ಮೂಲಕವೋ ರೋಗದ ಸೋಂಕು ಕಣ್ಣಿಗೆ ತಗಲಿ, ಕಣ್ಣು ಕೆಂಪಾಗಿ ಕೀವುಗಣ್ಣಾಗುವುದು. ಸೋಂಕು ತಗಲಿದ ಕೆಲವು ಗಂಟೆಗಳಿಂದ ಮೂರು ದಿವಸಗಳಲ್ಲಿ ರೋಗ ಕಾಣಿಸಿಕೊಳ್ಳುವುದು. ರೋಗಿ ಕಣ್ಣಲ್ಲಿ ಚುಚ್ಚುನೋವಿರುವುದೆಂದು ಹೇಳುತ್ತಾನೆ. ರೆಪ್ಪೆಗಳು ಬಾತು ಹೆಚ್ಚು ಕೆಂಪಾಗಿ ಕಣ್ಣು ಬಿಡಲಾಗುವುದಿಲ್ಲ. ಬಿಳಿಯ ಗುಡ್ಡೆಯನ್ನು ಮುಚ್ಚಿರುವ ಕೂಡುಪೊರೆ ಊದಿಕೊಂಡು ಸ್ವಚ್ಛ ಮಂಡಲವನ್ನು ಮುಚ್ಚಿರುವುದು. ಕಣ್ಣಿಂದ ನೀರು ಸುರಿಯಲಾರಂಭಿಸಿ, ಆಮೇಲೆ ರಕ್ತಮಿಶ್ರಿತ ನೀರು ಬರಲಾರಂಭಿಸಿ ಕೊನೆಗೆ ಕೀವು ಯಥೇಚ್ಛವಾಗಿ ಸುರಿಯುವುದು. ಗೊನೊಕಾಕಸ್ ಸ್ವಚ್ಛಮಂಡಲವನ್ನು ಸಹ ಹೊಕ್ಕು ವ್ರಣವನ್ನುಂಟುಮಾಡುವುದು. ಚಿಕಿತ್ಸೆ ಸರಿಯಾದ ಹಂತದಲ್ಲಿ ದೊರೆಯದಿದ್ದಲ್ಲಿ ಕುರುಡಾಗುವುದು.

**ಕಣ್ಣು ಕೆರಳುವಿಕೆ :** ಇದು ಸಹ ಒಂದು ಬಗೆಯ ಕೂಡುಪೊರೆಯೂತ(ಕಟಾರ್ ಆಫ್ ದಿ ಐ). ಈ ಸ್ಥಿತಿಗೆ ಕಾರಣಗಳು ಹಲವಾರು. ರಾಸಾಯನಿಕ ವಸ್ತುಗಳು, ದೂಳು, ಕೆಟ್ಟಗಾಳಿ, ಹೊರವಸ್ತುಗಳು, ಗಾಯಗಳು, ಲೋಹದ ಅಣುಗಳು ಮುಂತಾದುವು ಕಣ್ಣೊಳಕ್ಕೆ ಸೇರಿ ಉಜ್ಜುವಂತಾಗಿ ಕಣ್ಣುಗಳು ಕೆಂಪಾಗುತ್ತವೆ. ಇವುಗಳಲ್ಲದೆ ಸೂಕ್ಷ್ಮಾಣುಗಳೂ ದಂಡಾಣುಗಳೂ ಗಾಳಿಯಿಂದಾಗಲಿ ಇಲ್ಲವೆ ರೋಗಿಗಳಿಂದಾಗಲಿ ಕಣ್ಣನ್ನು ಪ್ರವೇಶಿಸಿ ಕಣ್ಗೆಂಪನ್ನು ಉಂಟು ಮಾಡುವುದುಂಟು. ಧೂಮಪಾನದ ಹೊಗೆ,

ಅತಿಮದ್ಯಪಾನ, ಸರಿಹೊಂದದ ಕನ್ನಡಕಗಳು ಹತ್ತಿರದ ಕೆಲಸವನ್ನು ಕನ್ನಡಕಗಳನ್ನು ಬಳಸದೆ ಮಾಡುವುದು. ಸೂಕ್ಷ್ಮತೆ–ಇವು ಕೂಡ ಕಣ್ಣುಗಳಲ್ಲಿ ಕೆಂಪನ್ನೂ ಒಂದು ಬಗೆಯ ಬಳಲಿಕೆ ಮತ್ತು ನೋವನ್ನೂ ಉಂಟುಮಾಡುತ್ತವೆ. ಆಗ ಕಣ್ಣುರೆಪ್ಪೆಗಳು ಭಾರವಾದಂತೆ ಭಾಸವಾಗುವುದು. ಬೆಳಕು ಕಣ್ಣನ್ನು ಚುಚ್ಚಿದಂತೆ ಅನ್ನಿಸುವುದು. ಬೆಳಗ್ಗೆ ಏಳುವಾಗ ಕಣ್ಣುರೆಪ್ಪೆಗಳು ಅಂಟಿಕೊಂಡು ಒಂದು ಬಗೆಯ ಲೋಳೆಯಂಥ ಅಂಟು ರೆಪ್ಪೆಗಳ ಅಂಚಿನಲ್ಲಿ ಕಾಣಿಸುವುದುಂಟು. ಹಲವು ವೇಳೆ ಕಣ್ಣೆಂಪು ಶಾಶ್ವತವಾಗಿರಬಹುದು ಇಲ್ಲವೇ ಬಹಳ ದಿವಸಗಳ ತನಕ ಬಾಧಿಸಬಹುದು. ಕಣ್ಣುರಿ, ಕಣ್ಣೊಳಗೆ ಏನೋ ಹೊರಪದಾರ್ಥ ಬಿದ್ದಂತಿರುವುದು, ಕಣ್ಣಲ್ಲಿ ತೇವವಿಲ್ಲದಿರುವುದು, ಕಣ್ಣುಜ್ಜುವಿಕೆ, ಕಣ್ಣಲ್ಲಿ ನೀರು ಹರಿಯುವುದು– ಇವು ರೋಗಿ ಹೇಳುವ ತೊಂದರೆಗಳು. ಯುಕ್ತ ವಿಶ್ರಾಂತಿ, ನೈರ್ಮಲ್ಯಪಾಲನೆ ಹಾಗೂ ಸಮರ್ಪಕ ಚಿಕಿತ್ಸೆಯಿಂದ ಕಣ್ಣು ಕೆರಳುವಿಕೆಯನ್ನು ಗುಣಪಡಿಸಿಕೊಳ್ಳಬಹುದು. (ಎಸ್.ಟಿ.ಪಿ)

**ಕೂಡು ಬಂಡವಾಳ ಕಂಪನಿ :** ನೋಡಿ–ಕಂಪನಿ.

**ಕೂಡೂ:** ಆಫ್ರಿಕದ ನಿವಾಸಿಯಾದ ಸಮಾಂಗುಲಿಪಾದವುಳ್ಳ ಒಂದು ಸ್ತನಿಜಾತಿ. *ಆರ್ಟಿಯೊಡ್ಯಾಕ್ಟೈಲ* ಗಣಕ್ಕೂ *ಬೋವಿಡೀ* ಕುಟುಂಬಕ್ಕೂ ಸೇರಿದೆ. *ಟ್ರೆಜೆಲಫಸ್* ಎಂಬುದು ಈ ಜಾತಿಯ ವೈಜ್ಞಾನಿಕ ನಾಮ. ಇದರಲ್ಲಿ *ಟ್ರ. ಸ್ಟ್ರೆಪ್ಸಿ ಸಿರಸ್*(ಹಿರಿಯ

ಕೂಡೂ) ಮತ್ತು *ಟ್ರ. ಇಂಬರ್ಬಿಸ್* (ಕಿರಿಯ ಕೂಡೂ) ಎಂಬ ಎರಡು ಪ್ರಭೇದಗಳಿವೆ. ಮೊದಲನೆಯ ಬಗೆ ಜ಼ಾಂಬೆಸಿ ನದಿಯ ದಕ್ಷಿಣಕ್ಕೆ ಅಂಗೋಲದಿಂದ ಹಿಡಿದು ಇಥಿಯೋಪಿಯದವರೆಗೂ ವ್ಯಾಪಿಸಿದೆ. ಎರಡನೆಯ ಬಗೆಯದು ಸೋಮಾಲಿಯ ರಾಜ್ಯ ಮತ್ತು ಪೂರ್ವ ಆಫ್ರಿಕದ ಪೂರ್ವಭಾಗಗಳಲ್ಲಿ ಕಂಡುಬರುತ್ತದೆ.

ಸಾರಂಗ ಮತ್ತು ಕಡವೆಗಳನ್ನು ಹೆಚ್ಚು ಕಡಿಮೆ ಹೋಲುವ ಕೂಡೂ ಬಹಳ ಚೆಲುವಾದ ಪ್ರಾಣಿಯೆಂದು ಹೆಸರಾಗಿದೆ. ಹಿರಿಯ ಕೂಡೂವಿನ ಗಂಡು ಸುಮಾರು 127–180 ಸೆಂ.ಮೀ. ಎತ್ತರವೂ (ಭುಜದ ಬಳಿ) 210–245 ಸೆಂಮೀ ಉದ್ದವೂ ಇದೆ. ಬಾಲ ಸುಮಾರು 45 ಸೆಂಮೀ. ಉದ್ದ ಇದೆ. ತೂಕ ಸುಮಾರು 270 ಕೆಜಿ. ಮೈಬಣ್ಣ ಕೆಂಗಂದಿನಿಂದ ಹಿಡಿದು ನೀಲಿಮಿಶ್ರಿತ ಬೂದು ಬಣ್ಣದವರೆಗೆ ವ್ಯತ್ಯಾಸವಾಗುತ್ತದೆ. ಮೈಮೇಲೆ ಭುಜದಿಂದ ಪೃಷ್ಠದವರೆಗೆ 4–10 ಬಿಳಿಯ ಅಡ್ಡಪಟ್ಟೆಗಳಿವೆ. ಮುಖದ ಮೇಲೆ ಬಿಳಿಯ ನಾಮದಂತಿರುವ ಎರಡು ಪಟ್ಟೆಗಳಿವೆ. ಕೆನ್ನೆ ಮತ್ತು ಎದೆಯ ಮೇಲೆ ಬಿಳಿಮಚ್ಚೆಗಳಿವೆ. ಗಂಟಲು ಭಾಗದಲ್ಲಿ ಇಳಿಬಿದ್ದಿರುವ ಉದ್ದಕೂದಲಿನ ಕೇಸರವಿದೆ. ಗಂಡು ಕೂಡೂವಿನಲ್ಲಿ ಉದ್ದನೆಯ ಬಿರಡೆ ತಿರುಪಿನಂಥ ಎರಡು ಕೊಂಬುಗಳಿವೆ. ಹೆಣ್ಣಿನಲ್ಲಿ ಕೊಂಬುಗಳಿಲ್ಲ.

ಇವು ಸಾಮಾನ್ಯವಾಗಿ ಕುರುಚಲು ಕಾಡಿನ ಅಥವಾ ವೃಕ್ಷಭರಿತ ಪರ್ವತಪ್ರದೇಶಗಳಲ್ಲೇ ವಾಸಿಸುತ್ತವೆ. ಗಂಡು ಹೆಣ್ಣು ಜೊತೆಯಾಗಿ ಇಲ್ಲವೆ 6–7 ಪ್ರಾಣಿಗಳ ಸಣ್ಣ ಹಿಂಡುಗಳಲ್ಲಿ ಇರುವುದೇ ವಾಡಿಕೆ. ಅಪೂರ್ವವಾಗಿ ಒಂಟೊಂಟಿಯಾಗಿರುವುದೂ ಉಂಟು. ಮರಗಿಡಗಳ ಚಿಗುರುಗಳನ್ನು ಮೆಲ್ಲುವ ಇವು ಸಾಧಾರಣವಾಗಿ ಹಗಲೆಲ್ಲ ಬೆಟ್ಟದ ಕಮರಿಗಳ ವಿವಿಕ್ತ ಸ್ಥಳಗಳಲ್ಲಿ ಹುದುಗಿದ್ದು ಸಂಜೆ ಇಲ್ಲವೆ ಬೆಳಗಿನ ಜಾವ ಹೊರಬರುತ್ತವೆ. ಇವುಗಳ ಶ್ರವಣಶಕ್ತಿ ಬಲುಚುರುಕು. ಶತ್ರುಗಳ ಬರವಿನ ಸುಳಿವನ್ನು ತಿಳಿದು ಕ್ಷಣಾರ್ಧದಲ್ಲಿ ನೆಗೆದು ಮಾಯವಾಗುತ್ತವೆ. ನೆಗೆತಕ್ಕೆ ಹೆಸರಾದ ಇವು ಸುಮಾರು 2–2½ ಮೀ. ಎತ್ತರದ ಪೊದೆಗಳನ್ನು ಸರಾಗವಾಗಿ ನೆಗೆಯಬಲ್ಲವು. ಹೆಣ್ಣು ಸುಮಾರು 212 ದಿನಗಳ ಗರ್ಭಧಾರಣೆಯ ಅವಧಿಯ ಅನಂತರ ಒಂದು ಮರಿಯನ್ನು ಈಯುತ್ತದೆ.

ಕಿರಿಯ ಕೂಡೂ ಹಿರಿಯದಕ್ಕಿಂತ ಗಾತ್ರದಲ್ಲಿ ಚಿಕ್ಕದು; ಸುಮಾರು 101 ಸೆಂಮೀ ಎತ್ತರ ಇರುತ್ತದೆ. ಇದರ ಕೊಂಬುಗಳೂ ಚಿಕ್ಕವು. ಮೈ ಬಣ್ಣ ಹಳದಿಮಿಶ್ರಿತ ಬೂದು. ಇದರಲ್ಲಿ ಗಂಟಲಿನ ಕೇಸರ ಇಲ್ಲ. (ಎ.)

**ಕೂಡ್ಲಿಗಿ :** ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಉಪವಿಭಾಗಕ್ಕೆ ಸೇರಿದ ಅತ್ಯಂತ ದೊಡ್ಡ ತಾಲ್ಲೂಕು. ಉತ್ತರದಲ್ಲಿ ಹಡಗಲಿ ಮತ್ತು ಸಂಡೂರು ತಾಲ್ಲೂಕುಗಳೂ ಪೂರ್ವ ದಕ್ಷಿಣಗಳಲ್ಲಿ ಚಿತ್ರದುರ್ಗ ಜಿಲ್ಲೆಯೂ ಪಶ್ಚಿಮದಲ್ಲಿ ಹರಪನಹಳ್ಳಿ ತಾಲ್ಲೂಕೂ ಇವೆ. ಸ್ಥೂಲವಾಗಿ ಪೂ.ರೇ. 76°25$^{l}$–76° 85$^{l}$ ಮತ್ತು ಉ. 14°33$^{l}$–15°4$^{l}$ ನಡುವೆ ಈ ತಾಲ್ಲೂಕು ಹರಡಿದೆ. ವಿಸ್ತೀರ್ಣ 703 ಚ.ಕಿ.ಮೀ. ಈ ತಾಲ್ಲೂಕಿನ ಗ್ರಾಮಗಳ ಸಂಖ್ಯೆ 93. 1891ರಲ್ಲಿ ಈ ತಾಲ್ಲೂಕಿನ ಜನಸಂಖ್ಯೆ 94,296 ಇದ್ದದ್ದು 1901ರಲ್ಲಿ 1,03,985ಕ್ಕೆ ಏರಿ, 1951ರಲ್ಲಿ 1,08,462 ಆಗಿದ್ದು. 2001ರ ಜನಸಂಖ್ಯೆ 21,855.

ಮೌರ್ಯರು (ಅಶೋಕ), ಸಾತವಾಹನರು, ಪಲ್ಲವರು, ಕದಂಬರು ಮತ್ತು ಚಾಳುಕ್ಯರು ಈ ತಾಲ್ಲೂಕನ್ನು ಆಳಿದರು. ರಾಷ್ಟ್ರಕೂಟರ ಕಾಲದಲ್ಲಿ ಇದು ಅವರ ಸಾಮಂತರಾಗಿದ್ದ ಗಂಗರ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರದ ಅರಸರ ಕಾಲ ಈ ತಾಲ್ಲೂಕಿನ ಇತಿಹಾಸದ ಸ್ವರ್ಣಯುಗವಾಗಿತ್ತು. ಆ ಸಾಮ್ರಾಜ್ಯ ಕಣ್ಮರೆಯಾದ ಮೇಲೆ ಈ ಪ್ರದೇಶ ಹೈದರ್ ಆಲಿ ಮತ್ತು ಟಿಪ್ಪೂ ಆಳ್ವಿಕೆಗೆ ಸೇರಿತು. ಟಿಪ್ಪೂವಿನ ಪತನದ ಅನಂತರ ಇದು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟು, ಮದ್ರಾಸ್ ಆಧಿಪತ್ಯದಲ್ಲಿ ಸೇರಿತು. ಸ್ವಾತಂತ್ರ್ಯಾ ನಂತರ 1953ರ ಅಕ್ಟೋಬರ್‌ನಲ್ಲಿ ಬಳ್ಳಾರಿ ಜಿಲ್ಲೆಯೊಂದಿಗೆ ಕರ್ನಾಟಕಕ್ಕೆ ಸೇರಿತು.

ಕೂಡ್ಲಿಗಿ ತಾಲ್ಲೂಕು ದಖ್ಖನಿನ ಉತ್ತರದ ಇಳಿಜಾರಿನಲ್ಲಿದೆ; 606–454 ಮೀ. ಎತ್ತರದಲ್ಲಿ ಈಶಾನ್ಯದ ಕಡೆಗೆ ಇಳಿಜಾರಾಗಿದೆ. ಪೂರ್ವದ ಅಂಚಿನಲ್ಲಿ ಸಂಡೂರು ಪರ್ವತಗಳ ಸ್ವಲ್ಪ ಭಾಗವುಂಟು. ತಾಲ್ಲೂಕಿನ ಮಧ್ಯದಲ್ಲೂ ಅನೇಕ ಸಣ್ಣ ಬೆಟ್ಟಗಳಿವೆ. ಉಳಿದ ಪ್ರದೇಶ ಸಾಮಾನ್ಯವಾಗಿ ಪ್ರಸ್ಥಭೂಮಿ.

ತುಂಗಭದ್ರೆಯ ಉಪನದಿಯಾದ ಚಿಕ್ಕಹಗರಿ ನದಿ ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹರಿಯುತ್ತದೆ. ಆಗ್ನೇಯ ಭಾಗದಲ್ಲಿ ತಾಲ್ಲೂಕು ಮೇರೆಯ ವರೆಗೆ ಹರಿಯವ ನದಿ ಚಿನ್ನಹಗರಿ(ಜಿಗಣಿ ಹಳ್ಳ). ಇವು ವಿಶಾಲವಾದ ಆದರೆ ಆಳವಿಲ್ಲದ ನದಿಗಳು. ನದಿಪಾತ್ರಗಳ ಮರಳು ದಡಗಳಲ್ಲಿ ಹರಡಿದೆ. ವರ್ಷದಲ್ಲಿ ಹೆಚ್ಚು ಕಾಲ ಈ ನದಿಗಳು ಒಣಗಿರುತ್ತವೆ.

ಇತಿಹಾಸದ ಅತ್ಯಂತ ಪ್ರಾಚೀನ ಶಿಲೆಗಳು ಇಲ್ಲುಂಟು. ಪಶ್ಚಿಮಾರ್ಧದಲ್ಲಿರುವವು ಧಾರವಾಡ ಪದರಶಿಲೆಗಳು. ಇವು ಒಂದರ ಮೇಲೊಂದರಂತೆ ನಾಲ್ಕು ಪದರಗಳಾಗಿ ಹರಡಿವೆ. ಪೂರ್ವಾರ್ಧದಲ್ಲಿ ಪರ್ಯಾಯದ್ವೀಪೀಯ ಪದರ ಶಿಲೆಗಳಿವೆ. ಆಗ್ನೇಯದ ಸ್ವಲ್ಪ ಭಾಗದಲ್ಲಿ ಮಾತ್ರ ಬೆಣಚುಕಲ್ಲುಂಟು.

ಇಲ್ಲಿಯದು ಕೆಂಪು ಮತ್ತು ಬಿಳಿ ಕೆಂಪು ಮಿಶ್ರವಾದ ಮಣ್ಣು. ಗ್ರಾನೈಟಿನ ಪೃಥಕ್ಕರಣದಿಂದುಂಟಾದ ಈ ಮಣ್ಣು ಎರೆ ಮತ್ತು ಮರಳಿನ ರೂಪದಲ್ಲಿದೆ. ಇದು ಮಸಾರೆ ನೆಲವೂ ಹೌದು. ಕೊಟ್ಟೂರಿನ ಸುತ್ತಮುತ್ತ ಇರುವುದು ಕರಿಕಲ್ಮಣ್ಣು. ತಾಲ್ಲೂಕಿನ 1/3 ಭಾಗದಲ್ಲಿ ಕೆಂಪು ಮಣ್ಣೂ 1/8 ಭಾಗದಲ್ಲಿ ಮಿಶ್ರ ಮಣ್ಣೂ ಇವೆ.

ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿಯ ಪ್ರಾಕೃತಿಕ ಸೌಂದರ್ಯ ಅತಿಶಯವಾದ್ದು. ಉತ್ತರದಲ್ಲೂ ಪೂರ್ವಮಧ್ಯಗಳಲ್ಲೂ ಕಾಡುಗಳುಂಟು. ಇತ್ತೀಚೆಗೆ ಅವುಗಳಲ್ಲಿ ಕೆಲವನ್ನು ಕಡಿದು ವ್ಯವಸಾಯ ಭೂಮಿಯನ್ನಾಗಿ ಮಾಡಿದ್ದಾರೆ. ಬೈರದೇವರ ಗುಡ್ಡ ಮುಂತಾದ ಬೆಟ್ಟಗಳ ಸುತ್ತಮುತ್ತ ಪ್ರಸಿದ್ಧ ಅರಣ್ಯಗಳಿವೆ. ಹುಲ್ಲು ಮತ್ತು ಕುರುಚಲು ಗಿಡಗಳಿಂದ ಕೂಡಿದ ಪ್ರದೇಶಗಳುಂಟು. ಕಾಲುವೆಗಳ ಅಂಚುಗಳಲ್ಲಿ ಈ ಮರಗಳ ತೋಪುಗಳುಂಟು. ತಂಗಡಿ ಮತ್ತು ಹಂಗರಿಕೆ (ಡೊಡೋನಿಯ) ಸಸ್ಯಗಳ ಪೊದೆಗಳು ಎಲ್ಲೆಲ್ಲೂ ಕಾಣುತ್ತವೆ. ಚಿರತೆಗಳು ಸಾಮಾನ್ಯ.

ಇಲ್ಲಿಯ ವಾಯುಗುಣ ಶುಷ್ಕ. ಆದರೂ ಆರೋಗ್ಯಕರ. ಅನೇಕ ಬೆಟ್ಟಗುಡ್ಡಗಳು ಮತ್ತು ಕೆರೆಗಳಿರುವುದರಿಂದ ಅಲ್ಲಲ್ಲಿ ಮಲೇರಿಯ ವ್ಯಾಧಿಯಿತ್ತು. ಈಚೆಗೆ ಅದನ್ನು ನಿವಾರಿಸಲಾಗಿದೆ. ವರ್ಷಪೂರ್ತಿ ಉಷ್ಣತೆ ಹೆಚ್ಚು. ಜೂನಿನಿಂದ ಅಕ್ಟೋಬರ್ ತನಕ ಮುಂಗಾರು ಮಳೆಯೂ, ಡಿಸೆಂಬರ್ ತನಕ ಹಿಂಗಾರು ಮಳೆಯೂ ಬೀಳುತ್ತವೆ. ವಾರ್ಷಿಕ ಮಳೆ 38–44 ಸೆಂ.ಮೀ. ಅದೂ ಅನಿಶ್ಚಿತ. ಆದರೆ ಕೆಲವೊಮ್ಮೆ ಅತಿವೃಷ್ಟಿಯಾಗುವುದೂ ಉಂಟು.

ಈ ತಾಲ್ಲೂಕಿನಲ್ಲಿ ನೀರಾವರಿ ಅನುಕೂಲಗಳು ಕಡಿಮೆ. ಇಲ್ಲಿ ಅನೇಕ ಕೆರೆ ಬಾವಿಗಳಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕೆರೆಗಳ ನಿರ್ಮಾಣಕ್ಕೆ ಗಮನ ಕೊಡಲಾಯಿತು. ಹಗರಿಬೊಮ್ಮನಹಳ್ಳಿಯ ಬಳಿ ಇರುವುದು ಜಿಲ್ಲೆಯ ಎರಡನೆಯ ದೊಡ್ಡ ಕಟ್ಟೆ. ಇದರಿಂದ

ಉತ್ತರಭಾಗದ ತಾಲ್ಲೂಕುಗಳಿಗೆ ನೀರು ಒದಗುತ್ತದೆ. ತಾಲ್ಲೂಕಿನ ಮುಖ್ಯ ಕಸುಬು ಕೃಷಿ. ಜೋಳ, ಹರಳುಬೀಜ, ಹುಣಿಸೆಹಣ್ಣು– ಇವು ಈ ತಾಲ್ಲೂಕಿನ ಕೃಷಿ ಉತ್ಪನ್ನಗಳು. ಪಶುಪಾಲನೆ ಎರಡನೆಯ ಮುಖ್ಯ ಕಸಬು. ಉದ್ದೆಳೆಯ ಉಣ್ಣೆ ಕೊಡುವ ಕುರಿಗಳನ್ನು ಹೆಚ್ಚಾಗಿ ಸಾಕುತ್ತಾರೆ; ಮರಗೆಲಸ, ಕಂಬಳಿ ಮತ್ತು ಜಮಖಾನೆ ನೇಯುವುದು. ಕೈಮಗ್ಗದ ಬಟ್ಟೆ ಮಾಡುವುದು ಇತ್ಯಾದಿ ಗೃಹಕೈಗಾರಿಕೆ ಗಳಿವೆ. ಈ ತಾಲ್ಲೂಕಿನಲ್ಲಿರುವ ಬೈರದೇವರ ಗುಡ್ಡದಲ್ಲಿ ಗಂಧಕ ಹೇರಳವಾಗಿ ದೊರೆಯುತ್ತದೆಂದು ಹೇಳಲಾಗಿದೆ. 1967ರಲ್ಲಿ ಕೊಟ್ಟೂರಿನಲ್ಲಿ ಒಂದು ಕಾಲೇಜು ಪ್ರಾರಂಭವಾಯಿತು. ಕೂಡ್ಲಿಗಿ, ಕೊಟ್ಟೂರು, ಹೊಸಹಳ್ಳಿ, ಮಾಳವಿ– ಇವು ತಾಲ್ಲೂಕಿನ ಮುಖ್ಯ ಊರುಗಳು.

ಕೊಟ್ಟೂರು ವ್ಯಾಪಾರಕೇಂದ್ರ. ಇಲ್ಲಿಂದ ಹರಿಹರಕ್ಕೆ ರೈಲುಮಾರ್ಗ ನಿರ್ಮಿಸುವ ಯೋಜನೆ ಇದೆ. ಇಲ್ಲಿರುವ ಬಸವೇಶ್ವರ ದೇವಾಲಯಗಳು ಪ್ರೇಕ್ಷಣೀಯ. ಊರಿನ ಮಧ್ಯದಲ್ಲಿ ಕೊಟ್ರಬಸಪ್ಪನ ದೊಡ್ಡ ದೇವಾಲಯವಿದೆ. ಪ್ರತಿವರ್ಷ ಫೆಬ್ರವರಿಯಲ್ಲಿ ಗುರುಬಸವೇಶ್ವರ ಸ್ವಾಮಿಯ ಜಾತ್ರೆಯಾಗುತ್ತದೆ. ಇಲ್ಲಿಯ ಮುಖ್ಯ ಕಸಬು ನೇಯ್ಗೆ. ಇದು ವ್ಯಾಪಾರ ಕೇಂದ್ರವೂ ಆಗಿದೆ.

ಕೊಟ್ಟೂರಿಗೆ ದಕ್ಷಿಣದಲ್ಲಿ 14.4 ಕಿ.ಮೀ ದೂರದಲ್ಲಿ ಉಜ್ಜಯಿನಿಯಲ್ಲಿ ಶ್ರೀಮರುಳಸಿದ್ಧನ ದೇವಾಲಯವಿದೆ. ಇಲ್ಲಿಯ ಶಿಲ್ಪಕಲೆ ಪ್ರಸಿದ್ಧವಾದ್ದು. ಇಲ್ಲಿ ಪ್ರತಿ ವರ್ಷವೂ ಏಪ್ರಿಲ್‌ನಲ್ಲಿ ಜಾತ್ರೆಯಾಗುತ್ತದೆ.

ತಾಲ್ಲೂಕು ಕೇಂದ್ರ ಕೂಡ್ಲಿಗಿ. ಇದು ಸಂಚಾರ ಮಾರ್ಗಗಳ ಸಂಧಿಸ್ಥಳ. ತುಂಗಭದ್ರಾ ವಿದ್ಯುತ್ ಕೇಂದ್ರದಿಂದ ಬರುವ ವಿದ್ಯುತ್ತಿನ ಸ್ವೀಕಾರಕೇಂದ್ರ ಮತ್ತು ಕೇಂದ್ರಗಳಿವೆ. ಈ ಸಾಲು ಮುಂದೆ ದಾವಣಗೆರೆ, ಭದ್ರಾವತಿಗಳಿಗೆ ಹೋಗುತ್ತದೆ. ಇಲ್ಲಿ ನಿಯಂತ್ರಿತ ಮಾರುಕಟ್ಟೆ ಇದೆ. (ಕೆ.ಆರ್.ಆರ್.)

**ಕೂದಲು :** ಸ್ತನಿಗಳ (ಮ್ಯಾಮಲ್ಸ್) ಚರ್ಮದ ಎಪಿಡರ್ಮಿಸ್ ಪದರದಿಂದ ಹುಟ್ಟಿ ಬೆಳೆದು ದೇಹದ ತುಪ್ಪುಳು ಅಥವಾ ಹೊದಿಕೆಯನ್ನು ಉಂಟುಮಾಡುವ ಎಳೆರೂಪದ ನಿರ್ಜೀವ ಬಾಹ್ಯ ಬೆಳೆವಣಿಗೆ (ಹೇರ್). ಕೂದಲು ಬಹಳ ಉದ್ದವಾಗಿಯೊ ಇಲ್ಲವೆ ಅತಿ ಕಿರಿಯದಾಗಿಯೊ ಇರಬಹುದು. ಇದರಲ್ಲಿ ಕೆರಟಿನ್ ಎಂಬ ವಿಶೇಷ ಬಗೆಯ ವಸ್ತುವಿನಿಂದ ಆವೃತವಾದ ಹಲವಾರು ಜೀವಕೋಶಗಳಿವೆ. ಇವೆಲ್ಲ ಒಟ್ಟಿಗೆ ಕೂಡಿಕೊಂಡು ಎಳೆಯಂಥ ರಚನೆಯಾಗುತ್ತದೆ. ಸ್ತನಿಗಳಲ್ಲಿ ಮಾತ್ರ ಕಂಡುಬರುವ ಈ ವಿಶೇಷ ರಚನೆ ಪ್ರಾಣಿಪ್ರಪಂಚದ ಬೇರಾವ ಪ್ರಾಣಿಗಳಲ್ಲೂ ಇಲ್ಲ. ಈ ಕಾರಣದಿಂದ ಸ್ತನಿ ಗುಂಪಿಗೆ ಪೈಲಿಫೆರ(ಅಂದರೆ ಕೂದಲುಳ್ಳ ಪ್ರಾಣಿಗಳು) ಎಂಬ ಹೆಸರನ್ನು ಕೊಡಬೇಕೆಂಬ ಸೂಚನೆಯೂ ಇದೆ. ಸ್ತನಿಗಳಲ್ಲಿ ಮಾತ್ರ ಕೂದಲು ಕಂಡುಬಂದರೂ ಸ್ತನಿಗಳಲ್ಲದ ಬೇರೆ ಪ್ರಾಣಿಗಳ ದೇಹದ ಮೇಲಿರುವ ಒರಟಾದ, ಬಿರುಸಾದ ಎಳೆಗಳಂಥ ರಚನೆಗಳಿಗೂ ಸಸ್ಯಗಳ ಕಾಂಡ. ಬೇರು ಮತ್ತು ಎಲೆಗಳ ಮೇಲೆ ಕಾಣಬರುವ ಏಕಕೋಶಿ ಅಥವಾ ಬಹುಕೋಶಿ ಎಳೆಗಳಿಗೂ ಕೂದಲು ಎಂಬ ಹೆಸರೇ ಇದೆ. ಆದರೆ ಇವಕ್ಕೂ ಸ್ತನಿಗಳ ಕೂದಲಿಗೂ ಭಿನ್ನತೆಯಿದೆ. ಈ ಲೇಖನದಲ್ಲಿ ಸ್ತನಿಗಳ (ಮನುಷ್ಯನೂ ಸೇರಿ) ಕೂದಲನ್ನು ಮಾತ್ರ ವಿವರಿಸಲಾಗಿದೆ.

ಕೂದಲು ಇಲ್ಲದ ಸ್ತನಿಯೇ ಇಲ್ಲ. ಆದರೆ ಇದರ ಮೊತ್ತದಲ್ಲಿ ವ್ಯತ್ಯಾಸವಿದೆ. ಕೆಲವು ಪ್ರಾಣಿಗಳ ದೇಹದಲ್ಲಿ ಕೂದಲು ಬಲು ವಿರಳವಾಗಿದೆ. ಉದಾಹರಣೆಗೆ ಜಲವಾಸಿಯಾದ ತಿಮಿಂಗಿಲದಲ್ಲಿ ಅದರ ಮೂತಿಯ ಮೇಲೆ ಮಾತ್ರ ಕೆಲವೇ ಕೂದಲುಗಳಿವೆ. ಈ ಸ್ಥಿತಿಗೆ ಹೈಪೊಟ್ರೈಕೋಸಿಸ್ ಎಂದು ಹೆಸರು. ಇನ್ನು ಕೆಲವು ಪ್ರಾಣಿಗಳ ದೇಹವೆಲ್ಲ ಕೂದಲುಮಯ. ಉದಾಹರಣೆಗೆ ಕರಡಿ. ಈ ಸ್ಥಿತಿಗೆ ಹೈಪರ್‌ಟ್ರೈಕೋಸಿಸ್ ಎಂದು ಹೆಸರು. ಆದರೆ ಎಲ್ಲ ಸ್ತನಿಗಳಲ್ಲೂ ಅವುಗಳ ಗರ್ಭಾವಸ್ಥೆಯಲ್ಲಿ ಕೂದಲು ಇದ್ದೇ ಇರುತ್ತದೆ. ಮನುಷ್ಯನಲ್ಲಿ ಅಂಗೈ, ಅಂಗಾಲು, ತುಟಿ, ಮೊಲೆತೊಟ್ಟು, ಹೊಕ್ಕುಳು ಮುಂತಾದ ಕೆಲವು ಭಾಗಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳಲ್ಲೂ ಕೂದಲು ಇದೆ.

**ಕೂದಲಿನ ಬಗೆಗಳು:** ಕೂದಲಿನ ಬಾಹ್ಯರೂಪದಲ್ಲೂ ಬಣ್ಣದಲ್ಲೂ ವೈವಿಧ್ಯ ಉಂಟು. ಕೆಲವು ರೀತಿಯ ಕೂದಲುಗಳು ನಯ, ನುಣುಪು ಮತ್ತು ಮೃದು. ಇನ್ನು ಕೆಲವು ಗಡುಸು ಮತ್ತು ಒರಟು. ಹಾಗೆಯೇ ಕೂದಲು ನೀಳವಾಗಿರಬಹುದು(ಸ್ಟ್ರೇಟ್), ಅಲೆಗಳಂತಿರಬಹುದು(ವೇವಿ) ಇಲ್ಲವೆ ಗುಂಗುರುಗುಂಗುರಾಗಿರಬಹುದು(ಕರ್ಲಿ). ಮಾನವನ ವಿವಿಧ ಬುಡಕಟ್ಟುಗಳಲ್ಲಿ ಈ ವ್ಯತ್ಯಾಸಗಳನ್ನು ಚೆನ್ನಾಗಿ ಕಾಣಬಹುದು. ಮಂಗೋಲಾಯ್ಡ್‌ಗಳ ಕೂದಲು ಉದ್ದ, ನೀಳ ಮತ್ತು ಒರಟು. ವಿಪರೀತ ಗುಂಗುರಾಗಿರುವ ಕೂದಲು ನೀಗ್ರಾಯಿಡ್‌ಗಳಲ್ಲಿ ಹೆಚ್ಚು. ಮೃದುವಾದ, ರೇಷ್ಮೆಯಂಥ, ಅಲೆಗಳ ರೂಪದ ಕೂದಲು ಕಾಕಸಾಯಿಡ್‌ಗಳಲ್ಲಿ ಕಂಡುಬರುತ್ತದೆ. ಇವು ಮೂರು ಮುಖ್ಯ ಬಗೆಗಳಾದರೆ ಇವುಗಳ ಮಧ್ಯವರ್ತಿ ಬಗೆಯ ಕೂದಲುಗಳನ್ನೂ ಕಾಣಬಹುದಾಗಿದೆ. ವಿವಿಧ ಬಗೆಯ ಕೂದಲುಗಳ ಅಡ್ಡಸೀಳಿಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಅವುಗಳ ಆಕಾರಗಳಲ್ಲಿಯ ವ್ಯತ್ಯಾಸಗಳನ್ನು ಗಮನಿಸಬಹುದು. ನೀಳವಾದ ಕೂದಲಿನಲ್ಲಿ ಅಡ್ಡಸೀಳಿಕೆ ಗುಂಡಗಿರುತ್ತದೆ. ಅಲೆಗಳಂಥ ಕೂದಲಿನ ಅಡ್ಡಸೀಳಿಕೆ ಅಂಡಾಕಾರವನ್ನು ತೋರುತ್ತದೆ. ಗುಂಗುರುಕೂದಲಿನ ಅಡ್ಡಸೀಳಿಕೆ ಚಪ್ಪಟೆಯಾಗಿಯೊ ಅವರೆ ಬೀಜದಾಕಾರದಲ್ಲೊ ಇರುತ್ತದೆ.

ಕೂದಲಿನ ಬಣ್ಣದಲ್ಲಿ ನಸುಕಂದಿನಿಂದ ಹಿಡಿದು ಕರಿಬಣ್ಣದವರೆಗೂ ವ್ಯತ್ಯಾಸವನ್ನು ಕಾಣಬಹುದು. ಕಾಕಸಾಯಿಡ್ ಬುಡಕಟ್ಟಿನಲ್ಲಿ ನಸುಕಂದು ಬಣ್ಣವೇ ಪ್ರಮುಖವಾದರೆ ನೀಗ್ರಾಯಿಡ್‌ಗಳಲ್ಲಿ ಕಪ್ಪುಬಣ್ಣ ಹೆಚ್ಚು ಪ್ರಾಮುಖ್ಯ. ಕೂದಲಿನ ಬಣ್ಣಕ್ಕೆ ಮುಖ್ಯ ಕಾರಣ ಇದರ ಒಳಗಿನ ಜೀವಕೋಶಗಳಲ್ಲಿರುವ ಮೆಲನಿನ್ ಎಂಬ ವರ್ಣಕ. ಇದರ ಪರಿಮಾಣ ವಿವಿಧ ಬಗೆಯ ಕೂದಲುಗಳಲ್ಲಿ ಬೇರೆಬೇರೆಯಾಗಿದ್ದು ಕೂದಲಿನ ಒಟ್ಟು ಬಣ್ಣದ ವೈವಿಧ್ಯಕ್ಕೆ ಕಾರಣವಾಗಿದೆ. ಅಲ್ಲದೆ ಕೂದಲಿನ ಕೇಂದ್ರಭಾಗವಾದ ಮಿಡಲ ಎಂಬುದರ ಜೀವಕೋಶಗಳ ನಡುವೆ ಇರುವ ಸೂಕ್ಷ್ಮವಾದ ಗಾಳಿಗುಳ್ಳೆಗಳೂ ಕೂದಲಿನ ಹೊರಮೈಯೂ ಕೂದಲಿನ ವರ್ಣ ವ್ಯತ್ಯಾಸಕ್ಕೂ ಹೊಳಪಿಗೂ ಕಾರಣಗಳೆಂದು ತಿಳಿದುಬಂದಿದೆ.

ಮೆಲನಿನ್ ವರ್ಣಕದ ಉತ್ಪತ್ತಿ ನಿಂತಾಗ ಕೂದಲಿನಲ್ಲಿರುವ ವರ್ಣಕ ನಾಶವಾಗುತ್ತದೆ. ಕೂದಲು ನರೆಯುತ್ತದೆ. ಸಾಮಾನ್ಯವಾಗಿ ಮನುಷ್ಯರಲ್ಲಿ ಕೂದಲಿನ ನರೆಯುವಿಕೆ 40–45 ವರ್ಷ ವಯಸ್ಸಾದ ಮೇಲೆ ತಲೆಯ ಎರಡೂ ಬದಿಗಳಲ್ಲಿ ಕಿವಿಯ ಮೇಲ್ಗಡೆ ಆರಂಭವಾಗಿ ಕ್ರಮೇಣ ತಲೆಯನ್ನೆಲ್ಲ ಆವರಿಸುತ್ತದೆ. ದೇಹದ ಉಳಿದ ಭಾಗಗಳಲ್ಲೂ ಕೆಲಕಾಲಾನಂತರ ಕೂದಲು ನರೆಯುವುದುಂಟು. ಆದರೆ ಅನೇಕ ವೇಳೆ ಕೆಲವು ಕಾಯಿಲೆಗಳಿಂದ, ಮಾನಸಿಕ ಆಘಾತದಿಂದ ಕೂದಲು ಬೇಗನೆ ನರೆಯುವುದೂ ಇದೆ. ಅಲ್ಲದೆ ಬಹಳ ಚಿಕ್ಕ ವಯಸ್ಸಿನಲ್ಲೇ ಕೂದಲು ನರೆಯಬಹುದು. ಹೀಗಾಗುವುದನ್ನು ಅಕಾಲನರೆ ಎನ್ನುತ್ತಾರೆ. ಇದು ಆನುವಂಶಿಕ ದೋಷವೆಂದು ತಿಳಿದಿದೆ. ಮನುಷ್ಯರಲ್ಲಿ ಕೂದಲ ನರೆ ಜೀವಮಾನದಲ್ಲಿ ಒಂದು ಬಾರಿ ಮಾತ್ರ ಆಗುವುದಾದರೆ ಕೆಲವು ಪ್ರಾಣಿಗಳಲ್ಲಿ ವರ್ಷದ ಋತುಗಳಿಗನುಗುಣವಾಗಿ ಬಿಳಿ ಮತ್ತು ಕರಿಯ ಕೂದಲುಗಳು ಪರ್ಯಾಯವಾಗಿ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಮೇರು ಪ್ರದೇಶದ ನರಿ ಮತ್ತು ಮೊಲ. ಬೇಸಗೆಯಲ್ಲಿ ಕಗ್ಗಂದು ಅಥವಾ ಕಪ್ಪಗಿರುವ ಇವುಗಳ ಕೂದಲು ಚಳಿಗಾಲ ಬಂದಂತೆ ವರ್ಣರಹಿತವಾಗುತ್ತ ಬಂದು ಕೊನೆಗೆ ಬಿಳಿಬಣ್ಣವಾಗುತ್ತವೆ. ಬೇಸಗೆ ಬಂದಾಗ ಕಪ್ಪಗಾಗುತ್ತವೆ.

ಕೂದಲಿನ ರೂಪರಚನೆ ಮತ್ತು ಕಾರ್ಯವ್ಯಾಪ್ತಿಯ ಆಧಾರದ ಮೇಲೆ ಮನುಷ್ಯನ ದೇಹದಲ್ಲಿ ಮೂರು ಬಗೆಯ ಕೂದಲನ್ನೂ ಇತರ ಸ್ತನಿಗಳ ದೇಹದಲ್ಲಿ ಎರಡು ಬಗೆಯ ಕೂದಲನ್ನೂ ಗುರುತಿಸಬಹುದು.

**ಮನುಷ್ಯನ ಕೂದಲು 3 ಬಗೆ:** 1.ಲ್ಯಾನುಗೋ–ಗರ್ಭದೊಳಗಿನ ಶಿಶುವಿನ ದೇಹದ ಮೇಲಿರುವ ಬಗೆ. ಈ ಬಗೆಯಕೂದಲು ಸಾಮಾನ್ಯವಾಗಿ ಕೂಸು ಹುಟ್ಟುವುದಕ್ಕೆ 5–6 ತಿಂಗಳ ಮುಂಚೆಯೇ ಹುಟ್ಟಿ ಸುಮಾರು 2 ತಿಂಗಳ ತನಕ ಬೆಳೆಯುತ್ತದೆ. ಇದು ಬಲು ಮೃದುವಾಗಿಯೂ ಸೂಕ್ಷ್ಮವಾಗಿಯೂ ತೆಳುವಾಗಿಯೂ ಇದೆ. ಬಣ್ಣ ಇಲ್ಲ. ಕೂಸು ಹುಟ್ಟುವುದಕ್ಕೆ ಸ್ವಲ್ಪ ಮುಂಚೆ ಇಲ್ಲವೆ ಹುಟ್ಟಿದ ಕೆಲವೇ ದಿನಗಳಲ್ಲಿ ಉದುರಿಹೋಗುತ್ತದೆ. 2. ವೆಲಸ್– ಕೂಸು ಹುಟ್ಟಿದ ಮೇಲೆ ಕ್ರಮೇಣ ದೇಹದ ಮೇಲೆಲ್ಲ ಬೆಳೆಯುವ ಕೂದಲು. ಇದು ಸಹ ಮೃದುವಾಗಿ ಚಿಕ್ಕದಾಗಿ ಇದೆ. ಬಣ್ಣ ಹೆಚ್ಚಾಗಿಲ್ಲ. ವೆಲಸ್ ಕೂದಲು ಬೆಳೆಯುತ್ತಿರುವಂತೆಯೆ ಹುಬ್ಬು, ತಲೆ, ರೆಪ್ಪೆಗಳ ಮೃದುವಾದ ಲ್ಯಾನುಗೊ ಕೂದಲುಗಳು ಕ್ರಮೇಣ ಉದ್ದವಾಗುತ್ತ ಬರುತ್ತವೆ. ಕೆಲ ಕಾಲಾನಂತರ ಉದ್ದವಾದ ಹೆಚ್ಚು ಬಿರುಸಾದ ಕೂದಲುಗಳು ಇಲ್ಲೆಲ್ಲ ಬೆಳೆಯುತ್ತವೆ. 3.ಟರ್ಮಿನಲ್– ಪ್ರೌಢಾವಸ್ಥೆಯನ್ನು ತಲುಪಿದ ಅನಂತರ ಮೂಡುವ ಕೂದಲು. ಉಳಿದೆರಡು ಬಗೆಗಳಿಗಿಂತ ಹೆಚ್ಚು ಉದ್ದವೂ ಒರಟೂ ಬಣ್ಣವುಳ್ಳದ್ದೂ ಆಗಿದೆ. ಇದು ಸಾಮಾನ್ಯವಾಗಿ ಕಂಕುಳು, ಮುಂಡದ ಕೆಲವು ನಿರ್ದಿಷ್ಟ ಪ್ರದೇಶಗಳು, ಕೈಕಾಲುಗಳು, ಜನನೇಂದ್ರಿಯಗಳ ಸುತ್ತಣ ಪ್ರದೇಶ ಮತ್ತು ಗಂಡಸರಲ್ಲಿ ಕೆನ್ನೆ ಮತ್ತು ಮೇಲ್ತುಟಿಯ ಮೇಲ್ಭಾಗದಲ್ಲಿ ಬೆಳೆಯುತ್ತದೆ. ಅಪೂರ್ವವಾಗಿ ಹೆಂಗಸರಲ್ಲೂ ಕೆನ್ನೆಯ ಮೇಲೆ, ತುಟಿಯ ಮೇಲೆ ಕಾಣಿಸಿಕೊಳ್ಳುವುದುಂಟು. ಟರ್ಮಿನಲ್ ಕೂದಲಿನ ಒಟ್ಟು ಪರಿಮಾಣ ವ್ಯಕ್ತಿ, ಬುಡಕಟ್ಟು, ವ್ಯಕ್ತಿಯ ಲಿಂಗ ಇವುಗಳಿಗೆ ಅನುಗುಣವಾಗಿ ಭಿನ್ನತೆಯನ್ನು ಪ್ರದರ್ಶಿಸುತ್ತದೆ. ಸಾಮಾನ್ಯವಾಗಿ ಗಂಡಸಿನಲ್ಲಿ ಇದರ ಪರಿಮಾಣ ಹೆಚ್ಚು, ಹೆಂಗಸಿನಲ್ಲಿ ವೆಲಸ್ ಕೂದಲಿನ ಪರಿಮಾಣವೇ ಹೆಚ್ಚು. ಒಟ್ಟಾರೆ ಹೇಳುವುದಾದರೆ ಮನುಷ್ಯನಲ್ಲಿ ಟರ್ಮಿನಲ್ ಕೂದಲಿನ ಪರಿಮಾಣ ಕಡಿಮೆ. ಇತರ ಸ್ತನಿಗಳಲ್ಲಿ ಹೆಚ್ಚು.

ಪ್ರಾಣಿಗಳಲ್ಲಿ ಸ್ಪರ್ಶಗ್ರಾಹಿ (ಟ್ಯಾಕ್ಟೈಲ್) ಕೂದಲು ಮತ್ತು ಹೊದಿಕೆಯ (ಕೋಟ್) ಕೂದಲು ಎಂಬ ಎರಡು ಬಗೆಗಳಿವೆ. ಸ್ಪರ್ಶಗ್ರಾಹಿ ಕೂದಲುಗಳ ಬುಡದಲ್ಲಿ ವಿಪುಲವಾಗಿ ಕವಲೊಡೆದ ರಕ್ತನಾಳ ಮತ್ತು ನರಗಳಿದ್ದು ಈ ಕೂದಲುಗಳು ಇವುಗಳ ಹೆಸರೇ ಹೇಳುವಂತೆ ಸ್ಪರ್ಶಕ್ಕೆ ಸೂಕ್ಷ್ಮವೇದಿಗಳಾಗಿದೆ. ಇವಕ್ಕೆ ವೈಬ್ರಿಸೀ ಎಂಬ ಹೆಸರೂ ಇದೆ. ಉದಾಹರಣೆಗೆ ಬೆಕ್ಕು , ಇಲಿ ಮುಂತಾದ ಪ್ರಾಣಿಗಳ ಮೂತಿಯಲ್ಲಿ ಈ ಬಗೆಯ ಕೂದಲುಗಳಿವೆ. ಹೊದಿಕೆಯ ಕೂದಲುಗಳು ಪ್ರಾಣಿಯ ದೇಹಕ್ಕೆ ರಕ್ಷಣೆಯೊದಗಿಸುತ್ತವೆ.

ಇವುಗಳಲ್ಲಿ ದೇಹದ ಬೆನ್ನುಭಾಗದ ಉದ್ದವಾದ ಮತ್ತು ಬಿರುಸಾದ ಕೂದಲು, ಹಾಗೂ ಹೊಟ್ಟೆಯ ಭಾಗದ ಸ್ವಲ್ಪ ಚಿಕ್ಕದಾದ ಮತ್ತು ಮೃದುವಾದ ಕೂದಲು ಎಂದು ಎರಡು ಬಗೆಗಳುಂಟು.

**ಕೂದಲಿನ ರಚನೆ:** ಕೂದಲಿನಲ್ಲಿ ಮೂರು ಮುಖ್ಯ ಭಾಗಗಳನ್ನು ಗುರುತಿಸ ಬಹುದು. 1.ಚೂಪಾಗಿರುವ ಕೂದಲಿನ ತುದಿ. 2.ರೋಮದಂಡ (ಹೇರ್ ಶಾಫ್ಟ್) 3. ಕೂದಲಿನ ಬೇರು ಅಥವಾ ಬುಡ(ಹೇರ್ ರೂಟ್). ಕೂದಲಿನ ಬೇರು ರೋಮಕೂಪ (ಹೇರ್ ಫಾಲಿಕಲ್) ಎಂಬ ವಿಶಿಷ್ಟ ಬಗೆಯ ಕೊಳವೆಯಂಥ ರಚನೆಯಲ್ಲಿ ಹುದುಗಿದೆ. ಎಪಿಡರ್ಮಿಸ್ ಪದರ ಡರ್ಮಿಸ್ ಪದರದೊಳಗೆ ನುಗ್ಗಿ ಉಂಟಾಗುವ ಕಿರಿದಾದ ರಚನೆಯೇ ರೋಮಕೂಪ. ಕೂದಲಿನ ಬೇರುಭಾಗ ಪೂರ್ಣವಾಗಿ ಬೆಳೆದು ನಿಂತಿರುವ ಕೂದಲುಗಳಲ್ಲಿ ಗೆಡ್ಡೆಯಂತೆ ಉಬ್ಬಿಕೊಂಡಿದೆ. ರೋಮಕೂಪದಿಂದ ಹೊರ ಚಾಚಿದ ಭಾಗವೇ ರೋಮದಂಡ. ಇದರ ಅಡ್ಡ ಸೀಳಿಕೆಯನ್ನು ಸೂಕ್ಷ್ಮದರ್ಶಕ ದಲ್ಲಿ ಪರಿಶೀಲಿಸಿದಾಗ ಇದರ ಕೇಂದ್ರಭಾಗದಲ್ಲಿ ಚಪ್ಪಟೆಯಾದ ಜೀವಕೋಶಗಳಿಂದ ಕೂಡಿದ ಮಿಡಲ ಪ್ರದೇಶವೂ ಇದರ ಸುತ್ತ ಉದ್ದನೆಯ ಹಾಗೂ ಕೂದಲಿನ ಲಂಬಾಕ್ಷಕ್ಕೆ ಸಮಾಂತರವಾಗಿ ಜೋಡಣೆ ಗೊಂಡಿರುವ ಜೀವಕೋಶಗಳನ್ನೊಳಗೊಂಡ ಕಾರ್ಟೆಕ್ಸ್ ಪದರವೂ ಹೊರಭಾಗದಲ್ಲಿ ಹುರುಪು ಗಳಂಥ ರಚನೆಗಳಿಂದ ಕೂಡಿದ ಕ್ಯೂಟಿಕಲ್ ಪದರವೂ ಇವೆ. ಮಿಡಲದ ಜೀವಕೋಶಗಳ ನಡುವಣ ಪ್ರದೇಶಗಳಲ್ಲಿ ಅನೇಕ ಅವಕಾಶಗಳಿದ್ದು ಇಲ್ಲೆಲ್ಲ ಗಾಳಿ ತುಂಬಿರುತ್ತದೆ. ಕಾರ್ಟೆಕ್ಸಿನ ಜೀವಕೋಶಗಳಲ್ಲಿ ಮೆಲನಿನ್ ವರ್ಣಕವಿದೆ. ಹುರುಪೆಗಳು ಒಂದರ ಮೇಲೊಂದು ಚಾವಣಿಯ ಹಂಚುಗಳಂತೆ ಕೂದಲ ಮುಂತುದಿಯ ಕಡೆ ಮುಖ ಮಾಡಿದಂತೆ ಜೋಡಣೆಯಾಗಿವೆ. ಆದರೆ ಅಮೆರಿಕದ ಎರಿತಿಜಾನ್ ಎಂಬ ಮುಳ್ಳುಹಂದಿಯ ಬಿರುಗೂದಲುಗಳಲ್ಲಿ ಹುರುಪೆಗಳು ಕೂದಲಿನ ಬುಡದ ಕಡೆ ಮುಖ ಮಾಡಿದಂತೆ ಜೋಡಣೆಯಾಗಿವೆ. ರೋಮಕೂಪದ ಒಂದು ಪಕ್ಕದಲ್ಲಿ ಒಂದು ಮೇದೋಗ್ರಂಥಿಯೂ (ಸಿಬೇಷಸ್ ಗ್ಲಾಂಡ್) ಒಂದು ಬೆವರು ಗ್ರಂಥಿಯೂ ಇವೆ. ಮೇದೋಗ್ರಂಥಿ ಒಂದು ಬಗೆಯ ಜಿಡ್ಡು ಪದಾರ್ಥವನ್ನು ಸ್ರವಿಸುತ್ತದೆ. ಇದರಿಂದ ಚರ್ಮ ಮೃದುವಾಗಿರುವುದಲ್ಲದೆ ಒಣಹವೆಯಲ್ಲಿ ಬಿರುಕು ಬಿಡದಂತೆ ಇರುತ್ತದೆ. ದಿನಕ್ಕೆ ಸುಮಾರು 1–4 ಗ್ರಾಮಿನಷ್ಟು ಜಿಡ್ಡು ಒಟ್ಟು ದೇಹದಲ್ಲಿ ತಯಾರಾಗುತ್ತದೆ. ಚಳಿಗಾಲದಲ್ಲಿ ಜಿಡ್ಡಿನ ಉತ್ಪತ್ತಿ ಕಡಿಮೆ. ರೋಮಕೂಪಕ್ಕೆ ಹಲವಾರು ಸೂಕ್ಷ್ಮ ನರಗಳ ಮತ್ತು ರಕ್ತನಾಳಗಳ ಸಂಪರ್ಕವೂ ಇದೆ. ಅಲ್ಲದೆ ಒಂದು ಪಕ್ಕದಲ್ಲಿ ಒಂದು ಸೂಕ್ಷ್ಮವಾದ ಸ್ನಾಯುವೂ ಇದೆ. ಈ ಸ್ನಾಯುವಿಗೆ ಅರೆಕ್ಟರ್ ಪೈಲಿ ಸ್ನಾಯು ಎಂದು ಹೆಸರು. ಇದರ ಕುಗ್ಗುವಿಕೆಯಿಂದ ಕೂದಲುಗಳು ನಿಮಿರುತ್ತವೆ. ನವಿರೇಳುವುದು. ರೋಮಾಂಚನ ಇವೆಲ್ಲ ಇದರಿಂದ ಆಗುವ ಕ್ರಿಯೆಗಳೇ. ಬೆಕ್ಕು ರೇಗಿದಾಗ ಮೈಯುಬ್ಬಿಸುವುದು ಇದೇ ಕ್ರಿಯೆಯಿಂದ. ಡರ್ಮಿಸಿನ ವಿಶೇಷ ರಚನೆಯೊಂದು ಕೂದಲಿನ ಬೇರುಭಾಗದೊಳಗೆ ಚಾಚಿಕೊಂಡಿದೆ. ಇದಕ್ಕೆ ಪ್ಯಾಪಿಲ ಎಂದು ಹೆಸರು. ಇದರಲ್ಲಿ ಸೂಕ್ಷ್ಮವಾದ ಹಲವಾರು ರಕ್ತನಾಳಗಳಿವೆ. ಇದು ಕೂದಲಿನ ಬೆಳವಣಿಗೆಗೆ ಆವಶ್ಯವಾದ ಪೋಷಕಾಂಶಗಳನ್ನು ಪೂರೈಸುತ್ತದೆ.



ಚಿತ್ರ 1 ರೋಮಕೂಪದ ನೇರ ಕೊಯ್ತ: 1. ರೋಮದಂಡ, 2. ಮೇದೋಗ್ರಂಥಿ, 3. ನರಗಳು, 4. ರೋಮಕೂಪ, 5. ರೋಮದ ಬುಡ, 6. ಪ್ಯಾಪಿಲ, 7. ಅರೆಕ್ಟರ್ ಪೈಲಿ ಸ್ನಾಯು, ಎಪಿಡರ್ಮಿಸ್

**ಕೂದಲಿನ ಬೆಳವಣಿಗೆ:** ರೋಮಕೂಪದ ಬುಡದಲ್ಲಿರುವ ಕೆಲವು ವಿಶೇಷ ಬಗೆಯ ಜೀವಕೋಶಗಳ ವಿಭಜನೆಯಿಂದ ಕೂದಲು ಬೆಳೆಯುತ್ತದೆ. ಎಲ್ಲ ಬಗೆಯ ಕೂದಲುಗಳೂ ತಮ್ಮ ಬೆಳವಣಿಗೆಯಲ್ಲಿ ಏಕಪ್ರಕಾರವಾಗಿಲ್ಲ. ಕೂದಲಿನ ಬೆಳವಣಿಗೆಯಲ್ಲಿ ಎರಡು ಮುಖ್ಯ ಹಂತಗಳನ್ನು ಗುರುತಿಸಬಹುದು. ಒಂದು ಅನಾಜೆನ್ ಎಂಬ ಬೆಳವಣಿಗೆಯ ಹಂತ, ಇನ್ನೊಂದು ಟಿಲೋಜೆನ್ ಎಂಬ ವಿಶ್ರಾಂತಿಯ ಹಂತ. ಇವು ಒಂದರರೊಡನೊಂದು ಪರ್ಯಾಯವಾಗಿ ಸಾಗುತ್ತವೆ. ಇದರಿಂದ ಕೂದಲಿನ ಬೆಳವಣಿಗೆಯಲ್ಲಿ ಒಂದು ರೀತಿಯ ಚಕ್ರಗತಿಯನ್ನು ಕಾಣಬಹುದು. ಇದಕ್ಕೆ ಕೂದಲಿನ ಚಕ್ರ(ಹೇರ್ ಸೈಕಲ್) ಎಂದು ಹೆಸರು. ಇವೆರಡು ಹಂತಗಳಲ್ಲಿ ರೋಮಕೂಪ ಮತ್ತು ರೋಮದಂಡಗಳೆರಡೂ ತಮತಮಗೆ ವಿಶಿಷ್ಟವಾದ ಬದಲಾವಣೆಗಳನ್ನು ತೋರಿಸುತ್ತವೆ. ಅನಾಜೆನ್ ಸ್ಥಿತಿಯಲ್ಲಿ ರೋಮಕೂಪದ ನಾಳಗಳು ಪೂರ್ಣವಾಗಿ ತೆರೆದಿದ್ದು ಹೇರಳ ಪ್ರಮಾಣದಲ್ಲಿ ಪೋಷಕಾಂಶಗಳನ್ನು ಪೂರೈಸುತ್ತವೆ. ಟಿಲೋಜೆನ್ ಅವಧಿಯಲ್ಲಿ ರಕ್ತನಾಳಗಳ ಸಂಖ್ಯೆ ಕುಗ್ಗಿ ಪೋಷಕಾಂಶಗಳ ಪೂರೈಕೆ ಸ್ಥಗಿತವಾಗುತ್ತದೆ. ಮನುಷ್ಯನಲ್ಲಿ ಕೂದಲಿನ ಬೆಳವಣಿಗೆಯ ಅವಧಿ ಸುಮಾರು 3 ಅಥವಾ ಹೆಚ್ಚು ವರ್ಷದಷ್ಟು ಇದೆ. ಇಲಿ ಮುಂತಾದ ಪ್ರಾಣಿಗಳಲ್ಲಿ ಇದು ಕೇವಲ 12 ದಿವಸಗಳ ಕಾಲ ಇರುತ್ತದೆ. ಮನುಷ್ಯನ ತಲೆಗೂದಲು ದಿನಕ್ಕೆ 0.2–0.5 ಮಿಮೀ. ಉದ್ದ ಬೆಳೆಯುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದು ಸಾಮಾನ್ಯವಾಗಿ 22"–28" ಉದ್ದ ಬೆಳೆಯುತ್ತದೆ. 15–30 ವರ್ಷಗಳ ವರೆಗೆ ಶೀಘ್ರಗತಿಯಲ್ಲಿ ಬೆಳೆದು ಅನಂತರ ಕೆಲವು ವರ್ಷ ಏಕಪ್ರಕಾರವಾಗಿದ್ದು 50–60 ವರ್ಷದ ಅನಂತರ ವೇಗ ಕುಂಠಿತವಾಗುತ್ತದೆ. ಕೂದಲಿನ ಬೆಳವಣಿಗೆ ಹಲವಾರು ಕಾರಕಗಳಿಂದ ನಿಯಂತ್ರಿತವಾಗಿದೆ. ಪೋಷಕಾಂಶಗಳ ಪೂರೈಕೆ, ರೋಮಕೂಪದ ಗೆಡ್ಡೆಯ ಜೀವಕೋಶಗಳ ವಿಭಜನೆ ಮತ್ತು ಬೆಳವಣಿಗೆಗಳ ದರ, ಶೈತ್ಯ ಹಾಗೂ ಉಷ್ಣತೆ, ದೇಹದಲ್ಲಿ ಉತ್ಪತ್ತಿಯಾಗುವ ಥೈರಾಕ್ಸಿನ್ ಮುಂತಾದ ವಿಶೇಷ ರೀತಿಯ ಹಾರ್ಮೋನುಗಳು, ದೇಹದ ಆರೋಗ್ಯಸ್ಥಿತಿ ಮುಂತಾದುವು ಈ ಕಾರಕಗಳಲ್ಲಿ ಮುಖ್ಯವಾದವು. ಜ್ವರ, ವಿಪರೀತ ರಕ್ತಸ್ರಾವ, ಶಸ್ತ್ರಚಿಕಿತ್ಸೆ ಮುಂತಾದ ಪರಿಸ್ಥಿತಿಗಳಲ್ಲಿ ಕೂದಲಿನ ಬೆಳವಣಿಗೆಯ ಚಕ್ರ ನಿಂತು ಹೋಗಿರುತ್ತದೆ. ಈ ಸ್ಥಿತಿಗಳು ಪೂರ್ಣಗೊಂಡ 2–3 ತಿಂಗಳ ಅನಂತರ ಹೊಸ ಚಕ್ರ ಆರಂಭವಾಗಿ ಹೊಸ ಕೂದಲು ಹುಟ್ಟುತ್ತದೆ. ಹೀಗೆ ಹೊಸದಾಗಿ ಹುಟ್ಟುವ ಕೂದಲು ಹಳೆಯದನ್ನು ಬದಲಾಯಿಸುತ್ತದೆ. ಆಗ ಹಳೆಯ ಕೂದಲೆಲ್ಲ ಒಟ್ಟಿಗೆ ಉದುರಿ ಹೋಗುತ್ತದೆ. ಹೆರಿಗೆಯ ಅನಂತರ ಹಳೆಯ ಕೂದಲು ಉದುರಿ ಹೊಸ ಕೂದಲು ಹುಟ್ಟುವುದು ಈ ವಿಧಾನದಿಂದಲೇ.

ಕೂದಲನ್ನು ಮೇಲಿಂದ ಮೇಲೆ ಕತ್ತರಿಸುವುದರಿಂದ ಇದರ ಬೆಳವಣಿಗೆ ಹೆಚ್ಚುತ್ತದೆ ಎಂಬ ಭಾವನೆಯೂ ಸತ್ತಮೇಲೂ ಕೂದಲು ಬೆಳೆಯುತ್ತದೆ ಎಂಬುದೂ ನಿರಾಧಾರವಾದವು. ಸತ್ತಮೇಲೆ ಚರ್ಮ ಆಕುಂಚನಗೊಂಡು ಕೂದಲು ಬೆಳೆದಂತೆ ಕಾಣುವುದೇ ಬಹುಶಃ ಈ ಭಾವನೆಗೆ ಕಾರಣವಾಗಿರಬಹುದು. ಯಾವ ಸ್ತನಿಯ ದೇಹದ ಮೇಲೂ ಒಮ್ಮೆ ಹುಟ್ಟಿದ ಕೂದಲು ಶಾಶ್ವತವಾಗಿರುವುದಿಲ್ಲ. ಪ್ರತಿಯೊಂದು ಪ್ರಾಣಿಯ ಜೀವಮಾನದಲ್ಲೂ ನಿರಂತರವಾಗಿ ಬದಲಾಗುತ್ತಿರುತ್ತದೆ.



ಚಿತ್ರ 2 ರೋಮದಂಡದ ನೇರಕೊಯ್ತ: 1. ಕ್ಯೂಟಿಕಲ್ ಹುರುಪೆ, 2. ಮಿಡಲ, 3. ಕಾರ್ಟೆಕ್ಸ್

ಕೆಲವು ಸ್ತನಿಗಳಲ್ಲಿ ಈ ಬದಲಾವಣೆ ದೇಹದ ಒಂದು ಭಾಗದಲ್ಲಿ ಆರಂಭವಾಗಿ ಕ್ರಮೇಣ ಇತರ ಭಾಗಗಳಿಗೆ ವಿಸ್ತರಿಸುತ್ತದೆ. ಉದಾಹರಣೆಗೆ ಇಲಿ, ಮೊಲ ಇತ್ಯಾದಿ. ಬೆಕ್ಕು, ಗಿನಿ ಹಂದಿ, ಮನುಷ್ಯ ಮುಂತಾದವುಗಳಲ್ಲಿ ಒಂದೊಂದು ಕೂದಲು ಒಂದೊಂದು ಕಾಲದಲ್ಲಿ ಬದಲಾಗುತ್ತಿದ್ದು ಇತರ ಕೂದಲುಗಳ ಬೆಳವಣಿಗೆಯಿಂದ ಸ್ವತಂತ್ರವಾಗಿದೆ.

ಕೂದಲು ಚರ್ಮಕ್ಕೆ ಹತ್ತಿಕೊಂಡಿರುವ ರೀತಿ ಮತ್ತು ಅದರ ಬೆಳವಣಿಗೆಯ ದಿಕ್ಕು ವಿವಿಧ ಪ್ರಾಣಿಗಳಲ್ಲಿ ಭಿನ್ನತೆಯನ್ನು ಪ್ರದರ್ಶಿಸುತ್ತವೆ. ಕೂದಲುಗಳು ಚರ್ಮಕ್ಕೆ ವಿಶೇಷ ಸಾಲುಗಳಲ್ಲಿ ಹತ್ತಿಕೊಂಡಿರುತ್ತವೆ. ಈ ಸಾಲುಗಳಿಗೆ ರೋಮಾಳಿಗಳು(ಹೇರ್ ಟ್ರಾಕ್ಟ್) ಎಂದು ಹೆಸರು. ರೋಮಾಳಿಗಳು ಪ್ರತ್ಯೇಕಗೊಳ್ಳುವ ಭಾಗದಲ್ಲಿ ಬೈತಲೆಯಂಥ ರೇಖೆ ಕಾಣುತ್ತದೆ. ಈ ರೇಖೆಗುಂಟ ಕೂದಲುಗಳು ಬೆಳೆಯುತ್ತಿದ್ದು ಅವು ದೇಹದ ಹಿಂಭಾಗದೆಡೆಗೆ(ಅಂದರೆ ಹೊಟ್ಟೆಯ ಕಡೆಗೆ) ಬಾಗಿರುತ್ತವೆ. ಕೈಕಾಲುಗಳಲ್ಲೂ ಕೂದಲುಗಳು ಅಂಗದ ಹಿಂಭಾಗದೆಡೆಗೆ ಹಾಗೂ ಪಾದದೆಡೆಗೆ ಬಾಗಿರುತ್ತವೆ. ಸ್ಲಾತ್ ಎಂಬ ಪ್ರಾಣಿಯಲ್ಲಿ ಮಾತ್ರ ಈ ಬಾಗುವಿಕೆ ವಿರುದ್ಧ ಬಗೆಯದು. ಈ ಪ್ರಾಣಿ ಯಾವಾಗಲೂ ಮರದ ರೆಂಬೆಗಳಿಗೆ ನೇತು ಬಿದ್ದು ಚಲಿಸುವುದರಿಂದ ಇದರ ಮೈಮೇಲೆ ಬಿದ್ದ ಮಳೆಯ ನೀರು ಸುಲಭವಾಗಿ ಹರಿದು ಹೋಗಲೆಂದು ಈ ಮಾರ್ಪಾಡು ಆಗಿರಬೇಕೆಂದು ತಜ್ಞರು ಊಹಿಸಿದ್ದಾರೆ. ಕೆಲವು ಬಾರಿ ರೋಮಾಳಿಗಳು ವರ್ತುಲಾಕಾರದಲ್ಲಿರುತ್ತವೆ. ಇವನ್ನು ಸುಳಿಗಳು(ವಾರ್ಟಿಸೀಸ್ ಅಥವಾ ಹ್ವಾರ್ಲ್ಸ್) ಎನ್ನಲಾಗುತ್ತದೆ.

ಕೂದಲಿನ ಪ್ರಥಮ ಹಾಗೂ ಅತಿಮುಖ್ಯವಾದ ಕಾರ್ಯ ಪ್ರಾಣಿಗಳ ದೇಹದ ಉಷ್ಣತೆಯನ್ನು ಕಾಪಾಡುವುದು ಮತ್ತು ದೇಹಕ್ಕೆ ಶೈತ್ಯದಿಂದ ರಕ್ಷಣೆಯೊದಗಿಸುವುದು. ಅತಿನೇರಳೆ ಕಿರಣಗಳಿಂದಲೂ ರಕ್ಷಿಸಿ ಚರ್ಮದ ಏಡಿಗಂತಿ ರೋಗದ ಅಪಾಯವನ್ನು ಕಡಿಮೆ ಮಾಡುತ್ತದೆ. ಎರಡನೆಯದಾಗಿ ಕೂದಲು ಸ್ಪರ್ಶಗ್ರಾಹಿ ಅಂಗವಾಗಿ ಕಾರ್ಯ ನಿರ್ವಹಿಸುತ್ತದೆ. ಸಾಮಾನ್ಯವಾಗಿ ನಿಶಾಚರ ಪ್ರಾಣಿಗಳಲ್ಲಿ ಇದು ಮುಖ್ಯವಾದ ಕೆಲಸ. ಅಲ್ಲದೆ ತನ್ನ ವಿವಿಧ ಬಣ್ಣಗಳಿಂದ ಮತ್ತು ವಿನ್ಯಾಸಗಳಿಂದ ಯುಕ್ತವಾದ ಭದ್ರವಾಗಿ ಶತ್ರುಗಳ ಕಣ್ಣಿಗೆ ಬೀಳದಂತೆ ಮಾಡಲು, ಸಂಗಾತಿಯನ್ನು ಆಕರ್ಷಿಸಲು ಸಹಕಾರಿಯಾಗಿದೆ.

**ಕೂದಲಿನ ಉಪಯೋಗಗಳು :** ವಿವಿಧ ಬಗೆಯ ಕೂದಲುಗಳಿಗೆ ಬೇರೆ ಬೇರೆ ರೀತಿಯ ಉಪಯೋಗಗಳಿವೆ. ಮನೆಕಟ್ಟುವುದಕ್ಕೆ ಉಪಯೋಗಿಸುವ ಗಾರೆಯನ್ನು ಬಂಧಿಸಲು ಮತ್ತು ಕೃತಕವಾಗಿ ತಯಾರಿಸುವ ಚಾವಣಿಗಳ ದನಗಳ ಕೂದಲನ್ನು ಬಳಸುತ್ತಾರೆ. ಒಂಟೆಯ ಕೂದಲನ್ನು ಜಮಖಾನ ಬಟ್ಟೆ, ಡೇರೆಗಳ ಹೊದಿಕೆ ಮುಂತಾದುವನ್ನು ಮಾಡಲು ಉಪಯೋಗಿಸುತ್ತಾರೆ. ಅರೇಬಿಯದ ಒಂಟೆಯ ಕೂದಲು ಹೆಚ್ಚು ಮೃದುವಾಗಿಯೂ ಬೆಲೆಬಾಳುವಂಥದೂ ಆಗಿದೆ. ಹಂದಿ ಮತ್ತು ಅಳಿಲುಗಳ ಕೂದಲಿನಿಂದ ಕುಂಚ ಮಾಡುತ್ತಾರೆ. ಕುರಿ, ಮೇಕೆ ಮುಂತಾದುವುಗಳ ಉಣ್ಣೆಯ ಉಪಯೋಗವಂತೂ ಎಲ್ಲರಿಗೂ ತಿಳಿದದ್ದೇ. ಕುದುರೆಯ ಬಾಲ ಮತ್ತು ಅಯಾಲಿನ ಕೂದಲನ್ನು ಬಟ್ಟೆ, ಬಲೆ ಮತ್ತು ಕುಂಚಗಳ ತಯಾರಿಕೆಯಲ್ಲೂ ಉದ್ದನೆಯ ಬಗೆಯನ್ನು ಪಿಟೀಲಿನ ಕಮಾನುಗಳ ತಯಾರಿಕೆಯಲ್ಲೂ ಚಿಕ್ಕ ಬಗೆಯದನ್ನು ಸೋಫ, ಹಾಸಿಗೆಗಳಿಗೆ ತುಂಬಲೂ ಬಳಸುತ್ತಾರೆ. ಮನುಷ್ಯರ ಕೂದಲನ್ನು ಚೌಲಿ, ವಿಗ್, ಟೋಫನ್ ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ವೈದ್ಯಕೀಯ ನ್ಯಾಯಶಾಸ್ತ್ರದಲ್ಲಿ ಕೂದಲಿನ ಪರೀಕ್ಷೆಯಿಂದ ಅಪರಾಧಿಗಳನ್ನು ಪತ್ತೆಹಚ್ಚಬಹುದೆಂದು ಗೊತ್ತಾಗಿದೆ. ಕೂದಲಿನ ಬಣ್ಣ, ಗುಣ ಅದು ಕತ್ತರಿಸಿದ್ದೊ ಸುಟ್ಟಿದ್ದೊ ಎಂಬ ವಿವರಗಳನ್ನು ಅಪರಾಧ ಪತ್ತೆಯಲ್ಲಿ ಬಳಸಬಹುದು. (ಡಿ.ಪಿ.ಜೆ; ಬಿ.ವೈ.ಎಂ.ಜಿ.)

**ಕೂನ್, ರಿಚರ್ಡ್ :** 1900 – ಆಸ್ಟ್ರಿಯನ್–ಜರ್ಮನ್ ರಸಾಯನವಿಜ್ಞಾನಿ. ಜನನ 1900ರ ಡಿಸೆಂಬರ್ 3 ರಂದು ವಿಯೆನ್ನ ನಗರದಲ್ಲಿ. ವಿದ್ಯಾಭ್ಯಾಸ ನಡೆದದ್ದು ಜರ್ಮನಿಯ ಮ್ಯೂನಿಕ್ ವಿಶ್ವವಿದ್ಯಾಲಯದಲ್ಲಿ. ಪ್ರಖ್ಯಾತ ಕಾರ್ಬನಿಕ ರಸಾಯನವಿಜ್ಞಾನಿ ರಿಚರ್ಡ್ ವಿಲ್‌ಸ್ಟೆಟರ್ (1872–1942) ಎಂಬಾತನೊಡನೆ ವ್ಯಾಸಂಗ ಮಾಡಿ ಮ್ಯೂನಿಕ್ ವಿಶ್ವವಿದ್ಯಾಲಯದ ಡಾಕ್ಟೊರೇಟ್ ಡಿಗ್ರಿ ಪಡೆದ(1922). ಕೆಲಕಾಲ ಮ್ಯೂನಿಕ್‌ನಲ್ಲೂ ಕೆಲಕಾಲ ಸ್ವಿಟ್ಸರ್ಲೆಂಡಿನ ಜ್ಯೂರಿಕ್‌ನಲ್ಲೂ ಕೆಲಸಮಾಡಿ, 1929ರಲ್ಲಿ ಹೈಡೆಲ್‌ಬರ್ಗ್‌ನಲ್ಲಿಯ ಕೈಸರ್ ವಿಲ್‌ಹೆಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಾಧ್ಯಾಪಕ ಹುದ್ದೆಯನ್ನು ಸ್ವೀಕರಿಸಿದ. ಕೂನನ ಕಾರ್ಯಕ್ಷೇತ್ರ ಕಾರ್ಬನಿಕ ರಾಸಾಯನ ವಿಜ್ಞಾನ. ಕ್ಯಾರೊಟಿನ್ ಬಳಗದ ಸಂಯುಕ್ತಗಳು ಮತ್ತು ಕೆಲವು ವಿಟಮಿನ್‌ಗಳ ಅಣುರಚನೆಗಳನ್ನು ನಿರ್ಣಯಿಸುವುದರಲ್ಲಿ ಮತ್ತು ಅವನ್ನು ಸಂಶ್ಲೇಷಿಸುವುದರಲ್ಲಿ ಈತ ಗಮನಾರ್ಹ ಕೆಲಸ ಮಾಡಿದ್ದಾನೆ. ವಾಕೆನ್‌ರೋಡರ್ ಎಂಬಾತ ಕಳೆದ ಶತಮಾನದ ಪೂರ್ವಾರ್ಧದಲ್ಲಿ ಗಜ್ಜರಿಯಿಂದ (ಕ್ಯಾರಟ್) ಪ್ರತ್ಯೇಕಿಸಿದ ವರ್ಣ ದ್ರವ್ಯವನ್ನು ಕ್ಯಾರೋಟಿನ್ ಎಂದು ಕರೆದ. ಆದರೆ ಅದರ ರಾಸಾಯನಿಕ ಸ್ವರೂಪ ಪತ್ತೆಯಾಗಲು ಮುಕ್ಕಾಲು ಶತಮಾನ ಕಾಯಬೇಕಾಯಿತು. ಕೂನ್‌ನ ಗುರು ವಿಲ್‌ಸ್ಟೆಟರ್ ಕ್ಯಾರೊಟಿನ್‌ನ ಅಣುಸೂತ್ರ $C_{40}H_{56}$ ಎಂದು ನಿರ್ಣಯಿಸಿದ. (1907). ಇದು ಒಂದೇ ಒಂದು ಸಂಯುಕ್ತವಲ್ಲ, ಅದೇ ಅಣುಸೂತ್ರವಿರುವ ಮೂರು ಸಮಾಂಗಿಗಳ (ಐಸೊಮೆರ್ಸ್) ಮಿಶ್ರಣ ಎಂಬುದನ್ನು ಕೂನ್ 1929ರಲ್ಲಿ ಪತ್ತೆ ಮಾಡಿದ. ಬೇರೆ ಬೇರೆ ರಚನೆಯಿರುವ ಈ ಮೂರು ಸಂಯುಕ್ತಗಳಿಗೆ $\alpha$– ಕ್ಯಾರೊಟಿನ್, $\beta$–ಕ್ಯಾರೊಟಿನ್, $\chi$–ಕ್ಯಾರೊಟಿನ್ ಎಂಬ ಹೆಸರುಗಳನ್ನು ಕೊಡಲಾಯಿತು. ಅವುಗಳ ನಿಷ್ಕೃಷ್ಟ ರಚನೆಗಳನ್ನೂ ಅದೇ ಬಳಗದ ಲೈಕೊಪೀನ್ (ಟೊಮ್ಯಾಟೊದಲ್ಲಿಯ ವರ್ಣದ್ರವ್ಯ) ರಚನೆಯನ್ನೂ ನಿರ್ಣಯಿಸಿದಾತ ಕೂನ್. ಅಲ್ಲಿಂದ ಮುಂದಿನ ಮೂರು ನಾಲ್ಕು ವರ್ಷಗಳಲ್ಲಿ ಕ್ಯಾರೊಟಿನ್‌ಗೆ ಸಮೀಪ ಸಂಬಂಧಿಗಳಿಂದ ಇನ್ನೂ ಕೆಲವು ಸಂಯುಕ್ತಗಳ ರಚನೆಗಳನ್ನು ಸಹ ನಿರ್ಣಯಿಸಿದ. ಅವುಗಳಲ್ಲಿ ಕೇಸರಿಯಲ್ಲಿಯ ಕ್ರೋಸೆಟಿನ್ ಮುಖ್ಯವಾದುದು.

ಯಕೃತ್ತಿನಲ್ಲಿ ಕ್ಯಾರೊಟಿನ್‌ಗಳು ರಸಾಯನಿಕ ಪರಿವರ್ತನೆ ಹೊಂದಿ ವಿಟಮಿನ್ ಎ ಯನ್ನು ಉತ್ಪತ್ತಿಮಾಡುವುವೆಂದು ತಿಳಿದುಬಂದುದರಿಂದ ವಿಟಮಿನ್ ಎ ಯ ಅಣುರಚನೆಯನ್ನು ನಿರ್ಣಯಿಸುವುದು ಸುಲಭವಾಯಿತು. ಅದರ ಅಣುರಚನೆ ಖಚಿತವಾದ ತರುವಾಯ ಅದರ ಸಂಶ್ಲೇಷಣೆಗೆ ಪ್ರಯತ್ನಗಳು ನಡೆದುವು. ಕೂನ್‌ನೂ ಸ್ವಿಟ್ಜರ್ಲ್ಯಾಂಡಿನ ಪಾಲ್ ಕಾರರ್‌ನೂ (ನೋಡಿ– ಕಾರರ್,–ಪಾಲ್). ಸ್ವತಂತ್ರವಾಗಿ ವಿಟಮಿನ್ ಎ ಯನ್ನು ಸಂಶ್ಲೇಷಿಸುವುದರಲ್ಲಿ ಯಶಸ್ವಿಯಾದರು. ಕ್ಯಾರೊಟಿನ್‌ಗಳ ಮುಖಾಂತರ ವಿಟಮಿನ್‌ಗಳಲ್ಲಿ ಆಸಕ್ತನಾದ ಕೂನ್ ತರುವಾಯ ಇತರ ವಿಟಮಿನ್‌ಗಳ ಕಡೆಗೆ ಗಮನ ಹರಿಸಿದ ಎಂಬಂತೆ ಕಾಣುತ್ತದೆ. ಏಕೆಂದರೆ ಕ್ಯಾರೊಟಿನ್ ಮತ್ತು ವಿಟಮಿನ್ ಎ ಗಳಿಗೆ ಯಾವ ರಚನಾಸಂಬಂಧವೂ ಇಲ್ಲದಿರುವ ಬಿ ಗುಂಪಿನ ವಿಟಮಿನ್‌ಗಳ ಬಗ್ಗೆ ಕೂನ್ ಅಲ್ಲಿಂದ ಮುಂದೆ ಗಮನಾರ್ಹ ಸಂಶೋಧನೆಗಳನ್ನು ನಡೆಸಿದ್ದಾನೆ. ವಿಟಮಿನ್ ಬಿ ಎಂದೂ ಕರೆಯುವ ರಿಬೊಫ್ಲಾವಿನ್ ಅಣುರಚನೆಯ ನಿರ್ಣಯದಲ್ಲಿ ಈತ ಗಣನೀಯ ಪಾತ್ರ ವಹಿಸಿದ. ಅದರ ಸಂಶ್ಲೇಷಣೆಯನ್ನು 1935ರಲ್ಲಿ ಪುನಃ ಕಾರರ್‌ನೂ ಕೂನ್‌ನೂ ಸ್ವತಂತ್ರವಾಗಿ ಸಾಧಿಸಿದರು. ವಿಟಮಿನ್ ಬಿ ಎಂದು ಕರೆಯುವ ಪಿರಿಡಾಕ್ಸಿನ್ ಎಂಬ ಸಂಯುಕ್ತವನ್ನು 1938ರಲ್ಲಿ ಮೊತ್ತಮೊದಲ ಬಾರಿಗೆ ಶುದ್ಧರೂಪದಲ್ಲಿ ಪ್ರತ್ಯೇಕಿಸಿದಾತ ಕೂನ್. ಅನಂತರ ಅದರ ಅಣುರಚನೆಯನ್ನು ನಿರ್ಣಯಿಸಿದವನೂ ಇವನೇ. 1937ರಲ್ಲಿ ಪಾಲ್ ಕಾರರ್ ನೊಬೆಲ್ ಬಹುಮಾನವನ್ನು ಪಡೆದ. ಅದೇ ಕ್ಷೇತ್ರದಲ್ಲಿ ಅಷ್ಟೇ ವ್ಯಾಪಕವಾದ, ಅಷ್ಟೇ ಮಹತ್ತ್ವಪೂರಿತವಾದ ಮತ್ತು ಹೆಚ್ಚು ಕಡಿಮೆ ಕಾರರನ ಸಂಶೋಧನೆಗಳಿಗೆ ಪೂರಕವೆನಿಸುವ ಸಂಶೋಧನೆಗಳನ್ನು ನಡೆಸಿದ ಕೂನ್‌ನಿಗೆ ಮರುವರ್ಷವೇ, ಅಂದರೆ 1938ರಲ್ಲಿ, ನೊಬೆಲ್ ಬಹುಮಾನವನ್ನು ನೀಡಲಾಯಿತು. ಆದರೆ ನಾಜಿಗಳ ಆಗ್ರಹಕ್ಕೆ ಪಾತ್ರನಾಗಿ ರಾಜಕೀಯ ಬಂಧಿಗಳ ಕೂಡು ಶಿಬಿರದಲ್ಲಿ (ಕಾನ್ಸಂಟ್ರೇಷನ್ ಕ್ಯಾಂಪ್) ತೊಳಲುತ್ತಿದ್ದ ಪ್ರಸಿದ್ಧ ಜರ್ಮನ್ ಶಾಂತಿವಾದಿ ಕಾರ್ಲ್‌ಫಾನ್ ಅಸ್ಸೀಟ್ಸ್ಕಿ ಎಂಬಾತನಿಗೆ 1935ರ ನೊಬೆಲ್ ಶಾಂತಿ ಬಹುಮಾನವನ್ನು ನೀಡಿದ್ದಕ್ಕಾಗಿ ನೊಬೆಲ್ ಪ್ರತಿಷ್ಠಾನದ ಮೇಲೆ ಕೋಪಗೊಂಡಿದ್ದ ಹಿಟ್ಲರ್ ಜರ್ಮನ್ ರಾಷ್ಟ್ರೀಯರು ಯಾರೂ ನೊಬೆಲ್ ಬಹುಮಾನವನ್ನು ಸ್ವೀಕರಿಸಕೂಡದೆಂದು ನಿರ್ಬಂಧ ಹಾಕಿದ್ದುದರಿಂದ ಕೂನ್ ಬಹುಮಾನ ಸ್ವೀಕರಿಸುವುದು ಸಾಧ್ಯವಾಗಲಿಲ್ಲ. ಎರಡನೆಯ ಜಾಗತಿಕ ಯುದ್ಧ ಮುಗಿದ ತರುವಾಯ ಅವನನ್ನು ಗೌರವಿಸಿ ನೊಬೆಲ್ ಪದಕವನ್ನು ನೀಡಲಾಯಿತು. ಆದರೆ ಬಹುಮಾನದ ಹಣ ಮಾತ್ರ ಅವನಿಗೆ ಸಿಕ್ಕಲಿಲ್ಲ.

ಪಾಶ್ಚರ್, ಪೇಟರ್ ನೊ ಮತ್ತು ಗಯಟೆ ಬಹುಮಾನಗಳೂ ಮುಂತಾದ ಅನೇಕ ಬಹುಮಾನಗಳೂ ಭಾರತದ ಮುಖರ್ಜಿ ಚಿನ್ನದ ಪದಕವೂ ಈತನಿಗೆ ದೊರೆತಿವೆ. ಲೀಬಿಗ್ಸ್ ಅನಾಲ್ಸ್ ಡರ್ ಕೆಮೆ ಎಂಬ ನಿಯತಕಾಲಿಕದ ಸಂಪಾದಕನಾಗಿ ಸಹ ಕೂನ್ ಸೇವೆ ಸಲ್ಲಿಸಿದ್ದಾನೆ. (ಜಿ.ಆರ್.ಎಲ್.)

**ಕೂಪ್‌ಫರಾನ್ :** ಇಂಗಾಲೇತರ ರಾಸಾಯನಿಕ ಕ್ರಿಯೆಗಳಲ್ಲಿ ಬಳಸುವ ಇಂಗಾಲ ವಸ್ತು. ಇದರ ಅಣುಸೂತ್ರ $C_6H_5N(NO)ONH_4$.. ಇದು N—ನೈಟ್ರೊಸೋಫೀನೈಲ್ ಹೈಡ್ರಾಕ್ಸಿಲ್ ಅಮೀನಿನ ಅಮೋನಿಯಂ ಲವಣ. ಈಥರಿನಲ್ಲಿ ಕರಗಿಸಿದ ಫೀನೈಲ್ ಹೈಡ್ರಾಕ್ಸಿಲ್ ಅಮೀನ್ ಮತ್ತು n- ಬ್ಯೂಟೈಲ್ ನೈಟ್ರೈಟುಗಳ ದ್ರಾವಣದಲ್ಲಿ ಅಮೋನಿಯ ಅನಿಲವನ್ನು ಹಾಯಿಸಿದಾಗ ಈ ವಸ್ತು ಏರ್ಪಡುತ್ತದೆ. ಇದರ ಬಣ್ಣ ಕಂದುಮಿಶ್ರಿತ ಬಿಳಿ. ಸ್ಫಟಿಕದಂಥ ವಸ್ತು. ನೀರಿನಲ್ಲಿ ಸುಲಭವಾಗಿ ವಿಲೀನವಾಗುತ್ತದೆ. ಇದು ತಾಮ್ರ, ಕಬ್ಬಿಣ, ತವರ, ಅಲ್ಯೂಮಿನಿಯಂ, ಥೋರಿಯಂ ಇತ್ಯಾದಿ ಲೋಹಗಳ ಲವಣಗಳ ದ್ರಾವಣದೊಂದಿಗೆ ರಾಸಾಯನಿಕ ಕ್ರಿಯೆಗೆ ತೊಡಗಿ ನೀರಿನಲ್ಲಿ ವಿಲೀನವಾಗದ ಆಯಾ ಲೋಹಗಳ ಒತ್ತರಗಳನ್ನು ಹೊರಗೆಡಹುತ್ತದೆ. ಈ ಒತ್ತರಗಳ ತೂಕದಿಂದ ಆಯಾ ಲೋಹಗಳ ನಿಷ್ಪತ್ತಿಯನ್ನು ನಿರ್ಧರಿಸಬಹುದು. ತಾಮ್ರ ಮತ್ತು ಕಬ್ಬಿಣದ ಅಂಶ ಕಂಡುಹಿಡಿಯುವ ಪ್ರಯೋಗಗಳಿಗೆ ಈ ವಸ್ತುವನ್ನು ಅತಿ ಹೆಚ್ಚಾಗಿ ಉಪಯೋಗಿಸುತ್ತಾರೆ. ತಾಮ್ರದೊಂದಿಗೆ ಕಾಪರ್ ಕೂಪ್‌ಫೆರೊನೇಟ್ ಮತ್ತು ಕಬ್ಬಿಣದೊಂದಿಗೆ ಫೆರ್ರಿಕ್ ಕೂಪ್‌ಫೆರೊನೇಟ್ ಎಂಬ ಒತ್ತರಗಳುಂಟಾಗುತ್ತವೆ. (ಎಂ.ಆರ್.ಪಿ.)

**ಕೂಪರ್, ಗ್ಯಾರಿ :** 1901–61. ತನ್ನ ಸರಳ ಹಾಗೂ ಗಂಭೀರ ಪಾತ್ರಗಳಿಂದ ಲಕ್ಷಾಂತರ ಸಿನಿಮಾ ಪ್ರೇಮಿಗಳ ಹೃದಯವನ್ನು ಸೂರೆಗೊಂಡ ಅಮೆರಿಕದ ಪ್ರಖ್ಯಾತ ಚಲನಚಿತ್ರನಟ. ಸಾಮ್ಯುಯಲ್ ಗೋಲ್ಡ್‌ವಿನ್ ಈತನನ್ನು ಬೆಳಕಿಗೆ ತಂದ. 1926ರಲ್ಲಿ ತೆರೆ ಕಂಡ 'ದಿ ವಿನ್ನಿಂಗ್ ಆಫ್ ಬಾರ್‌ಬರ ವರ್ತ್' ಎಂಬುದರಲ್ಲೀತ ಒಂದು ಗೌಣ ಪಾತ್ರ ವಹಿಸಿದ್ದನಾದರೂ ಸಾಕಷ್ಟು ಖ್ಯಾತಿ ಪಡೆದ. 1931ರಲ್ಲಿ ತೆರೆಕಂಡ ರೂಬೆನ್ ಮಮೌಲಿನ್‌ನ ಸಿಟಿ ಸ್ಟ್ರೀಟ್ಸ್‌ನಲ್ಲಿ ಪ್ರಧಾನ ಪಾತ್ರವಹಿಸಿದ. ಈ ಚಿತ್ರ ಹೆಸರು ಹಣ ಎರಡನ್ನೂ ಗಳಿಸಿ ಕೂಪರನ ಖ್ಯಾತಿಗೂ ಕಾರಣವಾಯಿತು. ಎ ಫೇರ್‌ವೆಲ್ ಟು ಆರಮ್ಸ್(1933), ದಿ ಪ್ಲೇನ್ಸ್‌ಮನ್ (1936). ಮಿಸ್ಟರ್ ಡೀಡ್ಸ್ ಗೋಸ್ ಟು ಟೌನ್(1936), ಸಾರ್ಜೆಂಟ್ ಯಾರ್ಕ್(1941), ಫಾರ್ ಹೂಮ್ ದಿ ಬೆಲ್ ಟೋಲ್ಸ್(1943), ಹೈ ನೂನ್(1952)– ಇವು ಈತ ನಟಿಸಿದ ಅತ್ಯುತ್ತಮ ಚಿತ್ರಗಳಲ್ಲಿ ಕೆಲವು. *

**ಕೂಪರ್, ಜೇಮ್ಸ್ ಫೆನಿಮೋರ್ :** 1789–1851. ಅಮೆರಿಕದ ಕಾದಂಬರಿಕಾರ, ಇತಿಹಾಸಜ್ಞ. ನ್ಯೂ ಜೆರ್ಸಿಯ ಬರ್ಲಿಂಗ್‌ಟನ್‌ನಲ್ಲಿ ತನ್ನ ತಂದೆಯ ಹನ್ನೆರಡನೆಯ ಮಗುವಾಗಿ ಹುಟ್ಟಿದ. ಈತನ ತಂದೆ ನ್ಯಾಯಾಧೀಶ ಹಾಗೂ ನ್ಯೂಯಾರ್ಕಿನ ಶಾಸನಸಭೆಯ ಸದಸ್ಯ. ಕೂಪರ್ ಹುಟ್ಟಿದ ಮೇಲೆ ಇಡೀ ಕುಟುಂಬವೇ ಓಟೆಸ್ಕೋ ಸರೋವರದ ದುರ್ಗಮ ಪ್ರದೇಶದ ಕಡೆಗೆ ಹೊರಟು ಅಲ್ಲಿಯ ಪ್ರದೇಶವನ್ನು ವ್ಯವಸಾಯ ಯೋಗ್ಯವನ್ನಾಗಿ ಮಾಡಿಕೊಂಡು ಅಲ್ಲಿಯೇ ನೆಲಸಿತು. ಅನಂತರ ಅದೇ ಪ್ರದೇಶ ಕೂಪರ್ಸ್ ಟೌನ್ ಎಂದು ಹೆಸರು ಪಡೆಯಿತು. ಕೂಪರನ ವಿದ್ಯಾಭ್ಯಾಸ ಯೇಲ್‌ವಿವಿ.ನಲ್ಲಿ ನಡೆಯಿತು. ಮೊದಲಿಗೆ ಐದು ವರ್ಷ ನೌಕಾದಳದಲ್ಲಿದ್ದು ಅದನ್ನು ಬಿಟ್ಟ ಮೇಲೆ ಈತ ಸಾಹಿತ್ಯರಚನೆ ಕೈಗೊಂಡ. 1811 ರಲ್ಲಿ ಸುಸಾನ್ ಅಗುಸ್ಟಾಡ ಲ್ಯಾನ್ಸಿ ಎಂಬಾಕೆಯನ್ನು ಮದುವೆಯಾಗಿ ಕೂಪರ್ಸ್ ಟೌನ್‌ನಲ್ಲಿ ನೆಲಸಿದ. ತನ್ನ ಸಂಸಾರದ ಅಭಿವೃದ್ಧಿಯ ಕಡೆ ಗಮನ ನೀಡಿ ವ್ಯವಸಾಯದ ಜೊತೆ ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳಲ್ಲಿ ಆಸಕ್ತಿ ತೋರತೊಡಗಿದ. 1820 ರಲ್ಲಿ ಪ್ರಿಕಾಷನ್ ಎಂಬ ಪ್ರಥಮ ಕಾದಂಬರಿಯನ್ನು ಪ್ರಕಟಿಸಿದ. ಮರುವರ್ಷ ಅಮೆರಿಕವನ್ನು ಹಿನ್ನೆಲೆಯಾಗಿಟ್ಟುಕೊಂಡು ದಿ ಸ್ಪೈ ಎಂಬ ಕಾದಂಬರಿ ಬರೆದು ಪ್ರಖ್ಯಾತನಾದ.

ಈತನ ದಿ ಪಯನೀರ್ಸ್ (1823) ಎಂಬ ಗ್ರಂಥದಲ್ಲಿ ಗಡಿನಾಡಿನ ಜನರ ಸಾಹಸ ಕಥೆಗಳಿವೆ. ಈ ಕೃತಿಗೆ ದೊರೆತ ಮನ್ನಣೆ ದಿ ಲಾಸ್ಟ್ ಅಫ್ ದಿ ಮೋಹಿಕನ್ಸ್ (1826), ದಿ ಪ್ರೈಯರಿ(1827), ದಿ ಪಾತ್ ಫೈಂಡರ್ (1840), ದಿ ಡೀರ್ ಸ್ಲೇಯರ್ (1841) ಮೊದಲಾದ ಅಂಥದೇ ವಸ್ತುಗಳನ್ನು ಒಳಗೊಂಡ ಕೃತಿಗಳು ಹೊರಬರಲು ಕಾರಣವಾಯಿತು. ದಿ ಪೈಲಟ್(1823), ದಿ ರೆಡ್ ರೋವರ್(1828) ಮತ್ತು ದಿ ವಾಟರ್ ವಿಚ್ ಮೊದಲಾದ ಕಾದಂಬರಿಗಳು ನಾವಿಕರ ಪ್ರಣಯ ಜೀವನವನ್ನು ಕುರಿತಂಥವು. ಕೂಪರನ ಒಲವು ಮೊದಲು ಪ್ರಜಾಪ್ರಭುತ್ವದ ಕಡೆಯಿದ್ದರೂ ಯೂರೋಪಿನಿಂದ ಅಮೆರಿಕಕ್ಕೆ ಹಿಂದಿರುಗಿದ ಮೇಲೆ ಅಮೆರಿಕದ ಪ್ರಜಾಪ್ರಭುತ್ವದ ಓರೆಕೋರೆಗಳನ್ನು ತನ್ನ ಕೃತಿಗಳಲ್ಲಿ ಚರ್ಚಿಸಿ ಕಟುವಾಗಿ ಟೀಕಿಸಿದ. ಈತ ಬರೆದ ಚಾರಿತ್ರಿಕ ಗ್ರಂಥಗಳಲ್ಲಿ ಹಿಸ್ಟರಿ ಆಫ್ ದಿ ನೇವಿ(1839) ವಿವಾದಾಸ್ಪದವಾದುದಾದರೂ ಶ್ರೇಷ್ಠವರ್ಗದ ಗ್ರಂಥ. ಕಡೆಯ ದಿನಗಳಲ್ಲಿ ಈತ ತನ್ನ ಕೃತಿಗಳು, ವ್ಯಕ್ತಿತ್ವ, ಚಾರಿತ್ರ್ಯಗಳ ಬಗ್ಗೆ ನಿಂದಿಸಿದ ವ್ಯಕ್ತಿ ಹಾಗೂ ಪತ್ರಿಕೆಗಳ ಮೇಲೆ ಮೊಕದ್ದಮೆ ನಡೆಸಿ ಮನಶ್ಶಾಂತಿಯನ್ನು ಕಳೆದುಕೊಂಡ. 1895–1900ರಲ್ಲಿ ಈತನ ಎಲ್ಲ ಬರೆಹವನ್ನೂ ಒಟ್ಟುಗೂಡಿಸಿ 33 ಸಂಪುಟಗಳಲ್ಲಿ ಪ್ರಕಟಿಸಲಾಯಿತು. 1922ರಲ್ಲಿ ಈತನ ಮೊಮ್ಮಗ ಈತನ ಪತ್ರ ವ್ಯವಹಾರಗಳನ್ನು ಸಂಪಾದಿಸಿ ಪ್ರಕಟಿಸಿದ. (ಎನ್.ಎಸ್.ಎಲ್.)

**ಕೂಪರ್, ಪೀಟರ್ :** 1791–83. ಅಮೆರಿಕದ ಆವಿಷ್ಕಾರಕ, ಕೈಗಾರಿಕೋದ್ಯಮಿ, ದಾನಿ. ಹುಟ್ಟಿದ್ದು ನ್ಯೂಯಾರ್ಕಿನಲ್ಲಿ. 1828ರಲ್ಲಿ ಬಾಲ್ಟಿನ್‌ನಲ್ಲಿ ಕ್ಯಾನ್ಟನ್ ಕಬ್ಬಿಣ ಕಾರ್ಖಾನೆಯನ್ನು ಸ್ಥಾಪಿಸಿದ. ಮೊತ್ತಮೊದಲಿಗೆ ರೈಲುಕಂಬಿಯ ಮೇಲೆ ಯಶಸ್ವಿಯಾಗಿ ಓಡಾಡುವಂಥ ರೈಲು ಎಂಜಿನನ್ನು ಕಂಡುಹಿಡಿದ (1830). ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ತಂತಿ ವ್ಯವಸ್ಥೆಯ ಅಭಿವೃದ್ಧಿಗೆ ಶ್ರಮಿಸಿದ. ನ್ಯೂಯಾರ್ಕ್ ನಗರದಲ್ಲಿ ಸಾರ್ವಜನಿಕ ಶಾಲಾವ್ಯವಸ್ಥೆಯನ್ನು ರೂಪಿಸಿದ. ಕೂಪರ್ ಯೂನಿಯನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಬಡವರ ಹಾಗೂ ಕೂಲಿಗಾರರ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾದಿಮಾಡಿಕೊಟ್ಟ. 1876ರಲ್ಲಿ ಗ್ರೀನ್‌ಬ್ಯಾಕ್ ಸಂಸ್ಥೆಯಿಂದ ಅಮೆರಿಕದ ಅಧ್ಯಕ್ಷಪದವಿಗೆ ಈತ ಸ್ಪರ್ಧಿಸಿದ್ದುಂಟು. *

**ಕೂಪರ್, ಸರ್ ಆಸ್ಟಲಿ ಪ್ಯಾಸ್ಟನ್ :** 1768–1841. ಪ್ರಸಿದ್ಧ ಇಂಗ್ಲಿಷ್ ಶಸ್ತ್ರವೈದ್ಯ. 1768ನೆಯ ಇಸವಿ ಆಗಸ್ಟ್ 23 ರಂದು ನಾರ್ಫೋಕಿನಲ್ಲಿ ಅಲ್ಲಿಯ ಪಾದ್ರಿಯ ನಾಲ್ಕನೆಯ ಮಗನಾಗಿ ಜನಿಸಿದ. ಚಿಕ್ಕಂದಿನಲ್ಲಿ ಸ್ವೇಚ್ಛಾಪ್ರವೃತ್ತಿಯವನಾಗಿದ್ದ. ಆದರೆ ಬುದ್ಧಿ ಬಂದಾಗ ಶ್ರದ್ಧಾವಂತನಾದ ಮತ್ತು ಲಂಡನ್ನಿನ ಸೇಂಟ್ ಥಾಮಸ್ ಆಸ್ಪತ್ರೆಯಲ್ಲಿ ವೈದ್ಯನಾಗಿದ್ದ ಹೆನ್ರಿಕ್ಲೈನ್ ಎಂಬವನ ಕೈಕೆಳಗೂ ಎಡಿನ್‌ಬರೋ ನಗರದ ಜಾನ್ ಹಂಟರನ ನೇತೃತ್ವದಲ್ಲಿಯೂ ವ್ಯಾಸಂಗ ಮಾಡಿದ (1787–88), ಮುಂದೆ ಸೇಂಟ್ ಥಾಮಸ್ ಆಸ್ಪತ್ರೆಯಲ್ಲಿ ಉಪಾಧ್ಯಾಯನಾಗಿ ನೇಮಕಗೊಂಡ (1789). 1791 ರಿಂದ 1800ರ ತನಕ ಲಂಡನ್ನಿನ ಪ್ರಸಿದ್ಧವಾದ ಗೈ ಆಸ್ಪತ್ರೆಯಲ್ಲಿ ಅಂಗರಚನಾ ಮತ್ತು ಶಸ್ತ್ರವೈದ್ಯದ ಸಹಾಧ್ಯಾಪಕನಾಗಿ ಕ್ಲೈನ್ ಜೊತೆಗೆ ಕೆಲಸ ಮಾಡಿದ. ಈ ಮಧ್ಯೆ 1792ರಲ್ಲಿ ಪ್ಯಾರಿಸ್ಸಿಗೂ ಹೋಗಿ ಅಲ್ಲಿ ಪೀರ್ ಜೋಸೆಫ್ ಡಿಸೌನ ಜೊತೆ ಕಲಿತ 1793 ರಿಂದ 1796ರ ತನಕ ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಸರ್ಜನ್ಸ್‌ನಲ್ಲಿ ಅಂಗರಚನಾವಿಜ್ಞಾನದ ಅಧ್ಯಾಪಕನಾಗಿ ಕೂಡ ಸೇವೆ ಸಲ್ಲಿಸುತ್ತಿದ್ದ. 1813ರಲ್ಲಿ ರಾಯಲ್ ಕಾಲೇಜಿನಲ್ಲಿ ತುಲನಾತ್ಮಕ ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾಗಿ ನೇಮಕಗೊಂಡ. 1802 ರಲ್ಲಿ ರಾಯಲ್ ಸೊಸೈಟಿಯ ಕೋಪ್ಲಿ ಪಾರಿತೋಷಿಕ ಪ್ರಾಪ್ತಿ. 1827ರಲ್ಲಿ 1836ರಲ್ಲಿ ರಾಯಲ್ ಕಾಲೇಜಿನ ಅಧ್ಯಕ್ಷತೆ. 1820–21ರಲ್ಲಿ ಬೇರೋನೆಟ್ ಬಿರುದು ಪ್ರಾಪ್ತಿ. ಮತ್ತು 1828ರಲ್ಲಿ ಇಂಗ್ಲೆಂಡಿನ ದೊರೆಗೆ ಶಸ್ತ್ರಕ್ರಿಯಾತಜ್ಞನಾಗಿ ನೇಮಕ. 1830ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯ ಉಪಾಧ್ಯಕ್ಷತೆ– ಇವು ಕೂಪರನ ಇತರ ಸಿದ್ಧಿಗಳು.

ಪ್ರಾಮಾಣಿಕವಾಗಿ ಮೇಲ್ತರಗತಿಯ ಕೆಲಸ ಮಾಡುತ್ತಿದ್ದುದರ ಜೊತೆಗೆ ಕೂಪರ್ ಅದೃಷ್ಟಶಾಲಿಯೂ ಆಗಿದ್ದುದರಿಂದ ಶಸ್ತ್ರವೈದ್ಯನಾಗಿ ಬಹು ಪ್ರಸಿದ್ಧಿ ಪಡೆದ. ದೇಹದ ಮುಖ್ಯ ಶುದ್ಧ ರಕ್ತನಾಳವಾದ ಅಪಧಮನಿಯನ್ನು ಕಟ್ಟಿ ಅಯೋರ್ಟಿಕ್ ಅನ್ಯೂರಿಸಂ ಎಂಬ ರೋಗಕ್ಕೆ ಚಿಕಿತ್ಸೆ ಮಾಡಲು ಮೊತ್ತಮೊದಲು ಪ್ರಯತ್ನಮಾಡಿದ್ದು (1817) ಇವನಿಗೆ ಪ್ರಸಿದ್ಧಿಯನ್ನು ತಂದಿತು. ಈ ಕಾರ್ಯ ವಿಷಾಣುನಿರೋಧ ಮತ್ತು ಸಂವೇದನಾನಾಶಗಳ ಸಿದ್ಧಿ ಸಾಧಿಸುವುದಕ್ಕೆ ಬಹು ಮುಂಚೆಯೇ ಮಾಡಿದ್ದು ಎನ್ನುವುದನ್ನು ನೆನೆದರೆ ಕೂಪರನ ಚಿಕಿತ್ಸಾ ಕ್ರಮದ ವೈಶಿಷ್ಟ್ಯವನ್ನು ಅರಿಯಬಹುದು. ಇಂಗ್ಲೆಂಡಿನ ರಾಜ ನಾಲ್ಕನೆಯ ಜಾರ್ಜನ ತಲೆಯ ಮೇಲಿದ್ದ ದುರ್ಮಾಂಸವನ್ನು ಕೂಪರ್ ಶಸ್ತ್ರಚಿಕಿತ್ಸೆಯಿಂದ ಕೊಯ್ದು ತೆಗೆದಾಗ (1820–21) ಯಾವ ಪ್ರಮಾದವಾದ ಅನ್ಯರೋಗವೂ ಉಂಟಾಗದೆ ಚಿಕಿತ್ಸೆ ತೃಪ್ತಿಕರವಾಗಿ ಪರಿಣಮಿಸಿತು. ಈ ಸಣ್ಣ ಶಸ್ತ್ರಚಿಕಿತ್ಸೆಯಿಂದಲೇ ಕೂಪರನಿಗೆ ಬೇರೋನೆಟ್ ಪದವಿ ಲಭಿಸಿತು. ಹರ್ನಿಯ ಮತ್ತು ಅದರ ಚಿಕಿತ್ಸೆಯ ವಿಷಯವಾಗಿ ಈತ ಬರೆದ ಪುಸ್ತಕ (1804–1807) ಬಹು ಪ್ರಸಿದ್ಧಿ ಪಡೆದಿದೆ. ಎಲುಬು ಮತ್ತು ಕೀಲುಗಳ ಘಾತುಗಳ ವಿಷಯವಾಗಿ ಸ್ತನ ರೋಗಗಳು, ವೃಷಣರೋಗಗಳು ಮುಂತಾದುವನ್ನು ಕುರಿತು ಕೂಪರ್ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ. ಇವನು ಅಂಗರಚನೆಯಲ್ಲಿ ತೋರಿಸಿಕೊಟ್ಟ ಅಂಗಾಂಶಗಳಿಗೆ ಇವನ ಹೆಸರನ್ನೇ ಇಟ್ಟು ಗೌರವಿಸಿದ್ದಾರೆ. ಅಂಗರಚನಾವಿಜ್ಞಾನದ ಪಾಠ ಹೇಳುವುದರಲ್ಲಿಯೂ ಈತ ಹೆಸರುವಾಸಿಯಾಗಿದ್ದ. ಕೂಪರ್ ಮಡಿದದ್ದು 1841 ಫೆಬ್ರುವರಿ 12ರಂದು. (ಎಸ್.ಆರ್.ಆರ್)

**ಕೂಪರ್ಯಾಂತಸ್ :** ಅಮರಿಲ್ಲಿಡೇಸೀ ಕುಟುಂಬಕ್ಕೆ ಸೇರಿದ ಜೆಫಿರ್ಯಾಂತಾಸ್ ಮತ್ತು ಕೂಪರಿಯ ಎಂಬೆರಡು ಜಾತಿಗಳನ್ನು ಅಡ್ಡ ಹಾಯಿಸಿ ಪಡೆಯಲಾಗಿರುವ ಒಂದು ಅಂತರ್ಜಾತೀಯ ಮಿಶ್ರ ತಳಿ. ಲಶುನ ಸಸ್ಯಗಳಲ್ಲಿ ಒಂದಾದ ಇದರಲ್ಲಿ ಸುಂದರವಾದ ಹೂ ಬಿಡುವ ಅನೇಕ ಪ್ರಭೇದಗಳಿವೆ. ಇವು ಬಿಳಿ, ನಸುಗೆಂಪು, ಗುಲಾಬಿ, ಕಿತ್ತಳೆ, ಹಳದಿ ಇತ್ಯಾದಿ ವರ್ಣರಂಜಿತವಾದ ಹೂಗಳನ್ನು ಬಿಡುತ್ತವೆ.

ತನ್ನ ಪಿತೃಜಾತಿಯಾದ ಜೆಫಿರ್ಯಾಂತಾಸ್ ಅನ್ನೆ ಬಹುವಾಗಿ ಹೋಲುವ ಕೂಪರ್ಯಾಂತಸ್ ತನ್ನ ಹೂಗಳ ಬಣ್ಣದಲ್ಲಿ ಹೆಚ್ಚು ವೈವಿಧ್ಯಮಯ. ಅಲ್ಲದೆ ಹೂಗಳ ಸಂಖ್ಯೆಯೂ ಹೆಚ್ಚು. ಜೆಫಿರ್ಯಾಂತಸ್‌ನಂತೆಯೇ ಇದು ಕೂಡ 4"–6" ಎತ್ತರಕ್ಕೆ ಬೆಳೆಯುತ್ತದೆ. ಇದರಲ್ಲಿ ಹೊಳೆಯುವ ಮತ್ತು ಸೊಗಸಾದ ಹುಲ್ಲಿನ ಎಸಳಿನಂಥ ಎಲೆಗಳಿವೆ. ಹೂಗಳು ಸಸ್ಯದ ಮಧ್ಯದಿಂದ ಹೊರಡುವ ದಿಂಡಿನಂಥ ಹೂಗೊಂಚಲಿನ(ಸ್ಕೇಪ್) ತುದಿಯಲ್ಲಿ ಸಮಾವೇಶಗೊಂಡಿವೆ. ಮಳೆಗಾಲದ ಆದಿಯಲ್ಲಿ ಮಳೆ ಬಿದ್ದ ಎರಡು ದಿನಗಳಲ್ಲಿ ಹೂ ಅರಳಿ ಶೋಭೆಯನ್ನುಂಟುಮಾಡುತ್ತದೆ. ಕೂಪರ್ಯಾಂತಸ್ ತನ್ನ ಅಂದವಾದ ಹೂಗಳಿಂದಾಗಿ ಒಂದು ಮುಖ್ಯವಾದ ಹಾಗೂ ಜನಪ್ರಿಯವಾದ ಅಲಂಕಾರ ಸಸ್ಯವೆನಿಸಿದೆ. ಅಂಚು ಸಸ್ಯವಾಗಿ ಬೆಳೆಸುವುದೇ ವಾಡಿಕೆ. ಲಶುನಗಳಿಂದ ಇದನ್ನು ವೃದ್ಧಿಸುತ್ತಾರೆ. (ಬಿ.ಎ.ಸಿ.)

**ಕೂಪ್ರಿನ್, ಅಲೆಕ್ಸಾಂಡರ್ ಇವಾನೊವಿಚ್ :** 1870–38. ರಷ್ಯನ್ ಕಾದಂಬರಿಕಾರ, ಸಣ್ಣ ಕಥೆಗಳಿಗೆ ಹೆಸರಾದವ. ಪೆಂಝ ಪ್ರದೇಶದ ನರೋವ್‌ಚಟ್‌ನಲ್ಲಿ ಬಡ ಸರ್ಕಾರಿ ನೌಕರನೊಬ್ಬನ ಕುಟುಂಬದಲ್ಲಿ ಜನಿಸಿದ. ವಿದ್ಯಾಭ್ಯಾಸ ಸೈನಿಕ ಶಾಲೆಗಳಲ್ಲಿ ನಡೆಯಿತು. ನಾಲ್ಕು ವರ್ಷ ಸೇನೆಯಲ್ಲಿ ಅಧಿಕಾರಿಯಾಗಿ ಕೆಲಸ ಮಾಡಿದ. 1894ರಲ್ಲಿ ಆ ಕೆಲಸಕ್ಕೆ ರಾಜಿನಾಮೆಯಿತ್ತು ನಾಟಕ, ಸರ್ಕಸ್ ಮುಂತಾದ ವಿವಿಧ ಕಾರ್ಯರಂಗಗಳಲ್ಲಿ ಕೆಲಸ ಮಾಡಿ ಕೊನೆಗೆ ಸಾಹಿತ್ಯ ಸೃಷ್ಟಿಗೆ ತೊಡಗಿದ. 1900ರಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಿಂತು ಪತ್ರಿಕೋದ್ಯಮಿಯಾಗಿ ಕೆಲಸ ಮಾಡತೊಡಗಿದ. 1903ರಲ್ಲಿ ಸಣ್ಣಕತೆಗಳ ಸಂಕಲನವೊಂದನ್ನು ಪ್ರಕಟಿಸಿದ. ಅದಾದ ಕೆಲವೇ ಸಮಯದಲ್ಲಿ (1905) ದಿ ಡ್ಯೂಯಲ್ ಎಂಬ ಕಾದಂಬರಿಯನ್ನು ಪ್ರಕಟಿಸಿದ. ಸೈನಿಕ ಜೀವನವನ್ನು ಒಳಗೊಂಡ ಆ ಕಾದಂಬರಿ ಬಹುಬೇಗ ಜನಪ್ರಿಯತೆಗಳಿಸಿತು. 1908 ರಿಂದ 1915ರ ವೇಳೆಗೆ ವೇಶ್ಯಾಜೀವನವನ್ನು ಕುರಿತಂಥ ಯಾಮ ಎಂಬ ಕಾದಂಬರಿಯನ್ನು ಮೂರು ಭಾಗಗಳಲ್ಲಿ ಪ್ರಕಟಿಸಿದ. ಇದು ಪ್ರಪಂಚದ ಹಲವು ಭಾಷೆಗಳಿಗೆ (ಕನ್ನಡದಲ್ಲಿ ಪಾಪಕೂಪ) ಭಾಷಾಂತರಗೊಂಡಿದೆ. 1917ರ ಕ್ರಾಂತಿಯ ಅನಂತರ ಈತ ರಷ್ಯವನ್ನು ಬಿಟ್ಟು ಪ್ಯಾರಿಸ್ ಮುಂತಾದ ಕಡೆ ಇದ್ದು 1937ರಲ್ಲಿ ರಷ್ಯಕ್ಕೆ ಹಿಂತಿರುಗಿ ಲೆನಿನ್‌ಗ್ರಾಡ್‌ನಲ್ಲಿ ನಿಂತ.

ಮ್ಯಾಕ್ಸಿಂಗಾರ್ಕಿಯ ಜ್ಞಾನಪಂಥದಲ್ಲಿ ಈತ ಸಾಹಿತ್ಯ ರಚನೆಯನ್ನು ಆರಂಭಿಸಿದವ. ಬರೆವಣಿಗೆಯಲ್ಲಿ ಚೆಕಾಫ್ ಮತ್ತು ತುರ್ಗಿನೀಫ್‌ರನ್ನು ಅನುಸರಿಸಿದರೂ ಅಮೆರಿಕೆಯ ಜಾಕ್‌ಲಂಡನ್ನನ ಬರೆವಣಿಗೆಯ ವೈಶಿಷ್ಟ್ಯವನ್ನು ರಷ್ಯನ್ ಸಾಹಿತ್ಯಕ್ಕೆ ತರಲು ಈತ ಯತ್ನಿಸಿದ್ದಾನೆ. ಈತನಿಗೆ ಕಥೆ ಹೇಳುವ ಕಲೆ ಸೊಗಸಾಗಿ ಸಿದ್ಧಿಸಿತ್ತು. (ಎಲ್.ಎಸ್.ಎಸ್.)

**ಕೂಮರಿನ್ :** ಒಂದು ಬಗೆಯ ನೈಸರ್ಗಿಕ ಪರಿಮಳ. ಹಲವು ಬಗೆಯ ಸಸ್ಯಗಳಲ್ಲಿ (ಆಸ್ಪರುಲ ಒಡೋರೇಟ) ಮತ್ತು ಟೌಂಕಕಾಯಿಗಳಲ್ಲಿದೆ. ಆಗತಾನೆ ಕತ್ತರಿಸಿದ ಒಣಹುಲ್ಲು ಪಸರಿಸಿದ ವಾಸನೆಗೆ ಇದೇ ಕಾರಣ. ಇದನ್ನು ಆಲ್ಕೋಹಾಲಿನಲ್ಲಿ ಸಂಸ್ಕರಿಸಿದ ಟೌಂಕ ಬೀಜಗಳಿಂದ ತಯಾರಿಸಬಹುದು. ಕೃತಕವಾಗಿ ಸ್ಯಾಲಿಸಿಲ್ ಆಲ್ಡಿಹೈಡ್ ಮೇಲೆ ಅಸಿಟಿಕ್ ಆನ್ ಹೈಡ್ರೈಡ್ ಮತ್ತು ಸೋಡಿಯಂ ಅಸಿಟೇಟುಗಳ ವರ್ತನೆಯಿಂದ ತಯಾರಿಸಲಾಗುವುದು(ಪರ್ಕಿನ್ ಕ್ರಿಯೆ). ಇದರ ಅಣುಸೂತ್ರ $C_9H_6O_2$. ಕೂಮರಿನ್ ಸಿಸ್ – ಆರ್ಥೋ– ಹೈಡ್ರಾಕ್ಸಿಸಿನ್ನಾಮಿಕ್ ಆಮ್ಲದ (ಕುಮರಿನಿಕ್ ಆಮ್ಲ) ವ್ಯುತ್ಪನ್ನ ಲ್ಯಾಕ್ಟೋನ್. ಇದು ಉತ್ಕರ್ಷಣವನ್ನು ಸಾಕಷ್ಟು ನಿರೋಧಿಸುತ್ತದೆ. ಪೊಟಾಸಿಯಂ ಹೈಡ್ರಾಕ್ಸೈಡಿನೊಡನೆ ಕುದಿಸಿದಾಗ ಕುಮರಿಕ್ ಆಮ್ಲ ಲವಣವನ್ನು ಸೋಡಿಯಂ ಅಮಾಲ್ಗಂನೊಡನೆ ಜಲಮಾಧ್ಯಮದಲ್ಲಿ ಅಪಕರ್ಷಿಸಿದಾಗ ಮೆಲಿಲೋಟಿಕ್ ಆಮ್ಲವನ್ನು ಬ್ರೋಮಿನ್ ಮತ್ತು ಸೋಡಿಯಂ ಬೈ ಸಲ್ಫೇಟುಗಳೊಡನೆ ಅನುಬಂಧ ಸಂಯುಕ್ತಗಳನ್ನು ಕೊಡುತ್ತವೆ. ಕುಮರಿನ್‌ನ ವಜ್ರಾಕೃತಿಯ ಹರಳುಗಳು ಆಲ್ಕೋಹಾಲಿನಲ್ಲಿ ಕೂಡಲೆ ಕರಗುತ್ತವೆ. ಬಿಸಿ ನೀರಿನಲ್ಲಿ ಮಿತವಾಗಿ ಕರಗುತ್ತವೆ. ಕುಮರಿನ್‌ನನ್ನು ಪರಿಮಳ ದ್ರವ್ಯಗಳಲ್ಲಿ ಮತ್ತು ರುಚಿಕಾರಕವಾಗಿ ಉಪಯೋಗಿಸಲಾಗುವುದು. ಇದರ ವ್ಯುತ್ಪನ್ನಗಳು ಪ್ರಧಾನವಾಗಿ 6, 7– ಡೈ ಹೈಡ್ರಾಕ್ಸಿ ಕುಮರಿನ್‌ಗಳು. ಇವು ಸಸ್ಯ ಜಗತ್ತಿನಲ್ಲಿ ಹೇರಳವಾಗಿವೆ.

ಸ್ತನಿಗಳ ಶರೀರ ವಿಜ್ಞಾನದಲ್ಲಿ ಕುಮರಿನಿನ ಪಾತ್ರ ಏನೂ ಇಲ್ಲ. ಆದರೆ ಸಂಶ್ಲೇಷಿತ 3– ಬದಲಿ– 4 – ಹೈಡ್ರಾಕ್ಸಿ ಕುಮರಿನ್‌ಗಳು ತೀಕ್ಷ್ಣವಾದ ಗರಣೆ ನಿರೋಧಕಗಳು. ಪಶುಗಳ ಒಂದು ಬಗೆಯ ರಕ್ತಸ್ರಾವ ಜಾಡ್ಯಕ್ಕೆ 3,3'–ಮೆಥಿಲಿನ್ ಬಿಸ್ (4–ಹೈಡ್ರಾಕ್ಸಿ ಕುಮರಿನ್) ಕಾರಣಕರ್ತೃ. ಡೈಕೊಮೊರಾಲ್ ಹೆಸರಿನ ಈ ಸಂಶ್ಲೇಷಿತ ವಸ್ತುವಿಗೆ ವೈದ್ಯದಲ್ಲಿ ಅನೇಕ ರಕ್ತಗರಣೆ ರೋಗಲಕ್ಷಣಗಳನ್ನು ತಡೆಗಟ್ಟಲು ಗರಣೆ ನಿರೋಧಕವಾಗಿ

ತುಂಬ ಉಪಯೋಗವುಂಟು. ವಾರ್‌ಫರಿನ್ ಬಹುಸತ್ತ್ವಯುತವಾದ ಮತ್ತೊಂದು ಸಂಶ್ಲೇಷಿತ ಕೂಮರಿನ್. ಇದು ಇಲಿಗಳ ನಿಯಂತ್ರಣದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿದೆ. ಸ್ವಲ್ಪ



ಪ್ರಮಾಣದಲ್ಲಿ(0.025%) ಇದನ್ನು ಮೂರರಿಂದ ಐದು ದಿವಸಗಳ ವರೆಗೆ ಸೇವಿಸಿದ ಇಲಿಗಳು 7ರಿಂದ 10 ದಿವಸಗಳಲ್ಲಿ ಆಂತರಿಕ ರಕ್ತಸ್ರಾವದಿಂದ ಸಾವನ್ನಪ್ಪುತ್ತವೆ. ಕೂಮರಿನ್ ಮತ್ತು ಸಂಬಂಧಿತ ಸಂಯುಕ್ತಗಳ ಅಣುರಚನೆಯನ್ನು ಚಿತ್ರದಲ್ಲಿ ತೋರಿಸಿದೆ.

(ಎಲ್.ಎ.ಆರ್.; ಎ.ಎಸ್.ಆರ್.)

**ಕೂರಲು ಮೀನು :** ಬಾರ್ಬಸ್ ಜಾತಿಯ ಸಿಹಿನೀರು ಮೀನು. ತಲೆಯನ್ನು ಬಿಟ್ಟು ಮೈಮೇಲೆಲ್ಲಾ ದೊಡ್ಡ ದೊಡ್ಡ ಹುರುಪೆಗಳಿವೆ. ಹಲ್ಲುಗಳಿಲ್ಲ. ಸಾಮಾನ್ಯವಾಗಿ ಎರಡು ಜೋಡಿ ಮೀಸೆಗಳುಂಟು (ಬಾರ್ಚೆಲ್ಸ್). ಇದು ಬಹಳ ಚುರುಕಾದ ಮೀನು. ಇದನ್ನು ಸಾಕಲು ಬಹಳ ವಿಶಾಲವಾದ ಜಲಾದ್ಯಾನಗಳು (ಅಕ್ವೇರಿಯ) ಅಗತ್ಯ. ಇದರ ಶಾಂತ ಮೀನುಗಳೊಂದಿಗೆ ಸಹಜೀವನ ನಡೆಸಬಲ್ಲದು. ವಿವಿಧ ಬಗೆಯ ಆಹಾರವನ್ನು ಸೇವಿಸುತ್ತದೆ. ಈ ಮೀನುಗಳನ್ನು ತಿನ್ನುತ್ತಾರೆ. (ಎಂ.ಜಿ.ಎಸ್.ಆರ್.)

**ಕೂರ್ಮಾವತಾರ :** ಮಹಾವಿಷ್ಣುವಿನ ದಶಾವತಾರಗಳಲ್ಲಿ ಎರಡನೆಯದು. ಅಷ್ಟದಶಪುರಾಣಗಳಲ್ಲಿ ಹದಿನೈದನೆಯದಾದ ಕೂರ್ಮಪುರಾಣ ಈ ಅವತಾರವನ್ನು ವರ್ಣಿಸುತ್ತದೆ. ಶ್ವೇತವರಾಹ ಕಲ್ಪದ ಚಾಕ್ಷುಷ ಮನ್ವಂತರದಲ್ಲಿ ಇದು ನಡೆಯಿತು. ದೇವಾಸುರರಲ್ಲಿ ದೇವತೆಗಳ ಬಲ ದಿನೇದಿನೇ ಕ್ಷಯಿಸುತ್ತ ಬಂದು ಅಸುರರ ಪ್ರಾಬಲ್ಯ ಹೆಚ್ಚಿದುದರಿಂದ ಮದಾಂಧರಾದ ರಾಕ್ಷಸರು ದೇವತೆಗಳಿಗೆ ಹೆಚ್ಚಿನ ಕಿರುಕುಳ ಕೊಟ್ಟರು. ಇದನ್ನು ಸಹಿಸಲಾರದ ಇಂದ್ರಾದಿ ದೇವತೆಗಳು ಬ್ರಹ್ಮಪುರಸ್ಸರರಾಗಿ ವಿಷ್ಣುವಿನ ಮೊರೆಹೊಕ್ಕರು. ಅವರ ಮೊರೆಯನ್ನು ಕೇಳಿ ಕನಿಕರಗೊಂಡ ವಿಷ್ಣು ಅವರಿಗೆ ಸಮುದ್ರಮಥನ ಮಾಡಿ ಅಮೃತವನ್ನು ಪಡೆದು ಅಜರರೂ ಅಮರರೂ ಆಗುವ ಉಪಾಯವನ್ನು ಉಪದೇಶಿಸಿದ.

ವಾಸುಕಿಯನ್ನು ಹಗ್ಗವನ್ನಾಗಿಯೂ ಮಂದರ ಪರ್ವತವನ್ನು ಕಡೆಗೋಲನ್ನಾಗಿಯೂ ಮಾಡಿಕೊಂಡು ಕ್ಷೀರಸಮುದ್ರವನ್ನು ಕಡೆದರೆ ಅಮೃತ ದೊರೆಯುವುದು, ಅದನ್ನು ಪಾನಮಾಡಿದರೆ ತಾವೆಲ್ಲರೂ ಅಮರರಾಗಿ ಸುಖಸಂತೋಷಗಳಿಂದ ಅನಂತಕಾಲದವರೆಗೂ ಇರಬಹುದು ಎಂದು ದೇವತೆಗಳು ರಾಕ್ಷಸರ ಮನಸ್ಸನ್ನು ಉಪಾಯದಿಂದ ಒಲಿಸಿದರು.

ಅನಂತರ ದೇವಾಸುರರೆಲ್ಲರೂ ಕಲೆತು ಕ್ಷೀರಸಮುದ್ರವನ್ನು ಮಥನಮಾಡಲು ಉಪಕ್ರಮಿಸಿದರು. ಆದರೆ ಕಡೆಗೋಲಾಗಿದ್ದ ಆ ಮಹಾಪರ್ವತ ಸಮುದ್ರತಳಕ್ಕಿಳಿದುಬಿಟ್ಟಿತು. ದಿಕ್ಕುತೋಚದ ದೇವತೆಗಳು ಮತ್ತೆ ಮಹಾವಿಷ್ಣುವಿಗೆ ಶರಣುಹೋಗಲು ಆತ ತನ್ನೊಂದು ಅಂಶದಿಂದ ಕೂರ್ಮರೂಪವನ್ನು ತಾಳಿ ತನ್ನ ಬೆನ್ನಿನ ಮೇಲೆ ಪರ್ವತವನ್ನು ಎತ್ತಿ ನಿಲ್ಲಿಸಿಕೊಂಡು ದೇವಾಸುರರು ಸಮುದ್ರಮಥನ ಮಾಡಲು ಅವಕಾಶ ಕಲ್ಪಿಸಿದ.

ಕೂರ್ಮಾವತಾರದಲ್ಲಿ ಮಹಾವಿಷ್ಣು ಇಂದ್ರದ್ಯುಮ್ನನ ಪ್ರಸಂಗದ ಮೂಲಕ ಋಷಿಗಳಿಗೆ ಚತುರ್ವಿಧ ಪುರುಷಾರ್ಥಗಳ ಮಹಾತ್ಮ್ಯವನ್ನು ವರ್ಣಿಸಿ ಉಪದೇಶಿಸಿದ್ದಾನೆ. (ನೋಡಿ–ದಶಾವತಾರಗಳು) (ಸಿ.ಜಿ.ಪಿ.; ಎಂ.ವೈ.)

**ಕೂಲಂಬ್, ಚಾರ್ಲ್ಸ್ ಅಗಸ್ಟಿನ್ ಡಿ :** 1736 – 1806. ಫ್ರೆಂಚ್ ಭೌತವಿಜ್ಞಾನಿ ವಿದ್ಯುದ್ವಿಜ್ಞಾನದಲ್ಲಿ ಆದಿ ಪರಿಶೋಧಕ. 1736 ಜೂನ್ 14ರಂದು ಅಂಗೋಲೆಮೆ ಎಂಬಲ್ಲಿ ಜನಿಸಿದ. ಫ್ರೆಂಚ್ ಸೇನೆಯಲ್ಲಿ ಇಂಜಿನಿಯರಾಗಿ 9 ವರ್ಷ ವೆಸ್ಟ್ ಇಂಡೀಸಿನಲ್ಲಿ ಕೆಲಸ ಮಾಡಿದ. ಅಲ್ಲಿದ್ದಾಗಲೇ ಈತ ವಿಜ್ಞಾನಕ್ಕೆ ಸಂಬಂಧಪಟ್ಟ ಲೇಖನಗಳನ್ನು ಬರೆದಿದ್ದ. ಅಲ್ಲಿಂದ ಫ್ರಾನ್ಸಿಗೆ ಮರಳಿಬಂದಾಗ ಈತನ ಆರೋಗ್ಯ ಬಹಳ ಹದಗೆಟ್ಟಿತ್ತು. 1789ರಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿ ತಲೆದೋರಿತು. ಆಗ ಈತ ಬ್ಲೋಯ್ ಪಟ್ಟಣದಲ್ಲಿದ್ದ ತನ್ನ ಚಿಕ್ಕ ತೋಟಕ್ಕೆ ಹೋಗಿ ಪೂರ್ಣ ಕಾಲವನ್ನು ವಿಜ್ಞಾನ ಸಂಶೋಧನೆಗೆ ಉಪಯೋಗಿಸಲಾರಂಭಿಸಿದ. ತಿರುಚುಮಾಪಕವನ್ನು ಇವನು ರಚಿಸಿದ್ದು 1777ರಲ್ಲಿ. ಇದೇ ಯಂತ್ರವನ್ನು ಮಿಚೆಲ್ ಎಂಬ ಇಂಗ್ಲಿಷ್ ಭೂವಿಜ್ಞಾನಿ ಆ ಮೊದಲೇ ಸ್ವತಂತ್ರವಾಗಿ ಕಂಡುಹಿಡಿದಿದ್ದ. ಇದರಲ್ಲಿ ಒಂದು ತೆಳುವಾದ ಮತ್ತು ಬಳುಕದ ತಂತು ಇದೆ. ತಂತುವಿನಲ್ಲಿ ಉಂಟಾಗುವ ತಿರುಚಿನಿಂದ ಬಲದ ಪರಿಮಾಣವನ್ನು ಅಳತೆಮಾಡಬಹುದು. ಈ ಮಾಪಕದ ಪ್ರಯೋಗದಿಂದ ವಿದ್ಯುದ್ವಿಜ್ಞಾನದಲ್ಲಿ ಉಪಯೋಗಿಸುವ ಮುಖ್ಯವಾದ ಒಂದು ನಿಯಮವನ್ನು ಕೂಲಂಬ್ ಕಂಡುಹಿಡಿದ. (1785). ಇದಕ್ಕೆ ಕೂಲಂಬನ ನಿಯಮ (**ನೋಡಿ– ಕೂಲಂಬನ–ನಿಯಮ**) ಎಂದೇ ಹೆಸರು ಬಂದಿದೆ. ಇದರ ಪ್ರಕಾರ ವಿದ್ಯುತ್ತಿನ ಆಕರ್ಷಣೆಯ ಅಥವಾ ವಿಕರ್ಷಣೆಯ ಬಲ ಎರಡು ವಿದ್ಯುದಾವೇಶಗಳ(ಎಲೆಕ್ಟ್ರಿಕ್ ಚಾರ್ಜಸ್) ಗುಣಲಬ್ಧದ ನೇರ ಅನುಪಾತದಲ್ಲಿಯೂ ಅವುಗಳ ದೂರದ ವರ್ಗದ ವ್ಯಸ್ತಾನುಪಾತದಲ್ಲಿಯೂ ಇದೆ ಎಂದು ನಿರೂಪಿತವಾಗಿದೆ. ಈ ಕಾರಣದಿಂದ ಕೂಲಂಬ್ ಎನ್ನುವ ವಿದ್ಯುತ್ತಿನ ಏಕಮಾನವನ್ನು ಈತನ ಗೌರವಾರ್ಥವಾಗಿಯೇ ಇಡಲಾಗಿದೆ. ಇಷ್ಟಲ್ಲದೆ ಕೂಲಂಬ್ ಘರ್ಷಣೆ(1779). ಗಾಳಿಯಂತ್ರಗಳು (1781) ಮತ್ತು ಲೋಹ ಹಾಗೂ ರೇಷ್ಮೆ ಎಳೆಗಳ ತಿರುಚು ಸ್ಥಿತಿಸ್ಥಾಪಕತ್ವಗಳ(1784) ವಿಚಾರವಾಗಿ ಲೇಖನಗಳನ್ನು ಪ್ರಕಟಿಸಿದ್ದಾನೆ. ಈತ ಕಾಂತತ್ವವನ್ನು ಕುರಿತು ಕೂಡ ಸಂಶೋಧನೆಗಳನ್ನು ನಡೆಸಿ ಕಾಂತಬಲಮಾಪಕ ಮತ್ತು ಕಾಂತಬಲದರ್ಶಕಗಳನ್ನು ನಿರ್ಮಾಣ ಮಾಡಿದ್ದಾನೆ.

ಫ್ರೆಂಚ್ ಕ್ರಾಂತಿಯ ಸಮಯದಲ್ಲಿ ಹೊಸ ಸರ್ಕಾರ ದಶಮಾನ ಅಳತೆ ಪದ್ಧತಿಯನ್ನು ಪರೀಕ್ಷಿಸಲು ರಚಿಸಿದ ಮಂಡಲಿಯಲ್ಲಿ ಈತನೂ ಒಬ್ಬ ಸದಸ್ಯನಾಗಿದ್ದ. 1802ರಲ್ಲಿ ಕೊಲಂಬನನ್ನು ಫ್ರಾನ್ಸ್ ದೇಶದ ಸಾರ್ವಜನಿಕ ಶಿಕ್ಷಣ ಕಾರ್ಯಕ್ಕೆ ಪರೀಕ್ಷಾಧಿಕಾರಿಯಾಗಿ ನೇಮಕ ಮಾಡಲಾಯಿತು. ಕೊಲಂಬ್ ಗತಿಸಿದ್ದು 1806ರ ಆಗಸ್ಟ್ 23 ರಂದು ಪ್ಯಾರಿಸ್ ನಗರದಲ್ಲಿ. (ಎನ್.ಜಿ.ಪಿ.)

**ಕೂಲಂಬನ ನಿಯಮ :** ಚಾರ್ಲ್ಸ್ ಅಗಸ್ಟಿನ್ ಡಿ ಕೊಲಂಬ್ (1736–1806) ಸ್ಥಿರ ವಿದ್ಯುತ್ ವಿಜ್ಞಾನವನ್ನು ಕುರಿತು ನಿರೂಪಿಸಿದ ನಿಯಮ. ನಿರೂಪಣೆ ಹೀಗಿದೆ: ನಿರ್ವಾತ ಪ್ರದೇಶದಲ್ಲಿ ಎರಡು ವಿದ್ಯುದಾವೇಷಗಳನ್ನು (ಎಲೆಕ್ಟ್ರಿಕಲ್ ಚಾರ್ಜಸ್) ಇಟ್ಟರೆ ಅವು ಪರಸ್ಪರ ಅನುಭವಿಸುವ ವಿದ್ಯುತ್ ಬಲ. ಆ ಆವೇಷಗಳ ಗುಣಲಬ್ಧದ ನೇರ ಅನುಪಾತದಲ್ಲಿಯೂ ಅವುಗಳ ನಡುವಿನ ಅಂತರದ ವರ್ಗದ ವ್ಯಸ್ಥಾನುಪಾತದಲ್ಲಿಯೂ ಇರುತ್ತದೆ. $q_1$, $q_2$ ವಿದ್ಯುದಾವೇಷಗಳೆಂದು R ಅವುಗಳ ನಡುವಿನ ಅಂತರಗಳೆಂದು ಭಾವಿಸಿದರೆ ಬಲ F ಅನ್ನು ಕೂಡುವ ಸಮೀಕರಣ $F = k_0 q_1 q_2 / r^2$ ಎಂದಾಗುವುದು. ಇಲ್ಲಿ $k_0$ ಅನುಪಾತದ ಸ್ಥಿರಾಂಕ. ಎರಡು ಏಕಮಾನ ಆವೇಷಗಳನ್ನು ನಿರ್ವಾತದಲ್ಲಿ ಒಂದು ಸೆಂ.ಮೀ. ದೂರದಲ್ಲಿಟ್ಟಾಗ ಅವುಗಳ ನಡುವೆ ಆಕರ್ಷಕ (ವಿಜಾತಿಯ ಆವೇಷಗಳಿದ್ದಾಗ) ಅಥವಾ ವಿಕರ್ಷಕ (ಸಜಾತಿಯ ಆವೇಷಗಳಿದ್ದಾಗ) ವಿದ್ಯುತ್ ಬಲ 1 ಡೈನ್ ಇರಬೇಕು. ಆದ್ದರಿಂದ $f = q_1 q_2 / r^2$ ಎಂದು ಬರೆದರೆ ($k_0 = 1$) ಆವೇಷಗಳನ್ನು ಸ್ಥಿರವಿದ್ಯುತ್ ಏಕಮಾನದಲ್ಲಿ ಇಡಲಾಗಿದೆ ಎಂದು ತಿಳಿಯಬೇಕು.

ಕೂಲಂಬ್ ತಾನೇ ಶೋಧಿಸಿದ ತಿರುಚು ತುಲಾಯಂತ್ರದ (ಟಾರ್ಷನ್ ಬ್ಯಾಲೆನ್ಸ್) ನೆರವಿನಿಂದ ಮೇಲಿನ ನಿಯಮವನ್ನು ಸ್ಥೂಲವಾಗಿ ಸಾಧಿಸಿದ. ಇದು ಪ್ರತ್ಯಕ್ಷ ಪದ್ಧತಿಯಾದರೂ r ನ ಘಾತಾಂಕ ನಿಖರವಾಗಿ 2 ಎಂದು ಸಿದ್ಧಪಡಿಸಲು ಸಾಧ್ಯವಾಗಲಿಲ್ಲ. ಇದಕ್ಕಾಗಿ ಅಪ್ರತ್ಯಕ್ಷ ಪದ್ಧತಿಯನ್ನು ಉಪಯೋಗಿಸಲಾಗಿದೆ. ಪ್ರಥಮತಃ ಹೆನ್ರಿ ಕ್ಯಾವೆಂಡಿಷ್ (1731–1810) ಇಂಥ ಪದ್ಧತಿಯಿಂದ r ನ ಘಾತಾಂಕ 1.98 ರಿಂದ 2.02 ಪರಿಮಿತಿಗಳೊಳಗಿದೆ ಎಂದು ತೋರಿಸಿದ. 1936ರಲ್ಲಿ ಪ್ಲಿಂಪ್ಟನ್ ಮತ್ತು ಲಾಟನ್ ಎಂಬುವರು ಅತ್ಯಂತ ಸೂಕ್ಷ್ಮವಾದ ಪ್ರಯೋಗ ಮಾಡಿ ಇದರ ಬೆಲೆ 1.999999998 ರಿಂದ 2.000000002 ಪರಿಮಿತಿಗಳೊಳಗಿದೆ ಎಂದು ತೋರಿಸಿದ್ದಾರೆ. ಈ ಅಪ್ರತ್ಯಕ್ಷ ಪದ್ಧತಿಯ ಪ್ರಯೋಗಗಳು ಟೊಳ್ಳು ವಾಹಕದ ಒಳಗೆ ಆವೇಷಗಳನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದು ತೋರಿಸಿ ಇದರಿಂದ ಘಾತಾಂಕವನ್ನು ನಿರ್ಣಯಿಸುತ್ತವೆ. ಪ್ಲಿಂಪ್ಟನ್ ಮತ್ತು ಲಾಟನ್ ಕೊಟ್ಟ ಪರಿಮಿತಿಗಳೇ ಈಗ ಒಪ್ಪಿಗೆಯಾಗಿವೆ. ಆದರೆ ವ್ಯವಹಾರದಲ್ಲಿ r ನ ಘಾತಾಂಕವನ್ನು 2 ಎಂದು ಇಟ್ಟುಕೊಳ್ಳುವ ರೂಢಿ ಉಂಟು.

ನಿರ್ವಾತದ ಬದಲು ಯಾವುದೇ ಏಕರೀತಿ ಮಾಧ್ಯಮದಲ್ಲಿ ಆವೇಷಗಳನ್ನು ಇಟ್ಟರೆ ಕೂಡ ಕೊಲಂಬನ ನಿಯಮ ಅನ್ವಯವಾಗುತ್ತದೆ. ಆದರೆ ವಿದ್ಯುತ್ ಬಲ ಆ ಮಾಧ್ಯಮದ ಪರಾವೈದ್ಯುತಾಂಕ (ಪರ್ಮಿಟಿವಿಟಿ) ಅಥವಾ ಪರಾವೈದ್ಯುತ (ಡೈ ಎಲೆಕ್ಟ್ರಿಕ್) ಸ್ಥಿರಾಂಕ ಎಂಬ ಅಂಕಕ್ಕೆ ವ್ಯಸ್ಥಾನುಪಾತವಾಗಿ ಕಡಿಮೆಯಾಗುವುದು. ಅಂದರೆ $f = q_1 q_2 / kr^2$ ಆಗುತ್ತದೆ. (ನಿರ್ವಾತಕ್ಕೆ k =1 ಎಂದು ಬರೆಯಬಹುದು. ಗಾಳಿಯಲ್ಲಿ kಯ ಬೆಲೆ ಸುಮಾರು 1 ಎಂದು ಇಟ್ಟುಕೊಳ್ಳಬೇಕು.

ಕೂಲಂಬನ ನಿಯಮ ಸುಮಾರು $10^{-13}$ 10 ಸೆಂ.ಮೀ. ಅಲ್ಪತಮ r ಬೆಲೆಗಳವರೆಗೆ ಅನ್ವಯವಾಗುತ್ತದೆ. ಇದಕ್ಕಿಂತ ಕಡಿಮೆ ದೂರಗಳಿಗೆ ಅನ್ವಯವಾಗುವುದಿಲ್ಲ. ಈ ನಿಯಮ ಪ್ರಸ್ತಾಪಿಸುವ ವಿದ್ಯುತ್ ಬಲಗಳೇ (ಇವಕ್ಕೆ ಕೊಲಂಬ್ ಬಲಗಳು ಎಂದು ಹೆಸರು) ಪರಮಾಣುಗಳಲ್ಲಿ ನ್ಯೂಕ್ಲಿಯಸ್ ಹತ್ತಿರ ಎಲೆಕ್ಟ್ರಾನುಗಳನ್ನು ಬಂಧಿಸುವ ಬಲಗಳಾಗಿವೆ. ಕೊಲಂಬನ ನಿಯಮ ಕಾಂತಧ್ರುವಗಳಿಗೂ ಅನ್ವಯವಾಗುತ್ತದೆ. ಅಲ್ಲಿ ಆವೇಷಗಳ ಬದಲು ಕಾಂತಧ್ರುವಗಳನ್ನು ಗಮನಿಸಬೇಕಾಗುತ್ತದೆ. k ಯ ಬದಲು μ ಎಂಬ ಅಂಕ (ಪರ್ಮಿ ಏಬಿಲಿಟಿ) ಇಲ್ಲಿ ಸಿಗುತ್ತದೆ. (ಆರ್.ಎಸ್.ಬಿ.)

**ಕೂಲಿ :** ಉತ್ಪಾದನಾಂಗಗಳಲ್ಲಿ ಒಂದಾದ ಶ್ರಮ ಅಥವಾ ದುಡಿಮೆಗೆ ಪಾವತಿ ಮಾಡಲಾಗುವ ಪ್ರತಿಫಲ (ವೇಜಸ್). ಇದನ್ನು ವೇತನ, ಮಜೂರಿ ಎಂದೂ ಹೇಳಲಾಗುತ್ತದೆ. ಕಾರ್ಮಿಕರು ತಮ್ಮ ಕೌಶಲ್ಯ ಮತ್ತು ಶಕ್ತಿಸಾಮರ್ಥ್ಯಗಳನ್ನು ಒಬ್ಬ ದಣಿಯ ವಶಕ್ಕೆ ಒಪ್ಪಿಸಿದ್ದಕ್ಕಾಗಿ

ಕಾರ್ಮಿಕರಿಗೆ ಮಾಡುವ ಪಾವತಿ. ಈ ಕೌಶಲ ಮತ್ತು ಶಕ್ತಿಸಾಮರ್ಥ್ಯಗಳ ಬಳಕೆಯ ವಿಧಾನ ದಣಿಯ ವಿವೇಚನೆಗೆ ಬಿಟ್ಟಿದ್ದು. ಪಾವತಿಯಾಗುವ ಮೊಬಲಗು ಎಷ್ಟೆಂಬುದು ಸೇವೆಯ ಕರಾರಿನ ವಿಧಿಗಳಿಗೆ ಅನುಗುಣವಾಗಿ ಇರತಕ್ಕದ್ದು. ಈ ಕರಾರು ಒಂದು ಕಾಲಪರಿಮಿತಿಗೆ ಒಳಪಟ್ಟಿರುತ್ತದೆ. ಸಾಧಾರಣವಾಗಿ ಎಲ್ಲ ದೇಶಗಳಲ್ಲೂ ಕೂಲಿ, ಮಜೂರಿ ಅಥವಾ ವೇತನ ಕೊಡುವುದು ಹಣದ ರೂಪದಲ್ಲಿಯಾದರೂ ದವಸಧಾನ್ಯಗಳನ್ನಾಗಲಿ ಇತರ ಪದಾರ್ಥಗಳನ್ನಾಗಲಿ ವೇತನಕ್ಕಾಗಿ ಕೊಡುವ ವಾಡಿಕೆಯೂ ಉಂಟು. ತಯಾರಾದ ಪದಾರ್ಥಗಳು ಮಾರುಕಟ್ಟೆಯನ್ನು ಸೇರುವ ಮೊದಲೇ ಶ್ರಮದ ಉತ್ಪಾದನ ಸೇವೆಗಾಗಿ ಪಾವತಿಯಾಗುವುದು ಇದರ ಒಂದು ವೈಶಿಷ್ಟ್ಯ. ಕಾರ್ಮಿಕರು ಮಾಡುವ ಕೆಲಸಗಳು ನಾನಾ ತೆರನಾದವು. ವಿದ್ಯೆ, ತರಬೇತು ಮತ್ತು ಪ್ರಾವೀಣ್ಯಗಳಿಂದ ಕೂಡಿ ಅತಿ ದಕ್ಷತೆಯಿಂದ ಮಾಡಬೇಕಾದ ಕೆಲಸಗಳಿಂದ ಹಿಡಿದು, ಸಾಮಾನ್ಯವಾಗಿ ಯಾರು ಬೇಕಾದರೂ ಮಾಡಬಹುದಾದ ಕೆಲಸಗಳ ವರೆಗೆ ಇವುಗಳಲ್ಲಿ ವಿವಿಧ ಬಗೆ. ಈ ವೈವಿಧ್ಯಗಳಿಗನುಗುಣವಾಗಿ ಕಾರ್ಮಿಕರಿಗೆ ಆಯಾ ಕೆಲಸಗಳಿಗೆ ಸಲ್ಲಬೇಕಾದ ವೇತನಗಳೂ ವೇತನದರಗಳೂ ವ್ಯತ್ಯಾಸವಾಗುತ್ತವೆ. ಕಾಲದೇಶಪರಿಸ್ಥಿತಿಗಳಿಗೆ ತಕ್ಕಂತೆ ಇವು ಮಾರ್ಪಾಡಾಗುತ್ತಿರುತ್ತವೆ. ಯಾವುದಾದರೊಂದು ಸಮಯದಲ್ಲಿ ಒಂದು ಪ್ರದೇಶದ ಕಾರ್ಮಿಕರಿಗೆ ಸಿಕ್ಕುವ ವೇತನಗಳನ್ನು ಪರೀಕ್ಷಿಸಿದಲ್ಲಿ ಒಂದು ಮುಖ್ಯಾಂಶ ವ್ಯಕ್ತವಾಗುತ್ತದೆ. ಕುಶಲ, ಅಕುಶಲ, ಅರೆಕುಶಲ ಕಾರ್ಮಿಕರಿಗೂ ಗಂಡಸರು ಹೆಂಗಸರಿಗೂ ವಿವಿಧ ಪ್ರದೇಶಗಳಲ್ಲಿಯ ಕಾರ್ಮಿಕರಿಗೂ ಕೊಡಲಾಗುವ ಕೂಲಿ ದರಗಳು ವಿಭಿನ್ನವಾಗಿರುತ್ತವೆ. ವಿವಿಧ ದರಗಳ ಈ ಸಮೂಹಕ್ಕೆ ವೇತನ ಸಂರಚನೆ(ವೇಜ್ ಸ್ಟ್ರಕ್ಚರ್) ಎನ್ನುತ್ತಾರೆ. ವಿವಿಧ ಕೈಗಾರಿಕೆ ಮತ್ತು ಕಸಬುಗಳಿಗೆ ಸಂಬಂಧಿಸಿದಂತೆ ಅನೇಕ ಸಂರಚನೆಗಳಿರುವುದುಂಟು. ಈ ಅನೇಕ ಸಂರಚನೆಗಳನ್ನೆಲ್ಲ ವೇತನವ್ಯವಸ್ಥೆ ಒಳಗೊಂಡಿರತಕ್ಕದ್ದು.

ವೇತನಗಳಿಗೆ ಅನೇಕ ಗುಣಲಕ್ಷಣಗಳುಂಟು. ಅವು ಒಂದನ್ನೊಂದು ಅನುಸರಿಸುವುದಿಲ್ಲ. ಅದು ಆವಶ್ಯಕವೂ ಅಲ್ಲ. ಉದ್ಯೋಗದಾತ ಮತ್ತು ಉದ್ಯೋಗಿಗಳ ನಡುವಣ ಕರಾರಿಗೆ ಅನುಸಾರವಾಗಿ ಮೂಲ ವೇತನದರಗಳು ಉದ್ಭವಿಸುತ್ತವೆ. ಈ ದರಗಳು ಬೇಗಬೇಗ ಬದಲಾವಣೆ ಹೊಂದಲು ಸಾಧ್ಯವಿಲ್ಲ. ಆದರೆ ಇವು ಒಂದೇ ರೀತಿಯಾಗಿರುವುದೂ ಸಾಧ್ಯವಿಲ್ಲ. ಮಾರುಕಟ್ಟೆಯಲ್ಲಿ ದೊರಕುವ ಅನೇಕ ಪದಾರ್ಥಗಳ ಬೆಲೆಗಳು ಏರಿಳಿತಕ್ಕೆ ಒಳಗಾಗಿರುತ್ತವೆ. ಆ ಬೆಲೆಗಳು ಏರಿದರೆ ವೇತನಗಳ ಮೌಲ್ಯ ಕಡಿಮೆಯಾಗುತ್ತದೆ. ಇದರಿಂದುಂಟಾಗುವ ನಷ್ಟವನ್ನು ಪರಿಹರಿಸಲು(ಅಥವಾ ಆದಷ್ಟು ಕಡಿಮೆ ಮಾಡಲು) ಭತ್ಯೆಗಳನ್ನು ಕೊಡಬೇಕಾಗುತ್ತದೆ. ಇವೂ ವೇತನದ ಭಾಗವೇ. ಉದ್ಯಮಕ್ಕೆ ಬರುವ ಲಾಭಗಳಿಗೆ ಕಾರ್ಮಿಕರ ದಕ್ಷತೆ ಸೇವೆಗಳೂ ಕಾರಣವಾಗಿರುವುದರಿಂದ ಲಾಭದ ಸ್ವಲ್ಪ ಭಾಗವನ್ನು ಕಾರ್ಮಿಕರಲ್ಲಿ (ವರ್ಷಕ್ಕೊಮ್ಮೆ ಅಥವಾ ಎರಡು ಸಲ) ಹಂಚುತ್ತಾರೆ. ಇದು ಹಣದ ರೂಪದಲ್ಲಿ ಕಾರ್ಮಿಕರಿಗೆ ಲಭ್ಯವಾಗುವ ವರಮಾನ ಅಥವಾ ಸಂಪಾದನೆ. ಇದರ ಜೊತೆಗೆ ಕಾರ್ಮಿಕ ಕಲ್ಯಾಣಕ್ಕಾಗಿ ಉದ್ಯಮಿಗಳೂ ಸರ್ಕಾರಗಳೂ ಔಷಧೋಪಚಾರ, ಮಕ್ಕಳ ವಿದ್ಯಾಭ್ಯಾಸ, ಮನೋರಂಜನೆ ಮುಂತಾದ ರೂಪಗಳಲ್ಲಿ ಹಲವು ಸೌಲಭ್ಯಗಳನ್ನು ಒದಗಿಸುತ್ತಾರೆ. ಸ್ಥೂಲವಾಗಿ ಇವೆಲ್ಲವೂ ವೇತನದಲ್ಲಿ ಸೇರಿರುವ ಅಂಶಗಳೇ.

ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿರುವ ದೇಶಗಳಲ್ಲಿ ಜನಜೀವನದ ಮಟ್ಟವನ್ನು ನಿರ್ಧರಿಸುವ ಮುಖ್ಯ ಅಂಶವೆಂದರೆ ಕೂಲಿಯ ದರಗಳು. ಮಾರುಕಟ್ಟೆಯಲ್ಲಿ ಸರಕು ಸೇವೆಗಳ ಬೆಲೆಗಳು ಏರಿಳಿದಂತೆ ವೇತನಗಳ ಮೌಲ್ಯಗಳೂ ವ್ಯತ್ಯಾಸವಾಗುತ್ತವೆ. ಪದಾರ್ಥಗಳ ಬೆಲೆಗಳ ವೇತನದ ಯೋಗ್ಯತೆಯನ್ನು ನಿಗದಿಮಾಡುತ್ತವೆ. ಹಣದ ರೂಪದಲ್ಲಿ ಪಾವತಿಯಾಗುವ ಕೂಲಿಯನ್ನು ಹಣಕೂಲಿ ಎಂದೂ ಹಣಕೂಲಿಯ ಯೋಗ್ಯತೆಯನ್ನು (ಈ ಹಣಕ್ಕೆ ಪ್ರತಿಯಾಗಿ ದೊರಕಬಹುದಾದ ಸರಕು ಸೇವೆಗಳು) ವಾಸ್ತವಿಕ ಕೂಲಿ ಎಂದೂ ಕರೆಯುತ್ತಾರೆ. ಇವೆರಡಕ್ಕೂ ಅನೇಕ ವೇಳೆ ಅಂತರ ಏರ್ಪಟ್ಟಿರುವುದುಂಟು.

ಕೈಗಾರಿಕೆಯ ಅಥವಾ ಕೃಷಿಯ ಉತ್ಪಾದನಾವೆಚ್ಚದ ಮುಖ್ಯಭಾಗ ಕೂಲಿ. ಆದ್ದರಿಂದ ಉತ್ಪನ್ನ ಬಹಳಮಟ್ಟಿಗೆ ಕೂಲಿಯನ್ನೇ ಅವಲಂಬಿಸಿದೆ. ಇದರಲ್ಲಿ ಬದಲಾವಣೆಗಳು ಆಗುತ್ತಿರುವುದರಿಂದ, ಉತ್ಪಾದನೆಗಾಗಿ ಉಪಯೋಗಿಸುವ ಕಚ್ಚಾಸಾಮಾಗ್ರಿಯೇ ಮುಂತಾದ ಅಂಗಗಳನ್ನೂ ಬದಲಾಯಿಸುತ್ತಿರಬೇಕಾಗುತ್ತದೆ. ಪದಾರ್ಥಗಳ ಅಸಲು ಬೆಲೆ ಸ್ಥಿರವಾಗಿದ್ದರೆ ಉದ್ಯಮ ಸುಸೂತ್ರವಾಗಿ ನಡೆಯಲು ಸಾಧ್ಯ. ಇದರಲ್ಲಿ ಸಂಭವಿಸುವ ತೀವ್ರ ವ್ಯತ್ಯಾಸಗಳಿಂದಾಗಿ ಉದ್ಯಮಕ್ಕೆ ಆಘಾತ ಒದಗಬಹುದು. ಇದನ್ನು ತಡೆಗಟ್ಟಲು ವಿವಿಧ ಉತ್ಪಾದನಾಂಗಗಳನ್ನು ಪದೇ ಪದೇ ಪರಸ್ಪರವಾಗಿ ನಿಯತಗೊಳಿಸುತ್ತಿರಬೇಕಾಗುತ್ತದೆ. ಈ ಬದಲಾವಣೆಯ ಅಂಗವಾಗಿ ಕಾರ್ಮಿಕರನ್ನು ಕೆಲಸಗಳಿಂದ ತೆಗೆದುಹಾಕಬೇಕಾಗಲೂ ಬಹುದು. ಉತ್ಪಾದನ ವೆಚ್ಚದ ಮೇಲೆ ಅಥವಾ ಅಸಲು ಬೆಲೆಯ ಮೇಲೆ ವೇತನಗಳ ಪರಿಣಾಮ ಪ್ರಬಲವಾಗಿರುವುದರಿಂದ ಕೂಲಿದರಗಳಲ್ಲಿ ಆಗುವ ವ್ಯತ್ಯಾಸಗಳಿಂದ ದೇಶದ ಉತ್ಪಾದನೆಯಲ್ಲೂ ಪದಾರ್ಥಗಳ ವಿತರಣೆಯಲ್ಲೂ ವ್ಯತ್ಯಾಸಗಳುಂಟಾಗುತ್ತವೆ.

ದೇಶದ ಆರ್ಥಿಕ ಹಿತದೃಷ್ಟಿಯಿಂದಲೂ ಅಭಿವೃದ್ಧಿಯ ದೃಷ್ಟಿಯಿಂದಲೂ ಕಾರ್ಮಿಕರು ಕೆಲಸಮಾಡಲು ಉತ್ಸಾಹ ನೀಡುವಂತೆ, ಕಾರ್ಮಿಕರ ಸರಬರಾಯಿ ಕಡಿಮೆಯಾಗದಂತೆ ಕೂಲಿಯ ದರಗಳ ರಚನೆಯಾಗಬೇಕು.

ಹೀಗೆ ದೇಶದ ಆರ್ಥಿಕ ಜೀವನದಲ್ಲಿ ಕೂಲಿಯ ಪಾತ್ರ ಅತ್ಯಂತ ಮುಖ್ಯವಾದದ್ದು. ಕೂಲಿ ಅಥವಾ ವೇತನಗಳು ಒಂದು ದೃಷ್ಟಿಯಲ್ಲಿ ವರಮಾನಗಳಾಗಿಯೂ ಇನ್ನೊಂದು ದೃಷ್ಟಿಯಲ್ಲಿ ಉತ್ಪಾದನಾವೆಚ್ಚಗಳಾಗಿಯೂ ಪರಿಣಮಿಸಿ ದೇಶದ ಸಂಪತ್ತಿನ ವಿತರಣೆಯನ್ನೂ ಜನಜೀವನಮಟ್ಟವನ್ನೂ ರೂಪುಗೊಳಿಸುತ್ತವೆ. ಕೈಗಾರಿಕಾ ಪ್ರಧಾನವಾದ ದೇಶಗಳಲ್ಲಿ ರಾಷ್ಟ್ರೀಯ ವರಮಾನದಲ್ಲಿ ಅರ್ಧಕ್ಕೂ ಹೆಚ್ಚಿನ ಭಾಗ ವೇತನಗಳಿಂದ ಬರುತ್ತದೆ.

ಕೂಲಿಪಾವತಿಯಲ್ಲಿ ಮುಖ್ಯವಾಗಿ ಎರಡು ವಿಧ: ಕಾಲಾನುಗುಣ ಮತ್ತು ಕೆಲಸಾನುಗುಣ. ಕಾಲಾನುಗುಣ ಪದ್ಧತಿಯಲ್ಲಿ ಕಾರ್ಮಿಕನ ದುಡಿಮೆಯ ಕಾಲಕ್ಕೆ(ಗಂಟೆ, ದಿನ, ವಾರ ಅಥವಾ ತಿಂಗಳು) ಅನುಗುಣವಾಗಿ ಕೂಲಿಯ ದರದ ನಿಗದಿಯಾಗಿರುತ್ತದೆ. ಕೆಲಸದ ಫಲಕ್ಕೆ ಅನುಗುಣವಾಗಿ ಪಾವತಿ ಮಾಡುವುದು ಇನ್ನೊಂದು ವಿಧಾನ. ಎರಡು ವಿಧಾನಗಳಲ್ಲೂ ಹಲವು ಅನುಕೂಲಗಳೂ ಪ್ರತಿಕೂಲಗಳೂ ಉಂಟು. ಕಾಲಾನುಗುಣವಾಗಿ ಕನಿಷ್ಠ ಕೂಲಿದರವನ್ನು ನಿಗದಿ ಮಾಡಿ, ಉತ್ಪತ್ತಿ ಒಂದು ಮಿತಿಗಿಂತ ಹೆಚ್ಚಾಗಿದ್ದರೆ ಅದಕ್ಕೆ ಗೊತ್ತಾದ ದರದಲ್ಲಿ ಅಧ್ಯಂಶ(ಬೋನಸ್) ನೀಡುವ ಕ್ರಮವೂ ಉಂಟು.

**ಕೂಲಿಯ ಭಿನ್ನಕ ದರಗಳು** : ಕಾರ್ಮಿಕರ ದಕ್ಷತೆ, ಕುಶಲತೆ, ಅನುಭವ, ಕರ್ಮದ ಸ್ವರೂಪ, ಪ್ರಾದೇಶಿಕ ವೈಶಿಷ್ಟ್ಯ, ಕೈಗಾರಿಕೆಯ ಸ್ಥಾನಮಾನ–ಇವುಗಳಿಗೆ ಅನುಗುಣವಾಗಿ ವೇತನ ಸಂರಚನೆಯಲ್ಲಿ ವೈವಿಧ್ಯ ಕಂಡುಬರುವುದು ಅಸ್ವಾಭಾವಿಕವಲ್ಲ. ಉದ್ಯಮ ಪ್ರಪಂಚದಲ್ಲಿ ಇಂಥ ವೈವಿಧ್ಯ ಅನೂಚಾನವಾಗಿ ನಡೆದುಕೊಂಡು ಬಂದಿದೆ; ಇದು ಸ್ವಾಭಾವಿಕ ಮಾತ್ರವಲ್ಲ, ಅಗತ್ಯವೂ ಹೌದು – ಎಂದು ವಾದಿಸಲಾಗಿದೆ. ಆದರೆ ಒಂದು ದರಕ್ಕೂ ಇನ್ನೊಂದು ದರಕ್ಕೂ ಇರುವ ಭಿನ್ನತೆ ಅಸಹಜವೂ ಅತಿಯೂ ಆದಾಗ ಭಿನ್ನಾಭಿಪ್ರಾಯಗಳಿಗೆ ಎಡೆಗೊಡುತ್ತದೆ. ಉದ್ಯಮಗಳನ್ನು ಹೋಲಿಸಿ ನೋಡಿದರೆ ಒಂದಕ್ಕೂ ಮತ್ತೊಂದಕ್ಕೂ ಎಷ್ಟೋ ವ್ಯತ್ಯಾಸ ಕಂಡುಬರುತ್ತದೆ. ವೃದ್ಧಿ–ಕ್ಷಯಗಳು ಉದ್ಯಮದಲ್ಲಿ ಹಾಸುಹೊಕ್ಕಾಗಿ ಸೇರಿವೆ. ವೃದ್ಧಿಯಾಗುತ್ತಿರುವ ಉದ್ಯಮದಲ್ಲಿ ದೊರಕುವ ವರಮಾನ ಹೆಚ್ಚಾಗಿರುವುದು ಸಹಜ. ಆದರೆ ಕಾರ್ಮಿಕರ ಅಜ್ಞಾನ ಮತ್ತು ಮಾಲೀಕರ ಸ್ವಾರ್ಥಗಳಿಂದಾಗಿ ಕೂಲಿಗಳಲ್ಲಿ ಏರ್ಪಡುವ ಭಿನ್ನತೆ ಅಸಹಜವೂ ಅಸಹನೀಯವೂ ಆದ್ದು. ನೈಪುಣ್ಯಪ್ರಧಾನವಾದ ಉದ್ಯಮಗಳಲ್ಲಿ ನಿಪುಣರಿಗೂ ಸಾಮಾನ್ಯರಿಗೂ ದೊರೆಯುವ ವೇತನಗಳ ನಡುವಣ ಭಿನ್ನತೆ ಹೆಚ್ಚಾಗಿರುತ್ತದೆ.

ಕೂಲಿಗಳ ಭಿನ್ನತೆ ಕಡಿಮೆಯಾಗಲು ಸಹಾಯಕವಾಗುವ ಅಂಶಗಳೆಂದರೆ ಕಾರ್ಮಿಕರ ತಿಳಿವಳಿಕೆ, ಹೆಚ್ಚು ಲಾಭ ಬರುವಂತೆ ಬಂಡವಾಳದ ವಿನಿಯೋಜನೆ, ವಿಜ್ಞಾನದ ಮುನ್ನಡೆ, ಆಧುನಿಕ ಯಂತ್ರೋಪಕರಣಗಳ ಪ್ರತಿಸ್ಥಾಪನೆ ಮುಂತಾದವು. ಅತ್ಯಂತ ಕುಶಲ ಕೆಲಸವನ್ನು ಮನುಷ್ಯರಿಗೆ ಬದಲಾಗಿ ಒಂದು ಯಂತ್ರ ಮಾಡಲು ಪ್ರಾರಂಭಿಸಿದರೆ, ಅದನ್ನು ನಡೆಸಲು ಕೇವಲ ಸಾಮಾನ್ಯ ಕೆಲಸಗಾರನೇ ಸಾಕಾದರೆ, ನೈಪುಣ್ಯ ಕುಶಲತೆಗಳಿಗೆ ಕೊಡುತ್ತಿದ್ದ ಹೆಚ್ಚುವರಿ ಕೂಲಿ ಮಾಯವಾಗುತ್ತದೆ. ವ್ಯವಸಾಯಕ್ಕೆ ಯಂತ್ರೋಪಕರಣಗಳನ್ನು ಉಪಯೋಗಿಸುವುದಾದರೆ ಆ ಉದ್ಯಮದ ಸ್ವರೂಪವೇ ವ್ಯತ್ಯಾಸವಾಗುತ್ತದೆ. ಇತ್ತೀಚೆಗೆ ಅನೇಕ ದೇಶಗಳಲ್ಲಿ ಕನಿಷ್ಠ ಕೂಲಿ ಕಾನೂನುಗಳು ಜಾರಿಗೆ ಬರುತ್ತಿವೆ. ಇದರಿಂದ ವೇತನ ದರಗಳಲ್ಲಿ ತೋರುವ ಅಂತರಗಳು ಕಡಿಮೆಯಾಗುತ್ತಿವೆ. ಸಮಾನ ಕೆಲಸಗಳಿಗೆಲ್ಲ ಸಮಾನ ವೇತನ ದೊರಕಬೇಕೆಂಬ ತತ್ತ್ವವನ್ನು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಸಾರಿದೆ. ಇದರಿಂದಾಗಿ ಗಂಡಸರಿಗೂ ಹೆಂಗಸರಿಗೂ ಸಮಾನವಾದ ವೇತನಗಳನ್ನು ಕೊಡುವುದು ಪ್ರಾರಂಭವಾಗಿದೆ. ಕಾರ್ಮಿಕರ ಮತ್ತು ಬಂಡವಾಳಗಳ ಚಲನೆ ಸುಸೂತ್ರವಾಗಿದ್ದು, ಸಾರಿಗೆ ಸಂಪರ್ಕಗಳು ಸಮರ್ಪಕವಾಗಿದ್ದ ಪಕ್ಷದಲ್ಲಿ ಒಂದು ದೇಶಕ್ಕೂ ಇನ್ನೊಂದು ದೇಶಕ್ಕೂ ಒಂದು ಪ್ರದೇಶಕ್ಕೂ ಇನ್ನೊಂದು ಪ್ರದೇಶಕ್ಕೂ ನಡುವೆ ವೇತನಗಳ ಭಿನ್ನತೆಗಳು ಕಡಿಮೆಯಾಗುವ ಪ್ರವೃತ್ತಿ ಇರುತ್ತದೆ. ಆದರೆ ಸಾಮಾನ್ಯವಾಗಿ ಇಂಥ ಪರಿಸ್ಥಿತಿ ಇರುವುದಿಲ್ಲ. ಆದ್ದರಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೂಲಿಯ ದರಗಳಲ್ಲಿ ವ್ಯತ್ಯಾಸ ಇರುವುದುಂಟು. ಈ ವ್ಯತ್ಯಾಸ ಅತಿಯಾದಾಗ ಅದರ ಪರಿಣಾಮಗಳು ತೀವ್ರವಾಗಬಹುದು.

**ಕೂಲಿಯ ದರಗಳ ನಿರ್ಧಾರ** : ಈ ಪ್ರಶ್ನೆ ಬಹಳ ಜಟಿಲವಾದ್ದು. ಕಳೆದ ಸುಮಾರು 200 ವರ್ಷಗಳಿಂದಲೂ ಇದನ್ನು ಕುರಿತ ಅನೇಕ ಸಿದ್ಧಾಂತಗಳು ಬಂದಿವೆ. ಕೂಲಿಗೆ ಸಂಬಂಧಿಸಿದ ಸಿದ್ಧಾಂತಗಳೆಲ್ಲ ಪಾಶ್ಚಾತ್ಯ ದೇಶಗಳಲ್ಲಿ ಹುಟ್ಟಿ ಬೆಳೆದವು. ಕೈಗಾರಿಕಾ ಕ್ರಾಂತಿ ಮೊದಲಿಗೆ ಪ್ರಾರಂಭವಾದದ್ದು ಆ ದೇಶಗಳಲ್ಲಿ. ಅಲ್ಲಿ ಸಂಭವಿಸಿದ ಕಾರ್ಮಿಕ ಸಮಸ್ಯೆಗಳೇ ಈ ಸಿದ್ಧಾಂತಗಳಿಗೆ ಕಾರಣ.

**ಆಧುನಿಕ ಕಾರ್ಮಿಕಕ್ಷೇತ್ರದಲ್ಲಿ ವೇತನ ನಿರ್ಧಾರದ ಬಗೆಗಳು ಮೂರು** : ಕಾರ್ಮಿಕರೂ ಉದ್ಯಮಿಗಳೂ ವೈಯಕ್ತಿಕವಾಗಿ ಚೌಕಾಸಿ ಮಾಡಿ ಒಪ್ಪಂದಕ್ಕೆ ಬರುವುದು ಒಂದನೆಯದು. ಸಾಮೂಹಿಕವಾಗಿ ಎರಡು ಪಕ್ಷಗಳೂ ಚೌಕಾಸಿ ಮಾಡಿ ಕರಾರು ಮಾಡಿಕೊಳ್ಳುವುದು ಎರಡನೆಯ ಬಗೆ. ಸರ್ಕಾರಗಳಾಗಲಿ ಅವುಗಳಿಂದ ನೇಮಿತವಾದ ಸಮಿತಿ ಸಂಘಗಳಾಗಲಿ ವೇತನದರಗಳನ್ನು ಗೊತ್ತುಮಾಡುವುದು ಮೂರನೆಯ ವಿಧಾನ. ಯಾವ ರೀತಿಯಲ್ಲೇ ದರಗಳ ನಿಗದಿಯಾಗಲಿ. ಅದರಲ್ಲಿ ಕೆಲವು ಮುಖ್ಯಾಂಶಗಳು ಸಾಮಾನ್ಯವಾಗಿರುತ್ತವೆ. ಕಾರ್ಮಿಕರ ದಕ್ಷತೆ, ವಿದ್ಯೆ, ತರಬೇತು– ಇವಕ್ಕೆ ಅನುಗುಣವಾಗಿ ಕೆಲಸಕ್ಕೆ ನೇಮಿಸಿಕೊಳ್ಳುವಾಗ, ಆ ಕೆಲಸದ ಮೌಲ್ಯ, ಅದೇ ರೀತಿಯ ಕೆಲಸಗಳಿಗೆ

ಬೇರೆಕಡೆ ದೊರಕಬಹುದಾದ ಪ್ರತಿಫಲ, ಕೆಲಸ ಕೊಡುವ ಉದ್ಯಮಪತಿಯ ಸಾಮರ್ಥ್ಯ ಇವನ್ನು ಅನುಸರಿಸಿ ದರಗಳ ನಿರ್ಧಾರವಾಗುತ್ತದೆ. ರಾಷ್ಟ್ರೀಯ ವರಮಾನವೂ ಒಂದು ಮುಖ್ಯವಾದ ಅಂಶ. ಇದು ಹೆಚ್ಚಿದಷ್ಟೂ ಕಾರ್ಮಿಕರ ವೇತನಗಳೂ ಹೆಚ್ಚಬಹುದು. ಅದು ಎಷ್ಟೇ ಹೆಚ್ಚಿದರೂ ಕಾರ್ಮಿಕನ ದುಡಿಮೆಯಿಂದಾಗಿ ಕೈಗಾರಿಕೆ ಲಭ್ಯವಾಗುವ ಫಲಕ್ಕಿಂತ ಹೆಚ್ಚಾಗಿರಬಾರದು. ವೇತನಗಳ ಪ್ರಶ್ನೆಗೆ ಅತಿ ಸಮೀಪವಾದ ಸಮಸ್ಯೆಗಳಲ್ಲಿ ನಿರುದ್ಯೋಗಸಮಸ್ಯೆಯೂ ಮುಖ್ಯವಾದ್ದು. ನಿರುದ್ಯೋಗದ ಹೆದರಿಕೆಯಿಂದ ಅನೇಕ ವೇಳೆ ಕಾರ್ಮಿಕರು ಅಲ್ಪಕೂಲಿಗೆ ಒಪ್ಪಿಕೊಳ್ಳುವುದುಂಟು. ಅಂಥ ಸಂದರ್ಭಗಳಲ್ಲಿ ಕಾರ್ಮಿಕರ ಶ್ರಮದಿಂದ ಉದ್ಯಮಕ್ಕೆ ದೊರಕುವ ಪ್ರತಿಫಲ ಬಹಳ ಕಡಿಮೆಯಾಗಿಯೇ ಇರಬಹುದು. ಕೂಲಿ ನಿರ್ಧಾರವನ್ನು ಕುರಿತ ಅನೇಕ ಸಿದ್ಧಾಂತಗಳು ಪಾಶ್ಚಾತ್ಯದೇಶಗಳಲ್ಲಿ ಪ್ರತಿಪಾದಿತವಾಗಿವೆ. **(ನೋಡಿ– ಕೂಲಿ ಸಿದ್ಧಾಂತಗಳು)**

ಇಂದು ಕೂಲಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಕಂಡುಬರುವ ದೃಷ್ಟಿ ಬೇರೆ ತೆರನಾಗಿದೆ. ವೇತನಕ್ಕೂ ರಾಷ್ಟ್ರಾದಾಯಕ್ಕೂ ಇರುವ ಸಂಬಂಧ, ವೇತನ ಸಂರಚನೆ, ಅದರ ಭಿನ್ನಕಗಳು, ಕಾರ್ಮಿಕ ಸಂಘಗಳ ಪಾತ್ರ, ವೇತನದರಗಳ ಪರಿಣಾಮ– ಈ ವಿಷಯಗಳು ಇಂದು ಮುಖ್ಯವಾದವು.

**ಕೂಲಿ ಮಂಡಳಿಗಳು :** ಒಂದು ದೇಶದ ಆರ್ಥಿಕ ನೀತಿಯಲ್ಲಿ ಹಣಕಾಸು, ತೆರಿಗೆ ಮುಂತಾದವಕ್ಕೆ ಸಲ್ಲುವಷ್ಟು ಮಾನ್ಯತೆ ಕೂಲಿಯ ನೀತಿಗೂ ಸಲ್ಲಬೇಕು. ಇಂದಿನ ಇಂಗ್ಲೆಂಡಿನ ಆರ್ಥಿಕ ಅಳತೆಗೋಲು ಕಾರ್ಮಿಕ– ಎಂದು ಜೆ.ಆರ್.ಹಿಕ್ಸ್ ಹೇಳಿದ ಮಾತು ಅನೇಕ ರಾಷ್ಟ್ರಗಳಿಗೆ ಅನ್ವಯವಾಗುತ್ತದೆ. ಒಂದು ದೇಶದ ಆರ್ಥಿಕತೆ ಅದರ ಕಾರ್ಮಿಕರ ವರಮಾನವನ್ನೇ ಅವಲಂಬಿಸಿರುತ್ತದೆ. ಹಣ ನೀತಿ, ತೆರಿಗೆನೀತಿ ಮುಂತಾದವುಗಳ ಜೊತೆಗೆ, ಇವೆಲ್ಲವನ್ನೂ ಒಳಗೊಂಡಂತೆ, ಒಂದು ವರಮಾನ ನೀತಿ ಇರಬೇಕೆಂಬುದು ಅರ್ಥಶಾಸ್ತ್ರಜ್ಞರ ಮತ. ಆದರೆ ವರಮಾನ ನೀತಿ ಮತ್ತು ಕೂಲಿಯ ನೀತಿ ಏನೆಂಬುದು ನಿಖರವಾದ ವ್ಯಾಖ್ಯೆಗೆ ಒಳಪಡುವ ವಿಚಾರಗಳಲ್ಲ. ಇವನ್ನು ರೂಪಿಸಿ ಜಾರಿಗೆ ತಂದರೂ ಇವುಗಳ ಅನ್ವಯದಲ್ಲಿ ದೇಶಕಾಲಾನುಗುಣವಾದ ಭಿನ್ನತೆಗಳೇರ್ಪಡುವುದು ಸಹಜ.

ವೇತನಗಳಿಗೆ ಸಂಬಂಧಪಟ್ಟ ನೀತಿ ಸಾಧಾರಣವಾಗಿ ಎಲ್ಲ ದೇಶಗಳಲ್ಲೂ ಯಾವುದೋ ರೂಪದಲ್ಲಿ ಬೇರೆಬೇರೆ ಸಮಯಗಳಲ್ಲಿ ಕಂಡುಬರುತ್ತದೆ. ಆರ್ಥಿಕ ರಾಜಕೀಯ ರಚನೆಗಳಿಗೆ ಸಂಬಂಧಿಸಿದಂತೆ ಈ ಧೋರಣೆಯೂ ಬದಲಾವಣೆಯಾಗುತ್ತದೆ. ಜನಜೀವನಮಟ್ಟ ಉನ್ನತವಾಗಿದ್ದು, ದೇಶದ ಸಂಪತ್ತು ಹೆಚ್ಚಾಗಿದ್ದು, ಕಾರ್ಮಿಕ ಸಂಘಗಳು ಪ್ರಬಲವಾಗಿರುವಂಥ ದೇಶಗಳಲ್ಲಿಯೂ ಅನೇಕ ಸಂದರ್ಭಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸಂಧಾನಮುಖೇನ ನಿರ್ಧಾರವಾದ ಕೂಲಿ ದರಗಳಿಗೂ ವಾಸ್ತವವಾಗಿ ಪಾವತಿಮಾಡುವ ಕೂಲಿಗೂ ವ್ಯತ್ಯಾಸವಿರುವುದುಂಟು. ಕಾರ್ಮಿಕರ ಅಭಾವ ಏರ್ಪಟ್ಟಾಗ ಅಥವಾ ಉತ್ಪಾದನೆ ಹೆಚ್ಚಿಸಿದಷ್ಟೂ ಹೆಚ್ಚು ಲಾಭ ದೊರಕುವ ಪರಿಸ್ಥಿತಿ ದೇಶದಲ್ಲಿದ್ದಾಗ, ಸ್ಥಳೀಯವಾಗಿ ಕಾರ್ಮಿಕರೂ ಯಜಮಾನರೂ ಪರಸ್ಪರ ಒಪ್ಪಂದ ಮಾಡಿಕೊಂಡು ಕೂಲಿ ಹೆಚ್ಚಿಸಬಹುದು. ಅಥವಾ ಕೂಲಿ ದರದಲ್ಲಿ ವ್ಯತ್ಯಾಸವಿಲ್ಲದಿದ್ದರೂ ಕಾರ್ಮಿಕರು ನಿಗದಿಯಾದ ಸಮಯಕ್ಕಿಂತ ಹೆಚ್ಚು ಕಾಲ ಕೆಲಸಮಾಡಿ, ಮೀರಿದ ಅವಧಿಯ ಕೂಲಿ ಸಂಪಾದಿಸಬಹುದು. ಇಂಥ ಸಂದರ್ಭಗಳಲ್ಲೆಲ್ಲ ಕೂಲಿಯ ಯಾದೃಚ್ಛಿಕತೆ(ವೇಜ್ ಡ್ರಿಫ್ಟ್) ಕಂಡುಬರುತ್ತದೆ. ಸರಾಸರಿ ಕೂಲಿ ದರಗಳಿಗೂ ಸರಾಸರಿ ಕೂಲಿ ಸಂಪಾದನೆಗೂ ಇರುವ ಅಂತರ ಯಾದೃಚ್ಛಿಕತೆಯ ಪ್ರಮಾಣವನ್ನು ಸೂಚಿಸುತ್ತದೆ. ಕೂಲಿಯ ಯಾದೃಚ್ಛಿಕತೆ ಒಳ್ಳೆಯದಲ್ಲ. ಇದರಿಂದ ದೇಶದಲ್ಲಿ ಸ್ಥಾಪಿತವಾದ ಭಿನ್ನಕ ಕೂಲಿ ದರ ವ್ಯವಸ್ಥೆ ಏರುಪೇರಾಗಬಹುದು. ಇಂಥ ಸಮಸ್ಯೆಗಳನ್ನು ಪರಿಹರಿಸಲು ಯುಕ್ತವಾದ ಕಾರ್ಮಿಕ ನೀತಿಯನ್ನು ಅನುಸರಿಸುವುದು ಸರ್ಕಾರದ ಕರ್ತವ್ಯವೆಂದು ಇಂದು ಪರಿಗಣಿತವಾಗಿದೆ. ಇದಕ್ಕಾಗಿ ಕೂಲಿ ಮಂಡಲಿಗಳನ್ನು ನೇಮಿಸಬಹುದು. ಅಥವಾ ಸರ್ಕಾರವೇ ನೇರವಾಗಿ ಪ್ರವೇಶಿಸಿ ನಿಯಂತ್ರಣ ಕೈಗೊಳ್ಳಬಹುದು. ಫ್ರಾನ್ಸಿನಲ್ಲಿ ಶೇ. 40ಕ್ಕೂ ಮೀರಿ ವೇತನಗಳು ಸರ್ಕಾರದ ಆದೇಶಕ್ಕೊಳಪಟ್ಟಿವೆ. ಆಸ್ಟ್ರೇಲಿಯದಲ್ಲಿ ಮೊದಲಿನಿಂದಲೂ ವೇತನ ಸಮಿತಿಗಳೇ ವೇತನ ರಚನೆಗಳಿಗೆ ಕಾರಣವಾಗಿವೆ. ಕಾರ್ಮಿಕ ಸಂಘಗಳು ಪ್ರಬಲವಾಗಿರುವ ಇಂಗ್ಲೆಂಡಿನಲ್ಲೂ ಇಂಥ ಸಮಿತಿಗಳುಂಟು.

ಅನೇಕ ದೇಶಗಳಲ್ಲಿ ಕನಿಷ್ಠವೇತನಗಳನ್ನು ರೂಪಿಸುವ ಕಾನೂನುಗಳು ಜಾರಿಯಲ್ಲಿವೆ. 1928ರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಕನಿಷ್ಠ ಕೂಲಿಯೋಜನೆಗೆ ಸಂಬಂಧಪಟ್ಟ ನಿರ್ಣಯವನ್ನು ಅನುಮೋದಿಸಿತು. ಈಗ ಅನೇಕ ದೇಶಗಳು ಈ ಯೋಜನೆಯನ್ನು ಅನುಸರಿಸಿವೆ. ಕನಿಷ್ಠವೇತನವನ್ನು ನಿಗದಿ ಮಾಡುವುದು ಕಾರ್ಮಿಕರ ಹಿತದೃಷ್ಟಿಯಿಂದ. ಕಾರ್ಮಿಕರಿಗೆ ಬಲವಾದ ಸಂಘಗಳ ಬೆಂಬಲವಿಲ್ಲದಿದ್ದರೆ ಕನಿಷ್ಠವೇತನ ದೊರಕದೆ ಇರುವುದು ಅಸಂಭವವೇನೂ ಅಲ್ಲ. ಸಂಘಗಳಿದ್ದೂ ಚೇತನವಿಲ್ಲದಿದ್ದರೂ ಅವುಗಳಿಂದ ಪ್ರಯೋಜನವಿರುವುದಿಲ್ಲ. ಕಾರ್ಮಿಕರ ಹಿತವನ್ನು ರಕ್ಷಿಸುವುದೂ ಅವರ ವೇತನಗಳನ್ನು ನ್ಯಾಯವಾಗಿ ನಿರ್ಧರಿಸುವುದೂ ಕಾರ್ಮಿಕ ಸಂಘಗಳ ಮುಖ್ಯ ಕರ್ತವ್ಯ. ಕಾರ್ಮಿಕರಾಗಲಿ ಅವರ ಸಂಘಗಳಾಗಲಿ ವೇತನಗಳನ್ನು ಸರಿಪಡಿಸಲು ಆಗದಿದ್ದಲ್ಲಿ ಸರ್ಕಾರಗಳು ಈ ಕೆಲಸಕ್ಕೆ ಕೈಹಾಕುತ್ತವೆ. ಕನಿಷ್ಠವೇತನ ರಚನೆ ಇದರಲ್ಲಿ ಒಂದು ಭಾಗ ಮಾತ್ರ. ಬೇರೆ ಬೇರೆ ಪ್ರದೇಶಗಳಲ್ಲಿರುವ ಉದ್ಯೋಗಗಳ ವೇತನ ರಚನೆಗೆ, ವೇತನಗಳನ್ನು ನಿಗದಿಮಾಡುವುದಕ್ಕೆ ಮತ್ತು ಉದ್ಯಮದಲ್ಲಿಯ ಅನೇಕ ಕಸಬುಗಳನ್ನು ಪುನಾರಚಿಸುವುದಕ್ಕೆ ಭಾರತದಲ್ಲೂ ವೇತನಮಂಡಲಿಗಳು ಸ್ಥಾಪಿತವಾಗಿವೆ. ಒಂದೊಂದು ಕೈಗಾರಿಕೆಗೆ ಸಂಬಂಧಪಟ್ಟಂತೆ ಒಂದೊಂದು ಮಂಡಲಿಯ ರಚನೆಯಾಗಿದೆ. ಅದರ ಮುಖ್ಯ ಕೆಲಸವೆಂದರೆ : ಆ ಕೈಗಾರಿಕೆಗೆ ಸಂಬಂಧಿಸಿದಂತೆ ವೇತನಗಳ ಪುನಾರಚನೆ, ಕೆಲಸಗಳ ಶಿಷ್ಟೀಕರಣ ಮತ್ತು ನಾಮನಿರ್ದೇಶನ, ದರಗಳ ಭಿನ್ನಕಗಳ ರಚನೆ. ಈ ರಚನೆಯನ್ನು ಮಾಡುವಾಗ ಸಮಿತಿಗಳು ನ್ಯಾಯದರಗಳನ್ನು ನಿರ್ಧರಿಸಬೇಕು.

ಪ್ರತಿಯೊಂದು ವೇತನ ಸಮಿತಿಯಲ್ಲೂ ಕೈಗಾರಿಕೆಯ ಮತ್ತು ಕಾರ್ಮಿಕ ಸಂಘಗಳ ಸದಸ್ಯರೂ ಸರ್ಕಾರದ ಪ್ರತಿನಿಧಿಗಳೂ ಸ್ವತಂತ್ರ ಸದಸ್ಯರೂ ಇರುತ್ತಾರೆ.

ವೇತನಗಳನ್ನು ನಿರ್ಧರಿಸುವಾಗ ಅನೇಕ ಅಂಶಗಳನ್ನು ಈ ಸಮಿತಿಗಳು ಗಮನಿಸಬೇಕಾಗುತ್ತದೆ. ಪ್ರತಿಯೊಂದು ಕೈಗಾರಿಕೆಗೂ ಕೈಗಾರಿಕಾ ಘಟಕಕ್ಕೂ ಹೆಚ್ಚಿನ ಕೂಲಿ ಕೊಡಲು ಇರಬಹುದಾದ ಸಾಮರ್ಥ್ಯ, ಕೈಗಾರಿಕೆಯ ಸ್ಥಾನ, ಕಾರ್ಮಿಕ ಜೀವನಮಟ್ಟ, ಜೀವನವೆಚ್ಚ, ದೇಶದ ಆದಾಯ, ಸದ್ಯದ ವೇತನಮಟ್ಟ ಇವು ಮುಖ್ಯ ಅಂಶಗಳು. ಇದಕ್ಕಾಗಿ ಪ್ರಾದೇಶಿಕವಾಗಿಯೂ ಔದ್ಯೋಗಿಕವಾಗಿಯೂ ಕೈಗಾರಿಕೆಗಳನ್ನು ವಿಂಗಡಿಸಿ ಒಂದು ಪ್ರದೇಶದಲ್ಲಿ ಆ ಕೈಗಾರಿಕೆಯಲ್ಲಿ ಸಲ್ಲಬೇಕಾದ ವೇತನಗಳನ್ನು ನಿರ್ಧರಿಸಲಾಗುತ್ತದೆ. ಈ ವೇತನ ಸಮಿತಿಗಳು ಸಾಧಾರಣವಾಗಿ ಕನಿಷ್ಠ ವೇತನದರಗಳನ್ನು ಹೆಚ್ಚಿಸುವುದರ ಜೊತೆಗೆ ಉಳಿದ ಬಡ್ತಿಗಳನ್ನೂ ವ್ಯವಸ್ಥೆಗೊಳಿಸಿವೆ. ಒಟ್ಟಿನಲ್ಲಿ ಕೈಗಾರಿಕೆಗಳಲ್ಲಿ ಕಾರ್ಮಿಕ ವೇತನಗಳು ಹಿಂದೆಂದೂ ಕಾಣದ ಹೆಚ್ಚಿನ ಮಟ್ಟಕ್ಕೇರಿವೆ.

ಆದರೂ ಈ ಕೆಲಸ ಇನ್ನೂ ಪೂರ್ಣವಾಗಿಲ್ಲ. ಇನ್ನೂ ಅಗತ್ಯಾನುಗುಣ ಕನಿಷ್ಠವೇತನ ಎಷ್ಟೋ ಉದ್ಯಮಗಳಲ್ಲಿ ನಿಗದಿಯಾಗಿಲ್ಲ. ವೇತನಗಳ ದರ್ಜೆಗೇ ಸೇರಿದಂತಿರುವ ಅಧ್ಯಂಶದ್ದು (ಬೋನಸ್) ಇನ್ನೊಂದು ಸಮಸ್ಯೆ. (ಎಸ್.ಎಸ್.ಕೆ.)

**ಕೂಲಿ ಕಾನೂನು :** ಕೂಲಿಯನ್ನು ಹೆಚ್ಚಿಸುವುದರಿಂದ ಬೆಲೆಗಳ ಏರಿಕೆಯ ಪ್ರವೃತ್ತಿ ತಲೆದೋರಿ, ಬೆಲೆಗಳೂ ಕೂಲಿಗಳೂ ಪರಸ್ಪರವಾಗಿ ಒಂದನ್ನೊಂದು ಏರಿಸುತ್ತ ಕೊನೆಮೊದಲಿಲ್ಲದ ಸುರಳಿಯಾಗಿ ಪರಿಣಮಿಸುವುವೆಂದು ವಾದಿಸುವುದು ಸಾಧ್ಯವಾದರೂ, ಕಡಿಮೆ ಕೂಲಿಯಿಂದ ಕಾರ್ಮಿಕರ ಉತ್ಸಾಹ ಕುಂದುವುದಲ್ಲದೆ ಅವರ ದಕ್ಷತೆಯೂ ಕುಗ್ಗುವುದರಿಂದ ಅವರಿಗೆ ಸಾಕಷ್ಟು ಕೂಲಿಯನ್ನು ದೊರಕಿಸಿಕೊಡುವುದು ಅಗತ್ಯವೆಂಬ ಭಾವನೆ ಇಂದು ಎಲ್ಲ ದೇಶಗಳಲ್ಲೂ ಕಂಡುಬರುತ್ತದೆ. ಕೈಗಾರಿಕೆಯಲ್ಲಿ ಘರ್ಷಣೆಯನ್ನು ತಪ್ಪಿಸುವ ದೃಷ್ಟಿಯಿಂದಲೂ ಈ ಕ್ರಮ ಅಗತ್ಯ. ವಿವಿಧ ಉದ್ಯೋಗಗಳಲ್ಲಿ ನಿರತರಾದ ಕಾರ್ಮಿಕರ ಕನಿಷ್ಠ ಕೂಲಿಯನ್ನು ನಿಗದಿಗೊಳಿಸುವ ಕಾನೂನುಗಳು ಅನೇಕ ದೇಶಗಳಲ್ಲಿ ಜಾರಿಗೆ ಬಂದಿವೆ. ಕೈಗಾರಿಕೆಯಲ್ಲಿ ಪ್ರಗತಿ ಹೊಂದಿರುವ, ಕಾರ್ಮಿಕ ಸಂಘ ಚಳವಳಿ ಪ್ರಬಲವಾಗಿ ಬೆಳೆದಿರುವ ದೇಶಗಳಲ್ಲಿ ಸಾಮೂಹಿಕ ಚೌಕಾಸಿ ಮುಂತಾದ ವಿಧಾನಗಳಿಂದ ಕನಿಷ್ಠ ಕೂಲಿಯ ಮಟ್ಟ ಸ್ಥಾಪಿಸುವುದು ಸುಲಭವಾದ್ದರಿಂದ ಅಲ್ಲಿ ಕನಿಷ್ಠ ಕೂಲಿ ಕಾನೂನು ಅಷ್ಟು ಆವಶ್ಯವೆನಿಸದಿರಬಹುದು. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇದು ಅಗತ್ಯವೆನಿಸಿದೆ.

ಎರಡನೆಯ ಮಹಾಯುದ್ಧದ ಅನಂತರ ಸರಕಾರಗಳು ಜೀವನವೆಚ್ಚದ ಹೆಚ್ಚಳವನ್ನು ತಡೆಗಟ್ಟುವುದರಲ್ಲಿ ಸಮರ್ಥವಾಗಿಲ್ಲ. ಹೀಗಾಗಿ, ಬೆಲೆಗಳಲ್ಲಿ ವ್ಯತ್ಯಾಸವಾದಂತೆಲ್ಲ ಸಹಜವಾಗಿ ಕೂಲಿಯ ಮಟ್ಟದಲ್ಲೂ ವ್ಯತ್ಯಾಸ ಮಾಡುವ ಕ್ರಮಗಳನ್ನು ರೂಢಿಗೆ ತರುವ ಪ್ರಯತ್ನ ಮಾಡಲಾಗಿದೆ. ಉದಾಹರಣೆಗೆ, ಬೆಲ್ಜಿಯಂ, ಡೆನ್ಮಾರ್ಕ್ ಮತ್ತು ಇಟಲಿಗಳಲ್ಲಿ ಇಡೀ ರಾಷ್ಟ್ರಕ್ಕೆ ಅನ್ವಯಿಸುವಂತೆ ಸಾಮೂಹಿಕ ಚೌಕಾಸಿ ಒಪ್ಪಂದಗಳ ಮೂಲಕ ನಿಗದಿಗೊಳಿಸಲಾಗುವ ಕೂಲಿಯನ್ನು ಜೀವನವೆಚ್ಚದ ಸೂಚ್ಯಂಕಗಳಿಗೆ ಹೊಂದಿಸಲಾಗುತ್ತದೆ.

ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಸರ್ಕಾರದ ಆರ್ಥಿಕ ಯೋಜನೆಗೆ ಅನುಗುಣವಾಗಿ ಕೂಲಿಯನ್ನು ನಿಯಂತ್ರಿಸಲಾಗುತ್ತದೆ. ಆಯಾ ಕೈಗಾರಿಕೆಗಳ ಉತ್ಪಾದನೆಯ ಪ್ರಾಮುಖ್ಯಕ್ಕೂ ಪ್ರತಿಯೊಂದು ಕೈಗಾರಿಕೆಯಲ್ಲಿಯ ವಿವಿಧ ಕೆಲಸಗಳ ಸ್ವರೂಪಕ್ಕೂ ಅನುಗುಣವಾಗಿ ವಿಭಿನ್ನ ದರಗಳನ್ನು ನಿಷ್ಕರ್ಷಿಸಲಾಗುತ್ತದೆ. ರಾಷ್ಟ್ರದೃಷ್ಟಿಯಿಂದ, ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಹೆಚ್ಚು ಅಗತ್ಯವೆನಿಸಿದ ಕೈಗಾರಿಕೆಗಳಲ್ಲಿ ಹೆಚ್ಚು ಕೂಲಿ ನಿಗದಿ ಮಾಡುವುದು ಅಲ್ಲಿಯ ಒಂದು ನೀತಿ. ಕಾರ್ಮಿಕರು ಹೆಚ್ಚು ಕಷ್ಟಪಟ್ಟು ದುಡಿದು ಉತ್ಪಾದನೆಯ ಹೆಚ್ಚುವರಿ ಸಾಧಿಸಿ. ಅದರಿಂದ ಹೆಚ್ಚು ಬಂಡವಾಳ ಒದಗಿಬರುವಂತೆ ಅವರಿಗೆ ಉತ್ತೇಜಕಗಳನ್ನು ನೀಡಲಾಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಕೆಲಸಾನುಗುಣ ಕೂಲಿ ನಿಗದಿಮಾಡಿ, ನಿರ್ಧಾರಿತ ಕನಿಷ್ಠ ಮಟ್ಟಕ್ಕಿಂತ ಹೆಚ್ಚು ದಕ್ಷತೆಯನ್ನು ತೋರಿಸಿದವರಿಗೆ ಹೆಚ್ಚು ಭತ್ಯ ಕೊಡುವ ನಿಯಮವಿದೆ. ಒಂದು ನಿರ್ದಿಷ್ಟ ಅವಧಿಯ ಕೂಲಿಯ ಹಣದಿಂದ ಕಳೆಯಬಹುದಾದ ಮೊಬಲಗಿನ ಗರಿಷ್ಠ ಪ್ರಮಾಣವನ್ನೂ ನಿಗದಿಗೊಳಿಸಲಾಗಿದೆ. ಹೆಚ್ಚುವರಿಯೆನಿಸಿದ ಕಾರ್ಮಿಕರನ್ನು ತೆಗೆದು ಹಾಕಿದಾಗ ಅವರಿಗೆ ನೀಡಬೇಕಾದ ಪರಿಹಾರವನ್ನು ಕಾನೂನಿನಲ್ಲಿ ನಿಷ್ಕರ್ಷಿಸಲಾಗಿದೆ.ಯುರೋಪಿನ ಬಹುತೇಕ ರಾಷ್ಟ್ರಗಳಲ್ಲಿ ಕಾರ್ಮಿಕರ ಅವಲಂಬಿಗಳಿಗೆ (ಉದಾ: ತಾಯಿ, ಹೆಂಡತಿ, ಮಕ್ಕಳು) ಕೂಲಿಯೊಡನೆ ವಿಶೇಷ ಭತ್ಯವನ್ನೂ ಕೊಡಲಾಗುತ್ತಿದೆ. ಅವು ಸಂಬಂಧಪಟ್ಟ ಕೈಗಾರಿಕೋದ್ಯಮಿಗಳಿಂದಲೋ ಸರ್ಕಾರಗಳಿಂದಲೋ ಪಾವತಿಯಾಗುತ್ತವೆ. ನಿರುದ್ಯೋಗ ವಿಮಾ ಯೋಜನೆಗಳೂ ಜಾರಿಯಲ್ಲಿವೆ.

ಹಲವು ನಿರ್ದಿಷ್ಟ ಉದ್ಯಮಿಗಳಲ್ಲಿ ಕನಿಷ್ಠ ಕೂಲಿಗಳನ್ನು ನಿಗದಿಗೊಳಿಸುವ ಮತ್ತು ಕಾಲದಿಂದ ಕಾಲಕ್ಕೆ ಅವನ್ನು ಪುನರ್ವಿಮರ್ಶಿಸುವ ಅಧಿಕಾರ ನೀಡುವ ಕಾಯಿದೆಯೊಂದು (ಕನಿಷ್ಠ ಕೂಲಿ ಕಾಯಿದೆ) 1948ರಲ್ಲಿ ಭಾರತದಲ್ಲಿ ಜಾರಿಗೆ ಬಂತು. ಎಲ್ಲೆಲ್ಲಿ ಕಾರ್ಮಿಕರನ್ನು ಅತಿಯಾಗಿ ದುಡಿಸಲಾಗುತ್ತದೆಯೋ ಕಾರ್ಮಿಕರ ಶೋಷಣೆ ನಡೆಯುತ್ತದೆಯೋ ಅಂಥ ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿಗಳನ್ನು ನಿರ್ಧರಿಸಲಾಗುತ್ತದೆ. ಪ್ಲಾಂಟೇಷನ್‍ಗಳು, ಅಕ್ಕಿಹಿಟ್ಟು ಮತ್ತು ಎಣ್ಣೆ ಗಿರಣಿಗಳು, ಚರ್ಮ ಹದಮಾಡುವ ಕಾರ್ಖಾನೆಗಳು, ರಸ್ತೆ ಸಾರಿಗೆ, ರಸ್ತೆ ನಿರ್ಮಾಣ, ಉಣ್ಣೆ ಜಮಖಾನೆ ಮತ್ತು ಶಾಲು ನೇಯ್ಗೆ, ಹೊಗೆಸೊಪ್ಪಿನ ವಸ್ತುಗಳ ಉತ್ಪಾದನೆ, ಕಲ್ಲೊಡೆತ, ಅರಗು ತಯಾರಿಕೆ, ಕಾಗೆಬಂಗಾರದ ಉದ್ಯಮ ಮುಂತಾದವು ಇಂಥ ಕೈಗಾರಿಕೆಗಳು. ಕಾಲಾನುಗುಣ ಕನಿಷ್ಠ ದರ, ಕೆಲಸಾನುಗುಣ ಕನಿಷ್ಠ ದರ, ಉಪರಿ ಕಾಲದ ದರ– ಇವನ್ನೆಲ್ಲ ವಿವಿಧ ಉದ್ಯೋಗ, ಸ್ಥಳ ಮತ್ತು ಕೆಲಸಗಳಿಗೆ ಸಂಬಂಧಿಸಿದಂತೆ ನಿಗದಿಗೊಳಿಸಲಾಗುತ್ತದೆ. ಕಾರ್ಮಿಕರೇ ಅಲ್ಲದೆ ಗುಮಾಸ್ತೆ ವರ್ಗಕ್ಕೂ ಇದನ್ನು ಅನ್ವಯಿಸಲಾಗುತ್ತದೆ. ಈ ದರಗಳನ್ನು ನಿಷ್ಕರ್ಷಿಸುವ ಅಧಿಕಾರ ಸಂಬಂಧಪಟ್ಟ ಸರ್ಕಾರಕ್ಕೆ ದತ್ತವಾಗಿದೆ.

ಕನಿಷ್ಠ ಕೂಲಿಗೆ ಹೊಂದಿಕೊಂಡ ಇನ್ನೊಂದು ಪ್ರಶ್ನೆಯೆಂದರೆ ಅಗತ್ಯಾಧಾರಿತ ಕೂಲಿ. ಕಾರ್ಮಿಕರನ ಜೀವನಾಧಾರ ಮಾತ್ರವಲ್ಲದೆ ಅವನ ದಕ್ಷತೆಯನ್ನು ಉಳಿಸಿಕೊಳ್ಳಲು ಅಗತ್ಯವಾಗುವಷ್ಟಾದರೂ ಕೂಲಿ ಪಾವತಿಯಾಗಬೇಕೆಂದೂ ಇದು ನ್ಯಾಯವಾದ ಕೂಲಿಯೆಂದೂ ವಾದಿಸಲಾಗಿದೆ. ಕಾರ್ಮಿಕನ ಕುಟುಂಬಕ್ಕೆ ಆಹಾರ, ವಸ್ತ್ರ, ವಸತಿ ಮುಂತಾದ ಅಗತ್ಯವಸ್ತುಗಳನ್ನು ದೊರಕಿಸುವುದರ ಜೊತೆಗೆ ಅವನ ಮಕ್ಕಳ ಶಿಕ್ಷಣ, ಅನಾರೋಗ್ಯದಿಂದ ರಕ್ಷಣೆ. ಸಾಮಾಜಿಕ ಅವಶ್ಯಕತೆಗಳ ಪೂರೈಕೆ, ವಿಮೆ ಮುಂತಾದವು ಲಭ್ಯವಾಗುವಷ್ಟು ಕೂಲಿ ದೊರಕಬೇಕು. 1957ರಲ್ಲಿ ಸೇರಿದ್ದ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಕಾರ್ಮಿಕನ ಕನಿಷ್ಠಾವಶ್ಯಕತೆಗಳೇನೆಂಬುದನ್ನು ವಿಶದೀಕರಿಸಲಾಗಿದೆ. ಅಗತ್ಯಾಧಾರಿತ ಕೂಲಿ ಎಷ್ಟೆಂಬುದನ್ನು ಲೆಕ್ಕಾಚಾರ ಮಾಡಲಾಗಿದೆ.

1968ರಲ್ಲಿ ಭಾರತದ ಕೇಂದ್ರ ಸರ್ಕಾರದ ನೌಕರರು ತಮಗೆ ಅಗತ್ಯಾಧಾರಿತ ಕನಿಷ್ಠ ವೇತನದ ಭರವಸೆ ನೀಡಬೇಕೆಂದು ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದ್ದರು. ಈ ಬೇಡಿಕೆ ಪೂರೈಸುವುದು ಅವಶ್ಯವಾದರೂ ಕೇಂದ್ರಸರ್ಕಾರದ ವ್ಯಾಪ್ತಿಯ ಹೊರಗಿರುವ ಅಸಂಖ್ಯಾತ ಕಾರ್ಮಿಕರನ್ನೂ ಒಳಗೊಳ್ಳುವ ಯೋಜನೆ ಜಾರಿಗೆ ತರುವುದು ಅಗತ್ಯವೆಂದು ಸರ್ಕಾರ ಭಾವಿಸಿತು. ಅಂಥ ವ್ಯಾಪಕ ಕ್ರಮ ಕೈಗೊಳ್ಳುವುದು ಭಾರತದಲ್ಲಿ ಸದ್ಯಕ್ಕಂತೂ ಸಾಧ್ಯವಿಲ್ಲವಾಗಿದೆ.

(ಜಿ.ಬಿ.ಕೆ.)

**ಕೂಲಿ ಸಿದ್ಧಾಂತಗಳು :** ಒಂದು ದೇಶದ ಉತ್ಪಾದನ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕಾರ್ಮಿಕರಿಗೆ ಅವರ ದುಡಿಮೆಗೆ ಪ್ರತಿಫಲವಾಗಿ ಲಭ್ಯವಾಗುವ ಕೂಲಿಯ ಮಟ್ಟದ ನಿರ್ಣಯವನ್ನು ಕುರಿತ ಸಿದ್ಧಾಂತಗಳು(ಥಿಯೋರೀಸ್ ಆಫ್ ವೇಜಸ್). 18ನೆಯ ಶತಮಾನದ ಮಧ್ಯಭಾಗದಿಂದಲೂ ಅರ್ಥಶಾಸ್ತ್ರಜ್ಞರು ಸಾರ್ವತ್ರಿಕವಾಗಿ ಅಂಗೀಕಾರಾರ್ಹವಾದ ಕೂಲಿ ಸಿದ್ಧಾಂತವೊಂದನ್ನು ರೂಪಿಸುವುದರಲ್ಲಿ ತೊಡಗಿದ್ದಾರಾದರೂ ಇದುವರೆಗೂ ಅವರು ಈ ದಿಕ್ಕಿನಲ್ಲಿ ಸಂಪೂರ್ಣ ಜಯಗಳಿಸಲಾಗಿಲ್ಲ. ಪ್ರಾಚೀನರಿಂದ ಹಿಡಿದು ಆಧುನಿಕರವರೆಗೆ ಅನೇಕ ಅರ್ಥಶಾಸ್ತ್ರಜ್ಞರು ತಂತಮ್ಮ ಕೂಲಿ ಸಿದ್ಧಾಂತಗಳನ್ನು ಮಂಡಿಸಿದ್ದಾರಾದರೂ ಒಂದೊಂದು ಸಿದ್ಧಾಂತವೂ ಈ ವಿಷಯದ ಒಂದೊಂದು ಮುಖವನ್ನು ಒತ್ತಿ ಹೇಳುತ್ತದೆ. ಯಾವ ಸಿದ್ಧಾಂತವೂ ಪರಿಪೂರ್ಣವಲ್ಲ. ಅವೆಲ್ಲ ಒಂದಕ್ಕೊಂದು ಪೂರಕ. ಸ್ವಾಭಾವಿಕ ಅಥವಾ ಮಾರುಕಟ್ಟೆಯ ಬಲಗಳಿಂದ, ಎಂದರೆ ಶ್ರಮದ ಬೇಡಿಕೆ ಮತ್ತು ಅದರ ಸರಬರಾಯಿಗಳ ಪರಸ್ಪರ ಕ್ರಿಯೆಯಿಂದ ಕಾರ್ಮಿಕರ ಕೂಲಿಯ ಮಟ್ಟದ ನಿರ್ಣಯವಾಗುವುದೆಂಬುದಾಗಿ 19ನೆಯ ಶತಮಾನದಲ್ಲೂ ಅದಕ್ಕೆ ಮುಂಚೆಯೂ ರೂಪಿತವಾದ ಕೂಲಿ ಸಿದ್ಧಾಂತಗಳು ಹೇಳಿದರೆ, ಸಾಂಸ್ಥಿಕ ಬಲಗಳಿಂದ ಮತ್ತು ಸಾಂಘಿಕ ಒತ್ತಡಗಳಿಂದ ಅಥವಾ ಸರ್ಕಾರದ ನಿರ್ದೇಶನಗಳಿಂದ ಕೂಲಿಯ ಮಟ್ಟದ ನಿರ್ಣಯವಾಗುವುದೆಂದು 20ನೆಯ ಶತಮಾನದ ಸಿದ್ಧಾಂತಗಳು ಪ್ರತಿಪಾದಿಸುತ್ತವೆ.

ಐತಿಹಾಸಿಕವಾಗಿ ಕೂಲಿ ಸಿದ್ಧಾಂತಗಳನ್ನು ನಾಲ್ಕು ಬಗೆಯಾಗಿ ವಿಂಗಡಿಸಬಹುದು: (1) 18ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಚುರವಾಗಿದ್ದ ಜೀವನ ನಿರ್ವಾಹಸಿದ್ಧಾಂತ (ಸಬ್‍ಸಿಸ್ಟೆನ್ಸ್ ಥಿಯೊರಿ), (2)19ನೆಯ ಶತಮಾನದ ಪೂರ್ವಾರ್ಧ ಮತ್ತು ಮಧ್ಯ ಕಾಲದಲ್ಲಿ ಬಂದ ಕೂಲಿ ಸಿದ್ಧಾಂತ (ವೇಜ್ ಫಂಡ್ ಥಿಯೊರಿ), (3) 19ನೆಯ ಶತಮಾನದ ಕೊನೆಯ ಭಾಗ ಮತ್ತು 20ನೆಯ ಶತಮಾನದ ಆದಿಭಾಗದಲ್ಲಿ ಪ್ರತಿಪಾದಿತವಾದ ಸೀಮಾಂತ ಉತ್ಪಾದಕತೆ ಸಿದ್ಧಾಂತ(ಮಾರ್ಜಿನಲ್ ಪ್ರೊಡಕ್ಟಿವಿಟಿ ಥಿಯೊರಿ) (4) 20ನೆಯ ಶತಮಾನದ ಸಾಮೂಹಿಕ ಚೌಕಾಸಿ ಸಿದ್ಧಾಂತಗಳು (ಬಾರ್ಗೇನಿಂಗ್ ಥಿಯೊರೀಸ್).

**ಜೀವನನಿರ್ವಾಹ ಸಿದ್ಧಾಂತ :** ಫ್ರಾನ್ಸಿನ ಪ್ರಕೃತಿಪ್ರಾಧಾನ್ಯವಾದಿಗಳ (ಫಿಸಿಯೋಕ್ರ್ಯಾಟ್ಸ್) ಪಂಥಕ್ಕೆ ಸೇರಿದ ಟುರ್ಗೊ(1727–81) ಮತ್ತು ಕೆನೆ(1694–74) ಇವರು ಈ ಸಿದ್ಧಾಂತದ ಪ್ರಥಮ ಪ್ರತಿಪಾದಕರು. ಈ ಸಿದ್ಧಾಂತವನ್ನು ಉತ್ತರೋತ್ತರ ಪರಿಷ್ಕರಿಸಿದವರಲ್ಲಿ ಮುಖ್ಯರಾದವರು ಆಡಂ ಸ್ಮಿತ್ (1723–90), ಮ್ಯಾಲ್ಥಸ್ (1766–34), ರಿಕಾರ್ಡೋ (1772–23), ಟಾರೆನ್ಸ್ (1821) ಮತ್ತು ಕಾರ್ಲ್ ಮಾರ್ಕ್ಸ್ (1818–83). ಇದು ಮುಖ್ಯವಾಗಿ ಶ್ರಮದ ಸರಬರಾಯಿಯ ಸಿದ್ಧಾಂತ. ಕಾರ್ಮಿಕ ಮತ್ತು ಅವನ ಕುಟುಂಬದ ಕನಿಷ್ಠ ಜೀವನ ನಿರ್ವಹಣಕ್ಕೆ ಆವಶ್ಯವಾದ ಮಟ್ಟದಲ್ಲಿ ಕೂಲಿ ನೆಲೆಗೊಳ್ಳುವ ಪ್ರವೃತ್ತಿ ತೋರಿಸುತ್ತದೆಯೆಂಬುದು ಇದರ ಮುಖ್ಯ ವಾದ. ಜನಸಂಖ್ಯೆಯ ಪ್ರವೃತ್ತಿಗಳು, ಕಾರ್ಮಿಕ ಬಲದ ಪ್ರತಿಸ್ಥಾಪನ ವೆಚ್ಚ – ಇವು ಕೂಲಿಯನ್ನು ನಿರ್ಣಯಿಸುವ ಮುಖ್ಯ ಅಂಶಗಳು. ಆಹಾರ ಪದಾರ್ಥಗಳಿಗಿಂತ ಹೆಚ್ಚು ವೇಗವಾಗಿ ಬೆಳೆಯುವುದು ಜನಸಂಖ್ಯೆಯ ಪ್ರವೃತ್ತಿಯಾಗಿರುವುದರಿಂದ. ಹೆಚ್ಚು ಸಂಖ್ಯೆಯ ಜನರು ಜೀವನ ನಿರ್ವಾಹದ ಮಟ್ಟದಲ್ಲೇ ಇರುತ್ತಾರೆ. ರಿಕಾರ್ಡೋ ಪ್ರತಿಪಾದಿಸಿದ ಸಿದ್ಧಾಂತದಲ್ಲಿ ಸಹಜ ಕೂಲಿ(ನ್ಯಾಚುರಲ್ ವೇಜ್) ಮತ್ತು ಮಾರುಕಟ್ಟೆಯ ಕೂಲಿ(ಮಾರ್ಕೆಟ್ ವೇಜ್) ಎಂಬ ಶಬ್ದಗಳನ್ನು ಬಳಸಿದ್ದಾನೆ. ಜೀವನನಿರ್ವಾಹ ಮಟ್ಟಕ್ಕೆ ಸಮನಾಗಿರತಕ್ಕದ್ದು ಸಹಜ ಕೂಲಿ. ಕಾರ್ಮಿಕರಿಗೆ ಕೊಡುವ ಕೂಲಿ ಅಥವಾ ಮಾರುಕಟ್ಟೆಯ ಕೂಲಿ ಸಹಜ ಕೂಲಿಯ ಮಟ್ಟಕ್ಕಿಂತ ಹೆಚ್ಚಾದಾಗ, ಕಾರ್ಮಿಕರು ಮದುವೆಯಾಗಿ ಕುಟುಂಬವನ್ನು ಬೆಳೆಸಲು ಉದ್ಯುಕ್ತರಾಗುತ್ತಾರೆ. ಇದರಿಂದ ಕಾರ್ಮಿಕರ ಸರಬರಾಯಿ ಅಧಿಕವಾಗುತ್ತದೆ. ಇದರಿಂದ ಕೂಲಿಯ ದರ ಮತ್ತೆ ಜೀವನ ನಿರ್ವಾಹ ಮಟ್ಟಕ್ಕೆ ಇಳಿಯುತ್ತದೆ. ಜೀವನನಿರ್ವಾಹ ಕೂಲಿಯ ಮಟ್ಟಕ್ಕಿಂತ ಮಾರುಕಟ್ಟೆಯ ಕೂಲಿ ಕಡಿಮೆಯಾದಾಗ ಕಾರ್ಮಿಕರು ಮದುವೆಯಾಗಲೂ ಮಕ್ಕಳನ್ನು ಪಡೆಯಲೂ ಹಿಂಜರಿಯುತ್ತಾರೆ. ಅಲ್ಲದೆ ಕಡಿಮೆ ಕೂಲಿಯಿಂದಾಗಿ ಅವರ ಪೋಷಣೆ ಅಸಮರ್ಪಕವಾಗುತ್ತದೆ. ಅವರಲ್ಲಿ ಮರಣಸಂಖ್ಯೆ ಏರುತ್ತದೆ. ಕಾರ್ಮಿಕರ ಸರಬರಾಯಿ ತಗ್ಗುತ್ತದೆ. ಮಾರುಕಟ್ಟೆಯ ಕೂಲಿ ದರ ಮತ್ತೆ ಜೀವನ ನಿರ್ವಾಹ ಮಟ್ಟಕ್ಕೆ (ಸಹಜ ಮಟ್ಟಕ್ಕೆ) ಏರುತ್ತದೆ.

ಜೀವನನಿರ್ವಾಹ ಸಿದ್ಧಾಂತ ಅತ್ಯಂತ ನಿರಾಶಾಪೂರಿತವಾದ್ದೆಂಬ ಟೀಕೆಗೆ ಒಳಗಾಗಿದೆ. ಯುರೋಪಿನ ಇತಿಹಾಸದಲ್ಲಿ ಇದಕ್ಕೆ ಸಮರ್ಥನೆಯಾಗಿ ಅನೇಕ ಘಟನೆಗಳು ಜರುಗಿದುವು. ಕರಾಳ ಮೃತ್ಯು ಎಂದು ಕುಖ್ಯಾತಿ ಗಳಿಸಿರುವ ಮಹಾಪ್ಲೇಗು ಜಾಡ್ಯದಿಂದ ಯೂರೋಪಿನಲ್ಲಿ ಅನೇಕರು ಮೃತ್ಯುವಶರಾದ ಮೇಲೆ ಸರಬರಾಯಿ ಕಡಿಮೆಯಾಗಿ ಕಾರ್ಮಿಕರ ಕೂಲಿಯ ಮಟ್ಟ ಏರಿತ್ತು. 19ನೆಯ ಶತಮಾನದ ವೇಳೆಗೆ ಅವರ ಸಂಖ್ಯೆ ಅಧಿಕವಾಯಿತು. ಕೂಲಿಯ ಮಟ್ಟ ಮತ್ತೆ ಜೀವನನಿರ್ವಾಹ ಮಟ್ಟಕ್ಕೆ ಕುಸಿಯಿತು. ಮ್ಯಾಲ್ಥಸನ ಜನಸಂಖ್ಯಾ ಸಿದ್ಧಾಂತವನ್ನವಲಂಬಿಸಿದ್ದ ಈ ಸಿದ್ಧಾಂತ ಬಹುವಾಗಿ ನಿರಾಶೆಗೆ ಎಡೆಗೊಟ್ಟಿತು. ಕಾರ್ಮಿಕರಿಗೆ ಹೆಚ್ಚು ಕೂಲಿ ಕೊಡುವುದು ಅಪಾಯಕರವೆಂಬ ವಾದದಿಂದ ಅವರು ಬಹಳ ಮಟ್ಟಿಗೆ ಶೋಷಣೆಗೆ ಒಳಗಾದರು. ಕಾರ್ಲ್ ಮಾರ್ಕ್ಸ್ ಪ್ರತಿಪಾದಿಸಿದ ಶೋಷಣೆಯ ಸಿದ್ಧಾಂತಕ್ಕೆ ಇದೇ ಆಧಾರವಾಯಿತು.

ಜೀವನನಿರ್ವಾಹ ಕೂಲಿ ಸಿದ್ಧಾಂತದಲ್ಲಿ ಕ್ರಮೇಣ ಶೈಥಿಲ್ಯವುಂಟಾಯಿತು. ಅದರ ಪ್ರತಿಪಾದಕರಲ್ಲಿ ಕೊನೆಯವರಾದ ಟಾರೆನ್ಸ್, ಮಿಲ್ ಮುಂತಾದವರು ತಮ್ಮ ಪರಿಷ್ಕೃತ ಸಿದ್ಧಾಂತದಲ್ಲಿ ಕೆಲವು ಮಾರ್ಪಾಟುಗಳ ಅಗತ್ಯವನ್ನು ಒಪ್ಪಿಕೊಂಡರು. ಇಂಗ್ಲೆಂಡ್, ಫ್ರಾನ್ಸ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಂಥ ಮುಂದುವರಿದ ದೇಶಗಳಲ್ಲಿ ಜೀವನಮಟ್ಟ ಜೀವನನಿರ್ವಾಹ ಮಟ್ಟಕ್ಕಿಂತ ಸಾಕಷ್ಟು ಹೆಚ್ಚಾಗಿರುವುದಲ್ಲದೆ ಅದು ಇನ್ನೂ ಕ್ರಮಕ್ರಮವಾಗಿ ಹೆಚ್ಚುತ್ತಿರುವುದನ್ನು ಮಿಲ್ ಗುರುತಿಸಿದ್ದಾನೆ. ಕೂಲಿ ಹೆಚ್ಚಿದಂತೆ ಜನನ ದರವೂ ಏರುವುದೆಂಬುದು ಇಲ್ಲಿ ಸುಳ್ಳಾಗಿದೆ. ಇಡೀ ಕಾರ್ಮಿಕವರ್ಗದ ಜೀವನ ನಿರ್ವಾಹ ಮಟ್ಟ ಸಾಮಾನ್ಯವಾಗಿ ಒಂದೇ ಆಗಿರುತ್ತದೆಯೆನ್ನುವುದೂ ಸರಿಯಲ್ಲ. ಬೇರೆ ಬೇರೆ ಉದ್ಯೋಗಗಳಲ್ಲಿ ಇದು ವ್ಯತ್ಯಾಸವಾಗುತ್ತದೆ. ಜೀವನನಿರ್ವಾಹ ಮಟ್ಟವೆಂಬುದೇ ಬಹಳ ಅಸ್ಪಷ್ಟವಾದ್ದು. ಎಲ್ಲ ದೇಶಗಳಿಗೂ ಎಲ್ಲ ಕಾಲಗಳಿಗೂ ಎಲ್ಲ ಸ್ಥಳಗಳಿಗೂ ಎಲ್ಲ ವರ್ಗಗಳಿಗೂ ಸಾಮಾನ್ಯವಾದ ಜೀವನ ನಿರ್ವಾಹ ಮಟ್ಟವೊಂದು ಉಂಟೆಂಬ ಭಾವನೆಯೇ ಅವಾಸ್ತವಿಕ. ಅಲ್ಲದೆ ಜೀವನನಿರ್ವಾಹ ಸಿದ್ಧಾಂತದಲ್ಲಿ ಕಾರ್ಮಿಕರ ಸರಬರಾಯಿಗೆ ಅನುಗುಣವಾಗಿ ಕೂಲಿ ವ್ಯತ್ಯಾಸವಾಗುವುದೆಂದು ಹೇಳಿದೆಯಾದರೂ ಶ್ರಮದ ಬೇಡಿಕೆಯ ಮುಖವನ್ನು ಪರಿಗಣಿಸಿಯೇ ಇಲ್ಲ. ಕಾರ್ಮಿಕರನ್ನು ನೇಮಿಸಿಕೊಳ್ಳುವವರು ಅವರ ದುಡಿಮೆಯಿಂದ ತಮಗೆ ದೊರಕುವ ಲಾಭದ ಬದಲು, ಕಾರ್ಮಿಕಜೀವನ ನಿರ್ವಾಹವನ್ನೇ ಪರಿಗಣಿಸಿ, ಕೂಲಿ ಪಾವತಿ ಮಾಡುವರೆಂಬುದು ಅಷ್ಟೊಂದು ಸಮಂಜಸವಾದ ವಿವರಣೆಯಾಗುವುದಿಲ್ಲ. ಜೀವನನಿರ್ವಾಹ ಸಿದ್ಧಾಂತ ದೀರ್ಘಕಾಲದ ಬದಲಾವಣೆಗಳನ್ನು ವಿವೇಚಿಸಬಹುದಾದರೂ ಪ್ರತಿ ವರ್ಷ ಸಂಭವಿಸುವ ಬದಲಾವಣೆಗಳನ್ನು ಇದು ಕಡೆಗಣಿಸುತ್ತದೆ.

**ಶೋಷಣೆಯ ಸಿದ್ಧಾಂತ :** ಜೀವನನಿರ್ವಾಹ ಸಿದ್ಧಾಂತದ ವಾದವನ್ನೇ ಮುಂದುವರಿಸಿ ಕಾರ್ಲ್ ಮಾರ್ಕ್ಸ್ ತನ್ನ ಪ್ರಸಿದ್ಧವಾದ ಶೋಷಣೆಯ ಸಿದ್ಧಾಂತವನ್ನು ಪ್ರತಿಪಾದಿಸಿದ. ಕಾರ್ಮಿಕರ ಶ್ರಮವನ್ನೂ ಒಂದು ಪದಾರ್ಥವೆಂದು ಬಗೆದು ಅದರ ಬೆಲೆಯನ್ನು ಕಟ್ಟುವ ವಿಧಾನವನ್ನು ಅವನು ತಳ್ಳಿಹಾಕಿದ. ಕಾರ್ಮಿಕನ ಶ್ರಮದಿಂದ ಪದಾರ್ಥದ ಉತ್ಪಾದನೆಯಾಗುತ್ತದೆ. ಆದ್ದರಿಂದ ಅದರ ಪ್ರತಿಫಲ ಹೋಗಬೇಕಾದ್ದು ಕಾರ್ಮಿಕನಿಗೆ.

ಆದರೆ ಜೀವನನಿರ್ವಾಹ ವೆಚ್ಚದ ಆಧಾರದ ಮೇಲೆ ಅವನ ಕೂಲಿಯ ನಿರ್ಧಾರವಾಗುತ್ತದೆ. ಉದ್ಯಮಿಯ ಲಾಭವೆಂಬುದು ವಾಸ್ತವವಾಗಿ ಕಾರ್ಮಿಕನಿಗೆ ಸಲ್ಲಿಸಬೇಕಾಗಿದ್ದೂ ಅವನಿಗೆ ಕೊಡದೆ ಉಳಿಸಿಕೊಂಡ ಭಾಗ ಎಂಬುದಾಗಿ ಆತ ವಾದಿಸಿದ.

**ಕೂಲಿ ನಿಧಿ ಸಿದ್ಧಾಂತ :** ಜೀವನನಿರ್ವಾಹ ಕೂಲಿ ಸಿದ್ಧಾಂತದಿಂದ ವಿಕಾಸಗೊಂಡ ಸಿದ್ಧಾಂತವಿದು. ಜೆ.ಎಸ್.ಮಿಲ್(1806–73) ಇದರ ಪ್ರತಿಪಾದಕನೆಂದು ಪರಿಗಣಿತನಾಗಿದ್ದಾನೆ. ಕಾರ್ಮಿಕರಿಗಾಗಿ ಬೇಡಿಕೆ, ಕಾರ್ಮಿಕರ ಸರಬರಾಯಿ– ಇವನ್ನೇ ಕೂಲಿ ಅವಲಂಬಿಸಿದೆ ಎಂದು ಆತ ಬರೆದ. ಜನಸಂಖ್ಯೆಯೂ ಬಂಡವಾಳವೂ ಕೂಲಿಯನ್ನು ನಿರ್ಧರಿಸುವ ಅಂಶಗಳು. ಇಲ್ಲಿ ಜನಸಂಖ್ಯೆಯೆಂದರೆ ಕಾರ್ಮಿಕ ಜನಸಂಖ್ಯೆ; ಬಂಡವಾಳವೆಂದರೆ ಆದರ್ಶ ಬಂಡವಾಳ; ಶ್ರಮವನ್ನು ಕೊಳ್ಳಲು ಮಾಡಿದ ವೆಚ್ಚದ ಭಾಗ. ಇದನ್ನು ಕೂಲಿ ನಿಧಿಯೆಂದು ಕರೆಯಲಾಗಿದೆ. ಒಂದು ದೇಶದಲ್ಲಿ ಲಭ್ಯವಿರುವ ಕೂಲಿ ನಿಧಿ. ಕೆಲಸ ಬಯಸುವ ಕಾರ್ಮಿಕರ ಸಂಖ್ಯೆ –ಇವಕ್ಕನುಗುಣವಾಗಿ ಕೂಲಿಯ ನಿರ್ಧಾರವಾಗುತ್ತದೆ. ಕೂಲಿ ಹೆಚ್ಚಬೇಕಾದರೆ ಬಂಡವಾಳನಿಧಿಯ ಮೊತ್ತ ಅಧಿಕವಾಗಬೇಕು. ಇಲ್ಲವೇ ಕೆಲಸಗಾರರ ಸಂಖ್ಯೆ ಕಡಿಮೆಯಾಗಬೇಕು. ಇವೆರಡರಲ್ಲಿ ಯಾವುದೂ ಸಂಭವಿಸದಿದ್ದಾಗ ಅಧಿಕ ಕೂಲಿ ಬೇಕೆಂದು ಕೇಳುವುದು ವ್ಯರ್ಥವಾಗುತ್ತದೆ – ಎಂದು ಮಿಲ್ ವಾದಿಸಿದ. ಈ ಸಿದ್ಧಾಂತ ಮಿಲ್ಲನ ಜೀವಿತ ಕಾಲದಲ್ಲೇ ಬಹುವಾದ ಟೀಕೆಗೆ ಒಳಗಾಯಿತು. ಮಿಲ್ಲನೇ ಅನಂತರ ಇದನ್ನು ತ್ಯಜಿಸಿದ. ಕೂಲಿಗೆ ಮೂಲವಾದ್ದು ಬಂಡವಾಳವೆ? ಅಥವಾ ಪ್ರಚಲಿತ ಉತ್ಪಾದನೆಯೆ? – ಎಂಬ ಬಗ್ಗೆ ವಿಪುಲವಾದ ವಾದ ನಡೆದಿದೆ. ಬಂಡವಾಳದ ಒಂದು ಭಾಗವನ್ನು ಕೂಲಿಗಾಗಿ ತೆಗೆದಿಡಲಾಗುತ್ತದೆಯೆಂಬ ವಾದ ಸರಿಯಿಲ್ಲ. ಈ ದೃಷ್ಟಿಯಲ್ಲಿ ಸ್ಥಿರವಾದ ಕೂಲಿ ನಿಧಿ ಯಾವುದೂ ಇರುವುದಿಲ್ಲ. ಒಂದು ವೇಳೆ ಇರುವುದೆಂದು ಭಾವಿಸಿದರೂ ಅದು ಸ್ಥಿರನಿಧಿಯಂತೂ ಅಲ್ಲವೇ ಅಲ್ಲ. ಕೂಲಿ ನಿಧಿ ಸ್ಥಿರವಾಗಿರುವುದರಿಂದ, ಒಂದು ಕೈಗಾರಿಕೆಯಲ್ಲಿ ಕೂಲಿ ಹೆಚ್ಚಿಸಿದರೆ ಇನ್ನೊಂದು ಕೈಗಾರಿಕೆಯಲ್ಲಿ ಅದು ಇಳಿಯಬೇಕಾದ್ದು ಅನಿವಾರ್ಯ; ಇಲ್ಲದಿದ್ದರೆ ಕೆಲವರು ನಿರುದ್ಯೋಗಿಗಳಾಗಬೇಕಾಗುತ್ತದೆ – ಎಂದು ಕೂಲಿ ನಿಧಿ ಸಿದ್ಧಾಂತ ವಾದಿಸುತ್ತದೆ. ಇದು ಒಂದು ಸಂಕುಚಿತ ತಳಹದಿಯ ಮೇಲೆ ರಚಿತವಾದ ಸಿದ್ಧಾಂತವಾಗಿ, ಆಧುನಿಕ ಕೈಗಾರಿಕಾ ಸಮಾಜದಲ್ಲಿ ಕಂಡುಬರುವ, ಕೂಲಿಗೆ ಸಂಬಂಧಿಸಿದ, ಅನೇಕ ವಿಷಯಗಳ ಬಗ್ಗೆ ಏನನ್ನೂ ವಿವರಿಸಲು ಶಕ್ತವಾಗಿಲ್ಲ. ಉದಾಹರಣೆಗೆ, ಆಧುನಿಕ ಕೈಗಾರಿಕಾ ಸಮಾಜದಲ್ಲಿ ಕಂಡುಬರುವ ಕೂಲಿ ಭಿನ್ನಕಗಳ(ವೇಜ್ ಡಿಫರೆನ್ಷಿಯಲ್ಸ್) ಬಗ್ಗೆ, ಕಾರ್ಮಿಕ ಸಂಘಗಳು ಕೂಲಿ ನಿರ್ಣಯದ ಮೇಲೆ ಬೀರುವ ಪ್ರಭಾವದ ಬಗ್ಗೆ ಏನೂ ಹೇಳುವುದಿಲ್ಲ. ಆರ್ಥಿಕತೆ ಬೆಳೆದಂತೆಲ್ಲ ಶ್ರಮದ ಬೇಡಿಕೆಯೂ ಹೆಚ್ಚಲೇಬೇಕು. ಈ ಬಗ್ಗೆ ಕೂಲಿ ನಿಧಿ ಸಿದ್ಧಾಂತ ಏನೂ ಹೇಳುವುದಿಲ್ಲ. ಇದು ಒಂದು ಜಡ ಸಿದ್ಧಾಂತ.

**ಅವಶಿಷ್ಟ ದಾವೀ ಸಿದ್ಧಾಂತ :** ಅಮೆರಿಕನ್ ಅರ್ಥಶಾಸ್ತ್ರಜ್ಞ ಫ್ರಾನ್ಸಿಸ್ ಎ.ವಾಕರ್(1840–97) ಮಂಡಿಸಿದ ಸಿದ್ಧಾಂತವಿದು(ರೆಸಿಡ್ಯೂಯಲ್ ಕ್ಲೇಮೆಂಟ್ ತಿಯೊರಿ). ಉತ್ಪಾದನೆಯಲ್ಲಿ ಇತರ ಉತ್ಪಾದನಾಂಗಗಳಿಗೆ ಕೊಡಬೇಕಾದ್ದನ್ನು ಕೊಟ್ಟ ಮೇಲೆ ಉಳಿಯುವುದು ಕೂಲಿ ಎಂದು ಅವನು ವಾದಿಸಿದ. ಗೇಣಿ, ಲಾಭ, ಬಡ್ಡಿ ಇವಕ್ಕೆಲ್ಲ ನಿರ್ಧಾರಕವಾದ ಖಚಿತ ನಿಯಮಗಳುಂಟೆಂಬುದು ಅವನ ಅಭಿಪ್ರಾಯವಾಗಿತ್ತು. ಆದರೆ ಕೂಲಿಗೆ ಇಂಥ ಯಾವ ನಿಯಮಗಳೂ ಇಲ್ಲ. ಒಟ್ಟು ಉತ್ಪಾದನೆಯಲ್ಲಿ ಆ ಮೂರೂ ಪಾವತಿಗಳನ್ನು ಮಾಡಿದ ಮೇಲೆ ಉಳಿದದ್ದು(ಅವಶಿಷ್ಟ) ಕಾರ್ಮಿಕರಿಗೆ ಕೂಲಿಯ ರೂಪದಲ್ಲಿ ಸಲ್ಲುತ್ತದೆ. ಕಾರ್ಮಿಕರು ಹೆಚ್ಚು ದಕ್ಷವಾಗಿ ಕೆಲಸ ಮಾಡಿದರೆ ಉತ್ಪಾದನೆ ಹೆಚ್ಚುತ್ತದೆ. ಕಾರ್ಮಿಕರಿಗೆ ಸಲ್ಲುವ ಅವಶಿಷ್ಟದ ಭಾಗವೂ ಅಧಿಕವಾಗುತ್ತದೆ. ಜೀವನನಿರ್ವಾಹ ಸಿದ್ಧಾಂತ ಅಥವಾ ಕೂಲಿ ನಿಧಿ ಸಿದ್ಧಾಂತದಂತೆ ನಿರಾಶಾವಾದಿ ಯಾಗಿಲ್ಲದ್ದು ಈ ಸಿದ್ಧಾಂತದ ಹೆಚ್ಚುಗಾರಿಕೆ. ಆದರೆ ಈ ಸಿದ್ಧಾಂತವನ್ನು ಅನೇಕ ಅರ್ಥಶಾಸ್ತ್ರಜ್ಞರು ತಳ್ಳಿಹಾಕಿದರು. ಕಾರ್ಮಿಕ ಸಂಘಗಳು ಕೂಲಿ ಏರಿಸಲು ಪ್ರಯತ್ನಿಸುವುದೇಕೆಂಬುದನ್ನು ಇದು ವಿವರಿಸುವುದಿಲ್ಲ. ಶ್ರಮದ ಸರಬರಾಯಿಯಿಂದ ಬೇಡಿಕೆಯ ಮೇಲಾಗುವ ಪರಿಣಾಮವನ್ನೂ ಇದು ಪರಿಗಣಿಸುವುದಿಲ್ಲ. ಬೇಡಿಕೆ – ಸರಬರಾಯಿಗಳ ಆಧಾರದ ಮೇಲೆ ನಿಂತ ನಿಯಮಗಳೇ ಕೂಲಿಗೂ ಏಕೆ ಅನ್ವಯವಾಗ ಲಾರವೆಂಬುದನ್ನು ಇದು ತಿಳಿಸುವುದಿಲ್ಲ. ಇತರ ಎಲ್ಲ ಉತ್ಪಾದನಾಂಗಗಳಿಗೂ ಕೊಡಬೇಕಾದ್ದನ್ನು ಕೊಟ್ಟಮೇಲೆ ಉಳಿಯುವುದು ಕಾರ್ಮಿಕರ ಪಾಲು – ಎಂಬ ವಾದ ಸತ್ಯವೆಂದು ಎಲ್ಲರಿಗೂ ಒಪ್ಪಿಗೆಯಾಗಿಲ್ಲ. ವಾಸ್ತವವಾಗಿ ಈ ಅವಶಿಷ್ಟದ ಅನುಭವದಾರನಾಗಿರುವವನು ಕಾರ್ಮಿಕನಲ್ಲ, ಉದ್ಯಮಿ.

**ಸೀಮಾಂತ ಉತ್ಪಾದಕತೆ ಸಿದ್ಧಾಂತ :** ಜೀವನನಿರ್ವಾಹ ಸಿದ್ಧಾಂತ ಮತ್ತು ಕೂಲಿ ನಿಧಿ ಸಿದ್ಧಾಂತಗಳಿಗೆ ಪ್ರತಿಕ್ರಿಯೆಯಾಗಿ ಬಂದ ಸಿದ್ಧಾಂತವಿದು(ಮಾರ್ಜಿನಲ್ ಪ್ರೊಡಕ್ಟಿವಿಟಿ ತಿಯೊರಿ). ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ, ಸಮಾನ ಕೌಶಲಸಾಮರ್ಥ್ಯಗಳಿರುವ ಪ್ರತಿಯೊಬ್ಬ ಕಾರ್ಮಿಕನಿಗೂ ಅವನ ಶ್ರಮದಿಂದ ಲಭ್ಯವಾಗುವ ಸೀಮಾಂತ ಉತ್ಪನ್ನದ ಮೌಲ್ಯಕ್ಕೆ ಸಮನಾಗಿ ಕೂಲಿ ನೆಲೆಗೊಳ್ಳುವುದೆಂಬುದು ಈ ಸಿದ್ಧಾಂತದ ಸಾರ. ಕೈಗಾರಿಕೋತ್ಪಾದನೆಯಲ್ಲಿ ನಿಯೋಜಿಸಲಾದ ಇತರ ಉತ್ಪಾದನಾಂಗಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದಿದ್ದು, ಕಾರ್ಮಿಕರ ಸಂಖ್ಯೆಯನ್ನು ಇನ್ನೊಬ್ಬನಿಂದ ಅಧಿಕಗೊಳಿಸಿದ್ದೇ ಆದರೆ ಒಟ್ಟು ಉತ್ಪತ್ತಿಯಲ್ಲಾಗುವ ಆಧಿಕ್ಯವೇ ಶ್ರಮದ ಸೀಮಾಂತ ಉತ್ಪನ್ನವೆನಿಸುತ್ತದೆ. ಸೀಮಾಂತ ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಯಾವ ಬೆಲೆಯಲ್ಲಿ ವಿಕ್ರಯಿಸಬಹುದೋ ಅದೇ ಶ್ರಮದ ಸೀಮಾಂತಮೌಲ್ಯ. ಕೊಟ್ಟಕೊನೆಯ ಕಾರ್ಮಿಕನನ್ನು ನೇಮಕ ಮಾಡಿಕೊಳ್ಳುವುದರಿಂದ ಲಭ್ಯವಾಗುವ ಉತ್ಪನ್ನಕ್ಕಿಂತ ಅವನಿಗೆ ಕೊಡುವ ಕೂಲಿಯ ವೆಚ್ಚ ಅಧಿಕವಾಗಿಲ್ಲದಿರುವವರೆಗೂ(ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ) ಕಾರ್ಮಿಕರನ್ನು ಉದ್ಯಮಿ ನೇಮಿಸಿಕೊಳ್ಳುತ್ತಲೇ ಇರುತ್ತಾನೆ. ಪ್ರತಿಯೊಂದು ಕೈಗಾರಿಕೆಯೂ ಒಂದಿಲ್ಲೊಂದು ಘಟ್ಟದಲ್ಲಿ ಇಳಿಮುಖ ಪ್ರತಿಫಲ ಸೂತ್ರಕ್ಕೆ ಒಳಗಾಗುವುದಾದ್ದರಿಂದ, ಶ್ರಮದ ಸೀಮಾಂತ ಉತ್ಪನ್ನವೂ ಇಳಿಮುಖವಾಗುವ ಘಟ್ಟ ಬಂದೇ ಬರುತ್ತದೆ. ಆ ಘಟ್ಟ ಬಂದ ಮೇಲೆ ಹೆಚ್ಚಿನ ಕಾರ್ಮಿಕರನ್ನು ನೇಮಿಸಿಕೊಳ್ಳುವುದನ್ನು ಉದ್ಯಮಿ ನಿಲ್ಲಿಸುತ್ತಾನೆ. ಆ ಘಟ್ಟದಲ್ಲಿ ಕಾರ್ಮಿಕನ ಉತ್ಪನ್ನದ ಮೌಲ್ಯವೂ ಅವನಿಗೆ ಕೊಡಲಾಗುವ ಕೂಲಿಯ ದರವೂ ಸಮವಾಗಿರುತ್ತವೆ.

ಒಂದು ಕೈಗಾರಿಕೆಯಲ್ಲಿ ಹೆಚ್ಚುಹೆಚ್ಚು ಕಾರ್ಮಿಕರನ್ನು ನೇಮಿಸಿಕೊಂಡಂತೆಲ್ಲ ಶ್ರಮದ ವೆಚ್ಚದ ಜೊತೆಗೆ ಇತರ ವೆಚ್ಚಗಳೂ ಅಧಿಕವಾಗಬಹುದೆಂಬುದನ್ನು ಗಮನಿಸಬೇಕು. ಆದ್ದರಿಂದ ಕಾರ್ಮಿಕನಿಗೆ ಕೊಡಬೇಕಾದ ಕೂಲಿ ದರದ ನಿಷ್ಕರ್ಷೆಯಾಗುವಾಗ ಇತರ ವೆಚ್ಚಗಳನ್ನೂ ಪರಿಗಣಿಸಬೇಕು. ಶ್ರಮದ ಒಂದೊಂದು ಘಟಕವನ್ನೂ ಅಧಿಕಾಧಿಕವಾಗಿ ನೇಮಿಸಿಕೊಂಡಾಗ ಲಭ್ಯವಾಗುವ ಉತ್ಪತ್ತಿಯ ಮೌಲ್ಯದಿಂದ ಅದರ ಉತ್ಪಾದನೆಗೆ ಮಾಡಲಾದ ಇತರ ವೆಚ್ಚಗಳನ್ನು ಕಳೆದರೆ ಉಳಿಯುವುದು ಶ್ರಮದ ಸೀಮಾಂತ ನಿವ್ವಳ ಉತ್ಪನ್ನ(ಮಾರ್ಜಿನಲ್ ನೆಟ್ ಪ್ರಾಡಕ್ಟ್). ಕಾರ್ಮಿಕರಿಗೆ ಕೊಡುವ ಕೂಲಿ ಇದಕ್ಕೆ ಸಮವಾಗಿರುತ್ತದೆ.

ಸೀಮಾಂತ ಉತ್ಪಾದಕತೆ ಸಿದ್ಧಾಂತ ತರ್ಕಬದ್ಧವಾಗಿದೆಯಾದರೂ ವಾಸ್ತವವಾಗಿ ಅನ್ವಯಿಸುವಾಗ ಇದರಲ್ಲಿ ಅನೇಕ ದೋಷಗಳು ಕಂಡುಬರುತ್ತವೆ. ಈ ಸಿದ್ಧಾಂತ ಅನ್ವಯವಾಗತಕ್ಕದ್ದು ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ. ಕಾರ್ಮಿಕರ ಪರಿಪೂರ್ಣ ಗತಿಶೀಲತೆ, ಎಲ್ಲ ದುಡಿಮೆಗಳ ಸಮಾನ ಗುಣಲಕ್ಷಣ, ಬಡ್ಡಿ ಬಾಡಿಗೆ ಬೆಲೆಗಳ ಸ್ಥಿರತೆ – ಇವೆಲ್ಲವೂ ಇದ್ದಾಗಲೇ ಈ ಸಿದ್ಧಾಂತದ ಅನ್ವಯ ಸಾಧ್ಯವಾಗುತ್ತದೆ. ಆದರೆ ಚಲನಾತ್ಮಕ ವ್ಯವಸ್ಥೆಯಲ್ಲಿ ಇಷ್ಟೆಲ್ಲ ಷರತ್ತುಗಳೂ ಪಾಲಿತವಾಗುವುವೆಂದು ನಿರೀಕ್ಷಿಸಲಾಗುವುದಿಲ್ಲ. ಇವೆಲ್ಲವೂ ಬದಲಾಗುತ್ತಿರುತ್ತವೆ. ಇವು ಎಷ್ಟರಮಟ್ಟಿಗೆ ಬದಲಾಗುವುವೋ ಅಷ್ಟರಮಟ್ಟಿಗೆ ಈ ಸಿದ್ಧಾಂತದ ಅನ್ವಯದಲ್ಲೂ ಓರೆಕೋರೆ ಅನಿವಾರ್ಯ. ಉದ್ಯಮಿಗಳೂ ಕಾರ್ಮಿಕರೂ ಸಂಘಟಿತರಾಗಿ, ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಗೆ ಪ್ರತಿಬಂಧಕವೊಡ್ಡುತ್ತಿರುತ್ತಾರೆ. ಕಾರ್ಮಿಕನ ಉತ್ಪಾದಕತೆಯ ಮೇಲೆ ಪ್ರಭಾವ ಬೀರುವ ಅಂಶಗಳು ಅನೇಕ ಉಂಟು. ಕೂಲಿಯ ವ್ಯತ್ಯಾಸದಿಂದ ಕಾರ್ಮಿಕರ ಸರಬರಾಯಿಯಲ್ಲಾಗುವ ವ್ಯತ್ಯಾಸಗಳನ್ನೂ ಈ ಸಿದ್ಧಾಂತ ಪರಿಗಣಿಸುವುದಿಲ್ಲ. ತತ್ಕಾಲದಲ್ಲಿ ಶ್ರಮದ ಸೀಮಾಂತ ಉತ್ಪಾದಕತೆಯೇ ಕೂಲಿಯನ್ನು ನಿರ್ಧರಿಸುವುದಾದರೂ ಉದ್ಯಮಿ ನೀಡುವ ಕೂಲಿಯ ಮಟ್ಟ ಕಾರ್ಮಿಕರ ಜೀವನಮಟ್ಟಕ್ಕಿಂತ ಕಡಿಮೆಯಿರಕೂಡದು. ಕಾರ್ಮಿಕ ಜೀವನಮಟ್ಟದ ದೃಷ್ಟಿಯಲ್ಲಿ, ದುಡಿಮೆಯ ಸರಬರಾಯಿಗೆ ಅನುಗುಣವಾಗಿ ನಿಶ್ಚಿತವಾಗುವ ಬೆಲೆಯೂ ಕಾರ್ಮಿಕನ ಸೀಮಾಂತ ಉತ್ಪಾದಕತೆಯೂ ಸಮವಾಗಿರುವ ಬಿಂದುವಿನಲ್ಲಿ ಕಾರ್ಮಿಕರ ಕೂಲಿಯ ಮಟ್ಟ ದೀರ್ಘಕಾಲದಲ್ಲಿ ನೆಲೆಗೊಳ್ಳುವ ಪ್ರವೃತ್ತಿ ಹೊಂದಿರುತ್ತದೆ.

**ಸೀಮಾಂತ ವಟಾಯಿತ ಉತ್ಪನ್ನ ಸಿದ್ಧಾಂತ :** ಸೀಮಾಂತ ಉತ್ಪಾದಕತೆ ಸಿದ್ಧಾಂತವನ್ನು ಅಮೆರಿಕನ್ ಅರ್ಥಶಾಸ್ತ್ರಜ್ಞ ಟೌಸಿಗ್(1859–1940) ಸ್ವಲ್ಪ ಬದಲಾವಣೆ ಮಾಡಿ ಹೊಸದೊಂದು ಸಿದ್ಧಾಂತವನ್ನು ರೂಪಿಸಿದ. ಇದು ಸೀಮಾಂತ ವಟಾಯಿತ ಉತ್ಪನ್ನ ಸಿದ್ಧಾಂತ(ಮಾರ್ಜಿನಲ್ ಡಿಸ್ಕೌಂಟೆಡ್ ಪ್ರಾಡಕ್ಟ್ ತಿಯೊರಿ). ಸೀಮಾಂತ ಉತ್ಪನ್ನದ ಮೌಲ್ಯಕ್ಕೆ ಸಮನಾಗಿ ಕಾರ್ಮಿಕನಿಗೆ ಕೂಲಿ ಲಭ್ಯವಾಗುವುದು ಸಾಧ್ಯವಿಲ್ಲವೆಂಬುದು ಅವನ ವಾದ. ಏಕೆಂದರೆ ಕೂಲಿ ಕೊಡುವುದು ಇಂದಾದರೆ ಉತ್ಪಾದನೆ ಕೊನೆಗೊಳ್ಳುವುದು ಭವಿಷ್ಯದಲ್ಲಿ. ಇಂದು ಕಾರ್ಮಿಕನಿಗೆ ಕೂಲಿ ಕೊಡಲು ಸಾಧ್ಯವಾಗಿರುವುದು ಬಂಡವಾಳಿಗ–ಉದ್ಯಮಿಯಿಂದಾಗಿ. ಅವನು ಕಾರ್ಮಿಕನಿಗೆ ದುಡಿಮೆಯಿಂದ ನಿರೀಕ್ಷಿಸಲಾದ ಸೀಮಾಂತ ಉತ್ಪನ್ನದ ಮೌಲ್ಯಕ್ಕೆ ಸಮನಾಗಿ ಕೂಲಿ ಕೊಡುವುದಿಲ್ಲ. ಭವಿಷ್ಯದಲ್ಲಿ ಲಭ್ಯವಾಗುವ ಉತ್ಪನ್ನಕ್ಕೆ ಮುಂಗಡವಾಗಿಯೇ ಅವನು ಕೂಲಿ ಕೊಡುವುದರಿಂದ ಆತ ನಷ್ಟಸಂಭವವನ್ನೆದುರಿಸಬೇಕಾಗುತ್ತದೆ. ಇದಕ್ಕಾಗಿ ಆತನಿಗೆ ಪರಿಹಾರ ಸಲ್ಲಬೇಕು. ಪ್ರಚಲಿತ ಬಡ್ಡಿಯ ದರದಲ್ಲಿ ತನಗೆ ಸಲ್ಲಬೇಕಾದ ಪರಿಹಾರವನ್ನು ಕಳೆದುಕೊಂಡು (ಕಟಾಯಿಸಿಕೊಂಡು) ಉಳಿದದ್ದನ್ನು ಆತ ಕಾರ್ಮಿಕನಿಗೆ ಪಾವತಿ ಮಾಡುತ್ತಾನೆ. ಸೀಮಾಂತ ಭೂಮಿ ಅಥವಾ ಸೀಮಾಂತ ಉದ್ಯಮದ ಒಟ್ಟು ಉತ್ಪನ್ನಮೌಲ್ಯದಿಂದ ಮೇಲೆ ಸೂಚಿಸಿದಂತೆ ವಟ್ಟದ ಹಣವನ್ನು ಕಳೆದರೆ ಉಳಿಯುವುದೇ ಕಾರ್ಮಿಕರಿಗೆ ಲಭ್ಯವಾಗುವ ಕೂಲಿ.

ಈ ಸಿದ್ಧಾಂತದ ದೌರ್ಬಲ್ಯವನ್ನು ಇತರರಿಗಿಂತ ಮುಂದಾಗಿ ಟೌಸಿಗನೇ ಕಂಡುಕೊಂಡು ಇದರ ಬಗ್ಗೆ ಬರಬಹುದಾದ ಟೀಕೆಗಳಿಗೆ ತಾನೇ ಉತ್ತರ ನೀಡಿದ್ದಾನೆ. ಈ ಸಿದ್ಧಾಂತ ಬಲು ಅಸ್ಫುಟ. ಅಮೂರ್ತ; ವಾಸ್ತವ ಜೀವನದಿಂದ ಬಲು ದೂರ–ಎನ್ನಬಹುದು. ಆದರೆ ಈ ಮಾತು ಈ ಸಿದ್ಧಾಂತಕ್ಕೆ ಮಾತ್ರ ಅನ್ವಯಿಸುವಂಥದಲ್ಲ. ಎಲ್ಲ ಸಿದ್ಧಾಂತಗಳನ್ನೂ ಹೀಗೆಂದು ಟೀಕಿಸಬಹುದು–ಎನ್ನುತ್ತಾನೆ, ಟೌಸಿಗ್. ಉತ್ಪನ್ನದ ಮೌಲ್ಯದಿಂದ ಪ್ರಚಲಿತ ಬಡ್ಡಿದರದಲ್ಲಿ ವಟ್ಟವನ್ನು ಕಳೆಯಬೇಕೆಂದು ಈ ಸಿದ್ಧಾಂತದಲ್ಲಿ ಹೇಳಲಾಗಿದೆ. ಆದರೆ ಇಂದು ಕಾರ್ಮಿಕರಿಗೆ ಕೂಲಿಯ ರೂಪದಲ್ಲಿ ಪಾವತಿಯಾಗುವುದಕ್ಕಿಂತ ಅಧಿಕವಾಗಿ

ಕಾರ್ಮಿಕರಿಂದ ಭವಿಷ್ಯದಲ್ಲಿ ಲಭ್ಯವಾಗುವ ಉತ್ಪಾದನೆಯನ್ನೇ ಇದು ಅವಲಂಬಿಸಿದೆಯೆಂದೂ ಹೇಳಲಾಗಿದೆ. ಇವೆರಡೂ ವಾಸ್ತವವಾಗಿ ಒಂದೇ. ಟೌಸಿಗನ ಸಿದ್ಧಾಂತ ಹೊಸದೇನೂ ಅಲ್ಲ. ಅದು ವಾಸ್ತವವಾಗಿ ಅವಶಿಷ್ಟ ದಾವೀಸಿದ್ಧಾಂತದ ಇನ್ನೊಂದು ರೂಪ. ಗೇಣಿ, ಬಡ್ಡಿ, ಲಾಭ ಇವನ್ನು ಕಳೆದಮೇಲೆ ಉಳಿಯುವುದೇ ಕೂಲಿ – ಎಂದೇ ಈ ಸಿದ್ಧಾಂತವೂ ಹೇಳುತ್ತದೆ.

**ಸಾಮೂಹಿಕ ಚೌಕಾಸಿ ಸಿದ್ಧಾಂತಗಳು :** ಇತ್ತೀಚೆಗೆ ಕೂಲಿ ನಿರ್ಣಯ ಪ್ರಬಲ ಕಾರ್ಮಿಕ ಸಂಘಗಳ ಹಾಗೂ ಉದ್ಯಮಿಗಳ ಸಂಘಗಳ ಮಧ್ಯೆ ನಡೆಯುವ ಚರ್ಚೆಯ ಮೂಲಕ ನಿರ್ಣಯವಾಗುತ್ತಿದೆ. ಈ ವಿಧಾನಕ್ಕೆ ಸಾಮೂಹಿಕ ಚೌಕಾಸಿ ಪ್ರಕ್ರಿಯೆ ಎಂದು ಕರೆಯುತ್ತಾರೆ. ಈ ನಿಟ್ಟಿನಲ್ಲಿ ರಚಿಸಲಾದ ಕೂಲಿ ಸಿದ್ಧಾಂತಗಳು ಸಾಮೂಹಿಕ ಚೌಕಾಸಿ ಸಿದ್ಧಾಂತಗಳು. ಇವುಗಳ ರಚನೆಯಲ್ಲಿ ವೆಬ್, ಕ್ಲಾರ್ಕ್, ಪಿಗು, ಮಾರಿಸ್ ದಾಬ್ ಮುಂತಾದ ಅರ್ಥಶಾಸ್ತ್ರಜ್ಞರು ಸಾಕಷ್ಟು ಶ್ರಮಿಸಿದ್ದಾರೆ. ಇವರ ಪ್ರಕಾರ ಕಾರ್ಮಿಕರ ಕೂಲಿ ಎರಡು ಮಟ್ಟಗಳ – ಮೇಲಿನ ಮಟ್ಟ ಮತ್ತು ಕೆಳಗಿನ ಮಟ್ಟಗಳ – ಮಧ್ಯೆ, ಕಾರ್ಮಿಕ ಸಂಘಗಳ ಹಾಗೂ ಉದ್ಯಮಿಗಳ ಪರಸ್ಪರ ಬಲಗಳಿಗೆ ಅನುಸಾರವಾಗಿ ನಿರ್ಣಯವಾಗುತ್ತದೆ. ಮೇಲಿನದು ಸಾಮಾನ್ಯವಾಗಿ ಕಾರ್ಮಿಕರ ಗರಿಷ್ಠ ಉತ್ಪಾದನ ಮಟ್ಟವಾಗಿಯೂ ಕೆಳಗಿನದು ಕಾರ್ಮಿಕರ ಜೀವನ ನಿರ್ವಾಹ ಮಟ್ಟವಾಗಿಯೂ ಇರುತ್ತದೆ. ಕಾರ್ಮಿಕರ ಕೂಲಿ ಅವರ ಉತ್ಪಾದನ ಮಟ್ಟವನ್ನು ಮೀರುವುದಿಲ್ಲ ಅಥವಾ ಜೀವನ ನಿರ್ವಾಹ ಮಟ್ಟಕ್ಕಿಂತ ಕೆಳಕ್ಕಿಳಿಯುವುದಿಲ್ಲ – ಎಂದು ಊಹಿಸಲಾಗಿದೆ. ಈ ಎರಡು ಮಟ್ಟಗಳ ಮಧ್ಯೆ, ಕಾರ್ಮಿಕ ಸಂಘಗಳು ಹೆಚ್ಚು ಬಲಯುತವಾಗಿದ್ದರೆ ಮೇಲಿನ ಮಟ್ಟದ ಹತ್ತಿರವೂ ಉದ್ಯಮಿಗಳ ಬಲ ಹೆಚ್ಚಾಗಿದ್ದರೆ ಕೆಳಗಿನ ಮಟ್ಟದ ಹತ್ತಿರವೂ ಕೂಲಿ ನೆಲೆಗೊಳ್ಳುವ ಪ್ರವೃತ್ತಿ ತೋರುತ್ತದೆ. ಸಾಮೂಹಿಕ ಚೌಕಾಸಿ ಸಿದ್ಧಾಂತಗಳು ಕೂಲಿಯ ನಿರ್ಣಯವನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ಸಂಘಗಳ ಪರಸ್ಪರ ಶಕ್ತಿಯೇ ಮುಖ್ಯ ನಿರ್ಣಾಯಕ ವಿಷಯವಾಗಿದ್ದರೆ ಈಗಿರುವುದಕ್ಕಿಂತ ಬಲು ಹೆಚ್ಚು ಕೂಲಿ ವ್ಯತ್ಯಾಸಗಳು ಕಾಣಬರುತ್ತಿದ್ದುವು. ಆದರೂ ಅನೇಕ ಚೌಕಾಸಿ ಮಾದರಿಗಳು ಕೆಲವು ಅರ್ಥಶಾಸ್ತ್ರಜ್ಞರಿಂದ ನಿರ್ಮಾಣವಾಗಿ ಕೂಲಿ ನಿರ್ಣಯವನ್ನು ವಿವರಿಸುವುದಕ್ಕೆ ಪ್ರಯತ್ನಪಟ್ಟಿವೆ. ಈ ಮಾದರಿಗಳೆಲ್ಲವೂ ಮಾನಸಿಕ ಅಂಶಗಳಿಗೆ ಹೆಚ್ಚು ಗಮನ ಕೊಟ್ಟು, ಕಾರ್ಮಿಕ ಸಂಘಗಳು ಮತ್ತು ಉದ್ಯಮಿಗಳ ಸಂಘಗಳು ಸಾಮೂಹಿಕ ಚೌಕಾಸಿ ವಿಧಾನಗಳಲ್ಲಿ ಹೇಗೆ ನಡೆದುಕೊಳ್ಳುತ್ತವೆಯೆಂಬುದನ್ನು ತೋರಿಸುತ್ತವೆ.

**ಇತ್ತೀಚಿನ ಬೆಳವಣಿಗೆಗಳು :** ಸಾಮೂಹಿಕ ಚೌಕಾಸಿ ಸಿದ್ಧಾಂತವನ್ನು ರಚಿಸುವಾಗ ಕೆಲವು ಅರ್ಥಶಾಸ್ತ್ರಜ್ಞರು ಆರ್ಥಿಕ ಅಂಶಗಳಿಗೂ ಮತ್ತೆ ಕೆಲವರು ಮಾನಸಿಕ ಅಂಶಗಳಿಗೂ ಗಮನ ಕೊಟ್ಟಿದ್ದಾರೆ. ಇತ್ತೀಚೆಗೆ ಸಾಂಸ್ಥಿಕ ಅಂಶಗಳಿಗೆ ಹೆಚ್ಚು ಪ್ರಾಧಾನ್ಯ ಸಂದಿದೆ. ಸಾಮೂಹಿಕ ಚೌಕಾಸಿ, ಪರಿನಿಯತ ನಿಬಂಧನೆ(ಸ್ಟ್ಯಾಚ್ಯುಟರಿ ರೆಗ್ಯುಲೇಷನ್) ನ್ಯಾಯ ಮಂಡಲಿಗಳ(ಟ್ರಿಬ್ಯೂನ್ಸ್) ತೀರ್ಪು– ಈ ಮೂರು ವಿಧಾನಗಳಿಂದ ಕೂಲಿಯ ನಿರ್ಣಯವಾಗುತ್ತದೆಯೆಂದು ಪರಿಗಣಿಸಲಾಗಿದೆ. ಈ ಮೂರು ವಿಧಾನಗಳಲ್ಲೂ ಕಾರ್ಮಿಕರ ಕೂಲಿ ಸ್ವಾಭಾವಿಕ ಮಾರುಕಟ್ಟೆಯ ಒತ್ತಡಗಳಿಂದ ನಿರ್ಣಯವಾಗದೆ ಸಾಮಾಜಿಕ ಸಾಂಸ್ಥಿಕ ಒತ್ತಡಗಳಿಂದ ನಿರ್ಣಯವಾಗುತ್ತದೆ. ಆಧುನಿಕ ಕೂಲಿ ನಿರ್ಣಯದಲ್ಲಿ ಸಾಮಾಜಿಕ ನ್ಯಾಯ ಬಹು ಮುಖ್ಯ ಪಾತ್ರವಹಿಸುತ್ತದೆ. ಕಾರ್ಮಿಕರ ಜೀವನಮಟ್ಟ, ಅವರ ಉತ್ಪಾದಕತೆ ಮತ್ತು ಸಮಾನ ವೇತನ ಇವುಗಳ ಆಧಾರದ ಮೇಲೆ ಕೂಲಿ ನಿರ್ಣಯವಾಗಲು ಕಾರ್ಮಿಕ ಸಂಘಗಳು ಒತ್ತಾಯಪಡಿಸುವ ಹಾಗೆ ಸರ್ಕಾರವೂ ನ್ಯಾಯಮಂಡಲಿಗಳೂ ಸಾಮಾಜಿಕ ನ್ಯಾಯದ ಆಧಾರದ ಮೇಲೆ, ಹೆಚ್ಚು ಉತ್ಪಾದಕತೆಯ ಪ್ರಯೋಜನಗಳು ಪ್ರತಿಯೊಬ್ಬ ಪ್ರಜೆಗೂ ಸಲ್ಲಬೇಕೆಂಬ ಆಧಾರದ ಮೇಲೆ ಕೂಲಿ ನಿರ್ಣಯಿಸಲು ಒತ್ತಾಯ ಹೇರುತ್ತವೆ.

(ಎಸ್.ಎನ್.ಎ.)

**ಬೇಡಿಕೆ ಮತ್ತು ಸರಬರಾಯಿ ಸಿದ್ಧಾಂತ :** ಶ್ರಮ ಒಂದು ಪದಾರ್ಥವೆಂದು ಪರಿಗಣಿಸುವುದಕ್ಕಾಗುವುದಿಲ್ಲ. ಪದಾರ್ಥಕ್ಕಿಲ್ಲದ ಕೆಲವು ವೈಶಿಷ್ಟ್ಯಗಳು ಶ್ರಮಕ್ಕುಂಟು. ಆದರೂ ಬೇಡಿಕೆ ಮತ್ತು ಸರಬರಾಯಿಗಳ ಬಲಗಳ ಪರಸ್ಪರ ಕ್ರಿಯೆಗಳ ಪರಿಣಾಮವಾಗಿ ಪದಾರ್ಥಗಳ ಬೆಲೆಯ ನಿಷ್ಕರ್ಷೆಯಾಗುವಂತೆ ಕೂಲಿಯ ನಿರ್ಣಯವೂ ಆಗುವುದೆಂದು ಪರಿಭಾವಿಸಿ, ಅವನ್ನು ಆಧರಿಸಿದ ಕೂಲಿ ಸಿದ್ಧಾಂತವೂ ರಚಿತವಾಗಿದೆ. ಒಂದು ಉದ್ಯಮದಿಂದ ಶ್ರಮಕ್ಕಾಗಿ ಬರುವ ಬೇಡಿಕೆ ಎರಡು ಅಂಶಗಳನ್ನವಲಂಬಿಸಿದೆ. ಶ್ರಮದ ಉತ್ಪಾದಕತೆ ಒಂದು ಅಂಶ, ಉದ್ಯಮದ ಉತ್ಪನ್ನಕ್ಕೆ ಹಣದ ರೂಪದಲ್ಲಿ ವ್ಯಕ್ತವಾಗುವ ಬೇಡಿಕೆ ಇನ್ನೊಂದು ಅಂಶ. ಉತ್ಪಾದಿತ ಪದಾರ್ಥಕ್ಕೆ ಅನುಭೋಗಿಗಳಿಂದ ಬರುವ ಬೇಡಿಕೆಗೆ ಅನುಗುಣವಾಗಿ ಉತ್ಪಾದಕರಿಂದ ಕಾರ್ಮಿಕರಿಗಾಗಿ ಬೇಡಿಕೆ ಇರುತ್ತದೆ. ಉದ್ಯಮದ ಉತ್ಪತ್ತಿಗೆ ಬೇಡಿಕೆಯಲ್ಲಿ ಪುಟಿತತೆಯಿದ್ದರೆ ಕಾರ್ಮಿಕನ ಬೇಡಿಕೆಯಲ್ಲೂ ಪುಟಿತತೆ ಇರುತ್ತದೆ. ಉತ್ಪಾದಿತ ಸರಕಿನ ಮೌಲ್ಯದಲ್ಲಿ ಕೂಲಿಯ ಅಂಶ ಬಹು ಅಲ್ಪವಾಗಿದ್ದ ಪಕ್ಷದಲ್ಲಿ ಕೂಲಿ ಅಪುಟಿತವಾಗಿರುತ್ತದೆ. ಉತ್ಪಾದನೆಯಲ್ಲಿ ಸಹಕರಿಸುವ ಅಂಶಗಳನ್ನೂ ಶ್ರಮದ ಬೇಡಿಕೆ ಅವಲಂಬಿಸಿರುವುದುಂಟು. ಸಹಕಾರಿ ಅಂಶಗಳ ಬೆಲೆ ಅಧಿಕವಾಗಿದ್ದಾಗ ಆ ಅಂಶಗಳ ಬದಲು ಕಾರ್ಮಿಕರನ್ನು ಹೆಚ್ಚಾಗಿ ನೇಮಿಸಿಕೊಳ್ಳುವ ಪ್ರವೃತ್ತಿ ಕಂಡುಬರುತ್ತದೆ. ಉದಾಹರಣೆಗೆ, ಯಂತ್ರದ ಬೆಲೆ ತುಟ್ಟಿಯಾಗಿದ್ದಾಗ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗುತ್ತದೆ. ತಾಂತ್ರಿಕ ಪರಿಸ್ಥಿತಿ, ಉತ್ಪಾದನೆಯ ಸಹಕಾರಿ ಅಂಶಗಳ ಬೆಲೆಗಳು, ಉತ್ಪನ್ನಕ್ಕೆ ಬೇಡಿಕೆ – ಇವೆಲ್ಲ ಕಾರ್ಮಿಕನ ಬೇಡಿಕೆಯನ್ನು ನಿರ್ಣಯಿಸುವ ಅಂಶಗಳು. ಇವುಗಳ ಜೊತೆಗೆ – ಇವುಗಳನ್ನೂ ಆಧರಿಸಿದ – ಶ್ರಮದ ಸೀಮಾಂತ ಉತ್ಪಾದಕತೆಯೂ ಪರಿಗಣಿಸಬೇಕಾದ ಒಂದು ಮುಖ್ಯ ಅಂಶ. ಇದಕ್ಕನುಗುಣವಾಗಿ ಉದ್ಯಮಿಯಿಂದ ಕಾರ್ಮಿಕನಿಗೆ ಬೇಡಿಕೆ ಬರುತ್ತದೆ. ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಕೂಲಿಯ ನಿರ್ಧಾರವಾಗುವುದು ಮಾರುಕಟ್ಟೆಯ ಬಲಗಳಿಂದ. ಯಾವೊಬ್ಬ ಉದ್ಯಮಿಯ ತೀರ್ಮಾನಗಳಿಂದಲೇ ಆಗಲಿ ಕೂಲಿಯ ಮಟ್ಟ ಬದಲಾಗುವುದಿಲ್ಲ.

ಕೂಲಿಯ ನಾನಾ ದರಗಳಲ್ಲಿ ಯಾವುದೇ ಪ್ರರೂಪದ ಶ್ರಮವನ್ನೊದಗಿಸಲು ಸಿದ್ಧವಾಗಿರುವ ಕಾರ್ಮಿಕರ ಒಟ್ಟು ಸಂಖ್ಯೆಯೇ ಶ್ರಮದ ಸರಬರಾಯಿ. ಇದನ್ನು ಮೂರು ದೃಷ್ಟಿಗಳಿಂದ ನೋಡಬಹುದು. ಒಂದು ಉದ್ಯಮಸಂಸ್ಥೆಯ ದೃಷ್ಟಿಯಲ್ಲಿ ಶ್ರಮದ ಸರಬರಾಯಿಗೆ ಪುಟಿತತೆ ಇರುತ್ತದೆ. ಅದು ಎಷ್ಟು ಕಾರ್ಮಿಕರನ್ನು ಬೇಕಾದರೂ ನೇಮಿಸಿಕೊಳ್ಳಬಹುದು. ಕಾರ್ಮಿಕರ ಒಟ್ಟು ಸರಬರಾಯಿಯಲ್ಲಿ ಕೇವಲ ಒಂದು ಸಂಸ್ಥೆಯ ಬೇಡಿಕೆ ಯಃಕಶ್ಚಿತ. ಒಂದು ಕೈಗಾರಿಕೆಯ ದೃಷ್ಟಿಯಲ್ಲಿ ಸರಬರಾಯಿಯ ಪುಟಿತತೆ ಅಮಿತವಲ್ಲ. ಆದ್ದರಿಂದ ಅದು ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಳ್ಳಬೇಕಾದರೆ ಹೆಚ್ಚು ಕೂಲಿ ನೀಡಿ ಇತರ ಕೈಗಾರಿಕೆಗಳಿಂದ ಅವರನ್ನು ಆಕರ್ಷಿಸಬೇಕು. ಹೆಚ್ಚು ಕೂಲಿಗೆ ಹೆಚ್ಚು ಸರಬರಾಯಿ; ಕಡಿಮೆ ಕೂಲಿಗೆ ಕಡಿಮೆ ಸರಬರಾಯಿ – ಎಂಬುದು ಅನ್ವಯವಾಗುವ ತತ್ತ್ವ. ಯಾವುದೇ ಉದ್ಯೋಗದಲ್ಲಿ ದೀರ್ಘಕಾಲದಲ್ಲಿ ಕಾರ್ಮಿಕರ ಸರಬರಾಯಿ ರೇಖೆ ಒಂದು ಸರಳರೇಖೆಯಾಗಿರುತ್ತದೆ. ಇಡೀ ಅರ್ಥವ್ಯವಸ್ಥೆಯ ದೃಷ್ಟಿಯಲ್ಲಿ ಕಾರ್ಮಿಕರ ಸರಬರಾಯಿಯನ್ನು ನಿರ್ಣಯಿಸುವ ಅಂಶಗಳು ಅನೇಕ. ಅವು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಥಿಕ ಅಂಶಗಳು.

ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಶ್ರಮದ ಸರಬರಾಯಿ ನಾನಾ ಉದ್ಯೋಗಗಳಲ್ಲಿ ಹಂಚಿಹೋಗಿರುತ್ತದೆ; ಎಲ್ಲ ಉದ್ಯೋಗಗಳಲ್ಲೂ ಶ್ರಮದ ಸೀಮಾಂತ ಉತ್ಪಾದಕತೆ ಒಂದೇ ಆಗಿರುತ್ತದೆ. ಆದರೆ ಕಾರ್ಮಿಕರು ಒಂದು ಉದ್ಯೋಗದಿಂದ ಇನ್ನೊಂದು ಉದ್ಯೋಗಕ್ಕೆ ಸುಲಭವಾಗಿ ಚಲಿಸದಿದ್ದರೆ ಆಗ ಬೇರೆಬೇರೆ ಉದ್ಯೋಗಗಳಲ್ಲಿ ಬೇರೆಬೇರೆ ಸೀಮಾಂತ ಉತ್ಪಾದಕತೆಗಳಿರುತ್ತವೆ. ಕಾರ್ಮಿಕರು ಸಂಘಗಳನ್ನು ರಚಿಸಿಕೊಂಡು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಮುಷ್ಕರ ಹೂಡಿದರೆ, ಕೆಲಸ ಮಾಡಲು ನಿರಾಕರಿಸಿದರೆ, ಆಗ ಕಾರ್ಮಿಕರ ಸರಬರಾಯಿ ಕಡಿಮೆಯಾಗಬಹುದು. ಕಾರ್ಮಿಕರು ತಮಗೆ ಒಗ್ಗಿರುವ ಜೀವನಮಟ್ಟಕ್ಕಿಂತ ಕಡಿಮೆಯ ಕೂಲಿಯನ್ನೊಪ್ಪಿಕೊಳ್ಳದಿರಬಹುದು. ಆದರೆ ಸೀಮಾಂತ ಉತ್ಪಾದಕತೆಗಿಂತ ಹೆಚ್ಚು ಕೂಲಿ ಬೇಡುವುದೂ ಕಷ್ಟವಾಗಬಹುದು. ಕಾರ್ಮಿಕರಿಗೆ ಹೆಚ್ಚಿನ ಧಾರಣ ಶಕ್ತಿ ಇಲ್ಲದಾಗ, ಕೆಲಸವಿಲ್ಲದಿದ್ದರೆ ಅವರು ಉಪವಾಸ ಮಾಡಬೇಕಾದ್ದು ಅನಿವಾರ್ಯವೆನಿಸಿದಾಗ, ಕಾರ್ಮಿಕರ ಸರಬರಾಯಿ ಅಪುಟಿತವಾಗಿರುತ್ತದೆ. ಒಂದು ಕನಿಷ್ಠ ಮಟ್ಟಕ್ಕಿಂತ ಕೂಲಿ ಕಡಿಮೆಯಾದಾಗ ಕಾರ್ಮಿಕರು ಕೆಲಸ ಮಾಡಲು ನಿರಾಕರಿಸಬಹುದು. ಕನಿಷ್ಠ ಮಿತಿಗಿಂತ ಹೆಚ್ಚಿನ ಕೂಲಿ ನೀಡಿದಾಗ ಅವರ ಸರಬರಾಯಿ ಅಧಿಕವಾಗುತ್ತದೆ. ಆದರೆ ಇದು ಒಂದು ಘಟ್ಟದವರೆಗೆ ಮಾತ್ರ. ಜೀವನದ ಒಂದು ಮಟ್ಟದ ಕೂಲಿ ದೊರಕಿದ ಮೇಲೆ ಕಾರ್ಮಿಕರು ಹೆಚ್ಚು ದುಡಿಮೆಗಿಂತ ವಿರಾಮಕ್ಕೇ ಹೆಚ್ಚಿನ ಪ್ರಾಶಸ್ತ್ಯ ನೀಡಬಹುದು. ಹೀಗೆ ಹೆಚ್ಚು ಕೂಲಿಯಿಂದ ಶ್ರಮದ ಸರಬರಾಯಿ ಅಧಿಕವಾಗಬಹುದೆಂಬಂತೆಯೇ ಕೆಲವು ಸಂದರ್ಭಗಳಲ್ಲಿ ಕಡಿಮೆಯಾಗುವ ಸಂಭವವೂ ಉಂಟು. ವಿವಿಧ ಕೂಲಿಗಳಲ್ಲಿ ಕೆಲಸ ಮಾಡಲು ಇಚ್ಛೆಯನ್ನೂ ಶಕ್ತಿಯನ್ನೂ ಹೊಂದಿರುವ ಕಾರ್ಮಿಕರ ಸಂಖ್ಯೆ, ಪ್ರತಿಯೊಬ್ಬ ಕಾರ್ಮಿಕನೂ ದುಡಿಯಬಯಸುವ ಮತ್ತು ದುಡಿಯಲು ಶಕ್ತನಾಗಿರುವ ಗಂಟೆಗಳ ಸಂಖ್ಯೆ – ಇವುಗಳ ಮೇಲಿಂದ ಶ್ರಮದ ಸರಬರಾಯಿಯನ್ನು ಅಳೆಯಬಹುದಾಗಿದೆ.




ಚಿತ್ರ 1 ಚಿತ್ರ 2

ಶ್ರಮದ ಬೇಡಿಕೆ ಮತ್ತು ಸರಬರಾಯಿಗಳ ಪರಸ್ಪರ ಕ್ರಿಯೆಗಳಿಂದ ಕೂಲಿಯ ಮಟ್ಟ ಹೇಗೆ ನಿರ್ಧಾರವಾಗುವುದೆಂಬುದನ್ನು ಚಿತ್ರ 1 ಮತ್ತು 2 ರಲ್ಲಿ ತೋರಿಸಿದೆ: 1ನೆಯ ಚಿತ್ರ ಒಂದು ಕೈಗಾರಿಕೆಗೂ 2ನೆಯದು ಒಂದು ಉದ್ಯಮಸಂಸ್ಥೆಗೂ ಸಂಬಂಧಿಸಿವೆ.

ಚಿತ್ರ 1 ರಲ್ಲಿ SS ಎಂಬುದು ಕೈಗಾರಿಕೆಯಲ್ಲಿ ಶ್ರಮದ ಸರಬರಾಯಿ ರೇಖೆ. DD ಎಂಬುದು ಬೇಡಿಕೆ ರೇಖೆ. SS ಮತ್ತು DD ಗಳು Eಯಲ್ಲಿ ಛೇದಿಸುತ್ತವೆ. OW(NE) ಎಂಬುದು ಕೂಲಿಯ ಮಟ್ಟ. ಒಂದು ಉದ್ಯಮ ಸಂಸ್ಥೆಗೆ ಸಂಬಂಧಿಸಿದಂತೆ ಇದರ ಅನ್ವಯ ಹೇಗಾಗುವುದೆಂಬುದನ್ನು 2ನೆಯ ಚಿತ್ರದಲ್ಲಿ ತೋರಿಸಿದೆ. ಮಾರುಕಟ್ಟೆಯಲ್ಲಿ ನಿರ್ಧಾರವಾದ ಕೂಲಿಯ ಮಟ್ಟವಾದ OWನ್ನು ಉದ್ಯಮ ಸಂಸ್ಥೆ ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ 1ನೆಯ ಚಿತ್ರದ WE ರೇಖೆಯನ್ನೇ 2ನೆಯ ಚಿತ್ರಕ್ಕೂ ವಿಸ್ತರಿಸಬೇಕು. ಸಂಸ್ಥೆಯ ಸೀಮಾಂತ ಹುಟ್ಟುವಳಿ ಉತ್ಪಾದಕತೆ ರೇಖೆಯನ್ನು (MRP) $E^1$ಯಲ್ಲಿ ರೇಖೆ WW ಛೇದಿಸುತ್ತದೆ. ಎಂದರೆ $ME^1$(OW; NE) ಎಂಬುದು ಉದ್ಯಮ ಸಂಸ್ಥೆ ಕೊಡಬೇಕಾದ ಕೂಲಿ. ಇದು ಮಾರುಕಟ್ಟೆಯಿಂದ ನಿಶ್ಚಿತವಾದ ಕೂಲಿ. ಈ ಉದ್ಯಮ ಸಂಸ್ಥೆಯೂ ಇದರಂತೆ ಈ ಕೈಗಾರಿಕೆಯ ಎಲ್ಲ ಉದ್ಯಮ ಸಂಸ್ಥೆಗಳೂ ಈ ಕೂಲಿಯನ್ನು ಕೊಡಬೇಕು. ಈ ಘಟ್ಟದಲ್ಲಿ ಪ್ರತಿಯೊಂದು ಉದ್ಯಮ ಸಂಸ್ಥೆಯ ಸರಾಸರಿ ಹುಟ್ಟುವಳಿ ಉತ್ಪಾದಕತೆಯೂ MR ಆಗಿರುತ್ತದೆ. ಎಂದರೆ ಪ್ರತಿಯೊಂದು ಸಂಸ್ಥೆಯೂ ಅದುಕೊಡುವ ($ME^1$) ಕೂಲಿಗಿಂತ $E^1R$ ನಷ್ಟು ಹೆಚ್ಚು ಲಾಭವನ್ನು– ಅತೀತ ಪ್ರಸಾಮಾನ್ಯ ಲಾಭವನ್ನು (ಸೂಪರ್ ನಾರ್ಮಲ್ ಪ್ರಾಫಿಟ್ಸ್) – ಸಂಪಾದಿಸುತ್ತದೆ. ಇದರಿಂದ ಆಕರ್ಷಿತವಾಗಿ ಹೊಸ ಸಂಸ್ಥೆಗಳು ಈ ಕೈಗಾರಿಕೆಯನ್ನು ಪ್ರವೇಶಿಸುತ್ತವೆ. ಕಾರ್ಮಿಕರಿಗೆ ಬೇಡಿಕೆ ಹೆಚ್ಚುತ್ತದೆ. ಕೂಲಿಯ ಮಟ್ಟ ಏರುತ್ತದೆ. ಅತೀತ ಪ್ರಸಾಮಾನ್ಯ ಲಾಭ ದೀರ್ಘಕಾಲದಲ್ಲಿ ಅದೃಶ್ಯವಾಗುವುದು ಅನಿವಾರ್ಯ. ಕೈಗಾರಿಕೆಯಲ್ಲಿ ಶ್ರಮಕ್ಕಾಗಿ ಬೇಡಿಕೆ $D^1D^1$ ಗೆ ಬದಲಾಗಿರುತ್ತದೆ. (ಚಿತ್ರ 1) ಇದರಿಂದಾಗಿ ಕೈಗಾರಿಕೆಯ ಸಮತೋಲ ಸ್ಥಾಪಿತವಾಗುವುದು Fನಲ್ಲಿ. ಈ ಮಟ್ಟದಲ್ಲಿ ಸರಾಸರಿ ಉತ್ಪಾದಕತೆಯೂ (ARP), ಸೀಮಾಂತ ಉತ್ಪಾದಕತೆಯೂ (MRP) ಸಮವಾಗಿರುತ್ತವೆ. (ಚಿತ್ರ 2). ಕೂಲಿಯ ಮಟ್ಟ $OW^1$.

ಅತೀತ ಪ್ರಸಾಮಾನ್ಯ ಲಾಭದ ಪರಿಣಾಮವಾಗಿ ಹೊಸ ಸಂಸ್ಥೆಗಳು ಕೈಗಾರಿಕೆಯನ್ನು ಪ್ರವೇಶಿಸುವುದೆಂದು ಹೇಳಲಾಯಿತಷ್ಟೆ. ARP ಯೂ MRP ಯೂ ಸಮವಾಗಿ ಪರಿಣಮಿಸುವ ಬಿಂದುವಿಗೆ ಸರಿಯಾಗಿ ಅವುಗಳ ಆಗಮನ ನಿಲ್ಲದಿರಬಹುದು. ಅಗತ್ಯಕ್ಕಿಂತ




ಚಿತ್ರ 3

ಹೆಚ್ಚು ಸಂಸ್ಥೆಗಳು ಬರಬಹುದು. ಆಗ ಕಾರ್ಮಿಕರಿಗಾಗಿ ಬೇಡಿಕೆ $D^1D^1$ ಗಿಂತ ಅಧಿಕವಾಗಬಹುದು; $D^{11} D^{11}$ ಆಗಬಹುದು (ಚಿತ್ರ 1). ಆಗ ಕೂಲಿಯ ಮಟ್ಟ $OW^{11}$. ಈ ಘಟ್ಟದಲ್ಲಿ ಸಂಸ್ಥೆಗಳು ನಷ್ಟ ಅನುಭವಿಸುತ್ತವೆ. ತತ್ಫಲವಾಗಿ ಕೆಲವು ಸಂಸ್ಥೆಗಳು ಈ ಕೈಗಾರಿಕೆಯಿಂದ ನಿರ್ಗಮಿಸುತ್ತವೆ. ಕೂಲಿ $OW^1$ಗೆ ಹಿಂದಿರುಗುತ್ತದೆ. ಇದು ಸಮತೋಲ ಸ್ಥಿತಿ.

ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ದೀರ್ಘ ಕಾಲದಲ್ಲಿ ಶ್ರಮದ ಸೀಮಾಂತ ಮತ್ತು ಸರಾಸರಿ ಉತ್ಪಾದಕತೆಗೆ ಅದರ ಕೂಲಿ ಸಮವಾಗಿರುತ್ತದೆ. ಚಿತ್ರ 3ರಲ್ಲಿ ತೋರಿಸಿರುವಂತೆ ಸೀಮಾಂತ ಉತ್ಪಾದಕತೆ ರೇಖೆ(MP) ಮತ್ತು ಸರಾಸರಿ ಉತ್ಪಾದಕತೆ ರೇಖೆ(AP) ಇವು ಛೇದಿಸುವಲ್ಲಿ(P) ಕೂಲಿಯ ಮಟ್ಟ ಸ್ಥಾಪಿತವಾಗುತ್ತದೆ.

**AP ಏರುಗಡೆಯಲ್ಲಿರುವಾಗ:** MP>AP. AP ಇಳಿಗಡೆಯಲ್ಲಿರುವಾಗ MP<AP. ಸಮತೋಲಸ್ಥಿತಿಯಲ್ಲಿ (P) : MP=AP. *

**ಕೂವೆ ಮರ :** ಗಟ್ಟಿಫೆರೀ ಅಥವಾ ಕ್ಲೂಸಿಯೇಸೀ ಕುಟುಂಬಕ್ಕೆ ಸೇರಿದ ಕ್ಯಾಲೊಫಿಲಂ ಏಲೇಟಂ ಎಂಬ ಶಾಸ್ತ್ರೀಯ ಹೆಸರಿನ ಮರ. ಕ್ಯಾಲೊಫಿಲಂ ಟೊಮೆಂಟೋಸಂ ಇದರ ಪರ್ಯಾಯ ನಾಮ. ಇದರ ಕಾಂಡವನ್ನು ಹಡಗಿನ ಪಟವನ್ನು ಕಟ್ಟಲು ಸ್ತಂಭ ಅಥವಾ ಕೂವೆಯಾಗಿಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ.

ಭಾರತ ಮತ್ತು ಶ್ರೀಲಂಕಗಳ ಮೂಲವಾಸಿಯಾದ ಇದು ಹೆಚ್ಚು ಮಳೆ ಬೀಳುವ ಮಲೆನಾಡು ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಭಾರತದ ಪಶ್ಚಿಮ ಘಟ್ಟಗಳಲ್ಲಿ 000′ – 5000′ ಎತ್ತರದ ನಿತ್ಯಹರಿದ್ವರ್ಣದ ಕಾಡುಗಳಲ್ಲಿದು ಹೇರಳ.

ಬೃಹದ್ ಗಾತ್ರಕ್ಕೆ ಬೆಳೆಯುವ ಈ ಮರದಲ್ಲಿ 150′ – 160′ ಎತ್ತರಕ್ಕೆ ನೇರವಾಗಿ ಕಂಬದಂತೆ ಬೆಳೆಯುವ ಅಚ್ಚುಕಟ್ಟಾದ ಕಾಂಡವಿದೆ. ಕಾಂಡದ ಸುತ್ತಳತೆ ಸುಮಾರು 15′. ಮರದ ತೊಗಟೆ ಉದ್ದುದ್ದವಾಗಿ ಸೀಳಿದೆ. ತೊಗಟೆಯ ಬಣ್ಣ ಹಳದಿ. ಸೀಳಿರುವ ತೊಗಟೆಯಿಂದ ಮರವನ್ನು ಸುಲಭವಾಗಿ ಗುರುತಿಸಬಹುದು. ಮರ ಬಲುಗಟ್ಟಿ. ಮರದ ತುದಿಯಲ್ಲಿ ಮಾತ್ರ ರೆಂಬೆಗಳಿರುವುದು ಈ ಮರದ ವೈಶಿಷ್ಟ್ಯ. ಕೂವೆ ಮರದ ಎಲೆಗಳು ಸರಳ ಮಾದರಿಯವು; ಅಭಿಮುಖವಾಗಿ ಜೋಡಣೆಗೊಂಡಿವೆ. ಹೂಗಳು ರೆಂಬೆಗಳ ತುದಿಯಲ್ಲಿಯ ಇಲ್ಲವೆ ಎಲೆಗಳ ಕಂಕುಳಲ್ಲಿಯ ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗಳು ಏಕಲಿಂಗಿಗಳಾಗಿರಬಹುದು ಇಲ್ಲವೆ ದ್ವಿಲಿಂಗಿಗಳಾಗಿರಬಹುದು. ಎರಡು ಬಗೆಯವೂ ಒಂದೇ ಮರದಲ್ಲಿರುತ್ತವೆ. ಪುಷ್ಪಪತ್ರಗಳು 4. ದಳಗಳು 4. ಕೇಸರಗಳು ಅಸಂಖ್ಯಾತವಾಗಿವೆ. ಉಚ್ಚಸ್ಥಾನದ ಅಂಡಾಶಯವಿದೆ. ಇದರ ಅಂಡಕೋಶದಲ್ಲಿ ಒಂದೇ ಕೋಣೆಯಿದ್ದು ಒಳಗೆ ಒಂದೇ ಅಂಡಕವಿದೆ. ಕಾಯಿ ಅಷ್ಠಿಫಲ ಮಾದರಿಯದು.

ಕೂವೆ ಮರದ ಚೌಬೀನೆ ನಸುಗೆಂಪುಬಣ್ಣದ್ದಾಗಿದ್ದು ಗಂಟುಗಳಿಲ್ಲದೆ ನಯವಾಗಿರುವುದರಿಂದ ಗೃಹನಿರ್ಮಾಣದ ಕೆಲಸಗಳಿಗೆ ಪೀಠೋಪಕರಣಗಳಿಗೆ ಬಹಳ ಉತ್ತಮವಾದ ಮರ ಎನಿಸಿದೆ. ಇದರ ಎಳೆಗಳು ಅಡ್ಡಡ್ಡವಾಗಿ ಹೆಣೆದುಕೊಂಡಿರುವುದರಿಂದ ಇದು ಬಲು ಗಟ್ಟಿಯಾಗಿದೆ. ಅಲ್ಲದೆ ಇದಕ್ಕೆ ಚೆನ್ನಾಗಿ ಹೊಳಪು ಕೊಡಬಹುದು. ಚೌಬೀನೆಯನ್ನು ಹದಕ್ಕೆ ತರಲು ಇದರ ದಿಮ್ಮಿಗಳನ್ನು ಕಡಿಮೆ ಉಷ್ಣತೆಯಲ್ಲಿ ಸಂಸ್ಕರಿಸುತ್ತಾರೆ. ಕೆಲವು ವೇಳೆ ನೀರಿನಲ್ಲಿ ನೆನೆಹಾಕಿ ಮರವನ್ನು ಮತ್ತಷ್ಟು ಗಟ್ಟಿಮಾಡಿ, ಚೇಗುಮರ ಬಿರುಕು ಬಿಡದಂತೆ ತಡೆಗಟ್ಟಬಹುದಾಗಿದೆ.

ಕಾಂಡ ಉದ್ದವಾಗಿಯೂ ಇರುವುದರಿಂದ ಹಡಗುಗಳ ಪಟಗಳ ಆಧಾರಕ್ಕಾಗಿ ಬಳಸುವ ದೂಲ ಅಥವಾ ಪಟಸ್ತಂಭವಾಗಿ ಕೂವೆ ಮರವನ್ನು ಯಥಾವತ್ ಉಪಯೋಗಿಸಲಾಗುತ್ತದೆ. ಅನೇಕ ಶತಮಾನಗಳ ಹಿಂದೆ ರೋಮನರು ಭಾರತಕ್ಕೆ ಬಂದು ಕೂವೆಮರಗಳನ್ನು ಕಡಿದು ಹಡಗುಗಳನ್ನು ಕಟ್ಟಲು ಕೊಂಡೊಯ್ಯುತ್ತಿದ್ದರು. ವಿದ್ಯುತ್ ಕಂಬಗಳಾಗಿಯೂ ಗುಡಾರದ (ಡೇರೆಯ) ಆಧಾರಸ್ತಂಭಗಳಾಗಿಯೂ ಕೂವೆ ಮರದ ಬಳಕೆ ಇದೆ. ಚಾವಣಿಗಳಿಗೆ ತೊಲೆಯಾಗಿ, ಯುದ್ಧದಲ್ಲಿ ಗುರಾಣಿಯಾಗಿ, ಗಣಿತವಿಜ್ಞಾನದಲ್ಲಿ ಬಳಕೆಯಾಗಿ ಇದು ರಾರಾಜಿಸಿದೆ. ಬ್ರಿಟಿಷರ ಕಾಲದಲ್ಲಿ ಕೂವೆ ಮರದಿಂದ ಕಟ್ಟಿದ ಸಣ್ಣಸಣ್ಣ ಸೇತುವೆಗಳು ಈಗಲೂ ಭಾರತದ ಪೂರ್ವ ಮತ್ತು ಪಶ್ಚಿಮಘಟ್ಟಗಳಲ್ಲಿ ಭದ್ರವಾಗಿವೆ. ವಿಮಾನದ ಮರದ ಭಾಗಗಳಿಗೂ ಇದು ಸೂಕ್ತವೆನಿಸಿದೆ. ಕೂವೆ ಮರದಿಂದ ಅನೇಕ ಆದಿವಾಸಿಗಳು, ಕಾಡು ಜನರು ಮಡಕೆಗಳನ್ನು ಮಾಡಿಕೊಂಡಿದ್ದರೆಂಬುದೂ ಬೆಳಕಿಗೆ ಬಂದಿದೆ. ಅಲ್ಲದೆ, ಕೂವೆ ಮರದ ಕಾಂಡದಲ್ಲಿ ದೊಡ್ಡದಾದ ಸ್ರಾವ ಕಾಲುವೆಗಳಲ್ಲಿ ಹರಿಯುವ ದ್ರವದಿಂದ ಅಂಟು ಪದಾರ್ಥಗಳನ್ನು ಪಡೆಯಲಾಗುತ್ತದೆ. ಕೂವೆಬೀಜದೊಳಗಿರುವ ಭ್ರೂಣ ದೊಡ್ಡದಾಗಿದ್ದು ಅದರಲ್ಲಿ ಶೇ.70ರಷ್ಟು ಕೆಂಪುವರ್ಣದ ಎಣ್ಣೆ ಇದೆ. ಕೂವೆ ಎಣ್ಣೆ ಎನ್ನಲಾಗುವ ಇದನ್ನು ದೀಪದ ಬುಡ್ಡಿಗಳನ್ನು ಉರಿಸಲು ಬಳಸಲಾಗುತ್ತದೆ. ಬೀಜ ವಿಷಪೂರಿತವೆಂದು ಹೇಳಲಾಗಿದೆ.

(ವಿ.ಬಿ.)

**ಕೂಸುಗಳ ದಂತವಿಜ್ಞಾನ :** ಮಕ್ಕಳ ಹಲ್ಲು ಮತ್ತು ವಸಡನ್ನು ಕುರಿತ ಅಧ್ಯಯನ ಮತ್ತು ಅವುಗಳಿಗೆ ಸಂಬಂಧಪಟ್ಟ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ವೈದ್ಯವಿಭಾಗ (ಪಿಡೋಡಾಂಟಿಕ್ಸ್), ಬಾಲ್ಯದಂತವಿಜ್ಞಾನವೆಂದು ಸಹ ಕರೆಯುತ್ತಾರೆ. ಮಕ್ಕಳು ತಮ್ಮ ಹಲ್ಲುಗಳ ಬೆಳವಣಿಗೆಯ ವಿವಿಧ ಹಂತಗಳಲ್ಲಿ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಪರಿಪೂರ್ಣತೆಯನ್ನು ಹೊಂದಿ, ದೃಢವಾದ ಮತ್ತು ಆರೋಗ್ಯದಿಂದ ಕೂಡಿದ ಶಾಶ್ವತ ಹಲ್ಲುಗಳನ್ನು ಪಡೆಯುವಂತೆ ಮಾಡುವುದು ಇದರ ಮುಖ್ಯ ಧ್ಯೇಯ. ಮಕ್ಕಳ ಹಲ್ಲು ಮತ್ತು ವಸಡಿಗೆ ಸಂಬಂಧಪಟ್ಟ ಕಾಯಿಲೆಗಳಿಗೆ ಚಿಕಿತ್ಸೆಯನ್ನು ನೀಡಲು ಅವರ ದೈಹಿಕ, ಮಾನಸಿಕ ಮತ್ತು ಹಲ್ಲುಗಳ ಬೆಳವಣಿಗೆಯ ಸಂಪೂರ್ಣ ತಿಳಿವಳಿಕೆ ಇರುವುದು ಅವಶ್ಯಕ. ಇದಕ್ಕಾಗಿ ಬಾಲ್ಯದಂತವೈದ್ಯರು ಆಗಿಂದಾಗ್ಗೆ ಮಕ್ಕಳನ್ನು ಪರೀಕ್ಷಿಸಿ ಅವರ ಬಗ್ಗೆ ತಂದೆತಾಯಿಯರನ್ನು ವಿಚಾರಿಸಿ ಯುಕ್ತ ಮಾಹಿತಿ ನೀಡಬೇಕು. ಮಕ್ಕಳಲ್ಲಿ ಹಲ್ಲುಗಳ ಬೆಳವಣಿಗೆಯನ್ನು ನಾಲ್ಕು ಹಂತಗಳನ್ನಾಗಿ ವಿಂಗಡಿಸಬಹುದು.

**1. ದಂತಪೂರ್ವ ಹಂತ (ಪ್ರೀಡೆಂಟಲ್ ಸ್ಟೇಜ್) :** ಮಕ್ಕಳು ಹುಟ್ಟಿದಾಗ ಬಚ್ಚು ಬಾಯಿಯವಾಗಿರುತ್ತವೆ. ಹುಟ್ಟಿದಂದಿನಿಂದ ಆರು ತಿಂಗಳವರೆಗೆ ಹಲ್ಲುಗಳು ವಸಡಿನ(ಬೊಡು) ಒಳಗೆ ಇರುತ್ತವೆ. ಆದ್ದರಿಂದ ಈ ಸಮಯವನ್ನು ದಂತಪೂರ್ವ ಅಥವಾ ಹಲ್ಲುಹುಟ್ಟಿನ ಮುಂಚಿನ ಕಾಲವೆಂದು ಕರೆಯುವರು.

**2. ಹಾಲು ಹಲ್ಲುಗಳ ಹಂತ (ಡೆಸಿಡುಯಸ್ ಡೆಂಟಿಷನ್ ಸ್ಟೇಜ್) :** ಮಕ್ಕಳಿಗೆ ಆರು ತಿಂಗಳಾದಾಗ ಕೆಳ ದವಡೆಯ ಮೊದಲನೆಯ ಹಾಲು ಬಾಚಿ ಹಲ್ಲು (ಲೋವರ್ ಡೆಸಿಡುಯಸ್ ಫಸ್ಟ್ ಸೆಂಟ್ರಲ್ ಇನ್‌ಸಿಸರ್) ಹುಟ್ಟುತ್ತದೆ. ಎರಡೂವರೆ

ವರ್ಷದೊಳಗೆ ಎಲ್ಲ ಹಾಲು ಹಲ್ಲುಗಳೂ (20) ಹುಟ್ಟಿರುತ್ತವೆ. ಆರನೆಯ ವರ್ಷದಲ್ಲಿ ಶಾಶ್ವತ ಮೊದಲನೆಯ ದವಡೆ ಹಲ್ಲುಗಳು (ಪರ್ಮನೆಂಟ್ ಫಸ್ಟ್ ಮೋಲಾರ್ಸ್) ಹುಟ್ಟುತ್ತವೆ. ಆರು ತಿಂಗಳಿಂದ ಆರು ವರ್ಷದ ವರೆಗಿನ ಕಾಲಕ್ಕೆ ಹಾಲು ಹಲ್ಲುಗಳ ಕಾಲ ಎಂದು ಹೆಸರು.

**3. ಮಿಶ್ರಿತ ಹಲ್ಲುಗಳ ಹಂತ (ಮಿಕ್ಸೆಡ್ ಡೆಂಟಿಷನ್ ಸ್ಟೇಜ್)** : ಶಾಶ್ವತ ಮೊದಲನೆಯ ದವಡೆ ಹಲ್ಲು ಹುಟ್ಟಿದಂದಿನಿಂದ ಎಲ್ಲ ಹಾಲು ಹಲ್ಲುಗಳೂ ಬೀಳುವವರೆಗಿನ ಕಾಲಕ್ಕೆ ಮಿಶ್ರಿತ ಹಲ್ಲುಗಳ ಕಾಲ ಎಂದೆನ್ನುವರು. ಇದು ಸಾಧಾರಣವಾಗಿ ಆರನೆಯ ವರ್ಷದಿಂದ ಹನ್ನೆರಡು ವರ್ಷದ ವರೆಗಿನ ಕಾಲ. ಈ ಸಮಯದಲ್ಲಿ ಮಕ್ಕಳಲ್ಲಿ ಹಾಲು ಹಲ್ಲುಗಳು ಮತ್ತು ಶಾಶ್ವತ ಹಲ್ಲುಗಳು ಇರುತ್ತವೆ.

**4. ಶಾಶ್ವತ ಹಲ್ಲುಗಳ ಹಂತ (ಪರ್ಮನೆಂಟ್ ಡೆಂಟಿಷನ್ ಸ್ಟೇಜ್)** : ಎಲ್ಲ ಹಾಲು ಹಲ್ಲುಗಳು ಬಿದ್ದ ಅನಂತರ ಬಾಯಿಯಲ್ಲಿ ಶಾಶ್ವತ ಹಲ್ಲುಗಳು ಮಾತ್ರ ಉಳಿದಿರುತ್ತವೆ. ಸಾಮಾನ್ಯವಾಗಿ ಹನ್ನೆರಡು ವರ್ಷದೊಳಗೆ ಎಲ್ಲ ಹಾಲು ಹಲ್ಲುಗಳು ಒಂದೊಂದಾಗಿ ಬಿದ್ದು ಹೋಗುತ್ತವೆ. ಆದ್ದರಿಂದ ಹನ್ನೆರಡು ವರ್ಷದ ಮೇಲ್ಪಟ್ಟ ಕಾಲಕ್ಕೆ ಶಾಶ್ವತ ಹಲ್ಲುಗಳ ಕಾಲ ಎಂದು ಕರೆಯುವರು.

ಮೇಲೆ ನಮೂದಿಸಿದ ಕಾಲಗಳಲ್ಲಿ ಗಮನಾರ್ಹ ಬದಲಾವಣೆಗಳು ಮಕ್ಕಳಲ್ಲಿ ಕಂಡು ಬರುತ್ತವೆ. ಪ್ರತಿಯೊಂದು ಕಾಲದ ಗುಣ ವ್ಯತ್ಯಾಸಗಳು ಇನ್ನೊಂದು ಕಾಲದೊಡನೆ ಬೆರೆಯುವ ಸಾಧ್ಯತೆ ಇದೆ. ಆದರೂ ಪ್ರತಿಯೊಂದರಲ್ಲೂ ಸಾಕಷ್ಟು ವಿಶಿಷ್ಟತೆ ಇರುವುದರಿಂದ ಇವನ್ನು ವಿಂಗಡಿಸಲು ಇತರ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಆದ್ದರಿಂದ ಪ್ರತಿಯೊಂದು ಕಾಲದಲ್ಲಿ ಮಕ್ಕಳಿಗೆ ಅಥವಾ ಸಂಬಂಧಪಟ್ಟ ಮಗುವಿಗೆ ಯಾವುದು ಸ್ವಾಭಾವಿಕವಾದುದೆಂಬುದನ್ನು ತಿಳಿದುಕೊಳ್ಳುವುದು ಅತ್ಯವಶ್ಯ. ಹಾಗೆಯೇ ಮುಂದೆ ಒಂದು ಕಾಲದಲ್ಲಿ ಬೆಳವಣಿಗೆಯಲ್ಲಿ ಯಾವ ಬದಲಾವಣೆಯಾಗ ಬಹುದೆಂಬುದನ್ನೂ ನಿರ್ಧರಿಸಬೇಕಾಗುತ್ತದೆ. ಇದಕ್ಕೆ ಪ್ರತಿಯೊಂದು ಮಗುವಿನ ಬೆಳವಣಿಗೆಯನ್ನು ಆರೋಗ್ಯವಂತ ಮಕ್ಕಳ ಬೆಳವಣಿಗೆಯೊಡನೆ ಹೋಲಿಸಿ ನೋಡಬೇಕಾಗುವುದು. ನಿರ್ದಿಷ್ಟ ಕಾಲಗಳಲ್ಲಿ ಮಕ್ಕಳ ಬೆಳವಣಿಗೆಯ ವೇಗ ಮತ್ತು ಪ್ರಗತಿಗಳಲ್ಲುಂಟಾಗುವ ಬದಲಾವಣೆಗಳು ಕೇವಲ ಅಧ್ಯಯನಕ್ಕೆ ಹೆಚ್ಚು ಸಹಕಾರಿಯಾಗುತ್ತವೆ. ಇವನ್ನು ಕೇವಲ ರುಗ್ಣಾಲಯದ (ಕ್ಲಿನಿಕಲ್) ಪರೀಕ್ಷೆಯಿಂದ ಹೇಳಲು ಬರುವುದಿಲ್ಲ. ಆದ್ದರಿಂದ ವೈದ್ಯರಿಗೆ ಮನಶ್ಶಾಸ್ತ್ರ, ಎಕ್ಸ್‌ಕಿರಣ ಪ್ರಯೋಗಾಲಯದ ಪರೀಕ್ಷೆಗಳ ಜ್ಞಾನವಿರಬೇಕು. ಇದರಿಂದ ರೋಗನಿದಾನವನ್ನು (ಡಯಗ್ನೋಸಿಸ್) ಮಾಡಿ ಉತ್ತಮ ಚಿಕಿತ್ಸೆಯನ್ನು ಮಾಡಬಹುದು.

**ಹಲ್ಲು ಹುಟ್ಟುವಾಗಿನ ತೊಂದರೆಗಳು (ಟೀತಿಂಗ್ ಟ್ರಬಲ್ಸ್)** : ಮಕ್ಕಳಲ್ಲಿ ಹಲ್ಲು ಹುಟ್ಟುವಾಗ ಜ್ವರ, ಭೇದಿ ಮುಂತಾದ ಕಾಯಿಲೆಗಳು ಬರುವುವೆಂದು ಜನರ ತಿಳಿವಳಿಕೆ. ಸಾಮಾನ್ಯರ ದೃಷ್ಟಿಯಿಂದ ಇದನ್ನು ಸರಿಯಾಗಿ ಹೇಳಲು ಬರುವುದಿಲ್ಲ. ಆದರೂ ವೈದ್ಯಕೀಯ ದೃಷ್ಟಿಯಿಂದ ಒಪ್ಪಿಕೊಳ್ಳಲಾಗದು. ಹಲ್ಲು ಹುಟ್ಟುವೆಡೆಗಳಲ್ಲಿ ವಸಡು ಊದಿಕೊಂಡು ಏಕಾಣು ಜೀವಿಗಳಿಂದ ತೊಂದರೆಯಾಗಬಹುದು. ಮಕ್ಕಳಲ್ಲಿ ಉರಿಕೆದುರುವಿಕೆ, ಜೊಲ್ಲುಸುರಿಸುವುದು ಮತ್ತು ಹೆಚ್ಚಾಗಿ ಚೀಪುವುದು ಅಥವಾ ಸಿಕ್ಕ ಪದಾರ್ಥಗಳನ್ನು ಜಗಿಯುವುದು ಹಲ್ಲು ಹುಟ್ಟುವಾಗ ಕಂಡುಬರುವುದು. ಇದಕ್ಕೆ ಆ ಸ್ಥಳದಲ್ಲಿ ಉಂಟಾಗುವ ನೋವು ಕಾರಣ. ಆ ಸ್ಥಳದಲ್ಲಿಯ ವಸಡನ್ನು ಅಮುಕಿ ಹಿಡಿಯುವುದರಿಂದ ಅಥವಾ ನೋವಿನ ಮಾತ್ರೆಗಳನ್ನು ಸೇವಿಸುವುದರಿಂದ ನೋವು ಕಡಿಮೆಯಾಗುತ್ತದೆ.

**ಮಕ್ಕಳ ದಂತಾರೋಗ್ಯ** : ಮಕ್ಕಳ ಹಲ್ಲುಗಳ ಆರೋಗ್ಯದ ಬಗ್ಗೆ ಮಕ್ಕಳು, ತಂದೆತಾಯಿಗಳು ಹಾಗೂ ಸಂಬಂಧಪಟ್ಟವರು ಜಾಗರೂಕರಾಗಿರುವಂತೆ ಮಾಡಿ, ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಸುವುದು ಬಾಲ್ಯದಂತವೈದ್ಯರ ಹಾಗೂ ಶಾಲಾದಂತವೈದ್ಯರ ಕೆಲಸಗಳಲ್ಲೊಂದು. ಇವರು ಮಕ್ಕಳ ಹಲ್ಲುಗಳು ಮತ್ತು ವಸಡುಗಳು ಕಾಯಿಲೆಗೆ ಒಳಗಾಗದಂತೆ ಹಾಗೂ ಹಲ್ಲುಗಳು ವಕ್ರ ವಕ್ರವಾಗಿ ಬೆಳೆಯದಂತೆ ನೋಡಿಕೊಳ್ಳುವರು. ಅಲ್ಲದೆ ಹಲ್ಲುಗಳ ಪ್ರಾಮುಖ್ಯ ಎಷ್ಟೆಂಬುದನ್ನು ತೋರಿಸಿಕೊಡುವರು. ಮಕ್ಕಳ ಹಲ್ಲಿನ ಆರೋಗ್ಯ ರಕ್ಷಣೆಯನ್ನು ನಾಲ್ಕು ವಿಧಗಳಲ್ಲಿ ವಿವರಿಸಬಹುದು.

**1. ದಂತರೋಗ ಪ್ರತಿಬಂಧಕ ವಿಜ್ಞಾನ (ಪ್ರಿವೆಂಟಿವ್ ಡೆಂಟಿಸ್ಟ್ರಿ)** : ಬಾಯಿಯನ್ನು ಶುಚಿಯಾಗಿಟ್ಟುಕೊಳ್ಳುವ ರೀತಿಗಳನ್ನು ಹೇಳಿಕೊಡುವುದು. ಅಲ್ಲದೆ ಹಲ್ಲುಗಳ ಮೇಲೆ ಫ್ಲೋರೈಡ್‌ಗಳನ್ನು ಆಗಿಂದಾಗ್ಗೆ ಹಚ್ಚುತ್ತಿರುವುದು, ಮಕ್ಕಳಿಗೆ ಸಮತೂಕದ ಆಹಾರವನ್ನು ಕೊಡುವುದು. ಸುಧಾರಿಸಿದ ಶರ್ಕರಪಿಷ್ಟಗಳನ್ನು (ರೀಫೈನ್ಡ್ ಕಾರ್ಬೋಹೈಡ್ರೇಟ್ಸ್) ತಿನ್ನುವುದನ್ನು ಕಡಿಮೆ ಮಾಡಿಸುವುದು ಅಥವಾ ಅವನ್ನು ಊಟ ಮಾಡುವಾಗ ಮಾತ್ರ ತಿನ್ನಲು ಕೊಟ್ಟು ಊಟವಾದ ಬಳಿಕ ಬಾಯಿಯನ್ನು ಚೆನ್ನಾಗಿ ತೊಳೆಯಲು ತಿಳಿಯಹೇಳುವುದು. ಅಲ್ಲದೆ ರೋಗಿಗಳಿಗೆ ಆರೋಗ್ಯದ ಬಗ್ಗೆ ಜಾಗರೂಕತೆಯಿಂದಿರುವಂತೆ ಮಾಡುವುದು–ಈ ರೀತಿಯ ಉಪಾಯಗಳಿಂದ ಹಲ್ಲು ಮತ್ತು ವಸಡುಗಳಿಗೆ ಬರುವ ರೋಗಗಳನ್ನು ತಡೆಗಟ್ಟಬಹುದು. ಅವನ್ನು ಕುರಿತ ಅಧ್ಯಯನಕ್ಕೆ ದಂತರೋಗಪ್ರತಿಬಂಧಕವಿಜ್ಞಾನ ಎಂದೆನ್ನುವರು.

**2. ಬಾಲ್ಯದಂತವಿಜ್ಞಾನ (ಪಿಡೊಡಾನ್ಷಿಯ)** : ಇದರಲ್ಲಿ ವೈದ್ಯರಾದವರು ಮಕ್ಕಳ ಮನಸ್ಸನ್ನು ಅರಿತುಕೊಂಡು ಅವರೊಡನೆ ಬೆರೆಯುವರು. ಅವರ ಬೇಕು ಬೇಡಗಳನ್ನು ತಿಳಿದುಕೊಳ್ಳುವರು. ಅಲ್ಲದೆ ಮಕ್ಕಳ ಬೆಳವಣಿಗೆಯಲ್ಲುಂಟಾಗುವ ಹಲ್ಲಿನ ರೋಗಗಳನ್ನು ಪತ್ತೆ ಹಚ್ಚಿ ತತ್‌ಕ್ಷಣ ಚಿಕಿತ್ಸೆ ನೀಡುವರು.

**3. ವಕ್ರದಂತಪ್ರತಿಬಂಧಕವಿಜ್ಞಾನ (ಪ್ರಿವೆಂಟಿವ್ ಆರ್ಥೋಡಾಂಟಿಕ್ಸ್)** : ಈ ವಿಭಾಗದವರು ಮಕ್ಕಳ ಹಲ್ಲುಗಳ, ದವಡೆಗಳ ಮತ್ತು ಮುಖದ ಬೆಳವಣಿಗೆಯಲ್ಲಿ ಉಂಟಾಗುವ ಬದಲಾವಣೆಗಳನ್ನು ಅಭ್ಯಸಿಸುತ್ತಾರೆ. ಒಂದು ಕಾಲದಲ್ಲಿ ಸ್ವಾಭಾವಿಕವಾಗಿದ್ದು ಮುಂದೆ ಅದು ಹಲ್ಲುಗಳು ವಕ್ರವಕ್ರವಾಗಿ ಹುಟ್ಟುವಂತೆ ಮಾಡುವುದಿದ್ದರೆ ಅದನ್ನು ತಡೆಗಟ್ಟುವರು ಹಾಗೂ ಹಲ್ಲುಗಳು ವಕ್ರವಾಗಿ ಹುಟ್ಟುತ್ತಿರುವಲ್ಲಿ ಸರಿಯಾದ ಚಿಕಿತ್ಸೆ ನೀಡಿ ಮುಂದೆ ಹಲ್ಲುಗಳು ಮುತ್ತಿನ ಸಾಲುಗಳಂತೆ ಕಾಣುವಂತೆ ಪ್ರಯತ್ನ ಮಾಡುವರು.

**4. ಜನಾರೋಗ್ಯ ದಂತವಿಜ್ಞಾನ (ಪಬ್ಲಿಕ್ ಹೆಲ್ತ್ ಡೆಂಟಿಸ್ಟ್ರಿ)**: ಇದಕ್ಕೆ ಸಂಬಂಧಪಟ್ಟ ವೈದ್ಯರು ಹಲ್ಲಿನ ಬೆಳವಣಿಗೆಗೆ ಮತ್ತು ಆರೋಗ್ಯಕ್ಕೆ ಬೇಕಾದ ಆವಶ್ಯಕತೆಗಳನ್ನು ಪೂರೈಸಲು ಏರ್ಪಾಡು ಮಾಡುವರು. ಹಾಗೂ ರೋಗಗಳನ್ನು ತಡೆಗಟ್ಟಲು ಯೋಜನೆಗಳನ್ನು ಕೈಗೊಳ್ಳುವರು. ಉದಾಹರಣೆಗೆ, ಕುಡಿಯುವ ನೀರಿಗೆ ಫ್ಲೋರೈಡುಗಳನ್ನು ಬೆರೆಸುವಂತೆ ವ್ಯವಸ್ಥೆ ಮಾಡುವರು. ಇದರಿಂದ ಹಲ್ಲು ಹುಳುಕಾಗುವುದಿಲ್ಲ. ಇನ್ನಿತರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಹಲ್ಲುಗಳ ವಸಡುಗಳ ಮತ್ತು ಶರೀರದ ಆರೋಗ್ಯ ರಕ್ಷಣೆ ಬಗ್ಗೆ ಜನರಿಗೆ ತಿಳಿವಳಿಕೆ ನೀಡುವರು. (ಎ.ಆರ್.ಪಿ.)

**ಕೃತಕ ಅಂಗಗಳು** : ಸ್ವಾಭಾವಿಕವಾದ ಅಂಗಗಳ ಬದಲಾಗಿ ಅಳವಡಿಸುವ ದೇಹಭಾಗಗಳು (ಆರ್ಟಿಫಿಶಿಯಲ್ ಆರ್ಗನ್ಸ್).

**ಇತಿಹಾಸ** : ಋಗ್ವೇದದ ಒಂದು ಮಂತ್ರದಲ್ಲಿ ಸೂಕ್ತ 116, ಅಧ್ಯಾಯ 8, ವರ್ಗ 10, ಮಂತ್ರ 15) ಇರುವ ನಿರೂಪಣೆ ಹೀಗಿದೆ–'ಖೇಲನೆಂಬ ಅರಸನ ಹೆಂಡತಿಯಾದ ವಿಶ್ಪಲೆಯ ಒಂದು ಕಾಲು ಯುದ್ಧದಲ್ಲಿ ಹಕ್ಕಿಯ ರೆಕ್ಕೆಯಂತೆ ತುಂಡರಿಸಲ್ಪಟ್ಟಿತ್ತು; ನೀವು (ಅಶ್ವಿನೀ ಕುಮಾರರು) ಅದೇ ರಾತ್ರಿಯಲ್ಲಿ ಯುದ್ಧಭೂಮಿಗೆ ಹೋಗಿ ಶತ್ರುನ್ಯಸ್ತವಾದ ಧನವನ್ನು ಗಳಿಸುವುದಕ್ಕಾಗಿ ವಿಶ್ಪಲೆಗೆ ಲೋಹಮಯ ತೊಡೆಯನ್ನು ಕೊಟ್ಟಿದ್ದಿರಿ' ಎನ್ನುವ ಉಲ್ಲೇಖವಿದೆ. ಅಂದ ಮಾತ್ರಕ್ಕೆ ಕೃತಕ ಅಂಗಗಳ ಬಳಕೆ ಭಾರತದಲ್ಲಿ ಸಾಮಾನ್ಯವಾಗಿತ್ತೆಂದು

ಕೃತಕ ಕೈಗಳನ್ನು ಬಳಸಿ ಕೆಲಸಮಾಡುತ್ತಿರುವುದು

ಭಾವಿಸಲಾಗದು. ಇಂಗ್ಲಿಷ್ ಭಾಷೆಯಲ್ಲಿ ಕೃತಕ ಅಂಗದ ಜೋಡಣೆಗೆ ಬಳಸುತ್ತಿರುವ ಪ್ರಾಸ್ಥೆಸಿಸ್ ಎಂಬ ಶಬ್ದ ಗ್ರೀಕ್ ಮೂಲವಾದದ್ದು. ಸ್ಪಾರ್ಟಾದೇಶದ ಚರಿತ್ರೆಯಲ್ಲಿ (ಪ್ರ.ಶ.ಪೂ. 5ನೆಯ ಶತಮಾನ) ಉಕ್ತವಾಗಿರುವ ಒಂದು ವರದಿಯ ಪ್ರಕಾರ ಹೆಜಿಸ್ಟ್ರೇಟಸ್ ಎಂಬ ಬಂದಿ ತನ್ನ ಪಾದವನ್ನು ಕತ್ತರಿಸಿಕೊಂಡು ಓಡಿಹೋಗಿದ್ದನೆಂದೂ ಅವನನ್ನು ಪುನಃ ಕೈದು ಮಾಡಿದಾಗ ಅವನು ಕೃತಕಪಾದಧಾರಿಯಾಗಿದ್ದನೆಂದೂ ಇದೆ. ಆದ್ದರಿಂದ ಗ್ರೀಸ್ ದೇಶದಲ್ಲಿ

ಅಷ್ಟು ಪ್ರಾಚೀನಕಾಲದಲ್ಲಿಯೇ ಕೃತಕ ಅಂಗಗಳ ವಿಚಾರ ತಿಳಿದಿತ್ತೆಂದು ತರ್ಕಿಸಬಹುದು. ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಸರ್ಜನ್ಸಿನ ವಸ್ತುಸಂಗ್ರಹಾಲಯದಲ್ಲಿ ಪ್ರ.ಶ.ಪೂ. ಸು.300ರ ವೇಳೆಯದು ಎನ್ನಲಾದ ಒಂದು ಕೃತಕಕಾಲನ್ನು ಪ್ರದರ್ಶಿಸಿದ್ದಾರೆ. ಪ್ರಶ. ಸು.1509ರಲ್ಲಿ ಮಾಡಿ ಉಪಯೋಗಿಸುತ್ತಿದ್ದರೆನ್ನಲಾದ ಒಂದು ಕೃತಕ ಕೈ ನ್ಯೂರೆಂಬರ್ಗಿನ ವಸ್ತುಸಂಗ್ರಹಾಲಯದಲ್ಲಿದೆ. 19ನೆಯ ಶತಮಾನದ ಕಡೆಯ ಭಾಗದಲ್ಲಿ ಸಂವೇದನಾರಹಿತ ಹಾಗೂ ವಿಷಾಣುರಹಿತ ಶಸ್ತ್ರಕ್ರಿಯೆ ಆರಂಭವಾದ ಮೇಲೆ ಕೃತಕ ಅಂಗಗಳ ಉದ್ಯಮಕ್ಕೆ ವ್ಯಾಪಕವಾದ ಬಳಕೆ, ಉಪಯೋಗ, ಉದ್ದೇಶ ಮುಂತಾದವು ಪ್ರಾಪ್ತವಾದುವು. ಕೃತಕಾಂಗ ನಿಜಾಂಗದೊಡನೆ ಆಕಾರಸಾಮ್ಯ ಹೊಂದಿರಬೇಕು; ಅದರ ಜೋಡಣೆಯಿಂದ ದೇಹದ ಸಹಜ ಸೌಂದರ್ಯ ಒದಗಬೇಕು ಮತ್ತು ಇಂಥ ಕೃತಕಾಂಗ ನಿಜ ಅಂಗದಷ್ಟಲ್ಲದಿದ್ದರೂ ಅದಕ್ಕೆ ಸರಿಸುಮಾರಾಗಿಯಾದರೂ ಸಮಾನವಾಗಿರುವಂತೆ ಉಪಯೋಗಾರ್ಹವಾಗಬೇಕು ಎಂದು ಜನ ಬಯಸಿದ್ದು ಸಹಜವೇ.

**ದೇಹದ ಹೊರಗೆ ಕೃತಕವಾಗಿ ಜೋಡಿಸುವ ನಿರ್ಜೀವ ಅಂಗಗಳು :** ಇವನ್ನು ಈ ಮುಂದೆ ಬರೆದಿರುವ ನಾಲ್ಕು ಪ್ರಧಾನ ಶೀರ್ಷಿಕೆಗಳಲ್ಲಿ ವಿವರಿಸಿದೆ–1 ಕೃತಕ ಕೈಕಾಲುಗಳು. 2 ಕೃತಕ ಕಣ್ಣು, 3.ಕೃತಕ ಶ್ವಾಸಕೋಶ, ಮೂತ್ರಜನಕಾಂಗಗಳು, 4.ಕೃತಕ ಹೃದಯ–ಶ್ವಾಸಕೋಶ ಯಂತ್ರ.

**1. ಕೃತಕ ಕೈಕಾಲುಗಳು :** ಕೃತಕ ಕೈಕಾಲುಗಳನ್ನು ಅಳವಡಿಸಿ ಆಕಾರ ಮಾತ್ರ ಸರಿಹೋಗುವಂತೆ ಮಾಡುವುದು ಪ್ರಯೋಜನವಿಲ್ಲ. ಅಳವಡಿಸಿದ ಅಂಗಗಳು ಸಾಧ್ಯವಾಗಿರುವಷ್ಟು ಕ್ರಿಯಾರ್ಹವಾಗಿರುವಂತೆ ಮಾಡುವುದು ಅಗತ್ಯ. ಈ ರೀತಿ ಉಪಯುಕ್ತವಾಗುವಂತೆ ಅವನ್ನು ಅಳವಡಿಸಿದ ಮೇಲೆ ಅವುಗಳ ಉಪಯೋಗವಿಧಾನದ ಶಿಕ್ಷಣವನ್ನು ಸಹ ಅಂಗಧಾರಿಗೆ ಕೊಡಬೇಕಾಗುತ್ತದೆ. ಕೃತಕ ಕಾಲಿಗೆ ಚಲನ ಸಾಮರ್ಥ್ಯದ ಜೊತೆಗೆ ದೇಹದ ಭಾರವನ್ನು ಹೊತ್ತು ದೃಢವಾಗಿ ನಿಂತುಕೊಳ್ಳುವ ದೃಢತೆಯೂ ಇರಬೇಕು. ಮರದಿಂದಲೊ ಹಗುರವಾದ ಲೋಹದಿಂದಲೊ ಅಥವಾ ಕ್ಯಾನ್‌ವಾಸಿನ ಮೇಲೆ ಪದರಪದರವಾಗಿ ಬಳಿದ ಪ್ಲಾಸ್ಟಿಕ್ಕಿನಿಂದಲೆ ಕೃತಕ ಕಾಲನ್ನು ತಯಾರುಮಾಡುತ್ತಾರೆ. ಪಾದದ ಮುಂಭಾಗ ಮಾತ್ರ ರಬ್ಬರಿನದು. ಕಾಲಿನ ಮೋಟಿಗೆ ಇದನ್ನು ಸಿಕ್ಕಿಸಿಕೊಂಡು ಪಟ್ಟಿಯಿಂದ ಭುಜಕ್ಕೊ ಎದೆಗೊ ಕಟ್ಟಿಕೊಳ್ಳುವಂತೆ ಇರುತ್ತದೆ. ಇಲ್ಲವೇ ವಾಯು ಒತ್ತಡದಿಂದಲೇ ಕಾಲಿನ ಮೋಟಿಗೆ ಅಂಟಿಕೊಳ್ಳುವಂತೆ ಇರುತ್ತದೆ. ಹೇಗಿದ್ದರೂ ದೇಹದ ಭಾರ ಮೋಟಿನ ತುದಿಯಿಂದ ಕೃತಕ ಕಾಲಿನ ಮೇಲೆ ನೇರವಾಗಿ ಬೀಳದೆ ಇರುವಂತೆ ಇವನ್ನು ತಯಾರುಮಾಡಿದೆ. ಮಂಡಿಭಾಗದಲ್ಲಿ (ಮೊಳಕಾಲು) ಮಡಚುವ ಹಾಗೆ, ನಡೆಯುವಾಗ ಮಾತ್ರ ನೆಟ್ಟುಕೊಂಡಿರುವಂತೆ ಕೆಲವು ಕೃತಕ ಕಾಲುಗಳನ್ನು ಮಾಡಿರುತ್ತಾರೆ. ಕೃತಕ ಕಾಲುಗಳು ಭಾರವನ್ನು ಹೊತ್ತುಕೊಂಡು ನಡೆಯಲು ತಕ್ಕವಲ್ಲ ಮತ್ತು ಹಳ್ಳದಿಣ್ಣೆ ಪ್ರದೇಶಗಳಲ್ಲೂ ಉಪಯೋಗಿಸಲಾಗದಂಥವು. ಕೃತಕ ಕೈಗಳ ನಿರ್ಮಾಣ ಕೃತಕ ಕಾಲಿನ ನಿರ್ಮಾಣಕ್ಕಿಂತ ಕಷ್ಟಸಾಧ್ಯ. ಏಕೆಂದರೆ ಕೈಯಲ್ಲಿ ಚಲನೆ ಪ್ರಧಾನ. ಕೃತಕವಾಗಿ ಇಷ್ಟಬಂದಂಥ ಚಲನೆಯನ್ನು ಒದಗಿಸಿಕೊಳ್ಳುವುದು ಸುಲಭವಲ್ಲ. ಕೃತಕ ಕೈಯಲ್ಲಿ ಮೊಳಕೈಚಲನೆಯನ್ನು ಏರ್ಪಡಿಸಬಹುದಾದರೂ ಹಸ್ತದ ಚಲನಗಳನ್ನು ಒದಗಿಸುವುದು ಕಷ್ಟ. ಅದರಲ್ಲೂ ನೆಲದ ಮೇಲಿನಿಂದ ಸಾಮಾನುಗಳನ್ನು ಎತ್ತಿಕೊಳ್ಳಲು ಮತ್ತು ಅವನ್ನು ಹಿಡಿದುಕೊಳ್ಳಲು ಅಗತ್ಯವಾದ ಹೆಬ್ಬೆರಳು ಮಿಕ್ಕ ಬೆರಳುಗಳೊಡನೆ ಮುಚ್ಚಿ ಕೊಳ್ಳಬೇಕಾದ ಚಲನೆಯನ್ನು ಕೃತಕವಾಗಿ ಏರ್ಪಡಿಸುವುದು ಬಹುಕಷ್ಟ.

ಕೃತಕ ಕಾಲುಗಳ ಸಹಾಯದಿಂದ ಒಬ್ಬ ಹುಡುಗ ಓಡುತ್ತಿರುವುದನ್ನು ಕಾಣಬಹುದು

ಕೃತಕ ಕೈ ಕೆಲವು ಸಾಮಾನುಗಳನ್ನು ಸ್ವಾಭಾವಿಕ ಕೈಗಿಂತ ಚೆನ್ನಾಗಿಯೂ ಬಿಗಿಯಾಗಿಯೂ ಹಿಡಿದು ಕೊಳ್ಳಬಲ್ಲದು. ಆದರೆ ಎಲ್ಲ ಸಾಮಾನುಗಳನ್ನೂ ಉಪಯುಕ್ತ ರೀತಿಯಲ್ಲಿ ಹಿಡಿದು ಕೊಳ್ಳುವುದು ಕೃತಕಕೈಗೆ ಅಸಾಧ್ಯ. ಏಕೆಂದರೆ ಹಾಗೆ ಹಿಡಿದುಕೊಳ್ಳಲು

ಕೃತಕ ಕೈಗಳನ್ನು ವೈದ್ಯರು ಅಳವಡಿಸುತ್ತಿರುವುದನ್ನು ಕಾಣಬಹುದು

ಸ್ಪರ್ಶ ಜ್ಞಾನವೂ, ಅದರಿಂದ ಸಾಧ್ಯ ವಾಗುವ ಅನೇಕ ಸ್ನಾಯುಗಳ ಸಂಯುಕ್ತ ಕ್ರಿಯೆಯೂ ಅತ್ಯಗತ್ಯ. ಕೈಮೋಟಿಗೆ ಸಿಕ್ಕಿಸಿಕೊಳ್ಳ ಬಹುದಾದ ಅನೇಕ ಕೃತಕ ಹಸ್ತಗಳು ಇವೆ. ಆಯಾ ಸಂದರ್ಭದಲ್ಲಿ ತಕ್ಕ ರೀತಿಯ ಹಸ್ತವನ್ನು ಅಳವಡಿಸಿಕೊಳ್ಳ ಬಹುದಾದ ರೀತಿ ಸಾಮಾನ್ಯ ವಾಗಿ ವಾಡಿಕೆಯಲ್ಲಿದೆ. ಕೃತಕ ಕೈಯ ಹೆಬ್ಬೆರಳಿನಿಂದ ಒಯ್ದು ಒಂದು ತಂತಿಯನ್ನು ಭುಜದ ಮೇಲುಗಡೆ ಯಿಂದ ಬೆನ್ನಿಗೆ ಹಾಯಿಸಿ ಕಟ್ಟುವಂತೆ ಏರ್ಪಾಡು ಮಾಡಿರುವುದು ಉಂಟು. ಬೆನ್ನಿನ ಸ್ನಾಯುಗಳನ್ನು ಬೇಕಾದಂತೆ ಐಚ್ಛಿಕವಾಗಿ ಚಲಿಸಿ ಕೃತಕ ಹೆಬ್ಬೆರಳನ್ನು ತಕ್ಕಮಟ್ಟಿಗೆ ಬೇಕಾದ ಹಾಗೆ ಚಲಿಸ ಬಹುದಾಗಿದೆ. ಕೈಮೋಟಿನ ಸ್ನಾಯು ಗಳ ತುದಿಗೆ ಪ್ಲಾಸ್ಟಿಕ್ ಬೆಣೆಗಳನ್ನು ಅಡ್ಡವಾಗಿ ತೂರಿಸಿ, ಆ ಬೆಣೆಗಳಿಗೆ ಕೃತಕಹಸ್ತದ ಬೆರಳುಗಳನ್ನು ತಂತಿ ಯಿಂದ ಬಿಗಿದು ಮೋಟಿನ ಸ್ನಾಯು ಗಳ ಐಚ್ಛಿಕ ಕ್ರಿಯೆಯಿಂದ ಕೃತಕ ಬೆರಳುಗಳು ತಕ್ಕಮಟ್ಟಿಗೆ ಐಚ್ಛಿಕವಾಗಿ ಚಲಿಸುವಂತೆಯೂ ಹಲವು ಸಾರಿ ಏರ್ಪಾಡು ಮಾಡಬಹುದು. ಇತ್ತೀಚೆಗೆ ಕೈಮೋಟಿನ ಸ್ನಾಯು ಗಳಿಂದಾಗುವ ಒತ್ತಡ ವ್ಯತ್ಯಾಸ ಅಥವಾ ಆಕಾರ ವ್ಯತ್ಯಾಸದಿಂದ ಚಲಿಸಲ್ಪಡುವ ಸಣ್ಣವಿದ್ಯುಚ್ಚಾಲಿತ ಮೋಟಾರುಗಳಿಂದ ಕೃತಕಹಸ್ತದ ಬೆರಳುಗಳು ತೆರೆದುಕೊಳ್ಳುವಂತೆಯೂ ಮುಚ್ಚಿಕೊಳ್ಳು ವಂತೆಯೂ ಏರ್ಪಾಡುಮಾಡಲಾಗಿದೆ. ಪ್ರತಿಯೊಂದರಲ್ಲಿಯೂ ಯಾಂತ್ರಿಕವಾಗಿ ಶಕ್ತಿಯನ್ನು ಒದಗಿಸಿ ಬೆರಳುಗಳು ಮಡಚಿಕೊಳ್ಳುವಂತೆ ಮಾಡುವುದೇ ಪ್ರಧಾನವಾಗಿರುವುದರಿಂದ

ಕಾಲಿನ ನ್ಯೂನತೆಯನ್ನು ಪೂರಣ ಮಾಡುವ ಕೃತಕ ಕಾಲು, ಪಟೇಲರ್ ಟೆಂಡನ್ ಚಾಚುಭಾಗವನ್ನು ಕಾಣಬಹುದು

ಮಡಚುವಿಕೆ ಅನೇಕ ವೇಳೆ ತಕ್ಕಷ್ಟು ಶಕ್ತಿಯುತವಾಗಿಲ್ಲದೆಯೂ ಕೆಲವುವೇಳೆ ಅನಾವಶ್ಯಕವಾಗಿ ಬಹು ಬಿಗಿತ ಉಂಟಾಗಿ ಕಾರ್ಯ ಸಾಫಲ್ಯ ಸಹಜಸ್ಥಿತಿಗಿಂತ ಬಹುಕಡಿಮೆ ಮಟ್ಟದ್ದಾಗಿಯೇ ಇರುತ್ತದೆ. ಕೃತಕ ಕೈಗಳನ್ನು ಹಗುರಲೋಹದಿಂದ ಮಾಡಿರುತ್ತಾರೆ. ಇಡೀ ಕೈಯನ್ನು ಮುಚ್ಚಿಕೊಳ್ಳು



ಎಡಗಡೆಯ ಚಿತ್ರ : ಅಂಗವಿಕಲತೆಯಿಂದ ಕೂಡಿದ ಮಗು-ಮೊದಲು :
ಬಲಗಡೆಯ ಚಿತ್ರ : ಅದೇ ಮಗು-ಕೃತಕ ಅಂಗಗಳು ಜೋಡಣೆಗೊಂಡ ಮೇಲೆ

ವಂಥ ಮೃದುವಾದ ಪ್ಲಾಸ್ಟಿಕ್ ಕೈಚೀಲವಿರುತ್ತದೆ. ಇದಕ್ಕೆ ಬುದ್ಧಿವಂತ ಕುಶಲಿಗಳು ಬಣ್ಣ,

ಕೃತಕ ಕೈಗಳನ್ನು ಬಳಸಿ ಕೆಲಸ ಮಾಡುತ್ತಿರುವುದು

ಕೂದಲು, ಗೆರೆಗಳು ಎಲ್ಲವನ್ನೂ ತೀರ ಸ್ವಾಭಾವಿಕವಾಗಿ ಕಾಣುವಂತೆ ಅಳವಡಿಸಬಲ್ಲರು. ಹೊರನೋಟಕ್ಕೆ ಕೃತಕ ಕೈಗೂ ಸ್ವಾಭಾವಿಕ ಕೈಗೂ ವ್ಯತ್ಯಾಸವೇ ತೋರದಂತೆ ಇರುತ್ತದೆ.

**2. ಕೃತಕ ಕಣ್ಣು :** ಆಕಾರದ ಪುನಃಪ್ರಾಪ್ತಿಗೆ ಮಾತ್ರ ಇದು ಸಹಾಯಕ. ಇದರಿಂದ ನೋಡಲು ಆಗದು. ಒಂದು ಕಣ್ಣುಗುಡ್ಡೆ ಯಾವ ಕಾರಣದಿಂದಲಾದರೂ ಇಂಗಿ ಹೋದಾಗ ಅಥವಾ ಶಸ್ತ್ರಕ್ರಿಯೆಯಿಂದ ತೆಗೆದು ಹಾಕಲ್ಪಟ್ಟಾಗ ಕೃತಕವಾದ ಬೇರೆ ಗುಡ್ಡೆಯನ್ನು ಆ ಸ್ಥಳದಲ್ಲಿ ಹುದುಗಿಸಿ ಕಣ್ಣು ಊನವೇ ಆಗಿಲ್ಲವೇನೋ ಎನ್ನುವಷ್ಟು ವ್ಯವಸ್ಥೆಮಾಡಬಹುದು. ಮೊದಲು ಒಂದು ಪ್ಲಾಸ್ಟಿಕ್ ಅಥವಾ ಲೋಹದ ಗೋಳವನ್ನು ಗುಡ್ಡೆ ಇದ್ದ ಸ್ಥಳದಲ್ಲಿ ಇಟ್ಟು ಕಣ್ಣಿನ ಸ್ನಾಯುಗಳನ್ನು ಅದರ ಮುಂದೆ ಸೇರಿಸಿ ಹೊಲಿಯುತ್ತಾರೆ. ಆಮೇಲೆ ಒಂದು ಡುಬ್ಬದ ಮತ್ತು ಹಗುರವಾದ ಪ್ಲಾಸ್ಟಿಕ್ ಅಥವಾ ಗಾಜಿನ ಚಿಪ್ಪನ್ನು ಅದರ ಮುಂದೆ ಇಟ್ಟು ಅದನ್ನು ಕಣ್ಣು ಎವೆಗಳ ಹಿಂದೆ ಹುದುಗಿಸುತ್ತಾರೆ. ಈ ಚಿಪ್ಪಿನಮೇಲೆ ತಕ್ಕ ಬಣ್ಣಗಳಲ್ಲಿ ಕಣ್ಣು ಹೇಗಿರುತ್ತದೋ ಅದೇ ಮಾದರಿಯ ವಿನ್ಯಾಸವಿರುತ್ತದೆ. ಆ ವ್ಯಕ್ತಿಯ ಇನ್ನೊಂದು ಕಣ್ಣಿನ ಚಿಪ್ಪಿನ ಹಾಗೆಯೆ ಇರುವಂಥ ಚಿಪ್ಪನ್ನು ಆರಿಸಿಕೊಂಡು ಅಳವಡಿಸುತ್ತಾರೆ. ಒಳಗಿನ ಪ್ಲಾಸ್ಟಿಕ್ ಅಥವಾ ಲೋಹದ ಗೋಳದ ಮುಂದೆ ಒಂದು ತುಂಡು ಕಡ್ಡಿಯನ್ನು ಅಕ್ಷದ ಹಾಗೆ ನೆಟ್ಟಿದ್ದರೆ ಕೃತಕ ಚಿಪ್ಪನ್ನು ತಕ್ಕಮಟ್ಟಿಗೆ ಸ್ವಾಭಾವಿಕ ಕಣ್ಣಿನಂತೆಯೇ ಚಲಿಸಬಹುದು.



ಕೃತಕ ಕೈಯನ್ನು ಅಳವಡಿಸಿಕೊಳ್ಳುತ್ತಿರುವ ಮಹಿಳೆ

**3. ಕೃತಕ ಶ್ವಾಸಕೋಶ ಮತ್ತು ಕೃತಕ ಮೂತ್ರಜನಕಾಂಗಗಳು :** ಕೃತಕ ಕೈಕಾಲುಗಳಂತೆ ಕ್ರಿಯಾಶೀಲವಾಗಿರುವ ಕೃತಕಸಾಧನಗಳನ್ನು ದೇಹದ ಹೊರಗೆ ಅಳವಡಿಸಿ ಅವುಗಳ ಅನುಕೂಲತೆಯನ್ನು ಪಡೆಯುವುದನ್ನು ಕೃತಕ ಶ್ವಾಸಕೋಶದಲ್ಲಿ ಕಾಣಬಹುದು. ನೀರಿನಲ್ಲಿ ಮುಳುಗಿದುದರಿಂದ, ಇಂಗಾಲದ ಮಾನಾಕ್ಸೈಡ್ ವಿಷವೇರುವಿಕೆಯಿಂದ, ವಿದ್ಯುದಾಘಾತದಿಂದ ಅಥವಾ ಪೋಲಿಯೋ ಮೈಯಲೈಟಿಸ್ ರೋಗದ ಪರಿಣಾಮದಿಂದ ಶ್ವಾಸಸ್ತಂಭನವಾಗಿದ್ದರೆ ಅಂಥವರಲ್ಲಿ ಕೃತಕಶ್ವಾಸಕ್ರಿಯೆಯು ಅಗತ್ಯವಿರುತ್ತದೆ. ಉಸಿರುತಡೆಯಾಗಿದ್ದಾಗ ಈ ವ್ಯಕ್ತಿಗಳನ್ನು ಕೃತಕಶ್ವಾಸಕೋಶಗಳಿಗೆ ಜೋಡಿಸಿ ಇಟ್ಟು ಎಷ್ಟು ಹೊತ್ತು ಬೇಕಾದರೂ ಯಾವ ಪ್ರಮಾಣದಲ್ಲಿ ಬೇಕಾದರೂ ಶ್ವಾಸಕ್ರಿಯೆ ಕೃತಕವಾಗಿ ನಡೆಯುತ್ತಿರುವಂತೆ ಏರ್ಪಾಡು ಮಾಡಬಹುದು. ಕೃತಕ ಶ್ವಾಸಕೋಶದ ಒಳಗಡೆ ಒತ್ತಡ ಕ್ರಮವಾಗಿ ಹೆಚ್ಚು ಅಥವಾ ಕಡಿಮೆ ಆಗುವ ಏರ್ಪಾಡಿದ್ದು ಒತ್ತಡ ಕಡಿಮೆಯಾದಾಗ ಉಸಿರು ಎಳೆದುಕೊಳ್ಳುವುದೂ ಹೆಚ್ಚಾದಾಗ ಉಸಿರುಬಿಡುವುದೂ ಕಂಡುಬರುತ್ತದೆ. ಸಹಜ ಶ್ವಾಸಕ್ರಿಯೆ ಏರ್ಪಡುವವರೆಗೂ ಈ ಕೃತಕ ಶ್ವಾಸಕೋಶವನ್ನು ಉಪಯೋಗಿಸುತ್ತಿರಬೇಕು. ಮೂತ್ರಪಿಂಡಗಳು ರೋಗಪೀಡಿತವಾಗಿ ಮೂತ್ರೋತ್ಪತ್ತಿಗೆ ತಡೆಯುಂಟಾದಾಗ ಸಹಜಮೂತ್ರೋತ್ಪತ್ತಿ ಏರ್ಪಡುವವರೆಗೂ ಕೃತಕ ಮೂತ್ರಜನಕಾಂಗವನ್ನು ಉಪಯೋಗಿಸಬೇಕಾಗುತ್ತದೆ. ಹದಗೆಟ್ಟ ಮೂತ್ರಪಿಂಡಗಳು ಕೆಲವು ವೇಳೆ ತಮ್ಮ ಕಾರ್ಯವನ್ನು ಪುನಃ ಆರಂಭಿಸಲಾರವು. ಅವು ಅಷ್ಟು ಕ್ಷತಿಗೊಂಡಿರುತ್ತವೆ. ಹಾಗಾದಾಗ ಬೇರೆ ಮೂತ್ರಪಿಂಡಗಳನ್ನು ಇವುಗಳ ಬದಲು ಅಳವಡಿಸುವತನಕ, ಅಂದರೆ ಬಹುಶಃ ದೀರ್ಘಕಾಲ, ಕೃತಕಮೂತ್ರಜನಕಾಂಗವನ್ನು ಉಪಯೋಗಿಸುತ್ತಿರಬೇಕು. ದೇಹದಲ್ಲಿಯ ರಕ್ತವನ್ನು ಹೆಪ್ಪುಗಟ್ಟದಂತೆ ಏರ್ಪಾಡುವಮಾಡಿ, ಅದು ಹೊರಪ್ರವಹಿಸಿ ಕೃತಕಮೂತ್ರಜನಕಾಂಗದಲ್ಲಿ ಹೊಕ್ಕುಬರುವಂತೆ ಮಾಡುತ್ತಾರೆ. ಆಗ ಅದು ತನ್ನ ಕಶ್ಮಲವನ್ನೆಲ್ಲ ಕಳೆದುಕೊಂಡು ಶುದ್ಧವಾಗುತ್ತದೆ. ಆಮೇಲೆ ಆ ರಕ್ತವನ್ನು ಪುನಃ ದೇಹದ ಒಳಹೊಗಿಸುತ್ತಾರೆ.

**4. ಕೃತಕ ಹೃದಯ-ಶ್ವಾಸಕೋಶ ಯಂತ್ರ :** 1868ರಿಂದಲೂ ರಕ್ತವನ್ನು ಕೃತಕವಾಗಿ ಗಾಳಿಯ ಪರಿಣಾಮಕ್ಕೆ ಒಡ್ಡುವ ಪ್ರಯತ್ನ ನಡೆದಿದೆ. ಆದರೆ ಸುಮಾರು 1953ರ ತನಕ ಹೆಚ್ಚು ಸಾಧಿಸಲಾಗಲಿಲ್ಲ. ಇದರ ಜೊತೆಗೆ ಇದರಲ್ಲಿ ಹೃದಯದ ಕೆಲಸವನ್ನೂ ಕೃತಕವಾಗಿ ಸೇರಿಸುವ ವಿಧಾನವನ್ನೂ ಯೋಜಿಸಲಾಯಿತು. ಅಂತೆಯೇ ಆ ಸುಮಾರಿನಲ್ಲಿ ಜಾನ್ ಗಿಬ್ಬನ್ ಎಂಬಾತ ಕೃತಕ ಹೃದಯ-ಶ್ವಾಸಕೋಶ ಯಂತ್ರವನ್ನು ಕಂಡುಹಿಡಿದ. ಇಲ್ಲೂ ದೇಹದ ರಕ್ತ  ಹೆಪ್ಪುಗಟ್ಟದಂತೆ ಮಾಡಿ, ಇನ್‌ಫೀರಿಯರ್ ಮತ್ತು ಸುಪೀರಿಯರ್

ವೀನಾತೇವಗಳಿಂದ ನಾಳಗಳ ಮೂಲಕ ಹೊರಸಾಗಿಸಿ ಕೃತಕ ಹೃದಯ–ಶ್ವಾಸಕೋಶಯಂತ್ರಕ್ಕೆ ಒಯ್ಯುತ್ತಾರೆ. ಅಲ್ಲಿ ರಕ್ತ ಗಾಳಿಗೆ ಒಡ್ಡಲ್ಪಟ್ಟು ಆಮ್ಲಜನಕವನ್ನು ಹೀರಿಕೊಂಡು ಇಂಗಾಲದ ಡೈ ಆಕ್ಸೈಡನ್ನು ಕಳೆದುಕೊಂಡು ಬೇರೆ ನಾಳದ ಮೂಲಕ ಎಷ್ಟು ಬೇಕೋ ಅಷ್ಟು ಒತ್ತಡದಿಂದ ಅಯೋರ್ಟಕ್ಕೆ ದಬ್ಬಲ್ಪಡುತ್ತದೆ. ರಕ್ತ ಸ್ವಾಭಾವಿಕ ಹೃದಯ–ಶ್ವಾಸಕೋಶಗಳಿಂದ ಹೊರಗೇ ಇದ್ದು ಆ ಅಂಗಗಳಲ್ಲಿ ರಕ್ತಪರಿಚಲನೆಯೇ ಇಲ್ಲದಿರುವುದರಿಂದ ಅವುಗಳಲ್ಲಿ ಬೇಕಾದ ಶಸ್ತ್ರ ಚಿಕಿತ್ಸೆಗಳನ್ನು ಸುಲಭವಾಗಿ ಮಾಡಿ ಮುಗಿಸಬಹುದು.

**ದೇಹದ ಒಳಗೆ ಕೃತಕವಾಗಿ ಜೋಡಿಸುವ ನಿರ್ಜೀವ ಅಂಗಗಳು :** ದೇಹದ ಒಳಗೆ ನಿರ್ಜೀವ ಕೃತಕ ಅಂಗಗಳನ್ನು ಅಳವಡಿಸಿಯೂ ದೇಹಕಾರ್ಯಗಳು ಸ್ವಾಭಾವಿಕವಾಗಿ ಜರಗುವಂತೆ ಮಾಡಿರುತ್ತಾರೆ. ಕೃತಕ ಅಂಗಗಳು ಪೂರ್ಣವಾಗಿ ತಾವೇ ಒಂದು ಜೀವಕಾರ್ಯವನ್ನು ಜರಗಿಸಬಹುದು ಅಥವಾ ಸಹಾಯಕವಾಗಿ ಇರಬಹುದು. ಇಂಥವನ್ನು ಲೋಹ, ಪ್ಲಾಸ್ಟಿಕ್ ಅಥವಾ ಪ್ರಾಣಿಗಳ, ಮನುಷ್ಯರ ನಿರ್ಜೀವ ಅಂಗಗಳಿಂದ ಮಾಡಿರುತ್ತಾರೆ. ಮುಖ್ಯವಾಗಿ ಸರಳ ರೀತಿಯ ಯಾಂತ್ರಿಕತೆಯೇ ಪ್ರಧಾನವಾದ ಜಡಸ್ವಭಾವದ ಅಂಗಗಳಾದ ಇವು ಶುದ್ಧ ರಕ್ತನಾಳಗಳು, ಕೀಲುಗಳು ಇತ್ಯಾದಿಗಳಿಗೆ ಬದಲಾಗಿ ಉಪಯೋಗಕ್ಕೆ ಬರುತ್ತವೆ. ಹೀಗೆ ನಿರ್ಜೀವ ಹೊರವಸ್ತುಗಳನ್ನು ಅಳವಡಿಸುವಾಗ ಗಮನಿಸಬೇಕಾದ ಕೆಲವು ಅಂಶಗಳಿವೆ. ಈ ವಸ್ತುಗಳನ್ನು ಒಳಹೊಗಿಸುವಾಗ ಸೋಂಕು ಇರಬಾರದು. ಇದ್ದರೆ ಇವು ದೇಹದಿಂದ ವಿಸರ್ಜಿಸಲ್ಪಡುತ್ತವೆ. ಸುತ್ತಮುತ್ತಲಿನ ಸ್ವಾಭಾವಿಕ ಅಂಗಗಳಿಗೆ ಭೌತಿಕವಾಗಿ ಮತ್ತು ರಾಸಾಯನಿಕವಾಗಿ ಇವು ಹೊಂದಿಕೊಳ್ಳುವಂತಿರಬೇಕು. ರಂಧ್ರಗಳಿರಬಹುದು. ನೀರಿನಲ್ಲಿ ಕಿಂಚಿತ್ತೂ ಕರಗದೇ ಇರುವಂಥವಾಗಿರಬೇಕು. ಇಲ್ಲದಿದ್ದರೆ ವಿಷಾಣುರಹಿತ ಊತ ಉಂಟಾಗಿ ಈ ವಸ್ತುಗಳು ವಿಸರ್ಜಿಸಲ್ಪಡುತ್ತವೆ. ವೈಟಾಲಿಯಂ, ಸ್ಟೇನ್‍ಲೆಸ್‍ಸ್ಟೀಲ್, ಏರೋಪ್ಲೇನ್ ಲೋಹ, ನೈಲಾನ್, ಟೆರಿಲೀನ್, ಪಾಲಿಥೀನ್ ಇವುಗಳಿಗೆ ಈ ಸ್ವಭಾವ ಇರುವುದರಿಂದ ಇವು ಅನುಕೂಲವಸ್ತುಗಳು. ಇವುಗಳಿಂದ ತಯಾರುಮಾಡಿದ ಅಂಗಗಳನ್ನು ದೇಹದ ಒಳಗೆ ಜೋಡಿಸಿದಾಗ ಇವು ದೇಹದ ಸ್ವಾಭಾವಿಕ ತುಯ್ತ ಧಕ್ಕೆಗಳಿಗೆ ಜಗ್ಗದೆ ಇರುವಷ್ಟು ಶಕ್ತಿಯುತವಾಗಿದ್ದು ಇರಬೇಕಾದ ಸ್ಥಾನಗಳಲ್ಲಿ ಕದಲದೆ ಇರುವಂತೆ ಬಿಗಿಯಾಗಿ ಬಂಧಿಸಲ್ಪಡಬೇಕು. ಸೊಂಟ ಪ್ರದೇಶದಲ್ಲಿ ಕೀಲನ್ನು ನಿರ್ಮಿಸಿ ಕೃತಕಕಾಲನ್ನು ಅಳವಡಿಸಿದರೆ ಆ ಕೀಲು ಕೆಲವೇ ವರ್ಷಗಳಲ್ಲಿ ಒಂದು ಮೋಟಾರು ಕಾರಿಗೆ ಅದೇ ಕಾಲದಲ್ಲಿ ಆಗುವಷ್ಟು ಧಕ್ಕೆಯನ್ನು ತಡೆದುಕೊಳ್ಳಬೇಕಾಗುತ್ತದೆ. ಅಂದಮೇಲೆ ಕೃತಕಕೀಲು ಯಾವ ಸ್ವಭಾವದ್ದಾಗಿರಬೇಕು ಎನ್ನುವುದು ಅರ್ಥವಾಗುತ್ತದೆ. ಈ ವಿಭಾಗವನ್ನು ಮುಂದಿನ ಆರು ಉಪಶೀರ್ಷಿಕೆಗಳಲ್ಲಿ ಚರ್ಚಿಸಿದೆ.

**1. ಕೃತಕ ಕೀಲುಗಳು :** ವೈಟಾಲಿಯಂ ಲೋಹವನ್ನು ದೇಹದ ಒಳಗೆ ಸೇರಿಸಿದಾಗ ಅದು ಯಾವ ಪ್ರತಿಕೂಲ ಪ್ರತಿಕ್ರಿಯೆಯನ್ನೂ ತೋರಿಸುವುದಿಲ್ಲವೆಂದು ಸ್ಮಿತ್ ಪೀಟರ್‌ಸನ್ ಎಂಬಾತ ಕಂಡುಹಿಡಿದ (1938). ಅಂದಿನಿಂದ ಈ ಲೋಹವನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಲು ತೊಡಗಿದ್ದಾರೆ. ತಲೆ ಒಡೆದು ಹೋದಾಗ, ಮುರಿದ ತಲೆಚಿಪ್ಪಿನ ಬದಲು ಇದರ ತಗಡನ್ನು ಉಪಯೋಗಿಸಲಾಗಿದೆ. ತೊಡೆಯ ಮೂಳೆ ಅಥವಾ ಕೀಲಿನಲ್ಲಿ ವ್ಯಾಧಿ ಅಥವಾ ಘಾತವಾಗಿದ್ದರೆ ಮತ್ತು ಯಾವ ಕಾರಣದಿಂದಲಾದರೂ ಆ ಭಾಗಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಬೇಕಾಗಿದ್ದರೆ ವೈಟಾಲಿಯಂ ತಗಡನ್ನು ಉಪಯೋಗಿಸಿ ಆಯಾ ಭಾಗಗಳ ಜೀರ್ಣೋದ್ಧಾರ ಮಾಡಿದೆ. ಹೀಗೆ ತೊಡೆಮೂಳೆಯ ತಲೆಭಾಗ, ಕೀಲಿನ ಎದುರು ಬದಿರಾದ ಸವೆಯುವ ಭಾಗಗಳು ಪೂರ್ಣವಾಗಿ ತೊಡೆ ದೇಹಕ್ಕೆ ಸೇರಿಕೊಳ್ಳುವ ಕೀಲು ಇವನ್ನೆಲ್ಲ ಮಾಡಿ ನಿಷ್ಕ್ರಿಯಗೊಂಡ ಭಾಗಗಳ ಬದಲು ಅಳವಡಿಸಲಾಗಿದೆ. ಕೀಲಿನ ಒಂದು ಭಾಗದ ಮೂಳೆಯನ್ನು ಮಾತ್ರ ಪಲ್ಲಟಿಸಿದ್ದರೆ ಈ ಕೃತಕಕೀಲು ಸ್ವಾಭಾವಿಕವಾಗಿರುವಂತೆಯೇ ಕೆಲಸ ಮಾಡಲು ಶಕ್ತವಾಗಿರುತ್ತದೆ. ಏಕೆಂದರೆ ಕಾಲಕ್ರಮೇಣ ಅಭಿಮುಖವಾದ ಆರೋಗ್ಯವಾದ ಮೂಳೆಯ ನಿರಂತರ ಸ್ವಾಭಾವಿಕ ಮಾರ್ಪಾಡಿನಿಂದ ಸವೆತ ಸಕ್ರಮಗೊಳ್ಳುತ್ತಲೇ ಇರುತ್ತದೆ. ಕೀಲಿನಲ್ಲಿ ಸಂಧಿಸುವ ಎರಡೂ ಮೂಳೆಗಳನ್ನು ಲೋಹದ ಅಳವಡಿಕೆಯಿಂದ ಸಹಜಸ್ಥಿತಿಗೆ ತಂದು ಜೋಡಿಸಿದ್ದರೆ ಕಾಲಕ್ರಮೇಣ ಆಗುವ ಸವೆತಕ್ಕೆ ತಕ್ಕ ಪ್ರತಿಕ್ರಿಯೆ ಒದಗದೆ ಕ್ರಮೇಣ ಕೀಲು ಅಪ್ರಯೋಜಕವಾಗುವುದು. ಸಾಮಾನ್ಯವಾಗಿ ಈ ರೀತಿ ಕೃತಕಕೀಲನ್ನು ವಯಸ್ಸಾದವರಲ್ಲಿ ಮಾತ್ರ ಅಳವಡಿಸುವುದರಿಂದ ಅದರ ಬಹುಕಾಲಿಕ ಉಪಯುಕ್ತತೆ ಅಥವಾ ಅನುಪಯುಕ್ತತೆಯನ್ನು ಅಳೆದು ಅಂದಾಜು ಮಾಡಲು ಸಾಧ್ಯವಾಗಿಲ್ಲ. ಲೋಹದ ಭಾಗಗಳನ್ನು ಸುತ್ತಲಿನ ಆರೋಗ್ಯವಾದ ಮೂಳೆಗಳಿಗೆ ಜರಗುವಂತೆ ಸೇರಿಸುವುದೂ ಒಂದು ತೊಡಕಿನ ವಿಷಯ. ಮೊಳೆ ಹೊಡೆದು ಸೇರಿಸಿದರೆ ಕ್ರಮೇಣ ಮೊಳೆಗಳು ಸಡಿಲವಾಗುತ್ತವೆ. ಇದನ್ನು ತಪ್ಪಿಸಲು ಇನ್ನೂ ಯಾವ ಉಪಾಯವೂ ತಿಳಿದಿಲ್ಲ. ಮೂಳೆಚೂರುಗಳನ್ನು ಬೆಣೆ ಮೊಳೆಗಳ ಹಾಗೆ ಉಪಯೋಗಿಸಿದರೆ ಮುಂದೆ ಪರಿಣಮಿಸುವ ಪ್ರತಿಕ್ರಿಯೆ ಸ್ವಲ್ಪಮಟ್ಟಿಗೆ ಸಹಜ ರೀತಿಯದಾಗಿದ್ದು ಅನುಕೂಲವಾಗಿರುವುದೇನೋ ಎಂದು ಯೋಚಿಸಲಾಗಿದೆ. ಸಂಧಿವಾತದಿಂದ ಅಥವಾ ಬೇರೆ ಕಾರಣಗಳಿಂದ ಘಾತವಾದ ಬೆರಳು ಕೀಲುಗಳನ್ನೂ ಮೊಣಕೈ ಮೊಣಕಾಲುಗಳನ್ನೂ ಇದೇ ರೀತಿ ಕೃತಕವಾಗಿ ಪುನರ್ವ್ಯವಸ್ಥೆಗೊಳಿಸಿ ಸ್ವಾಭಾವಿಕ ಆಕಾರ ಮತ್ತು ಕ್ರಿಯೆ ಒದಗುವಂತೆ ಪ್ರಯತ್ನಿಸಿದ್ದಾರೆ. ಆದರೆ ಕೀಲು ಅಥವಾ ಮೂಳೆಗಳು ಸಣ್ಣದಾದ ಹಾಗೆ ಲೋಹದ ತಗಡನ್ನು ಅಲ್ಲಿ ಜೋಡಿಸುವುದು ಪ್ರಯಾಸದ ಕೆಲಸವೆನ್ನುವುದು ವ್ಯಕ್ತವಾಗಿಯೇ ಇದೆ.

**2. ಕೃತಕ ಶುದ್ಧ ರಕ್ತನಾಳಗಳು :** 1950ರಿಂದ ಈಚೆಗೆ ಈ ಪ್ರಯತ್ನ ನಡೆದಿದೆ. ಶುದ್ಧರಕ್ತನಾಳಗಳನ್ನು ಒಂದಕ್ಕೊಂದು ಸೇರಿಸಿ ಹೊಲಿಯುವ ವಿಧಾನ ಈ ಶತಮಾನದ ಪ್ರಾರಂಭದಲ್ಲೇ ತಿಳಿದುಬಂದಿದ್ದರೂ ಅದನ್ನು ಪ್ರಾಣಿಗಳಲ್ಲಿ ಪ್ರಯೋಗಗಳಿಗಾಗಿ ಮಾತ್ರ ಅನುಸರಿಸುತ್ತಿದ್ದರು. ಅಳವಡಿಸಲು ಯೋಗ್ಯವಾದ ವಸ್ತು ದೊರೆತಾಗ ಕೃತಕವಾಗಿ ರಕ್ತನಾಳವನ್ನು ಸೃಷ್ಟಿಸಿ ಅಳವಡಿಸುವುದು ಸಾಧ್ಯವಾಯಿತು. ವಾಸ್ತವವಾಗಿ ಯೋಗ್ಯವಾದ ವಸ್ತು ದೊರೆಯುವವತನಕ ಕಾಯಲೇ ಇಲ್ಲ. ಏಕೆಂದರೆ ಮೊತ್ತಮೊದಲಾಗಿ ಶುದ್ಧ ರಕ್ತನಾಳವನ್ನು ಸೃಷ್ಟಿಸಿ ಸೇರಿಸಿ ಹೊಲಿದದ್ದು ವಾಸ್ತವಿಕವಾಗಿ ರೋಗಿ ಧರಿಸಿದ ಷರಟಿನ ಎರಡು ಉದ್ದನೆಯ ಚೂರುಗಳನ್ನು ಉಪಯೋಗಿಸಿಯೇ ಎಂದು ತಿಳಿದು ಬಂದಿದೆ. ಟೆರಿಲೀನ್ ವಸ್ತು ಕೃತಕಶುದ್ಧರಕ್ತನಾಳದ ನಿರ್ಮಾಣಕ್ಕೆ ಅನುಕೂಲ ವಸ್ತು. ಆದರೆ ಈ ವಸ್ತುವಿನ ಗಮನಾರ್ಹವಾದ ಒಂದು ಕೊರತೆ ಏನೆಂದರೆ ಅದು ಅನೇಕ ವೇಳೆ ಹೊರಚಲನದ ದೆಸೆಯಿಂದ ಮಡಿಚಿಕೊಂಡುಬಿಡುವುದು. ಟೆರಿಲೀನ್ ನಾಳಗಳನ್ನು ಶುದ್ಧರಕ್ತನಾಳಗಳಿಗೆ ಸೇರಿಸಿ ಹೊಲಿದಾಗ ಉಂಟಾದ ತೂತುಗಳು ರಕ್ತಹೆಪ್ಪು ಗಟ್ಟುವಿಕೆಯಿಂದ ಮುಚ್ಚಲ್ಪಡುವುದರಿಂದ ರಕ್ತಸ್ರಾವದ ಹೆದರಿಕೆ ಇರುವುದಿಲ್ಲ. ಹೊಲಿದ ಸ್ಥಳ ಕ್ರಮೇಣ ರಕ್ತನಾಳಕ್ಕೆ ಸೇರ್ಪಡೆಯಾಗುವುದರಿಂದ ಸೃಷ್ಟಿಸಿದ ರಕ್ತನಾಳ ಕಳಚಿಕೊಂಡು ಬರುತ್ತದೆ ಎನ್ನುವ ಹೆದರಿಕೆಯೂ ಇರುವುದಿಲ್ಲ. ಮಡಿಚಿಕೊಳ್ಳದಂತೆ ಏನಾದರೂ ಏರ್ಪಾಡು ಮಾಡಿದರೆ, ಕೃತಕ ರಕ್ತನಾಳಗಳಲ್ಲಿ ರಕ್ತ ವೇಗವಾಗಿ ಪ್ರವಹಿಸುತ್ತಿರುವವರೆಗೂ, ಹೆಪ್ಪುಗಟ್ಟುವುದಕ್ಕೆ ಅವಕಾಶವಿಲ್ಲದೆ, ಈ ಸಾಧನ ಬಹು ಉಪಯುಕ್ತವಾಗಿಯೇ ಇರುತ್ತದೆ. ಆದರೆ ಈ ಹೆದರಿಕೆಗಳು ಇದ್ದೇ ಇರುತ್ತವೆ.

**3. ಕೃತಕ ಹೃದಯಕವಾಟಗಳು :** ಅಯೋರ್ಟದ ಕವಾಟಗಳೇ ಮಿಕ್ಕ ಎಲ್ಲ ಕವಾಟಗಳಿಗಿಂತ ಹೆಚ್ಚಾಗಿ ವ್ಯಾಧಿಗ್ರಸ್ತವಾಗಿ ನಿಷ್ಪ್ರಯೋಜಕವಾಗುತ್ತವಾದ್ದರಿಂದ ಆ ಕವಾಟಗಳನ್ನು ಕೃತಕವಾಗಿ ನಿರ್ಮಿಸುವುದು ವಾಡಿಕೆ. ಸೀಮೆಎಣ್ಣೆ ಪಂಪಿನಲ್ಲಿರುವಂತೆ ಒಂದು ಲೋಹದ ಅಥವಾ ಪ್ಲಾಸ್ಟಿಕ್ ಗೋಲಿಗಳನ್ನು ಅಯೋರ್ಟದ ಒಳಗೆ ಅಳವಡಿಸಿ ಅದು ಕವಾಟದಂತೆ ಕ್ರಿಯೆಗೊಳ್ಳುವಹಾಗೆ ಮಾಡುವುದಾಗಿದೆ. ಇದನ್ನು ಸ್ಟಾರ್ ಎಂಬ ವೈದ್ಯ ವಿಜ್ಞಾನಿಯ ಹೆಸರಿನಿಂದ ಸ್ಟಾರ್ ಕವಾಟವೆಂದು ಕರೆಯುತ್ತಾರೆ. ಮರಣಾನಂತರ ಪ್ರಾಣಿಗಳಿಂದ, ಮುಖ್ಯವಾಗಿ ಹಂದಿಗಳಿಂದ, ಅಯೋರ್ಟದ ಕವಾಟಗಳನ್ನು ತೆಗೆದುಕೊಂಡು ಅವನ್ನು ಶೈತ್ಯಾಧಿಕ್ಯದಿಂದ ನಿರ್ಜಲೀಕರಿಸಿದರೆ ಅಂಥ ಸ್ವಾಭಾವಿಕ ಕವಾಟಗಳನ್ನು ಸಹ ಶಸ್ತ್ರಕ್ರಿಯೆಯಿಂದ ಅನುಪಯುಕ್ತವಾದ ಕವಾಟಗಳಿಗೆ ಬದಲಾಗಿ ಅಳವಡಿಸಬಹುದು. ರಕ್ಷಿಸಿಡಲ್ಪಟ್ಟ ಇಂಥ ಕವಾಟಗಳು ವಾಸ್ತವವಾಗಿ ನಿರ್ಜೀವ ವಸ್ತುಗಳೇ ಆದ್ದರಿಂದ ಜೋಡಣೆ ಆದ ವ್ಯಕ್ತಿಯಲ್ಲಿ ಯಾವ ವಿಶೇಷ ಪ್ರತಿಕ್ರಿಯೆಯನ್ನೂ ಉಂಟುಮಾಡದೆ ಹೊಂದಿಕೊಂಡು ತಮ್ಮ ಕೆಲಸವನ್ನು ಜರುಗಿಸುತ್ತವೆ. ಇದೇ ರೀತಿ ರೋಗದಿಂದ ಅಕ್ರಮಕ್ರಿಯೆಗೊಂಡಿರುವ ಇತರ ಹೃದಯ ಕವಾಟಗಳನ್ನು ಮುಖ್ಯವಾಗಿ ತ್ರಿದಳ ಮತ್ತು ದ್ವಿದಳ ಕವಾಟಗಳನ್ನು ಕೃತಕಕವಾಟಗಳಿಂದ ಪಲ್ಲಟಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಈ ಮೂರು ಕವಾಟಗಳನ್ನೂ ಒಂದೇ ಹೃದಯದಲ್ಲಿ ಕೃತಕವಾಗಿ ಅಳವಡಿಸಲಾಗಿದೆ. ಕೃತಕ ಕವಾಟ ಸ್ಟಾರ್‌ಕವಾಟವಾಗಿದ್ದರೆ ಹೃದಯದಿಂದ ರಕ್ತ ರಭಸದಿಂದ ಹೊರದಬ್ಬಲ್ಪಟ್ಟಾಗ ಗೋಲಿಯೊಡನೆ ಪದೇ ಪದೇ ತಿಕ್ಕಾಟವಾಗಿ ರಕ್ತಕಣಗಳು ಅತಿಯಾಗಿ ನಾಶಹೊಂದಬಹುದು. ಈ ಕಾರಣದಿಂದ ರಕ್ತಹೀನತೆಯೂ ಉಂಟಾಗಬಹುದು. ಜೊತೆಗೆ ಗೋಲಿಯ ಮೇಲೆ ರಕ್ತ ಹೆಪ್ಪುಗಟ್ಟಿಕೊಳ್ಳಬಹುದಾದ್ದರಿಂದ ಆ ಹೆಪ್ಪು ಆ ಮೇಲೆ ವಿಷಾಣುಗಳಿಂದ ಆವೃತವಾಗಿ ಹೃದಯದ ಒಳಪೊರೆಗೆ ಸೋಂಕು ತಗಲಿ ಊತವುಂಟಾಗಿ ಪ್ರಾಣಾಂತಕ ಆಗಬಹುದು. ಸ್ಟಾರ್ ಕವಾಟಗಳನ್ನು ಅಳವಡಿಸಿದ ಮೇಲೆ ಅವು ಒಂದು ವರ್ಷಕಾಲ ಕೆಲಸ ಮಾಡಿರುವುದನ್ನು ಅವನ್ನು ಅಳವಡಿಸಿದ ಶೇ. 70 ರಷ್ಟು ವ್ಯಕ್ತಿಗಳಲ್ಲಿ ನೋಡಲಾಗಿದೆ. ಕೆಲವಂತೂ ಐದು ವರ್ಷಗಳ ಮೇಲೂ ಕ್ರಿಯಾಶಕ್ತಿಗುಂದದೆ ಕೆಲಸಮಾಡುತ್ತಿರುವುದು ತಿಳಿದುಬಂದಿದೆ. ಎಷ್ಟಾದರೂ ಶೈತ್ಯಾಧಿಕ್ಯದಿಂದ ನಿರ್ಜಲೀಕರಿಸಿ ಸಂಗ್ರಹಿಸಿಟ್ಟ ಪ್ರಾಣಿಹೃದಯದ ಕವಾಟಗಳನ್ನು ಅಳವಡಿಸುವುದು ಉತ್ತಮ. ಈಚೆಗೆ ಷೂ ಮೇಕರ್ ಮುಂತಾದವರು ಸಿಲಿಕಾನ್ ಮತ್ತು ರಬ್ಬರನ್ನು ಉಪಯೋಗಿಸಿ ಒಂದೇ ಚೂರಿನಲ್ಲಿ ಕೃತಕ ಕವಾಟವನ್ನು ತಯಾರಿಸಿದ್ದಾರೆ. ಇವು ಪೂರ್ಣವಾಗಿ ತೆರೆದಿದ್ದಾಗ ದುಂಡು ರಂಧ್ರದಂತೆಯೂ ಮುಚ್ಚಿಕೊಂಡಾಗ C ಅಥವಾ S ಆಕಾರವಾಗಿ ಇರುವಂತೆಯೂ ತಯಾರುಮಾಡಲಾಗಿದೆ. ರಕ್ತ ಒಳಬರುವ ಕವಾಟಗಳಲ್ಲಿ C ರೀತಿ ಕವಾಟಗಳನ್ನೂ ಹೊರಬರುವಲ್ಲಿ S ರೀತಿಯ ಕವಾಟಗಳನ್ನೂ ಅಳವಡಿಸುತ್ತಾರೆ. ಇವನ್ನು ಉಪಯೋಗಿಸಿದಾಗ ರಕ್ತಕಣಗಳು ಉಜ್ಜುವಿಕೆಯಿಂದ ನಾಶಹೊಂದುವುದಾಗಲಿ ರಕ್ತ ಹೆಪ್ಪುಗಟ್ಟುವುದಾಗಲಿ ಕಾಣಬರುವುದಿಲ್ಲ.

**4. ಕೃತಕ ಹೃದಯ :** ಹೃದಯ ಮಿಡಿದು ರಕ್ತವನ್ನು ಹೆಚ್ಚು ಒತ್ತಡದಿಂದ ಹೊರನೂಕುವ ವಿಧಾನವನ್ನು ಪೂರ್ಣವಾಗಿ ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಎಡಹೃತ್ಕುಕ್ಷಿಯ ರಕ್ತವನ್ನು ಹೆಚ್ಚು ಒತ್ತಡದಿಂದ ಆಯೋರ್ಟಕ್ಕೆ ವರ್ಗಾಯಿಸುವ ಕ್ರಿಯೆಯನ್ನು ಮಾತ್ರ ಕೃತಕಹೃದಯದಿಂದ ಸಾಧಿಸಲಾಗಿದೆ. ಹೃದಯದ ಕವಾಟಗಳು ಅತಿಯಾಗಿ ವ್ಯಾಧಿಗ್ರಸ್ತವಾಗಿ ನಿಷ್ಕ್ರಿಯೆಗೊಂಡಾಗ ಅಥವಾ ಹೃದಯದ ಸ್ನಾಯು ವ್ಯಾಧಿಯಿಂದ ಭಾಗಶಃ ಶಿಥಿಲಗೊಂಡಾಗ ಕೃತಕಹೃದಯ–ಶ್ವಾಸಕೋಶ ಯಂತ್ರದ ಹೃದಯ ಭಾಗವನ್ನು ಮಾತ್ರ ಉಪಯೋಗಿಸಿಕೊಂಡು ಹೆಚ್ಚು ಕಾಲ ಹೃದ್ರೋಗಿಗಳ ರಕ್ತಪರಿಚಲನೆಯನ್ನು ದೇಹದ ಹೊರಗಡೆಯಿಂದಲೇ ಕ್ರಮಗೊಳಿಸಬಹುದಾಗಿದೆ. ದೇಹದ ಒಳಗೇ ಅಳವಡಿಸಬಹುದಾದಂಥ ಕೃತಕ ಹೃದಯ, ಒಂದರ ಪಕ್ಕದಲ್ಲಿ ಒಂದು ಇರುವ, ಎರಡು ಸಂಕುಚಿತವಾಗಬಲ್ಲ ಕೋಶಗಳು. ಇವೆರಡನ್ನೂ ಸುಮಾರಾಗಿ ಗಡುಸಾದ ಇನ್ನೊಂದು ಕೋಶದೊಳಗಿಟ್ಟು ಒಳಗಿನ ಕೋಶಗಳನ್ನೂ ಹೊರಕೋಶವನ್ನೂ ಒಂದು ದ್ರವದಿಂದ ಬೇರ್ಪಡಿಸಿರುತ್ತಾರೆ. ಈ ದ್ರವದ ಒತ್ತಡವನ್ನು ಯಾಂತ್ರಿಕವಾಗಿ ಮಾರ್ಪಾಡು ಮಾಡಿ ಒಳಗಿನ ಕೋಶಗಳಲ್ಲಿ ಒಂದು ಸಂಕುಚಿತವಾದಾಗ ಇನ್ನೊಂದು ಹಿಗ್ಗುವಂತೆ ಏರ್ಪಾಡು ಮಾಡಿರುತ್ತಾರೆ. ಈ ಕ್ರಮಕ್ಕೆ ಬೇಕಾದ ಒತ್ತಡದ ಏರುವಿಕೆ ಇಳಿಯುವಿಕೆಗಳನ್ನು ಒಂದು ವಿದ್ಯುತ್ ಮೋಟಾರಿನಿಂದ ನಡೆಸಲ್ಪಡುವ ಪಂಪಿನಿಂದ ಸಾಧಿಸಲಾಗಿದೆ. ಮೋಟಾರನ್ನೂ ಪಂಪನ್ನೂ ಎದೆಯಲ್ಲಿ ಸ್ಥಾಪಿಸಲು ಸ್ಥಳವಿಲ್ಲದೆ ಅವನ್ನು ಹೊಟ್ಟೆಯೊಳಗಿಟ್ಟು ಒಂದು ದೊಡ್ಡ ನಾಳದಿಂದ ಎದೆಯಲ್ಲಿರುವ ಕೃತಕ ಹೃದಯಕ್ಕೆ ಸಂಪರ್ಕ ಉಂಟುಮಾಡಿರುತ್ತಾರೆ. ಮೋಟಾರನ್ನು ನಡೆಸಬೇಕಾದ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಕಷ್ಟ. ದೇಹದ ಬೇರೆ ಸ್ನಾಯುಗಳಿಂದ ಈ ಶಕ್ತಿಯನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ದೇಹದ ಬೇರೆಯಾವ ಸ್ನಾಯುವಿಗೂ ಹೃದಯದಂತೆ ನಿರಂತರ ಚಟುವಟಿಕೆಯನ್ನು ತಡೆದುಕೊಳ್ಳಲು ಸಾಧ್ಯವಿಲ್ಲ. ದೇಹದ ಹೊರಗೆ ಅಥವಾ ಒಳಗೆ ವಿದ್ಯುತ್ ಕೋಶಗಳನ್ನಿಟ್ಟು ಶಕ್ತಿಯನ್ನು ಪೂರೈಸುವುದೂ ಅಷ್ಟು ಅನುಕೂಲಕರವಾಗಿರುವುದಿಲ್ಲ. ಎಚ್ಚರಿಕೆಯಿಂದ ಪದೇಪದೇ ವಿದ್ಯುತ್‌ಕೋಶಗಳನ್ನು ಬದಲಿಸುತ್ತಲೇ ಇರಬೇಕು. ಪದೇಪದೇ ಬದಲಿಸದೇ ಇರಬಹುದಾದ, ಬಹುಕಾಲಿಕವಾಗಿ ಬಾಳಿಕೆಬರುವ ವಿದ್ಯುತ್‌ಕೋಶಗಳು ದೊಡ್ಡದಾಗಿದ್ದು ದೇಹದ ಒಳಗೆ ಸೇರಿಸಲು ಅನುಕೂಲವಾಗಿರುವುದಿಲ್ಲ. ದೇಹದ ಇತರ ಸ್ನಾಯುಗಳ ಚಲನೆಯಿಂದ ಒಳಗೆ ಸೇರಿಸಿರುವ ವಿದ್ಯುತ್‌ಕೋಶಗಳ ಶಕ್ತಿಯನ್ನು ಭಾಗಶಃ ವರ್ಧಿಸುತ್ತ ಇರಬಹುದಾದರೂ ಅನನುಕೂಲತೆ ನಿವಾರಣೆ ಆದ ಹಾಗೆ ಆಗಲಿಲ್ಲ. ಅದಕ್ಕೆ ಹೊರಗಡೆಯಿಂದಲೇ ಹೇಗಾದರೂ ಒಳಗಿನ ಮೋಟಾರಿಗೆ ವಿದ್ಯುತ್‌ಪೂರೈಕೆ ಮಾಡುವ ಏರ್ಪಾಡನ್ನು ಯೋಚಿಸಲಾಗಿದೆ. ಇದನ್ನು ಹೃದಯದ ಕೃತಕ ನರ ಅಳವಡಿಕೆಯಲ್ಲಿ ಕಾರ್ಯಶೀಲವಾಗಿ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕವಾಟಗಳೇ ಇಲ್ಲದ ಹೃದಯವನ್ನು ಅಳವಡಿಸಲಾಗಿದೆ. ಇವು ಬೆರಳಿನಾಕಾರದ ಪಂಪುಗಳಂತೆ ಇದ್ದು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಕ್ರಮವಾಗಿ ಸಂಕುಚಿತವಾಗುವಂತೆ ಇರುತ್ತವೆ. ಇದರಿಂದ ರಕ್ತಪರಿಚಲನೆ ಏಕಮಾರ್ಗಿಕವಾಗಿಯೇ (ಕವಾಟಗಳಿಲ್ಲದಿದ್ದರೂ) ಸಾಗುವಂತಿರುತ್ತದೆ. ಕೃತಕ ಹೃದಯ ವಾಸ್ತವವಾಗಿ ಕೃತಕ ಎಡಹೃತ್ಕುಕ್ಷಿ ಮಾತ್ರವಾಗಿ ತಾತ್ಕಾಲಿಕವಾಗಿ ಹೃದಯ ಕವಾಟಗಳನ್ನು ಕೃತಕವಾಗಿ ಅಳವಡಿಸಿದಾಗ ಅಥವಾ ಹೃದಯಸ್ನಾಯು ಭಾಗಶಃ ಶಿಥಿಲಗೊಂಡಾಗ ಉಪಯೋಗಿಸಲು ಅನುಕೂಲವಾಗಿದೆ. ಒಟ್ಟಿನಲ್ಲಿ ಹೃದಯದಲ್ಲಿ ಮೂರು ಕವಾಟಗಳು ಮತ್ತು ಎಡಹೃತ್ಕುಕ್ಷಿಗಳನ್ನು ಕೃತಕವಾಗಿ ಅಳವಡಿಸಬಹುದೆಂದಾಯಿತು. ಸದ್ಯದ ಸ್ಥಿತಿಯಲ್ಲಿ ಕೃತಕವಾಗಿ ಇಷ್ಟು ಮಾಡಲು ಮಾತ್ರ ಸಾಧ್ಯವಾಗಿದೆ.

**5. ಕೃತಕ ನರಗಳು :** ಬೆನ್ನುಮೂಳೆ ರೋಗದಿಂದ ಅಥವಾ ಆಘಾತದಿಂದ ಮುರಿದು ಹೋದಾಗ ಅದರೊಳಗಿರುವ ನರಮಂಡಲ ಬಹುವಾಗಿ ಹಿಸುಕಲ್ಪಟ್ಟು ಅಥವಾ ಕತ್ತರಿಸಿಯೇ ಹೋಗಿ ನಿಷ್ಕ್ರಿಯವಾಗುತ್ತದೆ. ಹೀಗಾದಾಗ ಸಾಮಾನ್ಯವಾಗಿ ಕಾಲುಗಳ ಸ್ವಾಧೀನ ತಪ್ಪುವುದೇ ಅಲ್ಲದೆ ಮೂತ್ರಕೋಶದ ಸ್ವಾಧೀನವೂ ತಪ್ಪುತ್ತದೆ. ಮೂತ್ರಕೋಶ ಯಥಾವತ್ತಾಗಿ ಕೆಲಸ ಮಾಡಬೇಕಾದರೆ, ಅದಕ್ಕೆ ಕ್ರಿಯಾವಾಹಿ ನರಗಳು ನರಮಂಡಲದಿಂದ ಒದಗಿಸುತ್ತಿದ್ದ ಪ್ರಚೋದನೆಯಂತೆಯೇ ಕೃತಕ ಪ್ರಚೋದನೆ ದೊರೆಯುವಂತೆ ಮಾಡಬೇಕು. ದೇಹದ ಹೊರಗಡೆ ಇರುವ ವಿದ್ಯುತ್‌ಕೋಶಗಳಿಂದ ಒದಗುವ ವಿದ್ಯುಚ್ಛಕ್ತಿಯನ್ನು ತಂತಿಗಳ ಮೂಲಕ ಮೂತ್ರಕೋಶದಲ್ಲಿ ನಿರ್ದಿಷ್ಟ ಕ್ರಮದಲ್ಲಿ ಪ್ರವಹಿಸುವಂತೆ ಮಾಡಿದರೆ ಅಂಥ ಕೃತಕ ಪ್ರಚೋದನೆಯಿಂದ ಅದು ಸಂಕುಚಿತವಾಗುವಂತೆ ಮಾಡಬಹುದು. ವಿದ್ಯುಚ್ಛಕ್ತಿಯನ್ನು ಒಯ್ಯುವ ತಂತಿಗಳನ್ನು ಹೊಟ್ಟೆಯಲ್ಲಿ ರಂಧ್ರ ಮಾಡಿ ನುಗ್ಗಿಸಿ ಮೂತ್ರಕೋಶದ ಮೇಲೆ ಸರಿಯಾದ ಸ್ಥಳದಲ್ಲಿ ಕೂರಿಸಿ ಸೇರಿಸಿ ಹೊಲಿಯಬೇಕಾಗುತ್ತದೆ. ತಂತಿಗಳ ಈ ಭಾಗಗಳಾದರೂ ಬೆಳ್ಳಿ ತಂತಿಗಳಾಗಿರಬೇಕು. ಹೊಸ ವಸ್ತುವನ್ನು ದೇಹದೊಳಗೆ ಅಳವಡಿಸಿ, ನಿರ್ದಿಷ್ಟ ಸ್ಥಾನದಲ್ಲಿ ಪ್ರತಿಷ್ಠಿಸಬೇಕಾದರೆ ಏನೇನು ಎಚ್ಚರಿಕೆ ತೆಗೆದುಕೊಳ್ಳಬೇಕೋ ಅಷ್ಟು ಎಚ್ಚರಿಕೆಯನ್ನು ಇಲ್ಲೂ ತೆಗೆದುಕೊಳ್ಳಬೇಕು. ಮೂತ್ರಕೋಶ ಮೂತ್ರದಿಂದ ಅತಿಯಾಗಿ ಹಿಗ್ಗಲ್ಪಟ್ಟು, ತಡೆ ಮಿತಿಮೀರಿ ಮೂತ್ರತೊಟ್ಟು ತೊಟ್ಟಾಗಿ ಸ್ರವಿಸುತ್ತಲೇ ಇರಬಹುದಾದ ಸಂದರ್ಭದಲ್ಲಿಯೂ ಇದೇ ರೀತಿಯಲ್ಲಿ, ಮೂತ್ರಕೋಶದ ಬಾಯಲ್ಲಿದ್ದು ನಲ್ಲಿಯಂತೆ ವರ್ತಿಸುವ ಉಂಗುರಸ್ನಾಯುವನ್ನೂ ಕೃತಕ ಪ್ರಚೋದನೆಯಿಂದ ಸಂಕುಚಿತವಾಗಿರುವಂತೆಯೇ ಇಟ್ಟುಕೊಂಡು, ಬೇಕಾದಾಗ ಅದು ಸಡಿಲ ಬಿಡುವಂತೆ ಮಾಡಿಕೊಳ್ಳಬಹುದು. ಮೂತ್ರ ವಿಸರ್ಜನೆಯನ್ನು ಕೃತಕವಾಗಿ ಈ ವಿಧಾನಗಳಿಂದ ಸಕ್ರಮಿಸಿಕೊಳ್ಳಬಹುದಾಗಿದೆ. ಇಂಥ ಸಂದರ್ಭಗಳಲ್ಲಿ ಹೀಗೆಯೇ ನಿಷ್ಕ್ರಿಯೆಗೊಳ್ಳುವ ಮಲಕೋಶದ ಉಂಗುರಸ್ನಾಯುವನ್ನೂ ಕೃತಕವಾದ ನರಪ್ರಚೋದನೆ ಕ್ರಮದಿಂದ ಬೇಕಾದಾಗ ಸಡಿಲಗೊಳ್ಳುವಂತೆ ಏರ್ಪಾಡು ಮಾಡಿಕೊಳ್ಳಬಹುದು. ಈ ರೀತಿ ಹೊರಗಿನಿಂದ ರಂಧ್ರಮಾಡಿ ತಂತಿಗಳನ್ನು ಒಳಹೊಗಿಸಿ ಕೃತಕನರಗಳನ್ನು ಒದಗಿಸುವ ಬದಲು ಒಂದು ತಂತಿಯ ಸುರುಳಿಯನ್ನು ದೇಹದ ಒಳಗೆ ಇಟ್ಟು ಅದರ ಎರಡು ತುದಿಗಳನ್ನೂ ಈ ಅಂಗಗಳಿಗೆ ಬೇರೆಬೇರೆಯಾಗಿ ಸೇರಿಸಿ ಅದೇ ನರದಲ್ಲಿ ಹೊಲಿದು ಹೊರಗಡೆ ಇನ್ನೊಂದು ತಂತಿ ಸುರುಳಿಯನ್ನು ಇಟ್ಟು ಈ ಹೊರಗಿನ ಸುರುಳಿಯನ್ನು ಹೊರಗೇ ಇರುವ ವಿದ್ಯುತ್ಕೋಶಕ್ಕೆ ಒಂದು ಸ್ವಿಚ್ಚನ್ನಿಟ್ಟು ಸೇರಿಸಿರಬಹುದು. ಹೊರಗಿನ ಸುರುಳಿಯಲ್ಲಿ ವಿದ್ಯುತ್ಪ್ರವಾಹವನ್ನುಂಟು ಮಾಡಿದಾಗ ಒಳಗಿನ ತಂತಿ ಸುರುಳಿಯಲ್ಲಿ ಕ್ಷಣಿಕವಾಗಿ ವಿದ್ಯುತ್ತು ಪ್ರೇರಣೆ ಉಂಟಾಗುತ್ತದೆ. ಅದು ಅಂಗದಲ್ಲಿ ಪ್ರವಹಿಸಿ, ಅದನ್ನು ಪ್ರಚೋದಿಸಿ ಅದು ಸಂಕುಚಿಸುವಂತೆ ಮಾಡುತ್ತದೆ. ಇದರಿಂದ ಮಲಮೂತ್ರ ವಿಸರ್ಜನೆಯನ್ನು ಕೃತಕವಾಗಿ ಹತೋಟಿಯಲ್ಲಿಟ್ಟುಕೊಂಡಿರಬಹುದು. ಆದರೆ ಸದ್ಯದಲ್ಲಿ ಮಲಮೂತ್ರ ಕೋಶಗಳ ಸ್ನಾಯುಗಳನ್ನು ಕೃತಕವಾಗಿ ಹೊರಗಡೆ ತಂತಿಗಳಿಂದಲೇ ಹತೋಟಿಯಲ್ಲಿಟ್ಟುಕೊಳ್ಳುವುದು ವಾಡಿಕೆ.

**ಹೃದಯಕ್ಕೆ ಕೃತಕನರ ಪೂರೈಕೆ :** ಬಲಹೃತ್ಕರ್ಣದ ಒಂದು ಭಾಗ ನಿಯಮಿತವಾಗಿ ಸ್ವಪ್ರಚೋದನೆಗೊಳ್ಳುವುದರಿಂದ ಮತ್ತು ಆ ಪ್ರಚೋದನೆ ಹೃದಯದ ಮಿಕ್ಕ ಭಾಗಗಳಿಗೆ ನಿರ್ದಿಷ್ಟ ಮಾರ್ಗದಲ್ಲಿ ಒಯ್ಯಲ್ಪಡುವುದರಿಂದ ಹೃದಯ ಸಹಜವಾಗಿ ನಿಯಮಿತವಾಗಿ ಮಿಡಿಯುವುದು. ಹೃದಯದ ಈ ವೇಗನಿಷ್ಕರ್ಷಕಸ್ಥಾನ ಮತ್ತು ಪ್ರಚೋದನಾವಾಹಕ ಮಾರ್ಗ ರೋಗದಿಂದಲೋ ಆಘಾತದಿಂದಲೋ ತಾತ್ಕಾಲಿಕವಾಗಿ ಅಥವಾ ಕಾಯಂ ಆಗಿ ನಿಷ್ಕ್ರಿಯಗೊಂಡಾಗ ಹೃದಯದ ಮಿಡಿತದಲ್ಲಿ ಅಕ್ರಮ ತಲೆದೋರುವುದು. ಹೃದಯಮಿಡಿತ ಅತಿ ಹೆಚ್ಚಾದರೂ ಅತಿ ಕಡಿಮೆ ಆದರೂ ಸಾಮಾನ್ಯವಾಗಿ ರಕ್ತದ ಒತ್ತಡ ಕಡಿಮೆ ಆಗಿಬಿಡುತ್ತದೆ. ರಕ್ತದ ಒತ್ತಡ ನೈಜಪ್ರಮಾಣದಲ್ಲಿದ್ದು ಬದುಕು ನಿರ್ವಿಘ್ನವಾಗಿ ಮುಂದುವರಿಯಬೇಕಾದರೆ ಹೃದಯದ ಈ ಅಕ್ರಮವನ್ನು ಹೋಗಲಾಡಿಸಬೇಕು. ಇದನ್ನು ಕೃತಕ ವೇಗನಿಷ್ಕರ್ಷಕಸ್ಥಾನವನ್ನು ಅಳವಡಿಸಿ ಸಾಧಿಸಬಹುದು. ವೇಗನಿಷ್ಕರ್ಷಕಸ್ಥಾನ ಹೃತ್ಕರ್ಣಗಳನ್ನು ಪ್ರಚೋದಿಸಿ ಪುನಃ ತಂತಿಗಳಿಂದ ಹೃತ್ಕುಕ್ಷಿಗಳನ್ನು ಪ್ರಚೋದಿಸುವಂತೆ ಇರುತ್ತದೆ. ಕೃತಕ ವೇಗನಿಷ್ಕರ್ಷಕ ದೇಹದ ಹೊರಗಿರುತ್ತದೆ. ಅದು ಒಂದು ವಿದ್ಯುತ್ಕೋಶದಿಂದ ವಿದ್ಯುತ್ತನ್ನು, ಗಡಿಯಾರ ಸಾಧನದ ನೆರವಿನಿಂದ ನಿಯಮಿತವಾಗಿ, ತಂತಿಗಳ ಮೂಲಕ ಒದಗಿಸುತ್ತದೆ. ಮಲಮೂತ್ರಕೋಶಗಳ ಕೃತಕ ಹತೋಟಿಯಲ್ಲಿಯಂತೆಯೇ ಇಲ್ಲೂ ತಂತಿಗಳು ಒಳಹೋಗುವ ರಂಧ್ರಗಳೆಡೆಯಲ್ಲಿ ಕೀತುಕೊಳ್ಳಬಹುದು. ಹೊರಗಿನ ವಿದ್ಯುತ್ಕೋಶಗಳು ದುರ್ಬಲಗೊಳ್ಳುವುದಕ್ಕೆ ಮೊದಲೇ ಎಚ್ಚರಿಕೆಯಿಂದ ಅದನ್ನು ಬದಲಾಯಿಸುತ್ತಿರಬೇಕು. ಆದ್ದರಿಂದ ಬಹುಕಾಲ ಬಾಳಿಕೆ ಬರುವ ವಿದ್ಯುತ್ಕೋಶಗಳನ್ನೂ ಗಡಿಯಾರ ಸಾಧನಗಳನ್ನೂ ದೇಹದ ಒಳಗೇ ಅಳವಡಿಸುವ ಏರ್ಪಾಡು ನಡೆದಿದೆ. ಬಹುಕಾಲಿಕವಾಗಿಯಾದರೂ ವಿದ್ಯುತ್ಕೋಶವನ್ನು ಬದಲಿಸಬೇಕಾದ ಅವಶ್ಯಕತೆ ಇರುವುದರಿಂದ ಪ್ರತಿಸಾರಿಯೂ ಶಸ್ತ್ರಕ್ರಿಯೆಯನ್ನು ಮಾಡಿ ಬದಲಿಸುತ್ತಿರಬೇಕಾಗಿದೆ. ಆದ್ದರಿಂದ ಇಲ್ಲೂ ಹೊರಗಡೆ ಇರುವ ತಂತಿ ಸುರುಳಿಯಿಂದ ಒಳಗಡೆ ತಂತಿ ಸುರುಳಿಯಲ್ಲಿ ವಿದ್ಯುತ್‌ಪ್ರೇರಣೆ ಉಂಟಾಗುವ ವಿಧಾನವನ್ನು ಬಳಸಿಕೊಂಡು ಕೃತಕವೇಗನಿಷ್ಕರ್ಷಕವನ್ನು ದೇಹದ ಒಳಗೆ ಅಳವಡಿಸಿದ್ದಾರೆ. ಹೊರಗಡೆ ತಂತಿ ಸುರುಳಿಯಲ್ಲಿ ಗಡಿಯಾರ ಸಾಧನ ಮತ್ತು ಹೊರಗಡೆಯ ವಿದ್ಯುತ್ಕೋಶಗಳಿಂದ ನಿಯಮಿತವಾಗಿ ವಿದ್ಯುತ್ ಪ್ರವಾಹವಾದಾಗಲೆಲ್ಲ ಅದೇ ನಿಯಮದಂತೆ ಕ್ಷಣಿಕವಾಗಿ ಒಳಸುರುಳಿಯಲ್ಲಿ ವಿದ್ಯುತ್ ಪ್ರವಾಹವುಂಟಾಗಿ ಹೃದಯಮಿಡಿತವೇರ್ಪಡುತ್ತದೆ. ಇದು ಖಾಯಂ ಆಗಿ ಕೃತಕವೇಗ ನಿಷ್ಕರ್ಷಕವನ್ನು ಅಳವಡಿಸಬೇಕಾಗುವಾಗ ಅನುಸರಿಸುವುದಕ್ಕೆ ಯೋಗ್ಯವಾದ ಮಾರ್ಗ. ಜೊತೆಗೆ ವಾಸ್ತವವಾಗಿ ಇದರ ಕ್ರಿಯೆ ಹೊರಗಡೆಯೇ ಇರುವ ವಿದ್ಯುತ್ಕೋಶದಿಂದಲೇ ಜರಗುವುದರಿಂದ ವಿಷಾಣುಗಳಿಂದ ಕೀತುಕೊಳ್ಳುವ, ವಿದ್ಯುತ್ಕೋಶದ ಆಯುಸ್ಸು ಮುಗಿದುಹೋಗುವಂತಿದೆ ಯೇನೋ ಎನ್ನುವ ಆತಂಕದ ತಂತಿಗಳು ಮುರಿದುಹೋಗುವ ಇತ್ಯಾದಿ ಯಾವ ತೊಂದರೆಗಳೂ ಇರುವುದಿಲ್ಲವೆಂಬುದನ್ನು ಗಮನಿಸಬಹುದು. ದೇಹದ ಒಳಗಿರುವ ತಂತಿ ಸುರುಳಿಯಲ್ಲಿ ವಿದ್ಯುತ್ತಿನ ಉತ್ಪತ್ತಿಯನ್ನು ದೇಹದ ಇತರ ಸ್ನಾಯುಗಳ ಕ್ರಿಯೆಯಿಂದಲೇ ಉಂಟುಮಾಡಬಹುದಾದ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ. ತಾತ್ಕಾಲಿಕವಾಗಿ ಹೃದಯದ ಮಿಡಿತದ ವೇಗವನ್ನು ನಿಷ್ಕರ್ಷಿಸುವುದಕ್ಕೆ ಹೊರಗಡೆಯಿಂದ ತಂತಿಯನ್ನು ಒಳಹೊಗಿಸಿ ಅದನ್ನು ಹೃದಯಕ್ಕೆ ಸಂಪರ್ಕಿಸುವ ಸಾಧನವನ್ನೆ ಉಪಯೋಗಿಸುತ್ತಾರೆ.

**ಕೃತಕ ಸೈನೋ ಅಯೋರ್ಟಿಕ್ ನರ :** ಕೊನೆಯದಾಗಿ, ನರದಂತೆಯೇ ಸ್ವಾಭಾವಿಕ ರೀತಿಯ ಪ್ರಚೋದನೆಯನ್ನು ಉಂಟುಮಾಡಿ ಕಾರ್ಯಸಿದ್ಧಿಯನ್ನು ಸಾಧಿಸುವ ಈ ವಿಧಾನ ರಕ್ತದ ಒತ್ತಡವನ್ನು ಕೃತಕವಾಗಿ ನಿಯಂತ್ರಿಸಲು ಉಪಯೋಗಕಾರಿಯಾದೀತೇ ಎಂದು ಸಹ ಪರಿಶೀಲಿಸಲಾಗುತ್ತಿದೆ. ಸ್ವಾಭಾವಿಕವಾಗಿ ರಕ್ತದ ಒತ್ತಡ ಸೈನೋಅಯೋರ್ಟಿಕ್ ನರಗಳ ನಿಯಮಿತ ಪ್ರಚೋದನೆಯಿಂದ ನಿಯಂತ್ರಿಸಲ್ಪಡುತ್ತದೆ. ಸ್ವಾಭಾವಿಕ ನಿಯಂತ್ರಣಕ್ಕೆ ಚ್ಯುತಿ ಉಂಟಾದಾಗ ಅದರ ಬದಲಾಗಿ ಸೈನೋಅಯೋರ್ಟಿಕ್ ನರಗಳಂತೆಯೇ ನಿಯಮಿತವಾಗಿ ಪ್ರಚೋದನೆಯನ್ನು ಉಂಟುಮಾಡುವ ವಿದ್ಯುತ್ ಸಾಧನವನ್ನು ತಯಾರು ಮಾಡಲಾಗುತ್ತದೆ.

**6. ಇತರ ನಿರ್ಜೀವ ವಸ್ತುಗಳ ಅಳವಡಿಕೆ :** ಇದೇ ರೀತಿ ಶಬ್ದಜನಕ ಕೋಶ, ಹೊರಕಿವಿ ಪೊರೆ, ಕಣ್ಣಿನ ಮಸೂರ–ಇವನ್ನೂ ಕೃತಕವಾಗಿ ಅಳವಡಿಸಲಾಗಿರುವುದು. ಕಿವಿಪೊರೆ ಬಹುವಾಗಿ ಘಾತದಿಂದಲೊ ರೋಗದಿಂದಲೊ ಹರಿದುಹೋಗಿ ಕಿವಿಗೆ ಬಿದ್ದ ಶಬ್ದಗಳು ಒಳಕಿವಿಯ ಸ್ಪಂದನವನ್ನುಂಟುಮಾಡದೇ ಇರುವ ಸ್ಥಿತಿಯಲ್ಲಿ ಕೃತಕ ಹೊರಕಿವಿ ಪೊರೆಯನ್ನು ಅಳವಡಿಸುವುದು ಪ್ರಯೋಜನಕಾರಿ. ಇದನ್ನು ನಿರ್ಜೀವ ವಸ್ತುಗಳಿಂದ ತಯಾರು ಮಾಡುತ್ತಾರೆ. ಇದೇ ರೀತಿ ನಡುಕಿವಿಯ ಮೂಳೆಗಳು ಅಥವಾ ಒಳಕಿವಿ ಪೊರೆಯ ಭಾಗ ನಿಷ್ಕ್ರಿಯಗೊಂಡು, ಕಿವಿಗೆ ಬಿದ್ದ ಶಬ್ದ ಕೇಳಿಸದಂತಿದ್ದರೆ, ಹೊರವಸ್ತುಗಳನ್ನು ಉಪಯೋಗಿಸಿ ಇವನ್ನು ಕೃತಕವಾಗಿ ಸೃಷ್ಟಿಸಿ ಕೇಳುವಿಕೆಯನ್ನು ಉತ್ತಮಪಡಿಸಬಹುದು. ಆದರೆ ಇವನ್ನು ಜೀವಂತನಾಟಿ ವಿಧಾನದಲ್ಲಿ ಹೆಚ್ಚು ಉಪಯುಕ್ತವಾಗುವಂತೆ ಮಾಡಿದ್ದಾರೆ. ಇದೇ ರೀತಿ ಏಡಿಗಂತಿ ಇರುವ ಶಬ್ದಜನಕ ಕೋಶವನ್ನು ಪೂರ್ಣವಾಗಿ ತೆಗೆದು ಹಾಕಿದ ಮೇಲೆ ಶವದಿಂದ ತೆಗೆದ (ಅಂದರೆ ನಿರ್ಜೀವವಾದ) ಇನ್ನೊಂದು ಶಬ್ದಜನಕ ಕೋಶವನ್ನು ಅಳವಡಿಸುವ ಪ್ರಯತ್ನ ನಡೆದಿದೆ. ಶವಗಳಿಂದ ಅಂಗಗಳನ್ನು ಪಡೆಯುವುದು ಬಲು ಜಟಿಲಕಾರ್ಯ. ಈ ಅಳವಡಿಕೆ ಬಲು ಕ್ಲಿಷ್ಟ. ಇಂಥ ಪ್ರಯತ್ನವನ್ನು 1969ರಲ್ಲಿ ಒಂದೇ ಸಾರಿ ಮಾಡಿರುವುದು ತಿಳಿದುಬಂದಿದೆ. ಅಳವಡಿಸಿದ ವ್ಯಕ್ತಿಯಲ್ಲಿ ಕೃತಕ ಶಬ್ದಜನಕ ಕೋಶ 5 ತಿಂಗಳು ಕಾರ್ಯವೆಸಗಿ ಅವನು ತಕ್ಕಮಟ್ಟಿಗೆ ಮಾತಾಡಬಲ್ಲವನಾಗಿದ್ದನೆಂದೂ 5 ತಿಂಗಳ ಮೇಲೆ ಅವನಲ್ಲಿದ್ದ ಏಡಿಗಂತಿ ರೋಗ ಮರುಕಳಿಸಿ ಅವನು ಮರಣ ಹೊಂದಿದನೆಂದೂ ತಿಳಿದು ಬಂದಿದೆ. ಕಣ್ಣುಪೊರೆ ಬಂದಾಗ ಅಥವಾ ಇನ್ನಾವ ಕಾರಣದಿಂದಲಾದರೂ ಕಣ್ಣೊಳಗಿರುವ ಮಸೂರ ನಿರುಪಯುಕ್ತವಾಗಿ ದೃಷ್ಟಿನಾಶವಾಗಿದ್ದರೆ ಅಂಥ ಮಸೂರವನ್ನು ತೆಗೆದುಬಿಟ್ಟು ಅದರ ಸ್ಥಳದಲ್ಲಿ ಪ್ಲಾಸ್ಟಿಕ್ ಮಸೂರವನ್ನಿಟ್ಟು ದೃಷ್ಟಿ ಸರಿಹೋಗುವಂತೆ ಮಾಡಬಹುದು.

**ದೇಹದ ಒಳಗಡೆ ಜೀವಂತ ವಸ್ತುಗಳ ಅಳವಡಿಕೆ ನಾಟಿ:** ದೇಹದ ಒಳಗೆ ಜೀವಂತ ಭಾಗಗಳನ್ನು ಕೃತಕವಾಗಿ ಅಳವಡಿಸುವುದು ನಾಟಿ ವಿಧಾನ. ದೇಹದ ಹೊರಗೆ ಜೀವಂತ ಭಾಗಗಳನ್ನು ಅಳವಡಿಸುವ ವಿಧಾನವನ್ನು, ಮೂಗುಕಿವಿಗಳು ಛಿದ್ರವಾಗಿದ್ದಾಗ ಅವನ್ನು ಪುನರ್ವ್ಯವಸ್ಥೆ ಮಾಡುವುದಕ್ಕೆ ಕೈಗೊಳ್ಳುತ್ತಾರೆ. ದೃಢತೆಗೆ ಮೃದ್ವಸ್ಥಿಯನ್ನೂ ಆಕಾರ ನಿರ್ಮಾಣಕ್ಕೆ ಚರ್ಮವನ್ನೂ ತೆಗೆದುಕೊಂಡು ನಾಟಿ ಹಾಕಬೇಕಾಗುತ್ತದೆ. ಹತ್ತಿರದ ಸ್ಥಳದಿಂದ ಅದೇ ಭಾಗದ ಚರ್ಮವನ್ನು ತೆಗೆದು, ಬೇಕಾದ ಸ್ಥಳದಲ್ಲಿ ತಕ್ಕ ಸಿದ್ಧತೆ ಮಾಡಿ ಅದನ್ನು ನೆಟ್ಟು, ವಿಷಾಣುಗಳಿಂದ ಕೀತುಕೊಳ್ಳುವುದನ್ನು ತಡೆಗಟ್ಟಿದರೆ, ಈ ಚರ್ಮ ನಾಟಿ ಹಾಕಿದ ಸ್ಥಳದಲ್ಲಿ ಸ್ಥಿರವಾಗಿ ನಿಂತು, ಬೆಳೆದು ಸುತ್ತಲಿನ ಚರ್ಮಕ್ಕೆ ಸೇರಿಕೊಳ್ಳುತ್ತದೆ. ಇದೇ ರೀತಿ ನಿಷ್ಕ್ರಿಯಗೊಂಡ ಕಿವಿಯ ಹೊರ ಪೊರೆಯನ್ನೂ ನಾಟಿ ವಿಧಾನದಲ್ಲಿ ಪಲ್ಲಟಿಸಬಹುದು. ಸುಟ್ಟ ಗಾಯಗಳಲ್ಲಿ ಚರ್ಮ ಅಧಿಕವಾಗಿ ನಾಶಹೊಂದಿ, ಗುಣವಾದ ಮೇಲೆ ಅಸಹ್ಯವಾದ ಗಾಯಕಲೆ ಆದಲ್ಲಿ, ಆ ಸ್ಥಳದಲ್ಲೂ ನಶಿಸಿದ ಭಾಗವನ್ನು ತೆಗೆದುಹಾಕಿ ಹೊಸ ಚರ್ಮವನ್ನು ನಾಟಿ ಹಾಕಬೇಕಾಗುತ್ತದೆ. ದೇಹದ ಒಳಗಡೆಯೂ ಇದೇ ರೀತಿ ನಶಿಸಿದ ಜೀರ್ಣವಾದ ಒಂದು ಭಾಗಕ್ಕೆ ಬದಲು ಸ್ವಲ್ಪ ಹೆಚ್ಚೂಕಡಿಮೆ ಅದೇ ಲಕ್ಷಣವುಳ್ಳ ಬೇರೊಂದು ಭಾಗವನ್ನು ಅಳವಡಿಸಬಹುದು. ಮೂತ್ರಕೋಶದ ಭಾಗವನ್ನು ಸಣ್ಣ ಕರುಳಿನ ಭಾಗದಿಂದಲೂ, ಅನ್ನನಾಳವನ್ನು ದೊಡ್ಡಕರುಳಿನ ಭಾಗದಿಂದಲೂ ಈ ರೀತಿ ಪಲ್ಲಟಿಸಿರುವುದು ಸಾಮಾನ್ಯವಿಷಯ. ಹೀಗಿದ್ದರೂ ಹಣೆಗೆ ಚರ್ಮವನ್ನು ನಾಟಿ ಹಾಕಬೇಕಾದಾಗ ತಲೆಯಿಂದ ಅಥವಾ ಹೊಟ್ಟೆಯಿಂದ ಚರ್ಮವನ್ನು ತೆಗೆದುಕೊಂಡು ನಾಟಿ ಹಾಕಬಾರದು. ಪಲ್ಲಟವಾದ ಅಂಗಭಾಗಗಳಿಗೆ ತಕ್ಕಷ್ಟು ರಕ್ತ ಪೂರೈಕೆಯಾಗುವುದೊಂದೇ ಇಲ್ಲಿ ಗಣನೀಯವಾದ ಅಗತ್ಯತೆ. ನಿರ್ನಾಳ ಗ್ರಂಥಿಗಳ ನಾಟಿಯಂತೆಯೇ ಈ ನಾಟಿಗಳು ಜೀವಂತವಾಗಿದ್ದು ಕ್ರಿಯಾಗತವಾಗಿರಬೇಕಾದರೆ ಅವು ರಕ್ತ ಪೂರೈಕೆಗೆ ಸಹ ಗ್ರಾಹಕ ಭಾಗದ ಮೇಲೆ ಹೆಚ್ಚು ಅವಲಂಬಿಸದೆ ಇರುವಂಥ ನರಪ್ರಚೋದನೆ ಬೇಡವೇ ಆದ ರೀತಿಯವಾಗಿರಬೇಕು. ಈ ರೀತಿಯ ನಾಟಿ ಒಂದು ವ್ಯಕ್ತಿಯಲ್ಲಿ ಅಂಗದ ಅಥವಾ ಅಂಗಭಾಗದ ಸ್ಥಾನಪಲ್ಲಟ ಅಷ್ಟೆ. ಬೇರೆ ಪ್ರಾಣಿಗಳ ಜೀವಂತ ಅಂಗ ಅಥವಾ ಅಂಗಭಾಗಗಳನ್ನು ಹೀಗೆ ನಾಟಿ ಹಾಕಿ ಕಾರ್ಯಗತವಾಗುವಂತೆ ಮಾಡಲು ಆಗುವುದಿಲ್ಲ. ಬೇರೆ ಮನುಷ್ಯರ ಜೀವಂತ ನಾಟಿಗಳನ್ನು ಹಾಕಿದರೂ ಅವು ನೆಲೆಯಾಗಿನಿಂತುಕೊಳ್ಳುತ್ತವೆಂದು ನೆಚ್ಚಿಕೆ ಇಲ್ಲ. ಈ ಮೂರು ರೀತಿಯ ನಾಟಿಗಳನ್ನು ಅನುಕ್ರಮವಾಗಿ ಸ್ವಕೀಯ ನಾಟಿ (ಆಟೋ ಗ್ರಾಫ್ಟ್), ಅಂತರ್ಜಾತೀಯ ನಾಟಿ (ಹೆಟಿರೋ ಗ್ರಾಫ್ಟ್) ಮತ್ತು ಸ್ವಜಾತೀಯ ನಾಟಿ (ಹೋಮೋಗ್ರಾಫ್ಟ್) ಎಂದು ಕರೆಯುತ್ತಾರೆ. ಅಂತರ್ಜಾತೀಯ ನಾಟಿಗಳು ಯಾವಾಗಲೂ ಮತ್ತು ಸ್ವಜಾತೀಯ ನಾಟಿಗಳು ಸಾಮಾನ್ಯವಾಗಿಯೂ ನೆಲೆಗೊಳ್ಳದೆ ನಿಷ್ಫಲವಾಗಿ ವಿಸರ್ಜಿಸಲ್ಪಡುವವು. ಸ್ವಕೀಯ ನಾಟಿಗಳಂತೆ ಸ್ವಜಾತಿಯ ನಾಟಿಗಳು ರಕ್ತಪೂರೈಕೆಗೆ ಗ್ರಾಹಕ ದೇಹದ ಮೇಲೆ ಹೆಚ್ಚು ಅವಲಂಬಿಸದೆ, ನರಪ್ರಚೋದನೆ ಬೇಡವೇ ಆಗಿರುವಂತಾದರೆ, ಅವು ಮಾತ್ರ ಗ್ರಾಹಕ ದೇಹದಲ್ಲಿ ನೆಲೆನಿಂತುಕೊಳ್ಳುತ್ತವೆ. ಅವಳಿ ಜವಳಿಗಳಲ್ಲಿ ಒಬ್ಬರ ಅಂಗ ಇನ್ನೊಬ್ಬರಲ್ಲಿ ಸಾಮಾನ್ಯವಾಗಿ ವಿಷರ್ಜಿಸಲ್ಪಡದೆ ನೆಲೆನಿಂತುಕೊಳ್ಳುತ್ತದೆ. ಅವಳಿ ಜಗಳಿಗಳಲ್ಲಿ ಒಬ್ಬರ ಅಂಗ ಇನ್ನೊಬ್ಬರಲ್ಲಿ ಸಾಮಾನ್ಯವಾಗಿ ವಿಸರ್ಜಿಸಲ್ಪಡದೆ ನೆಲೆನಿಂತುಕೊಳ್ಳುತ್ತದೆ. ಏಕೆಂದರೆ ಇಂಥ ನಾಟಿಯನ್ನು ಒಂದು ರೀತಿಯ ವಿಶೇಷವಾದ ಸ್ವಕೀಯ ನಾಟಿಯೆಂದೇ ಪರಿಗಣಿಸಬೇಕಾಗಿದೆ. ಸ್ವಜಾತೀಯ ನಾಟಿಗಳು ಸಾಮಾನ್ಯವಾಗಿ ಗ್ರಾಹಕ ದೇಹದಲ್ಲಿ ನೆಲೆನಿಂತುಕೊಳ್ಳುವಂಥವು. ರಕ್ತನಾಟಿ, ಮೃದ್ವಸ್ಥಿನಾಟಿ ಮತ್ತು ಕಣ್ಣಿನ ಪಾರದರ್ಶಕ ಭಾಗದ ನಾಟಿ ಇವು ಮಾತ್ರ. ಇನ್ನು ಕೆಲವು ಸ್ವಜಾತೀಯ ನಾಟಿಗಳು ಮತ್ತು ಕೆಲವು ಸಂದರ್ಭಗಳಲ್ಲಿ ಪರಜಾತೀಯ ನಾಟಿಗಳು, ಅವು ಮೃತವಾದ ಮೇಲೂ ಅವುಗಳ ದೃಢತೆ ಹಾಗೂ ಆಕಾರ ವಿಶೇಷಗಳಿಂದ ಉಪಯುಕ್ತವಾಗಿರುತ್ತವೆ. ಮಿಕ್ಕ ನಾಟಿಗಳು ಹೊರವಸ್ತುಗಳಂತೆ ಗಣಿಸಲ್ಪಟ್ಟು ವಿಸರ್ಜಿಸಲ್ಪಡುತ್ತವೆ. ಈ ವಿಸರ್ಜನಸಾಮರ್ಥ್ಯ ದೇಹವನ್ನು ವಿಷಾಣುಗಳಿಂದ ಹೊರ ಪ್ರೋಟೀನ್ ಪದಾರ್ಥಗಳಿಂದ ರಕ್ಷಿಸಿಕೊಳ್ಳುವುದಕ್ಕೋಸ್ಕರ ನಿರೋಧ ವಸ್ತುಗಳು ಉತ್ಪತ್ತಿಯಾಗುವ ಸಾಮರ್ಥ್ಯದಂತೆಯೇ ಇರುತ್ತದೆ ಮತ್ತು ಅದೇ ರೀತಿ ಕಾರ್ಯವೆಸಗುತ್ತದೆ. ದೇಹಕ್ಕೆ ಸಹಜವಾದ ಒಂದು ಗುಣದಿಂದ ತನ್ನೊಳಗೆ ಕೃತಕವಾಗಿ ಅಳವಡಿಸಲಾದ ಅಂಗ ತನ್ನದೋ ಅಥವಾ ಬೇರೊಂದು ದೇಹದ್ದೋ ಎಂಬ ಭೇದ ತಿಳಿಯುತ್ತದೆ. ಹಾಗೆ ತಿಳಿದ ಮೇಲೆ ತಕ್ಕ ಪ್ರತಿಕ್ರಿಯೆಯಿಂದ ಹೊರಗಿನದಾದ ಅಂಗದ ಅಳವಡಿಕೆಯನ್ನು ವಿಸರ್ಜಿಸಬಲ್ಲದು. ದೇಹ ನಿರೋಧ ವಸ್ತುವನ್ನು ಉತ್ಪತ್ತಿ ಮಾಡಿಯೇ ಸಾಮಾನ್ಯವಾಗಿ ಈ ವಿಸರ್ಜನಕ್ರಿಯೆಯನ್ನು ತೋರಿಸುವುದರಿಂದ, ನಿರೋಧವಸ್ತು ಉತ್ಪತ್ತಿಯಾಗುವುದನ್ನು ತಡೆದುಬಿಟ್ಟರೆ ಸ್ವಜಾತೀಯ ನಾಟಿ ಬಹುಶಃ ಪರಜಾತೀಯ ನಾಟಿಯೂ ನೆಲೆಗೊಳ್ಳಬಹುದೇನೋ ಎನ್ನುವ ಅಂಶ ಅರಿಕೆಯಾಗುತ್ತದೆ. ನಾಟಿ ಮಾಡಲು ಅಂಗವನ್ನು ದಾನಿಯಿಂದ ತೆಗೆದುಕೊಂಡ ಮೇಲೆ, ಅದನ್ನು ಅತಿಶೈತ್ಯದಲ್ಲಿ ($4^0$ ಸೆಂ.) ಸಂರಕ್ಷಿಸಿಟ್ಟಿರಬೇಕು. ತೆಗೆದ ಸುಮಾರು 4–6 ಗಂಟೆಗಳೊಳಗೆ ಗ್ರಾಹಕದೇಹದಲ್ಲಿ ನಾಟಿ ಹಾಕಿಬಿಡಬೇಕು. ಸ್ವಾಭಾವಿಕವಾಗಿಯೇ ಅಂಗವನ್ನು ತೆಗೆಯುವಾಗ, ಶೈತ್ಯದಲ್ಲಿ ಸಂಗ್ರಹಿಸಿಟ್ಟಾಗ, ನಾಟಿ ಹಾಕುವಾಗ, ಆ ಮೇಲೆಯೂ ವಿಷಾಣುರಹಿತಸ್ಥಿತಿಯನ್ನು ಬಹು ಎಚ್ಚರಿಕೆಯಿಂದ ಕಾಪಾಡಿಕೊಂಡಿರಬೇಕು. ನಾಟಿ ಹಾಕುವಾಗ ಮೊದಲು ರಕ್ತನಾಳಗಳನ್ನು ಸೇರಿಸಿ ಹೊಲಿದುಬಿಡಬೇಕು. ಇದು 10–20 ಮಿನಿಟುಗಳೊಳಗೆ ಮುಗಿಸಿಬಿಡಬೇಕಾದ ಕಾರ್ಯ. ನಾಟಿ ವಿಸರ್ಜನೆ ಆಗದಂತಿರಬೇಕಾದರೆ ಮತ್ತು ನಾಟಿ ಊರ್ಜಿತವಾಗಬೇಕಾದರೆ ದಾನಿ ಮತ್ತು ಗ್ರಾಹಕ ಇಬ್ಬರ ರಕ್ತಪಂಗಡವೂ ಒಂದೇ ಆಗಿರಬೇಕು. ಇಲ್ಲವಾದರೆ ನಾಟಿ ಹಾಕಿದ ಕೂಡಲೇ ರಕ್ತಕಣಗಳು ಗಂಟು ಕಟ್ಟಿಕೊಂಡು ನಾಟಿಯ ರಕ್ತ ಪೂರೈಕೆಗೆ ಅಡಚಣೆಯುಂಟಾಗಿ ನಾಟಿ ಸತ್ತು ಹೋಗುತ್ತದೆ. ಹೀಗೆ ಕೂಡಲೇ ಆಗದಿದ್ದರೂ ಸ್ವಜಾತೀಯ ನಾಟಿ ಹೊರವಸ್ತುವೇ ಆದ್ದರಿಂದ ಗ್ರಾಹಕ ದೇಹದಲ್ಲಿ ನಿರೋಧ ವಸ್ತುಗಳು ಕ್ಷಿಪ್ರವಾಗಿಯೋ, ನಿಧಾನವಾಗಿಯೋ (ಇದು ಕೆಲವು ತಿಂಗಳುಗಳೇ ಆಗಬಹುದು) ಉತ್ಪತ್ತಿಯಾಗಿ ನಾಟಿ ವಿಸರ್ಜಿಸಲ್ಪಡುತ್ತದೆ. ನಾಟಿ ವಿಸರ್ಜನೆ ಸ್ಥಳೀಯ ಜೀವಾಣುಗಳ ಪ್ರತಿಕ್ರಿಯೆಯಿಂದಲೂ ಅನೇಕ ವೇಳೆ ಉಂಟಾಗುತ್ತದೆ. ನಾಟಿಗೆ ವಿರೋಧ ವಸ್ತುಗಳು ದೇಹದಲ್ಲಿ ಉತ್ಪತ್ತಿ ಆಗುವ ತನಕ ಅನೇಕ ವೇಳೆ ಅವಕಾಶವೇ ಇರುವುದಿಲ್ಲ. ಆದ್ದರಿಂದ ನಾಟಿ ಊರ್ಜಿತವಾಗಬೇಕಾದರೆ ನಾಟಿ ಮಾಡಿದ ಅಂಗ ಸ್ಥಳೀಕ ಪ್ರತಿಕ್ರಿಯೆಯನ್ನು ಉಂಟುಮಾಡದಂತಿರಬೇಕು. ಇದು ಸ್ವಕೀಯ ನಾಟಿ ಮತ್ತು ಅವಳಿ ನಾಟಿಗಳಲ್ಲಿ ಮಾತ್ರ ಕಾಣಬರುವ ವಿಷಯ. ಹೀಗೆ ನಾಟಿ ಹಾಕಿದ ಮೂತ್ರಪಿಂಡಗಳು 6–8 ವರ್ಷಗಳು ಕ್ರಿಯಾಶೀಲವಾಗಿವೆ; ಇಂಥ ನಾಟಿಯನ್ನಾದರೂ ಅಳವಡಿಸಲು ಬಲವತ್ತರವಾದ ಕಾರಣವನ್ನು ಒದಗಿಸಿವೆ. ಆದರೆ ಇಂಥ ಅವಕಾಶ ಎಷ್ಟು ತಾನೇ ಇದ್ದೀತು? ಸ್ವಜಾತೀಯ ನಾಟಿ ಊರ್ಜಿತವಾಗಬೇಕಾದರೆ ಗ್ರಾಹಕ ವ್ಯಕ್ತಿಯಲ್ಲಿ ನಾಟಿಯನ್ನು ವರ್ಜಿಸುವ ಸ್ಥಳೀಕ ಪ್ರತಿಕ್ರಿಯೆ ಲೋಪವಾಗಿರಬೇಕು. ಇದನ್ನು ಎಕ್ಸ್‌ಕಿರಣ ಪ್ರಯೋಗದಿಂದ ಗ್ರಾಹಕನಲ್ಲಿ ಉಂಟುಮಾಡಿ ನಾಟಿ ಹಾಕಿದ ಮೇಲೆ ಸ್ಥಳೀಯವಾಗಿ ಎಕ್ಸ್‌ಕಿರಣವನ್ನು ಪ್ರಯೋಗಿಸುವುದನ್ನು ಮುಂದುವರಿಸಿ ಸಾಧಿಸಿದ್ದಾರೆ. ನಾಟಿಯ ಊರ್ಜಿತಕ್ಕೆ ನಿರೋಧವಾದ ವಸ್ತುಗಳು ಲಿಂಫೋಸೈಟುಗಳೆಂಬ ಒಂದು ವಿಧವಾದ ಬಿಳಿರಕ್ತ ಕಣಗಳಿಂದ ಉತ್ಪತ್ತಿಯಾಗುವುದರಿಂದ ಲಿಂಫೋಸೈಟುಗಳು ಗ್ರಾಹಕದೇಹದಲ್ಲಿ ಕ್ಷೀಣಿಸುವಂತೆ

ಮಾಡುವುದಕ್ಕೋಸ್ಕರವೇ ಎಕ್ಸ್‌ಕಿರಣವನ್ನು ಪ್ರಯೋಗಿಸುವುದು. ಆದರೆ ಇದು ಎಲ್ಲ ಬಿಳಿರಕ್ತಕಣಗಳನ್ನೂ ಕೆಂಪುರಕ್ತಕಣಗಳನ್ನೂ ತಾರತಮ್ಯವಿಲ್ಲದೆ ಕ್ಷಯಗೊಳಿಸಬಹುದು. ಇದಕ್ಕಿಂತಲೂ ಹೆಚ್ಚು ಜೀವಾಣುಮಾರಕಗಳಾದ ಕಾರ್ಟಿಸೋನ್ ಆಸೋಥೈಯಾಪ್ರಿನ್ ಅಥವಾ ಆಕ್ಟಿನೋಮೈಸಿನ್ ಸಿ, ನೈಟ್ರೋಜನ್ ಮಸ್ಟರ್ಡ್–ಇವನ್ನು ಉಪಯೋಗಿಸಿ ಸಾಧಿಸಬಹುದು. ಸಹಜವಾಗಿಯೇ ರಕ್ತಕಣಗಳನ್ನೆಲ್ಲ ನಾಶಪಡಿಸುವ ಈ ಮಾರ್ಗ ಸಲ್ಲದ ಮಾರ್ಗ. ಲಿಂಫೋಸೈಟುಗಳನ್ನು ಮಾತ್ರ ನಾಶ ಮಾಡುವ ಲಸಿಕೆಗಳನ್ನು ಈಚೆಗೆ ಕುದುರೆಗಳ ದೇಹದಲ್ಲಿ ತಯಾರುಮಾಡಿ ಪಡೆದಿರುವುದರಿಂದ ಅಂಥ ಲಸಿಕೆಯನ್ನು ಉಪಯೋಗಿಸಿ ಅಳವಡಿಸಿದ ನಾಟಿ ಸಫಲವಾಗುವಂತೆ ಮಾಡಬಹುದು. ಜೊತೆಗೆ ಹೊರವಸ್ತುಗಳಿಗೆ ನಿರೋಧ ವಸ್ತುಗಳು ದೇಹದಲ್ಲಿ ಬೇರೆ ರೀತಿಯಲ್ಲೂ ಉತ್ಪತ್ತಿಯಾಗುವುದನ್ನು ಪ್ರೆಡ್ನಿಸೋನ್ ಮತ್ತು ಇಮ್ಯಾರಾನ್ ಎಂಬ ಔಷಧಿಗಳು ತಡೆಗಟ್ಟುವ ವಿಧಾನಗಳನ್ನೂ ಲಿಂಫೋಸೈಟ್ ನಿರೋಧಕಗಳು ವರ್ಧಿಸುವುದರಿಂದ ಇವೆರಡು ರೀತಿಯಲ್ಲೂ ಅವುಗಳ ಸಹಾಯದಿಂದ, ನಾಟಿಗೆ ನಿರೋಧವನ್ನು ಹೋಗಲಾಡಿಸಿ ಕೊಳ್ಳಬಹುದು. ಜೊತೆಗೆ ಕಡಿಮೆ ಪ್ರಮಾಣದಲ್ಲಿ ಪ್ರೆಡ್ನಿಸೋನ್ ಮತ್ತು ಇಮ್ಯಾರಾನನ್ನು ಉಪಯೋಗಿಸಬಹುದಾದ್ದರಿಂದ ಅವುಗಳ ನಂಜು ದೇಹಕ್ಕೆ ಕಡಿಮೆ ಮೊತ್ತದಲ್ಲಿ ತಟ್ಟುತ್ತದೆ. ಆದ್ದರಿಂದ ಲಿಂಫೋಸೈಟು ನಿರೋಧಕಗಳು ನಿಜವಾಗಿಯೂ ಸಹಾಯಕವಾಗಿವೆ. ಇದರ ಜೊತೆಗೆ ದಾನಿ ಗ್ರಾಹಕರ ಅಂಗಹೋಲಿಕೆಗಳನ್ನು ಮುಖ್ಯವಾಗಿ ಲಿಂಫೋಸೈಟುಗಳ ಹೋಲಿಕೆಗಳನ್ನೂ ಮಾಡಿ ನಾಟಿ ಮಾಡುವ ಅಂಗ ಗ್ರಾಹಕದೇಹಕ್ಕೆ ಒಗ್ಗುತ್ತದೋ ಇಲ್ಲವೋ ಎನ್ನುವುದನ್ನು ಕಂಡುಕೊಳ್ಳಲಾಗುತ್ತದೆ. ನಾಟಿ ಮಾಡುವುದಕ್ಕೋಸ್ಕರ ನಾಟಿಗೆ ನಿರೋಧವನ್ನು ತಗ್ಗಿಸುವ ಪ್ರಯತ್ನದಲ್ಲಿ ಒಟ್ಟಿನಲ್ಲಿ ಗ್ರಾಹಕ ದೇಹದ ನಿರೋಧ ಶಕ್ತಿಯನ್ನೇ ತಗ್ಗಿಸಲಾಗುತ್ತದೆ. ಇದರಿಂದ ಕ್ಷಣಕ್ಷಣಕ್ಕೂ ವಿಷಾಣುಗಳಿಂದ ದೇಹಕ್ಕೆ ಸೋಂಕು ಉಂಟಾಗುವ ಹೆದರಿಕೆ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ವಿಷಾಣುಗಳನ್ನು ಎದುರಿಸುವುದಕ್ಕೆ ಮಾತ್ರವೇ ಅಲ್ಲದೆ ಬೇರೆ ಇನ್ನಾವ ಕಾರಣಗಳಿಗೂ ನಿರೋಧವಸ್ತುಗಳು ಬೇಕಾಗಿದ್ದಲ್ಲಿ ಅದಕ್ಕೂ ತಡೆಯುಂಟಾಗುತ್ತದೆ ಎನ್ನುವುದನ್ನು ಸಹ ಇಲ್ಲಿ ಗಮನಿಸಬೇಕಾಗಿದೆ.

**ಗುಂಡಿಗೆಯ ನಾಟಿ :** ಗುಂಡಿಗೆಯನ್ನು ನಾಟಿ ಹಾಕಲು ಪ್ರಯತ್ನಿಸುವುದಕ್ಕೆ ಮೊದಲು ಗುಂಡಿಗೆಯ ಮೇಲೆ ಯಾವ ಶಸ್ತ್ರಚಿಕಿತ್ಸೆಯನ್ನು ಮಾಡಲೂ ಹೆದರುವ ಕಾಲವಿತ್ತು. ಅದು ಘಾತದಿಂದ ಹರಿದುಹೋಗಿದ್ದುದನ್ನು ಹೊಲಿದು ಪುನರ್ವ್ಯವಸ್ಥೆ ಮಾಡುವುದು, ಅದರ ಮೇಲು ಪೊರೆಯನ್ನು ತೆಗೆದು ಹಾಕುವುದು ಮತ್ತು ಗುಂಡಿಗೆಯ ಕವಾಟಗಳನ್ನು ಅಳವಡಿಸುವ ಪ್ರಯತ್ನ ಇವು ಅತಿ ವಿರಳವಾಗಿ ಜರಗುತ್ತಿದ್ದು ಅನೇಕ ವೇಳೆ ಸಫಲವಾಗುತ್ತಿರಲಿಲ್ಲ. ಸಾಮಾನ್ಯವಾಗಿ ಗುಂಡಿಗೆಯ ಮೇಲಿನ ಶಸ್ತ್ರಕ್ರಿಯೆ ಅಸಾಧ್ಯವೆಂದೇ ಸುಮಾರು 35–40 ವರ್ಷಗಳ ಹಿಂದಿನ ತನಕ ನಂಬಲಾಗಿತ್ತು. 1935–40ರ ಕಾಲದಲ್ಲಿ ಎದೆಮೂಳೆಗಳನ್ನು ಕತ್ತರಿಸಿ ತೆಗೆದಿಟ್ಟು ಗುಂಡಿಗೆ ಅಥವಾ ಶ್ವಾಸಕೋಶಗಳಲ್ಲಿ ನೇರವಾದ ಶಸ್ತ್ರಕ್ರಿಯೆಯನ್ನು ಜರಗಿಸಿ ಎದೆಮೂಳೆಗಳನ್ನು ಪುನಃ ಸ್ವಸ್ಥಾನದಲ್ಲಿ ಇಟ್ಟು ಬಂಧಿಸುವ ಏರ್ಪಾಡನ್ನು ಕಂಡುಹಿಡಿದರು. ಇದು ವಿಶೇಷ ರೀತಿಯ ಅರಿವಳಿಕೆ ಮತ್ತು ಕೃತಕ ಶ್ವಾಸಕ್ರಮವನ್ನು ಅವಲಂಬಿಸಿದ್ದರಿಂದ ಸಾಧ್ಯವಾಯಿತು. ಗುಂಡಿಗೆಯನ್ನು ಹೀಗೆ ಬಹಿರಂಗಿಸುವುದು ಸಾಧ್ಯವಾಗಿ ನೇರವಾಗಿ ಅದರ ಪರೀಕ್ಷೆಗೂ ಸಾಧ್ಯವಾದಷ್ಟು ಮಟ್ಟಿಗೆ ಚಿಕಿತ್ಸೆಗೂ ಸುಲಭ ದಾರಿಯಾಯಿತು. ಹಾಗೇ ಗುಂಡಿಗೆಯ ಭಾಗಗಳನ್ನು ಅಳವಡಿಸುವುದೂ ಕೊನೆಗೆ ಗುಂಡಿಗೆಯನ್ನೇ ನಾಟಿ ಹಾಕುವುದೂ ಸಾಧ್ಯವಾಯಿತು. ಅಂದರೆ ಈ ನಾಟಿ ಹಾಕುವ ಯೋಚನೆ ಹುಟ್ಟುವುದಕ್ಕೆ ಮೊದಲು ಗುಂಡಿಗೆಯ ಮೇಲೆ ಅನೇಕ ಶಸ್ತ್ರಕ್ರಿಯೆಗಳು ರೂಢಿಗೆ ಬಂದು ಅವುಗಳ ಅನುಭವ ಸಿದ್ಧಿಸಿತ್ತು. ಮುಖ್ಯವಾಗಿ ಈ ಘಟನೆಗಳಲ್ಲಿ ನಾವು ಈ ಕೆಳಗಿನವುಗಳನ್ನು ಪರಿಗಣಿಸಬಹುದಾಗಿದೆ : (I) ಅರಿವಳಿಕೆಯ ಕ್ರಿಯೆ, (ii) ಗುಂಡಿಗೆಯೊಳಗೆ ನಳಿಕೆಯನ್ನು ಹೊಗಿಸುವುದು ಮತ್ತು ರಕ್ತನಾಳಗಳ ಎಕ್ಸ್ ಕಿರಣ ಚಿತ್ರವನ್ನು ತೆಗೆಯುವ ವಿಧಾನ, (iii) ರಕ್ತದ ಒತ್ತಡ ಮುಂತಾದವುಗಳ ನಿಖರವಾದ ಅಳತೆ, (iv) ರಕ್ತದ ವಿಷಯ–ಮುಖ್ಯವಾಗಿ ಅದು ಹೆಪ್ಪುಗಟ್ಟುವ ವಿಚಾರದಲ್ಲಿ–ಪರಿಶೀಲನೆ, (v) ದೇಹದ ಉಷ್ಣತೆಯನ್ನು ತಗ್ಗಿಸಿ ಅರಿವಳಿಕೆಯನ್ನು ತಂದಿಟ್ಟುಕೊಳ್ಳುವಿಕೆ, (vi) ದೇಹಕ್ಕೆ ಹೊರಗಿನಿಂದ ರಕ್ತಚಲನೆಯನ್ನು ಒದಗಿಸುವುದು, (vii) ಗುಂಡಿಗೆಯ ಮಿಡಿತವನ್ನು ಕೃತಕವಾಗಿ ನಿರ್ವಹಿಸುವಿಕೆ, (viii) ಪ್ಲಾಸ್ಟಿಕ್ ವಸ್ತ್ರಗಳ ಅಳವಡಿಕೆ, (ix) ಹೊಸತಾಂತ್ರಿಕ ವಸ್ತುಗಳು ಮತ್ತು ವಿಧಾನಗಳನ್ನು ಕಂಡುಹಿಡಿದಿರುವಿಕೆ, (x) ದೇಹದ ನಿರೋಧ ವಿಷಯಕ ಜ್ಞಾನದ ಅಧ್ಯಯನ ಇತ್ಯಾದಿ.

ಗುಂಡಿಗೆ ನಾಟಿಯಲ್ಲಿ ಒಂದು ಪ್ರಧಾನವಾದ ಕ್ರಮವನ್ನು ಶಂವೇ ಎಂಬಾತ 1960–61ರಲ್ಲಿ ಕ್ಯಾಲಿಫೋರ್ನಿಯಾದ ಸ್ಟಾನ್‌ಫರ್ಡ್ ಆಸ್ಪತ್ರೆಯಲ್ಲಿ ಮಾಡಿ ತೋರಿಸಿದ. ಗ್ರಾಹಕನಲ್ಲಿ ಹೃತ್ಕರ್ಣಗಳನ್ನು ಇಟ್ಟುಕೊಂಡು ಗುಂಡಿಗೆಯ ಮಿಕ್ಕಭಾಗಗಳನ್ನು ತೆಗೆದುಹಾಕಿ, ಈ ಹೃತ್ಕರ್ಣ ಶೇಷಭಾಗಕ್ಕೆ ದಾನಿಯ ಹೃದಯ ಭಾಗವನ್ನು ಸೇರಿಸಿ ಹೊಲಿಯುವುದೇ ಈ ವಿಧಾನ. ಇದೇ ಕಾಲದಲ್ಲಿ ಶ್ವಾಸಕೋಶಗಳನ್ನು ಪಲ್ಲಟಿಸಿದರೆ ಅನುಕೂಲವೇನೋ ಎಂದು ಭಾವಿಸಿ ಪ್ರಾಣಿಗಳ ಮೇಲೆ ಅನೇಕ ವಿಧದ ನಾಟಿ ಪ್ರಯೋಗಗಳನ್ನು ಮಾಡಿ ಅಧ್ಯಯನ ನಡೆಸಿದರು. ಆದರೆ ಅದು ಮಾನವರಲ್ಲಿ ಎಷ್ಟುಮಟ್ಟಿಗೆ ಸಾಧ್ಯ ಎನ್ನುವುದು ಪ್ರಶ್ನೆಯೇ ಆಗಿದೆ. ಇದುವರೆಗೆ ಪಟ್ಟಿರುವ ಪ್ರಯತ್ನಗಳೆಲ್ಲ ಗುಂಡಿಗೆಯನ್ನು ಮಾತ್ರ ನಾಟಿ ಹಾಕಿರುವುದಾಗಿದೆ. 1965ರಲ್ಲಿ ಹಾರ್ಡಿ ಎಂಬ ವೈದ್ಯ ಮಿಸಿಸಿಪಿ ಆಸ್ಪತ್ರೆಯಲ್ಲಿ ಒಬ್ಬ ಹುಡುಗನಿಗೆ ಚಿಂಪಾಜಿಯ ಗುಂಡಿಗೆಯನ್ನು ನಾಟಿ ಹಾಕಿಸಿದ. ಅದು ಸ್ವಾಭಾವಿಕವಾಗಿಯೇ ಒಂದು–ಒಂದೂವರೆ ಗಂಟೆಯೊಳಗೆ ನಿಂತುಹೋಯಿತು. ಪರಜಾತಿಯ ನಾಟಿಯಾಗಿ ಅದು ಅಷ್ಟು ಹೊತ್ತಾದರೂ ಕೆಲಸ ಮಾಡಿದ್ದೇ ಆಶ್ಚರ್ಯ. ಸ್ವಜಾತೀಯ ನಾಟಿಯಾಗಿ ಗುಂಡಿಗೆಯನ್ನು ಮೊದಲು 1967ರಲ್ಲಿ ಬ್ರೂಕ್ಲಿನ್ ಆಸ್ಪತ್ರೆಯಲ್ಲಿ ಕಾಂಟ್ರೋವಿಟ್ಸ್ ಎಂಬಾತ 19 ದಿವಸಗಳ ಶಿಶುವಿನಲ್ಲಿ ಜರಗಿಸಿದ. ಈ ಶಿಶುವಿಗೆ ತ್ರಿದಳ ಕವಾಟ ಹುಟ್ಟಿದಾಗಿನಿಂದ ಕುಗ್ಗಿಹೋಗಿದ್ದರಿಂದ ಹೀಗೆ ಏನಾದರೂ ಪುನರ್ವ್ಯವಸ್ಥೆ ಮಾಡದೇ ಇದ್ದರೆ ಅದು ಬದುಕುವ ಆಸೆಯೇ ಇರಲಿಲ್ಲ. ಆಗ ತಾನೆ ಮೃತಿ ಹೊಂದಿದ ಇನ್ನೊಂದು ಶಿಶುವಿನ ಗುಂಡಿಗೆಯನ್ನು ತೆಗೆದು ಈ ಶಿಶುವಿನ ಹೃದಯಕ್ಕೆ ಬದಲಾಗಿ ಸುಮಾರು ಎರಡೂವರೆ ಗಂಟೆಗಳ ಕಾಲ ಶಸ್ತ್ರಕ್ರಿಯೆಯಿಂದ ಅಳವಡಿಸಲಾಯಿತು. ಹೀಗೆ ಅಳವಡಿಸಿದ ಗುಂಡಿಗೆ ಸುಮಾರು 6 ಗಂಟೆಗಳ ಕಾಲ ಕ್ರಿಯೆ ಜರಗಿಸಿ ಆಮೇಲೆ ನಿಂತುಹೋಯಿತು. ಬಹುಶಃ ಎರಡು ಶಿಶುಗಳ ರಕ್ತಗಳು ಹೊಂದಾಣಿಕೆ ಆಗದ್ದರಿಂದ ಹೀಗಾಯಿತು ಎನಿಸುತ್ತದೆ. ಏಕೆಂದರೆ ವಿಶೇಷ ಕ್ರಿಯೆಯಿಂದ ನಾಟಿ ವಿಸರ್ಜಿತವಾಗಿ ನಿರುಪಯುಕ್ತವಾಗಬೇಕಾದರೆ ಕೆಲವೇ ಗಂಟೆಗಳ ಅವಕಾಶ ಸಾಲದು.

1967ರ ಡಿಸೆಂಬರ್ 3ನೆಯ ತಾರೀಖು ದಕ್ಷಿಣ ಆಫ್ರಿಕಾದ ಕೇಪ್‌ಟೌನಿನಲ್ಲಿ ಹೃದಯ ವೈದ್ಯನಾದ ಕ್ರಿಶ್ಚನ್ ಬರ್ನಾರ್ಡ್ ಮತ್ತು ಅವನ ತಂಡದವರು 55 ವರ್ಷ ವಯಸ್ಸಿನ ವಾಷ್ಕಂಸ್ಕಿ ಎಂಬುವನಿಗೆ ಆಗತಾನೆ ವಾಹನಾಪಘಾತದಿಂದ ಮೃತಿಹೊಂದಿದ್ದ 25 ವರ್ಷ ವಯಸ್ಸಿನ ಮಹಿಳೆಯೋರ್ವಳ ಹೃದಯವನ್ನು ಮೊತ್ತಮೊದಲು ಅಳವಡಿಸಿದರು. ಡಿಸೆಂಬರ್ 21ರ ತನಕ ವಾಷ್ಕಂಸ್ಕಿ ಬದುಕಿದ್ದು, ನ್ಯೂಮೋನಿಯಾದಿಂದ ಮೃತಪಟ್ಟ. ನಾಟಿ ವಿಸರ್ಜನೆಯ ಕ್ರಮದಲ್ಲಿ ನ್ಯೂಮೋನಿಯಾ ಬರಬಹುದಾದರೂ ವಾಷ್ಕಂಸ್ಕಿಯ ವಿಷಯದಲ್ಲಿ ಹೀಗಾಯಿತೆಂದು ಹೇಳುವ ಹಾಗಿಲ್ಲ. ಬರ್ನಾರ್ಡ್‌ನ ಅಭಿಪ್ರಾಯದಂತೆ ಸಾವು ನಾಟಿ ವಿಸರ್ಜನೆಯಿಂದ ಉಂಟಾಯಿತು ಎಂದು ಹೇಳುವಂತಿರಲಿಲ್ಲ. ವಾಷ್ಕಂಸ್ಕಿಯಲ್ಲಿ ಗುಂಡಿಗೆ ನಾಟಿ ಹಾಕಿದ ತರುಣದಲ್ಲೇ ಇಂಥ ಇನ್ನೊಂದು ಸಂದರ್ಭ ಒದಗಿ ಬ್ಲೈಬರ್ಗ್ ಎಂಬ ದಂತವೈದ್ಯನಿಗೆ ನೀಗ್ರೋ ತರುಣಿಯ ಗುಂಡಿಗೆಯನ್ನು ನಾಟಿ ಹಾಕಲಾಯಿತು. ಇದನ್ನು ಸಹ ಕ್ರಿಶ್ಚನ್ ಬರ್ನಾರ್ಡ್‌ನೆ ಸಾಧಿಸಿದ್ದು. ಬ್ಲೈಬರ್ಗ್‌ನು ಅನೇಕ ತಿಂಗಳುಗಳ ಕಾಲ ನಾಟಿ ಗುಂಡಿಗೆಯ ಬಲದಿಂದಲೇ ಜೀವಂತನಾಗಿದ್ದು, ಕೊನೆಗೆ ಸತ್ತುಹೋದ. ಇದು ನಾಟಿ ಹಾಕುವ ಕ್ರಮದ ಜಯವೋ, ಸೋಲೋ ಎಂಬ ನಿರ್ಧಾರದ ಮಾತನ್ನು ಸದ್ಯದಲ್ಲಿ ತಡೆಯಲ್ಲಿಟ್ಟಿರುವ ಹಾಗೆ ಕಾಣಿಸುತ್ತದೆ. ಗುಂಡಿಗೆಯ ನಾಟಿಯಲ್ಲಾಗಲೀ ಇನ್ನಾವ ನಾಟಿಯಲ್ಲಾಗಲೀ ವಿಷಯವನ್ನು ಇನ್ನೂ ಹೆಚ್ಚಿಗೆ ಅರಿಯುವತನಕ ಮುಂದುವರಿಯಬಾರದು ಎನ್ನುವ ಅಭಿಪ್ರಾಯ ಮೂಡಿರುವಂತೆ ಕಾಣುತ್ತದೆ. ಮೂತ್ರಪಿಂಡದ ನಾಟಿಯ ವಿಷಯದಲ್ಲಿ ಇಷ್ಟು ಹಿಂದುಮುಂದು ನೋಡಬೇಕಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಮನುಷ್ಯದೇಹದಲ್ಲಿ ಎರಡು ಮೂತ್ರಪಿಂಡಗಳಿವೆ. ಸಾಮಾನ್ಯ ಮೂತ್ರೋತ್ಪತ್ತಿ, ವಿಸರ್ಜನೆಗಳಿಗೆ ಒಂದೇ ಮೂತ್ರಪಿಂಡದ 1/3, 1/4 ಭಾಗವಿದ್ದರೂ ಸಾಕಾಗುತ್ತದೆ. ಆದ್ದರಿಂದ ಇನ್ನೊಂದು ಮೂತ್ರಪಿಂಡವನ್ನು ಬದುಕಿರುವ ದಾನಿಯಿಂದಲೇ ತೆಗೆದುಕೊಳ್ಳಬಹುದು. ದಾನಿ ಯಾರಾಗಿರಬೇಕು, ಗ್ರಾಹಕನಿಗೆ ಇರಬೇಕಾದ ವೈಶಿಷ್ಟ್ಯಗಳೇನು ಎಂಬ ಪ್ರಶ್ನೆಗಳು ಗುಂಡಿಗೆಯ ವಿಷಯದಲ್ಲಿ ಇರಬೇಕಾದಷ್ಟು ಸಂದಿಗ್ಧವಾಗಿ ಇಲ್ಲಿ ಇರಬೇಕಾಗಿಲ್ಲ. ಜೊತೆಗೆ ಅನೇಕ ವೇಳೆ ದಾನಿಯು, ಗ್ರಾಹಕನೂ ಅವಳಿಜವಳಿಯಾಗಿರುವುದರಿಂದ ಇದು ಒಂದು ವಿಶೇಷವಾದ ಸ್ವಕೀಯ ನಾಟಿಯೆಂದೇ ಪರಿಗಣಿಸಬೇಕಾಗಿದೆ. ಬೇರೆ ಸ್ವಜಾತಿ ಮೂತ್ರಪಿಂಡದ ನಾಟಿಯಲ್ಲಿ ಸಹ, ರಕ್ತ ಪಂಗಡದ ಒಗ್ಗುವಿಕೆ, ವಿಸರ್ಜನಾ ಸಾಮರ್ಥ್ಯವನ್ನು ಅಡಗಿಸುವಿಕೆ ಮುಂತಾದ ಎಚ್ಚರಗಳನ್ನು ತೆಗೆದುಕೊಳ್ಳುವುದರಿಂದ ಅವು ಫಲಿತವಾಗುವುದು ಹೆಚ್ಚೇನೂ ಅಲ್ಲ.

ಮೂತ್ರಪಿಂಡ, ಗುಂಡಿಗೆಗಳಂತೆಯೇ ಬೇರೆ ಅಂಗಗಳನ್ನು ನಾಟಿ ಹಾಕಿದ್ದಾರೆ. ಯಕೃತ್ತು, ಶ್ವಾಸಕೋಶಗಳ ನಾಟಿಗಳು ಫಲಿಸಿವೆ. ಯಕೃತ್ತಿನ ನಾಟಿ ಪ್ರಾಣಿಗಳಲ್ಲಿ ಸಾಧ್ಯವಾಗಿದ್ದರೂ ಬಹುಕಾಲದಿಂದ ಮನುಷ್ಯರಲ್ಲಿ ಅಸಾಧ್ಯವಾಗಿತ್ತು. ಈಚೆಗೆ ಕಾಲೋರಾಡೋವಿನಲ್ಲಿ ಸೇಗಲ್ ಎಂಬಾತ ಕೆಲವು ಯುವತಿಯರಲ್ಲಿ ಯಕೃತ್ತನ್ನು ನಾಟಿಹಾಕಿ ಅವರನ್ನು ಜೀವಂತವಾಗಿಟ್ಟಿದ್ದಾನೆ. ಅದೇ ರೀತಿ ಶ್ವಾಸಕೋಶದ ನಾಟಿಯೂ ಸಿದ್ಧಿಸಿದೆ. ಆದರೆ ಕೃತಕವಾಗಿ ಅಳವಡಿಸಿ ನಾಟಿಯಾದ ಶ್ವಾಸಕೋಶ ಒಂದು ವರ್ಷದೊಳಗೆ ನಿರುಪಯುಕ್ತವಾಗಿರುವುದು ಕಂಡುಬಂದಿದೆ. ಒಟ್ಟಿನಲ್ಲಿ ಯಾವ ಅಂಗವಾದರೂ ಸುಮಾರು ಅರ್ಧಗಂಟೆ ರಕ್ತ ಪೂರೈಕೆಯೆ ಇಲ್ಲದಿರುವುದನ್ನು ತಡೆದುಕೊಳ್ಳಬಲ್ಲದು. ಆದರೆ ಅಂಥ ಅಂಗವನ್ನು ಇಂದಲ್ಲದಿದ್ದರೆ ನಾಳೆ ನಾಟಿ ವಿಧಾನದಿಂದ ಅಳವಡಿಸಬಹುದು ಎಂದು

ತೋರುತ್ತದೆ. ಜನರಲ್ಲಿ ಬೇಕಾದಾಗ ರಕ್ತವನ್ನು ನಳಿಕೆಯ ಮೂಲಕ ದೇಹಕ್ಕೆ ಹೊಗಿಸುವ ಬದಲು ಸ್ವಜಾತೀಯ ರಕ್ತಜನಕ ಮಜ್ಜೆಯನ್ನು ನಾಟಿಹಾಕುವುದು ಬಹಳ ವರ್ಷಗಳಿಂದ ನಡೆಯುತ್ತಿರುವ ಪ್ರಯತ್ನ. ನಾಟಿ ವಿಸರ್ಜನ ವಿಧಾನದಿಂದ ಗ್ರಾಹಕ ದೇಹದಲ್ಲಿ ಸಾಧಾರಣವಾಗಿ ಇವು ಸಫಲವಾಗುತ್ತಿರಲಿಲ್ಲ. ಲಿಂಫೋಸೈಟು ನಿರೋಧ ಲಸಿಕೆಯಿಂದ ಉತ್ತೇಜಿತರಾಗಿ ಸ್ವಜಾತೀಯ ಮಜ್ಜೆ ನಾಟಿ ಹಾಕುವುದನ್ನು ಪುನರಾರಂಭಿಸಿದ್ದಾರೆ.

ಕೃತಕ ಗುಂಡಿಗೆಯ ವಿಷಯವಾಗಿ ಡಿ ಬೇಕಿ ಎಂಬ ಪ್ರಸಿದ್ಧ ವೈದ್ಯ ಹೀಗೆ ಹೇಳಿದ್ದಾನೆ: ಗುಂಡಿಗೆಯ ನಾಟಿ ಸರಿಯಾದ ಮಾರ್ಗವಲ್ಲ ; ಹದಗೆಟ್ಟ ಗುಂಡಿಗೆಗೆ ಪೂರ್ಣ ಕೃತಕ ಗುಂಡಿಗೆಯ ಅಳವಡಿಕೆಯೆ ತಕ್ಕ ಮಾರ್ಗ. ಮಿಕ್ಕ ನಾಟಿಗಳಿಗೂ ಈ ಮಾತನ್ನು ಅನ್ವಯಿಸಬಹುದು. (ಎಸ್.ಆರ್.ಆರ್)

**ಭಾರತದಲ್ಲಿ ಕೃತಕ ಅಂಗಗಳ ಅಳವಡಿಕೆ :** ಪುಣೆಯಲ್ಲಿರುವ ಕೃತಕ ಅಂಗಗಳ ಕೇಂದ್ರವನ್ನು (ಆರ್ಟಿಫಿಶಿಯಲ್ ಲಿಂಬ್ ಸೆಂಟರ್) 1944ರಲ್ಲಿ ಸ್ಥಾಪಿಸಲಾಯಿತು. ಪ್ರೋಸ್ಥೆಟಿಕ್ಸ್ (ನ್ಯೂನತಾಪೂರಣವಿಜ್ಞಾನ) ಮತ್ತು ಆರ್ಥೋಟಿಕ್ಸ್ (ತಿರುಚಿಹೋದ ಅಂಗವನ್ನು ನೇರಗೊಳಿಸುವ ಚಿಕಿತ್ಸೆ) ವಿಭಾಗಗಳಲ್ಲಿ ಏಷ್ಯದಲ್ಲಿ ಮುಂದುವರಿದ ಕೇಂದ್ರಗಳಲ್ಲಿ ಇದು ಸಹ ಒಂದು. ಈ ಕೇಂದ್ರದ ಆಡಳಿತ ಭಾರತ ಸೈನ್ಯ ವಿಭಾಗಕ್ಕೆ ಸೇರಿದೆ. 1964ರಲ್ಲಿ ಎರಡು ಉಪಕೇಂದ್ರಗಳನ್ನು ದೆಹಲಿಯಲ್ಲೂ ಲಖನೌದಲ್ಲೂ ಆಯಾ ಸ್ಥಳಗಳ ಸೈನ್ಯಾಸ್ಪತ್ರೆಗಳಿಗೆ ಹಾಗೂ ಲಗತ್ತಿಸಿದಂತೆ ಸ್ಥಾಪಿಸಲಾಯಿತು. ಅಲ್ಲದೆ ಪುಣೆ ಕೇಂದ್ರದ ತಜ್ಞರ ಮಾರ್ಗದರ್ಶನ ಹಾಗೂ ತಾಂತ್ರಿಕ ನೆರವು ಅಹಮದಾಬಾದ್, ಪಾಟ್ನ, ಹೈದರಾಬಾದ್, ಚೆನ್ನೈ, ಪಟಿಯಾಲ ಮತ್ತು ಕೊಲ್ಕತ್ತ ನಗರಗಳ ಸರ್ಕಾರೀ ಮುಖ್ಯ ಆಸ್ಪತ್ರೆಗಳಲ್ಲಿ ದೊರೆಯುವ ಏರ್ಪಾಡನ್ನು ಮಾಡಲಾಗಿದೆ. ಯುದ್ಧ ಪ್ರಹಾರದಿಂದ ಅಂಗವಿಕಲರಾದ ಸೈನಿಕರ ಪುನರ್ವ್ಯವಸ್ಥೆಗೋಸ್ಕರ ಮೊದಲು ಪ್ರಾರಂಭವಾದ ಪುಣೆ ಕೇಂದ್ರ (ಮತ್ತು ಅದರ ಉಪಕೇಂದ್ರಗಳು) ಈಗ ಸೈನಿಕೇತರ ನಾಗರಿಕರನ್ನು ಸಹ ಸ್ವೀಕರಿಸಿ ಯುಕ್ತ ಚಿಕಿತ್ಸೆ ಮತ್ತು ಶುಶ್ರೂಷೆ ನೀಡುತ್ತದೆ. ಅಂಗವಿಕಲರಾಗಲಿ ಅಂಗವಿಹೀನರಾಗಲಿ ತಮ್ಮ ದೈಹಿಕ ಕೊರತೆಯೊಡನೆ ಮಾನಸಿಕವಾಗಿಯೂ ಕೊರೆ ಉಳ್ಳವರಾಗಿರುತ್ತಾರೆ. ಸಮಾಜದ ಮುಖ್ಯ ವಾಹಿನಿಯಲ್ಲಿ ತಮಗೆ ಸಕ್ರಿಯವಾಗಿ ಭಾಗವಹಿಸಲು ಆಗದಿರುವುದು ಒಂದು ಕಾರಣವಾದರೆ ಜೀವನ ನಿರ್ವಹಣೆ ಸಮಸ್ಯೆ ಇನ್ನೊಂದು ಕಾರಣ. ಇಂಥವರಿಗೆ ಚಿಕಿತ್ಸೆ ನೀಡುವಾಗ ಎರಡು ಪ್ರಧಾನ ಅಂಶಗಳನ್ನು ಪುಣೆ ಕೇಂದ್ರದಲ್ಲಿ ಗಮನಿಸುತ್ತಾರೆ. ಒಂದು, ಮಾನಸಿಕವಾಗಿ ಅಂಗವಿಕಲರನ್ನು ಸಹಜವ್ಯಕ್ತಿಗಳ ಮಟ್ಟಕ್ಕೆ ಬರುವಂತೆ ಸಿದ್ಧಪಡಿಸುವುದು; ಎರಡು, ಶಸ್ತ್ರಕ್ರಿಯೆ ಹಾಗೂ ಯೋಗ್ಯ ಕೃತಕಾಂಗಗಳ ಅಳವಡಿಕೆಯಿಂದ ದೈಹಿಕವಾಗಿ ಅವರನ್ನು ಆ ಮಟ್ಟದಲ್ಲಿ ಸಹಜವಾಗಿ ಬಾಳುವಂತೆ ಏರ್ಪಡಿಸುವುದು. ಈ ಕ್ರಿಯೆ ತೀರಾ ವೈಯಕ್ತಿಕವಾದದ್ದು. ಇದನ್ನು ಯಶಸ್ವಿಯಾಗಿ ನಿರ್ವಹಿಸಲು ಪುಣೆ ಕೇಂದ್ರ ಹಾಗೂ ಅದರ ಉಪಕೇಂದ್ರಗಳಲ್ಲಿ ಸೌಕರ್ಯಗಳಿವೆ. ಇಲ್ಲಿ ಬಳಸುವ ಕೃತಕ ಅಂಗಗಳು ವಿಶೇಷವಾಗಿ ಭಾರತದಲ್ಲೇ ತಯಾರಾದಂಥವು. ಅಂಗವಿಕಲರಿಗೆ ಪುಣೆ ಕೇಂದ್ರದಲ್ಲಿ ಒದಗಿಸುವ ಕೃತಕ ಅಂಗಗಳ ಯಾದಿ ಇಲ್ಲಿದೆ: (1) ಕೆಳಕಾಲಿನ ಶಸ್ತ್ರನಿರ್ಮೂಲನವಾದಾಗ ಉಪಯೋಗಿಸಲು ನಿಜ ಆಕಾರವಿರುವ ಕಾಲುಗಳು ಮತ್ತು ಗೂಟ ಕಾಲುಗಳು. (2) ಕೆಲಸಮಾಡುವ ಕೈಗಳು ಮತ್ತು ಉಡುಪುಧಾರಣೆಗೋಸ್ಕರ ಕೈಗಳು. (3) ಗಿಡ್ಡ ಕಾಲಿರುವಾಗ ಅಥವಾ ಪಾದನ್ಯೂನತೆ ಇರುವಾಗ ಉಪಯೋಗಿಸಲು ಸರ್ಜಿಕಲ್ ಪಾದರಕ್ಷೆಗಳು. (4) ಪಾರ್ಶ್ವವಾಯು ಮುಂತಾದವುಗಳಿಂದ ಕಾಲಿನ ಸ್ವಾಧೀನ ಕಳೆದುಕೊಂಡವರ ಅಥವಾ ಕಾಲು ವಿಕಾರವಾದವರ ಉಪಯೋಗಾರ್ಥ ಕ್ಯಾಲಿಪರುಗಳು. (5) ಹರ್ನಿಯಾ ಟ್ರಸ್ಸುಗಳು. (6) ಕೆಳಹೊಟ್ಟೆಯ ಬೆಲ್ಟುಗಳು, (7) ಬೆನ್ನು ಮೂಳೆಯ ಬ್ರೇಸುಗಳು ಮತ್ತು ಜ್ಯಾಕೆಟ್ಟುಗಳು. (8) ಸರ್ವಿಕಲ್ ಕಾಲರುಗಳು. (9) ಬೇರೆ ಬೇರೆ ರೂಪದ ಪಟ್ಟಿಗಳು. (10) ಮಂಡಿಯಿಂದ ಮೇಲೆ ಶಸ್ತ್ರ ನಿರ್ಮೂಲನವಾದಾಗ ಉಪಯೋಗಿಸಲು ಕಿರುಗೂಟಗಳು. (11) ಒರಗು ಪ್ಯಾಡುಗಳು. (12) ಮೂಳೆಗೆ ಸಂಬಂಧಿಸಿದ ಇತರ ಆಧಾರಗಳು. (13) ನಡೆಯಲಾಗದವರ ಚಲನೆಗೋಸ್ಕರ ಚಕ್ರಕುರ್ಚಿಗಳು. (14) ಕಂಕುಳ ಗೋಲ ಅಥವಾ ಊರುಗೋಲುಗಳು (15) ಕೈಕೋಲುಗಳು ಇತ್ಯಾದಿ. *

**ಕೃತಕ ಉಸಿರಾಟ :** ಆಕಸ್ಮಿಕದ ಪರಿಣಾಮವಾಗಿ ಸ್ವಾಭಾವಿಕ ಉಸಿರಾಟಕ್ಕೆ ತೊಂದರೆ ಆದಾಗ ಅಥವಾ ಅದು ನಿಂತುಹೋದಾಗ ಸ್ವಾಭಾವಿಕ ಉಸಿರಾಟವನ್ನು ಮತ್ತೆ ತೊಡಗಿಸಲು ಅನುಸರಿಸುವ ವಿಧಾನ (ಆರ್ಟಿಫಿಶಿಯಲ್ ರೆಸ್ಪಿರೇಷನ್). ಅಕಸ್ಮಾತ್ತಾಗಿ ನೀರಿನಲ್ಲಿ ಮುಳುಗಿ ಹೋದಾಗ ವಿದ್ಯುದಾಘಾತವಾದಾಗ, ಕುತ್ತಿಗೆಯನ್ನು ಇತರರು ಹಿಸುಕಿದಾಗ, ಬಾಹ್ಯ ಪದಾರ್ಥ ಉಸಿರ್ನಾಳದಲ್ಲಿ ಸಿಕ್ಕಿ ಹಾಕಿಕೊಂಡಾಗ, ಕ್ಲೋರೋಫಾರಂ ಮುಂತಾದ ಅರಿವಳಿಕೆಗಳ ಅತಿಪ್ರಯೋಗವಾದಾಗ, ಹೊಗೆ ಇಂಗಾಲದ ಮಾನಾಕ್ಸೈಡ್ ತುಂಬಿದ ವಾತಾವರಣದಲ್ಲಿ ಸಾಕಷ್ಟು ಕಾಲ ಇದ್ದಾಗ–ಇವೇ ಮುಂತಾದ ಸಂದರ್ಭಗಳಲ್ಲಿ ಫುಪ್ಫುಸಗಳ ಕ್ರಿಯಾವಿನ್ಯಾಸಕ್ಕೆ ಬೇಕಾಗುವ ಆಕ್ಸಿಜನ್ ಪೂರೈಕೆ ನಿಂತುಹೋಗಿ ಅಥವಾ ಅದರಲ್ಲಿ ಕೊರೆ ಉಂಟಾಗಿ ಸ್ವಾಭಾವಿಕ ಉಸಿರಾಟದಲ್ಲಿ ನ್ಯೂನತೆ ತಲೆದೋರುತ್ತದೆ. ಇದರಿಂದ ಒದಗುವ ಪ್ರಾಣಾಪಾಯದಿಂದ ವ್ಯಕ್ತಿಯನ್ನು ರಕ್ಷಿಸಲು ಇತರ ಯುಕ್ತ ಪ್ರಥಮ ಚಿಕಿತ್ಸೆಗಳ ಜೊತೆಗೆ ಕೃತಕ ಉಸಿರಾಟದಲ್ಲಿ ಸಹ ತೊಡಗಬೇಕು. ಇದರ ಮುಖ್ಯ ಗುರಿ



ಶೇಫರನ ವಿಧಾನವನ್ನು ಅನುಕ್ರಮವಾಗಿ ತೋರಿಸಿದೆ

ಗಾಳಿಗೂಡಿನಲ್ಲಿ ಅನಿಲದ ಬದಲಾವಣೆಮಾಡಿ ಹೃದಯ ಮತ್ತು ನರಮಂಡಲವನ್ನು ಸುಸ್ಥಿತಿಯಲ್ಲಿಡುವುದು. (ವೈ.ಎ.ಎ)

ಕೃತಕ ಉಸಿರಾಟವನ್ನು ದೈಹಿಕವಾಗಿ ಇಲ್ಲವೆ ಯಾಂತ್ರಿಕವಾಗಿ ಕೈಗೊಳ್ಳಬಹುದು.



ಸೆಲ್ವೆಸ್ಟರ್ ವಿಧಾನ : ಕೃತಕ ಉಸಿರಾಟದ ಕ್ರಮವನ್ನು ಅನುಕ್ರಮವಾಗಿ ತೋರಿಸಿದೆ

ಏಕಾಏಕಿ ಉಸಿರಾಟದ ನಿಲುಗಡೆಯುಂಟಾದಾಗ ದೈಹಿಕ ಕ್ರಮಗಳಿಂದ ಉಸಿರಾಟದ ಗತಿಯನ್ನು ಹಿಂತಿರುಗಿಸಿ ಪುನಶ್ಚೇತನಗೊಳಿಸಬಹುದು. ಉಸಿರಾಟ ಕ್ರಮದಲ್ಲಿ ದೀರ್ಘಕಾಲ

ಅಸಮರ್ಪಕತೆಯುಂಟಾದಾಗ ಯಾಂತ್ರಿಕ ವಿಧಾನಗಳು ಪರಿಣಾಮಕಾರಿಯಾಗಿ ಕೆಲಸಮಾಡಬಲ್ಲವು. ದೈಹಿಕ ವಿಧಾನಗಳಲ್ಲಿ ಶೇಫರ್, ಸಿಲ್ವೆಸ್ಟರ್, ಈವ್ ಹೋಲ್ಗರ್–ನೀಲ್ಸೆನ್‌ರ ಮತ್ತು ಬಾಯಿಯಿಂದ ಬಾಯಿ ಉಸಿರಾಟಕ್ರಮಗಳು ಬಳಕೆಯಲ್ಲಿವೆ. ಈ ವಿಧಾನಗಳನ್ನು ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬಹುದು.

**ಶೇಫರ್ ವಿಧಾನ :** ವ್ಯಕ್ತಿಯ ಉಸಿರಾಟದ ಪುನಶ್ಚೇತನ ಕಾರ್ಯದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಬಹುಮುಖ್ಯ ವಿಧಾನ. ನೀರಿನಲ್ಲಿ ಮುಳುಗಿ ಉಸಿರಾಟದ ತೊಂದರೆಯಿಂದ ಬಳಲುವ ವ್ಯಕ್ತಿಯಲ್ಲಿ ಈ ವಿಧಾನ ಪರಿಣಾಮಕಾರಿಯಾಗಿ ಬಳಕೆಯಾಗಿದೆ. ವ್ಯಕ್ತಿಯ ಬಾಯಿಯನ್ನು ಶುದ್ಧಗೊಳಿಸಿ ನಾಲಗೆಯನ್ನು ಮುಂದಕ್ಕೆಳೆದು ಬೋರಲಾಗಿ ಮಲಗಿಸಬೇಕು. ತಲೆಯನ್ನು ಒಂದು ಪಕ್ಕಕ್ಕೆ ತಿರುಗಿಸಬೇಕು. ಎದೆಯ ಕೆಳಗೆ ದಿಂಬನ್ನೋ ಇಲ್ಲವೇ ಬಟ್ಟೆಯನ್ನೋ ಮಡಿಸಿ ಇಡಬೇಕು. ಈ ರೀತಿ ಮಲಗಿಸುವುದರಿಂದ ಜೊಲ್ಲು, ಲೋಳೆ ಪದಾರ್ಥಗಳು ಬಾಯಿಯಿಂದ ಹೊರಕ್ಕೆ ಬರುತ್ತವೆ. ಇದರಿಂದಾಗಿ ಉಚ್ಛ್ವಾಸ ನಿಶ್ವಾಸ ಯಾವ ತಡೆಯೂ ಇಲ್ಲದೆ ನಡೆಯಲು ಅನುಕೂಲವಾಗುತ್ತದೆ. ಪುನಶ್ಚೇತಕ ತನ್ನ ಮಂಡಿಯನ್ನೂರಿ ವ್ಯಕ್ತಿಯ ತಲೆಯತ್ತ ಮುಖಮಾಡಿ ಒಂದು ಪಕ್ಕದಲ್ಲಿ ಕುಳಿತುಕೊಳ್ಳಬೇಕು. ತನ್ನ ಎರಡೂ ಹಸ್ತಗಳನ್ನು ವ್ಯಕ್ತಿಯ ಎದೆಗೂಡಿನ ಕೆಳ ಪಕ್ಕೆಲುಬುಗಳ ಮೇಲಿಟ್ಟು ಮುಂದೆ ಬಾಗಿ, ಎರಡು ಕ್ಷಣ ಇಡೀ ದೇಹದ ಭಾರವನ್ನು ಹಸ್ತದ ಮೇಲೆ ಹಾಕಿ ಶಕ್ತಿಯಿಂದ ಸೊಂಟದತ್ತ ಒತ್ತಬೇಕು. ಇದರ ಫಲವಾಗಿ ಹೊಟ್ಟೆಯೊಳಗಿನ ಒತ್ತಡ ಹೆಚ್ಚಿ ವಪೆ ಮೇಲಕ್ಕೆ ತಳ್ಳಲ್ಪಡುತ್ತದೆ. ಆಗ ಗಾಳಿ ಎದೆಗೂಡಿನಿಂದ ಹೊರಕ್ಕೆ ದಬ್ಬಲ್ಪಡುತ್ತದೆ. ಅನಂತರ ಒತ್ತುವಿಕೆಯನ್ನು ಸಡಿಲಗೊಳಿಸಿ ಎರಡು ಕ್ಷಣ ಹಿಂದಕ್ಕೆ ಬಾಗಬೇಕು. ಆಗ ಹೊಟ್ಟೆಯಲ್ಲಿಯ ಒತ್ತಡ ಕಡಿಮೆಯಾಗಿ ವಪೆ ಕೆಳಕ್ಕಿಳಿಯುತ್ತದೆ. ಫುಪ್ಪುಸ ತನ್ನ ಸ್ಥಿತಿಸ್ಥಾಪಕಶಕ್ತಿಯಿಂದ ಹಿಗ್ಗಿ ಗಾಳಿಯನ್ನು ಒಳಕ್ಕೆಳೆದುಕೊಳ್ಳುತ್ತದೆ. ಇದರ ಫಲವಾಗಿ ಒಟ್ಟು ಫುಪ್ಪುಸದ ಉಸಿರಾಟದ ಆಳವು ದೊರೆಯುತ್ತದೆ. ಅಷ್ಟು ಆಕ್ಸಿಜನ್ ರಕ್ತಶುದ್ಧೀಕರಣಕ್ಕೆ ಸಾಕು.

**ಸಿಲ್ವೆಸ್ಟರ್ ವಿಧಾನ :** ಈ ವಿಧಾನದಲ್ಲಿ ವ್ಯಕ್ತಿಯನ್ನು ಅಂಗಾತ ಮಲಗಿಸಬೇಕು. ನಾಲಗೆಯನ್ನು ಹೊರಕ್ಕೆ ಎಳೆದಿಟ್ಟು ಮುಖವನ್ನು ಒಂದು ಪಕ್ಕಕ್ಕೆ ತಿರುಗಿಸಿ, ಬಾಯಿಯಿಂದ ಒಸರುವ ಲೋಳೆ ಪದಾರ್ಥವನ್ನು ಒರಸುತ್ತಿರಬೇಕು. ಅಲ್ಲಿ ಇರಬಹುದಾದ ಕೃತಕ ಹಲ್ಲುಗಳು, ಸಸ್ಯಭಾಗಗಳನ್ನು ತೆಗೆಯಬೇಕು. ಪುನಶ್ಚೇತಕ ವ್ಯಕ್ತಿಯ ತಲೆಯ ಬಳಿ ಬಗ್ಗಿ ಕುಳಿತುಕೊಳ್ಳಬೇಕು. ಆತನ ಎರಡೂ ತೋಳುಗಳನ್ನು ಹಿಡಿದು ಮೇಲೆತ್ತಿ ಅನಂತರ ಕೈಗಳನ್ನೂ ಹಿಂದಕ್ಕೆ ಎಳೆದು ಎದೆಯ ಮೇಲಿರಿಸಿ ಒತ್ತಬೇಕು. ಈ ತೆರನಾದ ಚಲನೆಯಿಂದ ಎದೆಗೂಡು ಹಿಗ್ಗಿ ಕುಗ್ಗಿ ಕ್ರಮವಾಗಿ ಗಾಳಿ ಒಳಕ್ಕೂ ಹೊರಕ್ಕೂ ಹೋಗುವಂತೆ ಮಾಡಲು ಸಹಾಯಕವಾಗುವುದು. ಗಾಳಿಯ ಚಲನೆಗೆ ಯಾವ ತಡೆಯೂ ಉಸಿರುನಾಳದಲ್ಲಿ ಇರಬಾರದು. ಹಾಗಲ್ಲದಿದ್ದರೆ ಗಾಳಿಗೂಡಿನಲ್ಲಿ ಒತ್ತಡ ಹೆಚ್ಚಿ ಅದು ಒಡೆದು ಹೋಗುವ ಸಾಧ್ಯತೆಯಿದೆ.

ನೀರಿನಲ್ಲಿ ಮುಳುಗಿದ ವ್ಯಕ್ತಿಯನ್ನು ಹೊರಕ್ಕೆ ಎಳೆದ ಮೇಲೆ ಅವನ ಎರಡು ಕಾಲುಗಳನ್ನು ಹಿಡಿದೆತ್ತಿ ತಲೆ ಕೆಳಕ್ಕೆ ಮಾಡಿಯೋ(ಬ್ಯಾಂಟಿಂಗ್‌ನ ವಿಧಾನ) ಇಲ್ಲವೆ ಕಾಲುಗಳೆರಡನ್ನೂ ಹಿಡಿದು ಸುತ್ತ ತಿರುಗಿಸಿಯೋ ಒಳಕ್ಕೆ ಸೇರಿದ ನೀರು ಹೊರ ಹೋಗುವಂತೆ ಮಾಡಬೇಕು. ಇದರಿಂದ ಜಠರ ಮತ್ತು ಶ್ವಾಸಕೋಶಗಳಲ್ಲಿ ಸೇರಿದ ನೀರು ಹೊರಕ್ಕೆ ಬರುತ್ತದೆ. ಅನಂತರ ಕೃತಕ ಉಸಿರಾಟ ಕ್ರಮವನ್ನು ಕೈಗೊಳ್ಳಬೇಕು.

**ಈವ್‌ನ ತೂಗು ವಿಧಾನ :** ಚೇತನಗೊಳಿಸಬೇಕಾದ ವ್ಯಕ್ತಿಯನ್ನು ಅಸ್ವಸ್ಥರನ್ನು ಹೊರುವ ಮಂಚಕ್ಕೆ ಕಟ್ಟಿ ಮಲಗಿಸಬೇಕು. ಬಳಿಕ ಅನುಕ್ರಮವಾಗಿ ತಲೆ ಮತ್ತು ಪಾದಗಳನ್ನು $45^0$ ಕೋನದಷ್ಟು ಮೇಲಕ್ಕೂ ಕೆಳಕ್ಕೂ ಮಾಡಬೇಕು. ಮಿನಿಟಿಗೆ 8–10 ಬಾರಿ ಈ ತೆರನಾದ ಚಲನೆಯನ್ನು ಮಾಡಿಸಬೇಕು. ನಾಲ್ಕು ಸೆಕೆಂಡು ಕಾಲ ತಲೆಯನ್ನು ಕೆಳಕ್ಕೆ ಮಾಡಬೇಕು. ಆಗ ಹೊಟ್ಟೆಯೊಳಗಿನ ಅವಯವಗಳ ಭಾರ ವಪೆಯ ಮೇಲೆ ಬಿದ್ದು ಗಾಳಿ ಒತ್ತಡದಿಂದ ಹೊರದೂಡಲ್ಪಡುತ್ತದೆ. ತರುವಾಯ ಮೂರು ಸೆಕೆಂಡು ಕಾಲ ಪಾದವನ್ನು ಕೆಳಕ್ಕೆ ಮಾಡಬೇಕು. ಆಗ ವಪೆ ಕೆಳಕ್ಕೆ ಇಳಿದು ಗಾಳಿ ಒಳಕ್ಕೆ ಎಳೆಯಲ್ಪಡುತ್ತದೆ.

**ಹೋಲ್ಗರ್–ನೀಲ್ಸೆನ್‌ರ ವಿಧಾನ :** ಚೇತನಗೊಳಿಸಬೇಕಾದ ವ್ಯಕ್ತಿಯನ್ನು ಬೋರಲಾಗಿ ಮಲಗಿಸಿ ಮುಖವನ್ನು ಒಂದು ಪಕ್ಕಕ್ಕೆ ತಿರುಗಿಸಬೇಕು. ಮೊಳಕೈಯನ್ನು ಮಡಿಸಿ ತೋಳನ್ನು ದೇಹದಿಂದ ಹೊರಕ್ಕೆಳೆದು ಇರಿಸಬೇಕು. ಪ್ರಾರಂಭದಲ್ಲಿ ಬಾಯಿಯನ್ನು ಚೊಕ್ಕಟಗೊಳಿಸಿ ಅಲ್ಲಿರುವ ನೀರು, ಲೋಳೆ ಪದಾರ್ಥಗಳನ್ನು ಹೊರಕ್ಕೆ ತೆಗೆದುಹಾಕಬೇಕು. ಪುನಶ್ಚೇತಕ ವ್ಯಕ್ತಿಯ ಮುಂದೆ ಬಗ್ಗಿ, ಅವನ ತಲೆಯತ್ತ ಮುಖಮಾಡಿ ಕುಳಿತುಕೊಳ್ಳಬೇಕು. ತನ್ನ ಎರಡು ಹಸ್ತಗಳನ್ನೂ ವ್ಯಕ್ತಿಯ ಬೆನ್ನಮೇಲೆ ಇಟ್ಟು ಮುಂದಕ್ಕೆ ಬಗ್ಗಿ ತನ್ನ ದೇಹಭಾರವನ್ನು ವ್ಯಕ್ತಿಯ ಬೆನ್ನ ಮೇಲೆ ಹೇರಬೇಕು. ಇದರ ಫಲವಾಗಿ ಎದೆ ಬಗ್ಗಿ ಉಸಿರು ಹೊರಕ್ಕೆ ಬರುವುದು. ಅನಂತರ ಪುನಶ್ಚೇತಕ ಈ ಸ್ಥಾನದಿಂದ ಹಿಂದೆ ಸರಿದು ಮೊದಲಿನ ಸ್ಥಿತಿಗೆ ಬರಬೇಕು; ವ್ಯಕ್ತಿಯ ಮೊಳಕೈ ಹಿಡಿದು ತೋಳನ್ನು ಅಗಲಗೊಳಿಸಬೇಕು. ಇದರಿಂದ ಗಾಳಿ ಒಳಹೋಗಲು ಸಹಾಯಕವಾಗುವುದು. ಈ ಕ್ರಮವನ್ನು ಮಿನಿಟಿಗೆ 10–12 ಬಾರಿ ಮಾಡಬೇಕು.

**ಬಾಯಿಯಿಂದ ಬಾಯಿ ಉಸಿರಾಟ :** ಶ್ವಾಸಕೋಶದ ಸೋಲುವಿಕೆ ಏಕಾಏಕಿ ಉಂಟಾದಾಗ, ಹೃದಯಸ್ತಂಭನವಾದಾಗ ಹೃದಯದ ಒತ್ತುವಿಕೆಗೆ ಪೂರಕವಾಗಿ ಬಾಯಿಯಿಂದ ಬಾಯಿ ಉಸಿರಾಟ ನೀಡಿ ರಕ್ತ ಆಕ್ಸಿಜನ್ನಿನಿಂದ ಕೂಡಿರುವಂತೆ ಮಾಡಬೇಕು.

ವ್ಯಕ್ತಿಯನ್ನು ಮುಖ ಮೇಲೆ ಮಾಡಿ ಮಲಗಿಸಬೇಕು. ಪುನಶ್ಚೇತಕ ವ್ಯಕ್ತಿಯ ತಲೆಯ ಬಳಿ ಕುಳಿತುಕೊಂಡು ಆತನ ಕತ್ತನ್ನು ಮೇಲ್ಮುಖವಾಗಿ ಹಿಡಿದಿಡಬೇಕು. ಒಂದು ಕೈಯ ಹೆಬ್ಬೆರಳು ಮತ್ತು ತೋರುಬೆರಳಿನ ಸಹಾಯದಿಂದ ಮೂಗಿನ ಹೊಳ್ಳೆಯನ್ನು ಮುಚ್ಚಬೇಕು.

ಬಾಯಿಂದ ಬಾಯಿಗೆ ಉಸಿರಾಟ

ಇದು ಶ್ವಾಸಕೋಶದೊಳಕ್ಕೆ ಯೋಗ್ಯ ಪ್ರಮಾಣದಲ್ಲಿ ಗಾಳಿಸೇರಲು ಸಹಾಯಕವಾಗುವುದು. ಪುನಶ್ಚೇತಕ ತನ್ನ ಬಾಯಿಯನ್ನು ವ್ಯಕ್ತಿಯ ಬಾಯಿಯ ಮೇಲಿಟ್ಟು ತನ್ನೆಲ್ಲ ಶಕ್ತಿಯನ್ನೂ ಉಪಯೋಗಿಸಿ ಜೋರಾಗಿ ಗಾಳಿಯನ್ನು ಊದಬೇಕು. ಇದರಿಂದ ಎದೆಗೂಡು ಮತ್ತು ಫುಪ್ಪುಸ ಹಿಗ್ಗುತ್ತದೆ. ಅನಂತರ ಪುನಶ್ಚೇತಕ ತನ್ನ ಬಾಯಿಯನ್ನು ಹೊರಕ್ಕೆ ತೆಗೆಯಬೇಕು. ಈ ಕ್ರಮವನ್ನು ಮಿನಿಟಿಗೆ 10–12 ಬಾರಿ ಮಾಡಬೇಕು. ಈ ವಿಧಾನವನ್ನು ಎಲ್ಲ ವಯಸ್ಸಿನವರಲ್ಲಿಯೂ ಪರಿಣಾಮಕಾರಿಯಾಗಿ ಮಾಡಬಹುದು.

ಹೊಸದಾಗಿ ಹುಟ್ಟಿದ ಕೂಸಿನಲ್ಲಿ ಉಸಿರಾಟ ನಿಧಾನವಾದರೆ ಕೂಸನ್ನು ತಲೆಕೆಳಗೆ ಮಾಡಿ ಹಿಡಿದು ಬೆನ್ನ ಮೇಲೆ ತಟ್ಟಬೇಕು. ಇದರಿಂದ ಉಸಿರಾಟ ಪ್ರಾರಂಭಗೊಂಡು ಮಿದುಳಿಗೆ ರಕ್ತಪ್ರಸರಣ ನಿರಾತಂಕವಾಗಿ ಜರಗುವುದು. ಇಲ್ಲವೆ ಕ್ರಮವಾಗಿ ಕೂಸನ್ನು ಬಿಸಿ ಮತ್ತು ತಣ್ಣೀರಿನಲ್ಲಿಡಬೇಕು ಅಥವಾ ಮಗುವಿನ ಬಾಯಿ ತೆರೆದು ಮೂಗು ಮುಚ್ಚಿ ಜೋರಾಗಿ ಉಸಿರನ್ನು ಬಿಡಿಸಬೇಕು. ಇದರಿಂದ ರಕ್ತದಲ್ಲಿ ಇಂಗಾಲದ ಡೈಆಕ್ಸೈಡ್ ಮೊತ್ತ ಹೆಚ್ಚಿ ಉಸಿರಾಟಕೇಂದ್ರ ಚೇತನಗೊಳ್ಳುವುದು.

**ಯಾಂತ್ರಿಕ ವಿಧಾನಗಳು :** ದೈಹಿಕಶ್ರಮಗಳಿಂದ ದೀರ್ಘಾವಧಿ ಕಾಲ ಕೃತಕ ಉಸಿರಾಟ ಮಾಡುವುದು ಕಷ್ಟಸಾಧ್ಯವಾಗುವುದು. ಯೋಗ್ಯರೀತಿಯಲ್ಲಿ ಶ್ವಾಸಕ್ರಿಯೆಯನ್ನು ನಡೆಸಲು

ರಿಸಸಿಟೇಟರ್ ವಿಧಾನ

ಚೈತನ್ಯವಿಲ್ಲದ ವ್ಯಕ್ತಿಯಲ್ಲಿ ನಳಿಗೆ ಅಥವಾ ಮುಖವಾಡದ ಮೂಲಕ ಆಕ್ಸಿಜನ್ನನ್ನು ಫುಪ್ಫುಸದೊಳಗೆ ಸೇರಿಸಬೇಕು. ರಾಸಾಯನಿಕ ವಸ್ತುಗಳಿಂದ ಉಸಿರಾಟಕೇಂದ್ರವನ್ನು ಚೇತನಗೊಳಿಸಿ ಉಸಿರಾಟವನ್ನು ಕ್ರಮಗೊಳಿಸಬಹುದು. ಇದು ಅಸಾಧ್ಯವಾದಾಗ ಯಾಂತ್ರಿಕ ಉಸಿರಾಟಕ್ರಮಕ್ಕೆ ಶರಣು ಹೋಗಬೇಕಾಗುವುದು. ಪೋಲಿಯೋ, ಧನುರ್ವಾಯುವಿನಂಥ ನರಕ್ಕೆ ಸಂಬಂಧಿಸಿದ ರೋಗಗಳು, ಸ್ನಾಯು ಶಕ್ತಿಹೀನತೆಯ ಕುತ್ತಿನ ಸಮಯದಲ್ಲಿ, ಬಾರ್ಬಿಟುರೇಟ್, ಮಾರ್ಫಿಯದಂಥ ಔಷಧಗಳ ವಿಪರೀತ ಸೇವನೆ, ಇಂಗಾಲದ ಮಾನಾಕ್ಸೈಡಿನ ಸೇವನೆ, ಜಜ್ಜಲ್ಪಟ್ಟ ಎದೆ. ತೆರೆದ ಹೃದಯ ಚಿಕಿತ್ಸೆ ಮತ್ತು ಜನ್ಮ ತಳೆದ ಕೂಸಿನಲ್ಲಿ ತಲೆದೋರುವ ಮೃದು ಪೊರೆಯ ರೋಗ- ಇಲ್ಲೆಲ್ಲ ಯಾಂತ್ರಿಕ ಉಸಿರಾಟ ಕ್ರಮವನ್ನು ಕೈಗೊಂಡು ಉಸಿರಾಟದ ದೈಹಿಕಶ್ರಮವನ್ನು ಕಡಿಮೆ ಮಾಡಬೇಕಾಗುವುದು. ಈ ವಿಧಾನಗಳಿಂದ ಗಾಳಿಗೂಡಿನಲ್ಲಿ ಗಾಳಿಯ ಆಳವು ಹೆಚ್ಚುತ್ತದೆ. ದೀರ್ಘಕಾಲೀನ ಕೆಮ್ಮು ರೋಗ, ಬಿಡದ ಗೂರಲುಬ್ಬಸ ರೋಗಗಳಲ್ಲಿ ಉಂಟಾಗುವ ಉಸಿರಾಟದ ಸೋಲುವಿಕೆಯಲ್ಲಿಯೂ ಈ ತೆರನಾದ ಚಿಕಿತ್ಸೆ ಬೇಕಾಗಬಹುದು. ಯಾಂತ್ರಿಕ ವಿಧಾನಗಳು ಎರಡು ಮೂಲಭೂತ ತತ್ತ್ವಗಳ ಮೇಲೆ ಕೆಲಸಮಾಡುತ್ತವೆ; ಕ್ರಮವಾಗಿ ಎದೆಗೂಡನ್ನು ಹಿಗ್ಗಿಸುವುದು ಮತ್ತು ಕುಗ್ಗಿಸುವುದು; ಗಾಳಿ ಅಥವಾ ಆಕ್ಸಿಜನ್ನನ್ನು ನೇರವಾಗಿ ಫುಪ್ಫುಸದೊಳಗೆ ಬಿಟ್ಟು ಬಿಟ್ಟು ಇಲ್ಲವೆ ಬಿಡದೆ ಸೇರಿಸುವುದು.

**ಕಬ್ಬಿಣ ಶ್ವಾಸಕೋಶ :** ಯಾಂತ್ರಿಕ ವಿಧಾನಗಳ ಶೋಧದ ಪ್ರಾರಂಭಿಕ ದಿಶೆಗಳಲ್ಲಿ ಡ್ರಿಂಕರ್‌ನ ಗಾಳಿಯಿಲ್ಲದ ಕೋಶಾಗಾರವನ್ನು ಉಸಿರಾಟದ ಪುನಶ್ಚೇತನಕ್ಕೆ ಉಪಯೋಗಿಸಲಾಗುತ್ತಿದ್ದಿತು. ಈ ಕ್ರಮದಲ್ಲಿ ರೋಗಿಯ ತಲೆ ಮಾತ್ರ ಹೊರಗಿರುತ್ತದೆ. ಯಂತ್ರದ ಸಹಾಯದಿಂದ ಕೋಶಾಗಾರದ ಒತ್ತಡವನ್ನು ಹೆಚ್ಚು ಕಡಿಮೆ ಮಾಡಬಹುದು. ಕೋಶಾಗಾರದ ಒತ್ತಡ ಕಡಿಮೆಯಾದಾಗ ಎದೆಗೂಡು ಹಿಗ್ಗಿ ಗಾಳಿಯನ್ನೊಳಕ್ಕೆ ಎಳೆದುಕೊಳ್ಳುತ್ತದೆ. ಕೋಶಾಗಾರದ ಒತ್ತಡ ಹೆಚ್ಚಾದಾಗ ಎದೆಗೂಡು ಸಂಕುಚನಗೊಂಡು ಗಾಳಿ ಹೊರಹೋಗುತ್ತದೆ.

**ಒತ್ತಡ ಉಸಿರಾಟ ವಿಧಾನಗಳು :** ಒತ್ತಡ ಮತ್ತು ವಿಸ್ತಾರದ ಘನ ಸಾಮರ್ಥ್ಯದ ಸಾಧನಗಳು ಕೃತಕ ಉಸಿರಾಟಕ್ರಮದಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ತಂದಿವೆ. ನಿರ್ದಿಷ್ಟ ಪಡಿಸಿದ ಒತ್ತಡದಲ್ಲಿ ಗಾಳಿ ಫುಪ್ಫುಸವನ್ನು ಸೇರುವುದು.

**ಒತ್ತಡಕ್ರಮ :** ಒತ್ತಡಕ್ರಮದಲ್ಲಿ ಕೆಲಸಮಾಡುವ ಬರ್ಕ್, ಬೆನೆಟ್ ಎಂಬ ಸಣ್ಣ ಯಂತ್ರಗಳು ಮೊದಲೇ ನಿರ್ಧರಿಸಲ್ಪಟ್ಟ ಒತ್ತಡ ಗಾಳಿಯನ್ನು ರೋಗಿಯ ಶ್ವಾಸಕೋಶಗಳ ಒಳಕ್ಕೆ ತಳ್ಳಿ ಅವನ್ನು ಹಿಗ್ಗಿಸುತ್ತವೆ. ಆ ಕಾಲದಲ್ಲಿ ಶ್ವಾಸಕೋಶಗಳಲ್ಲಿ ಇರಬಹುದಾದ ಜಲಸಂಚಯ, ಉಸಿರುನಾಳದಲ್ಲಿ ಲೋಳೆ ಸೇರಿಕೆ, ಮುರುಟಿಕೊಂಡ ರಬ್ಬರ್ ನಳಿಗೆ ಮತ್ತು ಪಂಗುಸಿರ್ನಾಳದ ಸ್ನಾಯುಸೆಳಕು-ಸಮರ್ಪಕ ಉಸಿರಾಟಕ್ಕೆ ಯೋಗ್ಯ ಸನ್ನಿವೇಶವನ್ನು ಒದಗಿಸುವುದಿಲ್ಲ.

**ಘನವಿಸ್ತಾರಕ್ರಮ :** ಕೇಪ್, ರ್ಯಾಡ್‌ಕ್ಲಿಫ್ ಮತ್ತು ಸ್ಮಿತ್ ಕ್ಲಾರ್ಕರ ವಿಸ್ತಾರ ಸಾಮರ್ಥ್ಯದ ಯಂತ್ರಗಳು ದೊಡ್ಡವು ಮತ್ತು ತೊಡಕಿನವು ಆಗಿದ್ದರೂ ಅವು ರೋಗಿಗೆ ಹೆಚ್ಚು ಉಪಯುಕ್ತವಾಗಿದೆ, ಅವುಗಳ ಉಪಯೋಗದಿಂದಾಗಿ ರೋಗಿಯ ಶ್ವಾಸಕೋಶದ ಉಸಿರಾಟಕ್ರಮದಲ್ಲಿ ಏನೇ ವ್ಯತ್ಯಯವಿದ್ದರೂ ಆತನ ಫುಪ್ಫುಸದೊಳಗೆ ನಿರ್ದಿಷ್ಟಪಡಿಸಿದ ಪರಿಮಾಣದಲ್ಲಿ ಗಾಳಿ ಒಳಸೇರುವುದು. ಹೆಚ್ಚು ಒತ್ತಡದಿಂದ ಸಂಕುಚನಗೊಳಿಸಿದ ಗಾಳಿಯನ್ನು ಬಿಸಿನೀರಿನ ಮೂಲಕ ಹಾಯಿಸಿ ಅದನ್ನು ಉಸಿರುನಾಳದೊಳಕ್ಕೆ ಸೇರಿಸಬೇಕು.

ನಳಿಗೆಯೊಂದನ್ನು ಉಸಿರುನಾಳದ ಮೂಲಕವಾಗಲೀ ಅಥವಾ ಕತ್ತರಿಸಿದ ಉಸಿರುನಾಳದ ತೂತಿನ ಮೂಲಕವಾಗಲೀ ಸೇರಿಸಿ ಗಾಳಿ ಅಥವಾ ಆಕ್ಸಿಜನ್‌ನ ಪ್ರವಾಹವನ್ನು ಅದರ ಮೂಲಕ ಹರಿಯಬಿಟ್ಟು ಫುಪ್ಫುಸದೊಳಕ್ಕೆ ಸೇರುವಂತೆ ಮಾಡಬೇಕು. ದೀರ್ಘಕಾಲ ಕೃತಕ ಉಸಿರಾಟ ಕ್ರಮ ಬೇಕಾದರೆ ಉಸಿರುನಾಳದಲ್ಲಿ ತೂತುಮಾಡಿ ನಳಿಗೆ ಸೇರಿಸಬೇಕು. ಅದರಿಂದಾಗಿ ಶ್ವಾಸಮಾರ್ಗವನ್ನು ಶುದ್ಧವಾಗಿರಿಸಬಹುದು. ರೋಗಿಯ ಉಸಿರಾಟದ ಸಾಮರ್ಥ್ಯವನ್ನು ಯಂತ್ರದೊಡನೆ ಹೊಂದಾಣಿಕೆಗೊಳಿಸಬಹುದು. ಅದು ಸಾಧ್ಯವಾಗದಿದ್ದರೆ ಮಾರ್ಫಿಯ ಅಥವಾ ಕ್ಯುರಾರೆಯಂಥ ಔಷಧಗಳನ್ನು ಕೊಟ್ಟು ವ್ಯಕ್ತಿಗತ ಶ್ರಮವನ್ನು ನಷ್ಟಗೊಳಿಸಿ ಯಂತ್ರದ ಮೂಲಕ ಆಕ್ಸಿಜನ್‌ಪೂರಿತ ಗಾಳಿಯನ್ನು ಫುಪ್ಫುಸದೊಳಸೇರಿಸಬೇಕು. ಇದರ ಫಲವಾಗಿ ರೋಗಿಯ ಅರಿವು ತಿಳಿಗೊಳ್ಳುವುದು ರಕ್ತದಲ್ಲಿಯ ಇಂಗಾಲದ ಡೈಆಕ್ಸೈಡ್ ಪ್ರಮಾಣ ಕಡಿಮೆಯಾಗುವುದು. ಉಸಿರಾಟದ ಗತಿ ಸಮರ್ಪಕವಾದ ಮೇಲೆ ಯಾಂತ್ರಿಕ ಸಾಧನದ ಉಪಯೋಗವನ್ನು ನಿಲ್ಲಿಸಬೇಕು. (ಪಿ.ಎಸ್.ಎಸ್.)

**ಕೃತಕ ಎಳೆಗಳು :** ನೈಸರ್ಗಿಕ ಅಥವಾ ಇನಾರ್ಗ್ಯಾನಿಕ್ ಅಥವಾ ಸಂಶ್ಲೇಷಿತ ವಸ್ತುಗಳಿಂದ ತಯಾರಿಸಿದ ಎಳೆಗಳು. ರೇಯಾನ್ಸ್, ನೈಲಾನ್, ಝೆಫ್ರಾನ್ ಮುಂತಾದವು ಉದಾಹರಣೆಗಳು. ಎಲ್ಲ ಕೃತಕ ಎಳೆಗಳೂ ರಾಸಾಯನಿಕವಾಗಿ ವಿವಿಧಬಗೆಯ ಪಾಲಿಮರಗಳು. ಇವುಗಳಲ್ಲಿ ಸರಳ ಸಂಯುಕ್ತಗಳ ಅನೇಕ ಅಣುಗಳು ಪರಸ್ಪರ ಸರಪಳಿಯಂತೆ ಕೂಡಿಕೊಂಡು ಎಳೆಗಳ ಸರಪಳಿ ಪಾಲಿಮರಗಳು ಆಗುತ್ತವೆ.

ಸುಧಾರಿತ ಹಾಗೂ ಕೃತಕ ತಂತುಗಳ ಮತ್ತು ಅವುಗಳ ಸಂಸ್ಕರಣೆಯ ಬಗ್ಗೆ ಮಹತ್ತ್ವಪೂರ್ಣ ಸಂಶೋಧನೆಗಳು ಹಲವಾರು ದಶಕಗಳಿಂದ ನಡೆದಿವೆ. ಮನುಷ್ಯ ಮೊದಮೊದಲು ತಯಾರಿಸಿದ ಕೃತಕ ದಾರ ರೇಯಾನ್. ಅದನ್ನು ಸರಂಧ್ರೀಯವಾಗಿ ತಯಾರಿಸಿದ. ಪ್ರೋಟೀನ್ ಪದಾರ್ಥಗಳು, ಕಡಲೆಕಾಯಿ, ಕೆನೆತೆಗೆದ ಹಾಲು ಮುಂತಾದ ವಸ್ತುಗಳಿಂದ ಹಲವು ಬಗೆಯ ಇತರ ತಂತುಗಳು ತಯಾರಾದವು. ಕೆಲವು ಕೃತಕ ತಂತುಗಳು ಸಂಯೋಜಿತ ಕೃತಕ ರಬ್ಬರು ಮತ್ತು ಗಾಜಿನಿಂದ ಉತ್ಪಾದನೆಯಾದವು. ಕೃತಕ ದಾರ ಅಥವಾ ಸಂಯೋಜಿತ ದಾರ ಎಂಬ ಪದಗಳು ಸಾಮಾನ್ಯವಾಗಿ ಸಂಯೋಜಿತ ರಾಸಾಯನಿಕ ಪದಾರ್ಥಗಳಿಂದ ತಯಾರಿಸಿದ ತಂತುಗಳಿಗೆ ಅನ್ವಯವಾಗುತ್ತವೆ. ವಸ್ತುತಃ ಸ್ವಾಭಾವಿಕ ಉತ್ಪನ್ನಗಳನ್ನು ಬಳಸದೆಯೇ ಬಟ್ಟೆ ತಯಾರಿಕೆಗೆ ಬೇಕಾದ ಈ ಕೃತಕ ತಂತುಗಳನ್ನು ಸೃಜಿಸಬಹುದಾಗಿರುವುದರಿಂದ ಅವು ಜನತೆಯ ಆಸಕ್ತಿಯನ್ನು ಹೆಚ್ಚಿಸಿವೆ. ನೈಲಾನ್, ಟೆರಿಲಿನ್, ಓರ್ಲಾನ್ ಮೊದಲಾದವು ಹೆಚ್ಚು ಮೊತ್ತದಲ್ಲಿ ತಯಾರಾಗುವ ಬಹು ಮುಖ್ಯ ಕೃತಕ ತಂತುಗಳಲ್ಲಿ ಕೆಲವು ಬಗೆ.

**ನೈಲಾನ್:** ತಮ್ಮ ಮೂಲ ರಾಸಾಯನಿಕ ವಸ್ತುಗಳಲ್ಲಿ ವ್ಯತ್ಯಾಸಗಳಿದ್ದರೂ ಸರ್ವಸಾಧಾರಣವಾಗಿ ಆ ರಾಸಾಯನಿಕ ವಸ್ತುಗಳನ್ನು ಮಂದಗೊಳಿಸಿ ತಯಾರಿಸುವ ಕೆಲವು ಬಗೆಯ ನೈಲಾನ್ ತಂತುಗಳಿವೆ. ಅವುಗಳಿಗೆಲ್ಲ ಪಾಲಿಯಾಮೈಡ್ ತಂತುಗಳೆಂದು ಹೆಸರು. ಮೂಲವಸ್ತುಗಳ ಸಂಯೋಜನ ಕ್ರಮದಲ್ಲಿ ಸಣ್ಣ ಕಣಗಳು ದೊಡ್ಡ ಕಣಗಳಾಗಿ ಹೇಗೆ ಮಾರ್ಪಡುತ್ತವೆ ಎಂಬ ಬಗ್ಗೆ ಡಬ್ಲ್ಯು. ಎಚ್. ಕರೋಥೆರ್ಸ್ ಮತ್ತು ಆತನ ಸಹಾಯಕ ಸಂಶೋಧಕರು ನಡೆಸಿದ ಸಂಶೋಧನೆಗಳ ಫಲವಾಗಿ ಡ್ಯುಪಾಂಟ್ ಕಂಪೆನಿಯವರು ತಯಾರಿಸಿದ ಹೊಚ್ಚ ಹೊಸ ತಂತುಗಳಿಗೆ ಇಟ್ಟ ಹೆಸರು ನೈಲಾನ್. ಈ ದೊಡ್ಡ ಕಣಗಳಿಗೆ ಪಾಲಿಮರುಗಳೆಂದು ಹೆಸರು. ಕೆಲವು ರಾಸಾಯನಿಕ ವಸ್ತುಗಳು ಪ್ರಬಲ ಹಿರಿಯಕಣಗಳಾಗಿ (ಅತಿಪಾಲಿಮರುಗಳು) ಸಂಯೋಗವಾಗಬಲ್ಲುವೆಂದೂ ಅವುಗಳಲ್ಲಿ ಕೆಲವನ್ನು ದಾರವನ್ನಾಗಿ ಎಳೆಯಬಹುದು ಇಲ್ಲವೆ ಹೊರಡಿಸಬಹುದೆಂದೂ ಡ್ಯುಪಾಂಟ್ ರಾಸಾಯನಿಕ ಸಂಶೋಧಕರು ಕಂಡುಹಿಡಿದರು. ಈ ಉದ್ದೇಶಕ್ಕಾಗಿ ಕಲ್ಲಿದ್ದಲು, ವಾಯು ಮತ್ತು ನೀರು ಇವುಗಳಿಂದ ಪಡೆದ ಆಧಾರವಸ್ತುಗಳು ತೃಪ್ತಿಕರವಾಗಿ ಒಟ್ಟುಗೂಡುತ್ತವೆಂದು ಕಂಡುಬಂದಿತು. ಅದರ ಪರಿಣಾಮವಾಗಿ ನೈಲಾನ್ ಸೃಷ್ಟಿಯಾಯಿತು(1938). ಒಂದು ವರ್ಷದ ತರುವಾಯ ಬಟ್ಟೆ ನೂಲಿನಂತೆಯೆ ಅಲ್ಲದೆ ಬಿರುಸು ಎಳೆ ಮತ್ತು ಫಲಕ ರೂಪಗಳಲ್ಲಿ ಹಾಗೂ ತೀರ ಗಟ್ಟಿಯಾದ ಬಲವಾದ ಮತ್ತು ಸ್ಥಿತಿಸ್ಥಾಪಕ ಗುಣವುಳ್ಳ ಇತರ ಪ್ರಕಾರಗಳಲ್ಲಿ ನೈಲಾನ್ ವಾಣಿಜ್ಯ ಸರಕಾಗಿ ತಯಾರಾಗಲು ಪ್ರಾರಂಭವಾಯಿತು(1939). ರಾಷ್ಟ್ರರಕ್ಷಣೆಯ ಉದ್ದೇಶಗಳಿಗಾಗಿ, ವೈಮಾನಿಕರ ಧುಮುಕು ಛತ್ರಿ, ಸಮವಸ್ತ್ರ, ಟೈರುಗಳ ಹುರಿ ಮೊದಲಾದ ವಸ್ತುಗಳ ತಯಾರಿಕೆಗೆ ನೈಲಾನ್ ಉತ್ಪಾದನೆಗಳನ್ನು ಮೀಸಲಿಡಲಾಯಿತು. ಯುದ್ಧ ಮುಗಿದ ತರುವಾಯ ಪುನಃ ಜನರ ಉಪಯೋಗಕ್ಕಾಗಿ ನೈಲಾನ್ ಉತ್ಪಾದನೆ ಪ್ರಾರಂಭವಾಯಿತು. 66 ಮತ್ತು 6 ತರಹೆಗಳ ಎಳೆಗಳನ್ನು ಡ್ಯುಪಾಂಟ್ ಕಂಪೆನಿ ತಯಾರಿಸತೊಡಗಿತು. ಅದರೊಂದಿಗೆ ನೈಲಾನನ್ನು ಒಂದಲ್ಲ ಒಂದು ರೂಪದಲ್ಲಿ ತಯಾರಿಸುವ ಅನೇಕ ಉದ್ಯಮ ಸಂಸ್ಥೆಗಳಿವೆ. ನೈಲಾನ್ ತಯಾರಾಗುತ್ತಿರುವ ಪ್ರಪಂಚದ ಕೆಲವು ರಾಷ್ಟ್ರಗಳಲ್ಲಿ ಅದಕ್ಕೆ ಕೊಟ್ಟಿರುವ ಪ್ರಸಿದ್ಧ ಹೆಸರುಗಳಿವು: ಜಪಾನ್-ಅಮಿಲಾನ್, ಜರ್ಮನಿ-ಪೆರ್ಲಾನ್,ನೆದರ್ಲೆಂಡ್-ಬಿಟಾಲ್, ಇಟಲಿ, ಬ್ರಿಜಿಲ್ ಮತ್ತು ಫ್ರಾನ್ಸ್-ರಿಲ್ಸಾನ್.

**ತಯಾರಿಕೆ:** ನೈಲಾನ್ ತಯಾರಿಕೆಗೆ ಬೇಕಾದ ಮೂಲ ಕಚ್ಚಾ ಪದಾರ್ಥಗಳು ಹೈಡ್ರೋಕಾರ್ಬನ್ ಸಂಯುಕ್ತ, ಸಾರಜನಕ, ಆಮ್ಲಜನಕ ಮತ್ತು ಜಲಜನಕ. ಕಲ್ಲಿದ್ದಲಿನಿಂದ ಜಲಜನಕ ಮತ್ತು ಆಮ್ಲಜನಕಗಳನ್ನೂ ನೀರಿನಿಂದ ಜಲಜನಕವನ್ನೂ ಪಡೆಯಲಾಗುತ್ತದೆ. ಭಾರಿ ಒತ್ತಡದ ಬಲದಿಂದ ಹೈಡ್ರೊಕಾರ್ಬನ್ ಸಂಯುಕ್ತ ಹಾಗೂ ಇತರ ಮಧ್ಯವರ್ತಿಗಳು ಅಡಿಪಿಕ್ ಆಮ್ಲ ಮತ್ತು ಹೆಕ್ಸಮೆಥಿಲಿನ್ ಡಯಮೈನ್‌ಗಳಾಗಿ ರೂಪುಗೊಳ್ಳುತ್ತವೆ. ಹೆಕ್ಸಮೆಥಿಲಿನ್ ಡೈ ಅಮೋನಿಯಂ ಅಡಿಪೇಟ್ ಎಂಬ ಲವಣದ್ರಾವಣವನ್ನು ತಯಾರಿಸಲು ನೀರಿನೊಡನೆ ನಿರ್ದಿಷ್ಟ ಪ್ರಮಾಣಗಳ ಆಮ್ಲ ಮತ್ತು ಡೈಅಮೈನ್ ದ್ರಾವಣವನ್ನು ಸಂಯೋಜಿಸುತ್ತಾರೆ. ತರುವಾಯ ಸಂಯೋಜೀಕರಣ ಅಂದರೆ ಸಣ್ಣ ಸಣ್ಣ ಕಣಗಳನ್ನು ಒಗ್ಗೂಡಿಸುವ ಕ್ರಿಯೆ ಪ್ರಾರಂಭವಾಗುತ್ತದೆ. ಹೀಗೆ ಸಣ್ಣ ಕಣಗಳನ್ನು ಸಂಯೋಜಿಸಲು ನೈಲಾನ್ ಲವಣದ್ರಾವಣವನ್ನು ಉಸಿರುಪಾತ್ರೆಯಲ್ಲಿ ಹಾಯಿಸುತ್ತಾರೆ. ಆ ಉಸಿರುಪಾತ್ರೆಯಲ್ಲಿ ಒತ್ತಡಕ್ಕೆ ಒಳಪಡುವಂತೆ ದ್ರಾವಣಕ್ಕೆ ಕಾವು ಕೊಟ್ಟಾಗ, ಹೊಸ ಹಿರಿಯ ಕಣವಾಗಿ ರೂಪುಗೊಳ್ಳಲು ಡೈಅಮೈನ್ ಕಣ ಮೂಲ ಆಮ್ಲಕಣದೊಂದಿಗೆ ಮಿಲನವಾಗುತ್ತದೆ. ಕಣಗಳ ಸರಣಿಯಾಗಲು, ಅಂದರೆ ಹಿರಿಯ ಕಣವಾಗಿ ಸಂಯೋಗವಾಗಲು ಈ ಕಣಗಳು ಇದೇ ರೀತಿ ರಚಿತವಾದ ಇತರ ಕಣಗಳೊಂದಿಗೆ ಸೇರಿಕೊಳ್ಳುತ್ತವೆ. ಈ ಸಂಯೋಗದಿಂದ ಹಿರಿಯ ಕಣ ಅಶುದ್ಧಾವಸ್ಥೆಯಲ್ಲೆ ಉಸಿರುಪಾತ್ರೆಯ ತಳದ ಸೀಳುಕಂಡಿಯಿಂದ ಹೊರಬರುತ್ತದೆ. ಅದನ್ನು ನೀರಿನಿಂದ ತಂಪಾಗುವ ತಿರುಗುಚಕ್ರದ ಮೇಲೆ ಇರಿಸುತ್ತಾರೆ. ಆಗ ಅದು ದಂತವರ್ಣದ ಪಟ್ಟಿಯ ಆಕಾರದಲ್ಲಿ ಗಟ್ಟಿಯಾಗುತ್ತದೆ. ಅದನ್ನು ಚೂರುಗಳಾಗಿ ಇಲ್ಲವೆ ಉಣ್ಣೆ ಎಳೆಯಂಥ ಪೊರೆಗಳನ್ನಾಗಿ ಕತ್ತರಿಸುತ್ತಾರೆ. ತರುವಾಯ ನೈಲಾನ್ ಪೊರೆಗಳನ್ನು ಕರಗಿಸಿ, ಕರಗಿಸಿ ನೂಲುತೆಗೆಯುವ ವಿಧಾನದಲ್ಲಿ(ಮೆಲ್ಟ್‌ಸ್ಪಿನ್ನಿಂಗ್) ಕಿರುರಾಟೆಯ ಮೂಲಕ ಹೊರಡಿಸುತ್ತಾರೆ. ಕಿರುರಾಟೆಯ ರಂಧ್ರಗಳಿಂದ ಪ್ರವಹಿಸುವ ನೈಲಾನ್ ಸೂಕ್ಷ್ಮ ಪಟ್ಟಿಗಳು ತಂಪಾಗಿ ಕೂಡಲೆ ಘನೀಕೃತ ತಂತುಗಳಾಗುತ್ತವೆ. ಈ ಹಂತದಲ್ಲಿ ಮತ್ತೊಂದು ಹೊಸ ಮತ್ತು ಸ್ವಾರಸ್ಯವಾದ ಕ್ರಿಯೆ ನಡೆಯುತ್ತದೆ: ಹೀಗೆ ಉತ್ಪನ್ನವಾದ ನವುರೆಳೆಗಳು ಮತ್ತು ತಂತುಗಳು ಬಟ್ಟೆ ತಯಾರಿಕೆಗಾಗಿ ಬಳಸುವಷ್ಟು ತೃಪ್ತಿಕರವಾಗಿರುವುದಿಲ್ಲ. ಆದ್ದರಿಂದ ಹಸಿಯಾಗಿ ತೆಗೆಯುವ ವಿಧಾನವೆಂಬ ಕ್ರಮದಲ್ಲಿ ಅವನ್ನು ಮೊದಲ ಉದ್ದಕ್ಕಿಂತಲೂ 3–4 ಪಟ್ಟು ಉದ್ದಕ್ಕೆ ವಿಸ್ತರಿಸುತ್ತಾರೆ. ಈ ಪ್ರಕಾರವಾದ ಲಂಬನೆಯಿಂದ ಅವುಗಳ ಬಲ ಮತ್ತು ಸ್ಥಿತಿಸ್ಥಾಪಕತ್ವ ಉತ್ತಮವಾಗುವುವು. ನೈಲಾನನ್ನು ನವುರೆಳೆ ಮತ್ತು ತಂತು ರೂಪಗಳಲ್ಲಿ ತಯಾರಿಸುತ್ತಾರೆ. ನೂಲುವ ದ್ರಾವಣದಲ್ಲಿ ಟಿಟಾನಿಯಂ ಡೈಆಕ್ಸೈಡ್ ಮಾದರಿಯ ಹೊಳಪಿಲ್ಲದ ದ್ರವ್ಯವನ್ನು ಸೇರಿಸಿ ಅದರ ಕಾಂತಿಯನ್ನು ಕುಂದಿಸಬಹುದು. ಇದೇ ರೀತಿ ವರ್ಣದ್ರವ್ಯ ಸೇರಿಸಿ ಬಣ್ಣದ ನೈಲಾನ್ ತಯಾರಿಸಬಹುದು.

ಬಟ್ಟೆ ತಯಾರಿಕೆಯಲ್ಲಿ ಉಪಯೋಗಿಸುವ ಇತರ ಯಾವುದೇ ದಾರಗಳಿಗಿಂತ ನೈಲಾನ್ ತಂತುಗಳು ಗಟ್ಟಿಯಾದವು. ಅವುಗಳ ಶುಷ್ಕ ಸಾಮರ್ಥ್ಯ ಅಧಿಕ. ತೇವಸಾಮರ್ಥ್ಯ ಕೇವಲ ಶೇ.15. ತೂಕದಲ್ಲಿ ಹಗುರ ಹಾಗೂ ಅವುಗಳ ಘರ್ಷಣ ನಿರೋಧಶಕ್ತಿ ಉಣ್ಣೆಗಿಂತಲೂ ಸುಮಾರು ಮೂರು ಪಟ್ಟು ಹೆಚ್ಚು. ನೈಲಾನ್ ಬಹಳ ಸುಲಭವಾಗಿ ಎಳೆದು ಮತ್ತೆ ಪೂರ್ವಸ್ಥಿತಿಗೆ ತರಬಹುದಾದ ಸ್ಥಿತಿಸ್ಥಾಪಕ ಗುಣವುಳ್ಳ ವಸ್ತು. ತಂತುಗಳು ನುಣುಪಾಗಿಯೂ ರಂಧ್ರವಿಹೀನವಾಗಿಯೂ ಇರುವುದರಿಂದ ಬೇಗ ಕೊಳೆಯಾಗುವುದಿಲ್ಲ. ನೈಲಾನ್ ತೇವವನ್ನು ಹೀರುವುದಿಲ್ಲವಾದ್ದರಿಂದ ಬೇಗ ಒಣಗುತ್ತದೆ. ಜಲನಿರೋಧಗುಣ ಇರುವುದರಿಂದ ನೈಲಾನ್ ಬಟ್ಟೆ ಬೇಸಗೆಯಲ್ಲಿ ತೊಡಲು ಹಿತವಲ್ಲ. ಕೃತಕ ಎಳೆಗಳಂತೆ ನೈಲಾನ್ ಎಳೆಗಳಿಗೂ ವಿಸ್ತರಣಶಕ್ತಿಯನ್ನು ಕೊಡಬಹುದು. ಕ್ಷಾರಗಳನ್ನು ನೈಲಾನ್ ಬಹಳ ಚೆನ್ನಾಗಿ ತಡೆಯುತ್ತದೆ. ಆದರೆ ಸಲ್ಫೂರಿಕ್ ಆಮ್ಲದಲ್ಲಿ ಕರಗಿಹೋಗುತ್ತದೆ. ತೀಕ್ಷ್ಣ ಬಿಸಿಲಿಗೆ ಇಲ್ಲವೆ ಸಾಮಾನ್ಯ ಬೆಳಕಿಗೆ ದೀರ್ಘಕಾಲ ಬಿಟ್ಟರೆ ಸಾಮಾನ್ಯದರ್ಜೆಯ ನೈಲಾನ್ ಹಾಳಾಗುತ್ತದೆ. ನೈಲಾನ್ ಬಟ್ಟೆಗೆ ಬೂಷ್ಟು ಹಿಡಿಯುವುದಿಲ್ಲ; ಕೀಟಗಳಿಂದ ಅಥವಾ ಬೆಳ್ಳಿಹುಳುಗಳಿಂದ ಅದು ನಾಶವಾಗುವುದಿಲ್ಲ. ಅದನ್ನು ಕನಿಷ್ಠ ಉಷ್ಣತೆಗಳಲ್ಲಿ ಮಾತ್ರ ಇಸ್ತ್ರಿ ಮಾಡಬೇಕು. ನೈಲಾನನ್ನು ಬಿಡಿತಂತುಗಳನ್ನಾಗಿ ಮತ್ತು ಹಲವಾರು ಎಳೆಗಳಿಂದ ಕೂಡಿದ ತಂತುಗಳನ್ನಾಗಿ ತಯಾರಿಸುತ್ತಾರೆ. ಅಲ್ಲದೆ ಪ್ರಸಾರಬಲ, ಬಾಳಿಕೆ ಇತ್ಯಾದಿಗಳ ಸಾಧ್ಯತೆಗೆ ರೇಷ್ಮೆಯಂಥ ಹುರಿಮಾಡಿದ ದಾರವನ್ನಾಗಿಯೂ ಅನೇಕ ಎಳೆಗಳ ತಂತುಗಳನ್ನಾಗಿಯೂ ತಯಾರಿಸುತ್ತಾರೆ. ಯುಕ್ತ ಉದ್ದಳತೆಗಳಿಗೆ ಕತ್ತರಿಸಿದ ನೈಲಾನ್ ನವುರೆಳೆಗಳನ್ನು ಹತ್ತಿ, ಉಣ್ಣೆ, ರೇಷ್ಮೆ ಅಥವಾ ಮತ್ತಿತರ ತಂತುಗಳೊಂದಿಗೆ ಸೇರಿಸಿ ನೂಲುವುದುಂಟು. ಛಿದ್ರವಾಗದಂತೆ ನೈಲಾನ್ ಬಟ್ಟೆಯನ್ನು ಸೋಡಿಯಂ ಕ್ಲೋರೇಟ್‌ನಿಂದ ಸುರಕ್ಷಿತವಾಗಿ ಬಿಳಿಚಿಸಬಹುದು. ಸಾಮಾನ್ಯವಾಗಿ ನೈಲಾನಿಗೆ ಪ್ರಾಸಾರಿಕ ವರ್ಣಗಳನ್ನು ಉಪಯೋಗಿಸಿ ಬಣ್ಣ ಕಟ್ಟುತ್ತಾರೆ. ಆರಿಸಿದ ಆಮ್ಲವರ್ಣಗಳನ್ನು ಸಹ ಬಣ್ಣಕಟ್ಟಲು ಉಪಯೋಗಿಸಬಹುದು.

ನೈಲಾನ್ ತನ್ನ ಬಿಗುಲಕ್ಷಣದಿಂದ ವೈಮಾನಿಕರ ಧುಮುಕುಛತ್ರಿ ಬಟ್ಟೆ, ಹುರಿ, ಕುದುರೆ ಮೊದಲಾದ ಭಾರಹೊರುವ ಪ್ರಾಣಿಗಳ ಸರಂಜಾಮು–ಇವುಗಳ ತಯಾರಿಕೆಯಲ್ಲಿ ಬಹು ಮುಖ್ಯವಸ್ತುವಾಗಿದೆ. ಬಾಳಿಕೆ ಮತ್ತು ಬಲದ ದೃಷ್ಟಿಯಿಂದ ನೈಲಾನ್ ಯಂತ್ರವಹನ ಪಟ್ಟಿಗಳ ತಯಾರಿಕೆಗೆ ಯೋಗ್ಯವಾಗಿದೆ. ನೈಲಾನಿನ ಬಹುಮುಖತೆ ಅದರಲ್ಲೂ ತಂತುಗಳ ಮಿಶ್ರಣದಲ್ಲಿ ಅದರ ಪಾತ್ರ ಅಮಿತವಾದದ್ದು. ಸ್ಥಿರವಿದ್ಯುಚ್ಛಕ್ತಿ (ಸ್ಟ್ಯಾಟಿಕ್ ಎಲೆಕ್ಟ್ರಿಸಿಟಿ) ಬಳಕೆ ಯುಕ್ತವಾದುದು ಉಷ್ಣತೆ ಹೆಚ್ಚಾದರೆ, ಬಿಳಿನೈಲಾನ್ ಕಂದುಬಣ್ಣಕ್ಕೆ ತಿರುಗುವುದು ಮತ್ತು ಬಟ್ಟೆಯ ಮೇಲೆ ಸುರುಳಿಗಟ್ಟುವುದು ಇವು ನೈಲಾನಿನ ಹಲವು ಕೊರತೆಗಳು.

**ಟೆರಿಲಿನ್:** ಇದು ಜೆ. ಆರ್. ವಿಹಿನ್‌ಫೀಲ್ಡ್ ಮತ್ತು ಜೆ. ಟಿ. ಡಿಕ್‌ಸನ್ ಇವರು ಸೃಷ್ಟಿಸಿದ ಕೃತಕ ತಂತು. ಪಾಲಿಯೆಸ್ಟರ್ಸ್ ಮಂದವಸ್ತುಗಳ ಬಗ್ಗೆ ಡಬ್ಲ್ಯು. ಎಚ್. ಕರೋಥರ್ಸ್ ನಡೆಸಿದ ಸಂಶೋಧನೆಯನ್ನು ನೇರವಾಗಿ ಮುಂದುವರಿಸಿದ ಫಲವಾಗಿ ಪಡೆದ ರಾಸಾಯನಿಕ ವಸ್ತುವಿದು. ಬ್ರಿಟನ್ನಿನಲ್ಲಿ ತಯಾರಾಗುವ ಈ ಮಾದರಿಯ ಎಳೆ ಮತ್ತು ದಾರಗಳಿಗೆ ಟೆರಿಲಿನ್ ಎಂದು ಹೆಸರು. ಇದನ್ನು ಅಮೆರಿಕದಲ್ಲಿ ಡಕ್ರಾನ್ ಎಂದೂ ಭಾರತದಲ್ಲಿ ಟೆರಿನ್ ಎಂದೂ ಕರೆಯುತ್ತಾರೆ. ಈ ತಂತುಗಳ ಉತ್ಪಾದನೆಗೆ ಬೇಕಾದ ಮೂಲ ರಾಸಾಯನಿಕ ವಸ್ತುಗಳು ಕಲ್ಲಿದ್ದಲು, ವಾಯು, ನೀರು ಮತ್ತು ಪೆಟ್ರೋಲಿಯಂ. ಡೈಮಿಥೈಲ್ ಟೆರಿಫ್ಥಲೇಟ್ ಮತ್ತು ಎಥಿಲೀನ್ ಗ್ಲೈಕೋಲ್ ರಾಸಾಯನಿಕ ಪದಾರ್ಥಗಳನ್ನು, ಅವು ಪಿಂಗಾಣಿ ಜೇಡಿಮಣ್ಣಿನಂತೆ ಘನಾಕಾರ ತಾಳಿ ಗಟ್ಟಿಯಾಗುವ ವರೆಗೆ, ಅಧಿಕ ಉಷ್ಣತೆಯಲ್ಲಿ ನಿರ್ವಾಯು ಪಾತ್ರೆಯೊಂದರಲ್ಲಿಟ್ಟು ಬೇಯಿಸುತ್ತಾರೆ. ತರುವಾಯ ಅದನ್ನು ಜೇನುತುಪ್ಪದಂಥ ದ್ರವವಾಗುವಂತೆ ಕರಗಿಸಿ, ಕಿರುಚರಕದ(ಕರಗಿಸಿ ನೂಲುತೆಗೆಯುವ ಮೆಲ್ಟ್ ಸ್ಪನ್ ಸಾಧನದ) ಮೂಲಕ ಹೊರಡಿಸುತ್ತಾರೆ. ಬಿಡಿ ನವುರೆಳೆಗಳನ್ನು ಒಟ್ಟಿಗೆ ಸೆಳೆದು ಸೆಳೆಯದ ತಂತುಗಳಂತೆಯೇ ವರ್ತುಲ ನಾಳಗಳಿಗೆ ಸುತ್ತುತ್ತಾರೆ. ಈ ಹಂತದಲ್ಲಿ ತಂತನ್ನು ಎಳೆದು ಹುರಿಮಾಡುವ ಯಂತ್ರಗಳಿಗೆ ಒಯ್ದು ಅಲ್ಲಿ ಅದನ್ನು ಅದರ ಮೂಲ ಉದ್ದದ 5ರಷ್ಟು ಉದ್ದಕ್ಕೆ ಲಂಬಿಸುತ್ತಾರೆ. ಈ ವಿಧಾನದಲ್ಲಿ ಬಟ್ಟೆ ತಯಾರಿಕೆಯಲ್ಲಿ ಉಪಯೋಗಿಸುವ ಸಾಮಾನ್ಯ ಸಾಮರ್ಥ್ಯವುಳ್ಳ ದಾರ ಮತ್ತು ಕೈಗಾರಿಕೆಯ ಉದ್ದೇಶಗಳಿಗಾಗಿ ಬಳಸುವ ಬಹು ಬಿಗಿಯಾದ ದಾರ ಈ ಎರಡು ಟೆರಿಲಿನ್ ತಂತುಗಳನ್ನು ತಯಾರಿಸುತ್ತಾರೆ.

ನವುರೆಳೆಗಳನ್ನು ನೂಲುವ ಹಂತದವರೆಗೆ ಇದೇ ರೀತಿ ತಯಾರಿಸುತ್ತಾರೆ. ಬಹುಸಂಖ್ಯೆಯ ಎಳೆಗಳನ್ನು ಒಟ್ಟಿಗೆ ನೂತು ದೊಡ್ಡ ತುಂಡುನಾರಿನ ಆಕೃತಿಗೆ ತರುತ್ತಾರೆ. ಈ ತುಂಡು ನಾರನ್ನು ಉಣ್ಣೆಯ ಎಳೆಗಳಂತೆ ನಿರಿಗೆ–ನಿರಿಗೆಗಳಾಗಿ ಸೆಳೆದು, ಕಾವು ಕೊಟ್ಟು ನಿರಿಗೆಗಳನ್ನು ಸ್ಥಿರಗೊಳಿಸುತ್ತಾರೆ. ತುಂಡುನಾರನ್ನು ನೇಯ್ಗೆಯ ಉದ್ದೇಶಕ್ಕೆ ತಕ್ಕಂತೆ ಹಲವು ಇಂಚುಗಳ ಉದ್ದಗಳಲ್ಲಿ ಕತ್ತರಿಸುತ್ತಾರೆ. ತರುವಾಯ ಅವನ್ನು ಕಂಬಳಿದಾರ, ಉಣ್ಣೆ, ಹತ್ತಿ ಮತ್ತು ಅಗಸೆನಾರು ಇವುಗಳ ಜೊತೆಗೆ ನೂಲಲು ಅನುಕೂಲವಾಗುವಂತೆ ಉದ್ದನೆಯ ದಪ್ಪದಾರವಾಗಿ ಹಾಗೂ ಸೂಕ್ಷ್ಮ ಎಳೆಯಾಗಿ ಸಿದ್ಧಗೊಳಿಸುತ್ತಾರೆ. ಸಾಧಾರಣ ದಾರವನ್ನು ಕಾಂತಿಯುತವಾಗಿ ಇಲ್ಲವೆ ಕಾಂತಿರಹಿತವಾಗಿ ತಯಾರಿಸುತ್ತಾರೆ. ನೂಲುವ ದ್ರಾವಣದಲ್ಲಿ ಸ್ವಲ್ಪ ಟಿಟಾನಿಯಂ ಡೈಆಕ್ಸೈಡ್ ಸೇರಿಸಿದರೆ ನೂಲು ಕಾಂತಿರಹಿತವಾಗುತ್ತದೆ. ಸೂಕ್ಷ್ಮ ಎಳೆಗಳಾಗಿ ಮತ್ತು ನವುರೆಳೆಗಳಾಗಿ ತಯಾರಾಗುವ ಪಾಲಿಯೆಸ್ಟರ್ ತಂತುಗಳನ್ನು ನೇಯಬಹುದು ಅಥವಾ ಹೆಣಿಗೆಗೆ ಉಪಯೋಗಿಸಬಹುದು. ಟಫೆಟಾ ಬಟ್ಟೆ, ತೆರೆಬಟ್ಟೆ ಮತ್ತು ಸ್ಯಾಟಿನ್ ಬಟ್ಟೆ ತಯಾರಿಕೆಯಲ್ಲಿ ನಯವಾದ ಸೂಕ್ಷ್ಮ ಎಳೆಗಳನ್ನು ಉಪಯೋಗಿಸುತ್ತಾರೆ. ರಚನೆಯಲ್ಲಿ ಹತ್ತಿ ಅಥವಾ ಉಣ್ಣೆಯ ಎಳೆಗಳಂತಿರುವ ಪಾಲಿಯೆಸ್ಟರ್ ನೂಲಿನಿಂದ ಬಟ್ಟೆಗಳನ್ನು ತಯಾರಿಸುತ್ತಾರೆ. ನವಿರೆಳೆಗಳಂತೂ ವಿಶಿಷ್ಟವಾಗಿ ಮಿಶ್ರಣ ಉದ್ದೇಶಕ್ಕೆ ಯೋಗ್ಯವಾಗಿವೆ. ಪಾಲಿಯೆಸ್ಟರ್ ಹತ್ತಿ ಮಿಶ್ರಿತದಾರ (ಶೇ. 65 ಪಾಲಿಯಸ್ಟರ್ ಎಳೆ ಮತ್ತು ಶೇ. 35 ಹತ್ತಿ ಎಳೆ) ಸಾಧಾರಣ ಬಳಕೆಯ ಷರ್ಟಿಂಗ್ ಬಟ್ಟೆ, ರವಿಕೆ, ಇಜಾರ, ಹೆಣಿಗೆ ಹಾಕಿದ ಟಿ–ಷರಟು ಮೊದಲಾದ ಬಟ್ಟೆಗಳ ತಯಾರಿಕೆಯಲ್ಲಿ ಪ್ರಸಿದ್ಧವಾಗಿದೆ. ಪಾಲಿಯೆಸ್ಟರ್–ಆಕ್ರೈಲಿಕ್ ಮಿಶ್ರಿತ ತಂತುಗಳನ್ನು (50/50) ಗಂಡಸರ ಬೇಸಗೆ ಉಡುಪು ಬಟ್ಟೆ ತಯಾರಿಕೆಗೆ ಉಪಯೋಗಿಸುತ್ತಾರೆ. ಪಾಲಿಯೆಸ್ಟರ್ ಮತ್ತು ಉಣ್ಣೆದಾರ ಮಿಶ್ರಿತವಾದ ಬಟ್ಟೆಗಳಿಗೆ (55/45) ಮಡಿಕೆ ನಿಲ್ಲುತ್ತದೆ; ಅವು ಸುಕ್ಕಾಗುವುದಿಲ್ಲವಾಗಿ ಸೂಟಿಂಗ್ ಬಟ್ಟೆಗಳಿಗೆ ಪ್ರಸಿದ್ಧವಾಗಿವೆ. ಗಂಡಸರ ಉಡುಪಿಗೆ ಬೇಕಾದ ಬಟ್ಟೆ ತಯಾರಿಕೆಯಲ್ಲಿ ಪಾಲಿಯೆಸ್ಟರ್ ತಂತುಗಳನ್ನು ರೆಯಾನ್ ತಂತುಗಳೊಂದಿಗೆ ಸಹ ಬೆರೆಸುತ್ತಾರೆ.

ಪಾಲಿಯೆಸ್ಟರ್ ತಂತುಗಳು ವಾಸ್ತವವಾಗಿ ಸ್ವಯಂ ಶುಭ್ರವಾಗುವ ಉಡುಗೆ ತಯಾರಿಕೆಗೆ ಯೋಗ್ಯವಾಗಿವೆ. ಪದೇ ಪದೇ ಒಗೆದು ಇಸ್ತ್ರಿಮಾಡದಿದ್ದರೂ ಅದಕ್ಕೆ ಸುಕ್ಕಾಗದಂಥ ಸ್ಥಿರತೆ ಉಂಟು. ತಂತುಗಳನ್ನು ಕಾವಿಗಿಟ್ಟು ನಿಯಂತ್ರಿತ ಎಳೆತಕ್ಕೆ ನಿಲ್ಲುವಂತೆ ಮತ್ತು ಜೋಲುಬೀಳದಂತೆ ಬಟ್ಟೆಯನ್ನು ತಯಾರಿಸಬಹುದು. ಹಾಗೂ ಅದನ್ನು ಸ್ಥಿರವಾದ ಮಡಿಕೆಗೆ ನಿಲ್ಲಿಸಬಹುದು. ಪಾಲಿಯೆಸ್ಟರ್ ಬಟ್ಟೆ ಬಿಸಿಲಿನಿಂದ ಮತ್ತು ಹವೆಯಿಂದ ಹಾಳಾಗುವುದಿಲ್ಲ; ಅದಕ್ಕೆ ನುಸಿ ಮತ್ತು ಬೂಷ್ಟು ತಗಲುವುದಿಲ್ಲ. ಸೂಕ್ತಬಣ್ಣ ಮತ್ತು ಮೆರುಗನ್ನು ಕೊಟ್ಟರೆ ಈ ಬಟ್ಟೆಗೆ ಅಗ್ನಿಗ್ರಾಹಕ ಶಕ್ತಿ ಕಡಿಮೆಯಾಗುವುದು.

ಟೆರಿಲಿನ್ ದಾರ ಸ್ವಾಭಾವಿಕವಾಗಿ ದಂತವರ್ಣದಿಂದ ಕೂಡಿರುವುದರಿಂದ ಅದನ್ನು ಬಿಳುಪು ಮಾಡಬೇಕಾಗಿಲ್ಲ. ಹಾಗೇನಾದರೂ ಅದನ್ನು ಬಿಳಿಚಿಸುವ ಆವಶ್ಯಕತೆ ಇದ್ದರೆ ನೈಟ್ರಿಕ್ ಆಮ್ಲವನ್ನು ಉಪಯೋಗಿಸಿ 2–3 $P^H$ ಆ ಪ್ರಮಾಣಕ್ಕೆ ಸೋಡಿಯಂ

ಕ್ಲೋರೇಟ್‌ನ ಕುದಿಯುವ ದ್ರಾವಣದಿಂದ ಬಿಳಿಚಿಸಬಹುದು. ವಿಶಿಷ್ಟ ರೀತಿಯಲ್ಲಿ ಬೆಳಕಿನ ಸಹಾಯದಿಂದ ಬಿಳಿಚಿಸುವ (ಸಿಬಾ ಕಂಪೆನಿಯ) ಯುನಿಟೆಕ್ಸ್‌ರೇ ಮಾದರಿಯ ಮಧ್ಯಮಗಳು ಟೆರಿಲಿನ್ ತಂತುಗಳಿಗೆ ಯೋಗ್ಯವಾದವು.

ಪಾಲಿಯೆಸ್ಟರ್ ತಂತುಗಳಿಗೆ ಬಣ್ಣಕಟ್ಟುವುದು ಹೆಚ್ಚು ಕಷ್ಟವಾಗಿತ್ತು. ಸೆಲುಲೋಸ್ ಅಸಿಟೇಟ್ ಮತ್ತು ನೈಲಾನ್‌ಗಳಲ್ಲಿ ಪ್ರಯೋಜನಕರವಾಗಿ ಉಪಯೋಗಿಸಬಹುದಾದ ಪ್ರಾಸಾರಿಕ ವರ್ಣಗಳನ್ನು ಟೆರಿಲಿನ್ ತಂತುಗಳ ಬಗ್ಗೆ ಸಹ ಉಪಯೋಗಿಸಲು ಸಾಧ್ಯವಾಗಲಿಲ್ಲ. ಸೆಲುಲೋಸ್ ಅಸಿಟೇಟ್‌ಗಿಂತ ಟೆರಿಲಿನ್ ತಂತುಗಳಲ್ಲಿ ಕಣಸರಣಿಗಳು ಒತ್ತಾಗಿರುವುದೇ ಇದಕ್ಕೆ ಕಾರಣ. ಈ ತೊಂದರೆಯನ್ನು ಮೂರು ಪ್ರತ್ಯೇಕ ವಿಧಾನಗಳಿಂದ ಮುಂದೆ ಬಗೆಹರಿಸಲಾಯಿತು. ಆ ವಿಧಾನಗಳಿವು (1)$100^0$ ಸೆಂ. ಉಷ್ಣತೆಗಿಂತ ಹೆಚ್ಚು ಉಷ್ಣತೆಯಲ್ಲಿ ಬಣ್ಣಕಟ್ಟುವುದು; (2) ಉಬ್ಬಿಸುವ ಮಾಧ್ಯಮವಾಗಿ ವರ್ತಿಸುವ ವಾಹಕಗಳ ನೆರವಿನಿಂದ ಬಣ್ಣಕಟ್ಟುವುದು. ಸಾಮಾನ್ಯವಾಗಿ ಉಪಯೋಗಿಸುವ ವಾಹಕಗಳು ಟುಮಿಸ್ ಕೋಲ್ ಡಿ ಮತ್ತು ಟುಮಿಸ್ ಕೋಲ್ ಒ.ಪಿ.; (3) ಥರ್ಮೋಸೋಲ್ ವಿಧಾನ. ಮೂರನೆಯ ವಿಧಾನದಲ್ಲಿ ಕಾರ್ಬಾಕ್ಸಿಮೀಥೈಲ್ ಸೆಲುಲೋಸ್ (ಸಿ.ಎಂ.ಸಿ) ಮಾದರಿಯ ಒಂದು ಅಸಿಟೇಟ್ ಬಣ್ಣ ಮತ್ತು ಸೆಲ್ಲೊಸಾಲ್ ಮಾದರಿಯ ಒಂದು ಮೂಲಭೂತ ಲೀನಕಾರಿಯನ್ನು ಪ್ರಸರಿಸಿ ಬಟ್ಟೆಗೆ ಮೆತ್ತೆಗಟ್ಟಲಾಗುತ್ತದೆ. ಮೆತ್ತೆಗಟ್ಟಿದ ಬಟ್ಟೆಯನ್ನು $70^0$ ಸೆಂ.ಉಷ್ಣತೆಯಲ್ಲಿ ಒಣಗಿಸಿ, ತರುವಾಯ ಸುಮಾರು ಒಂದು ಮಿನಿಟ್ ಕಾಲ $175^0–200^0$ಸೆಂ. ಉಷ್ಣತೆಯಲ್ಲಿ ಬೇಯಿಸಿದ ಮೇಲೆ ಅದನ್ನು ಚೆನ್ನಾಗಿ ಅಪ್ಪಳಿಸಲಾಗುವುದು.

ಬಟ್ಟೆ ತಯಾರಿಕೆಯಲ್ಲಿ ಟೆರಿಲಿನ್ ತಂತು ಹೆಚ್ಚು ಉಪಯೋಗದಲ್ಲಿದ್ದರೂ ಹಲವಾರು ಇತರ ಕೈಗಾರಿಕೆಗಳಲ್ಲಿ ಸಹ ಅದನ್ನು ಚೆನ್ನಾಗಿ ಬಳಸುತ್ತಾರೆ. ಅದರಿಂದ ಹಗ್ಗ, ಮೀನಿನ ಬಲೆ ಹಾಗೂ ಹಡಗಿನ ಪಟ ತಯಾರಿಸುತ್ತಾರೆ. ಸಾಮಾನ್ಯ ಹಗ್ಗದ ಬಾಳಿಕೆಗಿಂತ ಟೆರಿಲಿನ್ ಹಗ್ಗ 15 ಪಟ್ಟು ಹೆಚ್ಚು ಬಾಳಿಕೆ ಬರುತ್ತದೆ. ಆಮ್ಲಗಳನ್ನು ನಿರೋಧಿಸುವ ರಾಸಾಯನಿಕ ಶಕ್ತಿ ಟೆರಿಲಿನ್‌ಗೆ ಇರುವುದರಿಂದ ಆಮ್ಲಗಳನ್ನು ಬಳಸುವ ಯಂತ್ರಶಾಲೆಗಳಲ್ಲಿ ಅದನ್ನು ರಕ್ಷಕ ತೊಡಿಗೆಯನ್ನಾಗಿ ಉಪಯೋಗಿಸುತ್ತಾರೆ. ಅದಕ್ಕೆ ಸೂಕ್ಷ್ಮದರ್ಶಕದಲ್ಲಿ ಕಾಣುವಂಥ ಅಣುಜೀವಿಗಳನ್ನು ತಡೆಯುವ ಸಾಮರ್ಥ್ಯವಿರುವುದರಿಂದ ಜಲಶುದ್ಧೀಕರಣ ಕೆಲಸಗಳಲ್ಲಿ ಉಪಯೋಗಿಸುತ್ತಾರೆ. ಸ್ಥಿರವಿದ್ಯುಚ್ಛಕ್ತಿ ಅನೇಕ ಕೃತಕ ಬಟ್ಟೆಗಳ ಸಂಬಂಧವಾದ ಸಮಸ್ಯೆ. ಇಂದು ಇದರ ನಿರೋಧಕ ಪರಿಷ್ಕರಣ ವಸ್ತುಗಳನ್ನು ಉಪಯೋಗಿಸಿ ಈ ಕ್ಲಿಷ್ಟತೆಯನ್ನು ಬಹುಮಟ್ಟಿಗೆ ನಿವಾರಿಸಿದೆ.

**ಅಕ್ರಿಲಿಕ್ ತಂತುಗಳು:** ಅಕ್ರಿಲಿಕ್ ತಂತುಗಳನ್ನು ಪಾಲಿ ಅಕ್ರಿಲೋನಿಟ್ರೈಲ್ ಎಂಬ ರಾಸಾಯನಿಕ ಮಿಶ್ರಣದಿಂದ ತಯಾರಿಸುತ್ತಾರೆ. ಇದಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ಕಲ್ಲಿದ್ದಲು, ಗಾಳಿ, ಪೆಟ್ರೋಲಿಯಂ, ಸುಣ್ಣ ಮತ್ತು ಸ್ವಾಭಾವಿಕ ಅನಿಲಗಳು. ಆರ್ಲಾನ್ 1948ರಲ್ಲಿ ವ್ಯಾಪಾರ ಉದ್ದೇಶಕ್ಕಾಗಿ ಮೊದಲು ತಯಾರಿಸಿದ ಅಕ್ರಿಲಿಕ್ ತಂತು. ಅದು ಸೂಕ್ಷ್ಮ ಎಳೆ ಮತ್ತು ನವುರೆಳೆ ರೂಪಗಳಲ್ಲಿ ದೊರೆಯುತ್ತದೆ. ಅಕ್ರಿಲಾನ್, ಕ್ರೆಸ್ಲಾನ್, ಜ಼ಫ್ರಾನ್ ಮೊದಲಾದವು ಇತರ ಪ್ರಮುಖ ಅಕ್ರಿಲಿಕ್ ತಂತುಗಳು. ಬಹುಮಾದರಿಗಳಲ್ಲಿ ಅಕ್ರಿಲಿಕ್ ತಂತುಗಳನ್ನು ಸಾಮಾನ್ಯದಾರದ ರೂಪದಲ್ಲಿ ತಯಾರಿಸುವುದರಿಂದ ಅವು ಮೃದುವಾಗಿರುತ್ತವೆ. ಅವು ದಪ್ಪವಾಗಿದ್ದರೂ ಹಗುರವಾಗಿರುತ್ತವೆ. ಅವು ಬಿಸಿಲು ಮತ್ತು ಕ್ರಿಮಿ ಕೀಟಗಳನ್ನು ನಿರೋಧಿಸುವುವಲ್ಲದೆ ಸುಕ್ಕಾಗುವುದಿಲ್ಲ. ಆರ್ಲಾನ್ ಬಟ್ಟೆಗೆ ನೀರು ಸುಲಭವಾಗಿ ಹಿಡಿಯುವುದಿಲ್ಲವಾಗಿ ಅವನ್ನು ಒಗೆಯುವುದು ಕಷ್ಟ. ಅವುಗಳಿಗೆ ಮೊದಲು ಮೂಲ ವರ್ಣಗಳನ್ನು ಕೊಡುತ್ತಿದ್ದರೂ ಬಣ್ಣ ಮಾಸಿಹೋಗುತ್ತಿತ್ತು. ಕ್ಯುಪ್ರಸ್ ಅಯಾನ್ ವಿಧಾನ ಎಂಬ ಬಣ್ಣ ಕಟ್ಟುವ ತಂತ್ರದಿಂದ ಆಮ್ಲವರ್ಣಗಳನ್ನು ಉಪಯೋಗಿಸಿ ಈ ಬಟ್ಟೆಗೆ ಬಣ್ಣ ಕಟ್ಟುವುದು ಸಾಧ್ಯವಾಗಿದೆ.

ಹಲವಾರು ಕಾರಣಗಳಿಂದ ಆರ್ಲಾನ್ ಬಟ್ಟೆಗಳು ಮತ್ತು ಆರ್ಲಾನ್ ತಂತುಗಳನ್ನೊಳಗೊಂಡ ಸಂಯೋಜಿತ ತಂತುಗಳು ಜನಪ್ರಿಯವಾಗಿವೆ. ಆರ್ಲಾನ್ ತನ್ನ ಆಕಾರವನ್ನು ತಡೆದುಕೊಳ್ಳುತ್ತದೆ; ಅದು ಘರ್ಷಣ ನಿರೋಧಕ; ಅದನ್ನು ಸುಲಭವಾಗಿ ಒಗೆಯಬಹುದು; ಬೇಗ ಒಣಗುತ್ತದೆ; ಅದಕ್ಕೆ ಇಸ್ತ್ರಿ ಮಾಡಬೇಕಾಗಿಲ್ಲ. ಹಾಗೆ ಇಸ್ತ್ರಿ ಮಾಡಬೇಕಾದರೂ ಸ್ವಲ್ಪ ಉಷ್ಣತೆಗೆ ಇಸ್ತ್ರಿನಿಲ್ಲುತ್ತದೆ. ಮೃದು ಆರ್ಲಾನ್ ಸ್ವೆಟರುಗಳು ಕಾಶ್ಮೀರಿ ಸ್ವೆಟರುಗಳಷ್ಟೇ ನೂರಕ್ಕೆ ನೂರು ಭಾಗ ಮೃದುವಾಗಿರುತ್ತದೆ. ಅಕ್ರಿಲಿಕ್ ದಾರಗಳಿಂದ ಸ್ವೆಟರ್ ಮತ್ತು ಕಂಬಳಿ ನೇಯುತ್ತಾರೆ. 50/50 ಅಕ್ರಿಲಿಕ್–ಹತ್ತಿ/ ರೆಯಾನ್ ಮಿಶ್ರದಾರದಿಂದ ಕಾಲುಚೀಲಗಳನ್ನು ತಯಾರಿಸುತ್ತಾರೆ. ಅಕ್ರಿಲಿಕ್ ನೈಲಾನ್ ಸಂಯೋಜಿತ ತಂತುಗಳಿಂದ ಚಿತ್ತಾಕರ್ಷಕ ದಾರಗಳನ್ನು ತಯಾರಿಸುತ್ತಾರೆ. ವ್ಯಾಪಾರಕ್ಕಾಗಿ ತಯಾರಿಸುವ ಅಕ್ರಿಲಿಕ್ ಸಂಯೋಜಿತ ತಂತುಗಳಿಂದ ಸೂಟಿಂಗ್ ಬಟ್ಟೆ, ಹೆಣೆದ ಉಡುಪುಗಳು, ಷರಾಯಿ, ಕ್ರೀಡಾಕವಚಗಳು ಮತ್ತು ಜಮಖಾನೆಗಳನ್ನು ತಯಾರಿಸುತ್ತಾರೆ.

ಡೈನೆಲ್ ಎಂಬ ಪರಿವರ್ತಿತ ಅಕ್ರಿಲಿಕ್ ತಂತನ್ನು ವಿನೈಲ್ ಕ್ಲೋರೈಡ್ ಮತ್ತು ಆಕ್ರಿಲೊನೈಟ್ರೈಲ್ ಎಂಬ ರಾಸಾಯನಿಕ ವಸ್ತುಗಳಿಂದ ತಯಾರಿಸುತ್ತಾರೆ. ಅದಕ್ಕೆ ಬಿಸಿಲು ಮತ್ತು ಬೆಂಕಿಯನ್ನು ನಿರೋಧಿಸುವ ಗುಣವಿರುವುದರಿಂದ ಅದನ್ನು ತೆರೆ ಮತ್ತು ಪೀಠೋಪಕರಣಗಳ ಬಟ್ಟೆ ತಯಾರಿಕೆಯಲ್ಲಿ ಬಳಸುತ್ತಾರೆ. ಡೈನೆಲ್ ಬಟ್ಟೆಗೆ ಹಲವು ರಾಸಾಯನಿಕ ವಸ್ತುಗಳನ್ನು ತಡೆಯುವ ಗುಣ ಇರುವುದರಿಂದ ಅದು ಕೈಗಾರಿಕೆಯಲ್ಲಿ ಸೋಸುವ ಬಟ್ಟೆಯನ್ನಾಗಿ ಉಪಯೋಗಿಸಲು ಯೋಗ್ಯವಾಗಿದೆ. ಡೈನೆಲ್ ಬಟ್ಟೆಯ ಬಣ್ಣ ಮಾಸುವುದಿಲ್ಲ. ಅದನ್ನು ಸುಲಭವಾಗಿ ಒಗೆದು ಉಪಯೋಗಿಸಬಹುದು. ಬಟ್ಟೆ ಸುಕ್ಕುವುದಿಲ್ಲ. ಡೈನೆಲ್ ತಂತುಗಳಲ್ಲಿ ಹತ್ತಿ, ರೆಯಾನ್ ಅಥವಾ ಉಣ್ಣೆಯ ಎಳೆಗಳನ್ನು ಬೆರೆಸುವುದುಂಟು.

**ಸಾರಾನ್ ತಂತುಗಳು:** ಸಾರಾನ್ ಎಂಬುದು ಕೃತಕರಾಳ. ಅದು ವಿನೈಲಿಡೀನ್ ಕ್ಲೋರೈಡ್ ಮತ್ತು ವಿನೈಲ್ ಕ್ಲೋರೈಡ್‌ನ ಸಹಪಾಲಿಮರ್ ಅಂಟು. ನೈಲಾನ್ ಮತ್ತು ಟೆರಿಲಿನ್‌ಗಳಂತೆ ಸಾರಾನ್ ಸಹ ಉಷ್ಣಲೇಪಕ ಸ್ವಭಾವವುಳ್ಳದ್ದು. ಅದು ಉಷ್ಣದಿಂದ ಅಂಟಿಕೊಳ್ಳುವ ವಸ್ತು. ಅದರ ಸಂಯೋಜನೆಗೆ ಬೇಕಾದ ವಸ್ತುಗಳು ಪೆಟ್ರೋಲಿಯಂ ಮತ್ತು ಲವಣ. ಸಾರಾನ್ ಕೃತಕರಾಳವನ್ನು ತಯಾರಿಕೆದಾರರಿಗೆ ಪುಡಿಯ ರೂಪದಲ್ಲಿ ಒದಗಿಸಲಾಗುತ್ತದೆ. ಈ ಪುಡಿಯನ್ನು ದ್ರಾವಣವಾಗುವಂತೆ ಕರಗಿಸುತ್ತಾರೆ. ದ್ರಾವಣವನ್ನು ನೂಲುರಾಟೆಯ ಮೂಲಕ ಹೊರಡಿಸುತ್ತಾರೆ. ರಾಟೆಯಿಂದ ಹೊರಟ ಎಳೆಗಳನ್ನು ನೀರಿನಲ್ಲಿಟ್ಟು ಗಟ್ಟಿಮಾಡಿ ಲಂಬಿಸಿ ಉರುಳೆಗಳಲ್ಲಿ ಸುತ್ತುತ್ತಾರೆ. ಸಾರಾನ್ ತಂತುಗಳನ್ನು ಪರಿಮಿತ ಮೊತ್ತದಲ್ಲಿ ಉತ್ಪಾದಿಸಿದರೂ ಅವುಗಳಲ್ಲಿ ಹೆಚ್ಚು ಭಾಗ ಒಂದೇ ಎಳೆಯ ದಾರಗಳಾಗಿರುತ್ತವೆ. ಸಾರಾನ್ ತಂತು ಬಿಸಿಲು ಮತ್ತು ಹವೆಯನ್ನು ತಡೆಯಬಲ್ಲುದು. ತೆರೆ ಮತ್ತು ಹೊರಾಂಗಣದ ಪೀಠೋಪಕರಣಗಳ ಬಟ್ಟೆ ತಯಾರಿಕೆಗೆ ಸಾರಾನ್ ತಂತು ಯೋಗ್ಯವಾಗಿದೆ. ಅದು ರಾಸಾಯನಿಕ ವಸ್ತುಗಳನ್ನು ಚೆನ್ನಾಗಿ ತಡೆಯುತ್ತದೆ ಹಾಗೂ ಬೆಂಕಿಗೆ ಹೊತ್ತಿಕೊಳ್ಳುವುದಿಲ್ಲ. ಟೆನಿಸ್ ಬ್ಯಾಟು, ನೇತುಹಾಕಲು ಉಪಯೋಗಿಸುವ ಸಾಧನಗಳು ಮೊದಲಾದವನ್ನು ಅದರಿಂದ ತಯಾರಿಸುತ್ತಾರೆ. ಕೀಟಗಳಿಂದ ಮತ್ತು ಏಕಾಣುಜೀವಿಗಳಿಂದ ಅದಕ್ಕೆ ಹಾನಿಯಿಲ್ಲ. ಸಾರಾನ್ ತಂತುವಿನ ಮತ್ತೊಂದು ಹೆಸರು ವೆಲಾನ್. ಅದರ ನಯವಾದ ಮತ್ತು ಕಾಂತಿಯುತವಾದ ಎಳೆಗಳನ್ನು ನೇಯಬಹುದು, ಹೆಣಿಗೆ ಹಾಕಬಹುದು ಹಾಗೂ ಹೊಸೆಯಬಹುದು. ಅದನ್ನು ಕಿಟಕಿ ತೆರೆಗಳಿಗೆ ಉಪಯೋಗಿಸುವ ಚಿತ್ತಾರದ ಅಲಂಕಾರ ಪಟ್ಟಿ ಅಥವಾ ಲೇಸ್, ಹೆಣೆದ ಮೇಜಿನ ಹಾಸುವಸ್ತ್ರ, ಹಡಗು ಮತ್ತು ಕೈಗಾರಿಕೆಗಳಲ್ಲಿ ಉಪಯೋಗಿಸುವ ಹಗ್ಗ–ಇವನ್ನು ತಯಾರಿಸಲು ಉಪಯೋಗಿಸುತ್ತಾರೆ.

**ಓಲಿಪಿನ್ ತಂತುಗಳು :** ಈ ಬಗೆಯಲ್ಲಿ ಪ್ಯಾರಾಫಿನ್ ಆಧಾರಿತ ಪಾಲಿಎಥಿಲೀನ್ ಮತ್ತು ಪಾಲಿಪ್ರೊಪೈಲಿನ್ ಎಂಬ ಎರಡು ಮಾದರಿ ತಂತುಗಳಿವೆ. ಪಾಲಿಎಥಿಲೀನ್ ಎಂಬುದು ಒಂದು ಬಗೆಯ ಕೃತಕರಾಳ ಕಾವು ಮತ್ತು ಒತ್ತಡಕ್ಕೊಳಗಾದ ಎಥಿಲೀನ್ ಸಂಯೋಜನೆಯಿಂದ ಇದು ಸೃಜಿತವಾಗುತ್ತದೆ. ಅವಿಚ್ಛಿನ್ನವಾದ ಏಕ ಎಳೆಯ ಆಕಾರವನ್ನು ತಾಳುವಂತೆ ಈ ಕೃತಕ ರಾಳವನ್ನು ಕರಗಿಸಿ ರಾಟೆಯಿಂದ ಹೊರಡಿಸಿ ತಂಪುಗೊಳಿಸಲಾಗುವುದು. ಹೀಗೆ ರೂಪಗೊಂಡ ತಂತುಗಳು ಮೇಣದಂತೆ ಮೃದುವಾಗಿರುತ್ತವೆ. ಅವುಗಳಿಗೆ ಸ್ವಲ್ಪಮಟ್ಟಿಗೆ ಕಾವನ್ನು ನಿರೋಧಿಸುವ ಗುಣ ಉಂಟು. ಅವು ಉತ್ತಮ ಘರ್ಷಣ ನಿರೋಧಕಗಳು. ತೇಲುವ ಸ್ವಭಾವ ಅವುಗಳಿಗಿದೆ. ಇಂಥ ಗುಣಗಳಿರುವುದರಿಂದ ಈ ತಂತುಗಳು ಉಡುಪಿನ ತಯಾರಿಕೆಗೆ ಯೋಗ್ಯವಾಗಿಲ್ಲ. ಆದರೆ ಈ ತಂತುಗಳು ಬಿಸಿಲನ್ನು ನಿರೋಧಿಸುವುದರಿಂದ ತೆರೆ ಮತ್ತು ಪೀಠೋಪಕರಣಗಳ ಬಟ್ಟೆಗಳನ್ನು ತಯಾರಿಸಲು ಉಪಯುಕ್ತವಾಗಿದೆ. ಅವುಗಳಿಗೆ ರಾಸಾಯನಿಕ ವಸ್ತುಗಳನ್ನು ತಡೆಯುವ ಗುಣ ಇರುವುದರಿಂದ ಅವನ್ನು ಚೌರಿ, ಹುರಿ, ಹಗ್ಗ ಮತ್ತು ಬಲೆಗಳನ್ನು ತಯಾರಿಸಲು ಉಪಯೋಗಿಸಬಹುದು. ಸಾರಾನ್ ತಂತುಗಳೊಂದಿಗೆ ಹೋಲಿಸಿದರೆ ಈ ತಂತುಗಳ ತಯಾರಿಕೆಗೆ ಹೆಚ್ಚು ವೆಚ್ಚ ತಗಲುವುದಿಲ್ಲ. ವರ್ಣದ್ರವ್ಯಗಳನ್ನು ಉಪಯೋಗಿಸಿ ವಿವಿಧ ಬಣ್ಣಗಳಲ್ಲಿ ಈ ತಂತುಗಳನ್ನು ತಯಾರಿಸಬಹುದು. ಆದರೆ ಅವುಗಳಿಗೆ ಪ್ರತ್ಯೇಕವಾಗಿ ಬಣ್ಣ ಕಟ್ಟಲಾಗುವುದಿಲ್ಲ.

ಪ್ರಾಪಿಲಿನ್ ಅನಿಲ ಆಧಾರಿತ ಪಾಲಿಪ್ರಾಪಿಲಿನ್ ತಂತುಗಳನ್ನು ಪ್ರಪ್ರಥಮವಾಗಿ ಇಟಲಿಯಲ್ಲಿ ಬಟ್ಟೆ ತಯಾರಿಕೆಗಾಗಿ 1951ರಲ್ಲಿ ತಯಾರಿಸಿದರು. ಅದನ್ನು ಮಿರಕ್ಲಾನ್ ಎಂದು ಕರೆದರು. ಪಾಲಿಎಥಿಲೀನ್ ದಾರದಂತೆ ಇದು ಸಹ ಪ್ಯಾರಫಿನ್ ಮೇದಸ್ಸಿನ ಆಧಾರವುಳ್ಳ ತಂತು. ಅದನ್ನು ಓಲಿಫಿನ್ ತಂತುಗಳಿಗೆ ಸೇರಿದಂತೆ ವರ್ಗೀಕರಿಸಿದ್ದಾರೆ. ಪಾಲಿಎಥಿಲೀನ್ ತಂತುಗಳಿಗಿಂತ ಇದು ಪ್ರಸಿದ್ಧವಾಗಿರಲು ಕಾರಣಗಳಿವು: ಇದು ಹಗುರವಾದದ್ದು ಮತ್ತು ಗಟ್ಟಿಯಾದದ್ದು; ಇದು ಉಷ್ಣದ ಪ್ರಭಾವಕ್ಕೆ ಒಳಗಾಗುವುದಿಲ್ಲ; ಇದಕ್ಕೆ ಮೇಣದಂಥ ಜಿಡ್ಡು ಗುಣವಿಲ್ಲ, ಇದನ್ನು ಮಿತವೆಚ್ಚದಲ್ಲಿ ತಯಾರಿಸಬಹುದು; ಇದು ರಾಸಾಯನಿಕ ವಸ್ತುಗಳನ್ನು ಚೆನ್ನಾಗಿ ತಡೆಯುವುದಲ್ಲದೆ ಬಲವಾಗಿಯೂ ಇದೆ; ಮಿರಕ್ಲಾನ್ ಬಿಸಿಲನ್ನು ನಿರೋಧಿಸುತ್ತದೆ ಹಾಗೂ ಇದು ಘರ್ಷಣ ನಿರೋಧಕ; ಇದರ ಕರಗುವ ಕ್ಷೀಣಶಕ್ತಿ, ಇದಕ್ಕೆ ಬಣ್ಣಕಟ್ಟುವ ಬಗ್ಗೆ ಇರುವ ತೊಂದರೆ, ವರ್ಣದ್ರವ್ಯಗಳನ್ನು ಉಪಯೋಗಿಸಿ ಬಣ್ಣದ ತಂತುಗಳನ್ನು ಉತ್ಪಾದಿಸಬಹುದಾದರೂ ಪ್ರತ್ಯೇಕವಾಗಿ ಇದಕ್ಕೆ ಬಣ್ಣ ಕಟ್ಟುವ ಸಂಬಂಧದಲ್ಲಿ ತೊಂದರೆ– ಇವು ಮಿರಕ್ಲಾನ್ ತಂತುವಿನ ಪ್ರಮುಖ ಕೊರತೆಗಳು. ಇತ್ತೀಚೆಗೆ ಬಣ್ಣಕಟ್ಟಬಹುದಾದ ಈ ವರ್ಗಕ್ಕೆ ಸೇರಿದ ತಂತುವೊಂದನ್ನು ಸೃಜಿಸಿದ್ದಾರೆ.

ಪಾಲಿಪ್ರೊಪೈಲಿನ್ ಎಳೆಗಳನ್ನು ವಿದ್ಯುದವಾಹಕಪಟ್ಟಿ (ಇನ್ಸುಲೇಷನ್ ಟೇಪ್), ಹಗ್ಗ, ಮೀನುಬಲೆ, ಸಮವಸ್ತ್ರ ಮತ್ತು ವಿದ್ಯುಲ್ಲೇಪನ (ಎಲೆಕ್ಟ್ರೊಪ್ಲೇಟಿಂಗ್) ಕೈಗಾರಿಕೆಯಲ್ಲಿ ಉಪಯೋಗಿಸುವ ಅನೋಡ್ ಬ್ಯಾಗ್‌ಗಳೆಂಬ ಧನವಿದ್ಯುತ್ತಿನ ಧ್ರುವಚೀಲಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಅದರ ನವುರೆಳೆಗಳನ್ನು ಸೂಟಿಂಗ್ ಬಟ್ಟೆ, ಹೆಣಿಗೆಯ ಉಡುಪು ಇತ್ಯಾದಿಗಳಿಗಾಗಿ ಉಪಯೋಗಿಸುವ ಸ್ವಾಭಾವಿಕ ಹಾಗೂ ಕೃತಕ ತಂತುಗಳೊಡನೆ ಸಂಯೋಜಿಸಲು ಬಳಸುತ್ತಾರೆ. ಅದನ್ನು ಪೀಠೋಪಕರಣಗಳ ಬಟ್ಟೆ ತಯಾರಿಕೆಗೂ ಉಪಯೋಗಿಸಬಹುದು.

ಕೃತಕ ತಂತುಗಳ ಮತ್ತು ವಸ್ತುಗಳ ತಯಾರಿಕೆ ಬೃಹದ್ರೂಪದಲ್ಲಿ ಸಾಗುತ್ತಿದ್ದರೂ ಈ ಕೈಗಾರಿಕೆಯ ಕ್ಷೇತ್ರ ಸೀಮಿತವಾದದ್ದು, ನೈಲಾನ್ ಸಂಯೋಜನೆಯಲ್ಲಿ ಕರೋಥೆರ್ಸ್ ವಿಜ್ಞಾನಿಯ ಅದ್ಭುತ ಸಾಧನೆ, ಆತನ ತರುವಾಯದ ಸಂಶೋಧಕರು ಟೆರಿಲಿನ್, ಡೈನೆಲ್ ಮೊದಲಾದ ವಸ್ತ್ರಗಳ ತಯಾರಿಕೆಯಲ್ಲಿ ಪಡೆದ ಯಶಸ್ಸು ಏನೇ ಆದರೂ ಈ ಕೃತಕ ವಸ್ತ್ರಗಳ ಕೈಗಾರಿಕೆಗೆ ಅಷ್ಟು ಪ್ರಾಮುಖ್ಯ ದೊರೆಯದು; ಎಲ್ಲ ಕೃತಕ ತಂತುಗಳಿಗೆ ಕೆಲವು ನಿರ್ದಿಷ್ಟ ಗುಣಗಳಿರುವುದರಿಂದ ಅವುಗಳ ತಯಾರಿಕೆದಾರರಿಗೆ ಅವುಗಳ ಹೊಸ ಪ್ರಯೋಜನಗಳೇನೆಂಬುದನ್ನು ಹುಡುಕಲು ಅವಕಾಶವಿದೆ. ಕೃತಕ ತಂತುಗಳು ಬಲಯುತವಾದವು, ಬಾಳಿಕೆ ಬರುವಂಥವು; ಅವು ರಾಸಾಯನಿಕ ಪದಾರ್ಥಗಳಿಂದ ಮತ್ತು ಕ್ರಿಮಿಕೀಟಗಳಿಂದ ನಾಶವಾಗುವುದಿಲ್ಲ. ಆದರೆ ಹತ್ತಿಯಂತೆ ತೇವವನ್ನು ಹೀರಿಕೊಳ್ಳುವ ಗುಣ ಅವುಗಳಿಗಿಲ್ಲ. ಅಲ್ಲದೆ ಅವುಗಳಿಗೆ ಹತ್ತಿ ಅಥವಾ ಉಣ್ಣೆಯಂತೆ ಸುಲಭವಾಗಿ ಬಣ್ಣ ಕಟ್ಟಲಾಗುವುದಿಲ್ಲ. ಸಂಯೋಜಿಸಲು ಸುಲಭವಾದ ತಂತುಗಳನ್ನು ಈ ವರೆಗೆ ರಾಸಾಯನಿಕ ತಜ್ಞರು ಕೃತಕವಾಗಿ ತಯಾರಿಸಿದ್ದಾರೆ. ಆದರೆ ಅವುಗಳಲ್ಲಿ ಯಾವುವೂ ನೈಸರ್ಗಿಕ ಎಳೆಗಳಂತಿಲ್ಲ. ಈ ಕಾರಣದಿಂದ ಜಲಗ್ರಾಹಕ ತಂತುಗಳನ್ನು ತಯಾರಿಸಲು ಸಂಶೋಧನೆಗಳು ನಡೆಯುತ್ತಿವೆ.

ಹೊಸ ಬಗೆಯ ಉತ್ತಮ ತಂತುಗಳ ತಯಾರಿಕೆಯಿಂದ ಹೆಚ್ಚು ಪ್ರಯೋಜನವಾಗುತ್ತಿದೆ. ಪ್ರಪಂಚದ ಎಲ್ಲೆಡೆಗಳಲ್ಲೂ ಬಟ್ಟೆ ತಯಾರಿಕೆ ಕೈಗಾರಿಕೆಗಳಲ್ಲಿ ಕಾರ್ಮಿಕರ ಸ್ಥಿತಿಗತಿಗಳಲ್ಲಿ ಗಣನೀಯವಾದ ಬದಲಾವಣೆಗಳಾಗುತ್ತವೆ. ಕೃತಕ ತಂತುಗಳ ಉತ್ಪಾದನೆಯಲ್ಲಿಯ ನವ ತಂತ್ರಗಳು ಬಹುಮಂದಿ ರಸಾಯನ ವಿಜ್ಞಾನಿಗಳಿಗೆ, ಭೌತವಿಜ್ಞಾನಿಗಳಿಗೆ ಎಂಜಿನಿಯರುಗಳಿಗೆ ಹಾಗೂ ತಜ್ಞರಿಗೆ ಉದ್ಯೋಗಗಳನ್ನು ದೊರಕಿಸಿಕೊಟ್ಟಿವೆ. ಕೃತಕ ವಸ್ತ್ರ ತಯಾರಿಕೆಯ ಕೈಗಾರಿಕೆ ಬೆಳೆಯುತ್ತಿರುವುದರಿಂದ ಸಹಸ್ರಾರು ಕಾರ್ಮಿಕರ ಜೀವನದಲ್ಲಿ ನವಕ್ರಾಂತಿಯುಂಟಾಗಿದೆ. **(ನೋಡಿ– ಎಳೆಗಳು)**

(ವಿ.ಎಸ್.ವಿ.)

**ಕೃತಕ ಗರ್ಭಧಾರಣೆ :** ಗಂಡು ಪ್ರಾಣಿಗಳ ವೀರ್ಯವನ್ನು ಕೃತಕ ರೀತಿಯಿಂದ ಸಂಗ್ರಹಿಸಿ ಅದನ್ನು ಯುಕ್ತರೀತಿಯಲ್ಲಿ ತೆಳುವಾಡಿ ಶೇಖರಿಸಿಟ್ಟು ಬೇಕಾದ ಸಮಯದಲ್ಲಿ ಅದನ್ನು ಅದೇ ವರ್ಗದ ಹೆಣ್ಣು ಪ್ರಾಣಿಗಳಿಗೆ ಕೃತಕ ರೀತಿಯಿಂದ ಕೊಟ್ಟು ಗರ್ಭಧಾರಣೆ ಮಾಡಿಸುವಿಕೆ (ಆರ್ಟಿಫಿಷಿಯಲ್). ತಾತ್ತ್ವಿಕವಾಗಿ ಇದನ್ನು ಎಲ್ಲ ಜಾತಿಯ ಪ್ರಾಣಿಗಳಲ್ಲೂ ನಡೆಸಬಹುದು. ಇತ್ತೀಚೆಗೆ ಪಶುಸಂಗೋಪನ ಕಾರ್ಯದಲ್ಲಿ ಈ ಏರ್ಪಾಡು ಬಹಳ ಪ್ರಾಮುಖ್ಯ ಗಳಿಸಿದೆ. ಇದರಿಂದಾಗಿ ತಿಳಿದ ಒಳ್ಳೆಯ ಬೀಜದ ಹೋರಿಯಿಂದ ಅಥವಾ ಕೋಣದಿಂದ ವೀರ್ಯವನ್ನು ಸಂಗ್ರಹಿಸಿ ಶೇಖರಿಸಿಟ್ಟು ಅಸಂಖ್ಯಾತ ಹಸುಗಳಿಗೆ ಅಥವಾ ಎಮ್ಮೆಗಳಿಗೆ ಗರ್ಭಧಾರಣೆ ಮಾಡಿಸಿ ಒಳ್ಳೆತರಹದ ತಳಿಗಳನ್ನು ಪಡೆಯಲಾಗುತ್ತಿದೆ. ಕೃತಕ ಗರ್ಭಧಾರಣೆಯ ಮುಖ್ಯ ಪ್ರಯೋಜನಗಳು ಈ ಕೆಳಗಿನಂತಿವೆ : 1. ಒಂದೇ ಒಂದು ಒಳ್ಳೆಯ ತಳಿಯ ಬೀಜದ ಹೋರಿಯಿಂದ ಅಸಂಖ್ಯಾತ ಹಸುಗಳಿಗೆ ಗರ್ಭಧಾರಣೆ ಮಾಡಿಸಬಹುದು. ನ್ಯೂಯಾರ್ಕಿನಲ್ಲಿ ಈ ತರಹದ ವ್ಯವಸ್ಥೆಯಿಂದಾಗಿ ಒಂದು ಹೋರಿಯಿಂದ ಏಳು ವರ್ಷದಲ್ಲಿ 90,000 ಹಸುಗಳಿಗೆ ಗರ್ಭಧಾರಣೆ ಮಾಡಿಸಿದ್ದಾರೆ. 2. ಹೋರಿಗಳ ವೀರ್ಯವನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಅಥವಾ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸುಲಭವಾಗಿ ಒಯ್ದು ಪ್ರಯೋಜನ ಪಡೆಯಬಹುದು. 3. ಹಸುಗಳ ನೈಸರ್ಗಿಕ ಗರ್ಭಧಾರಣೆಗಳಿಗೆ ಬೇಕಾಗುವ ಬಹುಸಂಖ್ಯೆಯ ಹೋರಿಗಳನ್ನು ಇಟ್ಟುಕೊಳ್ಳುವ ಪ್ರಸಂಗವನ್ನು ಕಡಿಮೆ ಮಾಡಿ ಬೇಕಾದಷ್ಟು ಉಳಿತಾಯವನ್ನು ಸಾಧಿಸಬಹುದು. 4.ಕೃತಕ ಗರ್ಭಧಾರಣೆಗೆ ಬೇಕಾದ ಕೆಲವು ಹೋರಿಗಳನ್ನು ಸರಿಯಾಗಿ ಪರೀಕ್ಷಿಸಿ, ರೋಗರುಜಿನಗಳಿಲ್ಲದವನ್ನು ಮಾತ್ರ ಇಟ್ಟುಕೊಂಡು ಉಳಿತಾಯವನ್ನು ಸಾಧಿಸಬಹುದು. ದನಗಳಲ್ಲಿ ನೈಸರ್ಗಿಕ ಜೋಡಿಯಿಂದಾಗಿ ಹರಡುವ ಕಾಯಿಲೆಗಳನ್ನು ಈ ವಿಧಾನದಿಂದ ತಡೆಗಟ್ಟಬಹುದು. 5. ಕೃತಕ ಗರ್ಭಧಾರಣೆಯಿಂದ ಬೇಕಾದ ದಾಖಲೆಗಳನ್ನು ಸುಲಭವಾಗಿ ಇಟ್ಟುಕೊಂಡು ಮುಂದೆ ಬೇಕಾಗುವಾಗ ನೋಡಬಹುದಾಗಿದೆ. ತಳಿ ಅಭಿವೃದ್ಧಿಗೆ ಇಂಥ ದಾಖಲೆಗಳು ಬಲು ಆವಶ್ಯಕ. 6. ಸಣ್ಣ ಗಾತ್ರದ ಹಸುಗಳಿಗೆ ದೊಡ್ಡ ಹೋರಿಗಳಿಂದ ಜೋಡಿ ಮಾಡಿಸುವ ಕಷ್ಟಗಳನ್ನು ಮತ್ತು ಆಗಬಹುದಾದ ಅಪಾಯಗಳನ್ನು ನಿವಾರಿಸಬಹುದು. 7. ಅಂಗಹೀನ ಹೋರಿಗಳು ಅಥವಾ ಹಸುಗಳು ಜೋಡಿಯಾಗಲು ಸಾಧ್ಯವಿಲ್ಲದಿರುವಾಗ ರಾಸುಗಳು ಉತ್ತಮವಾಗಿದ್ದರೆ ಕೃತಕ ಗರ್ಭಧಾರಣೆ ಅವುಗಳ ಪೀಳಿಗೆಯನ್ನು ಮುಂದುವರಿಸಲು ಸಹಕಾರಿ. ತಜ್ಞ ತಾಂತ್ರಿಕರ ಉಸ್ತುವಾರಿಯ ವಿನಾ ಮಾಡಿಸಿದ ಕೃತಕ ಗರ್ಭಧಾರಣೆ ಫಲಕಾರಿ ಆಗದಿರುವುದು ಮಾತ್ರವಲ್ಲ, ಹಲವಾರು ವೇಳೆ ಉಪದ್ರವಕಾರಿಯೂ ಆಗಬಹುದು.

ಕೃತಕ ಗರ್ಭಧಾರಣೆಯಲ್ಲಿ ವೀರ್ಯ ಸಂಗ್ರಹಿಸುವ ಕೆಲಸ ಹೀಗಿದೆ: ಹೆಚ್ಚಿನ ಕಡೆಗಳಲ್ಲಿ ರಬ್ಬರಿನ ಕೃತಕ ಯೋನಿಯೊಂದನ್ನು ತಯಾರು ಮಾಡಿ ಇಟ್ಟುಕೊಳ್ಳುತ್ತಾರೆ. ಹೋರಿ ಹಸುವಿನೊಡನೆ ಜೋಡಿಯಾಗುವ ಸಮಯದಲ್ಲಿ ಅದನ್ನು ಹಸುವಿನ ಬದಿಯಲ್ಲೆ ಇಟ್ಟುಕೊಂಡು ಹೋರಿಯ ಲಿಂಗ ಅದರೊಳಕ್ಕೆ ನೇರವಾಗಿ ಹೋಗುವಂತೆ ತೂರಿಸುತ್ತಾರೆ. ಆಗ ಹೊರಹಾಕಲ್ಪಟ್ಟ ವೀರ್ಯ ಕೃತಕ ಯೋನಿಯೊಳಗೆ ಸಂಗ್ರಹವಾಗುವುದು. ಕೃತಕ ಯೋನಿ ಸಾಧಾರಣವಾಗಿ 18" ಉದ್ದವೂ 3" ಅಗಲವೂ ಇರುವ ಕೊಳವೆ. ಅದರೊಳಗೆ ಸುತ್ತಲೂ ಬಿಸಿನೀರನ್ನೊಳಗೊಂಡ ರಬ್ಬರಿನ ಚೀಲವನ್ನು ಇಟ್ಟಿರುತ್ತಾರೆ. ಈ ಚೀಲದ ಕೊನೆಯಲ್ಲಿ ಒಂದು ಗಾಜಿನ ಪ್ರನಾಳವಿದ್ದು ವೀರ್ಯ ಇದರೊಳಗೆ ಸಂಗ್ರಹವಾಗುವುದು. ಕೆಲವು ಕಡೆಗಳಲ್ಲಿ ವಿದ್ಯುತ್ತಿನ ಉದ್ದೀಪನೆಯಿಂದ ವೀರ್ಯವನ್ನು ಶೇಖರಿಸುವರು. ಇದಕ್ಕೆ ಗಾಜಿನ ಕೊಳವೆಯಂತಿರುವ ಯಂತ್ರದಲ್ಲಿ ವಿದ್ಯುತ್ತಿನ ಉದ್ದೀಪನೆಯನ್ನು ಮಲದ್ವಾರಕ್ಕೆ ತೂರಿಕೊಟ್ಟು ಉದ್ದೀಪಿಸಿದರೆ ಸೊಂಟದ ಹತ್ತಿರವಿರುವ ನರಗಳು ಉತ್ತೇಜಿತವಾಗಿ ವೀರ್ಯಸ್ಖಲನವಾಗುತ್ತದೆ. ಮಲದ್ವಾರದ ಮುಖಾಂತರ ಆಂಪ್ಯುಲ್ಲವನ್ನು ತಿಕ್ಕಿದಾಗ ಸಹ ಹೀಗಾಗುವುದು. ವೀರ್ಯವನ್ನು ಈ ಪ್ರಕಾರ ಸಂಗ್ರಹಿಸಿದ ಬಳಿಕ ಅದನ್ನು ತೆಳು ಮಾಡಿ ಶೇಖರಿಸಿಡುವ ಕೆಲಸ ಸ್ವಲ್ಪ ಪ್ರಯಾಸದ್ದು. ತಜ್ಞರೇ ಅದನ್ನು ನಿರ್ವಹಿಸಬೇಕು. ಇದಕ್ಕಾಗಿ ಕೆಲವೆಡೆಗಳಲ್ಲಿ ಕೋಳಿಮೊಟ್ಟೆಯ ಹಳದಿ ಭಾಗವನ್ನು ಫಾಸ್ಫೇಟ್ ದ್ರವದಿಂದಲೋ ಸಿಟ್ರೇಟ್ ದ್ರವದಿಂದಲೋ ಸಂಸ್ಕರಿಸಿ ವೀರ್ಯವನ್ನು ಸುಮಾರು ನಾಲ್ಕು ಪಾಲಿನಷ್ಟು ತೆಳು ಮಾಡಿ ಉಪಯೋಗಿಸುತ್ತಾರೆ. ಕೆಲವರು ಕುದಿಸಿದ ಹಾಲಿನಿಂದ ತೆಳು ಮಾಡುತ್ತಾರೆ. ಇತ್ತೀಚೆಗೆ ತೆಂಗಿನಕಾಯಿಯ ನೀರಿನಿಂದ ತೆಳುಮಾಡುವ ವಿಧಾನವನ್ನೂ ಕಲ್ಪಿಸಿದ್ದಾರೆ. ಹೀಗೆ ತೆಳುಮಾಡಿದ ವೀರ್ಯಕ್ಕೆ ಕೀಟಗಳ ತಡೆಯನ್ನು ಎದುರಿಸುವಂತೆ ಕೆಲವು ಪ್ರತಿಜೀವಿ ಔಷಧಿಗಳನ್ನು ಸೇರಿಸಿ ಇಟ್ಟುಕೊಳ್ಳುತ್ತಾರೆ. ಈ ರೀತಿಯಲ್ಲಿ ತೆಳುಮಾಡಿ ಒದಗಿಸಿದ ವೀರ್ಯವನ್ನು ಒಂದು ವಾರದವರೆಗೆ ಶೀತಕ ಯಂತ್ರದಲ್ಲಿ ಇಟ್ಟುಕೊಂಡು ಬೇಕಾದ ಹಾಗೆ 1 ಮಿಲೀ–2 ಮಿಲೀ ನಷ್ಟು ತೆಗೆದು ಕೃತಕ ಗರ್ಭಧಾರಣೆ ಮಾಡಿಸಬಹುದು. ಇತ್ತೀಚೆಗೆ ವೀರ್ಯವನ್ನು ಗ್ಲಿಸರೋಲ್‌ನೊಡನೆ ಸೇರಿಸಿ ಗಡ್ಡೆ ಕಟ್ಟುವಂತೆ ಶೀತಲ ಮಾಡಿ ಅಂದರೆ ತೇವವನ್ನು ಸುಮಾರು–79° ಸೆಂ. ನಷ್ಟು ಕೆಳಗಿಳಿಸಿದರೆ ಬೇಕಾದಷ್ಟು ಸಮಯ ಶೇಖರಿಸಿ ಇಟ್ಟುಕೊಳ್ಳುವ ಪ್ರಸಂಗವನ್ನು ಕಲ್ಪಿಸಿದ್ದಾರೆ. ಹೀಗೆ ಕಲ್ಪಿಸಿದ ವೀರ್ಯವನ್ನು ಒಂದೆರಡು ವರ್ಷಗಳ ಕಾಲ ಕೂಡ ಶೇಖರಿಸಬಹುದು. ಇಂಥ ತೆಳು ಮಾಡಿದ ವೀರ್ಯವನ್ನು ಪಿಚಕಾರಿಯಲ್ಲಿ ತೆಗೆದುಕೊಂಡು ಸುಮಾರು 16" ಉದ್ದವಿರುವ ಗಾಜಿನ ಅಥವಾ ಪ್ಲಾಸ್ಟಿಕ್ ಸಪೂರ ಕೊಳವೆಯ ಮುಖಾಂತರ ಹಸುಗಳ ಯೋನಿಯೊಳಕ್ಕೆ ಸೇರಿಸುವರು. ಹಸುಗಳು ಸರಿಯಾದ ಬೆದೆಯ ಸಮಯದಲ್ಲಿರಬೇಕಾದದ್ದು ಆವಶ್ಯ. ಇಲ್ಲದಿದ್ದಲ್ಲಿ ಗರ್ಭಧಾರಣೆ ಫಲಕಾರಿಯಾಗುವುದಿಲ್ಲ.

(ವಿ.ಆರ್.ವಿ.ಎಚ್)

**ಕೃತಕ ಗೊಬ್ಬರಗಳು :** ಕೃಷಿಕನಿಂದ ತನ್ನ ಹಿಡುವಳಿಯಲ್ಲಿ ಉತ್ಪಾದನೆ ಮಾಡಲು ಸಾಧ್ಯವಲ್ಲದ ಹಾಗೂ ಕಾರ್ಖಾನೆಗಳಲ್ಲಿ ಕೆಲವು ರಾಸಾಯನಿಕ ವಸ್ತುಗಳ ಬಳಕೆಯಿಂದ ತಯಾರುಮಾಡುವ ಗೊಬ್ಬರಗಳು, ಇವನ್ನು ರಸ ಅಥವಾ ರಾಸಾಯನಿಕ ಅಥವಾ ಸೀಮೆಗೊಬ್ಬರಗಳೆಂದೂ ಕರೆಯುವುದುಂಟು. ಬೆಳೆಗಳ ಬೆಳವಣಿಗೆಗೆ ಮತ್ತು ಪೋಷಣೆಗೆ ದೊಡ್ಡ ಪರಿಮಾಣದಲ್ಲಿ ಅತಿ ಅಗತ್ಯವೆನಿಸಿದ ಸಾರಜನಕ, ರಂಜಕ ಮತ್ತು ಪೊಟಾಷ್ ಎಂಬ ಪೋಷಕಗಳನ್ನು ರಸ ಗೊಬ್ಬರಗಳ ಬಳಕೆಯಿಂದ ಅವುಗಳಿಗೆ ಒದಗಿಸಬಹುದು. ಕೃತಕ ಗೊಬ್ಬರಗಳನ್ನು ಅವುಗಳಿಂದ ದೊರೆಯುವ ಮುಖ್ಯ ಪೋಷಕವನ್ನು ಅವಲಂಬಿಸಿ ಸಾರಜನಕ, ರಂಜಕ ಮತ್ತು ಪೊಟಾಷ್ ಗೊಬ್ಬರಗಳೆಂದು ವಿಂಗಡಿಸುತ್ತಾರೆ. ಸಾಮಾನ್ಯವಾಗಿ ಉಪಯೋಗದಲ್ಲಿರುವ ಕೃತಕ ಗೊಬ್ಬರಗಳು ಮತ್ತು ಅವುಗಳಿಂದ ಸಿಗುವ ಸಸ್ಯ ಪೋಷಕಗಳ ಶೇಕಡಾ ಪರಿಮಾಣಗಳನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಕೃತಕ ಗೊಬ್ಬರಗಳು | ಸಿಗುವ ಶೇಕಡ | | |
|---|---|---|---|
| | ಸಾರಜನಕ | ರಂಜಕ | ಪೊಟಾಷ್ |
| **ಸಾರಜನಕ ಗೊಬ್ಬರಗಳು** | | | |
| 1. ಅಮೋನಿಯಂ ಸಲ್ಫೇಟ್ | 20.5 | – | – |
| 2. ಯೂರಿಯಾ | 44–46 | – | – |
| 3. ಅಮೋನಿಯಂ ಸಲ್ಫೇಟ್ ನೈಟ್ರೇಟ್ | 26 | – | – |
| 4. ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್ | 20.05 | – | – |
| 5. ಸೋಡಿಯಂ ನೈಟ್ರೇಟ್ | 16 | – | – |

| | | | |
|---|---|---|---|
| **ರಂಜಕ ಗೊಬ್ಬರಗಳು** | | | |
| 1. ಸೂಪರ್ ಫಾಸ್ಫೇಟ್ | – | 16 | – |
| 2. ಟ್ರಿಪಲ್ ಸೂಪರ್ ಫಾಸ್ಫೇಟ್ | – | 48 | – |
| 3. (ಎ) ನೈಟ್ರೋ ಫಾಸ್ಫೇಟ್ | 16 | 20 | – |
| (ಬಿ) ನೈಟ್ರೋ ಫಾಸ್ಫೇಟ್ | 20 | 20 | – |
| 4. ಬೇಸಿಕ್ ಸ್ಲೇಗ್ | – | 16 | – |
| 5. ಡೈ ಅಮೋನಿಯಂ ಫಾಸ್ಫೇಟ್ | 18 | 46 | – |
| 6. ಅಮೋನಿಯಂ ಫಾಸ್ಫೇಟ್ | 20 | 20 | – |
| **ಪೊಟಾಷ್ ಗೊಬ್ಬರಗಳು** | | | |
| 1. ಪೊಟಾಸಿಯಂ ಕ್ಲೋರೈಡ್ (ಮ್ಯುರಿಯೇಟ್ ಆಫ್ ಪೊಟಾಷ್) | – | – | 60 |
| 2. ಸಲ್ಫೇಟ್ ಆಫ್ ಪೊಟಾಷ್ | – | – | 48 |

**ಮಿಶ್ರಣ ಗೊಬ್ಬರ :** ಸಾರಜನಕ ರಂಜಕ ಮತ್ತು ಪೊಟಾಷ್–ಈ ಪೋಷಕಗಳು ಗೊತ್ತುಮಾಡಿದ ಪ್ರಮಾಣದಲ್ಲಿರುವಂತೆ ಕೃತಕ ಗೊಬ್ಬರಗಳನ್ನು ಮತ್ತು ಸಾವಯವಗೊಬ್ಬರಗಳನ್ನು ಮಿಶ್ರಮಾಡಿ ತಯಾರಿಸಿದಂಥ ಗೊಬ್ಬರ.

**ಸಂಯುಕ್ತ ಗೊಬ್ಬರ :** ಹರಳು ಹರಳುಗಳಾಗಿ ತಯಾರು ಮಾಡಿದ ಮಿಶ್ರಣಗೊಬ್ಬರ.

**ಸಾರಜನಕ ಗೊಬ್ಬರದ ಪರಿಣಾಮಗಳು :** 1. ಬೆಳೆಗಳನ್ನು ಹಚ್ಚನೆ ಹಸಿರಾಗಿ ಬೆಳೆಯುವಂತೆ ಮಾಡುತ್ತವೆ. 2. ಎಲೆಗಳು ಹೆಚ್ಚು ವಿಶಾಲವಾಗಿಯೂ ದಂಟು ಅಥವಾ ಕಾಂಡ ಹೆಚ್ಚು ಉದ್ದವಾಗಿಯೂ ದಪ್ಪವಾಗಿಯೂ ಬೆಳೆಯುವುದಕ್ಕೆ ಉತ್ತೇಜಕವಾಗಿದೆ. 3. ಬತ್ತ, ಗೋದಿ, ರಾಗಿ ಮೊದಲಾದ ಬೆಳೆಗಳಲ್ಲಿ ಅಧಿಕ ಕವಲುಗಳು(ತೆಂಡೆಗಳು,ಪಿಳ್ಳೆಗಳು) ಬರುತ್ತವೆ. 4. ತೆನೆಗಳ ಸಂಖ್ಯೆ ಜಾಸ್ತಿಯಾಗುವುದಕ್ಕೂ ಅವುಗಳ ಗಾತ್ರ ದೊಡ್ಡದಾಗುವುದಕ್ಕೂ ಪ್ರಯೋಜನಕಾರಿ. 5. ಕೆಲವು ಸಸ್ಯಗಳು ಫಸಲಿನಲ್ಲಿ ಸಾರಜನಕದ ಅಂಶವನ್ನು ಅಧಿಕಗೊಳಿಸುವ ಸಾಧ್ಯತೆ ಇದೆಯೆಂದು ತಿಳಿದುಬಂದಿದೆ.

**ಆವಶ್ಯಕ್ಕಿಂತ ಅಧಿಕವಾದಲ್ಲಿ ಸಂಭವಿಸಬಹುದಾದ ತೊಂದರೆಗಳು :** 1. ಬತ್ತ, ರಾಗಿ, ಗೋದಿ ಮೊದಲಾದ ಬೆಳೆಗಳಲ್ಲಿ ಕಾಂಡಗಳು ಅತಿಶಯ ಎತ್ತರಕ್ಕೆ ಬೆಳೆದು ಹೊಲದಲ್ಲಿ ನೆಟ್ಟಗೆ ನಿಲ್ಲಲು ಅಶಕ್ತವಾಗಿ ಬಗ್ಗಿ ಬೀಳುತ್ತವೆ. ಬೇರುಗಳ ಬೆಳವಣಿಗೆ ಚೆನ್ನಾಗಿರುವುದಿಲ್ಲ. 2. ಹೂ ಮತ್ತು ತೆನೆಗಳ ಉತ್ಪಾದನೆ ತಡವಾಗಿ, ಬೆಳೆ ಸಕಾಲದಲ್ಲಿ ಕೊಯ್ಲಿಗೆ ಬರುವುದಿಲ್ಲ. 3. ಸಸ್ಯಗಳು ಹೆಚ್ಚು ಕೋಮಲವಾಗಿ ಬೆಳೆದು, ಕ್ರಿಮಿಕೀಟ, ರೋಗಗಳಿಗೆ ಅವಕಾಶ ನೀಡುತ್ತವೆ. 4. ಅವುಗಳಲ್ಲಿ ಶುಷ್ಕತೆಯನ್ನು ಸಹಿಸುವ ಸಾಮರ್ಥ್ಯ ಕಡಿಮೆಯಾಗುವುದು ಕೂಡ ಗಮನಾರ್ಹವಾದ ವಿಷಯ. ಹೀಗೆ ಉತ್ತಮ ಬೆಳೆ ಪಡೆಯುವುದಕ್ಕೆ ತೊಡಕು ಉಂಟಾಗುತ್ತದೆ.

**ರಂಜಕ ಗೊಬ್ಬರದ ಪರಿಣಾಮಗಳು :** 1. ಬೇರುಗಳ ಬೆಳವಣಿಗೆ ಹೆಚ್ಚುತ್ತದೆ. 2. ಫಸಲು ಬೇಗನೆ ಕಟಾವಿಗೆ ಸಿದ್ಧವಾಗುವಂತೆ ಪರಿಣಾಮಕಾರಿ, 3. ದ್ವಿದಳ ಧಾನ್ಯಗಳ ಬೆಳೆಗಳಿಗೆ (ತೊಗರಿ, ಹೆಸರು, ಉದ್ದು, ಕಡ್ಲೆ, ನೆಲಗಡಲೆ, ಅವರೆ, ಅಲಸಂದೆ, ಹುರುಳಿ, ಸೋಯಬೀನ್ಸ್, ಬಟಾಣಿ ಮೊದಲಾದವು) ವಿಶೇಷವಾಗಿ ಉಪಯುಕ್ತವಾದ ಪೋಷಕ. 5. ಮೇವಿನ ಬೆಳೆಗಳಲ್ಲಿ ಸಸಾರಜನಕದ ಅಂಶ ಮತ್ತು ಲವಣಗಳ ಪರಿಮಾಣ ಹೆಚ್ಚುವಂತೆ ಉಪಯುಕ್ತವಾಗಿದೆ. 6. ಸಾರಜನಕ ಅಧಿಕವಾದುದರಿಂದ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ಕಡಿಮೆಮಾಡಲು ರಂಜಕ ಪ್ರಯೋಜನಕಾರಿಯಾಗಬಹುದು. 7. ಹೂ, ಬೀಜ ಮತ್ತು ಫಲಗಳ ಉತ್ಪಾದನೆಗೆ ಅನುಕೂಲ. 8. ಒಣಹವೆಯನ್ನು ಸಹಿಸುವ ಸಾಮರ್ಥ್ಯ ಬೆಳೆಗಳಿಗೆ ಬರುತ್ತದೆ. 9. ವಿಶೇಷ ಚಳಿ ಬಾಧಕವಾಗದಂತೆ ಸಹಾಯಕ. ರಂಜಕ ಜಾಸ್ತಿಯಾದಲ್ಲಿ ಬೆಳೆ ಬಹಳ ಬೇಗನೆ ಕೊಯ್ಲಿಗೆ ತಯಾರಾಗಿ ಫಸಲು ಕಡಿಮೆಯಾಗುವ ಸಂಭವವಿದೆ.

**ಪೊಟಾಷ್ ಗೊಬ್ಬರದ ಪರಿಣಾಮಗಳು :** 1. ಬೆಳೆಗಳು ಹೆಚ್ಚು ಬಿರುಸಾಗಿ ಬೆಳೆಯುತ್ತವೆ. ಅಂದರೆ ಅನನುಕೂಲ ವಾತಾವರಣವನ್ನು ಎದುರಿಸಿ ಬೆಳೆಯುವುದಕ್ಕೆ ಸಮರ್ಥವಾಗುತ್ತವೆ. 2. ಕೆಲವು ರೋಗಗಳನ್ನು ನಿರೋಧಿಸುವುದಕ್ಕೆ ಉಪಯುಕ್ತ. 3. ಆಹಾರಾಂಶಗಳು ಎಲೆಗಳಿಂದ ಬೇರುಗಳ ವರೆಗೆ ಚಲಿಸುವುದಕ್ಕೆ ಸಹಾಯಕ. 4. ದಂಟು ಅಥವಾ ಕಾಂಡ ಹೆಚ್ಚು ಸಾಮರ್ಥ್ಯಯುತವಾಗಿ ಬೆಳೆಯುತ್ತದೆ. 5. ಒಣ ಹವೆಯಲ್ಲಿ ಬೆಳೆದು ಸಸ್ಯಗಳು ಅಷ್ಟೊಂದು ಕಂಗಾಲಾಗದಂತೆ ನೋಡಿಕೊಳ್ಳುವುದಕ್ಕೆ ಪ್ರಯೋಜನಕಾರಿ. 6. ತರಕಾರಿ ಮತ್ತು ಹಣ್ಣುಗಳು ಬೇಗನೆ ಹಾಳಾಗಿ ಹೋಗದ ಹಾಗೆ ದಾಸ್ತಾನು ಮಾಡುವುದಕ್ಕೆ ಇದರಿಂದ ಉಪಯೋಗವಿದೆ. ಪೊಟಾಷ್ ಅತಿಶಯವಾದಲ್ಲಿ ಇತರ ಪೋಷಕಗಳನ್ನು ಬೆಳೆ ಹೀರುವುದಕ್ಕೆ ಆತಂಕ ಉಂಟಾಗಿ ಒಳ್ಳೆ ಇಳುವರಿ ಸಿಗಲು ಅನನುಕೂಲವಾಗಬಹುದು. ಸಾರಜನಕ, ರಂಜಕ, ಪೊಟಾಷ್ ಇವುಗಳಲ್ಲಿ ಯಾವುದಾದರೊಂದು ಕಡಿಮೆಯಾದಲ್ಲಿ ಬೆಳೆಯ ಬೆಳವಣಿಗೆ ಕುಂಠಿತವಾಗುತ್ತದೆ. ಪರಿಣಾಮವಾಗಿ ಫಸಲು ಕಡಿಮೆಯಾಗುತ್ತದೆ. ಸಾರಜನಕ ಸಾಕಷ್ಟು ಇಲ್ಲದಿದ್ದರೆ ಎಲೆಗಳ ಸ್ವಾಭಾವಿಕವಾದ ಹಸಿರು ಬಣ್ಣ ಬದಲಾಗುವುದು. ಅವು ನಸು ಹಸುರು ಇಲ್ಲವೇ ಹಳದಿ ಬಣ್ಣಕ್ಕೆ ತಿರುಗುತ್ತವೆ. ರಂಜಕದ ಅಭಾವದ ಪರಿಣಾಮವಾಗಿ ಬೇರುಗಳ ಬೆಳವಣಿಗೆ ಕುಗ್ಗುತ್ತದೆ. ಪೊಟಾಷಿನ ಕೊರತೆಯಿಂದ ಎಲೆಗಳ ತುದಿ ಮತ್ತು ಅಂಚು ಒಣಗುತ್ತದೆ. ಕೃತಕ ಗೊಬ್ಬರಗಳಿಂದ ಅಧಿಕ ಇಳುವರಿ ಗಳಿಸುವ ಸಲುವಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ಮುಖ್ಯ ವಿಚಾರಗಳು: 1. ನೀರಾವರಿ. ಕೃತಕ ಗೊಬ್ಬರಗಳನ್ನು ನೀರಾವರಿ ಬೆಳೆಗೆ ಹಾಕಿದಲ್ಲಿ ಸಿಕ್ಕುವಷ್ಟು ಹೆಚ್ಚಿಗೆ ಫಸಲು ಖುಷ್ಕಿ ಬೆಳೆಗಳಿಗೆ ಇವನ್ನು ಹಾಕಿದರೆ ಸಿಕ್ಕಲಾರದು. ರಾಸಾಯನಿಕ ಗೊಬ್ಬರಗಳಿಂದ ಹೆಚ್ಚು ಫಸಲು ಪಡೆಯುವುದಕ್ಕೆ ನೀರಾವರಿ ಅನುಕೂಲ. ಮಳೆ ಆಶ್ರಯದಿಂದ ಬೆಳೆಯುವ ಬೆಳೆಗಳಿಗೆ ಹೊಲದಲ್ಲಿ ಸಾಕಷ್ಟು ತೇವವಿರುವಾಗ ಮಾತ್ರ ಕೃತಕ ಗೊಬ್ಬರಗಳನ್ನು ಬಳಸಬೇಕು. ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿದಲ್ಲಿ ಹುಳ ಹುಪ್ಪಟೆ ಹಾಗೂ ರೋಗಗಳ ಹಾವಳಿ ಹೆಚ್ಚುವ ಸಂಭವವಿದೆ. ಆದ್ದರಿಂದ ಇವುಗಳ ನಿವಾರಣೆಗೆ ತಕ್ಕ ಬೆಳೆ ಸಂರಕ್ಷಣೆಯ ಕ್ರಮಗಳನ್ನು ಅನುಸರಿಸುವುದು ಅಗತ್ಯ.

2. ನೀರಿನ ಉಸ್ತುವಾರಿ ಕೂಡ ಚೆನ್ನಾಗಿರಬೇಕು. ಜಾಸ್ತಿಯಾದ ನೀರು ಹರಿದು ಹೋಗುವಂತೆ ಯೋಗ್ಯ ಬಸಿ ಕಾಲುವೆಗಳಿರಬೇಕು. ನೀರಿನ ವಿತರಣೆ ಸಮಾನವಾಗಿರುವಂತೆ ಮತ್ತು ಮಣ್ಣಿನ ಸವಕಳಿಯಾಗದಂತೆ ವ್ಯವಸ್ಥೆ ಅಗತ್ಯ.

3. ಬೆಳೆಯುವಂಥ ಬೆಳೆಯನ್ನು ಹೊಂದಿಕೊಂಡು ಕೃತಕ ಗೊಬ್ಬರಗಳ ಪರಿಮಾಣವನ್ನು ಹೆಚ್ಚುಕಡಿಮೆ ಮಾಡಬೇಕಾಗುತ್ತದೆ. ಬೆಳೆ ಮಾತ್ರವಲ್ಲದೆ ಬೆಳೆಯ ತಳಿ ಕೂಡ ಗಮನಿಸಬೇಕಾದ ಅಂಶ. ಐ.ಆರ್., 8 ಜಯಾ ಮೊದಲಾದ ಅಧಿಕೋತ್ಪಾದನೆಯ ತಳಿಗಳಿಗೆ ಸ್ಥಳೀಯ ತಳಿಗಳಿಗಿಂತ ದೊಡ್ಡ ಪರಿಮಾಣದಲ್ಲಿ ಸಾರಜನಕದ ಆವಶ್ಯಕತೆ ಇದೆ.

4. ಗೊಬ್ಬರದ ವಿಧ : ಆಯಾ ಗೊಬ್ಬರದಲ್ಲಿರುವ ಮುಖ್ಯ ಪೋಷಕದ ಶೇಕಡ ಅಂಶವನ್ನು ಅವಲಂಬಿಸಿ ಬೆಳೆಗೆ ಕೊಡಬೇಕಾದ ಗೊಬ್ಬರದ ಪರಿಮಾಣವನ್ನು ನಿಶ್ಚಯಿಸಬೇಕು. ಉದಾಹರಣೆಗೆ ಬತ್ತದ ಬೆಳೆ ತೆಗೆದುಕೊಳ್ಳೋಣ. ಎಕರೆಗೆ 20 ಕೆ.ಜಿ ಸಾರಜನಕ ಕೊಡಬೇಕಾದಲ್ಲಿ ಅಮೋನಿಯಂ ಸಲ್ಫೇಟ್ ಗೊಬ್ಬರವನ್ನು ಒಂದು ಕ್ವಿಂಟಾಲ್ ಹಾಕಬೇಕು. ಯೂರಿಯ ಗೊಬ್ಬರವಾದರೆ 44 ಕೆ.ಜಿ ಉಪಯೋಗಿಸಿದರೆ ಸಾಕು.

5. ಮಣ್ಣಿನ ಗುಣ : ಒಂದು ಸ್ಥಳದ ಮಣ್ಣು ಇನ್ನೊಂದು ಸ್ಥಳದ ಮಣ್ಣಿನಂತೆ ಇರುವುದಿಲ್ಲ. ಹೊಲದಿಂದ ಹೊಲಕ್ಕೆ ಮಣ್ಣಿನಲ್ಲಿ ವ್ಯತ್ಯಾಸವಿರಬಹುದು. ಮಣ್ಣಿನ ರಾಸಾಯನಿಕ ಪ್ರತಿಕ್ರಿಯೆ ಫಲವಂತಿಕೆ ಮುಂತಾದ ವಿವರಗಳನ್ನು ತಿಳಿದು ರಸಗೊಬ್ಬರಗಳನ್ನು ಮಣ್ಣಿನ ವೈಶಿಷ್ಟ್ಯಕ್ಕೆ ಅನುಗುಣವಾಗಿ ಬಳಸುವುದು ಉತ್ತಮ. ಇದರ ಸಲುವಾಗಿ ಪ್ರತಿ 4 ವರ್ಷಕ್ಕೊಂದು ಸರ್ತಿ ಮಣ್ಣಿನ ಮಾದರಿಯನ್ನು ಕ್ರಮಬದ್ಧವಾಗಿ ಪರೀಕ್ಷಾಲಯದಲ್ಲಿ ಪರೀಕ್ಷೆ ಮಾಡಿಸಿ ತಿಳಿವಳಿಕೆ ಪಡೆಯುವುದು ಲಾಭಕರ.

6. ಕೃತಕ ಗೊಬ್ಬರಗಳನ್ನು ಬೆಳೆಗಳಿಗೆ ನೀಡುವ ವಿಧಾನಗಳು ಹಲವಾರು ಇವೆ. ಸಮವಾಗಿ ವಿತರಣೆಯಾಗುವ ಹಾಗೆ ಚೆಲ್ಲುವುದು. ಕೂರಿಗೆಯಿಂದ ಹಾಕುವುದು. ನೇಗಿಲಿನ ಸಾಲಿನಲ್ಲಿ ಬೀಳಿಸುತ್ತ ಹೋಗುವುದು. ಕೃತಕ ಗೊಬ್ಬರಗಳನ್ನು ಸೇರಿಸಿದ ಸಗಣಿಗೊಬ್ಬರದ ದ್ರಾವಣ ತಯಾರಿಸಿ ಬೇರುಗಳನ್ನು ಅದ್ದುವುದು, ಉಂಡೆಗಳನ್ನು ತಯಾರಿಸಿ ಉಪಯೋಗಿಸುವುದು. ಸಾಲುಗಳ ಮಗ್ಗುಲಲ್ಲಿ ಪಟ್ಟೆಯ ರೂಪದಲ್ಲಿ ಹಾಕುವುದು: ತೆಳುವಾದ ದ್ರಾವಣ ತಯಾರಿಸಿ ಸಿಂಪರಣೆ ಮಾಡುವುದು. ಗಿಡಗಳ ಸುತ್ತಲೂ ವೃತ್ತಾಕಾರದಲ್ಲಿ ಹಾಕುವುದು ಇತ್ಯಾದಿ ಉತ್ತಮಕ್ರಮದಲ್ಲಿ ಗೊಬ್ಬರವನ್ನು ಉಪಯೋಗಿಸುವುದು ಅಗತ್ಯ.

7. ಬೆಳೆಯ ಯೋಗ್ಯ ಹಂತದಲ್ಲಿ ಕೃತಕ ಗೊಬ್ಬರವನ್ನು ಕೊಡುವುದು ಬಹಳ ಮುಖ್ಯ. ತಕ್ಕ ಸಮಯದಲ್ಲಿ ಕೊಡುವ ಬದಲು ಇತರ ವೇಳೆಯಲ್ಲಿ ಗೊಬ್ಬರ ಬಳಸಿದರೆ ಅಷ್ಟು ಉತ್ತಮ ಪ್ರತಿಫಲ ಸಿಗಲಾರದು.

8. ರಾಸಾಯನಿಕ ಗೊಬ್ಬರಗಳ ಜೋಡಣೆ: ಯಾವುದೇ ಒಂದು ಬೆಳೆಗೆ ನಿಗದಿಮಾಡಿರುವ ರಾಸಾಯನಿಕ ಗೊಬ್ಬರಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬೇರೆ ಬೇರೆ ಹೊಲಕ್ಕೆ ಹಾಕಿದಲ್ಲಿ ದೊರೆಯುವ ಇಳುವರಿ ಅವನ್ನು ಒಟ್ಟಾಗಿ ಜೋಡಣೆ ಮಾಡಿ ನೀಡಿದಾಗ ಸಿಗುವ ಉತ್ಪಾದನೆಗಿಂತ ಭಿನ್ನವಾಗುವುದುಂಟು. ಕೆಲವು ವೇಳೆ ಜೋಡಣೆ ಹೆಚ್ಚು ಲಾಭಕರ. ಇನ್ನು ಕೆಲವು ಸಂದರ್ಭದಲ್ಲಿ ನಷ್ಟದಾಯಕವಾಗುವ ಸಂಭವವಿದೆ. ಲಾಭವೂ ಇಲ್ಲ ನಷ್ಟವೂ ಇಲ್ಲದ ಪ್ರಸಂಗ ಕೂಡ ಉದ್ಭವಿಸಬಹುದು.

9. ಇತರ ಅಂಶಗಳು : ಹವೆ, ಬೀಜದ ಪ್ರಮಾಣ ಸಾಲಿಂದ ಸಾಲಿಗೆ ಮತ್ತು ಬೀಜದಿಂದ ಬೀಜಕ್ಕೆ ಇರುವ ಅಂತರ ಕಳೆಗಳ ನಿವಾರಣೆ, ಬೆಳೆ ಪರಿವರ್ತನೆ ಮತ್ತು ಇತರ ವ್ಯವಸಾಯ ಕ್ರಮಗಳು ಕೂಡ ಕೃತಕ ಗೊಬ್ಬರಗಳಿಂದ ಸಿಗುವ ಪ್ರತಿಫಲದ ಪರಿಮಾಣವನ್ನು ನಿಶ್ಚಯಿಸುತ್ತವೆ. (ವಿ.ಆರ್.ಎಸ್)

**ಕೃತಕ ಗೊಬ್ಬರ ಕೈಗಾರಿಕೆ :** ಕೃತಕ ಗೊಬ್ಬರಗಳ ರಸಾಯನ ವೃತ್ತಾಂತವನ್ನು (ಕೆಮಿಸ್ಟ್ರಿ) ಇಲ್ಲಿ ಚರ್ಚಿಸಿದೆ. ಗಿಡ, ಪೈರುಗಳಿಗೆ ಅಗತ್ಯವಾದ ಮೂಲಧಾತುಗಳಲ್ಲಿ ಸಾರಜನಕ, ಪೊಟಾಸಿಯಂ, ರಂಜಕ ಮತ್ತು ಕ್ಯಾಲ್ಸಿಯಂಗಳು ಮುಖ್ಯವಾದವು.

ಸಾರಜನಕವನ್ನು ಅಮೋನಿಯಂ ಸಲ್ಫೇಟ್, ಯೂರಿಯ, ಸೋಡಿಯಂ ನೈಟ್ರೇಟ್, ಪೊಟಾಸಿಯಂ ನೈಟ್ರೇಟ್, ಅಮೋನಿಯಂ ಫಾಸ್ಫೇಟ್ ಮೊದಲಾದ ಲವಣಗಳಿಂದ ಪೂರೈಸಬಹುದು. ರಂಜಕವನ್ನು ಪೂರೈಸಲು ಸೂಪರ್ ಫಾಸ್ಫೇಟ್‌ಗಳು ಮತ್ತು ಅಮೋನಿಯಂ ಫಾಸ್ಫೇಟ್ ಲವಣಗಳನ್ನು ಉಪಯೋಗಿಸುತ್ತಾರೆ. ಪೊಟಾಸಿಯಂ ಸಲ್ಫೇಟನ್ನು ಉಪಯೋಗಿಸಬಹುದು. ಕ್ಯಾಲ್ಸಿಯಂ ಪೂರೈಕೆಯನ್ನು ಸುಣ್ಣದಿಂದ ಪಡೆಯಬಹುದು. ಆದರೆ ಕ್ಯಾಲ್ಸಿಯಂ ಫಾಸ್ಫೇಟ್ ಅದಕ್ಕಿಂತ ಉತ್ತಮ. ಸೂಪರ್ ಫಾಸ್ಫೇಟ್‌ಗಳಲ್ಲೂ ಸಾಕಷ್ಟು ಕ್ಯಾಲ್ಸಿಯಂ ಇರುತ್ತದೆ. ಮೇಲೆ ಹೇಳಿದ ಧಾತುಗಳಲ್ಲದೆ ಇತರ ಅಲ್ಪಪರಿಮಾಣದಲ್ಲಿ ಬೇಕಾಗಿರುವ ಮೆಗ್ನೀಸಿಯಂ, ತಾಮ್ರ, ಸತು, ಮ್ಯಾಂಗನೀಸ್, ಕಬ್ಬಿಣ, ಬೋರಾನ್, ಮಾಲೆಬ್ಡಿನಂ, ಸೋಡಿಯಂ, ಸಿಲಿಕಾನ್, ಅಲ್ಯೂಮಿನಿಯಂಗಳನ್ನೂ ಭೂಮಿಯಲ್ಲಿ ಸಾಕಷ್ಟು ಇಲ್ಲದಿದ್ದರೆ ನೀರಿನಲ್ಲಿ ಕರಗಬಲ್ಲ ಇವುಗಳ ಲವಣಗಳನ್ನೂ ಅಲ್ಪಪರಿಮಾಣದಲ್ಲಿ ಇತರ ಮುಖ್ಯ ಗೊಬ್ಬರಗಳ ಲವಣಗಳೊಡನೆ ಬೆರೆಸಲಾಗುತ್ತದೆ. ಅಲ್ಪ ಅಂಶದಲ್ಲಿ ಬೇಕಾಗಿರುವ ಲವಣಗಳ ತಯಾರಿಕೆಗಳನ್ನು ಕೃತಕ ಗೊಬ್ಬರ ಉದ್ಯಮವೆಂದು ಪರಿಗಣಿಸಲಾಗುವುದಿಲ್ಲವಾದ್ದರಿಂದ ಅವನ್ನು ಇಲ್ಲಿ ಪರಿಶೀಲಿಸಿಲ್ಲ. ಸಾರಜನಕ, ರಂಜಕ, ಪೊಟಾಸಿಯಂಗಳನ್ನು ಪೂರೈಸುವ ಮುಖ್ಯ ಲವಣಗಳ ಕೈಗಾರಿಕೆಗಳನ್ನು ಇಲ್ಲಿ ವಿವರಿಸಲಾಗಿದೆ.

ಸಾರಜನಕ ಗೊಬ್ಬರಗಳಾದ ಯೂರಿಯ, ಅಮೋನಿಯಂ ನೈಟ್ರೇಟ್, ಅಮೋನಿಯಂ ಸಲ್ಫೇಟ್ ಮತ್ತು ಅಮೋನಿಯಂ ಫಾಸ್ಫೇಟ್‌ಗಳಲ್ಲದರ ತಯಾರಿಕೆಗೂ ಅಗತ್ಯವಾದದ್ದು ಅಮೋನಿಯಂ ಸಲ್ಫೇಟ್ ಮತ್ತು ಪೊಟಾಸಿಯಂ ಸಲ್ಫೇಟ್‌ಗಳ ತಯಾರಿಕೆಗೆ ಸಲ್ಫ್ಯೂರಿಕ್ ಆಮ್ಲ ಅಗತ್ಯ. ಹಾಗೆಯೇ ಫಾಸ್ಫಾರಿಕ್ ಆಮ್ಲವೂ ಒಂದು ಆವಶ್ಯಕ ರಾಸಾಯನಿಕ.

**ಸಾರಜನಕ ಗೊಬ್ಬರಗಳು :** ಅಮೋನಿಯಂ ಸಲ್ಫೇಟ್ [$(NH_2)SO_4$)]. ಕಲ್ಲಿದ್ದಲಿನ ಬಟ್ಟಿಯಿಳಿಸುವಿಕೆಯ ಉದ್ಯಮದಲ್ಲಿ ಸಹೋತ್ಪನ್ನವಾದ ಅಮೋನಿಯವನ್ನು ಇತರ ಅನಿಲಗಳಿಂದ ಬೇರ್ಪಡಿಸಲು ಅನಿಲ ಮಿಶ್ರಣವನ್ನು ಸಲ್ಫ್ಯೂರಿಕ್ ಆಮ್ಲದ ಶೇ. 10 ದ್ರಾವಣದಲ್ಲಿ ಹಾಯಿಸಲಾಗುತ್ತದೆ. ಆಗ ಅಮೋನಿಯಂ ಸಲ್ಫೇಟ್ ಲವಣದ ಉತ್ಪನ್ನ ಇಲ್ಲಿ ತೋರಿಸಿರುವ ಸಮೀಕರಣಕ್ಕೆ ಅನುಗುಣವಾಗಿ ಆಗುತ್ತದೆ.

$$2NH_3 + H_2SO_4 \rightarrow (NH_4)_2SO_4$$

ಹರಳುಗಳಾಗಿ ಬೇರ್ಪಡುವ ಲವಣವನ್ನು ಅನಂತರ ದ್ರಾವಣದಿಂದ ಬೇರ್ಪಡಿಸಲಾಗುತ್ತದೆ. ಮತ್ತೊಂದು ಹೆಚ್ಚು ಬಳಕೆಯಲ್ಲಿರುವ ವಿಧಾನದಲ್ಲಿ ಕಲ್ಲಿದ್ದಲಿನ ಉದ್ಯಮದಿಂದ ಪಡೆದ ಅಮೋನಿಯಂ ಕಾರ್ಬೊನೇಟ್ ಲವಣದ ದ್ರಾವಣವನ್ನು ಜಿಪ್ಸಂ (ಕ್ಯಾಲ್ಸಿಯಂ ಸಲ್ಫೇಟ್) ಅದುರಿನೊಡನೆ ವರ್ತಿಸುವಂತೆ ಮಾಡಿದಾಗ ಅಮೋನಿಯಂ ಸಲ್ಫೇಟ್ ದೊರೆಯುತ್ತದೆ.

$$(NH_4)_2CO_3 + CaSO_4.2H_2O \rightarrow CaCO_3 + 2H_2O + (NH_4)_2SO_4$$

ಸಿಂಧ್ರಿಯಲ್ಲಿರುವ ರಾಸಾಯನಿಕ ಗೊಬ್ಬರ ಕಾರ್ಖಾನೆಯಲ್ಲಿ ಈ ವಿಧಾನವನ್ನು ಬಳಸಲಾಗುತ್ತಿದೆ.

ಅಮೋನಿಯಂ ನೈಟ್ರೇಟ್ ($NH_4NO_3$): ನೈಟ್ರಿಕ್ ಆಮ್ಲದೊಡನೆ ಅಮೋನಿಯ ವರ್ತಿಸಿದಾಗ ಕೆಳಗೆ ತೋರಿಸಿರುವಂತೆ ನೈಟ್ರೇಟ್ ದೊರೆಯುತ್ತದೆ.

$$NH_3 + HNO_3 \rightarrow NH_4NO_3$$

ಉಷ್ಣ ಹೀರುವ ಈ ಕ್ರಿಯೆಗೆ ಉಷ್ಣದ ಪೂರೈಕೆ ಅಗತ್ಯ. ಬಹು ಬಳಕೆಯಲ್ಲಿರುವ ಸ್ಟೆಂಗೆಲ್ ವಿಧಾನದಲ್ಲಿ ಬಿಸಿ ಅಮೋನಿಯ ಮತ್ತು ಬಿಸಿ ನೈಟ್ರಿಕ್ ಆಮ್ಲಗಳೆರಡೂ ಕ್ರಿಯಾಪಾತ್ರೆಯೊಂದಲ್ಲಿ ಬೆರೆತಾಗ ಉತ್ಪತ್ತಿಯಾಗುವ ನೀರು ಆವಿಯಾಗಿ ಹೊರ ಹೋಗುತ್ತದೆ. ಉಷ್ಣದಿಂದ ಕರಗಿ ದ್ರವರೂಪದಲ್ಲಿರುವ ಅಮೋನಿಯಂ ನೈಟ್ರೇಟ್ ಮತ್ತೊಂದು ಕೊಳವೆಯಾಕಾರದ ಪಾತ್ರೆಯೊಳಕ್ಕೆ ಮೇಲಿನಿಂದ ಬೀಳುವಾಗ ಕೆಳಗಿನಿಂದ ತಂಗಾಳಿಯನ್ನು ಹಾಯಿಸುವುದರಿಂದ ಅಮೋನಿಯಂ ನೈಟ್ರೇಟ್ ಘನೀಕರಿಸಿ ಹರಳು ಹರಳುಗಳಾಗಿ ಕೆಳಕ್ಕೆ ಬೀಳುತ್ತವೆ. ಈ ಹರಳುಗಳನ್ನು ಜರಡಿ ಹಿಡಿದು ಸಮಗಾತ್ರದವುಗಳನ್ನು ಬೇರ್ಪಡಿಸಿ ಅವು ಆರ್ದ್ರತೆಯನ್ನು ಆಕರ್ಷಿಸದಂತೆ ಆರ್ದ್ರತಾವಿಕರ್ಷಕವೊಂದರ ಹೊದಿಕೆಯನ್ನು ನೀಡಲಾಗುತ್ತದೆ. ದೊಡ್ಡ ಹರಳುಗಳನ್ನು ಪುನಃ ಸಂಸ್ಕರಿಸಲಾಗುತ್ತದೆ.

**ಯೂರಿಯ ($NH_2CONH_2$) :** ಪ್ರತಿವರ್ಷವೂ ಭಾರತದಲ್ಲಿ ಸುಮಾರು ಇಪ್ಪತ್ತು ಲಕ್ಷಟನ್ ಪರಿಮಾಣದಲ್ಲಿ ಬಳಸಲಾಗುತ್ತಿರುವ ಈ ಗೊಬ್ಬರ ಸಾರಜನಕ ಗೊಬ್ಬರಗಳಲ್ಲಿ ಬಹು ಮುಖ್ಯವಾದದ್ದು. ಅಮೋನಿಯ ಮತ್ತು ಇಂಗಾಲದ ಡೈ ಆಕ್ಸೈಡ್‌ಗಳಿಂದ ತಯಾರಾಗುವ ರಾಸಾಯನಿಕದ ಉತ್ಪಾದನೆಯಲ್ಲಿ ನಡೆಯುವ ಕ್ರಿಯೆಗಳನ್ನು ಮುಂದಿನ ಸಮೀಕರಣಗಳಲ್ಲಿ ತೋರಿಸಲಾಗಿದೆ.

$$CO_2 + 2NH_3 \rightleftharpoons NH_4COONH_2$$

ಅಮೋನಿಯಂ ಕಾರ್ಬಮೇಟ್

$$NH_4COONH_2 \rightleftharpoons NH_2CONH_2 + H_2O$$

ಮೊದಲ ಕ್ರಿಯೆಯನ್ನು ಸಂಪೂರ್ಣವಾಗಿ ಸಾಧಿಸಬಹುದಾದರೂ ಎರಡನೆಯ ಕ್ರಿಯೆಯಲ್ಲಿ ಶೇ. 40–60 ಅಮೋನಿಯಂ ಕಾರ್ಬಮೇಟ್ ಮಾತ್ರ ಯೂರಿಯವಾಗಿ ಪರಿವರ್ತನೆಯಾಗುತ್ತದೆ. ಪರಿವರ್ತನೆಗೊಳ್ಳದೆ ಉಳಿದ ಕಾರ್ಬಮೇಟನ್ನು ಪುನಃ ವಿಭಜಿಸಿ ವಿಭಜನೆಗೆ ಒಳಗು ಮಾಡಬೇಕಾಗುತ್ತದೆ.

ದ್ರವರೂಪದಲ್ಲಿರುವ ಅಮೋನಿಯ (3.5 ಅಣುಪ್ರಮಾಣ–ಮೋಲಾರ್ ರೇಷಿಯೋ) ಮತ್ತು ಇಂಗಾಲದ ಡೈಆಕ್ಸೈಡ್‌ಗಳ (1.0 ಅಣುಪ್ರಮಾಣ) ಮಿಶ್ರಣವನ್ನು ಸುಮಾರು 200$^{\circ}$ಸೆಂ. ಉಷ್ಣತೆಯಲ್ಲಿ ಮತ್ತು 3200 ಪೌಂ./ಚ. ಇಂಚ್‌ನಲ್ಲಿ (ಪಿ.ಎಸ್.ಐ ಒತ್ತಡದಲ್ಲಿ ಸ್ಟೇನ್‌ಲೆಸ್ ಸ್ಟೀಲ್ ಒತ್ತಡ ಕ್ರಿಯಾಪಾತ್ರೆಯೊಂದಕ್ಕೆ ತುಂಬಲಾಗುತ್ತದೆ. ಕ್ರಿಯೆಗೆ ಸ್ವಲ್ಪವಾದರೂ ನೀರಿನ ಆವಶ್ಯಕತೆ ಇರುವುದರಿಂದ ಅಪರಿವರ್ತಿತ ಕಾರ್ಬಮೇಟ್ ದ್ರಾವಣವನ್ನೂ ಸೇರಿಸಿ ಒಟ್ಟು ಮಿಶ್ರಣವನ್ನು ಕ್ರಿಯೆಗೆ ಒಳಗು ಮಾಡಲಾಗುತ್ತದೆ. ಈ ಮೊದಲ ಮಟ್ಟದಲ್ಲಿ ಇಂಗಾಲದ ಡೈ ಆಕ್ಸೈಡ್ ಶೇ. 60 ರಷ್ಟು ಯೂರಿಯವಾಗಿ ಪರಿವರ್ತಿತವಾಗುತ್ತದೆ. ದ್ರವರೂಪದಲ್ಲಿರುವ ಮಿಶ್ರಣವನ್ನು ಕ್ರಿಯಾಪಾತ್ರೆಯಿಂದ ಮೊದಲನೆಯ ವಿಭಾಜಕಕ್ಕೆ (ಡೀಕಂಪೋಸರ್) ಸಾಗಿಸಲಾಗುತ್ತದೆ. ಇಲ್ಲಿ 300 ಪಿ.ಎಸ್.ಐ




ಚಿತ್ರ 1 ಯೂರಿಯ ತಯಾರಿಕೆಯ ಸ್ಥೂಲ ಚಿತ್ರಣ : 1 ದ್ರವ ಅಮೋನಿಯ ಸಂಚಯ ಪಾತ್ರೆ, 2 ಇಂಗಾಲದ ಡೈ ಆಕ್ಸೈಡ್ ಸಂಚಯ ಪಾತ್ರೆ, 3 ಒತ್ತಡ ಕ್ರಿಯಾಪಾತ್ರೆ, 4 ಮೊದಲ ವಿಭಾಜಕ, 5 ಮೊದಲ ಪರಿವರ್ತಕ, 6 ಎರಡನೆಯ ವಿಭಾಜಕ, 7 ಎರಡನೆಯ ಪರಿವರ್ತಕ ಪರಿವರ್ತಕ

ಒತ್ತಡದಲ್ಲಿ ಆವಿಯ ಬಿಸಿಯಿಂದ ಕಾರ್ಬಮೇಟ್ ಬಹುಮಟ್ಟಿಗೆ ಯೂರಿಯವಾಗಿ ಪರಿವರ್ತಿತವಾಗುತ್ತದೆ. ಪರಿವರ್ತನೆಗೊಳ್ಳದೆ ಉಳಿದುದರಲ್ಲಿ ಬಹುಪಾಲು ಇಂಗಾಲದ ಡೈ ಆಕ್ಸೈಡ್ ಮತ್ತು ಅಮೋನಿಯವಾಗಿ ವಿಭಜನೆಗೊಳ್ಳುತ್ತದೆ. ಈ ಅನಿಲಗಳನ್ನು ಹೊರತೆಗೆದು ಪುನಃ ಉಪಯೋಗಿಸಲಾಗುತ್ತದೆ. ಮೊದಲ ವಿಭಾಜಕದಿಂದ ಯೂರಿಯ ದ್ರಾವಣ ಎರಡನೆಯ ವಿಭಾಜಕಕ್ಕೆ ಹರಿಯುತ್ತದೆ. ಇಲ್ಲಿ ದ್ರಾವಣದಲ್ಲಿ ಕರಗಿ ಉಳಿದಿರುವ ಅಮೋನಿಯ ಮತ್ತು ಇಂಗಾಲದ ಡೈಆಕ್ಸೈಡ್‌ಗಳು ಹೊರಬೀಳುತ್ತವೆ. ದ್ರಾವಣದಿಂದ ಅನಿಲಗಳನ್ನು ಬೇರ್ಪಡಿಸಲು ಬಿಸಿ ಆವಿಯನ್ನು ದ್ರಾವಣದ ಮೂಲಕ ಹಾಯಿಸಲಾಗುತ್ತದೆ. ಹೊರಬಂದ ಅನಿಲಗಳನ್ನು ಬೇರ್ಪಡಿಸಿ ಪುನಃ ಅಮೋನಿಯ ಕಾರ್ಬಮೇಟ್ ಆಗಿ ಪರಿವರ್ತಿಸಿ ಉಪಯೋಗಿಸ ಲಾಗುತ್ತದೆ. ಕೊನೆಯ ಹಂತದಲ್ಲಿ ಯೂರಿಯ ದ್ರಾವಣದಿಂದ ಯೂರಿಯ ಹರಳುಗಳನ್ನು ಹೊರತೆಗೆದು ಯುಕ್ತ ರೀತಿಯಲ್ಲಿ ದಾಸ್ತಾನಿಗೆ ಕೊಂಡೊಯ್ಯಲಾಗುತ್ತದೆ.

**ಸೋಡಿಯಂ ನೈಟ್ರೇಟ್ ($NaNO_3$ ) :** ಸೋಡಿಯಂ ಕಾರ್ಬೊನೇಟ್ ಅಥವಾ ಸೋಡಿಯಂ ಕ್ಲೋರೈಡ್ ಅನ್ನು ನೈಟ್ರಿಕ್ ಆಮ್ಲದೊಡನೆ ವರ್ತಿಸುವಂತೆ ಮಾಡಿದಾಗ ಸೋಡಿಯಂ ನೈಟ್ರೇಟ್ ದೊರೆಯುತ್ತದೆ.

$$NaCl + HNO_3 \rightarrow NaNO_3 + HC$$

$$Na_2CO_3 + 2HNO_3 \rightarrow NaNO_3 + H_2O + CO_2$$

ಚಿಲಿಯಲ್ಲಿ ಸೋಡಿಯಂ ನೈಟ್ರೇಟ್ ಅಧಿಕ ಪರಿಮಾಣದಲ್ಲಿ ಖನಿಜವಾಗಿ ದೊರೆಯುತ್ತದೆ.

**ಪೊಟಾಷಿಯಂ ನೈಟ್ರೇಟ್ ($KNO_3$) :** ಸೋಡಿಯಂ ನೈಟ್ರೇಟ್ ಮತ್ತು ಪೊಟಾಷಿಯಂ ಕ್ಲೋರೈಡುಗಳ ಪರಸ್ಪರ ವರ್ತನೆಯಿಂದ ಪೊಟಾಷಿಯಂ ನೈಟ್ರೇಟ್ ದೊರೆಯುತ್ತದೆ.

$$KCl + NaNO_3 \rightarrow NaCl + KNO_3$$

ತಯಾರಿಕೆಯ ವಿಧಾನದಲ್ಲಿ ಬಿಸಿ ಸೋಡಿಯಂ ನೈಟ್ರೇಟಿನ ಬಲಯುಕ್ತ ದ್ರಾವಣಕ್ಕೆ ಪೊಟಾಷಿಯಂ ಕ್ಲೋರೈಡನ್ನು ಸೇರಿಸಲಾಗುತ್ತದೆ. ಕ್ರಿಯಾಪಾತ್ರೆಯಲ್ಲಿ ಈ ಮಿಶ್ರಣವನ್ನು ಕಾಯಿಸಿದಾಗ ಸೋಡಿಯಂ ಕ್ಲೋರೈಡ್ ಹರಳುಗಳು ಬೇರ್ಪಟ್ಟು ಪೊಟಾಷಿಯಂ ನೈಟ್ರೇಟ್ ದ್ರಾವಣದಲ್ಲಿ ಉಳಿಯುತ್ತದೆ. ಸೋಡಿಯಂ ಕ್ಲೋರೈಡ್ ಹರಳುಗಳನ್ನು ಬೇರ್ಪಡಿಸಿದ ಬಳಿಕ ದ್ರಾವಣವನ್ನು ಶೈತ್ಯಕ್ಕೆ ಒಳಗುಮಾಡಿದಾಗ ಪೊಟಾಷಿಯಂ ನೈಟ್ರೇಟ್ ಹರಳುಗಳು ಹೊರಬೀಳುತ್ತವೆ. ಎರಡನೆಯ ವಿಧಾನದಲ್ಲಿ ಪೊಟಾಸಿಯಂ ಕ್ಲೋರೈಡನ್ನು

ನೈಟ್ರಿಕ್ ಆಮ್ಲದೊಡನೆ ವರ್ತಿಸುವಂತೆ ಮಾಡಿದಾಗ ಮುಂದೆ ತೋರಿಸಿದ ಕ್ರಿಯೆಗಳಿಗನುಗುಣವಾಗಿ ಪೊಟಾಸಿಯಂ ನೈಟ್ರೇಟ್ ದೊರೆಯುತ್ತದೆ. ಈ ವಿಧಾನದಲ್ಲಿ ಕ್ಲೋರಿನ್ ಒಂದು ಮುಖ್ಯ ಸಹೋತ್ಪನ್ನ.

$$3KCl + 4HNO_3 \rightarrow 3KNO_3 + NOCl + Cl_2 + H_2O$$

$$NOCl + 2HNO_3 \rightarrow 3NO_2 + \frac{1}{2} Cl_2 + H_2O$$

$$2NO_2 + H_2O + \frac{1}{2} O_2 \rightarrow 2HNO_3$$

ಭಾರತದ ಅನೇಕ ಕಡೆಗಳಲ್ಲಿ ಪೊಟಾಸಿಯಂ ನೈಟ್ರೇಟ್ ಸಹಜರೂಪದಲ್ಲಿ ಖನಿಜವಾಗಿ ದೊರೆಯುತ್ತದೆ. ಅದನ್ನು ಶುದ್ಧೀಕರಿಸಿ ಅಥವಾ ನೇರವಾಗಿ ಉಪಯೋಗಿಸಲಾಗುತ್ತದೆ.

**ಪೊಟಾಸಿಯಂ ಗೊಬ್ಬರಗಳು :** ಕ್ಲೋರೈಡ್ ಅಂಶ ಹೆಚ್ಚಿರುವ ಉಪ್ಪು ಭೂಮಿ ಅಥವಾ ಚೌಳು ಭೂಮಿಗಳಲ್ಲಿ ಪೊಟಾಸಿಯಂ ಕ್ಲೋರೈಡನ್ನು ಉಪಯೋಗಿಸುವುದು ಯುಕ್ತವಲ್ಲ. ಆ ಬಗೆಯ ಭೂಮಿಯಲ್ಲಿ ಪೊಟಾಸಿಯಂ ಸಲ್ಫೇಟ್ ಅಥವಾ ಪೊಟಾಸಿಯಂ ನೈಟ್ರೇಟನ್ನು ಬಳಸಲಾಗುತ್ತದೆ. ಪೊಟಾಸಿಯಂ ಲವಣಗಳಿಗೆ ಮುಖ್ಯ ಆಕರಗಳು ಸಿಲ್ವಿನೈಟ್ ಮತ್ತು ಲಾಂಗ್ ಬೆನೈಟ್ ಎಂಬ ಅದುರುಗಳು. ಸೋಡಿಯಂ ಮತ್ತು ಪೊಟಾಸಿಯಂ ಕ್ಲೋರೈಡುಗಳ ಮಿಶ್ರಣವಾದ ಸಿಲ್ವಿನೈಟ್‌ನಿಂದ ಶುದ್ಧ ಪೊಟಾಸಿಯಂ ಕ್ಲೋರೈಡನ್ನು ಬೇರ್ಪಡಿಸಲಾಗುತ್ತದೆ. ಲಾಂಗ್ ಬೆನೈಟ್ ನಿಂದ ಪೊಟಾಸಿಯಂ ಸಲ್ಫೇಟ್ ದೊರೆಯುತ್ತದೆ.

**ಪೊಟಾಸಿಯಂ ಕ್ಲೋರೈಡ್ (KCl) :** ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ಟ್ರೋನಾ, ಯೂಟಾಪ್ರಾಂತ್ಯದಲ್ಲಿರುವ ಸಾಲ್ಟುರೋ ಮೊದಲಾದ ಸರೋವರಗಳಲ್ಲಿ ಸಾಕಷ್ಟು ಪೊಟಾಸಿಯಂ ಅಂಶವಿದೆ. 100ಕ್ಕೆ 3 ರಿಂದ 5 ಅಂಶ ಪೊಟಾಸಿಯಂ ಕ್ಲೋರೈಡ್ ಇರುವ ಈ ಸರಸ್ಸುಗಳ ನೀರಿನಿಂದ ಈ ಲವಣಗಳನ್ನು ವಿವಿಧ ಹಂತಗಳಲ್ಲಿ ಆಂಶಿಕ ಸ್ಫಟಿಕೀಕರಣಕ್ಕೆ (ಫ್ರಾಕ್ಷನಲ್ ಕ್ರಿಸ್ಟಲೈಸೇಷನ್) ಒಳಗು ಮಾಡಿದಾಗ ಪೊಟಾಸಿಯಂ ಕ್ಲೋರೈಡ್ ಮಾತ್ರವಲ್ಲದೆ ಸೋಡಿಯಂ ಕ್ಲೋರೈಡ್, ಸೋಡಿಯಂ ಕಾರ್ಬೋನೇಟ್, ಸೋಡಿಯಂ ಸಲ್ಫೇಟ್, ಬೊರಾಕ್ಸ್, ಸೋಡಿಯಂ ಬ್ರೋಮೈಡ್, ಸೋಡಿಯಂ ಫಾಸ್ಫೇಟ್ ಮತ್ತು ಲಿಥಿಯಂ ಲವಣಗಳು ದೊರೆಯುತ್ತವೆ. ಸಿಲ್ವಿನೈಟ್ ಅದುರಿನಿಂದ ಪೊಟಾಸಿಯಂ ಕ್ಲೋರೈಡನ್ನು ಪಡೆಯಲು ಬಹುಮಟ್ಟಿಗೆ ಆಂಶಿಕ ಸ್ಫಟಿಕೀಕರಣ ವಿಧಾನವನ್ನು ಉಪಯೋಗಿಸಲಾಗುತ್ತದೆ. ಹಲವು ವಿಧಾನಗಳಲ್ಲಿ ಪೊಟಾಸಿಯಂ ಕ್ಲೋರೈಡ್, ಮತ್ತು ಸೋಡಿಯಂ ಕ್ಲೋರೈಡ್ ಗಳ ಸಾಂದ್ರತೆಗಳಲ್ಲಿ ಇರುವ ವ್ಯತ್ಯಾಸವನ್ನು ಉಪಯೋಗಿಸಲಾಗುತ್ತದೆ. ಸಾಗರದ ನೀರಿನಿಂದ ಉಪ್ಪನ್ನು ಸ್ಫಟಿಕೀಕರಿಸಿ ತೆಗೆದ ಮೇಲೆ ಉಳಿಯುವ ಕಟುನೀರಿನಲ್ಲಿ ಪೊಟಾಸಿಯಂ ಕ್ಲೋರೈಡ್ ಅಂಶ ಸಾಕಷ್ಟಿರುತ್ತದೆ. ಒಂದು ಲಕ್ಷ ಟನ್ನಿಗೂ ಹೆಚ್ಚು ಪೊಟಾಸಿಯಂ ಕ್ಲೋರೈಡ್‌ನ್ನು ಈ ವಿಧಾನದಿಂದ ಭಾರತದಲ್ಲಿ ಧ್ರಂಗಾಧ್ರ, ಕಾರಾಘೋಡ ಮತ್ತು ಸಾಂಭಾರ್ ಗಳಲ್ಲಿರುವ ಉಪ್ಪಿನ ಕಾರ್ಖಾನೆಗಳಲ್ಲಿ ತಯಾರಿಸಲಾಗುತ್ತಿದೆ. ಕಟು ನೀರಿನಿಂದ ಪೊಟಾಸಿಯಂ ಕ್ಲೋರೈಡ್ ಉತ್ಪಾದನೆಯಲ್ಲಿ ಬ್ರೋಮಿನ್ ಮತ್ತು ಮೆಗ್ನೀಷಿಯಂ ಸಲ್ಫೇಟುಗಳು ಸಹೋತ್ಪನ್ನಗಳಾಗಿ ದೊರೆಯುತ್ತವೆ.

**ಪೊಟಾಷಿಯಂ ಸಲ್ಫೇಟ್ ($K_2SO_4$) :** ಲಾಂಗ್ ಬೆನೈಟ್ ಅದುರಿನ ಶುದ್ಧೀಕರಣದಿಂದ ಉತ್ತಮ ಪೊಟಾಸಿಯಂ ಸಲ್ಫೇಟನ್ನು ತಯಾರಿಸಬಹುದು. ಆದರೆ ಈ ಅದುರು ಹೇರಳವಾಗಿ ದೊರೆಯುವುದಿಲ್ಲ; ಹಾಗೂ ಗೊಬ್ಬರವಾಗಿ ಉಪಯೋಗಿಸಲು ಶುದ್ಧೀಕರಣದ ಅಗತ್ಯವಿಲ್ಲವಾದ್ದರಿಂದ ಸಾಕಷ್ಟು ಅದುರನ್ನು ಹಾಗೆಯೇ ಉಪಯೋಗಿಸಲಾಗುತ್ತಿದೆ. ಎರಡನೆಯ ವಿಧಾನದಲ್ಲಿ ಸೋಡಿಯಂ ಕಾರ್ಬೋನೇಟ್, ಸೋಡಿಯಂ ಸಲ್ಫೇಟ್ ಗಳನ್ನುಳ್ಳ ಬರ್ಕೈಟ್ ಎಂಬ ಅದುರನ್ನು ಪೊಟಾಸಿಯಂ ಕ್ಲೋರೈಡಿನೊಡನೆ ವರ್ತಿಸುವಂತೆ ಮಾಡಿದಾಗ ಪೊಟಾಸಿಯಂ ಸಲ್ಫೇಟ್ ದೊರೆಯುತ್ತದೆ.

$$2Na_2SO_4 . Na_2CO_3 + 4KCl \rightarrow 2K_2SO_4 + 4NaCl + Na_2CO_3$$

ಮೂರನೆಯ ಮತ್ತು ಅತಿ ಮುಖ್ಯ ವಿಧಾನದಲ್ಲಿ ಪೊಟಾಸಿಯಂ ಕ್ಲೋರೈಡ್ ನ ಮೇಲೂ ಸಲ್ಫ್ಯೂರಿಕ್ ಆಮ್ಲದ ವರ್ತನೆಯಿಂದ ಪೊಟಾಸಿಯಂ ಸಲ್ಫೇಟ್ ಉತ್ಪಾದನೆಯಾಗುತ್ತದೆ. ಇದನ್ನು ಸಾಲ್ಟ್ ಲೇಕ್ ವಿಧಾನವೆಂದು ಕರೆಯಲಾಗುತ್ತದೆ.

$$2KCl + H_2SO_4 \rightarrow K_2SO_4 + 2HCl$$

**ರಂಜಕ ಗೊಬ್ಬರಗಳು :** ರಂಜಕ ಮತ್ತು ಅದರ ಸಂಯುಕ್ತಗಳಿಗೆ ಮುಖ್ಯ ಆಕರ ಫಾಸ್ಫೇಟ್ ಬಂಡೆ ಎಂಬ ಅದುರು. ಎರಡನೆಯ ಆಕರ ಪ್ರಾಣಿಗಳ ಮೂಳೆಗಳು. ಹಲವು ಎಡೆಗಳಲ್ಲಿ ಫಾಸ್ಫೇಟ್ ಬಂಡೆ ಅಥವಾ ಮೂಳೆಗಳ ಪುಡಿಗಳನ್ನು ನೇರವಾಗಿ ಗೊಬ್ಬರವಾಗಿ ಉಪಯೋಗಿಸಿದರೂ ಬಹುಮಟ್ಟಿಗೆ ಅವನ್ನು ವಿವಿಧ ದರ್ಜೆಯ ಸೂಪರ್ ಫಾಸ್ಫೇಟುಗಳಾಗಿ ಅಥವಾ ಅಮೋನಿಯಂ ಫಾಸ್ಫೇಟುಗಳಾಗಿ ಪರಿವರ್ತಿಸಿ ಉಪಯೋಗಿಸಲಾಗುತ್ತದೆ.

**ಸೂಪರ್ ಫಾಸ್ಫೇಟುಗಳು :** ಫಾಸ್ಫೇಟ್ ಬಂಡೆ ಅದುರನ್ನು ಸಲ್ಫ್ಯೂರಿಕ್ ಅಥವಾ ಇತರ ಯುಕ್ತ ಆಮ್ಲಗಳೊಡನೆ ವರ್ತಿಸುವಂತೆ ಮಾಡಿದಾಗ ಹಲವಾರು ಪರಿವರ್ತನೆಗಳು ನಡೆದು ನೀರಿನಲ್ಲಿ ಕರಗಬಲ್ಲ ಫಾಸ್ಫೇಟ್ ಲವಣಗಳು ಉತ್ಪತ್ತಿಯಾಗುತ್ತವೆ–ಬಂಡೆಯಲ್ಲಿರುವ ಕ್ಯಾಲ್ಸಿಯಂ ಫ್ಲೂರೈಡ್, ಅಲ್ಯೂಮಿನಾ ಮತ್ತು ಕಬ್ಬಿಣದ ಆಕ್ಸೈಡುಗಳು ಬೇರ್ಪಡುತ್ತವೆ ಮತ್ತು ಕ್ಯಾಲ್ಸಿಯಂ ಫಾಸ್ಫೇಟ್ ಮಾನೋ ಕ್ಯಾಲ್ಸಿಯಂ ಫಾಸ್ಫೇಟ್ ಆಗಿ ಮಾರ್ಪಾಡಾಗುತ್ತವೆ. ಪ್ರಕೃತಿಯಲ್ಲಿ ದೊರೆಯುವ ಫಾಸ್ಫೇಟ್ ಬಂಡೆಗಳು ಎಲ್ಲಾ ಕಡೆಗಳಲ್ಲೂ ಒಂದೇ ದರ್ಜೆಯವಲ್ಲ. ಆದ್ದರಿಂದ ಅವುಗಳ ಪರಿಷ್ಕರಣ ವಿಧಾನಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿರುವುದು ಅನಿವಾರ್ಯ. ಮೊದಲು ಅದುರುಗಳನ್ನು ಕಲ್ಮಶಪ್ಲವನ ವಿಧಾನದಿಂದ ಉತ್ತಮಗೊಳಿಸಲಾಗುತ್ತದೆ. ನಾರ್ಮಲ್ ಸೂಪರ್ ಫಾಸ್ಫೇಟ್‌ನ ತಯಾರಿಕೆಯಲ್ಲಿ ಉತ್ತಮಗೊಳಿಸಿದ ಅದುರನ್ನು ಮೊದಲು ಪುಡಿ ಮಾಡಿ ನಿಗದಿಗೊಳಿಸಿ ಅಳತೆಮಾಡಿದ ಸಲ್ಫ್ಯೂರಿಕ್ ಆಮ್ಲದೊಡನೆ ಬೆರೆಸಲಾಗುತ್ತದೆ. ತರುವಾಯ ಅವಶ್ಯಕವಿದ್ದಷ್ಟು ನೀರನ್ನು ಬೆರೆಸಿದಾಗ ಉಷ್ಣೋತ್ಪತ್ತಿಯಾಗಿ ಉಷ್ಣತೆ ಹೆಚ್ಚುತ್ತದೆ. ಸೇರಿಸುವ ನೀರಿನ ಪರಿಮಾಣ ಮತ್ತು ಸೇರ್ಪಡೆಯ ವೇಗಗಳನ್ನು ನಿಯಂತ್ರಿಸುವುದರಿಂದ ಬೇಕಾದ ಉಷ್ಣತೆಯನ್ನು ಪಡೆಯಬಹುದು. ಈ ಬಿಸಿ ಮಿಶ್ರಣವನ್ನು ಮಿಶ್ರಕವೊಂದರಲ್ಲಿ ಸಮವಾಗಿ ಬೆರೆಸಿದ ಅನಂತರ ಹದವಾಗಿ ಕಲಸುವ ಪಗ್‌ಮಿಲ್ ಎಂಬ ಉಪಕರಣವೊಂದರಲ್ಲಿ ಹಲವು ಸಮಯ ಇಟ್ಟಿದ್ದು ಅನಂತರ ಮುದ್ದೆಮುದ್ದೆಯಾಗಿರುವ ಕ್ರಿಯಾ ಮಿಶ್ರಣವನ್ನು ನಿಧಾನವಾಗಿ ಚಲಿಸುವ ಸಾಗುಪಟ್ಟಿ (ಕನ್ವೇಯರ್) ಒಂದರ ಮೇಲೆ ಡೆನ್ ಎಂಬ ದಾಸ್ತಾನು ವಿಭಾಗಕ್ಕೆ ಕೊಂಡೊಯ್ಯಲಾಗುತ್ತದೆ. ರಾಸಾಯನಿಕಕ್ರಿಯೆ ಪೂರ್ಣಗೊಂಡು $P_2O_5$ (ಫಾಸ್ಫರಸ್ ಪೆಂಟಾಕ್ಸೈಡ್) ಅಂಶ ಆವಶ್ಯಕ ಮಟ್ಟವನ್ನು ಶೇ. 10–20 ತಲಪಲು ಬೇಕಾಗುವ ಸುಮಾರು ಹದಿನೈದು ದಿವಸಗಳ ಕಾಲ ದಾಸ್ತಾನಿನಲ್ಲಿಟ್ಟ ಬಳಿಕ ಸೂಪರ್ ಫಾಸ್ಫೇಟನ್ನು ಪುಡಿಮಾಡಿ ಚೀಲಗಳಿಗೆ ತುಂಬಲಾಗುತ್ತದೆ. ಸೂಪರ್




ಚಿತ್ರ 2 ಸೂಪರ್ ಫಾಸ್ಫೇಟ್ ತಯಾರಿಕೆಯ ಸ್ಥೂಲ ಚಿತ್ರಣ

ಫಾಸ್ಫೇಟಿನ ಮೇಲೆ ಅಮೋನಿಯ ಅಥವಾ ಯೂರಿಯದ ದ್ರಾವಣವನ್ನು ಯುಕ್ತ ಪರಿಮಾಣದಲ್ಲಿ ಸಿಂಪಡಿಸಿ ಒಣಗಿಸಿ ತರುವಾಯ ಉಂಡೆ ಅಥವಾ ಪುಡಿಮಾಡಿದರೆ ಸಾರಜನಕ, ರಂಜಕಗಳೆರಡೂ ಇರುವ ಉತ್ತಮ ಗೊಬ್ಬರ ದೊರೆಯುತ್ತದೆ.

ಸಲ್ಫ್ಯೂರಿಕ್ ಆಮ್ಲಕ್ಕೆ ಬದಲಾಗಿ ನೈಟ್ರಿಕ್ ಆಮ್ಲ ಅಥವಾ ನೈಟ್ರಿಕ್–ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣವನ್ನಾಗಲೀ ನೈಟ್ರಿಕ್–ಫಾಸ್ಫಾರಿಕ್ ಆಮ್ಲಗಳ ಮಿಶ್ರಣವನ್ನಾಗಲಿ ಉಪಯೋಗಿಸಬಹುದು. ಈ ಬಗೆಯ ತಯಾರಿಕೆಯ ಉತ್ಪನ್ನ ಸಾರಜನಕ ಇರುವ ಲವಣಗಳನ್ನೂ ಉಳ್ಳದ್ದರಿಂದ ಮೊದಲ ವಿಧಾನದ ಉತ್ಪನ್ನಕ್ಕಿಂತ ಶ್ರೇಷ್ಠ ತರಗತಿಯದು. ಕ್ಯಾಲ್ಸಿಯಂ ನೈಟ್ರೇಟ್ ಆರ್ದ್ರತಾಕರ್ಷಕ (ಹೈಗ್ರೊಸ್ಕೋಪಿಕ್) ವಸ್ತುವಾದದ್ದರಿಂದ ಅದನ್ನು ವಾತಾವರಣದ ಜಲಾಂಶದಿಂದ ರಕ್ಷಿಸಲು ಅಮೋನಿಯ ಅನಿಲವನ್ನು ಹಾಯಿಸಲಾಗುತ್ತದೆ. ಹೆಚ್ಚಿನ ನೈಟ್ರಿಕ್ ಆಮ್ಲ ಅಮೋನಿಯಂ ನೈಟ್ರೇಟ್ ಆಗಿ ಕ್ಯಾಲ್ಸಿಯಂ ನೈಟ್ರೇಟ್‌ಗೆ ರಕ್ಷೆ ನೀಡುತ್ತದೆ. ಹೀಗೆ ದೊರೆತ ನೈಟ್ರೋಫಾಸ್ಫೇಟನ್ನು ಗುಂಡು ಹರಳುಗಳಾಗಿ ಮಾರ್ಪಡಿಸಿ ಆರ್ದ್ರತಾ ವಿಕರ್ಷಕ ಕವಚವೊಂದನ್ನು ನೀಡಲಾಗುತ್ತದೆ. ಕಡೆಯ ಹಂತದಲ್ಲಿ ಹರಳುಗಳಾಗಿ ಮಾಡುವ ಮೊದಲು ಪೊಟಾಸಿಯಂ ಲವಣವನ್ನೂ ಸೇರಿಸಬಹುದು. ಆಗ ದೊರೆಯುವ ಉತ್ಪನ್ನ ಸಾರಜನಕ, ರಂಜಕ ಮತ್ತು ಪೊಟಾಸಿಯಂ ಮೂರನ್ನೂ ಉಳ್ಳ ಸಂಕೀರ್ಣ ಗೊಬ್ಬರವಾಗುತ್ತದೆ. ಮೂಳೆಗಳಲ್ಲಿಯೂ ಬಂಡೆಗಳಲ್ಲಿದ್ದಂತೆಯೇ ಕ್ಯಾಲ್ಸಿಯಂ ಫಾಸ್ಫೇಟ್ ಇರುವುದರಿಂದ ಮೂಳೆಗಳ ಪುಡಿಯನ್ನೂ ಆಮ್ಲಗಳ ವರ್ತನೆಯಿಂದ ಸೂಪರ್ ಫಾಸ್ಫೇಟ್ ಆಗಿ ಪರಿವರ್ತಿಸಬಹುದು. $P_2O_5$ ಅಂಶ ಶೇ. 44–51 ಇರುವ ಟ್ರಿಪ್ಲ್ ಸೂಪರ್ ಫಾಸ್ಫೇಟ್ ಸಾಮಾನ್ಯ ಸೂಪರ್ ಫಾಸ್ಫೇಟಿನ ಮೂರರಷ್ಟು ರಂಜಕವನ್ನುಳ್ಳದ್ದರಿಂದ ಅದನ್ನು ಅಲ್ಪಪರಿಮಾಣದಲ್ಲಿ ಉಪಯೋಗಿಸಬಹುದು. ಈ ಗೊಬ್ಬರವನ್ನು ತಯಾರಿಸಲು ಫಾಸ್ಫೇಟ್ ಬಂಡೆಯ ಪುಡಿಯನ್ನು ಬಿಸಿಮಾಡಿದ ಶೇ. 62 ಫಾಸ್ಫಾರಿಕ್ ಆಮ್ಲದೊಡನೆ ಕ್ರಿಯಾಪಾತ್ರೆಯಲ್ಲಿ ಚೆನ್ನಾಗಿ ಬೆರೆಸಲಾಗುತ್ತದೆ. ಕ್ರಿಯಾ ಸಮಯದಲ್ಲಿಯೇ ಕ್ರಿಯಾಮಿಶ್ರಣ ಹರಳುಗಳಾಗುತ್ತದೆ. ಕ್ರಿಯಾಪಾತ್ರೆಯಿಂದ ಹೊರತೆಗೆದ ಹರಳುಗಳನ್ನು ವಾಯುಪ್ರವಾಹದಲ್ಲಿ ತಂಪುಮಾಡಿ ಹರಳುಗಳಾಗದೆ ಉಳಿದ ಪುಡಿಯನ್ನು ಜರಡಿಗಳಿಂದ ಬೇರ್ಪಡಿಸಿ ಪುನಃ ಕ್ರಿಯಾಪಾತ್ರೆಗೆ

ಕಳುಹಿಸಲಾಗುತ್ತದೆ. ಅತಿ ದಪ್ಪವಾದ ಹರಳುಗಳನ್ನು ಒಡೆದು ಸಣ್ಣ ಹರಳುಗಳನ್ನಾಗಿ ಮಾಡಲಾಗುತ್ತದೆ. ತರುವಾಯ ರಾಸಾಯನಿಕ ಕ್ರಿಯೆ ಸಂಪೂರ್ಣವಾಗಲು ಸುಮಾರು ಎರಡು ವಾರ ದಾಸ್ತಾನಿನಲ್ಲಿಟ್ಟು ಬಳಿಕ ಚೀಲಗಳಿಗೆ ತುಂಬಲಾಗುತ್ತದೆ. ಒಂದು ಟನ್ ಸಾಮಾನ್ಯ ಸೂಪರ್ ಫಾಸ್ಫೇಟ್ ತಯಾರಿಸಲು 550 ಕೆ.ಜಿ. ಪರಿಷ್ಕೃತ ಫಾಸ್ಫೇಟ್ ಬಂಡೆ ಮತ್ತು 500 ಕೆ.ಜಿ ಸಲ್ಫ್ಯೂರಿಕ್ ಆಮ್ಲ ಬೇಕು. ಒಂದು ಟನ್ ಟ್ರಿಪ್ಲ್ ಸೂಪರ್ ಫಾಸ್ಫೇಟ್ ತಯಾರಿಕೆಗೆ 400 ಕೆ. ಜಿ. ಫಾಸ್ಫೇಟ್ ಬಂಡೆ ಮತ್ತು 550 ಕೆ. ಜಿ. ಫಾಸ್ಫಾರಿಕ್ ಆಮ್ಲ ಅವಶ್ಯಕ. ಟ್ರಿಪ್ಲ್ ಸೂಪರ್ ಫಾಸ್ಫೇಟಿನ ಬೆಲೆ ಸಾಮಾನ್ಯ ಸೂಪರ್ ಫಾಸ್ಫೇಟ್‌ಟಿನದಕ್ಕಿಂತಲೂ ಹೆಚ್ಚಾಗಿದ್ದರೂ ರಂಜಕದ ಅಂಶ ಹೆಚ್ಚಾಗಿರುವುದರಿಂದ ಟ್ರಿಪಲ್ ಸೂಪರ್ ಫಾಸ್ಫೇಟ್‌ನ ಬಳಕೆಯೆ ಮಿತವ್ಯಯದ ಹಾದಿ. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಯೂರೋಪಿನ ಅನೇಕ ಪ್ರದೇಶಗಳಲ್ಲಿ ಸಾಮಾನ್ಯ ಸೂಪರ್ ಫಾಸ್ಫೇಟ್‌ನ ಬಳಕೆ ಪೂರ್ಣವಾಗಿ ನಿಂತುಹೋಗಿದೆ.

**ಅಮೋನಿಯಂ ಫಾಸ್ಫೇಟುಗಳು :** ಮಾನೋ ಅಮೋನಿಯಂ ಫಾಸ್ಫೇಟ್ [$(NH_4)H_2PO_4$] ಮತ್ತು ಡೈ ಅಮೋನಿಯಂ ಫಾಸ್ಫೇಟುಗಳನ್ನು[$(NH_4)_2HPO_4$] ಅಮೋನಿಯ ಮತ್ತು ಫಾಸ್ಫಾರಿಕ್ ಆಮ್ಲಗಳ ಪರಸ್ಪರ ವರ್ತನೆಯಿಂದ ತಯಾರಿಸಬಹುದು. ಇವು ಸಾರಜನಕ ಮತ್ತು ರಂಜಕ ಎರಡನ್ನು ಒದಗಿಸಬಲ್ಲ ಗೊಬ್ಬರಗಳು. ಇವುಗಳ ತಯಾರಿಕೆಗೆ ಬೇಕಾಗುವ ಅಮೋನಿಯ ಮತ್ತು ಫಾಸ್ಫಾರಿಕ್ ಆಮ್ಲಗಳೆರಡು ಶುದ್ಧ ರಾಸಾಯನಿಕಗಳಾದ್ದರಿಂದ ಅಮೋನಿಯಂ ಫಾಸ್ಫೇಟುಗಳ ಬೆಲೆ ಹೆಚ್ಚು. ಆದ್ದರಿಂದ ಇವುಗಳ ಬಳಕೆ ಅಷ್ಟೇನು ಹೆಚ್ಚಿಲ್ಲ.

$$NH_3 + H_3PO_4 \rightarrow (NH_4)H_2PO_4$$

$$2NH_3 + H_3PO_4 \rightarrow (NH_4)_2HPO_4$$




ಚಿತ್ರ 3 ಟ್ರಿಪ್ಲ್ ಸೂಪರ್ ಫಾಸ್ಫೇಟ್ ತಯಾರಿಕೆಯ ಸ್ಥೂಲ ಚಿತ್ರಣ

**ಮಿಶ್ರ ಗೊಬ್ಬರಗಳು :** ಸಸ್ಯ ವರ್ಗಕ್ಕೆ ಅತ್ಯವಶ್ಯವಾಗಿರುವ ಧಾತುಗಳಾದ ಸಾರಜನಕ, ರಂಜಕ ಮತ್ತು ಪೊಟಾಸಿಯಂ ಮೂರನ್ನು ಉಳ್ಳ ಮಿಶ್ರಣಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. NPK ಮಿಶ್ರಣಗಳೆಂದು ಪರಿಚಿತವಾಗಿರುವ ಈ ಮಿಶ್ರಣಗಳಲ್ಲಿ ಹಲವಾರು ಬಗೆಗಳಿವೆ. 3–12–2, 2–12–6, 5–10–5 ಮೊದಲಾದ ಹೆಸರುಗಳನ್ನುಳ್ಳ ಈ ಮಿಶ್ರಣಗಳಲ್ಲಿ ಮೊದಲ ಅಂಕಿ ಸಾರಜನಕದ (N) ಪ್ರಮಾಣವನ್ನು (ಶತಾಂಶದಲ್ಲಿ) ಎರಡನೆಯ ಅಂಕಿ $P_2O_5$ ಪ್ರಮಾಣವನ್ನು ಮೂರನೆಯ ಅಂಕಿ ನೀರಿನಲ್ಲಿ ಕರಗಬಲ್ಲ $K_2O$ ಪ್ರಮಾಣವನ್ನು ತಿಳಿಸುತ್ತವೆ. ವಿವಿಧ ಪ್ರದೇಶಗಳಲ್ಲಿಯ ಲವಣ ಸಂಪತ್ತಿನ ಕೊರತೆಯನ್ನು ಅನುಸರಿಸಿ ಮತ್ತು ಬೆಳೆಯ ಅವಶ್ಯಕತೆಯನ್ನು ಗಮನಿಸಿ ಯುಕ್ತ ಮಿಶ್ರಣವನ್ನು ಉಪಯೋಗಿಸಲಾಗುತ್ತದೆ. ಈಗ ಹಲವು ವರ್ಷಗಳಿಂದ ಈ ಬಗೆಯ ಮಿಶ್ರಣಗಳನ್ನು ಪುಡಿಯಾಗಿ ಮಾರುವ ಬದಲು ಹರಳು ಅಥವಾ ವಿವಿಧ ಆಕಾರದ ಉಂಡೆಗಳನ್ನಾಗಿ ಮಾಡಿ ಮಾರಲಾಗುತ್ತದೆ. ಹರಳು ಅಥವಾ ಉಂಡೆಗಳಲ್ಲಿ ಮಿಶ್ರಣ ಏಕರೀತಿಯಾಗಿದ್ದು, ಪುಡಿಗಳಲ್ಲಿ ಇರಬಹುದಾದ ಮಿಶ್ರಣ ಪ್ರಮಾಣದ ಅನಿಶ್ಚಿತತೆಯನ್ನು ಈ ವಿಧಾನ ನಿವಾರಿಸುತ್ತದೆ. ಅಲ್ಲದೆ ಹರಳು, ಉಂಡೆಗಳಿಗೆ ಆರ್ದ್ರತಾವಿಕರ್ಷಕವೊಂದರ ಹೊದಿಕೆ ನೀಡುವುದು ಸಾಧ್ಯವಿರುವುದರಿಂದ ಇವುಗಳ ದಾಸ್ತಾನಿನಲ್ಲಿ ಹವೆಯ ಏರಿಳಿತಗಳಿಂದಾಗುವ ನಷ್ಟ ಕಡಿಮೆ. ಮಿಶ್ರಣಗಳ ಹರಳು ಅಥವಾ ಉಂಡೆಗಳನ್ನು ತಯಾರಿಸುವಾಗ ಅಲ್ಪಾಂಶದಲ್ಲಿ ಬೆಳವಣಿಗೆಗೆ ಅವಶ್ಯಕವಿರುವ ಇತರ ಲವಣಗಳನ್ನು ಯುಕ್ತಪ್ರಮಾಣದಲ್ಲಿ ಬೆರೆಸುವುದು ಸಾಧ್ಯವಿದೆ. ಇತ್ತೀಚೆಗೆ ಮಿಶ್ರಗೊಬ್ಬರಗಳು ದ್ರವರೂಪದಲ್ಲಿಯೂ ತಯಾರಾಗುತ್ತಿವೆ. ಶೇ. 10 ಸಾರಜನಕ, ಶೇ. 34 $P_2O_5$ ಅಂಶವನ್ನುಳ್ಳ ದ್ರವಗೊಬ್ಬರ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬಳಕೆಯಲ್ಲಿದೆ.

**ಭಾರತದ ಕೃತಕ ಗೊಬ್ಬರ ಉದ್ಯಮ :** ಭಾರತದಲ್ಲಿ ಪ್ರತಿವರ್ಷವೂ ಕೃತಕ ಗೊಬ್ಬರಗಳ ಬಳಕೆ ಹೆಚ್ಚುತ್ತಲೇ ಇದ್ದು ಸ್ವಾತಂತ್ರ್ಯಾನಂತರ ಬಳಕೆ ಮತ್ತು ಉದ್ಯಮಗಳು ಹಲವಾರು ಪಟ್ಟು ಹೆಚ್ಚಿವೆ. 1950ರಲ್ಲಿ ಭಾರತದಲ್ಲಿದ್ದುದು ಕೇವಲ ಮೂರೇಮೂರು ಮುಖ್ಯ ಕಾರ್ಖಾನೆಗಳು–ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್, ಆಲ್ವೇ ; ಸಿಂಧ್ರಿ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್, ಸಿಂಧ್ರಿ ; ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್, ಬೆಳಗೊಳ. ಈ ಮೂರು ಮುಖ್ಯ ಕಾರ್ಖಾನೆಗಳಲ್ಲದೆ ಸಣ್ಣ ಸಣ್ಣ ಕಾರ್ಖಾನೆಗಳೂ ಅನೇಕವಿದ್ದುವು. ಕಳೆದ 60 ವರ್ಷಗಳಲ್ಲಿ ಕೃತಕ ಗೊಬ್ಬರಗಳ ಬಳಕೆ ಅನೇಕಪಟ್ಟು ಹೆಚ್ಚಿದೆ. ಗೊಬ್ಬರ ತಯಾರಿಕೆಯ ಉದ್ಯಮ ಇದೇ ವೇಳೆ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಆಶ್ರಯದಲ್ಲೂ ಬೆಳೆದು ಬೃಹತ್ ಗಾತ್ರವನ್ನು ತಳೆದು ಆಯಾತವನ್ನು ನಿಯಂತ್ರಣದಲ್ಲಿಡಲು ಸಹಾಯಕವಾಗಿದೆ. ರಂಜಕ, ಪೊಟಾಸಿಯಂ, ಸಾರಜನಕ ಗೊಬ್ಬರಗಳ ಒಟ್ಟು ಉತ್ಪಾದನೆ ಸುಮಾರು ಒಂದೂವರೆ ಲಕ್ಷ ಟನ್ನಿನಷ್ಟಿತ್ತು. ರಾಸಾಯನಿಕ ಗೊಬ್ಬರಗಳನ್ನು ತಯಾರಿಸಲು ಹಳೆಯ ಅನೇಕ ಸಣ್ಣ ಕಾರ್ಖಾನೆಗಳು ದೊಡ್ಡವಾಗಿವೆ. ಮತ್ತು ಅನೇಕ ಹೊಸ ಕಾರ್ಖಾನೆಗಳು ಭಾರತದ ಅನೇಕ ಕಡೆಗಳಲ್ಲಿ ಆರಂಭವಾಗಿವೆ. ಸರ್ಕಾರಿ ಆಶ್ರಯದ ಫರ್ಟಿಲೈಸರ್ ಕಾರ್ಪೊರೇಷನ್ ಆಫ್ ಇಂಡಿಯ ಮತ್ತು ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್, ಟ್ರಾವಂಕೂರ್ ಸಂಸ್ಥೆಗಳು ಭೂರಿಗಾತ್ರದಲ್ಲಿ ಗೊಬ್ಬರಗಳನ್ನು ತಯಾರಿಸುವುದೇ ಅಲ್ಲದೆ ಹೊಸ ಕಾರ್ಖಾನೆಗಳನ್ನು ಸ್ಥಾಪಿಸಲು ಅಗತ್ಯವಾದ ತಾಂತ್ರಿಕ ಜ್ಞಾನ ಮತ್ತು ನೆರವನ್ನು ಸಹ ನೀಡುತ್ತವೆ. ಇತ್ತೀಚಿನ ದಿನಗಳಲ್ಲಿ ಕೃತಕಗೊಬ್ಬರಗಳ ಬಳಕೆ ಕಡಿಮೆಯಾಗುತ್ತಿದ್ದು, ನೈಸರ್ಗಿಕ ಗೊಬ್ಬರಗಳ ಕಡೆಗೆ ಕೃಷಿಕರ ಒಲವು ಹೆಚ್ಚಾಗುತ್ತಿದೆ. (ಕೆ.ಟಿ.ಎಸ್)

**ಕೃತಕ ಜಾಲರಿ ಬಟ್ಟೆ :** ಗಾಜ್ ಎಂಬ ನೇಯ್ಗೆಯ ಅಣಕುರೂಪ (ಮಾರ್ಕಲಿನೊ). ಈ ನೇಯ್ಗೆಯನ್ನು ಬೆದಗಳಲ್ಲಿ ಎಳೆಗಳನ್ನು ತುಂಬುವ ವಿಶೇಷತೆಯಿಂದಲೂ ಹಾಗೆ ತುಂಬಿದ ಎಳೆಗಳನ್ನು ವಿಶೇಷ ರೀತಿಯಿಂದ ನೇಯುವುದರಿಂದಲೂ ತಯಾರಿಸಬಹುದು. ಅತಿ ಸುಲಭವಾಗಿ ಈ ಬಟ್ಟೆಯನ್ನು ಒಂದು ತಟ್ಟಿನ ಮನೆಯಲ್ಲಿ ಮೂರು ಎಳೆಗಳಂತೆ ತುಂಬಿ, ತಟ್ಟಿನ ಮನೆಗಳನ್ನು ಚಿತ್ರದಲ್ಲಿ ಎಂಬಲ್ಲಿ ತೋರಿಸಿರುವಂತೆ ಬಿಟ್ಟು, ಅದಕ್ಕೆ ತಕ್ಕುದಾದ ನೇಯ್ಗೆಯಿಂದ ನೇಯ್ದು ತಯಾರಿಸಬಹುದು. ಮಾದರಿ ಬಟ್ಟೆಯೊಂದರಲ್ಲಿ ಅಂಗುಲಕ್ಕೆ 68 ಹಾಸು ಎಳೆಗಳು, 80 ಹೊಕ್ಕು ಎಲೆಗಳು ಇರುತ್ತವೆ. ಹಾಸಿಗೆ 30ರ ದಾರವನ್ನೂ ಹೊಕ್ಕಿಗೆ 32ರ ದಾರವನ್ನೂ ಉಪಯೋಗಿಸುವರು. (ವಿ.ಎಸ್.ವಿ.)



**ಕೃತಕ ಬಣ್ಣ ಹಾಕುವಿಕೆ :** ವಿವಿಧ ಬಣ್ಣಗಳನ್ನು ಸಂಶ್ಲೇಷಿಸುವ ಹಾಗೂ ಅವನ್ನು ಬಟ್ಟೆಗಳಿಗೆ ಹಾಕುವ ವಿಧಾನ. 19ನೆಯ ಶತಮಾನದ ತನಕ ನಿಸರ್ಗದತ್ತ ಬಣ್ಣಗಳನ್ನೇ ಬಟ್ಟೆಗಳಿಗೆ ಹಾಕುತ್ತಿದ್ದರು. ಈ ಬಣ್ಣಗಳು ಸಸ್ಯ, ಪ್ರಾಣಿ ಅಥವಾ ಖನಿಜ ವರ್ಗಕ್ಕೆ ಸೇರಿದವು. 1856ರಲ್ಲಿ ಪರ್ಕಿನ್ ಎಂಬಾತ ಮೊದಲನೆಯ ಕೃತಕ ಬಣ್ಣವನ್ನು ಸಂಶ್ಲೇಷಿಸಿದ. ಅಲ್ಲಿಂದ ಮುಂದೆ ರಸಾಯನ ವಿಜ್ಞಾನಿಗಳು ನಾನಾ ಬಗೆಯುವನ್ನು ಸಂಶ್ಲೇಷಿಸಿದ್ದಾರೆ. ಈಗ ಸಹಸ್ರಾರು ಕೃತಕ ಬಣ್ಣಗಳು ಉಪಯೋಗದಲ್ಲಿವೆ. ಇವನ್ನು ಆರ್ಗ್ಯಾನಿಕ್ ರಸಾಯನ ವಸ್ತುಗಳ ಸಂಯೋಗದಿಂದ ತಯಾರಿಸುವರು. ಕೃತಕ ಬಣ್ಣಗಳು ಹೆಚ್ಚಿದಂತೆ ಪ್ರಾಕೃತಿಕ ಬಣ್ಣಗಳ ಪ್ರಾಮುಖ್ಯ ಕಡಿಮೆಯಾಯಿತು. ಕೃತಕ ಬಣ್ಣಗಳ ಉಜ್ವಲತೆಯೂ ಛಾಯಾವೈವಿಧ್ಯವೂ ಇದರ ಕಾರಣಗಳು. ಇವುಗಳ ಉಪಯೋಗ ಸುಲಭ, ಕ್ಷಿಪ್ರ ಮತ್ತು ಪರಿಣಾಮಕಾರಿ. ಯಂತ್ರಗಳ ವ್ಯಾಪಕ ಬಳಕೆಯಿಂದ ಹತ್ತಿ, ಉಣ್ಣೆ, ರೇಷ್ಮೆಯಿಂದ ತಯಾರಾದ ನೂಲು ಮತ್ತು ಬಟ್ಟೆಗಳ ಮೇಲೆ ಸುಲಭವಾಗಿ ಸ್ಥಿರವರ್ಣಮೂಡುವಂತೆ ಕೃತಕ ಬಣ್ಣಗಳ ಬಳಕೆ ಸಾಧ್ಯ. ವಸ್ತ್ರಗಳ ಮೇಲೆ ಉಪಯೋಗಿಸುವ ಬಣ್ಣಗಳನ್ನು ಕೃತಕ ಬಣ್ಣಗಳ ತಯಾರಿಕೆಯ ದೃಷ್ಟಿಯಿಂದ ಮತ್ತು ಬಣ್ಣಹಾಕುವಿಕೆಯ ದೃಷ್ಟಿಯಿಂದ ಪರಿಶೀಲಿಸಬಹುದು.

ವಸ್ತ್ರೋಪಯೋಗಿಕ ಬಣ್ಣಗಳನ್ನು ಪ್ರಯೋಗ ದೃಷ್ಟಿಯಿಂದ ಇಲ್ಲಿ ಮುಂದೆ ಸೂಚಿಸಿರುವಂತೆ ಒಂಬತ್ತು ಗುಂಪುಗಳಾಗಿ ವಿಭಾಗಿಸಬಹುದು: ಸಾದಾ ಬಣ್ಣಗಳು, ಕ್ಷಾರವರ್ಣಗಳು, ಆಮ್ಲವರ್ಣಗಳು, ಗಂಧಕ ವರ್ಣಗಳು, ಬಾನೆವರ್ಣಗಳು, ಕ್ಷಾರೀಯ ವರ್ಣಗಳು, ಉತ್ಕರ್ಷಿತ ವರ್ಣಗಳು, ಪ್ರಸರಿತ ವರ್ಣಗಳು ಮತ್ತು ಪ್ರಕ್ರಿಯಾ ವರ್ಣಗಳು. ಒಂದೊಂದು ಗುಂಪಿನಲ್ಲಿಯೂ ನೂರಾರು ಬಣ್ಣಗಳಿರುವುವು. ಅವನ್ನು ತಯಾರಿಸುವ ವ್ಯಾಪಾರ ಸಂಸ್ಥೆಗಳು ಅವುಗಳಿಗೆ ವಿವಿಧ ವಾಣಿಜ್ಯ ನಾಮಗಳನ್ನು ಕೊಟ್ಟು ಮಾರಾಟಮಾಡುವರು. ಔಪಯೋಗಿಕ ವರ್ಣಗಳು ಸಾಮಾನ್ಯವಾಗಿ ಸ್ಥಿರವಾಗಿರುವುವು. ಮುಖ್ಯವಾಗಿ ಒಗೆತಕ್ಕೆ, ಬೆಳಕಿಗೆ, ಬೆವರಿಗೆ, ಚೆಲುವೆಗೆ ಬಣ್ಣ ಸ್ಥಿರವಾಗಿ ಇರಬೇಕು. ಬಣ್ಣ ಹಾಕುವಾಗ ಸರಿಯಾದ ಕ್ರಮವನ್ನು ಅನುಸರಿಸದಿದ್ದಲ್ಲಿ ಸ್ಥಿರತೆ, ಹೊಳಪು

ಮತ್ತು ಸಮವರ್ಣಗಳಲ್ಲಿ ದೋಷವುಂಟಾಗಬಹುದು. ವಸ್ತ್ರದ ಶಕ್ತಿ, ಸ್ಪರ್ಶ ಮತ್ತು ಪ್ರಭೆ(ಕಾಂತಿ, ಹೊಳಪು) ಮುಂತಾದವುಗಳಿಗೆ ಕುಂದಾಗಬಹುದು. ಬಣ್ಣ ಹಾಕುವಾಗ ಗಮನಿಸಬೇಕಾದ ಕೆಲ ಅಂಶಗಳು: ನೂಲು ಅಥವಾ ವಸ್ತ್ರಗಳಲ್ಲಿರುವ ಕಲ್ಮಶಗಳನ್ನು (ಮುಖ್ಯವಾಗಿ ಜಿಡ್ಡು ಪದಾರ್ಥಗಳನ್ನು) ತೆಗೆದು ಶುಭ್ರಪಡಿಸಬೇಕು. ಬಣ್ಣ ಮತ್ತು ಅದರ ಜೊತೆಯಲ್ಲಿ ಉಪಯೋಗಿಸುವ ರಾಸಾಯನಿಕ ವಸ್ತುಗಳು ನೀರಿನಲ್ಲಿ ಸಂಪೂರ್ಣವಾಗಿ ಕರಗಿರಬೇಕು. ಉಪಯೋಗಿಸುವ ನೀರು ಮೃದುವಾಗಿರುವುದು ಆವಶ್ಯಕ. ಎಲ್ಲಾ ವಸ್ತುಗಳೂ ಸರಿಯಾದ ಪ್ರಮಾಣದಲ್ಲಿರಬೇಕು. ಬಣ್ಣ ಹಾಕುವ ಸಮಯದಲ್ಲಿ ಎಳೆಗಳನ್ನು ದ್ರಾವಣದಲ್ಲಿ ತಿರುಗಿಸುವುದರಿಂದಾಗುವ ಕುಲುಕುವಿಕೆಯಿಂದ ಬಣ್ಣ ಸಮವಾಗಿ ಹತ್ತುವುದು. ಹಾಕುವ ರಸಾಯನ ವಸ್ತುಗಳ ತೂಕ, ಉಷ್ಣತೆ ಮತ್ತು ಬಣ್ಣದಲ್ಲಿ ಅದ್ದಿಡುವ ಕಾಲ ಇವನ್ನು ನಿಯತಕ್ರಮದಲ್ಲಿ ಅನುಸರಿಸಬೇಕು. ಒಂದೇ ಗುಂಪಿಗೆ ಸೇರಿದ ಬಣ್ಣಗಳನ್ನು ಬೆರೆಸಿ ಮಿಶ್ರವರ್ಣಗಳನ್ನು ಪಡೆಯಬಹುದು. ಒಂದು ಗುಂಪಿನ ಒಂದು ಬಣ್ಣವನ್ನು ಇನ್ನೊಂದು ಗುಂಪಿನ ಒಂದು ಬಣ್ಣದೊಡನೆ ಸಾಮಾನ್ಯವಾಗಿ ಮಿಶ್ರಮಾಡಬಾರದು.

**ವರ್ಣ ಮಿಶ್ರಣ :** ಬಣ್ಣಗಳನ್ನು ಮಿಶ್ರಮಾಡಿ ವಿವಿಧ ವರ್ಣಗಳನ್ನು ಪಡೆಯಬಹುದು. ಇದಕ್ಕೆ ಕೆಲವು ನಿಯಮಗಳನ್ನು ಅನುಸರಿಸಬೇಕು. ಪರಿಶುದ್ಧವಾದ ಕೆಂಪು, ಹಳದಿ ಮತ್ತು ನೀಲಿ ಇವು ಮೂರೂ ಪ್ರಾಥಮಿಕ ವರ್ಣಗಳು(ಪ್ರೈಮರಿ ಕಲರ್ಸ್). ಎರಡು ಮೂಲ ವರ್ಣಗಳನ್ನು ಬೆರೆಸಿದರೆ ದ್ವಿತೀಯಕ ವರ್ಣಗಳು (ಸೆಕೆಂಡರಿ ಕಲರ್ಸ್) ದೊರೆಯುತ್ತವೆ. ಇವು ಹಸಿರು, ಊದ, ಮತ್ತು ಕಿತ್ತಳೆ. ಮೂರು ಪ್ರಾಥಮಿಕ ವರ್ಣಗಳ ಅಥವಾ ಎರಡು ದ್ವಿತೀಯಕ ವರ್ಣಗಳ ಸಂಮಿಶ್ರಣದಿಂದ ತೃತೀಯಕ ವರ್ಣಗಳು ಲಭಿಸುತ್ತವೆ. ಉದಾ: ಕಂದು, ಬೂದು ಮತ್ತು ಪಾಚಿ. ಮೂರು ಪ್ರಾಥಮಿಕ ವರ್ಣಗಳ ಸಮ ಮಿಶ್ರಣ ಕಪ್ಪು ಬಣ್ಣವನ್ನು ಕೊಡುತ್ತವೆ.




ಚಿತ್ರ 1

| ಪ್ರಾಥಮಿಕ ವರ್ಣ | ದ್ವಿತೀಯಕ ವರ್ಣ | | ತೃತೀಯಕ ವರ್ಣ |
|---|---|---|---|
| ಹಳದಿ | + ಕೆಂಪು → ಕಿತ್ತಳೆ | } | ಕಂದು |
| ನೀಲಿ | + ಕೆಂಪು → ಊದು | } | ... |
| ಹಳದಿ | + ನೀಲಿ → ಹಸಿರು | } | ಬೂದು |
| ಕೆಂಪು | + ನೀಲಿ → ಊದು | } | ... |
| ನೀಲಿ | + ಹಳದಿ → ಹಸಿರು | } | ಪಾಚಿ |
| ಕೆಂಪು | + ಹಳದಿ → ಕಿತ್ತಳೆ | } | ... |

**ಬಣ್ಣ ಹಾಕಲು ಉಪಯೋಗಿಸುವ ಕೆಲವು ಯಂತ್ರೋಪಕರಣಗಳು :** ಹತ್ತಿಯಿಂದ ತಯಾರಾದ ವಸ್ತ್ರಗಳಿಗೆ ಬಣ್ಣಹಾಕಲು ಜಿಗ್ಗರ್ ಎಂಬ ಯಂತ್ರವನ್ನು ಹೆಚ್ಚಾಗಿ ಉಪಯೋಗಿಸುವರು. ಈ ಯಂತ್ರದಲ್ಲಿ ನೂರಾರು ಮೀಟರ್ ಉದ್ದದ ವಸ್ತ್ರವನ್ನು ಒಂದು ದಿಂಡಿನ ಮೇಲೆ ಸುತ್ತಿರುತ್ತಾರೆ. ಈ ವಸ್ತ್ರ ಬಿಡಿಸಿಕೊಂಡಂತೆ ಅದು ಬಣ್ಣ ಮತ್ತು ಅನುಗುಣವಾದ ರಾಸಾಯನಿಕ ವಸ್ತುಗಳಿಂದ ಕೂಡಿದ ದ್ರಾವಣದ ಮೂಲಕ ಹಾಯ್ದು ಇನ್ನೊಂದು ದಿಂಡಿನ ಮೇಲೆ(ಮತ್ತೊಂದು ಕೊನೆಯಿಂದ) ಸುತ್ತಲ್ಪಡುವುದು. ಈ ದಿಂಡಿನಿಂದ ಮೊದಲ ದಿಂಡಿಗೂ ಮೊದಲ ದಿಂಡಿನಿಂದ ಎರಡನೆಯ ದಿಂಡಿಗೂ ಹೀಗೆಯೇ ಬಣ್ಣ ಪೂರ್ಣವಾಗಿ ಹತ್ತುವವರೆಗೂ ವಸ್ತ್ರ ಉದ್ದಿಷ್ಟಕಾಲ ಸುತ್ತುತ್ತಿರುತ್ತದೆ.

**ಒತ್ತು ಕೊಟ್ಟು ಯಂತ್ರ (ಪ್ಯಾಡ್ಲಿಂಗ್ ಮ್ಯಾಂಗಲ್) :** ಇದನ್ನು ಕೆಲವು ತರಹ ಹತ್ತಿ ಬಟ್ಟೆಗಳ ಮೇಲೆ ಬಣ್ಣ ಹಾಕಲು ಉಪಯೋಗಿಸುವರು. ಅಲ್ಲಿಯೂ ಕೆಲವು ತರಹದ ಬಣ್ಣಗಳನ್ನು ಮಾತ್ರ ಇದರಿಂದ ಬಣ್ಣ ಹಾಕಬಹುದಷ್ಟೆ. ಈ ಯಂತ್ರದಲ್ಲಿ ಬಟ್ಟೆ ಬಣ್ಣದ



ಚಿತ್ರ 2 : ಸ್ವಯಂಚಾಲಿತ ಜಿಗ್ಗರ್ ಯಂತ್ರ

ದ್ರಾವಣದ ಮುಖಾಂತರ ಎರಡು ದಿಂಡುಗಳ ಮಧ್ಯೆ ಹಾಯ್ದು ಹೋಗುವುದು. ದಿಂಡುಗಳ ಒತ್ತಡ ತಕ್ಕಷ್ಟು ಪ್ರಮಾಣದಲ್ಲಿದ್ದು ಒಂದೇ ಸಮವಾಗಿ ಬಣ್ಣದ ದ್ರಾವಣವನ್ನು ಹರಡುವುದು ಮತ್ತು ಹೆಚ್ಚಿನ ನೀರನ್ನು ಹಿಂಡಿ ತೆಗೆಯುವುದು.

**ಚಕ್ರಬಾನೆ ಯಂತ್ರ(ವಿಂಚ್ ಡೈಯ್ಯಿಂಗ್) :** ಇದನ್ನು ರೇಷ್ಮೆ ಮತ್ತು ಉಣ್ಣೆಯಿಂದ ತಯಾರಾದ ಬಟ್ಟೆಯ ಮೇಲೆ ಬಣ್ಣಹಾಕುವುದಕ್ಕೆ ಹೆಚ್ಚಾಗಿ ಉಪಯೋಗಿಸುವರು. ಇದರಲ್ಲಿ ವಸ್ತ್ರ ಎರಡು ದಿಂಡುಗಳ ಮೇಲೆ ಹಾಯ್ದು ಬಣ್ಣದ ದ್ರಾವಣ ತುಂಬಿದ ತೊಟ್ಟಿಯಲ್ಲಿ ಅದ್ದಲ್ಪಟ್ಟು ಸುಮಾರು ಒಂದು ಗಂಟೆಯ ಕಾಲ ಸುತ್ತು ಹಾಕುವುದು. ಅದೇ ಸಮಯದಲ್ಲಿ ಆವಿಯಿಂದ ಬಣ್ಣದ ದ್ರಾವಣ ಕಾಯಿಸಲ್ಪಡುವುದು.

**ವಿವಿಧ ಗುಂಪಿನ ಬಣ್ಣಗಳ ಗುಣ ಮತ್ತು ಉಪಯೋಗ: ಸಾದಾ ಬಣ್ಣಗಳು :** ಈ ಗುಂಪಿಗೆ ಸೇರಿದ ವರ್ಣಗಳಿಗೆ ಕ್ಲೊರಾನ್‌ಟಿನ್, ಕ್ಲೋರೋಸಾಲ್, ಡ್ಯೂರೋಸಾಲ್, ಅತುಲ್ ಡೈರೆಕ್ಟ್ ಮುಂತಾದ ವಾಣಿಜ್ಯ ನಾಮಗಳಿವೆ. ಸಾದಾ ಬಣ್ಣಗಳ ಗುಂಪಿನಲ್ಲಿ ಎಲ್ಲಾ ವರ್ಣಗಳೂ ಇವೆ. ಇವು ನೀರಿನಲ್ಲಿ ಕರಗುವುವು. ಒಗೆತಕ್ಕೆ ಹೆಚ್ಚಾಗಿ ಸ್ಥಿರವಾಗಿರುವುದಿಲ್ಲ. ಅನೇಕ ಬಣ್ಣಗಳು ಬೆಳಕಿಗೆ ಬಣ್ಣಗುಂದುವುವು. ಕೆಲವು ಮಾತ್ರ ಸ್ಥಿರವಾಗಿರುವುವು. ಈ ಬಣ್ಣಗಳನ್ನು ಸಸ್ಯವರ್ಗದ ಮತ್ತು ಪ್ರಾಣಿವರ್ಗದ ವಸ್ತ್ರಗಳ ಮೇಲೆ ಉಪಯೋಗಿಸಬಹುದು. ಇವು ಉಣ್ಣೆ ಮತ್ತು ರೇಷ್ಮೆಯ ಮೇಲೆ ಹೆಚ್ಚು ಸ್ಥಿರವಾಗಿರುವುವು. ಬಣ್ಣವನ್ನು ಸ್ವಲ್ಪ ತಣ್ಣೀರಿನಲ್ಲಿ ಸರಿಮಾಡಿ, ಬಿಸಿನೀರು ಹಾಕಿ, ಕರಗಿಸಿ ಉಪಯೋಗಿಸಬೇಕು. ಬಣ್ಣ ಮತ್ತು ರಾಸಾಯನಿಕ ವಸ್ತುಗಳನ್ನು ನೂಲು ಅಥವಾ ವಸ್ತ್ರದ ತೂಕಕ್ಕೆ ಅನುಗುಣವಾಗಿ ಉಪಯೋಗಮಾಡಬೇಕು. ಹತ್ತಿಯಿಂದ ತಯಾರಾದ ವಸ್ತುಗಳ ಮೇಲೆ ಹಾಕುವಾಗ ಪಾತ್ರೆ ಅಥವಾ ಯಂತ್ರದಲ್ಲಿ ತಕ್ಕ ಮೊತ್ತದಲ್ಲಿ ನೀರಿಗೆ ಬಣ್ಣ ಕದಡಿ, ಜೊತೆಗೆ ಶೇ. 1–2 ಟರ್ಕಿರೆಡ್ ಎಣ್ಣೆ ಅಥವಾ ಸೋಡ ಉಪ್ಪು ಉಪಯೋಗಿಸುವುದರಿಂದ ಒಂದೆಸಮವಾಗಿ ಬಣ್ಣ ಹತ್ತುವುದು. ಬೆಚ್ಚಗಾದ ಬಣ್ಣದ ದ್ರಾವಣದಲ್ಲಿ ನೂಲು ಅಥವಾ ವಸ್ತ್ರವನ್ನು ಅದ್ದಿ ಪ್ರಯೋಗಿಸುತ್ತಿರಬೇಕು. ಕುದಿಯುವ ಮಟ್ಟಕ್ಕೆ ಉಷ್ಣತೆಯನ್ನು ತಂದು ½–1 ಗಂಟೆಯ ಅನಂತರ ಉಪ್ಪನ್ನು ಕರಗಿಸಿ ಹಾಕುವುದರಿಂದ ಬಣ್ಣ ಸರಿಯಾಗಿಯೂ ಪೂರ್ತಿಯಾಗಿಯೂ ಹತ್ತುವುದು. ಬಣ್ಣ ಪೂರ್ತಿಹತ್ತಲು ಉಪ್ಪು ಸಹಾಯಕವಾಗುವುದು. ಬಣ್ಣ ಮಾಡಿದ ಅನಂತರ ಚೆನ್ನಾಗಿ ನೀರಿನಲ್ಲಿ ತೊಳೆಯಬೇಕು.

ಸಾದಾ ಬಣ್ಣಗಳ ಸ್ಥಿರತೆಯನ್ನು ಹೆಚ್ಚಿಸಲು ಮುಂದೆ ಬರೆದಿರುವ ಕೆಲವು ರಾಸಾಯನಿಕ ವಸ್ತು ಪ್ರಯೋಗ ಅಥವಾ ಉತ್ತರ ಸಂಸ್ಕರಣ(ಆಫ್ಟರ್ ಟ್ರೀಟ್‌ಮೆಂಟ್) ಕೊಡಬಹುದು. ಇದರಿಂದ ಅನೇಕ ಬಣ್ಣಗಳ ಸ್ಥಿರತೆ ಹೆಚ್ಚುವುದು.

1. ಬಣ್ಣ ಮಾಡಿದ ವಸ್ತುವನ್ನು ಶೇ.½–2 ರಷ್ಟು ಮೈಲುತುತ್ತ ಮತ್ತು ಶೇ. ½–1 ಅಸಿಟಿಕ್ ಆಮ್ಲವಿರುವ ದ್ರಾವಣದಲ್ಲಿ 60° ಸೆಂ. ಉಷ್ಣತೆಯಲ್ಲಿ 20–30 ಮಿನಿಟುಗಳ ಕಾಲ ಸಂಸ್ಕರಿಸುವುದರಿಂದ ಕೆಲವು ಬಣ್ಣಗಳಲ್ಲಿ ಬೆಳಕಿಗೆ ಸ್ಥಿರತೆ ಹೆಚ್ಚುವುದು.

2. ಇದೇ ರೀತಿಯಲ್ಲಿ ಶೇ. 1–2 ಬೈಕ್ರೋಮೇಟ್ 1/2%–1% ಅಸಿಟಿಕ್ ಆಮ್ಲವಿರುವ ದ್ರಾವಣದಲ್ಲಿ 90°ಸೆಂ. ಉಷ್ಣತೆಯುಲ್ಲಿ 30 ಮಿನಿಟುಗಳು ಸಂಸ್ಕರಿಸುವುದರಿಂದ ಕೆಲವು ಬಣ್ಣಗಳ ಒಗೆತಕ್ಕೆ ಸ್ಥಿರತೆ ಹೆಚ್ಚುವುದು.

3. ಮೊದಲ ಮತ್ತು ಎರಡನೆಯ ಸಂಸ್ಕರಣಗಳಲ್ಲಿನ ರಾಸಾಯನಿಕ ವಸ್ತುಗಳೆರಡನ್ನು ಸೇರಿಸಿ ಅನಂತರ ಕ್ರಿಯೆಯನ್ನು ನಡೆಸಬಹುದು. ಈ ಕ್ರಿಯೆಯಿಂದ ಒಗೆತ, ತೊಳೆತ, ಬೆಳಕುಗಳಿಗೆ ಸ್ಥಿರತೆ ಹೆಚ್ಚಿಸಬಹುದು. ಶೇ. ½–3 ಮೈಲುತುತ್ತ, ಶೇ. 1–2 ಬೈಕ್ರೋಮೇಟ್ ಮತ್ತು ಶೇ. ½–1 ಅಸಿಟಿಕ್ ಆಮ್ಲ (ಶೇ. 30 ಸಾರವಾದದ್ದು) ಇರುವ ದ್ರಾವಣದಲ್ಲಿ 15–20 ಮಿನಿಟುಗಳ ಕಾಲ 60º ಸೆಂ. ಉಷ್ಣತೆಯಲ್ಲಿ ಸಂಸ್ಕರಿಸಿ ಅನಂತರ ಹಿಂಡಿ ತೊಳೆದು ಒಣಗಿಸುವುದು.

4. ಶೇ. 2–3 ರಷ್ಟು ಕ್ರೋಮಿಯಂ ಅಸಿಟೇಟ್ ದ್ರಾವಣದಲ್ಲಿ 30 ಮಿನಿಟುಗಳ ಕಾಲ 90º–95º ಸೆಂ. ಉಷ್ಣತೆಯಲ್ಲಿ ಸಂಸ್ಕರಿಸುವುದರಿಂದ ತೊಳೆತ, ಒಗೆತ, ಕ್ಲೇದಮರ್ದನ (ವೆಟ್ ಪ್ರೋಸೆಸಿಂಗ್) ಮತ್ತು ಬೆವರಿಗೆ ಸ್ಥಿರತೆ ಹೆಚ್ಚುವುದು.

5. ಶೇ. 2–3ರಷ್ಟು ಫಾರ್ಮಾಲ್ಡಿಹೈಡ್ ದ್ರಾವಣದಲ್ಲಿ (ಶೇ. 40 ಸಾರವಾದದ್ದು) 30 ಮಿನಿಟುಗಳ ಕಾಲ 50º ಸೆಂ. ಉಷ್ಣತೆಯಲ್ಲಿ ಸಂಸ್ಕರಿಸುವುದರಿಂದ ಕೆಲವು ಬಣ್ಣಗಳಲ್ಲಿ ಒಗೆತ, ತೊಳೆತಗಳಿಗೆ ಸ್ಥಿರತೆ ಹೆಚ್ಚುವುದು. ಇದನ್ನು ಮುಖ್ಯವಾಗಿ ಕಪ್ಪು ಬಣ್ಣಗಳಿಗೆ ಉಪಯೋಗಿಸುವರು.

6. ಸಾದಾ ಬಣ್ಣಗಳು ಕ್ಷಾರವರ್ಣಗಳಿಗೆ ವರ್ಣಬಂಧಕಗಳಂತೆ(ಮಾರ್ಡೆಂಟ್ಸ್) ವರ್ತಿಸುವುವು. ಆದ್ದರಿಂದ ಬಣ್ಣಗಳ ಹೊಳಪು ಹೆಚ್ಚಲು ಕ್ಷಾರವರ್ಣಗಳಿಂದ ಉಪವರ್ಣೀಕರಣ ಮಾಡುತ್ತಾರೆ. ಇದರಿಂದ ಬಣ್ಣ ಪೂರ್ಣಗೊಳ್ಳುವುದೇ ಅಲ್ಲದೆ ಬಣ್ಣದ ಛಾಯೆ ಸಹ ಮಾರ್ಪಡುವುದು. ಶೇ. ¼–½ ದಷ್ಟು ಕ್ಷಾರ ವರ್ಣ ಶೇ. 1–2 ರಷ್ಟು ಅಸೆಟಿಕ್ ಆಮ್ಲ ಇರುವ ಪಾತ್ರೆಯಲ್ಲಿ (ಆಮ್ಲ ಶೇ. 30 ಸಾರವಾದದ್ದು) ಬಣ್ಣಹಾಕಿದ ಎಳೆಗಳನ್ನು 10–15 ಮಿನಿಟುಗಳ ಕಾಲ ಮೊದಲು ದೇಹೋಷ್ಣತೆಯಲ್ಲಿ ಸಂಸ್ಕರಿಸಿ ಅನಂತರ ಕ್ರಮವಾಗಿ ಕುದಿಯುವ ಉಷ್ಣತೆಗೆ ಏರಿಸಿ ಅದರಲ್ಲಿ ಸಂಸ್ಕರಿಸುವರು.

7. ಕೆಲವು ಬಣ್ಣಗಳನ್ನು ಡೈಅಜೊಟೈಸ್ಡ್ ದ್ರಾವಣದಲ್ಲಿ ಅಂದರೆ ಸೋಡಿಯಂ ನೈಟ್ರೇಟ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲಗಳನ್ನು ಕರಗಿಸಿದ ದ್ರಾವಣದಲ್ಲಿ ದೇಹೋಷ್ಣತೆಯಲ್ಲಿ ಕೆಲವು ಮಿನಿಟುಗಳ ಕಾಲ ಬಣ್ಣಮಾಡಿದ ವಸ್ತುವನ್ನು ಸಂಸ್ಕರಿಸಿದ ತರುವಾಯ  ನ್ಯಾಫ್ಥಾಲ್ ಕರಗಿಸಿದ ದ್ರಾವಣದಲ್ಲಿ ಸಂಸ್ಕರಿಸುವುದರಿಂದ ಒಗೆತಕ್ಕೆ ಸ್ಥಿರತೆ ಹೆಚ್ಚುವುದು.  ನ್ಯಾಫ್ಥಾಲ್ ಅಲ್ಲದೆ ವರ್ಣೋತ್ಕರ್ಷಣೆಗೆ ರಿಸಾರ್ಸಿನಾಲ್, ಫೀನಾಲ್, ಚೆಲುವೆ ದ್ರಾವಣ ಉತ್ಕರ್ಷಕಗಳನ್ನು ಸಹ ಉಪಯೋಗಿಸಬಹುದು. ಸಾದಾ ಬಣ್ಣಗಳು ಉಣ್ಣೆ ಮತ್ತು ರೇಷ್ಮೆ ಮೇಲೆ ಹೆಚ್ಚು ಸ್ಥಿರವಾಗಿರುತ್ತದೆ. ಸಾದಾ ಬಣ್ಣವನ್ನು ಕರಗಿಸಿ ಅದರೊಡನೆ ಶೇ. 1–2ರಷ್ಟು ಅಸೆಟಿಕ್ ಆಮ್ಲ ಮತ್ತು ಶೇ. 10–20 ಗ್ಲಾಬರ್ಸ್ ಉಪ್ಪು ($Na_2SO_4$) ಬೆರೆಸಿ 60º ಉಷ್ಣತೆಯಲ್ಲಿ ನೂಲು ಅಥವಾ ವಸ್ತುವನ್ನು ಅದ್ದಿ ಸಂಸ್ಕರಿಸುತ್ತ, ಕುದಿಯುವ ಉಷ್ಣತೆಯವರೆಗೆ ಕಾವೇರಿಸಿ ½ ಗಂಟೆಯವರೆಗೆ ಬಣ್ಣ ಮಾಡಬೇಕು.

**ಕ್ಷಾರವರ್ಣಗಳು(ಬೇಸಿಕ್ ಕಲರ್ಸ್) :** ಇವು ನೀರಿನಲ್ಲಿ ಸುಲಭವಾಗಿ ಕರಗುತ್ತವೆ. ಹೆಚ್ಚು ಉಜ್ವಲ ಬಣ್ಣಗಳಿವು. ಒಗೆಯುವುದಕ್ಕೆ ಹೆಚ್ಚು ಸ್ಥಿರವಾಗಿ ಇರುವುದಿಲ್ಲ. ಬೆಳಕಿಗೆ ಬಣ್ಣ ಕುಂದುವುವು. ಹತ್ತಿಯ ಮೇಲೆ ನೇರವಾಗಿ ಬಣ್ಣ ಹಿಡಿಯುವುದಿಲ್ಲ. ವರ್ಣೋತ್ಕರ್ಷಕ ರಾಸಾಯನಿಕ ವಸ್ತುಗಳ ಸಹಾಯದಿಂದ ಹತ್ತಿಯ ಮೇಲೆ ಹಾಕಬಹುದು. ಬಣ್ಣಹಾಕುವ ವಿಧಗಳು ಈ ಕೆಳಗಿನಂತಿವೆ: (1)ಟರ್ಕಿ ರೆಡ್ ಎಣ್ಣೆ ವರ್ಣೋತ್ಕರ್ಷಕ (2) ಸ್ಫಟಿಕ ಮತ್ತು ಸೋಡ ಉಪ್ಪು ವರ್ಣೋತ್ಕರ್ಷಕ (3)ಟ್ಯಾನಿನ್ ಅಳಲೇಕಾಯಿ ವರ್ಣೋತ್ಕರ್ಷಕ, (4) ಕೆಟನಾಲ್ ವರ್ಣೋತ್ಕರ್ಷಕ. ಇವುಗಳಲ್ಲಿ ಮುಖ್ಯವಾದ ವರ್ಣೋತ್ಕರ್ಷಕ ಅಳಲೇಕಾಯಿ. ಮೊದಲು ಹತ್ತಿನೂಲು ಅಥವಾ ವಸ್ತ್ರವನ್ನು ಅಳಲೇ ಕಷಾಯದಲ್ಲಿ ವರ್ಣೋತ್ಕರ್ಷಣೆ ಮಾಡಿ ಅನಂತರ ಟಾರ್ಟರ್ ಎಮಿಟಿಕ್ ನೀರಿನಲ್ಲಿ ಸಂಸ್ಕರಿಸಬೇಕು. ಇದಾದಮೇಲೆ ಕ್ಷಾರವರ್ಣದ ದ್ರಾವಣದಲ್ಲಿ ಸಂಸ್ಕರಿಸಬೇಕು. ಇದರಿಂದ ಹತ್ತಿಯ ಮೇಲೆ ಬಣ್ಣಬರುವುದು. ಕ್ಷಾರವರ್ಣಗಳನ್ನು ಹತ್ತಿಯ ಮೇಲೆ ಹೆಚ್ಚಾಗಿ ಉಪಯೋಗಿಸುವುದಿಲ್ಲ. ರೇಷ್ಮೆಯ ಮೇಲೆ ನೇರವಾಗಿ ಹಾಕಬಹುದು. ಬಣ್ಣದ ಜೊತೆಯಲ್ಲಿ ಶೇ. 1 ಅಸೆಟಿಕ್ ಆಮ್ಲ ಹಾಕಿ 80º –90º ಸೆಂ. ಉಷ್ಣತೆಯಲ್ಲಿ ½ ಗಂಟೆ ಬಣ್ಣ ಮಾಡಬೇಕು. ಇದೇ ರೀತಿಯಲ್ಲಿ ಉಣ್ಣೆಯ ಮೇಲೆಯೂ ಬಣ್ಣ ಮಾಡಬಹುದು. ಆದರೆ ಈ ಬಣ್ಣಗಳನ್ನು ಉಣ್ಣೆಯ ಮೇಲೆ ಉಪಯೋಗಿಸುವುದು ಬಹಳ ಕಡಿಮೆ.

**ಆಮ್ಲ ವರ್ಣಗಳು :** ಆಮ್ಲ ವರ್ಣಗಳು ನೀರಿನಲ್ಲಿ ಸುಲಭವಾಗಿ ಕರಗುತ್ತವೆ. ಇವು ಹತ್ತಿ ಮತ್ತು ಕೃತಕ ರೇಷ್ಮೆಗಳ ಮೇಲೆ ಹತ್ತುವುದಿಲ್ಲವಾದ್ದರಿಂದ ಅಲ್ಲಿ ಇವನ್ನು ಉಪಯೋಗಿಸುವುದಿಲ್ಲ. ಉಣ್ಣೆ, ರೇಷ್ಮೆ ಮತ್ತು ನೈಲಾನ್‌ಗಳ ಮೇಲೆ ವಿಶೇಷವಾಗಿ ಉಪಯೋಗಿಸುವರು. ಸಾಮಾನ್ಯ ಸ್ಥಿರತೆಯಿಂದ ಅತಿ ಹೆಚ್ಚಿನ ಸ್ಥಿರತೆಯುಳ್ಳ ಬಣ್ಣಗಳೂ ಇವೆ. ಆಮ್ಲವರ್ಣಗಳನ್ನು ಚೆನ್ನಾಗಿ ಕರಗಿಸಿ, ಕರಗಿಸಿದ ಗ್ಲಾಬರ್ಸ್ ಉಪ್ಪನ್ನು ಸ್ವಲ್ಪ ಮಿಶ್ರಮಾಡಿ ಬಿಸಿಯಾಗಿರುವಾಗ ರೇಷ್ಮೆ ಅಥವಾ ಉಣ್ಣೆಯನ್ನು ಅದರಲ್ಲಿ ಸಂಸ್ಕರಿಸಬೇಕು. ಅನಂತರ ಕುದಿಯುವ ವರೆಗೆ ಉಷ್ಣತೆಯನ್ನು ಏರಿಸಿ ಸಲ್ಫ್ಯೂರಿಕ್ ಅಥವಾ ಫಾರ್ಮಿಕ್ ಅಥವಾ ಅಸೆಟಿಕ್ ಆಮ್ಲವನ್ನು (ಶೇ. 1–¼) ಹಾಕಿ ½ ಗಂಟೆಯ ಕಾಲ ಸಂಸ್ಕರಿಸಿದ ಮೇಲೆ ತೆಗೆದು ಚೆನ್ನಾಗಿ ತೊಳೆಯಬೇಕು.

ಆಮ್ಲವರ್ಣಗಳ ಕೆಲವು ವಾಣಿಜ್ಯನಾಮಗಳು ಹೀಗಿವೆ: ಫ್ರೆಂಚ್ ಡೈಸ್ ಅಂಡ್ ಕೆಮಿಕಲ್ಸ್ ಕಂಪನಿ–ಬ್ರಿಲಿಯಂಟ್ ಮಿಲ್ಲಿಂಗ್, ಆಸಿಡ್ ಬ್ರಿಲಿಯಂಟ್, ಬ್ರಿಲಿಯಂಟ್ ಫಾಸ್ಟ್ ಸಯನೈಡ್, ಕೂಮ್ಮಾಸ್ಸಿಮಿಲ್ಲಿಂಗ್ ಇತ್ಯಾದಿ. ಸಿಬಾ ಕಂಪನಿ– ನಿಯಲಾನ್, ಕ್ವಿಲಾನ್, ಫುಲ್ಲಾಸಿನ್, ಬ್ರಿಲಿಯಂಟ್ ಅಲಿಸರಿನ್ ಫಾಸ್ಟ್, ಅಲಿಸರಿನ್ ಸುಫೀರಿಯರ್, ನ್ಯಾವಿ, ಸ್ಯಾಂಡೋಜ್ ಕಂಪನಿ–ಸಲ್ಫೋನೈನ್, ತ್ವಲೈನ್‌ಮಿಲ್ಲಿಂಗ್, ಸಿಟ್ರನೈನ್, ಇಂಪಿರಿಯಲ್ ಕೆಮಿಕಲ್ ಇಂಡಸ್ಟ್ರೀಸ್–ಕ್ವಿನಾಲಿನ್, ಲಿಸಾಮಿನ್ ಫಾಸ್ಟ್, ತೂಮ್ಮಾಸ್ಸಿ, ನಾಫ್ಥಲಿನ್.

**ಗಂಧಕ ವರ್ಣಗಳು :** ಇವು ನೀರಿನಲ್ಲಿ ಕರಗುವುದಿಲ್ಲ. ಹಾಗೂ ಮಂದ ಛಾಯೆಯವು. ಸಾಮಾನ್ಯವಾಗಿ ಇವು ಸ್ಥಿರವರ್ಣಗಳು. ಹತ್ತಿಯ ಮೇಲೆ ಇವನ್ನು ಉಪಯೋಗಿಸಬಹುದು. ರೇಷ್ಮೆ ಮತ್ತು ಉಣ್ಣೆಯ ಮೇಲೆ ಉಪಯೋಗಿಸಲಾಗುವುದಿಲ್ಲ. ಇವನ್ನು ಸೋಡಿಯಂ ಸಲ್ಫೈಡ್ ಮತ್ತು ಸೋಡಿಯಂ ಕಾರ್ಬೊನೇಟ್ ಸಹಾಯದಿಂದ ಬಿಸಿನೀರಿನಲ್ಲಿ ಕರಗಿಸಬೇಕು. ಹತ್ತಿಯ ಮೇಲೆ ½ಗಂಟೆಯ ಕಾಲ ಕುದಿಯುವ ಉಷ್ಣತೆಯಲ್ಲಿ ಬಣ್ಣಮಾಡಿ ಉಪ್ಪು(ಶೇ.10–20) ಹಾಕಿ ಮತ್ತೆ ½ ಗಂಟೆಯ ಕಾಲ ಸಂಸ್ಕರಿಸಬೇಕು. ಬಣ್ಣಮಾಡಿದ ಅನಂತರ ಕೆಲವು ರಾಸಾಯನಿಕ ವಸ್ತುಸಂಸ್ಕರಣ ಮಾಡುವುದೂ ಉಂಟು. ಅಂಥ ಉತ್ತರ ಕ್ರಿಯೆಗಳು ಹೀಗಿವೆ: (1)ಶೇ. 1–3 ಬೈಕ್ರೊಮೇಟ್, ಶೇ.1–3 ಅಸೆಟಿಕ್ ಆಮ್ಲ., ಶೇ. 1–3 ಮೈಲುತುತ್ತ, 60º ಸೆಂ. ಉಷ್ಣತೆಯಲ್ಲಿ ½ ಗಂಟೆ ಸಂಸ್ಕರಣೆಯಿಂದ ಸ್ಥಿರತೆ ಹೆಚ್ಚುವುದು. (2) ಶೇ. 1–3 ಬೈಕ್ರೊಮೇಟ್, ಶೇ. 1–3 ಅಸೆಟಿಕ್ ಆಮ್ಲ (ಶೇ. 30 ಸಾರವಾದದ್ದು) ಇರುವ ದ್ರಾವಣದಲ್ಲಿ 20 ಮಿನಿಟುಗಳು 60º 70º ಸೆಂ. ಉಷ್ಣತೆಯಲ್ಲಿ ಸಂಸ್ಕರಿಸುವುದರಿಂದ ತೊಳೆತಕ್ಕೆ ಹಾಗೂ ಗುಣಿತವರ್ಣಗಳ (ಕ್ರಾಸ್ ಡೈಯಿಂಗ್) ಸ್ಥಿರತೆ ಉತ್ತಮಗೊಳ್ಳುವುದು. ಅಲ್ಲದೆ ಬಣ್ಣ ಹಾಕಿ ಎಳೆಗಳನ್ನು ಸಂಸ್ಕರಿಸಿದರೆ ತೀವ್ರವಾಗಿ ಅಮ್ಲಜನಕೋತ್ಕರ್ಷಣೆ ಆಗುವುದು. ಇದರಿಂದಾಗಿ ಪ್ರಬಲ ಕ್ಷಾರದ ಉಪಯೋಗದಿಂದಾಗುವ ದಾರದ ನಿಶ್ಯಕ್ತತೆ ತಡೆಯಲ್ಪಟ್ಟು ಪೂರ್ಣವಾಗಿ ಕ್ಷಾರ ತಟಸ್ಥಗೊಳಿಸಲ್ಪಡುವುದು. ಮುಖ್ಯವಾಗಿ ಕಪ್ಪುಬಣ್ಣದ ಪ್ರಯೋಗದಿಂದಾಗುವ ದಾರದ ಶಕ್ತಿಹೀನತೆಯ ನಿವಾರಣೆ ಆಗುತ್ತದೆ. ಸಂಸ್ಕರಣಾನಂತರ ತೊಳೆವ ಮುನ್ನ ಸೋಡ ಉಪ್ಪಿನ ದ್ರಾವಣದಲ್ಲಿ ತೊಳೆದು ಸಂಸ್ಕರಿಸಬೇಕು.

**ಆಮ್ಲಜನಕೋತ್ಕರ್ಷಣ :** ಬಣ್ಣಹಾಕಿದ ಎಳೆಗಳನ್ನು ಸೋಡಿಯಂಪರ್ಬೋರೇಟ್ ಶೇ. 1–2ರಷ್ಟು ಅಥವಾ 2 ಘನಗಾತ್ರ ಹೈಡ್ರೋಜನ್ ಪೆರಾಕ್ಸೈಡ್ ಅಥವಾ ಸೋಡಿಯಂ ಪೆರಾಕ್ಸೈಡ್ ದ್ರಾವಣದಲ್ಲಿ 30 ಮಿನಿಟುಗಳು ದೇಹೋಷ್ಣತೆಯಲ್ಲಿ ಸಂಸ್ಕರಿಸಿದರೆ ಆಮ್ಲಜನಕೋತ್ಕರ್ಷಣೆಯಾಗಿ ಹೊಳಪು ಹೆಚ್ಚುವುದು.

**ತೈಲೀಕರಣ :** ಗಂಧಕ ಕಪ್ಪು ಬಣ್ಣಗಳ ಘನತೆ. ಛಾಯಾಸೌಂದರ್ಯಗಳನ್ನು ಹೆಚ್ಚಿಸಿ ಒರಟುತನವನ್ನು ಹೋಗಲಾಡಿಸಲು 10 ಗ್ಯಾಲನ್ ನೀರಿಗೆ 5–7½ ತೊಲ ಅಮೋನಿಯ ಮತ್ತು 8–12 ತೊಲ ಟರ್ಕಿ ರೆಡ್ ಎಣ್ಣೆ ಇಲ್ಲವೆ ಎರಡನೆಯ ರೀತಿಯಲ್ಲಿ 8–12 ತೊಲ ಸಾಬೂನು 4–8 ತೊಲ ಆಲಿವ್ ಎಣ್ಣೆ ಅಥವಾ ಕಡಲೇಕಾಯಿ ಎಣ್ಣೆ ಅಥವಾ ಎಳ್ಳೆಣ್ಣೆ ಮತ್ತು 2–3 ತೊಲ ಸೋಡ ಉಪ್ಪು ಇರುವ ದ್ರಾವಣದಲ್ಲಿ 15 ಮಿನಿಟು ಉಗುರು ಬೆಚ್ಚಗಿರುವ ಉಷ್ಣತೆಯಲ್ಲಿ ಸಂಸ್ಕರಿಸಬೇಕು. ಸೋಡಾ ಉಪ್ಪು, ಸಾಬೂನುಗಳನ್ನು ಕುದಿವ ನೀರಲ್ಲಿ ಕರಗಿಸಿ, ಎಣ್ಣೆ ಹಾಕಿ ಕದಡಿ, ಈ ದ್ರಾವಣವನ್ನು ಪ್ರಯೋಗಕ್ಕೆ ಮುಂಚೆ 10 ಮಿನಿಟುಗಳು ಕುದಿಸಬೇಕು.

**ಕ್ಷಾರವರ್ಣದಿಂದ ಉಪರಿವರ್ಣೀಕರಣ :** ಗಂಧಕ ವರ್ಣಗಳೂ ಕ್ಷಾರವರ್ಣಗಳಿಗೆ ಉತ್ಕರ್ಷಕಗಳಾಗಿ ವರ್ತಿಸುವುದರಿಂದ ಗಂಧಕ ವರ್ಣಗಳ ಹೊಳಪನ್ನು ಹೆಚ್ಚಿಸಲು ಕ್ಷಾರವರ್ಣಗಳಿಂದ ಉಪರಿವರ್ಣ ಮಾಡುತ್ತಾರೆ. ಸಾಕಷ್ಟು ಕ್ಷಾರವರ್ಣ, ಶೇ. 2–3ರಷ್ಟು ಅಸೆಟಿಕ್ ಆಮ್ಲ (ಶೇ. 30ರಷ್ಟು ಸಾರವಾದದ್ದು) ಇರುವ ದ್ರಾವಣದಲ್ಲಿ 10–15 ಮಿನಿಟುಗಳು ದೇಹೋಷ್ಣತೆಯಲ್ಲಿ ಸಂಸ್ಕರಿಸಿ ಕ್ರಮವಾಗಿ ಉಷ್ಣತೆಯನ್ನು 60º ಸೆಂ.ಗೆ ಏರಿಸುತ್ತ ಸಂಸ್ಕರಿಸಬೇಕು.

**ಬಾನೆ ಬಣ್ಣಗಳು (ವಾಟ್ ಕಲರ್ಸ್) :** ಇವು ಬಟ್ಟೆಯ ಮೇಲೆ ಎಲ್ಲ ವಿಧದಲ್ಲಿಯೂ ಅತ್ಯಂತ ಸ್ಥಿರವಾದ ಬಣ್ಣವನ್ನು ಕೊಡುತ್ತವೆ. ಇವನ್ನು ಹತ್ತಿಯ ಮೇಲೆ ಹೆಚ್ಚಾಗಿ ಉಪಯೋಗಿಸುವರು. ರೇಷ್ಮೆಯ ಮೇಲೆ ಇವುಗಳ ಉಪಯೋಗ ವಿರಳ. ಉಣ್ಣೆಯ ಮೇಲೆ ಇಲ್ಲವೇ ಇಲ್ಲ. ಬಾನೆ ಬಣ್ಣಗಳಿಗೆ ಸೇರಿದ ವಿವಿಧ ತಯಾರಿಕೆಗಳ ಹೆಸರುಗಳು: ಇಂಡಾನ್‌ಥ್ರೀನುಗಳು, ಕ್ಯಾಲಡಾನುಗಳು, ಡ್ಯೂರಿನ್‌ಡಾನುಗಳು, ಸಿಬನಾನುಗಳು, ಇಂಡಿಗೊ, ನಾವಿನಾನ್ ಬಾನೆ ಬಣ್ಣಗಳು. ಈ ಬಣ್ಣಗಳು ನೀರಿನಲ್ಲಿ ಕರಗುವುದಿಲ್ಲ. ಸೋಡಿಯಂ ಹೈಡ್ರೊಸಲ್ಫೈಟ್ ಮತ್ತು ಸೋಡಿಯಂ ಹೈಡ್ರಾಕ್ಸೈಡ್ ಸಹಾಯದಿಂದ ಇವು ನೀರಿನಲ್ಲಿ ಕರಗುತ್ತವೆ. ಹೀಗೆ ಕರಗಿದ ಬಣ್ಣಗಳಿಗೆ(ಲ್ಯೂಕೋ) ವಿಲೀನಿತ ವಸ್ತುಗಳೆಂದು ಹೆಸರು. ಈ ವಸ್ತುಗಳು ಮೊದಲ ಬಣ್ಣದಿಂದ ಬೇರೆ ಬಣ್ಣ ಹೊಂದುವುವು. ಬಾನೆ ಬಣ್ಣಗಳನ್ನು ರಾಸಾಯನಿಕ ದೃಷ್ಟಿಯಿಂದ ಮೂರು ಗುಂಪಿಗೆ ಸೇರಿಸಬಹುದು: (1)ಇಂಡಿಗಾಯ್ಡ್, (2)ಆಂತ್ರಾಕ್ವಿನಾನ್, (3)ಸಲ್ಫುರೈಸ್ಡ್.

**ಇಂಡಿಗಾಯ್ಡ್ ಬಣ್ಣ ಮಾಡುವ ವಿಧಾನ :** ಹತ್ತಿಯ ತೂಕಕ್ಕೆ ಅನುಗುಣವಾಗಿ ಬಣ್ಣ ತೆಗೆದುಕೊಂಡು ರಾಸಾಯನಿಕ ವಸ್ತುಗಳನ್ನು ಸೇರಿಸಿ ಉಪಯೋಗಿಸಬೇಕು. 1 ಕೆಜಿ. ಇಂಡಿಗಾಯ್ಡ್ ಬಣ್ಣ ½–1 ಕೆ.ಜಿ ಟರ್ಕಿರೆಡ್ ಎಣ್ಣೆ, 25–150 ಲೀಟರ್ ಕಾಸ್ಟಿಕ್ ಸೋಡ, 25–150 ಲೀಟರ್ ಬಿಸಿನೀರು, 1–2½ ಕೆಜಿ ಹೈಡ್ರೋಸಲ್ಫೈಟ್–ಈ ವಸ್ತುಗಳನ್ನು 10–20 ಮಿನಿಟುಗಳವರೆಗೆ 40º– 60ºಸೆಂ ಉಷ್ಣತೆಗೆ ತರುವುದರಿಂದ ಕರಗಿದ ವಿಲೀನಿತ ಸಂಯುಕ್ತ ದ್ರಾವಣ ದೊರೆಯುತ್ತದೆ. ಈ ದ್ರಾವಣದ ಬಣ್ಣ ಸಾಮಾನ್ಯವಾಗಿ ಹಳದಿ, ಕರಗಿದ ಈ ಬಣ್ಣವನ್ನು ತಕ್ಕಷ್ಟು ಬಿಸಿ ನೀರಿನಲ್ಲಿ ಕದಡಿ, ಹತ್ತಿಯ ಮೇಲೆ ½ ಗಂಟೆ ಸಂಸ್ಕರಿಸಬೇಕು. ಅನಂತರ ಚೆನ್ನಾಗಿ ಹಿಂಡಿ, ಕೆಲವು ಮಿನಿಟು ಗಾಳಿಯಲ್ಲಿ ಹರಡುವುದರಿಂದ ಮೊದಲಿನ ಬಣ್ಣ ಬರುವುದು. ಕೊನೆಯದಾಗಿ ಚೆನ್ನಾಗಿ ತೊಳೆದು, ಕುದಿಯುವ ಸಾಬೂನಿನ ನೀರಿನಲ್ಲಿ ಕೆಲವು ಮಿನಿಟು ಸಂಸ್ಕರಿಸಬೇಕು.

**ಆಂತ್ರಾಕ್ವಿನಾನ್ ಬಣ್ಣ ಮಾಡುವ ವಿಧಾನ :** ಬಣ್ಣವನ್ನು ಹತ್ತಿಯ ತೂಕಕ್ಕೆ ಅನುಗುಣವಾಗಿ ತೆಗೆದುಕೊಳ್ಳಬೇಕು. ಆದರೆ ಇತರ ರಾಸಾಯನಿಕ ವಸ್ತುಗಳನ್ನು ನೀರಿನ ಅಳತೆಯನ್ನು ಅನುಸರಿಸಿ ಸೇರಿಸಬೇಕು. ಮತ್ತು ಬಣ್ಣಮಾಡಲು ಉಪಯೋಗಿಸುವ ಯಂತ್ರಕ್ಕೆ ತಕ್ಕಂತೆ ನೀರು ಬೇಕಾಗುವುದು. ಸಾಮಾನ್ಯವಾಗಿ ಬಟ್ಟೆ ಮತ್ತು ನೀರಿನ ಪ್ರಮಾಣ ಸುಮಾರು 1 : 8 ರಿಂದ 1 : 20 ರವರೆಗಿರುವುದು. ಬಣ್ಣ ಮಾಡಿ ಮುಗಿಸುವ ಅಳತೆಗಳನ್ನು ಮುಂದಿನ ಯಾದಿಯಲ್ಲಿ ಬರೆದಿದೆ.

| | | 1ನೆಯ ವಿಧ | | 2ನೆಯ ವಿಧ | | 3ನೆಯ ವಿಧ |
|---|---|---|---|---|---|---|
| 1. | ಬಾನೆ ಬಣ್ಣ | ಶೇ. 1 | ಶೇ. 1–2 | ಶೇ. 1 | ಶೇ. 1–2 | ಶೇ. 1–2 |
| 2. | ಟರ್ಕಿರೆಡ್ ಎಣ್ಣೆ– ಸಮಭಾಗ | – | – | – | – | – |
| 3. | ಕಾಸ್ಟಿಕ್ ಸೋಡ 66ºTW ಸಿಸಿ/ಲೀಟರ್ | ಶೇ. 12 | ಶೇ. 16 | 4 | 6 | 4–6 |
| | | 1– | | 1–1.15 | 1.5– | 1– |
| 4. | ಹೈಡ್ರೋಸ್ + ಗ್ರಾಂ/ಲೀಟರ್ | ಶೇ. 1–1.5 | ಶೇ. 1.5–2.5 | 1–1.15 | ಶೇ. 1.5–2.5 | 1–1.5 |
| 5. | ಉಪ್ಪು + ಗ್ರಾಂ/ಲೀಟರ್ | – | – | 5–10 | 10–20 | 5–10 |
| 6. | ಬಣ್ಣಮಾಡುವ ಉಷ್ಣತೆ | 50°–60°ಸೆಂ. | – | 40°–50°ಸೆಂ. | – | 25°–30°ಸೆಂ. |
| 7. | ಕಾಲ | ¾ ಗಂಟೆ | | ¾ ಗಂಟೆ | | 1 ಗಂಟೆ |

**ಕ್ಷಾರೀಯ ವರ್ಣಗಳು :** ಸಂಸ್ಕರಿಸುವುದಕ್ಕೆ ಮೊದಲು ಇವು ಬಣ್ಣಗಳಾಗಿರುವುದಿಲ್ಲ. ಎರಡು ರಾಸಾಯನಿಕ ವಸ್ತುಗಳು ಸೇರಿ ಬಣ್ಣವಾಗುತ್ತದೆ. ನ್ಯಾಫ್ತಾಲ್, ಸ್ಥಿರವರ್ಣಲವಣ ಮತ್ತು ಸ್ಥಿರವರ್ಣಕ್ಷಾರಗಳನ್ನು ಕರಗಿಸಿ ಮಿಶ್ರಮಾಡಿದರೆ ಬಣ್ಣ ಬರುವುದು. ಈ ಬಣ್ಣಗಳು ನೀರಿನಲ್ಲಿ ಕರಗುವುದಿಲ್ಲ. ಆದ್ದರಿಂದ ಇವನ್ನು ನೂಲು, ವಸ್ತುಗಳ ಮೇಲೆ ಸಂಯೋಜಿಸಬಹುದು. ಈ ಗುಂಪಿನ ಬಣ್ಣಗಳನ್ನು ಹತ್ತಿಯ ಮೇಲೆ ವಿಶೇಷವಾಗಿ ಉಪಯೋಗಿಸುತ್ತಾರೆ. ಇದರ ಮೇಲೆ ಗಟ್ಟಿಯಾಗಿಯೂ ಉಜ್ವಲವಾಗಿಯೂ ಬಣ್ಣಬರುವುದು. ಈ ಗುಂಪಿನ ಬಣ್ಣಗಳ ವಾಣಿಜ್ಯನಾಮಗಳು ಹೀಗಿವೆ: ನ್ಯಾಫ್ತಾಲ್ಸ್, ಬ್ರೆಂಥಾಲ್ಸ್, ಸೀಬಾನ್ಯಾಫ್ತಾಲ್ಸ್ ಮತ್ತು ಅಮರ್ಥಾಲ್ಸ್.

**ಬಣ್ಣ ಮಾಡುವ ಕ್ರಮ :** ನೀರಿನಲ್ಲಿ ನ್ಯಾಫ್ತಾಲ್ ಕರಗುವುದಿಲ್ಲ. ಸೋಡಿಯಂ ಹೈಡ್ರಾಕ್ಸೈಡಿನ ಸಹಾಯದಿಂದ ಇದನ್ನು ಕರಗಿಸಬೇಕು. ಇದರಲ್ಲಿ ಹತ್ತಿಯ ನೂಲನ್ನು ಕೆಲವು ಮಿನಿಟು ಸಂಸ್ಕರಿಸಿದ ತರುವಾಯ ಚೆನ್ನಾಗಿ ಹಿಂಡಬೇಕು. ಬೇರೊಂದು ಪಾತ್ರೆಯಲ್ಲಿ ಸ್ಥಿರವರ್ಣಲವಣವನ್ನು ತಣ್ಣಗಿರುವ ನೀರಿನಲ್ಲಿ ಕರಗಿಸಿ ನ್ಯಾಫ್ತಾಲ್ ಮಾಡಿದ ನೂಲನ್ನು ಸಂಸ್ಕರಿಸಬೇಕು. ಒಡನೆಯೇ ಬಣ್ಣಬರುವುದು. ಸ್ಥಿರವರ್ಣಲವಣ ಸುಲಭವಾಗಿ ನೀರಿನಲ್ಲಿ ಕರಗುವುದು. ಇದರ ಬದಲು ಸ್ಥಿರ ವರ್ಣಾಕ್ಷರವನ್ನು ಉಪಯೋಗಿಸಬೇಕಾದರೆ ಇದನ್ನು ಮೊದಲು ಡೈಅಜೊಟೈಸ್ ಮಾಡಬೇಕು. ಸ್ಥಿರವರ್ಣಕ್ಷಾರಕ್ಕೆ ಸರಿಯಾದ ಪ್ರಮಾಣದಲ್ಲಿ ಹೈಡ್ರೊಕ್ಲೋರಿಕ್ ಆಮ್ಲ ಮತ್ತು ಸೋಡಿಯಂ ನೈಟ್ರೇಟ್ ಉಪ್ಪನ್ನು ಹಾಕಿದರೆ ಕೆಲವು ಮಿನಿಟುಗಳಲ್ಲಿ ಡೈಅಜೋಟೈಸ್ ಆಗುವುದು. ಅನಂತರ ತಕ್ಕಷ್ಟು ತಣ್ಣೀರನ್ನು ಹಾಕಿ ಅದರಲ್ಲಿ ನ್ಯಾಫ್ತಾಲ್ ಮಾಡಿದ ನೂಲನ್ನು ಸಂಸ್ಕರಿಸಿದರೆ ಕೂಡಲೇ ಬಣ್ಣಬರುವುದು. ಇದೇ ರೀತಿಯ ಬಟ್ಟೆಯ ಮೇಲೆ ಮಾಡಲು ಪ್ಯಾಡ್ಲಿಂಗ್ ಮ್ಯಾಂಗಲ್(ಒತ್ತು ಕೊಚ್ಚು) ಯಂತ್ರವನ್ನು ಉಪಯೋಗಿಸುವರು. ವಿವಿಧ ನ್ಯಾಫ್ತಾಲ್ ಮತ್ತು ಸ್ಥಿರವರ್ಣ ಲವಣಗಳ ಜೋಡಣೆಯಿಂದ ಬೇರೆ ಬೇರೆ ಬಣ್ಣಗಳನ್ನು ಪಡೆಯಬಹುದು. ಬಣ್ಣ ಮಾಡಿದ ಬಳಿಕ ಕುದಿಯುವ ಶೇ. 0.5 ಸಾಬೂನಿನ ನೀರಿನಲ್ಲಿ ಕೆಲವು ಮಿನಿಟುಗಳ ಕಾಲ ಸಂಸ್ಕರಿಸುವುದರಿಂದ ಬಣ್ಣ ಹೆಚ್ಚು ಸ್ಥಿರವಾಗಿಯೂ ಉಜ್ವಲವಾಗಿಯೂ ಪರಿಣಮಿಸುವುದು.

**ಉತ್ಕರ್ಷಿತ ವರ್ಣಗಳು :** ಈ ಗುಂಪಿನ ಬಣ್ಣಗಳಿಂದ ಹತ್ತಿ ಮತ್ತು ರೇಷ್ಮೆಗಳ ಮೇಲೆ ಹೆಚ್ಚು ಉಪಯೋಗವಿಲ್ಲ. ಉಣ್ಣೆಯ ಮೇಲೆ ಸುಲಭವಾಗಿ ಹಾಕಬಹುದಾದ್ದರಿಂದಲೂ ಬಣ್ಣಗಳು ಹೆಚ್ಚು ಸ್ಥಿರತೆ ಪಡೆದಿರುವುದರಿಂದಲೂ ಇವನ್ನು ಅತ್ಯಂತ ಹೆಚ್ಚಾಗಿ ಉಪಯೋಗಿಸುವರು. ಉತ್ಕರ್ಷಕದ ಸಹಾಯದಿಂದ ಇವನ್ನು ಸಂಸ್ಕರಿಸಬೇಕು. ಇದಕ್ಕೆ ಸೋಡಿಯಂ ಅಥವಾ ಪೊಟಾಸಿಯಂ ಡೈಕ್ರೋಮೇಟ್ ಲವಣಗಳು ಉತ್ಕೃಷ್ಟವಾದುವು.

**ಬಣ್ಣಹಾಕುವ ಮೂರು ವಿಧಾನಗಳು :** (1)ಕ್ರೂಮ್ ಮಾರ್ಡೆಂಟ್ ಅತ್ಯುತ್ಕರ್ಷಣ ವಿಧಾನ. (2)ಆಫ್ಟರ್ ಕ್ರೋಂ ಮಾರ್ಡೆಂಟ್–ಉತ್ತರೋತ್ಕರ್ಷಣ (3)ಮೆಟಕ್ರೋಂ–ಮಾರ್ಡೆಂಟ್ ಸಮಕಾಲೋತ್ಕರ್ಷಣ. ಬಣ್ಣಕ್ಕೆ ತಕ್ಕ ವಿಧಾನವನ್ನು ಅನುಸರಿಸಬೇಕು. ಮೊದಲ ವಿಧಾನದಲ್ಲಿ ಉಣ್ಣೆಯನ್ನು ಉತ್ಕರ್ಷಣ ಮಾಡಿ ಅನಂತರ ಬಣ್ಣ ಹಾಕಬೇಕು.

**ಉತ್ಕರ್ಷಣ ವಿಧಾನಗಳು :** (1) ಉಣ್ಣೆಯನ್ನು ಶೇ. 2–4 ಬೈಕ್ರೋಮೇಟ್ ಕರಗಿಸಿದ ದ್ರಾವಣದಲ್ಲಿ 1–1½ ಗಂಟೆಗಳ ಕಾಲ ಕುದಿಸುವುದು. (2) ಶೇ.1–3 ಬೈಕ್ರೊಮೇಟ್, ಶೇ. ½–1 ಸಲ್ಫೂರಿಕ್ ಆಮ್ಲ ಅಥವಾ ಆಕ್ಸಾಲಿಕ್ ಆಮ್ಲ ಅಥವಾ ಫಾರ್ಮಿಕ್ ಆಮ್ಲದ ಜೊತೆಯಲ್ಲಿ ಕುದಿಸುವುದು. ಈ ರೀತಿ ಉತ್ಕರ್ಷಣ ಮಾಡಿದ ಉಣ್ಣೆಯನ್ನು ಬೇರೆ ಯಂತ್ರದಲ್ಲಿ ಬಣ್ಣ ಮತ್ತು 1–1 ಅಸಿಟಿಕ್ ಆಮ್ಲವಿರುವ ದ್ರಾವಣದಲ್ಲಿ 1–2 ಗಂಟೆಗಳ ಕಾಲ ಕುದಿಯುವ ಉಷ್ಣತೆಯಲ್ಲಿ ಬಣ್ಣ ಮಾಡಬೇಕು. ಉತ್ತರೋತ್ಕರ್ಷಣರೀತಿಯಲ್ಲಿ ಬಣ್ಣ ಮಾಡುವಾಗ ಮೊದಲು ಮೇಲೆ ಹೇಳಿದಂತೆ ಬಣ್ಣ ಮಾಡಿ ತರುವಾಯ ಬೇರೆ ಯಂತ್ರದಲ್ಲಿ ಹಿಂದೆ ಹೇಳಿದಂತೆ ಉತ್ಕರ್ಷಣ ಮಾಡಬೇಕು. ಸಮಕಾಲೋತ್ಕರ್ಷಣದ ವಿಧಾನದಲ್ಲಿ (ಬೈಕ್ರೋಮೇಟ್ + ಅಮೋನಿಯ) ಕ್ರೋಮೇಟ್ ಮತ್ತು ಅಮೋನಿಯಂ ಸಲ್ಫೇಟ್ ದ್ರಾವಣದಲ್ಲಿ ಕರಗಿಸಿದ ಬಳಿಕ ಬೇರೆಯಾಗಿ ಕರಗಿಸಿದ ಬಣ್ಣವನ್ನು ಅದರೊಡನೆ ಮಿಶ್ರಮಾಡಿ, 1–2 ಗಂಟೆಗಳ ಕಾಲ ಕುದಿಯುವ ಉಷ್ಣತೆಯಲ್ಲಿ ಬಣ್ಣ ಮಾಡಬೇಕು. ಬಣ್ಣ ಮಾಡಿದ ಮೇಲೆ ನೀರಿನಲ್ಲಿ ಚೆನ್ನಾಗಿ ತೊಳೆಯಬೇಕು.

**ಪ್ರಸರಿತ ವರ್ಣಗಳು :** ಅಸಿಟೇಟ್ ಕೃತಕ ರೇಷ್ಮೆಯ ಮೇಲೆ ಇತರ ಸಾಮಾನ್ಯ ಬಣ್ಣಗಳ ಉಪಯೋಗ ಬಹಳ ಕಡಿಮೆ. ಆದ್ದರಿಂದ ಈ ಪ್ರಸರಿತ ವರ್ಣಗಳನ್ನು ಮುಖ್ಯವಾಗಿ ಅಸಿಟೇಟ್ ಕೃತಕ ರೇಷ್ಮೆಗೋಸ್ಕರವಾಗಿಯೇ ಕಂಡುಹಿಡಿದರೆನ್ನಬಹುದು. ಇವುಗಳಿಂದ ಬಣ್ಣ ಮಾಡುವುದು ಸುಲಭ. ಬೆಳಕಿಗೂ ಒಗೆತಕ್ಕೂ ಈ ಬಣ್ಣಗಳಿಗೆ ಸಾಮಾನ್ಯಮಟ್ಟದ ಸ್ಥಿರತೆ ಸಹ ಇರುತ್ತದೆ. ಇವನ್ನು ನೈಲಾನ್, ಟೆರಿಲೀನ್ ಮತ್ತು ಕೆಲವು ಕೃತಕ ರೇಷ್ಮೆಯ ಮೇಲೆ ಉಪಯೋಗಿಸಬಹುದು. ಈ ಗುಂಪಿಗೆ ಸೇರಿದ ಬಣ್ಣಗಳು: ಡಿಸ್ಪರ್ಸಾಲ್, ಡ್ಯೂರನಾಲ್, ಸೀಬಾಸೆಟ್, ಸೋಲಾಸೆಟ್ ಮುಂತಾದವು.

**ಅಸಿಟೇಟ್ ಕೃತಕ ರೇಷ್ಮೆಯ ಮೇಲೆ ಬಣ್ಣ ಮಾಡುವ ಕ್ರಮ:** ಶೇ. 0.25 ಸಾಬೂನನ್ನು ಬಣ್ಣದ ತೊಟ್ಟಿಯಲ್ಲಿ ಕರಗಿಸಿದ ನೀರಿನೊಡನೆ, ಬಣ್ಣದ ದ್ರಾವಣ ಮಿಶ್ರಣವನ್ನೂ ಹಾಕಿ, 65º ಸೆಂ. ಉಷ್ಣತೆಗೆ ತಂದು ಅಸಿಟೇಟ್ ಕೃತಕ ರೇಷ್ಮೆಯನ್ನು ಇದರಲ್ಲಿ ಹಾಕಿ ಸಂಸ್ಕರಿಸಬೇಕು. ಅನಂತರ 15 ಮಿನಿಟುಗಳಲ್ಲಿ 80º ಸೆಂ ಗೆ. ಉಷ್ಣತೆಯನ್ನು ಏರಿಸಿ ½–1 ಗಂಟೆಯ ಕಾಲ ಸಂಸ್ಕರಿಸಬೇಕು.

**ಪ್ರಕ್ರಿಯಾ ವರ್ಣಗಳು :** ಈ ಗುಂಪಿಗೆ ಸೇರಿದ ಬಣ್ಣಗಳು ಅತ್ಯಂತ ಹೊಸವು. ಇವು ಹತ್ತಿಯ ಮೇಲೆ ರಾಸಾಯನಿಕ ಪ್ರಕ್ರಿಯೆಯಿಂದ ಸಂಯೋಜನೆಯಾಗುತ್ತವೆ. ಹತ್ತಿಯ ಮೇಲೆ ಹೆಚ್ಚು ಸ್ಥಿರವಾಗಿಯೂ ಉಜ್ವಲವಾಗಿಯೂ ಇರುವುವು. ಬಣ್ಣಮಾಡುವುದು ಸುಲಭ. ಉಣ್ಣೆ ಮತ್ತು ರೇಷ್ಮೆಯ ಮೇಲೆ ಇವನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ. ಈ ಬಣ್ಣಗಳು ನೀರಿನಲ್ಲಿ ಸುಲಭವಾಗಿ ಕರಗುತ್ತವೆ. ಬಣ್ಣಕ್ಕೆ ಸ್ವಲ್ಪ ಬಿಸಿ ನೀರನ್ನು ಹಾಕಿ ಸರಿಮಾಡಿ ಅನಂತರ ಬಿಸಿ ನೀರನ್ನು ಸುರಿಯುತ್ತ ಕದಡುತ್ತ ಕರಗಿಸಬೇಕು. ಹತ್ತಿಯ ಮೇಲೆ ಉಪ್ಪು ಮತ್ತು ಸೋಡಿಯಂ ಕಾರ್ಬೋನೇಟ್ ಅಥವಾ ಸೋಡಿಯಂ ಹೈಡ್ರಾಕ್ಸೈಡ್ ಸಹಾಯದಿಂದ ಬಣ್ಣಮಾಡಬಹುದು. ಇನ್ನೂ ಕೆಲವಕ್ಕೆ ಉಷ್ಣ ಕೊಡಬೇಕು. ಬಣ್ಣ ಮಾಡಿದ ಮೇಲೆ ಚೆನ್ನಾಗಿ ತೊಳೆದು ಕುದಿಯುವ ಶೇ. 0.5 ಸಾಬೂನಿನ ದ್ರಾವಣದಲ್ಲಿ 10–15 ಮಿನಿಟುಗಳ ಕಾಲ ಸಂಸ್ಕರಿಸಿ ಪುನಃ ತೊಳೆಯಬೇಕು. ಇದರಿಂದ ಸಂಯೋಜನೆ ಹೊಂದದ ಬಣ್ಣ ಕೊಚ್ಚಿಹೋಗಿ ಸ್ಥಿರ ವರ್ಣ ಮಾತ್ರ ಹತ್ತಿಯ ಮೇಲೆ ಉಳಿದುಕೊಳ್ಳುವುದು. (ಬಿ.ಎಲ್.)

**ಕೃತಕ ಬೆಣ್ಣೆ :** ಸಸ್ಯ ಹಾಗೂ ಪ್ರಾಣಿಜನ್ಯ ತೈಲಗಳನ್ನು ಉಪಯೋಗಿಸಿ ಕೆನೆ ತೆಗೆದ ಹಾಲನ್ನು ಸೇರಿಸಿ ಕೃತಕವಾಗಿ ತಯಾರುಮಾಡುವ ಬೆಣ್ಣೆ (ಮಾರ್ಗರಿನ್). ಹಿಂದೊಂದು ಕಾಲದಲ್ಲಿ, ಜನಗಳ ಉಪಯೋಗಕ್ಕೆ ಹಸುಗಳಿಂದ ದೊರೆಯುವ ಬೆಣ್ಣೆ

ಸಾಲದಾಗಿ ಅದರ ಬೆಲೆ ಮಿತಿಮೀರಿದಾಗ, ಬದಲಿ ಬೆಣ್ಣೆಯ ಆವಶ್ಯಕತೆ ಎಲ್ಲೆಲ್ಲಿಯೂ ಕಂಡುಬಂತು. ಮೂರನೆಯ ನೆಪೋಲಿಯನ್ ದೊರೆ ಇದನ್ನು ತಯಾರಿಸಲು ಒಂದು ಸ್ಪರ್ಧೆಯನ್ನು ಸಹ ಏರ್ಪಡಿಸಿದ್ದ. ಇದರಲ್ಲಿ ಭಾಗಿಗಳಾದವರಲ್ಲಿ ಫ್ರೆಂಚ್ ರಾಸಾಯನಿಕ ತಜ್ಞ ಹಿಪ್ಪೊಲೈಟ್ ಮೆಗೆ ಮೌರಿಸ್ ಎಂಬಾತ ಕೃತಕ ಬೆಣ್ಣೆಯನ್ನು ಯಶಸ್ವಿಯಾಗಿ ತಯಾರಿಸಿ(1860) ಪಾರಿತೋಷಿಕವನ್ನು ಪಡೆದ(1870). ಈತ ಪ್ರಾಣಿಗಳ ನೆಣವನ್ನು ಉಪಯೋಗಿಸಿ ಕೃತಕ ಬೆಣ್ಣೆಯನ್ನು ತಯಾರಿಸಿದ್ದ. ಇದಕ್ಕೆ ಮಾರ್ಗರಿನ್ ಎಂದು ಹೆಸರಿಟ್ಟರು. ಇದು ಬೇಗನೆ ಪ್ರಪಂಚದ ಇತರ ಭಾಗಗಳಲ್ಲಿ ಉಪಯೋಗಕ್ಕೆ ಬಂತು. ಪ್ರಮುಖವಾಗಿ ಯುರೋಪು ಹಾಗೂ ಅಮೆರಿಕದ ಕೈಗಾರಿಕಾ ಪ್ರಧಾನ ನಗರಗಳಲ್ಲಿ ಇದರ ಉಪಯೋಗದ ಆವಶ್ಯಕತೆ ತಲೆದೋರಿತು. 1869ರ ಹೊತ್ತಿಗೆ ಇಂಗ್ಲೆಂಡಿನಲ್ಲಿ ಮತ್ತು 1873ರ ವೇಳೆಗೆ ಅಮೆರಿಕದಲ್ಲಿ ಈ ವಸ್ತುವಿನ ತಯಾರಿಕೆಯ ಮೇಲೆ ಸರ್ಕಾರದ ವತಿಯಿಂದ ಸ್ವಾಮ್ಯ ಸನ್ನದು ಪಡೆಯಲಾಯಿತು.

ಕೃತಕ ಬೆಣ್ಣೆಯಲ್ಲಿ ಎರಡು ರೂಪಗಳಿವೆ. ಒಂದು ಕೊಬ್ಬಿನ ರೂಪ. ಇನ್ನೊಂದು ಹಾಲಿನ ರೂಪ. ಕೊಬ್ಬಿನ ರೂಪವನ್ನು ತಯಾರಿಸಲು ನಾನಾರೀತಿಯ ಕಚ್ಚಾಪದಾರ್ಥಗಳನ್ನು ಉಪಯೋಗಿಸುವರು. ತಾಳೆ ಜಾತಿಯ ಮರದ ಹಣ್ಣು ಹಾಗೂ ಅದರ ತಿರುಳು, ತೆಂಗು ಹಾಗೂ ಕಡಲೆಕಾಯಿ, ಸೋಯಾ ಅವರೆ, ಹರಳು ಬೀಜ, ಸೂರ್ಯಕಾಂತಿ ಬೀಜಗಳಿಂದ ಬರುವ ತೈಲಗಳನ್ನು ಉಪಯೋಗಿಸುವರು. ಪ್ರಾಣಿಗಳಿಂದ ಬರುವ ತೈಲಗಳೆಂದರೆ ತಿಮಿಂಗಿಲದೆಣ್ಣೆ. ದನ, ಕುರಿ ಮತ್ತು ಇತರ ಪ್ರಾಣಿಗಳ ನೆಣ. ಹಾಲಿನ ರೂಪವನ್ನು ತಯಾರಿಸಲು ಉಪಯೋಗಿಸುವ ಕಚ್ಚಾಪದಾರ್ಥವೆಂದರೆ ಕೆನೆತೆಗೆದ ಹಾಲು. ಚೆನ್ನಾಗಿ ಕೊಬ್ಬಿನೊಂದಿಗೆ ಸೇರಲು ಸಹಾಯವಾಗುವಂತೆ ಮಾಡಲು ಹಾಲನ್ನು ಹುಳಿಬರಿಸಲಾಗುವುದು. ಉಪ್ಪು, ಇತರ ವಸ್ತುಗಳನ್ನು ರುಚಿಗಾಗಿ ಉಪಯೋಗಿಸುವರು. ಕಾಲ ಬದಲಾದಂತೆ ವ್ಯವಸಾಯ ರಂಗದಲ್ಲಿ ಪ್ರಗತಿಯಾಗಿ ಆದಾಯ ನೀಡುವ ಎಣ್ಣೆಕಾಳಿನ ಬೆಳೆಯನ್ನು ಹೆಚ್ಚಿಗೆ ಬೆಳೆಸಲು ಆರಂಭಮಾಡಿದರು. ಇದರಿಂದ ಸಸ್ಯತೈಲ ಸುಲಭರೀತಿಯಲ್ಲಿ ದೊರೆಯುವಂತಾಯಿತು. ಇದನ್ನು ಕೃತಕ ಬೆಣ್ಣೆ ತಯಾರಿಕೆಯಲ್ಲಿ ಅಳವಡಿಸಲು ಅನೇಕ ರೀತಿಯ ಸಂಶೋಧನೆ ಸಾಗಿತು. ಒಂದನೆಯ ಮಹಾಯುದ್ಧದ ಬಳಿಕ ಸೋಯಾ ಅವರೆ ತೈಲದ ಉಪಯೋಗ ಆರಂಭವಾಯಿತು. ಹರಳು ಬೀಜದ ಎಣ್ಣೆಯನ್ನು ಸೇರಿಸಲು ತೊಡಗಿದ್ದು 1937ರಲ್ಲಿ. 20ನೆಯ ಶತಮಾನದ ಆದಿಯಲ್ಲಿ ಮೂಲ ಕೃತಕ ಬೆಣ್ಣೆಯಲ್ಲಿದ್ದ ಒಂದು ರೀತಿಯ ವಿಪರೀತ ವಾಸನೆ ಹಾಗೂ ಅಹಿತಕರವಾದ ರುಚಿಯನ್ನು ಸ್ಥಗಿತಗೊಳಿಸಲು ಹೆಚ್ಚು ಹೆಚ್ಚು ಕಾಳಿನ ತೈಲವನ್ನು ಉಪಯೋಗಿಸಲು ತೊಡಗಿದರು. ಇಂದು ತಯಾರಾಗುವ ಕೃತಕ ಬೆಣ್ಣೆ ಹಿಂದಿನ ಸ್ಥಿತಿಗಿಂತ ಅನೇಕ ರೀತಿಯಲ್ಲಿ ಬದಲಾವಣೆ ಹೊಂದಿದೆ. ಅದಕ್ಕೆ ಉಪಯೋಗಿಸುವ ಸಾಮಗ್ರಿಗಳಲ್ಲಿ ಬೇಕಾದಷ್ಟು ಬದಲಾವಣೆಗಳಾಗಿವೆ. ಕೃತಕ ಬೆಣ್ಣೆ ಎಲ್ಲ ವಿಧದಲ್ಲಿಯೂ ಹಿತಕರವಾಗಿರುವಂತೆ ಮಾಡಲಾಗಿದೆ.

ಕೃತಕಬೆಣ್ಣೆಯಲ್ಲಿ ಶೇ. 80 ಮೇದಸ್ಸಿದೆ. ಇದು ಸಸ್ಯತೈಲಗಳಿಂದ ಆದುದು. ಶೇ. 16 ಕೆನೆತೆಗೆದ ಹಾಲು ಮತ್ತು ಹುಳಿಬರಿಸಿದ ಹಾಲು ಇವೆ. ಮಿಕ್ಕ ಭಾಗದಲ್ಲಿ ಮುಖ್ಯವಾದ ವಿಟಮಿನುಗಳು ಎ ಮತ್ತು ಡಿ ಹಾಗೂ ಇತರ ರುಚಿ ವಸ್ತುಗಳಿವೆ. ಪ್ರಧಾನವಾಗಿ ಕೃತಕ ಬೆಣ್ಣೆಯನ್ನು ಕೊಬ್ಬಿನ ಆಹಾರವಾಗಿ ತೆಗೆದುಕೊಳ್ಳಲಾಗುವುದು. ಇದರಲ್ಲಿ ಅಧಿಕ ಕೆಲೊರಿ ಮೌಲ್ಯವಿದೆ. ಪ್ರಾಣಿಗಳ ಮಾಂಸದ ಅಂಶ ಶೇ. 1 ರಷ್ಟು ಇರುವ ಕೃತಕ ಬೆಣ್ಣೆಗೆ ಒಲಿಯೊ ಮಾರ್ಗರಿನ್ ಎಂದು ಹೆಸರು. 100 ಗ್ರಾಂ ತೂಗುವ ಕೃತಕ ಬೆಣ್ಣೆಯಲ್ಲಿರುವ ಆಹಾರ ಘಟಕಗಳು ಹೀಗಿವೆ: ನೀರು 13.7 ಗ್ರಾಂ; ಸಾರಜನಕ 0.2ಗ್ರಾಂ; ಮೇದಸ್ಸು 85.3 ಗ್ರಾಂ; ಶರ್ಕರ ಪಿಷ್ಟ ಇಲ್ಲ; ಕಿಲೊ ಕೆಲೋರಿ 795; ಲವಣ ಮತ್ತು ಕಬ್ಬಿಣ ಅನುಕ್ರಮವಾಗಿ 4.1 ಮತ್ತು 0.3 ಮಿಗ್ರಾಂ, ವಿಟಮಿನ್ ಎ ಮತ್ತು ಡಿ ಅನುಕ್ರಮವಾಗಿ 3,000 ಮತ್ತು 300 ಇ.ಯು.ಥಯಮಿನ್, ರಿಬೊಫ್ಲೇವಿನ್, ನಯಾಸಿನ್‌ಗಳ ಅಂಶ ಸಹ ಉಂಟು. (ಜಿ.ಆರ್.ಆರ್.ಎಸ್.)

**ಕೃತಕ ಭಾಷೆಗಳು :** ಹೆಸರೇ ತಿಳಿಸುವಂತೆ ಇವು ಕಟ್ಟಿ ಚಲಾವಣೆಗೆ ತಂದ ಭಾಷೆಗಳು (ಆರ್ಟಿಫಿಷಿಯಲ್ ಲ್ಯಾಂಗ್ವೇಜಸ್), ಹುಟ್ಟಿ ಬೆಳೆದು ಬಂದುವಲ್ಲ. ಸಹಜ ಭಾಷೆಗಳಿಂದ ಸಾಧಿಸಲಾಗದ ಯಾವುದೋ ಒಂದು ಉದ್ದೇಶಕ್ಕಾಗಿ ಈ ಭಾಷೆಗಳು ಸಿದ್ಧವಾಗುತ್ತವೆ. ಆಡಿದ ಮಾತು ಜನಸಾಮಾನ್ಯರಿಗೆ ತಿಳಿಯಬಾರದು ಎಂಬ ಉದ್ದೇಶವಿದ್ದಾಗ ಇಂಥದೊಂದು ಭಾಷೆ ಅಗತ್ಯವೆನಿಸುತ್ತದೆ. ಅಲ್ಲದೆ ಬಹು ಭಾಷಾ ಗೊಂದಲವನ್ನು ತಪ್ಪಿಸಿ ಯಾವುದಾದರೊಂದು ಭಾಷೆಯನ್ನು ರಾಷ್ಟ್ರದ ಅಥವಾ ಇಡೀ ವಿಶ್ವದ ವ್ಯವಹಾರ ಮಾಧ್ಯಮವನ್ನಾಗಿ ಬಳಸುವ ಉದ್ದೇಶವಿದ್ದಲ್ಲೂ ಇಂಥ ಭಾಷೆಯ ಅಗತ್ಯ ಕಂಡು ಬರುತ್ತದೆ. ಒಂದೊಂದು ಕೃತಕ ಭಾಷೆಗೂ ತನ್ನದೇ ಆದ ಶಬ್ದಸಂಪತ್ತು, ವ್ಯಾಕರಣ, ಕೆಲವು ವೇಳೆ ವಿಶಿಷ್ಟ ಲಿಪಿ-ಇವು ಇರುತ್ತವೆ.

ತಮ್ಮವೇ ಆದ ಗುಪ್ತ ಕೃತಕ ಭಾಷೆಗಳನ್ನು ವಿಶೇಷವಾಗಿ ಸೈನ್ಯದ ಗೂಢಚಾರರು, ವ್ಯಾಪಾರಿಗಳು, ದರೋಡೆಕೋರರು ಹಾಗೂ ಚಿಕ್ಕ ಚಿಕ್ಕ ಮಕ್ಕಳು ಹೆಚ್ಚಾಗಿ ಉಪಯೋಗಿಸುತ್ತಾರೆ. ಇದರ ಮುಖ್ಯ ಉದ್ದೇಶವೇನೆಂದರೆ ತಮ್ಮ ಮಾತು ಬೇರೆ ಜನರಿಗೆ ಅರ್ಥವಾಗುವಂತಿರಬಾರದು ಎಂಬುದು. ಭಾರತದ ಸ್ವಾತಂತ್ರ್ಯ ಸಂಗ್ರಾಮಕಾಲದಲ್ಲಿ ಕೆಲವು ದಂಗೆಕೋರರು ವಿರೋಧಿಗಳಿಗೆ ತಡೆಯನ್ನುಂಟುಮಾಡುವ ಉದ್ದೇಶದಿಂದ ಕೆಲವು ಗುಪ್ತ ಭಾಷೆಗಳನ್ನು, ಗುಪ್ತಲಿಪಿಗಳನ್ನು ಉಪಯೋಗಿಸಿದರು. ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುವ ಗುಪ್ತ ಭಾಷಾಪ್ರವೃತ್ತಿಗೆ ಕೆಲವು ಉದಾಹರಣೆಗಳನ್ನು ನೋಡಬಹುದು. ತಮ್ಮ ಭಾಷೆ ಮೂರನೆಯವರಿಗೆ ಅರ್ಥವಾಗದಿರಲೆಂದು ಪದದ ವರ್ಣವನ್ನು ಹಿಂದುಮುಂದು ಮಾಡಿ ಬಳಸುವುದಿದೆ. ಉದಾ: ಅವನು ಮನೆಗೆ ಹೋದ-ಎಂಬುದನ್ನು ನುವಅ ಗೆನಮ ದಹೋ- ಎಂದು ಹೇಳುವುದು. ಪದದ ಪ್ರತಿ ವರ್ಣದ ಹಿಂದೆ ಇನ್ನೊಂದು ವರ್ಣವನ್ನು ಸೇರಿಸಿ ಆಡುವುದು. ಉದಾ: ಅವನು ಮನೆಗೆ ಹೋದ-ಎಂಬುದನ್ನು ಕಅಕವಕನು ಕಮಕನೆಕಗೆ ಕಹೋಕದ ಎನ್ನುವುದು. ಕೆಲವು ಮಕ್ಕಳು ಪದದ ಮೊದಲ ವರ್ಣದ ಮುಂದೆ ಪ್ಪ ವರ್ಣವನ್ನು ಸೇರಿಸಿ ಗಂಟೆಗಟ್ಟಲೆ ಮಾತಾಡುತ್ತಾರೆ. ಉದಾ: ಅವನು ಅಲ್ಲೇ ಹೋದ- ಎಂಬುದನ್ನು ಅಪ್ಪವನು ಅಪ್ಪಲ್ಲೇ ಹೊಪ್ಪೋದ-ಎಂದು. ಕೆಲವು ಮಕ್ಕಳು ಕನ್ನಡ, ಹಿಂದೀ, ಉರ್ದು, ಇಂಗ್ಲೀಷ್ ಇತ್ಯಾದಿ ಭಾಷೆಗಳ ಲಿಪಿಗಳನ್ನು ಬಳಸಿಕೊಂಡು ಒಂದು ಕೃತಕ ಲಿಪಿಯನ್ನೇ ನಿರ್ಮಿಸಿದ್ದಾರೆ. ಉದಾ: ಅದು Aದು, ಇದು- iದು, ಅವನು Aವನು ಇತ್ಯಾದಿ. ಹಲವು ಭಾಷಾ ಲಿಪಿಗಳನ್ನು ಬಲ್ಲ ವಿದ್ಯಾರ್ಥಿಗಳಲ್ಲಿ ಈ ಪ್ರವೃತ್ತಿ ಹೆಚ್ಚಾಗಿ ಕಂಡುಬರುತ್ತದೆ. ಗುಪ್ತಲಿಪಿಯಲ್ಲಿ ಸ್ನೇಹಿತರಿಂದ ಸ್ನೇಹಿತರಿಗೆ ಕಾಗದಗಳು ಓಡಾಡುತ್ತವೆ. ಕೆಲವು ವೇಳೆ ಅಕ್ಷರಗಳನ್ನು ಹಿಂದುಮುಂದು ಮಾಡಿ ಕನ್ನಡಿಯಲ್ಲಿ ಕಂಡಂತೆ ಬರೆಯಲಾಗುತ್ತದೆ. ಅದನ್ನು ಓದಬೇಕಾದರೆ ಕನ್ನಡಿ ಹಿಡಿದೇ ಓದಬೇಕು. ಕೆಲವು ವೇಳೆ ಅಕ್ಷರಗಳಿಗೆ ಬದಲಾಗಿ ಅಂಕಿಗಳನ್ನು ಬಳಸುವುದುಂಟು. ಈಗ ಬಳಕೆಯಲ್ಲಿರುವ ಇಂಗ್ಲಿಷ್, ಹಿಂದಿ ಮತ್ತು ಕನ್ನಡ ಶೀಘ್ರಲಿಪಿಗಳು ಇಂಥವೇ ಅಲ್ಲದಿದ್ದರೂ ಅಂಥ ಬರೆವಣಿಗೆಗಾಗಿ ಹುಟ್ಟಿದ ಕೃತಕ ಲಿಪಿಗಳಾಗಿವೆ.

ದೇಶ ವಿಶಾಲವಾಗಿದ್ದು ಅದರಲ್ಲಿ ಅನೇಕ ಭಾಷೆಗಳು ಬಳಕೆಯಲ್ಲಿದ್ದರೆ ಕೆಲವೇಳೆ ಒಂದು ರಾಷ್ಟ್ರೀಯ ಭಾಷೆಯ ಅಗತ್ಯ ಕಂಡುಬರಬಹುದು. ಹಾಗೆಯೆ ದೇಶ ದೇಶಗಳ ನಡುವಿನ ಅಂತಾರಾಷ್ಟ್ರೀಯ ವ್ಯವಹಾರಗಳಿಗಾಗಿ ಒಂದು ಅಂತಾರಾಷ್ಟ್ರೀಯ ಭಾಷೆ ಇದ್ದರೊಳ್ಳೆಯದು ಎಂಬ ಭಾವನೆ ಕೆಲವೊಮ್ಮೆ ಕಾಣಿಸಿಕೊಂಡಿರುವುದುಂಟು. **(ನೋಡಿ- ಅಂತಾರಾಷ್ಟ್ರೀಯ-ಭಾಷೆ)**. ನೂರು ಭಾಷೆಗಳು ಬಳಕೆಯಲ್ಲಿರುವ ಕಡೆ ಅವುಗಳಲ್ಲೊಂದನ್ನು ರಾಷ್ಟ್ರಭಾಷೆಯೆಂದಾಗಲಿ ಅಂತಾರಾಷ್ಟ್ರೀಯ ಭಾಷೆಯೆಂದಾಗಲಿ ಆರಿಸಿದಲ್ಲಿ ಪಕ್ಷಪಾತ ಮಾಡಿದಂತಾಗುತ್ತದೆ. ಅದರಿಂದ ಗೊಂದಲ, ಘರ್ಷಣೆಗಳಿಗೆ ಎಡೆ ಮಾಡಿಕೊಟ್ಟಂತಾಗಬಹುದು. ಆದ್ದರಿಂದ ಆ ಉದ್ದೇಶಕ್ಕೆ ಕೃತಕ ಭಾಷೆಯೊಂದನ್ನು ಸೃಷ್ಟಿಸುವ ಕಡೆ ವಿದ್ವಾಂಸರ ಗಮನ ಹರಿದಿರುವುದುಂಟು.

ಇಂಥ ಉದ್ದೇಶದಿಂದ ಒಂದು ಕೃತಕ ಭಾಷೆಯನ್ನು ನಿರ್ಮಿಸುವ ಸರ್ವಪ್ರಯತ್ನ ನಡೆಸಿದವರಲ್ಲಿ ಫ್ರಾನ್ಸಿಸ್ ಬೇಕನ್(1561-1626) ಮೊತ್ತ ಮೊದಲಿಗನೆನ್ನಬಹುದು. ಆತ ತನ್ನ ಕಾಲದಲ್ಲಿ ಆಗಷ್ಟೇ ಪರಿಚಯವಾಗುತ್ತಿದ್ದ ಚೀನೀ ಭಾವಲಿಪಿಯನ್ನು ಉಪಯೋಗಿಸಿಕೊಂಡು ಕೃತಕ ಬರೆವಣಿಗೆಯ ಒಂದು ವಿಧಾನವನ್ನು ಸೂಚಿಸಿದ. ಅದು ಕೇವಲ ಬರೆವಣಿಗೆಯೇ ಹೊರತು ಭಾಷೆಯಲ್ಲ. 1629ರಲ್ಲಿ ತತ್ತ್ವಶಾಸ್ತ್ರಜ್ಞ ಡೇಕಾರ್ಟ್ ಸಂಖ್ಯೆಗಳ ಆಧಾರದ ಮೇಲೆ ಕೃತಕ ಭಾಷೆಯೊಂದನ್ನು ರೂಪಿಸಿದ. ಇದರಿಂದ ವಿಶ್ವಭಾಷಾ ಚಳವಳಿಗೆ ತೀವ್ರ ಪ್ರೋತ್ಸಾಹ ಸಿಕ್ಕಿದಂತಾಯಿತು. ಅಲ್ಲಿಂದ ಮುಂದೆ ಕೆಲವೇ ವರ್ಷಗಳಲ್ಲಿ ಅನೇಕ ಕೃತಕ ಭಾಷೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಕೆಲವು ಬರೆವಣಿಗೆಯನ್ನೂ ಸೇರಿಸಿಕೊಂಡವು. ಈ ಭಾಷೆಗಳ ಬಗ್ಗೆ ಸಾಕಷ್ಟು ಚರ್ಚೆ, ಪ್ರಯೋಗ ನಡೆಯಿತಾದರೂ ಯಾವುದೂ ಬಳಕೆಗೆ ಬರಲು ಸಾಧ್ಯವಾಗಲಿಲ್ಲ. ಫ್ರಾನ್ಸಿಸ್ ಬೇಕನನಿಂದ ಇಂದಿನ ತನಕ ಹೆಚ್ಚುಕಡಿಮೆ ಏಳನೂರು ಕೃತಕ ಭಾಷೆಗಳು ಸೃಷ್ಟಿಯಾಗಿವೆ ಎಂದು ಲೆಕ್ಕಾಚಾರ ಮಾಡಲಾಗಿದೆ. ಇವುಗಳಲ್ಲಿ ಕೆಲವು ಬಳಕೆಯಲ್ಲಿರುವ ವಿವಿಧ ಭಾಷೆಗಳ ಬೇರೆಬೇರೆ ಅಂಶಗಳನ್ನು ಸೇರಿಸಿ ತಯಾರಿಸಿದ ಮಿಶ್ರಣಗಳಾಗಿವೆ. ಬೋಪಲ್, ದಿಲ್, ಬಾಲ್ಟಾ, ಲ್ಯಾಟಿನೀಸ್, ವೆಲ್ಟ್ ಪಾರ್ಲ್ ಮುಂತಾದ ಕೃತಕ ಭಾಷೆಗಳು ಸುಮಾರು 19ನೆಯ ಶತಮಾನದಲ್ಲಿ ನಿರ್ಮಿತವಾದವು. ನೋವಿಯಲ್, ಇಂಟರ್‌ಲಿಂಗ್ವ, ಇಂಟರ್ ಗ್ಲಾಸ, ಇಡೊ, ಅಕ್ಸಿಡೆಂಟಲ್-ಮುಂತಾದ ಕೃತಕ ಭಾಷೆಗಳು 20ನೆಯ ಶತಮಾನದಲ್ಲಿ ಸೃಷ್ಟಿಯಾದವು. ಇವುಗಳಲ್ಲಿ ಎರಡು ಭಾಷೆಗಳು ಮಾತ್ರ ತುಂಬ ಯಶಸ್ವಿಯಾಗಿದ್ದು ವಿಶೇಷ ಉಲ್ಲೇಖಕ್ಕೆ ಯೋಗ್ಯವಾಗಿವೆ. ಅವು ಯಾವುವೆಂದರೆ ಒಂದು ವೊಲಾಪುಕ್; ಇನ್ನೊಂದು ಎಸ್ಪರ್‍ಯಾಂಟೊ.

ಶ್ಲೇಯರ್ ಎಂಬಾತ ಸುಮಾರು 1880ರಲ್ಲಿ ವೊಲಾಪುಕ್ ಭಾಷೆಯನ್ನು ನಿರ್ಮಿಸಿದ. ಇದರ ಧಾತುಗಳನ್ನು ಇಂಗ್ಲಿಷ್ ಮತ್ತು ಲ್ಯಾಟಿನ್ ಭಾಷಾಮೂಲಗಳಿಂದ ತಂದುಕೊಳ್ಳಲಾಗಿದೆ. ಇದರ ಪದಸಮೂಹ ತುಂಬ ಸರಳ ಹಾಗೂ ಸುಲಭ. ವ್ಯಾಕರಣ, ಮಾತೃಭಾಷೆಯಾದ ಜರ್ಮನ್ ಭಾಷೆಯನ್ನಾಧರಿಸಿದೆ. ಶ್ಲೇಯರ್‌ನಿಗೆ ಪ್ರಪಂಚಕ್ಕೆ ಒಂದೇ ಒಂದು ಭಾಷೆಯನ್ನು ನಿರ್ಮಿಸಬೇಕೆಂಬ ಆಸೆ ಇತ್ತಾದರೂ ಅವನ ಪ್ರಯತ್ನಕ್ಕೆ ಸಾಕಷ್ಟು ಮಾನ್ಯತೆ ಸಿಕ್ಕಲಿಲ್ಲ.

ಭಾಷಾಶಾಸ್ತ್ರದಲ್ಲಿ ಪ್ರಕಾಂಡ ಪಂಡಿತನೂ ಬಹುಭಾಷಾವಿಶಾರದನೂ ಆದ ಲಾಜರಸ್ ಲುಡ್ವಿಗ್ ಝಮೆನ್ ಹಾಫ್ (1859-1917) ಎಂಬ ರಷ್ಯನ್ ಪಂಡಿತ ಎಸ್ಪರ್‍ಯಾಂಟೊ **(ನೋಡಿ- ಎಸ್ಪರ್‍ಯಾಂಟೊ)** ಎಂಬ ಅಂತಾರಾಷ್ಟ್ರೀಯ ಭಾಷೆಯೊಂದನ್ನು 1887ರಲ್ಲಿ

ಸೃಷ್ಟಿಸಿದ. ಮೊದಮೊದಲು ಜನ ಇವನ ಯತ್ನಕ್ಕೆ ಅಷ್ಟಾಗಿ ಮಾನ್ಯತೆ ನೀಡಲಿಲ್ಲವಾದರೂ ಕಾಲ ಕಳೆದಂತೆಲ್ಲ ಎಸ್ಪರ್ಯಾಂಟೊ ಯುರೋಪಿನ ದೊಡ್ಡ ದೊಡ್ಡ ವಿದ್ವಾಂಸರ ಗಮನವನ್ನು ಆಕರ್ಷಿಸಿತು. ಇದರ ಸರಳತೆ, ಉಪಯೋಗಗಳನ್ನವರು ತುಂಬ ಪ್ರಶಂಸಿಸಿದರು. ಈ ಭಾಷಾಪ್ರಚಾರಕ್ಕಾಗಿಯೇ ಒಂದು ಸಂಸ್ಥೆಯನ್ನು ತೆರೆಯಲಾಯಿತು. ವಿಶ್ವದ ಕೆಲವು ರಾಷ್ಟ್ರಗಳ ಬೆಂಬಲವೂ ಇದಕ್ಕೆ ದೊರೆಯಿತು. ಇದೆಲ್ಲದರ ಪರಿಣಾಮವಾಗಿ ಎಸ್ಪರ್ಯಾಂಟೊ ಬಹುಬೇಗ ಯಶಸ್ಸು ಗಳಿಸಿಕೊಳ್ಳಲು ಅವಕಾಶ ಸಿಕ್ಕಿದಂತಾಯಿತು. ಜ಼ಮೆನ್‌ಹಾಫ್ 1887ರಲ್ಲಿ ಎಸ್ಪರ್ಯಾಂಟೊ ಎಂಬ ಗುಪ್ತನಾಮದಲ್ಲಿ ಅಂತಾರಾಷ್ಟ್ರೀಯ ಭಾಷೆ ಎಂಬ ಒಂದು ಕಿರು ಹೊತ್ತಗೆಯನ್ನು ಪ್ರಕಟಿಸಿದ. ಎಸ್ಪರ್ಯಾಂಟೊ ಎಂಬ ಲ್ಯಾಟಿನ್ ಪದಕ್ಕೆ ಆಶಾವಾದಿ ಎಂದರ್ಥ. ಜ಼ಮೆನ್‌ಹಾಫ್‌ನ ಗುಪ್ತನಾಮವೇ ಅವನ ಭಾಷೆಯ ಹೆಸರಾಗಿ ಉಳಿಯಿತು.

ಎಸ್ಪರ್ಯಾಂಟೊ ಭಾಷೆಗೆ ಹೆಚ್ಚಿನ ಪ್ರಸಾರ ದೊರಕಿತು. ಒಂದನೆಯ ಮತ್ತು ಎರಡನೆಯ ಮಹಾಯುದ್ಧ ಕಾಲದಲ್ಲದನ್ನು ಪ್ರಚಾರ ಮಾಧ್ಯಮವನ್ನಾಗಿ ಬಳಸಲಾಯಿತು. ಈ ಭಾಷೆಯಲ್ಲಿ ಅನೇಕಾನೇಕ ಗ್ರಂಥಗಳು ಹೊರಬಿದ್ದುವು. ನಿರ್ಮಿತ ಭಾಷೆಗಳಲ್ಲೆಲ್ಲ ಎಸ್ಪರ್ಯಾಂಟೊ ನಿರ್ವಿವಾದವಾಗಿ ಅತ್ಯಂತ ಯಶಸ್ವಿಯಾದ ಜನಪ್ರಿಯವಾದ ಭಾಷೆ. ಸರಳತೆ, ಸಂಕ್ಷಿಪ್ತತೆ, ಸೌಲಭ್ಯ ಹಾಗೂ ಕ್ರಮಬದ್ಧತೆಗಳೇ ಈ ಭಾಷೆಯ ಮುಖ್ಯ ಸೂತ್ರಗಳು.

20ನೆಯ ಶತಮಾನದ ಆರಂಭದಲ್ಲಿ ಕೆಲವು ವಿದ್ವಾಂಸರು ಎಸ್ಪರ್ಯಾಂಟೊ ಭಾಷೆಯನ್ನು ತುಂಬ ನವೀನ ರೀತಿಯಲ್ಲಿ ಪರಿವರ್ತಿಸುವ ಪ್ರಯತ್ನ ನಡೆಸಿದರು. ಅಂಥವರಲ್ಲಿ ಕಾಂಟುರಟ್ ಮೊದಲಿಗ. ಅವನ ಅತಿ ಸರಳ ಹಾಗೂ ತುಂಬ ಉಪಯೋಗಿ ನವೀನ ಭಾಷೆಯೇ ಇಡೊ. ಈ ಪದವನ್ನು ಎಸ್ಪರ್ಯಾಂಟೊ ಭಾಷೆಯಿಂದಲೇ ತೆಗೆದುಕೊಂಡಿದೆ. ಇದರ ಅರ್ಥ ಮಗು ಅಥವಾ ಹುಟ್ಟು ಎಂದು. ಇದನ್ನು ಸುಲಭವಾಗಿ ಅಂತಾರಾಷ್ಟ್ರೀಯ ಭಾಷೆಯನ್ನಾಗಿ ಉಪಯೋಗಿಸಿಕೊಳ್ಳಬಹುದಿತ್ತು. ಆದರದು ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ.

ಅಷ್ಟಾಗಿ ಕೃತಕ ಭಾಷೆಗಳು ಚಲಾವಣೆಗೆ ಬಂದು ಶಾಶ್ವತವಾಗಿ ನಿಲ್ಲದಿರಲು ಅನೇಕ ಕಾರಣಗಳಿವೆ. ಭಾಷೆ ಒಂದು ಸಾಮಾಜಿಕ ಕ್ರಿಯೆ. ಅದು ಸಮುದಾಯದ ಸಹಜ ಕೊಡುಗೆ. ಸಾಮೂಹಿಕ ಸೃಷ್ಟಿಯೇ ಹೊರತು ಅದು ಕೃತಕ ನಿರ್ಮಾಣವಲ್ಲ. ಆದುದರಿಂದಲೇ ಯಾವ ಒಂದು ಕೃತಕ ಭಾಷೆಯೂ ಸಂಪೂರ್ಣವಾಗಿ ಯಶಸ್ವಿಯಾಗುವುದು ಸಾಧ್ಯವಾಗಿಲ್ಲ. ಯಾವುದೇ ಒಂದು ಭಾಷೆಯನ್ನು ಪ್ರಪಂಚಾದ್ಯಂತ ಬಳಕೆಗೆ ತಂದರೂ ಅದನ್ನು ಬಳಸುವ ಜನ ಮೊದಲೇ ಬೇರೆ ಬೇರೆ ಭಾಷೆಗಳನ್ನು ಆಡುತ್ತಿರುತ್ತಾರಾದ್ದರಿಂದ ಭಾಷಾ ವ್ಯತ್ಯಾಸಗಳುಂಟಾಗುವ ಅಪಾಯ ಇದ್ದೇ ಇರುತ್ತದೆ. ಒಂದೇ ಭಾಷೆಯನ್ನು ಒಂದೇ ಸ್ಥಿತಿಯಲ್ಲಿ ಬಳಕೆಯಲ್ಲಿ ಉಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಚಿರಪರಿವರ್ತನಾಶೀಲತೆ ಭಾಷೆಯ ಬಹುಮುಖ್ಯ ಲಕ್ಷಣ. ಬಳಕೆಯಲ್ಲಿರುವ ಭಾಷೆಯಲ್ಲಂತೂ ಈ ಮಾತು ಸತ್ಯ. ಹಾಗಿರುವಾಗ ಕೃತಕ ಭಾಷೆಯೊಂದು ಅಸ್ತಿತ್ವಕ್ಕೆ ಬಂದು ಈಗಿರುವ ಭಾಷೆಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುವುದು ಸಾಧಾರಣ ಪರಿಸ್ಥಿತಿಯಲ್ಲಿ ಸಾಧ್ಯವಾಗದ ಮಾತು. (ಕೆ.ಕೆ.ಜಿ.)

**ಕೃತಕ ಮಳೆ :** ಮೋಡಗಳ ಮೇಲೆ ಕೆಲವು ರಾಸಾಯನಿಕಗಳನ್ನು ಬಿತ್ತುವುದರ (ಸೀಡಿಂಗ್) ಮೂಲಕ ಆ ಮೋಡಗಳು ಘನೀಕರಿಸಿ ನೀರಾಗಿ ಸುರಿಯುವ ವಿದ್ಯಮಾನ (ಆರ್ಟಿಫಿಷಿಯಲ್ ರೇನ್). ಇದರ ಹಿನ್ನೆಲೆಯಲ್ಲಿರುವ ತತ್ತ್ವ ಪ್ರಕೃತಿಯ ಅನುಕರಣೆಯ ಪ್ರಯತ್ನ. ಅಲ್ಲಿ ಮೋಡ ಮಳೆಯಾಗಿ ಸುರಿಯುವ ಮುನ್ನ ಯಾವ ಯಾವ ಹಂತಗಳ ಮೂಲಕ ಸಾಗುತ್ತದೆ ಎಂಬುದನ್ನು ಅಭ್ಯಸಿಸಿ ಅವನ್ನು ಮೋಡಗಳ ಮೇಲೆ ಕೃತಕವಾಗಿ ಪ್ರಯುಕ್ತಿಸಲು ಮಾಡುವ ಏರ್ಪಾಡಿದು. ಬರ್ಫದ ಅಥವಾ ತತ್ಸಮಾನ ನೀರಿನ ದೊಡ್ಡ ತುಣುಕುಗಳ ಇರವು ಮೋಡ ನೀರಾಗಿ ಕರಗುವ ಕ್ರಿಯಾವಿನ್ಯಾಸದ (ಮೆಕ್ಯಾನಿಸಂ) ಚಾಲನೆಗೆ ಆವಶ್ಯವೆಂದು ಕಂಡುಬಂದಿದೆ. ಎಲ್ಲ ಮೋಡಗಳೂ ಮಳೆಯಾಗಿ ಸುರಿಯದಿರಲು ಕಾರಣ ಅಂಥವುಗಳಲ್ಲಿ ಈ ಕ್ರಿಯಾವಿನ್ಯಾಸ ಅದಕ್ಷವಾಗಿರುವುದಾಗಿರಬಹುದೆಂದು ಭಾವಿಸಿದ್ದಾರೆ. ಈ ಆಧಾರಭಾವನೆಯ ಪ್ರಕಾರ, ಮಳೆ ಸುರಿಯದ ಮೋಡಗಳಲ್ಲಿ, ಕರಗುವ ಕ್ರಿಯಾವಿನ್ಯಾಸಕ್ಕೆ ಒತ್ತಾಸೆ ನೀಡಿದರೆ, ಮಳೆ ಸುರಿಯುವುದು ಸಹಜವಾಗಬೇಕು ಎಂದಾಯಿತು. ಶುಷ್ಕ ಬರ್ಫ ಅಥವಾ ಬೆಳ್ಳಿಯ ಅಯೊಡೈಡನ್ನು ಮೋಡಗಳ ಮೇಲೆ ಚೆಲ್ಲಿದಾಗ, ಕೆಲವು ಸಂದರ್ಭಗಳಲ್ಲಿ ಅವು ಘನೀಕರಿಸಿ ಮಳೆ ಸುರಿದದ್ದು ಉಂಟು. ಶುಷ್ಕ ಬರ್ಫ ವಿಧಾನದಲ್ಲಿ ಸುಮಾರು 1 ಸೆಂಮೀ. ವ್ಯಾಸವಿರುವ ಬರ್ಫದ ತುಣುಕುಗಳನ್ನು ಅತಿಶೈತ್ಯಗೊಂಡಿರುವ ಮೋಡದ ತುತ್ತತುದಿಯಲ್ಲಿ ಎಸೆಯುತ್ತಾರೆ. ಪ್ರತಿಯೊಂದು ತುಣುಕೂ ಅದರ ಆಸುಪಾಸಿನ ವಾಯುವನ್ನು $-40^{\circ}$ ಸೆಂ.ಗಿಂತಲೂ ಕೆಳಗಿನ ಉಷ್ಣತೆಗೆ ಶೀತಲಿಸುತ್ತದೆ. ಈ ಕ್ರಿಯೆಯಲ್ಲಿ ಅದು ಸುಮಾರು $10^{-12}$ ಅತಿಸೂಕ್ಷ್ಮ ಬರ್ಫದ ಕಣಗಳನ್ನು ಸಹ ಉಂಟುಮಾಡುವುದೆಂದು ಅಂದಾಜು. ಇವು ಮೋಡದ ಎಲ್ಲೆಲ್ಲೂ ಕ್ರಮೇಣ ಪಸರಿಸಿ, ಬೆಳೆದು, ಹಿಮಚಂಡುಗಳಾಗಿ ವಿಸ್ತರಿಸುತ್ತವೆ. ಇಷ್ಟಾದ ಮೇಲೆಯೂ ನೀರಾಗಿ ಸುರಿಯುವ ಕೃತಕ ಮಳೆಯ ಪರಿಮಾಣ ಗಮನಾರ್ಹವಾದುದೇನೂ ಅಲ್ಲ. ಬರ್ಫ ವಿಧಾನವಿನ್ನೂ ಪ್ರಾರಂಭ ಪ್ರಾಯೋಗಿಕ ಹಂತದಲ್ಲಿದೆ.

ಅಮೆರಿಕದ ಫ್ಲಾರಿಡದಲ್ಲಿ ಒಂದು ಪ್ರಯೋಗವನ್ನು ನಡೆಸಿದರು(1968). ಪ್ರತಿ ಮುಂಜಾನೆ ವಾಯುಮಂಡಲದ ವಿವಿಧ ಮಾಹಿತಿಗಳನ್ನು ಗಣಕಯಂತ್ರಕ್ಕೆ ಉಣಿಸುತ್ತಿದ್ದರು. ಮೋಡಗಳು ಬಹಳ ಎತ್ತರಕ್ಕೆ ಸಹಜವಾಗಿ ವಿಕಸಿಸುವ ಪ್ರವೃತ್ತಿಯುಳ್ಳವು. ಅಥವಾ ಅವು ಭೂರಿ ಬಿತ್ತನೆಗೆ ಒಗ್ಗಲಾರದಂಥವು ಎಂಬ ಉತ್ತರ ಗಣಕದಿಂದ ದೊರೆತಂದು ಪ್ರಯೋಗವನ್ನು ರದ್ದುಮಾಡುತ್ತಿದ್ದರು. ಹೀಗಲ್ಲದ ದಿನಗಳಂದು ಪ್ರಯೋಗವನ್ನು ಮುಂದುವರಿಸುವುದು ಆ ವಿಜ್ಞಾನಿಗಳ ಇಚ್ಛೆ. ಅವರಿಗೆ ಸಕಾಲ ಪ್ರಾಪ್ತವಾದಾಗ 14 ಮೋಡಗಳು ಪ್ರಯೋಗಕ್ಕೆ ದೊರೆತವು. ಪ್ರತಿಯೊಂದು ಮೋಡವನ್ನೂ ಬೆಳ್ಳಿಯ ಅಯೊಡೈಡಿನಿಂದ ಪದೇಪದೇ ಬಂಬಾಯಿಸಿದರು. ಅವರು ಬಳಸಿದ ಈ ರಾಸಾಯನಿಕದ ಒಟ್ಟು ಪರಿಮಾಣ 1,000 ಗ್ರಾಮುಗಳು. ಆದರೆ ಅಷ್ಟು ಮೋಡಗಳ ಪೈಕಿ ಒಂದು ಮಾತ್ರ ಗಮನಾರ್ಹ ಬದಲಾವಣೆಯನ್ನು ಪ್ರದರ್ಶಿಸಿತು. ಅದು ದ್ವಿಗುಣಿತ ಅಥವಾ ತ್ರಿಗುಣಿತವೆನಿಸುವಷ್ಟು ಪರಿಮಾಣದ ಮಳೆಯನ್ನು ಸುರಿಸಿತು.

ಬಿತ್ತಿದ ಮೋಡ ಸುರಿಸುವ ಕೃತಕ ಮಳೆಯ ಮೊತ್ತ ಸಮಾನ ಪರಿಮಾಣದ ಬಿತ್ತದ ಮೋಡ ಸುರಿಸುವ ಸಹಜ ಮಳೆಯ ಮೊತ್ತಕ್ಕಿಂತ ಹೆಚ್ಚೇನೂ ಅಲ್ಲ. ವಾಸ್ತವಿಕವಾಗಿ ಅವು ಸಾದೃಶ್ಯವಾಗಿರುತ್ತವೆ ಎಂದು ಗಮನಿಸಲಾಗಿದೆ.

ಕೃತಕ ಮಳೆಯ ಈ ತಂತ್ರ ಸುಭದ್ರವಾದದ್ದು ಎಂಬುದು ಇಂದಿನ ನಂಬಿಕೆ. ಆದರೆ ಮೇಘ ಭೌತವಿಜ್ಞಾನದ (**ನೋಡಿ– ಭೌತವಿಜ್ಞಾನ**) ಸಮಗ್ರ ವಿವರಗಳೂ ತಿಳಿಯದ ವಿನಾ ಭೂರಿ ಪ್ರಮಾಣದಲ್ಲಿ ಮಿತವ್ಯಯದಿಂದ ಯಶಸ್ಸು ಗಳಿಸುವುದು ಬಲು ದೂರದ ಆಸೆ. *

**ಕೃತಕ ರತ್ನಗಳು :** ಆಮ್ಲಜನಕ–ಜಲಜನಕ ಜ್ವಾಲೆಯಲ್ಲಿ ಅಲ್ಯೂಮಿನಿಯಂ ಆಕ್ಸೈಡ್ ಎಂಬ ವಸ್ತುವನ್ನು ಕಾಯಿಸಿದಾಗ ಸಣ್ಣ ಹನಿಗಳ ರೂಪದಲ್ಲಿ ಮೈದಳೆಯುವ ವಸ್ತುಗಳು (ಆರ್ಟಿಫಿಷಿಯಲ್ ಜೆಮ್ಸ್). ಇವು ಘನೀಕರಿಸಿ ಕೃತಕ ರತ್ನಗಳಾಗುತ್ತವೆ. ಯುಕ್ತ ಲೋಹ ಭಸ್ಮಗಳನ್ನು(ಆಕ್ಸೈಡುಗಳನ್ನು) ಸೇರಿಸುವುದರಿಂದ ನಾನಾ ಬಣ್ಣಗಳು ಉಂಟಾಗುತ್ತವೆ. ರಸಾಯನವಿಜ್ಞಾನದ ಪ್ರಗತಿಯೊಂದಿಗೆ ಕೃತಕ ರತ್ನಗಳ ಉತ್ಪಾದನೆಯೂ ಭರದಿಂದ ಸಾಗಿದೆ. ರತ್ನಗಳಿಗೆ ಇರುವ ಬೇಡಿಕೆ ಕೂಡ ಕೃತಕ ರತ್ನಗಳ ಪೂರೈಕೆಗೆ ಹೆಚ್ಚು ಬೆಂಬಲ ನೀಡಿದೆ. 1902ರಲ್ಲಿ ಫ್ರಾನ್ಸಿನ ಹೆಸರಾಂತ ರಸಾಯನವಿಜ್ಞಾನಿ ಎ–ವರ್ನೂಯಿಲ್ ಕೃತಕ ರತ್ನಗಳ ಸೃಷ್ಟಿಗೆ ಬುನಾದಿ ಹಾಕಿದ. ಅಲ್ಯುಮಿನಿಯಂ ಆಕ್ಸೈಡನ್ನು ಭಸ್ಮಮಾಡಿ ಜ್ವಾಲೆಯಲ್ಲಿ 2050$^{\circ}$ ಸೆ. ಉಷ್ಣತೆಯಲ್ಲಿ ಕಾಯಿಸಿದಾಗ ಕೆಳಗಿಟ್ಟ ಪಾತ್ರೆಯಲ್ಲಿ ಪೇರುಹಣ್ಣಿನ ಆಕಾರದ ಸ್ಫಟಿಕ ಮೈದಳೆದಿತ್ತು. ಅದಕ್ಕೆ ಅಲ್ಪಪ್ರಮಾಣದ ಕ್ರೋಮಿಯಂ ಬೆರೆಸಿದಾಗ ಅದು ಮಾಣಿಕ್ಯವನ್ನು ಹೋಲುವ ಸ್ಫಟಿಕವೆಂಬುದು ತಿಳಿದುಬಂತು. ಭಸ್ಮಕ್ಕೆ ಕಬ್ಬಿಣ ಮತ್ತು ಟೈಟಾನಿಯಂ ಆಕ್ಸೈಡನ್ನು ಮಿಶ್ರಣಮಾಡಿದಾಗ ನೈಜ ನೀಲದಂತೆ ಕಂಡುಬಂತು. ಈ ಕೃತಕ ರತ್ನಗಳು ಆಂತರಿಕ ದೋಷಗಳಿಂದ ಮುಕ್ತವಾಗಿದ್ದುವು. ಕೆಲವು ಸ್ಪಿನಲ್ ಸ್ಫಟಿಕಗಳನ್ನು ಬಳಸಿ ಮಾಣಿಕ್ಯಗಳನ್ನೂ ನೀಲಿ ಸ್ಪಿನಲ್ ಬಳಸಿ ನೀಲವನ್ನೂ ಸಂಶ್ಲೇಷಿಸಲಾಗುತ್ತಿದೆ. ನಕ್ಷತ್ರಮಾಣಿಕ್ಯವನ್ನು ಸೃಷ್ಟಿಸುವುದೂ ಈಗ ಸಾಧ್ಯವಾಗಿದೆ. ಬೆಣಚು ಸ್ಫಟಿಕವನ್ನು ಬಳಸಿ ಕಾಬೂಷಾನ್ ಶೈಲಿಯಲ್ಲಿ ಕತ್ತರಿಸಿ ತಳದಲ್ಲಿ ಕೆಂಪುಬಣ್ಣ ಪ್ರತಿಫಲಿಸುವ ಫಲಕವನ್ನು 60$^{\circ}$ ಕೋನದಲ್ಲಿರಿಸಿ ಗೆರೆಎಳೆದರೆ ಸ್ಫಟಿಕ ನಕ್ಷತ್ರದಂತೆ ಬೆಳಕನ್ನು ಹೊಮ್ಮಿಸುತ್ತದೆ. ಸಂಶ್ಲೇಷಿತ ಮಾಣಿಕ್ಯ ಅಥವಾ ನೀಲಗಳಲ್ಲಿ ಬಣ್ಣ ಏಕಪ್ರಕಾರವಾಗಿ ಹಂಚಿಕೆಯಾಗಿರುವುದಿಲ್ಲ. ಗಾಳಿ ಗುಳ್ಳೆಗಳ ಗಾತ್ರವೂ ಬೇರೆಬೇರೆಯಾಗಿರುತ್ತದೆ. ಅಲ್ಲದೆ ಅವು ಕ್ರಮಬದ್ಧವಾಗಿ ಹಂಚಿಕೆಯಾಗಿರುವುದಿಲ್ಲ. ನಕ್ಷತ್ರ ಮಾಣಿಕ್ಯಗಳನ್ನು ಸೃಷ್ಟಿಸಿದರೂ ಅದರೊಳಗೆ ರೇಷ್ಮೆ ಹೊಳಪನ್ನು ಕೊಡುವುದು ಈವರೆಗೆ ಸಾಧ್ಯವಾಗಿಲ್ಲ.

ಅಮೆರಿಕನ್ ಡೈಮಂಡ್ ಎಂದು ರತ್ನಾಭರಣ ಅಂಗಡಿಗಳಲ್ಲಿ ಪ್ರಸಿದ್ಧವಾಗಿರುವ ರತ್ನವೂ ಕೃತಕ ರತ್ನವೇ ಇದು ವಜ್ರವಲ್ಲ. ಆದರೆ ವಜ್ರದ ಅನೇಕ ಗುಣಗಳು ಇದರಲ್ಲಿವೆ. ಅಮೆರಿಕನ್ ಡೈಮಂಡ್ ಘನಾಕೃತಿಯ ಜಿರ್ಕೋನಿಯಂ ಆಕ್ಸೈಡ್. ಕಾಂತಿಯಲ್ಲಿ ವಜ್ರಕ್ಕೆ ಸಮೀಪವಾದ ರತ್ನ – ವಕ್ರೀಭವನಾಂಕ 2.18. ವಜ್ರದ ವಕ್ರೀಭವನಾಂಕ 2.42. ಅಮೆರಿಕನ್ ಡೈಮಂಡನ್ನು ಮೊದಲು ತಯಾರಿಸಿದ ಕೀರ್ತಿ ಸ್ಟ್ರಾಕಲ್‌ಬರ್ನ್ ಮತ್ತು ಚುಡೊಬ (1937) ಎಂಬ ವಿಜ್ಞಾನಿಗಳಿಗೆ ಸಲ್ಲುತ್ತದೆ.

ಲೀಥಿಯಂ ಮಾಲಿಬ್ಡೇಟನ್ನು ಮಾತ್ರ ದ್ರವವಾಗಿ ಬಳಸಿ ಅದಕ್ಕೆ ಬೆರಿಲಿಯಂ ಆಕ್ಸೈಡ್ ಅಲ್ಯುಮಿನಿಯಂ ಆಕ್ಸೈಡ್, ಸಿಲಿಕಾ, ಕ್ರೋಮಿಯಂ ಬೆರಸಿ ಬಹುದೀರ್ಘಕಾಲ 1800$^{\circ}$ಫ್ಯಾ. ಉಷ್ಣತೆಯಲ್ಲಿ ಕಾಯಿಸಿ ಪಚ್ಚೆಯನ್ನು ಕೃತಕವಾಗಿ ಉತ್ಪಾದಿಸುತ್ತಾರೆ. ಕೆಂಪು ಗಾರ್ನೆಟ್ ಖನಿಜವನ್ನು ಬಳಸಿ ತಳದಲ್ಲಿ ಹಸುರು ಗಾಜನ್ನು ಬೆಸೆಯುವುದು, ಹಸುರು ವರ್ಣವನ್ನು ಲೇಪಿಸಿ ಮೇಲೆ ಮತ್ತು ಕೆಳಗೆ ನಿರ್ವರ್ಣ, ಶುದ್ಧ ಬೆಣಚಿನ ಸ್ಫಟಿಕ ಕೂಡಿಸುವುದರಿಂದಲೂ 'ಸೂಡೆ' ಎಂದು ಕರೆಯಲಾದ ಕೃತಕ ಪಚ್ಚೆ ಉತ್ಪಾದಿಸುತ್ತಾರೆ. ಆದರೆ ಇಂಥವು ನೀರಿನಲ್ಲಿ ಬಣ್ಣ ಬಿಟ್ಟು ಕೊಡುತ್ತವೆ.

ನೀರಿನ ಸಮ್ಮುಖದಲ್ಲಿ ಸಿಲಿಕಾ – ಅಲ್ಯೂಮಿನಿಯಂ ಮೇಲೆ ಹೈಡ್ರೋಫ್ಲೂರೋಸಿಲಿಕ್ ಆಮ್ಲವನ್ನು ಹಾಯಿಸಿ 5000$^{\circ}$ ಸೆ. ಉಷ್ಣತೆ ಒದಗಿಸಿದಾಗ ಕೃತಕ ಪುಷ್ಪರಾಗ ರೂಪುಗೊಳ್ಳುತ್ತದೆ.

ಈ ಕೃತಕ ಹರಳುಗಳಿಗೂ ಪ್ರಕೃತಿಯಲ್ಲಿ ಸಿಗುವ ಹರಳುಗಳಿಗೂ ಇರುವ ವ್ಯತ್ಯಾಸವನ್ನು ಸೂಕ್ಷ್ಮದರ್ಶಕದ ಸಹಾಯದಿಂದ ನೋಡಬಹುದು. ಕೃತಕ ಹರಳುಗಳು ಶುದ್ಧವಾದವು ಮತ್ತು ಅವುಗಳಲ್ಲಿರುವ ಅನಿಲದ ಗುಳ್ಳೆಗಳು ಗುಂಡಗೆ ಇರುತ್ತವೆ. ಪ್ರಕೃತಿಯಲ್ಲಿ ಸಿಗುವ ಹರಳುಗಳಲ್ಲಿ ಈ ಗುಳ್ಳೆಗಳು ಒಂದೇ ಸಮವಾಗಿರುವುದಿಲ್ಲ. ಕೃತಕ ರತ್ನಗಳನ್ನು ತಯಾರಿಸುವ ಇತರ ವಿಧಾನಗಳೆಂದರೆ ಅಭಿವಾಹ ಸಮಿಲನ(ಫ್ಲಕ್ಸ್ ಫ್ಯೂಶನ್) ಜಲೋಷ್ಣ ಸಂಸ್ಕರಣ (ಹೈಡ್ರೋಥರ್ಮಲ್ ಪ್ರೋಸೆಸ್) ಮತ್ತು ಸಂಯೋಜಿಸಿದ ಕಲ್ಲುಗಳು. (ಎನ್.ಎಸ್.ಕೆ.; ಟಿ.ಆರ್.ಎ.)

**ಕೃತಕ ರಬ್ಬರ್ :** ನೋಡಿ–ಎಲ್ಯಾಸ್ಟೊಮರ್.

**ಕೃತಕ ವಜ್ರ :** ನೈಸರ್ಗಿಕ ವಜ್ರದ ಅಣುರಚನೆಯನ್ನು ಅನುಕರಿಸಿ ಪಡೆದಿರುವ ರಚನೆ (ಆರ್ಟಿಫಿಷಿಯಲ್ ಡೈಮಂಡ್). ಇಂಗಾಲದ ಒಂದು ರೂಪ ವಜ್ರವೆಂದು ತಿಳಿದಾಗಿನಿಂದಲೂ ಗ್ರಾಫೈಟ್, ಕೋಕ್ ಮೊದಲಾದ ಇಂಗಾಲದ ಅಗ್ಗ ರೂಪಗಳನ್ನು ವಜ್ರರೂಪಕ್ಕೆ ಪರಿವರ್ತಿಸುವ ಯತ್ನಗಳು ನಡೆದಿವೆ. ಜೆ.ಬಿ.ಹನ್ನೈ (1880), ಹೆನ್ರಿ ಮಾಯಿಸನ್(1893) ಮೊದಲಾದವರ ಯತ್ನಗಳು ಸರಿಯಾದ ಹಾದಿಯಲ್ಲೇ ಇದ್ದರೂ ಸಫಲವಾಗಲಿಲ್ಲ. ಕಬ್ಬಿಣ ಮತ್ತು ಗ್ರಾಫೈಟ್‌ಗಳ ಮಿಶ್ರಣವನ್ನು ಕಾಯಿಸಿ ಕೂಡಲೇ ತಣಿಸುವುದರಿಂದ ಮೇಲ್ಮೈಯಲ್ಲಿ ಕಬ್ಬಿಣ ಘನೀಭೂತವಾಗಿ ಹೆಚ್ಚಿನ ಒತ್ತಡ ಏರ್ಪಡುತ್ತದೆ. ಈ ಒತ್ತಡದಿಂದ ಗ್ರಾಫೈಟ್ ವಜ್ರರೂಪಕ್ಕೆ ಬರುವುದು – ಇದು ಮಾಯಿಸನ್ ಅನುಸರಿಸಿದ ವಿಧಾನ. ಅಂದರೆ ಇಂಗಾಲವನ್ನು ಹೆಚ್ಚು ಉಷ್ಣ ಮತ್ತು ಒತ್ತಡಗಳಿಗೆ ಒಳಪಡಿಸುವುದು. ಒತ್ತಡ ಸಾಲದಿದ್ದುದೇ ಬಹುಶಃ ಈ ಪ್ರಾರಂಭದ ಯತ್ನಗಳು ಫಲಿಸದಿರುವುದಕ್ಕೆ ಕಾರಣ.

ಅಮೆರಿಕದ ಬ್ರಿಡ್ಗ್‌ಮನ್ ಎಂಬಾತ ಅಧಿಕಾಧಿಕ ಒತ್ತಡಗಳನ್ನು ಉಂಟುಮಾಡುವ ವಿಧಾನವನ್ನು ಶೋಧಿಸಿದ ಮೇಲೆ ಕೃತಕವಜ್ರದ ತಯಾರಿಕೆಗೆ ಜನರಲ್ ಎಲೆಕ್ಟ್ರಿಕ್ ಕಂಪೆನಿ ಕೈಹಾಕಿತು. ಅನೇಕ ಪ್ರಯೋಗಗಳನ್ನು ನಡೆಸಿದ ಬಳಿಕ 1955ರಲ್ಲಿ ತಯಾರಿಕೆಯ ವಿಧಾನ ಫಲಿಸಿತು. ಪ್ರಯೋಗಗಳು ಬಹು ದಿಶೆಗಳಲ್ಲಿ ನಡೆದುವು. 1953ರಲ್ಲಿ ವೆನ್‌ಟಾರ್ಫ್ ಎಂಬಾತ ಲಿಥಿಯಮ್ ಕಾರ್ಬೈಡ್ ಸಂಯುಕ್ತ ವಸ್ತುವನ್ನು ಅಧಿಕ ಉಷ್ಣತೆ ಮತ್ತು ಒತ್ತಡಗಳಲ್ಲಿ ವಿಭಜಿಸಿ ಕೆಲವು ಸಣ್ಣ ಹರಳುಗಳನ್ನು ಪಡೆದ. ಇವು ವಜ್ರಗಳಿರಬಹುದು. ಆದರೆ ಖಚಿತವಾದ ರುಜುವಾತು ಸಿಗಲಿಲ್ಲ. ಎಚ್. ಟಿ. ಹಾಲ್ ಎಂಬಾತ ಲಿಥಿಯಮ್ ಕಾರ್ಬೋನೇಟನ್ನು ತೆಗೆದುಕೊಂಡು ಸಣ್ಣ ಹರಳುಗಳನ್ನು ಪಡೆದ. ಆದರೆ ಅವು ವಜ್ರಗಳೇ ಎಂಬುದು ಸ್ಪಷ್ಟ ಪಡಲಿಲ್ಲ. ಎಚ್. ಎಂ. ಸ್ಟ್ರಾಂಗ್ ಪ್ರಯೋಗ ಮೊದಲನೆಯ ಸಫಲ ಯತ್ನ. ಕಬ್ಬಿಣದ ತಗಡಿನಲ್ಲಿ ಒಂದು ವಜ್ರದ ಹರಳನ್ನಿಟ್ಟು ಅದನ್ನು ಕೋಕ್, ಸೋಡಿಯಮ್ ಮತ್ತು ಬೇರಿಯಮ್ ಕಾರ್ಬೋನೇಟ್‌ಗಳ ಮಿಶ್ರಣದಲ್ಲಿಟ್ಟು, 54,000 ವಾಯುಮಂಡಲಗಳಲ್ಲಿ (ಅಟ್ಮಾಸ್ಫಿಯರ್ಸ್) 1260$^{\circ}$ ಸೆ. ಉಷ್ಣತೆಯಲ್ಲಿ 16 ಗಂಟೆಗಳ ಕಾಲ ಕಾಯಿಸಿದ ಪರಿಣಾಮವಾಗಿ ಮೊದಲಿಟ್ಟಿದ್ದ ಹರಳಿಗೂ ದಪ್ಪವಾಗಿರುವ ಮತ್ತು ಬರಿಗಣ್ಣಿಗೆ ಕಾಣುವಂಥ ಹಲವು ಹರಳುಗಳು ಉತ್ಪನ್ನವಾದುವು. ಎಕ್ಸ್‌ಕಿರಣಗಳ ಪರೀಕ್ಷೆಯಿಂದ ಇವು ವಜ್ರಗಳೇ ಎಂದು ಸಿದ್ಧವಾಯಿತು. ಕೆಲವು ದಿನಗಳ ತರುವಾಯ ಹಾಲ್ ಎಂಬಾತ ಕಬ್ಬಿಣದ ಸಲ್ಫೈಡನ್ನು ಒಂದು ಗ್ರಾಫೈಟ್ ಕೊಳವೆಯಲ್ಲಿ 95,000 ವಾಯುಮಂಡಲ ಮತ್ತು 1,600$^{0}$ ಸೆ. ಉಷ್ಣತೆಗೆ ಕೆಲವು ಮಿನಿಟುಗಳ ಕಾಲ ಒಳಪಡಿಸಿದ. ಆಗ ಹಲವಾರು ವಜ್ರದ ಹರಳುಗಳು ಉತ್ಪನ್ನವಾದುವು.

ವಜ್ರದ ಹರಳನ್ನು ಬೀಜರೂಪದಲ್ಲಿ ಇಡಬೇಕಾಗಿಲ್ಲ. ಲೋಹಗಳನ್ನು ಬೆರೆಸಿ ಗ್ರಾಫೈಟನ್ನು ಪರಿವರ್ತಿಸಬಹುದು. ಲೋಹ ವೇಗವರ್ಧಕವಾಗಿ ಪರಿವರ್ತನೆಗೆ ಬೇಕಾದ ಉಷ್ಣತೆ ಮತ್ತು ಒತ್ತಡಗಳನ್ನು ಏರ್ಪಡಿಸುತ್ತದೆ. 55,000–130,000 ವಾಯುಮಂಡಲ ಒತ್ತಡ ಮತ್ತು 1,400$^{\circ}$–2,350$^{\circ}$ ಸೆ. ಉಷ್ಣತೆಗಳನ್ನು ಬಳಸಿ, ಸಣ್ಣ ವಜ್ರಗಳನ್ನು ತಯಾರಿಸಲಾಗಿದೆ. ಇವು ಕತ್ತರಿಸುವುದು, ಉಜ್ಜುವುದು ಮತ್ತು ಹೊಳಪು ಕೊಡುವ ಕೆಲಸಗಳಲ್ಲಿ ನೈಸರ್ಗಿಕ ವಜ್ರಗಳಿಗಿಂತಲೂ ಉತ್ತಮವೆನಿಸಿವೆ. ದೊಡ್ಡ ವಜ್ರಗಳನ್ನೂ ತಯಾರಿಸಲಾಗಿದೆ. ಆದರೆ ಇವುಗಳ ಬಣ್ಣ ಕಪ್ಪು ಮತ್ತು ಔದ್ಯೋಗಿಕ ಉಪಯೋಗದ ದೃಷ್ಟಿಯಿಂದ ಇವುಗಳ ಕಾಠಿಣ್ಯ ಸಾಲದು. (ಎನ್.ಎಸ್.ಕೆ)

**ಕೃತಕ ಹಲ್ಲುಗಳು :** ಬಿದ್ದುಹೋದ ಅಥವಾ ಕಿತ್ತು ತೆಗೆದ ಹಲ್ಲುಗಳ ಬದಲಾಗಿ ಬಾಯಿಗೆ ಅಳವಡಿಸಿದ ಹಲ್ಲುಗಳು. ಈ ತರಹೆಯ ಕೃತಕ ಹಲ್ಲುಗಳನ್ನು ಕಟ್ಟಿಸಿಕೊಳ್ಳುವುದು ಬಹುಪುರಾತನ ಕಾಲದಿಂದಲೂ ಬಂದ ಪದ್ಧತಿ. ಆದರೆ ಆಗ ಕೃತಕ ಹಲ್ಲುಗಳನ್ನು ಮರದಿಂದ ತಯಾರಿಸಿ ಅಥವಾ ಪ್ರಾಣಿಗಳ ಹಲ್ಲುಗಳನ್ನು ಅಳವಡಿಸಿ ಕಟ್ಟಿಸಿಕೊಳ್ಳುತ್ತಿದ್ದರು. ಪಿಂಗಾಣಿಯಿಂದ ಕೃತಕ ಹಲ್ಲುಗಳ ನಿರ್ಮಾಣ ಪ್ರಾರಂಭವಾದದ್ದು 18ನೆಯ ಶತಮಾನದಲ್ಲಿ. 19ನೆಯ ಶತಮಾನದಲ್ಲಿ ಪ್ಯಾರಿಸ್ಸಿನಲ್ಲಿ ವೃತ್ತಿ ನಡೆಸುತ್ತಿದ್ದ ದಂತವೈದ್ಯನೊಬ್ಬ ಪಿಂಗಾಣಿಯಿಂದ ರಚಿಸಿದ ಬಿಡಿ ಹಲ್ಲುಗಳನ್ನು ಚಿನ್ನ ಅಥವಾ ಬೆಳ್ಳಿಯಲ್ಲಿ ಎರಕಿಸಿ ಮೇಲ್ಭಾಗಕ್ಕೊಂದು ಕೆಳಭಾಗಕ್ಕೊಂದು ಕೃತಕ ದಂತಪಂಕ್ತಿಯನ್ನು ಮಾಡಿ ಬಹಳ ಐಶ್ವರ್ಯವಂತರ ದಂತವಿಹೀನ ಬಾಯಿಗಳಿಗೆ ಪೋಣಿಸುತ್ತಿದ್ದ. ಕ್ರಮೇಣ ಅಮೆರಿಕ ಸಂಯುಕ್ತಸಂಸ್ಥಾನದಲ್ಲೂ ಪಿಂಗಾಣಿಯಿಂದ ಬಹು ಸ್ವಾಭಾವಿಕವಾಗಿ ಕಾಣುವಂತೆ ಅವರವರ ಬಣ್ಣ, ವಯಸ್ಸು, ಮುಖದ ಆಕಾರವೇ ಮೊದಲಾದವಕ್ಕೆ ಅನುಗುಣವಾಗಿ ಕೃತಕ ಹಲ್ಲಿನ ಪಂಕ್ತಿ ನಿರ್ಮಾಣವನ್ನು ಪ್ರಾರಂಭಿಸಿದರು. ಸ್ವಿಟ್ಸರ್ಲೆಂಡಿನ ದಂತವೈದ್ಯನೊಬ್ಬ ಆಕಾರ ಸಾಮ್ಯದಲ್ಲಿ ಮಾತ್ರವಲ್ಲ ಅಗಿಯಲು ಸಹ ನೆರವಾಗುವಂಥ ಹಲ್ಲುಗಳನ್ನು

ಚಿತ್ರ–1



ಚಿತ್ರ–2

1. ಕೃತಕ ಹಲ್ಲುಗಳ ಜೋಡಣೆಗೆ ಬೇಕಾಗುವ ಸಾಧನ ಸಲಕರಣೆಗಳು, ಕೃತಕ ದಂತಪಂಕ್ತಿಗಳನ್ನೂ ಕಾಣಬಹುದು. 2. ಮೇಲು ಮತ್ತು ಕೆಳದವಡೆಯ ಕೃತಕ ದಂತಪಕ್ತಿಗಳು. 3. ಕೃತಕ ಹಲ್ಲುಗಳನ್ನು ಕಟ್ಟಿಸಿಕೊಂಡಾತನ ದಂತವಿನ್ಯಾಸ

ನಿರ್ಮಿಸಿದ. ಇದರಿಂದ ಬಹಳ ಜನರಿಗೆ ಪ್ರಯೋಜನವಾಯಿತು. ಬಾಯಿಯಲ್ಲಿ ಕೆಲವು ಹಲ್ಲುಗಳು ಹೋಗಿದ್ದರೂ ಸ್ವಾಭಾವಿಕ ಹಲ್ಲುಗಳಿಗೆ ಸೇರಿಸಿದಂತೆ ಸೇತುವೆಯ ಮಾದರಿ ಕೃತಕ ಹಲ್ಲುಗಳನ್ನು ಮಾಡಿಸುವ ಪದ್ಧತಿಯೂ ಪ್ರಾರಂಭವಾಯಿತು. ಇದಕ್ಕೆ ಹಲ್ಲಿನ ಸೇತುವೆಯೆಂದು ಹೆಸರು. ಪಿಂಗಾಣಿಯ ಹಲ್ಲುಗಳಿಗೆ ಸ್ವಾಭಾವಿಕ ಹಲ್ಲುಗಳ ಬಣ್ಣವನ್ನು ಕೊಡಲು ಬೇರೆ ಬೇರೆ ಲೋಹಗಳ ಮಿಶ್ರಣಗಳನ್ನು ಉಪಯೋಗಿಸುತ್ತಾರೆ. ಹಲ್ಲನ್ನು ಜೋಡಿಸಲು ಬುಡದ ಭಾಗಕ್ಕೆ ಮೊದಲು ಲೋಹಗಳನ್ನು (ಚಿನ್ನ, ಬೆಳ್ಳಿ) ಬಳಸುತ್ತಿದ್ದರು. ಆಮೇಲೆ ರಬ್ಬರ್ ಬಳಕೆಗೆ ಬಂತು. 1930ರಿಂದೀಚೆಗೆ ಕೃತಕ

ದಂತಗಳಿಗೂ ಬುಡದ ಭಾಗಕ್ಕೂ ಅನುಗುಣವಾದ ಬಣ್ಣವುಳ್ಳ ಪ್ಲಾಸ್ಟಿಕನ್ನು ಉಪಯೋಗಿಸುತ್ತಿದ್ದಾರೆ. ಈಚೆಗೆ ನಿರ್ಮಿಸಿರುವ ಕೃತಕ ಹಲ್ಲುಗಳನ್ನು ಯಾರೂ ಕೃತಕವೆಂದು ಹೇಳಲಾಗುವುದಿಲ್ಲ. ಅವು ಅಷ್ಟು ಸ್ವಾಭಾವಿಕವಾಗಿ ಕಾಣುತ್ತವೆ. ದಂತವಿಜ್ಞಾನ ಬಹಳ ಮುಂದುವರಿದಿದೆ. ಇದುವರೆಗೆ ನಿರ್ಮಿಸುತ್ತಿದ್ದ ಕೃತಕ ಹಲ್ಲುಗಳನ್ನು ರಾತ್ರಿಯ ವೇಳೆ ತೆಗೆದಿಡಬೇಕಾಗುತ್ತಿತ್ತು. ಈಗೀಗ ದವಡೆಯ ಮೂಳೆಗೆ ಸೇರಿಸುವಂತೆ ಕೃತಕದಂತಪಂಕ್ತಿಯನ್ನು ನಿರ್ಮಿಸಲಾಗುತ್ತಿದೆ. ಇದರಿಂದ ರಾತ್ರಿಯ ವೇಳೆಯೂ ಆ ಪಂಕ್ತಿಯನ್ನು ಕಳಚಿ ಇಡಬೇಕಾಗಿಲ್ಲ.

**ಕೃತಕ ಹಲ್ಲುಗಳ ತಯಾರಿಕೆ :** ಕಾರ್ಖಾನೆಗಳಲ್ಲಿ ಫೆಲ್ಡ್‌ಸ್ಪಾರ್, ಸಿಲಿಕ, ಬಿಳಿ ಜೇಡಿಗಳನ್ನು (ಕಯೊಲಿನ್) ಕಲಿಸಿಟ್ಟು ಸುಮಾರು 1315$^{0}$ ಸೆಂ. ಉಷ್ಣತೆಗೆ ಏರಿಸಿದರೆ ಪಿಂಗಾಣಿ ಹಲ್ಲುಗಳು ತಯಾರಾಗುವುವು. ಪಾಲಿಮೆತಿಲ್ ಮೆತಕ್ರಿಲೇಟಿಗೆ ಟೈಟಾನಿಯಂ, ಕ್ರೋಮಿಯಂ, ನಿಕ್ಕಲ್, ಕೋಬಾಲ್ಟ್, ಕಬ್ಬಿಣ ಲೋಹಗಳ ಆಕ್ಸೈಡುಗಳಿಂದ ಬೇಕಾದ ಬಣ್ಣ ಕೊಟ್ಟರೆ ಪ್ಲಾಸ್ಟಿಕ್ ಹಲ್ಲುಗಳು ಚೆನ್ನಾಗಿರುತ್ತವೆ. ಪಿಂಗಾಣಿ ಹಲ್ಲುಗಳನ್ನು ತಯಾರಿಸುವ ಮೊದಲು ಪ್ಲಾಸ್ಟರ್ ಆಫ್ ಪ್ಯಾರಿಸಿನಿಂದಲೋ ಮತ್ತಿತರ ವಸ್ತುವಿನಿಂದಲೋ ಬೇಕಾದ ಹಲ್ಲುಗಳ ಆಕಾರ, ಗಾತ್ರಗಳನ್ನು ರೂಪಿಸಿಕೊಳ್ಳಬೇಕು. ಇದರಿಂದ ಲೋಹದ ಅಚ್ಚುಗಳನ್ನು ಮಾಡಿಕೊಂಡು ಅವುಗಳಲ್ಲಿ ಪಿಷ್ಟ (ಸ್ಟಾರ್ಚ್), ಪಿಂಗಾಣಿಪುಡಿ, ಹಲ್ಲುಗಳಿಗೆ ಬೇಕಾದ ಬಣ್ಣಕೊಡಲು ಲೋಹದ ಆಕ್ಸೈಡುಗಳನ್ನು ನೀರಿನಲ್ಲಿ ಬೆರೆಸಿ ಗಟ್ಟಿಯಾಗಿ ಕಣಿಕದಂತೆ ನಾದಿಕೊಂಡು, ಪದರ ಪದರವಾಗಿ ಹಾಕುತ್ತ, ಸಹಜ ಹಲ್ಲುಗಳ ಮೇಲಿನ ವಜ್ರಾಗಾರೆಯಂತೆ ಹೊಳೆವ ಹಾಗೆ ಮಾಡಬೇಕು. ದಂತ್ಯದ (ಡೆಂಟಿನ್) ಹಾಗೆ ಗಟ್ಟಿಯಾಗಿ ಕಾಣಬೇಕಾದ ಒಳಭಾಗಕ್ಕೆ ಬೇರೆ ಪಿಂಗಾಣಿ ಕಣಿಕದ ಪುಡಿ ತುಂಬಬೇಕು. ಆಮೇಲೆ ಲೋಹದ ಅಚ್ಚುಗಳನ್ನು ಮುಚ್ಚಿ ಉರಿಯೊಲೆಯಲ್ಲಿ ಸುಟ್ಟಾಗ ಹಲ್ಲುಗಳು ಗಟ್ಟಿಯಾಗುತ್ತವೆ. ಈ ರೀತಿ ಅಚ್ಚುಗಳಲ್ಲಿ ಎರಕ ಹೊಯ್ದು ಹಲ್ಲುಗಳನ್ನು ಹೊರತೆಗೆದು ಕೊನೆಗೆ ಮತ್ತೆ ಹೊಳಪಿಡುವಂತೆ ಏರಿದ ಕಾವಿನಲ್ಲಿ ಸುಡಬೇಕು. ಮೋನೊಮೆತಿಲ್ ಮೆತಕ್ರಿಲೇಟ್ ದ್ರವವನ್ನೂ ಪಾಲಿಮೆತಿಲ್ ಮೆತಕ್ರಿಲೇಟ್ ಪುಡಿಯನ್ನೂ ಕಣಿಕದಂತೆ ಹದವಾಗಿ ಕಲಸಿ ನಾದಿಕೊಂಡು ಅಚ್ಚುಗಳಲ್ಲಿ ತುಂಬಿಸಿ, ಒತ್ತಡದಲ್ಲಿರಿಸಿ, ನೀರಿನ ಪಾತ್ರೆಯಲ್ಲಿಟ್ಟು ನಿಧಾನವಾಗಿ 100$^{0}$ ಸೆಂ. ಮಟ್ಟದ ತನಕ ಕಾಯಿಸಿದರೆ ಪ್ಲಾಸ್ಟಿಕ್ಕಿನ ಕೃತಕ ಹಲ್ಲುಗಳು ತಯಾರಾಗುತ್ತವೆ. ಆಮೇಲೆ ಇವಕ್ಕೆ ಗಾಜು ಗಿಲಾವು ಮಾಡಬೇಕು. ಕಾರ್ಖಾನೆಯಲ್ಲಿ ತಯಾರಾದ ಕೃತಕ ಹಲ್ಲುಗಳು ಸಾಮಾನ್ಯವಾಗಿ ಮೇಣ, ಪ್ಲಾಸ್ಟಿಕ್ ಹಾಳೆಗಳು ಇಲ್ಲವೆ ದಿಂಡುಗಳಲ್ಲಿ ಹುದುಗಿಸಿ ಮಾರಾಟಕ್ಕೆ ಬರುತ್ತವೆ. ಈ ಕೃತಕ ಹಲ್ಲು ಸಾಲುಗಳಲ್ಲಿ ಮುಂದಿನ ಆರು ಹಲ್ಲುಗಳೂ (4 ಮುಂದವಡೆ ಹಲ್ಲುಗಳು, 4 ಅರೆವಲ್ಲುಗಳು) ಒಂದೊಂದು ದವಡೆಯಲ್ಲೂ ಇರುತ್ತವೆ. ಕೃತಕ ದಂತ ಪಂಕ್ತಿಯಲ್ಲಿ ಒಟ್ಟು 28 ಹಲ್ಲುಗಳು ಮಾತ್ರ ಇರುತ್ತವೆ. ಇದರಲ್ಲಿ ಹಿಂದುಗಡೆ ಜಾಗ ಸಾಲದ್ದರಿಂದ ತೀರ ಹಿಂದಣ ದವಡೆ ಹಲ್ಲುಗಳು ಇರುವುದಿಲ್ಲ.



**ಕೃತಕ ಹಲ್ಲು ಕಟ್ಟುವಿಕೆ :** ಹಲ್ಲು ಕಟ್ಟಿಸಿಕೊಳ್ಳುವವನಿಗೆ ಬೇಕಿರುವ ತೋರಿಕೆ, ಆಕಾರ, ಗಾತ್ರ, ನಿಜಗೆಲಸಗಳಿಗೆ ತಕ್ಕಂತೆ ಹಲ್ಲುಗಳನ್ನು ಹಲ್ಲು ವೈದ್ಯರು ಆಯ್ದುಕೊಳ್ಳುವರು. ಇದನ್ನು ಬಳಸುವವರ ಬಾಯಿಯ ವಸಡುಗಳ ದವಡೆ ಏಣುಗಳ ಅಳತೆ, ಮುದ್ರೆಗಳನ್ನು ಎತ್ತಿಕೊಂಡು ಮಾಡಿದ ಅಡಿಗಟ್ಟಿಗೆ ಆರಿಸಿಕೊಂಡ ಕೃತಕ ಹಲ್ಲುಗಳನ್ನು ಭದ್ರವಾಗಿ ಸಿಕ್ಕಿಸಿ ಹಲ್ಲು ಸಾಲುಕಟ್ಟುವರು. ಆಗ ಇದು ಬಚ್ಚಬಾಯಿಯ ವಸಡುಗಳ ದವಡೆಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಮೇಲೆ ಆರು ಕೆಳಗೆ ಆರು ಇರುವ ಮುಂದಣ ಹಲ್ಲುಗಳಿಂದಲೇ ಮುಖಕ್ಕೆ ಅಂದ ಬರುವುದು. ಕೋರೆ ಹಲ್ಲುಗಳು ಆಹಾರವನ್ನು ಸಿಗಿದು ಸೀಳುತ್ತವೆ. ಬಾಚಿಹಲ್ಲುಗಳು ಹರಿದು ಕೆತ್ತುತ್ತವೆ. ಮಾತಿನ ಉಚ್ಚಾರಣೆ ಮತ್ತು ಹಾಡುಗಾರಿಕೆಗಳ ಧ್ವನಿ ರೂಪಿಸುವುದರಲ್ಲೂ ಹಲ್ಲುಗಳು ನೆರವಾಗುತ್ತವೆ. ದವಡೆ ಹಲ್ಲುಗಳು ಆಹಾರವನ್ನು ಚೆನ್ನಾಗಿ ಅರೆದು ಸುಲಭವಾಗಿ ಅರಗುವ ಹಾಗೆ ಮಾಡುವುವು. ಸಹಜ ಹಲ್ಲುಗಳ 1/10 ರಿಂದ 1/3 ರಷ್ಟು ಸಿಗಿವ, ಅಗಿಯುವ ಬಲವನ್ನು ಕೃತಕ ಹಲ್ಲುಗಳು ತಡೆಯಬಲ್ಲವು. ಹಲ್ಲುಗಳಿಲ್ಲದವರು ಎಂದಿನ ಆರೋಗ್ಯವನ್ನು ಕಾಪಾಡಿಕೊಳ್ಳಲೂ ಮುಖದ ಅಂದ ಉಳಿಸಿಕೊಳ್ಳಲೂ ಕೃತಕ ಹಲ್ಲುಗಳನ್ನು ಕಟ್ಟಿಸಿಕೊಳ್ಳಬೇಕು. (ಎಸ್.ಆರ್.ಸಿ.; ಬಿ.ಕೆ.ವಿ.)

**ಕೃತಜ್ಞತಾ ಸಮರ್ಪಣ ದಿನ :** ಅಮೆರಿಕದ ರಾಷ್ಟ್ರೀಯ ಮಟ್ಟದ ಹಬ್ಬಗಳಲ್ಲೊಂದು (ಥ್ಯಾಂಕ್ಸ್ ಗಿವಿಂಗ್ ಡೇ). ಅಂದು ದೇಶಾದ್ಯಂತ ಜನ ದೇವರಲ್ಲಿ ತಮಗಿರುವ ಕೃತಜ್ಞತಾಭಾವವನ್ನು ವ್ಯಕ್ತಪಡಿಸಿ ತಿಂದುಂಡು ನಲಿಯುತ್ತಾರೆ.

ಅಮೆರಿಕದ ಒಂದು ಮುಖ್ಯ ಆದಿ ವಸಾಹತಾಗಿದ್ದ ಪ್ಲಿಮತ್ ಎಂಬಲ್ಲಿ ಬಂದಿಳಿದ (1620) ಬಿಳಿಯರ ಪೈಕಿ ಅರೆವಾಸಿ ಜನ ಅದೇ ವರ್ಷದ ಚಳಿಗಾಲದಲ್ಲಿ ರೋಗಕ್ಕೆ ತುತ್ತಾದರು. ಹೊಸ ನೆಲೆಯಲ್ಲೊದಗಿದ ಇತರ ಕಷ್ಟಗಳೂ ಸೇರಿತಾಗಿ ಅವರ ಭವಿಷ್ಯ ಆಶಾದಾಯಕವಾಗಿರಲಿಲ್ಲ. ಹೀಗಿರಲು 1621ರಲ್ಲಿ ಹೊಸದಾಗಿ, ಸಮೃದ್ಧವಾಗಿ ಬಂದ ಬೆಳೆಯೂ ಅನಿರೀಕ್ಷಿತವಾಗಿ ಒದಗಿದ ರೆಡ್ ಇಂಡಿಯನರ ಸ್ನೇಹಹಸ್ತವೂ ವಸಾಹತುಗಾರರಲ್ಲಿ ಹೊಸ ಸ್ಫೂರ್ತಿಯನ್ನು ತುಂಬಿತು. ಈ ತಾರಕ ಘಟನೆಗಳಿಗಾಗಿ ಬಹಿರಂಗವಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವುದಕ್ಕೋಸ್ಕರ ಡಿಸೆಂಬರ್ 13ರಂದು ತೊಡಗಿ 3 ದಿನಗಳ ಉತ್ಸವವನ್ನು ನಡೆಸಬೇಕೆಂದು ಗವರ್ನರ್ ಬ್ರ್ಯಾಡ್‌ಫರ್ಡ್ ಆಜ್ಞೆ ಹೊರಡಿಸಿದ. ಪ್ರಾತಃಕಾಲ ಚರ್ಚಿನಲ್ಲಿ ಸುದೀರ್ಘ ಪೂಜೆ ಆಗಿ, ಅನಂತರ ಸ್ಥಳೀಯವಾಗಿ ಅಧಿಕಪ್ರಮಾಣದಲ್ಲಿ ಸಿಗುತ್ತಿದ್ದ, ಇಂದಿಗೂ ಥ್ಯಾಂಕ್ಸ್ ಗಿವಿಂಗ್ ಬರ್ಡ್ ಎನಿಸಿಕೊಂಡಿರುವ, ಟರ್ಕಿಕೋಳಿ, ಕಾಡುತರಕಾರಿಗಳೇ ಮುಖ್ಯವಾಗಿದ್ದ ಭಾರಿ ಔತಣ ನಡೆಯುತ್ತಿತ್ತು. ಇದು ಪ್ರಥಮವಾಗಿ ಏರ್ಪಟ್ಟ ಕೃತಜ್ಞತಾ ಸಮರ್ಪಣ ದಿನಾಚರಣೆಯ ಮುಖ್ಯ ವಿವರ.

ಕಾಲಕ್ರಮೇಣ ಅಮೆರಿಕದ ಇತರ ಭಾಗಗಳಿಗೂ ಈ ಪದ್ಧತಿ ಹರಡಿತು. ಕೃತಜ್ಞತಾ ದಿನವನ್ನು ರಾಷ್ಟ್ರೀಯ ಮಟ್ಟದ ಹಬ್ಬವೆಂದು ಘೋಷಿಸಿದ (1789) ಅಧ್ಯಕ್ಷ ವಾಷಿಂಗ್ಟನ್ ಪಾಪಗಳಿಗೆ ಕ್ಷಮಾಯಾಚನೆ, ಲೋಕದಾದ್ಯಂತ ಸುಭಿಕ್ಷ ಪ್ರಾಪ್ತಿಗಾಗಿ ಹಂಬಲ–ಇವೂ ಈ ದಿನದ ಆಚರಣೆಯ ಉದ್ದೇಶಗಳೆಂದು ಸಾರಿದ. 1941ರ ನವೆಂಬರ್ ತಿಂಗಳ ನಾಲ್ಕನೆಯ ಗುರುವಾರದಿಂದ ವರ್ಷೇ ವರ್ಷೇ ಈ ಹಬ್ಬ ನಡೆದು ಬರುತ್ತಿದೆ.

ಇಂದು ಅಮೆರಿಕದಲ್ಲಿ ಪ್ರತಿಯೊಂದು ಕುಟುಂಬದ ಸದಸ್ಯರೆಲ್ಲರ ಪುನರ್ಮಿಲನ ಈ ಹಬ್ಬದ ಮುಖ್ಯ ಆಚರಣೆಯಾಗಿ ಬೆಳೆದು ಬಂದಿದೆ. ಬೇರೆ ಬೇರೆ ಕಾರಣಗಳಿಗಾಗಿ ನೂರಾರು ಮೈಲಿಗಳಾಚೆ ಇರುವ ಮಕ್ಕಳು, ಮೊಮ್ಮಕ್ಕಳು ತರಾತುರಿಯಿಂದ ಅಂದು ಮನೆ ಸೇರುತ್ತಾರೆ; ಅಸಾಧ್ಯವಾದರೆ ಟೆಲಿಫೋನ್ ಮೂಲಕ ಮನೆಯವರೊಡನೆ ದೀರ್ಘಸಂಭಾಷಣೆ ನಡೆಸುತ್ತಾರೆ. ಮೂಲಸ್ಫೂರ್ತಿಯ ಕೃತಜ್ಞತಾಭಾವನೆ ನಶಿಸಿಲ್ಲವಾದರೂ ಅಂದಿನಷ್ಟು ದೀರ್ಘ ಪೂಜೆ–ಮನಸ್ಕಾರಗಳು ಇಂದಿಲ್ಲ. ಟರ್ಕಿಕೋಳಿ ಔತಣ, ಫುಟ್‌ಬಾಲ್ ಇತ್ಯಾದಿ ಮನೋರಂಜನೆಗಳಿಗೆ ಹೆಚ್ಚು ಪ್ರಾಧಾನ್ಯವಿದೆ. ಕೆನಡದಲ್ಲೂ ಕೊಯಿಲಿನ ವೇಳೆಗೆ ಸರಿಯಾಗಿ ಈ ದಿನದ ಆಚರಣೆ ಇದೆ. (ಇ.ಎನ್.ಎಸ್.ಜಿ.)

**ಕೃತದ್ಯುತಿ :** ಅಂಗರಾಜನ ಮಗಳು, ಶೂರಸೇನ ಮಹಾರಾಜ ಚಿತ್ರಕೇತುವಿನ ನೆಚ್ಚಿನ ರಾಣಿ. ಅನೇಕ ರಾಣಿಯರಿದ್ದ ಚಿತ್ರಕೇತುವಿಗೆ ಪುತ್ರಸಂತಾನ ಪ್ರಾಪ್ತಿಯಿಲ್ಲದೆ ಚಿಂತಾಕ್ರಾಂತನಾಗಿರಲು ಒಮ್ಮೆ ಆಂಗಿರಸ ಮಹರ್ಷಿ ಇವನ ಆಸ್ಥಾನಕ್ಕೆ ಬಂದು ಈತನ ಚಿಂತೆಯನ್ನರಿತು ಪುತ್ರಪ್ರಾಪ್ತಿಗಾಗಿ ಆದಿತ್ಯೇಷ್ಟಿಯನ್ನು ಕೈಗೊಳ್ಳುವಂತೆ ಉಪದೇಶಿಸಿದ. ಯಾಗಾಂತ್ಯದಲ್ಲಿ ಮಂತ್ರಪೂತವಾದ ಚರುಶೇಷವನ್ನು ರಾಜ ತನ್ನ ಪ್ರಿಯರಾಣಿ ಕೃತದ್ಯುತಿಗೆ ಕೊಡಲು ಆಕೆ ಗರ್ಭವತಿಯಾಗಿ ದಿವ್ಯತೇಜೋರೂಪಿಯಾದ ಕುಮಾರನಿಗೆ ಜನ್ಮವಿತ್ತಳು. ಇದರಿಂದ ಅರಸನಿಗೆ ಈಕೆಯಲ್ಲಿ ಪ್ರೀತ್ಯಾದರಗಳು ಹೆಚ್ಚಿದುವಾದರೂ ಉಳಿದ ಪತ್ನಿಯರ ದ್ವೇಷಾಸೂಯೆಗಳಿಗೆ ಈಕೆ ಪಾತ್ರಳಾಗಬೇಕಾಯಿತು. ಉಪಾಯಾಂತರದಿಂದ ಅವರು ವಿಷಪ್ರಾಶನಮಾಡಿಸಿ ಈಕೆಯ ಮಗುವನ್ನು ಕೊಂದರು. ಇದರಿಂದ ಪರಮದುಃಖಿತನಾದ ಚಿತ್ರಕೇತು ಕೊರಗುತ್ತಿರಲು ನಾರದಮಹರ್ಷಿಗಳು ಒಮ್ಮೆ ಅವನ ಆಸ್ಥಾನಕ್ಕೆ ಬಂದು ಲೌಕಿಕ ಸುಖಗಳ ನಶ್ವರತೆಯನ್ನು ತಿಳಿಸಿ, ಸಮಾಧಾನಪಡಿಸಿ ವೈರಾಗ್ಯವನ್ನವಲಂಬಿಸುವಂತೆ ಉಪದೇಶಿಸಿದರು.

ಚಿತ್ರಕೇತು ನಾರದರ ಉಪದೇಶವನ್ನು ಪಾಲಿಸಿ ತಪೋನಿರತನಾಗಿ ಸಿದ್ಧಿಯನ್ನು ಪಡೆದ. ಒಂದು ಸಾರಿ ಈತ ಕೈಲಾಸದಲ್ಲಿ ಪಾರ್ವತೀ ಸಹಿತನಾದ ಶಿವನನ್ನು ನೋಡಿ ಆಕ್ಷೇಪಿಸಿದ. ಅವಮಾನಿತಳಾದ ಶಿವೆ ಖತಿಗೊಂಡು ರಾಕ್ಷಸಜನ್ಮವೆತ್ತುವಂತೆ ಈತನಿಗೆ ಶಾಪವಿತ್ತಳು. ಚಿತ್ರಕೇತು ವೃತ್ರಾಸುರನಾಗಿ ಹುಟ್ಟಬೇಕಾಯಿತು. (ಸಿ.ಜಿ.ಪಿ.)

**ಕೃತಯುಗ :** ಪ್ರಪಂಚದ ಕಾಲಮಾನಗಳಿಗನ್ವಯಿಸುವಂತೆ ನಿಯಮಿತವಾಗಿ ಯುಗಗಳೆಂದು ನಿರ್ದಿಷ್ಟವಾಗಿರುವ ಚತುರ್ಯುಗಗಳಲ್ಲಿ ಒಂದನೆಯದು. ಇದಕ್ಕೆ ಆದಿಯುಗ, ದೇವಯುಗ, ಸ್ವರ್ಣಯುಗ ಎಂಬ ಬೇರೆ ಬೇರೆ ಹೆಸರುಗಳಿವೆ. ರವಿ, ಚಂದ್ರ, ಬೃಹಸ್ಪತಿ – ಈ ಮೂರು ಗ್ರಹಗಳೂ ಪುಷ್ಯನಕ್ಷತ್ರದಲ್ಲಿ ಸೇರಿದಾಗ ಕೃತಯುಗದ ಆರಂಭವೆಂದು ಪ್ರತೀತಿ. ಇದರ ಅವಧಿ 1,728,000 ಮಾನುಷ ವರ್ಷಗಳು. ಈ ಯುಗದಲ್ಲಿ ಜನ್ಮ ತಾಳಿದ್ದರಿಂದಲೇ ಕೃತಕೃತ್ಯರಾಗುವುದರಿಂದ ಇದಕ್ಕೆ ಕೃತಯುಗವೆಂಬ ಹೆಸರು ಬಂತೆಂದು ಹೇಳಿದ್ದಾರೆ. ಯುಗವಿಚಾರಗಳನ್ನು ಪ್ರತಿಪಾದಿಸುವ ಹಲವಾರು ಪುರಾಣಾದಿ ಗ್ರಂಥಗಳ ಪ್ರಕಾರ ಕೃತಯುಗದ ಕೆಲವು ಸಾಮಾನ್ಯ ಲಕ್ಷಣಗಳು ಹೀಗಿವೆ: ಕೃತಯುಗದಲ್ಲಿ ಬೆಳೆವ ಧಾನ್ಯ ಸರ್ವಶ್ರೇಷ್ಠವಾದುದು. ಬ್ರಹ್ಮ ಇದರ ಅಧಿದೇವತೆ. ಇಲ್ಲಿ ಧರ್ಮ ನಾಲ್ಕು ಪಾದಗಳನ್ನೂ ಹೊಂದಿ ಸ್ಥಿರವಾಗಿರುತ್ತದೆ. ಆದ್ದರಿಂದ ಈ ಯುಗದ ಜನರೆಲ್ಲರೂ ಧರ್ಮನಿಷ್ಠರೂ ತಪೋವ್ರತಪರಾಯಣರೂ ಆಗಿರುತ್ತಾರೆ. ಅವರೆಲ್ಲ ನಾರಾಯಣನ ಸೇವೆಯಲ್ಲಿ ನಿರತರು ಮತ್ತು ಶೋಕವ್ಯಾಧಿರಹಿತರು. ಇದು ಸತ್ಯವಂತರ, ದಯಾಶೀಲರ, ದೀರ್ಘಜೀವಿಗಳ, ಪರೋಪಕಾರಿಗಳ, ಸರ್ವಶಾಸ್ತ್ರಪಾರಂಗತರ ಯುಗ. ಅಲ್ಲದೆ ಈ ಯುಗದಲ್ಲಿ ರಾಜರು ಧರ್ಮಗ್ರಾಹಿಗಳೂ ಪ್ರಜಾಪಾಲಕರೂ ಆಗಿದ್ದು, ಭೂಮಿಧಾನ್ಯಾದಿ ಸಂಪತ್ತಿನಿಂದ ಕೂಡಿ ಜಗತ್ತೆಲ್ಲವೂ ಸುಭಿಕ್ಷವಾಗಿರುತ್ತದೆ. ಅಹೋ ಸತ್ಯಯುಗಸ್ಯಾಸ್ತಿ ಕಃ ಸಂಖ್ಯಾತುಂ ಗುಣಾನ್ ಕ್ಷಮಃ(ಈ ಸತ್ಯಯುಗದ ಗುಣಗಳನ್ನು ಎಣಿಕೆ ಮಾಡಲು ಯಾವನು ತಾನೆ ಶಕ್ತನಾಗಿದ್ದಾನೆ) ಎಂಬ ಮಾತುಗಳಲ್ಲಿ ಯುಗದ ಮಹಿಮೆಯನ್ನು ಪದ್ಮ ಪುರಾಣ ಕೊಂಡಾಡುತ್ತದೆ. **(ನೋಡಿ– ಯುಗ–2)** (ಬಿ.ಕೆ.ಎಸ್.)

**ಕೃತವರ್ಮ :** ಮಹಾಭಾರತದ ವೀರರಲ್ಲೊಬ್ಬ, ಅತಿರಥ. ವೃಷ್ಣಿವಂಶದ ಅರಸು. ಹೃದಿಕ ಇವನ ತಂದೆ. ಭೋಜ, ಹಾರ್ದಿಕ, ಹಾರ್ದಿಕ್ಯ, ವಾರ್ಷ್ಣೇಯ, ವೃಷ್ಣಿಸಿಂಹ–ಎಂಬವು ಇವನ ನಾಮಾಂತರಗಳು. ಬಲರಾಮನ ಅಣತಿಯಂತೆ ಒಂದು ಅಕ್ಷೌಹಿಣೀ ಸೈನ್ಯದೊಡನೆ ಕೌರವ ಪಕ್ಷವನ್ನು ಸೇರಿ ಪಾಂಡವರ ವಿರುದ್ಧ ಯುದ್ಧ ಮಾಡಿದ. ಭೀಷ್ಮ ಅಭೇದ್ಯವಾದ ಕ್ರೌಂಚವ್ಯೂಹವನ್ನು ರಚಿಸಿ ಅದರ ಮುಖಸ್ಥಾನದಲ್ಲಿ ಇವನನ್ನು ನಿಲ್ಲಿಸಿದ. ಪಾಂಡವರ ಸೇನಾನಿ ದೃಷ್ಟದ್ಯುಮ್ನನ ಆಟ ಇವನ ಮುಂದೆ ಸಾಗಲಿಲ್ಲ. ಯುದ್ಧ ಮಧ್ಯದಲ್ಲಿ ಸಾತ್ಯಕಿ ಮೇಲೇರಿ ಬಂದು ಘಾತಿಸಿದಾಗ ಶಲ್ಯ ಇವನಿಗೆ ರಕ್ಷಣೆ ಕೊಟ್ಟ.

ದ್ರೋಣ ಗರುಡವ್ಯೂಹವನ್ನು ರಚಿಸಿದಾಗ ಗರುಡಾಕೃತಿಯ ಸೂಕ್ಷ್ಮಸ್ಥಳವಾದ ಅಕ್ಷಿಸ್ಥಾನದಲ್ಲಿ ಕೃತವರ್ಮನಿದ್ದ. ವ್ಯೂಹವನ್ನು ಭೇದಿಸಿಕೊಂಡು ಒಳನುಗ್ಗಿದ ಅಭಿಮನ್ಯುವನ್ನು ಆಕ್ರಮಿಸಿ ಘಾತಿಸಿದ ಆರು ಜನರಲ್ಲಿ ಇವನೊಬ್ಬ. ಅಭಿಮನ್ಯುವಿನ ಕುದುರೆಗಳನ್ನು ಈತ ಕೊಂದು ಅವನನ್ನು ವಿರಥನನ್ನಾಗಿ ಮಾಡಿದ.

ಇವನಿಗೂ ಸಾತ್ಯಕಿಗೂ ಬದ್ಧದ್ವೇಷ. ಅರ್ಜುನ ಇವನ ರಥಾಶ್ವಗಳನ್ನು ಕೊಲ್ಲಲು ಸಾತ್ಯಕಿ ರಥವನ್ನೇ ನುಚ್ಚುನೂರಾಗಿಸಿದ. ಮಹಾಭಾರತದ ಯುದ್ಧದಲ್ಲಿ ಕೌರವರ ಕಡೆಯಲ್ಲಿ ಕೃಪ, ಅಶ್ವತ್ಥಾಮರ ಜೊತೆಗೆ ಈತನೂ ಉಳಿದ. ಅಶ್ವತ್ಥಾಮ ತಂದೆಯ ಮರಣದಿಂದ ಉದ್ವಿಗ್ನನಾಗಿ ಪಾಂಡವರ ಮೇಲೆ ರಾತ್ರಿಯುದ್ಧ ಮಾಡಲು ಹವಣಿಸಿದಾಗ ಈತ ತಡೆದು ನಿಷ್ಫಲನಾದ. ಕಡೆಗೆ ಊರುಭಂಗದಿಂದ ಪರಿತಪಿಸುತ್ತಿದ್ದ ದುರ್ಯೋಧನನನ್ನು ಸಂಧಿಸಿ ಆತನನ್ನು ಸಂತೈಸಿದ.

ಕೃತವರ್ಮ ಶ್ರೀ ಕೃಷ್ಣನ ಅಚ್ಚುಮೆಚ್ಚಿನ ಅನುವರ್ತಿ. ಮೌಸಲಪರ್ವದಲ್ಲಿ, ಕುಡಿದು ಮತ್ತರಾದ ಯಾದವರಲ್ಲಿ ಕಲಹವಾದಾಗ ಸಾತ್ಯಕಿ ಇವನನ್ನು ಕೊಂದ.

ಇದೇ ಹೆಸರಿನ ಮತ್ತೊಬ್ಬ, ಸುಪ್ರಸಿದ್ಧ ಕಾರ್ತವೀರ್ಯಾರ್ಜುನನ ಚಿಕ್ಕಪ್ಪ. ಧನಕ (ಕನಕ) ಎಂಬ ಮಹಾರಾಜನ ದಾಯಾದಿಗಳಲ್ಲಿ–ಕೃತವೀರ್ಯ, ಕೃತೌಜ, ಕೃತವರ್ಮ, ಕೃತಾಗ್ನಿ ಎಂಬುವರಲ್ಲಿ–ಒಬ್ಬ.

ಕೃತವರ್ಮನೆಂಬ ಮತ್ತೊಬ್ಬ, ಪ್ರಸ್ತುತ ಅವಸರ್ಪಿಣೀಯುಗದ ಹದಿಮೂರನೆಯ ಜೈನತೀರ್ಥಂಕರನ ತಂದೆ. (ಸಿ.ಜಿ.ಪಿ.)

**ಕೃತಿಚೌರ್ಯ :** ಒಬ್ಬನ ಬರೆಹವನ್ನು ಪೂರ್ಣವಾಗಿಯೋ ಅಥವಾ ಭಾಗಶಃವಾಗಿಯೋ ಕದ್ದು ತನ್ನದೆಂದು ಹೇಳಿಕೊಳ್ಳುವುದು ಇಲ್ಲವೆ ಇತರರದೆಂದು ಸಿದ್ಧಿಸಲು ಹೊರಡುವುದು ಕೃತಿಚೌರ್ಯವೆನಿಸುತ್ತದೆ(ಫೋರ್ಜರಿ), ಮನುಷ್ಯಪ್ರಪಂಚದಲ್ಲಿ ಕಳ್ಳತನ ಹೇಗೆ ನಡೆದು ಬಂದಿದೆಯೋ ಹಾಗೆಯೇ ಸಾಹಿತ್ಯಪ್ರಪಂಚದಲ್ಲೂ ಅದರ ಹಾವಳಿ ಇದ್ದೇ ಇದೆ. ಪ್ರಾಮಾಣಿಕತೆಗೆ ಒಂದೇ ದಾರಿ. ಅಪ್ರಾಮಾಣಿಕತೆಗೆ ಹಲವು. ಸಾಹಿತ್ಯಕ್ಷೇತ್ರದಲ್ಲಿ ಕಂಡುಬರುವ ಮೋಸಕೃತ್ಯಗಳನ್ನು ಇಲ್ಲಿ ಪರಿಶೀಲಿಸಿದೆ. ಗಾಢಾನುಭವ, ಧೀಶಕ್ತಿ, ಭಾಷಾಶೈಲಿ, ಮೊದಲಾದ ಹಿರಿಯ ಗುಣಗಳನ್ನುಳ್ಳ ಕವಿಯೊಬ್ಬನ ಖ್ಯಾತಿಯನ್ನು ಕಂಡು ಅಸೂಯೆಗೊಂಡ ಜನ ಯಾವನೋ ಅದಕ್ಷ ಸಾಹಿತಿಯಿಂದ ರಚಿತವಾದ ಕೃತಿಗಳನ್ನು ಕಾಲ್ಪನಿಕ ಕವಿಯೊಬ್ಬನ ಹೆಸರಿನಲ್ಲಿ ಪ್ರಕಟಿಸಿ ಅವನಿಗೂ ಹೆಸರಾಂತ ನಿಜದ ಕವಿಗೂ ಪೈಪೋಟಿಯನ್ನು ಏರ್ಪಡಿಸಲು ಯತ್ನಿಸಬಹುದು. ಬಹಳ ಹಿಂದೆ ಹೋಮರನಿಗೆ ಎದುರಾಗಿ ಹರ್ಮಿಸ್ ಟ್ರಿಸ್ಮೆಜಿಸ್ಟಸ್ ಎಂಬ ಸುಳ್ಳು ವ್ಯಕ್ತಿಯನ್ನು ನಿರ್ಮಿಸಿದ್ದುಂಟು. ಇದರಿಂದ ಕೆಲವು ಕಾಲ ಪಂಡಿತರಲ್ಲಿ ಸಂಶಯ ಸ್ಥಿತಿ ಏರ್ಪಟ್ಟಿತೇ ಹೊರತು ಹೋಮರನ ಕೀರ್ತಿಗೆ ಧಕ್ಕೆ ತಗಲಲಿಲ್ಲ.

ಇಂಥ ಫೋರ್ಜರಿಗೆ ಅಸೂಯೆ, ಮತ್ಸರ ಮುಂತಾದ ದುರ್ಭಾವನೆಯೇ ಇರಬೇಕಾದ್ದಿಲ್ಲ. ಯಾವುದೋ ಒಂದು ಬಗೆಯ ಕೋಪದಿಂದಲೋ ಅಥವಾ ನಿಷ್ಕಾರಣವಾಗಿಯೋ ಚಾಪಲ್ಯಕ್ಕೊಳಗಾಗಿ ಕೃತಿಚೌರ್ಯಕ್ಕೆ ಪ್ರಯತ್ನ ನಡೆಸಬಹುದು. 250 ವರ್ಷಕ್ಕೂ ಮೇಲ್ಪಟ್ಟು ಷೇಕ್ಸ್‌ಪಿಯರ್ ಕಟ್ಟಿದವೆಂದೇ ಗೊತ್ತಾಗಿದ್ದ ನಾಟಕ ಚಕ್ರವನ್ನು ಫ್ರಾನ್ಸಿಸ್ ಬೇಕನ್ ಬರೆದನೆಂಬ ವಾದವೊಂದು 19ನೆಯ ಶತಮಾನದ ಎರಡನೆಯ ಭಾಗದಲ್ಲಿ ಎದ್ದು ಬಂತು. ಅದರ ವೈಪರೀತ್ಯ ಎಷ್ಟರ ತನಕ ಹೋಯಿತೆಂದರೆ ಅವುಗಳ ಕರ್ತೃ ಬೇಕನ್ ಅಲ್ಲ ಮತ್ತೊಬ್ಬ, ಅವನಲ್ಲ ಮತ್ತೊಬ್ಬ–ಎಂಬುದಾಗಿ ಅನೇಕರಿಗೆ ಆ ಪಟ್ಟವನ್ನು ಕಟ್ಟುತ್ತ ಹೋದರು. ಈ ಹಗರಣ ಏತಕ್ಕೋ ತಿಳಿಯದು.

ಹಲವು ಸಾರಿ ನಡೆದಿರುವ ಮತ್ತು ನಡೆಯಬಹುದಾದ ಇನ್ನೊಂದು ಬಗೆಯ ಚೋರ ಕೆಲಸ ಉಂಟು. ಅದೇನೆಂದರೆ ದೊಡ್ಡ ಕವಿ ರಚಿಸಿ ಬಿಟ್ಟುಹೋಗಿರುವ ಗ್ರಂಥಕ್ಕೆ ಯಾವುದೋ ದುರಭಿಮಾನದ ಸಲುವಾಗಿ ಮಹದಾಸೆ ಉಳ್ಳವರು ತಾವೇ ರಚಿಸಿದ ತುಣುಕುಗಳನ್ನು ಸೇರಿಸಿಬಿಡುವ ವ್ಯಾಪಾರ. ರಾಮಾಯಣ, ಮಹಾಭಾರತಗಳಿಗೆ ಈ ವಿಧದ ಪ್ರಕ್ಷಿಪ್ತ ಭಾಗ ಎಷ್ಟೊಂದು ಸಂದಿದೆಯೋ ನಿರ್ಣಯಿಸುವುದು ಅಸಾಧ್ಯ. ಶ್ಲೋಕಗಳನ್ನು ತಯಾರಿಸುವುದು ಅಷ್ಟೇನೂ ಶ್ರಾಸಕರವಲ್ಲ. ಆದರೆ ವಾಲ್ಮೀಕಿ ವ್ಯಾಸರ ಅಗಾಧ ತೇಜಸ್ಸನ್ನು ಬಲ್ಲವರಿಗೆ ಇಂಥ ಕಳಪೆ ವಾಕ್ಯಗಳನ್ನು ಕಂಡುಹಿಡಿಯುವುದು ಅಷ್ಟೇನು ಕಷ್ಟವಲ್ಲ. ಕುಮಾರವ್ಯಾಸನ ಭಾರತಕ್ಕೂ ಪುರಂದರದಾಸರ ಕೀರ್ತನೆಗಳಿಗೂ ಯಾರು ಯಾರು ಎಷ್ಟು ಎಷ್ಟು ಕೂಡಿಸಿದ್ದಾರೊ ತಿಳಿಯದು. ಈ ಬಗೆಯ ಕಳ್ಳತನಕ್ಕೆ ಅತ್ಯುತ್ಕಟ ಧರ್ಮಶ್ರದ್ಧೆ, ಮೌಢ್ಯ ತಮ್ಮ ಗುಂಪೆಂಬ ವಿಪರೀತ ಮಮತೆಗಳು ಕಾರಣವಾಗುತ್ತವೆ.

ವಿದ್ವಾಂಸರು ನಿಷ್ಪಕ್ಷಪಾತವಾಗಿ ತಾರತಮ್ಯ ವಿವೇಚನೆಯಿಂದ ಸಾಹಿತ್ಯವನ್ನು ಪರೀಕ್ಷಿಸಬೇಕು, ಪರಿಶೀಲಿಸಬೇಕು. ಕೆಲವು ವಿದ್ವಾಂಸರಿಂದ ಅನ್ಯತವೆನಿಸಿಕೊಳ್ಳುವ ಕೃತ್ಯ ಜರುಗಿದೆಯೆಂದರೆ ಆಶ್ಚರ್ಯವಲ್ಲವೇ. ಒಬ್ಬ ಸಾಹಿತಿಯ ಸಂಬಂಧವಾದ ಪತ್ರಗಳೋ ದಾಖಲೆಗಳೋ ಕೆಲವು ಸಮಸ್ಯೆ ಬಿಡಿಸುವುದಕ್ಕೆ ಆವಶ್ಯಕವಾಗಿರುವ ಸಂದರ್ಭದಲ್ಲಿ ಎಲ್ಲೊ ಒಂದು ಕಡೆ ಸಿಕ್ಕಿತೆಂದು ಹೇಳುತ್ತ ಸುಳ್ಳಾದುವನ್ನು ಸೃಷ್ಟಿಸುತ್ತ ಗುಲ್ಲೆಬ್ಬಿಸುವ ವ್ಯಾಪಾರ ನಡೆದಿದೆ. ಅಂಥ ಕೃತ್ಯ ಪತ್ತೆಯಾಗಿದೆ. ಪ್ರ.ಶ.ಪೂ.ಸು 570 ರಿಂದ 555ರ ವರೆವಿಗೂ ಸಿಸಿಲಿಯ ನಿರಂಕುಶ ದೊರೆಯಾಗಿದ್ದ ಫ್ಯಾಲರಿಸ್ ಪ್ರಖ್ಯಾತ ಪ್ರಭು. ಇದ್ದಕ್ಕಿದ್ದಂತೆ 18ನೆಯ ಶತಮಾನದಲ್ಲಿ ಫ್ಯಾಲರಿಸನ ಕುಶಲ ಪತ್ರಗಳು ಎಂಬ ಸಂಕಲನ ಪ್ರಕಟಗೊಂಡಿತು. ಓದಿದ ಹಲವರು ಅದನ್ನು ಮೆಚ್ಚಿದರು. ಆದರೆ ಗ್ರೀಕ್ ಭಾಷೆಯನ್ನು, ಅದರ ಚರಿತ್ರೆಯನ್ನು ತನ್ನ ಅಂಗೈಯಲ್ಲಿ ಇಟ್ಟುಕೊಂಡಿದ್ದ ಪಂಡಿತವರೇಣ್ಯ ಬೆಂಟ್ಲೆ ಆ ಗ್ರಂಥ ಶುದ್ಧ ಮೋಸವೆಂದು ಸುಲಭವಾಗಿ ಕಂಡುಹಿಡಿದು, ಕಳ್ಳತನವನ್ನು ಎತ್ತಿತೋರಿಸಿದ. ಇಂಥ ವಂಚನೆಗೆ ಪ್ರತಿಷ್ಠೆ ಹೆಚ್ಚಿಸಿಕೊಳ್ಳಬೇಕೆಂಬ ಚಾಪಲ್ಯವೇ ಮುಖ್ಯ ಕಾರಣ.

ಇವಕ್ಕಿಂತ ಹೆಚ್ಚು ಖಂಡನೀಯವಾದ ಬೇರೊಂದು ಸಾರಸ್ವತ ಪ್ರಕರಣ ಹಲವುಬಾರಿ ಆಗಿದೆ. ತಾನೇ ಒಂದು ಕಾವ್ಯ ರಚಿಸಿ ಅದು ತನಗೆ ಯಾವುದೋ ಹಳೆಯ ಪೆಟ್ಟಿಗೆಯಲ್ಲಿ ಸಿಕ್ಕಿತೆಂದೂ ಅದರ ಕರ್ತೃ ಹಿಂದಣ ಕಾಲದ ಒಬ್ಬ ಕವಿಯೆಂದೂ ಪ್ರಕಟಿಸಿದವರುಂಟು. ಯುವಕ ಚ್ಯಾಟರ್‌ಟನ್ ತನಗೆ ಮಧ್ಯಯುಗದ ಥಾಮಸ್ ರೌಲಿ ಎಂಬಾತನಿಂದ ರಚಿತವಾದ ಕಾವ್ಯದ ಪ್ರತಿ ಒಂದು ಚರ್ಚಿನ ಮೂಲೆಯಲ್ಲಿ ದೊರಕಿತೆಂದು ಹೇಳಿದ. ಆದರೆ ಮಧ್ಯಯುಗದ ಇಂಗ್ಲಿಷ್ ಭಾಷೆಯ ಪರಿಚಯ ಅವನಿಗೆ ಚೆನ್ನಾಗಿ ಇರಲಿಲ್ಲವಾಗಿ ಕೃತ್ರಿಮ ಬಯಲಾಯಿತು. ಹಾಗೆಯೇ ಮೆಕ್‌ಫರ್ಸನ್ ಎಂಬಾತ ಲಯಬದ್ಧವಾದ ಗದ್ಯದಲ್ಲೊಂದು ಕಾವ್ಯವನ್ನು ಬರೆದು ಅದರ ಕರ್ತೃ ಪ್ರಾಚೀನನಾದ ಆಸಿಯಸ್ ಎಂದು ಘೋಷಿಸಿದ. ಅದು ಜರ್ಮನಿಯ ಮಹಾಕವಿಗಳನ್ನೂ ಇತರರನ್ನೂ ಬೆರಗುಗೊಳಿಸಿತು. ಆದರೆ ಇಂಗ್ಲೆಂಡಿನಲ್ಲಿ ಜಾನ್ಸನ್ ಮೊದಲಾದವರಿಗೆ ಅದರ ಕೃತಕತೆ ವೇದ್ಯವಾಯಿತು.

ಇವು ಕಪ್ಪು ಸುಳ್ಳಾದರೆ ಇನ್ನೊಂದು ಬಗೆಯ ಬಿಳಿ ಸುಳ್ಳು ಇದೆ. ಕೆಲವು ಗ್ರಂಥಕರ್ತರು ನಾಚಿಕೆಯಿಂದಲೋ ಅಧೈರ್ಯದಿಂದಲೋ ತಮ್ಮ ಕೃತಿಗೆ ಕಲ್ಪಿತವಾದ ಕವಿನಾಮವನ್ನು ಜೋಡಿಸಿ ಮುದ್ರಿಸಿದರು. ಈ ಕೆಲಸ ಬಹುವಾಗಿ ಮಹಿಳೆಯರಿಂದ ಆದದ್ದು. ಮೇರಿ ಎವನ್ಸ್ ಎಂಬಾಕೆ ತನ್ನ ಕಾದಂಬರಿಗಳನ್ನು ಜಾರ್ಜ್ ಎಲಿಯಟ್ ಎಂದು ಕಲ್ಪಿತ ಗಂಡಸಿನ ಹೆಸರಿನಲ್ಲಿ ಪ್ರಕಟಿಸಿದಳು. ಆ ಹೆಸರೇ ಇಂದಿಗೂ ಸ್ಥಿರವಾಗಿಬಿಟ್ಟಿದೆ.

ಈ ಪ್ರಸ್ತಾಪದಲ್ಲಿ ಯಥಾರ್ಥವಾಗಿ ಕಳ್ಳಸಾಹಿತ್ಯವಲ್ಲದಿದ್ದರೂ ಕಳ್ಳಸಾಹಿತ್ಯವೆಂಬ ಅಭಿಶಾಪಕ್ಕೆ ಪಕ್ಕಾಗಬಹುದಾದ ಲೇಖನಗಳ ಬಗ್ಗೆ ಕೆಲವು ಮಾತುಗಳನ್ನು ಆಡಬೇಕು. ಅವಕ್ಕೆ ಕೊಟ್ಟಿರುವ ಹೆಸರು ಪ್ರೇತಬರೆಹ (ಘೋಸ್ಟ್ ರೈಟಿಂಗ್), ಕವಿಯೊಬ್ಬ ಬೇರೆಯವನ ಕೈಯಲ್ಲಿ ಬರೆಯಿಸಿ ಅದನ್ನು ತನ್ನ ನಾಮಧೇಯದೊಡನೆ ಬೆರೆಸಿ ಪ್ರಕಟಿಸುವುದು ಪ್ರೇತಬರೆಹ. ಸಾಧಾರಣವಾಗಿ ಕವಿ ಹೀಗೆ ಮಾಡುವುದು ಪ್ರಬಲವಾದ ಒಂದು ಕಾರಣದಿಂದ. ತನ್ನ ಕೃತಿಗಳಿಗೆ ಜನರಿಂದ ಹೆಚ್ಚಿನ ಬೇಡಿಕೆ ಇದ್ದು ಸಕಾಲಕ್ಕೆ ಹೊಸ ಕೃತಿಗಳನ್ನು ಒದಗಿಸುವಷ್ಟು ಶಕ್ತಿ ಸಾಮರ್ಥ್ಯ, ಕಾಲಾವಕಾಶ, ಪ್ರತಿಭೆ ಇಲ್ಲದಿರುವಾಗ ಲೇಖಕ ಇತರರಿಗೆ ಹಣ ಕೊಟ್ಟು ಕತೆ ಕಾದಂಬರಿಗಳನ್ನು ಬರೆಸಿ ತನ್ನ ಹೆಸರಿನಲ್ಲಿ ಪ್ರಚುರ ಮಾಡುತ್ತಾನೆ. ಇಂಥ ವ್ಯವಹಾರ ಗ್ರಂಥಚೌರ್ಯವಲ್ಲ, ಗ್ರಂಥವನ್ನು ಬಾಡಿಗೆಗೆ ತೆಗೆದುಕೊಳ್ಳುವಿಕೆ ಎಂದು ಭಾವಿಸಲಾಗಿದೆ.

ಈಚೆಗೆ ಸಾಹಿತಿಗಿಂತಲೂ ಹೆಚ್ಚಾಗಿ ರಾಜಕಾರಣಿಗಳು ಮತ್ತು ಇತರ ಶ್ರೀಮಂತರು ತಮ್ಮ ಆತ್ಮಚರಿತ್ರೆಯನ್ನು ಪ್ರಕಟಿಸಬೇಕೆನಿಸಿದಾಗ ಅಥವಾ ತಮ್ಮ ಯಾವುದೋ ಒಂದು ಧೋರಣೆಯನ್ನು ಗ್ರಂಥರೂಪದಲ್ಲಿ ಪ್ರಸಾರ ಮಾಡಬೇಕೆನಿಸಿದಾಗ ಪ್ರೇತಲೇಖಕರ ಸಹಾಯವನ್ನು ಕೋರುವ ವ್ಯಾಪಾರ ಹೆಚ್ಚಾಗಿದೆ. (ಎಸ್.ವಿ.ಆರ್.)

**ಕೃತಿಸ್ವಾಮ್ಯ :** ಸಾಹಿತ್ಯ, ನಾಟಕ, ಸಂಗೀತ ಮತ್ತು ಕಲಾಕೃತಿಗಳನ್ನು ಅಧಿಕಾರವಿಲ್ಲದೆ ನಕಲು ಮಾಡುವುದು, ರೂಪಾಂತರಿಸುವುದು, ಮರುಪ್ರಕಟಿಸುವುದು, ಪ್ರದರ್ಶಿಸುವುದು ಮುಂತಾದುವುಗಳ ವಿರುದ್ಧ ಅವುಗಳ ಕರ್ತೃಗಳಿಗೆ ಕಾನೂನುರೀತ್ಯಾ ನೀಡಲಾಗಿರುವ ರಕ್ಷಣೆಯ ಹಕ್ಕು (ಕಾಪಿರೈಟ್). ಒಂದು ಸಾಹಿತ್ಯ, ನಾಟಕ, ಸಂಗೀತ ಇಲ್ಲವೇ ಕಲಾಕೃತಿಯ ಪ್ರತಿಗಳನ್ನು ಮಾಡುವ, ಮಾರುವ ಇಲ್ಲವೇ ನಿಯಂತ್ರಿಸುವ, ಅನನ್ಯ ಹಕ್ಕು ಇದು. ಇದು ಕಾನೂನಿನಿಂದ ನೀಡಲಾದ ಹಕ್ಕು. ಇದು ಒಂದು ಕಾಲಾವಧಿಗೆ ಸೀಮಿತವಾಗಿರುತ್ತದೆ. ಒಂದು ಕೃತಿ ಮೊದಲ ಬಾರಿಗೆ ಪ್ರಕಟವಾದ ಮೇಲೆ ಅದನ್ನು ಮರುಪ್ರಕಟಿಸಲು, ಪ್ರತಿಗಳನ್ನು ಮಾಡಿ ಮಾರಲು, ರೂಪಾಂತರಗೊಳಿಸಲು, ಮಾರ್ಪಡಿಸಲು, ಪ್ರದರ್ಶಿಸಲು, ಇಲ್ಲವೇ ನಿರೂಪಿಸಲು ಕಾನೂನು ನೀಡುವ ಅನನ್ಯ ಅಧಿಕಾರ, ಇನ್ನೊಂದು ಸಾಹಿತ್ಯ ಕೃತಿಯ ಪ್ರತಿಗಳನ್ನು ಮುದ್ರಿಸಿ ಪ್ರಕಟಿಸುವ ಅನನ್ಯ ಅಧಿಕಾರ; ಕಾನೂನುಮನ್ನಿತ ಸಾಹಿತ್ಯಸ್ವಾಮ್ಯಾಧಿಕಾರ; ಕಾನೂನಿನಿಂದ ನಿಗದಿಯಾದ ಅವಧಿಯಲ್ಲಿ ಒಂದು ಸಾಹಿತ್ಯ ಅಥವಾ ಕಲಾತ್ಮಕಕೃತಿಯ ಮೇಲೆ ಅದರ ಲೇಖಕ ಅಥವಾ ಉತ್ಪಾದಕನಲ್ಲಿ ಅಥವಾ ಆ ಹಕ್ಕನ್ನು ಪಡೆದುಕೊಂಡವನಲ್ಲಿ ನಿಹಿತವಾದ ಒಡೆತನದ ಹಕ್ಕು; ಒಂದು ಕೃತಿಯ ಪ್ರತಿಗಳನ್ನು ಮಾಡುವುದಕ್ಕೆ ಅನ್ಯರೊಡನೆ ಅನುಭವಿಸುತ್ತಿರಬಹುದಾದ ಸಾಮಾನ್ಯ ಹಕ್ಕಾಗಿರದೆ ನಿರ್ಮಾತೃವಿಗೆ ಮಾತ್ರ ಇರುವ ಅನನ್ಯ ಅಧಿಕಾರ; ಒಂದು ಕೃತಿಯ ಪ್ರತಿಗಳನ್ನು ಮುದ್ರಣ ಇಲ್ಲವೆ ಇನ್ನಾವುದೇ ಉಪಾಯದಿಂದ ಹೆಚ್ಚಿಸುವ ಬಗ್ಗೆ ಏಕೈಕವಾದ ಮತ್ತು ಆ ಕೃತಿಗೆ ಸಂಬಂಧಪಟ್ಟವರಿಗೆ ಇರುವ ಅನನ್ಯ ಸ್ವಾತಂತ್ರ್ಯ–ಎಂದು ನ್ಯಾಯಾಧೀಶರೂ ಕಾನೂನು ಪಂಡಿತರೂ ಹೇಳಿರುವ ಅನೇಕ ವ್ಯಾಖ್ಯೆಗಳು ಅಪೂರ್ಣವಾಗಿ ಕಂಡರೂ ಕಾಲ, ದೇಶ, ಪರಿಸ್ಥಿತಿ ಮತ್ತು ಜಾರಿಯಲ್ಲಿರುವ ಕಾನೂನುಗಳಿಗೆ ಅನುಗುಣವಾಗಿ ಇವನ್ನು ಹೇಳಿರುವುದರಿಂದ ಇವು ಸಂದರ್ಭೋಚಿತವಾದುದಾಗಿವೆ. ಕಾಲಕ್ರಮದಲ್ಲಿ ಕೃತಿಸ್ವಾಮ್ಯದ ವ್ಯಾಪ್ತಿ ಬೆಳೆದಂತೆ ಅದರ ವ್ಯಾಖ್ಯೆಯೂ ವಿಸ್ತರಿಸುತ್ತ ಬಂದಿದೆ.

ಭಾರತದಲ್ಲಿ 1957ರ ಜೂನ್ 4 ರಂದು ಅಂಗೀಕೃತವಾಗಿ, 1958ರ ಜನವರಿ21ರಂದು ಜಾರಿಗೆ ಬಂದ ಭಾರತದ ಕೃತಿಸ್ವಾಮ್ಯ ಕಾಯಿದೆಯಲ್ಲೂ ಕೃತಿಸ್ವಾಮ್ಯದ ವ್ಯಾಖ್ಯೆಯನ್ನು ನೀಡಲಾಗಿದೆ. ಒಂದು ಸಾಹಿತ್ಯ, ನಾಟಕ ಅಥವಾ ಸಂಗೀತಕೃತಿಯನ್ನು ಭೌತಿಕ ರೂಪದಲ್ಲಿ ಪುನಾರಚಿಸುವುದು, ಪ್ರಕಟಿಸುವುದು, ಬಹಿರಂಗವಾಗಿ ಪ್ರದರ್ಶಿಸುವುದು, ಅದರ ಭಾಷಾಂತರವನ್ನು ರಚಿಸುವುದು. ಚಲನಚಿತ್ರ ಇಲ್ಲವೇ ಧ್ವನಿಮುದ್ರಿಕೆ ಮಾಡುವುದು, ಬಾನುಲಿ ಪ್ರಸಾರದ ಮೂಲಕ ಶ್ರುತ ಪಡಿಸುವುದು, ಇಲ್ಲವೇ ಧ್ವನಿವರ್ಧಕ ಅಥವಾ ಅಂಥದೇ ಯಾವುದೊಂದು ಸಾಧನದ ಮೂಲಕ ಬಾನುಲಿ ಪ್ರಸಾರವನ್ನು ಜನತೆಗೆ ಮುಟ್ಟಿಸುವುದು, ಕೃತಿಯನ್ನು ಬೇಕಾದಂತೆ ರೂಪಾಂತರಿಸಿಕೊಳ್ಳುವುದು, ಈ ಎಲ್ಲ ಕ್ರಮಗಳೂ ಕೃತಿಸ್ವಾಮ್ಯದಲ್ಲಿ ಸೇರಿವೆ. ಇಡೀ ಕೃತಿಗಳಿಗೇ ಅಲ್ಲದೆ ಅವುಗಳ ಯಾವುದೇ ಸಾರಭೂತ ಅಂಶಕ್ಕೆ ಸಂಬಂಧಿಸಿದಂತೆಯೂ ಇವು ಅನ್ವಯವಾಗುತ್ತವೆ.

ಕೃತಿಕಾರರು ತಮ್ಮ ಸಮಯ, ಬುದ್ಧಿ ಮತ್ತು ಹಣವನ್ನು ವ್ಯಯ ಮಾಡಿ ಕೃತಿಗಳನ್ನು ರಚಿಸಿ, ಜ್ಞಾನ ಮತ್ತು ಮನೋರಂಜನೆಗಳನ್ನೊದಗಿಸುತ್ತಾರೆ. ಇದಕ್ಕೆ ಬದಲಾಗಿ ಜನತೆ ಕೃತಿಕಾರರ ಕೃತಿಸ್ವಾಮ್ಯವನ್ನು ಒಪ್ಪಿಕೊಳ್ಳುತ್ತದೆ. ಇತರರು ಅಧಿಕಾರ ಪಡೆಯದೆ ಈ ಕೃತಿಗಳ ನಕಲು ಮಾಡುವುದು ಕೃತಿಸ್ವಾಮ್ಯದ ಉಲ್ಲಂಘನೆಯೆಂದು ಸಾರಿ, ಅವರ ಹಕ್ಕುಗಳನ್ನು ಎತ್ತಿ ಹಿಡಿಯುತ್ತದೆ. ಕೃತಿಸ್ವಾಮ್ಯ ಒಂದು ಅಭೌತಿಕ ಔದ್ಯೋಗಿಕ ಸ್ವತ್ತು. ಇದು ಕಾಯಿದೆಯ ಸೃಷ್ಟಿಯಾಗಿದ್ದರೂ ನಿಜವಾಗಿ ಸ್ವಾಭಾವಿಕವಾದ ನಾಗರಿಕ ಹಕ್ಕು. ಸಾಹಿತ್ಯ, ಸಂಗೀತ ಇಲ್ಲವೇ ಕಲಾಕೃತಿಯ ರಚನೆಗಾಗಿ ಕೃತಿಗಾರರು ವಿನಿಯೋಗಿಸಿದ ಶ್ರಮದ ಫಲವನ್ನು ರಕ್ಷಿಸುವುದು ಏಕಸ್ವಾಮ್ಯ. ಇದು ಕೃತಿಯ ನಕಲು ಮಾಡುವುದನ್ನು ತಡೆಯುವ ಅಧಿಕಾರಕ್ಕೆ ನಿಯಮಿತವಾಗಿರುತ್ತದೆ. ಒಬ್ಬ ಸ್ವತಂತ್ರ ಲೇಖಕ ಸ್ವತಂತ್ರೋಪಾಯಗಳಿಂದ ಈಗಾಗಲೇ ಅಸ್ತಿತ್ವದಲ್ಲಿರುವ ಕೃತಿಯಂಥದೇ ಕೃತಿಯೊಂದನ್ನು ರಚಿಸಿದ್ದಲ್ಲಿ ಮೊದಲಿನ ಕೃತಿಕಾರ ಯಾವ ಕ್ರಮವನ್ನೂ ಕೈಕೊಳ್ಳಲಾಗುವುದಿಲ್ಲ. ಹೆರವರ ವಸ್ತುಗಳನ್ನು ಅಪಹರಿಸಲಾಗದು ಎಂಬ ನ್ಯಾಯೋಕ್ತಿಯ ಮೇಲೆ ಕೃತಿಸ್ವಾಮ್ಯದ ತಳಹದಿಯಿರುತ್ತದೆ.

ಕೃತಿಸ್ವಾಮ್ಯವಿರಬೇಕಾದರೆ ಆ ಕೃತಿ ಕರ್ತೃವಿನ ಸ್ವಂತದ್ದಾಗಿರಬೇಕು. ಅದು ಅವನ ಶ್ರಮ, ಸ್ವಂತ ಬುದ್ಧಿ, ವಿವೇಕ ಮತ್ತು ಜಾಣ್ಮೆಗಳ ಫಲವಾಗಿರಬೇಕು. ಯಾವುದೇ ಒಬ್ಬ ವ್ಯಕ್ತಿಗೆ ಜ್ಞಾನ ಮತ್ತು ವಿಚಾರಗಳಲ್ಲಿ ಏಕಸ್ವಾಮ್ಯವಿರುವುದು ಅಶಕ್ತವಾದ್ದರಿಂದ ಕೇವಲ ವಿಚಾರಗಳಲ್ಲಿ ಕೃತಿಸ್ವಾಮ್ಯವಿರುವುದಿಲ್ಲ. ಒಬ್ಬ ಲೇಖಕನಿಗೆ ನೀಡಿದ ಒಂದು ವಿಚಾರವನ್ನುಪಯೋಗಿಸಿಕೊಂಡು ಆತ ಕೃತಿಯೊಂದನ್ನು ರಚಿಸಿದಲ್ಲಿ ಅದರ ಸ್ವಾಮ್ಯ ಲೇಖಕನದಾಗುವುದೇ ವಿನಾ ವಿಚಾರವನ್ನಿತ್ತವನದಾಗುವುದಿಲ್ಲ. ಯಾವ ಕೃತಿಗಳ ಬಗ್ಗೆ ಈ ಹಕ್ಕು ಇರುತ್ತದೆ ಮತ್ತು ಯಾವವುಗಳ ಬಗ್ಗೆ ಇರುವುದಿಲ್ಲ ಎಂಬುದನ್ನು 1957ರ ಕೃತಿಸ್ವಾಮ್ಯಕಾಯಿದೆಯ 43ನೆಯ ಕಲಮಿನಲ್ಲಿ ವಿವರಿಸಲಾಗಿದೆ. ಕೃತಿಯೆಂದೆನ್ನಿಸಿಕೊಳ್ಳಬಹುದಾದ ಎಲ್ಲ ಅಪ್ರಕಟಿತ ಮತ್ತು ಪ್ರಕಟಿತ ರಚನೆಗಳಲ್ಲೂ ಕೃತಿಸ್ವಾಮ್ಯ ಇರಬಹುದಾಗಿದೆ ಎಂದು ಸಾಮಾನ್ಯವಾಗಿ ಹೇಳಬಹುದು. ಒಂದು ಕೃತಿ ಸ್ವೋಪಜ್ಞವಾಗಿರತಕ್ಕದ್ದು ಕೃತಿಸ್ವಾಮ್ಯಕ್ಕೆ ಆವಶ್ಯ. ಹಾಗೆಂದರೆ ಅದು ಮೂಲಭೂತ ಇಲ್ಲವೇ ಹೊಸತಾಗಿ ಶೋಧಿಸಿದ ವಿಚಾರಗಳ ಕಥನವಾಗಿರಬೇಕು ಎಂದೇನೂ ಇಲ್ಲ. ಕೃತಿಸ್ವಾಮ್ಯ ಕಾಯಿದೆ ವಿಚಾರಗಳ ಇಲ್ಲವೇ ವಸ್ತು ವಿಷಯಕವಾದ ಸ್ವೋಪಜ್ಞತೆಯನ್ನು ಲಕ್ಷಿಸುವುದಿಲ್ಲ. ಅದು ಮಹತ್ತ್ವ ನೀಡುವುದು ನಿರೂಪಣೆಗೆ. ಕೃತಿಕಾರ ವಸ್ತುವಿಷಯದ ಮಹತ್ತರ ಭಾಗವನ್ನು ಇತರ ಮೂಲಗಳಿಂದ ಎತ್ತಿಕೊಂಡಿದ್ದರೂ ನಿರೂಪಣೆಯಲ್ಲಿ ಸ್ವೋಪಜ್ಞತೆ ಇದ್ದರೆ ಕೃತಿಸ್ವಾಮ್ಯಲಭ್ಯವಾಗುತ್ತದೆ. ಕೃತಿಸ್ವಾಮ್ಯ ಭಾಜ್ಯವಿರುವುದರಿಂದ ಕೃತಿಯ ಒಂದು ಭಾಗದ ಮೇಲೂ ಆ ಹಕ್ಕು ಇರಬಹುದಾಗಿದೆ. ಸಾಹಿತ್ಯಕೃತಿಯೆಂದರೆ ಸಾಮಾನ್ಯಭಾವನೆ ಇರುವಂತೆ ಒಂದು ಕಾದಂಬರಿಯೋ ಕಥೆಯೋ ಪದ್ಯವೋ ನಾಟಕವೋ ಆಗಿರಬೇಕೆಂದಿಲ್ಲ. ಬರೆದ ಇಲ್ಲವೇ ಮುದ್ರಿಸಿದ ಯಾವುದೇ ಆದರೂ ಇಲ್ಲಿ ಸಾಹಿತ್ಯವೆನಿಸಿಕೊಳ್ಳುತ್ತದೆ. ಪ್ರಶ್ನಪತ್ರಿಕೆಗಳು, ಶೀಘ್ರಲಿಪಿ ಪದ್ಧತಿ, ಪತ್ರಿಕಾ ತಂತಿಗಳು, ಆಟದ ನಿಯಮಗಳು ಮುಂತಾದವೂ ಸಾಹಿತ್ಯಕೃತಿಗಳೆಂದು ನಿರ್ಧರಿಸಲಾಗಿದೆ. ಸಂಗ್ರಹಗಳು, ರೂಪಾಂತರಗಳು, ಜಾಹೀರಾತುಗಳು, ಟಿಪ್ಪಣಿಗಳು, ಸಂಕಲನಗಳು, ಪಾವತಿ ಪುಸ್ತಕ, ವೈಜ್ಞಾನಿಕ ಪ್ರಶ್ನೋತ್ತರಗಳ ಪುಸ್ತಕ, ನಿರ್ದೇಶಕ ಕೈಪಿಡಿ, ಒಂದು ಕ್ರೀಡಾವಾರ್ಷಿಕದಲ್ಲಿ ಪ್ರಕಟವಾದ ಪ್ರಮುಖ ಆಟಗಾರರ ಜೀವನವೃತ್ತಾಂತದ ಟಿಪ್ಪಣಿಗಳು, ಬ್ರಾಡ್‌ಷಾ ರೈಲ್ವೆ ಮಾರ್ಗದರ್ಶಿಯಲ್ಲಿರುವ ರೈಲ್ವೆ ನಿಲ್ದಾಣಗಳ ಅನುಕ್ರಮ ಪಟ್ಟಿ, ವ್ಯಾಪಾರ ಸಂಬಂಧವಾದ ಜಾಹೀರಾತು ಮುಂತಾದುವು, ಭಾಷಾಂತರಗಳು, ಕಾಯಿದೆ ವರದಿಗಳು ಮತ್ತು ಶಿರೋಟಿಪ್ಪಣಿಗಳು, ವ್ಯಾಖ್ಯಾನಗಳು, ಪತ್ರಗಳು, ಭಾಷಣಗಳು ಮುಂತಾದವು ಸಾಹಿತ್ಯಕೃತಿಗಳೆಂದು ಪರಿಗಣಿತವಾಗಿ ಅವುಗಳಲ್ಲೂ ಕೃತಿಸ್ವಾಮ್ಯವಿರಬಹುದು. ಮಾನನಷ್ಟಕರವಾದ, ಅನೈತಿಕವಾದ, ಅಶ್ಲೀಲವಾದ, ಧರ್ಮವಿರುದ್ಧವಾದ, ಜನತೆಯನ್ನು ಮೋಸಗೊಳಿಸುವ, ಸಾರ್ವಜನಿಕ ನೀತಿಗೆ ವಿರುದ್ಧವಾದ ಅಥವಾ ದೇಶದ್ರೋಹಾತ್ಮಕವಾದ ಕೃತಿಗಳು ಸ್ವೋಪಜ್ಞವಾಗಿದ್ದರೂ ಅವುಗಳಲ್ಲಿ ಕೃತಿಸ್ವಾಮ್ಯ ಇರುವುದಿಲ್ಲ. ನಾಟಕ ಮತ್ತು ಸಂಗೀತ ಕೃತಿಗಳಲ್ಲಿ ನಾಟಕದ ಕ್ರಿಯೆ ಮತ್ತು ಮಟ್ಟುಗಳಲ್ಲಿ ಕೃತಿಸ್ವಾಮ್ಯವಿರುತ್ತದೆ. ಪಾತ್ರಗಳ ಅಭಿನಯ ಚಲನೆಗಳ ನಿರ್ದೇಶಕ ಸೂಚನೆಗಳು, ಪಾತ್ರಗಳ ಭಾಷಣಗಳು ಇಲ್ಲವೇ ಸಂವಾದಗಳು, ನಾಟಕದ ಘಟನೆಗಳು, ಕಥೆ, ಲಿಖಿತ ಅಥವಾ ಮುದ್ರಿತ ಸನ್ನಿವೇಶ ದೃಶ್ಯ ವ್ಯವಸ್ಥೆಗಳು, ನಾಟ್ಯ ಇತ್ಯಾದಿಗಳಲ್ಲಿ ಕೃತಿಸ್ವಾಮ್ಯ ಇರಬಹುದು. ನೃತ್ಯಗಳು, ದೃಶ್ಯಗಳು ಮತ್ತು ಪೋಷಾಕುಗಳು ಸ್ವತಃ ಕೃತಿಸ್ವಾಮ್ಯದ ವಿಷಯಗಳಾಗಲಾರವಾದರೂ ಅವು ಎಂತಿರಬೇಕೆಂದು ಹೇಳುವ, ಬರೆದ ಇಲ್ಲವೇ ಮುದ್ರಿಸಿದ ಭಾಗಗಳಲ್ಲಿ ಕೃತಿಸ್ವಾಮ್ಯವಿರುವುದು ಶಕ್ಯವಿದೆ. ಕೃತಿಸ್ವಾಮ್ಯಕ್ಕೆ ನಾಟಕದ ಯೋಗ್ಯತೆ ಅಪ್ರಸ್ತುತ. ಸಂಗೀತದ ಕೃತಿಯಲ್ಲಿ ಸ್ವಾಮ್ಯವಿರಬೇಕಾದರೆ ಸಂಗೀತಯೋಗ್ಯತೆ ಇರಬೇಕೆಂದಿಲ್ಲ. ವರ್ಣಚಿತ್ರಗಳು, ಶಿಲ್ಪಕೃತಿಗಳು, ರೇಖಾಕೃತಿಗಳು, ಕುಶಲ ಕೆಲಸದ ಕೃತಿಗಳು ಮುಂತಾದವುಗಳನ್ನೆಲ್ಲ, ಅವುಗಳಲ್ಲಿ ಕಲಾತ್ಮಕ ಗುಣವಿರಲಿ, ಇಲ್ಲದಿರಲಿ, ಕಲಾಕೃತಿಗಳೆಂದೇ ಪರಿಗಣಿಸಲಾಗುತ್ತದೆ. ಒಂದೇ ಮೂಲದಿಂದ ಇಬ್ಬರು ಕೃತಿಗಳನ್ನು ರಚಿಸಬಹುದಾದರೂ ಒಬ್ಬನ ಕೃತಿಯನ್ನು ನೋಡಿ ಇನ್ನೊಬ್ಬ ಕೃತಿಯನ್ನು ರಚಿಸಲಾಗದು. ಒಂದೇ ವಸ್ತುವನ್ನು ಕುರಿತು ಎರಡು ಛಾಯಾಚಿತ್ರಗಳಿದ್ದರೆ ಅವೆರಡರಲ್ಲೂ ಪ್ರತ್ಯೇಕವಾಗಿ ಕೃತಿಸ್ವಾಮ್ಯವಿರಬಹುದು. ಕರಡು ಚಿತ್ರಗಳೂ ನಕ್ಷೆಗಳೂ ಕೃತಿಸ್ವಾಮ್ಯಕ್ಕೆ ಅರ್ಹವಾಗುವುವಾದರೂ ಅವುಗಳ ಆಧಾರದ ಮೇಲೆ ಕಟ್ಟಲಾದ ಇಮಾರತುಗಳಲ್ಲಿ ಕಲಾತ್ಮಕ ಗುಣವಿದ್ದರೆ ಮಾತ್ರ ಅವುಗಳಲ್ಲೂ ಕೃತಿಸ್ವಾಮ್ಯ ಇರಬಹುದು. ಚಲನಚಿತ್ರದಲ್ಲಿ ಸಾಹಿತ್ಯ, ನಾಟಕ ಮತ್ತು ಸಂಗೀತ ಕೃತಿಸ್ವಾಮ್ಯಗಳ ವಿಷಯಗಳು ಒಂದುಗೂಡಿರುತ್ತವೆ. ಛಾಯಾಚಿತ್ರವೆಂಬ ಕಾರಣದಿಂದ ಒಂದು ಚಲನಚಿತ್ರಕ್ಕೆ ಕೃತಿಸ್ವಾಮ್ಯದ ಅರ್ಹತೆ ಲಭ್ಯವಾಗುವುದು. ಕೃತಿಸ್ವಾಮ್ಯವಿರುವ ಇನ್ನೊಂದು ಕೃತಿಯಿಂದ ಒಂದು ಚಲನಚಿತ್ರ ರಚಿತವಾಗಿದ್ದರೂ ಅದರ ಕರ್ತೃ ಅದಕ್ಕೆ ಸ್ವೋಪಜ್ಞತೆಯ ಲಕ್ಷಣ ನೀಡಿದ ಪಕ್ಷದಲ್ಲಿ ಅದು ಮೂಲಕೃತಿಯೆನಿಸಿಕೊಂಡು, ಅದರಲ್ಲಿ ಕೃತಿಸ್ವಾಮ್ಯ ಇರಬಹುದು. ಧ್ವನಿಮುದ್ರಿಕೆಯಲ್ಲಿ ಸ್ವಾಮ್ಯವಿರಬೇಕಾದರೆ ಅದರ ರಚನೆ ಕಾನೂನಿನ ಮಿತಿಯಲ್ಲಿ ಬರಬೇಕು. ಭವಿಷ್ಯದ ಕೃತಿಗಳಲ್ಲಿ ಈಗ ಕೃತಿಸ್ವಾಮ್ಯ ಇರುವುದಿಲ್ಲ.

**ಸ್ವಾಮ್ಯದ ಹಕ್ಕುದಾರ :** ಒಂದು ಕೃತಿಯ ಮೊತ್ತಮೊದಲಿನ ಹಕ್ಕುದಾರ ಕೃತಿಕಾರ. ಒಂದು ವೃತ್ತಪತ್ರಿಕೆ ಅಥವಾ ನಿಯತಕಾಲಿಕವೊಂದರ ಒಡೆಯನಲ್ಲಿ ಒಪ್ಪಂದದ ಪ್ರಕಾರ ಉದ್ಯೋಗಿಯಾಗಿರುವವನು, ವಿರುದ್ಧ ಒಪ್ಪಂದವಾವುದೂ ಇಲ್ಲದಿದ್ದಲ್ಲಿ, ಬರೆದ ಲೇಖನವನ್ನು ಪ್ರಕಟಿಸುವ ಪುನರ್ಮುದ್ರಿಸುವ ಪ್ರಥಮ ಹಕ್ಕು ಯಜಮಾನನದು. ಉಳಿದೆಲ್ಲ ವಿಚಾರಗಳಲ್ಲಿ ಕೃತಿಕಾರನದೇ ಮೊದಲ ಸ್ವಾಮ್ಯ. ಪ್ರತಿಫಲಕ್ಕಾಗಿ ಒಬ್ಬ ಇನ್ನೊಬ್ಬನಿಗಾಗಿ ಒಂದು ಕಲಾಕೃತಿ ರಚಿಸಿದರೆ, ಸಾಮಾನ್ಯವಾಗಿ ಅದರ ಒಡೆತನ ಪ್ರತಿಫಲ ನೀಡಿದಾತನದು. ಸ್ವಾಮ್ಯದ ಮೊದಲಿನ ಹಕ್ಕುದಾರ ಪ್ರೇರಣೆಯಿತ್ತವನಾಗುತ್ತಾನೆ. ಸರ್ಕಾರದ ಕೃತಿಯನ್ನು ಯಾರೇ ರಚಿಸಲಿ, ಸಾಮಾನ್ಯವಾಗಿ ಅದರ ಒಡೆತನ ಸರ್ಕಾರದ್ದು.

**ಕೃತಿಸ್ವಾಮ್ಯದ ಅವಧಿ:** ಒಂದು ಕೃತಿ ಅದರ ಕೃತಿಕಾರ ಬದುಕಿದ್ದಾಗ ಪ್ರಕಟವಾಗಿದ್ದರೆ, ಕೃತಿಕಾರ ತೀರಿಕೊಂಡ ವರ್ಷದ ಅನಂತರದ ಪಂಚಾಂಗ ವರ್ಷದ ಸಂಯುಕ್ತ ಆದಿಯಿಂದ 50 ವರ್ಷಗಳ ಕಾಲ ಅದರ ಸ್ವಾಮ್ಯ ಇರುತ್ತದೆ. ಸಂಯುಕ್ತ ಕರ್ತೃತ್ವದ ಕೃತಿಯಾಗಿದ್ದರೆ, ಕೃತಿಕಾರರ ಪೈಕಿ ಕೊನೆಯಲ್ಲಿ ಮೃತಿ ಹೊಂದಿದವನ ಮರಣದ ಮುಂದಿನ ಪಂಚಾಂಗ ವರ್ಷದ ಆದಿಯಿಂದ 50 ವರ್ಷಗಳ ತನಕ ಸ್ವಾಮ್ಯ ಇರುತ್ತದೆ. ಕೃತಿ ಛಾಯಾಚಿತ್ರವಾಗಿದ್ದರೆ ಅದರಲ್ಲಿ ಸ್ವಾಮ್ಯ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ 50 ವರ್ಷಗಳ ತನಕ ಉಳಿಯುತ್ತದೆ. ಕೃತಿ ಚಲನಚಿತ್ರ ಇಲ್ಲವೇ ಧ್ವನಿಮುದ್ರಿಕೆ ಆಗಿದ್ದರೆ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ 50 ವರ್ಷಗಳ ತನಕ ಅದರಲ್ಲಿ ಸ್ವಾಮ್ಯ ಇರುತ್ತದೆ. ಸರ್ಕಾರಿ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳ ಕೃತಿಗಳಲ್ಲಿ ಸ್ವಾಮ್ಯ ಅವು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ 50 ವರ್ಷಗಳ ತನಕ ಉಳಿಯುತ್ತದೆ. ಹೆಸರಿಲ್ಲದೆ, ಇಲ್ಲವೇ ಗುಪ್ತನಾಮದಲ್ಲಿ ಒಂದು ಕೃತಿ ಪ್ರಕಟವಾಗಿದ್ದರೆ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ 50 ವರ್ಷಗಳವರೆಗೆ ಸ್ವಾಮ್ಯ ಇರುತ್ತದೆ. ಆದರೆ ಈ ಅವಧಿ ಮುಗಿಯುವ ಮೊದಲೇ ಕೃತಿಕಾರನಾರು ಎಂಬುದು ತಿಳಿದುಬಂದಲ್ಲಿ ಹಾಗೆ ತಿಳಿದುಬಂದ ವರ್ಷದ ಅನಂತರದ ವರ್ಷದ ಆದಿಯಿಂದ 50 ವರ್ಷಗಳ ತನಕ ಕೃತಿಯಲ್ಲಿ ಸ್ವಾಮ್ಯ ಉಳಿಯುತ್ತದೆ. ಒಂದು ಸಾಹಿತ್ಯ, ನಾಟಕ, ಸಂಗೀತ ಇಲ್ಲವೇ ಕಲಾತ್ಮಕ ಕೃತಿಯಲ್ಲಿ ಅದರ ರಚಕನಿಗೆ ಸ್ವಾಮ್ಯವಿದ್ದು, ಅವನು ಜೀವಂತವಿರುವಾಗ ಕೃತಿ ಪ್ರಕಟವಾಗದಿದ್ದಲ್ಲಿ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ 50 ವರ್ಷಗಳವರೆಗೆ ಸ್ವಾಮ್ಯ ಉಳಿಯುತ್ತದೆ.

ಈಗಾಗಲೇ ಅಸ್ತಿತ್ವದಲ್ಲಿರುವ, ಇಲ್ಲವೆ ಇನ್ನುಮೇಲೆ ಅಸ್ತಿತ್ವದಲ್ಲಿ ಬರಲಿರುವ ಒಂದು ಕೃತಿಯ ಸ್ವಾಮ್ಯವನ್ನು ಪೂರ್ಣವಾಗಿ ಇಲ್ಲವೇ ಭಾಗಶಃವಾಗಿ ಪೂರ್ಣ ಅವಧಿಯ ತನಕ ಇಲ್ಲವೆ ನಿಶ್ಚಿತ ಅವಧಿಯವರೆಗೆ ಸಾಮಾನ್ಯವಾಗಿ ಪರಭಾರೆ ಮಾಡಬಹುದಾಗಿದೆ. ಮುಂದೆ ಅಸ್ತಿತ್ವದಲ್ಲಿ ಬರಲಿರುವ ಕೃತಿಯ ಪರಭಾರೆ, ಕೃತಿ ಅಸ್ತಿತ್ವದಲ್ಲಿ ಬಂದಾಗಿನಿಂದ ಜಾರಿಯಲ್ಲಿ ಬರುವುದು. ಕೃತಿಕಾರ ತನ್ನ ಕೃತಿಯಲ್ಲಿರುವ ಪೂರ್ಣಸ್ವಾಮ್ಯವನ್ನು, ಇಲ್ಲವೇ ಅದರ ಭಾಗವನ್ನು ಕೃತಿಸ್ವಾಮ್ಯ ರಿಜಿಸ್ಟ್ರಾರನಿಗೆ ತಿಳಿವಳಿಕೆ ನೀಡಿ ತ್ಯಜಿಸಬಹುದು.

1957ರ ಕೃತಿಸ್ವಾಮ್ಯ ಕಾಯಿದೆಯ 14ನೆಯ ಕಲಮಿನಲ್ಲಿರುವ ಕೃತಿಸ್ವಾಮ್ಯದ ವ್ಯಾಖ್ಯೆಯಿಂದ ಕೃತಿಕಾರ ತನ್ನ ಕೃತಿಯ ಸಂಬಂಧದಲ್ಲಿ ಮಾಡಬಹುದಾದ ಕೃತ್ಯಗಳನ್ನು ಅರಿಯಬಹುದಾಗಿದೆ. ಒಬ್ಬ ವ್ಯಕ್ತಿ ಕೃತಿಕಾರನಿಂದ ಇಲ್ಲವೇ ಕೃತಿಸ್ವಾಮ್ಯ ರಿಜಿಸ್ಟ್ರಾರನಿಂದ ಅಪ್ಪಣೆಪತ್ರ ಪಡೆಯದೆ ಇಲ್ಲವೇ ಪಡೆದುಕೊಂಡ ಅಪ್ಪಣೆಯ ಷರತ್ತುಗಳಿಗೆ ವಿರುದ್ಧವಾಗಿ, ಕೃತಿಕಾರ ಮಾತ್ರ ಕಾಯಿದೆಯ ಪ್ರಕಾರ ಮಾಡಬಹುದಾದ ಕೃತ್ಯಗಳನ್ನು ತಾನೇ ಮಾಡಿದ್ದಾದರೆ, ಕೃತಿಸ್ವಾಮ್ಯಕ್ಕೆ ಚ್ಯುತಿ ಬರುವಂತೆ ಕೃತಿಯನ್ನು ವಿಕ್ರಯಕ್ಕೊ ಬಾಡಿಗೆಗೊ ತಯಾರು ಮಾಡಿದರೆ ಅಥವಾ ಕೊಟ್ಟರೆ ಅಥವಾ ಕೊಡುವುದಕ್ಕೆ ಮುಂದೆ ಬಂದರೆ ಅದು ಉಲ್ಲಂಘನೆಯೆನಿಸುತ್ತದೆ. ವ್ಯಾಪಾರಕ್ಕಾಗಿ ಅದನ್ನು ಬಹಿರಂಗವಾಗಿ ಪ್ರದರ್ಶಿಸಿದರೆ ಅಥವಾ ತನ್ನ ಉಪಯೋಗಕ್ಕಲ್ಲದೆ ಬೇರೆಯವರಿಗೆ ಸಾದರಪಡಿಸಿದರೆ ಅದು ಕೃತಿಸ್ವಾಮ್ಯದ ಉಲ್ಲಂಘನೆ.

**ಕೃತಿಸ್ವಾಮ್ಯದ ಇತಿಹಾಸ :** ಭಾರತದಲ್ಲಿ ಈಸ್ಟ್ ಇಂಡಿಯ ಕಂಪನಿಯ ಆಡಳಿತ ಪ್ರಾರಂಭವಾಗುವ ಮೊದಲು ಕೃತಿಸ್ವಾಮ್ಯಕ್ಕೆ ಮನ್ನಣೆ ಇತ್ತೆ? ಇದ್ದುದಾದರೆ ಯಾವ ರೂಪದಲ್ಲಿ ಇತ್ತು ಎಂದು ಅರಿತುಕೊಳ್ಳುವುದಕ್ಕೆ ನಂಬಲರ್ಹವಾದ ಆಧಾರವಾವುದೂ ಇದ್ದಂತೆ ಕಾಣುವುದಿಲ್ಲ. ಬಹುಶಃ ಕೃತಿಸ್ವಾಮ್ಯದ ಸಂಬಂಧದಲ್ಲಿ ವ್ಯಾಜ್ಯಗಳು ಎದ್ದಿದ್ದರೆ ಅವನ್ನು ಉಳಿದ ವ್ಯಾಜ್ಯಗಳಂತೆ ದೇಶದ ಸಂಪ್ರದಾಯನ್ಯಾಯಕ್ಕೆ ಅನುಸಾರವಾಗಿ ಬಗೆಹರಿಸುತ್ತಿದ್ದಿರಬೇಕು. ಈಸ್ಟ್ ಇಂಡಿಯ ಕಂಪನಿಯ ಆಡಳಿತ ಪ್ರಾರಂಭವಾದಂದಿನಿಂದ ಬ್ರಿಟಿಷ್ ಕಾಯಿದೆಗಳನ್ನು ಸ್ಥಳೀಯ ಪರಿಸ್ಥಿತಿಗಳಿಗೆ ತಕ್ಕಂತೆ ಮಾರ್ಪಡಿಸಿ ಭಾರತಕ್ಕೆ ಅನ್ವಯಿಸಲಾಗುತ್ತಿತ್ತು. ಅಂದಿನಿಂದ ಭಾರತದಲ್ಲಿ ಕೃತಿಸ್ವಾಮ್ಯದ ಸ್ವರೂಪ ಮತ್ತು ಕಾಯಿದೆಗಳು ಅದು ಸ್ವತಂತ್ರವಾಗುವ ತನಕವೂ ಇಂಗ್ಲೆಂಡಿನಲ್ಲಿದ್ದಂತೆಯೇ ಇದ್ದುವು. ಇಂಗ್ಲೆಂಡಿನಲ್ಲಿ ಕೃತಿಸ್ವಾಮ್ಯದ ಸಮಗ್ರ ಕಾಯಿದೆ ಮೊತ್ತಮೊದಲಿಗೆ 1911ರಲ್ಲಿ ಜಾರಿಗೆ ಬಂತು. ಸಂಪ್ರದಾಯನ್ಯಾಯದ ನಾನಾವಿಧಿಗಳನ್ನು ಇದು ರದ್ದು ಮಾಡಿತಲ್ಲದೆ ಕೃತಿಸ್ವಾಮ್ಯಕ್ಕೆ ಕೃತಿರಚನೆಯಷ್ಟೇ ಸಾಕೆಂದೂ ಹಿಂದಿನಂತೆ ಸ್ಟೇಷನರ್ಸ್ ಭವನದಲ್ಲಿ ಅದರ ನೋಂದಣಿಯ ಅಗತ್ಯವಿಲ್ಲವೆಂದೂ ಹೇಳಿತು. 1956ರ ಕಾಯಿದೆ ಹಿಂದಿನ ಕಾಯಿದೆಯ ಅನೇಕ ವಿಧಿಗಳನ್ನು ಪುನರ್ವಿಧಾಯಕ ಮಾಡಿತಲ್ಲದೆ, ಚಲನಚಿತ್ರ ಫಿಲಂ, ಟೆಲಿವಿಷನ್, ಧ್ವನಿಪ್ರಸಾರ ಮುಂತಾದವನ್ನೂ ಕೃತಿಸ್ವಾಮ್ಯದ ವ್ಯಾಪ್ತಿಯೊಳಕ್ಕೆ ತಂದಿತು. ಭಾರತದಲ್ಲಿ ಜಾರಿಗೆ ಬಂದ 1911ರ ಕೃತಿಸ್ವಾಮ್ಯ ಕಾಯಿದೆ 1914ರಲ್ಲಿ ಮಾರ್ಪಾಟಾಯಿತು: 1957ರ ತನಕ ಜಾರಿಯಲ್ಲಿತ್ತು. ಆಗ ಹೊಸ ಕಾಯಿದೆಯೊಂದು ಅಂಗೀಕೃತವಾಗಿ ಅದು ಮರುವರ್ಷ ಜಾರಿಗೆ ಬಂತು. ಅದು ಹೆಚ್ಚು ವ್ಯಾಪಕವಾದ್ದು. ನಾಟಕ, ಸಂಗೀತ ಮತ್ತು ಕಲಾಕೃತಿಗಳಿಗೆ ಆಗಲೇ ಇದ್ದ ರಕ್ಷಣೆಯನ್ನು ಮುಂದುವರಿಸಿದ್ದಲ್ಲದೆ, ಚಲನಚಿತ್ರಗಳಿಗೂ ಬಾನುಲಿ ಪ್ರಸಾರಗಳಿಗೂ ರಕ್ಷಣೆಯನ್ನು ನೀಡಲಾಯಿತು. ಇದಲ್ಲದೆ ಕೃತಿಸ್ವಾಮ್ಯದ ಐಚ್ಛಿಕ ನೋಂದಣಿಗಾಗಿ ಕೃತಿಸ್ವಾಮ್ಯ ರಿಜಿಸ್ಟ್ರಾರನ ನೇಮಕವೂ, ಕಡ್ಡಾಯದ ಲೈಸನ್ಸುಗಳನ್ನು ಕೊಡುವುದಕ್ಕೂ ಕೆಲವು ಸಂದರ್ಭಗಳಲ್ಲಿ ಕೃತಿಗಳ ಭಾಷಾಂತರಗಳನ್ನು ಮಾಡುವ ಹಕ್ಕುಗಳನ್ನು ಕೊಡುವುದಕ್ಕೂ ಅಧಿಕಾರವುಳ್ಳ ಕೃತಿಸ್ವಾಮ್ಯ ಬೋರ್ಡಿನ ನೇಮಕವೂ ಈ ಕಾಯಿದೆಯ ನಾವೀನ್ಯಗಳಾಗಿವೆ. ಹೊಸ ಕಾಯಿದೆ ಮೊದಲಿದ್ದ ಹಕ್ಕುಗಳಿಗೆ ಬಾಧೆ ತರುವುದಿಲ್ಲ. ಅದರಲ್ಲಿ ಕೃತಿಗಳ ನೋಂದಣಿಗೆ ಅವಕಾಶವಿದೆಯಾದರೂ ನೋಂದಣಿ ಕೇವಲ ಐಚ್ಛಿಕವಾಗಿದೆ. ಏಕೆಂದರೆ ಕೃತಿಸ್ವಾಮ್ಯ ಕೃತಿಕಾರನಲ್ಲಿ ನಿಹಿತವಾಗಿದೆಯೇ ಹೊರತು ಅದು ಬರೀ ಕಾಯಿದೆಯಿಂದ ಜನಿತವಾಗುವುದಿಲ್ಲ. ಕೃತಿಯನ್ನು ನೋಂದಣಿ ಮಾಡಿಸದಿದ್ದಲ್ಲಿ ಕೃತಿಸ್ವಾಮ್ಯದ ಸಂಬಂಧದಲ್ಲಿ ಏನಾದರೂ ವ್ಯಾಜ್ಯ ಬಂದಲ್ಲಿ ಕೃತಿ ತನ್ನ ಸ್ವಂತದ್ದು ಎಂಬುದನ್ನು ಸಿದ್ಧಮಾಡಿತೋರಿಸುವ ಭಾರ ಕೃತಿಕಾರನ ಮೇಲೆ ಇರುತ್ತದೆ. ಪ್ರದರ್ಶನ ಹಕ್ಕುಗಳ ಸಂಘ, ಬಾನುಲಿ ಪ್ರಸಾರ ಸಂಘ–ಇವುಗಳ ಹಕ್ಕುಬಾಧ್ಯತೆಗಳನ್ನೂ ಕಾಯಿದೆಯಲ್ಲಿ ವಿವರಿಸಲಾಗಿದೆ.

ಇಂಗ್ಲೆಂಡಿನಲ್ಲಿ 1956ರ ಕಾಯಿದೆಯ ಪ್ರಕಾರ ಸಾಹಿತ್ಯ, ನಾಟಕ, ಸಂಗೀತ ಮತ್ತು ಕಲಾಕೃತಿಗಳ, ಧ್ವನಿಮುದ್ರಣಗಳ, ಚಲನಚಿತ್ರಗಳ, ಟೆಲಿವಿಷನ್ ಮತ್ತು ಬಾನುಲಿ ಪ್ರಸಾರಗಳ ರಕ್ಷಣೆಗೆ ಅವಕಾಶವನ್ನೀಯಲಾಗಿದೆ. ಟೆಲಿವಿಷನ್ ಮತ್ತು ಪ್ರಸಾರಗಳ ಧ್ವನಿಮುದ್ರಿಕೆಗಳ ಬಹಿರಂಗ ಪ್ರದರ್ಶನ ಮಾಡುವುದಕ್ಕಾಗಿ ಲೈಸೆನ್ಸ್ ಪಡೆಯಲಿಚ್ಛಿಸುವವರ ಮತ್ತು ಕೃತಿಸ್ವಾಮ್ಯದ ಹಕ್ಕುದಾರರ ನಡುವೆ ವ್ಯಾಜ್ಯಗಳುಂಟಾದಲ್ಲಿ ಅವನ್ನು ಬಗೆಹರಿಸುವುದಕ್ಕೆ ಒಂದು ಟ್ರಿಬ್ಯೂನಲ್ ಸ್ಥಾಪಿತವಾಗಿದೆ. ಧ್ವನಿ ಮತ್ತು ಟೆಲಿವಿಷನ್ ಪ್ರಸಾರಗಳ ನಕಲು ಮಾಡುವುದನ್ನು ತಡೆಯುವ ಹಕ್ಕು ಅಸ್ತಿತ್ವದಲ್ಲಿ ಬಂದಿದೆ. ಟೆಲಿವಿಷನ್ ಪ್ರಸಾರಗಳಲ್ಲಿ ಪ್ರದರ್ಶಿಸುವ ಹಕ್ಕಿಗೂ ಮನ್ನಣೆಯನ್ನೀಯಲಾಗಿದೆ.

ಅಮೆರಿಕದ 1947ರ ಕೃತಿಸ್ವಾಮ್ಯ ಸಂಹಿತೆಯಲ್ಲಿ ಗ್ರಂಥಗಳು, ನಿಯತಕಾಲಿಕಗಳು, ಕರಡುಗಳು, ನಾಟಕ ಮತ್ತು ಸಂಗೀತ ರಚನೆಗಳು, ನಕಾಸೆಗಳು, ಕಲಾಕೃತಿಗಳು, ಕಲಾಕೃತಿಗಳ ಮರುರಚನೆಗಳು, ವೈಜ್ಞಾನಿಕ ಇಲ್ಲವೇ ತಾಂತ್ರಿಕ ನಕ್ಷೆಗಳು ಇಲ್ಲವೇ ಪ್ಲಾಸ್ಟಿಕ್ ಕೃತಿಗಳು, ಛಾಯಾಚಿತ್ರಗಳು, ಮುದ್ರಣಗಳು, ಚಿತ್ರನಿರೂಪಣೆಗಳು ಮುಂತಾದ, ಕೃತಿಕಾರನ ಎಲ್ಲ ಕೃತಿಗಳ ರಕ್ಷಣೆಗೆ ಅವಕಾಶವಿದೆ. ಕೃತಿಸ್ವಾಮ್ಯದ ಹಕ್ಕುದಾರನಿಗೆ ಕೃತಿಯ ಪ್ರತಿಗಳನ್ನು ಮಾಡುವ, ಭಾಷಾಂತರ ಇಲ್ಲವೇ ಇತರ ರೂಪಾಂತರಗಳನ್ನು ರಚಿಸುವ, ನಾಟಕರೂಪದಲ್ಲಿಲ್ಲದ ಕೃತಿಯನ್ನು ನಾಟಕಕೃತಿಯನ್ನಾಗಿ ಇಲ್ಲವೇ ನಾಟಕಕೃತಿಯನ್ನು ಬೇರೆ ಬಗೆಯ ಕೃತಿಯನ್ನಾಗಿ ಮಾರ್ಪಡಿಸುವ, ಸಂಗೀತದ ಕೃತಿಗಳನ್ನು ವ್ಯವಸ್ಥೆಗೊಳಿಸುವ ಇಲ್ಲವೇ ಅವನ್ನು ರೂಪಾಂತರಿಸುವ, ನಾಟಕಕೃತಿಯನ್ನು ಪ್ರದರ್ಶಿಸುವ, ಸಾಹಿತ್ಯ ಇಲ್ಲವೇ ಸಂಗೀತಕೃತಿಯನ್ನು ಪ್ರತಿಫಲಕ್ಕಾಗಿ ಬಹಿರಂಗವಾಗಿ ಪ್ರದರ್ಶಿಸುವ ಇಲ್ಲವೇ ಅದರ ಧ್ವನಿಮುದ್ರಿಕೆಯನ್ನು ರಚಿಸುವ ಅನನ್ಯ ಅಧಿಕಾರವಿದೆ. ಕೃತಿಸ್ವಾಮ್ಯದ ಹಕ್ಕುದಾರ ಸಂಗೀತಕೃತಿಯ ಯಾಂತ್ರಿಕ ಪುನರುತ್ಪಾದನ ಅಥವಾ ಧ್ವನಿಮುದ್ರಿಕೆ ರಚಿಸಿದಲ್ಲಿ, ಇಲ್ಲವೇ ರಚಿಸುವ ಅಧಿಕಾರವನ್ನಿತ್ತಲ್ಲಿ ಬೇರೊಬ್ಬನೂ ನಿಶ್ಚಿತವಾದ ಗೌರವಧನವನ್ನು ಕೊಟ್ಟು ಆ ಕೃತಿಯ ಅಂಥದೇ ಉಪಯೋಗ ಮಾಡಬಹುದು. ಅಪ್ರಕಟಿತ ಕೃತಿಗಳಿಗೆ ಸಂಪ್ರದಾಯನ್ಯಾಯದ ಪ್ರಕಾರ ಅನಿಶ್ಚಿತ ಅವಧಿಯ ತನಕ ರಕ್ಷಣೆಯಿದೆ. ಸಾಮಾನ್ಯವಾಗಿ ಪ್ರದರ್ಶಿಸುವುದಕ್ಕೆ ರಚಿಸಲಾಗುವ ನಾಟಕ, ಸಂಗೀತ ಇಲ್ಲವೇ ಕಲಾಕೃತಿಗಳಂಥ ರಚನೆಗಳು ಅಪ್ರಕಟಿತವಿದ್ದಲ್ಲಿ ಕೃತಿಸ್ವಾಮ್ಯ ಕಚೇರಿಯಲ್ಲಿ ನೋಂದಣಿ ಮಾಡಿಸಿ ಅವಕ್ಕೆ ಕೃತಿ ಸ್ವಾಮ್ಯ ಕಾಯಿದೆಯ ರಕ್ಷಣೆಯನ್ನು ದೊರಕಿಸಬಹುದು. ಕಾಯಿದೆಯ ಪ್ರಕಾರ ಅಗತ್ಯವಾದ ತಿಳಿವಳಿಕೆ ನೀಡಿ ಕೃತಿಯನ್ನು ಪ್ರಕಟಿಸುವುದರ ಮೂಲಕ ಸ್ವಾಮ್ಯ ಪಡೆಯಬಹುದು. ಅಮೆರಿಕದಲ್ಲಿ ಪ್ರಕಟಿತವಾದ ಕೃತಿಯ ಪ್ರತಿಯೊಂದು ಪ್ರತಿಯಲ್ಲೂ ಈ ಸೂಚನೆ ಅಥವಾ ತಿಳಿವಳಿಕೆ ಇರಬೇಕಾಗುತ್ತದೆ. ಇದಿಲ್ಲದೆ ಪ್ರಕಟವಾದ ಕೃತಿ ಸಾರ್ವಜನಿಕ ಕ್ಷೇತ್ರಕ್ಕೆ ಸೇರುತ್ತದೆ.

ಕೃತಿಕಾರರಿಗೆ ಅವರವರ ರಾಷ್ಟ್ರಗಳಷ್ಟೇ ಅಲ್ಲದೆ ಪರರಾಷ್ಟ್ರಗಳಲ್ಲಿ ಕೂಡ ಕೃತಿಗಳನ್ನು ನಕಲು ಮಾಡುವವರಿಂದ ರಕ್ಷಣೆ ದೊರೆಯಬೇಕೆನ್ನುವುದು ನ್ಯಾಯಸಮ್ಮತವಾದ್ದು. ಇಂಥ ರಕ್ಷಣೆಯನ್ನು ದೊರಕಿಸಿಕೊಡುವ ಮತ್ತು ಕೃತಿಕಾರರಿಗೆ ಬೇರೆಬೇರೆ ರಾಷ್ಟ್ರಗಳಲ್ಲಿ ಇರಬಹುದಾದ ಹಕ್ಕುಗಳಲ್ಲಿ ಏಕರೂಪತೆಯಿರುವಂತೆ ಮಾಡುವ ಉದ್ದೇಶದಿಂದ 1885ರಲ್ಲಿ ಕೆಲವು ಪ್ರಮುಖ ರಾಷ್ಟ್ರಗಳು ಸೇರಿ ಸಂಘವೊಂದನ್ನು ಮಾಡಿಕೊಂಡು 1886ರಲ್ಲಿ ಒಡಂಬಡಿಕೆಯೊಂದಕ್ಕೆ ಸಹಿ ಹಾಕಿದುವು. ಇದು ಬರ್ನ್ ಒಡಂಬಡಿಕೆಯೆಂದು ಪ್ರಸಿದ್ಧವಾಗಿದೆ. ಕೃತಿಕಾರನಿಗೆ ಹೆಚ್ಚಿನ ರಕ್ಷಣೆ ದೊರಕಿಸಿಕೊಡುವುದಕ್ಕೆ ಮತ್ತು ಇದ್ದ ಒಡಂಬಡಿಕೆಯ ಆಚರಣೆಯಲ್ಲಿ ಬರುವ ತೊಡಕುಗಳನ್ನು ನಿವಾರಿಸುವುದಕ್ಕೆ 1908ರಲ್ಲಿ ಈ ಒಡಂಬಡಿಕೆಗೆ ಬರ್ಲಿನ್ ಸಮಾವೇಶದಲ್ಲಿ ತಿದ್ದುಪಡಿ ಮಾಡಲಾಯಿತು. 1928ರಲ್ಲಿ ರೋಮಿನಲ್ಲೂ 1948ರಲ್ಲಿ ಬ್ರಸಲ್ಸಿನಲ್ಲೂ ಮತ್ತೆ ತಿದ್ದುಪಡಿಗಳಾದುವು. ಸಂಘದ ಒಂದು ಸದಸ್ಯ ದೇಶದ ಕೃತಿಕಾರರಿಗೆ ಇಲ್ಲವೇ ಅವರ ಪ್ರತಿನಿಧಿಗಳಿಗೆ ಮೊತ್ತಮೊದಲಿಗೆ ಪ್ರಕಟವಾದ ಇಲ್ಲವೇ ಅಪ್ರಕಟಿತ ಕೃತಿಗಳಲ್ಲಿ ಅವರ ಸ್ವಂತ ದೇಶಗಳಲ್ಲಿ ಈಗಾಗಲೇ ಇರುವ ಮತ್ತು ಮುಂದೆ ಅಸ್ತಿತ್ವದಲ್ಲಿ ಬರಲಿರುವ ಹಕ್ಕುಗಳು ಉಳಿದ ಸದಸ್ಯದೇಶಗಳಲ್ಲೂ ದೊರೆಯುವಂತೆ

ಮಾಡುವುದೇ ಬೆರ್ನ್ ಒಡಂಬಡಿಕೆಯ ಮುಖ್ಯ ಉದ್ದೇಶವಾಗಿತ್ತು. ರೋಮ್ ಒಡಂಬಡಿಕೆಯ 4ನೆಯ ನಿಬಂಧನೆಯಲ್ಲಿ, ಸಂಘದ ಯಾವುದೊಂದು ಸದಸ್ಯದೇಶದ ಪ್ರಜೆಗಳಾದ ಕೃತಿಕಾರರ ಕೃತಿಗಳ ಮೂಲದೇಶದ ಹೊರತಾಗಿ ಉಳಿದ ದೇಶಗಳಲ್ಲಿ ಅವರ ಕೃತಿಗಳು ಅಪ್ರಕಟಿತವಿರಲಿ ಇಲ್ಲವೇ ಯಾವುದೊಂದು ಸದಸ್ಯದೇಶದಲ್ಲಿ ಮೊದಲ ಬಾರಿಗೆ ಪ್ರಕಟಿತವಾಗಿರಲಿ, ಆ ದೇಶ ತಮ್ಮ ಮೂಲನಿವಾಸಿಗಳಿಗೆ ಈಗಾಗಲೇ ನೀಡುತ್ತಿರುವ ಮತ್ತು ಮುಂದೆ ನೀಡಲಿರುವ ಹಕ್ಕುಗಳಿಗೆ ಹಾಗೂ ಈ ಒಡಂಬಡಿಕೆ ಪ್ರತ್ಯೇಕವಾಗಿ ನೀಡುವ ಹಕ್ಕುಗಳಿಗೆ ಅವರೂ ಅರ್ಹರು–ಎಂದು ಹೇಳಲಾಗಿದೆ. ಇದೇ ಒಕ್ಕಣೆ ಬ್ರಸಲ್ಸ್ ಒಡಂಬಡಿಕೆಯಲ್ಲೂ ಕಂಡುಬರುತ್ತದೆ. ಕೃತಿಯ ಮೂಲದೇಶವೆಂದರೆ ಅದು ಮೊತ್ತಮೊದಲು ಪ್ರಕಟವಾದ ದೇಶ ಇಲ್ಲವೇ ಅದು ಅಪ್ರಕಟಿತವಿದ್ದಲ್ಲಿ ಕೃತಿಕಾರನ ದೇಶ. ಸಂಘದ ಸದಸ್ಯದೇಶವೊಂದರ ಪ್ರಜೆಗಳಾದ ಕೃತಿಕಾರರು ಇನ್ನೊಂದು ಸದಸ್ಯದೇಶದಲ್ಲಿ ತಮ್ಮ ಕೃತಿಗಳನ್ನು ಪ್ರಕಟಿಸಿದರೆ ಹಾಗೆ ಪ್ರಕಟವಾದ ದೇಶದಲ್ಲಿ ಅವರಿಗೆ ಆ ದೇಶದ ಕೃತಿಕಾರರಂತೆಯೇ ಹಕ್ಕುಗಳಿರುತ್ತವೆ. ಯಾವುದೇ ಸದಸ್ಯ ದೇಶದ ಪ್ರಜೆಗಳಾಗಿರದ ಕೃತಿಕಾರರು ಸದಸ್ಯದೇಶವೊಂದಲ್ಲಿ ಮೊತ್ತಮೊದಲಿಗೆ ತಮ್ಮ ಕೃತಿಗಳನ್ನು ಪ್ರಕಟಿಸಿದಲ್ಲಿ ಆ ದೇಶದಲ್ಲಿ ಆ ದೇಶದ ಕೃತಿಕಾರರಿಗೆ ಇರುವ ಹಕ್ಕುಗಳು ಅವರಿಗೂ ದೊರಕುತ್ತವೆ. ಉಳಿದ ಸದಸ್ಯದೇಶಗಳಲ್ಲೂ ಈ ಒಡಂಬಡಿಕೆಯಲ್ಲಿ ನಮೂದಿಸಿರುವಂತೆ ಹಕ್ಕುಗಳಿರುತ್ತವೆ.

ಯುನೆಸ್ಕೋದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಒಡಂಬಡಿಕೆಯ ಕರಡೊಂದು ತಯಾರಾಗಿ ಇದಕ್ಕೆ 1952ರ ಸೆಪ್ಟೆಂಬರ್ 6 ರಂದು ಜಿನೀವದಲ್ಲಿ ರಾಷ್ಟ್ರಗಳು ಸಹಿ ಹಾಕಿದವು. ಜಿನೀವ ಒಡಂಬಡಿಕೆಗೆ ಸಹಿ ಹಾಕಿದ ಪ್ರತಿಯೊಂದು ಸದಸ್ಯದೇಶವೂ ಒಡಂಬಡಿಕೆಯ ಇತರ ದೇಶಗಳ ಪ್ರಜೆಗಳ ಅಪ್ರಕಟಿತ ಕೃತಿಗಳಿಗೆ ತಾನು ತನ್ನ ಪ್ರಜೆಗಳ ಅಪ್ರಕಟಿತ ಕೃತಿಗಳಿಗೆ ನೀಡುವ ಹಕ್ಕುಗಳನ್ನು ನೀಡಲು ಒಪ್ಪುತ್ತದೆ. ಇತರ ಸದಸ್ಯರಾಷ್ಟ್ರಗಳ ಪ್ರಜೆಗಳ ಕೃತಿಗಳಿಗೆ ಸದಸ್ಯರಾಷ್ಟ್ರದಲ್ಲಿ ಮೊದಲಬಾರಿಗೆ ಪ್ರಕಟವಾದ ಕೃತಿಗಳಿಗೆ ಇರುವ ಹಕ್ಕುಗಳನ್ನು ನೀಡುವುದಕ್ಕೆ ಒಪ್ಪುತ್ತದೆ. ಎಲ್ಲ ಪ್ರಕಟಿತ ಕೃತಿಗಳೂ ಕೃತಿಸ್ವಾಮ್ಯದ ಹಕ್ಕುದಾರರ ಹೆಸರು ಮತ್ತು ಪ್ರಕಟನೆಯ ಷರತ್ತುಗಳೊಡನೆ C ಎಂಬ ಸಂಕೇತವನ್ನು ಉಳ್ಳವಾಗಿದ್ದರೆ ಅವು ಅಂಥ ರಕ್ಷಣೆಗೆ ಅರ್ಹವಾಗುತ್ತವೆ. ಈ ಒಡಂಬಡಿಕೆಯ ಪ್ರಕಾರ ರಕ್ಷಣೆಯ ಕನಿಷ್ಠ ಅವಧಿ ಕೃತಿಕಾರನ ಜೀವಾವಧಿ ಮತ್ತು ಅವನ ಮರಣದ ಅನಂತರ 25 ವರ್ಷಗಳ ವರೆಗೆ ಇರುತ್ತದೆ. ಕರಾರಿನ ರಾಷ್ಟ್ರಗಳು ನೀಡಬೇಕಾದ ರಕ್ಷಣೆಯ ವಿವರಗಳನ್ನು ಒಡಂಬಡಿಕೆ ಹೇಳುವುದಿಲ್ಲ. ರಕ್ಷಣೆಯ ಸ್ವರೂಪ ಮತ್ತು ವಿಶಾಲತೆಗಳನ್ನು ಕರಾರಿನ ರಾಷ್ಟ್ರದ ಪ್ರತ್ಯೇಕ ಕಾಯಿದೆ ನಿಶ್ಚಯಿಸಬಹುದಾಗಿದೆ. ಈ ಒಡಂಬಡಿಕೆಯ ಪ್ರಕಾರ ಒಂದು ಕೃತಿ ಕರಾರಿನ ರಾಷ್ಟ್ರದಲ್ಲಿ ಮೊದಲ ಬಾರಿಗೆ ಪ್ರಕಟವಾಗಿದ್ದರಷ್ಟೇ ಅಲ್ಲದೆ ಕೃತಿಕಾರ ಯಾವುದೇ ಒಂದು ಕರಾರಿನ ರಾಷ್ಟ್ರದ ಪ್ರಜೆಯಾಗಿದ್ದರೆ ಕೃತಿ ಎಲ್ಲಿ ಪ್ರಕಟವಾದರೂ ರಕ್ಷಣೆಯನ್ನು ನೀಡುವದು ಅಗತ್ಯ. ಈ ವಿಷಯದಲ್ಲಿ ಈ ಒಡಂಬಡಿಕೆ ಬೆರ್ನ್ ಒಡಂಬಡಿಕೆಗಿಂತ ಮುಂದುವರಿದಿದೆ. ಅಮೆರಿಕ, ಆಸ್ಟ್ರೇಲಿಯ, ಗ್ರೇಟ್ ಬ್ರಿಟನ್, ಫ್ರಾನ್ಸ್, ಭಾರತ, ಪಾಕಿಸ್ತಾನ, ಇಟಲಿ, ಜಪಾನ್, ಸ್ಪೇನ್, ಪೋರ್ಚುಗಲ್ ಮೊದಲಾದ ರಾಷ್ಟ್ರಗಳು ಇವುಗಳಲ್ಲಿ ಸೇರುತ್ತವೆ. ಮನುಷ್ಯನ ಬುದ್ಧಿ, ಜ್ಞಾನ ಇವುಗಳ ಫಲಗಳು ಸಾರ್ವತ್ರಿಕವಾಗಿ ದೊರಕಬೇಕೆನ್ನುವುದು ಸೋವಿಯತ್ ದೇಶವೇ ಮುಂತಾದ ಸಮಾಜವಾದಿ ರಾಷ್ಟ್ರಗಳ ತತ್ತ್ವವಾದ್ದರಿಂದ ಕೃತಿಸ್ವಾಮ್ಯಕ್ಕೆ ಸಂಬಂಧಿಸಿದ ಯಾವ ಅಂತಾರಾಷ್ಟ್ರೀಯ ಒಡಂಬಡಿಕೆಗೂ ಅವು ಸಹಿ ಹಾಕಿಲ್ಲ. (ಜಿ.ಕೆಯು. ಕೆ.ಜಿ.ಟಿ.)

**ಕೃತ್ತಿಕಾ :** ವೃಷಭರಾಶಿಯಲ್ಲಿಯ ಒಂದು ತಾರಾಗುಚ್ಛ (ಪ್ಲೀಯಡೀಸ್) ಭೂಮಿಯಿಂದ ಸುಮಾರು 500 ಜ್ಯೋತಿರ್ವರ್ಷ ದೂರದಲ್ಲಿದೆ. ಇದರ ಆಕಾರ ಹೆಚ್ಚು ಕಡಿಮೆ ಲಘುಸಪ್ತರ್ಷಿಯಂತೆ. ಬರಿಗಣ್ಣಿಗೆ ಆರೇಳು ನಕ್ಷತ್ರಗಳು ಕಾಣಿಸಿದರೂ ವಾಸ್ತವವಾಗಿ ಈ ಪುಂಜದಲ್ಲಿ ನೂರಾರು ನಕ್ಷತ್ರಗಳಿವೆ. ಆಲ್ಸೈಯೋನಿ ಇದರಲಿಯ ಪ್ರಧಾನ ನಕ್ಷತ್ರ. ಪುಂಜದ ನಕ್ಷತ್ರಗಳು B ಮಾದರಿಯವು. ನೀಲಿ ಬಣ್ಣದ ಕಾಂತಿಯಿಂದ ಮಿನುಗುತ್ತವೆ. ರಾತ್ರಿಯ ಆಕಾಶದಲ್ಲಿ ಈ ಪುಂಜಮಸುಕು ಪ್ರಕಾಶದ ತಾರಾಸಮೂಹವಾಗಿ ಕಾಣಿಸಿಕೊಳ್ಳುತ್ತವೆ. (ಸಿ.ಎನ್.ಎಸ್)

ಭಾರತೀಯ ಪಂಚಾಂಗದ ರೀತ್ಯ ಅಶ್ವಿನಿಯೇ ಆದಿಯಾದ 27 ನಕ್ಷತ್ರಗಳಲ್ಲಿ ಕೃತ್ತಿಕಾ ಒಂದು. ಕೃತ್ತಿಕಾ ತಾರಾಗುಚ್ಛದ ಬಗೆಗೆ ಅನೇಕ ಪೌರಾಣಿಕ ಕಥೆಗಳುಂಟು. ಮಹಾಭಾರತದ ಪ್ರಕಾರ ಕಥೆ ಹೀಗಿದೆ: ಸಪ್ತ ಋಷಿಗಳ ಪತ್ನಿಯರಲ್ಲಿ ಅರುಂಧತಿಯ ವಿನಾ ಉಳಿದವರು ಅಗ್ನಿದೇವನಲ್ಲಿ ಕಾಮಾಸಕ್ತರಾದವರು. ಆದ್ದರಿಂದ ಆ ಋಷಿಗಳು ಅವರನ್ನು ಪರಿತ್ಯಾಗ ಮಾಡಿದರು. ಪರಿತ್ಯಕ್ತರಾದ ಈ ಋಷಿಪತ್ನಿಯರು ಕುಮಾರಸ್ವಾಮಿಯನ್ನು ಮರೆಹೊಕ್ಕರು. ಕುಮಾರಸ್ವಾಮಿ ಇವರನ್ನು ಮನ್ನಿಸಿ ನಕ್ಷತ್ರಮಂಡಲದಲ್ಲಿ ಇವರಿಗೆ ಒಂದು ಸ್ಥಾನ ಕಲ್ಪಿಸಿಕೊಟ್ಟ. ಈ 6 ನಕ್ಷತ್ರಗಳ ಪುಂಜವೇ ಕೃತ್ತಿಕಾ ಎಂಬ ಹೆಸರನ್ನು ಪಡೆಯಿತು. ತೈತ್ತಿರೀಯ ಸಂಹಿತೆಯ ಪ್ರಕಾರ ಕೃತ್ತಿಕಾಪುಂಜದಲ್ಲಿ ಅಂಬಾ, ದುಲಾ, ನಿತತ್ನಿ, ಅಭ್ರಯಂತ್ರೀ, ಮೇಘಯಂತೀ, ವರ್ಷಯಂತೀ ಮತ್ತು ಚುಪುಣೀಕಾ ಎಂಬ ಏಳು ನಕ್ಷತ್ರಗಳಿವೆಯೆಂದು ತಿಳಿದುಬರುತ್ತದೆ. (ಜಿ.ಎಚ್)

ಶಿವಕುಮಾರ ಸುಬ್ರಹ್ಮಣ್ಯನಿಗೆ ಕಾರ್ತಿಕೇಯ ಎಂಬ ಹೆಸರು ಬಂದುದಕ್ಕೆ ಒಂದು ಪೌರಾಣಿಕ ಕತೆ ಇದೆ. ಕೈಲಾಸವಾಸಿ ಈಶ್ವರನ ತೇಜಸ್ಸು ಶಿಶುರೂಪಿಯಾಗಿ ಆತನ ಜಡೆಯಿಂದ ಪ್ರವಹಿಸುವ ಗಂಗೆಗೆ ಕೆಡೆಯಿತು. ನದಿಯಲ್ಲಿ ತೇಲುತ್ತಿದ್ದ ಈ ತೇಜಃಪುಂಜದಿಂದ ಆಕರ್ಷಿತರಾದ 6 ಜನ ಕೃತ್ತಿಕಾದೇವಿಯರು ಬಾನಿನಿಂದಿಳಿದು ಅದಕ್ಕೆ ಮೊಲೆಯೂಡಿಸಲು ಏಕಕಾಲದಲ್ಲಿ ಮುಂದಾದರು. ಆಗ ಮಗುವಿಗೆ 6 ತಲೆಗಳು ಮೊಳೆತು ಅಷ್ಟೂ ಪ್ರೀತಿರಸವನ್ನು ಒಮ್ಮೆಗೇ ಹೀರುವುದು ಸಾಧ್ಯವಾಯಿತು. ಕೃತ್ತಿಕಾದೇವಿಯರ ಸ್ತನ್ಯಪಾನ ಮಾಡಿದವನಾದ್ದರಿಂದ ಮಗುವಿಗೆ ಕಾರ್ತಿಕೇಯ ಎಂದೇ ಗಂಗೆಯಲ್ಲಿ ತೇಲಿ ಬಂದವನಾದರಿಂದ ಗಂಗಾತನಯ ಎಂದೇ ಹೆಸರುಂಟು.

ಗ್ರೀಕ್ ಪುರಾಣದ ರೀತ್ಯ ಅಟ್ಲಾಸ್, ಪ್ಲೀಯನೀ ರಾಕ್ಷಸದಂಪತಿಗಳಿಗೆ ಅಲ್ಸೈಯೋನಿ, ಸಿಲನೋ, ಎಲೆಕ್ಟ್ರಾ, ಟೆಯಿಜೆಟಾ, ಮೇಯ, ಸ್ಟೆರೋಪಿ ಮತ್ತು ಮೆರೋಪೀ ಎಂಬ ಏಳು ಹೆಣ್ಣುಮಕ್ಕಳಿದ್ದರು. ಈ ಏಳು ಜನರನ್ನೂ ಒರೈಯನ್ (ಮಹಾವ್ಯಾಧ) ಮೋಹಿಸಿ ಬಲಾತ್ಕಾರ ಮಾಡಿದಾಗ ಇವರೆಲ್ಲರೂ ದೇವರಿಗೆ ಮೊರೆಯಿಡುತ್ತಾರೆ. ಆಗ ದೈವಸಹಾಯದಿಂದ ಇವರೆಲ್ಲರೂ ಪಾರಿವಾಳಗಳಾಗಿ ಮಾರ್ಪಡುತ್ತಾರೆ. ಇವರೆಲ್ಲರಿಗೆ ನಕ್ಷತ್ರಸ್ಥಾನ ಲಭಿಸುತ್ತದೆ. ಆದರೂ ಒರೈಯನ್ ಮತ್ತು ಅವನ ನಾಯಿ (ಮಹಾಶ್ವಾನ) ಇವರನ್ನು ಬೆನ್ನಟ್ಟುವುದು ತಪ್ಪುವುದಿಲ್ಲ. ಇವರ ಪೈಕಿ ಎಲೆಕ್ಟ್ರಾ ಹೇಗೆಯೋ ತಪ್ಪಿಸಿಕೊಂಡು ಮುಂದೆ ಆಗಬಹುದಾದ ಟ್ರಾಯ್ ಪತನವನ್ನು ತಾನು ನೋಡದ ಹಾಗೆ ಕಣ್ಮರೆಯಾಗುತ್ತಾಳೆ. ತಪ್ಪಿಸಿಕೊಂಡ ಕನ್ನಿಕೆ ಮೆರೋಪೀ ಎಂದು ಕೆಲವರ ಅಭಿಪ್ರಾಯ. ಸಿಸಿಫಸನ ಜೊತೆಯಲ್ಲಿ ಲೈಂಗಿಕ ಸಂಬಂಧವನ್ನು ಪಡೆದದ್ದರ ಸಲುವಾಗಿ ನಾಚಿಕೆಪಟ್ಟು ಎಲೆಕ್ಟ್ರಾ ತನ್ನ ಪ್ರಕಾಶವನ್ನು ಕಡಿಮೆಮಾಡಿಕೊಂಡುಬಿಡುತ್ತಾಳೆ. ಅಂದಿನಿಂದ ಈ ನಕ್ಷತ್ರಪುಂಜದಲ್ಲಿ ಬರಿಯ ಕಣ್ಣಿಗೆ ಆರು ನಕ್ಷತ್ರಗಳು ಚೆನ್ನಾಗಿ ಕಾಣಿಸುತ್ತವೆ. ಏಳನೆಯ ನಕ್ಷತ್ರ ಚಂಚಲ. *

**ಕೃತ್ತಿವಾಸ :** ಬಂಗಾಲೀ ಸಾಹಿತ್ಯದಲ್ಲಿ ಪ್ರಾಚೀನತಮವೂ ಜನಾದರಣೀಯವೂ ಆಗಿರುವ ರಾಮಾಯಣವನ್ನು ರಚಿಸಿದ ಕವಿ. ಕೃತ್ತಿವಾಸ ಓಝಾ, ಕೃತ್ತಿವಾಸ ಪಂಡಿತ ಎಂದೂ ಈತನಿಗೆ ಹೆಸರುಗಳಿವೆ. ಈತ ಕುಲೀನ ಬ್ರಾಹ್ಮಣ. ಈತನ ಮುತ್ತಜ್ಜನ ತಂದೆ ದೊಡ್ಡ ಆಸ್ಥಾನ ವಿದ್ವಾಂಸನಾಗಿದ್ದು ಹೂಗ್ಲಿಯ ತೀರದಲ್ಲಿರುವ ಪೂಲಿಯಾ ಎಂಬ ಹಳ್ಳಿಯಲ್ಲಿ ಬಂದು ನೆಲಸಿದನಂತೆ. ಮುರಾರಿ ಕೃತ್ತಿವಾಸನ ಅಜ್ಜ. ದಕ್ಷಿಣ ದೇಶದ ಯಾತ್ರೆಗೆ ಹೊರಟ ಸಂದರ್ಭದಲ್ಲಿ ಜನಿಸಿದ ತನ್ನ ಮೊಮ್ಮಗನಿಗೆ ಆತ ಕೃತ್ತಿವಾಸ ಎಂದು ಶಿವನ ಸ್ಮರಣೆ ತರುವ ಹೆಸರನ್ನಿಟ್ಟನಂತೆ. ಕೃತ್ತಿವಾಸನ ತಂದೆ ವನಮಾಲಿ ಪಂಡಿತ. ತಾಯಿ ಮಾಲಿನೀ. ಆರು ಜನ ಸಹೋದರರಲ್ಲಿ ಈತನೇ ಹಿರಿಯ. ಇವನಿಗೊಬ್ಬ ಮಲತಂಗಿಯೂ ಇದ್ದಳು.

ಕೃತ್ತಿವಾಸ ತನ್ನ ಹನ್ನೊಂದನೆಯ ವಯಸ್ಸಿನಲ್ಲಿ ಉತ್ತರ ಬಂಗಾಲಕ್ಕೆ ಬಂದು ವಿದ್ಯಾಭ್ಯಾಸ ಮುಗಿಸಿಕೊಂಡು ಗೌಡದೇಶದ ದೊರೆಯ ಆಸ್ಥಾನಕ್ಕೆ ಹೋದ. ಅಲ್ಲಿ ತನ್ನ ಆಶುಕವಿತ್ವದಿಂದ ಅರಸನನ್ನು ಮೆಚ್ಚಿಸಿ ಅವನಿಂದ ಬಹುಮಾನಿತನಾಗಿ ಅವನ ಅಪೇಕ್ಷೆಯಂತೆ ಜನಪ್ರಿಯ ರಾಮಾಯಣ ಒಂದನ್ನು ಬರೆಯಲು ಸಂಕಲ್ಪಿಸಿದ.

ಭಣಿತಿಯಲ್ಲಿ (ಕಾವ್ಯದಲ್ಲಿಯ ಆತ್ಮವೃತ್ತಭಾಗ) ಬರುವ ಈ ವಿವರಣೆಯ ಆಧಾರದ ಮೇಲೆ ಕೆಲವು ವಿದ್ವಾಂಸರು ಲೆಕ್ಕಹಾಕಿ, ಕವಿಯ ಜನನಕಾಲವನ್ನು 1380 ಎಂದೂ ಮತ್ತೆ ಕೆಲವರು 1442 ಎಂದೂ ಉಳಿದ ಕೆಲವರು ಈತ 15ನೆಯ ಶತಮಾನದ ಉತ್ತರಾರ್ಧದವನೆಂದೂ ವಾದಿಸಿದ್ದಾರೆ. ಇಷ್ಟಲ್ಲದೆ ಕವಿಯ ಬಗ್ಗೆ ಬೇರೆ ಯಾವ ನಿಖರವಾದ ಸಮಾಚಾರವೂ ತಿಳಿದುಬಂದಿರುವುದಿಲ್ಲ.

ಕೃತ್ತಿವಾಸರಾಮಾಯಣವೆಂದು ಪ್ರಸಿದ್ಧವಿರುವ ಗ್ರಂಥದ ಮೂಲ ಹೆಸರು ರಾಮಪಾಂಚಾಲೀ, ಪಾಂಚಾಲೀ ಎಂದರೆ ಆಖ್ಯಾನ ಕಾವ್ಯ. ಕವಿ ಇದನ್ನು ಪಯಾರ್ ಎಂಬ ಮಾತ್ರಾಛಂದಸ್ಸಿನಲ್ಲಿ ಜನತೆಯ ಭಾಷೆಯಲ್ಲಿ ರಚಿಸಿದ್ದಾನೆ. ಈ ಕಥನಕಾವ್ಯ ಲಿಪಿಬದ್ಧವಾದದ್ದು ಕವಿ ಕಾಲವಶನಾದ ಎರಡು ಶತಮಾನಗಳ ಅನಂತರ ಎಂದು ಊಹಿಸಬಹುದು. ಈಗ ದೊರೆತಿರುವ ಹಸ್ತಪ್ರತಿಗಳಲ್ಲಿ ಪ್ರಾಚೀನತಮವಾದುದು ಇನ್ನೂರೈವತ್ತು ವರ್ಷಗಳಷ್ಟು ಹಿಂದಿನದಿರಬಹುದು. ಆದ್ದರಿಂದ ಇದರಲ್ಲಿ ಕೃತ್ತಿವಾಸನ ಮೂಲಭಾಷೆಯಾಗಲೀ ಕಥೆಯಾಗಲೀ ಎಷ್ಟರಮಟ್ಟಿಗೆ ಉಳಿದುಬಂದಿದೆ ಎನ್ನುವುದು ವಿಚಾರಾರ್ಹ. ಅದ್ಭುತಾಚಾರ್ಯನೆಂಬಾತ ಬರೆದ ರಾಮಾಯಣದ ಕೆಲವೊಂದು ಭಾಗವೂ 18ನೆಯ ಶತಮಾನದ ಕವಿಚಂದ್ರ ಬರೆದಿರಬಹುದಾದ ಕೆಲವಾರು ಭಾಗಗಳೂ ಈಗ ಪ್ರಚಲಿತವಿರುವ ಕೃತ್ತಿವಾಸ ರಾಮಾಯಣದಲ್ಲಿ ಸೇರಿಹೋಗಿವೆ. ಹೀಗಾಗಿ ಪ್ರಾಮಾಣಿಕ ಸಂಸ್ಕರಣ ಇನ್ನೂ ದೊರೆತಿಲ್ಲ. ದೊರೆಯುತ್ತಿಲ್ಲ. ಮೊದಲಿಗೆ ಈ ಕೃತಿ 1803ರಲ್ಲಿ ಶ್ರೀರಾಮಪುರ ಮಿಷನ್ ಪ್ರೆಸ್ಸಿನಲ್ಲಿ ಅಚ್ಚಾಯಿತು. ಪೂರ್ಣಚಂದ್ರ ಡೇ ಎಂಬವರು ಸಂಪಾದಕರಾಗಿರುವ ಚಕ್ರವರ್ತಿ ಚಟರ್ಜಿ ಅಂಡ್ ಕಂಪನಿಯವರು ಪ್ರಕಟಿಸಿರುವ ರಾಮಪಾಂಚಾಲೀ ಎಂಬುದು ಈಗ ಅತ್ಯಂತ ಪ್ರಚಾರದಲ್ಲಿದೆ.

ಕೃತ್ತಿವಾಸ ರಾಮಾಯಣದ ಕಥೆ ಮುಖ್ಯವಾಗಿ ವಾಲ್ಮೀಕಿ ರಾಮಾಯಣದ ಗೌಡೀಯ ಪಾಠಕ್ಕನುಸಾರವಾಗಿದ್ದರೂ ಅದರ ಅನುವಾದವಲ್ಲ. ಋಷ್ಯಶೃಂಗರ ಪತ್ನಿ ಶಾಂತಾ ದಶರಥನ ಮಗಳು; ಪೂರ್ವಜನ್ಮದಲ್ಲಿ ಕುಶಧ್ವಜನ ಮಗಳಾಗಿದ್ದ ವೇದವತಿಯೇ ಸೀತೆ; ಜನಕಮಹಾರಾಜ ಮೇನಕೆಯ ಸೌಂದರ್ಯದಿಂದ ಕಾಮವಶನಾದಾಗ ಸ್ಖಲಿತವಾದ ಆತನ ವೀರ್ಯ ಭೂಮಿಯಲ್ಲಿ ಬಿದ್ದು ಡಿಂಬವಾಗಿದ್ದು ಯಜ್ಞಕ್ಕಾಗಿ ಭೂಶೋಧ ಮಾಡುತ್ತಿದ್ದಾ ಜನಕನಿಗೆ ಸಿಕ್ಕಿತು–ಅದೇ ಭೂಮಿಜೆ ಸೀತೆ ಎಂಬ ವೃತ್ತಾಂತ; ಕಾಲನೇಮಿಯ ಪ್ರಕರಣ–ಮುಂತಾದ ಎಷ್ಟೋ ವಿಷಯಗಳು ಗೌಡೀಯ ವಾಲ್ಮೀಕಿ ರಾಮಾಯಣದಿಂದ ಬಂದವು. ಆದರೆ ಹರಿಶ್ಚಂದ್ರ, ಸೌದಾಸ, ದಿಲೀಪ, ರಘು, ಅಜ ಮುಂತಾದ ರಘುವಂಶದ ರಾಜರ ಇತಿಹಾಸದ ವರ್ಣನೆ ಪದ್ಮಪುರಾಣದಿಂದ ಪ್ರಭಾವಿತವಾಗಿದೆ; ಕಾಳಿದಾಸನ ರಘುವಂಶದ ಪ್ರಭಾವವೂ ಸಾಕಷ್ಟಿದೆ. ದಶರಥ ಶನಿಯಿಂದ ವರವನ್ನು ಪಡೆದದ್ದು, ದಶರಥ ಹಾಗೂ ಜಟಾಯುವಿನ ಮೈತ್ರಿ, ದುಂದುಭಿ ಎಂಬ ಗಂಧರ್ವ ಸ್ತ್ರೀ ಮಂಥರೆಯಾಗಿ ಜನಿಸುವುದು– ಮುಂತಾದುವು ಪದ್ಮಪುರಾಣಾನುಸಾರ ವರ್ಣಿತವಾಗಿವೆ. ಸ್ಕಾಂದಪುರಾಣದ ನಾಗರಖಂಡದಲ್ಲಿ ಬರುವ ವರ್ಣನೆಗೆ ಹೋಲಿಸಿ ನೋಡಿದರೆ ದಶರಥ ಶನಿದೇವನಿಂದ ವರ ಪಡೆದ ಕಥಾನಿರೂಪಣೆಯ ಪ್ರೇರಣೆ ಅಲ್ಲಿಯದೇ ಎನಿಸುತ್ತದೆ. ವಾಲ್ಮೀಕಿ ರಾಮಾಯಣದಲ್ಲಿಲ್ಲದ ಎಷ್ಟೋ ಪ್ರಸಂಗಗಳು ಕೃತ್ತಿವಾಸನ ರಾಮಾಯಣದಲ್ಲಿ ಬಂದಿವೆ. ದಶರಥ ಯಜ್ಞರಕ್ಷಣೆಗಾಗಿ ರಾಮಲಕ್ಷ್ಮಣರನ್ನು ಕರೆಯಲು ಬಂದ ವಿಶ್ವಾಮಿತ್ರರಿಗೆ ಮೋಸ ಮಾಡಿ ಅವರೊಂದಿಗೆ ಭರತಶತ್ರುಘ್ನರನ್ನು ಕಳುಹಿಸುವುದು; ಸೀತೆಯ ಪೂರ್ವರಾಗ; ಬೇರೆ ಬೇರೆ ಸಂದರ್ಭಗಳಲ್ಲಿ ಕೈಕೇಯಿ ಎರಡು ವರಗಳನ್ನು ಮುಡಿಪಾಗಿ ಪಡೆದಿದ್ದು; ರಾಮನಿಗೂ ಗುಹನಿಷಾದನಿಗೂ ವನವಾಸಕ್ಕೆ ಮುಂಚೆಯೇ ಇದ್ದ ಸ್ನೇಹಸಂಬಂಧ; ವಾಲಿ ಕೃಷ್ಣಾವತಾರದಲ್ಲಿ ಭಿಲ್ಲನಾಗಿ ಸೇಡು ತೀರಿಸಿಕೊಳ್ಳುವನೆಂದು ರಾಮನಿಗೆ ತಾರಾದೇವಿ ಕೊಟ್ಟ ಶಾಪ; ಹನುಮಂತನಿಗೂ ನಳನಿಗೂ ನಡೆದ ಕಲಹ, ಅನ್ನೋದಕವನ್ನೂ ನಿದ್ರೆಯನ್ನೂ ತ್ಯಜಿಸಿ ಹದಿನಾಲ್ಕು ವರ್ಷ ಬ್ರಹ್ಮಚರ್ಯ ಪಾಲನ ಮಾಡಿದ ಲಕ್ಷ್ಮಣನ ಸಂಯಮ; ಮಹೀರಾವಣನ ಕಥೆ; ಸೇತುವೆಯನ್ನು ಮುರಿದುಹಾಕಿದ್ದು, ಸೀತೆಯನ್ನು ಮರಳಿ ಕಾಡಿಗೆ ಕಳುಹಿಸುವಲ್ಲಿ ಪ್ರಚಲಿತವಿರುವ ಅಗಸನ ದೂರು ಮತ್ತು ಗುಪ್ತಚರರಿಂದ ಲೋಕಾಪವಾದದ ಸಂಗತಿಯನ್ನು ತಿಳಿಯುವುದರ ಜೊತೆಗೆ ಸೀತೆಯೇ ಬರೆದ ರಾವಣನ ಚಿತ್ರವನ್ನು ಕಂಡು ಶಂಕೆಗೊಳಗಾದದ್ದು; ಕುಶಲವರ ಕಾಳಗ–ಮುಂತಾದ ಹಲಕೆಲವು ಪ್ರಸಂಗಗಳು ಇದಕ್ಕೆ ನಿದರ್ಶನ.

ಕೃತ್ತಿವಾಸ ರಾಮಾಯಣದ ಮೇಲೆ ಶೈವ, ಶಾಕ್ತ ಪ್ರಭಾವಗಳು ಸಾಕಷ್ಟು ಬಿದ್ದಿವೆ. ಹನುಮಂತ ಶಿವನ ಅವತಾರ ಎಂದಿರುವುದು, ಮಹೀರಾವಣನ ಪ್ರಸಂಗದಲ್ಲಿ ಶಿವ ಮತ್ತು ರಾಮ ಇಬ್ಬರ ಐಕ್ಯವನ್ನು ತೋರುವುದು. ಸೇತುನಿರ್ಮಾಣ ಸಂದರ್ಭದಲ್ಲಿ ಶಿವನನ್ನು ಪ್ರತಿಷ್ಠಾಪಿಸಿ ಪೂಜಿಸುವುದು– ಮುಂತಾದವು ಶೈವಪ್ರಭಾವಕ್ಕೆ ಸಾಕ್ಷಿಯಾಗಿದ್ದರೆ ರಾವಣನ ರಕ್ಷಣೆಗಾಗಿ ಶಿವ ಹೋಗಬೇಕೆಂದು ಯುದ್ಧಕಾಂಡದಲ್ಲಿ ಪಾರ್ವತಿ ಆಗ್ರಹಪಡಿಸುವುದು, ಚಾಮುಂಡೀರೂಪಿಣಿಯಾದ ದೇವಿ ಲಂಕಾಪ್ರವೇಶ ಮಾಡಲಿದ್ದ ಹನುಮಂತನನ್ನು ತಡೆಹಿಡಿಯುವುದು ರಾಮನಿಂದ ಪೂಜಿತಳಾದ ದೇವಿ ಪ್ರಸನ್ನಳಾಗಿ ರಾಮನಿಗೆ ವಿಜಯವನ್ನು ತಂದುಕೊಡುವುದು– ಇವೇ ಮೊದಲಾದ ಪ್ರಸಂಗಗಳು ಶಾಕ್ತ ಪ್ರಭಾವಕ್ಕೆ ಸಾಕ್ಷಿಯಾಗಿವೆ.

ರಾಮಭಕ್ತಿಯ ಪ್ರಚಾರ ಕೂಡ ಕೃತ್ತಿವಾಸನ ರಚನೆಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದೆ. ರಾಮನಾಮಸ್ಮರಣೆಯಿಂದ ವಾಲ್ಮೀಕಿ ಉದ್ಧಾರನಾದನೆಂಬುದು, ಬ್ರಹ್ಮಹತ್ಯಾದೋಷನಿವಾರಣೆಗಾಗಿ ದಶರಥನಿಗೆ ಮೂರು ಸಲ ರಾಮನಾಮವನ್ನುಚ್ಚರಿಸಲು ಹೇಳಿದ ತಮ್ಮ ಮಗನಾದ ಲೋಮಶ ರಾಮನಾಮಕ್ಕೆ ಅಪಚಾರವೆಸಗಿದನೆಂದು ಸಿಟ್ಟಿನಿಂದ ವಸಿಷ್ಠರು ಆತನನ್ನು ಶಪಿಸಿದ್ದು, ಹನುಮಂತನ ಹೃದಯದಲ್ಲಿ ರಾಮನಾಮ ಅಂಕಿತವಾಗಿತ್ತೆಂಬುದು–ಮುಂತಾದುವು ಮಾತ್ರವಲ್ಲ. ರಾವಣನ ಮಗನಾದ ವೀರಬಾಹು ರಾಮನಲ್ಲಿ ವಿಷ್ಣು ಚಿಹ್ನೆಗಳನ್ನು ಗುರುತಿಸಿ ಯುದ್ಧದಿಂದ ವಿರತನಾದುದು, ವಿಭೀಷಣನ ಮಗನಾದ ತರಣೀಸೇನ ವೈಷ್ಣವ ಚಿಹ್ನೆಗಳನ್ನು ಧರಿಸಿ ರಥ, ತುರಗ, ಪತಾಕಾದಿಗಳ ಮೇಲೆ ರಾಮನಾಮವನ್ನು ಅಂಕಿತಗೊಳಿಸಿಕೊಂಡು ರಾಮಭಕ್ತನಾಗಿದ್ದುದು, ರಾಮ ದಯಾಳುವೆಂದೂ ಅವತರಿಸಿ ಬಂದಿರುವ ಮಹಾವಿಷ್ಣುವೆಂದೂ ಮನಸಾ ಸ್ಮರಿಸಿ ಯುದ್ಧಕ್ಷೇತ್ರದಲ್ಲಿ ನತಮಸ್ತಕನಾಗಿ ನಿಂತ ರಾವಣನ ಪಾತ್ರನಿರೂಪಣೆ–ಮುಂತಾಗಿ ರಾಕ್ಷಸರನ್ನೂ ರಾಮಭಕ್ತರನ್ನಾಗಿ ಚಿತ್ರಿಸಿರುವುದು ರಾಮಭಕ್ತಿಯ ಪ್ರಭಾವ. ಇಲ್ಲಿ ಶುಕಸಾರಣರೂ ರಾಮ ಭಕ್ತಿಯ ಪ್ರಭಾವಕ್ಕೊಳಗಾದ ರಾವಣನ ಗುಪ್ತಚರರಾಗಿದ್ದಾರೆ.

ಬಂಗಾಳದಲ್ಲಿ ಮಾತ್ರ ಪ್ರಚಲಿತವಿರುವ ಕೆಲವು ಜನಪದ ಗೀತೆಗಳ ಪ್ರಭಾವವನ್ನೂ ಕೃತ್ತಿವಾಸನ ರಾಮಪಾಂಚಾಲಿಯಲ್ಲಿ ಕಾಣಬಹುದು. ಋಷಿಮುನಿಗಳು ಶೋಧಿಸಿಟ್ಟ ಮುಹೂರ್ತದಲ್ಲೇ ರಾಮಸೀತೆಯರ ವಿವಾಹವಾಗಿಬಿಟ್ಟರೆ ಎಂದೆಂದಿಗೂ ಅವರ ವಿಯೋಗವಾಗಲಿಕ್ಕಿಲ್ಲವೆಂದು ಯೋಚಿಸಿ ದೇವತೆಗಳು ಸಭೆ ಸೇರಿ ಮುಹೂರ್ತವನ್ನು ತಪ್ಪಿಸಲು ಚಂದ್ರನನ್ನು ಮಿಥಿಲೆಗೆ ಕಳಿಸಿದ್ದು ಮತ್ತು ಚಂದ್ರ ನರ್ತಕಿಯಾಗಿ ಬಂದು ಎಲ್ಲರ ಮನಸ್ಸನ್ನೂ ಆಕರ್ಷಿಸಿ ಮುಹೂರ್ತವನ್ನು ಮರೆಸಿದ್ದು ಇವು ಇಲ್ಲಿ ಮಾತ್ರ ಬಂದಿರುವ ಘಟನೆಗಳು.

ಬ್ರಹ್ಮದೇವನನ್ನು ಕುರಿತು ತಪಸ್ಸು ಮಾಡಿದ ರಾವಣ ಅಮರತ್ವವನ್ನು ವರವಾಗಿ ಕೇಳಿದಾಗ ಬ್ರಹ್ಮ ಅದು ಅಸಾಧ್ಯವಾದುದೆಂದು ಹೇಳಿ ಪರ್ಯಾಯವಾಗಿ ಬ್ರಹ್ಮಾಸ್ತ್ರವನ್ನು ಕೊಟ್ಟು, ಇದನ್ನು ಜೋಪಾನವಾಗಿ ಕಾಪಾಡಿಟ್ಟುಕೋ. ಇದರಿಂದಲ್ಲದೆ ಬೇರೆ ಅಸ್ತ್ರಶಸ್ತ್ರಗಳಿಂದ ಕತ್ತರಿಸಿ ಹಾಕಿದರೂ ನಿನ್ನ ತಲೆಗಳೂ ಭುಜಗಳೂ ಬೆಳೆಯುವುವೆಂದು ವರ ಕೊಟ್ಟದ್ದು; ಆ ಬ್ರಹ್ಮಾಸ್ತ್ರವನ್ನು ರಾವಣ ಮಂಡೋದರಿಯ ಕೈಯಲ್ಲಿ ರಕ್ಷಿಸಿಟ್ಟುಕೊಳ್ಳಲು ಕೊಟ್ಟದ್ದು, ರಾವಣನ ಸಂಹಾರ ಏನು ಮಾಡಿದರೂ ಸಾಧ್ಯವಾಗಲಿಕ್ಕಿಲ್ಲವೆಂದು ತೋರಿಬಂದಾಗ ವಿಭೀಷಣ ಈ ಗುಟ್ಟನ್ನು ರಾಮನಿಗೆ ತಿಳಿಸಿದ್ದು; ಆಗ ರಾಮನಿಂದ ಆಜ್ಞಪ್ತನಾಗಿ ಹನುಮ ಬ್ರಾಹ್ಮಣವೇಷದಲ್ಲಿ ಮಂಡೋದರಿಯ ಬಳಿ ಬಂದು ಮಾತುಮಾತಿನಲ್ಲಿ ಮಂಡೋದರಿಯಿಂದ ಬ್ರಹ್ಮಾಸ್ತ್ರವಿರುವ ಗುಪ್ತಸ್ಥಾನವನ್ನು ಪತ್ತೆಹಚ್ಚಿ, ಕಂಬದಲ್ಲಿ ಬಚ್ಚಿಟ್ಟ ಆ ಅಸ್ತ್ರವನ್ನು ಅಪಹರಿಸಿ ತಂದದ್ದು–ಮುಂತಾದ ಘಟನಾವಳಿಗಳನ್ನಿಲ್ಲಿ ನೆನೆಯಬಹುದು.

ರಾವಣನ ಸಂಹಾರದ ಅನಂತರ ಯುದ್ಧಭೂಮಿಗೆ ಧಾವಿಸಿ ಬಂದ ಮಂಡೋದರಿಯನ್ನು ಸೀತೆ ಎಂದು ಭ್ರಮಿಸಿದ ರಾಮ ಸೌಭಾಗ್ಯವತೀಭವ ಎಂದು ಆಶೀರ್ವದಿಸಿ ಆದ ಪ್ರಮಾದಕ್ಕೆ ಪರಿಹಾರವಾಗಿ ರಾವಣನ ಚಿತೆ ಸದಾ ಉರಿಯುತ್ತಿರಲೆಂದು ಅನುಗ್ರಹಿಸಿದ್ದು ಮತ್ತು ಒತ್ತಾಯಪಡಿಸಿ ಮಂಡೋದರಿಗೂ ವಿಭೀಷಣನಿಗೂ ಮದುವೆ ಮಾಡಿಸಿದ್ದು–ಈ ಮೊದಲಾದ ಘಟನೆಗಳೂ ಗಮನಾರ್ಹವಾಗಿವೆ.

ಮಂಡೋದರಿಯೂ ಅನ್ಯರಾಕ್ಷಸಿಯರೂ ನಿನಗೆ ಪತಿಸುಖ ಸ್ವಲ್ಪಕಾಲವಿರಲಿ ಎಂದು ಸೀತೆಗೆ ಶಾಪವಿತ್ತದ್ದು ಇಲ್ಲಿ ವರ್ಣಿತವಾಗಿದೆ.

ಬಂಗಾಳದಲ್ಲಿ ಅತ್ಯಂತ ಜನಾದರಣೀಯವಾದ ಈ ರಾಮಪಾಂಚಾಲೀ ಅನಂತರದ ಸಾಹಿತ್ಯದ ಮೇಲೂ ಸಾಕಷ್ಟು ಪ್ರಭಾವವನ್ನು ಬೀರಿದೆ.

ಕೃತ್ತಿವಾಸನ ಭಾಷೆ ಸರಳವಾದುದು. ಪ್ರಸಾದಗುಣದಿಂದ ಕೂಡಿದ್ದು, ಉದಾಹರಣೆಗೆ, ರಾವಣನೂ ರಾಮಭಕ್ತನೆಂದು ಹೇಳಲಾಗಿದೆಯಷ್ಟೆ. ಆ ಸಂದರ್ಭದಲ್ಲಿ ಭಕ್ತಿಗೆ ಮೆಚ್ಚಿದ ರಾಮನ ಮಾತುಗಳು ಹೀಗಿವೆ.

| ಮೂಲ | ಅರ್ಥ |
|---|---|
| ಕಾರ್ಯನಾಇ ರಾಜಪಾಟೇ | ರಾಜ್ಯಕೋಶದಿಂದ ಈಗೇನಾಗಬೇಕು |
| ಪುನಃ ಜಾಇ ಬನೇ । | ಪುನಃ ವನಕ್ಕೆ ಹೋಗುವೆನು |
| ರಾವಣ ಪರಮ ಭಕ್ತ | ರಾವಣ ಪರಮ ಭಕ್ತ |
| ಮಾರಿಯ ಕೇಮನೇ ॥ | ಕೊಲ್ಲುವುದಾದರೂ ಹೇಗೆ? |

ವಿಭೀಷಣನಿಗೆ ಆಶ್ರಯವನ್ನಿತ್ತ ಸಂದರ್ಭದಲ್ಲಿ ರಾಮನ ಮಾತುಗಳಿವು :

| ಮೂಲ | ಅರ್ಥ |
|---|---|
| ಸೇಇತ ಪುಣ್ಯೇತೇ ರಾಜಾಗೈಲ ಸ್ವರ್ಗವಾಸ । | ಇದೇ ಪುಣ್ಯದಿಂದ ರಾಜ(ಶಿವಿ) ಸ್ವರ್ಗ ಪಡೆದ |
| ಶರಣಾಗತೇರೇ ನಾ ರಾಖಿಲೇ ಸರ್ವನಾಶ॥ | ಶರಣಾಗತನನ್ನು ರಕ್ಷಿಸದಿದ್ದರೆ ಸರ್ವನಾಶ |
| ವಿಭೀಷಣ ಥಾಕ್ ಯದಿ ಆ ಇಸೇ ರಾವಣ। | ವಿಭೀಷಣನಿರಲಿ ಒಂದುವೇಳೆ ರಾವಣನೆ ಬಂದು |
| ಹಇಲೇ ಶರಣಾಗತ ಕರಿಬ ಪಾಲನ॥ | ಶರಣಾಗತನಾದರೆ ಅವನನ್ನೂ ರಕ್ಷಿಸುತ್ತೇನೆ |

(ಎಂ.ಕೆ.ಬಿ.ಆರ್.)

**ಕೃತ್ಯಾ :** ಮಾಟ, ಮಾಟದ ಬೊಂಬೆ, ಮಾಟದ ಹಿಂದಿರುವ ಒಂದು ಶಕ್ತಿ, ದುಷ್ಟ ದೇವತೆ.

ಕೃತ್ಯಾ ಅಥರ್ವವೇದದ ಅಭಿಚಾರಿಕಾಣಿ(ಮಾಟದ ಮಂತ್ರಗಳು) ಎಂಬ ಅನೇಕ ಮಂತ್ರಗಳ ದೇವತೆ. ಋಗ್ವೇದದ ಕೊನೆಯ ಭಾಗದಲ್ಲಿ ಕೃತ್ಯಾ ಎಂಬ ಮಾತು ಬರುತ್ತದೆ.

ಇಷ್ಟಸಂಪಾದನೆಗಾಗಿ, ಅನಿಷ್ಟನಿವಾರಣೆಗಾಗಿ, ವೈರಿಗಳ ನಾಶಕ್ಕಾಗಿ, ದ್ವೇಷಾಸೂಯೆಗಳ ಮುಯ್ಯಿ ತೀರಿಸಿಕೊಳ್ಳುವುದಕ್ಕಾಗಿ ಕೃತ್ಯಾ ಪ್ರಯೋಗವನ್ನು ರಾಜರೂ ಆರ್ಯರೂ ಅನಾರ್ಯರೂ ಸ್ತ್ರೀ ಶೂದ್ರಾದಿಗಳೂ ಮಾಡುತ್ತಿದ್ದರು. ಮಾಟದ ಬೊಂಬೆಯನ್ನು ನಾನಾ ಆಕಾರಕ್ಕೆ ಹೊಂದಿಕೊಳ್ಳುವಂತೆ ಮಣ್ಣಿನಿಂದ ಕೈಯಲ್ಲೇ ಮಾಡಿ ಅದಕ್ಕೆ ವೇಷಭೂಷಣಾದಿಗಳನ್ನು ತೊಡಿಸುವ ವಾಡಿಕೆಯಿತ್ತು. ಈಗಲೂ ವಿಶೇಷವಾಗಿ ಹಳ್ಳಿಗಾಡಿನಲ್ಲಿ ಇಂಥ ಮಣ್ಣಿನ ಹೆಣ್ಣು ಬೊಂಬೆಗಳನ್ನು ಮಾಡಿ ಕಣಿಗಿಲೆ ಹೂ ಮುಡಿಸಿ ಎಣ್ಣೆಯಲ್ಲಿ ಅದ್ದಿದ ಅರಿವೆಯ ಬತ್ತಿಗಳನ್ನು (ದಾಳ) ಉರಿಸುತ್ತ ಬೊಂಬೆಯ ಬಾಯಿಗೆ ತಾಮ್ರದ ಕಾಸನ್ನು ಕೊಟ್ಟು ಕಿವಿಮೂಗುಗಳಿಗೆ ರಂಜಕವಾಗುವಂತೆ ಅರಿಶಿನ ಕುಂಕುಮಾದಿಗಳನ್ನು ಮೆತ್ತಿ, ರೋಗಿಯನ್ನದರ ಮುಂದೆ ಕುಳ್ಳಿರಿಸಿ ಪೂಜೆ ಹಾಕಿಸಿ ಅನಂತರ ಬೊಂಬೆಯನ್ನು ಆತನೆದುರು ನೀವಾಳಿಸಿ ಅರಿವೆಯ ದಾಳಗಳು ಧಗಧಗನೆ ಉರಿಯುತ್ತಿರಲು ಬೊಂಬೆಯನ್ನು ಎತ್ತಿಕೊಂಡು ಹೋಗಿ ಕೂಡುದಾರಿಯ ಬಳಿಯೋ ರೋಗಿ ಹೆದರಿಕೊಂಡಿದ್ದರೆ ಅಂಥ

ಜಾಗದಲ್ಲೋ ಇಡುವುದನ್ನು ಗಮನಿಸಬಹುದು. ಅಥರ್ವಕಾಲದಲ್ಲಿ ಈ ರೀತಿ ಮಾಡಿ, ಸಿಂಗರಿಸಿ ಅಭಿಚಾರದ(ಮಾಟ) ಮಂತ್ರಪ್ರಯೋಗಮಾಡಿ, ದರ್ಭೆ, ಹೊಲಗಳು, ಶ್ಮಶಾನ, ಗಾರ್ಹಪತ್ಯಾಗ್ನಿ–ಇವುಗಳಿರುವ ಕಡೆ ಬಚ್ಚಿಡುತ್ತಿದ್ದರು. ಬೇಯಿಸದಿರುವ ಹಸಿ ಮಡಕೆ, ಹಸಿಮಾಂಸ, ಮಿಶ್ರಧಾನ್ಯ–ಇವುಗಳಲ್ಲೂ ಕೃತ್ಯೆಯನ್ನು ಬಚ್ಚಿಟ್ಟು ಪ್ರಯೋಗಿಸುವುದು ರೂಢಿಯಲ್ಲಿತ್ತು.

ಇಂಥ ಮಾಟವನ್ನು ಕಂಡುಹಿಡಿಯುವವನಿಗೆ ವಲಗಿನ್ ಎಂದೂ ಅಗೆದು ತೆಗೆದು ಹಾಕುವವನಿಗೆ ಮೂಲಿನ್ ಎಂದೂ ಹೆಸರು.

ಹೀಗೆ ಕೃತ್ಯಾ ಮಾಡಿದಾಗ ಅದಕ್ಕೆ ಪ್ರತಿಮಾಟವನ್ನು (ಪ್ರತಿಕೃತ್ಯಾ) ಮಾಡುತ್ತಿದ್ದರು. ಅಪಾಮಾರ್ಗ ಎಂಬ ವನೌಷಧಿ ಕೃತ್ಯಾಪರಿಹಾರ ಮಾಡುತ್ತದೆಂಬ ನಂಬುಗೆಯಿತ್ತು. ಅದು ಮಾಟಗಾರನ ಮನೆಯನ್ನು ಹಾಳುಮಾಡಿಬಿಡುತ್ತಿತ್ತು. ಜಂಗಿಡವೆಂಬ ಮತ್ತೊಂದು ವನೌಷಧಿಗೆ ಮೂವತ್ತೈದು ಮಾಟಗಳನ್ನು, ಅಷ್ಟೇಕೆ, ನೂರು ಮಾಟಗಳನ್ನಾದರೂ ಹಿಂದೂಡುವ ಶಕ್ತಿಯಿತ್ತು. ಆದರೆ ನಿರಪರಾಧಿಯನ್ನು ಮಾಟ ಹಿಂಸಿಸುವಂತಿರಲಿಲ್ಲ. ಕೆಲವು ವೇಳೆ ಅದು ಕೃತ್ಯೆ ಮಾಡಿದವನ ಮೇಲೆಯೇ ಹಿಂತಿರುಗಿ ಎರಗಿ ಆತನನ್ನು ನಾಶಪಡಿಸುತ್ತಿತ್ತು. ಇಂಥ ಕೃತ್ಯಾಕೃತರಲ್ಲಿ ಪ್ರತೀಚೀನ ಆಂಗಿರಸನೆಂಬಾತ ಬಹು ಪ್ರಸಿದ್ಧ ಪುರೋಹಿತನಾಗಿದ್ದ.

ಮುಂದೆ ಮಹಾಭಾರತಾದಿಗಳಲ್ಲಿ ಕೃತ್ಯಾ ಪ್ರಯೋಗ ಮಾಡಿದ ಸಂದರ್ಭಗಳಿವೆ. ಚ್ಯವನ ಮಹರ್ಷಿ ಅಶ್ವಿನೀ ದೇವತೆಗಳ ಪ್ರಸಾದದಿಂದ ತಾರುಣ್ಯ ಪಡೆದು ಪ್ರತಿಫಲವಾಗಿ ತನ್ನ ಪತ್ನಿ ಸುಕನ್ಯೆಯ ತಂದೆ ಶರ್ಯಾತಿಯ ಯಜ್ಞದಲ್ಲಿ ಪುರೋಹಿತನಾಗಿ ಅವರಿಗೆ ಹವಿರ್ಭಾಗವನ್ನು ಕೊಡಿಸಿದನಷ್ಟೆ. ಭೂಲೋಕದಲ್ಲಿ ಸಂಚರಿಸುತ್ತಿದ್ದ ಅಶ್ವಿನೀ ದೇವತೆಗಳಿಗೆ ಹವಿರ್ಭಾಗದ ಹಕ್ಕಿಲ್ಲವೆಂದು ಕುಪಿತನಾದ ಇಂದ್ರ ತನ್ನ ವಜ್ರಾಯುಧ ಪ್ರಯೋಗ ಮಾಡಿ ಚ್ಯವನನನ್ನು ಕೊಲ್ಲಲೆತ್ನಿಸಲು ಆ ಮಹರ್ಷಿ ಕೃತ್ಯಾ ಸೃಷ್ಟಿಮಾಡಿ ಮಂತ್ರಬಲದಿಂದ ಇಂದ್ರನ ಬಾಹುಸ್ತಂಭನಮಾಡಿ ಅವನನ್ನೇ ಘಾತಿಸಲೆತ್ನಿಸಿದ.

ಭರದ್ವಾಜ ಮುನಿಯ ಮಗ ಯವಕ್ರೀತ ವಿಶ್ವಾಮಿತ್ರನ ಮೊಮ್ಮಗ ಪರಾವಸುವಿನ ಹೆಂಡತಿಯನ್ನು ಬಲಾತ್ಕಾರದಿಂದ ಮಾನಭಂಗಗೊಳಿಸಲು ವಿಶ್ವಾಮಿತ್ರನ ಮಗ ರೈಭ್ಯ ಕೃತ್ಯಾ ದೇವತೆಯನ್ನೂ ಒಬ್ಬ ರಾಕ್ಷಸನನ್ನೂ ಸೃಷ್ಟಿಸಿ ಪ್ರಯೋಗಿಸಲು ಕೃತ್ಯೆ ಯವಕ್ರೀತನ ಕಮಂಡಲವನ್ನು ಅಪಹರಿಸಿತಲ್ಲದೆ, ರಾಕ್ಷಸ ಯವಕ್ರೀತನನ್ನೇ ಕೊಂದುಹಾಕಿದ.

ಪುಂಡ್ರದೇಶದ ಅರಸು ವಾಸುದೇವ ಶ್ರೀಕೃಷ್ಣನನ್ನು ಕೊಲ್ಲಲು ಇಂಥ ಒಂದು ದುಷ್ಟದೇವತೆಯನ್ನು ಸೃಷ್ಟಿಮಾಡಿ ಆತನ ಮೇಲೆ ಪ್ರಯೋಗಿಸಲು ಶ್ರೀಕೃಷ್ಣ ಅದನ್ನು ಅವನ ಮೇಲೆಯೇ ಹಿಂತಿರುಗಿಸಿದ. ದುರ್ಯೋಧನ ಗಂಧರ್ವರಿಂದ ಬಂಧಿತನಾಗಿ ಕೊಂಡೊಯ್ಯಲ್ಪಡುತ್ತಿರುವಾಗ ಭೀಮಾರ್ಜುನರಿಂದ ರಕ್ಷಿತನಾದರೂ ಅವಮಾನದಿಂದ ಪ್ರಾಣತ್ಯಾಗ ಮಾಡಿಕೊಳ್ಳಬೇಕೆಂದಿರುವಾಗ ಕೃತ್ಯಾ ಆತನಿಗೆ ಸಹಾಯ ಮಾಡಿ ಪಾತಾಳಲೋಕಕ್ಕೆ ಒಯ್ಯಲು ದೈತ್ಯರು ಸಮಾಧಾನಮಾಡಿ ಅವನನ್ನು ಹಿಂತಿರುಗಿ ಕಳುಹಿಸಿದರು. (ಸಿ.ಜಿ.ಪಿ.)

**ಕೃಪ :** ಗೌತಮವಂಶದ ಶರದ್ವಂತನೆಂಬ ಬ್ರಾಹ್ಮಣ ಮುನಿಯ ಮಗ. ಶರದ್ವಂತನ ತಪಸ್ಸನ್ನು ಕೆಡಿಸಲು ಇಂದ್ರ ಕಳಿಸಿದ ಜಾಲವತಿ (ಜಾನಪದಿ) ಎಂಬ ಅಪ್ಸರೆಯಲ್ಲಿ ಹುಟ್ಟಿದವ; ರುದ್ರಗಣಾಂಶಸಂಭೂತ, ಜೊತೆಗೇ ಹುಟ್ಟಿದವಳು ಕೃಪಿ. ಈಕೆ ದ್ರೋಣರ ಹೆಂಡತಿ. ಅಶ್ವತ್ಥಾಮನ ತಾಯಿ. ಇವರನ್ನು ಶಂತನು ಸಾಕಿ ಆ ಹೆಸರುಗಳನ್ನಿಟ್ಟ. ಆಮೇಲೆ ಶರದ್ವಂತ ಅವರು ತನ್ನ ಮಕ್ಕಳೆಂಬುದನ್ನು ಶಂತನುವಿಗೆ ತಿಳಿಸಿ ಕೃಪನಿಗೆ ಉಪನಯನಾದಿ ಸಂಸ್ಕಾರಗಳನ್ನು ಮಾಡಿಸಿ, ಧನುರ್ವಿದ್ಯೆಯನ್ನು ಕಲಿಸಿದ. ಅನಂತರ ಪಾಂಡವ ಕೌರವರಿಗೆ ಕೃಪಾಚಾರ್ಯ ಧನುರ್ವಿದ್ಯೆಯ ಗುರುವಾಗಿದ್ದ. ಪಾಂಡವ ಪಕ್ಷಪಾತಿಯಾದರೂ ಮಹಾಭಾರತ ಯುದ್ಧದಲ್ಲಿ ಈತ ಕೌರವಪಕ್ಷದಲ್ಲಿದ್ದ. ಗೋಹರಣ ಪ್ರಸಂಗದಲ್ಲೂ ಕರ್ಣನಿಗೆ ಸೇನಾಪತ್ಯ ಬಂದ ಪ್ರಸಂಗದಲ್ಲೂ ಕರ್ಣನನ್ನು ನಿಂದಿಸಿದ. ಭಾರತಯುದ್ಧದಲ್ಲಿ ಅರ್ಜುನನಿಂದ ಸೋತು ಅವನನ್ನು ಪ್ರಶಂಸಿಸಿದ. ಪಾಂಡವ ಸೇನಾಪತಿಯಾದ ಧೃಷ್ಟದ್ಯುಮ್ನನನ್ನು ಯುದ್ಧದಲ್ಲಿ ಸೋಲಿಸಿದ. ಭಾರತಯುದ್ಧದ 18ನೆಯ ದಿನದ ರಾತ್ರಿಯಲ್ಲಿ ಕೌರವ ಮಡಿದಮೇಲೆ ಅಶ್ವತ್ಥಾಮ ಪಾಂಡವ ಶಿಬಿರವನ್ನು ಹೊಕ್ಕು ಪಾಂಡವೀಯರನ್ನು ಕೊಲ್ಲಹೋದಾಗ ಕೃಪ ಅವನಿಗೆ ವಿಶೇಷವಾಗಿ ಬುದ್ಧಿ ಹೇಳಿ ವಿಫಲನಾದ. ಯುದ್ಧಾನಂತರ ಕೌರವಪಕ್ಷೀಯರಲ್ಲಿ ಉಳಿದ ಮೂವರಲ್ಲಿ ಕೃಪನೊಬ್ಬ, ಯುಧಿಷ್ಠಿರನಿಗೆ ಪಟ್ಟಾಭಿಷೇಕವಾದಮೇಲೆ ಪಾಂಡವರ ಆಶ್ರಯದಲ್ಲಿದ್ದ, ಶರದ್ವಂತನ ಮಗನಾದುದರಿಂದ ಶಾರದ್ವತನೆಂದೂ ಗೌತಮವಂಶದವನಾದುದರಿಂದ ಗೌತಮನೆಂದೂ ಕೃಪನಿಗೆ ಇನ್ನೆರಡು ಹೆಸರುಗಳಿವೆ. ಈತ ಅಶ್ವತ್ಥಾಮ, ಬಲಿ, ವ್ಯಾಸ, ಹನುಮಂತ, ವಿಭೀಷಣ, ಪರಶುರಾಮರಂತೆ ಚಿರಂಜೀವಿ, ಪರೀಕ್ಷಿತನಿಗೆ ಕೃಪ ಧನುರ್ವಿದ್ಯೆಯನ್ನು ಕಲಿಸಿದನೆಂದು ಹೇಳಲಾಗಿದೆ. (ಬಿ.ಎಚ್.ಎಸ್.)

**ಕೃಪಾನಿಧಿ, ಜಿ.ವಿ. :** ಭಾರತದ ಒಬ್ಬ ಪತ್ರಿಕೋದ್ಯಮಿ, ಸಂಪಾದಕ, ಎಂ.ಎ., ಎಲ್‌ಎಲ್.ಬಿ. ಪದವೀಧರರಾಗಿ, ಮದರಾಸಿನ ಸ್ವರಾಜ್ಯ ಪತ್ರಿಕೆಯ ಉಪಸಂಪಾದಕರಾಗಿ ಕೆಲಸಕ್ಕೆ ಸೇರಿಕೊಂಡು, ಪತ್ರಿಕೋದ್ಯಮದಲ್ಲಿ ಅನುಭವಗಳಿಸಿ, ನವದೆಹಲಿಯ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯ ವಿಶೇಷ ವರದಿಗಾರರಾಗಿ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿ, ಅಲ್ಲಿಯ ಇಂಗ್ಲಿಷ್ ದಿನಪತ್ರಿಕೆಯಾದ ಇಂಡಿಯನ್ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದರು. ಅನಂತರ ಅವರು ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯ ಸಹಸಂಪಾದಕರಾಗಿ ಆ ಪತ್ರಿಕೆಯಲ್ಲಿ ಹತ್ತು ವರ್ಷಗಳ ಕಾಲ ಇದ್ದರು.

ನಿವೃತ್ತಿಯ ಅನಂತರ 1958ರಲ್ಲಿ ಮದ್ರಾಸಿಗೆ ಬಂದು ನೆಲಸಿ, ಅಲ್ಲಿ ದಕ್ಷಿಣಭಾರತದ ಭಾಷೆಗಳ ಸಂಘದ ವ್ಯವಸ್ಥಾಪಕರಾಗಿ ನೇಮಕವಾದರು. ತೆಲುಗು, ಕನ್ನಡ, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ಪುಸ್ತಕಗಳ ಭಾಷಾಂತರ ಮತ್ತು ಪ್ರಕಟಣೆಗೆ ಯೋಜನೆಯನ್ನು ತಯಾರಿಸಿ, ಆ ಭಾಷೆಗಳಲ್ಲಿ ಅನೇಕ ಪುಸ್ತಕಗಳು ಪ್ರಕಟವಾಗಲು ಕಾರಣರಾದರು.

ಪುನಃ ಪತ್ರಿಕೋದ್ಯಮ ಅವರನ್ನು ಸೆಳೆಯಿತು. ಬೆಂಗಳೂರಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಂಪಾದಕರಾಗಿ ನೇಮಕಗೊಂಡು, ಅನೇಕ ವರ್ಷಗಳ ಕಾಲ ಸೇವೆ ಮಾಡಿದರು. ಸುದ್ದಿಗಳ ತಲೆಬರೆಹಗಳು, ವಾರಪತ್ರಿಕೆಯ ವಿಶೇಷ ಪುರವಣಿ, ಕ್ರೀಡಾಪುಟ, ಸುದ್ದಿಚಿತ್ರಗಳ ಪ್ರಕಟಣೆ ಮುಂತಾದ ವಿಚಾರಗಳಲ್ಲಿ ಸುಧಾರಣೆ ತಂದುದಲ್ಲದೆ, ತಲೆಬರೆಹಗಳನ್ನು ಹೆಚ್ಚು ಆಕರ್ಷಕವಾಗಿ ಮಾಡಲೂ ಸ್ಥಳೀಯ ಸುದ್ದಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲೂ ಪ್ರಯತ್ನಿಸಿದರು. ಡೆಕ್ಕನ್ ಹೆರಾಲ್ಡ್ ಪತ್ರಿಕೆ ಇನ್ನೂ ಹೆಚ್ಚು ಜನಪ್ರಿಯವಾಗಲು ಶ್ರಮಿಸಿದರು. ಅವರು ಅನೇಕ ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಶಿಕ್ಷಣ ಸಲಹಾ ಸಮಿತಿಯ ಸದಸ್ಯರಾಗಿದ್ದರು. 1970ರಲ್ಲಿ ನಿಧನ ಹೊಂದಿದರು. (ಎನ್.ಕೆ.)

**ಕೃಷಿ :** ವ್ಯಾಪಕಾರ್ಥದಲ್ಲಿ ಮೀನುಗಾರಿಕೆ, ಸಮುದ್ರ ಸಂಪತ್ತು, ಅರಣ್ಯ ಹಾಗೂ ಪ್ರಾಥಮಿಕ ಅರಣ್ಯ ಉತ್ಪನ್ನಗಳು; ಆದರೆ ರೂಢಿಯ ಅರ್ಥದಲ್ಲಿ ಕೃಷಿ ಅಂದರೆ ಸಾಗುವಳಿ ಭೂಮಿ ಹಾಗೂ ಅದರ ಉತ್ಪನ್ನಗಳು(ಅಗ್ರಿಕಲ್ಚರ್) ವ್ಯವಸಾಯ, ಬೇಸಾಯ, ಸಾಗುವಳಿ ಮುಂತಾದುವನ್ನು ಸಾಂದರ್ಭಿಕವಾಗಿ ಪರ್ಯಾಯಪದಗಳಾಗಿ ಬಳಸುತ್ತಾರೆ.

**ಪ್ರರೂಪಗಳು:** ಆಹಾರ ಮತ್ತು ಕೃಷಿ ಸಂಸ್ಥೆ (ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಸೇಷನ್, ಎಫ್.ಎ.ಓ) 1962ರಲ್ಲಿ ಪ್ರಕಟಿಸಿದ ಒಂದು ಪತ್ರದಲ್ಲಿ ಈ ಕೆಳಗಿನ ವಿವಿಧ ಪ್ರರೂಪಗಳನ್ನು (ಟೈಪ್ಸ್) ಕೃಷಿಯಲ್ಲಿ ಗುರುತಿಸಿದೆ–(i) ಕೈಗಾರಿಕೆಯಲ್ಲಿ ಪ್ರಗತಿಗೊಂಡಿರುವ ದೇಶಗಳಲ್ಲಿ ಅಲ್ಪಸಾಗುವಳಿ ಪ್ರದೇಶದಿಂದ ಉನ್ನತಮೌಲ್ಯದ ಬೆಳೆಗಳ ತೀವ್ರಕೃಷಿ.(ii) ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಾಗುವಳಿ ಎಂದರೆ ಬೇಸಾಯದಿಂದಲೇ ಬದುಕನ್ನು ಸಾಗಿಸುವ ರೈತ ಎಂಬ ಅರ್ಥ ಮೂಡುತ್ತದೆ. (iii) ಸರಿಯಾದ ಹಿಡುವಳಿಗಳು, ಅವುಗಳಲ್ಲಿ ಮಿಶ್ರಬೆಳೆಗಳ ಹಾಗೂ ಜಾನುವಾರುಗಳ ಸಮೃದ್ಧ ಕೃಷಿ, ತತ್ಪರಿಣಾಮವಾಗಿ ಶ್ರೀಮಂತವಾಗಿರುವ ಕುಟುಂಬ. (iv) ಕೇಂದ್ರೀಯವಾದ ಒಂದು ಆಡಳಿತ ವ್ಯವಸ್ಥೆಗೆ ಒಳಪಟ್ಟು ಇರುವ ವಿಸ್ತಾರವಾದ ತೋಟಗಾರಿಕೆಗಳು, ಇವುಗಳ ಮೇಲ್ವಿಚಾರಣೆಗೆ ಸ್ಥಳೀಯವಾಗಿ ಇರುವ ಒಕ್ಕಲುಗಳು ಇತ್ಯಾದಿ. (v) ಕಾಳು ಹಾಗೂ ಹತ್ತಿ ಬೆಳೆಯುವ ಯಾಂತ್ರೀಕೃತವಾದ ವಿಸ್ತಾರ ಬಯಲು ಭೂಮಿಗಳು. ಜಾನುವಾರುಗಳ ಮೇವಿಗಾಗಿ ವಿಶಾಲವಾದ ಹುಲ್ಲುಗಾವಲುಗಳು ಇತ್ಯಾದಿ. (vi) ಬೇಸಾಯವನ್ನು ಬಿಡು ಸಮಯದ ಉಪಕಸುಬಾಗಿ ಅಂಗೀಕರಿಸಿದ ಇತರ ಉದ್ಯಮಗಳ ಕೆಲಸಗಾರರು ಅಲ್ಪಕಾಲದ ಕೃಷಿಗೋಸ್ಕರ ಉಪಯೋಗಿಸುವ ಹಿಡುವಳಿಗಳು. ಬಿಡುವೇಳೆಯ ಉದ್ಯಮದಿಂದ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದೇ ಇಂಥವರ ಪ್ರಧಾನೋದ್ದೇಶ.

**ಇತಿಹಾಸ:** ವ್ಯವಸಾಯದ ಆದಿಯನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಕಾರಣ ಅದು ನಾಗರಿಕತೆಯಷ್ಟೇ ಪ್ರಾಚೀನವಾದದ್ದು, ಆದರೆ ಇದರ ವಿಕಾಸ ಹೇಗೆ ಆಗಿರಬಹುದೆಂದು ಊಹಿಸುವುದು ಸುಲಭ. ಮೊದಲಲ್ಲಿ ಮನುಷ್ಯ ತನ್ನ ಆಹಾರ ಸಂಪಾದನೆ ಹಾಗೂ ರಕ್ಷಣೆಗೋಸ್ಕರ ಕೈಕಾಲುಗಳ ಬಲ ಮತ್ತು ಚಟುವಟಿಕೆಗಳನ್ನು ಅವಲಂಬಿಸಿಕೊಂಡಿದ್ದ. ನಿಸರ್ಗದಲ್ಲಿ ಸ್ವೇಚ್ಛೆಯಾಗಿ ಸಮೃದ್ಧವಾಗಿ ಬೆಳೆದು ಯಥೇಚ್ಛವಾಗಿ ಈತನಿಗೆ ಲಭಿಸುತ್ತಿದ್ದ ಸಸ್ಯ ಹಾಗೂ ಪ್ರಾಣಿ ಉತ್ಪನ್ನಗಳೇ ಈತನ ಆಹಾರ. ನೆಲ, ಹವೆ, ನೀರು, ಕಾಲ ಇವೇ ಮುಂತಾದ ಅಂಶಗಳನ್ನು ಅನುಸರಿಸಿ ಸಸ್ಯಗಳಲ್ಲಿ ಆಗುತ್ತಿದ್ದ ಬದಲಾವಣೆಗಳನ್ನೂ ಆವರ್ತನೆಗಳನ್ನೂ ಮನುಷ್ಯ ತನ್ನ ಬುದ್ಧಿ ಬೆಳೆದಂತೆ ಗಮನಿಸಿ ಸ್ವಪ್ರಯತ್ನದಿಂದ ಇಂಥ ಕೆಲವು ಕ್ರಿಯೆಗಳಲ್ಲಾದರೂ ಭಾಗಿಯಾಗಲು ಆರಂಭಿಸಿದ. ಹೀಗೆ ತೊಡಗಿರಬೇಕು ಆದಿಮ ವ್ಯವಸಾಯ. ಭಾರತದ ಪ್ರಾಚೀನ ಗ್ರಂಥಗಳಲ್ಲಿ ಉಕ್ತವಾಗಿರುವ ವ್ಯವಸಾಯಪದ್ಧತಿ ತೀರ ಶಾಸ್ತ್ರೀಯವಾದದ್ದು ಮಾತ್ರವಲ್ಲ ಜನಜೀವನದ ಏಳ್ಗೆಗೆ ಮತ್ತು ರಾಷ್ಟ್ರದ ಸರ್ವತೋಮುಖ ಅಭ್ಯುದಯಕ್ಕೆ ವ್ಯವಸಾಯವೇ ಹೇಗೆ ಕಂಕಾಲ ಎಂಬುದನ್ನು ಸಹ ಅಲ್ಲಿ ಅವಧರಿಸಿರುವುದು ಕಾಣುತ್ತದೆ. ವೇದ ಕಾಲದಲ್ಲೇ ಭಾರತೀಯ ವ್ಯವಸಾಯ ಇಷ್ಟೊಂದು ಪ್ರಗತಿಯನ್ನು ಸಾಧಿಸಿದ್ದು ಗಮನಿಸುವಾಗ ಭಾರತದಲ್ಲಿ ಆದಿಮ ವ್ಯವಸಾಯ ಆರಂಭವಾದ ಕಾಲವನ್ನು ಅವೆಷ್ಟೋ ಸಹಸ್ರ ವರ್ಷಗಳ ಹಿಂದಕ್ಕೆ ತಳ್ಳಬೇಕಾಗುತ್ತದೆ. ಕೌಟಿಲ್ಯ, ಶುಕ್ರ ಇವರ ಗ್ರಂಥಗಳಲ್ಲೂ ಮನುಸ್ಮೃತಿಯಲ್ಲೂ ವ್ಯವಸಾಯ ವಿಧಾನಗಳನ್ನು ವೈಜ್ಞಾನಿಕವಾಗಿ ನಿರೂಪಿಸಲಾಗಿದೆ; ವ್ಯವಸಾಯ ಒಂದು

ಜೀವಪೋಷಕಕಲೆ ಎಂದೇ ಅಲ್ಲಿ ಅದಕ್ಕೆ ಮನ್ನಣೆ ನೀಡಲಾಗಿದೆ. ಮಳೆನೀರಿನ ನೆರವಿನಿಂದ ನಡೆಸುವ ವ್ಯವಸಾಯ; ನದಿ, ಕಾಲುವೆ, ಬಾವಿ, ಯಾಂತ್ರಿಕ ಸಾಧನೆ–ಇವುಗಳ ಉಪಯೋಗ; ವ್ಯವಸಾಯದಲ್ಲಿ ಅನುಸರಿಸಬೇಕಾದ ಕಾಲುವೆ ವ್ಯವಸ್ಥೆ; ಗೊಬ್ಬರಗಳ ಉಪಯೋಗ ಬೆಳೆ

ಚಿತ್ರ 1 ಬತ್ತದ ಹುಲ್ಲಿನ ಬಣವೆಗಳು

ತೆಗೆಯುವ ವಿಧಾನದಲ್ಲಿ ಅನುಸರಿಸಬೇಕಾದ ಆವರ್ತನೆ; ಮಣ್ಣಿನ ಮತ್ತು ಹವೆಯ ಗುಣವನ್ನು ತಿಳಿದುಕೊಂಡು ಬಿತ್ತಬೇಕಾದ ಬೀಜಗಳ ಆಯ್ಕೆ; ತೀವ್ರ ಹಾಗೂ ವಿಸ್ತಾರ ಕೃಷಿಯ ಸಾಪೇಕ್ಷ ಅನುಕೂಲತೆಗಳು; ಬೆಳೆಗಳಿಗೆ ಬೀಳುವ ಪಿಡುಗುಗಳ ನಿವಾರಣೆ; ಹಿಡುವಳಿಯ ಗಾತ್ರ; ಜಮೀನ್ದಾರ ಗೇಣಿದಾರ ಸಂಬಂಧ; ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯ–ಇವೇ ಮುಂತಾದ ಕೃಷಿ ಹಾಗೂ ತತ್ಸಂಬಂಧ ಸಮಸ್ತ ಶಾಖೆಗಳನ್ನೂ ಕೂಲಂಕಷವಾಗಿ ಯಾವ ಆಧುನಿಕ ಮಾನಕದಿಂದಲೂ ಅತ್ಯಾಧುನಿಕವಾಗಿ ಕಾಣುವಂತೆ ಈ ಗ್ರಂಥಗಳಲ್ಲಿ ನಿರೂಪಿಸಿರುವುದನ್ನು ನೋಡುವಾಗ ಪ್ರಾಚೀನ ಭಾರತದ ಕೃಷಿಪ್ರಗತಿಯ

ಚಿತ್ರ 2 ಬತ್ತ ತೂರುತ್ತಿರುವುದು

ಬಗ್ಗೆ ವಿಶೇಷಾಭಿಮಾನ ಮೂಡುವುದು ಸಹಜ. ಯುದ್ಧಕಾಲದಲ್ಲಿ ಸಹ ಕೃಷಿವ್ಯವಸ್ಥೆಗೆ ಯಾವ ಆತಂಕವೂ ಉಂಟಾಗದಂತೆ ಈ ಉದ್ಯಮ ಮುಂದುವರಿಯುತ್ತಿರಬೇಕೆಂಬುದು ಯುದ್ಧನಿರತ ರಾಷ್ಟ್ರಗಳೆಲ್ಲವೂ ಒಪ್ಪಿ ಪಾಲಿಸುತ್ತಿದ್ದ ಸತ್ಸಂಪ್ರದಾಯ. ನೆಲವೆಂದರೆ ಸಂಪತ್ತು, ನೆಲದ ಮೇಲೆ ವ್ಯವಸ್ಥಿತ ಕೃಷಿವಿಧಾನಗಳನ್ನು ಪ್ರಯೋಗಿಸುವುದರಿಂದ ಈ ಸಂಪತ್ತನ್ನು ಬಹುಪಾಲು ವೃದ್ಧಿಸಬಹುದು ಎಂದು ಅವರಿಗೆ ಚೆನ್ನಾಗಿ ಮನವರಿಕೆ ಆಗಿತ್ತು.

ಸುವ್ಯವಸ್ಥಿತ ವ್ಯವಸಾಯದ ಪ್ರಥಮ ಹಂತವಾದ ಸಂಚಾರೀಭೂಸಾಗುವಳಿ ಹಾಗೂ ಸಾಕುಪ್ರಾಣಿಗಳ ಪಾಲನೆಯನ್ನು ಬೈಬಲಿನಲ್ಲಿ ಸುಸ್ಪಷ್ಟವಾಗಿ ವರ್ಣಿಸಿದೆ. ಹಳೇ ಬೈಬಲಿನ ಕಾಲದಲ್ಲಿ ವ್ಯವಸಾಯದ ವಿಧಾನ ಸಂಚಾರೀಸ್ವರೂಪದ್ದು. ಅದು ಕುರಿಪಾಲನೆಗೆ ಸಂಬಂಧಿಸಿತ್ತು. ಜನಸಂಖ್ಯೆ ವೃದ್ಧಿಹೊಂದಿದಂತೆ ಭೂಸಾಗುವಳಿ ಪುಷ್ಟಿಗೊಂಡಿತು. ಬರಬರುತ್ತ

ಚಿತ್ರ 3 ಬತ್ತ ಬಡಿಯುತ್ತಿರುವುದು

ಜನ ತಾವು ಸಾಗುವಳಿ ಮಾಡುತ್ತಿದ್ದ ಸ್ಥಳಗಳಲ್ಲಿಯೇ ಶಾಶ್ವತವಾಗಿ ನೆಲೆಸತೊಡಗಿದರು. ಸ್ವಾಭಾವಿಕವಾಗಿಯೇ ಫಲವತ್ತದೇಶಗಳು, ಅನುಕೂಲ ಹವಾಪರಿಸ್ಥಿತಿ ಇದ್ದ ವಲಯಗಳು, ನದಿ ಸರೋವರ ಹಾಗೂ ಸಮುದ್ರ ತೀರದ ಭೂಮಿಗಳು ಈ ಜನರ ಆಯ್ಕೆಗಳಾದುವು. ಸಹಜವಾಗಿ ಕೃಷಿ ನಿವೇಶನಗಳು ಬೆಳೆದು ಕೃಷ್ಯಾಧಾರಿತ ಚಟುವಟಿಕೆಗಳಿಗೆ ಪ್ರಾಧಾನ್ಯ ಲಭಿಸಿತು. ಭಾರತ, ಮೆಸೊಪೊಟೇಮಿಯ, ಈಜಿಪ್ಟ್, ಚೀನ ಮುಂತಾದ ಪ್ರಾಚೀನ ನಾಗರಿಕತೆಗಳು ಕೃಷ್ಯಾಧಾರಿತವಾದವು. ಹೀಗೆ ಪ್ರಪಂಚ ಮೂಲತಃ ಕೃಷ್ಯಾಧಾರಿತವಾಗಿದ್ದರೂ ಯಂತ್ರೋದ್ಯಮಗಳು ರಂಗಪ್ರವೇಶಿಸಿದಂದಿನಿಂದ ಪರಿಸ್ಥಿತಿ ಸಂಕೀರ್ಣಗೊಳ್ಳಲಾರಂಭಿಸಿತು. ಬೆಳೆಯುತ್ತಿದ್ದ ಜನಸಂಖ್ಯೆ, ಕೈಗಾರಿಕಾ ಕ್ರಾಂತಿಯಿಂದ ಸಿದ್ಧಿಸಿದ ಹೊಸ ಆಯಾಮ, ಆಳರಸರ ಸಾಮ್ರಾಜ್ಯದಾಹ, ಸಾರಿಗೆ ಸಂಪರ್ಕಗಳ ವಿಕಾಸ ಮತ್ತು ಪ್ರಚಾರ ಇವೇ ಮುಂತಾದ ನೂತನಯುಗದ ಕೊಡುಗೆಗಳ ಫಲವಾಗಿ ಕೃಷಿಗೆ ಮೊದಲಿನ ಅವಧಾರಣೆ ತಪ್ಪಿ ಹೋಯಿತು. ಕೃಷಿಯನ್ನು ಸಹ ಒಂದು ಕೈಗಾರಿಕೆ ಎಂದು ಪರಿಗಣಿಸಿ ಅದನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ವಿಜ್ಞಾನಲಬ್ಧ ಸಿದ್ಧಿಗಳನ್ನು ಅದಕ್ಕೆ ಅನ್ವಯಿಸಿ ಹೆಚ್ಚಿನ ಫಲಿತಾಂಶಗಳನ್ನು ಪಡೆಯುವ ಪ್ರವೃತ್ತಿ ತಲೆದೋರಿತು.

**ಹೊಸ ಒಲವುಗಳು:** ಪ್ರಪಂಚದ ಜನಸಂಖ್ಯೆ ವರ್ಷವೊಂದಕ್ಕೆ ಸುಮಾರು ಶೇ. 2ರಷ್ಟು ಹೆಚ್ಚುತ್ತಿದೆ. ಇದರಿಂದ ಆಹಾರದ ಬೇಡಿಕೆ ಒಂದು ಕಡೆ ಹೆಚ್ಚುತ್ತಿದ್ದರೆ ಆಹಾರ ಉತ್ಪಾದನೆಗೆ ಬೇಕಾದ ನೆಲ ಸಂಪತ್ತು ಇನ್ನೊಂದು ಕಡೆ ಕುಗ್ಗುತ್ತಿದೆ. ಈ ಉಭಯಸಂಕಷ್ಟವನ್ನು



ಚಿತ್ರ 4 ರಾಗಿ ಮೆದೆ

ಸಮರ್ಥವಾಗಿ ಎದುರಿಸಲು ಹೊಸ ದಾರಿಗಳನ್ನು ಮಾನವ ಕಂಡುಕೊಂಡಿದ್ದಾನೆ–ವಿಸ್ತಾರಕೃಷಿ, ತೀವ್ರಕೃಷಿ, ಬೆಳೆಗಳ ಆವರ್ತನೆ, ಬಿತ್ತನೆಯ ಬೀಜಗಳ ತಳಿ ಅಭಿವೃದ್ಧಿ, ಸಂಕರ ಬೀಜಗಳ

ಬಳಕೆ, ನೀರಿನ ನಿಯಂತ್ರಣ, ಮಣ್ಣಿನ ಪರೀಕ್ಷೆ ಮತ್ತು ಗುಣನಿರ್ಧಾರ, ಕೃತಕ ಗೊಬ್ಬರಗಳ ಸಾರ್ವತ್ರಿಕ ಉಪಯೋಗ, ಯಂತ್ರಗಳ ನೆರವು. ಕೀಟನಾಶಕಗಳ ಬಳಕೆ, ಹವೆಯ ನಿಯಂತ್ರಣ ಇವೇ ಮುಂತಾದವು ಕೃಷಿವಿಜ್ಞಾನದಲ್ಲಿ ಮಾನವ ತೋರಿಸುತ್ತಿರುವ ಈಚಿನ

ಚಿತ್ರ 5 ಬತ್ತದ ಕುಯ್ಲಿನಲ್ಲಿ ನಿರತರಾದ ಹೆಂಗಸರು

ಒಲವುಗಳು. ಈಗ ಕೃಷಿ ಎಂಬುದು ಒಂದು ಸುಸಂಘಟಿತ ಉದ್ಯಮ. ಯಾರೋ ಕೆಲವರು ವಿರಾಮವಾಗಿ ನಡೆಸುವ ಹವ್ಯಾಸವಲ್ಲ. ನಿಸರ್ಗ ತಾನೇ ತಾನಾಗಿ ಕೊಡುವ ಫಲಗಳು ಇಂದು ಸಾಲವು, ನಿಸರ್ಗ, ಮನುಷ್ಯಪ್ರಯತ್ನ, ವಿಜ್ಞಾನದ ನೆರವು ಹೀಗೆ ಮೂರು ಘಟಕಗಳ ಸಂಯುಕ್ತ ಫಲ ಇಂದಿನ ಕೃಷಿ. ಉದ್ದೇಶ ವೆಚ್ಚದಲ್ಲಿ ಮಿತವ್ಯಯ ಉತ್ಪಾದನೆಯಲ್ಲಿ ಗರಿಷ್ಠ ಸಿದ್ಧಿ.

**ಸಲಕರಣೆಗಳು:** ಎಂದಿನಿಂದಲೂ ಪಳಗಿಸಿದ ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕೋಣ, ಕುದುರೆ ಮುಂತಾದುವು ಕೃಷಿಕನ ನಿಕಟ ಒಡನಾಡಿಗಳಾಗಿ ಬಂದಿವೆ. ಕೋಳಿ, ಹಂದಿ, ನಾಯಿ, ಆಡು, ಕುರಿ ಮುಂತಾದ ಇತರ ಸಾಕುಪ್ರಾಣಿಗಳು ಒಂದಲ್ಲ ಒಂದು ರೀತಿಯಲ್ಲಿ ಕೃಷಿಪ್ರಪಂಚದಲ್ಲಿ ದೃಢ ಅಸ್ತಿತ್ವ ಪಡೆದಿವೆ. ಇವೆಲ್ಲವೂ ಸೇರಿ ಕೃಷಿ ಅರ್ಥಶಾಸ್ತ್ರ ಒಂದು ಸಂಗತ ಚಿತ್ರವಾಗುತ್ತದೆ. ಈ ಪ್ರಾಣಿಗಳು ಕೃಷಿಕನ ಜೀವಂತ ಸಲಕರಣೆಗಳಾದರೆ ಬಡಿಗೆ, ಕೋಲಿನಿಂದ ತೊಡಗಿ ಕುಕ್ಕೆ, ನೇಗಿಲು, ತಟ್ಟೆ, ಏತ, ಚಕ್ರ, ಗಾಡಿಗಳ ಮೂಲಕ ಇಂದಿನ ಸ್ವಯಂಚಾಲಿತ ಯಂತ್ರಗಳವರೆಗಿನ ಸಮಸ್ತ ಸಲಕರಣೆಗಳೂ ಕೃಷಿಕನ ಅನಿವಾರ್ಯ ಒಡನಾಡಿಗಳು. ಏತ ಕಟ್ಟೆಗಳಿಂದ ಆರಂಭವಾದ ನೀರಾವರಿ ತಂತ್ರ ಇಂದಿನ ನೀರಾವರಿಯ ಬೃಹದ್ಯೋಜನೆಗಳಲ್ಲಿ ವಿಕಾಸಗೊಂಡಿದೆ.

ಚಿತ್ರ 6

**ಸಾಗುವಳಿ ಪದ್ಧತಿಗಳು :** ಪ್ರಥಮ ವ್ಯವಸಾಯಗಾರರು ನೈಸರ್ಗಿಕ ಪದ್ಧತಿಯನ್ನು ಅನುಸರಿಸಿದರು; ಎಂದರೆ ಬಿತ್ತುವುದು ಮತ್ತು ಬೆಳೆ ಕೊಯ್ಯುವುದು, ಬೆಳೆಯ ಇಳುವರಿ ಕಡಿಮೆ ಆದಾಗ ಹಳೆ ನೆಲವನ್ನು ಪಾಳುಬಿಟ್ಟು ಹೊಸ ಹಸುರುಗಳನ್ನು ಅರಸುತ್ತ ಹೋಗುವುದು. ಜಂಗಮ ಜನಸಂಖ್ಯೆಗೆ ಇದೇನೋ ಸರಿಹೊಂದಿತು. ಆದರೆ ಸ್ಥಾವರ ಜನಸಂಖ್ಯೆ ಹೀಗೆ ಮಾಡುವಂತಿರಲಿಲ್ಲ. ತಮ್ಮ ನೆಲೆಯ ವಲಯದಲ್ಲೇ ಒಂದಷ್ಟು ಭೂಮಿಯನ್ನು ಕ್ರಮಾನುಗತವಾಗಿ ಪಡ ಬೀಳಿಸಲು ಆರಂಭಿಸಿದರು. ಇಂಥ ಭೂಮಿ ಪುನರಪಿ ಕ್ರಮೇಣ ತನ್ನ ಫಲವಂತಿಕೆಯನ್ನು ಪಡೆಯುವವರೆಗೆ ಅದರ ಮೇಲೆ ಕೃಷಿ ಮಾಡುತ್ತಿರಲಿಲ್ಲ. ಪಡಬೀಳಿಸುವ ಪದ್ಧತಿ ಪ್ರ.ಶ.ಪೂ. 2,000 ವರ್ಷಗಳಷ್ಟು ಪ್ರಾಚೀನದಲ್ಲೇ ರೂಢಿಯಲ್ಲಿತ್ತು. ಇದೇ ವೇಳೆಗೆ ಬೂದಿ, ದನದಗೊಬ್ಬರ, ಸೊಪ್ಪು ಸೊದೆ ಮುಂತಾದವನ್ನು ಉಳುಮೆಯ ನೆಲಕ್ಕೆ ಯುಕ್ತ ಕಾಲಗಳಲ್ಲಿ ಯುಕ್ತ ಪ್ರಮಾಣಗಳಲ್ಲಿ ಸೇರಿಸಿ ಅದರ ಫಲವಂತಿಕೆಯನ್ನು ವರ್ಧಿಸುವ ಕ್ರಮವೂ ರೂಢಿಗೆ ಬಂದಿತ್ತು. ಮಧ್ಯಯುಗದ (ಸುಮಾರು 10ನೆಯ ಶತಮಾನ) ಇಂಗ್ಲೆಂಡಿನಲ್ಲಿ ಪ್ರಚಲಿತವಾಗಿದ್ದ ಎರಡು–ಮತ್ತು–ಮೂರು ಕ್ಷೇತ್ರ ಸಾಗುವಳಿಯನ್ನು ಇಲ್ಲಿ ಹೆಸರಿಸಬೇಕು. ಆ ಕಾಲದ ಇಂಗ್ಲೆಂಡಿನ ಜಹಗೀರುಗಳಲ್ಲಿಯ ಜಹಗೀರುದಾರರ ಮತ್ತು ಹಳ್ಳಿಗರ ಭೂಮಿಗಳನ್ನು ಒಟ್ಟಾಗಿ ಸೇರಿಸಿ ತೋಟ, ಸಾಗುವಳಿ ಪ್ರದೇಶ, ಹುಲ್ಲುಗಾವಲು, ಬಂಜರು ನೆಲ ಎಂಬುದಾಗಿ ವಿಂಗಡಿಸಿದ್ದರು. ಸಾಗುವಳಿ ಕ್ಷೇತ್ರವನ್ನು ಎರಡು ಅಥವಾ ಮೂರು ದೊಡ್ಡ ಹೊಲಗಳಾಗಿ ವಿಭಾಗಿಸಿ ಇಂಥ ಒಂದೊಂದು ಹೊಲವನ್ನು ಒಂದು ಎಕರೆ ಅಥವಾ ಕಡಿಮೆ ವಿಸ್ತೀರ್ಣದ ಪಟ್ಟಗಳಾಗಿ ವಿಭಾಗಿಸಿದ್ದರು. ಒಬ್ಬೊಬ್ಬ ರೈತ ಒಂದೊಂದು ಪಟ್ಟವನ್ನು ಸಾಗುವಳಿ ಮಾಡುತ್ತಿದ್ದ. ಮೂರು–ಕ್ಷೇತ್ರ ಸಾಗುವಳಿ ಪದ್ಧತಿಯಲ್ಲಿ ಒಂದು ಹೊಲವನ್ನು ಪಡಬಿಟ್ಟರೆ ಒಂದರಲ್ಲಿ ಗೋದಿ ಅಥವಾ ರೈ ಧಾನ್ಯವನ್ನು ಬೆಳೆಸುತ್ತಿದ್ದರು. ಮತ್ತು ಇನ್ನೊಂದರಲ್ಲಿ ಬಾರ್ಲಿ ಓಟ್ ಧಾನ್ಯ ಬೆಳೆಗಳನ್ನು ಬೆಳೆಸುತ್ತಿದ್ದರು. ಎರಡು–ಕ್ಷೇತ್ರ ಸಾಗುವಳಿ ಪದ್ಧತಿಯಲ್ಲಿ ಅರ್ಧದಷ್ಟು ಭೂಮಿಯನ್ನು ಪಡಬಿಟ್ಟು ಉಳಿದ ಅರ್ಧದಲ್ಲಿ ಚಳಿಗಾಲದ ಮತ್ತು ವಸಂತ ಋತುವಿನ ಧಾನ್ಯಗಳನ್ನು ಬೆಳೆಸುತ್ತಿದ್ದರು. ಎರಡು–ಕ್ಷೇತ್ರದ ಪದ್ಧತಿಗಿಂತ ಶೇ. 50 ಹೆಚ್ಚು ಇಳುವರಿ ಮೂರು–ಕ್ಷೇತ್ರದ ಸಾಗುವಳಿ ಪದ್ಧತಿಯಲ್ಲಿ ದೊರೆಯುತ್ತಿತ್ತು. ಪಡ ಬಿಡುವ ಪದ್ಧತಿ ಬೆಳೆಗಳ ಆವರ್ತನೆಗೆ ಅವಕಾಶ ಒದಗಿಸುತ್ತಿತ್ತು. ನೈಟ್ರೋಜನ್ನನ್ನು ನೆಲದಲ್ಲಿ ಸೆರೆ ಹಿಡಿದಿಡುವ ದ್ವಿದಳ ಧಾನ್ಯಗಳನ್ನು ಮೊದಲು ಬೆಳೆಸಿ ತರುವಾಯ ಅದೇ ಹೊಲದಲ್ಲಿ ತೃಣ ಧಾನ್ಯಗಳನ್ನು(ಮಿಲ್ಲೆಟ್ಸ್) ಬೆಳೆಸಿ ಹೆಚ್ಚು ಇಳುವರಿಯನ್ನು ಪಡೆಯುತ್ತಿದ್ದರು.

**ಬೇಸಾಯದ ಸಮಸ್ಯೆಗಳು:** ಭಾರತದಲ್ಲಿ ಶೇ.75ರಷ್ಟು ಮಂದಿ ಬೇಸಾಯವನ್ನು ಜೀವನ ವೃತ್ತಿಯಾಗಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಹವಾಮಾನದ ಪ್ರಕಾರ 10 ವಲಯಗಳಿದ್ದು ಶೇ.65ರಷ್ಟು ಮಂದಿ ವ್ಯವಸಾಯವನ್ನೇ ನಂಬಿದ್ದಾರೆ. ಈ ಜನರಿಗೆ ತಮ್ಮ ನೆಲದ ಮೇಲಿರುವ ಪ್ರೇಮ ಮತ್ತು ಒಡನಾಟ ಮನುಷ್ಯಜನಾಂಗದಷ್ಟೇ ಪ್ರಾಚೀನವಾದದ್ದು. ಆದ್ದರಿಂದ ಬೇಸಾಯಕ್ಕೆ ಸಂಬಂಧಿಸಿದ ಯಾವ ಸುಧಾರಣೆಯೇ ಆಗಲಿ ಬೇಸಾಯವನ್ನೇ ಅವಲಂಬಿಸಿರುವ ಜನವರ್ಗದ ಹಿತವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಜಾರಿಗೆ ತರಬೇಕು. ಕೈಗಾರಿಕೆಗಳ ಕಾರ್ಮಿಕರು ಸುಸಂಘಟಿತರಾಗಿರುವುದರಿಂದ ಅವರ ಯೋಗಕ್ಷೇಮವನ್ನು ಆಡಳಿತೆಯಾಗಲೀ ಸರ್ಕಾರವಾಗಲೀ ಕಡೆಗಣಿಸಿ ಸುಧಾರಣೆಗಳನ್ನು ತರುವುದು ಸಾಧ್ಯವಾಗದು.

ಚಿತ್ರ 7 ನೇಗಿಲನ್ನು ಹೊತ್ತು ಉಳಮೆಗೆ ಸಿದ್ಧವಾಗಿರುವ ಎತ್ತುಗಳು

ಬೇಸಾಯಗಾರರ ಪರಿಸ್ಥಿತಿ ಹೀಗಲ್ಲ. ದೇಶವಿಡೀ ಹರಡಿಹಂಚಿಹೋಗಿರುವ ಇವರ ಅಭಿವೃದ್ಧಿಯ ಕಡೆಗೆ ಸರ್ಕಾರ ಅಧಿಕ ಲಕ್ಷ್ಯಕೊಡಬೇಕು. ಇದು ಆಡಳಿತೆಯ ಸಮಸ್ಯೆಯಾದರೆ ಬೇಸಾಯದ ಇತರ ಸಮಸ್ಯೆಗಳು ನಿಸರ್ಗಜನ್ಯವಾದವು. ಅತಿವೃಷ್ಟಿ, ಅನಾವೃಷ್ಟಿ, ನೆರೆ ಹಾವಳಿ, ಕೀಟಗಳ ಪಿಡುಗು, ಸಸ್ಯವ್ಯಾಧಿಗಳು, ಬೆಂಕಿ, ಹವೆ, ಇತ್ಯಾದಿ. ವೈಜ್ಞಾನಿಕ ವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದರಿಂದ ನೈಸರ್ಗಿಕ ಸಮಸ್ಯೆಗಳಲ್ಲಿ ಹೆಚ್ಚಿನವನ್ನು ಪರಿಹರಿಸಬಹುದು ಮಾತ್ರವಲ್ಲ, ಅತಿವೃಷ್ಟಿ, ನೆರೆಹಾವಳಿ ಮೊದಲಾದವನ್ನು ಯುಕ್ತ

ಪೂರ್ವಯೋಜನೆಗಳ ನೆರವಿನಿಂದ ಪ್ರಯೋಜನಕಾರಿಗಳಾಗಿ ಸಹ ಮಾಡಬಹುದು. ಇದು ಹೇಗೂ ಇರಲಿ, ಬೇಸಾಯದ ಪ್ರಧಾನ ಅವಳಿ ಸಮಸ್ಯೆಗಳೆಂದರೆ ಹವೆಯ ಮುನ್ಸೂಚಿಸಲಾಗದ ವರ್ತನೆ ಮತ್ತು ಬೇಸಾಯಗಾರರ ಕನಿಷ್ಠ ಜೀವನ ಮಟ್ಟ, ಇವನ್ನು ಪರಿಹರಿಸಲು ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಬೇರೆ ಬೇರೆ ಯೋಜನೆಗಳಿವೆ. ಕೃಷಿಯ ಇನ್ನೊಂದು ಸಮಸ್ಯೆ ಭೂಸಂರಕ್ಷಣೆ. ಜಾನುವಾರುಗಳನ್ನು ಮಿತಿಮೀರಿ ಬೆಳೆಸಿಕೊಂಡು ಅವುಗಳ ಉಪಯೋಗಾರ್ಥ ಸಾಗುವಳಿ ಭೂಮಿಯ ಬಳಕೆ, ಅಶಾಸ್ತ್ರೀಯ ವಿಧಾನಗಳಿಂದ ಕೃಷಿ ಮಾಡಿ ನೆಲದ ಸಾರಗುಂದಿಸುವಿಕೆ, ಕಾಡುಗಳ ಅವ್ಯಾಹತ ಸೂರೆ, ಪಟ್ಟಣಗಳ

ಚಿತ್ರ 8 ಹುಲುಸಾಗಿ ಬೆಳೆದಿರುವ ಜೋಳದ ಒಂದು ನೋಟ

ಅತಿವೃದ್ಧಿ, ನೀರಿನ ಪ್ರವಾಹದ ಮೇಲೆ ನಿಯಂತ್ರಣವಿಲ್ಲದೇ ಇಳಿಜಾರು ಪ್ರದೇಶಗಳಲ್ಲಿಯ ಸವಕಳಿ ಇವೇ ಮುಂತಾದವು ಮಿತಿಯಲ್ಲಿರುವ ಕೃಷಿ ಭೂಮಿಯನ್ನು ಸಾರರಹಿತವನ್ನಾಗಿಸುತ್ತವೆ. ವ್ಯವಸಾಯ ಸುಧಾರಣೆಯ ಎಲ್ಲ ಯೋಜನಗೆಳೂ ಇವೆಲ್ಲ ಸಮಸ್ಯೆಗಳನ್ನೂ ಅವುಗಳ ತೀವ್ರ ಪರಿಣಾಮಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. (ಕೆ.ಸಿ.ಎನ್.)

**ಕೃಷಿ ಅಂಕಿ ಅಂಶಗಳು :** ಕೃಷಿ ಮತ್ತು ಅದರ ಘಟಕ ಉದ್ಯಮಗಳನ್ನು ಕುರಿತಂತೆ ಅಂಕಿ ಅಂಶಗಳ ವೈಜ್ಞಾನಿಕ ಸಂಗ್ರಹ, ಕ್ರಮಬದ್ಧ ಸಂಸ್ಕರಣೆ ಹಾಗೂ ತನ್ಮೂಲಕ ಯುಕ್ತ ತೀರ್ಮಾನ ಪಡೆಯುವಿಕೆ ಇವುಗಳನ್ನು ಕುರಿತು ಈ ಲೇಖನದಲ್ಲಿ ವಿವರಿಸಿದೆ. ಪ್ರಾಚೀನ ಭಾರತದಲ್ಲಿ ಇಂಥ ಒಂದು ಕ್ರಮ ಪ್ರಚಲಿತವಾಗಿತ್ತು ಎನ್ನುವುದಕ್ಕೆ ಮುಂದಿನ ಉದ್ಧೃತ ವಾಕ್ಯಗಳು ಸಾಕ್ಷಿ. ಗೋಪ ಅಥವಾ ಹಳ್ಳಿಯ ಶ್ಯಾನುಭೋಗನ ಕರ್ತವ್ಯವನ್ನು ಅಲ್ಲಿ ಹೀಗೆ ನಿರೂಪಿಸಿದೆ. "ಹಳ್ಳಿಗಳಿಗೆ ಮೇರೆಗಳನ್ನು ಏರ್ಪಡಿಸುವುದು, ಕೃಷಿಮಾಡಿದ ಮತ್ತು ಮಾಡದಿರುವ ಭೂಮಿಯ ನಿವೇಶನಗಳು, ಸಮತಟ್ಟುಗಳು, ತರಿ ಜಮೀನುಗಳು, ಹಣ್ಣಿನ ತೋಟಗಳು, ತರಕಾರಿ ತೋಟಗಳು, ಪೊದೆಗಳು, ಬೇಲಿಗಳು, ಕಾಡುಗಳು, ಯಜ್ಞವೇದಿಗಳು, ದೇವಸ್ಥಾನಗಳು, ನೀರಾವರಿ ಆಸರೆಗಳು, ಶ್ಮಶಾನಗಳು, ಧರ್ಮಸತ್ರಗಳು, ಅರವಟ್ಟಿಗೆಗಳು, ಯಾತ್ರಾಸ್ಥಳಗಳು, ಹುಲ್ಲುಗಾವಲುಗಳು ಮತ್ತು ರಸ್ತೆಗಳು ಎಂದು ಎಣಿಕೆ ಮಾಡಿ ಮತ್ತು ಅದರಿಂದ ನಾನಾ ಹಳ್ಳಿಗಳಲ್ಲಿರುವ ಹೊಲಗಳ, ಕಾಡುಗಳ ಮತ್ತು ರಸ್ತೆಗಳ ಮೇರೆಗಳನ್ನು ನಿಶ್ಚಯಿಸುವುದು; ಅವನು ಕಾಣಿಕೆ, ಮಾರಾಟ, ಧರ್ಮ ಮತ್ತು ಹೊಲಗಳನ್ನು ಕುರಿತು ತೆರಿಗೆಯ ಮಾಫಿಗಳನ್ನು ದಾಖಲು ಮಾಡುವುದು ಮತ್ತು ತೆರಿಗೆ ಕೊಡುವ ಮತ್ತು ತೆರಿಗೆಯಿಂದ ವಿನಾಯಿತಿ ಪಡೆದ ಮನೆಗಳನ್ನು ಎಣಿಕೆ ಮಾಡಿ ಅವನು ಪ್ರತಿಯೊಂದು ಹಳ್ಳಿಯಲ್ಲೂ ವಾಸಿಸುವ ನಾಲ್ಕು ವರ್ಗದ ಜನರ ಒಟ್ಟು ಸಂಖ್ಯೆಯನ್ನು ದಾಖಲುಮಾಡುವುದಲ್ಲದೆ ಕೃಷಿಗಾರರ ನಿಖರವಾದ ಸಂಖ್ಯೆ, ಗೋವಳರು, ವ್ಯಾಪಾರಿಗಳು, ಕೈಕಸಬಿನವರು, ಕೆಲಸಗಾರರು ಆಳುಗಳು ಮತ್ತು ದ್ವಿಪದಿ ಮತ್ತು ಚತುಷ್ಪಾದಿ ಪ್ರಾಣಿಗಳು ಇವುಗಳ ಲೆಕ್ಕವನ್ನಿಟ್ಟು ಜೊತೆಗೆ ಪ್ರತಿಯೊಂದು ಮನೆಯಿಂದ ಸಂಗ್ರಹಿಸಬಹುದಾದ ದಂಡಗಳು, ಸುಂಕ, ಶ್ರಮದಾನ, ಚಿನ್ನದ ಪ್ರಮಾಣಗಳನ್ನು ನಿಶ್ಚಯಿಸುವುದು." ('ಕೌಟಿಲ್ಯನ ಅರ್ಥಶಾಸ್ತ್ರ' ಅನುವಾದ, ಆರ್. ಶಾಮಾಶಾಸ್ತ್ರೀ).

**ಬೇಸಾಯದ ಅಂಕಿ ಅಂಶಗಳ ಪ್ರಾಮುಖ್ಯ :** ಬೇಸಾಯ ಮತ್ತು ಜಾನುವಾರುಗಳು ಇವುಗಳಿಗೆ ಸಂಬಂಧಿಸಿದ ಅಂಕಿ ಅಂಶಗಳ ಸಂಗ್ರಹ ಮತ್ತು ಸಂಸ್ಕರಣೆಗೆ ಈಚೆಗೆ ಬಹಳ ಪ್ರಾಮುಖ್ಯತೆ ಬಂದಿದೆ. ಅಂಕಿ ಅಂಶಗಳ ವಿವರ, ಮುಖ್ಯವಾಗಿ ಕೃಷಿಗೆ ಯೋಗ್ಯವಾದ ಜಮೀನು. ವಿವಿಧ ಉದ್ದೇಶಗಳಿಗೆ ಉಪಯೋಗಿಸಲಾಗುವ ಭೂಮಿ, ಬೆಳೆದ ಪೈರುಗಳ ರಖಂ ಮತ್ತು ಅವುಗಳ ಪರಿಮಾಣ ಇವುಗಳನ್ನು ಒಳಗೊಂಡಿರುತ್ತದೆ. ಮನುಷ್ಯ ಜೀವಿಸಲು ಅವನು ತೊಡಗಿರುವ ವ್ಯಾಪಾರ, ಉದ್ಯಮಗಳನ್ನು ಅಭಿವೃದ್ಧಿಗೊಳಿಸಲು ಇವು ಆವಶ್ಯಕ. ಉತ್ಪತ್ತಿಯ ಅಂಕಿ ಅಂಶಗಳ ವಿವರ ಹಾಗೂ ಅವುಗಳ ಬೆಲೆಗಳು ಅಮೂಲ್ಯ ದಾಖಲೆಗಳು. ಸುಗ್ಗಿಕಾಲಕ್ಕೆ ಬಹಳ ಮುಂಚಿತವಾಗಿಯೇ ಬೆಳೆಯ ಮುನ್ನಂದಾಜನ್ನು ಮಾಡುವುದು ಅಗತ್ಯ. ಬೇಸಾಯದ ಅಂಕಿ ಅಂಶಗಳ ವಿವರಗಳಲ್ಲಿ ಬೆಲೆಯ ಮುನ್ನಂದಾಜು ಒಂದು ಮುಖ್ಯ ಸ್ಥಾನವನ್ನು ಪಡೆದಿರುವುದು. ಇದಲ್ಲದೆ ಪರಿಪೂರ್ಣವಾದ ಮತ್ತು ಖಾತರಿಯಾದ ಅಂಕಿ ಅಂಶಗಳ ಸಂಗ್ರಹಕಾರ್ಯ ಸರ್ಕಾರ ತಕ್ಕ ಆಡಳಿತ ಕ್ರಮವನ್ನು ಅಳವಡಿಸಿಕೊಳ್ಳಲು ಮುಖ್ಯವಾದ ಸಾಧನ, ಬೇಸಾಯದ ಉತ್ಪತ್ತಿಯ ನಿಖರವಾದ ಅಂದಾಜನ್ನು ದೇಶದ ಲೋಕಕಲ್ಯಾಣಕಾರೀ ಆಹಾರ ಧೋರಣೆಗೆ ತಳಹದಿಯೆಂದು ಪರಿಗಣಿಸಲಾಗುತ್ತದೆ. ಸಂಗ್ರಹಿಸಲ್ಪಟ್ಟ ಅಂಕಿ ಅಂಶಗಳ ವಿವರಗಳ ನಿಖರತ್ತ್ವ ಹಾಗೂ ಅವುಗಳ ಆಧಾರದ ಮೇಲೆ ಗಣಿಸಲಾಗುವ ಅಂದಾಜುಗಳು ಮತ್ತು ಅವುಗಳಿಂದ ಮಾಡಲಾಗುವ ನಿರ್ಣಯಗಳ ಸಮಂಜಸತೆ – ಇವು ಮಾಹಿತಿಗಳನ್ನು ಸಂಗ್ರಹಿಸಲು ಅಳವಡಿಸಿದ ಕ್ರಮಗಳ ಕ್ಷಮತೆ ಮತ್ತು ಅಂಕಿಅಂಶಗಳನ್ನು ಸಂಕಲನಮಾಡಿ ವಿಶ್ಲೇಷಿಸಲು ಬಳಸಿದ ಕ್ರಮಗಳನ್ನು ಅವಲಂಬಿಸಿವೆ.

**ಸಂಗ್ರಹಿಸಿದ ಮಾಹಿತಿಗಳ ಸ್ವರೂಪ :** ವ್ಯವಸಾಯದ ಅಂಕಿ ಅಂಶಗಳ ವಿವರಗಳನ್ನು ವರದಿಮಾಡುವ ಸಿಬ್ಬಂದಿಗಳು ಬಿತ್ತನೆಯಾದ ಭೂಮಿಯ ವಿಸ್ತೀರ್ಣ, ಎಕರೆಗೆ ಬೆಳೆಯ ಉತ್ಪತ್ತಿ ಇತ್ಯಾದಿಗಳೊಂದಿಗೆ ವ್ಯವಸಾಯದ ಹಲವಾರು ಮುಖಗಳ ವಿಷಯಗಳನ್ನು ಒದಗಿಸುವರು. ಇವನ್ನು ಹೊರಪಡಿಸುವ ಪ್ರಕಟಣೆಗಳು ಅಥವಾ ಸರ್ಕಾರದ ವರದಿಗಳಲ್ಲಿ ಕೊಡಲಾಗುವ ಹಲವು ವಿವರಗಳನ್ನು ಇಲ್ಲಿ ಸೂಚಿಸಬಹುದು.

**ಕ್ಷೇತ್ರದ ವರ್ಗೀಕರಣ :** ಭೂಮಿಯ ಉಪಯೋಗ ಅಥವಾ ಬಳಕೆಗೆ ಅನುಸಾರವಾಗಿ ದೇಶದ ಒಟ್ಟು ಕೃಷಿ ಪ್ರದೇಶವನ್ನು ರಾಜ್ಯವಾರು ವಿಂಗಡಣೆಮಾಡಿ ಅಗ್ರಿಕಲ್ಚರಲ್ ಸ್ಟ್ಯಾಟಿಸ್ಟಿಕ್ಸ್ ಆಫ್ ಇಂಡಿಯ ಎಂಬ ಪತ್ರದಲ್ಲಿ (ಭಾರತದ ಕೃಷಿ ಅಂಕಿ ಅಂಶಗಳ ವಿವರ) ಒದಗಿಸಲಾಗಿದೆ. ಈ ಅಂಕಿಗಳನ್ನು ಅನಂತರ ಸ್ಟ್ಯಾಟಿಸ್ಟಿಕಲ್ ಆಬ್‌ಸ್ಟ್ರ್ಯಾಕ್ಟ್ ಆಫ್ ಇಂಡಿಯನ್ ಯೂನಿಯನ್ ಎಂಬ ಪತ್ರದಲ್ಲಿ (ಇಂಡಿಯನ್ ಯೂನಿಯನ್ನಿನ ಅಂಕಿ ಅಂಶಗಳ ಗೋಷ್ವಾರೆ) ಎತ್ತಿ ಬರೆಯಲಾಗುತ್ತದೆ. ಕೆಳಗೆ ಕಾಣಿಸಿದಂತೆ ಬೇರೆ ಬೇರೆ ತರದ ಭೂಮಿಗಳ ಲೆಕ್ಕವನ್ನು ಸಂಗ್ರಹಿಸಲಾಗುತ್ತದೆ. 1. ಹಳ್ಳಿಗಳ ದಾಖಲೆ ಪತ್ರಗಳಿಗೆ ಅನುಸಾರವಾಗಿ ಅಂದರೆ ಹಂಗಾಮಿ ಗುತ್ತಿಗೆಯ ಪ್ರದೇಶಗಳಲ್ಲಿನ ಪಟವಾರಿ, ಶ್ಯಾನುಭೋಗ ಅಥವಾ ಕರಣಿಕರು ಅಥವಾ ಜಮಾಬಂದಿಯ ಅಧಿಕಾರಿಗಳ ದಾಖಲೆಗೆ ಅನುಸಾರವಾಗಿ ಮತ್ತು ಖಾಯಂ ಗುತ್ತಿಗೆ ಪ್ರದೇಶಗಳಲ್ಲಿ ಮೋಜಣಿಗೆ ಅನುಸಾರವಾಗಿ ವಿಸ್ತೀರ್ಣ. 2. ಸರ್ಕಾರಿ ಮತ್ತು ಖಾಸಗಿ ಕಾಡು ಪ್ರದೇಶಗಳು. 3. ಕೃಷಿ ಮಾಡಲು ದೊರೆಯದ ಪ್ರದೇಶಗಳು. ಉದಾಹರಣೆಗೆ ರಸ್ತೆಗಳು, ಹೊಂಡಗಳು, ಕೆರೆ ಕುಂಟೆಗಳು, ಸಣ್ಣ ಹೊಳೆಗಳು ಕಾಲುವೆಗಳು, ಕಟ್ಟಡಗಳು ಹುಲ್ಲುಗಾವಲುಗಳು ಇತ್ಯಾದಿ. ಈ ಬಾಬುಗಳಿಗಾಗಿ ಉತ್ತಾರ ಮಾಡುವ ಬಗ್ಗೆ ನಿಯಮಗಳು ಎಲ್ಲ ವರದಿಗಳಲ್ಲೂ ಒಂದೇ ಸಮವಾಗಿ ಇರುವುದಿಲ್ಲವೆಂಬುದನ್ನು ಗಮನಿಸಬೇಕು. ಇದರಿಂದಾಗಿ ಅವನ್ನು ಹೋಲಿಸಲು ಸಾಧ್ಯವಾಗುವುದಿಲ್ಲ, 4. ಪ್ರಚಲಿತ ಬೀಳುಬಿದ್ದ ಜಮೀನುಗಳು. ಇವು ಒಂದು ನಿಶ್ಚಿತ ಅವಧಿಯವರೆಗೆ ಬೀಳು ಬಿಟ್ಟ ಕೃಷಿಯೋಗ್ಯವಾದ ಪ್ರದೇಶಗಳನ್ನು ಸೂಚಿಸುವುವು. ರಾಜ್ಯದಿಂದ ರಾಜ್ಯಕ್ಕೆ ಈ ಅವಧಿ ಬದಲಾಯಿಸುವುದು. ಇದನ್ನು 2 ವರ್ಷಗಳಾಗಿ ಒಂದು ರಾಜ್ಯದಲ್ಲಿ ತೆಗೆದುಕೊಂಡರೆ ಮತ್ತೊಂದು ರಾಜ್ಯದಲ್ಲಿ 10 ವರ್ಷಗಳಾಗಿ ತೆಗೆದುಕೊಳ್ಳುತ್ತಿದ್ದರು. ಈ ವ್ಯತ್ಯಾಸಗಳಿಂದ ಭಾರತದಲ್ಲಿ ಒಂದು ವರ್ಷದಲ್ಲಿ ಒಟ್ಟಾರೆ ಕೃಷಿಗೊಳಗಾದ ಭೂಮಿಯ ಪರಿಮಾಣವನ್ನು ಕುರಿತು ಸಾಧಾರಣವಾದ ನಿರ್ಣಯವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಒಂದೇ ವಿಧವಾಗಿ ವರ್ಗೀಕರಣ ಮಾಡುವುದು ಒಳ್ಳೆಯದು ಮತ್ತು ಹಾಗೆ ಮಾಡುವುದರಿಂದ ಒಂದು ವರ್ಷದ ಸ್ಥಿತಿಯನ್ನು ಮತ್ತೊಂದು ವರ್ಷದ ಸ್ಥಿತಿಯೊಡನೆ ಅಥವಾ ಒಂದು ರಾಜ್ಯದ ಸ್ಥಿತಿಯನ್ನು ಮತ್ತೊಂದು ರಾಜ್ಯದ ಸ್ಥಿತಿಯೊಡನೆ ಹೋಲಿಸಲು ಸಾಧ್ಯವಾಗುವುದು. ಪ್ರಚಲಿತ ವರ್ಗೀಕರಣ ಕ್ರಮ ಹೀಗಿರುವುದು :

| | | |
|---|---|---|
| 1. ಚಾಲ್ತಿ ಬೀಳು ಜಮೀನುಗಳು | ... | 1 ವರ್ಷ ಬೀಳು ಬಿದ್ದ ಜಮೀನು |
| 2. ಇತರ ಬೀಳು ಜಮೀನುಗಳು | ... | 1 ವರ್ಷಕ್ಕಿಂತ ಹೆಚ್ಚು ಮತ್ತು 5 ವರ್ಷಗಳಿಗಿಂತ ಹೆಚ್ಚಲ್ಲದ್ದು |
| 3. ಕೃಷಿಯೋಗ್ಯವಾದ ಬಂಜರು | ... | 5 ವರ್ಷಗಳಿಗೆ ಮೇಲ್ಪಟ್ಟ ಬೀಳು ಜಮೀನುಗಳು |

ಇದರಿಂದ ರಾಜ್ಯವಾರು ಅಂಕಿಗಳನ್ನು ಸುಲಭವಾಗಿ ಹೋಲಿಸಲು ಸಾಧ್ಯವಾಗುವುದು ಮತ್ತು ಒಟ್ಟು ದೇಶದ ಸ್ಥಿತಿಗತಿಯ ನಿಖರವಾದ ಚಿತ್ರವನ್ನು ಪಡೆಯಲು ಸಹಾಯವಾಗುವುದು.

**ಕೃಷಿಯೋಗ್ಯವಾದ ಬಂಜರು ಭೂಮಿ :** ಇದು ಕೃಷಿಗೆ ಯೋಗ್ಯವಾದ ಆದರೆ ಬೇಸಾಯ ಮಾಡದೆ ಬಿಟ್ಟಿರುವ ಮತ್ತು ಐದು ವರ್ಷಗಳಿಗಿಂತ ಹೆಚ್ಚು ಬೀಳುಬಿಟ್ಟ ಭೂಮಿಗಳು, ತೋಪುಗಳನ್ನೊಳಗೊಂಡ ಪ್ರದೇಶ, ಬಿದಿರು ಮತ್ತು ಹುಲ್ಲು ಬೆಳೆವ ಪ್ರದೇಶಗಳನ್ನು (ಅರಣ್ಯದಲ್ಲಿ ಸೇರ್ಪಡೆಯಾಗದಿದ್ದಾಗ) ಸೂಚಿಸುವುದು.

**ವಿವಿಧ ಬೆಳೆಗಳ ಸಾಗುವಳಿ ಪ್ರದೇಶ :** ವಿವಿಧ ಬೆಳೆಗಳನ್ನು ಸಾಗುವಳಿ ಮಾಡುವ ಪ್ರದೇಶಗಗಳಿಗೆ ಸಂಬಂಧಪಟ್ಟ ಅಂಕಿಅಂಶಗಳ ವಿವರಗಳನ್ನು ಅಗ್ರಿಕಲ್ಚರಲ್ ಸ್ಟ್ಯಾಟಿಸ್ಟಿಕ್ಸ್ ಆಬ್‌ಸ್ಟ್ರ್ಯಾಕ್ಟ್ಸ್ ಆಫ್ ದಿ ಇಂಡಿಯನ್ ಯೂನಿಯನ್ ಎಂಬುದರಲ್ಲಿ ಮತ್ತೆ

ಕೊಡಲಾಗುವುದು. ಅಕ್ಕಿ, ಗೋಧಿ, ಬಾರ್ಲಿ, ಜೋಳ, ಬಾಜ್ರ, ಮೆಕ್ಕೆ ಜೋಳ, ರಾಗಿ, ಕಬ್ಬು, ಬೇಳೆಗಳು, ಕಡಲೆಕಾಯಿ, ಹತ್ತಿ, ಸೆಣಬು, ಹೊಗೆಸೊಪ್ಪು, ಅಗಸೆಬೀಜ, ಎಳ್ಳು, ರೇಪ್ ಎಣ್ಣೆಬೀಜ ಮತ್ತು ಸಾಸಿವೆಕಾಳು, ಹರಳು ಬೀಜ, ಕಾಫಿ, ಟೀ, ರಬ್ಬರ್, ಮೇವು ಹುಲ್ಲು, ಹಣ್ಣುಗಳು, ಗೆಡ್ಡೆ ಗೆಣಸುಗಳು, ತರಕಾರಿ ಮುಖ್ಯವಾದ ಬೆಳೆಗಳು. ಬಿತ್ತನೆ ವಿಸ್ತೀರ್ಣವನ್ನು ಲೆಕ್ಕ ಹಾಕುವಾಗ ಒಂದು ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬೆಳೆ ತೆಗೆಯುವ ಭೂಮಿಯನ್ನು ಒಂದೇ ಬಾರಿ ಎಣಿಕೆ ಮಾಡಲಾಗುತ್ತದೆ. ಆದರೆ ಪ್ರತಿಯೊಂದು ಬೆಳೆ ತೆಗೆಯುವ ಜಮೀನಿನ ವಿಸ್ತೀರ್ಣವನ್ನು ಲೆಕ್ಕಹಾಕುವಾಗ ಪ್ರತಿಸಲವೂ ಅಂಥ ವಿಸ್ತೀರ್ಣವನ್ನು ಆಯಾ ಬೆಳೆಗೆ ಅನುಸಾರವಾಗಿ ಒಂದಕ್ಕಿಂತ ಹೆಚ್ಚು ಸಲ ಲೆಕ್ಕಕ್ಕೆ ಸೇರಿಸಿಕೊಳ್ಳಲಾಗುವುದು.

**ನೀರಾವರಿ ಸಾಗುವಳಿ ಪ್ರದೇಶ :** 1. ಕಾಲುವೆಗಳು, 2. ಕೆರೆಗಳು, 3. ಬಾವಿಗಳು, 4. ಇತರ ಆಸರೆಗಳಿಂದ ಹಾಗೂ ವಿವಿಧ ನೀರಾವರಿ ಬೆಳೆಗಳ ಪೈರಾಗುವ ಜಮೀನಿನ ವಿಸ್ತೀರ್ಣಗಳ ರಾಜ್ಯವಾರು ವಿವರಗಳು. ಇವು ಎಸಿಮೇಟ್ಸ್ ಆಫ್ ಏರಿಯ ಅಂಡ್ ಯೀಲ್ಡ್ ಆಫ್ ಪ್ರಿನ್ಸಿಪಲ್ ಕ್ರಾಪ್ಸ್ ಇನ್ ಇಂಡಿಯ (ಭಾರತದ ಮುಖ್ಯ ಬೆಳೆಗಳ ಉತ್ಪತ್ತಿ ಮತ್ತು ವಿಸ್ತೀರ್ಣದ ಅಂದಾಜುಗಳು) ಎಂಬ ವಾರ್ಷಿಕ ಪ್ರಕಟಣೆಯಲ್ಲಿ ದೊರೆಯುತ್ತವೆ. ಈ ಅಂಕಿಗಳನ್ನು ಅಂಕಿಸಂಖ್ಯೆಗಳ ಗೋಷ್ವಾರೆಯಲ್ಲೂ ಸೇರಿಸಲಾಗುವುದು. ಇರಿಗೇಷನ್ ಇನ್ ಇಂಡಿಯ (ಭಾರತದಲ್ಲಿ ನೀರಾವರಿ) ಎಂಬ ವಾರ್ಷಿಕ ಪ್ರಕಟಣೆ ಇವನ್ನಲ್ಲದೆ ಸಂಬಂಧಪಟ್ಟ ಇತರ ಕೆಲವು ಮಾಹಿತಿಗಳನ್ನೂ ಒದಗಿಸುತ್ತದೆ. ಸರ್ಕಾರದ ಕಾಲುವೆಗಳ ಬಗ್ಗೆ ಅವಕ್ಕೆ ತಗಲಿರುವ ಬಂಡವಾಳ, ಸಂರಕ್ಷಣೆಯ ವೆಚ್ಚ, ಸಮಗ್ರ ಆದಾಯಗಳು, ಬೆಳೆಗಳ ಒಟ್ಟು ಉತ್ಪತ್ತಿ ನೀರಾವರಿ ಜಮೀನು ಮತ್ತು ನೀರಾವರಿ ಜಮೀನಿನ ಒಟ್ಟು ಉತ್ಪತ್ತಿ ಮುಂತಾದ ವಿವರಗಳು ಅದರಲ್ಲಿ ದೊರೆಯುವುವು.

**ಬೆಳೆಗಳ ಹುಟ್ಟುವಳಿ :** ಸಂಗ್ರಹಿಸಲಾಗುವ ಮಾಹಿತಿಗಳಲ್ಲಿ ಇದು ಅತ್ಯಂತ ಮುಖ್ಯವಾದ ಬಾಬ್ತು. ಉತ್ಪಾದನೆಯ ಅಂಕಿಗಳನ್ನು ಭಾರತದಲ್ಲಿ ಮುಖ್ಯ ಬೆಳೆಗಳ ಉತ್ಪತ್ತಿ ಮತ್ತು ವಿಸ್ತೀರ್ಣದ ಅಂದಾಜುಗಳು ಎಂಬ ಭಾಗದಲ್ಲಿ ಕೊಟ್ಟಿದೆ. ಪ್ರಧಾನ ಬೆಳೆಗಳು ಬೆಳೆಯುವ ಪ್ರದೇಶದ ಪಂಚವಾರ್ಷಿಕ ಸರಾಸರಿಯನ್ನು ಮತ್ತು ಉತ್ಪತ್ತಿ ಹಾಗೂ ಅದಕ್ಕೆ ಸಂಬಂಧಪಟ್ಟ ವಾರ್ಷಿಕ ಅಂಕಿಅಂಶಗಳನ್ನು ಈ ಭಾಗ ಕೊಡುವುದು. ಸರ್ಕಾರದ ವಾಣಿಜ್ಯ ವರ್ತಮಾನ ಮತ್ತು ಅಂಕಿ ಅಂಶಗಳ ಖಾತೆ ಅಕ್ಕಿ, ಗೋಧಿ, ಕಬ್ಬು, ಹತ್ತಿ, ಎಣ್ಣೆಬೀಜ ಇತ್ಯಾದಿ ಮುಖ್ಯ ಬೆಳೆಗಳಿಗೆ ಸ್ಥಳೀಯ ವಿವರಗಳ ಆಧಾರದ ಮೇಲೆ ಮತ್ತು ಪ್ರತಿವರ್ಷ ಪ್ರತಿಫಸಲಿನ ಕಾಲದ ಕೊನೆಯಲ್ಲಿ ಸುಗ್ಗಿಯ ಮೊದಲು ಮುಂದಾಜು ಅಥವಾ ಮುನ್ಸೂಚನೆಯ ವಿವರಗಳನ್ನು ಹೊರಡಿಸುವುದು. ಟೀ ಕಾಫಿ ಮತ್ತು ರಬ್ಬರ್‌ಗಳನ್ನು ಕುರಿತು ಖಾತೆ ವಿಶೇಷ ಪ್ರಕಟಣೆಗಳನ್ನು ಹೊರಡಿಸುವುದು. ಇದೇ ವಿವರಗಳನ್ನು ಭಾರತದಲ್ಲಿ ಮುಖ್ಯ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪತ್ತಿಯ ಅಂದಾಜುಗಳು ಎಂಬ ಪ್ರಕಟಣೆಯಲ್ಲಿ ನಕಲು ಮಾಡುತ್ತಾರೆ. ಸೆಣಬಿನ ಅಂಕಿಗಳನ್ನು ಪಶ್ಚಿಮ ಬಂಗಾಲದ ವ್ಯವಸಾಯದ ನಿರ್ದೇಶಕರು ಪ್ರಕಟಿಸುವ ಅಂತಿಮ ಮುನ್ಸೂಚನೆಯಿಂದ ಉದ್ಧರಿಸಿ ಬರೆಯುತ್ತಾರೆ. ಬೆಳೆಯ ಉತ್ಪತ್ತಿಯನ್ನು ಅಂದಾಜುಮಾಡಲು ಬಳಸುವ ಸೂತ್ರ ಹೀಗಿದೆ :

ಉತ್ಪತ್ತಿ = ವಿಸ್ತೀರ್ಣ × ಶಿಷ್ಟ ಪ್ರಸಾಮಾನ್ಯ ಉತ್ಪತ್ತಿ × ಸ್ಥಿತಿಗತಿಗುಣಾಂಕ

**ಭಾರತದಲ್ಲಿಯ ಪ್ರಧಾನ ಬೆಳೆಗಳ ಸರಾಸರಿ ಉತ್ಪತ್ತಿ :** ಫಸಲಿನ ಕಟಾವಿನ ಪ್ರಯೋಗಗಳ ಫಲಗಳಿಂದ ಎಕರೆಗೆ ಸರಾಸರಿ ಉತ್ಪತ್ತಿಯನ್ನು ಸಾಮಾನ್ಯವಾಗಿ ಪಡೆದು ವ್ಯವಸಾಯದ ನಿರ್ದೇಶಕರ ಸ್ವಂತ ತೀರ್ಮಾನಕ್ಕೆ ಅನುಸಾರವಾಗಿ ಅದನ್ನು ಸರಿಹೊಂದಿಸಲಾಗುವುದು. ಶಿಷ್ಟ ಫಲದ ಅಂಕಿಗಳನ್ನು ಭಾರತದಲ್ಲಿ ಪ್ರಧಾನ ಬೆಳೆಗಳ ಎಕರೆಗೆ ಸರಾಸರಿ ಉತ್ಪತ್ತಿಯ ಪಂಚವಾರ್ಷಿಕ ವರದಿಯಲ್ಲಿ ಪ್ರಕಟಿಸುತ್ತಾರೆ. ಇವು 5 ವರ್ಷಗಳವರೆಗೆ ಜಾರಿಯಲ್ಲಿರುತ್ತವೆ. ಭಾರತದ ಬೇಸಾಯದ ಅಂಕಿ ಅಂಶಗಳು ಎಂಬ ಭಾಗದಲ್ಲಿಯೂ ಈ ಅಂಕಿಗಳನ್ನು ಕೊಟ್ಟಿರುವರು.

**ಸುಗ್ಗಿಯ ಕಾಲದ ಧಾರಣೆವಾಸಿಗಳು :** ಜಿಲ್ಲೆಗಳ ಕೆಲವು ಮುಖ್ಯವಾದ ಬೆಳೆಗಳ ಸುಗ್ಗಿಯ ಕಾಲದ ಜಿಲ್ಲಾವಾರು ಧಾರಣೆವಾಸಿಗಳನ್ನು ವಾಣಿಜ್ಯ ವರ್ತಮಾನ ಮತ್ತು ಅಂಕಿಸಂಖ್ಯೆಗಳ ಖಾತೆಯವರು ಭಾರತದ ಬೇಸಾಯದ ಅಂಕಿ ಅಂಶಗಳು ಎಂಬುದರಲ್ಲಿ ಕೊಡಲಾಗಿದೆ. ಇಲ್ಲಿ ಸಹ ಅನುಸರಿಸಲಾಗುವ ಕ್ರಮಗಳು ಒಂದೇ ಸಮವಾಗಿಲ್ಲ. ಕೆಲವು ಜಿಲ್ಲೆಗಳು ಒಟ್ಟು ಮಾರಾಟ ದರವನ್ನು ಒದಗಿಸಿದರೆ ಮತ್ತೆ ಕೆಲವು ಸುಗ್ಗಿ ಕಾಲದಲ್ಲಿ ರೂಢಿಯಲ್ಲಿರುವ ಚಿಲ್ಲರೆ ದರವನ್ನು ಕೊಡುತ್ತವೆ. ಸುಗ್ಗಿಯ ದರದ ಅರ್ಥದಲ್ಲಿ ಹೀಗೆ ವ್ಯತ್ಯಾಸವಿದ್ದರೆ ಸಾಮ್ಯ ದೊರೆಯುವುದಿಲ್ಲ. ಒಂದು ಸುಗ್ಗಿಯ ಅವಧಿಯಲ್ಲಿ ಹಳ್ಳಿಯ ನಿವೇಶನದಲ್ಲಿ ಒಟ್ಟು ಮಾರಾಟಗಾರನಿಗೆ ಉತ್ಪಾದಕನಿಂದ ಕೊಡಲಾಗುವ ಸರಕಿನ ಬೆಲೆಯನ್ನು ಸುಗ್ಗಿಯ ಕಾಲದ ಧಾರಣೆ ಎಂದು ವ್ಯಾಖ್ಯಿಸಬಹುದು. ಆದ್ದರಿಂದ ಈ ಸಲಹೆಗೆ ಅನುಸಾರವಾಗಿ ಪ್ರತಿಯೊಂದು ವಾರದ ಯಾವುದಾದರೂ ನಿಶ್ಚಿತ ದಿನದಲ್ಲಿ ಹಳ್ಳಿಯ ನಿವೇಶನದ ಬಳಿ ಉತ್ಪಾದಕನಿಂದ ಒಟ್ಟು ಮಾರಾಟಗಾರರಿಗೆ ಮಾರಲಾಗುವ ಸರಕಿನ ಬೆಲೆಗಳನ್ನು ದಾಖಲು ಮಾಡಬೇಕು ಮತ್ತು ಸುಗ್ಗಿಯ ತರುವಾಯ ಸುಮಾರು 6 ವಾರಗಳಲ್ಲಿನ ಸರಾಸರಿಯನ್ನು ಸರಕಿನ ಸುಗ್ಗಿಯ ಬೆಲೆ ಎಂದು ತೆಗೆದುಕೊಳ್ಳಬೇಕು.

**ಟೀ. ಕಾಫಿ ಮತ್ತು ರಬ್ಬರುಗಳ ಅಂಕಿ ಅಂಶಗಳು :** ಟೀ, ಕಾಫಿ ಮತ್ತು ರಬ್ಬರುಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಾಣಿಜ್ಯ ವರ್ತಮಾನ ಮತ್ತು ಅಂಕಿ ಅಂಶಗಳ ಖಾತೆಯ ವಿಶೇಷ ಪ್ರಕಟಣೆಗಳಿಂದ ತಿಳಿಯಲಾಗುವುದು. ಇವು ಇಂಡಿಯನ್ ಟೀ ಸ್ಟ್ಯಾಟಿಸ್ಟಿಕ್ಸ್ (ಭಾರತದ ಟೀಯ ಅಂಕಿ ಅಂಶಗಳು), ಇಂಡಿಯನ್ ಕಾಫಿ ಸ್ಟ್ಯಾಟಿಸ್ಟಿಕ್ಸ್ (ಭಾರತದ ಕಾಫಿಯ ಅಂಕಿ ಅಂಶಗಳು) ಮತ್ತು ಇಂಡಿಯನ್ ರಬ್ಬರ್ ಸ್ಟ್ಯಾಟಿಸ್ಟಿಕ್ಸ್ (ಭಾರತದ ರಬ್ಬರಿನ ಅಂಕಿ ಅಂಶಗಳು). ಇವುಗಳ ಮೂಲಕ ಒದಗಿಸಲಾಗುವ ಮಾಹಿತಿಗಳು : 1. ಕೃಷಿ ಮಾಡಲಾದ ವಿಸ್ತೀರ್ಣ ಮತ್ತು ಹುಟ್ಟುವಳಿಯ ಪರಿಮಾಣ. 2. ತೋಟಗಳಲ್ಲಿ (ಕಾನುಗಳಲ್ಲಿ) ಶಾಶ್ವತವಾಗಿ ಮತ್ತು ತಾತ್ಕಾಲಿಕವಾಗಿ ನೇಮಿಸಲಾದ ಕೆಲಸಗಾರರ ಸರಾಸರಿ ಸಂಖ್ಯೆ. 3. ಕೆಲಸಗಾರರ ಸರಾಸರಿ ತಿಂಗಳ ಕೂಲಿ–ಗಂಡಸರಿಗೆ, ಹೆಂಗಸರಿಗೆ ಮತ್ತು ಮಕ್ಕಳಿಗೆ ಪ್ರತ್ಯೇಕವಾಗಿ. 4. ಸರಾಸರಿ ಬೆಲೆ–ಹರಾಜಿನಲ್ಲಿ. 5. ರಫ್ತು ಮತ್ತು ಆಮದುಗಳ ಅಂಕಿಗಳು.

**ಪಶುಗಳ ಅಥವಾ ಜಾನುವಾರುಗಳ ಅಂಕಿ ಅಂಶಗಳು :** ಜಾನುವಾರುಗಳ ಗಣತಿಯನ್ನೂ ಬೇಸಾಯದ ಮುಟ್ಟುಗಳ ಗಣತಿಯನ್ನೂ 5 ವರ್ಷಕ್ಕೊಮ್ಮೆ ಮಾಡಲಾಗುವುದು. ಆಹಾರ ಮತ್ತು ವ್ಯವಸಾಯದ ಮಂತ್ರಿಯ ಖಾತೆಗೆ ಸೇರಿದ ಆರ್ಥಿಕ ಮತ್ತು ಸಾಂಖ್ಯಿಕೀಯ ನಿರ್ದೇಶನಾಲಯದಲ್ಲಿ ಇವುಗಳನ್ನು ಕ್ರೋಡೀಕರಿಸಿ ಪ್ರಕಟಿಸಲಾಗುವುದು. ಕೆಳಗೆ ಕೊಟ್ಟಿರುವ ಶೀರ್ಷಿಕೆಗಳ ಕೆಳಗೆ ಮಾಹಿತಿಗಳನ್ನು ಸಾಮಾನ್ಯವಾಗಿ ಸಂಗ್ರಹಿಸುತ್ತಾರೆ :

**1. ದನಕರುಗಳ ಸಂಖ್ಯೆ :** ಗಂಡು, ಹೆಣ್ಣು ಮತ್ತು ಸಣ್ಣಕರು ಎಂದು ವರ್ಗೀಕರಣ ಮಾಡಲಾಗಿದೆ. 1 ತಳಿಯೆಬ್ಬಿಸಲು ಬೇಕಾದ ಪ್ರಾಣಿಗಳು, ಬೀಜದ ಹೋರಿಗಳು, 2 ಕೆಲಸಕ್ಕೆ ಒದಗುವ ಪ್ರಾಣಿಗಳು, 3 ಉಳಿದವುಗಳು–ಎಂದು ಪುನರ್ ವಿಭಾಗಿಸಲಾಗುತ್ತದೆ.

**2. ಕುರಿ ಮತ್ತು ಮೇಕೆಗಳ ಸಂಖ್ಯೆ**

**3. ಕುದುರೆಗಳು** ಮತ್ತು ಸಣ್ಣ ತಟ್ಟುಗಳ ಸಂಖ್ಯೆ ಇವನ್ನು ಗಂಡುಕುದುರೆಗಳು. ಹೆಣ್ಣುಕುದುರೆಗಳು, ಒಂದು ವರ್ಷ ವಯಸ್ಸಿನ ಒಳಗಿರುವ ಮರಿಗಳು ಮತ್ತು ಇತರ ಮರಿಗಳು ಎಂದು ಪುನಃ ವಿಂಗಡಿಸಲಾಗಿದೆ.

**4. ಕತ್ತೆಗಳು, ಹೇಸರಕತ್ತೆಗಳು ಮತ್ತು ಒಂಟೆಗಳ ಸಂಖ್ಯೆ.**

**5. ನೇಗಿಲು ಮತ್ತು ಗಾಡಿಗಳ** ಸಂಖ್ಯೆ ಇತ್ತೀಚೆಗೆ ಹಂದಿಗಳು ಮತ್ತು ಕೋಳಿಗಳ ಸಂಖ್ಯೆಯನ್ನೂ ಗಣತಿಯಲ್ಲಿ ಸೇರಿಸಲಾಗಿದೆ.

ಎಲ್ಲ ರಾಜ್ಯಗಳಲ್ಲಿಯೂ ಗಣತಿಯ ಕಾಲ, ವಿಧಾನ ಒಂದೇ ಆಗಿಲ್ಲದಿರುವುದು ಒಂದು ಕೊರತೆ. ಉದಾಹರಣೆಗೆ ಇತರ ರಾಜ್ಯಗಳಲ್ಲಿ 1961ನೆಯ ಇಸವಿಯ ಏಪ್ರಿಲ್ ತಿಂಗಳಲ್ಲಿ ಎಣಿಕೆ ನಡೆದುವು ; ಆದರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಅದೇ ಇಸವಿ ನವೆಂಬರಿನಲ್ಲಿ ಜಾನುವಾರು ಗಣತಿ ನಡೆಯಿತು. ಕೆಲವು ವೇಳೆ ದನಕರುಗಳ ಜಾತ್ರೆ ಮಧ್ಯ ಸಂಭವಿಸುವುದು. ಆಗ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಥವಾ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ದನ ಕರುಗಳು ವಲಸೆ ಹೋಗುವುವು. ಎಣಿಕೆಯ ವಿಧಾನದಲ್ಲಿ ಸಮಾನತೆ ತರುವುದರಿಂದ ಮತ್ತು ಎಲ್ಲ ರಾಜ್ಯಗಳಲ್ಲೂ ಏಕಕಾಲದಲ್ಲಿ ಗಣತಿಯನ್ನು ನಡೆಸುವುದರಿಂದ ಈ ನ್ಯೂನತೆಗಳನ್ನು ಸುಲಭವಾಗಿ ಪರಿಹರಿಸಬಹುದು. ಸರ್ಕಾರಿ ಆಕಳುವಾಡಿಗಳಿಂದ ಸಾರ್ವಜನಿಕರಿಗೆ ನೀಡಲಾದ ಆಕಳು, ಹೋರಿಗಳು, ಕೋಣಗಳು, ಎಮ್ಮೆಗಳು ಮತ್ತು ಕರುಗಳು–ಇವುಗಳ ಅಂಕಿ ಸಂಖ್ಯೆಗಳನ್ನು ಸಹ ಸಂಗ್ರಹಿಸಲಾಗುವುದು. ಇದರೊಂದಿಗೆ ಪಶುವೈದ್ಯ ಶಾಲೆಗಳು ಮತ್ತು ಚಿಕಿತ್ಸಾಲಯಗಳಿಗೆ ಸಂಬಂಧಪಟ್ಟ ಅಂಕಿಗಳು, ಚಿಕಿತ್ಸೆಗೊಳಗಾದ ಪ್ರಾಣಿಗಳ ಸಂಖ್ಯೆ ಮತ್ತು ಹಲವಾರು ಅಂಟು ರೋಗಗಳಿಂದ ಮೃತಪಟ್ಟ ದನಕರುಗಳ ಮರಣದಾಖಲೆಗಳು ಸಹ ದೊರೆಯುತ್ತವೆ. ದನಕರುಗಳು, ಕುರಿಗಳು ಮತ್ತು ಕುದುರೆಗಳು, ಕೋಳಿ ಮತ್ತು ಜೇನು ಸಾಕಣೆಗಳ ಪೋಷಣೆಯ ಅಭಿವೃದ್ಧಿಯಲ್ಲಿ ಸಾಧಿಸಿದ ಪ್ರಗತಿಯನ್ನು ತೋರಿಸುವ ಅಂಕಿ ಅಂಶಗಳನ್ನು ಸಹ ಸಂಗ್ರಹಿಸಲಾಗುತ್ತದೆ.

**ಎಕರೆಯ ಲೆಕ್ಕದ ಅಂಕಿ ಅಂಶಗಳು :** ರೈತವಾರಿ ಪ್ರದೇಶಗಳಲ್ಲಿ ವಿಸ್ತೀರ್ಣಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು (ಬೇಸಾಯದ ಇತರ ಅಂಕಿ ಅಂಶಗಳನ್ನು ಸಹ) ಹಳ್ಳಿಯ ಶಾನುಭೋಗರು ಒದಗಿಸಿಕೊಡುತ್ತಾರೆ. ಇವರು ತಮ್ಮ ಹಳ್ಳಿಯ ಹೊಲಗದ್ದೆಗಳಿಗೆ ಭೇಟಿಕೊಟ್ಟು ನೇರವಾಗಿ ಎಣಿಕೆಮಾಡಿ ಮಾಹಿತಿಗಳನ್ನು ಸಂಗ್ರಹಿಸುವರು. ಖಾಯಂ ಗುತ್ತಾ ಸ್ಥಳಗಳಲ್ಲಿ ಈ ಅಂಕಿ ಅಂಶಗಳ ವಿವರಗಳನ್ನು ಸಂಗ್ರಹಿಸಬಲ್ಲ ದ್ರವ್ಯಖಾತೆಯು ಹಳ್ಳಿಯ ಅಧಿಕಾರಿಗಳಿಗಿರುವುದಿಲ್ಲ. ಇನ್ನೂ ಕೆಲವು ರಾಜ್ಯಗಳಲ್ಲಿ ಅಳತೆಮಾಡದ ಮತ್ತು ಮೋಜಣಿಯಾಗದ ಪ್ರದೇಶಗಳಿವೆ. ಆ ಪ್ರದೇಶಗಳಲ್ಲಿನ ಹಲವಾರು ಬೆಳೆಗಳ ಎಕರೆವಾರು ಲೆಕ್ಕದ ಅಂದಾಜುಗಳು ಕೇವಲ ಊಹೆಗಳಲ್ಲದೆ ಮತ್ತೇನೂ ಅಲ್ಲ. ಭಾರತದಲ್ಲಿ ಬೇಸಾಯದ ಅಂಕಿ ಅಂಶಗಳ ಸಂಪೂರ್ಣ ಎಣಿಕೆಯಾಗುವ ಪ್ರದೇಶ ಮತ್ತು ಸಾಧಾರಣ

ಅಂದಾಜುಗಳುಳ್ಳ ಪ್ರದೇಶ ಇವುಗಳ ಅನುಪಾತ ಈ ರೀತಿ ಇದೆ (ಸಂಖ್ಯೆಗಳು ದಶಲಕ್ಷ ಎಕರೆಗಳನ್ನು ಸೂಚಿಸುತ್ತವೆ) : ಎಕರೆ ಪ್ರಕಾರ ಅಂಕಿ ಅಂಶಗಳ ವಿವರಗಳ ಬಗ್ಗೆ,

| | ಪೂರ್ಣ ಎಣಿಕೆ | ಅಂದಾಜು ಮಾಡಲಾದದ್ದು | ಒಟ್ಟು |
|---|---|---|---|
| ರೈತವಾರಿ ಪ್ರದೇಶಗಳು | 232 | 87 | 319 |
| ಖಾಯಂ ಗುತ್ತಾ ಪ್ರದೇಶಗಳು | – | 83 | 83 |
| (ಮಾಜಿ)ದೇಶೀಯ ಸಂಸ್ಥಾನಗಳು | 145 | 10 | 155 |
| **ಒಟ್ಟು** | **377** | **180** | **557** |

ಮುಂದಿನ ಅಂಶಗಳನ್ನು ಗಮನದಲ್ಲಿಡಬೇಕು : 1. ಪ್ರತಿಯೊಂದು ಬೆಳೆಯ ಕೆಳಗೆ ವರದಿಮಾಡಿರುವ ವಿಸ್ತೀರ್ಣ ಕೇವಲ ಬಿತ್ತನೆಯ ವಿಸ್ತೀರ್ಣವನ್ನು ಪ್ರತಿನಿಧಿಸುತ್ತಲ್ಲದೆ ಫಸಲು ಕಟಾವು ಮಾಡಿದ ವಿಸ್ತೀರ್ಣವನ್ನಲ್ಲ.

2. ಬೇಸಾಯದ ಅಂಕಿ ಅಂಶಗಳನ್ನು ಬೇಸಾಯವರ್ಷ ಅಂದರೆ ಜುಲೈಯಿಂದ ಜೂನ್‌ವರೆಗೆ ಕೊಟ್ಟರೆ ರಫ್ತು ಅಂಕಿಗಳನ್ನು ಅಥವಾ ಇಂಥ ಇತರ ಅಂಕಿ ಅಂಶಗಳನ್ನು ತಾರೀಖು ಪಟ್ಟಿ ವರ್ಷಕ್ಕೆ (ಜನವರಿಯಿಂದ ಡಿಸೆಂಬರ್‌ವರೆಗೆ) ಅಥವಾ ಹಣಕಾಸಿನ ವರ್ಷ ಅಂದರೆ ಏಪ್ರಿಲ್‌ನಿಂದ ಮಾರ್ಚ್‌ವರೆಗೆ ಕೊಟ್ಟಿರಬಹುದು. ಬೇಸಾಯದ ಅಂಕಿ ಅಂಶಗಳಿಗೂ ವ್ಯಾಪಾರದ ಅಂಕಿಗಳಿಗೂ ಹೋಲಿಸುವಲ್ಲಿ ಈ ವ್ಯತ್ಯಾಸವನ್ನು ತಪ್ಪದೆ ಗಮನದಲ್ಲಿ ಇಡಬೇಕು. ಪಟವಾರಿ ಮತ್ತು ಚೌಕಿದಾರರಿಂದ ವರದಿಯಾದ ಅಂಕಿ ಸಂಖ್ಯೆಗಳ ಆಧಾರದ ಮೇಲೆ ವಿವಿಧ ಬೆಳೆಗಳ ಎಕರೆ ಪ್ರಕಾರದ ಮುನ್ಸೂಚನೆಯನ್ನು ಕಾಲಕಾಲಕ್ಕೆ ಹೊರಡಿಸುವರು. ಈ ಅಂಕಿಗಳನ್ನು ವಾಣಿಜ್ಯ ವರ್ತಮಾನ ಮತ್ತು ಅಂಕಿ ಅಂಶಗಳ ಖಾತೆಯವರು ಪ್ರಕಟಿಸುವ ನಿಯತಕಾಲಿಕವಾದ ಬೆಳೆಗಳ ಮುನ್ನಂದಾಜುಗಳು ಮತ್ತು ಭಾರತದ ವಾಣಿಜ್ಯ ಪತ್ರಿಕೆಗಳಲ್ಲಿ ಪ್ರಕಟಿಸುವರು. ಅಕ್ಕಿಯ ಎಕರೆ ಲೆಕ್ಕ ಮುನ್ನಂದಾಜನ್ನು ತಿಳಿಸಲು ಇರುವ ದಿನಾಂಕಗಳು ಮೂರು – ಅಕ್ಟೋಬರ್ 20, ಡಿಸೆಂಬರ್ 20, ಫೆಬ್ರವರಿ 20 ಈ ಅಂಕಿಗಳನ್ನು ಭಾರತದಲ್ಲಿ ಪ್ರಧಾನ ಬೆಳೆಗಳ ಉತ್ಪತ್ತಿ ಮತ್ತು ವಿಸ್ತೀರ್ಣಗಳ ಅಂದಾಜುಗಳು ಎಂಬುದರಲ್ಲಿ ತರುವಾಯ ಪ್ರಕಟಿಸುತ್ತಾರೆ. ಹತ್ತಿಯ ಬಗ್ಗೆ ವಿಸ್ತೀರ್ಣದ ನಾಲ್ಕು ಮುನ್ನಂದಾಜುಗಳಿವೆ. ಮೊದಲನೆಯ ಮುನ್ಸೂಚನೆ ಆಗಸ್ಟ್‌ನಲ್ಲಿ, ಎರಡನೆಯದು ಅಕ್ಟೋಬರ್‌ನಲ್ಲಿ, ಮೂರನೆಯದು ಡಿಸೆಂಬರ್‌ನಲ್ಲಿ ಮತ್ತು ಕೊನೆಯದು ಫೆಬ್ರುವರಿಯಲ್ಲಿ. ಅಂತಿಮ ಅಥವಾ ತನಿಖೆ ಮಾಡಿದ ಲೆಕ್ಕಗಳು ಮೇ ತಿಂಗಳಲ್ಲಿ ದೊರೆಯುವುವು.

1927–28 ವರ್ಷಕ್ಕೆ ಮುನ್ನಂದಾಜಿನ ಅಂಕಿಗಳು (ದಶಲಕ್ಷ ಎಕರೆಗಳಲ್ಲಿ) :

| ಮೊದಲನೆಯ ಅಂದಾಜು | ಎರಡನೆಯ ಅಂದಾಜು | ಮೂರನೆಯ ಅಂದಾಜು | ನಾಲ್ಕನೆಯ ಅಂದಾಜು | ಸಂಶೋಧಿಸಿದ ಲೆಕ್ಕ |
|---|---|---|---|---|
| 15.2 | 20.6 | 23.2 | 23.3 | 24.7 |

ಇವುಗಳ ಪೈಕಿ 15.2 ಅಂಕಿ ಬಹಳ ಕಡಿಮೆಯಾದ ಅಂದಾಜಾಗಿದೆ. ಆದರೆ ಇದು ಆಗಸ್ಟ್‌ನಲ್ಲಿ ಮುನ್ಸೂಚನೆಯ ದಿನದವರೆಗಿನ ಬಿತ್ತನೆಯಾದ ಎಕರೆ ಲೆಕ್ಕದ ವರದಿ ಅಥವಾ ಅಂದಾಜಲ್ಲದೆ ಭವಿಷ್ಯಕ್ಕೆ ಅನ್ವಯಿಸುವ ಅಂದಾಜಲ್ಲ ಎಂಬುದನ್ನು ಗಮನಿಸಬೇಕು. ಮೊದಲನೆಯ ಮುನ್ನಂದಾಜಿನ ಉದ್ದೇಶ ಬಿತ್ತನೆಯಾದ ವಿಸ್ತೀರ್ಣ ಮತ್ತು ಬೀಜದ ಮೊಳಕೆ ಬಂದಿರುವ ಭೂಮಿಯನ್ನು ಕುರಿತು ಆದಷ್ಟು ಬೇಗ ತಿಳಿವಳಿಕೆಯನ್ನು ಕೊಡುವುದೇ ಆಗಿದೆ. ಎರಡು ತಿಂಗಳ ಅನಂತರ ಹೊರಬೀಳುವ ಎರಡನೆಯ ಮುನ್ಸೂಚನೆ ತಡವಾದ ಬಿತ್ತನೆಯ ಪ್ರದೇಶವನ್ನು ಒಳಗೊಂಡಿದೆ ಮತ್ತು ಬೆಳೆಯ ಸ್ಥಿತಿಯನ್ನು ಕುರಿತ ವಿಷಯದೊಂದಿಗೆ ಪೈರಿನ ಪ್ರಾಯಶಃ ಗುಣಗಳನ್ನು ಸೂಚಿಸುತ್ತದೆ.

**ವಿಸ್ತೀರ್ಣದ ಅಂಕಿ ಅಂಶಗಳನ್ನು ಸಂಗ್ರಹಿಸುವ ಕ್ರಮ :** ವಿಸ್ತೀರ್ಣದ ಅಂಕಿ ಅಂಶಗಳನ್ನು ಹಳ್ಳಿಯ ದ್ರವ್ಯ ಅಧಿಕಾರಿಗಳು ನೇರವಾದ ಎಣಿಕೆಯಿಂದ ಸಂಗ್ರಹಿಸುತ್ತಾರೆ. ಹೊಲಹೊಲಕ್ಕೆ ಹೋಗಿ ಬೆಳೆಗಳ ಪರಿಶೀಲನೆಯ ಆಧಾರದ ಮೇಲೆ ಸಾಗುವಳಿಯ ಕಾಲದಲ್ಲಿ ವಿವಿಧ ಬೆಳೆಗಳ ಎಕರೆ ಲೆಕ್ಕದ ಅಂಕಿ ಅಂಶಗಳನ್ನು ಹಳ್ಳಿಯ ಅಧಿಕಾರಿ ಸಂಗ್ರಹಿಸಿ ಬರೆಯುತ್ತಾನೆ. ಭೂಕಂದಾಯಕ್ಕಾಗಿ ಪೈಮಾಯಿಷಿ ಮಾಡಲಾದ ಹಳ್ಳಿಗಳ ವಿಷಯದಲ್ಲಿ ಹೊಲಗದ್ದೆಗಳಿಗೆ ಸರ್ವೆ ಪೈಮಾಯಿಷಿ ಸಂಖ್ಯೆಯನ್ನು ಕೊಡಲಾಗಿರುವುದು ಮತ್ತು ಪ್ರತಿಯೊಂದು ಬೆಳೆಗೆ ಒಳಗಾದ ವಿಸ್ತೀರ್ಣವನ್ನು ತಿಳಿಯಲು ಹೆಚ್ಚು ಕಷ್ಟವಾಗುವುದಿಲ್ಲ. ಆದರೆ ಖಾಯಂ ಗುತ್ತಾ ಪ್ರದೇಶಗಳಲ್ಲಿ ಪೈಮಾಯಿಷಿ ಮತ್ತು ಸರ್ವೆ ಸಂಖ್ಯೆ ಇಲ್ಲದಿರುವುದರಿಂದ ವಿವಿಧ ಹೊಲಗದ್ದೆಗಳ ವಿಸ್ತೀರ್ಣಗಳು ತಿಳಿದಿರುವುದಿಲ್ಲ. ಹಳ್ಳಿಗಳಲ್ಲಿ ವಿವಿಧ ಬೆಳೆಗಳಿಗೆ ಬಿತ್ತಿದ ಜಮೀನಿನ ವಿಸ್ತೀರ್ಣವನ್ನು ಅಂದಾಜು ಮಾಡಲು ದ್ರವ್ಯ ಅಧಿಕಾರಿಗಳು ಯಾರೂ ಇರುವುದಿಲ್ಲ. ಈ ಪ್ರದೇಶಗಳಲ್ಲಿ ಚೌಕಿದಾರ ಅಥವಾ ಪೊಲೀಸ್ ಪೇದೆ ಅಷ್ಟೇನೂ ನಂಬಲರ್ಹವಲ್ಲದ ಅಂದಾಜುಗಳನ್ನು ಒದಗಿಸುತ್ತಾನೆ. ಪಟವಾರಿ ಮತ್ತು ಚೌಕಿದಾರರಿಂದ ಒದಗಿಸಲಾದ ಅಂಕಿ ಅಂಶಗಳನ್ನು ತಹಸೀಲು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಪರಿಶೋಧಿಸಲಾಗುತ್ತದೆ ಮತ್ತು ಪುನರ್ವಿಮರ್ಶಿಸಿ ಕ್ರೋಡೀಕರಿಸಿದ ಅಂದಾಜುಗಳನ್ನು ರಾಜ್ಯಸರ್ಕಾರಕ್ಕೆ ಕಳುಹಿಸಲಾಗುವುದು. ಅಲ್ಲಿ ಈ ವಿವರಗಳ ಮೇಲೆ ಅಂತಿಮ ಅಂದಾಜನ್ನು ಮಾಡುತ್ತಾರೆ. ಕೆಲವು ರಾಜ್ಯಗಳಲ್ಲಿ ಬೇಸಾಯದ ನಿರ್ದೇಶಕರಿಗೆ ಈ ಕೆಲಸವನ್ನು ವಹಿಸಲಾಗಿದೆ. ಇತರ ರಾಜ್ಯಗಳಲ್ಲಿ ದ್ರವ್ಯ ಅಧಿಕಾರಿಗಳಿಗೆ ಈ ಕೆಲಸವನ್ನು ಒಪ್ಪಿಸಲಾಗುತ್ತದೆ.

**ಎಕರೆವಾರು ಅಂಕಿ ಅಂಶಗಳ ನ್ಯೂನತೆಗಳು :** ರೈತವಾರಿ ಪ್ರದೇಶಗಳಲ್ಲಿ ಬಿತ್ತನೆಯ ಪ್ರದೇಶ, ಬೀಳುಬಿಟ್ಟ ಪ್ರದೇಶ, ಪ್ರತಿಯೊಂದು ಬೆಳೆಗೂ ಬಿತ್ತನೆಯಾದ ಪ್ರದೇಶಗಳನ್ನು ಕುರಿತು ಸಂಪೂರ್ಣ ಮಾಹಿತಿಯನ್ನು ಪಟವಾರಿ ಒದಗಿಸುವನು. ಅವನ ಅಧಿಕಾರಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಅವನು ಹೊಲ ಹೊಲಕ್ಕೂ ಹೋಗಿ ಪರಿಶೀಲಿಸಿ ಎಣಿಕೆ ಆಧಾರದ ಮೇಲೆ ಲೆಕ್ಕಾಚಾರಗಳನ್ನು ಒದಗಿಸುವನೆಂದು ನಿರೀಕ್ಷಿಸಲಾಗಿದೆ. ಆದರೆ ಅವನು ಎಲ್ಲ ಹೊಲಗದ್ದೆಗಳಿಗೂ ಭೇಟಿ ಕೊಡುವುದೇ ಇಲ್ಲ. ಆವಶ್ಯಕವಾದ ವಿಷಯಗಳನ್ನು ಭೂಮಾಲೀಕರ ಅಥವಾ ನೆರೆಕರೆಯವರಿಂದ ಪಡೆಯುವನು. ಹತ್ತಿ, ಸೆಣಬು ಮತ್ತು ಇತರ ನಗದು ಬೆಳೆಗಳ ವಾಣಿಜ್ಯ ಅಂಕಿಅಂಶಗಳ ವಿವರಗಳನ್ನು ಹೋಲಿಸುವುದರಿಂದ ಹಳ್ಳಿಯ ಶ್ಯಾನುಭೋಗರಿಂದ ಒದಗಿಸಲಾದ ಅಂಕಿಗಳಲ್ಲಿ ನಿಶ್ಚಯವಾದ ಕೆಳಗಣ ಅಭಿನತಿ (ಡೌನ್‌ವರ್ಡ್ ಬಯಸ್) ಇದೆ ಎಂದು ಕಂಡು ಬರುತ್ತದೆ. ಮತ್ತೊಂದು ಗಮನಾರ್ಹವಾದ ನ್ಯೂನತೆ ಮಿಶ್ರ ಬೆಳೆಗಳ ಪ್ರದೇಶವನ್ನು ಕುರಿತು ವರದಿಯೊಪ್ಪಿಸುವುದರಲ್ಲಿದೆ. ಸಕಾಲದಲ್ಲಿ ಮಳೆ ಬೀಳದಿದ್ದರೆ ಒಂದು ವಿಧದ ವಿಮೆಯಂತಿರಲಿ ಎಂದು ಭಾರತದಲ್ಲೆಲ್ಲ ಸಾಮಾನ್ಯವಾಗಿ ಮಿಶ್ರಬೆಳೆಯನ್ನು ಬೆಳೆಸುವರು. ಕೆಲವು ರಾಜ್ಯಗಳಲ್ಲಿ ಗೋಧಿ ಮತ್ತು ಬಾರ್ಲಿ ಮುಂತಾದ ಮಿಶ್ರ ಬೆಳೆಯ ಒಟ್ಟು ಪ್ರದೇಶವನ್ನು ಒಟ್ಟು ಜಿಲ್ಲೆಗೆ ಪಡೆಯುತ್ತಾರೆ; ಮತ್ತು ರಾಜ್ಯಾಧಿಕಾರಿಯಿಂದ ನಮೂದಿಸಲಾದ ನಿಶ್ಚಿತ ಪ್ರಮಾಣಗಳಲ್ಲಿ ಈ ಪ್ರದೇಶವನ್ನು ಆಯಾ ಬೆಳೆಗಳಿಗೆ ಹಂಚುವರು. ಈ ಪ್ರಮಾಣಗಳು ಕೇವಲ ಪ್ರಧಾನ ಬೆಳೆಗಳ ಮಿಶ್ರಗಳಿಗೆ ಮಾತ್ರ ನಿಶ್ಚಿತವಾಗಿದೆ. ಇತರ ಸಣ್ಣ ಬೆಳೆಗಳ ಮಿಶ್ರಗಳ ಬಗ್ಗೆ ಇಡೀ ಪ್ರದೇಶವನ್ನು ಹಿರಿಯ ಬೆಳೆಯ ಕೆಳಗೆ ಎಣಿಕೆ ಮಾಡುವರು. ಕೆಲವು ರಾಜ್ಯಗಳಲ್ಲಿ ಪಟವಾರಿ ಕಣ್ಣಂದಾಜಿನಿಂದಲೆ ಎರಡು ಮಿಶ್ರಬೆಳೆಗಳಲ್ಲಿ ಪ್ರತಿಯೊಂದರ ವಿಸ್ತೀರ್ಣವನ್ನೂ ಲೆಕ್ಕ ಹಾಕುವನು. ಉದಾಹರಣೆಗೆ ಗೋಧಿ ಮತ್ತು ಎಣ್ಣೆಬೀಜಗಳನ್ನು ಒಂದು ಹೊಲದಲ್ಲಿ ಒಟ್ಟಾಗಿ ಬೆಳೆಸಿದರೆ ಗೋಧಿ ಬೆಳೆದ ಭಾಗದ ಮತ್ತು ಎಣ್ಣೆ ಬೀಜಗಳನ್ನು ಬೆಳೆದ ಭಾಗದ ವಿಸ್ತೀರ್ಣವನ್ನು ಬೇರೆಬೇರೆಯಾಗಿ ಅಂದಾಜುಮಾಡಬೇಕೆಂಬ ನಿಯಮವಿದೆ. ಉದಾಹರಣೆಗೆ ಗೋಧಿಯ ಎರಡು ಸಾಲುಗಳನ್ನೂ ಎಣ್ಣೆಬೀಜದ ಒಂದು ಸಾಲನ್ನೂ ಪರ್ಯಾಯವಾಗಿ ಬೆಳೆಸಿದರೆ ಒಟ್ಟು ಪ್ರದೇಶವನ್ನು 2:1 ನಿಷ್ಪತ್ತಿಯಲ್ಲಿ ಪಾಲುಮಾಡಬೇಕು. ಆದರೆ ಆ ಎರಡು ಬೆಳೆಗಳನ್ನು ಸಾಲುಗಟ್ಟಿ ಹಾಕದೆ ಎರಚಿ ಬಿತ್ತನೆ ಮಾಡಿದ್ದರೆ ಈ ಕ್ರಮವನ್ನು ಪ್ರಯುಕ್ತಿಸಲು ಸಾಧ್ಯವಿಲ್ಲ. ಆಗ ಪಟವಾರಿಗಳ ಅಂದಾಜುಗಳು ಕೇವಲ ಊಹೆಗಳಾಗಿ ಉಳಿಯುವುವು. ಹಾಗಲ್ಲದೆ ಆ ಎರಡು ಬೆಳೆಗಳನ್ನು ಒಂದೇ ಹೊಲದ ಬೇರೆ ಬೇರೆ ಭಾಗಗಳಲ್ಲಿ ಅಳೆದು ಪ್ರಮಾಣಗಳನ್ನು ಗೊತ್ತುಮಾಡಬಹುದು. ಸಾಮಾನ್ಯವಾಗಿ ಶ್ಯಾನುಭೋಗರು ಯಾವ ಅಳತೆಯನ್ನೂ ಮಾಡದೆ ಕಣ್ಣಂದಾಜಿನ ಬೆಲೆಗಳನ್ನೇ ಕೊಡುವರು. ಇಷ್ಟೆಲ್ಲ ನ್ಯೂನತೆಗಳು ಮತ್ತು ಕುಂದುಕೊರತೆಗಳಿದ್ದರೂ ಭಾರತದ ಸಾಗುವಳಿ ಪ್ರದೇಶದ ವಿಸ್ತೀರ್ಣದ ಅಂಕಿಗಳೂ ಅಮೆರಿಕ ಮತ್ತು ಹಲವು ಇತರ ದೇಶಗಳಿಂದ ಹೆಚ್ಚು ನಿಖರವಾಗಿವೆ. ಅಮೆರಿಕದಲ್ಲಿ 80,000 ಬೆಳೆಯ ಸ್ವತಂತ್ರ ವರದಿಗಾರರು ತಮ್ಮ ತಮ್ಮ ಸ್ಥಳದ ವಿವಿಧ ಬೆಳೆಗೆ ಬಿತ್ತನೆಯಾದ ಜಮೀನಿನ ವಿಸ್ತೀರ್ಣದ ಅಂಕಿಗಳನ್ನು ಒದಗಿಸುವರು. ಈ ಅಂಕಿಗಳನ್ನು ಭಾರತದಲ್ಲಿರುವಂತೆ ಸಂಪೂರ್ಣ ಲೆಕ್ಕಾಚಾರದಿಂದಲ್ಲದೆ ವ್ಯಕ್ತಿಗತ ಅಂದಾಜುಗಳಿಂದ ಪಡೆದಿರುವರು. ಆದ್ದರಿಂದ ತಪ್ಪುಗಳಿರುವುದು ಸಹಜ.

ಬೇರೆ ಬೇರೆ ಬೆಳೆಗಳಿಗೆ ಒಳಪಟ್ಟ ಪ್ರದೇಶಗಳ ಅಂದಾಜುಗಳಲ್ಲಿ ಇನ್ನೂ ಕೆಲವು ನ್ಯೂನತೆಗಳಿವೆ. ಉದಾಹರಣೆಗೆ ಕೃಷಿ ಮಾಡಿದ ಹೊಲಗದ್ದೆಗಳ ನಡುವೆ ಇರುವ ಬೇಸಾಯ ಮಾಡದ ತುಂಡು ಭೂಮಿಗಳ ವಿಸ್ತೀರ್ಣದ ಅಂದಾಜಿನ ಕ್ರಮದಲ್ಲಿ ಸಮಾನತೆ ಇರುವುದಿಲ್ಲ. ಇದೇ ಸಮಾನತೆಯ ನ್ಯೂನತೆ ಬದುಗಳ ಮತ್ತು ದಂಡೆಗಳ ವಿಸ್ತೀರ್ಣದ ಅಂದಾಜಿನಲ್ಲಿಯೂ ಇರುವುದು. ಈ ಎಲ್ಲ ಸಂದರ್ಭಗಳಲ್ಲಿಯೂ ಕೈಕೊಳ್ಳಬಹುದಾದ ಸಾಮಾನ್ಯ ನಿಯಮವನ್ನು ಗೊತ್ತುಪಡಿಸುವುದು ಒಳ್ಳೆಯದು. ಉದಾಹರಣೆಗೆ ಶಾಶ್ವತವಾದ ದಂಡೆಗಳು ಅಂದರೆ ಬೇರೆ ಬೇರೆ ಆರಂಭಗಾರರಿಗೆ ಸೇರಿದ ಹೊಲ ಗದ್ದೆಗಳ ಮೇರೆಗಳುದ್ದಕ್ಕೂ ಇರುವ ದಂಡೆಗಳನ್ನು ಬಿಟ್ಟುಬಿಡತಕ್ಕದ್ದು ಮತ್ತು ಪ್ರತ್ಯೇಕವಾಗಿ ಪಟ್ಟಾ ಅಥವಾ ಖಾತೆಯಲ್ಲಿ ತೋರಿಸತಕ್ಕದ್ದು. ಹಾಗೂ ಹಂಗಾಮಿ ದಂಡೆಗಳನ್ನು (ಅಂದರೆ ಒಬ್ಬ ಬೇಸಾಯಗಾರನಿಗೇ ಸೇರಿದ ಸರ್ವೆ ಸಂಖ್ಯೆಯಲ್ಲಿನ ಹೊಲಗದ್ದೆಗಳನ್ನು ಸಣ್ಣ ಸಣ್ಣ ಭಾಗಗಳಾಗಿ ವಿಭಾಗಿಸುವ ದಂಡೆಗಳನ್ನು) ಆಯಾ ಬೆಳೆಗಳ ವಿಸ್ತೀರ್ಣಗಳಲ್ಲಿ ಸೇರಿಸತಕ್ಕದ್ದು ಎಂದು ನಮೂದಿಸಬಹುದು.

**ಮಾನಕ ಸಾಮಾನ್ಯ ಉತ್ಪತ್ತಿ (ಸ್ಟ್ಯಾಂಡರ್ಡ್ ನಾರ್ಮಲ್ ಯೀಲ್ಡ್) :** ನಿರ್ದಿಷ್ಟ ಸ್ಥಳದಲ್ಲಿ ಯಾವುದಾದರೂ ಬೆಳೆಯ ಸಾಧಾರಣ ಉತ್ಪತ್ತಿ ಆ ಪದವೇ ಸೂಚಿಸುವಂತೆ ಪ್ರಸಾಮಾನ್ಯ ವರ್ಷದಲ್ಲಿ ಸರಾಸರಿ ಫಲವತ್ತಾದ ಪ್ರದೇಶಗಳ ಎಕರೆಯ ಉತ್ಪತ್ತಿಯಾಗಿದೆ.

ಸರಾಸರಿ ಫಲವಂತಿಕೆ (ಆವರೇಜ್ ಫರ್ಟಿಲಿಟಿ) ಮತ್ತು ಪ್ರಸಾಮಾನ್ಯ ವರ್ಷ (ನಾರ್ಮಲ್ ಇಯರ್) ಎಂಬ ಪದಗಳನ್ನು ಸ್ಪಷ್ಟವಾಗಿ ವ್ಯಾಖ್ಯಿಸಿಲ್ಲವಾದ್ದರಿಂದ ಪ್ರಸಾಮಾನ್ಯ ಎಂಬುದೇ ಒಂದು ಅಸ್ಪಷ್ಟ ಭಾವನೆಯಾಗುವುದು. ಮುಂದೆ ಕೊಟ್ಟಿರುವುದು ಪ್ರಸಾಮಾನ್ಯ ಉತ್ಪತ್ತಿಯ ಅಧಿಕೃತ ವ್ಯಾಖ್ಯೆಗಳು : ಹಲವು ವರ್ಷಗಳ ಅವಧಿಯಲ್ಲಿ ಅತ್ಯಂತ ಸಾಮಾನ್ಯವಾಗಿ ಆವರ್ತಿಸುವ ಬೆಳೆ ಎಂದು ಹಿಂದಿನ ಅನುಭವದಿಂದ ಕಂಡುಬಂದಿರುವ ಬೆಳೆ ; ಆ ಪ್ರದೇಶದ ಪ್ರರೂಪದ (ಟಿಪಿಕಲ್) ಅಥವಾ ಲಾಕ್ಷಣಿಕ ಬೆಳೆ; ಯಾವ ಬೆಳೆಯನ್ನು ನಿರೀಕ್ಷಿಸಲು ಬೇಸಾಯಗಾರರಿಗೆ ಅಧಿಕಾರವಿದೆಯೋ ಮತ್ತು ಅದರಿಂದ ತೃಪ್ತನಾಗುವನೋ ಆ ಬೆಳೆ; ಹೆಚ್ಚು ಪಡೆದರೆ ಸಂತೋಷಪಡಲು ಕಾರಣವಿರುವ ಕಡಿಮೆ ಪಡೆದರೆ ಕೊರಗಲು ಕಾರಣವಿರುವ ಬೆಳೆ. ಇಂಥ ಬೆಳೆಯ ಪ್ರತಿ ಎಕರೆ ಉತ್ಪತ್ತಿಯೇ ಎಕರೆಯ ಮಾನಕಪ್ರಸಾಮಾನ್ಯ ಉತ್ಪತ್ತಿ. ಮೇಲಿನ ವ್ಯಾಖ್ಯೆಯನ್ನು ಸ್ಪಷ್ಟಪಡಿಸಲು ಭಾರತದಲ್ಲಿ ಬೆಳೆಗಳ ಮುನ್ನಂದಾಜಿನ ತಯಾರಿಕೆ ಹೆಚ್ಚಿನ ವಿವರಣೆಗಳನ್ನು ಹೀಗೆ ವಿವರಿಸಿದೆ : ಸಾಮಾನ್ಯ ಉತ್ಪತ್ತಿ ಎಂದರೆ ಸಾಮಾನ್ಯ ಗುಣವಿರುವ ಒಂದು ವರ್ಷದಲ್ಲಿ ಸಾಮಾನ್ಯ ಭೂಮಿಯ ಸರಾಸರಿ ಉತ್ಪತ್ತಿ; ಈ ಸಾಮಾನ್ಯ ಉತ್ಪತ್ತಿ ಅಂಕಗಣಿತದ ಕಲ್ಪನೆಯಾದ ಬಹುವರ್ಷಗಳ ಸರಾಸರಿ ಬೆಳೆಯೊಡನೆ ತಾಳೆ ಬೀಳಬೇಕಾದ ಆವಶ್ಯಕತೆಯೇನೂ ಇಲ್ಲ.

ಈ ವಿವರಣೆಗಳು ವ್ಯಾಖ್ಯೆಯನ್ನು ಇನ್ನೂ ಹೆಚ್ಚು ಅಸ್ಪಷ್ಟಪಡಿಸುತ್ತವೆ. ವರ್ಷ ಪರಂಪರೆಯ ಬೆಳೆಗಳ ಸರಾಸರಿಯನ್ನು ಬಿಟ್ಟು ಬಹುಳಕವನ್ನು (ಮೋಡ್) ಪ್ರಸಾಮಾನ್ಯ ಬೆಳೆಯಾಗಿ ತೆಗೆದುಕೊಳ್ಳಬೇಕೆಂದು ಹೇಳುವಂತಿದೆ ಈ ವ್ಯಾಖ್ಯೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಪ್ರಸಾಮಾನ್ಯ ಉತ್ಪತ್ತಿ ಎಂಬ ಪದದ ವ್ಯಾಖ್ಯೆಯಲ್ಲಿ ಹೆಚ್ಚು ನಿಖರತೆಯನ್ನು ಸಾಧಿಸಿಲ್ಲ. ಬರಗಾಲ, ಆಲಿಕಲ್ಲು ಅಥವಾ ಅನಾಹುತಗಳು ಇಲ್ಲದೇ ಉತ್ತಮವಾದ ಸ್ಥಿತಿಯಲ್ಲಿ ಮೊಳೆತು ಬೆಳೆದ ಬೆಳೆ ಊಹೆಯ ಉತ್ಪತ್ತಿ ಎಂದು ಪ್ರಸಾಮಾನ್ಯ ಉತ್ಪತ್ತಿಯನ್ನು ಅಲ್ಲಿ ವ್ಯಾಖ್ಯಿಸಲಾಗಿದೆ. ಶಿಷ್ಟಪ್ರಸಾಮಾನ್ಯ ಉತ್ಪತ್ತಿಯನ್ನು ಅನೇಕ ವರ್ಷಗಳ ಸರಾಸರಿಯಾಗಿ ತೆಗೆದು ಕೊಳ್ಳುವುದು ಸೂಕ್ತವೆಂದು ಕಂಡುಬರುವುದು. ಅನೇಕ ವರ್ಷಗಳ ಬೆಳೆಗಳ ಉತ್ಪತ್ತಿಯ ಅಂಕಿ ಅಂಶಗಳ ಖಾತರಿ ವಿವರಗಳು ದೊರೆಯುವುದಾದರೆ ನಾವು ಸುಲಭವಾಗಿ ಸರಾಸರಿಯನ್ನು ಕಂಡುಹಿಡಿದು ಅದನ್ನು ಪ್ರಸಾಮಾನ್ಯ ಉತ್ಪತ್ತಿಯಾಗಿ ತೆಗೆದುಕೊಳ್ಳಬಹುದು. ಆದರೆ ಅಂಥ ಅಂಕಿ ಅಂಶಗಳ ವಿವರಗಳು ದೊರೆಯುವುದಿಲ್ಲ. ಆದ್ದರಿಂದ ಸಾಧಾರಣವಾಗಿ ಪ್ರಸಾಮಾನ್ಯ ಉತ್ಪತ್ತಿಯನ್ನು ಕಟಾವಿನ ಪ್ರಯೋಗಗಳಿಂದ ನಿರ್ಧರಿಸುವರು.

**ಬೆಳೆಯ ಕಟಾವಿನ ಪ್ರಯೋಗಗಳು :** ರಾಜ್ಯಗಳಲ್ಲಿರುವ ಕೃಷಿ ಖಾತೆಗಳು, ಪ್ರತಿಯೊಂದು ಜಿಲ್ಲೆಯ ಹಲವಾರು ಬೆಳೆಗಳಿಗೆ ಸಾಧಾರಣ ಗುಣವುಳ್ಳ ತರಿ ಮತ್ತು ಖುಷ್ಕಿ ಜಮೀನಿನ ಪ್ರತಿ ಎಕರೆಯ ಪ್ರಸಾಮಾನ್ಯ ಅಥವಾ ಸರಾಸರಿ ಉತ್ಪತ್ತಿಯ ಪಟ್ಟಿಯನ್ನು ಬರೆದಿಟ್ಟಿರುವರು. ಪ್ರಸಾಮಾನ್ಯ ಉತ್ಪತ್ತಿಯ ಈ ಮಾನಕ ದರದ ನಿಷ್ಕೃಷ್ಟತೆಯನ್ನು ಪರೀಕ್ಷಿಸಲು ಮತ್ತು ಅವಶ್ಯಬಿದ್ದಾಗ ಪುನರ್ವಿಮರ್ಶಿಸಲು ಬೆಳೆಯ ಕಟಾವಿನ ಪ್ರಯೋಗಗಳನ್ನು ಕೈಗೊಳ್ಳಲಾಗುವುದು. 1/3 ರಿಂದ 1/5 ಎಕರೆಯ ವಿಸ್ತೀರ್ಣದ ಸಾಧಾರಣ ಗುಣವುಳ್ಳ ಭೂಮಿಯ ತುಂಡು ನೆಲಗಳನ್ನು ಆರಿಸುವರು. ಪ್ರತಿಯೊಂದು ತುಂಡಿನಲ್ಲೂ ಬೆಳೆದ ಬೆಳೆಯನ್ನು ಕಟಾವು ಮಾಡಿ, ತೂಕಮಾಡಿ ಮತ್ತು ಅದನ್ನೇ ಎರಡು ವಾರಗಳ ಅನಂತರ ಪುನಃ ತೂಕ ಮಡುವುದರಿಂದ ಆರುವಾಸಿಯ ಪ್ರಮಾಣವನ್ನು ಕಂಡುಹಿಡಿಯುವರು. ಪ್ರಯೋಗದ ಪಾತಿಯ ಉತ್ಪತ್ತಿಯನ್ನೂ ಅದರಿಂದ ಪ್ರತಿ ಎಕರೆಯ ಉತ್ಪತ್ತಿಯನ್ನೂ ಲೆಕ್ಕಹಾಕುವರು. ಈ ಪ್ರಯೋಗಗಳನ್ನು ಎಲ್ಲ ಪ್ರಧಾನ ಬೆಳೆಗಳಿಗೂ ಪ್ರತಿವರ್ಷದಲ್ಲೂ ನಡೆಸುವರು. ಪಡೆದ ಉತ್ಪತ್ತಿಗಳ ಸರಾಸರಿಯನ್ನು ಪ್ರಸಾಮಾನ್ಯ ಉತ್ಪತ್ತಿಯಾಗಿ ತೆಗೆದುಕೊಳ್ಳಬಹುದು. ಆದರೆ ನಿಜವಾಗಿ ಮಾಡುವುದೇನೆಂದರೆ ಕೃಷಿಯ ರಾಜ್ಯ ನಿರ್ದೇಶಕ ಬೆಳೆಯ ಕಟಾವಿನ ಪ್ರಯೋಗಗಳ ಎಲ್ಲ ವರದಿಗಳನ್ನು ಎಚ್ಚರಿಕೆಯಿಂದ ಪರಿಶೋಧಿಸಿ ಮತ್ತು ತನಗೆ ಆವಶ್ಯಕವೆಂದು ಕಂಡುಬರುವ ತನಿಖೆಗಳ ಅನಂತರ ಪ್ರತಿಯೊಂದು ಜಿಲ್ಲೆಯ ಪ್ರತಿಯೊಂದು ಬೆಳೆಯ ಶಿಷ್ಟ ಉತ್ಪತ್ತಿಯನ್ನು ಪುರ್ನವಿಮರ್ಶಿಸಿ ನಿಶ್ಚಯಗೊಳಿಸುವನು. ಸಾಮಾನ್ಯವಾಗಿ 5 ವರ್ಷಗಳಿಗೊಮ್ಮೆ ಪುರ್ನವಿಮರ್ಶೆಯನ್ನು ಮಾಡಲಾಗುವುದು.

**ಪ್ರಸಾಮಾನ್ಯ ಉತ್ಪತ್ತಿಯನ್ನು ಪಡೆಯಲು ಅನುಸರಿಸುವ ಪ್ರಚಲಿತ ಪದ್ಧತಿಯ ನ್ಯೂನತೆಗಳು ಇವು :** 1. ಕೆಲವು ರಾಜ್ಯಗಳಲ್ಲಿ, ಉದಾಹರಣೆಗೆ, ದೆಹಲಿಯಲ್ಲಿ ಬೆಳೆಯ ಕಟಾವಿನ ಪ್ರಯೋಗಗಳನ್ನು ನಡೆಸುವುದಿಲ್ಲ. ಆದರೆ ದ್ರವ್ಯ ಅಧಿಕಾರಿ ತನ್ನ ಸ್ವಂತ ವಿಚಾರಣೆಗಳ ಆಧಾರದ ಮೇಲೆ ಅಂದಾಜನ್ನು ತಯಾರಿಸುವನು. ಎಲ್ಲ ರಾಜ್ಯಗಳೂ ಏಕರೀತಿಯಲ್ಲಿ ಬೆಳೆಯ ಕಟಾವಿನ ಆಧಾರದ ಮೇಲೆ ಅಂದಾಜನ್ನು ತಯಾರಿಸುವುದು ಒಳ್ಳೆಯದು. 2. ಹಲವಾರು ಸಂದರ್ಭಗಳಲ್ಲಿ ಬೆಳೆಯ ಕಟಾವಿನ ಪ್ರಯೋಗಗಳ ಸಂಖ್ಯೆ ಬಹಳ ಕಡಿಮೆಯಾಗಿರುವುದರಿಂದ ಖಾತರಿಯಾದ ಫಲಿತಾಂಶವನ್ನು ಪಡೆಯಲಾಗುವುದಿಲ್ಲ. ಆದ್ದರಿಂದ ಪ್ರಯೋಗಗಳ ಸಂಖ್ಯೆಯನ್ನು ಹೆಚ್ಚಿಸುವುದು ಅಗತ್ಯ. 3. ಬೆಳೆಯ ಕಟಾವಿನ ಪ್ರಯೋಗಗಳನ್ನು ನಡೆಸಲು ಆವಶ್ಯಕವಾದ ಸಾಧಾರಣ ಫಲವತ್ತಾದ ಭೂಮಿಯ ಸರಾಸರಿ ಬೆಳೆಯನ್ನು ಆರಿಸುವುದು ನಿಜವಾಗಿಯೂ ಕಷ್ಟಸಾಧ್ಯ. ಸುಲಭವಾಗಿ ನಿಷ್ಕರ್ಷಿಸಬಹುದಾದ ಮತ್ತು ಸಮೀಪದಲ್ಲಿರುವ ಅನುಕೂಲವಾದ ಹೊಲವನ್ನು ಯಾವಾಗಲೂ ವಿಧಿ ವಿಹಿತವಾದ ನಿವೇಶನದ ಅಳತೆಗಿಂತ ಸಣ್ಣದಾಗಿರುವುದನ್ನು ಆರಿಸುವರು. ನಿವೇಶನಗಳನ್ನು ಅಳತೆಪಟ್ಟಿಯಿಂದ ಸರಿಯಾಗಿ ಅಳತೆಮಾಡದೆ ಹೆಜ್ಜೆಗಳ ಮೂಲಕ ಸ್ಥೂಲ ರೀತಿಯಲ್ಲಿ ಅಳತೆ ಮಾಡಿ ಎಲ್ಲೆಗಳನ್ನು ಗುರುತಿಸುವರು. ಇದರಿಂದ ತಪ್ಪುಗಳುಂಟಾಗುತ್ತವೆ. ಈ ತಪ್ಪುಗಳ ಪರಿಮಾಣವನ್ನು ಲೆಕ್ಕಾಚಾರಮಾಡಲೂ ಆಗುವುದಿಲ್ಲ. ಸಾಧ್ಯವಾದ ಮಟ್ಟಿಗೆ ಅಂದಾಜುಗಳಲ್ಲಿ ಸ್ವಂತ ಅಭಿಪ್ರಾಯಗಳನ್ನು ಸೇರಗೊಡದೆ ಅವನ್ನು ವಸ್ತುನಿಷ್ಠ ಮಾಡುವುದು ಅಗತ್ಯ. ಬೆಳೆಯ ಕಟಾವಿನ ಪ್ರಯೋಗಗಳನ್ನು ನಡೆಸುವ ದ್ರವ್ಯಖಾತೆ ಮತ್ತು ಕೃಷಿಖಾತೆಗಳೆರಡೂ ಭಿನ್ನಭಿನ್ನವಾದ ಪ್ರಸಾಮಾನ್ಯ ಉತ್ಪತ್ತಿಯ ಅಂಕೆಗಳನ್ನು ಪಡೆಯತ್ತವೆ ಎಂಬುದನ್ನು ಗಮನಿಸಿಬೇಕು. ಇವುಗಳ ವ್ಯತ್ಯಾಸ ಕೆಲವು ವೇಳೆ ಶೇ. 15ರಷ್ಟು ಇರುವುದು. ಫಲಗಳನ್ನು ಖಾತರಿಯಾಗಿ ಮತ್ತು ಸಮಂಜಸವಾಗಿ ಮಾಡಲು ಈ ನ್ಯೂನತೆಗಳನ್ನು ಸರಿಪಡಿಸುವುದು ಅಗತ್ಯ. ಬೆಳೆಗಳ ಕಟಾವಿನ ಪ್ರಯೋಗಗಳನ್ನು ಯಾದೃಚ್ಛಿಕ ಪ್ರತಿದರ್ಶಿ (ರ್‍ಯಾಂಡಂ ಸ್ಯಾಂಪಲ್) ಸಿದ್ಧಾಂತಕ್ಕೆ ಅನುಸಾರವಾಗಿ ಪ್ರತಿದರ್ಶಿಯ ತಾಕುಗಳಲ್ಲಿ ನಡೆಸತಕ್ಕದ್ದು. 4. ಪ್ರಸಾಮಾನ್ಯ ಉತ್ಪತ್ತಿ ಪಂಚವರ್ಷಗಳಲ್ಲಿ ಬೆಳೆಯ ಕಟಾವಿನ ಪ್ರಯೋಗಗಳ ಫಲಿತಗಳಿಂದ ಪಡೆದ ಸರಾಸರಿ. ಆದರೆ ಪ್ರಸಾಮಾನ್ಯ ಉತ್ಪತ್ತಿ ಹೆಚ್ಚು ಸ್ಥಿರವಾದ ಅಂದರೆ ಕೂಡಲೆ ಅಥವಾ ಪದೇ ಪದೇ ಬದಲಾವಣೆಯಾಗದ ಅಂಕವಾಗಿರಬೇಕು. ಹತ್ತು ವರ್ಷಗಳ ಸರಾಸರಿಯನ್ನು ಪ್ರಸಾಮಾನ್ಯ ಉತ್ಪತ್ತಿಯಾಗಿ ಉಪಯೋಗಿಸಬಹುದು. ಕೆಲವು ರಾಜ್ಯಗಳಲ್ಲಿ ಬಳಸುತ್ತಿರುವ ಭಾರಿತ ಮಧ್ಯಕಕ್ಕೆ (ವೆಯ್ಟೆಡ್ ಅವರೇಜ್) ಬದಲು ಸಮಾಂತರ ಮಧ್ಯಕವನ್ನು ಬಳಸುವುದು ಒಳ್ಳೆಯದು. 5. ಕೃಷಿ ವಿಧಾನಗಳಲ್ಲಿ ಆಗಾಗ ಆಗುತ್ತಿರುವ ಲಾಭವೃದ್ಧಿಗಳಿಗೆ ಲಕ್ಷ್ಯಕೊಟ್ಟು ಹಿಂದಿನ 10 ವರ್ಷಗಳ ಸಂಚಾರೀ ಸರಾಸರಿಯನ್ನು (ಮೂವಿಂಗ್ ಅವರೇಜ್) ತೆಗೆದುಕೊಳ್ಳುವುದು ಒಳ್ಳೆಯದು. ಇದರಿಂದ ಪ್ರತಿವರ್ಷದ ಮಾನಕ ಉತ್ಪತ್ತಿಯ ಮರು ಲೆಕ್ಕಾಚಾರ ಆವಶ್ಯಕವಾಗುವುದು. ಆದರೆ ಫಲಿತ ಖಾತರಿ ಮತ್ತು ಸ್ಥಿರತೆಯ ದೃಷ್ಟಿಯಿಂದ ಈ ಸಲಹೆ ಸೂಕ್ತವಾಗಿರುವುದೆಂದು ಅನಿಸುತ್ತದೆ.

**ಸ್ಥಿತಿಕಾರಕ ಅಥವಾ ಸ್ಥಿತಿಗುಣಾಂಕ :** ಸ್ಥಿತಿಕಾರಕ ಅಥವಾ ಕಾಲಸ್ಥಿತಿ ಗುಣಾಂಕ ಉತ್ಪತ್ತಿಯ ಮುನ್ಸೂಚನೆಯಲ್ಲಿ ಸೇರಿರುವ ಮತ್ತೊಂದು ಅಂಶ. ಸ್ಥಿತಿಕಾರಕವೆಂದರೆ ಯಾವುದಾದರೂ ತಾಕಿನ ಪ್ರತಿ ಎಕರೆ ಉತ್ಪತ್ತಿಯೊಡನೆ ಸರಾಸರಿ ಅಥವಾ ಸಾಮಾನ್ಯ ಉತ್ಪತ್ತಿದರದ ಹೋಲಿಕೆ. ಪ್ರತಿಯೊಂದು ಬೆಲೆ ಕಾಲಸ್ಥಿತಿ ಗುಣಾಂಕದ ಅಂದಾಜನ್ನು ಪ್ರತಿಯೊಂದು ಹಳ್ಳಿಗೂ ಪರಿಸ್ಥಿತಿಗೆ ಅನುಗುಣವಾಗಿ ಪಟವಾರಿಯೋ ಅಥವಾ ಬಾಕಿದಾರನೋ ಮಾಡುವನು. ಅನಂತರ ಈ ಅಂದಾಜುಗಳ ಸರಾಸರಿಯನ್ನು ಕಂಡುಹಿಡಿದು (ಕೆಲವು ವೇಳೆ ಭಾರಿತ ಸರಾಸರಿಯನ್ನು ಕಂಡುಹಿಡಿದು) ಒಟ್ಟು ಜಿಲ್ಲೆಯ ಸ್ಥಿತಿಗುಣಾಂಕವನ್ನು ಪಡೆಯುವರು. ಒಂದು ಹೊಲದ ಸ್ಥಿತಿ ಗುಣಾಂಕದ ಅಂದಾಜನ್ನು ಮಾಡುವುದು ಕೂಡ ಕಷ್ಟಸಾಧ್ಯ ವಿಷಯ. ಹೀಗಿರುವಲ್ಲಿ ಸಮಗ್ರ ಹಳ್ಳಿಯ ಸಹಜ ಸ್ಥಿತಿಗುಣಾಂಕವನ್ನು ಆಣೆವಾರಿ ಸಂಕೇತದಲ್ಲಿ ವ್ಯಕ್ತಪಡಿಸುವುದರಿಂದ ಸಾಮಾನ್ಯವಾಗಿ ಅಂಕೆಯನ್ನು ಸಮೀಪದ ಆಣೆಗೆ ಒಟ್ಟುಮಾಡಿ ಹೇಳುವುದು ಹಳೆಯ ರೂಢಿ. ಇದು ತಪ್ಪನ್ನು ಮತ್ತಷ್ಟು ಹೆಚ್ಚಿಸುವುದು. ಕಂದಾಯದ ಮಾಫಿ ಸ್ಥಿತಿ ಗುಣಾಂಕ ಮೇಲೆ ಅವಲಂಬಿಸಿರುವ ಕಾರಣದಿಂದ ಈ ಗುಣಾಂಕದ ಅಂದಾಜಿನಲ್ಲಿ ಆಗುವ ತಪ್ಪು ಯಾದೃಚ್ಛಿಕ ತಪ್ಪಾಗಿಲ್ಲದೆ ಕೆಳ ಪ್ರವಣತೆಯ ಒಮ್ಮುಖವಾದ ತಪ್ಪಾಗಿದೆ. ತಮಿಳುನಾಡು, ಮಹಾರಾಷ್ಟ್ರ ಮತ್ತು ಅಸ್ಸಾಮ್ ರಾಜ್ಯಗಳಲ್ಲಿ ಸಾಮಾನ್ಯ ಬೆಳೆಯನ್ನು 12 ಆಣೆಗಳೆಂದು ಪರಿಗಣಿಸುವರು. ಉತ್ತರ ಪ್ರದೇಶ ಮತ್ತು ಪಂಜಾಬಿನಲ್ಲಿ 16 ಆಣೆಗಳೆಂದೂ ಮಧ್ಯಪ್ರದೇಶದಲ್ಲಿ 131/4 ಆಣೆಗಳೆಂದೂ ತೆಗೆದುಕೊಳ್ಳುವರು. ಇಂಥ ವ್ಯತಿರಿಕ್ತ ಕ್ರಮಗಳ ದೆಸೆಯಿಂದ ಅಂಕಿಗಳನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಎಲ್ಲ ರಾಜ್ಯಗಳಿಗೂ ಅನ್ವಯಿಸುವಂತೆ ಏಕರೀತಿಯಾದ ವ್ಯಾಖ್ಯೆಯನ್ನು ಮಾಡುವುದು ಒಳಿತು, ಅಮೇರಿಕದ ಸಂಯುಕ್ತ ರಾಜ್ಯದ ವ್ಯವಸಾಯ ಖಾತೆಯ ಅಂಕಿ ಅಂಶಗಳ ಸಂಸ್ಥೆ ಸಾಮಾನ್ಯ ಕಾಲಸ್ಥಿತಿಯನ್ನು ಈ ರೀತಿ ವ್ಯಾಖ್ಯಿಸುವುದು ; ಪ್ರಸಾಮಾನ್ಯ ಕಾಲಸ್ಥಿತಿ (ನಾರ್ಮಲ್ ಕಂಡಿಷನ್) ಸರಾಸರಿ ಸ್ಥಿತಿ ಆಗಿರದೆ, ಸರಾಸರಿ ಬೆಳೆಗಿಂತ ಹೆಚ್ಚು ಭರವಸೆ ನೀಡುವ ಸರಾಸರಿಗಿಂತ ಮೇಲ್ಮಟ್ಟದ ಸ್ಥಿತಿ ಆಗಿರುವುದು; ಇನ್ನೂ ಮುಂದಕ್ಕೆ ಪ್ರಸಾಮಾನ್ಯ ಸ್ಥಿತಿಯ ಪೂರ್ಣ ಬೆಳೆಯನ್ನಾಗಲಿ ಉತ್ತಮ ದರ್ಜೆಯ ಅತ್ಯಧಿಕ ಪ್ರಮಾಣದ ಬೆಳೆಯಾನ್ನಾಗಲಿ ಸೂಚಿಸುವುದಿಲ್ಲ; ಸರಾಸರಿ ಮತ್ತು ಮಹತ್ತಮ ಸ್ಥಿತಿಗಳ ನಡುವೆ ಪ್ರಸಾಮಾನ್ಯ ಬರುವುದು. ಪ್ರಸಾಮಾನ್ಯವನ್ನು 13 1/4 ಆಣೆಗಳಾಗಿಯೂ ಮಹತ್ತಮವನ್ನು 16 ಆಣೆಗಳಾಗಿಯೂ ಭಾವಿಸುವ ಮಧ್ಯಪ್ರದೇಶದ ವ್ಯಾಖ್ಯೆಯನ್ನು ಇದು ಹೋಲುತ್ತದೆ.

ಕಾಲಸ್ಥಿತಿ ಗುಣಾಂಕದ ಪ್ರಾಥಮಿಕ ಅಂದಾಜುಗಳ ಉಗಮದಲ್ಲಿ ಸಮಾನತೆ ಇರುವುದಿಲ್ಲ. ಹಲಕೆಲವು ನ್ಯೂನತೆಗಳಿವೆ. ಪಂಜಾಬಿನಲ್ಲಿ ಉತ್ಪತ್ತಿಯ ಅಂದಾಜುಗಳು ತಹಸೀಲು ಕೇಂದ್ರ ಕಛೇರಿಗಳಿಂದ ಹೊರಟರೆ, ಮಧ್ಯಪ್ರದೇಶದಲ್ಲಿ ಪ್ರತಿಯೊಬ್ಬ ಪಟವಾರಿ ಹಳ್ಳಿಯ ಹಳೆಯ ಆಣೆವಾರಿ ಸ್ಥಿತಿಯನ್ನು ವರದಿ ಮಾಡುವನು. ಅವರವರ ಹಳ್ಳಿಗಳಿಗೆ ಅಂದಾಜುಗಳನ್ನು ಒಪ್ಪಿಸುವಂತೆ ಏಕರೀತಿಯಾಗಿ ಎಲ್ಲ ಪಟವಾರಿಗಳಿಗೂ ನಿಯಮವನ್ನು ವಿಧಿಸುವುದು ಒಳಿತು. ಕಾಫಿ ಮತ್ತು ರಬ್ಬರ್‌ಗಳ ಬಗ್ಗೆ ಏಕರೀತಿಯಾಗಿ ಒಂದೇ ತರಹೆಯ ಆಧಾರದ ಮೇಲೆ ಅಂಕಿ ಅಂಶಗಳನ್ನು ಪಡೆಯುವರು ಮತ್ತು ಅವು ಸಾಮಾನ್ಯವಾಗಿ ತೃಪ್ತಿಕರವಾಗಿರುವುವು.

**ಉತ್ಪತ್ತಿಯ ನಿರಪೇಕ್ಷ ಅಂದಾಜು :** ಪ್ರತಿ ಎಕರೆಗೆ, ಕ್ವಿಂಟಾಲ್‌ಗಳಲ್ಲಿ ಅಥವಾ ಕಿಲೋಗ್ರಾಂಗಳಲ್ಲಿ, ಯಾವ ಮಾನಕ ಪ್ರಸಾಮಾನ್ಯ ಉತ್ಪತ್ತಿಗೂ ತಳಕು ಹಾಕದೆ ನೇರವಾಗಿ ಬೆಳೆಯ ಉತ್ಪತ್ತಿಯ ಅಂದಾಜನ್ನು ಮಾಡುವ ಕ್ರಮ ಶ್ಲಾಘನೀಯ. ಈ ನೇರವಾದ ಅಂದಾಜಿನ ಕ್ರಮ 1920ರಿಂದ ಪಂಜಾಬಿನಲ್ಲಿ ರೂಢಿಯಲ್ಲಿದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಂಥ ಬಹಳ ಸುವ್ಯವಸ್ಥಿತ ದೇಶದಲ್ಲೂ ಮಾನಕ ಪ್ರಸಾಮಾನ್ಯ ಉತ್ಪತ್ತಿ ಮತ್ತು ಕಾಲಸ್ಥಿತಿ ಗುಣಾಂಕದ ಮೂಲಕ ಅಂದಾಜಿನ ಉತ್ಪತ್ತಿಯನ್ನು ಮಾಡುವ ಸುತ್ತುಬಳಸಿನ ಕ್ರಮ ರೂಢಿಯಲ್ಲಿದೆ. ಭಾರತದಲ್ಲಿ ಎಕರೆವಾರು ಅಂಕಿ ಅಂಶಗಳ ವಿವರಗಳು ಪ್ರಪಂಚದ ಎಲ್ಲ ಕಡೆಗಳಿಗಿಂತಲೂ ಬಹುಶಃ ಹೆಚ್ಚು ನಿಖರವಾಗಿವೆ ಮತ್ತು ನಿರಪೇಕ್ಷ ಅಂದಾಜಿನ ಅಂದರೆ ಪ್ರತಿ ಎಕರೆಗೆ ಮಣ ಮತ್ತು ಸೇರುಗಳ ಪದ್ಧತಿಯನ್ನು ಅನುಸರಿಸುವುದರಿಂದ ಉತ್ಪತ್ತಿಯ ಅಂದಾಜಿನ ಮುನ್ಸೂಚನೆಯನ್ನು ಅಷ್ಟೇ ಖಾತರಿಯಿಂದ ಮಾಡಬಹುದು. ಈ ಅಂಕಿಗಳನ್ನು ವಿಹಿತವಾಗಿ ನಡೆಸಿದ ಯಾದೃಚ್ಛಿಕ ನಿದರ್ಶನ ಸರ್ವೇಕ್ಷಣಗಳಿಂದ ಪಡೆಯಬಹುದು ಮತ್ತು ಪಟವಾರಿಗಳು ಪ್ರತಿ ಎಕರೆಯ ಉತ್ಪತ್ತಿಯ ಪ್ರಮಾಣದ ಅಂದಾಜನ್ನು ಮಾಡಲು ಅವನ್ನು ಅನಂತರ ತಾಳೆ ನೋಡಲೂ ಸಾಕಷ್ಟು ಕಾಲ ಮತ್ತು ಸಂದರ್ಭಗಳನ್ನು ಒದಗಿಸಬಹುದು. ಪಂಜಾಬಿನಲ್ಲಿ ಜಾರಿಯಲ್ಲಿರುವ ಈ ಕ್ರಮವನ್ನು ದೇಶಾದ್ಯಂತ ವಿಸ್ತರಿಸಬಹುದು. ಮತ್ತು ಸ್ವೀಕೃತ ಪ್ರಸಾಮಾನ್ಯ ಉತ್ಪತ್ತಿಯನ್ನು ಉಪಯೋಗಿಸುವುದರಿಂದ ಉಂಟಾಗುವ ತಪ್ಪುಗಳನ್ನು ಸಂಪೂರ್ಣವಾಗಿ ವರ್ಜಿಸಬಹುದು. ಅಮೆರಿಕದ ಇತ್ತೀಚಿನ ಪ್ರಯೋಗಗಳಿಂದ ನೇರವಾಗಿ ಪ್ರತಿ ಎಕರೆಗೆ ಉತ್ಪತ್ತಿ ಇಷ್ಟೆಂದು ಅಂದಾಜು ಮಾಡುವುದು ಅಷ್ಟೇನೂ ಖಾತರಿಯಲ್ಲ ಎಂದು ತಿಳಿದುಬರುವುದು. ಏಕೆಂದರೆ ನೇರ ಅಂದಾಜಿನ ವಿಚಲನೆ (ವೇರಿಯನ್ಸ್) ಪ್ರಕೃತ ಪರೋಕ್ಷ ಕ್ರಮದ ಅಂದಾಜಿನ ಎರಡರಷ್ಟಾಗುವುದು.

**ಅಂಕಿ ಅಂಶಗಳ ನಿಖರತೆಯ ತಾಳೆ :** ವಾಣಿಜ್ಯ ಬೆಳೆಗಳ ಬಗ್ಗೆ ವ್ಯಾಪಾರದ ಅಂಕಿಗಳೊಡನೆ ಹೋಲಿಸುವುದರಿಂದ ಬೆಳೆಗಳ ಫಲದ ಅಂದಾಜುಗಳ ನಿಖರತೆಯನ್ನು ಸ್ವಲ್ಪಮಟ್ಟಿಗೆ ತಾಳೆ ನೋಡಬಹುದು. ಮುನ್ನಂದಾಜಿನ ಅಂಕಿಗಳೂ ಸಾಮಾನ್ಯವಾಗಿ ಇಳಿತರವಾದ ಅಂದಾಜುಗಳೆಂದು ಕಂಡುಬಂದಿದೆ. ಉದಾಹರಣೆಗೆ, ಹತ್ತಿ ಅಥವಾ ಸೆಣಬು ಬೆಳೆಯುವ ಬಗ್ಗೆ ಯಾವ ವರ್ಷದಲ್ಲಾದರೂ ವಸ್ತುವಿನ ಒಟ್ಟು ಪೂರೈಕೆ ವರ್ಷದ ಆರಂಭದಲ್ಲಿನ ಸಿಲ್ಕು ಮತ್ತು ಆ ವರ್ಷದ ಫಸಲು ಅಥವಾ ಉತ್ಪಾದನೆಯ ಮೊತ್ತಕ್ಕೆ ಸಮವಾಗಿರುವುದು. ಇದು ಹೊರದೇಶಕ್ಕೆ ಮಾಡಲಾದ ರಫ್ತು, ಕಾರ್ಖಾನೆಗಳು ಉಪಯೋಗಿಸಿಕೊಂಡದ್ದು, ಇತರ ವೆಚ್ಚ ಮತ್ತು ವರ್ಷದ ಕೊನೆಯಲ್ಲಿರುವ ಸಿಲ್ಕು ಬಾಕಿ-ಇವುಗಳ ಮೊತ್ತಕ್ಕೆ ಸಮವಾಗಿರಬೇಕು. ವರ್ಷದ ಆರಂಭ ಮತ್ತು ಕೊನೆಯಲ್ಲಿನ ಸಿಲ್ಕು ಹಾಗೂ ರಫ್ತು ಮತ್ತು ಕಾರ್ಖಾನೆಗಳಿಗೆ ಬಳಸಲಾದ ಸರಕು ಇವು ನಿಖರವಾಗಿ ಗೊತ್ತಾಗುತ್ತದೆ. ಕಾರ್ಖಾನೆಗಳಿಗಲ್ಲದೆ ಇತರ ಬಾಬ್ತುಗಳಿಗೆ ಖರ್ಚಾಗುವ ವಸ್ತುಗಳ ಅಂದಾಜನ್ನು ಯಾದೃಚ್ಛಿಕ ಪ್ರತಿದರ್ಶಿಯ ಪರಿಶೀಲನೆಯಿಂದ ಹೆಚ್ಚಿನ ಮಟ್ಟಿಗೆ ಸರಿಯಾಗಿಯೇ ತಿಳಿಯಬಹುದು. ಹೀಗಾಗಿ ಈ ಕೆಳಗಿನ ಸಂಬಂಧವನ್ನು ಪಡೆಯುತ್ತೇವೆ;

ಉತ್ಪಾದನೆ = ರಫ್ತುಗಳು + ಕಾರ್ಖಾನೆಗಳ ಬಳಕೆ+ ಇತರ ವೆಚ್ಚ + ವರ್ಷದ ಕೊನೆಯಲ್ಲಿರುವ ಸಿಲ್ಕು – ವರ್ಷದ ಆರಂಭದಲ್ಲಿದ್ದ ಸಿಲ್ಕು

ಪ್ರತಿವರ್ಷದ ಸಿಲ್ಕು ಬಾಕಿಯನ್ನು ನಿಖರವಾಗಿ ತಿಳಿಯಲಾಗದಿದ್ದರೂ ಹಲವು ಕ್ರಮಾಗತ ವರ್ಷಗಳಿಗೆ – 10 ವರ್ಷಗಳಿಗೆ ಎನ್ನೋಣ–ಮೇಲಿನ ಸಮೀಕರಣವನ್ನು ಪ್ರಯುಕ್ತಿಸಿ ಸರಾಸರಿಯನ್ನು ಕಂಡುಹಿಡಿಯಬಹುದು. ಇದರಿಂದಾಗಿ ಕೆಳಗೆ ಕೊಟ್ಟಿರುವ ಸಂಬಂಧ ಸಿದ್ಧಿಸುವುದು :

ಸರಾಸರಿ ವಾರ್ಷಿಕ ಉತ್ಪಾದನೆ = ಸರಾಸರಿ ರಫ್ತು + ಸರಾಸರಿ ಕಾರ್ಖಾನೆಗಳ ಬಳಕೆ + ಕಾರ್ಖಾನೆಗಳಿಗಲ್ಲದ ಇತರ ಸರಾಸರಿ ವೆಚ್ಚ 1/10 + ಹತ್ತನೆಯ ವರ್ಷದ ಕೊನೆಯಲ್ಲಿರುವ ಸಿಲ್ಕು – ಮೊದಲನೆಯ ವರ್ಷದ ಆರಂಭದಲ್ಲಿದ್ದ ಸಿಲ್ಕು /10

ಸಾಧಾರಣವಾಗಿ ಕೊನೆಯ ಮತ್ತು ಆರಂಭದ ಅವಧಿಯಲ್ಲಿ ಸಿಲ್ಕು ಹೆಚ್ಚು ಕಡಿಮೆ ಒಂದೇ ಆಗಿರುವುದು; ಅವು ಅಸಮವಾಗಿದ್ದರು 10 ರಿಂದ ಭಾಗಿಸಲಾಗುವ ಕಾರಣ ಈ ಅಂಕಿಗಳಲ್ಲಿನ ತಪ್ಪು ಕಡಿಮೆಯಾಗುವುದು. ಕಾಲದ ಅವಧಿಯನ್ನು ಯೋಗ್ಯ ರೀತಿಯಲ್ಲಿ ಆಯುವುದರಿಂದ ತಪ್ಪುಗಳನ್ನು ಮತ್ತಷ್ಟು ಕಡಿಮೆ ಮಾಡಬಹುದು. ಬೆಲೆ ಅತ್ಯಂತ ಹೆಚ್ಚಾಗಿರುವ ಯಾವುದಾದರೂ ವರ್ಷದಲ್ಲಿ ಕೊನೆಯ ಬಾಕಿ ಬಹಳ ಚಿಕ್ಕದಾಗಿರುವುದು. ಆದ್ದರಿಂದ ಅವಧಿಯನ್ನು ಆರಂಭದಲ್ಲಿ ದಾಸ್ತಾನು ಸಣ್ಣದಿರುವ ಅನಂತರದ ವರ್ಷದಿಂದ ಲೆಕ್ಕಹಾಕಬಹುದು; ಯಾವ ವರ್ಷದಲ್ಲಿ ಬೆಲೆ ಅತ್ಯಂತ ಹೆಚ್ಚಿರುವುದೋ ಆ ವರ್ಷದಲ್ಲಿ ಅವಧಿಯನ್ನು ಕೊನೆಗಾಣಿಸಬಹುದು. ಇದರ ಪರಿಣಾಮವಾಗಿ ವರ್ಷದ ಕೊನೆಯಲ್ಲಿ ದಾಸ್ತಾನು ಚಿಕ್ಕದಾಗಿರುವುದು. ಇದು ಸರಾಸರಿಯನ್ನು (ಅವಧಿಯ ಕೊನೆಯಲ್ಲಿರುವ ದಾಸ್ತಾನು–ಅವಧಿಯ ಆರಂಭದ ದಾಸ್ತಾನು) ಚಿಕ್ಕದಾಗಿ ಮಾಡುವುದು ಮತ್ತು ತಪ್ಪಿನ ಪ್ರಮಾಣ ಬಲುಮಟ್ಟಿಗೆ ಕಡಿಮೆಯಾಗುವುದು.

**ಭವಿಷ್ಯಕ್ಕಾಗಿ ಸಲಹೆಗಳು :** 1. ಪ್ರಕೃತ ವಸ್ತು ಸ್ಥಿತಿಯಲ್ಲಿ ಬೇಸಾಯದ ಮತ್ತು ಜಾನುವಾರುಗಳ ಅಂಕಿ ಅಂಶಗಳ ಸಂಗ್ರಹ ಮತ್ತು ವಿಶ್ಲೇಷಣೆ ಅತಿ ಮಹತ್ತ್ವವುಳ್ಳದ್ದಾಗಿದೆ. ನಮ್ಮ ದೇಶದ ಕೃಷಿ ಉತ್ಪಾದನೆಯ ಅಂದಾಜುಗಳನ್ನು ತ್ವರಿತವಾಗಿಯೂ ಖಾತರಿಯಾಗಿಯೂ ಪಡೆಯಲು ಸರ್ವಪ್ರಯತ್ನವನ್ನೂ ಮಾಡಬೇಕು. 2. ರೈತವಾರಿ ಪ್ರದೇಶಗಳಲ್ಲಿ ಸರಾಸರಿ ಅಂಕಿಗಳೂ ಸಾಕಷ್ಟು ವಿಶ್ವಾಸಾರ್ಹವಾಗಿವೆ. ಆದರೆ ಖಾಯಂ ಗುತ್ತಾ ಪ್ರದೇಶಗಳಲ್ಲಿ ಹಾಗಲ್ಲ. ಅಮೀನ ಅಥವಾ ಕ್ರಮಚಾರಿಗಳನ್ನು ಖಾಯಂ ಗುತ್ತಾ ಪ್ರದೇಶಗಳಲ್ಲಿ ಕೆಲವೆಡೆ ನೇಮಕ ಮಾಡಿ ಬೆಳೆಯ ವರದಿಮಾಡುವಕೆಲಸವನ್ನು ಅವರಿಗೊಪ್ಪಿಸಿರುವ ಪ್ರಯೋಗಗಳನ್ನು ಅದೇ ರೀತಿಯ ಇತರ ಪ್ರದೇಶಗಳಿಗೂ ವಿಸ್ತರಿಸಬೇಕು. 3. ಪಟವಾರಿಯ ಅಥವಾ ಅಮೀನನ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶಗಳನ್ನು ಯೋಗ್ಯವಾದ ರೀತಿಯಲ್ಲಿ ಕಡಿಮೆ ಮಾಡಿ, ಅವರಿಗೆ ಆವಶ್ಯಕವಾದಾಗ ಹೊಲದಿಂದ ಹೊಲಕ್ಕೆ ಹೋಗಿ ಪರಿಶೀಲಿಸಿ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಲು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. 4. ಶಿಷ್ಟ ಪ್ರಸಾಮಾನ್ಯ ಉತ್ಪತ್ತಿಯನ್ನು ಯಾದೃಚ್ಛಿಕ ಪ್ರತಿದರ್ಶಿ ತಂತ್ರದ ಮೇಲೆ ನಡೆಸಿದ ಬೆಳೆಯ ಕಟಾವಿನ ಪ್ರಯೋಗಗಳ ಆಧಾರದ ಮೇಲೆ ಗುಣಾಂಕ ಹಾಕಬೇಕು. 5. ಅನ್ಯಕ್ರಮವಾಗಿ ಉತ್ಪತ್ತಿಯ ಅಂದಾಜನ್ನು ಕಾಲಸ್ಥಿತಿ ಗುಣಾಂಕ ಮತ್ತು ಶಿಷ್ಟಪ್ರಸಾಮಾನ್ಯ ಉತ್ಪತ್ತಿಯೊಡನೆ ತಳಕುಹಾಕದೆ ಪಂಜಾಬಿನಲ್ಲಿ ಈಗ ಮಾಡುತ್ತಿರುವಂತೆ ನೇರವಾಗಿ ಗೊತ್ತುಮಾಡಬಹುದು. 6. ಎಲ್ಲ ರಾಜ್ಯಗಳಲ್ಲೂ ಪ್ರಕೃತ ಜಾನುವಾರುಗಳ ಅಂಕಿ ಅಂಶಗಳನ್ನು 5 ವರ್ಷಕ್ಕೊಮ್ಮೆ ಸಂಗ್ರಹಿಸಬೇಕು ಮತ್ತು ವರ್ಗೀಕರಣಕ್ರಮ ಎಲ್ಲ ಕಡೆಯಲ್ಲಿ ಒಂದೇ ಸಮವಾಗಿರಬೇಕು. ಹಾಲಿನ ಉತ್ಪಾದನೆ, ಹಾಲಿನಿಂದ ಮಾಡಿದ ವಸ್ತುಗಳು, ಪ್ರಕೃತ ಜಾನುವಾರುಗಳ ರಕ್ಷಣೆ, ದನಕರುಗಳ ಮರಣ ಮುಂತಾದ ಹೆಚ್ಚಿನ ಮಾಹಿತಿಗಳನ್ನು ಗಣತಿಯಲ್ಲಿ ಸೇರಿಸಬೇಕು. 7. ನಾನಾ ವಿಧದ ಅಂಕಿ ಅಂಶಗಳ ವಿವರಗಳನ್ನು ಸರಿಸಮಾನಗೊಳಿಸಲು ಕೇಂದ್ರ ಸಂಸ್ಥೆ ಇರುವುದು ಒಳಿತು. ಕೇಂದ್ರೀಯ ಸಾಂಖ್ಯಿಕ ಸಂಸ್ಥೆ ಈಗ ಏರ್ಪಟ್ಟಿದೆ. 8. ಹೊಲಗದ್ದೆಗಳ ಆಳುಗಳು ಅಥವಾ ಹಿಡುವಳಿ ಜಮೀನುಗಳ ವಿಸ್ತೀರ್ಣ ಮತ್ತು ತಾಕುಗಳ ಸಲೆ–ಇವಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸಬೇಕು. ಒಡೆತನದ ಭೂಮಿ ಮತ್ತು ಸಾಗುವಳಿ ಭೂಮಿಗಳಿಗೆ ಪ್ರತ್ಯೇಕ ಅಂಕಿಗಳನ್ನು ಕೊಡಬೇಕು. 9. ವಾರದ ಸಾಗುವಳಿ ಮತ್ತು ಗುತ್ತಿಗೆ ಸಾಗುಳಿಯ ಪ್ರಕಾರ ಜಮೀನುಗಳನ್ನು ವಿಂಗಡಿಸಿ, ಎಕರೆವಾರು ಮಾಹಿತಿಗಳನ್ನು ಒದಗಿಸಬೇಕು. 10. ಬೇಸಾಯದ ಮುಟ್ಟುಗಳು, ಸಲಕರಣೆ, ಪಶುಸಂಗೋಪನ, ಜಾನುವಾರುಗಳ ರಕ್ಷಣೆ, ಗೊಬ್ಬರಗಳು, ಬೀಜಗಳು, ಬೇಸಾಯದ ಕೆಲಸಗಾರರ ಕೂಲಿ, ಕಟ್ಟಡಗಳ ರಕ್ಷಣೆ ಕಾಲುವೆಗಳು, ಬಾವಿಗಳು, ಇವುಗಳ ರಕ್ಷಣೆ ಮತ್ತು ಮರಮುಟ್ಟು ಇವುಗಳ ವೆಚ್ಚ, ಜಮೀನುದಾರರಿಗೆ ಕೊಡುವ ಗುತ್ತಿಗೆ, ತೆರಿಗೆ ಮತ್ತು ಕಂದಾಯ ಮುಂತಾದವುಗಳಿಗೆ ತೆರತಕ್ಕ ಹಣ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಬೇಕು. 11. ಬೇಸಾಯದ ಕೆಲಸಗಾರರ ಸಂಖ್ಯೆ ಮತ್ತು ಅವರ ಕೂಲಿಯ ದರಗಳು. ಈ ಅಂಕಿಗಳು ಪ್ರಕೃತ ತೋಟ ಮತ್ತು ಕಾನುಗಳ (ಎಸ್ಟೇಟ್ಸ್) ಕೆಲಸಗಾರರಿಗೆ ಮಾತ್ರ ದೊರೆಯುವುದು. 12. ಬೇಸಾಯದ ಸಾಲಗಳು ಮತ್ತು ಬಡ್ಡಿಯ ದರಗಳು 13. ಮನೆ ಖರ್ಚಿಗಾಗಿ ಉಳಿಸಿಕೊಂಡು ಬೆಳೆಯ ಭಾಗ ಮತ್ತು ಮಾರಿದ ಅಥವಾ ಬೇರೆ ರೀತಿಯಲ್ಲಿ ವಿಲೆ ಮಾಡಿದ ಬೆಳೆಯ ಪ್ರಮಾಣ.

ಬೇಸಾಯದ ಅಂಕಿ ಅಂಶಗಳ ಸಂಗ್ರಹ ಮತ್ತು ಅರ್ಥವಿವರಣೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಆಸಕ್ತಿಯನ್ನು ತೋರುತ್ತಲಿವೆ. ಖಾತರಿಯಾದ ಮತ್ತು ತುಲನಾತ್ಮಕ ವಿಮರ್ಶೆ ಮಾಡಲು ಸಾಧ್ಯವಾಗುವಂಥ ಅಂಕಿ ಅಂಶಗಳು ಭಾರತದ ಎಲ್ಲ ರಾಜ್ಯಗಳಿಗೂ ದೊರೆಯುವಂತಾಗಿ ಅವು ದೇಶಾಭಿವೃದ್ಧಿಗೆ ಸಹಾಯಕಗಳಾಗಬೇಕು. (ಎಂ.ವಿ.ಜೆ.)

**ಕೃಷಿ ಅರ್ಥಶಾಸ್ತ್ರ :** ಅರ್ಥಶಾಸ್ತ್ರದ ನಿಯಮಗಳನ್ನು ಕೃಷಿಯ ಅಭಿವೃದ್ಧಿಗೆ ಅನ್ವಯಿಸುವ ಸುಸಂಬದ್ಧ ವಿಚಾರ. ಕೃಷಿ ಮಾನವ ಸಮಾಜದ ಪ್ರಾಚೀನ ಹಾಗೂ ಮೂಲಭೂತ ಉದ್ಯಮ. ಜನತೆಗೆ ಆಹಾರೋತ್ಪನ್ನಗಳನ್ನೂ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳನ್ನೂ ಒದಗಿಸುವ ಕೃಷಿ ಉದ್ಯಮ ವಿಶ್ವದ ಆರ್ಥಿಕ ಜೀವನದಲ್ಲಿ ಇಂದಿಗೂ ಪಾರಮ್ಯ ಹೊಂದಿದೆ.

ಮಾನವ ಕೃಷಿಯನ್ನು ಕಂಡುಹಿಡಿದ ಮೇಲೆ ಅನೇಕ ಶತಮಾನಗಳ ಕಾಲ ಕೃಷಿಯ ಮೂಲಧ್ಯೇಯ ಸರಳವಾಗಿತ್ತು. ತನ್ನ ಕುಟುಂಬದ ಜನರ ನಿರ್ವಹಣೆಗಾಗಿ ಆಹಾರವನ್ನು ಉತ್ಪಾದಿಸುವುದು ಪ್ರತಿ ರೈತನ ಪ್ರಧಾನ ಉದ್ದೇಶವಾಗಿತ್ತು. ಆದರೆ ಈಗ

ಕೈಗಾರಿಕಾ ಕ್ರಾಂತಿ, ವಾಣಿಜ್ಯದ ಬೆಳವಣಿಗೆ ಮತ್ತು ಸಾರಿಗೆಸಂಪರ್ಕಗಳ ಅಭಿವೃದ್ಧಿಯ ದೆಸೆಯಿಂದಾಗಿ ಕೃಷಿಯ ಮೂಲಧ್ಯೇಯ ಬದಲಾಗಿದೆ. ಕೃಷಿಯು ವಾಣಿಜ್ಯವಾಗಿದೆ. ಆಹಾರ ಧಾನ್ಯಗಳು ಮತ್ತಿತರ ಕೃಷಿ ಉತ್ಪನ್ನಗಳನ್ನು ಅನುಕೂಲತಮ ಮಟ್ಟದಲ್ಲಿ ಉತ್ಪಾದಿಸಿ ಮಾರುಕಟ್ಟೆಗೆ ಸಾಗಿಸಿ ಅವುಗಳ ಮಾರಾಟದ ಮೂಲಕ ಗರಿಷ್ಠ ಆರ್ಥಿಕ ಲಾಭ ಪಡೆಯುವುದು ಇಂದು ಕೃಷಿಗಾರರ ಮುಖ್ಯ ಉದ್ದೇಶವಾಗಿದೆ. ಇತರ ಉದ್ಯಮಗಳ ಸಾಧನಸಂಪತ್ತುಗಳಂತೆ ಅತಿ ವಿರಳವಾಗಿರುವ ಕೃಷಿಯ ಸಾಧನಸಂಪತ್ತುಗಳನ್ನು ಅತ್ಯಂತ ದಕ್ಷತೆಯಿಂದ ಹಾಗೂ ಅತ್ಯಂತ ಲಾಭದಾಯಕವಾಗಿ ಉಪಯೋಗಿಸಿಕೊಳ್ಳುವುದು ಹೇಗೆಂಬುದನ್ನು ಕೃಷಿ ಅರ್ಥಶಾಸ್ತ್ರ ಅಭ್ಯಸಿಸುತ್ತದೆ.

ಕೈಗಾರಿಕೋದ್ಯಮಗಳ ಬೆಳವಣಿಗೆ ಹಾಗೂ ನಗರೀಕರಣ ಅವ್ಯಾಹತವಾಗಿ ಆಗುತ್ತಿರುವುದರಿಂದ ಕೃಷಿ ಕ್ಷೇತ್ರದಿಂದ ಹೊರಗಿರುವವರ ಸಂಖ್ಯೆ ಏರುತ್ತಿದೆ. ಆ ಜನಕ್ಕೆಲ್ಲ ಆಹಾರ ವಸ್ತುಗಳನ್ನೂ ಕೈಗಾರಿಕಾ ಉದ್ಯಮಗಳಿಗೆ ಕಚ್ಚಾಸಾಮಗ್ರಿಗಳನ್ನೂ ಹೆಚ್ಚು ಹೆಚ್ಚಾಗಿ ಕೃಷಿಕ್ಷೇತ್ರ ಒದಗಿಸಬೇಕಾಗುತ್ತದೆ. ಹಿಗ್ಗುತ್ತಿರುವ ಈ ಬೇಡಿಕೆಗಳನ್ನು ಪೂರೈಸಲು ಕೃಷಿ ಉದ್ಯಮವನ್ನು ಆಧುನಿಕಗೊಳಿಸಿ ಈ ಕ್ಷೇತ್ರದಲ್ಲಿ ಅನುಕೂಲತಮ ಮಟ್ಟದಲ್ಲಿ ಉತ್ಪಾದಿಸುವುದು ಅನಿವಾರ್ಯವಾಗಿದೆ. ಈ ಸಂಬಂಧವಾಗಿ ಕೈಗೊಳ್ಳಬೇಕಾದ ವೈಜ್ಞಾನಿಕ ಹಾಗೂ ತಾಂತ್ರಿಕ ಕ್ರಮಗಳು ಮತ್ತು ಎದುರಿಸಬೇಕಾದ ಸಮಸ್ಯೆಗಳು ವಿಶಿಷ್ಟವೂ ವ್ಯಾಪಕವೂ ಆಗಿವೆ. ವ್ಯವಸಾಯದಿಂದ ಪೂರ್ಣ ಆರ್ಥಿಕ ಪ್ರಯೋಜನ ಪಡೆಯಲು ಅನುವಾಗುವ ಮುಖ್ಯ ಅಂಶಗಳನ್ನು ಅರ್ಥಶಾಸ್ತ್ರ ಒಳಗೊಂಡಿದೆ.

ಕೃಷಿ ಅರ್ಥಶಾಸ್ತ್ರವನ್ನು ಕುರಿತ ಈ ಲೇಖನದ ವಿಂಗಡಣೆ ಈ ರೀತಿ ಇದೆ : 1. ಕೃಷಿ ಅರ್ಥಶಾಸ್ತ್ರದ ಬೆಳವಣಿಗೆ, 2. ಕೃಷಿ ಉತ್ಪನ್ನದ ಬೆಲೆಗಳು ಹಾಗೂ ವರಮಾನ, 3. ಜಮೀನಿನ ಮೌಲ್ಯಮಾಪನ, 4. ಕೃಷಿ ಸಾಲ, 5. ಕೃಷಿ ವಿಮೆ, 6. ಕೃಷಿ ತೆರಿಗೆಗಳು, 7. ಕೃಷಿ ಉತ್ಪನ್ನಗಳ ಮಾರಾಟ, 8. ಕೃಷಿ ಮತ್ತು ಸಹಕಾರ, 9. ಕೃಷಿ ಕಾರ್ಮಿಕರು 10. ಕೃಷಿ ಕಾನೂನು. ಇವುಗಳಲ್ಲಿ ಮುಖ್ಯವಾದ ಕೆಲವು ವಿಭಾಗಗಳಿಗೆ ಸಂಬಂಧಿಸಿದಂತೆ ವಿವರವಾದ ಪ್ರತ್ಯೇಕ ಲೇಖನಗಳೂ ಇವೆ.

**ಕೃಷಿ ಅರ್ಥಶಾಸ್ತ್ರದ ಬೆಳವಣಿಗೆ :** ಕೃಷಿಯ ಆರ್ಥಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ 18 ಮತ್ತು 19ನೆಯ ಶತಮಾನಗಳಲ್ಲಿ ಇಂಗ್ಲಿಷ್ ಅರ್ಥಶಾಸ್ತ್ರಜ್ಞರಾದ ಆಡಂ ಸ್ಮಿತ್ ಮತ್ತು ರಿಕಾರ್ಡೋ ಹಾಗೂ ಫ್ರಾನ್ಸ್, ಜರ್ಮನಿ ಮತ್ತು ಆಸ್ಟ್ರಿಯಗಳ ಅರ್ಥಶಾಸ್ತ್ರಜ್ಞರು ತಮ್ಮ ಬರವಣಿಗೆಗಳಲ್ಲಿ ಸಾಕಷ್ಟು ಚರ್ಚೆ ನಡೆಸಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 1890ರ ಅನಂತರ ಕೃಷಿ ಅರ್ಥಶಾಸ್ತ್ರದ ಅಧ್ಯಯನಕ್ಕೆ ಗಮನ ಕೊಡಲಾಯಿತು. 20ನೆಯ ಶತಮಾನದ ಆದಿಭಾಗದಲ್ಲಿ ಅಲ್ಲಿಯ ಕೆಲವು ವಿಶ್ವವಿದ್ಯಾಲಯಗಳಲ್ಲೂ ಹಾಗೂ ಲ್ಯಾಂಡ್ ಗ್ರಾಂಟ್ ಕಾಲೇಜುಗಳಲ್ಲೂ ಕೃಷಿ ಅರ್ಥಶಾಸ್ತ್ರದ ಅಧ್ಯಯನಕ್ಕೆ ವಿಶೇಷ ಪ್ರೋತ್ಸಾಹ ದೊರಕಿತು. ಹೆನ್ರಿ ಸಿ. ಟೇಲರ್ ಮತ್ತು ನಿಕ್ಸನ್ ಕಾರ್ವರ್ ಕೃಷಿ ಅರ್ಥಶಾಸ್ತ್ರದ ಬಗ್ಗೆ ಪ್ರಕಟಿಸಿದ ಪುಸ್ತಕಗಳು ಅದರ ಶಾಸ್ತ್ರೀಯ ಅಧ್ಯಯನಕ್ಕೆ ಸಹಾಯಕವಾದುವು. ಅನಂತರ ಕೃಷಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ವ್ಯಾಪಕವಾಗಿ ಬರವಣಿಗೆಗಳು ಬೆಳಕಿಗೆ ಬರತೊಡಗಿದವು. 1930ರ ಆರ್ಥಿಕ ಹಿಂಜರಿತ ಹಾಗೂ ಇಳಿತಗಳಿಂದ ಕೃಷಿಕ್ಷೇತ್ರದ ಮೇಲೆ ವಿಷಮ ಪರಿಣಾಮವುಂಟಾಯಿತು. ಈ ಆರ್ಥಿಕ ಮುಗ್ಗಟ್ಟಿನಿಂದ ಕೃಷಿಯನ್ನು ಮೇಲೆತ್ತಲು ಕೃಷಿ ಉತ್ಪನ್ನ ಬೆಲೆಗಳಿಗೆ ಬೆಂಬಲಕೊಡುವ ಅಗತ್ಯ, ಹೆಚ್ಚುವರಿ ಉತ್ಪನ್ನವನ್ನು ಕಡಿಮೆಗೊಳಿಸುವುದು, ಕೃಷಿ ವರಮಾನವನ್ನು ಹೆಚ್ಚಿಸುವುದು, ಕೃಷಿ ಭೂಮಿ ಬಳಕೆಯ ಬಗ್ಗೆ ಯೋಜನೆ, ಕೃಷಿಪರ ಧೋರಣೆ ತಾಳಲು ಸರ್ಕಾರದ ಮೇಲೆ ಒತ್ತಾಯ ಮುಂತಾದ ವಿಷಯಗಳಲ್ಲಿ ವಿಚಾರಗಳ ಬೆಳವಣಿಗೆ ಕಂಡುಬಂತು. ಈ ದೇಶಗಳಲ್ಲಿ ಕೃಷಿ ಹಿಡುವಳಿಗಳ ವ್ಯವಸ್ಥೆ, ಕೃಷಿ ಉತ್ಪನ್ನಕ್ಕೆ ಸಾಲದ ಸೌಲಭ್ಯ, ಖರ್ಚಿನ ಲೆಕ್ಕಾಚಾರ, ಬೆಲೆಗಳ ನಿಷ್ಕರ್ಷೆ ಈ ಬಗ್ಗೆ ವಿಚಾರಗಳ ಬೆಳವಣಿಗೆಯಾಯಿತಲ್ಲದೆ ಕೃಷಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನೀತಿನಿರೂಪಣೆಯ ಬಗ್ಗೆ ಸಹ ಚರ್ಚೆ ನಡೆಯಿತು.

ಎರಡನೆಯ ಮಹಾಯುದ್ಧದ ಅನಂತರ ಕೃಷಿ ಉತ್ಪನ್ನಗಳ ಬೇಡಿಕೆಗಳಲ್ಲಿ ಹೆಚ್ಚಳ, ಜನಸಂಖ್ಯೆಯ ಸ್ಫೋಟ ಇತ್ಯಾದಿ ಕಾರಣಗಳಿಂದಾಗಿ ಕೃಷಿ ಅರ್ಥಶಾಸ್ತ್ರದ ವಿಚಾರ ಮತ್ತು ಅನ್ವಯಕ್ಕೆ ಪ್ರಾಮುಖ್ಯತೆ ದೊರೆಯಿತು. ಏಷ್ಯದ ಅಭಿವೃದ್ಧಿಶೀಲ ರಾಷ್ಟ್ರಗಳ ಅನೇಕ ವಿದ್ವಾಂಸರು, ಸಂಶೋಧಕರು ಮತ್ತು ಆಡಳಿತಗಾರರು ಮುಂದುವರಿದ ರಾಷ್ಟ್ರಗಳಲ್ಲಿ ಕೃಷಿ ಅರ್ಥಶಾಸ್ತ್ರದಲ್ಲಿ ಪ್ರಾವೀಣ್ಯ ಹೊಂದಿದರು. ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ ಕೃಷಿ ಅರ್ಥಶಾಸ್ತ್ರದ ಬಗ್ಗೆ ಉಪಯುಕ್ತ ವಿಚಾರಗಳನ್ನೂ ಅಂಕಿ ಅಂಶಗಳನ್ನೂ ಕಾಲಕಾಲಕ್ಕೆ ಒದಗಿಸುತ್ತ ಬಂತು. ಎಲ್ಲ ಪ್ರಮುಖ ರಾಷ್ಟ್ರಗಳಲ್ಲೂ ಕೃಷಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ತಜ್ಞ ಸಂಸ್ಥೆಗಳು ಸಂಶೋಧನ ಪತ್ರಿಕೆಗಳನ್ನು ಪ್ರಕಟಿಸುತ್ತಿವೆ. ಇವುಗಳಲ್ಲಿ ಮುಖ್ಯವಾಗಿ ಗ್ರೇಟ್ ಬ್ರಿಟನಿನ ದಿ ಅಗ್ರಿಕಲ್ಚರಲ್ ಎಕನಾಮಿಕ್ಸ್ ಸೊಸೈಟಿ, ಅಮೆರಿಕ ಸಂಯುಕ್ತ ಸಂಸ್ಥಾನದ ಅಮೆರಿಕನ್ ಎಕನಾಮಿಕ್ ಅಸೋಸಿಯೇಷನ್ ಮತ್ತು ಭಾರತದ ಇಂಡಿಯನ್ ಸೊಸೈಟಿ ಆಫ್ ಅಗ್ರಿಕಲ್ಚರಲ್ ಎಕನಾಮಿಕ್ಸ್ ಈ ಸಂಸ್ಥೆಗಳು ಪ್ರಕಟಿಸುತ್ತಿರುವ ನಿಯತಕಾಲಿಕ ಪತ್ರಿಕೆಗಳು ಕೃಷಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಪ್ರಬುದ್ಧ ಸಂಶೋಧನ ಲೇಖನಗಳನ್ನು ಒಳಗೊಂಡಿರುತ್ತವೆ. ಮೂರು ವರ್ಷಗಳಿಗೊಮ್ಮೆ ಸೇರುವ ಅಂತಾರಾಷ್ಟ್ರೀಯ ಕೃಷಿ ಅರ್ಥಶಾಸ್ತ್ರಜ್ಞರ ಸಮ್ಮೇಳನದಲ್ಲಿ ಕೃಷಿ ಆರ್ಥಿಕ ಮುನ್ನಡೆಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ವಿಚಾರಗಳ ಬಗ್ಗೆ ವಿವಿಧ ದೇಶಗಳ ಖ್ಯಾತ ತಜ್ಞರು ವಿಚಾರವಿನಿಮಯ ನಡೆಸುತ್ತಾರೆ.

ಭಾರತದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಅರ್ಥಶಾಸ್ತ್ರದ ಪಠ್ಯಕ್ರಮದಲ್ಲಿ ಕೃಷಿ ಅರ್ಥಶಾಸ್ತ್ರದ ಅಧ್ಯಯನಕ್ಕೆ ಗಮನ ಕೊಡಲಾಗಿದೆ. ಕೃಷಿ ವಿಶ್ವವಿದ್ಯಾಲಯಗಳಲ್ಲೂ ಸ್ನಾತಕೋತ್ತರ ತರಗತಿಗಳಲ್ಲೂ ಕೃಷಿ ಅರ್ಥಶಾಸ್ತ್ರ ಮತ್ತು ಗ್ರಾಮೀಣ ಅರ್ಥಶಾಸ್ತ್ರದ ಆಳವಾದ ಅಧ್ಯಯನಕ್ಕೆ ಅವಕಾಶವಿದೆ.

**ಕೃಷಿ ಉತ್ಪನ್ನದ ಬೆಲೆಗಳು ಮತ್ತು ವರಮಾನ :** ಕೃಷಿ ಉತ್ಪನ್ನದ ಬೆಲೆಗಳಲ್ಲಿ ಅಸ್ಥಿರತೆ ಅತಿಯಾಗಿರುತ್ತದೆ. ಆದ್ದರಿಂದ ಕೃಷಿಯನ್ನೇ ನಂಬಿರುವವರ ವರಮಾನದಲ್ಲಿ ಅನಿಶ್ಚಿತ ಪರಿಸ್ಥಿತಿ ಸದಾ ಇರುತ್ತದೆ. ಸರ್ವೇಸಾಧಾರಣವಾಗಿ ಬೇಸಾಯಗಾರರ ವರಮಾನ ಇತರ ಉದ್ಯಮಿಗಳಿಗಿಂತ ಕಡಿಮೆ ಇರುತ್ತದೆ.

ಇತರ ಎಲ್ಲ ವಸ್ತುಗಳ ಬೆಲೆಗಳು ನಿರ್ಧರಿಸುವ ರೀತಿಯಲ್ಲೇ ವ್ಯವಸಾಯೋತ್ಪನ್ನಗಳ ಬೆಲೆಗಳೂ ನಿರ್ಧರಿಸಲ್ಪಡುತ್ತವೆ. ಸಾಮಾನ್ಯವಾಗಿ ಬೆಲೆಗಳ ನಿರ್ಣಾಯಕ ಅಂಶಗಳು ಯಾವುವೆಂದರೆ : 1. ವಸ್ತುಗಳಿಗೆ ಬೇಡಿಕೆ ಮತ್ತು ಅವುಗಳ ಸರಬರಾಜಿನ ಸ್ಥಿತಿ, 2. ಹಣದ ಚಲಾವಣೆಯ ಪರಿಮಾಣ, 3. ನಗದುರೂಪದಲ್ಲಿ ಹಣ ಇಟ್ಟುಕೊಳ್ಳುವ ಬಗ್ಗೆ ಜನರ ಒಲವು.

ಕೃಷಿ ಉತ್ಪನ್ನಗಳ ಸರಬರಾಯಿ ಅವುಗಳಿಗೆ ಇರುವ ಬೇಡಿಕೆಗನುಗುಣವಾಗಿ ಕ್ಷಿಪ್ರದಲ್ಲಿ ಹೊಂದಿಕೊಳ್ಳುವುದಿಲ್ಲ. ಒಂದು ವೇಳೆ ಬೇಡಿಕೆ ಕುಗ್ಗಿದರೆ ಉತ್ಪನ್ನದ ಪರಿಮಾಣ ಕೂಡಲೇ ಇಳಿಯಲು ಸಾಧ್ಯವಿಲ್ಲ. ಆದ್ದರಿಂದ ಬೇಡಿಕೆ ಇಳಿಮುಖವಾದಾಗ ಬೆಲೆಗಳ ಇಳಿತ ತೀವ್ರವಾಗಿ, ಕೃಷಿಗಾರರಿಗೆ ಬರುವ ವರಮಾನದಲ್ಲಿ ಕಡಿತ ಬೀಳುತ್ತದೆ. ಆರ್ಥಿಕ ಹಿಂಜರಿತ ಹಾಗೂ ಇಳಿತದ ಕಾಲದಲ್ಲಂತೂ ಕೈಗಾರಿಕೋತ್ಪನ್ನಗಳ ಬೆಲೆಗಳಿಗಿಂತ ಬೇಸಾಯದ ವಸ್ತುಗಳ ಬೆಲೆ ತೀವ್ರವಾಗಿ ಇಳಿದು ಕೃಷಿಗಾರರಿಗೆ ಆರ್ಥಿಕ ಸಂಕಷ್ಟ ಹೆಚ್ಚಾಗುತ್ತದೆ; ವರಮಾನ ಕುಸಿಯುತ್ತದೆ.

ಸರ್ವೇಸಾಮಾನ್ಯವಾಗಿ ಕೃಷಿ ಉದ್ಯಮದಲ್ಲಿರುವ ದುಡಿಮೆಗಾರರ ಉತ್ಪನ್ನದ ಸಾಮರ್ಥ್ಯ ಕಡಿಮೆ ಇರುತ್ತದೆ. ಆದ್ದರಿಂದ ಅವರ ವರಮಾನವೂ ಕಡಿಮೆ. ಅಧಿಕ ಉತ್ಪನ್ನದ ಸಾಮರ್ಥ್ಯ ಪಡೆದಿರುವ ಮುಂದುವರಿದ ರಾಷ್ಟ್ರಗಳ ವ್ಯವಸಾಯೋದ್ಯಮಿಗಳೂ ಉನ್ನತಮಟ್ಟದ ವರಮಾನವನ್ನು ನಿರೀಕ್ಷಿಸಲಾಗುತ್ತಿಲ್ಲ. ಆ ದೇಶಗಳಲ್ಲಿ ರಾಷ್ಟ್ರೀಯ ವರಮಾನ ಏರಿ ತಲಾ ವರಮಾನದಲ್ಲಿ ಏರಿಕೆಯಾದರೂ ಹೆಚ್ಚುವರಿ ಆದಾಯಕ್ಕನುಗುಣವಾಗಿ ಆಹಾರಧಾನ್ಯಗಳಿಗೆ ಬೇಡಿಕೆ ಏರುವುದಿಲ್ಲ. ಆದಾಯದ ಹೆಚ್ಚಳವಾದಾಗಲೆಲ್ಲ ಕೈಗಾರಿಕಾ ವಸ್ತುಗಳು ಮತ್ತಿತರ ಭೋಗವಸ್ತುಗಳಿಗೆ ಬೇಡಿಕೆ ತೀವ್ರವಾಗಿ ಏರುತ್ತದೆ. ಆದ್ದರಿಂದ ಮುಂದುವರಿದ ದೇಶದಲ್ಲಾಗಲಿ ಹಿಂದುಳಿದ ದೇಶದಲ್ಲಾಗಲಿ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ದೃಢತೆ ತರುವುದು ಮತ್ತು ಉತ್ಪಾದಕರಿಗೆ ನ್ಯಾಯೋಚಿತ ವರಮಾನ ದೊರಕಿಸುವುದು ಪ್ರಭುತ್ವದ ಆದ್ಯಕರ್ತವ್ಯವಾಗಿದೆ. ಈಚಿನ ವರ್ಷಗಳಲ್ಲಿ ಎಲ್ಲ ದೇಶಗಳ ಸರ್ಕಾರಗಳೂ ಈ ಕರ್ತವ್ಯವನ್ನು ಮನಗಂಡು ಬೆಲೆಗಳಿಗೆ ಅಧಿಕೃತ ಬೆಂಬಲ ಮತ್ತು ವರಮಾನದಲ್ಲಿ ದೃಢತೆಯ ಭರವಸೆ ಕೊಡುವ ಬಗ್ಗೆ ಹಲವಾರು ಕ್ರಮಗಳನ್ನು ಕೈಗೊಂಡಿವೆ.

1930ರ ಪೂರ್ವದಲ್ಲಿ ಸರ್ಕಾರಗಳು ಸಾಮಾನ್ಯವಾಗಿ ಆಹಾರಧಾನ್ಯಗಳನ್ನು ಪಟ್ಟಣಿಗರಿಗೆ ಒದಗಿಸುವ ಸಂಬಂಧವಾಗಿ ನೀತಿನಿರೂಪಣೆ ಮಾಡಿಕೊಳ್ಳುತ್ತಿದ್ದುವೇ ಹೊರತು ಬೇಸಾಯಗಾರರಿಗೆ ವರಮಾನದ ಭರವಸೆ ನೀಡುವ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳುತ್ತಿರಲಿಲ್ಲ. 1930ರ ಅನಂತರ ಉಂಟಾದ ಆರ್ಥಿಕ ಇಳಿತದ ಪರಿಣಾಮವಾಗಿ ಅನೇಕ ದೇಶಗಳಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳಿಗೆ ಬೆಂಬಲ ಕೊಡುವ ನೀತಿಯನ್ನೂ ಕೃಷಿಯಲ್ಲಿ ತೊಡಗಿರುವವರಿಗೆ ವರಮಾನದ ಭದ್ರತೆಯನ್ನೂ ಒದಗಿಸುವ ಕ್ರಮಗಳನ್ನು ಸರ್ಕಾರಗಳು ಜಾರಿಗೆ ತಂದುವು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 1933ರ ಬೇಸಾಯದ ಹೊಂದಾವಣಿ ಕಾಯಿದೆಯ ಪ್ರಕಾರ ಹತ್ತಿಯ ಬೆಳೆಯನ್ನು ಅದರ ಹಿಂದಿನ ವರ್ಷದ ಉತ್ಪನ್ನಕ್ಕಿಂತ ಶೇಕಡ 25ರಷ್ಟು, ತಂಬಾಕಿನ ಬೆಳೆಯನ್ನು ಶೇಕಡ 33ರಷ್ಟು ಕಡಿಮೆಯ ಮಟ್ಟಕ್ಕೆ ಕಡ್ಡಾಯವಾಗಿ ಇಳಿಸಲಾಯಿತು. ಗ್ರೇಟ್ ಬ್ರಿಟನಿನಲ್ಲಿ 1932–34ರಲ್ಲಿ ಆಲೂಗೆಡ್ಡೆ ಬೆಳೆಯುವ ಪ್ರದೇಶದ ವಿಸ್ತೀರ್ಣವನ್ನು ಕಡ್ಡಾಯವಾಗಿ ಇಳಿಸಿ ನಿಗದಿಗೊಳಿಸಲಾಯಿತು. ಬ್ರೆಜಿಲಿನಲ್ಲಿ 1931 ರಿಂದ 1937 ರ ವರೆಗೆ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಸರಬರಾಜಾಗುತ್ತಿದ್ದ ಕಾಫಿ ಬೀಜದ ಪರಿಮಾಣವನ್ನು ಕಡ್ಡಾಯವಾಗಿ ಕಡಿಮೆ ಮಾಡುವ ಕ್ರಮವನ್ನು ಅಲ್ಲಿಯ ಸರ್ಕಾರ ಕೈಗೊಂಡಿತು. ಅಲ್ಲದೆ ಉತ್ಪನ್ನವನ್ನು ಕಡಿಮೆ ಮಾಡುವುದಕ್ಕೋಸ್ಕರ ಹೊಸದಾಗಿ ಕಾಫಿ ಬೆಳೆಯುವುದರ ಮೇಲೆ ನಿರ್ಬಂಧ ಹಾಕಿದ್ದಲ್ಲದೆ ದಾಸ್ತಾನಾಗಿದ್ದ ಕಾಫಿ ಬೀಜದಲ್ಲಿ ಗಣನೀಯ ಭಾಗವನ್ನು ನಾಶಮಾಡಲಾಯಿತು. ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಬರುತ್ತಿದ್ದ ದಿನಸಿಗಳ ಪರಿಮಾಣವನ್ನು ಕಡಿಮೆ ಮಾಡಿ ಅವುಗಳ ಬೆಲೆಗಳು ಚೇತರಿಸಿಕೊಳ್ಳುವಂತೆ ಮಾಡುವುದು ಈ ಎಲ್ಲ ಕ್ರಮಗಳ ಉದ್ದೇಶವಾಗಿತ್ತು. 1945ರ ಅನಂತರ ಜಾರಿಗೆ ಬಂದ ಅಂತಾರಾಷ್ಟ್ರೀಯ ದಿನಸಿ ಯೋಜನೆಗಳ ಮೂಲಕ

ಬೆಲೆಗಳ ದೃಢತೆಯನ್ನು ಸಾಧಿಸಲು ಯತ್ನಿಸಲಾಯಿತು. ಅಲ್ಲದೆ ಪ್ರತಿಯೊಂದು ದೇಶದಲ್ಲೂ ಕೃಷಿ ಉತ್ಪನ್ನಗಳ ಬೆಲೆಗಳನ್ನು ಗೊತ್ತಾದ ಮಟ್ಟದಲ್ಲಿ ಕಾಪಾಡಿಕೊಂಡು ಬರಲು ಮತ್ತು ಕೃಷಿ ಉದ್ಯಮಿಗಳಿಗೆ ವರಮಾನದ ಭರವಸೆ ಕೊಡಲು ಕ್ರಮಗಳನ್ನು ಜಾರಿಗೆ ತರಲಾಗಿದೆ. ಈ ನೀತಿಯ ಅನುಸರಣೆಯಲ್ಲಿ ದೇಶದಿಂದ ದೇಶಕ್ಕೆ ವ್ಯತ್ಯಾಸವುಂಟು. ಅಮೆರಿಕದಲ್ಲಿ ಪ್ರತಿಯೊಂದು ದಿನಸಿಯ ಬೆಲೆಗೂ ಬೆಂಬಲ ಕೊಡುವ ವ್ಯವಸ್ಥೆ ಇದ್ದರೆ, ಜರ್ಮನಿ, ಸ್ವಿಟ್ಜರ್ಲೆಂಡ್ ಮತ್ತಿತರ ದೇಶಗಳಲ್ಲಿ ಕೃಷಿಯ ವರಮಾನವನ್ನು ಉತ್ತಮಪಡಿಸಲು ವಿಧಿವತ್ತಾದ ಕ್ರಮಗಳಿವೆ. ಮತ್ತೆ ಕೆಲವು ದೇಶಗಳಲ್ಲಿ ಕೃಷಿ ಕ್ಷೇತ್ರದಲ್ಲಿ ದುಡಿಯುವವರ ಗಳಿಕೆ ಕೈಗಾರಿಕಾಕ್ಷೇತ್ರದಲ್ಲಿರುವವರ ಗಳಿಕೆಗೆ ಸಮಾನವಾಗಿರಬೇಕೆಂಬ ನೀತಿಯನ್ನನುಸರಿಸಲಾಗುತ್ತಿದೆ. ದಿನಸಿಯ ಬೆಲೆಗಳು ಇಳಿಯುವುದನ್ನು ತಡೆಗಟ್ಟಲು ಸರ್ಕಾರ ಘೋಷಿಸುವ ಬೆಂಬಲದ ಬೆಲೆಗೆ ಅನುಗುಣವಾಗಿ ದಿನಸಿಗಳನ್ನು ಸರ್ಕಾರವೇ ಯಥೇಚ್ಛವಾಗಿ ಕೊಂಡು ದಾಸ್ತಾನು ಮಾಡುವ ವ್ಯವಸ್ಥೆ ಕೆಲವು ದೇಶಗಳಲ್ಲಿದೆ.

ಭಾರತದಲ್ಲಿ ಕೃಷಿ ಉತ್ಪನ್ನಗಳಿಗೆ ಸದೃಢ ಬೆಲೆಗಳನ್ನು ದೊರಕಿಸಿಕೊಡಲು ಈಚಿನ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳುತ್ತಿವೆ. ಆಹಾರಧಾನ್ಯಗಳಿಗೆ ಸೂಕ್ತ ಬೆಲೆ ದೊರಕಿಸಿಕೊಡುವ ಉದ್ದೇಶದಿಂದ 1964ರಲ್ಲಿ ದೇಶಾದ್ಯಂತ ಈ ವಸ್ತುಗಳ ಬೆಲೆಗಳಿಗೆ ಬೆಂಬಲ ಕೊಡುವ ನೀತಿಯನ್ನು ಜಾರಿಗೆ ತರಲಾಯಿತು. ಬೇಸಾಯದ ಉತ್ಪನ್ನ/ಪದಾರ್ಥಗಳ ಬೆಲೆಗಳನ್ನು ನಿಯಂತ್ರಣ ಮಾಡುವ ಸಂಬಂಧದಲ್ಲಿ ಸರಿಯಾದ ನೀತಿಯನ್ನು ನಿರೂಪಿಸಲು ಸಹಾಯವಾಗುವಂತೆ ಸರ್ಕಾರಕ್ಕೆ ಆಗಿಂದಾಗ್ಗೆ ಸಲಹೆ ಮಾಡಲು 1965ರಲ್ಲಿ ಕೃಷಿ ಬೆಲೆಗಳ ಆಯೋಗವನ್ನು ಕೇಂದ್ರ ಸರ್ಕಾರ ರಚಿಸಿತು. ಅದೇ ವರ್ಷ ಭಾರತದ ಆಹಾರ ಕಾರ್ಪೋರೇಷನ್ ಎಂಬ ಸಂಸ್ಥೆಯನ್ನು ಕೇಂದ್ರ ಸರ್ಕಾರ ಸ್ಥಾಪಿಸಿತು. ಹೆಚ್ಚುವರಿ ಬೆಳೆಯಾದ ವರ್ಷಗಳಲ್ಲಿ ಸರ್ಕಾರ ಘೋಷಿಸುವ ಬೆಂಬಲದ ಬೆಲೆಗೆ ಉತ್ಪನ್ನ/ಪದಾರ್ಥಗಳ ಈ ಸಂಸ್ಥೆ ಕೊಳ್ಳುತ್ತದೆ. ಅಭಾವದ ವರ್ಷಗಳಲ್ಲಿ ಸರ್ಕಾರ ತೀರ್ಮಾನ ಮಾಡುವ ಸಂಗ್ರಹಣ ಬೆಲೆಗೆ ಅನುಗುಣವಾಗಿ ಧಾನ್ಯಗಳನ್ನು ಕೊಳ್ಳುತ್ತದೆ.

ಆಹಾರಧಾನ್ಯಗಳಿಗಷ್ಟೇ ಅಲ್ಲದೆ ಕಬ್ಬು, ಸೆಣಬು ಮತ್ತು ಹತ್ತಿ–ಇವುಗಳಿಗೂ ಕನಿಷ್ಠ ಬೆಲೆಯ ಭರವಸೆ ಕೊಡುವ ನೀತಿಯನ್ನು ಕೈಗೊಳ್ಳಲಾಗಿದೆ. ಈಚಿನ ವರ್ಷಗಳಲ್ಲಿ ಒಟ್ಟಾರೆ ಅಭಾವ ಪರಿಸ್ಥಿತಿಯೇ ಪ್ರಧಾನವಾಗಿದ್ದುದರಿಂದಲೂ ಇತರ ಹಲವಾರು ಕಾರಣಗಳಿಂದಲೂ ವ್ಯವಸಾಯೋತ್ಪನ್ನಗಳ ಬೆಲೆಗಳು ಒಂದೇ ಸಮನೆ ಏರುತ್ತಿದ್ದು ಬೇಸಾಯಗಾರರ ವರಮಾನವೂ ಹೆಚ್ಚುತ್ತಿದೆ.

**ಜಮೀನಿನ ಮೌಲ್ಯಮಾಪನ :** ವ್ಯಕ್ತಿಗಳು ಅಥವಾ ಸಂಸ್ಥೆಗಳು ಹೊಂದಿರುವ ಜಮೀನಿನ ಮೌಲ್ಯವನ್ನು ನಿರ್ಧಾರ ಮಾಡುವ ಕೆಲಸವನ್ನು ತಜ್ಞರು ನಿರ್ವಹಿಸುತ್ತಾರೆ. ಜಮೀನಿನ ಮೌಲ್ಯವೆಷ್ಟೆಂದು ನಿರ್ಧಾರ ಮಾಡುವ ಆವಶ್ಯಕತೆ ಉಂಟು. ಜಮೀನಿನ ಆಧಾರದ ಮೇಲೆ ಸಾಲ ಎತ್ತಬೇಕಾದರೆ ಅದರ ಮೌಲ್ಯದ ಅರಿವು ಇರಬೇಕು. ಭೂ ಆಸ್ತಿಯನ್ನು ಮಾರುವವರಿಗೂ ಕೊಳ್ಳುವವರಿಗೂ ಇದರ ಅಗತ್ಯವುಂಟು. ಸರ್ಕಾರ ಭೂ ಆಸ್ತಿಯ ಮೇಲೆ ತೆರಿಗೆ ಹಾಕಬೇಕಾದರೂ ಅದಕ್ಕೆ ಆಸ್ತಿಯ ಮೌಲ್ಯವನ್ನು ಆಧಾರವಾಗಿ ಇರಿಸಿಕೊಳ್ಳುತ್ತದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಖಾಸಗಿ ಜಮೀನನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಳ್ಳುವುದಾದರೆ ಪರಿಹಾರವನ್ನು ನಿರ್ಧರಿಸಲು ಜಮೀನಿನ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಭೂ ಆಸ್ತಿಯ ಮೌಲ್ಯ ನಿಷ್ಕರ್ಷೆ ಮಾಡುವುದಕ್ಕಾಗಿಯೇ ವಿಶೇಷ ಶಿಕ್ಷಣ ಪಡೆದ ಪರಿಣತರು ಇರುತ್ತಾರೆ.

**ಕೃಷಿ ಸಾಲ :** ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿರುವ ಉದ್ಯಮಿಗಳಿಗೆ ಸಾಲ ಹೇಗೆ ಆವಶ್ಯಕವೋ ಬೇಸಾಯಗಾರರಿಗೂ ಹಾಗೇ ಆವಶ್ಯಕ. ಸ್ವಂತ ಬಂಡವಾಳದ ಅಭಾವವಿರುವೆಡೆ ಸಾಲದ ಅಗತ್ಯ ಇರುತ್ತದೆ. ಬೇಸಾಯಗಾರರು ಸಾಮಾನ್ಯವಾಗಿ ಸಣ್ಣ ಹಿಡುವಳಿಗಳಲ್ಲಿ ಕೃಷಿ ಮಾಡುವುದರಿಂದ ಉತ್ಪನ್ನದ ಪರಿಮಾಣ ಕಡಿಮೆ ಇರುತ್ತದೆ. ಬಂದ ವರಮಾನದಲ್ಲಿ ಬಹುಭಾಗ ಇಲ್ಲವೇ ಪೂರ್ಣಭಾಗ ಕುಟುಂಬ ನಿರ್ವಹಣೆಗೇ ವೆಚ್ಚವಾಗುತ್ತದೆ. ಆದ್ದರಿಂದ ಅವರಲ್ಲಿ ಹಣವನ್ನು ಉಳಿಸಿ ಬಂಡವಾಳವನ್ನು ಕೂಡಿಸಿಕೊಳ್ಳುವ ಸಾಮರ್ಥ್ಯ ಕಡಿಮೆ ಇರುತ್ತದೆ. ಆರ್ಥಿಕವಾಗಿ ಹಿಂದುಳಿದ ದೇಶಗಳಲ್ಲಂತೂ ಈ ಸಮಸ್ಯೆ ತೀವ್ರವಾಗಿದೆ.

ಕೃಷಿ ಉದ್ಯಮಕ್ಕೆ ಸಾಕಷ್ಟು ಬಂಡವಾಳ ಹೂಡಿದ ಹೊರತು ಉತ್ಪನ್ನದ ಪರಿಮಾಣ ಏರುವುದಿಲ್ಲ. ಉತ್ಪನ್ನ ಏರದೆ ವರಮಾನ ಏರಲು ಸಾಧ್ಯವಿಲ್ಲ. ಸ್ವಂತ ಬಂಡವಾಳ ಇಲ್ಲದ ಕಡೆ ಸಾಲದ ಸೌಲಭ್ಯ ಇದ್ದರೆ ರೈತರು ಸಾಲ ಪಡೆದು ಉತ್ತಮ ಬೀಜ, ಸಾರಪೋಷಕಗಳು, ನೀರಾವರಿ ಸೌಲಭ್ಯ, ತಾಂತ್ರಿಕ ಸಹಾಯ ಇತ್ಯಾದಿಗಳನ್ನು ಉಪಯೋಗಿಸಿ ಕೃಷಿಯನ್ನು ಅಭಿವೃದ್ಧಿಪಡಿಸಬಹುದು. ಇದರಿಂದ ವರಮಾನ ಹೆಚ್ಚುತ್ತದೆ. ಹೆಚ್ಚಿದ ವರಮಾನದಲ್ಲಿ ಒಂದು ಭಾಗವನ್ನು ಸಾಲದ ಪಾವತಿಗೆ ಉಪಯೋಗಿಸಬಹುದು. ಇದರಿಂದ ಕೃಷಿ ಲಾಭದಾಯಕವಾಗುತ್ತದೆ.

ಬೇಸಾಯಗಾರರಿಗೆ ಮೂರು ರೀತಿಯ ಸಾಲ ಬೇಕಾಗುತ್ತದೆ. ಅವು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳು. ವರ್ಷದ ಸಾಗುವಳಿಯ ಚಾಲ್ತಿ ಖರ್ಚಿನ ಪೂರೈಕೆಗೆ ಅಲ್ಪಾವಧಿ ಸಾಲ ಬೇಕಾಗುತ್ತದೆ. ಯಂತ್ರೋಪಕರಣಗಳನ್ನು, ಬೇಸಾಯದ ಎತ್ತುಗಳನ್ನು ಕೊಳ್ಳಲು ಮತ್ತು ಜಮೀನಿನ ಸುತ್ತ ಅಣೆ ಹಾಕಿಸಲು, ಚರಂಡಿ ತೋಡಿಸಲು ಮತ್ತಿತರ ದುರಸ್ತಿ ಕೆಲಸಗಳನ್ನು ಮುಗಿಸಲು ಮಧ್ಯಮಾವಧಿ ಸಾಲ ಬೇಕಾಗುತ್ತದೆ. ಜಮೀನನ್ನು ಕೊಳ್ಳಲು, ಕಟ್ಟಡಗಳನ್ನು ನಿರ್ಮಿಸಲು ಅಥವಾ ಇರುವ ಜಮೀನಿನಲ್ಲಿ ಶಾಶ್ವತವಾದ ಉತ್ತಮ ಮಾರ್ಪಾಡು ಮಾಡಲು ಅಗತ್ಯವಾದ ವೆಚ್ಚವನ್ನು ಪೂರೈಸಲು ದೀರ್ಘಾವಧಿ ಸಾಲ ಬೇಕಾಗುತ್ತದೆ.

ಬೇಸಾಯಗಾರರಿಗೆ ಸಾಮಾನ್ಯವಾಗಿ ಕೆಳಕಂಡ ವರ್ಗದವರಿಂದ ಅಥವಾ ಸಂಸ್ಥೆಗಳಿಂದ ಸಾಲ ದೊರೆಯುತ್ತದೆ : 1. ವರ್ತಕರು 2. ಲೇವಾದೇವಿ ಮಾಡುವ ಸಾಹುಕಾರರು 3. ವಾಣಿಜ್ಯ ಬ್ಯಾಂಕುಗಳು 4. ಸಹಕಾರಿ ಸಂಸ್ಥೆಗಳು 5. ಸರ್ಕಾರಿ ಸಂಸ್ಥೆಗಳು.

ಅನೇಕ ದೇಶಗಳಲ್ಲಿ ಸಹಕಾರಿ ಮತ್ತು ಸರ್ಕಾರದ ಸಂಸ್ಥೆಗಳೂ ರೈತರಿಗೆ ಸಾಲ ಕೊಡುವ ಮುಖ್ಯ ಕೇಂದ್ರಗಳಾಗಿವೆ. ರೈತರಿಗೆ ಅಲ್ಪ ಬಡ್ಡಿ ದರದಲ್ಲಿ ಸಾಕಷ್ಟು ಸಾಲವನ್ನು ಒದಗಿಸಿ ತನ್ಮೂಲಕ ಕೃಷಿಯ ಅಭಿವೃದ್ಧಿ ಸಾಧಿಸುವುದು ಅನೇಕ ಸರ್ಕಾರಗಳ ಧ್ಯೇಯವಾಗಿದೆ.

ಐರೋಪ್ಯ ದೇಶಗಳಲ್ಲಿ ಸಹಕಾರ ಸಂಸ್ಥೆಗಳು ರೈತರಿಗೆ ಸಾಲ ನೀಡುವುದರಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಸಹಕಾರ ಆಂದೋಲನ ಹಿಂದೆ ಬಿದ್ದಿರುವ ಕೆಲವು ದೇಶಗಳಲ್ಲಿ ಸರ್ಕಾರದ ವತಿಯಿಂದ ಆದಷ್ಟು ಹೆಚ್ಚು ಸಾಲ ಸೌಲಭ್ಯಗಳನ್ನು ಒದಗಿಸುವ ವ್ಯವಸ್ಥೆ ಇದೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕೃಷಿ ಉದ್ಯಮಕ್ಕೆ ಸಾಲ ನೀಡಲು ಹಲವಾರು ಸಂಸ್ಥೆಗಳಿವೆ. ವಾಣಿಜ್ಯ ಬ್ಯಾಂಕುಗಳು, ಸಹಕಾರಿ, ಸಂಸ್ಥೆಗಳು, ಸರ್ಕಾರದಿಂದ ಪೋಷಿತವಾದ ಉದ್ದರಿ ಸಂಸ್ಥೆಗಳು, ವಿಮಾ ಸಂಸ್ಥೆಗಳು ಇತ್ಯಾದಿ ಮೂಲಗಳಿಂದ ಹೇರಳವಾಗಿ ಸಾಲ ದೊರೆಯುತ್ತದೆ.

ಭಾರತದಲ್ಲಿ ಕೃಷಿ ಉದ್ಯಮಕ್ಕೆ ಸಾಲ ಹಲವಾರು ಮೂಲಗಳಿಂದ ದೊರೆಯುತ್ತದೆ. ಮುಖ್ಯವಾಗಿ ಗ್ರಾಮದ ಸಾಹುಕಾರರು, ಲೇವಾದೇವಿ ಮಾಡುವವರು, ವರ್ತಕರು, ಪತ್ತಿನ ಸಹಕಾರ ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಸಾಲ ಕೊಡುವ ವ್ಯವಸ್ಥೆ ಇದೆ. 1969ರಲ್ಲಿ ಬೇಸಾಯಗಾರರು ಮಾಡಿದ ಒಟ್ಟು ಸಾಲದಲ್ಲಿ ಶೇಕಡ 70ರಷ್ಟು ಸಾಲ ಸಾಹುಕಾರರು, ವರ್ತಕರು ಮತ್ತು ಖಾಸಗಿ ಲೇವಾದೇವಿ ಮಾಡುವ ಜನರು ಕೊಟ್ಟದ್ದಾಗಿತ್ತು. ಇನ್ನುಳಿದ ಶೇಕಡ 30ರಷ್ಟು ಸಾಂಸ್ಥಿಕ ಮೂಲಗಳಿಂದ ದೊರೆತಿತ್ತು. 1973–74ರ ಹೊತ್ತಿಗೆ ಭಾರತದಲ್ಲಿ ಕೃಷಿಗೆ ರೂ. 2.000 ಕೋಟಿಗಳಷ್ಟು ಅಲ್ಪಾವಧಿ ಸಾಲವನ್ನು ಒದಗಿಸುವ ಆವಶ್ಯಕತೆ ಇರುತ್ತದೆಂದು ಆಲ್ ಇಂಡಿಯ ರೂರಲ್ ಕ್ರೆಡಿಟ್ ರೆವ್ಯೂ ಕಮಿಟಿ (1969) ಅಂದಾಜು ಮಾಡಿತ್ತು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮಧ್ಯಮಾವಧಿಯ ಸಾಲದ ಅಗತ್ಯ ರೂ. 500 ಕೋಟಿ ಎಂದೂ ದೀರ್ಘಾವಧಿ ಸಾಲದ್ದು ರೂ. 1,500 ಕೋಟಿ ಎಂದೂ ಅಂದಾಜು ಮಾಡಲಾಗಿತ್ತು.

ಪತ್ತಿನ ಸಹಕಾರ ಸಂಘಗಳ ಮೂಲಕ 1969ರಲ್ಲಿ ಒದಗಿಸಿದ್ದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದ ಮೊತ್ತ ರೂ. 450 ಕೋಟಿ ಆಗಿತ್ತು. ಆ ಮೊತ್ತ 1974ರ ಹೊತ್ತಿಗೆ, ಅಂದರೆ ನಾಲ್ಕನೆಯ ಯೋಜನೆಯ ಅಂತ್ಯದ ಹೊತ್ತಿಗೆ, ರೂ. 750 ಕೋಟಿಗಳಿಗೆ ಏರುವ ಅಂದಾಜಿದೆ. ಅದೇ ರೀತಿ ಭೂ ಅಭಿವೃದ್ಧಿ ಬ್ಯಾಂಕುಗಳಿಂದ ದೊರೆಯುವ ದೀರ್ಘಾವಧಿ ಸಾಲದ ಮೊತ್ತ ರೂ. 700 ಕೋಟಿ ಆಗುವುದೆಂದು ಸೂಚಿಸಲಾಗಿತ್ತು.

ಭಾರತದ ವಾಣಿಜ್ಯ ಬ್ಯಾಂಕುಗಳು ವ್ಯವಸಾಯಕ್ಕೆ ನೇರವಾಗಿ ಕೊಡುತ್ತಿರುವ ಸಾಲದ ಪ್ರಮಾಣ ಏರುತ್ತಿದೆ. ಕೃಷಿಗೆ ಈ ಬ್ಯಾಂಕುಗಳು ಒದಗಿಸಿದ ಸಾಲ 1966–67ರಲ್ಲಿ ಕೇವಲ ರೂ. 5 ಕೋಟಿ ಇದ್ದುದ್ದು 1968–69ರಲ್ಲಿ ರೂ. 53 ಕೋಟಿಗಳಿಗೆ ಏರಿತ್ತು. ಪ್ರಮುಖ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಇವುಗಳಿಂದ ಕೃಷಿ ಉದ್ಯಮಕ್ಕೆ ದೊರೆಯುತ್ತಿರುವ ಸಾಲದ ಪರಿಮಾಣ ವರ್ಷೇ ವರ್ಷೇ ಏರುತ್ತಿದೆ.

1963ರಲ್ಲಿ ಸ್ಥಾಪಿತವಾದ ಕೃಷಿ ಮರುಹಣಕಾಸು ಕಾರ್ಪೋರೇಷನಿನ್ನಿಂದ ಕೆಲವು ವಿಶಿಷ್ಟ ಕಾರ್ಯಕ್ರಮಗಳಿಗೆ ಅದರಲ್ಲೂ ಮುಖ್ಯವಾಗಿ ಸಣ್ಣ ನೀರಾವರಿ ಕಾರ್ಯಕ್ರಮಗಳಿಗೆ ಸಾಲದ ಪೂರೈಕೆ ಆಗುತ್ತಿದೆ.

ಭಾರತದಲ್ಲಿ ಕೃಷಿ ಸಂಬಂಧದ ಸಾಲದ ವಿಸ್ತರಣೆಗಾಗಿ ರಿಸರ್ವ್ ಬ್ಯಾಂಕು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷ ಗಮನ ಕೊಡುತ್ತಿವೆ. **(ನೋಡಿ: ಕೃಷಿಉದ್ದರಿ)**

**ಕೃಷಿ ವಿಮೆ :** ಕೃಷಿಯಲ್ಲಿ ತೊಡಗಿರುವವರು ಎದುರಿಸಬೇಕಾದ ಅಪಾಯ ಮತ್ತು ಅನಿಶ್ಚಿತ ಪರಿಸ್ಥಿತಿಗಳು ಅಪಾರವಾದವು. ಇವನ್ನು ಎದುರಿಸಲು ವಿಮಾ ಸೌಕರ್ಯಗಳು ನಿಧಾನಗತಿಯಲ್ಲಿ ಜಾರಿಗೆ ಬರುತ್ತಿವೆ. ಮುಂದುವರಿದ ದೇಶಗಳಲ್ಲಿ ಹಲವಾರು ರೀತಿಯ ವಿಮಾ ಯೋಜನೆಗಳು ಜಾರಿಯಲ್ಲಿವೆ. ಹಿಂದುಳಿದ ದೇಶಗಳಲ್ಲಿ ಕೃಷಿವಿಮಾ ಯೋಜನೆ ಬೆಳೆದಿಲ್ಲ.

ಕೃಷಿ ಕ್ಷೇತ್ರದಲ್ಲಿ ಸರ್ವೇ ಸಾಮಾನ್ಯವಾಗಿ ಅಗ್ನಿ ಅಪಘಾತ, ಬಿರುಗಾಳಿ, ಮಳೆ, ಪ್ರವಾಹ, ಅತಿವೃಷ್ಟಿ, ಅನಾವೃಷ್ಟಿ ಇತ್ಯಾದಿ ಪ್ರಕೃತಿ ವಿಕೋಪಗಳಿಂದ ಅಪಾಯ ಸಂಭವಿಸಿ ಬೆಳೆಗಳು ನಾಶವಾಗುತ್ತವೆ. ಇವಲ್ಲದೆ ದನಕರುಗಳಿಗೆ ತಗಲುವ ಸಾಂಕ್ರಾಮಿಕ ರೋಗಗಳು ರೈತರನ್ನು ನಷ್ಟಕ್ಕೆ ಗುರಿ ಮಾಡುತ್ತವೆ. ಉತ್ಪನ್ನಗಳ ಬೆಲೆಗಳಲ್ಲಿ ಸಂಭವಿಸುವ ಏರಿಳಿತಗಳು ಅನಿಶ್ಚಿತತೆಯನ್ನು ತಂದೊಡ್ಡಿ ನಷ್ಟದ ಅಪಾಯವನ್ನು ತರುತ್ತವೆ.

ಕೃಷಿ ವಿಮಾ ಯೋಜನೆಯಲ್ಲಿ ಅಂತರ್ಗತವಾಗಿರುವ ವಿಶಿಷ್ಟ ಆರ್ಥಿಕ ಅಪಾಯಗಳಿಂದಾಗಿ ವಿಮಾ ಸಂಸ್ಥೆಗಳು ಸ್ವಯಂಪ್ರೇರಿತ ಉತ್ಸಾಹದಿಂದ ಈ ಕ್ಷೇತ್ರಕ್ಕಿಳಿಯುವುದಿಲ್ಲ. ಆದ್ದರಿಂದ ಕೃಷಿ ವಿಮಾ ಯೋಜನೆ ಜಾರಿಗೆ ಬಂದಿರುವ ದೇಶಗಳಲ್ಲಿ ಸಾಮಾನ್ಯವಾಗಿ ಸರ್ಕಾರ ಸಹಾಯಧನ ಮತ್ತು ಇತರ ಸವಲತ್ತುಗಳನ್ನು ನೀಡಿ ವಿಮಾ ಸೌಕರ್ಯಗಳನ್ನು ವಿಸ್ತರಿಸಿವೆ.

ಸೋವಿಯತ್ ದೇಶದಲ್ಲಿ ಮುಖ್ಯ ಬೆಳೆಗಳಿಗೆ ಕಡ್ಡಾಯವಾದ ವಿಮಾಯೋಜನೆಯನ್ನು ಜಾರಿಗೆ ತರಲಾಗಿದೆ. ಅಲ್ಲಿ ವಿಮಾಯೋಜನೆ ಸರ್ಕಾರದ ಸ್ವಾಮ್ಯದಲ್ಲಿದೆ. ಯಥೇಚ್ಛವಾಗಿ ಬಾಳೆ ಫಸಲು ಇರುವ ಜಮೈಕದಲ್ಲಿ ಚಂಡಮಾರುತದ ಅಪಾಯದಿಂದ ರಕ್ಷಣೆ ಕೊಡಲು ಬಾಳೆಯ ಬೆಳೆಯನ್ನು ವಿಮೆ ಮಾಡಲು ಅವಕಾಶವಿದೆ. ಜಪಾನಿನಲ್ಲಿ ಬತ್ತದ ಬೆಳೆ ಮತ್ತು ರೇಷ್ಮೆ ಹುಳುಗಳ ಸಾಕಣೆ ಮೇಲೆ ಕಡ್ಡಾಯವಾಗಿ ವಿಮೆ ಮಾಡಬೇಕಾಗಿದೆ. ಇದು ದುಬಾರಿಯ ವಿಮೆ. ಆದ್ದರಿಂದ ವಿಮಾ ಕಂತಿನಲ್ಲಿ ಒಂದು ಭಾಗವನ್ನು ರೈತರೂ ಉಳಿದದ್ದನ್ನು ಸರ್ಕಾರವೂ ಕೊಡುವ ವ್ಯವಸ್ಥೆ ಇದೆ. ಈ ಸಂಬಂಧವಾಗಿ ಆಗಬಹುದಾದ ಆರ್ಥಿಕ ನಷ್ಟವನ್ನು ಸರ್ಕಾರವೇ ಭರಿಸುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಸಕಲ ರೀತಿಯ ಬೆಳೆ ವಿಮಾ ಯೋಜನೆಗಳು ಜಾರಿಯಲ್ಲಿವೆ. **(ನೋಡಿ: ಕೃಷಿ ವಿಮೆ)**

**ಕೃಷಿ ತೆರಿಗೆಗಳು :** ಪ್ರಾಚೀನ ಕಾಲದಿಂದಲೂ ಸರ್ಕಾರದ ಆದಾಯದ ಬಾಬ್ತಿನಲ್ಲಿ ಕೃಷಿಯ ಮೇಲಿನ ತೆರಿಗೆ ಮುಖ್ಯವಾಗಿದೆ. ಅನೇಕ ಶತಮಾನಗಳ ಕಾಲ ಎಲ್ಲ ದೇಶಗಳಲ್ಲೂ ಕೃಷಿ ಉತ್ಪನ್ನದಲ್ಲಿ ಒಂದು ಗೊತ್ತಾದ ಭಾಗವನ್ನು ದಿನಸಿಯ ರೂಪದಲ್ಲಿ ಸರ್ಕಾರಕ್ಕೆ ರೈತರು ಕಂದಾಯ ಕಟ್ಟುವ ಪದ್ಧತಿ ಇತ್ತು. ಭಾರತದಲ್ಲಿ ರೈತರು ತಾವು ಗಳಿಸಿದ ಉತ್ಪನ್ನದಲ್ಲಿ ಆರನೆಯ ಒಂದು ಭಾಗದಿಂದ ಮೂರನೆಯ ಒಂದು ಭಾಗದವರೆಗೆ ಸರ್ಕಾರಕ್ಕೆ ಕಂದಾಯ ಕೊಡುವ ಪದ್ಧತಿ ಮೊದಲಿನಿಂದಲೂ ಇತ್ತು.

ಕಾಲಕ್ರಮೇಣ ಹಣ ಚಲಾವಣೆ ಸಾರ್ವತ್ರಿಕವಾಗಿ ಜಾರಿಗೆ ಬಂದಂತೆ ಎಲ್ಲ ದೇಶಗಳಲ್ಲೂ ದಿನಸಿಯ ಬದಲಾಗಿ ಹಣದ ರೂಪದಲ್ಲಿ ಸರ್ಕಾರಕ್ಕೆ ಕಂದಾಯ ಮತ್ತು ತೆರಿಗೆಗಳನ್ನು ಕೊಡುವುದು ರೂಢಿಗೆ ಬಂತು. ಕೃಷಿಗೆ ಸಂಬಂಧಪಟ್ಟಂತೆ ಕಂದಾಯ, ತೆರಿಗೆ ಅಥವಾ ಕರಗಳನ್ನು ಭೂ ಆಸ್ತಿಯ ಮೌಲ್ಯ ಅಥವಾ ವಾರ್ಷಿಕ ಗೇಣಿಯ ಬೆಲೆ ಅಥವಾ ಸಾಮಾನ್ಯ ವರಮಾನಕ್ಕನುಗುಣವಾಗಿ ಗೊತ್ತುಪಡಿಸಲಾಗುತ್ತದೆ.

ಕೈಗಾರಿಕೆ, ವಾಣಿಜ್ಯ, ಆರ್ಥಿಕ ಸೇವಾಕ್ಷೇತ್ರಗಳು ಹೆಚ್ಚಿದಂತೆಲ್ಲ ಈ ಕ್ಷೇತ್ರಗಳ ಮೇಲೆ ಬೀಳುವ ತೆರಿಗೆ ಕ್ರಮವಾಗಿ ಏರುತ್ತ ಬಂದು ಆಧುನಿಕ ಸರ್ಕಾರಗಳ ಆದಾಯ ಬಾಬ್ತುಗಳಲ್ಲಿ ಇವು ಹೆಚ್ಚು ಪ್ರಾಮುಖ್ಯ ಪಡೆದಿವೆ. ಭೂ ಕಂದಾಯ ಮತ್ತು ಕೃಷಿ ಕ್ಷೇತ್ರದ ಮೇಲಿನ ಇತರ ತೆರಿಗೆಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಗಣನೀಯವಾಗಿದ್ದರೂ ಅದು ಮೊದಲಿನಷ್ಟು ಪ್ರಧಾನವಾಗಿಲ್ಲ.

ಎಷ್ಟೋ ದೇಶಗಳಲ್ಲಿ ಕೃಷಿ ಕ್ಷೇತ್ರದ ಮೇಲಿನ ತೆರಿಗೆಯಿಂದ ಬರುವ ಹಣ ಸ್ಥಳೀಯ ಸಂಸ್ಥೆಗಳ ನಿರ್ವಹಣೆಗೆ ಮೀಸಲಾಗಿರುವುದೂ ಉಂಟು.

ಕೆಲವು ದೇಶಗಳಲ್ಲಿ ಭೂಕಂದಾಯವನ್ನು ಪ್ರತ್ಯೇಕವಾಗಿ ವಿಧಿಸುವ ಪದ್ಧತಿ ಇದ್ದರೆ, ಮುಂದುವರಿದ ದೇಶಗಳಲ್ಲಿ ಸಾಮಾನ್ಯ ವರಮಾನ ತೆರಿಗೆ ಕೃಷಿ ಉದ್ಯಮಿಗಳ ವರಮಾನಕ್ಕೂ ಅನ್ವಯಿಸುತ್ತದೆ. ಗ್ರೇಟ್ ಬ್ರಿಟನ್ನಿನಲ್ಲಿ 1799ರಿಂದ ಕೃಷಿ ವರಮಾನವನ್ನು ವರಮಾನ ತೆರಿಗೆಗೆ ಅಳವಡಿಸುವ ಪದ್ಧತಿ ಜಾರಿಗೆ ಬಂದಿದ್ದರೂ ಬಹಳ ವರ್ಷಗಳ ಕಾಲ ಕೃಷಿ ಉದ್ಯಮಿಗಳಿಗೆ ರಿಯಾಯಿತಿ ದರದಲ್ಲಿ ವರಮಾನ ತೆರಿಗೆ ವಿಧಿಸುವ ಪದ್ಧತಿಯಿತ್ತು. ಆದರೆ 1948 ರಿಂದ ಈ ತಾರತಮ್ಯ ಹೋಗಿ ಇತರ ಉದ್ಯಮಿಗಳು ತೆರುವ ದರದಲ್ಲೇ ಕೃಷಿ ಉದ್ಯಮಿಗಳೂ ವರಮಾನ ತೆರಿಗೆ ಕೊಡುವುದು ರೂಢಿಗೆ ಬಂದಿದೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಫೆಡರಲ್ ಇನ್‌ಕಂ ಟ್ಯಾಕ್ಸ್ ರೀತ್ಯ ಯಾವ ತಾರತಮ್ಯವೂ ಇಲ್ಲದೆ ಬೇಸಾಯಗಾರರು ಇತರ ಕ್ಷೇತ್ರಗಳಲ್ಲಿರುವವರಂತೆಯೇ ವರಮಾನ ತೆರಿಗೆ ಕೊಡಬೇಕು.

ಭಾರತದಲ್ಲಿ ಭೂ ಕಂದಾಯ ಪ್ರಾಚೀನ ಕಾಲದಿಂದಲೂ ಸರ್ಕಾರದ ಮುಖ್ಯ ಆದಾಯ ಬಾಬ್ತು ಆಗಿದೆ. ಭಾರತದ ಸಂವಿಧಾನದ ಪ್ರಕಾರ ಭೂ ಕಂದಾಯ ಮತ್ತು ಕೃಷಿಕ್ಷೇತ್ರದ ಮೇಲೆ ವಿಧಿಸಬಹುದಾದ ಇತರ ಬಗೆಯ ತೆರಿಗೆ ಅಥವಾ ಕರಗಳನ್ನು ರಾಜ್ಯ ಸರ್ಕಾರಗಳ ಅಧಿಕಾರವ್ಯಾಪ್ತಿಗೆ ಬಿಡಲಾಗಿದೆ. ರಾಜ್ಯ ಸರ್ಕಾರಗಳ ಆದಾಯ ಬಾಬ್ತುಗಳಲ್ಲಿ ಮಾರಾಟ ತೆರಿಗೆ ಬಿಟ್ಟರೆ ಭೂ ಕಂದಾಯ ಎರಡನೆಯ ಮುಖ್ಯ ಆದಾಯದ ಬಾಬ್ತು ಆಗಿದೆ.

ಭೂ ಕಂದಾಯವನ್ನು ಲಾಭದಾಯಕವಲ್ಲದ ಸಣ್ಣ ಹಿಡುವಳಿಗಳಿಂದ ಹಿಡಿದು ಎಲ್ಲ ತರದ ಜಮೀನಿನ ಮೇಲೂ ವಿಧಿಸುವುದರಿಂದ ಅದು ಆರ್ಥಿಕವಾಗಿ ಅಸಮರ್ಥನೀಯವಾದ ಹಾಗೂ ಅನ್ಯಾಯವಾದ ಹೊರೆ ಎಂದು ಭಾವಿಸಲಾಗಿದೆ. ಈಚಿನ ವರ್ಷಗಳಲ್ಲಿ ಕೆಲವು ರಾಜ್ಯಗಳಲ್ಲಿ ಸಣ್ಣ ಹಿಡುವಳಿಗಳ ಮೇಲಿನ ಕಂದಾಯವನ್ನು ರದ್ದು ಮಾಡುವ ಕ್ರಮ ಕೈಗೊಳ್ಳಲಾಗಿದೆ. ಭೂ ಕಂದಾಯವನ್ನು ರದ್ದು ಮಾಡಿ ಕೃಷಿ ವರಮಾನ ತೆರಿಗೆ ಹಾಕಬೇಕೆಂಬುದು ಎಲ್ಲ ರಾಜಕೀಯ ಪಕ್ಷಗಳ ಘೋಷಿತ ನೀತಿಯಾಗಿದೆ. ಈಚೆಗೆ ಅನೇಕ ರಾಜ್ಯ ಸರ್ಕಾರಗಳು ಕೃಷಿ ವರಮಾನ ತೆರಿಗೆಯನ್ನು ವಿಧಿಸುತ್ತಿವೆ.

**ಕೃಷಿ ಉತ್ಪನ್ನಗಳ ಮಾರಾಟ:** ಬೇಸಾಯದ ಗುರಿ ರೈತನ ಕುಟುಂಬ ನಿರ್ವಹಣೆಗೆ ಆಹಾರವನ್ನುತ್ಪಾದಿಸುವುದು ಮಾತ್ರ ಆಗಿದ್ದಾಗ ಆ ಉತ್ಪನ್ನಗಳ ಮಾರಾಟದ ಪ್ರಶ್ನೆ ಇರಲಿಲ್ಲ. ಉಳಿದ ಅಲ್ಪಸ್ವಲ್ಪ ಹೆಚ್ಚುವರಿ ದಿನಸಿಗಳನ್ನು ಗ್ರಾಮದಲ್ಲಿಯೇ ಅದಲುಬದಲು ಮಾಡುವ ಮೂಲಕ ಇತರ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತಿತ್ತು. ಈಗ ಆ ಪರಿಸ್ಥಿತಿ ಇಲ್ಲ. ಈಗ ಬೇರೆ ಉದ್ಯಮಗಳಂತೆಯೇ ಕೃಷಿ ಉದ್ಯಮದ ವಾಣಿಜ್ಯೀಕರಣ ಆಗಿದೆ. ಬೇಸಾಯಗಾರರು ಬೆಳೆದ ದಿನಸಿಗಳು ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿದೆ. ಆಧುನಿಕ ಕಾಲದ ಸಮಸ್ಯೆಯೆಂದರೆ ಮಾರುಕಟ್ಟೆಗಾಗಿ ಉತ್ಪನ್ನ ಮಾಡುವ ಕೃಷಿ ಉದ್ಯಮಿಗಳಿಗೆ ಅವರು ಉತ್ಪಾದನೆ ಮಾಡುವ ದವಸ ಧಾನ್ಯಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ದೊರಕಿಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಾಗಿದೆ. ರೈತರು ಬೆಳೆಯುವ ಉತ್ಪನ್ನ/ಪದಾರ್ಥಗಳನ್ನು ಅವರೇ ಖುದ್ದಾಗಿ ಮಾರಾಟ ಮಾಡಲು ಅಸಾಧ್ಯವಾಗುತ್ತದೆ. ಆದ್ದರಿಂದ ವರ್ತಕರು, ದಳ್ಳಾಳಿಗಳು ಮುಂತಾದ ಮಧ್ಯವರ್ತಿಗಳನ್ನೂ ಸಾರ್ವಜನಿಕ ಹಾಗೂ ಸಹಕಾರಿ ಮಾರಾಟ ಸಂಸ್ಥೆಗಳನ್ನೂ ಅವಲಂಬಿಸಬೇಕಾಗಿದೆ. ಖಾಸಗಿಯವರ ಮೂಲಕ ಮಾರಾಟ ಮಾಡಿದಾಗ ಲಾಭದ ಬಹುಪಾಲು ಮಧ್ಯವರ್ತಿಗಳಿಗೆ ಸಲ್ಲುವುದರಿಂದ ರೈತರಿಗೆ ಅನ್ಯಾಯವಾಗುತ್ತದೆ. ಅದನ್ನು ತಪ್ಪಿಸಲು ಅನೇಕ ದೇಶಗಳಲ್ಲಿ ಸರ್ಕಾರಗಳು ಸುಸಜ್ಜಿತ ಮಾರುಕಟ್ಟೆಗಳನ್ನು ಏರ್ಪಡಿಸಿ ಉತ್ಪನ್ನಕಾರರಿಗೆ ಲಾಭದಾಯಕ ಅಥವಾ ನ್ಯಾಯವಾದ ಬೆಲೆ ದೊರೆಯುವಂತೆ ಹಲವಾರು ಕ್ರಮಗಳನ್ನು ಕೈಗೊಂಡಿವೆ.

ಬೇಸಾಯದ ಉತ್ಪನ್ನಗಳಿಗೆ ಸರಿಯಾದ ಬೆಲೆಯನ್ನು ಒದಗಿಸಿಕೊಡುವ ದೃಷ್ಟಿಯಿಂದ ಉತ್ಪನ್ನಗಳ ಸಂಸ್ಕರಣ, ಗುಣಕ್ಕನುಗುಣವಾಗಿ ವಸ್ತುಗಳ ಶ್ರೇಣೀಕರಣ, ವಸ್ತುಗಳ ವೈಜ್ಞಾನಿಕ ದಾಸ್ತಾನು–ಈ ಸಂಬಂಧವಾಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೃಷಿ ಉತ್ಪನ್ನದ ಮಾರಾಟಕ್ಕೆ ವಿಧಿಬದ್ಧ ಮಾರುಕಟ್ಟೆಗಳನ್ನೂ ಕೇಂದ್ರ ದಾಸ್ತಾನು ಕೋಠಿಗಳನ್ನೂ ಏರ್ಪಾಟು ಮಾಡುವುದರ ಮೂಲಕವೂ ಅಗತ್ಯ ಸಂದರ್ಭಗಳಲ್ಲಿ ನ್ಯಾಯೋಚಿತ ಬೆಲೆಗಳನ್ನು ಗೊತ್ತುಪಡಿಸುವುದರ ಮೂಲಕವೂ ಸರ್ಕಾರ ಸಹಾಯ ಮಾಡುತ್ತದೆ. ಸಹಕಾರ ಮಾರುಕಟ್ಟೆ ವ್ಯವಸ್ಥೆ ಬೆಳೆದಿರುವ ಕಡೆ ಸಹಕಾರಿ ಮಾರಾಟ ಸಂಸ್ಥೆಗಳು ಉತ್ಪನ್ನಗಳ ಸಂಸ್ಕರಣ, ದಾಸ್ತಾನು, ಮಾರಾಟ ಇತ್ಯಾದಿ ಎಲ್ಲ ಸೌಲಭ್ಯಗಳನ್ನೂ ಒದಗಿಸುತ್ತವೆ.

ಭಾರತದಲ್ಲಿ ಕೃಷಿ ಉತ್ಪನ್ನಗಳ ಮಾರಾಟ ಮುಖ್ಯವಾಗಿ ಗ್ರಾಮಾಂತರ ಕೇಂದ್ರಗಳಲ್ಲಿ ವಾರಕ್ಕೊಮ್ಮೆ ಸೇರುವ ಸಂತೆಗಳಲ್ಲೂ ನಗರ ಮತ್ತು ಪಟ್ಟಣಗಳಲ್ಲಿರುವ ದಿನಸಿ ಮಂಡಿಗಳ ಮೂಲಕವೂ ಸಹಕಾರಿ ಮಾರಾಟ ಕೇಂದ್ರ ಮತ್ತು ನಿಯಂತ್ರಿತ ಮಾರುಕಟ್ಟೆಗಳ ಮೂಲಕವೂ ನಡೆಯುತ್ತದೆ. ಖಾಸಗಿ ಮಧ್ಯವರ್ತಿಗಳ ಮೂಲಕ ನಡೆಯುವ ಮಾರಾಟದಲ್ಲಿ ಬೇಸಾಯಗಾರರಿಗೆ ಸಾಕಷ್ಟು ಲಾಭದಾಯಕ ಬೆಲೆ ದೊರೆಯುವುದಿಲ್ಲ. ಆದ್ದರಿಂದ ಈಚಿನ ವರ್ಷಗಳಲ್ಲಿ ಸಹಕಾರಿ ಮಾರಾಟ ಕೇಂದ್ರಗಳ ಮೂಲಕವೂ ನಿಯಂತ್ರಿತ ಮಾರುಕಟ್ಟೆಗಳ ಮೂಲಕವೂ ಮಾರಾಟ ಮಾಡುವಂತೆ ರೈತರಿಗೆ ಪ್ರೋತ್ಸಾಹ ಕೊಡಲಾಗುತ್ತಿದೆ. ನಿಯಂತ್ರಿತ ಮಾರುಕಟ್ಟೆಗಳನ್ನು ರಚಿಸುವ ಬಗ್ಗೆ ಹೆಚ್ಚು ಕಡಿಮೆ ಎಲ್ಲ ರಾಜ್ಯಗಳಲ್ಲೂ ಕಾನೂನು ಮಾಡಲಾಗಿದೆ. 1969ರಲ್ಲಿ ಭಾರತಾದ್ಯಂತ ಒಟ್ಟು 1,844 ನಿಯಂತ್ರಿತ ಮಾರುಕಟ್ಟೆಗಳು ಹಾಗೂ ಉಪಮಾರುಕಟ್ಟೆ ಕೇಂದ್ರಗಳನ್ನು ಏರ್ಪಡಿಸಲಾಗಿತ್ತು. ಗುಣದ ಆಧಾರದ ಮೇಲೆ ಕೃಷಿ ಉತ್ಪನ್ನಗಳನ್ನು ಶ್ರೇಣೀಕರಣ ಮಾಡುವ ಕಾರ್ಯಕ್ರಮದಂತೆ 1969ರಲ್ಲಿ 450 ಗುಣ ನಿರ್ಧರಿಸಲು ಕೇಂದ್ರಗಳಿದ್ದುವು. ಅವುಗಳ ಸಂಖ್ಯೆಯನ್ನು ಕ್ರಮೇಣ ಏರಿಸಲಾಯಿತು. ಆಹಾರ ಮತ್ತಿತ್ತರ ಕೃಷಿ ಉತ್ಪನ್ನಗಳ ಸಂಸ್ಕರಣ ಮತ್ತು ಸಂರಕ್ಷಣೆಗಾಗಿ ಸಂಘಸಂಸ್ಥೆಗಳು ಕಾರ್ಯನಿರತವಾಗಿವೆ **(ನೋಡಿ: ಕೃಷಿ ಉತ್ಪನ್ನ ಮಾರಾಟ)**.

**ಕೃಷಿ ಮತ್ತು ಸಹಕಾರ:** ವಿಶ್ವವ್ಯಾಪಿಯಾಗಿರುವ ಸಹಕಾರ ಚಳವಳಿ ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗಿದೆ. ಸ್ವಯಂಪ್ರೇರಿತ ಸಹಕಾರ, ಪ್ರಜಾತಂತ್ರ, ಪರಸ್ಪರ ಸಹಾಯ–ಈ ತತ್ತ್ವಗಳನ್ನು ಆಧಾರವಾಗುಳ್ಳ ಸಹಕಾರ ಪದ್ಧತಿ ಕೃಷಿ ಸಮುದಾಯಗಳ ಆರ್ಥಿಕ ಉನ್ನತಿಗೆ ಉತ್ತೇಜಕವಾಗಿದೆ. ಕೃಷಿ ಸಹಕಾರ ಸಂಸ್ಥೆಗಳು ಪ್ರಧಾನವಾಗಿ ಬೇಸಾಯಗಾರರಿಗೆ ಮೂರು ರೀತಿಯಲ್ಲಿ ಸಹಾಯ ಮಾಡುತ್ತವೆ :

1. ರೈತರಿಗೆ ಬೇಕಾದ ಉಪಕರಣಗಳನ್ನೂ ಗೊಬ್ಬರ ಪೋಷಕಗಳನ್ನೂ ಸಾಲವನ್ನೂ ಸಮಯಕ್ಕೆ ಸರಿಯಾಗಿ ಒದಗಿಸುವುದು. 2. ರೈತರು ಉತ್ಪಾದನೆ ಮಾಡುವ ವಸ್ತುಗಳನ್ನು ಕೊಂಡು ದಾಸ್ತಾನು ಮಾಡಿ ಮಾರುಕಟ್ಟೆ ಬೆಲೆಗಳು ಲಾಭದಾಯಕವಾಗಿರುವಾಗ ಮಾರಾಟ ಮಾಡಿ ರೈತರಿಗೆ ಸೂಕ್ತ ಪ್ರತಿಫಲ ಬರುವಂತೆ ಮಾಡುವುದು. 3. ಕೃಷಿಯನ್ನು ಆಧುನಿಕ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ರೈತರಿಗೆ ಅಗತ್ಯ ಸೇವೆಗಳನ್ನು ಒದಗಿಸುವುದು.

ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಸದಸ್ಯರುಗಳೇ ನಡೆಸುವ ಸಹಕಾರ ಸಂಘಗಳು ಪ್ರಜಾ ತಾಂತ್ರಿಕ ಸಂಸ್ಥೆಗಳಾಗಿರುತ್ತವೆ. ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ಸರ್ಕಾರಗಳು ಸಾಮಾನ್ಯವಾಗಿ ಸಹಕಾರ ಸಂಸ್ಥೆಗಳ ವ್ಯವಹಾರಗಳಲ್ಲಿ ಪ್ರವೇಶ ಮಾಡುವುದಿಲ್ಲ. ಹಿಂದುಳಿದ ಅಥವಾ ಅಭಿವೃದ್ಧಿಪಥದಲ್ಲಿರುವ ದೇಶಗಳಲ್ಲಿ ಸರ್ಕಾರ ಅನಿವಾರ್ಯವಾಗಿ ಸಹಕಾರಿ ಸಂಸ್ಥೆಗಳ ವ್ಯವಹಾರದಲ್ಲಿ ಭಾಗವಹಿಸಬೇಕಾಗುತ್ತದೆ. ಸಹಕಾರಿ ಸಂಸ್ಥೆಗಳಿಗೆ ಸಾಕಷ್ಟು ಹಣಕಾಸಿನ ಮುಂಗಡಗಳನ್ನು ಒದಗಿಸಬೇಕಾಗಿರುವುದರಿಂದಲೂ ಅವುಗಳ ವಹಿವಾಟು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಬೇಕಾದ್ದರಿಂದಲೂ ಸರ್ಕಾರಗಳು ಸಹಕಾರ ಸಂಸ್ಥೆಗಳ ಮೇಲೆ ಹತೋಟಿ ಇಟ್ಟುಕೊಳ್ಳುವುದು ಅಗತ್ಯವೆಂದು ಭಾವಿಸಲಾಗಿದೆ.

ಮುಂದುವರಿದ ದೇಶಗಳಲ್ಲಿ ಒಂದೊಂದು ಕೃಷಿ ಉತ್ಪನ್ನದ ಮಾರಾಟಕ್ಕಾಗಿಯೇ ಅಥವಾ ಒಂದೊಂದು ನಿರ್ದಿಷ್ಟ ಸೇವೆ ಒದಗಿಸುವ ದೃಷ್ಟಿಯಿಂದಲೇ ಪ್ರತ್ಯೇಕ ಸಹಕಾರ ಸಂಸ್ಥೆಗಳು ಇವೆ. ಇತರ ದೇಶಗಳಲ್ಲಿ ನಾಲ್ಕಾರು ಬಗೆಯ ಸೇವೆಗಳನ್ನು ನಿರ್ವಹಿಸುವ ವಿವಿಧೋದ್ದೇಶ ಅಥವಾ ಸೇವಾ ಸಹಕಾರ ಸಂಘಗಳು ಇವೆ.

ಭಾರತದಲ್ಲಿ ಕೃಷಿ ಅಭಿವೃದ್ಧಿಯ ಧ್ಯೇಯದಿಂದಲೇ 20ನೆಯ ಶತಮಾನದ ಆದಿಭಾಗದಲ್ಲಿ ವಿಧಿವತ್ತಾಗಿ ಕೃಷಿ ಸಹಕಾರ ಸಂಘಗಳ ರಚನೆ ಆರಂಭವಾಯಿತು. ಮೊದ ಮೊದಲು ಪ್ರಧಾನವಾಗಿ ಗ್ರಾಮಗಳಲ್ಲಿ ಕೃಷಿಗೆ ಸಾಲ ನೀಡುವ ಪ್ರಾಥಮಿಕ ಸಹಕಾರ ಸಂಘಗಳು ಏರ್ಪಟ್ಟುವು. ಕ್ರಮೇಣ ಇತರ ಬಗೆಯ ಸೇವೆಗಳನ್ನು ಒದಗಿಸುವ ಸಹಕಾರ ಸಂಘಗಳು ಆರಂಭವಾದುವು. ಸ್ವಾತಂತ್ರ್ಯೋತ್ತರದಲ್ಲಿ ಪಂಚವಾರ್ಷಿಕ ಯೋಜನೆಗಳ ಕಾರ್ಯಕ್ರಮ ಆರಂಭವಾದ ಮೇಲೆ ಕೃಷಿ ಸಹಕಾರ ಸಂಸ್ಥೆಗಳಿಗೆ ಎಲ್ಲ ರೀತಿಯ ನೆರವನ್ನು ಕೊಡಲಾಗುತ್ತಿದೆ. ಗ್ರಾಮೀಣ ಭಾರತದ ವಿಶಿಷ್ಟ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗನುಗುಣವಾಗಿ ಸೇವಾ ಸಹಕಾರ ಸಂಘಗಳನ್ನು ಸ್ಥಾಪಿಸಲು ಆದ್ಯತೆ ಕೊಡಲಾಗುತ್ತಿದೆ. ಸಹಸ್ರಾರು ಸೇವಾ ಸಹಕಾರ ಸಂಘಗಳು ಕಾರ್ಯನಿರತವಾಗಿದ್ದು ರೈತರಿಗೆ ಬೀಜ, ವ್ಯವಸಾಯದ ಉಪಕರಣಗಳು, ಗೊಬ್ಬರಗಳು, ಸಾಲ ಇತ್ಯಾದಿಗಳನ್ನು ಒದಗಿಸುವುದರ ಜೊತೆಗೆ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಿ ಮಾರಾಟ ಮಾಡುವ ಕೆಲಸಗಳನ್ನು ನಿರ್ವಹಿಸುತ್ತಿವೆ. ರೈತರಿಗೆ ದೀರ್ಘಾವಧಿ ಸಾಲ ಒದಗಿಸಲು ಭೂ ಅಡಮಾನ ಬ್ಯಾಂಕುಗಳು ಕಾರ್ಯ ನಿರತವಾಗಿವೆ. ಭಿನ್ನ ಭಿನ್ನ ಹಿಡುವಳಿಗಳನ್ನು ಸಂಘಟಿಸಿ ಬೇಸಾಯವನ್ನು ಲಾಭದಾಯಕವನ್ನಾಗಿ ಮಾಡುವ ದೃಷ್ಟಿಯಿಂದ ಸಹಕಾರಿ ಬೇಸಾಯ ಕೇಂದ್ರಗಳ ಉದ್ಯಮಕ್ಕೆ ವಿಶೇಷ ಪ್ರೋತ್ಸಾಹ ಕೊಡಲಾಗುತ್ತಿದೆ **(ನೋಡಿ: ಕೃಷಿ ಸಹಕಾರ)**.

**ಕೃಷಿ ಕಾರ್ಮಿಕರು :** ಕೃಷಿ ಕ್ಷೇತ್ರದಲ್ಲಿ ದುಡಿಮೆ ಮಾಡುವವರಲ್ಲಿ ಸಾಮಾನ್ಯವಾಗಿ ಮೂರು ಬಗೆಯ ಜನರನ್ನು ಗುರುತಿಸಬಹುದು : 1. ಭೂ ಹಿಡುವಳಿಯ ಮಾಲಿಕರಾಗಿದ್ದು ತಮ್ಮ ಸ್ವಂತ ಶ್ರಮದಿಂದ ಹಾಗೂ ತಮ್ಮ ಕುಟುಂಬದ ಸದಸ್ಯರ ಸಹಾಯದಿಂದ ಬೇಸಾಯ ಮಾಡುವವರು. 2. ಬೇರೆಯವರ ಹಿಡುವಳಿಗಳನ್ನು ಗೇಣಿ ಅಥವಾ ಗುತ್ತಿಗೆಯ ಆಧಾರದ ಮೇಲೆ ಪಡೆದುಕೊಂಡು ಕೃಷಿ ಮಾಡುವ ಗೇಣಿದಾರರು. 3. ಕೇವಲ ಕೂಲಿಗೋಸ್ಕರ ಬೇರೆಯವರ ಜಮೀನುಗಳಲ್ಲಿ ದುಡಿಯುವವರು. ಮೂರನೆಯ ವರ್ಗದ ಜನ ಕೃಷಿ ಕಾರ್ಮಿಕರೆನಿಸುತ್ತಾರೆ.

ಎಲ್ಲ ದೇಶಗಳಲ್ಲೂ ಕೃಷಿ ಕಾರ್ಮಿಕರು ಅನನುಕೂಲ ಪರಿಸ್ಥಿತಿಯಲ್ಲಿ ದುಡಿಮೆ ಮಾಡುತ್ತಾರೆ. ಮುಂದುವರಿದ ಅಮೆರಿಕ ಮತ್ತು ಐರೋಪ್ಯ ದೇಶಗಳಲ್ಲೂ ಕೃಷಿ ಕಾರ್ಮಿಕರ ವೇತನ ಮಟ್ಟ ಕೈಗಾರಿಕಾ ಕಾರ್ಮಿಕರ ವೇತನ ಮಟ್ಟಕ್ಕಿಂತ ಕಡಿಮೆ ಇರುತ್ತದೆ. ಏಷ್ಯದ ದೇಶಗಳಲ್ಲಂತೂ ಕೃಷಿ ಕಾರ್ಮಿಕರ ಸ್ಥಿತಿ ತೀರ ಕಾರ್ಪಣ್ಯದ್ದಾಗಿದೆ.

ಕೃಷಿ ಕಾರ್ಮಿಕರ ಸ್ಥಿತಿ ಅನನುಕೂಲವಾಗಿರುವುದಕ್ಕೆ ಮುಖ್ಯ ಕಾರಣಗಳು ಇವು ; 1. ಸಾಮಾನ್ಯವಾಗಿ ಕೃಷಿ ಕ್ಷೇತ್ರದಲ್ಲಿ ವರ್ಷ ಪೂರ್ತಿ ಕೆಲಸವಿರುವುದಿಲ್ಲ. ಇದು ಪ್ರಧಾನವಾಗಿ ಶ್ರಾಯಿಕ (ಸೀಸನಲ್) ಉದ್ಯಮ. ಈ ಉದ್ಯಮದ ಎಲ್ಲ ಘಟ್ಟಗಳಲ್ಲೂ ಒಂದೇ ಮಟ್ಟದಲ್ಲಿ ಕಾರ್ಮಿಕರ ಸೇವೆ ಅಗತ್ಯವಿರುವುದಿಲ್ಲ. ಕೃಷಿಯ ಕೆಲವು ಘಟ್ಟಗಳಲ್ಲಿ ಅಂದರೆ ಬಿತ್ತನೆ ಮಾಡುವಾಗ, ಕಳೆ ಕೀಳುವಾಗ, ಫಸಲು ಕುಯ್ಲು ಮಾಡುವಾಗ ಮಾತ್ರ ಹೆಚ್ಚು ಜನರ ಶ್ರಮ ಅಗತ್ಯವಾಗುತ್ತದೆ. ಅಂಥ ಸಂದರ್ಭಗಳಲ್ಲಿ ಭೂ ಮಾಲೀಕರು ಕೃಷಿ ಕಾರ್ಮಿಕರನ್ನು ಸಾಮಾನ್ಯವಾಗಿ ದಿನಗೂಲಿಯ ಮೇಲೆ ನೇಮಿಸಿಕೊಳ್ಳುತ್ತಾರೆ. ಆದ್ದರಿಂದ ಕೃಷಿ ಕಾರ್ಮಿಕರಿಗೆ ವರ್ಷಪೂರ್ತಿ ಪೂರ್ಣಕಾಲದ ಉದ್ಯೋಗ ಲಭಿಸುವುದಿಲ್ಲ. 2. ಕೃಷಿ ಕಾರ್ಮಿಕರು ಗ್ರಾಮಾಂತರ ಪ್ರದೇಶಗಳಲ್ಲಿ ಹಂಚಿ ಹೋಗಿರುವುದರಿಂದ ಅವರಲ್ಲಿ ಸಂಘಟನೆ ತುಂಬ ಕಷ್ಟ. ಸಂಘಟನೆ ಇಲ್ಲದಿರುವಾಗ ಉದ್ಯೋಗದ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವುದು ಸುಲಭವಲ್ಲ. 3. ಕೃಷಿ ಕಾರ್ಮಿಕರು ಸಾಮಾನ್ಯವಾಗಿ ಕುಶಲ ಕಾರ್ಮಿಕರಾಗಿರುವುದಿಲ್ಲ. ಆದ್ದರಿಂದ ಅವರಿಗೆ ದಕ್ಕುವ ವೇತನ ಕಡಿಮೆ.

ಕೃಷಿ ಕಾರ್ಮಿಕರ ದುಃಸ್ಥಿತಿಯನ್ನು ಹೋಗಲಾಡಿಸಲು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಕೆಲವು ನಿರ್ದಿಷ್ಟ ಕ್ರಮಗಳನ್ನು ಎಲ್ಲ ಸರ್ಕಾರಗಳಿಗೂ ಸೂಚಿಸಿದೆ. ಹಲವು ದೇಶಗಳಲ್ಲಿ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ, ಸಾಮಾಜಿಕ ಭದ್ರತೆ ಏರ್ಪಡಿಸುವ ಬಗ್ಗೆ ಕಾನೂನುಗಳನ್ನು ಮಾಡಲಾಗಿದೆ.

ಭಾರತದಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ 1971ರ ಜನಗಣತಿಯ ಪ್ರಕಾರ ಸು. 454 ದಶಲಕ್ಷ ಇತ್ತು. ಗ್ರಾಮೀಣ ಕುಟುಂಬಗಳಲ್ಲಿ ಶೇಕಡ 24 ರಷ್ಟು ಕೃಷಿ ಕಾರ್ಮಿಕರ ಕುಟುಂಬಗಳೆಂದು ಅಂದಾಜು ಮಾಡಲಾಗಿದೆ.

ಭಾರತದಲ್ಲಿ ಕೃಷಿ ಕಾರ್ಮಿಕರು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ತುಂಬ ಹಿಂದುಳಿದಿದ್ದಾರೆ. ಇವರಲ್ಲಿ ಬಹು ಮಂದಿ ದುರ್ಬಲ ವರ್ಗಗಳಿಗೆ ಸೇರಿದವರು. ಭಾರತ ಸರ್ಕಾರ 1960ರಲ್ಲಿ ಕೃಷಿ ಕಾರ್ಮಿಕರ ಬಗ್ಗೆ ರಚಿಸಿದ್ದ ಎರಡನೆಯ ತನಿಖಾ ಆಯೋಗದ ಪ್ರಕಾರ ಕೃಷಿ ಕಾರ್ಮಿಕರಿಗೆ ವರ್ಷದಲ್ಲಿ ಉದ್ಯೋಗ ದೊರೆಯುವುದು ಸರಾಸರಿ 197 ದಿನಗಳು ಮಾತ್ರ. 1956–57ರಲ್ಲಿ ಅವರ ಸರಾಸರಿ ತಲಾ ವಾರ್ಷಿಕ ವರಮಾನ ಕೇವಲ ರೂ. 99 ಆಗಿತ್ತು. ಅದೇ ವರ್ಷ ರಾಷ್ಟ್ರದ ಸರಾಸರಿ ತಲಾ ವಾರ್ಷಿಕ ವರಮಾನ ರೂ. 291 ಇತ್ತು. ಈಚಿನ ವರ್ಷಗಳಲ್ಲಿ ಜನಸಂಖ್ಯೆಯ ಬೆಳೆವಣಿಗೆಯಿಂದ ಕೃಷಿ ಕಾರ್ಮಿಕರ ಸ್ಥಿತಿ ಇನ್ನೂ ಹದಗೆಟ್ಟಿದೆ.

ಭಾರತದಲ್ಲಿ ಕೃಷಿ ಕಾರ್ಮಿಕರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಅವರಿಗೆ ಅನ್ವಯವಾಗುವಂತೆ ಕನಿಷ್ಠ ವೇತನದ ಕಾನೂನು ಮಾಡಲಾಗಿದೆ. ಎಲ್ಲ ರಾಜ್ಯಗಳಲ್ಲೂ ಈ ಕಾನೂನು ಅಂಗೀಕೃತವಾಗಿದ್ದರೂ ಅದರ ಸಾರ್ಥಕ ಅನ್ವಯ ಆಗಿಲ್ಲ. ಕೃಷಿ ಕಾರ್ಮಿಕರ ಅಸಂಘಟಿತ ಪರಿಸ್ಥಿತಿ, ಅಜ್ಞಾನ, ಭೂ ಮಾಲೀಕರ ಉಪೇಕ್ಷೆ ಮತ್ತು ಸರ್ಕಾರದ ಕಾನೂನನ್ನು ಕಾರ್ಯಗತ ಮಾಡಲು ಸೂಕ್ತ ವ್ಯವಸ್ಥೆ ಇಲ್ಲದಿರುವುದು– ಇವೇ ಇದಕ್ಕೆ ಕಾರಣ.

ಭೂ ಸುಧಾರಣೆಯಿಂದ ಲಭ್ಯವಾದ ಹೆಚ್ಚುವರಿ ಜಮೀನನ್ನು ಕೃಷಿ ಕಾರ್ಮಿಕರಿಗೆ ಹಂಚುವ ಧೋರಣೆ ಸರ್ಕಾರದ್ದಾಗಿದೆ. ವಿನೋಬಾ ಭಾವೆಯವರು ಭೂದಾನ ಗ್ರಾಮದಾನ ಚಳವಳಿಯ ಫಲವಾಗಿ ದೊರೆತ ಭೂಮಿಯನ್ನು ಬಹುಮಟ್ಟಿಗೆ ಭೂಹೀನ ಕೃಷಿ ಕಾರ್ಮಿಕರಿಗೆ ಹಂಚಲಾಗಿದೆ **(ನೋಡಿ: ಕೃಷಿ ಕಾರ್ಮಿಕರು)**.

**ಕೃಷಿ ಕಾನೂನು :** ಪ್ರತಿಯೊಂದು ದೇಶದಲ್ಲೂ ಕೃಷಿಗೆ ಸಂಬಂಧಿಸಿದಂತೆ ವ್ಯಾಪಕವಾದ ಕಾನೂನುಗಳಿವೆ. ಇವುಗಳಲ್ಲಿ ಮುಖ್ಯವಾಗಿ ಕೃಷಿ ಹಿಡುವಳಿಗಳ ಮಾಲೀಕತ್ವದ ಬಗ್ಗೆ, ಖಾತೆ ವರ್ಗಾವಣೆ ಬಗ್ಗೆ ನಿಯಮಗಳು, ಸಾಲಕ್ಕಾಗಿ ಭೂಸ್ವತ್ತನ್ನು ಅಡಮಾನ ಮಾಡುವ ಸಂಬಂಧದಲ್ಲಿ ನಿಬಂಧನೆಗಳು, ಮಾಲೀಕ–ಗೇಣಿದಾರರ ಸಂಬಂಧ, ಪೈರುಗಳ ರಕ್ಷಣೆ, ನೀರಾವರಿ ಹಕ್ಕುಗಳು, ಅತಿಕ್ರಮ ಪ್ರವೇಶದ ನಿರ್ಬಂಧ–ಇತ್ಯಾದಿ ವಿಷಯಗಳು ಕೃಷಿ ಸಂಬಂಧದ ಕಾನೂನಿನ ಕಡತದಲ್ಲಿ ಸೇರಿರುತ್ತವೆ.

ಭೂ ಸಂಪತ್ತಿನ ಪರಮಾವಧಿ ಉಪಯೋಗದ ದೃಷ್ಟಿಯಿಂದಲೂ ಕೃಷಿ ಕ್ಷೇತ್ರದಲ್ಲಿ ಖುದ್ದು ದುಡಿಯುವವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ದೃಷ್ಟಿಯಿಂದಲೂ ಭೂ ಸುಧಾರಣಾ ಕಾನೂನುಗಳನ್ನು ಮಾಡಲಾಗಿದೆ. ಭೂ ಮಾಲೀಕರು ಅನಿವಾರ್ಯವಾಗಿ ಗೇಣಿದಾರರಿಂದ ಬೇಸಾಯ ಮಾಡಿಸಬೇಕಾದ ಸಂದರ್ಭದಲ್ಲಿ ಕಾನೂನುಗಳನ್ನು ಮಾಡಲಾಗಿದೆ. ಇದರ ಉದ್ದೇಶ ಗೇಣಿದಾರರಿಗೆ ಬೇಸಾಯದ ಕೆಲಸದ ಭದ್ರತೆ ಒದಗಿಸುವುದು, ನ್ಯಾಯವಾದ ಗೇಣಿಯನ್ನು ಗೊತ್ತುಮಾಡುವುದು ಇತ್ಯಾದಿ.

ಭಾರತದಲ್ಲಿ ಕೃಷಿ ಸಂಬಂಧವಾದ ಕಾನೂನುಗಳು ಅನೇಕವಿದೆ. ಭೂಹಿಡುವಳಿಗಳ ಒಡೆತನದ ಹಕ್ಕು, ವರ್ಗಾವಣೆ, ಅಡಮಾನಕ್ಕೆ ಸಂಬಂಧಿಸಿದಂತೆ ವಿಪುಲವಾದ ಕಾನೂನುಗಳು ಜಾರಿಯಲ್ಲಿವೆ. ಸ್ವಾತಂತ್ರ್ಯೋತ್ತರದಲ್ಲಿ ಭೂ ಸುಧಾರಣೆ ಕಾರ್ಯಕ್ರಮದ ಅಂಗವಾಗಿ ಜಮೀನ್ದಾರಿ, ಜಹಗೀರುದಾರಿ ಮತ್ತು ಇನಾಂ ಪದ್ಧತಿಗಳನ್ನು ಅಂತ್ಯಗೊಳಿಸುವ ಕಾನೂನುಗಳು ಜಾರಿಗೆ ಬಂದುವು. ಖುದ್ದಾಗಿ ಬೇಸಾಯ ಮಾಡುವ ಲಕ್ಷಾಂತರ ಗೇಣಿದಾರರಿಗೆ ಸರ್ಕಾರದೊಡನೆ ನೇರ ಸಂಪರ್ಕ ಉಂಟುಮಾಡಿ ಅವರಿಗೆ ಒಡೆತನದ ಹಕ್ಕು ಇಲ್ಲವೇ ಸಾಗುವಳಿ ಹಕ್ಕನ್ನು ಕೊಡುವ ಕಾನೂನುಗಳನ್ನು ಜಾರಿಗೆ ತರಲಾಯಿತು. ಎಲ್ಲೆಲ್ಲಿ ಭೂ ಮಾಲೀಕರು ಅನಿವಾರ್ಯವಾಗಿ ಗೇಣಿದಾರರಿಂದ ವ್ಯವಸಾಯ ಮಾಡಿಸುತ್ತಾರೋ ಅಲ್ಲಲ್ಲಿ ಸಾಗುವಳಿದಾರರಿಗೆ ಭದ್ರತೆ ಮತ್ತು ಗೇಣಿಯ ಪರಿಮಾಣವನ್ನು ನಿಖರಗೊಳಿಸುವ ಕಾನೂನುಗಳಾಗಿವೆ. ಭೂ ಮಾಲೀಕರು ಸ್ವಯಂ ಬೇಸಾಯಕ್ಕಾಗಿ ಇಟ್ಟುಕೊಳ್ಳಬಹುದಾದ ಹಿಡುವಳಿಯ ಪರಮಾವಧಿ ಪರಿಮಾಣವನ್ನು ಗೊತ್ತುಪಡಿಸುವ ಕಾನೂನುಗಳನ್ನು ಸಾಮಾನ್ಯವಾಗಿ ಎಲ್ಲ ರಾಜ್ಯಗಳೂ ಮಾಡಿವೆ. **(ನೋಡಿ: ಕೃಷಿ ಕಾನೂನುಗಳು)** (ಬಿ.ಆರ್.ಪಿ.)

**ಕೃಷಿ ಉತ್ಪನ್ನ ಮಾರಾಟ :** ಕೃಷಿ ಉತ್ಪನ್ನದ ಮಾರಾಟ, ಉತ್ಪಾದನೆಯ ಒಂದು ಬೇರ್ಪಡಿಸಲಾರದ ಅಂಗವಾಗಿದೆ. ಉತ್ಪನ್ನದ ಮಾರಾಟ ಅದರ ಉತ್ಪಾದನೆಯಷ್ಟೇ ಮುಖ್ಯವಾದ್ದು. ಉತ್ಪಾದನೆ ಮೊದಲನೆಯ ಹಂತವಾದರೆ, ಮಾರಾಟ ಕೊನೆಯ ಹಂತ. ಇವೆರಡನ್ನೂ ಬೇರ್ಪಡಿಸಲಿಕ್ಕಾಗದು. ಕೃಷಿ ಉತ್ಪಾದನೆಯ ಉದ್ದೇಶವೆಂದರೆ, ಉತ್ಪನ್ನವನ್ನು ಬೇಕಾದ ಪರಿಮಾಣದಲ್ಲಿ ಬೇಕಾದ ಕಡೆಯಲ್ಲಿ ಬೇಕಾದ ರೂಪದಲ್ಲಿ ಗ್ರಾಹಕರಿಗೆ ಪೂರೈಸುವುದು. ಕೃಷಿ ಮಾರಾಟ ಈ ಉದ್ದೇಶವನ್ನು ಈಡೇರಿಸುತ್ತದೆ.

ಕೃಷಿ ಉತ್ಪನ್ನದ ಮಾರಾಟ ಕಾರ್ಯದಲ್ಲಿ ನಾನಾ ವಿಧವಾದ ಕಾರ್ಯಗಳು ಅಡಕವಾಗಿವೆ. ಇವು ಹೊಲದಲ್ಲಿ ಇಳುವರಿಯನ್ನು ಪಡೆದಾಗಿನಿಂದ ಅದು ಗ್ರಾಹಕರಿಗೆ ಮುಟ್ಟುವವರೆಗೂ ಹಬ್ಬಿವೆ. ಈ ಕಾರ್ಯಗಳು ಅತ್ಯಂತ ಅವಶ್ಯಕವಾದವು. ಕೃಷಿ ಉತ್ಪನ್ನಗಳು ಜೀವನಾವಶ್ಯಕವಾದ ಅಥವಾ ಕೈಗಾರಿಕೆಗೆ ಆವಶ್ಯಕವಾದ ಪದಾರ್ಥಗಳಾದ ಕಾರಣ ಸತತವಾಗಿ ಇವುಗಳಿಗೆ ಬೇಡಿಕೆ ಇದ್ದೇ ಇರುತ್ತದೆ. ಆದರೆ ಇವುಗಳ ಉತ್ಪಾದನೆ ಮಾತ್ರ ಸಾಮಾನ್ಯವಾಗಿ ವರ್ಷಕ್ಕೆ ಒಂದು ಅಥವಾ ಎರಡು ಸಾರಿ ಋತುಗಳಿಗನುಸಾರವಾಗಿ ಆಗುತ್ತದೆ. ಎರಡನೆಯದಾಗಿ, ಇವುಗಳಿಗೆ ಬೇಡಿಕೆ ಎಲ್ಲಿರುತ್ತದೋ ಅಲ್ಲೇ ಇವನ್ನು ಯಾವಾಗಲೂ ಬೆಳೆಯಲಾಗುವುದಿಲ್ಲ. ಮೂರನೆಯದಾಗಿ, ಇವು ಗ್ರಾಹಕರಿಗೆ ಬೇಕಾದ ರೂಪದಲ್ಲಿ ಬೆಳೆಯುವುದಿಲ್ಲ. ಆದ್ದರಿಂದ ಇವನ್ನು ಅವರಿಗೆ ಬೇಕಾದ ಕಾಲ, ರೂಪ, ಸ್ಥಳ ಮತ್ತು ಪರಿಮಾಣಗಳಲ್ಲಿ ದೊರಕಿಸಲು ನಾನಾ ವಿಧವಾದ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಈ ಕಾರ್ಯಗಳು ವೈಶಿಷ್ಟ್ಯಪೂರ್ಣವಾಗಿರುವುದರಿಂದ ಇವಕ್ಕೆ ನುರಿತ, ಅನುಭವಸ್ಥ, ಮಧ್ಯವರ್ತಿಗಳ ಪಾತ್ರ ಆವಶ್ಯವೆನಿಸಬಹುದು. ಆದಕಾರಣ ಮಾರಾಟ ಕಾರ್ಯಗಳು ಕೃಷಿ ಉತ್ಪನ್ನದ ಮಾರಾಟದಲ್ಲಿ ಅತ್ಯಂತ ಮಹತ್ತ್ವದ ಮತ್ತು ವೈಶಿಷ್ಟ್ಯಪೂರ್ಣವಾದ ಕಾರ್ಯಗಳು. ಕೃಷಿ ಉತ್ಪನ್ನದ ಮಾರಾಟದ ಮುಖ್ಯ ಕಾರ್ಯಭಾರಗಳನ್ನು ಈ ಮುಂದೆ ವಿವರಿಸಲಾಗಿದೆ.

**1. ಸಂಗ್ರಹಣ :** ಕೃಷಿ ಉತ್ಪನ್ನಗಳು ಸಾಮಾನ್ಯವಾಗಿ ದೇಶದ ಲಕ್ಷಾಂತರ ಹಳ್ಳಿಗಳಲ್ಲಿ ಕೋಟ್ಯಂತರ ಬೇಸಾಯಗಾರರಿಂದ ಅಲ್ಪಪರಿಮಾಣಗಳಲ್ಲಿ ಉತ್ಪಾದಿತವಾಗುತ್ತವೆ. ಆದರೆ ಇವಕ್ಕೆ ಬಹುಪಾಲು ಬೇಡಿಕೆ ಕೇವಲ ಕೆಲವಾರು ಪಟ್ಟಣಗಳಲ್ಲೂ ರೂಪಾಂತರಿಸುವ ಕೈಗಾರಿಕಾ ಕ್ಷೇತ್ರಗಳಲ್ಲೂ ಕೇಂದ್ರೀಕೃತವಾಗಿರುತ್ತದೆ. ನಾನಾ ಕಡೆಗಳಲ್ಲಿ ಹರಡಿಕೊಂಡಿರುವ ಸಣ್ಣ ಸಣ್ಣ ಉತ್ಪಾದಕರಿಂದ ಕೃಷಿ ಉತ್ಪನ್ನವನ್ನು ಪಡೆದು ಕೆಲವು ಮುಖ್ಯ ಕೇಂದ್ರಗಳಲ್ಲಿ ಒಂದುಗೂಡಿಸುವುದು ಬಹು ಮುಖ್ಯವಾದ ಅಂಶ.

**2. ವಸ್ತುಗಳ ಸಾಗಣೆ :** ವಸ್ತುಗಳನ್ನು ಉತ್ಪಾದಿತ ಸ್ಥಳಗಳಿಂದ ಸಂಗ್ರಹ ಸ್ಥಳಗಳಿಗೆ ಮತ್ತು ಅಲ್ಲಿಂದ ಅವನ್ನು ಸಗಟು ವ್ಯಾಪಾರ ಕೇಂದ್ರಗಳಿಗೆ, ಚಿಲ್ಲರೆ ವ್ಯಾಪಾರ ಕೇಂದ್ರಗಳಿಗೆ ಅಥವಾ ಪೇಟೆಗಳಿಗೆ ಸಾಗಿಸಬೇಕಾಗುತ್ತದೆ. ಮಾರುಕಟ್ಟೆ ವಿಸ್ತಾರವಾದಂತೆ ಈ ಕಾರ್ಯದ ಮಹತ್ತ್ವವೂ ವ್ಯಾಪ್ತಿಯೂ ಹೆಚ್ಚುತ್ತದೆ.

**3. ದಾಸ್ತಾನು :** ವಸ್ತುಗಳ ಉತ್ಪಾದನೆಯ ಅನಂತರ ಅವು ಗ್ರಾಹಕರಿಗೆ ತಲುಪುವವರೆಗಿನ ಅವಧಿಯಲ್ಲಿ ಅವು ಕೆಡದಂತೆ ದಾಸ್ತಾನು ಮಾಡುವುದು ಮುಖ್ಯವಾದ ಕಾರ್ಯ. ಇದರಿಂದ ಅವನ್ನು ಬೇಕಾದಾಗ ಮಾರುವುದು ಅಥವಾ ಉಪಯೋಗಿಸುವುದು ಶಕ್ಯವಾಗುತ್ತದೆ. ಇದರಿಂದ ವಸ್ತುಗಳ ಸರಬರಾಜನ್ನು ಬೇಡಿಕೆಗೆ ಅನುಗುಣವಾಗಿ ನಿಯಂತ್ರಿಸುವುದು ಸಾಧ್ಯ. ಮಾರುಕಟ್ಟೆಯಲ್ಲಿ ಬೇಡಿಕೆಗಿಂತ ಸರಬರಾಯಿ ಹೆಚ್ಚಾಗಿ ಬೆಲೆ ಇಳಿಯುವ ಪ್ರವೃತ್ತಿ ಇದ್ದಾಗ ಸರಬರಾಜನ್ನು ತಡೆಹಿಡಿದು, ಬೆಲೆ ಇಳಿಯುವ ಪ್ರವೃತ್ತಿಯನ್ನು ತಡೆಯುವುದು ಮತ್ತು ಅನುಕೂಲ ಪರಿಸ್ಥಿತಿಯಲ್ಲಿ ಯೋಗ್ಯ ಬೆಲೆಗೆ ವಸ್ತುಗಳನ್ನು ವಿಕ್ರಯಿಸುವುದು ಶಕ್ಯವಾಗುತ್ತದೆ.

**4. ಹಣಕಾಸಿನ ಪೂರೈಕೆ :** ವಸ್ತುಗಳ ಉತ್ಪಾದನೆಯ ಅನಂತರ ಅವು ಗ್ರಾಹಕರಿಗೆ ತಲುಪುವ ತನಕ ಹಣಕಾಸಿನ ವ್ಯವಸ್ಥೆ ಮಾಡುವುದೂ ಮಾರಾಟದ ಒಂದು ಮುಖ್ಯ ಅಂಗ, ಕೃಷಿ ವಸ್ತುವಿನ ಉತ್ಪಾದಕನಿಗೆ ತೆರುವುದಕ್ಕೂ ವಸ್ತುಗಳ ಸಾಗಣೆ, ದಾಸ್ತಾನು ಸಂಸ್ಕರಣ ಮುಂತಾದ ಮಾರಾಟ ಕಾರ್ಯಗಳಿಗೂ ಹಣ ಬೇಕಾಗುತ್ತದೆ. ಸಾಮಾನ್ಯವಾಗಿ ಸುಗ್ಗಿಯಾದ ಕೂಡಲೆ ಕೃಷಿಕರು ತಮ್ಮ ಉತ್ಪಾದನೆಯ ಕಾರ್ಯಕ್ಕೆ ಪಡೆದ ಸಾಲವನ್ನು ಮುಟ್ಟಿಸಲು ಮತ್ತು ತಮ್ಮ ಮನೆ ಖರ್ಚಿಗೆ ಹಣ ಪಡೆಯಲು ಶೀಘ್ರವಾಗಿ ತಮ್ಮ ಉತ್ಪನ್ನವನ್ನು ಮಾರುತ್ತಾರೆ. ಹೀಗೆ ಏಕಕಾಲದಲ್ಲಿ ಉತ್ಪನ್ನ ಹೆಚ್ಚು ಮೊತ್ತದಲ್ಲಿ ಮಾರುಕಟ್ಟೆಗೆ ಬರುವುದರಿಂದ ಅದರ ಬೆಲೆಗಳು ಇಳಿದು ರೈತರಿಗೆ ತಕ್ಕ ಪ್ರತಿಫಲ ಸಿಗದೆ ಹೋಗುವ ಸಂಭವವುಂಟು. ಉತ್ಪನ್ನದ ಆಧಾರದ ಮೇಲೆ ಅವನಿಗೆ ಹಣದ ಪೂರೈಕೆಯಾಗುವ ಏರ್ಪಾಡಾದರೆ ಅನುಕೂಲ ಪರಿಸ್ಥಿತಿಯಲ್ಲಿ ಯೋಗ್ಯ ಬೆಲೆಗೆ ಉತ್ಪನ್ನವನ್ನು ಮಾರುವುದು ರೈತರಿಗೆ ಶಕ್ಯವಾಗುತ್ತದೆ. ಅವನಿಗೆ ಕಾಲಕಾಲಕ್ಕೆ ಬೇಕಾಗುವ ಹಣವನ್ನು ಸುಲಭವಾದ ಬಡ್ಡಿದರದಲ್ಲಿ ದೊರಕಿಸುವ ಏರ್ಪಾಡಾದರೆ, ಉತ್ಪನ್ನದ ಮಾರಾಟ ಸುವ್ಯವಸ್ಥಿತವಾಗುವುದು ಸಾಧ್ಯ. ಹಣದ ಧಾವಂತದಿಂದ, ಹೋದಷ್ಟು ಬೆಲೆಗೆ ಉತ್ಪನ್ನವನ್ನು ಮಾರುವ ಪ್ರವೃತ್ತಿ ತಪ್ಪುತ್ತದೆ.

**5. ನಷ್ಟ ಸಂಭವದ ಧಾರಣ :** ವಸ್ತುಗಳ ಉತ್ಪಾದನೆಯಾದ ಮೇಲೆ ಅವುಗಳ ಮಾರಾಟವಾಗುವವರೆಗಿನ ಅವಧಿಯಲ್ಲಿ ಅಥವಾ ಉತ್ಪಾದಕರಿಂದ ವಸ್ತುಗಳು ಗ್ರಾಹಕರನ್ನು ಮುಟ್ಟುವವರೆಗಿನ ಅವಧಿಯಲ್ಲಿ ಒಂದಿಲ್ಲೊಂದು ಕಾರಣದಿಂದ ಮಾಲಿಗೆ ಒದಗುವ ಹಾನಿಯನ್ನು ಭರಿಸಬೇಕಾದ ಸಂದರ್ಭ ಬರುತ್ತದೆ. ಈ ಹಾನಿಯನ್ನು ಸಹಿಸುವ ಹೊಣೆಗಾರಿಕೆಯನ್ನು ಮಾರಾಟ ವ್ಯವಹಾರಗಳಲ್ಲಿ ತೊಡಗಿದವರು ನಿರ್ವಹಿಸಬೇಕಾಗುತ್ತದೆ. ಬೆಂಕಿ, ಪ್ರವಾಹ, ಕಳವು, ಬೆಲೆಗಳ ಪಲ್ಲಟ ಮುಂತಾದವುಗಳ ವಿರುದ್ಧ ವಿಮೆ ಇಳಿಸಿ, ಮುಂಜಾಗ್ರತೆ ವಹಿಸುವುದೂ ಮಾರಾಟ ವ್ಯವಹಾರದ ಮುಖ್ಯ ಕಾರ್ಯವಾಗಿದೆ.

**6. ಸಂಸ್ಕರಣ :** ಕೆಲವೊಂದು ಉತ್ಪನ್ನಗಳು ಗ್ರಾಹಕರನ್ನು ತಲುಪುವುದಕ್ಕಿಂತ ಮುಂಚೆ ಅವನ್ನು ರೂಪಾಂತರಿಸುವುದು ಅಥವಾ ಸಂಸ್ಕರಿಸುವದು ಆವಶ್ಯವಿರುತ್ತದೆ. ಸೇಂಗಾ ಬೀಜವನ್ನು ಗಾಣಕ್ಕೆ ಕೊಟ್ಟು ಎಣ್ಣೆ ಮಾಡುವುದು, ಗೋದಿಯಿಂದ ಹಿಟ್ಟನ್ನು ಮಾಡುವುದು, ಬತ್ತದಿಂದ ಅಕ್ಕಿಯನ್ನು ತಯಾರಿಸುವುದು–ಇವು ಕೆಲವು ಉದಾಹರಣೆಗಳು. ಕೆಲವೊಂದು ಸಂದರ್ಭಗಳಲ್ಲಿ ಸಂಸ್ಕರಣವನ್ನು ಸ್ವತಃ ಉತ್ಪಾದಕರೇ ಮಾಡುವರಾದರೂ (ಉದಾ : ತುಪ್ಪವನ್ನು ತಯಾರಿಸುವುದು) ಬಹಳಷ್ಟು ಸಂದರ್ಭಗಳಲ್ಲಿ ಸಂಸ್ಕರಣವನ್ನು ಕಡಿಮೆ ವೆಚ್ಚದಲ್ಲಿ ಮಾಡಲು ದೊಡ್ಡ ಗಾತ್ರದಲ್ಲಿ ಮಧ್ಯವರ್ತಿಗಳು ಮತ್ತು ಸಹಕಾರ ಸಂಘಗಳು ಮುಖ್ಯಪಾತ್ರ ವಹಿಸುತ್ತವೆ.

**7. ಶಿಷ್ಟೀಕರಣ ಮತ್ತು ಶ್ರೇಣೀಕರಣ :** ಸುವ್ಯವಸ್ಥಿತ ಮಾರಾಟಕ್ಕಾಗಿ ವಸ್ತುಗಳ ಗುಣಮಟ್ಟಗಳನ್ನು ನಿಶ್ಚಯಿಸಿ ಅವಕ್ಕನುಗುಣವಾಗಿ ಶ್ರೇಣೀಕರಿಸಿ ಮಾರಬೇಕಾಗುತ್ತದೆ. ಇದರಿಂದ ಮಾರಾಟ ವ್ಯವಹಾರಗಳು ಸುಲಭವಾಗುತ್ತವೆ. ಶ್ರೇಣೀಕೃತ ವಸ್ತುಗಳ ವಿಷಯದಲ್ಲಿ ಕೊಳ್ಳುವವರಿಗೆ ಆಯಾ ವಸ್ತುಗಳ ಯೋಗ್ಯತೆಯ ಬಗ್ಗೆ ನಿಶ್ಚಿತ ತಿಳಿವಳಿಕೆ ಇರುವುದರಿಂದ ಮಾರಾಟ ವ್ಯವಹಾರಗಳು ಸುಸೂತ್ರವಾಗಿ ಮತ್ತು ಶೀಘ್ರವಾಗಿ ಸಾಗುವುದು ಶಕ್ಯವಾಗುತ್ತದೆ. ಶ್ರೇಣೀಕರಣದಿಂದ ಮಾರುವವನಿಗೆ ಉತ್ತಮ ಬೆಲೆಯೂ, ಕೊಳ್ಳುವವನಿಗೆ ಕೊಟ್ಟ ಹಣಕ್ಕೆ ಉತ್ತಮ ಮಾಲೂ ದೊರೆತು ಇಬ್ಬರಿಗೂ ತೃಪ್ತಿಯಾಗುತ್ತದೆ.

**ಮಾರಾಟ ವೆಚ್ಚ :** ಕೃಷಿ ವಸ್ತುವಿನ ಉತ್ಪಾದನೆಯ ಅನಂತರ ಅದನ್ನು ಗ್ರಾಹಕರಿಗೆ ತಲುಪಿಸುವವರೆಗೆ ಮಾಡಬೇಕಾದ ನಾನಾ ಕಾರ್ಯಗಳಿಗೆ ತಗಲುವ ವೆಚ್ಚವನ್ನೇ ಮಾರಾಟ ವೆಚ್ಚವೆಂದು ಕರೆಯುತ್ತಾರೆ. ಕೈಗಾರಿಕೆಯ ಸರಕುಗಳ ಮಾರಾಟ ವೆಚ್ಚಕ್ಕಿಂತ ಈ ವೆಚ್ಚ ಅತ್ಯಂತ ಹೆಚ್ಚಿನದಾಗಿರುತ್ತದೆ. ಏಕೆಂದರೆ ಕೈಗಾರಿಕೆಯ ಸರಕುಗಳನ್ನು ಮಾರಾಟ ಮಾಡುವುದರಲ್ಲಿ ಮೇಲ್ಕಾಣಿಸಿದ ಎಲ್ಲ ಮಾರಾಟಕಾರ್ಯಗಳ ಅವಶ್ಯಕತೆ ಇರುವುದಿಲ್ಲ. 1. ಕೃಷಿ ಪದಾರ್ಥದ ಸ್ವರೂಪ, 2. ಸರಬರಾಯಿಯ ಸ್ವರೂಪ. 3. ಬೇಡಿಕೆಯ ಸ್ವರೂಪ–ಈ ಕಾರಣಗಳಿಂದಾಗಿ ಕೃಷಿ ಉತ್ಪನ್ನದ ಮಾರಾಟ ವೆಚ್ಚ ಹೆಚ್ಚಾಗಿರುತ್ತದೆ. ಮೌಲ್ಯದ ದೃಷ್ಟಿಯಲ್ಲಿ ಕೃಷಿ ಉತ್ಪನ್ನದ ಗಾತ್ರ ಮತ್ತು ತೂಕ ಸಾಮಾನ್ಯವಾಗಿ ಹೆಚ್ಚಾಗಿರುವುದರಿಂದ ಅದರ ಸಾಗಣೆ ಮತ್ತು ದಾಸ್ತಾನುಗಳ ವೆಚ್ಚ ಅಧಿಕವಾಗಿರುತ್ತದೆ. ಆದ್ದರಿಂದ ವಸ್ತುವಿನ ಮೌಲ್ಯದ ಮಾನದಿಂದ, ಮಾರಾಟ ವೆಚ್ಚ ಹೆಚ್ಚಾಗುತ್ತದೆ. ಕೃಷಿ ಉತ್ಪನ್ನ ಸಾಮಾನ್ಯವಾಗಿ ಹೆಚ್ಚು ಕಾಲ ಕೆಡದೆ ಇರುವಂಥದಲ್ಲ. ರೈತರು ಬೆಳೆ ಕೊಯ್ದಾದ ಕೂಡಲೇ ತಮ್ಮ ಉತ್ಪನ್ನಗಳನ್ನು ಪೇಟೆಗೆ ತರುವುದರಿಂದ ಪೂರೈಕೆಯ ಪರಿಮಾಣ ಅಧಿಕವಾಗಿ ಮಾರಾಟವಾಗುತ್ತದೆ. ಅದರ ಸರಬರಾಯಿ ಋತುವಿಗೆ ಅನುಗುಣವಾದ್ದು, ಆದರೆ ಅದರ ಬೇಡಿಕೆ ಸಾಮಾನ್ಯವಾಗಿ ವರ್ಷವಿಡೀ ಇರುತ್ತದೆ. ಆದ್ದರಿಂದ ವರ್ಷವೆಲ್ಲ ಒದಗುವಂತೆ ಇದನ್ನು ದಾಸ್ತಾನು ಮಾಡಿಡಲು ಹೆಚ್ಚು ವೆಚ್ಚ ತಗಲುತ್ತದೆ. ನಾಶೀಗುಣವುಳ್ಳ ಪದಾರ್ಥವಾದರೆ ಅದನ್ನು ರಕ್ಷಿಸಲು ಹೆಚ್ಚು ವೆಚ್ಚ ಭರಿಸುವುದು ಅಗತ್ಯ. (ಉದಾ : ಶೀತಕ ವ್ಯವಸ್ಥೆ) ಈ ಕಾರಣಗಳಿಂದ ಕೃಷಿ ಉತ್ಪನ್ನದ ಮಾರಾಟ ವೆಚ್ಚ ಕೈಗಾರಿಕಾ ವಸ್ತುಗಳ ಮಾರಾಟ ವೆಚ್ಚಕ್ಕಿಂತ ಅತ್ಯಂತ ಅಧಿಕವಾಗಿರುತ್ತದೆ.

ಕೃಷಿ ಉತ್ಪನ್ನ ಮಾರಾಟ ವೆಚ್ಚ ಭಾರತದಲ್ಲಿ ಅತ್ಯಂತ ಹೆಚ್ಚು. ಅದಕ್ಕೆ ಮುಖ್ಯವಾದ ಕಾರಣವೆಂದರೆ ಭಾರತದ ಮಾರಾಟ ಪದ್ಧತಿಯಲ್ಲಿರುವ ದೋಷಗಳು, ರೈತರ ಜಮೀನು ಹಿಡುವಳಿಗಳು ಬಲು ಚಿಕ್ಕವಾಗಿರುವುದರಿಂದ ಅವರು ಉತ್ಪಾದಿಸಿದ ಅಲ್ಪಪರಿಮಾಣದ ಹುಟ್ಟುವಳಿಯನ್ನು ದೂರದ ಪೇಟೆಗೆ ಸಾಗಿಸಲಾರದೆ ಬಹು ಪಾಲು ರೈತರು ಹಳ್ಳಿಗಳಲ್ಲಿ ಮಾರಾಟ ಮಾಡುತ್ತಾರೆ.

ಅಲ್ಲದೆ ಇವರಲ್ಲನೇಕರಲ್ಲಿ ಬೇಸಾಯದ ವೆಚ್ಚ ಭರಿಸುವಷ್ಟು ಹಣ ಸಾಮರ್ಥ್ಯ ಇಲ್ಲದಿರುವುದರಿಂದ, ಅದಕ್ಕಾಗಿಯೂ ಜೀವನ ನಿರ್ವಹಣಕ್ಕಾಗಿಯೂ ಮಾಡಿದ ಸಾಲವನ್ನು ತೀರಿಸಲು ಅವರು ತಮ್ಮ ಉತ್ಪನ್ನವನ್ನು ಸುಗ್ಗಿಯಾದೊಡನೆಯೇ ಮಾರಲು ಹಾತೊರೆಯುತ್ತಾರೆ. ದಾಸ್ತಾನು ಸೌಕರ್ಯ ಇಲ್ಲದ್ದು ಇನ್ನೊಂದು ಕೊರತೆ. ಸಾರಿಗೆ ಸೌಕರ್ಯಗಳ ಅಭಾವ, ಸಾಗಾಟಕ್ಕೆ ಬೇಕಾಗುವ ಹಣದ ಅಡಚಣೆ–ಮುಂತಾದವೂ ಸಮಸ್ಯೆಗಳೇ. ಉತ್ಪನ್ನದ ಬಹುದೊಡ್ಡ ಭಾಗವನ್ನು ಅವರು ಹಳ್ಳಿಗಳಲ್ಲೇ ಮಧ್ಯವರ್ತಿಗಳಿಗೆ ಮಾರಬೇಕಾಗಿ ಬರುವುದರಿಂದ ಅವರಿಗೆ ಯೋಗ್ಯ ಬೆಲೆ ದೊರೆಯುವುದಿಲ್ಲ. ಅಂತಿಮವಾಗಿ ಗ್ರಾಹಕರು ಇದನ್ನು ಕೊಳ್ಳುವಾಗ ಕೊಡುವ ಬೆಲೆಯ ಅರ್ಧಕ್ಕಿಂತ ಹೆಚ್ಚು ಭಾಗ ಮಧ್ಯವರ್ತಿಗಳ ಪಾಲಾಗುವುದುಂಟು.

ಭಾರತದಲ್ಲಿ ಮಧ್ಯವರ್ತಿಗಳ ಹಿತಸಂಬಂಧಗಳಿಗೆ ಅನುಕೂಲವಾಗಿರುವ ಅನೇಕ ಸಂಪ್ರದಾಯಗಳು ಕಂಡುಬರುತ್ತವೆ. ಹೀಗಾಗಿ ರೈತರು ಅನಿಯಂತ್ರಿತ ಮಾರುಕಟ್ಟೆಗಳಲ್ಲಿ ನಾನಾ ರೀತಿಯಲ್ಲಿ ಶೋಷಣೆಗಳಿಗೆ ಒಳಗಾಗುತ್ತಾರೆ. ಇವುಗಳಲ್ಲಿ ಮುಖ್ಯವಾದವೆಂದರೆ:

1. ತೂಕ ಅಳತೆಗಳ ಯೋಗ್ಯ ನಿಯಂತ್ರಣವಿಲ್ಲದ್ದರಿಂದ ಆಗುವ ವಂಚನೆ. 2. ಉತ್ಪನ್ನದ ಮಾದರಿಯನ್ನು ಪರೀಕ್ಷಿಸುವ ನೆವದಲ್ಲಿ ಅಧಿಕ ಪರಿಮಾಣದಲ್ಲಿ ಅದರ ದೋಚಿಕೆ. 3. ಗುಪ್ತ ಸಂಜ್ಞೆಗಳಿಂದ ಬೆಲೆಗಳನ್ನು ನಿರ್ಧರಿಸಿ ನಡೆಸುವ ವಂಚನೆ. 4. ರೈತರ ಮೇಲೆ ಅನವಶ್ಯ, ಅಸಮರ್ಥನೀಯ ಹಾಗೂ ಅನ್ಯಾಯದ ಮಾರುಕಟ್ಟೆಯ ಖರ್ಚುಗಳ ಹೇರಿಕೆ.

ಈ ನಾನಾ ರೀತಿಯ ಅಕ್ರಮಗಳನ್ನೂ ದೋಷಗಳನ್ನೂ ಸರಿಪಡಿಸಲು ನಾನಾ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲಾಗಿದೆ. ರಾಯಲ್ ಕಮಿಷನ್ ಆಫ್ ಅಗ್ರಿಕಲ್ಚರ್, ಸೆಂಟ್ರಲ್ ಕಾಟನ್ ಕಮಿಟಿ ಮತ್ತು ಮಾರ್ಕೆಟಿಂಗ್ ಉಪಸಮಿತಿಯವರು ಕೆಲವು ಮುಖ್ಯ ಸುಧಾರಣೆಗಳನ್ನು ಸೂಚಿಸಿದ್ದಾರೆ. ಮಾರಾಟದ ಸುಧಾರಣೆಗಳಿಗಾಗಿ ಮತ್ತು ಪ್ರಗತಿಗಾಗಿ ಮಾಡಿದ ಸೂಚನೆಗಳು ಇವು : 1. ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆ. 2. ಸಹಕಾರಿ ಮಾರಾಟ. 3. ಸಾರಿಗೆ ಸಂಪರ್ಕಸುಧಾರಣೆ. 4. ಸುಲಭ ಬಡ್ಡಿಯಲ್ಲಿ ರೈತರಿಗೆ ಹಣದ ಪೂರೈಕೆ. 5. ಪೇಟೆಗಳಿಗೆ ಸಂಬಂಧಿಸಿದ ಅಂಕಿಅಂಶಗಳ ಸಂಗ್ರಹಣ. 6. ನಿರ್ದಿಷ್ಟ ತೂಕ ಮತ್ತು ಅಳತೆಗಳ ಕಾಯಿದೆಗಳ ಕಟ್ಟುನಿಟ್ಟಾದ ಜಾರಿ. 7. ಉತ್ಪನ್ನದ ದಾಸ್ತಾನು ಸೌಲಭ್ಯ, ಭಾರತದಲ್ಲಿ ಉತ್ಪನ್ನ ಮಾರಾಟ ಸುಧಾರಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಕ್ರಮಗಳನ್ನು ಜಾರಿಗೆ ತಂದಿವೆ. ಅವುಗಳಲ್ಲಿ ಮುಖ್ಯವಾದವನ್ನು ಕೆಳಗೆ ವಿವರಿಸಿದೆ :

**ಸಹಕಾರಿ ಮಾರಾಟ :** ಭಾರತದಲ್ಲಿ ಹಿಡುವಳಿಗಳು ಚಿಕ್ಕವು. ಅವುಗಳ ಉತ್ಪಾದನೆಯೂ ಅಲ್ಪವೇ ಆಗಿದೆ. ರೈತರು ತಮಗೆ ಬೇಕಾದ ಸಾಧನ ಸಲಕರಣೆಗಳನ್ನು ಕೊಳ್ಳುವಾಗ ಹೆಚ್ಚು ಹಣ ತೆರಬೇಕಾಗುತ್ತದೆ. ಇದರಿಂದ ಅವರ ಉತ್ಪಾದನೆ ವೆಚ್ಚ ಕೂಡ ಹೆಚ್ಚಾಗಿ, ಉತ್ಪನ್ನಗಳಿಗೆ ಯೋಗ್ಯ ಮಾರಾಟದ ಸೌಕರ್ಯವಿಲ್ಲದೆ ಹುಟ್ಟುವಳಿಗೆ ಲಾಭದಾಯಕವಲ್ಲದ ಪ್ರತಿಫಲವನ್ನು ಪಡೆಯಬೇಕಾಗುತ್ತದೆ. ರೈತರು ಈ ವಿಷಮ ಸ್ಥಿತಿಯಿಂದ ಪಾರಾಗಲು ಅವರಿಗೆ ಯೋಗ್ಯ ಸಾಧನ ಸಲಕರಣೆಗಳ ಪೂರೈಕೆ ಮತ್ತು ಅವರ ಹುಟ್ಟುವಳಿಗೆ ಯೋಗ್ಯ ಬೆಲೆ ದೊರಕಬೇಕು. ಇದನ್ನು ಅವರಲ್ಲಿ ಒಬ್ಬೊಬ್ಬರೂ ಪ್ರತ್ಯೇಕವಾಗಿ ಸಾಧಿಸಲಾಗುವುದಿಲ್ಲ. ಆದಕಾರಣ ರೈತರು ತಮ್ಮೆಲ್ಲರ ಅಸಮರ್ಥತೆ ಮತ್ತು ಕೊರತೆಗಳನ್ನು ನೀಗಿಕೊಳ್ಳಲು ಮತ್ತು ಪರಸ್ಪರ ಹಿತ ಸಂವರ್ಧನೆಗಾಗಿ ಸಹಕಾರ ತತ್ತ್ವಾನುಗುಣವಾಗಿ ಸಂಘಟಿತರಾಗಿ, ಸುವ್ಯವಸ್ಥಿತವಾದ ಮಾರಾಟ ಸಂಘಗಳನ್ನು ಸ್ಥಾಪಿಸಿ, ಆ ಮೂಲಕ ತಮ್ಮ ಉತ್ಪನ್ನವನ್ನು ಸಾಮೂಹಿಕವಾಗಿ ಮಾರುವುದೂ ಬೇಕಾದ ಸಾಧನ ಸಲಕರಣೆಗಳನ್ನು ಸಾಮೂಹಿಕವಾಗಿ ಕೊಳ್ಳುವುದೂ ಆವಶ್ಯವಾಗಿದೆ. ರೈತನ ಆರ್ಥಿಕ ಸ್ಥಿತಿ ಬಹಳ ಮಟ್ಟಿಗೆ ಆತ ಉತ್ಪಾದಿಸುವ ಪದಾರ್ಥಕ್ಕೆ ಪೇಟೆಯಲ್ಲಿ ದೊರೆಯುವ ಬೆಲೆಯನ್ನೇ ಅವಲಂಬಿಸಿರುತ್ತದೆ. ಉತ್ಪನ್ನದ ಪರಿಮಾಣ, ಫಸಲಿನ ಗುಣ, ಅದಕ್ಕೆ ಪೇಟೆಯಲ್ಲಿ ದೊರೆಯುವ ಬೆಲೆ–ಇವು ರೈತನ ವರಮಾನವನ್ನು ನಿಷ್ಕರ್ಷಿಸುವ ಅಂಶಗಳು. ಸಹಕಾರಿ ಮಾರಾಟದಿಂದ ಉತ್ಪನ್ನಕ್ಕೆ ಯೋಗ್ಯ ಬೆಲೆ ದೊರಕುವುದಲ್ಲದೆ ಮಾರಾಟ ವೆಚ್ಚದಲ್ಲಿ ಗಣನೀಯ ಪರಿಮಾಣದ ಮಿತವ್ಯಯವನ್ನು ಸಾಧಿಸಬಹುದಾಗಿದೆ. ಇದು ರೈತರ ಆರ್ಥಿಕ ಹಿತವನ್ನು ಸಂರಕ್ಷಿಸಲು ಯುಕ್ತ ಸಾಧನವಾಗಿದೆ.

ಸಹಕಾರಿ ಮಾರಾಟದಿಂದ ಆಗುವ ಪ್ರಯೋಜನಗಳು, ಸೌಕರ್ಯಗಳು ಮತ್ತು ಲಾಭಗಳು ಅಪಾರವಾಗಿವೆ. ಉತ್ಪನ್ನಕ್ಕೆ ಯೋಗ್ಯ ಬೆಲೆ ದೊರಕಿಸುವುದು ಸಹಕಾರಿ ಮಾರಾಟದ ಮೊದಲನೆಯ ಗುರಿ. ರೈತರು ಸಂಘಟಿತರಾಗಿ, ಸಾಮೂಹಿಕವಾಗಿ ತಮ್ಮ ಉತ್ಪನ್ನವನ್ನು ಸಹಕಾರಿ ಮಾರಾಟ ಸಂಘದ ಮೂಲಕ ವಿಕ್ರಯಿಸುವುದರಿಂದ ಬೆಲೆಯ ವಿಷಯವಾಗಿ ಖರೀದಿದಾರರಿಂದ ಸಾಮೂಹಿಕ ಕರಾರು ಮಾಡುವುದರೊಂದಿಗೆ ಶಕ್ಯವಾಗಿ, ಖರೀದಿದಾರರಲ್ಲಿ ಸ್ಪರ್ಧೆಯುಂಟಾಗಿ ಉತ್ಪನ್ನಕ್ಕೆ ಅಧಿಕ ಯೋಗ್ಯ ಬೆಲೆ ದೊರಕುತ್ತದೆ.

ಸಹಕಾರಿ ಮಾರಾಟ ಸಂಘಗಳು ಅತ್ಯುತ್ತಮ ಮಾರಾಟ ಪದ್ಧತಿಗಳಾದ ಬಹಿರಂಗ ಹರಾಜು ಮುಂತಾದವುಗಳ ಮೂಲಕ ಉತ್ಪನ್ನವನ್ನು ವಿಕ್ರಯ ಮಾಡಿ ಅದಕ್ಕೆ ಯೋಗ್ಯ ಬೆಲೆ ದೊರಕುವಂತೆ ಮಾಡುತ್ತವೆ. ಸಹಕಾರಿ ಮಾರಾಟ ಸಂಘಗಳು ದೊಡ್ಡ ಪರಿಮಾಣದಲ್ಲಿ ಉತ್ಪನ್ನದ ವ್ಯವಹಾರ ನಡೆಸುವುದರಿಂದ ಅವು ತಜ್ಞರನ್ನು ನಿಯಮಿಸಿ ಉತ್ಪನ್ನವನ್ನು ಶಿಷ್ಟೀಕರಣ, ಶ್ರೇಣೀಕರಣ ಮಾಡಿ ಮಾರುವುದು ಶಕ್ಯವಾಗುತ್ತದೆ. ಇದರಿಂದಾಗಿ ಕೊಳ್ಳುವವರಲ್ಲಿ ಮತ್ತು ವಿಕ್ರಯಿಸುವವರಲ್ಲಿ ಉತ್ಪನ್ನದ ಗುಣ ಮತ್ತು ಅದರ ಶ್ರೇಷ್ಠತೆಯ ಬಗ್ಗೆ ನಿಶ್ಚಿತ ತಿಳಿವಳಿಕೆ ಮೂಡಿ ಉತ್ಪನ್ನದ ಗುಣಕ್ಕೆ ತಕ್ಕಂತೆ ಯೋಗ್ಯ ಬೆಲೆ ದೊರೆಯುತ್ತದೆ. ಸಹಕಾರ ಸಂಘಗಳು ಉತ್ಪನ್ನವನ್ನು ಹಳ್ಳಿಗಳಲ್ಲಿ ಶೇಖರಿಸಿ ಅವನ್ನು ಒಟ್ಟಾಗಿ ಪೇಟೆಗಳಿಗೆ ಸಾಗಿಸಿ ಮಾರಾಟ ಮಾಡುವುದರಿಂದ ಉತ್ಪನ್ನಕ್ಕೆ ಯೋಗ್ಯಬೆಲೆ ದೊರೆಯುವುದಲ್ಲದೆ ಸಾಗಾಟ ವೆಚ್ಚವೂ ಮಿತವಾಗಿರುತ್ತದೆ. ಮಧ್ಯವರ್ತಿಗಳನ್ನು ಬಹುತೇಕ ನಿವಾರಿಸಲಾಗುವುದರಿಂದ ಮಾರಾಟ ವೆಚ್ಚವೂ ಗಣನೀಯವಾದ ಪರಿಮಾಣದಲ್ಲಿ ಕಡಿಮೆಯಾಗುತ್ತದೆ. ಸಂಘವೇ ಮಧ್ಯವರ್ತಿಗಳ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಸಹಕಾರ ಮಾರಾಟ ಸಂಘಗಳು ಇನ್ನೂ ಹಲವಾರು ಸಹಾಯ ಸೌಕರ್ಯಗಳನ್ನು ರೈತರಿಗೆ ಒದಗಿಸುವುವು. ಅವು ಯಾವುವೆಂದರೆ : ಪೇಟೆಯ ಸ್ಥಿತಿಗತಿಗಳ ಬಗ್ಗೆ ತಿಳಿವಳಿಕೆ ನೀಡಿಕೆ, ಉತ್ಪನ್ನಕ್ಕೆ ಯೋಗ್ಯ ಬೆಲೆ ಬರುವವರೆಗೆ ಅದರ ದಾಸ್ತಾನು, ರೈತರ ಅಗತ್ಯಗಳಿಗಾಗಿ ಉತ್ಪನ್ನದ ಆಧಾರದ ಮೇಲೆ ಸುಲಭ ಬಡ್ಡಿದರದಲ್ಲಿ ಹಣ ಸಹಾಯ ಮತ್ತು ರೈತರ ಕೃಷಿಗೆ ಯೋಗ್ಯ ಬೆಲೆಗಳಲ್ಲಿ ಅವರಿಗೆ ಬೇಕಾದ ಸಾಧನ ಸಲಕರಣೆಗಳ ಪೂರೈಕೆ.

**ಕೃಷಿ ಉತ್ಪನ್ನದ ಮಾರಾಟ ನಿಯಂತ್ರಣ :** ಕೃಷಿ ಉತ್ಪನ್ನದ ಮಾರಾಟದ ವ್ಯವಸ್ಥೆಯ ಪುನರ್ಘಟನೆ ಸುಧಾರಣೆಗಳಿಗೆ ಈಗೀಗ ಹೆಚ್ಚು ಮಹತ್ತ್ವ ಪ್ರಾಪ್ತವಾಗುತ್ತಿದೆ. ಮಾರಾಟ ಪದ್ಧತಿಯನ್ನು ಸಮಗ್ರವಾಗಿ ಹಾಗೂ ಯೋಜನಾ ಬದ್ಧವಾಗಿ ಸುಧಾರಿಸುವ ಕಾರ್ಯಕ್ರಮದಲ್ಲಿ ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ಪ್ರಮುಖ ಹೆಜ್ಜೆಯಾಗಿ ಪರಿಣಮಿಸಿದೆ. ಮಾರುಕಟ್ಟೆಯ ವ್ಯವಹಾರಗಳು ಕ್ರಮಬದ್ಧವಾಗಿ, ನ್ಯಾಯಪೂರ್ವಕವಾಗಿ ನಡೆಯುವಂತೆ ಏರ್ಪಾಡು ಮಾಡುವುದು, ಪೇಟೆಗೆ ಉತ್ಪನ್ನವನ್ನು ವಿಕ್ರಯಿಸಲಿಕ್ಕೆ ತಂದ ರೈತರ ಮತ್ತು ಕೊಳ್ಳಲು ಬಂದ ವರ್ತಕರ ನಡುವಣ ವ್ಯವಹಾರಗಳನ್ನು ಕ್ರಮಗೊಳಿಸುವುದು, ರೈತರ ನ್ಯಾಯವಾದ ಹಿತಗಳಿಗೆ ಬಾಧಕವಾಗುವಂಥ ಪದ್ಧತಿಗಳನ್ನು ಪ್ರತಿಬಂಧಿಸುವುದು, ಅನಾವಶ್ಯಕ ಹಾಗೂ ಅನ್ಯಾಯದ ವೆಚ್ಚವನ್ನು ಹೋಗಲಾಡಿಸಿ, ಮಾರಾಟ ವೆಚ್ಚದಲ್ಲಿ ಉಳಿತಾಯ ಸಾಧಿಸುವುದು, ಅಲ್ಲದೆ ಗುಪ್ತ ವಿಕ್ರಯ ಪದ್ಧತಿಯನ್ನು ನಿಲ್ಲಿಸಿ ಜಾಹೀರು ಅಥವಾ ಬಹಿರಂಗ ವಿಕ್ರಯ ಪದ್ಧತಿ ಜಾರಿಗೆ ತರುವುದು–ಇವು ಇದರ ಮುಖ್ಯ ಉದ್ದೇಶಗಳು.

ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ಕಾಯಿದೆ 1939ರಲ್ಲಿ ಮುಂಬೈ ಪ್ರಾಂತ್ಯದಲ್ಲಿ ಜಾರಿಗೆ ಬಂದಮೇಲೆ ಅದೇ ಬಗೆಯ ಕಾಯಿದೆಗಳು ಇತರ ಪ್ರಾಂತ್ಯಗಳಲ್ಲಿಯೂ ಬಂದುವು. ಹಿಂದಿನ ಮೈಸೂರು ಸಂಸ್ಥಾನದಲ್ಲಿ 1939ರ ಕೃಷಿ ಉತ್ಪನ್ನ ಮಾರುಕಟ್ಟೆಗಳ ಕಾಯಿದೆಯ ಪ್ರಕಾರ ನಿಯಂತ್ರಿತ ಮಾರುಕಟ್ಟೆಗಳು ಸರ್ಕಾರದ ಸ್ವಾಮ್ಯದಲ್ಲಿ ಸ್ಥಾಪಿತವಾದುವು. 1966–67ರಲ್ಲಿ ರಾಜ್ಯದಲ್ಲಿ ಒಟ್ಟು 155 ನಿಯಂತ್ರಿತ ಮಾರುಕಟ್ಟೆಗಳಿದ್ದು ಒಟ್ಟು 245.50 ಕೋಟಿ ರೂಪಾಯಿಗಳ ವ್ಯವಸಾಯೋತ್ಪನ್ನಗಳು ನಿಯಂತ್ರಿತ ಮಾರುಕಟ್ಟೆಗಳ ಮೂಲಕ ಮಾರಾಟವಾದುವು. ಈ ಕಾಯಿದೆಯನ್ವಯ ಕೃಷಿ ಉತ್ಪನ್ನದ ಮಾರಾಟ ಮತ್ತು ಕೊಳ್ಳಿಕೆ ವ್ಯವಹಾರಗಳನ್ನು ಕ್ರಮಪಡಿಸಲಾಗುವುದು. ಈ ವ್ಯವಹಾರಗಳನ್ನು ನೋಡಿಕೊಳ್ಳಲು 9 ರಿಂದ 15 ಜನ ಸದಸ್ಯರ ಸಮಿತಿಯನ್ನು ಅಸ್ತಿತ್ವಕ್ಕೆ ತರಲಾಗುತ್ತದೆ. ಈ ಸಮಿತಿಯಲ್ಲಿ ಶೇಕಡ 50ಕ್ಕಿಂತಲೂ ಹೆಚ್ಚು ಜನ ರೈತ ಪ್ರತಿನಿಧಿಗಳು ಇರುತ್ತಾರೆ. ಒಬ್ಬರು ಅಥವಾ ಇಬ್ಬರು ಸರ್ಕಾರದಿಂದ ನಾಮಕರಣ ಹೊಂದಿದವರಿರುತ್ತಾರೆ. ಸಹಕಾರ ಸಂಘಗಳಿಂದ ಒಬ್ಬ ಪ್ರತಿನಿಧಿ ಮತ್ತು ವರ್ತಕರ ಚುನಾಯಿತ ಪ್ರತಿನಿಧಿಗಳು ಈ ಸಮಿತಿಯ ಪ್ರಾತಿನಿಧ್ಯವನ್ನು ಪಡೆದಿರುತ್ತಾರೆ. 1966ರ ಮೈಸೂರು ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ಕಾಯಿದೆಯ ಪ್ರಕಾರ ಈ ಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ರೈತರ ಪ್ರತಿನಿಧಿಗಳೇ ಆಗಿರಬೇಕು. ಈ ಕಾಯಿದೆಯಲ್ಲಿ ಪೇಟೆಯ ಕ್ಷೇತ್ರ, ಮಾರುಕಟ್ಟೆಯ ಪ್ರದೇಶ, ಉಪಮಾರುಕಟ್ಟೆಯ ಪ್ರದೇಶಗಳಲ್ಲಿ ನಿಯಂತ್ರಣಕ್ಕೆ ಒಳಪಟ್ಟ ದವಸ–ಧಾನ್ಯಗಳು ಮುಂತಾದವನ್ನು ಕಟ್ಟುನಿಟ್ಟಾಗಿ ನಮೂದಿಸಲಾಗಿರುತ್ತದೆ. ವರ್ತಕರು ಮಾರುಕಟ್ಟೆಯ ಪ್ರದೇಶದಲ್ಲಿ ವ್ಯವಹಾರ ನಡೆಸಲು ಅನುಮತಿ ಪಡೆಯಬೇಕಾಗುತ್ತದೆ. ಇದಕ್ಕೆ ನಿಗದಿಯಾದ ಹಣ ಕೊಡಬೇಕಾಗುತ್ತದೆ. ಉತ್ಪನ್ನ ಶ್ರೇಣೀಕರಣಕ್ಕೆ ನುರಿತ ಜನರನ್ನು ನಿಯಮಿಸಲಾಗುತ್ತದೆ. ನಿರ್ದಿಷ್ಟ ತೂಕ ಅಳತೆಗಳನ್ನು ಜಾರಿಗೆ ತರುವುದು, ಮಾರಾಟ ಪದ್ಧತಿಗಳನ್ನು ಕ್ರಮಗೊಳಿಸುವುದು, ಗುಪ್ತ ಸಂಜ್ಞೆಗಳಿಂದ ಉತ್ಪನ್ನದ ಬೆಲೆ ನಿರ್ಧರಿಸುವ ಪದ್ಧತಿಯನ್ನು ನಿರ್ಬಂಧಿಸುವುದು ಮತ್ತು ಬಹಿರಂಗ ಕರಾರು ಪದ್ಧತಿ ಅಥವಾ ಜಾಹೀರು ಹರಾಜು ಪದ್ಧತಿಯಿಂದ ಉತ್ಪನ್ನದ ಮಾರಾಟ ಏರ್ಪಡಿಸುವುದು, ಮಾರಾಟ ಖರೀದಿ ವ್ಯವಹಾರಗಳನ್ನು ಕ್ರಮಬದ್ಧವಾಗಿ ನಡೆಸುವುದು ಮತ್ತು ಅವುಗಳ ಲೆಕ್ಕಪತ್ರಗಳನ್ನಿಡುವ ವ್ಯವಸ್ಥೆ ಮಾಡುವುದು ಮುಂತಾದವು ಮಾರಾಟ ನಿಯಂತ್ರಣ ಕಾಯಿದೆಯ ಮುಖ್ಯಾಂಶಗಳು. ಅಲ್ಲದೆ ಮಾರುಕಟ್ಟೆ ಸಮಿತಿಗಳು ಹುಟ್ಟುವಳಿಯ ಬೆಲೆಗಳ ವಿಷಯವಾಗಿ ರೈತರಲ್ಲಿ ತಿಳುವಳಿಕೆಯಾಗುವಂತೆ ಮಾರುಕಟ್ಟೆಯ ವರದಿಗಳನ್ನು ಪ್ರಸಾರ ಮಾಡುತ್ತವೆ. ಉತ್ಪನ್ನಕ್ಕೆ ಯೋಗ್ಯ ಬೆಲೆ, ಶಿಷ್ಟ ಅಳತೆ ತೂಕ, ಅನಾವಶ್ಯಕ ವಟ್ಟಗಳ ಹಾಗೂ ಕಡಿತಗಳ ನಿರ್ಬಂಧ– ಈ ಮೂರು ಮುಖ್ಯ ತತ್ತ್ವಗಳ ಮೇಲೆ ಮಾರಾಟ ನಿಯಂತ್ರಣ ಯೋಜನೆ ರೂಪಿತವಾಗಿದೆ.

**ಶಿಷ್ಟ ತೂಕ ಮತ್ತು ಅಳತೆ :** ದೇಶದಲ್ಲಿ 1959ರಲ್ಲಿ ಮೆಟ್ರಿಕ್ ಪದ್ಧತಿ ಅಥವಾ ದಶಮಾಂಶ ಪದ್ಧತಿ ಜಾರಿಗೆ ಬರುವುದಕ್ಕಿಂತ ಮುಂಚೆ ಒಂದೊಂದು ಕಡೆ ಒಂದೊಂದು ರೀತಿಯ ಅಳತೆ ಮತ್ತು ತೂಕಗಳು ಜಾರಿಯಲ್ಲಿದ್ದುವು. ಅವುಗಳಿಂದಾಗಿ ರೈತರು ತಮ್ಮ ಉತ್ಪನ್ನವನ್ನು ವಿಕ್ರಯಿಸುವಾಗ ವರ್ತಕರ ಮೋಸಗಳಿಗೆ ಬಲಿಯಾಗಿ ಅಧಿಕ ಹಾನಿಯಾಗುತ್ತಿತ್ತು. ದೇಶದಲ್ಲಿ ಆಗ ಸುಮಾರು 200 ಕ್ಕಿಂತಲೂ ಹೆಚ್ಚು ವಿವಿಧ ಅಳತೆ ಮತ್ತು ತೂಕಗಳು ಜಾರಿಯಲ್ಲಿದ್ದುವು. ದಶಮಾಂಶ ಪದ್ಧತಿ ಜಾರಿಗೆ ಬಂದ ಅನಂತರ ಇವೆಲ್ಲವನ್ನೂ ನಿವಾರಿಸಿ ದೇಶದಲ್ಲಿ ಏಕರೂಪದ ತೂಕ ಮತ್ತು ಅಳತೆಗಳು ಜಾರಿಗೆ ಬಂದುವು. ತೂಕ ಮತ್ತು ಅಳತೆಗಳನ್ನು ನಿಯಂತ್ರಿಸಲು ಮತ್ತು ಅವುಗಳ ಉಲ್ಲಂಘನೆಯಾಗದಂತೆ ಕಾಯ್ದುಕೊಳ್ಳಲು ತೂಕ–ಅಳತೆಗಳ ಒಂದು ಪ್ರತ್ಯೇಕ ಇಲಾಖೆ ಪ್ರಾರಂಭವಾಯಿತು.

**ಉತ್ಪನ್ನಗಳ ಶ್ರೇಣೀಕರಣ :** ಇದರಿಂದ ಮಾರುವವರಿಗೂ ಕೊಳ್ಳುವವರಿಗೂ ಅನುಕೂಲವಾಗಿ, ಒಳ್ಳೆಯ ಮತ್ತು ವಿವಿಧ ಬಗೆಯ ಪದಾರ್ಥಗಳನ್ನು ಉತ್ಪಾದಿಸುವ ರೈತರಿಗೆ ಅಧಿಕ ಬೆಲೆ ದೊರೆತು, ವರ್ತಕರೂ ಗ್ರಾಹಕರು ವಿಶ್ವಾಸದಿಂದ ತಮಗೆ ಬೇಕಾದ ದರ್ಜೆಯ ಉತ್ಪನ್ನವನ್ನು ಕೊಳ್ಳಲು ಸಮರ್ಥರಾಗುತ್ತಾರೆ. ವಿವಿಧ ದರ್ಜೆಯ ವಸ್ತುಗಳ ಬೆಲೆಗಳನ್ನು ನಿರ್ಧರಿಸುವುದು ಸುಲಭವಾಗುತ್ತದೆ. ಈ ದಿಶೆಯಲ್ಲಿ ಕೇಂದ್ರ ಸರ್ಕಾರ 1937ರಲ್ಲಿ ಕೃಷಿ ಉತ್ಪನ್ನ ಹುಟ್ಟುವಳಿಯ ಶ್ರೇಣೀಕರಣ ಮತ್ತು ಮಾರಾಟ ಕಾಯಿದೆಯನ್ನು ಜಾರಿಗೆ ತಂದಿತು. ಈ ಕಾಯಿದೆಯ ಮೇರೆಗೆ ಹತ್ತಿ, ಸೆಣಬು, ತುಪ್ಪ, ಮೊಟ್ಟೆ– ಮುಂತಾದ ಉತ್ಪನ್ನಗಳನ್ನು ಶ್ರೇಣೀಕರಿಸಿ ಆಗ್‍ಮಾರ್ಕ್ ಎಂಬ ಕೃಷಿ ಗುರುತನ್ನು ಹಾಕಿ ಮಾರಾಟಮಾಡುವ ವ್ಯವಸ್ಥೆ ಮಾಡಲಾಗಿದೆ.

**ದಾಸ್ತಾನು ಸೌಲಭ್ಯ :** ಮಾರಾಟಕ್ಕೆ ಬಂದ ಉತ್ಪನ್ನವನ್ನು ಯೋಗ್ಯ ರೀತಿಯಿಂದ ದಾಸ್ತಾನು ಮಾಡುವ ಮತ್ತು ಹಾಗೆ ಆ ದಾಸ್ತಾನಾದ ವಸ್ತುವಿನ ಆಧಾರದ ಮೇಲೆ ಉದ್ದರಿ ಸೌಲಭ್ಯ ದೊರಕಿಸುವ ದೃಷ್ಟಿಯಿಂದ ದಾಸ್ತಾನು ಮಳಿಗೆಗಳಿಗೆ ಹೆಚ್ಚು ಮಹತ್ತ್ವ ಪ್ರಾಪ್ತವಾಗಿದೆ. ಈ ದಿಶೆಯಲ್ಲಿ ಕೇಂದ್ರ ಉಗ್ರಾಣ ಮಂಡಲಿಯ ಉಗ್ರಾಣಗಳ ಕಾಯಿದೆಯ ಪ್ರಕಾರ ಸ್ಥಾಪಿತವಾದ, ದೇಶದ ಎಲ್ಲ ಪ್ರಮುಖ ಮಾರಾಟ ಕೇಂದ್ರಗಳಲ್ಲೂ ಅಧಿಕೃತ ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಲು ಕಾರ್ಯಕ್ರಮವಿದೆ. ಇದರ ಜೊತೆಗೆ ರಾಜ್ಯ ಉಗ್ರಾಣ ಮಂಡಲಿಯೂ ತನ್ನ ಕಾರ್ಯ ನಿರ್ವಹಿಸಿ ರೈತರಿಗೆ ತಮ್ಮ ಫಸಲನ್ನು ದಾಸ್ತಾನು ಮಾಡಲು ಅನುಕೂಲ ಕಲ್ಪಸಿದೆ.

**ಸಾರಿಗೆ ಸಂಪರ್ಕ ಸೌಲಭ್ಯ :** ಕೃಷಿ ಉತ್ಪನ್ನ ಮಾರಾಟ ವೆಚ್ಚವನ್ನು ಕಡಿಮೆ ಮಡಲು ಹುಟ್ಟುವಳಿಯನ್ನು ಶೀಘ್ರವಾಗಿ ಕಡಿಮೆ ವೆಚ್ಚದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಸಾರಿಗೆ ಸಂಪರ್ಕ ಸೌಲಭ್ಯ ಅತ್ಯಂತ ಆವಶ್ಯಕ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಂಚವಾರ್ಷಿಕ ಯೋಜನೆಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು, ಸಾರಿಗೆ ಸೌಲಭ್ಯವನ್ನು ಹೆಚ್ಚಿಸುವುದು ಮತ್ತು ಸಂಪರ್ಕ ಸಾಧನಗಳನ್ನು ವೃದ್ಧಿಪಡಿಸುವುದು– ಇವೇ ಮೊದಲಾದವಕ್ಕೆ ಸಾಕಷ್ಟು ಗಮನ ಕೊಟ್ಟಿವೆ.

**ಬೆಲೆಗಳ ಸ್ಥಾಯೀಕರಣ :** ಈಚೆಗೆ ಸರ್ಕಾರ ಕೃಷಿ ಉತ್ಪನ್ನದ ಧಾರಣೆ ಮಟ್ಟವನ್ನು ದೃಢಗೊಳಿಸಲು ಮೂರು ವಿಶೇಷ ಕ್ರಮಗಳನ್ನು ಕೈಗೊಂಡಿದೆ : 1. ಕೃಷಿ ಉತ್ಪನ್ನದ ಸಂಬಂಧವಾಗಿ ಕಾಲಕಾಲಕ್ಕೆ ಸರಕಾರ ತನ್ನ ನೀತಿಯನ್ನು ರೂಪಿಸುವುದು. 2. ಕಾಲಕಾಲಕ್ಕೆ ಉತ್ಪನ್ನದ ಗರಿಷ್ಠ ಮತ್ತು ಕನಿಷ್ಠ ಬೆಲೆಗಳನ್ನು ನಿಗದಿಪಡಿಸುವುದು. 3. ಆವಶ್ಯವೆನಿಸಿದರೆ ಮಾರುಕಟ್ಟೆಯಲ್ಲಿ ಸರ್ಕಾರ ಉತ್ಪನ್ನವನ್ನು ಕೊಂಡು ಮಾರುವ ಕೆಲಸದಲ್ಲಿ ಭಾಗವಹಿಸುವುದು.

ಸರ್ಕಾರ ಧಾರಣೆಯಲ್ಲಿ ದೃಢತೆ ಸಾಧಿಸಲು ಸಲಹಾ ಸಮಿತಿಗಳನ್ನು ನೇಮಿಸಿದೆ. ಅವುಗಳ ಉದ್ದೇಶ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಪ್ರಚುರಪಡಿಸುವುದಾಗಿದೆ. ಈ ಸಮಿತಿಗಳ ಸಲಹೆಗಳ ಮೇರೆಗೆ ಕೃಷಿ ಉತ್ಪನ್ನಗಳ ಕನಿಷ್ಠ ಮತ್ತು ಗರಿಷ್ಠ ಬೆಲೆಗಳನ್ನು ಗೊತ್ತುಪಡಿಸಿ ಗ್ರಾಹಕರಿಗೂ ಉತ್ಪಾದಕರಿಗೂ ನಷ್ಟವಾಗದಂತೆ ಬೆಲೆ ನೀತಿ ರೂಪಿಸುವುದು ಮತ್ತು ಆವಶ್ಯಕವೆನಿಸಿದರೆ ಕೊಳ್ಳುವ ವ್ಯವಹಾರದಲ್ಲಿ ತಾನೇ ಭಾಗವಹಿಸಿ ಆ ಮೂಲಕ ಬೆಲೆಗಳ ಮಟ್ಟದಲ್ಲಿ ಸ್ಥೈರ್ಯ ಸ್ಥಾಪಿಸುವುದು ಸರ್ಕಾರದ ಉದ್ದೇಶಗಳಲ್ಲೊಂದಾಗಿದೆ. ಈ ದಿಶೆಯಲ್ಲಿ ಭಾರತದ ಆಹಾರ ಕಾರ್ಪೊರೇಷನ್ ಮತ್ತು ಕೃಷಿ ಉತ್ಪನ್ನ ಬೆಲೆಗಳ ಆಯೋಗಗಳನ್ನು ಸ್ಥಾಪಿಸಿರುವುದು ಮಹತ್ತ್ವದ ಕ್ರಮ. ಅದರಿಂದ ಕೆಲವೊಂದು ವೇಳೆ ಮಾರುಕಟ್ಟೆಯಲ್ಲಿ ಸಂಭವಿಸುವ ಬೆಲೆ ಕುಸಿತದಿಂದ ಆಗುವ ನಷ್ಟವನ್ನು ಗಣನೀಯವಾಗಿ ತಡೆಗಟ್ಟುವುದು ಸಾಧ್ಯ.

ಭಾರತದಲ್ಲಿ ಕೃಷಿ ಉತ್ಪನ್ನ ಮಾರಾಟದ ವ್ಯವಸ್ಥೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಬೇಕಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 70 ಜನ ರೈತರು. ಅವರ ಮುಖ್ಯ ಉತ್ಪನ್ನ ಕೃಷಿ ಸಂಬಂಧಿಯಾದ್ದು. ಅವರ ಜೀವನ ಮಟ್ಟ ಮತ್ತು ಆರ್ಥಿಕ ಸ್ಥಿತಿಗೆ ಕೃಷಿ ಉತ್ಪನ್ನ ಆದಾಯವೇ ಅಸ್ತಿಭಾರ. ಕೃಷಿ ಉತ್ಪನ್ನಗಳಿಗೆ ತಕ್ಕ ಪ್ರತಿಫಲ ದೊರೆಯದೆ ಅವರ ಸ್ಥಿತಿ ಸುಧಾರಿಸುವುದು ಅಸಾಧ್ಯ. ಇವಲ್ಲದೆ ಅಂತಿಮ ಗ್ರಾಹಕರಿಗೆ ಯೋಗ್ಯ ಬೆಲೆಗೆ ಯೋಗ್ಯ ವಸ್ತುಗಳು ದೊರೆಯದೆ ಇದ್ದರೆ ಅದರಿಂದಾಗುವ ಅನಿಷ್ಟ ಪರಿಣಾಮಗಳು ಅಪಾರ. ಈ ದೃಷ್ಟಿಯಿಂದ ಕೃಷಿ ಉತ್ಪನ್ನ ಮಾರಾಟವನ್ನು ಸರ್ವವಿಧದಲ್ಲೂ ಸುಧಾರಿಸುವುದು ಅತಿಮುಖ್ಯ.

ಮಧ್ಯವರ್ತಿಗಳನ್ನು ನಿವಾರಿಸಿ, ಉತ್ಪಾದಕ ಪಡೆಯುವ ಬೆಲೆಗೂ ಗ್ರಾಹಕ ಕೊಡುವ ಬೆಲೆಗೂ ಇರುವ ಅಂತರವನ್ನು ಕಿರಿದುಗೊಳಿಸುವುದೇ ಮಾರಾಟ ವ್ಯವಸ್ಥೆಯ ಸುಧಾರಣೆಯ ಮುಖ್ಯೋದ್ದೇಶ. (ಎಸ್.ಸಿ.ಎಚ್.)

## ಕೃಷಿ ಉತ್ಪನ್ನ ವಿನಿಮಯ ಕೇಂದ್ರ

**ಕೃಷಿ ಉತ್ಪನ್ನ ವಿನಿಮಯ ಕೇಂದ್ರ :** ವ್ಯವಸಾಯ ಪದಾರ್ಥಗಳ ವ್ಯಾಪಾರಿಗಳ ಸಂಘಟನೆ (ಪ್ರಾಡ್ಯೂಸ್ ಎಕ್ಸ್‌ಚೇಂಜ್). ಈ ಸಂಸ್ಥೆಯಿಂದ ನಿಗದಿಯಾದ ಮಾರುಕಟ್ಟೆಯ ಸ್ಥಳದಲ್ಲಿ ಇದರ ಸದಸ್ಯರು ನಿಶ್ಚಿತ ಸಮಯಗಳಲ್ಲಿ ಪರಸ್ಪರ ಸಂಧಿಸಿ ನಿಯಮ ನಿಬಂಧನೆಗಳಿಗೆ ಅನುಸಾರವಾಗಿ ವ್ಯವಹಾರ ನಡೆಸುತ್ತಾರೆ. ಪಾರಿಭಾಷಿಕವಾಗಿ ಈ ಸ್ಥಳವನ್ನು ವಲಯ(ರಿಂಗ್) ಅಥವಾ ಗರ್ತ(ಪಿಟ್) ಎಂದು ಕರೆಯುತ್ತಾರೆ. ಆಹಾರಧಾನ್ಯಗಳು, ಹತ್ತಿ, ಸೆಣಬು, ಎಣ್ಣೆಬೀಜಗಳು ಮುಂತಾದವು ಮುಖ್ಯವಾಗಿ ಈ ಕೇಂದ್ರಗಳಲ್ಲಿ ವಹಿವಾಟಿಗೆ ಒಳಪಡುವ ಪದಾರ್ಥಗಳು. ಇವು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಒಳಗಾದ ಪದಾರ್ಥಗಳು. ಒಂದು ಪದಾರ್ಥಕ್ಕೆ ಉತ್ಪನ್ನ ವಿನಿಮಯ ವ್ಯವಸ್ಥೆ ಬೆಳೆಯಬೇಕಾದರೆ ಅದಕ್ಕೆ ಕೆಲವು ಗುಣಗಳಿರುವುದು ಅವಶ್ಯ; ಪದಾರ್ಥ ಬೇಗ ಕೆಡುವಂಥದಾಗಿರಬಾರದು. ದೊಡ್ಡ ಗಾತ್ರದಲ್ಲಿ ಆ ಪದಾರ್ಥದ ವ್ಯಾಪಾರವಾಗಬೇಕು. ಪದಾರ್ಥದ ಬೆಲೆ ತೀವ್ರ ಪಲ್ಲಟಕ್ಕೆ ಒಳಗಾಗುವಂತಿರಬೇಕು. ಪದಾರ್ಥದ ಗುಣಮಟ್ಟಾನುಸಾರವಾಗಿ ಅದನ್ನು ತಕ್ಕಮಟ್ಟಿಗೆ ನಿಖರವಾಗಿ ಶ್ರೇಣೀಕರಿಸುವುದು ಸಾಧ್ಯವಾಗಬೇಕು.

ವಿನಿಮಯ ಕೇಂದ್ರದಲ್ಲಿ ನಡೆಯುವ ವಹಿವಾಟುಗಳನ್ನು ನಗದಿ ಮತ್ತು ವಾಯಿದಾ ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಸರಕಿನ ಬಟವಾಡೆಯ ಒಪ್ಪಿಗೆ, ಬಟವಾಡೆ ಪಡೆದ ಮೇಲೆ ಹಣ ಪಾವತಿ–ಇವು ನಗದಿ ವಹಿವಾಟಿನ ಲಕ್ಷಣಗಳು. ವಾಯಿದಾ ಕರಾರುಗಳಲ್ಲಿ ವ್ಯಾಪಾರಿಗಳು ವ್ಯವಹರಿಸುವುದು ಪದಾರ್ಥದಲ್ಲಲ್ಲ, ಅದರ ಹಕ್ಕಿನಲ್ಲಿ, ಆದಕಾರಣ ಮಾರಾಟಗಾರ ಪದಾರ್ಥದ ಬಟವಾಡೆ ಮಾಡಬಹುದು, ಮಾಡದೆಯೂ ಇರಬಹುದು.

ತನಗಾಗಿಯೇ ಪದಾರ್ಥಗಳನ್ನು ಮಾರುವುದು ಅಥವಾ ಕೊಳ್ಳುವುದು ಉತ್ಪನ್ನ ವಿನಿಮಯ ಕೇಂದ್ರದ ಉದ್ದೇಶವಲ್ಲ. ಶಿಷ್ಟೀಕರಣ, ಶ್ರೇಣೀಕರಣ, ಮಾರುಕಟ್ಟೆಯ ಸ್ಥಳ, ವಹಿವಾಟುಗಳ ನಿಯಂತ್ರಣ, ಪೇಟೆ ಪ್ರವೃತ್ತಿಗಳನ್ನು ಕುರಿತು ಸುದ್ದಿ ಪ್ರಕಟನೆ–ಮುಂತಾದ ನಾನಾ ಸೌಲಭ್ಯಗಳನ್ನು ಒದಗಿಸುವುದು ಕೇಂದ್ರದ ಉದ್ದೇಶ. ಒಂದು ಪದಾರ್ಥಕ್ಕೆ ಸಿದ್ಧವಾದ, ನಿರಂತರವಾದ ಮತ್ತು ತತ್‌ಕ್ಷಣದಲ್ಲಿ ಸರಕನ್ನು ಹಣಕ್ಕೆ ಪರಿವರ್ತಿಸಿಕೊಳ್ಳಬಹುದಾದ ಮಾರುಕಟ್ಟೆ ಒದಗಿಸುವುದರಲ್ಲಿ ವಿನಿಮಯ ಕೇಂದ್ರದ ಪ್ರಾಮುಖ್ಯತೆಯಿದೆ. ವಿವಿಧ ಮಾರುಕಟ್ಟೆಗಳಲ್ಲಿಯ ಬೆಲೆಗಳ ಸಮೀಕರಣ, ಅವುಗಳ ಸ್ಥಿರತೆಯ ಸ್ಥಾಪನೆ–ಇವು ವಿನಿಮಯ ಕೇಂದ್ರದಿಂದ ಸಾಧ್ಯವಾಗುತ್ತದೆ. ಇದು ಪೇಟೆಯ ಪ್ರವೃತ್ತಿಗಳ ಮಾಪನಸಾಧನ. ಬೆಲೆಗಳ ಏರಿಳಿತಗಳ ನಷ್ಟಸಂಭವಗಳಿಗೆ ರಕ್ಷಣೆಯನ್ನೊದಗಿಸುತ್ತದೆ. ನಷ್ಟಸಂಭವವನ್ನು ಎದುರಿಸುವ ಹೊಣೆಯನ್ನು ಕೇಂದ್ರದಲ್ಲಿ ವಹಿವಾಟು ನಡೆಸುವ ಪರಿಣತರಿಗೆ ಒಪ್ಪಿಸಿ ಕೊಡಬೇಕು. ಬೆಲೆಗಳ ಏರಿಕೆ ಅಥವಾ ಇಳಿಕೆಯ ಫಲವಾಗಿ ಸಂಭವಿಸುವ ನಷ್ಟವನ್ನು–ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಮಾಡಿಕೊಳ್ಳುವ ಒಪ್ಪಂದದ ಸಹಾಯದಿಂದ–ಅವರು ತಪ್ಪಿಸುತ್ತಾರೆ.

ಭಾರತದಲ್ಲಿ ಉತ್ಪನ್ನ ವಿನಿಮಯ ಕೇಂದ್ರಗಳ ಬೆಳೆವಣಿಗೆ ಆರಂಭವಾದ್ದು ಒಂದನೆಯ ಮಹಾಯುದ್ಧದ ಅನಂತರ ಕಾಲದಲ್ಲಿ. ಭಾರತದಲ್ಲಿ ಇವು ನೋಂದಾಯಿತ ಸಂಘಗಳು ಅಥವಾ ನಿಗಮಿತ ಸಂಸ್ಥೆಗಳು ಅಥವಾ ಸ್ವಯಂ ಇಚ್ಛೆಯ ಸಂಘಗಳಾಗಿರುತ್ತವೆ. ಸಂಘಟಿತ ಉತ್ಪನ್ನ ವಿನಿಮಯಕೇಂದ್ರಗಳು 1952ಕ್ಕೆ ಮುಂಚೆ ರಾಜ್ಯಸರ್ಕಾರಗಳ ಕಾಯಿದೆಗಳಿಗೆ ಒಳಪಟ್ಟಿದ್ದುವು. 1952ರಲ್ಲಿ ಜಾರಿಗೆ ಬಂದ ಭಾರತದ ವಾಯಿದಾ ಕರಾರುಗಳ (ನಿಯಂತ್ರಣ) ಕಾಯಿದೆಯ ಪ್ರಕಾರ ಎಲ್ಲ ಉತ್ಪನ್ನ ವಿನಿಮಯ ಕೇಂದ್ರಗಳೂ ಕೇಂದ್ರಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿದೆ. ಇವುಗಳ ಮೇಲ್ವಿಚಾರಣೆ ಮತ್ತು ನಿರ್ದೇಶನಕ್ಕಾಗಿ ವಾಯಿದಾ ಮಾರುಕಟ್ಟೆಗಳ ಆಯೋಗವೆಂಬ ವಿಶೇಷ ಪರಿನಿಯತ ನಿಕಾಯವೊಂದು ಸ್ಥಾಪಿತವಾಗಿದೆ. (ಸಿ.ಪಿ.)

## ಕೃಷಿ ಉತ್ಪಾದನ ಯೋಜನೆಗಳು, ಪಂಚಾಯತಿ

**ಕೃಷಿ ಉತ್ಪಾದನ ಯೋಜನೆಗಳು, ಪಂಚಾಯತಿ :** ಭಾರತದ ಗ್ರಾಮ ಪ್ರದೇಶದಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು, ಪಂಚಾಯಿತಿ, ಗ್ರಾಮಸೇವಕ, ಕೃಷಿ ಮತ್ತು ಸಹಕಾರ ಸಂಘಗಳ ನೆರವಿನಿಂದ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯವಾಗಲು ರೂಪಿಸಿದ ಯೋಜನೆ. ಗ್ರಾಮ ಮಟ್ಟದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ಕುರಿತು ಅಭಿವೃದ್ಧಿ, ಕೃಷಿ ಸಹಕಾರ, ಪಶುಪಾಲನೆ ಮತ್ತು ಇತರ ಇಲಾಖೆಗಳ ಅಧಿಕಾರಿಗಳು 1962ರಲ್ಲಿ ನಡೆಸಿದ ಸಮಾಲೋಚನೆಯ ಫಲವಾಗಿ ಈ ಯೋಜನೆ ಜಾರಿಗೆ ಬಂತು. ಇದರ ಒಂದು ಕೈಪಿಡಿಯನ್ನು ಕೂಡ ತಯಾರಿಸಲಾಯಿತು. ಈ ಯೋಜನೆಗೆ ಗ್ರಾಮ ಪಂಚಾಯತಿಯನ್ನು ಘಟಕವಾಗಿ ಪರಿಗಣಿಸಿರುವುದರಿಂದ ಇದನ್ನು ಪಂಚಾಯತಿ ಕೃಷಿ ಉತ್ಪಾದನಾ ಯೋಜನೆಯೆಂದು ಕರೆಯುತ್ತಾರೆ. ಪಂಚಾಯತಿಯ ಗ್ರಾಮಸೇವಕ ಮತ್ತು ಸಹಕಾರ ಸಂಘದ ನೆರವಿನಿಂದ ತಯಾರಿಸಿದ ಈ ಯೋಜನೆಯನ್ನು ಕಾರ್ಯಗತ ಮಾಡಲಾಗುತ್ತದೆ. ಒಂದು ಮುಖ್ಯ ಆಹಾರ ಬೆಳೆಯನ್ನೂ ಒಂದು ಮುಖ್ಯ ವಾಣಿಜ್ಯ ಬೆಳೆಯನ್ನೂ ಈ ಯೋಜನೆ ಒಳಗೊಂಡಿರುತ್ತದೆ. ಆವಶ್ಯವಿದ್ದಲ್ಲಿ ಎರಡೆರಡು ಬೆಳೆಗಳನ್ನೂ ಒಳಗೊಂಡಿರುತ್ತದೆ. ಹೀಗೆ ಆರಿಸಿದ ಬೆಳೆಗಳಿಗೆ ಅನುಸರಿಸಬೇಕಾದ ಸುಧಾರಿಸಿದ ಪದ್ಧತಿಗಳನ್ನು ಅನ್ವಯಿಸಲಾಗುತ್ತದೆ. ರೈತರು ವೈಯಕ್ತಿಕವಾಗಿ ಮತ್ತು ಗುಂಪುಗೂಡಿ ಸಾಧಿಸಲು ಒಪ್ಪಿರುವ ಗುರಿಯನ್ನು ಅನುಸರಿಸಿ ಉತ್ಪಾದನ ಯೋಜನೆಯನ್ನು ತಯಾರಿಸಲಾಗುವುದು. ಹೀಗೆ ಸಿದ್ಧಪಡಿಸಿದ ಯೋಜನೆಯಲ್ಲಿ ಸ್ಥಳೀಯ ಸಂಪನ್ಮೂಲ ಮತ್ತು ಜನಬಲವನ್ನು ಬಳಸಿಕೊಳ್ಳುವುದಕ್ಕೆ ಪ್ರಾಧಾನ್ಯತೆ ನೀಡಲಾಗುತ್ತದೆ. ಉತ್ಪಾದನ ಯೋಜನೆ ಒಂದು ಕನಿಷ್ಠ

ಯೋಜನೆ. ಪಂಚಾಯತಿ ಇನ್ನೂ ದೊಡ್ಡ ಯೋಜನೆಗಳಿಗೆ ಕೈಹಾಕಬಹುದು. ಗ್ರಾಮ ಸಂಸ್ಥೆಗಳು ಸ್ವಪ್ರಯತ್ನದಿಂದ ಹೆಚ್ಚು ಇಳುವರಿಯನ್ನು ಪಡೆಯುವುದೇ ಈ ಯೋಜನೆಯ ಪ್ರಥಮ ಉದ್ದೇಶ.

**ಯೋಜನೆಯ ನಿರ್ದಿಷ್ಟ ಗುರಿ :** 1. ಗ್ರಾಮದಲ್ಲಿ ಕೆಲಸಮಾಡುವ ಎಲ್ಲ ಸಂಘ ಸಂಸ್ಥೆಗಳ ಮತ್ತು ಅಭಿವೃದ್ಧಿ ಇಲಾಖೆಗಳ ಒಟ್ಟು ಪ್ರಯತ್ನದಿಂದ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸಂಘಟಿತ, ಶೀಘ್ರ ಮತ್ತು ಸುಲಭ ವಿಧಾನಗಳನ್ನು ಏರ್ಪಡಿಸುವುದು; 2. ಉತ್ಪತ್ತಿಯನ್ನು ಹೆಚ್ಚಿಸಲು ಗ್ರಾಮದಲ್ಲಿ ಸಾಧ್ಯವಾಗುವ ಪದ್ಧತಿಗಳನ್ನು (ಗೊಬ್ಬರದ ಉತ್ತಮ ಉಪಯೋಗ, ಸುಧಾರಿತ ಬಿತ್ತನೆಯ ಬಳಕೆ, ಸಸ್ಯ ಸಂರಕ್ಷಣ ಕ್ರಮಗಳ ಅನುಸರಣೆ, ನೀರಾವರಿ ಸೌಲಭ್ಯಗಳ ಪರಿಣಾಮಕಾರಿ ಉಪಯೋಗ ಮತ್ತು ಒಣಬೇಸಾಯ ಪದ್ಧತಿಗಳು) ಕೈಗೊಳ್ಳುವುದು; 3. ಕಾಲ ಕ್ರಮೇಣ ಎಲ್ಲ ರೈತರನ್ನೂ ಈ ಯೋಜನೆಗೆ ಒಳಪಡಿಸುವುದು; 4. ನಿಧಾನವಾಗಿ ಎಲ್ಲ ಮುಖಗಳಿಗೂ ಈ ಯೋಜನೆಯನ್ನು ಅನ್ವಯಿಸುವುದು ಮತ್ತು ಆದಷ್ಟು ಹೆಚ್ಚು ಸುಧಾರಿತ ಪದ್ಧತಿಗಳನ್ನು ಆಚರಣೆಗೆ ತರುವುದು; 5. ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರ ಪಡೆದು ಜನರಲ್ಲಿ ತಿಳಿವಳಿಕೆ ಉಂಟುಮಾಡುವುದು; 6. ಕೃತಕ ಗೊಬ್ಬರ ಮತ್ತು ಹಸಿರೆಲೆ ಗೊಬ್ಬರದ ಬಳಕೆಯನ್ನು ಹೆಚ್ಚು ಮಾಡುವುದು. 7. ಮಿಶ್ರ ಬೇಸಾಯ ಪದ್ಧತಿಗಳಿಗೆ ಉತ್ತೇಜನ ಕೊಡುವುದು.

ದೊಡ್ಡ ಮತ್ತು ಸಣ್ಣರೈತರು, ಪ್ರಗತಿಪರರು ಮತ್ತು ಸಂಪ್ರದಾಯಶರಣರು, ಅಕ್ಷರಸ್ಥರು ಮತ್ತು ಅನಕ್ಷರಸ್ಥರು–ಹೀಗೆ ಎಲ್ಲರಿಗಾಗಿ ಈ ಯೋಜನೆಯಿರುವುದರಿಂದ ಇದು ಸರಳವಾಗಿಯೂ ಇರಬೇಕು. ಎಲ್ಲ ಉತ್ಪಾದನೆಯೂ ಹೆಚ್ಚಿನ ಶ್ರಮದಿಂದಲೇ ಸಾಧ್ಯವಾಗುವುದರಿಂದ ಯಾವ ಪ್ರಯತ್ನದಿಂದ ಅತ್ಯಂತ ಹೆಚ್ಚಿನ ಪ್ರತಿಫಲ ಸಿಗುವುದೋ ಅಂಥ ಕ್ರಮಗಳು ಮಾತ್ರ ಯೋಜನೆಯಲ್ಲಿ ಸೇರಿರುತ್ತವೆ. ಇದಲ್ಲದೆ ಆಯ್ದುಕೊಳ್ಳಲಾದ ಕ್ರಮಗಳು ಸ್ಥಳೀಯವಾಗಿ ದೊರಕುವ ಮತ್ತು ಸುಲಭವಾಗಿ ರೂಢಿಸಲು ಸಾಧ್ಯವಾಗುವ ಸಂಪನ್ಮೂಲಗಳನ್ನೇ ಆಧರಿಸಿರುತ್ತವೆ. ದೊರಕುವ ಗೊಬ್ಬರ ಸಂಪತ್ತಿನ ಉತ್ತಮ ಉಪಯೋಗ, ಸುಧಾರಿತ ಬಿತ್ತನೆಯ ವ್ಯಾಪಕವಾದ ಬಳಕೆ, ಸಸ್ಯ ಸಂರಕ್ಷಣ ಕ್ರಮಗಳ ವ್ಯಾಪಕ ಅನುಸರಣೆ, ಒದಗಿಬರುವ ನೀರಾವರಿ ಸೌಲಭ್ಯಗಳ ಪರಿಣಾಮಕಾರಿ ಉಪಯೋಗ ಮತ್ತು ಉತ್ತಮ ಒಣಬೇಸಾಯ–ಇವು ಈ ಯೋಜನೆಯಲ್ಲಿ ಸೂಚಿತವಾಗಿರುವ ಸುಧಾರಿತ ಪದ್ಧತಿಗಳು.

**ಯೋಜನೆಯ ಗುರಿ ಸಾಧಿಸುವ ಬಗೆ :** ಈ ಯೋಜನೆ ಒಂದು ವಾರ್ಷಿಕ ಕಾರ್ಯಕ್ರಮ. ಕೃಷಿಕಾರ್ಯದ ಕಾಲ ವಾಸ್ತವವಾಗಿ ಇದಕ್ಕೂ ಕಡಿಮೆ ಇದ್ದರೂ ಇದರ ಪೂರ್ವಭಾವಿ ಮತ್ತು ಅನಂತರದ ಕೆಲಸಗಳಿಗಾಗಿ ಒಂದು ವರ್ಷದ ಅವಧಿಯನ್ನು ಗೊತ್ತುಪಡಿಸಲಾಗಿದೆ. ಉತ್ಪಾದನ ಯೋಜನೆಯಲ್ಲಿ ಕೈಗೊಳ್ಳಬೇಕಾದ ಎಲ್ಲ ಹಂತಗಳ ಕೆಲಸಗಳನ್ನು ಕ್ರಮಬದ್ಧವಾಗಿ ನಮೂದಿಸಿ ಅವುಗಳ ಪ್ರಾಮುಖ್ಯಕ್ಕೆ ಅನುಗುಣವಾಗಿ ಒಂದು ವೇಳಾಪಟ್ಟಿಯನ್ನು ತಯಾರಿಸಿರುತ್ತದೆ. ಯೋಜನೆಯ ಹಂತಗಳು ಈ ರೀತಿ ಇವೆ : 1. ಯೋಜನೆಯಲ್ಲಿ ಮಾಡಲಾಗಿರುವ ಸೂಚನೆಗಳಿಗೆ ಪಂಚಾಯತಿಯ ಒಪ್ಪಿಗೆ. 2. ವ್ಯವಸಾಯ ಉಪಸಮಿತಿಯ ರಚನೆ. 3. ಪ್ರಮುಖ ಬೆಳೆಗಳ ಜಮೀನಿನ ವಿಸ್ತೀರ್ಣ, ಇಳುವರಿ ಮುಂತಾದ ಅಂಕಿ–ಅಂಶಗಳ ಸಂಗ್ರಹಣೆ. 4. ಉತ್ಪಾದನಾ ಯೋಜನೆಯಲ್ಲಿ ಸೇರಿಸಬೇಕಾದ ಬೆಳೆಗಳ ಬಗ್ಗೆ ನಿರ್ಧಾರ. 5. ಬೆಳೆಗಳಿಗೆ ಅನ್ವಯಿಸುವ ಧಾರಣೆಗಳ ಬಗ್ಗೆ ರೈತರೊಡನೆ ಚರ್ಚೆ. 6. ಸುಧಾರಣೆಗಳ ಅಂಗೀಕಾರ. 7. ಹೆಚ್ಚು ಇಳುವರಿಯ ಬಗ್ಗೆ ಜಿಲ್ಲಾ ವ್ಯವಸಾಯಾಧಿಕಾರಿ ಕೊಡುವ ಶಿಷ್ಟತೆಯ ಅಂಗೀಕಾರ. 8. ಗ್ರಾಮಸಭೆಯಲ್ಲಿ ಕರಡು ಯೋಜನೆಯ ಚರ್ಚೆ ಮತ್ತು ಭಾಗವಹಿಸಲು ಕೋರುವ ರೈತರ ಪಟ್ಟಿಯ ರಚನೆ. 9. ವ್ಯವಸಾಯ ಉಪಸಮಿತಿ ಮತ್ತು ಸಹಕಾರ ಸಂಘದ ಜಂಟಿ ಸಭೆಯಲ್ಲಿ ಕರಡು ಯೋಜನೆಯ ಅಂಗೀಕಾರ, ಒದಗಿಬರುವ ಸಾಲ ಮತ್ತು ಸಾಮಗ್ರಿಗಳ ಅಂದಾಜು, ಸರಬರಾಯಿಯ ವೇಳಾಪಟ್ಟಿ ತಯಾರಿಕೆ ಮತ್ತು ಕಾರ್ಯಕ್ರಮದ ರೂಪ ರಚನೆ. 10. ಉತ್ಪಾದನಾ ಯೋಜನೆಯ ಬಗ್ಗೆ ಪಂಚಾಯತಿಯ ತೀರ್ಮಾನ. 11. ಯೋಜನೆಯ ಮೂರುಪ್ರತಿಗಳ ತಯಾರಿಕೆ. 12. ರೈತರೊಡನೆ ವಿಚಾರ ವಿನಿಮಯ ಮತ್ತು ಪ್ರತಿಯೊಬ್ಬ ರೈತನ ಭೂಮಿ, ಬೆಳೆ, ಆತ ಮಾಡಬೇಕಾದ ಅಭಿವೃದ್ಧಿ ಕಾರ್ಯಗಳು ಮತ್ತು ಸಾಧಿಸಿದ ಅಭಿವೃದ್ಧಿ– ಇವನ್ನು ಬರೆದಿಡಲು ಪುಸ್ತಕ ಇಡುವುದು. 13. ಬ್ಲಾಕ್ ಯೋಜನೆಯ ರಚನೆ. 14. ತಿಂಗಳಿಗೊಮ್ಮೆ ಪಂಚಾಯತಿಯಿಂದ ಪ್ರಗತಿಯ ಪರಿಶೀಲನೆ ಮತ್ತು 15. ಯೋಜನೆಯನ್ನು ಕಾರ್ಯಗತ ಮಾಡಿದ ರೀತಿ ಮತ್ತು ಮುಂದಿನ ವರ್ಷದ ಕರಡು ಯೋಜನೆ ಇವುಗಳ ಬಗ್ಗೆ ಗ್ರಾಮಸಭೆಯಲ್ಲಿ ಪರಿಶೀಲನೆ.

ಉತ್ಪಾದನ ಯೋಜನೆ ಯಶಸ್ವಿಯಾಗಲು ಪ್ರತಿ ಸಂಸ್ಥೆಯೂ ಪ್ರತಿ ವ್ಯಕ್ತಿಯೂ ತನ್ನ ಪಾಲಿನ ಹೊಣೆಯನ್ನು ನಿರ್ವಹಿಸುವುದು ಅವಶ್ಯ. ಈ ಯೋಜನೆಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಮುಖ್ಯವಾಗಿ ಪಂಚಾಯತಿ, ಸಹಕಾರ ಸಂಘ, ಗ್ರಾಮಸೇವಕ, ತಾಲ್ಲೂಕು ಅಭಿವೃದ್ಧಿ ಮಂಡಲಿ, ಬ್ಲಾಕ್ ಸಿಬ್ಬಂದಿ, ಜಿಲ್ಲಾ ವ್ಯವಸಾಯಾಧಿಕಾರಿ, ಜಿಲ್ಲಾ ಸಹಕಾರಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಮೇಲೆ ಇದೆ. ಹಲವಾರು ವರ್ಷಗಳ ಕಾಲ ಈ ಯೋಜನೆ ಯಶಸ್ವಿಯಾಗಿ ನಡೆದು, ಕಾಲಕ್ರಮದಲ್ಲಿ ಇದರ ಪ್ರಾಮುಖ್ಯತೆ ಕಡಿಮೆಯಾಗುತ್ತ ಬಂದಿದೆ. (ಕೆ.ಆರ್.ಜಿ.ಎ.)

**ಕೃಷಿ ಉದ್ದರಿ (ಸಾಲ) :** ಇತರ ಉತ್ಪಾದನೋದ್ಯಮಗಳಂತೆ ಕೃಷಿ ಉದ್ಯಮದ ಯಶಸ್ಸು ಹಲವು ಅಂಗಗಳ ಸಂಯೋಜನೆಯ ಫಲ, ನೆಲ ಮತ್ತು ಶ್ರಮಗಳೊಂದಿಗೆ ಬಂಡವಾಳವನ್ನು ಕೂಡಿಸಿ ಸಮರ್ಥವಾಗಿ ನಿರ್ವಹಿಸುವುದೇ ಆಧುನಿಕ ಬೇಸಾಯದ ಗೆಲವಿನ ಗುಟ್ಟು. ಕೃಷಿಗೆ ಅವಶ್ಯವಾದ ಬೀಜ, ಗೊಬ್ಬರ ಮುಂತಾದವನ್ನು ಹೊಂದಿಸಿಕೊಳ್ಳಲು ಬಂಡವಾಳ ಅಗತ್ಯ. ವರಮಾನದ ಗಾತ್ರ ನಿರ್ಧರಿಸುವ ಅಂಶಗಳಲ್ಲಿ ಬಂಡವಾಳವೂ ಒಂದು. ಇತರ ಕ್ಷೇತ್ರಗಳಂತೆ ಕೃಷಿಕ್ಷೇತ್ರದಲ್ಲೂ ಬಂಡವಾಳ ಆವಶ್ಯ.

ಕೃಷಿಯ ಉತ್ಪಾದನೆಗೆ ತಗಲುವ ನಾನಾ ಬಗೆಯ ವೆಚ್ಚಗಳನ್ನು ಪೂರೈಸಲು ರೈತನಿಗೆ ಒದಗಿ ಬರುವ ಸಾಲದ ನೆರವು ಕೃಷಿ ಉದ್ದರಿ ಅಥವಾ ಕೃಷಿ ಪತ್ತು ಎನಿಸಿಕೊಳ್ಳುತ್ತದೆ. ಇತರ ಕ್ಷೇತ್ರಗಳಲ್ಲಿಯ ಉತ್ಪಾದಕರಂತೆ ರೈತರಿಗೂ ಸಾಲದ ಆವಶ್ಯಕತೆ ಬಹಳಷ್ಟು ಉಂಟು. ಇಂದಿನ ಕೃಷಿ ಉತ್ಪಾದನೆ ವಿಜ್ಞಾನ ಮತ್ತು ತಾಂತ್ರಿಕ ಸಹಾಯದಿಂದ ಬಹಳ ಮುಂದುವರಿದಿದೆ. ವ್ಯವಸಾಯದಲ್ಲೂ ವಾಣಿಜ್ಯ ಅಥವಾ ಔದ್ಯೋಗಿಕ ಕ್ಷೇತ್ರದಲ್ಲಿರುವಂತೆ ಬಂಡವಾಳದ ಕೊರತೆಯನ್ನು ನೀಗಲು ಸಾಲದ ಆವಶ್ಯಕತೆಯುಂಟು. ಬಂಡವಾಳವಿಲ್ಲದೆ ರೈತನ ಕಸುಬು ಸಾಗದು. ಬಂಡವಾಳದ ಅಭಾವ ಅಥವಾ ಅದರ ತೀವ್ರ ಕೊರತೆಯೇ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿ ವ್ಯವಸಾಯ ಎದುರಿಸುತ್ತಿರುವ ಒಂದು ಪ್ರಮುಖ ಸಮಸ್ಯೆ. ಹಿಂದಿನಿಂದ ರೂಢಿಯಲ್ಲಿರುವ ಸಂಸ್ಥೆಯೇತರ ಮೂಲಗಳನ್ನೇ ಉದ್ದರಿಯ ಪೂರೈಕೆಗಾಗಿ ಹೆಚ್ಚಾಗಿ ಅವಲಂಬಿಸಬೇಕಾಗಿರುವ ಭಾರತದಂಥ ಅಭಿವೃದ್ಧಿಶೀಲ ದೇಶಗಳಲ್ಲಿ ಈ ಸಮಸ್ಯೆ ತುಂಬ ತೀವ್ರವಾಗಿದೆ. ಇಂಥ ರಾಷ್ಟ್ರಗಳಲ್ಲಿ ಸಾಮಾನ್ಯ ಕೃಷಿಕನ ಆದಾಯ ತೀರ ಕಡಿಮೆ. ಆದ್ದರಿಂದ ಆತನಿಗೆ ತನ್ನ ಬಂಡವಾಳವನ್ನು ಪ್ರತಿ ವರ್ಷ ವೃದ್ಧಿಪಡಿಸಿಕೊಳ್ಳಲು ಉಳಿತಾಯವೇ ಇರುವುದಿಲ್ಲ. ಇಂಥ ಸ್ಥಿತಿಯಲ್ಲಿ ಸಾಲರೂಪದಲ್ಲಿ ದೊರೆತ ಹಣವೇ ಅಂದರೆ ಉದ್ದರಿಯೇ, ಬೇಸಾಯಗಾರನ ಉತ್ಪಾದನೆಯನ್ನು ಹೆಚ್ಚಿಸಿ, ಬೆಳೆವ ಸರಕಿನ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಸಾಧಕವಾಗುತ್ತದೆ. ಇದರಿಂದ ಬೇಸಾಯ ಒಂದು ಲಾಭದಾಯಕ ಉದ್ಯಮವಾಗಿ ಪರಿವರ್ತನೆಯಾಗಲು ಸಾಧ್ಯ. ಪತ್ತಿನ ಉಪಯೋಗದಿಂದ ರೈತರಿಗೆ ಸಾಕಷ್ಟು ಅಧಿಕ ಆದಾಯ ಬಂದು, ಪಡೆದ ಸಾಲದ ಮೊಬಲಗನ್ನು ಅದರ ಅವಧಿಯೊಳಗಾಗಿ ಬಡ್ಡಿಸಮೇತ ಮರುಪಾವತಿ ಮಾಡುವುದಷ್ಟೇ ಅಲ್ಲದೆ, ತನ್ನ ಜೀವನಕ್ಕೆ ಸಾಮಾನ್ಯವಾಗಿ ಬೇಕಾಗುವಷ್ಟನ್ನು ಉಳಿಸಿಕೊಂಡು, ಬೇಸಾಯಕ್ಕೆ ಮರುಬಂಡವಾಳ ಹಾಕುವಷ್ಟಿರಬೇಕು. ಹಾಗಲ್ಲದೆ ಪತ್ತಿನ ಉಪಯೋಗದಿಂದ ಬಂದ ಅಧಿಕ ಉತ್ಪತ್ತಿ ಬಡ್ಡಿಯ ಸಮೇತ ಸಾಲದ ಮರುಪಾವತಿಗೆ ಮತ್ತು ಜೀವನ ಸರಿತೂಗಿಸಲು ಮಾತ್ರ ಸಾಕಾಗುವಷ್ಟಾದರೆ ಮುಂದೆಯೂ ರೈತನ ಉತ್ಪಾದನೆಯನ್ನು ಆ ಮಟ್ಟದಲ್ಲಿ ಮುಂದುವರಿಸಿಕೊಂಡು ಹೋಗಲು ಪುನಃ ಪುನಃ ಸಾಲ ಕೊಡುತ್ತಿರಬೇಕಾಗುತ್ತದೆ. ಆಗ ಉದ್ದರಿ ವ್ಯವಸ್ಥೆ ಪ್ರಗತಿಪರವಾಗಲು ಸಾಧ್ಯವಿರುವುದಿಲ್ಲ. ಹೆಚ್ಚು ಉದ್ದರಿಯನ್ನು ಒದಗಿಸಲು ಸಾಧ್ಯವಾಗದುದರಿಂದ ಈ ಸೌಲಭ್ಯವನ್ನು ಅತಿ ಹೆಚ್ಚು ಮಂದಿ ರೈತರಿಗೆ ವಿಸ್ತರಿಸಲು ಅಡಚಣೆಯಾಗುತ್ತದೆ.

ಉದ್ದರಿಯ ಬಳಕೆಯ ಬಗ್ಗೆ ಬಹು ಮುಖ್ಯವಾದ ಒಂದು ಅಂಶವನ್ನು ಗಮನದಲ್ಲಿಡಬೇಕು. ವಿವೇಚನೆಯಿಂದ ಉಪಯೋಗಿಸಿದಲ್ಲಿ ಅದು ರೈತನ ಉತ್ಪಾದನೆಯನ್ನು ಅಧಿಕಗೊಳಿಸಿ ಅವನ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಅಸ್ತ್ರವಾಗಬಲ್ಲದು : ಉದ್ದರಿಯನ್ನು ವಿವೇಚನಾರಹಿತವಾಗಿ ಉಪಯೋಗಿಸಿದ್ದೇ ಆದರೆ ರೈತನಿಗೆ ಅದೊಂದು ದೊಡ್ಡ ಹೊರೆಯಾಗಿ, ಆತನ ಆರ್ಥಿಕ ಭವಿಷ್ಯಕ್ಕೆ ದೊಡ್ಡ ಗಂಡಾಂತರವೇ ಆಗಬಹುದು. ಹಿಂದಿನ ಕಾಲದಲ್ಲಿ ರೈತ ತನ್ನ ಜೀವನೋಪಾಯವನ್ನು ತನ್ನ ದೈಹಿಕ ದುಡಿಮೆಯಿಂದ ಗಳಿಸಿಕೊಳ್ಳುತ್ತಿದ್ದ. ಈಗ ಆತನಿಗೆ ಸಹಾಯಕವಾಗಿ ಯಾಂತ್ರಿಕ ಮತ್ತು ಆರ್ಥಿಕ ಉಪಕರಣಗಳಿವೆ. ಅಂದರೆ ಉದ್ದರಿಯೂ ಸಲಕರಣೆ, ವಿದ್ಯುತ್ತು, ಬೀಜ, ಗೊಬ್ಬರ ಮುಂತಾದವುಗಳಂತೆ ಉತ್ಪಾದನೆಯ ಒಂದು ಮುಖ್ಯ ಉಪಕರಣ. ಇದನ್ನರಿತು ಬುದ್ಧಿವಂತಿಕೆಯಿಂದ ಉದ್ದರಿಯನ್ನು ಬಳಸಿಕೊಂಡರೆ ಆ ವ್ಯವಸ್ಥೆಯಿಂದ ಕೊಡುವ ತೆಗೆದುಕೊಳ್ಳುವ ಎರಡು ಪಕ್ಷಗಳಿಗೂ ಅನುಕೂಲವಾಗುವುದಲ್ಲದೆ ದೇಶಕ್ಕೂ ಒಳಿತಾಗುತ್ತದೆ. ಸಾಲಿಗನಿಗೆ ಬಡ್ಡಿಯ ಸಮೇತ ಸಾಲದ ಮರುಪಾವತಿ ಖಾತರಿಯಾಗಿ, ಸುಸೂತ್ರವಾಗಿ ಆತ ಉದ್ದರಿಯನ್ನೊದಗಿಸಲು ಸಹಕಾರಿಯಾಗುತ್ತದೆ.

ವಾಣಿಜ್ಯ ಮತ್ತು ಕೈಗಾರಿಕೆಗಳಲ್ಲಿ ರೂಢಿಯಲ್ಲಿರುವ ಉದ್ದರಿ ವ್ಯವಸ್ಥೆಯನ್ನೇ ಕೃಷಿರಂಗದಲ್ಲಿ ಅನುಸರಣೆಗೆ ತರಲು ಸಾಧ್ಯವಿಲ್ಲ. ವ್ಯವಸಾಯೋದ್ಯಮ ಮತ್ತು ವ್ಯವಸಾಯಗಾರನ ಸಂಸಾರ–ಇವೆರಡೂ ಒಂದಕ್ಕೊಂದು ಹಾಸುಹೊಕ್ಕಾಗಿವೆ. ಈ ಪರಿಸ್ಥಿತಿ ಇನ್ನಾವ ರಂಗದಲ್ಲೂ ಅಷ್ಟಾಗಿ ಕಾಣಬರುತ್ತಿಲ್ಲ. ಬಹುತೇಕ ಹಿಡುವಳಿಗಳು ಸಣ್ಣವೂ, ಹಾಗೂ ಅವು ಲಕ್ಷಾಂತರ ಹಿಡುವಳಿದಾರರ ಅಧೀನದಲ್ಲಿವೆ. ಕೃಷಿ ಉತ್ಪಾದನೆ ಸಾಮಾನ್ಯವಾಗಿ ಋತುಮಾನಗಳಿಗನುಸಾರವಾಗಿ ನಡೆಯುವ ಕ್ರಿಯೆ; ಅಲ್ಲದೆ ಇದು ಜೀವಿಸಂಬಂಧವಾದ ಕ್ರಿಯೆ; ಪ್ರಾಣಿ ಮತ್ತು ಸಸ್ಯ ಜೀವಿಗಳ ಬೆಳವಣಿಗೆಯ ಫಲ. ಇಲ್ಲಿ ಉತ್ಪಾದನೆ

ತಯಾರಿಕಾಕೈಗಾರಿಕೆಯ ಕ್ರಿಯೆಗಿಂತ ತುಂಬ ನಿಧಾನ. ಆದ್ದರಿಂದ ವ್ಯವಸಾಯದಲ್ಲಿ ಹೂಡಿದ ಬಂಡವಾಳದ ಆವರ್ತ ನಿಧಾನ ಮತ್ತು ಅನಿರ್ದಿಷ್ಟ. ಗಂಡಾಂತರಗಳು ಮತ್ತು ಅನಿಶ್ಚಿತತೆಗಳು ಕೈಗಾರಿಕಾ ರಂಗಕ್ಕಿಂತ ಕೃಷಿರಂಗದಲ್ಲಿ ಅಧಿಕ. ಆದ್ದರಿಂದ ಕೃಷಿ ಉದ್ದರಿ ಅನೇಕ ಅನಿಶ್ಚಿತತೆಗಳನ್ನೂ ಗಂಡಾಂತರಗಳನ್ನೂ ಎದುರಿಸಬೇಕಾಗುತ್ತದೆ. ಅಲ್ಲದೆ ಕೃಷಿ ರಂಗದಲ್ಲಿ ಹೂಡಿದ ಬಂಡವಾಳಕ್ಕೆ ಬರುವ ಆದಾಯ ಇತರ ಕ್ಷೇತ್ರಗಳಿಗೆ ಹೋಲಿಸಿದರೆ ತೀರ ಕಡಿಮೆ. ಇವೆಲ್ಲ ಕಾರಣಗಳಿಂದಾಗಿ ಕೃಷಿ ಉದ್ದರಿ ವ್ಯವಸ್ಥೆ ಇತರ ಉದ್ದರಿ ವ್ಯವಸ್ಥೆಗಳಿಗಿಂತ ಭಿನ್ನವಾಗಿರುವುದು ಆವಶ್ಯ.

ಧಾನ್ಯ, ಹಾಲು, ಮೊಟ್ಟೆ, ಮಾಂಸ ಇತ್ಯಾದಿಗಳ ಉತ್ಪಾದನೆಗೆ ತಗಲುವ ನೇರವಾದ ಖರ್ಚಿಗೆ ಕೃಷಿಸಾಲ ಸೀಮಿತವಾಗಿಲ್ಲ. ಕೃಷಿ ಉತ್ಪಾದನೆಗಳ ಶೇಖರಣೆ, ಸಾಗಣೆ ಮತ್ತು ಮಾರಾಟಕ್ಕಾಗಿ ತಗಲುವ ಖರ್ಚುಗಳನ್ನು ಕೂಡ ಕೃಷಿ ಸಾಲ ಪೂರೈಸುವಂಥದಾಗಿರುತ್ತದೆ. ಇದೂ ಅಲ್ಲದೆ ಕೃಷಿ ಉತ್ಪಾದನೆಗೆ ಬೇಕಾಗುವ ಉಪಕರಣಗಳ ಪೂರೈಕೆಗೆ ಮತ್ತು ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಬೇಕಾಗುವ ರೀತಿಯಲ್ಲಿ ಮಾರ್ಪಾಡುಗೊಳಿಸಲು ತಗಲುವ ಹಣದ ಆವಶ್ಯಕತೆಯನ್ನು ಪೂರೈಸುವುದಕ್ಕೆ ಉದ್ದರಿ ಅಗತ್ಯವಾಗಿರುತ್ತದೆ. ಕೃಷಿ ಸಾಲ ಪ್ರತ್ಯಕ್ಷವಾಗಿಯೇ ಆಗಲಿ ಪರೋಕ್ಷವಾಗಿಯೇ ಆಗಲಿ ಕೃಷಿ ಉತ್ಪಾದನೆಗೆ ಸಹಾಯಕವಾಗಿರುತ್ತದೆ.

ರೈತರಿಗೆ ಆವಶ್ಯವಾದ ಕೃಷಿ ಉದ್ದರಿಯನ್ನು ಅಲ್ಪಾವಧಿ, ಮಧ್ಯಮಾವಧಿ, ಮತ್ತು ದೀರ್ಘಾವಧಿ ಎಂದು ಮೂರು ಬಗೆಯಾಗಿ ವಿಂಗಡಿಸಬಹುದು.

**1. ಅಲ್ಪಾವಧಿ ಸಾಲ :** ಬೆಳೆಗಳಿಗೆ ತಗಲುವ ಖರ್ಚನ್ನು ಪೂರೈಸಲು ಅಲ್ಪಾವಧಿ ಸಾಲ ಬೇಕಾಗುತ್ತದೆ. ಬೆಳೆದ ಫಸಲಿನ ಮಾರಾಟವಾದ ಕೂಡಲೆ ಇದರ ಮರುಪಾವತಿ ಆಗಬೇಕು. ಸಾಮಾನ್ಯವಾಗಿ ಈ ಸಾಲದ ಅವಧಿ ಆರು ತಿಂಗಳುಗಳಿಂದ ಒಂದು ವರ್ಷ. ಕೆಲವು ಬೆಳೆಗಳು (ಉದಾ: ಕಬ್ಬು) ಒಂದು ವರ್ಷಕ್ಕಿಂತ ಹೆಚ್ಚು ಕಾಲ ತೆಗೆದುಕೊಳ್ಳಬಹುದು. ಅಂಥ ಸಂದರ್ಭಗಳಲ್ಲಿ ಅಲ್ಪಾವಧಿ ಸಾಲ ಹದಿನೈದು ತಿಂಗಳುಗಳವರೆಗೂ ವಿಸ್ತರಿಸಬಹುದು. ಕೆಲವು ವೇಳೆ ಸಕಾಲಕ್ಕೆ ಮಳೆಯಾಗದೆ ಅಥವಾ ಕೀಟ ರೋಗದ ಬಾದೆ ಮುಂತಾದ ಕಾರಣಗಳಿಂದ ಫಸಲು ನಷ್ಟವಾಗಿ, ಸಾಲ ತೀರಿಸಲು ರೈತ ನಿಶ್ಶಕ್ತನಾದಲ್ಲಿ ಕೊಟ್ಟ ಸಾಲವನ್ನು ಮುಂದಿನ ಫಸಲು ಬಂದಾಗ ವಸೂಲು ಮಾಡುವ ಹಂಚಿಕೆಯೂ ಇರುತ್ತದೆ. ಬೇಸಾಯಕ್ಕೆ ಸಂಬಂಧಪಟ್ಟಂತೆ ಬೀಜ, ಗೊಬ್ಬರ ಮಂತಾದವನ್ನು ಕೊಂಡುಕೊಳ್ಳಲು, ಕಾರ್ಮಿಕರಿಗೆ ಕೂಲಿ ಕೊಡಲು, ಕಂದಾಯ ಕಟ್ಟಲು, ಉತ್ಪಾದಿಸಿದ ವಸ್ತುಗಳನ್ನು ಸಾಗಿಸಲು, ಮಾರಾಟ ಮಾಡಲು-ಇಂಥ ನಾನಾ ಉದ್ದೇಶಗಳಿಗೆ ಅಲ್ಪಾವಧಿ ಸಾಲ ಆವಶ್ಯಕ. ಇದು ಮುಖ್ಯವಾಗಿ ಬೆಳೆ ಸಾಲ, ಆಧುನಿಕ ಕ್ರಮಗಳನ್ನು ಅನುಸರಿಸಿ ಬೆಳೆಗಳನ್ನು ತಗೆಯಲು, ಸಹಕಾರ ಸಂಘಗಳು ಅಲ್ಪಾವಧಿಯ ಬೆಳೆಸಾಲಗಳನ್ನು ನೀಡುತ್ತಿವೆ. ಸುಧಾರಿತ ಕ್ರಮಗಳ ಅನುಸರಣೆ ಮಟ್ಟ ರೈತನಿಂದ ರೈತನಿಗೆ ಬದಲಾಗುವುದರಿಂದ, ಬೆಳೆಸಾಲವನ್ನು ಪೂರೈಸುವಾಗ ಸಹಕಾರಸಂಘಗಳು ಒಂದು ನಿರ್ದಿಷ್ಟಕ್ರಮವನ್ನು ಅನುಸರಿಸುತ್ತ ಇವೆ. ಬೆಳೆಸಾಲ ಮೂರು ಘಟಕಗಳಾಗಿ ವಿಂಗಡವಾಗಿದೆ. ನಗದಿನ ರೂಪದಲ್ಲಿದ್ದು ಬೆಳೆ ಉತ್ಪಾದನೆಯ ಸಂಬಂಧದಲ್ಲಿ ತಗಲುವ ಸಣ್ಣ ಪುಟ್ಟ ಖರ್ಚುಗಳನ್ನು ನೀಗಿಸುವುದು ಮೊದಲನೆಯ (ಎ) ಘಟಕ ಬೀಜ, ರಾಸಾಯನಿಕಗೊಬ್ಬರ ಮತ್ತು ಇತರ ವಸ್ತುಗಳ ರೂಪದಲ್ಲಿ ಆಧುನಿಕ ಬೇಸಾಯ ಕ್ರಮಗಳ ಅನುಸರಣೆಗೆ ಅನುಕೂಲವಾಗುವಂತೆ ದೊರಕಿಸಿಕೊಡಲಾಗುವುದು; ಎರಡನೆಯ (ಬಿ) ಘಟಕ ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸಿದಾಗ ತಗಲುವ ಇತರ ಖರ್ಚುಗಳನ್ನು, ಮೇಲು ಖರ್ಚುಗಳನ್ನು, ಪೂರೈಸಲು ನೀಡುವ ಉದ್ದರಿ; ಮೂರನೆಯದು (ಸಿ) ಇದು ನಗದಿನ ರೂಪದಲ್ಲಿರುತ್ತದೆ. ಎ ಘಟಕ ಎಲ್ಲರಿಗೂ ಒಂದೇ ಗಾತ್ರದ್ದಾಗಿರುತ್ತದೆ. ಬಿ ಮತ್ತು ಸಿ ಘಟಕಗಳ ಗಾತ್ರ ರೈತನಿಂದ ರೈತನಿಗೆ ಅವನ ಆವಶ್ಯಕತೆಗೆ ಅನುಗುಣವಾಗಿ ಬದಲಾಗುತ್ತದೆ. ಕೃಷಿ ಉದ್ದರಿಯನ್ನು ಕೃಷಿ ಉತ್ಪನ್ನದ ಮಾರಾಟಕ್ಕೆ ಜೋಡಣೆ ಮಾಡಲಾಗಿದೆ. ಬೆಳೆಸಾಲವನ್ನು ತೆಗೆದುಕೊಂಡ ರೈತ ತನ್ನ ಉತ್ಪನ್ನವನ್ನು ಸಂಬಂಧಪಟ್ಟ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘದ ಮೂಲಕ ಮಾರಾಟ ಮಾಡುತ್ತಾನೆ. ಆತನಿಗೆ ಬೆಳೆಸಾಲ ಕೊಟ್ಟ ಸಹಕಾರ ಸಂಘ ಅವನಿಂದ ತನಗೆ ಬರಬೇಕಾದ ಅಸಲು ಮತ್ತು ಬಡ್ಡಿಯನ್ನು ವಸೂಲಿ ಮಾಡಿಕೊಳ್ಳಲು ಇದರಿಂದ ಸಹಾಯವಾಗುತ್ತದೆ.

**2. ಮಧ್ಯಮಾವಧಿ ಸಾಲ :** ಇದರ ಅವಧಿ 15 ತಿಂಗಳುಗಳಿಂದ 5 ವರ್ಷಗಳವರೆಗೆ. ವ್ಯವಸಾಯ ಉಪಕರಣ, ದನಕರು, ಕೋಳಿ ಮುಂತಾದವನ್ನು ನೀರೆತ್ತುವ ಸಾಧನಗಳನ್ನೂ ಕೊಳ್ಳುವುದಕ್ಕೆ, ವಿದ್ಯುದೀಕರಣಕ್ಕೆ ಹಾಗೂ ಸಣ್ಣ ಪುಟ್ಟ ಭೂ ಅಭಿವೃದ್ಧಿ ಕಾರ್ಯಗಳಿಗೆ ಮಧ್ಯಮಾವಧಿ ಸಾಲ ಅಗತ್ಯ.

**3. ದೀರ್ಘಾವಧಿ ಸಾಲ :** ಇದರ ಅವಧಿ 5 ವರ್ಷಗಳಿಂದ 25 ವರ್ಷಗಳ ವರೆಗೆ, ಜಮೀನು ಕೊಳ್ಳಲು, ಅಭಿವೃದ್ಧಿಪಡಿಸಲು (ಜಮೀನಿನ ಆಬಾದು, ಬೇಲಿ ನಿರ್ಮಾಣ, ಜಮೀನಿನಲ್ಲಿ ಕಟ್ಟಡಗಳ ನೀರಾವರಿ ಕಾಮಗಾರಿ, ಬಾವಿ ತೋಡಿಸುವುದು ಇತ್ಯಾದಿ), ಅಧಿಕ ಬೆಲೆಯ ವ್ಯವಸಾಯ ಯಂತ್ರೋಪಕರಣಗಳನ್ನು ಕೊಳ್ಳಲು, ವಿಶೇಷ ಬೆಳೆಗಳಾದ ಕಾಫಿ, ಚಹ, ತೆಂಗು, ಅಡಕೆ ಮುಂತಾದ ಬೆಳೆಗಳನ್ನು ಹಾಕಲು ನೀಡುವ ಸಾಲ ಈ ರೀತಿಯಾಗಿರುತ್ತದೆ.

**ಕೃಷಿ ಸಾಲದ ಮೂಲಗಳು :** ಭಾರತದಲ್ಲಿ ಕೃಷಿ ಸಾಲದ ಅನೇಕ ಮೂಲಗಳಿವೆ. ಅಖಿಲಭಾರತ ಗ್ರಾಮೀಣ ಉದ್ದರಿ ಸರ್ವೇಕ್ಷಣ ಸಮಿತಿಯವರು (ಆಲ್-ಇಂಡಿಯ ರೂರಲ್ ಕ್ರೆಡಿಟ್ ಸರ್ವೆ ಕಮಿಟಿ) ಕೃಷಿ ಸಾಲದ ಮೂಲಗಳನ್ನು ಒಂಬತ್ತು ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ; ರೈತ ಲೇವಾದೇವಿಗಾರರು, ಲೇವಾದೇವಿಯೇ ಮುಖ್ಯ ಕಸುಬಾಗಿ ಉಳ್ಳವರು, ಜಮೀನುದಾರರು, ಸಂಬಂಧಿಕರು, ವರ್ತಕರು, ಸಹಕಾರ ಸಂಘಗಳು, ಸರ್ಕಾರ, ವಾಣಿಜ್ಯ ಬ್ಯಾಂಕುಗಳು, ಇತರರು.

ಈ ನಾನಾ ಮೂಲಗಳನ್ನು ಸಾಂಸ್ಥಿಕ ಮತ್ತು ಸಂಸ್ಥೇತರ ಎಂದು ಎರಡು ಗುಂಪುಗಳಾಗಿ ಮಾಡಬಹುದು. ಸರ್ಕಾರ, ಸಹಕಾರ ಸಂಘಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಸಾಂಸ್ಥಿಕ ಮೂಲಗಳು. ಉಳಿದವು ಸಂಸ್ಥೇತರ ಮೂಲಗಳು. ಭಾರತದಲ್ಲಿ ಬಹಳ ಕಾಲದಿಂದಲೂ ಸಂಸ್ಥೆತರ ಮೂಲಗಳೇ ಬಹಳಷ್ಟು ಪ್ರಮಾಣದಲ್ಲಿ ಕೃಷಿ ಸಾಲವನ್ನು ಒದಗಿಸುತ್ತ ಬಂದಿವೆ. ಸಾಂಸ್ಥಿಕ ಮೂಲಗಳ ಪಾತ್ರ ಈಗಲೂ ಬಹಳ ಕಡಿಮೆ.

ಸಾಂಸ್ಥಿಕ ಮೂಲಗಳು ಸಾಮಾನ್ಯವಾಗಿ ಉತ್ಪಾದಕಸಾಲಗಳನ್ನು ಮಾತ್ರ ಕೊಡುತ್ತವೆ. ಅದೂ ಅಲ್ಲದೆ, ಅವು ರೈತನ ಸಾಲ ಹೊರುವ ಸಾಮರ್ಥ್ಯ ಮತ್ತು ಸಾಲವನ್ನು ಹಿಂದಿರುಗಿಸುವ ಸಾಮರ್ಥ್ಯ ಇವೆರಡನ್ನೂ ಗಣನೆಗೆ ತೆಗೆದುಕೊಂಡು ಸಾಲವನ್ನು ಪೂರೈಸುತ್ತವೆ. ಅವಕ್ಕೆ ಹೆಚ್ಚುವರಿ ಲಾಭ ಮಾಡಿಕೊಳ್ಳುವ ಮನೋಭಾವ ಇರುವುದಿಲ್ಲ ಮತ್ತು ಅವು ನ್ಯಾಯವಾದ ಬಡ್ಡಿದರಗಳನ್ನು ಹಾಕುತ್ತವೆ. ಸಂಸ್ಥೇತರ ಮೂಲಗಳು ಇವಕ್ಕೆ ವಿರುದ್ಧವಾದಂಥವು. ಸಾಂಸ್ಥಿಕ ಮೂಲಗಳೇ ಕೃಷಿ ಸಾಲವನ್ನು ಬಹಳಷ್ಟು ಪ್ರಮಾಣದಲ್ಲಿ ಪೂರೈಸಿದರೆ ರೈತನಿಗೂ ದೇಶಕ್ಕೂ ಒಳ್ಳೆಯದು. ಹೀಗಿದ್ದರೂ ಭಾರತದಲ್ಲಿ 1970ರಲ್ಲಿ ಕೂಡ ಸಂಸ್ಥೇತರ ಮೂಲಗಳು ಒಟ್ಟು ಕೃಷಿ ಉದ್ದರಿಯ ಶೇ. 60ರಷ್ಟನ್ನು ಒದಗಿಸಿದುವು. ಹಿಂದೆ ಇವು ಇನ್ನೂ ಹೆಚ್ಚಿನ ಪಾತ್ರ ವಹಿಸಿದ್ದುವು. ಇನ್ನು ಮುಂದೆ ಸಾಂಸ್ಥಿಕ ಮೂಲಗಳ ಪ್ರಭಾವ ಮತ್ತು ಸಾಲದ ಪ್ರಮಾಣ ಕ್ರಮೇಣ ಹೆಚ್ಚುವುದಕ್ಕೆ ದೇಶದಲ್ಲಿ ಸರಿಯಾದ ವಾತಾವರಣ ಉಂಟಾಗುತ್ತಿದೆ.

ಸಾಂಸ್ಥಿಕ ಮೂಲಗಳ ಪೈಕಿ ಸಹಕಾರ ಸಂಘಗಳು ಕ್ರಮೇಣ ಪ್ರಾಮುಖ್ಯತೆ ಗಳಿಸುತ್ತಿವೆ. ಭಾರತದಲ್ಲಿ ಸಹಕಾರ ಚಳವಳಿ 1904ರಲ್ಲಿ ಪ್ರಾರಂಭವಾದಾಗ ರೈತರಿಗೆ ಸರಿಯಾದ ಕೃಷಿ ಸಾಲದ ಸೌಕರ್ಯಗಳನ್ನು ಕಲ್ಪಿಸಿಕೊಡುವುದೇ ಅದರ ಮುಖ್ಯ ಉದ್ದೇಶವಾಗಿತ್ತು. ರೈತರಿಗೆ ಸಹಕಾರ ಸಾಲ ಬಹಳ ಉತ್ತಮವಾದ ಮೂಲ. ಹಳ್ಳಿಯ ಮಟ್ಟದಲ್ಲಿ ಪ್ರಾಥಮಿಕ ಕೃಷಿ ಉದ್ದರಿ ಸಹಕಾರ ಸಂಘ, ಜಿಲ್ಲಾ ಮಟ್ಟದಲ್ಲಿ ಕೇಂದ್ರ ಸಹಕಾರ ಬ್ಯಾಂಕು ಮತ್ತು ರಾಜ್ಯಮಟ್ಟದಲ್ಲಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು-ಇವು ಮೂರೂ ಸೇರಿ ಪ್ರತಿಯೊಂದು ರಾಜ್ಯದಲ್ಲೂ ಅಲ್ಪಾವಧಿ ಮತ್ತು ಮಧ್ಯಮಾವಧಿಯ ಸಹಕಾರಿ ಕೃಷಿ ಸಾಲವನ್ನು ಪೂರೈಸುವ ವ್ಯವಸ್ಥೆ ಏರ್ಪಡಿಸಿಕೊಂಡಿವೆ. ತಾಲ್ಲೂಕು ಮಟ್ಟದಲ್ಲಿರುವ ಪ್ರಾಥಮಿಕ ಸಹಕಾರಿ ಜಮೀನು ಅಭಿವೃದ್ಧಿ ಬ್ಯಾಂಕು ಮತ್ತು ರಾಜ್ಯಮಟ್ಟದಲ್ಲಿರುವ ಕೇಂದ್ರ ಸಹಕಾರಿ ಜಮೀನು ಅಭಿವೃದ್ಧಿ ಬ್ಯಾಂಕು-ಇವರು ದೀರ್ಘಾವಧಿ ಸಹಕಾರಿ ಕೃಷಿ ಸಾಲವನ್ನು ಪೂರೈಸುತ್ತವೆ. ಮುಂಚೆ ಈ ಬ್ಯಾಂಕನ್ನು ಜಮೀನು ಅಡಮಾನ ಬ್ಯಾಂಕೆಂದು ಕರೆಯಲಾಗುತಿತ್ತು. ಆಗ ಜಮೀನು ಅಡಮಾನ ಬ್ಯಾಂಕುಗಳು ರೈತರಿಗೆ ಮುಖ್ಯವಾಗಿ ಹಳೆಯ ಸಾಲಗಳನ್ನು ತೀರಿಸುವುದಕ್ಕಾಗಿ ದೀರ್ಘಾವಧಿ ಸಾಲಗಳನ್ನು ಕೊಡುತ್ತಿದ್ದುವು. ಆದರೆ, ಈಗ ಜಮೀನು ಅಭಿವೃದ್ಧಿ ಬ್ಯಾಂಕುಗಳು ಜಮೀನು ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ದೀರ್ಘಾವಧಿ ಸಾಲ ನೀಡುತ್ತವೆ.

ನೇರವಾಗಿ ಕೃಷಿ ಸಾಲವನ್ನು ಪೂರೈಸುವುದರಲ್ಲಿ ಸರ್ಕಾರ ಬಹಳ ಕಡಿಮೆ ಪಾತ್ರವಹಿಸುತ್ತ ಬಂದಿದೆ. ಸರ್ಕಾರ ನೇರವಾಗಿ ಕೊಡುವ ಕೃಷಿ ಸಾಲವನ್ನು ತಕಾವಿ ಸಾಲವೆಂದು ಕರೆಯುತ್ತಾರೆ. 1883ರ ಜಮೀನು ಅಭಿವೃದ್ಧಿ ಸಾಲದ ಕಾಯಿದೆ ಮತ್ತು 1884ರ ವ್ಯವಸಾಯಗಾರರ ಸಾಲದ ಕಾಯಿದೆ ಇವೆರಡೂ ರೈತರಿಗೆ ತಕಾವಿ ಸಾಲಗಳನ್ನು ಒದಗಿಸಿಕೊಡಲು ಸರ್ಕಾರಕ್ಕೆ ಅಧಿಕಾರ ಕೊಡುತ್ತವೆ. 1883ರ ಕಾಯಿದೆ ದೀರ್ಘಾವಧಿ ಕೃಷಿ ಸಾಲವನ್ನು ಮತ್ತು 1884 ರ ಕಾಯಿದೆ ಅಲ್ಪಾವಧಿ ಸಾಲವನ್ನು ಪೂರೈಸುತ್ತವೆ. ಈಗ ತಕಾವಿ ಸಾಲಗಳನ್ನು ಸಹ ಸಹಕಾರ ಸಂಘಗಳ ಮೂಲಕವೇ ಕೊಡಲಾಗುತ್ತಿದೆ. ಸರ್ಕಾರ ನೇರವಾಗಿ ಕೊಡುವ ತಕಾವಿ ಸಾಲದ ಜೊತೆಗೆ ಪರೋಕ್ಷವಾಗಿಯೂ ಸರ್ಕಾರ ಕೃಷಿಸಾಲದ ಪೂರೈಕೆಗೆ ಸಹಾಯ ಮಾಡುತ್ತದೆ. ರಾಜ್ಯ ಸರ್ಕಾರಗಳು ಸಹಕಾರ ಸಂಘಗಳ ಷೇರುಗಳನ್ನು ಕೊಳ್ಳುತ್ತವೆ. ಅಲ್ಲದೆ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮತ್ತು ಕೇಂದ್ರ ಸಹಕಾರಿ ಜಮೀನು ಅಭಿವೃದ್ಧಿ ಬ್ಯಾಂಕುಗಳು ಭಾರತದ ರಿಸರ್ವ್ ಬ್ಯಾಂಕಿನಿಂದ ತೆಗೆದುಕೊಳ್ಳಬಹುದಾದ ಸಾಲಗಳಿಗೆ ಜಾಮೀನಾಗಿ ನಿಲ್ಲುತ್ತವೆ.

ಭಾರತದಲ್ಲಿಯ ವಾಣಿಜ್ಯ ಬ್ಯಾಂಕುಗಳು 1969ರ ತನಕ ಕೃಷಿ ಸಾಲಗಳನ್ನು ಕೊಡಲು ಮುಂದೆ ಬರಲಿಲ್ಲ. 1955ರಲ್ಲಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವನ್ನು ಇತರ ಹತ್ತು ರಾಜ್ಯ ಬ್ಯಾಂಕುಗಳ ಜೊತೆ ರಾಷ್ಟ್ರೀಕರಣಗೊಳಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಎಂದು ಕರೆಯಲಾಯಿತು. ಆಗಿನಿಂದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ

ಕೃಷಿ ಉದ್ದರಿಯನ್ನು ಪೂರೈಸುವುದರಲ್ಲಿ ಸಹಕಾರ ಸಂಘಗಳ ಮೂಲಕ ಸ್ವಲ್ಪ ಮಟ್ಟಿಗೆ ನೆರವಾಗುತ್ತಿದೆ. 1969ರಲ್ಲಿ ಭಾರತದ ವಾಣಿಜ್ಯ ಬ್ಯಾಂಕುಗಳ ಮೇಲೆ ಸಾಮಾಜಿಕ ನಿಯಂತ್ರಣ ತರಲಾಯಿತು. ಅದಾದ ಮೇಲೆ ಕೂಡ ವಾಣಿಜ್ಯ ಬ್ಯಾಂಕುಗಳು ಕೃಷಿ ಉದ್ದರಿ ಪೂರೈಕೆಗೆ ಅಷ್ಟೇನೂ ಮುಂದೆ ಬರಲಿಲ್ಲ. 1969ರ ಜೂನ್ ತಿಂಗಳಲ್ಲಿ 14 ಪ್ರಮುಖ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ತತ್ಪರಿಣಾಮವಾಗಿ 1969ರಿಂದ ಈಚೆಗೆ ವಾಣಿಜ್ಯ ಬ್ಯಾಂಕುಗಳು ಕೃಷಿ ಸಾಲಗಳನ್ನು ನೀಡಲು ಮುಂದೆ ಬಂದಿವೆ. ಇನ್ನು ಮುಂದೆ ವಾಣಿಜ್ಯ ಬ್ಯಾಂಕುಗಳು ಭಾರತದ ಕೃಷಿ ಸಾಲದ ಪೂರೈಕೆಯಲ್ಲಿ ಮಹತ್ತ್ವದ ಪಾತ್ರ ವಹಿಸುತ್ತವೆಯೆಂದು ನಿರೀಕ್ಷಿಸಲಾಗಿದೆ. ವಾಣಿಜ್ಯ ಬ್ಯಾಂಕುಗಳು ರಾಷ್ಟ್ರೀಕರಣಕ್ಕೆ ಮುಂಚೆ ಕೈಗಾರಿಕೆಗೆ ಕೊಟ್ಟ ಪ್ರಾಮುಖ್ಯ, ವ್ಯವಸಾಯಕ್ಕೆ ತೋರಿಸಿದ ಉದಾಸೀನ, ಇವೆರಡೂ ತಿಳಿದ ವಿಚಾರವೇ ಆಗಿದೆ. ಆದರೆ 14 ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾದಂದಿನಿಂದ ಈಚೆಗೆ ಪರಿಸ್ಥಿತಿ ಬದಲಾಗಿದೆ.

**ಭಾರತದ ರಿಸರ್ವ್ ಬ್ಯಾಂಕ್ ಮತ್ತು ಕೃಷಿ ಉದ್ದರಿ :** ಕೃಷಿ ಪ್ರಧಾನವಾದ ಭಾರತದಲ್ಲಿ ಕೃಷಿ ಉದ್ದರಿಯ ಪೂರೈಕೆಯ ಬಗ್ಗೆ ದೇಶದ ಕೇಂದ್ರೀಯ ಬ್ಯಾಂಕಾದ ಭಾರತದ ರಿಸರ್ವ್ ಬ್ಯಾಂಕಿನ ಹೊಣೆಗಾರಿಕೆ ಮಹತ್ತ್ವದ್ದು. ಇದರ ನಿರ್ವಹಣೆಗಾಗಿ ಭಾರತದ ರಿಸರ್ವ್ ಬ್ಯಾಂಕ್ ಒಂದು ಪ್ರತ್ಯೇಕ ಕೃಷಿ ಉದ್ದರಿ ವಿಭಾಗ ಸ್ಥಾಪಿಸಿದೆ. ಇದರ ಉದ್ದೇಶಗಳಿವು: 1. ಕೃಷಿ ಉದ್ದರಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಪರಿಶೀಲನೆಗಾಗಿ ತಜ್ಞರ ಸಿಬ್ಬಂದಿಯ ನೇಮಕ. 2. ಕೃಷಿ ಸಾಲದ ಬಗ್ಗೆ ಉತ್ತೇಜನ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೂ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕುಗಳಿಗೂ ಕೇಂದ್ರ ಸಹಕಾರ ಜಮೀನು ಅಭಿವೃದ್ಧಿ ಬ್ಯಾಂಕುಗಳಿಗೂ ಮಾರ್ಗದರ್ಶನ ನೀಡುವುದು. 3. ಕೃಷಿ ಉತ್ಪಾದನ ಕಾರ್ಯಗಳಿಗೆ ಮತ್ತು ದವಸಧಾನ್ಯಗಳ ಸಾಗಾಣಿಕೆಗೆ ರಾಜ್ಯ ಸಹಕಾರ ಬ್ಯಾಂಕುಗಳ ಮೂಲಕ ಕೃಷಿ ಉದ್ದರಿ ಒದಗಿಸುವುದು.

**ಕೃಷಿ ಮರುಹಣಕಾಸು ಸಂಸ್ಥೆ (ಅಗ್ರಿಕಲ್ಚರಲ್ ರೀಫೈನಾನ್ಸ್ ಕಾರ್ಪೋರೇಷನ್):** ಇದನ್ನು ಭಾರತದ ರಿಸರ್ವ್ ಬ್ಯಾಂಕಿನ ಒಂದು ಅಂಗಸಂಸ್ಥೆಯಾಗಿ 1963ರಲ್ಲಿ ಸ್ಥಾಪಿಸಲಾಯಿತು. ಕೃಷಿ ದೀರ್ಘಾವಧಿ ಸಾಲಕ್ಕೆ ಈ ಸಂಸ್ಥೆ ಕೇಂದ್ರ ಮರುಹಣಕಾಸಿನ ಮೂಲವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಸಂಸ್ಥೆಯಿಂದ ಮುಂದೆ ತೋರಿಸಿರುವ ಕೃಷಿ ಕಾರ್ಯಗಳಿಗೆ ದೀರ್ಘಾವಧಿ ಸಾಲವನ್ನು, ಜಮೀನು ಅಭಿವೃದ್ಧಿ ಬ್ಯಾಂಕುಗಳ ಮೂಲಕ, ಕೊಡಲಾಗುತ್ತದೆ; 1. ಜಮೀನು ಹದಗೊಳಿಸಲು ಮತ್ತು ನೀರಾವರಿಗೆ ಅನುಕೂಲವಾಗುವಂತೆ ಅದನ್ನು ಸಿದ್ಧಪಡಿಸಲು. 2. ಕಾಫಿ, ಚಹ, ರಬ್ಬರ್, ತೆಂಗು, ಅಡಕೆ ಮುಂತಾದ ತೋಟದ ಬೆಳೆಗಳನ್ನು ಬೆಳೆಯಲು 3. ವ್ಯವಸಾಯವನ್ನು ಯಾಂತ್ರೀಕರಿಸಲು. 4. ದನಕರು, ಕೋಳಿ ಮುಂತಾದವನ್ನು ಸಾಕಲು. ಈ ಸಂಸ್ಥೆಯ ಸ್ಥಾಪನೆಯಿಂದ ವ್ಯವಸಾಯದ ಅಭಿವೃದ್ಧಿಗೆ ಕೃಷಿಸಾಲ ಒದಗಿಸುವ ಕಾರ್ಯಕ್ಕೆ ಉತ್ತೇಜನ ದೊರಕಿದಂತಾಗಿದೆ.

ಭಾರತದಲ್ಲಿ ಕೃಷಿ ಸಾಲದ ಬೇಡಿಕೆಗೂ ಹಾಗು ಪೂರೈಕೆಗೂ ನಡುವಣ ಅಂತರ ಬಲು ಹೆಚ್ಚು. ಸಾಕಷ್ಟು ಮೊತ್ತದಲ್ಲಿ ಕೃಷಿ ಸಾಲ ದೊರೆಯದಿದ್ದಲ್ಲಿ ಅದು ವ್ಯವಸಾಯದ ಅಭಿವೃದ್ಧಿಯಲ್ಲಿ ಒಂದು ಮುಖ್ಯವಾದ ಅಡಚಣೆಯಾಗಿ ಪರಿಣಮಿಸುತ್ತದೆ. ರಿಸರ್ವ್ ಬ್ಯಾಂಕಿನ ಅಖಿಲಭಾರತ ಗ್ರಾಮೀಣ ಸಾಲ ಪರಿಶೀಲನ ಸಮಿತಿ (1969) 1970–71ರಲ್ಲಿ ಭಾರತದಲ್ಲಿ ಒಟ್ಟು ರೂ. 2,280 ಕೋಟಿಗಳ ಆವಶ್ಯಕತೆ ಇರುವುದಾಗಿಯೂ ಅದರಲ್ಲಿ ರೂ. 1,106 ಕೋಟಿಗಳಷ್ಟು ಅಲ್ಪಾವಧಿಯದೆಂದೂ ಅಂದಾಜು ಮಾಡಿದೆ. 1973–74ರ ಹೊತ್ತಿಗೆ ರೂ. 2.000 ಕೋಟಿ ಅಲ್ಪಾವಧಿ ಸಾಲದ ಅಗತ್ಯವಾಗುವುದೆಂದು ಅಂದಾಜು ಮಾಡಿದೆ.

ವ್ಯವಸಾಯವೂ ಒಂದು ಉದ್ಯಮವಾದ್ದರಿಂದ ಕೃಷಿ ಸಾಲದಿಂದ ಅಧಿಕೋತ್ಪಾದನೆಯೂ ಬಂಡವಾಳ ನಿರ್ಮಾಣವೂ ಸಾಧ್ಯವಾಗಬೇಕು. ಅದನ್ನು ನೀಡುವವರೂ ಪಡೆಯುವವರೂ ಈ ವಹಿವಾಟನ್ನು ವ್ಯಾವಹಾರಿಕವಾಗಿಯೇ ನೋಡುವುದು ಆವಶ್ಯ. ಕೃಷಿ ಸಾಲ ನೀಡುವಾಗ, ಸಾಲ ಪಡೆಯುವವನ ಸಂಪಾದನೆಯ ಗಾತ್ರ, ಸಾಲ ತೀರಿಸುವ ಸಾಮರ್ಥ್ಯ, ಅನಿರೀಕ್ಷಿತ ನಷ್ಟವನ್ನು ಭರಿಸುವ ಶಕ್ತಿ, ಇವೆಲ್ಲವನ್ನೂ ಒಂದು ರೈತ ಕುಟುಂಬದ ಪೂರ್ತಿ ಸಾಗುವಳಿಯ ಜಮೀನಿಗೆ ಸಂಬಂಧಪಟ್ಟಂತೆ ಗಣನೆಗೆ ತೆಗೆದುಕೊಳ್ಳಬೇಕೇ ಹೊರತು, ಆ ರೈತ ಕುಟುಂಬದ ವ್ಯವಸಾಯೋದ್ಯಮದ ಬೇರೆಬೇರೆ ಭಾಗಗಳಿಗೆ ಸಂಬಂಧಪಟ್ಟಂತೆ ಅಲ್ಲ. ಅದು ಇನ್ನೊಬ್ಬರ ಜಂಟಿ ಖಾತರಿಯನ್ನೇ ಅವಲಂಬಿಸಬಾರದು; ಉತ್ಪಾದನೆಯ ಮತ್ತು ಮರುಪಾವತಿ ಸಾಮರ್ಥ್ಯ ಸಂಪಾದನೆಯ ದೃಷ್ಟಿ ಅತ್ಯಂತ ಮುಖ್ಯ. (ಜಿ.ಎಸ್.ಸಿ.; ಆರ್.ಆರ್.ಎಂ.; ಬಿ.ಆರ್.ಪಿ.)

**ಕೃಷಿ ಉಪಕರಣಗಳು :** ಒಂದೊಂದು ಸಾಗುವಳಿ ಕೆಲಸಕ್ಕೂ ವಿವಿಧ ಉಪಕರಣಗಳು ಬೇಕು. ಭೂಮಿಯನ್ನು ಉಳಲು ಗುದ್ದಲಿ, ಪಿಕಾಸಿ (ಪಿಕ್ಯಾಕ್ಸ್), ಸನಿಕೆ (ಸಲಾಕಿ), ನೇಗಿಲು, ರಂಟೆ, ಹಲಬೆ, ಕುಂಟೆ, ಕೊರಡುಗಳು ಬೇಕು, ಬಿತ್ತಲಿಕ್ಕೆ ನೇಗಿಲು, ಸಡ್ಡೆ, ಕೂರಿಗೆಗಳು ಬೇಕು. ಸಾಗುವಳಿ ಮಾಡಲು ಕೈಗುದ್ದಲಿ, ಕುರ್ಚಿಗಿ, ವರವರಿ, ಎಡೆಕೂಟೆಗಳು ಬೇಕು. ನೀರೆತ್ತಿ ಉಣ್ಣಿಸಲು ಏತ, ಕಪ್ಪಲಿ (ಕಪಲೆ), ಸನಿಕೆಗಳು ಬೇಕು. ಕೊಯಿಲು ಮಾಡಿ ಸುಗ್ಗಿ ಮಾಡಲು ಕುಡಗೋಲು, ಮಚ್ಚು, ಬಡಿಗೆ, ಬಡಿಮಣೆ, ಕಲ್ಲಿನ ರೂಲು (ರೋಣಗಲ್ಲು), ಜಂತಗುಂಟೆ, ಗ್ವಾರಿ, ಮ್ಯಾಟ, ಬುಟ್ಟಿಗಳು (ಮಂಕರಿ) ಬೇಕು. ಸಾಗಾಟಕ್ಕೆ ಚಕ್ಕಡಿ ಬಂಡಿ ಬೇಕು. ಇವೆಲ್ಲ ಬಹುದಿನಗಳಿಂದ ರೈತರು ಉಪಯೋಗಿಸುತ್ತ ಬಂದ ಕೃಷಿ ಉಪಕರಣಗಳು, ಇವುಗಳಲ್ಲಿ ಅನೇಕ ಉಪಕರಣಗಳ ಉಲ್ಲೇಖ ನಮ್ಮ ವೇದ, ಪುರಾಣ, ಪ್ರಾಚೀನ ಗ್ರಂಥಗಳಲ್ಲಿ ಬರುತ್ತದೆ. ನೇಗಿಲು ಬಲರಾಮನ ಆಯುಧ, ಚಕ್ರ (ಬಂಡಿಯ ಗಾಲಿ) ಕೃಷ್ಣನ ಆಯುಧ. ಭೂಮಿ, ಬೆಳೆ, ದೊರೆಯುವ ವಸ್ತುಗಳಿಗೆ ಅನುಗುಣವಾಗಿ ಈ ಉಪಕರಣಗಳಲ್ಲಿ ಅಲ್ಪಸ್ವಲ್ಪ ಮಾರ್ಪಾಡಾಗಿದ್ದರೂ ಸಾವಿರಾರು ವರ್ಷಗಳ ಅವಧಿಯಲ್ಲಿಯೂ ಭಾರತದಲ್ಲಿ ಗಮನಾರ್ಹ ಬದಲಾವಣೆಯಾದುದು ಕಂಡಬರುವುದಿಲ್ಲ. ಕಾರಣವಿಷ್ಟೆ–ಕೃಷಿಯೂ ಮಾರ್ಪಡಲಿಲ್ಲ. ಕೃಷಿಯಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿ ಹೀಗಲ್ಲ. ಅಲ್ಲಿ ಸರ್ವಾಂಗೀಣ ಪ್ರಗತಿ ಕಂಡುಬರುತ್ತದೆ.

**ಸಾಂಪ್ರದಾಯಿಕ ಕೃಷಿ ಉಪಕರಣಗಳ ಅಸಮರ್ಥತೆ :** ಕೃಷಿ ಉತ್ಪಾದನೆ ಮೊದಲು ಕೃಷಿಕನ ಹೊಟ್ಟೆಹೊರೆಯುವಿಕೆಗೆ ಮಾತ್ರ ಸೀಮಿತವಾಗಿತ್ತು, ಆಗ ಹೆಚ್ಚು ನೆಲದಲ್ಲಿ ಕೃಷಿಕ ಕೃಷಿ ಮಾಡುತ್ತಿರಲಿಲ್ಲ. ರಟ್ಟೆ ಮುರಿದು ಹೊಟ್ಟೆ ತುಂಬಿಕೊಳ್ಳುತ್ತಿದ್ದ. ಪ್ರಾರಂಭದಲ್ಲಿಯಂತೂ ಮೊನೆಯಾದ ಕಲ್ಲು, ಚೂಪಾದ ಕಟ್ಟಿಗೆ, ದನಗಳ ಕೊಂಬುಗಳಿಂದ ನೆಲ ಕೊಚ್ಚಿ ಬೀಜ ಹಾಕುತ್ತಿದ್ದ. ಮುಂದೆ ಬರಬರುತ್ತ ಕೊಂಕುಕಟ್ಟಿಗೆ ಅವನ ಕೃಷಿ ಆಯುಧವಾಯಿತು. ಇದೇ ನೇಗಿಲಿಗೆ ಮೂಲಾಧಾರ. ಕ್ರಮೇಣ ಕಬ್ಬಿಣವನ್ನು ಕೃಷಿ ಉಪಕರಣಗಳಿಗೆ ಬಳಸುವುದು ಪ್ರಾರಂಭವಾಯ್ತು. ಮಾನವಸಾಮರ್ಥ್ಯದೊಂದಿಗೆ ಪಶುಸಾಮರ್ಥ್ಯದ ಉಪಯೋಗ ಕೃಷಿ ಸಾಗುವಳಿಯಲ್ಲಿ




ಚಿತ್ರ 1 ನೀರಾವರಿ ಸಾಗುವಳಿ ಸಲಕರಣೆಗಳು : 1. ಭೂಮಿಯನ್ನು ಸಮಗೊಳಿಸುವ ತೇಲ್ಗುಂಟೆ, 2. ಸಾಲ್ಬಿಡುವ ಕಟ್ಟಿಗೆ ರಂಟೆ, 3. ಮಣ್ಣೇರಿಸುವ ರಂಟೆ

ಅನಿವಾರ್ಯವಾಯಿತು. ಕೈ ಉಪಕರಣಗಳೊಂದಿಗೆ ಪಶುಚಾಲಿತ ಉಪಕರಣಗಳೂ ಬಳಕೆಯಲ್ಲಿ ಬಂದವು. ನಮ್ಮ ಸದ್ಯದ ಹಲವಾರು ಉಪಕರಣಗಳು ನಮ್ಮ ಕೃಷಿಯಷ್ಟೇ ಹಳೆಯದಾಗಿವೆ; ಅಸಮರ್ಥವಾಗಿವೆ. ರಂಟೆ, ಕುಂಟೆ, ಹಲಬೆ, ಕೊರಡು, ಕೂರಿಗೆ,




ಚಿತ್ರ 2 : ಸುಧಾರಿತ ಕೃಷಿ ಉಪಕರಣಗಳು : 1. ತವೆಗುಂಟೆ, 2. ಬೀಜ ಹಾಗೂ ಗೊಬ್ಬರ ಕೂರಿಗೆ, 3. ಕಲ್ಟಿವೇಟರ್, 4. ಮೇಲುಗೊಬ್ಬರ ಕೂರಿಗೆ

ಕಪ್ಪಲಿ, ಎಡೆಕುಂಟೆ, ಜಂತಕುಂಟೆ, ಕುರ್ಚಿಗಿ, ಕುಡಗೋಲು, ಸಲಿಕೆ ಗುದ್ದಲಿ, ಚಕ್ಕಡಿ, ಒಕ್ಕಣಿ ಉಪಕರಣಗಳು ಅನಾದಿಯಿಂದ ಇಂದಿನ ವರೆಗೆ ಹೆಚ್ಚು ಬದಲಾವಣೆ ಹೊಂದಿಲ್ಲ. ಹೀಗಾಗಿ ಇಂದು ಉತ್ಪಾದನೆಯ ವೆಚ್ಚ ಹೆಚ್ಚಿದೆ. ಅಧಿಕ ಇಳುವರಿ

ಪಡೆಯುವುದು ಕಠಿನಸಾಧ್ಯ. ಉತ್ಪಾದನೆಯಲ್ಲಿ ಕ್ರಾಂತಿ ಸುಧಾರಿಸಿದ ಉಪಕರಣಗಳನ್ನು ಅವಲಂಬಿಸಿದೆ.

**ಬದಲಾದ ಕೃಷಿ ಹಾಗೂ ಕೃಷಿ ಉಪಕರಣಗಳು :** ಇಂದು ಕೃಷಿಯ ಮುಖ ಬದಲಾಗಿದೆ. ಕೃಷಿ ಉತ್ಪಾದನೆ ಹೆಚ್ಚಿದೆ. ಪ್ರತಿ ಎಕರೆ ಭೂಮಿಯ ಮತ್ತು ಪ್ರತಿಯೊಬ್ಬ ಕೃಷಿಕನ ಉತ್ಪಾದನೆಯ ಸಾಮರ್ಥ್ಯ ಹೆಚ್ಚಿದೆ. ಕೇವಲ ಮಳೆಯನ್ನೇ ಅವಲಂಬಿಸಿ ವರ್ಷದಲ್ಲಿ ಒಂದೇ ಬೆಳೆ ಬೆಳೆಯುತ್ತಿದ್ದ ರೈತ ಇಂದು ನೀರಾವರಿಯ ಉಪಯೋಗ ಮಾಡಿಕೊಂಡು ಬೆಳೆಯುತ್ತಿರುವ ಕೃಷಿವಿಜ್ಞಾನ ತಾಂತ್ರಿಕತೆಗಳ ಪ್ರಯೋಜನ ಪಡೆದು ವರ್ಷದಲ್ಲಿ ಎರಡು ಮೂರು ನಾಲ್ಕು ಬೆಳೆಗಳನ್ನು ಬೆಳೆಯಲು ಶಕ್ತನಾಗಿದ್ದಾನೆ. ಈ ಬದಲಾವಣೆಯಲ್ಲಿ ಕೃಷಿ ಉಪಕರಣಗಳ ಬದಲಾವಣೆಯೂ ಸೇರಿದೆ. ನೀರೆತ್ತುವ ಏತ ಕಪಿಲೆಗಳು ಮಾಯವಾಗತೊಡಗಿವೆ. ಪಂಪ್ ಸೆಟ್‌ಗಳ ಬಳಕೆ ಹೆಚ್ಚಿದೆ. ನೀರುಣ್ಣಿಸಲು ಭೂಮಿಯನ್ನು ಸಿದ್ಧಪಡಿಸಲು ಹಲವಾರು ನೂತನ ಉಪಕರಣಗಳು ಬಳಕೆಯಲ್ಲಿ ಬಂದಿವೆ. ಬಹುಬೇಗ ಭೂಮಿಯನ್ನು ಉತ್ತಿ ಬಿತ್ತಿ ಸಾಗುವಳಿ ಮಾಡುವುದಕ್ಕೆ ಶಕ್ತವಾಗುವ ರೀತಿಯಲ್ಲಿ ಮೊದಲಿನ ನೇಗಿಲು, ಹಲಬೆ, ಕುಂಟೆ, ಕೂರಿಗೆ, ಎಡೆಕುಂಟೆಗಳಲ್ಲಿ ಸುಧಾರಣೆಗಳಲ್ಲದೆ ಹಲವು ಹೊಸ ಉಪಕರಣಗಳೂ ತಲೆದೋರಿವೆ. ಅಧಿಕ ಬೆಳೆ ಬರಬೇಕಾಗಿದ್ದಲ್ಲಿ ಹೆಚ್ಚು ಇಳುವರಿ ಕೊಡುವ ತಳಿಗಳನ್ನೇ ಬಿತ್ತನೆ ಮಾಡಬೇಕು. ಮೂಲಗೊಬ್ಬರದ ಜೊತೆಗೆ ಮೇಲುಗೊಬ್ಬರಗಳನ್ನೂ ಕೊಡಬೇಕಾಗುವುದು. ಗೊಬ್ಬರಗಳನ್ನು ಕೈಯಿಂದ ಚೆಲ್ಲುವುದು ಬೆಳೆಗಳ ಸರಿಯಾದ ಬೆಳವಣಿಗೆಗೆ ಸಹಕಾರಿಯಾಗದು. ಗೊಬ್ಬರ ಪೋಲಾಗುವುದನ್ನು ತಪ್ಪಿಸಿ ಮಿತವ್ಯಯ ಸಾಧಿಸಲು ಜಮೀನಿನಲ್ಲಿ ಆಳದಲ್ಲಿ ಬೆಳೆಗಳ ಬೇರುಗಳ ಭಾಗದಲ್ಲಿಯೇ ಗೊಬ್ಬರಗಳು ಬೀಳುವಂತೆ ಮಾಡುವುದನ್ನು ಆಧುನಿಕ ರೈತರು ಮನಗಂಡಿದ್ದಾರೆ. ಈ ಕಾರ್ಯಕ್ಕೆ ಕೆಲವು ಉಪಕರಣಗಳು ಅವರ ನೆರವಿಗೆ ಬಂದಿವೆ. ಹಲವಾರು ಕಾರಣಗಳಿಂದ ಕೀಟ ಹಾಗೂ ರೋಗ ರುಜಿನಗಳ ಬಾಧೆ ಬೆಳೆಗಳಿಗೆ ಹೆಚ್ಚಿದೆ. ಸರಿಯಾದ ಔಷಧಿಗಳನ್ನು ಬಳಸಿ ಬೆಳೆಗಳನ್ನು ರಕ್ಷಿಸಿಕೊಳ್ಳದೆ ನಿರ್ವಾಹಣೆ ಇಲ್ಲದಾಗಿದೆ. ಈ ಔಷಧಿಗಳು ಪುಡಿ ರೂಪದಲ್ಲಿರಬಹುದು ಇಲ್ಲವೆ ದ್ರವ ರೂಪದಲ್ಲಿರಬಹುದು. ಈ ಕಾರ್ಯಗಳಿಗೆ ಉಪಕರಣಗಳು ಬೇಕಾಗುತ್ತವೆ. ಇನ್ನು ಕೊಯ್ಲು ಒಕ್ಕಣೆ ವಿಚಾರ. ಅಕಾಲದಲ್ಲಿ ಇವನ್ನು



ಚಿತ್ರ 3 : ಕೃಷಿಗಾರಿಕೆಯ ಕೆಲವು ಉಪಕರಣಗಳು

ಮಾಡಬೇಕಾಗಿ ಬಂದಿದೆ. ಈ ಮೊದಲು ಸುಗ್ಗಿಗೊಂದು ನಿರ್ದಿಷ್ಟ ಕಾಲವಿತ್ತು. ಅದು ಹಿಂದಾಗುತ್ತ ನಡೆದಿದೆ. ಮಳೆಗಾಲದ ಮಧ್ಯದಲ್ಲಿ ಅನೇಕ ಬೆಳೆಗಳ ಕೊಯ್ಲು ಒಕ್ಕಣೆ ಇಂದು ನಡೆಯುತ್ತಿವೆ. ಅಂತೂ ಕೃಷಿಯಲ್ಲಾದ ಈ ಭಾರಿ ಬದಲಾವಣೆ ಕೃಷಿ ಉಪಕರಣಗಳಲ್ಲಿಯೂ ತಲೆದೋರಿದೆ. ಈ ಬದಲಾವಣೆಯನ್ನು ಎರಡು ವಿಧಗಳಲ್ಲಿ ಕಾಣಬಹುದು. ಮೊದಲನೆಯದು ಸಾಂಪ್ರದಾಯಿಕ ಉಪಕರಣಗಳಲ್ಲಿ ಆದ ಮಾರ್ಪಾಡು ಇಲ್ಲವೆ ಸುಧಾರಣೆ; ಎರಡನೆಯದು ಹಲಕೆಲವು ಆಧುನಿಕ ಉಪಕರಣಗಳ ಪ್ರವೇಶ. ಮೊದಲಿನ ಗುಂಪಿಗೆ ಸೇರಿದ ಉಪಕರಣಗಳನ್ನು ಹೆಚ್ಚಾಗಿ ಮಾನವ ಸಾಮರ್ಥ್ಯ ಹಾಗೂ ಪಶು ಸಾಮರ್ಥ್ಯಗಳಿಂದಲೇ ನಿರ್ವಹಿಸಬಹುದಾದರೆ ಎರಡನೆಯ ಗುಂಪಿಗೆ ಸೇರಿದ ಕೆಲವು ಯಂತ್ರ ಸಾಮರ್ಥ್ಯದಿಂದ ನಡೆಯುತ್ತವೆ.

**ಸುಧಾರಿತ ಉಪಕರಣಗಳು :** ದೇಶೀಯ ಉಪಕರಣಗಳಲ್ಲಿ ಆದ ಹಲಕೆಲವು ಸುಧಾರಣೆಗಳು ತೀರ ಅಲ್ಪ. ಹೊಸದಾಗಿ ಬಳಕೆಯಲ್ಲಿ ಬಂದ ಉಪಕರಣಗಳೇ ಬಹಳಷ್ಟನ್ನು ಹಳ್ಳಿಯ ಆಯಗಾರರಾದ ಬಡಿಗ ಕಮ್ಮಾರರೇ ಸಿದ್ಧಪಡಿಸಲು ಸಾಧ್ಯವಿದೆ. ಹರಿಮುರಿ ಆದಲ್ಲಿ ನಿರಾಯಾಸವಾಗಿ ಹಳ್ಳಿಗಳಲ್ಲಿಯೇ ದುರಸ್ತಿ ಮಾಡಿಕೊಳ್ಳಬಹುದು. ಕೆಲವು ಸುಧಾರಿತ ಉಪಕರಣಗಳನ್ನು ಇಲ್ಲಿ ಉಲ್ಲೇಖಿಸಿದೆ : ಉಳಲು ಕಬ್ಬಿಣನೇಗಿಲು,



ಚಿತ್ರ 4 : ಪಂಪ್ ಸೆಟ್

ಹೆಂಟೆಯೊಡೆಯಲು ನಾರ್ವೇಜಿಯನ್ ಹ್ಯಾರೋ, ಸಾಲು ಬಿಡಲು ಮಣ್ಣೇರಿಸಲು ಎರಡು ರೆಕ್ಕೆಗಳ ರಂಟೆ (ರಿಡ್ಜರ್), ಮಣ್ಣೇರಿಸಲು ಕೊಪ್ಪರಿಗೆ (ಅಮೆರಿಕನ್ ಲೆವೆಲರ್), ನೆಲ ಪೊಳ್ಳು ಮಾಡಲು ಕಬ್ಬಿಣ ತಾಳಿನ ಗುರ್ರಾ, ನೆಲ ಕೊಚ್ಚಲು ತವೆಗುಂಟೆ (ಡಿಸ್ಕ್‌ಹ್ಯಾರೋ), ಬೀಜ ಹಾಗೂ ಗೊಬ್ಬರ ಏಕಕಾಲದಲ್ಲಿ ಬಿತ್ತಲು ಬೀಜಗೊಬ್ಬರ ಕೂರಿಗೆ (ಸೀಡ್ ಕಮ್ ಫರ್ಟಿಲೈಸರ್ ಡ್ರಿಲ್), ಕೈಯಿಂದ ತಿರುವಲು ವ್ಯವಸ್ಥೆಯಿರುವ ಯಾಂತ್ರಿಕ ಕೂರಿಗೆ(ಹ್ಯಾಂಡ್ ಆಪರೇಟೆಡ್ ಸೀಡ್ ಡ್ರಿಲ್), ಮೇಲು ಗೊಬ್ಬರ ಕೊಡಲು ಯೋಗ್ಯವಾಗಿರುವ ಗೊಬ್ಬರ ಕೂರಿಗೆ, ವಿವಿಧ ಆಕಾರದ ತಾಳುಗಳುಳ್ಳ ಕಲ್ಟಿವೇಟರ್‌ಗಳು, ಬತ್ತದ ಬೆಳೆಯಲ್ಲಿ ಕಳೆ ಕಸಿ ಕಿತ್ತುವ ವೀಡರ್‌ಗಳು, ಒಕ್ಕಣೆ ಉಪಕರಣಗಳು (ರೋಣಗಲ್ಲು, ಗೋದಿ ತುಳಿಸುವ ಉಪಕರಣ, ಧಾನ್ಯ ಒಕ್ಕಣೆ ಯಂತ್ರಗಳು, ಅನಿಲ ಚಕ್ರ), ಆಲೂಗೆಡ್ಡೆ ಅಗೆಯಲು ಡಿಗ್ಗರ್, ಮೇವು ಕತ್ತರಿಸಲು ಚಕ್ರಗತ್ತರಿ, ನೀರಾವರಿಗೆ ಭೂಮಿ ಸಿದ್ಧಪಡಿಸುವ ಉಪಕರಣಗಳು [ಭೂಮಿ ಸಮಗೊಳಿಸುವ ತೇಲ್ಗುಂಟೆ, ಸಾಲು ಬಿಡುವ ವಿ ಡಿಚ್ಚರ್, ದಿನ್ನೆ ನಿರ್ಮಿಸುವ ಚಟ್ಟು (ಬಂಡ್ ಫಾರ್ಮರ್), ಮಣ್ಣೆಳೆಸುವ ತಟ್ಟೆಗಳು (ಲೆವಲ್ಲರ್‌ಗಳು)], ಹುಡಿ ಎರಚಲು ದೂಳುಕೋವಿ (ಡಸ್ಟರ್‌ಗನ್ನುಗಳ) ಸಿಂಪಡಿಕೆಗಾಗಿ ಸಿಂಚಕಗಳು (ಸ್ಪ್ರೇಯರುಗಳು). ತೋಟಗಾರಿಕೆಯ ಸುಧಾರಿತ ಉಪಕರಣಗಳು [ಪಿಕಾಸಿ, ಕ್ರೋಬಾರ್, ಮಮಟಿ, ಶಾವೆಲ್, ಡಿಗ್ಗಿಂಗ್ ಫೋರ್ಕ್, ಡಿಬ್ಲರ್ ಟ್ರೊವೆಲ್, ಸ್ಟೀಲ್ ಹ್ಯಾಂಡ್ ಬ್ರೂಮ್, ಡಬಲ್ ಹೋ, ವರವರಿ, ಹ್ಯಾಂಡ್ ಕಲ್ಟಿವೇಟರ್, ಗಾರ್ಡನ್ ಫೋರ್ಕ್, ಪಲ್ವರೈಸರ್, ಗಾರ್ಡನ್ ರೇಕ್, ಹೆಡ್ಜ್‌ಕಟರ್, ಬಿಲ್ ಹುಕ್ (ಕಂದಲಿ, ಮಚ್ಚು), ಕೊಡಲಿ, ಸಿಕೇಚರ್, ಪ್ರೂನಿಂಗ್ ನೈಫ್, ಬಡಿಂಗ್ ನೈಫ್, ಪ್ರೂನಿಂಗ್ ಸಾ (ಗರಗಸ), ವಾಟರ್ ಕ್ಯಾನ್, ವ್ಹೀಲ್ ಹ್ಯಾರೊ, ಹ್ಯಾಂಡ್ ಸ್ಪೇಡ್ (ಕೈಗುದ್ದಲಿ)– ಈ ಉಪಕರಣಗಳು ಪಶು ಇಲ್ಲವೆ ಮಾನವ ಸಾಮರ್ಥ್ಯದಿಂದ ನಡೆಯುವಂಥವು].

**ಯಂತ್ರಚಾಲಿತ ಕೃಷಿ ಉಪಕರಣಗಳು :** ಇತ್ತೀಚೆಗೆ ಯಂತ್ರಚಾಲಿತ ಉಪಕರಣಗಳ ಬಳಕೆಯೂ ಜನಪ್ರಿಯವಾಗುತ್ತಿದೆ. ಅವುಗಳಲ್ಲಿ ಮುಖ್ಯವಾದವೆಂದರೆ; ಪಂಪ್ ಸೆಟ್ (ಎಣ್ಣೆ ಇಲ್ಲವೆ ವಿದ್ಯುತ್ ಚಾಲಿತ), ಪವರ್ ಡಸ್ಟರ್ (ಪೆಟ್ರೋಲ್ ಚಾಲಿತ), ಪವರ್ ಸ್ಪ್ರೇಯರ್ (ಪೆಟ್ರೋಲ್ ಚಾಲಿತ), ಟ್ರಾಕ್ಟರ್ ಎಳೆಯುವ ಕಬ್ಬಿಣ ನೇಗಿಲುಗಳು, ಡಿಸ್ಕ್ ಸ್ಪ್ರೆಡರ್ ಹ್ಯಾರೊ, ಸ್ಪ್ರಿಂಗ್ ಟೂಥ್ ಹ್ಯಾರೊ, ಮ್ಯಾನುಅರ್ ಸ್ಪ್ರೆಡರ್ ಹಾಗೂ ಮಿಕ್ಸರ್, ಸೀಡ್‌ಡ್ರಿಲ್, ಪ್ಲಾಂಟರ್, ಕಲ್ಟಿವೇಟರ್, ಪಿಕ್ಕರ್, ಹಸ್ಕರ್, ಶಿಲ್ಲರ್, ಕಂಬಾಯಿನ್, ಹಾರ್ವೆಸ್ಟರ್, ಬುಲ್‌ಡೋಝರ್.

**ಟ್ರಾಕ್ಟರುಗಳು ಎರಡು ವಿಧ ಇವೆ :** 1. ಚಕ್ರವುಳ್ಳವು. ಈ ಚಕ್ರಗಳು ಕಬ್ಬಿಣದವು ಇರಬಹುದು. ಇಲ್ಲವೆ ರಬ್ಬರಿನವು ಇರಬಹುದು. 2. ಕ್ರಾಲರ್ ಸ್ವರೂಪದ್ದು. ಇದಕ್ಕೆ ಕ್ಯಾಟರ್‌ಪಿಲ್ಲರ್ ಸ್ವರೂಪವೆಂದೂ ಹೆಸರಿದೆ. ಟ್ರಾಕ್ಟರುಗಳನ್ನು ದೊಡ್ಡವು ಹಾಗೂ

ಚಿಕ್ಕವುಗಳೆಂದೂ ವಿಂಗಡಿಸಬಹುದು. ಚಕ್ರಗಳುಳ್ಳವು ಚಿಕ್ಕವು; ಕ್ಯಾಟರ್‌ಪಿಲ್ಲರ್ ಸ್ವರೂಪ ದೊಡ್ಡವು. ಹತ್ತು ಅಶ್ವಸಾಮರ್ಥ್ಯದಿಂದ ನೂರಾರು ಅಶ್ವಸಾಮರ್ಥ್ಯಗಳ ತನಕ ಟ್ರಾಕ್ಟರುಗಳು ಇರುತ್ತವೆ. ಹಿಂಬದಿಯಲ್ಲಿ ಓಡಾಡಿ ಮೇಲೆ ಕುಳಿತು ನಡೆಯಿಸುವ ಯಂತ್ರಚಾಲಿತ ಕೆಲ ಉಪಕರಣಗಳು ಇತ್ತೀಚೆಗೆ ಭರದಿಂದ ಜನಪ್ರಿಯವಾಗುತ್ತಿವೆ. ಅವೇ ಟಿಲ್ಲರ್‌ಗಳು, ಪವರ್ ಟಿಲ್ಲರ್‌ಗಳೆಂದೇ ಪ್ರಸಿದ್ಧಿ ಪಡೆದಿವೆ. ಇವು 10 ಅಶ್ವಸಾಮರ್ಥ್ಯಗಳವು. ಒಣ ನೆಲದಲ್ಲಿಯೂ

ಪಂಪ್ ಸೆಟ್‌ನಿಂದ ನೀರು ಹಾಯಿಸುತ್ತಿರುವುದು

ಕೆಸರಿನಲ್ಲಿಯೂ ಕೆಲಸ ಮಾಡುತ್ತವೆ. ನೆಲ ಪೊಳ್ಳು ಮಾಡಲು, ಮಣ್ಣು ಕೊಚ್ಚಲು, ಕೆಸರಗದ್ದೆ ಸಿದ್ಧಪಡಿಸಲು, ಬಿತ್ತನೆ ಮಾಡಲು, ಹುಡಿ ಹಾಕಲು, ಸಿಂಪಡಿಸಲು, ಅಂತರ ಬೇಸಾಯ ಸಾಗುವಳಿ ಮಾಡಲು, ನೀರೆತ್ತಲು, ಸಾಗಾಟಕ್ಕೆ ಹಿಂದೆ ಕಟ್ಟಿದ ಟ್ರೇಲರ್ ಎಳೆಯಲು ಇವುಗಳಿಂದ ಪ್ರಯೋಜನ ಉಂಟು. ಸಮನೆಲದಲ್ಲಿ ಅಲ್ಲದೆ ಬೆಟ್ಟಗಳ ಇಳಿಜಾರಿನಲ್ಲಿ ಇವು ಉಪಯೋಗಕ್ಕೆ ಬರುತ್ತವೆ. 3 ರಿಂದ 30 ಎಕರೆ ಹಿಡುವಳಿಯುಳ್ಳ ರೈತರು ಈ ಟಿಲ್ಲರ್‌ಗಳ ಪ್ರಯೋಜನ ಪಡೆಯಬಹುದಾಗಿದೆ. ಕೃಷಿ ಉಪಕರಣಗಳಿಗೆ ಸಾಮರ್ಥ್ಯದ ಮೂಲಗಳು ಮುಖ್ಯವಾಗಿ ಮೂರು – ಮನುಷ್ಯ, ಪಶು ಮತ್ತು ಯಂತ್ರ. ಯಂತ್ರಗಳಿಗೆ ಶಕ್ತಿ ಪೂರೈಕೆ ಮಾಡಲು ಬಳಸುವ ಇಂಧನಗಳು ಗ್ಯಾಸೊಲಿನ್, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್.

ಆಧುನಿಕ ಕೃಷಿ ಉಪಕರಣಗಳಿಂದ ಲಾಭಗಳು : ಆಧುನಿಕ ಕೃಷಿ ಉಪಕರಣಗಳನ್ನು ಉಪಯೋಗಿಸುವುದರಿಂದ ಕಷ್ಟತರ ಕೃಷಿ ಸುಲಭವಾಗುತ್ತದೆ. ರೈತರಿಗೆ ಇದರಿಂದ ಹೆಚ್ಚು ವಿರಾಮ ದೊರೆತು ಸಾಮಾಜಿಕ ರಾಜಕೀಯ ಹಾಗೂ ಸಾಂಸ್ಕೃತಿಕ ಕಾರ್ಯಗಳಲ್ಲಿ ಭಾಗವಹಿಸಲು ಬಿಡುವೇಳೆ ದೊರೆಯುವುದು. ಹೆಂಗಸರು ಮಕ್ಕಳಿಗೂ ಸಾಕಷ್ಟು ವಿರಾಮ ದೊರೆಯುವುದರಿಂದ ವಿದ್ಯೆ ಸಾಂಸ್ಕೃತಿಕ ಚಟುವಟಿಕೆಗಳು ಮುಂತಾದವಲ್ಲಿ ಅವರು ಪ್ರಗತಿಗೊಳ್ಳಬಹುದು. ಆಳಿನ ಕೊರತೆಗೂ ಪರಿಹಾರ ದೊರೆಯುವುದು. ಯಂತ್ರೋಪಕರಣಗಳ ಬಳಕೆಯಿಂದ ನಿರುದ್ಯೋಗ ಹೆಚ್ಚಾಗುವುದೆಂದು ಸಾಮಾನ್ಯ ತಿಳಿವಳಿಕೆ. ಇದು ಸರಿಯಲ್ಲ. ಯಂತ್ರಗಳನ್ನು ಉಪಯೋಗಿಸಿದಾಗ ಸಾಂದ್ರ ಬೆಳೆ ಬೆಳೆಸಲು ಸಾಧ್ಯವಾಗುತ್ತದೆ. ಬಹುಬೆಳೆ ಯೋಜನೆ ಅನುಷ್ಠಾನಕ್ಕೆ ಸಾಧ್ಯವಿರುವೆಡೆ ತರಬಹುದು. ಆಗ ಅನೇಕರು ಕೃಷಿಯಲ್ಲಿ ತೊಡಗಬಹುದಾಗಿದೆ. ಅಲ್ಪ ಸಮಯದಲ್ಲಿ ಮಿತವ್ಯಯ ವೆಚ್ಚದಲ್ಲಿ ಅಧಿಕ ಉತ್ಪಾದನೆಯನ್ನು ಸಾಧಿಸಬಹುದು.

ಕೆಲವು ಸುಧಾರಿತ ಕೃಷಿ ಉಪಕರಣಗಳು : ಕೃಷಿ ಉಪಕರಣಗಳಲ್ಲಿ ಮುಖ್ಯವಾದ ಕೆಲವನ್ನು ಕುರಿತು ಇಲ್ಲಿ ಬರೆದಿದೆ.

**ಕಬ್ಬಿಣ ನೇಗಿಲು:** ಇದರಲ್ಲಿ ರೆಕ್ಕೆ (ವೌಲ್ಡ್‌ಬೋರ್ಡ್) ಎಂಬ ಸಾಧನೆ ಇರುವುದರಿಂದ ಇದರಿಂದ ಉತ್ತಾಗ ಮಣ್ಣು ತಿರುವಿ ಬಿದ್ದು ಕಿತ್ತ ಕಳೆಕಸಗಳೆಲ್ಲ ಸರಿಯಾಗಿ ಮಣ್ಣಿನಲ್ಲಿ ಹೂತುಹೋಗುತ್ತವೆ. ಮರದ ನೇಗಿಲಿಗಿಂತಲೂ ಇದು ಆಳವಾಗಿ ನೆಲ ಉಳುತ್ತದಲ್ಲದೆ ಮಣ್ಣನ್ನು ಸರಿಯಾಗಿ ಪುಡಿ ಮಾಡುತ್ತದೆ; ಹೊರಳಿಸಿ ಹಾಕುತ್ತದೆ. ಇದು ಚೌಕೋನಾಕೃತಿಯ ಸಾಲು ಕೊರೆಯುವುದರಿಂದ ಮರದ ನೇಗಿಲಿನಂತೆ ಮಧ್ಯದಲ್ಲಿ ಉಳದ ನೆಲ ಉಳಿಯುವುದಿಲ್ಲ. ಇದು ಉಳಲಿಕ್ಕಲ್ಲದೆ ಸಾಲು ಬಿಡಲು ಮಣ್ಣೇರಿಸಲು ಹಸುರು ಗೊಬ್ಬರ ಮುಗ್ಗು ಹೊಡೆಯಲು ಸಹ ಉಪಯೋಗ ಬೀಳುವುದು. ಕಬ್ಬಿಣ ನೇಗಿಲುಗಳ ಚಿಕ್ಕ ದೊಡ್ಡ ಬಗೆ ಬಗೆಯ ಪ್ರಕಾರಗಳು ಪೇಟೆಯಲ್ಲಿ ಮಾರಾಟಕ್ಕೆ ದೊರೆಯುತ್ತವೆ. ಈ ಉಪಕರಣದಲ್ಲಿ ಆಗಾಗ ಬದಲು ಮಾಡಬೇಕಾದುದು ಗುಳವೊಂದೇ. ಅದಕ್ಕೂ ಹೆಚ್ಚಿನ ಬೆಲೆಯಿಲ್ಲ. ಬಿಚ್ಚಿ ಜೋಡಿಸುವುದೂ ಸುಲಭ.

ಮಣ್ಣೇರಿಸುವ ನೇಗಿಲು (ರಿಡ್ಜರ್): ಕಬ್ಬಿಣ ನೇಗಿಲಿಗೆ ಒಂದ ಕಡೆಗೆ ಮಾತ್ರ ರೆಕ್ಕೆಯಿದ್ದರೆ ಇದಕ್ಕೆ ಎರಡೂ ಕಡೆಗೆ ರೆಕ್ಕೆಗಳಿವೆ. ಸಾಲು ಬಿಡಲು ಹಾಗೂ ಮಣ್ಣೇರಿಸಲು ಬಲು ಉಪಯುಕ್ತ ಉಪಕರಣವಿದು.

ಬತ್ತದ ಒಕ್ಕಣೆ ಯಂತ್ರ

**ತವೆಗುಂಟೆ:** ಇದರಲ್ಲಿ 8–10 ಉಕ್ಕಿನ ತವೆಗಳಿವೆ. ಇವು ಎರಡು ಗುಂಪುಗಳಲ್ಲಿ ವಿಂಗಡಿಸಲ್ಪಟ್ಟು ಪ್ರತಿ ಗುಂಪನ್ನು ಸನ್ನೆಯ ಸಹಾಯದಿಂದ ಬೇಕಾದ ಕೋನದಲ್ಲಿ ನಿಯಂತ್ರಿಸುವ ವ್ಯವಸ್ಥೆಯಿರುತ್ತದೆ. ಮೇಲ್ಗಡೆಯಲ್ಲಿ ಕೆಲಸಗಾರರಿಗೆ ಕೂರಲು ಆಸನದ ವ್ಯವಸ್ಥೆ ಕೂಡ ಉಂಟು. ಪ್ರತಿಯೊಂದು ಗುಂಪಿನಲ್ಲಿಯ ತವೆಗಳನ್ನು ಅಚ್ಚಿನ ನೆರವಿನಿಂದ ಜೋಡಿಸಲಾಗಿದೆ. ಒಂದು ಗುಂಪಿನ ತವೆಗಳು ಒಂದು ಬದಿಗೆ ಮುಖ ಮಾಡಿದ್ದರೆ ಇನ್ನೊಂದು ಗುಂಪಿನಲ್ಲಿಯ ತವೆಗಳು ಇನ್ನೊಂದು ಕಡೆಗೆ ಮುಖ ತಿರುವಿರುತ್ತವೆ. ತವೆಗಳು ಮೊಂಡಾದಲ್ಲಿ ಪುನಃ ಹರಿತ ಮಾಡಬಹುದು. ಈ ಉಪಕರಣ ನೆಲವನ್ನು ಕೊಚ್ಚುತ್ತದೆ. ಜಬ್ಬಲು ಬೆಳೆದು ಕಬ್ಬಿಣ ನೇಗಿಲು ಹಿಡಿಯದ ಭೂಮಿಯಲ್ಲಿ ಇದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಕಬ್ಬಿಣ ನೇಗಿಲು ಉತ್ತ ಭೂಮಿಯಲ್ಲಿಯ ಹೆಂಟೆ ಒಡೆದು, ನೆಲ ಕೊಚ್ಚಲೂ ಇದನ್ನು ಉಪಯೋಗಿಸಬಹುದು.

**ಬೀಜ–ಗೊಬ್ಬರ ಸಂಯುಕ್ತ ಕೂರಿಗೆ:** ಇದರಲ್ಲಿ ಬೀಜ ಹಾಗೂ ಗೊಬ್ಬರಗಳನ್ನು ಏಕಕಾಲದಲ್ಲಿ ಬಿತ್ತುವ ವ್ಯವಸ್ಥೆ ಉಂಟು. ಎರಡು ಜೊತೆ ಸೆಡ್ಡಿಕೋಲು ಹಾಗೂ ಬಟ್ಟಲುಗಳು ಇವೆ. ಒಂದರಲ್ಲಿ ಒಬ್ಬ ಬೀಜ ಬಿತ್ತುವನು, ಅದೇ ಕಾಲಕ್ಕೆ ಇನ್ನೊಂದರಲ್ಲಿ ಇನ್ನೊಬ್ಬ

ವಿದ್ಯುತ್ ಚಾಲಿತ ಉಳುಮೆ ಯಂತ್ರ

ಗೊಬ್ಬರ ಹಾಕಬಹುದು. ಬೀಜದೊಂದಿಗೆ ಗೊಬ್ಬರ ಕೊಡಲು ಹಾಗೂ ಒಂದೆರಡು ಆಳಿನ ಶ್ರಮ ಉಳಿಸಲು ಇದು ಸಹಕಾರಿ. ಜೊತೆಗೆ ಗೊಬ್ಬರವು ನೇರವಾಗಿ ಮಣ್ಣಿಗೆ ಸೇರುವುದರಿಂದ, ಬೆಳೆಯ ಇಳುವರಿಯು ಅಧಿಕ.

**ಕಲ್ಟಿವೇಟರ್‌ಗಳು:** ಬಗೆಬಗೆಯ ತಾಳುಗಳುಳ್ಳ ಕಲ್ಟಿವೇಟರ್‌ಗಳು ಬಳಕೆಯಲ್ಲಿವೆ. ಅವುಗಳಲ್ಲಿ ಕೆಳಗಿನವು ಮುಖ್ಯ. ಟೇನ್ಸ್ ಕಲ್ಟಿವೇಟರ್, ಸ್ಪೈಕ್ ಟೂತ್ ಕಲ್ಟಿವೇಟರ್, ರಿಡ್ಜಿಂಗ್ ಅರೇಂಜ್‌ಮೆಂಟ್ ಕಲ್ಟಿವೇಟರ್. ಮೋಲ್ಡ್ ಬೋರ್ಡ್ ಅರೇಂಜ್‌ಮೆಂಟ್

ಕಲ್ಟಿವೇಟರ್. ಈ ಉಪಕರಣಗಳು ಬಿತ್ತನೆಗೆ ಭೂಮಿಯನ್ನು ಸಿದ್ಧಪಡಿಸಲು ಹಾಗೂ ಎಡೆಹೊಡೆಯಲು ಉಪಯೋಗ ಬೀಳುತ್ತದೆ. ಸಾಲಿನ ನಡುವಣ ಅಂತರಗಳಿಗೆ ಅನುಗುಣವಾಗಿ ಇವನ್ನು ಚಿಕ್ಕವು ದೊಡ್ಡವು ಮಾಡಿಕೊಳ್ಳುವುದರ ಜೊತೆಗೆ ಕಡಿದು

ವಿದ್ಯುತ್ ಚಾಲಿತ ನೀರಾವರಿ ಪಂಪ್

ಬಳಿದು ಮಾಡಿಕೊಂಡು ಜಮೀನಿನಲ್ಲಿ ಹೆಚ್ಚು ಕಡಿಮೆ ಆಳ ಇಳಿಸಲೂಬಹುದು, ತೇಲಿಸಲೂಬಹುದು. ಇವುಗಳಲ್ಲಿ ಕೆಲವು ಕೈ ಉಪಕರಣಗಳೂ ಇವೆ.

**ಮೇಲುಗೊಬ್ಬರ ಕೂರಿಗೆ:** ಬೆಳೆ ಒಂದೆರಡು ಅಡಿ ಎತ್ತರವಿರುವ ತನಕ ಈ ಉಪಕರಣಗಳಿಂದ ಸಾಲುಗಳಲ್ಲಿ ಮೇಲುಗೊಬ್ಬರ ಕೊಡಲು ಸಾಧ್ಯವಿದೆ. ಬೆಳೆಗಳಿಗೆ ಧಕ್ಕೆಯಾಗದಂತೆ ಸಾಲುಗಳ ಎರಡೂ ಮಗ್ಗುಲು ಗೊಬ್ಬರ ಬೀಳುವುದು.

**ಫ್ಲೋಟ್, ಭೂಮಿ ಸಮಗೊಳಿಸುವ ತೇಲ್ಗುಂಟೆ:** ಇದೊಂದು ನೆಲಸಮಗೊಳಿಸುವ ಉಪಕರಣ. ನೀರುಣ್ಣಿಸಲು ಭೂಮಿಯನ್ನು ಸಿದ್ಧಪಡಿಸುವುದಕ್ಕೆ ಈ ಉಪಕರಣ ಸಹಾಯಕವಾಗುವುದು. ಇದು ಕಾಟಕೋನ ಚೌಕೋನಾಕೃತಿಯ ಕಟ್ಟಿಗೆ ಹಲಗೆಗಳಿಂದ ಮಾಡಿದ ತೀರ ಸಾದಾ ಉಪಕರಣ.

**V(ವಿ) ಡಿಚ್ಚರ್, ಸಾಲು ಬಿಡುವ V(ವಿ) ಸಾಧನ :** ಇದು ದಿಂಡು ನಿರ್ಮಿಸುವ ಉಪಕರಣ. ನೇಗಿಲಿನಿಂದ ಉತ್ತು ಮಣ್ಣನ್ನು ಪೊಳ್ಳು ಮಾಡಿದ ಮೇಲೆ ಇದರಿಂದ ಚಿಕ್ಕ ದೊಡ್ಡ ಸಾಲುಗಳನ್ನು ನಿರ್ಮಿಸಬಹುದು. ಬಾರ್ಡರ್ ಸ್ಟ್ರಿಪ್ ಹಾಗೂ ಕಾಂಟೂರ್ ಡಿಚ್ಚ್ ಪದ್ಧತಿಗಳಿಂದ ನೀರುಣ್ಣಿಸಲು ಭೂಮಿಯನ್ನು ಸಿದ್ಧಪಡಿಸುವುದರಲ್ಲಿ ಇದು ಬಹುವಾಗಿ ಉಪಯೋಗ ಬೀಳುವುದು.

**ಬಂಡ್‌ಫಾರ್ಮರ್, ಮಣ್ಣೇರಿಸುವ ಚಟ್ಟು :** ದಿನ್ನೆ (ಒಡ್ಡು) ನಿರ್ಮಿಸಲು ಈ ಉಪಕರಣ ಉಪಯೋಗ ಬೀಳುವುದು. ಇದು ಮುಂಭಾಗದಲ್ಲಿ ವಿಶಾಲವಾಗಿದ್ದು, ಹಿಂಬದಿಯಲ್ಲಿ ಸಂಕುಚಿತವಾಗಿರುತ್ತದೆ. ಮುಂಬದಿಯಲ್ಲಿ ಸೇರಿದ ಮಣ್ಣು ಹಿಂಭಾಗದಲ್ಲಿ ಸೇರಿ ದಿನ್ನೆ ನಿರ್ಮಾಣವಾಗುವುದು.

**ಮಣ್ಣೆಳೆಸುವ ತಟ್ಟೆಗಳು:** ಇವು ಮೂರು ತೆರನಾಗಿವೆ. ಮುಖ್ಯವಾದುದು ಅಮೆರಿಕನ್ ಲೆವೆಲರ್. ಇದಕ್ಕೆ ಬಕ್ ಸ್ಕ್ರೇಪರ್ ಎಂದೂ ಹೆಸರುಂಟು. ಇದು ಆನೆಯ ಕಿವಿಯಾಕಾರದ ಕಬ್ಬಿಣದ ಉಪಕರಣ. ಪೊಳ್ಳು ಮಾಡಿದ ಭೂಮಿಯಲ್ಲಿಯ ಮಣ್ಣನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ದು ತಗ್ಗು ಉಬ್ಬು ಸಮಗೊಳಿಸಲು ತೀರ ಸಹಕಾರಿ. ಇದಕ್ಕೆ ಚಿಕ್ಕ ಬುಲ್‌ಡೋಜರ್ (ಮಾರಿಹಲುಬೆ) ಎಂಬುದು ಅನ್ವರ್ಥನಾಮ.

**ಮಿಕ್ಕ ಮಣ್ಣೆಳೆಸುವ ತಟ್ಟೆಗಳು. ವಕ್ರ ತಟ್ಟೆ:** 2″ ದಪ್ಪ 2′ ಅಗಲದ ಎರಡು ರಕ್ಕೆಯಾಕಾರದ ತಟ್ಟೆಗೆ ಹಲಗೆಗಳನ್ನು 160º ಕೋನದಲ್ಲಿ ಕೂಡಿಸಿದ್ದು ಅವುಗಳ ಮುಂಭಾಗದ ಅಂತರ 7′ ಇರುತ್ತದೆ. ಹಲಗೆಗಳನ್ನು ಕೂಡಿಸಿದ ಮೂಲೆಯಲ್ಲಿ ಎತ್ತಲು ಅನುಕೂಲವಾಗಲೆಂದು ಒಂದು ಹಿಡಿಕೆ ಇರುತ್ತದೆ. ಎತ್ತರ ಸ್ಥಳದಲ್ಲಿಯ ಮಣ್ಣನ್ನು ತಗ್ಗಿನ ಕಡೆಗೆ ಸಾಗಿಸಲು ಇದು ಒಳ್ಳೆಯ ಉಪಕರಣ.

**ಸರಳ ತಟ್ಟೆ :** ಇದು ವಕ್ರವಾಗಿಲ್ಲ, ಸರಳವಾಗಿದೆ. ಒಂದೇ ಹಲಗೆಯಿಂದ ಇದನ್ನು ಮಾಡಿರುತ್ತಾರೆ. ಇದರ ಕಾರ್ಯ ಕೂಡ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಮಣ್ಣೆಳೆಸುವುದೇ ಆಗಿದೆ.

**ತೋಟಗಾರಿಕೆಯ ಉಪಕರಣಗಳು (ಮುಟ್ಟುಗಳು):** ಇವೆಲ್ಲ ಕೈ ಉಪಕರಣಗಳು, ಬಿತ್ತನೆಗೆ ಭೂಮಿಯನ್ನು ಸಿದ್ಧಮಾಡುವುದರಿಂದ ಮೊದಲು ಮಾಡಿಕೊಂಡು ಯಾವತ್ತೂ ತೋಟದ ಕಾರ್ಯಗಳನ್ನು ನಿರ್ವಹಿಸಲು ಈ ಉಪಕರಣಗಳಲ್ಲಿ ಒಂದಿಲ್ಲೊಂದು ಬೇಕಾಗುತ್ತದೆ.

**ಚಕ್ರಗಳುಳ್ಳ ಟ್ರಾಕ್ಟರ್:** ಪ್ರಾರಂಭದಲ್ಲಿ ಕಬ್ಬಿಣದ ಚಕ್ರಗಳಿದ್ದುವು. ಈಗ ರಬ್ಬರ್ ಚಕ್ರಗಳು ಬಳಕೆಯಲ್ಲಿ ಬಂದಿವೆ. ಇವು ವೇಗವಾಗಿ ಓಡಾಡಬಲ್ಲವು. ಉತ್ತುವುದು ಬಿತ್ತುವುದು, ಬೆಳೆ ಸಂರಕ್ಷಣೆ ಮಾಡುವುದು, ಪೋಷಿಸುವುದು ಮತ್ತು ಒಕ್ಕಣೆ ಮಾಡಿ ಸುಗ್ಗಿ ಮಾಡುವ ಎಲ್ಲ ವ್ಯವಸಾಯ ಕಾರ್ಯಗಳಿಗೂ ಇವು ಸಾಮರ್ಥ್ಯವನ್ನು ಒದಗಿಸುತ್ತವೆ.

**ಕ್ರಾಲರ್ ಟ್ರಾಕ್ಟರುಗಳು:** ಇವು ಭಾರವಾದ ಅತಿ ಹೆಚ್ಚು ಅಶ್ವಸಾಮರ್ಥ್ಯದ ಟ್ರಾಕ್ಟರುಗಳು. ಇವುಗಳಲ್ಲಿ ಗಾಲಿಗಳ ಬದಲು ಕಬ್ಬಿಣದ ಸರಪಳಿಗಳಿವೆ. ಹೆಚ್ಚಾಗಿ ಜಮೀನು ಸಮಗೊಳಿಸುವ ಕಾರ್ಯಕ್ಕೆ ಪ್ರಯೋಜನಕಾರಿಗಳಿವು.

ಭೂಮಿ ಸಿದ್ಧಪಡಿಸುವ ಹಾಗೂ ಬಿತ್ತನೆ ಮಾಡುವ ಯಾಂತ್ರಿಕ ಉಪಕರಣಗಳು. 1. ನಾಲ್ಕು ನೇಗಿಲು ಹಚ್ಚಿದ ಟ್ರಾಕ್ಟರ್ : ಇದಕ್ಕೆ ಹೈಡ್ರೋಲಿಕ್ ನಿಯಂತ್ರಣ ವ್ಯವಸ್ಥೆ ಉಂಟು. ಇದರಿಂದ ಭೂಮಿ 1′ ಗಿಂತಲೂ ಹೆಚ್ಚು ಆಳವಾಗುತ್ತದೆ. 2. ಡಿಸ್ಕ್ ಹ್ಯಾರೋ ಹಚ್ಚಿದ ಟ್ರಾಕ್ಟರ್. 3. ಕೂರಿಗೆ ಜೋಡಿಸಿದ ಟ್ರಾಕ್ಟರ್ : ಇದರಲ್ಲಿ ಬಿತ್ತನೆ ಬೀಜ ಹಾಕುವ ಪೆಟ್ಟಿಗೆ ಹಾಗೂ ಸರಿಯಾದ ಅಂತರ ಹಾಗೂ ಆಳದಲ್ಲಿ ಬೀಜ ಬೀಳುವ ಹಂಚಿಕೆ ವಿಧಾನಗಳಿವೆ. ಎರಡು ಸಾಲು ನಾಲ್ಕು ಸಾಲು ಹಾಗೂ ಆರು ಸಾಲು ಒಮ್ಮೆಲೇ ಬಿತ್ತನೆ ಮಾಡುವ ಉಪಕರಣಗಳಿವೆ. ಬಿತ್ತಿದ ಬಿತ್ತನೆಯನ್ನು ಹಿಂದಿನಿಂದ ಮುಚ್ಚುವ ವ್ಯವಸ್ಥೆಯೂ ಉಂಟು.

**ಗೊಬ್ಬರ ಹರಡುವ ಸಾಧನ:** ಇದರ ಉಪಯೋಗದಿಂದ ಗೊಬ್ಬರ ಹರಡುವ ಕಾರ್ಯ ಎಲ್ಲೆಡೆಯಲ್ಲಿಯೂ ಸಮವಾಗಿ ನಡೆದು ಭೂಸತ್ತ್ವದ ಸ್ಥಿರತೆ ಸ್ಥಾಪಿತವಾಗುವುದು. ಬೆಳೆಗಳಿಗೆ ಸಮವಾದ ಆಹಾರಾಂಶ ಸಿಕ್ಕಿ ಜಮೀನಿನಲ್ಲಿಯ ಬೆಳೆ ಏಕರೂಪವಾಗಿ ಬೆಳೆದು ಹೆಚ್ಚಿನ ಇಳುವರಿ ದೊರೆಯಲು ಸಾಧ್ಯವಾಗುತ್ತದೆ.

ನಾಟಿ ಉಪಕರಣ

**ಅಂತರ ಬೇಸಾಯ ಸಾಗುವಳಿ ಸಾಧನ:** ಇದರ ಉಪಯೋಗದಿಂದ ಏಕಕಾಲದಲ್ಲಿ ನಾಲ್ಕು, ಆರು ಸಾಲುಗಳಲ್ಲಿ ಅಂತರ ಬೇಸಾಯ ಸಾಗುವಳಿ ನಡೆದು, ಬೆಳೆಗಳು ಸಮೃದ್ಧವಾಗಿ ಬೆಳೆಯಲು ಅನುಕೂಲತೆ ಏರ್ಪಡುವುದು.

**ಒಕ್ಕಣೆ ಸಾಧನಗಳು:** ಪಿಕ್ಕರ್–ಶೆಲ್ಲರ್, ಸಂಯುಕ್ತ ಇತ್ಯಾದಿ. ಈ ಯಂತ್ರಗಳು ಕೊಯಿಲು ಮಾಡಿ ಬಡಿದು ತೂರಿ ಕಾಳನ್ನು ಬೇರ್ಪಡಿಸುತ್ತವೆ. ಮೂಟೆಗಳಲ್ಲಿ ತುಂಬುವ



ಮಾರಿಹಲುಬೆ

ವ್ಯವಸ್ಥೆ ಕೂಡ ಉಂಟು. ಇದೊಂದು ಆಧುನಿಕ ಯುಗದ ಭಾರಿ ಕೊಡುಗೆ. ಮುಸುಕಿನ ಜೋಳದ ಒಕ್ಕಣೆಗೆ ಪಿಕ್ಕರ್–ಶೆಲ್ಲರ್‌ನ್ನು ಉಪಯೋಗಿಸಿದಾಗ ತೆನೆ ಮುರಿಯುವ ಸಿಪ್ಪೆ ಸುಲಿಯುವ ಕಾಳು ಬೇರ್ಪಡಿಸುವ ಕಾರ್ಯಗಳು ಏಕಕಾಲದಲ್ಲಿ ಕೈಗೂಡಿಬರುತ್ತವೆ. ಹುಲ್ಲಿನ ಜಾತಿಯ ಬೆಳೆಗಳಾದ ಗೋದಿ ಬತ್ತಗಳಲ್ಲಿ ಕಂಬಾಯಿನ್ ಹಾರ್ವೆಸ್ಟರ್ ಕಂಬಾಯಿನ್

ಉಪಯೋಗಿಸಿದಾಗ ಹುಲ್ಲು ಕೊಯ್ಯಲ್ಪಟ್ಟು ಒಕ್ಕಣೆ ಕಾರ್ಯ ನಡೆದು ತೂರುವುದು ಮುಗಿದು ಸ್ವಚ್ಛ ಕಾಳು ಬೇರ್ಪಟ್ಟು ಮೂಟೆಗಳಲ್ಲಿ ತುಂಬುವ ಕಾರ್ಯವೂ ಒಂದೇ ಸಲದಲ್ಲಿ ನಡೆದು ಬಿಡುವುದು. ಹತ್ತಿಯನ್ನು ಬಿಡಿಸಿ ಕೊಳ್ಳುವ, ಆಲೂಗೆಡ್ಡೆ ಹೆಚ್ಚುವ, ಸಂಗ್ರಹಿಸುವ, ಸುಗ್ಗಿ ಮಾಡುವ ಉಪಕರಣಗಳಿವೆ. ಈ ಸಾಧನೆಗಳ ನೆರವಿನಿಂದ ರೈತರು ತಮ್ಮ ಬೆಳೆಗಳನ್ನು ಪೂರ್ತಿ ಮುಗಿದ ಕಾಲದಲ್ಲಿ ಅಲ್ಪ ಅವಧಿಯಲ್ಲಿ ಗಾಳಿ



ಚಿತ್ರ 10

ಬಿಸಿಲುಗಳ ಅನುಕೂಲತೆಯನ್ನು ನಿರೀಕ್ಷಿಸದೆ ಕೊಯಿಲು ಮಾಡಿ ಒಕ್ಕಣೆ ಮಾಡಲು ಸಾಧ್ಯವಾಗಿದೆ. ಇದರಿಂದ ಗಂಡಾಂತರಗಳಿಗೆ ಅವಕಾಶವೇ ಉಳಿಯುವುದಿಲ್ಲ. ರೈತರು ತಮ್ಮ ಶ್ರಮಕ್ಕೆ ಯೋಗ್ಯ ಪ್ರತಿಫಲ ಪಡೆದು ಅಧಿಕ ಆದಾಯ ಸಂಪಾದಿಸಲು ಸಹಾಯಕವಾಗುವುದು.

**ನೀರೆತ್ತುಲು ಪಂಪ್‌ಸೆಟ್:** ಈಗ ರೈತರು ಮಳೆಯ ದಾರಿಯನ್ನೇ ಕಾಯಬೇಕಾಗಿಲ್ಲ. ಬೇಕಾದಾಗ ಬೆಳೆಗೆ ನೀರು ಹರಿಸಲು ಇದರಿಂದ ಸಾಧ್ಯವಾಗಿದೆ.

**ಸಿಂಚನ ಮತ್ತು ಹನಿ ನೀರಾವರಿ:** ಇದರಿಂದ ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಬಹುದು. ಬೇಕಾದಷ್ಟೆ ನೀರನ್ನು ಬೇಕಾದ ಕಾಲದಲ್ಲಿ ಒದಗಿಸಬಹುದು. ತಗ್ಗು ಉಬ್ಬು ಭೂಮಿಯಲ್ಲಿಯೂ ಬೆಳೆಗಳಿಗೆ ನೀರು ದೊರೆಯುವಂತೆ ಮಾಡಬಹುದು. ಮಳೆ ಬಿದ್ದು ಬೆಳೆ ಸಂತುಷ್ಟಿ ಪಡೆಯುವಂತೆಯೇ ಸಿಂಚನ ನೀರಾವರಿಯಿಂದಲೂ ಪಡೆಯುತ್ತದೆ. ಸಿಂಚನ ನೀರಿನೊಂದಿಗೆ ರಾಸಾಯನಿಕ ಗೊಬ್ಬರ ಪೂರೈಸಲು ಸಹ ಸಾಧ್ಯವಿದೆ.

ವಿಮಾನಗಳಿಂದ ಬೆಳೆಗಳ ಸಂರಕ್ಷಣೆ: ಹುಡಿ ಹರಡುವಿಕೆ, ಔಷಧಿಗಳ ಸಿಂಪಡಿಕೆ ಇಂದು ವಿಮಾನಗಳಿಂದ ನಡೆಯುತ್ತಿರುವುದು ಸಾಮಾನ್ಯ ಮಾತು. ಕಡಿಮೆ ಅವಧಿಯಲ್ಲಿ ಹೆಚ್ಚು ವಿಸ್ತಾರ ಪ್ರದೇಶದಲ್ಲಿಯ ಬೆಳೆರಕ್ಷಣೆ ಇದರಿಂದ ಸಾಧ್ಯವಾಗಿದೆ. (ಬಿ.ವಿ.ವಿ; ವಿ.ಸಿ.ಎಚ್.)

**ಕೃಷಿ ಕಾನೂನುಗಳು :** ದೇಶದ ಸಂಪನ್ಮೂಲಗಳ ರಕ್ಷಣೆ, ಸೂಕ್ತ ಬಳಕೆ, ಬೇಸಾಯದ ಸ್ಥಿತಿಗತಿಗಳ ಉತ್ತಮಿಕೆ, ಬೇಸಾಯಗಾರರ ಹಿತಸಾಧನೆ–ಮುಂತಾದ ಉದ್ದೇಶಗಳಿಗಾಗಿ ಪ್ರತಿಯೊಂದು ದೇಶದಲ್ಲೂ ಅನೇಕ ಕಾಯಿದೆಗಳಿರುತ್ತವೆ. ಭಾರತದಂಥ ವ್ಯವಸಾಯ ಪ್ರಧಾನ ದೇಶದ ಅನೇಕ ಕಾಯಿದೆಗಳು ಒಂದಿಲ್ಲೊಂದು ರೀತಿಯಲ್ಲಿ ಕೃಷಿಗೆ ಸಂಬಂಧಿಸಿರುತ್ತವೆ. ಎಲ್ಲ ದೇಶಗಳಲ್ಲೂ ಅನೇಕ ಮೂಲಭೂತ ಕಾಯಿದೆಗಳು ಕೃಷಿ ಸಂಬಂಧವಾಗಿಯೇ ಉದ್ಭವಿಸಿದಂಥವು. ಅವುಗಳಲ್ಲನೇಕವನ್ನು ಕೃಷಿ ಕಾಯಿದೆಗಳೆನ್ನಲಾಗದಿದ್ದರೂ ಅವುಗಳಿಂದ ಕೃಷಿಯ ಮೇಲಾಗುವ ಪರಿಣಾಮ ಬಲು ಹೆಚ್ಚಿನದು. ಸ್ವತ್ತು, ಕರಾರು, ತೆರಿಗೆ ಮುಂತಾದವಕ್ಕೆ ಸಂಬಂಧಿಸಿದ ಕಾನೂನುಗಳು ಕೂಡ ಕೃಷಿಗೆ ಸಂಬಂಧಿಸಿದವಲ್ಲವೆನ್ನಲಾಗುವುದಿಲ್ಲ. ಆದರೆ ಅವು ಸಮಾಜದ ಇತರ ಕ್ಷೇತ್ರಗಳಿಗೂ ಅನ್ವಯವಾಗುವಂಥವು. ಕೃಷಿಗೆಂದೇ ಉದ್ದೇಶಿಸಿ ಜಾರಿಗೆ ತರಲಾದ ಕಾನೂನುಗಳು ವಿರಳವಾದರೂ ಬಹು ಮುಖ್ಯವಾದವು. ಜಮೀನು ಹಿಡುವಳಿ, ಗೇಣಿ, ಭೂಕಂದಾಯ, ಜಮೀನು ಅಡಮಾನ ಮತ್ತು ಸಾಲ, ಕೃಷಿ ಕಾರ್ಮಿಕರು ಮತ್ತು ಅವರ ಕೂಲಿ, ನೀರಾವರಿ ಮತ್ತು ಜಲೋತ್ಸಾರಣ, ಪಶುಸಂಗೋಪನೆ, ಕುಕ್ಕುಟ ಪಾಲನೆ, ಭೂ ಆವರಣ ಅಥವಾ ಬೇಲಿ ರಚನೆ, ಇನ್ನೊಬ್ಬರ ನೆಲವನ್ನು ಪ್ರವೇಶಿಸುವ ಅವಕಾಶ, ಕೃಷಿ ವಿಮೆ ಇವು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಕಾನೂನು ವಿಷಯಗಳು.

**ಭೂ ಹಿಡುವಳಿ, ಕಂದಾಯ:** ಸ್ವತ್ತಿನ ಕಾನೂನುಗಳು ಮುಖ್ಯವಾಗಿ ಭೂ ಮಾಲೀಕರ ಕುಟುಂಬಗಳ ಹಿತಕ್ಕೆ ಸಂಬಂಧಿಸಿದಂಥವು. ಒಂದು ದೇಶದ ಭೂ ಹಿಡುವಳಿಯ ಸ್ವರೂಪವೆಂಥದೆಂಬುದರ ಮೇಲಿಂದ ಆ ದೇಶದ ಕೃಷಿ ಸ್ವರೂಪವನ್ನೂ ಅದು ಎಷ್ಟರಮಟ್ಟಿಗೆ ಪ್ರಗತಿ ಪರವಾಗಿದೆಯೆಂಬುದನ್ನೂ ಅಳೆಯಬಹುದು. ಜಮೀನಿನ ಒಡೆತನ, ಬಳಕೆ, ಅದನ್ನು ಪರಭಾರೆ ಮಾಡುವ ಬಗ್ಗೆ ಕೃಷಿಕನಿಗೆ ಇರುವ ಹಕ್ಕು, ಅದನ್ನು ಉತ್ತಮಗೊಳಿಸಲು ಇರುವ ಆಸಕ್ತಿ, ಅದರ ಉತ್ತರಾಧಿಕಾರ–ಇವೆಲ್ಲ ಬಹು ಮುಖ್ಯ. ಒಂದು ಜಮೀನಿನ ಹಕ್ಕು ಯಾರಿಗೆ ಸೇರಿದೆ ? ಅದನ್ನು ಸಾಗುವಳಿ ಮಾಡುತ್ತಿರುವವನಿಗೇ ಆ ನೆಲ ಸೇರಿದೆಯೇ? ಅವನ ಜೀವನಾವಧಿಗೆ ಮಾತ್ರ ಅದರ ಹಕ್ಕು ಸೀಮಿತವಾಗಿದೆಯೆ ಅಥವಾ ಅದು ವಂಶಪಾರಂಪರ್ಯವಾದ್ದೆ ? ಅದು ಒಬ್ಬನಿಗಿಂತ ಹೆಚ್ಚು ಮಂದಿಯ ಸ್ವಾಮ್ಯಕ್ಕೊಳಪಟ್ಟಿದ್ದೆ? ಮುಂತಾದವು ಅತ್ಯಂತ ಮುಖ್ಯವಾದ ಪ್ರಶ್ನೆಗಳು. ಇವುಗಳ ಬಗ್ಗೆ ವ್ಯಾಪಕವಾದ ಕಾನೂನುಗಳು ಎಲ್ಲ ದೇಶಗಳಲ್ಲೂ ಜಾರಿಯಲ್ಲಿವೆ.

ಭೂ ಒಡೆತನಕ್ಕೆ ಸಂಬಂಧಿಸಿದ ಕಾನೂನು ಸಾಮಾನ್ಯವಾಗಿ ತ್ರಿಕೋನಾತ್ಮಕವಾದ್ದು. ಭೂ ಮಾಲೀಕ ಈ ತ್ರಿಕೋನದ ಒಂದು ಬದಿಯಾದರೆ ಸರ್ಕಾರವೂ ಸಾಗುವಳಿದಾರನೂ ಇನ್ನೆರಡು ಬದಿಗಳು. ಭಾರತದಲ್ಲಿ ಸರ್ಕಾರದಲ್ಲೇ (ರಾಷ್ಟ್ರ) ಎಲ್ಲ ನೆಲದ ಒಡೆತನವೂ ನಿಹಿತವಾಗಿರುತ್ತದೆ. ಎಲ್ಲ ಭೂ ಮಾಲೀಕರೂ ರಾಷ್ಟ್ರದ ಈ ಮೂಲಭೂತ ಹಕ್ಕಿಗೆ ಅಧೀನರಾಗಿ ಅದನ್ನು ಅನುಭವಿಸುತ್ತ ಬಂದಿದ್ದಾರೆ. ಇದಕ್ಕನುಗುಣವಾಗಿ ಅವರು ಸರ್ಕಾರಕ್ಕೆ ಭೂಕಂದಾಯವನ್ನು ಪಾವತಿಮಾಡುತ್ತಾರೆ. ಇತ್ತೀಚಿನವರೆಗೂ ಭೂಕಂದಾಯ ಸರ್ಕಾರದ ಬಹು ಮುಖ್ಯ ಆದಾಯವಾಗಿತ್ತು. ಸರ್ಕಾರ ನೇರವಾಗಿ ಕಂದಾಯ ವಸೂಲಿ ಮಾಡುವ ವ್ಯವಸ್ಥೆಯನ್ನು ರೈತವಾರಿ ವ್ಯವಸ್ಥೆಯೆನ್ನುತ್ತಾರೆ. ಪ್ರತಿಯೊಂದು ಹಳ್ಳಿಯ ನೆಲವನ್ನೂ ಜಮೀನುಗಳಾಗಿ ವಿಂಡಗಿಸಲಾಗಿದೆ. ಪ್ರತಿ ಜಮೀನಿಗೂ ಪ್ರತ್ಯೇಕವಾಗಿ ಕಂದಾಯವನ್ನು ವಿಧಿಸಲಾಗುತ್ತದೆ. ಜಮೀನಿನ ಒಡೆಯನೇ ರೈತ. ರಕ್ಷಿತ, ಪ್ರಜೆ– ಎಂಬುದು ಈ ಶಬ್ದದ ಅರಬ್ಬಿ ಮೂಲದ ಅರ್ಥ. ಅವನು ಕೊಡಬೇಕಾದ ಕಂದಾಯವನ್ನು ನೇರವಾಗಿ ಸರ್ಕಾರಕ್ಕೆ ಪಾವತಿ ಮಾಡಬೇಕು. ಕಾಲದಿಂದ ಕಾಲಕ್ಕೆ (ಉದಾ: ಮೂವತ್ತು ಅಥವಾ ನಲವತ್ತು ವರ್ಷಗಳಿಗೊಮ್ಮೆ) ಕಂದಾಯವನ್ನು ಪುನರ್ವಿಮರ್ಶಿಸಲಾಗುತ್ತದೆ ; ಅಥವಾ ಹೊಸದಾಗಿ ವ್ಯವಸ್ಥೆಗೊಳಿಸಲಾಗುತ್ತದೆ (ಸೆಟ್ಲ್‌ಮೆಂಟ್). ಹೀಗೆ ಮಾಡುವುದು ಸರ್ಕಾರದ ಹಕ್ಕು, ಬೆಲೆಗಳು ಅಧಿಕವಾದಂತೆಲ್ಲ ಸರ್ಕಾರ ಹೀಗೆ ಮಾಡಿರುವುದುಂಟು. ಈಚಿನ ವರ್ಷಗಳಲ್ಲಿ ಸರ್ಕಾರ ಈ ಹಕ್ಕನ್ನು ಹೆಚ್ಚಾಗಿ ಚಲಾಯಿಸಿಲ್ಲ. ರಸ್ತೆ, ರೈಲ್ವೆ, ಶಿಕ್ಷಣ, ನೀರಿನ ಬಳಕೆ–ಮುಂತಾದ ಸ್ಥಳೀಯ ಅವಶ್ಯಕತೆಗಳಿಗಾಗಿ ಮೇಲುತೆರಿಗೆಗಳನ್ನೂ (ಸೆಸ್) ವಿಧಿಸಲಾಗುತ್ತದೆ. ಪ್ರತಿ ಕಂದಾಯವರ್ಷದಲ್ಲೂ ಪಾವತಿ ಮಾಡಬೇಕಾದ ಹಣವನ್ನು ನಿಷ್ಕರ್ಷಿಸಿ ಅದನ್ನು ಆ ವರ್ಷದ ಕೊನೆಯೊಳಗೆ ಪಡೆಯಬೇಕೆಂಬುದು ಕಾನೂನು. ಸರ್ಕಾರ ರೈತನಿಗೆ ಒಂದು ಪಟ್ಟೆಯನ್ನು ನೀಡುತ್ತದೆ. ಕಳೆದ ಕಂದಾಯ ನಿಷ್ಕರ್ಷೆಯ ಸಮಯದಲ್ಲಿ ಒಂದು ಜಮೀನಿನ ಮೇಲೆ ಗೊತ್ತುಪಡಿಸಲಾದ ಕಂದಾಯವನ್ನು ನಮೂದಿಸುವ ದಾಖಲೆಯಿದು. ಪಟ್ಟೆದಾರನ ಹೆಸರು, ಅವನ ಜಮೀನಿನ ವಿಸ್ತೀರ್ಣ, ಸರ್ವೆ ನಂಬರು– ಇವೆಲ್ಲ ಅದರಲ್ಲಿ ನಮೂದಾಗಿರುತ್ತದೆ. ಅವನು ತನ್ನ ಜಮೀನನ್ನು ಅಥವಾ ಅದರಲ್ಲೊಂದು ಭಾಗವನ್ನು ಬಿಟ್ಟುಕೊಟ್ಟ ಪಕ್ಷದಲ್ಲಿ ಅದರ ಮೇಲೆ ಕಂದಾಯ ಕೊಡಬೇಕಾದುದಿಲ್ಲ. ನೀರಾವರಿ ಸೌಲಭ್ಯಪಡೆದದ್ದಕ್ಕಾಗಿ ಅವನು ಹೆಚ್ಚು ಶುಲ್ಕ ಕೊಡಬೇಕಾಗಬಹುದು. ಬೆಳೆ ನಷ್ಟವಾದ್ದಕ್ಕೆ ಸರ್ಕಾರದಿಂದ ಕಂದಾಯ ಮಾಫಿ (ರಿಮಿಷನ್) ದೊರಕಬಹುದು. ವಾರ್ಷಿಕವಾಗಿ ಮಾಡಲಾಗುವ ಕಂದಾಯ ನಿಷ್ಕರ್ಷೆಗೆ ಜಮಾಬಂದಿ ಎಂದು ಹೆಸರು. ಅನಾವೃಷ್ಟಿ, ಪ್ರವಾಹ ಮುಂತಾದ ಕಾರಣಗಳಿಂದಾಗಿ ಫಸಲು ಆಗದಿದ್ದಾಗ ಸರ್ಕಾರ ಕಂದಾಯ ಮಾಫಿ ಮಾಡಬಹುದು. ರೈತ ಕಂದಾಯವನ್ನು ಪಾವತಿ ಮಾಡದಿದ್ದಾಗ ಸರ್ಕಾರ ಅವನ ಜಮೀನನ್ನು ವಶಪಡಿಸಿಕೊಂಡು ಅದನ್ನು ಅಥವಾ ಅದರ ಮೇಲಣ ಚರಾಸ್ತಿಗಳನ್ನು ಮಾರಿ ಕಂದಾಯಕ್ಕೆ ಉತ್ತಾರ ಹಾಕಿಕೊಳ್ಳಬಹುದು. ಅವನನ್ನು ಬಂಧಿಸಲೂ ಬಹುದು. ಸರ್ಕಾರದ ವಿಕ್ರಯಕ್ರಮ ಅನ್ಯಾಯವೆಂದೆನಿಸಿದರೆ ಸಿವಿಲ್ ನ್ಯಾಯಾಲಯದಲ್ಲಿ ದಾವ ಹೂಡಲು ರೈತನಿಗೆ ಹಕ್ಕುಂಟು. ರೈತನ ನೆಲದ ಪಕ್ಕದ ನದೀಪಾತ್ರ ಅವನಿಗೆ ಸೇರಿದ್ದಲ್ಲ. ಅದು ಸರ್ಕಾರದ್ದು. ಜಮೀನಿನ ಮೇಲೆ ಕೊಡಬೇಕಾದ ಸಾಲಕ್ಕೆ ಆ ಜಮೀನು ಪ್ರಥಮತಃ ಈಡಾಗಿರುತ್ತದೆ. ಉಳಿದ ಸಾಲಿಗರ ಹಕ್ಕು ಅನಂತರ. ರೈತ ತನ್ನ ಜಮೀನಿನಡಿಯ ಖನಿಜಗಳನ್ನು ತೆಗೆಯಬಹುದು. ಆದರೆ ಅದಕ್ಕೆ ಪ್ರತ್ಯೇಕವಾಗಿ ಶುಲ್ಕ ಕೊಡಬೇಕು. ಅವನು ಕೊಡುವ ಕಂದಾಯ ನೆಲದ ಮೇಲಣ ಸಾಗುವಳಿಗಾಗಿ ಮಾತ್ರ, ಭೂಗರ್ಭದ ಸಂಪತ್ತೆಲ್ಲ ಸರ್ಕಾರಕ್ಕೆ ಸೇರಿದ್ದೆಂಬುದು ತತ್ತ್ವ. ಆದರೆ ಜೇಡಿಮಣ್ಣು ತೆಗೆಯುವುದು, ಬಂಡೆ ಒಡೆಯುವುದು–ಇಂಥವಕ್ಕೆ ಸರ್ಕಾರ ಅಡ್ಡಬರುವುದಿಲ್ಲ. ನೆಲದ ಮೇಲೆ ಬೆಳೆದ ಮರಗಳ ಹಕ್ಕು ರೈತನದು. ರೈತವಾರಿ ಹಳ್ಳಿಯ ಎಲ್ಲ ಪಾಳು ಅಥವಾ ಅನಾಕ್ರಮಿತ ನೆಲವೂ ಸರ್ಕಾರದ್ದು.

ಇತ್ತೀಚಿನವರೆಗೂ ಭಾರತದಲ್ಲಿ ಕೆಲವು ಕಡೆಗಳಲ್ಲಿ ಜಮೀನ್ದಾರಿ ವ್ಯವಸ್ಥೆ ಎಂಬೊಂದು ವ್ಯವಸ್ಥೆಯಿತ್ತು. ಇಂಥ ವ್ಯವಸ್ಥೆಯಿರುವೆಡೆ ಜಮೀನ್ದಾರರು ಸರ್ಕಾರಕ್ಕೆ ನಿಗದಿಯಾದ ಕಂದಾಯ ಕೊಡುತ್ತಿದ್ದರು. ಪ್ರತಿಯಾಗಿ ಅವರು ಅಲ್ಲಿಯ ರೈತರಿಂದ ಕಂದಾಯ ವಸೂಲಿ ಮಾಡಿಕೊಳ್ಳುತ್ತಿದ್ದರು. ರೈತರಿಗೂ ಸರ್ಕಾರಕ್ಕೂ ನಡುವೆ ಇದ್ದ

ಇಂಥವರ ಹಕ್ಕುಗಳನ್ನು ಸ್ವತಂತ್ರ ಭಾರತದಲ್ಲಿ ತೆಗೆದುಹಾಕಲಾಗಿದೆ. ಜಮೀನ್ದಾರಿ ರದ್ದು ಕಾಯಿದೆಗಳು ಜಾರಿಗೆ ಬಂದಿವೆ. ಮೇಲೆ ಹೇಳಿದ ಹಕ್ಕು ಸಾಮೂಹಿಕವಾಗಿದ್ದುದೂ ಉಂಟು. ಅದು ಮಹಲ್ವಾರಿ ಎನಿಸಿಕೊಂಡಿತ್ತು. ಅದನ್ನೂ ರದ್ದುಪಡಿಸಲಾಗಿದೆ.

ರೈತವಾರಿ ಜಮೀನಿನ ಒಡೆಯ ತನ್ನ ನೆಲವನ್ನು ಇನ್ನೊಬ್ಬನಿಗೆ ಸಾಗುವಳಿಗಾಗಿ ಗುತ್ತಿಗೆಗೆ ಕೊಡಬಹುದು. ಅವನು ಸಾಗುವಳಿದಾರನೊಂದಿಗೆ ಈ ಬಗ್ಗೆ ಮಾಡಿಕೊಂಡ ಕರಾರುಗಳಿಗೆ ಅನುಗುಣವಾಗಿ ಗೇಣಿ ಮುಂತಾದವು ನಿಷ್ಕರ್ಷೆಯಾಗಿರುತ್ತವೆ. ಗೇಣಿಯ ಅವಧಿ ಮುಗಿದ ಮೇಲೂ ಜಮೀನನ್ನು ಅಬಾಧಿತವಾಗಿ ಸಾಗುವಳಿ ಮಾಡುವ ಹಕ್ಕು ಈಗ ಸಾಗುವಳಿದಾರರಿಗೆ ಸಾಮಾನ್ಯವಾಗಿ ದತ್ತವಾಗಿದೆ. ಭೂ ಹಿಡುವಳಿಯ ಗಾತ್ರಕ್ಕೆ ಗರಿಷ್ಠ ಮಿತಿ ಕಲ್ಪಿಸುವ ಮತ್ತು ಸಣ್ಣ ಭೂಮಿಗಳನ್ನು ಒಂದುಗೂಡಿಸುವ ಕಾಯಿದೆಗಳೂ ಉಂಟು.

**ಋಣಪರಿಹಾರ, ಹಣಕಾಸು ಸರಬರಾಯಿ:** ಜಮೀನನ್ನೂ ಸ್ವಂತ ಆಸ್ತಿಯನ್ನೂ ಆಧಾರಮಾಡಿ ಸಾಲ ಪಡೆಯುವುದಕ್ಕೆ ಸಂಬಂಧಿಸಿದ ಕಾನೂನುಗಳು ಅನೇಕ ದೇಶಗಳಲ್ಲಿ ವ್ಯಾಪಕವಾಗಿವೆ. ಭಾರತದಲ್ಲಿ ಕೃಷಿಕಾರ್ಯ ಬಹು ಹಿಂದಿನಿಂದಲೂ ಅಷ್ಟೇನೂ ಲಾಭಪ್ರದವಾಗಿಲ್ಲದಿರುವುದರಿಂದಲೂ ಸಾಮಾಜಿಕ ದುಃಸ್ಥಿತಿಯ ಕಾರಣದಿಂದಲೂ ರೈತ ಅನಾದಿ ಅನಂತವೆನಿಸುವಂಥ ಋಣಬಾಧೆಗೆ ತುತ್ತಾಗಿದ್ದಾನೆ. ಇದನ್ನು ನಿವಾರಿಸುವವರೆಗೂ ಕೃಷಿ ಪ್ರಗತಿ ಸಾಧ್ಯವಿಲ್ಲ. ಅವನ ಕೃಷಿ ಕಾರ್ಯಕ್ಕೆ ಅಗತ್ಯವಾದ ಹಣಕಾಸನ್ನು ಒದಗಿಸುವುದು ಅಗತ್ಯ. ಈ ದೃಷ್ಟಿಯಿಂದ ಅನೇಕ ಕಾನೂನುಗಳು ಭಾರತದ ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿವೆ. ಬಾಕಿಯಿರುವ ಸಾಲದ ಮೊಬಲಗು ಅಸಲಿನ ಎರಡರಷ್ಟಕ್ಕಿಂತ ಅಧಿಕವಾಗಬಾರದು (ದಾಮ್‌ದುಪಟ್). ಬಡ್ಡಿಯ ಬಾಕಿಯನ್ನು ಕಡಿಮೆ ಮಾಡುವುದೂ ಬಡ್ಡಿಯ ದರವನ್ನು ನಿಗದಿಗೊಳಿಸುವುದೂ ಋಣ ಪರಿಹಾರ ಕಾಯಿದೆಗಳ ಮುಖ್ಯ ಉದ್ದೇಶಗಳು. ಲೇವಾದೇವಿಗಾರನಾದಾತ ರೈತನ ಅಸಹಾಯಸ್ಥಿತಿಯ ದುರುಪಯೋಗ ಪಡೆಯದಂತೆ ನಾನಾ ನಿರ್ಬಂಧಗಳನ್ನು ವಿಧಿಸಲಾಗಿದೆ. ಲೇವಾದೇವಿಗಾರನ ನೋಂದಾವಣೆ, ಅವನಿಗೆ ಲೈಸೆನ್ಸ್ ನೀಡಿಕೆ. ಅವನ ಲೆಕ್ಕಪತ್ರಗಳನ್ನು ಕ್ರಮಬದ್ಧಗೊಳಿಸುವುದು, ಬಡ್ಡಿ ದರದ ಮಿತಿ– ಮುಂತಾದ ನಾನಾ ವಿಧಿಗಳು ಕಾನೂನಿನಲ್ಲಿ ಅಂತರ್ಗತವಾಗಿವೆ. ಆದರೆ ಇಂಥ ಕಾಯಿದೆಗಳು ರೈತನ ಮೂಲಭೂತವಾದ ಸಮಸ್ಯೆಯನ್ನು ಪರಿಹರಿಸುವುವೆಂದು ನಿರೀಕ್ಷಿಸುವಂತಿಲ್ಲ. ರೈತನ ಬೇಸಾಯದ ಕೆಲಸಕ್ಕೆ ಅಗತ್ಯವಾದ ಕಿರು–ನಡುನಿಡುವಾಯಿದೆ ಉದ್ದರಿ ನೀಡುವ ನಾನಾ ಉಪಾಯಗಳು ಕಾನೂನಿನ ಮೂಲಕ ಭಾರತದಲ್ಲಿ ಜಾರಿಗೆ ಬಂದಿವೆ. **(ನೋಡಿ: ಕೃಷಿ ಉದ್ದರಿ)**

**ಭೂ ಮಾಲೀಕ–ಗೇಣಿದಾರ ಸಂಬಂಧ:** ಕೃಷಿ ಪ್ರಗತಿಪರವೆ, ಅಲ್ಲವೆ ಎಂಬುದು ಗೇಣಿಗೆ ಸಂಬಂಧಿಸಿದ ಕಾನೂನನ್ನು ಬಹಳಮಟ್ಟಿಗೆ ಅವಲಂಬಿಸಿದೆ. ಭೂ ಮಾಲಿಕನೇ ಬೇಸಾಯ ಮಾಡುವುದು ಅತ್ಯಂತ ಸಮರ್ಪಕ ವ್ಯವಸ್ಥೆ. ಅದು ಸಾಧ್ಯವಾಗದ ಸಂದರ್ಭದಲ್ಲಿ ಅದನ್ನು ಗೇಣಿಯ ಕರಾರಿನ ಮೇಲೆ ಇನ್ನೊಬ್ಬನಿಗೆ ಸಾಗುವಳಿಗೆ ನೀಡುವುದು ಆವಶ್ಯವಾಗಬಹುದು. ಇವರಿಬ್ಬರ ನಡುವಣ ಕರಾರು ನ್ಯಾಯವಾಗಿರಬೇಕಾದ್ದು ಅಗತ್ಯ. ಅನೇಕ ಸಂದರ್ಭಗಳಲ್ಲಿ, ಗೇಣಿಗೆ ಸಂಬಂಧಿಸಿದ ಕಾಯಿದೆಯ ಅರಿವು ಸಾಗುವಳಿದಾರನಿಗಾಲಿ ಜಮೀನಿನ ಒಡೆಯನಿಗಾಗಲಿ ಇರುವುದಿಲ್ಲ. ಇದರಿಂದ ತೊಂದರೆಗಳು ಉದ್ಭವಿಸಬಹುದು. ಭಾರತದಲ್ಲಿ ಗೈರುಹಾಜರಿ ಭೂಸ್ವಾಮ್ಯ ಪದ್ಧತಿ ವ್ಯಾಪಕವಾಗಿದೆ. ಪರಂಪರಾಗತವಾಗಿ ಜಮೀನು ಸಾಗುವಳಿ ಮಾಡುತ್ತ ಬಂದಿರುವವನು ಸರ್ವದಾ ಅನಿಶ್ಚಿತತೆಯನ್ನೆದುರಿಸಬೇಕಾಗಿ ಬಂದಿದೆ. ಇದನ್ನು ತಪ್ಪಿಸಲು ಭಾರತದ ಎಲ್ಲ ರಾಜ್ಯಗಳಲ್ಲೂ ಗೇಣಿ ಕಾಯಿದೆಗಳು ಜಾರಿಗೆ ಬಂದಿವೆ. ಭೂಮಾಲೀಕ ಅತಿಯಾದ ಗೇಣಿ ವಿಧಿಸದಂತೆ, ಗೇಣಿದಾರನ ಸಾಗುವಳಿ ಹಕ್ಕು ಭದ್ರವಾಗಿರುವಂತೆ, ಅವನೇ ನೆಲವನ್ನು ಕೊಂಡು ಭೂ ಮಾಲೀಕನಾಗುವಂತೆ, ಕಾನೂನುಬಾಹಿರವಾದ ರೀತಿಯಲ್ಲಿ ಗೇಣಿದಾರನನ್ನು ಹೊರಹಾಕುವ ಭೂಮಾಲೀಕ ಶಿಕ್ಷಾರ್ಹನಾಗುವಂತೆ–ಹೀಗೆ ನಾನಾ ವಿಧಿಗಳು ಈ ಕಾಯಿದೆಗಳಲ್ಲಿವೆ.

**ಕೃಷಿ ಕಾರ್ಮಿಕರ ಸಮಸ್ಯೆ:** ಕೃಷಿಕಾರ್ಮಿಕರು ಮತ್ತು ಅವರಿಗೆ ಕೊಡಬೇಕಾದ ಕೂಲಿಯನ್ನು ಕುರಿತು ಅನೇಕ ದೇಶಗಳಲ್ಲಿ ಕಾನೂನುಗಳಿವೆ. ಕಾರ್ಮಿಕರಿಗೆ ಹೆಚ್ಚಾಗಿ ಬೇಡಿಕೆಯಿಲ್ಲದ ಭಾರತದಂಥ ದೇಶದಲ್ಲಿ ಇದೊಂದು ದೊಡ್ಡ ಸಮಸ್ಯೆಯೇ. ಕೃಷಿಕಾರ್ಮಿಕರು ಸುಸಂಘಟಿತರಲ್ಲ. ಇವರು ಸಾಮೂಹಿಕ ಚೌಕಾಸಿ ಮಾಡುವ ಸಾಧ್ಯತೆ ಕಡಿಮೆ. ಇಂಥವರಿಗೆ ಕಾನೂನಿನ ರಕ್ಷಣೆ ಅಗತ್ಯ. ಇದಕ್ಕಾಗಿ ಭಾರತದಲ್ಲಿ ಕಾಯಿದೆಗಳು ಜಾರಿಯಲ್ಲಿವೆ. **(ನೋಡಿ: ಕೃಷಿ ಕೂಲಿ; ಕೃಷಿ ಕಾರ್ಮಿಕರು)**

**ಬೇಲಿ ರಚನೆ, ಜಮೀನು ಪ್ರವೇಶ ಇತ್ಯಾದಿ:** ಜಮೀನುಗಳ ನಡುವೆ ಅಥವಾ ಸುತ್ತ ಬೇಲಿ ರಚನೆ, ನೆರೆಹೊರೆಯ ಜಮೀನುಗಳ ಒಡೆಯರಲ್ಲಿ ಈ ವೆಚ್ಚದ ಹಂಚಿಕೆ–ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆಯೂ ಕಾನೂನುಗಳಿರುವುದುಂಟು, ಇವುಗಳ ಸ್ವರೂಪ ಮತ್ತು ವ್ಯಾಪ್ತಿ ದೇಶದಿಂದ ದೇಶಕ್ಕೆ ತುಂಬ ಭಿನ್ನವಾಗಿವೆ. ಜಮೀನಿಗೆ ಸಂಬಂಧಿಸಿದಂತೆ ಬಹುತೇಕ ಎಲ್ಲ ದೇಶಗಳಲ್ಲೂ ಇರುವ ಹಕ್ಕುಗಳಲ್ಲಿ ಅದರ ಪ್ರವೇಶಕ್ಕೆ ಸಂಬಂಧಿಸಿದ್ದೂ ಒಂದು. ಒಬ್ಬನ ಜಮೀನನ್ನು ಅವನ ಅಪ್ಪಣೆಯಿಲ್ಲದೆ ಇತರರು ಪ್ರವೇಶಿಸುವಂತಿಲ್ಲ. ರೈತನಿಗೆ ಇಂಥ ಕಾನೂನು ಅತ್ಯಂತ ಮುಖ್ಯವಾದ್ದು, ಇತರರ ಪ್ರವೇಶದಿಂದ ಅವನ ಫಸಲು, ಬೇಲಿ, ಜಾನುವಾರು ಮುಂತಾದವಕ್ಕೆ ನಷ್ಟವಾಗಬಹುದು. ಜಮೀನಿನ ಸ್ವಾಧೀನದ ಹಕ್ಕಿಗೆ ಧಕ್ಕೆ ಬರುವಂತೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪ್ರವೇಶ ಮಾಡುವುದು ಅತಿಕ್ರಮ ಪ್ರವೇಶ ಎಂದು ಭಾರತದ ಖಾಸಗಿ ತಕ್ಸೀರು ಕಾಯಿದೆಯಲ್ಲಿ ಹೇಳಲಾಗಿದೆ. ಇದು ಶಿಕ್ಷಾರ್ಹ ಅಪರಾಧ. ಯಾವುದೇ ವಸ್ತುವನ್ನು ಇನ್ನೊಬ್ಬನ ಜಮೀನಿನೊಳಕ್ಕೆ ಬಿಸಾಡುವುದು, ಅವನ ಜಮೀನಿನ ಸುತ್ತಗೋಡೆಯ ಪಕ್ಕದಲ್ಲಿ ಕಸ ಮುಂತಾದವನ್ನು ಗುಡ್ಡೆ ಹಾಕುವುದು, ನೆಲದೊಳಕ್ಕೆ ಮೊಳೆ ಹೊಡೆಯುವುದು, ಜಮೀನಿನ ಪ್ರವೇಶಕ್ಕೆ ಅವಕಾಶ ನೀಡಲಾಗಿದ್ದ ಪಕ್ಷದಲ್ಲಿ ಆ ಅವಧಿ ಮುಗಿದ ಮೇಲೂ ಆ ನೆಲದ ಮೇಲೆ ಇರುವುದು ಇವು ಅತಿಕ್ರಮ ಪ್ರದೇಶದ ಕೆಲವು ಉದಾಹರಣೆಗಳು. ರೋಗಗ್ರಸ್ಥವಾದ ದನಕರುಗಳು ಇತರರ ಜಮೀನಿಗೆ ನುಗ್ಗಿ ಅಲ್ಲಿಯ ಜಾನುವಾರುಗಳಿಗೆ ರೋಗ ಅಂಟಿಸಿದರೆ ಅದೂ ಅತಿಕ್ರಮ ಪ್ರವೇಶವೇ. ಆ ದನಕರುಗಳ ಒಡೆಯನಾದವನು ನಷ್ಟಪರಿಹಾರ ನೀಡಲು ಬಾಧ್ಯನಾಗುತ್ತಾನೆ. ಆದರೆ ಒಬ್ಬ ತನ್ನ ಜಮೀನಿಗೆ ಇನ್ನೊಬ್ಬನ ಜಮೀನಿನ ಮೂಲಕವಲ್ಲದೆ ಬೇರೆ ಮಾರ್ಗವಾಗಿ ಹೋಗಲು ಸಾಧ್ಯ ಇಲ್ಲದಾಗ ಆತ ತನ್ನ ಜಮೀನಿಗೆ ಇನ್ನೊಬ್ಬನ ಜಮೀನಿನ ಮೂಲಕ ಹೋಗಲು ಅವಕಾಶ ಇರಬೇಕೆಂದು ನ್ಯಾಯ. ಇದಕ್ಕೆ ಸಂಬಂಧಿಸಿದ ವಿಧಿ ನಿಬಂಧನೆಗಳು ಖಾಸಗಿ ತಕ್ಸೀರು ಕಾಯಿದೆಯಲ್ಲಿವೆ.

**ಇತರ ಕಾನೂನುಗಳು:** ಜಲೋತ್ಸಾರಣ, ನೀರಾವರಿ, ಜಲಸಂರಕ್ಷಣೆ ಮುಂತಾದವಕ್ಕೆ ಸಂಬಂಧಿಸಿದಂತೆ ಸಂಪ್ರದಾಯನ್ಯಾಯ ವ್ಯಾಪಕವಾಗಿ ಜಾರಿಯಲ್ಲಿದೆ. ಎಲ್ಲೆಲ್ಲಿ ಅವಶ್ಯವೋ ಅಲ್ಲೆಲ್ಲ ಕಾನೂನುಗಳು ರಚಿತವಾಗಿವೆ. ಪ್ರಾಣಿಗಳ ರೋಗಗಳ ಹರಡುವಿಕೆ, ಪ್ರಾಣಿ ಹಿಂಸೆ–ಇವನ್ನು ನಿರೋಧಿಸುವ ಕಾನೂನುಗಳುಂಟು. ರೈತರ ನಷ್ಟಗಳನ್ನು ತುಂಬಿಕೊಡುವ ಉಪಾಯಗಳನ್ನು ಕುರಿತ ಕಾನೂನುಗಳು ಇನ್ನೊಂದು ಬಗೆಯವು. **(ನೋಡಿ: ಕೃಷಿ ವಿಮೆ)** ಬೀಜಗಳು, ಕೀಟನಿರೋಧಕಗಳು, ಕೃತಕಗೊಬ್ಬರಗಳು ಮತ್ತು ಇತರ ವಸ್ತುಗಳ ಪರೀಕ್ಷೆ ಮತ್ತು ಗುಣಮಟ್ಟ ನಿಷ್ಕರ್ಷೆಗಾಗಿ ಕಾನೂನುಗಳು ಹಲವು ದೇಶಗಳಲ್ಲಿ ಜಾರಿಯಲ್ಲಿವೆ. ಬೇಸಾಯದ ಭೂಮಿಯ ಸುತ್ತಲೂ ದಿಂಡನ್ನು ಕಟ್ಟುವುದು. ಮಣ್ಣಿನ ಪರೀಕ್ಷೆ, ಹುಲ್ಲುಗಾವಲುಗಳ ರಕ್ಷಣೆ, ಖಾಸಗಿ ಅರಣ್ಯಗಳ ಮೇಲ್ವಿಚಾರಣೆ, ಬಂಜರು ನೆಲದ ಸುಧಾರಣೆ–ಇವಕ್ಕಾಗಿಯೂ ಕಾನೂನುಗಳು ಅವಶ್ಯವಾಗಿವೆ. ಇಂಥ ಹಲವಾರು ವಿಚಾರಗಳನ್ನು ಕುರಿತ ಹೆಚ್ಚಿನ ಕಾನೂನುಗಳನ್ನು ಭಾರತದಲ್ಲೂ ಜಾರಿಗೆ ತರುವುದು ಆವಶ್ಯವಾಗಿದೆ.

(ಎಸ್.ಎಸ್.ಡಿ.; ಎ.ಎನ್.ಕೆ.)

**ಕೃಷಿ ಕಾರ್ಮಿಕರು :** ವ್ಯವಸಾಯದ ವಿಶಿಷ್ಟ ಸಮಸ್ಯೆಗಳ ಪೈಕಿ ಕೃಷಿ ಕಾರ್ಮಿಕರ ಸಮಸ್ಯೆ ಪ್ರಧಾನವಾದ್ದು. ಇದು ಇತರ ಉದ್ಯೋಗಗಳಲ್ಲಿಯ ಕಾರ್ಮಿಕ ಸಮಸ್ಯೆಗಳಿಗಿಂತಲೂ ಪ್ರಧಾನವಾದದ್ದು. ಇದು ಇತರ ಉದ್ಯೋಗಗಳಲ್ಲಿಯ ಕಾರ್ಮಿಕರ ಸಮಸ್ಯೆಗಿಂತ ಭಿನ್ನವಾದ್ದು. ವಿಶ್ವದ ಜನಸಂಖ್ಯೆಯ ಹೆಚ್ಚಿನ ಭಾಗ ಕೃಷಿಸಂಬಂಧವಾದ ದುಡಿಮೆಯಲ್ಲಿ ನಿರತವಾಗಿದೆ. ಕೈಗಾರಿಕಾ ಉತ್ಪನ್ನಗಳಿಗೆ ಇರುವ ಬೇಡಿಕೆಯಲ್ಲಿ ಶೇಕಡ 80 ರಷ್ಟು ವ್ಯವಸಾಯದಲ್ಲಿ ನಿರತರಾಗಿರುವವವರಿಂದಲೇ ಬರುತ್ತದೆ.

ಮಾನವ ನಾಗರಿಕತೆಯ ದೀರ್ಘ ಇತಿಹಾಸದಲ್ಲಿ ಕೃಷಿ ಕಾರ್ಮಿಕರ ಸ್ಥಾನಮಾನಗಳಲ್ಲಿ ಆಗಿರುವ ಬದಲಾವಣೆ ಮುಖ್ಯವಾದ್ದು. ಈಜಿಪ್ಟ್, ಪರ್ಷಿಯ, ರೋಮ್ ಮುಂತಾದವುಗಳ ಪುರಾತನ ನಾಗರಿಕತೆಗಳಲ್ಲಿ ಗುಲಾಮರ ದುಡಿಮೆಯೇ ಪ್ರಧಾನವಾಗಿತ್ತು. ಅನಂತರ ಈ ಪದ್ಧತಿ ಬದಲಾಯಿತು. ಊಳಿಗಮಾನ್ಯ ಪದ್ಧತಿಯಲ್ಲಿ ದುಡಿಮೆಗಾರರು ಜಮೀನ್ದಾರನಿಂದ ಭೂಮಿಯನ್ನು ಸಾಗುವಳಿಗೆ ಪಡೆದು ಅದಕ್ಕೆ ಪ್ರತಿಫಲವಾಗಿ ಆತನ ಭೂಮಿಯಲ್ಲಿ ಹಲವು ನಿಯಮಗಳಿಗೆ ಅನುಸಾರವಾಗಿ ಕೆಲಸ ಮಾಡುತ್ತಿದ್ದರು. ಇವರು ಗುಲಾಮರಂತೆ ಸಂಪೂರ್ಣವಾಗಿ ತಮ್ಮ ವ್ಯಕ್ತಿತ್ವನ್ನು ಕಳೆದುಕೊಂಡಿರದಿದ್ದರೂ, ಈಗಿನ ಬೇಸಾಯಗಾರರಂತೆ ಇವರಿಗೆ ವ್ಯಕ್ತಿಸ್ವಾತಂತ್ರ್ಯ ಇರಲಿಲ್ಲ. ಕಾಲಕ್ರಮದಲ್ಲಿ ಊಳಿಗಮಾನ್ಯ ಪದ್ಧತಿ ಕ್ಷೀಣಿಸಿ ಬೇಸಾಯ ಕೆಲಸಗಾರರು ಇತರ ಆರ್ಥಿಕ ಉದ್ಯಮಗಳಲ್ಲಿಯ ಕಾರ್ಮಿಕರಂತೆಯೇ ಒಂದು ಗೊತ್ತಾದ ಅವಧಿಯಲ್ಲಿ ಒಂದು ನಿರ್ದಿಷ್ಟ ಕೂಲಿಗಾಗಿ ಕೆಲಸ ಮಾಡುವಂತಾಯಿತು.

ಇಂದು ವ್ಯವಸಾಯ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವವರನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು: 1. ಸಾಗುವಳಿಯ ಜಮೀನಿನಲ್ಲಿ ನೇರವಾಗಿ ಕಾರ್ಯನಿರತರಾಗಿರುವವರು. ಇವರು ಭೂಮಿಯ ಮಾಲೀಕರಾಗಿರಬಹುದು ಅಥವಾ ಗೇಣಿದಾರರಾಗಿರಬಹುದು. 2. ವಾರದಾರರು (ಕ್ರಾಪ್ ಷೇರರ್ಸ್) ಪ್ರಪಂಚದ ಅನೇಕ ಕಡೆಗಳಲ್ಲಿ ಭೂಮಿಯನ್ನು ಲಾವಣಿಗೆ ಪಡೆದಿರುವ ವ್ಯವಸಾಯಗಾರರು ಮಾಲೀಕರೊಡನೆ ಆ ಭೂಮಿಯ ಉತ್ಪನ್ನದಲ್ಲಿ ಪಾಲುಗೊಳ್ಳುತ್ತಾರೆ. 3. ಒಂದು ಗೊತ್ತಾದ ಕೂಲಿಗಾಗಿ ಇತರರ ಜಮೀನಿನಲ್ಲಿ ಕೆಲಸ ಮಾಡುವವರು. ಈ ಗುಂಪಿಗೆ ಸೇರಿದವರ ಜೀವನದ ಸಮಸ್ಯೆ ಇಂದು ಅನೇಕ ರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಾಮುಖ್ಯ ಪಡೆದಿದೆ.

ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲಿ ಕೃಷಿಯಲ್ಲಿ ನಿರತರಾದವರ ಸಂಖ್ಯೆ ಶೇಕಡ 10ಕ್ಕಿಂತ ಕಡಿಮೆ. ಅಭಿವೃದ್ಧಿಶೀಲ ದೇಶಗಳಲ್ಲಿ ಅಲ್ಲಿಯ ಜನಸಂಖ್ಯೆಯ ಶೇಕಡ 60ಕ್ಕೂ ಹೆಚ್ಚು ಮಂದಿ ವ್ಯವಸಾಯವನ್ನೆ ಅವಲಂಬಿಸಿರುತ್ತಾರೆ. ಎಲ್ಲ ದೇಶಗಳಲ್ಲೂ ಭೂಮಾಲೀಕರ ಸಂಖ್ಯೆಗಿಂತಲೂ ವ್ಯವಸಾಯ ಕೆಲಸಗಾರರ ಸಂಖ್ಯೆ ಹೆಚ್ಚಾಗಿದೆ. ಭಾರತದಲ್ಲಿ ವ್ಯವಸಾಯದಲ್ಲಿ ನಿರತರಾಗಿರುವ ಜನರಲ್ಲಿ ಶೇ. 30 ಕ್ಕಿಂತಲೂ ಹೆಚ್ಚು ಮಂದಿ ಕೂಲಿಗಾಗಿ ಕೆಲಸಮಾಡುವ ಭೂರಹಿತ ಶ್ರಮಜೀವಿಗಳಾಗಿದ್ದಾರೆ. ಇವರು ವರ್ಷದ ಕೆಲವು ತಿಂಗಳುಗಳಲ್ಲಿ ಇತರರ ಜಮೀನಿನಲ್ಲಿ ಕೂಲಿಗಾಗಿ ಕೆಲಸ ಮಾಡುತ್ತಾರೆ. ಇಂಥವರಲ್ಲಿ ಪುರುಷರ ಸಂಖ್ಯೆಗಿಂತಲೂ ಸ್ತ್ರೀಯರ ಮತ್ತು ಮಕ್ಕಳ ಸಂಖ್ಯೆ ಹೆಚ್ಚು.

ಏಷ್ಯನ್ ದೇಶಗಳ ಸಣ್ಣ ಜಮೀನಿನ ಒಡೆಯರು ಕೂಡ ತಮ್ಮ ಆದಾಯದ ಕೊರತೆಯನ್ನು ತುಂಬಿಸಲು ಇತರರ ಜಮೀನಿನಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಾರೆ. ಮತ್ತೆ ಹಲವು ದೇಶಗಳ ನಗರಗಳಲ್ಲಿ ಅಥವಾ ಗ್ರಾಮ ಪ್ರದೇಶಗಳಲ್ಲಿ ಬೇರೆ ಉದ್ಯೋಗಗಳಲ್ಲಿರುವವರೂ ವ್ಯವಸಾಯರಂಗದಲ್ಲಿ ಕೆಲಸದ ಒತ್ತಡ ಹೆಚ್ಚಾಗಿರುವ ಕಾಲದಲ್ಲಿ ಕೂಲಿಗಾಗಿ ತಾತ್ಕಾಲಿಕ ಕೆಲಸ ಮಾಡುತ್ತಾರೆ.

ಆರ್ಥಿಕವಾಗಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ವ್ಯವಸಾಯನಿರತರ ಪ್ರಮಾಣ ಏಕಪ್ರಕಾರವಾಗಿ ಕ್ಷೀಣಿಸುತ್ತಿದೆ. ಬೇಸಾಯ ಕೆಲಸಗಾರರ ಕೊರತೆಯನ್ನು ತುಂಬಿಸಲು ಅವರನ್ನು ಹೆಚ್ಚು ದಕ್ಷತೆಯಿಂದ ಉಪಯೋಗಿಸಿಕೊಳ್ಳಬೇಕಾದ ಆವಶ್ಯಕತೆ ತಲೆದೋರಿದೆ. ಎಷ್ಟೋ ಸನ್ನಿವೇಶಗಳಲ್ಲಿ ಗ್ರಾಮ ಪ್ರದೇಶದ ಜನ ಊರುಗಳಿಗೂ ನಗರಗಳಿಗೂ ವಲಸೆ ಹೋದುದರ ಪರಿಣಾಮವಾಗಿ ಗ್ರಾಮ ಸಮಾಜ ಯುವಕ ಉತ್ಸಾಹೀ ಕೃಷಿ ಜನಾಂಗವನ್ನು ಕಳೆದುಕೊಂಡಿದೆ. ಬೇಸಾಯದ ಕೆಲಸಗಾರರು ವ್ಯವಸಾಯ ಕ್ಷೇತ್ರದಿಂದ ಹೊರಬೀಳುವುದು ಸ್ವಾಭಾವಿಕವಾದ ಬೆಳೆವಣಿಗೆಯಾದರೂ ಇದಕ್ಕೆ ಮತ್ತೆ ಕೆಲವು ಕಾರಣಗಳೂ ಇವೆ: 1. ಕೃಷಿ ಕೆಲಸಗಾರರು ವಾಸಿಸುವ ಆಕರ್ಷಕವಲ್ಲದ ಸನ್ನಿವೇಶ. 2. ಅವರ ಕೆಲಸದ ಅಸಮರ್ಪಕ ಸ್ಥಿತಿ. 3. ಅಸಮಂಜಸವಾದ ಕೂಲಿಯ ದರ.

ಸಾಧಾರಣವಾಗಿ ಕೂಲಿಕೆಲಸ ಮಾಡುವ ಬೇಸಾಯ ಕಾರ್ಮಿಕರಿಗೆ ಇತರ ಉದ್ಯಮಗಳಲ್ಲಿಯ ಕೆಲಸಗಾರರಷ್ಟು ಅನುಕೂಲವಾದ ಜೀವನಸ್ಥಿತಿಗತಿಗಳಾಗಲಿ ಕೆಲಸದ ಸನ್ನಿವೇಶವಾಗಲಿ ಕೂಲಿಯ ದರವಾಗಲಿ ಇಲ್ಲ. ಏಕೆಂದರೆ, ಬೇಸಾಯಕೆಲಸಗಾರರ ಉತ್ಪಾದನ ಶಕ್ತಿ ಕಡಿಮೆಯಾಗಿರುವುದರಿಂದ ಅವರಿಗೆ ಭೂ ಮಾಲೀಕರು ಹೆಚ್ಚಿನ ವೇತನವನ್ನಾಗಲಿ ಜೀವನದ ಉತ್ತಮ ಸನ್ನಿವೇಶವನ್ನಾಗಲಿ ಒದಗಿಸುವ ಸಂಭವ ಕಡಿಮೆ. ವ್ಯವಸಾಯ ಕೆಲಸಗಾರರು ಸಾಮಾನ್ಯವಾಗಿ ಒಂದೇಕಡೆ ಕೇಂದ್ರೀಕೃತವಾಗಿರದೆ ವಿಶಾಲವಾದ ಪ್ರದೇಶಗಳಲ್ಲಿ ಚದುರಿಹೋಗಿರುವುದರಿಂದ ಅವರಲ್ಲಿ ಸಂಘಟನ ಶಕ್ತಿ ಕಡಿಮೆ. ಹೀಗೆ ಬೇಸಾಯ ಕೆಲಸಗಾರರ ಸಂಘಗಳು ಅತಿ ವಿರಳ. ಅವರಲ್ಲನೇಕರು ಅವಿದ್ಯಾವಂತರು. ಈ ಕಾರಣಗಳಿಂದಾಗಿ ವ್ಯವಸಾಯ ಕಾರ್ಮಿಕರಲ್ಲಿ ದೀರ್ಘವಾದ ಕೆಲಸದ ಅವಧಿ, ಹಿತಕರವಲ್ಲದ ಜೀವನದ ಸನ್ನಿವೇಶ, ಕಡಿಮೆಮಟ್ಟದ ಕೂಲಿ, ಸಾಂಸ್ಕೃತಿಕ ಮತ್ತು ಮನೋರಂಜನೆ ಚಟುವಟಿಕೆಗಳ ಅಭಾವ-ಮುಂತಾದ ಅನೇಕ ಕೊರತೆಗಳಿವೆ.

ಕೃಷಿ ಕಾರ್ಮಿಕರು ಹಣದ ರೂಪದಲ್ಲಿ ಪಡೆಯುವ ಕೂಲಿಯ ಜೊತೆಗೆ ಸರಕುಗಳ ಅಥವಾ ಇತರ ಸೌಲಭ್ಯಗಳ ರೂಪದಲ್ಲಿ ಪಡೆಯುವ ಕೂಲಿಯನ್ನೂ ಪರಿಗಣಿಸಬೇಕು. ಹಿಂದುಳಿದ ರಾಷ್ಟ್ರಗಳಲ್ಲಿ ಅವರ ಕೂಲಿಯ ಹೆಚ್ಚಿನ ಅಂಶ ಈ ರೀತಿಯ ಸರಕುಗಳ ರೂಪದಲ್ಲೇ ಇರುತ್ತದೆ. ಅವರಿಗೆ ದೊರೆಯುವ ಉಚಿತ ವಸತಿ ಸೌಕರ್ಯ, ಕಡಿಮೆ ದರದಲ್ಲಿ ಆಹಾರ ಸಾಮಗ್ರಿಗಳ ಸರಬರಾಜು, ಬಟ್ಟೆ ಬರೆಯ ಪೂರೈಕೆ-ಇವೆಲ್ಲ ಅವರ ಕೂಲಿಯ ಅಂಶಗಳಾಗಿರುತ್ತವೆ. ಈ ರೀತಿಯಾಗಿ ವಸ್ತು ಸೇವೆಗಳ ರೂಪದ ಕೂಲಿಯನ್ನು ಪರಿಗಣಿಸಿದರೂ ಬೇಸಾಯ ಕೆಲಸಗಾರರ ಒಟ್ಟು ಕೂಲಿ ಇತರ ಉದ್ಯಮಗಳ ಕೂಲಿಯ ಮಟ್ಟಕ್ಕಿಂತ ಕಡಿಮೆಯಾಗಿಯೇ ಇರುತ್ತದೆ.

ಭಾರತದಲ್ಲಿ ಭೂರಹಿತ ಕೂಲಿಗಾರರ ಸಂಖ್ಯೆ ಹೆಚ್ಚುತ್ತಿದೆ. ಇದರ ಪರಿಣಾಮವಾಗಿ ವ್ಯವಸಾಯರಂಗದಲ್ಲಿ ಕೂಲಿಯ ಮಟ್ಟ ಇಳಿದಿರುವುದಲ್ಲದೆ ವರ್ಷದಲ್ಲಿ ಕೆಲಸ ಇಲ್ಲದಿರುವ ದಿನಗಳಸಂಖ್ಯೆ ಹೆಚ್ಚುತ್ತಿದೆ. ದೆಹಲಿ, ಅಜ್ಮೀರ್, ಸೌರಾಷ್ಟ್ರ ಮುಂತಾದ ಕೆಲವು ಪ್ರದೇಶಗಳಲ್ಲಿ ಮಾತ್ರ ಬೇಸಾಯ ಕೆಲಸಗಾರರ ಪ್ರಮಾಣ ಇತರ ಉದ್ಯಮಗಳ ಕೆಲಸಗಾರರ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಮಿಕ್ಕ ಕಡೆಗಳಲ್ಲೆಲ್ಲ ಕೈಗಾರಿಕೆಯಲ್ಲಿ ಬಹಳ ಮುಂದುವರಿದಿರುವ ಮಹಾರಾಷ್ಟ್ರ ಮತ್ತು ಬಂಗಾಲ ಪ್ರದೇಶಗಳಲ್ಲಿ ಕೂಡ ವ್ಯವಸಾಯ ಕೆಲಸಗಾರರ ಪ್ರಮಾಣವೇ ಹೆಚ್ಚು. ಹಿಮಾಚಲ ಪ್ರದೇಶಗಳಲ್ಲಿಯಂತೂ ಶೇ. 90 ರಷ್ಟು ಮಂದಿ ಕೃಷಿ ಕಾರ್ಮಿಕರಿದ್ದಾರೆ. ಇತ್ತೀಚಿಗೆ ಭಾರತದಲ್ಲಿ ಕೃಷಿಕಾರ್ಮಿಕರ ಸಮಸ್ಯೆಗೆ ಸರ್ಕಾರ ಹೆಚ್ಚಿನ ಗಮನ ನೀಡುತ್ತಿದೆ.

**ಭಾರತದ ಕೃಷಿ ಕೆಲಸಗಾರರಲ್ಲಿ ಮೂರು ವಿಧಗಳುಂಟು: 1. ಕೃಷಿ ಕಾರ್ಮಿಕರು:** ಉಳುವುದೇ ಮುಂತಾದ ಕೆಲಸಗಳಲ್ಲಿ ಪ್ರತ್ಯಕ್ಷವಾಗಿ ನಿರತರಾಗಿರುವವರು. **2. ಅಕುಶಲ ಕರ್ಮಿಗಳು (ಕಾರ್ಮಿಕರು)** : ಬಾವಿತೋಡುವುದು, ಬೇಲಿ ಕಟ್ಟುವುದು, ಮುಂತಾದ ಕೆಲಸ ಮಾಡುವವರು. **3. ಕುಶಲ ಕರ್ಮಿಗಳು (ಕಾರ್ಮಿಕರು)** : ಬಡಗಿಗಳು, ಲೋಹದ ಕೆಲಸ ಮಾಡುವವರು, ಇತ್ಯಾದಿ. ಇವರಲ್ಲದೆ ಅಲ್ಪಸ್ವಲ್ಪ ಜಮೀನು ಹೊಂದಿದ್ದು ಆಗಾಗ್ಗೆ ಇತರರ ಭೂಮಿಗಳಲ್ಲಿ ಕೆಲಸ ಮಾಡುವವರೂ ಸೇರಿದ್ದಾರೆ.

1947ರ ಅನಂತರ ಭಾರತದ ರಾಷ್ಟ್ರೀಯ ಸರ್ಕಾರ ಕೃಷಿ ಕಾರ್ಮಿಕರಸ್ಥಿತಿಯನ್ನು ಉತ್ತಮಪಡಿಸಲು ಅನೇಕ ಪ್ರಯತ್ನಗಳನ್ನು ಕೈಗೊಂಡಿದೆ. 1948ರಲ್ಲಿಯೇ ಕನಿಷ್ಠ ಕೂಲಿ ಕಾಯಿದೆ ಜಾರಿಗೆ ಬಂತಾದರೂ ಇದನ್ನು ವಾಸ್ತವವಾಗಿ ಕಾರ್ಯ ರೂಪಕ್ಕೆ ತರಲು ಅನೇಕ ಅಡಚಣೆಗಳಿದ್ದವು. ಭಾರತದ ಪಂಚವಾರ್ಷಿಕ ಯೋಜನೆಗಳು ಆರಂಭವಾದ ಮೇಲೆ ಬೇಸಾಯ ಕೆಲಸಗಾರರ ಸಮಸ್ಯೆ ಮತ್ತು ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಅವರ ಸ್ಥಾನದ ಕಡೆಗೆ ಹೆಚ್ಚಿನ ಗಮನ ಕೊಡಲಾಗಿದೆ. 1950-51ರಲ್ಲಿ ಭಾರತ ಸರ್ಕಾರ ಕೃಷಿಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ಆಯೋಗವನ್ನು ನೇಮಿಸಿತು. ಪುನಃ 1956-57ರಲ್ಲಿ ಎರಡನೆಯ ಬಾರಿ ವಿಚಾರಣೆ ನಡೆಸಲಾಯಿತು. ಈ ಆಯೋಗಗಳ ವರದಿಗಳ ಪ್ರಕಾರ ದೇಶದಲ್ಲಿರುವ ಹಳ್ಳಿಯ ಕುಟುಂಬಗಳಲ್ಲಿ ಶೇ. 30 ರಷ್ಟು ಕೃಷಿ ಕಾರ್ಮಿಕರ ಕುಟುಂಬಗಳೆಂದು ಅಂದಾಜು ಮಾಡಲಾಗಿದೆ. ಇವರಲ್ಲಿ ಅರ್ಧಾಂಶ ಜನರಿಗೆ ಭೂಮಿ ಇರುವುದಿಲ್ಲ. ಉಳಿದವರ ಸ್ವಾಧೀನದಲ್ಲಿ ಸ್ವಲ್ಪ ಭೂಮಿ ಇರುತ್ತದೆ. ದೇಶದಲ್ಲಿ 163 ಲಕ್ಷ ಬೇಸಾಯಗಾರ ಕುಟುಂಬಗಳಿವೆಯೆಂದು ಈ ವರದಿಗಳಿಂದ ತಿಳಿದು ಬಂದಿದೆ. ಅವರಲ್ಲಿ ಶೇಕಡ 83 ರಷ್ಟು ಜನ ದಿನಗೂಲಿಗೆ ಹಂಗಾಮಿಯಾಗಿ ಕೆಲಸಕ್ಕೆ ನೇಮಕವಾಗುವವರು. ಉಳಿದವರು ಒಂದು ಗೊತ್ತಾದ ಅವಧಿಯವರೆಗೆ ಕರಾರಿನ ಮೇರೆಗೆ ಕೆಲಸಕ್ಕೆ ನೇಮಕವಾಗಿರುವವರು.

ಎರಡನೆಯ ಆಯೋಗದ ವಿವರಣೆಯ ಪ್ರಕಾರ ಕೃಷಿ ಕಾರ್ಮಿಕರ ಕುಟುಂಬ ಎಂದರೆ ವ್ಯವಸಾಯದಿಂದ ಬರುವ ಕೂಲಿಯೇ ಪ್ರಮುಖ ಆದಾಯವಾಗಿರುವ ಕುಟುಂಬ. 1956-57ರಲ್ಲಿ ಭಾರತದಲ್ಲಿ ಸುಮಾರು 330 ಲಕ್ಷ ಕೃಷಿ ಕಾರ್ಮಿಕರಿದ್ದರು. ಇವರಲ್ಲಿ 180 ಲಕ್ಷ ಪುರುಷರು, 120 ಲಕ್ಷ ಮಹಿಳೆಯರು ಮತ್ತು 30 ಲಕ್ಷ ಜನ ಮಕ್ಕಳು. ಹಂಗಾಮಿಯಾಗಿ ಕೆಲಸ ಮಾಡುವ ಪುರುಷರಿಗೆ ವರ್ಷದಲ್ಲಿ 128 ದಿನಗಳು ಕೆಲಸವಿರುವುದಿಲ್ಲ. ಈ ಕೆಲಸಗಾರರ ದಿನಗೂಲಿ 1956ರಲ್ಲಿ ಸರಾಸರಿ 96 ಪೈಸೆಯಾಗಿತ್ತು. ಈ ಕೂಲಿಯಲ್ಲಿ ಶೇ. 40 ರಷ್ಟು ಸರಕುಗಳ ರೂಪದಲ್ಲಿ ಸಂದಾಯವಾಗುತ್ತಿತ್ತು. 1950-56ರ ಅವಧಿಯಲ್ಲಿ ಕೃಷಿ ಕಾರ್ಮಿಕರ ಕೂಲಿಯ ಮಟ್ಟ ಇಳಿದಿತ್ತು. ಹಣ ರೂಪದ ಕೂಲಿಗಿಂತಲೂ ಸರಕಿನ ರೂಪದ ಕೂಲಿಗೆ ಹೆಚ್ಚಿನ ಪ್ರಾಮುಖ್ಯ ಉಂಟಾಯಿತು, ಕಾರ್ಮಿಕ ಕುಟುಂಬದ ವಾರ್ಷಿಕಾದಾಯ 1950-51ರಲ್ಲಿ ರೂ. 447 ಇದ್ದದ್ದು, 1956-57ರಲ್ಲಿ ರೂ. 437ಕ್ಕೆ ಕಡಿಮೆಯಾಗಿತ್ತು. ಹಾಗೆಯೇ ತಲಾ ವರಮಾನ ರೂ. 140 ರಿಂದ ರೂ. 99.4ಕ್ಕೆ ಇಳಿದಿತ್ತು.

ಭೂ ರಹಿತ ಕಾರ್ಮಿಕರಲ್ಲಿ ಬಹುಪಾಲು ಜನ ಹಿಂದುಳಿದ ಪಂಗಡಕ್ಕೆ ಸೇರಿದವರು. 1950ರಲ್ಲಿಯೇ ಭಾರತದ ಭೂ ವ್ಯವಸಾಯ ಸುಧಾರಣಾ ಸಮಿತಿ ರಚಿಸಿದಂತೆ ಭಾರತದ ವ್ಯವಸಾಯ ಸುಧಾರಿಸಬೇಕಾದರೆ ಹಿಂದುಳಿದ ಪಂಗಡಕ್ಕೆ ಸೇರಿದ ಕೃಷಿಕಾರ್ಮಿಕರ ಸಮಸ್ಯೆ ಅಗತ್ಯವಾಗಿ ಸುಧಾರಿಸಬೇಕು. ವಂಶಪಾರಂಪರ್ಯವಾಗಿ ಅವರು ಅನುಸರಿಸುತ್ತ ಬಂದಿರುವ ಉದ್ಯೋಗ, ಭೂ ಹಿಡುವಳಿಯ ಪದ್ಧತಿ, ಗೇಣಿಯ ಸೌಲಭ್ಯ-ಮುಂತಾದ ಅಂಶಗಳಿಗೆ ಅನುಗುಣವಾಗಿಇವರ ಆರ್ಥಿಕ ಸಾಮಾಜಿಕ ಸ್ಥಾನಮಾನಗಳ ನಿಷ್ಕರ್ಷೆಯಾಗಿದೆ.

ಕೃಷಿಕಾರ್ಮಿಕರ ವಿಚಾರಣಾ ಆಯೋಗದ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಭಾರತದ ಎರಡನೆಯ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಅನೇಕ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಆಯೋಗದ ವರದಿಗಳ ಆಧಾರದ ಮೇಲೆ ಕೇರಳ, ಪಂಜಾಬ್, ಒರಿಸ್ಸ, ರಾಜಸ್ಥಾನ, ಅಜ್ಮೀರ್, ದೆಹಲಿ, ತ್ರಿಪುರ, ಕಚ್ ಮತ್ತು ಕೊಡಗು ಪ್ರದೇಶಗಳಲ್ಲಿಯೂ ಅಸ್ಸಾಮ್, ಆಂಧ್ರ ಪ್ರದೇಶ, ಬಿಹಾರ, ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಕರ್ನಾಟಕ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಲದ ಹಲವು ಭಾಗಗಳಲ್ಲಿಯೂ ಕನಿಷ್ಠಮಟ್ಟದ ವೇತನವನ್ನು ಜಾರಿಗೆ ತರಲಾಗಿದೆ. ಕೃಷಿ ಕಾರ್ಮಿಕರನ್ನು ಯಾವುದೇ ರೀತಿಯ ಜೀತ ಪದ್ಧತಿಗೆ ಗುರಿ ಮಾಡುವುದು ಕಾನೂನು ಬಾಹಿರವಾದ, ಶಿಕ್ಷಾರ್ಹವಾದ, ಗುರುತರ ಅಪರಾಧವೆಂದು ರಾಷ್ಟ್ರ ಸಂವಿಧಾನ ಘೋಷಿಸಿದೆ.

ಕೃಷಿಕಾರ್ಮಿಕರಿಗೆ ಸರಿಯಾದ ಉದ್ಯೋಗಾವಕಾಶ ದೊರೆತು ಅವರ ಸ್ಥಿತಿ ಉತ್ತಮಗೊಳ್ಳದ ಹೊರತು ದೇಶದಲ್ಲಿ ಯೋಜನಾನುಗುಣವಾದ ಪ್ರಗತಿ ಸಾಧ್ಯವಿಲ್ಲವೆಂದು ಭಾರತದ ಯೋಜನಾ ಆಯೋಗ ಸೂಚಿಸಿದೆ. ಇದರ ಪರಿಣಾಮವಾಗಿ ಪಂಚ ವಾರ್ಷಿಕಯೋಜನೆಗಳ ಅಡಿಯಲ್ಲಿ ಕೃಷಿ ಕಾರ್ಮಿಕರ ಕುಂದುಕೊರತೆಗಳನ್ನು ನಿವಾರಿಸಲು ಅನೇಕ ಕ್ರಮಗಳನ್ನು ಜಾರಿಗೆ ತರಲಾಗಿದೆ: 1. ವ್ಯವಸಾಯ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಪಶುಸಂಗೋಪನೆಯ ಯೋಜನೆಗಳು; 2. ಗ್ರಾಮಕೈಗಾರಿಕೆ, ಗೃಹಕೈಗಾರಿಕೆ ಮತ್ತು ಸಣ್ಣ ಗಾತ್ರದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಕೃಷಿಕಾರ್ಮಿಕರಿಗೆ ಹೆಚ್ಚಿನ

ಉದ್ಯೋಗಾವಕಾಶದ ಕಲ್ಪನೆ ; 3. ಭೂಮಿಯ ಹಂಚುವಿಕೆ, ಶಿಕ್ಷಣಾವಕಾಶ ಇವುಗಳಿಂದ ಅವರ ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸಿ ಅವರಲ್ಲಿ ಆತ್ಮವಿಕಾಸ, ಕಾರ್ಯಾಸಕ್ತಿ ಮತ್ತು ಸಾಮರ್ಥ್ಯ ಉಂಟಾಗುವಂತೆ ಮಾಡುವುದು; 4. ಗ್ರಾಮ ಪುನರುಜ್ಜೀವನ ಕಾರ್ಯಗಳಿಗಾಗಿ ಮೀಸಲಾಗಿರುವ ಹಣದಲ್ಲಿ ಅಧಿಕಾಂಶವನ್ನು ಅವರ ಜೀವನದ ಪರಿಸ್ಥಿತಿಯನ್ನು ಸುಧಾರಿಸಲು ಉಪಯೋಗಿಸುವುದು.

ಒಂದನೆಯ ಯೋಜನೆಯ ಅವಧಿಯಲ್ಲಿ ಸುಮಾರು ರೂ. 1.5 ಕೋಟಿಯನ್ನು ಭೂರಹಿತ ಕಾರ್ಮಿಕರಿಗೆ ಭೂಮಿಯನ್ನು ಒದಗಿಸಲು ಉಪಯೋಗಿಸಲಾಯಿತು ಮತ್ತು ರೂ. 32 ಕೋಟಿಯನ್ನು ಹಿಂದುಳಿದ ಪಂಗಡದ ಕೃಷಿ ಕಾರ್ಮಿಕರ ಕ್ಷೇಮಾಭ್ಯುದಯಕ್ಕಾಗಿ ಉಪಯೋಗಿಸಲಾಯಿತು. ಎರಡನೆಯ ಯೋಜನೆಯ ಅವಧಿಯಲ್ಲಿ 20,000 ಕೃಷಿಕ ಕುಟುಂಬಗಳನ್ನು 1 ಲಕ್ಷ ಎಕರೆ ಭೂಮಿಯಲ್ಲಿ ನೆಲಸುವಂತೆ ಮಾಡಲು ಸೌಕರ್ಯಗಳನ್ನು ಕಲ್ಪಿಸಲು ಸುಮಾರು 5 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಯಿತು. ಮತ್ತು 90ಕೋಟಿ ರೂ.ಗಳನ್ನು ಹಿಂದುಳಿದ ಪಂಗಡದ ಬೇಸಾಯ ಕೆಲಸಗಾರರ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಾಗಿ ವಿನಿಯೋಗಿಸಲಾಯಿತು. ಮೂರನೆಯ ಯೋಜನೆಯ ಅವಧಿಯಲ್ಲಿ ಹೆಚ್ಚಿನ ವ್ಯವಸಾಯ ಪ್ರಗತಿಯನ್ನು ಸಾಧಿಸುವುದರ ಮೂಲಕ ಬೇಸಾಯ ಕೆಲಸಗಾರರ ಸ್ಥಿತಿಯನ್ನು ಉತ್ತಮ ಪಡಿಸುವ ಉದ್ದೇಶವಿತ್ತು. ಭೂ ಸುಧಾರಣೆ ಹಾಗೂ ಉದ್ಯೋಗ ಪ್ರಧಾನ ಕಾರ್ಯಕ್ರಮಗಳ ರೂಪಣೆ– ಈ ಎರಡೂ ದಿಕ್ಕುಗಳಲ್ಲಿ ನಾಲ್ಕನೆಯ ಯೋಜನೆಯಲ್ಲಿ ಕ್ರಮಗಳನ್ನು ಸೂಚಿಸಲಾಗಿದೆ. ಭೂ ಸುಧಾರಣೆಗೂ ಭೂ ರಹಿತ ಕೃಷಿ ಕಾರ್ಮಿಕರ ಜೀವನ ಸ್ಥಿತಿಗತಿಗಳ ಸುಧಾರಣೆಗೂ ನೇರ ಸಂಬಂಧವುಂಟೆಂಬುದನ್ನು ಯೋಜನೆಯಲ್ಲಿ ಗಮನಿಸಲಾಗಿದೆ. ಪಾಳು ನೆಲ ವರ್ಗೀಕರಣ ಮತ್ತು ಭೂಹೀನರಲ್ಲಿ ಅದರ ಹಂಚಿಕೆ, ಅವರಿಗೆ ಜಮೀನು ನೀಡುವುದರ ಜೊತೆಗೆ ಉದ್ದರಿ ಮುಂತಾದ ಸೌಲಭ್ಯಗಳ ನೀಡಿಕೆ, ಗೇಣಿ ಸುಧಾರಣೆ, ಸಾಂದ್ರ ಬೇಸಾಯ–ಇವುಗಳಿಂದ ಕೃಷಿ ಕಾರ್ಮಿಕರ ಉದ್ಯೋಗ ಸ್ಥಿತಿಗತಿಗಳು ಉತ್ತಮಗೊಳ್ಳುತ್ತಿವೆ. ಇರುವಷ್ಟೇ ನೆಲಕ್ಕಾಗಿ ಕೃಷಿ ಕಾರ್ಮಿಕರಲ್ಲೇ ಸ್ಪರ್ಧೆ ಹೆಚ್ಚದಂತೆ ಕ್ರಮ ಕೈಗೊಳ್ಳುವುದರಿಂದ ಗೇಣಿದಾರರ ಮತ್ತು ವಾರಸುಗಾರರ ಭದ್ರತೆ ಸಾಧಿಸಬಹುದಾಗಿದೆ. ಕೃಷಿ ಕಾರ್ಮಿಕರಿಗೆ ಬೇರೆ ಉದ್ಯೋಗಾವಕಾಶಗಳನ್ನು ನಿರ್ಮಿಸುವುದು ನಾಲ್ಕನೆಯ ಯೋಜನೆಯ ಇನ್ನೊಂದು ಪರಿಹಾರ. ಕೃಷಿಯ ಚೌಕಟ್ಟಿಗೇ ಹೊಂದಿಕೊಂಡಂತೆ ಅನೇಕ ಉದ್ಯೋಗಗಳನ್ನು ಬೆಳೆಸಲು ದೇಶದ ವಿವಿಧ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಇವಕ್ಕೆ ಸಾಂಸ್ಥಿಕ ಉದ್ದರಿ ದೊರಕುವುದು ಕಷ್ಟವಾದ್ದರಿಂದ ಸರ್ಕಾರವೇ ಈ ಕಾರ್ಯಕ್ರಮಗಳಿಗೆ ನೆರವು ನೀಡಲು ಕ್ರಮ ಕೈಕೊಂಡಿದೆ.

1951ರಲ್ಲಿ ಆಚಾರ್ಯ ವಿನೋಬಾ ಭಾವೆಯವರು ಆರಂಭಿಸಿದ ಭೂದಾನ ಚಳವಳಿಯೂ ಭೂರಹಿತ ಕೃಷಿ ಕಾರ್ಮಿಕರ ಸಮಸ್ಯೆಯನ್ನು ಪರಿಹರಿಸಲು ಸ್ವಲ್ಪ ಮಟ್ಟಿಗೆ ಸಹಕಾರಿಯಾಗಿದೆ. 1967ರ ಮಾರ್ಚಿಯವರೆಗೆ 42.7 ಲಕ್ಷ ಎಕರೆಗಳನ್ನು ಸಂಗ್ರಹಿಸಿ, 12 ಲಕ್ಷ ಎಕರೆಗಳನ್ನು ಭೂರಹಿತರಲ್ಲಿ ಹಂಚಲಾಗಿದೆ. ಗ್ರಾಮದಾನ ಇದರ ವಿಸ್ತೃತ ರೂಪ. (ಎಸ್.ಎಲ್.ಆರ್.)

**ಕೃಷಿ ಕೂಲಿ :** ನಿರುದ್ಯೋಗಿಗಳು ಅಧಿಕವಾಗಿರುವ ಭಾರತದಂಥ ದೇಶಗಳಲ್ಲಿ ಕೃಷಿ ಕೆಲಸಗಾರರ ಕೂಲಿ ದರಗಳು ಸಾಮಾನ್ಯವಾಗಿ ಸಾಂಪ್ರದಾಯಿಕವಾಗಿ ಬಂದ ಮಾಮೂಲು ದರಗಳನ್ನು ಅವಲಂಬಿಸಿರುತ್ತವೆ. ಕಾರ್ಮಿಕರ ಬೇಡಿಕೆ ಮತ್ತು ಪೂರೈಕೆಯ ನಿಬಂಧನೆಗಳನ್ವಯ ಗಣನೀಯ ಪ್ರಮಾಣದಲ್ಲಿ ತೀರ್ಮಾನವಾಗುವುದಿಲ್ಲ. ಮುಂದುವರಿದ ರಾಷ್ಟ್ರಗಳಲ್ಲಿ ಕೆಲಸಗಾರರ ನೇಮಕಕ್ಕೆ ಕೃಷಿರಂಗವೂ ಇತರ ಉದ್ಯಮ ರಂಗಗಳೊಂದಿಗೆ ಪೈಪೋಟಿ ನಡೆಸಬೇಕಾಗುತ್ತದೆ. ಅಲ್ಲಿ ಕಾರ್ಮಿಕರನ್ನು ಕೃಷಿರಂಗಕ್ಕೆ ಆಕರ್ಷಿಸಬೇಕಾದರೆ ಹೆಚ್ಚಿನ ಕೂಲಿದರಗಳನ್ನು ನೀಡಬೇಕಾಗುತ್ತದೆ. ಕೆಲವು ಕಾರ್ಯಗಳನ್ನು ಋತುಗಳಿಗೆ ಅನುಗುಣವಾಗಿ (ಉದಾ : ಬಿತ್ತನೆ, ಕಳೆ ತೆಗೆಯುವುದು, ಕಟಾವು ಒಕ್ಕಣೆ) ಶೀಘ್ರವಾಗಿ ಪೂರೈಸಬೇಕಾದಾಗ ಕೃಷಿ ಕಾರ್ಮಿಕರಿಗೆ ಬೇಡಿಕೆ ಹೆಚ್ಚಿ ಕೂಲಿದರಗಳು ತಾತ್ಕಾಲಿಕವಾಗಿ ಏರುವ ಸಾಧ್ಯತೆ ಇರುತ್ತದೆ. ಇದರ ಜೊತೆಗೆ ಕೆಲವು ಪ್ರದೇಶಗಳಲ್ಲಿ ಲೋಕೋಪಯೋಗಿ ಕೆಲಸಗಳು (ಕೆರೆ ಕಟ್ಟೆ ಕಾಲುವೆಗಳ ನಿರ್ಮಾಣ ಮುಂತಾದವು) ನಡೆಯುತ್ತಿದ್ದಾಗ ಕೂಲಿಗಾರರ ಕೊರತೆಯುಂಟಾಗಿ ಕೃಷಿ ಕೂಲಿದರಗಳಲ್ಲಿ ಏರಿಕೆಯುಂಟಾಗುತ್ತದೆ. ಕೆಲವು ವರ್ಷಗಳಲ್ಲಿ ಮಳೆಬೆಳೆಗಳು ತೃಪ್ತಿಕರವಾಗಿಲ್ಲದೆ ಕ್ಷಾಮ ಡಾಮರಗಳಿಗೆ ತುತ್ತಾದ ಪ್ರದೇಶಗಳಲ್ಲಿ ರೈತರಲ್ಲಿ ಕೂಲಿ ನೀಡುವ ಶಕ್ತಿ ಕುಗ್ಗುವುದಷ್ಟೇ ಅಲ್ಲದೆ ಕೆಲಸಕ್ಕಾಗಿ ಹಾತೊರೆಯುವವರ ಸಂಖ್ಯೆ ಏರಿ ಅವರಿಗೆ ಕೆಲಸ ದೊರೆಯುವುದೇ ಕಷ್ಟವಾಗುತ್ತದೆ. ಆಗ ಕಾರ್ಮಿಕರ ಹೊಟ್ಟೆ ತುಂಬುವಷ್ಟು ಕೂಲಿ ಕೂಡ ಸಿಗದೆ ಹೋಗಬಹುದು. ವ್ಯವಸಾಯೋತ್ಪನ್ನಗಳ ಬೆಲೆಗಳು ಏರುತ್ತಿರುವ ಸಮಯದಲ್ಲಿ ಸಾಮಾನ್ಯವಾಗಿ ಕೃಷಿ ಕೂಲಿದರಗಳೂ ಏರುತ್ತವೆ. ಇಷ್ಟಾದರೂ ಸಾಮಾನ್ಯವಾಗಿ ಬೇಡಿಕೆ ಪೂರೈಕೆಗಳ ನಿಯಮದಿಂದ ಕೃಷಿ ಕೂಲಿ ಹೊರತಾಗಿ, ಸಂಪ್ರದಾಯಕ್ಕೆ ಅನುಸಾರವಾಗಿ ನಿರ್ಧಾರವಾಗುತ್ತದೆ. ಕೂಲಿದರಗಳು ಸ್ಥೂಲವಾಗಿ ಆಯಾ ದೇಶಗಳ ಅಥವಾ ಪ್ರಾಂತ್ಯಗಳ ಆರ್ಥಿಕಾಭಿವೃದ್ಧಿಯ ಅಳತೆಗೋಲುಗಳು. ಕೃಷಿ ಕೂಲಿದರಗಳು ಕೆಲಸ ಮತ್ತು ಋತುಗಳಿಗನುಗುಣವಾಗಿ ಮಾತ್ರವೇ ಅಲ್ಲದೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಹೆಚ್ಚು ಕಡಿಮೆಯಾಗುತ್ತವೆ; ಹುಡುಗರು, ದೊಡ್ಡವರು, ಹೆಣ್ಣಾಳುಗಳು, ಗಂಡಾಳುಗಳಿಗೆ ಬೇರೆಬೇರೆಯಾಗಿರುತ್ತವೆ. ಕೆಲಸ ಒಂದೇ ಬಗೆಯದಾಗಿದ್ದಾಗಲೂ ಗಂಡಾಳುಗಳಿಗೆ ಹೆಣ್ಣಾಳುಗಳಿಗಿಂತ ಹೆಚ್ಚಿನ ಕೂಲಿ ದೊರೆಯುತ್ತದೆ. ಹಾಗೆಯೇ ವಯಸ್ಕರಿಗೆ ಕಿರಿಯರಿಗಿಂತ ಅಧಿಕ ಕೂಲಿ ದೊರೆಯುತ್ತದೆ. ಕೆಲವು ವ್ಯವಸಾಯ ಕಾರ್ಯಗಳಲ್ಲಿ (ಉದಾ : ಉಳುಮೆ, ಅಗತೆ) ಹೆಚ್ಚಿನ ದೈಹಿಕ ಶ್ರಮ ಅಗತ್ಯ. ಆದ್ದರಿಂದ ಇಂಥ ಕೆಲಸಗಳಿಗೆ ಗಂಡಸರೇ ನೇಮಕವಾಗುತ್ತಾರೆ. ಅವರ ಕೂಲಿ ದರ ಸಾಮಾನ್ಯ ದರಗಳಿಗಿಂತ ಹೆಚ್ಚಾಗಿರುತ್ತದೆ. ಕೃಷಿ ಕೂಲಿಯನ್ನು ಹಣದ ರೂಪದಲ್ಲಾಗಲಿ ಧಾನ್ಯದ ರೂಪದಲ್ಲಾಗಲಿ ಕೊಡುವುದು ವಾಡಿಕೆ. ಕೆಲವು ವೇಳೆ ಕೃಷಿ ಕಾರ್ಮಿಕರು ಈ ಎರಡು ರೂಪಗಳಲ್ಲೂ ತಮ್ಮ ಕೂಲಿಯನ್ನು ಪಡೆಯುತ್ತಾರೆ.

ಕೃಷಿ ಕಾರ್ಮಿಕರ ಬಗ್ಗೆ ತನಿಖೆ ನಡೆಸಿ ವರದಿ ಒಪ್ಪಿಸಲು ಭಾರತ ಸರ್ಕಾರ ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಪೂರ್ವ ಎರಡು ತನಿಖಾ ಆಯೋಗಗಳನ್ನು ನೇಮಿಸಿತ್ತು. ಅವುಗಳ ವರದಿಗಳಿಂದ ಭಾರತದಲ್ಲಿ ಕೃಷಿ ಕಾರ್ಮಿಕರ ಕೂಲಿದರಗಳು (ಸರಾಸರಿ) ಮತ್ತು ಕೂಲಿಪಾವತಿ ವಿಧಾನಗಳ ಬಗ್ಗೆ ವಿವರಗಳು ದೊರಕುತ್ತವೆ.

ಸಾಮಾನ್ಯವಾಗಿ ಆಹಾರಧಾನ್ಯಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯದೆ ಬೆಲೆಗಳು ಏರಿದ್ದಾಗ ಕೃಷಿಕೂಲಿಗಾರರು ತಮ್ಮ ಕೂಲಿಯನ್ನು ಧಾನ್ಯ ರೂಪದಲ್ಲಿ ಪಡೆಯಲಿಚ್ಚಿಸುತ್ತಾರೆ. ಆಹಾರ ಧಾನ್ಯಗಳ ಬೆಲೆಗಳು ಇಳಿಮುಖವಾಗಿ, ಮಾರುಕಟ್ಟೆಯಲ್ಲಿ ಧಾನ್ಯದ ಕೊರತೆ ಇಲ್ಲದ ಪಕ್ಷದಲ್ಲಿ ಅವರು ತಮ್ಮ ಕೂಲಿಯನ್ನು ಹಣದ ರೂಪದಲ್ಲಿ ಪಡೆಯಲು ಆಶಿಸುತ್ತಾರೆ. ಕೃಷಿ ಕೂಲಿಗಾರರು–ಅದರಲ್ಲೂ ವಾರ್ಷಿಕ ಆಧಾರದ ಮೇಲೆ ನೇಮಕವಾದವರು–ತಮ್ಮ ವಾರ್ಷಿಕ ಕೂಲಿಯ ಜೊತೆಗೆ ದಿನದ ಊಟವನ್ನು ತಮ್ಮ ಯಜಮಾನನ ಮನೆಯಲ್ಲಿ ಪಡೆಯುವುದಲ್ಲದೆ ತಮಗೆ ಬೇಕಾದ ಬಟ್ಟೆಬರೆಗಳನ್ನೂ ಬೀಡಿ, ತಂಬಾಕು ಮುಂತಾದವನ್ನೂ ಪಡೆಯುತ್ತಾರೆ. ಹಂಗಾಮಿಯಾಗಿ ನೇಮಕವಾದ ದಿನಗೂಲಿ ಕಾರ್ಮಿಕರೂ ತಮ್ಮ ಕೂಲಿಯ ಹಣ ಅಥವಾ ಧಾನ್ಯದ ಜೊತೆಗೆ ಒಂದು ಊಟವನ್ನು ಸಹ ಕೆಲವು ವೇಳೆ ಪಡೆಯುತ್ತಾರೆ. ಈ ವ್ಯವಸ್ಥೆಯಿಂದ ಕೃಷಿ ಕೂಲಿಗಾರನಿಗೆ ಕೆಲಸದಲ್ಲಿ ಆಸಕ್ತಿ ಹೆಚ್ಚಿ ಅವನ ದಕ್ಷತೆ ಹೆಚ್ಚುವ ಸಾಧ್ಯತೆ ಇದೆ. ಇದೇ ರೀತಿ ಕೆಲವು ಸಾರಿ ಬತ್ತದ ಕೊಯ್ಲಿನ ಕಾಲದಲ್ಲಿ ಕೂಲಿಯ ಜೊತೆಗೆ ಆತ ಬತ್ತದ ಒಂದು ಸಣ್ಣ ಹೊರೆಯನ್ನೂ ಪಡೆಯಬಹುದು.

ಕೃಷಿ ಕೂಲಿ ಪಾವತಿಯ ಎರಡು ಪದ್ಧತಿಗಳು ವಾಡಿಕೆಯಲ್ಲುಂಟು. ಒಂದು ಅವರು ಕೆಲಸ ಮಾಡುವ ಕಾಲಕ್ಕನುಗುಣವಾಗಿ ಕೂಲಿ (ದಿನಗೂಲಿ) ಕೊಡುವುದು; ಎರಡು, ಮಾಡಬೇಕಾದ ಕೆಲಸವನ್ನು ಗುತ್ತಿಗೆಗೆ ಕೊಟ್ಟು ಅದಕ್ಕೆ ತಕ್ಕಂತೆ ಕೂಲಿ ಪಾವತಿ ಮಾಡುವುದು. ಮೊದಲನೆಯ (ಕಾಲಾನುಗುಣ) ಪದ್ಧತಿಯಲ್ಲಿ ಕೆಲಸಗಾರನ ಕೂಲಿ ಅವನು ಮಾಡಿದ ಕೆಲಸದ ಪ್ರಮಾಣವನ್ನಾಗಲಿ ಗುಣಮಟ್ಟವನ್ನಾಗಲಿ ಅವಲಂಬಿಸಿರುವುದಿಲ್ಲ; ಅವನು ಕೆಲಸದಲ್ಲಿ ನಿರತನಾಗಿದ್ದ ಕಾಲವನ್ನು ಅವಲಂಬಿಸಿರುತ್ತದೆ. ಈ ಪದ್ಧತಿಯಂತೆ ಕೂಲಿ ಕೊಡುವಾಗ ಕೆಲಸಗಾರರ ಮೇಲುಸ್ತುವಾರಿ ಅಗತ್ಯವಾಗುತ್ತದೆ. ಅಥವಾ ಯಜಮಾನನೂ ಆಳುಗಳ ಜೊತೆಯಲ್ಲಿ ಒಬ್ಬನಾಗಿ ಹೊಲದಲ್ಲಿ ದುಡಿಯುತ್ತಾನೆ.

ವ್ಯವಸಾಯ ಕಾರ್ಯಗಳನ್ನು ಕೈಗಾರಿಕೆಯಲ್ಲಿಯಂತೆ ಸುಲಭವಾಗಿ ಶಿಷ್ಟೀಕರಣಗೊಳಿಸಲು ಸಾಧ್ಯವಿಲ್ಲ. ಕೆಲವು ಕಾರ್ಯಗಳಲ್ಲಿ ಮಾತ್ರ ಇದು ಸಾಧ್ಯ. ಗಿಡದಿಂದ ಹತ್ತಿಯನ್ನು ಬಿಡಿಸುವುದು; ನೆಲಗಡಲೆ, ಆಲೂಗೆಡ್ಡೆ ಮುಂತಾದವುಗಳಿಗೆ ಅಗತೆ ಮಾಡುವುದು ಮತ್ತು ಅವನ್ನು ಗಿಡದಿಂದ ಬಿಡಿಸುವುದು; ದ್ರಾಕ್ಷಿ ಮತ್ತಿತರ ಹಣ್ಣುಗಳನ್ನು ಗಿಡದಿಂದ ಕೊಯ್ಯುವುದು ಇತ್ಯಾದಿ ಕಾರ್ಯಗಳಲ್ಲಿ ಕೂಲಿಗುತ್ತಿಗೆ ವಾಡಿಕೆಯಲ್ಲಿದೆ. ಹತ್ತಿ ಬೆಳೆಯುವ ಕಡೆಗಳಲ್ಲಿ ಇಂತಿಷ್ಟು ಚೀಲ ಹತ್ತಿ ಬಿಡಿಸಿದರೆ ಇಂತಿಷ್ಟು ಕೂಲಿ ಎಂದು ನಿಗದಿ ಮಾಡುತ್ತಾರೆ. ಹೆಚ್ಚು ಹತ್ತಿ ಬಿಡಿಸಿದ ಆಳು ಹೆಚ್ಚು ಕೂಲಿ ದುಡಿಯಲು ಅನುಕೂಲವಾಗುತ್ತದೆ. ಆ ಕೆಲಸಕ್ಕೆ ದಿನಗೂಲಿಯಂತೆ ಕಾರ್ಮಿಕರನ್ನು ನೇಮಕಮಾಡಿಕೊಂಡಿದ್ದರೆ ಅವನು ಹೆಚ್ಚು ಮುತುವರ್ಜಿ ವಹಿಸಿ ಕೆಲಸ ಮಾಡಲು ಆಸಕ್ತಿ ತೋರುವುದಿಲ್ಲ.

ಕೈಗಾರಿಕಾ ಕ್ಷೇತ್ರದ ಕೂಲಿಗಿಂತ ಕೃಷಿಕೂಲಿ ಬಹಳ ಕಡಿಮೆ ಮಟ್ಟದಲ್ಲಿರುವುದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯ ಮತ್ತು ಬಹು ಮುಖ್ಯವಾದ ಕಾರಣವೆಂದರೆ ಕೃಷಿ ಕಾರ್ಮಿಕರಲ್ಲಿ ಸಂಘಟನೆ ಇಲ್ಲದಿರುವುದು. ಕೃಷಿ ಕಾರ್ಮಿಕರು ಸಾಮಾನ್ಯವಾಗಿ ಅನಕ್ಷರಸ್ಥ ಮತ್ತು ಅವಿದ್ಯಾವಂತ ಗುಂಪಿಗೆ ಸೇರಿದವರು. ಅಲ್ಲದೆ ಕೈಗಾರಿಕಾ ಕಾರ್ಮಿಕರಂತೆ ಸಾವಿರಾರು ಜನ ಒಂದೆಡೆ ಕಲೆತು ಕೆಲಸಮಾಡುವುದಿಲ್ಲ. ಇವರು ದೇಶಾದ್ಯಂತ ಹರಡಿಕೊಂಡಿದ್ದಾರೆ. ಇವರಲ್ಲಿ ಸಂಘಟನ ಶಕ್ತಿ ಇಲ್ಲ. ಅದಕ್ಕೆ ಮುಂದಾಳುತನವೂ ಇವರಲ್ಲಿಲ್ಲ. ಇದರಿಂದಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಮಿಕ ಸಂಘಗಳಿಲ್ಲ; ಮತ್ತು ಹೆಚ್ಚು ಕೂಲಿ ಪಡೆಯಲು ದಣಿಗಳೊಡನೆ

ಚೌಕಾಸಿ ಮಾಡುವ ಶಕ್ತಿ ಇವರಿಗೆ ಇಲ್ಲ. ಇದರ ಜೊತೆಗೆ, ಅನೇಕ ಮಂದಿ ಕೂಲಿಗಾರರು ಭೂಮಾಲೀಕರಿಂದ ಪಡೆದ ಸಾಲದ ಕೂಪದಲ್ಲಿ ಬಿದ್ದು ತೊಳಲುತ್ತಿರುತ್ತಾರೆ. ಸಾಲಗಾರರಾದ ಕೃಷಿ ಕಾರ್ಮಿಕರು ಸಾಲಿಗರಾದ ಭೂಮಾಲೀಕರ ಹಂಗಿನಲ್ಲಿರುತ್ತಾರೆ. ಕೆಲಸಗಳಿಗೆ ಕೂಲಿಯನ್ನು ಮಾಲೀಕರೇ ನಿರ್ಧರಿಸುತ್ತಾರೆ. ಕಾರ್ಮಿಕರು ಅದನ್ನೊಪ್ಪಿ ಕೆಲಸ ಮಾಡಬೇಕಾಗುತ್ತದೆ. ಇದು ಏಕಪಕ್ಷೀಯ. ಇಷ್ಟೇ ಅಲ್ಲ, ಭೂಮಾಲೀಕತ್ವ ಸಾಮಾನ್ಯವಾಗಿ ಸಮಾಜದ ಉಚ್ಚಜಾತೀಯರಲ್ಲಿ ನಿಹಿತವಾಗಿದೆ. ಕೃಷಿ ಕಾರ್ಮಿಕರೆಲ್ಲ ಸಾಮಾಜಿಕವಾಗಿ ಕೆಳ ಜಾತಿಗಳಿಗೆ ಸೇರಿದವರಾಗಿರುತ್ತಾರೆ. ಭೂಮಾಲೀಕರು ಇವರನ್ನು ಸ್ವಪ್ರಯೋಜನಕ್ಕಾಗಿ ದುಡಿಸಿಕೊಂಡು ಸುಲಿಗೆ ಮಾಡಿರುವುದುಂಟು.

ಕೃಷಿ ಕೂಲಿ ಕಡಿಮೆ ಮಟ್ಟದಲ್ಲಿರುವುದಕ್ಕೆ ಕಾರ್ಮಿಕರ ಚೌಕಾಸಿಯ ಅಸಾಮರ್ಥ್ಯವಷ್ಟೇ ಕಾರಣವಲ್ಲ. ಕೃಷಿ ಕಾರ್ಮಿಕರಿಗೆ ಬೇಡಿಕೆ ಸಾಮಾನ್ಯವಾಗಿ ದೊಡ್ಡ ಹಿಡುವಳಿಗಾರರಿಂದಲೇ ಬರಬೇಕು. ಸಣ್ಣ ಹಿಡುವಳಿದಾರರ ಬೇಡಿಕೆ ಬಹಳ ಅಲ್ಪ. ಸಣ್ಣ ಹಿಡುವಳಿದಾರರಿಗೆ ಕೂಲಿ ಕೊಡುವ ಚೈತನ್ಯವೂ ಕಡಿಮೆ. ಆದ್ದರಿಂದ ಅವರು ತಮ್ಮ ತಾಕುಗಳ ಕೆಲಸಗಳನ್ನು ಆದಷ್ಟೂ ತಾವೇ ತಮ್ಮ ಕುಟುಂಬದವರ ಸಹಾಯದೊಂದಿಗೆ ಮುಗಿಸಿಕೊಳ್ಳಲು ಬಯಸುತ್ತಾರೆ. ಅಗತ್ಯವಿದ್ದಾಗ ಅವರು ಹೆಚ್ಚು ದುಡಿಯುವುದೂ ಉಂಟು. ಇದರ ಜೊತೆಗೆ ಗ್ರಾಮಗಳಲ್ಲಿ ಜಾರಿಯಲ್ಲಿರುವ ಮುಯ್ಯಾಳು ಪದ್ಧತಿಯನ್ವಯ ಅಕ್ಕಪಕ್ಕದ ರೈತರು ಪರಸ್ಪರವಾಗಿ ನೆರವು ನೀಡಿ, ಪಡೆದು ಕೃಷಿಕಾರ್ಯಗಳನ್ನು ಮುಗಿಸಿಕೊಳ್ಳುತ್ತಾರೆ. ಅಲ್ಲದೆ ವ್ಯವಸಾಯದ ಯಾಂತ್ರೀಕರಣದಿಂದಾಗಿ ಈಗಿನ ದೊಡ್ಡ ಹಿಡುವಳಿದಾರರಿಂದಲೂ ಕೃಷಿ ಕಾರ್ಮಿಕರಿಗೆ ಬೇಡಿಕೆ ದುರ್ಬಲವಾಗುವ ಸೂಚನೆಗಳು ತೋರುತ್ತಿವೆ. ಆದರೆ ಕೃಷಿ ಕಾರ್ಮಿಕರ ಸಂಖ್ಯೆ ಅನೇಕ ಕಾರಣಗಳಿಂದ ದಿನೇ ದಿನೇ ವೃದ್ಧಿಯಾಗುತ್ತಿದೆ. ಕೃಷಿ ಕಾರ್ಯಗಳಲ್ಲಿ ಅಪ್ರಾಪ್ತ ವಯಸ್ಕರನ್ನು ನೇಮಿಸಿಕೊಳ್ಳಬಾರದೆಂಬ ನಿಯಮವೂ ಇಲ್ಲ; ಇದ್ದಾಗ್ಯೂ ಅದನ್ನು ಪಾಲಿಸುವುದು ಕಷ್ಟ. ಇದಲ್ಲದೆ ಹಲವು ವ್ಯವಸಾಯ ಕೆಲಸಗಳಿಗೆ ಹೆಣ್ಣಾಳುಗಳನ್ನು ಸೇರಿಸಿಕೊಳ್ಳಬಹುದು. ಇದೆಲ್ಲದರಿಂದಾಗಿ ಕೃಷಿ ಕಾರ್ಮಿಕರ ಪೂರೈಕೆ ಬೇಡಿಕೆಗಿಂತಲೂ ಬಹುಪಾಲು ಅಧಿಕವಾಗಿ ಕೂಲಿದರಗಳು ಬಹುಮಟ್ಟಿಗೆ ಕುಸಿಯಲು ಕಾರಣವಾಗಿದೆ.

**ಕೃಷಿಯ ಕನಿಷ್ಠ ಕೂಲಿ ಕಾಯಿದೆ :** 1948ರಲ್ಲಿ ಅಂಗೀಕೃತವಾದ ಕನಿಷ್ಠ ಕೂಲಿಕಾಯಿದೆ ಕೂಲಿ ದರಗಳನ್ನು ಕ್ರಮಬದ್ಧಪಡಿಸುವ ಹಾದಿಯಲ್ಲಿ ಒಂದು ಮೈಲಿಗಲ್ಲಾಗಿದೆ. ಕೂಲಿದರಗಳು ಅಸಹಜವಾಗಿ ಕಡಿಮೆ ಇರುವ, ಕಾರ್ಮಿಕರ ಸಂಘ ಸಂಸ್ಥೆಗಳಿಲ್ಲದ ಇದ್ದರೂ ಉಚ್ಛ್ರಾಯ ಸ್ಥಿತಿಯಲ್ಲಿಲ್ಲದ ಕಡೆಗಳಲ್ಲಿ ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ. ಈ ಕಾಯಿದೆಯನ್ವಯ ಕೃಷಿ ಕಾರ್ಮಿಕರು ಸಹ ಕನಿಷ್ಠ ಕೂಲಿ ಮಿತಿಗೆ ಅರ್ಹರಾಗಿರುತ್ತಾರೆ.

ಕನಿಷ್ಠ ಕೂಲಿಯನ್ನು ನಿಗದಿ ಮಾಡುವಾಗ ಕಾರ್ಮಿಕರ ಸಾಮಾನ್ಯ ಜೀವನ ಮಟ್ಟ, ನ್ಯಾಯವಾದ ಕೂಲಿ, ಉದ್ಯಮ ಅಥವಾ ಯಜಮಾನ ಕೊಡಲು ಶಕ್ತವಾದ ಕೂಲಿದರ, ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ಗಂಡಾಳಿಗೆ ಕೊಡುವ ಕೂಲಿ ಅವನ ಸಂಸಾರದ ಪೋಷಣೆಗೆ ಸಾಕಾಗುವಷ್ಟಿರಬೇಕು. ಹೆಂಗಸಿಗೆ ಆಕೆಯ ಜೀವನಕ್ಕೆ ಸಾಕಾಗುವಷ್ಟು ಮಟ್ಟಿಗೆ ಕೂಲಿ ಸಿಕ್ಕರೆ ಸಾಕು. ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಗದಿ ಮಾಡಿದ ಕೂಲಿದರವನ್ನು ಜಾರಿಗೆ ತರಲು ಜಿಲ್ಲಾ ಮತ್ತು ರಾಜ್ಯಮಟ್ಟಗಳಲ್ಲಿ ಕೃಷಿಕೂಲಿ ಮಂಡಳಿಗಳನ್ನು ರಚಿಸಬೇಕು. ಇವು ಕಾರ್ಮಿಕ ಪ್ರತಿನಿಧಿಗಳು, ಜಮೀನು ಹಿಡುವಳಿದಾರರು ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳಿಂದ ಕೂಡಿದ ತ್ರಿಪಕ್ಷೀಯ ಮಂಡಳಿಗಳಾಗಿರಬೇಕು. ಪ್ರತಿಯೊಂದು ಜಿಲ್ಲೆಗೂ ಅಥವಾ ಜಿಲ್ಲೆಯ ಸಮರೂಪದ ಕೃಷಿ ಪ್ರದೇಶಕ್ಕೂ ಕೂಲಿದರಗಳನ್ನು ನಿಗದಿ ಮಾಡಿ ಜಾರಿಗೆ ತರಬೇಕು. ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ಮಂಡಳಿಯ ನ್ಯಾಯಾಧೀಶರ ತೀರ್ಮಾನಕ್ಕೊಳಪಡಿಸಬೇಕು.

ಕೃಷಿಯ ಕನಿಷ್ಠ ಕೂಲಿಯನ್ನು ನಿಗದಿ ಮಾಡಿ ಜಾರಿಗೆ ತರವುದು ಸುಲಭವಲ್ಲ. ಈ ದಿಶೆಯಲ್ಲಿ ಅನೇಕ ಎಡರು ತೊಡರುಗಳಿವೆ. ಮೊದಲಾಗಿ ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದೇ ತುಂಬ ಪ್ರಯಾಸದ ಕೆಲಸ. ಕೂಲಿಯನ್ನು ನಿಗದಿ ಮಾಡುವಾಗ ಮೇಲೆ ಹೇಳಿದಂತೆ ಕಾರ್ಮಿಕನ ಜೀವನಮಟ್ಟ ಮತ್ತು ನ್ಯಾಯವಾದ ದರಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದರೂ ಬಹು ಮುಖ್ಯವಾಗಿ ನಿಗದಿ ಮಾಡಿದ ಕೂಲಿಯನ್ನು ದಣಿ ಕೊಡಲು ಶಕ್ತನೆ, ಇಲ್ಲವೆ ಎಂಬುದನ್ನು ಗಮನದಲ್ಲಿಡಬೇಕು. ಅಂದರೆ ಕೃಷಿಕನಿಗೆ ಅವನ ಕಸಬು ಎಷ್ಟು ಲಾಭದಾಯಕ ಎಂಬ ಪ್ರಶ್ನೆಯನ್ನು ಇದು ಅವಲಂಬಿಸಿದೆ. ಆದ್ದರಿಂದ ಅವನ ಉತ್ಪಾದನ ಕಾರ್ಯದ ಆಯವ್ಯಯಗಳನ್ನು ಕಂಡುಹಿಡಿಯಬೇಕಾಗುತ್ತದೆ. ಇದು ಅಷ್ಟು ಸುಲಭವಲ್ಲ. ಉತ್ಪಾದನೆಯ ಖರ್ಚು, ಆ ಪ್ರದೇಶದ ಬೆಳೆಗಳು, ಅವಕ್ಕೆ ಉಪಯೋಗಿಸುವ ಉತ್ಪಾದನಾಂಗಗಳು ಮತ್ತು ಅವಕ್ಕೆ ತಗಲುವ ಖರ್ಚು, ಉತ್ಪನ್ನದ ಮಟ್ಟ ಮತ್ತು ಅದಕ್ಕೆ ದೊರೆಯಬಹುದಾದ ಬೆಲೆ ಇವುಗಳ ಮೇಲೆ ಕೃಷಿಕನ ಕಸಬು ಲಾಭದಾಯಕವೆ, ಅಲ್ಲವೆ ಎಂಬುದು ನಿರ್ಧಾರವಾಗುತ್ತದೆ. ಉತ್ಪಾದನೆಯ ವೆಚ್ಚ ಮತ್ತು ಇಳುವರಿಯ ಮಟ್ಟಗಳು ಒಣಬೇಸಾಯ ಮತ್ತು ನೀರಾವರಿ ಬೇಸಾಯಗಳಲ್ಲಿ ಭಿನ್ನ ಭಿನ್ನವಾಗಿರುತ್ತವೆ. ಒಣಬೇಸಾಯ ಜಾರಿಯಲ್ಲಿರುವೆಡೆಗಳಲ್ಲಿ ಕನಿಷ್ಠ ಕೂಲಿದರ ನೀರಾವರಿ ಬೇಸಾಯವಿರುವೆಡೆ ಗಳಲ್ಲಿರುವುದಕ್ಕಿಂತ ಕಡಿಮೆಯಾಗಿರುತ್ತದೆ. ಒಬ್ಬ ರೈತ ಈ ಎರಡು ಮಾದರಿಯ ಬೇಸಾಯಗಳನ್ನೂ ನಡೆಸುತ್ತಿರಬಹುದು ಮತ್ತು ಒಂದೇ ಗ್ರಾಮದಲ್ಲಿ ಕೆಲವರಿಗೆ ನೀರಾವರಿ ಬೇಸಾಯವಿಲ್ಲದಿರಬಹುದು. ಆದ್ದರಿಂದ ಅವರು ನೇಮಿಸಿಕೊಳ್ಳುವ ಕಾರ್ಮಿಕರ ಕೂಲಿ ಬೇರೆಯವರು ಕೊಡುವ ಕೂಲಿಗಿಂತ ಕಡಿಮೆ ಇರಬೇಕೆ ಎಂಬ ಪ್ರಶ್ನೆ ತಾನಾಗಿಯೇ ಉದ್ಭವಿಸುತ್ತದೆ. ಆದರೆ ಹಾಗೆ ಮಾಡುವುದು ಸಾಧ್ಯವಾಗದಿರಬಹುದು. ಅಲ್ಲದೆ ಕೂಲಿ ದರವನ್ನು ಉತ್ಪನ್ನದ ಬೆಲೆಗೆ ಸರಿಹೊಂದಿಸಬೇಕು. ಆದರೆ ಕಾರ್ಮಿಕರನ್ನು ನೇಮಿಸಿಕೊಂಡು ಉತ್ಪಾದನೆ ಮಾಡಿಯಾದ ಅನಂತರ ಮಾರಾಟ ಮಾಡಿದಾಗಲೇ ಅವನಿಗೆ ತನ್ನ ಉತ್ಪನ್ನಕ್ಕೆ ಸಿಗುವ ಬೆಲೆ ಗೊತ್ತಾಗುತ್ತದೆ. ಅಂದರೆ ವ್ಯವಸಾಯೋತ್ಪನ್ನಗಳ ಬೆಲೆಗಳನ್ನು ನಿಗದಿ ಮಾಡಿದಲ್ಲದೆ ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದು ಸಾಧ್ಯವಾಗಲಾರದು. ಇಷ್ಟಾನುಸಾರ ಕನಿಷ್ಠ ಕೂಲಿಯನ್ನು ನಿಗದಿ ಮಾಡಿದ್ದೇ ಆದರೆ ಸಣ್ಣ ಹಿಡುವಳಿದಾರರಿಗೆ ತುಂಬ ಹಿಂಸೆಯಾಗುತ್ತದೆ. ಹಾಗೆಯೇ ಕೂಲಿದರಗಳನ್ನು ಗೇಣಿದಾರರು ಕೊಡುವ ಲಾವಣಿಗಳಿಗೆ ಸರಿಹೊಂದಿಸಬೇಕು. ದೊಡ್ಡ ಭೂಮಾಲೀಕರಿಗೆ ಸರಿ ಹೋಗುವ ಕೂಲಿ ಸಣ್ಣ ಹಿಡುವಳಿದಾರರಿಗೆ ಭಾರಿ ಹೊರೆಯಾಗುತ್ತದೆ. ಕೃಷಿ ಕೂಲಿಯನ್ನು ಹಣ, ಧಾನ್ಯ ಮತ್ತಿತರ ರೂಪಗಳಲ್ಲಿ ಕೊಡುವುದರಿಂದ ಸಮಾನ ಕೂಲಿದರಗಳನ್ನು ನಿಗದಿ ಮಾಡುವುದು ಕಷ್ಟವಾಗುತ್ತದೆ. ಹಾಗೂ ಇಷ್ಟಾನುಸಾರ ಒಂದು ದರವನ್ನು ನಿಗದಿ ಮಾಡಿದ್ದೇ ಆದಲ್ಲಿ ಇದರಿಂದ ಸಣ್ಣ ಹಿಡುವಳಿದಾರರಿಗೂ ಗೇಣಿದಾರರಿಗೂ ತೊಂದರೆಯಾಗಿ ಅವರು ಕೂಲಿಯಾಳುಗಳನ್ನು ನೇಮಿಸಿಕೊಳ್ಳದೆ ಹೋಗಬಹುದು; ತಮ್ಮ ಕೃಷಿ ಕಾರ್ಯಗಳನ್ನು ಆದಷ್ಟು ಮಟ್ಟಿಗೆ ತಾವೇ ಹೆಚ್ಚುಕಾಲ ದುಡಿದು, ಮುಗಿಸಿಕೊಳ್ಳಬಹುದು; ಮತ್ತು ತಮ್ಮ ನೆರೆಹೊರೆಯವರ ಸಹಾಯ ಪಡೆಯಬಹುದು. ಹೀಗಾಗಿ ಕನಿಷ್ಠ ಕೂಲಿ ದರವನ್ನು ಯಾವ ಆಧಾರವೂ ಇಲ್ಲದೆ ಅಧಿಕ ಮಟ್ಟದಲ್ಲಿ ನಿಗದಿ ಮಾಡಿದರೆ ಕೊನೆಯಲ್ಲಿ ಕಾರ್ಮಿಕರಿಗೆ ಬೇಡಿಕೆ ಕಡಿಮೆಯಾಗಿ ಅವರಿಗೇ ತೊಂದರೆಯಾಗುವ ಸಂಭವ ಹೆಚ್ಚು.. ಎಲ್ಲಕ್ಕೂ ಮೇಲಾಗಿ ಕೃಷಿ ಕಾರ್ಮಿಕರು ನಿರಕ್ಷರಕುಕ್ಷಿಗಳು. ಅವರಲ್ಲಿ ಸಂಘಟನ ಶಕ್ತಿ ಇಲ್ಲ. ಕೃಷಿ ಕೂಲಿಯ ಕನಿಷ್ಠ ಮಿತಿಯನ್ನು ನಿಗದಿ ಮಾಡಿದರೂ ಈ ವಿಷಯ ಎಷ್ಟೋ ಕಾರ್ಮಿಕರ ಗಮನಕ್ಕೆ ಬರದಿರಬಹುದು. ಬಹುತೇಕ ಕೃಷಿಕರಿಗೂ ಇದು ತಿಳಿಯದೆ ಇರಬಹುದು. ಇಂಥ ಸಂದರ್ಭಗಳಲ್ಲಿ ಕನಿಷ್ಠ ಕೂಲಿಯನ್ನು ಜಾರಿಗೆ ತಂದು ಮೇಲ್ವಿಚಾರಣೆ ನಡೆಸುವುದು ತುಂಬ ಅಗಾಧವಾದ ಕೆಲಸ. ಇದರ ಆಡಳಿತದ ಖರ್ಚು ದುಬಾರಿಯಾಗುತ್ತದೆ. (ಆರ್.ಆರ್‌ಎಂ.)

**ಕೃಷಿ ತಂಡಗಳು :** ಸಾಮಾನ್ಯವಾಗಿ ರೈತ ತನ್ನ ಕುಟುಂಬದ ಸದಸ್ಯರ ಸಹಾಯದಿಂದ ತನ್ನ ಹಿಡುವಳಿಗಳ ಕೆಲಸಗಳನ್ನು ಪೂರೈಸಿಕೊಳ್ಳುತ್ತಾನೆ. ಬೇಸಾಯಕಾರ್ಯಗಳು ಋತುಗಳಿಗನುಸಾರವಾಗಿ ನಡೆಯಬೇಕಾದ ಕ್ರಿಯೆಗಳಾದ್ದರಿಂದ ಎಲ್ಲ ರೈತರೂ ಅವನ್ನು ನಿಶ್ಚಿತ ಅವಧಿಯಲ್ಲೇ ಮಾಡಿ ಮುಗಿಸಬೇಕಾಗುತ್ತದೆ. ಆದ್ದರಿಂದ ಕೆಲವು ವೇಳೆ ತಮ್ಮ ಮತ್ತು ಅಕ್ಕಪಕ್ಕದ ಗ್ರಾಮಗಳಿಂದಲೇ ಕೂಲಿಯಾಳುಗಳ ಪೂರೈಕೆ ಸಾಧ್ಯವಾಗದಿರಬಹುದು. ಅಂಥ ಸಮಯಗಳಲ್ಲಿ ಕೃಷಿ ತಂಡಗಳು ಸಂಸಾರ ಸಮೇತವಾಗಿ ದೂರದ ಪ್ರದೇಶಗಳಿಂದ ತಾತ್ಕಾಲಿಕವಾಗಿ ವಲಸೆ ಬಂದು ಗ್ರಾಮದಿಂದ ಗ್ರಾಮಕ್ಕೆ ಹೋಗಿ ಬೇಸಾಯದ ಕಾರ್ಯಗಳನ್ನು ಪೂರೈಸಿಕೊಡಲು ಸಹಾಯವಾಗುತ್ತವೆ. ಇಂಥ ತಂಡಗಳು ಸಾಮಾನ್ಯವಾಗಿ ಹೆಚ್ಚು ಜನನಿಬಿಡವಲ್ಲದ ಆದರೆ ಕೆಲವು ವ್ಯವಸಾಯ ಕಾರ್ಯಗಳಿಗೆ ಹೆಚ್ಚು ಕೆಲಸಗಾರರ ಬೇಡಿಕೆ ಇರುವ ಮಲೆನಾಡಿನ ಕಾಫಿತೋಟಗಳಲ್ಲಿ ಕಂಡುಬರುತ್ತವೆ. ಅದರಲ್ಲೂ ಗಿಡಗಳಿಂದ ಕಾಫಿ ಹಣ್ಣುಗಳನ್ನು ಆರಿಸುವಾಗ ಆ ಪ್ರದೇಶದಲ್ಲಿ ಕೂಲಿಗಾರರಿಗೆ ಬೇಡಿಕೆ ಅಗಾಧವಾಗಿ ಹೆಚ್ಚುತ್ತದೆ. ಈ ಕೆಲಸಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕೇರಳ ರಾಜ್ಯದ ಕಡೆಗಳಿಂದ ವಲಸೆ ಬರುವ ಕೃಷಿ ತಂಡಗಳು ಪೂರೈಸಿಕೊಟ್ಟು ಕಾಫಿ ಬೆಳೆಯ ಅಭಿವೃದ್ಧಿಗೆ ಸಹಾಯಕವಾಗಿದೆ. (ಆರ್.ಆರ್‌ಎಂ.)

**ಕೃಷಿ ದೇವತೆಗಳು :** ಪ್ರಾಚೀನರು ನಂಬಿದ್ದ ದೇವತೆಗಳಲ್ಲಿ ಕೃಷಿಗೆ ಸಂಬಂಧಪಟ್ಟ ದೇವತೆಗಳು ಒಂದು ಗುಂಪಿನವರು. ಇವರಲ್ಲಿ ಕೆಲವರು ಪುರುಷದೇವತೆಗಳು. ಐಗುಪ್ತರ ದೇವತೆ ಓಸಿರಿಸ್ ಮೊದಲಿಗೆ ಕೃಷಿ ದೇವತೆಯಾಗಿದ್ದು ಅನಂತರದಲ್ಲಿ ಸರ್ವೋತ್ತಮ ದೇವತೆಯಾದ. ಸಾಮಾನ್ಯವಾಗಿ ಭೂಮಿತಾಯಿ ಪೃಥಿವಿ ಎಲ್ಲ ದೇಶದ ಜನರಲ್ಲೂ ಕೃಷಿಗೆ ಸಂಬಂಧಪಟ್ಟ ಮುಖ್ಯ ದೇವತೆ. ಭಾರತದಲ್ಲಿ ಮಾತೃದೇವತೆ ಮೊಹೆಂಜೊದಾರೋ ಸಂಸ್ಕೃತಿಯಷ್ಟು ಹಳೆಯವಳು. ಮಳೆರಾಯ (ಪರ್ಜನ್ಯ) ಕೃಷಿಗೆ ಸಂಬಂಧಪಟ್ಟ ದೇವತೆ. ಗಂಗಾ, ಯಮುನಾ, ಕಾವೇರಿ ಮುಂತಾದ ನದೀ ದೇವತೆಗಳು ರೈತರಿಗೆ ಎಷ್ಟು ಪ್ರಿಯವಾದ

ದೇವತೆಗಳು ಎಂಬುದನ್ನು ಹೇಳಬೇಕಾಗಿಲ್ಲ. ಸಾಮಾನ್ಯವಾಗಿ ಸಪ್ತಮಾತೃಕೆಯರು ಹಳ್ಳಿಯವರ ಮುಖ್ಯ ದೇವತೆಗಳು. ಇವರು ಬೆಳೆಯ ಸಂವೃದ್ಧಿಗೆ ಕಾರಣರಲ್ಲದೆ, ರೋಗ ರುಜಿನಗಳಿಂದ ಜನರನ್ನು ಕಾಪಾಡುತ್ತಾರೆ.

ಸಾಮಾನ್ಯವಾಗಿ ರೈತರು ಸುಗ್ಗಿಯ ಕಾಲದಲ್ಲಿ ಧಾನ್ಯದ ರಾಶಿಯನ್ನು ಧಾನ್ಯ ದೇವತೆಯಾಗಿ ಭಾವಿಸಿ ಆ ರಾಶಿಗೂ ಆಯಾ ಧಾನ್ಯದ ತೆನೆಗಳನ್ನು ಕಟ್ಟಿ ಒಂದು ವಿಗ್ರಹವನ್ನು ಮಾಡಿ ಅದಕ್ಕೂ ಪೂಜೆ ಸಲ್ಲಿಸುತ್ತಾರೆ. ಮೆಕ್ಸಿಕೊ ದೇಶದ ಜನರು ಆ ದೇಶದ ಮುಖ್ಯ ಬೆಳೆಯಾದ ಮುಸುಕಿನ ಜೋಳದಿಂದ ಒಂದು ಪ್ರತಿಮೆಯನ್ನು ಮಾಡಿ ಅದನ್ನು ಪೂಜಿಸುತ್ತಾರೆ. ಹಳ್ಳಿಯವರು ಉಳುಮೆಯ ಉಪಕರಣಗಳನ್ನು ದೇವರುಗಳಂತೆ ಭಾವಿಸಿ ಮಹಾನವಮಿಯ ದಿವಸ ಅವಕ್ಕೆ ಪೂಜೆ ಸಲ್ಲಿಸುತ್ತಾರೆ.

ಉಳುಮೆ ಮತ್ತು ಬಿತ್ತನೆ ಕಾಲಗಳಲ್ಲೂ ತೆನೆಗೆ ಹಾಲು ತುಂಬಿದ ಕಾಲದಲ್ಲೂ ಉಳುಮೆಯ ದೇವತೆ, ಬಿತ್ತನೆಯ ದೇವತೆಗಳಿಗೆ ಪೂಜೆ ಸಲ್ಲಿಸುತ್ತಾರೆ. ಪ್ರಾಚೀನ ರೋಮನರು ಒಂದೊಂದು ಕೃಷಿಯ ಕ್ರಿಯೆಗೂ ಒಂದೊಂದು ನಿರ್ದಿಷ್ಟ ದೇವತೆಯನ್ನು ಕಲ್ಪಿಸಿಕೊಂಡಿದ್ದರು. ಸೆಟರ್ನಸ್ ಉಳುಮೆಯ ದೇವತೆ, ಸೀರಿಸ್ ಪೈರಿನ ಬೆಳವಣಿಗೆಯ ದೇವತೆ, ಫ್ಲೋನನ್ ಪುಷ್ಪದ ದೇವತೆ, ಪೊಮೊನ ಹಣ್ಣಿನ ದೇವತೆ, ಕಾನ್ಸಸ್ ಸುಗ್ಗಿಯ ದೇವತೆ. ಈ ಒಂದೊಂದು ದೇವತೆಯ ಪೂಜೆಗೂ ಪ್ರಾಚೀನ ರೋಮನರಲ್ಲಿ ಪ್ರತ್ಯೇಕ ಪೂಜಾರಿಗಳಿದ್ದರು. ಈ ಎಲ್ಲ ದೇವತೆಗಳಿಗೂ ವಿಶೇಷ ಉತ್ಸವಗಳು ನಡೆಯುತ್ತಿದ್ದವು.

ಇಂದಿನ ನಾಗರಿಕ ದೇಶಗಳಲ್ಲಿನ ಹಳ್ಳಿಗಳಲ್ಲಿ ಕೃಷಿದೇವತೆಗಳ ಮತ್ತು ಅವುಗಳಿಗೆ ಸಂಬಂಧಪಟ್ಟ ಸಂಸ್ಕಾರಗಳ ಅವಶೇಷಗಳು ಮಾತ್ರ ಉಳಿದಿವೆ. ಭಾರತದಲ್ಲಾದರೋ ಅವು ಇನ್ನೂ ಜೀವಂತವಾಗಿವೆ. (ಜಿ.ಎಚ್.)

**ಕೃಷಿ ಬೆಳೆಗಳ ಪೀಡಕಗಳು ಮತ್ತು ಅವುಗಳ ನಿಯಂತ್ರಣ:** ಇಲಿ, ಮಂಗ, ಹಂದಿ, ಮೊದಲಾದ ಸ್ತನಿಗಳು, ಹಲವಾರು ಬಗೆಯ ಪಕ್ಷಿಗಳು, ಕೀಟಗಳು, ರೋಗಾಣುಗಳು, ಕಳೆಗಳು, ಮುಂತಾದವು ಕೃಷಿಪೀಡಕಗಳು. ಇವುಗಳ ಪೀಡನೆಯಿಂದ ಪೈರುಗಳಿಗೆ ಅಪಾರ ನಷ್ಟ ಉಂಟಾಗುತ್ತದೆ. ಕೃಷಿಗೆ ನಷ್ಟಕಾರಿಗಳಾದ ಕೆಲವು ಮುಖ್ಯ ಕೀಟಗಳನ್ನೂ ಅವುಗಳ ನಿವಾರಣೋಪಾಯಗಳನ್ನೂ ಮುಂದೆ ಚರ್ಚಿಸಿದೆ.

**ರಸಹೀರಿ ನಷ್ಟಪಡಿಸುವ ಕೀಟಗಳು:** ಈ ಪಂಗಡದ ಕೀಟಗಳಲ್ಲಿ ಸಸ್ಯ ಹೇನುಗಳು ಮುಖ್ಯ. ಇವುಗಳಿಂದ ಬಾಧಿಸಲ್ಪಡದ ಸಸ್ಯವೇ ಇಲ್ಲವೆನ್ನಬಹುದು. ಇವು ವಿಶ್ವವ್ಯಾಪಿ, ಅಸಂಖ್ಯಾತ, ಸಣ್ಣ, ಮೃದು, ವಿವಿಧ ಬಣ್ಣದವು–ಹಸಿರು, ಕಪ್ಪು, ಬೂದು, ಪಾಟಲ– ಇತ್ಯಾದಿ. ಈ ಹೇನುಗಳಿಗೆ ಸಾಮಾನ್ಯವಾಗಿ ರೆಕ್ಕೆಗಳಿಲ್ಲ. ಹಿಂಭಾಗದ ಇಕ್ಕೆಲಗಳಲ್ಲಿ ಒಂದೊಂದು ಮಯಣದ ನಾಳಗಳು (ಕಾರ್ನಿಕಲ್) ಇವೆ. ಸಸ್ಯದ ಚಿಗುರ ಸುಳಿ ಹೂ ಮುಂತಾದ ಎಳೆಯ ಭಾಗಗಳಿಗೆ ತಮ್ಮ ಮೂತಿಯನ್ನು ಚುಚ್ಚಿ ರಸವನ್ನು ಹೀರುತ್ತವೆ. ಆದ್ದರಿಂದ ಸಸ್ಯಗಳು ಬಾಡಿ ಒಣಗುತ್ತವೆ. ಜೊತೆಯಲ್ಲೇ ಹೇನುಗಳು ವಿಸರ್ಜಿಸುವ ಸಿಹಿ ಅಂಟು ಎಲೆಗಳ ಮೇಲೆ ಬಿದ್ದು ಅದರ ಮೇಲೆ ಕಪ್ಪು ಬೂಷ್ಟು ಬೆಳೆದು ದ್ಯುತಿಸಂಶ್ಲೇಷಣ ಕಾರ್ಯವೂ ನಿಂತು ನಷ್ಟವಾಗುತ್ತದೆ. ಹಲವು ಬಗೆ ಸಸ್ಯ ಹೇನುಗಳು ನಂಜು ರೋಗಗಳನ್ನು ಹರಡುತ್ತವೆ. ಸಸ್ಯಹೇನುಗಳಿಂದ ನಷ್ಟಪಡುವ ಬೆಳೆಗಳು ಮುಖ್ಯವಾಗಿ ಹತ್ತಿ, ಜೋಳ, ರಾಗಿ, ಅವರೆ, ಅಲಸಂದೆ, ಕೋಸು ಮುಂತಾದ ತರಕಾರಿಗಳು, ನೆಲಗಡಲೆ, ಕಿತ್ತಳೆ ಜಾತಿ ಗಿಡಮರಗಳು ಮಾವು, ಹಲಸು, ದಾಳಿಂಬೆ ಇತ್ಯಾದಿ ಹಣ್ಣಿನ ಮರಗಳು, ಹೊಗೆಸೊಪ್ಪು, ಗುಲಾಬಿ ಹೂ ಗಿಡಗಳು, ತೋಟದ ಬೆಳೆಗಳು ಇತ್ಯಾದಿ. ಸಸ್ಯ ಹೇನುಗಳು ಅನಿಷೇಚಕ ಜನನದಿಂದ ಸಂತಾನೋತ್ಪತ್ತಿ ಮಾಡುವುದರಿಂದ ವಿಶೇಷವಾಗಿ ಹೆಚ್ಚುತ್ತವೆ. ಇವುಗಳಲ್ಲಿ ರೆಕ್ಕೆಗಳುಳ್ಳ ಹೇನುಗಳೂ ತಲೆದೋರುವುದುಂಟು. ಈ ಪ್ರಾಣಿಗಳ ಹತೋಟಿಗೆ ಅವುಗಳ ನೈಸರ್ಗಿಕ ಶತ್ರುಗಳು ಸಹಾಯಕ. ಗುಲಗಂಜಿಹುಳಗಳು, ಸಿರ್ಫಿಡ್ ನೊಣಗಳು, ಕ್ರೈಸೊಪಿಡ್ ಕೀಟಗಳು ಸಾಕಷ್ಟಿದ್ದರೆ ರಾಸಾಯನಿಕಗಳು ಬೇಕಾಗುವುದಿಲ್ಲ. ಅವಿಲ್ಲದಿದ್ದಾಗ ಹೊಂಗೆ ಎಣ್ಣೆ, ರಾಳದ ಸಾಬೂನು, ಹೊಗೆಸೊಪ್ಪಿನ ಕಷಾಯ ಅಥವಾ ಯಾವುದಾದರೂ ರಂಜಕ ಕ್ರಿಮಿನಾಶಕವನ್ನು ಉಪಯೋಗಿಸಬಹುದು.

**ಬೂಷ್ಟುತಿಗಣೆಗಳು, ಶಲ್ಕಕೀಟಗಳು, ಬಿಳಿನೊಣಗಳು (ಅಲೆರೋಡಿಡ್):** ಇವು ಸಹ ರಸವನ್ನು ಹೀರುವ ಕೀಟಗಳೇ. ಈ ಪಂಗಡದ ಕೀಟಗಳೂ ಸಸ್ಯ ಹೇನುಗಳಂತೆ ಅಸಂಖ್ಯಾತವಾಗಿ ಒಟ್ಟಾಗಿದ್ದು ರಸವನ್ನು ಸದಾ ಹೀರಿ ವೈರಿಗೆ ಸಾವು ಉಂಟು ಮಾಡುತ್ತವೆ. ರಚನೆಯಲ್ಲಿ ಒಂದೊಂದಕ್ಕೂ ವ್ಯತ್ಯಾಸವಿದೆ. ಲೈಂಗಿಕ ವ್ಯತ್ಯಾಸವೂ ಉಂಟು. ಮರಿಗಳು ಒಂದೆರಡು ದಿನ ಹರಿದಾಡಿ ಸೂಕ್ತವಾದೆಡೆ ನೆಲೆಸಿದ ಮೇಲೆ ಮತ್ತೆ ಚಲಿಸುವುದಿಲ್ಲ. ವಿಶ್ವವ್ಯಾಪಿಯಾದರೂ ಉಷ್ಣವಲಯದಲ್ಲಿ ಹೆಚ್ಚು. ಇವು ತೋಟದ ಬೆಳೆಗಳು ಮತ್ತು ಹಣ್ಣಿನ ಗಿಡ ಮರಗಳ ಕೆಟ್ಟ ಶತ್ರುಗಳು. ಬೂಷ್ಟು ತಿಗಣೆ ಮತ್ತು ಶಲ್ಕ ಕೀಟಗಳಲ್ಲಿ ಗಂಡುಗಳು ಆಗಾಗ ಮಾತ್ರ ಕಾಣಿಸಿಕೊಳ್ಳುತ್ತವೆ. ರೆಕ್ಕೆಗಳು ಒಂದೇ ಜೊತೆ. ಬೂಷ್ಟು ತಿಗಣೆಹೆಣ್ಣು ಗುಂಡು, ಅದರ ಹಿಂಭಾಗದಲ್ಲಿ ಹತ್ತಿಯಂಥ ಅಂಡಕೋಶ ಬೆಳದು ಅದರೊಳಗೆ ಮೊಟ್ಟೆ ಮರಿಗಳಿರುತ್ತವೆ. ಚಲನೆ ಇಲ್ಲ. ಶಲ್ಕ ಕೀಟಗಳ ಹೆಣ್ಣುಗಳೂ ಗುಂಡು. ಅವುಗಳ ಮೈಮೇಲೆ ತೆಳುವಾದ ಗಟ್ಟಿಯಾದ ಚಿಪ್ಪಿರುತ್ತದೆ. ಕೆಲವು ಮೃದು ಶಲ್ಕಗಳು ಕೆಲವು ಗಡಸು ಶಲ್ಕಗಳು. ಬಿಳಿ ನೊಣಗಳ ಮೈ ರೆಕ್ಕೆಗಳ ಮೇಲೆ ಮಯಣದ ಪುಡಿ ತುಂಬಿರುತ್ತದೆ. ಹೆಣ್ಣು ಗಂಡುಗಳೆರಡಕ್ಕೂ ನಾಲ್ಕು ರೆಕ್ಕೆಗಳಿವೆ; ಎರಡೂ ಚಲಿಸಿ ಹಾರಾಡಿ ರಸವನ್ನು ಹೀರುತ್ತವೆ; ಅಲ್ಲದೆ ನಂಜು ರೋಗವನ್ನು ಸಹ ಹರಡುತ್ತವೆ. ಈ ಪಂಗಡದ ಶತ್ರುಗಳು ಕಬ್ಬಿನ ಬೂಷ್ಟು ತಿಗಣೆ ಮತ್ತು ಬಿಳಿತಿಗಣೆ, ಬತ್ತದ ಬೂಷ್ಟೆ ತಿಗಣೆ, ಕಿತ್ತಳೆ ಜಾತಿ ಗಿಡಮರಗಳ ಬಿಳಿ ತಿಗಣೆ, ಕಾಫಿಯ ಹಸಿರು ತಿಗಣೆ, ಕ್ರೋಟನ್ ಗಿಡಗಳ ಬೂಷ್ಟು ತಿಗಣೆ, ಹುಣಸೆ, ಮೆಣಸು ಮೊದಲಾದ ಗಿಡಮರಗಳ ಶಲ್ಕ ಕೀಟಗಳು, ಮಾವಿನ ಬೂಷ್ಟು ತಿಗಣೆ, ಹರಳಿನ ಬಿಳಿ ತಿಗಣೆ, ಇತ್ಯಾದಿ. ಈ ಕೀಟಗಳ ಹತೋಟಿಗೆ ಅವು ಹೆಚ್ಚಾಗಿ ಮುತ್ತಿರುವ ಸಸ್ಯ ಭಾಗಗಳನ್ನು ಕತ್ತರಿಸಿ ನಾಶಮಾಡಬೇಕು. ಆಮೇಲೆ ಸಸ್ಯಹೇನುಗಳಿಗೆ ಮಾಡಿದಂತೆ ಸ್ಪರ್ಶ ಕೀಟನಾಶಕವನ್ನು ಉಪಯೋಗಿಸಬಹುದು. ಈ ಕೀಟಗಳನ್ನು ಹರಡುವ ಇರುವೆಗಳಿದ್ದಲ್ಲಿ ಅವುಗಳ ಗೂಡನ್ನು ನಾಶಮಾಡಬೇಕು. ನೈಸರ್ಗಿಕ ಶತ್ರುಗಳ ಉಪಯೋಗದಿಂದ ಅವನ್ನು ಹತೋಟಿಯಲ್ಲಿಡಬಹುದು.

**ಸಸ್ಯತಿಗಣೆಗಳು:** ಇವು ಸಹ ರಸವನ್ನು ಹೀರುವ ತಿಗಣೆಗಳೇ. ಇವು ಹಲವಾರು ಕುಲಗಳಿಗೆ ಸೇರಿವೆ. ವಾಸನೆ ತಿಗಣೆಗಳು, ಸೊಳ್ಳೆ ತಿಗಣೆಗಳು, ಜರತಾರಿ ತಿಗಣೆಗಳು, ನೆಗೆಯುವ ತಿಗಣೆಗಳು, ನೊರೆತಿಗಣೆಗಳು ಮತ್ತು ಎಲೆ ಜಿಗಿಗಳು ಇತ್ಯಾದಿ. ವಾಸನೆ ತಿಗಣೆಗಳು ಗಾತ್ರದಲ್ಲಿ ದಪ್ಪ ಮತ್ತು ಮಧ್ಯಸ್ಥ. ಇವು ಅನೇಕ ಬಗೆಯ ಬೆಳೆಗಳಿಗೆ ಬಿದ್ದು ರಸವನ್ನು ಹೀರುತ್ತವೆ; ದುರ್ಗಂಧವನ್ನು ಹೊರಸೂಸುತ್ತವೆ. ಉದಾಹರಣೆಗೆ, ನಿಝಾರ ವಿರಿಡುಲ ಎಂಬ ದಪ್ಪ ಹಸಿರು ತಿಗಣೆ ಹಲವು ಬೆಳೆಗಳಿಗೆ ಬೀಳುತ್ತದೆ. ಕೋಸಿನ ಬೆಗ್ರಾಡ ಕ್ರೂಸಿಫೆರೇರಂ, ಬತ್ತದ ಪಟ್ಟೆ ತಿಗಣೆ, ಟೆಟ್ರೋಡ ಹಿಸ್ಟೆರಾಯ್ಡಿಸ್, ಅವರೆಯ ಕೋಪ್ಟೊಸೋಮ ಕ್ರಿಬ್ರೇರಿಯ, ಕುಂಬಳದ ಅಸ್ಪಾಂಗೋಪಸ್ ಜಾನಸ್, ಬತ್ತದ ಗಂಧಿ ತಿಗಣೆ, ಲೆಪ್ಟೊಕೋರಿಸ ಅಕ್ಯೂಟ, ಹತ್ತಿ ಕೆಂಪು ತಿಗಣೆ, ಡಿಸ್ಡೆರ್ಕಸ್ ಸಿಂಗುಲೇಟಸ್ ಮತ್ತು ಮಬ್ಬುತಿಗಣೆ ಆಕ್ಸಿಕೆರೀನಸ್ ಲೀಟಸ್– ಇವು ಪೆಂಟಟೋಮಿಡಿ, ಕೊರಿಯಿಡಿ, ಲೈಗಿಯಿಡಿ, ಪೈರ್ಹೊಕೋರಿಡಿ ಕುಟುಂಬಗಳ ಉದಾಹರಣೆಗಳು. ಸೊಳ್ಳೆ ತಿಗಣೆಗಳು ಚುರುಕು, ಶರೀರ ಕಿರಿದು, ಕಾಲುಗಳು ಉದ್ದ; ಕೆಲವು ಕೆಟ್ಟ ಶತ್ರುಗಳು. ಜೋಳದ ಆರುಕಾಲು ಚಿಟ್ಟೆ– ಕ್ಯಾಲೊಕೋರಿಸ್ ಆಂಗಸ್ಟೇಟಸ್, ವೀಳ್ಯದೆಲೆ ತಿಗಣೆ–ಡಿಸ್ಫಿಂಕ್ಟಸ್ ಪೊಲೈಟಸ್, ಟಿಸೊಳ್ಳೆ–ಹೆಲೊಪೆಲ್ಟಿಸ್ ಆಂಟೊನೈ. ಇವು ಕ್ಯಾಪ್ಸಿಡೀ (ಮಿರಿಡೀ) ಕುಲಕ್ಕೆ ಸೇರಿವೆ. ಜರತಾರಿ ತಿಗಣೆಗಳು ಬಹಳ ಸಣ್ಣ, ಸಸ್ಯಗಳ ಚಿಗುರು, ಎಳೆಯ ರೆಂಬೆಗಳ ಮೇಲೆ ಇವು ಅಸಂಖ್ಯಾತವಾಗಿರುತ್ತವೆ. ಅವುಗಳ ರೆಕ್ಕೆಗಳು ಬಹಳ ನವಿರು ಜರತಾರಿ ಮಾದರಿಯಂತೆ; ಆದ್ದರಿಂದ ಆ ಹೆಸರು, ಬದನೆ, ಬಾಳೆ, ಮಲ್ಲಿಗೆ, ಸ್ಫಟಿಕ ಇತ್ಯಾದಿ ಗಿಡಗಳಲ್ಲಿ ಈ ಬಗೆಯ ತಿಗಣೆಗಳಿದ್ದು ಆಯಾ ಗಿಡದ ರಸವನ್ನು ಹೀರುತ್ತವೆ. ನೊರೆತಿಗಣೆಗಳ ಮರಿಗಳು ದಪ್ಪ. ಇವು ಸಸ್ಯಗಳ ಮೇಲೆ ಉಗುಳಿನಂಥ ನೊರೆಯನ್ನು ಸ್ರವಿಸಿ ಅದರೊಳಗಿದ್ದು ಸಸ್ಯ ರಸವನ್ನು ಹೀರುತ್ತವೆ. ಹಲಸಿನ ಮರಗಳ ಮೇಲೆ ರೆಂಬೆ ಕೊಂಬೆಗಳ ಮೇಲೆ ನೊರೆ ತುಂಬಿದ್ದು ಅದರೊಳಗೆ ಮರಿ ತಿಗಣೆಗಳಿರುತ್ತವೆ. ಈ ಜಾತಿ ತಿಗಣೆಗಳಲ್ಲಿ ಹಲಸಿನ ಕಾಸ್ಮೊಕಾರ್ಟರಿಲೇಟ ಎಂಬುದು ಮಾತ್ರ ನಷ್ಟಪಡಿಸುವ ಶತ್ರು. ಎಲೆಜಿಗಿಗಳು ಫಲ್ಗೋರಿಡಿ, ಜಾಸಿಡಿ (ಸಿಕಡೆಲ್ಲಿಡಿ) ಕುಲಗಳಿಗೆ ಸೇರಿವೆ. ರಸ ಹೀರುವ ಈ ಕೀಟಗಳ ಗಾತ್ರಗಳಲ್ಲಿ ವ್ಯತ್ಯಾಸ ಉಂಟು. ಬಹು ಸಣ್ಣ ಗಾತ್ರದಿಂದ ಮಧ್ಯಸ್ಥಗಾತ್ರದವರೆಗೂ ಇವೆ. ಗಿಡಗಳ ಮೇಲೆ ಇವು ಎಲ್ಲ ಸ್ಥಳಗಳಲ್ಲೂ ಇರುತ್ತವೆ. ಮುಖ್ಯವಾದವು ಮಾವಿನ ಹೂಗೊಂಚಲನ್ನು ಒಣಗಿಸುವ ಇಡಿಯೊಸಿರಸ್ ಬಗೆಗಳು, ಕಬ್ಬಿನ ಪೈರಿಲ ಪರ್‌ಪ್ಯೂಸಿಲ; ಬತ್ತದ ನಿಫೊಟೆ ಟಿಕ್ಸ್, ಟೆಟ್ಟಿಗೋನಿಯಲ್ಲ; ಹತ್ತಿಯ ಎಂಪೊವಾಸ್ಕ ಡಿವಾಸ್ಟೆನ್ಸ್, ಜೋಳದ ಕಾಂಡದ ತಿಗಣೆ, ಪೆರಿಗ್ರೈನಸ್ ಮೈಡಿಸ್–ಇವು ಆಗಾಗ ವಿಶೇಷವಾಗಿ ಹೆಚ್ಚಿ ನಷ್ಟಪಡಿಸುತ್ತವೆ. ಈ ಕೀಟಗಳ ನಡತೆಯನ್ನು ಅನುಸರಿಸಿ ಹತೋಟಿ ಕ್ರಮಗಳನ್ನು ನಿರೂಪಿಸಬೇಕು. ಕೆಲವನ್ನು ದೀಪಕ್ಕೆ ಆಕರ್ಷಿಸಿ ಕೊಲ್ಲಬಹುದು ಅಥವಾ ಬಲೆಯನ್ನು ಬೀಸಿ ಹಿಡಿದು ಇವನ್ನು ಕೊಲ್ಲಬಹುದು. ಕೀಟನಾಶಕಗಳ ಉಪಯೋಗದಿಂದ ಇವುಗಳ ಹತೋಟಿ ಸುಲಭ.

**ಥ್ರಿಪ್ಸ್:** ಇವು ಥೈಸನಾಪ್ಟರ ತರಗತಿಯ ಕೀಟಗಳು. ಗಾತ್ರದಲ್ಲಿ ಸಣ್ಣ. ತಮ್ಮ ಮೂತಿಯಿಂದ ಸಸ್ಯಭಾಗಗಳನ್ನು ಉಜ್ಜಿ ಹೊರಸೂಸಿದ ರಸವನ್ನು ಹೀರುತ್ತವೆ. ಕೆಲವು ಸಸ್ಯಗಳ ಮೇಲೆ ಗಂಟುಗಳನ್ನು ಮಾಡುತ್ತವೆ. ಇವುಗಳಿಂದಾಗುವ ನಷ್ಟ ಸ್ವಲ್ಪ ಹೆಚ್ಚು ಕಡಿಮೆ ಸಸ್ಯ ಹೇನುಗಳು ಮತ್ತು ಬೂಷ್ಟು ತಿಗಣೆಗಳಿಂದಾಗುವಂತೆಯೇ. ಕೆಲವು ಥ್ರಿಪ್ಸ್‌ಗಳಿಂದ ಅಷ್ಟೇನೂ ನಷ್ಟವಾಗದಿದ್ದರೂ ಅವು ಪೀಡೆಗಳಂತೂ ಹೌದು. ಉದಾಹರಣೆಗೆ ಬತ್ತದ ಥ್ರಿಪ್ಸ್ ಒರೈಜಿ, ನೀರುಳ್ಳಿ ಬೆಳ್ಳುಳ್ಳಿಗಳ ಥ್ರಿಪ್ಸ್ ಟಬಾಸಿ, ಮೆಣಸಿನಮುರ್ದರೋಗದ ಸರ್ಟೊಥ್ರಿಪ್ಸ್

ಡಾರ್ಸಾಲಿಸ್; ಅರಿಸಿನದ ಪ್ಯಾಂಕಿಟೊಥ್ರಿಪ್ಸ್, ದ್ರಾಕ್ಷಿಯ ರ್‍ಹಿಪಿಫೋರೊಥ್ರಿಪ್ಸ್; ಕೋಕೋ ಮೇಲಿನ ಸೆಲನೊಥ್ರಿಪ್ಸ್ ಇತ್ಯಾದಿ. ಹೊಗೆಸೊಪ್ಪಿನ ಕಷಾಯದಂಥ ಸ್ಪರ್ಶನಾಶಕದಿಂದ ಥ್ರಿಪ್ಸ್ ಕೀಟಗಳನ್ನು ಹತೋಟಿಗೊಳಿಸಬಹುದು.

**ಕೊರೆಯುವ ಕೀಟಗಳು:** ಇವು ಸಸ್ಯಗಳ ಬೇರು, ಕಾಂಡ, ರೆಂಬೆ, ಮೊಗ್ಗು, ಹಣ್ಣು ಬೀಜಗಳನ್ನು ಕೊರೆದು ಅಂಗಾಂಶವನ್ನು ತಿನ್ನುತ್ತವೆ. ಲೆಪಿಡಾಪ್ಟರ, ಕೋಲಿಯಾಪ್ಟರ ಮತ್ತು ಡಿಪ್ಟರ ಗಣಗಳಿಗೆ ಸೇರಿವೆ. ಇವುಗಳ ಮರಿಗಳು ಕ್ಯಾಟರ್‌ಪಿಲ್ಲರ್, ಗ್ರಬ್ ಮತ್ತು ಮ್ಯಾಗಟ್. ಇವು ಸಸ್ಯಗಳನ್ನು ಕೊರೆಯಲು ತೊಡಗುತ್ತವೆ. ತಾಯಿ ಕೀಟಗಳು ತಮ್ಮ ಮೊಟ್ಟೆಗಳನ್ನು ಆಸರೆ ಸಸ್ಯಗಳ ಮೇಲೆ ಅಥವಾ ತೊಗಟೆ ಕೆಳಗೆ ಇಡುತ್ತವೆ. ಮೊಟ್ಟೆಗಳಿಂದ ಬಂದ ಮರಿಗಳು ಕಾಂಡ, ಎಲೆ ಇತ್ಯಾದಿ ಭಾಗಗಳನ್ನು ಕೊರೆದು ಒಳಗಡೆಯೇ ಬೆಳೆದು ಕೋಶಗಳಾಗಿ ಆಮೇಲೆ ರೆಕ್ಕೆಬಂದ ಕೀಟಗಳಾಗಿ ಹೊರಕ್ಕೆ ಬರುತ್ತವೆ. ಈ ಪಂಗಡದ ಕೀಟಗಳಲ್ಲಿ ಮುಖ್ಯವಾದವು ಬತ್ತದ ಕಾಂಡವನ್ನು ಕೊರೆಯುವ ಷೀನೊಬಿಯಸ್ ಇನ್‌ಸರ್ಟುಲಾಸ್, ಮಾವಿನ ಕಾಂಡವನ್ನು ಕೊರೆಯುವ ದುಂಬಿ, ಬ್ಯಾಟೊಸಿರ ರೂಫೊಮ್ಯಾಕ್ಯುಲೇಟಸ್, ಕಿತ್ತಳೆ ರೆಂಬೆ, ತೊಗಟೆಯನ್ನು ಕೊರೆಯುವ ಇಂಡಾರ್ಬೆಲ ಟೆಟ್ರೋನಿಸ್, ಜೋಳದ ಕಾಂಡದ ನೊಣ, ಎಥಿರಿಗೋನ ಇಂಡಿಕ, ಶೇಂಗದ ಬೇರಿನ ಭಾಗವನ್ನು ಕೊರೆಯುವ ಸ್ಫೆನಾಪ್ಟಿರ ಪೆರೊಟೆಟ್ಟಿ, ದ್ರಾಕ್ಷಿಯ ಕಾಂಡವನ್ನು ಸುತ್ತು ಕೊರೆಯುವ ಸ್ಥೆನಿಯಾಸ್ ಗ್ರೈಸೇಟರ್, ಕಬ್ಬಿನ ಪೈರನ್ನು ಕೊರೆಯುವ ಕೈಲೊಟ್ರಿಯ ಇನ್‌ಫಸ್ಕಟೆಲ್ಲಸ್ ಬದನೆ ಸುಳಿ, ಕಾಯನ್ನು ಕೊರೆಯುವ ಲೂಸಿನೋಡಿಸ್ ಆರ್ಬೊನಾಲಿಸ್, ಹತ್ತಿ ಕಾಯಿಗಳ ಪ್ಲಾಟಿಡ್ರ ಗಾಸಿಪಿಯೆಲ್ಲ, ಎರಿಯಾಸ್ ಬಗೆಗಳು ಇತ್ಯಾದಿ. ಕೊರೆಯುವ ಕೀಟಗಳ ಹತೋಟಿ ಸುಲಭವಲ್ಲ. ಅಂಗಾಂಶದೊಳಗಿರುವ ಕೀಟಗಳಿಗೆ ಕೀಟನಾಶಕಗಳು ತಗಲುವುದಿಲ್ಲ. ಅವುಗಳ ನಿವಾರಣೆ ಮುಖ್ಯ. ಅವುಗಳ ತಾಯಿ ಕೀಟಗಳ ಮೊಟ್ಟೆಗಳನ್ನಿಡುವುದನ್ನು ತಪ್ಪಿಸಬೇಕು. ಅದಕ್ಕಾಗಿ ಕೀಟನಾಶಕಗಳನ್ನು ಬಳಸಬಹುದು. ಕೊರೆದ ಭಾಗಗಳನ್ನು ಹುಳುಗಳ ಸಹಿತ ಕತ್ತರಿಸಿ ಸುಡಬೇಕು.

**ಮೇಲ್ಮೈ ಕೀಟಗಳು:** ಬೀಜಗಳು ಮೊಳೆತು ಮೇಲಕ್ಕೆ ಬರುತ್ತಿರುವ ಸಸಿಗಳನ್ನು ಇವು ನಷ್ಟಪಡಿಸುತ್ತವೆ. ಆಗಾಗ ಬೆಳೆದ ಗಿಡಗಳಿಗೂ ಕೆಲವು ಬೀಳುತ್ತವೆ. ಅವು ಭೂಮಿಯ ಮೇಲಿರುತ್ತವೆ; ಹಗಲಿನಲ್ಲಿ ಸಾಮಾನ್ಯವಾಗಿ ಅಡಗಿರುತ್ತವೆ. ಕತ್ತರಿಸುವ ಹುಳುಗಳು, ಮಿಡತೆಗಳು, ಮೇಲ್ಮೈ ದುಂಬಿಗಳು ಈ ಗುಂಪಿಗೆ ಸೇರಿವೆ. ಕತ್ತರಿಸುವ ಹುಳುಗಳು ರಾತ್ರಿಯಲ್ಲಿ ಹರಿದಾಡಿ ಸಸಿಗಳ ಬುಡವನ್ನು ಕಡಿಯುತ್ತವೆ. ಹಿಂದಿನ ಸಾಯಂಕಾಲ ಸರಿಯಾಗಿದ್ದ ಗಿಡಗಳು ಮಾರನೇ ಬೆಳಗ್ಗೆ ಮುರಿದುಬಿದ್ದಿರುವ ದೃಶ್ಯ ಸಾಮಾನ್ಯ. ಅದು ಕತ್ತರಿಸುವ ಹುಳುಗಳಿಂದಾದದ್ದು. ಈ ಬಗೆಯ ಹುಳುಗಳು ವರ್ತುಳ, ಮೃದು, ದಪ್ಪ, ಅವುಗಳ ತಾಯಿ ಪತಂಗಗಳು ಬೂದು-ಕಪ್ಪು, ಹುಳುಗಳಿಗೆ ತೊಂದರೆಯಾದರೆ ಉಂಗುರುಗಳಂತೆ ಸುತ್ತಿಕೊಳ್ಳುತ್ತವೆ. ಕೋಸು, ಮೆಣಸು, ನೀರುಳ್ಳಿ, ಬದನೆ ಮುಂತಾದ ಗಿಡಗಳಿಗೆ ಬೀಳುತ್ತವೆ. ಸಂಖ್ಯೆಯಲ್ಲಿ ಹೆಚ್ಚಿದ್ದಾಗ ಒಟ್ಟಾಗಿ ಸ್ಥಳದಿಂದ ಸ್ಥಳಕ್ಕೆ ಹರಿದು ಹೋಗುತ್ತವೆ. ಬೆಳೆದ ಹುಳುಗಳು ಭೂಮಿಯೊಳಗೆ ಕೋಶಗಳಾಗಿ ಆಮೇಲೆ ಚಿಟ್ಟೆಗಳು ಹೊರಕ್ಕೆ ಬರುತ್ತವೆ. ಉದಾಹರಣೆಗೆ ಹೊಗೆಸೊಪ್ಪಿನ ಪ್ರೊಡಿನಿಯ, ರಾಗಿಯ ಲ್ಯಾಫಿಗ್ಮ, ಬತ್ತದ ಸಿರ್ಫಿಸ್ ಮತ್ತು ಸ್ಪೊಡಾಪ್ಟಿರ, ಆಲೂಗಡ್ಡೆಯ ಯುಕ್ಸೋವ ಇತ್ಯಾದಿ. ಕೆಲವು ಮಿಡತೆಗಳು, ದುಂಬಿಗಳು ಕತ್ತರಿಸುವ ಹುಳಗಳಂತೆ ವರ್ತಿಸಿದರೂ ಅವುಗಳಿಂದ ಆಗುವ ನಷ್ಟ ಕಡಿಮೆ. ಈ ಕೀಟಗಳು ಬಣ್ಣದಲ್ಲಿ ಅವುಗಳ ಸನ್ನಿವೇಶಕ್ಕೆ ಹೊಂದಿಕೊಂಡು ಸುಲಭವಾಗಿ ಕಾಣಿಸದೆ ತಪ್ಪಿಸಿಕೊಳ್ಳುತ್ತವೆ. ಮಿಡತೆಗಳಲ್ಲಿ ಕ್ರೋಟೊಗೋನಸ್, ಈಲೋಪಸ್, ಅಟ್ರ್ಯಾಕ್ಟೊಮಾರ್ಫ, ಅರ್ಥ್ಯಾಕ್ರಿಸ್, ಹೈರೊಗ್ಲಿಫಸ್, ಕೋಲ್ಮೇನಿಯ ಮೊದಲಾದವು ಮುಖ್ಯ. ದುಂಬಿಗಳಲ್ಲಿ ಚಿಕ್ಕಟದುಂಬಿಗಳು, ಮೂತಿ ಹುಳುಗಳು, ಗೋನೊಸಿಫ್ಯಾಲಂ, ಓಪಟ್ರೋನ್ ಮೊದಲಾದವು ದ್ರಾಕ್ಷಿ, ಹೊಗೆಸೊಪ್ಪು, ಆಲೂಗಡ್ಡೆಗಳಿಗೆ ಬೀಳುತ್ತವೆ. ಈ ಬಗೆಯ ಕೀಟಗಳ ಹತೋಟಿಗೆ ವಿಷಬೆರೆತ ಆಹಾರವನ್ನು ಹಾಕಿ ಅವು ಅದನ್ನು ತಿಂದು ಸಾಯುವಂತೆ ಮಾಡಬಹುದು. ಬಲೆ ಚೀಲ ಮೊದಲಾದ ಸಾಧನಗಳಿಂದ ಅವನ್ನು ಹಿಡಿದು ನಾಶಮಾಡಬೇಕು.

**ಭೂಮಿಯೊಳಗಿನ ಕೀಟಗಳು:** ಈ ಬಗೆಯ ಕೀಟಗಳಲ್ಲಿ ಮುಖ್ಯವಾದವು ಚಿಮ್ಮಂಡೆಗಳು, ಗೆದ್ದಲು, ಇರುವೆಗಳು, ತಂತಿಹುಳುಗಳು ಮತ್ತು ಗೊಬ್ಬರದ ಹುಳುಗಳು, ಚಿಮ್ಮಂಡೆಗಳು ತೇವವಿರುವ ಸ್ಥಳಗಳು, ತೋಟಗಳು ಮತ್ತು ತರಕಾರಿ ತಾಕುಗಳಲ್ಲಿದ್ದು ರಾತ್ರಿ ಹೊರಕ್ಕೆ ಬಂದು ಸಸ್ಯಗಳ ಬೇರುಗಳನ್ನು ಕಡಿಯುತ್ತವೆ. ಆಗಾಗ ರಾತ್ರಿ ದೀಪಕ್ಕೆ ಮನೆಗಳಿಗೆ ಬರುವುದೂ ಉಂಟು. ಅವು ಜಿರ್ ಜಿರ್ ಎಂದು ಜೀರುವುದನ್ನು ಕೇಳಬಹುದು. ತಂತಿ ಹುಳುಗಳು ರಿಬ್ಬನ್ನಿನಂತೆ ಉದ್ದ, ಕ್ಲಿಕ್ ದುಂಬಿ ಮರಿಗಳು ಆಗಾಗ ಕೆಲವು ಸಸ್ಯಗಳ ಬೇರುಗಳನ್ನು ಮತ್ತು ಆಲೂಗಡ್ಡೆಗಳನ್ನು ನಷ್ಟ ಪಡಿಸಿದರೂ ಈ ದೇಶದಲ್ಲಿ ಅವು ಸಾಮಾನ್ಯವಲ್ಲ. ಗೆದ್ದಲು ಹುಳಗಳು ಮರಮುಟ್ಟು ಮತ್ತು ಒಣಗಿದ ವಸ್ತುಗಳನ್ನು ತಿಂದು ವಿಶೇಷ ನಷ್ಟಪಡಿಸುತ್ತವೆ. ಕೆಲವು ಸ್ಥಳಗಳಲ್ಲಿ ಕಬ್ಬು, ಶೇಂಗ, ದ್ರಾಕ್ಷಿ, ಗೋಧಿ ಮೊದಲಾದ ಸಸ್ಯಗಳಿಗೆ ಗೆದ್ದಲು ಬಿದ್ದು ನಷ್ಟಪಡಿಸುತ್ತದೆ. ಇರುವೆಗಳು ಮನೆಗಳಲ್ಲಿ ಪೀಡೆಗಳು. ಬೆಳೆಗಳಿಗೆ ಬೀಳುವುದು ಕಡಿಮೆ. ಸಣ್ಣ ಕೆಂಪಿರುವೆಗಳು ಬದನೆ ಕಬ್ಬು ಇತ್ಯಾದಿ ಸಸಿಗಳ ಬುಡವನ್ನು ಕಚ್ಚಿ ಸ್ವಲ್ಪ ನಷ್ಟಪಡಿಸುತ್ತವೆ. ಅವು ಸಸ್ಯ ಹೇನು, ಶಲ್ಕಕೀಟ, ಬೂಷ್ಟು ತಿಗಣೆ, ಮುಂತಾದ ಸಿಹಿ ಅಂಟನ್ನು ವಿಸರ್ಜಿಸುವ ತಿಗಣೆಗಳಂಥ ರಸವನ್ನು ಹೀರುವ ಕೀಟಗಳನ್ನು ಹರಡುತ್ತವೆ. ಕೆಂಜಿಗವಂತೂ ಹಣ್ಣಿನ ಮರಗಳು, ಕಾಫಿ ಗಿಡಗಳ ಮೇಲಿದ್ದು ರಸಹೀರುವ ಕೀಟಗಳನ್ನು ಹರಡುವುದಲ್ಲದೆ ಕೆಲಸಗಾರರಿಗೂ ಉಪದ್ರವಕಾರಿಗಳಾಗುತ್ತವೆ. ಗೊದ್ದಗಳು ಸಸ್ಯಗಳ ಬುಡಗಳಲ್ಲಿ ಕೊರೆದು ಹತ್ತಿ ಜೋಳ ರಾಗಿ ಮುಂತಾದ ಬೆಳೆಗಳಿಗೆ ಸಸ್ಯಹೇನುಗಳನ್ನು ಹರಡುತ್ತವೆ. ಗೊಬ್ಬರದ ಹುಳುಗಳು ಸಸ್ಯಗಳು ಬೇರುಗಳನ್ನು ತಿಂದು ನಷ್ಟಪಡಿಸುತ್ತವೆ. ಕಾಕಷೇಫರ್ ದುಂಬಿಗಳ ಮರಿಗಳು. ಇವು ಗೊಬ್ಬರದ ಗುಂಡಿ ಮತ್ತು ಭೂಮಿಯೊಳಗಿರುತ್ತವೆ. ಬಣ್ಣದಲ್ಲಿ ಮಾಸಲು ಬಿಳುಪು, ಶರೀರ ಬಗ್ಗಿರುತ್ತದೆ; ದಪ್ಪ, ಮಾಂಸಲ; ಹೊಲಗಳನ್ನು ಉತ್ತಾಗ ಅವನ್ನು ನೇಗಿಲ ಸಾಲಿನಲ್ಲಿ ಆಗಾಗ ಕಾಣಬಹುದು; ಕಾಗೆ, ಮೈನ ಮೊದಲಾದ ಪಕ್ಷಿಗಳು ಅವನ್ನು ತಿನ್ನುತ್ತವೆ. ಗುಲಾಬಿ, ದ್ರಾಕ್ಷಿ, ಕಬ್ಬು, ಹುರುಳಿ, ಕಾಫಿ ಮುಂತಾದ ಹಲವಾರು ಬೆಳೆಗಳಿಗೆ ಇವು ಶತ್ರುಗಳು. ಹಸಿರು ಮೈದಾನಕ್ಕಂತೂ ಇವುಗಳಿಂದ ತೀವ್ರ ನಷ್ಟ. ದುಂಬಿಗಳು ಏಪ್ರಿಲ್, ಮೇ ತಿಂಗಳುಗಳಲ್ಲಿ ಮಳೆ ಬಿದ್ದ ಅನಂತರ ದೀಪದ ಬೆಳಕಿಗೆ ಬರುತ್ತವೆ. ಇವುಗಳ ಹತೋಟಿಕ್ರಮಗಳು ವಿವಿಧ. ಆಳವಾಗಿ ಉಳುವುದು, ಹುತ್ತಗಳನ್ನು ಅಗೆದು ರಾಣಿ ಗೆದ್ದಲನ್ನು ಕೊಲ್ಲುವುದು, ದೀಪದ ಬೆಳಕಿನಲ್ಲಿ ತಾಯಿದುಂಬಿಗಳನ್ನು ಹಿಡಿಯುವುದು ಮೊದಲಾದ ಕ್ರಮಗಳಿಂದ ಉಪಯೋಗ ಉಂಟು.

**ಎಲೆಗಳನ್ನು ತಿನ್ನುವ ಕ್ಯಾಟರ್‌ಪಿಲ್ಲರುಗಳು:** ಇವು ಬಹುಮಟ್ಟಿಗೆ ಬೆಳೆದ ಗಿಡಗಳ ಎಲೆಗಳನ್ನು ತಿನ್ನುತ್ತವೆ. ಅವು ವಿವಿಧ. ಕೆಲವು ಮೈತುಂಬ ಕರಡಿಯಂತೆ ಕೂದಲು ಇರುವ ಕಂಬಳಿಹುಳುಗಳು. ಕೆಲವು ಮೃದು; ಕೆಲವಕ್ಕೆ ಮೈಮೇಲೆ ಮುಳ್ಳುಗಳು, ಕೊಂಬು, ಮೊದಲಾದ ರಚನೆಗಳಿವೆ. ಕೆಂಪುತಲೆ ಕಂಬಳಿಹುಳು ಶೇಂಗ, ಹತ್ತಿ, ರಾಗಿ, ಜೋಳ, ಕಳೆಗಿಡಗಳು ಮೊದಲಾದ ಸಸ್ಯಗಳಿಗೆ ವಿಶೇಷ ನಷ್ಟಪಡಿಸುತ್ತದೆ. ಅದು ಸರ್ವಭಕ್ಷಕ. ಅದೇ ರೀತಿ ಕಪ್ಪುತಲೆ ಕಂಬಳಿಹುಳುಗಳು ತಂಪಾಗಿರುವ ಕಡೆಗಳಲ್ಲಿದ್ದು ಚಳಿಗಾಲದಲ್ಲಿ ಹೆಚ್ಚಿ ಸಿಕ್ಕಿದ ಸಸ್ಯಗಳನ್ನೆಲ್ಲ ತಿನ್ನುತ್ತವೆ. ಇವಲ್ಲದೆ ಯಸ್ಪಿಗ್‌ಮೆನ್ ಲ್ಯಾಕ್ಟಿನಿಯ, ಪೆರಿಕ್ಯಾಲಿಯ ರಿಸಿನಿ, ಯುಟೆಥೈಸ್ ಲೂರಿಕ್ಸ್, ಇವೆಲ್ಲವೂ ಕಂಬಳಿಹುಳುಗಳೇ. ಕುಚ್ಚು ಕಂಬಳಿ ಹುಳುಗಳಾದ ಯೂಪ್ರಾಕ್ಟಿಸ್ ಬಗೆಗಳು ತೊಗರಿ, ಗೋಗು, ಹರಳು, ಗುಲಾಬಿ ಇತ್ಯಾದಿ ಬೆಳೆಗಳಿಗೆ ಬೀಳುತ್ತವೆ. ತುರುಚೆ ಹುಳುಗಳ ಮುಳ್ಳು ಕೂದಲುಗಳು ತಗುಲಿದ ಕಡೆ ಬಹಳ ನವೆಯುಂಟಾಗುತ್ತದೆ. ಇವೆಲ್ಲ ಪತಂಗದ ಮರಿಗಳು. ಇವಲ್ಲದೆ ಚಿಟ್ಟೆಮರಿಗಳೂ ಕ್ಯಾಟರ್‌ಪಿಲ್ಲರ್‌ಗಳೇ. ಅವುಗಳ ಮೈಮೇಲೂ ಮುಳ್ಳು ಕೊಂಬುಗಳಿರುತ್ತವೆ. ಉದಾಹರಣೆಗೆ ಬತ್ತದ ಮೆಲನೈಟಿಸ್ ಇಸ್ಮೆನ್, ಹರಳಿನ ಏರ್ಗೋಲಿಸ್ ಮೆರಿಯೋನಿ, ಮಾವಿನ ಯೂಥ್ಯಾಲಿಯ ಗರುಡ. ಎಲೆಗಳನ್ನು ತಿನ್ನುವ ಬೇರೆ ಕ್ಯಾಟರ್‌ಪಿಲ್ಲರ್‌ಗಳ ನಡತೆ ವಿವಿಧ- ಕೆಲವು ಎಲೆಗಳನ್ನು ಸುರುಳಿಸುತ್ತಿ ಕೆಲವು ಎಲೆಗಳನ್ನು ಮಡಿಸಿ, ಕೆಲವು ಎಲೆಗಳನ್ನು ಕೊರೆದು ಮತ್ತೆ ಕೆಲವು ಎಲೆಗಳನ್ನು ಹೆಣೆದು ತಿನ್ನುತ್ತವೆ. ಹತ್ತಿಯ ಸೈಲೆಪ್ಟ ಡೆರೋಗೇಟ, ಬದನೆಯ ಯೂಬ್ಲೆಮ ಓಲಿವೇಶಿಯ, ಶೇಂಗದ ಸ್ಟೋಮಾಪ್ಟೆರಿಕ್ಸ್ ಬಗೆ ಮುಂತಾದವು ಉದಾಹರಣೆಗಳು. ಇವಲ್ಲದೆ ಡೇಗೆ ಪಂಗಡದ ಮರಿಗಳಾದ-ಆಕಿರೊನ್ಷಿಯ, ಹೆರ್ಸ್ ಕನವಾಲ್ವುಲೈ. ಡೈಲೆಫೈಲ ನಿರಿಯೈ ದಪ್ಪವಾಗಿವೆ. ಇವುಗಳ ಮೈಮೇಲೆ ಹಿಂಭಾಗದಲ್ಲಿ ಒಂದು ಕೊಂಬಿದೆ. ಅವರೆ, ಗೆಣಸು, ಕಣಗಿಲು ಗಿಡಗಳ ಎಲೆಗಳನ್ನು ಇವು ವಿಶೇಷವಾಗಿ ತಿನ್ನುತ್ತವೆ. ಪತಂಗಗಳನ್ನು ದೀಪಕ್ಕೆ ಆಕರ್ಷಿಸಿ ನಾಶಮಾಡಬಹುದು. ಮೊಟ್ಟೆಗಳನ್ನು ಆರಿಸಿ ಆಸರೆ ಸಸ್ಯಗಳನ್ನು ನಾಶಮಾಡಿ ಭೂಮಿಯನ್ನು ಉತ್ತು ಅಗೆದು ಕೋಶಗಳನ್ನು ಹೊರಗೆಡವಿ ಪತಂಗಗಳನ್ನು ಕಡಿಮೆ ಮಾಡಬಹುದು. ಸುತ್ತಿರುವ ಮತ್ತು ಮಡಿಸಿರುವ ಎಲೆಗಳನ್ನು ಹುಳುಗಳ ಸಹಿತ ಕಿತ್ತು ನಾಶಮಾಡಬೇಕು.

**ದುಂಬಿಗಳು:** ಈ ಕೀಟಗಳೂ ಎಲೆಗಳನ್ನು ತಿನ್ನುತ್ತವೆ. ಸಾಮಾನ್ಯವಾದವು ಕಾಕ್‌ಷೇಫರ್‌ಗಳು ಮೂತಿದುಂಬಿಗಳು, ಗುಲಗಂಜಿ ಹುಳುಗಳು, ಬೊಬೆ ದುಂಬಿಗಳು, ಚಿಕ್ಕಟದುಂಬಿಗಳು, ಮಿಲ್ಲೊಸಿರಸ್ ಬಗೆ, ಮೂತಿದುಂಗಿಗಳು, ಜೋಳ, ರಾಗಿ ಶೇಂಗ ಇತ್ಯಾದಿ ಹಲವಾರು ಸಸ್ಯಗಳ ಎಲೆಗಳನ್ನು ತಿನ್ನುತ್ತವೆ. ಇತರ ದುಂಬಿಗಳಲ್ಲಿ ಮುಖ್ಯವಾದವು ತೆಂಗಿನ ರೈನಾಸಿರಸ್, ರಿಂಕೊಫೋರಸ್, ಕುಂಬಳದ ಆಲಕೊಫೋರ, ದ್ರಾಕ್ಷಿಯ ಸ್ಕೆಲೆಡೋಂಟ, ಬತ್ತದ ಹಿಸ್ಪ, ಮಾವಿನ ರ್‍ಹಿಂಕೀನಸ್ ಇತ್ಯಾದಿ, ಈ ಕೀಟಗಳ ಹತೋಟಿಗೆ ಬೆಳೆ ಮತ್ತು ಕೀಟದ ನಡತೆಗಳ ಮೇಲೆ ಹೊಟ್ಟೆ ಪಾಷಾಣವನ್ನು ಎಚ್ಚರಿಕೆಯಿಂದ ಉಪಯೋಗಿಸಬೇಕು.

(ಪಿ.ಎಂ.)

**ಕೃಷಿ ಪ್ರದರ್ಶನ :** ಕೃಷಿಗೆ ಸಂಬಂಧಿಸಿದ ಯಾವುದಾದರೂ ಒಂದು ವಿಷಯವನ್ನು ಕುರಿತ ಮಾಹಿತಿ, ಚಿತ್ರ, ಸಾಧನೆ, ಪ್ರಯೋಗ ಮುಂತಾದವನ್ನು ಸಾರ್ವಜನಿಕರ ಅವಗಾಹನೆಗಾಗಿ ವ್ಯವಸ್ಥಿತ ರೀತಿಯಲ್ಲಿ ಇಡುವುದು. ಹೀಗೆ ಜೋಡಿಸಿ ಇಡಲಾದ ವಸ್ತು ಸಂಗ್ರಹಣೆ ಒಂದು ಕಥೆಯನ್ನೇ ಹೇಳುವಂತಿರುತ್ತದೆ. ಪ್ರದರ್ಶನಗಳಲ್ಲಿ ಎರಡು ವಿಧ : 1. ಶೈಕ್ಷಣಿಕ ಪ್ರದರ್ಶನ– ನೇರ ಲಾಭದ ಉದ್ದೇಶವಿಲ್ಲದೆ, ಜನರ ಜ್ಞಾನವನ್ನು ಹೆಚ್ಚಿಸಲು ಏರ್ಪಡಿಸುವುದು. 2. ವಾಣಿಜ್ಯ ಪ್ರದರ್ಶನ– ಲಾಭಗಳಿಸಲು ಅಥವಾ ನಷ್ಟ ಕಡಿಮೆ ಮಾಡಿಕೊಳ್ಳಲು ನೇರವಾಗಿ ಅಥವಾ ಅಪ್ರತ್ಯಕ್ಷವಾಗಿ ಸಹಾಯಮಾಡುವುದು.

ಕೃಷಿ ಪ್ರದರ್ಶನಗಳನ್ನು ಸಾಮಾನ್ಯವಾಗಿ ರೈತರು ಸೇರುವಂಥ ಪ್ರದೇಶಗಳಲ್ಲಿ ಏರ್ಪಡಿಸಲಾಗುತ್ತದೆ. ಸಂತೆ, ಗ್ರಾಮಪಂಚಾಯಿತಿ ಕಟ್ಟಡ, ಕ್ಷೇತ್ರೋತ್ಸವ, ಜಾನುವಾರು ಪ್ರದರ್ಶನ, ಸಂಶೋಧನ ಕೇಂದ್ರಗಳು– ಇವು ಇಂಥ ಪ್ರದೇಶಗಳು. ಪ್ರದರ್ಶನದಿಂದ ಜನರ ಮನಸ್ಸು ಒಂದು ನಿರ್ದಿಷ್ಟ ವಿಷಯದ ಕಡೆಗೆ ಆಕರ್ಷಿತವಾಗುತ್ತದೆ. ಅವರು ಅದನ್ನು ನೋಡಿ ಒಂದು ವಿಷಯವನ್ನು ಕೂಲಂಕಷವಾಗಿ ತಿಳಿದು ಅದನ್ನು ಆಚರಣೆಗೆ ತರಲು ಅನುಕೂಲವಾಗುತ್ತದೆ. ಪ್ರದರ್ಶನಗಳು ಬೇರೆ ಕಡೆಗಳಿಂದ ಬರುವ ಊಹಾಪೋಹದ ಸುದ್ದಿಗಳನ್ನು ನಿವಾರಿಸಿ ವಾಸ್ತವ ಸಂಗತಿಯನ್ನು ತಿಳಿಸುತ್ತವೆ.


ಬೆಂಗಳೂರು ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ (1969) ಕೃಷಿ ವಿಶ್ವವಿದ್ಯಾನಿಲಯದ ಮಂಟಪ

**ಪ್ರದರ್ಶನದ ಅನುಕೂಲಗಳು :** ಪ್ರದರ್ಶನಗಳು ಜನಗಳ ಪಂಚೇಂದ್ರಿಯಗಳನ್ನು ಉಪಯೋಗಿಸಿಕೊಂಡು ಹೊಸ ವಿಷಯಗಳನ್ನು ಕಲಿಯುವಂತೆ ಸಹಾಯ ಮಾಡುತ್ತವೆ. ಪ್ರದರ್ಶನಗಳಲ್ಲಿ ವಸ್ತುಗಳನ್ನು ನೋಡಬಹುದು, ಧ್ವನಿಯನ್ನಾಲಿಸಬಹುದು, ಸಾಧ್ಯವಾದರೆ ರುಚಿ ನೋಡಬಹುದು, ಮೂಗಿನಿಂದ ವಾಸನೆ ತಿಳಿಯಬಹುದು ಮತ್ತು ಕೈಗಳಿಂದ ಮುಟ್ಟಿ ತಿಳಿದುಕೊಳ್ಳಬಹುದು. ಪ್ರದರ್ಶನಗಳನ್ನು ನಾಟಕೀಕರಿಸಿ ವಾಸ್ತವಿಕತೆಯ ವಾತಾವರಣವನ್ನು ಕಲ್ಪಿಸಬಹುದು. ಪ್ರದರ್ಶನಗಳಿಂದ ಕಾಲ ಉಳಿತಾಯವಾಗುವುದಲ್ಲದೆ ನೋಡಿದ ಜನ ವಿಷಯವನ್ನು ಎಷ್ಟರ ಮಟ್ಟಿಗೆ ತಿಳಿದುಕೊಂಡಿದ್ದಾರೆಂದು ಕಂಡುಹಿಡಿಯಲು ಅನುಕೂಲವಾಗುತ್ತದೆ. ಜನರಲ್ಲಿ ಒಂದು ವಿಷಯದ ಬಗ್ಗೆ ಆಸಕ್ತಿ ಹೆಚ್ಚಾಗಿರುವಾಗ ಅವರಲ್ಲಿಗೆ ಅದರ ಬಗ್ಗೆ ಹೆಚ್ಚಿನ ತಿಳಿವಳಿಕೆ ನೀಡಲು ಪ್ರದರ್ಶನಗಳನ್ನು ಉಪಯೋಗಿಸಬಹುದು.


ಕೃಷಿ ಪ್ರದರ್ಶನ ಮಂಟಪದೊಳಗಿನ ಒಂದು ನೋಟ

**ಇತಿಮಿತಿಗಳು :** ಪ್ರದರ್ಶನಗಳನ್ನು ಏರ್ಪಡಿಸಲು ಬಹಳ ಹಣ ಬೇಕಾಗುತ್ತದೆ. ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಖರ್ಚು ಹೆಚ್ಚು. ಅವನ್ನು ರಕ್ಷಿಸಿ ಇಡಲು ಹೆಚ್ಚು ಸ್ಥಳ ಬೇಕು. ಇವೆಲ್ಲಕ್ಕಿಂತ ಹೆಚ್ಚಾಗಿ ಅವನ್ನು ತಯಾರಿಸಲು ಕುಶಲಕಲೆಗಾರರ ಆವಶ್ಯಕತೆಯುಂಟು.

ಜನರನ್ನು ಆಕರ್ಷಿಸಲು ಕೃಷಿ ಪ್ರದರ್ಶನಗಳು ನಾನಾ ವಿಧಾನಗಳನ್ನನುಸರಿಸುತ್ತವೆ. ಉಬ್ಬುಚಿತ್ರ, ಬಣ್ಣಗಳ ಬಳಕೆ, ಚಲನೆ, ಆಕಾರ, ಆಶ್ಚರ್ಯಕಲ್ಪನೆ ಮುಂತಾದವು ಆಕರ್ಷಣೆ ಸೆಳೆಯುವ ಕೆಲವು ವಿಧಾನಗಳು.

ಕೃಷಿ ಪ್ರದರ್ಶನಗಳನ್ನು ಏರ್ಪಡಿಸುವಾಗ ಈ ಕೆಲವು ಅಂಶಗಳನ್ನು ಗಮನಿಸಬೇಕು: 1. ಪ್ರದರ್ಶನಗಳಿಂದ ಆಗಬೇಕಾದ ಫಲಿತಾಂಶಗಳು, 2. ಜನರ ತಿಳಿವಳಿಕೆಯ ಮಟ್ಟ ಮತ್ತು ಆಸಕ್ತಿ, 3. ಕಲಿಯುವ ಮತ್ತು ನೋಡುವ ಪರಿಸ್ಥಿತಿ, 4. ಅದನ್ನು ನೋಡಲು ಬೇಕಾದ ಕಾಲ, 5. ವಿವರಣಕಾರನ ಆವಶ್ಯಕತೆ, 6. ಹಣದ ಸೌಲಭ್ಯ, 7. ಕಲಾಕಾರನ ನೆರವು 8. ಪ್ರದರ್ಶನದ ಅವಶ್ಯಕತೆ.

ಪ್ರದರ್ಶನಗಳಲ್ಲಿ ಬೆಳಕಿನ ಏರ್ಪಾಡು ಬಹಳ ಮುಖ್ಯ. ಬೆಳಕು ನೇರವಾಗಿ ಕಣ್ಣಿಗೆ ಬೀಳದಂತೆ ಇರಬೇಕಲ್ಲದೆ, ಬೆಳಕು ವಸ್ತುಗಳ ಮೇಲೆ ಬಿದ್ದು ಕಣ್ಣು ಕೋರೈಸುವಂತಿರಬಾರದು. ಪ್ರದರ್ಶನದಲ್ಲಿ ಇಟ್ಟ ವಸ್ತುಗಳು 3–4 ಅಡಿ ದೂರದಿಂದ ಸ್ಫುಟವಾಗಿ ಕಾಣುವಂತಿರಬೇಕು. ಜನಗಳು ಪ್ರದರ್ಶನದ ಒಳಗೆ ತಿರುಗಾಡಲು ದಾರಿಯನ್ನು ಯೋಚಿಸಿ ಅಳವಡಿಸಬೇಕು. ಒಂದು ಕಡೆ ಒಂದೇ ಸಾರಿ ಬಹಳ ಜನ ಸೇರುವಂತಿರಬಾರದು. ಮುಖ್ಯ ವಸ್ತುಗಳನ್ನು ನೋಡಲು ಹೆಚ್ಚು ಕಾಲ ಬೇಕಾಗುವುದರಿಂದ ಅಲ್ಲಿ ಹೆಚ್ಚು ಜನ ಸೇರುವ ಸಂಭವವಿದೆ. ಅಂಥ ಕಡೆ ಹೆಚ್ಚು ಸ್ಥಳ ಬಿಟ್ಟಿರಬೇಕು. ಜನ ಬಹಳ ಓಡಾಡುವಂತೆ ಇರಬಾರದು, ಹಾಗಿದ್ದರೆ ಅವರಿಗೆ ಬೇಸರವಾಗಿ ಪ್ರದರ್ಶನವನ್ನು ಸರಿಯಾಗಿ ನೋಡದೆ ಹೋಗಬಹುದು.

ಪ್ರದರ್ಶನದಲ್ಲಿ ಇಡುವ ಪದಾರ್ಥಗಳು ನೆಲದ ಮಟ್ಟದಿಂದ ಮೂರು ಅಡಿಗಳ ಮೇಲೆ ಮತ್ತು ಎಂಟು ಅಡಿಗಳ ಒಳಗೆ ಇರಬೇಕು.

ಕೃಷಿ ಪ್ರದರ್ಶನಗಳನ್ನು ಒಂದು ನಿರ್ದಿಷ್ಟ ಆಂದೋಲನದ ಅಂಗವಾಗಿ ಏರ್ಪಡಿಸಬಹುದು. ಅವನ್ನು ಸಮಯೋಚಿತವಾಗಿ ರೈತರ ನಿತ್ಯದ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ, ಅವರಿಗೆ ಆಸಕ್ತಿ ಹೆಚ್ಚಾಗಿರುವಾಗ, ಅವರ ಗ್ರಾಮಗಳಲ್ಲಿ ಅಥವಾ ಸಮೀಪದಲ್ಲಿ ಏರ್ಪಡಿಸಬೇಕು. ಪ್ರದರ್ಶನಗಳನ್ನು ನೋಡಿದ ಮೇಲೆ ಅವುಗಳ ವಿಷಯವಾಗಿ ಚರ್ಚಿಸಲು ಅವಕಾಶ ಕಲ್ಪಿಸಿಕೊಡಬೇಕು. ಗ್ರಾಮಪಂಚಾಯಿತಿ ಕಟ್ಟಡ ಅಥವಾ ಶಾಲೆಯನ್ನು ಪ್ರದರ್ಶನದ ಏರ್ಪಾಡಿಗೆ ಉಪಯೋಗಿಸಿಕೊಳ್ಳಬಹುದು. ಪ್ರದರ್ಶನದ ಸಮಯದಲ್ಲಿ ಸಂಬಂಧಪಟ್ಟ ವಿಸ್ತರಣ ತಜ್ಞರು ಇದ್ದರೆ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಅನುಕೂಲವಾಗುತ್ತದೆ.

ಪ್ರದರ್ಶನಗಳನ್ನು ಏರ್ಪಡಿಸಿದರೆ ಸಾಲದು, ಮುಂದೆ ಅನುಸರಿಸಲು ಸಹಾಯವಾಗುವಂತೆ ಕರಪತ್ರಗಳು, ಕ್ಷೇತ್ರಪ್ರದರ್ಶನಗಳು, ಸಂಪನ್ಮೂಲಗಳು, ಮತ್ತು ತಾಂತ್ರಿಕ ತಿಳಿವಳಿಕೆಯನ್ನೂ ಒದಗಿಸಬೇಕು. ಹೀಗೆ ಮಾಡುವುದರಿಂದ ಪ್ರದರ್ಶನಗಳ ಉಪಯುಕ್ತತೆ ಹೆಚ್ಚಾಗುವುದಲ್ಲದೆ ಅವು ಪರಿಣಾಮಕಾರಿಗಳಾಗುತ್ತವೆ.

ವ್ಯವಸಾಯದ ಅಭಿವೃದ್ಧಿಯಲ್ಲಿ ಕೃಷಿ ಪ್ರದರ್ಶನಗಳು ಪ್ರಮುಖ ಪಾತ್ರವಹಿಸುತ್ತವೆ.

(ಕೆ.ಆರ್.ಜಿ.)

**ಕೃಷಿ ಮತ್ತು ಸರ್ಕಾರ :** ಪ್ರತಿಯೊಂದು ದೇಶದ ಸರ್ಕಾರವೂ ಬಹಳ ಹಿಂದಿನಿಂದಲೂ ಕೃಷಿಯಲ್ಲಿ ವಿಶೇಷವಾದ ಆಸಕ್ತಿ ವಹಿಸುತ್ತ ಬಂದಿದೆ; ಅನೇಕ ಸಾರಿ ನಡುವೆ ಪ್ರವೇಶಿಸಿದೆ. ಎರಡನೆಯ ಮಹಾಯುದ್ಧಕ್ಕೆ ಹಿಂದಿನ ಕಾಲದಲ್ಲಿ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರದ ಮಧ್ಯ ಪ್ರವೇಶ ಅತ್ಯಂತ ಮುಖ್ಯ ಮತ್ತು ಆವಶ್ಯ ಎಂದು ಭಾವಿಸಲಾಗಿತ್ತು. ಎರಡನೆಯ ಮಹಾಯುದ್ಧದ ಕಾಲದಲ್ಲೂ ಅನಂತರದ ವರ್ಷಗಳಲ್ಲೂ ಈ ನಂಬಿಕೆ ಬಲವಾಯಿತು.

ಎರಡನೆಯ ಮಹಾಯುದ್ಧಕ್ಕೆ ಮುಂಚೆ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಕೃಷಿಯ ಬಗ್ಗೆ ಸರ್ಕಾರದ ಕ್ರಮ ಅಗತ್ಯವೆನಿಸಲು ಇದ್ದ ಕಾರಣಗಳು ಹಲವಾರು. ಈ ಕಾರಣಗಳಲ್ಲಿ ಕೆಲವು ಈಚೆಗೆ ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡಿವೆ. ಕೆಲವು ಕಾರಣಗಳ ಪ್ರಾಮುಖ್ಯ ಹೆಚ್ಚಿದೆ. ಸರ್ಕಾರದ ಮಧ್ಯಪ್ರವೇಶಕ್ಕೆ ಕಾರಣವಾದ ಹೊಸ ಸನ್ನಿವೇಶಗಳು ಉದ್ಭವಿಸಿವೆ. ವ್ಯವಸಾಯಕಾರ್ಯ ನೆಲವನ್ನೇ ಬಹಳ ಮಟ್ಟಿಗೆ ಅವಲಂಬಿಸಿದ್ದಾಗಿದೆ ಯಾದ್ದರಿಂದ ಭೂ ಹಿಡುವಳಿ ಮತ್ತು ಉತ್ತರಾಧಿಕಾರ ಕಾನೂನುಗಳು ಕೃಷಿಯ ಆರೋಗ್ಯಕ್ಕೆ ಅತ್ಯಂತ ಮುಖ್ಯ. ಇವೆರಡನ್ನೂ ನಿರ್ಣಯಿಸುವುದು ಪ್ರತಿಯೊಂದು ಸರ್ಕಾರದ ಹೊಣೆಯಾಗಿದೆ. ಎರಡನೆಯದಾಗಿ, ವ್ಯವಸಾಯ ಸಾಮಾನ್ಯವಾಗಿ ಸಣ್ಣಗಾತ್ರದ ಉದ್ಯಮ. ಬೃಹದ್ಗಾತ್ರದ ಉದ್ಯಮಗಳಿಗೆ ಒದಗಿಬರುವ ಅನೇಕ ಸೌಲಭ್ಯಗಳನ್ನು ಸಣ್ಣ ರೈತ ಸಂಘಟಿಸಿಕೊಳ್ಳಲಾರ. ಬೃಹದ್ಗಾತ್ರದ ಮಧ್ಯವರ್ತಿಗಳೊಂದಿಗೆ ಚೌಕಾಸಿ ಮಾಡುವ ಶಕ್ತಿ ಇವನಿಗೆ ಇರುವುದಿಲ್ಲ. ಈ ನಿಟ್ಟಿನಿಂದಲೂ ಸರ್ಕಾರದ ಮಧ್ಯಪ್ರವೇಶ ಆವಶ್ಯವೆನಿಸಿದೆ. ಮೂರನೆಯದಾಗಿ,

ವಿಶ್ವಾದ್ಯಂತ ಬೇಸಾಯ ಒಂದು ಅವಸನ್ನ (ಡಿಪ್ರೆಸ್ಡ್) ಕೈಗಾರಿಕೆಯೆನಿಸಿದೆ. ಕೃಷಿವಿಧಾನಗಳನ್ನು ಉತ್ತಮಗೊಳಿಸಲು ಬಂಡವಾಳವೇ ಮುಂತಾದ ಉತ್ಪಾದನಾಂಗಗಳು ಸುಲಭವಾಗಿ ಹರಿದು ಬರುವುದಿಲ್ಲ. ಹೊಸ ವಿಧಾನಗಳನ್ನು ಜಾರಿಗೆ ತಂದ ಫಲವಾಗಿ ಅಥವಾ ಕೃಷಿಯ ಅಸ್ಥಿರತೆಯ ಪರಿಣಾಮವಾಗಿ ಹೆಚ್ಚುವರಿಯಾಗುವ ಶ್ರಮ, ಬಂಡವಾಳ ಮುಂತಾದವು ಸುಲಭವಾಗಿ ಬೇರೆಡೆಗೆ ಹರಿದು ಹೋಗುವುದಿಲ್ಲ. ಇಂಥ ಸಮಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರ ಮಧ್ಯಪ್ರವೇಶ ಮಾಡಬೇಕಾಗುತ್ತದೆ. ನಾಲ್ಕನೆಯದಾಗಿ, ಅಲ್ಪಾವಧಿಯಲ್ಲಿ ಬೇಡಿಕೆಯ ಏರಿಳಿತಗಳಿಗೆ ಅನುಗುಣವಾಗಿ ಕೃಷಿ ಉತ್ಪನ್ನದ ಸರಬರಾಯಿ ವ್ಯತ್ಯಾಸಗೊಳ್ಳುವುದಿಲ್ಲವಾದ್ದರಿಂದ ಬೆಲೆಗಳೂ ಲಾಭಗಳೂ ಅಸ್ತವ್ಯಸ್ತಗೊಂಡು ಕೃಷಿಕಾರನಿಗೋ ಅನುಭೋಗಿಗೋ ಕೈಗಾರಿಕೆಗೋ ದುಷ್ಪರಿಣಾಮ ಉಂಟಾಗದಂತೆ ಸರ್ಕಾರ ಕ್ರಮ ಕೈಕೊಳ್ಳುವುದು ಅಗತ್ಯ. ಕೊನೆಯದಾಗಿ, ಕೃಷಿಯಲ್ಲಿ ಸರ್ಕಾರ ಹೆಚ್ಚಿನ ಆಸಕ್ತಿ ತಳೆಯಲು ರಾಜಕೀಯ ಮತ್ತು ಸಾಮಾಜಿಕ ಕಾರಣಗಳೂ ಇರುವುದುಂಟು.

**ಉತ್ಪಾದನೆ ಮತ್ತು ಸರ್ಕಾರ :** ಉತ್ಪಾದನೆಗೆ ನೇರವಾಗಿ ಸಂಬಂಧಿಸಿದ ಅಂಶಗಳಲ್ಲಿ ಮುಖ್ಯವಾದ್ದೆಂದರೆ ಜಮೀನಿನ ಒಡೆತನ ಮತ್ತು ಉತ್ತರಾಧಿಕಾರ, ದೇಶದಲ್ಲಿ ಆದಷ್ಟು ಹೆಚ್ಚು ಮಂದಿ ನೆಲದೊಡೆಯರಿರಬೇಕೆಂಬ ಉದ್ದೇಶದಿಂದ ಸರ್ಕಾರ ಭೂ ಸ್ವತ್ತನ್ನು ವ್ಯಾಪಕವಾಗಿ ಹಂಚುವ ನೀತಿ ಅನುಸರಿಸಬಹುದು. ಆದರೆ ಈ ಕ್ರಮ ಯಾವುದೋ ಒಂದು ಘಟ್ಟ ಮೀರಿದರೆ ಜಮೀನು ಅನಾರ್ಥಿಕವಾಗಿ ಪರಿಣಮಿಸಬಹುದು. ಅಥವಾ ಜಮೀನು ವಿಂಗಡಣೆಯ ಮೇಲೆ ನಿರ್ಬಂಧ ಹೇರಿದರೆ ಅಥವಾ ಜಮೀನಿನ ಗಾತ್ರ ಹೆಚ್ಚಿಸಲು ಕ್ರಮ ಕೈಗೊಂಡರೆ ಒಂದು ಮಿತಿಯಿಂದಾಚೆಗೆ ಅದೂ ಬಾಧಕವೇ ಆಗಬಹುದು. ಜಮೀನು ಹಿಡುವಳಿಯ ಸ್ವರೂಪವನ್ನು ನಿಷ್ಕರ್ಷಿಸಿ, ಅದರ ಗರಿಷ್ಠ–ಕನಿಷ್ಠ ಮಿತಿ ನಿರ್ಧರಿಸುವುದು ಸರ್ಕಾರದ ಕರ್ತವ್ಯವಾಗಿದೆ. (**ನೋಡಿ– ಕೃಷಿ–ಸಂಘಟನೆ**). ಗೇಣಿ ಪದ್ಧತಿ ಇರುವುದು ಸೂಕ್ತವೇ ? ಅದಕ್ಕೆ ಯಾವ ಬಗೆಯ ನಿಯಂತ್ರಣ ಇರಬೇಕು ? – ಎಂಬುದನ್ನು ನಿರ್ಧರಿಸುವುದೂ ಸರ್ಕಾರದ ಹೊಣೆಯೇ. (ನೋಡಿ– ಕೃಷಿ–ಕಾನೂನುಗಳು)

ಜಮೀನು ಹಿಡುವಳಿ ಮತ್ತು ಗೇಣಿ ಪದ್ಧತಿಗಳನ್ನು ನಿಯಂತ್ರಣಗೊಳಿಸುವುದೇ ಅಲ್ಲದೆ, ಉತ್ಪಾದನೆಗೆ ನೇರವಾಗಿ ಸಂಬಂಧಿಸಿದಂತೆಯೂ ಸರ್ಕಾರ ನಾನಾ ಕ್ರಮಗಳನ್ನು ಜಾರಿಗೆ ತರಬಹುದು. ಭೂಸಾರ ನಷ್ಟವಾಗದಂತೆ ಕೃಷಿಕಾರ್ಯ ನಡೆಯಲು ಸರ್ಕಾರ ಕಾನೂನು ಮಾಡುವುದುಂಟು. ನೆಲದ ಖಾಸಗಿ ಒಡೆಯರು ಅನೇಕ ವೇಳೆ ಸ್ವಂತ ಲಾಭದೃಷ್ಟಿಯನ್ನೇ ಆಳೆದು, ದೀರ್ಘಕಾಲದ ಹಿತಗಳನ್ನು ಅಲಕ್ಷಿಸಬಹುದು; ಅಥವಾ ಸಮಾಜದ ಆವಶ್ಯಕತೆಗಳನ್ನು ದುರ್ಲಕ್ಷಿಸಬಹುದು. ಗೋಮಾಳಕ್ಕೆ ಮಾತ್ರ ಅರ್ಹವಾದ ನೆಲವೊಂದನ್ನು ಸಾಗುವಳಿಗೆ ಒಳಪಡಿಸಿದರೆ ತತ್ಕಾಲದಲ್ಲಿ ರೈತನಿಗೆ ಲಾಭ ಬಂದೀತು. ಆದರೆ ಯಾವುದೋ ಒಂದು ವರ್ಷ ಮಳೆ ಬಾರದೆ ಭೂಮಿಯ ಮೇಲ್ಮಣ್ಣು ಹುಡಿಯಾಗಿ, ಗಾಳಿಯಲ್ಲಿ ದೂಳಾಗಿ, ಆ ನೆಲ ನಗ್ನೀಕೃತವಾದರೆ ದೇಶಕ್ಕೆ ಅದೊಂದು ಶಾಶ್ವತ ನಷ್ಟವೇ. ಆದ್ದರಿಂದ ಸರ್ಕಾರ ಸೂಕ್ತ ಸರ್ವೇಕ್ಷಣ ನಡೆಸಿ, ನೆಲ ಇಂಥಿಂಥ ಕಾರ್ಯಕ್ಕೆ ಒದಗಿ ಬರತಕ್ಕದ್ದೆಂದು ನಿಗದಿ ಮಾಡಬೇಕಾಗುತ್ತದೆ. ಒಂದು ಕೃಷಿಕ್ಷೇತ್ರವನ್ನು ಸುವ್ಯವಸ್ಥಿತವಾಗಿ ನಿರ್ವಹಿಸಿದ ಸಂದರ್ಭದಲ್ಲಿ ಅದನ್ನು ಸರ್ಕಾರ ವಶಪಡಿಸಿಕೊಳ್ಳಲು ಕಾನೂನು ಮಾಡಬಹುದು. ರಾಷ್ಟ್ರಕ್ಕೆ ಆವಶ್ಯಕವಾದ ಬೆಳೆಗಳನ್ನು ಉತ್ಪಾದಿಸಲು ಪ್ರೋತ್ಸಾಹ ನೀಡಬಹುದು. ತತ್‌ಕ್ಷಣದಲ್ಲಿ ಲಾಭದಾಯಕವೆನಿಸಿದ ಬೆಳೆಗಳಿಗೆ ಸಹಾಯಧನ ನೀಡುವುದೂ ಒಂದು ವಿಧಾನ. ಕೆಲವು ಬಾಹ್ಯ ಕಾರಣಗಳಿಂದಾಗಿ ಒಂದು ಜಮೀನಿನ ಬೆಲೆ ಏರಿದರೆ ಆಗ ಅದರ ಲಾಭ ಅದರ ಒಡೆಯನಿಗೇ ಹೋಗದೆ ಸಮಾಜಕ್ಕೆ ಒದಗುವಂತೆ ಕೂಡ ಸರ್ಕಾರ ಕಾನೂನು ಮಾಡುತ್ತದೆ. ನೀರಾವರಿ ಸೌಲಭ್ಯದಿಂದಾಗಿಯೋ, ಸಾರಿಗೆ ಸೌಲಭ್ಯ ಬೆಳವಣಿಗೆಯಿಂದಾಗಿಯೋ, ಹತ್ತಿರದಲ್ಲೇ ಒಂದು ನಗರ ಬೆಳೆದದ್ದರಿಂದಲೋ ಜಮೀನಿನ ಮೌಲ್ಯ ಹೆಚ್ಚಿ, ಮಾಲೀಕ ಆ ಜಮೀನನ್ನು ಹಿಂದಣ ಉದ್ದೇಶದ ಬದಲು ಬೇರೆ ಉದ್ದೇಶಕ್ಕೆ ಬಳಸಿದಾಗ ಆ ಲಾಭ ಸರ್ಕಾರದ ಮೂಲಕ ಸಮಾಜಕ್ಕೆ ಲಭ್ಯವಾಗುವಂತೆ ಸರ್ಕಾರ ಶುಲ್ಕ ವಿಧಿಸುವುದುಂಟು.

ಕೃಷಿಕ್ಷೇತ್ರದ ಒಡೆತನ ಮತ್ತು ಅದರ ಸೂಕ್ತ ಬಳಕೆಗಾಗಿ ಇಂಥ ಹಲವೆಂಟು ಕಾಯಿದೆಗಳನ್ನುಮಾಡುವ ಬದಲು ಎಲ್ಲ ನೆಲವನ್ನೂ ರಾಷ್ಟ್ರೀಕರಣಗೊಳಿಸಿ. ಸರ್ಕಾರವೇ ಅದನ್ನು ನಿರ್ವಹಿಸುವುದು ಸಾಧ್ಯ. ಒಡೆತನದಲ್ಲಿ ಬದಲಾವಣೆಯಿಲ್ಲದೆ, ಯೋಗ್ಯ ಮೇಲ್ವಿಚಾರಕರ ಅಡಿಯಲ್ಲಿ, ನೆಲದ ಸಾರ ಕಡಿಮೆಯಾಗದಂತೆ ಮತ್ತು ಸಮಾಜಕ್ಕೆ ಅನುಕೂಲವಾಗುವಂತೆ ದೀರ್ಘ ದೃಷ್ಟಿಯಿಂದ ಕೃಷಿಕಾರ್ಯ ನೆರವೇರಬಹುದೆಂಬುದು ರಾಷ್ಟ್ರೀಕರಣದ ಪರವಾದ ವಾದ. ರೈತನಿಗೆ ನೆಲದ ಒಡೆತನದಿಂದ ಲಭ್ಯವಾಗುವ ತೃಪ್ತಿಯೂ ಅಗ್ಗವಾದ ಬಂಡವಾಳ ಒದಗಿಬರುವ ಸಾಧ್ಯತೆಯೂ ನೆಲದ ಖಾಸಗಿ ಒಡೆತನದ ಪರವಾದ ಮುಖ್ಯ ವಾದ. ಇದರಿಂದ ಸಮಾಜದಲ್ಲಿ ಸುಖ ನೆಮ್ಮದಿಗಳು ನೆಲೆಗೊಳ್ಳುವುವೆಂದು ಭಾವಿಸಲಾಗಿದೆ. ಜಮೀನನ್ನು ರಾಷ್ಟ್ರೀಕರಣಗೊಳಿಸಿದಾಗ ಬೇಸಾಯವನ್ನು ನಿರ್ವಹಿಸಲು ಸರ್ಕಾರ ನೌಕರರನ್ನು ನೇಮಿಸಬಹುದು. ಆದರೆ ವೈಯಕ್ತಿಕ ಹಿತಾಸಕ್ತಿ ಇಲ್ಲದ್ದರಿಂದ ಇವರು ಖಾಸಗಿ ಒಡೆಯರಷ್ಟೇ ದಕ್ಷತೆಯಿಂದ ಕಾರ್ಯ ಪ್ರವೃತ್ತರಾಗುವುದಿಲ್ಲವೆಂದು ವಾದಿಸಲಾಗಿದೆ. ಅಲ್ಲದೆ ಉತ್ಪಾದನೆಯ ದೃಷ್ಟಿಯಿಂದ ಸಮರ್ಪಕವಾದ ಜಮೀನಿನ ಗಾತ್ರವೆಷ್ಟೆಂಬುದನ್ನು ನಿರ್ಧರಿಸಲು ಸರ್ಕಾರಕ್ಕೆ ಯಾವ ಮಾಪನ ವಿಧಾನವೂ ಇಲ್ಲದೆ ಹೋಗಬಹುದು. ಈ ಕಾರಣಗಳಿಂದ ರಾಷ್ಟ್ರೀಕರಣ ಸೂಕ್ತವಲ್ಲವೆಂಬುದು ವಿರೋಧಿಗಳ ವಾದ.

ನೆಲದ ಒಡೆತನದ ನಿಯಂತ್ರಣವೇ ಅಲ್ಲದೆ ಇನ್ನೂ ಅನೇಕ ಬಗೆಯಾಗಿ ಸರ್ಕಾರವು ಉತ್ಪಾದನ ಕಾರ್ಯದಲ್ಲಿ ಮಧ್ಯಪ್ರವೇಶ ಮಾಡಬಹುದು. ಕೃಷಿಯ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಕೆಲವು ಕ್ರಮಗಳನ್ನು ಒಂದು ಪ್ರದೇಶದ ಎಲ್ಲರೂ ಏಕಪ್ರಕಾರವಾಗಿ ಅನುಸರಿಸುವುದು ಅಗತ್ಯವಾಗುತ್ತದೆ. ಫಸಲಿಗೋ ಪಶುಗಳಿಗೋ ಯಾವುದಾದರೂ ಸಾಂಕ್ರಾಮಿಕ ರೋಗ ಹತ್ತಿದಾಗ ಅದನ್ನು ನಿವಾರಿಸಲು ಸಾರ್ವತ್ರಿಕ ಕ್ರಮ ಅಗತ್ಯ. ಇದನ್ನು ಜಾರಿಗೆ ತರಲು ಸರ್ಕಾರ ಮಾತ್ರವೇ ಅರ್ಹವಾಗಿರುತ್ತದೆ. ಚರಂಡಿ ವ್ಯವಸ್ಥೆ, ನೀರಾವರಿ– ಇಂಥ ಕಾರ್ಯಗಳೂ ಅಷ್ಟೆ. ಸರ್ಕಾರದ ಮಧ್ಯಪ್ರವೇಶ ಅಗತ್ಯವಾದ ಇನ್ನೊಂದು ವಿಷಯವೆಂದರೆ ಹೊಸ ಹೊಸ ಸಂಶೋಧನೆಯ ಪ್ರಯೋಗಗಳು, ದೀರ್ಘಕಾಲದಲ್ಲಿ ಮಾತ್ರವೇ ಫಲಪ್ರದವಾಗುವ ಕ್ರಮಗಳ ಬಗ್ಗೆ ರೈತರಲ್ಲಿ ಜ್ಞಾನಪ್ರಸಾರ– ಮುಂತಾದವು. ಇವನ್ನೆಲ್ಲ ಕೈಗೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಹೆಚ್ಚು ಬೆಲೆಯ ಯಂತ್ರಗಳನ್ನು ಪಡೆಯಲೂ ಸಾರಪೋಷಕಗಳೇ ಮುಂತಾದವನ್ನು ಒಟ್ಟೊಟ್ಟಿಗೆ ಕೊಳ್ಳಲೂ ರೈತರಿಗೆ ವೈಯಕ್ತಿಕವಾಗಿ ಶಕ್ತಿ ಇರುವುದಿಲ್ಲ. ಇವನ್ನು ಕೊಂಡು ರೈತರಿಗೆ ಒದಗಿಸುವುದು ಅಥವಾ ಅದಕ್ಕಾಗಿ ವ್ಯವಸ್ಥೆ ಏರ್ಪಡಿಸುವುದು ಸರ್ಕಾರದ ಹೊಣೆ. ರೈತರೆಲ್ಲ ಒಟ್ಟಿಗೆ ಸೇರಿ ತಮ್ಮ ಪ್ರತ್ಯಯದ (ಕ್ರೆಡಿಟ್) ಆಧಾರದ ಮೇಲೆ ಉದ್ದರಿ ಪಡೆಯುವುದು ಸಾಧ್ಯವಾಗುವಂತೆ ಸಹಕಾರ ಸಂಘಗಳೇ ಮುಂತಾದವನ್ನು ಸಂಘಟಿಸಲು ಸರ್ಕಾರದ ನೆರವು ಅಗತ್ಯವಾಗುತ್ತದೆ. ಉತ್ಪಾದನೆಯನ್ನು ಅಧಿಕಗೊಳಿಸುವುದು ಅಗತ್ಯವಾದಾಗ, ಕೃಷಿ ಉತ್ಪನ್ನಗಳ ಅಧಿಕಬೆಲೆಗಳಿಂದಾಗಿ ಅದಕ್ಷ ಕೃಷಿಕರೂ ಉತ್ಪಾದನೆಯಲ್ಲಿ ನಿರತರಾಗಿದ್ದಾಗ ಅಂಥ ಉತ್ಪಾದಕರನ್ನು ಉಚ್ಚಾಟಿಸಿ ದಕ್ಷಸ್ಥಿತಿಯನ್ನೇರ್ಪಡಿಸಲು ಸರ್ಕಾರ ಕ್ರಮಕೈಗೊಳ್ಳುವುದುಂಟು. ಉತ್ಪಾದನೆಗೆ ಸಂಬಂಧಿಸಿದಂತೆ ಸರ್ಕಾರದ ಮಧ್ಯಪ್ರವೇಶ ಅಗತ್ಯವೇ, ಅಲ್ಲವೇ– ಎಂಬ ವಿಚಾರವನ್ನು ನಿರ್ಣಯಿಸುವಾಗ ಪರಿಗಣಿಸಬೇಕಾದ ಪ್ರಶ್ನೆಗಳು ಎರಡು ; ಸರ್ಕಾರದ ಮಧ್ಯಪ್ರವೇಶವಿಲ್ಲದ್ದರ ಪರಿಣಾಮವಾಗಿ ರೈತರು ವೈಯಕ್ತಿಕವಾಗಿ ಉತ್ಪಾದನೆಯನ್ನು ಹೆಚ್ಚಿಸುವುದು ಅಸಾಧ್ಯವಾಗಿದೆಯೇ ? ಉತ್ಪಾದನವ್ಯವಸ್ಥೆಯ ಕೊರತೆಯನ್ನು ನಿವಾರಿಸಲು ಸರ್ಕಾರ ಅಥವಾ ಸಹಕಾರ ಸಂಘ ನೀಡುವ ನೆರವಿನಿಂದ ಹೆಚ್ಚಿನ ಫಲ ಲಭ್ಯವಾಗುತ್ತದೆಯೇ? – ಎಂಬವು ಈ ಪ್ರಶ್ನೆಗಳು.

**ಮಾರಾಟದಲ್ಲಿ ಮಧ್ಯ ಪ್ರವೇಶ :** ಮಾರಾಟ ಕಾರ್ಯದಲ್ಲಿ ಸರ್ಕಾರದ ಪ್ರವೇಶ ಅಗತ್ಯವೆನಿಸುವ ಸಂದರ್ಭಗಳು ಅನೇಕ. ಒಂದು ಉತ್ಪನ್ನದ ಸರಬರಾಯಿಯಲ್ಲಿ ಕೊರತೆಯಿದ್ದಾಗ ಅದು ಅನುಭೋಗಿಗಳಿಗೆ ನ್ಯಾಯವಾದ ಬೆಲೆಯಲ್ಲಿ, ತಾರತಮ್ಯವಿಲ್ಲದೆ ಹಂಚಿಕೆಯಾಗುವಂತೆ ಕ್ರಮ ಕೈಗೊಳ್ಳುವುದು ಸರ್ಕಾರದ ಕರ್ತವ್ಯವಾಗುತ್ತದೆ. ಬೆಲೆಯ ನಿಯಂತ್ರಣ, ಪಡಿತರ ವ್ಯವಸ್ಥೆ– ಇವು ಸರ್ಕಾರ ಅನುಸರಿಸುವ ವಿಧಾನಗಳು. ಸರ್ಕಾರವೇ ಉತ್ಪನ್ನವನ್ನೆಲ್ಲ ನಿಗದಿಯಾದ ಬೆಲೆಯಲ್ಲಿ ಕೊಂಡು ಅದನ್ನು ಮಾರಲು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬಹುದು; ಅಥವಾ ಚಿಲ್ಲರೆ ವಿಕ್ರಯದಾರರು ನ್ಯಾಯಬೆಲೆಗೆ, ನಿಗದಿಯಾದ ಪರಿಮಾಣಗಳಲ್ಲಿ ವಿಕ್ರಯ ಮಾಡುವಂತೆ ವ್ಯವಸ್ಥೆ ಏರ್ಪಡಿಸಬಹುದು. ಮಧ್ಯವರ್ತಿಗಳು ಬಲಿಷ್ಠರಾಗಿ ಉತ್ಪನ್ನವನ್ನೆಲ್ಲ ರೈತರಿಂದ ಸಂಗ್ರಹಿಸಿ ಬೆಲೆ ಏರಿಕೆಗೆ ಕಾರಣರಾದಾಗ ಉತ್ಪಾದಕರಿಗೆ ನ್ಯಾಯಬೆಲೆ ದೊರಕುವಂತೆ, ಅನುಭೋಗಿಗಳು ಹೆಚ್ಚು ಬೆಲೆ ತರಬೇಕಾಗದಂತೆ ಸರ್ಕಾರ ಪ್ರಯತ್ನಿಸುವುದು ಆವಶ್ಯ. ಮಾರಾಟ ಸಹಕಾರ ಸಂಘಗಳನ್ನು ಏರ್ಪಡಿಸಲು ಅದು ಪ್ರೋತ್ಸಾಹ ನೀಡಬಹುದು. ಉತ್ಪನ್ನದ ಗುಣಮಟ್ಟವನ್ನು ನಿಷ್ಕರ್ಷಿಸಿ ಬೆಲೆ ನಿಗದಿ ಮಾಡಬಹುದು. ಇದರಿಂದ ತಮ್ಮ ಉತ್ಪನ್ನಕ್ಕೆ ಯಾವ ಬೆಲೆ ದೊರಕುವುದೆಂಬುದು ಉತ್ಪಾದಕರಿಗೂ, ತಾವು ಕೊಳ್ಳುವ ಸರಕಿಗೆ ಯಾವ ಬೆಲೆ ಕೊಡಬೇಕಾಗುವುದೆಂಬುದು ಅನುಭೋಗಿಗಳಿಗೂ ಖಚಿತವಾಗಿ ಗೊತ್ತಿರುತ್ತದೆ.

**ಸಾಧನಗಳ ಕ್ಷೇತ್ರ ಬದಲಾವಣೆ :** ಒಂದು ಪದಾರ್ಥಕ್ಕೆ ಬೇಡಿಕೆ ಅಧಿಕವಾದಾಗ ಅದರ ಬೆಲೆ ಏರುವ ಪ್ರವೃತ್ತಿ ಕಂಡುಬರುತ್ತದೆ. ಪದಾರ್ಥದ ಉತ್ಪಾದನೆ ಹೆಚ್ಚು ಲಾಭದಾಯಕವಾಗಿ ಕಂಡುಬರುವುದರಿಂದ ಹೆಚ್ಚು ಉತ್ಪಾದನ ಸಾಧನಗಳು ಅದರಿಂದ ಆಕರ್ಷಿತವಾಗುತ್ತವೆ, ಉತ್ಪಾದನೆ ಅಧಿಕವಾಗುತ್ತದೆ, ಅಧಿಕ ಬೇಡಿಕೆಯ ಪೂರೈಕೆ ಸಾಧ್ಯವಾಗುತ್ತದೆ. ಪದಾರ್ಥಕ್ಕೆ ಬೇಡಿಕೆ ಇಳಿದಾಗ ಹಿಂದೆ ಹೇಳಿದುದಕ್ಕೆ ವಿಪರ್ಯಯವಾದ ಕ್ರಿಯೆಗಳು ಜರುಗುತ್ತವೆ. ಇದು ತಾತ್ತ್ವಿಕವಾಗಿ ಮಾರುಕಟ್ಟೆಯ ನಿಯಮ. ಆದರೆ ಕೃಷಿ ಕ್ಷೇತ್ರದಲ್ಲಿ ಅಲ್ಪಾವಧಿಯಲ್ಲಿ ಇಂಥ ಕ್ರಿಯೆಗಳು ಸಂಭವಿಸುವುದಿಲ್ಲ. ದೀರ್ಘಕಾಲದಲ್ಲಿ ಕೂಡ ಅನೇಕ ವೇಳೆ ರೈತರ ಅಜ್ಞಾನ, ಉತ್ಪಾದನ ಸಾಧನಗಳ ಚಲನರಾಹಿತ್ಯ–ಈ ಕಾರಣಗಳಿಂದಾಗಿ ಉತ್ಪಾದನೆಯಲ್ಲಿ ವ್ಯತ್ಯಾಸವಾಗುವುದಿಲ್ಲ. ಒಂದು ಪದಾರ್ಥಕ್ಕೆ ಬೇಡಿಕೆ ತಗ್ಗಿ, ಬೆಲೆ ಇಳಿದು, ಅದರ ಉತ್ಪಾದನೆ ಅಲಾಭದಾಯಕವಾಗಿದ್ದಾಗಲೂ ಕೃಷಿಯನ್ನು ತ್ಯಜಿಸಿ ಬೇರೆ ಉತ್ಪಾದನ ಕಾರ್ಯದಲ್ಲಿ ನಿರತರಾಗುವುದು ಸಾಧ್ಯವಿಲ್ಲದಿದ್ದರಿಂದ ರೈತರು

ಸಂಕಟಕ್ಕೀಡಾಗಬಹುದು. ಭಾರತದಲ್ಲಿ ಬಹುತೇಕ ರೈತರಿಗೆ ಬೇರೆ ಯಾವ ಉದ್ಯೋಗವೂ ಇಲ್ಲದ್ದರಿಂದ ಅವರು ನೆಲವನ್ನೇ ಅವಲಂಬಿಸಿರುವುದು ಒಂದು ಉದಾಹರಣೆ. ಉತ್ಪಾದನ ಸಾಧನಗಳು ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೂ ಒಂದು ಉತ್ಪನ್ನದಿಂದ ಇನ್ನೊಂದು ಉತ್ಪನ್ನಕ್ಕೂ ಚಲಿಸುವಂತೆ ಸರ್ಕಾರ ಪ್ರಯತ್ನಿಸುವುದು ಅಗತ್ಯವೆನಿಸುತ್ತದೆ. ಯಾವುದೋ ಒಂದು ಆಹಾರಧಾನ್ಯದ ಬೆಳೆಗೆ ಹೆಚ್ಚು ಪ್ರೋತ್ಸಾಹ ನೀಡುವುದು, ಕೈಗಾರಿಕೆಗೆ ಆವಶ್ಯವಾದ ಕಚ್ಚಾಸಾಮಗ್ರಿಯನ್ನು ಹೆಚ್ಚಾಗಿ ಬೆಳೆಯುವಂತೆ ನೆರವು ನೀಡುವುದು, ನೆಲವನ್ನೇ ನಂಬಿದವರಿಗೆ ಅನ್ಯೋದ್ಯೋಗಗಳನ್ನು ಒದಗಿಸಿ ಅವರು ಅವುಗಳತ್ತ ಚಲಿಸುವಂತೆ ಮಾಡುವುದು– ಇವು ಸರ್ಕಾರದ ಕ್ರಮಗಳ ಕೆಲವು ಉದಾಹರಣೆಗಳು.

**ಬೆಲೆ ವರಮಾನಗಳ ಸ್ಥಾಯೀಕರಣ :** ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಸಂಭವಿಸುವ ಅನಾವಶ್ಯಕವಾದ ಮತ್ತು ತೀವ್ರವಾದ ಏರಿಳಿತಗಳು ಉತ್ಪಾದಕ, ಅನುಭೋಗಿ ಇಬ್ಬರಿಗೂ ಅನಿಷ್ಟಕಾರಕವಾದವು. ಆದರೆ ಈ ಅಸ್ಥಿರತೆ ಅನೇಕ ವೇಳೆ ಅಜ್ಞಾನಜನ್ಯವಾದ್ದು ; ಮಾರುಕಟ್ಟೆಯ ಸ್ಥಿತಿಗತಿಗಳನ್ನು ಅರಿಯದ್ದರಿಂದ ಸಂಭವಿಸುವಂಥದು. ಉತ್ಪನ್ನದ ಬೆಲೆ ಇಳಿದೀತೆಂಬ ಭಯದಿಂದ ರೈತ ಆತುರದಿಂದ ಅದನ್ನು ಮಾರಾಟ ಮಾಡುವುದೂ ಅಭಾವ ಪರಿಸ್ಥಿತಿ ಏರ್ಪಟ್ಟು ಬೆಲೆ ಏರುವುದೆಂಬ ಭಯದಿಂದ ಅನುಭೋಗಿ ತನಗೆ ತತ್ಕ್ಷಣದಲ್ಲಿ ಆವಶ್ಯವಾದ್ದಕ್ಕಿಂತ ಹೆಚ್ಚು ಕೊಳ್ಳುವುದೂ ಬೆಲೆಗಳ ತೀವ್ರ ಅಸ್ಥಿರತೆಗೆ ಒಂದು ಕಾರಣ. ಆದ್ದರಿಂದ ಸರ್ಕಾರವೋ ಅದರಿಂದ ಮನ್ನಣೆ ಪಡೆದ ಯಾವುದಾದರೂ ಸಂಸ್ಥೆಯೋ ಮಾರುಕಟ್ಟೆಯ ಪ್ರವೃತ್ತಿಗಳನ್ನು ಕುರಿತ ಅಂಕಿಅಂಶಗಳನ್ನು ಸಂಗ್ರಹಿಸಿ ನಿಯತಕಾಲಿಕ ವರದಿಗಳನ್ನು ಪ್ರಕಟಿಸುವುದರಿಂದ ಈ ಬಗೆಯ ಅಸ್ಥಿರತೆಗಳನ್ನು ನಿವಾರಿಸಬಹುದು. ಋತುವಿಗೆ ಅನುಗುಣವಾಗಿಯೂ ಬೆಲೆಗಳು ಏರಿಳಿಯಬಹುದು. ರೈತ ತನ್ನ ಉತ್ಪನ್ನವನ್ನು ದಾಸ್ತಾನು ಮಾಡಲು ಸರಿಯಾದ ವ್ಯವಸ್ಥೆಯಿಲ್ಲದ್ದರಿಂದಲೂ ಕೃಷಿಕಾರ್ಯಕ್ಕಾಗಿ ಮಾಡಿದ ಸಾಲವನ್ನು ಸುಗ್ಗಿಯಾದೊಡನೆ ತೀರಿಸಬೇಕಾಗಿ ಬರುವುದರಿಂದಲೂ ಆತ ತನ್ನ ಸರಕನ್ನು ಉತ್ಪಾದಿಸಿದೊಡನೆ ಮಾರಾಟ ಮಾಡಲು ಹಾತೊರೆಯುವುದುಂಟು. ಮಧ್ಯವರ್ತಿಗಳು ಈ ಪರಿಸ್ಥಿತಿಯ ದುರುಪಯೋಗ ಪಡೆದುಕೊಂಡು, ಸರಕನ್ನು ಅಗ್ಗದ ಬೆಲೆಯಲ್ಲಿ ಕೊಂಡು, ದಾಸ್ತಾನು ಮಾಡಿ, ಕೃತಕ ಅಭಾವ ಏರ್ಪಡಿಸಿ ಬೆಲೆ ಏರಿಸಬಹುದು. ರೈತರಿಗೆ ತಮ್ಮ ಉತ್ಪನ್ನವನ್ನು ದಾಸ್ತಾನು ಮಾಡಲು ಸೌಲಭ್ಯಗಳನ್ನು ಕಲ್ಪಿಸಿ, ಅವರಿಗೆ ಹಣಕಾಸಿನ ನೆರವುನೀಡಿ, ಸಾಧ್ಯವಾದಲ್ಲೆಲ್ಲ ಮಧ್ಯವರ್ತಿಗಳನ್ನು ನಿವಾರಿಸಲು ರೈತರನ್ನು ಸಂಘಟಿಸಿ, ಸರ್ಕಾರ ಈ ಶ್ರಾಯೀಣ ಅಸ್ಥಿರತೆಯನ್ನು ಕಡಿಮೆಗೊಳಿಸಬಹುದು. ಆದರೆ ಅತ್ಯಂತ ತ್ರಾಸದಾಯಕವಾದ್ದೆಂದರೆ ದೀರ್ಘ ಕಾಲದಲ್ಲಿ ಸಂಭವಿಸುವ ಅಸ್ಥಿರತೆ; ಪದಾರ್ಥದ ಅತಿಯಾದ ಉತ್ಪಾದನೆ ಅಥವಾ ಅಭಾವಗಳಿಂದ ಸಂಭವಿಸುವ ಏರಿಳಿತ. ಬೆಲೆಗಳು ಅತಿಯಾಗಿ ಇಳಿಯದಂತೆ ಕನಿಷ್ಠ ಬೆಲೆಗಳನ್ನು ನಿರ್ಧರಿಸುವುದು. ಆ ಬೆಲೆಗಳಲ್ಲಿ ಉತ್ಪನ್ನಗಳನ್ನು ಸರ್ಕಾರವೋ ಯಾವುದಾದರೂ ಸಂಸ್ಥೆಯೋ ರೈತರಿಂದ ಕೊಳ್ಳುವುದು, ಬೆಲೆಗಳು ಅತಿಯಾಗಿ ಏರಿದಾಗ ನಿಗದಿಯಾದ ಬೆಲೆಗಳಲ್ಲಿ ರೈತರು ಕಡ್ಡಾಯವಾಗಿ ಉತ್ಪನ್ನವನ್ನು ಸಲ್ಲಿಸುವಂತೆ ಕಾಯಿದೆ ಮಾಡುವುದು–ಇವು ಕೆಲವು ಕ್ರಮಗಳು.

ಕೃಷಿಕನಿಗೆ ಧನಸಹಾಯ, ವಿವಿಧ ಸೌಲಭ್ಯಗಳ ನೀಡಿಕೆ, ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿ, ಹೆಚ್ಚು ಉತ್ಪಾದನೆ ಮಾಡುವ ರೈತರಿಗೆ ನಗದು ಬಹುಮಾನ, ಸನ್ಮಾನ, ಸ್ವದೇಶೀ ಉತ್ಪನ್ನಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಅದರ ಆಮದಿನ ನಿರ್ಬಂಧ, ರಫ್ತಿಗೆ ನೆರವು, ಕೃಷಿ ಅಭಿವೃದ್ಧಿ ಯೋಜನೆ– ಮುಂತಾಗಿ ನಾನಾ ವಿಧವಾಗಿ ಆಧುನಿಕ ಸರ್ಕಾರಗಳು ಕೃಷಿಯಲ್ಲಿ ಆಸಕ್ತಿ ವಹಿಸುತ್ತಿವೆ.

**ಭಾರತದಲ್ಲಿ :** ಭಾರತದಲ್ಲಂತೂ ಕೃಷಿಯಲ್ಲಿ ಸರ್ಕಾರದ ಮಧ್ಯಪ್ರವೇಶ ಅತ್ಯಂತ ಆವಶ್ಯಕವೆನಿಸಿದೆ. ಇದಕ್ಕೆ ಅನೇಕ ಕಾರಣಗಳುಂಟು ; 1. ಭಾರತದ ವ್ಯವಸಾಯ ಇಂದಿಗೂ ಬಹುತೇಕ ಮಳೆಯನ್ನೇ ಅವಲಂಬಿಸಿದೆ. ಇದೊಂದು ಜೂಜು. ಪ್ರಕೃತಿಯ ಪ್ರಕೋಪದಿಂದ ಸಂಭವಿಸುವ ಸಂಕಟವನ್ನು ಪರಿಹರಿಸಲು ಸರ್ಕಾರದ ನೆರವು ಅಗತ್ಯ. 2. ಭಾರತದ ಕೃಷಿ ಸಂಘಟನೆ ಮತ್ತು ವ್ಯವಸ್ಥೆ ತುಂಬ ಅಸಮರ್ಪಕವಾದ್ದು, ಜಮೀನು ಹಿಡುವಳಿ, ಗೇಣಿಪದ್ಧತಿ, ಧನಪೋಷಣೆ, ಮಾರಾಟ ಮುಂತಾದವನ್ನೆಲ್ಲ ನೇರ್ಪುಗೊಳಿಸಲು ಸರ್ಕಾರ ಪ್ರವೇಶಿಸಬೇಕಾಗುತ್ತದೆ. ಸಾಲಿಗರು, ಮಧ್ಯವರ್ತಿಗಳು, ಮಾರುಕಟ್ಟೆಯ ಏರಿಳಿತಗಳು–ಇವೆಲ್ಲ ಸರ್ಕಾರದ ಆಗಮನವನ್ನು ಆಕರ್ಷಿಸುವ ವ್ಯಾಧಿಸ್ಥಳಗಳು. ಅನಕ್ಷರಸ್ಥನೂ ಆಧುನಿಕ ಕೃಷಿವಿಧಾನಗಳನ್ನರಿಯದವನೂ ಮಾರುಕಟ್ಟೆಯ ಪ್ರವೃತ್ತಿಗಳನ್ನು ತಿಳಿಯಲಾಗದವನೂ ಆದ ರೈತನ ಪ್ರಗತಿಯಲ್ಲಿ ಸರ್ಕಾರದ ಪಾತ್ರ ಅಗಾಧ. 3. ಕೃಷಿ ಈಗಲೂ ಭಾರತದಲ್ಲಿ ಒಂದು ಅವಸನ್ನ ಕೈಗಾರಿಕೆ. ಕೃಷಿ ಉತ್ಪಾದನ ವ್ಯವಸ್ಥೆಯನ್ನು ಸ್ಥಾಯೀಕರಣಗೊಳಿಸುವುದು ಸರ್ಕಾರದಿಂದ ಮಾತ್ರ ಸಾಧ್ಯ. 4. ಕೃಷಿ ಉತ್ಪಾದನಾಂಗಗಳನ್ನು ಚಲನಾತ್ಮಕವನ್ನಾಗಿ ಮಾಡಿ, ಕೃಷಿಯಲ್ಲಿ ಹೆಚ್ಚುವರಿಯಾಗಿರುವ ಕಾರ್ಮಿಕರನ್ನು ಬೇರೆ ಉದ್ಯೋಗಗಳಲ್ಲಿ ನೆಲೆಗೊಳಿಸುವುದು ಆವಶ್ಯವಾಗಿದೆ. 5. ನೀರಾವರಿ ಸೌಲಭ್ಯವನ್ನು ವಿಸ್ತೃತಗೊಳಿಸಿ, ಮಳೆಯನ್ನೇ ನೇರವಾಗಿ ಅವಲಂಬಿಸುವ ಪರಿಸ್ಥಿತಿಯನ್ನು ತಪ್ಪಿಸಲು ಅಭಿವೃದ್ಧಿ ಯೋಜನೆಗಳನ್ನು ಸರ್ಕಾರವೇ ಜಾರಿಗೆ ತರಬೇಕಾಗಿದೆ. 6. ಮಿಶ್ರ ಬೇಸಾಯ, ಹೊಸ ತಳಿಗಳ ಮತ್ತು ಸಾರಪೋಷಣಗಳ ಬಳಕೆ, ಸುಧಾರಿತ ಸಾಗುವಳಿ ವಿಧಾನ ಮುಂತಾದವುಗಳಲ್ಲಿ ರೈತರಿಗೆ ನಂಬಿಕೆ ಬರುವಂತೆ ಮಾಡಲು ಪ್ರಾತ್ಯಕ್ಷಿಕ ಕೃಷಿಕ್ಷೇತ್ರಗಳನ್ನು ತೆರೆಯಬೇಕಾಗಿದೆ. ಈ ಎಲ್ಲ ಕಾರಣಗಳಿಂದ ಭಾರತದ ಕೃಷಿಯಲ್ಲಿ ಸರ್ಕಾರದ ಪಾತ್ರ ಅಗಾಧ.

**ಕೃಷಿ ನೀತಿ :** ಬ್ರಿಟಿಷ್ ಸರ್ಕಾರ ಕೃಷಿಯ ಬಗ್ಗೆ ಬಹಳ ಕಾಲ ಅತಿಯಾದ ಉದಾಸೀನ ಧೋರಣೆಯನ್ನೇ ತಳೆದಿತ್ತು. ದೇಶದ ವ್ಯವಸಾಯವ್ಯವಸ್ಥೆಯನ್ನು ಬದಲಿಸುವ ಆಸಕ್ತಿ ಅದಕ್ಕಿರಲಿಲ್ಲ. ಪರಿಸ್ಥಿತಿಯನ್ನು ಉತ್ತಮಪಡಿಸುವ ಯಾವ ಕ್ರಮವನ್ನೂ ಅದು ಜಾರಿಗೆ ಅದು ತರಬಯಸಲಿಲ್ಲ. 19ನೆಯ ಶತಮಾನದ ಕೊನೆಯಲ್ಲಿ ದೇಶದಲ್ಲಿ ಅನೇಕ ಕ್ಷಾಮಗಳು ಸಂಭವಿಸಿದುವು. ಆಗ ಸರ್ಕಾರ ಕೃಷಿಯನ್ನು ಸುಧಾರಿಸುವ ಬಗ್ಗೆ ತೀವ್ರ ಗಮನ ಹರಿಸುವುದು ಅನಿವಾರ್ಯವಾಯಿತು. 1880, 1898 ಮತ್ತು 1901 ರ ಕ್ಷಾಮ ಆಯೋಗಗಳೂ 1903ರ ನೀರಾವರಿ ಆಯೋಗವೂ ಭಾರತದ ಕೃಷಿ ಸುಧಾರಣೆಯ ಬಗ್ಗೆ ರಚನಾತ್ಮಕ ಸಲಹೆಗಳನ್ನು ನೀಡಿದುವು. ಇದಕ್ಕೂ ಮುಂಚೆ ಲ್ಯಾಂಕಷೈರಿನ ಹತ್ತಿ ಜವಳಿ ತಯಾರಕರು ಭಾರತದ ಹತ್ತಿಯಲ್ಲಿ ಆಸಕ್ತಿ ತಳೆದುದರಿಂದ ಅದರ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಸರ್ಕಾರ ವ್ಯವಸಾಯ ಇಲಾಖೆಗಳನ್ನು ಸ್ಥಾಪಿಸುವುದು ಆವಶ್ಯವೆಂದು ಬಗೆಯಿತು. ಇವುಗಳ ಸ್ಥಾಪನೆಯಾದ್ದು 1884ರಲ್ಲಿ. ರಾಯಲ್ ಅಗ್ರಿಕಲ್ಚರಲ್ ಸೊಸೈಟಿಯ ವೋಲ್ಕರ್ 1889ರಲ್ಲಿ ಸಲ್ಲಿಸಿದ ಒಂದು ವರದಿಯಲ್ಲಿ ಕೃಷಿಗೆ ಸಂಬಂಧಿಸಿದಂತೆ ವೈಜ್ಞಾನಿಕ ಸಂಶೋಧನೆಯ ಆವಶ್ಯಕತೆಯನ್ನು ಒತ್ತಿ ಹೇಳಲಾಗಿತ್ತು. 1890ರಲ್ಲಿ ಸಮಾವೇಶಗೊಂಡಿದ್ದ ಕೃಷಿ ಸಮ್ಮೇಳನದ ಶಿಫಾರಸಿನ ಪ್ರಕಾರ ಸರ್ಕಾರ ಒಬ್ಬ ಕೃಷಿ ರಾಸಾಯನಶಾಸ್ತ್ರಜ್ಞನನ್ನು ನೇಮಕ ಮಾಡಿತು. ಕೃಷಿ ಮಹಾನಿರೀಕ್ಷಕ (ಇನ್‌ಸ್ಪೆಕ್ಟರ್ ಜನರಲ್), ಶಿಲೀಂಧ್ರಶಾಸ್ತ್ರಜ್ಞ (ಮೈಕಾಲಜಿಸ್ಟ್), ಕೀಟವಿಜ್ಞಾನಿ (ಎಂಟೋಮಾಲಜಿಸ್ಟ್)– ಇವರು ಕ್ರಮೇಣ ನೇಮಕವಾದರು. ಪುಣೆಯಲ್ಲಿ ಸಂಶೋಧನಾಲಯ ಸ್ಥಾಪಿತವಾದ್ದು 1903ರಲ್ಲಿ. ಕೃಷಿಗೆ ಹಣಕಾಸು ಒದಗಿಸುವ ಉದ್ದೇಶದಿಂದ ಸಹಕಾರ ಉದ್ದರಿ ಸಂಘಗಳ ಕಾಯಿದೆಯನ್ನು 1904ರಲ್ಲಿ ಜಾರಿಗೆ ತರಲಾಯಿತು. 1905ರಲ್ಲಿ ಕೇಂದ್ರ ಮತ್ತು ಪ್ರಾಂತ್ಯ ವ್ಯವಸಾಯ ಇಲಾಖೆಗಳ ವಿಸ್ತರಣೆಯಾಯಿತು. ಅಖಿಲಭಾರತ ವ್ಯವಸಾಯ ಬೋರ್ಡ್ ಸ್ಥಾಪನೆಯಾದ್ದೂ ಆ ವರ್ಷವೇ. ಇಂಪೀರಿಯಲ್ ಕೃಷಿ ಸೇವಾ ವ್ಯವಸ್ಥೆಯನ್ನು 1906ರಲ್ಲಿ ಆರಂಭಿಸಲಾಯಿತು. ಕೃಷಿ ಸಂಬಂಧವಾದ ವಿಷಯಗಳ ಸಂಶೋಧನೆ ಮತ್ತು ಅಧ್ಯಯನಕ್ಕಾಗಿ ಪುಣೆ, ಕಾನ್ಪುರ, ನಾಗಪುರ, ಲೈಯಲ್‌ಪುರ, ಕೊಯಮತ್ತೂರು ಮತ್ತು ಮಾಂಡಲೆಗಳಲ್ಲಿ (ಬರ್ಮಾ ಆಗ ಭಾರತದ ಭಾಗವಾಗಿತ್ತು)ಕೃಷಿ ಕಾಲೇಜುಗಳು ಸ್ಥಾಪಿತವಾದುವು.

1919ರ ಸುಧಾರಣೆಗಳ ಫಲವಾಗಿ 1921ರಲ್ಲಿ ವ್ಯವಸಾಯ ವಿಷಯವನ್ನು ಪ್ರಾಂತ್ಯ ಸರ್ಕಾರಕ್ಕೆ ವರ್ಗಾಯಿಸಲಾಯಿತು. ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಕೃಷಿ ಸುಧಾರಣೆ ಮಾಡಲು ಪ್ರಾಂತೀಯ ಸರ್ಕಾರಗಳಿಗೆ ಇದರಿಂದ ಹೆಚ್ಚಿನ ಸ್ವಾತಂತ್ರ್ಯ ಲಭ್ಯವಾಯಿತು. 1926ರಲ್ಲಿ ಸರ್ಕಾರ ನೇಮಿಸಿದ ವ್ಯವಸಾಯ ಆಯೋಗ ಸಲ್ಲಿಸಿದ ವರದಿಯಲ್ಲಿ (1928) ಭಾರತದ ವ್ಯವಸಾಯವನ್ನು ಉತ್ತಮಪಡಿಸಲು ಅನೇಕ ಸಲಹೆಗಳನ್ನು ನೀಡಿತು. 1929ರಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟಿನ ಫಲವಾಗಿ ಭಾರತದಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಬಹುವಾಗಿ ಕುಸಿದುವು. ಬೆಲೆಗಳನ್ನು ಸ್ಥಾಯೀಕರಿಸಿ ರೈತರ ಸ್ಥಿತಿಯನ್ನು ಸುಧಾರಿಸಲು ಸರ್ಕಾರ ಏನೂ ಕ್ರಮ ಕೈಗೊಳ್ಳಲಿಲ್ಲ. ಭಾರತೀಯ (ಆಗ ಇಂಪೀರಿಯಲ್) ವ್ಯವಸಾಯ ಸಂಶೋಧನ ಮಂಡಲಿ ಆ ವರ್ಷ ಸ್ಥಾಪಿತವಾಯಿತು.

ಮುಂದಣ ದಶಕದಲ್ಲಿ ಸಂಭವಿಸಿದ ಮಹತ್ತ್ವದ ಘಟನೆಯೆಂದರೆ ರಿಸರ್ವ್‌ಬ್ಯಾಂಕಿನ ಸ್ಥಾಪನೆ (1935). ಇದರ ಅಂಗವಾದ ಕೃಷಿ ಉದ್ದರಿ ಇಲಾಖೆ ಭಾರತದ ಕೃಷಿ ಅಭಿವೃದ್ಧಿಗೆ ಅನೇಕ ಬಗೆಯಲ್ಲಿ ಸೇವೆ ಸಲ್ಲಿಸುತ್ತಿದೆ. 1937ರಲ್ಲಿ ಪ್ರಾಂತ್ಯಗಳಲ್ಲಿ ಜನಪ್ರಿಯ ಸರ್ಕಾರಗಳ ಸ್ಥಾಪನೆಯಾದ್ದರಿಂದ ಕೃಷಿಗೆ ಹೆಚ್ಚಿನ ಗಮನ ಲಭ್ಯವಾಗುವ ಸಂದರ್ಭ ಒದಗಿ ಬಂತು. ಆದರೆ ಎರಡೇ ವರ್ಷಗಳಲ್ಲಿ ಈ ಸರ್ಕಾರಗಳು ನಿರ್ಗಮಿಸಿದುವು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಅತಿಯಾಗಿ ಏರಿದುವು. ಸರ್ಕಾರದ ಬೆಲೆ ನಿಯಂತ್ರಣ ಮತ್ತು ಪಡಿತರ ವ್ಯವಸ್ಥೆ ಸಮರ್ಪಕವಾಗಿರಲಿಲ್ಲ.

**ಅಭಿವೃದ್ಧಿ ಯೋಜನೆ :** ಸ್ವತಂತ್ರ ಭಾರತದಲ್ಲಿ ಕೃಷಿ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಸರ್ಕಾರ ಅನೇಕ ದಿಕ್ಕುಗಳಲ್ಲಿ ಪ್ರಯತ್ನ ನಡೆಸುತ್ತಿದೆ. ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆ ಕೃಷಿಗೆ ಆದ್ಯಗಮನ ನೀಡಿತು. ಅದರ ಒಟ್ಟು ವೆಚ್ಚದಲ್ಲಿ ಶೇ. 32 ರಷ್ಟು ಹಣವನ್ನು ಕೃಷಿ ಸಮುದಾಯ ಅಭಿವೃದ್ಧಿ ಯೋಜನೆ, ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಕಾರ್ಯಗಳಿಗಾಗಿ ಮೀಸಲಾಗಿರಿಸಿತು. ಒಂದನೆಯ ಯೋಜನೆಯ ಒಟ್ಟು ವೆಚ್ಚವಾದ ರೂ. 1,960 ಕೋಟಿಯಲ್ಲಿ ಇದಕ್ಕಾಗಿ

ವೆಚ್ಚವಾದ ಹಣ ರೂ. 601 ಕೋಟಿ (ವ್ಯವಸಾಯ ಮತ್ತು ಸಮುದಾಯ ಅಭಿವೃದ್ಧಿ ರೂ. 291 ಕೋಟಿ ; ನೀರಾವರಿ ಮತ್ತು ಪ್ರವಾಹ ನಿಯಂತ್ರಣ ರೂ. 310 ಕೋಟಿ). ಎಲ್ಲ ಕೃಷಿ ಪದಾರ್ಥಗಳ ಉತ್ಪನ್ನ ಈ ಅವಧಿಯಲ್ಲಿ ಶೇ. 22.2 ರಷ್ಟು ಹೆಚ್ಚಿತು. ಸಾಧಿಸಲಾದ ಬೆಳವಣಿಗೆ ದರ ಶೇ.4.2.

ಬೆಳೆಯುತ್ತಿರುವ ಜನಸಂಖ್ಯೆಗೂ ಕೈಗಾರಿಕಾ ವ್ಯವಸ್ಥೆಗೂ ಅಗತ್ಯವಾದ ಆಹಾರ ಮತ್ತು ಕಚ್ಚಾಸಾಮಗ್ರಿಯನ್ನು ಒದಗಿಸುವುದೂ ಕೃಷಿ ಉತ್ಪನ್ನಗಳು ಹೆಚ್ಚು ಹೆಚ್ಚಾಗಿ ರಫ್ತಿಗಾಗಿ ಒದಗಿ ಬರುವಂತೆ ಮಾಡುವುದೂ ದ್ವಿತೀಯ ಯೋಜನೆಯ ಉದ್ದೇಶವಾಗಿತ್ತು. ಯೋಜನೆಯಲ್ಲಿ ಸೂಚಿಸಲಾಗಿದ್ದ ಒಟ್ಟು ವೆಚ್ಚವಾದ ರೂ. 4,800 ಕೋಟಿಯಲ್ಲಿ ಕೃಷಿಯ ಭಾಗ ಶೇ.22. ಎರಡನೆಯ ಯೋಜನೆಯಲ್ಲಿ ವಾಸ್ತವವಾಗಿ ಮಾಡಲಾದ ಒಟ್ಟು ವೆಚ್ಚ ರೂ. 4,600 ಕೋಟಿ, ಇದರಲ್ಲಿ ಕೃಷಿಯ ಭಾಗ ಶೇ.20 (ರೂ. 950 ಕೋಟಿ). ಎರಡನೆಯ ಯೋಜನೆಯಲ್ಲಿ ಕೈಗಾರಿಕೆಗೆ ಆದ್ಯತೆ ನೀಡಲಾಗಿತ್ತು. ಆದರೆ ಕೃಷಿಯನ್ನು ಕಡೆಗಣಿಸಲಿಲ್ಲ. ಒಟ್ಟು ಕೃಷಿ ಉತ್ಪಾದನೆಯಲ್ಲಿ ಶೇ.27.1 ಅಧಿಕ್ಯ ಸಾಧಿಸಲಾಯಿತು (ವಾರ್ಷಿಕ ಹೆಚ್ಚಳದ ದರ ಶೇ.3.8). ಆಹಾರಧಾನ್ಯದ ಉತ್ಪಾದನೆ ಶೇ.18.9 ಹೆಚ್ಚಿತು (ವಾರ್ಷಿಕ ದರ ಶೇ.3.8).

ಮೂರನೆಯ ಯೋಜನೆಯಲ್ಲಿ ಕೃಷಿಯ ಪ್ರಾಧಾನ್ಯವನ್ನು ಮತ್ತೆ ಹೆಚ್ಚಿಸಲಾಯಿತು. ಬೆಲೆಗಳ ಏರಿಕೆಯನ್ನು ತಡೆಗಟ್ಟಲೂ ಕೈಗಾರಿಕೆಗೆ ತಳಹದಿ ನಿರ್ಮಿಸಲೂ ಇತರ ದೇಶಗಳ ಮೇಲೆ ಅವಲಂಬಿಸುವುದನ್ನು ತಪ್ಪಿಸಲೂ ಕೃಷಿಯ ಅಭಿವೃದ್ಧಿ ಅಗತ್ಯವೆಂಬುದನ್ನು ಮನಗಾಣಲಾಯಿತು. ಯೋಜನೆಯ ಒಟ್ಟು ವೆಚ್ಚವಾದ ರೂ. 10.400 ಕೋಟಿಯಲ್ಲಿ ಕೃಷಿಯ ಪಾಲು ರೂ. 2,110 ಕೋಟಿ (20%) ; ವ್ಯವಸಾಯ, ಸಾಮುದಾಯಿಕ ಅಭಿವೃದ್ಧಿ ಇವಕ್ಕಾಗಿ ರೂ. 1,460 ಕೋಟಿ ಮತ್ತು ದೊಡ್ಡ ಮತ್ತು ಮಧ್ಯಮ ಗಾತ್ರದ ನೀರಾವರಿ ಕಾರ್ಯಗಳಿಗಾಗಿ ರೂ.650 ಕೋಟಿ. ಕೃಷಿ ಉತ್ಪಾದನೆಯನ್ನು ಶೇ. 30 ರಷ್ಟು ಹೆಚ್ಚಿಸುವುದು ಮೂರನೆಯ ಯೋಜನೆಯ ಗುರಿಯಾಗಿತ್ತು. ಆದರೆ ಮೂರನೆಯ ಯೋಜನೆಯ ಸಾಧನೆ ನಿರಾಶಾದಾಯಕವಾಗಿತ್ತು. ಆಹಾರ ಧಾನ್ಯದ ಉತ್ಪಾದನೆ ಶೇ.10ರಷ್ಟು ಮಾತ್ರ ಆಧಿಕವಾಯಿತು. ಇತರ ಅನೇಕ ಉತ್ಪನ್ನಗಳ ಉತ್ಪಾದನೆ ವಾಸ್ತವವಾಗಿ ಇಳಿಮುಖವಾಯಿತು. ಒಟ್ಟು ಹದಿನೈದು ವರ್ಷಗಳ ಅವಧಿಯಲ್ಲಿ ಸಾಧಿಸಲಾದ ವಾರ್ಷಿಕ ಬೆಳವಣಿಗೆಯ ದರ ಶೇ.2.5. ಅದಕ್ಕೆ ಹಿಂದಣ 50 ವರ್ಷಗಳಲ್ಲಿಯ ಬೆಳವಣಿಗೆಯ ದರವಾದ ಶೇ.1 ರೊಂದಿಗೆ ಹೋಲಿಸಿದರೆ ಇದು ಆಶಾದಾಯಕವೆಂದೇ ಹೇಳಬೇಕು.

ನಾಲ್ಕನೆಯ ಯೋಜನೆಯಲ್ಲಿ ಸರ್ಕಾರಿ ವಲಯದಲ್ಲಿ ವ್ಯವಸಾಯ ಮತ್ತು ತತ್ಸಂಬಂಧಿ ಕಾರ್ಯಗಳಿಗಾಗಿ ಮೀಸಲಾಗಿಟ್ಟ ಹಣ ರೂ. 2.728 ಕೋಟಿ. ಬೆಲೆಗಳ ಸ್ಥಿರತೆ, ಆರ್ಥಿಕ ಬೆಳವಣಿಗೆಯ ಸಾಧನೆ ಇವಕ್ಕಾಗಿ ಕೃಷಿಯ ಅಭಿವೃದ್ಧಿ ಅತ್ಯಗತ್ಯವೆಂಬುದನ್ನು ಮನಗಂಡ ಸರ್ಕಾರ ಉತ್ಪಾದನೆಯನ್ನು ಹೆಚ್ಚಿಸಲು ತೀವ್ರಕ್ರಮಗಳನ್ನು ಜಾರಿಗೆ ತಂದಿವೆ. ಉತ್ತಮ ಬೀಜಗಳೂ, ಸಾರಪೋಷಕ, ಆಧುನಿಕ ಉಪಕರಣಗಳು ಮುಂತಾದವುಗಳ ಬಳಕೆ, ಬೆಲೆಗಳ ನಿಗದಿ, ಉತ್ತೇಜಕಗಳ ನೀಡಿಕೆ, ನೀರಾವರಿ ವಿಸ್ತರಣೆ, ಉದ್ದರಿ ಸೌಲಭ್ಯ ಕಲ್ಪನೆ– ಮುಂತಾದ ನಾನಾ ಕ್ರಮಗಳನ್ನೊಳಗೊಂಡ ಹಸಿರು ಕ್ರಾಂತಿಯ ಪಲವಾಗಿಕೃಷಿ ಉತ್ಪನ್ನಗಳ ವಿಚಾರದಲ್ಲಿ ಸ್ವಯಂ ಪೂರ್ಣತೆ ಸಾಧಿಸುವ ಆಶೆ ಉದ್ಭವಿಸಿದೆ. ಸ್ಟೇಟ್ ಬ್ಯಾಂಕಿನ ವಿಸ್ತರಣೆ, ಹದಿನಾಲ್ಕು ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣ, ಬ್ಯಾಂಕುಗಳ ಗ್ರಾಮೀಣ ಶಾಖೆಗಳ ಸ್ಥಾಪನೆ, ಜಮೀನು ಹಿಡುವಳಿ ಸುಧಾರಣೆ, ಜಮೀನಿನ ಗಾತ್ರದ ಕನಿಷ್ಠ–ಗರಿಷ್ಠ ಮಿತಿ ನಿಗದಿ–ಮುಂತಾದ ನಾನಾ ಕ್ರಮಗಳನ್ನು ಸರ್ಕಾರ ಜಾರಿಗೆ ತರುತ್ತಿದೆ. ಕೃಷಿ ವಿಶ್ವವಿದ್ಯಾಲಯಗಳು ಸ್ಥಾಪಿತವಾಗಿವೆ. (ಇವುಗಳ ಬಗ್ಗೆ ಹೆಚ್ಚು ವಿಷಯಗಳಿಗೆ ಕೃಷಿಯನ್ನು ಕುರಿತ ಇತರ ಲೇಖನಗಳನ್ನು ನೋಡಿ)

**ಕೃಷಿ ಖಾತೆ :** ಹಿಂದಿನಿಂದಲೂ ಕೇಂದ್ರದಲ್ಲಿ ಮತ್ತು ಎಲ್ಲ ರಾಜ್ಯಗಳಲ್ಲಿ ಹೆಚ್ಚು ಕಾಲದಿಂದ ವ್ಯವಸಾಯ ಇಲಾಖೆಗಳು ಅಸ್ತಿತ್ವದಲ್ಲಿವೆ. ಮೊದಲ ದಿನಗಳಲ್ಲಿ ಈ ಇಲಾಖೆಗಳು ಕಂದಾಯದ ಇಲಾಖೆಯ ಭಾಗಗಳಾಗಿದ್ದು, ಜಮೀನು ಕಂದಾಯದ ವಸೂಲಿ ದೃಷ್ಟಿಯಿಂದ ಅಗತ್ಯವಾದ ಅಂಕಿಅಂಶಗಳನ್ನು ಶೇಖರಿಸುವುದಷ್ಟೆ ಉದ್ದೇಶವಾಗಿತ್ತು. ಕೇಂದ್ರ ಸರ್ಕಾರ ಸ್ವಲ್ಪಮಟ್ಟಿನ ಕೃಷಿ ಸಂಶೋಧನೆ ಮತ್ತು ಕೃಷಿ ವಿದ್ಯಾಭಿವೃದ್ಧಿಗೆ ಗಮನ ಕೊಟ್ಟಿತು. ಕೇಂದ್ರ ಪಶುಸಂಶೋಧನ ಸಂಸ್ಥೆ ಮತ್ತು ಸಸ್ಯ ಮತ್ತು ಪ್ರಾಣಿ ಸಂಪತ್ಸಮೀಕ್ಷಾ ಖಾತೆಗಳು ಕಳೆದ ಶತಮಾನದ ಅಂತ್ಯದಲ್ಲಿ ಸ್ಥಾಪಿತವಾದುವು. ಹಾಗೆಯೇ ಕೇಂದ್ರ ಕೃಷಿ ಸಂಶೋಧನ ಸಂಸ್ಥೆ 1906ರಲ್ಲಿ ಬಿಹಾರದ ಪೂಸಾದಲ್ಲಿ ಸ್ಥಾಪಿತವಾಯಿತು. ರಾಜ್ಯಗಳಲ್ಲಿ ವ್ಯವಸಾಯದ ನಿರ್ದೇಶಕರ ನೇಮಕವಾಗಿ, ಸಂಶೋಧನ ಶಾಖೆಗಳು, ವ್ಯವಸಾಯ ಶಾಲೆಗಳು ಮತ್ತು ಕಾಲೇಜುಗಳು ಅಸ್ತಿತ್ವಕ್ಕೆ ಬಂದುವು.

ಕೇಂದ್ರ ಆಡಳಿತ ಉದ್ಯೋಗ ಖಾತೆಯಂತೆ ಪರಿಣತರನ್ನೊಳಗೊಂಡ ಕೇಂದ್ರ ಕೃಷಿ ಸೇವಾ ಖಾತೆಯೂ ಪ್ರಾರಂಭವಾಯಿತು. ಒಂದನೆಯ ಮಹಾಯುದ್ಧದ ಕಾರಣದಿಂದ ಈ ಪ್ರಗತಿಗೆ ಕುಂದಾಗಿ ಬೇಸಾಯದ ಅಭಿವೃದ್ಧಿಯಲ್ಲಿ ಸರ್ಕಾರದ ಆಸಕ್ತಿ ಕೆಲಕಾಲ ಹಿಂದೆ ಬಿತ್ತು.

1927ರಲ್ಲಿ ಲಿನ್‍ಲಿತ್‍ಗೋ ಕೃಷಿ ಆಯೋಗ ಸಲ್ಲಿಸಿದ ವರದಿಯಲ್ಲಿ ಮಾಡಲಾಗಿದ್ದ ಶಿಫಾರಸುಗಳಿಂದ ಮತ್ತೆ ಕೃಷಿ ಅಭಿವೃದ್ಧಿಗೆ ಸರ್ಕಾರದ ಪ್ರೋತ್ಸಾಹ ದೊರೆಯಿತು. ಕೇಂದ್ರ ಕೃಷಿ ಸಂಶೋಧನ ಮಂಡಳಿ ಸ್ಥಾಪಿತವಾಗಿ, ದೇಶಾದ್ಯಂತ ಕೃಷಿ ಸಂಶೋಧನ ಕಾರ್ಯಕ್ಕೆ ಬೇಕಾದ ಧನಸಹಾಯ, ಸೌಕರ್ಯ, ಸೌಲಭ್ಯಗಳು ಸಂಘಟಿತ ರೀತಿಯಲ್ಲಿ ದೊರೆಯುವಂತಾಯಿತು. 1936ರಲ್ಲಿ ಅಂಕಿ ಅಂಶ, ನೀರಾವರಿ, ಮೀನುಗಾರಿಕೆ ಈ ವಿಷಯಗಳಲ್ಲಿ ಸಲಹೆಗಾರರು ನೇಮಕವಾದರು. 1944ರಲ್ಲಿ ಕಬ್ಬು, ಸೆಣಬು, ತಂಬಾಕು, ತೆಂಗು, ಎಣ್ಣೆ ಬೀಜ– ಈ ಬೆಳೆಗಳ ಅಭಿವೃದ್ಧಿಗೆ ಕೇಂದ್ರ ಸಮಿತಿಗಳು ಅಸ್ತಿತ್ವಕ್ಕೆ ಬಂದುವು. ಅದುವರೆವಿಗೂ ಒಟ್ಟಿಗೆ ಇದ್ದ ಕೃಷಿ ಮತ್ತು ಆಹಾರ ಇಲಾಖೆಗಳು ಬೇರೆಯಾದುವು ; ಕೇಂದ್ರ ಬತ್ತ ಸಂಶೋಧನ ಸಂಸ್ಥೆ, ಒಳನಾಡು ಮೀನುಗಾರಿಕೆ ಸಂಶೋಧನಾಲಯಗಳು ಸ್ಥಾಪನೆಯಾದವು.

1942ರಲ್ಲಿ ಎರಡನೆಯ ಮಹಾಯುದ್ಧದ ಕಾರಣದಿಂದ ಬರ್ಮದಿಂದ ಆಮದಾಗುತ್ತಿದ್ದ ಅಕ್ಕಿ ನಿಂತುಹೋಯಿತು. ಬಂಗಾಲದಲ್ಲಿ ಮಹಾಕ್ಷಾಮ ಸಂಭವಿಸಿತು. ಅನೇಕ ಕಾರಣಗಳಿಂದ ಆಹಾರಾಭಾವ ಉಂಟಾಗಿ, ಹೆಚ್ಚು ಆಹಾರ ಬೆಳೆಯುವ ಆಂದೋಲನ ಆರಂಭವಾಯಿತು. ಅದುವರೆಗೂ ಕೇವಲ ರಾಜ್ಯ ಸರ್ಕಾರಗಳಿಗೆ ಸೀಮಿತವಾಗಿದ್ದ ಆಹಾರೋತ್ಪನ್ನ ಮತ್ತು ಸರಬರಾಯಿ ಹೊಣೆಯಲ್ಲಿ ಕೇಂದ್ರ ಸರ್ಕಾರವೂ ಆಸಕ್ತಿ ವಹಿಸಲು ಪ್ರಾರಂಭಿಸಿತು. ಅಧಿಕ ಬೆಳೆಗಳಿಗೆ ಸಾಧಕವಾಗಿ ಅಲ್ಪ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಕಲ್ಪನೆ, ಗೊಬ್ಬರ, ಸಾಧನ ಸಂಪತ್ತು, ಉಕ್ಕು, ಸಿಮೆಂಟ್, ಡೀಸೆಲ್– ಇವುಗಳ ಸರಬರಾಯಿ, ಸಸ್ಯ ಸಂರಕ್ಷಣೆಯ ಕ್ರಮ, ಕೇಂದ್ರ ಟ್ರ್ಯಾಕ್ಟರ್ ಸಂಸ್ಥೆಯ ಸ್ಥಾಪನೆ– ಇವು ಸಾಧ್ಯವಾದುವು. ತತ್ಫಲವಾಗಿ, ಕೇಂದ್ರದಲ್ಲಿ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ, ನೀರಾವರಿ ಮತ್ತು ಶಕ್ತಿ, ಸಮಾಜಕಲ್ಯಾಣ ಮತ್ತು ಸಹಕಾರ, ಆಹಾರ ಮತ್ತು ಕೃಷಿ ಮಂತ್ರಿ ಶಾಖೆಗಳು ಅಸ್ತಿತ್ವಕ್ಕೆ ಬಂದವು. ಯೋಜನಾ ಆಯೋಗದ ಕಾರ್ಯಕ್ರಮದಲ್ಲೂ ಈ ವಿಷಯಕ್ಕೆ ಆದ್ಯತೆ ದೊರೆಯಿತು. ಕೃಷಿ ಮಂತ್ರಿ ಶಾಖೆಯಲ್ಲಿ ಮಣ್ಣಿನ ಸಂರಕ್ಷಣೆ, ಬಂಜರು ಭೂಮಿಗಳ ಪುನರುದ್ಧಾರ, ಕೊಳವೆ ಬಾವಿಗಳ ನಿರ್ಮಾಣ, ಕ್ಷೀರೋದ್ಯಮ, ಮೀನುಗಾರಿಕೆ ಅಭಿವೃದ್ಧಿ, ಬಿತ್ತನೆ ಬೀಜಗಳ ಸುಧಾರಣೆ–ಈ ವಿಷಯಗಳಿಗೆ ಸಂಬಂಧಿಸಿದಂತೆ ಕೆಲಸ ತೀವ್ರವಾಗಲು ಕಾರ್ಯವ್ಯವಸ್ಥೆ ಜಾರಿಗೆ ಬಂತು. ಹಾಗೆಯೇ ಕೇಂದ್ರ ವ್ಯವಸಾಯ ವಿಸ್ತರಣ ಡೈರೆಕ್ಟೊರೇಟ್ ನಿರ್ದಿಷ್ಟ ರೂಪ ತಾಳಿತು. ಭಾರತದಲ್ಲಿ ಮೊದಲಿಂದಲೂ ಆಹಾರ ಸರಬರಾಯಿಯ ನಿಯಂತ್ರಣದ ಹೊಣೆ ಮುಖ್ಯವಾಗಿ ರಾಜ್ಯ ಸರ್ಕಾರಗಳಿಗೆ ಸೇರಿದ್ದು, ರಾಜ್ಯದ ಕಂದಾಯ ಇಲಾಖೆಗಳೂ ಆದಷ್ಟು ಮಟ್ಟಿಗೆ ಈ ಕೆಲಸಗಳನ್ನು ನಿರ್ವಹಿಸುತ್ತಿದ್ದುವು. ಎಲ್ಲ ರಾಜ್ಯಗಳಲ್ಲೂ ಕೃಷಿ ಇಲಾಖೆಗಳು ಅಸ್ತಿತ್ವದಲ್ಲಿದ್ದು, ರೈತರಲ್ಲಿ ತಕ್ಕಮಟ್ಟಿಗೆ ಆಧುನಿಕ ವ್ಯವಸಾಯ ಜ್ಞಾನದ ವಿಸ್ತರಣೆ ಆಗುತ್ತಾ ಬಂದಿದೆ. ಈಚಿನ ವರ್ಷಗಳಲ್ಲಿ ಜನಸಂಖ್ಯೆ ಬೆಳೆಯುತ್ತ ಬಂದಂತೆ ಆಹಾರ ಸಮಸ್ಯೆಯೂ ಉಲ್ಬಣವಾಗುತ್ತಿದೆ. ಈ ಸಮಸ್ಯೆಯನ್ನು ಎದುರಿಸಲು ರಾಜ್ಯ ಸರ್ಕಾರಗಳು ಕೃಷಿ ಅಭಿವೃದ್ಧಿಯ ಕಾರ್ಯಗಳಿಗೆ ಹೆಚ್ಚು ಗಮನವನ್ನು ಕೊಡುತ್ತ ಬಂದಿವೆ. ಕೃಷಿ ಇಲಾಖೆಗಳು ವ್ಯಾಪಕವಾಗಿ ಬೆಳೆದಿವೆ. ರಾಜ್ಯ ಮಟ್ಟದಲ್ಲಿ ಡೈರೆಕ್ಟರ್ ವಿಭಾಗ ಮಟ್ಟದ ಜಾಯಿಂಟ್ ಡೈರೆಕ್ಟರ್, ಜಿಲ್ಲಾಮಟ್ಟದಲ್ಲಿ ಡೆಪ್ಯುಟಿ ಡೈರೆಕ್ಟರ್, ಉಪವಿಭಾಗ ಮಟ್ಟದಲ್ಲಿ ಅಸಿಸ್ಟೆಂಟ್ ಡೈರೆಕ್ಟರ್, ತಾಲ್ಲೂಕು ಮಟ್ಟದಲ್ಲಿ ವ್ಯವಸಾಯ ವಿಸ್ತರಣಾಧಿಕಾರಿ, ಹೀಗೆ ಸಿಬ್ಬಂದಿ ಶ್ರೇಣಿಯಿದ್ದು ವ್ಯವಸಾಯದ ವಿಷಯದಲ್ಲಿ ರೈತರಿಗೆ ಮಾಹಿತಿ ದೊರೆಯುತ್ತದೆ. ಇದಲ್ಲದೆ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿರುವ ಕೃಷಿ ವಿಶ್ವವಿದ್ಯಾಲಯಗಳೂ ಸಹ ವ್ಯವಸಾಯ ಜ್ಞಾನ ಪ್ರಸಾರ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡಿವೆ. ಪಶುಪಾಲನೆ, ತೋಟಗಾರಿಕೆ, ಮೀನುಗಾರಿಕೆ ಈ ವಿಷಯಗಳ ಅಭಿವೃದ್ಧಿಗೂ ಹೆಚ್ಚು ಕಡಿಮೆ ಇದೇ ರೀತಿಯಲ್ಲಿ ವ್ಯವಸ್ಥೆಯ ಏರ್ಪಾಡಾಗಿದೆ. ಅಧಿಕಾರಿಗಳು ತಾಲ್ಲೂಕು ಅಭಿವೃದ್ಧಿ ಸಮಿತಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ನಿಕಟ ಸಂಪರ್ಕ ಏರ್ಪಡಿಸುವಂಥ ಕಾರ್ಯಕ್ರಮಗಳಿಂದ ರೈತರಿಗೆ ನೆರವು ದೊರೆಯುತ್ತಿದೆ. ರಾಜ್ಯ ಸರ್ಕಾರದ ಮಟ್ಟದಲ್ಲಿ ಪ್ರತ್ಯೇಕ ಕೃಷಿ ಮತ್ತು ಆಹಾರ ಮಂತ್ರಿ ಶಾಖೆಗಳಿವೆ. ಅಭಿವೃದ್ಧಿ ಮತ್ತು ಆಹಾರೋತ್ಪನ್ನ ಕಮಿಷನರ್ ಇರುತ್ತಾರೆ. ವ್ಯವಸಾಯ, ಸಹಕಾರ ಮತ್ತು ಗ್ರಾಮಾಭಿವೃದ್ಧಿಗೆ ಅಗತ್ಯವಾದ ಎಲ್ಲ ಕಾರ್ಯಕ್ರಮಗಳ ಸಂಘಟನೆಗೆ ಇವರು ಜವಾಬುದಾರರು. ಬೇಸಾಯದಲ್ಲಿ ರಾಸಾಯನಿಕ ಗೊಬ್ಬರ, ಸಸ್ಯ ಸಂರಕ್ಷಣೆ, ರಾಸಾಯನಿಕಗಳು, ಸ್ಪ್ರೇಯರ್‍ಗಳು ಮತ್ತು ಇತರ ಅನೇಕ ಉಪಕರಣಗಳು ಜಾರಿಗೆ ಬರುತ್ತಿವೆ. ಕೊಳ್ಳುವ ರೈತರಿಗೆ ವಂಚನೆ ಆಗದಂತೆ ಇವುಗಳ ಗುಣಮಟ್ಟವನ್ನು ಕಾಪಾಡುವುದು ಅಗತ್ಯ. ಈ ನಿಯಂತ್ರಣ ಕಾರ್ಯಕ್ರಮ ಸಹ ಸಂಬಂಧಪಟ್ಟ ಇಲಾಖೆಗಳ ಹೊಣೆ. ಇತ್ತೀಚಿನ ದಿನಗಳ ಮತ್ತೊಂದು ವೈಶಿಷ್ಟ್ಯವೆಂದರೆ ರೈತರಿಗೆ ಕೃಷಿ ಉದ್ಯಮಕ್ಕೆ ಬೇಕಾದ ಬಂಡವಾಳದ ಸರಬರಾಯಿ. ಸಹಕಾರ ಸಂಸ್ಥೆಗಳಿಂದ ಮೊದಲಿನಿಂದಲೂ ಈ ದಿಕ್ಕಿನಲ್ಲಿ ಸ್ವಲ್ಪ ಕೆಲಸ ಆಗುತ್ತಿದೆ. ಎಲ್ಲ ಅನುಸೂಚಿತ ಬ್ಯಾಂಕುಗಳೂ ರೈತರಿಗೆ ಸುಲಭವಾಗಿ ಸಾಲ ಒದಗಿಸಲು ಮುಂದೆ ಬಂದಿವೆ; ಅನೇಕ ಹೊಸ ಶಾಖೆಗಳನ್ನು ತೆರೆದಿವೆ. ಇವುಗಳಲ್ಲಿ ಇದಕ್ಕೆಂದೇ ಪ್ರತ್ಯೇಕ ವಿಭಾಗಗಳನ್ನು ತೆರೆಯಲಾಗಿದ್ದು ರೈತರಿಗೆ

ಸುಲಭ ಬಡ್ಡಿಯಲ್ಲಿ ವ್ಯವಸಾಯಾಭಿವೃದ್ಧಿಗೆ ಅಗತ್ಯವಾದ ಬಂಡವಾಳ ದೊರೆಯುತ್ತಿದೆ.

(ಬಿ.ಎ.ಎ.)

**ಕೃಷಿ ಮತ್ತು ಹವೆ :** ಹವೆಯ ಏರಿಳಿತಗಳಿಂದ ಕೃಷಿಯ ಮೇಲಾಗುವ ಪರಿಣಾಮಗಳನ್ನು (ಭಾರತ ಪರ್ಯಾಯ ದ್ವೀಪಕ್ಕೆ ಅನ್ವಯಿಸುವಂತೆ) ಈ ಲೇಖನದಲ್ಲಿ ಚರ್ಚಿಸಿದೆ.

ವಾತಾವರಣದ ಉಷ್ಣತೆ, ಮಳೆ ಮತ್ತು ಗಾಳಿ-ಇವುಗಳ ಸ್ಥಿತಿಗೆ ಒಟ್ಟಾಗಿ ಹವೆ (ವೆದರ್) ಎಂದು ಹೆಸರು. ಹವೆಯ ಮುನ್ಸೂಚನೆ, ವಾತಾವರಣದ ಚಲನೆ ಮುಂತಾದವನ್ನು ಅಭ್ಯಸಿಸುವ ಶಾಸ್ತ್ರ ಪವನವಿಜ್ಞಾನ ಅಥವಾ ಹವಾವಿಜ್ಞಾನ (ಮೀಟಿಯರಾಲಜಿ). ಒಂದು ನಿರ್ದಿಷ್ಟಪ್ರದೇಶದ ದೀರ್ಘಕಾಲದ ಹವೆಯನ್ನು ಕುರಿತ ಅಂಕಿ ಅಂಶಗಳ ಗುಣಗಳೇ ಅಲ್ಲಿಯ ವಾಯುಗುಣ (ಕ್ಲೈಮೇಟ್). ಈ ಅಂಶಗಳ ವೈಜ್ಞಾನಿಕ ಅಧ್ಯಯನ ವಾಯುಗುಣವಿಜ್ಞಾನ (ಕ್ಲೈಮಟಾಲಜಿ).

ಭಾರತದಲ್ಲಿ ಕೃಷಿ ಪ್ರಧಾನವಾಗಿ ಮಾನ್‌ಸೂನ್ ಮಳೆಯನ್ನು (ಹಿಂದೂ ಸಾಗರದಲ್ಲಿ ಬೀಸುವ ಒಂದು ಕ್ಲುಪ್ತ ಮಾರುತಕ್ಕೆ ಮಾನ್‌ಸೂನ್ ಎಂದು ಹೆಸರು. ಬೇಸಗೆಯಲ್ಲಿ ನೈರುತ್ಯದಿಂದಲೂ ಚಳಿಗಾಲದಲ್ಲಿ ಈಶಾನ್ಯದಿಂದಲೂ ಇದು ಬೀಸುತ್ತದೆ) ಅವಲಂಬಿಸಿದೆ. ಈ ಮಳೆ ದೇಶದ ಹವೆಯನ್ನೂ ಹವೆ ದೇಶದ ಭೌತವಿನ್ಯಾಸವನ್ನೂ ನಿಕಟವಾಗಿ ಹೊಂದಿಕೊಂಡಿರುವುದರಿಂದ ಇವೆಲ್ಲ ಅಂಶಗಳ ಸಮಗ್ರ ಅಧ್ಯಯನದಿಂದ ಮಾತ್ರ ಕೃಷಿಯ ಮೇಲೆ ಹವೆಯ ಪರಿಣಾಮಗಳನ್ನು ತಿಳಿದುಕೊಳ್ಳಬಹುದು ಹಾಗೂ ಕೃಷಿಯ ಭವಿಷ್ಯವನ್ನು ರೂಪಿಸಬಹುದು.

**ಭಾರತದ ಭೌತ ಹಾಗೂ ವಾಯುಗುಣ ಲಕ್ಷಣಗಳು :** ಚಿತ್ರ 1 ರಲ್ಲಿ ಭಾರತ ಉಪಖಂಡದ ಮೇಲೆ ಬೀಳುವ ಪ್ರಸಾಮಾನ್ಯ (ನಾರ್ಮಲ್) ವಾರ್ಷಿಕ ಮಳೆಯ ವಿತರಣೆಯನ್ನು ನೋಡಬಹುದು. ಅತ್ಯಧಿಕ ಮಳೆ ಬೀಳುವ ಪ್ರದೇಶಗಳೆಂದರೆ ಪಶ್ಚಿಮ ಘಟ್ಟಗಳ ಗಾಳಿಕಡೆಗಿರುವ ಭಾಗಗಳು, ಅಸ್ಸಾಮಿನ ಬೆಟ್ಟಗಳು ಹಾಗೂ ಹಿಮಾಲಯ ಸಾಲುಗಳು. ದೇಶದ ಪ್ರಧಾನ ನದೀ ವ್ಯವಸ್ಥೆಗಳು ಉಗಮಿಸುವುದು ಈ ಜಲಾನಯನ ಪ್ರದೇಶಗಳಲ್ಲಿ. ದಖ್ಖನದ ಪೀಠಭೂಮಿಯಲ್ಲಿ, ಗಂಗಾ ಬಯಲುಗಳಲ್ಲಿ ಹಾಗೂ ಕರ್ನಾಟಕದ ಬಯಲುಗಳಲ್ಲಿ ಪರ್ವತಗಳಿಂದ ಉಂಟಾಗುವ ಪರಿಣಾಮಗಳು ಅತ್ಯಲ್ಪ, ಇಲ್ಲವೇ ಇಲ್ಲ ಎಂದರೂ ಸಲ್ಲುವುದು. ಅಲ್ಲದೇ ಇಲ್ಲಿ ಮಳೆ ಬಲು ಕಡಿಮೆ. ವಾಯವ್ಯ ದಿಕ್ಕಿನಲ್ಲಿರುವ ಪಂಜಾಬ್ ಹಾಗೂ ರಾಜಸ್ಥಾನ ಮತ್ತು ಅವುಗಳ ಉತ್ತರಕ್ಕೂ ಪಶ್ಚಿಮಕ್ಕೂ ಒತ್ತಾಗಿರುವ ತಟ್ಟುಗಳು ಮಳೆಯ ದೃಷ್ಟಿಯಿಂದ ಭಾರತದ ಅತ್ಯಂತ ಒಣಪ್ರದೇಶಗಳು.

ಭಾರತ ಪರ್ಯಾಯ ದ್ವೀಪದ ವಿವಿಧ ಮಳೆಯ ಉಪವಿಭಾಗಗಳಲ್ಲಿ ವರ್ಷದ ಬೇರೆ ಬೇರೆ ಶ್ರಾಯಗಳಲ್ಲೂ ಇಡೀ ವರ್ಷದಲ್ಲೂ ಬೀಳುವ ಪ್ರಸಾಮಾನ್ಯ ಮಳೆಯ ವಿವರಗಳನ್ನು ಕೋಷ್ಟಕ 1 ರಲ್ಲಿ ಕೊಟ್ಟಿದೆ.

ಉತ್ತರದಲ್ಲಿ ಕಾಶ್ಮೀರ, ವಾಯವ್ಯ ಸರಹದ್ದಿನ ಪ್ರಾಂತ್ಯಗಳು ಹಾಗೂ ಬಲೂಚಿಸ್ತಾನ ಮತ್ತು ದಕ್ಷಿಣದಲ್ಲಿ ಆಗ್ನೇಯ ತಮಿಳುನಾಡು ಇವುಗಳ ಹೊರತಾಗಿ ಮಿಕ್ಕ ಪ್ರದೇಶಗಳಲ್ಲಿ ಬೀಳುವ ಮಳೆಯ ಅತ್ಯಧಿಕಾಂಶ ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ನೈರುತ್ಯ ಮಾನ್‌ಸೂನ್ ಶ್ರಾಯದಲ್ಲಿ ಆಗಿದೆ ಎಂಬುದು ಸ್ಪಷ್ಟ. ಅತಿ ಉತ್ತರದಲ್ಲಿ ಮಳೆಯ ಅಧಿಕಾಂಶ ಚಳಿಗಾಲದ ಹಿಮಪಾತವಾಗಿಯೋ ಅವಸಾದನವಾಗಿಯೋ ಕೆಡೆದರೆ ಆಗ್ನೇಯ ತಮಿಳು ನಾಡಿನಲ್ಲಿ ವಾರ್ಷಿಕ ಮಳೆಯ ಸುಮಾರು ಅರ್ಧದಷ್ಟು ಮಾನ್‌ಸೂನ್-ಉತ್ತರ ಅಥವಾ ಹಿಂಗಾರು ಮಳೆಯ ಅವಧಿಯಲ್ಲಿ (ಸೆಪ್ಟೆಂಬರಿನ ಅನಂತರ) ಸುರಿಯುತ್ತದೆ. ಜೂನಿನ ತರುಣದಲ್ಲಿ ಪ್ರಾರಂಭವಾಗಿ ಜೂನ್ ಮತ್ತು ಜುಲೈಗಳಲ್ಲಿ ಭಾರತ ಉಪಖಂಡದಲ್ಲಿ ವ್ಯಾಪಿಸಿ ಸೆಪ್ಟೆಂಬರ್ ಮತ್ತು ಅಕ್ಟೋಬರಿನಲ್ಲಿ



ಚಿತ್ರ 1

**ಕೋಷ್ಟಕ 1**

**ಭಾರತದ 30 ಮಳೆ ಉಪವಿಭಾಗಗಳಲ್ಲಿ ಶ್ರಾಯದ ಪ್ರಸಾಮಾನ್ಯ ಮಳೆ ಸುರಿತ (ಇಂಚುಗಳಲ್ಲಿ)**

| ಉಪವಿಭಾಗ | ಚಳಿಗಾಲ ಡಿಸೆಂಬರ್ ನಿಂದ ಫೆಬ್ರವರಿವರೆಗೆ | ಬೇಸಿಗೆ ಅಥವಾ ಮಾನ್ ಸೂನ್–ಪೂರ್ವಮಾರ್ಚಿ ಯಿಂದ ಮೇ ವರೆಗೆ | ಮಳೆಗಾಲ ಜೂನ್‌ನಿಂದ ಸೆಪ್ಟಂಬರ್ ವರೆಗೆ | ಮಾನ್‌ಸೂನ್ ಉತ್ತರ ಅಕ್ಟೋಬರ್ ನಿಂದ ನವೆಂಬರ್ ವರೆಗೆ | ವಾರ್ಷಿಕ |
|---|---|---|---|---|---|
| 1 | 2 | 3 | 4 | 5 | 6 |
| ಅಸ್ಸಾಂ | 2.38 (2.4) | 25.06 (25.7) | 64.26 (65.8) | 5.96 (6.1) | 97.66 |
| ಬಂಗಾಲ | 1.53 (2.0) | 12.42 (16.5) | 56.01 (74.5) | 5.17 (6.9) | 75.13 |
| ಒಡಿಶಾ | 1.82 (3.2) | 5.62 (9.9) | 44.49 (78.2) | 4.98 (8.8) | 56.91 |
| ಛೋಟಾ ನಾಗಪುರ | 2.57 (5.0) | 3.64(7.1) | 42.71 (83.4) | 2.26 (4.4) | 51.18 |
| ಬಿಹಾರ್ | 1.41 (2.9) | 3.30 (6.8) | 40.96 (85.0) | 2.54 (5.3) | 48.21 |
| ಪೂರ್ವ ಉತ್ತರಪ್ರದೇಶ | 1.53 (3.9) | 1.12 (2.9) | 34.44 (88.0) | 2.04 (5.2) | 39.13 |
| ಪಶ್ಚಿಮ ಉತ್ತರಪ್ರದೇಶ | 2.27 (6.0) | 1.36 (3.6) | 32.98 (87.8) | 0.97 (2.6) | 37.58 |
| ಪೂರ್ವ ಮತ್ತು ಉತ್ತರಪಂಜಾಬ್ | 2.76 (11.9) | 1.89 (8.1) | 18.23 (78.4) | 0.37 (1.6) | 23.25 |
| ನೈಋತ್ಯಪಂಜಾಬ್ | 1.28 (13.7) | 1.36 (14.9) | 6.58 (70.4) | 0.13 (1.4) | 9.35 |
| ಕಾಶ್ಮೀರ | 9.12 (22.1) | 9.09 (22.0) | 22.19 (53.7) | 0.94 (2.3) | 41.34 |
| ವಾಯವ್ಯ ಸರ ಹದ್ದಿನಪ್ರಾಂತ್ಯಗಳು | 3.36 (20.0) | 4.18 (24.9) | 8.65 (51.5) | 0.62 (3.7) | 16.81 |
| ಬಲೂಚಿಸ್ತಾನ್ | 3.50 (45.6) | 2.03 (26.4) | 1.89 (24.6) | 0.26 (3.4) | 7.68 |
| ಸಿಂಧ್ | 0.67 (10.4) | 0.41 (6.4) | 5.28 (82.4) | 0.08 (1.2) | 6.44 |
| ಪಶ್ಚಿಮರಾಜಸ್ಥಾನ್ | 0.62 (4.8) | 0.56 (4.3) | 11.74 (90.0) | 0.12 (0.9) | 13.04 |
| ಪೂರ್ವರಾಜಸ್ಥಾನ್ | 0.96 (3.8) | 0.78 (3.1) | 22.91 (90.9) | 0.55 (2.2) | 25.20 |
| ಗುಜರಾತ್ | 0.22 (0.7) | 0.24 (0.7) | 31.46 (96.2) | 0.77 (2.4) | 32.69 |
| ಪಶ್ಚಿಮ ಮಧ್ಯಭಾರತ | 0.85 (2.5) | 0.47 (1.4) | 31.56 (93.8) | 0.75 (2.2) | 33.63 |
| ಪೂರ್ವ ಮಧ್ಯಭಾರತ | 1.44 (3.7) | 0.79 (2.0) | 35.05 (90.9) | 1.30 (3.4) | 38.58 |
| ಬಿರಾರ್ | 1.01 (3.1) | 0.96 (3.0) | 28.10 (87.4) | 2.07 (6.4) | 32.14 |
| ಪಶ್ಚಿಮ ಮಧ್ಯಪ್ರಾಂತಗಳು | 1.47 (3.2) | 1.14 (2.5) | 41.04 (90.4) | 1.76 (3.9) | 45.41 |
| ಪೂರ್ವಮಧ್ಯಪ್ರಾಂತಗಳು | 1.58 (3.0) | 2.10 (4.0) | 46.37 (89.1) | 1.99 (3.8) | 52.04 |
| ಕೊಂಕಣ | 0.28 (0.3) | 1.85 (1.7) | 102.45 (93.7) | 4.75(4.3) | 109.33 |
| ಮುಂಬೈದಖ್ಖನ್ | 0.51 (1.7) | 2.13 (6.9) | 24.41 (79.1) | 3.82 (12.4) | 30.87 |
| ಉತ್ತರ ಹೈದರಾಬಾದ್ | 0.67 (1.9) | 1.53 (4.4) | 29.51 (84.5) | 3.20 (9.2) | 34.91 |
| ದಕ್ಷಿಣ ಹೈದರಾಬಾದ್ | 0.57 (1.9) | 2.10 (7.0) | 23.38 (78.1) | 3.88 (13.0) | 29.93 |
| ಕರ್ನಾಟಕ | 0.73 (2.0) | 5.47 (15.2) | 22.27 (61.8) | 7.54 (20.9) | 36.01 |
| ಮಲಬಾರ್ | 2.73 (2.6) | 12.61 (12.2) | 71.47 (68.9) | 16.93 (16.3) | 103.74 |
| ಆಗ್ನೇಯ ತಮಿಳುನಾಡು | 4.76 (13.6) | 4.53 (12.9) | 12.01 (34.2) | 13.80 (39.3) | 35.10 |
| ತಮಿಳುನಾಡು ದಖ್ಖನ್ | 0.74 (3.0) | 2.42 (9.9) | 15.27 (62.3) | 0.09 (24.8) | 24.52 |
| ಉತ್ತರ ತಮಿಳುನಾಡು ಕರಾವಳಿ | 1.69 (4.2) | 3.44 (8.9) | 25.03 (62.3) | 10.00 (24.9) | 40.16 |

(2) ರಿಂದ (5) ರವರೆಗಿನ ನೀಟ ಸಾಲುಗಳಲ್ಲಿ ಆವರಣಗಳ ಒಳಗೆ ಇರುವ ಸಂಖ್ಯೆಗಳು ವಾರ್ಷಿಕ ಮಳೆಯನ್ನು ಕುರಿತಂತೆ ಆಯಾ ಶ್ರಾಯದಲ್ಲಿ ಬೀಳುವ ಮಳೆಯ ಶೇಕಡ ಪ್ರಮಾಣಗಳನ್ನು ಸೂಚಿಸುತ್ತವೆ.

ದಕ್ಷಿಣಾಭಿಮುಖವಾಗಿ ನಿಷ್ಕ್ರಮಿಸುವ ಮಾನ್‌ಸೂನಿನ ಜೊತೆಗೆ ಆವರ್ತಮಾರುತ ಜನ್ಯ ಬಿರುಗಾಳಿಗಳೂ ಸಮುದ್ರಗಳಲ್ಲಿ ತಲೆದೋರುವ ಒತ್ತಡಕುಸಿತಗಳೂ ಭಾರತದ ಹವೆಯ ಮೇಲೆ ಪರಿಣಾಮಕಾರೀ ಪ್ರಭಾವವನ್ನು ಬೀರುತ್ತವೆ. ಇವನ್ನು ಮುಂದೆ ಸಂಕ್ಷೇಪವಾಗಿ ವಿವರಿಸಿದೆ.

**ಪೂರ್ವದಿಕ್ಕಿನ ಅಥವಾ ಮಾನ್‌ಸೂನ್ ಒತ್ತಡ ಕುಸಿತಗಳು :** ಮಾನ್‌ಸೂನಿನ ತೀವ್ರತೆಯಲ್ಲಿಯ ಏರಿಳಿತಗಳು ಹೆಚ್ಚಾಗಿ ಬಂಗಾಲ ಆಖಾತದ ಶಿರದಲ್ಲಿ ತಲೆದೋರುವ ಒತ್ತಡ ಕುಸಿತಗಳನ್ನು ಅವಲಂಬಿಸಿವೆ. ಇವು ಇನ್ನಷ್ಟು ಪೂರ್ವವಲಯದಿಂದ ಬಂದು ಬಂಗಾಲ ಆಖಾತವನ್ನು ಸೇರಿ ಅಲ್ಲಿಯ ಕುಸಿತಗಳನ್ನು ಪುಷ್ಟಿಗೊಳಿಸಬಹುದು. ಅಲ್ಲಿಂದ ಅವು ವಾಯವ್ಯ ದಿಕ್ಕಿಗಭಿಮುಖವಾಗಿ ಸಾಗಿ ದೇಶದ ಅಡ್ಡಕ್ಕೂ ಹಾಯುತ್ತ ವಾಯವ್ಯ ಭಾರತವನ್ನು ತಲಪುತ್ತವೆ. ಸಂಚಾರಪಥದ ಉದ್ದಕ್ಕೂ ಅವು ಮಳೆಸುರಿಸುವುದು ವಾಡಿಕೆ. ಮಾನ್‌ಸೂನ್ ಶ್ರಾಯದಲ್ಲಿ (ಜೂನ್‌ನಿಂದ ಸೆಪ್ಟೆಂಬರ್) ಇಂಥ ಕುಸಿತಗಳ ಆವೃತ್ತಿ ತಿಂಗಳೊಂದರ 3 ರಿಂದ 4. ಒತ್ತಡ ಕುಸಿತಗಳ ಆವೃತ್ತಿ ಬಲು ಕೆಳಮಟ್ಟಕ್ಕೆ ಬರುವ ಕೆಲವು ತಿಂಗಳುಗಳಲ್ಲಿ ಮಾನ್‌ಸೂನಿನ ಮಳೆಸುರಿತ ಪರ್ವತೀಯವಾಗುವುದುಂಟು. ಎಂದರೆ ಆಗ ಮಳೆ ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಉತ್ತರ ಹಾಗೂ ಮಧ್ಯ ಭಾರತದ ಬಯಲುಗಳಲ್ಲಿ ಮಳೆಯ ಸಮುಚಿತ ಪ್ರಾದೇಶಿಕ ವಿತರಣೆಯನ್ನು ಸಾಧಿಸುವಲ್ಲಿ ಈ ಒತ್ತಡಕುಸಿತಗಳ ಪಾತ್ರ ಪ್ರಧಾನವಾದದ್ದು.

**ಪಶ್ಚಿಮದ ಒತ್ತಡಕುಸಿತಗಳು :** ನವೆಂಬರ್–ಮೇ ಅವಧಿಯಲ್ಲಿ ಒತ್ತಡ ಕುಸಿತಗಳ ಒಂದು ಶ್ರೇಣಿಯೇ ಪಶ್ಚಿಮ ವಲಯದಲ್ಲಿ ತೊಡಗಿ ವಾಯವ್ಯ ಸರಹದ್ದು ಹಾಗೂ ಬಲೂಚಿಸ್ತಾನ ಪ್ರದೇಶಗಳ ಮೂಲಕ ಭಾರತ ಉಪಖಂಡವನ್ನು ಪ್ರವೇಶಿಸುತ್ತದೆ. ಇದು ಉತ್ತರ ಭಾರತದಲ್ಲಿ ಪೂರ್ವದಿಗಭಿಮುಖವಾಗಿ ಚಲಿಸುತ್ತ ಅಸ್ಸಾಂ ಮತ್ತು ಬಂಗಾಲ ಪ್ರದೇಶವನ್ನು ತಲುಪುವುದು. ಈ ಕುಸಿತಗಳ ಪರಿಣಾಮವಾಗಿ ಬಯಲುಗಳಲ್ಲಿ

ಮೋಡಮುಸುಕಿದ ಹವೆಯೂ ಹಿಮಾಲಯ ಪ್ರದೇಶದಲ್ಲಿ ಹಿಮಪಾತವೂ ಉಂಟಾಗುತ್ತವೆ. ಪ್ರತಿಯೊಂದು ಕುಸಿತವೂ ಪೂರ್ವಾಭಿಮುಖವಾಗಿ ಚಲಿಸುತ್ತಿದ್ದಂತೆ ಅದರ ಹಾದಿಯಲ್ಲಿ ಶೈತ್ಯತರಂಗಗಳನ್ನು ಎಬ್ಬಿಸುತ್ತ ಹೋಗುವುದು. ಸರಾಸರಿಯಾಗಿ ಹೇಳುವುದಾದರೆ ನವೆಂಬರಿನಲ್ಲಿ 2, ಡಿಸೆಂಬರಿನಿಂದ ಏಪ್ರಿಲ್‌ವರೆಗೆ ತಲಾ 4 ರಿಂದ 5 ಮತ್ತು ಮೇಯಲ್ಲಿ ಸುಮಾರು 2 ಒತ್ತಡಕುಸಿತಗಳು ತಲೆದೋರುತ್ತವೆ.




ಚಿತ್ರ 2

**ಆವರ್ತಮಾರುತಜನ್ಯ ಬಿರುಗಾಳಿಗಳು :** ಸಾಮಾನ್ಯವಾಗಿ ಏಪ್ರಿಲ್–ಜೂನ್ ಮತ್ತು ಅಕ್ಟೋಬರ್–ಡಿಸೆಂಬರ್ ಮಧ್ಯಾಂತರ ಅವಧಿಗಳಲ್ಲಿ ತೀವ್ರ ಆವರ್ತಮಾರುತಜನ್ಯ ಬಿರುಗಾಳಿಗಳು ಬಂಗಾಲ ಆಖಾತದಲ್ಲೂ ಅರೇಬಿಯನ್ ಸಮುದ್ರದಲ್ಲೂ ಹುಟ್ಟುತ್ತವೆ. ಅವು ಒಳನಾಡನ್ನು ನುಗ್ಗಿ ಸಾಕಷ್ಟು ಉತ್ಪಾತವನ್ನು ಉಂಟುಮಾಡುವುವು. ಪ್ರಬಲಗಾಳಿ ಸಮೇತವಾದ ಬಿರುಮಳೆ ಬೆಳೆಗಳಿಗೂ ಹಣ್ಣಿನ ತೋಟಗಳಿಗೂ ಅತಿನಷ್ಟಕಾರಿ. ಕರಾವಳಿ ಪ್ರದೇಶದಲ್ಲಿ ಭೀಕರ ತರಂಗಗಳೆದ್ದು ಜನ ಮತ್ತು ಸಂಪತ್ತನ್ನು ನಾಶಮಾಡುವುದುಂಟು. ಸರಾಸರಿಯಾಗಿ ಹೇಳುವುದಾದರೆ ಮಾನ್‌ಸೂನ್–ಪೂರ್ವ ಅವಧಿಯಲ್ಲಿ 1 ರಿಂದ 2 ಮತ್ತು ಮಾನ್‌ಸೂನ್–ಉತ್ತರ ಅವಧಿಯಲ್ಲಿ 2 ರಿಂದ 3 ತೀವ್ರ ಆವರ್ತಮಾರುತಗಳು ಜನಿಸುತ್ತವೆ.

**ನೈರುತ್ಯ ಮಾನ್‌ಸೂನಿನ ಬಗೆಗೆ ಹೆಚ್ಚಿನ ವಿವರಗಳು :** ಭಾರತ ಉಪಖಂಡದ ಹವೆಯ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿ ಇಲ್ಲಿಯ ಬೆಳೆಯ ವಾರ್ಷಿಕ ಉತ್ಪನ್ನದ ಮೇಲೆ ತೀವ್ರ ಪರಿಣಾಮವನ್ನು ಉಂಟುಮಾಡುವ ನೈರುತ್ಯ ಮಾನ್‌ಸೂನ್ ಈ ದೇಶದ ಹವಾವಿಜ್ಞಾನದಲ್ಲಿ ಒಂದು ಪ್ರಮುಖ ವಿದ್ಯಮಾನ. ಆದ್ದರಿಂದ ಅದರ ಕೆಲವು ಲಕ್ಷಣಗಳನ್ನು ನಾವು ತಿಳಿಯುವುದು ಉಚಿತವಾಗಿದೆ.



ಚಿತ್ರ 3

**1. ಮಾನ್‌ಸೂನಿನ ಪ್ರಾರಂಭ :** ಮಾನ್‌ಸೂನಿನ ಸಕಾಲಿಕ ಆರಂಭವನ್ನು ರೈತ ಕುತೂಹಲ ಹಾಗೂ ಕಳವಳಗಳಿಂದ ಕಾಯುತ್ತಿರುತ್ತಾನೆ. ಈ ಮಳೆ ಇಡೀ ಶ್ರಾಯದಲ್ಲಿ ಸಮರ್ಪಕವಾಗಿ ಬೀಳಬೇಕು ಎಂದು ಅವನ ಹಂಬಲ. ಭಾರತದ ವಿವಿಧ ಪ್ರದೇಶಗಳಲ್ಲಿ ಮಾನ್‌ಸೂನ್ ಸಾಮಾನ್ಯವಾಗಿ ಆರಂಭವಾಗುವ ಮತ್ತು ಅಂತ್ಯವಾಗುವ ತಾರೀಖುಗಳನ್ನು ಅನುಕ್ರಮವಾಗಿ ಚಿತ್ರ 2 ಮತ್ತು 3 ರಲ್ಲಿ ಕಾಣಿಸಿದೆ. ಒಂದು ಸ್ಥಳದಲ್ಲಿ ಮಳೆಗಾಲ ಖಚಿತವಾಗಿ ಆರಂಭವಾಗುವ ದಿವಸ ಹಾಗೂ ಮಳೆಗಾಲದಲ್ಲಿ ಅಲ್ಲಿ ಬೀಳುವ ಮಳೆಯ ಮೊತ್ತ ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ. ಪಶ್ಚಿಮ ಕರಾವಳಿಯ ನಾಲ್ಕು ಪ್ರಮುಖ ಸ್ಥಳಗಳಲ್ಲಿ ವಾಸ್ತವಿಕವಾಗಿ ಮಳೆಗಾಲ ಆರಂಭವಾದ ತಾರೀಖುಗಳನ್ನು ಹಲವಾರು ವರ್ಷಗಳಿಗೆ ಅನ್ವಯಿಸುವಂತೆ ಕೋಷ್ಟಕ 2 ರಲ್ಲಿ ಬರೆದಿದೆ. ಉಪಖಂಡದ ನೈರುತ್ಯ ಕೊನೆಯಾದ ತಿರುವಾಂಕೂರು–ಕೊಚ್ಚಿ ಪ್ರದೇಶದಿಂದ ಉತ್ತರದಲ್ಲಿ ಮುಂಬಯಿ ಸಮೀಪದ ಕೊಲಾಬಕ್ಕೆ ಮಾನ್‌ಸೂನ್ ಸಾಗುವ ವೇಗದಲ್ಲಿ ಸಹ ಸಾಕಷ್ಟು ವಿಚಲನೆ ಇರುವುದನ್ನು ಈ ಅಂಕಿ ಅಂಶಗಳು ವ್ಯಕ್ತಪಡಿಸುತ್ತವೆ. ಕೋಷ್ಟಕ 2 ರಲ್ಲಿ ಕೊಟ್ಟಿರುವ ಮಾಹಿತಿಗಳ ಸಾರಾಂಶ ಕೋಷ್ಟಕ 3 ರಲ್ಲಿದೆ. ಕೃಷಿಗೆ ಸಂಬಂಧಿಸಿದ ಮುಖ್ಯ ಕ್ರಿಯೆಗಳನ್ನು ಮಾನ್‌ಸೂನ್ ಮಳೆಯ ಆರಂಭದಲ್ಲಿಯೇ ತೊಡಗಬೇಕಾದ್ದರಿಂದ ದೇಶದ ಬೇರೆ ಬೇರೆ ಭಾಗಗಳಲ್ಲಿ ಮಾನ್‌ಸೂನಿನ ಪ್ರಾರಂಭದ ದಿವಸಗಳು, ಮಳೆಸುರಿಯುವ ದಿವಸಗಳು, ಮಳೆನಿಂತ ದಿವಸಗಳು ಇವೆಲ್ಲವನ್ನು ಕುರಿತ ಮುನ್ಸೂಚನೆಗಳು ರೈತರಿಗೆ ಬಲು ಮುಖ್ಯ ಮತ್ತು ಉಪಯುಕ್ತ ಮಾಹಿತಿಗಳು.

**2. ಮಹಾಪೂರಗಳ ಹಾಗೂ ಅನಾವೃಷ್ಟಿಗಳ ಆವೃತ್ತಿ:** ಕೃಷಿ, ನೀರಾವರಿ ಕಾರ್ಯಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಭವಿಷ್ಯದ ದೀರ್ಘಕಾಲೀನ ಯೋಜನೆಗಳನ್ನು ರೂಪಿಸುವಾಗ ನಮ್ಮ ಹಿಂದಿನ ಹವಾವಿಜ್ಞಾನದ ಚರಿತ್ರೆಯಿಂದ ಕಲಿತ ಪಾಠಗಳನ್ನು ಪರಿಶೀಲಿಸುವುದು ಯುಕ್ತ. ಭೂತಕಾಲದ ಎಷ್ಟು ಮಾನ್‌ಸೂನುಗಳು ಸಮೃದ್ಧ ಹಾಗೂ ಉಪಯುಕ್ತ, ಎಷ್ಟು ಭಾಗಶಃ ಉಪಯುಕ್ತ ಮತ್ತು ಎಷ್ಟು ಸಂಪೂರ್ಣ ವೈಫಲ್ಯಗಳು ಎಂಬುದನ್ನು ಈಗ ನೋಡೋಣ. ಇದಕ್ಕಾಗಿ ಭಾರತ ಉಪಖಂಡದ ಉಪವಿಭಾಗಗಳಲ್ಲಿ ಪ್ರತಿವರ್ಷವೂ ಇಡೀ ಮಾನ್‌ಸೂನ್ ಶ್ರಾಯದಲ್ಲಿ ಸುರಿಯುವ ಒಟ್ಟು ಮಳೆಯನ್ನು ನಾವು ಪರಿಶೀಲಿಸಬಹುದು.

**ಕೋಷ್ಟಕ 2**

**ಭಾರತದ ಪಶ್ಚಿಮ ಕರಾವಳಿಯಲ್ಲಿ ನೈರುತ್ಯ ಮಾನ್‌ಸೂನಿನ ಪ್ರಾರಂಭ ತಾರೀಖು**

| ವರ್ಷ | ತಿರುವಾಂಕೂರು–ಕೊಚ್ಚಿ | ದ. ಕನ್ನಡ | ರತ್ನಗಿರಿ | ಕೊಲಾಬ |
|---|---|---|---|---|
| 1 | 2 | 3 | 4 | 5 |
| 1891 | ಮೇ 27 | ಜೂನ್ 3 | ಜೂನ್ 19 | ಜೂನ್ 21 |
| 1892 | ಮೇ 22 | ಮೇ 24 | ಮೇ 29 | ಮೇ 31 |
| 1893 | ಮೇ 22 | ಜೂನ್ 4 | ಜೂನ್ 10 | ಜೂನ್ 10 |
| 1894 | ಜೂನ್ 1 | ಜೂನ್ 2 | ಜೂನ್ 7 | ಜೂನ್ 7 |
| 1895 | ಜೂನ್ 8 | ಜೂನ್ 12 | ಜೂನ್ 14 | ಜೂನ್ 15 |
| 1896 | ಮೇ 30 | ಮೇ 31 | ಜೂನ್ 1 | ಜೂನ್ 1 |
| 1897 | ಮೇ 30 | ಜೂನ್ 5 | ಜೂನ್ 7 | ಜೂನ್ 7 |
| 1898 | ಜೂನ್ 2 | ಜೂನ್ 3 | ಜೂನ್ 8 | ಜೂನ್ 8 |
| 1899 | ಮೇ 23 | ಜೂನ್ 7 | ಜೂನ್ 9 | ಜೂನ್ 10 |
| 1900 | ಜೂನ್ 6 | ಜೂನ್ 8 | ಜೂನ್ 9 | ಜೂನ್ 9 |
| 1901 | ಜೂನ್ 1 | ಜೂನ್ 4 | ಜೂನ್ 7 | ಜೂನ್ 7 |
| 1902 | ಮೇ 31 | ಜೂನ್ 6 | ಜೂನ್ 7 | ಜೂನ್ 12 |
| 1903 | ಜೂನ್ 8 | ಜೂನ್ 11 | ಜೂನ್ 12 | ಜೂನ್ 12 |
| 1904 | ಮೇ 29 | ಜೂನ್ 1 | ಜೂನ್ 7 | ಜೂನ್ 8 |
| 1905 | ಜೂನ್ 6 | ಜೂನ್ 8 | ಜೂನ್ 9 | ಜೂನ್ 10 |
| 1906 | ಜೂನ್ 3 | ಜೂನ್ 6 | ಜೂನ್ 7 | ಜೂನ್ 8 |
| 1907 | ಮೇ 31 | ಜೂನ್ 5 | ಜೂನ್ 11 | ಜೂನ್ 11 |
| 1908 | ಜೂನ್ 8 | ಜೂನ್ 10 | ಜೂನ್ 11 | ಜೂನ್ 11 |
| 1909 | ಜೂನ್ 1 | ಜೂನ್ 2 | ಜೂನ್ 3 | ಜೂನ್ 3 |
| 1910 | ಮೇ 28 | ಜೂನ್ 2 | ಜೂನ್ 3 | ಜೂನ್ 3 |
| 1911 | ಜೂನ್ 1 | ಜೂನ್ 2 | ಜೂನ್ 4 | ಜೂನ್ 4 |
| 1912 | ಜೂನ್ 4 | ಜೂನ್ 6 | ಜೂನ್ 12 | ಜೂನ್ 12 |
| 1913 | ಮೇ 24 | ಜೂನ್ 1 | ಜೂನ್ 6 | ಜೂನ್ 7 |
| 1914 | ಮೇ 28 | ಜೂನ್ 5 | ಜೂನ್ 13 | ಜೂನ್ 13 |
| 1915 | ಜೂನ್ 3 | ಜೂನ್ 12 | ಜೂನ್ 17 | ಜೂನ್ 18 |
| 1916 | ಮೇ 26 | ಮೇ 27 | ಮೇ 31 | ಜೂನ್ 1 |
| 1917 | ಮೇ 26 | ಮೇ 29 | ಜೂನ್ 4 | ಜೂನ್ 5 |
| 1918 | ಮೇ 7 | ಮೇ 15 | ಮೇ 22 | ಮೇ 25 |
| 1919 | ಮೇ 16 | ಮೇ 26 | ಜೂನ್ 4 | ಜೂನ್ 6 |

| | | | | |
|---|---|---|---|---|
| 1920 | ಮೇ 27 | ಜೂನ್ 2 | ಜೂನ್ 6 | ಜೂನ್ 6 |
| 1921 | ಜೂನ್ 1 | ಜೂನ್ 3 | ಜೂನ್ 10 | ಜೂನ್ 12 |
| 1922 | ಮೇ 25 | ಮೇ 31 | ಜೂನ್ 10 | ಜೂನ್ 12 |
| 1923 | ಜೂನ್ 4 | ಜೂನ್ 11 | ಜೂನ್ 12 | ಜೂನ್ 13 |
| 1924 | ಮೇ 31 | ಜೂನ್ 3 | ಜೂನ್ 10 | ಜೂನ್ 12 |
| 1925 | ಮೇ 27 | ಮೇ 28 | ಮೇ 29 | ಮೇ 29 |
| 1926 | ಮೇ 28 | ಜೂನ್ 5 | ಜೂನ್ 9 | ಜೂನ್ 10 |
| 1927 | ಮೇ 23 | ಮೇ 27 | ಜೂನ್ 10 | ಜೂನ್ 7 |
| 1928 | ಮೇ 31 | ಮೇ 31 | ಜೂನ್ 5 | ಜೂನ್ 10 |
| 1929 | ಮೇ 29 | ಮೇ 30 | ಜೂನ್ 1 | ಜೂನ್ 6 |
| 1930 | ಮೇ 21 | ಜೂನ್ 7 | ಜೂನ್ 8 | ಜೂನ್ 9 |
| 1931 | ಮೇ 23 | ಮೇ 29 | ಜೂನ್ 14 | ಜೂನ್ 14 |
| 1932 | ಮೇ 14 | ಜೂನ್ 2 | ಜೂನ್ 3 | ಜೂನ್ 3 |
| 1933 | ಮೇ 22 | ಮೇ 28 | ಜೂನ್ 1 | ಜೂನ್ 1 |
| 1934 | ಜೂನ್ 6 | ಜೂನ್ 6 | ಜೂನ್ 10 | ಜೂನ್ 10 |
| 1935 | ಜೂನ್ 10 | ಜೂನ್ 10 | ಜೂನ್ 12 | ಜೂನ್ 14 |
| 1936 | ಮೇ 28 | ಮೇ 22 | ಮೇ 29 | ಜೂನ್ 1 |
| 1937 | ಜೂನ್ 3 | ಜೂನ್ 10 | ಜೂನ್ 11 | ಜೂನ್ 12 |
| 1938 | ಜೂನ್ 1 | ಜೂನ್ 2 | ಜೂನ್ 2 | ಜೂನ್ 4 |
| 1939 | ಜೂನ್ 6 | ಜೂನ್ 6 | ಜೂನ್ 7 | ಜೂನ್ 9 |
| 1940 | ಜೂನ್ 7 | ಜೂನ್ 13 | ಜೂನ್ 16 | ಜೂನ್ 18 |
| 1941 | ಮೇ 23 | ಜೂನ್ 3 | ಜೂನ್ 14 | ಜೂನ್ 16 |
| 1942 | ಜೂನ್ 4 | ಜೂನ್ 8 | ಜೂನ್ 12 | ಜೂನ್ 13 |
| 1943 | ಮೇ 12 | ಮೇ 14 | ಮೇ 21 | ಮೇ 21 |
| 1944 | ಮೇ 17 | ಮೇ 30 | ಜೂನ್ 8 | ಜೂನ್ 10 |

**ಕೋಷ್ಟಕ 3**

**ಭಾರತದ ಪಶ್ಚಿಮ ಕರಾವಳಿಯಲ್ಲಿ ನೈಋತ್ಯ ಮಾನ್‌ಸೂನಿನ ಪ್ರಾರಂಭದ ತಾರೀಖು**

| ಪ್ರದೇಶ | ಪ್ರಸಾಮಾನ್ಯ ತಾರೀಖು | ಪ್ರಸಾಮಾನ್ಯ ವಿಚಲನೆ (ದಿವಸಗಳಲ್ಲಿ) | ಅತಿಮೊದಲ ತಾರೀಖು | ಅತಿತಡವಾದ ತಾರೀಖು |
|---|---|---|---|---|
| ತಿರುವಾಂಕುರು-ಕೊಚ್ಚಿ | ಮೇ 29 | 7.0 | ಮೇ 7 | ಜೂನ್ 10 |
| ದ. ಕನ್ನಡ | ಜೂನ್ 3 | 5.7 | ಮೇ 14 | ಜೂನ್ 13 |
| ರತ್ನಗಿರಿ | ಜೂನ್ 7 | 5.4 | ಮೇ 21 | ಜೂನ್ 19 |
| ಕೊಲಾಬ | ಜೂನ್ 8 | 5.2 | ಮೇ 21 | ಜೂನ್ 21 |

ಒಂದೊಂದು ಮಳೆ ಉಪವಿಭಾಗದ ವಾರ್ಷಿಕ ಪ್ರಸಾಮಾನ್ಯ ಮಳೆಯ ಪರಿಮಾಣವನ್ನು (ಹಿಂದಿನ ಹಲವಾರು ವರ್ಷಗಳ ಸುರಿತಗಳ ಆಧಾರದಿಂದ) ಇಂತಿಷ್ಟೆಂದು ನಿಗದಿಮಾಡಿರುತ್ತಾರೆ. ಒಂದೊಂದು ವರ್ಷವೂ ಅಲ್ಲಿ ವಾಸ್ತವಿಕವಾಗಿ ಸುರಿಯುವ ಮಳೆಯನ್ನು ಈ ಪ್ರಸಾಮಾನ್ಯದೊಡನೆ ಹೋಲಿಸಿ ವಾರ್ಷಿಕ ವಿಚಲನೆಯನ್ನು (ಇವೆರಡರ ವ್ಯತ್ಯಾಸ) ನಿರ್ಧರಿಸುತ್ತಾರೆ. ಹಲವಾರು ವರ್ಷಗಳ ವಿಚಲನೆಗಳ ಪರಿಶೀಲನೆಯಿಂದ ವಾರ್ಷಿಕ ಸರಾಸರಿ ವಿಚಲನೆಯನ್ನು ಸಹ ನಿಗದಿ ಮಾಡಿರುತ್ತಾರೆ. ಯಾವುದೇ ವರ್ಷ ಒಂದು ಮಳೆ ಉಪವಿಭಾಗದಲ್ಲಿ ವಾಸ್ತವಿಕವಾಗಿ ಸುರಿದ ಮಳೆಯ ಮೊತ್ತ ಆ ಉಪವಿಭಾಗದ ಪ್ರಸಾಮಾನ್ಯ ಇವುಗಳ ವ್ಯತ್ಯಾಸ ಅದೇ ಸ್ಥಳದ ಸರಾಸರಿ ವಿಚಲನೆಯ ಎರಡರಷ್ಟಾದಾಗ, ವ್ಯತ್ಯಾಸ ಧನಾತ್ಮಕವಾಗಿದ್ದರೆ ಆ ವರ್ಷವನ್ನು ಮಹಾಪೂರದ ವರ್ಷವೆಂದೂ ಋಣಾತ್ಮಕವಾಗಿದ್ದರೆ ಆ ವರ್ಷವನ್ನು ಅನಾವೃಷ್ಟಿಯ ವರ್ಷವೆಂದೂ ವ್ಯಾಖ್ಯಿಸಲಾಗಿದೆ. 1875 ರಿಂದ 1951 ರವರೆಗಿನ ಮಹಾಪೂರ-ಅನಾವೃಷ್ಟಿ ವರ್ಷಗಳನ್ನು ಆಯ್ದ ಕೆಲವು ಪ್ರದೇಶಗಳಿಗೆ ಅನ್ವಯಿಸುವಂತೆ ಚಿತ್ರ 5 ರಲ್ಲಿ ತೋರಿಸಲಾಗಿದೆ. ಅಧಿಕ ಸಂಖ್ಯೆಯ ವರ್ಷಗಳನ್ನು ಪರಿಶೀಲಿಸುವಾಗ ಒಂದು ಉಪವಿಭಾಗದಲ್ಲಿಯ ಮಹಾಪೂರಗಳ ಮತ್ತು ಅನಾವೃಷ್ಟಿಗಳ ಸಂಖ್ಯೆಗಳು ಪರಸ್ಪರ ಸಮವಾಗುವ ಒಲವನ್ನು ಪ್ರದರ್ಶಿಸುತ್ತವೆ. ಗರಿಷ್ಠ ಸಂಖ್ಯೆಯ ವೈಪರಿತ್ಯಗಳು (ಅಂದರೆ ಮಹಾಪೂರಗಳು ಮತ್ತು ಅನಾವೃಷ್ಟಿಗಳು) ತಲೆದೋರುವುದು ಬಲುಕಡಿಮೆ. ಮಳೆ ಬೀಳುವ ಪ್ರದೇಶಗಳಾದ ಬಲೂಚಿಸ್ತಾನ, ಸಿಂಧ್, ರಾಜಸ್ಥಾನ ಮುಂತಾದೆಡೆಗಳಲ್ಲಿ, ಮಾನ್‌ಸೂನಿನ ಮಳೆ 40". ಅಥವಾ ಹೆಚ್ಚು ಸುರಿಯುವ ಕೊಂಕಣ, ಕೇರಳ, ಬಂಗಾಳ ಮುಂತಾದ ಪ್ರದೇಶಗಳಲ್ಲಿ ವೈಪರೀತ್ಯಗಳ ಸಂಖ್ಯೆ ತೀರ ಕನಿಷ್ಠ ಮಿತಿಗೆ ಇಳಿಯುತ್ತದೆ.

1875 ರಿಂದ 1951 ತನಕದ ಅವಧಿಯನ್ನು ಅವಲೋಕಿಸುವಾಗ 1877, 1899 ಮತ್ತು 1918 ಸಾರ್ವತ್ರಿಕ ಅನಾವೃಷ್ಟಿ ವರ್ಷಗಳಾಗಿ ಎದ್ದುನಿಲ್ಲುತ್ತವೆ. ದೇಶಾದ್ಯಂತ ಇಂಥ




ಚಿತ್ರ 4 : 1. ಬಂಗಾಲ ಕೊಲ್ಲಿಯ ದ್ವೀಪಗಳು, 2. ಅಸ್ಸಾಂ, 3. ಪಶ್ಚಿಮ ಬಂಗಾಲ-ಉಪಹಿಮಾಲಯ, ಪಶ್ಚಿಮ ಬಂಗಾಲ-ಗಂಗಾನದೀ ಬಯಲು, 4. ಒಡಿಶ, 5. ಛೋಟಾನಾಗಪುರ, 6. ಬಿಹಾರ್, 7. ಉತ್ತರ ಪ್ರದೇಶ (ಪೂರ್ವ), 8. ಉತ್ತರ ಪ್ರದೇಶ (ಪಶ್ಚಿಮ), 9. ಪಂಜಾಬು (ಭಾರತ), 10 ಕಾಶ್ಮೀರ, 11. ರಾಜಾಸ್ಥಾನ (ಪಶ್ಚಿಮ), 12 ರಾಜಸ್ಥಾನ (ಪೂರ್ವ), 13 ಮಧ್ಯಭಾರತ, 14. ವಿಂಧ್ಯ ಪ್ರದೇಶ, 15. ಮಧ್ಯ ಪ್ರದೇಶ (ಪೂರ್ವ), 16 ಮಧ್ಯಪ್ರವೇಶ (ಪಶ್ಚಿಮ), 17 ಗುಜರಾತ್, 18 ಸೌರಾಷ್ಟ್ರ ಮತ್ತು ಕಚ್, 19 ಕೊಂಕಣ, 20 ದಕ್ಕನ್, 21. ಹೈದರಾಬಾದ್ (ಉತ್ತರ), 22 ಹೈದರಾಬಾದ್ (ದಕ್ಷಿಣ), 23 ಆಂಧ್ರ ಪ್ರದೇಶ (ತೀರ ಪ್ರದೇಶ) 24 ರಾಯಲಸೀಮೆ, 25 ತಮಿಳುನಾಡು, 26 ಮಲಬಾರ್, 27 ಕರ್ನಾಟಕ, 28 ತಿರುವಾಂಕೂರು-ಕೊಚ್ಚಿ

ಅನಾವೃಷ್ಟಿ ವರ್ಷಗಳು ಸುಮಾರು ಇಪ್ಪತ್ತು ವರ್ಷಗಳಿಗೊಮ್ಮೆ ಕಾಣಿಸಿಕೊಳ್ಳುತ್ತವೆ. ಮೇಲೆ ಬರೆದಿರುವ ಮೂರು ಸಾರ್ವತ್ರಿಕ ಅನಾವೃಷ್ಟಿ ವರ್ಷಗಳಲ್ಲಿಯೂ ದೇಶವಿಡೀ ಕ್ಷಾಮ ದುರ್ಭಿಕ್ಷಗಳನ್ನು ಅನುಭವಿಸಿದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. 1920 ಭಾಗಶಃ ಅನಾವೃಷ್ಟಿ ವರ್ಷ. ದೇಶದ ವಾಯವ್ಯ ಮತ್ತು ಮಧ್ಯ ಪ್ರದೇಶಗಳಿಗೆ ಮಾತ್ರ ಇದು ವ್ಯಾಪಿಸಿತ್ತು. ದೇಶಾದ್ಯಂತ ಮಹಾಪೂರ ವರ್ಷಗಳು 1878, 1892 ಮತ್ತು 1917. ಕನಿಷ್ಠಪಕ್ಷ ಎರಡು ಸಂದರ್ಭಗಳಲ್ಲಿ – ಎಂದರೆ 1877, 1878 ಮತ್ತು 1917, 1918 ರಲ್ಲಿ – ಮಹಾಪೂರಗಳು ಮತ್ತು ಅನಾವೃಷ್ಟಿಗಳು ಪಕ್ಕಪಕ್ಕದ ವರ್ಷಗಳಲ್ಲಿ ತಲೆದೋರಿದುವು. ಇವುಗಳ ವಿತರಣೆಯಲ್ಲಿ ಯಾವೊಂದು ಕ್ರಮವಾಗಲಿ ನಿಯತಕಾಲಿಕತೆಯಾಗಲಿ ಇರುವುದಿಲ್ಲ. ಇದು ಹೇಗೂ ಇರಲಿ, ಯಾವುದೇ ಉಪವಿಭಾಗದಲ್ಲಿ ಒಂದು ಅನಾವೃಷ್ಟಿ ವರ್ಷದ ಬೆನ್ನಿಗೆ ಪುನಃ ಇನ್ನೊಂದು ಅನಾವೃಷ್ಟಿ ವರ್ಷ ಅಥವಾ ಒಂದು ಮಹಾಪೂರ ವರ್ಷದ ಬೆನ್ನಿಗೇ ಇನ್ನೊಂದು ಮಹಾಪೂರ ವರ್ಷ ಬರುವುದು ಅತಿ ವಿರಳ, ಅನಾವೃಷ್ಟಿ ಅಥವಾ ಮಹಾಪೂರ ತಲೆದೋರುವ ವರ್ಷಗಳಲ್ಲಿ ಆಯಾ ಪೀಡಿತ ಪ್ರದೇಶಗಳು ಬಲು ಕಡಿಮೆ ಮಳೆ ಬೀಳುವ ಅಥವಾ ಅತಿ ಹೆಚ್ಚು ಮಳೆಸುರಿಯುವ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿರುವುದನ್ನು ಸಹ ಚಿತ್ರ 5 ರಲ್ಲಿ ನೋಡಬಹುದು.

3. ಭಾರತದಲ್ಲಿ ಪ್ರತಿವರ್ಷದ ಸಾಪ್ತಾಹಿಕ ಮಳೆಯ ಮೊತ್ತ : ಹಲವಾರು ವರ್ಷಗಳ ಸಾಲಿನಲ್ಲಿ ಮಾನ್‌ಸೂನ್ ಮಳೆಯ ಒಟ್ಟು ಸುರಿತವನ್ನು ಚಿತ್ರ 5 ರಲ್ಲಿ ಪರಿಶೀಲಿಸಲಾಗಿದೆ. ಈ ಮೊತ್ತ ಇಡೀ ಮಳೆಗಾಲದಲ್ಲಿ ಸುರಿದ ಮಳೆಗೆ ಒಂದು ಸಾಮಾನ್ಯ ಸೂಚ್ಯಂಕವಷ್ಟೆ. ಕೃಷಿಗೆ ಮಳೆಸುರಿತದ ಸಂಬಂಧವನ್ನು ತಿಳಿಯಲು ಈ ಮೊತ್ತ ಒಂದೊಂದು ವರ್ಷದ ಎಲ್ಲ ಶ್ರಾಯಗಳಲ್ಲೂ ವಾರದಿಂದ ವಾರಕ್ಕೆ ಹೇಗೆ ಹಂಚಿಹೋಗಿದೆ ಎಂಬುದನ್ನು ನೋಡಬೇಕು. ಇದಕ್ಕಾಗಿ ಭಾರತದ ಹವಾವಿಜ್ಞಾನ ಇಲಾಖೆ ಕ್ರಮವಾಗಿ ಪ್ರಕಟಿಸುವ ಸಾಪ್ತಾಹಿಕ ಹವಾವರದಿಗಳಲ್ಲಿ ಇರುವ ಮಳೆಯ ವಿವರಗಳನ್ನು ನಾವು

ಉಪಯೋಗಿಸಿಕೊಳ್ಳುತ್ತೇವೆ. ಒಂದೇ ಚಿತ್ರದಲ್ಲಿ ವಾಸ್ತವಿಕ ಮಳೆಸುರಿತವನ್ನು ಯಾವುದೇ ವರ್ಷದ 52 ವಾರಗಳಿಗೂ ನಿರೂಪಿಸುವ ವಿಧಾನ ಉಂಟು. ಅದನ್ನು ಭಾರತದ 30



ಚಿತ್ರ 5 : ಪ್ರಾಂತ್ಯಗಳು : 1 ಅಸ್ಸಾಂ, 2 ಬಂಗಾಲ, 3 ಒರಿಸ್ಸ, 4. ಛೋಟಾನಗರ, 5 ಬಿಹಾರ್, 6 ಉತ್ತರ ಪ್ರದೇಶ (ಪೂರ್ವ), 7 ಉತ್ತರ ಪ್ರದೇಶ (ಪಶ್ಚಿಮ), 8 ಪಂಜಾಬು (ಪೂರ್ವ, ಉತ್ತರ), 9. ಪಂಜಾಬು (ದಕ್ಷಿಣ, ಪಶ್ಚಿಮ), 10 ಕಾಶ್ಮೀರ, 11. ವಾಯವ್ಯ ಸರಹದ್ದು ಪ್ರಾಂತ್ಯ, 12. ಬಲೂಚಿಸ್ತಾನ, 13. ಸಿಂಧ್, 14. ರಾಜಪುತಾನ (ಪಶ್ಚಿಮ), 15 ರಾಜಪುತಾನ (ಪೂರ್ವ), 16. ಗುಜರಾತ್ 17. ಮಧ್ಯಭಾರತ (ಪಶ್ಚಿಮ), 18 ಮಧ್ಯಭಾರತ (ಪೂರ್ವ), 19 ಬಿರಾರ್, 20 ಮಧ್ಯ ಪ್ರಾಂತ್ಯ (ಪಶ್ಚಿಮ), 21. ಮಧ್ಯ ಪ್ರಾಂತ್ಯ (ಪೂರ್ವ), 19. ಬಿರಾರ್, 20 ಮಧ್ಯ ಪ್ರಾಂತ್ಯ (ಪಶ್ಚಿಮ), 21 ಮಧ್ಯ ಪ್ರಾಂತ್ಯ (ಪೂರ್ವ), 22. ಕೊಂಕಣ, 23. ಬೊಂಬಾಯಿ (ದಕ್ಕನ್), 24. ಹೈದರಾಬಾದ್ (ಉತ್ತರ), 25. ಹೈದರಾಬಾದ್ (ದಕ್ಷಿಣ), 26. ಕರ್ನಾಟಕ, 27. ಮಲಬಾರ್ 28. ಮದ್ರಾಸ್ (ಆಗ್ನೇಯ), 29. ಮದ್ರಾಸ್ (ದಕ್ಕನ್), 30 ಮದ್ರಾಸ್ ತೀರ (ಉತ್ತರ).

A : ಅಪ್ರಸಾಮಾನ್ಯತೆಗೆ ಪರಿಮಿತಿ : B : ಪ್ರಸಾಮಾನ್ಯ ಮಳೆ –1910; C: ಸರಾಸರಿ ವಿಚಲನೆ

ಮಳೆ ಉಪವಿಭಾಗಗಳಿಗೆ ಸಹ ಅನ್ವಯಿಸುತ್ತಾರೆ. ಪ್ರತಿಯೊಂದು ಉಪವಿಭಾಗಕ್ಕೂ ಪ್ರತಿವಾರಕ್ಕೂ ಎರಡು ಸಂಖ್ಯೆಗಳನ್ನು ಬರೆಯುತ್ತಾರೆ. ಮೇಲಿನ ಸಂಖ್ಯೆ ವಾಸ್ತವಿಕವನ್ನೂ ಕೆಳಗಿನ ಸಂಖ್ಯೆ ಪ್ರಸಾಮಾನ್ಯವನ್ನೂ ಸೂಚಿಸುವುವು. ವೈಪರೀತ್ಯಗಳನ್ನು ಇದೇ ಚಿತ್ರದಲ್ಲಿ ತೋರಿಸಲು ಅನುಕೂಲವಾಗುವಂತೆ ಅನಾವೃಷ್ಟಿ ಮತ್ತು ಮಹಾಪೂರಗಳನ್ನು ಈ ಕೆಳಗಿನಂತೆ ವ್ಯಾಖ್ಯಿಸುತ್ತಾರೆ : ವಾಸ್ತವಿಕ ಸಾಪ್ತಾಹಿಕ ಮಳೆ ಪ್ರಸಾಮಾನ್ಯ ಮಳೆ ಅರ್ಧಕ್ಕೆ ಸಮ ಅಥವಾ ಅದಕ್ಕಿಂತ ಕಡಿಮೆ ಆಗಿರುವ ವಾರಗಳು ಅನಾವೃಷ್ಟಿಗಳು ; ವಾಸ್ತವಿಕ ಸಾಪ್ತಾಹಿಕ ಮಳೆ ಪ್ರಸಾಮಾನ್ಯ ಮಳೆಯ ಎರಡರಷ್ಟಕ್ಕೆ ಸಮ ಅಥವಾ ಅದಕ್ಕಿಂತ ಹೆಚ್ಚು ಆಗಿರುವ ವಾರಗಳು ಮಹಾಪೂರಗಳು. ಇವನ್ನು ಅನುಕ್ರಮವಾಗಿ, ಬೇರೆ ಬೇರೆ ಸಂಕೇತಗಳಿಂದ ತೋರಿಸುತ್ತಾರೆ. ಮಳೆಗಾಲದಲ್ಲಿ ಅನಾವೃಷ್ಟಿಗಳಾಗಲೀ ಮಹಾಪೂರಗಳಾಗಲೀ ಇಲ್ಲದಿರುವ ವರ್ಷಗಳ ಹೆಸರು ಆದರ್ಶ ವರ್ಷಗಳು. ಕೃಷಿ ಉತ್ಪನ್ನದ ಯಶಸ್ಸು ಶ್ರಾಯದಲ್ಲಿ ಸುರಿಯುವುದು ಮಳೆಯ ಒಟ್ಟು ಪರಿಮಾಣವನ್ನು ಅವಲಂಬಿಸಿರುವುದರ ಜೊತೆಗೆ ಸಕಾಲಿಕತೆಯನ್ನೂ ಸಮುಚಿತ ಪ್ರದೇಶ ವಿತರಣೆಯನ್ನೂ ಅವಲಂಬಿಸಿದೆ. ಅವು ಪ್ರಸಾಮಾನ್ಯ (ಪ್ರಸಾಮಾನ್ಯಕ್ಕಿಂತ ಕೆಳಗಿನ ಮಟ್ಟದ) ಮಳೆಯಾದರೂ ಸಮರ್ಪಕವಾಗಿ ಹಂಚಿಹೋಗಿದ್ದರೆ ಅದರಿಂದ ಒಳ್ಳೆ ಫಸಲಿನ ಉತ್ಪಾದನೆ ಆಗಬಲ್ಲದು. ಹಲವಾರು ವರ್ಷಗಳ ಅಂಕಿಅಂಶಗಳನ್ನು ಪರಿಶೀಲಿಸುವಾಗ ಅಲ್ಪಕಾಲದ ಅನಾವೃಷ್ಟಿ ಮತ್ತು ಮಹಾಪೂರ ತಲೆದೋರುವುದನ್ನೂ ಅವುಗಳಿಂದ ಶ್ರಾಯದ ಒಟ್ಟು ಮಳೆ ಮೇಲೆ ಏನೂ ಪ್ರಭಾವ ಆಗದಿರುವುದನ್ನೂ ನೋಡುತ್ತೇವೆ. 5, 10 ಅಥವಾ 20 ವರ್ಷಗಳಿಗೊಮ್ಮೆ ಅನಾವೃಷ್ಟಿ ಮಹಾಪೂರ ಹಲವಾರು ವಾರಗಳ ಕಾಲ ಸತತವಾಗಿ ಒಂದು ಪ್ರದೇಶದಲ್ಲಿ ಹಬ್ಬಿರಬಹುದು. ಸಸ್ಯಗಳ ಬೆಳವಣಿಗೆ ಅವಧಿಕ ಘಟ್ಟಗಳಲ್ಲಿ ತಲೆದೋರುವ ಇಂಥ ಸುದೀರ್ಘ ವೈಪರೀತ್ಯಗಳು ಬೆಳೆಗಳ ಮೇಲೆ ಸಾಕಷ್ಟು ದುಷ್ಪರಿಣಾಮಗಳನ್ನು ಬೀರಬಲ್ಲವು.

ಸ್ಥೂಲವಾಗಿ ಹೇಳುವುದಾದರೆ ಈಶಾನ್ಯಭಾರತದ ಆರ್ದ್ರಪಟ್ಟಿಗಳಲ್ಲೂ ತಿರುವಾಂಕೂರು–ಕೊಚ್ಚಿ ಮಲಬಾರ್ ಕರಾವಳಿಯ ಉದ್ದಕ್ಕೂ ಎರಡು ಮಳೆಗಾಲಗಳೂ ಒಂದರೊಳಗೆ ಇನ್ನೊಂದು ಸೇರಿಕೊಂಡು ಸಾಕಷ್ಟು ದೀರ್ಘಕಾಲದ ಥಂಡಿಕಾಲವನ್ನು ಸೃಜಿಸುತ್ತವೆ. ಇದಾದ ತರುವಾಯ ಅಲ್ಪಾವಧಿಯ ಶುಷ್ಕಶ್ರಾಯ ಬರುತ್ತದೆ. ಭಾರತದ ಮಧ್ಯ ಪ್ರದೇಶಗಳಲ್ಲಿ, ದಖ್ಖನದ ಪೀಠಭೂಮಿಯಲ್ಲಿ ಮತ್ತು ತಮಿಳುನಾಡಿನ ಆಗ್ನೇಯ ಪ್ರದೇಶದಲ್ಲಿ ಉತ್ತರದಿಂದ ದಕ್ಷಿಣಕ್ಕೆ ನಾವು ಚಲಿಸಿದಂತೆ ಥಂಡಿ ಶ್ರಾಯ ದೀರ್ಘವಾಗುತ್ತ ಹೋಗಿ ಅದು ಮುಗಿದ ತರುವಾಯ ಸ್ಪಷ್ಟವಾಗಿ ಗುರುತಿಸಲಾಗುವ ಶುಷ್ಕಶ್ರಾಯ ಬರುತ್ತದೆ.

ಮೇಲೆ ವಿವರಿಸಿರುವಂಥ ಪಟ್ಟಿಗಳನ್ನು 40–50 ವರ್ಷಗಳ ತನಕ ಪ್ರತಿ ವರ್ಷಕ್ಕೂ ತಯಾರಿಸಿ ಪರಿಶೀಲಿಸುವುದುಂಟು. ಇಂಥವುಗಳ ಸಾರಾಂಶವನ್ನು ಮಳೆ ಉಪವಿಭಾಗವಾರು ಭಾರತದ 30 ಉಪವಿಭಾಗಗಳಲ್ಲಿ ಒಂದೊಂದಕ್ಕೂ ಪುನರ್ವಿತರಣೆ ಮಾಡಿ ಅಭ್ಯಸಿಸುತ್ತಾರೆ. ಕರ್ನಾಟಕ ರಾಜ್ಯದ ವಾರ್ಷಿಕ ಪ್ರಸಾಮಾನ್ಯ ಮಳೆ 36″ಗಳ ಸನಿಹದಲ್ಲಿದೆ. ಥಂಡಿ ಶ್ರಾಯ (ಸಾಪ್ತಾಹಿಕ 0.2″ ಅಥವಾ ಹೆಚ್ಚು) ಏಪ್ರಿಲ್ ತಿಂಗಳ ಎರಡನೆಯ ವಾರದಿಂದ ನವೆಂಬರ್ ಕೊನೆಯವರೆಗೆ (34 ವಾರಗಳ ಕಾಲ) ವ್ಯಾಪಿಸಿರುವುದು. ಡಿಸೆಂಬರಿನಿಂದ ಮುಂದಿನ ಮಾರ್ಚ್‌ವರೆಗೆ ಸಾಮಾನ್ಯವಾಗಿ ಶುಷ್ಕಶ್ರಾಯ. ನಾಲ್ಕು ವಾರಗಳ ಕಾಲದ ಮಹಾಪೂರ 1913ರಲ್ಲಿ ಸಂಭವಿಸಿದೆ. ಪ್ರಸಾಮಾನ್ಯ, ಮಹಾಪೂರ ಮತ್ತು ಅನಾವೃಷ್ಟಿ ವಾರಗಳ ಶೇಕಡಾ ಪ್ರಮಾಣ ಅನುಕ್ರಮವಾಗಿ 43.9, 16.3, 39.8. ಇಡೀ ದೇಶವನ್ನು ಪರಿಶೀಲಿಸುವಾಗ ವಾರ್ಷಿಕ ಮಳೆ 50″ಗಳಿಗಿಂತ ಹೆಚ್ಚು ಇರುವ ಈಶಾನ್ಯ ಭಾರತ, ಮಧ್ಯ ಪ್ರದೇಶಗಳು, ಕೊಂಕಣ ಮತ್ತು ಕೇರಳ ಈ ಪ್ರದೇಶಗಳಲ್ಲಿಯ



ಚಿತ್ರ 6 ಕರ್ನಾಟಕ ರಾಜ್ಯದಲ್ಲಿ ವಾರದಿಂದ ವಾರಕ್ಕೆ ಮಳೆಸುರಿತದ ವಿಶ್ಲೇಷಣೆ

ಮಳೆಸುರಿತದ ವಿಚಲನೆ ಕನಿಷ್ಠ ಪ್ರಮಾಣದ್ದು. ಈ ಭಾಗಗಳಲ್ಲಿ ಮಳೆ ನೀರನ್ನು ಅವಲಂಬಿಸಿ ವ್ಯವಸಾಯ ಮಾಡಬಹುದು. ದೇಶದ ಉಳಿದ ಭಾಗಗಳಲ್ಲಿ ಯಶಸ್ವೀ ಕೃಷಿ ಉತ್ಪಾದನೆಗೆ ಮಳೆಯ ಜೊತೆಗೆ ನೀರಾವರಿಯ ನೆರವೂ ಬೇಕಾಗುತ್ತದೆ. ದೇಶಾದ್ಯಂತ ಅನಾವೃಷ್ಟಿ

ಮತ್ತು ಕ್ಷಾಮ ದುರಂತಗಳನ್ನು ಒಂದು ಶತಮಾನದ ಅವಧಿಯಲ್ಲಿ 5 ಅಥವಾ 6 ಸಲ ನಿರೀಕ್ಷಿಸಬಹುದು. ಕೇವಲ ಕೆಲವೇ ವಲಯಗಳಿಗೆ ಸೀಮಿತವಾಗಿರುವ ಆಂಶಿಕ ದುರಂತಗಳು ಒಂದು ಶತಮಾನ ಕಾಲದಲ್ಲಿ 30 ರವರೆಗೂ ಇರಬಹುದು. ಅತಿಶಯ ಸಮೃದ್ಧ ವರ್ಷಗಳ ಅತಿ ಉತ್ಪಾದನೆಯನ್ನು ಕ್ಷೀಣ ವರ್ಷಗಳಲ್ಲಿ ಉಪಯೋಗಿಸಲೋಸ್ಕರ ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು. ಬೆಳೆವಿಮೆಯ ಮೂಲಕ ಸರ್ಕಾರ ರೈತರಿಗೆ ರಕ್ಷಣೆ ಒದಗಿಸಬಹುದು.

**ಹವೆ ಮತ್ತು ಸಸ್ಯದ ಬೆಳೆವಣಿಗೆ :** ಮಳೆ, ಉಷ್ಣತೆ, ಆರ್ದ್ರತೆ, ಗಾಳಿ, ಬಿಸಿಲು ಮುಂತಾದವುಗಳ ಅನುಕೂಲತಮ ಅಳವಡಿಕೆಯನ್ನು ಅವಲಂಬಿಸಿ ಪೈರುಗಳ ಆರೋಗ್ಯವಂತ ಬೆಳೆವಣಿಗೆ ಮತ್ತು ಇಳುವರಿ ಇವೆ. ಪ್ರವರ್ಧಿಸುತ್ತಿರುವ ಸಸ್ಯ ಸಮುದಾಯಗಳಿಗೆ ನಿಕಟ ಪರಿಸರವನ್ನು ಒದಗಿಸುವುದು ಇವೇ. ಆದ್ದರಿಂದ ಪ್ರತಿಕೂಲ ಹವೆಯನ್ನು ಕುರಿತ ಮುನ್ನೆಚ್ಚರಿಕೆಗಳು ಸಕಾಲದಲ್ಲಿ ಸರಿಯಾಗಿ ದೊರೆತರೆ ಅವುಗಳಿಂದ ರೈತರಿಗೆ ಖಂಡಿತ ಲಾಭ ಉಂಟು. ಉದಾಹರಣೆಗೆ ಮಾನ್‌ಸೂನ್ ಮಳೆಗಳ ಪ್ರಾರಂಭ ಎಂದು ಆಗಬಹುದು ಎಂಬುದನ್ನು ರೈತನಿಗೆ ಸಾಕಷ್ಟು ಮೊದಲೇ ತಿಳಿಸಿದರೆ ಆ ಶ್ರಾಯದಲ್ಲಿ ಮಳೆಸುರಿತ ಹೇಗೆ ಬದಲಾಗಬಹುದು, ಮಳೆಯಲ್ಲಿ ಎಂದು ತಡೆ ಉಂಟಾಗಬಹುದು ಎಂಬಿವೇ ಮುಂತಾದ ವಿವರಗಳನ್ನು ಮುಂದಾಗಿಯೇ ಪ್ರಕಟಿಸಿದರೆ ಕೃಷಿಯ ಹಲವಾರು ಚಟುವಟಿಕೆಗಳಾದ ಪಾತಿಯ ರಚನೆ, ಗೊಬ್ಬರ ಹಾಕುವುದು, ಬಿತ್ತನೆ, ನಾಟಿ, ಕಳೆ ಕೀಳುವಿಕೆ, ಕೊಯ್ಲು, ಒಕ್ಕಲು, ಒಣಗಿಸುವುದು ಮುಂತಾದವನ್ನು ಯುಕ್ತವಾಗಿ ಅಳವಡಿಸಿಕೊಂಡು ಬೆಳೆಗೆ ಒದಗಬಹುದಾದ ನಷ್ಟವನ್ನು ಕನಿಷ್ಠ ಮಟ್ಟಕ್ಕೆ ಇಳಿಸಬಹುದು; ರೈತನ ಬಲು ಮಿತ ಮೂಲಗಳಾದ ಗೆಯ್ಮೆ, ಗೊಬ್ಬರ, ಬೀಜ, ನೀರು ಇವೇ ಮುಂತಾದವನ್ನು ಲಾಭದಾಯಕವಾಗಿ ಬಳಸಬಹುದು. ಬಿತ್ತನೆಯಿಂದ ಕೊಯ್ಲಿನವರೆಗಿನ ಬೆಳೆಯ ಜೀವಿತದಲ್ಲಿ ಅವಧಿಕ ಕಾಲಗಳಿವೆ. ಬಿತ್ತನೆಯ ಕಾಲವೇ ಸಾಕಷ್ಟು ಗಾಬರಿ ಹುಟ್ಟಿಸಬಹುದು. ಬಿತ್ತನೆ ಮುಗಿದೊಡನೆ ಬಿರುಮಳೆ ಸುರಿದರೆ ಬಹುಶಃ ಬೀಜಗಳು ತೊಳೆದು ಹೋಗಿ ಮೊಳಕೆ ಒಡೆಯುವ ಪ್ರಮಾಣ ಬಲು ಕಡಿಮೆ ಆಗುವುದೆಂಬುದು ರೈತನಿಗೆ ತಿಳಿದಿದೆ. ಬಿತ್ತನೆ ಮುಗಿದ ಬಳಿಕ ಸುದೀರ್ಘ ಅನಾವೃಷ್ಟಿ ತಲೆದೋರಿದರೆ ಎಳೆ ಅಗೆಗಳು ಒಣಗೀ ಹೋಗಬಹುದು; ಮತ್ತು ಈ ಕಾರಣದಿಂದ ಇಡೀ ಗದ್ದೆಯನ್ನು ಪುನಃ ಬಿತ್ತಬೇಕಾದೀತು. ಮೊದಲಿನ ಘಟ್ಟದಲ್ಲಿ (ಎಂದರೆ ಮೊಳಕೆ ಒಡೆಯುವಲ್ಲಿಂದ ತೊಡಗಿ ಚಿಗುರು ಒಡೆಯುವವರೆಗೆ) ಸನ್ನಿವೇಶಗಳೆಲ್ಲವೂ ಅನುಕೂಲಕರವಾಗಿದ್ದರೆ ಬೆಳೆಯ ಪ್ರಾರಂಭ ಉತ್ತಮವಾಗಿ ಆಗುತ್ತದೆ. ಆಮೇಲೆ ಮಳೆಯಿಲ್ಲದ ಸ್ವಚ್ಛ ಹವೆಯ ಅವಕಾಶ ಒದಗಿ ಎಡೆಹೊಡೆಯುವುದಕ್ಕೂ ಕಳೆ ಕೀಳುವುದಕ್ಕೂ ಅನುಕೂಲವಾಗುವುದು. ಎರಡನೆಯ ಘಟ್ಟದಲ್ಲಿ (ಎಂದರೆ ಸಸ್ಯದ ತೀವ್ರ ಬೆಳೆವಣಿಗೆಯ ಕಾಲ–ಇದನ್ನು ವೈಭವಕಾಲ ಎಂದು ಕರೆಯುವುದುಂಟು) ದ್ಯುತಿಸಂಶ್ಲೇಷಣೆಗೋಸ್ಕರ ನೀರಿನ ಮತ್ತು ಬಿಸಿಲಿನ ಆವಶ್ಯಕತೆ ಗರಿಷ್ಠವಾಗಿದೆ. ಮುಂದಕ್ಕೆ ಮೂರನೆಯ ಘಟ್ಟ ಹೂ ಹೋಗುವುದು, ತೆನೆಗೂಡುವುದು ಮತ್ತು ಕಾಳುಗಟ್ಟುವುದು, ಇದರಲ್ಲಿ ಸಸ್ಯದ ಎಲೆ ಕಾಂಡಗಳ ಬೆಳೆವಣಿಗೆ ಪೂರ್ಣಗೊಂಡ ತರುವಾಯ ಪುನರುತ್ಪತ್ತಿಯ ಅವಧಿ (ಎಂದರೆ ಮುಖ್ಯವಾಗಿ ಬೀಜಗಳ ಬಲಿಯುವಿಕೆ) ಪ್ರಾರಂಭವಾಗುವುದು. ಈ ವೇಳೆ ಹವೆ ಸ್ವಚ್ಛವಾಗಿರಬೇಕು. ಆದಷ್ಟು ಕಡಿಮೆ ಮೋಡಕವಿದ ವಾತಾವರಣವಿರಬೇಕು. ಹಾಗಲ್ಲದೇ ಈ ಅವಧಿಯಲ್ಲಿ ಮೋಡ ಮುಸುಕಿದ ಥಂಡಿ ಹವೆಯೇನಾದರೂ ಇತ್ತೋ ಅದುವರೆಗೂ ಹುಲುಸಾಗಿ ಬೆಳೆದುಬಂದಿದ್ದ ಪೈರು ತೀರ ನಿರಾಶೆ ಉಂಟುಮಾಡುವಂತೆ ಹಾಳಾಗಿಹೋಗಬಹುದು. ತೆನೆಗಳು ಒಡೆಯುವ ಕಾಲದಲ್ಲಿ, ಕಾಳುಗಳು ಇನ್ನೂ ಹಾಲಿನ ಸ್ಥಿತಿಯಲ್ಲಿಯೇ ಇರುವ ವೇಳೆಯಲ್ಲಿ, ಕೇವಲ ಒಂದು ದಿವಸದ ಬಿಸಿಗಾಳಿಯೂ ತೆನೆಗಳನ್ನು ಒಣಗಿಸಿ ಬೆಳೆಗೆ ಸರ್ವನಾಶ ತರಬಹುದು. ಈ ಶ್ರಾಯ ಯಾವ ಆತಂಕವೂ ಇಲ್ಲದಂತೆ ಕಳೆದು ಹೋದ ಮೇಲೆಯೂ ಪ್ರತಿಕೂಲ ಹವೆಯಿಂದ ಬೆಳೆಗೆ ಒದಗಬಹುದಾದ ಅಪಾಯ ಪೂರ್ಣವಾಗಿ ತಪ್ಪಿತೆನ್ನುವಂತಿಲ್ಲ. ಬಿರುಸು ಜಡಿಮಳೆ, ಆಲಿಕಲ್ಲುಗಳ ಕೆಡೆತ ಮುಂತಾದವು ಬೆಳೆಗೆ ಬಹಳ ಹಾನಿ ಉಂಟುಮಾಡಬಲ್ಲವು. ಇಂಥ ಅಪಾಯಕರ ಸನ್ನಿವೇಶಗಳನ್ನು ಕುರಿತ ಸಕಾಲಿಕ ಮುನ್ನೆಚ್ಚರಿಕೆಗಳನ್ನು ರೈತನಿಗೆ ಕೊಟ್ಟದ್ದೇ ಆದರೆ ಆತ ಕೊಯ್ಲು ಕೆಲಸವನ್ನು ಒಡನೆಯೇ ಚುರುಕಾಗಿ ನಡೆಸಿ ಬೆಳೆಯನ್ನು ಉಳಿಸಿಕೊಳ್ಳಬಲ್ಲ. ಇಲ್ಲಿಗೇ ಮುಗಿಯಲಿಲ್ಲ. ಮುಂದೆ ಕಣದಲ್ಲಿ ಒಟ್ಟಿರುವ ಮೆದೆ ಹಠಾತ್ ಮಳೆ ಬಿರುಗಾಳಿಗಳಿಂದ ಹಾಳಾಗಿಹೋಗುವ ಸಂಭಾವ್ಯತೆಯೂ ಉಂಟು. ಇದುವರೆಗೆ ಹವೆಯ ನೇರ ಪ್ರಭಾವವನ್ನು ಹೇಳಲಾಗಿದೆ. ಹವೆಗೆ ಬೆಳೆಯ ಬೆಳೆವಣಿಗೆ ಮೇಲೆ ಪರೋಕ್ಷ ಪ್ರಭಾವವೂ ಉಂಟು. ಪೈರು ಬೆಳೆಯುತ್ತಿರುವ ವೇಳೆಯಲ್ಲಿ ಹಲವಾರು ರೋಗಗಳೂ ಕೀಟಪಿಡುಗುಗಳೂ ಅದರ ಮೇಲೆ ದಾಳಿಮಾಡುತ್ತವೆ. ಇಂಥ ದಾಳಿಗಳ ತೀವ್ರತೆ ಮತ್ತು ಪುನರಾವರ್ತನೆ ಹವೆಯ ಕೆಲವು ವಿಶಿಷ್ಟ ಪರಿಸ್ಥಿತಿಗಳನ್ನು ಅವಲಂಬಿಸಿವೆ. ಧಾನ್ಯಗಳಿಗೆ ತಗಲುವ ಬೂಷ್ಟು ರೋಗಗಳು, ಗೋದಿ ಹೊಲಗಳ ಮೇಲೆ ಎರಗುವ ಮಿಡತೆ ದಂಡುಗಳು ರೈತ ಎಂದೂ ಮರೆಯದ ವೈರಿಗಳು.

**ಪ್ರತಿಕೂಲ ಹವೆಯ ವಿದ್ಯಮಾನಗಳು :** ಹವೆಯಲ್ಲಿಯ ಏರಿಳಿತಗಳೂ ಹೆಚ್ಚಾಗಿ ಪಕ್ಕನೆ ಸಂಭವಿಸುತ್ತವೆ. ಅವುಗಳ ಆಘಾತವನ್ನು ಬೆಳೆಗಳು, ಹಣ್ಣಿನ ತೋಟಗಳು, ಒತ್ತಟ್ಟಿಗಿರಲಿ, ರಸ್ತೆ ಬದಿಯ ಸಾಲು ಮರಗಳು ಸಹ ತಾಳಿಕೊಳ್ಳಲಾರವು. ಪ್ರತಿಕೂಲ ಹವೆಯ ಪರಿಣಾಮವಾಗಿ ಎದ್ದುಕಾಣುವ ವಿನಾಶಕಾರೀ ವಿದ್ಯಮಾನಗಳನ್ನು ಮುಂದೆ ವಿವರಿಸಲಾಗಿದೆ.

**1. ಅತಿವೃಷ್ಟಿ ಹಾಗೂ ಮಹಾಪೂರಗಳು :** ಸತತವಾಗಿ ಹಲವಾರು ದಿವಸಗಳ ಕಾಲ ನದಿಗಳ ಜಲಾನಯನ ಪ್ರದೇಶಗಳಲ್ಲಿ ಬಿರುಮಳೆ ಸುರಿದಾಗ ಸಂಭವಿಸುವ ಮಹಾಪೂರಗಳ ಗಾತ್ರವನ್ನು ಊಹಿಸಿಕೊಳ್ಳಬಹುದು. ಜಲಾನಯನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆದ ಅರಣ್ಯಗಳು ಮತ್ತು ಅಲ್ಲಲ್ಲ ವ್ಯಾಪಿಸಿದ ಗಿಡಗಂಟಿಗಳು ನೀರಿನ ಪ್ರವಾಹವನ್ನು ನಿಯಂತ್ರಿಸುತ್ತವೆ. ಒಂದೇ ಸಲ ಕಿರುತೊರೆಗಳಿಗೆ ದುಮ್ಮಿಕ್ಕುವ ನೀರಿನ ಓಟವನ್ನೂ ಮೊತ್ತವನ್ನೂ ತಡೆಹಿಡಿದು ನಿಲ್ಲಿಸುವುದರ ಜೊತೆಗೆ ಮಣ್ಣಿನ ಸವಕಳಿಯನ್ನು ಕನಿಷ್ಠಗೊಳಿಸುವಲ್ಲಿ ಇವುಗಳ ಪಾತ್ರ ಹಿರಿದು. ಹೀಗೆ ಅತಿವೃಷ್ಟಿಯ ಪ್ರಸಾದವಾದ ನೀರು ತಗ್ಗಿನ ಹೊಳೆ, ನದಿಗಳಿಗೆ ಕೊಂಚ ಮಂದಗತಿಯಿಂದ ಪೂರೈಕೆ ಆಗುವುದರಿಂದ ಅವುಗಳಲ್ಲಿ ಪ್ರವಾಹದ ಮಟ್ಟ ಏರುವುದು ನಿಧಾನವಾಗಿ, ಸಂಭವಿಸಬಹುದಾದ ನಾಶ ಕಡಿಮೆ ಆಗುತ್ತದೆ. ಆದ್ದರಿಂದ ಜಲಾನಯನ ಪ್ರದೇಶಗಳಲ್ಲಿ, ಮುಖ್ಯವಾಗಿ, ಅರಣ್ಯಗಳ ಅಭಿವೃದ್ಧಿ ಹಾಗೂ ರಕ್ಷಣೆ ತೀರ ಅವಶ್ಯಕವಾದ ಒಂದು ಕಾರ್ಯ. ಇನ್ನು ಗದ್ದೆ, ಬಯಲುಗಳಲ್ಲಿ ರೈತರು ಕಾಲುವೆಗಳನ್ನೂ ಚರಂಡಿಗಳನ್ನೂ ತೆರೆದಿಟ್ಟು ಅತಿವೃಷ್ಟಿಯ ಅಧಿಕ ನೀರನ್ನು ಅಡೆತಡೆ ಇಲ್ಲದೇ ಹರಿದುಹೋಗಲು ಯುಕ್ತ ಅವಕಾಶ ಕಲ್ಪಿಸಿಕೊಡಬೇಕು. ಮಹಾಪೂರಗಳಿಂದ ಒದಗುವ ಹಾನಿಗಳನ್ನು ತಡೆದುಕೊಂಡು ಬಾಳಿ ಸಮೃದ್ಧ ಬೆಳೆಗಳನ್ನು ನೀಡಬಲ್ಲ ವಿಶಿಷ್ಟ ತಳಿಗಳ ಸಂಶೋಧನೆಯತ್ತ ಲಕ್ಷ್ಯ ಈಚಿನ ದಿವಸಗಳಲ್ಲಿ ಹರಿದಿದೆ.

**2. ಅನಾವೃಷ್ಟಿಗಳು :** ಇವುಗಳ ಪ್ರಮುಖ ದುಷ್ಪರಿಣಾಮ ಬೆಳೆನಾಶ ಮತ್ತು ಅದರಿಂದ ಕ್ಷಾಮ. ಅಂಕಿ ಅಂಶಗಳ ಆಧಾರದಿಂದ ಅನಾವೃಷ್ಟಿ ವರ್ಷಗಳ ಸಂಭಾವ್ಯತೆಯನ್ನು ಊಹಿಸಿ ಆ ಮೊದಲೇ ಅವನ್ನು ಎದುರಿಸಲು ಯುಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಹಿಂದಿನ ಸಮೃದ್ಧವರ್ಷಗಳಲ್ಲಿ ದೊರೆತ ನೀರನ್ನು ಮಿತವಾಗಿ ವ್ಯಯಿಸಬೇಕು; ಜೊತೆಯಲ್ಲೇ ಸಾಧ್ಯವಾಗುವಷ್ಟು ನೀರನ್ನು ಕೆರೆಕುಂಟೆಗಳಲ್ಲಿ ಜಲಾಶಯಗಳಲ್ಲಿ ಸಂಗ್ರಹಿಸಿಡಬೇಕು; ನೀರಿನ ಅಪವ್ಯಯವನ್ನು ನಿಲ್ಲಿಸಬೇಕು. ಇವೆಲ್ಲ ಕಾರ್ಯಕ್ರಮಗಳಿಂದ ಅನಾವೃಷ್ಟಿಯ ದುಷ್ಪರಿಣಾಮಗಳನ್ನು ತಕ್ಕಮಟ್ಟಿಗೆ ಕಡಿಮೆ ಮಾಡಬಹುದು. ಇನ್ನು ಅವಭೂಮಿ (ಸಬ್‌ಸಾಯಿಲ್) ನೀರಾವರಿಯನ್ನು ತೊಡಗುವುದರಿಂದ ಬಿಸಿಲಿನಿಂದ ಕಾದು ಉಗಿಯಾಗಿ ಹೋಗುವ ನೀರಿನ ನಷ್ಟವನ್ನು ಬಲುಮಟ್ಟಿಗೆ ಪಡೆಯಬಹುದು. ಜಲಾಶಯಗಳಲ್ಲಿ ನೀರಿನ ಮೇಲುತಳದಿಂದ ಆವಿಯಾಗಿ ಹೋಗುವ ನೀರಿನ ಅಂಶವನ್ನು ಕಡಿಮೆ ಮಾಡಲು ಆ ಆವರಣದಲ್ಲಿ ಗಾಳಿಯ ಸ್ವಚ್ಛಂದ ಚಲನೆಗೆ ಅವಕಾಶ ಒದಗದಂತೆ ಸುತ್ತಮುತ್ತಲೂ ಗಿಡಮರಗಳನ್ನು ವಿಪುಲವಾಗಿ ಬೆಳೆಸಬೇಕು. ಸೆಟೈಲ್ ಸ್ಟೆರೈಲ್ ಆಲ್ಕೊಹಾಲ್ ಎಂಬ ದ್ರವವನ್ನು ನೀರಿನ ಮೇಲುತಳದ ಮೇಲೆ ತೆಳುವಾಗಿ ಪಸರಿಸಿ ಆವಿಯಾಗಿ ಹೋಗುವ ನೀರಿನ ಶೇ. 20–30 ಅಂಶವನ್ನು ತಡೆಹಿಡಿಯಲಾಗಿದೆ. ಕ್ಷಾಮ ಪರಿಸ್ಥಿತಿಗಳನ್ನು ಯಶಸ್ವಿಯಾಗಿ ಎದುರಿಸಿಯೂ ಬೆಳೆಯನ್ನು ನೀಡಬಲ್ಲ ಸಸ್ಯಜಾತಿಗಳ ಸಂಶೋಧನೆಯೂ ಕೃಷಿತಜ್ಞರಿಂದ ನಡೆದಿದೆ.

**3. ಆವರ್ತ ಬಿರುಗಾಳಿಗಳು ಹಾಗೂ ಹವೆಯ ಒತ್ತಡ ಕುಸಿತಗಳು :** ಇವು ಹವಾವಿಜ್ಞಾನದ ಮಹಾವಿದ್ಯಮಾನಗಳು. ಬಂಗಾಳ ಆಖಾತದಲ್ಲಿ ಅಥವಾ ಅರೇಬಿಯನ್ ಸಮುದ್ರದಲ್ಲಿ ಅವು ತಲೆದೋರುವ ಅವಧಿಗಳನ್ನು ಮುನ್ನುಡಿಯಬಹುದು. ವಾಸ್ತವಿಕವಾಗಿ ಅವು ಹುಟ್ಟಿದಾಗ ಆ ಸ್ಥಾನಗಳನ್ನು ಗುರುತಿಸಬಹುದು. ಒತ್ತಡ ಕುಸಿತಗಳಿಂದ ಉಂಟಾಗುವ ಆವರ್ತ ಬಿರುಗಾಳಿಗಳು ನಿರಂತರ ಸಂಚಾರಿಗಳು. ತಮಗೆ ಪ್ರಿಯವಾದ ಪಥದ ಮೇಲೆ ಸಂಚರಿಸುತ್ತ ದಾರಿಯಿಡೀ ಮಳೆ ಸುರಿಸುತ್ತ ಥಂಡಿ ಹವೆ ಬೀರುತ್ತ ಸಾಗುತ್ತವೆ. ಸಮುದ್ರದ ಅಂಚಿನಿಂದ ಅವು ನೆಲವನ್ನು ಪ್ರವೇಶಿಸುವ ದಿವಸಗಳನ್ನು ಮುಂದಾಗಿಯೇ ಹೇಳಲು ಸಾಧ್ಯ ಉಂಟು.

**4. ಮಿಂಚು ಗುಡುಗಿನ ಬಿರುಗಾಳಿಗಳು, ಆಲಿಕಲ್ಲಿನ ಬಿರುಗಾಳಿಗಳು ಮತ್ತು ದೂಳಿಮಯ ಬಿರುಗಾಳಿಗಳು :** ಇಂಥ ಸ್ಥಾನಿಕ ಘಟನೆಗಳು ಸಾಧಾರಣವಾಗಿ ಮಾನ್‌ಸೂನ್ ಮಳೆಯ ಆಗಮನದ ಮೊದಲು ಹಾಗೂ ಕೊನೆಯ ಅವಧಿಯಲ್ಲಿ ಸಂಭವಿಸುತ್ತವೆ. ಹವೆಯಲ್ಲಿ ಆರ್ದ್ರತೆ ಇಲ್ಲದಿದ್ದರೆ ಕೇವಲ ದೂಳಿಮಯ ಬಿರುಗಾಳಿ ಉಂಟಾಗುತ್ತದೆ. ವಾತಾವರಣದಲ್ಲಿ ಸಾಕಷ್ಟು ತೇವ ಇದ್ದರೆ ಮಿಂಚು ಗುಡುಗುಗಳಿಂದ ಕೂಡಿದ ಮಳೆ ಗಾಳಿ ಉದ್ಭವವಾಗುವುದು. ಆಲಿಕಲ್ಲಿನ ಮಳೆಗಳೆಂದರೆ ವಿಶೇಷವಾಗಿ ಗುಡುಗು ಮಿಂಚಿನ ಬಿರುಗಾಳಿಗಳು. ವಾತಾವರಣದಲ್ಲಿ ಆಲಿಕಲ್ಲುಗಳನ್ನು ಉಂಟುಮಾಡಬಲ್ಲಷ್ಟು ಪ್ರಬಲವಾದ ಊರ್ಧ್ವಗಾಮಿಗಾಳಿ ಇದ್ದಾಗ ಆಲಿಕಲ್ಲಿನ ಮಳೆ ಸುರಿಯುತ್ತದೆ. ಇದರಿಂದ ಬೆಳೆಗಳಿಗೆ ಬಲು ಹಾನಿ ಉಂಟು. ಈ ಅಸ್ಥಿರ ಘಟನೆಗಳನ್ನು ಕುರಿತು ಯಾವ ವಿಧದ ಮುನ್ಸೂಚನೆಯನ್ನು ಕೊಡಲೂ ಸಾಧ್ಯವಾಗಿಲ್ಲ. ಆದರೆ ಒಂದು ಪ್ರಕಾರದ ಗುಡುಗು ಮಿಂಚಿನ ಬಿರುಗಾಳಿ ತಲೆದೋರುವ ಪ್ರದೇಶಗಳನ್ನು ಗುರುತಿಸಬಹುದು;

ಮತ್ತು ಅದು ಸಂಭವಿಸಲು ಅಗತ್ಯವಾದ ಪರಿಸ್ಥಿತಿಯನ್ನು ಮುಂಚಿತವಾಗಿ ಅರಿಯಬಹುದು. ದೇಶದ ವಿವಿಧ ಭಾಗಗಳಲ್ಲಿ ಸಂಭವಿಸಿದ ಗುಡುಗು ಮಿಂಚಿನ ಬಿರುಗಾಳಿಯ ವಾರ್ಷಿಕ ಆವೃತ್ತಿಯನ್ನು ಚಿತ್ರ 7 ರಲ್ಲಿ ತೋರಿಸಿದೆ. ಹಿಮಾಲಯದ ಪರ್ವತಮಯ ಪ್ರದೇಶಗಳು ಹಾಗೂ ಭಾರತದ ಈಶಾನ್ಯ ಭಾಗಗಳು ಇಂಥ ಗಾಳಿಗಳು ಹೆಚ್ಚಾಗಿ ಸಂಭವಿಸುವ ಪ್ರದೇಶಗಳು. ಕರಾವಳಿ ಪ್ರದೇಶಗಳಲ್ಲಿ ಇವುಗಳ ಸಂಭವ ಬಲು ಕಡಿಮೆ. ಆದರೆ ಒಳನಾಡುಗಳಲ್ಲಿ ಮೈಸೂರು ಹಾಗೂ ದಖ್ಖನದ ತಪ್ಪಲುಗಳಲ್ಲಿ ಅವು ಮೇಲಿಂದ ಮೇಲೆ ಸಂಭವಿಸುವುದುಂಟು.



ಚಿತ್ರ 7

**5. ಅತಿಶೀತಗಾಳಿ ಹಾಗೂ ಹಿಮಗಾಳಿ ಉತ್ಪಾತಗಳು:** ಚಿತ್ರ 8(ಎ)ಯಲ್ಲಿ ಜನವರಿ ತಿಂಗಳಿನಲ್ಲಿ ಭಾರತದ ಪ್ರಸಾಮಾನ್ಯ ಸರಾಸರಿ ದೈನದಿಂದ ಕನಿಷ್ಠ ಉಷ್ಣತೆಯನ್ನು ತೋರಿಸಿದೆ. ಚಿತ್ರ 8(ಬಿ)ಯಲ್ಲಿ 1920ರ ತನಕ ವರದಿ ಮಾಡಲಾದ ಕನಿಷ್ಠತಮ ಉಷ್ಣತೆಯನ್ನು ಗುರುತಿಸಿದೆ. ಈ ವರದಿಗಳನ್ನು ಮಾಡಿರುವುದು ಸ್ಟೀವನ್‌ಸನ್ ತೆರೆಯ ಮೇಲೆ. 18$^{o}$ ಉ. ಅಕ್ಷಾಂಶದಿಂದ ಕೆಳಗಿನ ಭಾಗದಲ್ಲಿರುವ ಉಪಖಂಡದಲ್ಲಿ ಅತಿಶೀತ ತರಂಗದಿಂದ ಉಂಟಾಗುವ ಅಪಾಯ ಬಲು ಕಡಿಮೆ. ಉತ್ತರಾಭಿಮುಖವಾಗಿ ನಾವು ಸಾಗಿದಂತೆ ಶೀತ ತರಂಗಗಳಿಗೆ ಈಡಾಗುವ ಸಂಭಾವ್ಯತೆ ಏರುತ್ತದೆ. ವಾಯವ್ಯ ಭಾರತದಲ್ಲಿ ಶೈತ್ಯದ ತೀಕ್ಷ್ಣತೆ ಗರಿಷ್ಠ. ಈ ಮೊದಲೇ ಹೇಳಿದಂತೆ ಚಳಿಗಾಲದ ಪುಂಖಾನುಪುಂಖ ಒತ್ತಡಕುಸಿತಗಳ ಪರಿಣಾಮವೇ ಈ ಶೀತ ತರಂಗಗಳು. ಇವು ವಾಯವ್ಯ ಭಾರತವನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಬಂಗಾಳ ಅಸ್ಸಾಂ ಕಡೆಗೆ ಚಲಿಸುತ್ತವೆ. ಮುಂದೆ ಮುಂದೆ ತೆರಳಿದಂತೆ ಅವು ದುರ್ಬಲಗೊಳ್ಳುತ್ತವೆ.

ಗದ್ದೆಗಳಲ್ಲಿಯ ಬೆಳೆಗಳು ಮುಂತಾದ ನೆಲಕ್ಕೆ ಒತ್ತಾಗಿರುವ ವಸ್ತುಗಳು ಸ್ವಚ್ಛಾಕಾಶಕ್ಕೆ ಸದಾ ತೆರೆದಿರುತ್ತವೆ. ಹೀಗಾಗಿ ಅವು ತಳೆಯುವ ಕನಿಷ್ಠ ಉಷ್ಣತೆ ಸ್ಟೀವನ್‌ಸನ್ ತೆರೆಯಲ್ಲಿ ವರದಿಯಾಗುವ ಕನಿಷ್ಠ ಉಷ್ಣತೆಗಿಂತಲೂ ಕಡಿಮೆ ಎಂಬುದು ಸುವಿದಿತ. ಹೀಗೆ ಹೊರಗೆ ತೆರೆದಿಟ್ಟ ವಸ್ತುಗಳ ಉಷ್ಣತೆಗೆ ವಿಸರಣ ಕನಿಷ್ಠ ಉಷ್ಣತೆ (ರೇಡಿಯೇಷನ್ ಮಿನಿಮಂ ಟೆಂಪರೇಚರ್) ಎಂದು ಹೆಸರು. ಇದು ಸ್ಟೀವನ್‌ಸನ್ ತೆರೆ ಉಷ್ಣತೆಗಿಂತ 10$'$–12$'$ ಫ್ಯಾ.ಗಳಷ್ಟು ಕಡಿಮೆ. ಚಳಿಗಾಲದ ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿಗಳಲ್ಲಿ ವಿಸರಣ ಕನಿಷ್ಠ ಉಷ್ಣತೆ 30$^{o}$. ಫ್ಯಾ.ಗಿಂತ ಕಡಿಮೆ (ಎಂದರೆ ಹಿಮಬಿಂದುವಿಗಿಂತ ಕೆಳಗಿನದು) ಇವರು ದಿವಸಗಳ ಆವೃತ್ತಿಯನ್ನು ಅನುಕ್ರಮವಾಗಿ ಚಿತ್ರಗಳು 8(ಸಿ), (ಡಿ), (ಇ), (ಎಫ್), ನಿರೂಪಿಸುತ್ತವೆ. ಅತಿಶೈತ್ಯಗಳು ವಾಯವ್ಯ ಭಾರತದಲ್ಲಿ ಪದೇ ಪದೇ ಸಂಭವಿಸುತ್ತವೆಂದೂ ಪೂರ್ವ ಅಥವಾ ದಕ್ಷಿಣಾಭಿಮುಖವಾಗಿ ಸಾಗಿದಂತೆ ಇವು ಕಡಿಮೆ ಆಗುವುವೆಂದೂ ಈ ಪಟ್ಟಿಗಳು ತೋರಿಸುತ್ತವೆ. ಶೀತ ತರಂಗಗಳ ಹಾಗೂ ಅತಿಶೈತ್ಯಗಳ ಸಂಭಾವ್ಯತೆಯನ್ನು ಕುರಿತ ಮುನ್ನೆಚ್ಚರಿಕೆಗಳನ್ನು ರೇಡಿಯೋ ಮೂಲಕ ಬಿತ್ತರಿಸುತ್ತಾರೆ. ಆಗ ರೈತರು ತಮ್ಮ ಗದ್ದೆಗಳನ್ನು ಮತ್ತು ಹಣ್ಣು ತೋಟಗಳನ್ನು ಕೃತಕ ವಿಧಾನಗಳಿಂದ ಬೆಚ್ಚಗಿಟ್ಟು ಅಥವಾ ಬಿಸಿನೀರಿನಿಂದ ವ್ಯವಸಾಯ ಮಾಡಿ ಬೆಳೆಗಳನ್ನು ಉಳಿಸಿಕೊಳ್ಳುವುದು ಸಾಧ್ಯವಾಗುತ್ತದೆ.

**6. ಉಷ್ಣ ತರಂಗಗಳು :** ಬೇಸಗೆ ತೊಡಗಿದಂತೆ ಭಾರತದ ಒಳಭಾಗದಲ್ಲಿ ಉಚ್ಚ ಉಷ್ಣತೆಯ ಒಂದು ಪಟ್ಟಿ ಮೈದಳೆಯುತ್ತದೆ. ಆದರೆ ಮಳೆಗಾಲ ಆರಂಭವಾದಂತೆ ಈ ಪಟ್ಟಿ ಸ್ಥಾನ ಬದಲಾಯಿಸಿ ವಾಯವ್ಯ ಭಾಗಕ್ಕೆ ಹೋಗುತ್ತದೆ. ಭಾರತದ ವಿವಿಧ ಭಾಗಗಳಲ್ಲಿ 1920ರ ತನಕ ವರದಿಯಾದ ಗರಿಷ್ಠ ಉಷ್ಣತೆಗಳನ್ನು ಚಿತ್ರ 9 ರಲ್ಲಿ ಕಾಣಿಸಿದೆ. ಸಿಂಧ್‌ನ ಒಳಭಾಗದಲ್ಲೂ ಪಂಜಾಬ್‌ನಲ್ಲೂ ಗರಿಷ್ಠ ಉಷ್ಣತೆ 125$^{o}$ ಫ್ಯಾ. ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟಕ್ಕೆ ಕನಿಷ್ಠ ಪಕ್ಷ ಒಂದು ಸಲವಾದರೂ ಸಿಡಿದಿದೆ ಎಂಬುದನ್ನು ಚಿತ್ರದಿಂದ ತಿಳಿಯಬಹುದು. ನೆಲದ ಮೇಲ್ಮೈಯನ್ನು ನೀರು ಸಿಂಪಡಿಸಿ ಚಂಡಿ ಮಾಡುವುದು, ನೆಲದ ಮೇಲೆ ಹುಲ್ಲನ್ನು ಬೆಳೆಸುವುದು, ನೆಲವನ್ನು ಚಾಕ್‌ಪುಡಿಯ ತೆಳುಪದರದಿಂದ ಮುಚ್ಚುವುದು – ಇವೇ ಮುಂತಾದ ವಿಧಾನಗಳಿಂದ ನೆಲದ ಹಾಗೂ ಅದಕ್ಕೆ ಸಮೀಪವಿರುವ ಗಾಳಿ ಪದರುಗಳ ಉಷ್ಣತೆಯನ್ನು ತಗ್ಗುಮಟ್ಟದಲ್ಲಿ ಇಡಬಹುದು.



ಚಿತ್ರ 8

**7. ಅತಿವೇಗದ ಗಾಳಿಗಳು :** ಗುಡುಗಿನಿಂದ ಕೂಡಿದ ಅತಿವೇಗದ ಗಾಳಿಗಳು, ಒತ್ತಡ ಕುಸಿತಗಳು ಮುಂತಾದವು ಬೆಳೆಗಳಿಗೆ, ಹಣ್ಣುತೋಟಗಳಿಗೆ ಮತ್ತು ಗಿಡಗಳ ಸಾಲುಗಳಿಗೆ ಹಾನಿಕಾರಿಗಳು. ಇವು ಉಷ್ಣಮಾರುತಗಳಾಗಿದ್ದರೆ ಸರೋವರಗಳ, ನೆಲದ ಮತ್ತು ಬೆಳೆಗಳ ಶೋಷಣೆ ಅಧಿಕ ಪ್ರಮಾಣದಲ್ಲಿ ಆಗುತ್ತದೆ. ಗಾಳಿ ತಡೆಗಳು ಇಂಥ ಗಾಳಿಗಳನ್ನು ತಡೆಯುವುದರಿಂದ ಲಭಿಸುವ ಉಪಯುಕ್ತ ಪರಿಣಾಮಗಳು ಎಲ್ಲರಿಗೂ ತಿಳಿದಿವೆ. ಆದರೆ ಎಂಥ ತಡೆಮರಗಳ ಸಾಲೇ ಇರಲಿ ಅದನ್ನು ಲೆಕ್ಕಿಸದೇ ಉತ್ಪಾತವೆಸಗುವ ತೀವ್ರಗಾಳಿಗಳು ಒಮ್ಮೊಮ್ಮೆ ಬೀಸುವುದುಂಟು. ತೀವ್ರ ಚಂಡಮಾರುತಗಳು ಕರಾವಳಿಯನ್ನು ಅಡ್ಡ ಹಾಯುವಾಗ ಆ ಪ್ರದೇಶಗಳ ಮೇಲೆ ಅವುಗಳ ಪ್ರಭಾವ ಅತ್ಯಧಿಕ.

**ರೈತನಿಗೆ ಒದಗಿಸುವ ಹವಾ ವರದಿಗಳು :** ಜುಲೈ 1945ರಿಂದ ಭಾರತೀಯ ರೈತನಿಗೆ ಹವೆಗೆ ಸಂಬಂಧಿಸಿದ ವರದಿಗಳನ್ನು ಕ್ರಮವಾಗಿ ಒದಗಿಸಲಾಗುತ್ತಿದೆ. ಈ ಸೇವೆಯನ್ನು ಪೂರೈಸುತ್ತಿರುವುದು ಪುಣೆಯಲ್ಲಿರುವ ಭಾರತೀಯ ಹವಾವಿಜ್ಞಾನ ಇಲಾಖೆ (ಇಂಡಿಯ ಮೀಟಿಯರಾಲಾಜಿಕಲ್ ಡಿಪಾರ್ಟ್‌ಮೆಂಟ್). ಇದರ ಅಂಗವಾಗಿ ದೇಶದ ಎಲ್ಲ ಜಿಲ್ಲೆಗಳಿಗೂ (ಸುಮಾರು 300) ಅನ್ವಯವಾಗುವ ಜಿಲ್ಲಾವಾರು ಮತ್ತು ಬೆಳೆವಾರು ಬೆಳೆ–ಹವೆ ಪಂಚಾಂಗಗಳನ್ನು ಪ್ರಕಟಿಸಲಾಗಿದೆ. ಇದಲ್ಲದೇ ಆಕಾಶವಾಣಿಯ ಮೂಲಕ ಸ್ಥಳೀಯ ಮುನ್ಸೂಚನೆಗಳನ್ನೂ ನಿರ್ದೇಶನಗಳನ್ನೂ ನಿಯತಕಾಲಿಕವಾಗಿ ಬಿತ್ತರಿಸುತ್ತಲೇ ಇರುತ್ತಾರೆ. ಆಯಾ ವಾರಗಳ ವಾಸ್ತವಿಕ ಪರಿಸ್ಥಿತಿಗಳನ್ನು ಸಂಗ್ರಹಿಸಿ ಪುಣೆಯ ಹವಾವಿಜ್ಞಾನ ಇಲಾಖೆ ಪ್ರತಿ ತಿಂಗಳ ಬೆಳೆ ಭವಿಷ್ಯವನ್ನು ರೂಪಿಸುವುದು. ಅಲ್ಲದೆ ರಾಜ್ಯಗಳ ಕೃಷಿ ಇಲಾಖೆಗಳು ಸಹ ಸ್ಥಳೀಯವಾಗಿ ಸವಿವರವಾಗಿ ಈ ಕೆಲಸಗಳನ್ನು ಮಾಡಿ ರೈತರಿಗೆ ಯುಕ್ತಮಾಹಿತಿಗಳನ್ನು ಒದಗಿಸುತ್ತವೆ.

**ಕೃಷಿ ಹವಾವಿಜ್ಞಾನ :** ಪರಿಸರ ವಿಧಿಸುವ ನಿಯಂತ್ರಣಾನುಸಾರ ಸಸ್ಯದ ಬೆಳೆವಣಿಗೆ ಮೇಲೆ ಪ್ರಭಾವ ಬೀರುವ ಬೇರೆ ಬೇರೆ ಅಂಶಗಳ ಅಭ್ಯಾಸವೇ ಕೃಷಿ ಹವಾವಿಜ್ಞಾನ. ಎಲ್.ಎ. ರಾಮದಾಸ್ ಅವರ ನೇತೃತ್ವದಲ್ಲಿ ಈ ವಿಭಾಗ ಭಾರತದಲ್ಲಿ (ಪುಣೆ) ಸ್ಥಾಪಿತವಾಯಿತು (1932). ಈ ವಿಭಾಗದ ಚಟುವಟಿಕೆಗಳು ಪ್ರಧಾನವಾಗಿ ಮೂರು : 1. ಪ್ರಾಯೋಗಿಕ




ಚಿತ್ರ 9

ಸಂಶೋಧನೆ, 2. ಅಂಕಿ ಅಂಶಗಳ ಸಂಶೋಧನೆ, 3. ಹವಾವಿಜ್ಞಾನ ಹಾಗೂ ಕೃಷಿ ನಡುವೆ ಸಂಪರ್ಕ.

**1. ಪ್ರಾಯೋಗಿಕ ಸಂಶೋಧನೆ :** ವಾಸ್ತವಿಕ ಪರಿಸ್ಥಿತಿಗಳಲ್ಲಿ ಸಸ್ಯಗಳ ಮೇಲೆ ಬೇರೆ ಬೇರೆ ಕಾರಕಗಳ ಪ್ರಭಾವಗಳನ್ನು ಪ್ರಾಯೋಗಿಕವಾಗಿ ಅಳೆಯುವುದು. ಇದಕ್ಕಾಗಿ ನಾನಾತರದ ಪ್ರಯೋಗಗಳನ್ನು ರಚಿಸುವುದು ಇವೇ ಮುಂತಾದವು ಇಲ್ಲಿಯ ಪ್ರಧಾನೋದ್ದೇಶ. ಸಸ್ಯಗಳ ಮುಖ್ಯ ವಾಸ್ತವಿಕ ಪರಿಸರವೆಂದರೆ ಇವೆರಡರ ನೆಲಮಟ್ಟದ ಉಷ್ಣಸಮತೋಲ ಹಾಗೂ ತೇವಸಮತೋಲ. ಪ್ರಭಾವಗಳನ್ನು ಅರಿಯಲು ಸಂಕೀರ್ಣ ಪ್ರಯೋಗಗಳನ್ನು ರೂಪಿಸಬೇಕಾಗುತ್ತದೆ. ಭೂಮಿಗೆ ಲಭಿಸುವ ಉಷ್ಣಶಕ್ತಿಯ ಆಕರ ಸೂರ್ಯನಾದರೂ ನೆಲಮಟ್ಟದಲ್ಲಿನ ಉಷ್ಣಸಮತೋಲ ಸೂರ್ಯನ ಮೇಲೆ ಮಾತ್ರ

ಚಿತ್ರ 10 ಕೇಂದ್ರ ಕೃಷಿ ಹವಾವೀಕ್ಷಣಾಲಯ, ಪುಣೆ

ಅವಲಂಬಿಸಿರುವುದಿಲ್ಲ. ಉಷ್ಣಪ್ರತಿಫಲನ, ಗಾಳಿಯಲ್ಲಿನ ತೇವ, ಪರಿಸರದ ನೆಲ ನೀರು ಸಸ್ಯ ಮುಂತಾದವುಗಳ ವಿತರಣೆ, ವರ್ಷದ ಋತು ಅಕ್ಷಾಂಶ ಮುಂತಾದ ಹಲವಾರು ಕಾರಕಗಳನ್ನು ಆಧರಿಸಿ ಉಷ್ಣಸಮತೋಲವಿದೆ. ಮಣ್ಣಿನ ಗುಣ, ನೆಲದ ವಿನ್ಯಾಸ, ಮಳೆ ಸ್ಥಳದ ಅಕ್ಷಾಂಶ ಇವೇ ಮುಂತಾದ ಹಲವಾರು ಕಾರಕಗಳನ್ನು ನೆಲಮಟ್ಟದ ತೇವಸಮತೋಲ ಅವಲಂಬಿಸಿದೆ. ಈ ಸಮತೋಲಗಳ ಅಭ್ಯಾಸ ಸಹಜವಾಗಿ ಸೂಕ್ಷ್ಮವಾಯುಗುಣವಿಜ್ಞಾನ (ಮೈಕ್ರೊಕ್ಲೈಮಟಾಲಜಿ) ಎಂಬ ಒಂದು ವಿಶಿಷ್ಟ ಅಧ್ಯಯನಕ್ಕೆ ಹಾದಿ ಮಾಡಿಕೊಡುತ್ತದೆ. ಈ ವಿಜ್ಞಾನ ವಿಭಾಗ ಬೃಹದ್ವಾಯುಗುಣವಿಜ್ಞಾನಕ್ಕಿಂತ (ಮ್ಯಾಕ್ರೊಕ್ಲೈಮೆಟಾಲಜಿ) ಭಿನ್ನವಾದದ್ದು. ಎರಡನೆಯದು ಆಯಾ ಸ್ಥಳಕ್ಕೆ ಒಟ್ಟು ಸಂಬಂಧಿಸಿದಂತಿದ್ದರೆ ಮೊದಲನೆಯದು ಸಸ್ಯಗಳ ಒತ್ತಿನ ಪರಿಸರಕ್ಕೆ ಮಾತ್ರ ಅನ್ವಯಿಸಿದೆ. ಸೂಕ್ಷ್ಮ ವಾಯುಗುಣವಿಜ್ಞಾನ ಬೃಹದ್ವಾಯುಗುಣವಿಜ್ಞಾನದಿಂದ ಪ್ರಭಾವಿತವಾಗುವುದಾದರೂ ಅಂತಿಮವಾಗಿ ಸಸ್ಯಗಳ ಬೆಳೆವಣಿಗೆ ಮೇಲೆ ಪ್ರಭಾವ ಸೂಕ್ಷ್ಮವಾಯುಗುಣವಿಜ್ಞಾನದ್ದೇ. ಬೆಳೆಯು ಈ ಸೂಕ್ಷ್ಮವಾಯುಗುಣ ಬೃಹದ್ವಾಯುಗುಣದಿಂದ ಎಷ್ಟು ವಿಚಲಿತವಾಗಿರುವುದೆಂಬುದು ಬೆಳೆಯ ಬೆಳೆವಣಿಗೆಯ ಹಂತ, ಅದರ ಸಸ್ಯಗಳ ಸಾಂದ್ರತೆ ಹಸುರಿನ ವಿತರಣೆ, ಮಟ್ಟಸಗಾಳಿಯ ಮೇಲೆ ಸಸ್ಯಗಳು ಒಡ್ಡುವ ತಡೆ ಮತ್ತು ಸೂರ್ಯರಶ್ಮಿ–ಇವನ್ನು ಅವಲಂಬಿಸಿದೆ. ಕಬ್ಬಿನ ಪೈರನ್ನು ಪರಿಶೀಲಿಸಬಹುದು. ಅದರ ಬೆಳೆವಣಿಗೆಯ ಮುಂದುವರಿದ ಹಂತದಲ್ಲಿ ಇಡೀ ತೋಟವನ್ನು ವ್ಯಾಪಿಸುವ ಹಸುರಿನ ಹಂದರ ಕ್ರಿಯಾ ಮೇಲ್ಮೈ–ಎಂದರೆ ಉಷ್ಣಶಕ್ತಿಯನ್ನು ಹೀರಿಕೊಂಡು ಅದನ್ನು ಪುನರ್ವಿತರಣೆ ಮಾಡುವ ಮೇಲ್ಮೈ–ಆಗಿ ವರ್ತಿಸುತ್ತದೆ. ಇಲ್ಲಿ ನೆಲ ಈ ಕೆಲಸವನ್ನು ಮಾಡುವುದಲ್ಲ ಎಂಬುದನ್ನು ಗಮನಿಸಬೇಕು. ಇದರಿಂದಾಗಿ ತೋಟದ ಒಳಗಿನ ಉಷ್ಣತೆಯಲ್ಲಾಗಲಿ ಗಾಳಿಸಂಚಾರದಲ್ಲಾಗಲಿ ಹೊರಗಿನ ಪರಿಸರಕ್ಕಿಂತ ಹೆಚ್ಚಿನ ಸ್ಥಿರತೆ ಬಂದಿರುತ್ತದೆ. ಹೀಗೆ ಸೂಕ್ಷ್ಮವಾಯುಗುಣ ಕಬ್ಬಿನ ಬೆಳೆಯ ಮೇಲೆ (ಅದೇ ರೀತಿ ಬೇರೆ ಬೆಳೆಗಳ ಮೇಲೆ) ವಿಶೇಷ ಪರಿಣಾಮಕಾರಿಯಾಗಿ ವರ್ತಿಸುವುದು.

**2. ಹವೆ ಮತ್ತು ಬೆಳೆಗಳ ಸಂಬಂಧವನ್ನು ಕುರಿತ ಅಂಕಿ ಅಂಶಗಳ ಸಂಶೋಧನೆ :** ಅಂಕಿ ಅಂಶಗಳ ಕ್ರಮಬದ್ಧ ಸಂಗ್ರಹವನ್ನು ದೀರ್ಘಕಾಲ ಸುಸಂಘಟಿತ ವಿಧಾನದಲ್ಲಿ ಮಾಡುವುದು ಯಾವುದೇ ಶಾಸ್ತ್ರದ ಬೆಳೆವಣಿಗೆಗೆ ತೀರ ಆವಶ್ಯಕ. ಈ ದಿಶೆಯಲ್ಲಿ ಪುಣೆಯ ಹವಾವಿಜ್ಞಾನ ಇಲಾಖೆಯಲ್ಲಿ ಕಳೆದ ಹಲವಾರು ದಶಕಗಳಿಂದ ಕೃಷಿ ಮತ್ತು ಹವೆಗೆ ಸಂಬಂಧಿಸಿದಂಥ ಅಂಕಿ ಅಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಸಾಕಷ್ಟು ಸಂಗ್ರಹವಾದ ತರುವಾಯ ಕೃಷಿ–ಹವೆ ಸಂಬಂಧವನ್ನು ಕುರಿತ ನಿಖರ ಮುನ್ಸೂಚನೆಗಳನ್ನು ನೀಡಿ ತನ್ಮೂಲಕ ಕೃಷಿಸುಧಾರಣೆಗಳನ್ನು ಸಾಧಿಸಬಹುದು.

**3. ಹವಾವಿಜ್ಞಾನ ಮತ್ತು ಕೃಷಿ ಇವುಗಳ ನಡುವೆ ಸಂಪರ್ಕ :** ಇಂಥ ಸಂಪರ್ಕವನ್ನು ನಿಕಟವಾಗಿ ಏರ್ಪಡಿಸಿವುದರಿಂದ ಕೃಷಿಯಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬಹುದು. ಈ ದಿಶೆಯಲ್ಲಿ ಕೇಂದ್ರ ಸರ್ಕಾರವೂ ರಾಜ್ಯ ಸರ್ಕಾರಗಳೂ ತೀವ್ರ ಕುತೂಹಲಿಗಳಾಗಿ ಪ್ರಾಯೋಗಿಕ ಕಾರ್ಯಕ್ರಮಗಳನ್ನು ರೂಪಿಸಿವೆ. ದೇಶದ ಆಹಾರ ಸಮಸ್ಯೆಯ ಪರಿಹಾರದಲ್ಲಿ ಇದೊಂದು ಸರಿಯಾದ ಹೆಜ್ಜೆ. (ಎಲ್.ಎ.ಆರ್.ಡಿ.)

## ಕೃಷಿಯ ಅಸ್ಥಿರತೆ :

ಕೃಷಿ ವ್ಯವಸ್ಥೆಯ ಒಂದು ಮುಖ್ಯ ಸಮಸ್ಯೆಯೆಂದರೆ ಅದರಲ್ಲಿ ಪದೇ ಪದೇ ಸಂಭವಿಸುವ ವಿಕ್ಷೋಭೆಗಳು, ವಿಕೋಪ (ಡಿಸ್ಟರ್ಬೆನ್ಸಸ್). ಕೈಗಾರಿಕಾಕ್ಷೇತ್ರದಲ್ಲೂ ಇವು ಸಂಭವಿಸುವುದಾದರೂ ಕೃಷಿಯಲ್ಲಿ ಇವು ಬಹಳ ತೀವ್ರವಾಗಿರುತ್ತವೆ. ಕೃಷಿ ವಸ್ತುಗಳ ಉತ್ಪಾದನೆ ಮತ್ತು ವಿಕ್ರಯಗಳಲ್ಲಿ ಶ್ರಾಯಿಣವಾಗಿ, ವಾರ್ಷಿಕವಾಗಿ ಮತ್ತು ಚಕ್ರೀಯವಾಗಿ ಸಂಭವಿಸುವ ಏರಿಳಿತಗಳಿಂದಾಗಿ ಅವುಗಳ ಬೆಲೆಗಳ ಮೇಲೆ ತೀವ್ರ ಪರಿಣಾಮಗಳುಂಟಾಗುತ್ತವೆ. ಕೃಷಿ ವಸ್ತುಗಳಿಗಾಗಿ ಅನುಭೋಗಿಗಳಿಂದ ಬರುವ ಬೇಡಿಕೆಯಲ್ಲಿ ಸಾಮಾನ್ಯವಾಗಿ ಹೆಚ್ಚು ವ್ಯತ್ಯಾಸಗಳಿರುವುದಿಲ್ಲ. ಉತ್ಪಾದನೆಯಲ್ಲಿ ಏರಿಳಿತಗಳು ಸಂಭವಿಸಿದಾಗ ಚಿಲ್ಲರೆ ಮಾರಾಟ ಬೆಲೆಗಳಲ್ಲಿ ಬಲು ಹೆಚ್ಚಿನ ವ್ಯತ್ಯಾಸಗಳು ಸಂಭವಿಸುವುದಕ್ಕೆ ಸಮರ್ಪಕ ಬೇಡಿಕೆಯ ಅಪುಟಿತತೆಯೇ ಕಾರಣ. ಕೃಷಿ ವಸ್ತುಗಳಿಗೆ ಬೇಡಿಕೆಯಲ್ಲಿ ವ್ಯತ್ಯಾಸವಿಲ್ಲದಿರುವುದಷ್ಟೇ ಅಲ್ಲದೆ ಉತ್ಪಾದಕನಿಗೂ ಅನುಭೋಗಿಗೂ ನಡುವೆ ಬರುವ ಮಧ್ಯವರ್ತಿಗಳು ಕೃಷಿ ಉತ್ಪನ್ನದ ಪ್ರತಿಯೊಂದು ಘಟಕದ ಮೇಲೂ ವಸೂಲಿ ಮಾಡುವ ಹಣದಲ್ಲಿ ಕೂಡ ಸಾಮಾನ್ಯವಾಗಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಈ ಕಾರಣದಿಂದಾಗಿ, ಉತ್ಪಾದಕನಿಗೆ ದೊರಕುವ ಬೆಲೆಯ ಮೇಲೂ ಅನುಭೋಗಿ ಕೊಡಬೇಕಾಗಿ ಬರುವ ಬೆಲೆಯ ಮೇಲೂ ತೀವ್ರ ಪರಿಣಾಮಗಳುಂಟಾಗುತ್ತವೆ. ಒಂದೊಂದು ಉತ್ಪನ್ನದ ಬೆಲೆ ಮತ್ತು ವರಮಾನಗಳು ಋತುಧರ್ಮಗಳಿಗೂ ವಾರ್ಷಿಕ ಸ್ಥಿತಿಗಳಿಗೂ ಅನುಗುಣವಾಗಿ ಏರಿಳಿಯುತ್ತಿರುವುದು ಮಾತ್ರವೇ ಅಲ್ಲ; ಹಲವು ವರ್ಷಗಳಿಗೊಮ್ಮೆ ಸಂಭವಿಸುವ ಚಕ್ರೀಯ ಏರಿಳಿತಗಳಿಂದಾಗಿ ಇಡೀ ಕೃಷಿ ವ್ಯವಸ್ಥೆಯಲ್ಲಿಯ ಬೆಲೆಗಳು ಮತ್ತು ಅಭ್ಯುದಯದ ಮೇಲೆ ತೀವ್ರ ಪರಿಣಾಮಗಳುಂಟಾಗುತ್ತಿರುತ್ತವೆ.

**ಮಾರಾಟ ವೆಚ್ಚಗಳು ಮತ್ತು ಬೆಲೆಗಳು:** ಕೃಷಿ ವ್ಯವಸ್ಥೆಯ ಲಕ್ಷಣ್ಯಗಳಲ್ಲಿ ಅದರ ಮಾರಾಟ ವೆಚ್ಚವು ಪ್ರಮುಖವಾದದ್ದು. ಒಂದು ಕೃಷಿ ಉತ್ಪನ್ನದ ಚಿಲ್ಲರೆ ಮಾರಾಟ ಬೆಲೆಯಲ್ಲಿ ಯಾವ ವ್ಯತ್ಯಾಸ ಸಂಭವಿಸಿದರೂ ಅದು ರೈತನಿಗೆ ಸಲ್ಲಬೇಕಾದ ಬೆಲೆಗೆ ಇಡಿಯಾಗಿ ವರ್ಗವಾಗುತ್ತದೆ. ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಅಲ್ಪಾವಧಿಯಲ್ಲಿ ಎಷ್ಟೇ

ಬದಲಾವಣೆಗಳಾಗಲಿ, ಮಾರಾಟ ಪ್ರಕ್ರಿಯೆಗಾಗಿ ಮಾಡಬೇಕಾದ ವೆಚ್ಚ ಮಾತ್ರ ಸಾಮಾನ್ಯವಾಗಿ ಸ್ಥಿರವಾಗಿಯೇ ಇರುತ್ತದೆ. ಕೃಷಿ ವಸ್ತುವಿನ ಸರಬರಾಜು ಅಧಿಕವಾದಾಗಲೂ ಅಷ್ಟೇ. ಉತ್ಪಾದಕನ ಬೆಲೆ ಮತ್ತು ಚಿಲ್ಲರೆ ಮಾರಾಟ ಬೆಲೆ–ಇವುಗಳ ನಡುವಣ ವೆಚ್ಚ ಸ್ಥಿರವಾಗಿರುವುದರಿಂದ ಚಿಲ್ಲರೆ ಮಾರಾಟ ಬೆಲೆ ರೂ. 100 ಆಗಿದ್ದು, ಅದರಲ್ಲಿ ರೈತನಿಗೆ ಸಲ್ಲುವ ಬೆಲೆ ರೂ. 50 ಆಗಿದ್ದಲ್ಲಿ, ಚಿಲ್ಲರೆ ಮಾರಾಟ ಬೆಲೆಯಲ್ಲಿ ಶೇ. 5 ರಷ್ಟು ಕಡಿಮೆಯಾದಾಗ ಅನುಭೋಗಿ ಆ ವಸ್ತುವಿಗೆ ರೂ. 95 ಕೊಡಬೇಕಾಗುತ್ತದೆ; ಮಧ್ಯವರ್ತಿಗಳ ವೆಚ್ಚದಲ್ಲಿ (ರೂ. 50) ಏನೂ ಕಡಿತವಾಗುವುದಿಲ್ಲ. ಆದರೆ ರೈತನಿಗೆ ಸಲ್ಲುವ ಬೆಲೆಯಲ್ಲಿ ರೂ. 5 ರ ಕಡಿತವಾಗಿ. ಅವನಿಗೆ ರೂ. 45 ಸಲ್ಲುತ್ತದೆ. ಎಂದರೆ ಚಿಲ್ಲರೆ ಮಾರಾಟ ಬೆಲೆಯಲ್ಲಿ ಆದ ಶೇ. 5 ರ ಇಳಿತದಿಂದಾಗಿ ಕೃಷಿ ಉತ್ಪಾದಕನ ಬೆಲೆಯಲ್ಲಿ ಸಂಭವಿಸುವ ಇಳಿತ ಶೇ. 10. ಇದು ಚಿಲ್ಲರೆ ಇಳಿತದ ಎರಡರಷ್ಟಾಗಿರುತ್ತದೆ. ಮಾರುಕಟ್ಟೆಯಲ್ಲಿ ಸಂಭವಿಸುವ ಅಲ್ಪ ಏರಿಳಿತಗಳೂ ರೈತನಿಗೆ ಸಲ್ಲುವ ಬೆಲೆಯ ಮೇಲೆ ಹೇಗೆ ತೀವ್ರ ಪರಿಣಾಮ ಬೀರುತ್ತವೆಂಬುದನ್ನು ಈ ಉದಾಹರಣೆ ಸ್ಪಷ್ಟಪಡಿಸುತ್ತದೆ.

ಅನುಭೋಗಿಗಳ ವರಮಾನಗಳಲ್ಲಿ ಏರಿಳಿತಗಳುಂಟಾಗಿ ಕೃಷಿ ಪದಾರ್ಥಗಳ ಬೇಡಿಕೆಯಲ್ಲಿ ತಾತ್ಕಾಲಿಕವಾಗಿ ಏರಿಳಿತಗಳು ಸಂಭವಿಸಿದಾಗಲೂ ಕೃಷಿ ಉತ್ಪನ್ನಗಳ ಸರಬರಾಜಲ್ಲೇ ಏರಿಳಿತಗಳುಂಟಾಗಿ ಬೆಲೆಗಳಲ್ಲಿ ವ್ಯತ್ಯಾಸಗಳು ಸಂಭವಿಸಿದಾಗಲೂ ಮಾರುಕಟ್ಟೆಯ ವೆಚ್ಚಗಳು ಮಾತ್ರ ಬದಲಾಗದಿರುವುದಕ್ಕೆ ಹಲವಾರು ಕಾರಣಗಳಿವೆ. ಯಾವುದಾದರು ಒಂದು ಪದಾರ್ಥಕ್ಕೆ ಬೇಡಿಕೆ ತಗ್ಗಿ ಅದರ ಚಿಲ್ಲರೆ ಮಾರಾಟ ಬೆಲೆಗಳು ಇಳಿದ ಪಕ್ಷದಲ್ಲಿ ಅದಕ್ಕನುಗುಣವಾಗಿ ಸರಬರಾಜನ್ನು ಇಳಿಸಿ ಬೆಲೆಗಳ ಕುಸಿತವನ್ನು ತಪ್ಪಿಸುವ ಶಕ್ತಿ ರೈತನಿಗೆ ಇರುವುದಿಲ್ಲ. ಕಡಿಮೆ ಉತ್ಪನ್ನವನ್ನು ಮಾರಾಟ ಮಾಡುವ ಬದಲು, ಎಷ್ಟೇ ಕಡಿಮೆ ಬೆಲೆಯನ್ನಾದರೂ ಪಡೆದು ಎಲ್ಲ ಉತ್ಪನ್ನವನ್ನೂ ಮಾರಾಟ ಮಾಡಲು ರೈತ ಸಿದ್ಧನಾಗಿರುತ್ತಾನೆ. ಆದ್ದರಿಂದ ಬೆಲೆಗಳಲ್ಲಿ ಏನೇ ಏರಿಳಿತಗಳಾದರೂ ಮಧ್ಯವರ್ತಿಗಳ ಸೇವೆ ಮಾತ್ರ ಸ್ಥಿರವಾಗಿಯೇ ಇರುತ್ತದೆ. ತಮ್ಮ ಸೇವೆಗಳಿಗೆ ಬೇಡಿಕೆ ವ್ಯತ್ಯಾಸಗೊಳ್ಳುವುದಿಲ್ಲವೆಂಬ ಭರವಸೆಯಿರುವುದರಿಂದ ಅವರು ಕೃಷಿ ವಸ್ತುಗಳ ಬೆಲೆಗಳಿಗೆ ಅನುಗುಣವಾಗಿ ತಮ್ಮ ವರಮಾನಗಳನ್ನು ಕಡಿದುಕೊಳ್ಳುವ ಪ್ರವೃತ್ತಿಯನ್ನೇ ತೋರುವುದಿಲ್ಲ.

ಕೃಷಿ ವಸ್ತುವಿನ ಬೆಲೆ ಇಳಿದದ್ದರ ಫಲವಾಗಿ ರೈತರು ಕಡಿಮೆ ಮಾರಾಟ ಮಾಡಲು ನಿರ್ಧರಿಸಿದಾಗ ಆ ವಸ್ತುವಿನ ಒಟ್ಟು ವಹಿವಾಟಿನ ಪರಿಮಾಣದಲ್ಲಿ ಇಳಿತಾಯವಾಗಬಹುದು. ಆದರೆ ಮಾರಾಟವಾದ ಉತ್ಪನ್ನದ ಪ್ರತಿಯೊಂದು ಘಟಕದ ಮೇಲೂ ಅವರು ವಿಧಿಸುವ ಶುಲ್ಕಗಳು ಮಾತ್ರ ಇಳಿಯುವುದಿಲ್ಲ. ಮಧ್ಯವರ್ತಿಗಳು ಮಾಡಬೇಕಾದ ಅನೇಕ ವೆಚ್ಚಗಳು ಸ್ಥಿರವಾಗಿರುವುದೇ ಇದಕ್ಕೆ ಕಾರಣ. ಚಿಲ್ಲರೆ ಮಾರಾಟ ಬೆಲೆಯಲ್ಲಿ ಏನೇ ವ್ಯತ್ಯಾಸವಾದರೂ ಅವರು ಅದನ್ನು ಕೃಷಿ ವಸ್ತುವಿನ ಉತ್ಪಾದಕನಿಗೆ ವರ್ಗಾಯಿಸುತ್ತಾರೆ. ಕೃಷಿ ಉತ್ಪನ್ನವನ್ನು ರೈತನಿಂದ ಕೊಂಡ ಬೆಲೆಯ ಮೇಲೆ ತಮ್ಮೆಲ್ಲ ವೆಚ್ಚಗಳನ್ನು ಹೇರಿ ಅದನ್ನು ಮಾರಾಟ ಮಾಡುತ್ತಾರೆ.

ಉತ್ಪಾದಕನಿಗೂ ಅನುಭೋಗಿಗೂ ನಡುವೆ ಬರುವ ಅನೇಕ ಮಾರುಕಟ್ಟೆ ಸೇವೆಗಳು ಸಾಮಾನ್ಯವಾಗಿ ಏಕಸ್ವಾಮ್ಯ ಸ್ವರೂಪದವು. ರೈಲ್ವೆ ಒಂದು ಉದಾಹರಣೆ. ಉತ್ಪನ್ನದ ಪ್ರತಿ ಘಟಕಕ್ಕೆ ಇಷ್ಟು–ಎಂಬ ಆಧಾರದ ಮೇಲೆ ರೈಲ್ವೆ ದರಗಳು ದೀರ್ಘಕಾಲದಲ್ಲಿ ನಿಶ್ಚಿತವಾಗಿರುತ್ತವೆ. ಬೆಲೆಗಳ ಏರಿಳಿತಗಳಿಗೆ ತಕ್ಕಂತೆ ಈ ದರಗಳಲ್ಲಿ ವ್ಯತ್ಯಾಸವಾಗುವುದಿಲ್ಲ. ಅವಸಾನ (ಡಿಪ್ರೆಷನ್) ಕಾಲದಲ್ಲಿ ಕೂಡ ಈ ದರಗಳನ್ನು ಉಳಿಸಿಕೊಳ್ಳಲು ಇಂಥ ಏಕಸ್ವಾಮ್ಯಗಳು ಪ್ರಯತ್ನಿಸುತ್ತವೆ. ಅಸಂಘಟಿತರಾದ ರೈತರು ಇವನ್ನು ಎದುರಿಸಲಾರರು. ಅತಿಯಾದ ಲಾಭವಿಟ್ಟು ಮಾರಾಟ ಮಾಡುವ ಪ್ರವೃತ್ತಿಯನ್ನು ಸಾರ್ವಜನಿಕರು ಪ್ರತಿಭಟಿಸುವುದುಂಟು. ಆದರೆ ಮಧ್ಯವರ್ತಿ ಏಕಸ್ವಾಮ್ಯಗಳು ತಮ್ಮ ವರಮಾನವನ್ನು ಕಡಿದುಕೊಳ್ಳಲು ಇಷ್ಟಪಡದಿದ್ದಾಗ ಅದು ಅನೇಕರ ಗಮನವನ್ನೇ ಸೆಳೆಯುವುದಿಲ್ಲ. ಆರ್ಥಿಕ ಉತ್ಕರ್ಷಕಾಲಕ್ಕಿಂತ ಅವಸಾನ ಕಾಲದಲ್ಲೇ ಮಧ್ಯವರ್ತಿಗಳು ಹೆಚ್ಚು ಒತ್ತಡ ಹೇರುವ ಸ್ಥಿತಿಯಲ್ಲಿರುತ್ತಾರೆ.

ಕೃಷಿ ಉತ್ಪನ್ನದ ಸರಬರಾಯಿ ಅಧಿಕವಾದ ಫಲವಾಗಿ ಬೆಲೆಗಳು ಇಳಿದಾಗಲೂ ಮಧ್ಯವರ್ತಿಗಳ ವೆಚ್ಚ ಒಂದೇ ಆಗಿರುವುದು ಮಾತ್ರವೇ ಅಲ್ಲ; ಸರಬರಾಜು ಅಧಿಕವಾದಾಗ ಮಧ್ಯವರ್ತಿಗಳ ಸೇವೆಗಳಿಗೆ ಬೇಡಿಕೆಯೂ ಅಧಿಕವಾಗುತ್ತದೆ. ಹೆಚ್ಚು ಗಾತ್ರದಲ್ಲಿ ಸರಕಿನ ವಹಿವಾಟು ನಡೆದಾಗಲೂ ಅವರು ವಿಧಿಸುವ ದರಗಳು ಮಾತ್ರ ಅಲ್ಪಾವಧಿಯಲ್ಲಿ ಸ್ಥಿರವಾಗಿಯೆ ಉಳಿಯುತ್ತವೆ. ಸರಬರಾಯಿ ಹೆಚ್ಚಿದಾಗ ಅವಕ್ಕೆ ಹೆಚ್ಚು ಬೆಲೆ ಬರುವವರೆಗೂ ಸರಕನ್ನು ತಡೆ ಹಿಡಿಯುವುದು ಅಗತ್ಯವಾಗುವುದರಿಂದ ಮಧ್ಯವರ್ತಿ ಅದನ್ನು ದಾಸ್ತಾನು ಮಾಡಲು ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಒಳ್ಳೆಯ ಫಸಲು ಬಂದ ವರ್ಷಗಳಲ್ಲಿ ದಾಸ್ತಾನು ವೆಚ್ಚ ಏರುವ ಪ್ರವೃತ್ತಿ ಇರುತ್ತದೆ. ಈ ಕಾರಣಗಳಿಂದಾಗಿ ಕೃಷಿ ವಸ್ತುಗಳ ಬೇಡಿಕೆಯಲ್ಲಾಗಲಿ ಉತ್ಪಾದನೆಯಲ್ಲಾಗಲಿ ಏನೇ ಬದಲಾವಣೆಗಳಾದರೂ ಅದರ ಬಿಸಿ ತಟ್ಟುವುದು ವಿಶೇಷವಾಗಿ ರೈತರಿಗೇ ಹೊರತು, ಮಧ್ಯವರ್ತಿಗಳಿಗೆ ಏನೂ ಬಾಧಕವಿರುವುದಿಲ್ಲ.

**ಋತುಮಾನ ಏರಿಳಿತಗಳು:** ಕೃಷಿ ವಸ್ತುವಿನ ಇನ್ನೊಂದು ವೈಲಕ್ಷಣ್ಯವೆಂದರೆ ಋತುವಿಗೆ ಅನುಗುಣವಾಗಿ ಸಂಭವಿಸುವ ವ್ಯತ್ಯಾಸ. ಅನೇಕ ಕೃಷಿ ವಸ್ತುಗಳ ಬೇಡಿಕೆಯಲ್ಲಿ ಆಗುವ ವ್ಯತ್ಯಾಸಗಳಿಗಿಂತ ಸರಬರಾಯಿಯಲ್ಲಿ ಆಗುವ ವ್ಯತ್ಯಾಸಗಳೇ ಅಧಿಕ. ಅಕ್ಕಿ, ಗೋದಿ, ಮಾಂಸ, ಮೊಟ್ಟೆ ಮುಂತಾದ ಆಹಾರ ಪದಾರ್ಥಗಳಿಗೆ ವರ್ಷವೆಲ್ಲ ಒಂದೇ ಸಮನಾಗಿ ಬೇಡಿಕೆ ಇರುತ್ತದೆ. ಮತ್ತೆ ಕೆಲವು ವಸ್ತುಗಳಿಗೆ ಕೆಲಕೆಲವು ಋತುಗಳಲ್ಲಿ ಅಥವಾ ವೇಳೆಗಳಲ್ಲಿ ಬೇಡಿಕೆ ಅಧಿಕವಾಗುತ್ತದೆ. ಕೆಲಕೆಲವು ಹಬ್ಬಗಳಲ್ಲಿ ಕೆಲಕೆಲವು ತರಕಾರಿಗಳಿಗೆ ಬೇಡಿಕೆ ಏರುವುದು ಒಂದು ಉದಾಹರಣೆ. ಆದರೂ ಒಟ್ಟಿನಲ್ಲಿ ಕೈಗಾರಿಕಾ ಸರಕುಗಳಿಗಿಂತ ಕೃಷಿ ಉತ್ಪನ್ನಗಳಿಗೆ ವರ್ಷವೆಲ್ಲ ಏಕರೀತಿಯಾದ ಬೇಡಿಕೆ ಇರುತ್ತದೆನ್ನಬಹುದು. ಆದರೆ ಅವುಗಳ ಸರಬರಾಯಿಯಲ್ಲಿ ಮಾತ್ರ ಋತುವಿಗೆ ಅನುಗುಣವಾಗಿ ಬಲು ತೀವ್ರ ವ್ಯತ್ಯಾಸಗಳಾಗುತ್ತವೆ. ದಾಸ್ತಾನು ಮಾಡಲು ಸಾಧ್ಯವೇ ಇಲ್ಲದ ಕೃಷಿ ಉತ್ಪನ್ನಗಳ ಬೆಲೆಗಳು ಋತುವಿನಿಂದ ಋತುವಿಗೆ ತೀವ್ರ ಬದಲಾವಣೆಗೆ ಒಳಗಾಗುತ್ತವೆ. ಉತ್ಪಾದನೆಯ ವೆಚ್ಚ ಮತ್ತು ಸಾರಿಗೆ ವೆಚ್ಚ–ಇವೇ ಅವುಗಳ ಮುಖ್ಯ ನಿರ್ಧಾರಕಗಳು. ಉದಾಹರಣೆಗೆ ಮಾವಿನ ಹಣ್ಣು; ಮೊದಮೊದಲು ಫಲಗಳು ಮಾರುಕಟ್ಟೆಗೆ ಬಂದಾಗ ಅವಕ್ಕೆ ದೊರಕುವ ಬೆಲೆ ಅಧಿಕ. ಕ್ರಮಕ್ರಮವಾಗಿ, ಹೆಚ್ಚು ಹಣ್ಣು ಮಾರುಕಟ್ಟೆಗೆ ಬಂದಂತೆ ಬೆಲೆ ಇಳಿಯುತ್ತದೆ. ಸರಬರಾಯಿಯ ಶಿಖರ ಮುಟ್ಟಿದ ಮೇಲೆ ಮತ್ತೆ ಬೆಲೆ ಕ್ರಮವಾಗಿ ಏರುತ್ತ ಸಾಗುತ್ತದೆ. ಅಕಾಲದಲ್ಲಿ ಮಾವಿನಹಣ್ಣು ಬೇಕಾದರೆ ಆಗ ಅದನ್ನು ಬೆಳೆಯಲು ತಗಲುವ ಅಧಿಕ ವೆಚ್ಚವನ್ನೂ ಕೊಡಲು ಅನುಭೋಗಿ ಸಿದ್ಧವಾಗಿರಬೇಕು. ದಾಸ್ತಾನು ಮಾಡಿಡಲಾಗದ ಇನ್ನೊಂದು ವಸ್ತುವೆಂದರೆ ಹಾಲು. ಆದರೆ ಋತುಮಾನುಗುಣವಾಗಿ ಇದರ ಬೆಲೆಯಲ್ಲಿ ಏರಿಳಿತಗಳಿದ್ದಾಗಲೂ ಇದು ಎಲ್ಲ ಋತುಗಳಲ್ಲೂ ಲಭ್ಯವಾಗುತ್ತದೆ. ಅದರ ಉತ್ಪನ್ನ ಹಣ್ಣು ಅಥವಾ ತರಕಾರಿಯಷ್ಟು ಸೀಮಿತವಲ್ಲ.

ಹಣ್ಣು, ಹಾಲು ಮುಂತಾದ ಕೆಡುವ (ಪೆರಿಷಬಲ್) ಪದಾರ್ಥಗಳನ್ನು ದಾಸ್ತಾನು ಮಾಡಿಡುವುದು ಸಾಧ್ಯವಿಲ್ಲವಾದರೂ ಅವನ್ನು ಸ್ಥಾಯೀ ಸ್ವರೂಪಕ್ಕೆ ಪರಿವರ್ತಿಸುವುದು ಸಾಧ್ಯ (ಉದಾ: ಹಾಲಿನ ಪುಡಿ). ಆದ್ದರಿಂದ ಯಾವುದು ದಾಸ್ತಾನಿಸಬಹುದಾದ ಪದಾರ್ಥ, ಯಾವುದು ದಾಸ್ತಾನಿಸಲಾಗದ್ದು–ಎಂದು ಪ್ರತ್ಯೇಕಿಸುವುದು ಬಹು ಕಷ್ಟ. ದಾಸ್ತಾನು ಮಾಡಬಹುದಾದ ಪದಾರ್ಥದ ಬೆಲೆಯ ಸ್ಥಿತಿ ಹೆಚ್ಚು ಸಂಕೀರ್ಣವಾಗಿರುತ್ತದೆ. ಅಂತಹ ಪದಾರ್ಥದ ಉತ್ಪಾದಕರು ಅನುಸರಿಸಬಹುದಾದ ಮಾರ್ಗಗಳು ಎರಡು. ಉತ್ಪಾದನೆಯ ವೆಚ್ಚ ಅತ್ಯಂತ ಕಡಿಮೆಯಿರುವ ಕಾಲದಲ್ಲಿ ಅವರು ಅದನ್ನು ಉತ್ಪಾದಿಸಿ ಅದರಲ್ಲಿ ಒಂದು ಭಾಗವನ್ನು ದಾಸ್ತಾನು ಮಾಡಿ ವರ್ಷವೆಲ್ಲ ಮಾರಾಟ ಮಾಡಬಹುದು; ಅಥವಾ, ಸಾಧ್ಯವಾದರೆ, ಅದನ್ನು ವರ್ಷವೆಲ್ಲ ಉತ್ಪಾದನೆ ಮಾಡಬಹುದು. ಅವರು ಯಾವ ಮಾರ್ಗ ಅನುಸರಿಸುವರೆಂಬುದು ದಾಸ್ತಾನಿನ ವೆಚ್ಚಕ್ಕೂ ಪದಾರ್ಥದ ಬೆಲೆಗೂ ಇರುವ ಸಂಬಂಧ ಮತ್ತು ಉತ್ಪಾದನೆಯ ವೆಚ್ಚಕ್ಕೂ ಪದಾರ್ಥದ ಬೆಲೆಗೂ ಇರುವ ಸಂಬಂಧ–ಇವನ್ನೇ ಅವಲಂಬಿಸುತ್ತದೆ. ದಾಸ್ತಾನಿನ ವೆಚ್ಚದಲ್ಲಿ ಸೇರಿರುವ ಅಂಶಗಳು ಆರು: 1. ಭವಿಷ್ಯದಲ್ಲಿ ವಸ್ತುವನ್ನು ಮಾರಾಟ ಮಾಡುವ ವರೆಗೂ ತಡೆದು ಕೊಳ್ಳುವ ಶಕ್ತಿ ಬಂಡವಾಳ. 2. ದಾಸ್ತಾನು ಮಾಡಲು ಅಗತ್ಯವಾದ ಕಟ್ಟಡ, ಉಪಕರಣ ಇತ್ಯಾದಿ. 3. ದಾಸ್ತಾನಾದ ಪದಾರ್ಥದಲ್ಲಿ ಒಂದು ಭಾಗ ಕೆಡುವುದರಿಂದ ಸಂಭವಿಸಬಹುದಾದ ನಷ್ಟ. 4. ದಾಸ್ತಾನು ಮಾಡಿಡಲು ಸಾಧ್ಯವಾಗುವಂತೆ ಸರಕನ್ನು ಪರಿಷ್ಕರಿಸಲು ಮಾಡಬೇಕಾದ ವೆಚ್ಚ (ಉದಾ : ಹಾಲಿನ ಪುಡಿ, ಮಾವಿನ ಹಣ್ಣಿನ ಮೊರಬ್ಬ). 5. ದಾಸ್ತಾನು ಮಾಡಿದ ಪದಾರ್ಥದ ಬೆಲೆ ಇಳಿದು ಸಂಭವಿಸಬಹುದಾದ ನಷ್ಟ. 6. ದಾಸ್ತಾನಾದ ಹಳೆಯ ಪದಾರ್ಥದ ಬದಲು ಹೊಚ್ಚ ಹೊಸ ಪದಾರ್ಥವನ್ನು ಕೊಳ್ಳಲು ಅನುಭೋಗಿ ಕೊಡಲು ಇಷ್ಟಪಡುವ ಬೆಲೆ. ಉತ್ಪಾದನೆಯ ಕಾಲದಲ್ಲಿ ಪದಾರ್ಥಕ್ಕೆ ದೊರಕುವ ಬೆಲೆಗೂ ಭವಿಷ್ಯದಲ್ಲಿ ಅದನ್ನು ಮಾರಾಟ ಮಾಡುವಾಗ ದೊರಕುವ ಬೆಲೆಗೂ ಇರುವ ಅಂತರಕ್ಕಿಂತ ದಾಸ್ತಾನಿನ ವೆಚ್ಚ ಮತ್ತು ನಷ್ಟ ಸಂಭವದ ಮೌಲ್ಯ ಅಧಿಕವಾಗಿಲ್ಲದಾಗ ಮಾತ್ರವೇ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಬಹುದು. ಇವು ಪದಾರ್ಥದಿಂದ ಪದಾರ್ಥಕ್ಕೆ ಹೆಚ್ಚು ಕಡಿಮೆಯಾಗುತ್ತಿರುತ್ತವೆ. ಪದಾರ್ಥದ ನಾಶೀಗುಣ, ಅದರ ಗಾತ್ರ–ಮುಂತಾದವೇ ಇದರ ನಿರ್ಣಾಯಕಗಳು, ಋತುವಿನಿಂದ ಋತುವಿಗೆ ಪದಾರ್ಥದ ಬೆಲೆಯಲ್ಲಿ ಆಗುವ ವ್ಯತ್ಯಾಸಗಳು, ವರ್ಷದ ಬೇರೆಬೇರೆ ಋತುಗಳಲ್ಲಿ ಅದನ್ನು ಉತ್ಪಾದಿಸಲು ತಗಲುವ ವೆಚ್ಚ–ಇವೂ ಬಹು ಮುಖ್ಯವಾದ ಅಂಶಗಳು. ಅನೇಕ ಅಗತ್ಯ ವಸ್ತುಗಳನ್ನು ಅವುಗಳ ಉತ್ಪಾದನ ವೆಚ್ಚ ಬಲು ಕಡಿಮೆಯಿರುವ ಕಾಲದಲ್ಲಿ ಉತ್ಪಾದಿಸಿ, ದಾಸ್ತಾನಿನಲ್ಲಿಟ್ಟಿದ್ದು ವರ್ಷಾದ್ಯಂತ ಬರುವ ಬೇಡಿಕೆಗೆ ಅನುಗುಣವಾಗಿ ಮಾರಾಟ ಮಾಡುವ ವಾಡಿಕೆಯಿದೆ. ಸುಗ್ಗಿಯ ಕಾಲದಲ್ಲಿ ಇಂಥ ಪದಾರ್ಥದ ಬೆಲೆ ಅತ್ಯಂತ ಕಡಿಮೆಯಿದ್ದು ಅನಂತರ ಮುಂದಿನ ಸುಗ್ಗಿಯ ವರೆಗೆ ಏರುತ್ತ ಸಾಗುತ್ತದೆ. ದಿನ ಕಳೆದಂತೆಲ್ಲ ದಾಸ್ತಾನಿನ ವೆಚ್ಚವೂ ಏರುತ್ತ ಸಾಗುವುದರಿಂದ, ಸರಕಿನ ಬೆಲೆಯ ಏರಿಕೆಯಲ್ಲಿ ಈ ಅಂಶವೂ ಸೇರಿರುವುದು ಆವಶ್ಯಕ.

ದಾಸ್ತಾನಿನ ವೆಚ್ಚಕ್ಕಿಂತ ಸಾರಿಗೆಯ ವೆಚ್ಚ ಕಡಿಮೆಯಾಗಿದ್ದು, ವಿಶ್ವದ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಅದರ ಉತ್ಪಾದನೆ ಸಾಧ್ಯವಿದ್ದರೆ ಆಗ ಅನುಭೋಗಿ ಇರುವೆಡೆಗೆ ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ಕಡೆಗಳಿಂದ ಸರಕಿನ

ಸರಬರಾಯಿ ಆಗುವುದು ಸಾಧ್ಯ. ಗೋಧಿ ಒಂದು ಉದಾಹರಣೆ. ಉತ್ತರಾರ್ಧಗೋಳದ ಸಮಶೀತೋಷ್ಣ ವಲಯದಲ್ಲಿ ಜುಲೈ–ಆಗಸ್ಟ್‌ನಲ್ಲಿ ಸುಗ್ಗಿಯಾದರೆ, ದಕ್ಷಿಣಾರ್ಧಗೋಳದಲ್ಲಿ ಡಿಸೆಂಬರಿನಲ್ಲಿ ಸುಗ್ಗಿ, ಈ ಕಾರಣದಿಂದ ವರ್ಷದಲ್ಲಿ ಎರಡು ಬಾರಿ ಇದರ ಬೆಲೆ ಕಡಿಮೆಯಿರುತ್ತದೆ.

ಹೀಗೆ ಸಹಜವಾಗಿ ಸಂಭವಿಸುವ ಬೆಲೆಗಳ ಏರಿಳಿತಗಳನ್ನು ಮೊದಲೇ ನಿರೀಕ್ಷಿಸಲು ಸಾಧ್ಯವಾಗುವುದರಿಂದ ಅದನ್ನು ಎದುರಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವುದು ಸಾಧ್ಯ. ಆದರೆ ಸುಗ್ಗಿಯಲ್ಲಿ ಸಹಜವಾಗಿ ಇಳಿಯಬೇಕಾದ್ದಕ್ಕಿಂತ ಹೆಚ್ಚಾಗಿ ಬೆಲೆ ಇಳಿಯುವುದೂ ಅನಂತರಕಾಲದಲ್ಲಿ ಸಹಜವಾಗಿ ಏರಬೇಕಾದ್ದಕ್ಕಿಂತ ಹೆಚ್ಚಾಗಿ ಏರುವುದೂ ಕೃಷಿಯಲ್ಲಿ ಕಂಡುಬಂದಿರುವ ಒಂದು ಪ್ರವೃತ್ತಿ. ಇವೆರಡು ಬೆಲೆಗಳ ನಡುವಣ ಅಂತರ ದಾಸ್ತಾನಿನ ವೆಚ್ಚಕ್ಕಿಂತ ಬಹಳ ಅಧಿಕವಾಗಿರುವುದುಂಟು. ತನ್ನ ಫಸಲನ್ನು ಮಾರಾಟಮಾಡದೆ ಸ್ವಲ್ಪ ತಡೆಹಿಡಿಯಲು ಅಗತ್ಯವಾದ ಧಾರಣಶಕ್ತಿ ರೈತನಲ್ಲಿ ಇಲ್ಲದ್ದರಿಂದ ಅವನ ಪರಿಸ್ಥಿತಿಯ ದುರುಪಯೋಗವನ್ನು ಮಧ್ಯವರ್ತಿ ಪಡೆದುಕೊಳ್ಳುತ್ತಾನೆಂಬುದು ಇದಕ್ಕೆ ಒಂದು ಕಾರಣ. ಅಲ್ಲದೆ ಫಸಲನ್ನು ಬೆಳೆದ ಸ್ಥಳದಲ್ಲೇ ದಾಸ್ತಾನು ಮಾಡಲು ಹೆಚ್ಚು ಖರ್ಚಾಗುವುದಿಲ್ಲ. ಆದರೆ ವರ್ತಕರ ದಾಸ್ತಾನು ವೆಚ್ಚ ಅಧಿಕವಾಗಿರುತ್ತವೆ. ಆದ್ದರಿಂದ ಎಷ್ಟು ಬೇಗ ಫಸಲಿನ ಎಷ್ಟು ಅಧಿಕ ಪ್ರಮಾಣ ರೈತನ ಕೈಯಿಂದ ವರ್ತಕನ ಕೈಗೆ ವರ್ಗವಾಗುತ್ತದೋ, ಅಷ್ಟರ ಮಟ್ಟಿಗೆ ಅದರ ದಾಸ್ತಾನು ವೆಚ್ಚ ಹೆಚ್ಚುತ್ತದೆಯೆಂದು ಹೇಳಲಾಗಿದೆ. ಅನೇಕ ವೇಳೆ ಹೀಗಾಗಿರುವುದಕ್ಕೆ ಅಂಕಿ ಅಂಶಗಳ ಆಧಾರವುಂಟು. ಆದರೆ ಯಾವಾಗಲೂ ಹೀಗಾಗುವುದೆಂಬುದಕ್ಕೆ ಸಾಕಷ್ಟು ಪುರಾವೆಯಿಲ್ಲ. ನ್ಯಾಯವಾದ್ದಕ್ಕಿಂತ ಅಧಿಕವಾಗಿ ಕೃಷಿ ವಸ್ತುಗಳ ಬೆಲೆಗಳಲ್ಲಿ ಏರಿಳಿತಗಳು ಸಂಭವಿಸುವುದಕ್ಕೆ ಇನ್ನೊಂದು ಮುಖ್ಯ ಕಾರಣವೆಂದರೆ ಮಾರುಕಟ್ಟೆಯ ಸ್ಥಿತಿಗತಿಗಳ ಬಗ್ಗೆ ಜನರಲ್ಲಿರುವ ಅಜ್ಞಾನ. ಅವರೆಕಾಯಿ, ಆಲೂಗೆಡ್ಡೆ, ಮಾವಿನಹಣ್ಣು ಮುಂತಾದವುಗಳ ಫಸಲುಗಳು ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುತ್ತಿರುತ್ತವೆ. ಬೆಲೆಗಳಲ್ಲೂ ತೀವ್ರ ಏರಿಳಿತಗಳಾಗುತ್ತವೆ. ಕೃಷಿ ಉತ್ಪನ್ನಗಳ ಮಾರಾಟ ಕಾರ್ಯದಲ್ಲಿ ಸರ್ಕಾರದ ಮಧ್ಯಪ್ರವೇಶ ಆವಶ್ಯವೆನಿಸಿರುವುದಕ್ಕೆ ಈ ಪ್ರವೃತ್ತಿಯೂ ಒಂದು ಕಾರಣ.

**ವಾರ್ಷಿಕ ಏರಿಳಿತಗಳು :** ಹಿಂದೆ ಹೇಳಿದಂತೆ ಕೃಷಿ ಉತ್ಪನ್ನಗಳ ಪರಿಮಾಣ ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುತ್ತಿರುತ್ತದೆ. ಕೆಲವು ವರ್ಷಗಳಲ್ಲಿ ಉತ್ತಮ ಫಸಲು, ಮತ್ತೆ ಕೆಲವು ವರ್ಷಗಳಲ್ಲಿ ಕಡಿಮೆ–ಇದು ಸಾಮಾನ್ಯವಾಗಿ ಕಂಡು ಬರುವ ಅನುಭವ. ಕೃಷಿ ಬಹುತೇಕ ಹವೆಯನ್ನೇ ಅವಲಂಬಿಸಿರುತ್ತದೆ. ಆದರೆ ಈ ವ್ಯತ್ಯಾಸಗಳು ಎಲ್ಲ ವಸ್ತುಗಳಲ್ಲೂ ಒಂದೇ ಸಮನಾಗಿರುವುದಿಲ್ಲ. ಪ್ರಾಣಿಜನ್ಯ ವಸ್ತುಗಳಲ್ಲಿ ಇದು ಬಲು ಕಡಿಮೆ. ವೃಕ್ಷೋತ್ಪನ್ನಗಳಲ್ಲಿ (ಉದಾ: ಮಾವಿನ ಹಣ್ಣು) ಇದು ಅತ್ಯಧಿಕ. ಫಸಲಿನ ಏರಿಳಿತಗಳನ್ನು ಮುಂದಾಗಿ ನಿರೀಕ್ಷಿಸುವುದು ಸಾಧ್ಯವಿಲ್ಲವಾದ್ದರಿಂದ ಅವನ್ನು ಸರಿದೂಗಿಸಲು ಬೇಸಾಯದ ನೆಲವನ್ನು ಅಲ್ಪಾವಧಿಯಲ್ಲಿ ಹೆಚ್ಚು ಕಡಿಮೆ ಮಾಡುವುದು ಸಾಧ್ಯವಾಗುವುದಿಲ್ಲ. ಒಂದು ಪದಾರ್ಥವನ್ನು ಉತ್ಪಾದಿಸುವ ಪ್ರದೇಶ ವಿಸ್ತಾರವಾದಷ್ಟೂ ಅದರ ಸರಬರಾಯಿಯಲ್ಲಿಯ ವ್ಯತ್ಯಾಸಗಳು ಕಡಿಮೆಯಾಗಿರುತ್ತವೆ. ಒಂದು ಸ್ಥಳದಲ್ಲಿ ಒಂದು ಪದಾರ್ಥದ ಉತ್ಪಾದನೆ ತಗ್ಗಿದರೆ ಇನ್ನೊಂದು ಸ್ಥಳದಲ್ಲಿ ಸಮೃದ್ಧ ಫಸಲು ದೊರೆಕಬಹುದು. ಗೋಧಿಯಂಥ ಪದಾರ್ಥವನ್ನು ಬೆಳೆಯುವ ಪ್ರದೇಶಗಳು ವಿಶ್ವದ ಹಲವೆಡೆ ಇವೆ. ಅದರ ಮಾರುಕಟ್ಟೆಯೂ ವಿಶ್ವವ್ಯಾಪಿ. ಆದ್ದರಿಂದ ಅದರ ಬೆಲೆಯ ಏರಿಳಿತ ಅತಿ ತೀವ್ರವಲ್ಲ. ಆಲೂಗೆಡ್ಡೆ, ಮಾವಿನಹಣ್ಣು–ಇಂಥವುಗಳ ಬೆಲೆ ಹಾಗಲ್ಲ. ಆದರೂ ಒಟ್ಟಿನಲ್ಲಿ ಇಷ್ಟು ಹೇಳಬಹುದು: ಒಂದು ಉತ್ಪನ್ನದ ಮಾರುಕಟ್ಟೆಯ ವ್ಯಾಪ್ತಿಗೆ ಒಳಪಟ್ಟ ಎಲ್ಲ ಕ್ಷೇತ್ರಗಳಲ್ಲಿಯ ಒಟ್ಟು ಸರಬರಾಯಿಗೆ ಅನುಗುಣವಾಗಿ ಅದರ ಬೆಲೆ ಏರಿಳಿಯುತ್ತದೆ. ಆಯಾ ಸ್ಥಳಗಳಲ್ಲಿಯ ಉತ್ಪನ್ನದ ಮೊತ್ತಗಳಿಗನುಗುಣವಾಗಿ ಆಯಾ ಸ್ಥಳಗಳಲ್ಲಿ ಬೆಲೆಗಳು ಸ್ವಲ್ಪ ಹೆಚ್ಚು ತೀವ್ರವಾಗಿ ವ್ಯತ್ಯಾಸವಾಗುತ್ತವೆ. ಸಾಗಿಗೆ ವೆಚ್ಚ, ಅಪರಿಪೂರ್ಣ ಸ್ಪರ್ಧೆ– ಇವು ಸ್ಥಳೀಯ ಏರುಪೇರುಗಳಿಗೆ ಕಾರಣವಾದ ಅಂಶಗಳು.

ಉತ್ಪನ್ನದ ವಾರ್ಷಿಕ ವ್ಯತ್ಯಾಸಗಳಿಂದ ಬೆಲೆಗಳು ಯಾವ ಪ್ರಮಾಣದಲ್ಲಿ ವ್ಯತ್ಯಾಸಗೊಳ್ಳುವುವೆಂಬುದನ್ನು ಅರಿಯಲು ಸಹಾಯಕವಾಗುವ ಇನ್ನೊಂದು ಅಂಶವೆಂದರೆ ಬೇಡಿಕೆಯ ಸ್ವರೂಪ. ಆಹಾರಧಾನ್ಯಗಳ ಬೇಡಿಕೆ ಸಾಮಾನ್ಯವಾಗಿ ವ್ಯತ್ಯಾಸವಾಗುವುದಿಲ್ಲ. ಅವು ಆವಶ್ಯಕ ವಸ್ತುಗಳಾದ್ದರಿಂದ ಬೆಲೆಯೆಷ್ಟೇ ಇದ್ದರೂ ಸಾಮಾನ್ಯವಾಗಿ ಒಂದೇ ಸಮನಾದ ಬೇಡಿಕೆ ಇರುತ್ತದೆ. ಆದ್ದರಿಂದ ಅವುಗಳ ಸರಬರಾಯಿಯಲ್ಲಿ ಹೆಚ್ಚುಕಡಿಮೆಯಾದರೆ ಬೆಲೆಗಳು ಹೆಚ್ಚು ತೀವ್ರವಾಗಿ ವ್ಯತ್ಯಾಸವಾಗುತ್ತವೆ.

ಉತ್ಪನ್ನವನ್ನು ಹೆಚ್ಚು ಕಾಲ ದಾಸ್ತಾನು ಮಾಡಿಡುವುದು ಸಾಧ್ಯವಿದ್ದರೆ, ಆ ಮೂಲಕ ಶ್ರಾಯೀಣ ಬೆಲೆ ಏರಿಳಿತಗಳನ್ನು ತಗ್ಗಿಸುವುದು ಸಾಧ್ಯವಿರುವಂತೆಯೇ ವಾರ್ಷಿಕ ಏರಿಳಿತಗಳನ್ನೂ ಸ್ವಲ್ಪಮಟ್ಟಿಗೆ ಸುಧಾರಿಸಬಹುದು. ಹೆಚ್ಚು ಬೆಳೆ ಬಂದ ವರ್ಷದಲ್ಲಿ ಸಹಜವಾಗಿ ಇರಬಹುದಾದ್ದಕ್ಕಿಂತ ಕಡಿಮೆ ಬೆಲೆಯೂ ಇರುತ್ತವೆ. ಫಸಲಿನ ಏರಿಳಿತ ವರ್ಷದಿಂದ ವರ್ಷಕ್ಕೆ ತೀವ್ರವಾಗಿದ್ದು, ಬೇಡಿಕೆಯಲ್ಲೂ ಅಪುಟಿತತೆ ಇದ್ದ ಪಕ್ಷದಲ್ಲಿ ಉತ್ಪನ್ನವನ್ನು ದಾಸ್ತಾನು ಮಾಡುವುದರಿಂದ ವರ್ತಕನಿಗೆ ಅನುಕೂಲ ಹೆಚ್ಚು. ಆದರೆ ನಷ್ಟಸಂಭವವೂ ಉಂಟು. ಕಾಫಿ ಒಂದು ಉದಾಹರಣೆ. ಒಂದು ವರ್ಷ ಸಮೃದ್ಧ ಫಸಲು ಬಂದರೆ ಮುಂದಣ ಎರಡು ಮೂರು ಫಸಲುಗಳು ಕಡಿಮೆಯಾಗಿರುವುವೆಂಬುದು ಸಾಮಾನ್ಯ ಅನುಭವ. ಆದರೆ ಒಮ್ಮೊಮ್ಮೆ ಎರಡು ವರ್ಷ ಒಟ್ಟಿಗೆ ಸಮೃದ್ಧ ಫಸಲು ಲಭ್ಯವಾಗುವುದೂ ಉಂಟು. ಮೊದಲನೆಯ ವರ್ಷ ಹೆಚ್ಚು ದಾಸ್ತಾನಿಟ್ಟ ವರ್ತಕನಿಗೆ ಮರುವರ್ಷದ ಸಮೃದ್ಧ ಫಸಲಿನಿಂದ ನಷ್ಟ ತಟ್ಟಬಹುದು. ಬೆಲೆಗಳ ಶ್ರಾಯೀಣ ಏರಿಳಿತಗಳನ್ನು ನಿವಾರಿಸುವ ಸಲುವಾಗಿ ದಾಸ್ತಾನು ಮಾಡುವುದಕ್ಕಿಂತ, ವಾರ್ಷಿಕ ಏರಿಳಿತಗಳನ್ನು ನೇರಗೊಳಿಸಲು ದಾಸ್ತಾನು ಮಾಡುವುದರಿಂದ ನಷ್ಟಸಂಭವ ಅಧಿಕ. ದಾಸ್ತಾನು ವೆಚ್ಚವೂ ಅಧಿಕ. ಈ ವೆಚ್ಚವನ್ನೂ ನಷ್ಟಸಂಭವವನ್ನೂ ತುಂಬಿಕೊಡುವಷ್ಟು ಲಾಭ ದೊರಕುವಂಥ ನಿರೀಕ್ಷೆಯಿದ್ದಾಗ ಮಾತ್ರ ದೀರ್ಘಕಾಲಿಕ ದಾಸ್ತಾನು ಸಾರ್ಥಕವಾಗುತ್ತದೆ.

ಬೆಲೆಗಳ ವಾರ್ಷಿಕ ಏರಿಳಿತದ ಪರಿಣಾಮವಾಗಿ ರೈತನ ವರಮಾನ ವ್ಯತ್ಯಾಸವಾಗುತ್ತವೆ. ಯಾವ ಪದಾರ್ಥಕ್ಕೆ ಬೇಡಿಕೆಯಲ್ಲಿ ಹೆಚ್ಚು ಪುಟಿತತೆ ಇರುತ್ತದೆಯೋ ಅದರ ಉತ್ಪನ್ನ ಅಧಿಕವಾದಷ್ಟೂ ಅವನ ವರಮಾನ ಹೆಚ್ಚುತ್ತದೆ(ಉದಾಹರಣೆ: ಹಾಲು). ಯಾವುದಕ್ಕೆ ಬೇಡಿಕೆಯಲ್ಲಿ ಪುಟಿತತೆ ಇರುವುದಿಲ್ಲವೋ ಅದರ ಉತ್ಪನ್ನ ಕಡಿಮೆಯಾದಾಗ ಅವನಿಗೆ ಲಭ್ಯವಾಗುವ ವರಮಾನಕ್ಕಿಂತಲೂ ಅದರ ಉತ್ಪನ್ನ ಹೆಚ್ಚಾದಾಗ ಕಡಿಮೆ ವರಮಾನ ಲಭ್ಯವಾಗಬಹುದು (ಉದಾಹರಣೆ : ಆಲೂಗೆಡ್ಡೆ). ಹೆಚ್ಚು ಬೆಳೆ ತೆಗೆಯಲು ಹೆಚ್ಚು ವೆಚ್ಚ ಮಾಡಬೇಕೆಂಬುದು ನಿಜ. ಬೀಜದ ಬಿತ್ತನೆ, ಗಿಡದ ನಾಟಿ, ಸಾಗುವಳಿ ಮುಂತಾದ ವೆಚ್ಚಗಳನ್ನೂ ಫಸಲು ಬರುವುದಕ್ಕೆ ಮುಂಚೆಯೇ ಮಾಡಬೇಕು. ಆದ್ದರಿಂದ ಫಸಲಿನ ಪರಿಮಾಣಕ್ಕೆ ಅನುಗುಣವಾಗಿ ಅವನ್ನು ಏರಿಸುವುದಕ್ಕಾಗುವುದಿಲ್ಲ. ಫಸಲಿಗೆ ನೇರವಾಗಿ ಸಂಬಂಧಿಸಿದ್ದೆಂದರೆ ಸುಗ್ಗಿಯ ವೆಚ್ಚ. ಆಲೂಗೆಡ್ಡೆಯಂಥ ಫಸಲಿನ ವಿಚಾರದಲ್ಲಿ ಈ ವೆಚ್ಚ ಭಾರಿಯಾಗಿರುತ್ತದೆ. ಆದ್ದರಿಂದ ಇಲ್ಲಿ ಬೆಲೆಯ ಏರಿಳಿತಗಳಿಂದ ರೈತರ ವರಮಾನದ ಮೇಲೆ ಆಗುವ ಪರಿಣಾಮ ಹೆಚ್ಚು ತೀವ್ರ.

**ಚಕ್ರೀಯ ಏರಿಳಿತಗಳು:** ಅನೇಕ ಕೃಷಿ ವಸ್ತುಗಳ ಉತ್ಪನ್ನ ಕೆಲವು ವರ್ಷಗಳಿಗೊಮ್ಮೆ ನಿಯತವಾಗಿ ಏರಿಳಿಯುತ್ತಿರುತ್ತವೆಂಬುದನ್ನು ನೋಡಿದ್ದಾಯಿತು. ಆಲೂಗೆಡ್ಡೆಯ ಫಸಲಿನ ಏರಿಳಿತದ ಚಕ್ರದ ಅವಧಿ ಮೂರುನಾಲ್ಕು ವರ್ಷ. ಕಾಫಿ, ಮಾವಿನ ಹಣ್ಣು ಮುಂತಾದ ಅನೇಕ ಫಸಲುಗಳಲ್ಲೂ ಈ ಬಗೆಯ ಚಕ್ರಗಳನ್ನು ಗುರುತಿಸಬಹುದು. ಈ ಫಸಲುಗಳೆಲ್ಲ ಏಕಕಾಲದಲ್ಲಿ ಏರುತ್ತ ಏಕಕಾಲದಲ್ಲಿ ಇಳಿಯುತ್ತ ಸಾಗುವುದಿಲ್ಲವೆಂಬುದನ್ನು ಗಮನಿಸಬೇಕು. ಇವುಗಳ ಪ್ರಕ್ರಿಯೆ ವಿಭಿನ್ನವಾದ್ದು. ಒಂದೊಂದು ವಸ್ತುವಿನ ಫಸಲೂ ಸ್ಥೂಲವಾಗಿ ಚಕ್ರೀಯವಾಗಿ ಏರಿಳಿಯುವ ಪ್ರವೃತ್ತಿ ತೋರಿಸುವುದಾದರೂ ಈ ನಿರೀಕ್ಷೆಯಲ್ಲೂ ವಾರ್ಷಿಕವಾಗಿ ವ್ಯತ್ಯಾಸಗಳಾಗುವುದುಂಟು. ಅಂತೂ ಈ ಏರಿಳಿತಗಳು ರೈತನ ಹತೋಟಿಗೆ ಒಳಪಡದೆ ಇರುವಂಥವು.

ಆದರೆ ಯಾವುದೇ ವಸ್ತುವಿನ ಬೆಲೆಗಳು ಅಧಿಕವಾಗುವ ಪ್ರವೃತ್ತಿಯಿದ್ದರೆ ಅಥವಾ ಅದರ ವರಮಾನ ಅಧಿಕವಾಗುವ ನಿರೀಕ್ಷೆಯಿದ್ದರೆ, ಅಂಥ ವಸ್ತುವನ್ನು ಬೆಳೆಯುವ ರೈತರು ಅದನ್ನು ಹೆಚ್ಚಾಗಿ ಉತ್ಪಾದಿಸುವ ತೀರ್ಮಾನ ಕೈಗೊಳ್ಳಬಹುದು. ಬೇಡಿಕೆಯ ಪುಟಿತತೆ, ಉತ್ಪಾದನೆಯ ವೆಚ್ಚ, ಸರಬರಾಯಿಯಿಂದ ಬೆಲೆ ಮತ್ತು ವರಮಾನಗಳ ಮೇಲೆ ಆಗುವ ಪರಿಣಾಮ–ಇವೆಲ್ಲವೂ ಈ ತೀರ್ಮಾನದ ಮೇಲೆ ಪ್ರಭಾವ ಬೀರುವ ಅಂಶಗಳು. ಒಂದು ಪದಾರ್ಥದ ಉತ್ಪಾದನೆಯನ್ನು ಹೆಚ್ಚಿಸಬೇಕೆಂಬ ತೀರ್ಮಾನ ಮಾಡಿ ಅದನ್ನು ಕಾರ್ಯಗತಗೊಳಿಸಲೂ ಅದರ ಫಲ ಪಡೆಯಲೂ ಎಷ್ಟು ಕಾಲ ಬೇಕಾಗುವುದೆಂಬುದು ಆ ಉತ್ಪನ್ನದ ಸ್ವರೂಪವನ್ನೇ ಅವಲಂಬಿಸುತ್ತದೆ. ಬತ್ತ, ಗೋಧಿ ಮುಂತಾದವುಗಳ ಉತ್ಪನ್ನವನ್ನು ಹೆಚ್ಚಿಸಲು ಸಾಮಾನ್ಯವಾಗಿ ಹೆಚ್ಚು ನೆಲವನ್ನು ಆ ಧಾನ್ಯದ ಬಿತ್ತನೆಗೆ ಒಳಪಡಿಸಬೇಕು. ಈ ಬಗ್ಗೆ ತೀರ್ಮಾನವನ್ನು ಒಂದು ವರ್ಷ ಮುಂಚೆಯಾದರೂ ಕೈಗೊಳ್ಳಬೇಕು. ಮಾಂಸದ ಉತ್ಪನ್ನ ಹೆಚ್ಚಿಸಲು ಮೂರು ವರ್ಷವಾದರೂ ಬೇಕಾದೀತು. ಕಾಫಿಗಾದರೆ ಐದು ವರ್ಷ. ಈ ದೀರ್ಘಕಾಲದ ಅನಂತರವೂ ತನಗೆ ಲಾಭ ಬಂದೀತೆಂದು ರೈತ ಭಾವಿಸಿದರೆ ಮಾತ್ರವೇ ಆತ ಹೆಚ್ಚು ಉತ್ಪನ್ನಕ್ಕಾಗಿ ವೆಚ್ಚ ಮಾಡಲು ಸಿದ್ಧನಾಗಿರುತ್ತಾನೆ. ಉತ್ಪನ್ನ ಹೆಚ್ಚಿಸಬೇಕೆಂದು ಒಮ್ಮೆ ತೀರ್ಮಾನಿಸಿ ಆ ಬಗ್ಗೆ ಕ್ರಮ ಕೈಗೊಂಡ ಮೇಲೆ, ಮಧ್ಯದಲ್ಲಿ ಅವನ ನಿರೀಕ್ಷೆ ಸುಳ್ಳಾದರೆ ಆಗ ಆತ ಅದಕ್ಕೆ ತಡೆ ಒಡ್ಡುವುದು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಕಾಫಿ : ಹುಟ್ಟು ಹಾಕಿದ ಹತ್ತು ವರ್ಷದ ವೇಳೆಗೆ ಕಾಫಿ ಗಿಡದ ಫಸಲು ಸಾಮಾನ್ಯವಾಗಿ ಗರಿಷ್ಠ ಸ್ಥಿತಿ ಮುಟ್ಟಿ ಅನಂತರ ಸುಮಾರು ಹತ್ತು ವರ್ಷ ಕಾಲ ಹೆಚ್ಚು ಕಡಿಮೆ ಅದೇ ಮಟ್ಟದಲ್ಲಿ ಮುಂದುವರಿಯುತ್ತದೆ (ವಾರ್ಷಿಕ ಏರಿಳಿತಗಳಿಗೆ ಒಳಪಟ್ಟು). ನಡುದಾರಿಯಲ್ಲಿ ಉತ್ಪನ್ನವನ್ನು ಮೊಟಕು ಮಾಡುವುದು ಉತ್ಪಾದಕನ ಕೈಯಲ್ಲಿಲ್ಲ. ಹೆಚ್ಚು ಕಾಫಿ ಫಸಲು ತೆಗೆಯಲು ತೀರ್ಮಾನಿಸಿದ ಈ ರೈತನಂತೆಯೇ ಇನ್ನೂ ಅನೇಕರು ತೀರ್ಮಾನ ಮಾಡಿರಬಹುದು. ಹೀಗೆ ಒಬ್ಬೊಬ್ಬರೂ ಫಸಲು ವಿಸ್ತರಿಸುವುದರಲ್ಲಿ ತೊಡಗಿದಾಗ ಇವರೆಲ್ಲರ ಪ್ರಯತ್ನದ ಫಲವಾಗಿ ಸರಬರಾಯಿಯ ಮೊತ್ತ ಬೇಡಿಕೆಗಿಂತ ಅತ್ಯಧಿಕವಾಗಬಹುದು. ಹೆಚ್ಚು ಫಸಲು ತೆಗೆಯಬೇಕೆಂದು ತಾವು ಪ್ರಯತ್ನಿಸಿದ್ದು

ತಪ್ಪಾಯಿತೆನಿಸಿದಾಗ ಆ ಬಗ್ಗೆ ಕ್ರಮ ಕೈಗೊಂಡ ಎಷ್ಟೋ ವರ್ಷಗಳ ಅನಂತರವೇ ವಾಸ್ತವವಾಗಿ ಫಸಲನ್ನು ಇಳಿಸಲು ಸಾಧ್ಯ. ಫಸಲು ಇಳಿತವೂ ನಿರೀಕ್ಷೆಗಿಂತ ಅತಿಯಾಗಬಹುದು. ಹೀಗೆ ಬಿಡಿ ಉತ್ಪಾದಕರ ವೈಯಕ್ತಿಕ ತೀರ್ಮಾನಗಳು ಕೂಡ ಒಟ್ಟಿನಲ್ಲಿ ಚಕ್ರೀಯವಾಗಿ ಪರಿಣಮಿಸುತ್ತವೆ. ಇದರಿಂದ ರೈತರ ವರಮಾನಗಳಲ್ಲಿ ಅಸ್ಥಿರತೆ ಉಂಟಾಗುತ್ತದೆ. ಇದು ಹಿಂದೆ ಹೇಳಿದ ವಾರ್ಷಿಕ ಏರಿಳಿತಗಳಿಗಿಂತ ಹೆಚ್ಚು ತೀವ್ರವಾದ್ದು. ಈ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರವೋ ಉತ್ಪಾದಕರ ಕೂಟವೋ ಮಾರಾಟ ಸಂಸ್ಥೆಯೋ ಮುಂದಾಗಿಯೇ ಮಾರುಕಟ್ಟೆಯ ಸ್ಥಿತಿಗತಿಗಳನ್ನು ವೀಕ್ಷಿಸಿ ಉತ್ಪಾದನ ಕಾರ್ಯವನ್ನು ನಿಯಂತ್ರಣಗೊಳಿಸುವುದು ಆವಶ್ಯವಾಗುತ್ತದೆ.

ಇಡೀ ಕೃಷಿ ವ್ಯವಸ್ಥೆಗೇ ಸಂಬಂಧಿಸಿದಂತೆ ಕೆಲವು ವರ್ಷಗಳಿಗೊಮ್ಮೆ ಏರಿಳಿತಗಳು ಸಂಭವಿಸುತ್ತಿರುವುದುಂಟು. ಇವು ಕೃಷಿಗೆ ಸೀಮಿತವಲ್ಲ; ಇಡೀ ಅರ್ಥ ವ್ಯವಸ್ಥೆಯನ್ನೇ ವ್ಯಾಪಿಸಿರುತ್ತವೆ. ಸಾರ್ವತ್ರಿಕ ವ್ಯಾಪಾರ ಚಕ್ರದ ಪರಿಣಾಮವಾಗಿ ಇವು ಸಂಭವಿಸುತ್ತವೆ. ಬಂಡವಾಳ ವ್ಯವಸ್ಥೆಯಲ್ಲಿ ಉತ್ಕರ್ಷ-ಅವನತಿಗಳು ತಾಳ-ಲಯಬದ್ಧವಾಗಿ ಪದೇ ಪದೇ ಸಂಭವಿಸುತ್ತಿರುತ್ತವೆಯೆಂಬುದು ಒಂದು ಸಿದ್ಧಾಂತ. ಇದೊಂದು ನಿಯಮ. ಉತ್ಪತ್ತಿ, ವರಮಾನ, ಬೆಲೆ, ಉದ್ಯೋಗ-ಮುಂತಾದ ಎಲ್ಲವೂ ನಿಯತವಾಗಿ ಒಟ್ಟೊಟ್ಟಿಗೆ ವ್ಯತ್ಯಾಸವಾಗುತ್ತಿರುತ್ತವೆ. ಕೃಷಿ ಉತ್ಪನ್ನಗಳ ಏರಿಳಿತಗಳೇ ಸಾರ್ವತ್ರಿಕ ವ್ಯಾಪಾರ ಚಕ್ರಕ್ಕೆ ನಿಮಿತ್ತವಾಗುವುವೆಂಬುದು ಒಂದು ವಾದ. ಆದರೆ ಎಲ್ಲ ಕೃಷಿ ವಸ್ತುಗಳ ಉತ್ಪನ್ನವೂ ಒಂದೇ ಸಮಯದಲ್ಲಿ ಅಧಿಕವಾಗುವುದಿಲ್ಲ; ಅಥವಾ ಒಮ್ಮೆಗೇ ಇಳಿಯುವುದಿಲ್ಲ-ಎಂಬುದನ್ನು ಹಿಂದೆ ಹೇಳಲಾಗಿದೆ. ಫಸಲು ಹೆಚ್ಚಾದಾಗ ಹೆಚ್ಚು ವ್ಯವಹಾರ; ಕಡಿಮೆಯಾದಾಗ ಕಡಿಮೆ-ಎಂಬ ವಾದವೂ ಕಾಲದೇಶ ಭೇದವಿಲ್ಲದೆ ನಿಜವಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಹೆಚ್ಚು ಫಸಲಿನಿಂದ ರೈತನಿಗೆ ನಷ್ಟ ಸಂಭವಿಸುವುದೂ ಉಂಟು. ಅತ್ಯಂತ ಮುಂದುವರಿದ ದೇಶದಲ್ಲಿ ಕೈಗಾರಿಕೆಯ ಕಚ್ಚಾ ಸಾಮಗ್ರಿಯಲ್ಲಿ ಕೃಷಿ ವಸ್ತುಗಳ ಭಾಗ ಬಹಳ ಹೆಚ್ಚಿರುವುದಿಲ್ಲ. ಆದ್ದರಿಂದ ಅಲ್ಲಿ ಕೃಷಿ ಉತ್ಪನ್ನದ ಏರಿಳಿತಗಳಿಂದ ಸಾರ್ವತ್ರಿಕವಾಗಿ ಆರ್ಥಿಕ ಏರುತಗ್ಗುಗಳಾಗುವುವೆಂಬುದಾಗಿ ಹೇಳಲಾಗುವುದಿಲ್ಲ. ಮುಂದುವರಿಯದ ದೇಶಗಳಲ್ಲಿ ಕೃಷಿ ಉತ್ಪನ್ನದ ಸರಬರಾಯಿ ತಗ್ಗಿದಾಗ ಬೆಲೆಗಳು ಏರಿ ಆರ್ಥಿಕತೆಯೇ ಅಸ್ತವ್ಯಸ್ತವಾಗಬಹುದು.

ವ್ಯಾಪಾರ ಚಕ್ರಗಳಿಗೆ ಕೃಷಿ ಉತ್ಪನ್ನದ ವರ್ತನೆ ಎಷ್ಟರಮಟ್ಟಿಗೆ ಕಾರಣ-ಎಂಬ ವಿಚಾರ ಹೇಗಾದರೂ ಇರಲಿ, ಸಾರ್ವತ್ರಿಕ ಬೆಲೆ ಏರಿಕೆ ಅಥವಾ ಇಳಿತಗಳಿಂದ ಕೃಷಿ ವರಮಾನಗಳ ಮೇಲೆ ಆಗುವ ತೀವ್ರ ಪರಿಣಾಮವನ್ನು ಈ ಲೇಖನದ ಆದಿಯಲ್ಲಿ ವಿವರಿಸಲಾಗಿದೆ. ಚಿಲ್ಲರೆ ಮಾರಾಟ ಬೆಲೆಯಲ್ಲಿ ಸಂಭವಿಸುವ ಇಳಿತವಿಡೀ ಉತ್ಪಾದಕನಿಗೆ ವರ್ಗವಾಗುವುದರಿಂದ ಆತನ ಬೆಲೆಯಲ್ಲಿ ಆಗುವವೆಲ್ಲ ಸೇಕಡವಾರು ಇಳಿತ ಹೆಚ್ಚು. ಕೈಗಾರಿಕೆಯಲ್ಲಿ ಬೇಡಿಕೆಯ ಏರಿಳಿತಗಳು ಹೆಚ್ಚು ತೀವ್ರವಾಗಿದ್ದರೂ ಅವನ್ನು ಎದುರಿಸಲು ಶೀಘ್ರವಾಗಿ ಉತ್ಪಾದನೆಯಲ್ಲಿ ಹೊಂದಾವಣೆ ಮಾಡಬಹುದು. ಆದರೆ ಅಷ್ಟೇ ಶೀಘ್ರವಾಗಿ ಕೃಷಿಯಲ್ಲಿ ಹೊಂದಾವಣೆ ಸಾಧ್ಯವಿಲ್ಲ. ಆದ್ದರಿಂದ ಕೃಷಿ ಕ್ಷೇತ್ರದಲ್ಲಿಯ ಅಸ್ಥಿರತೆ ತುಂಬ ತೀವ್ರವೆನಿಸಿದೆ; ಸರ್ಕಾರದ ಮಧ್ಯ ಪ್ರವೇಶ ಹೆಚ್ಚು ಅಗತ್ಯವಾಗುತ್ತದೆ. **(ನೋಡಿ-ಕೃಷಿ-ಮತ್ತು-ಸರ್ಕಾರ)**

*

**ಕೃಷಿ ಬೆಲೆಗಳ ಸ್ಥಾಯೀಕರಣ:** ವ್ಯವಸಾಯವೇ ಪ್ರಧಾನವಾಗಿರುವ ಭಾರತದಂಥ ದೇಶದಲ್ಲಿ ಕೃಷಿ ಪದಾರ್ಥಗಳ ಬೆಲೆಗಳ ದೃಢತೆಯೇ ಆರ್ಥಿಕ ಸ್ಥಿರತೆಯ ಅಸ್ತಿವಾರವಾಗಿದೆ. ಅಸ್ಥಿರ ಬೆಲೆಗಳು ಅರ್ಥವ್ಯವಸ್ಥೆಯಲ್ಲಿಯ ವ್ಯಾಧಿಯ ಬಾಹ್ಯ ಲಕ್ಷಣಗಳಾದ್ದರಿಂದ ಮೂಲಭೂತವಾದ ವ್ಯಾಧಿಯನಿವಾರಣೆಯಿಂದ ಬೆಲೆಗಳ ಅಸ್ಥಿರತೆ ಬಹುತೇಕ ಕಡಿಮೆಯಾಗುವುದೆಂಬುದು ನಿಜವಾದರೂ ಭಾರತದ ಆರ್ಥಿಕತೆಯ ವಿಶಿಷ್ಟ ಸ್ವರೂಪದಿಂದಾಗಿ ಅನೇಕ ವೇಳೆ ಅಸ್ಥಿರ ಬೆಲೆಗಳಿಂದ ಸಾಮಾಜಿಕ ನೆಮ್ಮದಿಗೂ ಆರ್ಥಿಕ ಅಭಿವೃದ್ಧಿಗೂ ಭಂಗ ಬರಬಹುದು. ಕೈಗಾರಿಕೆಯಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿ ಕೂಡ ಕೃಷಿ ಬೆಲೆಗಳ ದೃಢತೆಯನ್ನು ಕಾಯ್ದುಕೊಳ್ಳಲು ಅನೇಕ ಕ್ರಮಗಳನ್ನು ಜಾರಿಗೆ ತಂದಿರುವುದುಂಟು.

ಕೃಷಿ ವಸ್ತುಗಳ ಬೆಲೆಗಳನ್ನು ಸ್ಥಾಯೀಕರಿಸುವ ಕ್ರಮಗಳು 1929ರಲ್ಲಿ ಅಮೆರಿಕದಲ್ಲಿ ಆರಂಭವಾಗಿ, ಇತ್ತೀಚೆಗೆ ಇತರ ರಾಷ್ಟ್ರಗಳಲ್ಲೂ ರೂಢಿಗೆ ಬಂದಿದೆ. ಧಾರಣೆಯ ಚಲನವಲನಗಳಲ್ಲಿ ಒಂದಂಶ ನಿರೀಕ್ಷಿತ; ಇನ್ನೊಂದಂಶ ಅನಿರೀಕ್ಷಿತ. ಉದಾಹರಣೆಗೆ ಭಾರತದಲ್ಲಿ ಅಕ್ಟೋಬರಿನಿಂದ ಮಾರ್ಚ್ ತನಕ ಸಾಗುವ ಧಾರಣೆಯ ಇಳಿತ ಅನಿರೀಕ್ಷಿತವಲ್ಲ. ಇಂಥ ಅನಿರೀಕ್ಷಿತ ಬದಲಾವಣೆಗಳನ್ನು ಸಮರ್ಪಕ ಪರಿಮಾಣದ ದಾಸ್ತಾನಿನ ವ್ಯವಸ್ಥೆಯಿಂದ ನಿವಾರಿಸಬಹುದು. ಅನಿರೀಕ್ಷಿತ ಪ್ರಾಕೃತಿಕ ಹಾಗೂ ರಾಜಕೀಯ ಕಾರಣಗಳಿಂದುಂಟಾಗುವ ಬದಲಾವಣೆಗಳ ಮಟ್ಟಿಗೆ ದಾಸ್ತಾನು ವ್ಯವಸ್ಥೆಯ ಜೊತೆಗೆ, ಬೆಲೆಗಳ ಏರಿಳಿತಕ್ಕೆ ಕನಿಷ್ಠ ಗರಿಷ್ಠ ಮಿತಿಗಳನ್ನು ಗೊತ್ತುಪಡಿಸುವುದೂ ಆವಶ್ಯಕ. ಒಟ್ಟಿನಲ್ಲಿ ಈ ಧೋರಣೆಯಿಂದ ರೈತನ ಉತ್ಪನ್ನಕ್ಕೆ ಒಂದು ನ್ಯಾಯ ಬೆಲೆ ದೊರೆತು, ಅವನ ವರಮಾನದ ಅಸಂದಿಗ್ಧ ಪರಿಸ್ಥಿತಿ ಕಡಿಮೆಯಾಗಿ, ಅವನ ಉತ್ಪಾದನ ಶಕ್ತಿ ಹೆಚ್ಚುವಂತಾಗಬೇಕು.

ಕೃಷಿಧಾರಣೆಗಳ ಸ್ಥಾಯೀಕರಣಕ್ಕೆ ಹಲವು ವಿಧಾನಗಳು ಆಚರಣೆಯಲ್ಲಿವೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಅನುರೂಪ ದರಗಳ (ಪ್ಯಾರಿಟಿ ಪ್ರೈಸಸ್) ತತ್ತ್ವದ ತಳಹದಿಯ ಮೇರೆಗೆ ರೈತರ ಉತ್ಪನ್ನಕ್ಕೆ ಕನಿಷ್ಠ ಬೆಲೆಗಳನ್ನು ನಿರ್ಧರಿಸಲಾಗುತ್ತದೆ. ಹಿಂದಣ ಹತ್ತು ವರ್ಷಗಳ ಅವಧಿಯಲ್ಲಿ ರೈತನ ಉತ್ಪನ್ನದ ಬೆಲೆಗೂ ಅವನು ಕೊಳ್ಳಬೇಕಾಗಿದ್ದ ವಸ್ತುಗಳ ಬೆಲೆಗೂ ನಡುವಣ ಸರಾಸರಿ ಪ್ರಮಾಣವನ್ನು ಮೂಲವಾಗಿಟ್ಟುಕೊಂಡು, ಎಲ್ಲ ಮುಖ್ಯ ಕೃಷಿ ವಸ್ತುಗಳಿಗೂ ವರ್ಷಕ್ಕೊಮ್ಮೆ ಬೆಲೆಗಳನ್ನು ನಿರ್ಧರಿಸಲಾಗುತ್ತದೆ. ಪೇಟೆಯ ಬೆಲೆಗಳು ಈ ಮಿತಿಗಿಂತ ಕಡಿಮೆಯಾದಾಗ ಕಮಾಡಿಟಿ ಕ್ರೆಡಿಟ್ ಕಾರ್ಪೋರೇಷನ್ ಎಂಬ ಸಂಸ್ಥೆಯ ಮೂಲಕ ಆ ಪದಾರ್ಥಗಳನ್ನು ಕೊಳ್ಳಲಾಗುತ್ತದೆ. ಅಲ್ಲದೆ ಕೃಷಿಯ ಸುಧಾರಣೆಗಾಗಿ ರೈತನಿಗೆ ಬೇರೆಬೇರೆ ರೀತಿಯ ಸಾಲಗಳನ್ನೂ ಸಹಾಯಧನಗಳನ್ನೂ ಕೊಡಲಾಗುತ್ತದೆ.

ಬ್ರಿಟನ್, ನಾರ್ವೇ, ಸ್ವೀಡನ್‌ಗಳಲ್ಲಿ ರೈತವರ್ಗದ ಒಟ್ಟು ವರಮಾನವನ್ನು ರಕ್ಷಿಸುವ ಉದ್ದೇಶದಿಂದ ಕನಿಷ್ಠ ಬೆಲೆಗಳನ್ನು ಪ್ರತಿವರ್ಷವೂ ನಿರ್ಧರಿಸಲಾಗುತ್ತದೆ. ಆಸ್ಟ್ರೇಲಿಯ, ಬ್ರಜಿಲ್, ಅರ್ಜೆಂಟೀನ ಮೊದಲಾದ ದೇಶಗಳಲ್ಲಿ ರೈತನ ಬೇಸಾಯದ ವೆಚ್ಚವನ್ನನುಸರಿಸಿ ಬೆಲೆಗಳನ್ನು ನಿಗದಿ ಮಾಡುತ್ತಾರೆ.

ಭಾರತದಲ್ಲೂ ಈ ದಿಕ್ಕಿನಲ್ಲಿ ಪ್ರಯತ್ನಗಳು ನಡೆದಿವೆ. ಸ್ಥಾಯೀಕರಣದ ಒಂದು ವಿಧಾನವೆಂದರೆ ಬೆಲೆಗಳ ಸಂಪೂರ್ಣ ಹತೋಟಿ ಮತ್ತು ಪಡಿತರ ವ್ಯವಸ್ಥೆ. 1953ಕ್ಕೆ ಮುಂಚೆ ಭಾರತದಲ್ಲಿ ಇದು ವಿಶೇಷವಾಗಿ ಜಾರಿಯಲ್ಲಿತ್ತು. ಬೇಡಿಕೆಗೆ ತಕ್ಕಷ್ಟು ಸರಬರಾಯಿ ಇಲ್ಲದಾಗ ನಿಷ್ಪಕ್ಷಪಾತ ಹಂಚಿಕೆ ಅಗತ್ಯವಾಗುತ್ತದೆ. ಆದರೆ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಲು ಸರ್ಕಾರದ ಶ್ರಮ ಅಧಿಕ. ಜರೂರು ಸಮಯದಲ್ಲಿ ಇದು ಅನಿವಾರ್ಯವಾದರೂ ಸದಾ ಕಾಲದಲ್ಲೂ ಇದನ್ನು ನಡೆಸುವುದು ಕಷ್ಟ. ದಕ್ಷ ಪ್ರಾಮಾಣಿಕ ಸಿಬ್ಬಂದಿ ಇಲ್ಲದಾಗ ಇದು ಅನೈತಿಕ ವ್ಯವಹಾರಗಳಿಗೆ ಅವಕಾಶ ಕೊಡಬಹುದು. ಅರ್ಥವ್ಯವಸ್ಥೆಯ ಬೆಳವಣಿಗೆಗೆ ಇದರಿಂದ ಅಡಚಣೆ ಒದಗಬಹುದು. ಅಲ್ಲದೆ ಇದಕ್ಕೆ ತಗಲುವ ವೆಚ್ಚವೂ ಅಧಿಕ. ಇದನ್ನು ಸಮಾಜ ಹೊರಬೇಕಾಗುತ್ತದೆ. ಯುದ್ಧಕಾಲದಲ್ಲಿ ಭಾರತದಲ್ಲಿ ಜಾರಿಗೆ ಬಂದ ಪಡಿತರ ವ್ಯವಸ್ಥೆ ಕ್ರಮಕ್ರಮವಾಗಿ ಸಡಿಲವಾಯಿತು.

1954-56ರ ಅವಧಿಯಲ್ಲಿ ಬೆಲೆಗಳು ಕುಗ್ಗಿದಾಗ ಹಲವು ರಾಜ್ಯ ಸರ್ಕಾರಗಳು ಅಕ್ಕಿ, ಗೋಧಿ, ಜೋಳ ಮೊದಲಾದ ಆಹಾರ ಧಾನ್ಯಗಳ ಕನಿಷ್ಠ ಬೆಲೆಗಳನ್ನು ನಿರ್ಧರಿಸಿದುವು. 1956ರಿಂದೀಚೆಗೆ ಮತ್ತೆ ಬೆಲೆಗಳು ಏರುತ್ತ ಬಂದಾಗ ರೈತನಿಗೆ ಕನಿಷ್ಠಾವಧಿ ಬೆಲೆಯನ್ನು ನೀಡುವುದಕ್ಕಿಂತ, ಬೆಲೆಗಳ ಏರಿಕೆಯನ್ನು ಹಿಡಿತದಲ್ಲಿರಿಸುವ ಸಮಸ್ಯೆ ಪ್ರಮುಖವಾಯಿತು. ಬೆಲೆಗಳ ಸ್ಥಾಯೀಕರಣವನ್ನು ಸಾಧಿಸಲು ಅನುಸರಿಸಬಹುದಾದ ಇನ್ನೊಂದು ಕ್ರಮವೆಂದರೆ ಕಾಪು ದಾಸ್ತಾನು ವ್ಯವಹಾರ. ಅಶೋಕ ಮೆಹ್ತಾ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಆಹಾರಧಾನ್ಯ ವಿಚಾರಣಾ ಸಮಿತಿ ಇದರ ಉದ್ದೇಶವನ್ನು ವಿವರಿಸಿದೆ. ನಿರ್ಧರಿಸಲಾದ ಬೆಲೆಮಟ್ಟದಿಂದ ಕೆಳಕ್ಕೆ ಬೆಲೆಗಳು ಇಳಿಯುವ ಪ್ರವೃತ್ತಿ ತೋರಿದಾಗ ಸಂಬಂಧಪಟ್ಟ ಸ್ಥಳದಲ್ಲಿ ಆ ಪದಾರ್ಥಗಳನ್ನು ಪ್ರಕಟಿತ ಬೆಲೆಗಳಿಗೆ ಕೊಂಡು ಬೆಲೆಗಳ ಪತನವನ್ನು ನಿಲ್ಲಿಸುವುದೂ ಬೆಲೆಗಳು ಏರಿದಾಗ ಅವನ್ನು ಪ್ರಕಟಿತ ಬೆಲೆಯಲ್ಲಿ ದಾಸ್ತಾನಿನಿಂದ ಮಾರುವುದೂ ಇದರ ಮುಖ್ಯ ಕ್ರಮ. ಈ ವಹಿವಾಟುಗಳನ್ನು ನಡೆಸಲು ಪ್ರತ್ಯೇಕ ಸಂಸ್ಥೆ ಇರುವುದು ಆವಶ್ಯಕ. ಭಾರತದ ಆಹಾರ ಕಾರ್ಪೋರೇಷನ್ ಈ ಕಲಾಪಗಳನ್ನು ಈಚೆಗೆ ಯಶಸ್ವಿಯಾಗಿ ನಿರ್ವಹಿಸಿ ಆಹಾರಧಾನ್ಯ ಬೆಲೆಗಳ ಸ್ಥಿರತೆ ಸಾಧಿಸುತ್ತಿದೆ. ಪರದೇಶಗಳಿಂದ ಆಹಾರಧಾನ್ಯಗಳನ್ನು ತರಿಸಿಕೊಂಡೊ ಆಂತರಿಕವಾಗಿ ಧಾನ್ಯ ಸಂಗ್ರಹ ಮಾಡಿಯೂ ಆವಶ್ಯವಾದ ಕಾಪು ದಾಸ್ತಾನು ನಿರ್ಮಿಸಲಾಗಿದೆ. ಇದನ್ನು ಸಮರ್ಪಕವಾಗಿ ನಿರ್ವಹಿಸಲು ಅಧಿಕ ಬಂಡವಾಳ ಬೇಕಾಗುತ್ತದೆ. ದಾಸ್ತಾನು ಮಳಿಗೆಗಳನ್ನು ನಿರ್ಮಿಸುವುದು ಆವಶ್ಯಕ. ದಕ್ಷ ಸಿಬ್ಬಂದಿಯದು ಇನ್ನೊಂದು ಸಮಸ್ಯೆ. ಕನಿಷ್ಠ-ಗರಿಷ್ಠ ಬೆಲೆಗಳನ್ನು ನಿರ್ಧರಿಸುವುದೂ ಸುಲಭವಲ್ಲ. ಈ ಎಲ್ಲ ಇತಿಮಿತಿಗಳಿದ್ದರೂ ಪ್ರಸ್ತುತ ಸ್ಥಿತಿಯಲ್ಲಿ ಭಾರತದಲ್ಲಿ ಆಹಾರಧಾನ್ಯ ಬೆಲೆಗಳ ಸ್ಥಾಯಿಕರಣ ಸಾಧಿಸಲು ಇದೊಂದು ಒಳ್ಳೆಯ ವಿಧಾನವಾಗಿದೆ.

ದೀರ್ಘಕಾಲದಲ್ಲಿ ಬೆಲೆಗಳ ದೃಢತೆ ಸಾಧಿಸಬೇಕಾದರೆ ಉತ್ಪಾದನೆಯನ್ನೇ ಹೆಚ್ಚಿಸುವುದೂ ಕೃಷಿವಸ್ತುಗಳ ಸಮರ್ಪಕ ಮಾರಾಟ ವ್ಯವಸ್ಥೆಯನ್ನು ನಿರ್ಮಿಸುವುದೂ ರೈತನಿಗೆ ಅಗತ್ಯವಾದ ಧನಪೋಷಣೆ ನೀಡುವುದೂ ಆವಶ್ಯವಾಗುತ್ತದೆ. ಈ ನಿಟ್ಟಿನಲ್ಲಿ ವ್ಯಾಪಕವಾದ ಪ್ರಯತ್ನಗಳು ಭಾರತದಲ್ಲಿ ಜರುಗುತ್ತಿವೆ. (ಎನ್.ಎಸ್.ಬಿ.)

**ಕೃಷಿ ರಸಾಯನವಿಜ್ಞಾನ :** ಕೃಷಿಯ ಉತ್ಪನ್ನಗಳ ಮತ್ತು ಕೃಷಿಗೆ ಸಹಾಯಕವಾದ ಸಾಕು ಪ್ರಾಣಿಗಳ ಅಭಿವೃದ್ಧಿಯ ದಿಶೆಯಲ್ಲಿ ಬಳಸುವ ರಾಸಾಯನಿಕಗಳ ಹಾಗೂ ಅವುಗಳ ರಾಸಾಯನಿಕ ಕ್ರಿಯೆಗಳ ಅಧ್ಯಯನ ಕೃಷಿ ರಸಾಯನವಿಜ್ಞಾನ. ಕೃಷಿಗೆ ಆಧಾರ ಭೂಮಿ, ಅದರಲ್ಲೂ ಭೂಮಿಯ ಮೇಲ್ಮೈ. ಆದ್ದರಿಂದ ಕೃಷಿಯ ದೃಷ್ಟಿಯಿಂದ ಕೆಲವೇ ಮೀಟರುಗಳಷ್ಟು ಆಳದವರೆಗೆ ಮಣ್ಣನ್ನು ಪರಿಶೀಲಿಸಿದರೆ ಸಾಕು. ಕಲ್ಲುಮರಳು ಪ್ರಧಾನವಾದ ಭೂಮಿ ಕೃಷಿಗೆ ಯೋಗ್ಯವಲ್ಲ. ಮೂಲವಾಗಿ ಕಲ್ಲುಮರಳುಗಳಿಂದಲೇ ಫಲಿತವಾದ ಮೆದುಮಣ್ಣಿನ ಭೂಮಿ

ಮಾತ್ರವೇ ಅರ್ಹವಾದದ್ದು. ಅನಾದಿಕಾಲದಿಂದಲೂ ಭೂಮಿ ಬಿಸಿಲು ಗಾಳಿ ಮಳೆ ಶೀತೋಷ್ಣಗಳ ವೈಪರೀತ್ಯ ಮತ್ತು ಜೀವಿಗಳ ಆಕ್ರಮಣಗಳಿಗೆ ತುತ್ತಾಗಿ ಕ್ರಮೇಣ ಜರ್ಝರಿತವಾಗಿ ಅದರ ಅಲ್ಪಾಂಶ ಮಣ್ಣಾಗಿದೆ. ಧೂಳಾಗಿ ಛಿದ್ರಿತವಾದ ಕಲ್ಲುಬಂಡೆಗಳ ಮತ್ತು ಸತ್ತ ಜೀವಿಗಳು ಕೊಳೆತು ನಶಿಸಿ ಉಂಟಾಗುವ ಸಾವಯವ ಸಂಯುಕ್ತ ಶೇಷಗಳ ಮಿಶ್ರಣವೇ ಮಣ್ಣು. ಹೀಗಾಗಿ ಮಣ್ಣಿನ ರಚನೆ ಮತ್ತು ಲಕ್ಷಣಗಳು ಕಾಲಕಾಲಕ್ಕೆ ಬದಲಾಯಿಸುತ್ತ ಹೋಗುತ್ತವೆ. ಈ ಮಣ್ಣೇ ಗಿಡಮರಗಳನ್ನೂ ತನ್ಮೂಲಕ ಪ್ರಾಣಿವರ್ಗವನ್ನೂ ಹೊರುವ ಮತ್ತು ಪೋಷಿಸುವ ಆಧಾರವಸ್ತು. ಆದ್ದರಿಂದ ಪ್ರತಿಯೊಬ್ಬ ರೈತನೂ ತನ್ನ ಕೃಷಿಭೂಮಿಯ ರಸಾಯನ ಚರಿತ್ರೆಯನ್ನು ಕಾಲಕಾಲಕ್ಕೆ ಪ್ರಯೋಗಪೂರ್ವಕವಾಗಿ ಅರಿಯುವುದು ಆಧುನಿಕ ಕೃಷಿಪದ್ಧತಿಗಳಲ್ಲಿ ಒಂದು. ಕೃಷಿ ಕ್ಷೇತ್ರಾಧಿಕಾರಿಗಳು ವಿವರಣಾತ್ಮಕ ಕ್ಷೇತ್ರ ಭೂಪಟಗಳನ್ನು ಸಿದ್ಧಪಡಿಸಿ ಆ ಕ್ಷೇತ್ರದ ಮಣ್ಣಿನ ಲಕ್ಷಣಗಳಿಗೆ ಅನುಸಾರವಾಗಿ ಯಾವ ಬೆಳೆಯನ್ನು ಫಲಪ್ರದವಾಗಿ ಪಡೆಯಬಹುದೆಂಬುದನ್ನು ನಿರ್ಧರಿಸಲು ಸಹಾಯಕರಾಗುವರು. ಮಣ್ಣು ಎಷ್ಟರಮಟ್ಟಿಗೆ ಗಡುಸಾಗಿದೆ ಅಥವಾ ಮೆದುವಾಗಿದೆ ಅಂದರೆ ಕಲ್ಲುಮರಳಿನ ಅಂಶವೆಷ್ಟು ಜೇಡಿಮಣ್ಣಿನ ಅಂಶವೆಷ್ಟು ಎಂಬುದು ಒಂದು ಮುಖ್ಯಾಂಶ. ಮಣ್ಣಿನ ಭೌತರಚನೆಗೂ ಅದರ ನೀರು ಹೀರುವಿಕೆಗೂ ನಿಕಟಸಂಬಂಧ ಉಂಟು. ನೀರಿನ ಜೊತೆಯಲ್ಲಿ ಮಣ್ಣಿನಲ್ಲಿರುವ ಲವಣಗಳು, ಬೆಳೆಗೆ ಹಾಕುವ ಗೊಬ್ಬರಗಳೂ ಮತ್ತು ರೋಗ ಕ್ರಿಮಿಕೀಟನಿರೋಧಕ ರಾಸಾಯನಿಕ ವಸ್ತುಗಳು ವಿಲೀನವಾದ ಅನಂತರ ಆ ಅಂಶಗಳನ್ನು ಮಣ್ಣಿನ ಕಣಗಳು ಎಷ್ಟರ ಮಟ್ಟಿಗೆ ಹೀರುತ್ತವೆ ಎಂಬುದೂ ತಿಳಿಯಬೇಕಾದ ಅಂಶ. ಹಾಕಿದ ನೀರೆಲ್ಲ ಮಣ್ಣಿನ ಮೂಲಕ ಶೀಘ್ರವಾಗಿ ಇಳಿದು ಹೋದರೆ ಎಷ್ಟು ನಿಷ್ಪ್ರಯೋಜಕವೋ ನೀರು ನಿಂತು ಕೆಸರಾದರೂ ಅಷ್ಟೇ ನಿಷ್ಪ್ರಯೋಜಕ. ನೀರನ್ನು ಆದಷ್ಟು ಹೀರಿ, ತೇವಾಂಶವನ್ನು ಬಹುಕಾಲ ಉಳಿಸಿಕೊಂಡು ಸಸ್ಯಗಳಿಗೆ ಕ್ರಮೇಣ ಆ ತೇವವನ್ನು ಒದಗಿಸಬಲ್ಲ ಸಾಮರ್ಥ್ಯವುಳ್ಳ ಮಣ್ಣೇ ಬಹು ಬೆಳೆಗಳಿಗೆ ಶ್ರೇಷ್ಠವಾದುದು. ಮಣ್ಣಿನಲ್ಲಿ ಅನೇಕ ಲವಣಗಳಿವೆ. ಇವು ನೀರಿನಲ್ಲಿ ವಿಲೀನವಾದಾಗ ಫಲಿತ ದ್ರಾವಣಗಳಲ್ಲಿ ಲವಣಗಳಲ್ಲಿನ ಅಯಾನುಗಳು ಪ್ರತ್ಯೇಕಿತವಾಗುವುವು. ಪೊಟಾಸಿಯಂ ಸೋಡಿಯಂ ಕ್ಯಾಲ್ಸಿಯಂ ಮೆಗ್ನೀಸಿಯಂ ಅಯಾನುಗಳು; ಕಾರ್ಬೊನೇಟ್ ಬೈಕಾರ್ಬೊನೇಟ್ ಕ್ಲೋರೈಡ್ ಸಲ್ಫೇಟ್ ಅಯಾನುಗಳು–ಇವೇ ಪ್ರಧಾನವಾದವು. ಪೊಟಾಸಿಯಂ ಮುಂತಾದ ಲೋಹಗಳ ಅಯಾನುಗಳ ಪರಿಮಾಣ ಹೆಚ್ಚಾದರೆ ಮಣ್ಣು ಆಮ್ಲೀಯವೂ ಆಗುತ್ತದೆ. ಮಣ್ಣಿನ ಆಮ್ಲ ಕ್ಷಾರ ಪ್ರಮಾಣವನ್ನು ರೈತ ತಾನೇ ಕೆಲ ಸರಳ ರಾಸಾಯನಿಕ ಪ್ರಯೋಗಗಳ ಮೂಲಕ ತಿಳಿದುಕೊಳ್ಳಬಹುದು. ಆಮ್ಲಾಂಶ ಹೆಚ್ಚಾದರೆ ಮಣ್ಣಿನಲ್ಲಿ ಅತಿ ಸೂಕ್ಷ್ಮ ಜೀವಾಣುಗಳು ಬದುಕಲಾರವು. ಅವಿಲ್ಲದಿದ್ದರೆ ಮಣ್ಣಿಗೆ ಹಾಕುವ ತಿಪ್ಪೆ ಗೊಬ್ಬರ ಕಾಂಪೋಸ್ಟ್ ಮಲಮೂತ್ರ ಮುಂತಾದ ಗೊಬ್ಬರಗಳಲ್ಲಿನ ಸಾವಯವ ಸಂಯುಕ್ತಗಳು ವಿಭಜನೆ ಹೊಂದಲಾರವು. ಪರಿಣಾಮವಾಗಿ ಸಸ್ಯಗಳಿಗೆ ಪೌಷ್ಟಿಕಾಂಶಗಳಾದ ಸಾರಜನಕ ರಂಜಕ ಮತ್ತು ಗಂಧಕಗಳು ಬಿಡುಗಡೆಯಾಗುವುದಿಲ್ಲ. ಮಣ್ಣಿನ ಆಮ್ಲತೆ ಕೆಲವೇಳೆ ಅದಕ್ಕೆ ಹಾಕುವ ಕೃತಕ ರಾಸಾಯನಿಕ ಗೊಬ್ಬರಗಳಿಂದ ಸಹ ವೃದ್ಧಿಯಾಗುತ್ತದೆ. ಹೇರಳವಾಗಿ ಬಳಸುವ ಅಮೋನಿಯಂ ಸಲ್ಫೇಟ್ ಗೊಬ್ಬರ ಸ್ಪಷ್ಟ ಉದಾಹರಣೆ. ಮಣ್ಣಿನ ಆಮ್ಲೀಯತೆಯನ್ನು ಕಡಿಮೆಮಾಡಲು ಕ್ಷಾರವಸ್ತು ಸುಣ್ಣದ ನೀರನ್ನು ಬೆರೆಸುವುದು ವಾಡಿಕೆ. ಮಣ್ಣಿನ ಕ್ಷಾರತೆ ಹೆಚ್ಚಾಗುವುದೂ ಅಪೇಕ್ಷಣೀಯವಲ್ಲ. ಅದರ ಪರಿಣಾಮವೆಂದರೆ ಮಣ್ಣಿನಲ್ಲಿರುವ ಕಬ್ಬಿಣ ತಾಮ್ರ ಸತು ಮ್ಯಾಂಗನೀಸ್ ಮುಂತಾದ ಸಸ್ಯಪೋಷಕ ಲೋಹಾಂಶಗಳು ಬಿಡುಗಡೆಯಾಗಲಾರವು. ಕೆಲ ಸಸ್ಯವರ್ಗಗಳ ಬೆಳವಣಿಗೆಗೆ ಬೋರಾನ್, ಮೊಲಿಬ್ಡಿನಮ್, ಬೇರಿಯಂ, ಸ್ಟ್ರಾನ್‍ಷಿಯಂ, ಕೊಬಾಲ್ಟ್ ಮುಂತಾದ ಮೂಲವಸ್ತುಗಳೂ ಆವಶ್ಯಕ ಎಂಬುದು ಈಗ ಸ್ಪಷ್ಟವಾಗಿದೆ. ಸಾರಜನಕ (ಗಾಳಿಯಿಂದ), ರಂಜಕ (ನಶಿಸಿದ ಜೀವಿಗಳಿಂದ) ಪೊಟಾಸಿಯಂಗಳು (ಭೂಮಿಯಲ್ಲಿನ ಲವಣಗಳಿಂದ) ಸಸ್ಯಗಳ ಬೆಳವಣಿಗೆಗೆ ಅಗಾಧಪ್ರಮಾಣದಲ್ಲಿ ಆವಶ್ಯವಾದ ಪೌಷ್ಟಿಕಾಂಶಗಳಾದರೆ ಬೋರಾನ್ ಕೊಬಾಲ್ಟ್ ತಾಮ್ರ ಮುಂತಾದವು ಕನಿಷ್ಠಾಂಶದಲ್ಲಿಯಾದರೂ ಆವಶ್ಯವಾದ ಪೋಷಕ ವಸ್ತುಗಳು. ಇವುಗಳ ಪೂರೈಕೆ ಮಣ್ಣಿನಿಂದ ಎಷ್ಟರಮಟ್ಟಿಗೆ ಆಗಬಲ್ಲದು ಎಂಬುದಕ್ಕೆ ಮಣ್ಣಿನ ರಾಸಾಯನಿಕ ವಿಶ್ಲೇಷಣೆ ಹಾಗೂ ಅಧ್ಯಯನ ಅಗತ್ಯ. ಮರಳು, ಸುಣ್ಣ, ತಿಪ್ಪೆಗೊಬ್ಬರ, ಕೃತಕಗೊಬ್ಬರ, ನೀರು ಇವನ್ನು ನಿಯಂತ್ರಿತ ನಿಯೋಜಿತ ಪ್ರಮಾಣದಲ್ಲಿ ಉಪಯೋಗಿಸಿ ಮಣ್ಣನ್ನು ಕೃಷಿಯೋಗ್ಯ ಸ್ಥಿತಿಯಲ್ಲಿಡುವುದು ಪದ್ಧತಿ.

ಕೃಷಿಯೋಗ್ಯ ಭೂಮಿಯಲ್ಲಿ ಉತ್ತಮ ಬೀಜವನ್ನು ಬಿತ್ತುವುದು ವ್ಯವಸಾಯದಲ್ಲಿ ಮೊದಲ ಹೆಜ್ಜೆ. ಉತ್ತಮ ಬೀಜದ ಉತ್ಪಾದನೆ ಮತ್ತು ಶೇಖರಣೆಯಲ್ಲಿ ತಳಿಶಾಸ್ತ್ರಜ್ಞರಿಗೆ ರಸಾಯನವಿಜ್ಞಾನದ ನೆರವು ಅತ್ಯಾವಶ್ಯಕ. ಹೆಚ್ಚು ಬೆಳೆ ಇಳುವರಿ ಬರುವ ಮತ್ತು ರೋಗನಿರೋಧಕ ದೃಢಕಾಯ ಮಿಶ್ರತಳಿ ಶಕ್ತಿಮಾನ್ ಜೋಳ, ಐಆರ್–8 ಬತ್ತದ ತಳಿಗಳ ವೃದ್ಧಿಯೇ ಉದಾಹರಣೆಗಳು. ಬಿತ್ತಿದ ಬೀಜ ಮೊಳೆತು ಗಿಡವಾಗಿ ಬೆಳೆಯಲು ಪೋಷಕವಾಗಿ ಪುಷ್ಟಿಕರವಾದ ಆಹಾರ ಪೂರೈಕೆ ಆವಶ್ಯ. ಗಾಳಿಯಲ್ಲಿ ಯಥೇಚ್ಛವಾಗಿ ಸಾರಜನಕವಿದ್ದರೂ ಎಲ್ಲ ಸಸ್ಯವರ್ಗಗಳೂ ನೇರವಾಗಿ ಅದನ್ನು ಸೇವಿಸಲು ಸಮರ್ಥವಾಗಿಲ್ಲ. ಕೆಲವು ಜಾತಿಯ ಸಸ್ಯಗಳು ಮಾತ್ರ ತಮ್ಮ ಬೇರಿನ ಮೂಲಕ ಮಣ್ಣಿನ ಒಳಗೆ ಅಡಕವಾಗಿರುವ ಗಾಳಿಯಲ್ಲಿನ ಸಾರಜನಕವನ್ನು ಹೀರಬಲ್ಲವು. ಉಳಿದೆಲ್ಲವಕ್ಕೂ ಸಾರಜನಕ ಸಂಯುಕ್ತಗಳನ್ನು ಮಣ್ಣಿಗೆ ಬೆರಸಬೇಕು. ಮತ್ತೊಂದು ಪೌಷ್ಟಿಕಾಂಶವಾದ ರಂಜಕ ತಿಪ್ಪೆಗೊಬ್ಬರ, ಮೂಳೆಗೊಬ್ಬರಗಳ ಮೂಲಕ ಮಣ್ಣಿನಲ್ಲಿ ಸೇರಿದರೂ ಅದರ ಪ್ರಮಾಣ ಅಲ್ಪವಾದುದು. ಮೂರನೆಯ ಆವಶ್ಯ ಪೌಷ್ಟಿಕಾಂಶವಾದ ಪೊಟಾಸಿಯಂ ಕೂಡ ಎಲ್ಲ ಮಣ್ಣುಗಳಲ್ಲಿಯೂ ಅಪೇಕ್ಷಿತ ಪ್ರಮಾಣದಲ್ಲಿ ಇರುವುದಿಲ್ಲ. ಮನುಷ್ಯರಂತೆಯೇ ಸಸ್ಯಗಳಿಗೂ ಪೌಷ್ಟಿಕಾಂಶಗಳಿಗೆ ಸಂಬಂಧಿಸಿದಂತೆ ಸಮತೂಕದ ಆಹಾರ ಆವಶ್ಯಕ. ಈಗ ಸಾಮಾನ್ಯ ರೈತನಿಗೂ ಸುಪರಿಚಿತವಾಗಿರುವ ಎನ್‍ಪಿಕೆ ಮಿಶ್ರಣಗೊಬ್ಬರಗಳು ಈ ಮಾದರಿಯವು. ಹೆಚ್ಚು ಗೊಬ್ಬರ ಹಾಕಿದ ಮಾತ್ರಕ್ಕೆ ಹೆಚ್ಚು ಬೆಳೆ ಬರುವುದೆನ್ನುವುದೂ ವೈಜ್ಞಾನಿಕವಾಗಿ ಸರಿಯಲ್ಲ. ಆವಶ್ಯಕತೆಗಿಂತ ಹೆಚ್ಚಿನ ಪರಿಮಾಣದಲ್ಲಿ ಯಾವೊಂದು ಗೊಬ್ಬರವನ್ನು ಬಳಸಿದರೂ ವ್ಯರ್ಥವಾಗುತ್ತದೆ. ರಸಾಯನವಿಜ್ಞಾನಿಯ ನೆರವಿನಿಂದ ಆವಶ್ಯ ಪೌಷ್ಟಿಕಾಂಶಗಳ ಸಮತೂಕದ ಮಿಶ್ರಗೊಬ್ಬರಗಳನ್ನೂ ಅವನ್ನು ವಿವಿಧ ಬೆಳೆಗಳಿಗೆ ಉಪಯೋಗಿಸುವ ಪ್ರಮಾಣಗಳನ್ನೂ ನಿರ್ಧರಿಸಬಹುದು, ಬಳಕೆಯಲ್ಲಿರುವ ರಾಸಾಯನಿಕ ಗೊಬ್ಬರಗಳೆಂದರೆ ಅಮೋನಿಯಂ ಸಲ್ಫೇಟ್, ಕ್ಯಾಲ್ಸಿಯಂ ಸಯನಮೈಡ್, ಅಮೋನಿಯಂ ನೈಟ್ರೇಟ್, ಸೂಪರ್ ಫಾಸ್ಫೇಟ್, ಪೊಟಾಸಿಯಂ ಲವಣಗಳು ಮುಂತಾದವು. ಈ ಕೃತಕಗೊಬ್ಬರಗಳು ನೀರಿನಲ್ಲಿ ಎಷ್ಟರಮಟ್ಟಿಗೆ ವಿಲೀನವಾಗುತ್ತವೆ, ಮಣ್ಣಿನ ಆಮ್ಲತೆ ಕ್ಷಾರಗಳನ್ನು ಹೇಗೆ ಮಾರ್ಪಾಡುಮಾಡುತ್ತವೆ, ಬೆಳೆಗಳಿಂದ ಯಾವ ರೀತಿಯಲ್ಲಿ ಹೀರಿಕೊಳ್ಳಲ್ಪಡುತ್ತವೆ. ಮಣ್ಣಿನಲ್ಲಿ ಎಷ್ಟು ಇರಬಲ್ಲವು ಎಂಬೆಲ್ಲ ವಿಷಯಗಳ ಅಧ್ಯಯನ ಫಲಿತಾಂಶನಿರ್ಧಾರ ಕೃಷಿ ರಸಾಯನವಿಜ್ಞಾನದ ಕರ್ತವ್ಯ. ಪುಷ್ಟ ಆಹಾರ ಪೂರೈಕೆಯಾದರೂ ಬೆಳೆಗಳು ಸಮೃದ್ಧಿಯಾಗಿ ಕೈಗೆ ಬರುವುವೆಂಬ ನಿರೀಕ್ಷೆಗೆ ಅನೇಕ ಅಡಚಣೆಗಳಿವೆ. ರೋಗರುಜಿನಗಳು ಕ್ರಿಮಿಕೀಟಗಳ ಆಕ್ರಮಣ ಕಳೆಗಳ ಪೈಪೋಟಿ ಇವೇ ಮುಂತಾದ ಸಮಸ್ಯೆಗಳನ್ನು ಕೃಷಿಕ್ಷೇತ್ರದಲ್ಲಿ ಸರ್ವೇಸಾಧಾರಣವಾಗಿ ಎದುರಿಸುತ್ತಲೇ ಇರಬೇಕು. ನಿರಂತರ ಎಚ್ಚರಿಕೆ ನಿರೋಧ ಕ್ರಮಗಳನ್ನು ಅನುಸರಿಸದಿದ್ದಲ್ಲಿ ಪೈರು ನಾಶವಾದೀತು. ಕೆಲವೊಂದು ಸಾಂಕ್ರಾಮಿಕ ರೋಗಗಳು ವಿಶಾಲಕ್ಷೇತ್ರದ ಇಡೀ ಬೆಳೆಯನ್ನು ನಾಶಮಾಡಲು ಸಾಧ್ಯ. ಉದಾಹರಣೆಗೆ ಕಿತ್ತಳೆ, ಕಬ್ಬು, ಆಲೂಗಡ್ಡೆ ಇವುಗಳಿಗೆ ತಗಲುವ ವೈರಸ್‍ಮೂಲ ಅಥವಾ ನಂಜು ರೋಗಗಳು. **(ನೋಡಿ– ಕೀಟನಾಶಕಗಳು)**

ಕೀಟನಾಶಕಗಳು ಮೂಲತಃ ರಾಸಾಯನಿಕಗಳು. ಅವನ್ನು ಅಲ್ಪ ಪರಿಮಾಣದಲ್ಲಿ ಉಪಯೋಗಿಸಿದಾಗ ಬಾಧಕ ಕ್ರಿಮಿಕೀಟಾದಿಗಳಿಗೆ ವಿಷವಾದರೆ ಹೆಚ್ಚು ಪರಿಮಾಣದಲ್ಲಿ ಮುಖ್ಯ ಸಸಿಗೂ ಅಷ್ಟೇ ವಿಷವಾಗುವುದು ಮಾತ್ರವಲ್ಲ ಅದರ ಸಂಪರ್ಕಕ್ಕೆ ಬರುವ ರೈತನಿಗೂ ಅವನ ಸಾಕುಪ್ರಾಣಿಗಳಿಗೂ ಅಪಾಯಕಾರಿಯಾದೀತು. ಆದ್ದರಿಂದ ಈಗ ರೈತನಿಗೆ ಹೊಸದಾಗಿ ಲಭಿಸಿರುವ ಕೀಟನಾಶಕ ರಾಸಾಯನಿಕಗಳನ್ನು ರಸಾಯನವಿಜ್ಞಾನ ಪರಿಣತರು ನಿಗದಿ ಮಾಡಿರುವ ಪರಿಮಾಣದಲ್ಲಿ ಕಟ್ಟುನಿಟ್ಟಾಗಿ ಉಪಯೋಗಿಸುವುದು ಅನಿವಾರ್ಯ, ಇದೇ ಮಾತು ಕೃಷಿ ಉತ್ಪನ್ನಗಳ ದಾಸ್ತಾನಿನಲ್ಲಿ ಬಳಸುವ ವಿವಿಧ ಕ್ರಿಮಿಕೀಟನಾಶಕ ರಾಸಾಯನಿಕ ವಸ್ತುಗಳಿಗೂ ಅನ್ವಯಿಸುತ್ತದೆ. ಪ್ರತಿ ಬೆಳೆಯ ಸಂರಕ್ಷಣೆಗೋಸ್ಕರ ಬಳಸುವ ರಾಸಾಯನಿಕಗಳು ಮಣ್ಣಿನಲ್ಲಿ ಬೆರೆತು ಭಾಗಶಃ ತಮ್ಮ ಕಾರ್ಯನಿರ್ವಹಿಸಿ ನಿರ್ಮೂಲವಾದರೆ ಉಳಿದ ಅಂಶ ಹಾಗೆಯೇ ಉಳಿಯುತ್ತದೆ. ಕಾಲಕ್ರಮೇಣ ಅದು ಹೆಚ್ಚಾಗಿ ಮಿತಿಮೀರಿದಾಗ ಬೆಳೆಗೇ ಅಪಾಯಕಾರಿಯಾದೀತು. ಆದ್ದರಿಂದ ಕೃಷಿ ರಸಾಯನವಿಜ್ಞಾನಿ ಈ ವಿಷವಸ್ತುಗಳ ಉತ್ಪಾದನೆ ವಿಶ್ಲೇಷಣೆ ಪ್ರಯೋಗ ಪ್ರಯೋಗೋತ್ತರ ಪರಿಣಾಮಗಳ ಅಧ್ಯಯನ ಆ ಸಮಸ್ಯೆಗಳಿಗೆ ಪರಿಹಾರ ಹುಡುಕುವಿಕೆಯ ಕಾರ್ಯಚಟುವಟಿಕೆಗಳಲ್ಲಿ ನಿರಂತರವಾಗಿ ಆಸಕ್ತನಾಗಿರುತ್ತಾನೆ.

ಎಲ್ಲ ಜೀವಿಗಳಂತೆ ಸಸ್ಯವರ್ಗವೂ ಅದರ ಜೀವಿತಕಾಲದಲ್ಲಿ ಆಕಸ್ಮಿಕಗಳಿಗೊಳಗಾಗಿ ಗಾಯಗೊಳ್ಳುವುದುಂಟು. ಈ ಆಕಸ್ಮಿಕಗಳಿಗೆ ನೈಸರ್ಗಿಕ ಕಾರಣಗಳಿರಬಹುದು ಅಥವಾ ಪ್ರಾಣಿವರ್ಗದ ಉದ್ದೇಶಪೂರಿತ ಕೃತ್ಯಗಳೂ ಕಾರಣಗಳಾಗಬಹುದು. ಬಿರುಗಾಳಿ, ಅತಿವೃಷ್ಟಿ, ಭಾರಿ ಹಿಮ ಸಿಡಿಲು ಮುಂತಾದ ಕಾರಣಗಳಿಂದ ಕೊಂಬೆಗಳು ಮುರಿಯುವುದು ಎಲೆಗಳುದುರುವುದು ಸಾಮಾನ್ಯ ಅನುಭವ. ಹಕ್ಕಿಗಳು, ಪ್ರಾಣಿಗಳು ಕೊಂಬೆಗಳನ್ನು ಮುರಿಯುವುದೂ ಎಲೆ ಹೂಗಳನ್ನು ತಿನ್ನುವುದೂ ಗಾಯಗಳಿಗೆ ಕಾರಣವಾಗುತ್ತದೆ. ಪ್ರಾಣಿವರ್ಗಕ್ಕೆ ಹೋಲಿಸಿದರೆ ಸಸ್ಯವರ್ಗಕ್ಕೆ ತನ್ನ ಗಾಯಗಳನ್ನು ತಾನೇ ವಾಸಿಮಾಡಿಕೊಳ್ಳುವುದರಲ್ಲಿ ಅಸಾಧಾರಣ ಶಕ್ತಿ ಇದೆ. ಆದರೂ ಗಾಯಗೊಂಡ ಜಾಗಕ್ಕೆ ಚಿಕಿತ್ಸೆ ನಡೆಸುವುದರಿಂದ ಸಸ್ಯದ ಆರೋಗ್ಯ ರಕ್ಷಣೆಗೆ ಸಹಾಯವಾಗುತ್ತದೆ. ಕತ್ತರಿಸಿದ ಭಾಗವನ್ನು ಸ್ವಚ್ಛಮಾಡಿ ರಾಸಾಯನಿಕ ಮುಲಾಮನ್ನು ಹಚ್ಚಿ ಪೊಟರೆಗಳನ್ನೆಲ್ಲ ಮುಚ್ಚಿ ಗಾಯವನ್ನು ಮಾಯಲು ಸಹಾಯ ಮಾಡಬೇಕು. ಈ ಉದ್ದೇಶಕ್ಕಾಗಿ ಅರಗು ಮೇಣ ಬಣ್ಣದ ಮುಲಾಮು ಲಿನ್‍ಸಿಡ್ ಎಣ್ಣೆ ಟಾರ್ ಆಧಾರಿತ ರಾಸಾಯನಿಕಗಳು ಬಳಕೆಯಲ್ಲಿವೆ. ಇತ್ತೀಚಿನ ದಿನಗಳ ನೂತನ ಪದ್ಧತಿಯೊಂದೆಂದರೆ ಗಿಡಮರಗಳಿಗೂ

ಚುಚ್ಚುಮದ್ದನ್ನು ಕೊಡುವುದು. ಉದಾಹರಣೆಗೆ ಕಬ್ಬಿಣದ ಅಂಶ ಕಡಿಮೆಯಾದಾಗ ಕಬ್ಬಿಣಸಂಯುಕ್ತ ದ್ರವವೊಂದನ್ನು ಚುಚ್ಚುಮದ್ದಾಗಿ ಬಳಸುವರು. ಹಾಗೆಯೇ ಸತುವಿನ ಕ್ಲೋರೈಡ್ ಮೈಲುತುತ್ತಗಳನ್ನೂ ಬಳಸಬಹುದು. ಇದಕ್ಕೆಲ್ಲ ರಸಾಯನವಿಜ್ಞಾನಿ ಮೊದಲು ಯಾವ ಔಷಧಿಯನ್ನು ಎಷ್ಟು ಪರಿಮಾಣದಲ್ಲಿ ಕೊಡಬೇಕೆಂದು ನಿರ್ಧರಿಸುವ ವೈದ್ಯನಂತಾಗುತ್ತಾನೆ.

ಸಂರಕ್ಷಿತ ಭೂಮಿ ಪೌಷ್ಟಿಕ ಆಹಾರ ಸಂರಕ್ಷಿತ ಬೆಳೆ ಇಷ್ಟಾದ ಮೇಲೆ ಉದ್ದೇಶಿತ ಅಂತಿಮ ಫಲವನ್ನು ಆದಷ್ಟು ಬೇಗ ಪಡೆಯುವುದೂ ರೈತನ ಆಕಾಂಕ್ಷೆಗಳಲ್ಲೊಂದು. ಈ ಕ್ಷೇತ್ರದಲ್ಲೂ ರಾಸಾಯನಿಕಗಳ ಪ್ರಭಾವ ರೈತನಿಗೆ ಸಹಕಾರಿಯಾಗಿದೆ. ಕಾಯಿಗಳನ್ನು ಬೇಗ ಹಣ್ಣಾಗಿಸಲು ಎಥೀಲಿನ್ ರಾಸಾಯನಿಕ ಉತ್ತೇಜಕ. ಸೇಬು ಕಿತ್ತಲೆ ಹಣ್ಣುಗಳು ಬಲಿಯುವುದಕ್ಕೆ ಮುಂಚೆಯೇ ಗಿಡದಿಂದ ಬಿದ್ದುಹೋಗದಂತೆ ರಕ್ಷಿಸಿ ಚೆನ್ನಾಗಿ ಬಲಿತು ಹಣ್ಣಾಗುವಂತೆ ಮಾಡಲು ನ್ಯಾಫ್ಥಲೀನ್ ಅಸೆಟಿಕ್ ಆಮ್ಲ ಮತ್ತು 2–4 ಡೈಕ್ಲೋರೊ ಫೀನಾಕ್ಸಿ ಅಸೆಟಿಕ್ ಆಮ್ಲಗಳನ್ನು ಉಪಯೋಗಿಸುವರು. ಗಿಬೆರಲಿನ್ ಎಂಬ ರಾಸಾಯನಿಕ ಸಸ್ಯ ಮತ್ತು ಅದರ ಫಲದ ಶೀಘ್ರ ಬೆಳವಣಿಗೆಗೆ ಉತ್ತೇಜಕ. ಗಿಡಮರಗಳು ಹೂ ಬಿಟ್ಟಾಗ ಗೊಂಚಲಿನಲ್ಲಿನ ಹೂಗಳ ಸಂಖ್ಯೆಯನ್ನು ನಿಯಂತ್ರಿಸಿ ಅವು ಯಶಸ್ವಿಯಾಗಿ ಕಾಯಿ ಬಿಡುವಂತೆ ಮಾಡಲು ಸಾಧ್ಯ. ಪೈರಿನ ಕುಯಿಲು ಯಾಂತ್ರೀಕರಣಗೊಳ್ಳಲಾಗಿ ಫಲವನ್ನು ಮಾತ್ರ ಬೆಳೆಯ ಮೇಲೆ ಬಿಟ್ಟು ಉಳಿದ ಎಲೆಗಳನ್ನು ಉದುರುವಂತೆ ಮಾಡುವುದು ವಿಹಿತ. ಉದಾಹರಣೆಗೆ ಹತ್ತಿ ಬೆಳೆಯಲ್ಲಿ ಕ್ಯಾಲ್ಸಿಯಂ ಸಯನಮೈಡ್ ಧೂಳಿನ ಉಪಯೋಗ, ಬೊರೇಟ್–ಕ್ಲೋರೇಟುಗಳ ಮಿಶ್ರಣ ಇತ್ಯಾದಿ. ಈ ಎಲ್ಲ ಉದ್ದೇಶಗಳನ್ನೂ ಸೂಕ್ತ ರಾಸಾಯನಿಕಗಳ ಪ್ರಯೋಗದಿಂದ ಸಾಧಿಸಲಾಗಿದೆ.

ಕೃಷಿ ರಸಾಯನವಿಜ್ಞಾನದ ಪೂರ್ಣ ಉಪಯೋಗವನ್ನು ಇತರ ಕೃಷಿವಿಜ್ಞಾನಿಗಳ ಸಹಕಾರದಿಂದ ಮಾತ್ರ ಪಡೆಯುವುದು ಸಾಧ್ಯ. ವೈಜ್ಞಾನಿಕ ಕೃಷಿಯ ಪೂರ್ಣ ಫಲವನ್ನು ಮೊದಲು ಅನುಭವಿಸಿದ ರಾಷ್ಟ್ರವೆಂದರೆ ಅಮೆರಿಕ. ಅಲ್ಲಿ ಇಳುವರಿ ಎಷ್ಟರಮಟ್ಟಿಗೆ ಹೆಚ್ಚಿತೆಂದರೆ ರೈತ ತನ್ನ ಉತ್ಪನ್ನವನ್ನು ವಿಲೇವಾರಿ ಮಾಡುವುದೇ ಒಂದು ಸಮಸ್ಯೆಯಾಯಿತು.

ಕರ್ನಾಟಕದಲ್ಲಿ ಮಿಶ್ರತಳಿ ಜೋಳದ ಬೆಳೆ ಆಹಾರ ಪೂರೈಕೆಗಿಂತ ಅಧಿಕವಾಗಿ ಬೆಲೆ ಕುಸಿದು ರೈತರನ್ನು ಸಮಸ್ಯೆಗೀಡುಮಾಡಿದುದೂ ಒಂದು ಉದಾಹರಣೆ. ಇಂಥ ಸಮಸ್ಯೆಯನ್ನು ಎದುರಿಸಲು ರಸಾಯನ ವಿಜ್ಞಾನಿಗಳು ಸಹಾಯಕರಾಗಿ ಕೃಷಿ ರಸಾಯನವಿಜ್ಞಾನದ ಒಂದು ವಿಶಿಷ್ಟ ಶಾಖೆಯೇ ಎನ್ನಬಹುದಾದ ಕೆಮರ್ಜಿ ಅಂದರೆ ಅಧಿಕ ಕೃಷಿ ಆಹಾರೋತ್ಪನ್ನಗಳ ರಾಸಾಯನಿಕ ವಿಲೇವಾರಿ ಉದಯವಾಯಿತು. ಇದರಲ್ಲಿ ಸಾವಯವ ರಸಾಯನವಿಜ್ಞಾನದ ಪಾತ್ರವೇ ಪ್ರಮುಖವಾದುದು. ಕೃಷಿ ಉತ್ಪನ್ನಗಳಲ್ಲೆಲ್ಲ ಉಪಯುಕ್ತ ಸಾವಯವ ಸಂಯುಕ್ತಗಳಾದ ಶರ್ಕರಪಿಷ್ಟಾದಿಗಳು ಸೆಲ್ಯುಲೋಸ್ ಪ್ರೋಟೀನ್‌ಗಳೂ ಎಣ್ಣೆ ಮತ್ತು ಕೊಬ್ಬುಗಳು ಇರುವುವು. ಇವುಗಳ ಆಧಾರದ ಮೇಲೆ ರಾಸಾಯನಿಕ ಕೈಗಾರಿಕೆಗಳನ್ನು ಕೈಗೊಂಡು ಉಪಯುಕ್ತ ಕೈಗಾರಿಕಾ ಉತ್ಪನ್ನಗಳನ್ನು ಪಡೆಯಬಹುದು. ಉದಾಹರಣೆಗೆ ಕಬ್ಬಿನ ಚರಟಿನಿಂದ ಕಾಗದ, ಜೋಳದಿಂದ ಪಿಷ್ಟ ಮತ್ತು ಗ್ಲೂಕೋಸ್, ಅಕ್ಕಿ ತೌಡಿನಿಂದ ಎಣ್ಣೆ ಮತ್ತು ಸಾಬೂನು, ಕಡ್ಲೆಕಾಯಿ ಸಿಪ್ಪೆಯಿಂದ ಬೆಂಡು, ಓಟ್ಸ್ ಜೊಂಡಿನಿಂದ ಕಾಗದ, ಓಟ್ಸ್ ಹೊಟ್ಟು ತೌಡಿನಿಂದ ಫರ್‌ಫ್ಯುರಾಲ್ ಅದರಿಂದಾಗಿ ನೈಲಾನ್ ಕೀಲೆಣ್ಣೆಗಳು ಇತ್ಯಾದಿ ; ಅಗಸೆಗಿಡದ ಜಾತಿಯ ಲಿನ್ಸೀಡ್ ಎಣ್ಣೆಯ ಬೀಜದ ಗಿಡದ ನಾರಿನಿಂದ ಸಿಗರೇಟ್ ಕಾಗದ ಹರಳೆಣ್ಣೆಯಿಂದ ಬೇಗ ಒಣಗುವ ಶಾಯಿಗಳು, ಬಣ್ಣಗಳು, ವಾರ್ನಿಷ್‌ಗಳು ಇತ್ಯಾದಿ. (ಎಚ್.ಎಸ್.ಎನ್.)

**ಕೃಷಿ ವಾರ್ತೆ :** ರೈತರಿಗೆ ಮತ್ತು ರೈತರೊಂದಿಗೆ ಕೆಲಸ ಮಾಡುವ ಸಂಘಸಂಸ್ಥೆಗಳ ಕಾರ್ಯಕರ್ತರಿಗೆ ಕೃಷಿಯ ವಿಷಯವಾಗಿ ಸಮಯೋಚಿತ ಮಾಹಿತಿ; ಇತ್ತೀಚಿನ ಸಂಶೋಧನೆಗಳು, ಸುಧಾರಿತ ಪದ್ಧತಿಗಳ ಗುಣಗಳು ಮತ್ತು ಅವುಗಳನ್ನು ಹಂತಹಂತವಾಗಿ ಅನುಸರಿಸುವ ವಿಧಾನಗಳು–ಇವನ್ನು ಕುರಿತ ವಾರ್ತೆ. ಕೃಷಿವಾರ್ತೆಯ ಸಹಾಯದಿಂದ ರೈತ ತನ್ನ ಬೇಸಾಯವನ್ನು ಅಭಿವೃದ್ಧಿಪಡಿಸಿಕೊಂಡು ಹೆಚ್ಚು ಇಳುವರಿ ಪಡೆದು ತನ್ನ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಲ್ಲದೆ, ಹೊರದೇಶದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುವುದನ್ನು ನಿಲ್ಲಿಸುವುದು ಸಾಧ್ಯವಾಗುತ್ತದೆ.

ಕೃಷಿವಾರ್ತೆ ಸಂಪೂರ್ಣವಾಗಿ ಯಶಸ್ವಿಯಾಗಿ ಪರಿಣಾಮಕಾರಿಯಾಗಲು ಮೂರು ಅಂಶಗಳು ಮುಖ್ಯ ; 1. ವಾರ್ತೆಯ ಮೂಲ ಮತ್ತು ಅದನ್ನು ಕಳುಹಿಸುವ ವ್ಯಕ್ತಿ, 2. ಅದನ್ನು ಕಳುಹಿಸುವ ವಿಧಾನ, 3. ಪಡೆಯುವ ಜನ

**1. ವಾರ್ತೆಯ ಮೂಲ :** ಕೃಷಿವಾರ್ತೆಯ ಮೂಲಗಳು ಅನೇಕ. ಅವುಗಳಲ್ಲಿ ಕೃಷಿಸಂಶೋಧಕರು, ಕೃಷಿ ವಿಸ್ತರಣ ತಜ್ಞರು ಮತ್ತು ಕೃಷಿಪತ್ರಿಕೆ ಮತ್ತು ಲೇಖನಗಳು ಮುಖ್ಯವಾದವು. ಕೃಷಿ ಸಂಶೋಧಕರು ರೈತರ ಸಮಸ್ಯೆಗಳನ್ನು ಅರಿತುಕೊಂಡು ಅವನ್ನು ನಿವಾರಿಸಲು ಅನುಸರಿಸಬೇಕಾದ ಪದ್ಧತಿಗಳನ್ನು ಸಂಶೋಧನಾಲಯಗಳಲ್ಲಿ ಕಂಡುಹಿಡಿದು, ಪರೀಕ್ಷಿಸುತ್ತಾರೆ. ಅಲ್ಲದೆ ಅವನ್ನು ರೈತರ ವಿವಿಧ ಕ್ಷೇತ್ರಗಳಲ್ಲಿ ಪರೀಕ್ಷಿಸಲು ತಜ್ಞರಿಗೆ ಸಹಾಯ ಮಾಡುತ್ತಾರೆ. ಕೃಷಿತಜ್ಞರು ಇತ್ತೀಚಿನ ಸಂಶೋಧನೆಗಳ ಫಲಿತಾಂಶಗಳನ್ನು ತಿಳಿದುಕೊಂಡು ಅವನ್ನು ವಿಶ್ಲೇಷಿಸಿ, ಆಯಾ ಋತುಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ಅನುಸರಿಸಬೇಕಾದ ಪದ್ಧತಿಗಳನ್ನು ರೈತರಿಗೆ ತಿಳಿಯಪಡಿಸುತ್ತಾರೆ. ಇವರ ಇನ್ನೊಂದು ಕಾರ್ಯವೆಂದರೆ ರೈತರ ಸಮಸ್ಯೆಗಳನ್ನು ಅರಿತುಕೊಂಡು ಸಂಬಂಧಪಟ್ಟ ಸಂಶೋಧಕರಿಗೆ ಹೆಚ್ಚಿನ ಸಂಶೋಧನೆಗೆ ಸೂಚನೆ ನೀಡುವುದು. ಕೃಷಿ ಪತ್ರಿಕೆ ಮತ್ತು ಲೇಖನಗಳು, ಸಂಶೋಧನ ಫಲಿತಾಂಶಗಳು, ಕ್ಷೇತ್ರ ಪರೀಕ್ಷೆಗಳ ಫಲಿತಾಂಶಗಳು ಮತ್ತು ಕೃಷಿ ವಿಜಯದ ಕಥೆಗಳು–ಇವನ್ನು ಪ್ರಕಟಿಸಿ, ಇವು ರೈತರಿಗೆ ಮತ್ತು ಕಾರ್ಯಕರ್ತರಿಗೆ ಬೇಕಾದಾಗ ದೊರೆಯುವಂತೆ ಮಾಡುವುದೂ ಕರ್ತವ್ಯವಾಗಿದೆ. ಕೃಷಿವಾರ್ತೆಯನ್ನು ಕಳುಹಿಸುವವನು ಕೃಷಿತಜ್ಞ, ಕೃಷಿವಿಸ್ತರಣ ಕಾರ್ಯಕರ್ತ, ಕೃಷಿವಾರ್ತಾಧಿಕಾರಿ, ಆಕಾಶವಾಣಿಯ ಕೃಷಿ ವಿಭಾಗದ ಅಧಿಕಾರಿ ಅಥವಾ ಸಂಘಸಂಸ್ಥೆಗಳ ಕಾರ್ಯಕರ್ತನಾಗಿರಬಹುದು.

**2. ಕಳುಹಿಸುವ ವಿಧಾನ :** ವಾರ್ತೆಯನ್ನು ಕಳುಹಿಸಲು ಅನೇಕ ವಿಧಾನಗಳನ್ನು ಅನುಸರಿಸಬೇಕಾಗಬಹುದು. ವೃತ್ತಪತ್ರಿಕೆ ಮತ್ತು ರೇಡಿಯೋಗಳಿಗೆ ಪೂರಕವಾಗಿ ಕೃಷಿ ವಾರ್ತಾ ಕರಪತ್ರಿಕೆಗಳು, ಭಿತ್ತಿಪತ್ರಗಳು, ಸುತ್ತೋಲೆಗಳು, ಕೃಷಿ ಪುಸ್ತಕಗಳು, ಚಿತ್ರಗಳು, ಪ್ರದರ್ಶನಗಳು, ಚಲನಚಿತ್ರಗಳು, ವಾಸ್ತವ ಕಥೆಗಳು, ಕ್ಷೇತ್ರೋತ್ಸವಗಳು ಮತ್ತು ರೈತ ದಿನಾಚರಣೆಗಳು, ಇವು ಕೆಲವು ವಿಧಾನಗಳು. ಕೃಷಿ ವಾರ್ತೆಯನ್ನು ವೈಯುಕ್ತಿಕವಾಗಿ ರೈತನಲ್ಲಿಗೆ ತೆಗೆದುಕೊಂಡು ಹೋಗುವುದಕ್ಕಿಂತ ಪರಿಣಾಮಕಾರಿಯಾದ್ದು ಬೇರೆ ಯಾವುದೂ ಇಲ್ಲ. ಆದರೆ ಇದಕ್ಕೆ ಬೇಕಾದ ಜನಬಲ ಮತ್ತು ಆರ್ಥಿಕ ಬಲವನ್ನು ಒದಗಿಸುವುದು ಸದ್ಯದಲ್ಲಿ ಸಾಧ್ಯವಿಲ್ಲ. ಆದ್ದರಿಂದ ಅನೇಕ ಬಗೆಯ ಇತರ ಸಾಮೂಹಿಕ ಸಂಪರ್ಕಸಾಧನಗಳನ್ನೂ ವಿವಿಧ ಶ್ರವ್ಯದೃಶ್ಯ ಮಾಧ್ಯಮಗಳನ್ನೂ ಬಳಸಬೇಕಾಗುತ್ತದೆ.

**3. ಪಡೆಯುವ ಜನ :** ಕೃಷಿ ವಾರ್ತೆ ಮೂರು ಬಗೆಯ ಜನರನ್ನು ತಲುಪಬೇಕಾಗುತ್ತದೆ.–ಬೇಸಾಯಗಾರ, ರೈತರೊಂದಿಗೆ ಅವರ ಅಭಿವೃದ್ಧಿಗಾಗಿ ಕೆಲಸ ಮಾಡುವ ವಿವಿಧ ಸಂಘಸಂಸ್ಥೆಗಳ ಕಾರ್ಯಕರ್ತರು ಮತ್ತು ಇತರ ಸಂಶೋಧಕರು; ವ್ಯವಸಾಯ ಯೋಜನೆಗಳನ್ನು ರೂಪಿಸುವ ಅಧಿಕಾರಿಗಳು, ರಾಜಕಾರಣಿಗಳು; ಮತ್ತು ಸಾಮಾನ್ಯ ಜನರು. ರೈತರು ನೋಡಿ, ಕೇಳಿ, ಮಾಡಿ ಕಲಿಯುವುದು ಸಾಧ್ಯವಾಗುವಂತೆ ಪ್ರಚಾರಕ ಅನೇಕ ಸಾಧನಗಳನ್ನು ತನ್ನ ಕೆಲಸಕಾರ್ಯಗಳಲ್ಲಿ ಬಳಸಿಕೊಳ್ಳಬೇಕು. ಸಾಧನಗಳನ್ನು ಬಳಸಲು ಇರುವ ಜನಬಲ, ಹಣಬಲ, ತಾಂತ್ರಿಕ ಸೌಲಭ್ಯ, ಕಾಲಾವಕಾಶ ಮತ್ತು ಅದು ತಲುಪಬೇಕಾದ ಜನಗಳ ಗುಣ ಲಕ್ಷಣಗಳನ್ನು ತಿಳಿದುಕೊಂಡಿರಬೇಕು. ಕಾಲಕ್ಕನುಗುಣವಾಗಿ ಸಂಪನ್ಮೂಲಗಳನ್ನು ಅರಿತುಕೊಂಡು ಸೂಕ್ತ ಸಾಧನಗಳನ್ನು ಪ್ರಯೋಗಿಸಬೇಕು. ಈ ಸಾಧನಗಳನ್ನು ಅವುಗಳ ಕಾರ್ಯಕ್ಕನುಗುಣವಾಗಿ ವಿಂಗಡಿಸಬಹುದು : 1. ತೋರಿಸಿ ಕಲಿಸುವ ಸಾಧನಗಳು. ಕೆಲವು ಸಾಧನಗಳನ್ನು ತೋರಿಸಿ ಆ ಮೂಲಕ ತಿಳಿವಳಿಕೆಯನ್ನುಂಟು ಮಾಡಬಹುದು. ಚಿತ್ರಪಟಗಳು, ಚಲನಚಿತ್ರಗಳು, ರೇಖಾಚಿತ್ರಗಳು, ಪ್ರದರ್ಶನಗಳು, ಅಚ್ಚಾದ ವಿಷಯಗಳು, ಶೈಕ್ಷಣಿಕ ಪ್ರವಾಸಗಳು ಹಾಗೂ ಪ್ರಾತ್ಯಕ್ಷಿಕೆಗಳು ಈ ಗುಂಪಿಗೆ ಸೇರುತ್ತವೆ. 2. ಕೇಳಿಸಿ ಕಲಿಸುವ ಸಾಧನಗಳು : ಒಂದು ವಿಷಯವನ್ನು ಹೇಳಿ ಅದರ ಮೂಲಕ ತಿಳಿವಳಿಕೆ ಉಂಟುಮಾಡಲು ಕೆಲವು ಸಾಧನಗಳನ್ನು ಬಳಸಬಹುದು. ರೇಡಿಯೋ, ಶಬ್ದಚಿತ್ರ, ಟೆಲಿಫೋನ್, ಧ್ವನಿಮುದ್ರಿಕೆಗಳು, ಧ್ವನಿವರ್ಧಕಗಳು ಮತ್ತು ನೇರ ಮಾತುಕತೆ ಇವು ಶ್ರವ್ಯ ಸಾಧನಗಳು. 3. ಮಾಡಿಸಿ ಕಲಿಸುವ ಸಾಧನಗಳು: ಕೆಲವು ಸಾಧನಗಳು ಸ್ವತಃ ಮಾಡಿಸುವುದರ ಮೂಲಕ ತಿಳಿವಳಿಕೆ ಉಂಟುಮಾಡಲು ಅನುಕೂಲವಾಗುತ್ತವೆ. ಜನರು ಪಾತ್ರವಹಿಸುವ ಪ್ರದರ್ಶನಗಳು, ಫಲಿತಾಂಶ ಪ್ರದರ್ಶನಗಳು ಮತ್ತು ಕಾರ್ಯವಿಧಾನ ಪ್ರದರ್ಶನಗಳು ಈ ಗುಂಪಿಗೆ ಸೇರುತ್ತವೆ. ಅನೇಕ ವೇಳೆ ಈ ಮೂರರಲ್ಲಿ ಎರಡು ಅಥವಾ ಮೂರು ಕಾರ್ಯಗಳನ್ನು ಕೆಲವು ಸಾಧನಗಳಿಂದ ನೆರವೇರಿಸಬಹುದು. ವಾಕ್ಚಿತ್ರ ಮತ್ತು ಟೆಲಿವಿಷನ್ ಪ್ರದರ್ಶನಗಳು ತೋರಿಸಿ ಮತ್ತು ಕೇಳಿಸಿ ಕಲಿಸುವ ಸಾಧನಗಳು. ವಸ್ತುಪ್ರದರ್ಶನಗಳೂ ಫಲಿತಾಂಶ ಮತ್ತು ಕಾರ್ಯವಿಧಾನ ಪ್ರದರ್ಶನಗಳೂ ನೋಡಿಸುವ, ಕೇಳಿಸುವ ಮತ್ತು ಮಾಡಿಸುವ ವಿಧಾನಗಳು.

ಕೃಷಿವಾರ್ತೆ ರೈತರಿಗೆ ಎಷ್ಟು ವಿಧಗಳಲ್ಲಿ ಎಷ್ಟು ಸಾರಿ ತಲುಪುತ್ತದೋ ಅಷ್ಟು ಪರಿಣಾಮಕಾರಿಯಗುತ್ತದೆ. ಇದು ಮರೆತಿರುವುದನ್ನು ಜ್ಞಾಪಕಮಾಡುತ್ತದೆ, ಸಂಶಯಗಳನ್ನು ನಿವಾರಿಸುತ್ತದೆ ಮತ್ತು ಪರೀಕ್ಷಿಸಿ ನೋಡುವಂತೆ ಮಾಡುತ್ತದೆ. ಒಂದು ವಿಷಯವನ್ನು ಮೇಲಿಂದಮೇಲೆ ವಿವಿಧ ರೀತಿಗಳಲ್ಲಿ ಹೇಳಿದರೆ–ಮಾತು, ಚಿತ್ರ, ಮುದ್ರಿತ ಪದ, ಚಲನಚಿತ್ರ, ಇತ್ಯಾದಿಗಳ ಮೂಲಕ ಹೇಳುತ್ತ ಬಂದರೆ ಅದನ್ನು ಪರೀಕ್ಷಿಸಬೇಕೆಂಬ ಆಕಾಂಕ್ಷೆ ಮೂಡುವುದು ಸಹಜ. ಈ ಪದ್ಧತಿಯನ್ನು ಬಹಳ ಯಶಸ್ವಿಯಾಗಿ ಬೆಳೆಸಿಕೊಂಡು ಬಂದಿದ್ದಾರೆ. ರೈತರಲ್ಲಿ ಆಕಾಂಕ್ಷೆ ಮೂಡಿ ಬಂದಾಗ ವಿಸ್ತರಣ ಕಾರ್ಯಕರ್ತರು ಆ ವಿಧಾನದ ಬಗ್ಗೆ ಹೆಚ್ಚು ವಿಷಯಗಳನ್ನು ಮತ್ತು ಅದನ್ನು ಆಚರಣೆಗೆ ತರಲು ಬೇಕಾಗುವ

ವಸ್ತು ಸಂಪನ್ಮೂಲಗಳನ್ನು ಮತ್ತು ತಾಂತ್ರಿಕ ತಿಳಿವಳಿಕೆಯನ್ನು ಒದಗಿಸಿ ಅದನ್ನು ಪ್ರತ್ಯಕ್ಷ ಮಾಡಿ ನೋಡಲು ಅವನಿಗೆ ಅನುಕೂಲ ಕಲ್ಪಿಸಿಕೊಡಬೇಕು. ರೈತ ಅದನ್ನು ಆಚರಣೆಗೆ ತಂದ ಮೇಲೂ ಆಗಾಗ ಅದನ್ನು ಪರೀಕ್ಷಿಸುತ್ತಿರಬೇಕು.

ಹೊಸ ಪದ್ಧತಿಯೊಂದನ್ನು ಮೊತ್ತಮೊದಲಿಗೆ ಪರೀಕ್ಷೆಮಾಡಲು ಒಪ್ಪುವವನನ್ನು ಪ್ರದರ್ಶನಕಾರರೈತ ಎಂದು ಕರೆಯುತ್ತಾರೆ. ಇವನ ಸಹಾಯದಿಂದ ಆ ಪದ್ಧತಿಯನ್ನು ಇನ್ನೂ ಬಹಳ ಜನರು ಆಚರಣೆಗೆ ತರಬಹುದು. ಇವನನ್ನು ಕೇಂದ್ರವಾಗಿ ಮಾಡಿಕೊಂಡು, ಇವನಿಂದ ತಿಳಿವಳಿಕೆ ಹರಡುವಂತೆ ಮಾಡಬೇಕು. ಬೇರೆಯವರು ಹೇಳುವುದಕ್ಕಿಂತ ನೆರೆಹೊರೆಯ ರೈತರು ಮಾಡಿ ಲಾಭ ಪಡೆದಿರುವುದನ್ನು ಕೇಳಿ ನೋಡಿದರೆ ನಂಬುವುದು ಸುಲಭ. ಕೃಷಿವಾರ್ತೆ ಪ್ರದರ್ಶನಕಾರ ರೈತನಿಗೆ ಸುಲಭವಾಗಿ, ಕಾಲಕ್ಕೆ ಸರಿಯಾಗಿ ದೊರೆಯುವಂತಿರಬೇಕು. ಪ್ರದರ್ಶನಕಾರ ಸ್ವತಃ ಮಾಡುವುದನ್ನು ಪ್ರತ್ಯಕ್ಷವಾಗಿ ಕಂಡು ಅವನೊಂದಿಗೆ ಸಂಭಾಷಿಸಿ ಸಂಶಯಗಳನ್ನು ನಿವಾರಿಸಿಕೊಂಡು ಇತರ ರೈತರು ಅದನ್ನು ಅನುಷ್ಠಾನಕ್ಕೆ ತರುವುದರಿಂದ ಸಂಶೋಧನೆಯಿಂದ ಸ್ಥಿರಪಟ್ಟಂಥ ವಾರ್ತೆಗಳು ಪ್ರದರ್ಶನಕಾರ ರೈತನಿಗೆ ತಲುಪುವಂತೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು.

ಕೃಷಿ ವಾರ್ತೆಯನ್ನು ಈ ಕಾರ್ಯಕ್ರಮಗಳಲ್ಲಿ ಯಶಸ್ವಿಯಾಗಿ ಉಪಯೋಗಿಸಬಹುದು : 1. ರೈತರಿಗೆ ವಿಷಯ ತಿಳಿಸುವುದು: ಒಂದು ಹೊಸ ಪದ್ಧತಿ ಅಥವಾ ಹಳೆಯ ಪದ್ಧತಿಯನ್ನು ಸರಿಯಾಗಿ ಅನುಸರಿಸಲು ಅನುವಾದಂಥ ಸಂಶೋಧನೆಯ ಫಲಿತಾಂಶಗಳನ್ನು ರೈತರಿಗೆ ತಿಳಿಸಲು ಕೃಷಿವಾರ್ತೆಯನ್ನು ಉಪಯೋಗಿಸಿಕೊಳ್ಳಬೇಕು. 2. ರೈತರಲ್ಲಿ ಆಸೆ ಹುಟ್ಟಿಸುವುದು; ಸುಧಾರಿತ ಪದ್ಧತಿಯನ್ನು ಸರಿಯಾಗಿ ಆಚರಣೆಗೆ ತರುವುದರಿಂದ ಅಥವಾ ಹೊಸ ಪದ್ಧತಿಯನ್ನು ಉಪಯೋಗಿಸುವುದರಿಂದ ಬರುವ ಹೆಚ್ಚು ಇಳುವರಿಯ ವಿಷಯವಾಗಿ ಪ್ರದರ್ಶನ ತಾಕುಗಳಲ್ಲಿ ಫಸಲನ್ನು ಬೆಳೆದು ತೋರಿಸುವುದರಿಂದ ರೈತರಲ್ಲಿ ಆಸೆ ಹುಟ್ಟಿಸಬಹುದು. ಕೃಷಿ ವಾರ್ತೆ ಇಲ್ಲಿ ಸಹ ನೆರವಾಗುತ್ತದೆ. 3. ರೈತರಲ್ಲಿ ಸ್ಫೂರ್ತಿ ತುಂಬುವುದು; ರೈತರಲ್ಲಿ ಆಸೆ ಹುಟ್ಟಿದ ಅನಂತರ ಅದನ್ನು ಅನುಷ್ಠಾನಕ್ಕೆ ತರಲು ಬೇಕಾಗುವ ತಾಂತ್ರಿಕ ತಿಳಿವಳಿಕೆ ಕೊಡಲು ಕೃಷಿವಾರ್ತೆ ಅನುಕೂಲ ಮಾಡಿಕೊಡುತ್ತದೆ. 4. ರೈತನಿಗೆ ತಿಳಿವಳಿಕೆ ಕೊಡುವುದು: ಒಂದು ಪದ್ಧತಿಯನ್ನು ಅನುಸರಿಸಲು ಮೊದಲಿಂದ ಕೊನೆಯವರೆಗೂ ರೈತನಿಗೆ ಅದರ ವಿಷಯವಾಗಿ ತಿಳಿವಳಿಕೆ ಬೇಕಾಗುತ್ತದೆ. ಈ ತಿಳಿವಳಿಕೆಯನ್ನು ಕೃಷಿವಾರ್ತೆ ನೀಡುತ್ತದೆ.

ರೈತರಲ್ಲಿ ಬಹುಮಂದಿ ಅನಕ್ಷರಸ್ಥರಾಗಿರುವುದರಿಂದ ಮುದ್ರಿತ ಅಥವಾ ಲಿಖಿತ ಪದಗಳು ಅವರಿಗೆ ಉಪಯೋಗವಾಗಲಾರವು. ಆದ್ದರಿಂದ ಮುದ್ರಿತ ಪದಗಳ ಜೊತೆಗೆ ಕೃಷಿವಾರ್ತೆಯನ್ನು ಚಿತ್ರ, ಚಲನಚಿತ್ರ, ಭಿತ್ತಿಪತ್ರಗಳು, ಪ್ರಚಾರ ಪತ್ರಗಳು, ಪ್ರಾತ್ಯಕ್ಷಿಕೆಗಳು, ಪ್ರದರ್ಶನಗಳು–ಇವುಗಳ ಮೂಲಕ ಹರಡಬೇಕು.

ಕೃಷಿವಾರ್ತೆಯನ್ನು ಉಪಯೋಗಿಸುವುದು ಒಂದು ಕಲೆ. ಯಾವಾಗ, ಯಾರಿಗೆ, ಎಲ್ಲಿ, ಯಾವ ಸಾಧನಗಳನ್ನು ಬಳಸಬೇಕೆಂದು ಅರಿತು ಅವನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದರಿಂದ ಹೆಚ್ಚು ಲಾಭ ಪಡೆಯಬಹುದು. ಸಾಧನಗಳು ತಮ್ಮಷ್ಟಕ್ಕೆ ತಾವೇ ಏನನ್ನೂ ತಿಳಿಸುವುದಿಲ್ಲವಾದ್ದರಿಂದ ಕಾರ್ಯಕರ್ತರು ಬೇಕಾದಾಗ ಸರಿಯಾದವುಗಳನ್ನು ಉಪಯೋಗಿಸಬೇಕು.

ವಾರ್ತಾಸಾಧನಗಳು ಸರಿಯಾಗಿ ಉಪಯೋಗವಾಗುವಂತೆ ಮಾಡಲು ಅವನ್ನು ಬಳಸುವ ಜನಕ್ಕೆ, ಎಂದರೆ ವಿಸ್ತರಣ ಕಾರ್ಯಕರ್ತರಿಗೆ ಆಗಾಗ ತರಬೇತು ಕೊಡುವುದು ಆವಶ್ಯಕ. ಬೇರೆಯವರು ಮಾಡಿದ ಸಾಧನಗಳನ್ನು ಬಳಸುವುದಕ್ಕಿಂತ ತಾವೇ ಸ್ವತಃ ಮಾಡಿದ ಸಾಧನಗಳನ್ನು ಬಳಸುವುದು ಹೆಚ್ಚು ಪರಿಣಾಮಕಾರಿಯಾದ್ದರಿಂದ ವಿಸ್ತರಣ ಕಾರ್ಯಕರ್ತರಿಗೆ ಶ್ರವ್ಯದೃಶ್ಯ ಸಾಧನಗಳನ್ನು ತಯಾರಿಸಿಕೊಳ್ಳುವುದರಲ್ಲೂ ಶಿಕ್ಷಣ ನೀಡುವುದು ಬಹು ಮುಖ್ಯ.

ಕೃಷಿ ಆಂದೋಲನಗಳಲ್ಲಿ ಕೃಷಿ ವಾರ್ತೆ ಮುಖ್ಯ ಪಾತ್ರ ವಹಿಸುತ್ತದೆ. ಆಂದೋಲನವನ್ನು ಪ್ರಾರಂಭಿಸುವುದಕ್ಕೆ ಕನಿಷ್ಠ ಪಕ್ಷ ಒಂದು ತಿಂಗಳ ಮೊದಲು ಆಂದೋಲನದ ವಿಷಯ ಮತ್ತು ಅದು ಪ್ರಾರಂಭವಾಗುವ ದಿನವನ್ನು ತಿಳಿಸುವುದು ಆವಶ್ಯಕ. ಇದರಿಂದ ಅದರಲ್ಲಿ ಪಾತ್ರವಹಿಸಬೇಕಾಗುವ ರೈತರನ್ನು ತಯಾರು ಮಾಡಿದಂತಾಗುತ್ತದೆ, ಅಲ್ಲದೆ ಆಂದೋಲನ ಪ್ರಾರಂಭವಾದಾಗ ಅದರಲ್ಲಿ ಸಂಬಂಧಪಟ್ಟವರು ಭಾಗವಹಿಸಲು ಸಿದ್ಧರಾಗಿರುತ್ತಾರೆ. ಅವರಿಗೆ ಆಂದೋಲನದ ರೂಪರೇಖೆ ಮತ್ತು ಅನುಕೂಲಗಳು ಮನದಟ್ಟಾಗಿರುತ್ತವೆ. ಈ ರೀತಿ ಪೂರ್ವಭಾವಿ ತಿಳಿವಳಿಕೆ ಕೊಡಲು ವೃತ್ತಪತ್ರಿಕೆ, ರೇಡಿಯೋ, ಭಿತ್ತಿಪತ್ರಗಳು, ಚಿತ್ರಗಳು ಮತ್ತು ಸಭೆಗಳು ಅನುಕೂಲವಾಗಿರುತ್ತವೆ.

ಆಂದೋಲನ ಪ್ರಾರಂಭವಾದ ಮೇಲೆ ಅದರ ವಿಷಯವಾಗಿ ಆಗಾಗ ಮಾಡಬೇಕಾದ ಕಾರ್ಯಗಳನ್ನು ತಿಳಿಸುತ್ತಿರಬೇಕಾಗುತ್ತದೆ. ಹಂತಹಂತವಾಗಿ ಮಾಡಬೇಕಾದ ಪದ್ಧತಿಗಳನ್ನು ಸಮಯಕ್ಕೆ ಸರಿಯಾಗಿ ತಿಳಿಸುತ್ತಿರಬೇಕು. ಇದಕ್ಕೆ ಸುತ್ತೋಲೆ, ರೇಡಿಯೋ, ಕರಪತ್ರ, ಪ್ರಾತ್ಯಕ್ಷಿಕೆ ಮತ್ತು ವೈಯಕ್ತಿಕ ಭೇಟಿ ಸಹಾಯ ಮಾಡುತ್ತವೆ.

ಆಂದೋಲನ ಮುಗಿದ ಅನಂತರ ಅದರಲ್ಲಿ ಪಾಲ್ಗೊಂಡವರಿಗೆ ಮತ್ತು ಅದರಲ್ಲಿ ಆಸಕ್ತಿ ವಹಿಸಿದವರಿಗೆ ಅದರಿಂದಾದ ಉಪಯೋಗ, ಅದರ ಫಲಿತಾಂಶ, ಅದರ ಗುಣಾವಗುಣಗಳು ಮತ್ತು ಅದರಿಂದ ಬಂದ ನಿವ್ವಳ ಲಾಭವನ್ನು ತಿಳಿಸಬೇಕು. ಹೀಗೆ ತಿಳಿಸುವುದರಿಂದ ಆ ಪದ್ಧತಿಯಲ್ಲಿ ರೈತರಿಗೆ ನಂಬಿಕೆ ಹುಟ್ಟಿ ಅದನ್ನು ಮುಂದೆ ಅನುಸರಿಸಿಕೊಂಡು ಬರಲು ಉತ್ತೇಜನ ದೊರಕುತ್ತದೆ. ಈ ಸಂದರ್ಭದಲ್ಲಿ ಕ್ಷೇತ್ರೋತ್ಸವ, ಅಂಕಿ–ಅಂಶ, ಚಿತ್ರ, ಕರಪತ್ರ ಮತ್ತು ವೃತ್ತಪತ್ರಿಕೆಗಳನ್ನು ಉಪಯೋಗಿಸಿಕೊಳ್ಳಬಹುದು.

ಕೃಷಿವಾರ್ತೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ಬರುವುದರಿಂದ ವ್ಯವಸಾಯದ ಅಭಿವೃದ್ಧಿಯ ವೇಗವನ್ನು ವರ್ಧಿಸಿ ಆಹಾರದ ಅಭಾವ ಬೇಗ ತೀರಿ ಮತ್ತೆ ಅಂಥ ಅಭಾವ ಬರದ ಹಾಗೆ ಮಾಡಲು ಯತ್ನಿಸಬಹುದು.

(ಕೆ.ಆರ್.ಜಿ.ಎ.)

**ಕೃಷಿ ವಿದ್ಯೆ :** ಹೊಲದ ಸಾಗುವಳಿಯಿಂದ ಪೈರಿನ ಉತ್ಪಾದನೆ ಹಾಗೂ ಮಣ್ಣಿನ ರಕ್ಷಣೆಯನ್ನು ಅಭ್ಯಸಿಸುವ ಕೃಷಿವಿಭಾಗ (ಅಗ್ರಾನಮಿ). ಇದರಲ್ಲಿ ಅಡಕವಾಗಿರುವ ಇತರ ಶಾಸ್ತ್ರವಿಭಾಗಗಳು ಪ್ರಧಾನವಾಗಿ ಕೃಷಿಸಸ್ಯವಿಜ್ಞಾನ, ಕೃಷಿರಸಾಯನವಿಜ್ಞಾನ, ಕೀಟವಿಜ್ಞಾನ, ಕೃಷಿಶಿಲ್ಪ ಇತ್ಯಾದಿ. ಸಸ್ಯದ ಮತ್ತು ಭೂಮಿಯ ವ್ಯಾಸಂಗವನ್ನು ಆಧರಿಸಿ ಕೃಷಿವಿದ್ಯೆಯಲ್ಲಿ ಸಸ್ಯಕೃಷಿ ಮತ್ತು ಭೂಮಿಕೃಷಿ ಎಂಬ ಎರಡು ಭಾಗಗಳಿವೆ.

**ಭೂಮಿ ಕೃಷಿ :** ಉತ್ತು ಭೂಮಿಯನ್ನು ಸಡಿಲ ಮಾಡುವುದು ಭೂಮಿಕೃಷಿಯ ಮೊದಲ ಹಂತ. ಗೊಬ್ಬರಗಳ ಹಾಗೂ ರಾಸಾಯನಿಕ ಗೊಬ್ಬರಗಳ ಪಾತ್ರ ಇಲ್ಲಿ ಹಿರಿದಾಗಿದೆ. ಬೆಳೆ ಎತ್ತಲು ಬೇಕಾದ ನೀರನ್ನು ಭೂಮಿಗೆ ಒದಗಿಸುವುದರ ಜೊತೆಗೆ ನೀರಿನ ಹೆಚ್ಚಿನ ಪ್ರವಾಹದಿಂದ ನೆಲದ ಸಾರ ತೊಳೆದು ಹೋಗದಂತೆ ಎಚ್ಚರವನ್ನು ವಹಿಸುವುದು ಅಗತ್ಯ. ಹವೆಯ ವ್ಯತ್ಯಾಸಗಳು ಭೂಮಿಕೃಷಿಯ ಮೇಲೆ ಉಂಟುಮಾಡುವ ಪರಿಣಾಮಗಳು ಮತ್ತು ಅವುಗಳಿಗೆ ಪರಿಹಾರಗಳು ರೈತನಿಗೆ ತಿಳಿದಿರಬೇಕು.

**ಸಸ್ಯ ಕೃಷಿ :** ಉತ್ತಮ ತಳಿಯ ಬೀಜಗಳ ಆಯ್ಕೆ, ಬಿತ್ತುವುದರಲ್ಲಿ ವೈಜ್ಞಾನಿಕ ವಿಧಾನದ ಅನುಸರಣೆ ಹಾಗೂ ಯಂತ್ರಗಳ ಉಪಯೋಗ, ಬೆಳೆಯ ಆವರ್ತನೆ ಇವೆಲ್ಲವೂ ಈ ವಿಭಾಗದಲ್ಲಿ ಬರುತ್ತವೆ. ರೋಗ, ಕೀಟ ಮತ್ತು ಕಳೆಗಳ ನಿವಾರಣೆಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಬೀಜಗಳ ತಳಿಸುಧಾರಣೆಯೂ ಅಗತ್ಯ.

(ಕೆ.ಆರ್.ಎಂ.; ಎಸ್.ಎಸ್.ಡಿ.)

**ಮಿಶ್ರ ವ್ಯವಸಾಯ :** ಒಂದೇ ಭೂ ಹಿಡುವಳಿಯಲ್ಲಿ ಹಲವಾರು ವಿಧದ ಕೃಷಿ ಉತ್ಪಾದನೆಗಳನ್ನು ಏಕಕಾಲದಲ್ಲಿ ಕೈಗೊಳ್ಳುವುದು. ಉದಾಹರಣೆಗೆ, ಒಂದೇ ಜಮೀನಿನಲ್ಲಿ ಗೋಧಿ, ಬಾರ್ಲಿ, ಆಲೂಗೆಡ್ಡೆ, ಓಟ್ಸ್ ಮೊದಲಾದ ಬೆಳೆಗಳನ್ನು ಏಕಕಾಲದಲ್ಲಿ ಎತ್ತುವ ವಿಧಾನ. ರಾಗಿ, ಹುರುಳಿ ಫಸಲು; ಅಚ್ಚೆಳ್ಳು, ಹುರುಳಿ, ಹೊಗೆ ಸೊಪ್ಪು ಫಸಲು; ಅಲಸಂದೆ, ಹೆಸರು, ಅವರೆ ಫಸಲು; ಅಡಕೆ, ತೆಂಗು, ವೀಳ್ಯದೆಲೆ, ಬಾಳೆ, ಕಾಳು ಮೆಣಸು ಫಸಲು–ಇವೇ ಮುಂತಾದವು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಮಿಶ್ರವ್ಯವಸಾಯದ ಉದಾಹರಣೆಗಳು. ಮಿಶ್ರ ವ್ಯವಸಾಯದ ಕ್ರಮದಲ್ಲಿ ಸ್ಥೂಲವಾಗಿ ಮೂರು ವಿಭಾಗಗಳಿವೆ : 1. ತರೀ ಜಮೀನಿನಲ್ಲಿ ಅನುಸರಿಸುವ ಮಿಶ್ರ ವ್ಯವಸಾಯ. 2. ಖುಷ್ಕಿ ಜಮೀನಿನಲ್ಲಿ ಅನುಸರಿಸುವ ಮಿಶ್ರ ವ್ಯವಸಾಯ, 3. ತೋಟಗಳಲ್ಲಿ ಅನುಸರಿಸುವ ಮಿಶ್ರ ವ್ಯವಸಾಯ.

**ಉಪಯೋಗಗಳು :** 1. ಹಿಡುವಳಿಯ ಫಲವಂತಿಕೆ ಹಿಂಗುವುದಿಲ್ಲ. ಆದ್ದರಿಂದ ದೀರ್ಘಕಾಲ ಲಾಭದಾಯಕವಾಗಿ ಉತ್ಪನ್ನಗಳನ್ನು ಪಡೆಯುತ್ತಿರಬಹುದು. 2. ಕೀಟಗಳಿಂದಲೂ ಸಸ್ಯರೋಗಗಳಿಂದಲೂ ಒದಗುವ ನಷ್ಟವನ್ನು ಕಡಿಮೆ ಮಾಡಬಹುದು. 3. ಕಳೆಗಳ ಮೇಲೆ ಹೆಚ್ಚಿನ ಹತೋಟಿ ಸಾಧ್ಯ. 4. ಉಪೋತ್ಪನ್ನಗಳು ಒದಗಿಸುವ ಲಾಭ.

(ಎಸ್.ಎಲ್.ಆರ್.)

**ಬಂಜರುಭೂಮಿಗಳ ಸಾಗುವಳಿ :** ಸಾಗುವಳಿ ಆಗದೇ ಇರುವ ಅಥವಾ ಕನಿಷ್ಠ ಬೆಳೆ ಕೊಡುವ ಭೂಮಿಗಳ ಕೃಷಿ. ಇವುಗಳಲ್ಲಿ ಸಾಗುವಳಿ ಮಾಡಲು ಯೋಗ್ಯವಾಗಿರುವ ಭೂಮಿಯನ್ನು ದೇಶದ ಆವಶ್ಯಕತೆಗೆ ಅನುಸಾರವಾಗಿ ನೇಗಿಲಿನ ಅಡಿಯಲ್ಲಿ ತರುವುದು ಆವಶ್ಯ. ಬಂಜರು ಭೂಮಿಗಳನ್ನು ಮುಖ್ಯವಾಗಿ ಐದು ಭಾಗಗಳಾಗಿ ವಿಂಗಡಿಸಲಾಗಿದೆ ; 1. ಕಠಿಕೆ ಕಣಿಗಲುಗಳಿಂದ ಬೀಳಾದವು, 2. ಅತಿ ತೇವಪೂರಿತ ಮತ್ತು ವಾಸಿಸಲು ಸಾಧ್ಯವಿಲ್ಲದಂಥ ಪ್ರದೇಶಗಳು, 3. ಮಣ್ಣು ಕೊಚ್ಚಿಹೋದ ಬಡ ಮತ್ತು ಉಸುಕು ಭೂಮಿಗಳು, 4. ಉಪ್ಪು ಭೂಮಿಗಳು, 5. ಸಮುದ್ರ ದಂಡೆಯಲ್ಲಿರುವಂಥ ಗಝನೀ (ಖಾರ್) ಬೀಳುಭೂಮಿಗಳು.

ಕಂಠಿ ಕಣಿಗಲುಗಳುಳ್ಳ ಬಂಜರು ಭೂಮಿಗಳನ್ನು $12''$–$14''$ ಆಳವಾಗಿ ಟ್ರಾಕ್ಟರುಗಳ ಸಹಾಯದಿಂದ ರಂಟೆ ಹೊಡೆದು ಸಾಗುವಳಿ ಮಾಡುವುದು ಸಾಧ್ಯ. ಅತಿ ತೇವ ಹಿಡಿದ ಪ್ರದೇಶಗಳಲ್ಲಿ ಗಿಡಗಳನ್ನು ಮಾರಿಹಲುಬೆಯ (ಬುಲ್‌ಡೋಜ಼ರ್) ಸಹಾಯದಿಂದ ತೆಗೆದು ಅವನ್ನು ಸುಧಾರಿಸಿ ವಸತಿಗಳನ್ನು ಪುನಃ ನಿರ್ಮಿಸಬಹುದು. ಮಣ್ಣುಕೊಚ್ಚಿಹೋದ ಮತ್ತು ಆಳವಾದ ಕೊರಕಲುಗಳುಳ್ಳ ಬೀಳುಭೂಮಿಗಳ ಸುಧಾರಣೆ ಮಣ್ಣು ತಡೆ ಹಿಡಿಯುವ ಅನೇಕ ವಿಧಾನಗಳ ಮೂಲಕ ಮಾಡಬಹುದು. ಉಪ್ಪು ಬಂಜರು ಭೂಮಿಗಳ

ಸುಧಾರಣೆಯನ್ನು ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿ ಎರಡು ವಿಧಾನದಿಂದ ಮಾಡಬಹುದು : 1. ಉಪ್ಪು ಬಸಿದುಹೋಗುವಂತೆ ಭೂಮಿಗೆ ಹೆಚ್ಚು ನೀರುಣ್ಣಿಸಿ ಆ ನೀರನ್ನು ಬಸಿಗಾಲುವೆಗಳಿಂದ ಹೊರಗೆಡಹುವುದು, 2. ಗಂಧಕ ಮತ್ತು ಜಿಪ್ಸಮ್ ಎಂಬ ರಾಸಾಯನಿಕ ವಸ್ತುಗಳಿಂದ ಭೂಮಿಯಲ್ಲಿಯ ಉಪ್ಪಿನ ಅಂಶವನ್ನು ಹೋಗಲಾಡಿಸುವುದು.

ಸಮುದ್ರದ ದಂಡೆಗಿರುವ ಗಝನಿ ಬೀಳು ಭೂಮಿಗಳನ್ನು ಒಡ್ಡು ಮತ್ತು ಮೋರಿಗಳಿಂದ ಕಟ್ಟಿ ಸಮುದ್ರದ ನೀರನ್ನು ತಡೆಹಿಡಿದು ಅವುಗಳಲ್ಲಿ ಉಪ್ಪಿನ ಅಂಶವನ್ನು ಸಹಿಸಲಿಕ್ಕೆ ಬತ್ತ ಬೆಳಸಬೇಕು. ಇಂಥ ಬಂಜರು ಭೂಮಿಗಳನ್ನು ಸುಧಾರಿಸಿ ಒಕ್ಕಲತನದ ಹುಟ್ಟುವಳಿಯನ್ನು ಹೆಚ್ಚಿಸಲು ಅವಕಾಶವಿದೆ. (ಎ.ಎಸ್.ಎಚ್.; ಎಂ.ಬಿ.ಟಿ.)

**ಜೀವನಾಧಾರ ಮತ್ತು ವಾಣಿಜ್ಯ ವ್ಯವಸಾಯ :** ಕೃಷಿಯನ್ನು ಕೈಗೊಳ್ಳುವ ಉದ್ದೇಶವನ್ನು ಅನುಸರಿಸಿ ತಲೆದೋರುವ ಎರಡು ವಿಭಾಗಗಳು. ಒಬ್ಬ ಬೇಸಾಯಗಾರ ತನ್ನ ಹಿಡುವಳಿಯಲ್ಲಿ ಬೇಸಾಯವನ್ನು ಸ್ವಪೋಷಣೆಗೋಸ್ಕರ ಮಾಡಿದಾಗ ಅದು ಜೀವನಾಧಾರ ವ್ಯವಸಾಯವಾಗುತ್ತದೆ. ಇದರ ಬದಲು ತನ್ನ ವ್ಯವಸಾಯೋತ್ಪನ್ನಗಳನ್ನು ಮಾರಾಟಮಾಡಬೇಕು ಎಂಬ ಉದ್ದೇಶ ಪ್ರಚೋದಿತ ಸಾಗುವಳಿ ವಾಣಿಜ್ಯ ವ್ಯವಸಾಯವಾಗುತ್ತದೆ. ಪ್ರಪಂಚದ ಜನಜೀವನದ ಸಂಕೀರ್ಣಗೊಂಡಂತೆ ವಾಣಿಜ್ಯ ವ್ಯವಸಾಯ ಮೈದಳೆದು ಇಂದಿನ ಅಸ್ತಿತ್ವವನ್ನು ಪಡೆದಿದೆ. ಜೀವನಾಧಾರ ವ್ಯವಸಾಯ ಕೈಗೊಳ್ಳುತ್ತಿದ್ದ ರೈತ ಅಂದಿನ ಸಂಕುಚಿತ ಆರ್ಥಿಕ ಮತ್ತು ಸಾಮಾಜಿಕ ಘಟಕವಾಗಿದ್ದ ಹಳ್ಳಿಯ ಒಂದು ಅಂಗ ಮಾತ್ರ ಆಗಿದ್ದ. ಆದರೆ ಇಂದು ಪ್ರಪಂಚದ ನಾನಾಭಾಗಗಳ ಮಾರುಕಟ್ಟೆಗಳಿಗೆ ವಾಣಿಜ್ಯ ವ್ಯವಸಾಯದ ಮೂಲಕ ಸರಕುಗಳನ್ನು ಒದಗಿಸುವ ವ್ಯವಸಾಯಗಾರ ಇಡೀ ಪ್ರಪಂಚದ ಆರ್ಥಿಕ ವ್ಯವಸ್ಥೆಯ ಒಂದು ಅಂಗವಾಗಿದ್ದಾನೆ. ಜೀವನಾಧಾರ ವ್ಯವಸಾಯದಲ್ಲಿ ರೈತ ಸ್ವಯಂಪೂರ್ಣನಾಗಿರುತ್ತಾನೆ. ಇಲ್ಲಿ ಅವನ ಆವಶ್ಯಕತೆಗಳು ತೀರ ಮಿತ ಎಂಬುದನ್ನು ಗಮನಿಸಬೇಕು. ವಾಣಿಜ್ಯ ವ್ಯವಸಾಯದಲ್ಲಿ ಹೀಗಲ್ಲ, ಅವನು ಪರಾವಲಂಬಿಯಾಗಿರುತ್ತಾನೆ, ನಿಜ. ಆದರೆ ಶ್ರಮವಿಭಜನೆ ಹಾಗೂ ಕೃಷಿಪ್ರಾವೀಣ್ಯದ ವಿನಿಮಯ ಇಲ್ಲಿ ಆತನಿಗೆ ಲಭಿಸುವ ಸ್ಪಷ್ಟ ಸೌಕರ್ಯಗಳು, ಪ್ರಪಂಚದ ಯಾವುದೇ ಮೂಲೆಯಲ್ಲಿ ಸಂಭವಿಸುವ ಒಂದು ಘಟನೆ ಈ ರೈತನ ಆರ್ಥಿಕ ಸ್ಥಿತಿಯ ಮೇಲೆ ದುಷ್ಪರಿಣಾಮ ಬೀರುವುದು ಇಲ್ಲಿ ಸಾಧ್ಯ. ಇದು ಹೇಗೆಯೇ ಇರಲಿ, ಇಂದಿನ ಜೀವನಕ್ರಮದಲ್ಲಿ ವಾಣಿಜ್ಯ ವ್ಯವಸಾಯ ಬಹುಮಟ್ಟಿಗೆ ಸಾರ್ವತ್ರಿಕವಾಗಿಯೇ ಅಸ್ತಿತ್ವಕ್ಕೆ ಬಂದಿದೆ. (ಎಸ್.ಎಲ್.ಆರ್.)

**ಕೃಷಿ ವಿಮೆ :** ಕೃಷಿ ಎಷ್ಟು ಹಳೆಯದೋ ವಿಮೆಯೂ ಅಷ್ಟೇ ಹಳೆಯದು. ಕೃಷಿಕರೂ ಕುರಿಗಾಹಿಗಳೂ ಪಶುಪಾಲಕರೂ ತಮಗೆ ಸಂಭವಿಸಬಹುದಾದ ನಷ್ಟಗಳನ್ನೆದುರಿಸಲು ನಾನಾ ಬಗೆಯ ಉಪಾಯಗಳನ್ನು ಬಲು ಹಿಂದಿನಿಂದಲೂ ಅನುಸರಿಸುತ್ತ ಬಂದಿದ್ದಾರೆ. ಆಧುನಿಕ ಕೃಷಿ ವಿಮೆಗೆ ಇವೇ ಉಗಮ. ಪ್ರಾಣಹಾನಿ, ಸ್ವತ್ತಿನ ಹಾನಿಗಳನ್ನೂ ಆಹಾರ ಸರಬರಾಯಿಗೆ ಸಂಭವಿಸುವ ತಡೆಯನ್ನೂ ತಪ್ಪಿಸುವ ಸಲುವಾಗಿ ರೈತರು ಪರಸ್ಪರವಾಗಿ ಸಹಕರಿಸುತ್ತಿದ್ದ ದೃಷ್ಟಾಂತಗಳು ಎಷ್ಟೋ ಉಂಟು. ಈ ಬಗೆಯ ರಕ್ಷಣೆಯ ಕಾರ್ಯವನ್ನು ಪ್ರತಿಯೊಂದು ಕುಟುಂಬಕ್ಕೂ ಗುಂಪಿಗೂ ವಿಧಿಸಲಾಗಿತ್ತು. ಜೀವಕ್ಕೋ ಆಸ್ತಿಗೋ ನಷ್ಟವೇನಾದರೂ ತಟ್ಟಿದ ಪಕ್ಷದಲ್ಲಿ ಊರವರೆಲ್ಲ ಸೇರಿ ಆ ನಷ್ಟ ತುಂಬಲು ಸೇವೆ ಸಲ್ಲಿಸುವುದು ಸಾಮಾನ್ಯವಾಗಿತ್ತು. ಇದು ಧರ್ಮವಾಗಿತ್ತು.

ವ್ಯಾಪಾರ ಬೆಳೆದು ಹಣವ್ಯವಸ್ಥೆ ಆಗಮಿಸಿದಾಗ ನಷ್ಟ ತುಂಬುವ ಹೊಸಹೊಸ ವಿಧಾನಗಳು ಅಸ್ತಿತ್ವಕ್ಕೆ ಬಂದುವು. ಸಂಭವಿಸಿದ ವೈಯಕ್ತಿಕ ನಷ್ಟವನ್ನು ಊರೊಟ್ಟಿನವರೆಲ್ಲ ಪಾಲ್ಗೊಳ್ಳುವ ವ್ಯವಸ್ಥೆ ವಿಸ್ತರಿಸಿ, ಹಣಾಧಾರಿತವಾದ ವ್ಯವಸ್ಥೆಗೆ ಎಡೆ ಕೊಟ್ಟಿತು. ಈ ಪರಿವರ್ತನೆ ಸಂಭವಿಸುತ್ತಿದ್ದಂಥ ಸಂಧಿಕಾಲದಲ್ಲಿ ನಷ್ಟ ತುಂಬುವ ಕಾರ್ಯ ಬಹುತೇಕ ಸ್ವಂತ ಇಚ್ಛೆಯದಾಗಿತ್ತು. ಗುಂಪಿನ ಯಾವ ವ್ಯಕ್ತಿಗಾದರೂ ಸಂಭವಿಸಿದ ನಷ್ಟವನ್ನು ಪ್ರತಿಯೊಬ್ಬನೂ ಅವನವನ ಇಚ್ಛಾನುಸಾರ ತುಂಬಿಕೊಡುವ ಪದ್ಧತಿ ಹಣವ್ಯವಸ್ಥೆಯಲ್ಲಿ ಸರಿಯಾಗಿ ಕೆಲಸ ಮಾಡಲಾರದೆ ಹೋಯಿತು. ಇದರ ಹಿಂದಿನ ಧೋರಣೆಯನ್ನು ಬದಲಾಯಿಸಿ, ಇದನ್ನೊಂದು ವ್ಯವಹಾರವಾಗಿ ರೂಪಿಸಬಾರದೇಕೆ?– ಎಂಬ ವಿಚಾರ ಬೆಳೆಯಿತು. ಸರ್ವಸಾಮಾನ್ಯವಾದ ನಷ್ಟಸಂಭವಗಳನ್ನು ಎದುರಿಸುವ ಸಲುವಾಗಿ ಪ್ರತಿಯೊಬ್ಬರಿಂದಲೂ ಚಂದಾ ಸಂಗ್ರಹಿಸಿ ನಿಧಿಯಾಗಿ ಇಟ್ಟಿದ್ದು, ಚಂದಾದಾರರಲ್ಲಿ ಯಾರಿಗೆ ನಷ್ಟ ಸಂಭವಿಸಿದರೂ ಆ ಸಾಮಾನ್ಯ ನಿಧಿಯಿಂದ ಅವರ ನಷ್ಟವನ್ನು ತುಂಬಿಕೊಡುವ ವಿಧಾನವೊಂದು ವಿಕಾಸವಾಯಿತು.

ಆಸ್ತಿಯ ನಷ್ಟವನ್ನು ತುಂಬಿಕೊಡುವ ಕ್ರಮಗಳೇ ಅತ್ಯಂತ ಪ್ರಾಚೀನವಾದವು. ಜೀವವಿಮೆ, ಸಾಮಾಜಿಕ ಭದ್ರತೆಯ ಕ್ರಮಗಳು–ಇವೆಲ್ಲ ಈಚಿನವು. ವ್ಯವಸಾಯ ಕ್ಷೇತ್ರದಲ್ಲಿ ವಿಮೆಯ ಉದಯವಾದ್ದು ಬಲು ಹಿಂದೆಯೇ ಆದರೂ ಕೈಗಾರಿಕೆ ವಾಣಿಜ್ಯ ಕ್ಷೇತ್ರಗಳಲ್ಲಿ ಇದು ಬೆಳೆದಷ್ಟು ಶೀಘ್ರವಾಗಿ ಕೃಷಿಕ್ಷೇತ್ರದಲ್ಲಿ ಬೆಳೆಯಲಿಲ್ಲ. ಅನಿವಾರ್ಯವಾದ ನಷ್ಟಗಳನ್ನು ಪರಸ್ಪರ ಸಹಾಯದಿಂದ ತುಂಬಿಕೊಳ್ಳುವಷ್ಟಕ್ಕೇ ಇದು ಬಹುಕಾಲ ಸೀಮಿತವಾಗಿತ್ತು. ಕೃಷಿಕರು ಸಾಮಾನ್ಯವಾಗಿ ಸ್ವಾವಲಂಬನಕ್ಕೆ ಹೆಚ್ಚು ಬೆಲೆ ಕೊಡುತ್ತಿದ್ದದ್ದೂ, ಕೈಗಾರಿಕೆ ವಾಣಿಜ್ಯಗಳೊಡನೆ ಹೋಲಿಸಿದರೆ ಅವರ ನಷ್ಟಸಂಭವಗಳು ಅಲ್ಪವಾಗಿದ್ದು ಅವನ್ನು ಸುಲಭವಾಗಿ ತುಂಬಿಕೊಳ್ಳಬಹುದೆಂಬ ಭಾವನೆಯಿದ್ದದ್ದೂ ಕೃಷಿವಿಮೆಯ ಮಂದಗಮನಕ್ಕೆ ಮುಖ್ಯ ಕಾರಣ ವಿಮೆಯ ವೆಚ್ಚ ಬಲು ದುಬಾರಿಯೆಂಬ ಕಾರಣದಿಂದ ಅವರು ವಿಮಾಕಂತು ಕೊಡಲು ಹಿಂದೆಗೆಯುತ್ತಿದ್ದರು. ತಾಂತ್ರಿಕ ಮುನ್ನಡೆಯಿಂದಾಗಿ ಕೃಷಿಯಲ್ಲೂ ವಿಶೇಷ ಪ್ರಾವೀಣ್ಯ ಪ್ರಧಾನವಾಗಿ, ಜಮೀನಿನ ಮೇಲೆ ಹೆಚ್ಚು ಬಂಡವಾಳ ಹಾಕುವುದು ಆರಂಭವಾದಾಗ ಇದಕ್ಕೂ ವಿಮಾ ಸೂತ್ರವನ್ನು ಅನ್ವಯಿಸುವುದು ಅಗತ್ಯವಾಯಿತು. ಆದರೂ ಕೃಷಿ ವಿಮೆಯ ಬೆಳವಣಿಗೆ ಅಷ್ಟೇನೂ ಗಮನಾರ್ಹವಾದದ್ದಲ್ಲವೆಂದೇ ಹೇಳಬೇಕು.

ವ್ಯವಸಾಯೋತ್ಪಾದನೆಗೆ ಸಂಬಂಧಿಸಿದ ನಷ್ಟ ಸಂಭವಗಳೆಂದರೆ ಅತಿವೃಷ್ಟಿ ಅನಾವೃಷ್ಟಿ ಬಿರುಗಾಳಿ, ಹಿಮವೃಷ್ಟಿ, ಸಿಡಿಲು, ಬೆಂಕಿ, ಪಿಡುಗುಗಳು, ಪ್ರಾಣಿಗಳ ಹಾವಳಿ, ಕೃಷಿಕಾರ್ಯ ಸರಿಯಾಗಿ ನಿರ್ವಹಿಸದೆ ಇದ್ದುದರ ಪರಿಣಾಮವಾಗಿ ಕಡಿಮೆ ಇಳುವರಿ, ಕೃಷಿಕಾರ್ಯ ನಿರ್ವಹಿಸುವವನ ಕಾಯಿಲೆ, ಸಾವು, ಬೆಲೆಗಳ ಏರಿಳಿತಗಳಿಂದ ಸಂಭವಿಸುವ ನಷ್ಟ–ಮುಂತಾದವು.

ಲಾಭೋದ್ದೇಶವಿಲ್ಲದ ಪರಸ್ಪರ ವಿಮಾ ಕ್ರಮಗಳು ಜರ್ಮನಿಯ ರೈತರಲ್ಲಿ 15–16ನೆಯ ಶತಮಾನಗಳಲ್ಲಿ ಬೆಳೆದುವು. ಪಶುಗಳ ನಷ್ಟ ತುಂಬಿಕೊಡುವ ಪರಸ್ಪರ ವಿಮಾ ಪದ್ಧತಿ 12ನೆಯ ಶತಮಾನದ ಆದಿಕಾಲದಲ್ಲಿ ಐಸ್‍ಲೆಂಡಿನಲ್ಲಿತ್ತು. ರೈತರೇ ಪರಸ್ಪರ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ನಷ್ಟ ಸಂಭವಿಸಿದಾಗ ಅದನ್ನು ತುಂಬಿಕೊಡಲು ಎಲ್ಲ ಸದಸ್ಯರ ಮೇಲೂ ಶುಲ್ಕ ವಿಧಿಸಲಾಗುತ್ತಿತ್ತು. ಸರಾಸರಿ ನಷ್ಟವನ್ನು ಮುಂದಾಗಿಯೇ ಅಂದಾಜುಮಾಡಿ ಶುಲ್ಕವನ್ನು ಮುಂಗಡವಾಗಿ ವಸೂಲುಮಾಡುವ ಪದ್ಧತಿ ಅನಂತರ ವಿಕಾಸಗೊಂಡಿತು. ಈ ನಷ್ಟವನ್ನು ಇನ್ನೂ ವಿಶಾಲಕ್ಷೇತ್ರಕ್ಕೆ ವರ್ಗಾಯಿಸುವ ವಿಧಾನವಾದ ಮರುವಿಮೆ ವ್ಯವಸ್ಥೆ ಕ್ರಮೇಣ ಬಂತು. ಪ್ರಾದೇಶಿಕ ಹಾಗೂ ರಾಷ್ಟ್ರಿಯ ಸಂಘಟನೆಗಳು ಬೆಳೆದುವು.

ಕೃಷಿ ಉತ್ಪಾದನೆಗೆ ಸಂಬಂಧಿಸಿದ ನಾನಾ ನಷ್ಟ ಸಂಭವಗಳ ವಿಮೆ ಇಳಿಸುವ ಕಷ್ಟದಿಂದಾಗಿ, ಕೆಲವು ಬಗೆಯ ನಷ್ಟ ತುಂಬುವ ವ್ಯವಸ್ಥೆಗಳಿಗೆ ಸರ್ಕಾರದ ನೆರವನ್ನು ಪಡೆಯಲಾಗಿದೆ. ಬೆಳೆ ಮತ್ತು ಪಶು ವಿಮೆಗಳು ಇಂಥವು. ಜಮೀನುಗಳ ಪರಸ್ಪರ ಸಹಕಾರ ವಿಮೆ ಕಂಪನಿಗಳನ್ನು ಕೆಲವು ವಿದೇಶಗಳಲ್ಲಿ ಸರ್ಕಾರಗಳೇ ಸಂಘಟಿಸಿವೆಯಲ್ಲದೆ, ಅವಕ್ಕೆ ನೇರ ಧನದಾನ ನೀಡಿವೆ ; ಅವುಗಳ ಬೆಳವಣಿಗೆಗೆ ಬಲು ಉದಾರವಾದ ಕಾನೂನುಗಳನ್ನು ಜಾರಿಗೆ ತಂದಿವೆ ; ತೆರಿಗೆಯಿಂದಲೂ ಅವಕ್ಕೆ ವಿನಾಯಿತಿ ನೀಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರಗಳೇ ವಿಮಾಕ್ಷೇತ್ರವನ್ನು ಪ್ರವೇಶಿಸಿ, ರೈತರಿಗೆ ಬೇರೆ ಮೂಲಗಳಿಂದ ಲಭಿಸದಿದ್ದ ಭರವಸೆಯನ್ನು ತಾವೇ ದೊರಕಿಸಿಕೊಟ್ಟಿರುವುದುಂಟು.

ಕಟ್ಟಡ, ಜಾನುವಾರು, ಉತ್ಪನ್ನದ ದಾಸ್ತಾನು, ಕೃಷಿ ಉಪಕರಣಗಳು, ಯಂತ್ರಗಳು, ವಾಹನಗಳು, ಬೆಳೆ–ಇವಕ್ಕೆ ಸಂಬಂಧಿಸಿದ್ದು ಸ್ವತ್ತಿನ ವಿಮೆ. ಬೆಂಕಿಯ ವಿಮೆ ಇನ್ನೊಂದು ಹಳೆಯ ವಿಮಾಪ್ರಕಾರ. ಸಿಡಿಲಿನಿಂದ ಸಂಭವಿಸಿದ ನಷ್ಟ ತುಂಬಿಕೊಡುವ ವ್ಯವಸ್ಥೆ ಮೊದಲಿಗೆ ಇರಲಿಲ್ಲ. ಸಿಡಿಲಿನಿಂದ ಬೆಂಕಿ ಸಂಭವಿಸಿದರೆ ಅದರ ನಷ್ಟ ತುಂಬಿಕೊಡುವ ಕ್ರಮ ಅನಂತರ ಬಂತು. ಕ್ರಮೇಣ ನಾನಾ ಬಗೆಯ ಕಾರಣಗಳಿಂದ ಸಂಭವಿಸುವ ಅಗ್ನಿ ಅಪಘಾತಗಳೆಲ್ಲ ವಿಮೆಯ ವ್ಯಾಪ್ತಿಯೊಳಕ್ಕೆ ಬಂದುವು. ಬೆಳೆ ಒಣಗಿ ಬೆಂಕಿಗೆ ಈಡಾಗಬಹುದಾದ ಸಂಭವಕ್ಕೆ ವಿರುದ್ಧವಾಗಿಯೂ ವಿಮೆ ಇಳಿಸುವ ಪರಿಪಾಠ ಆರಂಭವಾಯಿತು.

ಬಿರುಗಾಳಿ, ಆಲಿಕಲ್ಲು ಮುಂತಾದ ನೈಸರ್ಗಿಕ ಅನಾಹುತಗಳ ವಿಮೆ ಪದ್ಧತಿಗಳು ಸ್ವಿಟ್ಜರ್ಲೆಂಡ್, ಆರ್ಜೆಂಟೈನ, ಡೆನ್ಮಾರ್ಕ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬೆಳೆದುವು. ಜಾನುವಾರುಗಳ–ಮುಖ್ಯವಾಗಿ ಉಳುವ ಎತ್ತು, ಕುದುರೆ ಮುಂತಾದುವುಗಳ–ನಷ್ಟಭರ್ತಿ ಮಾಡಿಕೊಡುವ ವಿಮಾ ಪ್ರಕಾರಗಳು ಬಲು ಹಿಂದಿನವು. ಈ ಬಗೆಯ ನಷ್ಟಸಂಭವದ ಸಾಮೂಹಿಕ ಪಾಲುದಾರಿಕೆ ವ್ಯವಸ್ಥೆ ಅನೇಕ ಶತಮಾನಗಳ ಹಿಂದೆ ಚೀನದಲ್ಲಿ ಜಾರಿಯಲ್ಲಿತ್ತು. ಬೆಂಕಿ, ಸಿಡಿಲು, ಬಿರುಗಾಳಿ ಮುಂತಾದವುಗಳಿಂದ ಸಂಭವಿಸುವ ನಷ್ಟವನ್ನು ತುಂಬಿಕೊಡುವ ವಿಮೆ ಇಂದು ಜಾರಿಯಲ್ಲಿದೆ. ಅಪಘಾತ ಮತ್ತು ಕಾಯಿಲೆಗಳಿಂದ ಸಂಭವಿಸುವ ಜಾನುವಾರು ನಷ್ಟದ ವಿಮೆಯೂ ಹಲವು ದೇಶಗಳಲ್ಲುಂಟು. ಜಾನುವಾರುಗಳಿಗೆ ಸಂಭವಿಸುವ ಎಲ್ಲ ಬಗೆಯ ನಷ್ಟಗಳಿಗೂ ಅನ್ವಯಿಸುವ ವಿಮೆ (ಸಕಲನಷ್ಟ ವಿಮೆ) ತುಂಬ ಅಮೂಲ್ಯವಾದ ಪ್ರಾಣಿಗಳಿಗೆ ಸಂಬಂಧಿಸಿದಂತೆ ಮಾತ್ರ ಜಾರಿಯಲ್ಲಿದೆ. ಒಂದು ಅಥವಾ ಎರಡು ಪ್ರಾಣಿಗಳನ್ನೇ ಅವಲಂಬಿಸಿರುವ ರೈತನಿಗೆ ಸಕಲನಷ್ಟ ವಿಮೆಯ ಅಗತ್ಯ ಅಧಿಕವಾಗಿದೆ. ಬೆಂಕಿ, ಬಿರುಗಾಳಿ, ಅಪಘಾತ– ಈ ಮೂರು ಬಗೆಯ ನಷ್ಟಗಳನ್ನೊಳಗೊಂಡ ವಿವಿಧ ಮುಖ ವಿಮಾ ಯೋಜನೆಯೇ ಇತ್ತೀಚಿನ ಪ್ರವೃತ್ತಿ.

ಫಸಲು ವಿಮೆ ಯೋಜನೆಗಳು ಆರಂಭದಲ್ಲಿ ಒಂದೊಂದೇ ಬಗೆಯ ನಷ್ಟಗಳಿಗೆ ಸೀಮಿತವಾಗಿದ್ದುವು. ಸಕಲ ನಷ್ಟಗಳಿಗೂ ರಕ್ಷೆ ನೀಡುವ ಯೋಜನೆಗಳು ಈಚೆಗೆ ಜಾರಿಗೆ ಬರುತ್ತಿವೆ. ಇವಕ್ಕೆ ಸರ್ಕಾರಗಳೂ ನೆರವು ನೀಡುತ್ತಿವೆ. ಅನೇಕ ಸಂಧರ್ಭಗಳಲ್ಲಿ ಸರ್ಕಾರವೇ

ಈ ಬಗೆಯ ವಿಮೆಯಲ್ಲಿ ಏಕಸ್ವಾಮ್ಯ ಪಡೆದಿರುವುದುಂಟು. ಸೋವಿಯತ್ ದೇಶದಲ್ಲಿ ಫಸಲು ವಿಮೆ ಸರ್ಕಾರದ ಏಕಸ್ವಾಮ್ಯ. ವಿಮೆ ಅಲ್ಲಿ ಕಡ್ಡಾಯ. ಚಂಡಮಾರುತದಿಂದ ಬಾಳೆಗೆ ರಕ್ಷಣೆ ನೀಡುವ ವಿಮಾ ಯೋಜನೆಯೊಂದು ಜಮೈಕಾದಲ್ಲಿ ಜಾರಿಯಲ್ಲಿದೆ. ಇದು ಅರ್ಧ ಸರ್ಕಾರಿ ಅಭಿಕರ್ತೃತ್ವವಾಗಿದೆ (ಏಜೆನ್ಸಿ). ಕಾಫಿ ಬೀಜ ಮತ್ತು ಕಾಫಿಯ ನೆರಳುಮರಗಳ ರಕ್ಷಣೆಗಾಗಿ ಪೋರ್ಟರಿಕೋದಲ್ಲಿ ಸರ್ಕಾರಿ ವಿಮಾ ವ್ಯವಸ್ಥೆಯೊಂದಿದೆ. ಮಲಾವಿಯಲ್ಲಿ ಬಿರುಗಾಳಿ ಮತ್ತು ಅನಾವೃಷ್ಟಿಯಿಂದ ಕಬ್ಬಿಗಾಗುವ ನಷ್ಟ ತುಂಬಲು ವಿಮಾ ಸೌಲಭ್ಯವುಂಟು. ಫಸಲಿನ ಸಕಲ ನಷ್ಟಗಳ ವಿರುದ್ಧ ರಕ್ಷಣೆ ನೀಡುವ ವಿಮಾಯೋಜನೆಗಳು ಅನೇಕ ರಾಷ್ಟ್ರಗಳಲ್ಲಿವೆ. ಬ್ರಜಿಲಿನಲ್ಲಿರುವ ವಿಮಾ ಕಾರ್ಪೋರೇಷನ್ ಅರೆ ಸರ್ಕಾರಿ ಸಂಸ್ಥೆ. ಜಪಾನಿನಲ್ಲಿ ಬತ್ತ, ಕಾಳು, ರೇಷ್ಮೆಹುಳು ಮುಂತಾದವುಗಳ ನಷ್ಟ ತುಂಬುವ ಕಡ್ಡಾಯ ವಿಮೆ ಜಾರಿಯಲ್ಲಿದೆ. ಇದಕ್ಕಾಗಿ ಸ್ಥಾಪಿತವಾದ ಅರೆ ಸರ್ಕಾರಿ ಸಂಸ್ಥೆಗೆ ಸರ್ಕಾರ ಬಹು ಹೆಚ್ಚು ಸಹಾಯಧನ ನೀಡುತ್ತಿದೆ. ವಿಮಾಕಂತಿನ ಒಂದು ಭಾಗವನ್ನು ರೈತ ಕೊಡಬೇಕು. ಉಳಿದದ್ದನ್ನು ಸರ್ಕಾರ ಹೊರುತ್ತದೆ.

ಪ್ರವಾಹ ವಿಮೆ, ಕೃಷಿಕರ ವಾಹನಗಳಿಂದಲೂ ಯಂತ್ರಗಳಿಂದಲೂ ಸಂಭವಿಸುವ ಅಪಘಾತದ ವಿಮೆ, ಕೃಷಿ ಕೆಲಸಗಾರರ ನಷ್ಟ ಪರಿಹಾರ ವಿಮೆ, ಜೀವ ವಿಮೆ,- ಇವು ಹಲವು ದೇಶಗಳಲ್ಲಿ ಜಾರಿಯಲ್ಲಿರುವ ಇತರ ವಿಮೆಗಳು. ಸಣ್ಣರೈತರು, ಕೃಷಿ ಕಾರ್ಮಿಕರು ಮುಂತಾದವರ ಸಾಮಾಜಿಕ ಸುರಕ್ಷತಾ ವಿಮಾ ಯೋಜನೆಗಳು ವ್ಯಾಪಕವಾಗುತ್ತಿವೆ. ಕೃಷಿಕರು ಮಾತ್ರವೇ ಅಲ್ಲದೆ ಸಮಾಜದ ಎಲ್ಲ ವರ್ಗಗಳಿಗೂ ಅನ್ವಯಿಸುವಂಥ ಯೋಜನೆಗಳಿವೆ. ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲಿ ಇವು ಸಾಮಾನ್ಯ. ಭಾರತದಲ್ಲಿ ಕೃಷಿ ವಿಮೆಯ ಕೆಲವು ಪ್ರಕಾರಗಳು ಪ್ಲಾಂಟೇಷನ್ ವ್ಯವಸಾಯದಲ್ಲಿ ಸ್ವಲ್ಪಮಟ್ಟಿಗೆ ಬೆಳೆದಿವೆಯಾದರೂ ಇತರ ಕ್ಷೇತ್ರಗಳು ಇದರ ವ್ಯಾಪ್ತಿಗೆ ಒಳಪಟ್ಟಿಲ್ಲ. ವ್ಯವಸಾಯಗಾರನಿಗೆ ಕೃಷಿಕಾರ್ಯಕ್ಕೆ ಅಗತ್ಯವಾದ ಉದ್ದರಿಯ ಸೌಲಭ್ಯ ಕಲ್ಪನೆಗೂ ಫಸಲು ವಿಮೆಗೂ ನೇರ ಸಂಬಂಧವಿರುವುದರಿಂದ ಇದನ್ನು ವ್ಯಾಪಕವಾಗಿ ಜಾರಿಗೆ ತರುವುದು ಆವಶ್ಯವಾಗಿದೆ.

(ಬಿ.ವಿ.ವಿ.; ಎಸ್.ಎಸ್.ಎಚ್.ಎ.)

**ಕೃಷಿ ವಿಶ್ವವಿದ್ಯಾಲಯ :** ಕೃಷಿಯನ್ನು ಒಂದು ಶಾಸ್ತ್ರವನ್ನಾಗಿ ಪರಿಗಣಿಸಿ ಅದರ ಪಾಂಕ್ತವಾದ ಬೋಧನೆ, ಸಂಶೋಧನೆ, ಪ್ರಯೋಗಗಳಿಗೆ ಅವಕಾಶ ಕಲ್ಪಿಸಿಕೊಡಲು ಸ್ಥಾಪನೆಗೊಂಡಿರುವ ಉನ್ನತ ಶಿಕ್ಷಣ ಸಂಸ್ಥೆ. ಕೃಷಿಯೂ ಒಂದು ವಿದ್ಯೆ; ಜಿಜ್ಞಾಸೆ, ಚಿಂತನೆ ಮತ್ತು ಸಂಶೋಧನೆಗಳಿಂದ ಈ ದಿಕ್ಕಿನಲ್ಲಿ ಜ್ಞಾನಭಂಡಾರವನ್ನು

ಕರ್ನಾಟಕ ರಾಜ್ಯದ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ ವಿವಿಧ ಕೇಂದ್ರಗಳು

ಬೆಳೆಸಿ ಹೊರಬಂದ ವಿಷಯಗಳನ್ನು ಅಳವಡಿಸಿಕೊಂಡು ಕೃಷಿ ಉದ್ಯಮವನ್ನು ಸುಧಾರಿಸುವುದು ಸಾಧ್ಯ ಇಂಬ ಅರಿವು ಮೂಡಿದಂತೆಲ್ಲ ವೈದ್ಯವಿಜ್ಞಾನ, ಎಂಜಿನಿಯರಿಂಗ್, ತಾಂತ್ರಿಕ ಕುಶಲ ಕಲೆ – ಮೊದಲಾದ ವಿಭಾಗಗಳಲ್ಲಿಯಂತೆಯೇ ವ್ಯವಸಾಯ ವಿಷಯದಲ್ಲೂ ಉನ್ನತ ಮಟ್ಟದ ವೃತ್ತಿಶಿಕ್ಷಣ ಮತ್ತು ತರಬೇತಿ ಆವಶ್ಯಕ ಎನ್ನುವ ಅಂಶ 19ನೆಯ ಶತಮಾನದ ಉತ್ತರಾರ್ಧದಲ್ಲಿ ಯುರೋಪ್, ಅಮೆರಿಕ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ದೃಢಪಟ್ಟಿತು. ಅಂತೆಯೇ ಕೃಷಿ ಶಿಕ್ಷಣ ಶಾಲೆಗಳು ಮತ್ತು ಕಾಲೇಜುಗಳು ಅಸ್ತಿತ್ವಕ್ಕೆ ಬಂದುವು. ಕೃಷಿ ವಿದ್ಯಾಭ್ಯಾಸ ಸಹ ವಿಶ್ವವಿದ್ಯಾನಿಲಯಗಳ ಒಂದು ಮುಖ್ಯ ಅಂಗವಾಗಿ ಬೆಳೆದು ಬಂದು, ಸರ್ವತೋಮುಖವಾದ ವ್ಯವಸಾಯೋನ್ನತಿಗೆ ದಾರಿ ಮಾಡಿತು.

ಭಾರತದಲ್ಲೂ 20ನೆಯ ಶತಮಾನದ ಆದಿಭಾಗದಲ್ಲಿ ಕೃಷಿ ವಿಜ್ಞಾನದಲ್ಲಿ ತರಬೇತಿ ಕೊಡುವ ಉದ್ದೇಶದಿಂದ ವ್ಯವಸಾಯ ಶಾಲೆಗಳು ಪ್ರಾರಂಭವಾದುವು. ಕ್ರಮೇಣ ಇವು ಕಾಲೇಜುಗಳಾಗಿ ಮಾರ್ಪಟ್ಟು ವಿಶ್ವವಿದ್ಯಾನಿಲಯಗಳಿಂದ ಮನ್ನಣೆ ಪಡೆದುವು. ಕೃಷಿ ಕಾಲೇಜುಗಳಲ್ಲಿ ಯಶಸ್ವಿ ತರಬೇತಿ ಪಡೆದವರೂ ಪದವಿ (ಡಿಗ್ರಿ) ಪಡೆಯುವ ಅವಕಾಶ ಉಂಟಾಯಿತು. ಈ ಸಂಸ್ಥೆಗಳಲ್ಲಿ ತರಬೇತಿಗೆ ಹೆಚ್ಚಿನ ಪ್ರಾಮುಖ್ಯವಿದ್ದು ಬೇಸಾಯ ಸಂಶೋಧನೆಯ ಹೊಣೆಗಾರಿಕೆ ವ್ಯವಸಾಯ ಇಲಾಖಾ ತಜ್ಞರಿಗೆ ಸೇರಿತ್ತು. ಇವೆರಡರ ನಡುವೆ ಹೊಂದಾಣಿಕೆ ಇರಬೇಕೆಂಬ ಭಾವನೆ ಪ್ರಬಲವಾದುದು ಇತ್ತೀಚೆಗೆ. ಏಕೆಂದರೆ ವ್ಯವಸಾಯದ ಪ್ರಗತಿಗೆ ಮೂಲ ಆಧಾರ ಸತತವಾದ ಸಂಶೋಧನೆಗಳಿಂದ ಹೊರಬಂದ ಹೊಸ ಹೊಸ ವಿಷಯಗಳು. ಇಂಥ ನೂತನ ಜ್ಞಾನಸೃಷ್ಟಿ ಮತ್ತು ಬೆಳವಣಿಗೆಯಲ್ಲಿ ಕ್ರಿಯಾತ್ಮಕವಾಗಿ ಭಾಗಿಯಾಗದ ವ್ಯಕ್ತಿ ಕೃಷಿ ಶಿಕ್ಷಣ ಕಾರ್ಯಕ್ರಮದಲ್ಲಿ ಪರಿಣಾಮಕಾರಿಯಾಗಲಾರ. ಕೃಷಿ ತರಬೇತಿ ಫಲಕಾರಿಯಾಗಬೇಕಾದರೆ ಅಧ್ಯಾಪನ ಮತ್ತು ಸಂಶೋಧನೆಗಳ ಸಮನ್ವಯ ಆಗುವುದು ಅಗತ್ಯ ಇಂಬ ಚಿಂತನೆ 1947ರ ಈಚಿನ ವರ್ಷಗಳಲ್ಲಿ ದೇಶದ ನಾಯಕರುಗಳಲ್ಲಿ ಬೆಳೆದು ಬಂತು. ಇದು ಸಮರ್ಪಕವಾಗಿ ಆಗಬೇಕಾದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವ್ಯವಸಾಯ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಅನಿವಾರ್ಯ ಎಂಬ ಅಂಶಕ್ಕೂ ಎಲ್ಲರ ಒಪ್ಪಿಗೆ ದೊರೆಯಿತು.

ಅಮೆರಿಕದ ಬೇಸಾಯ ಅತಿ ಉಚ್ಛ್ರಾಯ ಸ್ಥಿತಿಯಲ್ಲಿದೆ. ಆ ದೇಶದ ಜನರಲ್ಲಿ 5% ಭಾಗ ಬೇಸಾಯದಲ್ಲಿ ತೊಡಗಿದೆ. ಅಷ್ಟೇ ಜನರ ದುಡಿಮೆಯಿಂದ ಉಳಿದ ಪ್ರಜಾಸಂಖ್ಯೆಗೆ ಸಮೃದ್ಧಿಯಾದ ಆಹಾರ ಮತ್ತಿತರ ವ್ಯವಸಾಯೋತ್ಪನ್ನಗಳು ಒದಗುತ್ತಿವೆ. ಅಲ್ಲದೆ ಪ್ರಪಂಚದ ಅನೇಕ ಭಾಗಗಳ ಜನರ ಹಸಿವನ್ನು ಇಂಗಿಸುವಷ್ಟು ಅಮೆರಿಕದ ಕಣಜ ತುಂಬಿದೆ. ಭಾರತ ಈಚಿನ ವರ್ಷಗಳಲ್ಲಿ ಅಮೆರಿಕದಿಂದ ವಿಶೇಷವಾದ ಧಾನ್ಯದ ನೆರವನ್ನು ಪಡಿದಿದೆ. 50–60 ವರ್ಷಗಳಲ್ಲಿ ಇಡೀ ಸಂಯುಕ್ತ ಸಂಸ್ಥಾನಗಳಲ್ಲಿ ಈ ಅದ್ಭುತ ಪ್ರಗತಿ ಸಾಧ್ಯವಾಗಿದೆ. ಆದರೆ ಹಿಂದೆ, ಭಾರತದಲ್ಲಿನಂತೆಯೇ ಅಲ್ಲಿಯೂ ಕೃಷಿ ಉದ್ಯಮ ಕೆಳಮಟ್ಟದಲ್ಲಿತ್ತು. ಅಮೆರಿಕದ ಅದ್ಭುತ ಪ್ರಗತಿಗೆ ಕಾರಣ ಅಲ್ಲಿನ ಲ್ಯಾಂಡ್‌ಗ್ರಾಂಟ್ ಕಾಲೇಜು ವ್ಯವಸ್ಥೆ. ಕಾಲೇಜುಗಳು 1862ರಲ್ಲಿ ಮೊರಿಲ್ ಶಾಸನದ ಆಧಾರದ ಮೇಲೆ ಸ್ಥಾಪನೆಗೊಂಡುವು. ಕೇಂದ್ರ ಸರ್ಕಾರ ಪ್ರತಿ ಸಂಸ್ಥಾನಕ್ಕೂ ಆ ಸಂಸ್ಥಾನದಿಂದ ಕೇಂದ್ರ ಶಾಸನ ಸಭೆಯಲ್ಲಿರುವ ಪ್ರತಿನಿಧಿಗಳ ಸಂಖ್ಯೆಗನುಸಾರ, ಒಬ್ಬ ಶಾಸಕನಿಗೆ 30,000 ಎಕರೆಯಂತೆ ಜಮೀನನ್ನು ದತ್ತಿಯಾಗಿ ಕೊಟ್ಟಿತು. ಶಾಸನದ ಆದೇಶದಂತೆ ಈ ದತ್ತಿಗಳ ವರಮಾನದಿಂದ ಪ್ರತಿ ಸಂಸ್ಥಾನದಲ್ಲೂ ವ್ಯವಸಾಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನೊಳಗೊಂಡ ವಿಶ್ವವಿದ್ಯಾಲಯಗಳು ಪ್ರಾರಂಭವಾದುವು. ರೈತ ಮತ್ತು ಕೆಲಸಗಾರರ ಮಕ್ಕಳಿಗೆ ಈ ಕಾಲೇಜುಗಳಲ್ಲಿ ಉನ್ನತ ವಿದ್ಯಾಭ್ಯಾಸ ದೊರೆಯುವುದು ಸಾಧ್ಯವಾಯಿತು. ಈ ವ್ಯವಸಾಯ ಕಾಲೇಜುಗಳು ವ್ಯವಸಾಯ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳಿಗೆ ಕೇಂದ್ರಗಳಾದುವು. ಶಿಕ್ಷಣ, ಸಂಶೋಧನೆ ಮತ್ತು ಇವುಗಳಿಂದ ಹೊರಬಂದ ಜ್ಞಾನವನ್ನು ರೈತರಿಗೆ ವಿಸ್ತರಿಸುವ ಕಾರ್ಯವನ್ನಿವು ನಿರ್ವಹಿಸುತ್ತಬಂದುವು. ತೀವ್ರಗತಿಯ ಸಂಶೋಧನೆಗಳಿಂದ ಹೊರಬಂದ ವಿಷಯಗಳು ರೈತರಿಗೆ ಕೂಡಲೆ ತಲಪಿದ್ದರಿಂದ ಅಮೆರಿಕದಲ್ಲಿನ ವ್ಯವಸಾಯ ಕ್ರಾಂತಿಕಾರಿಯಾಗಿ ಪ್ರಗತಿ ಹೊಂದಿತು.

ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ ಕೆಲಸ ಮಾಡಿದ ವಿಶ್ವವಿದ್ಯಾನಿಲಯ ವಿದ್ಯಾಭ್ಯಾಸ ಆಯೋಗ, 1949ರಲ್ಲಿ, ಭಾರತದಲ್ಲೂ ಪ್ರತ್ಯೇಕ ವ್ಯವಸಾಯ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಬೇಕೆಂಬ ಸಲಹೆ ಮಾಡಿತು. 1954ರಲ್ಲಿ ಭಾರತ–ಅಮೆರಿಕ ತಜ್ಞರ ಪರಿಶೀಲನಾ ತಂಡ ಭಾರತ ಸರ್ಕಾರದ ಮುಂದೆ ಕೆಲವು ಪ್ರಾಯೋಗಿಕ ಶಿಫಾರಸುಗಳನ್ನು ಇಟ್ಟಿತು. ಇಂಥದೇ ಎರಡನೆಯ ಪರಿಶೀಲನಾ ತಂಡದ ಮತ್ತು ಕಮ್ಮಿಂಗ್ಸ್‌ರವರ ನೇತೃತ್ವದಲ್ಲಿನ ಸಮಿತಿಗಳ ನಿರ್ದಿಷ್ಟ ಸಲಹೆಗಳ ಫಲವಾಗಿ ಕೃಷಿ ವಿಶ್ವವಿದ್ಯಾನಿಲಯಗಳ ಕಲ್ಪನೆಗೆ ಸರ್ಕಾರದ ಒಪ್ಪಿಗೆ ದೊರೆಯಿತು. ಉತ್ತರ ಪ್ರದೇಶದ ರುದ್ರಪುರ ಜಿಲ್ಲೆಯಲ್ಲಿ ಪ್ರಥಮ ಕೃಷಿ ವಿಶ್ವವಿದ್ಯಾನಿಲಯದ ಸ್ಥಾಪನೆಯಾಯಿತು. ಕರ್ನಾಟಕದಲ್ಲೂ ವಿಧಾನಸಭೆ ಈ ದಿಕ್ಕಿನಲ್ಲಿ ಮಂಡಿತವಾದ ಕಾಯಿದೆಗೆ 1963ರಲ್ಲಿ ಅನುಮೋದನೆ ನೀಡಿತು. 1964ರಲ್ಲಿ ಮೈಸೂರು ಕೃಷಿ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂತು. ಪ್ರಸ್ತುತ, ಮೈಸೂರಲ್ಲದೆ ಮಹಾರಾಷ್ಟ್ರ, ಮಧ್ಯಪ್ರದೇಶ, ಪಂಜಾಬ್, ಹರಿಯಾಣ, ಅಸ್ಸಾಂ, ಒರಿಸ್ಸ, ಬಿಹಾರ, ಕೇರಳ, ಗುಜರಾತ್,

ತಮಿಳುನಾಡು – ಈ ಎಲ್ಲ ರಾಜ್ಯಗಳಲ್ಲೂ ಕೃಷಿ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಿವೆ. ದೇಶದ ಉಳಿದ ಎಲ್ಲ ರಾಜ್ಯಗಳಲ್ಲೂ ಇಂಥ ಪ್ರತ್ಯೇಕ ಕೃಷಿ ವಿಶ್ವವಿದ್ಯಾನಿಲಯಗಳು ರೂಪುಗೊಳ್ಳಲಿವೆ.

ಈ ಸಂಸ್ಥೆಗಳು, ಉಳಿದ ವಿಶ್ವವಿದ್ಯಾನಿಲಯಗಳಂತೆಯೇ ಸ್ವಯಂ ಆಡಳಿತ ಅಧಿಕಾರ ಹೊಂದಿವೆ. ಕೃಷಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವ್ಯವಸಾಯ ಕಾಲೇಜುಗಳು, ಪಶುವೈದ್ಯ ಕಾಲೇಜುಗಳು, ಮೀನುಗಾರಿಕೆ, ಕಾಲೇಜುಗಳು – ಮುಂತಾದ ರೈತನ ಉನ್ನತಿಗೆ ಸಂಬಂಧಿಸಿದ ಎಲ್ಲ ಉನ್ನತ ವಿದ್ಯಾಸಂಸ್ಥೆಗಳು ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೆ ಒಳಪಟ್ಟಿವೆ. ಈ ವಿದ್ಯಾಸಂಸ್ಥೆಗಳಲ್ಲಿ ಪಾಠ ಪ್ರವಚನಗಳಲ್ಲದೆ ಸಂಶೋಧನೆ ಮತ್ತು ಅವುಗಳ ವಿಸ್ತರಣಾಕಾರ್ಯಕ್ಕೆ ಹೆಚ್ಚು ಗಮನ ಕೊಡಲಾಗಿದೆ. ಸರ್ಕಾರದ ಆಡಳಿತ ವ್ಯವಸ್ಥೆಯ ಚೌಕಟ್ಟಿನ ಹೊರಗೆ ಕೃಷಿಯ ಎಲ್ಲ ರೀತಿಯ ಉನ್ನತಿಗೆ ಶ್ರಮಿಸುವ ಹೊಣೆ ಈ ವಿಭಾಗಗಳಿಗೆ ಸೇರಿದ್ದು.

ಪ್ರಸ್ತುತ, ಬೆಂಗಳೂರು ಬಳಿ ಹೆಬ್ಬಾಳದಲ್ಲಿರುವ ವ್ಯವಸಾಯ ಕಾಲೇಜು ಮತ್ತು ಪಶೂವೈದ್ಯ ಕಾಲೇಜು ಧಾರವಾಡದ ಕೃಷಿ ಕಾಲೇಜು, ಮಂಗಳೂರಿನಲ್ಲಿರುವ ಮೀನುಗಾರಿಕೆ ಕಾಲೇಜು ಮತ್ತು ರಾಯಚೂರಿನಲ್ಲಿರುವ ಕೃಷಿ ಎಂಜಿನಿಯರಿಂಗ್ ಸಂಸ್ಥೆ – ಇವು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿವೆ. ಅರಣ್ಯ, ತೋಟಗಾರಿಕೆ ಮತ್ತು ಗೃಹ ಆರ್ಥಿಕ ವಿಷಯಗಳಲ್ಲಿ ಕಾಲೇಜುಗಳಲ್ಲಿ ಸ್ಥಾಪಿಸಲಾಗಿದೆ. ಹಾಗೆಯೇ ರಾಜ್ಯಾದ್ಯಂತ ಸುಮಾರು 35 ವ್ಯವಸಾಯ ಸಂಶೋಧನ ಕೇಂದ್ರಗಳಿದ್ದು ಕೃಷಿಯ ವಿವಿಧ ವಿಷಯಗಳಲ್ಲಿ ವಿಶ್ವವಿದ್ಯಾನಿಲಯ ತೀವ್ರ ಸಂಶೋಧನೆ ನಡೆಸುತ್ತಿದೆ. ತುಂಗಭದ್ರಾ ಪ್ರದೇಶ, ಬೆಂಗಳೂರು ಜಿಲ್ಲೆ ಮತ್ತು ಧಾರವಾಡ ಜಿಲ್ಲೆಗಳಲ್ಲಿ ತೀವ್ರ ವ್ಯವಸಾಯ ವಿಸ್ತರಣಾ ಕಾರ್ಯಕ್ರಮ ನಡೆದಿದೆ. ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಬೋರ್ಡ್ ಆಫ್ ರೀಜೆಂಟ್ಸ್ ಎಂಬ ಆಡಳಿತ ಮಂಡಲಿ ಕೃಷಿ ವಿಶ್ವವಿದ್ಯಾನಿಲಯದ ಆಡಳಿತದ ಹೊಣೆಯನ್ನು ನಿರ್ವಹಿಸುತ್ತದೆ. (ನೋಡಿ – ಕೃಷಿವಿಶ್ವ ವಿದ್ಯಾಲಯ, ಹೆಬ್ಬಾಳ)

ಈ ವಿದ್ಯಾಸಂಸ್ಥೆಗಳಲ್ಲಿ ಪಠ್ಯವಿಷಯಗಳಲ್ಲೂ ಪಠ್ಯಕ್ರಮಗಳಲ್ಲೂ ಅನೇಕ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ. ಪಠ್ಯ ವಿಷಯಗಳಲ್ಲಿ ಕೃಷಿಶಾಸ್ತ್ರ, ಕೃಷಿ ರಸಾಯನವಿಜ್ಞಾನ, ಕೃಷಿ ಸಸ್ಯ ವಿಜ್ಞಾನ, ಸಸ್ಯರೋಗ ನಿರೋಧವಿಜ್ಞಾನ, ಕೀಟವಿಜ್ಞಾನ, ಸಸ್ಯಸಂರಕ್ಷಣಾ ವಿಜ್ಞಾನ, ಕೃಷಿ ಎಂಜಿನಿಯರಿಂಗ್,ಕೃಷಿ ಅರ್ಥಶಾಸ್ತ್ರ, ಕೃಷಿ ವಿಸ್ತರಣಾ ವಿಷಯ – ಇವೆಲ್ಲ ಸೇರುತ್ತವೆ. ಪಠ್ಯಕ್ರಮದ ಮಾರ್ಪಾಟು ಹೀಗಿದೆ : ವರ್ಷದ ಕೊನೆಯಲ್ಲಿ ಬಾಹ್ಯ ಪರೀಕ್ಷೆಗಳನ್ನು ನಡೆಸುವ ಬದಲು ಇಡೀ ವರ್ಷವನ್ನು ಟ್ರೈಮಿಸ್ಟರ್ ಎಂಬ 14 ವಾರದ ಅವಧಿಯ 3 ಭಾಗಗಳಾಗಿ ಮಾಡಿ ಈ ಅವಧಿಯಲ್ಲಿ ವಿದ್ಯಾರ್ಥಿಯ ದಿನಂಪ್ರತಿ ಪ್ರಗತಿಯ ಆಧಾರದ ಮೇಲೆ ಅಧ್ಯಾಪಕನಿಂದಲೇ ವಿದ್ಯಾರ್ಥಿಯ ಯೋಗ್ಯತಾನಿರ್ಣಯ ಮಾಡುವ ವ್ಯವಸ್ಥೆಯಿಂದೆ. ಪ್ರತಿ ಮುಖ್ಯ ಪಠ್ಯವಿಷಯಗಳನ್ನೂ 14 ವಾರಗಳಲ್ಲಿ ಬೋಧಿಸಲು ಅನುಕೂಲವಾಗುವಂತೆ ಪಾಠವಿಧಿಗಳನ್ನು (ಕೋರ್ಸು) ಮಾಡಿ ಎಲ್ಲ ವಿಷಯಗಳನ್ನೂ ತೀವ್ರವಾಗಿ ವ್ಯಾಸಂಗ ಮಾಡುವ ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿ ಒಂದು ವಿಷಯದ ವ್ಯಾಸಂಗದಲ್ಲಿ ಉಪಯೋಗಿಸುವ ಕಾಲದ ಆಧಾರದ ಮೇಲೆ ಗಣತಿಗಳನ್ನು (ಕ್ರೆಡಿಟ್ಸ್) ನಿರ್ಧರಿಸಿ, ವ್ಯಾಸಂಗದ ಕೊನೆಯಲ್ಲಿ ವಿದ್ಯಾರ್ಥಿಯ ಯೋಗ್ಯತಾನಿರ್ಣಯ ಮಾಡಲಾಗುತ್ತದೆ. ಈ ಕಾರಣದಿಂದ ವಿದ್ಯಾರ್ಥಿ ತನ್ನ ವ್ಯಾಸಂಗದ ಅವಧಿಯ ಉದ್ದಕ್ಕೂ ಎಚ್ಚರಿಕೆಯಿಂದ ಪಾಠಪ್ರವಚನಗಳಲ್ಲಿ ತೊಡಗುವುದು ಆವಶ್ಯಕವಾಗುತ್ತದೆ. (ಬಿ.ವಿ.ವಿ.)

ಧಾರವಾಡ ಕರ್ನಾಟಕದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳಲ್ಲೊಂದು. +ಇನ್ನೊಂದು ಬೆಂಗಳೂರಿನಲ್ಲಿದೆ. ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಪ್ರತ್ಯೇಕವಾಗಿ ಸ್ಥಾಪಿಸುವ ಅಗತ್ಯವನ್ನು ಮನಗಂಡು ರಾಜ್ಯ ಸರ್ಕಾರ 1986ರಲ್ಲಿ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ಸೇರುತ್ತವೆ.

ಈ ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿ ಅಧ್ಯಯನ ಕೇಂದ್ರಗಳನ್ನೂ ಕಾಲೇಜುಗಳನ್ನೂ ಹೊಂದಿದೆ. ಒಟ್ಟು ಏಳು ಶೈಕ್ಷಣಿಕ ಕೇಂದ್ರಗಳಲ್ಲಿರುವ ಒಂಬತ್ತು ಕಾಲೇಜುಗಳಲ್ಲಿ ಸ್ನಾತಕ ಬೋಧನಾ ಚಟುವಟಿಕೆಗಳು ನಡೆಯುತ್ತಿವೆ. ಧಾರವಾಡದಲ್ಲಿ ಕೃಷಿ, ಕೃಷಿ ಮಾರಾಟ ಮತ್ತು ಸಹಕಾರ ಹಾಗೂ ಗ್ರಾಮೀಣ ಗೃಹ ವಿಜ್ಞಾನ ಪದವಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ. ರಾಯಚೂರು ಕೇಂದ್ರದಲ್ಲಿ ಕೃಷಿ ಮತ್ತು ಕೃಷಿ ಎಂಜಿನಿಯರಿಂಗ್; ಬೀದರ್‌ನಲ್ಲಿ ಪಶುವೈದ್ಯಕೀಯ, ಬಿಜಾಪುರ ಮತ್ತು ಭೀಮರಾಯನ ಗುಡಿಯಲ್ಲಿ ಕೃಷಿ; ಅರಭಾವಿಯಲ್ಲಿ ತೋಟಗಾರಿಕೆ, ಶಿರಸಿಯಲ್ಲಿ ಅರಣ್ಯವಿಜ್ಞಾನ ಪದವಿಗಳಿಗೆ ಶಿಕ್ಷಣ ಸೌಲಭ್ಯವಿದೆ. ಸ್ನಾತಕೋತ್ತರ ಪದವಿ ಕೇಂದ್ರಗಳು ಧಾರವಾಡ, ರಾಯಚೂರು, ಶಿರಸಿ, ಬೀದರ್ ಮತ್ತು ಅರಭಾವಿಗಳಲ್ಲಿವೆ.

ಕೃಷಿ ವಿಶ್ವವಿದ್ಯಾಲಯ ಕೃಷಿ, ಪಶುವಿಜ್ಞಾನಗಳ ಶಿಕ್ಷಣ ನಿಕಾಯಗಳನ್ನು ಹೊಂದಿದೆ. ಅಧ್ಯಯನ ಮಂಡಲಿಗಳು ಮತ್ತು ಶೈಕ್ಷಣಿಕ ಪರಿಷತ್ತುಗಳಿವೆ. ವಿಶ್ವವಿದ್ಯಾಲಯ ವಿವಿಧ ಕೃಷಿ ವಲಯಗಳಲ್ಲಿ ಒಟ್ಟು 33 ಸಂಶೋಧನ ಕೇಂದ್ರಗಳನ್ನು ನಡೆಸುತ್ತಿದೆ. ಅವು ಅಂಕೋಲ, ಅಣ್ಣಿಗೇರಿ, ಅರಭಾವಿ, ಬಾಗಲಕೋಟೆ, ಬೈಲಹೊಂಗಲ, ಬೆಳಗಾವಿ, ಬೆಳವಟಗಿ, ಭೀಮರಾಯನ ಗುಡಿ, ಬೀದರ್, ಬಿಜಾಪುರ, ಜೆನವಾಡಾ, ದೇವಣಿ, ಎಂ.ಆರ್.ಎಸ್. ಧಾರವಾಡ –5, ಎ.ಆರ್.ಎಸ್. ಧಾರವಾಡ –7, ಗದಗ, ಗಂಗಾವತಿ, ಗುಲ್ಬರ್ಗ, ಹಗರಿ, ಹನುಮನಹಟ್ಟಿ, ಕವಡಿಮಟ್ಟಿ, ಕಲ್ಲೋಳಿ, ಮಾಲನೂರ, ಮುಂಡಗೋಡ, ಮುಗದ, ನಿಪ್ಪಾಣಿ, ಪ್ರಭುನಗರ, ರಾಯಚೂರು, ಶಿರಸಿ (ಬತ್ತ), ಶಿರಸಿ (ಮೆಣಸು), ಸಿರಗುಪ್ಪ, ಸಂಕೇಶ್ವರ, ದೇವಿಹೊಸೂರು, ಅಲಮೇಲ್. ಹೊಸದಾಗಿ ಜಾರಿಗೆ ಬಂದ ರಾಷ್ಟ್ರೀಯ ಕೃಷಿ ತಾಂತ್ರಿಕ ಯೋಜನೆಯಡಿ 60 ಸಂಶೋಧನ ಯೋಜನೆಗಳು ಆರಂಭವಾಗಿವೆ. ಇವುಗಳ ಅಂದಾಜು ವಿನಿಯೋಗ 11.63 ಕೋಟಿ ರೂಪಾಯಿ.

ವಿಶ್ವವಿದ್ಯಾಲಯದ ಸಂಶೋಧನೆ, ಪ್ರಯೋಗ ಮತ್ತು ಪರಿಶೀಲನೆಯ ಪರಿಣಾಮವಾಗಿ 15 ಸಂಕರಣ ತಳಿಗಳನ್ನೂ 87 ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಲಾಗಿದೆ. ಇದರಲ್ಲಿ ಜೋಳ, ಬತ್ತ, ಗೋದಿ, ಸೋಯಬೀನ್, ಸೇಂಗ, ಸೂರ್ಯಕಾಂತಿ, ಹಸುರು ಮೆಣಸಿನಕಾಯಿ, ಫ್ರೆಂಚ್ ಬೀನ್ ಮತ್ತು ಕಬ್ಬು ಸೇರಿವೆ. ವಿವಿಧ ಬೆಳೆ ರೋಗಗಳ ನಿಯಂತ್ರಣಕ್ಕೂ ಆದ್ಯತೆ ನೀಡಲಾಗಿದೆ. ವಿಶ್ವವಿದ್ಯಾಲಯವು ವಿಸ್ತರಣ ನಿರ್ದೇಶನಾಲಯವಿದೆ. ಅದರ ಮುಖ್ಯ ಕಾರ್ಯಗಳೆಂದರೆ ತಾಂತ್ರಿಕ ವರ್ಗಾವಣೆ, ಸಿಬ್ಬಂದಿ ತರಬೇತಿ, ಪ್ರಕಟಣೆ, ವಿಸ್ತರಣಾ ಶಿಕ್ಷಣ, ಸಂಶೋಧನ ಕೇಂದ್ರಗಳು ಮತ್ತು ರೈತರ ನಡುವೆ ಸಂಪರ್ಕಸೇವೆ ಏರ್ಪಡಿಸುವುದು. ಇದಕ್ಕಾಗಿ ವಸ್ತುಪ್ರದರ್ಶನ, ಪ್ರಾತ್ಯಕ್ಷಿಕೆ, ಸುದ್ದಿ ಮಾಧ್ಯಮಗಳು ಮತ್ತು ಕೃಷಿ ಮೇಳಗಳನ್ನು ಸಾಧನಗಳಾಗಿ ಬಳಸಿಕೊಳ್ಳಲಾಗಿದೆ. ರೈತ ಮಹಿಳೆಯರಲ್ಲಿ ಕೃಷಿ ಕುರಿತ ಹೊಸ ಆವಿಷ್ಕಾರಗಳ ಬಗ್ಗೆ ಅರಿವುಂಟುಮಾಡಲು ಕಾಳಜಿ ವಹಿಸಲಾಗುತ್ತಿದೆ. ಕೃಷಿ ವಿಶ್ವವಿದ್ಯಾಲಯ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ 1995–2000 ಅವಧಿಗೆ ಸರದಾರ್ ಪಟೇಲ್ ಪ್ರಶಸ್ತಿ ಪಡೆದಿದೆ. ಇಲ್ಲಿನ ಹಲವು ವಿಜ್ಞಾನಿಗಳು ಜವಹರಲಾಲ್ ನೆಹರೂ ಪ್ರಶಸ್ತಿ, ಸರ್.ಸಿವಿ.ರಾಮನ್ ಪ್ರಶಸ್ತಿ ಸೇರಿದಂತೆ ವಿವಿಧ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈ ವಿಶ್ವವಿದ್ಯಾಲಯದಲ್ಲಿ ಇಲ್ಲಿಯವರೆಗೆ ಜಿ.ವಿ.ಗೌಡ (1986–89), ಆರ್.ಕೆ.ಹೆಗಡೆ (1989–91), ಎನ್.ಎಲ್.ಮೌರ್ಯ (1991), ಪಿ.ವಿ.ರೈ (1991–94), ಎಂ.ಮಹದೇವಪ್ಪ (1994–2000) ಮತ್ತು ಎಸ್.ಎ.ಪಾಟೀಲ (2000ದಿಂದ) ಇವರು ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. *

**ಕೃಷಿ ವಿಶ್ವವಿದ್ಯಾಲಯ, ಧಾರವಾಡ :** ಕರ್ನಾಟಕದಲ್ಲಿರುವ ಕೃಷಿ ವಿಶ್ವವಿದ್ಯಾಲಯ ಗಳಲ್ಲೊಂದು. ಇನ್ನೊಂದು ಬೆಂಗಳೂರಿನಲ್ಲಿದೆ. ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಪ್ರತ್ಯೇಕವಾಗಿ ಸ್ಥಾಪಿಸುವ ಅಗತ್ಯವನ್ನು ಮನಗಂಡು ರಾಜ್ಯ ಸರ್ಕಾರ 1986ರಲ್ಲಿ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ಸೇರುತ್ತವೆ.

ಈ ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿ ಅಧ್ಯಯನ ಕೇಂದ್ರಗಳನ್ನೂ ಕಾಲೇಜು ಗಳನ್ನೂ ಹೊಂದಿದೆ. ಒಟ್ಟು ಏಳು ಶೈಕ್ಷಣಿಕ ಕೇಂದ್ರಗಳಲ್ಲಿರುವ ಒಂಬತ್ತು ಕಾಲೇಜುಗಳಲ್ಲಿ ಸ್ನಾತಕ ಬೋಧನಾ ಚಟುವಟಿಕೆಗಳು ನಡೆಯುತ್ತಿವೆ. ಧಾರವಾಡದಲ್ಲಿ ಕೃಷಿ, ಕೃಷಿ ಮಾರಾಟ ಮತ್ತು ಸಹಕಾರ ಹಾಗೂ ಗ್ರಾಮೀಣ ಗೃಹ ವಿಜ್ಞಾನ ಪದವಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ. ರಾಯಚೂರು ಕೇಂದ್ರದಲ್ಲಿ ಕೃಷಿ ಮತ್ತು ಕೃಷಿ ಎಂಜಿನಿಯರಿಂಗ್; ಬೀದರ್‌ನಲ್ಲಿ ಪಶುವೈದ್ಯಕೀಯ, ಬಿಜಾಪುರ ಮತ್ತು ಭೀಮರಾಯನ ಗುಡಿಯಲ್ಲಿ ಕೃಷಿ; ಅರಭಾವಿಯಲ್ಲಿ ತೋಟಗಾರಿಕೆ, ಶಿರಸಿಯಲ್ಲಿ ಅರಣ್ಯವಿಜ್ಞಾನ ಪದವಿಗಳಿಗೆ ಶಿಕ್ಷಣ ಸೌಲಭ್ಯವಿದೆ. ಸ್ನಾತಕೋತ್ತರ ಪದವಿ ಕೇಂದ್ರಗಳು ಧಾರವಾಡ, ರಾಯಚೂರು, ಶಿರಸಿ, ಬೀದರ್ ಮತ್ತು ಅರಭಾವಿಗಳಲ್ಲಿವೆ.

ಕೃಷಿ ವಿಶ್ವವಿದ್ಯಾಲಯ ಕೃಷಿ, ಪಶುವಿಜ್ಞಾನಗಳ ಶಿಕ್ಷಣ ನಿಕಾಯಗಳನ್ನು ಹೊಂದಿದೆ. ಅಧ್ಯಯನ ಮಂಡಲಿಗಳು ಮತ್ತು ಶೈಕ್ಷಣಿಕ ಪರಿಷತ್ತುಗಳಿವೆ. ವಿಶ್ವವಿದ್ಯಾಲಯದಲ್ಲಿ ಒಟ್ಟು 2,234 ವಿದ್ಯಾರ್ಥಿಗಳು ವಿವಿಧ ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳಿಗಾಗಿ ಅಭ್ಯಾಸ ಮಾಡುತ್ತಿದ್ದಾರೆ (2003). ವಿಶ್ವವಿದ್ಯಾಲಯ ವಿವಿಧ ಕೃಷಿ ವಲಯಗಳಲ್ಲಿ ಒಟ್ಟು 33 ಸಂಶೋಧನ ಕೇಂದ್ರಗಳನ್ನು ನಡೆಸುತ್ತಿದೆ. ಅವು ಅಂಕೋಲ, ಅಣ್ಣಿಗೇರಿ, ಅರಭಾವಿ, ಬಾಗಲಕೋಟೆ, ಬೈಲಹೊಂಗಲ, ಬೆಳಗಾಂವಿ, ಬೆಳವಟಗಿ, ಭೀಮರಾಯನ ಗುಡಿ, ಬೀದರ್, ಬಿಜಾಪುರ, ಜೆನವಾಡಾ, ದೇವಣಿ, ಎಂ.ಆರ್.ಎಸ್. ಧಾರವಾಡ –5, ಎ.ಆರ್.ಎಸ್. ಧಾರವಾಡ –7, ಗದಗ, ಗಂಗಾವತಿ, ಗುಲ್ಬರ್ಗ, ಹಗರಿ, ಹನುಮನಹಟ್ಟಿ, ಕವಡಿಮಟ್ಟಿ, ಕಲ್ಲೋಳಿ, ಮಾಲನೂರ, ಮುಂಡಗೋಡ, ಮುಗದ, ನಿಪ್ಪಾಣಿ, ಪ್ರಭುನಗರ, ರಾಯಚೂರು, ಶಿರಸಿ (ಬತ್ತ), ಶಿರಸಿ (ಮೆಣಸು), ಸಿರಗುಪ್ಪ, ಸಂಕೇಶ್ವರ, ದೇವಿಹೊಸೂರು, ಅಲಮೇಲ್. ಹೊಸದಾಗಿ ಜಾರಿಗೆ ಬಂದ ರಾಷ್ಟ್ರೀಯ ಕೃಷಿ ತಾಂತ್ರಿಕ ಯೋಜನೆಯಡಿ 60 ಸಂಶೋಧನ ಯೋಜನೆಗಳು ಆರಂಭವಾಗಿವೆ. ಇವುಗಳ ಅಂದಾಜು ವಿನಿಯೋಗ 11.63 ಕೋಟಿ ರೂಪಾಯಿ.

ವಿಶ್ವವಿದ್ಯಾಲಯದ ಸಂಶೋಧನೆ, ಪ್ರಯೋಗ ಮತ್ತು ಪರಿಶೀಲನೆಯ ಪರಿಣಾಮವಾಗಿ 15 ಸಂಕರಣ ತಳಿಗಳನ್ನೂ 87 ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಲಾಗಿದೆ. ಇದರಲ್ಲಿ ಜೋಳ, ಬತ್ತ, ಗೋದಿ, ಸೋಯಬೀನ್, ಸೇಂಗ, ಸೂರ್ಯಕಾಂತಿ, ಹಸುರು ಮೆಣಸಿನಕಾಯಿ, ಫ್ರೆಂಚ್ ಬೀನ್ ಮತ್ತು ಕಬ್ಬು ಸೇರಿವೆ. ವಿವಿಧ ಬೆಳೆ ರೋಗಗಳ ನಿಯಂತ್ರಣಕ್ಕೂ ಆದ್ಯತೆ ನೀಡಲಾಗಿದೆ. ವಿಶ್ವವಿದ್ಯಾಲಯವು ವಿಸ್ತರಣ ನಿರ್ದೇಶನಾಲಯವಿದೆ.

ಅದರ ಮುಖ್ಯ ಕಾರ್ಯಗಳೆಂದರೆ ತಾಂತ್ರಿಕ ವರ್ಗಾವಣೆ, ಸಿಬ್ಬಂದಿ ತರಬೇತಿ, ಪ್ರಕಟಣೆ, ವಿಸ್ತರಣಾ ಶಿಕ್ಷಣ, ಸಂಶೋಧನ ಕೇಂದ್ರಗಳು ಮತ್ತು ರೈತರ ನಡುವೆ ಸಂಪರ್ಕಸೇವೆ ಏರ್ಪಡಿಸುವುದು. ಇದಕ್ಕಾಗಿ ವಸ್ತುಪ್ರದರ್ಶನ, ಪ್ರಾತ್ಯಕ್ಷಿಕೆ, ಸುದ್ದಿ ಮಾಧ್ಯಮಗಳು ಮತ್ತು ಕೃಷಿ ಮೇಳಗಳನ್ನು ಸಾಧನಗಳಾಗಿ ಬಳಸಿಕೊಳ್ಳಲಾಗಿದೆ. ರೈತ ಮಹಿಳೆಯರಲ್ಲಿ ಕೃಷಿ ಕುರಿತ ಹೊಸ ಅವಿಷ್ಕಾರಗಳ ಬಗ್ಗೆ ಅರಿವುಂಟುಮಾಡಲು ಕಾಳಜಿ ವಹಿಸಲಾಗುತ್ತಿದೆ. ಕೃಷಿ ವಿಶ್ವವಿದ್ಯಾಲಯ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ 1995–2000 ಅವಧಿಗೆ ಸರದಾರ್ ಪಟೇಲ್ ಪ್ರಶಸ್ತಿ ಪಡೆದಿದೆ. ಇಲ್ಲಿನ ಹಲವು ವಿಜ್ಞಾನಿಗಳು ಜವಹರಲಾಲ್ ನೆಹರೂ ಪ್ರಶಸ್ತಿ, ಸರ್.ಸಿ.ವಿ.ರಾಮನ್ ಪ್ರಶಸ್ತಿ ಸೇರಿದಂತೆ ವಿವಿಧ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈ ವಿಶ್ವವಿದ್ಯಾಲಯದಲ್ಲಿ ಇಲ್ಲಿಯವರೆಗೆ ಜಿ.ವಿ.ಗೌಡ (1986–89), ಆರ್.ಕೆ.ಹೆಗಡೆ (1989–91), ಎನ್.ಎಲ್.ಮೌರ್ಯ (1991), ಪಿ.ವಿ.ರೈ (1991–94), ಎಂ.ಮಹದೇವಪ್ಪ (1994–2000) ಮತ್ತು ಎಸ್.ಎ.ಪಾಟೀಲ (2000ದಿಂದ) ಇವರು ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

*

**ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು (ಹೆಬ್ಬಾಳ) :** ಕರ್ನಾಟಕದಲ್ಲಿ ಕೃಷಿ ಶಿಕ್ಷಣ ಹಾಗೂ ಸಂಶೋಧನೆಗಾಗಿ ಬೆಂಗಳೂರು ನಗರದ ಹೆಬ್ಬಾಳದಲ್ಲಿ ನೆಲೆಗೊಂಡ ವಿಶ್ವವಿದ್ಯಾಲಯ. ಸ್ಥಾಪನೆ 1965. 1899ರಲ್ಲಿ ಮೈಸೂರು ಸರ್ಕಾರ ಕೃಷಿ ಸಂಶೋಧನೆ ಹಾಗೂ ಶಿಕ್ಷಣವನ್ನು ಪ್ರೋತ್ಸಾಹಿಸಲು ಜರ್ಮನ್ ರಾಷ್ಟ್ರೀಯನಾದ ಲೆಹಮನ್ ಎಂಬಾತನನ್ನು ಮೊದಲ ಕೃಷಿ ತಜ್ಞನನ್ನಾಗಿ ನೇಮಿಸಿತು. ಆತ ಈಗಿನ ಸೆಂಟ್ರಲ್ ಕಾಲೇಜ್ ಕಟ್ಟಡದ ಪಕ್ಕದಲ್ಲಿ ಒಂದು ಕೃಷಿ ಸಂಶೋಧನ ಪ್ರಯೋಗಾಲಯ ಹಾಗೂ ಹೆಬ್ಬಾಳದಲ್ಲಿ 30 ಎಕರೆ ಜಾಗದಲ್ಲಿ ಒಂದು ಪ್ರಾಯೋಗಿಕ ಕ್ಷೇತ್ರವನ್ನು ಸ್ಥಾಪಿಸಿದ. ಈ ಕ್ಷೇತ್ರದಲ್ಲಿ ಸಂಶೋಧನ ಪ್ರಗತಿ ಕಂಡ ಅನಂತರ ಅದೇ ಸ್ಥಳದಲ್ಲಿ 1913ರಲ್ಲಿ ಮೈಸೂರು ಕೃಷಿ ಶಾಲೆ ಸ್ಥಾಪಿಸಲಾಯಿತು. ರಾಜ್ಯ ಕೃಷಿ ಇಲಾಖೆಯ ನಿರ್ದೇಶಕರಾಗಿದ್ದ (1907) ಕೀಟವಿಜ್ಞಾನಿ ಹಾಗೂ ಶಿಲೀಂಧ್ರ ತಜ್ಞ ಕೆನಡದ ಲೆಸ್ಲೀ ಕೋಲ್‌ಮನ್‌ರನ್ನು (**ನೋಡಿ– ಕೋಲ್‌ಮನ್,–ಲೆಸ್ಲಿ–ಸಿ**) ಕೃಷಿ ಶಾಲೆಯ ಮೊದಲ ಪ್ರಾಂಶುಪಾಲರನ್ನಾಗಿ ನೇಮಿಸಲಾಯಿತು. ಮೊದಲಿಗೆ ಈ ಶಾಲೆ ಎರಡು ವರ್ಷಗಳ ಪೋಸ್ಟ್ ಸೆಕೆಂಡರಿ ಟ್ರೈನಿಂಗ್ ಕೋರ್ಸ್ ನಡೆಸುತ್ತಿತ್ತು. ಅನಂತರ ಅದನ್ನು ಮೂರು ವರ್ಷಗಳ ಅವಧಿಯ ಪೋಸ್ಟ್ ಸೆಕೆಂಡರಿ ಡಿಪ್ಲೊಮಾ ಕೋರ್ಸ್ ಆಗಿ ಬದಲಾಯಿಸಲಾಯಿತು. ಕೋಲ್‌ಮನ್ ಅವರ ನೇತೃತ್ವದಲ್ಲಿ ಮೈಸೂರು ಕೃಷಿ ಶಾಲೆ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಹಾಗೂ ಬರ್ಮಾ (ಈಗಿನ ಮಯನ್‌ಮಾರ್), ಶ್ರೀಲಂಕ ಹಾಗೂ ದಕ್ಷಿಣ ಆಫ್ರಿಕ ದೇಶಗಳಲ್ಲೂ ಪ್ರಖ್ಯಾತವಾಯಿತು. ಈ ಖ್ಯಾತಿಯಿಂದಾಗಿ ಕೋಲ್‌ಮನ್ ಅವರು ಕೃಷಿ ಶಾಲೆಯನ್ನು ಕೃಷಿ ಕಾಲೇಜಾಗಿ ಪರಿವರ್ತಿಸುವ ಕನಸು ಕಂಡರು. ಅವರ ಕನಸು ನನಸಾಗುವುದು ತಡವಾದರೂ ಆಗ ರಾಜ್ಯ ಕೃಷಿ ಅಧಿಕಾರಿಯಾಗಿದ್ದ ಎಂ.ಎ.ಶ್ರೀನಿವಾಸನ್ ಅವರ ಆಸಕ್ತಿಯಿಂದಾಗಿ 1946ರಲ್ಲಿ 3 ವರ್ಷಗಳ ಸ್ನಾತಕ ಪದವಿ (ಬ್ಯಾಚೆಲರ್ ಡಿಗ್ರಿ) ಕೋರ್ಸ್‌ನೊಂದಿಗೆ ಕೃಷಿ ಕಾಲೇಜು ಸ್ಥಾಪಿತವಾಯಿತು. ಕೃಷಿ ಕಾಲೇಜಿನ ನಿರ್ವಹಣೆ ಕೃಷಿ ಇಲಾಖೆಯ ಅಧೀನದಲ್ಲಿದ್ದು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಟ್ಟಿತ್ತು. ಸ್ನಾತಕ ಪದವಿ ಕೋರ್ಸಿಗೆ ಎರಡು ವರ್ಷಗಳ ಇಂಟರ್‌ಮೀಡಿಯೇಟ್ ಮುಗಿಸಿದ ವಿದ್ಯಾರ್ಥಿಗಳಿಗೆ ಪ್ರವೇಶವಿತ್ತು. ಮುಂದೆ ರಾಜ್ಯ ಸರ್ಕಾರ ಇಂಟರ್‌ಮೀಡಿಯೇಟ್ ಕೋರ್ಸ್ ಬದಲಿಗೆ ಒಂದು ವರ್ಷದ ಪದವಿ ಪೂರ್ವ (ಪ್ರೀಯೂನಿವರ್ಸಿಟಿ) ಪರೀಕ್ಷೆ ಜಾರಿಗೆ ತಂದಾಗ ಕೃಷಿ ಸ್ನಾತಕ ಪದವಿಯನ್ನು ನಾಲ್ಕು ವರ್ಷದ ಕಾರ್ಯಕ್ರಮವನ್ನಾಗಿ ಬದಲಾಯಿಸಲಾಯಿತು.

ಕೃಷಿ ಕಾಲೇಜಿಗೆ ಒಂದು ಹೊಸ ವಿಸ್ತಾರವಾದ ಕಟ್ಟಡದ ಆವಶ್ಯಕತೆಯನ್ನು ಮನಗಂಡಿದ್ದ ಆಗಿನ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಮೈಸೂರು ಕೃಷಿ ಕಾಲೇಜಿನ ಶಂಕುಸ್ಥಾಪನೆ ನೆರವೇರಿಸಿದ್ದರು (1956). ಅನಂತರ 1959ರಲ್ಲಿ ಬೆಂಗಳೂರು ನಗರದ ಬಳ್ಳಾರಿ ರಸ್ತೆಯಲ್ಲಿರುವ ಹೊಸ ಕಟ್ಟಡಕ್ಕೆ ಕೃಷಿ ಕಾಲೇಜು ವರ್ಗಾವಣೆಗೊಂಡಿತು.

ರಾಜ್ಯ ವಿಧಾನಮಂಡಲದಲ್ಲಿ ವಿಶ್ವವಿದ್ಯಾನಿಲಯ ಅಧಿನಿಯಮ (1963ರ ಅಧಿನಿಯಮ 22) ಅಂಗೀಕೃತವಾದ ಅನಂತರ 1964ರಲ್ಲಿ ಕೃಷಿ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂತು. ವಿಶ್ವವಿದ್ಯಾಲಯದ ಉದ್ಘಾಟನೆಯನ್ನು ಆಗಿನ ರಾಷ್ಟ್ರಪತಿಗಳಾದ ಜಾಕೀರ್ ಹುಸೇನ್ ಅವರು ವಿಧ್ಯುಕ್ತವಾಗಿ ನೆರವೇರಿಸಿದರು (1965 ಅಕ್ಟೋಬರ್ 1). ಕೆ.ಸಿ.ನಾಯಕ್ ಕೃಷಿ ವಿಶ್ವವಿದ್ಯಾಲಯದ ಮೊದಲ ಕುಲಪತಿ (1964–73), ಕೃಷಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎಂ.ಪುಟ್ಟರುದ್ರಯ್ಯ ಅವರು ಮೊದಲ ಶಿಕ್ಷಣ ನಿರ್ದೇಶಕರು. ಅನಂತರ ಎಚ್.ಆರ್.ಅರಕೆರೆ (1973–79), ಆರ್.ದ್ವಾರಕೀನಾಥ (1979–81), ಎನ್.ಜಿ.ಪೆರೂರ್ (1981–85), ಎಸ್.ವಿ.ಪಾಟೀಲ್ (1985–88), ಆರ್.ವಿ.ರಾಮಕೃಷ್ಣ (1988), ಕೆ.ಕೃಷ್ಣಮೂರ್ತಿ (1989–92), ಕೆ.ವಿ.ದೇವರಾಜ್ (1992–95), ಜಿ.ಕೆ.ವೀರೇಶ್ (1995–98), ಎಸ್.ಬಿಸಲಯ್ಯ (1998–2001) ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಈಗಿನ ಕುಲಪತಿ ಎ.ಎಂ.ಕೃಷ್ಣಪ್ಪ, (2001).

1986ರಲ್ಲಿ ಈ ವಿಶ್ವವಿದ್ಯಾಲಯವನ್ನು ವಿಭಜಿಸಿ ಧಾರವಾಡದಲ್ಲಿ ಮತ್ತೊಂದು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಮೊದಲಿಗೆ ಕೃಷಿ ವಿಜ್ಞಾನ ಬೋಧನೆಯೊಂದಿಗೆ ಪ್ರಾರಂಭವಾದ ಕೃಷಿ ವಿಶ್ವವಿದ್ಯಾಲಯ ಪ್ರಸ್ತುತ 9 ವಿಷಯಗಳಲ್ಲಿ ಸ್ನಾತಕ ಪದವಿಗಳನ್ನೂ 47 ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನೂ 34 ವಿಷಯಗಳಲ್ಲಿ ಪಿಎಚ್.ಡಿ. ಪದವಿಗಳನ್ನೂ ಪ್ರದಾನ ಮಾಡುತ್ತಿದೆ. ಕರ್ನಾಟಕದ ಕೃಷಿ ಕಾಲೇಜುಗಳ ವಿವರ ಹೀಗಿದೆ: ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಮಂಡ್ಯ, ಶಿವಮೊಗ್ಗ ಹಾಗೂ ಹಾಸನಗಳಲ್ಲಿ ಕೃಷಿ ಕಾಲೇಜುಗಳು; ಮಂಗಳೂರಿನಲ್ಲಿ ಮೀನುಗಾರಿಕೆ ಕಾಲೇಜು; ಮೂಡಿಗೆರೆಯಲ್ಲಿ ತೋಟಗಾರಿಕೆ ಕಾಲೇಜು, ಪೊನ್ನಂಪೇಟೆಯಲ್ಲಿ ಅರಣ್ಯಶಾಸ್ತ್ರ ಕಾಲೇಜು; ಚಿಂತಾಮಣಿಯಲ್ಲಿ ರೇಷ್ಮೆ ಕೃಷಿ ಕಾಲೇಜು; ಬೆಂಗಳೂರಿನ ಹೆಬ್ಬಾಳ ಆವರಣದಲ್ಲಿ ಪಶುವೈದ್ಯಕೀಯ ಹಾಗೂ ಹೈನು ತಂತ್ರಜ್ಞಾನ ಕಾಲೇಜು. ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಮಾರುಕಟ್ಟೆ ಮತ್ತು ಸಹಕಾರ ಹಾಗೂ ಕೃಷಿ ಇಂಜಿನಿಯರಿಂಗ್ ಸ್ನಾತಕ ಪದವಿಗಳನ್ನು ಬೋಧಿಸಲಾಗುತ್ತಿದೆ. ಈ ಎಲ್ಲ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ವಿಶ್ವವಿದ್ಯಾನಿಲಯದ ಪ್ರಮುಖ ಅಧ್ಯಯನ ವಿಭಾಗಗಳಿವು: ಕೃಷಿ ಜೀವತಂತ್ರಜ್ಞಾನ, ಕೃಷಿ ಅರ್ಥಶಾಸ್ತ್ರ, ಕೃಷಿ ವಿಸ್ತರಣೆ, ಕೃಷಿ ಸೂಕ್ಷ್ಮ ಜೀವವಿಜ್ಞಾನ, ಬೇಸಾಯವಿಜ್ಞಾನ, ಆನುವಂಶಿಕತೆ ಹಾಗೂ ಸಸ್ಯಸಂವರ್ಧನೆ, ಬೆಳೆ ಶರೀರಕ್ರಿಯಾವಿಜ್ಞಾನ, ಸಸ್ಯರೋಗ ವಿಜ್ಞಾನ, ಕೃಷಿ ಕೀಟವಿಜ್ಞಾನ, ಕುಕ್ಕುಟ ವಿಜ್ಞಾನ, ಪಶುವೈದ್ಯಕೀಯ, ಅಂಗವಿಜ್ಞಾನ, ಪಶು ಆನುವಂಶಿಕತೆ ಮತ್ತು ಪಶುಸಂವರ್ಧನೆ, ಹೈನುತಂತ್ರಜ್ಞಾನ, ಮೀನು ಉತ್ಪಾದನೆ ಹಾಗೂ ನಿರ್ವಹಣೆ.

ಪ್ರಾದೇಶಿಕ ಭಾಷೆ ಶಿಕ್ಷಣಮಾಧ್ಯಮವಾಗಿರಬೇಕೆಂಬ ಸಂಸತ್ತಿನ ತೀರ್ಮಾನದಂತೆ ಕೃಷಿ ವಿಶ್ವವಿದ್ಯಾಲಯದಲ್ಲಿ 1970ರಲ್ಲಿ ಪ್ರಾರಂಭಿಸಲಾದ ಕನ್ನಡ ಅಧ್ಯಯನ ವಿಭಾಗ ಕನ್ನಡವನ್ನು ಕೃಷಿ ಶಿಕ್ಷಣ ಮಾಧ್ಯಮಕ್ಕೆ ಅನುವಾಗುವಂತೆ ಮೊದಲ ಹೆಜ್ಜೆಯಾಗಿ ಕೃಷಿವಿಜ್ಞಾನದ ವಿವಿಧ ವಿಷಯಗಳಲ್ಲಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ನಿರ್ಮಿಸುವ ಕಾರ್ಯ ಕೈಗೊಂಡಿದೆ. ಈ ವಿಭಾಗ ಇದುವರೆಗೆ 230ಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪ್ರಕಟಿಸಿದೆ.

ವಿಶ್ವವಿದ್ಯಾಲಯ ಕರ್ನಾಟಕ ರಾಜ್ಯವನ್ನು ಹವಾಮಾನದ ಆಧಾರದ ಮೇಲೆ ವಿವಿಧ ಕೃಷಿ ಹವಾಮಾನ ವಲಯಗಳೆಂದು ವಿಂಗಡಿಸಿ ಆಯಾ ವಲಯಗಳಲ್ಲಿನ ಬೆಳೆಗಳಿಗನುಸಾರವಾಗಿ ಸಂಶೋಧನೆ ನಡೆಸಲು 23 ಕೃಷಿ ಹಾಗೂ ಪ್ರಾದೇಶಿಕ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದೆ.

ಕೃಷಿ ವಿಶ್ವವಿದ್ಯಾಲಯ ಸಂಶೋಧನ ಪ್ರಕಟಣೆಗಳನ್ನಾಧರಿಸಿ ಅಖಿಲ ಭಾರತ ಶ್ರೇಣೀಕರಣದಲ್ಲಿ ಎಲ್ಲಾ ಕೃಷಿ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ 4ನೆಯ ಸ್ಥಾನವನ್ನೂ ಎಲ್ಲ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಮೂರನೆಯ ಸ್ಥಾನವನ್ನೂ ಗಳಿಸಿದೆ. ಮಂಗಳೂರಿನ ಮೀನುಗಾರಿಕೆ ಕಾಲೇಜು ಎಲ್ಲ ಸಂಸ್ಥೆಗಳಲ್ಲೂ 3ನೆಯ ಸ್ಥಾನವನ್ನೂ ಭಾರತದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಮೊದಲನೆಯ ಸ್ಥಾನವನ್ನೂ ಗಳಿಸಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಜೂನಿಯರ್ ಫೆಲೋಷಿಪ್ ಗಳಿಕೆಯಲ್ಲಿ ಈ ವಿಶ್ವವಿದ್ಯಾಲಯ 4ನೆಯ ಸ್ಥಾನವನ್ನು ಪಡೆದಿದೆ. ಜಲಾನಯನ ನಿರ್ವಹಣೆಯಲ್ಲಿ ಸತತವಾಗಿ ಎರಡು ಬಾರಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿದೆ. ವಿಶ್ವವಿದ್ಯಾಲಯದ ಎರಡು ವಿಭಾಗಗಳಾದ ಕೀಟವಿಜ್ಞಾನ ವಿಭಾಗ ಹಾಗೂ ಕೃಷಿ ಸೂಕ್ಷ್ಮ ಜೀವವಿಜ್ಞಾನ ವಿಭಾಗಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನೀಡುವ ಸ್ಪರ್ಧಾತ್ಮಕ ಅನುದಾನಗಳನ್ನು ಪಡೆದಿರುವ ಮೊತ್ತಮೊದಲ ಹಾಗೂ ಏಕೈಕ ವಿಶ್ವವಿದ್ಯಾಲಯ ಇದಾಗಿದೆ.

ಭಾರತದ ಜೀವವೈವಿಧ್ಯದ ನಕ್ಷೆ ರಚಿಸಲು ಭಾರತ ಸರ್ಕಾರದ ಜೀವತಂತ್ರಜ್ಞಾನ ವಿಭಾಗ ವಿಶ್ವವಿದ್ಯಾಲಯವನ್ನು ಕೇಂದ್ರ ಕಾರ್ಯಸ್ಥಾನವಾಗಿ ಗುರುತಿಸಿದೆ ಹಾಗೂ ಚಿಟ್ಟೆಗಳ ಸಂಗ್ರಹಾವರಣ ಸ್ಥಾಪಿಸಲು ಸಹ ಆಯ್ಕೆ ಮಾಡಿದೆ. ಸಂಶೋಧನೆಗಾಗಿ ಕೃಷಿ ವಿಜ್ಞಾನಗಳಲ್ಲಿ (ಎರಡು) ಹಾಗೂ ಮೀನುಗಾರಿಕೆ ವಿಜ್ಞಾನವನ್ನೊಳಗೊಂಡಂತೆ ಪಶುವೈದ್ಯಕೀಯ ಮತ್ತು ಸಂಬಂಧಿ ವಿಜ್ಞಾನಗಳಲ್ಲಿ (ಐದು) ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಈ ವಿಶ್ವವಿದ್ಯಾಲಯಗಳಿಸಿದೆ.

(ಎನ್.ಎಸ್.ವಿ.)

**ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ:** ಈ ಕೇಂದ್ರ ಕರ್ನಾಟಕ ಸರ್ಕಾರದ ವ್ಯವಸಾಯ ಇಲಾಖೆಯ ಅಧೀನದಲ್ಲಿ 1957ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯಲ್ಲಿ ಪ್ರಾರಂಭವಾಯಿತು. ಮೂಡಿಗೆರೆಗೆ ಪಟ್ಟಣಕ್ಕೆ 2ಕಿಮೀ ದೂರದಲ್ಲಿ ಕಡೂರು–ಮಂಗಳೂರು ರಸ್ತೆಯಲ್ಲಿದೆ. ಕುದುರೆಗುಂಡಿ ತಿಮ್ಮಶೆಟ್ಟಿ ಎಂಬ ಕಾಫಿ ಬೆಳೆಗಾರರು ತಮ್ಮ ತೋಟದ ಭೂಮಿಯನ್ನು ಈ ಕೇಂದ್ರಕ್ಕೆ ನೀಡಿದರು. ಮಲೆನಾಡಿನ ಈ ಭಾಗದಲ್ಲಿ ಏಲಕ್ಕಿ ಬೆಳೆ ಅಧಿಕವಾಗಿದ್ದುದರಿಂದ ಆರಂಭದಲ್ಲಿ ಈ ಬೆಳೆಯ ಅಭಿವೃದ್ಧಿಗಾಗಿ ಈ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಲಾಯಿತು. 1965ರಲ್ಲಿ ಇದು ಹೆಬ್ಬಾಳಿನ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿತು. ಏಲಕ್ಕಿ ಬೆಳೆಯುವ ಪ್ರದೇಶ ಕಡಿಮೆಯಾದಂತೆ ಇದರ ಕಾರ್ಯವ್ಯಾಪ್ತಿ ಇತರ ಬೆಳೆಗಳಿಗೂ ವಿಸ್ತರಿಸಿತು.

ಏಲಕ್ಕಿ ಬೆಳೆಗೆ ವಿಶೇಷ ಪ್ರಾಶಸ್ತ್ಯ ನೀಡಿ ಸಂಶೋಧನೆ ನಡೆಸಿದ್ದರ ಫಲವಾಗಿ ಅಧಿಕ ಇಳುವರಿ ಕೊಡುವ ಮೂಡಿಗೆರೆ– 1 ಮತ್ತು ಮೂಡಿಗೆರೆ– 2 ಏಲಕ್ಕಿ ತಳಿಗಳನ್ನು ರೂಪಿಸಿ ಬಿಡುಗಡೆಗೊಳಿಸಲಾಗಿದೆ. ಬತ್ತ, ಕರಿಮೆಣಸು, ಶುಂಠಿ, ಅಡಕೆ ಮತ್ತು ಇತರ ತೋಟದ ಬೆಳೆಗಳ ಬಗ್ಗೆಯೂ ಸಂಶೋಧನೆಗಳು ನಡೆಯುತ್ತಿವೆ. ಅಧಿಕ ಇಳುವರಿ ಮತ್ತು ಬೆಂಕಿರೋಗ ನಿರೋಧಕ ಬತ್ತದ ತಳಿಗಳಾದ ಐ.ಇ.ಟಿ. 7191, ಕೆ.ಎಚ್.ಪಿ. 2, ಹೇಮಾವತಿ, ಕೆ.ಎಚ್.ಆರ್.ಎಸ್. 26 ತಳಿಗಳನ್ನು ಸಾಗುವಳಿಗೆ ಬಿಡುಗಡೆ ಮಾಡಲಾಗಿದೆ.

ಬತ್ತದ ಬೇಸಗೆ ಹಂಗಾಮಿಗೆ ಸೂಕ್ತವಾದ ರಾಶಿ, ಸಿ.ಟಿ.ಎಚ್.1, ಹಾಗೂ ಸಿ.ಟಿ.ಎಚ್.3 ತಳಿಗಳನ್ನು ರೂಪಿಸಿ ಬಿಡುಗಡೆ ಮಾಡಲಾಗಿದೆ. ಬೋಳಾದ ಗುಡ್ಡಗಾಡು ಪ್ರದೇಶಕ್ಕೆ ಸಪೋಟ ಮತ್ತು ಸೀಬೆ ಹಣ್ಣು ಸಾಗುವಳಿ ಸೂಕ್ತವೆಂದು ಶಿಫಾರಸು ಮಾಡಲಾಗಿದೆ.

ವಿವಿಧ ಬಗೆಯ ತೋಟಗಾರಿಕೆ ಬೆಳೆಗಳನ್ನು ಪ್ರಯೋಗಾರ್ಥವಾಗಿ ಬೆಳೆದು ಅವುಗಳ ಗುಣಸಾಮರ್ಥ್ಯಗಳನ್ನೂ ಸ್ಥಳೀಯ ಪರಿಸರಕ್ಕೆ ಅವುಗಳ ಯಥಾರ್ಥತೆಯನ್ನೂ ಕಂಡುಕೊಳ್ಳಲು ಕೇಂದ್ರ ಶ್ರಮಿಸಿದೆ. ಈ ಬೆಳೆಗಳಿಗೆ ತಗಲುವ ಕೀಟಬಾಧೆಗಳನ್ನು ಪರೀಕ್ಷಿಸಿ ಸೂಕ್ತ ಕ್ರಿಮಿನಾಶಕ ಔಷಧಗಳನ್ನು ಸಲಹೆ ಮಾಡುವ ಕಾರ್ಯಯೋಜನೆ ನಡೆದಿದೆ. ಸದ್ಯದಲ್ಲಿ ಈ ಕೇಂದ್ರದಲ್ಲಿ ಸಂಶೋಧನೆಗಾಗಿ ಬೆಳೆಯಲಾಗುತ್ತಿರುವ ಬೆಳೆ ಮತ್ತು ಅವುಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) ಈ ಮುಂದಿನಂತಿದೆ: ಸಪೋಟ (20.70), ಸೀಬೆ (1.20), ಗೋಡಂಬಿ ಮತ್ತು ಸಪೋಟ (2.10), ಕಾಫಿ (4.04), ತೆಂಗು ಮತ್ತು ಕಾಫಿ (0.62), ಚಿಕ್ಕೆ (0.20), ವೆನಿಲಾ (0.20), ಅಡಕೆ (0.40), ಬತ್ತ (1.60), ತೆಂಗು ಮತ್ತು ಅಡಕೆ (0.62), ಏಲಕ್ಕಿ (2.06) ಮತ್ತು ಇತರೆ (6.85). ಕೇಂದ್ರದ ಒಟ್ಟು ವಿಸ್ತೀರ್ಣ 178.54 ಹೆಕ್ಟೇರ್.

ಗುಡ್ಡಗಾಡು ಮತ್ತು ಮಲೆನಾಡು ಪ್ರದೇಶದಲ್ಲಿ ಬೆಳೆಯುವ ಬೆಳೆಗಳ ತಳಿ ಅಭಿವೃದ್ಧಿ, ರೋಗ ನಿವಾರಣೆ ವಿಧಾನಗಳ ಆವಿಷ್ಕಾರ, ಕೃಷಿ ಅರಣ್ಯ ಮತ್ತು ಮಣ್ಣುತೇವಾಂಶ ಸಂರಕ್ಷಣೆ ಬಗ್ಗೆ ಅಧ್ಯಯನ ಮಾಡುವುದು ಈ ಕೇಂದ್ರದ ಮುಖ್ಯ ಗುರಿ. ಜೊತೆಗೆ ಈ ಕೇಂದ್ರಕ್ಕೆ ಹೊಂದಿಕೊಂಡಂತೆ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲಾಗಿದೆ (1991). ಇಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಕಾರ್ಯಗಳು ನಡೆಯುತ್ತಿವೆ. ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಕೃಷಿ ವಸ್ತು ಪ್ರದರ್ಶನ ಸೇರಿದಂತೆ ಕೃಷಿ ಮೇಳ ಏರ್ಪಡುತ್ತದೆ. ರೈತರು ಮತ್ತು ತೋಟಗಾರರ ಸಮಸ್ಯೆಗಳಿಗೆ ಸೂಕ್ತ ಸಲಹೆಗಳನ್ನು ನೀಡುವುದು, ಖುದ್ದಾಗಿ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಹಾರ ಒದಗಿಸುವುದು ವಿಸ್ತರಣ ಕಾರ್ಯದ ಅಡಿಯಲ್ಲಿ ಬರುತ್ತದೆ. ವೆನಿಲಾ ಸೇರಿದಂತೆ ವಿವಿಧ ಲಾಭದಾಯಕ ಬೆಳೆಗಳ ಮತ್ತು ಸಸ್ಯಗಳ ಸಸಿಗಳನ್ನು ಬೆಳೆಸಿ ರೈತರಿಗೆ ಮತ್ತು ತೋಟಗಾರರಿಗೆ ಒದಗಿಸುವ ಕಾರ್ಯವೂ ವ್ಯಾಪಕವಾಗಿ ನಡೆದಿದೆ. *

**ಕೃಷಿ ವಿಸ್ತರಣಕಾರ್ಯ :** ರೈತರು ಸ್ವಸಹಾಯದಿಂದಲೇ ಪ್ರಗತಿಪರರಾಗುವಂತೆ ಸರ್ಕಾರದ ಕೃಷಿ ಇಲಾಖೆ ನೀಡುವ ನೆರವು. ಇದರ ಮೂಲೋದ್ದೇಶ ಸಾಂಸ್ಕೃತಿಕ ವಿನಿಮಯ. ಕೃಷಿ ವಿಸ್ತರಣ ಸೇವೆಯ ಪ್ರಧಾನ ಲಕ್ಷ್ಯ ವ್ಯಕ್ತಿವಿಕಾಸ. ಆದ್ದರಿಂದ ಇಂಥ ವಿಸ್ತರಣಕಾರ್ಯ ರೈತರೊಂದಿಗೆ ನಿಕಟ ಒಡನಾಟದಿಂದ ನಡೆಯಬೇಕಾದದ್ದು. ವಿಸ್ತರಣಕಾರ್ಯಗಳು ರೈತರು ಇರುವಲ್ಲಿಯೇ ನಡೆಯುವ ಚಟುವಟಿಕೆಗಳು. ಇವು ಮುಖ್ಯವಾಗಿ ವೈಜ್ಞಾನಿಕ ಪದ್ಧತಿಗಳ ಕಡೆಗೆ ರೈತವರ್ಗದ ಲಕ್ಷ್ಯವನ್ನು ಆಕರ್ಷಿಸಿ ಅವರಲ್ಲಿ ಕುತೂಹಲವನ್ನು ಪ್ರಚೋದಿಸಿ ಅನುಷ್ಠಾನಕ್ಕೆ ತರುವಂತೆ ಪ್ರೋತ್ಸಾಹಿಸುತ್ತವೆ ಮತ್ತು ಪ್ರತ್ಯಕ್ಷಾನುಭವಗಳ ಮೌಲ್ಯಮಾಪನ ಮಾಡುತ್ತವೆ. ಇಲ್ಲೆಲ್ಲ ಸ್ಥಳೀಯ ರೈತ ಧುರೀಣತ್ವವನ್ನು ವರ್ಧಿಸುವುದು ಅತ್ಯಾವಶ್ಯಕ. ಆದ್ದರಿಂದ ವಿಸ್ತರಣ ಕಾರ್ಯಕರ್ತ ಶಿಕ್ಷಕನಾಗಿ ಸಲಹೆಗಾರನಾಗಿ, ವಿಶ್ಲೇಷಣಕಾರನಾಗಿ ಮತ್ತು ವ್ಯವಸ್ಥಾಪಕನಾಗಿ ವಿವಿಧ ಪಾತ್ರಗಳನ್ನು ಹೊಣೆ ನಿರ್ವಹಿಸಬೇಕಾಗುತ್ತದೆ. ರೈತವರ್ಗದವರು ತಮ್ಮ ಪ್ರದೇಶದ ಸಾಧನಸಂಪತ್ತಿನ ಪೂರ್ಣ ಪ್ರಯೋಜನ ಪಡೆದು ಅಧಿಕ ಉತ್ಪನ್ನವನ್ನು ಸಾಧಿಸುವಂತೆ ಮಾಡಲು ಕೃಷಿ ವಿಸ್ತರಣಕಾರ್ಯಕರ್ತ ಶ್ರಮಿಸುತ್ತಾನೆ.

**ಕೃಷಿ ವಿಸ್ತರಣ ಕಾರ್ಯವಿಧಾನಗಳು:** ರೈತನ ಮನೋವಿಕಾಸವೇ ಕೃಷಿ ಅಭಿವೃದ್ಧಿಗೆ ಮೂಲ. ಇದಕ್ಕೆ ಪೂರಕವಾಗುವಂತೆ ಸನ್ನಿವೇಶಗಳನ್ನು ಕಲ್ಪಿಸುವುದು ಕೃಷಿ ವಿಸ್ತರಣಾಧಿಕಾರಿಗಳ ಕರ್ತವ್ಯ. ಇದನ್ನು ಎರಡು ರೀತಿಗಳಲ್ಲಿ ಮಾಡುತ್ತಾರೆ. ವೈಯಕ್ತಿಕ ವಿಧಾನ, ಸಾಮೂಹಿಕ ವಿಧಾನ. ವೈಯಕ್ತಿಕ ವಿಧಾನದಲ್ಲಿ ಕಾರ್ಯಕರ್ತ ಒಂದೊಂದು ರೈತ ಕುಟುಂಬಕ್ಕೂ ಭೇಟಿ ನೀಡಿ ಅಥವಾ ಅವರೊಡನೆ ಪತ್ರ ವ್ಯವಹಾರ ನಡೆಸಿ ಅವರ ಸಮಸ್ಯೆಗಳಿಗೆ ವೈಯಕ್ತಿಕ ಗಮನ ನೀಡುತ್ತಾನೆ. ಅಲ್ಲದೆ ವಿಸ್ತರಣ ಕಚೇರಿಗೆ ರೈತರು ಆಗಾಗ ಭೇಟಿ ಕೊಡುವಂತೆ ಪ್ರೋತ್ಸಾಹಿಸುತ್ತಾನೆ. ಸಾಮೂಹಿಕ ವಿಧಾನದಲ್ಲಿ ವಿಚಾರಗೋಷ್ಠಿಗಳು, ತಜ್ಞರಿಂದ ಪ್ರಯೋಗಸಹಿತ ವಿವರಣೆಗಳು, ಚಿತ್ರ ಪ್ರದರ್ಶನಗಳು, ರೇಡಿಯೋ ಗೋಷ್ಠಿಗಳು ಮುಂತಾದವು ಸೇರುತ್ತವೆ. ಕಾರ್ಯವಿಧಾನದ ಇವೆರಡು ರೀತಿಗಳ ಉದ್ದೇಶವೆಂದರೆ ರೈತನಲ್ಲಿ ಜಾಗೃತ ಮನೋಭಾವದ ಪ್ರೇರಣೆ ಮತ್ತು ತನ್ಮೂಲಕ ತನ್ನ ವೃತ್ತಿಯಲ್ಲಿ ಅರ್ಥಪೂರ್ಣ ಕಾರ್ಯಭಾಗಿತ್ವ.

**ಗೃಹಿಣಿಯರಿಗಾಗಿ ವಿಸ್ತರಣಕಾರ್ಯ:** ಆರೋಗ್ಯ, ನೈರ್ಮಲ್ಯ, ಪೌಷ್ಟಿಕ ಆಹಾರಗಳ ಉಪಯೋಗ, ಮಿತವ್ಯಯ, ಶಿಶುಸಂಗೋಪನ, ಕುಟುಂಬ ಯೋಜನೆ, ಸಂಸ್ಕೃತಿಯ ರಕ್ಷಣೆ ಇವೇ ಮುಂತಾದ ದೈನಂದಿನ ಜೀವನದ ನೂರೆಂಟು ಚಿಕ್ಕ ದೊಡ್ಡ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸಲು ಗೃಹಿಣಿಯರಿಗೆ ಯೋಗ್ಯ ಜ್ಞಾನ ಇರಬೇಕಾದದ್ದು ಅಗತ್ಯ. ಈ ದಿಶೆಯಲ್ಲಿ ಮಹಿಳೆಯರಿಗೆ ಸಮರ್ಪಕ ತಿಳಿವಳಿಕೆ ನೀಡುವುದು ವಿಸ್ತರಣಕಾರ್ಯದ ಇನ್ನೊಂದು ಪ್ರಧಾನ ಹೊಣೆಗಾರಿಕೆ. ಮಹಿಳಾ ಕಾರ್ಯಕರ್ತರು ಇಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.

**ಗ್ರಾಮಾಂತರ ಯುವಜನರಿಗಾಗಿ ವಿಸ್ತರಣಕಾರ್ಯ:** ಸಾಧಾರಣವಾಗಿ 10–20 ವರ್ಷ ವಯಸ್ಸಿನ ಬಾಲಕ ಬಾಲಕಿಯರನ್ನು ಲಕ್ಷ್ಯದಲ್ಲಿರಿಸಿ ಈ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ರೈತಾಪಿ ಜನಾಂಗದಲ್ಲಿ ಇಂದಿಗೂ ಅಂಥ ಬಹುಮಂದಿ ಆಕಡೆ ವಿದ್ಯಾವಂತರೂ ಆಗದೆ ಈಕಡೆ ವ್ಯವಸಾಯಕ್ಕೂ ಇಳಿಯದೇ ನಿರುತ್ಸಾಹಿಗಳಾಗಿರುವುದುಂಟು. ಅಂಥವರಿಗೆ ತಕ್ಕುದಾದ ರಚನಾತ್ಮಕ ಕಾರ್ಯಕಲಾಪಗಳನ್ನು ರೂಪಿಸಿ ಅವರು ಅವುಗಳಲ್ಲಿ ಭಾಗವಹಿಸುವಂತೆ ಮಾಡಿ ಅವರ ಜೀವನದಲ್ಲಿ ಆಸೆ, ಆಕಾಂಕ್ಷೆ, ಉತ್ಸಾಹ ತುಂಬುವುದು ವಿಸ್ತರಣ ಕಾರ್ಯದ ಇನ್ನೊಂದು ಮುಖ್ಯ ಹೊಣೆಗಾರಿಕೆ. ಯುವಜನ ಯೋಜನೆಯಿಂದ ವಿಜ್ಞಾನ ಪ್ರಸಾರ ಶೀಘ್ರಗತಿಯಿಂದ ಆಗುವುದು.

**ಜಾಗತಿಕ ವಿಸ್ತರಣಕಾರ್ಯ:** ಸಂಯುಕ್ತ ರಾಷ್ಟ್ರಸಂಘದ ಆಹಾರ ಮತ್ತು ಕೃಷಿ ಸಂಸ್ಥೆ (ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಸೇಷನ್, ಎಫ್‌ಎಓ) 1951ರಲ್ಲಿ ನಡೆಸಿದ ಒಂದು ಸಮ್ಮೇಳನದಲ್ಲಿ 66 ರಾಷ್ಟ್ರಗಳು ಭಾಗವಹಿಸಿದ್ದವು. ಪ್ರತಿ ರಾಷ್ಟ್ರದಲ್ಲಿಯೂ ಕೃಷಿವಿಸ್ತರಣ ಮತ್ತು ಪ್ರಾತ್ಯಕ್ಷಿಕೆ ವ್ಯವಸ್ಥೆಯ ಏರ್ಪಾಡಾಗಬೇಕು ಎಂದು ಆ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು. ಇಂಥ ಒಂದು ಏರ್ಪಾಡಿನಿಂದ ಮಾತ್ರ ರೈತರ ಅಭಿವೃದ್ಧಿ ಸಾಧ್ಯ ಎಂದು ಸಮ್ಮೇಳನ ಮನಗಂಡಿತು. ಅಲ್ಲಿಂದ ಈಚೆಗೆ ಪ್ರಪಂಚದ ಬಹುಭಾಗವನ್ನು ಕೃಷಿವಿಸ್ತರಣ ಕಾರ್ಯ ವ್ಯಾಪಿಸಿದೆ. ಕೆಲವು ಪ್ರಮುಖ ರಾಷ್ಟ್ರಗಳಲ್ಲಿ ಇದು ಹೇಗೆ ಪ್ರಗತಿಹೊಂದಿದೆ ಎಂಬುದನ್ನು ಮುಂದೆ ನೋಡಬಹುದು.

**ಅಮೆರಿಕ ಸಂಯುಕ್ತಸಂಸ್ಥಾನ:** ಏಬ್ರಹಾಂಲಿಂಕನನ ಕಾಲದಲ್ಲಿಯೇ ಸ್ಥಾಪಿತವಾದ (1862) ವಿಸ್ತರಣ ಕಾರ್ಯದ ಯೋಜನೆ ಇಂದು ಅಮೆರಿಕದಲ್ಲಿ ಸರ್ವವ್ಯಾಪಿಯಾಗಿದೆ. ಆ ರಾಷ್ಟ್ರದ ಕೃಷಿಯ ಸರ್ವಾಂಗೀಣಾಭಿವೃದ್ಧಿಯಲ್ಲಿ ವಿಸ್ತರಣಕಾರ್ಯದ ಪಾತ್ರ ಮಹತ್ತ್ವಪೂರ್ಣವಾದದ್ದು. ಅಲ್ಲಿನ ವೈಶಿಷ್ಟ್ಯವೆಂದರೆ ವಿಶ್ವವಿದ್ಯಾಲಯಗಳು, ಸ್ಥಳೀಯ ಕೌಂಟಿ ಸರ್ಕಾರಗಳು (ನಮ್ಮ ತಾಲ್ಲೂಕು ಬೋರ್ಡುಗಳಂತೆ) ಮತ್ತು ರೈತ ಸಂಘ ಸಂಸ್ಥೆಗಳು ವಿಸ್ತರಣಕಾರ್ಯದ ಜವಾಬ್ದಾರಿಯನ್ನು ಸಮನಾಗಿ ಹೊತ್ತಿರುತ್ತವೆ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಹಣದ ಸಹಾಯ ಮತ್ತು ತಾಂತ್ರಿಕ ನೆರವು ಮಾತ್ರ ನೀಡುವುವು. ವಿಸ್ತರಣಕಾರ್ಯಕರ್ತರು ವಿಶ್ವವಿದ್ಯಾಲಯಗಳೊಡನೆ ನೇರ ಸಂಪರ್ಕ ಹೊಂದಿದ್ದು ರೈತಜೀವನದಲ್ಲಿ ಬೆರೆತು ಕೆಲಸ ಮಾಡುತ್ತಾರೆ. ಇದರಿಂದ ವಿಶ್ವವಿದ್ಯಾಲಯ–ರೈತರಲ್ಲಿ ಅಭಿಪ್ರಾಯಗಳ ಮತ್ತು ಅನುಭವಗಳ ನೇರ ವಿನಿಮಯವಾಗಲು ಹೆಚ್ಚಿನ ಅವಕಾಶವುಂಟಾಗುತ್ತದೆ.

**ವಾಯವ್ಯ ಯುರೋಪಿನ ರಾಷ್ಟ್ರಗಳು:** ನೆದರ್‌ಲ್ಯಾಂಡ್ಸ್, ಡೆನ್‌ಮಾರ್ಕ್, ಜರ್ಮನಿ, ಫ್ರಾನ್ಸ್, ಬೆಲ್ಜಿಯಂ ಮತ್ತು ಸ್ವಿಟ್ಸರ್‌ಲೆಂಡ್ ರಾಷ್ಟ್ರಗಳಲ್ಲಿ 18ನೆಯ ಶತಮಾನದಲ್ಲಿ ಕೃಷಿಕ್ರಾಂತಿ ಮೊದಲು ಪ್ರಾರಂಭವಾಯಿತು. ಗ್ರಾಮಾಂತರ, ಪ್ರಾಥಮಿಕ ವಿದ್ಯಾಭ್ಯಾಸ ಪದ್ಧತಿಯಲ್ಲಿ ಕೃಷಿವಿಜ್ಞಾನಕ್ಕೆ ಪ್ರಾಮುಖ್ಯ ಕೊಡುವುದರ ಮೂಲಕವೂ ಶಾಲೆಗಳಿಂದ ಹೊರಬರುವ ಯುವಕ ಯುವತಿಯರಿಗೆ ಕೃಷಿ ವಿದ್ಯಾಭ್ಯಾಸದ ಏರ್ಪಾಡು ಮುಂದುವರಿಯಲು ಅವಕಾಶ ಮಾಡಿಕೊಡುವುದರ ಮೂಲಕವೂ ಕೃಷಿ ವಿಸ್ತರಣಕಾರ್ಯ ಈ ರಾಷ್ಟ್ರಗಳಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿದೆ. ಜನತಾ ಪ್ರೌಢಶಾಲೆಗಳು ಇಲ್ಲಿನ ವೈಶಿಷ್ಟ್ಯ. ನೆದರ್‌ಲೆಂಡ್ಸಿನಲ್ಲಿ ಶಾಲಾ ಉಪಾಧ್ಯಾಯರು ಕೃಷಿ ವಿಸ್ತರಣಕಾರ್ಯಕ್ಕೆ ಬಹಳ ನೆರವು ನೀಡುತ್ತಾರೆ.

**ಯುನೈಟೆಡ್ ಕಿಂಗ್‌ಡಮ್:** 1889ರಲ್ಲಿಯೇ ಕೃಷಿಮಂಡಳಿ ಸ್ಥಾಪನೆಗೊಂಡಿದ್ದರೂ 1946ರವರೆಗೂ ಸಮರ್ಪಕವಾದ ಕೃಷಿ ವಿಸ್ತರಣ ವ್ಯವಸ್ಥೆ ರೂಪ ತಳೆದಿರಲಿಲ್ಲ. ಆ ವರ್ಷ ರಾಷ್ಟ್ರೀಯ ಕೃಷಿ ಸಲಹಾ ವ್ಯವಸ್ಥೆಯನ್ನು ಪ್ರಾರಂಭಿಸಿದ ಮೇಲೆ ಕೃಷಿ ವಿಸ್ತರಣಕಾರ್ಯ ಚೆನ್ನಾಗಿ ನಡೆಯುತ್ತಿದೆ.

**ಬಾಲ್ಕನ್ ರಾಷ್ಟ್ರಗಳು:** ಹಂಗೇರಿ, ರುಮೇನಿಯ, ಯುಗೋಸ್ಲಾವಿಯ, ಬಲ್ಗೇರಿಯ, ಗ್ರೀಸ್ ಮತ್ತು ಅಲ್ಬೇನಿಯ ಇತ್ಯಾದಿ ರಾಷ್ಟ್ರಗಳಲ್ಲಿ ಕೃಷಿ ಸಂಶೋಧನೆ ತೃಪ್ತಿದಾಯಕವಾಗಿದ್ದರೂ ಅದರ ಫಲ ರೈತರಿಗೆ ಸಾಕಷ್ಟು ಆಗಲಿಲ್ಲ. ಇವುಗಳಲ್ಲಿ ಸರ್ಕಾರ ಮತ್ತು ಸಹಕಾರಿ ಸಂಸ್ಥೆಗಳೇ ಕೃಷಿ ವಿಸ್ತರಣಕಾರ್ಯದ ಜವಾಬ್ದಾರಿ ಹೊತ್ತಿವೆ. ಪ್ರತಿ ಕೌಂಟಿಗೂ ವಿಸ್ತರಣಕಾರ್ಯಕರ್ತ ಇದ್ದಾನೆ. ಕಾರ್ಯಕರ್ತರ ಬೆಂಬಲಕ್ಕೆ ತಜ್ಞರ ಮಂಡಳಿ ಉಂಟು. ಸ್ಥಳೀಯ ಮುಂದಾಳುಗಳ ಸಹಕಾರದಿಂದ ವಿಸ್ತರಣ ಯೋಜನೆಗಳು ರೂಪಗೊಳ್ಳುವ ಮನೋಭಾವನೆ ಇನ್ನೂ ಬೆಳೆದಿಲ್ಲ.

**ಅರಬ್ ರಾಷ್ಟ್ರಗಳು:** ಪಾಶ್ಚಾತ್ಯ ರಾಷ್ಟ್ರಗಳೊಡನೆ ನಿಕಟ ಸಂಬಂಧ ಹೊಂದಿ ಕೆಲವು ಬದಲಾವಣೆಗಳಾಗಿದ್ದರೂ ಕೃಷಿ ವಿಸ್ತರಣಕಾರ್ಯ ಸಾಕಷ್ಟು ನಡೆದಿಲ್ಲ. ಪ್ರತಿ ರಾಷ್ಟ್ರದಲ್ಲಿಯೂ ಕೇಂದ್ರ ಕೃಷಿ ಇಲಾಖೆ ಇದೆ. ಒಂದೆರಡು ಸಂಶೋಧನ ಕೇಂದ್ರಗಳೂ ಕೆಲಸಮಾಡುತ್ತಿವೆ. ಕೆಲವು ವಿಸ್ತರಣ ಕೆಲಸಗಾರರೂ ಇದ್ದಾರೆ. ಪ್ರಕಟಣೆಗಳು ಕೆಲವು ಹೊರಬಿದ್ದಿವೆ. ಆದರೆ ರೈತ ಈ ಅಲ್ಪಸ್ವಲ್ಪ ಕೆಲಸದ ಲಾಭ ಪಡೆಯಲು ಅವಕಾಶ ಸಾಲದು. ವಿದ್ಯಾಭ್ಯಾಸದ ಮಟ್ಟ ಅತಿ ಕಡಿಮೆ. ಈಜಿಪ್ಟಿನಲ್ಲಿ 19ನೆಯ ಶತಮಾನದ ಎರಡನೆಯ ಅರ್ಧಭಾಗದಿಂದಲೂ ಕೃಷಿ ವಿಸ್ತರಣಕಾರ್ಯದ ಪ್ರಯತ್ನ ನಡೆದಿದೆ.

**ಲ್ಯಾಟಿನ್ ಅಮೆರಿಕ:** ಅಮೆರಿಕ ಸಂಯುಕ್ತಸಂಸ್ಥಾನಗಳ ಪ್ರಭಾವವಿದ್ದ ಪೋರ್ಟರೀಕೋ, ಕ್ಯೂಬ, ವೆನಿಜ್ವೇಲಗಳಲ್ಲಿ ಕೃಷಿವಿಸ್ತರಣಕಾರ್ಯ ಇಲ್ಲವೆಂದೇ ಹೇಳಬಹುದು. ಆದರೆ ವಿವಿಧ ರೀತಿಯ ವಿಸ್ತರಣಕಾರ್ಯದ ಅಲ್ಪಸ್ವಲ್ಪ ಪ್ರಯತ್ನ ಎಲ್ಲ ರಾಷ್ಟ್ರಗಳಲ್ಲಿಯೂ ನಡೆದಿದೆ. ಸಾಮಾನ್ಯವಾಗಿ ಪಶುವೈದ್ಯರು ಮತ್ತು ಕೃಷಿತಜ್ಞರು ಎಲ್ಲ ಪ್ರಾಂತ್ಯಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಆಗಿಂದಾಗ್ಗೆ ನಿರ್ದಿಷ್ಟ ತೀವ್ರ ಪ್ರಸಾರ ಕಾರ್ಯಗಳನೇಕವು ಅರ್ಜೆಂಟೈನ, ಬ್ರೆಜಿಲ್ ಮತ್ತು ಕೊಲಂಬಿಯಗಳಲ್ಲಿ ನಡೆದಿದ್ದರೂ ಅವು ಸ್ಥಳೀಯ ಗ್ರಾಮಜೀವನಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ನಡೆಯಲಿಲ್ಲ. ಮೆಕ್ಸಿಕೊ,

ಚಿಲಿ, ಕೊಲಂಬಿಯ, ಅರ್ಜೆಂಟೈನ ಮತ್ತು ಪೆರುಗಳಲ್ಲಿ ಶಾಲಾವಿದ್ಯಾರ್ಥಿಗಳು ಸಣ್ಣ ಯೋಜನೆಗಳ ಮೂಲಕ ಕೃಷಿವಿಸ್ತರಣಕಾರ್ಯ ನಡೆಸಿದ್ದಾರೆ. ಗ್ರಾಮಾಂತರ ಶಾಲೆಗಳ ಕೃಷಿವೃತ್ತಿ ಶಿಕ್ಷಣದ ಶಾಖೆಗಳ ಮೂಲಕವೂ ಕೃಷಿ ವಿಸ್ತರಣಕಾರ್ಯ ನಡೆದಿದೆ. ಮೆಕ್ಸಿಕೊ ದೇಶದ ಗ್ರಾಮಾಂತರ ವಿದ್ಯಾಮಿಷನ್‌ಗಳು ಕೃಷಿವಿಸ್ತರಣ ಕಾರ್ಯಕ್ಕೆ ಉತ್ತೇಜನ ನೀಡಿವೆ. ಪ್ರತಿ ಮಿಷನ್ನಿನಲ್ಲಿಯೂ ತರಬೇತಿ ಪಡೆದ ಕಾರ್ಯಕರ್ತರಿದ್ದು ಅವರು ಸ್ಥಳೀಯ ಮುಂದಾಳುಗಳ ಸಹಕಾರದಿಂದ ಯೋಜನೆಗಳನ್ನು ತಯಾರು ಮಾಡಿ ಕಾರ್ಯಗತ ಮಾಡಲು ಪ್ರಯತ್ನಿಸುತ್ತಾರೆ. ಒಂದೆರಡು ವರ್ಷ ಒಂದು ಜಿಲ್ಲೆಯಲ್ಲಿ ಕೆಲಸ ಮಾಡಿದ ಅನಂತರ ಇನ್ನೊಂದು ಜಿಲ್ಲೆಯನ್ನು ಕಾರ್ಯವ್ಯಾಪ್ತಿಗೆ ಆರಿಸುತ್ತ ಹೋಗುತ್ತಾರೆ. ಇಂಥ 25 ಮಿಷನ್‌ಗಳು ಕೆಲಸ ಮಾಡುತ್ತಿವೆ.

**ಆಸ್ಟ್ರೇಲಿಯ**: 1880ರಲ್ಲಿಯೇ ಕೃಷಿ ಕಾಲೇಜುಗಳು ಸ್ಥಾಪಿತವಾದರೂ ಕೃಷಿ ಇಲಾಖೆಗಳು ಪ್ರಾಂತ್ಯಗಳಲ್ಲಿ ರೂಪುಗೊಂಡಿದ್ದು 1900–1925ರಲ್ಲಿ, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನ ಕೌನ್ಸಿಲ್ 1926ರಲ್ಲಿ ಪ್ರಾರಂಭವಾಗಿ ಇದರ ಮೂಲಕ ಗ್ರಾಮಾಂತರ ಉತ್ಪಾದನ ಕಾರ್ಯಕ್ಕೆ ನೆರವಾಗಲು ಅವಕಾಶವಾಯಿತು. ಪ್ರಿಕ್ಲಿಪಿಯರ್ ಕಳೆ ಹತೋಟಿ. ಪ್ರಾಣಿಗಳ ರೋಗ ನಿವಾರಣೆ–ಇವು ಯಶಸ್ವಿಯಾದದ್ದು ತೀವ್ರ ಪ್ರಚಾರ ಕಾರ್ಯದಿಂದಲೇ. ಇತ್ತೀಚಿನ ವರ್ಷಗಳಲ್ಲಿ ಎಂದರೆ 1945ರಿಂದ ಈಚೆಗೆ ಪ್ರಾಂತ್ಯ ಸರ್ಕಾರಗಳು ತಾಂತ್ರಿಕ ಸಲಹಾ ವ್ಯವಸ್ಥೆ ಏರ್ಪಡಿಸಿ ಅವುಗಳ ಮೂಲಕ ಸಂಶೋಧನೆ ಮತ್ತು ವಿಸ್ತರಣಕಾರ್ಯಕ್ಕೆ ನೆರವಾಗುವಂತೆ ಅವಕಾಶ ಕಲ್ಪಿಸಿದ್ದಾರೆ. ಫಾರ್ಮ್ ಮ್ಯಾನೇಜ್‌ಮೆಂಟ್ ಕ್ಲಬ್‌ಗಳಿಂದ ಮತ್ತು ಖಾಸಗೀ ಸಲಹಾಗಾರರಿಂದ ಕೃಷಿ ವಿಸ್ತರಣಕಾರ್ಯಕ್ಕೆ ಬೆಂಬಲ ಸಿಕ್ಕುತ್ತಿದೆ.

**ಪೆಸಿಫಿಕ್ ದ್ವೀಪಗಳು (ನ್ಯೂಗಿನಿಯಿಂದ ಮಲೇಷ್ಯವರೆಗಿನ) ದ್ವೀಪಗಳು:** ಈ ದ್ವೀಪಗಳು ವಸಾಹತುಗಳಾಗಿದ್ದುದರಿಂದ ವಿಸ್ತರಣಕಾರ್ಯ ಸರ್ಕಾರ, ಪ್ಲಾಂಟರ್ಸ್ ಸಂಘಗಳು ಮತ್ತು ಮಿಷನರಿ ಸಂಸ್ಥೆಗಳ ಮೂಲಕ ನಡೆಯಿತು. ಮಾದರಿ ಪ್ಲಾಂಟೇಷನ್‌ಗಳು ಮತ್ತು ಸಂಶೋಧನ ಕೇಂದ್ರಗಳು ಸ್ಥಾಪಿಸಲ್ಪಟ್ಟು ಅಲ್ಲಿಯ ಕಾರ್ಯಕರ್ತರು ವಿಸ್ತರಣಕಾರ್ಯ ನಡೆಸಿದರು. 1930ರವರೆಗೂ ಈ ಕಾರ್ಯ ಭರದಿಂದ ಸಾಗಿ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಹಿಂದುಳಿಯಿತು. ಇಲ್ಲಿಯ ರೈತ ಸಂಸಾರಗಳು ಅನಕ್ಷರಸ್ಥರೂ ಗುಳೇ ಸ್ವಭಾವದವರೂ ಆದ್ದರಿಂದ ಅವರನ್ನು ನಿರ್ದಿಷ್ಟ ಕೃಷಿ ಕಸುಬಿನಲ್ಲಿ ನೆಲೆಸುವಂತೆ ಮಾಡುವುದು ಸುಲಭ ಸಾಧ್ಯವಾಗಿಲ್ಲ.

**ಜಪಾನ್:** 1899ರಲ್ಲಿಯೇ ಕೃಷಿ ವಿಸ್ತರಣಕಾರ್ಯ ಪ್ರಾರಂಭವಾಯಿತು. ಸಂಶೋಧನ ಕೇಂದ್ರಗಳು ಸ್ಥಾಪಿತವಾಗಿ ಅಲ್ಲಿ ಕೃಷಿ ವಿಸ್ತರಣಕಾರ್ಯಕರ್ತರ ತರಬೇತಿ ಕೊಡಲಾಗುತ್ತಿತ್ತು. ಕೃಷಿಸಂಘಗಳು ಕೈಗಾರಿಕಾ ಸಹಕಾರ ಸಂಘಗಳು ಮತ್ತು ರೇಷ್ಮೆ ನೂಲಿನ ಸಂಘಗಳು ರೂಪಗೊಂಡು ಅವು ವಿಸ್ತರಣಕಾರ್ಯದ ಹೊಣೆ ಹೊತ್ತಿದ್ದುವು. 1943ರಲ್ಲಿ ಈ ಮೂರೂ ಸಂಘಗಳು ಒಂದೇ ವ್ಯವಸ್ಥೆಯಲ್ಲಿ ಸೇರಿದವು. ನೊಗ್ಯಕಾಯಿ ಸಂಘ ಎಂಬ ಹೆಸರಿನಿಂದ ಸರ್ಕಾರದ ನೇತೃತ್ವದಲ್ಲಿ ಕೃಷಿ ವಿಸ್ತರಣಕಾರ್ಯ ಮುಂದುವರಿಯಿತು. ಆದರೆ ಇದು ಸಮರ್ಪಕವಾಗಿ ನಡೆಯಲಿಲ್ಲ. ರೈತ ಜನತೆ ಸಮವಾಗಿ ಕಾರ್ಯಯೋಜನೆಯಲ್ಲಿ ಭಾಗವಹಿಸದೇ ಧನಸಹಾಯದ ಆಸೆಯ ಆಧಾರದ ಮೇಲೆ ನಡೆಯುವಂಥ ಕಾರ್ಯ ಯಶಸ್ವಿ ಆಗಲಾರದು ಎಂಬ ಅರಿವು ಉಂಟಾಯಿತು. ರೈತರ ಮನವೊಲಿಸುವಂಥ ಮತ್ತು ಮನೋವಿಕಾಸಕ್ಕೆ ಅವಕಾಶ ಉಂಟಾಗುವಂಥ ಯೋಜನೆಗಳು ಪರಿಣಾಮಕಾರಿಯಾಗುತ್ತವೆ ಎಂದು ಅರಿತು 1948ರಲ್ಲಿ ಕೃಷಿವಿಸ್ತರಣ ವ್ಯವಸ್ಥೆಯನ್ನು ಹೊಸ ರೂಪಕ್ಕೆ ತಂದರು. ಈಗಿನ ವಿಸ್ತರಣ ವ್ಯವಸ್ಥೆ ತಾಂತ್ರಿಕ ಜ್ಞಾನ ಬೆಳೆಯಲು ಕಲಿಯುವ ಸನ್ನಿವೇಶಗಳನ್ನು ಕಲ್ಪಿಸುತ್ತದೆ. ಪ್ರತಿ ರೈತ ಸಂಸಾರಕ್ಕೂ ಸಂಪರ್ಕ ಇಟ್ಟುಕೊಂಡು ವಿಜ್ಞಾನದ ಪ್ರಯೋಗ ಮಾಡುವಂತೆ ಉತ್ತೇಜನ ನೀಡುತ್ತದೆ. ಧನಸಹಾಯ ಮುಂತಾದ ಆಮಿಷಗಳನ್ನು ಉಪಯೋಗಿಸುವುದಿಲ್ಲ. ಈಗ ಜಪಾನಿನಲ್ಲಿ ಬಹಳ ಉತ್ತಮ ಕೃಷಿ ವಿಸ್ತರಣ ವ್ಯವಸ್ಥೆ ರೂಪುಗೊಂಡಿದೆ. ಪ್ರತಿ 10 ಸಾವಿರ ಸಂಸಾರವಿರುವ ಒಂದು ಪ್ರದೇಶದಲ್ಲಿ ತರಬೇತಿ ಪಡೆದ ಇಪ್ಪತ್ತೈದು ಕಾರ್ಯಕರ್ತರು ಇರುತ್ತಾರೆ (400:1). ಗ್ರಾಮ, ಜಿಲ್ಲಾ ಮತ್ತು ಪ್ರಾದೇಶಿಕ ಮಟ್ಟಗಳಲ್ಲಿ ಕೃಷಿ ಅಭಿವೃದ್ಧಿ ಸಮಿತಿಗಳು, ಕೃಷಿವಸ್ತು ಮಾರಾಟ ಸಮಿತಿಗಳು ಕಾರ್ಯ ಮಾಡುತ್ತಿವೆ. ಗೃಹವಿಜ್ಞಾನ ವಿಸ್ತರಣ ಕಾರ್ಯ ಪ್ರಾರಂಭವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಜಪಾನ್ ಸರ್ಕಾರ ತೀವ್ರಗತಿ ಕೃಷಿ ವಿಸ್ತರಣಕಾರ್ಯಕ್ಕೆ ಅವಕಾಶ ಕಲ್ಪಿಸಿದೆ. ಸಂಶೋಧನಕೇಂದ್ರಗಳೂ ವಿಸ್ತರಣಕಾರ್ಯಕರ್ತರೂ ನೇರಸಂಬಂಧ ಹೊಂದಿರುವುದಲ್ಲದೆ ರೈತಪ್ರತಿನಿಧಿಗಳು ವಿಸ್ತರಣಕಾರ್ಯ ಜವಾಬ್ದಾರಿಯನ್ನು ಸಲಹಾ ಸಮಿತಿಗಳ ಮೂಲಕ ವಹಿಸಿದ್ದಾರೆ.

**ಭಾರತ :** ಹತ್ತಿ ಬೆಳೆ ಅಭಿವೃದ್ಧಿಯ ಪ್ರಯತ್ನ ಮೊಟ್ಟಮೊದಲ ಕೃಷಿ ವಿಸ್ತರಣಕಾರ್ಯ ಎನ್ನಬಹುದು. ಈಸ್ಟ್ ಇಂಡಿಯಾ ಕಂಪನಿಯವರ ಆದೇಶದ ಮೇಲೆ 1839ರಲ್ಲಿ ಅಮೇರಿಕದ ಹನ್ನೆರಡು ಹತ್ತಿ ಬೆಳೆಗಾರರು ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದ ರೈತರಿಗೆ ಸುಧಾರಿಸಿದ ಹತ್ತಿ ಬೆಳೆ ತೆಗೆಯುವ ಮತ್ತು ಕಲ್ಮಷವಿಲ್ಲದ ಹತ್ತಿ ಮಾರಾಟ ಮಾಡುವ ಪದ್ಧತಿಗಳನ್ನು ತೋರಿಸಿಕೊಡಲು ಭಾರತಕ್ಕೆ ಬಂದು ಕೆಲಸ ಮಾಡಿದರು. ಅಂತಾರಾಷ್ಟ್ರೀಯ ಸಹಕಾರದ ಮೂಲಕವೇ ಭಾರತದ ಕೃಷಿ ವಿಸ್ತರಣೆ ಪ್ರಾರಂಭವಾಗಿರುವುದು ಗಮನಾರ್ಹ. 1880, 1898 ಮತ್ತು 1901 ಈ ವರ್ಷಗಳ ಕ್ಷಾಮ ಕಮಿಷನ್‌ಗಳ ವರದಿಗಳು 1903ರ ನೀರಾವರಿ ಕಮಿಷನ್ ವರದಿ 1915ರ ಸಹಕಾರ ಸಮಿತಿ ವರದಿ ಮತ್ತು 1928ರ ರಾಯಲ್ ಕಮಿಷನ್ ಆಫ್ ಅಗ್ರಿಕಲ್ಚರ್ ಮಾಡಿದ ಶಿಫಾರಸ್ಸುಗಳು ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರಗಳ ಕೃಷಿವಿಸ್ತರಣ ಪ್ರಯತ್ನಗಳಿಗೆ ಮಾರ್ಗದರ್ಶನ ನೀಡಿವೆ. ಕ್ಷಾಮ ಕಮಿಷನ್‌ಗಳ ವರದಿಗಳು ಕೃಷಿವಿಸ್ತರಣದ ಆವಶ್ಯಕತೆಯನ್ನು ತೋರಿಸಿ ಕೊಟ್ಟಿದ್ದರಿಂದ ರಾಜ್ಯ ಸರ್ಕಾರಗಳಲ್ಲಿ ಕೃಷಿ ಇಲಾಖೆಗಳು ಅಸ್ತಿತ್ವಕ್ಕೆ ಬಂದುವು. 1906ರಲ್ಲಿ ಕೇಂದ್ರ ಕೃಷಿ ಸೇವಾ ವ್ಯವಸ್ಥೆ ರೂಪುಗೊಂಡಿತು. ಆದರೆ 1919ರ ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ ವರದಿ ಪ್ರಕಾರ ಕೃಷಿ ಅಭಿವೃದ್ಧಿಯ ಹೆಚ್ಚಿನ ಜವಾಬ್ದಾರಿ ರಾಜ್ಯಸರ್ಕಾರಗಳಿಗೆ ಬಂದದ್ದರಿಂದ ಈ ಸಿಬ್ಬಂದಿಯನ್ನು 1924ರ ನಂತರ ಮುಂದುವರಿಸಲಿಲ್ಲ. ಆದರೂ ಕೇಂದ್ರ ಸರ್ಕಾರ ಕೃಷಿ ಅಭಿವೃದ್ಧಿಗಾಗಿ ಹಣ ಸಹಾಯ, ತಾಂತ್ರಿಕ ಸಲಹೆ ಮತ್ತು ಇತರ ರೀತಿಯ ಮಾರ್ಗದರ್ಶನದ ಹೊಣೆಯನ್ನು ಸ್ವಲ್ಪಮಟ್ಟಿಗೆ ನಿರ್ವಹಿಸುತ್ತ ಬಂದಿದೆ. 1903ರಲ್ಲಿ ಭಾರತ ಸರ್ಕಾರ ಬಿಹಾರಿನ ಪೂಸಾ ಎಂಬಲ್ಲಿ ರಾಷ್ಟ್ರೀಯ ಕೃಷಿ ಸಂಶೋಧನ ಕೇಂದ್ರವನ್ನು ಸ್ಥಾಪಿಸಿತು. ಅಮೆರಿಕದ ಹೆನ್ರಿ ಫಿಪ್ಸ್ ಎಂಬಾತನ 3,000 ಡಾಲರ್ ದಾನವನ್ನು ಇದರ ಸ್ಥಾಪನೆಗೆ ಉಪಯೋಗಿಸಲಾಯಿತು. ಈ ಕೇಂದ್ರ ಬಿಹಾರಿನಲ್ಲಿ ನಡೆದ ಭಾರಿ ಭೂಕಂಪದ ಪರಿಣಾಮವಾಗಿ 1936ರಲ್ಲಿ ದೆಹಲಿಗೆ ವರ್ಗಾಯಿಸಲ್ಪಟ್ಟಿತು.

19ನೆಯ ಶತಮಾನದಲ್ಲಿಯೇ ಕೃಷಿ ವಿಸ್ತರಣಕಾರ್ಯಕ್ಕೆ ಅನುಕೂಲವಾಗುವಂಥ ಹಲ ಕೆಲವು ಪ್ರಯತ್ನಗಳು ನಡೆದಿದ್ದವು. ಅವುಗಳಲ್ಲಿ ಅತಿಮುಖ್ಯವಾದವನ್ನು ಇಲ್ಲಿ ನಮೂದಿಸಲಾಗಿದೆ.

1862–ನಾಗಪುರದಲ್ಲಿ ಕೃಷಿ ಮತ್ತು ತೋಟಗಾರಿಕೆ ಸಂಘ ಸ್ಥಾಪನೆ.

1864–ಮದ್ರಾಸ್ ಪ್ರಾಂತ್ಯದ ಸೈದಾಪೇಟೆಯಲ್ಲಿ ಮಾದರೀ ಫಾರ್ಮ್ ಸ್ಥಾಪನೆ ಮತ್ತು ಅದರ ಮೂಲಕ ಯಾಂತ್ರಿಕ ಬೇಸಾಯದ ಪ್ರಾತ್ಯಕ್ಷಿಕ ಪ್ರದರ್ಶನ ಮತ್ತು ಪ್ರಸಾರದ ಏರ್ಪಾಡು.

1866–ಮಧ್ಯ ಪ್ರದೇಶದಲ್ಲಿ ಹತ್ತಿ ಅಭಿವೃದ್ಧಿ ಕಮಿಷನರ್ ನೇಮಕ.

1871–ಬಂಗಾಲದಲ್ಲಿ ಏಳು ಮಾದರಿ ಫಾರ್ಮುಗಳ ಸ್ಥಾಪನೆ.

1875–ಉತ್ತರ ಪ್ರದೇಶದಲ್ಲಿ ಕೃಷಿ ಇಲಾಖೆ ಡೈರೆಕ್ಟರರ ನೇಮಕ; ರೇಷ್ಮೆ ಗೃಹಕೈಗಾರಿಕೆಗೆ, ತಂಬಾಕು ಬೆಳೆ ಮತ್ತು ಹೈನುರಾಸುಗಳ ಅಭಿವೃದ್ಧಿ ಕಾರ್ಯಗಳಿಗೆ ಉತ್ತೇಜನ.

1876–1900 – ಮದ್ರಾಸ್ ಪ್ರಾಂತ್ಯದ ಸೈದಾಪೇಟೆಯಲ್ಲಿ ಕೃಷಿ ಕಾಲೇಜು ಸ್ಥಾಪನೆ (1876), ಗೋದಾವರೀ ಜಿಲ್ಲೆಯಲ್ಲಿ ಕಬ್ಬಿನ ರೋಗ ನಿರೋಧಕ ತಳಿಸಂವರ್ಧನೆ ಮತ್ತು ವಿಸ್ತರಣ, ನೆಲಗಡಲೆ ಬೆಳೆ ವಿಸ್ತರಣೆ, ಬಳ್ಳಾರಿ ಮತ್ತು ತಿರುನೆಲ್ವೇಲಿಗಳಲ್ಲಿ ಹತ್ತಿ ಬೆಳೆ ಅಭಿವೃದ್ಧಿ ಕಾರ್ಯ.

1879–ಪುಣೆಯ ವಿಜ್ಞಾನ ಕಾಲೇಜಿನಲ್ಲಿ ಕೃಷಿಶಾಖೆ ಸ್ಥಾಪನೆ.

1880–ಪಂಜಾಬಿನಲ್ಲಿ ಲ್ಯಾಂಡ್ ರಿಕಾರ್ಡ್ ಮತ್ತು ಕೃಷಿ ಇಲಾಖೆಯ ಸ್ಥಾಪನೆ.

1882–ಅಸ್ಸಾಮಿನಲ್ಲಿ ಕೃಷಿ ಇಲಾಖೆ ಸ್ಥಾಪನೆ, ಪಶುಪಾಲನೆ ಮತ್ತು ಆಲೂಗೆಡ್ಡೆ ಬೆಳೆ ಅಭಿವೃದ್ಧಿ ಕಾರ್ಯ, ಷಿಲಾಂಗನಲ್ಲಿ ಸಂಶೋಧನಕೇಂದ್ರ ಸ್ಥಾಪನೆ.

1883–ಮಧ್ಯಪ್ರದೇಶ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಕೃಷಿ ಇಲಾಖೆ ಸ್ಥಾಪನೆ.

1886– ಮೈಸೂರು ಸಂಸ್ಥಾನದಲ್ಲಿ ಕೃಷಿ ಮತ್ತು ಅಂಕಿ ಅಂಶಗಳ ಇಲಾಖೆ ಸ್ಥಾಪನೆ. ಪ್ರತಿ ಜಿಲ್ಲೆಗೂ ತರಬೇತಿ ಹೊಂದಿದ ತಜ್ಞರ ನೇಮಕ.

1888–ಮೈಸೂರಿನಲ್ಲಿ ಪ್ರಥಮ ಕೃಷಿ ಪ್ರದರ್ಶನ.

1890–ಪುಣೆಯಲ್ಲಿ ಕೃಷಿ ಡಿಪ್ಲೊಮ ಪ್ರಾರಂಭ.

1899–ಮೈಸೂರು ಸಂಸ್ಥಾನದಲ್ಲಿ ವಿಸ್ತರಣಕಾರ್ಯಕ್ಕೆ, ಕಾಫಿ ಬೆಳೆಗಾರರಿಗೆ ಸಲಹೆ ನೀಡಲು ಮತ್ತು ಮಣ್ಣು ಪರಿಶೀಲನೆಗಾಗಿ ರಸಾಯನವಿಜ್ಞಾನಿಗಳ ನೇಮನ.

ಇಪ್ಪತ್ತನೆಯ ಶತಮಾನದ ಮೊದಲ ಮೂರು ದಶಕಗಳಲ್ಲಿ ಗಮನಾರ್ಹ ರೀತಿಯಲ್ಲಿ ವಿಸ್ತರಣಕಾರ್ಯ ನಡೆದಿದೆ ಎಂದು ರಾಯಲ್ ಕಮಿಷನ್ ವರದಿ ಶ್ಲಾಘಿಸಿದೆ. ಕೆಲವು ನಿರ್ದಿಷ್ಟ ಉದಾಹರಣೆಗಳನ್ನು ಉಲ್ಲೇಖಿಸಲಾಗಿದೆ. ಪ್ರಕಟಣೆಗಳ ಮೂಲಕ ವಿಸ್ತರಣ ಪ್ರಯತ್ನ ಮದ್ರಾಸ್ ಪ್ರಾಂತ್ಯದಲ್ಲಿ ನಡೆದಿದೆ. 'ಬತ್ತದ ಬೆಳೆಗೆ ಒಂದೇ ಸಸಿ ನೆಡಿ' (1,20,000 ಪ್ರತಿಗಳು) ಮತ್ತು 'ದನಗಳ ಕಸಿ ಮಾಡುವುದು' (6,000 ಪ್ರತಿಗಳು) ಎಂಬ ಪುಸ್ತಿಕೆಗಳನ್ನು ಹಂಚಲಾಯಿತು. ವಿಸ್ತರಣಕಾರ್ಯದ ಪ್ರಗತಿಯನ್ನು ಡೈಜೆಸ್ಟ್ ಎಂಬ ಮಾಸಿಕದಲ್ಲಿ ಪ್ರಕಟಿಸಲಾಗುತ್ತಿತ್ತು (7,520 ಪ್ರತಿಗಳು). ಗ್ರಾಮಸ್ಥರಿಗಾಗಿ ವಾರ್ಷಿಕ ಪಂಚಾಂಗ ಮತ್ತು ಇತರ ರೀತಿಯ ಬುಲೆಟಿನ್‌ಗಳು ಪ್ರಕಟವಾಗುತ್ತಿದ್ದುವು.

ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿಯೂ ಮಾಸಿಕಗಳು ಮತ್ತು ಪ್ರಕಟಣೆಗಳು ಪ್ರಾರಂಭವಾಗಿದ್ದುವು. ಧಾರವಾಡ ಜಿಲ್ಲಾ ವ್ಯವಸಾಯ ಪತ್ರಿಕೆ ಕನ್ನಡದಲ್ಲಿ ಪ್ರಕಟವಾಗುತ್ತಿತ್ತು. ಬಂಗಾಲ ಉತ್ತರ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳು ಪ್ರದರ್ಶನ ರೈಲುಗಳಲ್ಲಿ ಪ್ರಚಾರ ಕೈಗೊಂಡವು. ಕೃಷಿ ವಿಭಾಗವನ್ನು ಈ ಪ್ರದರ್ಶನ ರೈಲಿನಲ್ಲಿ ಸೇರಿಸಲಾಗಿತ್ತು. ಬೊಂಬಾಯಿ, ಮಧ್ಯಪ್ರದೇಶ, ಬಂಗಾಲ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಕೃಷಿಸಂಘಗಳು ಪ್ರಾರಂಭವಾದವು. ಬೊಂಬಾಯಿ ಪ್ರಾಂತ್ಯದಲ್ಲಿ ಮಾತ್ರ ಇವು ಯಶಸ್ವೀ ಕಾರ್ಯ ನಡೆಸಿದುವು. ಮೈಸೂರು ಸಂಸ್ಥಾನದಲ್ಲಿಯೂ ಬಹಳ ಪರಿಣಾಮಕಾರಿ ಕಾರ್ಯ ನಡೆಯಿತು.

ಇದೇ ಕಾಲದಲ್ಲಿ ಕೇರಳ ರಾಜ್ಯದಲ್ಲಿ ಕ್ರಿಶ್ಚಿಯನ್ ಯುವಕ ಸಂಘದ (ವೈ.ಎಂ.ಸಿ.ಎ.) ಆಶ್ರಯದಲ್ಲಿ ಗ್ರಾಮಾಭಿವೃದ್ಧಿ ಪ್ರಯತ್ನ ಸುಮಾರು 20 ವರ್ಷಗಳ ಕಾಲ ನಡೆಯಿತು. ಇದರ ವ್ಯಾಪ್ತಿ ಮಾರ್ತಾಂಡದ ಸುತ್ತಮುತ್ತಣ ಹಳ್ಳಿಗಳಿಗೆ ಮಾತ್ರ ಸೀಮಿತವಾಗಿದ್ದರೂ ಪ್ರಯತ್ನದ ಮುಖ್ಯ ಚಾಲಕರಾದ ಸ್ಪೆನ್ಸರ್ ಹ್ಯಾಚ್ರು ವಿಸ್ತರಣ ತತ್ತ್ವಾಧಾರದ ಮೇಲೆ ಮಾರ್ಗದರ್ಶನ ನೀಡಿದ್ದರಿಂದ ಬಹಳ ಯಶಸ್ಸು ಸಾಧಿಸಲಾಯಿತು. ಅದರ ಕಾರ್ಯಸ್ವರೂಪ ಪ್ರಾತ್ಯಕ್ಷಿಕ ಕೇಂದ್ರ, ಸ್ಥಳೀಯ ಮುಖಂಡರ ತರಬೇತಿ, ಕೃಷಿಪ್ರದರ್ಶನ ಮತ್ತು ಸ್ಥಳೀಯ ಪ್ರಸಾರ ನಾಳಗಳ ಮೂಲಕವೂ ವಿಸ್ತರಣೆ ಮುಂತಾದವುಗಳ ಮೂಲಕವೂ ಆಗಿತ್ತು. ಹಿಂದುಳಿದ ಅನಕ್ಷರಸ್ಥ ಮತ್ತು ಹೀನ ಆರ್ಥಿಕ ಸ್ಥಿತಿಯಲ್ಲಿದ್ದ ಜನಾಂಗಗಳಲ್ಲಿಯೂ ಸ್ವಸಹಾಯದಿಂದಲೇ ಪ್ರಗತಿ ಸಾಧಿಸಲು ಸಾಧ್ಯ ಎಂದು ತೋರಿಸಿದರು.

1930ರಿಂದ ಎರಡನೆಯ ಮಹಾಯುದ್ಧ ಪ್ರಾರಂಭವಾಗುವವರೆಗೆ ರಾಯಲ್ ಕಮಿಷನ್ ವರದಿಯ ಸಲಹೆಗಳ ಆಧಾರದ ಮೇಲೆ ಕೃಷಿವಿಸ್ತರಣಕಾರ್ಯ ರೂಪುಗೊಳ್ಳಲು ಮೊದಲಾಯಿತು. ಆದರೆ ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಹೆಚ್ಚಿನ ಪ್ರಗತಿಗೆ ಅವಕಾಶವಾಗಲಿಲ್ಲ. ಆದರೂ ಸುಧಾರಿಸಿದ ತಳಿಗಳ ಉಪಯೋಗ, ನೀರಾವರಿ ಆಸರೆಯಿಂದ ಬೆಳೆಸುವ ಮತ್ತು ಕೆಲವು ಆರ್ಥಿಕ ಬೆಳೆಗಳಿಗೆ ರಸಗೊಬ್ಬರಗಳ ಉಪಯೋಗ, ಕಾಂಪೋಸ್ಟ್ ತಯಾರಿಕೆ ಮತ್ತು ಹಸಿರು ಎಲೆಗೊಬ್ಬರಗಳ ರೂಢಿ. ಕಬ್ಬಿಣದ ನೇಗಿಲು ಮತ್ತು ಇತರ ಸುಧಾರಿಸಿದ ಮುಟ್ಟುಗಳ ಬಳಕೆ, ಹೊಲಗಳಲ್ಲಿ ಸಮಪಾತಳಿ ಒಡ್ಡು ನಿರ್ಮಿಸುವುದು, ನೀರಾವರೀ ಬಾವಿಗಳಿಗೆ ನೀರೆತ್ತುವ ಯಂತ್ರಗಳ ಜೋಡಣೆ, ಸಸ್ಯರಕ್ಷಣೆಯ ಕೆಲವು ಕ್ರಮಗಳ ಅನುಸರಣೆ ಮುಂತಾದ ಕಾರ್ಯಕ್ರಮಗಳು ಕೃಷಿ ವಿಸ್ತರಣಕಾರ್ಯದ ವಿಷಯಗಳಾಗಿದ್ದವು. ಪ್ರತಿ ತಾಲ್ಲೂಕಿನಲ್ಲಿಯೂ ಹಲಕೆಲವು ಹಣವಂತ ವಿದ್ಯಾವಂತ ರೈತರು ಈ ಪದ್ಧತಿಗಳನ್ನು ರೂಢಿಗೆ ತಂದು ನಮ್ಮ ದೇಶದ ಕೃಷಿಯೂ ವಿಜ್ಞಾನದ ಆಧಾರದ ಮೇಲೆ ಅಭಿವೃದ್ಧಿಯಾಗಲು ಸಾಧ್ಯವಿದೆ ಎಂದು ತೋರಿಸಿಕೊಟ್ಟರು. ಸಾಮಾನ್ಯ ರೈತನ ಮತ್ತು ಸರ್ಕಾರದ ಆರ್ಥಿಕ ನಿರ್ಬಲತೆ ಹೆಚ್ಚಿನ ಪ್ರಗತಿಗೆ ಅಡಚಣೆಯಾಯಿತು. ಈ ದಶಕದಲ್ಲಿ ಎಲ್ಲ ರಾಜ್ಯಗಳಲ್ಲಿಯೂ ಕೃಷಿ ವಿಸ್ತರಣಕಾರ್ಯವನ್ನೊಳಗೊಂಡ ಗ್ರಾಮಾಭಿವೃದ್ಧಿ ಕಾರ್ಯ ತೀವ್ರಗತಿಯಲ್ಲಿ ನಡೆಯಲು ಪ್ರಯತ್ನಿಸಿದಾಗ್ಯೂ ಸರ್ಕಾರದ ಆರ್ಥಿಕ ಸ್ಥಿತಿ ಹೆಚ್ಚಿನ ರೀತಿಯ ಅಭಿವೃದ್ಧಿಗೆ ಉತ್ತೇಜನ ಕೊಡುವಂತಿರಲಿಲ್ಲ. ಆದರೆ ರೈತಜನತೆಯ ಮನಸ್ಸು ವಿಜ್ಞಾನದ ಕಡೆಗೆ ಕುತೂಹಲದಿಂದ ನೋಡುವ ರೀತಿಯಲ್ಲಿ ಬದಲಾವಣೆಯಾಗಲು ಪ್ರಾರಂಭವಾಯಿತು ಎನ್ನಬಹುದು.

ಎರಡನೆಯ ಮಹಾಯುದ್ಧ ಕಾಲದಲ್ಲಿ ಕೃಷಿ ಉತ್ಪಾದನೆಗೆ ಹೆಚ್ಚಿನ ಗಮನ ಕೊಡಬೇಕಾದ ಅಗತ್ಯ ಉಂಟಾಯಿತು. ಕೃಷಿ ವಿಸ್ತರಣಕಾರ್ಯಗಳಿಗೆ ಹೆಚ್ಚು ಪ್ರೋತ್ಸಾಹ ಹಣದ ಸಹಾಯ ಮತ್ತು ಪ್ರಾಮುಖ್ಯ ಕೊಡಲು ಪ್ರಾರಂಭವಾಯಿತು. ರೈತನಿಗೆ ಹೊಸ ಪದ್ಧತಿಯನ್ನು ಜಾರಿಗೆ ತರಲು ತಾಂತ್ರಿಕ ನೆರವಿನೊಂದಿಗೆ ಆರ್ಥಿಕ ನೆರವನ್ನು ಸಹ ನೀಡಲಾಯಿತು. ಸುಲಭ ಬೆಲೆಯಲ್ಲಿ ರಸಗೊಬ್ಬರ, ನೇಗಿಲು, ಬೀಜ, ಔಷಧಿ ಮತ್ತು ಕೃಷಿಯಂತ್ರಗಳನ್ನು ರೈತನಿಗೆ ಒದಗಿಸುವ ಕಾರ್ಯಕ್ರಮ ರೂಪುಗೊಂಡಿತು. ಹೆಚ್ಚು ಆಹಾರ ಬೆಳೆಸಿರಿ ಎಂಬ ಪ್ರಚಾರ ವಿವಿಧ ರೀತಿಯಲ್ಲಿ ಕಾರ್ಯಗತವಾಗತೊಡಗಿತು.

1947ರ ಅನಂತರ ಗ್ರಾಮಾಭಿವೃದ್ಧಿಗೆ ತೀವ್ರ ಪ್ರಯತ್ನಗಳು ಪ್ರಾರಂಭವಾದುವು. ಸಮಾಜವಿಕಾಸಯೋಜನೆ, ಅದರ ಅಂಗವಾಗಿ ರಾಷ್ಟ್ರೀಯ ವಿಸ್ತರಣ ವ್ಯವಸ್ಥೆ ರೂಪುಗೊಂಡವು. ಕೃಷಿ ವಿಸ್ತರಣಕಾರ್ಯಕ್ಕೆ ಅತಿ ಮುಖ್ಯ ಸ್ಥಾನ ದೊರೆಯಿತು. ಈ ವ್ಯವಸ್ಥೆಯಿಂದ ತಾಲ್ಲೂಕು ಮತ್ತು ಗ್ರಾಮಾಂತರಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತರ ಸಂಖ್ಯೆ 1964ರಲ್ಲಿ ಈ ರೀತಿಯಾಗಿತ್ತು : 49,628 ಗ್ರಾಮಸೇವಕರು, 6,726 ಗ್ರಾಮಸೇವಿಕೆಯರು, 2,726 ಮುಖ್ಯ ಸೇವಿಕೆಯರು, 5,117 ಕೃಷಿ ವಿಸ್ತರಣ ಅಧಿಕಾರಿಗಳು, 6,028ಸಮಾಜ ವಿಕಾಸ ಅಧಿಕಾರಿಗಳು, 4,641 ಸಹಕಾರೀ ವಿಸ್ತರಣ ಅಧಿಕಾರಿಗಳು, 4,087 ಪಶುಪಾಲನ ವಿಸ್ತರಣ ಅಧಿಕಾರಿಗಳು. ಸಮಾಜ ವಿಕಾಸ ಯೋಜನೆಯ ಕಾರ್ಯಕ್ರಮದಲ್ಲಿ ಬ್ಲಾಕುಗಳನ್ನು ಒಂದು ಏಕಮಾನವಾಗಿ ಪರಿಗಣಿಸಿ ಕೆಲಸ ಸಾಗುತ್ತಿದೆ. ಕೃಷಿ ವಿಸ್ತರಣೆಯ ಕೆಲ ಸಾಧನೆಗಳು ಹೀಗಿವೆ.

| ಪ್ರತಿ ಬ್ಲಾಕಿಗೆ | 1ನೆಯ ಯೋಜನೆಯಲ್ಲಿ | 2ನೆಯ ಯೋಜನೆಯಲ್ಲಿ | 3ನೆಯ ಯೋಜನೆಯಲ್ಲಿ |
|---|---|---|---|
| ಪ್ರಾತ್ಯಕ್ಷಿಕಗಳು | 800 | 713 | 265 |
| ಸುಧಾರಿಸಿದ ಮುಟ್ಟುಗಳ ಸರಬರಾಜು | 130 | – | 172 |
| ಉತ್ತಮ ತಳಿ ಹೋರಿ | 8.4 | 7.3 | – |
| ಸುಧಾರಿಸಿದ ಕೋಳಿಗಳು | 135 | 105 | – |

ಈ ಸಂಖ್ಯೆಗಳನ್ನು ನೋಡಿದರೆ ಕಾಲಕ್ರಮೇಣ ಕೃಷಿ ವಿಸ್ತರಣ ಕೆಲಸ ಪ್ರಾರಂಭದಲ್ಲಿದ್ದಷ್ಟು ತೀವ್ರವಾಗಿಲ್ಲ ಎಂದು ತೋರುತ್ತದೆ. ಸರ್ಕಾರ ನೇಮಿಸಿದ ಮೌಲ್ಯಮಾಪನ ವಿಭಾಗದವರು ಕೂಡ ಆಗಿಂದಾಗ್ಯೆ ಈ ಬಗ್ಗೆ ಗಮನ ಸೆಳೆದು ಯೋಜನೆಯ ರೂಪ ಬದಲಾಯಿಸಲು ಪ್ರಯತ್ನಪಟ್ಟಿದ್ದಾರೆ. 1960ರಿಂದ ಕೃಷಿ ಇಲಾಖೆಗಳು ಸಮಾಜ ವಿಕಾಸ ಕಾರ್ಯಕ್ರಮದ ಮೂಲಕ ನಡೆಯುವ ಕೃಷಿ ವಿಸ್ತರಣಕ್ಕೆ ತೃಪ್ತಿಗೊಳ್ಳದೆ ತೀವ್ರ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಆ ಮೂಲಕ ರೈತನಿಗೆ ಕೃಷಿ ವಿಜ್ಞಾನದ ಲಾಭ ದೊರಕಿಸಿಕೊಡುತ್ತಿದ್ದಾರೆ. ಕೆಲವು ವಿಶಿಷ್ಟ ರೀತಿಯ ಕೃಷಿ ವಿಸ್ತರಣಕಾರ್ಯ ರೂಪುಗೊಳ್ಳುತ್ತಿದೆ. ತೀವ್ರ ಬೆಳೆ ಅಭಿವೃದ್ಧಿ ಸಸ್ಯರಕ್ಷಣಕಾರ್ಯ, ಮಣ್ಣು ಪರೀಕ್ಷಾಸೌಲಭ್ಯ, ಹೆಚ್ಚು ಇಳುವರಿ ಬೆಳೆ ಪ್ರಚಾರಕಾರ್ಯ, ಹೊಲಗಳಲ್ಲಿ ಒಡ್ಡು ಹಾಕುವ ಕಾರ್ಯಕ್ರಮ ಮುಂತಾದವು ಇವುಗಳಲ್ಲಿ ಮುಖ್ಯವಾದವು. ಕೇಂದ್ರ ಸರ್ಕಾರದ ನೆರವು ಮತ್ತು ಮಾರ್ಗದರ್ಶನ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ಮೂಲಕ ಈ ಕಾರ್ಯಗಳಿಗೆ ದೊರೆಯುತ್ತಿದೆ. ಈ ಎರಡು ದಶಕಗಳಲ್ಲಿ ಐ.ಸಿ.ಎ.ಆರ್. ಅನೇಕ ಕೃಷಿ ವಿಸ್ತರಣಕಾರ್ಯಗಳಿಗೆ ಉತ್ತೇಜನ ನೀಡಿರುವುದಲ್ಲದೆ ನಿರ್ದಿಷ್ಟ ಬೆಳೆ ಅಭಿವೃದ್ಧಿ ಸಮಿತಿಗಳ ಮೂಲಕವೂ–ಎಂದರೆ ಹತ್ತಿ ಎಣ್ಣೆಕಾಳುಗಳು ತಂಬಾಕು ಅಡಕೆ ತೆಂಗು ಮುಂತಾದ ಬೆಳೆಗಳ ಅಭಿವೃದ್ಧಿ ಕಾರ್ಯ–ಕೆಲಸ ಮಾಡಿದೆ. ಇನ್ನೊಂದು ಗಮನಾರ್ಹ ಬೆಳವಣಿಗೆ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆ. **(ನೋಡಿ–ಕೃಷಿ–ವಿಶ್ವವಿದ್ಯಾಲಯ)**

ಭಾರತದ ರೈತಜನತೆಯ ಗಮನ ಕೃಷಿ ವಿಜ್ಞಾನದತ್ತ ಹೊರಳಿದೆ. ಅನಕ್ಷರಸ್ಥರಾಗಿದ್ದರೂ ಸೂಕ್ತ ರೀತಿಯಲ್ಲಿ ಕೃಷಿ ವಿಸ್ತರಣಕಾರ್ಯ ನಡೆದದ್ದೇ ಆದರೆ ಅವರು ವಿಜ್ಞಾನ ಪದ್ಧತಿಗಳನ್ನು ಅನುಸರಿಸುವುದರಲ್ಲಿ ಇತರ ಮುಂದುವರಿದ ದೇಶದವರಿಗಿಂತ ಹಿಂದಿಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಎರಡು ದಶಕಗಳಲ್ಲಿ ಗ್ರಾಮಜೀವನ ತೀವ್ರ ಬದಲಾವಣೆಯಾಗಿದೆ. ವಿದ್ಯಾಭ್ಯಾಸದ ಪ್ರಗತಿಯಿಂದ ಯುವಕರನೇಕರು ಶಾಲೆಗಳಿಂದ ಹೊರಬಂದಿದ್ದಾರೆ. ಗ್ರಾಮಾಂತರ ರಸ್ತೆಗಳು ಮತ್ತು ಇತರ ಅಭಿವೃದ್ಧಿಗೆ ಆವಶ್ಯಕ ಮಾರ್ಪಾಡುಗಳು ರೂಪುಗೊಂಡಿವೆ. ಕೃಷಿ ಉತ್ಪಾದನೆ ಅತಿ ಹೆಚ್ಚು ಪರಿಮಾಣದಲ್ಲಿ ಆಗಲು ಸಂಶೋಧನೆ ಮತ್ತು ವಿಸ್ತರಣದ ತೀವ್ರತೆ ಕಾಣುತ್ತಿದೆ. ಮುಂದಿನ ಕೃಷಿ ಅಭಿವೃದ್ಧಿ ಕಾರ್ಯಕ್ಕೆ ಮಾರ್ಗದರ್ಶನ ನೀಡಲು ಭಾರತ ಸರ್ಕಾರ ಒಂದು ಕೃಷಿ ಕಮಿಷನನ್ನು ನೇಮಕ ಮಾಡಿದೆ.

**ಕರ್ನಾಟಕದಲ್ಲಿ ಕೃಷಿ ವಿಸ್ತರಣಕಾರ್ಯ:** ಹಳೆಯ ಮೈಸೂರು ಸಂಸ್ಥಾನದಲ್ಲಿ ಕೃಷಿ ಮತ್ತು ಅಂಕಿಅಂಶಗಳ ಇಲಾಖೆ 1886ರಲ್ಲಿ ಸ್ಥಾಪಿತವಾಯಿತು. ಮದ್ರಾಸ್ ಪ್ರಾಂತ್ಯದ ಸೈದಾಪೇಟೆಯ ಕೃಷಿ ಕಾಲೇಜಿನಲ್ಲಿ ತರಬೇತಿ ಪಡೆದ ತಜ್ಞರನ್ನು ಪ್ರತಿ ಜಿಲ್ಲೆಗೂ ನೇಮಕ ಮಾಡಲಾಯಿತು. 1888ರಲ್ಲಿಯೇ ಒಂದು ಕೃಷಿಪ್ರದರ್ಶನವು ಏರ್ಪಟ್ಟಿತು. ಮಣ್ಣು ಪರಿಶೀಲನೆಗೆ, ಸುಧಾರಿಸಿದ ಕೃಷಿ ಪದ್ಧತಿಗಳನ್ನು ರೈತರಿಗೆ ತಿಳಿಸಿಕೊಡುವುದಕ್ಕೆ ಮತ್ತು ಕಾಫಿ ಬೆಳೆಗಾರರಿಗೆ ಸಲಹೆ ನೀಡುವುದಕ್ಕೆ ಕೃಷಿ ರಸಾಯನಶಾಸ್ತ್ರಜ್ಞರ ನೇಮಕ 1899ರಲ್ಲಿ ಆಯಿತು. 1905–06ನೆಯ ಸಾಲಿನಲ್ಲಿ ಹೆಬ್ಬಾಳಿನಲ್ಲಿ ಕೃಷಿ ಸಂಶೋಧನಕೇಂದ್ರ ಸ್ಥಾಪನೆಯಾಗಿ ಕ್ರಮೇಣ 1913ರಲ್ಲಿ ಕೃಷಿ ಶಾಲೆ ರೂಪುಗೊಂಡಿತು. ಆಗಿನ ಕೃಷಿ ವಿಸ್ತರಣಕಾರ್ಯದಿಂದ ಅಡಿಕೆ ಕೊಳೆರೋಗದ ಹತೋಟಿ, ಹೊಲದ ಬೆಳೆಗಳಿಗೆ ಬೀಳುವ ಕಂಬಳಿಹುಳದ ಹತೋಟಿ, ಉತ್ತಮ ಕಬ್ಬಿನ ಬೆಳೆ ತೆಗೆಯುವುದು, ಸುಧಾರಿಸಿದ ರೀತಿಯಲ್ಲಿ ಬೆಲ್ಲ ತಯಾರಿಸುವುದು ಮುಂತಾದವನ್ನು ಸಾಧಿಸಲಾಯಿತು. ಸ್ವಪ್ರಯತ್ನಕ್ಕೆ ಸರ್ಕಾರದ ನೆರವು ನೀಡಿಕೆ ಎಂಬುದು ಕೃಷಿ ವಿಸ್ತರಣಕಾರ್ಯದ ತತ್ತ್ವವಾಗಿತ್ತು. ಇತರ ಗಮನಾರ್ಹ ಕೃಷಿ ಅಭಿವೃದ್ಧಿ ಕಾರ್ಯಗಳೆಂದರೆ 1916ರಲ್ಲಿ ಚಿಕ್ಕನಹಳ್ಳಿಯಲ್ಲಿ ಶ್ರೀ ಉಗ್ರೇಗೌಡರ ದಾನದ ಫಲವಾಗಿ (ರೂ.25,000) ರೈತಮಕ್ಕಳಿಗಾಗಿ ಕೃಷಿಶಾಲೆಯ ಪ್ರಾರಂಭ; ಮತ್ತು ಸಂಸ್ಥಾನದ ಗ್ರಾಮಾಂತರ ಶಾಲೆಗಳಲ್ಲಿ ಗ್ರಾಮವಿಜ್ಞಾನ ಬೋಧನೆಗೆ ಅವಕಾಶ ಏರ್ಪಟ್ಟಿದ್ದು. 1914ರಲ್ಲಿ ಕೃಷಿ ಇಲಾಖೆಯಲ್ಲಿ ಪ್ರಾತ್ಯಕ್ಷಿಕ ವಿಭಾಗ ರೂಪಗೊಂಡು ಕೃಷಿ ವಿಸ್ತರಣೆ ತೀವ್ರಗತಿಯಲ್ಲಿ ಸಾಗತೊಡಗಿತು. ಪ್ರಜೆಗಳು ಮತ್ತು ಸರ್ಕಾರಿ ಅಧಿಕಾರಿಗಳು ಸಹಕರಿಸಿ ದೇಶದ ಆರ್ಥಿಕ ಪ್ರಗತಿ ಸಾಧಿಸಲು ಆರ್ಥಿಕ ಸಮ್ಮೇಳನ ರೂಪುಗೊಂಡಿತು. ಇದರ ಅಂಗವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಪ್ರಜಾಪ್ರತಿನಿಧಿಗಳೂ ಪ್ರಗತಿಪರ ರೈತರೂ ಸರ್ಕಾರಿ ಅಧಿಕಾರಿಗಳೂ ಸೇರಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಕಾರ್ಯಗತಮಾಡಲು ಸಹಕರಿಸುತ್ತಿದ್ದರು. ಗ್ರಾಮಾಭಿವೃದ್ಧಿ ಮಂಡಳಿಗಳು ಗ್ರಾಮಮಟ್ಟದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದುವು. ಜನಗಳ ಮನೋವಿಕಾಸ ಮತ್ತು ಆರ್ಥಿಕ ಪ್ರಗತಿಗೆ ಅನುವಾಗುವಂತೆ ವಿಸ್ತರಣಭಾಷಣಗಳು, ಪ್ರಾತ್ಯಕ್ಷಿಕೆಗಳು, ಪ್ರದರ್ಶನಗಳು ಮುಂತಾದವನ್ನು ಏರ್ಪಡಿಸುವ ಜವಾಬ್ದಾರಿ ಈ ಗ್ರಾಮಾಭಿವೃದ್ಧಿ ಮಂಡಳಿಗೆ ಇತ್ತು. ಈ ರೀತಿ ತೀವ್ರಗತಿಯಲ್ಲಿ ಕೃಷಿ ವಿಸ್ತರಣ ಸಾಗಿದ್ದು 1929ರ ಹೊತ್ತಿಗೆ ಕೃಷಿ ಇಲಾಖೆ ರೈತರೊಂದಿಗೆ ನೇರ ಸಂಪರ್ಕ ಹೊಂದಿ ಅವರ ಹಿಡುವಳಿಗಳಲ್ಲಿಯೇ ಸುಧಾರಿಸಿದ ಕ್ರಮಗಳನ್ನು ತೋರಿಸಿ ಸೂಕ್ತ ಸಲಹೆ ಕೊಡುತ್ತಿತ್ತು. ಇಲಾಖೆಯ ಸುದ್ದಿ ಸಮಾಚಾರ ಶಾಖೆ ಹೊರದೇಶಗಳೊಡನೆ ಸಂಪರ್ಕ ಏರ್ಪಡಿಸಿಕೊಂಡು ವಿಜ್ಞಾನ ಪ್ರಗತಿಯ ಲಾಭವನ್ನು ತನ್ನ ಕಾರ್ಯಕರ್ತರುಗಳಿಗೆ ಮತ್ತು ಪ್ರಗತಿಪರ ರೈತರಿಗೆ ಮಾಡಿಕೊಡುತ್ತಿತ್ತು. ಪುಸ್ತಕಭಂಡಾರದಲ್ಲಿ 3,000 ಪುಸ್ತಕಗಳು 6,000 ಪ್ರಕಟಣೆಗಳು, 1,000 ವರದಿಗಳು ಇದ್ದು 84 ನಿಯತಕಾಲಿಕಗಳು ಬರುತ್ತಿದ್ದುವು.

ಮೈಸೂರು ವ್ಯವಸಾಯ ಪತ್ರಿಕೆ ಮತ್ತು ಮೈಸೂರು ಕೃಷಿ ಸಂಶೋಧನ ಪತ್ರಿಕೆಗಳು ಸಹ ಪ್ರಕಟವಾಗುತ್ತಿದ್ದುವು. 1930ರಿಂದ 1940ರವರೆಗೆ ಇದೇ ರೀತಿ ಕಾರ್ಯ ಚಟುವಟಿಕೆಗಳು ಮುಂದುವರಿದುವಾದರೂ ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಸರ್ಕಾರ ವಿಸ್ತರಣ ಸಂಶೋಧನೆ ಮತ್ತು ಕೃಷಿ ಶಿಕ್ಷಣದ ಬಗ್ಗೆ ತೀವ್ರತರ ಯೋಜನೆ ರೂಪಿಸಲು ಸಾಧ್ಯವಾಗಲಿಲ್ಲ. ಎರಡನೆಯ ಮಹಾಯುದ್ಧದ ಪರಿಣಾಮವಾಗಿ ದೇಶದ ಆಹಾರ ಮತ್ತು ಕೃಷಿ ಉತ್ಪನ್ನದ ಕಡೆ ಗಮನ ಕೊಡುವ ಅವಶ್ಯಕತೆ ಉಂಟಾಗಿ, ಹೆಚ್ಚು ಆಹಾರ ಬೆಳೆಸಿರಿ ಎಂಬ ಯೋಜನೆಗಳು ಕಾರ್ಯಗತವಾಗತೊಡಗಿದುವು. ಉದಾಹರಣೆಗೆ 1943–44ನೆಯ ಸಾಲಿನಲ್ಲಿ 2,291 ಪ್ರಾತ್ಯಕ್ಷಿಕೆಗಳು, 895 ರೈತಹಿಡುವಳಿಯಲ್ಲಿಯೇ ಬೀಜೋತ್ಪಾದನಾ ತಾಕುಗಳು, 31,313 ನೇಗಿಲುಗಳು, 6,942 ಸುಧಾರಿಸಿದ ಕಬ್ಬಿಣ ಗಾಣಗಳು 546 ವಿದ್ಯುತ್ ನೀರೆತ್ತುವ ಸಾಧನಗಳು, 197 ಎಣ್ಣೆ ಯಂತ್ರದಿಂದ ನೀರೆತ್ತುವ ಸಾಧನಗಳು, 11 ಟ್ರಾಕ್ಟರುಗಳು ಇದ್ದುವು. ರಾಸಾಯನಿಕ ಗೊಬ್ಬರದ ಬಳಕೆ ಸುಮಾರು 1,000 ಟನ್‌ಗಳು. 1946ನೆಯ ಸಾಲಿನಲ್ಲಿ ಹೆಬ್ಬಾಳದ ಕೃಷಿಸಂಶೋಧನ ಕೇಂದ್ರದಲ್ಲಿ ಕೃಷಿ ಕಾಲೇಜು ಸ್ಥಾಪಿತವಾಯಿತು.

ಇನ್ನೊಂದು ದಶಕದ ಅನಂತರ ಕೃಷಿ ವಿಸ್ತರಣಕಾರ್ಯಚಟುವಟಿಕೆಗಳು ಇನ್ನೂ ಹೆಚ್ಚಾದುವು. 1953–54ನೆಯ ಸಾಲಿನಲ್ಲಿ ಪ್ರಾತ್ಯಕ್ಷಿಕಗಳ ಸಂಖ್ಯೆ ಹೀಗಿತ್ತು ; ಉಳುಮೆ 4,282, ನಾಟಿ 6,094, ಸಸ್ಯರಕ್ಷಣೆ 3,364, ಹಸುರುಗೊಬ್ಬರ 3,108, ಕಾಂಪೋಸ್ಟ 7,800, ಬೆಲ್ಲ ತಯಾರಿಕೆ 358, ಉತ್ತಮ ತಳಿ 1,589. ಅಲ್ಲದೆ 49 ಪ್ರದರ್ಶನಗಳು ಏರ್ಪಟ್ಟಿದ್ದುವು. ವ್ಯವಸಾಯದ ಯೂನಿಯನ್‌ನಲ್ಲಿ 12,000 ರೈತರು ಸದಸ್ಯರಾಗಿದ್ದರು. ಅವರು 877 ಗ್ರಾಮಸಭೆಗಳಲ್ಲಿ 197 ತಾಲ್ಲೂಕು ಸಭೆಗಳಲ್ಲಿ ಭಾಗವಹಿಸಿದ್ದರು. 26,704 ಕಬ್ಬಿಣದ ನೇಗಿಲುಗಳು, 767 ಕಲ್ಟಿವೇಟರುಗಳು, 775 ಟ್ರಾಕ್ಟರುಗಳು ಗ್ರಾಮಾಂತರದಲ್ಲಿ ಕೆಲಸ ಮಾಡುತ್ತಿದ್ದವು. 17,000 ಟನ್ ರಸಗೊಬ್ಬರಗಳು ಉಪಯೋಗಿಸಲ್ಪಟ್ಟವು. ಕ್ರಮೇಣ ಕೃಷಿ ವಿಸ್ತರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆತದ್ದರಿಂದ ಮತ್ತು ಸಮಾಜ ವಿಕಾಸಯೋಜನೆ ರೂಪುಗೊಳ್ಳಲು ಪ್ರಾರಂಭವಾದದ್ದರಿಂದ ಕೃಷಿ ವಿಸ್ತರಣಕಾರ್ಯದ ಸ್ವರೂಪ ಬದಲಾಗತೊಡಗಿತು. ಈ ಪರ್ವ ಕಾಲದಲ್ಲಿ ಎಂದರೆ 1952–54 ರಲ್ಲಿ ತೀವ್ರತರ ವಿಸ್ತರಣ ಯೋಜನೆಯೊಂದು ಪ್ರಯೋಗಾತ್ಮಕವಾಗಿ ನಡೆಯಿತು. ಇದಕ್ಕೆ ಫೋರ್ಡ್ ಫೌಂಡೇಶನ್‌ನ ಉತ್ತೇಜನ ಮತ್ತು ಕೇಂದ್ರ ಸರ್ಕಾರದ ಮುಂದಾಳುತನ ಒದಗಿದ್ದುವು. ಮಳವಳ್ಳಿ ತಾಲ್ಲೂಕಿನಲ್ಲಿ ಈ ಪ್ರಯತ್ನ ಯಶಸ್ವಿಯಾಗಿ ನಡೆಯಿತು. ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿದ್ದ ಕೃಷಿ ಇನ್‌ಸ್ಪೆಕ್ಟರುಗಳು–ಕೃಷಿ ವಿಜ್ಞಾನ ಪದವೀಧರರು ಮತ್ತು ಡಿಪ್ಲೊಮ ಪಡೆದ ತಜ್ಞರು–ಗ್ರಾಮಾಂತರಗಳಲ್ಲಿ ನೆಲೆಸಿ ತೀವ್ರ ಕೃಷಿ ವಿಸ್ತರಣಕಾರ್ಯ ಕೈಗೊಂಡರು. ಮೊದಲ 18 ತಿಂಗಳುಗಳಲ್ಲಿ 100 ಗ್ರಾಮಗಳಲ್ಲಿ ಸಾಧಿಸಿದ ಕೆಲಸ ಗಮನಾರ್ಹ. 1,658 ಸಭೆಗಳು, 4,046 ಪ್ರಾತ್ಯಕ್ಷಿಕೆಗಳು, 140 ಪ್ರಾತ್ಯಕ್ಷಿಕೆ ತಾಕುಗಳು, 6,580 ಎಕರೆಗಳಲ್ಲಿ ಜಪಾನ್ ಮಾದರೀ ಬತ್ತ, 256 ಹೊಸ ಬೆಳೆಗಳನ್ನು ರೂಢಿಗೆ ತಂದ ರೈತರು, 299 ಸುಧಾರಿಸಿದ ದನದ ಕೊಟ್ಟಿಗೆಗಳು, 1,083 ಕಾಂಪೋಸ್ಟ್ ಗುಂಡಿಗಳು, 244 ಮಣ್ಣು ಪರೀಕ್ಷೆ ಮತ್ತು ಸಲಹೆ ಇವಿಷ್ಟು ನಡೆದವು. ಪಶು ಸಂವರ್ಧನೆ ಕಾರ್ಯಕ್ರಮಗಳೂ ಸೇರಿದ್ದುವು. ಈ ಪ್ರಯತ್ನದಿಂದ ಒಂದು ಮಹತ್ತರ ಪಾಠ ಕಲಿತಂತೆ ಆಯಿತು. ಗ್ರಾಮಾಂತರ ಪ್ರದೇಶದಲ್ಲಿ ಕೃಷಿತಜ್ಞರು ತೀವ್ರತರ ಕೃಷಿ ವಿಸ್ತರಣಕಾರ್ಯ ನಡೆಸಿದರೆ ರೈತರು ಸಹಕರಿಸುತ್ತಾರೆ, ಮಾತ್ರವಲ್ಲ ಜನತಾ ವಿಕಾಸ ಸ್ವಯಂ ಸೇವಾತತ್ತ್ವದ ಮೂಲಕ ಸಾಧಿಸಲು ಸಾಧ್ಯ ಎಂದು ತಿಳಿಯಿತು. ಸಾಕಷ್ಟು ತರಬೇತಿ ಪಡೆದ ತಜ್ಞರು ಈ ಕಾರ್ಯದ ಹೊಣೆ ಹೊರಬೇಕು ಮಾತ್ರ. 1954ರಿಂದ ಈಚೆಗೆ ರಾಷ್ಟ್ರೀಯ ವಿಸ್ತರಣ ಯೋಜನೆ ಸಮಾಜ ವಿಕಾಸ ಯೋಜನೆ ಮತ್ತು ಇತರ ಅಭಿವೃದ್ಧಿ ಯೋಜನೆಗಳು ಇತರ ರಾಜ್ಯಗಳಲ್ಲಿ ಕಾರ್ಯಗತವಾದಂತೆ ಕರ್ನಾಟಕದಲ್ಲಿಯೂ ಕಾರ್ಯಗತವಾಗುತ್ತಿವೆ. ಕೃಷಿ ಇಲಾಖೆ ಇತರ ಯೋಜನೆಗಳನ್ನು ಅದರಲ್ಲಿಯೂ ಮುಖ್ಯವಾಗಿ ಮಣ್ಣುಪಾಲನೆ ಸಸ್ಯರಕ್ಷಣೆ ಬೆಳೆ ಅಭಿವೃದ್ಧಿ ವಿಸ್ತರಣಕಾರ್ಯ ರೂಪಿಸಿತು. ಸಾಂದ್ರ ವ್ಯವಸಾಯ ಯೋಜನೆಗಳ ಮೂಲಕ ಗ್ರಾಮಮಟ್ಟದಲ್ಲಿ ಕೃಷಿ ವಿಸ್ತರಣಕ್ಕಾಗಿಯೇ ಮೀಸಲಾದ ಗ್ರಾಮಸೇವಕರು ಅವರ ಮೇಲ್ವಿಚಾರಣೆಗೆ ಮತ್ತು ಮಾರ್ಗದರ್ಶನಕ್ಕೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಕೃಷಿತಜ್ಞರು ಕೆಲಸಮಾಡುತ್ತಿದ್ದಾರೆ. ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ ಮತ್ತು ಭದ್ರಾ ನೀರಾವರಿ ಪ್ರದೇಶದಲ್ಲಿ ನೀರಾವರಿ ಗದ್ದೆಗಳನ್ನಾಗಿ ಪರಿವರ್ತಿಸಿ ಲಾಭದಾಯಕ ಬೆಳೆ ತೆಗೆಯಲು ಅನುಕೂಲವಾಗುವಂತೆ ವಿಶಿಷ್ಟ ಸಿಬ್ಬಂದಿ ಕೆಲಸ ಮಾಡುತ್ತಲಿದೆ. 1965ರಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಸಂಶೋಧನೆ, ಕೃಷಿ ವಿದ್ಯಾಭ್ಯಾಸ ಮತ್ತು ವಿಸ್ತರಣ ಮೂರು ಜವಾಬ್ದಾರಿಗಳು ಒಂದು ಸಂಯೋಜಿತ ವ್ಯವಸ್ಥೆ. ಇದು ಕೃಷಿ ಅಭಿವೃದ್ಧಿಗೆ ಪರಿಣಾಮಕಾರಿಯಲ್ಲದೆ ಜನತಾ ವಿಕಾಸಕ್ಕೆ ಸೂಕ್ತ ವ್ಯವಸ್ಥೆಯೆಂದು ನೂರು ವರ್ಷಗಳ ಅನುಭವದಿಂದ ತೋರಿಸಿಕೊಟ್ಟ ಅಮೆರಿಕ ಲ್ಯಾಂಡ್ ಗ್ರಾಂಟ್ ಸಂಸ್ಥೆಗಳ ಮಾದರಿಯನ್ನು ಅನುಸರಿಸಲು ಪ್ರಯತ್ನ ಮಾಡಲಾಗುತ್ತಿದೆ. ಕರ್ನಾಟಕ ಸರ್ಕಾರ ಕೃಷಿ ಮತ್ತು ಪಶುವೈದ್ಯಕೀಯ ಕಾಲೇಜುಗಳನ್ನು, ಕೃಷಿ ಸಂಶೋಧನಾ ಕ್ಷೇತ್ರಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿದೆ.

(ಜಿ.ಎಸ್.ಎಂ.)

**ಕೃಷಿಶಿಲ್ಪವಿಜ್ಞಾನ** : ವ್ಯವಸಾಯೋದ್ಯಮಕ್ಕೆ ಆಧಾರವಾಗಿ ನಿಂತಿರುವ ಎಂಜಿನಿಯರಿಂಗ್ ವಿಜ್ಞಾನ. ಮಾನವನಿಗೆ ಆವಶ್ಯಕವಾದ ಆಹಾರ ಹಾಗೂ (ವಸ್ತ್ರ ಮಾಡಲು) ನೂಲಿನ ಎಳೆಗಳ ಉತ್ಪಾದನೆಯಲ್ಲಿ ಸುಧಾರಣೆ ಮತ್ತು ಹೆಚ್ಚುವರಿಯನ್ನು ಸಾಧಿಸುವಲ್ಲಿ ಕೃಷಿ ಎಂಜಿನಿಯರಿಂಗ್‌ದ ಪಾತ್ರ ಪ್ರಧಾನವಾದದ್ದು. ಕೃಷಿಯ ವಾಸ್ತವಿಕ ಸಮಸ್ಯೆಗಳನ್ನು ಪರಿಶೀಲಿಸಿ ಅವುಗಳ ಪರಿಹಾರಕ್ಕೆ ಸೂಕ್ತ ಉಪಕರಣಗಳ ನಿರ್ಮಾಣ ಇರುವ ಉಪಕರಣಗಳಲ್ಲಿ ಸುಧಾರಣೆ, ನವವಿಧಾನಗಳ ಆವಿಷ್ಕಾರ, ಯಂತ್ರೋಪಕರಣಗಳ ಕ್ರಿಯಾಶೀಲತೆಯಲ್ಲಿ ದಕ್ಷತೆ–ಇವೆಲ್ಲವು ಕೃಷಿ ಎಂಜಿನಿಯರಿಂಗ್‌ನ ಹೊಣೆಗಾರಿಕೆಗಳು. **(ನೋಡಿ– ಕೃಷಿ ಉಪಕರಣಗಳು)**

ವ್ಯವಸಾಯದ ಸಮಸ್ತ ಅಂಗಗಳ ಯಾಂತ್ರೀಕರಣ ಕೃಷಿ ಎಂಜಿನಿಯರಿಂಗ್‌ವಿಜ್ಞಾನಿಗಳ ಮುಂದಿರುವ ಅತ್ಯಾಧುನಿಕ ಸವಾಲು. ಪರಿಸರದ–ವಾತಾವರಣ, ನೀರು, ಬೆಳಕು, ಮಣ್ಣಿನ ಗುಣಗಳು ಇತ್ಯಾದಿಗಳ–ಸಮರ್ಪಕ ನಿಯಂತ್ರಣ ಈ ತಜ್ಞರ ಮುಂದೆ ಇರುವ ಇನ್ನೊಂದು ಸವಾಲು. ಇದಕ್ಕಾಗಿ ನಿಯಂತ್ರಿತ ಪರಿಸರದಲ್ಲಿ ನಾನಾವಿಧದ ಪ್ರಯೋಗಗಳನ್ನು ಮಾಡಿ ಲಭಿಸಿದ ಫಲಿತಾಂಶಗಳನ್ನು ಕೃಷಿ ರಂಗದಲ್ಲಿ ಸಾರ್ವಜನಿಕರ ಉಪಯೋಗಕ್ಕೋಸ್ಕರ ಭಿತ್ತರಿಸುತ್ತಾರೆ. ಕೃಷಿಶಾಸ್ತ್ರದ ವ್ಯಾಪ್ತಿಯಲ್ಲಿ ಸಾಕು ಪ್ರಾಣಿಗಳ ಪಾಲನೆ, ಪೋಷಣೆ ಬರುವುದರಿಂದ ಈ ದಿಸೆಯಲ್ಲೂ ಕೃಷಿ ಎಂಜಿನಿಯರಿಂಗ್‌ನ ಪಾತ್ರವಿದೆ. ಜಾನುವಾರಗಳ ಕೊಟ್ಟಿಗೆಗಳನ್ನು ಒಂದು ಆಧುನಿಕ ಕಾರ್ಖಾನೆಯಂತೆ ನಡೆಸುವುದರಿಂದ ರೈತನಿಗೆ ವಿಶೇಷ ಲಾಭವುಂಟು. ಮಣ್ಣು, ನೀರು, ಆಸುಪಾಸಿನ ಅರಣ್ಯ ಸಂಪತ್ತು, ಜಾನುವಾರುಗಳು, ಜನಬಲ ಇವೇ ಮುಂತಾದವು ರೈತನ ಶಕ್ತಿ ಆಕರಗಳು. ಇವುಗಳ ವೈಜ್ಞಾನಿಕ ಸಂಘಟನೆಯಿಂದ ಕೃಷಿಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಇಲ್ಲಿ ಕೃಷಿ ಎಂಜಿನಿಯರಿಂಗ್‌ನ ಪಾತ್ರ ಮಹತ್ತ್ವಪೂರ್ಣವಾದದ್ದು. ಕೃಷಿ ಉತ್ಪನ್ನಗಳ ಸಂಸ್ಕರಣೆ, ದಾಸ್ತಾನು, ಮಾರುಕಟ್ಟೆಗೆ ಒಯ್ಯಲು ಸಿದ್ಧತೆ ಈ ಕ್ರಿಯೆಗಳಲ್ಲಿ ಕೃಷಿ ಎಂಜಿನಿಯರಿಂಗ್ ವಿಜ್ಞಾನಿಗಳು ಹೊಸ ವಿಧಾನಗಳನ್ನು ರೂಢಿಗೆ ತಂದು ರೈತನ ಅಭಿವೃದ್ಧಿಗೆ ಸಾಧಿಸಲು ನೆರವಾಗಿದ್ದಾರೆ. ವಿಜ್ಞಾನ ಮತ್ತು ಯಂತ್ರಕೌಶಲ ಬೆಳೆದಂತೆ ವ್ಯವಸಾಯದಲ್ಲಿ ಯಂತ್ರಗಳ ಬಳಕೆ ವ್ಯಾಪಕವಾಗುತ್ತಿದೆ. ಬೇಸಾಯಕ್ಕೆ ಎತ್ತು ಮತ್ತು ಕುದುರೆಗಳ ಬದಲು ಟ್ರಾಕ್ಟರ್ ಆಧಾರವಾಗಿದೆ. ಗಾಡಿಗಳ ಬದಲು ಜನ ಮತ್ತು ಹೇರು ಸಾಗಾಣಿಕೆಗೆ ಸ್ವಯಂಚಾಲಿತ ಮೋಟಾರುವಾಹನಗಳು ಅಸ್ತಿತ್ವಕ್ಕೆ ಬಂದಿವೆ. ಬೇಸಾಯದ ಅನೇಕ ಕೆಲಸಗಳಿಗೆ ಸಾಧನ ಒದಗಿಸುವ ಕಾರ್ಯ ಒಂದು ವಿಶೇಷ ಶಾಸ್ತ್ರವಾಗಿದೆ. ಕೃಷಿ ಎಂಜಿನಿಯರಿಂಗ್‌ನ ವ್ಯಾಪ್ತಿಯಲ್ಲಿ ಮುಖ್ಯವಾಗಿ ಬೇಸಾಯದಲ್ಲಿ ಬೇಕಾದ ಶಕ್ತಿ ಮತ್ತು ಯಂತ್ರ ಸಾಧನ, ರೈತ ತನ್ನ ಕಾರ್ಯಕ್ಕೆ ಬೇಕಾದ ಬೇಲಿ, ಕೊಟ್ಟಿಗೆ, ವಾಸದ ಮನೆ, ದಾಸ್ತಾನು ಕಣಜ, ನೀರಾವರಿ ಆಶ್ರಯಗಳ ನಿರ್ಮಾಣ, ಗ್ರಾಮಾಂತರ ವಿದ್ಯುಚ್ಛಕ್ತಿ ಬಳಕೆ, ಕೊನೆಯದಾಗಿ ಮಣ್ಣು ಮತ್ತು ನೀರಾವರಿ ನಿರ್ವಹಣೆ ಈ ಅಂಶಗಳು ಸೇರಿವೆ.

ಭಾರತದ ಕೇಂದ್ರ ಮತ್ತು ರಾಜ್ಯದ ವ್ಯವಸಾಯ ಇಲಾಖೆಗಳಲ್ಲಿ ಕೃಷಿ ಎಂಜಿನಿಯರಿಂಗ್ ಶಾಖೆಗಳು ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿವೆ. ಇವು ಕೃಷಿ ಉಪಕರಣಗಳು ಮತ್ತು ಯಂತ್ರಗಳ ವಿಷಯವಾಗಿ ರೈತರಿಗೆ ಮಾಹಿತಿ ಕೊಡುವುದಲ್ಲದೆ ಯಂತ್ರಗಳ ಬಳಕೆಯಿಂದ ಭೂ ಪುನರುತ್ಥಾನ, ಯಂತ್ರಗಳ ಸಹಾಯದಿಂದ ಭೂಮಿ ಕೊರೆಯುವ ಯೋಜನೆ, ಬಾವಿ, ಪಂಪುಸೆಟ್ ಜೋಡಣೆ ಇತ್ಯಾದಿ ವಿಷಯಗಳಲ್ಲಿ ರೈತರಿಗೆ ನೆರವಾಗುತ್ತಿದೆ. ಇತ್ತೀಚಿನ ದಿವಸಗಳಲ್ಲಿ ರೈತರಿಗೆ ಕೃಷಿ ಯಂತ್ರಗಳ ಬಳಕೆ ಮತ್ತು ರಿಪೇರಿ ವಿಷಯದಲ್ಲಿ ತರಬೇತಿ ಕಾರ್ಯಕ್ರಮ ಸಹ ಏರ್ಪಾಡಾಗಿದೆ. ಬೇಸಾಯದಲ್ಲಿ ಕಾಲಕಾಲಕ್ಕೆ ಆಗಿರುವ ಕ್ರಾಂತಿಗೂ ಕೃಷಿ ಉದ್ಯಮದ ವಿವಿಧ ಅಂಗಗಳಾದ ಭೂಮಿ ಉಳುಮೆ, ಬೆಳೆ ಬೆಳೆಯುವುದು, ದನ ಸಾಕಣೆ ಮತ್ತು ಧಾನ್ಯ ಮತ್ತಿತರ ಬೇಸಾಯೋತ್ಪನ್ನಗಳ ಒಪ್ಪ ಮಾಡುವಿಕೆ ಇವುಗಳಲ್ಲಿ ಆಗಿರುವ ಮಾರ್ಪಾಡಿಗೆ ನಿಕಟ ಸಂಪರ್ಕವಿದೆ. ಬೇಸಾಯದಲ್ಲಿ ಯಂತ್ರ ಸಜ್ಜುಗಳ ಪ್ರಾಮುಖ್ಯ ಕೃಷಿ ಅಭಿವೃದ್ಧಿಯ ಪರಿಶೀಲನೆಯಲ್ಲಿ ಆದ್ಯವಾಗಿ ಗಮನಿಸಲೇಬೇಕಾದ ವಿಷಯ. ಕೃಷಿ ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಅನೇಕ ರೀತಿಯ ಯಂತ್ರಗಳು ಬಳಕೆಯಲ್ಲಿವೆ. ಉಳುಮೆಯ ಅನಂತರ ಹರಗುವಿಕೆ, ಉತ್ತ ನೆಲವನ್ನು ಮಟ್ಟ ಮಾಡಿ ಗೊಬ್ಬರ ಕೊಡುವುದು, ಬೀಜ ಬಿತ್ತುವುದು, ಕಳೆ ಕೀಳುವುದು, ಪೈರು ಕಟಾವು, ಅದರ ಒಕ್ಕಣೆ, ಈ ಎಲ್ಲಾ ಕೆಲಸಗಳಿಗೂ ರೈತ ಒಂದಲ್ಲ ಒಂದು ಸಜ್ಜನ್ನು ಬಹಳ ಹಿಂದಿನಿಂದಲು ಬಳಸುತ್ತಲೇ ಬಂದಿದ್ದಾನೆ. ಭಾರತದ ನಾನಾ ಭಾಗಗಳ ವೈವಿಧ್ಯಕ್ಕೆ ಅನುಸಾರವಾಗಿ ಈ ಸಜ್ಜುಗಳ ವಿಷಯದಲ್ಲಿ ತೀವ್ರ ಭಿನ್ನತೆ ಸಹಜ. ಭಾರತದಲ್ಲಿ ಜಮೀನಿನ ಹಿಡುವಳಿ ಬಹಳ ಸಣ್ಣದು. ಉಳುಮೆಗೆ ಬಳಸುವ ದನಗಳು ಬಡವಾಗಿರುತ್ತವೆ. ರೈತನ ಅನುಕೂಲವೂ ಕಡಿಮೆ. ಈ ಸ್ಥಿತಿಗೆ ಹೊಂದುವಂತಹ ಬೇಸಾಯ ಮುಟ್ಟುಗಳು ಪ್ರಸ್ತುತ ಬಳಕೆಯಲ್ಲಿವೆ. ಇವನ್ನೇ ವೃದ್ಧಿಪಡಿಸಿ ಪರಿಸ್ಥಿತಿ ಸುಧಾರಿಸುವ ದಿಕ್ಕಿನಲ್ಲಿ ಕೆಲಸ ನಡೆದಿದೆ. ಹಾಗೆಯೇ ವ್ಯವಸಾಯದ ವಿವಿಧ ಕೆಲಸಗಳಿಗೆ ಆಧುನಿಕ ಸ್ವಯಂಚಾಲಿತ ಯಂತ್ರಗಳ ಬಳಕೆಯೂ ತೀವ್ರಗತಿಯಲ್ಲಿ ಬರುತ್ತಿದೆ. ಕೃಷಿ ಇಂಜಿನಿಯರಿಂಗ್‌ನ ಅಂಗವಾಗಿ ಪರಿಶೀಲಿಸಬೇಕಾದ ಇನ್ನೊಂದು ಅಂಶ ಬೇಸಾಯದ ಕೆಲಸಗಳಿಗೆ ಅಗತ್ಯವಾದ ಸಾಮರ್ಥ್ಯ.

ಭಾರತದಲ್ಲಿ ಪ್ರಸ್ತುತ ಇದನ್ನು ಜಾನುವಾರುಗಳ ಬಳಕೆಯಿಂದ ಒದಗಿಸಿಕೊಳ್ಳಲಾಗುತ್ತಿದೆ. ಮುಖ್ಯವಾಗಿ ಎತ್ತುಗಳೇ ಭಾರತದ ಬೇಸಾಯಕ್ಕೆ ಆಧಾರ. ಎತ್ತುಗಳ ತಳಿ, ಅವುಗಳಿಗೆ ಕೊಡುವ ಆಹಾರ ಮತ್ತು ಈ ಸಜ್ಜುಗಳನ್ನು ಎತ್ತುಗಳಿಗೆ ಹೇಗೆ ನೊಗದ ಮೂಲಕ ಜೋಡಿಸುತ್ತಾರೆ ಎಂಬುದನ್ನು ಅವಲಂಬಿಸಿ ಎತ್ತುಗಳ ದಕ್ಷತೆ ಉಂಟು. ಈ ದಿಕ್ಕಿನಲ್ಲಿ ಅನೇಕ ಸಂಶೋಧನೆಗಳು ನಡೆಯುತ್ತಿವೆ. ಅಷ್ಟೇ ಶ್ರಮಕ್ಕೆ ಹೆಚ್ಚಿನ ಕೆಲಸ ಆಗುವಂತೆ ನೊಗಗಳ ರಚನೆಯ ಸುಧಾರಣೆಯಾಗಿದೆ. ಬೇಸಾಯದಲ್ಲಿ ಮಣ್ಣಿನ ಸಂರಕ್ಷಣೆ ಅತೀ ಮುಖ್ಯ ಅಂಶ. ಮಣ್ಣಿನ ಸವಕಳಿ ತಡೆಯುವುದಕ್ಕೆ ವ್ಯಾಪಕವಾದ ಸಮಪಾತಳಿ ಒಡ್ಡುಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಒಡ್ಡುಗಳ ನಿರ್ಮಾಣಕ್ಕೆ ಎಂಜಿನಿಯರಿಂಗ್ ಜ್ಞಾನ ಬೇಕು. ಮಣ್ಣನ್ನು ಅಗೆದು ಮಟ್ಟಸ ಮಾಡಿ ಒಡ್ಡು ಹಾಕಲು ಬೇಕಾದ ಸಲಕರಣೆಗಳನ್ನು ತಯಾರು ಮಾಡಲಾಗಿದೆ.

ಆಧುನಿಕ ಬೇಸಾಯದ ಮುಖ್ಯ ಲಕ್ಷಣ ಯಾಂತ್ರೀಕರಣ. ಜಾನುವಾರು ಇಲ್ಲವೇ ಮನುಷ್ಯನ ಶ್ರಮದ ಮೇಲೆ ಆಧರಿಸಿದ ಬೇಸಾಯದ ಪ್ರಗತಿ ತೀರಾ ನಿಧಾನ. ಅದರಲ್ಲೂ ಕೂಲಿ ಹೆಚ್ಚಾಗುತ್ತಿರುವಾಗ ಈಗಿನ ಸಮಯದಲ್ಲಿ ವ್ಯವಸಾಯ ಲಾಭದಾಯಕವಾಗಬೇಕಾದಲ್ಲಿ ಯಂತ್ರಗಳ ಬಳಕೆ ಅನಿವಾರ್ಯ. ಈಗೀಗ ಅನುಕೂಲಸ್ಥ ರೈತರು ಬೇಸಾಯದಲ್ಲಿ ಹೆಚ್ಚುಹೆಚ್ಚಾಗಿ ಯಂತ್ರಗಳನ್ನು ಬಳಸುತ್ತಿದ್ದಾರೆ. ಟ್ರಾಕ್ಟರ್ ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಎಲ್ಲರಲ್ಲೂ ಬಳಕೆಗೆ ಬಂದಿರುವ ಯಂತ್ರ. ಒಂದು ಟ್ರಾಕ್ಟರಿನಿಂದ ಒಂದು ದಿವಸಕ್ಕೆ 5–6 ಜೊತೆ ಎತ್ತು ಉಳುವಷ್ಟು ಭೂಮಿಯನ್ನು ಉಳುಮೆ ಮಾಡಬಹುದು. ಅನೇಕ ರೀತಿಯ ಸಣ್ಣ ಮತ್ತು ದೊಡ್ಡ ಟ್ರಾಕ್ಟರುಗಳು ಈಗ ಬಳಕೆಯಲ್ಲಿವೆ. ಬತ್ತದ ಗದ್ದೆಯಲ್ಲಿ ಉಪಯೋಗಿಸುವುದಕ್ಕೆ ಅನುಕೂಲವಾಗುವಂತೆ ಯಂತ್ರಚಾಲಿತ ನೇಗಿಲು ಅಥವಾ ಪವರ್‌ಟಿಲ್ಲರ್‌ಗಳ ಬಳಕೆ ಸಹ ಈಗ ಸಾಮಾನ್ಯ. ಟ್ರಾಕ್ಟರ್ ಅನ್ನು ಸೂಕ್ತ ಸಜ್ಜುಗಳೊಡನೆ ಉಳುಮೆ, ಮಧ್ಯಂತರ ಬೇಸಾಯ, ಬಿತ್ತನೆ ಮುಂತಾದ ಎಲ್ಲಾ ಕೆಲಸಗಳಿಗೂ ಉಪಯೋಗಿಸುವುದು ಸಾಧ್ಯ. ಯಂತ್ರಗಳನ್ನು ಕೊಳ್ಳಬಹುದು. ಆದರೆ, ಅವನ್ನು ಮಿತಕರವಾಗಿ ಬಳಸಿ ಸರಿಯಾದ ಸ್ಥಿತಿಯಲ್ಲಿ ಕಾಪಾಡಿಕೊಂಡು ಬರದಿದ್ದರೆ ನಷ್ಟವಾಗುವುದು ಸಹಜ. ಅವುಗಳ ನಿರ್ವಹಣೆಯ ವಿಷಯ ತಕ್ಕಮಟ್ಟಿಗೆ ಅವುಗಳ ಮಾಲಿಕ–ರೈತರು ತಿಳಿದುಕೊಳ್ಳದಿದ್ದರೆ ತೊಂದರೆಯಾಗುತ್ತದೆ. ಭಾರತದಲ್ಲಿ ಕೃಷಿ ಯಂತ್ರಗಳನ್ನು ತಯಾರಿಸುವ ದಿಕ್ಕಿನಲ್ಲಿ ಪ್ರಯತ್ನ ನಡೆದಿದೆ. (ಬಿ.ವಿ.ವಿ.)

**ಕೃಷಿ ಸಂಘಟನೆ :** ಮಾನವ ಚಟುವಟಿಕೆಗಳ ಇತರ ಕ್ಷೇತ್ರಗಳಂತೆ ಕೃಷಿ ಕ್ಷೇತ್ರದಲ್ಲಿ ರೂಪುಗೊಂಡಿರುವ ಸಂಘಟನೆಯ ವಿವೇಚನೆ ಸುಲಭವಲ್ಲ. ಏಕೆಂದರೆ ಅತ್ಯಂತ ಪ್ರಾಚೀನ ಉದ್ಯೋಗಗಳಲ್ಲೊಂದಾದ ಕೃಷಿಯ ಬಗ್ಗೆ ಐತಿಹಾಸಿಕ ದಾಖಲೆಗಳು ಸಾಕಷ್ಟು ಇಲ್ಲ. ಅಲ್ಲದೆ ಕೃಷಿ ಸಂಘಟನೆ ಎಂಬ ಶಬ್ದದ ವ್ಯಾಪ್ತಿಯೆಷ್ಟೆಂಬುದನ್ನು ನಿಷ್ಕರ್ಷೆಯಾಗಿ ಹೇಳುವುದು ಸಾಧ್ಯವಿಲ್ಲ. ಕೃಷಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳನ್ನೂ ಈ ಶಬ್ದದ ಅರ್ಥವ್ಯಾಪ್ತಿಗೆ ಒಳಪಡಿಸಿದರೆ ಪ್ರತಿಯೊಂದು ದೇಶದ ಜನಸಂಖ್ಯೆಯ ತಕ್ಕಮಟ್ಟಿನ ಭಾಗ ಅದರಲ್ಲಿ ನಿರತರಾದವರೆಂದೇ ಹೇಳಬೇಕಾಗುತ್ತದೆ. ಆಗ ಅದು ಕೃಷಿ ಮಾತ್ರವೇ ಆಗುವುದಿಲ್ಲ. ಕೃಷಿ ವ್ಯವಹಾರ (ಅಗ್ರಿ ಬಿಸನೆಸ್) ಆಗುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನದಂಥ ಕೈಗಾರಿಕಾ ರಾಷ್ಟ್ರದಲ್ಲೂ ಕಾರ್ಮಿಕ ಬಲದ ಶೇಕಡ 30–40ರಷ್ಟು ಮಂದಿ ಇದರಲ್ಲಿ ನಿರತರಾಗಿದ್ದಾರೆ. ಸಾಗುವಳಿಯಲ್ಲಿ ನೇರವಾಗಿ ನಿರತರಾದವರನ್ನು ಮಾತ್ರ ಪರಿಗಣಿಸಿದರೆ ಅವರ ಸಂಖ್ಯೆ ಅಲ್ಲಿಯ ಕಾರ್ಮಿಕ ಬಲದ ಶೇಕಡ 12ರಷ್ಟಾಗುತ್ತದೆ. ಕೃಷಿ ಸಂಘಟನೆಯ ಅಧ್ಯಯನಕ್ಕೆ ಸಂಬಂಧಿಸಿದ ಇನ್ನೊಂದು ತೊಂದರೆಯೆಂದರೆ ಹೋಲಿಕೆಗೆ ಸಂಬಂಧಿಸಿದ್ದು. ಪುಟ್ಟ ಕುಟುಂಬವೊಂದರ ಬೇಸಾಯಕ್ಕೆ ಒಳಪಟ್ಟ ಹೊಲವನ್ನು ಕಂಪನಿಯ ಆಡಳಿತಕ್ಕೆ ಒಳಪಟ್ಟ ಒಂದು ದೊಡ್ಡ ಕೃಷಿ ಕ್ಷೇತ್ರದೊಂದಿಗೆ ಹೋಲಿಸುವುದು ಸಾಧ್ಯವಾಗುವುದಿಲ್ಲ. ಇವೆರಡರ ಲಕ್ಷಣಗಳಲ್ಲಿ ತುಂಬ ವ್ಯತ್ಯಾಸಗಳುಂಟು. ಉತ್ಪಾದನ ವ್ಯವಸ್ಥೆಯಲ್ಲಿ, ವಿಧಾನದಲ್ಲಿ, ಹೀಗೆ ಪ್ರತಿಯೊಂದು ಅಂಶದಲ್ಲೂ ಇವು ಪರಸ್ಪರ ಭಿನ್ನವಾದವು. ಕೃಷಿ ಸಂಘಟನೆಯ ಶಾಸ್ತ್ರೀಯ ವಿವೇಚನೆಗೆ ಅಡ್ಡಿಯಾಗಿರುವ ಇನ್ನೊಂದು ಅಂಶವೆಂದರೆ ವಿವಿಧ ದೇಶಗಳಲ್ಲಿಯ ಭಿನ್ನ ಆದರ್ಶಗಳು. ಜರ್ಮನಿಯಲ್ಲಿ ನಾಟ್ಸಿಗಳ ಕಾಲದಲ್ಲಿ ಕುಟುಂಬ ಕೃಷಿ ವ್ಯವಸ್ಥೆಯನ್ನು ಪವಿತ್ರವೆಂದು ಪರಿಗಣಿಸಲಾಗಿತ್ತು. ಸೋವಿಯತ್ ದೇಶದಲ್ಲಿ ಕೃಷಿಯನ್ನೂ ಇತರ ಉದ್ಯಮಗಳಂತೆ ಅತ್ಯಂತ ವಾಸ್ತವಿಕ ದೃಷ್ಟಿಯಿಂದಲೇ ಪರಿಗಣಿಸಲಾಗುತ್ತದೆ. ಜರ್ಮನಿಯ ನಾಟ್ಸಿ ಆಡಳಿತ ಕಾಲದಲ್ಲಿ ಸಣ್ಣ ಕುಟುಂಬ ಬೇಸಾಯದಿಂದಲೂ ಬೃಹದ್ಗಾತ್ರ ಕೃಷಿ ಕ್ಷೇತ್ರಗಳಿಂದ ದೊರಕುತ್ತಿದ್ದಷ್ಟೇ ಪ್ರಮಾಣದಲ್ಲಿ ಉತ್ಪನ್ನ ಲಭ್ಯವಾಗುತ್ತಿದ್ದದ್ದು ವೇದ್ಯವಾಗಿದೆ. ಅಷ್ಟು ಮಾತ್ರವೇ ಅಲ್ಲ; ಈ ಕುಟುಂಬಗಳು ನಾಟ್ಸಿ ಜರ್ಮನಿಗೆ ಅಗತ್ಯವಾಗಿದ್ದ ಯೋಧರನ್ನು ಅಧಿಕ ಸಂಖ್ಯೆಯಲ್ಲಿ ಉತ್ಪಾದಿಸುತ್ತಿದ್ದವು. ದೇಶದಲ್ಲಿ ಸಣ್ಣ ಗಾತ್ರದ ಕುಟುಂಬ ಬೇಸಾಯ ಘಟಕಗಳು ಅಧಿಕಸಂಖ್ಯೆಯಲ್ಲಿದ್ದಾಗ ಮಾತ್ರವೇ ಸಮಾಜದಲ್ಲಿ ಶಾಂತಿ ನೆಮ್ಮದಿಗಳು ನೆಲಸಿಯಾವು, ಆ ದೇಶದ ರಣಶಕ್ತಿ ವರ್ಧಿಸೀತು–ಎಂಬ ಭಾವನೆ ಅನೇಕರ ವಿಚಾರಗಳಿಗೆ ಬಣ್ಣ ನೀಡಿದೆ. ಇದು ಎಲ್ಲ ಸಂದರ್ಭಗಳಲ್ಲೂ ವಾಸ್ತವಿಕವೆನಿಸದು. ಅನಾರ್ಥಿಕವಾದ ಅನೇಕ ಸಣ್ಣ ಉತ್ಪಾದನ ಘಟಕಗಳು ದೇಶದ ಅಭ್ಯುದಯಕ್ಕೆ ಅಡಚಣೆಯಾಗಬಹುದು.

ಕೃಷಿ ಸಂಬಂಧವಾದ ಸಾಮಾಜಿಕ ಕಾರ್ಯದ ಸಂಘಟನೆಯ ಅನೇಕ ಪ್ರಕಾರಗಳುಂಟು. ಇವುಗಳಲ್ಲಿ ಕೆಲವು ಅತ್ಯಂತ ಪ್ರಾಚೀನವಾದವು; ಮತ್ತೆ ಕೆಲವು 20ನೆಯ ಶತಮಾನದ ವೈಶಿಷ್ಟ್ಯಗಳು ಅತ್ಯಂತ ಸಾಮಾನ್ಯವಾಗಿರುವ ಘಟಕವೆಂದರೆ ಕುಟುಂಬ. ಉತ್ಪಾದನೆ, ಅನುಭೋಗ–ಎರಡೂ ಏಕೀಭವಿಸಿರುವ ಘಟಕವಿದು. ಇದು ಸಾಮಾನ್ಯವಾಗಿ ಗಾತ್ರದಲ್ಲಿ ಸಣ್ಣದು. ಮೇನರ್ ಅಥವಾ ಜಹಗೀರು; ಸಾಗುವಳಿ, ಕಮ್ಮಾರಿಕೆ, ಪಶುಪೋಷಣೆ ಮುಂತಾದ ಕಲಾಪಗಳನ್ನೊಳಗೊಂಡ ವಿಶಾಲ ಕ್ಷೇತ್ರ; ಸಹಕಾರಿ ಬೇಸಾಯ ಕ್ಷೇತ್ರ; ಸಾಮೂಹಿಕ ಕೃಷಿ ಕೇಂದ್ರ; ವಿವಿಧ ಪ್ರಕಾರಗಳ ಕೆಲಸಗಾರರ ತಂಡ; ನೀರಾವರಿ, ಜಲೋತ್ಸಾರಣ, ಮಾರಾಟ, ಕೊಳ್ಳಿಕೆ ಮುಂತಾದ ಉದ್ದೇಶಗಳಿಗಾಗಿ ಕೈಕೊಂಡ ಸಂಘಟನೆಗಳು ಇವು ಇತರ ಕೆಲವು ಪ್ರಕಾರಗಳು.

**ಸಾಮಾಜಿಕ ಸಂಘಟನೆ:** ಕೃಷಿ ಸಂಬಂಧವಾದ ಸಂಘಟನೆಯ ಪ್ರಕಾರಗಳನ್ನು ಸ್ಥೂಲವಾಗಿ ಫರ್ಡಿನೆಂಡ್ ಟಾನೀಸ್ ವಿವರಿಸಿರುವ ಜೆಮೇನ್‌ಷಾಫ್ಟ್ ಮತ್ತು ಜೆಸೆಲ್‌ಷಾಫ್ಟ್ (1887)–ಎಂಬ ಎರಡು ಪ್ರರೂಪಗಳ ಅಡಿಯಲ್ಲಿ ತರಬಹುದು. ಜೆಮೇನ್‌ಷಾಫ್ಟ್ ಎಂಬುದು ಸಹಚರಿಗಳ ಸಂಘಟನೆ. ಸಮಾನ ಗುಣಲಕ್ಷಣಗಳ ಆಧಾರದ ಮೇಲೆ, ಸಮಾನ ಅನುಭವಗಳನ್ನು ಹಂಚಿಕೊಂಡು ಒಂದಿಗೆ ಬಾಳುವವರ ಸಂಘಟನೆಯಿದು. ತಾಯಿ–ಮಗು, ಗಂಡ–ಹೆಂಡತಿ, ಸೋದರ–ಸೋದರಿಯರು–ಇವರ ಸಂಬಂಧ ಈ ಬಗೆಯದು. ಈ ಸಂಬಂಧದ ವ್ಯಾಪ್ತಿಯೊಳಗೆ ಬರುವವರ ನಡುವೆ ಅಧಿಕಾರ ಶಕ್ತಿಗಳು ವ್ಯತ್ಯಾಸವಾದರೂ ಒಗ್ಗಟ್ಟಿಗೆ ಚ್ಯುತಿಯಿಲ್ಲ. ಪ್ರೀತಿ ಮಮತೆಗಳ ಆಧಾರದ ಮೇಲೆಯೇ ಈ ಒಗ್ಗಟ್ಟು ಸಾಮಾನ್ಯವಾಗಿ ನಿಂತಿರುತ್ತದೆ. ಇಂಥ ಸಂಘಟನೆಗೆ ರಕ್ತಸಂಬಂಧ ಅಥವಾ ವಿವಾಹ ಸಂಬಂಧವೇ ಇರಬೇಕೆಂಬ ಕಟ್ಟೇನೂ ಇಲ್ಲ. ನೆರೆಹೊರೆ, ಸಾಮೂಹಿಕ ಒಡೆತನ, ಸ್ನೇಹ– ಇವು ಈ ಬಗೆಯ ಸಂಘಟನೆಗೆ ಆಧಾರವಾಗಬಹುದು. ಈ ಸಾಮಾಜಿಕ ಸಂಬಂಧಗಳೇ ಸಂಘಟನೆಯ ಗುರಿಯೂ ಸಾಧನವೂ ಆಗಿರುತ್ತದೆ. ಕಾರ್ಯಾತ್ಮಕವಾಗಿ ನಿಖರವಾದ ಗುರಿಗಳನ್ನೇ ಇವು ಅವಲಂಬಿಸಿರುವುದಿಲ್ಲ. ಸದಸ್ಯರ ವಯಸ್ಸು, ಲಿಂಗ ಇವಕ್ಕನುಸಾರವಾಗಿ ಅವರ ಕರ್ತವ್ಯ, ಪಾತ್ರ, ಅಧಿಕಾರ, ಅಂತಸ್ತುಗಳ ನಿರ್ಣಯವಾಗಿರುತ್ತದೆ. ಕೃಷಿಗೆ ಸಂಬಂಧಿಸಿದಂತೆ ಜೆಮೇನ್‌ಷಾಫ್ಟ್ ಪ್ರರೂಪದ ಘಟಕದ ಮುಖ್ಯ ಉದಾಹರಣೆಯೆಂದರೆ ಕುಟುಂಬ. ಈ ಪ್ರರೂಪದ ಸಂಘಟನೆಗಳಲ್ಲಿ ಬೇಸಾಯವೊಂದು ಜೀವನವಿಧಾನವೆಂದು ಪರಿಗಣಿತವಾಗಿರುತ್ತದೆ. ಜೆಮೇನ್‌ಷಾಫ್ಟ್‌ಗೆ ವಿರುದ್ಧವಾದ ಪ್ರರೂಪವೇ ಜೆಸೆಲ್‌ಷಾಫ್ಟ್. ಈ ಬಗೆಯ ಸಂಘಟನೆಗೆ ಕ್ರಿಯಾತ್ಮಕವಾಗಿ ನಿಖರವಾದ ಗುರಿಯೊಂದಿರುತ್ತದೆ. ಕಾರ್ಖಾನೆ, ಸೇನೆ– ಇವು ಉದಾಹರಣೆಗಳು, ಕಾರ್ಖಾನೆಗೆ ಲಾಭಗಳಿಕೆಯೇ ಗುರಿಯಾಗಿರಬಹುದು. ಕಾಳಗದಲ್ಲಿ ಗೆಲ್ಲುವುದು ಸೇನೆಯ ಗುರಿ. ನಿಯೋಜಿತವಾದ ಗುರಿಸಾಧನೆಯಲ್ಲಿ ಅದರ ಸದಸ್ಯರೆಲ್ಲ ಭಾಗವಹಿಸುತ್ತಾರೆ. ಈ ಗುರಿಸಾಧನೆಗಾಗಿಯೇ ಸೌಲಭ್ಯಗಳು, ಸಾಧನಗಳು, ಸಂಘಟನೆಯಲ್ಲಿ ಭಾಗವಹಿಸುವವರ ಪರಸ್ಪರ ಸಂಬಂಧಗಳು–ಎಲ್ಲ ನಿಗದಿಯಾಗಿರುತ್ತವೆ. ಇವನ್ನೆಲ್ಲ ದಕ್ಷವಾಗಿ ಆರ್ಥಿಕವಾಗಿ ಬಳಸಿಕೊಳ್ಳುವ ಬಗ್ಗೆ ವಿಧಿವಿಧಾನಗಳಿರುತ್ತವೆ. ಕೃಷಿಕ್ಷೇತ್ರದಲ್ಲೂ ಈ ಬಗೆಯ ಸಂಘಟನೆಗಳನ್ನು ಕಾಣಬಹುದು.

ಕೈಗಾರಿಕಾ ಕ್ರಾಂತಿ ಸಂಭವಿಸುವವರೆಗೂ ಕೃಷಿ ಸಂಘಟನೆಯಲ್ಲಿಯ ಸಂಬಂಧಗಳು ಬಹುತೇಕ ಜೆಮೇನ್‌ಷಾಫ್ಟ್ ರೀತಿಯವಾಗಿದ್ದುವು. ರಕ್ತಸಂಬಂಧಕ್ಕೆ ಹೆಚ್ಚಿನ ಪ್ರಾಧಾನ್ಯವಿತ್ತು. ತಂದೆ–ಮಕ್ಕಳ ಸಂಬಂಧವನ್ನೇ ಜಹಗೀರಿಗೂ ವಿಸ್ತರಿಸಲಾಗಿತ್ತು. ಜಹಗೀರನ ಒಡೆಯನದು ಅಥವಾ ಪ್ರಭುವಿನದು ತಂದೆಯ ಸ್ಥಾನ. ಅವನ ಅಧಿಕಾರಕ್ಕೆ ಎದುರಾಡುವಂತಿಲ್ಲ. ಅದನ್ನು ಪೋಷಿಸಿ ಬೆಳೆಸುವುದೇ ಇಡೀ ಜಹಗೀರಿನ ಪರಮಗುರಿ. ಇದರ ಸುತ್ತ ಹಲವಾರು ಕಟ್ಟುಕಟ್ಟಳೆಗಳೂ, ಸಂಪ್ರದಾಯಗಳೂ ಪಾವಿತ್ರ್ಯದ ಕಲ್ಪನೆಗಳೂ ಬೆಳೆದುಕೊಂಡವು. ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಂದರ್ಭದಲ್ಲೂ ಇದರ ಪ್ರತಿಯೊಬ್ಬ ಸದಸ್ಯನೂ ಹೇಗೆ ವರ್ತಿಸಬೇಕೆಂಬ ಬಗ್ಗೆ ವ್ಯಾಪಕವಾದ ವಿಧಿನಿಯಮಗಳಿದ್ದುವು. ಇದರ ಒಬ್ಬೊಬ್ಬ ಪಾತ್ರಧಾರಿಯ ಅಂತಸ್ತು ಮತ್ತು ಸ್ಥಾನಮಾನಗಳಿಗೆ ಅನುಸಾರವಾಗಿ ಕರ್ತವ್ಯ ನಿರೂಪಣೆಯಾಗಿತ್ತೇ ವಿನಾ, ಅವನು ಸಾಧಿಸಬಹುದಾದ ಗುರಿಯ ದೃಷ್ಟಿಯಲ್ಲಿ ಅಲ್ಲ. ಮಾನವನ ಸೇವೆಯನ್ನೂ ಮಾನವೇತರ ಸೌಲಭ್ಯಗಳನ್ನೂ ತರ್ಕಬದ್ಧವಾಗಿ, ಸಮರ್ಥವಾಗಿ, ಆರ್ಥಿಕವಾಗಿ ಬಳಸಿಕೊಳ್ಳುವುದಕ್ಕೆ ಇದೊಂದು ದೊಡ್ಡ ತಡೆಯಾಗಿ ಸಂಭವಿಸಿತ್ತು.

ಜೆಸೆಲ್‌ಷಾಫ್ಟ್ ರೀತಿಯ ಸಂಘಟನೆಯಲ್ಲಿ ಮಾನವೇತರ ಸೌಲಭ್ಯಗಳಾದ ಸ್ಥಿರಸ್ವತ್ತು, ಸಲಕರಣೆ ಮುಂತಾದವುಗಳಿಂದ ಗರಿಷ್ಠ ಉತ್ಪಾದನೆ ದೊರಕುವಂಥ ರೀತಿಯಲ್ಲಿ ಅವನ್ನು ನಿಯೋಜಿಸಲಾಗಿರುತ್ತದೆ. ಇದರ ಸದಸ್ಯರಿಗೆ ಹೆಚ್ಚಿನ ಸ್ವಾತಂತ್ರ್ಯವುಂಟು. ಅವರ ಪರಸ್ಪರ ಸಂಬಂಧಗಳು ವ್ಯತ್ಯಾಸಗೊಳ್ಳಬಹುದು. ಅವರು ಹಳೆಯ ಸಂಬಂಧಗಳನ್ನು ತ್ಯಜಿಸಬಹುದು. ಸ್ಥಾನಮಾನ, ಅಧಿಕಾರ, ಅಂತಸ್ತುಗಳಲ್ಲಿ ಬದಲಾವಣೆಗಳಿಗೆ ಒಳಗಾಗಬಹುದು. ಉತ್ಪಾದನ ಸಾಧನಗಳ ಸ್ಥಿರಹಕ್ಕು, ಬದಲಾಗದ ಸಾಮಾಜಿಕ ಸಂಬಂಧಗಳು, ಕಟ್ಟುನಿಟ್ಟಾದ ಅಂತಸ್ತುಗಳು–ಇವೆಲ್ಲವೂ ಮಾನವ ಮತ್ತು ಮಾನವೇತರ ಸಾಧನಗಳ ತರ್ಕಬದ್ಧ ಬಳಕೆಗೆ ಅಡಚಣೆಗಳಾಗಿ

ಪರಿಣಮಿಸುತ್ತವೆ. ಕೈಗಾರಿಕಾ ರಾಷ್ಟ್ರಗಳ ಗತಕಾಲದ ಕೃಷಿ ವ್ಯವಸ್ಥೆಗಳಲ್ಲಿ ಈ ಬಗೆಯ ಅಡೆತಡೆಗಳಿದ್ದುವು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಕೃಷಿ ಸಮಾಜಗಳಲ್ಲಿ ಇಂದಿಗೂ ಇವು ಸಾಮಾನ್ಯವಾಗಿವೆ.

ಒಂದು ಪದಾರ್ಥ ಅಮೂಲ್ಯವೆನಿಸಿದಷ್ಟೂ-ಅದರ ಸುತ್ತಲೂ ಉದಾತ್ತ ಭಾವನೆಗಳು ಹೆಣೆದುಕೊಂಡಷ್ಟೂ-ಅದರ ಬಳಕೆಗೆ ಹೆಚ್ಚು ಅಡ್ಡಿಯುಂಟಾಗುತ್ತದೆಂಬುದು ಸಮಾಜಶಾಸ್ತ್ರಜ್ಞರು ಸಾಮಾನ್ಯವಾಗಿ ಅಂಗೀಕರಿಸುವ ಭಾವನೆಯಾಗಿದೆ. ಒಂದು ವಸ್ತುವನ್ನು ಗಳಿಸಲು ಅಥವಾ ಅದನ್ನುಳಿಸಿಕೊಳ್ಳಲು ಸಂಬಂಧಪಟ್ಟವರು ಮಾಡಲು ಒಪ್ಪುವ ತ್ಯಾಗದ ದೃಷ್ಟಿಯಿಂದ ಆ ವಸ್ತುವಿನ ಮೌಲ್ಯವನ್ನಳೆಯುವುದು ಒಂದು ರೀತಿ. ಇಲ್ಲಿ ಆ ವಸ್ತುವಿನ ಉಪಯುಕ್ತತೆ ಅಥವಾ ಪ್ರಯೋಜನವೇ ಪ್ರಧಾನ ಅಂಶ. ಆದರೆ ರೂಢಿ ಅಥವಾ ಕಟ್ಟಳೆಗೆ ಒಳಪಟ್ಟ ವಸ್ತುಗಳ ವಿಚಾರದಲ್ಲಿ ಹೀಗಲ್ಲ ಆ ರೂಢಿ ಅಥವಾ ಕಟ್ಟಳೆಯನ್ನು ಮೀರಿ ನಡೆದರೆ ಉದ್ಭವಿಸುವ ಕ್ರೋಧದ ತೀವ್ರತೆ ಎಷ್ಟು ಎಂಬುದರ ಮೇಲಿಂದ ಹಾಗೆ ಅತಿಕ್ರಮಿಸಿದವನಿಗೆ ವಿಧಿಸಲಾಗುವ ಬಹಿಷ್ಕಾರ ಅಥವಾ ಶಿಕ್ಷೆಯ ಮೇಲಿಂದ ಅದರ ಮೌಲ್ಯವನ್ನಳೆಯಲಾಗುತ್ತದೆ. ಆವಶ್ಯಕ್ಕಿಂತ ಕಡಿಮೆ ಮಟ್ಟದ ಆಹಾರ ಲಭ್ಯವಿರುವ, ಕ್ಷಾಮ ಡಾಮರಗಳು ಪದೇಪದೇ ಸಂಭವಿಸುವ ಸಮಾಜಗಳಲ್ಲಿ ಜಮೀನು ಅತ್ಯಮೂಲ್ಯವೆಂಬ ಭಾವನೆಯಿರುತ್ತದೆ. ಅಲ್ಲಿ ಇದು ಅತ್ಯಂತ ಪವಿತ್ರ. ಜಮೀನಿನ ಕ್ರಯ, ವಿಕ್ರಯ, ಹಸ್ತಾಂತರ, ವಿನಿಮಯ-ಇವುಗಳ ಬಗ್ಗೆ ಇಂಥ ಸಮಾಜಗಳಲ್ಲಿ ಅನೇಕ ವಿಧಿನಿಷೇಧಗಳಿರುತ್ತವೆ. ಸಾಮಾಜಿಕ ಅಂತಸ್ತು, ಅಧಿಕಾರ, ಪಾತ್ರ-ಇವಕ್ಕೆಲ್ಲ ಈ ಕಟ್ಟುಪಾಡುಗಳೇ ಆಧಾರವಾಗುತ್ತವೆ. ವ್ಯಕ್ತಿಗೂ ನೆಲಕ್ಕೂ ಇರುವ ಸಂಬಂಧಕ್ಕನುಗುಣವಾಗಿ ಅವನಿಗೆ ಇವು ಸೀಮಿತವಾಗಿರುತ್ತವೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿದ್ದ ಜಹಗೀರಿನ ಪ್ರಭು, ರೈತರು, ಜೀತಗಾರರು- ಇವರು ಉದಾಹರಣೆಗಳು. ಇಂಥ ಸಮಾಜಗಳಲ್ಲಿ ಜಮೀನಿನಲ್ಲಿ ಕುಯ್ಲಿಗೆ ಬಂದ ಪೈರೂ ಸುಗ್ಗಿಯ ಫಸಲೂ ಅತ್ಯಂತ ಪವಿತ್ರವೆಂದು ಪರಿಗಣಿತವಾಗಿರುತ್ತವೆ. ಪೈರಿನ ಕುಯ್ಲು, ಕಾಳಿನ ಬಡಿತ, ಧಾನ್ಯದ ಸಾಗಣೆ, ಅದರ ಪ್ರಥಮ ಬಳಕೆ-ಇವಕ್ಕೆ ಸಂಬಂಧಿಸಿದಂತೆ ವಿದ್ಯುಕ್ತ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಒಮ್ಮೆ ಧಾನ್ಯದ ಮಾರಾಟವಾಯಿತೆಂದರೆ ಅದರ ಪಾವಿತ್ರ್ಯ ನಷ್ಟವಾಗುತ್ತದೆ. ಜಮೀನಿಗೆ ಸಂಬಂಧಿಸಿದಂತೆಯೂ ನಾನಾ ಕಟ್ಟುಪಾಡುಗಳಿರುತ್ತವೆ. ಜನರ ಸ್ಥಾನಗಳನ್ನು ಕದಲಿಸುವುದು ಮತ್ತು ಅವರ ಸೇವೆಗಳ ಸ್ವರೂಪಗಳನ್ನು ಬದಲಿಸುವುದು ಪಾಪಕರ.

ಕೈಗಾರಿಕಾ ಕ್ರಾಂತಿಯ ಅನಂತರ ಮುಂದುವರಿದ ರಾಷ್ಟ್ರಗಳಲ್ಲಿ ಬೇಸಾಯ ಸಂಘಟನೆಗೆ ಸಂಬಂಧಿಸಿದಂತೆ ಮಾನವೇತರ ಸೌಲಭ್ಯಗಳ ಮತ್ತು ಮಾನವ ಸೇವೆಗಳ ಬಳಕೆ ಹೆಚ್ಚು ದಕ್ಷವೂ ಹಾಳತವೂ ಸಂಪ್ರದಾಯದೂರವೂ ಆಗುತ್ತಿದೆ. ನಾಟ್ಸಿ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿಯಲ್ಲಿ ಮಾತ್ರ ತಾತ್ಕಾಲಿಕವಾಗಿ ಈ ಪ್ರಕ್ರಿಯೆಗೆ ವಿರುದ್ಧವಾದ ಚಳವಳಿಗಳು ಪ್ರಬಲವಾಗಿದ್ದುವು. ಆದರೆ ಒಟ್ಟಿನಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿ ಜೆಮೇನ್‍ಷಾಫ್ಟ್ ರೀತಿಯ ವಿಧಿನಿಷೇಧಗಳು ಸಡಿಲವಾಗಿ ಜೆಸೆಲ್‍ಷಾಫ್ಟ್ ರೀತಿಯ ಸಂಬಂಧಗಳು ಏರ್ಪಡುತ್ತಿವೆ.

ಪ್ರಪಂಚಾದ್ಯಂತ ಕಂಡುಬಂದಿರುವ ಈ ಸಾಮಾನ್ಯ ಪ್ರವೃತ್ತಿಯ ದೃಷ್ಟಿಯಲ್ಲಿ ಉದ್ಭವಿಸುವ ಪ್ರಶ್ನೆಯೊಂದುಂಟು, ಕೈಗಾರಿಕೆ ವ್ಯಾಪಾರಗಳಲ್ಲಿ ಸೂಕ್ತವೆನಿಸುವಂಥ ಸಂಘಟನೆಯ ತರ್ಕಬದ್ಧ ದೃಷ್ಟಿಯನ್ನು ವ್ಯವಸಾಯ ಸಂಘಟನೆಯಲ್ಲೂ ಅನುಸರಿಸಬಹುದೇ? ಹಣದ ಒಂದು ನೋಟನ್ನು ಇನ್ನೊಬ್ಬರಿಗೆ ವರ್ಗಾಯಿಸುವಾಗ ತಳೆಯುವ ಮನೋಭಾವವನ್ನೇ ಒಂದು ಜಮೀನನ್ನು ವರ್ಗಾಯಿಸುವಾಗಲೂ ತಳೆಯುವಂತಾಗಬಹುದೇ?-ಎಂಬುದು ಆ ಪ್ರಶ್ನೆ. ಜಮೀನಿಗೆ ಸಂಬಂಧಿಸಿದ ವ್ಯವಹಾರಗಳು ಕೂಡ ಅಷ್ಟೊಂದು ತರ್ಕಬದ್ಧವಾಗಿ ಸಂಭವಿಸುವ ಕಾಲ ಬಹು ದೂರವಿದೆಯೆಂಬುದೇ ಕೃಷಿಸಂಘಟನೆಯನ್ನು ಅಧ್ಯಯನ ಮಾಡಿರುವವರ ಅಭಿಪ್ರಾಯವಾಗಿದೆ. ಜಮೀನು, ಜಾನುವಾರು, ಯಂತ್ರ-ಎಲ್ಲಕ್ಕೂ ಪಾವಿತ್ರ್ಯದ ಜಿಗುಟು ಅಂಟಿಯೇ ಇರುತ್ತದೆ. ವ್ಯವಸಾಯೇತರ ಉತ್ಪಾದನೆಗೆ ಸಂಬಂಧಿಸಿದ ವ್ಯವಹಾರಗಳಷ್ಟು ಮಟ್ಟಿಗೆ ವ್ಯವಸಾಯವೂ ಲೌಕಿಕವಾಗುವುದು ಬಹಳ ದೂರದ ಸಂಗತಿ.

ಮಧ್ಯಕಾಲೀನ ಯುರೋಪಿನಲ್ಲಿ ಜಹಗೀರು ಪದ್ಧತಿ ಸಾಮಾನ್ಯವಾಗಿತ್ತು. ಪ್ರತಿಯೊಂದು ಜಹಗೀರಿನಲ್ಲೂ ಕೆಲವು ಮಂದಿ ಗುಲಾಮರಿರುತ್ತಿದ್ದರು. ಇವರನ್ನು ಮಾರಾಟ ಮಾಡಬಹುದಾಗಿತ್ತು. ಆದರೆ ಕೃಷಿ ಕೆಲಸಗಾರರಲ್ಲಿ ಬಹುಸಂಖ್ಯಾತರು ಜೀತಗಾರರು. ನೆಲಕ್ಕೆ ಅವರನ್ನು ಬಂಧಿಸಲಾಗಿತ್ತು. ಜಮೀನಿನ ಒಡೆತನದ ಹಸ್ತಾಂತರದೊಂದಿಗೆ ಅವರೂ ವರ್ಗಾವಣೆ ಹೊಂದುತ್ತಿದ್ದರು. ಇವರ ಮೇಲೆ ಕಡಿಮೆ ದರ್ಜೆಯ ರೈತರ, ಶ್ರೀಮಂತರ, ರಾಜಮನೆತನದವರ ವರ್ಗಗಳಿದ್ದುವು. ಒಬ್ಬನ ವಿವಾಹದ ಹಕ್ಕು, ಅವನು ವಿವಾಹವಾಗಬಹುದಾದ ಕಾಲ ಇದೆಲ್ಲವೂ ಅವನಿಗೂ ಜಮೀನಿಗೂ ಇದ್ದ ಸಂಬಂಧದ ಸ್ವರೂಪಕ್ಕೆ ಅನುಸಾರವಾಗಿ ನಿಶ್ಚಿತವಾಗಿರುತ್ತಿತ್ತು. ಅವನ ಅಂತಸ್ತು, ಅಧಿಕಾರ ಎಲ್ಲವೂ ಜಮೀನು ಹಿಡುವಳಿ ವ್ಯವಸ್ಥೆಯಲ್ಲಿ ಅವನ ಸ್ಥಾನವೆಲ್ಲಿದೆಯೆಂಬುದರ ಮೇಲಿಂದ ನಿರ್ಧಾರವಾಗುತ್ತಿದ್ದುವು.

ಸಮಾಜದಲ್ಲಿಯ ವಿವಿಧ ಸ್ತರವಿನ್ಯಾಸದ ಅಥವಾ ಜಾತಿಪದ್ಧತಿಯ ರಚನೆಯಾದ್ದು ಊಳಿಗಮಾನ್ಯ ವ್ಯವಸ್ಥೆಯ ಫಲ. ಇದು ಗ್ರಾಮೀಣ ಸಮಾಜದ ಒಂದು ಲಕ್ಷಣವಾಗಿ ಉಳಿದು ಬಂದಿದೆ. ಜಮೀನಿನ ಒಡೆತನ, ಜಮೀನಿಗೆ ಸಂಬಂಧಿಸಿದಂತೆ ವ್ಯಕ್ತಿಯ ಪಾತ್ರ-ಇವಕ್ಕೆ ಅನುಗುಣವಾಗಿ ಜಾತಿಯ ನಿರ್ಧಾರವಾಗಿ ಅದರ ವಿಧಿನಿಯಮಗಳು ಕಟ್ಟುನಿಟ್ಟಾಗಿ ಆಚರಣೆಗೆ ಬಂದುವು. ಫಲಿತಾಂಶ ಪ್ರಧಾನವಾದ ಆಧುನಿಕ ಕೈಗಾರಿಕೆ-ವಾಣಿಜ್ಯಗಳ ಬೆಳವಣಿಗೆಯ ಪರಿಣಾಮವಾಗಿ ಇವುಗಳ ವ್ಯವಸ್ಥೆ ಇಂದು ಸಡಿಲಗೊಂಡಿದೆ. ಜೆಮೇನ್‍ಷಾಫ್ಟ್ ಪ್ರರೂಪದ ಸಂಘಟನೆಯ ಸ್ಥಾನವನ್ನು ಜೆಸೆಲ್‍ಷಾಫ್ಟ್ ಪ್ರರೂಪ ಆಕ್ರಮಿಸಿಕೊಳ್ಳುತ್ತಿದೆ. ವ್ಯಕ್ತಿಗಳ ಬುದ್ಧಿಕೌಶಲ, ತಾಂತ್ರಿಕ ಅರ್ಹತೆ, ಉತ್ಪಾದನೆಗೆ ಅವನಿಂದ ಲಭ್ಯವಾಗುವ ಸೇವೆ-ಇವುಗಳಿಗೆ ಅನುಗುಣವಾಗಿ ಅವರ ಸ್ಥಾನ ನಿಷ್ಕರ್ಷೆಯಾಗುತ್ತಿದೆ: ಮನೆತನ, ವಯಸ್ಸು, ಲಿಂಗ-ಇವು ನಿರ್ಧಾರಕಗಳಾಗಿಲ್ಲ. ಭಾರತದಂಥ ಕೃಷಿಪ್ರಧಾನ ದೇಶಗಳಲ್ಲಿ ಜಾತಿ ವ್ಯವಸ್ಥೆಯ ಪರಾಕಾಷ್ಠೆಯನ್ನು ಕಾಣಬಹುದು. ಊಳಿಗಮಾನ್ಯ ವ್ಯವಸ್ಥೆಯಿಂದ ಕೈಗಾರಿಕಾ ವ್ಯವಸ್ಥೆಗೆ ಪರಿವರ್ತನೆ ಹೊಂದಿದ ಇಂಗ್ಲೆಂಡ್, ಜರ್ಮನಿ ಮುಂತಾದ ರಾಷ್ಟ್ರಗಳಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಅನೇಕ ಆದರ್ಶಗಳೂ ಆಚಾರವಿಚಾರಗಳೂ ಹರಿದುಕೊಂಡು ಬಂದಿವೆ. ಊಳಿಗಮಾನ್ಯ ವ್ಯವಸ್ಥೆಯ ಹಿನ್ನೆಲೆಯಿಲ್ಲದ ಕೈಗಾರಿಕಾ ಸಮಾಜ ಸುಲಭವಾಗಿ ಸಮತೆಯ ಸಾಧನೆಯತ್ತ ಸಾಗಬಹುದಾಗಿದೆ. ಭಾರತದಂಥ ಸಮಾಜದಲ್ಲಿ ವ್ಯವಹಾರ ದೃಷ್ಟಿಯಿನ್ನೂ ಹಬ್ಬದಿರುವುದಕ್ಕೆ ಅದರ ದೀರ್ಘಕಾಲದ ಸ್ಥಗಿತ ಸ್ತರವ್ಯವಸ್ಥೆ ಒಂದು ಮುಖ್ಯ ಕಾರಣ.

ಕುಟುಂಬ ಘಟಕ, ಬೃಹತ್ ಭೂಕ್ಷೇತ್ರ-ಇವೆರಡೂ ಕೃಷಿ ಸಂಘಟನೆಯ ಎರಡು ಪ್ರರೂಪಗಳಾದರೂ ಇವೆರಡರ ನಡುವೆ ನಾನಾ ಪ್ರಕಾರಗಳು ಇರುವುದನ್ನು ಇಂದು ಕಾಣಬಹುದು. ಆರಂಭಕಾಲದಲ್ಲಿ ಒಂದು ಹಳ್ಳಿಯ ಕೃಷಿಯ ನೆಲವೆಲ್ಲ ಸಾಮೂಹಿಕ ಒಡೆತನಕ್ಕೆ ಒಳಪಟ್ಟಿತ್ತು. ಇಂಗ್ಲೆಂಡ್ ಮುಂತಾದ ಅನೇಕ ದೇಶಗಳಲ್ಲಿ ಆವರಣ ಚಳವಳಿ ಮತ್ತು ಇತರ ಒತ್ತಡಗಳಿಂದಾಗಿ ಹಳ್ಳಿಗರಿಗೆ ಭೂಮಿ ನಷ್ಟವಾಯಿತು. ಶ್ರೀಮಂತರು ನೆಲವನ್ನೆಲ್ಲ ಆಕ್ರಮಿಸಿಕೊಳ್ಳಲಾರಂಭಿಸಿದಾಗ ಭೂಹೀನ ರೈತರ ಸಂಖ್ಯೆ ಅಧಿಕವಾಯಿತು. ಕಟ್ಟುಕಟ್ಟಳೆಗಳ ತಳಹದಿಯ ಮೇಲೆ ನಿರ್ಮಿತವಾದ ಜೆಮೇನ್‍ಷಾಫ್ಟ್ ರೀತಿಯ ಸಂಘಟನೆಯ ಬದಲು ಜೆಸೆಲ್‍ಷಾಫ್ಟ್ ರೀತಿಯ ಸಂಘಟನೆ ಬಂದಾಗ ಗ್ರಾಮವಾಸಿಗಳನೇಕರು ಬಲು ಭಂಗಗಳಿಗೆ ಒಳಗಾದರು. ಹೊಸ ವ್ಯವಸ್ಥೆಯಲ್ಲಿ ಭದ್ರವಾಗಿ ಉಳಿಯಲು ತಮ್ಮ ಸಂಬಂಧ ಎಂಥದಾಗಿರಬೇಕೆಂಬ ಪ್ರಜ್ಞೆ ಅವರಿಗಿರಲಿಲ್ಲ. ಉಳುವವನಿಗೇ ಹೊಲ ಎಂಬ ಧ್ಯೇಯ ಬಹಳ ಕಾಲ ಪೂರೈಸಲಿಲ್ಲ.

ಊಳಿಗಮಾನ್ಯ ಪದ್ಧತಿಯ ಕಾಲದಲ್ಲಿ ಅನೇಕ ಮಂದಿ ರೈತರು ಪ್ರಭುವಿನ ಜೀತಗಾರರಾಗಿ ಮುಂದುವರಿದರಾದರೂ ಸಣ್ಣ ಸ್ವತಂತ್ರ ರೈತರು ಇಲ್ಲದಿರಲಿಲ್ಲ. ನೆಲದೊಡೆಯನಾದ, ಋಣವಿಹೀನನಾದ ಸಣ್ಣ ರೈತನೇ ಪ್ರಜಾಪ್ರಭುತ್ವದ ಆಧಾರ ಎಂದು ಅಮೆರಿಕಾಧ್ಯಕ್ಷ ಥಾಮಸ್ ಜೆಫರ್ಸನನೇ ಮುಂತಾದ ಅನೇಕರು ನಂಬಿದ್ದರು. ರಾಷ್ಟ್ರಗಳ ಆರೋಗ್ಯದೃಷ್ಟಿಯಿಂದ ಆಗೊಮ್ಮೆ ಈಗೊಮ್ಮೆ ಕ್ರಾಂತಿ ಸಂಭವಿಸುವುದವಶ್ಯವೆಂದೂ ಸ್ವತಂತ್ರ ರೈತರು ಇಂಥ ಕ್ರಾಂತಿಗಳ ಜನಕರೆಂದೂ ಜೆಫರ್ಸನ್ ಭಾವಿಸಿದ್ದ.

ಕುಟುಂಬ ಘಟಕದ ಸರಾಸರಿ ಗಾತ್ರವೆಷ್ಟೆಂಬುದನ್ನು ಖಚಿತವಾಗಿ ಹೇಳುವುದಕ್ಕೆ ಬರುವುದಿಲ್ಲ. ಅಮೆರಿಕದಲ್ಲಿ 3 ಎಕರೆಗಳಿಂದ 3,200 ಎಕರೆಗಳವರೆಗೂ ಇದು ಇರುವುದುಂಟು. ಭಾರತದಲ್ಲಿ 3 ಎಕರೆಗಳಿಗೂ ಕಡಿಮೆಯ ಪುಟ್ಟ ತಾಕುಗಳುಂಟು. ಪಶ್ಚಿಮಾರ್ಧಗೋಳದಲ್ಲೂ ಕುಟುಂಬ ಬೇಸಾಯವೇ ಇಂದಿಗೂ ಪ್ರಧಾನವಾಗಿದೆ. ಟರ್ಕಿ, ಭಾರತ, ಪಾಕಿಸ್ತಾನ, ಜಪಾನ್, ಕೊರಿಯ ಮುಂತಾದ ಪೌರಸ್ತ್ಯ ದೇಶಗಳಲ್ಲಿ ಕುಟುಂಬ ಬೇಸಾಯ ವ್ಯವಸ್ಥೆಯೇ ಪ್ರಧಾನ. ಎರಡನೆಯ ಮಹಾಯುದ್ಧಾನಂತರ ಮಿತ್ರರಾಷ್ಟ್ರಗಳು ಆಕ್ರಮಿಸಿಕೊಂಡ ಕಡೆಗಳಲ್ಲಿ ಇದು ಪ್ರಚಾರಕ್ಕೆ ಬಂತು. ಅಮೆರಿಕದ ಇತರ ಉದ್ಯಮಗಳಂತೆ ಅಲ್ಲಿ ಕೃಷಿ ಕ್ಷೇತ್ರಗಳು ವಿಸ್ತರಿಸುತ್ತಿವೆ. ಆದರೂ ಕುಟುಂಬದ ಒಡೆತನವನ್ನು ಅಲ್ಲಿ ಪವಿತ್ರವೆಂದು ಪರಿಗಣಿಸಲಾಗುತ್ತಿದೆ.

ಕೈಗಾರಿಕಾ ಪ್ರಧಾನವಾದ ಅನೇಕ ದೇಶಗಳಲ್ಲಿ ಕುಟುಂಬ ಒಡೆತನ ಕ್ರಮ ಕ್ರಮವಾಗಿ ಕ್ಷೀಣಿಸುತ್ತಿದೆ. ಬೃಹದ್ಗಾತ್ರ ಬೇಸಾಯದ ಫಲವಿದು. ಜರ್ಮನಿಯ ಹೈಡ್ ಪ್ರದೇಶ ಒಮ್ಮೆ ಸ್ವತಂತ್ರ ರೈತರ ನೆಲೆಯಾಗಿತ್ತು. ಆದರೆ ಸಾಲಿಗರ ಮತ್ತು ನಗರವಾಸಿಗಳ ದೆಸೆಯಿಂದಾಗಿ ಅವರ ಪ್ರಭಾವ ಕ್ಷೀಣಿಸಿತು. ಆಧುನಿಕ ಕಾಲದಲ್ಲಿ ಕೃಷಿಯೂ ಸ್ಪರ್ಧಾತ್ಮಕವಾಗಿದೆ. ನೀರಾವರಿ, ಸಾರಪೋಷಣೆ, ಉತ್ತಮ ತಳಿ, ವಿಶೇಷ ಪ್ರಾವೀಣ್ಯ, ಅಧಿಕತರ ಬಂಡವಾಳ, ಒಳಹೊರ ಮಾರುಕಟ್ಟೆಗಳ ಮೇಲೆ ಅವಲಂಬನೆ, ಕೃಷಿ ಕುಟುಂಬದ ಸದಸ್ಯರ ನಗರವಲಸೆ-ಇವು ಮುಖ್ಯ ಕಾರಣಗಳು. ಅಲ್ಲದೆ ಉತ್ಪಾದನ ಮಾರಾಟಗಳ ಉಗ್ರ ಸಂಘಟನೆಯೂ ಕೃಷಿ ಕುಟುಂಬದ ಸ್ವಾವಲಂಬನೆ ಸ್ವಾತಂತ್ರ್ಯಗಳನ್ನು ನಷ್ಟಗೊಳಿಸಿದೆ. ಕುಕ್ಕುಟ ಪೋಷಣೆ ಒಂದು ಉದಾಹರಣೆ. ಕುಕ್ಕುಟ ಆಹಾರ ವ್ಯಾಪಾರಿಗಳು ಅಥವಾ ಮರಿ ಪೋಷಕರು ಈ ಕ್ಷೇತ್ರದಲ್ಲಿ ಪ್ರಭಾವ ಬೀರುತ್ತಿದ್ದಾರೆ. ಮರಿ, ಆಹಾರ, ಔಷಧಿ, ಬಂಡವಾಳ, ವಿದ್ಯುತ್ ಸೌಲಭ್ಯ, ಶಾಖ, ಮೇಲ್ವಿಚಾರಣೆ_ಎಲ್ಲವನ್ನೂ ಇವರೇ ಒದಗಿಸಿ, ತಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಉತ್ಪಾದನೆಯನ್ನು

ನಿಯಂತ್ರಿಸುತ್ತಿದ್ದಾರೆ. ಇಂಥ ಅನೇಕ ಪ್ರವೃತ್ತಿಗಳಿಂದಾಗಿ ಸಣ್ಣ ರೈತರ ಸ್ವಾತಂತ್ರ್ಯ ಕುಂಠಿತವಾಗುತ್ತಿದೆ. ಇದನ್ನು ಉಳಿಸಲು ಅನೇಕ ಪ್ರಯತ್ನಗಳು ನಡೆದಿವೆ. ಸಹಕಾರ ವ್ಯವಸ್ಥೆ ಒಂದು ಉದಾಹರಣೆ. **(ನೋಡಿ– ಕೃಷಿ ಸಹಕಾರ)**

**ಆರ್ಥಿಕ ಸಂಘಟನೆ:** ಕೃಷಿ ಸಂಘಟನೆಗಳನ್ನು ಉತ್ಪಾದನೆಯ ದೃಷ್ಟಿಯಿಂದ ಜೀವನ ನಿರ್ವಾಹ ಬೇಸಾಯ, ತೋಟಗಾರಿಕೆ, ಬೃಹದ್ಗಾತ್ರ ಬೇಸಾಯ, ಸಣ್ಣ ಬೇಸಾಯ, ಮಧ್ಯಮಗಾತ್ರದ ಬೇಸಾಯ, ಸಾಮೂಹಿಕ ಬೇಸಾಯ– ಎಂದು ವಿಂಗಡಿಸಬಹುದಾಗಿದೆ. ಜೀವನ ನಿರ್ವಾಹ ಬೇಸಾಯ ಪದ್ಧತಿಯ ಮುಖ್ಯ ಲಕ್ಷಣವೆಂದರೆ ಬೇಸಾಯದ ನೆಲದ ಕಿರು ಅಗಲ. ಪ್ರತಿ ಕೆಲಸಗಾರನಿಗೂ ದೊರಕುವ ಸರಾಸರಿ ನೆಲ ಬಲು ಕಡಿಮೆ; ಯಂತ್ರ ಮುಂತಾದ ಬಂಡವಾಳ ಸರಕೂ ಕಡಿಮೆಯೇ. ರಸ್ತೆ, ಸಾರಿಗೆ ಮುಂತಾದ ಸೌಲಭ್ಯಗಳು ಹೆಚ್ಚಾಗಿ ಇರುವುದಿಲ್ಲ. ಇಲ್ಲಿ ಅನುಭೋಗವೇ ಬೇಸಾಯದ ಉದ್ದೇಶ; ಮಾರಾಟವಲ್ಲ. ಕೃಷಿ ವಸ್ತುಗಳ ಬೆಲೆಗಳು ಅಷ್ಟಾಗಿ ಇವನ ಮೇಲೆ ಪ್ರಭಾವ ಬೀರುವುದಿಲ್ಲ. ಅಜ್ಞಾನ ಮತ್ತು ಮೂಢನಂಬಿಕೆಗಳಿಂದಾಗಿ ಮುಂದುವರಿಯದ ಇಂಥ ರೈತರ ಸಂಖ್ಯೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಧಿಕವಾಗಿದೆ.

ಪ್ಲಾಂಟೇಷನ್ ಅಥವಾ ತೋಟಗಾರಿಕೆ ಬೇಸಾಯ ಸಂಪೂರ್ಣವಾಗಿ ಮಾರುಕಟ್ಟೆಯನ್ನೇ ಅವಲಂಬಿಸಿದ್ದು ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಇವುಗಳ ಉತ್ಪನ್ನಗಳ ಮಾರಾಟವಾಗುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವಿದೇಶಿ ವಿನಿಮಯ ಸಂಪಾದನೆಗೆ ಇದೊಂದು ಮುಖ್ಯ ಸಾಧನ. ಇದಕ್ಕೆ ಹೆಚ್ಚಿನ ಬಂಡವಾಳ ಬೇಕು. ವಿದೇಶಿ ಮೂಲಗಳಿಂದಲೇ ಅನೇಕ ವೇಳೆ ಇದು ಬಂದಿರುವುದು ಉಂಟು. ಕಾರ್ಮಿಕ–ಬಂಡವಾಳ ಮತ್ತು ಕಾರ್ಮಿಕ–ಭೂಮಿ ಪ್ರಮಾಣ ಅತಿ ಹೆಚ್ಚು. ಪ್ಲಾಂಟೇಷನ್ನಿನ ಕೂಲಿಗಾರರು ಸ್ಥಳೀಯ ಮೂಲಗಳಿಂದ ಬರುತ್ತಾರೆ. ಉತ್ಪಾದನೆಯ ತಾಂತ್ರಿಕ ವಿಧಾನವನ್ನೆಲ್ಲ ಅದರ ವ್ಯವಸ್ಥಾಪಕನೇ ನಿರ್ಧರಿಸುತ್ತಾನೆ.

ಆಸಿಯೆಂಡಾ ಎಂಬ ಒಂದು ಪ್ರಕಾರ ಲ್ಯಾಟಿನ್ ಅಮೆರಿಕದಲ್ಲಿ ಕಾಣಬರುತ್ತದೆ. ಇದರ ಮಾಲೀಕರು ಖಾಸಗಿ ಮಂದಿ ಅವರು ಸಾಮಾನ್ಯವಾಗಿ ತಮ್ಮ ನೆಲೆಗಳಿಂದ ದೂರದಲ್ಲಿರುತ್ತಾರೆ. ಇವು ಪ್ಲಾಂಟೇಷನ್ನುಗಳ ಹಾಗೆ ವಿಸ್ತೃತ ನೆಲೆಗಳಾದರೂ ಇವುಗಳಲ್ಲಿ ಬಂಡವಾಳ ಕಡಿಮೆ. ಇವು ಆಧುನಿಕ ತಾಂತ್ರಿಕ ವಿಧಾನಗಳನ್ನು ಬಳಸುವುದಿಲ್ಲ. ಪಶುಪಾಲನೆ, ಧಾನ್ಯ ಬೆಳೆ–ಮುಂತಾದವಕ್ಕೆ ಮೀಸಲಾದ ಈ ಕ್ಷೇತ್ರಗಳಲ್ಲಿ ಸಾಂದ್ರ ಬೇಸಾಯ ಕ್ರಮಗಳನ್ನನುಸರಿಸುವುದಿಲ್ಲವಾದ್ದರಿಂದ ಉತ್ಪಾದನೆಯ ಮಟ್ಟ ಕಡಿಮೆ. ಕಾರ್ಮಿಕರಿಗೆ ಸಲ್ಲುವ ಕೂಲಿಯೂ ಕಡಿಮೆ. ಹೊಸ ತಂತ್ರಗಳ ಬಳಕೆಗೆ ಪ್ರೋತ್ಸಾಹವಿಲ್ಲ. ಇವು ಆರ್ಥಿಕವಾಗಿ ಪ್ರಗತಿದಾಯಕವಾಗಿದ್ದರೂ ಇವುಗಳ ಒಡೆಯರು ಸಾಮಾನ್ಯವಾಗಿ ರಾಜಕೀಯ ಬಲವುಳ್ಳವರಾದ್ದರಿಂದ ಇವನ್ನು ತೊಡೆದು ಹಾಕುವುದು ಅನೇಕ ಕಡೆಗಳಲ್ಲಿ ಸಾಧ್ಯವಾಗಿಲ್ಲ.

ಕೃಷಿ ಕ್ಷೇತ್ರದಲ್ಲಿ ಬೃಹತ್ ಗಾತ್ರ ಉತ್ಪಾದನಾ ವ್ಯವಸ್ಥೆ ಎರಡು ವಿಧ. ಒಂದು ಸಾಮೂಹಿಕ ಒಡೆತನದ್ದು, ಇನ್ನೊಂದು ಖಾಸಗಿ ಒಡೆತನದ್ದು. ಸೋವಿಯತ್ ದೇಶ ಮತ್ತು ಪೂರ್ವ ಐರೋಪ್ಯ ರಾಷ್ಟ್ರಗಳಲ್ಲಿ ಸಾಮೂಹಿಕ ಒಡೆತನವಿದೆ. ಇಸ್ರೇಲಿನಲ್ಲೂ ಸಾಮೂಹಿಕ ಒಡೆತನವಿರುವುದಾದರೂ ಅದು ಸಹಕಾರಾಧಾರಿತವಾದದ್ದು. ಸಾಮೂಹಿಕ ಒಡೆತನದ ವ್ಯವಸ್ಥೆಯಲ್ಲಿ ಬಂಡವಾಳ ಸಾರ್ವಜನಿಕವಾದ್ದು. ಇದರ ಉತ್ಪನ್ನ ಬಹುತೇಕ ಹೊರಗಡೆಯವರ ಅನುಭೋಗಕ್ಕಾಗಿ. ಬೇಸಾಯಕ್ಕೆ ಆವಶ್ಯವಾದ ಗ್ರಾಸಗಳು (ಇನ್‌ಫುಟ್ಸ್) ಬರುವುದು ಹೊರಗಿನಿಂದ. ಉತ್ಪತ್ತಿಯನ್ನು ಅಧಿಕಗೊಳಿಸಲು ಉತ್ತೇಜನ ನೀಡುವ ಪದ್ಧತಿಯಿರುತ್ತದೆ. ಸಾಮೂಹಿಕ ಕೃಷಿ ಕ್ಷೇತ್ರಗಳು ವಿಶಿಷ್ಟ ಪದಾರ್ಥಗಳ ಉತ್ಪಾದನೆಗಾಗಿ ಮೀಸಲಾಗಿರುವುದರಿಂದ ಇವುಗಳಲ್ಲಿ ಕೆಲಸ ಮಾಡುವವರಿಗೆ ಖಾಸಗಿಯಾಗಿ ಸಣ್ಣ ತಾಲ್ಲೂಕುಗಳು ಇರುವುದುಂಟು. ಇಲ್ಲಿ ಅವರು ತಮಗೆ ಬೇಕಾದ ಹಣ್ಣು, ತರಕಾರಿ ಬೆಳೆಯುವುರಲ್ಲದೆ ಹಾಲು, ಬೆಣ್ಣೆ ಉತ್ಪಾದಿಸಿಕೊಳ್ಳುತ್ತಾರೆ.

ಖಾಸಗಿ ಒಡೆತನದ ಬೃಹತ್ ಗಾತ್ರ ಉತ್ಪಾದನಾ ಘಟಕ ಅನೇಕ ವೇಳೆ ಒಂದು ಕಂಪನಿಯಾಗಿರಬಹುದು. ಹೆಚ್ಚು ಬಂಡವಾಳ, ಅಧಿಕ ಗ್ರಾಸಗಳು, ಅತ್ಯಾಧುನಿಕ ತಂತ್ರಗಳ ಅನ್ವಯ, ಉತ್ಪಾದನೆಯಲ್ಲಿ ದಕ್ಷತೆ–ಇವು ಇಂಥ ಘಟಕದ ವೈಶಿಷ್ಟ್ಯಗಳು. ಕೆಲಸ ಮಾಡುವವರು ಜಮೀನಿನ ಒಡೆಯರಲ್ಲ, ಕೂಲಿಗಾರರು. ಕೇಂದ್ರೀಯ ಆಡಳಿತಕ್ಕೆ ಇದು ಒಳಪಟ್ಟಿರುತ್ತದೆ. ಒಂದು ಅಥವಾ ಕೆಲವೇ ಉತ್ಪನ್ನಗಳಿಗೆ ಇದು ಮೀಸಲಾಗಿರುತ್ತದೆ. ಪಶು ಪೋಷಣೆಗಿಂತ ಧಾನ್ಯ ಬೆಳೆಯಲ್ಲಿ ಬೃಹತ್ ಗಾತ್ರ ಬೇಸಾಯ ಸಾಮಾನ್ಯವಾಗಿ ಹೆಚ್ಚು ಯಶಸ್ವಿಯಾಗಿದೆ. ಬೃಹತ್ ಗಾತ್ರ ಕ್ಷೇತ್ರಗಳ ಕೇಂದ್ರೀಯ ವ್ಯವಸ್ಥೆ. ಅನೇಕ ವೇಳೆ ಉತ್ಪಾದನೆಗೆ ತಡೆಯಾಗಿ, ಆಡಳಿತವೊಂದು ತಲೆಭಾರವಾಗಿ ಸಂಭವಿಸುವುದು ಉಂಟು.

**ಸಣ್ಣ ಗಾತ್ರದ ಬೇಸಾಯ:** ಇದು ಜೀವನ ನಿರ್ವಾಹ ಬೇಸಾಯಕ್ಕಿಂತ ಸ್ವಲ್ಪ ಉನ್ನತಮಟ್ಟದ್ದು. ಪಶ್ಚಿಮ ಯುರೋಪ್, ಜಪಾನ್. ಲ್ಯಾಟಿನ್ ಅಮೆರಿಕದ ಕೆಲವು ಭಾಗಗಳು ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಇದು ಸಾಮಾನ್ಯವಾಗಿದೆ. ಇದು ಸಾಮಾನ್ಯವಾಗಿ ಒಂದರಿಂದ ಹತ್ತು ಎಕರೆಗಳಷ್ಟು ವಿಸ್ತಾರವಾಗಿರುತ್ತದೆ. ಕೆಲಸಗಾರ–ಭೂಮಿ ಪ್ರಮಾಣ ಕಡಿಮೆ. ಬಂಡವಾಳವೂ ಕಡಿಮೆ. ಇದು ಸಂಸಾರದ ಅಗತ್ಯಕ್ಕಿಂತ ಸ್ವಲ್ಪ ಹೆಚ್ಚು ಉತ್ಪಾದಿಸುತ್ತದೆ. ಕೃಷಿಕಾರರ ಜೀವನಮಟ್ಟ ಕಡಿಮೆ.

**ಮಧ್ಯಮ ಗಾತ್ರದ ಉತ್ಪಾದನೆ:** ಇದು ಸಣ್ಣ ಗಾತ್ರಕ್ಕಿಂತ ದೊಡ್ಡದು, ಬೃಹದ್ಗಾತ್ರಕ್ಕಿಂತ ಸಣ್ಣದು. ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಪಶ್ಚಿಮ ಯುರೋಪಿನಲ್ಲಿ ಇದು ಸಾಮಾನ್ಯ. ಒಡೆತನ ಖಾಸಗಿಯದು. ಇದಕ್ಕೆ ಕುಟುಂಬವೇ ಆಧಾರ. ಇದು ಅಷ್ಟೇನೂ ಹೆಚ್ಚು ಗಾತ್ರವಾಗಿಲ್ಲದಿದ್ದರೂ ಬಂಡವಾಳದ ಪ್ರಮಾಣ ಅಧಿಕ. ಈ ದೇಶಗಳಲ್ಲಿ ಸಾಧಿಸಲಾಗಿರುವ ಆರ್ಥಿಕ ಪ್ರಗತಿಯ ಫಲವಿದು. ಕೃಷಿ ಕ್ಷೇತ್ರದಲ್ಲಿ ಸಾಧ್ಯವಾಗಿರುವ ತಾಂತ್ರಿಕ ಪ್ರಗತಿಯಿಂದಾಗಿ ಸಣ್ಣ ಕ್ಷೇತ್ರಗಳೂ ಜೀವನ ನಿರ್ವಾಹ ಕ್ಷೇತ್ರಗಳೂ ಬೆಳೆದು ಮಧ್ಯಮ ಗಾತ್ರದ ಕ್ಷೇತ್ರಗಳಾಗುತ್ತಿವೆ. ಅಮೆರಿಕದಲ್ಲಿ ಸಣ್ಣ ಮತ್ತು ಮಧ್ಯಮಗಾತ್ರದ ಕೃಷಿಕ್ಷೇತ್ರಗಳ ಉತ್ಪಾದನೆ ಅಲ್ಲಿಯ ಒಟ್ಟು ಕೃಷಿ ಉತ್ಪಾದನೆಯ ಶೇಕಡ70ರಷ್ಟು ಇದೆಯೆಂದು ಅಂದಾಜು ಮಾಡಲಾಗಿದೆ. ಇವು ಮುಖ್ಯವಾಗಿ ಮಾರುಕಟ್ಟೆಗಾಗಿ ಉತ್ಪಾದಿಸುತ್ತವೆ. ಈ ಕ್ಷೇತ್ರಗಳ ಒಡೆಯರೇ ನಿರ್ವಹಣೆಯ ಹೊಣೆ ಹೊರುತ್ತಾರೆ. ಸಣ್ಣ ಮತ್ತು ಮಧ್ಯಮ ಗಾತ್ರದ ಕೃಷಿ ಕ್ಷೇತ್ರಗಳು ಅಭಿವೃದ್ಧಿ ಹೊಂದಲು ಸರ್ಕಾರ ಧಾರಾಳವಾಗಿ ಬಂಡವಾಳ ಹೂಡಬೇಕಾದ್ದು ಆವಶ್ಯಕವಾಗುತ್ತದೆ. ರಸ್ತೆ ನಿರ್ಮಾಣ, ಕೃಷಿಕನ ಶಿಕ್ಷಣ, ಮಾರುಕಟ್ಟೆಯ ವ್ಯವಸ್ಥೆ, ನಾನಾ ಸೇವೆಗಳನ್ನು ಒದಗಿಸುವುದು–ಇಂಥ ಕಾರ್ಯಗಳನ್ನು ಸರ್ಕಾರ ಕೈಗೊಳ್ಳುವುದು ಅಗತ್ಯ. ಸಣ್ಣ ಮತ್ತು ಮಧ್ಯಮ ಗಾತ್ರದ ಸ್ವತಂತ್ರ ಕೃಷಿಕ್ಷೇತ್ರಗಳಿಂದ ಉತ್ತಮ ದಕ್ಷತೆ, ಆರ್ಥಿಕ ಸ್ಥಿರತೆ, ಸಾಮಾಜಿಕ ನೆಮ್ಮದಿ–ಇವು ಸಾಧಿಸುವುವೆಂದು ನಂಬಲಾಗಿದೆಯಾದ್ದರಿಂದ ಇವುಗಳ ಅಭಿವೃದ್ಧಿಗಾಗಿ ಸರ್ಕಾರಗಳು ಧಾರಾಳವಾಗಿ ಹಣ ವೆಚ್ಚ ಮಾಡುತ್ತಿವೆ.

**ಭಾರತದಲ್ಲಿ :** ಭಾರತ ಕುಟುಂಬ ಬೇಸಾಯ ಪ್ರಧಾನವಾದ ದೇಶ. ಜೀವನ ನಿರ್ವಾಹಕ ಮತ್ತು ಸಣ್ಣ ಗಾತ್ರದ ಕೃಷಿಕ್ಷೇತ್ರಗಳು ಇಲ್ಲಿ ಸಾಮಾನ್ಯವಾಗಿವೆ. ಇಲ್ಲಿಯ ಕೃಷಿಕ್ಷೇತ್ರಗಳು ಅತ್ಯಂತ ಸಣ್ಣವು ಮಾತ್ರವಲ್ಲ; ಅವು ಚೂರುಚೂರಾಗಿ ಹರಡಿವೆ. ಭಾರತದ ಜಮೀನು ಹಿಡುವಳಿ ಅತ್ಯಂತ ಅನಾರ್ಥಿಕವೆಂದು ಪರಿಗಣಿತವಾಗಿದೆ.

ಭಾರತದಲ್ಲಿ ಹಿಡುವಳಿ ಜಮೀನುಗಳ ಸರಾಸರಿ ವಿಸ್ತೀರ್ಣ 7.39 ಎಕರೆ ಎಂಬುದಾಗಿ ಅಂದಾಜು ಮಾಡಲಾಗಿದೆ. 1960–61ರಲ್ಲಿ ನಡೆದ ರಾಷ್ಟ್ರೀಯ ಪ್ರತಿದರ್ಶಿ ಸರ್ವೇಕ್ಷಣದ ಅಂದಾಜಿನ ಪ್ರಕಾರ ಇದು 6.65 ಎಕರೆ. ಗೇಣಿ ಹಿಡುವಳಿಯ ಸರಾಸರಿ ವಿಸ್ತೀರ್ಣ ಬೇರೆಬೇರೆ ರಾಜ್ಯಗಳಲ್ಲಿ ಭಿನ್ನಭಿನ್ನವಾಗಿದೆ. 2–3 ಎಕರೆಗಳಿಂದ 7–10 ಎಕರೆಗಳವರೆಗೆ ವ್ಯತ್ಯಾಸವಾಗುತ್ತದೆ. 5 ಎಕರೆಗಳಿಗಿಂತ ಕಡಿಮೆ ವಿಸ್ತೀರ್ಣದ ಜಮೀನುಗಳು ಒಟ್ಟು ಹಿಡುವಳಿಗಳ ಶೇಕಡ 63ರಷ್ಟಿದ್ದುವಾದರೂ ಒಟ್ಟು ಸಾಗುವಳಿ ನೆಲದಲ್ಲಿ ಇವುಗಳ ಪ್ರಮಾಣ ಶೇಕಡ 19 ಮಾತ್ರ. 20 ಎಕರೆಗಳವರೆಗಿನ ಹಿಡುವಳಿಗಳ ವಿಸ್ತೀರ್ಣ ಒಟ್ಟು ಸಾಗುವಳಿ ನೆಲದ ಶೇಕಡ 62ರಷ್ಟಿತ್ತು; ಒಟ್ಟು ಹಿಡುವಳಿಗಳಲ್ಲಿ ಇವುಗಳ ಪ್ರಮಾಣ ಶೇಕಡ 98. ಭಾರತದ ಬಹುತೇಕ ಹಿಡುವಳಿ ಜಮೀನುಗಳು ಬಹು ಸಣ್ಣವು ಮತ್ತು ಅನಾರ್ಥಿಕವಾದವು ಎಂಬುದು ಈ ಅಂಕಿಅಂಶಗಳಿಂದ ವಿಶದವಾಗುತ್ತದೆ.

ವಂಶಪಾರಂಪರ್ಯವಾಗಿ ನೆಲವನ್ನು ಉತ್ತರಾಧಿಕಾರಿಗಳಲ್ಲಿ ಪಾಲು ಮಾಡುತ್ತ ಬಂದಿರುವುದರಿಂದ, ಅನೇಕ ವೇಳೆ ಒಬ್ಬ ತಂದೆಯ ಜಮೀನುಗಳಲ್ಲಿ ಒಂದೊಂದನ್ನೂ ಮಕ್ಕಳು ಒಡೆದು ಹಂಚಿಕೊಳ್ಳುವ ಪ್ರವೃತ್ತಿ ಇರುವುದರಿಂದ ಅನೇಕ ಜಮೀನುಗಳು ಕೃಷಿಗೆ ಅನುಕೂಲವಾಗಿಲ್ಲದಷ್ಟು ಸಣ್ಣ ಚೂರುಗಳಾಗಿ ಪರಿಣಮಿಸಿವೆ. ಭಾರತದ ಕೃಷಿ ಸಮಸ್ಯೆಗಳಲ್ಲಿ ಅಪಖಂಡನವೂ (ಫ್ರ್ಯಾಗ್ಮೆಂಟೇಷನ್) ಒಂದು.

ನೆಲದ ಅಪಖಂಡನ ಸಮಸ್ಯೆ ಎಷ್ಟೊಂದು ಬೃಹತ್ತಾಗಿದೆಯೆಂಬುದು ಮೇಲಣ ಅಂಕಿಅಂಶಗಳಿಂದ ವ್ಯಕ್ತವಾಗುತ್ತದೆ. ಜನಸಂಖ್ಯೆಯ ಹೆಚ್ಚಳ, ಉತ್ತರಾಧಿಕಾರದ ಕಾನೂನುಗಳು, ಕರಕೌಶಲಗಳ ಕ್ಷೀಣದೆಸೆಯಿಂದಾಗಿ ಅನೇಕರು ಜಮೀನನ್ನೇ ನಂಬಬೇಕಾಗಿ ಬಂದಿರುವ ಪರಿಸ್ಥಿತಿ, ಜಮೀನಿನ ಒಡೆಯರಿಗೆ ಸಾಮಾಜಿಕವಾಗಿ ಸ್ಥಾನಮಾನಗಳು ಲಭ್ಯವಾಗುವುವೆಂದು ಜನರಲ್ಲಿ ಸಾಮಾನ್ಯವಾಗಿರುವ ಭಾವನೆ, ಸಾಲದ ಭಾರ, ಹಿಂದೂ ಅವಿಭಕ್ತ ಕುಟುಂಬಗಳ ವಿಭಜನೆ–ಇವು ಜಮೀನುಗಳ ಪುನರ್ವಿಂಗಡಣೆಯ (ಸಬ್–ಡಿವಿಷನ್) ಮುಖ್ಯ ಕಾರಣಗಳು. ಅಪಖಂಡನ ಮತ್ತು ಪುನರ್ವಿಂಗಡಣೆಗಳ ದುಷ್ಫಲಗಳಲ್ಲಿ ಮುಖ್ಯವಾದವು ಇವು: 1. ಮಾನವ ಶಕ್ತಿ ಮತ್ತು ಸಾಧನಸಾಮಗ್ರಿಗಳ ಅಪವ್ಯಯವಾಗುತ್ತದೆ. 2. ಜಮೀನು ಚಿಕ್ಕದಾದ್ದರಿಂದ ಕೃಷಿ ಸಲಕರಣೆಗಳನ್ನು ಬಳಸುವುದು ಅಸಾಧ್ಯವಾಗುತ್ತದೆ. 3. ಬೇಸಾಯದ ವೆಚ್ಚದ ಪ್ರಮಾಣ ಅಧಿಕವಾಗುತ್ತದೆ. 4. ದಕ್ಷತೆ ತಗ್ಗುತ್ತದೆ. 5. ಜಮೀನು ತುಂಬಾ ಸಣ್ಣದಾದ್ದರಿಂದ ಬೇಲಿ ನಿರ್ಮಾಣ ಅಸಾಧ್ಯವಾಗುತ್ತದೆ. ನೆರೆ ಜಮೀನಿನಿಂದ ಕಳೆಯ ವಿಸ್ತರಣೆ, ತೊಂಡು ದನಗಳು–ಮುಂತಾದವನ್ನು ತಡೆಯಲಾಗುವುದಿಲ್ಲ. 6 ಕೃಷಿಯಾಂತ್ರೀಕರಣ ಅಸಾಧ್ಯ. 7 ಜೀವನನಿರ್ವಾಹವೇ ಬೇಸಾಯದ ಉದ್ದೇಶವಾಗಿರುವುದರಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುವುದಿಲ್ಲ. 8 ಒಬ್ಬನಿಗೆ ಸೇರಿದ ಜಮೀನಿನ ತುಂಡುಗಳು ಬೇರೆಬೇರೆಡೆಗಳಲ್ಲಿ ಹರಡಿಹೋಗಿದ್ದರೆ ಅವನ್ನೆಲ್ಲ ದಕ್ಷವಾಗಿ ಬೇಸಾಯ ಮಾಡುವುದು ಅಸಾಧ್ಯ. ಒಂದು ತುಂಡಿನಿಂದ ಇನ್ನೊಂದು ತುಂಡಿಗೆ ಸಂಚರಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಹೆಚ್ಚು ಸಮಯ ವ್ಯಯವಾಗುತ್ತದೆ.

ಜಮೀನಿನ ಪುನರ್ವಿಂಗಡಣೆ ಮತ್ತು ಅಪಖಂಡನಗಳನ್ನು ನಿವಾರಿಸಲು ಸೂಚಿತವಾಗಿರುವ ಉಪಾಯಗಳು ಅನೇಕ. 1 ಎಲ್ಲ ನೆಲವನ್ನೂ ಸಮಾಜೀಕರಣಗೊಳಿಸಿ, ಸಾಮೂಹಿಕ ಬೇಸಾಯ ತತ್ತ್ವವನ್ನು ಜಾರಿಗೆ ತರುವುದು. 2 ಜಮೀನುಗಳನ್ನು ಒಂದುಗೂಡಿಸಿ ಸಹಕಾರ ಬೇಸಾಯವನ್ನು ಅನುಸರಿಸುವುದು. 3 ರೈತರು ಸಾಲ ತೀರಿಸಿ, ಹೊಸ ಜಮೀನುಗಳನ್ನು ಕೊಂಡು ತಮ್ಮ ಹಿಡುವಳಿಗಳನ್ನು ವಿಸ್ತರಿಸಿಕೊಳ್ಳುವಂತೆ ಸರ್ಕಾರದ ಧನಸಹಾಯ.

ಆರ್ಥಿಕ ಹಿಡುವಳಿಗಳನ್ನು ನಿರ್ಮಿಸುವುದರ ಜೊತೆಗೆ ಜಮೀನುಗಳು ಮತ್ತೆ ಹರಿದು ಹಂಚಿಹೋಗದ ಹಾಗೆ ಉತ್ತರಾಧಿಕಾರ ಕಾನೂನುಗಳಲ್ಲಿ ತಿದ್ದುಪಡಿ, ಒಂದು ಕನಿಷ್ಠ ಮಿತಿಯನ್ನು ಮೀರಿ ಜಮೀನನ್ನು ವಿಭಾಗಿಸದಂತೆ ಕಾಯಿದೆಯ ರಚನೆ– ಇವು ಅಗತ್ಯವಾಗಿವೆ.

ಸಣ್ಣ ತುಣುಕುಗಳನ್ನು ಒಂದುಗೂಡಿಸಿ ಕೃಷಿ ಜಮೀನುಗಳನ್ನು ವಿಸ್ತರಿಸುವ ಕ್ರಮದೊಂದಿಗೆ ಇನ್ನೊಂದು ನಿಟ್ಟಿನಲ್ಲೂ ಭಾರತದಲ್ಲಿ ಪ್ರಯತ್ನಗಳು ಸಾಗಿವೆ. ಹಿಡುವಳಿ ಜಮೀನಿನ ಗರಿಷ್ಠ ಮಿತಿ ನಿಗದಿಯೂ ಮುಖ್ಯವೆನಿಸಿದೆ. ಆದಷ್ಟು ಹೆಚ್ಚು ಸಂಖ್ಯೆಯ ರೈತರಿಗೆ ಜಮೀನನ್ನು ಒದಗಿಸಿ ಉದ್ಯೋಗ ಕಲ್ಪಿಸುವುದೂ ಸಾಮಾಜಿಕ ಸಮತೆಯನ್ನೇರ್ಪಡಿಸುವುದೂ ಗೇಣಿ ಪದ್ಧತಿಯನ್ನು ತೊಡೆದುಹಾಕುವುದೂ ಇದರಿಂದ ಸಾಧ್ಯವಾಗುತ್ತದೆ. ಭಾರತದ ಅನೇಕ ರಾಜ್ಯಗಳಲ್ಲಿ ಜಮೀನು ಹಿಡುವಳಿಯ ಗರಿಷ್ಠ ಮಿತಿಗಳನ್ನು ವಿಧಿಸುವ ಕಾಯಿದೆಗಳು ಜಾರಿಗೆ ಬಂದಿವೆ. ಪ್ರಸ್ತುತ ಇರುವ ಹಿಡುವಳಿ ಜಮೀನುಗಳಿಗೂ ಗರಿಷ್ಠ ಮಿತಿಗಳನ್ನು ನಿರ್ಧರಿಸಿ ಕಾಯಿದೆಗಳನ್ನು ಮಾಡಲಾಗಿದೆ. ಜಮೀನಿನ ಒಡೆಯ ಸ್ವಂತ ಬೇಸಾಯಕ್ಕಾಗಿ ತನ್ನ ಗೇಣಿದಾರರಿಂದ ವಾಪಸ್ಸು ಪಡೆದುಕೊಳ್ಳುವ ಜಮೀನಿನ ಗರಿಷ್ಠ ಮಿತಿಯನ್ನೂ ನಿರ್ಧರಿಸಲಾಗಿದೆ.

ಹಿಡುವಳಿ ಜಮೀನಿನ ಗರಿಷ್ಠ ಮಿತಿಯನ್ನು ನಿಗದಿಪಡಿಸುವಲ್ಲಿ ಸಾಮಾನ್ಯವಾಗಿ ಗಣನೆಗೆ ತೆಗೆದುಕೊಂಡಿರುವ ಅಂಶಗಳು ಎರಡು: ಜಮೀನಿನ ವಿಸ್ತೀರ್ಣ ಮತ್ತು ಭೂಮಿಯ ವಾರ್ಷಿಕ ವರಮಾನ. ಪ್ಲಾಂಟೇಷನ್‍ಗಳು, ಹಣ್ಣಿನ ತೋಟಗಳು, ಪಶುಪಾಲನೆಯೇ ಮುಂತಾದವಕ್ಕೆ ಮೀಸಲಾದ ಜಮೀನುಗಳು–ಇಂಥ ಕೆಲವು ಭೂಮಿಗಳಿಗೆ ಮೇಲಣ ಮಿತಿ ಅನ್ವಯಿಸುವುದಿಲ್ಲ.

ಭಾರತದಲ್ಲಿ ಇತ್ತೀಚಿನವರೆಗೂ ಜಾರಿಯಲ್ಲಿದ್ದ ಹಿಡುವಳಿ ಪದ್ಧತಿಗಳಾದ ಮಹಲ್‍ವಾರಿ ಮತ್ತು ಜಮೀನ್ದಾರಿಗಳು ಈಗ ಎಲ್ಲ ರಾಜ್ಯಗಳಲ್ಲೂ ರದ್ದಾಗಿವೆ. ರೈತವಾರಿ ಪದ್ಧತಿಯೇ ಬಹುತೇಕ ಜಾರಿಯಲ್ಲಿದೆ. **(ನೋಡಿ– ಕೃಷಿ ಕಾನೂನುಗಳು)** (ಡಿ.ಕೆ.ಎ.)

**ಕೃಷಿ ಸಂಶೋಧನೆ :** ಕೃಷಿ ಕ್ಷೇತ್ರದಲ್ಲಿ ಕಾಲದಿಂದ ಕಾಲಕ್ಕೆ ಆಗಿರುವ ಮಾರ್ಪಾಡುಗಳ ವಿವರಗಳು ಇಲ್ಲಿವೆ.

**ಇತಿಹಾಸ:** ಈಗ ಬೇಸಾಯದಲ್ಲಿ ರೂಢಿಯಲ್ಲಿರುವ ಅನೇಕ ಸಾಮಾನ್ಯ ವಿಷಯಗಳನ್ನು ಕಂಡುಕೊಳ್ಳಲು ಆದಿಮಾನವನಿಗೆ ಅಪಾರವಾದ ಕಾಲ ಮತ್ತು ಶ್ರಮ ಹಿಡಿದಿರಬೇಕು. ಉದಾಹರಣೆಗಾಗಿ, ಉಳುಮೆಯನ್ನೆ ತೆಗೆದುಕೊಂಡರೆ ಮೊಟ್ಟಮೊದಲು ನೆಲ ಸಡಿಲಮಾಡಿ ಬೀಜ ಬಿತ್ತುವುದಕ್ಕೆ ಮೊನಚಾದ ಕಲ್ಲನ್ನೋ ಅಥವಾ ಮರವನ್ನೋ ಬಳಸಿರಬೇಕು. ಅನಂತರ ಕಬ್ಬಿಣದ ಆಯುಧಗಳಾದ ಸಲಾಕಿ ಗುದ್ದಲಿಯಂಥ ಉಪಕರಣಗಳು ಉಪಯೋಗಕ್ಕೆ ಬಂದಿರಬಹುದು. ಮುಂದಿನ ಹೆಜ್ಜೆ ಮನುಷ್ಯನಿಂದ ಎಳೆಯಲ್ಪಟ್ಟ ನೇಗಿಲಿನಂಥ ಸಜ್ಜು; ಈ ಶ್ರಮಕ್ಕೆ ಕುದುರೆ ಎತ್ತು ಮತ್ತಿತರ ಪ್ರಾಣಿಗಳ ಬಳಕೆ; ನೇಗಿಲಿನ ಗುಳ ಮರ ಇವುಗಳ ಸುಧಾರಣೆ; ಪ್ರಾಣಿಗಳಿಗೆ ಬದಲಾಗಿ ಸ್ವಯಂಚಾಲಕ ಯಂತ್ರಗಳ ಬಳಕೆ; ಹೀಗೆ ಬೆಳೆದು ಬಂದಿದೆ. ಈ ರೀತಿ ಕೃಷಿಗೆ ಸಂಬಂಧಿಸಿದಂತೆ ಅನೇಕ ವಿಷಯಗಳು ಕಳೆದ 20 ಸಾವಿರ ವರ್ಷಗಳಲ್ಲಿ ಹಲವಾರು ತಲೆಮಾರಿನ ಜನರ ಚಿಂತನೆ, ಅನುಭವ ಇವುಗಳಿಂದ ಹೊರಹೊಮ್ಮಿ ಈಗಿನ ಕೃಷಿವಿಜ್ಞಾನ ಅಸ್ತಿತ್ವಕ್ಕೆ ಬಂದಿದೆ. ಪುರಾತನ ಮಾನವ ತನ್ನ ಬೆಳೆ ಅಧಿಕಗೊಳಿಸುವುದಕ್ಕೆ ನಾವು ಈಗ ಬಳಸುವ ಅನೇಕ ಕ್ರಮಗಳನ್ನು ಅನುಸರಿಸುತ್ತಿದ್ದುದು ಗತಸಂಸ್ಕೃತಿಯ ಪರಿಶೀಲನೆಯಿಂದ ತಿಳಿದುಬರುತ್ತದೆ. ಗೊಬ್ಬರ, ಸುಣ್ಣ, ಧಾನ್ಯ ಬೆಳೆಗಳ ಮಧ್ಯೆ ದ್ವಿದಳ ಬೆಳೆಗಳ ಪರಿವರ್ತನೆ ಮುಂತಾದ ಕ್ರಮಗಳು ವ್ಯಾಪಕವಾಗಿ ಈಜಿಪ್ಟ್, ರೋಮ್, ಸಿಂಧೂ ಬಯಲಿನ ಪುರಾತನ ಸಂಸ್ಕೃತಿಗಳ ಕೃಷಿಯಲ್ಲಿ ಬಳಕೆಯಲ್ಲಿದ್ದುವು. ಭಾರತದಂತೆ ಉಳಿದ ದೇಶಗಳಲ್ಲೂ ಈ ಕೃಷಿಜ್ಞಾನ ತಂದೆಯಿಂದ ಮಕ್ಕಳಿಗೆ ಅನೂಚಾನವಾಗಿ ಬೆಳೆದು ಬಂದಿದೆ. ಈಗ 2,000 ವರ್ಷಗಳ ಹಿಂದೆ ರೋಮನ್ ರಾಜ್ಯದಲ್ಲಿ ಕೊಲುಮೆಲ್ಲಾ ಎಂಬಾತ ಬರೆದ ಕೃಷಿ ಕೈಪಿಡಿ ಬಹುಕಾಲ ಜನಪ್ರಿಯವಾಗಿತ್ತಂತೆ. ಇಂದು ಬಳಕೆಯಲ್ಲಿರುವ ಕೃಷಿಕ್ರಮಗಳ ಪ್ರಸ್ತಾಪ ಇದರಲ್ಲಿದೆ. ಭಾರತದಲ್ಲಿ ನೀರಾವರಿ ಬೇಸಾಯ ಬಹಳ ಹಿಂದಿನಿಂದ ಜಾರಿಯಲ್ಲಿದೆ. ಅನೇಕ ಪ್ರಾಚೀನ ಭಾರತೀಯ ಗ್ರಂಥಗಳಲ್ಲಿ ಕೃಷಿ ವಿಷಯಗಳ ಪ್ರಸ್ತಾಪವಿದೆ.

ಸ್ಪೇನ್ ದೇಶದಲ್ಲಿ 12ನೆಯ ಶತಮಾನದಲ್ಲಿ ಇಬ್ನ್–ಎಲ್–ಎವಾನ್ ಎಂಬ ಪಂಡಿತ ಒಂದು ಕೃಷಿಗ್ರಂಥ ಬರೆದ. ಅದರಲ್ಲಿ ಸೂಚಿಸಿದ ಅನೇಕ ಬೇಸಾಯ ಕ್ರಮಗಳು ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ವಲಸೆ ಬಂದು ನೆಲೆಸಿದ ಸ್ಪ್ಯಾನಿಷ್ ಜನಗಳ ಮೂಲಕ ಅಮೆರಿಕದ ಬೇಸಾಯದ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡಿದವು. 1635ರಲ್ಲಿ ವಾನ್ ಹೆಲ್ಮಾಂಟ್ ಎಂಬ ವಿಜ್ಞಾನಿ ಒಂದು ಕುಂಡದಲ್ಲಿ 200 ಪೌಂಡ್ ಒಣಗಿದ ಮಣ್ಣನ್ನು ತುಂಬಿ ಒಂದು ವಿಲೋ (ನೀರು ಹಬ್ಬೆ) ಮರದ ಸಸಿಯನ್ನು ನೆಟ್ಟು 5 ವರ್ಷ ಕೇವಲ ಮಳೆನೀರನ್ನಷ್ಟೇ ಉಣಿಸಿ ಬೆಳೆಸಿದ. ಆಮೇಲೆ ಅದನ್ನು ಕತ್ತರಿಸಿ ತೂಗಿದಾಗ ಅದರ ತೂಕ 165 ಪೌಂಡ್ ಇತ್ತು. ಕುಂಡದಲ್ಲಿನ ಮಣ್ಣನ್ನು ಒಣಗಿಸಿ ತೂಗಿದಾಗ ಕೇವಲ 2 ಔನ್ಸ್ ತೂಕ ಮಾತ್ರ ಕಡಿಮೆಯಾಗಿದ್ದುದು ಕಂಡುಬಂತು. ಈ ಪ್ರಯೋಗಾಧಾರದ ಮೇಲೆ ಅವನು ಸಸ್ಯ ಬೆಳವಣಿಗೆಗೆ ನೀರಷ್ಟೇ ಸಾಕು ಎಂಬ ಅಭಿಮತಕ್ಕೆ ಬಂದ. ಪ್ರಸ್ತುತ ನಮಗೆ ತಿಳಿದಿರುವಂತೆ ಇದು ಸರಿಯಲ್ಲ. ಸಸ್ಯದ ಬಹುಭಾಗದ ವಸ್ತು ಗಾಳಿ ಮತ್ತು ನೀರಿನಿಂದೊದಗುವ ಇಂಗಾಲ ಆಮ್ಲ ಮತ್ತು ಜಲಜನಕಗಳಿಂದಾದುದು. ಆದರೆ ಇದರ ಜೊತೆಗೆ ಕಡಿಮೆ ಪ್ರಮಾಣದಲ್ಲಿ ಇತರ ಮೂಲವಸ್ತುಗಳು ಸಸ್ಯ ಬೆಳವಣಿಗೆಗೆ ಅತ್ಯಾವಶ್ಯಕ.

**ಆಧುನಿಕ ಕಾಲ :** ಬೇಸಾಯದ ವಿಷಯದಲ್ಲಿ ಒಂದು ಶಾಸ್ತ್ರೀಯ ದೃಷ್ಟಿ ತಲೆದೋರಿದ್ದು 18ನೆಯ ಶತಮಾನದ ಕೊನೆಯಲ್ಲಿ. ಅದು ರಸಾಯನವಿಜ್ಞಾನದ ವೇಗೋತ್ಕರ್ಷಿತ ಮುನ್ನಡೆಯ ನೇರ ಫಲ. ಸಸ್ಯಗಳ ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ಇಂಗಾಲಾಮ್ಲ, ಜಲಜನಕಗಳ ಪಾತ್ರವನ್ನು ಕುರಿತು ಕೆಲವು ವಿಷಯಗಳು ಆಗ ತಿಳಿದು ಬಂದುವು. ಅಲ್ಲಿಂದ ಅನೇಕ ಪ್ರಯೋಗಗಳು ನಡೆದು ರಾಸಾಯನಿಕ ವಿಶ್ಲೇಷಣ ಕ್ರಮಗಳು ವ್ಯಾಪಕವಾಗಿ ಬಳಕೆಗೆ ಬಂದುವು. ಇದರಿಂದ ಪದಾರ್ಥಗಳ ನಿಜಸ್ವರೂಪ ತಿಳಿದು ಸಸ್ಯ ಬೆಳವಣಿಗೆಯ ವಿಚಾರದಲ್ಲಿ ಬೆಳೆದು ಬಂದಿದ್ದ ಕುರುಡು ನಂಬಿಕೆಗಳು ಕಳೆದು ಮಣ್ಣು ಮತ್ತು ಸಸ್ಯರಚನೆಯ ಸಂಬಂಧವಾದ ಹಲವಾರು ನಿಖರವಾದ ವಿಷಯಗಳು ತಿಳಿಯುವಂತಾಯ್ತು. ಇವೆಲ್ಲವುಗಳ ಆಧಾರದ ಮೇಲೆ 19ನೆಯ ಶತಮಾನದ ಮೊದಲಿನ ಅರ್ಧದಲ್ಲಿ ಲೀಬಿಗ್ ಎಂಬ ಜರ್ಮನ್ ವಿಜ್ಞಾನಿ ಸಸ್ಯ ಬೆಳವಣಿಗೆಯ ವಿಷಯವಾಗಿ ಪ್ರಭಾವಶಾಲಿಯಾದ ಪ್ರತಿಪಾದನೆಗಳನ್ನು ಜನಗಳ ಮುಂದಿಟ್ಟ. ಇದೇ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಲಾಸ್ ಮತ್ತು ಗಿಲ್ಬರ್ಟ್ ಎಂಬ ವಿಜ್ಞಾನಿಗಳ ಶ್ರಮದಿಂದ ವಿಶ್ವವಿಖ್ಯಾತಿ ಹೊಂದಿರುವ ರೋತನ್‍ಸ್ಟೆಡ್ ಕೃಷಿ ಪ್ರಯೋಗ ಕ್ಷೇತ್ರ ಅಸ್ತಿತ್ವಕ್ಕೆ ಬಂತು. ಇಲ್ಲಿ ಮತ್ತಿತರೆಡೆ ನಡೆದ ಸಂಶೋಧನೆಗಳ ಫಲವಾಗಿ ರಾಸಾಯನಿಕ ಗೊಬ್ಬರಗಳ ಕೈಗಾರಿಕೆ ಸ್ಥಾಪಿತವಾಯಿತು. ಹಾಗೆಯೇ ಮುಂದೆ ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ನಡೆದ ಸಂಶೋಧನೆಯ ಫಲವಾಗಿ ಮಣ್ಣಿನಲ್ಲಿ ಸಸ್ಯಬೆಳವಣಿಗೆಗೆ ಸಹಾಯಕಗಳಾದ ಸೂಕ್ಷ್ಮಜೀವಿಗಳ ಪಾತ್ರದ ಪ್ರಾಮುಖ್ಯ ವ್ಯಕ್ತವಾಯಿತು.

ಭಾರತದಲ್ಲಿ ಕೃಷಿ ಸಂಶೋಧನಕಾರ್ಯ ಸುಮಾರು 20ನೆಯ ಶತಮಾನದ ಆದಿಯಲ್ಲಿ ಪ್ರಾರಂಭವಾಯಿತು. ಆಗಿನ ಕೇಂದ್ರ ಸರ್ಕಾರ ಬಿಹಾರ್ ಪ್ರಾಂತ್ಯದ ಪೂಸಾ ಎಂಬಲ್ಲಿ ಕೇಂದ್ರಕೃಷಿ ಸಂಶೋಧನಾಲಯವನ್ನು ತೆರೆಯಿತು. 1936ರಲ್ಲಿ ಭೂಕಂಪದ ಪರಿಣಾಮವಾಗಿ ಇದು ವಿಧ್ವಂಸವಾದಾಗ ಈ ಚಟುವಟಿಕೆಯನ್ನು ಬಿಹಾರದಿಂದ ದೆಹಲಿಗೆ ವರ್ಗಾಯಿಸಲಾಯಿತು. ಈ ಸಂಸ್ಥೆ ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಹಾಗೆಯೇ ಕೇಂದ್ರ ವೆಟರನರಿ ಸಂಶೋಧನ ಸಂಸ್ಥೆ 1890ರಲ್ಲಿ ಮುಕ್ತೇಶ್ವರದಲ್ಲಿ ಸ್ಥಾಪಿತವಾಯಿತು. ಕರ್ನಾಟಕ ರಾಜ್ಯದಲ್ಲಿ 1899ರಲ್ಲೇ ವ್ಯವಸಾಯದ ಇಲಾಖೆ ಅಸ್ತಿತ್ವಕ್ಕೆ ಬಂದಿತು. ಇವುಗಳಿಂದ ಉಪಯುಕ್ತ ಕೆಲಸ ನಡೆದು ಬೇಸಾಯದಲ್ಲಿ, ಪಶುಪಾಲನೆಯಲ್ಲಿ ಅನೇಕ ಸುಧಾರಣೆಗಳು ಅನುಷ್ಠಾನಕ್ಕೆ ಬಂದಿವೆ.

ಹೀಗೆ ಬೆಳೆದು ಬಂದ ಕೃಷಿ ಸಂಶೋಧನಕಾರ್ಯ, ಕಳೆದ ಅರ್ಧ ಶತಮಾನದಲ್ಲಿ ತನ್ನದೇ ಆದ ಒಂದು ಸ್ವರೂಪವನ್ನು ಪಡೆದು ವಿಜ್ಞಾನ ಪ್ರಪಂಚದಲ್ಲಿ ವಿಶಿಷ್ಟ ಮನ್ನಣೆ ಪಡೆದಿದೆ.

**ಭೂಫಲವಂತಿಕೆ ಮತ್ತು ಮಣ್ಣು–ನೀರಿನ ನಿರ್ವಹಣೆ:** ವಿಜ್ಞಾನದ ಪ್ರಯೋಗ ಕ್ರಮಗಳನ್ನು ಅನ್ವಯಿಸಿ ಭೂಮಿ ಮತ್ತು ಅದರ ಫಲವಂತಿಕೆಯನ್ನು ಬೆಳೆಸುವ ದಾರಿಯಲ್ಲಿ ಸಂಶೋಧನೆ ಸಾಗಿದೆ. ರಾಸಾಯನಿಕ ಗೊಬ್ಬರಗಳ ಬಳಕೆ, ಮಣ್ಣಿನ ಕ್ರಿಯೆ, ಸಸ್ಯಕ್ರಿಯೆ, ಸಸ್ಯರೋಗರುಜಿನಗಳಲ್ಲಿ ಸೂಕ್ಷ್ಮಜೀವಿಗಳ ಪಾತ್ರ ಇವನ್ನು ವಿಶೇಷವಾಗಿ ಅಭ್ಯಸಿಸಲಾಗಿದೆ. ಸಸ್ಯ ಬೆಳವಣಿಗೆ ಸಮರ್ಪಕವಾಗಿ ನಡೆಯಲು ಅನುಕೂಲವಾದ ಸನ್ನಿವೇಶ ಮುಖ್ಯ. ಮಣ್ಣು, ಬೀಜ, ನೀರು, ಪೋಷಕಗಳು, ಅನುಕೂಲವಾದ ಹವೆ, ರೋಗ ಮತ್ತು ಕೀಟಗಳಿಲ್ಲದಿರುವಿಕೆ ಇವೆಲ್ಲವುಗಳ, ಒಂದೊಂದರ ಮತ್ತು ಒಟ್ಟಿನ, ಪರಿಣಾಮ ಸಸ್ಯ ಬೆಳವಣಿಗೆಯ ಯಶಸ್ಸನ್ನು ನಿರ್ಧರಿಸುತ್ತದೆ. ಕೃಷಿಯ ಎಲ್ಲ ವಿಭಾಗಗಳಲ್ಲಿನ ಪ್ರಗತಿ ಹಾಗೂ ಪ್ರತಿಯೊಂದು ಎಕರೆ ಜಮೀನಿನಲ್ಲೂ ರೈತನಿಂದ ಅವುಗಳ ಅನುಷ್ಠಾನದ ಕ್ರಮಗಳು ಇವುಗಳೇ ವ್ಯವಸಾಯೋತ್ಪನ್ನಕ್ಕೆ ಕಾರಕ. ಮಣ್ಣಿಲ್ಲದೇ ಪ್ರಾಯೋಗಿಕವಾಗಿ ಮರಳಿನಲ್ಲಿ ಇಲ್ಲವೇ ಪೋಷಕಗಳನ್ನು ಕರಗಿಸಿದ ನೀರಿನಲ್ಲಿ ಸಸ್ಯವನ್ನು ಬೆಳೆಸಬಹುದಾದರೂ ಉತ್ಕೃಷ್ಟವಾದ ಮಣ್ಣು ಕೃಷಿಗೆ ಮುಖ್ಯಾಧಾರ. ಸುಮಾರಾದ ಭೂಮಿಗಳನ್ನು ಒಳ್ಳೆಯದನ್ನಾಗಿ ಮಾಡಲು ಹೆಚ್ಚಾದ ಪ್ರಯತ್ನ ನಡೆಯುತ್ತಲೇ ಇದೆ. ಸಸ್ಯಬೆಳವಣಿಗೆಗೆ ಆಧಾರ ಭೂಮಿಯ ಮೇಲಿನ ಪದರ. ಇದರಿಂದಲೇ ಸಸ್ಯಕ್ಕೆ ನೀರು ಮತ್ತು ಪೋಷಕವಸ್ತುಗಳು ಒದಗುತ್ತವೆ. ಒಂದು ಪ್ರದೇಶದಲ್ಲಿನ ವಿವಿಧ ಮಣ್ಣುಗಳನ್ನು ನಕ್ಷೆಯಲ್ಲಿ ನಮೂದಿಸುವುದು ಒಂದು

ಅತಿಮುಖ್ಯವಾದ ನವೀನ ಪ್ರಗತಿ. ಇದಕ್ಕೆ ವಿಮಾನದಿಂದ ತೆಗೆದ ಛಾಯಾಚಿತ್ರಗಳನ್ನು ಆಧಾರನಕ್ಷೆಗಳಾಗಿ ಬಳಸುವುದು ಇಂದಿನ ಕ್ರಮ. ಭಾರತದಲ್ಲಿ ಇತ್ತೀಚೆಗೆ ಇಂಥ ನಕ್ಷೆಗಳ ಬಳಕೆ ರೂಢಿಗೆ ಬರುತ್ತಿದೆ. ಈ ಛಾಯಾಚಿತ್ರಗಳಲ್ಲಿ ಸ್ಥೂಲಸಮೀಕ್ಷೆಗೆ ಸಹಕಾರಿಗಳಾದ ಭೂರೂಪರೇಖೆಗಳನ್ನು ಗುರುತಿಸಬಹುದಾದರೂ ವ್ಯಾಪಕವಾದ ಭೂಸಮೀಕ್ಷೆಯಾಗಬೇಕಾದರೆ ಮಣ್ಣಿನ ಆಳವನ್ನು ಅನೇಕ ಸ್ಥಳಗಳಲ್ಲಿ ಪರೀಕ್ಷಿಸುವುದು ಅಗತ್ಯ. ವಿವಿಧ ಮಣ್ಣಿನ ಸರಹದ್ದನ್ನು ನಿರ್ಧರಿಸಲು ಅನುಕೂಲಿಸುವ ಮಣ್ಣಿನ ಪಾರ್ಶ್ವಚಿತ್ರ (ಪ್ರೊಫೈಲ್) ಭೂಮಿಯ ಮೇಲೆ ಸ್ಥಳದಲ್ಲೇ ಗುರುತಿಸುವುದು ಅಗತ್ಯವಾಗುತ್ತದೆ. ಇದರ ಸಹಾಯದಿಂದ ವಿವಿಧ ಪ್ರಮಾಣದ ನಕ್ಷೆಗಳನ್ನು ತಯಾರಿಸಬಹುದು. ಈ ನಕ್ಷೆಗಳ ಆಧಾರದಿಂದ ಬೇಸಾಯ ಕ್ರಮಗಳ ಯೋಜನೆಯನ್ನು ರೂಪಿಸಬಹುದು. ಒಂದು ಮೈಲಿಗೆ 4 ಅಂಗುಲ ಪ್ರಮಾಣದ ನಕ್ಷೆಯಲ್ಲಿ 1/10 ಚದರಂಗುಲ 4 ಎಕರೆ ವಿಸ್ತಾರದ ಭೂಮಿಯನ್ನು ಪ್ರತಿಬಿಂಬಿಸುತ್ತದೆ. ವಿಸ್ತಾರ ಹೆಚ್ಚಿದಷ್ಟೂ ಪ್ರಮಾಣ ಕಿರಿದಾಗುತ್ತದೆ. ಈ ರೀತಿ ಒಂದು ಹಳ್ಳಿ ಹೋಬಳಿ ತಾಲ್ಲೂಕು ರಾಜ್ಯಗಳ ಮಣ್ಣಿನ ನಕ್ಷೆಗಳನ್ನು ತಯಾರಿಸಬಹುದು. ಹೀಗೆ ಪ್ರಪಂಚದ ಮಣ್ಣಿನ ನಕ್ಷೆಯ ತಯಾರಿಕೆ ನಡೆದಿದೆ. ಅಮೆರಿಕ, ಯುರೋಪ್ ಖಂಡದ ಬಹುದೇಶಗಳು, ಕೆನಡ, ನ್ಯೂಜಿಲೆಂಡ್, ಸೋವಿಯತ್ ಒಕ್ಕೂಟ ಮುಂತಾದ ಅನೇಕ ದೇಶಗಳಲ್ಲಿ ಸಾಗುವಳಿಯಲ್ಲಿರುವ ಜಮೀನುಗಳೆಲ್ಲ ಸಮೀಕ್ಷೆಯಾಗಿ ನಕ್ಷೆಗಳು ತಯಾರಾಗಿವೆ. ಮಣ್ಣಿನ ಗುಣಗಳ ಅರಿವಿಗೆ ಮಣ್ಣಿನ ವರ್ಗೀಕರಣ ಅತ್ಯಾವಶ್ಯಕ. ಗುಣವಿಶೇಷಗಳ ಆಧಾರದ ಮೇಲೆ ಮಣ್ಣನ್ನು ಗುರುತಿಸುವುದು ಸಾಧ್ಯ. ಪ್ರಕೃತಿಯಲ್ಲಿ ಕಂಡುಬರುವ ಇತರ ವಸ್ತುಗಳಂತೆ ಮಣ್ಣುಗಳಿಗೆ ಸಹ ಸ್ವಭಾವದತ್ತವಾದ ಗುಣಗಳಿವೆ. ರಚನೆ ಬಣ್ಣ ಕಣಜೋಡಣೆ ಈ ಗುಣಗಳು ಮಣ್ಣುಗಳ ವರ್ಗೀಕರಣ ಕಾರ್ಯದಲ್ಲಿ ಪ್ರಯೋಜನಕರ. ಇವಲ್ಲದೆ ಮಣ್ಣಿನ ವರ್ಗೀಕರಣಕ್ಕೆ ಪ್ರೊಫೈಲ್ ಆಧಾರ. ಪ್ರೊಫೈಲ್ ಅಂದರೆ ಮೇಲ್ಮೈಯಿಂದ ಗಾಳಿ ಬಿಸಿಲು ಮಳೆಗಳ ಹೊಡೆತಕ್ಕೆ ಸಿಕ್ಕಿ ಶಿಥಿಲವಾದ ಬಂಡೆ ಮತ್ತು ಖನಿಜಗಳು ಸಿಕ್ಕುವವರೆಗಿನ ಸಾಧಾರಣವಾಗಿ ನಾಲ್ಕೈದು ಅಡಿ ಆಳದವರೆಗಿನ ಮಣ್ಣಿನ ಎಲ್ಲ ಪದರುಗಳು. ಅವೆಲ್ಲ ಒಟ್ಟಾಗಿ ಮಣ್ಣಿನ ವೈಶಿಷ್ಟ್ಯಕ್ಕೆ ಕಾರಣ. ಈ ಪ್ರೊಫೈಲ್ ರೂಪುಗೊಳ್ಳುವುದಕ್ಕೆ ಆ ಪ್ರದೇಶದ ವಾಯುಗುಣ ಮುಖ್ಯ ಕಾರಣ. ಪ್ರೊಫೈಲ್ ಕಲ್ಪನೆ ಬೆಳೆದದ್ದು ಸೋವಿಯತ್ ಒಕ್ಕೂಟದ ವಿಜ್ಞಾನಿಗಳ ಶ್ರಮದ ಫಲವಾಗಿ. ಈಗ ಈ ಸಿದ್ಧಾಂತಕ್ಕೂ ಮುಂದೆ ಹೋಗಿ ಮಣ್ಣು ಹೇಗೆಯೇ ಆಗಿರಲಿ ಪ್ರಸ್ತುತ ಅದರ ಪ್ರೊಫೈಲ್ ಲಕ್ಷಣಗಳ ಆಧಾರದ ಮೇಲೆ ವರ್ಗೀಕರಣ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಾರೆ. ಕಳೆದ 10–20 ವರ್ಷಗಳಲ್ಲಿ ಅಮೆರಿಕದಲ್ಲಿ ರೂಪುಗೊಂಡ ಈ ವರ್ಗೀಕರಣ ವ್ಯವಸ್ಥೆಯನ್ನು ಪ್ರಪಂಚವಿಡೀ ಒಪ್ಪಿಕೊಂಡು ಜಾರಿಯಲ್ಲಿ ತರಲು ಪ್ರಯತ್ನ ನಡೆದಿದೆ. ಹೀಗೆ ಶಾಸ್ತ್ರೀಯವಾಗಿ ತಯಾರಿಸಿದ ಮಣ್ಣಿನ ನಕ್ಷೆ ಬೇಸಾಯದ ಪ್ರಗತಿಗೆ ಅನೇಕ ವಿಧದಲ್ಲಿ ಸಹಾಯವಾಗಬಲ್ಲುದು. ಒಂದು ಪ್ರದೇಶದಲ್ಲಿ ಸಂಶೋಧನೆಯಿಂದ ಮತ್ತು ರೈತರ ಅನುಭವದಿಂದ ಹೊರಬಂದು ನಕ್ಷೆಯಲ್ಲಿ ಅಳವಡಿಸಿದ ಗುಣಗಳು ಮತ್ತೊಂದು ಪ್ರದೇಶದಲ್ಲಿ ವ್ಯವಸಾಯ ಯೋಜನೆಗಳ ತಯಾರಿಕೆಗೆ ಸಹಾಯವಾಗುತ್ತವೆ. ಉತ್ಕೃಷ್ಟ ಬೇಸಾಯ ಜಾರಿಯಲ್ಲಿರುವ ಪ್ರದೇಶದ ಅನುಭವ ಬೇರೆಯವರಿಗೆ ದೊರೆಯುತ್ತದೆ. ಮಣ್ಣಿನ ಗುಣವಿಷಯ ಸಂಗ್ರಹಣೆಗೆ ಅನುಭವ ಉಪಕರಣ ಸಾಮಗ್ರಿಗಳನ್ನು ವ್ಯಾಪಕವಾಗಿ ಬಳಸುತ್ತಾರೆ. ಮಣ್ಣಿನ ಗುಣನಿರ್ಧಾರಕ್ಕೆ ಕಾರಣವಾದ ಜೇಡಿ ಬಹು ಸೂಕ್ಷ್ಮ ರಚನೆಯುಳ್ಳದ್ದು. ಅದರ ಮೇಲ್ಮೈ ವಿಸ್ತೀರ್ಣ, ರಾಸಾಯನಿಕ ಮತ್ತು ಜೇಡಿ ಭೌತ ರಚನೆಗಳ ವೈಶಿಷ್ಟ್ಯ–ಇವೇ ಬಹುತೇಕ ಗುಣಗಳನ್ನು ನಿರ್ಧರಿಸುವ ಅಂಶಗಳು. ಮಣ್ಣಿನ ನೀರಿನ ಶೇಖರಣೆ ಬಸಿಯುವಿಕೆ ಸಾಗುವಳಿ ಸೌಲಭ್ಯ ಪೋಷಕಾಂಶಗಳ ಪ್ರಮಾಣ ಹುಳಿ ಅಥವಾ ಕ್ಷಾರ ಪರಿಸ್ಥಿತಿ_ಇವೆಲ್ಲ ಗುಣಗಳು ಜೇಡಿಯ ಗುಣಗಳನ್ನು ಅವಲಂಬಿಸಿವೆ. ಜೇಡಿಯ ಗುಣವಿಶ್ಲೇಷಣೆಯಲ್ಲಿ ಅತ್ಯಾಧುನಿಕ ಸಲಕರಣೆಗಳಾದ ಎಕ್ಸ್‌ಕಿರಣ, ಎಲೆಕ್ಟ್ರಾನ್ ಸೂಕ್ಷ್ಮದರ್ಶಿಗಳು ಮುಂತಾದ ಸಾಧನಗಳನ್ನು ಬಳಸುತ್ತಾರೆ. ಈ ಸಂಶೋಧನೆಗಳಿಂದ ಜೇಡಿ ಹರಳಿನ ಆಕೃತಿ ಮತ್ತು ಮಣ್ಣುಮಣ್ಣುಗಳಲ್ಲಿ ಈ ಜೇಡಿ ಆಕೃತಿ ವ್ಯತ್ಯಾಸ ಬೇರೆ ಬೇರೆ ಮಣ್ಣುಗಳ ಗುಣವೈವಿಧ್ಯಕ್ಕೆ ಕಾರಣ ಎಂಬ ಅಂಶ ತಿಳಿದುಬಂದಿದೆ. ಕಪ್ಪು ಮಣ್ಣುಗಳು ನೀರು ಕುಡಿದಾಗ ಉಬ್ಬುತ್ತವೆ; ಒಣಗಿದಾಗ ಕುಗ್ಗಿ ಬಿರುಕು ಬಿಡುತ್ತವೆ. ಇದಕ್ಕೆ ಕಾರಣ ಆ ಮಣ್ಣಿನ ಜೇಡಿಯಲ್ಲಿರುವ ಮಾಂಟ್ ಮೊರಿಲನೈಟ್ ಎಂಬ ಖನಿಜದ ರಚನೆಯ ವೈಶಿಷ್ಟ್ಯ. ಕೆಂಪು ಮಣ್ಣಿನಲ್ಲಿ ಕೆಯೊಲಿನೈಟ್ ಎಂಬ ಖನಿಜ ಇದೆ.

ಅನೇಕ ಸುಲಭ ರಾಸಾಯನಿಕ ಕ್ರಮಗಳಿಂದ ಮಣ್ಣಿನ ಫಲವಂತಿಕೆಯನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ಹಿಂದಿನಿಂದಲೂ ಕೆಲಸ ನಡೆದು ಬಂದಿದೆ. ಈಗ ಕೆಲವು ವರ್ಷಗಳಲ್ಲಿ ನಿಖರವಾದ ಕ್ರಮಗಳನ್ನು ಅಳವಡಿಸಿಕೊಂಡು ಪ್ರಯೋಗಶಾಲೆಯಲ್ಲಿ ಕೆಲವೇ ಮಿನಿಟುಗಳಲ್ಲಿ ಒದಗುವ ರೂಪದಲ್ಲಿರುವ ಪೋಷಕಾಂಶಗಳು, ಮಣ್ಣಿನ ರಸಸಾರ (ಕ್ಷಾರಾಂಕ) (pH), ಲವಣಾಂಶ ಮತ್ತಿತರ ಉಪಯುಕ್ತ ಗುಣಗಳನ್ನು ನಿರ್ಧರಿಸುವುದು ಸಾಧ್ಯ. ಇದರ ಆಧಾರದ ಮೇಲೆ ಪೈರಿಗೆ ಎಷ್ಟು ಗೊಬ್ಬರ ಅಗತ್ಯ ಎಂಬ ವಿಷಯವನ್ನು ನಿರ್ಧರಿಸಬಹುದು. ರೇಡಿಯೋ ಸಮಸ್ಥಾನಿಗಳ ಬಳಕೆಯಿಂದ ಸಸ್ಯ ಪೋಷಣೆಯಲ್ಲಿ ಹೊಸ ವಿಷಯಗಳು ತಿಳಿದುಬಂದಿವೆ. ಉದಾಹರಣೆಗೆ, ರಂಜಕ ಗೊಬ್ಬರವನ್ನು ಮಣ್ಣಿಗೆ ಸೇರಿಸಿದ ಮೇಲೆ ಸಸ್ಯಕ್ಕೆ ಒದಗುವುದು ಮಣ್ಣಿನ ಪರಿಸ್ಥಿತಿಯನ್ನು ಅವಲಂಬಿಸಿದೆ; ಹಾಗೆಯೇ ಸಸ್ಯ ಇದನ್ನು ಹೀರಿದ ಮೇಲೆ ಅದರ ವಿವಿಧ ಭಾಗಗಳಲ್ಲಿ ಅದು ಹೇಗೆ ಚಲಿಸಿ ಉಪಯೋಗವಾಗುತ್ತದೆ ಎಂಬುದನ್ನು ಉದ್ದಿಪ್ತಗೊಳಿಸಿದ ರಂಜಕ ವಸ್ತುಗಳ ಸಹಾಯದಿಂದ ಕಂಡುಕೊಳ್ಳುವುದು ಸಾಧ್ಯ. ವ್ಯವಸಾಯದಲ್ಲಿ ಭೂಫಲವಂತಿಕೆಯನ್ನು ಬೆಳೆಸಲು ರಾಸಾಯನಿಕ ವಸ್ತುಗಳ ಬಳಕೆ ಕಳೆದ ಶತಮಾನದ ಆದಿ ಭಾಗದಲ್ಲಿ ಪ್ರಾರಂಭವಾಯಿತು. ಅಮೋನಿಯಂ ಸಲ್ಫೇಟ್, ಚಿಲಿಯನ್ ನೈಟ್ರೇಟ್, ಸೂಪರ್ ಫಾಸ್ಫೇಟ್, ಮ್ಯೂರಿಯೇಟ್ ಆಫ್ ಪೊಟ್ಯಾಷ್ ಮುಂತಾದ ರಾಸಾಯನಿಕಗಳು ವ್ಯಾಪಕವಾಗಿ ಬೇಸಾಯದಲ್ಲಿ ಬಳಕೆಗೆ ಬಂದು ಕೃಷಿ ಉತ್ಪನ್ನ ವಿಶೇಷವಾಗಿ ಹೆಚ್ಚಿತು. ಒಂದನೆಯ ಮಹಾಯುದ್ಧದ ಸಮಯದಲ್ಲಿ ಜರ್ಮನಿಯಲ್ಲಿ ಹಾಬರ್ ಮತು ಬಾಷ್ ಎಂಬ ವಿಜ್ಞಾನಿಗಳು ಅಮೋನಿಯವನ್ನು ತಯಾರಿಸುವ ವಿಧಾನವನ್ನು ಕಂಡಿಹಿಡಿದರು. ನಿಜವಾಗಿಯೂ ಕೃಷಿ ಪ್ರಗತಿಯಲ್ಲಿ ಇದೊಂದು ದೊಡ್ಡ ಮೈಲಿಗಲ್ಲು. ಇದುವರೆಗೂ ಗೊಬ್ಬರಗಳ ಸಾಧನ ಸಂಪತ್ತು ಪ್ರಕೃತಿಯಲ್ಲಿ ದೊರೆಯುವ ನಿಕ್ಷೇಪಕ್ಕಷ್ಟೇ ಮಿತಿಯಾಗಿತ್ತು. ಈ ಸಂಶೋಧನೆಯ ಫಲವಾಗಿ ಹೇರಳವಾಗಿ ಗೊಬ್ಬರ ತಯಾರಿಸಿ ಬೇಸಾಯದ ಉತ್ಪನ್ನಗಳನ್ನು ಅಧಿಕಗೊಳಿಸುವುದು ಸಾಧ್ಯವಾಯಿತು. ಹೆಚ್ಚು ಸಾರವುಳ್ಳ ಯೂರಿಯಾ, ಅಮೋನಿಯಾ ನೈಟ್ರೇಟ್, ಅನಾರ್ದ್ರ ದ್ರವ ಅಮೋನಿಯ ಮುಂತಾದ ಗೊಬ್ಬರಗಳು ಈಗ ಕೃಷಿಯಲ್ಲಿ ವ್ಯಾಪಕವಾಗಿ ಬಳಕೆಯಲ್ಲಿವೆ. ಹಾಗೆಯೇ ಹೆಚ್ಚು ರಂಜಕಾಂಶಗಳುಳ್ಳ ಟ್ರಿಪಲ್ ಸೂಪರ್, ಮೆಟಾಫಾಸ್ಫೇಟ್, ದ್ರವರಂಜಕಾಮ್ಲ ಇಂಥ ರಂಜಕ ಗೊಬ್ಬರಗಳು ಸಾಮಾನ್ಯ ಬಳಕೆಯಲ್ಲಿವೆ. ಗೊಬ್ಬರಗಳ ಬೆಲೆ ಅಗ್ಗವಾಗಿ ಬಳಕೆ ಹೆಚ್ಚಿ ಬೇಸಾಯೋತ್ಪನ್ನ ಹೆಚ್ಚಲು ಸಾಧ್ಯವಾಗಿದೆ. ಹೆಚ್ಚು ಪರಿಮಾಣದಲ್ಲಿ ಸಸ್ಯಕ್ಕೆ ಬೇಕಾಗುವ ಸಾರಜನಕ, ರಂಜಕ ಮತ್ತು ಪೊಟಾಷಿಯಂಗಳಲ್ಲದೆ ಕಬ್ಬಿಣ, ಬೋರಾನ್, ತಾಮ್ರ, ಸತು, ಮ್ಯಾಂಗನೀಸ್, ಮೊಲಿಬ್ಡಿನಂ ಮುಂತಾದವು ಸೂಕ್ಷ್ಮ ಪರಿಮಾಣದಲ್ಲಿ ಸಸ್ಯಕ್ಕೆ ಅಗತ್ಯ ಎಂಬ ಅಂಶದ ತಿಳಿವಳಿಕೆ ಇತ್ತೀಚಿನದು. ಸಾಮಾನ್ಯವಾಗಿ ಬೇಸಾಯದಲ್ಲಿ ಇವುಗಳ ಕೊರತೆ ಅಷ್ಟೇನೂ ವ್ಯಾಪಕವಲ್ಲ. ಮಣ್ಣಿನಿಂದ ಇಲ್ಲವೇ ಕೊಟ್ಟಿಗೆ ಗೊಬ್ಬರದಿಂದ ಈ ಆವಶ್ಯಕತೆ ಪೂರೈಸುತ್ತದೆ. ಹೀಗಾಗದೆ ಅಭಾವ ಉಂಟಾದಾಗ ಕೊರತೆ ಚಿಹ್ನೆ ಕಾಣಬರುತ್ತದೆ. ಕೆಲವು ವೇಳೆ ಇವುಗಳ ಪರಿಮಾಣ ಮಿತಿ ಮೀರಿದಾಗ ನಂಜಾಗುವುದು ಉಂಟು. ಮಣ್ಣಿಗೆ ಕೊಟ್ಟೋ ಬೆಳೆಯ ಮೇಲೆ ಸಿಂಪಡಿಸಿಯೊ ಕೊರತೆಯನ್ನು ನಿವಾರಿಸಬಹುದು.

ಕೃಷಿ ಯೋಗ್ಯವಾದ ಎಲ್ಲ ಭೂಮಿ ಬಹಳ ದೇಶಗಳಲ್ಲಿ ಉಳುಮೆಯಾಗಿದೆಯಾದರೂ ಜನಸಂಖ್ಯೆ ಇತಿಮಿತಿಯಿಲ್ಲದೆ ಬೆಳೆಯುತ್ತಿದೆ. ಹೀಗಾಗಿ ಇರುವ ಭೂಮಿಯನ್ನು ದುರುಪಯೋಗಪಡಿಸಿ ಹಾಳು ಮಾಡದೆ ಅದರ ಉತ್ಪಾದನಾ ಸಾಮರ್ಥ್ಯವನ್ನು ಬೆಳೆಸುವುದು ಮಾನವನ ಉಳಿವು ಅಳಿವಿನ ಸಮಸ್ಯೆಯಾಗಿದೆ. ಮಣ್ಣು ಸವೆದು ಕೊಚ್ಚಿ ಭೂಮಿ ಪಾಳಾಗುತ್ತಿರುವುದು ಅನೇಕ ಪ್ರದೇಶಗಳಲ್ಲಿ ಸಾಮಾನ್ಯ ದೃಶ್ಯ. ಈ ಕ್ಷೀಣತೆಯನ್ನು ತಡೆಗಟ್ಟುವುದಕ್ಕೆ ಭೂಸಂರಕ್ಷಣಾ ಕಾರ್ಯಕ್ರಮ ಈಗ ಎಲ್ಲಾ ದೇಶಗಳಲ್ಲಿಯೂ ಕಾರ್ಯಗತವಾಗುತ್ತಿದೆ. ಸ್ವಾಭಾವಿಕ ಸಸ್ಯ ಸಂಪತ್ತುಗಳ ರಕ್ಷಣೆ, ವೃದ್ಧಿ ಈ ಅಂಶಗಳನ್ನು ಸಂರಕ್ಷಣೆಯ ಕಲ್ಪನೆ ಒಳಗೊಂಡಿದೆ. ಹಾಗೆಯೇ ಪ್ರಸ್ತುತ ಸಾಗುವಳಿಗೆ ಯೋಗ್ಯವಲ್ಲ ಎಂದು ಬಿಟ್ಟಿರುವ ಭೂಮಿಗಳನ್ನು ಸುಧಾರಿಸಿ ಯೋಗ್ಯವನ್ನಾಗಿ ಮಾಡಬಹುದು. ಹಾಲೆಂಡ್ ದೇಶದಲ್ಲಿ ಕಟ್ಟೆ ಕಟ್ಟುವುದರ ಮೂಲಕ ಸಮುದ್ರವನ್ನು ಹಿಂದೊತ್ತಿ ಆ ಭೂಮಿಯನ್ನು ಕೃಷಿ ಮಾಡುತ್ತಿರುವುದು ಸಾಗುವಳಿ ಭೂಮಿಯನ್ನು ವಿಸ್ತರಿಸಿರುವುದಕ್ಕೆ ಒಂದು ಕೌತುಕದ ನಿದರ್ಶನ. ಮರಳು ಗಾಡಿಗೆ ನೀರು ಹಾಯಿಸಿ ಲಾಭದಾಯಕವಾದ ಕೃಷಿಯನ್ನು ಇಸ್ರೇಲ್ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಗಳಲ್ಲಿ ಅಸ್ತಿತ್ವಕ್ಕೆ ತಂದಿರುವುದು ಮಾನವನ ಸಾಹಸಕ್ಕೆ ನಿದರ್ಶನ. ಸಂರಕ್ಷಣ ಚಟುವಟಿಕೆಯ ಮತ್ತೊಂದು ಕಾರ್ಯಕ್ರಮ ಕರ್ನಾಟಕ ರಾಜ್ಯದಲ್ಲಿ ಅನೇಕ ಪ್ರದೇಶಗಳಲ್ಲಿ ಇಳಿಜಾರು ಭೂಮಿಗಳಲ್ಲಿ ಕಾರ್ಯಗತವಾಗುತ್ತಿರುವ ಸಮಪಾತಳಿ ಒಡ್ಡುಗಳ ನಿರ್ಮಾಣ. ಇದರಿಂದ ಮಣ್ಣಿನ ಸವೆತ ಕಡಿಮೆಯಾಗುತ್ತದೆ. ಇದರೊಡನೆ ಸೂಕ್ತ ಸಾಗುವಳಿ ಕ್ರಮಗಳಿದ್ದಲ್ಲಿ ಮಣ್ಣಿನ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚಿಸುವುದು ಸಾಧ್ಯ. ಚೌಳು ಕ್ಷಾರ ಇಲ್ಲವೇ ಹುಳಿಗಳಿಂದಾಗಿ ಪಾಳಾಗಿರುವ ಭೂಮಿಯನ್ನು ನೀರು ಕಟ್ಟಿ ಬಸಿದು ಜಿಪ್ಸಂ ಕೊಟ್ಟು ಸಾಗುವಳಿಗೆ ಯೋಗ್ಯವಾಗಿ ಮಾಡಬಹುದು. ಹುಳಿ ಭೂಮಿಗಳಿಗೆ ಸುಣ್ಣ ಸೇರಿಸಿ ಸುಧಾರಣೆ ಮಾಡಬೇಕು.

**ನೀರಾವರಿ:** ಬೇಸಾಯದ ನೀರಾವರಿ ಪುರಾತನ ಕಾಲದಿಂದ ಅಸ್ತಿತ್ವದಲ್ಲಿದ್ದರೂ ಅದರ ಬಳಕೆಯಲ್ಲಿ ವಿವೇಚನೆ ಕಡಿಮೆ. ಭೂಮಿಯು ತೇವದ ಮಟ್ಟವನ್ನು ಟೆನ್ಸಿಯಾಮೀಟರ್, ಜಿಪ್ಸಂಬ್ಲಾಕ್ ಮತ್ತಿತರ ಸಲಕರಣೆಗಳ ಸಹಾಯದಿಂದ ಅಳೆದು ಹದವಾದ ಮಟ್ಟದಲ್ಲಿ ನೀರು ಹಾಯಿಸುವ ವ್ಯವಸ್ಥೆ ಈಗ ತೋಟ ಮತ್ತಿತರ ಬೇಸಾಯದಲ್ಲಿ ಸಾಧಾರಣ ಕ್ರಮ. ಚಿಮುಕು ನೀರಾವರಿ ಅಥವಾ ಸ್ಪಿಂಕ್ಲರ್ ನೀರಾವರಿಯಿಂದ ನೀರನ್ನು ಮಳೆಯಂತೆ ಬೇಕಾದಾಗ ಸುರಿಸಬಹುದು. ಉಪ್ಪು ಮತ್ತು ಕ್ಷಾರ ಭೂಮಿಗಳನ್ನು

ಸಾಗುವಳಿಗೆ ಯೋಗ್ಯ ಮಾಡಲು ವ್ಯಾಪಕ ಸಂಶೋಧನೆ ನಡೆದು ಉಪಯುಕ್ತ ಕ್ರಮಗಳು ರೂಪಿಸಲ್ಪಟ್ಟಿವೆ. ನೀರಾವರಿ ಕಾಲುವೆಗಳಲ್ಲಿ ನೀರು ಪೋಲಾಗದೆ ಸಸ್ಯ ಬೆಳೆವಣಿಗೆಗೆ ಉಪಯೋಗವಾಗುವಂತೆ ಅವುಗಳಿಗೆ ಕಾಂಕ್ರಿಟ್ ಆಸ್ಫಾಲ್ಟ್ ಅಥವಾ ಜೇಡಿಯಿಂದ ಭದ್ರಪಡಿಸಿ ನೀರು ಜಿನುಗಿ ಆಗುವ ನಷ್ಟವನ್ನು ತಪ್ಪಿಸಬಹುದು. ನೀರು ಹಾಯಿಸುವ ಉತ್ತಮ ಕ್ರಮಗಳು ಅಂದರೆ ಅಂಚು ನೀರಾವರಿ, ಗೆರೆ ನೀರಾವರಿ ಮುಂತಾದವುಗಳ ಬಳಕೆಯಿಂದ ನೀರಿನ ಮಿತವ್ಯಯವಾಗುವುದಲ್ಲದೆ ಪ್ರದೇಶದ ಭೂಮಿ ಚೌಗಾಗುವುದು ತಪ್ಪುತ್ತದೆ. ವಿಸೋಮೀಟರ್ ಎಂಬ ಉಪಕರಣದ ಬಳಕೆಯಿಂದ ಒಂದು ಪ್ರದೇಶದಲ್ಲಿ ಅಂತರ್ಜಲ ಮಟ್ಟದ ಸ್ಥಿತಿಯನ್ನು ಎಚ್ಚರಿಕೆಯಿಂದ ಗಮನಿಸಿ ಕಡಗುಳ ವ್ಯವಸ್ಥೆಯಿಂದ ಅದನ್ನು ತಗ್ಗಿಸುವ ವ್ಯಾಪಕ ಕ್ರಮ ಪಾಶ್ಚಾತ್ಯ ದೇಶಗಳ ನೀರಾವರಿ ಬೇಸಾಯದ ಅಂಗ. ಕೆರೆ ಕುಂಟೆ ಜಲಾಶಯಗಳ ಮೇಲ್ಮೈಯಿಂದ ನೀರು ಆವಿಯಾಗಿ ನಷ್ಟವಾಗುವುದನ್ನು ತಪ್ಪಿಸಲು ರಾಸಾಯನಿಕ ವಸ್ತುಗಳು ಬಳಕೆಗೆ ಬರುತ್ತಿವೆ. ರೈತನಿಗೆ ಬೇಕಾದಾಗ ಮಳೆ ಬೀಳುವುದನ್ನು ಕುರಿತು ಪ್ರಯತ್ನ ನಡೆಯುತ್ತಲೇ ಇದೆ. ಸ್ವಾಭಾವಿಕವಾದ ಮಳೆಹನಿಗಳು ಎರಡು ವಿಧಗಳಲ್ಲಿ ಆಗುತ್ತವೆ. ಮೋಡದಲ್ಲಿ ಸಣ್ಣ ಮಳೆ ಕಣಗಳು ಒಂದಕ್ಕೊಂದು ತಾಕಿ ಒಂದುಗೂಡಿ ಹನಿಗಳಾಗಿ ಬೀಳುತ್ತವೆ. ಈ ರೀತಿ ನಾವು ಮಾಡುವುದಕ್ಕಾಗುವುದಿಲ್ಲ. ಎರಡನೆಯದಾಗಿ ಮಂಜುಗಡ್ಡೆ ಕಣಗಳು ನೀರಿನ ಕಣಗಳೊಡನೆ ಘರ್ಷಣೆಯಾದಾಗ ಮಳೆಹನಿಗಳು ಉಂಟಾಗುತ್ತವೆ. ಮೋಡದಲ್ಲಿನ ಶೈತ್ಯವನ್ನು ಮಂಜಾಗಿ ಘನೀಕರಿಸುವುದಕ್ಕೆ ಘನ ಇಂಗಾಲದ ಡೈಆಕ್ಸೈಡ್ ಪುಡಿಯನ್ನು ಹಾಕುವ ಪ್ರಯೋಗ ನಡೆದಿದೆ. ಸಿಲ್ವರ್ ಅಯೊಡೈಡ್ ಪುಡಿ ಸಹ ಇದಕ್ಕೆ ಬಳಸಲ್ಪಟ್ಟಿದೆ. ಪ್ರಯೋಜನಕಾರಿ ಫಲಿತಾಂಶ ಇನ್ನೂ ದೊರೆತಿಲ್ಲ. ಮಳೆಯಲ್ಲಿನ ಆಲಿಕಲ್ಲು ಹಾವಳಿ ತೋಟಗಾರರಿಗೆಲ್ಲ ತಿಳಿದ ವಿಷಯ. ಇದನ್ನು ನಿವಾರಿಸುವ ದಿಕ್ಕಿನಲ್ಲಿ ಸಂಶೋಧನೆ ನಡೆದಿದೆ.

**ಬೆಳೆ ಅಭಿವೃದ್ಧಿ :** ಕೃಷಿ ಉತ್ಪನ್ನ ಹೆಚ್ಚಳಕ್ಕೆ ನಮಗಿರುವ ಸಾಧನಗಳಲ್ಲೆಲ್ಲ ಅತ್ಯಂತ ಸುಲಭ ಮತ್ತು ಪರಿಣಾಮಕರವಾದದ್ದು ಸುಧಾರಿತ ಬೀಜಗಳ ಬಳಕೆ. ಸಂಕರಣ ಅಥವಾ ಅಡ್ಡ ತಳಿಗಳು ಸಸ್ಯವಿಜ್ಞಾನಿಗಳು ನಮಗೆ ಕೊಟ್ಟಿರುವ ಮಹತ್ತ್ವದ ಕೊಡುಗೆ. ಇವು ಶಕ್ತಿಮಾನ್ ತಳಿಗಳು. ನಮ್ಮಲ್ಲಿ ಈಗ ಕೆಲವು ವರ್ಷಗಳಲ್ಲಿ ಜನಪ್ರಿಯವಾಗಿರುವ ಅಮೆರಿಕದ ಮುಸುಕಿನ ಜೋಳ ಇದಕ್ಕೆ ದೃಷ್ಟಾಂತ. ಮೊದಲು ಈ ಜೋಳದ ಇಳುವರಿ 6–7 ಕ್ವಿಂಟಲ್ ಇತ್ತು. ಹೊಸ ತಳಿಗಳಿಂದ 30–35 ಕ್ವಿಂಟಲ್ ಇಳುವರಿ ಬರುತ್ತದೆ. ಇದೇ ರೀತಿ ಬಾಜ್ರ, ಜೋಳ, ಹತ್ತಿ ಮತ್ತಿತರ ಅಡ್ಡತಳಿಗಳು ಬಂದಿವೆ. ಇವುಗಳ ಫಲವಾಗಿ ಎಕರೆ ಇಳುವರಿ 3–4 ಪಟ್ಟು ಹೆಚ್ಚಿದೆ. ಈ ತಳಿಗಳ ಒಂದು ಮುಖ್ಯ ವೈಶಿಷ್ಟ್ಯ ಗೊಬ್ಬರ ಹೆಚ್ಚು ಕೊಟ್ಟಷ್ಟೂ ಇಳುವರಿ ಅಧಿಕವಾಗುವುದು. ಸಸ್ಯದಲ್ಲೇ ಸ್ವಾಭಾವಿಕವಾಗಿರುವ ಐ.ಎ.ಎ., ಜಿ.ಎ. ಮೊದಲಾದ ವಸ್ತುಗಳ ಬೆಳೆ ವೃದ್ಧಿಕಾರಕಗಳು. 2–4–ಡಿ.ಐ.ಬಿ.ಎ.. ಎನ್.ಎ.ಎ. ಮುಂತಾದವು ಇಂಥ ಗುಣಗಳನ್ನು ಪಡೆದಿರುವುದು ಸಂಶೋಧನೆಯಿಂದ ತಿಳಿದುಬಂದಿದೆ. 2–4–ಡಿ, ಎನ್.ಎ.ಎ. ಇವುಗಳ ಪ್ರಯೋಗದಿಂದ ಹಣ್ಣುಗಳು ತೊಟ್ಟು ಕಳಚಿ ಬೀಳುವುದನ್ನು ತಪ್ಪಿಸಬಹುದು. ಜಿ.ಎ. ಪ್ರಯೋಗದಿಂದ ದ್ರಾಕ್ಷಿಹಣ್ಣುಗಳು ದೃಢವಾಗುತ್ತದೆ. 2–4–ಡಿಯನ್ನು ಸಾಕಷ್ಟು ಪರಿಮಾಣದಲ್ಲಿ ಪ್ರಯೋಗಿಸಿದರೆ ಕಳೆ ನಾಶವಾಗುತ್ತದೆ. ಕೈನಟಿನ್ ಎಂಬ ರಾಸಾಯನಿಕ ವಸ್ತು ಉಷ್ಣ ಅಥವಾ ಚಳಿಯಿಂದ ಸಸ್ಯಗಳಿಗೆ ಆಗಬಹುದಾದ ತೊಂದರೆಯನ್ನು ಸಹಿಸಬಲ್ಲ ಸಾಮರ್ಥ್ಯ ಕೊಡುತ್ತದೆ.

**ವ್ಯವಸಾಯದ ಯಾಂತ್ರೀಕರಣ:** ಕೃಷಿಯಲ್ಲಿ ಅಗತ್ಯವಾದ ಶ್ರಮವನ್ನು ಆದಿಮಾನವ ತನ್ನ ಬಾಹುಬಲದಿಂದ ಒದಗಿಸಿಕೊಳ್ಳುತ್ತಿದ್ದ. ಮುಂದೆ ಈ ಶ್ರಮ ಎತ್ತು ಕುದುರೆ ಎಮ್ಮೆ ಕೋಣಗಳಿಂದ ಬಂತು. ಈಗ ದುಡಿಮೆಗೆ ಯಂತ್ರಗಳ ಬಳಕೆ ಬಂದಿದೆ. ಟ್ರಾಕ್ಟರ್ ಜೊತೆ ಬಳಸಬಹುದಾದ ಸಲಕರಣೆಗಳು ಬಂದಿವೆ. ಪ್ರಸ್ತುತ ಟ್ರಾಕ್ಟರ್ ಬಳಕೆಯಿಂದ ಉಳುಮೆ, ಹೆಂಟೆಯನ್ನು ಪುಡಿ ಮಾಡುವುದು, ಗೊಬ್ಬರ ಹರಡುವುದು ಮುಂತಾದ ಎಲ್ಲ ಕೆಲಸಗಳನ್ನೂ ಮಾಡಬಹುದು. ಇವಲ್ಲದೆ ಬೆಳೆ ಕಟಾವು, ಕಾಳು ಬೇರ್ಪಡಿಸುವುದು, ಕಬ್ಬನ್ನು ಕೊಯ್ದು ಲಾರಿಗೆ ತುಂಬುವುದು, ಆಲೂಗಡ್ಡೆ ಅಗೆದು ಅದನ್ನು ಆರಿಸಿ ಚೀಲಕ್ಕೆ ತುಂಬಿ ಟ್ರಕ್ಕಿನಲ್ಲಿ ಪೇರುವುದು, ಹಣ್ಣು ಕೀಳುವುದು, ಹಾಲು ಕರೆಯುವುದು–ಇಂಥ ಎಲ್ಲ ಕೆಲಸಗಳನ್ನು ಮಾಡಲೂ ಯಂತ್ರವನ್ನು ಅಳವಡಿಸಿಕೊಂಡಿದ್ದಾರೆ.

**ಸಸ್ಯ ಸಂರಕ್ಷಣೆ:** ಸಸ್ಯಗಳಿಗೆ ಕೀಟಗಳಿಂದ ಒದಗುವ ಹಾನಿಯನ್ನು ಕೀಟರೋಗ ನಿರೋಧಕ ಶಕ್ತಿಯುಳ್ಳ ತಳಿಗಳ ವೃದ್ಧಿ, ತಡೆದ ಬಿತ್ತನೆ ಇನ್ನಿತರ ಕ್ರಮಗಳಿಂದ ಕೆಲಮಟ್ಟಿಗೆ ಕಡಿಮೆ ಮಾಡುವುದು ಸಾಧ್ಯ. ಕೀಟಗಳ ಹತೋಟಿ ಕ್ರಮಗಳು ಎರಡು: ರಾಸಾಯನಿಕಗಳ ಬಳಕೆ ಮತ್ತು ಸ್ವಾಭಾವಿಕ ಶತ್ರುಗಳ ಮೂಲಕ ಉಪದ್ರವಕಾರಿಗಳ ನಿವಾರಣೆ **(ನೋಡಿ– ಕೀಟನಾಶಕಗಳು)**. ಕೀಟಗಳಿಂದ ಅಥವಾ ರೋಗಾಣುಗಳಿಂದ ಹರಡುವ ವೈರಸ್, ಬ್ಯಾಕ್ಟೀರಿಯಾ, ಬೂಷ್ಟು ಮುಂತಾದ ರೋಗಗಳಿಂದ ಶೇ 50%ಕ್ಕೂ ಹೆಚ್ಚು ಬೆಳೆ ನಾಶವಾಗುತ್ತದೆ. ಇವುಗಳನ್ನು ಎದುರಿಸಲು ಮೊದಲಿನಿಂದಲೂ ಬಂದ ಕ್ರಮ ನಿರೋಧಶಕ್ತಿಯುಳ್ಳ ತಳಿಗಳ ವೃದ್ಧಿ. ಈಗೀಗ ರೋಗನಿರೋಧಕ್ಕೆ ರಾಸಾಯನಿಕಗಳ ಬಳಕೆ ಸಾಮಾನ್ಯವಾಗುತ್ತಿದೆ. ಸಸ್ಯಶರೀರ ವಿಜ್ಞಾನ, ಜೀವರಸಾಯನವಿಜ್ಞಾನ, ತಳಿವಿಜ್ಞಾನ ಇವುಗಳಲ್ಲಿನ ಪರಿಣತರ ಸಹಕಾರ ಮತ್ತು ಶ್ರಮಗಳ ಪರಿಣಾಮವಾಗಿ ರೋಗನಿರೋಧಕ್ಕೆ ಸಮಗ್ರ ಕ್ರಮಗಳು ರೂಪಿತವಾಗಿವೆ. **(ನೋಡಿ– ಕೃಷಿ ರಸಾಯನವಿಜ್ಞಾನ)**

**ಖುಷ್ಕಿ ಬೇಸಾಯ:** ಇದುವರೆವಿಗೂ ಭಾರತದಲ್ಲಿ ಬೇಸಾಯ ಸುಧಾರಣೆ ಕಾರ್ಯ ಬಹುವಾಗಿ ತರೀ ಬೆಳೆಗಳಿಗೆ ಸಂಬಂಧಿಸಿತ್ತು. ಸಂಶೋಧನೆಯ ಪ್ರಯೋಜನ ತರೀ ಜಮೀನುಳ್ಳ ಅನುಕೂಲಸ್ಥ ರೈತರಿಗೆ ಮಾತ್ರ ಮುಟ್ಟಿದೆ. ನೀರಿನ ಸೌಕರ್ಯ ಭಾರತದಲ್ಲಿ ಕೇವಲ ಶೇ 20%ರಷ್ಟು ಜಮೀನಿಗೆ ಮಾತ್ರ. ಉಳಿದ ಶೇ 80% ಭಾಗದಲ್ಲಿ ಬೆಳೆ ಮಳೆಯನ್ನೇ ಅವಲಂಬಿಸಿ ಆಗಬೇಕಾಗಿದೆ. ಇದನ್ನು ನಂಬಿರುವ ರೈತರ ಸಂಖ್ಯೆಯೇ ಹೆಚ್ಚು. ಅವರ ಜೀವನ ಮಳೆಯಷ್ಟೇ ಅನಿಶ್ಚಿತ. ಈಗ 2–3 ವರ್ಷಗಳಿಂದ ಈ ದಿಕ್ಕಿನಲ್ಲಿ ಅಂದರೆ ಖುಷ್ಕಿ ಬೇಸಾಯದ ಅಭಿವೃದ್ಧಿಗೆ ಸಂಶೋಧನೆ ಪ್ರಾರಂಭವಾಗಿದೆ. ಖುಷ್ಕಿ ಪ್ರದೇಶಗಳಲ್ಲಿ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸುವ ಸಮಸ್ಯೆಗೆ ಪರಿಹಾರ ಎರಡು ಬಗೆ. ದೂರದ ಜಲಾಶಯಗಳಿಂದ ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು ಒಂದು ಶಾಶ್ವತ ರೀತಿಯ ಪರಿಹಾರ. ವೆಚ್ಚ ಅಧಿಕ, ಆದರೂ ಕ್ರಮೇಣ ಲಾಭದಾಯಕ. ಬಿದ್ದ ಅಲ್ಪ ಪರಿಮಾಣದ ಮಳೆಯ ನೀರನ್ನು ಪೋಲಾಗದಂತೆ ಮಣ್ಣಿನಲ್ಲೇ ಉಳಿಸಿಕೊಂಡು ವಿಮೋಚನೆಯಿಂದ ಸೂಕ್ತ ಬೆಳೆಗೆ ಬಳಸಿಕೊಳ್ಳುವುದು ಇನ್ನೊಂದು ಕ್ರಮ. ಬಿದ್ದ ಮಳೆ ನೀರು ಹರಿದು ಮುಂದೆ ಹೋಗದೆ ಮಣ್ಣಿನಲ್ಲೇ ಇಳಿಯುವಂತೆ ಅದರ ಹದವನ್ನು ಬೆಳೆಸಿ ಕಾಪಾಡಿಕೊಳ್ಳುವುದು ಮೊದಲನೆಯ ಹಂತ. ಇದಾಗಬೇಕಾದರೆ ಇಳಿಜಾರನ್ನು ಕಡಿಮೆ ಮಾಡಿ ನೆಲವನ್ನು ಆದಷ್ಟು ಮಟ್ಟಸ ಮಾಡುವುದು ಅಗತ್ಯ. ಇಳಿಜಾರಿಗೆ ಅಡ್ಡವಾಗಿ ಸಮಪಾತಳಿ ಒಡ್ಡುಗಳ ನಿರ್ಮಾಣದಿಂದ ಮಣ್ಣು ಕೊಚ್ಚುವುದು ತಪ್ಪುವುದು. ನೀರು ಇಂಗಿ ಮಣ್ಣಿನಲ್ಲೇ ಉಳಿಯುತ್ತದೆ. ಆಳವಾದ ಉಳುಮೆ ಇದಕ್ಕೆ ಅತ್ಯಂತ ಸಹಕಾರಿ. ಖುಷ್ಕಿ ಬೇಸಾಯ ಜಯಪ್ರದವಾಗಬೇಕಾದರೆ ಗಮನಿಸಬೇಕಾದ ಇನ್ನೊಂದಂಶ ಇರುವ ಸ್ವಲ್ಪ ಮಣ್ಣಿನ ತೇವವನ್ನು ಬಳಸಿಕೊಂಡು ಶೀಘ್ರವಾಗಿ ಬೆಳೆದು ಫಲಕೊಡಬಲ್ಲ ಬೆಳೆ ತಳಿಗೆ ಚುನಾವಣೆ. ಸಾಮಾನ್ಯವಾಗಿ ಮಳೆ ಅಭಾವ ಪ್ರದೇಶಗಳಲ್ಲಿ ನೆಲಗಡಲೆ ಮತ್ತು ಕೇಸರಿ ಬೆಳೆ ಜನಪ್ರಿಯ. ಇವು ಆರ್ದ್ರತೆಯನ್ನು ಸಹಿಸಿ ತಕ್ಕಮಟ್ಟಿನ ಇಳುವರಿ ಕೊಡಬಲ್ಲವು. ಖುಷ್ಕಿ ಬೆಳೆಗಳಿಗೆ ರಾಸಾಯನಿಕ ಗೊಬ್ಬರಗಳನ್ನು ಕೊಟ್ಟರೆ ಲಾಭದಾಯಕ ಎಂದು ಕಂಡುಬಂದಿದೆ. ಅದರಲ್ಲೂ ರಂಜಕ ಗೊಬ್ಬರ ಧಾರಾಳವಾಗಿ ಕೊಟ್ಟು ಮಣ್ಣಿನಲ್ಲಿ ಅದರ ಅಂಶ ವೃದ್ಧಿ ಪಡಿಸಿದಾಗ ಅನೇಕ ರೀತಿಯ ಪ್ರಯೋಜನ ಕಂಡು ಬಂದಿದೆ. ಸಸ್ಯದ ಬೇರು ಚೆನ್ನಾಗಿ ಬೆಳೆಯುತ್ತದೆ; ದ್ವಿದಳ ಧಾನ್ಯದ ಬೆಳೆ ಇಂಥ ಮಣ್ಣಿನಲ್ಲಿ ಬೆಳೆದಾಗ ವಾಯುವಿನಲ್ಲಿನ ಸಾರಜನಕ ಹೆಚ್ಚು ಪರಿಮಾಣದಲ್ಲಿ ಶೇಖರಣೆಯಾಗುತ್ತದೆ. ಈ ರೀತಿಯ ವಿವಿಧ ಮುಖ ಕ್ರಮಗಳನ್ನು ಒಟ್ಟುಗೂಡಿಸಿ ಕಾರ್ಯಕ್ರಮವನ್ನು ಅಳವಡಿಸಿ ಖುಷ್ಕಿ ಬೇಸಾಯದಲ್ಲಿನ ಮಳೆ ಅನಿಶ್ಚಿತತೆಯನ್ನು ಬಹುವಾಗಿ ನಿವಾರಿಸಬಹುದು. (ಬಿ.ಎ.ಎ.)

**ಕೃಷಿ ಸಸ್ಯವಿಜ್ಞಾನ :** ಮಾನವ ಹಾಗೂ ಪ್ರಾಣಿಗಳಿಗೆ ಅತ್ಯವಶ್ಯಕವಾದ ಆಹಾರ, ಮೇವು ಹಾಗೂ ವಾಣಿಜ್ಯ ಬೆಳೆಗಳಲ್ಲಿ ಹೆಕ್ಟೇರುವಾರು ಉತ್ಪನ್ನ ಹೆಚ್ಚಿಸಲು ಕೃಷಿ ವಿಜ್ಞಾನಿಗಳಿಗೆ ಕೃಷಿ ಸಸ್ಯವಿಜ್ಞಾನದ ಎಲ್ಲಾ ಪ್ರಾಕಾರಗಳು ಅತ್ಯವಶ್ಯಕ. ಕೃಷಿ ಸಸ್ಯ ವಿಜ್ಞಾನದೊಂದಿಗೆ ನೇರ ಸಂಬಂಧ ಹೊಂದಿರುವ ಮುಖ್ಯ ವಿಭಾಗಗಳೆಂದರೆ – ಜೀವಕೋಶ ವಿಜ್ಞಾನ (ಸೈಟಾಲಜಿ), ಅನುವಂಶಿಯ ವಿಜ್ಞಾನ ಅಥವಾ ತಳಿವಿಜ್ಞಾನ (ಜೆನಿಟಿಕ್ಸ್), ಕೋಶ ತಳಿವಿಜ್ಞಾನ (ಸೈಟೋಜೆನಿಟಿಕ್ಸ್), ತಳಿ ಸಂವರ್ಧನೆ ಅಥವಾ ತಳಿ ಉತ್ಪಾದನ ವಿಜ್ಞಾನ (ಪ್ಲಾಂಟ್ ಬ್ರೀಡಿಂಗ್), ಸಸ್ಯ ಶರೀರ ವಿಜ್ಞಾನ (ಪ್ಲಾಂಟ್ ಫಿಸಿಯಾಲಜಿ), ಬೀಜ ವಿಜ್ಞಾನ ಮತ್ತು ತಾಂತ್ರಿಕತೆ (ಸೀಡ್ ಸೈನ್ಸ್ ಅಂಡ್ ಟೆಕ್ನಾಲಜಿ) ಹಾಗೂ ಸಸ್ಯ ಜೈವಿಕ ತಂತ್ರಜ್ಞಾನ (ಬಯೋಟೆಕ್ನಾಲಜಿ). ಸಸ್ಯ ವಿಜ್ಞಾನದ ಉಳಿದ ಭಾಗಗಳಾದ ಸಸ್ಯವರ್ಗೀಕರಣ ವಿಜ್ಞಾನ (ಬೊಟಾನಿಕಲ್ ಕ್ಲಾಸಿಫಿಕೇಶನ್) ಸಸ್ಯಗಳ ರಚನಾ ವಿಜ್ಞಾನ (ಪ್ಲಾಂಟ್ ಅನಾಟಮಿ), ಸಸ್ಯ ಹಾಗೂ ಪರಿಸರಗಳ ಸಂಬಂಧ, ಇವುಗಳ ಜ್ಞಾನವು ಕೃಷಿ ಸುಧಾರಣೆ ಒಂದಿಲ್ಲೊಂದು ವಿಧದಲ್ಲಿ ಅತ್ಯಗತ್ಯ. ಹೀಗೆ ಕೃಷಿವಿಜ್ಞಾನದ ಅನೇಕ ಪ್ರಾಕಾರಗಳ ಪರಿಚಯ ಜ್ಞಾನವಿದ್ದಲ್ಲಿ ಮಾತ್ರ, ಅಧಿಕ ಉತ್ಪತ್ತಿ ಹಾಗೂ ಒಳ್ಳೆಯ ಗುಣಗಳಿರುವ ಫಲ ಕೊಡಬಲ್ಲ ತಳಿಗಳ ವಿಕಾಸ ಮತ್ತು ಅಭಿವೃದ್ಧಿ ಸಾಧ್ಯ.

ಸಸ್ಯ ಜೀವಕೋಶಗಳ ರೂಪ ರಚನೆ, ಹಾಗೂ ಅವುಗಳೊಳಗಿನ ವಿವಿಧ ಅಂಗಕಗಳಾದ ರೈಬೋಸೋಮ್ಸ್, ಮೈಟೋಕಾಂಡ್ರಿಯಾ, ಕ್ಲೋರೋಪ್ಲಾಸ್ಟ್, ವ್ಯಾಕ್ಯುಯೋಲ್ ಹಾಗೂ ನ್ಯೂಕ್ಲಿಯಸ್‌ಗಳ ರೂಪರಚನೆ ಹಾಗೂ ಕಾರ್ಯಗಳ ಅಭ್ಯಾಸವೇ ಜೀವಕೋಶ ವಿಜ್ಞಾನ. ಇವುಗಳಲ್ಲಿ ನ್ಯೂಕ್ಲಿಯಸ್ ಅಥವಾ ಕೇಂದ್ರಕ ಬಿಂದುವಿನಲ್ಲಿರುವ ಅನುವಂಶಿಯ ವಾಹಕಗಳಾದ ವರ್ಣತಂತುಗಳ (ಕ್ರೋಮೋಸೋಮ್ಸ್) ಕಾರ್ಯ ಬಹು ಮುಖ್ಯವೆನಿಸಿದೆ. ಜೀವಿಗಳ ಎಲ್ಲಾ ಗುಣ ಲಕ್ಷಣಗಳು, ಜೈವಿಕ ಕ್ರಿಯೆಗಳು, ಬೆಳೆವಣಿಗೆ ಹಾಗೂ ವಂಶಾಭಿವೃದ್ಧಿ ಕ್ರಿಯೆಗಳು, ಈ ವರ್ಣತಂತುಗಳಲ್ಲಿ ಅಡಕವಾಗಿರುವ ವಂಶವಾಹಿಗಳಿಂದ (ಜೀನ್ಸ್) ನಿಯಂತ್ರಿಸಲ್ಪಡುವುದಲ್ಲದೆ, ಹೆಣ್ಣಿನ ಅಂಡಾಣು (ಎಗ್ ಸೆಲ್) ಹಾಗೂ ಗಂಡಿನ ವೀರ್ಯಾಣು (ಸ್ಪರ್ಮ್ ಸೆಲ್)ವಿನ ವರ್ಣತಂತುಗಳ ಮೂಲಕ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸಲ್ಪಡುತ್ತಿವೆ.

ಅನುವಂಶೀಯ ವಿಜ್ಞಾನದಲ್ಲಿ ವಿವಿಧ ಸಸ್ಯಗಳ ಗುಣಲಕ್ಷಣಗಳ ಕೋರಿಕೆಯಲ್ಲಿ ವಂಶವಾಹಿಗಳ ಪ್ರಕ್ರಿಯೆ, ಪ್ರಭಾವ, ವಂಶವಾಹಿಗಳಿಗೂ ಹಾಗೂ ಅವುಗಳ ಸುತ್ತಣ ಪರಿಸ್ಥಿತಿಗಳಿಗೂ ಇರುವ ಪರಸ್ಪರ ಸಂಬಂಧ, ಹಾಗೂ ಈ ಗುಣಲಕ್ಷಣಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗುವ ಕ್ರಮ, ವಿಧಿ, ಸೂತ್ರ ಮುಂತಾದುವುಗಳನ್ನು ಒಳಗೊಂಡಿದೆ.

ಕೋಶತಳಿ ವಿಜ್ಞಾನದಲ್ಲಿ ಅನುವಂಶೀಯತೆಯ ಭೌತಿಕ ಮೂಲದ ಬಗ್ಗೆ ಹೆಚ್ಚಿನ ತಿಳಿವಳಿಕೆ ದೊರಕುತ್ತದೆ. ಪ್ರತಿಯೊಂದು ಸಸ್ಯ ಕೋಶಗಳಲ್ಲಿ ವರ್ಣತಂತುಗಳ ದ್ವಿಗುಣ ಸ್ಥಿತಿ, ಅವುಗಳಲ್ಲಿ ವಂಶವಾಹಿಗಳ ರೇಖಾತ್ಮಕ ಜೋಡಣೆ, ಸಮ ಸೂತ್ರಣದಲ್ಲಿ (ಮೈಟಾಸಿಸ್) ವಂಶವಾಹಿಗಳ ವಿಭಜನೆ ಮತ್ತು ಅರ್ಧಸೂತ್ರಣದಲ್ಲಿ (ಮಿಯಾಸಿಸ್) ಅದರ ಬೇರ್ಪಡಿಕೆ, ವಂಶವಾಹಿಗಳ ಸಂಲಗ್ನತೆ (ಲಿಂಕೇಜ್), ವಂಶವಾಹಿಗಳ ಹೊಸ ಸಂಯೋಜನೆ (ರಿಕಾಂಬಿನೇಷನ್) ಸಂಭವ ಪ್ರಮಾಣ, ವಂಶವಾಹಿಗಳ ಭೌತಿಕ ನಕ್ಷೆ (ಜೀನ್ ಮ್ಯಾಪಿಂಗ್) ಇವುಗಳ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸುತ್ತದೆ. ಸಸ್ಯ ತಳಿ ಅಭಿವೃದ್ಧಿ ಅಧ್ಯಯನಕ್ಕೆ ಸಸ್ಯದ ವರ್ಣ ತಂತುಗಳ ಸಂಖ್ಯೆ ಮತ್ತು ಸ್ವಭಾವ ಹಾಗೂ ಕೋಶ ವಿಭಜನೆ ಸಮಯದಲ್ಲಿ ಅವುಗಳ ವರ್ತನೆಯ ತಿಳುವಳಿಕೆ ಆಧಾರವಾಗುತ್ತದೆ. ಒಂದು ಸಸ್ಯದ ವರ್ಣತಂತುಗಳ ಹೆಚ್ಚಳ, ಸಸ್ಯಗಳ ಬಾಹ್ಯ ಹಾಗೂ ಅಂತರರೂಪ ರಚನೆ ಹಾಗೂ ಗುಣಧರ್ಮಗಳ ಮೇಲೂ ಪ್ರಭಾವ ಬೀರುತ್ತವೆ. ಬಹುಗುಣಿತ (ಪಾಲಿಪ್ಲಾಯ್ಡ್) ವರ್ಣತಂತುಗಳುಳ್ಳ ಸಸ್ಯಗಳು ಸಾಮಾನ್ಯ ಬಗೆಯ ಅಂದರೆ ದ್ವಿಗುಣಿತ (ಡಿಪ್ಲಾಯ್ಡ್) ವರ್ಣತಂತುಗಳುಳ್ಳ ತಳಿಗಳಿಗಿಂತ ಉತ್ತಮ ಮಟ್ಟದ್ದಾಗಿರುತ್ತದೆ. ಇವುಗಳಲ್ಲಿ ಸ್ವಬಹುಗುಣಿತ (ಆಲ್ಲೋಪಾಲಿ ಪ್ಲಾಯ್ಡ್) ತಳಿಗಳು ಹಾಗು ಅನ್ಯಗುಣಕ ತಳಿಗಳನ್ನು ಅಭಿವೃದ್ಧಿ ಪಡಿಸಿ ಅವುಗಳ ಸ್ವಭಾವ ಹಾಗೂ ಇಳುವರಿಯ ಮೇಲಿನ ಪ್ರಭಾವಗಳನ್ನು ತಿಳಿಯಬಹುದು. ಇದಲ್ಲದೆ ಭಿನ್ನಗುಣಿತ (ಅನುಪ್ಲಾಯ್ಡ್) ತಳಿಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ತಳಿ ಸಂವರ್ಧನೆಯಲ್ಲಿ ವಿಶೇಷ ರೀತಿಯಲ್ಲಿ ಉಪಯೋಗಿಸಬಹುದು.

ಶರೀರ ವಿಜ್ಞಾನದಲ್ಲಿ ಸಸ್ಯ ದೇಹದಲ್ಲಿ ನಡೆಯುವ ದ್ಯುತಿಸಂಶ್ಲೇಷಣೆ, ಬಾಷ್ಪ ವಿಸರ್ಜನೆ, ಉಸಿರಾಟ ಮುಂತಾದ ಕ್ರಿಯೆಗಳ ಕ್ರಿಯಾವಿನ್ಯಾಸವನ್ನು ಅಭ್ಯಸಿಸಿ ಇವು ಹೆಚ್ಚು ಉಪಯುಕ್ತವಾಗುವಂತೆ ಸುಧಾರಿಸಬಹುದು. ಅಲ್ಲದೆ ಸಸ್ಯ ಪೋಷಣೆಯನ್ನೂ ವಿವರವಾಗಿ ಅಭ್ಯಸಿಸಿ ಕೃತಕವಾಗಿ ಪೋಷಕಾಂಶಗಳನ್ನು ಕೊಡುವುದರ ಮೂಲಕ ಸಸ್ಯಗಳ ಇಳುವರಿಯನ್ನು ಹೆಚ್ಚಿಸಬಹುದು. ಸಸ್ಯಗಳಲ್ಲಿ ಅನೇಕ ಹಾರ್ಮೋನ್‌ಗಳ ಉತ್ಪಾದನೆಯನ್ನೂ ತಿಳಿದುಕೊಂಡು ಇವನ್ನು ಕೃತಕವಾಗಿ ತಯಾರು ಮಾಡಿ, ಸಸ್ಯಗಳ ಮೇಲೆ ಸಿಂಪಡಿಸಿ, ಸಸ್ಯದ ಫಲಶಕ್ತಿಯನ್ನು ಹೆಚ್ಚಿಸಲು, ತುಂಡುಗಳಿಂದ ಬೇಗ ಬೇರು ಬಿಡಿಸಿ ಹೆಚ್ಚು ಸಸ್ಯಗಳು ಉತ್ಪಾದನೆಯಾಗುವಂತೆ ಮಾಡಲು, ಸಸ್ಯಗಳನ್ನು ಗಿಡ್ಡವಾಗಿ ಬೆಳೆಯುವಂತೆ ಮಾಡಲು, ಕಳೆಗಳು ತಲೆಯೆತ್ತದಂತೆ ಮಾಡಲು, ಸಸ್ಯದ ವೃದ್ಧಾಪ್ಯವನ್ನು ಮುಂದೆ ಹಾಕಲು, ಹಣ್ಣು ಹಂಪಲುಗಳ ಗುಣಮಟ್ಟವನ್ನು ಹೆಚ್ಚಿಸಲು ಈ ವಿಜ್ಞಾನದ ಅಭ್ಯಾಸದಿಂದ ಈಗಾಗಲೇ ಸಾಧ್ಯವಾಗಿದೆ.

ತಳಿಸಂವರ್ಧನೆ, ಇತರ ಮೂಲ ಸಸ್ಯ ವಿಜ್ಞಾನಗಳ ಅನ್ವಯದಿಂದ ಮಾತ್ರವೆ ಸಮರ್ಪಕವಾಗಿ ನಿರ್ವಹಿಸಬಲ್ಲ ಒಂದು ವ್ಯವಹಾರಿಕ ವಿಜ್ಞಾನ. ತಳಿಸಂವರ್ಧನಾ ವಿಜ್ಞಾನದಲ್ಲಿ, ಒಂದು ಸಸ್ಯದ ಅಥವಾ ಮಾನವನಿಗೆ ಉಪಯುಕ್ತವಾಗುವ ಬೆಳೆಗಳಲ್ಲಿ, ಈಗ ಪ್ರಚಲಿತವಿರುವ ತಳಿಗಳಿಗಿಂತ ಹೆಚ್ಚು ಉತ್ಪಾದಕತೆ ಇರುವ ತಳಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಗಮನ ಹರಿಸಲಾಗುತ್ತಿದೆ. ವ್ಯವಸಾಯದಲ್ಲಿ ಉತ್ತಮ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಲು ಸಸ್ಯದ ಯಾವ ಯಾವ ಉಪಯುಕ್ತ ಲಕ್ಷಣಗಳು ವಂಶಾನುಗತವಾಗಿ ಪೀಳಿಗೆಯಲ್ಲಿ ಕಾಣಿಸುತ್ತವೆ ಎಂಬುದನ್ನು ಪರೀಕ್ಷಿಸಿ ತಿಳಿಯಬೇಕು. ಏಕೆಂದರೆ ಸಾಮಾನ್ಯವಾಗಿ ಎಲ್ಲಾ ಉಪಯುಕ್ತ ಗುಣಲಕ್ಷಣಗಳೂ ಒಂದೇ ತಳಿಯ ಸಸ್ಯಗಳಲ್ಲಿ ಇರುವುದಿಲ್ಲ. ಸಸ್ಯಗಳಿಗೆ ಬರುವ ರೋಗ ಹಾಗೂ ಕೀಟಗಳ ಹಾವಳಿ, ನೀರಿನ ಬರಪರಿಸ್ಥಿತಿ, ವಾತಾವರಣದಲ್ಲಿ ಅತ್ಯಧಿಕ ಉಷ್ಣಾಂಶ ಅಥವಾ ಹೆಚ್ಚು ಚಳಿ ಅಥವಾ ಹಿಮಪಾತ, ಮಣ್ಣಿನಲ್ಲಿ ಸವಳು, ಜವಳು ಹಾಗು ಜೌಗು ಪರಿಸ್ಥಿತಿ, ಇವುಗಳು ಒಂದು ಬೆಳೆಯ ಉತ್ಪಾದಕತೆಯನ್ನು ಕಡಿಮೆ ಮಾಡುತ್ತವೆ. ಇಂತಹ ಕ್ಲಿಷ್ಟ ಪರಿಸ್ಥಿತಿಗೂ ನಿರೋಧಕ ಹೊಂದಿರುವ ತಳಿಗಳನ್ನು ಗುರುತಿಸಿ, ಅವುಗಳ ಉತ್ಪಾದಕತೆ ಕಡಿಮೆ ಇದ್ದರೆ ಸಂಕರಣ ತಂತ್ರದಿಂದ ಉತ್ಪಾದನೆ ಹಾಗೂ ನಿರೋಧಕತೆ ಹೊಂದಿರುವ ತಳಿಗಳನ್ನು ಅಭಿವೃದ್ಧಿಪಡಿಸಬಹುದು.

ವಿವಿಧ ಬೆಳೆಗಳಲ್ಲಿ ಹೆಚ್ಚಿನ ಉತ್ಪಾದಕತೆ ಹೊಂದಿರುವ ಹಾಗೂ ಗ್ರಾಹಕರು ಮತ್ತು ರೈತರುಗಳ ಅಪೇಕ್ಷಿಸುವ ಉತ್ತಮ ಗುಣ ಲಕ್ಷಣಗಳನ್ನು ಹೊಂದಿರುವ ತಳಿಗಳನ್ನು ಅಭಿವೃದ್ಧಿ ಪಡಿಸಲು ಅನೇಕ ವಿಧಾನಗಳನ್ನು ಅನುಸರಿಸಲಾಗುತ್ತದೆ. ಸ್ವಪರಾಗಸ್ಪರ್ಶ, ಅನ್ಯಪರಾಗಸ್ಪರ್ಶ ಹಾಗೂ ನಿರ್ಲಿಂಗ ರೀತಿಯಲ್ಲಿ ಸಂತಾನ ವೃದ್ಧಿಪಡಿಸಿಕೊಳ್ಳಬಲ್ಲ ಸಸ್ಯ ಅಥವಾ ಬೆಳೆಗಳಲ್ಲಿ ಬೇರೆ ಬೇರೆ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಸಾಮಾನ್ಯವಾಗಿ ಹೊಸ ಪರಿಚಯಿತಗಳ ಬಳಕೆ; ಏಕ ಸಸ್ಯ ಆಯ್ಕೆಯ ಶುದ್ಧ ಸಾಲುಸಿದ್ಧಾಂತದ ಅನ್ವಯಿಸುವಿಕೆ; ಸಂಕರಣ ಬಳಸಿ ತಳಿ ಅಭಿವೃದ್ಧಿ ಮಾಡುವ ವಿಧಾನಗಳಾದ ವಂಶಾವಳಿ ವಿಧಾನ, ರಾಶಿ ವಿಧಾನ, ಹಿಂಸಂಕರಣ ವಿಧಾನ ಬಹುಸಂಕರ ವಿಭಾಗ; ಬಹುಗುಣಿತ ತಳಿಗಳ ಉತ್ಪಾದನೆ, ಹಾಗೂ ಇತ್ತೀಚೆಗೆ ಸಂಕರಣ ಓಜದ (ಹಟರೋಸಿಸ್) ಬಳಕೆ ಮಾಡಿಕೊಂಡು ಸಂಕರಣ ತಳಿಗಳ ಅಭಿವೃದ್ಧಿ, ಇವುಗಳು ಸ್ವಪರಾಗಸ್ಪರ್ಶ ಪದ್ಧತಿಯಿಂದ ಸಂತಾನ ವೃದ್ಧಿಪಡಿಸಿಕೊಳ್ಳುವ ಬೆಳೆಗಳಲ್ಲಿ ಅನುಸರಿಸುವ ತಳಿ ಅಭಿವೃದ್ಧಿ ವಿಧಾನಗಳು. ಇದೇ ರೀತಿ ಅನ್ಯಪರಾಗ ಸ್ಪರ್ಶವಿರುವ ಬೆಳೆಗಳಲ್ಲಿ ತಳಿ ಅಭಿವೃದ್ಧಿ ಪಡಿಸಲು, ಗುಂಪು –ಪೀಳಿಗೆ ಆಯ್ಕೆ ವಿಧಾನ, ಹಿಂಸಂಕರಣ ವಿಧಾನ, ಸಂಕರಣ ಬೀಜದ ಬಳಕೆ, ಸಂಕರಣ ತಳಿಗಳ ಉತ್ಪಾದನೆಯಲ್ಲಿ ಪುಂನಿಷ್ಫಲತ್ವ (ಮೇಲ್ ಸ್ಟರಿಲಿಟಿ) ಅಥವಾ ಗಂಡು ನಿರ್ವೀರ್ಯ ತಳಿಗಳ ಬಳಕೆ, ಪುನರಾವರ್ತನೆ ಆಯ್ಕೆ, ಸಜಾತಿ ಹಾಗೂ ವಿಜಾತಿ ಸಂಕರಣ ತಳಿಗಳ ಅಭಿವೃದ್ಧಿ ವಿಧಾನಗಳಲ್ಲದೆ, ಉತ್ಪರಿವರ್ತನೆ ಮೂಲಕ ಅಪೇಕ್ಷಿತ ಗುಣಗಳಿರುವ ತಳಿಗಳನ್ನು ಅಭಿವೃದ್ಧಿ ಪಡಿಸಬಹುದು. ವಿವಿಧ ಮೇವು ಬೆಳೆಗಳಲ್ಲಿ, ಅಥವಾ ನಿರ್ಲಿಂಗ ಪದ್ಧತಿಯನ್ನು ಸಂತಾನವೃದ್ಧಿ ಪಡಿಸಿಕೊಳ್ಳಬಲ್ಲ ಬೆಳೆಗಳಲ್ಲಿ ಅಂತರ ಜಾತಿ ಸಂಕರಣಗಳು, ಮಾತೃ ಸಾಲು ಆಯ್ಕೆ ವಿಧಾನ, ಬಹು ಸಂಕರಣ ಪರೀಕ್ಷೆ ವಿಧಾನ, ಪುನರಾವರ್ತನ ಆಯ್ಕೆ ವಿಧಾನ, ಪ್ರೇರಿತ ಬಹುಗುಣಿಕಗಳ ತಳಿಗಳ ಬಳಕೆ ಮಾಡಬಹುದು.

ಹೊಸ ತಳಿ ಅಭಿವೃದ್ಧಿ ನಂತರ, ತಳಿಯ ಮೌಲ್ಯ ಮಾಪನಕ್ಕಾಗಿ ಈಗಾಗಲೆ ಬೆಳೆಯುತ್ತಿರುವ ಪರಿಚಿತ ತಳಿಗಳೊಡನೆಯ ಹೋಲಿಕೆ ಆವಶ್ಯಕ; ಇದಕ್ಕಾಗಿ ಸೂಕ್ತವಾದ ಪ್ರಯೋಗ ವಿನ್ಯಾಸಗಳು, ಕ್ಷೇತ್ರ ಪ್ರಯೋಗ ತಂತ್ರಗಳು ಹಾಗೂ ಸಾಂಖ್ಯಿಕ ವಿಧಾನಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇವುಗಳನ್ನು ಉಪಯೋಗಿಸಿಕೊಂಡು ವಿವಿಧ ಬೆಳೆಗಳಲ್ಲಿ ಉತ್ತಮ ತಳಿಗಳನ್ನು ರೈತರ ಉಪಯೋಗಕೋಸ್ಕರ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಉತ್ತಮ ಗುಣಲಕ್ಷಣಗಳುಳ್ಳ ತಳಿಗಳ ಉತ್ಪಾದನೆಯಿಂದ ಅನೇಕ ಕಡೆ ಹಸಿರುಕ್ರಾಂತಿ ಆಗಿದೆ. ನಮ್ಮ ಭಾರತ ದೇಶದಲ್ಲಿ ಪಂಜಾಬಿನಲ್ಲಿ ಗೋಧಿ ಉತ್ಪಾದನೆಯಲ್ಲಿ 1966ರಲ್ಲೇ ಅಮೆರಿಕದ ಮೆಕ್ಸಿಕೋ ದೇಶದಿಂದ ಪರಿಚಯಿಸಲ್ಪಟ್ಟ ಗಿಡ್ಡ ಗೋಧಿ ತಳಿಗಳಿಂದ ಹಸಿರು ಕ್ರಾಂತಿಯಾಗಿರುವ ಉದಾಹರಣೆ ಇದೆ. ಇದೇ ರೀತಿ ಫಿಲಿಫೈನ್ಸ್ ದೇಶದಿಂದ ಪರಿಚಯಿಸಲ್ಪಟ್ಟ ಗಿಡ್ಡ ಬತ್ತದ ತಳಿಗಳು, ಆಫ್ರಿಕದಿಂದ ಬಂದಂತ ರಾಗಿ ತಳಿಗಳನ್ನು ಬಳಸಿಕೊಂಡು ರಾಗಿಯಲ್ಲಿ ಬಿಡುಗಡೆಯಾಗಿರುವ ಇಂಡಾಫ್ ರಾಗಿ ತಳಿಗಳು, ಜೋಳ ಹಾಗೂ ಮುಸುಕಿನ ಜೋಳದಲ್ಲಿ ಅಭಿವೃದ್ಧಿ ಪಡಿಸಿದ ಸಂಕರಣ ತಳಿಗಳು, ಹತ್ತಿಯಲ್ಲಿ ಬಿಡುಗಡೆಯಾಗಿರುವ ಸಂಕರಣ ಇತ್ತೀಚೆಗೆ ಸೂರ್ಯಕಾಂತಿ ಬೆಳೆಯಲ್ಲಿ ಬಿಡುಗಡೆಯಾಗಿರುವ ಸಂಕರಣ ತಳಿಗಳು ಹಾಗೂ ಇತರ ದ್ವಿದಳದಾನ್ಯ ಹಾಗೂ ಬೇಳೆಕಾಳು ಬೆಳೆಗಳಲ್ಲಿ ಬಿಡುಗಡೆಯಾಗಿರುವ ಅನೇಕ ಉತ್ತಮ ತಳಿಗಳಿಂದ ನಮ್ಮ ರಾಜ್ಯ ಉತ್ಪಾದನೆಯಲ್ಲಿ ಸ್ವಾವಲಂಬನೆಯತ್ತ ಸಾಗಿದೆ. ಈ ಎಲ್ಲಾ ಸಾಧನೆಗಳು ಕೃಷಿ ಸಸ್ಯವಿಜ್ಞಾನದ ಅನೇಕ ವಿಭಾಗಗಳಲ್ಲಿ ಬೆಳವಣಿಗೆಯ ಫಲ. ಕೃಷಿ ವಿಜ್ಞಾನದ ಆಳವಾದ ಅಧ್ಯಯನ ಉತ್ತಮ ಕೃಷಿಗೆ ತಳಪಾಯ.

(ಎಂ.ಆರ್.ಜಿ.)

**ಕೃಷಿ ಸಹಕಾರ :** ಆರ್ಥಿಕವಾಗಿ ದುರ್ಬಲರಾದವರು ಸಮಾನತೆಯ ತಳಹದಿಯ ಮೇಲೆ ಸಂಘಟಿತರಾಗಿ, ಪರಸ್ಪರ ಸಹಾಯದಿಂದ ತಮ್ಮ ಮೇಲ್ಮೆಯನ್ನು ಸಾಧಿಸಿಕೊಳ್ಳಬೇಕೆಂಬ ಉದ್ದೇಶದಿಂದ ಆರಂಭಿಸಲಾದ ಸಹಕಾರ ಚಳವಳಿ ಕೃಷಿಕ್ಷೇತ್ರವನ್ನೂ ವ್ಯಾಪಿಸಿದೆ. ಕೃಷಿ ಉತ್ಪಾದನೆಯ ಘಟಕಗಳು ಸಾಮಾನ್ಯವಾಗಿ ಚಿಕ್ಕವು. ಕೃಷಿ ಕಾರ್ಯನಿರತರಾಗಿರುವವರು ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಅಷ್ಟೇನೂ ಮುಂದುವರಿದವರಲ್ಲ. ದೇಶದಲ್ಲಿ ವ್ಯಾಪಕವಾಗಿ ಹರಡಿರುವ ಈ ಮಂದಿ ಕೈಗಾರಿಕಾ ನಿರತರಂತೆ ಸಂಘಟಿತರಾಗಿಲ್ಲ. ವ್ಯಕ್ತಿಶಃ ಇವರು ಸಬಲರಲ್ಲ. ಉತ್ಪಾದನೆಗೆ ಅಗತ್ಯವಾದ ಅಂಗಗಳನ್ನು ಹೊಂದಿಸುವುದರಲ್ಲೂ ಉತ್ಪಾದನೆಯಾದ ಪದಾರ್ಥವನ್ನು ಮಾರಾಟ ಮಾಡುವುದರಲ್ಲೂ ಇವರು ಅನೇಕರನ್ನು. ಲಾಭಾಕಾಂಕ್ಷೆಯಿಂದ ಕೂಡಿದವರು ಕೃಷಿಕರನ್ನು ಸುಲಭವಾಗಿ ವಂಚಿಸಬಹುದು. ಅವರ ದೌರ್ಬಲ್ಯದ ದುರುಪಯೋಗ ಪಡೆದುಕೊಂಡು ಅವರನ್ನು ಶೋಷಿಸಬಹುದು. ಇವನ್ನೆಲ್ಲ ತಪ್ಪಿಸಲು ಇರುವ ಉಪಾಯವೊಂದೇ: ಅವರ ಸಂಘಟನೆ, ಕೈಗಾರಿಕೆ, ವ್ಯಾಪಾರ ಮುಂತಾದ ಕ್ಷೇತ್ರಗಳಿಗೆ ಅನ್ವಯಿಸಲಾಗಿರುವ ಸಹಕಾರ ತತ್ತ್ವವನ್ನು ಕೃಷಿಕ್ಷೇತ್ರಕ್ಕೂ ಸುಲಭವಾಗಿ ಅನ್ವಯಿಸಬಹುದಾಗಿದೆ. ವಾಸ್ತವವಾಗಿ ಕೃಷಿಕ್ಷೇತ್ರದಲ್ಲೇ ಇದು ಹೆಚ್ಚಿನ ಯಶಸ್ಸು ಗಳಿಸಿದೆ. ಕೃಷಿಕನಿಗೆ ಉತ್ಪಾದನೆಯ ಸಾಲ ನೀಡಿಕೆ, ಬೀಜ, ಗೊಬ್ಬರ ಉಪಕರಣ ಮೊದಲಾದವುಗಳ ಸರಬರಾಯಿ, ಕೃಷಿ ಉತ್ಪನ್ನದ ಸಂಗ್ರಹ, ಪರಿಷ್ಕರಣ ಮತ್ತು ಮಾರಾಟ, ಕೃಷಿಕನ ಋಣಪರಿಹಾರ ಮತ್ತು ಜಮೀನು ಅಭಿವೃದ್ಧಿಗಾಗಿ ನೆರವು, ಸಹಕಾರಿ ವ್ಯವಸಾಯ–ಈ ರೀತಿಯಾಗಿ ಸಹಕಾರವನ್ನು ಕೃಷಿಯ ಎಲ್ಲ ವಿಭಾಗಗಳಿಗೂ ಅನ್ವಯಿಸಬಹುದು. ಸಹಕಾರದಿಂದ ರೈತ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳದೆ ಇತರರೊಂದಿಗೆ ಸರಿಸಮಾನವಾಗಿ ತನ್ನ ಹಿತಗಳನ್ನು ರಕ್ಷಿಸಿಕೊಳ್ಳಬಹುದು. ಆ ವ್ಯವಸ್ಥೆಯ ಆಡಳಿತದಲ್ಲಿ ಪಾಲ್ಗೊಳ್ಳಬಹುದು ಮತ್ತು ಫಲಗಳನ್ನು ಅನುಭವಿಸಬಹುದು. ಸಹಕಾರ ಸಂಘಗಳ ಬಂಡವಾಳ ಮುಖ್ಯವಾಗಿ ಅವುಗಳ ಸದಸ್ಯರಿಂದಲೇ ಬರುತ್ತದೆ.

ಕೃಷಿಕರ ಸಹಕಾರ ಸಂಘಗಳು 19ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಯುರೋಪ್ ಅಮೆರಿಕಗಳಲ್ಲಿ ವ್ಯಾಪಕವಾಗಿ ಸ್ಥಾಪಿತವಾದುವು. ಅವುಗಳ ಕಲಾಪಗಳು ಎಲ್ಲ ಕಡೆಯೂ ಒಂದೇ ರೀತಿಯಾಗಿರಲಿಲ್ಲ. ಆದರೆ ರೈತರಿಗೆ ಅಗತ್ಯವಾದ ಸೌಲಭ್ಯಗಳನ್ನು

ನೀಡಲು ಪ್ರಚಲಿತವಾಗಿದ್ದ ಸಾಧನಗಳು ಎಲ್ಲೆಲ್ಲಿ ಅಸಮರ್ಪಕವಾಗಿದ್ದುವೋ ಆ ಕ್ಷೇತ್ರಗಳಲ್ಲೆಲ್ಲ ಅವನ್ನು ಒದಗಿಸುವುದು ಇವುಗಳ ಉದ್ದೇಶವಾಗಿತ್ತು. ಉದ್ದರಿ, ವಿಮೆ, ಮಾರಾಟ, ಕೃಷಿಗೆ ಅಗತ್ಯವಾದ ವಸ್ತುಗಳ ಖರೀದಿ–ಇವು ಸಹಕಾರ ಸಂಘಗಳು ನೀಡತೊಡಗಿದ ಸೇವೆಗಳು.

ಮೊತ್ತಮೊದಲಿಗೆ ಸಂಘಗಳು ಸ್ಥಳೀಯವಾಗಿದ್ದುವು. ಆರ್ಥಿಕ ವ್ಯವಸ್ಥೆ ಬೆಳೆದಂತೆ ಕೃಷಿಕರ ಅಗತ್ಯಗಳು ಹೆಚ್ಚು ಸಂಕೀರ್ಣವಾಗತೊಡಗಿದಾಗ ಸಹಕಾರವೂ ಬೆಳೆಯಿತು. ಅನೇಕ ಸ್ಥಳೀಯ ಸಂಘಗಳು ಒಕ್ಕೂಟಗಳನ್ನು ರಚಿಸಿಕೊಂಡು ತಮ್ಮ ಸೇವೆಯನ್ನು ವಿಸ್ತರಿಸಿದುವಲ್ಲದೆ ಚೌಕಾಸಿ ಶಕ್ತಿಯನ್ನೂ ಹೆಚ್ಚಿಸಿಕೊಂಡುವು. 20ನೆಯ ಶತಮಾನದ ಪ್ರಥಮಾರ್ಧದಲ್ಲಿ ಇವು ತಮ್ಮ ಖರೀದಿ ಕಾರ್ಯವನ್ನು ವ್ಯಾಪಕಗೊಳಿಸಿದುವಲ್ಲದೆ, ಕೃಷಿ ಉತ್ಪನ್ನಗಳನ್ನು ಸಂವೇಷ್ಟಿಸುವ ಮತ್ತು ಪರಿಷ್ಕರಿಸುವ, ಕೃಷಿಕರಿಗೆ ಬೇಕಾದ ವಸ್ತುಗಳನ್ನು ತಯಾರಿಸುವ ಕಾರ್ಯಗಳಲ್ಲೂ ನಿರತವಾದುವು. ಎರಡನೆಯ ಮಹಾಯುದ್ಧಾನಂತರ ಕಾಲದ ತಾಂತ್ರಿಕ ಮತ್ತು ಕೈಗಾರಿಕಾ ವಿಸ್ತರಣದೊಂದಿಗೆ ಸಹಕಾರ ಸಂಘಗಳ ಕ್ಷೇತ್ರವೂ ವಿಸ್ತಾರವಾಯಿತು.

**ಭಾರತದಲ್ಲಿ :** ಭಾರತದಲ್ಲಿ 19ನೆಯ ಶತಮಾನದ ಉತ್ತರಾರ್ಧದಲ್ಲಿ ಹಳ್ಳಿಗಳ ಪರಿಸ್ಥಿತಿ ಬಹು ಶೋಚನೀಯವಾಗಿತ್ತು. ಗ್ರಾಮಗಳಲ್ಲಿ ಬಡತನ ಹೆಚ್ಚಾಗಿ ಸಾಲದ ಹೊರೆ ವ್ಯಾಪಕವಾಗತೊಡಗಿತ್ತು. ಸಾಗುವಳಿಯ ಭೂಮಿ ಧನಿಕರ ಕೈವಶವಾಗಹತ್ತಿತು. ಇಂಥ ಪರಿಸ್ಥಿತಿಯನ್ನು ಹೋಗಲಾಡಿಸುವ ಉದ್ದೇಶದಿಂದ ಆಗಿನ ಸರ್ಕಾರ 1904ರಲ್ಲಿ ಸಹಕಾರಿ ಪತ್ತಿನ ಸಂಘಗಳ ಕಾಯಿದೆಯನ್ನು ಜಾರಿಗೆ ತಂದು ರೈತರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಪೂರೈಸುವ ವ್ಯವಸ್ಥೆ ಮಾಡಿತು. ಈ ಕಾಯಿದೆಯಿಂದ ದೇಶದಲ್ಲಿ ಕೃಷಿ ಸಹಕಾರ ಅಧಿಕೃತವಾಗಿ ಪಾದಾರ್ಪಣೆ ಮಾಡಿದಂತಾಯಿತು. ಮುಂದೆ 1912ರ ಕಾಯಿದೆಯನ್ವಯ ವಿವಿಧೋದ್ದೇಶ ಸಂಘಗಳು ಸ್ಥಾಪನೆಯಾದುವು. 1929–30ರವರೆಗೆ ನಿರೀಕ್ಷಣೆಗಿಂತ ಹೆಚ್ಚಿನ ಸಂಘಗಳು ಸ್ಥಾಪನೆಯಾದರೂ ಸಹಕಾರಿ ಆಂದೋಳನ ಆರ್ಥಿಕ ಮುಗ್ಗಟ್ಟಿನಿಂದ ಸ್ವಲ್ಪಮಟ್ಟಿಗೆ ಕುಂಠಿತಗೊಂಡರೂ ಎರಡನೆಯ ಮಹಾಯುದ್ಧದ ಸಮಯದಲ್ಲಿ ಮತ್ತೆ ಚೇತರಿಸಿಕೊಂಡಿತು.

ಅಂದು ಪತ್ತು ಪೂರೈಕೆಗಾಗಿ ಜನ್ಮತಾಳಿದ ಸಹಕಾರ ಚಳವಳಿ ವಿವಿಧ ಮುಖಗಳಲ್ಲಿ ಬೆಳೆದು ಇಂದು ಕೃಷಿಕರ ಸರ್ವತೋಮುಖವಾದ ಚಟುವಟಿಕೆಗಳಲ್ಲಿ ವೃದ್ಧಿಯಾಗಿದೆ. ಸಣ್ಣಪುಟ್ಟ ರೈತರು ದೊಡ್ಡ ರೈತರಷ್ಟು ಅನುಕೂಲಸ್ಥರಲ್ಲ. ಅವರು ತಮ್ಮ ಕಸುಬನ್ನು ಅಭಿವೃದ್ಧಿಪಡಿಸಿಕೊಂಡು ಸಾಕಷ್ಟು ಆದಾಯ ಪಡೆದು ತಮ್ಮ ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳಲು ಶಕ್ತರಲ್ಲ. ಒಂದೇ ಹಳ್ಳಿಯ ಅಥವಾ ಅಕ್ಕಪಕ್ಕದ ಕೆಲವು ಗ್ರಾಮಗಳ ಇಂಥ ಸಣ್ಣಪುಟ್ಟ ರೈತರು ತಮ್ಮ ಸ್ವಸಹಾಯದಿಂದ ತಮ್ಮ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಕೃಷಿ ಸಹಕಾರ ಸಂಘಗಳನ್ನು ರಚಿಸಿಕೊಳ್ಳಬಹುದು. ಇಂಥ ಸಹಕಾರ ಸಂಘಗಳು ಬೇಸಾಯ ಸಹಕಾರ ಅಂದರೆ ಕೃಷಿ ಉತ್ಪಾದನೆಯಿಂದ ಹಿಡಿದು ಉತ್ಪನ್ನವನ್ನು ಮಾರಾಟ ಮಾಡುವವರೆಗಿನ ಎಲ್ಲ ಹಂತಗಳಿಗೂ ವ್ಯಾಪಿಸಿವೆ. ಸಹಕಾರ ವ್ಯವಸ್ಥೆಗೊಳಪಟ್ಟ ದುರ್ಬಲ ರೈತರಿಗೆ ಹಣದ ಜೊತೆಗೆ ಅವರಿಗೆ ಬೇಕಾದ ಉತ್ಪಾದನ ಸಾಮಗ್ರಿಗಳನ್ನೊದಗಿಸುವುದು, ಅವರಿಗೆ ಬೇಕಾದ ತಾಂತ್ರಿಕ ಜ್ಞಾನವನ್ನು ದೊರಕಿಸಲು ಸಹಾಯ ಮಾಡುವುದು, ಬೆಳೆದ ಫಸಲನ್ನು ಅನುಕೂಲ ಧಾರಣೆಗೆ ಮಾರಾಟ ಮಾಡಲು ಸಹಾಯ ಮಾಡುವುದು–ಇವೇ ಮುಂತಾದ ಚಟುವಟಿಕೆಗಳಿಂದ ರೈತರ ಉದ್ಯೋಗ ಲಾಭದಾಯಕವಾಗಲು ಸಹಾಯ ಮಾಡಿದೆ. ಹಾಲು ಸಂಗ್ರಹಣೆ ಮತ್ತು ಮಾರಾಟ ಸಹಕಾರ ಸಂಘ, ಮೊಟ್ಟೆ ಮಾರಾಟ ಸಹಕಾರ ಸಂಘ–ಇವು ಈ ದಿಸೆಯಲ್ಲಿ ತಮ್ಮ ಸದಸ್ಯರಿಗೆ ಉತ್ಪಾದನಾಕಾರ್ಯಕ್ಕೆ ಆವಶ್ಯವಾದ ಸಾಮಗ್ರಿಗಳನ್ನು ನ್ಯಾಯಬೆಲೆಗೆ ಒದಗಿಸಿ, ಅವರ ಉತ್ಪಾದನೆಯನ್ನು ಸಂಗ್ರಹಿಸಿ ಮಾರುಕಟ್ಟೆಯಲ್ಲಿ ವಿತರಣೆಗೆ ತಕ್ಕ ಏರ್ಪಾಡು ಮಾಡಿ ಸದಸ್ಯರ ಆರ್ಥಿಕಸ್ಥಿತಿ ಉತ್ತಮಗೊಳ್ಳಲು ಬಹುಮಟ್ಟಿಗೆ ಸಹಕಾರಿಯಾಗಿವೆ. ಇದೇ ರೀತಿ ಅನೇಕ ಕಡೆ ನೀರಾವರಿ ಸಹಕಾರ ಸಂಘಗಳು, ಭೂಹಿಡುವಳಿಗಳನ್ನು ಒಂದುಗೂಡಿಸುವ ಸಹಕಾರ ಸಂಘಗಳು ಮುಂತಾದವು ತಲೆ ಎತ್ತಿ ಕೃಷಿಕರಿಗೆ ಬಹಳ ನೆರವಾಗುತ್ತಿವೆ.

ದೇಶದ ಸ್ವಾತಂತ್ರ್ಯದ ಅನಂತರ ಸಹಕಾರಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಸಹಕಾರ ಸಂಘಗಳು ಸರ್ಕಾರದ ಅಚ್ಚುಮೆಚ್ಚಿನ ರಂಗವಾಗಿ ವಿವಿಧ ರೀತಿಯಿಂದ ಕೃಷಿಯ ಉನ್ನತಿಗೆ ಕಾರಣವಾಗಿವೆ. ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಸೇವಾ ಸಹಕಾರಿ ಸಂಘಗಳಾಗಿ ರೈತರಿಗೆ ಬೆಳೆಸಾಲ, ರಾಸಾಯನಿಕ ಗೊಬ್ಬರ, ಬೆಳೆಗಳ ರೋಗಾದಿಗಳಿಗೆ ಔಷಧ, ಸಲಕರಣೆಗಳು, ಉತ್ತಮ ಬೀಜ ಮುಂತಾದವನ್ನು ಪೂರೈಸಿ ಕೃಷಿಯಲ್ಲಿ ಕ್ರಾಂತಿಯನ್ನು ರೂಪಿಸುವುದರಲ್ಲಿ ಮುಖ್ಯಪಾತ್ರ ವಹಿಸಿವೆ. 1967–68ರಲ್ಲಿ 1,71,800 ಪ್ರಾಥಮಿಕ ಸಂಘಗಳು, 341 ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಮತ್ತು 25 ರಾಜ್ಯ ಮಧ್ಯವರ್ತಿ ಬ್ಯಾಂಕುಗಳೇ ಇದಕ್ಕೆ ಕಾರಣವೆನ್ನಬಹುದು. ಈ ದಿಸೆಯಲ್ಲಿ ಇನ್ನೊಂದು ಮಹತ್ಸಾಧನೆಯೆಂದರೆ ಸಂಸ್ಕರಣ ಸಹಕಾರ ಸಂಘಗಳ ಸ್ಥಾಪನೆ. ಇವುಗಳಲ್ಲಿ ಸಕ್ಕರೆ ಉತ್ಪಾದನಾ ಸಹಕಾರ ಸಂಘಗಳು ಮುಖ್ಯವಾದವು. ಇವು ದೇಶದಲ್ಲಿಯ ಒಟ್ಟು ಉತ್ಪಾದನೆಯ 1/3 ರಷ್ಟು ಸಕ್ಕರೆಯನ್ನು ಉತ್ಪಾದಿಸುತ್ತವೆ. ಈಗ ದೇಶದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಗಳು, ಹತ್ತಿ ಗಿರಣಿಗಳು, ಬತ್ತ ಸಂಸ್ಕರಿಸುವ ಗಿರಣಿಗಳು, ಎಣ್ಣೆ ಗಿರಣಿಗಳು ಮತ್ತು ಹಣ್ಣು ತರಕಾರಿ ಸಂಸ್ಕರಣ ಸಂಘಗಳು ಸ್ಥಾಪಿತವಾಗಿವೆ. ಇದೇ ರೀತಿ ಹಾಲು, ಮೀನುಗಾರಿಕೆ, ನೀರಾವರಿ ಮುಂತಾದ ಸಂಘಗಳು ಆರಂಭವಾಗಿವೆ.

ಕೃಷಿ ಸಹಕಾರದ ಇನ್ನೊಂದು ಮುಖ ಸಹಕಾರಿ ಬೇಸಾಯ. ಸಣ್ಣಪುಟ್ಟ ರೈತರು ತಮ್ಮ ಜಮೀನುಗಳನ್ನು ಒಂದುಗೂಡಿಸಿ ಒಟ್ಟಾಗಿ ಬೇಸಾಯ ಮಾಡಿ, ಬೃಹದ್ಗಾತ್ರ ಬೇಸಾಯದ ಅನುಕೂಲಗಳನ್ನೆಲ್ಲ ಪಡೆಯುವಂತೆ ಮಾಡುವುದು ಸಹಕಾರಿ ಬೇಸಾಯದ ಮೂಲತತ್ತ್ವ. ವ್ಯಕ್ತಿಗಳ ಆಸ್ತಿಯ ಹಕ್ಕುಗಳಿಗೆ ಧಕ್ಕೆ ಬಾರದಂತೆ, ಆದರೆ ಸಾಮೂಹಿಕ ಬೇಸಾಯದ ಫಲ ದೊರಕುವಂತೆ ಮಾಡುವುದು ಇದರಿಂದ ಸಾಧ್ಯವಾಗುತ್ತದೆ. ಇದಕ್ಕೆ ಪಂಚವಾರ್ಷಿಕ ಯೋಜನೆಗಳಲ್ಲಿ ಹೆಚ್ಚು ಪ್ರೋತ್ಸಾಹ ನೀಡಲಾಗಿದೆ. ಆಯ್ದ ಕೆಲವು ಪ್ರದೇಶಗಳಲ್ಲಿ ತಲಾ 10 ಸಹಕಾರ ಸಂಘಗಳಿರುವ ಪಥದರ್ಶಕ ಪ್ರಾಯೋಜನೆಗಳನ್ನು (ಪೈಲಟ್ ಪ್ರಾಜೆಕ್ಟ್ಸ್) ಪ್ರಾರಂಭಿಸಲಾಯಿತು.

ಭಾರತದಲ್ಲಿ ಸಹಕಾರ ಬೇಸಾಯ ಪದ್ಧತಿಯ ಬೆಳವಣಿಗೆ ಕುಂಠಿತವಾಗಿರುವುದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವು: 1 ಸಹಕಾರಿ ಬೇಸಾಯ ಸಂಘಕ್ಕೆ ರೈತ ತನ್ನ ಹಿಡಿತದಲ್ಲಿರುವ ಜಮೀನನ್ನು ಒಪ್ಪಿಸಲು ಇಷ್ಟಪಡುವುದಿಲ್ಲ. ಇದಕ್ಕೆ ಕಾರಣವೆಂದರೆ, ಅವನ ಜೀವನದ ಯಾವ ತುರ್ತುಪರಿಸ್ಥಿತಿಯಲ್ಲಾದರೂ ಅವನಿಗೆ ಏಕಮಾತ್ರ ರಕ್ಷಣೆಯಾಗಿರುವ, ಅವನ ಜೀವನೋಪಾಯದ ಆಸರೆಯಾಗಿರುವ ಭೂಮಿಗೆ ಅವನು ತುಂಬ ಅಂಟಿಕೊಂಡಿದ್ದಾನೆ. 2 ಹೆಚ್ಚು ಇಳುವರಿ ಪಡೆಯುವುದರಲ್ಲಿ ಈಗ ಇರುವ ಸಹಕಾರಿ ಬೇಸಾಯ ಸಂಘಗಳು ವಿಫಲವಾಗಿವೆ. ಉತ್ತಮ ಬೇಸಾಯಕ್ಕೆ ಈ ಸಂಘಗಳನ್ನು ನಿದರ್ಶನವಾಗಿಸಲಾಗದು. ಇವುಗಳ ಕಾರ್ಯದಕ್ಷತೆಯ ವಿಚಾರವಾಗಿ ತನಗೆ ಸಂಪೂರ್ಣ ನಂಬಿಕೆ ಬಂದ ಹೊರತು ಒಬ್ಬ ರೈತ ತನ್ನ ಜಮೀನಿನ ಅಧಿಕಾರವನ್ನು ಅಂದರೆ ಅದರ ಭವಿಷ್ಯವನ್ನು ಸಹಕಾರಿ ಬೇಸಾಯ ಸಂಘಕ್ಕೆ ಬಿಟ್ಟುಕೊಡಲು ಒಪ್ಪಲಾರ. ಆದ್ದರಿಂದ ಒಬ್ಬ ರೈತ ತನ್ನ ಜಮೀನನ್ನು ಒಂದು ಸಹಕಾರಿ ಬೇಸಾಯ ಸಂಘಕ್ಕೆ ಒಪ್ಪಿಸುವಂತೆ ಅವನನ್ನು ಪ್ರೇರೇಪಿಸಬೇಕಿದ್ದರೆ ಸಣ್ಣ ಬೇಸಾಯಗಾರನ ಕೃಷಿಕಾರ್ಯಕ್ಕಿಂತ ಅದು ಹೆಚ್ಚು ದಕ್ಷವಾಗಿರಬೇಕು. 3 ಸಹಕಾರಿ ಬೇಸಾಯ ಸ್ವಪ್ರೇರಣೆಯಿಂದ ಕೂಡಿರಬೇಕು. ತಾತ್ತ್ವಿಕವಾಗಿಯೇನೂ ಇದು ಸರಿ. ಆದರೆ ಪ್ರಾಯೋಗಿಕ ಅಂಶವನ್ನು ಗಮನಿಸಿದಾಗ ಎಲ್ಲ ರೈತರೂ ಸ್ವಪ್ರೇರಣೆಯಿಂದ ಒಟ್ಟಿಗೆ ಸೇರುವುದಿಲ್ಲವಾದ ಕಾರಣ ಸಹಕಾರಿ ಬೇಸಾಯ ಸಂಘವನ್ನು ಸ್ಥಾಪಿಸುವುದು ಸುಲಭವಾಗುತ್ತಿಲ್ಲ. 4 ಸಹಕಾರಿ ಬೇಸಾಯ ಕ್ರಮ ಲಾಭದಾಯಕವಾಗಿಲ್ಲದ ಹಿಡುವಳಿಯ ಸಮಸ್ಯೆಗೆ ಏಕೈಕ ಪರಿಹಾರ ಮಾರ್ಗ–ಎನ್ನುವವರಿದ್ದಾರೆ. ಇದು ನಿಜವಾಗಬೇಕಾದರೆ ಆರ್ಥಿಕವಲ್ಲದ ಹಿಡುವಳಿಗಳು ಅಕ್ಕಪಕ್ಕದಲ್ಲೇ ಇರಬೇಕು. ಆದರೆ ಪರಿಸ್ಥಿತಿ ಹೀಗಿಲ್ಲ. ಇದಲ್ಲದೆ ಇಳುವರಿಯನ್ನು ಹಂಚಿಕೊಳ್ಳಲು ಯಾವ ತೃಪ್ತಿಕರವಾದ ಉಪಾಯವನ್ನೂ ಕಂಡು ಹಿಡಿದಿಲ್ಲ. ವ್ಯವಸಾಯ ಕ್ಷೇತ್ರದಲ್ಲಿ ಅನೇಕ ವೇಳೆಗಳಲ್ಲಿ ಭೂಮಿಯ ವಿಸ್ತಾರಕ್ಕೂ ಇಳುವರಿಗೂ ಪರಸ್ಪರ ಸಂಬಂಧವಿಲ್ಲವೆಂಬುದು ಗಮನಿಸಬೇಕಾದ ವಿಚಾರ. 5 ಈ ಎಲ್ಲ ಅಂಶಗಳಿಗಿಂತ ಹೆಚ್ಚಾಗಿ, ಸಹಕಾರ ಬೇಸಾಯವೆಂಬುದು ಅತ್ಯಂತ ದೊಡ್ಡ ಮಟ್ಟದ ಸಹಕಾರಕಾರ್ಯ. ಆದ್ದರಿಂದ ಸಹಕಾರ ಬೇಸಾಯ ಸಾಧ್ಯವಾಗಬೇಕಾದರೆ ಸಹಕಾರದ ಉಳಿದ ಅಂಶಗಳಾದ ಸಹಕಾರ ಉದ್ದರಿ, ಮಾರಾಟ ಸಹಕಾರ, ಸೇವಾ ಸಹಕಾರ ಮುಂತಾದುವು ಸಾಕಷ್ಟು ಅಭಿವೃದ್ಧಿ ಹೊಂದಬೇಕು.

ಈಗಿನ ಪರಿಸ್ಥಿತಿಯಲ್ಲಿ ಸಹಕಾರ ಪದ್ಧತಿಯ ಬೆಳವಣಿಗೆ ಅಷ್ಟೊಂದು ಆಶಾದಾಯಕವಾಗಿ ತೋರುವುದಿಲ್ಲ. ಇದನ್ನು ಆಚರಣೆಗೆ ತರುವಲ್ಲಿ ಇರುವ ವ್ಯಾವಹಾರಿಕ ಕಷ್ಟಗಳಿಂದಾಗಿ ಸಹಕಾರ ಬೇಸಾಯ ಪದ್ಧತಿ ಮಾತ್ರವಲ್ಲದೆ, ಉದ್ದರಿ, ಮಾರಾಟ ಮತ್ತು ಸೇವಾ ಸಹಕಾರ ಸಂಸ್ಥೆಗಳು ತಮ್ಮ ಪ್ರಯತ್ನಗಳಲ್ಲಿ ಸಾಫಲ್ಯ ಗಳಿಸಿಲ್ಲ. ಆದರೆ ಅವು ಸಫಲತೆಯನ್ನು ಸಾಧಿಸಬೇಕಾಗಿದೆ. ಏಕೆಂದರೆ ಸಹಕಾರ ಚಳವಳಿ ವಿಫಲವಾದರೆ ಹಳ್ಳಿಗಳಿಂದ ಕೂಡಿದ ಭಾರತದ ಭವಿಷ್ಯತ್ತಿನ ಆಶೆಯೇ ನಷ್ಟವಾದಂತೆ. ಕೃಷಿ ಅಭಿವೃದ್ಧಿ ಸಹಕಾರದಿಂದ ಸಾಧ್ಯ. ಅದರಿಂದ ರೈತನ ಏಳಿಗೆ ಮಾತ್ರವಲ್ಲದೆ ದೇಶದ ಅಭ್ಯುದಯಕ್ಕೆ ಭದ್ರ ತಳಹದಿಯನ್ನು ಹಾಕಿದಂತೆ ಆಗುತ್ತದೆ. ಕೃಷಿರಂಗದಲ್ಲಿ ಸಹಕಾರ ಪದ್ಧತಿಯ ಪೂರ್ಣ ಫಲ ದೊರೆಯಲು ದೀರ್ಘಕಾಲ ಬೇಕಾಗುತ್ತದೆ. ಆದರೂ ಅದು ಯಶಸ್ವಿಯಾಗುವಂತೆ ಪ್ರಯತ್ನಿಸುವುದು ಅಗತ್ಯ.

ಇದು ಜನತೆಯ ಸಹಕಾರ ಆಂದೋಲನವಾಗದೆ ಬಹುಪಾಲು ಸರ್ಕಾರದ ಆಂದೋಲನವಾಗಿಯೇ ಇನ್ನೂ ಉಳಿದಿದೆ. ದೇಶದ ಪ್ರಜೆಗಳಲ್ಲಿ ಸ್ವಾವಲಂಬನೆ, ಸ್ವಯಂಪ್ರೇರಣೆ, ಸಮನ್ವಯ, ನಿಸ್ವಾರ್ಥತೆ, ಪ್ರಾಮಾಣಿಕತೆ, ಮುಂದಾಳುತನ ಇವುಗಳ

ಕೊರತೆಯನ್ನು ನಿವಾರಿಸಿದಲ್ಲಿ ಕೃಷಿರಂಗದಲ್ಲಿ ಅಬಾಧಿತವಾಗಿ ಪ್ರಗತಿಪರ ರೀತಿಯಲ್ಲಿ ಗ್ರಾಮಾಂತರ ಜನರ ಏಳ್ಗೆಗೆ ಸಹಕಾರ ಸಹಾಯವಾಗಬಲ್ಲುದು.

(ಎಸ್.ಎಂ.ವಿ.; ಎಸ್.ಸಿ.ಎಚ್.; ಆರ್.ಆರ್ಎಂ.)

**ಕೃಷ್ಣ :** ವಿಷ್ಣುವಿನ ದಶಾವತಾರಗಳಲ್ಲಿ ಎಂಟನೆಯದು. ನಿಗಮದ ನಾರಾಯಣ, ವಿಷ್ಣು, ವಾಸುದೇವ, ಮಹಾಭಾರತದ ದಿವ್ಯಪುರುಷ, ಭಾಗವತ ಪುರಾಣದ ದೇವರು, ಭಗವದ್ಗೀತೆಯ ಗುರು, ಭಾಗವತ ಧರ್ಮದ ಅಧಿದೈವ, ಅಸುರ ಸದೃಶರಾದ ಮದಿಷ್ಠ ಅರಸರನ್ನೆಲ್ಲಾ ತನ್ನವರೆನ್ನದೆ ಅನ್ಯರೆನ್ನದೆ ಕೊಂದು ಸಾಮಾನ್ಯ ಜನಕ್ಕೆ ಕ್ಷೇಮವನ್ನು ತಂದ ದೈತ್ಯಾಂತಕ; ಸಾಧುಸಂತರ ಮನಸ್ಸನ್ನು ಸೂರೆಗೊಂಡು, ಇಂದಿಗೂ ಸೂರೆಗೊಳ್ಳುತ್ತಿರುವ ಪ್ರೇಮಮೂರ್ತಿ. ಇಂದಿಗೂ ಜನ ಅಕ್ಕರೆಯಿಂದ ನೆನೆದು ಪೂಜಿಸಿ ಸುಖ ಕಾಣುತ್ತಿರುವ ಅವತಾರ ಪುರುಷ. ಮಂತ್ರದಂತಿರುವ ಶ್ರೀಕೃಷ್ಣನೆಂಬ ಹೆಸರನ್ನು ಹಿಂಜಿ ಎಳೆಎಳೆಯಾಗಿ ಬಿಡಿಸಿ ಇದು ಸಂಕೇತಿಸುವ ಪರಮಸತ್ತ್ವದ ಐತಿಹಾಸಿಕಾಂಶವೆಷ್ಟು ಆಧ್ಯಾತ್ಮಿಕಾಂಶವೆಷ್ಟು ಎಂಬುದನ್ನು ಬಿಡಿಸಿ ಸುಲಭವಾಗಿ ಹೇಳಲಾಗುವುದಿಲ್ಲ. ಮಹಾಭಾರತದ ಯುದ್ಧದ ಕಾಲ ಪ್ರ.ಶ.ಪೂ. ಸು. 3000 ವರ್ಷಗಳಿಂದ 1400 ವರ್ಷಗಳ ತನಕ ವಿದ್ವಾಂಸರ ಜಿಜ್ಞಾಸೆಯಲ್ಲಿ ಆಂದೋಲಿತವಾಗುತ್ತಿದೆ. ಶ್ರೀಕೃಷ್ಣನ ಜೀವಿತ ಕಾಲ ಇದರೊಂದಿಗೆ ಸಮ್ಮಿಳಿತವಾಗಿದೆ. ಹೀಗೆ ಕನಿಷ್ಠ ಪಕ್ಷ ಸುಮಾರು 3,500 ವರ್ಷಗಳ ಹಿಂದೆ ಬದುಕಿದ್ದನೆಂದು ಊಹಿಸಬಹುದಾದ ಈ ಮಹಾಪುರುಷನನ್ನು ನಮ್ಮ ಭಾವನಾ ದೃಷ್ಟಿಗೆ ಲೌಕಿಕ ಬುದ್ಧಿಯನ್ನು ಅಳವಡಿಸಿ, ನೋಡಿದರೆ ಶ್ರೀಕೃಷ್ಣನೆಂಬ ಒಬ್ಬ ಐತಿಹಾಸಿಕ ಪುರುಷ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾನೆ. ಜೊತೆಗೆ ಈತ ದೈವ ಪಟ್ಟಕ್ಕೆ ಏರಿರುವುದು ಗೋಚರಿಸುತ್ತದೆ. ಮಹಾಭಾರತ ಪುರಾಣಗಳಲ್ಲದೆ ವೇದದಲ್ಲೂ ಬೌದ್ಧ, ಜೈನ, ಸಾಹಿತ್ಯಗಳಲ್ಲೂ ಕೃಷ್ಣನ ಹೆಸರು ಪರಮಪೂಜ್ಯ ಸ್ಥಾನದಲ್ಲಿ ಕಾಣಸಿಗುತ್ತದೆ.

ಋಗ್ವೇದ ಮತ್ತು ಕೌಶೀತಕಿ ಬ್ರಾಹ್ಮಣಗಳಲ್ಲಿ ಕೃಷ್ಣ ಆಂಗೀರಸನೆಂಬ ಮಂತ್ರ ದ್ರಷ್ಟಾರನ ಉಲ್ಲೇಖವಿದೆ. ಐತರೇಯ ಆರಣ್ಯಕದಲ್ಲಿ ಕೃಷ್ಣ ಹಾರೀತನೆಂಬ ಆಚಾರ್ಯನ ಹೆಸರು ಕಂಡುಬರುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಕೃಷ್ಣನ ಹೆಸರು ದೇವಕೀಪುತ್ರನೆಂಬ ವಿಶೇಷಣದೊಂದಿಗೆ ಗೋಚರಿಸುತ್ತದೆ. ಮಹಾಭಾರತದಲ್ಲಾಗಲೀ, ಪುರಾಣದಲ್ಲಾಗಲೀ, ಕೃಷ್ಣ ಆಂಗೀರಸ, ಕೃಷ್ಣ ಹಾರೀತರ ಹೆಸರುಗಳು ಬಾರವು. ದೇವಕೀಪುತ್ರನಾದ ಕೃಷ್ಣನೇನೋ ಈ ಇತಿಹಾಸ ಪುರಾಣಗಳಲ್ಲಿ ಗೋಚರಿಸುತ್ತಾನೆ. ಆದರೆ ಉಪನಿಷತ್ತಿನ ಕೃಷ್ಣ ಘೋರ ಆಂಗಿರಸನ ಶಿಷ್ಯ. ಇತಿಹಾಸ ಪುರಾಣಗಳಲ್ಲಿ ಕೃಷ್ಣ ಸಾಂದೀಪಿನಿ ಗರ್ಗರ ಶಿಷ್ಯ. ಭಗವದ್ಗೀತೆಯ ಉಪದೇಶಕ್ಕೂ ಛಾಂದೋಗ್ಯದ ಉಪದೇಶಕ್ಕೂ ಕೆಲವು ಸಾಮ್ಯಗಳಿವೆ ಎಂಬ ಕಾರಣದಿಂದ ಆ ದೇವಕೀಪುತ್ರ ಕೃಷ್ಣನೇ ಭಗವದ್ಗೀತೆಯ ಕೃಷ್ಣನೆಂದು ಕೆಲವರು ಊಹಿಸಲು ಅವಕಾಶವಿದೆ. ಆದರೆ ಗೀತೆಯಲ್ಲಿ ಎಲ್ಲೂ ಘೋರ ಆಂಗಿರಸನ ಮಾತು ಬರುವುದಿಲ್ಲ. ತನ್ನ ಗುರುವಿನ ಉಪದೇಶವನ್ನೇ ಕೃಷ್ಣ ಪ್ರಸರಿಸುತ್ತಿರುವಾಗ ಆ ಗುರುವನ್ನು ಸ್ಮರಿಸದೇ ಇರುವುದು ಸೋಜಿಗವೇ ಸರಿ. ಅಲ್ಲದೇ ಗೀತೆಯಲ್ಲಿ ಎಲ್ಲ ಉಪನಿಷತ್ತುಗಳ ಸಾರವು ಕಂಡುಬರುತ್ತದೆ. ಆದುದರಿಂದ ಇವರಿಬ್ಬರು ಒಂದೇ ಎನ್ನುವ ವಿಷಯದಲ್ಲಿ ತಕ್ಕಷ್ಟು ಸಾಕ್ಷ್ಯ ಒದಗಿಲ್ಲ ಎನ್ನಬೇಕು. ಆದರೆ ತೈತ್ತಿರೀಯ ಆರಣ್ಯಕದಲ್ಲಿ ವಾಸುದೇವನೆಂಬ ಹೆಸರು ನಾರಾಯಣ ಮತ್ತು ವಿಷ್ಣುಗಳ ಹೆಸರುಗಳೊಂದಿಗೆ ಮಿಳಿತವಾಗಿದೆ. ಭಗವದ್ಗೀತೆ,

ಬಾಲಕೃಷ್ಣ (ವರ್ಣಚಿತ್ರ) ಸರಸ್ವತಿ ಮಹಲ್ ಗ್ರಂಥಾಲಯ, ತಂಜಾವೂರು

ಘಟಜಾತಕ, ಜೈನರ ಉತ್ತರಾಧ್ಯಯನ ಸೂತ್ರ–ಇವೆಲ್ಲವೂ ವಾಸುದೇವ ವೃಷ್ಣಿ ಕುಲಸಂಭೂತನಾದ ಕೃಷ್ಣನೆಂದು ಹೇಳುತ್ತವೆ. ಮಹಾಭಾರತವೂ ಇದನ್ನೇ ಘೋಷಿಸುತ್ತದೆ. ಆದುದರಿಂದ ನಿಗಮದಲ್ಲೂ ಸ್ತುತ್ಯವಾದ ದೈವ ಶ್ರೀಕೃಷ್ಣನೆಂದು ಹೇಳಬಹುದು.

ಬ್ರಹ್ಮ, ವಿಷ್ಣು, ಭಾಗವತ, ಬ್ರಹ್ಮವೈವರ್ತ ಪುರಾಣಗಳಲ್ಲೂ ಗೋಪ ಹರಿವಂಶವೆಂಬ ಮಹಾಭಾರತದ ಪರಿಶಿಷ್ಟ ಕಾವ್ಯದಲ್ಲೂ ಗೋಚರಿಸುವ ಕೃಷ್ಣ ಹಾಗೂ ಮಹಾಭಾರತದ ಪಾಂಡವಸಖ ಕೃಷ್ಣ ಇವರ ವಿಷಯದಲ್ಲೂ ಜಿಜ್ಞಾಸೆ ಏಳದಿಲ್ಲ. ಮಹಾಭಾರತದಲ್ಲಿ ಕೃಷ್ಣನ ಪೂರ್ವಚರಿತ್ರೆಯ ವರ್ಣನೆ ಇಲ್ಲ. ಮೇಲೆ ಹೇಳಿದ ಪುರಾಣಗಳು, ಭಾಗವತದಲ್ಲಿ ಅಷ್ಟಿಷ್ಟು ಹೊರತು, ಕೃಷ್ಣನ ಮಹಾಭಾರತ ಪ್ರಸಂಗಗಳ ವಿಷಯದಲ್ಲಿ ಮೌನ ವಹಿಸುತ್ತವೆ. ಭಗವದ್ಗೀತೆಯಲ್ಲಿ ಬಹು ಉದಾತ್ತವಾದ ಮೌಲಿಕ ತತ್ತ್ವಗಳನ್ನು ಉಪದೇಶಿಸಿದ ಯೋಗೀಶ್ವರ ಭಗವಾನ್ ಕೃಷ್ಣ ಮತ್ತು ಪಾಂಡವ ಪಕ್ಷಪಾತಿಯೂ ದ್ವಾರಕಾಪತಿಯೂ ಕಪಟ ನಾಟಕ ಸೂತ್ರಧಾರಿಯೂ ಆದ ಕೃಷ್ಣ, ಅಲ್ಲದೆ ಭಾಗವತದ ಗೋಪೀವಲ್ಲಭ ಕೃಷ್ಣ ಇವರೆಲ್ಲ ಒಂದೇ ವ್ಯಕ್ತಿ ಎಂದು ಒಪ್ಪುವುದಕ್ಕೆ ಕೆಲವರು ಜಿಜ್ಞಾಸುಗಳು ಕ್ಲೇಶಪಟ್ಟಿದ್ದಾರೆ. ಆದರೆ ಮಹಾಭಾರತಕ್ಕೆ ಕೃಷ್ಣನ ಪೂರ್ವಚರಿತ್ರೆಯ ಪರಿಚಯವಿಲ್ಲದೆಯೇ ಇಲ್ಲ. ಅದರ ಅತ್ಯಂತ ಪ್ರಾಚೀನ ಭಾಗದಲ್ಲೂ ಕೃಷ್ಣನ ಬಾಲಚರಿತೆಯ ಉಲ್ಲೇಖವಿದೆ. ಗೋಕುಲದಿಂದ ಬಂದು ಸಭಾಭವನದಲ್ಲಿ ಕಂಸನನ್ನು ಕೊಂದ ಕೃಷ್ಣನೇ ಪಾಂಡವಮಿತ್ರನಾಗಿ ಅವರಿಂದ ಜರಾಸಂಧನನ್ನು ಕೊಲ್ಲಿಸಿದ ಎಂಬ ಮಾತು ಬರುತ್ತದೆ. ಅಲ್ಲದೆ ರಾಜಸೂಯಗದಲ್ಲಿ ಕೃಷ್ಣನಿಗೆ ಅಗ್ರಪೂಜೆಯನ್ನು ಕೊಡಬೇಕೆಂಬ ಸೂಚನೆ ಹೊರಟ ಸಂದರ್ಭದಲ್ಲಿ ಅದನ್ನು ಪ್ರತಿಭಟಿಸಿ ನಿಂತ ಶಿಶುಪಾಲ ಕೃಷ್ಣನ ಬಾಲವೃತ್ತಾಂತಗಳನ್ನು ಪುರಾಣಗಳಲ್ಲಿ ಹೇಳಿರುವ ಪ್ರಕಾರವೇ ಎತ್ತಿಕೊಂಡು ಆಡುತ್ತಾನೆ. ಅಪ್ರಸಕ್ತವಾದುದರಿಂದ ಕೃಷ್ಣನ ಪೂರ್ವವೃತ್ತಾಂತ ಮಹಾಭಾರತದಲ್ಲಿ ಬಂದಿಲ್ಲವಷ್ಟೇ. ಅಲ್ಲದೇ ಮಹಾಭಾರತದ ಕೃಷ್ಣ ಚರಿತೆಯನ್ನು ಕೈಬಿಟ್ಟು ಆತನ ಮಿಕ್ಕ ಚರಿತೆಯನ್ನು ವಿವರಿಸುವುದಕ್ಕಾಗಿಯೇ ಹರಿವಂಶ ಎಂಬ ಪರಿಶಿಷ್ಟ ಭಾಗ ನಿರ್ಮಿತವಾಗಿ ಆ ಕೊರತೆಯನ್ನು ಪೂರೈಸಿದೆ. ಪುರಾಣಗಳೂ ಇದೇ ಮಾರ್ಗವನ್ನು ಹಿಡಿದಿವೆ. ಆದುದರಿಂದ ಅಲ್ಲಿಯ ಕೃಷ್ಣನೇ ಇಲ್ಲಿಯ ಕೃಷ್ಣ ಎಂಬುದರಲ್ಲಿ ಸಂದೇಹ ಪಡುವುದು ಯುಕ್ತ ಎನಿಸುವುದಿಲ್ಲ. ಹಾಗೆಯೇ ಸೂಕ್ಷ್ಮವಾಗಿ ವಿಮರ್ಶೆ ಮಾಡಿ ನೋಡಿದರೆ ಭಗವದ್ಗೀತೆಯ ಉದಾತ್ತ ಕೃಷ್ಣ ತನ್ನ ಉದಾತ್ತತೆಯನ್ನು ಮಿಕ್ಕ ಪ್ರಸಂಗಗಳಲ್ಲಿ ಕಳೆದುಕೊಂಡಂತೆ ಕಾಣುವುದಿಲ್ಲ. ಆತನ ಯಾವ ಕಾರ್ಯಗಳು ಭಗವದ್ಗೀತೆಯಲ್ಲಿಯ ಈ ಶ್ಲೋಕಕ್ಕೆ ಅಳವಡದೇ ಇಲ್ಲ. 'ಯಸ್ಯ ನಾಹಂ ಕೃತೋಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ, ಹತ್ವಾಪಿ ಸ ಇಮಾನ್ ಲೋಕಾನ್ ನ ಹಂತಿ ನ ನಿಬಧ್ಯತೇ.' ಆತ ಯಾವ ಸಮಯದಲ್ಲೂ ನಿರಹಂಕಾರವೂ ಸ್ವಾರ್ಥದೂರವೂ ಅನಾಸಕ್ತವೂ ಲೋಕಕ್ಷೇಮಕರವೂ ಧರ್ಮನಿಷ್ಠವೂ ಆದ ಕರ್ಮದಲ್ಲಿ ಆಸಕ್ತ, ಫಲವಿರಕ್ತ. ಆತನ ಕಾರ್ಯಗಳೆಲ್ಲ ಪರಮತತ್ತ್ವವಿದ ಯೋಗೀಶ್ವರನ ಕಾರ್ಯವೇ ಹೊರತು ಅಜ್ಞಾನಿಯೂ ಅಹಂಕಾರಿಯೂ ಅರಿಷಡ್ವರ್ಗಭೂಯಿಷ್ಠನೂ ಆದ ಸ್ವಾರ್ಥಿಯದಲ್ಲ. ಆದುದರಿಂದ ಭಗವದ್ಗೀತೆಯ ಕೃಷ್ಣನೂ ಪುರಾಣೇತಿಹಾಸಗಳು ವರ್ಣಿಸಿರುವ ಕೃಷ್ಣನೂ ಬೇರೆಬೇರೆ ಎಂದು ಹೇಳುವುದು ಉಚಿತವಲ್ಲವೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಶ್ರೀಕೃಷ್ಣಚರಿತ್ರೆಯಲ್ಲಿಯ ಮುಖ್ಯ ಪ್ರಸಂಗಗಳನ್ನು ಈ ರೀತಿಯಾಗಿ ಸಂಗ್ರಹಿಸಬಹುದು.

ಕೃಷ್ಣ ಚಂದ್ರವಂಶದ ಯಾದವರ ವೃಷ್ಣಿ ಅಥವಾ ಸಾತ್ವತ ಪಂಗಡಕ್ಕೆ ಸೇರಿದವನೆಂದೂ ಮನುವಿನಿಂದ 24ನೆಯ ತಲೆಯವನೆಂದೂ ಪುರಾಣಗಳಿಂದ ತಿಳಿದುಬರುತ್ತದೆ. ಯಾದವರು ಸೂರ್ಯವಂಶದವರೆಂದೂ ಹರಿವಂಶ ಹೇಳುತ್ತದೆ. ಎಂದರೆ ಶ್ರೀಕೃಷ್ಣ ಈ ಎರಡು ಪ್ರಸಿದ್ಧ ವಂಶಗಳಿಗೂ ಸೇರಿದವನೆಂದ ಹಾಗಾಯಿತು. ಭಾಗವತ ಪುರಾಣದ ಪ್ರಕಾರ ಶ್ರೀಕೃಷ್ಣ ಸುಮಾರು 5,000 ವರ್ಷಗಳ ಹಿಂದೆ ಹುಟ್ಟಿದನೆಂದೂ 125 ವರ್ಷಗಳ ಕಾಲ ಜೀವಿಸಿದ್ದನೆಂದೂ ತಿಳಿದುಬರುತ್ತದೆ. ಮಹಾಭಾರತದ ಪ್ರಕಾರ ಶ್ರೀಕೃಷ್ಣ ಅರ್ಜುನನಿಗಿಂತ ಮೂರು ತಿಂಗಳು ದೊಡ್ಡವ. ಅರ್ಜುನ ಯುಧಿಷ್ಠಿರನಿಗಿಂತ ಎರಡು ವರ್ಷ, ಭೀಮನಿಗಿಂತ ಒಂದು ವರ್ಷ ಚಿಕ್ಕವ. ಧರ್ಮರಾಜ 108 ವರ್ಷ ಬದುಕಿದ್ದ. ಆದುದರಿಂದ ಕೃಷ್ಣನ ಜೀವಿತಕಾಲ 105–6ಕ್ಕೆ ಇಳಿಯುತ್ತದೆ.

ಶ್ರೀಕೃಷ್ಣ, ವಸುದೇವ ಮತ್ತು ದೇವಕಿಯರ ಮಗ; ಮಥುರಾ ನಗರದ ಸೆರೆಮನೆಯಲ್ಲಿ ಅವರ ಎಂಟನೆಯ ಮಗನಾಗಿ ಜನಿಸಿದ. ಕಾವಲಿನವರ ಸಹಕಾರದಿಂದ ವಸುದೇವ ಶಿಶುವನ್ನು ಸೆರೆಮನೆಯಿಂದ ಕೊಂಡೊಯ್ದು ತನ್ನ ಸ್ನೇಹಿತ ನಂದಗೋಪನ ಹೆಂಡತಿ ಯಶೋದೆಯ ಮಗ್ಗುಲಲ್ಲಿ ಮಲಗಿಸಿ ಬಂದ. ಹೀಗೆ ಕಂಸನಿಗೆ ತಿಳಿಯದೆ ಕೃಷ್ಣ ಗೋಕುಲದಲ್ಲಿ ಬೆಳೆಯುವಂತಾಯಿತು. ಅಲ್ಲಿಯೇ ವಸುದೇವನ ಮತ್ತೊಬ್ಬಳು ಹೆಂಡತಿಯಾದ ರೋಹಿಣಿ ಬಲರಾಮನೆಂಬ ಶಿಶುವನ್ನು ಹೆತ್ತಿದ್ದಳು. ಈ ಇಬ್ಬರು ಅಣ್ಣ ತಮ್ಮಂದಿರೂ ಬಹಳ ಅನ್ಯೋನ್ಯವಾಗಿದ್ದುಕೊಂಡು ಮಹಾಕಾರ್ಯಗಳನ್ನೆಸಗುತ್ತ ದೇವಾಂಶಸಂಭೂತರೆನಿಸಿ ಕಡೆಯವರೆಗೂ ಬಾಳಿದರು.

ಕ್ಷತ್ರಿಯರಿಗೆ ದುರ್ಲಭವಾದ ಸಾಮಾನ್ಯ ಸರಳಜೀವಿಗಳ ಸಂಪರ್ಕ ಹೀಗೆ ಶ್ರೀಕೃಷ್ಣನಿಗೆ ದೊರೆತದ್ದು ಆತನಿಗೂ ಭಾರತದ ಜನಕ್ಕೂ ಒಂದು ಮಹಾಭಾಗ್ಯ ಎನ್ನಬೇಕು. ಅವರ ಉದಾರಪ್ರೇಮದಿಂದ ಆತನ ತೇಜಸ್ಸು ಇನ್ನಿಲ್ಲದಂತೆ ವರ್ಧಿಸಿತು. ಭಾರತದ ತಾಯಿತಂದೆಗಳು ತಮ್ಮ ಮಕ್ಕಳನ್ನು ದೇವರೆಂದೇ ಭಾವಿಸಿ ಹಾಡುಹಸೆಗಳಲ್ಲಿ ಸಂತೋಷಗೊಳ್ಳುವಂತಾದುದು ಗೋಕುಲದಲ್ಲಿ ಗೋಪಿಯರಿಂದ ಪರಿಭಾವಿತನಾದ ಈ ಕೃಷ್ಣನಿಂದ. ಮಗುವಾಗಿ ಕೃಷ್ಣ ಅನೇಕ ಗಂಡಾಂತರಗಳಿಗೆ ಈಡಾಗಿ ಪಾರಾದ. ಪೂತನಿ ಎಂಬ ರಕ್ಕಸಿ ಮೊಲೆಯೂಡ ಬಂದಳು. ಕೃಷ್ಣ ಆಕೆಯ ಅಸುವನ್ನೇ ಹೀರಿಬಿಟ್ಟ. ಮಗುವಿನ ಕಾಲೊದೆತಕ್ಕೆ ಬಂಡಿ ಅದರ

ಮೇಲೆ ಉರುಳಿತು. ಮಗು ಯಾವ ಘಾಸಿಯನ್ನೂ ಹೊಂದದೆ ಬದುಕಿತು. ಸುಂಟರಗಾಳಿ ಅದನ್ನು ಮೇಲಕ್ಕೆ ಹಾರಿಸಿಕೊಂಡು ಹೋಗಿ ಕೆಡವಿತು. ಮಗು ಸಾಯದೆ ಉಳಿಯಿತು. ಈ ತುಂಟ ಮಗುವಿನ ಕಾಟ ತಾಳಲಾರದೆ ಯಶೋದೆ ಅದನ್ನು ಹಗ್ಗದಿಂದ ಒರಳಿಗೆ ಬಿಗಿದಳು. ಆ ಒರಳನ್ನೇ ಅದು ಎಳೆದುಕೊಂಡು ಹೋಗಿ ಅವಳಿಜವಳಿಯಾಗಿ ಬೆಳೆದಿದ್ದ ಅರ್ಜುನ ವೃಕ್ಷಗಳ ನಡುವೆ ತೂರಿ ತಾಟಿಸಲು ಆ ಮರಗಳೇ ಬಿದ್ದುಹೋದವು. ಅವುಗಳ ನಡುವೆ ಮಗು ನಗುತ್ತ ಕುಳಿತಿತ್ತು. ಈ ಮರಗಳು ಬಿದ್ದದ್ದು ಊರಿನವರಿಗೆ ಅಪಶಕುನ ಎನಿಸಿತು. ಜೊತೆಗೆ ತೋಳಗಳು ಹೆಚ್ಚಿ ಕಿರುಕುಳ ಕೊಟ್ಟವು. ನಂದಗೋಪಾದಿಗಳು ಗೋಕುಲವನ್ನು ಬಿಟ್ಟು ಬೃಂದಾವನಕ್ಕೆ ತೆರಳಿದರು.

ಶ್ರೀಕೃಷ್ಣ ಬಹು ಮನೋಹರಮೂರ್ತಿ. ಆತನ ಮೈಬಣ್ಣ ಶ್ಯಾಮವರ್ಣ. ಆತ ಬಹು ಸುಂದರ, ದೃಢಗಾತ್ರ, ತೇಜಸ್ವಿ, ಮಹಾಬಲಶಾಲಿ, ದಿಟ್ಟ, ಉಪಾಯಕುಶಲಿ, ವನಮಾಲಿಯೂ ಪೀತಾಂಬರಧಾರಿಯೂ ಬರ್ಹಿಪಿಂಛಾವತುಸನೂ ಆದ ಆತನನ್ನು ಕಂಡರೆ ಮರುಳುಗೊಳ್ಳದವರೇ ಇಲ್ಲ. ಜೊತೆಗೆ ಕೊಳಲು ನುಡಿಸುವುದರಲ್ಲಿ ಅದ್ವಿತೀಯ ಪರಿಣತಿಯನ್ನು ಹೊಂದಿ ತಾನಿಚ್ಛಿಸಿದ ರಾಗಭಾವಗಳನ್ನು ಕೇಳುವವರ ಹೃದಯದಲ್ಲಿ ಆತ ಉಕ್ಕಿಸುತ್ತಿದ್ದ. ಬಂದ ಕೇಡುಗಳನ್ನು ಧೃತಿಗೆಡದೆ ಎದುರಿಸಿ ಗೆಲ್ಲುವುದರಲ್ಲೂ ತನ್ನ ಸುತ್ತ ಮಮತೆ ಹರ್ಷಗಳನ್ನು ಹರಡುವುದರಲ್ಲೂ ಆತನಿಗೆಣೆಯನ್ನೇ ಕಾಣೆವು. ಬೃಂದಾವನದಲ್ಲಿ ಬಲ ರಾಮಕೃಷ್ಣರು ಅನೇಕ ದುಷ್ಟರನ್ನು ನಾಶಪಡಿಸಿ ಗೋಪರಿಗೆ ಆ ಜಾಗವನ್ನು ಸುರಕ್ಷಿತವಾಗಿ ಮಾಡಿದರು. ಆ ಪ್ರಸಂಗಗಳಲ್ಲಿ ಮುಖ್ಯವಾದವು–ಬಕ, ವೃಷ, ಧೇನುಕಾದಿಗಳ ವಧೆ; ಕಾಳೀಯನಾಗನ ದಮನ, ಇಂದ್ರನ ದರ್ಪವನ್ನು ಗೋವರ್ಧನೋದ್ಧರಣದಲ್ಲಿ ಮುರಿದುದು; ವೇಣುಗಾನ; ರಾಸಲೀಲೆ; ಬಲರಾಮನಿಂದ ಪ್ರಲಂಬಾಸುರ ವಧೆ, ಕೃಷ್ಣನಿಂದ ವೃಷಭಾಸುರ, ಕೇಶಿಗಳ ವಧೆ–ಇವು. ಕಾಳೀಯ ದಮನದಲ್ಲಿ ನಾಗಕುಲದ ಕಾಳೀಯನೆಂಬವನನ್ನು ಪರಿವಾರ ಸಮೇತ ಆ ನೆಲದಿಂದ ಹೊರಗೆ ಅಟ್ಟಿದ ಐತಿಹಾಸಿಕ ಪ್ರಸಂಗವೊಂದನ್ನು ವಿದ್ವಾಂಸರು ಊಹಿಸುತ್ತಾರೆ. ಗೋವರ್ಧನೋದ್ಧರಣದಲ್ಲಿ ಶ್ರೀಕೃಷ್ಣ ಪರಂಪರೆಯಾಗಿ ಬಂದ ಇಂದ್ರಮಖದ ಆಚರಣೆಯನ್ನು ಬಿಟ್ಟು ತಮ್ಮ ವೃತ್ತಿಗೆ ಆಧಾರಗಳಾದ ಗೋವುಗಳನ್ನೂ ಗೋವರ್ಧನ ಪರ್ವತವನ್ನೂ ಪೂಜಿಸುವಂತೆ ಸ್ವಜನರನ್ನು ಪ್ರೇರಿಸಿ, ಆ ಮೂಲಕ ಇಂದ್ರನನ್ನು ಕೆರಳಿಸಿ, ಆತ ತಂದ ಪ್ರಳಯಕಾಲದ ಮಳೆಯನ್ನು ಗೋವರ್ಧನಗಿರಿಯನ್ನು ಕಿರುಬೆರಳಿನಲ್ಲಿ ಎತ್ತಿ ತಡೆದು ಗೋಪರನ್ನೂ ಗೋವುಗಳನ್ನೂ ಕಾಪಾಡಿದ ಗಿರಿಧರ ಎನಿಸಿದ ಆಧ್ಯಾತ್ಮಿಕ ಭಾವನೆಗಳು ವಿಚಾರ–ವಿಮರ್ಶೆಗಳನ್ನು ಅವಲಂಬಿಸಬೇಕೇ ಹೊರತು ಕೇವಲ ಕುರುಡು ಸಂಪ್ರದಾಯವನ್ನಲ್ಲ ಎಂಬುದನ್ನು ಕೃಷ್ಣ ಬಲು ದಿಟ್ಟತನದಿಂದ ಆದರೆ ಕುಶಲ ತರ್ಕದ ದಾರಿಹಿಡಿದು ಹಿರಿಯರಿಗೆ ತಿಳಿಯಹೇಳಿದಂತಿದೆ. ಭಗವದ್ಗೀತೆಯಲ್ಲಿ ಈ ತತ್ತ್ವ ಪರಿಪೂರ್ಣತೆಯನ್ನು ಪಡೆಯುತ್ತದೆ. ರಾಸಲೀಲೆಯಲ್ಲಿ ಮುರಲೀಧರ ಕೃಷ್ಣನೊಂದಿಗೆ ಯಮುನಾತೀರದಲ್ಲಿ ಗೋಪಸ್ತ್ರೀಯರು ಹಾಡುಕುಣಿತಗಳಲ್ಲಿ ಮೈಮರೆಯುತ್ತಿದ್ದ ಪ್ರಸಂಗ ವರ್ಣಿತವಾಗಿದೆ. ಹೀಗೆ ಕನ್ಯೆಯರೊಂದಿಗೂ ಗೃಹಿಣಿಯರೊಂದಿಗೂ ಬೆರೆಯುತ್ತಿದ್ದ ಕೃಷ್ಣನನ್ನು ಸ್ವೈರಿಯೆಂದೂ ಕಾಮುಕನೆಂದೂ ನಿಂದಿಸುವುದುಂಟು. ಆದರೆ ಯಾವ ಭಾಗವತ ರಾಸಲೀಲೆಯನ್ನು ವರ್ಣಿಸುತ್ತದೋ ಅದೇ ಭಾಗವತ ಕೃಷ್ಣ ವೃಂದಾವನದಲ್ಲಿದ್ದುದು ಕೇವಲ 11 ವರ್ಷಗಳು ಮಾತ್ರ ಎನ್ನುತ್ತದೆ. ಆತ ಬೃಂದಾವನವನ್ನು ತೊರೆದಾಗ ಇನ್ನೂ ಕಿಶೋರ. ಗೊಲ್ಲರ ನಡುವೆ ಆತ ಸೊಂಪಾಗಿ ಬೆಳೆದು ತರುಣನಂತೆ ಕಂಡಿರಬಹುದು. ಗೋಪಸ್ತ್ರೀಯರಿಗೆ ಆತನ ರೂಪವನ್ನು ಕಂಡು ಕಾಮವೂ ಹುಟ್ಟಿರಬಹುದು. ಆದರೆ ಆತನ ಪ್ರೀತಿ, ವರ್ತನೆ ಬೇರೆ ತರಹದ್ದು. ತನ್ನ ರೂಪವಾಕ್ಕೃತಿಗಳಿಂದ ಎಲ್ಲರ ಮನಸ್ಸನ್ನೂ ಅಪಹರಿಸಿದ ಜಾಯಮಾನ ಆತನದು. ಆತನನ್ನು ಕಾಮಿಸುವುದು ಕಾಮವಲ್ಲ. ಮೊದಲು ಆ ರೂಪದಲ್ಲಿ ತೋರಿದರೂ ಅದು ಪ್ರೇಮವಾಗಿ ಪರಿಣಾಮ ಹೊಂದುತ್ತಿತ್ತು. ಪ್ರೌಢ, ಸಂಗೀತವನ್ನು ಆಲಿಸುತ್ತಿರುವಾಗ ಅನೇಕ ರಾಗಗಳ ಉದ್ಬೋಧನವಾಗುತ್ತದೆ. ಆದರೆ ಅವೆಲ್ಲ ತೇಜೋಜ್ಜ್ವಲವಾದ ದಿವ್ಯ ಶಾಂತಿಯಲ್ಲಿ ಮುಗಿಯುತ್ತವೆ. ಕೃಷ್ಣನ ಮೋಹಗಾನದಿಂದಲೂ ದರ್ಶನ ಸ್ಪರ್ಶಾದಿಗಳಿಂದಲೂ ಗೋಪಿಯರು ಅನೇಕ ರಾಗಗಳಿಗೆ ಪಕ್ಕಾಗಿ ಅವುಗಳ ಸಹಾಯದಿಂದ ತಮ್ಮ ಬಾಳುವೆಯ ಅತ್ಯಂತ ಉನ್ನತ ಸ್ತರಕ್ಕೇರಿ ಅಲ್ಲಿ ತಮ್ಮ ಜೀವ ತೇಜೋಜ್ಜ್ವಲವೂ ಸಕಲ ಕಾಮ ಸಂತೃಪ್ತವೂ ಶಾಂತವೂ ಆಗುವ ಸ್ಥಿತಿಯನ್ನು ಮುಟ್ಟುತ್ತಿದ್ದರು ಎಂದು ಹೇಳಬೇಕು. ಭಾಗವತವನ್ನು ಆಲಿಸಿದ ಪರೀಕ್ಷಿತ್ ರಾಜನೇ ಈ ನೀತಿಯ ಪ್ರಶ್ನೆಯನ್ನು ಶುಕನಿಗೆ ಹಾಕಿ ಸದುತ್ತರ ಪಡೆಯುತ್ತಾನೆ. ಕೃಷ್ಣನ ಮಾತೂ ಈ ವಿಷಯದಲ್ಲಿಯ ನಮ್ಮ ಸಂದೇಹವನ್ನು ನಿವಾರಿಸುತ್ತದೆ. ಆತನೆನ್ನುತ್ತಾನೆ: ‘ನನ್ನಲ್ಲಿ ಮನಸ್ಸನ್ನು ನೆಟ್ಟವರ ಕಾಮ ಕಾಮವಾಗಿ ಪರಿಣಮಿಸದು; ಹೊಟ್ಟು ಬಿಡಿಸಿದ ಅಥವಾ ಬೇಯಿಸಿದ ಧಾನ್ಯದಿಂದ ಪೈರು ಹುಟ್ಟದು’ (ಭಾಗವತ). ರಾಸಲೀಲೆಯೊಂದಿಗೆ ಗೋಪೀವಸ್ತ್ರಾಪಹರಣದ ಪ್ರಸಂಗವನ್ನೂ ಉಲ್ಲೇಖಿಸಬಹುದು. ಕೃಷ್ಣನೇ ತಮಗೆ ಗಂಡನಾಗಬೇಕೆಂದು ಕೋರಿ ಗೋಪಕನ್ಯೆಯರು ಕಾಳಿಂದೀನದಿಯಲ್ಲಿ ಬೆಳಗಿನ ಜಾವದಲ್ಲಿ ಮಿಂದು ಕಾತ್ಯಾಯಿನಿ ಪೂಜೆಯ ವ್ರತವನ್ನು ಕೈಗೊಳ್ಳುತ್ತಾರೆ. ಒಂದು ದಿನ ಕೃಷ್ಣ ಅವರು ನೀರಿನಲ್ಲಿ ಜಲಕ್ರೀಡೆಯಾಡುತ್ತಿದ್ದಾಗ ಅವರ ಸೀರೆಗಳನ್ನೆಲ್ಲ ಎತ್ತಿಕೊಂಡು ಹತ್ತಿರದ ಮರವನ್ನೇರಿ ಕುಳಿತುಕೊಳ್ಳುತ್ತಾನೆ. ಅವರು ಹೊರಗೆ ಬಂದು ಲಜ್ಜೆಯನ್ನೆಲ್ಲ ತೊರೆದು ಎರಡೂ ಕೈಗಳನ್ನು ಎತ್ತಿ ಬೇಡಿದ ಹೊರತು ಕೃಷ್ಣ ಅವರಿಗೆ ಅವರ ದುಕೂಲಗಳನ್ನು ಕೊಡುವುದಿಲ್ಲ. ಲಜ್ಜೆ ಕಾಮಸೂಚಕ. ಕೃಷ್ಣ ಅವರಿಂದ ಬಯಸಿದುದು ಕಾಮವನ್ನಲ್ಲ, ನಿಷ್ಕಲಷವೂ ಪ್ರಕಾಂತಿಕವೂ ಆದ ಪ್ರೇಮವನ್ನು. ಇದೇ ಜಾಗದಲ್ಲಿ ಋಷಿಪತ್ನಿಯರು ಕೃಷ್ಣನಿಗೂ ಅವನ ಸ್ನೇಹಿತರಿಗೂ ತಮ್ಮ ಕರ್ಮನಿಷ್ಠರಾದ ಋಷಿಪತಿಗಳ ಇಷ್ಟವನ್ನು ಮೀರಿ ಉಣಬಡಿಸಿದುದನ್ನೂ ನೆನೆಯಬಹುದು. ಅವರ ಈ ಅತಿವರ್ತನೆಗೆ ಸಮಾಧಾನವನ್ನು ಅವರೇ ಹೇಳುತ್ತಾರೆ: ಯಾರ ಸಂಪರ್ಕದಿಂದ ಪ್ರಾಣ, ಬುದ್ಧಿ, ಮನಸ್ಸು, ಆತ್ಮ, ದಾರಾಪತ್ಯ, ಧನಾದಿಗಳು ಪ್ರಿಯವಾಗಿ ಆಗುತ್ತವೋ ಆತನಿಗಿಂತ ಮತ್ತಾರೂ ಪ್ರಿಯರು (ಭಾಗವತ). ಹೀಗೆ ಕೃಷ್ಣನಿಂದ ಪ್ರೇಮದ ಪರಾಕಾಷ್ಠೆಯನ್ನು ಮುಟ್ಟಿ ಸಂತುಷ್ಟರಾದವರು ಗೋಪಸ್ತ್ರೀಯರು ಮಾತ್ರವಲ್ಲ. ಆತ ಮುಂದೆ ವರಿಸಿದ ಅಷ್ಟಮಹಿಷಿಯರು ಮತ್ತು ಹದಿನಾರು ಸಹಸ್ರ ರಾಜಕುಮಾರಿಯರೂ. ಪ್ರೇಮ ನಿಧಿಯೇ ಕೃಷ್ಣರೂಪವನ್ನು ತಾಳಿ ಬಂದಿದೆ. ಆದ್ದರಿಂದ ಪತಿ–ಪುತ್ರಾದಿ ಪ್ರೇಮದ ಕಾಲುವೆಗಳು ಹೊರಟು ಜೀವಜೀವಗಳನ್ನು ತಣಿಸುತ್ತಿವೆ–ಎಂಬುದು ಇಲ್ಲಿಯ ಮಥಿತಾರ್ಥ. ಇದರ ಜೊತೆಗೆ ರಾಧೆಯ ವೃತ್ತಾಂತ ಬ್ರಹ್ಮವೈವರ್ತದಲ್ಲಿ ಮಾತ್ರ ಗೋಚರಿಸುತ್ತದೆ. ರಾಧಾಕೃಷ್ಣರ ಪ್ರೇಮಸಂಕೇತವನ್ನು ಕುರಿತೇ ಈ ಪುರಾಣ ಪ್ರವೃತ್ತವಾಗಿದೆ ಎನ್ನಬೇಕು. ಈ ಪ್ರಣಯ ಒಂದು ಆಧ್ಯಾತ್ಮಿಕ ಪಂಥವಾಗಿ ಪರಿಣಮಿಸಿ ವಲ್ಲಭ, ಚೈತನ್ಯ ಮೊದಲಾದ ಮಹಾತೇಜಸ್ವೀ ಭಕ್ತರ ಮನಸ್ಸನ್ನು ಸೂರೆಗೊಂಡಿದೆ. ಇಲ್ಲೂ ಕಾಮವಲ್ಲ, ಪ್ರೇಮವೇ ಪ್ರಧಾನಾಂಶ.

ಬೃಂದಾವನದಲ್ಲಿ ಕೃಷ್ಣ ಹೆಚ್ಚು ಕಾಲವಿರಲಿಲ್ಲ. ಮಧುರೆಯಲ್ಲಿ ಕೃಷ್ಣನಿಂದ ಕುವಲಯಾಪೀಡವೆಂಬ ಆನೆ ಮತ್ತು ಮುಷ್ಟಿಕ ಚಾಣೂರಾದಿ ಜಟ್ಟಿಗಳ ವಧೆ, ಕೊನೆಗೆ ಕಂಸನನಾಶ–ಇವು ಜರಗಿ ಉಗ್ರಸೇನನಿಗೆ ಮರಳಿ ಸಿಂಹಾಸನ ದೊರೆಯುತ್ತದೆ (**ನೋಡಿ–ಕಂಸ–1**). ಮುಂದೆ ಈ ಬಾಲಕರಿಗೆ ಉಪನಯನವಾಗಿ ಕಾಶಿಯ ಹತ್ತಿರದ ಅವಂತೀಪುರದಲ್ಲಿದ್ದ ಸಾಂದೀಪಿನಿ ಎಂಬಾತನಲ್ಲಿ ಗುರುಕುಲವಾಸ ಒದಗುತ್ತದೆ. ಅಲ್ಲಿ ಕೇವಲ ಅರವತ್ತು ನಾಲ್ಕು ದಿನಗಳಲ್ಲಿ ವೇದವೇದಾಂಗಗಳೊಡನೆ ಲೇಖನ, ಗಣಿತ, ವೈದ್ಯ ವಿದ್ಯೆಗಳನ್ನು ಹನ್ನೆರಡು ದಿನಗಳಲ್ಲಿ ಗಜವಿದ್ಯೆ, ಅಶ್ವವಿದ್ಯೆಗಳನ್ನು 50 ದಿನಗಳಲ್ಲಿ ಧನುರ್ವಿದ್ಯೆ ಮತ್ತು ದಶಶಾಖೆಗಳೊಡನೆ ಯುದ್ಧ ವಿದ್ಯೆಗಳನ್ನು ಕಲಿತರೆಂದೂ ಮಹಾಭಾರತ ಹೇಳುತ್ತದೆ. ಕೃಷ್ಣನಿಗೆ ಸುಧಾಮನ (**ನೋಡಿ– ಕುಚೇಲ**) ಸ್ನೇಹವಾದುದು ಅಲ್ಲಿಯೇ. ಮುಂದೆ ಈತ ತನ್ನ ಬಡತನವನ್ನು ಕೃಷ್ಣಪ್ರಸಾದದಿಂದ ನೀಗಿಕೊಂಡ ಕಥೆ ಬಹು ಮನೋಹರವಾಗಿದೆ. ಈ ನಡುವೆ ಕಂಸನ ಮಾವ ಜರಾಸಂಧ ಮಧುರೆಯ ಮೇಲೆ ದಂಡೆತ್ತಿ ಬರಲು ಯಾದವರು ಬಲ ರಾಮಕೃಷ್ಣರನ್ನು ಗುರುಕುಲದಿಂದ ಕರೆಸಿಕೊಳ್ಳುತ್ತಾರೆ. ಮಗಧರಾಜನಾದ ಜರಾಸಂಧನೊಡನೆ ಕೃಷ್ಣ ಹದಿನೇಳು ಸಲ ಯುದ್ಧ ಮಾಡಿ ಆತನನ್ನು ಸೋಲಿಸಿ ಮರಳಿಸುತ್ತಾನೆ. ಹದಿನೆಂಟನೆಯ ಸಲ ಆತ ಕಾಲಯವನನೆಂಬ ಪ್ರಬಲ ರಾಜನೊಡನೆ ಸ್ನೇಹ ಮಾಡಿಕೊಂಡು ಕೃಷ್ಣನ ಮೇಲೆ ಇಬ್ಬರೊಂದಾಗಿ ಕವಿದು ಬರಲು, ಕೃಷ್ಣ ಉಪಾಯದಿಂದ ಮುಚುಕುಂದನ ಮೂಲಕ ಕಾಲಯವನನ್ನು ಸಂಹರಿಸಿ ಜರಾಸಂಧನೊಡನೆ ತತ್‌ಕ್ಷಣದಲ್ಲಿ ಯುದ್ಧ ಮಾಡಿದರೆ ಜಯ ಲಭಿಸದೆಂದು ಪಶ್ಚಿಮ ಸಮುದ್ರ ತೀರದಲ್ಲಿರುವ ದ್ವಾರಕೆಗೆ ತನ್ನವರೊಂದಿಗೆ ವಲಸೆ ಹೋಗುತ್ತಾನೆ. ಆತನಿಂದ ದ್ವಾರಕೆ ಭವ್ಯನಗರವಾಗಿ ರೂಪುಗೊಳ್ಳುತ್ತದೆ. ಅಲ್ಲಿರುವಾಗ ವಿದರ್ಭ ದೇಶದ ಭೀಷ್ಮಕನ ಮಗಳು ರುಕ್ಮಿಣಿ ತನ್ನ ಅಣ್ಣ ಗೊತ್ತು ಮಾಡಿದ್ದ ಚೇದಿಯ ಅರಸ ಶಿಶುಪಾಲನೊಂದಿಗೆ ಮದುವೆಯಾಗಲು ಒಪ್ಪದೇ ತಾನೊಲಿದ ಕೃಷ್ಣನಿಗೆ ಬ್ರಾಹ್ಮಣನೊಬ್ಬನ ಮೂಲಕ ವರ್ತಮಾನ ಕಳುಹಿಸುತ್ತಾಳೆ. ಕೃಷ್ಣ ಬಲರಾಮನೊಂದಿಗೆ ಬಂದು ಗೌರಿಯ ಪೂಜೆಯನ್ನು ಮುಗಿಸಿಕೊಂಡು ಹೊರಗೆ ಬರುತ್ತಿದ್ದ ವಧುವನ್ನು ಎಲ್ಲರ ಕಣ್ಣೆದುರಿಗೆ ಅಪಹರಿಸಿಕೊಂಡು ಮದುವೆಯಾಗುತ್ತಾನೆ.

ಬೃಂದಾವನವನ್ನು ಬಿಟ್ಟ ಮೇಲೆ ಗೋಪ ಗೋಪಿಯರನ್ನು ಕೃಷ್ಣ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಂತೆ ಕಾಣಲಿಲ್ಲ. ತಾನೇ ಅವರನ್ನು ಪುನಃ ಕಂಡದ್ದು ಗೋಚರಿಸುವುದಿಲ್ಲ. ಉದ್ಧವನ ಮೂಲಕ ನಂದಗೋಪಾದಿಗಳಿಗೆ ತನ್ನ ಪ್ರೇಮ ವಿಶ್ವಾಸಗಳನ್ನು ನೆನೆಕೆಗಳನ್ನು ಕಳುಹಿಸಿ ಅವರನ್ನು ಸಮಾಧಾನಗೊಳಿಸಿದ. ಅವರಲ್ಲಿಗೆ ಹೋಗಿ ಒಂದೆರಡು ತಿಂಗಳು ಇದ್ದು ಬರುವಂತೆ ಬಲರಾಮನನ್ನು ಪ್ರೇರಿಸುತ್ತಾನೆಯೇ ಹೊರತು ತಾನೇ ಹೋಗ. ನಡುವೆ ಸೂರ್ಯೋಪರಾಗದ ಸಮಯದಲ್ಲಿ ಭಾರತೀಯರೆಲ್ಲರೂ ಪೀಡಾ ಪರಿಹಾರಕ್ಕಾಗಿ ಸಮಂತ ಪಂಚಕದಲ್ಲಿ ನೆರೆಯುವಾಗ ನಂದಗೋಪ ಯಶೋದಾದಿಗಳು ಅಲ್ಲಿಗೆ ಬಂದು ಯಾದವರೊಡನೆ ಸಂಗಮಿಸುತ್ತಾರೆ. ಕೃಷ್ಣ ಅವರನ್ನು ತುಂಬಾ ಮಮತೆಯಿಂದ ಕಂಡು ಮಾತಾಡಿಸಿದನೆಂದು ಭಾಗವತ ಹೇಳುತ್ತದೆ. ಕೃಷ್ಣನಿಗೆ ಬಿಡುವಿಲ್ಲದ ಕೆಲಸವಿದ್ದುದರಿಂದ ತನ್ನ ಬಾಲ್ಯದ ಜೊತೆಗಾರರನ್ನು ಸಾಕು ತಾಯಿ ತಂದೆಗಳನ್ನು ನೆನೆದು ಕೊರಗುವಷ್ಟು ಅವಕಾಶವಿರಲಿಲ್ಲವೆನ್ನಬೇಕು. ಮಹಾಕಾರ್ಯಗಳನ್ನು ಎಸಗಲು ಬಂದ ಮಹಾಪುರುಷರಿಗೆ ನಿರ್ವಿಕಾರ ಬುದ್ಧಿ ಸಹಜ. ಹೀಗೆಯೇ ಸಮಂತ ಪಂಚಕದಲ್ಲಿ ಕುಂತಿ ಅಣ್ಣ ವಸುದೇವನನ್ನು ಕುರಿತು “ಕಷ್ಟ ದೆಸೆಯಲ್ಲಿರುವ ನಂಟರನ್ನು ಎಲ್ಲರೂ ಕೈಬಿಡುತ್ತಾರೆ. ನೀವು ನನ್ನ ವಿಚಾರವನ್ನೇ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ ಅಣ್ಣಯ್ಯ” ಎಂದಾಗ ವಸುದೇವ “ನಮಗೂ ಕಷ್ಟಗಳಿಲ್ಲದಿಲ್ಲ.

ತಂಗಿ, ಶತ್ರುಗಳ ದೆಸೆಯಿಂದ ಯಾದವರೆಲ್ಲ ಚಲ್ಲಾಪಿಲ್ಲಿಯಾಗಿ ಚದುರಿ ಹೋದೆವು; ನೆಲೆ ಕಾಣುವುದೇ ಕಷ್ಟವಾಯಿತು ಎನ್ನುತ್ತಾನೆ.” ಈ ಯಾದವರನ್ನೆಲ್ಲ ಅವರ ಕಷ್ಟಗಳಿಂದ ತಪ್ಪಿಸಿ ಒಂದು ನೆಲೆಗೆ ಕೂಡಿಸಿ ಒಂದು ಭವ್ಯವಾದ ನಗರದಲ್ಲಿ ನೆಲಸುವಂತೆ ಮಾಡಿದವ ಕೃಷ್ಣ. ಈ ಮಹತ್ಕಾರ್ಯದಲ್ಲಿ ಮಗ್ನನಾದ ಆತ ತನ್ನ ಸಾಕು ನೆಲವನ್ನು ಮನಸ್ಸಿಗೆ ಅಷ್ಟಾಗಿ

ಪಹಾರಿಶೈಲಿಯಲ್ಲಿ ರಾಧಾಕೃಷ್ಣ (ಕಾಂಗ್ರಾ ಚಿತ್ರಕಲೆ)

ಹಚ್ಚಿಕೊಳ್ಳದಿದ್ದುದು ಸಹಜವೇ ಎನಿಸುತ್ತದೆ. ಕೃಷ್ಣ ದ್ವಾರಕೆಯಲ್ಲಿ ರುಕ್ಮಿಣಿಯ ಜೊತೆಗೆ ಸತ್ಯಭಾಮೆ, ಜಾಂಬವತಿ, ಕಾಲಿಂದಿ, ಮಿತ್ರವಿಂದೆ, ಸತ್ಯೇ, ಭದ್ರೇ, ಲಕ್ಷ್ಮಣೇ ಎಂಬ ಏಳು ಜನ ರಾಜಕನ್ಯೆಯರನ್ನು ವೀರಶುಲ್ಕವಾಗಿಯೇ ಜಯಿಸಿ ಮದುವೆಯಾಗುತ್ತಾನೆ. ಮುರನರಕಾದಿಗಳನ್ನು ಕೊಂದು ನರಕನ ಸೆರೆಯಲ್ಲಿದ್ದ ಹದಿನಾರು ಸಾವಿರ ರಾಜಕನ್ಯೆಯರನ್ನು ಅವರ ಇಷ್ಟದಂತೆ ಮದುವೆಯಾಗುತ್ತಾನೆ. ಇವರೆಲ್ಲ ಕೃಷ್ಣನ ಸಾನಿಧ್ಯ, ಕೈಂಕರ್ಯಗಳಿಗೆ ಆಸೆ ಪಟ್ಟು ಕೃತಾರ್ಥರಾದವರು. ಕಾಮಿಗಳನ್ನು ಪ್ರೇಮಿಗಳನ್ನಾಗಿ ಮಾಡುವ ದೈವೀ ಗುಣ ಕೃಷ್ಣನದು.

ಮಹಾಭಾರತದಲ್ಲಿ ಕೃಷ್ಣ ದ್ರೌಪದಿಯ ಸ್ವಯಂವರದಲ್ಲಿ ಮೊದಲು ಕಾಣಿಸಿಕೊಳ್ಳುತ್ತಾನೆ. ಇಂದ್ರಪ್ರಸ್ಥದಲ್ಲಿ ದ್ರೌಪದಿಯೊಡನೆ ಪಾಂಡವರು ನೆಲಸಲು ಸಹಾಯಕನಾಗುತ್ತಾನೆ. ಅರ್ಜುನನಿಂದ ಖಾಂಡವವನವನ್ನು ಸುಡಿಸುತ್ತಾನೆ. ಆಗ ಮಯನೆಂಬ ದಾನವಶಿಲ್ಪಿಯನ್ನು ಕಾಪಿಟ್ಟು ಆತನಿಂದ ದಿವ್ಯವಾದ ಸಭಾ ಭವನವೊಂದನ್ನು ಪಾಂಡವರಿಗಾಗಿ ಕಟ್ಟಿಸಿಕೊಡುತ್ತಾನೆ. ತೀರ್ಥಯಾತ್ರೆಯನ್ನು ಮಾಡುತ್ತ ಪ್ರಭಾಸಕ್ಕೆ ಬಂದ ಅರ್ಜುನನ್ನು ಕಂಡು ದ್ವಾರಕೆಗೆ ಬರಮಾಡಿಕೊಂಡು, ತನ್ನ ಅಣ್ಣ ಬಲರಾಮ ದುರ್ಯೋಧನನಿಗೆ ಕೊಡಬೇಕಾಗಿದ್ದ ತಂಗಿ ಸುಭದ್ರೆಯನ್ನು ಅಪಹರಿಸಿಕೊಂಡು ಹೋಗುವಂತೆ ಅರ್ಜುನನನ್ನು ಪ್ರೇರಿಸುತ್ತಾನೆ. ಇವರು ಹೀಗೆ ಮದುವೆಯಾಗಿ ಹುಟ್ಟಿದ ಮಗ ಅಭಿಮನ್ಯು. ಈತನಿಂದಲೇ ಪಾಂಡವರ ಖ್ಯಾತಿ ಮುಂದೆ ಬೆಳೆಯುವಂತಾದುದು. ಕೃಷ್ಣ ಧರ್ಮರಾಯನನ್ನು ರಾಜಸೂಯ ಯಾಗ ನಡೆಸುವಂತೆ ಪ್ರೇರಿಸಿ ಅದು ನಿರ್ವಿಘ್ನವಾಗಿ ನಡೆಯಲು ಭೀಮನಿಂದ ಜರಾಸಂಧನನ್ನು ಉಪಾಯವಾಗಿ ಕೊಲ್ಲಿಸುತ್ತಾನೆ. ರಾಜಸೂಯಯಾಗದಲ್ಲಿ ಆ ಕಾಲದ ಪ್ರಮುಖ ರಾಜರೆಲ್ಲರೆದುರು ಭೀಷ್ಮ ಕೃಷ್ಣನೇ ಅಗ್ರಪೂಜೆಗೆ ಅರ್ಹನೆಂದು ಉದ್ಘೋಷಿಸಲು ರುಕ್ಮಿಣೀ ವಂಚಿತನಾದ ಚೇದಿರಾಜ ಶಿಶುಪಾಲ ಪ್ರತಿಭಟಿಸಿ ಕೃಷ್ಣನನ್ನು ನಿಂದಿಸಿ ಅವನ ಚಕ್ರಕ್ಕೆ ಬಲಿಯಾಗುತ್ತಾನೆ. ರಾಜಸೂಯ ಯಾಗ ನಿರ್ವಿಘ್ನವಾಗಿ ನಡೆಯುತ್ತದೆ. ಅಗ್ರಪೂಜೆಯಿಂದ ಗರ್ವಿತನಾಗದೆ ಕೃಷ್ಣ ಸಹಜವಿನಯದಿಂದಲೇ ಅತಿಥಿಗಳನ್ನು ಆದರಿಸುತ್ತಾನೆ. ಮಯನಿರ್ಮಿತ ಸಭೆಯಲ್ಲಿ ದುರ್ಯೋಧನನ ನೀರಿರುವೆಡೆಯನ್ನು ನೆಲವೆಂದೂ ನೆಲವಿರುವೆಡೆಯನ್ನು ನೀರೆಂದೂ ಭ್ರಮಿಸಿ ಎಲ್ಲರ ನಗೆಗೀಡಾಗುತ್ತಾನೆ. ಇದು ಮುಂದೆ ಧರ್ಮರಾಯ ಜೂಜಾಟದಲ್ಲಿ ಸೋತು ತನ್ನ ಸರ್ವಸ್ವವನ್ನೂ ಕೌರವರಿಗೆ ಕಳೆದುಕೊಳ್ಳುವುದರಲ್ಲಿ ಮುಗಿಯುತ್ತದೆ. ಸೋತ ಪಾಂಡವರೆದುರು ದುಶ್ಶಾಸನ ದಾಸಿಯೆಂದು ದ್ರೌಪದಿಯ ಸೀರೆಯನ್ನೆಳೆದು ಮಾನ ತೆಗೆಯಲು ಹವಣಿಸುತ್ತಾನೆ. ಆಗ ಆಕೆ ಶ್ರೀಕೃಷ್ಣನನ್ನು ನೆನೆದು ಅಕ್ಷಯ ವಸ್ತ್ರಳಾಗುತ್ತಾಳೆ. ಈ ಪ್ರಸಂಗ ಮೂಲ ಭಾರತದಲ್ಲಿಲ್ಲವೆಂದು ವಿದ್ವಾಂಸರು ತೀರ್ಮಾನಿಸಿದ್ದರೂ ದ್ರೌಪದಿಯ “ಗೋವಿಂದ ಪುಂಡರೀಕಾಕ್ಷ ರಕ್ಷಮಾಂ ಶರಣಾಗತಾಂ” ಎಂಬ ಮಾತು ಭಾರತೀಯರ ನಿತ್ಯ ಪ್ರಾರ್ಥನೆಯಲ್ಲಿ ಇಂದಿಗೂ ಅನುರಣಿತವಾಗುತ್ತಿದೆ.

ವೇಣುಗೋಪಾಲ ಲಕ್ಷ್ಮೀನರಸಿಂಹ ದೇವಾಲಯ, ವಿಘ್ನಸಂತೆ, ತಿಪಟೂರು ತಾಲ್ಲೂಕು

ಪಾಂಡವರು ಅರಣ್ಯಕ್ಕೆ ತೆರಳಿದಾಗ ಕೃಷ್ಣ ಅವರಲ್ಲಿಗೆ ಆಗಾಗ ಬಂದು ಸಂತೈಸುತ್ತಾನೆ. ದ್ರೌಪದಿಗೆ ದುರ್ವಾಸ ಮುನಿಯ ಆತಿಥ್ಯವನ್ನು ನಡೆಸಲು ಅಕ್ಷಯ ಪಾತ್ರೆ ದೊರೆತುದು ಇಂಥ ಒಂದು ಪ್ರಸಂಗದಲ್ಲಿ. ಅಜ್ಞಾತವಾಸದಲ್ಲಿದ್ದಾಗ ಗೋಗ್ರಹಣ ಮತ್ತು ಯುದ್ಧ ಮುಗಿದು ಅರ್ಜುನನ ಅಭಿಮನ್ಯುವಿಗೆ ವಿರಾಟನ ಮಗಳು ಉತ್ತರೆಯನ್ನು ತಂದುಕೊಂಡಾಗ ಕೃಷ್ಣ ಬಂದು ವಧೂವರರನ್ನು ಹರಸಿ ಹೋಗುತ್ತಾನೆ. ನ್ಯಾಯವಾಗಿ ಪಾಂಡವರಿಗೆ ಸಲ್ಲಬೇಕಾದ ರಾಜ್ಯದ ಪಾಲನ್ನು ಕೊಡದೆ, ದುರ್ಯೋಧನ ನಿರಾಕರಿಸಿ, ಉಭಯರೂ ಕಾಳಗಕ್ಕೆ ನಿಂತಾಗ ಕೃಷ್ಣ ರಾಯಭಾರಿಯಾಗಿ ಸಂಧಿ ಮಾಡಿಸಲು ಸಕಲ ಯತ್ನ ಮಾಡಿದ. ಅದು ಕೈಗೂಡದಿರಲು ಅವರವರ ಕೋರಿಕೆಯಂತೆ ಕೌರವನಿಗೆ ತನ್ನ ಸಕಲ ಸೈನ್ಯವನ್ನೂ ಅರ್ಜುನನಿಗೆ ನಿರಾಯುಧನಾಗಿ ಯುದ್ಧ ಮಾಡದ ತನ್ನನ್ನೂ ಕೊಟ್ಟುಕೊಂಡ. ಹೀಗೆ ಅರ್ಜುನನಿಗೆ ಸಾರಥಿಯಾಗಿ ಕೃಷ್ಣ ನಿಲ್ಲದಿದ್ದರೆ ಪಾಂಡವರು ಜಯ ಕಾಣುತ್ತಿರಲಿಲ್ಲ. ಕೌರವರು ಹತರಾಗುತ್ತಿರಲಿಲ್ಲ. ಯುದ್ಧದ ಪ್ರಾರಂಭದ ದಿನದಲ್ಲೇ ಅರ್ಜುನ ಸ್ವಜನವಧೆಗೆ ಅಂಜಿ ಶೋಕಾವಿಷ್ಟನಾಗಿ ಕರ್ತವ್ಯ ವಿಮುಖನಾಗಿರುವಾಗ ಗೀತೋಪದೇಶದಿಂದ ಆತನ ಮೋಹವನ್ನು ಹೋಗಲಾಡಿಸಿ ತಿಳಿಮೆಯನ್ನು ತರುತ್ತಾನೆ. ಪಾರ್ಥಸಾರಥಿ, ಗೀತಾಚಾರ್ಯ, ಕೃಷ್ಣ. ಕರ್ಣನಿಗೆ ತಾನು ಕುಂತಿಯ ಮಗನೆಂದು ತಿಳಿಸಿ ಪಾಂಡವರ ಕಡೆಗೆ ಸೆಳೆಯಲು ಪ್ರಯತ್ನಿಸಿ ವಿಫಲನಾಗಿ ಕುಂತಿಯ ಮೂಲಕ ಅರ್ಜುನ ಹೊರತು ಮಿಕ್ಕವರನ್ನು ಕೊಲ್ಲುವುದಿಲ್ಲವೆಂಬ ವರವನ್ನು ಕರ್ಣನಿಂದ ದೊರಕಿಸಿಕೊಳ್ಳುತ್ತಾನೆ. ಭೀಷ್ಮನ ಕೈಮೇಲಾಗಿ ಪಾಂಡವರಿಗೆ ಸೋಲು ಎನ್ನಿಸಿದಾಗ ತಾನೇ ತನ್ನ ಪ್ರತಿಜ್ಞೆಯನ್ನು ಮರೆತು ಭೀಷ್ಮನ ಮೇಲೆ ಕೈಯೆತ್ತಲು ಹಿಂಜರಿಯುವುದಿಲ್ಲ. ಆ ದೃಶ್ಯವನ್ನು ಭೀಷ್ಮ ತನ್ನ ಅಂತ್ಯಕಾಲದಲ್ಲಿ ಬಹು ಮಮತೆಯಿಂದ ನೆನೆಯುತ್ತಾನೆ. ಭಗದತ್ತ ತನ್ನ ಅಜೇಯನಾದ ಶಕ್ತ್ಯಾಯುಧವನ್ನು ಅರ್ಜುನನ ಮೇಲೆ ಪ್ರಯೋಗಿಸಿದಾಗ ಅದನ್ನು ಕೃಷ್ಣ ತಾನೇ ಧರಿಸಿ ಪಾರ್ಥನನ್ನು ಕಾಪಾಡುತ್ತಾನೆ. ಜಯದ್ರಥ, ದ್ರೋಣ, ಕರ್ಣ, ದುರ್ಯೋಧನ–ಇವರ ಸಂಹಾರದಲ್ಲಿ ವಿಷಮ ಸಂದರ್ಭವೊದಗಿದಾಗಲೆಲ್ಲ ತಕ್ಕ ಉಪಾಯಗಳನ್ನು ಸೂಚಿಸಿ ಪಾಂಡವರನ್ನು ಗೆಲ್ಲಿಸುತ್ತಾನೆ. ಈ ಉಪಾಯಗಳ ನೀತಿಯನ್ನು ಕುರಿತು ಕೃಷ್ಣನನ್ನು ದೂರುವುದುಂಟು. ಆದರೆ ಕೌರವರು ಗೆದ್ದು ಪಾಂಡವರು ಸೋಲುವ ಹಾಗಾಗಿದ್ದರೆ ಆಗ ಅಧರ್ಮಗಳೇ ಗೆದ್ದು ಸತ್ಯವಂತರು ಸೋಲುವುದಾಗುತ್ತಿತ್ತು; ಧರ್ಮವನ್ನು ದೃಢವಾಗಿ ನೆಲೆಗೊಳಿಸುವುದಕ್ಕೆ ಅವತರಿಸಿದ ಕೃಷ್ಣನ ಜನ್ಮವೇ ವಿಫಲವಾಗುತ್ತಿತ್ತು. ಭೂಭಾರವಿಳಿಯುತ್ತಿರಲಿಲ್ಲ. ಏರಿನಲ್ಲಿ ನೀರಹಾದಿ ಲೇಸೆನಿಸದು; ಕೊಂಕು ಕೊಂಕಾಗಿ ಹೋಗುವುದರಿಂದ ಸುಲಭವಾಗಿ ಕೊನೆಮುಟ್ಟಬಹುದು. ಮಹಾಭಾರತದ ಯುದ್ಧದಲ್ಲಿ ಕೃಷ್ಣನ ನಡವಳಿಕೆಗಳೂ ಇಂಥವು. ಯುದ್ಧದ ಕೊನೆಯಲ್ಲಿ ಕೃಷ್ಣ ಧರ್ಮರಾಯನನ್ನು ಕರೆತಂದು ಧೃತರಾಷ್ಟ್ರನ ಕಾಲಿಗೆರಗಿಸಿ

ಸಾಂತ್ವ ವಚನಗಳನ್ನಾಡುತ್ತಾನೆ. ವ್ಯಾಸನೊಂದಿಗೆ ತಾನೂ ಸೇರಿ ಗಾಂಧಾರಿ ಮೊದಲಾದ ಸ್ತ್ರೀಯರನ್ನೂ ಸಂತೈಸುತ್ತಾನೆ. ಅಂಬುಗಳ ಮೇಲೆ ಮಲಗಿದ್ದ ಭೀಷ್ಮನ ಕೈಯಲ್ಲಿ ಸಕಲ ನೀತಿಗಳನ್ನೂ ಕೇಳಿ ತಿಳಿದುಕೊಳ್ಳಲು ಧರ್ಮರಾಯನನ್ನು ಕಳುಹಿಸುತ್ತಾನೆ. ಸಾಯುವ ವೇಳೆಗೆ ಭೀಷ್ಮನ ಬಳಿಗೆ ಹೋಗಿ ಆತನಿಗೆ ಬಹು ಹರ್ಷವನ್ನು ತರುತ್ತಾನೆ. ಕೃಷ್ಣನ ಅನುಜ್ಞೆಯನ್ನು ಪಡೆದೇ ಭೀಷ್ಮ ದಿವಂಗತನಾಗುವುದು. ಅಂತ್ಯಕಾಲದಲ್ಲಿ ಶ್ರೀಕೃಷ್ಣನನ್ನು ಕುರಿತು ಭೀಷ್ಮನ ಸ್ತೋತ್ರ ಬಹು ರಮಣೀಯವಾಗಿದೆ. ಬಂಧುಗಳ ಮರಣದಿಂದಲೂ ಯುದ್ಧದ ಪಾಪಭೀತಿಯಿಂದಲೂ ಕಂಗೆಟ್ಟು ಕುಸಿದು ಕುಳಿತ ಯುಧಿಷ್ಠಿರ ವ್ಯಾಸನ ಪ್ರೇರಣೆಯಿಂದ ಪ್ರಾಯಶ್ಚಿತ್ತ ರೂಪವಾದ ಅಶ್ವಮೇಧಯಾಗಕ್ಕೆ ತೊಡಗಲು ಶ್ರೀಕೃಷ್ಣ ಅದರಲ್ಲಿ ಸಂತೋಷದಿಂದ ಪಾಲುಗೊಳ್ಳುತ್ತಾನೆ. ಅಶ್ವತ್ಥಾಮನ ನಾರಾಯಣಾಸ್ತ್ರದ ವಿಪತ್ತಿನಿಂದ ಉತ್ತರೆಯ ಗರ್ಭವನ್ನು ಕಾಪಾಡಿ ಪಾಂಡವರ ಸಂತತಿ ಕೊನೆಗೊಳ್ಳದಂತೆ ಮಾಡುತ್ತಾನೆ. ಪಾಂಡವರೊಡನೆ ಕೆಲಕಾಲ ಸುಖವಾಗಿದ್ದು ದ್ವಾರಕೆಗೆ ಮರಳುತ್ತಾನೆ.

ಬಲರಾಮ ಕೃಷ್ಣ ಬಾಹುಪಾಲಿತವಾದ ದ್ವಾರಕೆ ನಿಷ್ಕಂಟಕವಾಗಿ ಸುಖ ಸಮೃದ್ಧಿಗಳಿಂದ ತುಳುಕಾಡುತ್ತಿತ್ತು. ಕೃಷ್ಣ ಅದನ್ನು ಬಿಟ್ಟು ಹೊರಟು ದೂರದಲ್ಲಿದ್ದಾಗಲೆಲ್ಲ ಅದಕ್ಕೆ ವಿಪತ್ತು ಕಾದಿರುತ್ತಿತ್ತು. ರಾಜಸೂಯಕ್ಕೆ ಆತ ಬಂದಾಗ ರುಕ್ಮಿಣಿಯ ಅಣ್ಣ ರುಕ್ಮಿಯ ಸ್ನೇಹಿತ ಸಾಲ್ವನೆಂಬ ಪ್ರಬಲನಾದ ಅರಸ ಸೌಭವೆಂಬ ಆಕಾಶಪುರಿಯಲ್ಲಿ ಕುಳಿತು ದ್ವಾರಕೆಯ ಮೇಲೆ ದಾಳಿಯಿಟ್ಟು ವಸುದೇವ ಪ್ರದ್ಯುಮ್ನಾದಿಗಳನ್ನು ಘಾತಿಸಿದ. ಆಗ ಕೃಷ್ಣನೇ ಇಂದ್ರಪ್ರಸ್ಥದಿಂದ ಹೊರಟು ಬಂದು ಆತನನ್ನೂ ಆತನಿಗೆ ಶಿವನ ಪ್ರಸಾದದಿಂದ ಮಯನ ಮೂಲಕ ಪ್ರಾಪ್ತವಾದ ಆಕಾಶಪುರಿಯನ್ನೂ ನಾಶಪಡಿಸಬೇಕಾಯಿತು. ಮತ್ತೊಮ್ಮೆ ಹಸ್ತಿನಾವತಿಯಲ್ಲಿ ಹೀಗೆಯೇ ಪ್ರವಾಸವಿದ್ದಾಗ ಶ್ಯಮಂತಕಮಣಿಯ ನಿಮಿತ್ತವಾಗಿ ದ್ವಾರಕೆಯಲ್ಲಿ



ಗೀತೋಪದೇಶ

ಸತ್ಯಭಾಮೆಯ ತಂದೆ ಸತ್ರಾಜಿತುವಿನ ಕೊಲೆ ನಡೆಯಿತು. ಅಳುತ್ತ ಬಂದ ಸತ್ಯಭಾಮೆಯ ಸಂಗಡ ಹೊರಟು ದುಷ್ಟರನ್ನು ಶಿಕ್ಷಿಸಬೇಕಾಯಿತು, ಶ್ರೀಕೃಷ್ಣ. ತಾನೇ ಅವತಾರಪುರುಷ ವಾಸುದೇವನೆಂದು ಕೃಷ್ಣನೊಡನೆ ಸ್ಪರ್ಧಿಸಹೊರಟ ಪೌಂಡ್ರಕನನ್ನೂ ಆತನ ಮಿತ್ರ ಕಾಶೀರಾಜನನ್ನೂ ಕೃಷ್ಣ ಸಂಹರಿಸಿದ. ಬಲರಾಮನಿಂದ ದಂತವಕ್ತ್ರವಿಡೂರಥರು ಮಡಿದರು. ಭಾರತಯುದ್ಧದಲ್ಲಿ ಅನೇಕ ಬಲಿಷ್ಠರೂ ಮದಾಂಧರೂ ಆದ ಕ್ಷತ್ರಿಯರ ನಾಶವಾಗಿ ಭೂಭಾರವಿಳಿದು ಶ್ರೀಕೃಷ್ಣನ ಅವತಾರದ ಕೆಲಸ ಬಹುಪಾಲು ಕೊನೆಗೊಂಡಿತು. ತನ್ನ ಮಗ ಪ್ರದ್ಯುಮ್ನನಿಗೆ ರುಕ್ಮಿಯ ಮಗಳನ್ನೇ ತಂದುಕೊಂಡು ಮದುವೆ ಮಾಡಿದ್ದರಿಂದ ಆ ಮನಸ್ತಾಪವೂ ಶಾಂತವಾಗಿ ರುಕ್ಮಿಣಿ ಸಂತುಷ್ಟಳಾಗಿದ್ದಳು. ಇಂದ್ರನೊಡನೆ ಹೋರಾಡಿ ಪಾರಿಜಾತವೃಕ್ಷವನ್ನು ತಂದು ಸತ್ಯಭಾಮೆಗೆ ಕೊಟ್ಟಿದ್ದರಿಂದ ಆಕೆ ಪ್ರಸನ್ನಳಾಗಿದ್ದಳು. ತನ್ನ ಮಡದಿಯರಲ್ಲಿ ಯಾರೂ ವಿರಹವನ್ನು ಅನುಭವಿಸದಂತೆ ಕೊರೆಯಾಗದ ತನ್ನ ಮಮತೆಯನ್ನು ತನ್ನ ಯೋಗೈಶ್ವರ್ಯದಿಂದ ತೋರುತ್ತ ಕೃಷ್ಣ ಸುಖವಾಗಿ ದ್ವಾರಕೆಯಲ್ಲಿ ಇದ್ದ. ಕಾಲಕ್ರಮದಲ್ಲಿ ಪ್ರದ್ಯುಮ್ನನ ಮಗ ಅನಿರುದ್ಧ ತನ್ನಲ್ಲಿ ಅನುರಕ್ತಳಾದ ಬಾಣಾಸುರನ ಮಗಳು ಉಷೆಯನ್ನು ವರಿಸಿದ. ಬಾಣಾಸುರನನ್ನು ಸ್ವಲ್ಪ ಕಷ್ಟದಿಂದಲೇ ಜಯಿಸಿ ಕೃಷ್ಣ ಉಷಾಪರಿಣಯವನ್ನು ಸಾಧಿಸಬೇಕಾಯಿತು. ಹೀಗೆ ಶ್ರೀಕೃಷ್ಣ ತನ್ನ ಅಪಾರ ಸಂಸಾರವನ್ನು ಯಾರಿಗೂ ಕೊರಗು ತಟ್ಟದಂತೆ ಒಂದು ನೆಲೆಗೆ ಮುಟ್ಟಿಸಿದ. ಶತ್ರುಬಾಧೆಯಿಂದ ಪಾರಾದ ದ್ವಾರಕೆ ನೆಮ್ಮದಿಯ ದೆಸೆಯಿಂದಲೇ ದುರ್ವಿನೀತರೂ ವಿಷಯಾಸಕ್ತರೂ ಆದ ಸ್ವಜನರಿಂದಲೇ ಬಾಧೆಗೀಡಾಯಿತು. ಸಾಮಾನ್ಯ ಜನ ಸಂತೋಷದಿಂದಿದ್ದರೂ ಕೃಷ್ಣ ನೆಮ್ಮದಿಯಿಂದ ಇದ್ದನೆಂದು ಹೇಳುವಂತಿರಲಿಲ್ಲ. ಮಹಾಭಾರತದ ಶಾಂತಿಪರ್ವದ 81ನೆಯ ಅಧ್ಯಾಯದಲ್ಲಿ ಆತ ನಾರದರೊಡನೆ ತನ್ನ ಸುಃಖದುಃಖಗಳನ್ನು ತೋಡಿಕೊಂಡ ಪ್ರಕರಣ ಸ್ವಾರಸ್ಯವಾಗಿದೆ. ತನ್ನನ್ನು ಕಾಣಲು ಬಂದ ನಾರದನಿಗೆ ಕೃಷ್ಣ ಹೇಳುತ್ತಾನೆ: "ನಾನು ಒಡೆಯ ಎನ್ನಿಸಿಕೊಂಡು ನನ್ನವರಿಗೆ ಆಳಾಗಿ ದುಡಿಯುತ್ತಿದ್ದೇನೆ. ನನ್ನ ಭೋಗ ಯಾವುದು ಗೊತ್ತೆ, ಅವರ ಬೈಗುಳವನ್ನೂ ಅಹವಾಲುಗಳನ್ನೂ ಕೇಳುವುದು. ಅವರ ಕಠಿಣ ಮಾತುಗಳು ನನ್ನ ಎದೆಯನ್ನು ಕೊರೆದು ಕಿಡಿಕಾರಿಸುತ್ತಿವೆ. ಅಣ್ಣ ಬಲರಾಮನಿಗೆ ತನ್ನ ತೋಳಬಲ ಮತ್ತು ಮದ್ಯಗಳನ್ನು ಬಿಟ್ಟರೆ ಮಾತೇ ಇಲ್ಲ. ತಮ್ಮನಾದ ಗದನದು ಸೂಕ್ಷ್ಮ ಸ್ವಭಾವ. ಮಗ ಪ್ರದ್ಯುಮ್ನನಿಗೆ ತನ್ನ ಮುಖ ನೋಡಿಕೊಂಡಷ್ಟೂ ತೃಪ್ತಿಯೇ ಇಲ್ಲ. ನನ್ನ ಪಾಡನ್ನು ಕೇಳುವವರೇ ಇಲ್ಲ. ಅಹುಕನೂ ಅಕ್ರೂರನೂ ಯಾವಾಗಲೂ ಜಗಳವಾಡುತ್ತಲೇ ಇರುತ್ತಾರೆ. ಅಣ್ಣ ತಮ್ಮಂದಿರಿಬ್ಬರೂ ಜೂಜಾಡುತ್ತಿರುವಾಗ ಒಬ್ಬ ಗೆಲ್ಲಲೆಂದೂ ಮತ್ತೊಬ್ಬ ಸೋಲದಿರಲೆಂದೂ ಹರಸಿಕೊಳ್ಳುವ ತಾಯಿಯ ಸ್ಥಿತಿ ನನಗೆ ಬಂದಿದೆ. ಅವರಿಲ್ಲದೆ ನಾನು ಬದುಕಲಾರೆ; ಅವರಿದ್ದರೆ ಬದುಕೇ ಭಾರ. ಏನು ಮಾಡಲಯ್ಯ?" ಕೃಷ್ಣನ ಈ ಮಾತಿಗೆ ನಾರದನ ಉತ್ತರ ಹೀಗಿದೆ: "ನಿನ್ನ ಪಾಡು ಹೊರಗಿನಿಂದ ಬಂದದ್ದಲ್ಲ; ನೀನೇ ಬರಿಸಿಕೊಂಡದ್ದು. ಮುದಿಯ ಉಗ್ರಸೇನನಿಗೆ ಪಟ್ಟಗಟ್ಟುವುದಕ್ಕೆ ಬದಲು ನೀನೇ ಏಕೆ ಸಿಂಹಾಸನವೇರಬಾರದಾಗಿತ್ತು? ಏಕೆ ಹಾಗೆ ಹೊರಗೆ ನಿಂತೆ? ಈಗ ತಾಳಿಕೊಳ್ಳುವುದು ಒಂದೇ ಉಪಾಯ. ಬೈಗುಳಕ್ಕೆ ಮಿದುಮಾತು, ಕದಿಯ ಬಂದವನಿಗೆ ಕೊಟ್ಟು ಕಳುಹಿಸುವುದು–ನಂತರ ಹತ್ತಿರ ನಡೆದುಕೊಳ್ಳಬೇಕಾದ ಉಪಾಯ ಇದು. ಔದಾರ್ಯವಿಲ್ಲದೆ, ಸಂತತವಾದ ಸ್ವಾರ್ಥ ತ್ಯಾಗವಿಲ್ಲದೆ, ತಾಳ್ಮೆಯ ಧೀಮಂತಿಕೆ ಇಲ್ಲದೆ, ಆಪ್ತ ಸಹಾಯವಿಲ್ಲದೆ, ಇರುವವ ಇಂಥ ದೊಡ್ಡ ಕುಲವನ್ನೂ ನೀನು ಕೈಗೊಂಡಿರುವ ಮಹತ್ಕಾರ್ಯಗಳನ್ನೂ ನಿರ್ವಹಿಸುವುದು ಕಷ್ಟ.. ಭೇದದಿಂದ ಸಂಘ ಒಡೆದು ಹೋಗುತ್ತದೆ. ನೀನು ಸಂಘದ ತಲೆಯವ. ಇದು ಒಡೆದು ಹೋಗದಂತೆ ನಡದುಕೊ. ಅಷ್ಟಕ್ಕೂ ನಿನಗೆ ಬುದ್ಧಿ ಹೇಳತಕ್ಕವನು ನಾನೇ! ನೀನು ನಗುತ್ತಿದ್ದೀಯೇ. ಇದೆಲ್ಲ ನಿನಗೆ ಗೊತ್ತಿಲ್ಲದೆ ಇಲ್ಲ, ಶಿಷ್ಯನಿಂದಲೇ ಗುರು ಉಪದೇಶ ಪಡೆಯುವ ಹವಣು, ಇದು." ಇದರಿಂದ ಯಾದವರು ಸಹ ಎಂಥ ಗುಣಲಕ್ಷಣದವರು ಎಂಬುದು ಗೊತ್ತಾಗುತ್ತದೆ. ಕೃಷ್ಣನ ತಾಳ್ಮೆ ಕೂಡ ಇವರ ವಿಷಯದಲ್ಲಿ ಕೊನೆಮುಟ್ಟಿತು. ದ್ವಾರಕೆಯಲ್ಲಿ ಮಹೋತ್ಪಾತ ತೋರಿದಾಗ ಪೀಡಾ ಪರಿಹಾರಾರ್ಥವಾಗಿ ಪ್ರಭಾಸ ಕ್ಷೇತ್ರಕ್ಕೆ ಯಾದವ ಪ್ರಮುಖರೆಲ್ಲ ಹೊರಡುತ್ತಾರೆ. ಅಲ್ಲಿ ಅನ್ನಪಾನಾದಿಗಳಲ್ಲಿ ಮಗ್ನರಾಗಿ ಮತ್ತಿನಿಂದ ಮತಿಗೆಟ್ಟು ಒಬ್ಬರಿಗೊಬ್ಬರು ಹೊಡೆದಾಡಿ ಮಡಿಯುತ್ತಾರೆ; ಕೃಷ್ಣನ ಮೇಲೂ ಅಂದು ಕೈಯೆತ್ತಲು ಹಿಂಜರಿಯುವುದಿಲ್ಲ. ಆತನೂ ಕುಪಿತನಾಗಿ ಕೈಗೆ ಸಿಕ್ಕಿದವರನ್ನು ಹೊಡೆದು ಕೊಲ್ಲುತ್ತಾನೆ. ಬಲರಾಮನೂ ಈ ಹತ್ಯೆಯಲ್ಲಿ ಪಾಲುಗೊಳ್ಳುತ್ತಾನೆ. ಕೊನೆಗೆ ಉಳಿದವರು ಬಲರಾಮ, ಕೃಷ್ಣ, ಆತನ ಸಾರಥಿ ದಾರುಕ. ಬಲರಾಮ ಸಮುದ್ರವನ್ನು ಹೊಗುತ್ತಾನೆ. ಕೃಷ್ಣ ಕಾಡಿನೊಳಕ್ಕೆ ಹೋಗಿ ಅಲ್ಲಿ ಯೋಗದಲ್ಲಿ ಮಲಗುತ್ತಾನೆ. ಆತನ ಕಾಲನ್ನು ಮೃಗವೆಂದು ಭಾವಿಸಿ ಜರನೆಂಬ ಬೇಡ ಅಂಬಿನಿಂದ ಹೊಡೆಯುತ್ತಾನೆ. ಕೃಷ್ಣ ದಾರುಕನೊಂದಿಗೆ ಅರ್ಜುನನನ್ನು ಬರಮಾಡಿಕೊಂಡು, ವಜ್ರನೆಂಬ ಯದುಬಾಲಕನೊಡನೆ ಎಲ್ಲರೂ ದ್ವಾರಕೆಯನ್ನು ಬಿಟ್ಟು ಹೊರಡುವಂತೆ ಹೇಳಿಕಳಿಸಿ, ತಾನು ಯೋಗದಿಂದ ದೇಹವನ್ನು ತ್ಯಜಿಸುತ್ತಾನೆ.

ಇದು ಐತಿಹಾಸಿಕವೆಂದು ಹೇಳಬಹುದಾದ ಶ್ರೀಕೃಷ್ಣ ಚರಿತೆ. ಆದರೆ ಮಹಾಪ್ರಾಜ್ಞನಾದ ಭೀಷ್ಮನಿಂದ ಪೂಜಿತನಾದ ಶ್ರೀಕೃಷ್ಣನನ್ನು ಕೇವಲ ಐತಿಹಾಸಿಕ ಮಹಾಪುರುಷನನ್ನಾಗಿ ಭಾವಿಸಿದರೆ ನಮಗೆ ನಾವೇ ಅಪಚಾರ ಮಾಡಿಕೊಂಡಂತಾಗುತ್ತದೆ. ತನ್ನ ಕಾಲದಲ್ಲೇ ಆತ ದೇವರೆಂದು ಪರಿಗಣಿತನಾಗಿದ್ದನೆಂಬ ಅಂಶ ಆತನಿಗೆ ರಾಜಸೂಯಯಾಗದಲ್ಲಿ ಸಂದ ಅಗ್ರಪೂಜೆಯಿಂದ ವಿದಿತವಾಗುತ್ತದೆ. ಈ ದಿವ್ಯ ಪುರುಷನೊಡನೆ ದೇವದೇವತೆಗಳೆಲ್ಲರೂ ಒಂದಿಲ್ಲೊಂದು ತೆರದಲ್ಲಿ ಸಂಬಂಧವನ್ನು ಕಲ್ಪಿಸಿಕೊಂಡಿದ್ದರು. "ಗೋಪಿಯರು ಕಾಮದಿಂದ, ಕಂಸ ಭಯದಿಂದ, ಶಿಶುಪಾಲ ಮೊದಲಾದವರು ದ್ವೇಷದಿಂದ, ವೃಷ್ಣಿಗಳು ಬಾಂಧವ್ಯದಿಂದ, ಪಾಂಡವರು ಸಖ್ಯದಿಂದ, ಮಿಕ್ಕ ಸಾಧುಸಂತರಾದಿಯಾಗಿ ಸಮಸ್ತರೂ ಭಕ್ತಿಯಿಂದ ಭಗವಾನ್ ಶ್ರೀಕೃಷ್ಣನಿಗೆ ಸಂಬಂಧಿಗಳಾಗಿದ್ದರು"–ಎನ್ನುತ್ತದೆ ಭಾಗವತ; "ಸಕಲ ಸುಂದರ ಸನ್ನಿವೇಶವಾದ ತನುವನ್ನು ತಳೆದು, ಸುಮಂಗಲ ಕಾರ್ಯಗಳನ್ನು ಭೂಮಿಯಲ್ಲಿ ನಡೆಸಿ, ತನ್ನಿಷ್ಟಾರ್ಥವನ್ನು ಪೂರೈಸಿಕೊಂಡು, ತಾನಲ್ಲದೆ ಇತರರನ್ನೂ ನಿಮಿತ್ತವಾಗಿ ಮಾಡಿಕೊಂಡು, ರಾಜರನ್ನೆಲ್ಲ ಧ್ವಂಸಮಾಡಿ ಭೂಭಾರವನ್ನಿಳಿಸಿದನು, ಸ್ವಾಮಿ"–ಎಂದೂ ಕೊಂಡಾಡುತ್ತದೆ.

ಇಂಥ ರೂಪಶಾಲಿಯೂ ಸಂಯಮಿಶ್ರೇಷ್ಠನೂ ತತ್ತ್ವಜಿಜ್ಞಾಸುವೂ ಜಗನ್ಮಂಗಲವಿದನೂ ಜಗತ್ ಕಲ್ಯಾಣಕಾರನೂ ಆದ ಕೃಷ್ಣನ ಪೂಜೆ ಬಹುಕಾಲದ ಹಿಂದೆಯೇ ಭಾರತದಲ್ಲಿ ಪ್ರವೃತ್ತವಾಯಿತು. ಕ್ರಿ.ಪೂ.400 ವೇಳೆಗೇ ಮಥುರಾ ನಗರದಲ್ಲಿ ಪಾಂಡವಸಖ ಕೃಷ್ಣ ಪೂಜೆಗೊಳ್ಳುತ್ತಿದ್ದನೆಂದು ಮೆಗಾಸ್ತನೀಸನಿಂದ ತಿಳಿದುಬರುತ್ತದೆ. ಕ್ರಿಸ್ತಪೂರ್ವ 6ನೆಯ ಶತಮಾನದಿಂದ ಕೃಷ್ಣನಿಗೆ ಗುಡಿಗಳಾಗಿದ್ದವೆಂದು ಶಾಸನಗಳೂ ಗರುಡಗಂಬಾದಿ ಶಿಲ್ಪಗಳೂ ಘೋಷಿಸುತ್ತವೆ. ಕೃಷ್ಣ ಬಲರಾಮರು ದೇವತ್ವಕ್ಕೇರಿದ ಕ್ಷತ್ರಿಯ ವೀರರೆಂದು ಪಾಣಿನಿ ತನ್ನ ಸೂತ್ರಗಳಲ್ಲಿ ಉದಾಹರಿಸಿದ್ದಾನೆ. ಪತಂಜಲಿಯ ಕಾಲಕ್ಕೆ ಇವರು ದೇವರೆಂಬ ವಿಷಯ ಸ್ಥಿರಪಟ್ಟು ಹೋಗಿತ್ತು. ಈಗಲೂ ಶ್ರೀಕೃಷ್ಣನನ್ನು ದೇವರ ಪೂರ್ಣ ಅವತಾರವೆಂದೇ ಭಾರತೀಯರು ನಂಬುತ್ತಾರೆ. ಕೃಷ್ಣನನ್ನು ಹಾಡಿ ಹೊಗಳದ ಸಾಧುಸಂತರಿಲ್ಲ. ಕವಿಗಳು

ಎಲ್ಲ ಕಾಲದಲ್ಲೂ ಆತನ ವಿಷಯಕವಾದ ಕತೆಗಳನ್ನು ಕವಿತೆಗಳನ್ನೂ ರಚಿಸಿದ್ದಾರೆ; ರಚಿಸುತ್ತಲೂ ಇದ್ದಾರೆ. ಗಾನ ನೃತ್ಯಗಳಲ್ಲೂ ಕೃಷ್ಣನನ್ನು ಕೊಂಡಾಡದ ಕಲೆಗಾರರಿಲ್ಲ. ಕನ್ನಡನಾಡಿನ ದಾಸರು ಆತನ ನೆನಪನ್ನು ಮನೆಮನೆಗಳಿಗೆ ಕೊಂಡೊಯ್ದು ಭವತಾಪವನ್ನು ಹಿಂಗಿಸಿದ್ದಾರೆ. ಪ್ರೇಮವನ್ನೂ ಸಂತೋಷವನ್ನೂ ಬೆಳೆಸಿದ್ದಾರೆ. ಕೃಷ್ಣನ ನೇರವಾದ ಉಪದೇಶ ಮಹಾಭಾರತದಲ್ಲಿಯ ಭಗವದ್ಗೀತೆ ಮತ್ತು ಅನುಗೀತೆಗಳಲ್ಲೂ ಭಾಗವತದ ಉದ್ಧವ ಕೃಷ್ಣಸಂವಾದದಲ್ಲೂ ದೊರೆಯುತ್ತದೆ. ಮತ ಪ್ರವರ್ತಕರಾದ ಆಚಾರ್ಯರೆಲ್ಲರೂ ಭಗವದ್ಗೀತೆಯ ಮೇಲೆ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಈಗಲೂ ಇದು ವಿದ್ವಾಂಸರಿಂದಲೂ ಜಿಜ್ಞಾಸುಗಳಿಂದಲೂ ವ್ಯಾಖ್ಯಾನವಾಗುತ್ತಲೇ ಇದೆ. ಭಗವದ್ಗೀತೆ **(ನೋಡಿ– ಭಗವದ್ಗೀತೆ)** ಶ್ರೀಕೃಷ್ಣ ಸ್ವಾನುಭವದಿಂದ ಹೇಳಿದ ಮಾತುಗಳಾಗಿವೆ. ಭಾರತಕ್ಕೆ ಆತ ಕೊಟ್ಟ ಕೊಡುಗೆ ಎಂದರೆ ಎಲ್ಲ ಮತಗಳನ್ನೂ ಗೌರವದಿಂದ ಕಾಣಬೇಕೆಂಬ ಮನೋವೃತ್ತಿ, ಸ್ವಾರ್ಥದೂರವೂ ಜ್ಞಾನಭಕ್ತಿಯುತವೂ ಶುದ್ಧಾಂತಃಕರಣ ಪ್ರವೃತ್ತವೂ ಫಲಾಸಕ್ತಿರಹಿತವೂ ಆದ ಪ್ರಾಪ್ತ ಕರ್ತವ್ಯ ನಿರ್ವಹಣೆಯ ಬುದ್ಧಿ. ಅಲ್ಲದೆ ಅಂತಃಕರಣಕ್ಕೆ ಒಗ್ಗದೆ ಸುವಿಚಾರಕ್ಕೆ ಸಗ್ಗದೆ ಇರುವ, ಆದರೆ ಕಾಮಾತ್ಮರೂ ಅಲ್ಪಸುಖಾಪೇಕ್ಷಿಗಳೂ ಆದ ಸ್ವಾರ್ಥಿಗಳಿಗೆ ಮಾತ್ರ ಇಷ್ಟವಾಗುವ ಕುರುಡು ನಂಬಿಕೆ ಮತ್ತು ಆಚರಣೆಗಳ ತಿರಸ್ಕಾರ. ಅಧ್ಯಾತ್ಮ ಸಂಪನ್ನರಾದ ಜ್ಞಾನಿಗಳ ಮಾತಿಗೆ ಪುರಸ್ಕಾರ. ಸುವಿಚಾರಿತವೂ ಆಚರಣೀಯವೂ ಆದ ಆತ್ಮವೃದ್ಧಿಕರ ಉಪದೇಶವನ್ನು ಕೃಷ್ಣ ಸ್ವಾನುಭಾವದಿಂದ ನಿರೂಪಿಸಿರುವುದರಿಂದಲೇ ಭಗವದ್ಗೀತೆ ಎಂಥ ಸೂಕ್ಷ್ಮ ತೀಕ್ಷ್ಣಮತಿಗೂ ಹಿಡಿಸುತ್ತದೆ. ಆತನ ಸ್ಮರಣೆಯಿಂದ ನಮಗೆ ಲಭಿಸುವುದು ಸೈರಣೆಯ ಹಾಗೂ ಪ್ರೇಮಲ ಕೋಮಲ ಸಂತುಷ್ಟಿಯ ಮನೋಭಾವ. ಆತನ ಉಪದೇಶ ಮಾಮನುಸ್ಮರ ಯುದ್ಧ್ಯ ಚ–ಪರಮಾತ್ಮನನ್ನು ಸಂತತವಾಗಿ ಸ್ಮರಣೆಯಲ್ಲಿಟ್ಟುಕೊಂಡು ವಿಗತಜ್ವರನಾಗಿ ಮಾಡಬೇಕಾದುದನ್ನು ಅಳುಕದೆ ಮಾಡುತ್ತ ಈ ಬಾಳಿನಲ್ಲಿ ಏಗು–ಎಂಬುದು. (ಪಿ.ಟಿ.ಎನ್.)

**ಕೃಷ್ಣ (ರಾಷ್ಟ್ರಕೂಟ) :** ರಾಷ್ಟ್ರಕೂಟ ಮನೆತನದಲ್ಲಿ ಈ ಹೆಸರಿನ ಮೂವರು ಪ್ರಖ್ಯಾತ ದೊರೆಗಳಿದ್ದರು.

**ಕೃಷ್ಣ I:** ರಾಷ್ಟ್ರಕೂಟವಂಶದ ಸ್ಥಾಪಕ. ದಂತಿದುರ್ಗನ ಚಿಕ್ಕಪ್ಪ ಮತ್ತು ಉತ್ತರಾಧಿಕಾರಿ. ಇವನ ಆಳ್ವಿಕೆ ಅವಧಿ–756–774. ದಂತಿದುರ್ಗನಿಗೆ ಮಕ್ಕಳಿಲ್ಲದ್ದರಿಂದ ಈತ ಅಧಿಕಾರಕ್ಕೆ ಬಂದ. ಚಾಳುಕ್ಯರಸ ಇಮ್ಮಡಿ ಕೀರ್ತಿವರ್ಮನನ್ನು ಪೂರ್ಣವಾಗಿ ಸೋಲಿಸಿ ಬಹುಶಃ ರಣರಂಗದಲ್ಲಿ ಅವನನ್ನೂ ಕೊಂದನೆಂದು ತಿಳಿದುಬರುತ್ತದೆ. ರಾಹಪ್ಪನೆಂಬ ಮತ್ತೊಬ್ಬ ರಾಜನನ್ನು ಸೋಲಿಸಿದುದು ಇವನ ಪ್ರಮುಖ ವಿಜಯಗಳಲ್ಲೊಂದು. ರಾಜ್ಯದ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿದ ತರುವಾಯ ಕೊಂಕಣವನ್ನು ಗೆದ್ದು ಶಿಲಾಹಾರವಂಶದ ಸಣಫುಲ್ಲನನ್ನು ಅಲ್ಲಿ ಸಾಮಂತನಾಗಿ ನೇಮಿಸಿದ. ಅನಂತರ ತಲಕಾಡಿನ ಗಂಗರನ್ನು ಎದುರಿಸಿದಾಗ ಅಲ್ಲಿಯ ದೊರೆ ಶ್ರೀಪುರುಷ ಘೋರ ಹೋರಾಟ ನಡೆಸಿದ. ಅವರ ರಾಜಧಾನಿ ಮಾನ್ಯಪುರ (ಈಗಿನ ಮಣ್ಣೆ, ಬೆಂಗಳೂರು ಜಿಲ್ಲೆ) ವಶವಾದರೂ ಶ್ರೀಪುರುಷನನ್ನು ತನ್ನ ಸಾಮಂತನನ್ನಾಗಿ ನೇಮಿಸಿದ. ಈ ವಿಜಯ ಗಳಿಸಿದ್ದು 768ರಲ್ಲಿ. ಇವನ ಮಗ ಇಮ್ಮಡಿ ಗೋವಿಂದನ ನೇತೃತ್ವದಲ್ಲಿ 769ರಲ್ಲಿ ವೆಂಗಿಯ ಮೇಲೂ ಜಯ ಲಭ್ಯವಾಯಿತು.

ಕೃಷ್ಣ ಅಧಿಕಾರಕ್ಕೆ ಬಂದಾಗ ಮುದುಕನಾಗಿದ್ದರೂ ಈತ ಸಾಮ್ರಾಜ್ಯದ ಮೇರೆಗಳನ್ನು ವಿಸ್ತರಿಸಿ, ಆಡಳಿತ ವ್ಯವಸ್ಥೆಯನ್ನು ಸುಗಮಗೊಳಿಸಿ, ರಾಷ್ಟ್ರಕೂಟ ಸಾಮ್ರಾಜ್ಯವನ್ನು ಬಲಗೊಳಿಸಿದ. ಧರ್ಮ, ಸಾಹಿತ್ಯ ಮತ್ತು ಕಲೆಗಳಿಗೆ ಪ್ರೋತ್ಸಾಹ ನೀಡಿದ. ಎಲ್ಲೋರದ ಕೈಲಾಸ ದೇವಾಲಯ ಇವನ ಕಾಲದ ವಾಸ್ತುಕೃತಿಗಳಲ್ಲಿ ಅತ್ಯಂತ ಪ್ರಮುಖವಾದ್ದು. **(ನೋಡಿ– ಎಲ್ಲೋರ)**

**ಕೃಷ್ಣ II:** ಆಳ್ವಿಕೆಯ ಕಾಲ 878–914 ಮುಮ್ಮಡಿ ಗೋವಿಂದನ ತರುವಾಯ ಅಧಿಕಾರಕ್ಕೆ ಬಂದ. ಇವನ ಆಳ್ವಿಕೆಯ ಹೆಚ್ಚು ಕಾಲ ಯುದ್ಧರಂಗದಲ್ಲಿ ಕಳೆಯಿತು. ಉತ್ತರದಲ್ಲಿ ಗೂರ್ಜರ ಪ್ರತೀಹಾರರು ಪ್ರಬಲರಾಗಿದ್ದು ರಾಷ್ಟ್ರಕೂಟ ರಾಜ್ಯದ ಮೇಲೆ ದಾಳಿ ಮಾಡಿದರು. ಆ ವಂಶದ ಭೋಜನ ಸೈನ್ಯವನ್ನು ನರ್ಮದೆಯ ತೀರದಲ್ಲಿ ಎದುರಿಸಿದಾಗ ಕೃಷ್ಣ ಸೋಲನ್ನನುಭವಿಸಬೇಕಾಯಿತು. ಭೋಜನ ಸೈನ್ಯ ಗುಜರಾತಿಗೆ ನುಗ್ಗಲು, ಅಲ್ಲಿಯ ರಾಷ್ಟ್ರಕೂಟ ಸಾಮಂತ ಇಮ್ಮಡಿ ಕೃಷ್ಣ ಭೋಜನನ್ನು ಸೋಲಿಸಿ ತನ್ನ ಸಮ್ರಾಟನ ಗೌರವ ಉಳಿಸಿದ.

ವೆಂಗಿಯ ಚಾಳುಕ್ಯರು ರಾಷ್ಟ್ರಕೂಟದ ಶತ್ರುಗಳಾಗಿದ್ದರು. ವೆಂಗಿಯ ಗುಣಗ ವಿಜಯಾದಿತ್ಯ ಈ ಸಂದರ್ಭವನ್ನು ಉಪಯೋಗಿಸಿಕೊಂಡು ರಾಷ್ಟ್ರಕೂಟರ ಮೇಲೆರಗಿದ. ಯುದ್ಧದಲ್ಲಿ ಸೋತ ಕೃಷ್ಣ ತನ್ನ ಮಾವ ಚೇದಿರಾಜ ಕೊಕ್ಕಲ್ಲನ ಆಶ್ರಯ ಪಡೆಯಬೇಕಾಯಿತು. ವೆಂಗಿ ಚಾಳುಕ್ಯರಿಂದ ರಾಷ್ಟ್ರಕೂಟರು ಗೆದ್ದಿದ್ದ ಎಲ್ಲ ಪ್ರದೇಶಗಳೂ ಚಾಳುಕ್ಯರ ವಶವಾದುವು. ಆದರೆ 891ರಲ್ಲಿ ಗುಣಗ ವಿಜಯಾದಿತ್ಯನ ಮರಣಾನಂತರ ವೆಂಗಿಯ ಮೇಲೆ ದಾಳಿ ಮಾಡಿ, ಹೊಸ ದೊರೆ ಭೀಮನನ್ನು ಸೆರೆಹಿಡಿದುದಲ್ಲದೆ ಇಡೀ ವೆಂಗಿ ಸ್ವತಂತ್ರವಾಗಿರ ಬೇಕೆಂದೂ ಮತ್ತೆ ಯುದ್ಧ ಮುಂದುವರಿಸಬಾರದೆಂದೂ ಒಪ್ಪಿಕೊಂಡಂತೆ ಕಾಣುತ್ತದೆ.

ದಕ್ಷಿಣದಲ್ಲಿ ಆ ವೇಳೆಗೆ ಪಲ್ಲವರು ಅವನತಿಯಲ್ಲಿದ್ದು ಚೋಳರು ಪ್ರಬಲರಾಗುತ್ತಿದ್ದರು. ಕೃಷ್ಣ ಅವರೊಂದಿಗೆ ಸ್ನೇಹ ಬೆಳೆಸಿ ಆ ವಂಶದ 1ನೆಯ ಆದಿತ್ಯನಿಗೆ ತನ್ನ ಮಗಳನ್ನು ವಿವಾಹ ಮಾಡಿ ಕೊಟ್ಟಿದ್ದ. ಆದರೆ ತನ್ನ ಮೊಮ್ಮಗ (ಆದಿತ್ಯನ ಮಗ) ಕನ್ನರನ ಪರವಹಿಸಿ ಅವನ ಮಲತಮ್ಮ 1ನೆಯ ಪರಾಂತಕನೊಂದಿಗೆ ರಾಜ್ಯಕ್ಕಾಗಿ ಹೋರಾಡಬೇಕಾಯಿತು. 911ರಲ್ಲಿ ತಿರುವಳ್ಳಂನಲ್ಲಿ ನಡೆದ ಕದನದಲ್ಲಿ ಕೃಷ್ಣ ಸೋತ. IIನೆಯ ಕೃಷ್ಣ ಗುಜರಾತಿನಲ್ಲಿದ್ದ ಅರಬರೊಡನೆ ಸ್ನೇಹ ಗಳಿಸಿದ್ದ. ಈತ ಸಾಹಸಿ ಮತ್ತು ವೀರನಾಗಿದ್ದರೂ ಇವನ ಆಳ್ವಿಕೆ ಫಲದಾಯಕವಾಗಲಿಲ್ಲ. ಈತ ಮಹತ್ತ್ವಾಕಾಂಕ್ಷಿಯಾದರೂ ಈತನ ಉದ್ಯಮಗಳೆಲ್ಲ ವಿಫಲಗೊಂಡುವು. ಶತ್ರುಗಳು ಸುತ್ತುವರಿದಿದ್ದರೂ ಎಲ್ಲ ಯುದ್ಧಗಳಲ್ಲೂ ಈತ ಸೋಲನ್ನನುಭವಿಸಿದರೂ ಸಾಮ್ರಾಜ್ಯದ ಮೇರೆಗಳನ್ನು ರಕ್ಷಿಸಿಕೊಂಡು ಬಂದದ್ದು ಇವನ ಸಾಹಸಕ್ಕೆ ಸಾಕ್ಷಿ. ಈತ ಜೈನಧರ್ಮಾನುರಾಗಿ ಜೈನ ವಿದ್ವಾಂಸ ಗುಣಭದ್ರನ ಶಿಷ್ಯ.

**ಕೃಷ್ಣ III:** ಆಳ್ವಿಕೆಯ ಕಾಲ 939–967. ಮೂರನೆಯ ಅಮೋಘವರ್ಷನ ಮಗ; ಅವನ ಅನಂತರ ಬಂದ ದೊರೆ. ಅಮೋಘವರ್ಷ ಮುಪ್ಪಿನಲ್ಲಿ ಸಿಂಹಾಸನಕ್ಕೆ ಬಂದಾಗ (935) ಮೂರನೆಯ ಕೃಷ್ಣ ಯುವರಾಜ ಪದವಿಯಲ್ಲಿದ್ದುಕೊಂಡು ತಂದೆಯ ಪರವಾಗಿ ಆಡಳಿತ ನಿರ್ವಹಿಸುತ್ತಿದ್ದ. ತನ್ನ ತಂದೆಯ ಶತ್ರುಗಳಾಗಿದ್ದ ಅಚಲಾಪುರದ ದಂತಿಗ ಮತ್ತು ವಪ್ಪುಕರನ್ನು ಸದೆಬಡಿದುದಲ್ಲದೆ ತನ್ನ ತಂದೆಯ ಆಪ್ತನಾದ ಗಂಗವಂಶದ ಇಮ್ಮಡಿ ಬೂತುಗನಿಗೆ ರಾಜ್ಯ ದೊರಕಿಸಿಕೊಡಲು ಗಂಗವಾಡಿಯ ಮೇಲೆ ನುಗ್ಗಿದ. ನೊಳಂಬ ರಾಜ ಅಣ್ಣಿಗನ ಸಹಾಯ ಪಡೆದ ಗಂಗರ ದೊರೆ ರಾಚಮಲ್ಲನನ್ನು ಯುದ್ಧದಲ್ಲಿ ಕೊಂದು, ಅಣ್ಣಿಗನನ್ನು ಹೊಡೆದೋಡಿಸಿ, ಬೂತುಗನನ್ನು ಸಿಂಹಾಸನಕ್ಕೇರಿಸಿದ. ಮಹತ್ತ್ವಾಕಾಂಕ್ಷಿಯಾದ ಕೃಷ್ಣ ರಾಷ್ಟ್ರಕೂಟರ ವೈವಾಹಿಕ ಸಂಬಂಧಿಗಳೂ ದೀರ್ಘಕಾಲದ ಮಿತ್ರರೂ ಆದ ಚೇದಿ ಕಳಚುರಿಗಳ ಮೇಲೆ ಕದನ ಹೂಡಿ, ಆ ವಂಶದ ಸಾಹಸತುಂಗನನ್ನು ಸೋಲಿಸಿದ್ದರಿಂದ ಅವರ ಹಗೆತನ ಕಟ್ಟಿಕೊಳ್ಳಬೇಕಾಯಿತು. ಅನಂತರ ಉತ್ತರದ ಕಡೆ ನುಗ್ಗಿ ಗೂರ್ಜರ ಪ್ರತೀಹಾರರನ್ನು ಸೋಲಿಸಿ ಅವರಿಂದ ಚಿತ್ರಕೂಟ ಮತ್ತು ಕಾಲಿಂಜರ ಕೋಟೆಗಳನ್ನು ವಶಪಡಿಸಿಕೊಂಡ. 939ರಲ್ಲಿ ಅಮೋಘ ವರ್ಷ ಮೃತನಾದಾಗ ಮುಮ್ಮಡಿ ಕೃಷ್ಣ ಸಿಂಹಾಸನಕ್ಕೆ ಬಂದ. ಒಡನೆಯೇ ಗಂಗಬೂತುಗನ ಸಹಾಯದಿಂದ ಲಲ್ಲೆಯನೆಂಬ ಪ್ರತಿಸ್ಪರ್ಧಿಯೊಡನೆ ಹೋರಾಡಿ ವಿಜಯ ಗಳಿಸಿದ. ತರುವಾಯ ಆಡಳಿತವನ್ನು ವ್ಯವಸ್ಥೆಗೊಳಿಸಿ ತನ್ನ ಅಧಿಕಾರವನ್ನು ಸುಭದ್ರಗೊಳಿಸಿಕೊಂಡ.

ದಕ್ಷಿಣದಲ್ಲಿ ಚೋಳ ದೊರೆ ಒಂದನೆಯ ಪರಾಂತಕ ಪ್ರಬಲನಾಗುತ್ತಿದ್ದು, ಕೃಷ್ಣನ ಪೂರ್ವಜರನ್ನು ಸೋಲಿಸಿ ರಾಷ್ಟ್ರಕೂಟ ಕುಲಕ್ಕೆ ಕಳಂಕ ತಂದಿದ್ದ. ಮತ್ತೆ ಮುಮ್ಮಡಿ ಕೃಷ್ಣನ ಪ್ರತಿಸ್ಪರ್ಧಿಯಾದ ರಾಷ್ಟ್ರಕೂಟ ನಾಲ್ವಡಿ ಗೋವಿಂದನಿಗೆ ಆತ ಆಶ್ರಯವನ್ನೂ ನೀಡಿದ್ದ. ಕೃಷ್ಣ ತನ್ನ ಸಮರ್ಥ ಸಾಮಂತನಾಗಿದ್ದ ಗಂಗಬೂತುಗನೊಡನೆ ಚೋಳ ರಾಜ್ಯದ ಮೇಲೆ ನುಗ್ಗಿದ. ಚೋಳರ ಸೈನ್ಯ ಯುವರಾಜ ರಾಜಾದಿತ್ಯನ ನಾಯಕತ್ವದಲ್ಲಿ ಈಗಿನ ಚೆಂಗಲ್ಪಟ್ಟು ಜಿಲ್ಲೆಯಲ್ಲಿರುವ ತಕ್ಕೋಲಂ ಎಂಬಲ್ಲಿ ರಾಷ್ಟ್ರಕೂಟರನ್ನು ಎದುರಿಸಿತು. ಆ ಯುದ್ಧದಲ್ಲಿ ರಾಜಾದಿತ್ಯ ಮಡಿದ. ರಾಷ್ಟ್ರಕೂಟರಿಗೆ ವಿಜಯ ಲಭಿಸಿತು. ತಂಜಾವೂರುವರೆಗಿನ ಚೋಳರ ಪ್ರದೇಶಗಳು ರಾಷ್ಟ್ರಕೂಟರ ವಶವಾದುವು. ಕೃಷ್ಣ ತನ್ನ ಸೈನ್ಯದೊಡನೆ ದಕ್ಷಿಣ ದಿಕ್ಕಿನಲ್ಲಿ ಮುಂದುವರಿದು, ಪಾಂಡ್ಯರನ್ನು ಸೋಲಿಸಿ ರಾಮೇಶ್ವರದವರೆಗೂ ನುಗ್ಗಿ ಅಲ್ಲಿ ತನ್ನ ವಿಜಯಸ್ತಂಭವನ್ನು ಸ್ಥಾಪಿಸಿದ. ತಮಿಳು ದೇಶದಲ್ಲಿ ಆಡಳಿತವನ್ನು ವ್ಯವಸ್ಥೆಗೊಳಿಸಿ, ತರುವಾಯ ಹಿಂದಿರುಗಿದ. ಯುದ್ಧದಲ್ಲಿ ಅಮೋಘ ನೆರವು ನೀಡಿದ ಬೂತುಗನಿಗೆ ಬನವಾಸಿ, ಬೆಳ್ವೊಲ ಮತ್ತು ಪುರಿಗೆರೆ ಪ್ರಾಂತ್ಯಗಳು ಬಳುವಳಿಯಾಗಿ ದೊರೆತುವು. ಉತ್ತರದಲ್ಲಿ ಈ ಮಧ್ಯೆ ರಾಷ್ಟ್ರಕೂಟದ ವಶದಲ್ಲಿದ್ದ ಚಿತ್ರಕೂಟ ಮತ್ತು ಕಾಲಂಜರ ಕೋಟೆಗಳನ್ನು ಚಂದೇಲರು ವಶಪಡಿಸಿಕೊಂಡದ್ದರಿಂದಲೂ ಗೂರ್ಜರ ಪ್ರತೀಹಾರರು ಪ್ರಬಲರಾಗುತ್ತಿದ್ದುದರಿಂದಲೂ ಕೃಷ್ಣ ಆ ಕಡೆ ಗಮನ ಕೊಡಬೇಕಾಯಿತು. ಬೂತುಗನ ಮಗ ಮಾರಸಿಂಹನ ನೇತೃತ್ವದಲ್ಲಿ ಹೊರಟ ರಾಷ್ಟ್ರಕೂಟ ಸೈನ್ಯ ಗೂರ್ಜರ ಪ್ರತೀಹಾರ ರಾಜ್ಯದ ಪಶ್ಚಿಮ ಭಾಗವನ್ನು ವಶಪಡಿಸಿಕೊಂಡಿದ್ದರಿಂದ ಗೂರ್ಜರಾಧಿರಾಜನೆಂಬ ಬಿರುದು ಅವನಿಗೆ ಲಭ್ಯವಾಯಿತು. ಪರಮಾರ ಮನೆತನದ ಸೀಯಕ ಹರ್ಷನನ್ನು ಕೃಷ್ಣ ಸೋಲಿಸಿ ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದ.

ಪೂರ್ವದಲ್ಲಿ ವೆಂಗಿ ರಾಜ್ಯದಲ್ಲಿ ಪುನಃ ಅಂತಃಕಲಹಗಳು ತಲೆದೋರಿದುವು. ಚಾಳುಕ್ಯ ಇಮ್ಮಡಿ ಭೀಮನ ಮರಣಾನಂತರ ಅವನ ಮಕ್ಕಳಾದ ಅಮ್ಮ ಮತ್ತು ದಾನಾರ್ಣವರಲ್ಲಿ ಸಿಂಹಾಸನಕ್ಕಾಗಿ ಹೊಡೆದಾಟ ನಡೆಯುತ್ತಿದ್ದಾಗ ಬಾಡಪನೆಂಬ ಮತ್ತೊಬ್ಬ ಅಭ್ಯರ್ಥಿಯ ಪರವಾಗಿ ಅಲ್ಲಿಯ ಹೋರಾಟದಲ್ಲಿ ಕೃಷ್ಣ ಪ್ರವೇಶಿಸಿ, ಬಾಡಪನಿಗೆ ರಾಜ್ಯವನ್ನು ಗಳಿಸಿಕೊಟ್ಟ. ಅಮ್ಮ ಯುದ್ಧವನ್ನು ಮುಂದುವರಿಸಿ ಬಾಡಪನ ತಮ್ಮ ಇಮ್ಮಡಿ ತೈಲನನ್ನು ಪದಚ್ಯುತನನ್ನಾಗಿ ಮಾಡಿದಾಗ ಪುನ: ಕೃಷ್ಣ ಪ್ರವೇಶಿಸಿ ಅಮ್ಮನನ್ನು ಸೋಲಿಸಿ ಓಡಿಸಿದ್ದಲ್ಲದೆ ವೆಂಗಿಯ ಸಿಂಹಾಸನವನ್ನು ಮತ್ತೊಬ್ಬ ಅಭ್ಯರ್ಥಿಯಾಗಿದ್ದ ದಾನಾರ್ಣವನಿಗೆ ಕೊಡಿಸಿದ.

ಕೃಷ್ಣ ರಾಷ್ಟ್ರಕೂಟರ ಅತ್ಯಂತ ಸಮರ್ಥ ದೊರೆಗಳಲ್ಲೊಬ್ಬ; ಧೀರಯೋಧ, ಚತುರ ಆಡಳಿತಗಾರ ಮತ್ತು ಪ್ರತಿಭಾವಂತ ರಾಜನೀತಿಜ್ಞ. ಈತ ಸು.ಮೂರು ದಶಕಗಳ ಕಾಲ ಸೋಲನ್ನರಿಯದ ಅರಸನಾಗಿದ್ದು ತನ್ನ ಮನೆತನದ ಸರ್ವತೋಮುಖ ಪ್ರಗತಿಗೆ ಮುಖ್ಯ ಕಾರಣನಾಗಿದ್ದುದಲ್ಲದೆ ಅಂದಿನ ಭಾರತದಲ್ಲಿ ಅಸಮಾನ ವೀರಯೋಧನಾಗಿದ್ದ. ಶೀಘ್ರಗತಿಯಲ್ಲಿ ಬೆಳೆಯುತ್ತಿದ್ದ ಚೋಳರನ್ನು ಸದೆಬಡಿದಿದ್ದು ಇವನ ಸಾಧನೆಗಳಲ್ಲಿ ಪ್ರಮುಖವಾದ್ದು. 967ರಲ್ಲಿ ಈತ ಮೃತನಾದಾಗ ರಾಷ್ಟ್ರಕೂಟ ರಾಜ್ಯ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತು. (ಬಿ.ಎಂ.)

**ಕೃಷ್ಣ (ಸೇವುಣ) :** ದೇವಗಿರಿಯ ಸೇವುಣರ 2ನೆಯ ಸಿಂಘಣ್ಣನ ಮೊಮ್ಮಗ ಮತ್ತು ಜೈತುಗಿಯ ಮಗ. ಇವನ ಆಳ್ವಿಕೆಯ ಅವಧಿ 1247–61. ಸಿಂಘಣ್ಣನಿಗಿಂತ ಮೊದಲೇ ಜೈತುಗಿ ಕಾಲವಾದ್ದರಿಂದ ಸಿಂಘಣನ ಅನಂತರ ಕೃಷ್ಣನೇ ಸಿಂಹಾಸನವನ್ನೇರಿದ (1247). ಶಾಸನಗಳಲ್ಲಿ ಇವನ ಹೆಸರು ಕನ್ಹ, ಕನ್ಹಪ, ಕಂಧಾರ, ಕನ್ಹಾರ ಎಂದೆಲ್ಲ ಉಲ್ಲೇಖಿತವಾಗಿದೆ. ರಾಜ್ಯಭಾರವನ್ನು ವಹಿಸಿಕೊಂಡ ಅನಂತರ ಈತ ಮಾಳ್ವದೇಶದ ದೊರೆಯಾಗಿದ್ದ ಜೈತುಗಿ ದೇವನನ್ನೂ ಗುಜರಾತಿನ ವೀಸಲದೇವನನ್ನೂ ಸೋಲಿಸಿದರೂ ಇದರಿಂದ ಅವನ ರಾಜ್ಯವಿಸ್ತಾರವೇನೂ ಆಗಲಿಲ್ಲ. ಈ ದಾಳಿಗಳು ಸು. 1250ರಲ್ಲಿ ನಡೆದಿರಬಹುದು.

ಉತ್ತರದಲ್ಲಿ ಲಭ್ಯವಾದ ಈ ವಿಜಯಗಳಿಂದ ಕೃಷ್ಣ ಉತ್ಸಾಹಗೊಂಡು ಹೊಯ್ಸಳ ರಾಜ್ಯದ ಮೇಲೆ ಆಕ್ರಮಣ ನಡೆಸಿದಾಗ ಚಿತ್ರದುರ್ಗದ ಕೆಲವು ಭಾಗಗಳು ಅವನ ವಶವಾದುವು. ಕೃಷ್ಣನ ಮಂತ್ರಿಯಾಗಿದ್ದ ಚಾವುಂಡರಸ, ಕುಕ್ಕನೂರಿನಲ್ಲಿ ಬೀಡುಬಿಟ್ಟಿದ್ದ ಸಮಯದಲ್ಲಿ ಹೊಯ್ಸಳ ಪಾಂಡ್ಯರನ್ನು ಎದುರಿಸುತ್ತಿದ್ದುದರಿಂದ ಇದೇ ತಕ್ಕ ಸಮಯವೆಂದು ಚಾವುಂಡರಸ ಕಾವೇರಿಯ ತೀರದವರೆಗೂ ದಾಳಿ ನಡೆಸಿದ. ಹೊಯ್ಸಳ ದೊರೆ 3ನೆಯ ನರಸಿಂಹ ಅಸಹಾಯಕನಾಗಿದ್ದ.

ಕೃಷ್ಣ ಗೋವೆಯ ಕದಂಬರನ್ನು ಸೋಲಿಸಲು ಚಂದ್ರದೇವ ಮತ್ತು ಕೇಶವದೇವ ಎಂಬ ತನ್ನ ಮಂತ್ರಿಗಳನ್ನು ಕಳುಹಿಸಿದ. ಅವರ ದೊರೆ ಷಷ್ಠದೇವ ಸೋತು ಕೃಷ್ಣನ ಸಾಮಂತನಾದ. ಹಾನುಗಲ್ಲಿನ ಕದಂಬರು ಕೃಷ್ಣನ ಸಾಮಂತರಾಗಿದ್ದರು. ಕೃಷ್ಣ ಗುತ್ತವೊಳಲಿನ ಗುತ್ತರ ಮೇಲೂ ಯುದ್ಧ ಮಾಡಿದ. ಮೂರನೆಯ ಗುತ್ತನನ್ನು ಸೋಲಿಸಿದ. ಅವನು ಕೃಷ್ಣನ ಸಾಮಂತನಾದ. ಅವಿಧೇಯನಾಗಿದ್ದ ಸೌಂದತ್ತಿಯ ರಟ್ಟರಾಜ ಲಕ್ಷ್ಮೀದೇವನಿಗೂ ಮಹಾಪ್ರಧಾನ ನಾಗರಸನ ನೇತೃತ್ವದಲ್ಲಿ ಹೊರಟ ಸೇವುಣ ಸೈನ್ಯದಿಂದ ಸೋಲಾಯಿತು. ಅವನೂ ಸೇವುಣರ ಸಾಮಂತನಾದ. ವಂಶಪಾರಂಪರ್ಯವಾಗಿ ಬಂದಿದ್ದ ತೆಲುಂಗರಾಯ ಸ್ಥಾಪನಾಚಾರ್ಯ ಎಂಬ ಬಿರುದು ಕೃಷ್ಣನಿಗಿತ್ತಾದರೂ ಕಾಕತೀಯರೂ ಸೇವುಣರೂ ಆ ಕಾಲದಲ್ಲಿ ಮಿತ್ರರಾಗಿದ್ದರು. ಅಭೀರ ರಾಜ ಕಾಮಪಾಲನೂ ಕೃಷ್ಣನಿಂದ ಪರಾಜಯ ಹೊಂದಿದ. ಕೃಷ್ಣನ ಆಡಳಿತಕ್ಕೆ ಕೋಸಲವೂ ಸೇರಿತ್ತೆಂದು ತಿಳಿದು ಬರುತ್ತದೆ.

ಕೃಷ್ಣನ ರಾಜ್ಯ ದಕ್ಷಿಣದಲ್ಲಿ ನೊಳಂಬವಾಡಿಯವರೆಗೂ ಪೂರ್ವದಲ್ಲಿ ಛತ್ತೀಸ್‍ಗಡದವರೆಗೂ ಉತ್ತರದಲ್ಲಿ ಮಾಳ್ವದವರೆಗೂ ಹರಡಿತ್ತು. ಇವನು ಕೇವಲ ಯುದ್ಧಾಸಕ್ತನಾಗಿರದೆ ಸಾಂಸ್ಕೃತಿಕ ಕಾರ್ಯಗಳಲ್ಲೂ ಆಸಕ್ತಿ ವಹಿಸಿದ್ದ. ಕೃಷ್ಣನ ಆಶ್ರಯದಲ್ಲಿ ಸೂಕ್ತಿ ಮುಕ್ತಾವಲೀ ಎಂಬ ಸಂಸ್ಕೃತ ಗ್ರಂಥವನ್ನು ಜಲ್ಹಣಪಂಡಿತನೂ ಕಲ್ಪತರು ಎಂಬ ಸಂಸ್ಕೃತ ಗ್ರಂಥವನ್ನು ಅಮಲಾನಂದನೂ ರಚಿಸಿದರು. ಬ್ರಾಹ್ಮಣ, ಶೈವ, ವೀರಶೈವ, ಜೈನ ಮತ್ತು ಮಹಾನುಭಾವ ಪಂಥದ ಮುನಿಗಳಿಗೆ ಮತ್ತು ದೇವಾಲಯಗಳಿಗೆ ಇವನಿಂದ ಆಶ್ರಯ ದೊರಕಿತೆಂದು ಶಾಸನಗಳಿಂದ ತಿಳಿಯುತ್ತದೆ. ಚಕ್ರಧರ ಸ್ವಾಮಿ ಕೋಸಲ ದೇಶದಲ್ಲಿ ತಂಗಿದ್ದ ಸಮಯದಲ್ಲಿ ಕೃಷ್ಣ ಅಲ್ಲಿಗೆ ಹೋಗಿ (1256) ಆ ಮುನಿಯ ದರ್ಶನ ಭಾಗ್ಯವನ್ನು ಪಡೆದನೆಂದು ಲೀಲಾಚರಿತ ಗ್ರಂಥ ತಿಳಿಸುತ್ತದೆ.

ಕೃಷ್ಣ 14 ವರ್ಷಗಳ ಕಾಲ ರಾಜ್ಯವಾಳಿದ. ಸೇವುಣ ರಾಜ್ಯ ಇವನ ಕಾಲದಲ್ಲಿ ಪ್ರಭಾವಶಾಲಿಯಾಗಿತ್ತು. ಇವನು 1261ರಲ್ಲಿ ಮರಣ ಹೊಂದಿದ. (ಎ.ವಿ.ಎನ್.)

**ಕೃಷ್ಣ ಅಗರು ಮರ :** ತೈಮೀಲಿಯೇಸಿ ಕುಟುಂಬಕ್ಕೆ ಸೇರಿದ ದೊಡ್ಡಮರ. ಅಕ್ವಿಲೇರಿಯ ಅಗಲೋಚ ಇದರ ಶಾಸ್ತ್ರೀಯ ನಾಮ. ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಇದನ್ನು ಈಗಲ್‍ವುಡ್ ಎನ್ನಲಾಗುತ್ತದೆ. ಭಾರತದ ಮೂಲವಾಸಿಯಾದ ಇದು ಭಾರತದ ಪೂರ್ವಭಾಗ, ಭೂತಾನ್, ಅಸ್ಸಾಮ್ ರಾಜ್ಯದ ಖಾಸಿಯ, ಗ್ಯಾರೊ, ನಾಗಾ, ಕಚಾರ್ ಬೆಟ್ಟಗಳಲ್ಲಿ ಬೆಳೆಯುತ್ತದೆ. ಇದು ಸದಾ ಹಸುರಾಗಿರುವ ಮತ್ತು ಸುಮಾರು 60′–70′ ಎತ್ತರಕ್ಕೆ ಬೆಳೆಯುವ ದೊಡ್ಡ ಮರ. ಇದರ ಕಾಂಡದ ಸುತ್ತಳತೆ 5′–8′ಗಳವರೆಗೂ ಇರುತ್ತದೆ. ಇದರ ಚೌಬೀನೆ ಮೃದು ಮತ್ತು ಹಗುರ; ಇದಕ್ಕೆ ವಿಸ್ತರಣ ಶಕ್ತಿ ಉಂಟು. ಇದರ ಬಣ್ಣ ಬಿಳಿ ಅಥವಾ ನಸುಹಳದಿ. ಚೌಬೀನೆ ಬಾಳಿಕೆ ಬರುವಂಥದಲ್ಲ. ಇದನ್ನು ಮಯನ್ಮಾರ್‌ನ ಕಾರೆನ್ಸ್ ಬುಡಕಟ್ಟಿನವರು ಬಿಲ್ಲುಗಳನ್ನು ಮತ್ತು ಊರುಗೋಲುಗಳನ್ನು ತಯಾರಿಸಲು ಬಳಸುತ್ತಾರೆ.

ಕೃಷ್ಣ ಅಗರು ಮರದ ಚೌಬೀನೆಯ ಅತ್ಯಂತ ಒಳಭಾಗದಲ್ಲಿ ಒಂದು ರೀತಿಯ ಸುವಾಸನಾಯುಕ್ತವಾದ ರಾಳ ಮತ್ತು ಚಂಚಲ ತೈಲಗಳ ಮಿಶ್ರಣವಿದೆ. ಕಾಂಡದಲ್ಲಿ ರೆಂಬೆಗಳು ಹೊರಡುವ ಭಾಗದಲ್ಲೇ ಈ ವಸ್ತುವಿನ ಪ್ರಮಾಣ ಹೆಚ್ಚು. ಈ ಭಾಗದ ಬಣ್ಣ ಕಡುಕೆಂಪು. ಈ ಮಿಶ್ರಣಕ್ಕೆ ಅಗರು ಅಥವಾ ಕೃಷ್ಣ ಅಗರು ಎಂಬ ವಾಣಿಜ್ಯನಾಮವಿದೆ. ಇದರ ಉತ್ಪತ್ತಿಯ ಕಾರಣ ಮರಕ್ಕೆ ಬೂಷ್ಟು ರೋಗವೊಂದು ಅಂಟುವುದರಿಂದ ಎಂದು ನಂಬಲಾಗಿದೆ. ಅಗರಿನ ಉತ್ಪತ್ತಿಗೆ ಕಾರಣವಾದುದೆಂದು ನಂಬಲಾದ ಬೂಷ್ಟಿನ ಎಳೆಗಳನ್ನೂ ಕಂಡುಹಿಡಿಯಲಾಗಿದೆ. ಅಲ್ಲದೆ ಅಗರು ಇರುವ ಮರಗಳಿಂದ ಗೂಟಗಳನ್ನು ತಯಾರಿಸಿ ಬೇರೆ ಆರೋಗ್ಯವಂತ ಮರಗಳಿಗೆ ಹೊಡೆದು ನುಗ್ಗಿಸುವುದರಿಂದ ಈ ರೋಗವನ್ನು ಉಂಟುಮಾಡಬಹುದೆಂದು ಗೊತ್ತಾಗಿದೆ. ಈ ರೋಗ ಬಲಿಯಲು ಬಹಳ ವರ್ಷಗಳು ಬೇಕು. ಚೆನ್ನಾಗಿ ಬಲಿತ ಮರ ಅಂದರೆ ಸುಮಾರು 50 ವರ್ಷಗಳಾದ ಮರದಲ್ಲಿ ಅಗರಿನ ಸಾರತೆ ಹೆಚ್ಚಾಗಿರುತ್ತದೆ. ಕೆಲವು ಸಲ ತೊಗಟೆಯ ಒಳಗಿನ ಜೀವಕೋಶಗಳ ಸಮುದಾಯವೆಲ್ಲವೂ ಅಗರುಮಯವಾಗಿರುತ್ತದೆ.

ಕೃಷ್ಣ ಅಗರು ನೀರಿಗಿಂತ ಭಾರ. ಈ ಗುಣವನ್ನು ಕೆಲವು ಸಲ ಚೌಬೀನೆಯ ದರ್ಜೆಯನ್ನು ಗುರುತಿಸಲು ಉಪಯೋಗಿಸುತ್ತಾರೆ. ಅಗರಿಲ್ಲದ ಮರ ನೀರಿನಲ್ಲಿ ತೇಲುತ್ತದೆ. ಅಗರಿಗೆ ಸ್ವಲ್ಪ ಕಹಿ ರುಚಿಯೂ ಒಂದು ಬಗೆಯ ವಿಚಿತ್ರವಾದ ಆದರೆ ಹಿತವಾದ ವಾಸನೆಯೂ ಉಂಟು. ವಾಸನೆಯನ್ನು ಕೊಂಚಮಟ್ಟಿಗೆ ಗಂಧದ ಮರದ ಇಲ್ಲವೆ ಪನ್ನಂಬರದ(ಅಂಬರ್ ಗ್ರೀಸ್) ವಾಸನೆಗೆ ಹೋಲಿಸಬಹುದು. ಇದರ ಬಣ್ಣ ಕಂದು, ಬಲು ಗಡುಸಾದ ಇದರಲ್ಲಿ ಹೆಚ್ಚು ಮೊತ್ತದಲ್ಲಿ ರಾಳ (ರೆಸಿನ್) ಇದೆ. ಅಗರು ಪ್ರಜ್ವಲಿತವಾಗಿ ಇಲ್ಲವೆ ಜ್ವಾಲೆಯಿಲ್ಲದೆ ಉರಿಯುತ್ತದೆ. ಉರಿಯುವಾಗ ಅಪ್ಯಾಯಮಾನವಾದ ಸುವಾಸನೆಯನ್ನು ನೀಡುತ್ತದೆ. ಮಾರುಕಟ್ಟೆಗಳಲ್ಲಿ ಚಕ್ಕೆ ಮತ್ತು ಸಿಬಿರುಗಳ ರೂಪದಲ್ಲಿ ಇಲ್ಲವೆ ಸುಮಾರು ಒಂದು ಪೌಂಡು ತೂಕದ ತುಂಡುಗಳ ರೂಪದಲ್ಲಿ ದೊರೆಯುತ್ತದೆ. ಇದನ್ನು ಸಾಮಾನ್ಯವಾಗಿ ಪಾರ್ಸಿಗಳು, ಅರಬ್ಬೀ ದೇಶದವರು ಧೂಪ ಹಾಕುವ ವಸ್ತುವಾಗಿ ಉಪಯೋಗಿಸುತ್ತಾರೆ. ಅಸ್ಸಾಮಿನ ಸಿಲ್ಹೆಟ್ ಪ್ರದೇಶದ ಅಗರಿಗೆ ಹೆಚ್ಚು ಬೆಲೆ. ಅಗರಿನ ಒಂದು ಬಗೆಯಾದ ಧಮ್ ಎಂಬುದು ಮೃದುವಾಗಿದೆ. ಅದರ ಬಣ್ಣ ಹಳದಿ ಮಿಶ್ರಿತ ಬಿಳಿ. ಆದರೆ ಇದು ಕೀಳುದರ್ಜೆಯದು. ಇದನ್ನು ಬಟ್ಟಿ ಇಳಿಸಿ ಒಂದು ರೀತಿಯ ಚಂಚಲ ತೈಲವನ್ನು ತೆಗೆಯುತ್ತಾರೆ. ಇದಕ್ಕೆ ಅಗರು ಅತ್ತರ್ ಎಂಬ ಹೆಸರಿದೆ. ಗುಲಾಬಿ ಅತ್ತರಿನಷ್ಟೇ ಬೆಲೆಯಿರುವ ಇದಕ್ಕೆ ಸುವಾಸನೆಯನ್ನು ದೀರ್ಘಕಾಲದವರೆಗೂ ಉಳಿಯುವಂತೆ ಮಾಡುವ ಶಕ್ತಿಯಿದೆ. ಆದ್ದರಿಂದ ಯೂರೋಪಿನ ಸುಗಂಧದ್ರವ್ಯ ತಯಾರಕರು ಅತ್ಯುತ್ತಮ ದರ್ಜೆಯ ಸುಗಂಧ ದ್ರವ್ಯಗಳೊಂದಿಗೆ ಸೇರಿಸಲು ಇದನ್ನು ಉಪಯೋಗಿಸುತ್ತಾರೆ. ಬಟ್ಟೆ ಮತ್ತು ಚರ್ಮದ ಮೇಲೆ ಅಗರು ಹುಡಿಯನ್ನು ಚಿಮುಕಿಸುವುದರಿಂದ ಚಿಗಟ ಮತ್ತು ಹೇನುಗಳನ್ನು ತಡೆಗಟ್ಟಬಹುದು. ಅಗರಿಗೆ ಉತ್ತೇಜಕ, ಬಲವರ್ಧಕ ಮತ್ತು ವಾತಹರ ಗುಣಗಳೂ ಇವೆಯೆಂದು ಹೇಳಲಾಗಿದೆ. ಮಲಯದಲ್ಲಿ ಇದನ್ನು ಅನೇಕ ಚರ್ಮರೋಗಗಳ ನಿವಾರಣೆಗೆ ಮತ್ತು ಕಾಂತಿವರ್ಧನೆಗೆ ಬಳಸುವರು. ಇದನ್ನು ಈಗ ಹೆಚ್ಚಾಗಿ ಧೂಪದ ಮತ್ತು ಅಗರುಬತ್ತಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸುವಾಸನಾಯುಕ್ತವಾದ ಚೌಬೀನೆ ಬಹಳ ಕಾಲ ಬಾಳಿಕೆ ಬರುವುದಿಲ್ಲವಾದರೂ ಬೀರು ಮತ್ತು ಕೆತ್ತನೆ ಕೆಲಸಗಳಲ್ಲಿ ಇದನ್ನು ಉಪಯೋಗಿಸುವುದುಂಟು. ಈ ಮರದ ತೊಗಟೆ ಬಹಳ ಉದ್ದ. ಅದು ತೆಲುನಾರಿನಂತಿದೆ. ಹಿಂದೆ ಅಸ್ಸಾಮನಲ್ಲಿ ಬಹಳ ಕಾಲದವರೆಗೂ ಈ ತೊಗಟೆಯಿಂದ ಒಂದು ರೀತಿಯ ಕಾಗದವನ್ನು ತಯಾರಿಸುತ್ತಿದ್ದರು. ಅಲ್ಲದೆ ಇದರಿಂದ ಹಗ್ಗಗಳನ್ನು ತಯಾರಿಸುವುದಿದೆ. (ಕೆ.ಜಿ.ಎ.)

**ಕೃಷ್ಣ ಆಲ :** ಮೊರೇಸೀ ಕುಟುಂಬಕ್ಕೆ ಸೇರಿದ ಫೈಕಸ್ ಬೆಂಗಾಲೆನ್ಸಿಸ್ (ಆಲ) ಪ್ರಭೇದದ ಕೃಷ್ಣ ಎಂಬ ಬಗೆಯ ಮರ. ಇದನ್ನು ಫೈಕಸ್ ಕೃಷ್ಣೆ ಎಂಬ ಭಿನ್ನರೀತಿಯ

ಕೃಷ್ಣ ಆಲದ ಎಲೆಗಳು

ಪ್ರಭೇದವೆಂದು ಕರೆಯುವುದೂ ಇದೆ. ಕೊಡೆಯಾಕಾರದ ಹಂದರವುಳ್ಳ ಸುಂದರವಾದ ಮರವಾದ್ದರಿಂದ ಇದನ್ನು ಉದ್ಯಾನವನಗಳಲ್ಲಿ ಅಲಂಕಾರ ಸಸ್ಯವನ್ನಾಗಿ ಬೆಳೆಸುತ್ತಾರೆ.

ಆಲದ ಮರಗಳನ್ನು ಎಲ್ಲ ಲಕ್ಷಣಗಳಲ್ಲಿ ಹೋಲುವ ಈ ಮರ ಬಟ್ಟಲಿನಾಕಾರದ ತನ್ನ ಎಲೆಗಳಿಂದಾಗಿ ಆಲದ ಮರದಿಂದ ಭಿನ್ನವಾಗಿದೆ. ಭಾರತದ ಮೂಲವಾಸಿಯಾದ ಇದು ಬಹಳ ವಿರಳವಾಗಿ ಕಾಣಸಿಗುತ್ತದೆ. ಬೆಂಗಳೂರಿನ ಲಾಲ್ ಬಾಗಿನಲ್ಲಿ ಈ ಮರವನ್ನು ಬೆಳೆಸಿದ್ದಾರೆ. ಮರದ ಬುಡ ಹಾಗೂ ರೆಂಬೆಗಳು ಒರಟು. ಎಲೆಗಳು ಸರಳ ಮಾದರಿಯವು. ಅವಕ್ಕೆ ಉದ್ದನೆಯ ತೊಟ್ಟಿದೆ. ಎಲೆಯ ಬುಡ ಬಟ್ಟಲಿನಂತೆ ಮಡಿಚಿಕೊಂಡಿದೆ. ಎಲೆಯ ಮೇಲ್ಭಾಗ ಹಸುರು, ತಳಭಾಗ ಹಳದಿ ಮಿಶ್ರಿತ ಹಸರು. ಹಣ್ಣುಗಳು ಸಾಮಾನ್ಯವಾಗಿ ಎಲೆಗಳ ಕಂಕುಳಲ್ಲಿ ಜೊತೆಜೊತೆಯಾಗಿರುತ್ತವೆ. ಗುಂಡಾಗಿರುವ ಇವುಗಳ ಮೇಲೆ ತೆಳುವಾದ ಹಾಗೂ ಮೃದುವಾದ ಕೂದಲುಗಳಿವೆ.

ಪವಿತ್ರವಾದ ಮರವೆಂದು ಪರಿಗಣಿಸಲಾಗಿರುವ ಕೃಷ್ಣ ಆಲ ಹಲವಾರು ದಂತಕತೆಗಳಿಗೆ ಕಾರಣವಾಗಿದೆ. ಶ್ರೀಕೃಷ್ಣನ ಬಾಯಾರಿಕೆಯನ್ನು ನೀಗಲು ಇಬ್ಬನಿಯನ್ನು ಸಂಗ್ರಹಿಸುವುದ ಕ್ಕೋಸ್ಕರ ಇದರ ಎಲೆಗಳು ಬಟ್ಟಲಿನಂತಿವೆ ಎಂದು ಒಂದು ಕತೆಯಿದ್ದರೆ ಬಾಲಕೃಷ್ಣ ಬೆಣ್ಣೆ ಕದಿಯಲು ಇದರ ಎಲೆಗಳನ್ನು ಉಪಯೋಗಿಸಿದ ಎಂದು ಇನ್ನೊಂದು ಕತೆಯಿದೆ.

(ಎಂ.ಎಚ್.ಎಂ.)

**ಕೃಷ್ಣ, ಎಂ.ಎಚ್.:** 1892–1947. ಕರ್ನಾಟಕದ ಖ್ಯಾತ ಪುರಾತತ್ತ್ವಜ್ಞ. 1892 ಆಗಸ್ಟ್ 19 ರಂದು ಮೈಸೂರಿನಲ್ಲಿ ಜನಿಸಿದರು. ತಾಯಿ ಲಕ್ಷ್ಮಮ್ಮ, ತಂದೆ ಹಟ್ಟಿ ರಂಗಯ್ಯಂಗಾರ್. ಹಟ್ಟಿ ರಂಗಯ್ಯಗಾರ್‌ರವರು ಮೈಸೂರು ಅರಮನೆಯ ಖಜಾನೆಯಲ್ಲಿ ಮೊಕ್ತೇಸರರಾಗಿದ್ದರು. ಕೃಷ್ಣ ಅವರ ವಿದ್ಯಾಭ್ಯಾಸ ಜಯಾಚಾರ್ಯ ಪಾಠಶಾಲೆ, ವೆಸ್ಲಿಯನ್ ಮಿಶನ್ ಶಾಲೆ, ಮಹಾರಾಜ ಕಾಲೇಜುಗಳಲ್ಲಿ (ಬಿ.ಎ. 1911) ನಡೆಯಿತು. ಸ್ವಲ್ಪಕಾಲ ಮಹಾರಾಜ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಅನಂತರ ಅಧ್ಯಯನ ಮುಂದುವರಿಸಿ ಎಂ.ಎ. (ಇತಿಹಾಸ) ಪದವಿ ಪಡೆದರು (1916). ಬಳಿಕ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಅಧ್ಯಾಪಕರಾದರು. ಸತತ ಅಧ್ಯಯನ, ಪಾಂಡಿತ್ಯ, ಪ್ರತಿಭೆ ತೀಕ್ಷ್ಣಮತಿಗಳಿಂದಾಗಿ ವಿದ್ವಾಂಸರ ಮೆಚ್ಚುಗೆ ಪಡೆದಿದ್ದರು. ಇತಿಹಾಸ ಪ್ರಾಧ್ಯಾಪಕರಾಗಿದ್ದ ರಾಧಾಕುಮುದ ಮುಖರ್ಜಿ ಹಾಗೂ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಬ್ರಜೇಂದ್ರನಾಥ್ ಸೀಲ್ ಅವರ ಸಲಹೆಯಂತೆ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆದು ಬರುಲು ನಿರ್ಧರಿಸಿದರು.

1924ರಲ್ಲಿ ವ್ಯಾಸಂಗವೇತನ ಸಿಕ್ಕಿ ಲಂಡನ್ನಿಗೆ ಹೋದರು 1926ರ ತನಕ ಅವರು ಲಂಡನ್ ವಿಶ್ವವಿದ್ಯಾಲಯದ ಯೂನಿವರ್ಸಿಟಿ ಕಾಲೇಜಿನಲ್ಲಿ ಶಿಕ್ಷಣ ಹಾಗೂ ತರಬೇತಿ ಪಡೆದರು. ಲಂಡನ್ ವಿಶ್ವವಿದ್ಯಾಲಯದ ಕುಲಪತಿಗಳಾದ ಇ.ಎ. ಗಾರ್ಡಿನರ್ ಅವರು ಕೃಷ್ಣ ಅವರ ವ್ಯಾಸಂಗದ ನಿರ್ದೇಶಕರಾಗಿದ್ದರು. ಪ್ರಪಂಚ ಮಾನ್ಯತೆ ಪಡೆದಿದ ಸರ್ ಫಿಂಡರ್ಸ್ ಪೇಟ್ರಿ, ಎಚ್.ಡಿ. ಬಾರ್ನೆಟ್, ಜಿ. ಆಲನ್, ಎಫ್.ಡಿ. ಥಾಮಸ್, ಈಲಿಯಟ್ ಸ್ಮಿತ್, ನೆಲಿಗ್ಗನ್, ವೆಸ್ಟರ್‌ಮಾರ್ಕ್ ಡಬ್ಲ್ಯು, ಡಿ.ಪೆರ‍್ರಿ ಮೊದಲಾದ ಪ್ರಾಚ್ಯ ವಸ್ತು ತಜ್ಞರು ಕೃಷ್ಣ ಅವರಿಗೆ ಸಲಹೆ ಸಹಕಾರ, ಮಾರ್ಗದರ್ಶನ ಮಾಡಿದ್ದರ ಫಲವಾಗಿ ಪುರಾತತ್ತ್ವಶಾಸ್ತ್ರದ ಹಲವು ಮುಖಗಳನ್ನು ಅಧ್ಯಯನ ಮಾಡಲು ಕೃಷ್ಣ ಅವರಿಗೆ ಸಾಧ್ಯವಾಯಿತು. ಇವರು ಪೇಟ್ರಿಯವರ ಮುಖಂಡತ್ವದಲ್ಲಿ ಈಜಿಪ್ಟಿನಲ್ಲಿ ನಡೆದ ಉತ್ಖನನದಲ್ಲಿ ಪಾಲ್ಗೊಂಡು ಅನುಭವಗಳಿಸಿದರು. ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ, ಆಕ್ಸ್‌ಫರ್ಡಿನ ಆ್ಯಷ್ ಮೊಲಿಯನ್ ಮ್ಯೂಸಿಯಂ, ಕೇಂಬ್ರಿಡ್ಜಿನ ಫಿಟ್ಸ್ ವಿಲಿಯಮ್ಸ್ ಮ್ಯೂಸಿಯಂ, ಬರ್ಲಿನ್ನಿನ ಕೈಸರ್ ಫ್ರೀಡರಿಕ್ ಮ್ಯೂಸಿಯಂ, ಪ್ಯಾರಿಸಿನ ನ್ಯಾಷನಲ್ ಮ್ಯೂಸಿಯಂಗಳಲ್ಲಿರುವ ದಕ್ಷಿಣ ಭಾರತದ ನಾಣ್ಯಗಳ ಅಧ್ಯಯನ ನಡೆಸಿ ದಖನ್ ನ್ಯೂ ಮೆಸ್ಮಾಟಿಕ್ಸ್ ಎಂಬ ಸಂಶೋಧನ ಪ್ರಬಂಧ ಸಿದ್ಧಪಡಿಸಿದರು. ಇದಕ್ಕೆ ಡಿ.ಲಿಟ್ ಪದವಿ ಗಳಿಸಿದರು. ತಾಯ್ನಾಡಿಗೆ ಮರಳುವ ಮುನ್ನ ಯುರೋಪಿನ ಅನೇಕ ದೇಶಗಳಲ್ಲಿ ಸಂಚರಿಸಿ ಅಲ್ಲಿಯ ವಸ್ತು ಸಂಗ್ರಹಾಲಯಗಳನ್ನು ವೀಕ್ಷಿಸಿ ತಜ್ಞರನ್ನು ಸಂದರ್ಶಿಸಿ ತಮ್ಮ ಅನುಭವವನ್ನು ಹೆಚ್ಚಿಸಿಕೊಂಡರು.

1926ರಲ್ಲಿ ಭಾರತಕ್ಕೆ ಹಿಂದಿರುಗಿದ ಕೃಷ್ಣ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಉಪಪ್ರಾಧ್ಯಾಪಕರಾಗಿ ನೇಮಕಗೊಂಡರು. 1928ರಲ್ಲಿ ವೆಂಕಟೇಶ್ವರಲು ಅವರ ಅನಂತರ ತೆರವಾದ ಹುದ್ದೆಗೆ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಈ ಹುದ್ದೆಯ ಜೊತೆಗೆ ಪುರಾತತ್ತ್ವ ಇಲಾಖೆಯ ಒಪ್ಪೊತ್ತಿನ ನಿರ್ದೇಶಕರಾಗಿ ಕೂಡಾ ಕೆಲಸ ಮಾಡಿದರು. ಇವೆರಡೂ ಹುದ್ದೆಗಳಲ್ಲೂ 1944 ಜೂನ್‌ವರೆಗೆ ಸೇವೆ ಸಲ್ಲಿಸಿದರು. ಅನಂತರ ಜುಲೈ 1 ರಿಂದ ಪುರಾತತ್ತ್ವ ಇಲಾಖೆಯ ನಿರ್ದೇಶಕರಾದರು.

ಇತಿಹಾಸತಜ್ಞರಾಗಿ ಕೃಷ್ಣ ಅವರ ಕೊಡುಗೆ ಬಹಳ ಮಹತ್ತ್ವ ಪೂರ್ಣವಾದುದು. ಭಾರತೀಯ ಇತುಹಾಸವನ್ನು ದೇಶೀಯ ವಿದ್ವಾಂಸರೇ ಬರೆಯಬೇಕು ಎನ್ನುವ ವಾದ ಮಂಡಿಸಿದ ಮಹನೀಯರ ಪೈಕಿ ಇವರು ಮುಖ್ಯರು. ಆಡಿದಂತೆಯೇ ಮಾಡಿಯೂ ತೋರಿಸಿದರು. ಹಿಂದೂ ದೇಶದ ಚರಿತ್ರ ಸಾರ, ಕನ್ನಡ ನಾಡಿನ ಚರಿತ್ರೆ, ಅಜಂತ ಮತ್ತು ಎಲ್ಲೋರ – ಇವು ಇವರ ಕನ್ನಡ ಗ್ರಂಥಗಳು. ಹಿಂದೂ ದೇಶದ ಚರಿತ್ರ ಸಾರ 13 ಪುನರ್‌ಮುದ್ರಣ ಕಂಡಿದೆ. ಭಾರತದಲ್ಲಿ ಇತಿಹಾಸತಜ್ಞರ ಸಮ್ಮೇಳನಕ್ಕೆ ಮೊದಲ ಬಾರಿ ಅಧ್ಯಕ್ಷರಾಗಿ ಆಯ್ಕೆಗೊಂಡದ್ದು ಇವರಿಗೆ ದೊರಕಿದ ಗೌರವ. 1929ರಲ್ಲಿ ಬೆಳಗಾಂವಿಯಲ್ಲಿ ನಡೆದ ಪ್ರಥಮ ಕರ್ನಾಟಕ ಇತಿಹಾಸ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಕೃಷ್ಣ ಅವರ ಯೋಜನೆಯಿಂದಾಗಿ 1938ರಲ್ಲಿ ಮೊದಲ ಭಾರತೀಯ ಇತಿಹಾಸ ಕಾಂಗ್ರೆಸ್ ಜರಗುವ ಮೊದಲೇ ಕರ್ನಾಟಕದಲ್ಲಿ ಆರು ಇತಿಹಾಸ ಸಮ್ಮೇಳನಗಳು ನಡೆದಿದ್ದುವು. ರಾಜಕೀಯ ಇತಿಹಾಸದಷ್ಟೇ ಸಾಂಸ್ಕೃತಿಕ ಇತಿಹಾಸಕ್ಕೂ ಹೆಚ್ಚಿನ ಮನ್ನಣೆ ಕೊಡಬೇಕೆಂಬುದು ಕೃಷ್ಣ ಅವರ ನಿಲುವು.

ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿ ಆ ಇಲಾಖೆಯ ಕಾರ್ಯಗಳನ್ನು ಬಹುಮುಖವಾಗಿ ವಿಸ್ತರಿಸಿದರು. ಅಂದಿನ ಮೈಸೂರು ಸಂಸ್ಥಾನದ ಪುರಾತತ್ತ್ವದ ಬಗ್ಗೆ ಇವರು ನಡೆಸಿದ ಸಂಶೋಧನೆಗಳು ಮಹತ್ತ್ವ ಪೂರ್ಣವಾದಂಥವು. ನಾಣ್ಯಗಳ ಅಧ್ಯಯನ, ಉತ್ಖನನ, ಶಾಸನಗಳು, ವಾಸ್ತುಶಿಲ್ಪಗಳ ವೈಜ್ಞಾನಿಕ ಅಧ್ಯಯನ ಹಾಗೂ ಅವುಗಳ ಸಂರಕ್ಷಣೆ, ಇಲಾಖೆಯ ಪ್ರಕಟಣೆಗಳು, ದೇಶೀಯ ಮತ್ತು ವಿದೇಶೀಯ ವಿದ್ವಾಂಸರನ್ನು ಆಕರ್ಷಿಸಿದ ಇಲಾಖೆಯ ವಾರ್ಷಿಕ ಸಂಶೋಧನಾತ್ಮಕ ವರದಿಗಳು – ಇವು ಭಾರತೀಯ ಪುರಾತತ್ತ್ವಶಾಸ್ತ್ರಕ್ಕೆ ಕೃಷ್ಣ ಇವರು ಕೊಟ್ಟ ಕೊಡುಗೆಗಳು.

ಕೃಷ್ಣ ಅವರ ಮಾರ್ಗದರ್ಶನದಲ್ಲಿ ಸಾವಿರಾರು ಶಾಸನಗಳು ಬೆಳಕಿಗೆ ಬಂದುವು. ಹಲ್ಮಿಡಿ ಶಾಸನ, ಚಂದ್ರವಳ್ಳಿ ಶಾಸನ – ಇವು ಇವರ ಕಾಲದ ಪ್ರಮುಖ ಶೋಧಗಳು. ಉತ್ತರ ಭಾರತದ ಹರಪ್ಪ ಮೊಹೆಂಜೊದಾರೊಗಳಲ್ಲಿ ಉತ್ಖನನ ನಡೆಯುತ್ತಿದ್ದಾಗ ದಕ್ಷಿಣ ಭಾರತದಲ್ಲಿ ಚಿತ್ರದುರ್ಗಜಿಲ್ಲೆಯ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ಉತ್ಖನನ ನಡೆಸಿದ್ದು ಕೃಷ್ಣ ಅವರ ಹೆಗ್ಗಳಿಕೆ. ತಮ್ಮ ಸಂಶೋಧನಾ ಕಾರ್ಯಕ್ಕಾಗಿ ಸ್ಟ್ರಾಟೀಗ್ರಫಿ, ತಂತ್ರ ಬಳಸಿದರು. ಚಂದ್ರವಳ್ಳಿ ಸಾತವಾಹನರ ಕಾಲದ ಪಟ್ಟಣವಾಗಿತ್ತೆಂದೂ ಅದು ಅಗಸ್ಟಸ್ ಮತ್ತು ಟೈಬೀರಿಯಸ್ (ಪ್ರ.ಶ. 1ನೆಯ ಶ) ಕಾಲದ ರೋಮನ್ ಚಕ್ರಾಧಿಪತ್ಯದೊಡನೆ ವ್ಯಾಪಾರ ಸಂಬಂಧ ಹೊಂದಿತ್ತೆಂದೂ ಸ್ಥಿರಪಡಿಸಿದರು. ಅಶೋಕನ ಕಾಲದ ಪಟ್ಟಣವಾದ ಇಸಿಲ (ಈಗಿನ ಬ್ರಹ್ಮಗಿರಿ) ಬಳಿ ಇವರು ನಡೆಸಿದ ಭೂಶೋಧನೆಯಿಂದ ಅಲ್ಲಿ ಅಶೋಕನ ಕಾಲಕ್ಕಿಂತ ಹಳೆಯದಾದ ನವಶಿಲಾಯುಗದ ಸಂಸ್ಕೃತಿ ಇದ್ದುದು ಪತ್ತೆಯಾಯಿತು (1939–40).

ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಸಮಯದಲ್ಲಿ ಭಾರತ ಸರ್ಕಾರ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆ ಉತ್ಖನನ ಕಾರ‍್ಯವನ್ನು ರದ್ದು ಮಾಡಿ ವಾರ್ಷಿಕ ವರದಿಗಳ ಪ್ರಕಟಣೆಯನ್ನು ನಿಲ್ಲಿಸಿತು. ಆದರೆ ಕೃಷ್ಣ ಅವರ ಉಸ್ತುವಾರಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಉತ್ಖನನ ನಡೆಯುತ್ತಿತ್ತು. ಇಲಾಖೆಯ ವಾರ್ಷಿಕ ವರದಿಗಳು ಸಕಾಲದಲ್ಲಿ ಪ್ರಕಟಗೊಳ್ಳುತ್ತಿದ್ದವು. 1929 ರಿಂದ 1945ರ ಅವಧಿಯ ಹದಿನೇಳು ವಾರ್ಷಿಕ ವರದಿಗಳು ವಿಚಾರ ವೈವಿಧ್ಯಗಳಿಂದ ತುಂಬ ಆಕರ್ಷಕವಾಗಿ ವೈಶಿಷ್ಟ್ಯಪೂರ್ಣವಾಗಿ ಪ್ರಕಟಗೊಂಡು ಉತ್ತಮ ವರದಿಗಳೆಂದು ಖ್ಯಾತಿ ಪಡೆದಿವೆ. ಇಷ್ಟೇ ಅಲ್ಲದೆ ಮೈಸೂರು ಮತ್ತು ಹಾಸನ ಜಿಲ್ಲೆಗಳ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಅನುಬಂಧಗಳನ್ನು ಪ್ರಕಟಿಸಿದರು. ಅನೇಕ ಪ್ರವಾಸಿ ಕ್ಷೇತ್ರಗಳಿಗೆ ಜನಪ್ರಿಯ ಕೈಪಿಡಿಗಳನ್ನು ಪ್ರಕಟಿಸಿದ್ದಾರೆ. ಇವುಗಳ ಪೈಕಿ ಬೇಲೂರು, ಹಳೇಬೀಡು, ಶ್ರೀರಂಗಪಟ್ಟಣ, ಶ್ರವಣಬೆಳಗೊಳ, ತಲಕಾಡುಗಳ ಬಗೆಗಿನ ಕೈಪಿಡಿಗಳು ಪ್ರಮುಖವಾದವು ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ಒಂದು ಕೈಪಿಡಿಯನ್ನೂ ಹೊರತಂದಿದ್ದಾರೆ. ಇವರು 1938ರ ಸುಮಾರಿನಲ್ಲೇ ಕರ್ನಾಟಕದ ಭೂಪಟವನ್ನು ರಚಿಸಿದ್ದರು. ಕರ್ನಾಟಕದ ಏಕೀಕರಣಕ್ಕೆ ದುಡಿದಿದ್ದರು. ಇವರು ಅನೇಕ ಕೃತಿಗಳು ಸಂಪ್ರಬಂಧಗಳು ಪ್ರಕಟವಾಗಿದ್ದರೂ ಇವರ ಅಪ್ರಕಟಿತ ಕೃತಿಗಳೂ ಹಲವಾರು ಇವೆ ಎಂಬ ಸಂಗತಿ ತಿಳಿದು ಬಂದಿದೆ. ರಾಜ್ಯ ಪುರಾತತ್ತ್ವ ಇಲಾಖೆಯಲ್ಲಿ ಇವರ ಮೂರು ಅಪ್ರಕಟಿತ ಗ್ರಂಥಗಳು ಪತ್ತೆಯಾಗಿವೆ. ಅವು ಪ್ರಕಟಗೊಂಡರೆ ಸಂಶೋಧನೆಯ ದಾರಿ ವಿಸ್ತಾರವಾಗುತ್ತದೆ. ಕೃಷ್ಣ ಅವರು 1947 ಡಿಸೆಂಬರ್ 23ರಂದು ನಿಧನರಾದರು. (ಎಸ್.ಎಂ.;ಆರ್.ಆರ್.ಕೆ.)

**ಕೃಷ್ಣ, ಎಸ್.ಎಂ. :** 1932–. ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (1999–2004). ಮಹಾರಾಷ್ಟ್ರದ ರಾಜ್ಯಪಾಲರು (2004). ಇವರು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಸೋಮನಹಳ್ಳಿಯಲ್ಲಿ 1932 ಮೇ 1ರಂದು ಜನಿಸಿದರು. ತಂದೆ ಎಸ್.ಸಿ.ಮಲ್ಲಯ್ಯ, ತಾಯಿ ತಾಯಮ್ಮ. ಇವರ ತಂದೆ ಎಸ್.ಸಿ.ಮಲ್ಲಯ್ಯನವರು ದೀರ್ಘಕಾಲ ಪ್ರಜಾಪ್ರತಿನಿಧಿ

ಸಭೆಯ ಸದಸ್ಯರಾಗಿದ್ದರು ದೀರ್ಘ ಕಾಲ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಿದ್ದರು. ಮಂಡ್ಯ ಜಿಲ್ಲೆಯ ಪ್ರತ್ಯೇಕ ರಚನೆಗಾಗಿ ಶ್ರಮಿಸಿದ ಪ್ರಮುಖರಲ್ಲಿ ಅವರೂ ಒಬ್ಬರು. ಕೃಷ್ಣ ಅವರ ಪ್ರಾಥಮಿಕ ಶಿಕ್ಷಣ ಸೋಮನಹಳ್ಳಿಯಲ್ಲಿ ನಡೆಯಿತು. ಅನಂತರ ಇವರ ವಿದ್ಯಾಭ್ಯಾಸ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಮುಂದುವರಿಯಿತು. ಮಹಾಜನ ಶಾಲೆ ಮತ್ತು ಮಹಾರಾಜ ಕಾಲೇಜಿನಲ್ಲೂ ವ್ಯಾಸಂಗ ಮಾಡಿ ಬಿ.ಎ. ಪದವಿ ಗಳಿಸಿ ತರುವಾಯ ಬೆಂಗಳೂರಿನಲ್ಲಿ ಬಿ.ಎಲ್. ಪದವಿ ಪಡೆದರು. ಕಾಲೇಜಿನ ದಿನಗಳಲ್ಲಿ ಇವರು ಉತ್ಸಾಹ ದಿಂದ ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದು ಉತ್ತಮ ವಾಗ್ಮಿ ಎಂಬ ಹೆಸರು ಪಡೆದಿದ್ದರು. ಮುಂದೆ ಇವರು ಅಮೆರಿಕಕ್ಕೆ ತೆರಳಿ ಡಲ್ಲಾಸ್‌ನ ಮೆಥಾಡಿಸ್ಟ್ ವಿಶ್ವವಿದ್ಯಾಲಯದ ಎಂ.ಸಿ.ಎಲ್. ಪದವಿ ಪಡೆದರು. ಅಮೆರಿಕದಲ್ಲಿ ಕೆನಡಿಯವರು ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದ್ದಾಗ ಅವರ ಪರವಾಗಿ ಇವರೂ ಪ್ರಚಾರ ಮಾಡಿದ್ದರು. ಇವರು ಸ್ವದೇಶಕ್ಕೆ ಹಿಂದಿರುಗಿ ಅನಂತರ ವಕೀಲ ವೃತ್ತಿ ಆರಂಭಿಸಿದರು. ಜೊತೆಗೆ ಬೆಂಗಳೂರಿನ ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಕಾನೂನಿನ ಪ್ರಾಧ್ಯಾಪಕ ರಾಗಿದ್ದರು. ಇವರು ಚಿಕ್ಕಂದಿನಿಂದಲೂ ರಾಜಕಾರಣದಲ್ಲಿ ಆಸಕ್ತಿ ತಳೆದಿದ್ದರು. ಒಮ್ಮೆ ಸೋಮನ ಹಳ್ಳಿಗೆ ಮಹಾತ್ಮಾಗಾಂಧೀಜಿಯವರು ಭೇಟಿ ನೀಡಿದ್ದರು. ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದ ಗಣ್ಯರು ಬೆಂಗಳೂರು ಮೈಸೂರು ಸಂಚಾರದ ನಡುವೆ ಇವರ ತಂದೆಯವರೊಡನೆ ಮನೆಗೆ ಭೇಟಿ ನೀಡುತ್ತಿದ್ದರು. ಹಾಗಾಗಿ ರಾಜ್ಯದ ಹಲವಾರು ರಾಜಕೀಯ ಮುಖಂಡರ ಪರಿಚಯ ಕೃಷ್ಣರಿಗಿತ್ತು. ಕೃಷ್ಣರು ಒಳ್ಳೆಯ ಮಾತುಗಾರರು. ಇವರು 1962ರ ವಿಧಾನಸಭೆಯ ಚುನಾವಣೆಗೆ ಮದ್ದೂರು ಕ್ಷೇತ್ರದಿಂದ ಸ್ಪರ್ಧಿಸಿ ಆ ಮೂಲಕ ರಾಜಕೀಯ ಪ್ರವೇಶ ಮಾಡಿದರು. ಮೊದಲ ಪ್ರಯತ್ನದಲ್ಲೇ ಯಶಸ್ವಿಯಾದರು. ಆಗ ಅಂದಿನ ಪ್ರಮುಖ ನಾಯಕರಲ್ಲೊಬ್ಬರಾಗಿದ್ದ ಮದ್ದೂರಿನ ಎಚ್.ಕೆ.ವೀರಣ್ಣಗೌಡರನ್ನು ಇವರು ಸೋಲಿಸಿದ್ದು ಎಲ್ಲರ ಗಮನ ಸೆಳೆಯಿತು. ಪ್ರಜಾಸಮಾಜವಾದಿ ಪಕ್ಷದ ಯುವ ಸದಸ್ಯರೆಂಬ ಖ್ಯಾತಿಗೆ ಇವರು ಪಾತ್ರರಾದರು.



ಮುಂದೆ ಇವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗುವವರೆಗೆ ನಾಲ್ಕು ದಶಕಗಳ ಕಾಲ ರಾಜಕೀಯದಲ್ಲಿ ಮುಂದುವರಿದರು. 1968ರಲ್ಲಿ ಲೋಕಸಭೆಗೆ ಆಯ್ಕೆಯಾದರು. 1969ರಲ್ಲಿ ಕಾಂಗ್ರೆಸ್ ಪಕ್ಷ ವಿಭಜಿತವಾದಾಗ ಇವರು ಇಂದಿರಾಗಾಂಧಿ ಯವರ ನೇತೃತ್ವದ ಆಡಳಿತ ಕಾಂಗ್ರೆಸ್ ಪಕ್ಷವನ್ನು ಸೇರಿದರು.

1971ರಲ್ಲಿ ಇವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಮಂಡ್ಯ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಆಯ್ಕೆಯಾದರು. 1972ರಲ್ಲಿ ಲೋಕಸಭಾ ಸದಸ್ಯತ್ವವನ್ನು ತ್ಯಜಿಸಿ ಡಿ. ದೇವರಾಜ ಅರಸು ಸಂಪುಟದಲ್ಲಿ ಕೈಗಾರಿಕೆ, ವಾಣಿಜ್ಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದರು. ಮತ್ತು ವಿಧಾನ ಪರಿಷತ್ ಸದಸ್ಯರಾಗಿ ಚುನಾಯಿತರಾದರು. 1980ರಲ್ಲಿ ಮತ್ತೆ ತಮ್ಮ ಜಿಲ್ಲೆಯಿಂದ ಲೋಕಸಭೆಗೆ ಸ್ಪರ್ಧಿಸಿ ಗೆದ್ದರು. 1982ರಲ್ಲಿ ಭಾರತದ ನಿಯೋಗದ ಪ್ರತಿನಿಧಿಯಾಗಿ ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಭಾಗವಹಿಸಿದರು. ಇಂದಿರಾ ಗಾಂಧಿಯವರ ಸಂಪುಟದಲ್ಲಿ ಕೈಗಾರಿಕೆ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದರು (1983–84). ಕೃಷ್ಣರು ತಮ್ಮ ವ್ಯಕ್ತಿತ್ವ ಮತ್ತು ಸ್ನೇಹಪರತೆಯಿಂದ ಇಂದಿರಾ ಗಾಂಧಿಯವರ ಕುಟುಂಬದ ಆಪ್ತರಲ್ಲೊಬ್ಬರಾದರು.

ಅನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಇವರಿಗೆ ಯಶಸ್ಸು ದೊರಕದಿದ್ದುದರಿಂದ ಕೇಂದ್ರ ಸಂಪುಟದ ಸಚಿವರಾಗುವ ಅವಕಾಶ ತಪ್ಪಿಹೋಯಿತು. ಆಗ ಇವರು ರಾಜ್ಯದ ರಾಜಕೀಯಕ್ಕೆ ಮರಳಿದರು. 1989ರಲ್ಲಿ ರಾಜ್ಯ ವಿಧಾನಸಭೆಗೆ ಆರಿಸಿ ಬಂದು ಅದರ ಸಭಾಪತಿಯಾಗಿ ಆಯ್ಕೆಯಾದರು. ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ (1992–94) ಇವರು ಉಪಮುಖ್ಯಮಂತ್ರಿಯಾಗಿ ಜವಾಬ್ದಾರಿ ನಿರ್ವಹಿಸಿದರು (1993–94). 1996ರಲ್ಲಿ ರಾಜ್ಯಸಭಾ ಸದಸ್ಯರಾಗಿ ಚುನಾಯಿತರಾದರು.

1999ರಲ್ಲಿ ಇವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ನೇಮಿತರಾದರು. ಪಕ್ಷವನ್ನು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮುನ್ನಡೆಸುವ ಅತ್ಯಂತ ಗುರುತರವಾದ ಹೊಣೆ ಇವರ ಮೇಲೆ ಬಿತ್ತು. ಆಗ ಇವರು ರಾಜ್ಯಾದ್ಯಂತ ನಿರಂತರ ಪ್ರವಾಸ ಕೈಗೊಂಡರು. ಪಕ್ಷದ ಕಾರ್ಯಕರ್ತರನ್ನು ಒಗ್ಗೂಡಿಸಿದರು. ಪಕ್ಷ ಮೂರನೆಯ ಎರಡು ಭಾಗ ಬಹುಮತದೊಂದಿಗೆ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಆರಿಸಿ ಬಂತು. ಲೋಕಸಭೆಗೂ ಗಣನೀಯ ಸಂಖ್ಯೆಯ ಸದಸ್ಯರು ಚುನಾಯಿತರಾದರು. ಈ ಸಾಧನೆಗೆ ಪಾರಿತೋಷಕವೆಂಬಂತೆ ಎಸ್.ಎಂ.ಕೃಷ್ಣ ಅವರು 1999ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾದರು.

ಇವರು ಮುಖ್ಯಮಂತ್ರಿಗಳಾದ ಮೇಲೆ ರಾಜ್ಯದ ಆರ್ಥಿಕ ಮತ್ತು ಆಡಳಿತ ಕ್ಷೇತ್ರದಲ್ಲಿ ಕೆಲವೊಂದು ಬದಲಾವಣೆಗಳನ್ನು ತಂದರು. ತಂತ್ರಾಂಶ ಜಾಗತೀಕರಣಕ್ಕೆ ಸ್ಪಂದಿಸಿದ ಇವರು ಬೆಂಗಳೂರು ಭಾರತದ ಪ್ರಥಮ (ಸಾಫ್ಟ್‌ವೇರ್) ಕೇಂದ್ರವಾಗುವಂತೆ ಮಾಡಿದರು. ಬೆಂಗಳೂರು ನಗರದಲ್ಲಿ ಹಲವಾರು ಮೇಲು ಸೇತುವೆಗಳನ್ನು ನಿರ್ಮಿಸಿ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಿದರು. ವಿಧಾನ ಸೌಧದ ಬಳಿ ವಿಕಾಸಸೌಧ ಎಂಬ ಬೃಹತ್ ಸಚಿವಾಲಯವನ್ನು ನಿರ್ಮಿಸಿದ್ದು ಇವರ ಮುಖ್ಯ ಸಾಧನೆಗಳಲ್ಲೊಂದು. ಇವರ ಕಾರ್ಯಾವಧಿಯಲ್ಲಿ ರಾಜ್ಯದಲ್ಲಿ ಹೆದ್ದಾರಿಗಳ ದುರಸ್ತು ಮತ್ತು ಅಗಲಗೊಳಿಸುವ ಕಾರ್ಯ ಆದ್ಯತೆ ದೊರೆಯಿತು. ತಾಲ್ಲೂಕು ಮತ್ತು ಜಿಲ್ಲಾ ಕಚೇರಿಗಳಲ್ಲಿ ಕಂಪ್ಯೂಟರ್ ಮತ್ತಿತರ ಸಲಕರಣೆಗಳನ್ನು ಸಜ್ಜುಗೊಳಿಸಿದರು. ಇದರಿಂದ ಜನಸಾಮಾನ್ಯರು ಅತ್ಯಲ್ಪ ಕಾಲದಲ್ಲಿ ಕೆಲವೊಂದು ಭೂದಾಖಲೆಗಳನ್ನು ಪಡೆಯುವುದು ಸಾಧ್ಯವಾಯಿತು. ಸ್ತ್ರೀ ಸಬಲೀಕರಣದ ಅಂಗವಾಗಿ ಸ್ತ್ರೀಶಕ್ತಿ ಸಂಘಗಳು ರಾಜ್ಯಾದ್ಯಂತ ಸ್ಥಾಪನೆಯಾದವು. ಇವರು ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಜಾರಿಗೆ ತಂದರು. ಇವರ ಅಧಿಕಾರಾವಧಿಯ ಹೆಚ್ಚು ಕಾಲ ಬರಗಾಲದ ಭೀಕರ ಛಾಯೆ ಆವರಿಸಿದ್ದರಿಂದ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಲ್ಲಿ ಸರ್ಕಾರ ಹೆಚ್ಚಾಗಿ ಸವಾಲುಗಳನ್ನೇ ಎದುರಿಸಬೇಕಾಯಿತು. ಕಾಡುಗಳ್ಳ ವೀರಪ್ಪನ್‌ನಿಂದ ವರನಟ ರಾಜಕುಮಾರ್ ಅಪಹರಣ ಮತ್ತು ರಾಜಕಾರಣಿ ನಾಗಪ್ಪ ಅಪಹರಣ ಹಾಗೂ ಹತ್ಯೆ ಕೃಷ್ಣ ಸರ್ಕಾರಕ್ಕೆ ದೊಡ್ಡ ಸಮಸ್ಯೆಗಳನ್ನು ತಂದಿದ್ದವು.

ಕೃಷ್ಣ 2004ರಲ್ಲಿ ವಿಧಾನಸಭೆಗೆ, ಅವಧಿಗೆ ಮುನ್ನವೇ ಚುನಾವಣೆ ಘೋಷಿಸಿದರು. ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸಿದರು. ಪಕ್ಷಕ್ಕೆ ಬಹುಮತ ಲಭಿಸದೆ ಮುಖ್ಯಮಂತ್ರಿ ಹುದ್ದೆಯಿಂದ ಹೊರಗುಳಿಯಬೇಕಾಯಿತು. ಬೆಂಗಳೂರು ನಗರ ಕಾಂಗ್ರೆಸ್‌ಗೆ ಅಧಿಕ ಸ್ಥಾನಗಳು ದೊರಕಿದುವು. 2004 ಡಿಸೆಂಬರ್ 6ರಂದು ಇವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡರು.

'ಎಸ್.ಎಂ.ಕೃಷ್ಣ ಬದುಕು ಸಾಧನೆ' ಎಂಬ ಬೃಹತ್ ಗೌರವ ಗ್ರಂಥ ಇವರ 68ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಪ್ರಕಟವಾಯಿತು. ಪ್ರೇಮಾ ಇವರ ಪತ್ನಿ. ಈ ದಂಪತಿಗಳಿಗೆ ಇಬ್ಬರು ಪುತ್ರಿಯರಿದ್ದಾರೆ. (ಡಿ.ಎಸ್.ಜೆ.)

**ಕೃಷ್ಣಗಿರಿ :** ತಮಿಳುನಾಡಿನ ಒಂದು ಜಿಲ್ಲೆ ತಾಲ್ಲೂಕು; ಮತ್ತು ಮುಖ್ಯಪಟ್ಟಣ. ಉ.ಅ. 12° 14'–12°43' ಮತ್ತು ಪೂ.ರೇ. 77 58'–78°30' ನಡುವೆ ಈ ತಾಲ್ಲೂಕು ಹಬ್ಬಿದೆ. ವಿಸ್ತೀರ್ಣ 5143 ಚ.ಕಿ.ಮೀ. ಜಿಲ್ಲೆಯ ಜನಸಂಖ್ಯೆ 695524 (2001). ತಾಲ್ಲೂಕಿನ ಸುತ್ತಣ ಪ್ರದೇಶದಲ್ಲಿ ಎತ್ತರದ ಬೆಟ್ಟಗಳಿವೆ. ಅನೇಕ ಬೆಟ್ಟಗಳ ನೆತ್ತಿಗಳ ಮೇಲೆ ಕೋಟೆಗಳುಂಟು. ಈ ಬೆಟ್ಟಗಳಲ್ಲಿ ಅನೇಕ ತೊರೆಗಳು ಹುಟ್ಟಿ ಪೊನ್ನಯಾರ್ ನದಿಯನ್ನು ಸೇರುತ್ತವೆ. ತಾಲ್ಲೂಕಿನಲ್ಲಿ 500ಕ್ಕೂ ಹೆಚ್ಚು ಹಳ್ಳಿಗಳುಂಟು. ಆದರೆ ಪಟ್ಟಣ ಮಾತ್ರ ಒಂದೇ–ಕೃಷ್ಣಗಿರಿ.

ಕೃಷ್ಣಗಿರಿ ಪಟ್ಟಣ ತಾಲ್ಲೂಕಿನ ಕೇಂದ್ರ. ಉ.ಅ. 12° 31' ಮತ್ತು ಪೂ.ರೇ. 78° 13' ಮೇಲಿದೆ. ಜನಸಂಖ್ಯೆ 65,024 (2001). ದಕ್ಷಿಣ ರೈಲ್ವೆಗೆ ಸೇರಿದ ತಿರುಪ್ಪತ್ತೂರ್ ನಿಲ್ದಾಣಕ್ಕೆ 38 ಕಿ.ಮೀ ದೂರದಲ್ಲಿದೆ. ತಿರುಪ್ಪತ್ತೂರಿಗೂ ಕೃಷ್ಣಗಿರಿಗೂ ರಸ್ತೆ ಸಂಪರ್ಕವುಂಟು. ಮೊದಲು ಇವುಗಳ ನಡುವೆ ನ್ಯಾರೋ ಗೇಜ್ ರೈಲು ಸಂಪರ್ಕವಿತ್ತು. ಈಗ ಇದನ್ನು ತೆಗೆದುಹಾಕಲಾಗಿದೆ. ಪಟ್ಟಣದ ಹಳೆಯ ಭಾಗವನ್ನು ಕೃಷ್ಣಗಿರಿಯೆಂದೂ ಹೊಸಬಡಾವಣೆಯಿರುವ ಭಾಗವನ್ನು ದೌಲತಾಬಾದ್ ಎಂದೂ ಕರೆಯುತ್ತಾರೆ. ಸರ್ಕಾರಿ ಕಚೇರಿಗಳು ದೌಲತಾಬಾದಿನಲ್ಲಿವೆ. ಜಿಲ್ಲೆಯ ಪ್ರಥಮ ಸಹಾಯಕ ಕಲೆಕ್ಟರುಗಳಾಗಿದ್ದ ಮನ್ರೋ ಮತ್ತು ಗ್ರಾಹಾಮರ ಕಾಲದಲ್ಲಿ ಈ ಬಡಾವಣೆಯನ್ನು ಕಟ್ಟಲಾಯಿತು. ಪಟ್ಟಣದ ರಕ್ಷಣೆಗಾಗಿ ಕಡಿದಾದ ಬೆಟ್ಟದ ಮೇಲೆ ಕಟ್ಟಲಾದ ದುರ್ಗದಿಂದ ಕಾಣುವ ನೋಟ ಭವ್ಯವಾದ್ದು. ದುರ್ಗಮವಾದ ಈ ಕೋಟೆಯನ್ನು ಗೆಲ್ಲಲು ಬ್ರಿಟಿಷರು ಬಹಳ ಸಾಹಸ ಮಾಡಿದರು. ಬ್ರಿಟಿಷರು ಮೈಸೂರು ಸಂಸ್ಥಾನದ ಮೇಲೆ ಯುದ್ಧ ನಡೆಸಿದಾಗಲೆಲ್ಲ ಈ ಕೋಟೆಯನ್ನು ದಿಗ್ಬಂಧಿಸುತ್ತಿದ್ದರು. 1767 ಮತ್ತು 1791ರಲ್ಲಿ ನಡೆಸಿದ ಮುತ್ತಿಗೆಗಳಲ್ಲಿ ಅವರು ಸೋಲನ್ನು ಅನುಭವಿಸಿದರು. 1768ರಲ್ಲಿ ಮಾತ್ರ ಕೋಟೆ ಬ್ರಿಟಿಷರಿಗೆ ಶರಣಾಗಿತ್ತು. ಆಗ ಕೆಲವು ವರ್ಷಗಳ ಕಾಲ ಇದು ಬ್ರಿಟಿಷ್ ಪಡೆಯೊಂದರ ಅಧೀನದಲ್ಲಿತ್ತು. ಕೃಷ್ಣಗಿರಿಯ ಸುತ್ತಣ ಪ್ರದೇಶದಲ್ಲಿ ಒಳ್ಳೆಯ ದ್ರಾಕ್ಷಿ ಬೆಳೆಯುತ್ತದೆ. (ಯು.ಜಿ.ಎಂ.)

**ಕೃಷ್ಣದೇವರಾಯ :** ವಿಜಯನಗರ ಸಾಮ್ರಾಜ್ಯದ ಅರಸು ಮನೆತನಗಳಲ್ಲಿ ಮೂರನೆಯದಾದ ತುಳುವ ವಂಶಕ್ಕೆ ಸೇರಿದ ಮತ್ತು ಆ ಸಾಮ್ರಾಜ್ಯದ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧನಾದ ಚಕ್ರವರ್ತಿ. ಇವನ ಆಳ್ವಿಕೆಯ ಕಾಲ 1509–1529. ಧರ್ಮರಕ್ಷಣೆಗಾಗಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ಕೃಷ್ಣದೇವರಾಯನ ಕಾಲದಲ್ಲಿ ತನ್ನ ಧ್ಯೇಯವನ್ನು ಸಾಧಿಸಿತಲ್ಲದೆ ಉನ್ನತ ಕೀರ್ತಿಯನ್ನೂ ಪಡೆಯಿತು. ಪೇಸ್, ನ್ಯೂನಿಜ್, ಬರ್ಬೊಸ ಮೊದಲಾದ ಪೋರ್ಚುಗೀಸ್ ಪ್ರವಾಸಿಗಳು ಇವನ ಆಸ್ಥಾನದಲ್ಲಿದ್ದು, ರಾಜನ ವ್ಯಕ್ತಿತ್ವ ಮತ್ತು ವೈಭವಗಳನ್ನು ಕಣ್ಣಾರೆ ಕಂಡು ಅವನ್ನು ವಿವರವಾಗಿ ವರ್ಣಿಸಿದ್ದಾರೆ. ದೊರೆ ಸ್ಫುರದ್ರೂಪಿ. ಆತ ಎತ್ತರವಾಗಿಲ್ಲದಿದ್ದರೂ ನಿತ್ಯವೂ ಗರಡಿ ಸಾಧನೆ ಮಾಡುತ್ತಿದ್ದುದರಿಂದ ಬಲವಾದ ಮೈಕಟ್ಟು ಪಡೆದಿದ್ದ. ಮುಖದಲ್ಲಿ ಸಿಡುಬಿನ ಕಲೆಗಳಿದ್ದರೂ ವರ್ಚಸ್ಸು ತುಂಬಿತ್ತು. ವಿದೇಶೀಯರಲ್ಲಿ ಇವನಿಗೆ ತುಂಬ ಗೌರವವಿತ್ತೆಂದೂ ಈತ ನ್ಯಾಯಪರನೆಂದೂ

ಚಿನ್ನಾದೇವಿ, ಕೃಷ್ಣದೇವರಾಯ, ತಿರುಮಲಾದೇವಿ– ತಿರುಮಲೈ ದೇವಸ್ಥಾನದಲ್ಲಿರುವ ಕಂಚಿನ ಪ್ರತಿಮೆಗಳು

ಹೇಳಲಾಗಿದೆ. ಕತ್ತಿವರಸೆ, ಕುದುರೆ ಸವಾರಿ, ಕುಸ್ತಿ ಇವು ಈತನ ದಿನಚರಿಗಳಾಗಿದ್ದುವು. ಈತ ಸೂರ್ಯೋದಯಕ್ಕೆ ಮುಂಚೆಯೇ ಅಂಗಸಾಧನೆಗಳಲ್ಲಿ ನಿರತನಾಗುತ್ತಿದ್ದ. ಕೆಲವು ಬಾರಿ ಮುಂಗೋಪಿಯಾದರೂ ಕಾಲವನ್ನು ವ್ಯರ್ಥಮಾಡದೆ ಯಾವಾಗಲೂ ಜನರ ಯೋಗಕ್ಷೇಮವನ್ನೇ ಚಿಂತಿಸುತ್ತಿದ್ದ–ಇದು ಪೇಸನ ಬರೆಹಗಳಿಂದ ತಿಳಿದುಬಂದಿರುವಂತೆ ಕೃಷ್ಣದೇವರಾಯನ ವ್ಯಕ್ತಿತ್ವ. ಇವನ ರಾಜ್ಯಾರೋಹಣದ ವಿಷಯವಾಗಿ ಜನಜನಿತವಾದ ಕಥೆಯೊಂದಿದೆ. ಇವನಿಗೆ ಹಿಂದೆ ದೊರೆಯಾಗಿದ್ದ ಇಮ್ಮಡಿ ನರಸಿಂಹ ತನ್ನ 8 ವರ್ಷದ ಮಗನಿಗೆ ಪಟ್ಟ ಕಟ್ಟುವ ಸಲವಾಗಿ, ಬಲತಮ್ಮನಾದ ಕೃಷ್ಣದೇವನನ್ನು ಕೊಂದು ಅವನ ಕಣ್ಣುಗುಡ್ಡೆಗಳನ್ನು ತನಗೆ ತೋರಿಸುವಂತೆ ಮಂತ್ರಿ ಸಾಳುವ ತಿಮ್ಮರಸನಿಗೆ ಆಜ್ಞಾಪಿಸಿದುದಾಗಿಯೂ ಮಂತ್ರಿ ಇವನನ್ನು ಗೋಪ್ಯವಾಗಿಟ್ಟು ಮೇಕೆಯ ಕಣ್ಣುಗುಡ್ಡೆಗಳನ್ನು ದೊರೆಗೆ ತೋರಿಸಿದನೆಂದೂ ನರಸಿಂಹ ನೆಮ್ಮದಿಯಿಂದ ಸತ್ತ ಅನಂತರ ಕೃಷ್ಣದೇವನಿಗೆ ಪಟ್ಟಕಟ್ಟಿದುದಾಗಿಯೂ ಈ ಕಥೆ ತಿಳಿಸುತ್ತದೆ. ಇದನ್ನು ನ್ಯೂನಿಜ್ ಬರೆದಿಟ್ಟಿದ್ದಾನೆ. ಆದರೆ ಇದನ್ನು ಸಮರ್ಥಿಸುವ ಐತಿಹಾಸಿಕ ದಾಖಲೆಗಳು ಯಾವುವೂ ದೊರಕಿಲ್ಲ. ಆ ಸೋದರರಲ್ಲಿ ಅನ್ಯೋನ್ಯತೆ ಇದ್ದುದಾಗಿಯೂ ತಿಳಿದು ಬರುತ್ತದೆ. ಕೃಷ್ಣದೇವರಾಯ ಪಟ್ಟಕ್ಕೆ ಬಂದೊಡನೆ ಸೈನ್ಯವನ್ನು ಸುವ್ಯವಸ್ಥೆಗೊಳಿಸಿ ಯುದ್ಧ ನಿರತನಾಗಬೇಕಾಯಿತು. ದಕ್ಷಿಣದಲ್ಲಿ ಉಮ್ಮತ್ತೂರಿನ ಗಂಗರಾಜನ ಮೇಲೆ ಮಾಡಿದ ಯುದ್ಧದಲ್ಲಿ (1510–1512) ಉಮ್ಮತ್ತೂರು, ಪೆನುಗೊಂಡೆ, ಶಿವಸಮುದ್ರ ಮತ್ತು ಶ್ರೀರಂಗಪಟ್ಟಣಗಳು ಇವನ ವಶವಾದುವು. ಈ ಪ್ರದೇಶಗಳನ್ನು ಶ್ರೀರಂಗಪಟ್ಟಣ ಪ್ರಾಂತ್ಯವನ್ನಾಗಿ ಮಾಡಲಾಯಿತು. ಅನಂತರ ಈತ ಪೂರ್ವ ದೇಶಕ್ಕೆ ನುಗ್ಗಿ ಕೊಂಡವೀಡು, ಉದಯಗಿರಿ ಕೋಟೆಗಳನ್ನು ಹಿಡಿದು, ಪ್ರತಾಪರುದ್ರ ಗಜಪತಿಯನ್ನು ಸೋಲಿಸಿ, ಅವನ ಮಗಳಾದ ಜಗನ್ಮೋಹಿನಿಯನ್ನು ಮದುವೆಯಾದ. ಈ ವಿಜಯದ ಅನಂತರ 1514ರಲ್ಲಿ ತಿರುಮಲೈಗೆ ಹೋಗಿ ಶ್ರೀ ವೆಂಕಟೇಶ್ವರನಿಗೆ ಕಾಣಿಕೆ ಸಲ್ಲಿಸಿದ. ಆ ಸಂದರ್ಭದಲ್ಲಿ ಮಾಡಿಸಲಾದ ಈತನ ಮತ್ತು ರಾಣಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯರ ಪ್ರತಿಮೆಗಳು ಈಗಲೂ ಆ ದೇವಸ್ಥಾನದಲ್ಲಿವೆ. ಮಾಧ್ವ ಯತಿಗಳಾದ ಶ್ರೀ ವ್ಯಾಸರಾಯರು ಆ ಸಂದರ್ಭವನ್ನು ಕೊಂಡಾಡಿ ದೇವರನಾಮಗಳನ್ನು ರಚಿಸಿದ್ದಾರೆ. 1520ರಲ್ಲಿ ನಡೆದ ರಾಯಚೂರು ಯುದ್ಧದಲ್ಲಿ ಕೃಷ್ಣದೇವರಾಯನಿಂದ ಬಿಜಾಪುರ ಸುಲ್ತಾನ ಸಂಪೂರ್ಣವಾಗಿ ಸೋತ. ಕರ್ನಾಟಕ ಸಾಮ್ರಾಜ್ಯದ ಎಲ್ಲೆಗಳು ಉತ್ತರದಲ್ಲಿ ಕೃಷ್ಣಾ ಗೋದಾವರಿಗಳವರೆಗೂ ಪೂರ್ವಪಶ್ಚಿಮಗಳಲ್ಲಿ ಸಮುದ್ರತೀರದವರೆಗೂ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೂ ವಿಸ್ತರಿಸಿ ದಕ್ಷಿಣ ಭಾರತದಲ್ಲಿ ಶಾಂತಿ ನೆಲಸಿತು. ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಾಧೀಶ್ವರ ಎಂಬ ಬಿರುದು ಕೃಷ್ಣದೇವರಾಯನಿಗೆ ಸಾರ್ಥಕವಾಯಿತು.

ಕೃಷ್ಣದೇವರಾಯ ಪ್ರಖ್ಯಾತನಾಗಿರುವುದು ತನ್ನ ವಿಜಯಯಾತ್ರೆಗಳಿಗಿಂತ ಅಧಿಕವಾಗಿ ತಾನು ಸಂಸ್ಕೃತಿಗೆ ಕೊಟ್ಟ ಪ್ರೋತ್ಸಾಹದಿಂದಾಗಿ. ಈತ ಮಹಮ್ಮದೀಯರಿಂದ ನಾಶವಾಗಿದ್ದ ಸುಪ್ರಸಿದ್ಧ ಹಿಂದೂ ದೇವಾಲಯಗಳ ಜೀರ್ಣೋದ್ಧಾರ ಮಾಡಿ, ಹಿಂದೂಧರ್ಮದ ಪುನರೇಳಿಗೆಗೆ ಕಾರಣನಾದ. ಉದಯಗಿರಿಯಿಂದ ಬಾಲಗೋಪಾಲವಿಗ್ರಹವನ್ನು ತರಿಸಿ ರಾಜಧಾನಿಯಲ್ಲಿ ಪ್ರತಿಷ್ಠಿಸಿದುದಲ್ಲದೆ, ಹಂಪಿಯ ವಿಜಯವಿಠಲಸ್ವಾಮಿಯ ಕಲಾಪೂರ್ಣವಾದ ದೇವಾಲಯವನ್ನು ಕಟ್ಟಿಸಿದ. ಈತ ಎಲ್ಲ ಧರ್ಮಗಳಿಗೂ ಆಶ್ರಯದಾತನಾಗಿದ್ದ. ಮಾಧ್ವ ಗುರು ವ್ಯಾಸರಾಯರು ವೈಷ್ಣವಮತವನ್ನೂ ಶ್ರೀವೈಷ್ಣವ ಗುರು ತಾತಾಚಾರ್ಯರು ಶ್ರೀವೈಷ್ಣವ ಮತವನ್ನೂ ವಲ್ಲಭಾಚಾರ್ಯರು ಶುದ್ಧಾದ್ವೈತ ಮತವನ್ನೂ ಪ್ರಚಾರ ಮಾಡಿದರು. ಪಂಡಿತರಿಂದಲೂ ಕವಿಗಳಿಂದಲೂ ಇವನ ಆಸ್ಥಾನ ತುಂಬಿತ್ತು. ತೆಲುಗು ಸಾಹಿತ್ಯ ಬಹಳ ಮಟ್ಟಿಗೆ ಅಭಿವೃದ್ಧಿ ಹೊಂದಿತು. ಇವರ ಕಾಲ ಸಾಹಿತ್ಯ ರಂಗದಲ್ಲಿ ಸ್ವರ್ಣಯುಗವೆಂದು ಪ್ರಸಿದ್ಧವಾಗಿದೆ. ಪ್ರಸಿದ್ಧರಾದ ಅಲ್ಲಸಾನಿಪೆದ್ದನ, ಪಿಂಗಳಿಸೂರನ, ಮಲ್ಲನ, ತಿಮ್ಮನ, ರಾಮಭದ್ರ, ತೆನಾಲಿ ರಾಮಕೃಷ್ಣ, ಧೂರ್ಜಟಿ, ರಾಮರಾಜಭೂಷಣ ಎಂಬ ಅಷ್ಟದಿಗ್ಗಜರು ಇವನ ಆಸ್ಥಾನವನ್ನು ಅಲಂಕರಿಸಿ ಉದ್ಗ್ರಂಥಗಳನ್ನು ರಚಿಸಿದರು. ಮನುಚರಿತ್ರೆಯನ್ನು ಬರೆದ ಅಲ್ಲಸಾನಿ ಪೆದ್ದನ ಇವರಲ್ಲಿ ಅಗ್ರಗಣ್ಯ. ಕೃಷ್ಣದೇವರಾಯ ಇತರ ಭಾಷೆಗಳಿಗೂ ಇದೇ ರೀತಿಯಾದ ಪ್ರೋತ್ಸಾಹ ನೀಡಿದ. ತಿಮ್ಮಕವಿ ಇವನ ಆಶ್ರಯದಲ್ಲಿ ಕನ್ನಡದಲ್ಲಿ ಗದುಗಿನ ಭಾರತವನ್ನು ಪೂರ್ತಿ ಮಾಡಿದ. ಪುರಂದರದಾಸರು ಅಮೋಘವಾದ ದೇವರನಾಮಗಳನ್ನು ಸೃಷ್ಟಿಸಿದರು. ಸಂಸ್ಕೃತದಲ್ಲಿ ಜಾಂಬವತೀ ಕಲ್ಯಾಣ, ಮದಾಲಸ ಚರಿತ್ರೆ, ಸತ್ಯಾವಧೂ ಪ್ರೀಣನ,

ಕೃಷ್ಣದೇವರಾಯನ ಅರಮನೆ ಗಗನಮಹಲ್, ಪೆನುಕೊಂಡ, ಜಲವರ್ಣಚಿತ್ರ : ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಅವರ ಕೃತಿ

ಸಕಲಕಥಾ ಸಾರಸಂಗ್ರಹಂ, ಜ್ಞಾನಚಿಂತಾಮಣಿ, ರಸಮಂಜರೀ–ಎಂಬ ಗ್ರಂಥಗಳನ್ನೂ ತೆಲುಗಿನಲ್ಲಿ ಆಮುಕ್ತಮಾಲ್ಯದ ಎಂಬ ಕಾವ್ಯವನ್ನೂ ಕೃಷ್ಣದೇವರಾಯನೇ ರಚಿಸಿದನೆಂದು ಹೇಳಲಾಗಿದೆ. ಇವುಗಳಲ್ಲಿ ಸದ್ಯಕ್ಕೆ ದೊರಕಿರುವವು ಜಾಂಬವತೀ ಪರಿಣಯ ಮತ್ತು ಅಮುಕ್ತಮಾಲ್ಯದ. ಕೃಷ್ಣದೇವರಾಯನ ವೈಭವ ಭಾರತದ ಚರಿತ್ರೆಯಲ್ಲಿ ಚಿರಸ್ಮರಣೀಯವಾದುದು.

(ಬಿ.ಎಸ್.ಕೆ.)

**ಆಮುಕ್ತ ಮಾಲ್ಯದ:** ತೆಲುಗಿನ ಪಂಚಮಹಾಕಾವ್ಯಗಳಲ್ಲೊಂದೆನಿಸಿದ ಅಮುಕ್ತಮಾಲ್ಯದ ಅದರ ಹೆಸರೇ ಹೇಳುವಂತೆ ತಾನು ಧರಿಸಿದ ಹೂ ಮಾಲೆಯನ್ನು ದೇವರಿಗೆ ಕೊಟ್ಟು ಆತನ ಪ್ರಣಯಪಾತ್ರಳಾಗಿ ಅವನನ್ನೇ ಮದುವೆಯಾದ ಗೋದಾದೇವಿಯ ಚರಿತ್ರೆಯನ್ನು ಒಳಗೊಂಡ ಗ್ರಂಥ. ವಿಷ್ಣುಚಿತ್ತನೆಂಬ ಭಾಗವತೋತ್ತಮನ ಪುಣ್ಯಕಥೆಯೂ ಇರುವುದರಿಂದ ಗ್ರಂಥಕ್ಕೆ ವಿಷ್ಣುಚಿತ್ತೀಯಮು ಎಂಬ ಪರ್ಯಾಯನಾಮವೂ ಇದೆ. ವಿಷ್ಣುಚಿತ್ತ ಮತ್ಸ್ಯಧ್ವಜ ಮಹಾರಾಜನ ಆಸ್ಥಾನದಲ್ಲಿ ವಿಷ್ಣುವೇ ಪರದೈವವೆಂಬ ಸಿದ್ಧಾಂತವನ್ನು ಸ್ಥಾಪಿಸಿ ಅನ್ಯವಾದಿಗಳನ್ನು ಗೆದ್ದವನು. ಇವನ ಕಥೆ ಹೇಳಿ ಶ್ರೀವೈಷ್ಣವ ಮತದ ಪ್ರಾಶಸ್ತ್ಯ ಪ್ರತಿಪಾದನೆ ಮಾಡಬೇಕೆಂಬುದು ಕವಿಯ ಮುಖ್ಯ ಗುರಿಯಾಗಿದೆ. ತನ್ನ ಉದ್ದೇಶಕ್ಕೆ ತಕ್ಕಂತೆ ಹರಿಭಕ್ತಿ, ಹರಿಕೀರ್ತನೆ, ಹರಿಕಥಾಶ್ರವಣ–ಇವುಗಳ ಮಹಿಮಾತಿಶಯವನ್ನು ಕಾವ್ಯದುದ್ದಕ್ಕೂ ಕವಿ ಹೊಗಳಿದ್ದಾನಲ್ಲದೆ ಶ್ರೀವೈಷ್ಣವ ಧರ್ಮದ ಹಿರಿಮೆಯನ್ನು ಬಾಯಿ ತುಂಬ ಕೊಂಡಾಡಿದ್ದಾನೆ.

ಮತ್ಸ್ಯಧ್ವಜನ ಕಥೆ, ಗೋದಾದೇವಿಯ ಕಥೆ, ಮಾಲದಾಸರಿ ಮತ್ತು ಬ್ರಹ್ಮರಾಕ್ಷಸರ ವೃತ್ತಾಂತ, ಖಾಂಡಿಕ್ಯಕೇಶಿಧ್ವಜರ ಚರಿತ್ರೆ, ವಿಷ್ಣುಚಿತ್ತನ ಭಕ್ತಿಜೀವನ ವೃತ್ತಾಂತ–ಹೀಗೆ ಹಲವು ಕಥೆಗಳನ್ನು ಒಳಗೊಂಡ ಈ ಕಾವ್ಯದಲ್ಲಿ ವಸ್ತ್ವೈಕ್ಯವಿಲ್ಲವೆಂದು ತೋರಬಹುದಾಗಿದೆ. ಆದರೆ ಈ ಎಲ್ಲ ಕಥೆಗಳನ್ನೂ ರಾಯ ಹೇಳಹೊರಟಿರುವುದು ತನಗೆ ಪೂಜ್ಯವಾದ ಶ್ರೀವೈಷ್ಣವ ಧರ್ಮ ಪ್ರಾಶಸ್ತ್ಯ ಪ್ರತಿಪಾದನೆಯ ಏಕೈಕ ಧ್ಯೇಯವನ್ನು ಸಾಧಿಸಿಕೊಳ್ಳುವುದಕ್ಕಾಗಿ. ಆದರೆ ಈ ಕಾವ್ಯದಲ್ಲಿ ತಾನು ಧರಿಸಿದ ಮಾಲೆಯನ್ನು ದೇವರಿಗೆ ಅರ್ಪಿಸಿ ಅವನ ಪ್ರೇಮಕ್ಕೆ ಪಾತ್ರಳಾದ ಗೋದಾದೇವಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ.

ಏಳು ಆಶ್ವಾಸಗಳಷ್ಟು ವಿಸ್ತಾರವಾದ ಈ ಕಾವ್ಯ ಮುಖ್ಯವಾಗಿ ಶ್ರೀವೈಷ್ಣವ ಸಿದ್ಧಾಂತದ ಹಿರಿಮೆಯನ್ನು ಸ್ಥಾಪಿಸುವ ಉದ್ದೇಶ ಸಾಧನೆಗೋಸ್ಕರವೇ ರಚಿತವಾದುದಾದರೂ ಇದರಲ್ಲಿ ರಾಯನ ರಸಿಕತೆ, ಪಾಂಡಿತ್ಯ, ಲೋಕಾನುಭವ, ರಾಜನೀತಿ, ಚೆನ್ನಾಗಿ ಪ್ರಕಟವಾಗಿವೆ. ಅಂದಿನ ಜನಜೀವನದ ರಮ್ಯಚಿತ್ರವೂ ಇಲ್ಲಿದೆ. ವಿಲ್ಲಿಪುತ್ತೂರಿನ ವರ್ಣನೆ, ವಿಷ್ಣುಚಿತ್ತನ ಮನೆಯ ಅತಿಥಿ ಸತ್ಕಾರವರ್ಣನೆ, ತಮಿಳು ಕನ್ಯೆಯರು, ಅವರ ಪರಿಹಾಸ್ಯಗಳ ವರ್ಣನೆ ಮುಂತಾದ ಹಲವು ಚಿತ್ರಗಳು ಗ್ರಂಥವನ್ನು ಓದಿಮುಗಿಸಿದ ಮೇಲೆಯೂ ಓದುಗರ ಚಿತ್ತಭಿತ್ತಿಯ ಮೇಲೆ ನಿಲ್ಲುತ್ತವೆ. ಕೃಷ್ಣದೇವರಾಯ ಪ್ರಕೃತಿ ವರ್ಣನೆಯಲ್ಲಿ ದಕ್ಷ. ಆಟವಿಕ ಮೃಗಗಳ ಚಲನವಲನಗಳನ್ನೂ ವನಸಂಚಾರಿಗಳ ರೀತಿನೀತಿಗಳನ್ನೂ ಸೂಕ್ಷ್ಮವಾಗಿ ಗಮನಿಸಿದ್ದಾನೆ. ಚಳಿಗಾಲದಲ್ಲಿ ರೆಡ್ಡಿ ಜನ ತಮ್ಮ ಮನೆಗಳಲ್ಲಿ ಅಳವಡಿಸಿಕೊಳ್ಳುವ ಜೀವನ ಸೌಲಭ್ಯಗಳನ್ನೂ ಅವರ ನಿತ್ಯವ್ಯವಹಾರಕ್ರಮಗಳನ್ನೂ ತನ್ನ ಕಾವ್ಯದಲ್ಲಿ ಅಲ್ಲಲ್ಲಿ ಸೂಚ್ಯವಾಗಿ ವರ್ಣಿಸಿ ಹೇಳಿರುವುದು ಮನೋಜ್ಞವಾಗಿದೆ. ವಿಜಯನಗರ ಸಾಮ್ರಾಜ್ಯಕ್ಕೆ ಅಧಿಪತಿಯಾಗಿ ಅಮಿತವೈಭವದಿಂದ ಬಾಳಿದ ರಾಯ ತನ್ನ ಕಾಲದ ಸಾಧಾರಣ ಜನರ ಕಷ್ಟಸುಖಗಳನ್ನೂ ಆದರ್ಶಗಳನ್ನೂ ಅವರ ಬದುಕಿನ ರೀತಿಯನ್ನೂ ಚೆನ್ನಾಗಿ ಬಲ್ಲವನೆಂಬುದು ಈ ಕೃತಿಯಿಂದ ಸುವ್ಯಕ್ತವಾಗುತ್ತದೆ.

ಅಲ್ಲಸಾನಿ ಪೆದ್ದನ ರಚಿಸಿದ ಕೃಷ್ಣರಾಯ ಪ್ರಶಂಸಾತ್ಮಕವಾದ ಕೆಲವು ಪದ್ಯಗಳು ಆಮುಕ್ತಮಾಲ್ಯದದಲ್ಲೂ ಬಂದಿವೆ. ಆದ್ದರಿಂದ ಈ ಗ್ರಂಥವನ್ನೂ ಪೆದ್ದನ ಕವಿಯೇ ರಚಿಸಿ ರಾಯನ ಹೆಸರಿನಲ್ಲಿ ಪ್ರಚುರಪಡಿಸಿರಬೇಕೆಂಬ ಒಂದು ವಾದ ಇದೆ. ಆದರೆ ಈ ಕೃತಿಯ ಶೈಲಿ ಪೆದ್ದನನ ಸರಳ ಶೈಲಿಯಲ್ಲ. ಮನುಚರಿತ್ರದಂಥ ದ್ರಾಕ್ಷಾಪಾಕದ ಕಾವ್ಯ ರಚಿಸಿದ ಪೆದ್ದನ ಈ ಶಿಲಾಪಾಕ, ವಜ್ರಪಾಕ, ಎಂದು ವರ್ಣಿಸಬಹುದಾದ ಆಮುಕ್ತಮಾಲ್ಯದವನ್ನು ಬರೆಯುವುದು ಸಂಭವವಲ್ಲ–ಎಂದು ಹೇಳಲಾಗಿದೆ. ಇದು ಪ್ರೌಢಶೈಲಿಯ ಪಂಡಿತಕೃತಿ. ಅಪೂರ್ವ ಪದಪ್ರಯೋಗ, ಅಲಂಕಾರ ಶೈಲಿ, ಸಂಸ್ಕೃತ ಪದಬಾಹುಳ್ಯ ಮೊದಲಾದ ಹಲವು ನಿಮಿತ್ತಗಳಿಂದ ಈ ಕೃತಿರತ್ನ ತಕ್ಕ ವ್ಯಾಖ್ಯಾನದ ನೆರವಿಲ್ಲದಿದ್ದರೆ ಸಾಮಾನ್ಯ ವಾಚಕರಿಗೆ ಸರ್ವಥಾ ಅರ್ಥವಾಗುವುದಿಲ್ಲ. ತೆಲುಗು ದೇಶದ ಹಲವು ವಿದ್ವಾಂಸರು ಈ ಕೃತಿಗೆ ವಿಸ್ತಾರವಾದ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ವೇದಂ ವೆಂಕಟರಾಯಶಾಸ್ತ್ರಿಗಳು ರಚಿಸಿದ ಸಂಜೀವಿನೀ ಮತ್ತು ವಾವಿಳ್ಳ ರಾಮಸ್ವಾಮಿ ಶಾಸ್ತ್ರಿಗಳು ಚದಲವಾಡ ಸೀತಾರಾಮಶಾಸ್ತ್ರಿಗಳ ನೆರವಿನಿಂದ ರಚಿಸಿದ ರುಚಿ ಎಂಬ ಎರಡು ವ್ಯಾಖ್ಯಾನಗಳು ಸುಪ್ರಸಿದ್ಧವಾಗಿವೆ. (ಕೆ.ವಿಇ.)

**ಕೃಷ್ಣದ್ವೈಪಾಯನ :** ವ್ಯಾಸಮಹರ್ಷಿ. ಕೃಷ್ಣವರ್ಣದ ಯಮುನಾ ನದಿಯ ದ್ವೀಪವೊಂದರಲ್ಲಿ ಜನ್ಮ ತಾಳಿದ್ದರಿಂದ ಕೃಷ್ಣದ್ವೈಪಾಯನನೆಂಬ ಹೆಸರನ್ನು ಪಡೆದ; ಕಪ್ಪುಬಣ್ಣದ ಮೈಯುಳ್ಳವನಾಗಿ ಕೃಷ್ಣ ಎನಿಸಿಕೊಂಡನೆಂದು ಪ್ರತೀತಿ. ಬಾದರಾಯಣ, ವೇದವ್ಯಾಸ, ಪಾರಾಶರ್ಯ–ಇವು ಈ ಮುನಿಯ ಇನ್ನೂ ಕೆಲವು ಮುಖ್ಯ ಹೆಸರುಗಳು.

ಬದರೀವನದಲ್ಲಿ ಆಶ್ರಮವನ್ನು ಮಾಡಿಕೊಂಡು ತಪಸ್ಸು ಮಾಡುತ್ತಿದ್ದುದರಿಂದ ಈತ ಬಾದರಾಯಣನಾದ. ಈ ಹೆಸರಿನಿಂದ ವೇದಾಂತದರ್ಶನದ ಅದರಲ್ಲೂ ವಿಶೇಷವಾಗಿ ಬ್ರಹ್ಮಸೂತ್ರದ ಕರ್ತೃವೆಂದು ಪ್ರಸಿದ್ಧಿ ಪಡೆದಿದ್ದಾನೆ.

ಪುರಾಣಗಳಲ್ಲಿ ಪ್ರತಿಪಾದಿತವಾಗಿರುವಂತೆ ಕಲ್ಪವೊಂದರ(ಒಂದು ಸಾವಿರ ಮಹಾಯುಗಗಳು) ಒಂದೊಂದು ಮಹಾಯುಗದಲ್ಲೂ ವೇದರಾಶಿಯನ್ನು ವಿಭಾಗ ಮಾಡುವುದಕ್ಕೋಸ್ಕರ ವಿಷ್ಣುವೇ ವ್ಯಾಸರೂಪಿಯಾಗಿ ಉದಯಿಸುತ್ತಾನೆ. ವೇದ ವಿಭಾಗ ಮಾಡಿದ ಕಾರಣದಿಂದ ಅಂಥ ಒಬ್ಬೊಬ್ಬ ಮುನಿಗೂ ವ್ಯಾಸ ಅಥವಾ ವೇದವ್ಯಾಸ ಎಂಬ ಹೆಸರು ಬಂದಿದೆ(ಯೋ ವ್ಯಸ್ಯ ವೇದಾಂಶ್ಚತುರಸ್ತಪಸಾಭಗವನ್ಋಷಿಃ ಲೋಕೇ ವ್ಯಾಸತ್ವಮಾಪೇದೇ ಕಾರ್ಷ್ಣ್ಯಾತ್ ಕೃಷ್ಣತ್ವಮೇವ ಚ । ಮಹಾಭಾರತ, ಆದಿಪರ್ವ; ಮತ್ತು ಯಥಾಸೌ ಕುರುತೇ ತನ್ವಾ ವೇದಮೇಕಂ ಪೃಥಕ್ ಪ್ರಭುಃ ವೇದವ್ಯಾಸಾಭಿಧಾನಾ ತು ಸಾ ಚ ಮೂರ್ತಿರ್ಮಧುದ್ವಿಷಃ॥ ವಿಷ್ಣುಪುರಾಣ). ಅಲ್ಲದೆ ಒಂದೊಂದು ಮಹಾಯುಗದ ಒಂದೊಂದು ದ್ವಾಪರದಲ್ಲೂ ಒಬ್ಬೊಬ್ಬ ವೇದವ್ಯಾಸ ಮುನಿಯ ಸಂಭವವಾಗುತ್ತದೆ. ಇಲ್ಲಿಯವರೆಗೆ ಇಪ್ಪತ್ತೇಳು ಮಹಾಯುಗಗಳು ಕಳೆದಿವೆ; ಪ್ರಚಲಿತ ಮಹಾಯುಗ ಇಪ್ಪತ್ತಂಟನೆಯದು; ಇದರ ದ್ವಾಪರಕ್ಕೆ ಸಂಬಂಧಪಟ್ಟಂತೆ ಕೃಷ್ಣದ್ವೈಪಾಯನ ಮುನಿ ವೇದವ್ಯಾಸನಾಗಿದ್ದಾನೆ.

ಉಪರಿಚರವಸುವೆಂಬ ರಾಜನಿಗೆ ಮತ್ಸ್ಯಜಾತಳಾಗಿ ಮತ್ಸ್ಯಗಂಧಿಯೆನಿಸಿಕೊಂಡ ಸತ್ಯವತಿಯಲ್ಲಿ ವಸಿಷ್ಠನ ಮೊಮ್ಮಗ ಶಕ್ತಿಮಹರ್ಷಿಯ ಪುತ್ರನಾದ ಪರಾಶರ ಮುನಿಗೆ ಮಗನಾಗಿ ಜನಿಸಿದನಾದ್ದರಿಂದ ಕೃಷ್ಣದ್ವೈಪಾಯನನಿಗೆ ಪಾರಾಶರ್ಯನೆಂಬ ಹೆಸರು ಬಂತು.

ಕೌರವರ ಪಿತೃವಾದ ಧೃತರಾಷ್ಟ್ರನ ಮತ್ತು ಪಾಂಡವರ ಜನಕನಾದ ಪಾಂಡುವಿನ ಜೀವನದಲ್ಲಿ ಕೃಷ್ಣದ್ವೈಪಾಯನನ ಪಾತ್ರ ಗಮನಾರ್ಹವಾಗಿದೆ. ಬ್ರಹ್ಮಲೋಕವನ್ನು ಪಡೆದಿದ್ದ ಮಹಾಭಿಷನೆಂಬ ಇಕ್ಷ್ವಾಕುರಾಜ ಗಂಗೆಯಲ್ಲಿ ಅನುರಾಗ ತೋರಿಸಿದ್ದರಿಂದ ಬ್ರಹ್ಮನ ಶಾಪಕ್ಕೆ ಸಿಕ್ಕಿ ತತ್ಪರಿಣಾಮವಾಗಿ ಚಂದ್ರವಂಶದ ಪ್ರತೀಪರಾಜನಿಗೆ ಶಂತನುವೆಂಬ (ಶಾಂತನು) ಹೆಸರುಳ್ಳ ಪುತ್ರನಾಗಿ ಭೂಲೋಕದಲ್ಲಿ ಜನಿಸುತ್ತಾನೆ; ಇವನಿಗೆ ಗಂಗೆಯಲ್ಲಿ ಜನಿಸಿದವನೇ ಭೀಷ್ಮ. ಪರಾಶರನೊಡನೆ ಸಂಯುಕ್ತಳಾಗಿದ್ದರೂ ಮತ್ಸ್ಯಕನ್ಯೆ ಸತ್ಯವತಿಯ ಕನ್ಯಾತ್ವ ಆ ಮುನಿಯ ವರಪ್ರಸಾದದಿಂದ ರಕ್ಷಿತವಾಗಿದ್ದು ಅವಳನ್ನು ಗಂಗೆಯಿಂದ ತ್ಯಕ್ತನಾಗಿದ್ದ ಶಂತನು ವರಿಸುತ್ತಾನೆ. ಶಂತನು ಸತ್ಯವತಿಯರ ಇಬ್ಬರು ಪುತ್ರರಲ್ಲಿ ಮೊದಲನೆಯವನಾದ ಚಿತ್ರಾಂಗದ ಯುದ್ಧದಲ್ಲಿ ಮಡಿದುದಲ್ಲದೆ, ದ್ವಿತೀಯ ಪುತ್ರನಾಗಿದ್ದ ವಿಚಿತ್ರವೀರ್ಯ ಅಂಬಿಕೆ, ಅಂಬಾಲಿಕೆ ಎಂಬ ತನ್ನ ಇಬ್ಬರು ಪತ್ನಿಯರನ್ನು ಬಿಟ್ಟು ಸಂತಾನವಿಲ್ಲದೆ ಸಾಯುತ್ತಾನೆ. ಹೀಗೆ ರಾಜ್ಯಕ್ಕೆ ಉತ್ತರಾಧಿಕಾರಿಗಳಿಲ್ಲದಂತಾಗಲು ಬ್ರಹ್ಮಚಾರಿಯಾಗಿದ್ದು ರಾಜ್ಯದ ಹಕ್ಕನ್ನು ತ್ಯಜಿಸಿದ್ದ ಬಲಮಗ ಭೀಷ್ಮನ ಸಲಹೆಯಂತೆ ಸತ್ಯವತಿ ಕೃಷ್ಣದ್ವೈಪಾಯನನನ್ನು ಬರಮಾಡಿಕೊಳ್ಳುತ್ತಾಳೆ. ತನ್ನ ಪೂರ್ವಸ್ಥಿತಿಯಲ್ಲಿ ಪರಾಶನಿಂದ ತನ್ನಲ್ಲಿ ಜನಿಸಿದ ಆ ಮುನಿಯನ್ನು ಕುರಿತು ಸತ್ಯವತಿ ಬಲತಮ್ಮನ ಪತ್ನಿಯರಲ್ಲಿ ಧರ್ಮಾನುಸಾರವಾಗಿ ಸಂತಾನೋತ್ಪತ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತಾಳೆ. ತಾಯಿಯ ಕೋರಿಕೆಯನ್ನಂಗೀಕರಿಸಿದ ಕೃಷ್ಣದ್ವೈಪಾಯನನಿಂದ ಅಂಬಿಕೆಯಲ್ಲಿ ಧೃತರಾಷ್ಟ್ರನೂ ಅಂಬಾಲಿಕೆಯಲ್ಲಿ ಪಾಂಡುವೂ ಜನಿಸುತ್ತಾರೆ. ಹೀಗೆ ಕೃಷ್ಣದ್ವೈಪಾಯನ ಕೌರವ ಪಾಂಡವರಿಗೆ ಪರಮಪೂಜ್ಯ ತಾತನೂ ಮಹಾಭಾರತದ ಕರ್ತೃವೂ ಆಗಿದ್ದಾನೆ.

ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳಬೇಕೆಂದು ಧೃತರಾಷ್ಟ್ರನಿಗೆ ಉಪದೇಶ, ಆಗಾಗ್ಗೆ ಯುಧಿಷ್ಠಿರಾದಿಗಳಿಗೆ ಸಹನೆ ಮುಂತಾದ ಗುಣಗಳನ್ನು ಕುರಿತು ಬುದ್ಧಿವಾದ, ಧರ್ಮಬೋಧೆ ಮುಂತಾದವು ಮಹಾಭಾರತದಲ್ಲಿ ಕೃಷ್ಣದ್ವೈಪಾಯನ ನಿರ್ವಹಿಸುವ ಗುರುಕಾರ್ಯಗಳು. ಶಾಂತಿಪರ್ವದ ಪ್ರಕಾರ ಈತ ಪುತ್ರಪ್ರಾಪ್ತಿಗಾಗಿ ತಪಸ್ಸು ಮಾಡಿ ಘೃತಾಚಿಯೆಂಬ ಅಪ್ಸರೆಯಲ್ಲಿ ಶುಕನೆಂಬ ಸುಪುತ್ರನನ್ನು ಪಡೆಯುತ್ತಾನೆ. **(ನೋಡಿ– ವ್ಯಾಸ)** (ಬಿ.ಕೆ.ಎಸ್.)

**ಕೃಷ್ಣನ್, ಎಂ.ಎಸ್. :** 1898–1970. ಭಾರತದ ಭೂವಿಜ್ಞಾನಿಗಳಲ್ಲಿ ಅಗ್ರಗಣ್ಯರೆನಿಸಿದ್ದ ಮಹಾರಾಜ~ಪುರಂ ಸೀತಾರಾಂ ಕೃಷ್ಣನ್ 1898ರ ಆಗಸ್ಟ್ 24ರಂದು ತಂಜಾವೂರು ಜಿಲ್ಲೆಯ ಮಹಾರಾಜಪುರಂ ಎಂಬ ಹಳ್ಳಿಯಲ್ಲಿ ಜನ್ಮ ತಳೆದರು. ಅವರ ಮನೆತನ ವೈದಿಕ ವಿದ್ವಾಂಸರದು. ಈ ಪರಿಸರದಲ್ಲಿ ಬೆಳೆದ ಕೃಷ್ಣನ್ ಮುಂದೆ ಮದರಾಸು ವಿಶ್ವವಿದ್ಯಾಲಯದ ಪ್ರೆಸಿಡೆನ್ಸಿ ಕಾಲೇಜನ್ನು ಸೇರಿ ಭೂವಿಜ್ಞಾನವನ್ನು ವಿಶೇಷವಾಗಿ ಅಧ್ಯಯನ ಮಾಡಿ 1919ರಲ್ಲಿ ಉತ್ತಮ ಶ್ರೇಣಿಯಲ್ಲಿ ಬಿ.ಎ.(ಆನರ್ಸ್) ಪದವಿಯನ್ನು ಪಡೆದರು. ಆ ಕಾಲೇಜಿನಲ್ಲೇ ಅಧ್ಯಾಪಕರಾಗಿ ಸುಮಾರು ಎರಡು ವರ್ಷ ಸೇವೆ ಸಲ್ಲಿಸಿ 1921ರಲ್ಲಿ ಎಂ.ಎ. ಪದವೀಧರರಾದರು. ಅಷ್ಟರಲ್ಲೇ ಈ ಪ್ರತಿಭಾವಂತ ಯುವಕನಿಗೆ ಲಂಡನ್ನಿನ ಇಂಪೀರಿಯಲ್ ಕಾಲೇಜ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿಯಲ್ಲಿ ಉನ್ನತವ್ಯಾಸಂಗಕ್ಕಾಗಿ ಸರ್ಕಾರದ ವಿದ್ಯಾರ್ಥಿ ವೇತನ ದೊರೆಯಿತು. ಅಲ್ಲಿ 1922ರಲ್ಲಿ ಉತ್ತಮ ಶ್ರೇಣಿಯ ಎ.ಆರ್.ಸಿ.ಎಸ್. ಪದವಿಯನ್ನೂ ಮರುವರ್ಷ ಡಿ.ಐ.ಸಿ. ಪದವಿಯನ್ನೂ ಪಡೆದರು. ಮುಂದೆ ಪ್ರೊಫೆಸರ್ ಡಬ್ಲ್ಯೂ. ಡಬ್ಲ್ಯೂ. ವಾಟ್ಸ್ ಮತ್ತು ಜೆ. ಡಬ್ಲ್ಯೂ ಇವಾನ್ಸ್ ಅವರ ಮಾರ್ಗದರ್ಶನದಲ್ಲಿ ಗುಜರಾತ್ ರಾಜ್ಯದ ಕಾಥೆವಾರ್ ಜಿಲ್ಲೆಯ ಗಿರ್ನಾರ್ ಮತ್ತು ಓಷಾಂ ಬೆಟ್ಟಗಳಲ್ಲಿಯ ವಿವಿಧ ಶಿಲೆಗಳನ್ನು ಕುರಿತು ಸಂಶೋಧನೆ ನಡೆಸಿ 1924ರಲ್ಲಿ ಲಂಡನ್

ವಿಶ್ವವಿದ್ಯಾಲಯದ ಪಿಎಚ್.ಡಿ. ಪದವೀಧರರಾದರು. ಇದರೊಡನೆ ಅದೇ ಕಾಲೇಜಿನಲ್ಲಿ ಗಣಿಯ ಕೆಲಸದ ಬಗ್ಗೆ ಹೆಚ್ಚಿನ ತರಬೇತಿಯನ್ನೂ ಪಡೆದರು. ಇವರ ಪ್ರತಿಭೆಯನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಇವರನ್ನು ಭಾರತದ ಭೂವೈಜ್ಞಾನಿಕ ಇಲಾಖೆಯಲ್ಲಿ ಉನ್ನತ ವರ್ಗದ ಅಧಿಕಾರಿಯನ್ನಾಗಿ ನೇಮಿಸಿತು. ಬಹುಶಃ ಈ ಇಲಾಖೆಗೆ ಸೇರಿದ ಮೊತ್ತಮೊದಲಿನ ಡಾಕ್ಟೊರೆಟ್ ಪದವೀಧರರು ಕೃಷ್ಣನ್ ಎನ್ನಬಹುದು.

1935–36ರಲ್ಲಿ ಸರ್ಕಾರ ಇವರನ್ನು ಉನ್ನತ ತರಬೇತಿಗಾಗಿ ಮತ್ತೆ ಇಂಗ್ಲೆಂಡ್ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಕಳುಹಿಸಿತು. ಈ ಸದವಕಾಶವನ್ನು ಉಪಯೋಗಿಸಿಕೊಂಡು ಕೃಷ್ಣನ್ ಲಂಡನ್ನಿನ ತಮ್ಮ ಹಳೆಯ ಕಾಲೇಜಿನಲ್ಲಿ ಅನ್ವಯ ಭೂಭೌತ ವಿಜ್ಞಾನದಲ್ಲಿ ಹೆಚ್ಚಿನ ಪರಿಶ್ರಮ ಗಳಿಸಿದರು. ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನದ ಭೂಶೋಧನ ಇಲಾಖೆಯಲ್ಲೂ ಖ್ಯಾತ ಹಾರ್ವರ್ಡ್ ಮತ್ತು ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯಗಳ ಭೂವೈಜ್ಞಾನಿಕ ಶಾಖೆಗಳ ಸಂಶೋಧನಾಲಯಗಳಲ್ಲೂ ಹೆಚ್ಚಿನ ಅಧ್ಯಯನ ನಡೆಸುವುದರ ಮೂಲಕ ತರಬೇತಿಯನ್ನು ಪಡೆದರು.

ಈ ಖ್ಯಾತ ಭೂವಿಜ್ಞಾನಿ ಭಾರತ ಭೂವೈಜ್ಞಾನಿಕ ಇಲಾಖೆಯ ವಿವಿಧ ಹುದ್ದೆಗಳಲ್ಲಿದ್ದು ಉತ್ತಮ ಸೇವೆಯನ್ನು ಸಲ್ಲಿಸಿದ್ದಾರೆ. 1949ರಲ್ಲಿ ಕೊಂಚ ಕಾಲದ ಮತ್ತು 1951ರಲ್ಲಿ ಇಲಾಖೆಯ ಕಾಯಂ ಅವಧಿಯ ನಿರ್ದೇಶಕರಾಗಿ ನೇಮಕಗೊಂಡರು. ಈ ಹುದ್ದೆಯನ್ನು ಅಲಂಕರಿಸಿದ ಪ್ರಪ್ರಥಮ ಭಾರತೀಯರೇ ಕೃಷ್ಣನ್. ಅವರ ಸೇವಾವಧಿಯಲ್ಲಿ ದೇಶದ ನಾನಾ ಭಾಗಗಳಲ್ಲಿ– ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಅಸ್ಸಾಮಿನಿಂದ ಬಲೂಚಿಸ್ತಾನದ ವರೆಗೆ– ಅವರು ದಕ್ಷತೆಯಿಂದ ಭೂಶೋಧನೆ ನಡೆಸಿದುದರದೇ ಅಲ್ಲದೆ ಅನೇಕ ಯುವ ಭೂವಿಜ್ಞಾನಿಗಳಿಗೆ ಉತ್ತಮ ಮಾರ್ಗದರ್ಶನ ಸಹ ನೀಡಿದರು. ಸುಮಾರು 450 ಸಂಶೋಧನ ಲೇಖನಗಳನ್ನೂ, 8–10 ಪುಸ್ತಿಕೆಗಳನ್ನೂ ಪ್ರಕಟಿಸಿದ ಕೀರ್ತಿ ಅವರದು. ಈ ಅನುಭವಗಳ ಹಿನ್ನಲೆಯಲ್ಲಿ ಬರೆದ 'ಜಿಯಾಲಜಿ ಆಫ್ ಇಂಡಿಯ ಅಂಡ್ ಬರ್ಮ' ಎಂಬ ಗ್ರಂಥ 1943ರಲ್ಲಿ ಪ್ರಕಟವಾಯಿತು. ಭಾರತದ (ಉಪಖಂಡದ) ಭೂವಿಜ್ಞಾನವನ್ನು ತಿಳಿಯಲು ಇದು ಅತ್ಯಂತ ಆವಶ್ಯಕ ಪುಸ್ತಕ. ಇದು ರಷ್ಯನ್ ಭಾಷೆಗೂ ಭಾಷಾಂತರಗೊಂಡಿದೆಯೆಂದರೆ ಇದರ ವೈಜ್ಞಾನಿಕ ಮೌಲ್ಯವನ್ನು ಒತ್ತಿ ಹೇಳಬೇಕಾಗಿಲ್ಲ.

ಉತ್ತಮ ಇಂಧನದ ಆಗರವೆನಿಸಿದ ನೈವೇಲಿ ಲಿಗ್ನೈಟ್ ಬೃಹತ್ ಯೋಜನೆ ಕೃಷ್ಣನ್ ಅವರ ಕೊಡುಗೆ. ದೇಶದ ವಿವಿಧ ಪ್ರದೇಶಗಳಲ್ಲಿನ ಕಬ್ಬಿಣದ ಅದಿರು ನಿಕ್ಷೇಪಗಳನ್ನು ಇವರು ವಿವರವಾಗಿ ಅಧ್ಯಯನ ಮಾಡಿ ಲೇಖನಗಳನ್ನು ಪ್ರಕಟಿಸಿದ್ದಾರೆ.

ಭೂವೈಜ್ಞಾನಿಕ ಇಲಾಖೆಯಿಂದ ನಿವೃತ್ತರಾದಮೇಲೆ ಧನಬಾದ್‍ನಲ್ಲಿರುವ ಭಾರತೀಯ ಗಣಿವಿಜ್ಞಾನ ಮತ್ತು ಆನ್ವಯಿಕ ಭೂವಿಜ್ಞಾನ ಶಾಲೆಯ ನಿರ್ದೇಶಕರಾಗಿಯೂ ಅನಂತರ ಕೊಂಚಕಾಲ ಆಂಧ್ರ ವಿಶ್ವವಿದ್ಯಾಲಯದ ಭೂವಿಜ್ಞಾನ ಶಾಖೆಯ ಪ್ರಾಧ್ಯಾಪಕರಾಗಿಯೂ ಕೆಲಸಮಾಡಿದರು. ಹೈದರಾಬಾದಿನಲ್ಲಿರುವ ರಾಷ್ಟ್ರೀಯ ಭೂಭೌತ ವಿಜ್ಞಾನ ಸಂಶೋಧನ ಕೇಂದ್ರದ ಸ್ಥಾಪಕರು ಮತ್ತು ಪ್ರಥಮ ನಿರ್ದೇಶಕರು ಕೃಷ್ಣನ್ ಅವರೇ. ಅಲ್ಲದೆ ರಾಷ್ಟ್ರದ ಹಲವಾರು ವಿಜ್ಞಾನ ಸಂಘಗಳ ಸ್ಥಾಪಕ ಸದಸ್ಯರಾಗಿ ಅಮೂಲ್ಯ ಸೇವೆಯನ್ನು ರಾಷ್ಟ್ರದ ವೈಜ್ಞಾನಿಕ ಪ್ರಗತಿಗೆ ಸಲ್ಲಿಸಿದ ಕೀರ್ತಿ ಈ ಹಿರಿಯ ವಿಜ್ಞಾನಿಯದಾಗಿದೆ. ಇವರ ವೈಜ್ಞಾನಿಕ ಸಂಶೋಧನೆಗಳನ್ನು ಮೆಚ್ಚಿ ದೇಶ ವಿದೇಶಗಳ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.

ಭೂವಿಜ್ಞಾನವೇ ಅಲ್ಲದೆ ಕೃಷ್ಣನ್ ಅವರಿಗೆ ಸಾಹಿತ್ಯ, ಸಂಗೀತ ಮತ್ತು ಜ್ಯೋತಿಷ ಶಾಸ್ತ್ರಗಳಲ್ಲಿ ವಿಶೇಷ ಆಸಕ್ತಿ. ಭಾರತ ಸರ್ಕಾರ 1970ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಗೌರವಿಸಿತು.

ಈ ಪ್ರತಿಭಾವಂತ ಹಿರಿಯವಿಜ್ಞಾನಿ 1970 ಏಪ್ರಿಲ್ 21ರಂದು ತಂಜಾವೂರಿನಲ್ಲಿ ಕಾಲವಾದರು.

(ಬಿ.ವಿ.ಜಿ.)

**ಕೃಷ್ಣನ್, ಕೆ.ಎಸ್. :** 1898–1961. ಭಾರತದ ಅತ್ಯಂತ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರಾದ ಕರಿಯಮಾಣಿಕ್ಕಂ ಶ್ರೀನಿವಾಸ ಕೃಷ್ಣನ್ ಅವರು ದೇಶದ ವೈಜ್ಞಾನಿಕ ಮುನ್ನಡೆಗೆ ಸಲ್ಲಿಸಿರುವ ಸೇವೆ ಅಮೂಲ್ಯವಾದುದು. ತಮಿಳುನಾಡಿನ ಸಾಂಪ್ರದಾಯಿಕ ಕುಟುಂಬದಲ್ಲಿ ಜನಿಸಿದ (ದಿನಾಂಕ 4ನೆಯ ಡಿಸೆಂಬರ್ 1898) ಇವರು ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಖಗೋಳ ವಿಜ್ಞಾನ ಇತ್ಯಾದಿ ವಿಷಯಗಳ ಬಗ್ಗೆ ಅಧ್ಯಯನ ಮಾಡಿದರಲ್ಲದೆ, ದಿನಕ್ಕೆ ಎರಡು ಮೂರು ತಾಳೆಗರಿಗಳ ಮೇಲೆ ವಿಷಯ ಸಂಗ್ರಹಣೆ ಮಾಡಿ ಒಂದು ದೊಡ್ಡ ಪುಸ್ತಕವನ್ನೇ ರಚಿಸಿದರು. ಮುಂದೆ ಪ್ರೊಫೆಸರ್ ರಾಮನ್ ಅವರಿಂದ ಆಕರ್ಷಿತರಾಗಿ ಕಲ್ಕತ್ತಾ ವಿಶ್ವವಿದ್ಯಾಲಯದ ವಿಜ್ಞಾನ ಕಾಲೇಜಿನಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದು ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ದ್ರವಗಳ ಬೆಳಕಿನ ಚದರುವಿಕೆ ಹಾಗೂ ಅನಿಲಾಣುಗಳು ಮತ್ತು ಹರಳುಗಳಲ್ಲಿ ಕಾಂತತೆಯ ಅಸಮಾನತೆಯ ಬಗ್ಗೆ ಆಳವಾದ ಸಂಶೋಧನೆ ನಡೆಸಿದರು. ಸಿ.ವಿ. ರಾಮನ್ ಅವರ ಸಹಚರರಾಗಿ ಅವರೊಂದಿಗೆ ಬೆಳಕಿನ ಚರಾಕಿಗೆ ಸಂಬಂಧಿಸಿದ ಹಲವು ವೀಕ್ಷಣೆಗಳನ್ನು ನಡೆಸಿದರು; ವೈಜ್ಞಾನಿಕ ಸಂಪ್ರಬಂಧಗಳನ್ನು ಬರೆದರು. ವೈಜ್ಞಾನಿಕ ವಿಷಯಗಳಲ್ಲಷ್ಟೇ ಅಲ್ಲದೆ ತಮಿಳು, ಸಂಸ್ಕೃತ ಹಾಗೂ ಆಂಗ್ಲ ಸಾಹಿತ್ಯದಲ್ಲಿ ಅಭಿರುಚಿಯಿದ್ದ ಕೃಷ್ಣನ್ ದೇಶದ ಆಗು ಹೋಗುಗಳಲ್ಲಿ ಮಾತ್ರವಲ್ಲ, ಕ್ರೀಡೆಗಳಲ್ಲೂ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಡಾಕಾ, ಅಲಹಾಬಾದ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ ತಮ್ಮ ಸಹೋದ್ಯೋಗಿಗಳೊಡನೆ ಹರಳುಗಳ ಕಾಂತತೆ ಮತ್ತು ಕಾಂತರಸಾಯನವಿಜ್ಞಾನಗಳ ಬೆಳವಣಿಗೆಗೆ ಬುನಾದಿಯನ್ನು ಹಾಕಿದರು. ಸ್ವಾತಂತ್ರ್ಯಾನಂತರ ರಾಷ್ಟ್ರೀಯ ಭೌತವಿಜ್ಞಾನ ಪ್ರಯೋಗಾಲಯದ ನಿರ್ದೇಶಕರಾಗಿ ಚುನಾಯಿತರಾಗಿ ತಮ್ಮ ಅಂತ್ಯ ಕಾಲದ ತನಕ ಸೇವೆ ಸಲ್ಲಿಸಿದರು. ಈ ವಿಜ್ಞಾನಿ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ, ಪರಮಾಣು ಶಕ್ತಿ ಮಂಡಲಿ, ಕೈಗಾರಿಕಾ ಮತ್ತು ವೈಜ್ಞಾನಿಕ ಸಂಶೋಧನಾ ಮಂಡಲಿ, ಯುನೆಸ್ಕೋ ಸಂಸ್ಥೆಯ ಸೈಂಟಿಫಿಕ್ ಅಡ್ವೈಸರಿ ಕಮಿಟಿ ಇತ್ಯಾದಿ ವೈಜ್ಞಾನಿಕ ಸಂಘಸಂಸ್ಥೆಗಳಲ್ಲಿ ಪ್ರಮುಖವಾದ ಸ್ಥಾನಗಳಿಗೆ ಚುನಾಯಿತರಾಗಿದ್ದರು. ಎಫ್.ಆರ್.ಎಸ್. (1940), ಪದ್ಮಭೂಷಣ (1954), ರಾಷ್ಟ್ರೀಯ ಪ್ರಾಧ್ಯಾಪಕ ಮೊದಲಾದ ಅನೇಕ ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟಿದ್ದರು. ಇವರು ಅತ್ಯಂತ ಸರಳ ಸ್ವಭಾವದಿಂದ ಬಹು ಜನಪ್ರಿಯರಾಗಿದ್ದರು. ಮೇಲೆ ಹೇಳಿದ ವಿಷಯಗಳಷ್ಟೇ ಅಲ್ಲದೆ ತರಂಗ ಯಂತ್ರವಿಜ್ಞಾನ (ವೇವ್ ಮೆಕ್ಯಾನಿಕ್ಸ್) ಸಂಖ್ಯಾಕಲನೀಯ ಉಷ್ಣಗತಿವಿಜ್ಞಾನ (ಸ್ಟ್ಯಾಟಿಸ್ಟಿಕಲ್ ಥರ್ಮೋಡೈನಮಿಕ್ಸ್) ಹಾಗೂ ಘನಸ್ಥಿತಿಯ ಬಗ್ಗೆ ಸಂಶೋಧನೆ ನಡೆಸಿ 130ಕ್ಕೂ ಹೆಚ್ಚು ಪ್ರಬಂಧಗಳನ್ನು ಅನೇಕ ಪ್ರತಿಷ್ಠಿತ ಸಂಶೋಧನ ಪತ್ರಿಕೆಗಳಲ್ಲಿ ಪ್ರಕಟಿಸಿದ ಮಹಾವಿಜ್ಞಾನಿ ಇವರು. ಜೂನ್ 14, 1961 ರಂದು ಇವರು ನಿಧನರಾದರು.

(ಎನ್.ವಿ.ಎಂ.)

**ಕೃಷ್ಣಪ್ಪ, ಬಿ :** 1955. ಕನ್ನಡ ನುಡಿ ಸೇವೆಯಲ್ಲಿ ನಿರತರಾದ ಹಳಬರಲ್ಲೊಬ್ಬರು; ಮೈಸೂರಿನವರು. 1907ರಲ್ಲಿ ಬಿ.ಎ. ಪದವೀಧರರಾಗಿ ಮೈಸೂರು ಪ್ರಾಂತ್ಯದ ಅನೇಕ ಕಡೆಗಳಲ್ಲಿ ಸುಮಾರು ಏಳೆಂಟು ವರ್ಷಗಳ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿ, 1915ರಲ್ಲಿ ಮೈಸೂರಿಗೆ ಬಂದರು. ಅಲ್ಲಿ ಕುರುಡ–ಮೂಗರ ಶಾಲೆಯ ಮುಖ್ಯೋಪಾಧ್ಯಾಯರಾದರು. ಮುಂದೆ ಕನ್ನಡ ಭಾಷೆ, ಸಾಹಿತ್ಯಗಳಲ್ಲಿ ಎಂ.ಎ., ಪದವಿ ಪಡೆದು ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾದರು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದ ಬಳಿಕ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಮೊತ್ತಮೊದಲ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು.

ಬಿ. ಕೃಷ್ಣಪ್ಪನವರು ವಿದ್ಯಾದಾಯಿನಿ ಮಾಸಪತ್ರಿಕೆಗೂ ಬಾಪು ಅನಂತಸುಬ್ಬರಾಯರ ಅನಂತರ ಕರ್ಣಾಟಕ ಗ್ರಂಥಮಾಲೆಗೂ ಸಂಪಾದಕರಾಗಿದ್ದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಮೊತ್ತಮೊದಲ ಕಾರ್ಯದರ್ಶಿಯಾಗಿದ್ದರು ಎಂಬುದು ಗಮನಾರ್ಹ ಸಂಗತಿ. 1919 ರಿಂದ 1926ರ ತನಕ ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಉಪಾಧ್ಯಕ್ಷರಾಗಿದ್ದರು.

ಟಿ. ಶ್ರೀನಿವಾಸರಾಘವಾಚಾರ್ಯರೊಡನೆ ಸಹಲೇಖಕರಾಗಿ ಕೃಷ್ಣಪ್ಪನವರು ಕನ್ನಡ ಕೈಪಿಡಿಯ ಮೊದಲ ಸಂಪುಟದ ಮೊದಲನೆಯ ಭಾಗವಾದ ಹಳಗನ್ನಡ ವ್ಯಾಕರಣವನ್ನು ಬರೆದಿರುವರಲ್ಲದೆ ಅಭಿಜ್ಞಾನ ಶಾಕುಂತಲ ನಾಟಕದ ಗದ್ಯಾನುವಾದವನ್ನೂ ವಿಮರ್ಶೆಯನ್ನೂ

ಕನಕೋರ್ಣಾರ್ಜುನ ಎಂಬ ವನಸ್ಪತಿಶಾಸ್ತ್ರ ಸಂಬಂಧಿಸಿದ ಗ್ರಂಥ ವನ್ನೂ ಟ್ರೋಜನ್ ದಂಡಯಾತ್ರೆ, ಯವನ ಮಹಾವೀರ ಚರಿತ್ರೆ, ಯವನವೀರ ಕಥಾವಳಿ–ಮೊದಲಾದ ಕಥಾಸಾಹಿತ್ಯಕೃತಿಗಳನ್ನು ಬರೆದಿರುವರು.

ಕಣ್ಣುಬೇನೆಯಿಂದಾಗಿ ಕೃಷ್ಣಪ್ಪನವರು ನಿವೃತ್ತರಾಗುವ ಮೊದಲೇ ಕೆಲಸವನ್ನು ಬಿಟ್ಟು 2ನೆಯ ಮಾರ್ಚ್, 1955ರಲ್ಲಿ ಮೃತರಾದರು. (ಜಿ.ಪಿ.ಎ.)

**ಕೃಷ್ಣಪ್ಪನಾಯಕ :** ಈ ಹೆಸರಿನ ನಾಲ್ವರು ವ್ಯಕ್ತಿಗಳು ದಕ್ಷಿಣ ಭಾರತದ ವಿಜಯನಗರ ಸಾಮ್ರಾಜ್ಯದ ಕೊನೆಗಾಲದಲ್ಲಿ ಕಂಡುಬರುತ್ತಾರೆ. ಇವರಲ್ಲಿ ಇಬ್ಬರು ಮಧುರೆಯ ನಾಯಕ ಮನೆತನಕ್ಕೂ ಒಬ್ಬ ಚೆಂಜಿಯ ಪಾಳೆಯಪಟ್ಟಿಗೂ ಒಬ್ಬ ಹಾಸನ ಜಿಲ್ಲೆಯ ಮಂಜರಾಬಾದಿಗೂ ಸೇರಿದವರು.

**ಕೃಷ್ಣಪ್ಪನಾಯಕ (ಮಧುರೆ) I:** ಮಧುರೆಯ ನಾಯಕ ಮನೆತನದ ವಿಶ್ವನಾಥನಾಯಕನ ಮಗ ಮತ್ತು ಆ ಮನೆತನದ ಎರಡನೆಯ ನಾಯಕ. 1529ರಲ್ಲಿ ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ಸ್ಥಾಪಿತವಾದ ಈ ಪಾಳೆಯಪಟ್ಟಿಗೆ ಅಧಿಕಾರಿಯಾಗಿ 1564ರಿಂದ 1572ರ ತನಕ ಆಳಿದ. ಈತ ಪಟ್ಟಕ್ಕೆ ಬಂದ ಮರುವರ್ಷವೇ (1565) ಇತಿಹಾಸ ಪ್ರಸಿದ್ಧ ತಾಳಿಕೋಟೆ (ರಕ್ಕಸತಂಗಡಿ) ಕದನ ನಡೆಯಿತು. ಇವನು ವಿಜಯನಗರದ ನೆರವಿಗೆ ಕಳುಹಿಸಿದ ಸೈನ್ಯ ಯುದ್ಧಾನಂತರ ಆ ಸ್ಥಳವನ್ನು ತಲುಪಿದುದರಿಂದ ಪ್ರಯೋಜನವಾಗಲಿಲ್ಲ. ಅಲ್ಲದೆ 1565ರಲ್ಲಿ ತುಂಬಿಚ್ಚಿನಾಯಕನೆಂಬವ ಮಧುರೆಯ ನಾಯಕತ್ವವನ್ನು ಕಬಳಿಸಲು ಬಂದಿದ್ದಾಗ ಕೃಷ್ಣಪ್ಪ ನಾಯಕ ಅವನನ್ನು ಹಿಡಿಸಿ ಕೊಲ್ಲಿಸಿದರೂ, ಆತನ ಮಕ್ಕಳಿಗೆ ಕ್ಷಮಾದಾನ ನೀಡಿದ. ಕೃಷ್ಣಪ್ಪನಾಯಕ ಸಿಂಹಳ ದ್ವೀಪವನ್ನು ಮುತ್ತಿ ಅಲ್ಲಿಯ ರಾಜನನ್ನು ಸೋಲಿಸಿ, ವಿಜಯನಗರಕ್ಕೆ ಸಂದಾಯವಾಗುತ್ತಿದ್ದ ಕಪ್ಪಕಾಣಿಕೆಗಳು ತನಗೆ ಸಲ್ಲುವಂತೆ ವ್ಯವಸ್ಥೆ ಮಾಡಿದಂತೆ ತಿಳಿದುಬರುತ್ತದೆ. ಇವನು ಕೃಷ್ಣಾಪುರ ಎಂಬಲ್ಲಿ ತಿರುವೇಂಗಡನಾಥ ಸ್ವಾಮಿಯ ದೇವಾಲಯವನ್ನು ಕಟ್ಟಿಸಿ ಅದರ ಮೇಲ್ಮೆಗಾಗಿ ಅನೇಕ ಗ್ರಾಮಗಳ ಹುಟ್ಟುವಳಿಯನ್ನು ದತ್ತಿಕೊಟ್ಟ. ತನ್ನ ಪ್ರಾಂತ್ಯದಲ್ಲಿ ಸುಭದ್ರವಾದ ಆಡಳಿತವನ್ನು ಸ್ಥಾಪಿಸಿದ. ಇವನಿಗೆ ಪಾಂಡ್ಯಕುಲಸ್ಥಾಪನಾಚಾರ್ಯ ಹಾಗೂ ದಕ್ಷಿಣ ಸಮುದ್ರ ಸಾರ್ವಭೌಮ ಎಂಬ ಬಿರುದುಗಳಿದ್ದುವು.

**ಕೃಷ್ಣಪ್ಪನಾಯಕ (ಮಧುರೆ) II:** ಮಧುರೆಯ ನಾಯಕ ಮನೆತನದ ನಾಲ್ಕನೆಯ ಅಧಿಕಾರಿ; ವೀರಪ್ಪನಾಯಕನ ಹಿರಿಯ ಪುತ್ರ. ಇವನಿಗೆ ವೀರಕೃಷ್ಣ ಎಂಬ ಹೆಸರೂ ಇತ್ತು. ಇವನ ಆಳ್ವಿಕೆಯ ಕಾಲ 1595–1601. ಇವನನ್ನು ಒಂದು ಶಾಸನದಲ್ಲಿ ಪಾಂಡ್ಯಪಾರ್ಥಿವ ಕೃಷ್ಣನೃಪತಿ ಎಂದು ಕರೆಯಲಾಗಿದೆ. ಈತ ಅರವೀಡು ಮನೆತನದ ಒಂದನೆಯ ವೆಂಕಟನನ್ನು ತನ್ನ ಸಾರ್ವಭೌಮನೆಂದು ಒಪ್ಪಿಕೊಂಡಿದ್ದ.

**ಕೃಷ್ಣಪ್ಪನಾಯಕ (ಚೆಂಜಿ) :** ಚೆಂಜಿಯ ಪಾಳೆಯಪಟ್ಟಿನ ನಾಯಕ. ಇವನ ಕಾಲ ಸು.1616. ಇವನು ಪೆನುಕೊಂಡೆಯ ಶ್ರೀರಂಗನ ವಿರುದ್ಧ ನಡೆದ ಪಿತೂರಿಯಲ್ಲಿ ಪಿತೂರಿಕೋರ ಜಗರಾಯನ ಸಹಾಯಕನಾಗಿ ಭಾಗವಹಿಸಿದ್ದರಿಂದ ರಾಜ್ಯದ ಬಹುಭಾಗವನ್ನು ಕಳೆದುಕೊಂಡದ್ದಲ್ಲದೆ ಸಾಮ್ರಾಜ್ಯದ ಬಂದಿಯಾಗಿದ್ದನೆಂದೂ ಅನಂತರ ಬಿಡುಗಡೆ ಹೊಂದಿದನೆಂದೂ ತಿಳಿದುಬರುತ್ತದೆ.

**ಕೃಷ್ಣಪ್ಪನಾಯಕ (ಮಂಜರಾಬಾದ್):** 1800ರಲ್ಲಿ ಈತ ಬ್ರಿಟಿಷರ ವಿರುದ್ಧ ದಂಗೆಯನ್ನು ಎಬ್ಬಿಸಿದನೆಂದೂ ಮೈಸೂರು ಮತ್ತು ಬ್ರಿಟಿಷ್ ಸೈನ್ಯಗಳು ಇದನ್ನಡಗಿಸಿದುವೆಂದೂ ತಿಳಿದುಬರುತ್ತದೆ. (ಜಿ.ಆರ್.ಆರ್.)

**ಕೃಷ್ಣಪ್ಪ, ಬಿಡಾರಂ :** 1866–1931. ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದು ಅವರಿಂದ ಗಾನವಿಶಾರದರೆಂಬ ಬಿರುದು ಪಡೆದ ಸಂಗೀತ ಕಲಾವಿದರು. ಆಸ್ಥೆಯಿಂದ ಇವರು ಕಟ್ಟಿಸಿರುವ ರಾಮಮಂದಿರಕ್ಕೆ ಬಿಡಾರಂ ಕೃಷ್ಣಪ್ಪನವರ ರಾಮಮಂದಿರವೆಂಬ ಹೆಸರೇ ಉಳಿದು ಬಂದಿದೆ. ಕೃಷ್ಣಪ್ಪನವರ ತಂದೆ ವಿಶ್ವನಾಥಯ್ಯನವರು ಉಡುಪಿಯ ಬಳಿಯಿರುವ ನಂದಳಿಕೆ ಗ್ರಾಮದವರು. ಇವರು ಮಂಗಳೂರು ದೇಶಸ್ಥ ಬ್ರಾಹ್ಮಣರು. ಮೈಸೂರು ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಒಮ್ಮೆ ಧರ್ಮಸ್ಥಳಕ್ಕೆ ಭೇಟಿಯಿತ್ತಾಗ, ಅವರ ಗೌರವಾರ್ಥವಾಗಿ ಏರ್ಪಡಿಸಲಾಗಿದ್ದ ಯಕ್ಷಗಾನ ಮಂಡಲಿಯ ದಶಾವತಾರ ಆಟವನ್ನು ನೋಡಿ ಮೆಚ್ಚಿಕೊಂಡ ಮಹಾಸ್ವಾಮಿಗಳು ಆ ಮಂಡಲಿಯವರನ್ನು ಮೈಸೂರಿಗೆ ಬರಲು ಆಹ್ವಾನಿಸಿದರು. ಅಂತೆಯೇ ಉತ್ತಮ ಕಲಾವಿದರಾಗಿದ್ದ ವಿಶ್ವನಾಥಯ್ಯನವರು ತಮ್ಮ ಕಲಾವಿದರ ತಂಡದವರೊಂದಿಗೆ ಮೈಸೂರಿಗೆ ಬಂದು ನೆಲೆಸಿದ್ದರಿಂದ ಅವರಿಗೆ ಬಿಡಾರದವರು ಎಂಬ ಹೆಸರು ಬಂತು. ವಿಶ್ವನಾಥಯ್ಯನವರಿಗೆ ಇಬ್ಬರು ಪುತ್ರರು. ಹಿರಿಯ ಮಗ ಸುಬ್ರಾಯರು. ಕಿರಿಯ ಮಗನೇ ಕೃಷ್ಣಪ್ಪ.

ಕೃಷ್ಣಪ್ಪನವರು ಮೈಸೂರಿನಲ್ಲಿ ಜನಿಸಿದರು. ಚಿಕ್ಕಂದಿನಲ್ಲೇ ಪಿತೃ ವಿಯೋಗವಾಯಿತು. ಸಂಸಾರ ನಿರ್ವಹಣೆಯ ಜವಾಬ್ದಾರಿ ಅಣ್ಣತಮ್ಮಂದಿರ ಮೇಲೆ ಬಿತ್ತು. ಕೃಷ್ಣಪ್ಪನವರಿಗೆ ದೈವದತ್ತವಾದ ಶಾರೀರ ಸಂಪತ್ತು ವಿನಾ ಜೀವನೋಪಾಯಕ್ಕೆ ಮತ್ತಾವ ದಾರಿಯೂ ಇರಲಿಲ್ಲವಾದ ಕಾರಣ, ಉಂಛವೃತ್ತಿ ಮಾಡಿ ಸಂಸಾರ ಸಾಗಿಸಲು ನಿರ್ಧರಿಸಿ ಮೈಸೂರಿನ ಕೋಟೆ ಆಂಜನೇಯಸ್ವಾಮಿಯ ಗುಡಿಯಲ್ಲಿ ಕುಳಿತು ದೇವರನಾಮಗಳನ್ನು ಹಾಡಿ, ಭಕ್ತಾದಿಗಳು ಕೊಡುತ್ತಿದ್ದ ದಾನದಿಂದ ಉದರಂಭರಣ ಮಾಡುತ್ತಿದ್ದರು. ಒಂದು ದಿನ ಸಾಹುಕಾರ್ ತಿಮ್ಮಯ್ಯನೆಂಬವರು ಆಂಜನೇಯನ ದರ್ಶನಾ ಕಾಂಕ್ಷಿಗಳಾಗಿ ಅಲ್ಲಿಗೆ ಬಂದಾಗ ಕೃಷ್ಣಪ್ಪನವರ ದಿವ್ಯವಾದ ಶಾರೀರದಿಂದ ಹೊರಹೊಮ್ಮುತ್ತಿದ್ದ ನಾದಮಾಧುರ್ಯಕ್ಕೆ ಸಂತಸಗೊಂಡು ಅವರ ಪೂರ್ವೋತ್ತರಗಳನ್ನು ವಿಚಾರಿಸಿ, ಅವರ ಪರಿಸ್ಥಿತಿಯನ್ನರಿತು,

ಅವರಲ್ಲಿದ್ದ ಸಂಗೀತ ಪ್ರತಿಭೆಯನ್ನು ಪ್ರಕಾಶಕ್ಕೆ ತರಲು ಬಯಸಿ, ಆಗ ನಗರದ ಪ್ರಸಿದ್ಧ ವಿದ್ವಾಂಸರೆನಿಸಿದ್ದ ಕರೂರು ರಾಮಸ್ವಾಮಯ್ಯನವರ ಬಳಿ ಶಿಕ್ಷಣ ಪಡೆಯಲು ಏರ್ಪಾಡು ಮಾಡಿದರು. ಇದರಿಂದ ಕೃಷ್ಣಪ್ಪನವರ ತಾಯಿಯವರ ಇಷ್ಟಾರ್ಥ ಕೈಗೂಡಿದಂತಾಯಿತು. ಶಿಷ್ಯನ ಶಾರೀರಸೌಖ್ಯವನ್ನು ಮೆಚ್ಚಿದ ಗುರು ತಮಗೆ ತಿಳಿದ ವಿದ್ಯೆಯನ್ನು ನಿರ್ವಂಚನೆಯಿಂದ ಧಾರೆ ಎರೆದರು.

ಅನಂತರ ಕೃಷ್ಣಪ್ಪನವರು ತಮ್ಮ ವಿದ್ಯಾಭ್ಯಾಸವನ್ನು ಗಿರಿಭಟ್ಟರ ತಮ್ಮಯ್ಯ, ಮೈಸೂರು ಕರಿಗಿರಿರಾಯ ಮತ್ತು ವೀಣೆ ಶೇಷಣ್ಣನವರಲ್ಲಿ ಮುಂದುವರಿಸಿ ವಿದ್ವತ್ತನ್ನು ಸಂಪಾದಿಸಿದರು. ದಿವಾನ್ ರಂಗಾಚಾರ್ಲು, ಸಾಹುಕಾರ್ ತಿಮ್ಮಯ್ಯ ಮತ್ತು ಡಾಕ್ಟರ್ ನಂಜುಂಡರಾಯರ ಪ್ರೋತ್ಸಾಹ ಮತ್ತು ಬೆಂಬಲಗಳಿಂದ ಕೃಷ್ಣಪ್ಪನವರಿಗೆ ಮಹಾರಾಜರ ಆಸ್ಥಾನದಲ್ಲಿ ತಿಂಗಳಿಗೆ ಆರು ರೂಪಾಯಿ ವೇತನ ದೊರಕಿತು. ಅನೇಕ ವರ್ಷಗಳ ಕಾಲ ಅರಮನೆಗೆ ಸೇರಿದ ನಾಟಕ ಮಂಡಲಿಯಲ್ಲಿಯೇ ಕೃಷ್ಣಪ್ಪನವರು ಅಭಿನಯಿಸುತ್ತಾ ಇದ್ದು ಅನಂತರ ಆ ನಾಟಕ ಮಂಡಲಿಯನ್ನು ಬಿಟ್ಟು, ಸಂಗೀತ ಕಚೇರಿಗಳನ್ನು ಮಾಡಲು ಆರಂಭಿಸಿದರು. ಮೈಸೂರು ಮತ್ತು ದಕ್ಷಿಣ ಭಾರತದಲ್ಲೆಲ್ಲ ಇವರ ಖ್ಯಾತಿ ಹರಡಿತು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಇವರನ್ನು ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿ ಗಾನವಿಶಾರದ ಎಂಬ ಬಿರುದನ್ನೂ ಕೊಟ್ಟು ಸನ್ಮಾನಿಸಿದರು. ದಕ್ಷಿಣ ದೇಶದ ಸಭೆಗಳು ಮತ್ತು ಉತ್ಸವಗಳಲ್ಲಿ ಕೃಷ್ಣಪ್ಪನವರ ಕಚೇರಿ ಇದ್ದೇ ಇರುತ್ತಿತ್ತು. ಅಪಾರ ಕೀರ್ತಿ ಮತ್ತು ಹಣವನ್ನಿವರು ಕ್ರಮೇಣ ಸಂಪಾದಿಸಿದರು. ಸುಪ್ರಸನ್ನ ಮಾರುತಿಯ ಆರಾಧ್ಯದೇವರಾದ ಶ್ರೀರಾಮಚಂದ್ರನ ಮಂದಿರವೊಂದನ್ನು ಕಟ್ಟಿಸಬೇಕೆಂಬ ಹಂಬಲ ಇವರಲ್ಲಿ ಪ್ರಬಲವಾಯಿತು. ಬಹುವಾಗಿ ಶ್ರಮಿಸಿ, ತಮ್ಮ ಸರ್ವಸ್ವವನ್ನೂ ಧಾರೆ ಎರೆದು, ತಮ್ಮ ಜೀವಿತಕಾಲದಲ್ಲೇ ಭವ್ಯವಾದ ಪ್ರಸನ್ನ ಸೀತಾರಾಮ ಮಂದಿರವನ್ನು ಮೈಸೂರಿನ ಶಿವರಾಂಪೇಟೆಯಲ್ಲಿ ಕಟ್ಟಿಸಿ ಕೃತಾರ್ಥರಾದರು. ಶ್ರೀರಾಮನಲ್ಲಿ ಇವರಿಗಿದ್ದ ದೃಢಭಕ್ತಿಯ ಹೆಗ್ಗುರುತಾಗಿ, ಈ ಮಂದಿರ ಈಗಲೂ ಪ್ರಸಿದ್ಧವಾಗಿದೆ. ಇಲ್ಲಿ ಸ್ಥಳದ ಮತ್ತು ಪರಸ್ಥಳದ ವಿದ್ವಾಂಸರ ಸಂಗೀತ ಕಚೇರಿಗಳು ಪ್ರತಿವರ್ಷವೂ ಅವ್ಯಾಹತವಾಗಿ ನಡೆಯುತ್ತ ಬಂದಿವೆ.

ಕೃಷ್ಣಪ್ಪನವರು ಲಾಕ್ಷಣಿಕರಾಗಿರಲಿಲ್ಲ; ಆದರೆ ಹೆಸರಾಂತ ಲಕ್ಷ್ಯವಿದ್ವಾಂಸರಾಗಿದ್ದರು. ಆ ಕಾಲದಲ್ಲಿ ಪ್ರಚಲಿತವಾಗಿದ್ದ ಸಂಗೀತದ ಲಕ್ಷಣಗಳನ್ನು ಇವರ ಸಂಗೀತ ನಿರೂಪಿಸುವಂಥದಾಗಿತ್ತು. ಇವರು ಸಾಮಾನ್ಯವಾಗಿ, ತಮ್ಮ ಕಚೇರಿಗಳಲ್ಲಿ ಕಾಂಭೋಜಿ, ಕಲ್ಯಾಣಿ, ಶಂಕರಾಭರಣ, ಭೈರವಿ ರಾಗಗಳನ್ನೂ ತ್ಯಾಗರಾಜರ ಮತ್ತು ಸದಾಶಿವರಾಯರ ಕೆಲವು ಕೃತಿಗಳನ್ನೂ ರಾಗ, ತಾನ, ಪಲ್ಲವಿಗಳನ್ನೂ ದೇವರನಾಮಗಳನ್ನೂ ಭಾವರಸಾವೇಶದಿಂದ 4–5 ಗಂಟೆಗಳ ಕಾಲ ಹಾಡುತ್ತಿದ್ದರು. ಇವರಿಗೆ ತ್ರಿಸ್ಥಾಯಿಯಲ್ಲಿ ನುಡಿಯುವ ಅತ್ಯಂತ ಶ್ರುತಿಶುದ್ಧವಾದ, ಅದ್ಭುತವಾದ ಶಾರೀರಸಂಪತ್ತು ಇತ್ತು. ತಾಳಜ್ಞಾನ ಮತ್ತು ನಿರ್ವಹಣೆಯಲ್ಲಿವರು ತಾಳಬ್ರಹ್ಮರಾಗಿದ್ದರು.

ತಮ್ಮ ಕಚೇರಿಗಳಲ್ಲಿವರು ಚೌಕ, ವಿಳಂಬ, ಮಧ್ಯಮ, ದ್ರುತಕಾಲವೇ ಮುಂತಾದ ವೈವಿಧ್ಯವುಳ್ಳ ತಾಳಗತಿಯನ್ನು ನಿರೂಪಿಸುತ್ತಿದ್ದರು. ಪ್ರಾರಂಭದಿಂದ ಕೊನೆಯವರೆಗೂ ಒಂದೇ ಕಾಲದಲ್ಲಿ ಕಚೇರಿಯನ್ನು ನಿರ್ವಹಿಸುವ ಈಗಿನ ವಾಡಿಕೆಯನ್ನು ಇವರು ಅನುಸರಿಸುತ್ತಿರಲಿಲ್ಲ. ಯಾವುದೇ ಕಾಲಪ್ರಮಾಣದಲ್ಲಿ ಕೃತಿಗಳನ್ನೋ ಅಥವಾ ಪಲ್ಲವಿಯನ್ನೋ ಪ್ರಾರಂಭಿಸಿದರೆ ಎತ್ತಿದ ಕಾಲಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಹಾಡುವ ಅದ್ವಿತೀಯ ಸಾಮರ್ಥ್ಯ ಇವರಿಗಿತ್ತು. ಕೈಯಲ್ಲಿ ತಾಳ ಹಾಕದೆಯೇ ಸ್ವರಕಲ್ಪನೆ ಮಾಡಿ ಎಡುಪಿಗೆ ಬಂದುಬಿಡುತ್ತಿದ್ದರು. ಆಗಿನ ಅತ್ಯಂತ ಪ್ರಸಿದ್ಧ ಮೃದಂಗ ವಿದ್ವಾಂಸರಾಗಿದ್ದ ಅಳಗನಂಬಿ, ಫಾಲ್ಘಾಟ್ ಸುಬ್ಬಯ್ಯರ್

ಮತ್ತು ಬೆಂಗಳೂರು ಪಿಟೀಲ್ ತಾಯಪ್ಪ ಮುಂತಾದವರು ಇವರ ಕಚೇರಿಗೆ ಪಕ್ಕವಾದ್ಯ ನುಡಿಸಿ, ಇವರ ಅಸಾಧಾರಣವಾದ ತಾಳಜ್ಞಾನಕ್ಕೆ ಮಾರುಹೋಗಿದ್ದರು. ಇವರ ಶೈಲಿಯಲ್ಲಿ ರಾಗಲಕ್ಷಣಕ್ಕಿರಬೇಕಾದ ಗ್ರಹ, ಅಂಶ, ನ್ಯಾಸ ಮುಂತಾದ ಲಕ್ಷಣಗಳು ಶುದ್ಧವಾಗಿ ಎದ್ದು ಕಾಣುತ್ತಿದ್ದುವು. ಭಾವರಸಾವೇಶ, ಸ್ಪಷ್ಟ ಉಚ್ಚಾರ, ಅದ್ಭುತವಾದ ಶಾರೀರಗಳಿಂದ ಕೂಡಿದ ಇವರ ಸಂಗೀತ ಧ್ವನಿವರ್ಧಕವಿಲ್ಲದಿದ್ದ ಆ ಕಾಲದಲ್ಲೂ ನೂರಾರು ಜನರಿಗೆ ಕೇಳಿಸುವಂತೆ ಆನಂದದಾಯಕವಾಗಿರುತ್ತಿತ್ತು. ಇವರ ಸಂಗೀತ ಕೇವಲ ಪಾಮರರಂಜಕವಾಗಿಲ್ಲದೆ, ಪಂಡಿತರಂಜಕವೂ ಆಗಿತ್ತು. ಇವರ ಶೈಲಿಯನ್ನು ಅನುಸರಿಸಬೇಕಾದರೆ ವಿದ್ಯಾರ್ಥಿ ಒಂದು ಕಠಿಣ ತಪಸ್ಸನ್ನೇ ಆಚರಿಸಬೇಕಾಗಿತ್ತು.



ಪ್ರಸನ್ನ ಸೀತಾರಾಮ ಮಂದಿರ, ಮೈಸೂರು

ಕೃಷ್ಣಪ್ಪನವರು ಎತ್ತರವಾಗಿ, ಗಂಭೀರವಾಗಿ, ಸ್ಫುರದ್ರೂಪಿಗಳಾಗಿದ್ದರು; ಗುಣಗ್ರಾಹಿಗಳೂ ವಿದ್ವತ್ಪಕ್ಷಪಾತಿಗಳೂ ಉದಾರಿಗಳೂ ಆಗಿದ್ದರು. ದಕ್ಷಿಣ ದೇಶದಲ್ಲಿ ಸಂಚಾರ ಮಾಡಿದ ಸಂದರ್ಭಗಳಲ್ಲಿ ಸಂಪ್ರದಾಯವನ್ನು ಪೋಷಿಸಿಕೊಂಡು ಬಂದಿದ್ದ ಅನೇಕ ವಿದ್ವಾಂಸರಿಂದ ಹಲವಾರು ವಿಷಯಗಳನ್ನಿವರು ಗ್ರಹಿಸಿದ್ದರು. ಮೈಸೂರಿನ ಕೀರ್ತಿಯನ್ನು ಹರಡಿ, ಸದಾಶಿವರಾಯರ ಕೃತಿಗಳು ಮತ್ತು ದೇವರನಾಮಗಳನ್ನು ಸಂಗೀತ ಪ್ರಪಂಚಕ್ಕೆ ಪರಿಚಯ ಮಾಡಿಕೊಟ್ಟ ಕೀರ್ತಿ ಕೃಷ್ಣಪ್ಪನವರದು. ಬಡವರೂ ದೀನರೂ ಆದ ಸಂಗೀತಗಾರರಿಗೆ ಇವರು ಉದಾರವಾಗಿ ಸಹಾಯ ಮಾಡುತ್ತಿದ್ದರು. ಇವರಿಗೆ ಅಧಿಕ ಸಂಖ್ಯೆಯಲ್ಲಿ ಶಿಷ್ಯರಿದ್ದರು. ಮನಬಿಚ್ಚಿ ಪಾಠ ಹೇಳುವುದೆಂದರೆ ಇವರಿಗೆ ಪರಮಾನಂದ. ಇವರ ಪಾಠಕ್ರಮವೂ ಬಹು ಕಠಿಣವಾಗಿತ್ತು; ಸ್ವಲ್ಪ ತಪ್ಪು ಮಾಡಿದರೂ ಸಹಿಸುತ್ತಿರಲಿಲ್ಲ. ಶಿಷ್ಯನಾದವ ಇವರಂತೆಯೇ ನಾದೋಪಾಸನೆಯ ಕಠಿಣ ವ್ರತವನ್ನು ಮಾಡಬೇಕಾಗಿತ್ತು. ಈ ಹಾದಿಯಲ್ಲಿ ತಮ್ಮ ದಿಟ್ಟತನದಿಂದ ಮುಂದುವರಿದವರೆಂದರೆ ಇವರ ಶಿಷ್ಯಶ್ರೇಷ್ಠರಾದ ಸಂಗೀತರತ್ನ ಟಿ. ಚೌಡಯ್ಯನವರು. ತಮ್ಮ ಅಮೋಘ ಪಿಟೀಲುವಾದನದಿಂದ ಚೌಡಯ್ಯನವರು ತಮ್ಮ ಗುರುಗಳ ಮನವನ್ನೇ ಸೂರೆಗೊಂಡು ಅವರಿಗೆ ಪಕ್ಕವಾದ್ಯವನ್ನು ನುಡಿಸಲಾರಂಭಿಸಿದರು. ಕೊನೆಗೆ ಈ ಗುರುಶಿಷ್ಯರ ಜೋಡಿ ಅತ್ಯಂತ ಪ್ರಸಿದ್ಧಿ ಪಡೆಯಿತು(**ನೋಡಿ– ಚೌಡಯ್ಯ,– ಟಿ**).

ತಮ್ಮಂತೆಯೇ ಇವರು ಇನ್ನೂ ಕೆಲವು ಜನ ಉತ್ತಮಮಟ್ಟದ ಕಲಾವಿದರನ್ನು ತಯಾರು ಮಾಡಿದರು. ಗಾನವಿಶಾರದ ಬಿ. ದೇವೇಂದ್ರಪ್ಪ, ಸಂಗೀತ ವಿದ್ಯಾಸಾಗರ ಆರ್.ಆರ್. ಕೇಶವಮೂರ್ತಿ, ಗಾನಕಲಾಸಿಂಧು ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ಆಸ್ಥಾನ ವಿದ್ವಾನ್ ಎ.ಎಸ್. ಶಿವರುದ್ರಪ್ಪ, ವಿದ್ವಾಂಸರಾದ ಎ.ಕೆ. ಸುಬ್ಬರಾವ್. ಟಿ. ಗುರುರಾಜಪ್ಪ, ಟಿ. ಪುಟ್ಟಸ್ವಾಮಯ್ಯ; ಮಹಿಳೆಯರ ಪೈಕಿ ಬೆಂಗಳೂರು ನಾಗರತ್ನಮ್ಮ, ಚಂದ್ರಮುಖಿ, ಶಾರದಮ್ಮ–ಮುಂತಾದವರು ಇವರ ಶಿಷ್ಯರು. ನಾಗರತ್ನಮ್ಮನವರು ತಮ್ಮ ಗುರುಗಳ ಆದೇಶದಂತೆ ತಿರುವಾಯೂರಿನಲ್ಲಿ ತ್ಯಾಗರಾಜರ ಸಮಾಧಿಯನ್ನು ಜೀರ್ಣೋದ್ಧಾರ ಮಾಡಿದರು. ಈ ಪ್ರೇರೇಪಣೆ ಕೃಷ್ಣಪ್ಪನವರಲ್ಲಡಗಿದ್ದ ಭಕ್ತಿ ಮತ್ತು ಹೃದಯ ವೈಶಾಲ್ಯದ ದ್ಯೋತಕವಾಗಿದೆ.

ಕೃಷ್ಣಪ್ಪನವರು ಆ ಕಾಲದಲ್ಲಿ ಮೈಸೂರಿನ ಕೀರ್ತಿಯನ್ನು ಹರಡಿದ ಅದ್ವಿತೀಯ ಗಾಯಕರಾಗಿದ್ದುದಲ್ಲದೆ ವಾಗ್ಗೇಯಕಾರರೂ ಆಗಿದ್ದರು. ಹಲವು ಕೃತಿಗಳನ್ನು ಶ್ರೀಕೃಷ್ಣ ಎಂಬ ಸ್ವನಾಮಾಂಕಿತದಲ್ಲಿವರು ರಚಿಸಿದ್ದಾರೆ. (ವಿ.ಆರ್.ಆರ್.)

**ಕೃಷ್ಣಮಾಚಾರ್ಯ, ಶ್ರೀರಂಗಪಟ್ಟಣದ :** ದ್ರಾವಿಡ ಭಾಷಾವಿಜ್ಞಾನ ಜನಕನೆಂದು ಪ್ರಸಿದ್ಧನಾಗಿರುವ ಫ್ರಾನ್ಸಿಸ್ ವೈಟ್ ಎಲ್ಲಿಸ್‌ನನ್ನು ಬಿಟ್ಟರೆ ಆ ಸಾಲಿನಲ್ಲಿ ಬರುವ ಎರಡನೆಯ ವ್ಯಕ್ತಿಯೇ ಕೃಷ್ಣಮಾಚಾರ್ಯ. ಈತ ಹೊಸಗನ್ನಡ ನುಡಿಗನ್ನಡಿ ಎಂಬ ವ್ಯಾಕರಣದ ಕರ್ತೃ. ತನ್ನ ಪುಸ್ತಕದ ಮುನ್ನುಡಿಯಲ್ಲಿ ಈತ ತನ್ನನ್ನು ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ ಎಂದು ಹೇಳಿಕೊಂಡಿದ್ದಾನೆ. ಮೈಸೂರಿಗೆ 16 ಕಿ.ಮೀ ದೂರದಲ್ಲಿರುವ, ಟಿಪ್ಪುಸುಲ್ತಾನನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವೇ ಈತನ ಹುಟ್ಟೂರು. ಮೈಸೂರಿನ ಸುತ್ತಮುತ್ತಲ ಪ್ರದೇಶವನ್ನು ಅಚ್ಚಗನ್ನಡ ನಾಡೆಂದು ಕರೆದು ಅಲ್ಲಿಯ ಹಿರಿಯರು ಮಾತನಾಡುವ ಕನ್ನಡವನ್ನು ಆಧಾರವಾಗಿಟ್ಟುಕೊಂಡು ಈ ಗ್ರಂಥವನ್ನು ಬರೆದಿರುವುದಾಗಿ ಹೇಳಿಕೊಂಡಿದ್ದಾನೆ. ಹೆಸರನ್ನು ನೋಡಿದರೆ ಈತ ಶ್ರೀವೈಷ್ಣವ ಬ್ರಾಹ್ಮಣನೆಂದು ಗೊತ್ತಾಗುತ್ತದೆ. ತಮಿಳು ಈತನ ಮಾತೃಭಾಷೆ ಮೊದಲು ವಿದ್ಯಾರ್ಥಿಯಾಗಿ ಅನಂತರ ಪ್ಲೀಡರ್ ಆಗಿ ಮದ್ರಾಸಿನಲ್ಲಿ ಬಹಳ ಕಾಲವಿದ್ದುದರಿಂದ ಈತ ತಮಿಳಿನಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಗಳಿಸಿಕೊಂಡಿರಬೇಕು. ಅದಕ್ಕೆ ಈತನ ಪುಸ್ತಕವೇ ಸಾಕ್ಷಿಯಾಗಿದೆ. ಜೊತೆಗೆ ಈತನ ಹೇಳಿಕೆಗಳನ್ನು ನೋಡಿದರೆ ಇವನಿಗೆ ಮಲಯಾಳ, ತುಳು, ಸಂಸ್ಕೃತ ಮುಂತಾದ ಭಾಷೆಗಳ ಜ್ಞಾನವೂ ಇದ್ದಂತೆ ಕಾಣುತ್ತದೆ.

ಶಬ್ದೋತ್ಪತ್ತಿ ಕ್ರಮವು 'ಶಬ್ದಮಂಜರಿ', 'ಧಾತುಮಂಜರಿ'ಗಳಲ್ಲಿ ಹೇಳಲ್ಪಡುವುದು– ಎಂದು ತನ್ನ ಗ್ರಂಥದ ಮುನ್ನುಡಿಯಲ್ಲಿ ಹೇಳಿಕೊಂಡಿರುವುದರಿಂದ ಈತ ಇನ್ನೆರಡು ಗ್ರಂಥಗಳನ್ನು ಬರೆದಿರಬಹುದೆಂದು ಊಹಿಸಬಹುದು. ಹಳಗನ್ನಡ, ನುಡಿಗನ್ನಡಿ, ಹೊಸಗನ್ನಡ ನುಡಿಗನ್ನಡಿ, ಶಬ್ದಮಂಜರಿ, ಧಾತುಮಂಜರಿ ಎಂಬ ಗ್ರಂಥಗಳನ್ನು ಈತ ಬರೆದಿದ್ದಾನೆ ಎಂದು ಕವಿಚರಿತೆಕಾರರ ಅಭಿಪ್ರಾಯ. ಈಗ ದೊರೆತಿರುವ ಗ್ರಂಥವೊಂದನ್ನು ಬಿಟ್ಟರೆ ಉಳಿದವು ದೊರೆತಿಲ್ಲ.

ಈಗ ದೊರೆತಿರುವ ಈತನ ಗ್ರಂಥವಾದ ಹೊಸಗನ್ನಡ ನುಡಿಗನ್ನಡಿ ಎಂಬುದು ಹೊಸಗನ್ನಡವನ್ನು ಕುರಿತಾಗಿ ಕನ್ನಡದಲ್ಲಿ ಬರೆದಿರುವ ವ್ಯಾಕರಣ ಗ್ರಂಥ. ಹೊಸಗನ್ನಡ ವ್ಯಾಕರಣವನ್ನು ಕುರಿತು ಈತ ಪುಸ್ತಕವನ್ನು ಬರೆಯುವುದಕ್ಕೆ ಮೊದಲು ಇಂಗ್ಲಿಷಿನಲ್ಲಿ ವಿಲಿಯಂ ಕ್ಯಾರಿ ಎಂಬಾತ ಮೊದಲನೆಯದಾಗಿ 1817ರಲ್ಲಿ ಕನ್ನಡ ಭಾಷೆಯ ಒಂದು ವ್ಯಾಕರಣವನ್ನು ಬರೆದಿದ್ದ. ಇದು ಸರಾಂಪುರದಲ್ಲಿ ಅಚ್ಚಾಗಿದೆ. ಎರಡನೆಯದಾಗಿ ಜಾನ್‌ಮೆಕ್ಕರಲ್ ಇಂಗ್ಲಿಷಿನಲ್ಲಿಯೇ ಮತ್ತೊಂದು ಕನ್ನಡ ಭಾಷೆಯ ವ್ಯಾಕರಣವನ್ನು 1820ರಲ್ಲಿ ಬರೆದಿದ್ದ. ಇದು ಮದ್ರಾಸಿನಲ್ಲಿ ಅಚ್ಚಾಯಿತು. ಇದೇ ಪಂಕ್ತಿಯಲ್ಲಿ ಹೊಸಗನ್ನಡದ ಬಗ್ಗೆ ಬಂದ ಮೂರನೆಯ, ಆದರೆ ಕನ್ನಡದಲ್ಲಿ ಮೊದಲನೆಯ, ಗ್ರಂಥ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನ ಹೊಸಗನ್ನಡ ನುಡಿಗನ್ನಡಿ. ಇದು ಕಾಲ್ಡ್‌ವೆಲ್ಲನ ದ್ರಾವಿಡಭಾಷೆಗಳ ತೌಲನಿಕ ವ್ಯಾಕರಣ ಗ್ರಂಥ ಬರುವುದಕ್ಕೆ 18 ವರ್ಷಗಳ ಮೊದಲು ದೇಶ ಭಾಷೆಯಲ್ಲಿ ಹೊರಬಂತು. ಆಗ ಪ್ರಚಾರದಲ್ಲಿದ್ದ ಪದ್ಧತಿಯನ್ನನುಸರಿಸಿ ಪ್ರಶ್ನೋತ್ತರರೂಪದಲ್ಲಿ ಈ ಗ್ರಂಥವನ್ನು ಬರೆಯಲಾಗಿದೆ. ಲೇಖಕ ಎಲ್ಲಿಸನ ಪ್ರಭಾವಕ್ಕೊಳಗಾಗಿರಬೇಕು. ಗ್ರಂಥದ ಮೊದಲ ಮುದ್ರಣದ ಪ್ರತಿಗಳು ಸಂಪೂರ್ಣವಾಗಿ ಮುಗಿದುಹೋಗಿವೆ. ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಒಂದು ಪ್ರತಿಮಾತ್ರ ಇದೆ. ಅದರಲ್ಲಿಯೂ ಮುಖಪುಟಗಳು ಕಾಣೆಯಾಗಿವೆ. ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿ ಮುಖಪುಟವಿರುವ ಪ್ರತಿಯೊಂದಿದೆ. ಪ್ರತಿಗಳು ತೀರ ದುರ್ಲಭವಾದುದರಿಂದ ಮಂಗಳೂರಿನ ಬಾಸೆಲ್ ಮಿಷನ್ ಅಂಡ್ ಟ್ರ್ಯಾಕ್ಟ್ ಡಿಪಾಸಿಟರಿ ಅವರು 1882ರಲ್ಲಿ ಎರಡನೆಯ ಮುದ್ರಣವನ್ನು ತಂದರು. ಈ ಮುದ್ರಣದ ಪ್ರತಿಗಳೂ ಈಗ ಸಿಗುವುದು ಕಠಿಣವಾಗಿದೆ. ಎರಡನೆಯದು ಮೊದಲ ಮುದ್ರಣದ ಪಡಿಯಚ್ಚು. ಮೊದಲ ಮುದ್ರಣದ ಕೆಲವು ಅಚ್ಚುದೋಷಗಳನ್ನು ಸರಿಪಡಿಸಲಾಗಿದೆ. ಹೊಸ ಕಾಲದ ವಿರಾಮ ಚಿಹ್ನೆಗಳನ್ನು ಬಳಸಲಾಗಿದೆ.

ಈ ಗ್ರಂಥವನ್ನು ಬರೆಯುವ ಕಾಲಕ್ಕೆ ಲೇಖಕ ಚೆನ್ನಪಟ್ಟಣದಲ್ಲಿ ಅಂದರೆ ಈಗಿನ ಮದ್ರಾಸಿನಲ್ಲಿ ಸದರದಾಲತ್ತು ಕೋರ್ಟಿನಲ್ಲಿ ವಕೀಲನಾಗಿಯೂ ಪಂಡಿತ ಹುದ್ದೆಗೆ ಬೇಕಾದ ಯೋಗ್ಯತಾಪತ್ರಿಕೆಯನ್ನು ಪಡೆದವನಾಗಿಯೂ ಇದ್ದು ಫೋರ್ಟ್ ಸೇಂಟ್ ಜಾರ್ಜ್ ಕಾಲೇಜಿನಲ್ಲಿ (ಎಲ್ಲಿಸ್ ಅಧಿಕಾರಿಯಾಗಿದ್ದ ಕಾಲೇಜು) ಪಂಡಿತ ವಿದ್ಯಾರ್ಥಿಯ ಉದ್ಯೋಗದಲ್ಲಿದ್ದ. ಆಗ ಆ ಕಾಲೇಜು ಬೋರ್ಡಿನ ಕಾರ್ಯದರ್ಶಿಯಾಗಿದ್ದ ಕ್ಯಾಪ್ಟನ್ ಹಾರ್ಕಿನ್ 'ಇಂಗ್ಲಿಷೂ ಕನ್ನಡವೂ ತಿಳಿಯದ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವ ಹಾಗೆ ಕನ್ನಡದಲ್ಲಿ ಪ್ರಶ್ನೋತ್ತರ ರೂಪವಾಗಿ ಒಂದು ವ್ಯಾಕರಣವನ್ನು ಬರೆಯುವಂತೆ' ಸೂಚಿಸಿದ್ದರಿಂದ ಈ ಗ್ರಂಥವನ್ನು ಬರೆದುದಾಗಿ ಹೇಳಿಕೊಂಡಿದ್ದಾನೆ. ಆದರೆ ಹಾರ್ಕಿನ್ ತ್ವರೆಯಾಗಿ ಸ್ವದೇಶಕ್ಕೆ ಹೊರಟುಹೋದುದರಿಂದ ಪುಸ್ತಕ ಹೊರಗೆ ಬರಲು ಸಾಧ್ಯವಾಗಲಿಲ್ಲ. ಕೆಲಕಾಲದ ಮೇಲೆ ಸಿವಿಲ್ ಉದ್ಯೋಗಸ್ಥ ಜಾನ್‌ವಾಕರ್ ಸ್ವತಃ ಸಂಸ್ಕೃತ, ಕನ್ನಡ, ದ್ರಾವಿಡ, ಹಿಂದೂಸ್ಥಾನಿ ಮುಂತಾದ ದೇಶ ಭಾಷೆಗಳಲ್ಲಿ ಶ್ರಮವುಳ್ಳವನೂ ದೇಶಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದವನೂ ಧನಸಹಾಯಮಾಡಿ ಇತರರಿಂದ ಕೃತಿರಚನೆ ಮಾಡಿಸಿದವನೂ ಆದುದರಿಂದ, ಕೃಷ್ಣಮಾಚಾರ್ಯನ ವ್ಯಾಕರಣ ಗ್ರಂಥದ ಹಸ್ತಪ್ರತಿಯನ್ನು ಅಮೂಲಾಗ್ರವಾಗಿ ಓದಿ ಉಪಯುಕ್ತ ಗ್ರಂಥವೆಂದು ಕಂಡುಬಂದ ಮೇಲೆ ಅದರ ಪ್ರಕಟಣೆಯ ಭಾರವನ್ನು ಹೊತ್ತು ಪುಸ್ತಕ ಹೊರಬರುವಂತೆ ಮಾಡಿದುದರಿಂದ 1938ರಲ್ಲಿ ಗ್ರಂಥ ಅಚ್ಚಾಗಿ ಹೊರಬಂತು.

ಅಚ್ಚಗನ್ನಡ ದೇಶದಲ್ಲಿರುವ ತನ್ನ ಕಾಲದ ಹಿರಿಯವರು ಮಾತನಾಡುವ ಹೊಸಗನ್ನಡವನ್ನು ಆಧರಿಸಿ ಈ ಗ್ರಂಥವನ್ನು ಬರೆದಿದ್ದೇನೆಂದು ಗ್ರಂಥದಲ್ಲಿ ಲೇಖಕ ಹೇಳಿಕೊಂಡಿದ್ದಾನೆ. ಗ್ರಂಥದಲ್ಲಿ ಗ್ರಾಮ್ಯ ಪದಗಳನ್ನು ಧಾರಾಳವಾಗಿ ಬಳಸಲಾಗಿದೆ. ಉದಾ: ತಿನ್ತಾನೆ, ಬಂತು ಇತ್ಯಾದಿ. ಸಂಧಿಪದಗಳಲ್ಲಿ–ಓಡ್ಹೋದ್ನು, ಕೆಟ್ಹೋಯಿತು ಇತ್ಯಾದಿ. ಕೆಲವೆಡೆ ಹಳೆಯ ರೂಪಗಳೂ ಸಿಗುತ್ತವೆ. ಉದಾ: ಹನ್ನಿಬ್ಬರ (12 ಎಂಬಲ್ಲಿ) ಅಗಳ್ತೆ, ಕಾಲುರಿಚ–ಇತ್ಯಾದಿ. ಶೀನೀರು, ಅನುಸರಿಶಿ ಮುಂತಾದ ಪ್ರಯೋಗಗಳೂ ಕೆಲವೆಡೆ ಬಂದಿವೆ.

ಈತ ತನ್ನ ವ್ಯಾಕರಣವನ್ನು ಕೇಶಿರಾಜನ ಶಬ್ದಮಣಿದರ್ಪಣದ ಮಾದರಿಯಲ್ಲಿಯೇ ಬರೆದಿದ್ದಾನೆ. ತನ್ನ ಕೃತಿಯಲ್ಲಿ ಭಟ್ಟಾಕಳಂಕನನ್ನು ಹೆಸರಿಸಿದ್ದಾನೆ. ಆದರೆ ನಾಗವರ್ಮನನ್ನು ಮಾತ್ರ ನೆನೆದಿಲ್ಲ. ಕನ್ನಡ ವೈಯಾಕರಣಿಗಳು ಹಿಂದಿನವರನ್ನು ಸ್ಮರಿಸುವಂತೆ ಈತ ತನಗಿಂತ ಹಿಂದಿನ ವೈಯಾಕರಣನಾದ ಜಾನ್ ಮೆಕ್ಕರೆಲ್ ಪುಸ್ತಕವನ್ನು ಹೆಸರಿಸುತ್ತಾನೆ, ಆದರೆ ವಿಲಿಯಂ ಕ್ಯಾರಿಯನ್ನು ಹೆಸರಿಸುವುದಿಲ್ಲ. ಗ್ರಂಥದಲ್ಲಿ ಹತ್ತು ಅಧ್ಯಾಯಗಳಿವೆ. 1 ಸಂಜ್ಞಾಪ್ರಕರಣ, 2 ಸಂಧಿ ಪ್ರಕರಣ, 3 ಶಬ್ದ ಪ್ರಕರಣ, 4 ಅಖ್ಯಾತ ಪ್ರಕರಣ, 5 ಕೃದಂತ ಪ್ರಕರಣ, 6 ತದ್ಧಿತ ಪ್ರಕರಣ, 8 ತದ್ಭವ ಪ್ರಕರಣ, 9 ಸಮಾಸ ಪ್ರಕರಣ ಮತ್ತು 10 ಪ್ರಯೋಗ ಪ್ರಕರಣ. ಈ ಒಂದೊಂದು ಪ್ರಕರಣದಲ್ಲೂ ಪಾರಿಭಾಷಿಕ ಪದಗಳಿಗೆ ಇಂಗ್ಲಿಷ್ ಸಮಾನಪದಗಳನ್ನು ಕೊಡಲಾಗಿದೆ. ತತ್ಸಮ, ತದ್ಭವಗಳನ್ನು ಕುರಿತು ಹೇಳುವಾಗ ಕೇಶಿರಾಜ, ಭಟ್ಟಾಕಳಂಕರಂತೆ ಈ ಶಬ್ದಗಳು ಕೇವಲ ಸಂಸ್ಕೃತದಿಂದ ಮಾತ್ರ ಕನ್ನಡಕ್ಕೆ ಬಂದುವು ಎಂದಷ್ಟೇ ಹೇಳದೆ, ದ್ರಾವಿಡ ಭಾಷೆಯಿಂದಲೂ ಬಂದವು ಎಂದು ಹೇಳಲಾಗಿದೆ.

ಹಿಂದಿನ ವೈಯಾಕರಣಿಗಳಂತೆ ಶಬ್ದಗಳನ್ನು ತತ್ಸಮ, ತದ್ಭವ, ದೇಶ್ಯಗಳೆನ್ನದೆ, ಅನ್ಯದೇಶ್ಯ, ಗ್ರಾಮ್ಯ ಶಬ್ದಗಳನ್ನೂ ಪಟ್ಟಿಹಾಕಲಾಗಿದೆ.

ನಾಗವರ್ಮ, ಕೇಶಿರಾಜ, ಭಟ್ಟಾಕಳಂಕರು ಹಳಗನ್ನಡದ, ಅದರಲ್ಲೂ ಗ್ರಂಥಸ್ಥ ಭಾಷೆಯ, ವ್ಯಾಕರಣವನ್ನು ಬರೆದಂತೆ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ 19ನೆಯ ಶತಮಾನದಲ್ಲಿ ಹೊಸಗನ್ನಡದ, ಅಚ್ಚಗನ್ನಡ ದೇಶದಲ್ಲಿ ಆಗಿನ ಹಿರಿಯರು ಮಾತನಾಡುತ್ತಿದ್ದ ಕನ್ನಡ ಭಾಷೆಯ ವ್ಯಾಕರಣವನ್ನು ಬರೆದಿದ್ದಾನೆ. (ಬಿ.ಎಸ್.ಸಿ.)

**ಕೃಷ್ಣಮಾಚಾರ್ಲು, ಸಿ.ಆರ್. :** 1888–1947. 1942 ರಿಂದ 1947ರ ತನಕ ಭಾರತ ಸರ್ಕಾರದ ಶಾಸನ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದವರು. ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಗಂಗವರಂ ಗ್ರಾಮದಲ್ಲಿ ಜನ್ಮ ತಾಳಿದ ಕೃಷ್ಣಮಾಚಾರ್ಲು ಅವರು ಭಾರತ ಸರ್ಕಾರದ ಶಾಸನ ಇಲಾಖೆ ಸೇರಿ, ಎಚ್.ಕೃಷ್ಣಶಾಸ್ತ್ರಿಯವರ ಸಹಾಯಕರಾಗಿ ದುಡಿದರು. 1925ರಲ್ಲಿ ಆ ಇಲಾಖೆಯ ಸಹಾಯಕ ಸೂಪರಿಟೆಂಡೆಂಟರೂ 1931ರಲ್ಲಿ ಸೂಪರಿಂಟೆಂಡೆಂಟರೂ ಆಗಿ 1942ರಲ್ಲಿ ಆ ಇಲಾಖೆಯ ಮುಖ್ಯಾಧಿಕಾರಿಯಾದರು (ಗವರ್ನ್‌ಮೆಂಟ್ ಎಪಿಗ್ರಫಿಸ್ಟ್ ಫಾರ್ ಇಂಡಿಯ).

ಕೃಷ್ಣಮಾಚಾರ್ಲು ಅವರು ಸಂಸ್ಕೃತ, ತೆಲುಗು, ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಅಪಾರ ವಿದ್ವತ್ತನ್ನು ಗಳಿಸಿಕೊಂಡಿದ್ದರು. 1931ರಿಂದ ಅವರು ಸಂಪಾದಿಸುತ್ತಿದ್ದ ದಕ್ಷಿಣ ಭಾರತದ ಶಾಸನಗಳನ್ನು ಕುರಿತ ವಾರ್ಷಿಕ ವರದಿಗಳು(ಆನ್ಯುಯಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ) ಅವರ ಭಾಷಾಜ್ಞಾನಕ್ಕೂ ಇತಿಹಾಸ ದೃಷ್ಟಿಗೂ ವಿಚಾರದಕ್ಷತೆಗೂ ನಿದರ್ಶನಗಳು. ಅವರು ಪಲ್ಲವರ ಇತಿಹಾಸಕ್ಕೆ ಆಧಾರವಸ್ತುಗಳಾದ ಅನೇಕ ತಾಮ್ರಶಾಸನಗಳನ್ನು ಪತ್ತೆ ಹಚ್ಚಿದರು. ಶಾಸನ ಇಲಾಖೆಯ ತ್ರೈಮಾಸಿಕವಾದ ಎಪಿಗ್ರಾಫಿಯ ಇಂಡಿಕಾದ ಪುಟಗಳಲ್ಲಿ ಪ್ರಕಟವಾಗಿರುವ 13 ಲೇಖನಗಳೂ ಕರ್ಣಾಟಕದ ನಾಗಾವಿಯ ಶಾಸನಗಳನ್ನು ಕುರಿತ (ಹೈದರಾಬಾದ್ ಆರ್ಕಿಯೊಲಾಜಿಕಲ್ ಸೀರೀಸ್, ನಂ.8) ಮತ್ತು ಕೊಪ್ಪಳದ ಶಾಸನಗಳ ಬಗೆಗಿನ (ಅದೇ ಮಾಲೆಯ ನಂ.12) ಪ್ರಬಂಧಗಳೂ ಅವರ ವಿದ್ವತ್ಪೂರ್ಣವೂ ಸಂಶೋಧನಾತ್ಮಕವೂ ಆದ ಕೃತಿಗಳ ಪೈಕಿ ಕೆಲವು.

ಸಂಶೋಧನ ಕ್ಷೇತ್ರದಲ್ಲಿ ಅವರು ಸಾಧಿಸಿದ ಪ್ರಗತಿಗೆ ಮೆಚ್ಚಿ ಅಂದಿನ ಬ್ರಿಟಿಷ್ ಸರ್ಕಾರ ಇವರಿಗೆ ರಾವ್ ಬಹದ್ದೂರ್ ಬಿರುದನ್ನು ನೀಡಿ ಗೌರವಿಸಿತು. (ಕೆ.ವಿ.ಆರ್.)

**ಕೃಷ್ಣಮೂರ್ತಿ ಪುರಾಣಿಕ:** 1911-85. ಕನ್ನಡದ ಜನಪ್ರಿಯ ಕಾದಂಬರಿಕಾರರು. 1911, ಸೆಪ್ಟೆಂಬರ್ 5ರಂದು ಬಿಜಾಪುರ ಜಿಲ್ಲೆಯ ಬಿಳಗಿಯಲ್ಲಿ ಜನಿಸಿದರು. ತಂದೆ ತಮ್ಮಣ್ಣ ಭಟ್ಟ, ತಾಯಿ ಲಕ್ಷ್ಮೀಬಾಯಿ. ಪುರಾಣಿಕರು ಮುಲ್ಕಿ ಪರೀಕ್ಷೆ ಮುಗಿಸಿ ಬಾಗಲಕೋಟೆಯ ಬಸವೇಶ್ವರ ಪ್ರೌಢಶಾಲೆಯಲ್ಲಿ ಓದು ಮುಂದುವರಿಸಿದರು. ಆಗಲೇ ಇವರು ಕವನ ರಚಿಸತೊಡಗಿದ್ದರು. ಇವರ ಪ್ರತಿಭೆಯನ್ನು ಯಲಗುರ್ದರಾವ್ ಧಾರವಾಡಕರರು ಗುರುತಿಸಿ ಇವರನ್ನು ಪ್ರೋತ್ಸಾಹಿಸಿದರು. ಮಂಗಳವೇಡೆ ಶ್ರೀನಿವಾಸರಾಯರು ಪ್ರಕಟಿಸುತ್ತಿದ್ದ 'ಕನ್ನಡಿಗ' ಪತ್ರಿಕೆಗೂ ಅಲ್ಲಿಂದಲೇ ಹೊರಡುತ್ತಿದ್ದ 'ಕರ್ನಾಟಕ ವೈಭವ'ಕ್ಕೂ ಇವರು ಲೇಖನ ಬರೆಯುತ್ತಿದ್ದರು. ಆಗ ಇವರು ಅನೇಕ ರಾಷ್ಟ್ರಪ್ರೇಮದ ಕವನಗಳನ್ನು ರಚಿಸತೊಡಗಿದ್ದರು. ಗೆಳೆಯರೊಂದಿಗೆ ಬಲಭೀಮ ವಾಚನಾಲಯ ಕಟ್ಟಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮ ಆಗ ಬಿರುಸಾಗತೊಡಗಿತ್ತು. ರಾಷ್ಟ್ರೀಯ ಭಾವನೆಯಿಂದ ಉದ್ದೀಪಿತರಾದ ಇವರು ಶಾಲೆಯಲ್ಲಿ ರಾಷ್ಟ್ರೀಯ ವಿಚಾರ ಜಾಗೃತಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಶಾಲೆಯಲ್ಲಿ ತೂಗುಹಾಕಿದ್ದ ಜಾರ್ಜ್ ಚಕ್ರವರ್ತಿ ಮತ್ತು ವಿಕ್ಟೋರಿಯ ರಾಣಿಯ ಚಿತ್ರಗಳನ್ನು ಇವರು ತೆಗೆದುಹಾಕಿ ಗಾಂಧೀಜಿ ಮತ್ತು ನೆಹರೂ ಚಿತ್ರಗಳನ್ನು ತೂಗು ಹಾಕಿ ಇನ್‌ಸ್ಪೆಕ್ಟರ್‌ರ ಅಸಮಾಧಾನಕ್ಕೆ ಕಾರಣರಾದರು. ಜಾರ್ಜ್ ಚಕ್ರವರ್ತಿಯ ಚಿತ್ರವನ್ನು ಸುಟ್ಟು ಹಾಕಲಾಗಿದೆಯೆಂಬ ದೂರು ಪೋಲಿಸರನ್ನು ಮುಟ್ಟಿತು. ಅವರು ಪುರಾಣಿಕರನ್ನು ದಸ್ತಗಿರಿ ಮಾಡಿದರು. ಜಾರ್ಜರ ಚಿತ್ರವನ್ನು ಸುಟ್ಟು ಹಾಕಲಿಲ್ಲವೆಂದು ಶಾಲೆಯ ಮುಖ್ಯೋಪಾಧ್ಯಾಯರಾದ ಎಚ್.ಎಫ್. ಕಟ್ಟಿಮನಿಯವರು ಸಾಕ್ಷಿ ಹೇಳಿ ಇವರನ್ನು ಬಿಡಿಸಿದರು.

ಇವರು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಇವರು ಗೆಳೆಯರನ್ನು ಕೂಡಿಸಿ ರಾಷ್ಟ್ರಭಕ್ತಿಯ ಹಾಡು ಹಾಡಿ ಕೊನೆಯಲ್ಲಿ ಭಾರತ ಮಾತಾ ಕಿ ಜೈ ಎಂದು ಘೋಷಣೆ ಕೂಗಿಸುತ್ತಿದ್ದರು. ಒಂದು ದಿನ ಪೊಲೀಸ್ ಸಬ್‌ಇನ್‌ಸ್ಪೆಕ್ಟರರು ಪುರಾಣಿಕರ ವರ್ತನೆಯ ಬಗ್ಗೆ ಅವರ ತಂದೆಗೆ ದೂರು ನೀಡಿದರು. ಇಂಥ ನಡತೆಯನ್ನು ತಿದ್ದಿಕೊಳ್ಳದಿದ್ದರೆ ಬಂಧಿಸುವುದಾಗಿ ಎಚ್ಚರಿಸಿದರು. ಆದರೆ ಪುರಾಣಿಕರು ಇದಕ್ಕೆ ಹೆದರಲಿಲ್ಲ. ಸ್ವಾತಂತ್ರ್ಯ ಯೋಧ ಹನುಮಂತರಾವ್ ಕೌಜಲಗಿಯವರ ಸಂಪರ್ಕ ಪಡೆದು ಅವರೊಂದಿಗೆ ಕೆರೂರು ಬಳಿಯ ಮುಗುಟಗೇರಿಯಲ್ಲಿ ಸೇಂದಿಗಿಡ (ಈಚಲುಮರ) ಕಡಿಯುವ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಸತ್ಯಾಗ್ರಹ ಮಾಡಿ ದಣಿದ ಹುಡುಗರು ಮನೆ ಮನೆಗೆ ಹೋಗಿ ಅನ್ನ ಬೇಡಿ ತಂದು ಹಸಿವೆ ಹಿಂಗಿಸಿಕೊಳ್ಳುತ್ತಿದ್ದರು. ಆದರೆ ಮುಖ್ಯ ಶಿಬಿರದಲ್ಲಿದ್ದವರು ಮೃಷ್ಟಾನ್ನ ಉಣ್ಣುವುದನ್ನು ನೋಡಿ ಕಿಡಿಕಾರಿದರು. ಚಹದಂಗಡಿಗೆ ಹೋಗುವುದೂ ಆಗ ಹಿರಿಯರ ದೃಷ್ಟಿಯಲ್ಲಿ ಒಂದು ಅಪರಾಧವಾಗಿತ್ತು.



ಮುಂದೆ ಪುರಾಣಿಕರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದು ಮುಂದುವರಿಸಿದರು. ವಿದಾರ್ಥಿನಿಲಯದ ಶುಲ್ಕ ತುಂಬಲಾಗದೆ ಇವರು ವಿದ್ಯಾರ್ಥಿಗಳಿಗೆ ಊಣಬಡಿಸುವ ಕೆಲಸಮಾಡುತ್ತಿದ್ದರು. ಆ ಕಾಲದಲ್ಲಿ ಇವರು ಭಾಷಣ, ಪ್ರಬಂಧ, ಲೇಖನ ಮುಂತಾದ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ಅನೇಕ ಬಹುಮಾನ ಪಡೆದರು.

ಇವರು ತಮ್ಮ 23ನೆಯ ವಯಸ್ಸಿನಲ್ಲಿ ಅಕ್ಕ ಅಬಚಿತಾಯಿಯ ಮಗಳು ಗಂಗಾ ಅವರನ್ನು ಮದುವೆಯಾದರು(1935). ಇವರಿಗೆ 4 ಹೆಣ್ಣು, 3 ಗಂಡು ಮಕ್ಕಳು. ಪುರಾಣಿಕರು ಪದವೀಧರರಾಗಿ ಗೋಕಾಕ ಪುರಸಭಾ ಪ್ರೌಢಶಾಲೆಯಲ್ಲಿ ಸು.35 ವರ್ಷಗಳಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದರು (1936–71). ಕಥೆಗಾರರಾಗಿಯೂ ಕಾದಂಬರಿಕಾರರಾಗಿಯೂ ಕವಿಯಾಗಿಯೂ ಅಪಾರ ಜನಪ್ರಿಯತೆಗಳಿಸಿದರು. ರಾಮೂನ ಕತೆಗಳು –ಇವರ ಮೊದಲ ಕಥಾ ಸಂಗ್ರಹ (1946), ಮೊದಲ ಕವನಸಂಗ್ರಹ ಬಾಳಕನಸು (1947). ಮೊದಲ ಕಾದಂಬರಿ 'ಮುಗಿಲ ಮಲ್ಲಿಗೆ' (1948). ಇವರು 80 ಕಾದಂಬರಿಗಳನ್ನೂ 14 ಕಥಾಸಂಗ್ರಹಗಳನ್ನೂ 3 ಕವನ ಸಂಕಲನಗಳನ್ನೂ 11 ಸರಳ ರಗಳೆಯ ಸಂಗ್ರಹಗಳನ್ನೂ ಅನೇಕ ಮಕ್ಕಳ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಇವರ ಕೃತಿಗಳ ಒಟ್ಟು ಸಂಖ್ಯೆ 116.

ಇವರ ಕಾದಂಬರಿಗಳಲ್ಲಿ ಮುಗಿಲ ಮಲ್ಲಿಗೆ, ಮುತ್ತೈದೆ, ಭಾಗೀರಥಿ, ಬೆವರಿನ ಬೆಲೆ, ವೇಷಧಾರಿ, ಧರ್ಮದೇವತೆ, ಪಾವನಗಂಗಾ, ಕುಲವಧು, ಮನಸೋತ ಮನದನ್ನೆ, ಹಸಿರುತೋರಣ, ಸನಾದಿಅಪ್ಪಣ್ಣ, ಹಾಲುಂಡ ತವರು ಇವು ತುಂಬ ಜನಪ್ರಿಯವಾಗಿವೆ. ಸಾತ್ತ್ವಿಕ ಜೀವನ, ಸುಸಂಸ್ಕೃತ ಬದುಕು, ಸಂಸ್ಕೃತಿ ಪ್ರೇಮ, ರಾಷ್ಟ್ರಪ್ರೇಮ, ಆದರ್ಶ ಹಳ್ಳಿಯ ಬದುಕು –ಬವಣೆಗಳನ್ನು ತಮ್ಮ ಕಥೆ ಕಾದಂಬರಿಗಳಲ್ಲಿ ಇವರು ಹೃದಯಂಗಮವಾಗಿ ತಂದಿದ್ದಾರೆ. ಆ ಕಾಲಕ್ಕೆ ಇವರ ಕಾದಂಬರಿಗಳು ಅಪಾರ ಸಂಖ್ಯೆಯ ಮಹಿಳಾ ಓದುಗವರ್ಗವನ್ನು ಸೃಷ್ಟಿಸಿದ್ದವು. ಕನ್ನಡದಲ್ಲಿ ವಾಚನಾಭಿರುಚಿಯನ್ನು ಬೆಳೆಯಿಸಿದ ಮಹನೀಯರಲ್ಲಿ ಇವರ ಹೆಸರೂ ಮುಂಚೂಣಿಯಲ್ಲಿ ನಿಲ್ಲುತ್ತದೆ.

ಸನಾದಿ ಅಪ್ಪಣ್ಣ, ಪಾವನಗಂಗಾ, ದೇವರಕೂಸು, ಅನಿರೀಕ್ಷಿತ, ಭಾಗೀರಥಿ, ಕುಲವಧು, ಧರ್ಮದೇವತೆ –ಈ ಕಾದಂಬರಿಗಳು ಕನ್ನಡ ಚಲನಚಿತ್ರಗಳಾಗಿ ಹೆಸರು ಮಾಡಿವೆ. ಮುತ್ತೈದೆ ಎಂಬ ಕಾದಂಬರಿ ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಚಲನಚಿತ್ರವಾಗಿದೆ.

ಇವರ ಸಾಹಿತ್ಯ ಸಾಧನೆಗಾಗಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ತರಳಬಾಳು ಜಗದ್ಗುರುಗಳಿಂದ ಕಾದಂಬರಿಶ್ರೀ ಪ್ರಶಸ್ತಿ (1969), ಶೃಂಗೇರಿ ಜಗದ್ಗುರುಗಳಿಂದ ಶಾರದಾಂಬಾ ಬಂಗಾರದ ಪದಕ (1972), ಹೊನ್ನಾವರದ ಶೃಂಗಾರ ಮಂಟಪ ಪ್ರಶಸ್ತಿ (1973), ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1974) ಬಂದಿವೆ. ಕಾದಂಬರಿ ದರ್ಶನ ಎಂಬ ಗೌರವ ಗ್ರಂಥವನ್ನು ಇವರಿಗೆ ಸಮರ್ಪಿಸಲಾಗಿದೆ (1974). ಇವರು 1985 ನವೆಂಬರ್ 9ರಂದು ನಿಧನರಾದರು. (ಎಸ್.ಎಂ.ಕೆ.)

**ಕೃಷ್ಣಮೂರ್ತಿ, ಆರ್. :** 1899–1954. ಕಲ್ಕಿ ಎಂಬ ಕಾವ್ಯನಾಮದಿಂದ ಪ್ರಸಿದ್ಧ ಗ್ರಂಥಕರ್ತೃವಾಗಿ ಅದೇ ಹೆಸರಿನ ಪತ್ರಿಕೆಯ ಸಂಪಾದಕನಾಗಿ ಕೀರ್ತಿ ಗಳಿಸಿರುವ ತಮಿಳು ಲೇಖಕ. ಇವರು ತಂಜಾವೂರು ಜಿಲ್ಲೆಯ ಬುದ್ಧಮಂಗಲಂ(ಮಣಲ್‌ಮೇಡು) ಎಂಬಲ್ಲಿಯ ಕರ್ಣಂ ರಾಮಸ್ವಾಮಯ್ಯರ್ ಎಂಬುವರ ದ್ವಿತೀಯ ಪುತ್ರ. ಬಾಲ್ಯದಲ್ಲಿಯೇ ಕಥೆ ಕೇಳುವುದರಲ್ಲಿ ಹಾಗೂ ಇತರರಿಗೆ ಅದನ್ನು ಸ್ವಾರಸ್ಯವಾಗಿ ಹೇಳುವುದರಲ್ಲಿ ಇವರಿಗೆ ಆಸಕ್ತಿ ಅಧಿಕವಾಗಿತ್ತು. ಇಂಥ ಇವರ ಕಲ್ಪನಾ ಸಾಮರ್ಥ್ಯವೇ ಭವಿಷ್ಯದಲ್ಲಿ ಇವರು ದೊಡ್ಡ ಕತೆಗಾರರಾಗಲು ಅಡಿಗಲ್ಲಾಯಿತೆಂದು ಹೇಳಬಹುದು. ಚಿಕ್ಕವರಾಗಿದ್ದಾಗಲೇ ಭಜನೆಗಳನ್ನು ಹಾಡುತ್ತಿದ್ದರಲ್ಲದೆ ಹರಿಕಥೆಗಳನ್ನೂ ಮಾಡುತ್ತಿದ್ದರು.

ತಿರುಚಿಯ ನ್ಯಾಷನಲ್ ಕಾಲೇಜಿನಲ್ಲಿ ಇವರು 9ನೆಯ ತರಗತಿಯ ತನಕ ಕಲಿತರು. ಗಾಂಧೀಜಿಯ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿ 1921ರಲ್ಲಿ ಕರೂರಿನಲ್ಲಿ ಸೆರೆಮನೆಗೆ ಹೋದರು. ರಾಷ್ಟ್ರೀಯ ಆಂದೋಳನದಲ್ಲಿ ಭಾಗವಹಿಸಲು ಆಸಕ್ತರಾದರು. ಕಲ್ಪನೆಯ ಜೊತೆಗೆ ಬರವಣಿಗೆಯಲ್ಲೂ ಶಕ್ತರಾದ ಇವರು ಪತ್ರಿಕೋದ್ಯಮದಲ್ಲಿ ತೊಡಗಿದರಲ್ಲದೆ ಆ ವೃತ್ತಿಯಲ್ಲಿ ಉದ್ದಕ್ಕೂ ರಾಷ್ಟ್ರೀಯ ಧೋರಣೆಯಿಂದ ದುಡಿದರು.

ನವಶಕ್ತಿ, ವಿಮೋಚನಂ, ಆನಂದವಿಕಟನ್ ಮುಂತಾದ ಪತ್ರಿಕೆಗಳಿಗೆ ಸಂಪಾದಕರಾದರು. ತಮ್ಮ ಸಾಮರ್ಥ್ಯವನ್ನು ಅನುಭವವನ್ನು ಕ್ರಮವಾಗಿ ವರ್ಧಿಸಿಕೊಂಡರು. ಕಲ್ಕಿ ಎಂಬ ಹೆಸರಿನಿಂದ ಪ್ರಬಂಧಗಳನ್ನೂ ಕಥೆಗಳನ್ನೂ ವಿಮರ್ಶೆಗಳನ್ನೂ ಬರೆದರು. ಅಲ್ಲದೆ ಕರ್ನಾಟಕಂ, ಲಾಂಗೂಲನ್, ತಮಿಳ್ ಮಗನ್, ವ್ಯವಸಾಯಿ, ತಮಿಳ್ ತೇನೀ, ಯಮನ್, ರಾ.ಕಿ. ಪೆಟ್ರೋನ್, ಅಗಸ್ತ್ಯರ್–ಎಂಬ ಗುಪ್ತನಾಮದಿಂದಲೂ ಅನೇಕ ಲೇಖನಗಳನ್ನೂ ಬರೆದರು.

1941ರಲ್ಲಿ ರಾಜಾಜಿ, ಟಿ.ಕೆ. ಚಿದಂಬರನಾಥ ಮುದಲಿಯಾರರಂಥವರ ಸಹಾಯದಿಂದ ಕಲ್ಕಿ ಎಂಬ ಪತ್ರಿಕೆಯನ್ನು ಆರಂಭಿಸಿದರು. (**ನೋಡಿ– ಕಲ್ಕಿ**[1]). ಇದು ಅನೇಕ ಬಗೆಯಲ್ಲಿ ಹೊಸತನವನ್ನು ಪ್ರದರ್ಶಿಸಿ ಒಂದು ಉನ್ನತಮಟ್ಟದ ಪತ್ರಿಕೆಯಾಯಿತು. ಗಾಂಧೀಜಿಯನ್ನು ಕುರಿತು ಮಾನ್ದರುಕ್ಕುಳ್ ಒರು ದೈವಂ (ಮನುಷ್ಯರಲ್ಲಿ ಒಬ್ಬ ದೇವರು) ಎಂದೂ ರಾಜಾಜಿಯನ್ನು ಕುರಿತು ನಾಟ್ಟುಕ್ಕೊರು ತಲೈವರ್ (ನಾಡಿಗೊಬ್ಬ ಮುಖಂಡ) ಎಂದೂ ಇವರು ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಲೇಖಕ ಹಾಗೂ ಪತ್ರಿಕಾಕರ್ತರಾಗಿ, ತಿಳಿಯಾದ ತಮಿಳಿನಲ್ಲಿ ಎಲ್ಲರಿಗೂ ತಿಳಿಯುವಂತೆ ರಾಜಕೀಯ ವಿಷಯಗಳನ್ನು ವಿವರಿಸಿದ್ದಾರೆ. ಸಂಗೀತ ವಿದ್ವಾಂಸರು, ಇತರ ಕಲಾವಿದರು, ನಾಟಕಗಳು, ಚಲನಚಿತ್ರಗಳು ಮುಂತಾದ ಕಲಾ ವಿಷಯಗಳ ಮೇಲೆ ನಿಷ್ಪಕ್ಷಪಾತ ದೃಷ್ಟಿಯ ವಿಮರ್ಶೆಗಳನ್ನು ಬರೆದಿದ್ದಾರೆ. ಸಾಹಿತಿಗಳಿಗೆ, ವಾಗ್ಮಿಗಳಿಗೆ ಪ್ರೋತ್ಸಾಹವಿತ್ತಿದ್ದಾರೆ.

ಕವಿಗಳಾದ ಸುಬ್ರಹ್ಮಣ್ಯ ಭಾರತೀಯಾರ್ ಆರಂಭಿಸಿದ ತಮಿಳಿನ ಪುನರುದ್ಧಾರ ಕಾರ್ಯವನ್ನು ಇವರು ಇನ್ನಷ್ಟು ವೃದ್ಧಿಗೊಳಿಸಿದರು. ತಮಿಳಿನ ಉದ್ಧಾರ ಕಾರ್ಯಕರ್ತರ ಲ್ಲೊಬ್ಬರಾಗಿಯೂ ತಮಿಳು ಬರೆಹಗಾರರ ಸಂಘದ ಮೊದಲಿಗರಾಗಿಯೂ ಸೇವೆ ಸಲ್ಲಿಸಿದರು.

ರಾಷ್ಟ್ರೀಯ ಕವಿಗಳಾದ ಭಾರತೀಯಾರ್ ಸ್ಮಾರಕಕ್ಕಾಗಿ ಎಟ್ಟೆಯಪುರವೆಂಬಲ್ಲಿ ಭಾರತಿಮಣಿಮಂಡಪಂ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಶ್ರಮಿಸಿ ಅದನ್ನು ನೆರವೇರಿಸಿದರು. ದೇಶಕ್ಕಾಗಿ ತ್ಯಾಗ ಮಾಡಿದ ವಿ.ಓ. ಚಿದಂಬರಂ ಪಿಳ್ಳೆಯವರ ನೆನಪಿಗೆ ತೂತ್ತುಕುಡಿಯಲ್ಲಿ ಕಾಲೇಜು ಸ್ಥಾಪಿಸಲು ಕಾರಣರಾದರು. ವಿ. ಕಲ್ಯಾಣ ಸುಂದರನಾರ್ ಮಣಿಮಂಡಪಂ, ಗಾಂಧಿ ನಿನೈವು ಮಂಡಪಂಗಳ ಸ್ಥಾಪನೆಗೆ ನಿಧಿ ಸಂಗ್ರಹಿಸುವುದರಲ್ಲಿ ಮಗ್ನರಾದರು.

ಕಲ್ಕಿಯವರ ಮಹತ್ಸಾಧನೆ ಅವರು ಬರೆದ ಚಾರಿತ್ರಿಕ ಕಾದಂಬರಿಗಳಲ್ಲಿದೆ. ಗತಕಾಲದ ಜನರ ಮನಸ್ಸಿನ ನೆಲೆ, ಆಚಾರ ವಿಚಾರಗಳು, ರಾಜಕೀಯ, ಧಾರ್ಮಿಕ ಹಾಗೂ ಕಲಾಭಿರುಚಿಯ ವಿವರಗಳನ್ನು ಇವುಗಳಲ್ಲಿ ಅವರು ಚೆನ್ನಾಗಿ ವಿವರಿಸಿದ್ದಾರೆ. ಚಾರಿತ್ರಿಕ ಸತ್ವದ ಹಿನ್ನೆಲೆಯಲ್ಲಿ ಪಾತ್ರಗಳನ್ನು ಸಜೀವಗೊಳಿಸಿದ್ದಾರೆ. ಕೆಲವು ಕಲ್ಪನಾ ಸನ್ನಿವೇಶಗಳನ್ನೂ ಸಂದರ್ಭಗಳನ್ನೂ ಅನುಕೂಲಕ್ಕೆ ತಕ್ಕಂತೆ ಸುಂದರವಾಗಿ ಕಡೆದಿದ್ದಾರೆ. ನಿಜ ಹಾಗೂ ಕಾಲ್ಪನಿಕ ಸನ್ನಿವೇಶಗಳು ಒಂದರೊಡನೊಂದು ಸರಿಯಾಗಿ ಹೊಂದಿಕೊಂಡು ಬರುವಂತೆ ಎಸಗಿ ಜನಮನವನ್ನು ಸೂರೆಗೊಂಡಿದ್ದಾರೆ. ಪತ್ರಿಕಾಲೋಕದಲ್ಲಿ ಪಾರ್ತಿಬನ್ ಕನವು, ಪೊನ್ನಿಯಿನ್ ಶೆಲ್ವನ್, ಶಿವಗಾಮಿಯಿನ್ ಶಪಥಂ–ಎಂಬ ಕಾದಂಬರಿಗಳನ್ನು ಪ್ರಕಟಿಸಿ ಹಲವು ಲಕ್ಷ ಜನರು ಆತುರದಿಂದ ಓದುವಂತೆ ಮಾಡಿದ್ದಾರೆ.

ಕಲ್ಕಿ ಅವರ ಸಾಮಾಜಿಕ ಕಾದಂಬರಿಗಳೂ ಚಾರಿತ್ರಿಕ ಕಾದಂಬರಿಗಳಂತೆಯೇ ಉತ್ತಮವಾದುವು. ಅವರು ಬರೆದ ತ್ಯಾಗಭೂಮಿ. ಅಲೈ ಓಸೈ ಎಂಬವುಗಳಲ್ಲಿ ರಾಷ್ಟ್ರೀಯತೆ ಎದ್ದು ಕಾಣುತ್ತದೆ. ಪೊಯ್ ಮಾನ್ ಕರಡು, ಮಕುಟಪತಿ, ವೀಣೈ ಭವಾನಿ, ಶಾರದೆಯಿನ್ ತಂತಿರಂ, ಅಬಲೈಯಿನ್ ಕಣ್ಣೀರ್–ಇಂಥ 30ಕ್ಕೂ ಮೇಲ್ಪಟ್ಟು ಕೃತಿಗಳನ್ನು ಅವರು ರಚಿಸಿದ್ದಾರೆ.

ಕಲ್ಕಿಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ನಾಲ್ಕು ಕೃತಿಗಳ ಸಂಗ್ರಹಕ್ಕೆ ಸಾಹಿತ್ಯ ಅಕೆಡಮಿಯ ಬಹುಮಾನ ಬಂದಿದೆ.

ತಮಿಳು ಸಂಗೀತಕ್ಕೆ ಕಲ್ಕಿ ಮನಃಪೂರ್ವಕ ಬೆಂಬಲ ಕೊಟ್ಟರಲ್ಲದೆ ತಾವೇ ಕೆಲವು ಉತ್ತಮ ಹಾಡುಗಳನ್ನು ರಚಿಸಿದ್ದಾರೆ. ಮೂವತ್ತು ವರ್ಷಗಳ ಅವಿರತ ಸೇವೆಯಿಂದ ಕಲ್ಕಿ ತಮಿಳುನಾಡಿನ ಚಿರಪರಿಚಿತ ಹಾಗೂ ಜನಪ್ರಿಯ ಲೇಖಕರಾಗಿದ್ದಾರೆ. (ಎಸ್.ವಿ.ಎಲ್.)

**ಕೃಷ್ಣಮೂರ್ತಿ ಹುಣಸೂರು :** (1914–1989). ಸಾಹಿತಿಯಾಗಿ, ನಟರಾಗಿ, ನಿರ್ದೇಶಕರಾಗಿ ಹಾಗೂ ನಿರ್ಮಾಪಕರಾಗಿ ಕನ್ನಡ ಚಲನಚಿತ್ರರಂಗದಲ್ಲಿ ತಮ್ಮದೇ ಆದ ಛಾಪನ್ನೊತ್ತಿದ ಹುಣಸೂರು ಕೃಷ್ಣಮೂರ್ತಿ ಅವರು ಗ್ರಾಂಥಿಕವಾಗಿದ್ದ ಕನ್ನಡ ಚಲನಚಿತ್ರ ಸಾಹಿತ್ಯವನ್ನು ಆಡುಮಾತಿಗೆ ತಂದು ಜನಮನಮುಟ್ಟಿದವರಲ್ಲಿ ಒಬ್ಬರು. 1914ರಲ್ಲಿ ಜನಿಸಿದ ಇವರಿಗೆ ಬಾಲ್ಯದಿಂದಲೇ ರಂಗಭೂಮಿಯತ್ತ ಒಲವು, ನಾಟಕಗಳಲ್ಲಿನ ಆಸಕ್ತಿ ಕೃಷ್ಣಮೂರ್ತಿಗಳು ಮನೆಬಿಟ್ಟು ಓಡುವಂತಾಗಿಸಿತು. ಹೀಗೆ ಮುಂಬೈ ಸೇರಿ, ಅಲ್ಲಿ

ಬಾಲಗಂಧರ್ವ ನಾಟಕ ಕಂಪೆನಿಯಲ್ಲಿ ಅವಕಾಶ ಪಡೆದರು. ಜೊತೆಗೆ ಮುಂಬೈನ ಬಾಂಬೆ ಟಾಕೀಸ್ ಸಂಸ್ಥೆಯ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಅಭಿನಯಿಸಿದರು. ಆದರೆ ಅಲ್ಲಿನ ವಾತಾವರಣ ಹಿಡಿಸದೆ ತವರಿಗೆ ಮರಳಿ, ಮಹಮ್ಮದ್ ಪೀರ್ ಸಾಹೇಬರ ಕಂಪೆನಿ, ವರದಾಚಾರ್ಯರ ಕಂಪೆನಿ ಹಾಗೂ ಗುಬ್ಬಿ ಕಂಪೆನಿಗಳಲ್ಲಿ ಬಗೆಬಗೆಯ ಪಾತ್ರಗಳಲ್ಲಿ ನಟಿಸ ತೊಡಗಿದರು. ಹಾಗೆ ರಂಗಭೂಮಿ ಯಲ್ಲಿ ಅಭಿನಯಿಸುತ್ತಿರುವಾಗಲೇ ಸಾಹಿತ್ಯದತ್ತ ಒಲವು ಬೆಳೆಯಿತು. ಬರವಣಿಗೆ ಇವರ ನಿತ್ಯಕಾಯಕವಾಯಿತು. "ಗೌತಮ ಬುದ್ಧ" "ಧರ್ಮರತ್ನಾಕರ", "ರಾಜಾಗೋಪಿಚಂದ್" ಮುಂತಾದ ನಾಟಕಗಳನ್ನು ಬರೆದರು. ಅವರ ಸಂಭಾಷಣೆ ಶೈಲಿ ಜನಮೆಚ್ಚುಗೆ ಪಡೆಯಿತು. ಪ್ರೇಕ್ಷಕರನ್ನು ನೇರವಾಗಿ ಮುಟ್ಟುವಂತಹ ಆಡು ಭಾಷೆಯ ಮಾತುಗಳು ಜನಪ್ರಿಯವಾಗುತ್ತಿದ್ದಂತೆಯೇ ಹುಣಸೂರು ಕೃಷ್ಣಮೂರ್ತಿಯವರು ಬರವಣಿಗೆಯತ್ತಲೇ ತಮ್ಮ ಗಮನ ಕೇಂದ್ರೀಕರಿಸಿದರು. ನಿರ್ಮಾಪಕ–ನಿರ್ದೇಶಕರುಗಳಾದ ಡಿ.ಶಂಕರ್‌ಸಿಂಗ್ ಮತ್ತು ಬಿ.ವಿಠಲಾಚಾರ್ಯ ಇವರ ಬರವಣಿಗೆಯಲ್ಲಿನ ಸತ್ವವನ್ನು ಅರಿತರು. ಹುಣಸೂರು ಕೃಷ್ಣಮೂರ್ತಿ ಅವರ ಎಲ್ಲ ಚಿತ್ರಗಳಿಗೂ ಸಂಭಾಷಣೆ ಹಾಗೂ ಹಾಡುಗಳನ್ನು ಬರೆಯತೊಡಗಿದರು. ಸರಳ–ಸುಂದರ–ಆಡುಭಾಷೆಯ ಮಾತು–ಹಾಡುಗಳು ಪ್ರೇಕ್ಷಕರಿಗೆ ಮೋಡಿಮಾಡಿತು. ಭಕ್ತಿಪ್ರಧಾನ, ಜಾನಪದ, ಐತಿಹಾಸಿಕ, ಸಾಮಾಜಿಕ ಯಾವುದೇ ಆಗಿರಲಿ, ಆ ಪ್ರಕಾರಕ್ಕೆ ಒಪ್ಪುವಂಥ–ಜನಸಾಮಾನ್ಯರ ಮನಸ್ಸಿಗೆ ಮುಟ್ಟುವಂಥ ಸಾಹಿತ್ಯ ಇವರ ಲೇಖನಿಯಿಂದ ಮೂಡಿಬಂದಿತು. ಜಗನ್ಮೋಹಿನಿ, ರತ್ನಮಂಜರಿ, ಕನ್ಯಾದಾನ, ವೀರಸಂಕಲ್ಪ, ಬೂತಯ್ಯನ ಮಗ ಅಯ್ಯು, ಭಕ್ತಸಿರಿಯಾಳ, ಭಕ್ತಜ್ಞಾನದೇವ ಮತ್ತು ಭಕ್ತ ಕುಂಬಾರ, ಬಬ್ರುವಾಹನ, ಸತ್ಯಹರಿಶ್ಚಂದ್ರ ಎರಡು ವರ್ಷ ಸತತವಾಗಿ ಪ್ರದರ್ಶಿತವಾದ 'ಬಂಗಾರದ ಮನುಷ್ಯ', ಹೀಗೆ ಅನೇಕ ಚಿತ್ರಗಳಿಗೆ ಹಾಡು–ಮಾತು ಬರೆದರು.

ಹುಣಸೂರು ಕೃಷ್ಣಮೂರ್ತಿಗಳು "ರತ್ನಮಂಜರಿ" ಚಿತ್ರದ ಮೂಲಕ ನಿರ್ದೇಶಕ ಹಾಗೂ ನಿರ್ಮಾಪಕರಾದರು. ವೀರಸಂಕಲ್ಪ ಚಿತ್ರ ಇವರದೇ ನಿರ್ಮಾಣ ನಿರ್ದೇಶನ. 'ಸತ್ಯಹರಿಶ್ಚಂದ್ರ' ಇವರ ನಿರ್ದೇಶನದ ಇನ್ನೊಂದು ಮುಖ್ಯ ಚಿತ್ರ. ಎಂ.ಪಿ.ಶಂಕರ್, ದ್ವಾರಕೀಶ್, ನಿರ್ದೇಶಕ ಭಾರ್ಗವ ಹೀಗೆ ಅನೇಕರನ್ನು "ಬೆಳ್ಳಿತೆರೆ"ಗೆ ಪರಿಚಯಿಸಿದರು.

ಹುಣಸೂರು ಕೃಷ್ಣಮೂರ್ತಿಗಳು ತಮ್ಮನ್ನು ಒಬ್ಬ ಪತ್ರಕರ್ತನೆಂದೇ ಅನೇಕ ಸಲ ಕರೆದುಕೊಂಡುದೂ ಉಂಟು. ಮೈಸೂರಿನ ಶಾಲೆಯಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಶಾಲೆಯ ಮಾಸ್ತರರಾದ ಪಿ.ಆರ್.ರಾಮಯ್ಯನವರು ಸಂಪಾದಿಸಿ, ಪ್ರಕಟಿಸುತ್ತಿದ್ದ 'ತಾಯಿನಾಡು' ಪತ್ರಿಕೆಯನ್ನು ದಿನನಿತ್ಯ ಶಾಲೆ ಮುಗಿದ ನಂತರ ರಸ್ತೆಯ ಬದಿಯಲ್ಲಿಟ್ಟುಕೊಂಡು ಕೂಗಿ ಕೂಗಿ ಮಾರಾಟಮಾಡಿ ಬಂದ ಕಮಿಷನ್ ಹಣದಲ್ಲಿ ಹೋಟೇಲಿನಲ್ಲಿ ದೋಸೆ–ಕಾಫಿ ಕುಡಿಯುತ್ತಿದ್ದುದಾಗಿ ನೆನಪಿಸಿಕೊಳ್ಳುತ್ತಾ ತಾವೂ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ವ್ಯಕ್ತಿಯೆಂದೇ ಹೇಳಿಕೊಳ್ಳುತ್ತಿದ್ದರು. ತಮ್ಮ ಸ್ವಂತ ನಿರ್ಮಾಣದ ಕೆಲವು ಚಿತ್ರಗಳಲ್ಲಿ ಅಭಿನಯಿಸಿಯೂ ಇದ್ದಾರೆ. ಬಿಳಿಕಚ್ಚೆಪಂಚೆ, ಬಿಳಿ ಜುಬ್ಬಾ, ಕೈಲೊಂದು ಸಿಗರೇಟು, ಇಷ್ಟೇ ಅವರ ಸರಳ ವೇಷಭೂಷಣ ಹಾಗೂ ಔದಾರ್ಯದ ನೇರ ನುಡಿಗಳು ಅವರನ್ನು ವಿಕಾಸದ ಹಾದಿಯಲ್ಲಿ ಕೊಂಡೊಯ್ದವು.

ರಾಜ್ಯಸರ್ಕಾರವು ಚಲನಚಿತ್ರ ನಿರ್ದೇಶಕರ ಸೇವೆಯನ್ನು ಗುರುತಿಸಿ, ಪುರಸ್ಕರಿಸಲು "ಪುಟ್ಟಣ್ಣ ಕಣಗಾಲ್ ಪ್ರಶಸ್ತಿ"ಯನ್ನು ಪ್ರಾರಂಭಗೊಳಿಸಿದಾಗ ಆ ಪ್ರಶಸ್ತಿಯನ್ನು ಮೊದಲು ಪಡೆದವರು ಹುಣಸೂರು ಕೃಷ್ಣಮೂರ್ತಿ. 1989ರ ಜನವರಿ 13ರಂದು ಹುಣಸೂರು ಕೃಷ್ಣಮೂರ್ತಿ ತಮ್ಮ 75ನೇ ವಯಸ್ಸಿನಲ್ಲಿ ವಿಧಿವಶರಾದರು. (ಎಸ್.ಕೆ.)

**ಕೃಷ್ಣಮೃಗ :** ಬೋವಿಡೇ ಕುಟುಂಬದ ಉಪವಿಭಾಗ ಆಂಟಿಲೋಪ್‌ನ ಸದಸ್ಯ. ವೈಜ್ಞಾನಿಕ ಹೆಸರು ಆಂಟಿಲೋಪೆ ಸೆರ್ವಿಕಾಪ್ರ. ಹಿಂದೆ ಸೂರತ್‌ನ ಕೆಲವು ಭಾಗಗಳನ್ನು ಬಿಟ್ಟು ಭಾರತದ ಎಲ್ಲ ಮೈದಾನ ಪ್ರದೇಶಗಳಲ್ಲಿ ಕಂಡುಬರುತ್ತಿದ್ದ ಇವು ಇಂದು ಆವಾಸ ನಾಶದಿಂದಾಗಿ ವಂಶನಾಶದ ಹಾದಿ ಹಿಡಿದಿದೆ. ಮರಿಯಾಗಿದ್ದಾಗ ಹಳದಿ ಬಣ್ಣ ಹೊಂದಿರುವ ಇವು ಕ್ರಮೇಣ ಕಂದು–ಕಪ್ಪಿಗೆ ತಿರುಗುತ್ತವೆ. ವಯಸ್ಸಿನೊಂದಿಗೆ ಈ

ಬಣ್ಣ ಗಾಢವಾಗುತ್ತದೆ. ಹೆಣ್ಣಿನ ಬಣ್ಣ ಬದಲಾಗದೆ ಹಳದಿಯಾಗೇ ಉಳಿಯುತ್ತದೆ. ಎರಡಕ್ಕೂ ಕಣ್ಣಿನ ಸುತ್ತ ಬಿಳಿ ಉಂಗುರವಿದ್ದು, ಗಂಡಿಗೆ ಸುರುಳಿಯಾದ ಎರಡು ಕೊಂಬುಗಳಿರುತ್ತದೆ. ವಿಜಯದ ಧ್ವಜದಂತೆ ಇವು ಕಂಗೊಳಿಸುತ್ತವೆ.

ದಕ್ಷಿಣ ಭಾರತದಲ್ಲಿ 20–30ರ ಗುಂಪುಗಳಲ್ಲಿರುವ ಇವು ವರ್ಷಪೂರ್ತಿ ವಂಶಾಭಿವೃದ್ಧಿ ನಡೆಸುತ್ತವೆಯಾದರೂ ಮುಖ್ಯ ವಂಶಾಭಿವೃದ್ಧಿಯ ಸಮಯ ಫೆಬ್ರವರಿ ಮತ್ತು ಮಾರ್ಚ್. ಹೆಣ್ಣಿಗಾಗಿ ಕಾದಾಟ ಸಾಮಾನ್ಯ. ಹೆಣ್ಣು ಒಂದು ಅಥವಾ ಎರಡು ಮರಿಯನ್ನು ಈಯುತ್ತದೆ. ಗುಂಪಿನ ನಾಯಕತ್ವ ವಹಿಸುವುದು ಇತರ ಹಲವಾರು ಪ್ರಾಣಿಗಳಲ್ಲಿರುವಂತೆ ಹಿರಿಯ ಹೆಣ್ಣು ಪ್ರಾಣಿ. ಅಪಾಯ ಒದಗಿದಾಗ ಇವು ದಾಪುಗಾಲು ಹಾಕಿಕೊಂಡು ತಪ್ಪಿಸಿಕೊಳ್ಳಲು ಯತ್ನಿಸುತ್ತವೆ. ಓಟದ ಮಧ್ಯದಲ್ಲಿ ದೊಡ್ಡ ದೊಡ್ಡ ಜಿಗಿತಗಳು ಇರುತ್ತವೆ.

(ಕೆ.ಎಸ್.ಎನ್.)

**ಕೃಷ್ಣರಾಜ ಒಡೆಯರ್ I** : ಮೈಸೂರು ಸಂಸ್ಥಾನವನ್ನಾಳಿದ ದೊರೆಗಳ ಪೈಕಿ ಒಬ್ಬರು. ಇವರ ಆಳ್ವಿಕೆಯ ಕಾಲ 1714–1731. ಒಡೆಯರ ಮನೆತನದಲ್ಲಿ ಹದಿನಾರನೆಯವರು. ಇಮ್ಮಡಿ ಕಂಠೀರವ ನರಸರಾಜ ಒಡೆಯರು (ಮೂಕರಸ) ಮತ್ತು ಅವರ ಪತ್ನಿ ಚೆಲುವರಾಜಮ್ಮಣ್ಣಿ–ಇವರ ಪುತ್ರ. ಕಳಲೆ ಚಿಕ್ಕ ಅರಸಿನವರ ಪುತ್ರಿ ದೇವಾಜಮ್ಮಣ್ಣಿಯನ್ನೂ ಅಷ್ಟಮಹಿಷಿಯರನ್ನೂ ವಿವಾಹವಾದರು. ದೇವಾಜಮ್ಮಣ್ಣಿಗೆ ಹುಟ್ಟಿದ ಗಂಡುಮಗು ಆರು ತಿಂಗಳಲ್ಲೇ ತೀರಿಕೊಂಡು ಮುಂದೆ ಸಂತಾನವಿಲ್ಲದ್ದರಿಂದ ಇವರು ಚಾಮರಾಜ ಮತ್ತು ಚಿಕ್ಕ ಕೃಷ್ಣರಾಜರನ್ನು ದತ್ತು ತೆಗೆದುಕೊಂಡರು.

1724ರಲ್ಲಿ ಹೈದರಾಬಾದಿನ ನಿಜಾಮ ಮತ್ತು ಅವನ ಗುಂಪಿನವರು ಮೈಸೂರು ರಾಜ್ಯದ ಮೇಲೆ ಆಕ್ರಮಣ ನಡೆಸಿದಾಗ ಇವರು ಹಣ ತೆತ್ತು ಪಾರಾದರು. 1725ರಲ್ಲಿ ಮರಾಠರ ಪೇಶ್ವೆ 1ನೆಯ ಬಾಜೀರಾಯ ದಂಡೆತ್ತಿ ಬಂದಾಗ ಸಮರ್ಥವಾಗಿ ಹೋರಾಡಿ ಮರಾಠರ ಸೈನ್ಯವನ್ನು ಹೊಡೆದೋಡಿಸಿದರು. ಆರ್ಕಾಟಿನ ನವಾಬ ನಿಜಾಮನೊಂದಿಗೆ ಸೇರಿ ಮೈಸೂರಿನ ಮೇಲೆ ಆಕ್ರಮಣ ನಡೆಸಿದ್ದಕ್ಕೆ ಪ್ರತೀಕಾರವಾಗಿ ಅವನ ಪ್ರದೇಶಗಳನ್ನು ಆಕ್ರಮಿಸಿ ಅಪಾರ ಐಶ್ವರ್ಯವನ್ನು ಸೂರೆ ಮಾಡಿದರು. ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಮೈಸೂರಿನ ಸೈನ್ಯ ಮಾಗಡಿ ಸಾವನದುರ್ಗಗಳನ್ನು ದೋಚಿ, ಅದರ ನಾಯಕ 3ನೆಯ ಕೆಂಪೇಗೌಡನನ್ನು ಸೆರೆ ಹಿಡಿಯಿತು.

ಕೃಷ್ಣರಾಜರು ದೈವಭಕ್ತರೂ ಉದಾರಿಗಳೂ ಆಗಿದ್ದರೂ ರಾಜ್ಯಭಾರದಲ್ಲಿ ನಿಪುಣರಾಗಿರಲಿಲ್ಲ. ದಳವಾಯಿ ನಂಜರಾಜಯ್ಯನೂ ಅವನ ಸೋದರ ದೇವರಾಜಯ್ಯನೂ ರಾಜ್ಯಸೂತ್ರವನ್ನು ಕೈವಶಮಾಡಿಕೊಂಡು ದುರಾಡಳಿತ ನಡೆಸಲಾರಂಭಿಸಿದರು.

ಕೃಷ್ಣರಾಜ ಒಡೆಯರು ತಿರುಪತಿಯ ದೇವಾಲಯ ಮತ್ತು ಕಂಚಿಯ ವರದರಾಜಸ್ವಾಮಿಯ ದೇವಾಲಯಗಳಿಗೂ ಇತರ ಸಣ್ಣಪುಟ್ಟ ದೇವಮಂದಿರಗಳಿಗೂ ಅನೇಕ ದತ್ತಿಗಳನ್ನು ಬಿಟ್ಟುದಲ್ಲದೆ, ಕಳಲೆಯ ಲಕ್ಷ್ಮೀಕಾಂತ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ, ಅಲ್ಲೊಂದು ಅಗ್ರಹಾರವನ್ನು ಸ್ಥಾಪಿಸಿದರು. ಸಂಗೀತ, ಸಾಹಿತ್ಯ ಮತ್ತಿತರ ಕಲೆಗಳಿಗೆ ಆಶ್ರಯದಾತರಾಗಿದ್ದರು. 1731ರಲ್ಲಿ ಇವರು ಮೃತರಾದರು.

(ಎಂಎಚ್‌ಇ)

**ಕೃಷ್ಣರಾಜ ಒಡೆಯರ್ II** : ಹಿಂದಿನ ಮೈಸೂರರಸರಲ್ಲೊಬ್ಬರು. 1ನೆಯ ಕೃಷ್ಣರಾಜ ಒಡೆಯರ ಎರಡನೆಯ ದತ್ತುಪುತ್ರ ; ಒಡೆಯ ಮನೆತನದ 18ನೆಯ ದೊರೆ. ಆಳ್ವಿಕೆಯ ಕಾಲ 1734–1766. ಅಣ್ಣ 7ನೆಯ ಚಾಮರಾಜ ಒಡೆಯರ ಮರಣಾನಂತರ ಸಿಂಹಾಸನಕ್ಕೆ ಬಂದರು. ದಳವಾಯಿ ದೇವರಾಜಯ್ಯನೂ ಸರ್ವಾಧಿಕಾರಿ ಮತ್ತು ಪ್ರಧಾನ ನಂಜರಾಜಯ್ಯನೂ ಚಾಮರಾಜ ಒಡೆಯರ ಕಾಲದಲ್ಲಿ ಪ್ರಬಲರಾಗಿ, ಚಾಮರಾಜ ಒಡೆಯರನ್ನು ಕಬ್ಬಾಳದುರ್ಗದಲ್ಲಿ ಸೆರೆಯಲ್ಲಿಟ್ಟು ತಾವೇ ಆಡಳಿತ ನಡೆಸುತ್ತಿದ್ದರು. ಚಾಮರಾಜರು ಅಲ್ಲೇ ತೀರಿಕೊಂಡರು. ಅವರ ಸ್ವಂತ ಸಹೋದರನಾದ ವೆಂಕಟೇ ಅರಸು ಸ್ವತಂತ್ರ ಮನೋವೃತ್ತಿಯವನಾಗಿದ್ದುದರಿಂದ 1ನೆಯ ಕೃಷ್ಣರಾಜರ ಇನ್ನೊಬ್ಬ ದತ್ತು ಪುತ್ರರಾದ ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಆ ದಳವಾಯಿಗಳು ಪಟ್ಟಕಟ್ಟಿದರು. ಇವರ ಕಾಲದಲ್ಲಿ ಸಂಸ್ಥಾನದ ಆಡಳಿತದಲ್ಲಿ ವಿಶೇಷ ಬದಲಾವಣೆಯೇನೂ ಆಗಲಿಲ್ಲ. ನಂಜರಾಜ ತನ್ನ ಹೆಸರಿನಲ್ಲಿ ಕನ್ನಂಬಾಡಿಯ ಬಳಿ ನಂಜರಾಜಸಮುದ್ರವೆಂಬ ಒಂದು ಅಗ್ರಹಾರವನ್ನು 1741ರಲ್ಲಿ ಕಟ್ಟಿಸಿದನಲ್ಲದೆ ಹಲವಾರು ದೇವಾಲಯಗಳಿಗೆ ದಾನಗಳನ್ನು ಕೊಟ್ಟ. ಇದೇ ಸಮಯದಲ್ಲಿ ತಾನು ಅನ್ಯಾಯದಿಂದಗಳಿಸಿದ ಐಶ್ವರ್ಯವನ್ನು ಪಶ್ಚಾತ್ತಾಪದಿಂದ ರಾಜಮನೆತನಕ್ಕೆ ಹಿಂತಿರುಗಿಸಿದನಲ್ಲದೆ ತನ್ನ ಅನಂತರ ದೇವರಾಜನ ತಮ್ಮ ಕರಾಚುರಿ ನಂಜರಾಜನಿಗೆ ದಳವಾಯಿಪಟ್ಟ ಕೊಡಬಾರದೆಂದು ಎಚ್ಚರಿಕೆ ನೀಡಿದ್ದ.

ಮೈಸೂರಿನಿಂದ ಸಿರಾದ ನವಾಬ ಪಡೆಯುತ್ತಿದ್ದ ಕಪ್ಪವನ್ನು ತಾನು ಕಬಳಿಸಬೇಕೆಂದು ಆರ್ಕಾಟಿನ ನವಾಬನಾದ ದೋಸ್ತ್ ಆಲಿಖಾನ್ ಶ್ರೀರಂಗಪಟ್ಟಣವನ್ನು ಮುತ್ತಿದಾಗ ಮುಪ್ಪಿನ ದಳಪತಿ ದೇವರಾಜಯ್ಯ ಅವನನ್ನು ಹೊಡೆದಟ್ಟಿದ. ಈ ವೇಳೆಗೆ ದಳವಾಯಿಯಾಗಿದ್ದ ಕರಾಚುರಿ ನಂಜರಾಜ ಧಾರಾಪುರದ ಪಾಳೆಯಗಾರರ ಮೇಲೆ ದಂಡೆತ್ತಿ ಹೋಗಿದ್ದಾಗ ದಖನಿನ ಸುಬೇದಾರ ನಿಜಾಂ–ಉಲ್–ಮುಲ್ಕನ ಮಗ ನಾಸಿರ್‌ಜಂಗ್ ಶ್ರೀರಂಗಪಟ್ಟಣವನ್ನು ಮುತ್ತಲು, ಆಡಳಿತಾಧಿಕಾರಿಯಾಗಿದ್ದ ದೇವರಾಜಯ್ಯನ ನೇತೃತ್ವದಲ್ಲಿ ಕೃಷ್ಣರಾಜ ಒಡೆಯರು ಕಳುಹಿಸಿದ ನಿಯೋಗ ಸಂಧಾನವನ್ನಾರಂಭಿಸಿತು. ಧಾರಾಪುರದಿಂದ ಜಯಶೀಲನಾಗಿ ಹಿಂತಿರುಗಿದ ನಂಜರಾಜನ ಮಗಳನ್ನು ಒಡೆಯರು ವಿವಾಹವಾದುದರಿಂದ ನಂಜರಾಜನ ಸ್ಥಾನ ಭದ್ರವಾಯಿತು.

1749ರಲ್ಲಿ ನಡೆದ ದೇವನಹಳ್ಳಿಯ ಪಾಳೆಯಗಾರರ ಮೇಲಿನ ದಾಳಿಯಲ್ಲಿ ನಂಜರಾಜನಿಗೆ ಸಹಾಯಕನಾಗಿ ಸೈನ್ಯ ಸೇರಿದ ಹೈದರ್ ಆಲಿ ಅಮಿತಶೌರ್ಯ ಸಾಹಸಗಳನ್ನು ಮೆರೆದು ಹೆಸರು ಗಳಿಸಿದ. 50 ಅಶ್ವಗಳ ಮತ್ತು 200 ಪದಾತಿಗಳ ಪಡೆಯ ನಾಯಕನಾದ.

ಈ ಮಧ್ಯೆ ದಖನಿನ ಸುಬೇದಾರ ಪದವಿಗೆ ನಡೆದ ಹೋರಾಟದಲ್ಲಿ ನಾಸಿರ್‌ಜಂಗನ ಪರ ಮೈಸೂರು ಸೈನ್ಯ ಹೊರಡಲು ಹೈದರ್ ಅದರಲ್ಲಿ ಸೇರಿಸಿದ್ದ. ಹೋರಾಟದಲ್ಲಿ ನಾಸಿರ್‌ಜಂಗ್ ಸತ್ತ. ಹೈದರ್ ಅಮಿತ ಐಶ್ವರ್ಯವನ್ನು ವಶಪಡಿಸಿಕೊಂಡು ದೇವನಹಳ್ಳಿಯಲ್ಲಿ ಅದನ್ನು ಬಚ್ಚಿಟ್ಟ.

ಕರ್ಣಾಟಕದ ನವಾಬ ಪದವಿಗೆ ನಡೆದ ಹೋರಾಟದಲ್ಲಿ ನಂಜರಾಜನ ಸೈನ್ಯ ಮಹಮ್ಮದಾಲಿಯ ನೆರವಿಗೆ ಹೋಯಿತು. ಗುಪ್ತ ಒಡಂಬಡಿಕೆಯ ಪ್ರಕಾರ ತಿರುಚ್ಚಿರಪಳ್ಳಿಯಿಂದ ಕನ್ಯಾಕುಮಾರಿಯವರೆಗಿನ ಪ್ರಾಂತ್ಯಗಳನ್ನು ಮೈಸೂರಿಗೆ ನೀಡುವುದಾಗಿ ಮಹಮ್ಮದಾಲಿ ಆಶೆ ತೋರಿಸಿದ್ದ. ಜಯಶೀಲನಾದ ಮೇಲೆ ಅವನು ಶ್ರೀರಂಗಂ ಮತ್ತು ನೆರೆಹೊರೆಯ ಪ್ರದೇಶಗಳ ಆದಾಯವನ್ನು ಮಾತ್ರ ಕೊಡಲೊಪ್ಪಿದ. ಹೀಗೆ ನಂಜರಾಜನಿಗೆ ನಿರಾಶೆಯಾಯಿತು. ಇದರಿಂದ ಮತ್ತು ನಂಜರಾಜನ ಇತರ ಕಾರ್ಯಗಳಿಂದ ರಾಜ್ಯದ ಬೊಕ್ಕಸ ಬರಿದಾಗಿತ್ತು. ಈ ಸಂದರ್ಭದಲ್ಲಿ ದಖನಿನ ಸುಬೇದಾರ ಸಲಾಬತ್‌ಜಂಗ್ ಫ್ರೆಂಚರ ಸಹಾಯದಿಂದ ಮೈಸೂರನ್ನು ಮುತ್ತಿ ಕಪ್ಪಕಾಣಿಕೆಗಳನ್ನು ಕೊಡುವಂತೆ ಬಲಾತ್ಕರಿಸಿದ. ದೇವರಾಜ ವಿಧಿಯಿಲ್ಲದೆ 56 ಲಕ್ಷ ರೂ. ಕೊಡಲೊಪ್ಪಿದರೂ ಅಷ್ಟು ಹಣವನ್ನು ಒಟ್ಟುಗೂಡಿಸಲು ಆಗಲಿಲ್ಲ. ದೇಶದಲ್ಲಿ ಅನಾಯಕ ಪರಿಸ್ಥಿತಿ ತಲೆದೋರಿತು. ಈವರೆಗೂ ಪ್ರೇಕ್ಷಕರಂತಿದ್ದ ಕೃಷ್ಣರಾಜರು ತಮ್ಮ ಅಧಿಕಾರವನ್ನು ಮರಳಿ ಪಡೆದು ರಾಜ್ಯದ ಪರಿಸ್ಥಿತಿಯನ್ನು ತಹಬಂದಿಗೆ ತರಲು ನಿರ್ಧರಿಸಿದರು. ದಳವಾಯಿಗಳನ್ನು ಮೂಲೆಗೊತ್ತರಿಸುವ ನಿರ್ಧಾರ ಮಾಡಿದ್ದುದನ್ನು ತಿಳಿದ ನಂಜರಾಜ ಅವರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಅವರ ಪಕ್ಷದವರ ಕಿವಿಮೂಗುಗಳನ್ನು ಅವರ ಸಮ್ಮುಖದಲ್ಲೇ ಕತ್ತರಿಸಿ ಹಾಕಿದ. ಅಸಹಾಯಕರಾದ ಅರಸರ ಅವಮಾನವನ್ನು ಸಹಿಸದ ದೇವರಾಜಯ್ಯ ತಮ್ಮನ ಮೇಲೆ ಮುನಿದುಕೊಂಡು ಸತ್ಯಮಂಗಲಕ್ಕೆ ಹೊರಟುಹೋದ. ಇದರ ಜೊತೆಗೆ ಹಣದ ತೊಂದರೆ ಹೆಚ್ಚಾಯಿತು. ಅಲ್ಲದೆ 1757ರಲ್ಲಿ ಮರಾಠರು ಬ್ರಿಟಿಷರ ಸಹಾಯದಿಂದ ದಾಳಿ ನಡೆಸಿ 32 ಲಕ್ಷ ರೂ.ಗಳನ್ನು ಕಾಣಿಕೆಯಾಗಿ ಕೇಳಿದರು. ಈ ಹಣ ಕೊಡಲಾರದ ನಂಜರಾಜ ರಾಜ್ಯದ ಕೆಲವು ಭಾಗಗಳನ್ನು ಅವರಿಗೆ ವಹಿಸಿಕೊಟ್ಟ. ಸೈನ್ಯಕ್ಕೆ ಸಂಬಳ ಸಂದಾಯವಾಗಿರಲಿಲ್ಲವಾಗಿ ಅದು ದಂಗೆಯೆದ್ದಿತು. ನಂಜರಾಜ ಅರಸರಲ್ಲಿ ತನ್ನ ತಪ್ಪೊಪ್ಪಿಕೊಂಡ. ದೇವರಾಜ ಹಿಂದಿರುಗಿದ. ಆದರೆ ಆರು ದಿನಗಳಲ್ಲಿ ಮೃತನಾದ. ಹೈದರ್ ಆಲಿ ಪರಿಸ್ಥಿತಿಯನ್ನು ಸುಧಾರಿಸುವ ಹೊಣೆ ಹೊತ್ತು ಸೈನಿಕರಿಗೆ ತನ್ನ ಬೊಕ್ಕಸದಿಂದ ಹಣ ಕೊಟ್ಟು, ಅಧಿಕಾರವನ್ನು ತಾನೇ ವಹಿಸಿಕೊಂಡ. ಮರಾಠರಿಗೆ ವಹಿಸಿದ್ದ ಪ್ರದೇಶಗಳನ್ನು ಹೈದರ್ ಆಲಿ ಪುನ: ವಶಪಡಿಸಿಕೊಂಡದ್ದರಿಂದ ಅವರು ದಂಡೆತ್ತಿ ಬಂದರು (1759). ಹೈದರ್ ಆಲಿ ಅವರನ್ನು ಸೋಲಿಸಿ, ಸಂಧಿ ಮಾಡಿಕೊಂಡ. ಅದರ ಪ್ರಕಾರ 32 ಲಕ್ಷ ಹಣ ಕೊಡಬೇಕಾಯಿತು. 16 ಲಕ್ಷ ಹಣ ಕೊಟ್ಟು ಉಳಿದುದನ್ನು ಕೊಡುವ ಜವಾಬ್ದಾರಿಯನ್ನು ಹೈದರನೇ ವಹಿಸಿಕೊಂಡ. ಹೈದರನ ಈ ಸಾಹಸಗಳಿಂದ ಸುಪ್ರೀತರಾದ ಕೃಷ್ಣರಾಜರು ಶ್ರೀರಂಗಪಟ್ಟಣದ ಆಸ್ಥಾನದಲ್ಲಿ ವೈಭವಪೂರ್ಣ ದರ್ಬಾರಿನಲ್ಲಿ ಹೈದರನಿಗೆ ಗೌರವ ನೀಡಿ ಫತ್ತೆ ಹೈದರ್ ಬಹಾದ್ದೂರ್ ಎಂಬ ಬಿರುದು ನೀಡಿದರು

(1759). ಕೃಷ್ಣರಾಜ ಒಡೆಯರು ಹೈದರನ ವಿಷಯದಲ್ಲಿ ಹೆಚ್ಚುಹೆಚ್ಚು ಆದರ ತೋರಿ ಕ್ರಮೇಣ ಆಸ್ಥಾನದಲ್ಲಿ, ಆಡಳಿತದಲ್ಲಿ ಅವನ ಪ್ರಾಬಲ್ಯ ಹೆಚ್ಚುವಂತೆ ಮಾಡಿ, ನಂಜರಾಜನ್ನು ಅಧಿಕಾರದಿಂದ ತೆಗೆದು ಹಾಕಿದರು. ಕೊಣನೂರಿನಲ್ಲಿ ನೆಲಸಿದ ನಂಜರಾಜನಿಗೆ ಒಂದು ಲಕ್ಷ ರೂ.ಗಳ ವರಮಾನದ ಜಹಗೀರಿಯನ್ನು ಕೊಡಲಾಯಿತು. ನಂಜರಾಜನ ಮಗಳಾದ ಮಹಾರಾಣಿ ಈ ಮಧ್ಯೆ ತೀರಿಕೊಂಡಳು. ಒಡೆಯರು ಮತ್ತೆ ಇಬ್ಬರನ್ನು ವಿವಾಹವಾದರು. ಈ ಇಬ್ಬರಲ್ಲಿ ಒಬ್ಬರು ಮೈಸೂರಿನ ಇತಿಹಾಸದಲ್ಲಿ ಪ್ರಸಿದ್ಧರಾದ ಲಕ್ಷ್ಮಮ್ಮಣ್ಣಿ. ಕ್ರಮೇಣ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದ ಹೈದರ್ ಆಲಿ ಫ್ರೆಂಚರ ಜೊತೆಗೂಡಿ ಬ್ರಿಟಿಷರ ವಿರುದ್ಧ ಯುದ್ಧಕ್ಕಿಳಿದ. ಈ ಮಧ್ಯೆ ಹೈದರನ ವಿರುದ್ಧ ರಾಜಧಾನಿಯಲ್ಲಿ ಪಿತೂರಿ ನಡೆಯಿತು. ಅವನು ಎಚ್ಚರಿಕೆ ವಹಿಸಿ ತಲೆತಪ್ಪಿಸಿಕೊಂಡು ಆನೆಕಲ್ಲಿನಲ್ಲಿದ್ದ ತನ್ನ ಭಾವಮೈದುನ ಇಸ್ಮಾಯಿಲ್ ಆಲಿಯ ಆಶ್ರಯದಲ್ಲಿ ನಿಂತ. ಮೊದಲು ಹೈದರ್ ಆಲಿಯ ನಂಬಿಕೆಯ ಸಹಚರನಾಗಿದ್ದು ಆಮೇಲೆ ಒಡೆಯರ ಪರವಾಗಿ ಪಿತೂರಿಯ ಮುಖ್ಯನಾಗಿದ್ದ ಖಂಡೇರಾಯನನ್ನು ಸೋಲಿಸಿ, ಕೃಷ್ಣರಾಜ ಒಡೆಯರು ತನಗೆ ಸರ್ವಾಧಿಕಾರವನ್ನು ವಹಿಸುವಂತೆ ಮಾಡಿಕೊಂಡ. ಒಡೆಯರಿಗೆ 3 ಲಕ್ಷ ಮತ್ತು ಈ ಹೋರಾಟದಲ್ಲಿ ತನಗೆ ನೆರವು ನೀಡಿದ ಕರಾಚುರಿ ನಂಜರಾಜನಿಗೆ 1 ಲಕ್ಷ ಪಗೋಡಗಳ ವರ್ಷಾಶನ ನೀಡಿ ಖಂಡೇರಾಯನನ್ನು ಕೊಂದು ಹಾಕಿದ. 1761ರ ಅನಂತರ ಹೈದರ್ ಆಲಿಯ ಸರ್ವಾಧಿಕಾರದಲ್ಲಿ ಹೆಸರಿಗೆ ಮಾತ್ರ ಅರಸರಾಗಿ ಮುಂದುವರಿದ ಇಮ್ಮಡಿ ಕೃಷ್ಣರಾಜರು 1766ರಲ್ಲಿ ಮೃತರಾದರು.

*

**ಕೃಷ್ಣರಾಜ ಒಡೆಯರ್ III** : 1794–1868. ಹಿಂದಿನ ಮೈಸೂರಿನ ರಾಜವಂಶದ 22ನೆಯ ಅರಸರು. ಇವರ ಆಳ್ವಿಕೆಯ ಕಾಲ 1799–1868. 1831ರಲ್ಲಿ ರಾಜ್ಯದಲ್ಲಿ ತಲೆದೋರಿದ ಪ್ರಕ್ಷುಬ್ಧ ಪರಿಸ್ಥಿತಿಯ ನೆವದಿಂದ ಬ್ರಿಟಿಷರು ಸಂಸ್ಥಾನದ ಸೂತ್ರವನ್ನು ತಾವೇ ವಹಿಸಿಕೊಂಡು ಕಮಿಷನರುಗಳ ಮೂಲಕ 1868ರ ತನಕ ಅಂದರೆ ಇವರ ಮರಣದ ತನಕ ಆಡಳಿತ ನಡೆಸುತ್ತಿದ್ದರೂ ಹೆಸರಿಗೆ ಮಾತ್ರ ಇವರೇ ಅರಸರಾಗಿದ್ದರು. ಮೈಸೂರಿನ ಚರಿತ್ರೆಯಲ್ಲಿ ಇವರ ಕಾಲದಲ್ಲಿ ಉಂಟಾದ ವಿಷಮಪರಿಸ್ಥಿತಿ ಮತ್ತು ಸಾಹಿತ್ಯನಿರ್ಮಾಣ ಇವೆರಡೂ ಗಮನಾರ್ಹವಾದವು. ಕೃಷ್ಣರಾಜರು ಸ್ವತಃ ಕವಿ. ಅಲ್ಲದೆ ಅನೇಕ ಕವಿಗಳಿಗೆ ಆಶ್ರಯ ಕೊಟ್ಟು ಕವಿಜನ ಕಾಮಧೇನು, ಕನ್ನಡದ ಭೋಜ ಎಂದೆಲ್ಲ ಪ್ರಸಿದ್ಧರಾಗಿದ್ದರು. ಇವರ ಅಂಕಿತದಲ್ಲಿರುವ ಕೃತಿಗಳ ಸಂಖ್ಯೆ ಐವತ್ತೊಂಬತ್ತು. ಇವರ ಘನತೆ, ಗಾಂಭೀರ್ಯ, ರಸಿಕತೆ, ಕಲಾಪ್ರೇಮ ಅನುಪಮ ವಾದವೆಂದು ಹೇಳಲಾಗಿದೆ.

ಹೈದರ್ ಆಲಿಯ ಮತ್ತು ಟಿಪ್ಪುವಿನ ಕಾಲದಲ್ಲಿ ಅಧಿಕಾರ ಕಳೆದುಕೊಂಡಿದ್ದ ರಾಜ ಮನೆತನ 1799ರಲ್ಲಿ, ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಮರಣ ಹೊಂದಿದಾಗ, ಮತ್ತೆ ಅಧಿಕಾರ ಪಡೆಯಿತು. ದುರಾಡಳಿತ, ಎಡೆಬಿಡದ ಯುದ್ಧಗಳು, ಕ್ಷಾಮದ ಭಯ– ಇವುಗಳಿಂದ ದೇಶ ನರಳುತ್ತಿದ್ದಾಗ 1799ರಲ್ಲಿ ಕೃಷ್ಣರಾಜರು ತಮ್ಮ ಆರನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದರು.

ಇವರು ಬಾಲಕರಾಗಿದ್ದುದರಿಂದ ದಿವಾನ್ ಪೂರ್ಣಯ್ಯ ಮತ್ತು ರಾಣಿ ಲಕ್ಷ್ಮಮ್ಮಣ್ಣಿ ಆಡಳಿತ ಸೂತ್ರಗಳನ್ನು ವಹಿಸಿಕೊಳ್ಳಬೇಕಾಯಿತು. ರಾಣಿ ಲಕ್ಷ್ಮಮ್ಮಣ್ಣಿ ಬಹಳ ಚತುರಮತಿಯುಳ್ಳ ಸ್ತ್ರೀ. ಟಿಪ್ಪುವಿನ ಕೈಯಿಂದ ರಾಜ್ಯವನ್ನು ಹಿಂದಕ್ಕೆ ಗಳಿಸಲು ಅವರು ಕಂಪನಿ ಸರ್ಕಾರದೊಂದಿಗೆ ನಡೆಸಿದ ವ್ಯವಹಾರ ಉತ್ತಮ ರಾಜಕಾರಣದ ನಿದರ್ಶನ. ಇದರ ಜೊತೆಗೆ ಆಡಳಿತನಿಪುಣನೂ, ಅನುಭವಿಯೂ ಆದ ಪೂರ್ಣಯ್ಯ ದಿವಾನನಾದುದು ಆಡಳಿತ ಸುಸೂತ್ರವಾಗಲು ಕಾರಣವಾಯಿತು. ಪೂರ್ಣಯ್ಯ ಕೃಷ್ಣರಾಜರಿಗೆ ರಾಜಯೋಗ್ಯವಾದ ಸಕಲ ಶಿಕ್ಷಣವನ್ನೂ ನೀಡಿದ್ದ. ಕನ್ನಡ, ಸಂಸ್ಕೃತ, ಮರಾಠಿ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಕೃಷ್ಣರಾಜರಿಗೆ ಪಾಂಡಿತ್ಯವಿತ್ತು. 1812ರಲ್ಲಿ ಪೂರ್ಣಯ್ಯ ಮೃತನಾದಾಗ 18 ವಯಸ್ಸಿನ ಕೃಷ್ಣರಾಜರು ಆಡಳಿತವನ್ನು ವಹಿಸಿಕೊಂಡರು. ಪೂರ್ಣಯ್ಯನ ದಕ್ಷ ಆಡಳಿತದಿಂದ ರಾಜ್ಯ ಸುಧಾರಿಸತೊಡಗಿದ್ದರೂ, ಇನ್ನೂ ಪರಿಸ್ಥಿತಿ ಪೂರ್ಣ ಹತೋಟಿಗೆ ಬಂದಿರಲಿಲ್ಲ. ಆ ಸಂದರ್ಭದಲ್ಲಿ ಬ್ರಿಟಿಷರು ಪಿಂಡಾರೆ ಮತ್ತು ಮರಾಠರೊಂದಿಗೆ ನಡೆಸುತ್ತಿದ್ದ ಯುದ್ಧಗಳಲ್ಲಿ ಮೈಸೂರಿನ ಸೈನ್ಯ ಪಾಲುಗೊಳ್ಳಬೇಕಾಯಿತು. 1816–17 ಮತ್ತು 1823–24ರಲ್ಲಿ ದೇಶದಲ್ಲಿ ಭೀಕರ ಕ್ಷಾಮ ತಲೆದೋರಿತು. ತ್ವರಿತವಾಗಿ ಪರಿಹಾರ ಒದಗಿಸಬೇಕಾಯಿತು. ಜನತೆಯ ಬಗ್ಗೆ ಅಪಾರ ಅನುಕಂಪವಿದ್ದ ಕೃಷ್ಣರಾಜರು ಪರಿಹಾರಕಾರ್ಯಗಳಿಗೆ ಅಧಿಕ ಹಣ ಖರ್ಚು ಮಾಡಿದರು. ಇದರಿಂದಾಗಿ ದೇಶದ ಆರ್ಥಿಕಸ್ಥಿತಿ ಹದಗೆಟ್ಟಿತು. ಇದೇ ಸಮಯದಲ್ಲಿ 1830ರಲ್ಲಿ ರಾಜ್ಯದ ಹಲವು ಕಡೆ ದಂಗೆಗಳುಂಟಾದುವು. ಇವುಗಳಲ್ಲಿ ನಗರ ಪ್ರಾಂತ್ಯದ ಗಲಭೆ ಮುಖ್ಯವಾದುದು. ಈ ಭಾಗದಿಂದ ರಾಜ್ಯಕ್ಕೆ ಬರಬೇಕಾದ ಕಂದಾಯ ಸರಿಯಾಗಿ ಬಂದಿರಲಿಲ್ಲ. ಹದಿಮೂರು ಲಕ್ಷ ರೂಪಾಯಿಗಳವರೆಗೆ ಬಾಕಿ ಏರಿತ್ತು. ಅಲ್ಲಿಯ ಫೌಜುದಾರ ಏಳೂವರೆ ಲಕ್ಷ ರೂಪಾಯಿಗಳ ಕಂದಾಯ ಮಾಫಿಗೆ ಶಿಫಾರಸು ಮಾಡಿದಾಗ ಅರಸರು ಅದನ್ನು ಒಪ್ಪಲಿಲ್ಲ. ಅಲ್ಲಿಗೆ ಹೊಸ ಫೌಜುದಾರನನ್ನು ಕಳಿಸಿ ವಿವರಗಳನ್ನು ಪಡೆದಾಗ ಅಲ್ಲಿ ನಡೆದಿದ್ದ ಮೋಸ ಬೆಳಕಿಗೆ ಬಂತು. ಆದ್ದರಿಂದ ಮೊದಲಿನ ಕಂದಾಯವನ್ನೇ ಖಾಯಂಗೊಳಿಸಲಾಯಿತು. ಇದರಿಂದ ಅಸಮಾಧಾನಗೊಂಡ ಸಂಬಂಧಪಟ್ಟವರು ಏನೂ ಅರಿಯದ ಜನತೆಯನ್ನು ರಾಜ್ಯದ ವಿರುದ್ಧ ಎತ್ತಿ ಕಟ್ಟಿದರು. ಇದೇ ಸಮಯದಲ್ಲಿ ಬಿದನೂರಿನ ಅರಸು ಮನೆತನದ ಹಕ್ಕುದಾರನೆಂದು ನಟಿಸುತ್ತಿದ್ದ ಬೂದಿಬಸವಯ್ಯ ದಂಗೆಯ ನಾಯಕನಾದ. ಗಲಭೆಯನ್ನು ಅಡಗಿಸಲು ಮೈಸೂರು ಸೈನ್ಯಕ್ಕೆ ಸಾಧ್ಯವಾಗದೆ ಬ್ರಿಟಿಷ್ ಸೈನ್ಯದ ಸಹಾಯ ಪಡೆದು ದಂಗೆಗಳನ್ನು ಅಡಗಿಸಲಾಯಿತು. ಮೈಸೂರಿನಲ್ಲಿದ್ದ ಬ್ರಿಟಿಷ್ ರೆಸಿಡೆಂಟ್ ಅರಸರ ವಿರುದ್ಧ ವರದಿ ಕಳಿಸಿ, ಅವರು ರಾಜ್ಯದ ಹಣವನ್ನು ಪೋಲು ಮಾಡುತ್ತಿದ್ದಾರೆಂದೂ ಆಡಳಿತ ಹದಗೆಡಲು ಅವರೇ ಕಾರಣರೆಂದೂ ಆಪಾದಿಸಿದ. ಈ ವರದಿಯ ಸತ್ಯಾಸತ್ಯತೆಗಳನ್ನು ಪರೀಕ್ಷಿಸುವ ಮೊದಲೇ ಗವರ್ನರ್–ಜನರಲ್ ಬೆಂಟಿಂಕ್ ಮೈಸೂರು ಸಂಸ್ಥಾನದ ಆಡಳಿತವನ್ನು ಕಂಪನಿ ವಹಿಸಿಕೊಳ್ಳತಕ್ಕದ್ದೆಂದು ಆಜ್ಞೆ ಮಾಡಿದ. ತಮಗಾದ ಅನ್ಯಾಯವನ್ನು ಸರಿಪಡಿಸುವಂತೆ ಬ್ರಿಟಿಷ್ ಸರ್ಕಾರದೊಡನೆ 37 ವರ್ಷಕಾಲ ಕೃಷ್ಣರಾಜರು ಪತ್ರ ವ್ಯವಹಾರ ನಡೆಸುತ್ತ ಹೋರಾಡಿದರು. ಬ್ರಿಟನ್ನಿನಲ್ಲಿ ಉದಾರವಾದ ಬೆಳೆಯುತ್ತಿದ್ದ ಆ ಕಾಲದಲ್ಲಿ ಅಲ್ಲಿಯ ಜನತೆಯ ಮತ್ತು ಪತ್ರಿಕೆಗಳ ಅಭಿಪ್ರಾಯ ಮೈಸೂರರಸರಿಗಾದ ಈ ಅನ್ಯಾಯವನ್ನು ಸರಿಪಡಿಸುವಂತೆ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ತಂದಿತು. ಪ್ರಸಿದ್ಧ ಬ್ರಿಟಿಷ್ ರಾಜಕಾರಣಿಗಳಾದ ಬೆಲ್, ಕ್ಯಾಂಬೆಲ್, ಮಾರ್ಲೆ ಇವರ ಪ್ರಯತ್ನದಿಂದಾಗಿ 1867ರಲ್ಲಿ ಬ್ರಿಟಿಷ್ ಸರ್ಕಾರ ಮಕ್ಕಳಿಲ್ಲದ ಕೃಷ್ಣರಾಜರು ದತ್ತು ಪಡೆಯಬಹುದೆಂದೂ ಆ ದತ್ತುಪುತ್ರ ಪ್ರಾಪ್ತವಯಸ್ಕನಾದಮೇಲೆ ಸಿಂಹಾಸನವನ್ನು ಅವರಿಗೆ ವಹಿಸಿಕೊಡುವುದಾಗಿಯೂ ಒಪ್ಪಿತು. 1867ರ ಜುಲೈ 18ರಂದು ರಾಜಮನೆತನದವರೇ ಆದ, 17 ವರ್ಷದ ಚಾಮರಾಜ ಒಡೆಯರನ್ನು ದತ್ತು ತೆಗೆದುಕೊಳ್ಳಲಾಯಿತು. ಇದಾದ ಒಂದೇ ವರ್ಷದಲ್ಲಿ 1868ರ ಜೂನ್ 27ರಂದು ಮುಮ್ಮಡಿ ಕೃಷ್ಣರಾಜರು ದೈವಾಧೀನರಾದರು.

**ಇವರ ಕಾಲದ ಸಾಹಿತ್ಯ, ಕಲೆ** : ಮುಮ್ಮಡಿ ಕೃಷ್ಣರಾಜರು ಅಧಿಕಾರವನ್ನು ಕಳೆದುಕೊಂಡರೂ ಮನಸ್ಸ್ವಾಸ್ಥ್ಯವನ್ನು ಕಳೆದುಕೊಳ್ಳಲಿಲ್ಲ. ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರವಾದ ಒಲವನ್ನು ಹೃದಯದಲ್ಲಿ ತುಂಬಿಕೊಂಡಿದ್ದ ಇವರು ಕೈಬಿಟ್ಟು ಹೋಗಿದ್ದ ಅಧಿಕಾರವನ್ನು ಹಿಂದಕ್ಕೆ ಪಡೆಯಲು ಕ್ರಮಬದ್ಧ ವ್ಯವಹಾರದಲ್ಲಿ ತೊಡಗಿದರಾದರೂ ಅಧಿಕಾರದ ಆಸೆಯ ಕನಸಿನಲ್ಲಿ ಕಾಲ ಕಳೆಯಲಿಲ್ಲ. ತಮ್ಮ ಬಿಡುವಿನ ವೇಳೆಯನ್ನೆಲ್ಲ ಸಾಹಿತ್ಯಾಧ್ಯಯನಕ್ಕೆ ಮೀಸಲಾಗಿಸಿದರು.

ಮುಮ್ಮಡಿ ಕೃಷ್ಣರಾಜರ ಆಶ್ರಯದಲ್ಲಿ ಪ್ರಸಿದ್ಧರಾದ ವಿದ್ವಾಂಸರು, ಕವಿಗಳು, ಶಿಲ್ಪಿಗಳು ಮತ್ತು ಸಂಗೀತಗಾರರು ಕಲಾಸೃಷ್ಟಿಯಲ್ಲಿ ನಿರತರಾಗಿದ್ದರು. ವೀಣೆ ವೆಂಕಟಸುಬ್ಬಯ್ಯ, ಕುಣಿಗಲ್ ರಾಮಶಾಸ್ತ್ರಿ, ಸೋಸಲೆ ಗರಳಪುರಿಶಾಸ್ತ್ರಿ, ಅಳಿಯ ಲಿಂಗರಾಜ, ಕೆಂಪುನಾರಾಯಣ, ದೇವಲಾಪುರದ ನಂಜುಂಡ, ಬಸವಪ್ಪಶಾಸ್ತ್ರಿ ಮೊದಲಾದ ಕವಿ, ಕಲಾವಿದರನ್ನಿಲ್ಲಿ ಹೆಸರಿಸಬಹುದು. ರಾಜರು ಇಂಥ ಕವಿಗಳಿಗೆ, ಕಲಾವಿದರಿಗೆ ಆಶ್ರಯ ನೀಡಿದುದಷ್ಟೇ ಅಲ್ಲದೆ ಸ್ವತಃ ಕನ್ನಡದಲ್ಲಿ ಹೇರಳವಾಗಿ ಕೃತಿ ರಚನೆ ಮಾಡಿದ್ದಾರೆ. ಸಂಸ್ಕೃತದಲ್ಲಿ ಕೃಷ್ಣಕಥಾ ಪುಷ್ಪಮಂಜರಿ, ರಾಮಾಯಣ ಕಥಾ ಪುಷ್ಪಮಂಜರಿ, ಚಾಮುಂಡಿ ಮಂಗಳ ಮಾಲಿಕಾ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರ ಕನ್ನಡ ಕೃತಿ ರಚನೆಯಂತೂ ಯಾರನ್ನಾದರೂ ದಂಗುಬಡಿಸುವಂತಿದೆ. ಸುಮಾರು ಐವತ್ತೊಂಬತ್ತು ಗ್ರಂಥಗಳು ಇವರ ಹೆಸರಿನಲ್ಲಿದ್ದು ಇವರ ವಿದ್ವತ್ತು, ಪ್ರತಿಭೆಗಳಿಗೆ ಸಾಕ್ಷಿಯಾಗಿವೆ. ಸಂಸ್ಕೃತ ಸಾಹಿತ್ಯದ ಪ್ರಮುಖ ಗ್ರಂಥಗಳನ್ನು ಕನ್ನಡ ಜನಕ್ಕೆ ಪರಿಚಯ ಮಾಡಿಕೊಡಬೇಕೆಂದು ಇವರ ಆಸೆಯಾಗಿದ್ದಂತೆ ಕಂಡುಬರುತ್ತದೆ.

ಶೃಂಗಾರಪ್ರಧಾನವಾದ ರತ್ನಾವಳಿ ನಾಟಕದ ಕತೆಯನ್ನು ವಿಸ್ತಾರವಾಗಿ ಸುಲಲಿತವಾದ ಗದ್ಯದಲ್ಲಿ ಬರೆದು ವತ್ಸರಾಜಕಥೆ ಎಂಬ ಹೆಸರಿಟ್ಟಿದ್ದಾರೆ. ಯೌಗಂಧರಾಯಣ ಹೂಡಿದ ಉಪಾಯಗಳಿಂದ ಸಿಂಹಳದ ರಾಜಕುಮಾರಿ ರತ್ನಾವಳಿಯನ್ನು ಕೌಶಾಂಬಿಯ ವತ್ಸರಾಜ ಮದುವೆಯಾದ ಪ್ರಸಂಗವೇ ಇದರ ಕತೆ. ಸೌಗಂಧಿಕಾಪರಿಣಯವನ್ನು ಭಾಮಿನಿ ಷಟ್ಪದಿಯಲ್ಲಿಯೂ ಗದ್ಯದಲ್ಲಿಯೂ ಬರೆದಿದ್ದಾರೆ. ದುರ್ವಾಸ ಮುನಿಯ ಶಾಪದಿಂದ ಇಂದ್ರ ರತ್ನಪುರಿಯ ರಾಜನಾದ ಸುಚರಿತ್ರನಿಗೆ ಗುಣವತಿಯ ಗರ್ಭದಲ್ಲಿ ಸುಗಂಧರಾಯನೆಂಬ ಮಗನಾಗಿ ಹುಟ್ಟಿ ಸೌಗಂಧಿಕಾದೇವಿಯಾಗಿ

ಹುಟ್ಟಿದ್ದ ಶಚೀದೇವಿಯನ್ನು ಮದುವೆಯಾದುದೇ ಈ ಕೃತಿಯ ಕಥಾವಸ್ತು. ಕೃಷ್ಣಕಥಾಸಂಗ್ರಹದಲ್ಲಿ ಕೃಷ್ಣನ ಅನೇಕ ಅವತಾರಗಳು ವರ್ಣಿತವಾಗಿವೆ. ರಾಮಾವತಾರದ ಕಥೆ 77 ಅಧ್ಯಾಯಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ಬೌದ್ಧಾವತಾರ, ಕಪಿಲಾವತಾರಗಳೂ ದತ್ತಾತ್ರೇಯ ವೃತ್ತಾಂತವೂ ವೆಂಕಟೇಶ ಮಾಹಾತ್ಮ್ಯ, ಶ್ರೀನಿವಾಸ ಕೊರವಂಜಿಯ ವೇಷ ಧರಿಸಿದ ಪ್ರಸಂಗಗಳೂ ಇಲ್ಲಿ ಸೇರಿವೆ.

ಸಂಸ್ಕೃತ ಭಾಷೆಯಲ್ಲಿದ್ದು ಸಾಮಾನ್ಯ ಜನರಿಗೆ ನಿಲುಕದಿದ್ದ ಭಾರತ, ಭಾಗವತಗಳನ್ನು ಇವರು ತಿಳಿಯಾದ ಕನ್ನಡದಲ್ಲಿ ವಿಸ್ತಾರವಾಗಿ ಗದ್ಯರೂಪದಲ್ಲಿ ಬರೆದಿದ್ದಾರೆ. ಕಾಳಿದಾಸನ ಶಾಕುಂತಲ, ವಿಕ್ರಮೋರ್ವಶೀಯ, ಮಾಳವಿಕಾಗ್ನಿಮಿತ್ರ ನಾಟಕಗಳನ್ನು ಕನ್ನಡ ಗದ್ಯರೂಪಕ್ಕೆ ತಿರುಗಿಸಿದ್ದಾರೆ. ಪಂಚತಂತ್ರದ ನೀತಿಕಥೆಗಳನ್ನು ಕನ್ನಡದಲ್ಲಿ 'ಬಾಲಹಿತಾರ್ಥ' ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ಕಥೆಗಳನ್ನು ಸಂಕ್ಷಿಪ್ತವಾಗಿ ಹೇಳುವ ಕಲೆ ಕೃಷ್ಣರಾಜರಿಗೆ ಸಿದ್ಧಿಸಿದೆ. ಪದ್ಮಪುರಾಣಾಂತರ್ಗತವಾದ ಅರ್ಕಪುಷ್ಕರಿಣಿ ಮಾಹಾತ್ಮ್ಯವೂ ಅಖಂಡ ಕಾವೇರಿ ಮಹಾತ್ಮ್ಯವೂ ಸಾಮಾನ್ಯ ಜನರಿಗಾಗಿ ಬರೆದ ಕೃತಿಗಳು. ಅಖಂಡ ಕಾವೇರಿ ಮಾಹಾತ್ಮ್ಯ ಟೀಕು ಸ್ಕಂದಪುರಾಣದ ಆಧಾರದ ಮೇಲೆ ರಚಿತವಾದುದು. ಇದರಲ್ಲಿ ಸಂಸ್ಕೃತ ಶ್ಲೋಕಗಳಿಗೆ ವಿವರಣಾತ್ಮಕ ಟೀಕೆಯಿದೆ.

ಶ್ರೀತತ್ತ್ವನಿಧಿ ಮುಮ್ಮಡಿಯವರಿಂದ ರಚಿತವಾದ ಒಂದು ವಿಶಿಷ್ಟ ಗ್ರಂಥ. ಅದರಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ ಮತ್ತು ಕೌತುಕನಿಧಿ ಎಂಬ ಒಂಬತ್ತು ನಿಧಿಗಳಿವೆ. ಅವುಗಳಲ್ಲಿರುವ ವಿಷಯಗಳನ್ನು ಸುಲಭವಾಗಿ ಅರಿತುಕೊಳ್ಳಲು ಸಾಧ್ಯವಾಗುವಂತೆ ಚಿತ್ರಗಳನ್ನು ಕೊಡಲಾಗಿದೆ. ಈಗ ಉಪಲಬ್ಧವಿರುವ ಹಸ್ತಪ್ರತಿಯಲ್ಲಿ ಸುಮಾರು ನಾಲ್ಕು ಸಾವಿರ ಚಿತ್ರಗಳಿವೆ. ಈ ಚಿತ್ರಗಳ ಕಲಾಕೌಶಲ ಅದ್ಭುತವಾದುದು. ಕೊನೆಯದಾದ ಕೌತುಕ ನಿಧಿಯಲ್ಲಿ ಪುರಾತನ ಕಾಲದಿಂದ ರೂಢಿಯಲ್ಲಿ ಬಂದಿರುವ ಹಸ್ತಿಬಂದಾಧಿ ಕ್ರೀಡೆಗಳ ವಿವರಣೆ, ಚತುರಂಗಾದಿ ಆಟಗಳ ನಿರೂಪಣೆ ವಿವರವಾಗಿ ಬಂದಿವೆ. ಇದೊಂದು ಸಣ್ಣ ವಿಶ್ವಕೋಶ. ಸಂಖ್ಯಾರತ್ನಮಾಲಾ, ತ್ರೇತಾಗ್ನಿ, ತ್ರಿಮೂರ್ತಿಗಳು, ಗುಣತ್ರಯ, ಪಂಚಮಹಾಪಾತಕಗಳು, ಪಂಚಪ್ರಾಣ, ಪಂಚೇಂದ್ರಿಯಗಳು ಮುಂತಾದವುಗಳ ಸಾರಸಂಗ್ರಹವಿಲ್ಲಿದೆ.

ಸಂಸ್ಕೃತದ ಪರಿಚಯವಿಲ್ಲದ ತಮ್ಮ ಪ್ರಜೆಗಳು ಅರಿಯಲಿ ಎಂದು ಕಾಳಿದಾಸನ ಶಾಕುಂತಲ ನಾಟಕವನ್ನು ಗದ್ಯದಲ್ಲಿ ಇವರು ಬರೆದುದಾಗಿ ತಿಳಿದುಬರುತ್ತದೆ. ಮೂಲ ನಾಟಕದೊಡನೆ ಇದನ್ನು ಹೋಲಿಸಿ ನೋಡಿದರೆ ಕಾಳಿದಾಸನ ಒಂದೊಂದು ಮಾತಿಗೂ ತಮ್ಮದೊಂದು ವಿವರಣೆಯ ಮಾತು ಸೇರಿಸಿ ಮೂಲವನ್ನು ಹಿಗ್ಗಿಸಿರುವುದು ಕಂಡುಬರುತ್ತದೆ. ಮೂಲ ಒಂದು ಪಾಲು ನವೀನ ಟೀಕೆ ಮೂರು ಪಾಲು ಆಗಿದೆ. ಇವರ ಟೀಕೆಗಳಲ್ಲಿ ಒಬ್ಬ ಸಮರ್ಥ ಉಪಾಧ್ಯಾಯನ ಮನೋಧರ್ಮ ಎದ್ದು ಕಾಣುತ್ತದೆ.

ರಾಜ್ಯಾಧಿಕಾರವನ್ನು ಕಳೆದುಕೊಂಡ ಮುಮ್ಮಡಿ ಕೃಷ್ಣರಾಜರು ಆಳವಾದ ಅಧ್ಯಯನದಲ್ಲಿ ತೊಡಗಿದರು. 'ಮುಮ್ಮಡಿ ಶ್ರೀಕೃಷ್ಣಕಂಠೀರವರು ಶ್ರೀಮದ್ರಾಮಯಣ, ವಿಷ್ಣುಪುರಾಣ, ಪದ್ಮ, ಕೂರ್ಮ, ಅಧ್ಯಾತ್ಮ ರಾಮಾಯಣ, ಶಿವ, ವಿಷ್ಣು ಧರ್ಮೋತ್ತರ, ಜೈಮಿನ್ಯಾದಿ ಗ್ರಂಥಗಳಲ್ಲಿರುವ ಅನೇಕ ರಾಮ ಕಥೆಗಳ ಪರಿಶೋಧನೆಯಂ ಮಾಡಿ' ಎಂಬ ಮಾತುಗಳು ಇವರ ಸಂಶೋಧನಾ ದೃಷ್ಟಿಯ ಅಧ್ಯಯನ ನಿಷ್ಠೆಯ ಪ್ರತೀಕವಾಗಿವೆ. ಅಧ್ಯಯನ ಹೆಚ್ಚಿದಂತೆಲ್ಲ ಇವರ ಹೃದಯ, ಮನಸ್ಸುಗಳು ಲೌಕಿಕ ಕ್ರಿಯೆಗಳಿಂದ ದೂರವಾಗಿ ಪಾರಮಾರ್ಥಿಕದತ್ತ ತುಯ್ಯುತ್ತಿರುವುದನ್ನು 'ಕೆಂದುಟಿಯಂ ಪೆರ್ಮೊಲೆಯಂ ಚಂದದ ಮುಖವನ್ನು ನೋಡಿ ಸುಂದರಿಯರ ನಾಂ ಪೊಂದಿ ಮದದಿಂದ ಮರೆತೆನು ಚಂದಿರಧರ ನಿನ್ನ ಪದವ' ಎಂಬ ಇವರ ಮಾತುಗಳಲ್ಲಿ ಕಾಣಬಹುದು.

ಮುಮ್ಮಡಿ ಕೃಷ್ಣರಾಜರು ಕನ್ನಡದಲ್ಲೊಂದು ಸಂಧಿಕಾಲವನ್ನು ಪ್ರತಿನಿಧಿಸುತ್ತಾರೆ. ಇವರ ಕಾಲದಲ್ಲಿ ರಚನೆಗೊಂಡ ವಾಙ್ಮಯ ರಾಶಿಯಲ್ಲಿ ಹಳೆಯದು ಬೇಕಾದಷ್ಟಿದೆ. ಅದರೆ, ಹೊಸದರ ಬೀಜಗಳೂ ಅದರಲ್ಲಿ ಅಡಗಿವೆ ಎಂಬುದು ಪ್ರಮುಖವಾದ ಸಂಗತಿ. ಇಪ್ಪತ್ತನೆಯ ಶತಮಾನದ ಪ್ರಾರಂಭದ ಕಾಲ ಕನ್ನಡ ಸಾಹಿತ್ಯದ ನವೋದಯ ಕಾಲ. ಅದರ ಹಿನ್ನೆಲೆ, ಹತ್ತೊಂಬತ್ತನೆಯ ಶತಮಾನದಲ್ಲಿ ಮುಮ್ಮಡಿ ಕೃಷ್ಣರಾಜರ ಆಳ್ವಿಕೆಯ ದಿನಗಳಲ್ಲಿ ರೂಪಗೊಂಡಿತೆಂದು ಹೇಳಬೇಕು.

ಕೃಷ್ಣರಾಜರ ಕಾಲದಲ್ಲಿದ್ದ ಇಬ್ಬರು ಪ್ರಮುಖ ಗದ್ಯ ಕವಿಗಳೆಂದರೆ ದೇವಚಂದ್ರ ಮತ್ತು ಕೆಂಪುನಾರಾಯಣ. ದೇವಚಂದ್ರನ ರಾಮಕಥಾವತಾರ ಜೈನ ಸಂಪ್ರದಾಯದ ರಾಮಕಥೆಯಾಗಿದೆ. ಆತನ ಇನ್ನೊಂದು ಕೃತಿಯಾದ ರಾಜಾವಳೀ ಕಥೆ ಸಾಹಿತ್ಯ ದೃಷ್ಟಿಯಿಂದ ಮುಖ್ಯವಾದುದು. ಈ ಗದ್ಯ ಕೃತಿಯಲ್ಲಿ ಜೈನಮತಕ್ಕೆ ಸಂಬಂಧಿಸಿದ ಕಥೆಗಳು ಅನೇಕ ರಾಜರ ಚರಿತ್ರೆಗಳು ಮೈಸೂರು ಒಡೆಯರ ವಂಶಾವಳಿಯೂ ಇವೆ. ಆಧುನಿಕ ಗದ್ಯಕಥಾಶೈಲಿಯನ್ನು ನಿರ್ಮಾಣ ಮಾಡಿದವನೆಂದೂ ಪ್ರಸಿದ್ಧನಾಗಿರುವ ಕೆಂಪುನಾರಾಯಣನ ಕೃತಿ ಮುದ್ರಾಮಂಜೂಷ. ಇದೂ ಮತ್ತು ಕೃಷ್ಣ ರಾಜರ ಕೆಲವು ಕೃತಿಗಳೂ ಇಂದಿನ ಗದ್ಯಕ್ಕೆ ಬುನಾದಿ ಹಾಕಿದಂಥವು. ರಾಜಾಶ್ರಯದಲ್ಲಿದ್ದು ಅನೇಕ ಕೃತಿಗಳನ್ನು ರಚಿಸಿದ ಖ್ಯಾತಿಗೆ ಪಾತ್ರನಾದ ಇನ್ನೊಬ್ಬನೆಂದರೆ ಅಳಿಯ ಲಿಂಗರಾಜ.

ಹೀಗೆ ಮುಮ್ಮಡಿ ಕೃಷ್ಣರಾಜರ ಕಾಲ ಚರಿತ್ರೆಯ ದೃಷ್ಟಿಯಿಂದಲೂ ಸಾಹಿತ್ಯಾದಿ ಸಾಂಸ್ಕೃತಿಕ ದೃಷ್ಟಿಯಿಂದಲೂ ಮಹತ್ತ್ವಪೂರ್ಣವಾಗಿದೆ. **(ನೋಡಿ– ಒಡೆಯರ ಕಾಲದ ಕನ್ನಡ ಸಾಹಿತ್ಯ)**

**(ಎಚ್.ಕೆ.ಆರ್.ಜಿ.)**

**ಕೃಷ್ಣರಾಜ ಒಡೆಯರ್ IV** : 1884–1940 ಮೈಸೂರು ಸಂಸ್ಥಾನದ ರಾಜ ಮನೆತನದ 24ನೆಯ ಅರಸು; ಅದಕ್ಕೆ ಮಾದರಿ ಸಂಸ್ಥಾನವೆಂಬ ಅಭಿದಾನಗಳಿಸಿ ಕೊಟ್ಟ ರಾಜನೀತಿಜ್ಞ, ಆಳ್ವಿಕೆಯ ಕಾಲ 1895–1940. ಭಾರತೀಯರ ಸ್ವಾತಂತ್ರ್ಯ ಚಳವಳಿ ರೂಪುಗೊಳ್ಳುತ್ತಿದ್ದ ಕಾಲದಲ್ಲಿ, 1895ರಲ್ಲಿ ಇವರು ಪಟ್ಟಕ್ಕೆ ಬಂದರು. ಕೃಷ್ಣರಾಜ ಒಡೆಯರು ಆಗಿನ್ನೂ ಚಿಕ್ಕವರಾಗಿದ್ದುದರಿಂದ ಅವರ ತಾಯಿ ಕೆಂಪನಂಜಮ್ಮಣ್ಣಿಯವರು ರಾಜಪ್ರತಿನಿಧಿಯಾಗಿ ಆಡಳಿತದಲ್ಲಿ ಮಹತ್ತರವಾದ ಪಾತ್ರ ವಹಿಸಿದರು. ಅವರಿಗೆ ಸಹಾಯಕರಾಗಿ ದಿವಾನರೂ ಮತ್ತು ರೆಸಿಡೆಂಟರಿದ್ದರು. ಕೃಷ್ಣರಾಜರಿಗೆ ಕಾಲಾನುಗುಣವಾಗಿ ಹೊಸ ರೀತಿಯ ವಿದ್ಯೆ ಕೊಡಿಸಲಾಯಿತು. ಮೊದಲಿಗೆ ಜೆ.ಜೆ. ವಿಟ್ಲೆ, ಅನಂತರ ಸ್ಟೂವರ್ಟ್‌ಫ್ರೇಸರ್ ಇವರ ಅಧ್ಯಾಪಕರಾಗಿದ್ದರು. ಜೊತೆಗೆ ಕೃಷ್ಣರಾಜರು ರಾಜ್ಯಾದ್ಯಂತ ಪ್ರವಾಸ ಮಾಡಿ, ಅಧಿಕಾರಿಗಳನ್ನೂ ಪ್ರಜೆಗಳನ್ನೂ ಭೇಟಿ ಮಾಡಿ ಆಡಳಿತಾನುಭವ ಪಡೆದರು. ಈ ಪ್ರವಾಸ ಮತ್ತು ಭೇಟಿಗಳೇ ಕೃಷ್ಣರಾಜರ ಜನಪ್ರಿಯತೆಗೆ ಮೂಲ. ಇವರು ಉತ್ತರಭಾರತದ ಅನೇಕ ರಾಜ್ಯಗಳಲ್ಲೂ ಪ್ರವಾಸ ಮಾಡಿದರು. 1900ರಲ್ಲಿ ಕಾಠಿಯಾವಾಡದ ಉಪಶಾಖೆಗೆ

ಸೇರಿದ ರಾಣಾ ಥಲಬಾಸೆ ಸಿಂಘ್‌ಜೀಯವರ ಪುತ್ರಿ ಪ್ರತಾಪ ಕುಂವರಾರಿಂಬವರನ್ನು ಮದುವೆಯಾದರು.

ಕೃಷ್ಣರಾಜರು ಪ್ರಾಪ್ತವಯಸ್ಕರಾದ ಮೇಲೆ (1902) ರಾಜ್ಯಾಡಳಿತವನ್ನು ಸ್ವತಃ ವಹಿಸಿಕೊಂಡರು. ರಾಜ್ಯದ ಎಲ್ಲೆಡೆಯಲ್ಲೂ ಪ್ರವಾಸ ಕೈಗೊಂಡು ಜನರ ಕುಂದು ಕೊರತೆಗಳನ್ನು ವಿಚಾರಿಸಿ, ಜನತೆಯಲ್ಲಿ ಪ್ರಜಾಸರ್ಕಾರದ ಬಗೆಗೆ ಇದ್ದ ಒಲವನ್ನು ಅರಿತರು. ಸಂಸ್ಥಾನದ ಕಾನೂನು ರಚನೆಯ ಕಾರ್ಯದಲ್ಲಿ ಅಧಿಕಾರಿಗಳು ಹಾಗೂ ಸಾರ್ವಜನಿಕ ಪ್ರತಿನಿಧಿಗಳು ಪಾಲ್ಗೊಳ್ಳುವಂತೆ ಮಾಡಿದ ದೃಷ್ಟಿಯಿಂದ 1907ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಜೊತೆಗೆ ನ್ಯಾಯವಿಧಾಯಕ ಸಭೆಯನ್ನು ರಚಿಸಿದರು. ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆಯಲ್ಲಿ ಸ್ತ್ರೀಯರಿಗೂ ಮತದಾನದ ಹಕ್ಕು ಲಭಿಸಿತು. 1923ರಲ್ಲಿ ಆಡಳಿತ ಸುಧಾರಣೆಗಳನ್ನು ಪ್ರಕಟಪಡಿಸುತ್ತ ಜನತಾ ಪ್ರತಿನಿಧಿಗಳು ಅಧಿಕಾಧಿಕ ಸಂಖ್ಯೆಯಲ್ಲಿ ರಾಜ್ಯಭಾರದಲ್ಲಿ ಭಾಗಿಗಳಾಗುವಂತೆ ಮಾಡುವಲ್ಲಿ ಭಾರತದ ಸಂಸ್ಥಾನಗಳಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯೇ ಪ್ರಾಚೀನತಮವಾದ್ದು ಎಂದು ನುಡಿದರು.

ಆಡಳಿತ ಸೂತ್ರವನ್ನು ವಹಿಸಿಕೊಂಡ ಕೃಷ್ಣರಾಜರು ಅನೇಕ ಜನಹಿತ ಕಾರ್ಯಗಳಲ್ಲಿ ತೊಡಗಿದರು. ಇವರ ಕಾಲದಲ್ಲಿ ಆಸ್ಪತ್ರೆಗಳು ಮತ್ತು ಸಾರಿಗೆ ಸಂಪರ್ಕಗಳಿಗೆ ಹೆಚ್ಚು ಗಮನ ಕೊಡಲಾಯಿತು. ಎಂ. ವಿಶ್ವೇಶ್ವರಯ್ಯನಂಥ ಸಮರ್ಥ ದಿವಾನರು ಇವರಿಗೆ ದೊರೆತು ಆಧುನಿಕ ಮೈಸೂರಿನ ಯೋಜನೆಗಳು ಕಾರ್ಯಗತವಾದುವು. ಇವರಿಬ್ಬರ ನೇತೃತ್ವದಲ್ಲಿ ಮೈಸೂರು ಸರ್ವತೋಮುಖ ಪ್ರಗತಿ ಹೊಂದಿತು.

ರಾಜ್ಯ ಮುಂದುವರಿಯಬೇಕಾದರೆ ವ್ಯವಸಾಯ ಮತ್ತು ಕೈಗಾರಿಕೆಗಳ ಬೆಳೆವಣಿಗೆ ಅತ್ಯಾವಶ್ಯಕವೆಂದು ಅರಿತಿದ್ದ ಕೃಷ್ಣರಾಜರು ವಿಶ್ವೇಶ್ವರಯ್ಯನವರ ಸಹಾಯದಿಂದ ಕೃಷ್ಣರಾಜಸಾಗರ, ವಾಣಿವಿಲಾಸ ಸಾಗರಗಳಂತಹ ಬೃಹತ್ ನೀರಾವರಿ ಯೋಜನೆಗಳ ಜೊತೆಗೆ ಅನೇಕ ಸಣ್ಣ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ವ್ಯವಸಾಯಾಭಿವೃದ್ಧಿಗೆ ಭದ್ರ ಬುನಾದಿ ಹಾಕಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಮೊದಲ ಹೆಜ್ಜೆಯಾಗಿ ಶಿವಸಮುದ್ರದ ಜಲವಿದ್ಯುತ್ ಯೋಜನೆಯನ್ನೂ ಅನಂತರ ಭದ್ರಾವತಿಯ ಕಬ್ಬಿಣ ಉಕ್ಕು ಕಾರ್ಖಾನೆಯನ್ನೂ ಸ್ಥಾಪಿಸಿದರು. ಹೀಗೆ ನಾಲ್ವಡಿ ಕೃಷ್ಣರಾಜರೂ ಮೊತ್ತಮೊದಲ ಬಾರಿಗೆ ಇಡೀ ಸಂಸ್ಥಾನದ ಹಿತದೃಷ್ಟಿಯಿಂದ ಅನೇಕ ಕೆಲಸಗಳನ್ನು ಕೈಗೆತ್ತಿಕೊಂಡು ಸಾಧಿಸಿದರು. ಇದರಿಂದ ಸಂಸ್ಥಾನದ ಆರ್ಥಿಕ ವ್ಯವಸ್ಥೆ ಹೆಚ್ಚು ಭದ್ರವಾಯಿತು.

ಇವರ ಮತ್ತೊಂದು ಮಹತ್ತರ ಸಾಧನೆ ಎಂದರೆ ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆ (1916). ಇವರು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಮೊದಲ

ಕುಲಾಧಿಪತಿಯಾಗಿದ್ದರು. ಆ ವಿಶ್ವವಿದ್ಯಾಲಯ ಅವರಿಗೆ ಡಾಕ್ಟೊರೇಟ್ ಪದವಿ ನೀಡಿ ಗೌರವಿಸಿತ್ತು. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡುವ ವಿಚಾರದಲ್ಲಿ ಇವರಿಗೆ ಅಪಾರ ಆಸಕ್ತಿಯಿತ್ತು. ಮೈಸೂರು ವಿಶ್ವವಿದ್ಯಾನಿಲಯ ಆದಷ್ಟು ಬೇಗ ಕನ್ನಡದಲ್ಲಿ ಶಿಕ್ಷಣ ನೀಡಬೇಕೆಂದು ಹೇಳಿದ್ದರು. ಸರ್ವಜನಾದರಣೀಯರಾಗಿದ್ದ ಕೃಷ್ಣರಾಜ ಒಡೆಯರು 1940ರಲ್ಲಿ ದೈವಾಧೀನರಾದರು. (ಎಚ್.ಕೆ.ಆರ್.ಜಿ.)

**ಕೃಷ್ಣರಾಜನಗರ :** ಮೈಸೂರು ಜಿಲ್ಲೆಯ ವಾಯವ್ಯ ಭಾಗದ ತಾಲ್ಲೂಕು; ಆ ತಾಲ್ಲೂಕಿನ ಕೇಂದ್ರ. ದಕ್ಷಿಣದಲ್ಲಿ ಹುಣಸೂರು ತಾಲ್ಲೂಕು, ಆಗ್ನೇಯದಲ್ಲಿ ಮೈಸೂರು ತಾಲ್ಲೂಕು, ಪೂರ್ವದಲ್ಲಿ ಕೃಷ್ಣರಾಜಸಾಗರ ಜಲಾಶಯ, ಉತ್ತರದಲ್ಲಿ ಹಾಸನ ಮತ್ತು ಮಂಡ್ಯ ಜಿಲ್ಲೆಗಳು ಮತ್ತು ಪಶ್ಚಿಮದಲ್ಲಿ ಪಿರಿಯಾಪಟ್ಟಣ ತಾಲ್ಲೂಕು–ಇವು ತಾಲ್ಲೂಕಿನ ಮೇರೆಗಳು. ವಿಸ್ತೀರ್ಣ 605ಚ.ಕಿಮೀ. ಜನಸಂಖ್ಯೆ : 2,39,199 (2001) ಜನಸಾಂದ್ರತೆ : 395. ತಾಲ್ಲೂಕಿನಲ್ಲಿ 6 ಹೋಬಳಿಗಳು, 31 ಗ್ರಾಮ ಪಂಚಾಯಿತಿಗಳು, 156 ಜನವಸತಿಗಳುಳ್ಳ ಹಳ್ಳಿಗಳು ಮತ್ತು 22 ಜನ ವಸತಿಯಿಲ್ಲದ ಹಳ್ಳಿಗಳಿವೆ. ಒಂದು ನಗರ ಸಭೆಯಿದೆ. ಪಶ್ಚಿಮದಿಂದ ಪೂರ್ವಾಭಿಮುಖವಾಗಿ ತಾಲ್ಲೂಕು ಇಳಿಜಾರಾಗಿದೆ. ಎತ್ತರದ ಬೆಟ್ಟಗಳಾಗಲಿ, ಕಾಡುಗಳಾಗಲಿ ಹೆಚ್ಚಾಗಿಲ್ಲ. ಎತ್ತರದ ಪ್ರದೇಶಗಳಲ್ಲಿ ಕಿರಿ ಪೊದೆಗಳು ತಗ್ಗಿನ ಮುಳ್ಳಿನ ಗಿಡಗಳೂ ಇವೆ. ಅಲ್ಲಲ್ಲಿ ಕಣಿವೆಗಳಲ್ಲಿ ತೋಪುಗಳುಂಟು. ಕೇವಲ 166 ಹೆಕ್ಟೇರು ಅರಣ್ಯವೆಂದು ದಾಖಲಾಗಿದೆ. ಇಲ್ಲಿಯ ಕಪ್ಪುಮಿಶ್ರಿತ ಕಂದು ಜೇಡಿ ಕೆಂಪು ಮತ್ತು ಮರಳು ಮಿಶ್ರಿತ ಮಣ್ಣು. ಮಣ್ಣಿನ ಗುಣದಲ್ಲಿ ವ್ಯತ್ಯಾಸವಿದ್ದರೂ ನೀರಾವರಿಯ ಅನುಕೂಲವಿರುವೆಡೆಯಲ್ಲಿ ಇದನ್ನು ವ್ಯವಸಾಯಕ್ಕೆ ಚೆನ್ನಾಗಿ ಅಳವಡಿಸಿಕೊಳ್ಳಲಾಗಿದೆ. ತಾಲ್ಲೂಕಿನ ಉತ್ತರಭಾಗದಲ್ಲಿ ಅತ್ಯಂತ ಪ್ರಾಚೀನವಾದ ಧಾರವಾಡ ಪದರಶಿಲೆಗಳಿವೆ. ಉಳಿದ ಭಾಗಗಳು ಪರ್ಯಾಯ ದ್ವೀಪೀಯ ನೈಸ್ ಶಿಲೆಯಿಂದ ಕೂಡಿವೆ. ಋತುಕಾಲಿಕ ಮಾನ್ಸೂನ್ ಮಾದರಿ ವಾಯುಗುಣವಿದ್ದರೂ ಒಣ ಹವಾಮಾನವೇ ಹೆಚ್ಚು. ತಾಲ್ಲೂಕಿನ



ಕಾವೇರಿ ನದಿ–ಎಡತೊರೆಯ ಬಳಿಯಲ್ಲಿ

ಉಷ್ಣತೆ ಚಳಿಗಾಲದಲ್ಲಿ 36°– 37°ಸೆ. ಬೇಸಗೆಯಲ್ಲಿ 44°– 47°ಸೆ. ಇದು ವ್ಯವಸಾಯಕ್ಕೆ ಅನುಕೂಲವಾದುದು. ಗರಿಷ್ಠ ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ ಏಪ್ರಿಲ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿರುತ್ತವೆ. ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಸಾಮಾನ್ಯವಾಗಿಯೂ ಅಕ್ಟೋಬರಿನಲ್ಲಿ ಹೆಚ್ಚಾಗಿಯೂ ಮುಂಗಾರು ಮಳೆಯಾಗುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 671 ಮಿ.ಮೀ.

ಕಾವೇರಿ ನದಿ ಈ ತಾಲ್ಲೂಕಿನ ನಡುವೆ ಪ್ರವಹಿಸುತ್ತದೆ. ಚುಂಚನಕಟ್ಟೆಯ ಬಳಿ ಇಕ್ಕಟ್ಟಾದ ಕಣಿವೆಯಲ್ಲಿ ಬಂಡೆಗಳ ಮೇಲಿಂದ 35 ಮೀ. ಎತ್ತರದಿಂದ ಧುಮುಕಿ ಮುಂದೆ ತಿಪ್ಪೂರುಬಳಿ ಹೇಮಾವತಿ ಮತ್ತು ಲಕ್ಷ್ಮಣತೀರ್ಥದೊಂದಿಗೆ ಕೂಡಿಕೊಳ್ಳುತ್ತದೆ. ಕೃಷ್ಣರಾಜಸಾಗರ ಕಟ್ಟೆಯನ್ನು ನಿರ್ಮಿಸಲಾಗಿರುವುದು ಅಲ್ಲೇ. ಆ ಕಟ್ಟೆ ಮಂಡ್ಯ ಜಿಲ್ಲೆಯಲ್ಲಿದೆಯಾದರೂ ಜಲಾಶಯದ ನೀರು ಕೃಷ್ಣರಾಜ ನಗರದ ಭಾಗದಲ್ಲೂ ಹರಡಿದೆ.

ಕಾವೇರಿ ನದಿ ವ್ಯವಸ್ಥೆಯಿಂದ ತಾಲ್ಲೂಕಿನಲ್ಲಿ ನೀರಾವರಿ ಪೂರೈಕೆ ಹೆಚ್ಚು. ನದಿಗೆ ಹಿಂದೆಯೇ ನಿರ್ಮಿಸಿದ ಬಳ್ಳೂರುಕಟ್ಟೆ, ಚುಂಚನಕಟ್ಟೆ ಬಳಿಯ ಒಡ್ಡುಗಳು, ಹಾರಂಗಿ ಮತ್ತು ಹೇಮಾವತಿ ಯೋಜನೆಗಳಿಂದ 24,500 ಹೆಕ್ಟೇರುಗಳಿಗೆ ಕಾಲುವೆ ನೀರಾವರಿ ಪೂರೈಕೆಯಾಗುತ್ತಿದೆ. ಕೆರೆಗಳಿಂದ ನೀರಾವರಿ ಕಡಿಮೆ (2500 ಹೆ.) ಬಾವಿ ಮತ್ತು ಕೊಳವೆ ಬಾವಿ ನೀರಾವರಿ ಇತ್ತೀಚೆಗೆ ಪ್ರಚಲಿತಗೊಳ್ಳುತ್ತಿವೆ. ಒಟ್ಟು ನೀರಾವರಿ ಕ್ಷೇತ್ರದಲ್ಲಿ (28000 ಹೆ.) ಶೇ. 87.5 ಭಾಗ ಕಾಲುವೆ ನೀರಾವರಿಯಾಗಿದ್ದು, ಬತ್ತ ಮತ್ತು ಕಬ್ಬು ಬೇಸಾಯಕ್ಕೆ ಪೂರಕವಾಗಿದೆ.

ತಾಲ್ಲೂಕಿನ ಪ್ರಮುಖ ವೃತ್ತಿ ಕೃಷಿ. ಸುಮಾರು 59,495 ಹೆಕ್ಟೇರು ಕೃಷಿಗೆ ಯೋಗ್ಯ. ನಿವ್ವಳ ಬಿತ್ತನೆ ಪ್ರದೇಶದಲ್ಲಿ (29,980 ಹೆ.) ಶೇ. 90 ಭಾಗವು ನೀರಾವರಿಗೊಳಪಟ್ಟಿದೆ. ಅನೇಕ ಬೆಳೆಗಳನ್ನು ಬೆಳೆದರೂ ಬತ್ತ (25,236 ಹೆ.) ಮುಖ್ಯಬೆಳೆ. ರಾಗಿ (7450 ಹೆ.), ಜೋಳ (599 ಹೆ.), ತಂಬಾಕು (5394 ಹೆ.) ಮುಖ್ಯ ವಾಣಿಜ್ಯ ಬೆಳೆಗಳು. ಇವು ಇತ್ತೀಚೆಗೆ ಹೆಚ್ಚು ಪ್ರಚಲಿತಗೊಂಡಿವೆ. ಸುಮಾರು 184 ಹೆಕ್ಟೇರುಗಳಲ್ಲಿ ಹಿಪ್ಪುನೇರಳೆ ಬೆಳೆಯಲಾಗುತ್ತದೆ. ರೈತರಿಗೆ ಜಾನುವಾರುಗಳ ಸಾಕಣೆ ರೂಢಿಯಲ್ಲಿದೆ. ದನಕರು(68227), ಎಮ್ಮೆ(23540), ಕುರಿ(35492), ಮೇಕೆ(16393) ಮತ್ತು ಕೋಳಿ(97750) ಸಾಕುವರು. ವಿವಿಧ ತರಕಾರಿ ಮತ್ತು ತೋಟದ ಬೆಳೆಗಳ ಸಾಗುವಳಿಯೂ ಉಂಟು. ಉದಾ : ತೆಂಗು, ಅಡಿಕೆ, ವೀಳ್ಯದೆಲೆ, ಬಾಳೆ ಇತ್ಯಾದಿ.

ಈ ತಾಲ್ಲೂಕಿನಲ್ಲಿ ಅನೇಕ ಗೃಹ ಕೈಗಾರಿಕೆಗಳುಂಟು. ಅಲ್ಲಲ್ಲಿ ಹತ್ತಿ ಬಟ್ಟೆ ಮತ್ತು ಕಂಬಳಿಗಳನ್ನು ತಯಾರಿಸುತ್ತಾರೆ. ಚುಂಚನಕಟ್ಟೆಯಲ್ಲಿ ಸಕ್ಕರೆ ಕಾರ್ಖಾನೆ ಮತ್ತು ಜಲ ವಿದ್ಯುದಾಗಾರವೊಂದಿದೆ. ಇಲ್ಲಿ ಜನವರಿ ತಿಂಗಳಿನಲ್ಲಿ ರಥೋತ್ಸವ ಮತ್ತು ದೊಡ್ಡ ಜಾತ್ರೆಯಾಗುತ್ತದೆ. ದನಗಳ ಪ್ರದರ್ಶನ ಈ ಜಾತ್ರೆಯ ಮುಖ್ಯ ಆಕರ್ಷಣೆ.

ತಾಲ್ಲೂಕಿನಲ್ಲಿ ರಸ್ತೆಸಾರಿಗೆ ಮುಖ್ಯ. ಒಟ್ಟು ರಸ್ತೆಗಳ ಉದ್ದ 858 ಕಿ.ಮೀ ಇದರಲ್ಲಿ 84 ಕಿ.ಮೀ. ರಾಜ್ಯ ಹೆದ್ದಾರಿಯಾಗಿರುತ್ತದೆ. ಅವುಗಳಲ್ಲಿ ಹಾಸನ–ಮೈಸೂರು ನಡುವಣ ರಸ್ತೆ ತಾಲ್ಲೂಕಿನಲ್ಲಿ ಹಾಯ್ದು ಹೋಗಿರುವ ಉತ್ತಮ ರಸ್ತೆ ಮಾರ್ಗ. ತಾಲ್ಲೂಕು ಕೇಂದ್ರ ಕೆ.ಆರ್. ನಗರದಿಂದ ಎಲ್ಲೆಡೆಗೆ ರಸ್ತೆಸಾರಿಗೆ ಸೌಕರ್ಯವಿದೆ. ಮೈಸೂರು–ಹಾಸನ ರೈಲುಮಾರ್ಗ (41 ಕಿ.ಮೀ.) ಈ ತಾಲ್ಲೂಕು ಮೂಲಕ ಹಾಯ್ದುಹೋಗಿದೆ.

ತಾಲ್ಲೂಕಿನ ಸಾಕ್ಷರತೆಯ ಮಟ್ಟ ತೃಪ್ತಿದಾಯಕ (ಶೇ. 56.47)ವಲ್ಲ. ಪುರುಷರಿಗಿಂತ (ಶೇ. 67.80) ಮಹಿಳೆಯರ ಸಾಕ್ಷರತೆ ಬಹಳ ಕಡಿಮೆ (ಶೇ. 45.06) ಒಟ್ಟು 223 ಪ್ರಾಥಮಿಕ ಮತ್ತು 42 ಪ್ರೌಢಶಾಲೆಗಳಿವೆ. 14 ಪದವಿಪೂರ್ವ 8 ಸಾಮಾನ್ಯ ಪದವಿಕಾಲೇಜು ಹಾಗೂ 32 ಗ್ರಂಥಾಲಯಗಳಿವೆ. 5 ಮೆಟ್ರಿಕ್ ಪೂರ್ವ 1 ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು ಮತ್ತು ಒಂದು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯವಿದೆ. 9 ಹಿಂದುಳಿದ ವರ್ಗದವರ ವಿದ್ಯಾರ್ಥಿನಿಲಯಗಳಿವೆ.

ಕೃಷ್ಣರಾಜನಗರ ಈ ತಾಲ್ಲೂಕಿನ ಕೇಂದ್ರ ಮತ್ತು ಧಾನ್ಯ ರವಾನೆ ಕೇಂದ್ರ. ಉತ್ತರ ಅಕ್ಷಾಂಶ 12°–26' ಮತ್ತು ಪೂರ್ವ ರೇಖಾಂಶ 76°–22'ಗಳಲ್ಲಿದೆ. ಇದು ಸಾರಿಗೆ ಮಾರ್ಗಗಳ ಕೇಂದ್ರವೂ ಹೌದು. ಹಳೆಯ ಊರು ಕಾವೇರಿ ನದಿಯ ದಂಡೆಯಲ್ಲಿ, ಅದು ಎಡಕ್ಕೆ ತಿರುಗುವಲ್ಲಿ ಇತ್ತು. ಆದ್ದರಿಂದ ಅದಕ್ಕೆ ಎಡತೊರೆಯೆಂಬ ಹೆಸರು ಬಂದಿತ್ತು. ಅಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿದ ಅರ್ಕೇಶ್ವರ ದೇವಸ್ಥಾನವಿದೆ. 11ನೆಯ ಶತಮಾನದಲ್ಲಿ ಗಂಗರನ್ನು ಸೋಲಿಸಿ ರಾಜೇಂದ್ರ ಚೋಳ ಈ ಸ್ಥಳವನ್ನು ವಶಪಡಿಸಿಕೊಂಡಿದ್ದ. ಈ ಪಟ್ಟಣ ಪದೇಪದೇ ಕಾವೇರಿ ನದಿಯ ಪ್ರವಾಹಕ್ಕೆ ತುತ್ತಾಗುತ್ತಿತ್ತು. ಕೃಷ್ಣರಾಜಸಾಗರದ ನಿರ್ಮಾಣವಾದ ಮೇಲೆ ಅದರಿಂದ ಈ ಪಟ್ಟಣದ ಒಂದು ಭಾಗದ ಮುಳುಗಡೆಯಾದುದರಿಂದ ಹೊಸ ಪಟ್ಟಣವನ್ನು ಹಳೆಯ ಊರಿಗೆ ಸು. 31/2ಕಿ.ಮೀ ದೂರದಲ್ಲಿ ಎತ್ತರವಾದ ಸ್ಥಳದಲ್ಲಿ ನಿರ್ಮಿಸಲಾಯಿತು. ಆಗ ಇದರ ಹೆಸರು ಕೃಷ್ಣರಾಜನಗರ ಎಂದಾಯಿತು. ಇಲ್ಲಿ ನಿಯಂತ್ರಿತ ಮಾರುಕಟ್ಟೆಯೂ ಶಾಲಾ ಕಾಲೇಜುಗಳು, ನ್ಯಾಯಾಲಯ ಮತ್ತು ಆಸ್ಪತ್ರೆಗಳು ಇವೆ. ಪ್ರತಿ ಶುಕ್ರವಾರ ಇಲ್ಲಿ ಸಂತೆ ನಡೆಯುತ್ತದೆ. (ಕೆ.ಆರ್.ಆರ್.ಪಿ.)

**ಕೃಷ್ಣರಾಜಪೇಟೆ :** ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ತಾಲ್ಲೂಕು ಮತ್ತು ಆ ತಾಲ್ಲೂಕಿನ ಕೇಂದ್ರ. ಪಾಂಡವಪುರದ ರೈಲ್ವೆ ನಿಲ್ದಾಣದಿಂದ 37 ಕಿ.ಮೀ ಮತ್ತು ಮೈಸೂರಿಗೆ 56 ಕಿ.ಮೀ ದೂರದಲ್ಲಿದೆ. ಇದಕ್ಕೆ 1891ರವರೆಗೆ ಅತ್ತಿಗುಪ್ಪೆ ಎಂಬ ಹೆಸರಿತ್ತು. ಆಗ ಇದು ಹಾಸನ ಜಿಲ್ಲೆಗೆ ಸೇರಿತ್ತು. ಆ ವರ್ಷ ಇದಕ್ಕೆ ಕೃಷ್ಣರಾಜಪೇಟೆಯೆಂದು ನಾಮಕರಣ ಮಾಡಿ ಇದನ್ನು ಮೈಸೂರು ಜಿಲ್ಲೆಗೆ ವರ್ಗಾಯಿಸಲಾಯಿತು. 1939ರಲ್ಲಿ ಮೈಸೂರು ಜಿಲ್ಲೆಯನ್ನು ಇಬ್ಭಾಗಿಸಿ ಮಂಡ್ಯ ಜಿಲ್ಲೆಯನ್ನು ನಿರ್ಮಿಸಿದಾಗ ಇದು ಪಾಂಡವಪುರ ಉಪವಿಭಾಗಕ್ಕೆ ಸೇರಿತು. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ 4 ಹೋಬಳಿಗಳು 316 ಹಳ್ಳಿಗಳು ಪುರಸಭೆ 2 ಗ್ರಾಮಪಂಚಾಯಿತಿಗಳು 21 ಇವೆ. ಕೃಷ್ಣರಾಜಪೇಟೆ ತಾಲ್ಲೂಕಿನ ವಿಸ್ತೀರ್ಣ 906.3 ಚ.ಕಿಮೀ. ಜನಸಂಖ್ಯೆ 248245 (2001).

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಹಲವು ಬೆಟ್ಟಗುಡ್ಡಗಳಿವೆ. ಇವುಗಳಲ್ಲಿ ಚನ್ನಗಿರಿ ಮತ್ತು ಜೆಲ್ಲಿ ಬೆಟ್ಟಗಳು ಮುಖ್ಯವಾದವು. ಜೆಲ್ಲಿ ಬೆಟ್ಟ ಕೃಷ್ಣರಾಜಪೇಟೆಗೆ 5 ಕಿಮೀ ದೂರದಲ್ಲಿದೆ. ಬೆಣಚುಕಲ್ಲು ಮತ್ತು ಬೂದು ಬಣ್ಣದ ಶಿಲೆಗಳು ಇಲ್ಲಿವೆ. ದಕ್ಷಿಣದ ಗವಿಬೆಟ್ಟ ಭಾಗದಲ್ಲಿ ಗಟ್ಟಿಯಾದ ಕೆಂಪು ಶಿಲೆಗಳಿವೆ. ಇದರ ಎತ್ತರ ಸಮುದ್ರ ಮಟ್ಟದಿಂದ 760–915 ಮೀ.

ಮಾನ್ಸೂನ್ ಮಾದರಿ ವಾಯುಗುಣ ತಾಲ್ಲೂಕಿನಲ್ಲಿ ಮುಂಗಾರು ಮತ್ತು ಹಿಂಗಾರು ಮಾರುತಗಳಿಂದ ಮಳೆಯಾಗುತ್ತದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನೈರುತ್ಯ ಮಾನ್ಸೂನ್ ಮಾರುತಗಳಿಂದ ಹೆಚ್ಚು ಮಳೆಯಾಗುತ್ತದೆ. ಅಕ್ಟೋಬರ್ ತಿಂಗಳು ಹಿಂಗಾರು ಮಳೆಯ

ಶಿಖರ ಮಾಸ. ಮಾರ್ಚ್–ಮೇ ತಿಂಗಳುಗಳಲ್ಲಿ ಉಷ್ಣತೆ ಹೆಚ್ಚು. ಏಪ್ರಿಲ್ ತಿಂಗಳಿನಲ್ಲಿ ಹಗಲಿನ ಗರಿಷ್ಠ ಮತ್ತು ಕನಿಷ್ಠ ಉಷ್ಣತೆಗಳು ಅನುಕ್ರಮವಾಗಿ 53° ಸೆ. ಮತ್ತು 38.8° ಸೆ, ಗರಿಷ್ಠ ಉಷ್ಣತೆ ಕೆಲವು ವೇಳೆ 54.8° ಸೆ.ವರೆಗೂ ಹೆಚ್ಚಾಗಿರುವುದುಂಟು. ಡಿಸೆಂಬರ್ ತಿಂಗಳಿನಲ್ಲಿ ಉಷ್ಣತೆ 45.8° ಸೆ.– 33.8° ಸೆ. ಕೆಲವು ಬಾರಿ ಇದು 27.8° ಸೆ.ಗೆ ಇಳಿದಿದ್ದು ಉಂಟು. 2005ರಲ್ಲಿ ವಾರ್ಷಿಕಮಳೆ 1042 ಮಿ.ಮೀ.

ಇಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣಿನ ಪ್ರದೇಶ ಹೆಚ್ಚು. ಕೆಲವು ಕಡೆಗಳಲ್ಲಿ ಜೇಡಿಮಣ್ಣಿನ ನೆಲವಿದೆ. ವಿಶಾಲಪ್ರದೇಶ ಬಂಜರು ನೆಲ. ಪೊದೆ ಅಥವಾ ಕುರುಚಲು ಗಿಡಗಳಿಂದ ಕೂಡಿದ ಕಾಡುಗಳು ಅಲ್ಲಲ್ಲಿ ಕಂಡುಬರುತ್ತವೆ. ಈ ಪ್ರದೇಶದಲ್ಲಿ 5767 ಹೆಕ್ಟೇರು ಕಾಡುಗಳು 56,789 ಎಕರೆ ಗೋಮಾಳವು ಇವೆ. ಕೃಷಿ ಯೋಗ್ಯವಲ್ಲದ ಪ್ರದೇಶ 24,344 ಎಕರೆಗಳು.

ಕೃಷ್ಣರಾಜಪೇಟೆಯ ಮುಖ್ಯ ವೃತ್ತಿ ವ್ಯವಸಾಯ; ಶೇಕಡ 90ರಷ್ಟು ಜನ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಸುಮಾರು 55059 ಹೆಕ್ಟೇರು ಭೂಮಿ ಸಾಗುವಳಿಗೆ ಒಳಪಟ್ಟಿದೆ. ವ್ಯವಸಾಯ ಮಳೆಯನ್ನೇ ಬಹುವಾಗಿ ಅವಲಂಬಿಸಿದೆ. ಕೆರೆ, ಕಾಲುವೆ ಮತ್ತು ಬಾವಿಗಳು ನೀರಾವರಿ ವಿಧಗಳು ಇವೆ. ಹೇಮಾವತಿ ಈ ಪ್ರದೇಶದ ಮುಖ್ಯವಾದ ನದಿ. ನಿವ್ವಳ ಬಿತ್ತನೆ ಪ್ರದೇಶದಲ್ಲಿ ಶೇ. 52 ಭಾಗ ನೀರಾವರಿ ಸೌಲಭ್ಯ ಹೊಂದಿದೆ. ನಿವ್ವಳ ನೀರಾವರಿ ಪ್ರದೇಶ 31115 ಹೆ. ಇದರಲ್ಲಿ ಶೇ. 58 ಭಾಗ ಕಾಲುವೆ ನೀರಾವರಿಯಾಗಿರುತ್ತದೆ. ಕಾರು ಮತ್ತು ಹೈನು ಎಂಬ ಎರಡು ವಿಧವಾದ ಬೆಳೆಗಳನ್ನು ಬೆಳೆಯುವರು. ಕಾರು ಬೆಳೆ ಜೂನ್–ಜುಲೈ ತಿಂಗಳುಗಳಲ್ಲಿಯೂ ಹೈನು ಬೆಳೆ ಡಿಸೆಂಬರ್–ಜನವರಿ ತಿಂಗಳುಗಳಲ್ಲೂ ಕಟಾವಾಗುತ್ತವೆ. ಆಹಾರ ಬೆಳೆಗಳೇ ಹೆಚ್ಚು ಶೇ. 77.61 ರಾಗಿ, (1230 ಹೆ.) ಬತ್ತ, (18890 ಹೆ.) ಹುರುಳಿ ಮತ್ತು ಜೋಳ (123 ಹೆ.) ಮುಖ್ಯವಾದ ಬೆಳೆಗಳು ಕಬ್ಬು, ನೆಲಗಡಲೆ, ಬಾಳೆ, ತೆಂಗು, ಹೊಗೆಸೊಪ್ಪು ಹಿಪ್ಪು ನೇರಳೆ ಇವು ಇತರ ಮುಖ್ಯ ಬೆಳೆಗಳು. ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬನ್ನೂರು ಜಾತಿಯ ಕುರಿಗಳನ್ನು ಸಾಕುತ್ತಾರೆ. ದನ ಮತ್ತು ಕೋಳಿ ಸಾಕಣೆಯು ಸಾಕಷ್ಟು ರೂಢಿಯಲ್ಲಿದೆ. ಒಟ್ಟು ಜಾನುವಾರುಗಳ ಸಂಖ್ಯೆ : 110,360 (2000)

ಸೀಳನೆರೆ ಹಳ್ಳಿಯ ಬಳಿ ಕ್ರೋಮೈಟ್ ಖನಿಜ ನಿಕ್ಷೇಪಗಳಿವೆ. ಕೃಷ್ಣರಾಜಪೇಟೆಯ ಪಶ್ಚಿಮಕ್ಕೆ ಬೆಳ್ಳಿ ಬೆಟ್ಟದ ಬಳಿ ಚಿನ್ನ ದೊರೆಯುವುದೆಂದು ತಿಳಿದುಬಂದಿದೆ.

ಕಿಕ್ಕೇರಿ ಮತ್ತು ಸಿಂದಘಟ್ಟಗಳು ರೇಷ್ಮೆ ಬಟ್ಟೆ ತಯಾರಿಕೆಗೆ ಪ್ರಸಿದ್ಧ. ಇಲ್ಲಿ 4,400ಕ್ಕಿಂತಲೂ ಹೆಚ್ಚು ರೇಷ್ಮೆ ನೂಲಿನ ರಾಟೆಗಳಿವೆ. ಇತ್ತೀಚೆಗೆ ಉತ್ಪಾದನೆ ಕಡಿಮೆಯಾಗಿದೆ. ತಾಲ್ಲೂಕಿನಾದ್ಯಂತ ದೊಡ್ಡ ಹಾಗೂ ಸಣ್ಣ ಪ್ರಮಾಣದ 370 ಕೈಗಾರಿಕಾ ಘಟಕಗಳಿವೆ. ಅವುಗಳ 2151 ಜನರು ಕೆಲಸ ಮಾಡುತ್ತಿದ್ದಾರೆ.

ಸಾರಿಗೆ ಸೌಲಭ್ಯ ಹೆಚ್ಚಾಗಿ ಬೆಳೆದಿಲ್ಲ. ಕೃಷ್ಣರಾಜಪೇಟೆಯಲ್ಲಿ ಹಲವು ರಸ್ತೆಗಳು ಕೂಡುತ್ತವೆ. ಕೃಷ್ಣರಾಜಪೇಟೆಗೆ ಈಶಾನ್ಯದಲ್ಲಿರುವ ಕೋಟಿಗನಹಳ್ಳಿ ಮತ್ತು ಪೂರ್ವದ ನಾಗಮಂಗಲಕ್ಕೆ ಟಾರು ರಸ್ತೆಯ ಸಂಪರ್ಕವಿದೆ. ಒಟ್ಟು ರಸ್ತೆಗಳ ಉದ್ದ 2593 ಕಿ.ಮೀ. 22 ಕಿ.ಮೀ. ರೈಲು ಮಾರ್ಗವಿದೆ. (ಹಾಸನ–ಮೈಸೂರು). ಇದು ಬೆಟ್ಟ ಗುಡ್ಡಗಳ ಮತ್ತು ಹಸಿರು ಕಣಿವೆಗಳ ನಡುವೆ ಸಾಗುತ್ತದೆ. ಬೆಂಗಳೂರು–ನಾಗಮಂಗಲ ಬಸ್ಸುಗಳು ಕೃಷ್ಣರಾಜಪೇಟೆಯ ಮಾರ್ಗವಾಗಿ ಹೋಗುತ್ತವೆ. ಅಕ್ಕಿಹೆಬ್ಬಾಳಿಗೂ ಮೇಲುಕೋಟೆಗೂ ಹೇಮಗಿರಿಗೂ ಬಸ್ಸಿನ ಸಂಪರ್ಕವುಂಟು. ವರ್ಷಕ್ಕೊಮ್ಮೆ ಹೇಮಗಿರಿಯಲ್ಲಿ ನಡೆಯುವ ಜಾತ್ರೆ ಪ್ರಸಿದ್ಧವಾದ್ದು. ಅಲ್ಲಿ ದನಗಳ ವ್ಯಾಪಾರವಾಗುತ್ತದೆ. ತಾಲ್ಲೂಕಿನ ಸಾಕ್ಷರತೆ ಶೇ. 61.06.

ತಾಲ್ಲೂಕಿನ ಕೇಂದ್ರ ಮತ್ತು ದೊಡ್ಡ ಪಟ್ಟಣ ಕೃಷ್ಣರಾಜಪೇಟೆ. ಜನಸಂಖ್ಯೆ 22,580 (2001). ಅಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪದವಿ ಪೂರ್ವ ಪದವಿ ಕಾಲೇಜುಗಳು ಮತ್ತು ಪ್ರೌಢಶಾಲೆಗಳಿವೆ.

ಕೃಷ್ಣರಾಜ ಪೇಟೆಯಲ್ಲಿ ತಾಲ್ಲೂಕಿನಲ್ಲಿ ಒಟ್ಟು 125 ಪ್ರಾಥಮಿಕ ಶಾಲೆ, 13 ಪೌಢಶಾಲೆ, 7 ಪದವಿ ಪೂರ್ವ ಕಾಲೇಜು ಮತ್ತು 2 ಪದವಿ ಕಾಲೇಜು ಹಾಗೂ 1 ಪಾಲಿಟೆಕ್ನಿಕ್ ಕಾಲೇಜುಗಳಿವೆ. (ಪಿ.ಎಚ್.)

**ಕೃಷ್ಣರಾಜ, ಶಾಲ್ಯದ :** 1748–1775. ಮೈಸೂರು ರಾಜರ ವಂಶದವನಾದ ಈತನನ್ನು ಶಾಲ್ಯದ ಅರಸು ಎಂದು ಕರೆಯುವುದೂ ಉಂಟು. ಈತ ಕನ್ನಡ, ಸಂಸ್ಕೃತ, ತೆಲುಗು– ಈ ಮೂರು ಭಾಷೆಗಳಲ್ಲೂ ಗ್ರಂಥಗಳನ್ನು ಬರೆದಿರುವಂತೆ ತಿಳಿದುಬರುತ್ತದೆ. ಅಕ್ಷರಾದಿ ನಿಘಂಟು. ಅಧ್ಯಾತ್ಮರಾಮಾಯಣದ ಉತ್ತರಕಾಂಡ, ಅನುಭವರಸಾಯನ, ಟೀಕಿನ ಕೀರ್ತನೆ, ಧರ್ಮಗುಪ್ತಚರಿತ್ರೆ, ನಳನಾಟಕ, ನಿಜದೀಪಕಾ ಲಕ್ಷ್ಮೀಮಂದಿರ, ಯಯಾತಿ ಕಾವ್ಯ, ವಿವೇಕಾಭರಣ, ವ್ರತಚರ್ಯೆ, ಷಟ್ಪ್ರತ್ಯಯ, ಸದಾಶಿವಶತಕ, ಅಪ್ರಸ್ತುತ (ಪ್ರಾಣೇಶ್ವರಶತಕ)– ಈ ಹದಿನಾರು ಕೃತಿಗಳನ್ನು ಶಾಲ್ಯದ ಕೃಷ್ಣರಾಜ ರಚಿಸಿದ್ದಾನೆಂದೂ ಇವುಗಳಲ್ಲಿ ಕೆಲವು ಸಂಸ್ಕೃತ ಗ್ರಂಥಗಳಿರಬಹುದೆಂದೂ ಕವಿಚರಿತೆಕಾರರು ತಿಳಿಸಿದ್ದಾರೆ. ಇವುಗಳಲ್ಲಿ ಹತ್ತು ಗ್ರಂಥಗಳು ಮಾತ್ರ ದೊರಕಿವೆ. ಷಟ್ಪದಿ ಶತಕ, ಕೀರ್ತನೆ, ಯಕ್ಷಗಾನ– ಈ ಎಲ್ಲ ರೀತಿಯ ಗ್ರಂಥಗಳನ್ನೂ ಶಾಲ್ಯದ ಕೃಷ್ಣರಾಜ ರಚಿಸಿದ್ದಾನೆ. ಈ ಜಗತ್ತಿನಲ್ಲಿ ಬೇಗುದಿಗೊಳ್ಳುವ ಜನರನ್ನು ನೋಡಿ ಕರುಣದಿಂದ ಭಕ್ತಿ, ಜ್ಞಾನ, ವೈರಾಗ್ಯಪರವಾದ ಗ್ರಂಥಗಳನ್ನು ತಾನು ಬರೆದುದಾಗಿ ಹೇಳಿಕೊಂಡಿದ್ದಾನೆ.

ವಿವೇಕಾಭರಣ ಭಾಮಿನೀಷಟ್ಪದಿಯಲ್ಲಿದೆ. ಶ್ರೀರಂಗಪಟ್ಟಣದ ತ್ರಿಯಂಬಕ ಗುರು ಶಿಷ್ಯನಾದ ನರಸಾರ್ಯನಿಗೆ ನಿಗಮಾರ್ಥಗಳನ್ನು ಉಪದೇಶಿಸಿದ. ಆ ಉಪದೇಶ ಸಾರವನ್ನು ಸಂಸ್ಕೃತದಲ್ಲಿ ಜ್ಞಾನಸರ್ವಸ್ವ ಎಂಬ ಗ್ರಂಥದಲ್ಲಿ ನರಸಾರ್ಯ ನಿರೂಪಿಸಿದ. ಅದನ್ನು ಕನ್ನಡಿಸುವಂತೆ ಶಾಲ್ಯದ ಕೃಷ್ಣರಾಜನಿಗೆ ಹೇಳಲು ಅವನು ಅದನ್ನು ವಿವೇಕಾಭರಣ ಎಂಬ ಗ್ರಂಥದಲ್ಲಿ ನೆರವೇರಿಸಿದ. ಪೂರ್ವ ಪುರಾಣೋಕ್ತಿಗಳ ಘನಸಾರವನ್ನು ನರಸಾರ್ಯನ ಗ್ರಂಥದಿಂದ ತೆಗೆದು ಎಲ್ಲರಿಗೂ ತಿಳಿಯುವಂತೆ, ತಿಳಿವು ನೆಲೆಗೊಳ್ಳುವ ಹಾಗೆ, ಶಾಸ್ತ್ರದ ಬಳಕೆ ತಲೆದೋರುವ ಹಾಗೆ, ಸಂದೇಹವುದಿಸದಂತೆ, ನಂಬಿಕೆ ಹುಟ್ಟುವಂತೆ ಕೃಷ್ಣರಾಜ ನಿರೂಪಿಸಿದ. ಇದರೊಳಗೆ ತನ್ನನ್ನು ನೋಡುವವನಿಗೆ ನಿಜಭಾವ ಕಾಣಿಸುವುದು– ಎಂದಿದ್ದಾನೆ ಕವಿ.

ಸದಾಶಿವ ಎಂದು ಕೊನೆಗೊಳ್ಳುವ ನೂರೊಂದು ವೃತ್ತಗಳಿವೆ. ಸದಾಶಿವಶತಕದಲ್ಲಿ. ಆರ್ತನಿಗೆ ಭಕ್ತಿಯಿಂದ ಮನಸ್ಸಿನ ಭಾವವನ್ನು ಕವಿ ಇಲ್ಲಿ ಹೊರಪಡಿಸಿರುವುದನ್ನು ಕಾಣಬಹುದು. ಪ್ರಾಣೇಶ್ವರಾ ಎಂಬ ಪದದಿಂದ ಕೊನೆಯಾಗುವ 102 ವೃತ್ತಗಳ ಗ್ರಂಥ ಪ್ರಾಣೇಶ್ವರಶತಕ. ನೀತಿಯನ್ನು ಇಲ್ಲಿ ಅನ್ಯೋಕ್ತಿರೂಪವಾಗಿ ಬೋಧಿಸಲಾಗಿದೆ.

ಟೀಕಿನ ಕೀರ್ತನೆಯಲ್ಲಿ ವೇದಾಂತವನ್ನು ಬೋಧಿಸುವ ಪದಗಳೂ ಅವುಗಳ ಮೇಲಿನ ವ್ಯಾಖ್ಯಾನವೂ ಇದೆ. ಭಕ್ತಿಮಾರ್ಗ ಸರೋವರದಲ್ಲಿ 80 ಕೀರ್ತನಗಳಿವೆ. ನಿಜದೀಪಿಕಾರತ್ನದಲ್ಲಿ ಹಾಡು, ವಚನ, ಸಾಂಗತ್ಯ ಮೂರೂ ಬರುತ್ತವೆ. ಧರ್ಮಗುಪ್ತ ಚರಿತ್ರೆ ಯಕ್ಷಗಾನ. ಅನುಭವರಸಾಯನ ಗದ್ಯಗ್ರಂಥ; ಗುರುಶಿಷ್ಯರ ಸಂವಾದದ ಮೂಲಕ ಜ್ಞಾನಮೋಕ್ಷಗಳ ತಿಳಿವಳಿಕೆಯನ್ನು ಕೊಡುತ್ತದೆ. ಗುರುಶಿಷ್ಯರ ಪ್ರಶ್ನೋತ್ತರ ರೂಪವಾಗಿರುವ ಈ ಗ್ರಂಥದಲ್ಲಿ ಅಂದಿನ ವ್ಯವಹಾರದಲ್ಲಿದ್ದ ಸರಳ ಸುಲಭ ಕನ್ನಡದ ಬಳಕೆ ಕಂಡುಬರುತ್ತದೆ. ಪುಟ್ಟ ಪುಟ್ಟ ವಾಕ್ಯಗಳನ್ನು ರಮ್ಯವಾಗಿ ಹೆಣೆದಿರುವುದು ಇಲ್ಲಿನ ವೈಶಿಷ್ಟ್ಯ. ಭಾಷೆ ಹೊಸಗನ್ನಡ ಗದ್ಯಕ್ಕೆ ಹತ್ತಿರ ಹತ್ತಿರವಾಗಿದೆ. (ಕೆ.ಎಸ್.ಕೆ.ಎಂ.)

**ಕೃಷ್ಣರಾಜಸಾಗರ :** ಕರ್ನಾಟಕ ರಾಜ್ಯದ ಪ್ರಸಿದ್ಧ ಸ್ಥಳಗಳಲ್ಲೊಂದು. ಇದು ಮೈಸೂರು ನಗರಕ್ಕೆ ನೈರುತ್ಯದಲ್ಲಿ 18 ಕಿಮಿ ದೂರದಲ್ಲಿದೆ. ಈ ಅಣೆಕಟ್ಟೆಯನ್ನು ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿಗಳು ಸಂಗಮಬಿಂದುವಿನಿಂದ ಕೆಳಗೆ ಕಾವೇರಿಗೆ ಅಡ್ಡಲಾಗಿ ಇತಿಹಾಸ ಪ್ರಸಿದ್ಧವಾದ ಶ್ರೀರಂಗಪಟ್ಟಣಕ್ಕೆ 14 ಕಿಮೀ ಮೇಲುಗಡೆ ಕಟ್ಟಿದ್ದಾರೆ. ಇಲ್ಲಿ ಜಲಾಶಯವನ್ನು ಕಟ್ಟುವ ಯೋಚನೆ 1870ರಿಂದಲೂ ಇತ್ತು. 1900ರಲ್ಲಿ ಮೈಸೂರು ಸರ್ಕಾರ ಕೆ. ಶೇಷಾದ್ರಿ ಅಯ್ಯರ್‌ರವರ ದಿವಾನಗಿರಿಯಲ್ಲಿ ಕೋಲಾರದ ಚಿನ್ನದ ಗಣಿಗಳಿಗೆ ವಿದ್ಯುತ್ತನ್ನು ಒದಗಿಸಲು ಶಿವಸಮುದ್ರದ ವಿದ್ಯುತ್ಕೇಂದ್ರದ ಯೋಜನೆಯನ್ನು ಕೈಗೊಂಡಿತು. ವಿದ್ಯುತ್ತಿಗೆ ಗಿರಾಕಿ ಹೆಚ್ಚುತ್ತಿರುವಾಗ ಬೇಸಿಗೆಯಲ್ಲಿ ಹೊಳೆಯ ಪ್ರವಾಹ 50 ಕ್ಯೂಸೆಕ್ಸ್‌ಗಳಿಗೆ ಇಳಿಯುತ್ತಿದ್ದುದರಿಂದ ಶಿವಸಮುದ್ರದ ಮೇಲಿನ ಅಣೆಕಟ್ಟುಗಳಲ್ಲಿ ತಾತ್ಕಾಲಿಕವಾಗಿ ನೀರನ್ನು ಕೂಡಿಡಲು ವರ್ಷಕ್ಕೆ ಅರ್ಧಲಕ್ಷ ರೂಪಾಯಿ ಖರ್ಚಾಗುತ್ತಿತ್ತು. ಅದಕ್ಕಾಗಿ ಎಂ. ವಿಶ್ವೇಶ್ವರಯ್ಯನವರು ಮೈಸೂರಿನ ಪ್ರಧಾನ ಇಂಜಿನಿಯರ್ ಆಗಿ ಬಂದಾಗ ಕಾವೇರಿ ನದಿಗೆ ಅಡ್ಡವಾಗಿ ಕನ್ನಂಬಾಡಿಯಲ್ಲಿ ಒಂದು ಕಲ್ಲುಗಾರೆಯ ಕಟ್ಟೆ ಕಟ್ಟಿ ಜಲಾಶಯವನ್ನು ನಿರ್ಮಿಸಿ ಚಿನ್ನದ ಗಣಿಗಳಿಗೆ ವಿದ್ಯುತ್ತನ್ನು ಮತ್ತು ಮಂಡ್ಯ ಹಾಗೂ ಮಳವಳ್ಳಿಯ ಬೆಂಗಾಡಿನಂಥ ಭೂಮಿಗೆ ನೀರಾವರಿಯನ್ನು ಒದಗಿಸುವುದಕ್ಕೂ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೂ 1911ರ ನವೆಂಬರ್‌ನಲ್ಲಿ ಒಂದು ಯೋಜನೆಯನ್ನು ತಯಾರಿಸಿದರು. ಕೂಡಲೇ ಕೆಲಸ ಪ್ರಾರಂಭವಾಯಿತು. ಅಂದಾಜು ಖರ್ಚು 89,00,000 ರೂಪಾಯಿಗಳು. ಜಲಾಶಯದಲ್ಲಿ 80 ಅಡಿ ಆಳವಾಗಿ ನೀರನ್ನು ಶೇಖರಿಸುವ ಹಾಗೆ ಕೆಲಸ ಮುಂದುವರಿಯಿತು. ಚಿನ್ನದ ಗಣಿಗಳೊಂದಿಗೆ ಮಾಡಿಕೊಂಡ ಒಪ್ಪಂದದಂತೆ 1915ರ ಜೂನಿನಲ್ಲಿ ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ 50 ಅಡಿ ಆಳದ ನೀರನ್ನು ಜಲಾಶಯದಲ್ಲಿ ಶೇಖರಿಸಿದರು.

ಏತನ್ಮಧ್ಯೆ ಈ ಯೋಜನೆಯಿಂದ ತಂಜಾವೂರಿನ ಕುದುರಿನ ಭೂಮಿಗೆ ನೀರು ಸಾಲದೆ ಹೋಗಬಹುದೆಂದು ಅಂದಿನ ಮದ್ರಾಸ್ ಸರ್ಕಾರ (ತಮಿಳುನಾಡು) ಅಡ್ಡಿ ಮಾಡಿತು. ಈ ವಿಚಾರದಲ್ಲಿ ದೀರ್ಘ ಚರ್ಚೆಯಾಗಿ 1924ರಲ್ಲಿ ಮೈಸೂರು–ಮದರಾಸ್ ಸರ್ಕಾರಗಳಿಗೆ ಕೆಳಗೆ ಕಂಡಂತೆ ಒಡಂಬಡಿಕೆಯಾಯಿತು.

1 ಕೃಷ್ಣರಾಜಸಾಗರದ ಕಟ್ಟೆಯನ್ನು 130′ ಎತ್ತರಕ್ಕೆ ಎತ್ತರಿಸಿ ಜಲಾಶಯದಲ್ಲಿ 124′ ಎತ್ತರದ ನೀರನ್ನು ಶೇಖರಿಸಿ 49,229 ಮಿಲಿಯನ್ ಸಲೆ ಅಡಿ ನೀರನ್ನು ಕೂಡಿಟ್ಟು 1,25,000 ಎಕರೆಗಳಿಗೆ ನೀರನ್ನು ಮೈಸೂರು ಸರ್ಕಾರ ಒದಗಿಸಬಹುದು. 2 ಇದಲ್ಲದೆ

ಕಾವೇರಿ ಮತ್ತು ಅದರ ಉಪನದಿಗಳಿಗೆ ಅಡ್ಡವಾಗಿ ಒಟ್ಟು 45,000 ಮಿಲಿಯನ್ ಸಲೆ ಅಡಿ ನೀರನ್ನು ಕೂಡಿಟ್ಟು ಇನ್ನೂ 1,10,000 ಎಕರೆಗಳಿಗೆ ನೀರಾವರಿಯನ್ನು ಒದಗಿಸಬಹುದು. 3 ಕಾವೇರಿ ಮತ್ತು ಉಪನದಿಗಳಿಂದ ಈಗ ಇರುವ ನಾಲೆಗಳ ಕೆಳಗೆ ನೀರಿನ ತೆರಿಗೆಯನ್ನು ಹೆಚ್ಚಿಸಿ ಆಗ ಇದ್ದ ನೀರಾವರಿಯನ್ನು ಶೇ. 33.33ರಷ್ಟು ಹೆಚ್ಚಿಸಬಹುದು.

1924ರಲ್ಲಿ ಕಾವೇರಿ ಮತ್ತು ಉಪನದಿಗಳಲ್ಲಿ ಪ್ರಚಂಡ ಪ್ರವಾಹ ಬಂದಿತು. ಅಂದಾಜು ಮಾಡಿದ್ದ 2.5 ಲಕ್ಷ ಕ್ಯೂಸೆಕ್ಸಿಗೆ ಬದಲಾಗಿ 2.9 ಲಕ್ಷ ಕ್ಯೂಸೆಕ್ಸಿನಷ್ಟು ನೀರು ಬಂದದ್ದರಿಂದ ಜಲಾಶಯದ ಕೋಡಿಯನ್ನು 3.5 ಲಕ್ಷ ಕ್ಯೂಸೆಕ್ಸ್ ನೀರನ್ನು ಸುರಕ್ಷಿತವಾಗಿ ಕಟ್ಟೆಯಿಂದ ಬಿಡುವ ಹಾಗೆ ಕಟ್ಟಬೇಕಾಯಿತು.

ಜಲಾಶಯದ ಒಟ್ಟು ಜಲಾನಯನ ಭೂಮಿ 4,100 ಚದರ ಮೈಲಿ. (10619 ಚ.ಕಿ.ಮೀ.) ಇದರಿಂದ ಈ ಜಾಗದಲ್ಲಿ ವರ್ಷಕ್ಕೆ ಸರಾಸರಿ 55 ಲಕ್ಷ ಎಕರೆ-ಅಡಿ ನೀರು



ಬರುತ್ತದೆ. 1924ರಲ್ಲಿ ಇಲ್ಲಿ 2.8 ಲಕ್ಷ ಸಲೆ ಅಡಿ ನೀರು ಒಂದು ಸೆಕೆಂಡಿನಲ್ಲಿ ಹರಿಯಿತು. ಇಲ್ಲಿ ನದಿಯ ತಳ ಸಮುದ್ರಮಟ್ಟದಿಂದ 2,344′ (714 ಮೀ.) ಎತ್ತರದಲ್ಲಿದೆ. ಕಟ್ಟೆಯನ್ನು ಗ್ರಾನೈಟ್ ನೈಸ್ ಬಂಡೆಯ ತಳಪಾಯದ ಮೇಲೆ ಕಟ್ಟಿದ್ದಾರೆ. ತಳಪಾಯದ ಸರಾಸರಿ ಆಳ 16′. ಕಟ್ಟೆಯ ಅಗಲ ತಳಪಾಯದಲ್ಲಿ 111′. ನದಿಯ ತಳದ ಮೇಲೆ ಕಟ್ಟೆಯ ಗರಿಷ್ಠ ಎತ್ತರ 134′. ಕಟ್ಟೆಯ ಮೇಲುಗಡೆ ರಸ್ತೆಯ ಅಗಲ 14.25′. ಕಟ್ಟೆಯ ಉದ್ದ 8,600′.

ಕಟ್ಟೆಯಲ್ಲಿ ಒಟ್ಟು 48,330 ಮಿಲಿಯನ್ ಸಲೆ ಅಡಿ ನೀರು ಹಿಡಿಯುತ್ತದೆ. ಜಲಾಶಯದ ನೀರು ಮೇಲುಗಡೆ 50 ಚದರ ಮೈಲಿಯಷ್ಟು ಹರಡಿರುತ್ತದೆ. ಜಲಾಶಯದ ಸರಾಸರಿ ಉದ್ದ 25 ಮೈಲಿ, ಅಗಲ 5 ಮೈಲಿ. ಕಟ್ಟೆಯ ನೀರಿನಲ್ಲಿ ಒಟ್ಟು 31,943 ಎಕರೆ ಭೂಮಿ ಮುಳುಗಡೆಯಾಗಿದೆ. ಈ ಪೈಕಿ 9,520 ಎಕರೆ ತರಿ, 13,923 ಎಕರೆ ಹಿಡುವಳಿಯಲ್ಲಿರುವ ಖುಷ್ಕಿ. 8,500 ಎಕರೆ ಸರ್ಕಾರದ ವಶದಲ್ಲಿದ್ದ ಪಾಳು ಭೂಮಿ. ಈ ಅಣೆಕಟ್ಟೆ ನಿರ್ಮಾಣದಿಂದ ಜಮೀನನ್ನು ಕಳೆದುಕೊಂಡ ರೈತರುಗಳಿಗೆಲ್ಲ ಹತ್ತಿರದಲ್ಲಿಯೇ ಹೊಸ ಊರುಗಳನ್ನು ಕಟ್ಟಿ ಭೂಮಿಯನ್ನು ಕೊಟ್ಟು ಅಲ್ಲಿಗೆ ಹೊಸ ನಾಲೆಗಳನ್ನು ತೆಗೆದು ನೀರಾವರಿಯನ್ನು ಒದಗಿಸಿದೆ. ಈ ಊರುಗಳಲ್ಲಿ ಆಸ್ಪತ್ರೆ, ಪಾಠಶಾಲೆ-ಮೊದಲಾದ ಎಲ್ಲ ಅನುಕೂಲತೆಗಳನ್ನೂ ಏರ್ಪಡಿಸಿ ಪುನರ್ವಸತಿ ಕಲ್ಪಿಸಲಾಗಿದೆ.

ಕಟ್ಟೆಯನ್ನು ಮಾರಿಕಣಿವೆಯ ಕಟ್ಟೆಯಂತೆಯೇ ಗ್ರಾನೈಟ್ ಕಲ್ಲು ಮತ್ತು ಸುರ್ಕಿ ಗಾರೆಯಿಂದ ಕಟ್ಟಿದ್ದಾರೆ. ಮಾರಿಕಣಿವೆಯಲ್ಲಿ ಕಲ್ಲುಗಾರೆಯ ಕೆಲಸದವರೂ ಕಲ್ಲನ್ನು ಹೊರುವ ನವಗಾಣಿಗಳೂ ಹೊರಗಡೆಯಿಂದ ಬಂದಿದ್ದರು. ಆದರೆ ಇಲ್ಲಿ ಮಾರಿಕಣಿವೆಯಲ್ಲಿ ಕೆಲಸವನ್ನು ಕಲಿತ ತಲಕಾಡಿನ ಗೌಂಡಿಗಳೂ ನವಗಾಣಿಗಳೂ ಸ್ಥಳದಲ್ಲಿಯೇ ದೊರೆಯುವ ಸಾಮಗ್ರಿಗಳಿಂದ ಭದ್ರವಾಗಿಯೂ ಅಗ್ಗವಾಗಿಯೂ ಕಟ್ಟಿದ್ದಾರೆ. ದೊಡ್ಡ ಯಂತ್ರಗಳನ್ನು ಬಳಸಿಲ್ಲ. ಕಲ್ಲನ್ನು ಬೆಟ್ಟಗಳಿಂದ ಸಾಗಿಸಲು ಟ್ರಾಲಿಗಳನ್ನು ಕಂಬಿಗಳ ಮೇಲೆ ಮೊದಲು ಎಂಜಿನ್ನುಗಳಿಂದ ಎಳೆಸುತ್ತಿದ್ದರು. ಆಮೇಲೆ ಆಳುಗಳೇ ಟ್ರಾಲಿಗಳನ್ನು ಕಂಬಿಗಳ ಮೇಲೆ ಓಡಿಸುತ್ತಿದ್ದರು.

ಕಟ್ಟೆಯ ತಳಪಾಯದಲ್ಲಿ 90 ಲಕ್ಷ ಸಲೆ ಅಡಿ ಕಲ್ಲು ಮತ್ತು ಮಣ್ಣನ್ನು 1,000 ಸಲೆ ಅಡಿಗೆ 55 ರೂಪಾಯಿಗಳ ಸರಾಸರಿ ದರದಲ್ಲಿ ತೆಗೆದಿದ್ದಾರೆ. ಇದರ ತಳಪಾಯದ ಕಲ್ಲಿನ ಮೇಲೆ ಚದರ ಅಡಿಗೆ 9 ಟನ್ನಿನ ಗರಿಷ್ಠ ಒತ್ತಡದ ತ್ರಾಸ ಬೀಳುತ್ತದೆ. ಕಲ್ಲುಗಾರೆಯ ತೂಕ ಸಲೆ ಅಡಿಗೆ 146 ಪೌಂಡ್. ಕಲ್ಲುಗಾರೆಯ ಕಟ್ಟೆಯ ತೂಕ ಮತ್ತು ಕೂಡಿಟ್ಟ ನೀರಿನ ಒತ್ತಡ ಇವನ್ನೆಲ್ಲ ಗಣನೆಗೆ ತೆಗೆದುಕೊಂಡಾಗ ತಳಪಾಯದ ಮೇಲೆ 8.9 ಟನ್ನಿನ ಗರಿಷ್ಠ ಒತ್ತಡದ ತ್ರಾಸ ಬೀಳುತ್ತದೆ. ಇದಕ್ಕೆ ಪ್ರತಿಯಾಗಿ ಪೆರಿಯಾರ್ ನದಿಗೆ ಅಡ್ಡಲಾಗಿ 170′ ಎತ್ತರವಾದ ಕಾಂಕ್ರೀಟಿನ ಕಟ್ಟೆಯ ತಳದ ಮೇಲೆ ಚದರ ಅಡಿಗೆ 9 ಟನ್ ತ್ರಾಸ ಬೀಳುತ್ತದೆ.

ಕಟ್ಟೆಯಲ್ಲಿರುವ 30 ಮಿಲಿಯನ್ ಸಲೆ ಅಡಿ ಕಲ್ಲುಗಾರೆಗೆ ಸರಾಸರಿಯಾಗಿ 100 ಸಲೆ ಅಡಿಗೆ 31 ರೂಪಾಯಿ ದರ ಬಿದ್ದಿದೆ. ಆಗ್ಗೆ ಇದು ಭಾರತದಲ್ಲಿಯೇ ಅತ್ಯಂತ ದೊಡ್ಡ ಕಲ್ಲುಗಾರೆಯ ಕಟ್ಟೆಯಾಗಿತ್ತು ಎಂಬುದು ಗಮನೀಯವಾದ ವಿಚಾರ.

ಅಣೆಕಟ್ಟೆಯಲ್ಲಿ ಮೂರು ಉದ್ದೇಶಗಳಿಗಾಗಿ ತೂಬುಗಳನ್ನು ಇಟ್ಟಿದ್ದಾರೆ; 1 ಪ್ರವಾಹ ನಿಯಂತ್ರಣ, 2 ನೀರಾವರಿ, 3 ವಿದ್ಯುತ್ತಿನ ಉತ್ಪಾದನೆ. ಅವನ್ನು ಕೆಳಗೆ ಕೊಟ್ಟಿದೆ.

| ಸಂಖ್ಯೆ | ಉದ್ದೇಶ | ಮಟ್ಟ | ಅಳತೆ | ತೂಬಿನ ಸಂಖ್ಯೆ | ಸ್ಥಳ |
|---|---|---|---|---|---|
| 1 | ಪ್ರವಾಹ ನಿಯಂತ್ರಣ | +12 | 6′X 12′ | 8 | ನಡುಹೊಳೆ |
| 2 | ಗೋಡಿನ ಸಾಗಣೆ | +50 | 6′X 15′ | 3 | ಉತ್ತರ(ಎಡ)ದಡ |
| 3 | ಕೋಡಿಯ ತೂಬು | +103 | 10′X 8′ | 48 | ದಕ್ಷಿಣ(ಬಲ)ದಡ |
| 4 | “ | +114 | 10′X 10′ | 48 | “ |
| 5 | ‘ | +106 | 8′X 12′ | 40 | “ |
| 6 | “ | +80 | 10′X 20′ | 16 | “ |
| 7 | ನೀರಾವರಿ | +60 | 6′X 8′ | 1 | “ |
| 8 | “ | +40 | 4′X 8′ | 1 | ಉತ್ತರ(ಎಡ)ದಡ |
| 9 | “ | +60 | 6′X 12′ | 3 | “ |
| 10 | ವಿದ್ಯುತ್ತಿನ ಉತ್ಪಾದನೆ | +63 | 6′ ವ್ಯಾಸ | 4 | ವಿದ್ಯುದುತ್ಪಾದನೆ |

ಪಟ್ಟಿಯಲ್ಲಿ 7ನೆಯ ನೀರಾವರಿಯ ತೂಬಿನಿಂದ ನೀರು 350′ ಉದ್ದವಾದ ಸಣ್ಣ ಸುರಂಗದ ಮೂಲಕ ಹರಿದು 3,500 ಎಕರೆ ಭೂಮಿಗೆ ನೀರಾವರಿಯನ್ನು ಒದಗಿಸುವ ಬಲದಂಡೆಯ ನಾಲೆಗೆ ಹೋಗುತ್ತದೆ. ಇದು ಮೈಸೂರಿನಲ್ಲಿ ಕೊರೆದ ಮೊತ್ತ ಮೊದಲನೆಯ ಸುರಂಗ. 9ನೆಯ ಉತ್ತರ ದಡದ ತೂಬಿನಿಂದ ವಿಶ್ವೇಶ್ವರಯ್ಯ ನಾಲೆಗೆ ನೀರನ್ನು ಬಿಟ್ಟು ಮಂಡ್ಯ, ಪಾಂಡವಪುರ, ಶ್ರೀರಂಗಪಟ್ಟಣ, ಮದ್ದೂರು, ನಾಗಮಂಗಲ, ಮೈಸೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ 1,20,000 ಎಕರೆ ಭೂಮಿಗೆ ನೀರಾವರಿಯನ್ನು ಒದಗಿಸಿದ್ದಾರೆ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆಲ್ಲ ಈ ನಾಲೆಯೇ ಕಾರಣ. 8ನೆಯ ಉತ್ತರ ದಡದ ತಗ್ಗಿನ ಮಟ್ಟದ ತೂಬಿನ ನೀರು ತಗ್ಗಿನ ಮಟ್ಟದ ನಾಲೆಯ ಮೂಲಕ 1,500 ಎಕರೆಗೆ ನೀರನ್ನು ಒದಗಿಸುತ್ತದೆ. ಈ ನಾಲೆಗೆ ಮೇಲಿನ ಮಟ್ಟದ ವಿಶ್ವೇಶ್ವರಯ್ಯ ನಾಲೆಯ ಕೆಳಗಿನ ಜಮೀನಿನ ಬೀಳು ನೀರು ಬೀಳುತ್ತದೆ. 10ನೆಯ ನದಿಯ ಮಟ್ಟದ ಮೇಲೆ 53′ ಎತ್ತರದಲ್ಲಿ 6′ ವ್ಯಾಸದ ನಾಲ್ಕು ತಿರುಬಾನಿ ಕೊಳವೆಗಳನ್ನು ಇಟ್ಟಿದೆ. ನಡುಹೊಳೆಯಲ್ಲಿರುವ 8 ಬಾಗಿಲುಗಳು, 50′ ಎತ್ತರದಲ್ಲಿರುವ 3 ಮತ್ತು 80′ ಎತ್ತರದಲ್ಲಿರುವ 16 ಬಾಗಿಲುಗಳಿಂದಲೂ ಜಲಾಶಯದ ನೀರು 124′ ಮಟ್ಟದಲ್ಲಿದ್ದಾಗ 1.42 ಲಕ್ಷ ಕ್ಯೂಸೆಕ್ಸ್‌ಗಳನ್ನು ಸಾಗಿಸಬಹುದು. 1924ರಲ್ಲಿ ಹೊಳೆಯಲ್ಲಿ ಬಂದಂಥ ಮಹಾಪ್ರವಾಹವನ್ನು ಸಾಗಿಸಲು 3ನೆಯ 103′ ಮಟ್ಟದ 48 ಬಾಗಿಲುಗಳ ಮೇಲುಗಡೆ 114′ ಮಟ್ಟದಲ್ಲಿ 4ನೆಯ 48 ಬಾಗಿಲುಗಳನ್ನು ಇಟ್ಟಿದೆ. ಇವುಗಳಲ್ಲಿ ಕೆಳಗಿನ ಬಾಗಿಲುಗಳನ್ನು ಕೈಯಿಂದ ಎತ್ತಬೇಕು. ಮೇಲಿನ ಕಂಡಿಗಳಿಗೆ ಎಂ. ವಿಶ್ವೇಶ್ವರಯ್ಯನವರಿಂದ ನಿರ್ಮಿತವಾದ ಸ್ವಯಂಚಲಿಯಾದ ಬಾಗಿಲುಗಳಿವೆ. ಈ ಕೋಡಿಯ ಬಾಗಿಲುಗಳೆಲ್ಲದರಿಂದ ಒಟ್ಟು 3.5ಲಕ್ಷ ಕ್ಯೂಸೆಕ್ಸ್‌ಗಳ ಪ್ರವಾಹವನ್ನು ಸುರಕ್ಷಿತವಾಗಿ ಹೊಳೆಯಲ್ಲಿ ಸಾಗಿಸಬಹುದು. ಇತ್ತೀಚೆಗೆ ನವೀಕರಿಸಿ, ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಲು ಯೋಜನೆ ಕೈಗೊಳ್ಳಲಾಗಿದೆ. ದಕ್ಷಿಣ ದಂಡೆಯಿಂದ ವರುಣನಾಲೆಯನ್ನು ನಿರ್ಮಿಸಲಾಗುತ್ತಿದೆ. ಇದರಿಂದ ಮೈಸೂರು ಕಸಬಾ, ತಿ.ನರಸೀಪುರ ಮತ್ತು ನಂಜನಗೂಡು ತಾಲ್ಲೂಕುಗಳ ಕೃಷಿವಲಯಕ್ಕೆ ನೀರಾವರಿ ಪೂರೈಕೆಯಾಗುತ್ತದೆ. ನಿರ್ಮಾಣ ಕಾರ್ಯವು ಪೂರ್ಣಗೊಂಡಾಗ 32, 375 ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ.

ಮಳೆಗಾಲದಲ್ಲಿ ತುಂಬಿದ ಜಲಾಶಯದ ಹರಡನ್ನು ನೋಡುವುದೇ ಒಂದು ರೋಮಾಂಚನಕಾರಿಯಾದ ಅನುಭವ. ಮಿರ್ಜಾ ಇಸ್ಮಾಯಿಲ್ ಅವರ ದಿವಾನಗಿರಿಯಲ್ಲಿ ಕಟ್ಟೆಯ ಹಿಂದುಗಡೆ ಕಾಶ್ಮೀರದ ಪಾಲಿಮಾರ್ ತೋಟವನ್ನು ಹೋಲುವ ಬೃಂದಾವನವನ್ನು ಎರಡು ದಡಗಳಲ್ಲಿಯೂ ನಿರ್ಮಿಸಿದರು. ಪ್ರೇಕ್ಷಕರ ತಂಡಗಳನ್ನು ಈ ಜಲಾಶಯ ಆಕರ್ಷಿಸುತ್ತದೆ. ನೀರು ಚಿಮ್ಮುವ ಬಗೆಬಗೆಯ ಚಿತ್ತಾರದ ಕಾರಂಜಿಗಳನ್ನು ಅಳವಡಿಸಲಾಗಿದೆ. ಇತ್ತೀಚೆಗೆ ವರ್ಣರಂಜಿತ ಸಂಗೀತಕಾರಂಜಿಯನ್ನು ನಿರ್ಮಿಸಲಾಗಿದ್ದು ಪ್ರವಾಸಿಗರನ್ನು ಹೆಚ್ಚು ಆಕರ್ಷಿಸುತ್ತಿದೆ. ದೋಣಿವಿಹಾರ ಸೌಲಭ್ಯವಿದೆ.ಇಲ್ಲಿನ ಮಕ್ಕಳ ಉದ್ಯಾನ, ತೋಟಗಾರಿಕೆ ಕ್ಷೇತ್ರ, ಸಸಿಮಡಿಕ್ಷೇತ್ರ, ಮೀನುಗಾರಿಕೆ ಕೊಳ ಮತ್ತು ಜಲಶಕ್ತಿ ಸಂಶೋಧನಾ ಕೇಂದ್ರಗಳಿವೆ. ಕಟ್ಟೆಯ ಬುಡದಲ್ಲಿ ಒಂದು ಸುಂದರವಾದ ಕಾವೇರಿ ದೇವತೆ ಪ್ರತಿಮೆ ಇದೆ. ದಕ್ಷಿಣ ದಡದಲ್ಲಿ ಊಟ ಮತ್ತು ತಿಂಡಿಗಾಗಿ ಆಧುನಿಕವಾದ ಉಪಾಹಾರಗೃಹಗಳು ನಿರ್ಮಾಣವಾಗಿವೆ. ಇಲ್ಲಿ ಆಧುನಿಕವಾದ ಒಂದು ಜಲಭಾರಶಾಸ್ತ್ರದ ಪ್ರಯೋಗಶಾಲೆಯನ್ನು ಕಟ್ಟಿದ್ದಾರೆ.

(ಎಚ್.ಸಿ.ಕೆ.)

**ಕೃಷ್ಣರಾಯ, ಅ.ನ. :** 1908–1971. ಅನಕೃ ಎಂಬ ಮೂರಕ್ಷರಗಳಿಂದ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಚಿರಪರಿಚಿತರಾದ ಇವರ ಪೂರ್ತಿ ಹೆಸರು ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ ಎಂದು. ಕೃಷ್ಣರಾಯರು 1908ರ ಮೇ 9ರಂದು ಜನಿಸಿದರು. ತಂದೆ ನರಸಿಂಗರಾಯರು; ತಾಯಿ ಅನ್ನಪೂರ್ಣಮ್ಮನವರು. ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಓದನ್ನು ಮುಗಿಸಿ ಕೃಷ್ಣರಾಯರು ಬೆಂಗಳೂರಿನ ದೇಶೀಯ ವಿದ್ಯಾಶಾಲೆಗೆ ಸೇರಿದರು. ಅಲ್ಲಿಯ ವಾತಾವರಣ ಬಾಲಕ ಕೃಷ್ಣರಾಯರ ಆಸಕ್ತಿ–ವಿಚಾರಗಳನ್ನು ರೂಪಿಸುವಲ್ಲಿ ನೆರವಾಯಿತು. ರಾಷ್ಟ್ರೀಯ ಭಾವನೆಗಳ ಕೇಂದ್ರವಾಗಿತ್ತು, ಆ ಶಾಲೆ. ಅಲ್ಲಿ ಸಂಪದ್ಗಿರಿರಾಯರಂಥ, ಕಂದಾಡೆ ಕೃಷ್ಣಯ್ಯಂಗಾರರಂಥ ಅಧ್ಯಾಪಕರು ಶಿಷ್ಯರ ಹೃದಯ, ಮನಸ್ಸುಗಳನ್ನು ಹದಗೊಳಿಸುತ್ತಿದ್ದರು. ಕೃಷ್ಣರಾಯರಿಗೆ ಓದಿನ ಗೀಳು ಹತ್ತಿತು; ಗಾಂಧಿ ವಿವೇಕಾನಂದರ ಪರಿಚಯವಾಯಿತು; ಅವರ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದರು. ಶಾಲೆಯ ಓದಿಗೆ ಗಮನ ಕೊಡಲಿಲ್ಲವಾಗಿ ಆ ಕಾಲದ ಎಂಟ್ರೆನ್ಸ್ ಪರೀಕ್ಷೆಯನ್ನು ದಾಟುವುದು ಕೃಷ್ಣರಾಯರಿಗೆ ಸಾಧ್ಯವಾಗಲಿಲ್ಲ.

ತಂದೆ ನರಸಿಂಗರಾಯರಿಗೆ ನಾಟಕದ ಹುಚ್ಚು. ಕರ್ನಾಟಕ ರಂಗಭೂಮಿಯ ಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದರು. ಎ.ವಿ. ವರದಾಚಾರ್ಯರಂಥ ಶ್ರೇಷ್ಠ ಕಲಾವಿದರನ್ನು ಕಟ್ಟಿಕೊಂಡು ಅವರು ನಾಟಕ ಪ್ರದರ್ಶನಗಳಿಗಾಗಿ ಹವ್ಯಾಸೀ ಕ್ಲಬ್ ಒಂದನ್ನು ನಡೆಸುತ್ತಿದ್ದರು. ಇದರಿಂದ ಸಹಜವಾಗಿಯೇ ಕೃಷ್ಣರಾಯರಿಗೆ ಎಳವೆಯಿಂದಲೂ ರಂಗಭೂಮಿಯ ಪರಿಚಯವಾಯಿತು. ವರದಾಚಾರ್ಯರ ನಾಟಕಗಳನ್ನು ಇವರು ತಪ್ಪದೆ ನೋಡುತ್ತಿದ್ದರು. ಆ ನಟಸಾರ್ವಭೌಮರ ಅಭಿನಯಕ್ಕೆ ಕೃಷ್ಣರಾಯರು ಮಾರುಹೋದರು. ಆ ಕಾಲದಲ್ಲಿ ರಂಗದ ಮೇಲೆ ಬರುತ್ತಿದ್ದ ನಾಟಕಗಳೆಲ್ಲ ಪೌರಾಣಿಕ ವಸ್ತುವನ್ನು ಅವಲಂಬಿಸಿರುತ್ತಿದ್ದುವು. ಅಪರೂಪವಾಗಿ ಐತಿಹಾಸಿಕ ಪ್ರಸಂಗಗಳೂ ನಾಟಕರೂಪ ತಾಳುತ್ತಿದ್ದವು. ಈ ನಾಟಕಗಳು ಹದಿಹರಯದ ಕೃಷ್ಣರಾಯರಿಗೆ ಕಂದಾಚಾರದ ನಾಟಕಗಳಾಗಿ ಕಂಡವು. ತಮ್ಮ ಸುತ್ತಣ ಸಮಾಜದ ಸಮಸ್ಯೆಗಳು ಸಂಗತಿಗಳು ಏಕೆ ರಂಗದ ಮೇಲೆ ಬರಬಾರದು ಎಂಬ ಪ್ರಶ್ನೆ ಇವರನ್ನು ಕಾಡುತ್ತಿತ್ತು. ಒಂದು ಸಲ ಇವರು ವರದಾಚಾರ್ಯರಿಗೆ ಈ ಪ್ರಶ್ನೆ ಹಾಕಿದರು. "ಅಂಥ ನಾಟಕಗಳನ್ನು ಯಾರು ಬರೆಯುತ್ತಾರೆ?" ಎಂದು ಆಚಾರ್ಯರು ನಿರಾಶೆಯಿಂದ ಕೇಳಿದರು. ಕೃಷ್ಣರಾಯರು ಮರುದಿನವೇ ತಾವು ಅಂಥ ನಾಟಕವೊಂದನ್ನು ಬರೆದು ಕೊಡುವುದಾಗಿ ಹೇಳಿ ಆಚಾರ್ಯರನ್ನು ತಬ್ಬಿಬ್ಬು ಮಾಡಿದರು. ಅಷ್ಟೇ ಅಲ್ಲ, ಅಂದು ಇಡೀ ರಾತ್ರಿ ಕುಳಿತು ಒಂದು ನಾಟಕ ಬರೆದು ಬೆಳಗ್ಗೆ ಅದನ್ನು ಆಚಾರ್ಯರ ಕೈಯಲ್ಲಿಟ್ಟರು. ಅದೊಂದು ಸಾಮಾಜಿಕ ನಾಟಕ. ಅದರ ಹೆಸರು–ಮದುವೆಯೋ ಮನೆ ಹಾಳೋ ಎಂದು. ಅದು ಕೃಷ್ಣರಾಯರ ಮೊದಲ ಕೃತಿ (1924). ಅದರೊಂದಿಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೊಸ ಅಧ್ಯಾಯವೊಂದು ತೊಡಗಿತು. ಕೃಷ್ಣರಾಯರು ಹೀಗೆ ನಾಟಕಕಾರರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟು ಮುಂದೆ ಹತ್ತಿರ ಹತ್ತಿರ ಅರ್ಧ ಶತಮಾನ, ಕಾವ್ಯವೊಂದನ್ನು ಬಿಟ್ಟು ಮಿಕ್ಕ ಎಲ್ಲ ಸಾಹಿತ್ಯಪ್ರಕಾರಗಳಲ್ಲೂ ಕೆಲಸ ಮಾಡಿ, ಪ್ರಭಾವಶಾಲಿಯಾಗಿ ಖ್ಯಾತಿಗಳಿಸಿದರು.

ಕೃಷ್ಣರಾಯರು ಸುಮಾರು 190 ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 112 ಕಾದಂಬರಿಗಳು; 9 ಕಥಾಸಂಗ್ರಹಗಳು, 24 ನಾಟಕಗಳು; 24 ವಿಮರ್ಶೆ ಹಾಗೂ ಪ್ರಬಂಧ ಸಂಕಲನಗಳು; 9 ಜೀವನ ಚರಿತ್ರೆಗಳು; 3 ಅನುವಾದಗಳು; 9 ಸಂಪಾದಿತ ಗ್ರಂಥಗಳು. ಇವುಗಳಲ್ಲಿ ನಾಲ್ಕೈದು ಕೃತಿಗಳು ಇನ್ನೂ ಪ್ರಕಟವಾಗಬೇಕಾಗಿವೆ. ಹೀಗೆ ನಾನಾ ಪ್ರಕಾರಗಳಲ್ಲಿ ಕೃಷ್ಣರಾಯರು ದುಡಿದಿದ್ದರೂ ಕಾದಂಬರಿಕಾರರೆಂದೇ ಇವರು ಪ್ರಸಿದ್ಧರಾಗಿದ್ದಾರೆ. ಇವರ ಕಾದಂಬರಿಗಳಲ್ಲಿ ಹದಿನೈದನ್ನು ಬಿಟ್ಟರೆ ಉಳಿದವೆಲ್ಲ ಸಾಮಾಜಿಕ ಕಾದಂಬರಿಗಳು. ಈ ಕಾದಂಬರಿಗಳಲ್ಲಿವರು ಸಮಕಾಲೀನ ಜೀವನದ ಬೇರೆ ಬೇರೆ ಮುಖಗಳನ್ನು ತೋರಿಸಿದ್ದಾರೆ. ಕಲಾವಿದರ ಸಮಸ್ಯೆಗಳು, ಆಧುನಿಕ ವಿದ್ಯಾಭ್ಯಾಸದ ಪರಿಣಾಮ, ಭಾರತೀಯ ಸಂಸ್ಕೃತಿಯ ಮೌಲ್ಯಗಳ ಮಹತ್ತ್ವ, ಅವಿಭಕ್ತಕುಟುಂಬ ಜೀವನ, ಒಡೆಯುತ್ತಿರುವ ಬದುಕು, ವೇಶ್ಯಾ ಸಮಸ್ಯೆ, ಲಂಚಗುಳಿತನ, ಸ್ತ್ರೀಸ್ವಾತಂತ್ರ್ಯ, ಜೈಲುಗಳ ಸುಧಾರಣೆ, ದಾಂಪತ್ಯವಿಚ್ಛೇದನ, ಜಾತೀಯತೆಯ ಭೂತ, ರಾಜಕೀಯ ದೊಂಬರಾಟ, ಪವಿತ್ರ ಪ್ರೇಮ, ಕೊಳಚೆಯ ಕಾಮ, ಪಾನನಿರೋಧದ ಸಮಸ್ಯೆ, ಶ್ರೀಮಂತಿಕೆಯ ಡೌಲು, ಬಡತನದ ದಾರುಣತೆ, ಪೂರ್ವಪಶ್ಚಿಮಗಳ ಸಂಗಮ, ಧಾರ್ಮಿಕತೆಯ ಸೋಗು, ಆಡಳಿತದ ಅಬ್ಬರ ಆರ್ಭಟಗಳು, ಸ್ವಾತಂತ್ರ್ಯದ ಕೆಚ್ಚು, ಬದುಕಿನ ಮೇಲೆ ವಿಜ್ಞಾನದ ಪ್ರಭಾವ–ಹೀಗೆ ನಾನಾ ಸಂಗತಿಗಳನ್ನು ಕುರಿತು ಕೃಷ್ಣರಾಯರು ವಿಚಾರ ಮಾಡಿದ್ದಾರೆ. ತಮ್ಮ ವಿಚಾರಗಳನ್ನು ಪ್ರತಿಪಾದಿಸಲು ಇವರು ಕಾದಂಬರಿಯನ್ನು ಬಳಸಿಕೊಂಡರು. ತಮ್ಮ ಕಥನಕೌಶಲ, ನಿರರ್ಗಳವಾದ ಶೈಲಿ, ಸಂಭಾಷಣೆಯ ಚಾತುರ್ಯ ಇವುಗಳಿಂದ ಇವರು ತಮ್ಮ ಓದುಗರನ್ನು ಸೆರೆಹಿಡಿದರು; ತಮ್ಮ ಕಾಲದ ಅತ್ಯಂತ ಜನಪ್ರಿಯ ಲೇಖಕ ಎನ್ನಿಸಿಕೊಂಡರು.

ತಮ್ಮ ಬರೆವಣಿಗೆಯ ಆರಂಭಕಾಲದಲ್ಲಿ ಕೃಷ್ಣರಾಯರು ರಚಿಸಿದ, ಕಲಾವಿದರ ಜೀವನವನ್ನು ಕುರಿತ ಸಂಧ್ಯಾರಾಗ, ಉದಯರಾಗ, ಸಾಹಿತ್ಯರತ್ನ, ನಟಸಾರ್ವಭೌಮ ಮೊದಲಾದ ಕಾದಂಬರಿಗಳೇ ಇವರ ಶ್ರೇಷ್ಠ ಕೃತಿಗಳೆಂದು ಪರಿಗಣಿತವಾಗಿವೆ. ಇವರ ಮುಂದಿನ ಬರೆಹಗಳಲ್ಲಿ ಗಾತ್ರದ ಪ್ರಮಾಣವನ್ನು ಗುಣ ಕಾಯ್ದುಕೊಳ್ಳುವುದು ಸಾಧ್ಯವಾಗಲಿಲ್ಲ. 'ಅವರ ಪಾತ್ರಗಳಲ್ಲಿ ವೈವಿಧ್ಯದ ಬಲವಿಲ್ಲದಿರುವುದೇ ಒಂದು ದೋಷ. ಬೇರೆ ಬೇರೆ ಸಂದರ್ಭಗಳಿಗೆ, ಸಂಗತಿಗಳಿಗೆ, ಸಮಸ್ಯೆಗಳಿಗೆ ಬೇಕಾದ ಬೇರೆ ಬೇರೆ ಪಾತ್ರಗಳು ಅನಕೃ ಅವರ ಕುಲುಮೆಯಲ್ಲಿ ಕರಗಿ ಹೋಗಿ ತಮ್ಮತನಗಳನ್ನು ಕಳೆದುಕೊಂಡು ಸಾಧಾರಣೀಕೃತರಾಗಿಬಿಡುತ್ತಾರೆ. ಅವರ ಯಾವುದೇ ಕಾದಂಬರಿಯನ್ನು ಎತ್ತಿಕೊಂಡರೂ ಅಲ್ಲಿಯ ಪಾತ್ರಗಳನ್ನು ಇನ್ನೆಲ್ಲಿಯೋ ನೋಡಿದ್ದೇವಲ್ಲ ಎನ್ನಿಸಿಬಿಡುತ್ತದೆ. ಸಮಕಾಲೀನ ಜೀವನಸಮಸ್ಯೆಗಳ ವಿಸ್ತಾರವನ್ನು, ವಿವಿಧ ಪರಿಗಳನ್ನು ಅನಕೃ ವಿವರವಾಗಿ ಗುರುತಿಸಿ, ವರ್ಣಿಸಲು ಸಮರ್ಥರಾಗಿದ್ದರೂ ಸಾಹಿತ್ಯ ಚರಿತ್ರೆಯಲ್ಲಿ ಅವರ ಹೆಸರು ಅವರ ಮೊದಲ ಕೃತಿಗಳಿಂದಲೇ ನಿಲ್ಲಬೇಕಾಗುತ್ತದೆಂಬುದು ಸಮಕಾಲೀನ ಸಾಹಿತ್ಯದ ಒಂದು ಸೋಜಿಗವಾಗಿದೆ. ಸಾಹಿತ್ಯವನ್ನು ಜನಪ್ರಿಯಗೊಳಿಸಿದ ಕನ್ನಡ ಕಾದಂಬರಿಕಾರರಲ್ಲಿ ಅನಕೃ ಇಂದಿಗೂ ಅದ್ವಿತೀಯರು' ಎಂಬುದಾಗಿ ವಿಮರ್ಶಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಕೃಷ್ಣರಾಯರ ಕೊನೆಕೊನೆಯ ಕಾದಂಬರಿಗಳಂತೂ ಬರೆವಣಿಗೆಯ ಯಾಂತ್ರಿಕತೆಯಿಂದ ತುಂಬ ಜಾಳುಜಾಳಾಗಿ ಹೋಗಿವೆ.

ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು ಮೊದಲಾದ ಕಾದಂಬರಿಗಳಲ್ಲಿ ಕೃಷ್ಣರಾಯರು ವೇಶ್ಯಾ ಜೀವನವನ್ನೂ ಆ ಜೀವನದ ಸಮಸ್ಯೆಗಳನ್ನೂ ಚಿತ್ರಿಸಿದ್ದಾರೆ. ಆ ಕಾದಂಬರಿಗಳು ಪ್ರಕಟವಾದಾಗ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೋಲಾಹಲವಾಯಿತು. ಕೃಷ್ಣರಾಯರ ಮೇಲೆ ಅಶ್ಲೀಲತೆಯ ಆರೋಪ ಬಂತು. ಆಗ ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಸಾಹಿತ್ಯ ಮತ್ತು ಕಾಮಪ್ರಚೋದನೆ ಎಂಬ ದೊಡ್ಡ ಗ್ರಂಥವನ್ನೇ ಬರೆಯಬೇಕಾಯಿತು. ಈ ಕಾದಂಬರಿಗಳಲ್ಲಿ ವೇಶ್ಯೆಯ ದುಃಖಕ್ಕಿಂತ ಸುಖವೇ ಹೆಚ್ಚಾಗಿ ವರ್ಣಿತವಾಗಿದೆಯೆಂಬುದಂತೂ ನಿಜ. ಗೃಹಲಕ್ಷ್ಮಿ, ರುಕ್ಮಿಣಿ ಮೊದಲಾದ ಕಾದಂಬರಿಗಳಲ್ಲಿ ಇವರು ಭಾರತೀಯ ಸ್ತ್ರೀಯನ್ನು ಆ ಸಂಸ್ಕೃತಿಯ ಪ್ರತೀಕವನ್ನಾಗಿ ಚಿತ್ರಿಸಿದ್ದಾರೆ. ಅವುಗಳಲ್ಲಿ ಬರುವ ಸಮಾಜ ಜೀವನದ ಚಿತ್ರಣದಲ್ಲಿ ಕಥೆಯನ್ನು ಭಾವುಕತೆಯೇ ಆಳುವಂತೆ ತೋರುತ್ತದೆ. ಯಾವುದೇ ಪಾತ್ರಗಳನ್ನು ನಿರ್ಮಿಸುವಲ್ಲಿ ಕೃಷ್ಣರಾಯರಿಗೆ ಒಳ್ಳೆಯ ಹಾಗೂ ಕೆಟ್ಟ ತುದಿಗಳು ಮಾತ್ರ ತಿಳಿದಿವೆ. ಬಹುಪಾಲು ಜೀವನ ಈ ಎರಡರ ನಡುವೆ ಇದೆ ಎಂಬುದನ್ನು ಇವರು ಸಾಮಾನ್ಯವಾಗಿ ಲಕ್ಷಿಸುವುದಿಲ್ಲ. ಕಲಾವಿದರಾಗಿ ಇವರ ಸೋಲಿಗೆ ಈ ದೃಷ್ಟಿಯೂ ಒಂದು ಕಾರಣವಿರಬಹುದು. ಕೃಷ್ಣರಾಯರ ಐತಿಹಾಸಿಕ ಕಾದಂಬರಿಗಳಲ್ಲಿ ಬಹುಪಾಲು ಕಾದಂಬರಿಗಳು ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದವು. ಬೆಂಗಳೂರು ಕೆಂಪೇಗೌಡನನ್ನೂ ಕಿತ್ತೂರು ಚೆನ್ನಮ್ಮನನ್ನೂ ಕುರಿತು ಇವರು ಒಂದೊಂದು ಕಾದಂಬರಿಯನ್ನು ಬರೆದಿದ್ದಾರೆ.

ಇವರ ಸಣ್ಣ ಕಥೆ ಮತ್ತು ನಾಟಕಗಳಲ್ಲಿಯೂ ಕಾದಂಬರಿಯ ವಸ್ತುಗಳೇ ಅನೇಕ ಸಲ ಕಾಣಿಸಿಕೊಳ್ಳುತ್ತವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ತೀವ್ರವಾಗಿ ಉದ್ಭವಿಸಿದ ಕೋಮುವಾರು ಗಲಭೆಗಳಿಗೆ ಸಂಬಂಧಿಸಿದಂತೆ ಇವರು ಬರೆದ ಕಥೆಯೊಂದು ಸರ್ಕಾರದ ಬಹಿಷ್ಕಾರಕ್ಕೆ ಒಳಗಾಗಿತ್ತು. ಇವರ ಕೆಲವು ನಾಟಕಗಳು ರಂಗಭೂಮಿಯ ಮೇಲೂ ಯಶಸ್ವಿಯಾಗಿವೆ. ಸಂಧ್ಯಾರಾಗ ಕಾದಂಬರಿ ಬೆಳ್ಳಿತೆರೆಯ ಮೇಲೆ ಕಾಣಿಸಿಕೊಂಡಿದೆ.

ಕೃಷ್ಣರಾಯರ ವಿಮರ್ಶಾತ್ಮಕ ಪ್ರಬಂಧಗಳು ಹಲವು ಸಂಪುಟಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ–ನಾಟಕಕಲೆ, ಸಜೀವ ಸಾಹಿತ್ಯ, ಸಮದರ್ಶನ, ಸಂಸ್ಕೃತಿಯ ವಿಶ್ವರೂಪ, ಸಾಹಿತ್ಯ ಮತ್ತು ಜೀವನ, ಸಾಹಿತ್ಯ ಮತ್ತು ಯುಗಧರ್ಮ–ಮೊದಲಾದವು ಉಲ್ಲೇಖನೀಯವಾಗಿವೆ. ಕನ್ನಡದ ದಾರಿ, ಅಖಂಡ ಕರ್ನಾಟಕ, ಕರ್ನಾಟಕದ ಹಿತಚಿಂತನೆ, ಬಳ್ಳಾರಿ ಸಮಸ್ಯೆ–ಮೊದಲಾದ ಗ್ರಂಥಗಳಲ್ಲಿ ಕೃಷ್ಣರಾಯರು ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಚರ್ಚಿಸಿದ್ದಾರೆ; ತಮ್ಮದೇ ಆದ ಸಲಹೆ ಸೂಚನೆಗಳನ್ನು ಮಂಡಿಸಿದ್ದಾರೆ. ಕರ್ನಾಟಕದ ಕಲಾವಿದರು ಎಂಬ ಹೆಸರಿನ ಎರಡು ಸಂಪುಟಗಳಲ್ಲಿ ಕನ್ನಡ ನಾಡಿನ ಕಲಾವಿದರನೇಕರ ಸಾಧನೆ ಸಿದ್ಧಿಗಳನ್ನು ನಿರೂಪಿಸಿ, ಕರ್ನಾಟಕದ ಕಲಾಶ್ರೀಮಂತಿಕೆ ಯಾವ ಬಗೆಯದೆಂಬುದನ್ನು ವಿವೇಚಿಸಿದ್ದಾರೆ. ಅಷ್ಟಾಗಿ ಬೆಳಕಿಗೆ ಬಾರದ ಕಲಾವಿದರ ಸಾಧನೆಗಳನ್ನೂ ಗಮನಿಸಿ ಅವರನ್ನು ನಾಡವರ ಕಣ್ಣಿಗೆ ಬೀಳುವಂತೆ ಮಾಡಿದ್ದು ಕೃಷ್ಣರಾಯರ ಹೆಚ್ಚುಗಾರಿಕೆ. ಕನ್ನಡ ಕುಲರಸಿಕರು ಎಂಬ ಗ್ರಂಥದಲ್ಲಿ ಪ್ರಖ್ಯಾತರಾದ ಕನ್ನಡ ಲೇಖಕರು, ವಿದ್ವಾಂಸರು, ಸಂಶೋಧಕರ ವ್ಯಕ್ತಿಚಿತ್ರಗಳಿವೆ. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಬಸವಣ್ಣನವರ ಅಮೃತವಾಣಿ ಮೊದಲಾದ ಗ್ರಂಥಗಳು

ವೀರಶೈವ ಸಾಹಿತ್ಯದಲ್ಲಿ ಇವರಿಗಿದ್ದ ಪ್ರವೇಶವನ್ನು ಸೂಚಿಸುತ್ತವೆ. ಕೃಷ್ಣರಾಯರು ಕಲಾವಿಮರ್ಶಕರೂ ಆಗಿದ್ದರು. ರವಿವರ್ಮನ ಕೃತಿಗಳನ್ನು ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ ಎಂಬ ಗ್ರಂಥದಲ್ಲಿ ಸವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಕನ್ನಡದಲ್ಲಿ ಈ ಬಗೆಯ ಕೃತಿ ಇಂದಿಗೂ ಹೊಸದೆ. ಚಿತ್ರಕಲೆ ಎಂಬುದು ಇಂಥದೇ ಇನ್ನೊಂದು ಗ್ರಂಥ. ಗಾಂಧಿ, ವಿವೇಕಾನಂದ, ಬಸವೇಶ್ವರ, ಕಬೀರ್ ಮೊದಲಾದವರ ಜೀವನ ಚರಿತ್ರೆಗಳನ್ನು ಕೃಷ್ಣರಾಯರು ರಚಿಸಿದ್ದಾರೆ. ನನ್ನನ್ನು ನಾನೇ ಕಂಡೆ ಎನ್ನುವುದು ಸ್ವಯಂ ಸಂದರ್ಶನಗಳನ್ನೊಳಗೊಂಡ ಗ್ರಂಥ. ಇದರಲ್ಲಿ ಇವರು ತಮ್ಮ ವಿಚಾರಗಳನ್ನು ವಿನೂತನವಾಗಿ ನಿರೂಪಿಸಿದ್ದಾರೆ. ಬರಹಗಾರನ ಬದುಕು ಎನ್ನುವುದು ಇವರ ಆತ್ಮಕಥೆ. ಇದನ್ನು ಇವರು ದಿನಪತ್ರಿಕೆಯೊಂದರ ವಾರದ ಪುರವಣಿಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. ಇದು ಪುಸ್ತಕರೂಪದಲ್ಲಿಯೂ ಪ್ರಕಟವಾಗಿದೆ. ಎರಡು ಸಂಪುಟಗಳಲ್ಲಿ ಗಾರ್ಕಿಯ ಕಥೆಗಳನ್ನೂ ಭಾರತದ ಕಥೆ (ದಿ ಸ್ಟೋರಿ ಆಫ್ ಇಂಡಿಯ) ಎಂಬ ಪುಸ್ತಕವನ್ನೂ ಇವರು ಅನುವಾದಿಸಿದ್ದಾರೆ. ಸುಮಾರು ಹತ್ತು ಪುಸ್ತಕಗಳನ್ನು ಕೃಷ್ಣರಾಯರು ಸಂಪಾದಿಸಿ ಪ್ರಕಟಿಸಿದ್ದಾರೆ. ಕನ್ನಡದ ಕಥೆಗಳನ್ನೂ ಪ್ರೇಮಗೀತೆಗಳನ್ನೂ ಪ್ರಾತಿನಿಧಿಕವಾಗಿ ಆಯ್ದು ಮೊದಲ ಬಾರಿಗೆ ಪ್ರಕಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮ್ಯಾಕ್ಸಿಂ ಗಾರ್ಕಿಯ ಬಗೆಗೆ ಇವರು ಸಂಪಾದಿಸಿರುವ ಗ್ರಂಥ ವಿಶಿಷ್ಟ ರೀತಿಯದಾಗಿದೆ. ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿಯರನ್ನು ಕುರಿತು ಕೃಷ್ಣರಾಯರು ಇಂಗ್ಲಿಷಿನಲ್ಲಿಯೂ ಬರೆದಿದ್ದಾರೆ.

ಕೃಷ್ಣರಾಯರು ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿಯ ಪ್ರವರ್ತಕರು. ಇವರು ತಮ್ಮ ಧ್ಯೇಯಸಾಧನೆಗಾಗಿ ಒಂದು ಗುಂಪನ್ನೇ ಕಟ್ಟಿದರು; ಹೊಸ ಲೇಖಕರ ಒಂದು ಪಡೆಯನ್ನೇ ನಿರ್ಮಿಸಿದರು; ಉತ್ಸಾಹ ಉದ್ವೇಗಗಳಿಂದ ಸಾಹಿತ್ಯಕ್ಕೆ ಹೊಸ ತಿರುವು ತಂದು ಕೊಟ್ಟರು. ಈ ಚಳವಳಿ ಕೇವಲ ಚಳವಳಿಯಾಗಿ ಉಳಿಯಿತೇ ವಿನಾ ಪರಂಪರೆಯಾಗಲಿಲ್ಲ, ಪರಂಪರೆಯ ಭಾಗವಾಗಲಿಲ್ಲ. ಆದರೆ ಇದಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶೇಷ ಸ್ಥಾನವಿದೆಯೆಂಬುದನ್ನು ಮರೆಯುವ ಹಾಗಿಲ್ಲ. ಕೃಷ್ಣರಾಯರು ಬೆಳಕಿಗೆ ತಂದ ಲೇಖಕರಲ್ಲಿ ಒಬ್ಬಿಬ್ಬರಾದರೂ ಕನ್ನಡದಲ್ಲಿ ಇಂದು ಮಹತ್ತ್ವದ ಹೆಸರು ಪಡೆದಿದ್ದಾರೆ; ವಿಶಿಷ್ಟವಾದ ಕೆಲಸ ಮಾಡಿದ್ದಾರೆ.

ಕೃಷ್ಣರಾಯರು ಪತ್ರಿಕೋದ್ಯಮ, ಚಲನಚಿತ್ರೋದ್ಯಮಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದರು. ಕನ್ನಡ ನುಡಿ ಮತ್ತು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳಿಗೆ ಇವರು ಕೆಲಕಾಲ ಸಂಪಾದಕರಾಗಿದ್ದರು. ಕಥಾಂಜಲಿ, ವಿಶ್ವವಾಣಿ ಎಂಬ ಪತ್ರಿಕೆಗಳನ್ನು ಇವರೇ ಪ್ರಕಟಿಸುತ್ತಿದ್ದರು. ಉದ್ದೇಶ, ವಿನ್ಯಾಸಗಳಲ್ಲಿ ಆ ಪತ್ರಿಕೆಗಳು ಇಂದಿಗೂ ಆದರ್ಶಪ್ರಾಯವಾಗಿವೆ. ಕೆಲವು ಕನ್ನಡ ಚಲನಚಿತ್ರಗಳ ನಿರ್ಮಾಣದೊಂದಿಗೂ ಇವರ ಸಂಪರ್ಕವಿತ್ತು. ಕೃಷ್ಣರಾಯರು ನಡೆಸಿದ ಸಾಹಿತ್ಯಕ ಜಗಳಗಳಿಗೆ ಲೆಕ್ಕವಿಲ್ಲ. ತಮ್ಮನ್ನು ಹಲವು ಕಾಳಗಗಳ ಕಲಿ ಎಂದು ತಾವೇ ಒಂದು ಕಡೆ ವರ್ಣಿಸಿಕೊಂಡಿದ್ದಾರೆ. ಕನ್ನಡದ ಬಗೆಗೆ ಯಾರಿಂದಲೇ ಆಗಲಿ, ಯಾವುದೇ ಮೂಲೆಯಿಂದಾಗಲಿ ಅಪಸ್ವರ ಬಂದಾಗ ಕೃಷ್ಣರಾಯರು ಗರ್ಜಿಸುತ್ತಿದ್ದರು. ತಮ್ಮ ಸ್ವಂತ ವಿಚಾರಗಳನ್ನು ಪ್ರತಿಪಾದಿಸಲು ಇವರು ಯಾವಾಗಲೂ ಹಿಂದೆ ಮುಂದೆ ನೋಡಿದವರಲ್ಲ. ಇವರ ಕನ್ನಡ ಅಭಿಮಾನ ಅಪೂರ್ವವಾದದ್ದು. 'ನನ್ನಂಥವರು ಕನ್ನಡಕ್ಕೆ ಅನೇಕರಿದ್ದಾರೆ; ಆದರೆ ನನಗಿರುವುದು ಒಂದೇ ಕನ್ನಡ' ಎನ್ನುವುದು ಇವರದೇ ಒಂದೇ ಮಾತು. ಕನ್ನಡ ನಾಡಿನ ಏಕೀಕರಣಕ್ಕಾಗಿ, ಏಕೀಕೃತ ನಾಡಿನ ಸರ್ವಾಂಗೀಣ ಪ್ರಗತಿಗಾಗಿ ಇವರು ತಮ್ಮ ಜೀವನವನ್ನೇ ಮುಡಿಪಿಟ್ಟಿದ್ದರು. ನಾಡಿನ ಉದ್ದಗಲಗಳಲ್ಲೆಲ್ಲ ಸಂಚರಿಸಿ ಜಾಗೃತಿಯ ಜಯಘಂಟೆಯನ್ನು ಬಾರಿಸಿದರು; ನಾಡಿನ ಹೊರಗೂ ಸಂಚರಿಸಿ ಕನ್ನಡ ಸಾಹಿತ್ಯಕ ಸಾಂಸ್ಕೃತಿಕ ಹಿರಿಮೆಯ ಜಯಘೋಷ ಮಾಡಿದರು. ಕೃಷ್ಣರಾಯರು ಶುದ್ಧ ಕನ್ನಡಿಗರು; ವೀರ ಕನ್ನಡಿಗರು. ಕನ್ನಡಿಗರ ಆತ್ಮಾಭಿಮಾನವನ್ನು ಇವರ ಹಾಗೆ ಉಕ್ಕಿಸಿದವರು ಹಲವರಿಲ್ಲ.

ಕೃಷ್ಣರಾಯರು ದೊಡ್ಡ ಪ್ರಮಾಣದಲ್ಲಿ ತಮ್ಮ ಜನರ ಪ್ರೀತಿವಿಶ್ವಾಸಗಳನ್ನು ಪಡೆದಿದ್ದರು. ಸಾಹಿತಿಯಾಗಿ, ವಾಗ್ಮಿಯಾಗಿ ಜನಪ್ರಿಯತೆಯ ಶಿಖರವನ್ನೇರಿದ್ದರು. ಮಣಿಪಾಲದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟೊರೇಟ್ ಪ್ರಶಸ್ತಿಯನ್ನಿತ್ತು ಗೌರವಿಸಿತು. ಮೈಸೂರು ರಾಜ್ಯದ ಸಾಹಿತ್ಯ ಅಕಾಡಮಿಗೆ ಇವರು ಮೊದಲ ಅಧ್ಯಕ್ಷರಾಗಿದ್ದರು. **(ನೋಡಿ- ಪ್ರಗತಿಶೀಲ-ಸಾಹಿತ್ಯ)** (ಎಚ್.ಎಂ.ಎನ್.)

**ಕೃಷ್ಣರಾಯ, ಕೃಷ್ಣಗಿರಿ :** 1890-1966. ಕನ್ನಡ ನಾಡಿನ ಕೇವಲ ಕೆಲವೇ ಪ್ರಸಿದ್ಧ ಗಮಕಿಗಳಲ್ಲೊಬ್ಬರು. ಭಾರತದ ಕೃಷ್ಣರಾಯರು ಎಂದೇ ಪ್ರಸಿದ್ಧಿ ಪಡೆದ ಇವರು ಹುಟ್ಟಿದ್ದು ಹಾಸನದಲ್ಲಿ. ತಂದೆ ಕೃಷ್ಣಗಿರಿ ಅನಂತಯ್ಯ. ತಾಯಿ ನಾಮಗಿರಿಯಮ್ಮ. ಇವರ ಪೂರ್ವಜರು ಆಂಧ್ರದವರು. ಮಾತೃಭಾಷೆ ತೆಲುಗು. ಇವರ ಹಿರಿಯರು ಮೈಸೂರಿಗೆ ಬಂದು ನೆಲಸಿದ್ದರಿಂದ ಮನೆಮಾತು ಕನ್ನಡವಾಯಿತು. ತಾಯಿತಂದೆಗೆ ಮೂರನೆಯ ಪುತ್ರನಾಗಿ ಜನಿಸಿದ ಕೃಷ್ಣರಾಯರು ಹಸುಗೂಸಾಗಿದ್ದಾಗಲೆ ತಂದೆಯನ್ನು ಕಳೆದುಕೊಂಡರು. ಸೋದರಮಾವನ ಪೋಷಣೆಯಲ್ಲಿ ಬಾಲ್ಯವನ್ನು ಕಳೆದು ಬೆಂಗಳೂರಿನ ಕೋಟೆ ಪ್ರೌಢಶಾಲೆಯಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಮುಗಿಸಿದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಓದಿದರಾದರೂ ಕಾರಣಾಂತರದಿಂದ ಪದವಿಯನ್ನು ಪಡೆಯಲಾಗಲಿಲ್ಲ. ಅನಂತರ ಅದೇ ಕಾಲೇಜಿನಲ್ಲಿ ಗುಮಾಸ್ತರಾಗಿ ಸೇರಿ ಕೊನೆಗೆ ಕಾಲೇಜಿನ ಪುಸ್ತಕ ಭಂಡಾರಿಗಳಾಗಿ ಕೆಲಸ ನಿರ್ವಹಿಸಿ ನಿವೃತ್ತರಾದರು.

ಕೃಷ್ಣರಾಯರಿಗೆ ಚಿಕ್ಕಂದಿನಿಂದ ಸಂಗೀತದ ಖಯಾಲಿ. ಅವರ ಚಿಕ್ಕಪ್ಪ ರಾಮಾಯಣ ಪಾರಾಯಣದ ರಾಮಚಂದ್ರರಾಯರು-ಸಬ್ ಡಿವಿಜನ್ ಆಫೀಸರರಾಗಿದ್ದವರು-ಸ್ವತಃ ದೇವರ ನಾಮಗಳನ್ನು ರಚಿಸಿ ಹಾಡುತ್ತಿದ್ದರು. ಜಮಾಬಂದಿ ಕಾಲದಲ್ಲಿ ಸಂಜೆಯ ಹೊತ್ತು ಜನರಿಗೆ ರಾಮಾಯಣವನ್ನು ಪರಿಚಯ ಮಾಡಿಕೊಡುವುದು ಅವರ ಒಂದು ಹವ್ಯಾಸವಾಗಿತ್ತು. ಕೃಷ್ಣರಾಯರ ಅಕ್ಕ ಮತ್ತು ಸೋದರತ್ತೆ ಕಂಠಶ್ರೀಯುಳ್ಳ ಹಾಡುಗಾರರು. ಅವರು ಹೇಳುವ, ಹೇಳಿಕೊಟ್ಟ ಹಾಡನ್ನು ಈ ಮಗು ಕಲಿತಿತು. ಬಾಲ್ಯದಲ್ಲಿಯೇ ಕೃಷ್ಣರಾಯರು ಪಿಟೀಲು ವಾದನವನ್ನು ಅಭ್ಯಾಸ ಮಾಡಿ ಸಂಗೀತ ಪ್ರಜ್ಞೆಯನ್ನು ಬೆಳೆಸಿಕೊಂಡರು. ಕಡೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಕೊಯಮತ್ತೂರು ಗಂಗಪ್ಪನವರ ಮಕ್ಕಳಾದ ಸಂಗೀತ ವಿದ್ವಾನ್ ಸುಬ್ಬಣ್ಣನವರಲ್ಲಿ ಎರಡು ವರ್ಷ ಸತತವಾಗಿ ಶಾಸ್ತ್ರೀಯ ಸಂಗೀತವನ್ನು ಕಲಿತರು. ಆಗ ಪ್ರಸಿದ್ಧರಾಗಿದ್ದ ಬಿಡಾರಂ ಕೃಷ್ಣಪ್ಪನವರು, ವೈಣಿಕ ಶಿಖಾಮಣಿ ವೀಣೆ ಶೇಷಣ್ಣ, ವಾಸುದೇವಾಚಾರ್ಯ-ಮೊದಲಾದ ಸಂಗೀತ ವಿದ್ವಾಂಸರ ಹಾಡುಗಾರಿಕೆಯನ್ನು ಕೇಳಿ ಕೇಳಿ ತಾವೂ ಉತ್ತಮ ಸಂಗೀತಗಾರರಾದರು.

ಸಂಗೀತ ಕಲಿಕೆಯನ್ನು ಹವ್ಯಾಸ ಮಾಡಿಕೊಂಡು ಪುಸ್ತಕ ಭಂಡಾರದ ಅಧಿಕಾರಿಗಳಾಗಿ ಕೃಷ್ಣರಾಯರು ಕ್ರಮೇಣ ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯಗಳನ್ನು ರೂಢಿಸಿಕೊಂಡರು. ಕಾನಕಾನಹಳ್ಳಿ ವರದಾಚಾರ್ಯರು, ಬಿ.ಎಂ.ಶ್ರೀ.-ಮೊದಲಾದವರ ಸ್ನೇಹಲಾಭ, ಎಂ.ಆರ್.ಶ್ರೀ. ಅಂಥವರ ಬಂಧುತ್ವ ಸಂಪರ್ಕಗಳಿಂದ ಇವರ ಮನಸ್ಸು ಸಾಹಿತ್ಯ, ಗಮಕಗಳ ಕಡೆ ತಿರುಗಿತು. ಒಮ್ಮೆ ಎಂ.ಆರ್.ಶ್ರೀ. ಅವರು ಕೃಷ್ಣರಾಯರಿಗೆ ಕದರ ಮುಂಡಿಗೆದಾಸರ ಮೊಮ್ಮಕ್ಕಳಾದ ಕೆ.ಎನ್. ಧೀರೇಂದ್ರದಾಸರ ಮತ್ತು ಬಿಂದೂರಾಯರ ಭೇಟಿ ಮಾಡಿಸಿದರು; ಬಿಂದೂರಾಯರ ಭಾರತವಾಚನವನ್ನು ಕೇಳಿಸಿದರು. ಇದು ನಡೆದದ್ದು 1919ರ ಸುಮಾರಿನಲ್ಲಿ. ಅಲ್ಲಿಂದ ಬಿಂದೂರಾಯರಿಗೂ ಕೃಷ್ಣರಾಯರಿಗೂ ಸ್ನೇಹ ಬೆಳೆಯಿತು. ಅದರಿಂದಾಗಿ ಕೃಷ್ಣರಾಯರ ಸಂಗೀತ ಗಮಕದ ಕಡೆಗೆ ತಿರುಗಿತು. ತಮ್ಮ ಕಲೆಗೆ ಸಂಗೀತದ ನೆರವನ್ನು ಪಡೆದು ರಾಯರು ಅಲ್ಲಿಂದ ಮೂವತ್ತು ವರ್ಷಗಳ ಕಾಲ ತಮ್ಮ ವಾಚನದಿಂದ ಕನ್ನಡಿಗರಿಗೆ ಕನ್ನಡ ಬೃಹತ್ ಕಾವ್ಯಗಳ ಪರಿಚಯ ಮಾಡಿಕೊಟ್ಟರು.

1938-40ರ ಸುಮಾರಿನಲ್ಲಿ ಕುವೆಂಪು ಅವರು ರಾಯರ ಕೈಲಿ ಚಿತ್ರಾಂಗದಾ ಮತ್ತು ಶ್ರೀರಾಮಾಯಣ ದರ್ಶನಂ ಕಾವ್ಯಗಳನ್ನು ಗಮಕ ಮಾಡಿಸಿ ಸಂತೋಷಪಟ್ಟರು. ಟಿ.ಎಸ್. ವೆಂಕಣ್ಣಯ್ಯ ಮತ್ತು ಕುವೆಂಪು ಅವರು ಒಮ್ಮೆ ಚಿತ್ರಾಂಗದಾ ಕಾವ್ಯವನ್ನು ಪೂರ್ಣವಾಗಿ ರಾಯರಿಂದ ವಾಚನ ಮಾಡಿಸಿದ್ದುಂಟು.

ಕೃಷ್ಣರಾಯರ ಓದುಗಾರಿಕೆ ವಿಶಿಷ್ಟವಾದುದು; ಆ ವ್ಯಕ್ತಿಗೇ ಮೀಸಲಾದುದು. ಸಂಗೀತಕ್ಕೆ ಸಂಗೀತ, ಸಾಹಿತ್ಯಕ್ಕೆ ಸಾಹಿತ್ಯ-ಇವೆರಡನ್ನೂ ಬೆರೆಸಿ ಗಮಕ ಕೆಡದಂತೆ, ರಸಭಂಗವಾಗದಂತೆ ಇವರು ಕಾವ್ಯವಾಚನ ಮಾಡುತ್ತಿದ್ದರು. ಪದ್ಯದ ಅರ್ಥವನ್ನು ಇಂಗ್ಲಿಷ್ ಕಾವ್ಯಗಳಲ್ಲಿ ಬರುವ ಸನ್ನಿವೇಶ, ಉಪಮೆ, ಹೋಲಿಕೆಗಳೊಡನೆ ವಿವರಿಸಿ, ಅನಂತರ ಪದ್ಯವನ್ನೂ ಓದಿ ಅದರ ಭಾವ ಕೇಳುಗರ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವಂತೆ ಇವರು ವಾಚನ ಮಾಡುತ್ತಿದ್ದರು.

ಕೃಷ್ಣರಾಯರದು ಗಡುಸಾದರೂ ಸುಮಧುರವಾದ ಶಾರೀರ. ಹಿತಮಿತವಾಗಿ ಆನಂದರಸಮಯವಾಗಿ ಕಾವ್ಯವನ್ನು ಸುಶ್ರಾವ್ಯವಾಗಿ ಓದುವುದು ಇವರ ವೈಶಿಷ್ಟ್ಯ. ಸಂಗೀತವನ್ನು ಕೇವಲ ಅಡಿಪಾಯವಾಗಿ ಬಳಸಿ, ಸ್ಥೂಲ ಸೂಚನೆಗಳಿಂದ ಮಾತ್ರ ರಾಗದ ಛಾಯೆಯನ್ನು ತೋರಿಸಿ ಕಾವ್ಯವನ್ನು ಪ್ರಧಾನವಾಗಿ ಎತ್ತಿ ನಿಲ್ಲಿಸುತ್ತಿದ್ದುದು ಕೃಷ್ಣರಾಯರ ಗಮಕಶೈಲಿ.

ಕನ್ನಡ ಜನ ಇವರನ್ನು 1935ರಲ್ಲಿ ಬೇಲೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಗಮಕ ಗೋಷ್ಠಿಗೆ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದರು.

ಕೃಷ್ಣರಾಯರು ಭಾರತದ ಕೃಷ್ಣರಾಯರಾಗಿ ಕನ್ನಡ ನಾಡಿನಲ್ಲೆಲ್ಲ ಸಂಚರಿಸಿ ಕನ್ನಡ ಕಾವ್ಯಗಂಗೆಯನ್ನು ಗಮಕ ಪಥದಲ್ಲಿ ಹರಿಸಿ ಕನ್ನಡಿಗರನ್ನು ಪವಿತ್ರಹೃದಯರನ್ನಾಗಿ ಮಾಡಿ ಕೀರ್ತಿಶೇಷರಾದರು. ಶ್ರೀಯುತರು ತಮ್ಮ 76ನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ಇಹಜೀವನವನ್ನು ಮುಕ್ತಾಯಗೊಳಿಸಿದರು. ಇರುವಷ್ಟು ಕಾಲವೂ ತಮ್ಮ ಕಲೆಯನ್ನು ಶಿಷ್ಯರಿಗೆ ಹಂಚಿ ಗಮಕ ಕಲೆ ತಲೆ ಎತ್ತುವಂತೆ ಮಾಡಿದರು.

ಸರಳತೆ, ಸರಸತೆ, ಔದಾರ್ಯ, ಸ್ನೇಹಪರತೆ,ವಿದ್ಯಾರ್ಥಿಪ್ರಿಯತೆ, ವಿನಯಶೀಲತ್ವ-ಇವು ಕೃಷ್ಣರಾಯರ ವಿಶಿಷ್ಟ ಗುಣಗಳು. (ಆರ್.ಎಸ್.ಆರ್.)

**ಕೃಷ್ಣರಾಯ, ಯು.ಎಸ್.(ಮಂಗಳೂರು) :** 1914–. ಕರಾವಳಿಯ ತೀರದ ಮಂಗಳೂರಿಗೆನೃತ್ಯಕಲಾಸಂಪತ್ತನ್ನುಪರಿಚಯಿಸಿದವ್ಯಕ್ತಿ ನಾಟ್ಯಾಚಾರ್ಯ ಯು.ಎಸ್.ಕೃಷ್ಣರಾಯರು. ಹುಟ್ಟಿದ್ದು 1914ರ ನವೆಂಬರ್ 14ರಲ್ಲಿ ಉಡುಪಿಯ ಸಮೀಪದ ಉಚ್ಚಿಲದಲ್ಲಿ. ತಂದೆ ಸುಬ್ಬರಾಯರು, ಸಂಪ್ರದಾಯಸ್ಥ ಹಾಗೂ ಶಿಸ್ತಿಗೆ ಹೆಸರಾದ ಬ್ರಾಹ್ಮಣ ವರ್ಗಕ್ಕೆ ಸೇರಿದವರು. ವಿದ್ಯಾಭ್ಯಾಸ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ. ಕೃಷ್ಣರಾಯರಿಗೆ ಹಾಡು, ಅಭಿನಯದಲ್ಲಿ ಆಸಕ್ತಿ, ಹುಟ್ಟಿನಿಂದಲೇ ಬೆಳೆದು ಬಂದದ್ದು. ಕನ್ನಡ ಪಂಡಿತ, ಕವಿ ಎಂ.ಎನ್. ಕಾಮತರ ಮಾರ್ಗದರ್ಶನದಲ್ಲಿ ಆ ಅಭಿರುಚಿಯ ವಿಕಾಸ. ಶಾಲೆಯ ನಾಟಕಗಳಲ್ಲಿ ಪ್ರಧಾನ ಪಾತ್ರಗಳೆಲ್ಲಾ ಇವರ ಪಾಲು. ಗಾಯನದಲ್ಲಿ ಅಭಿನಯದಲ್ಲಿ ಅವರಿಗೆ ಸರಿಗಟ್ಟುವವರೇ ಇರಲಿಲ್ಲ.

ಅಂತಾರಾಷ್ಟ್ರೀಯ ನೃತ್ಯ ಕಲಾವಿದ ಉದಯಶಂಕರರ ತಂಡದಲ್ಲಿದ್ದ ನೃತ್ಯಕಲಾವಿದ ಕೆ.ಕೆ.ಶೆಟ್ಟಿ ಮಂಗಳೂರಿಗೆ ಹಿಂತಿರುಗಿ ಬಂದರು. ಕೃಷ್ಣರಾಯರು, ಅವರ ಶಿಷ್ಯರಾದರು. 1934ರಲ್ಲಿ ಕದ್ರಿಯ ವಿದ್ಯಾ ಬೋಧಿನಿ ಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿರಂಗ ಪ್ರವೇಶ. ಆ ವೇಳೆಗೆ ಮಹಾಲಿಂಗಂ ಶಾಲಾ ಇನ್ಸ್‌ಪೆಕ್ಟರಾಗಿ ಬಂದರು. ಮಹಾಲಿಂಗಂ, ಕಥಕ್ಕಳಿ ನೃತ್ಯ ಪರಿಣತರು. ಕೃಷ್ಣರಾಯರು ಅವರಲ್ಲಿ ಕಥಕ್ಕಳಿ ನೃತ್ಯಾಭ್ಯಾಸ ಮಾಡ ತೊಡಗಿದರು.

ಕೃಷ್ಣರಾಯರು ಬೋಧನ ಕ್ರಮದಲ್ಲಿ ಸುಧಾರಣೆ ಮಾಡ ಬಯಸಿದರು. ಅದಕ್ಕೆ ಮಹಾಲಿಂಗಂ ಅವರ ಉತ್ತೇಜನವೂ ಇತ್ತು. ಶುಷ್ಕಪಾಠ ಪ್ರವಚನವಲ್ಲ. ಹಾಡು, ಅಭಿನಯ, ನೃತ್ಯಗಳಿಂದ ಕೂಡಿದ ಪಾಠ. ಮಕ್ಕಳು ಮೆಚ್ಚಿದರು. ಪೋಷಕರಿಗೂ ಇಷ್ಟವಾಯಿತು. ಶಾಲೆಯ ಆಡಳಿತ ಕೂಡ ಮಕ್ಕಳಿಂದಲೇ, ಪ್ರಜಾಸತ್ತಾತ್ಮಕ ವಿಧಾನದಲ್ಲಿ ಆಯ್ದ ಪ್ರತಿನಿಧಿಗಳ ಮೂಲಕ ಆಡಳಿತ. ಉತ್ತಮ ಶಿಕ್ಷಕರೆಂದು ಕೃಷ್ಣರಾಯರು ಗುರುತಿಸಲ್ಪಟ್ಟರು. ಶಾಲೆ ಬಿಟ್ಟ ನಂತರ ಸೈಕಲ್ ಹತ್ತಿ ಮನೆ ಮನೆಗೆ ಭೇಟಿ ನೀಡಿ ನೃತ್ಯ ಕಲಿಸಿದರು. ಕೃಷ್ಣರಾಯರ ಶಿಷ್ಯವೃಂದ, ಸಾರ್ವಜನಿಕ ಪ್ರದರ್ಶನ ನೀಡುವಷ್ಟು ಎತ್ತರಕ್ಕೆ ಬೆಳೆಯಿತು. ಮಂಗಳೂರಿನಲ್ಲಿ ನಡೆವ ಸಮಾರಂಭಗಳಲ್ಲಿ ಕಾರ್ಯಕ್ರಮ ಕಳೆಗಟ್ಟಲು, ಆಕರ್ಷಣೆ ಹೆಚ್ಚಿಸಲು ನೃತ್ಯ ಕಾರ್ಯಕ್ರಮ ಅಗತ್ಯವೆನ್ನುವ ಪರಿಸ್ಥಿತಿ ಉಂಟಾಯಿತು. 1941ರಲ್ಲಿ ಕೃಷ್ಣರಾಯರು ಮನೆಯಲ್ಲೇ ನೃತ್ಯಶಾಲೆ ಆರಂಭಿಸಿದರು. 'ನೃತ್ಯ ವಿದ್ಯಾನಿಲಯ' ಜನಪ್ರಿಯವಾಯಿತು. ನವರಾತ್ರಿ ಸಮಯದಲ್ಲಿ ಇಲ್ಲಿ ನಡೆವ ನೃತ್ಯೋತ್ಸವ, ಜನರು ಆಸಕ್ತಿಯಿಂದ ನಿರೀಕ್ಷಿಸುತ್ತಿದ್ದ ಸಾಂಸ್ಕೃತಿಕ ಉತ್ಸವವಾಯಿತು.

ಕೇರಳದ ನೃತ್ಯ ಪರಿಣತ ರಾಜನಮ್ಮರ್ ಮಂಗಳೂರಿಗೆ ಬಂದರು. ಅವರು ಭರತನಾಟ್ಯ, ಕಥಕ್ಕಳಿ ನೃತ್ಯ ಪಟು. ಕೃಷ್ಣರಾಯರು ಅವರ ಬಳಿಯೂ ತಮ್ಮ ನೃತ್ಯಾಭ್ಯಾಸವನ್ನು ಮುಂದುವರಿಸಿದರು; ಕರಾವಳಿ ಮಂಗಳೂರಿನ ಸಾಂಸ್ಕೃತಿಕ ಜೀವನದ ಅಂಗವಾದರು. ಅವರ ಸಂಸ್ಥೆಯ ನೃತ್ಯ ಪ್ರದರ್ಶನಗಳು ದೇಶಾದ್ಯಂತ ನಡೆದಿವೆ. ರಾಷ್ಟ್ರಪತಿ ಭವನದಲ್ಲಿ, ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣ ಅವರ ಸಮ್ಮುಖದಲ್ಲಿ ಪ್ರದರ್ಶನ ನೀಡಿ ಅವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ನೃತ್ಯವಿದ್ಯಾನಿಲಯದ ಬೆಳ್ಳಿ ಹಬ್ಬ ಮುಂಬಯಿ ನಗರದಲ್ಲಿ, ಸುವರ್ಣ ಮಹೋತ್ಸವ ಮಂಗಳೂರಿನಲ್ಲಿ ನಡೆಯಿತು. ಈ ಸಮಾರಂಭಗಳಲ್ಲಿ ಕೃಷ್ಣರಾಯರು ನಾಡಿನ ಹಿರಿಯ ಕಲಾ ಚೇತನಗಳನ್ನು ಗೌರವಿಸಿದರು.

ಕೃಷ್ಣರಾಯರ ಶಿಷ್ಯರ ಸಂಖ್ಯೆ ಅಪಾರ. ಸಾವಿರಕ್ಕೂ ಮೀರಿದೆ ಎಂದು ಒಂದು ಅಂದಾಜು. ಅವರಲ್ಲಿ ಅನೇಕರು ನೃತ್ಯ ಗುರುಗಳಾಗಿ, ದೇಶ, ವಿದೇಶಗಳಲ್ಲಿ ನೃತ್ಯ ಕಲೆಯ ಪ್ರಸಾರ ಮಾಡುತ್ತಿದ್ದಾರೆ. ರಾಯರ ಐದು ಮಂದಿ ಮಕ್ಕಳೂ ನೃತ್ಯರಂಗದಲ್ಲೇ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನ 'ನೃತ್ಯನಿಕೇತನ್' ಮತ್ತು 'ಅರುಣ್ ಕಲಾವಿದರು' ಸಂಸ್ಥೆಯ ಯು.ಕೆ.ಅರುಣ್, ಕೃಷ್ಣರಾಯರ ಪುತ್ರರು. ಯು.ಕೆ.ಪ್ರವೀಣ್ ಕದ್ರಿಯ 'ನೃತ್ಯ ವಿದ್ಯಾನಿಲಯ'ದಲ್ಲಿ, ತಂದೆಯವರ ಪರವಾಗಿ ನೃತ್ಯಶಿಕ್ಷಣ ಕಾರ್ಯ ಮುಂದುವರೆಸಿದ್ದಾರೆ.

ಇವರಿಗೆ ನೃತ್ಯ ರಂಗದಲ್ಲಷ್ಟೇ ಅಲ್ಲದೆ, ಶಾಲಾ ಶಿಕ್ಷಕರಾಗಿಯೂ ಉತ್ತಮ ಸೇವೆ ಸಲ್ಲಿಸಿದ್ದಕ್ಕಾಗಿ 1972ರಲ್ಲೇ ರಾಜ್ಯ ಪ್ರಶಸ್ತಿಯೂ ಲಭಿಸಿದೆ.ನೃತ್ಯ ಕಲೆಗೆ ತಮ್ಮ ಜೀವನವನ್ನು ಅರ್ಪಿಸಿಕೊಂಡ ಕೃಷ್ಣರಾಯರು, ಕರ್ನಾಟಕ ನೃತ್ಯ ಅಕಾಡೆಮಿ ಪ್ರಶಸ್ತಿ (1981), ರಾಜ್ಯೋತ್ಸವ ಪ್ರಶಸ್ತಿ (1990), ನಾಟ್ಯರಾಣಿ ಶಾಂತಲಾ ಪ್ರಶಸ್ತಿಗಳಿಗೆ (1997) ಪಾತ್ರರಾಗಿದ್ದಾರೆ. (ಎಂ.ಬಿ.ಎಸ್.)

**ಕೃಷ್ಣರಾವ್, ಎಂ.ವಿ. :** 1901–1971. ಕರ್ನಾಟಕದ ಪ್ರಖ್ಯಾತ ಇತಿಹಾಸಜ್ಞ, ರಾಜನೀತಿಜ್ಞ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲು ರಾಜ್ಯಶಾಸ್ತ್ರದ ಉಪಪ್ರಾಧ್ಯಾಪಕರೂ ಅನಂತರ ಇತಿಹಾಸದ ಪ್ರಾಧ್ಯಾಪಕರೂ ಆಗಿದ್ದವರು.

ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಖ್ಯಾತ ವಿದ್ವಾಂಸ ಥಾಮಸ್ ಡೆನ್‌ಹ್ಯಾಂ, ಸಿ.ಆರ್. ರೆಡ್ಡಿ, ರಾಧಾಕುಮುದ ಮುಖರ್ಜಿ, ಎಸ್.ವಿ. ವೆಂಕಟೇಶ್ವರ, ಎಂ.ಎಚ್. ಕೃಷ್ಣ ಮೊದಲಾದವರ ಶಿಷ್ಯರಾಗಿದ್ದು, ಅವರಿಂದ ಜೀವನದ ವಿಶಾಲದೃಷ್ಟಿ, ವಿದ್ಯಾರ್ಜನೆಯಲ್ಲಿ ಆಳವಾದ ಸಂಶೋಧನಾತ್ಮಕ ಆಸಕ್ತಿ ಮತ್ತು ಪ್ರೌಢವಾದ ವಿದ್ವತ್ತನ್ನು ಗಳಿಸಿಕೊಂಡರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದ ತರುವಾಯ ರಾಜ್ಯಶಾಸ್ತ್ರದಲ್ಲಿ ಹೆಚ್ಚಿನ ಪಾಂಡಿತ್ಯ ಗಳಿಸುವ ದೃಷ್ಟಿಯಿಂದ ಲಂಡನಿಗೆ ತೆರಳಿ, ಲಾಸ್ಕಿಯ ಶಿಷ್ಯರಾದರು. ಇದರ ಫಲವಾಗಿ ಗ್ರೋತ್ ಆಫ್ ಲಿಬರಲಿಸಂ ಇನ್ ಇಂಡಿಯ ಇನ್ ದಿ ನೈನ್‌ಟೀನ್ತ್ ಸೆಂಚುರಿ ಎಂಬ ಗ್ರಂಥ ರಚಿಸಿದರು.

ಹೀಗೆ ತಮ್ಮ ಪಾಂಡಿತ್ಯಕ್ಕೆ ಭದ್ರ ಬುನಾದಿಯನ್ನು ಒದಗಿಸಿಕೊಂಡ ಅನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಂಶೋಧನೆ ಮತ್ತು ಬೋಧನೆಯಲ್ಲಿ ನಿರತರಾದರು. ವಿದ್ಯಾರ್ಥಿಗಳ ಮೇಲೆ, ಸಹಾಧ್ಯಾಪಕರ ಮೇಲೆ ಇವರು ಪ್ರಭಾವ ಬೀರಿದರು. ಇವರು ಒಳ್ಳೆಯ ವಾಗ್ಮಿತೆಯನ್ನೂ ವಿಷಯದ ಮೇಲೆ ಪ್ರಭುತ್ವವನ್ನೂ ಪಡೆದಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹುದ್ದೆಯಿಂದ 1956ರಲ್ಲಿ ಇವರು ನಿವೃತ್ತರಾದರೂ

ಅನಂತರ ಒಂದೂವರೆ ದಶಕಗಳ ಕಾಲ ಕರ್ನಾಟಕದ ಇತಿಹಾಸ, ಸಂಸ್ಕೃತಿಗಳ ವಿಚಾರವಾಗಿ ಆಳವಾದ ಅಧ್ಯಯನ ಸಂಶೋಧನೆಗಳಲ್ಲಿ ನಿರತರಾಗಿದ್ದರಲ್ಲದೆ ಬೆಂಗಳೂರಿನ ಕಾಲೇಜೊಂದರಲ್ಲಿ ಅಧ್ಯಾಪಕ ವೃತ್ತಿಯನ್ನು ಮುಂದುವರಿಸಿದರು. ಬೆಂಗಳೂರು ನಗರದ ಅನೇಕ ಪ್ರಮುಖ ಐತಿಹಾಸಿಕ–ಸಾಂಸ್ಕೃತಿಕ ಸಭೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಉಪಾಧ್ಯಕ್ಷತೆ, ಪ್ರೌಢಶಾಲಾ ಉಪಾಧ್ಯಾಯ ಸಂಘದ ಅಧ್ಯಕ್ಷತೆ, ಮಿಥಿಕ್ ಸೊಸೈಟಿಯ ಅಧ್ಯಕ್ಷಪದ, ಆಚಾರ್ಯ ತುಳಸಿಯವರಿಂದ ಪ್ರಚಲಿತವಾದ ಅಣುವ್ರತ ಸಮಿತಿಯ ಕರ್ನಾಟಕ ಸಮಿತಿಯ ನಿರ್ದೇಶಕತ್ವ–ಇವು ಇವರ ಚಟುವಟಿಕೆಗಳಲ್ಲಿ ಕೆಲವು. ಕೃಷ್ಣರಾಯರು 1971ರಲ್ಲಿ ಮೃತರಾದರು.

ವಿದ್ವತ್ ಲೋಕಕ್ಕೆ ಇವರ ಕೊಡುಗೆ ಗಮನಾರ್ಹ. ಕೌಟಿಲ್ಯನ ಅರ್ಥಶಾಸ್ತ್ರವನ್ನು ಕುರಿತ ಇವರ ಸಂಶೋಧನಾತ್ಮಕ ಲೇಖನಗಳು ಪುರಾತನ ಭಾರತೀಯ ರಾಜನೀತಿಯ ಅಧ್ಯಯನಕ್ಷೇತ್ರದಲ್ಲಿ ಉತ್ತಮ ಕೊಡುಗೆಗಳಾಗಿವೆ. 19ನೆಯ ಶತಮಾನದಲ್ಲಿ ಭಾರತದ ರಾಜಕಾರಣದಲ್ಲಿ ಬೆಳೆದುಬಂದ ಉದಾರತಾವಾದದ ಮೇಲಿನ ಇವರ ಅಧ್ಯಯನ ಉತ್ತಮವಾದ ಶಾಸ್ತ್ರೀಯ ಬರೆವಣಿಗೆಗೂ ಭಾಷಾಪ್ರೌಢಿಮೆಗೂ ಹೆಸರಾಗಿದೆ. ಪ್ರಾಚೀನ ಕರ್ನಾಟಕದಲ್ಲಿ 7 ಶತಮಾನಗಳ ಕಾಲ ರಾಜ್ಯವಾಳಿ ಆ ಸಂಸ್ಕೃತಿಯ ಬೆಳೆವಣಿಗೆಗೆ ಗಮನಾರ್ಹ ಕಾಣಿಕೆ ನೀಡಿದ ಗಂಗವಂಶದ ಚರಿತ್ರೆಯ ಮೇಲೆ ಇವರು ರಚಿಸಿದ ಹೊತ್ತಗೆ (ತಲಕಾಡಿನ ಗಂಗರು) ಇಂದಿಗೂ ಆ ವಂಶದ ಮೇಲಿನ ಏಕೈಕ ಅಧಿಕಾರಯುತ ಗ್ರಂಥ. ಕರ್ನಾಟಕದ ಇತಿಹಾಸದ ಮೇಲೆ ಇವರು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಗ್ಲಿಂಪ್ಸಸ್ ಆಫ್ ಕರ್ನಾಟಕ ಹಿಸ್ಟೊರಿ ಮತ್ತು ಕರ್ನಾಟಕ ಇತಿಹಾಸ ದರ್ಶನ–ಇವು ಮುಖ್ಯವಾದವು. ಕರ್ನಾಟಕ ಇತಿಹಾಸ ದರ್ಶನ ಕನ್ನಡ ನಾಡಿನ 2,000 ವರ್ಷಗಳ ಇತಿಹಾಸದ ಸಮಗ್ರ ನೋಟವನ್ನೊದಗಿಸುವ ದೊಡ್ಡ ಕೃತಿ. ಅವರ ಜೀವನದ ಕೊನೆಯ ಕಾಲದಲ್ಲಿ ಪ್ರಕಟವಾದ ಈ ಪುಸ್ತಕ ಅವರ ಆಳವಾದ ವಿದ್ವತ್ತು ಮತ್ತು ವಿಶಾಲವಾದ ಅನುಭವಗಳ ದ್ಯೋತಕವಾಗಿದೆ.

ಕೃಷ್ಣರಾಯರು ಬ್ರಿಟನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿಯ ಗೌರವ ಸದಸ್ಯತ್ವ ಪಡೆದಿದ್ದರು. ರಾಜ್ಯ ಸರ್ಕಾರದ ಆಶ್ರಯದಲ್ಲಿ ನಡೆದ ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಇತಿಹಾಸದ ರಚನೆಯಲ್ಲೂ ಇವರು ಭಾಗವಹಿಸಿದ್ದರು. ಕನ್ನಡ ವಿಶ್ವಕೋಶದ ಇತಿಹಾಸ ಉಪಸಮಿತಿಯ ಅಧ್ಯಕ್ಷರಾಗಿದ್ದರು. ಇವರ ಹಲವು ಲೇಖನಗಳು ಕನ್ನಡ ವಿಶ್ವಕೋಶದಲ್ಲಿ ಪ್ರಕಟವಾಗಿವೆ.
*

**ಕೃಷ್ಣರಾವ್, ಯು.ಎಸ್. – ಚಂದ್ರಭಾಗಾದೇವಿ :** ಪರಂಪರೆಯಿಂದ 'ಸೋಲೋ' (ಸಾದಿರ್) ವಾಗಿಯೇ ರೂಪಗೊಂಡ ಭರತನಾಟ್ಯ ಶೈಲಿಯನ್ನು ಪ್ರಪ್ರಥಮವಾಗಿ ಯುಗಳ ನೃತ್ಯಕ್ಕೆ ಅಳವಡಿಸಿದ ಕೀರ್ತಿ ಬೆಂಗಳೂರಿನ ಯು.ಎಸ್. ಕೃಷ್ಣರಾವ್–ಚಂದ್ರಭಾಗಾದೇವಿ ಅವರಿಗೆ ಸಲ್ಲಬೇಕು. ಅಂತೆಯೇ ಹೆಣ್ಣು–ಗಂಡು, ಸತಿ–ಪತಿಗಳು ಜೋಡಿಯಾಗಿ ನರ್ತಿಸುವ ಪರಿಪಾಠವೂ ಇವರಿಂದಲೇ ಮೊದಲುಗೊಂಡಿದ್ದು ಎಂಬುದೂ ನಿಜ. ಅದೇ ಧಾಟಿಯಲ್ಲಿ ಸುಮಾರು ಐದು ದಶಕಗಳ ಪರ್ಯಂತ ಪ್ರದರ್ಶನಗಳನ್ನು ನಿರ್ವಹಿಸಿ, ನೃತ್ಯ ಶಿಕ್ಷಣವನ್ನು ಆಸಕ್ತರನೇಕರಿಗೆ ಒದಗಿಸಿ, ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ ಈ ದಂಪತಿಗಳ ಕಾರ್ಯಕ್ಷೇತ್ರ ಬೆಂಗಳೂರಾದರೂ ಇಬ್ಬರೂ ದಕ್ಷಿಣ ಕನ್ನಡ ಜಿಲ್ಲೆಯವರು, ಕೃಷ್ಣರಾಯರು ಹುಟ್ಟಿದ್ದು (ಡಿಸೆಂಬರ್ 31, 1912) ಉತ್ತರ ಕನ್ನಡ ಜಿಲ್ಲೆಯ ಮಲ್ಲಾಪುರ. ಬೆಳೆದದ್ದು ಬೆಂಗಳೂರು. ತಂದೆ ಶಿವರಾಮ, ತಾಯಿ ಗಿರಿಜಾ ಬಾಯಿ. ಚಂದ್ರಭಾಗಾದೇವಿ (ಜನ್ಮ 1921 ಆಗಸ್ಟ್ 11) ತಂದೆ ಪಡುಕೋಣೆ ರಮಾನಂದರಾಯರು, ತಾಯಿ ಸೀತಾದೇವಿ. ಇಬ್ಬರೂ ಬರೆಹಗಾರರು. ಇವರುಗಳ ವಿದ್ಯಾಭ್ಯಾಸಕೇಂದ್ರ ಕರ್ನಾಟಕದ ರಾಜಧಾನಿ. ಪತಿ ಕೃಷ್ಣರಾವ್ ಸ್ನಾತಕೋತ್ತರ ಪದವಿ ಪಡೆದು, ಅದೇ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾದರೆ, ಪತ್ನಿ ಚಂದ್ರಭಾಗಾ ಪದವೀಧರೆ. ಇಬ್ಬರಿಗೂ ರಸಾಯನವಿಜ್ಞಾನದಷ್ಟೇ ನೃತ್ಯದಲ್ಲೂ ಮೊದಲಿನಿಂದಲೂ ಆಸಕ್ತಿ. ಕೃಷ್ಣರಾಯರು ನಗರದಲ್ಲಿ ಕೋಲಾರ ಪುಟ್ಟಪ್ಪನವರಲ್ಲಿ

ನೃತ್ಯಾಭ್ಯಾಸಕ್ಕೆ ತೊಡಗಿದ್ದರು, ಚಂದ್ರಭಾಗಾದೇವಿ ಚಿಕ್ಕಂದಿನಿಂದಲೇ ಶಿವರಾಮ ಕಾರಂತರ ವಿವಿಧ ನೃತ್ಯ ರೂಪಕ ಪ್ರಯೋಗಗಳಲ್ಲಿ ನರ್ತಿಸಿದ ಅನುಭವ. ಇಂತಹ ಹಲವಾರು ಸಮಾನತೆಗಳಿಂದ ಕೂಡಿದ ಈರ್ವರೂ ಸತಿ ಪತಿಗಳಾದದ್ದು ಯೋಗಾಯೋಗ. ನೃತ್ಯವನ್ನು ಕೀಳಾಗಿ ಪರಿಗಣಿಸುತ್ತಿದ್ದ ಅಂದಿನ ಸಮಾಜದಲ್ಲಿ ಸುಸಂಸ್ಕೃತ, ವಿದ್ಯಾವಂತ ಕುಟುಂಬಕ್ಕೆ ಸೇರಿದ ಕಲಾವಿದರಲ್ಲಿ ಈ ದಂಪತಿಗಳೇ ಮೊದಲಿಗರು ಎಂದರೂ ತಪ್ಪಾಗಲಾರದು.

ಕೃಷ್ಣರಾಯರು ಕೋಲಾರದ ಪುಟ್ಟಪ್ಪನವರಲ್ಲಿ ಮೈಸೂರು ಶೈಲಿಯ ಭರತನಾಟ್ಯ, ಪಂದನಲ್ಲೂರ್ ಶೈಲಿಯನ್ನು ಮೀನಾಕ್ಷಿ ಸುಂದರಂ ಪಿಳ್ಳೆ ಅವರಲ್ಲಿ, ಕುಮಾರನ್ ಮತ್ತು ಕುರುಪ್ ಅವರಿಂದ ಕಥಕ್ಕಳಿಯನ್ನು ಕಲಿತರು. ಚಂದ್ರಭಾಗಾದೇವಿ ಮೊದಲ ನೃತ್ಯ ಹೆಜ್ಜೆ ಇಡಲು ಕಲಿತದ್ದು ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ. ಶ್ರೀನಿವಾಸ ಕುಲಕರ್ಣಿ ಅವರಿಂದ ಕಥಕ್ಕಳಿ ನೃತ್ಯ ಬಂಧಗಳನ್ನು, ಭರತನಾಟ್ಯವನ್ನು ಕೋಲಾರ ಪುಟ್ಟಪ್ಪ ಮತ್ತು ಕೃಷ್ಣರಾಯರಿಂದ ಕಲಿತರು.

ಇವರುಗಳ ನೃತ್ಯಾಸಕ್ತಿಯನ್ನು ಚುರುಕು ಗೊಳಿಸಿದ್ದು, 20ನೆಯ ಶತಮಾನದ ನಲ್ವತ್ತರಲ್ಲಿ, ಅದೇತಾನೆ, ಎರಡನೆಯ ಮಹಾಯುದ್ಧದ ಅಡಚಣೆಯಿಂದ ತಮ್ಮ ಇಂಗ್ಲೆಂಡ್ ಯುರೋಪ್ ನೃತ್ಯ ಪ್ರವಾಸವನ್ನು ಮೊಟಕುಗೊಳಿಸಿ ತಾಯ್ನಾಡಿಗೆ ಹಿಂದಿರುಗಿದ, ಖ್ಯಾತ ನೃತ್ಯ ಕಲಾವಿದ ರಾಂಗೋಪಾಲ್‌ರ ಸಂಪರ್ಕ. ಆ ಹೊತ್ತಿಗೆ ಆ ಅತ್ಯಾಕರ್ಷಕ ನರ್ತಕರ ತಂಡದ ಪ್ರದರ್ಶನಗಳು ಜರುಗಿದ್ದು, ಅವು ಜನಮನವನ್ನು ಗೆದ್ದಿದ್ದವು. 1948ರ ಪ್ರದರ್ಶನ ಒಂದರಲ್ಲಿ ಕೃಷ್ಣರಾವ್ ದಂಪತಿಗಳಿಗೂ ನರ್ತಿಸುವ ಅವಕಾಶ ಒದಗಿ ಬಂತು. ಆ ಪ್ರದರ್ಶನ ಅನೇಕ ರಸಿಕರ, ನೃತ್ಯಾಸಕ್ತರ ಗಮನವನ್ನು ಸೆಳೆಯಿತು. ಕೃಷ್ಣರಾಯರು ಹಾಗೂ ಚಂದ್ರಭಾಗಾದೇವಿ ಅವರ ಕಲಾಜೀವನದ ನಾಂದಿಯಾಯಿತು ಕೂಡ. ಪರಿಣಾಮ ಅನೇಕ ನೃತ್ಯಾಸಕ್ತರಿಂದ ನೃತ್ಯ ಕಲಿಯಲು ಬೇಡಿಕೆ. ಹೀಗೆ ಪ್ರಾರಂಭವಾದದ್ದು ಇವರ "ಮಹಾಮಾಯಾ" ನೃತ್ಯ ಶಾಲೆ. ಈ ಮಧ್ಯೆ ಮದರಾಸಿನ (ಈಗ ಚೆನ್ನೈ) ನೃತ್ಯೋದಯ ಸಂಸ್ಥೆಯಲ್ಲಿ (ಖ್ಯಾತ ನರ್ತಕಿ ಪದ್ಮಾ ಸುಬ್ರಹ್ಮಣ್ಯಂರ ಚಿಕ್ಕಪ್ಪ ಕೆ. ವಿಶ್ವನಾಥನ್‌ರಿಂದ ಸ್ಥಾಪಿಸಲಾದ ಈ ಸಂಸ್ಥೆ ಪದ್ಮಾರ ಆಡಳಿತದಲ್ಲಿ ಹೆಸರು ಗಳಿಸಿ, ಈಗ ಲೋಕ ವಿಖ್ಯಾತವಾಗಿದೆ) ಕೆಲಕಾಲ ನೃತ್ಯ ಶಿಕ್ಷಕರಾಗಿ ಸೇವೆಸಲ್ಲಿಸಿದರು. ಆದರೆ ನೃತ್ಯದಲ್ಲಿ ಹೆಚ್ಚಿನ ತರಬೇತಿ ಪಡೆಯುವುದರ ಉದ್ದೇಶದಿಂದ ಆ ಕೆಲಸವನ್ನು ತ್ಯಜಿಸಿ ಪಂದನಲ್ಲೂರಿನತ್ತ ಪ್ರಯಾಣ ಬೆಳೆಸಿದರು. ಅಲ್ಲಿನ ಸುವಿಖ್ಯಾತ ಮೀನಾಕ್ಷಿ ಸುಂದರಂ ಪಿಳ್ಳೆಯವರಲ್ಲಿ ಕೆಲಕಾಲ ಸಾಧನೆಯಲ್ಲಿ ತೊಡಗಿ, ಬೆಂಗಳೂರಿಗೆ ಹಿಂದಿರುಗಿದಾಗ ಅವರ ಆತ್ಮವಿಶ್ವಾಸ ಇಮ್ಮಡಿಯಾಗಿತ್ತು. ಪ್ರದರ್ಶನ ಮತ್ತು ಶಿಕ್ಷಣಗಳೆರಡರಲ್ಲೂ ಹೆಚ್ಚು ಉತ್ಸಾಹದಿಂದ ತಮ್ಮನ್ನು ತೊಡಗಿಸಿಕೊಂಡರು.

ಜೊತೆಜೊತೆಯಲ್ಲಿ ಕೃಷ್ಣರಾಯರ ಕಾಲೇಜಿನ ಅಧ್ಯಾಪಕ ವೃತ್ತಿಯೂ ಮುಂದುವರಿದಿತ್ತು. ತನ್ಮೂಲಕ ವಿದ್ಯಾರ್ಥಿ ಸಮೂಹಗಳಲ್ಲಿ ಭರತನಾಟ್ಯವನ್ನು ಕುರಿತ ಪ್ರಾತ್ಯಕ್ಷಿಕೆಗಳನ್ನು ನೀಡಿ ಆ ಕಲೆಯ ಅಭಿರುಚಿ ಬೆಳೆಯಲು ಸಹಾಯಕರಾದರಲ್ಲದೇ ತಮ್ಮ ಕಲಿಕೆಯ ಬಗ್ಗೆ ಪ್ರಚಾರವನ್ನು ಗಳಿಸಿಕೊಂಡರು. ಇದರಿಂದ ಇವರೀರ್ವರ ಪ್ರದರ್ಶನಗಳ, ಶಿಕ್ಷಣದ ಬೇಡಿಕೆಯು ಬೆಳೆಯುತ್ತಾ ಹೋಯಿತು. ಇವರು ಈ ಮಧ್ಯೆ ನಿರ್ಮಿಸಿದ 'ಮಹಾಮಾಯಾ' ಈ ದಂಪತಿಗಳ ವಾಸಕ್ಕೂ, ನೃತ್ಯ ಶಾಲೆಗೂ ಅಲ್ಲದೇ ನೃತ್ಯ ಪ್ರದರ್ಶನಗಳಿಗೂ ಕೇಂದ್ರವಾಯಿತು. ಇವರ ಶಿಷ್ಯರನೇಕರು ಅದರ ರಂಗಸ್ಥಳದಲ್ಲಿ ರಂಗಪ್ರವೇಶ, ನೃತ್ಯ ಪ್ರದರ್ಶನಗಳನ್ನಿತ್ತಿದ್ದಾರೆ. ಅವರುಗಳಲ್ಲಿ ಹಿರಿಯರನೇಕರು ಹೊರನಾಡಿನಲ್ಲಿ ನೃತ್ಯ ಶಾಲೆಗಳನ್ನು ಆರಂಭಿಸಿ ತಮ್ಮ ಗುರುಗಳ ಕೀರ್ತಿಗೆ ಭಾಜನರಾಗಿದ್ದಾರೆ. ಅಂತೆಯೇ ಸ್ಥಳೀಯವಾಗಿ ತರಗತಿಗಳನ್ನು ನಡೆಸುತ್ತಾ, ಪ್ರದರ್ಶನಗಳಲ್ಲಿ ಭಾಗವಹಿಸುತ್ತಿರುವ ಇವರ ಶಿಷ್ಯರೂ ಕಡಿಮೆ ಏನಿಲ್ಲ, ಇಂಥವರಲ್ಲಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿರುವ ಪ್ರತಿಭಾ ಪ್ರಹ್ಲಾದ್‌ರಂಥವರನ್ನೂ ಹೆಸರಿಸಬಹುದು.

ಕೃಷ್ಣರಾವ್ ದಂಪತಿಗಳ ವಿದೇಶ ಪ್ರವಾಸಗಳೂ ಅಷ್ಟೇ ಫಲಪ್ರದ. ವಿದೇಶಗಳಲ್ಲಿ ನೆಲೆಸಿರುವ ತಮ್ಮ ಶಿಷ್ಯರ ಅಭಿಲಾಷೆಯಂತೆ ಆ ರಾಜ್ಯಗಳಲ್ಲೆಲ್ಲಾ ಪ್ರಾತ್ಯಕ್ಷಿಕೆಗಳನ್ನು ನಡೆಸಿ ಪ್ರದರ್ಶನಗಳನ್ನಿತ್ತು ಅಲ್ಲಿನ ರಸಿಕರ ವಿಶ್ವಾಸಕ್ಕೆ ಪಾತ್ರರಾದರಲ್ಲದೇ ಅಂತಹವರನೇಕರು ಬೆಂಗಳೂರಿಗೇ ಬಂದು ಇವರಲ್ಲಿ ನೃತ್ಯಾಭ್ಯಾಸವನ್ನು ಮುಂದುವರಿಸಿದ್ದೂ ಉಂಟು.

ಹೀಗೆ ಕೃಷ್ಣರಾವ್ ಚಂದ್ರಭಾಗಾದೇವಿಯವರ 'ಖ್ಯಾತಿ ಬೆಳೆದು ರಾಜ್ಯ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ (1980) ಕೇಂದ್ರ ಸಂಗೀತ ನೃತ್ಯ ಅಕಾಡೆಮಿ(1988), ಕರ್ನಾಟಕದ ಶ್ರೇಷ್ಠ ಪ್ರಶಸ್ತಿಯಾದ 'ಶಾಂತಲಾ ಪ್ರಶಸ್ತಿ, (1996)ಗಳಿಂದ ಪುರಸ್ಕೃತರಾದರು. ಕೃಷ್ಣರಾವ್ ನೃತ್ಯ ಕಲೆಗೆಂದೇ ಮೀಸಲಾದ ಕರ್ನಾಟಕ ನೃತ್ಯಕಲಾ ಪರಿಷತ್ತಿನ ಅಧ್ಯಕ್ಷರಾಗಿ ಕೆಲಕಾಲ ಉಪಯುಕ್ತ ಸೇವೆ ಸಲ್ಲಿಸಿದರು. ಚಂದ್ರಭಾಗ ರಾಜ್ಯದ ಸಂಗೀತ-ನೃತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿ (1995) ಗಣನೀಯ ಸೇವೆ ಸಲ್ಲಿಸಿದರು. ಈರ್ವರೂ ಬೇರೆ ಬೇರೆಯಾಗಿ, ಜೋಡಿಯಾಗಿ ನೃತ್ಯಕ್ಕೆ ಸಂಬಂಧಿಸಿದಂತೆ 'ಆಧುನಿಕ ಭಾರತದಲ್ಲಿ ನೃತ್ಯಕಲೆ' ಅಭಿನಯ ಕಲೆ ಸೇರಿದಂತೆ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ "ನೃತ್ಯಕಲೆ" ಎರಡನೆಯ ಆವೃತ್ತಿಯನ್ನು ಕಂಡಿದೆ. ಇವರ ಕೀರ್ತಿ ಶಾಶ್ವತವಾಗಲು ನೆರವಾಗಿದೆ. ಇ ಕೃಷ್ಣಯ್ಯರ್ ಸ್ಮಾರಕ ಚಿನ್ನದ ಪದಕ (2002) ಚಂದ್ರಭಾಗಾದೇವಿ ನಿಧನಾನಂತರ (1996) ಕೃಷ್ಣ ರಾಯರು ಒಂಟಿಯಾಗಿ ಸ್ವೀಕರಿಸಿದ ಪ್ರಶಸ್ತಿ. ಕೃಷ್ಣರಾಯರು 2005 ಮಾರ್ಚ್‌ನಲ್ಲಿ ವಿಧಿವಶರಾದರು. (ಎಸ್.ಎನ್.ಪಿ.)

**ಕೃಷ್ಣರಾವ್, ಮುದವೀಡು :** 1874-1947. ಕರ್ನಾಟಕದ ಪ್ರಥಮ ಕ್ರಾಂತಿಕಾರಿಗಳಲ್ಲಿ ಹಿರಿಯರು. ಕರ್ನಾಟಕದ ಸಿಂಹ ಎಂಬ ಕೀರ್ತಿಗೆ ಪಾತ್ರರಾದವರು. ಕನ್ನಡ ಚಳವಳಿಯ ಪುರಸ್ಕರ್ತರು. ದೇಶಾದ್ಯಂತ ಪ್ರಯಾಣಮಾಡಿ ತಮ್ಮ ಸಿಂಹ ಕಂಠದಿಂದ ಭಾಷಣಗಳನ್ನು ಮಾಡಿ ಜನತೆಯಲ್ಲಿ ಕರ್ನಾಟಕ ಮತ್ತು ಕನ್ನಡಗಳ ಬಗ್ಗೆ ಸ್ಫೂರ್ತಿ, ಮಮತೆ ಹುಟ್ಟಿಸಿದವರು. ಕನ್ನಡ ರಂಗಭೂಮಿಯ ಸೇವಕರು. ಅಲ್ಲದೆ ಕರ್ನಾಟಕ ವೃತ್ತ ಮತ್ತು ಧನಂಜಯ ಪತ್ರಿಕೆಗಳನ್ನು ಕಾಲು ಶತಮಾನದವರೆಗೆ ನಡೆಸಿ ಕನ್ನಡ ಪತ್ರಿಕಾ ಪ್ರಪಂಚಕ್ಕೆ ಅಮೋಘವಾದ ಸೇವೆ ಸಲ್ಲಿಸಿದವರು.

ಸ್ವತಂತ್ರ ಭಾರತ, ಏಕೀಕೃತ ಕರ್ನಾಟಕಗಳು ಕೃಷ್ಣರಾಯರ ದಿವ್ಯ ಕನಸಾಗಿದ್ದವು. ಭಾರತ ಸ್ವಾತಂತ್ರ್ಯ ಆಂದೋಲನದಲ್ಲಿ ಇವರು ಮೊದಲಿಗೆ ಧುಮುಕಿದುದು ಒಂದು ಗುಪ್ತ ಕ್ರಾಂತಿಕಾರಿ ಸಂಸ್ಥೆಯ ಸದಸ್ಯರಾಗಿ. ತಮ್ಮ ನಿಕಟ ಸ್ನೇಹಿತರೊಂದಿಗೆ ಇವರು ಸಾವಿರಾರು ಖಡ್ಗಧಾರಿ ಬೇಡರಪಡೆಯನ್ನು ಸಂಘಟಿಸಿದ್ದರು. ದೇಶಕಾರ್ಯಕ್ಕೆ ಹಣ ಸಾಲದಾದಾಗ ಇವರು ತಮ್ಮ ಆದಾಯವನ್ನೇ ಅದಕ್ಕಾಗಿ ಮುಡುಪಾಗಿಟ್ಟರು.

ಕನ್ನಡದ ಆಂದೋಲನವನ್ನು ಕೃಷ್ಣರಾಯರು ತಮ್ಮ ಎಳೆತನದಲ್ಲೇ ಪ್ರಾರಂಭಿಸಿದರು. 1896ರಲ್ಲಿ ಇವರು ಗಜಾನನ ಉತ್ಸವದಲ್ಲಿಯ ವಾಕ್ ಸ್ಪರ್ಧೆಯಲ್ಲಿ ಕನ್ನಡದಲ್ಲಿ ಮಾತನಾಡಿ ಬಹುಮಾನ ಪಡೆದು ಕನ್ನಡದ ಕೀರ್ತಿಪತಾಕೆಯನ್ನು ಹಾರಿಸಿದರು. ಆಗ ಕನ್ನಡದ ಹಿರಿಯರು ಬೆನ್ನು ತಟ್ಟಿ ಇವರಿಗೆ ಕನ್ನಡತನದ ದೀಕ್ಷೆ ನೀಡಿದರು. ಅನಂತರ ಕನ್ನಡ



ಸಾಹಿತ್ಯಸಮ್ಮೇಳನ, ರಾಜಕೀಯ ಪರಿಷತ್ತು ಈ ಮೊದಲಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕನ್ನಡದ ಹಿರಿಮೆಯನ್ನು ಮೆರೆಯಲು ಕೃಷ್ಣರಾಯರು ಸಹಾಯಕರಾದರು. ಸಭೆ ಸಮಾರಂಭಗಳಲ್ಲಿ ಇವರು ಸಿಂಹಗರ್ಜನೆಯಿಂದ ಜನಜಾಗೃತಿಯನ್ನು ಮಾಡುತ್ತಿದ್ದರು. ಇವರಿಗೆ ಧ್ವನಿವರ್ಧಕದ ಆವಶ್ಯಕತೆಯೇ ಬೀಳುತ್ತಿದ್ದಿಲ್ಲ. ಇದ್ದರೂ ಅದನ್ನಿವರು ಬದಿಗಿರಿಸಿ ಮಾತನಾಡುತ್ತಿದ್ದರು. ಕೃಷ್ಣರಾಯರ ಕಂಠಶ್ರೀ ಅಷ್ಟು ಗಡದ್ದಾದುದು.

ಕೃಷ್ಣರಾಯರು ಉತ್ತಮ ವಾಗ್ಮಿಗಳಾಗಿದ್ದಂತೆ ತತ್‌ಕ್ಷಣದ ಅನುವಾದದಲ್ಲಿ ಎತ್ತಿದ ಕೈ ಎನಿಸಿದ್ದರು. ರಾಜಾಜಿ ಮತ್ತು ಪಟ್ಟಾಭಿ ಸೀತಾರಾಮಯ್ಯ ಇಬ್ಬರೂ ಇವರ ಈ ಕಲೆಯನ್ನು ಮೆಚ್ಚಿಕೊಂಡು ಕರ್ನಾಟಕದ ತಮ್ಮ ಕಾರ್ಯಕ್ರಮಗಳಲ್ಲಿ ತಮ್ಮ ಭಾಷಣಗಳ ಅನುವಾದಕ್ಕಾಗಿ ಇವರನ್ನು ಕರೆದೊಯ್ಯುತ್ತಿದ್ದರು. ಹುಬ್ಬಳ್ಳಿಯ ಒಂದು ಸಭೆಯಲ್ಲಿ ಮೆನ್, ಮನಿ ಅಂಡ್ ಮ್ಯೂನಿಷನ್ ಎಂಬ ಪದಪುಂಜವನ್ನು ಕೂಡಲೇ ಮನುಷ್ಯ, ಮಾಲಕ್ಷ್ಮಿ, ಮಮ್ಮು-ಮದ್ದು ಎಂದು ಕನ್ನಡಕ್ಕೆ ಪರಿವರ್ತಿಸಿ ಕೃಷ್ಣರಾಯರು ರಾಜಾಜಿಯವರಿಂದ ಸೈ ಎನಿಸಿಕೊಂಡರು. ನೆಹರು ಅವರು ಕರ್ನಾಟಕದ ಸಂಚಾರದಲ್ಲಿ ತಮ್ಮ ಭಾಷಣಗಳ ಅನುವಾದಕ್ಕೆ ಇವರನ್ನೇ ಕರೆದೊಯ್ಯುತ್ತಿದ್ದರು.

ಕೃಷ್ಣರಾಯರು ನುರಿತ ಪತ್ರಿಕೋದ್ಯಮಿಗಳೂ ಹೌದು. ಕಾಲು ಶತಮಾನದ ಕಾಲ ಕರ್ನಾಟಕ ವೃತ್ತ ಮತ್ತು ಧನಂಜಯ ಪತ್ರಿಕೆಗಳನ್ನು, ಎಲ್ಲ ಏರುಪೇರುಗಳನ್ನೂ ಸಹಿಸಿ, ಇವರು ನಡೆಸಿಕೊಂಡು ಬಂದರು. ಸ್ವಾತಂತ್ರ್ಯ ಆಂದೋಲನದ ವರದಿಗಳನ್ನು ಯಥಾವತ್ತಾಗಿ ಕೊಡುವುದರೊಂದಿಗೆ ಅಗ್ರಲೇಖನಗಳನ್ನು ಒಳ್ಳೆಗಡುಸಾದ ಗಂಡುಶೈಲಿಯ ಕನ್ನಡದಲ್ಲಿ ಕೃಷ್ಣರಾಯರು ಬರೆಯುತ್ತಿದ್ದರು. ಡೈಯರನ ಕ್ರೌರ್ಯವನ್ನು ಮೆರೆಯಲು ಧಾರವಾಡದ ಆಗಿನ ಕಲೆಕ್ಟರ್ ಮುಂದಾದಾಗ ಡೈಯರನೆಂದರೂ ಬಣ್ಣ ಬಳಿಯುವವನೇ ಪೇಂಟರನೆಂದರೂ ಬಣ್ಣ ಬಳೆಯುವವನೇ ಎಂದು ಅಗ್ರಲೇಖ ಬರೆದು ಅವನನ್ನಿವರು ಚೆನ್ನಾಗಿ ಛೀಮಾರಿ ಹಾಕಿದ್ದರು.

ಇದಕ್ಕೂ ಮಿಗಿಲಾಗಿ ಇವರು ಒಳ್ಳೆ ಕಲಾವಿದರು. ರಂಗಭೂಮಿಯ ಅಭಿಮಾನಿಗಳು. 1907ರಲ್ಲಿ ಭಾರತ ಕಲೋತ್ತೇಜಕ ನಾಟಕಮಂಡಳಿ ಎಂಬ ನಾಟ್ಯವಿಲಾಸಿ ತರುಣರ ಸಂಸ್ಥೆಯನ್ನಿವರು ಸಂಘಟಿಸಿದರು. ಇವರು ಸ್ವತಃ ಗಾಯಕರು, ಗಮಕಿಗಳು. ಹೀಗಾಗಿ ಅನೇಕ ಒಳ್ಳೆಯ ನಾಟಕಗಳನ್ನು ಅಭಿನಯಿಸುವಂತೆ ಸ್ವಯಂ ತರಬೇತಿ ನೀಡಿದರು. ಪ್ರೇಮಭಂಗ ಎಂಬ ನಾಟಕವನ್ನು ಬರೆದಿದ್ದರಲ್ಲದೆ ಚಿರಂಜೀವಿ ಚಿತ್ರದಲ್ಲಿ ಯಮ ಹಾಗೂ ಚಿತ್ರಗುಪ್ತನ ಪಾತ್ರಗಳನ್ನು ನಿರ್ವಹಿಸಿದ್ದರು. ಇವರಿಂದ ಅನೇಕ ಶ್ರೇಷ್ಠ ನಾಟಕ ಕಂಪನಿಗಳೂ ಸ್ಫೂರ್ತಿಗೊಂಡು ತಲೆಯೆತ್ತಿದುವು.

ಕೃಷ್ಣರಾಯರು ಒಳ್ಳೆಯ ಕಾದಂಬರಿಕಾರರು. ಇವರು ಬರೆದ ಚಿತ್ತೂರು ಮುತ್ತಿಗೆ ಎಂಬ ಐತಿಹಾಸಿಕ ಕಾದಂಬರಿ 1904ರ ವಾಗ್ಭೂಷಣದಲ್ಲಿ ಧಾರವಾಹಿಯಾಗಿ ಪ್ರಕಟವಾಯಿತು. ಕೃಷ್ಣರಾಯರು 1939ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕೃಷ್ಣರಾಯರು ಅಂಥ ಎತ್ತರದ ಆಳಲ್ಲದಿದ್ದರೂ ಗಿಡ್ಡರಂತೂ ಅಲ್ಲ. ಇವರದು ಕಟ್ಟುಮಸ್ತಾದ ವ್ಯಕ್ತಿತ್ವ, ಯಾರನ್ನೂ ತಮ್ಮತ್ತ ಸೆಳೆದುಕೊಳ್ಳುವಂಥದು. ಕನ್ನಡದ, ಕರ್ನಾಟಕದ ಚರಿತ್ರೆಯಲ್ಲಿ ಕೃಷ್ಣರಾಯರದು ಮರೆಯಲಾಗದ ಹೆಸರು. (ಎಸ್.ವಿ.ಪಿ.ಎ.)

**ಕೃಷ್ಣವರ್ಮ I** : ಕದಂಬ ವಂಶದ ಪ್ರಸಿದ್ಧ ದೊರೆ; ಕಾಕುತ್ಸ್ಥವರ್ಮನ ಮಗ. ಆಳ್ವಿಕೆಯ ಕಾಲ 430–60. ಕಾಕುತ್ಸ್ಥವರ್ಮ ರಾಜ್ಯವಾಳುತ್ತಿದ್ದಾಗ ಅವನ ರಾಜಧಾನಿಯಾದ ವೈಜಯಂತಿಯ ದಕ್ಷಿಣದ ಸಾಮಂತರು ದಂಗೆಯೇಳಲು ಅದನ್ನು ಅಡಗಿಸಲು ಅವನ ಹಿರಿಯ ಮಗ ಶಾಂತಿವರ್ಮ ಮತ್ತು ತಮ್ಮ ಕೃಷ್ಣವರ್ಮರನ್ನು ಅಲ್ಲಿಗೆ ಕಳುಹಿಸಿದ. ಕೃಷ್ಣವರ್ಮ ಆ ದಂಗೆಯನ್ನಡಗಿಸಿ ಶಾಂತಿಯನ್ನು ನೆಲೆಗೊಳಿಸಿ ತ್ರಿಪರ್ವತದಲ್ಲಿ (ಈಗಿನ ಹಳೇಬೀಡು ಅಥವಾ ಮುರ್ಗೋಡ್, ಬೆಳಗಾವಿ ಜಿಲ್ಲೆ) ನೆಲೆನಿಂತು ರಾಜ್ಯಭಾರ ಮಾಡತೊಡಗಿದ. ಶಾಂತಿವರ್ಮ ಜೀವಿಸಿರುವ ತನಕ ಕೃಷ್ಣವರ್ಮ ಅವನ ಸಾಮಂತನಾಗಿದ್ದ. ಬನವಾಸಿಯ ಸಿಂಹಾಸನಕ್ಕೆ ಮೃಗೇಶವರ್ಮ ಬಂದಾಗ ಈತ ಸ್ವಾತಂತ್ರ್ಯ ಘೋಷಿಸಿ ಕದಂಬ ಸಂತತಿಯ ನೂತನ ಶಾಖೆಯ ಸ್ಥಾಪಕನಾದ. ಇವನ ಆಡಳಿತದ ಎರಡು ಮುಖ್ಯ ಘಟನೆಗಳೆಂದರೆ ನಾಗರನ್ನು ಸೋಲಿಸಿದ್ದು ಮತ್ತು ನಣಕ್ಕಾಸ ಪಲ್ಲವನನ್ನು ಪರಾಭವಗೊಳಿಸಿದ್ದು. 1ನೆಯ ಕೃಷ್ಣವರ್ಮ ನಾಗರನ್ನು ಸೋಲಿಸಿ ಅವರಿಂದ ದಾಯವನ್ನು ಪಡೆದಿದ್ದನೆಂದು ದೇವಗಿರಿ ತಾಮ್ರ ಶಾಸನದಲ್ಲಿ ಹೇಳಲಾಗಿದೆ. ಈ ದೊರೆ ತನ್ನ ವಿಜಯಗಳ ಸಂಕೇತವಾಗಿ ಅಶ್ವಮೇಧಯಾಗ ಮಾಡಿದ. ಕೈಕೇಯ ಮನೆತನದ ಅರಸುಕುವರಿಯನ್ನು ಈತ ವಿವಾಹವಾದ. ಇವನಿಗೆ ವಿಷ್ಣುವರ್ಮ, ದೇವವರ್ಮ ಎಂಬ ಇಬ್ಬರು ಮಕ್ಕಳಿದ್ದರು. ಕೃಷ್ಣವರ್ಮನ ಮರಣಾನಂತರ ಅವನ ಮಗ ವಿಷ್ಣುವರ್ಮ ತ್ರಿಪರ್ವತಶಾಖೆಯ ಅರಸನಾದ.
(ಎಂ.ವಿ.ಎಸ್.ಆರ್.; ಎಂ.ಜಿ.)

**ಕೃಷ್ಣವರ್ಮ II** : ಕದಂಬ ರಾಜ ಸಿಂಹವರ್ಮನ ಮಗ ಮತ್ತು ಕದಂಬ ಮನೆತನದ ಉಪಶಾಖೆಯ ನಾಲ್ಕನೆಯ ದೊರೆ. ಅತ್ಯಂತ ಸಮರ್ಥ. ಅಳ್ವಿಕೆಯ ಕಾಲ 516–540. ಎರಡು ಕದಂಬ ರಾಜ್ಯಗಳನ್ನೂ ಮತ್ತೆ ಒಂದುಗೂಡಿಸಿದ ಕೀರ್ತಿ ಇವನದು. ಇವನು ನಾಗಪುರವನ್ನು ಗೆದ್ದು ಪಟ್ಟವೇರಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಕದಂಬ ಸಂತತಿಯ ಮತ್ತೊಂದು ಶಾಖೆಯ ದೊರೆಯಾಗಿದ್ದ ಹರಿವರ್ಮನನ್ನು ಸೋಲಿಸಿ ಅವನ ರಾಜಧಾನಿಯಾಗಿದ್ದ ಬನವಾಸಿ ಅಥವಾ ವೈಜಯಂತಿಯಲ್ಲಿ ಈತ ನೆಲಸಿದನೆಂದು ತಿಳಿದುಬರುತ್ತದೆ. ಈತ ಅಶ್ವಮೇಧಯಾಗವನ್ನು ಆಚರಿಸಿದ. ಚಾಳುಕ್ಯ ಸಂತತಿಯ 1ನೆಯ ಪುಲಿಕೇಶಿ ಕೃಷ್ಣವರ್ಮನ ಸಾಮಂತನಾಗಿದ್ದ. ಅನಂತರ ಅವನನ್ನು ಸೋಲಿಸಿ ಸ್ವತಂತ್ರನಾಗಿ ಬಾದಾಮಿಯನ್ನು ರಾಜಧಾನಿಯಾಗಿ ಮಾಡಿಕೊಂಡ–ಅನಂತರ ಕದಂಬ ಸಂತತಿ ಕ್ಷೀಣಗೊಂಡಿತು. ಕೃಷ್ಣವರ್ಮನ ಮರಣಾನಂತರ (540) ಅವನ ಮಕ್ಕಳಾದ ಅಜವರ್ಮ ಮತ್ತು ರವಿವರ್ಮರೂ ಅಜವರ್ಮನ ಮಗ ಭೋಗಿವರ್ಮನೂ ಅನುಕ್ರಮವಾಗಿ ಅಧಿಕಾರಕ್ಕೆ ಬಂದರಾದರೂ ಅವರು ಸ್ವತಂತ್ರರಾಗಿ ಆಳಲಿಲ್ಲ. (ಎಂ.ವಿ.ಎಸ್.ಆರ್.; ಎಂ.ಜಿ.)

**ಕೃಷ್ಣಶಾಸ್ತ್ರಿ, ಎಚ್.** : 1870–1928. 1920 ರಿಂದ 1925ರ ತನಕ ಭಾರತ ಸರ್ಕಾರದ ಶಾಸನ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದವರು. ಬೆಂಗಳೂರು ಜಿಲ್ಲೆಯ ಹೊಸಕೋಟೆಯಲ್ಲಿ ಜನಿಸಿದರು. ಶಾಸನ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಖ್ಯಾತ ಜರ್ಮನ್ ವಿದ್ವಾಂಸ ಹುಲ್ಟ್‌ಸ್ಕ್‌ನ ಸಹಾಯಕರಾಗಿ ನೇಮಕಗೊಂಡರು. 1908ರಲ್ಲಿ ಸಹಾಯಕ ಸೂಪರಿಂಟೆಂಡೆಂಟರ ಹುದ್ದೆಗೇರಿದರು. ಅನಂತರ ವಿವಿಧ ಮಟ್ಟಗಳಲ್ಲಿ ಸೇವೆ ಸಲ್ಲಿಸಿದರು.

ಸಂಸ್ಕೃತ, ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಪ್ರೌಢವಿದ್ವಾಂಸರಾಗಿದ್ದ ಇವರು 1909 ರಿಂದ 1919ರತನಕ ಸಂಪಾದಿಸಿದ, ದಕ್ಷಿಣ ಭಾರತದ ಶಾಸನಗಳಿಗೆ ಸಂಬಂಧಿಸಿದ ವಾರ್ಷಿಕ ವರದಿಗಳು (ಆನ್ಯುಯಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ) ಇತಿಹಾಸಕಾರರಿಗೆ ಅಮೂಲ್ಯ ಆಧಾರ ಗ್ರಂಥಗಳಾಗಿವೆ. ಇವರು ಶಾಸನ ಇಲಾಖೆಯ ತ್ರೈಮಾಸಿಕವಾದ ಎಪಿಗ್ರಾಫಿಯ ಇಂಡಿಕದ 17ನೆಯ (1923–24) ಸಂಪುಟವನ್ನೂ 16ನೆಯ (1921–22) ಮತ್ತು 18ನೆಯ (1925–26) ಸಂಪುಟಗಳ ಕೆಲವು ಸಂಚಿಕೆಗಳನ್ನೂ ಸಂಪಾದಿಸಿದರು. ಅಲ್ಲದೆ ಆ ಪತ್ರಿಕೆಯ ಪುಟಗಳಲ್ಲಿ ಅವರ 18 ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸಿನ ಸರಣಿಯಲ್ಲಿ 2ನೆಯ ಸಂಪುಟದ 5ನೆಯ ಭಾಗವನ್ನೂ 3ನೆಯ ಸಂಪುಟದ 3ನೆಯ ಭಾಗವನ್ನೂ ಹೊರಡಿಸಿದರಲ್ಲದೆ ಅದೇ ಸರಣಿಯ 3ನೆಯ ಸಂಪುಟದ 4ನೆಯ ಭಾಗವನ್ನೂ 4 ಮತ್ತು 5ನೆಯ ಸಂಪುಟಗಳನ್ನೂ ಸಂಪಾದಿಸಿದರು. ಕರ್ನಾಟಕದ ಮಸ್ಕಿಯಲ್ಲಿಯ ಅಶೋಕ ಶಾಸನವನ್ನು ಕುರಿತ (ಹೈದರಾಬಾದ್ ಆರ್ಕಿಯೊಲಾಜಿಕಲ್ ಸೀರೀಸ್ ನಂ.1) ಮತ್ತು ತಮಿಳುನಾಡಿನ ಮಹಾಬಲಿಪುರದ ಶಿಲಾದೇವಾಲಯವೊಂದರ 2 ಪ್ರತಿಮೆಗಳನ್ನು ಮತ್ತು 5 ಪಲ್ಲವ ಶಾಸನಗಳನ್ನು ಕುರಿತ (ಆರ್ಕಿಯೊಲಾಜಿಕಲ್ ಮೆಮ್ವಾರ್ಸ್, ನಂ.26) ಸಂಶೋಧನಾತ್ಮಕ ಪ್ರಬಂಧಗಳು ಅವರ ಇತರ ಪ್ರಬಂಧಗಳ ಪೈಕಿ ಮುಖ್ಯವಾದವು. ಭಾರತದ ದೇವದೇವತೆಯರ ಪ್ರತಿಮೆಗಳನ್ನು ಕುರಿತ ಅವರ ಸಚಿತ್ರಗ್ರಂಥ 1916ರಲ್ಲಿ ಪ್ರಕಟವಾಯಿತು. ಹಿಂದೂ ಪ್ರತಿಮಾಶಿಲ್ಪಗಳ ಅಧ್ಯಯನದಲ್ಲಿ ಅದು ಇಂದಿಗೂ ಉಪಯುಕ್ತ ಸಹಾಯಕ ಗ್ರಂಥವಾಗಿದೆ.

ಕೃಷ್ಣಶಾಸ್ತ್ರಿಯವರ ವಿದ್ವತ್ತಿಗೆ ಮೆಚ್ಚಿ ಭಾರತ ಸರ್ಕಾರ ಅವರಿಗೆ 1912ರಲ್ಲಿ ರಾವ್‌ಸಾಹಿಬ್ ಮತ್ತು 1920ರಲ್ಲಿ ರಾವ್ ಬಹದ್ದೂರ್ ಬಿರುದುಗಳನ್ನು ಕೊಟ್ಟು ಗೌರವಿಸಿತು. ಅವರು 1924ರಲ್ಲಿ ಕೋಲಾರದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1925ರಲ್ಲಿ ಅವರು ಗವರ್ನ್‌ಮೆಂಟ್ ಎಪಿಗ್ರಫಿಸ್ಟ್ ಹುದ್ದೆಯಿಂದ ನಿವೃತ್ತರಾದರು. 1928ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. (ಕೆ.ವಿ.ಆರ್.)

**ಕೃಷ್ಣಶಾಸ್ತ್ರೀ, ಎ.ಆರ್.** : 1890–1968. ಹೊಸಗನ್ನಡದ ಅಶ್ವಿನೀದೇವತೆಗಳಲ್ಲಿ ಒಬ್ಬರೆಂದು ಕೀರ್ತಿತರಾದ ಇವರು ವಿರೋಧಿನಾಮ ಸಂವತ್ಸರದ ಮಾಘ ಬಹುಳ ಸಪ್ತಮಿ ಬುಧವಾರದಂದು (12–2–1890) ಮೈಸೂರು ನಗರದಲ್ಲಿ ಜನ್ಮವೆತ್ತಿದರು. ತಂದೆ ಅಂಬಳೆ ರಾಮಕೃಷ್ಣಶಾಸ್ತ್ರಿಗಳು ಮೈಸೂರಿನ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿದ್ದುದರಿಂದ, ಶಾಸ್ತ್ರಿಗಳಿಗೆ ಚಿಕ್ಕಂದಿನಲ್ಲಿಯೇ ಸಂಪ್ರದಾಯದ ರೀತಿಯಲ್ಲಿ ಸಂಸ್ಕೃತ ಭಾಷಾ ಸಾಹಿತ್ಯಗಳ ಪ್ರವೇಶಕ್ಕೆ ಅನುಕೂಲವಾಯಿತು. ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಮುಗಿಸಿದ ಮೇಲೆ, ಇವರು ಅದೇ ನಗರದ ಮಹಾರಾಜರವರ ಕಾಲೇಜಿನಲ್ಲಿ ಬಿ.ಎಂ. ಶ್ರೀಕಂಠಯ್ಯನವರಲ್ಲಿ ಇಂಗ್ಲಿಷ್ ಕನ್ನಡ ಭಾಷಾಸಾಹಿತ್ಯಗಳನ್ನೂ ಎಂ. ಹಿರಿಯಣ್ಣನವರಲ್ಲಿ ಸಂಸ್ಕೃತ ಸಾಹಿತ್ಯವನ್ನೂ ಅಭ್ಯಾಸಮಾಡಿ, ಕನ್ನಡ ಸಂಸ್ಕೃತಗಳಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಬಿ.ಎ. (1913), ಎಂ.ಎ. (1915) ಪದವಿಗಳನ್ನು ಪಡೆದರು.

ಕೆಲವು ತಿಂಗಳಕಾಲ ಮೈಸೂರು ಜಿಲ್ಲಾ ಕಚೇರಿಯಲ್ಲಿ ಕೆಲಸ ಮಾಡಿದ ಮೇಲೆ, ಶಾಸ್ತ್ರಿಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಬೋಧಕರಾಗಿ ನೇಮಕಗೊಂಡರು (1915). ಕೇಳುವವರಿಲ್ಲದೆ ಮೂಲೆಗುಂಪಾಗಿದ್ದ ಕನ್ನಡವನ್ನು ಮೇಲೆತ್ತಲು ಅಲ್ಲಿ ಇವರು ಮಾಡಿದ ಮಹತ್ತ್ವಪೂರಿತವಾದ ಕೆಲಸಗಳು ಮೂರು: ಮೊದಲನೆಯದಾಗಿ ಇಂಗ್ಲಿಷ್ ಸಾಹಿತ್ಯಾಭ್ಯಾಸದಿಂದ ತಾವು ಪಡೆದ ಜ್ಞಾನದಿಂದ ಕನ್ನಡದ ಬೋಧನೆಗೆ ಹೊಸ ತಿರುವನ್ನು ಕೊಟ್ಟು, ಕನ್ನಡದ ವಿಷಯದಲ್ಲಿ ವಿದ್ಯಾರ್ಥಿಗಳಲ್ಲಿ ಉತ್ಸಾಹವನ್ನು ತುಂಬಿ, ಕನ್ನಡಕ್ಕೆ, ಕನ್ನಡದ ಉಪಾಧ್ಯಾಯರಿಗೆ ಒಂದು ಗೌರವದ ಸ್ಥಾನವನ್ನು ತಂದುಕೊಟ್ಟರು. ಎರಡನೆಯದಾಗಿ ಕನ್ನಡ ವಿಷಯದಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಅರಳಿಸಲು ಯೋಗ್ಯವಾದ, ನಾಡಿನ ಕರ್ಣಾಟಕ ಸಂಘಗಳಿಗೆ ಮಾತೃಪ್ರಾಯವಾದ ಕರ್ಣಾಟಕ ಸಂಘವೊಂದನ್ನು 1918ರಲ್ಲಿ ಸ್ಥಾಪಿಸಿದರು. ವಿಜ್ಞಾನವನ್ನು ಕನ್ನಡದ ಮೂಲಕ ಬೋಧಿಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟದ್ದು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ; ತಮ್ಮ ಸಹೋದ್ಯೋಗಿಗಳ ನೆರವಿನಿಂದ ಹಾಗೆ ತೋರಿಸಿಕೊಟ್ಟವರು ಶಾಸ್ತ್ರಿಗಳು. ತೊಂಬತ್ತು ವರ್ಷಗಳಿಗೂ ಮಿಕ್ಕು ನಡೆದು ಬಂದು, ಕನ್ನಡದ ಉತ್ಕೃಷ್ಟ ತ್ರೈಮಾಸಿಕವಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಹೊರಡುತ್ತಿರುವ ಪ್ರಬುದ್ಧ ಕರ್ಣಾಟಕವನ್ನು ಹೊಸಗನ್ನಡದ ಪುನರುಜ್ಜೀವನ ಕಾರ್ಯಕ್ಕೆ ವೇದಿಕೆಯಾಗಿ ಹೊರಡಿಸಿದ್ದು (1919) ಶಾಸ್ತ್ರಿಗಳೇ. ಅದೇ ವರ್ಷ ಇವರಿಗೆ ಮೈಸೂರಿನ ಓರಿಯಂಟಲ್ ಲೈಬ್ರರಿಗೆ ವರ್ಗವಾಗಲು, ಅಲ್ಲಿ ಶಾಮಶಾಸ್ತ್ರಿಗಳ ನೇತೃತ್ವದಲ್ಲಿ ನಯಸೇನನ ಧರ್ಮಾಮೃತವನ್ನು ಸಂಪಾದಿಸಿ, ಪೀಠಿಕೆಯೊಡನೆ ಅಚ್ಚಿಗೆ ಸಿದ್ಧಪಡಿಸಿದರು. 1927ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ತರಗತಿಗಳು ತೆರೆಯುವಂತಾಗಲು ಶಾಸ್ತ್ರಿಗಳು ತೆರೆಯ ಮರೆಯಲ್ಲಿ ಕೆಲಸಮಾಡಿ ಅದು ಅಸ್ತಿತ್ವಕ್ಕೆ ಬಂದಾಗ ಕೆಲವು ತಿಂಗಳ ಕಾಲ ಆ ತರಗತಿಗಳಿಗೆ ಪಾಠ ಹೇಳಿದರು. 1927ರಲ್ಲಿ ಮತ್ತೆ ಸೆಂಟ್ರಲ್ ಕಾಲೇಜಿಗೆ ಕನ್ನಡದ ಉಪ ಪ್ರಾಧ್ಯಾಪಕರಾಗಿ ಹೋಗಿದ್ದು 1939ರಲ್ಲಿ ವೆಂಕಣ್ಣಯ್ಯನವರು ದಿವಂಗತರಾದಾಗ ಮೈಸೂರಿನ ಮಹಾರಾಜರವರ ಕಾಲೇಜಿಗೆ ಕನ್ನಡ ಪ್ರಾಧ್ಯಾಪಕರೂ ಇಲಾಖೆಯ ಮುಖ್ಯಾಧಿಕಾರಿಗಳೂ ಆಗಿ ಬಂದು, 1946ನೆಯ ಆಗಸ್ಟ್ ತಿಂಗಳ ತನಕ ಕನ್ನಡ ವಿಭಾಗದ, ಕನ್ನಡ ಭಾಷಾಸಾಹಿತ್ಯಗಳ, ಪ್ರಬುದ್ಧ ಕರ್ಣಾಟಕದ ಏಳಿಗೆಗಾಗಿ ದುಡಿದರು.

ಮೂವತ್ತು ವರ್ಷಗಳ ಕಾಲ ಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಬೋಧಕರಾಗಿ ಹೊಸ ಪೀಳಿಗೆಯನ್ನು ಸೃಷ್ಟಿಮಾಡಿದರಲ್ಲದೆ, ಕನ್ನಡದ ಮುನ್ನಡೆಗಾಗಿ ಹಲವು ಸಂಘಸಂಸ್ಥೆಗಳ ಸದಸ್ಯರಾಗಿ ಕೆಲಸಮಾಡಿದರು. 1942ರಿಂದ 1946ರ ತನಕ

ಶಾಸ್ತ್ರಿಗಳೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಪ್ರಧಾನ ಸಂಪಾದಕರಾಗಿದ್ದುದಲ್ಲದೆ, ಕುಮಾರವ್ಯಾಸ ಭಾರತದ ಯುದ್ಧಪಂಚಕದ ಪರಿಷ್ಕರಣ ಸಮಿತಿಯ ಸದಸ್ಯರಾಗಿದ್ದು ಕರ್ಣಶಲ್ಯಗದಾಪರ್ವಗಳು ಕ್ಷಿಪ್ರವಾಗಿ ಹೊರಬೀಳಲು ಕಾರಣರಾದರು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಬುದ್ಧ ಕರ್ಣಾಟಕ ಪತ್ರಿಕೆ ವರ್ಗವಾಗುವ ತನಕ ಅದರ ಸಂಪಾದಕರಾಗಿದ್ದುದಲ್ಲದೆ ಮೈಸೂರಿನಲ್ಲಿ ಅವರು ಪ್ರಾಧ್ಯಾಪಕರಾದಾಗಲೂ ಅದರ ಸಂಪಾದಕತ್ವವನ್ನು ವಹಿಸಿಕೊಂಡು ಅದು ಕಾಲಕ್ಕೆ ಸರಿಯಾಗಿ ಬರುವಂತೆ ಮಾಡಿ ಪತ್ರಿಕೆಯ ಮಟ್ಟವನ್ನು ಘನತೆಗೇರಿಸಿದರು. ಈ ಪತ್ರಿಕೆಯ ಮೂಲಕ ವಿದ್ವತ್ತಿಗೆ, ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಬರೆಯುವ ತರುಣ ಲೇಖಕರಿಗೆ ಪ್ರೋತ್ಸಾಹ ಕೊಟ್ಟಂತೆ ಶಾಸ್ತ್ರಿಗಳು ತಮ್ಮ ಲೇಖನಗಳಿಂದ ಕಾವ್ಯ ಪರೀಕ್ಷೆಯ ಹೊಸ ವಿಮರ್ಶನ ಮಾರ್ಗವನ್ನು ನಿರ್ಮಿಸಿದರು. ಹಾಗೆಯೇ ಆದರ್ಶವಾದಿಗಳ ಮಧ್ಯದಲ್ಲಿದ್ದುಕೊಂಡು ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆಯ ಸಂಪಾದಕರಾಗಿ ಅದರ ಮಟ್ಟವನ್ನು ಕಾಯ್ದುಕೊಂಡು ಬಂದದ್ದಲ್ಲದೆ, ಅದನ್ನು ಉನ್ನತ ದರ್ಜೆಗೆ ಏರಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಪ್ರಾರಂಭವಾದಂದಿನಿಂದ ಅದು ಮುಗಿಯುವವರೆಗೆ ಅದರ ಸದಸ್ಯರಾಗಿದ್ದರು. ಎಲ್ಲಕ್ಕೂ ಮಿಗಿಲಾಗಿ ಕನ್ನಡ ಸಾಹಿತ್ಯಪರಿಷತ್ತು ಪ್ರಕಟಿಸುತ್ತಿರುವ ಕನ್ನಡ ನಿಘಂಟಿನ ಪ್ರಥಮ ಸಂಪಾದಕರಾಗಿದ್ದು (1943–1957) ಅದಕ್ಕೆ ಒಂದು ಖಚಿತರೂಪವನ್ನು ಕೊಟ್ಟವರು ಶಾಸ್ತ್ರಿಗಳು. ಇವರ ಸಾರ್ವಜನಿಕ ಸೇವೆ ಎಲೆಮರೆಯ ಕಾಯಿನಂತಿರುತ್ತಿತ್ತು; ಆದರದು ಬಹುಫಲಗಳನ್ನು ಕೊಡುತ್ತಿತ್ತು.

ಶ್ರೇಷ್ಠ ಅಧ್ಯಾಪಕರಾಗಿ ಶಾಸ್ತ್ರಿಗಳು ಹೊಸ ಪೀಳಿಗೆಯ ಲೇಖಕರನ್ನು ಗುರುತಿಸಿ, ಅವರನ್ನು ಕೃತಿರಚನೆಗೆ ಪ್ರೋತ್ಸಾಹಿಸಿದುದು ಮಾತ್ರವಲ್ಲದೆ ತಾವೇ ಕನ್ನಡದಲ್ಲಿ ಘನವಾದ ಗದ್ಯಕೃತಿಗಳನ್ನು ನಿರ್ಮಿಸಿದ್ದಾರೆ. ಆ ಗ್ರಂಥಗಳು ಇವು: 1. ಶ್ರೀರಾಮಕೃಷ್ಣಪರಮಹಂಸರ ಚರಿತ್ರೆ (ವೆಂಕಣ್ಣಯ್ಯನವರೊಡನೆ, 1957), 2. ಸ್ವಾಮಿ–ಶಿಷ್ಯ ಸಂವಾದ, ಭಾಗ–1(ವೆಂಕಣ್ಣಯ್ಯನವರೊಡನೆ, 1923), 3. ಕನ್ನಡ ಕೈಪಿಡಿ–ಭಾಗ–1 ಕಾವ್ಯಲಕ್ಷಣ ವಿಭಾಗ (1928), 4. ಹರಿಶ್ಚಂದ್ರ ಕಾವ್ಯ ಸಂಗ್ರಹ (ವೆಂಕಣ್ಣಯ್ಯನವರೊಡನೆ, 1931), 5. ಭಾಸಕವಿ (1933), 6. ಸಂಸ್ಕೃತ ನಾಟಕ (1937), 7. ನಾಗಮಹಾಶಯ (1939), 8 ಸರ್ವಜ್ಞಕವಿ (1948), 9. ಭಾಷಣಗಳು ಮತ್ತು ಲೇಖನಗಳು (ಭಾಗ–1, 1948, ಭಾಗ–2, 1949, ಸಂಯುಕ್ತ ಸಂಪುಟ 1960), 10. ಶ್ರೀಪತಿಯ ಕಥೆಗಳು (1948), 11. ವಚನಭಾರತ (1950), 12. ಕಥಾಮೃತ (1952), 13. ಕವಿಜಿಹ್ವಾಬಂಧನಂ (1952), 14. ಬಂಕಿಮಚಂದ್ರ (1960), 15. ನಿರ್ಮಲಭಾರತೀ (1960), 16. ನಿಬಂಧಮಾಲಾ (1963).

ಕೃಷ್ಣಶಾಸ್ತ್ರಿಗಳ ಕೃತಿಗಳನ್ನು ಸಂಪಾದಿತ, ಅನುವಾದಿತ, ಸ್ವತಂತ್ರ ಎಂದು ಮೂರು ಭಾಗವಾಗಿ ವಿಂಗಡಿಸಬಹುದು. ಪೀಠಿಕೆಯೊಡನೆ ಕೂಡಿದ ನಯಸೇನನ ಧರ್ಮಾಮೃತ (ಮೈಸೂರಿನ ಓರಿಯಂಟಲ್ ಲೈಬ್ರರಿಗಾಗಿ), ಕವಿಜಿಹ್ವಾಬಂಧನ ಇವರಿಂದ ಸಂಪಾದಿತವಾದ ಗ್ರಂಥಗಳು. ಶರಶ್ಚಂದ್ರ ಚಕ್ರವರ್ತಿಯವರ ಪ್ರಸಿದ್ಧ ಬಂಗಾಳೀ ಮೂಲಕೃತಿಯ ಅನುವಾದ ನಾಗಮಹಾಶಯ. ರವೀಂದ್ರ ಶತಮಾನೋತ್ಸವ ಸಂದರ್ಭದಲ್ಲಿ ದೆಹಲಿಯ ಸಾಹಿತ್ಯ ಅಕಾಡಮಿಗಾಗಿ ಬಂಗಾಳಿಯಿಂದ ಅನುವಾದಗೊಂಡ ಕವಿವರ್ಯ ಠಾಕೂರರ ಲೇಖನಗಳ ಸಂಗ್ರಹವೇ ನಿಬಂಧಮಾಲಾ. ಇದು ಶಾಸ್ತ್ರಿಗಳ ಕೊನೆಯ ಗ್ರಂಥ. ಸ್ವತಂತ್ರ ಕೃತಿಯನ್ನು ಓದಿದಷ್ಟು ಸೊಗಸಾಗಿರುವುದೇ ಈ ಅನುವಾದಗಳ ವೈಶಿಷ್ಟ್ಯ. ಧ್ವನಿ ತತ್ತ್ವದ ವಿಸ್ತಾರವಾದ ವಿವೇಚನೆಯೊಂದನ್ನು ಬಿಟ್ಟರೆ ಅಲಂಕಾರಶಾಸ್ತ್ರದ ಎಲ್ಲ ವಿಷಯಗಳನ್ನೂ ಸಂಗ್ರಹವಾಗಿ ಸಾರವತ್ತಾಗಿ ತಿಳಿಸುವ ಕೈಪಿಡಿಯ ಭಾಗವೇ ಕಾವ್ಯಲಕ್ಷಣ ವಿಭಾಗ. ರಾಘವಾಂಕನ ಕೃತಿಗಳ, ಅದರಲ್ಲೂ ಹರಿಶ್ಚಂದ್ರ ಕಾವ್ಯದ, ಘನವಾದ ವಿಮರ್ಶೆ ಹರಿಶ್ಚಂದ್ರ ಕಾವ್ಯಸಂಗ್ರಹದ ಪೀಠಿಕೆ. ಭಾಸಕವಿ ಶಾಸ್ತ್ರಿಗಳ ಮೊದಲ ಪಂಡಿತಕೃತಿ. ಭಾಸನ ಕಾಲ, ದೇಶ, ಕೃತಿ ಕರ್ತೃತ್ವಗಳ ವಿಚಾರವಾಗಿ ಅದುವರೆಗೂ ನಡೆದ ವಿದ್ವಾಂಸರ ವಾದಗಳನ್ನು ನಿರೂಪಿಸಿ, ಅವನ್ನು ತೂಗಿ ನೋಡಿ, ತಮ್ಮ ಅಭಿಪ್ರಾಯವನ್ನು ಹೇಳಿ, ಸ್ವಪ್ನವಾಸವದತ್ತ, ಪ್ರತಿಮಾ, ಪಂಚರಾತ್ರ ನಾಟಕಗಳ ಕಲಾಸೌಂದರ್ಯವನ್ನು ವಿಸ್ತಾರವಾಗಿ ತಿಳಿಸಿ, ಮಿಕ್ಕ ನಾಟಕಗಳನ್ನು ಪರಿಚಯಮಾಡಿಕೊಡುವ ಗ್ರಂಥವದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಹತ್ತನೆಯ ಕುಸುಮವಾಗಿ ಅರಳಿದ ಅಪೂರ್ವವೂ ಅದ್ವಿತೀಯವೂ ಆದ ಗ್ರಂಥ ಸಂಸ್ಕೃತ ನಾಟಕ. ಪಂಡಿತ ಪತ್ರಿಕೆಗಳಲ್ಲಿ ಚದರಿಹೋಗಿದ್ದ ಅಸಂಖ್ಯಾತ ಲೇಖನಗಳನ್ನು ಪರಿಶೀಲಿಸಿ, ಸಂಸ್ಕೃತನಾಟಕಗಳನ್ನು ಅಭ್ಯಾಸಮಾಡಿ, ತಮ್ಮ ಸ್ವಂತ ಅನುಭವವನ್ನು ಸೇರಿಸಿ, ರಚಿಸಿದ ಈ ಗ್ರಂಥದಲ್ಲಿ ಸಂಸ್ಕೃತನಾಟಕದ ಉಗಮ ಮತ್ತು ಬೆಳವಣಿಗೆಯನ್ನು ಹೇಳಿರುವುದಲ್ಲದೆ, ಅಶ್ವಘೋಷನಿಂದ ಹಿಡಿದು ಕೃಷ್ಣಮಿಶ್ರನವರೆಗೆ ರಚಿತವಾದ ನಾಟಕಗಳ ವಿಮರ್ಶೆಯನ್ನೂ ಕೊಟ್ಟಿದೆ. ಕವಿಯ ಕಾಲದೇಶ ಕೃತಿಗಳನ್ನು ಸಂಗ್ರಹವಾಗಿ ನಿರೂಪಿಸಿ, ಬಳಿಕ ಅಡಕವಾಗಿ ನಾಟಕದ ಸಾರಾಂಶವನ್ನು ತಿಳಿಸಿ ಅನಂತರ ವಿಮರ್ಶೆಯನ್ನು ಕೊಟ್ಟಿರುವುದು ಇಲ್ಲಿಯ ಪದ್ಧತಿ. ಪಾತ್ರಗಳ ಗುಣದೋಷಗಳನ್ನು, ನಾಟಕಗಳ ಕಲಾ ಸೌಂದರ್ಯವನ್ನು ಹಿಡಿದಿಡುವ ಸೂತ್ರಪ್ರಾಯವಾದ ಮಾತುಗಳು, ವಾಕ್ಯಗಳು ಇಲ್ಲಿ ಪುಟಪುಟಗಳಲ್ಲಿ ಕಂಗೊಳಿಸುತ್ತಿವೆ. ವಿಷಯವನ್ನು ಸಮರ್ಥಿಸಲು ನಾಟಕಗಳಿಂದ ವಾಕ್ಯಗಳನ್ನೂ ಪದ್ಯಗಳನ್ನೂ ಅಲ್ಲಲ್ಲಿ ಉದ್ಧರಿಸಿದೆ. ಗ್ರಂಥದ ಕೊನೆಯಲ್ಲಿ 650 ನಾಟಕಗಳ ಹೆಸರಿನ ಪಟ್ಟಿ ಇದೆ. ಹತ್ತು ವರ್ಷಗಳ ಲೇಖಕರ ಪರಿಶ್ರಮದಿಂದ ರಚಿತವಾದ ಈ ಗ್ರಂಥ ಅವರ ವಿದ್ವತ್ತಿಗೂ ರಸಜ್ಞತೆಗೂ ಸಾಕ್ಷಿಯಾಗಿದೆ. ಇಂಥ ಗ್ರಂಥ ಭಾರತೀಯ ಭಾಷೆಗಳ ಮಾತು ಹಾಗಿರಲಿ, ಇಂಗ್ಲಿಷಿನಲ್ಲಿಯೂ ಇಲ್ಲವೆಂದು ವಿದ್ವಾಂಸರ ಮತ. ಅಂಗೈಯಗಲದ ಅರವತ್ತುನಾಲ್ಕು ಪುಟಗಳಲ್ಲಿ ಅವನ ಮಾತುಗಳಿಂದಲೇ ಸರ್ವಜ್ಞನ ಜೀವನ ಹಾಗೂ ವಚನಗಳನ್ನು ಪರಿಚಯಮಾಡಿಕೊಡುವ, ಪ್ರಚಾರೋಪನ್ಯಾಸ ಮಾಲೆಯ ಚಿಕ್ಕಪುಸ್ತಕ ಸರ್ವಜ್ಞಕವಿ. ಭಾಷಣಗಳು ಮತ್ತು ಲೇಖನಗಳು ಎಂಬ ಗ್ರಂಥದಲ್ಲಿ ಹೈದರಾಬಾದಿನ ಸಾಹಿತ್ಯ ಸಮ್ಮೇಳನದ (1941) ಅಧ್ಯಕ್ಷ ಭಾಷಣವೂ ವಿಶೇಷ ಸಾಹಿತ್ಯೋತ್ಸವದ ಆರಂಭಭಾಷಣವೂ (1947) ನಾಲ್ಕು ಲೇಖನಗುಚ್ಛಗಳೂ ಇವೆ. ಮೊದಲ ಎರಡು ಲೇಖನಗುಚ್ಛಗಳಲ್ಲಿ ಹಿಂದಿನ ಮತ್ತು ಇಂದಿನ ಕವಿಗಳ ಹಾಗೂ ಅವರ ಕೃತಿಗಳಿಗೆ ಸಂಬಂಧಪಟ್ಟ ಲೇಖನಗಳೂ ತರುಣ ಸಾಹಿತಿಗಳಿಗೆ ಮಾರ್ಗದರ್ಶನ ಮಾಡತಕ್ಕ ಲೇಖನಗಳೂ ಮೂರನೆಯ ಗುಚ್ಛದಲ್ಲಿ ಹನ್ನೆರಡು ಗ್ರಂಥಗಳ ಮೇಲೆ ಲೇಖಕರು ಬರೆದಿರುವ ವಿಮರ್ಶೆಗಳೂ ನಾಲ್ಕನೆಯದರಲ್ಲಿ ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿ ಅವರು ಬರೆದ ವಿವಿಧ ವಿಷಯಗಳ ಮೂವತ್ತೆರಡು ಸಂಪಾದಕೀಯಗಳೂ ಇವೆ. ಭಾಷಣಗಳಲ್ಲಿ ಶಾಸ್ತ್ರಿಗಳ ಉಜ್ವಲವಾದ ಕನ್ನಡದ ಅಭಿಮಾನ, ಲೇಖನಗಳಲ್ಲಿ ಅವರು ಕನ್ನಡ ಸಾಹಿತ್ಯಕ್ಕೆ ತಂದುಕೊಟ್ಟ ಹೊಸದೃಷ್ಟಿ ಸುಸ್ಪಷ್ಟವಾಗಿ ಗೋಚರಿಸುತ್ತವೆ. ಶ್ರೀಪತಿ ಎಂಬ ಕಾವ್ಯನಾಮದಿಂದ ಪ್ರಬುದ್ಧ ಕರ್ಣಾಟಕಕ್ಕೆ ಶಾಸ್ತ್ರಿಗಳು ಬರೆದ ಹದಿಮೂರು ಸಣ್ಣಕಥೆಗಳೇ ಶ್ರೀಪತಿಯ ಕಥೆಗಳು. ಮಧ್ಯಮವರ್ಗದ ಜನರ ಕಷ್ಟಕಾರ್ಪಣ್ಯಗಳನ್ನೂ ನಂಬಿಕೆಗಳನ್ನೂ ಕಣ್ಣಿಗೆ ಕಟ್ಟುವಂತೆ ಈ ಕಥೆಗಳು ಚಿತ್ರಿಸುವುವಲ್ಲದೆ, ಸ್ತ್ರೀಯರ ವಿಷಯದಲ್ಲಿ ಲೇಖಕರ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತವೆ. ಇದೊಂದೇ ಶಾಸ್ತ್ರಿಗಳ ಸ್ವತಂತ್ರ ಸೃಜನಾತ್ಮಕಕೃತಿ. ಇವೆಲ್ಲಕ್ಕೂ ಮಿಗಿಲಾಗಿ ಕೃಷ್ಣಶಾಸ್ತ್ರಿಗಳಿಗೆ ಕೀರ್ತಿತಂದ ಕೃತಿ ವಚನಭಾರತ. ಇಂದಿನ ಜೀವನಕ್ಕೆ ಅಗತ್ಯವಾದ ಧರ್ಮ ನೀತಿಗಳನ್ನೊಳಗೊಂಡು ವ್ಯಾಸಭಾರತದ ಹದಿನೆಂಟು ಪರ್ವಗಳ ಕಥೆ ಸರಳಸುಂದರ ಗದ್ಯದಲ್ಲಿ ಮೂಲಕ ಗಾಂಭೀರ್ಯವನ್ನು ಬಿಟ್ಟುಕೊಡದೆ ಹೊಸಗನ್ನಡದಲ್ಲಿ ಬಟ್ಟಿಯಿಳಿದು ಬಂದಿದೆ ಈ ಭಾರತ ಸಾರಸಂಗ್ರಹದಲ್ಲಿ. ಹಲವು ಸಂಸ್ಕರಣಗಳನ್ನು ಓದಿ ನೋಡಿ, ತೂಗಿ ವಿಮರ್ಶೆಮಾಡಿ ಆರು ತಿಂಗಳಲ್ಲಿ ಬರೆಗ ಗ್ರಂಥ ಇದು. ನಾನೂರು ಪುಟಗಳ ಕಥೆ ಒಂದು ತೂಕವಾದರೆ ಇದರ ವಿದ್ವತ್ಪೂರ್ಣವಾದ ಪೀಠಿಕೆಯೇ ಒಂದು ತೂಕ. ಮಹಾಭಾರತದ ಹುಟ್ಟು, ಬೆಳವಣಿಗೆ, ಅದು ಪ್ರತಿಪಾದಿಸುವ ತತ್ತ್ವ, ಆಧುನಿಕ ಯುಗಕ್ಕೆ ಅದರ ಸಂದೇಶ– ಇವೇ ಮೊದಲಾದ ಬಹು ವಿಷಯಗಳನ್ನೊಳಗೊಂಡ ಪೀಠಿಕೆ ಪ್ರೌಢವೂ ಸರಳವೂ ಆಗಿದೆ. ಇಷ್ಟು ಸರಳಸುಂದರವಾದ ಗದ್ಯಭಾರತ ಇನ್ನಾವ ಭಾಷೆಯಲ್ಲಿಯೂ ಇರಲಾರದು. ಸಂಸ್ಕೃತಭಾಷೆಯಲ್ಲಿ ಸೋಮದೇವನಿಂದ ರಚಿತವಾದ ಕಥಾಸರಿತ್ಸಾಗರದ ಸಾರಸಂಗ್ರಹವೇ ಕಥಾಮೃತ. ಬೃಹತ್ಕಥೆ, ಗುಣಾಢ್ಯ, ಸಮಾಜ, ನೀತಿ ಇವೇ ಮೊದಲಾದ ಹಲವು ವಿಷಯಗಳನ್ನೊಳಗೊಂಡ ಪ್ರೌಢವಾದ ಪೀಠಿಕೆ ಈ ಗ್ರಂಥಕ್ಕೂ ಇದೆ. ಸ್ತ್ರೀಯರ ವಿಷಯದಲ್ಲಿ ಲೇಖಕರು ಇಲ್ಲಿ ಮಾಡಿರುವ ವಿಮರ್ಶೆ ಸ್ವಲ್ಪ ಹೆಚ್ಚಾಯಿತೇನೋ. ಬಂಕಿಮಚಂದ್ರನ ಕೃತಿಗಳನ್ನು ಕಾದಂಬರಿ ಮತ್ತು ಇತರ ಲೇಖನ ಹಾಗೂ ಗ್ರಂಥಗಳನ್ನು ಮೂಲದಲ್ಲಿಯೇ ಅಭ್ಯಾಸಮಾಡಿ, ಕವಿಯ ಮತ್ತು ಅವನ ಕೃತಿಗಳನ್ನು ಪರಿಶೀಲಿಸುವ ಸಮಗ್ರಗ್ರಂಥ ಬಂಕಿಮಚಂದ್ರ. ಸಂಕ್ಷಿಪ್ತ ಬಂಗಾಳೀ ಸಾಹಿತ್ಯಚರಿತ್ರೆ ಮತ್ತು ಬಂಕಿಮರ ಜೀವನಚರಿತ್ರೆಯಾದ ಮೇಲೆ, ಕಾದಂಬರಿಗಳ ಕಥಾಸಾರವನ್ನು ಸಂಕ್ಷೇಪವಾಗಿ ನಿರೂಪಿಸಿ ಆ ಬಳಿಕ ಶಾಸ್ತ್ರಿಗಳು ವಿಸ್ತಾರವಾಗಿ ಕೃತಿ ವಿಮರ್ಶೆ ಮಾಡುತ್ತಾರೆ. ಅವನ ಇತರ ಕೃತಿಗಳ, ಲೇಖನಗಳ ಹಕ್ಕಿನೋಟವೂ ಇಲ್ಲಿದೆ. ಬಂಕಿಮಚಂದ್ರ ಗ್ರಂಥ ವಿಮರ್ಶೆಯ ಒಂದು ರಸದೂಟ. ಇದರ ರಚನೆಗೆ ಶಾಸ್ತ್ರಿಗಳಿಗೆ ಎಂಟು ವರ್ಷಕಾಲ ಹಿಡಿಯಿತು. ಕನ್ನಡದ ಮಾತಿರಲಿ, ಇಂಥ ಕೃತಿ ಬಂಗಾಳೀ ಭಾಷೆಯಲ್ಲಿಯೂ ಇಲ್ಲವೆಂದು ತಿಳಿದವರು ಹೇಳುತ್ತಾರೆ. ನಿರ್ಮಲ ಭಾರತೀ ಎಂಬ ಸಚಿತ್ರ ಕಿರುಹೊತ್ತಗೆ ಮಕ್ಕಳಿಗಾಗಿ ಸರಳವಾದ ಭಾಷೆಯಲ್ಲಿ ಮಹಾಭಾರತದ ಇಡೀ ಕಥೆಯನ್ನು ತಿಳಿಸುತ್ತದೆ. ಈ ಪುಸ್ತಕದಲ್ಲಿ ದೊಡ್ಡಚಿತ್ರಗಳೊಡನೆ ಮಕ್ಕಳ ಕುತೂಹಲವನ್ನು ಕೆರಳಿಸುವ ಬಿಲ್ಲು ಬಾಣ ಗದೆ ಈಟಿ ಚತುರಂಗಸೇನೆ ಶಂಖ ಕೊಂಬು ಕಹಳೆ ಮುಂತಾದ ಚಿಕ್ಕಚಿಕ್ಕ ಚಿತ್ರಗಳಿರುವುದು ಒಂದು ವೈಶಿಷ್ಟ್ಯ.

ಹೈದರಾಬಾದಿನಲ್ಲಿ 1941ರಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. 1956ರಲ್ಲಿ ಶಾಸ್ತ್ರಿಗಳ ಶಿಷ್ಯರೂ ಮಿತ್ರರೂ ಅಭಿವಂದನೆ ಎಂಬ ವಿದ್ವತ್ ಪ್ರಬಂಧಗಳ ಸಂಪುಟವನ್ನು ಇವರಿಗೆ ಅರ್ಪಿಸಿದರು. ಮೈಸೂರು ವಿಶ್ವವಿದ್ಯಾನಿಲಯ 1960ರಲ್ಲಿ ಶಾಸ್ತ್ರಿಗಳಿಗೆ ಡಿ.ಲಿಟ್. ಪದವಿಯನ್ನು ಕೊಟ್ಟು ಗೌರವಿಸಿತು. ಬಂಕಿಮಚಂದ್ರಕ್ಕೆ ದೆಹಲಿ ಸಾಹಿತ್ಯ ಅಕಾಡಮಿಯ ಬಹುಮಾನ 1963ರಲ್ಲಿ ದೊರಕಿತು.

ಸಂಸ್ಕೃತ, ಕನ್ನಡ, ಇಂಗ್ಲಿಷ್, ಬಂಗಾಳೀ ಭಾಷೆಗಳಲ್ಲಿ ಘನವಾದ ಪಾಂಡಿತ್ಯವನ್ನೂ ತಮಿಳು ತೆಲುಗು ಭಾಷೆಗಳಲ್ಲಿ ಸಲಿಗೆಯನ್ನೂ ಹೊಂದಿದ್ದ ಶಾಸ್ತ್ರಿಗಳು ಕನ್ನಡ ಬರೆವಣಿಗೆಯ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಹೊಂದಿದ್ದರು. ವಿಷಯವನ್ನು ಚೆನ್ನಾಗಿ ತಿಳಿಯದೆ ಏನನ್ನೂ ಬರೆಯಬಾರದು. ತಿಳಿದ ವಿಷಯವನ್ನು ತಿಳಿಯಾದ ಬಿಗಿಯಾಗಿ ಅಡಕವಾದ ಭಾಷೆಯಲ್ಲಿ ಹೇಳಬೇಕು. ಅನಾವಶ್ಯಕವಾದ ಸಂಸ್ಕೃತ ಪದಗಳಿಂದ ಭಾಷೆಯನ್ನು

ಹೊರೆಯಾಗಿಸಬಾರದು. ವಿಷಯ ನಿರೂಪಣೆ ಸರಳವೂ ಸ್ಪಷ್ಟವೂ ಅಸಂದಿಗ್ಧವೂ ಆಗಿರಬೇಕು. ಶಾಸ್ತ್ರಿಗಳ ಬರವಣಿಗೆಯಲ್ಲಿ ಈ ಗುಣಗಳನ್ನು ಸಂಪೂರ್ಣವಾಗಿ ಕಾಣುತ್ತೇವೆ. ತಮ್ಮ ಪಾಂಡಿತ್ಯದಿಂದ ಶಾಸ್ತ್ರಿಗಳು ಬರವಣಿಗೆಯನ್ನು ಎಲ್ಲಿಯೂ ಹೊರೆಯಾಗಿಸಿಲ್ಲ. ಶಾಸ್ತ್ರಿಗಳ ಗದ್ಯಶೈಲಿ ಸುಂದರ, ಸರಳ, ವಾಕ್ಯಗಳು ಸಾಮಾನ್ಯವಾಗಿ ಚಿಕ್ಕವಾಗಿರುತ್ತವೆ. ಆದರೆ ನಡೆ ಎಲ್ಲಿಯೂ ಕುಂಟುವುದಿಲ್ಲ. ಆಡುಮಾತಿನ ಬಳಕೆ ಯಥೇಚ್ಛ.. ಆದರೂ ಭಾಷೆ ಬಿಗಿಯಾದುದು. ಸ್ವಾನುಭವದಿಂದ ಉಕ್ಕಿಬಂದ ಸೂಕ್ತಿಗಳು ಹೇರಳವಾಗಿ ಸಿಗುತ್ತವೆ. ಅಲ್ಲಲ್ಲಿ ಬರುವ ಸಹಜವಾದ ಉಪಮಾನ ರೂಪಕಗಳಂತೂ ಮೋಹಕ.

ಸಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ ಬೆಳೆದು, ಅದಕ್ಕೆ ವಿರೋಧಿಯಲ್ಲದಿದ್ದರೂ ಧರ್ಮ ನೀತಿ ನಡತೆ ಮುಂತಾದ ವಿಚಾರಗಳನ್ನು ಧಾರಾಳವಾಗಿ ಸ್ವತಂತ್ರವಾದ ವಾತಾವರಣದಲ್ಲಿ ನಡೆಸಬೇಕು ಎಂದು ನಂಬಿ ಅದರಂತೆ ಮನೋವೃತ್ತಿಯನ್ನು ಬೆಳೆಸಿಕೊಂಡು ಜೀವನ ನಡೆಸಿದ ಕೃಷ್ಣಶಾಸ್ತ್ರಿಗಳು 'ಕನ್ನಡ ನಾಡಿಗೆ ಕನ್ನಡವೇ ಗತಿ. ದೇಶದಲ್ಲಿ ಅದು ಮೊದಲ ಸ್ಥಾನವನ್ನು ಪಡೆದು ರಾಣಿಯಂತೆ ಮೆರೆಯಬೇಕು. ಇಂಗ್ಲಿಷ್ ಸಂಸ್ಕೃತಗಳಿಂದ ಕನ್ನಡಕ್ಕೆ ಆಗತಕ್ಕ ಸಹಾಯ ಅಪಾರವಾಗಿದೆ. ಹಿಂದಿಯಿಂದ ಎಂದಿದ್ದರೂ ಕನ್ನಡಕ್ಕೆ ಅಪಾಯ. ಅವಕಾಶ ಕೊಟ್ಟರೆ ಕನ್ನಡ ಮಿಕ್ಕ ಭಾಷೆಗಳನ್ನು ಮೀರಿಸಿ ಬೆಳೆಯಬಲ್ಲದು'–ಎಂದು ಸಾರಿ ಹೇಳಿ, ಇದೇ ಮಂತ್ರವನ್ನು ತಮ್ಮ ಬಾಳಿನ ಉದ್ದಕ್ಕೂ ಜಪಿಸುತ್ತ ತಮ್ಮ ಎಪ್ಪತ್ತೆಂಟನೆಯ ವಯಸ್ಸಿನಲ್ಲಿ 1968ರ ಫೆಬ್ರುವರಿ 1ರಂದು ನಿಧನರಾದರು. (ಎಚ್.ಎಂ.ಎಸ್.ಎನ್.)

**ಕೃಷ್ಣಸೂಕ್ತಿ :** ಕನ್ನಡದ ಒಂದು ಮಾಸಪತ್ರಿಕೆ. 1905ರಲ್ಲಿ ಕೆರೋಡಿ ಸುಬ್ಬರಾಯರಿಂದ ಸ್ಥಾಪಿತವಾಯಿತು. ಅವರ ಅನಂತರ ರಾಜಗೋಪಾಲಕೃಷ್ಣ ರಾಯರು ಸಂಪಾದಕರಾಗಿ ಪತ್ರಿಕೆಯನ್ನು ಅನೇಕ ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿಕೊಂಡು ಬಂದರು. ಸಣ್ಣಕತೆಗಳು, ವಿಚಾರಪೂರಿತ ಲೇಖನಗಳು ಮತ್ತು ಪ್ರಬಂಧಗಳು ಇದರಲ್ಲಿ ಪ್ರಕಟವಾಗುತ್ತಿದ್ದುವು. ಜನಪ್ರಿಯ ಕನ್ನಡ ಮಾಸಪತ್ರಿಕೆಯಾಗಿ ಇದು ಹಲವು ವರ್ಷಗಳ ಕಾಲ ನಡೆಯಿತು. (ಎನ್.ಕೆ.)

**ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್. :** 1920–2008. ಎಚ್ಚೆಸ್ಕೆ ಎಂದೇ ಪ್ರಸಿದ್ಧರಾಗಿರುವ ಎಚ್ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ 26 ಆಗಸ್ಟ್ 1920ರಂದು ಕೆ.ಆರ್.ನಗರ ತಾಲ್ಲೂಕಿನ ಹಳೆಯೂರಿನಲ್ಲಿ ಜನಿಸಿದರು. ತಂದೆ ಶ್ರೀನಿವಾಸ ಅಯ್ಯಂಗಾರ್ಯರ್, ತಾಯಿ ಶ್ರೀಮತಿ ಅಲಮೇಲಮ್ಮ.

ಹಳೆಯೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಮೈಸೂರಿನಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿದೆಶೆ. 1935ರಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿಯತ್ತಿದ್ದಂತೆಯೇ ತಾಯಿನಾಡು ಹಿಂದೂ ಪತ್ರಿಕೆಗಳಿಗೆ ಅತಿ ಕಿರಿಯ ಬಾತ್ಮೀದಾರ. ಮಿರ್ಜಾ ಇಸ್ಮಾಯಿಲರು ದಿವಾನರಾಗಿದ್ದ ಕಾಲ. ಒಂದು ಸಭೆಯಲ್ಲಿ ಪತ್ರಿಕಾಪ್ರತಿನಿಧಿಗಳ ಸಾಲಿನಲ್ಲಿ ಎಚ್ಚೆಸ್ಕೆ ಕುಳಿತಿದ್ದರು. ಅವರನ್ನು ನೋಡಿ ಮಿರ್ಜಾ ಕುತೂಹಲದಿಂದ ವಿಚಾರಿಸಿ "ಆ ದೊಡ್ಡ ಪತ್ರಿಕೆಗೆ ಈ ಚೋಟುದ್ದದ ಹುಡುಗ ಪ್ರತಿನಿಧಿಯೆ?" ಎಂದು ತಮಾಷೆ ಮಾಡಿದರಂತೆ.

1940ರಲ್ಲಿ ಎಚ್ಚೆಸ್ಕೆ ಬೆಂಗಳೂರಿಗೆ ಬಂದರು. ಸ್ವಾತಂತ್ರ್ಯ ಚಳವಳಿಯ ಆ ದಿನಗಳಲ್ಲಿ ಅದರಲ್ಲಿ ಪಾಲ್ಗೊಳ್ಳುತ್ತಲೇ ಎಚ್ಚೆಸ್ಕೆ ಪತ್ರಕರ್ತರಾಗಿಯೂ ಸೇವೆ ಸಲ್ಲಿಸಿದರು. ಆ ಸಮಯದಲ್ಲಿ ಕಾಲೇಜಿನಲ್ಲಿ ಇದ್ದ ಎಲ್ ಕಾಂ ಪರೀಕ್ಷೆಯನ್ನು ಪ್ರಥಮದರ್ಜೆಯಲ್ಲಿ ಪಾಸು ಮಾಡಿದರು. ತರಗತಿಗಳಲ್ಲಿ ಸಂಸ್ಕೃತವನ್ನು ಓದಿದರೂ, ಕನ್ನಡದ ಮೇಲೆ ಪ್ರೀತಿ, ಅಭಿಮಾನ, ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿದ್ದ 'ಕನ್ನಡ ಜಾಣ' ಪರೀಕ್ಷೆಗೂ ಕಟ್ಟಿ ತೇರ್ಗಡೆಯಾದರು. ಬಿ ಎಂ ಶ್ರೀಕಂಠಯ್ಯನವರ ಸಮ್ಮುಖದಲ್ಲಿ ತಮ್ಮ ಒಂದು ಪ್ರಬಂಧವನ್ನು ಓದುವ ಸದವಕಾಶ ಎಚ್ಚೆಸ್ಕೆಯವರಿಗೆ ಲಭಿಸಿತು. ಅತೃಪ್ತಿಯೇ ಪ್ರಗತಿಯ ಮೂಲ ಎಂದು ಆ ಪ್ರಬಂಧದಲ್ಲಿ ಪ್ರತಿಪಾದಿಸಲಾಗಿತ್ತು. ಶ್ರೀಕಂಠಯ್ಯನವರು ಆ ಪ್ರಬಂಧವನ್ನು ಮೆಚ್ಚಿ ಎಚ್ಚೆಸ್ಕೆ ಅವರ ಬೆನ್ನು ತಡವಿ **"ಕನ್ನಡ ಸಾಹಿತ್ಯದಲ್ಲಿ ನೀನು ಹೆಚ್ಚಿನದನ್ನು ಸಾಧಿಸಬೇಕು"** ಎಂದು ಹುರಿದುಂಬಿಕೆಯ ಮಾತನ್ನಾಡಿದರು. ಎಚ್ಚೆಸ್ಕೆ ಅದನ್ನು ಎಂದೂ ಮರೆಯಲಿಲ್ಲ. ನಂತರ ಬಿಕಾಂ ಪದವಿಗೆ ಸೇರಿ ಮೊದಲ ಸ್ಥಾನದಲ್ಲಿ ತೇರ್ಗಡೆಯಾದರು. ಈ ಸಮಯದಲ್ಲಿ ನಿರಂಜನ, ವೈಎನ್‌ಕೆ, ಟಿಎಸ್‌ಆರ್ ಮುಂತಾದ ಖ್ಯಾತ ಪತ್ರಕರ್ತರ ಪರಿಚಯವಾಯಿತು. ಎಚ್ಚೆಸ್ಕೆ ಒಂದೇ ಸಮನೆ ಬರೆದರು. ಅಸ್ಖಲಿತ ಸುಂದರ ಕೈಬರೆಹ. ಎಚ್ಚೆಸ್ಕೆಯವರದು ಪತ್ರಿಕಾವೃತ್ತಿಯಲ್ಲೂ ಪ್ರಥಮದರ್ಜೆ. ಆದರೆ ಅವರು ವಾಣಿಜ್ಯ ಶಾಸ್ತ್ರದಲ್ಲಿ ಹೆಚ್ಚಿನ ಕೆಲಸ ಮಾಡಬೇಕಾಗಿತ್ತೇನೋ ಎನ್ನುವ ಹಾಗೆ ಅವರು ಬನಾರಸ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಎಂ.ಎ ಪರೀಕ್ಷೆಯಲ್ಲಿ ಮೊದಲ ಸ್ಥಾನದೊಂದಿಗೇ ತೇರ್ಗಡೆಯಾದರು. ಅಲ್ಲಿಂದಾಚೆಗೆ ಅವರು ಬನುಮಯ್ಯ ಕಾಲೇಜಿನಲ್ಲಿ ಅಧ್ಯಾಪಕರಾದರು. ಬೋಧನೆಯಲ್ಲಿಯೂ ಪ್ರಥಮ ದರ್ಜೆಯನ್ನು ಸಾಧಿಸಿದರು. ಸಾವಿರಾರು ವಿದ್ಯಾರ್ಥಿಗಳ ಪ್ರೀತಿಯನ್ನು ಅಭಿಮಾನವನ್ನು ಸಂಪಾದಿಸಿದರು. ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೂ ಕಡೆಯ ಹದಿನೈದು ನಿಮಿಷ ಕನ್ನಡದಲ್ಲಿ ಸಾರಾಂಶವನ್ನು ಬೋಧಿಸುತ್ತಿದ್ದರು. ಈ ಕುರಿತು ಅವರು ಕನ್ನಡದಲ್ಲಿ ವಿಷಯ ನಿರೂಪಣೆ ಮಾಡುವಾಗ ವಿದ್ಯಾರ್ಥಿಗಳ ಕಣ್ಣುಗಳಲ್ಲಿ ಕಾಂತಿ ತುಂಬಿಕೊಳ್ಳುತ್ತಿತ್ತು ಎಂದು ನೆನಪಿಸಿಕೊಳ್ಳುತ್ತಾರೆ. ಬೋಧನೆಯ ಜೊತೆಜೊತೆಗೇ ಬರೆಹದಲ್ಲಿಯೂ ಎಚ್ಚೆಸ್ಕೆ ತೊಡಗಿಕೊಂಡರು. ವಾಣಿಜ್ಯ ಶಾಸ್ತ್ರದ ಬಗೆಗೆ ಆಗ ಕನ್ನಡದ ಪುಸ್ತಕಗಳೇ ಇರಲಿಲ್ಲ. ಎಚ್ಚೆಸ್ಕೆ ವ್ಯಾವಹಾರಿಕ ಕನ್ನಡ, ವಾಣಿಜ್ಯ ಶಾಸ್ತ್ರ ಪರಿಚಯ (ಎರಡು ಸಂಪುಟಗಳು) ಕೃತಿಗಳನ್ನು ನೀಡಿದರು. ಅವು ವಿದ್ಯಾರ್ಥಿಗಳಿಗೆ ಬಹಳ ಆಪ್ತ ಸಹಚರಿಗಳಾದವು. ಎಚ್ಚೆಸ್ಕೆ ಬಹುಶ್ರುತರು. ಬರವಣಿಗೆಯಲ್ಲಿ ವಿಶೇಷ ಶೈಲಿಯನ್ನು ರೂಢಿಸಿಕೊಂಡಿರುವವರು. ಕ್ರಿಯಾಪದಗಳಿಲ್ಲದೆಯೇ ವಾಕ್ಯ ರಚನೆ ಮಾಡುವುದರಲ್ಲಿ ಸಿದ್ಧಹಸ್ತರು. ಎರಡು ಮೂರು ಪದಗಳಲ್ಲಿ ಒಂದು ವಾಕ್ಯವನ್ನು ಕಟ್ಟಿಬಿಡುತ್ತಾರೆ. ಸುಧಾ ಪ್ರಜಾವಾಣಿಗಳಲ್ಲಿ ಎಚ್ಚೆಸ್ಕೆಯವರ ಅಂಕಣಗಳು ಅತ್ಯಂತ ಜನಪ್ರಿಯವಾದವು. ವಾರದ ವ್ಯಕ್ತಿ, ವ್ಯಕ್ತಿ ವಿಶೇಷ, ವಾರದಿಂದ ವಾರಕ್ಕೆ, ಆರ್ಥಿಕ ಚಿಂತನೆ ಇಂತಹ ಅಂಕಣಗಳಲ್ಲಿ ಕೆಲವು. ಸಮದರ್ಶಿ, ವಿಚಾರಪ್ರಿಯ ಮುಂತಾದ ಹೆಸರುಗಳಲ್ಲಿ ಅವರು ಈ ಅಂಕಣಗಳನ್ನು ಬರೆಯುತ್ತಿದ್ದರು. ನಿಯತವಾಗಿ ಅವರಷ್ಟು ದೀರ್ಘಕಾಲ ಅಂಕಣಗಳನ್ನು ಬರೆದವರು ಬೇರೊಬ್ಬರಿಲ್ಲ. ಪತ್ರಿಕಾ ಅಂಕಣಗಳ ಜೊತೆಗೇ ಲಲಿತ ಪ್ರಬಂಧಗಳನ್ನು ಬರೆದರು. ಕಳ್ಳಹೊಕ್ಕ ಮನೆ, ಚಂದ್ರಕಾಂತಿ, ಸುರಹೊನ್ನೆ, ಮೇಘಲಹರಿ ಮುಂತಾದವು ಅವರ ಮುಖ್ಯ ಪ್ರಬಂಧ ಸಂಕಲನಗಳಲ್ಲಿ ಕೆಲವು. ಎಚ್ಚೆಸ್ಕೆ ಕಾದಂಬರಿಗಳನ್ನೂ ಬರೆದರು. ಬಯಕೆಯ ಬೆಲೆ ಮುಖ್ಯವಾದ ಕಾದಂಬರಿಗಳಲ್ಲಿ ಒಂದು. ಅನೇಕ ಜೀವನಚರಿತ್ರೆಗಳನ್ನು ಎಚ್ಚೆಸ್ಕೆ ರಚಿಸಿದರು. ಅವುಗಳಲ್ಲಿ ಶ್ರೀ ರಾಮಾನುಜಾಚಾರ್ಯರು, ವಿ ಕೆ.ಆರ್.ವಿ ರಾವ್, ಲಾಲ್‌ಬಹದ್ದೂರ್ ಶಾಸ್ತ್ರೀ, ಬಿ ಆರ್ ಅಂಬೇಡ್ಕರ್, ಜಯಪ್ರಕಾಶ ನಾರಾಯಣ, ಯಾಮುನಾಚಾರ್ಯರು ಇವು ಮುಖ್ಯವಾದವು. ಅವರ ಅಂಕಣ ಬರೆಹಗಳಿಂದ ಆಯ್ದ ಸಾವಿರಾರು ಲೇಖನಗಳನ್ನು ಬದುಕು–ಬೆಳಕು, ಮಾನ್ಯರು– ಅಸಾಮಾನ್ಯರು, ಗಗನಚುಕ್ಕಿ– ಭರಚುಕ್ಕಿ, ಹೊ–ನ್ನ ಬಿತ್ತಿ ಬೆಳೆದವರು ಮುಂತಾದ ಕೃತಿಗಳಲ್ಲಿ ಪ್ರಕಟಿಸಿದ್ದಾರೆ. ಎಚ್ಚೆಸ್ಕೆಯವರು ಅಂಕಣಬರೆಹಗಳಲ್ಲದೇ ಬಿಡಿಲೇಖನಗಳನ್ನೂ ಬರೆದಿದ್ದಾರೆ. ಇವು ಅವರ ಆಯ್ದ ಬರೆಹಗಳು ಎಂಬ ಸಂಭಾವನಾ ಗ್ರಂಥದಲ್ಲಿ ಇವೆ. ನವ್ಯಕಾವ್ಯದಿಂದ ರಾಜಕೀಯದವರೆಗೆ ಈ ಲೇಖನಗಳು ಚಾಚಿಕೊಂಡಿವೆ. ಅವರ ಅನೇಕ ಕವನ ಸಂಕಲನಗಳು ನಂತರ ಪ್ರಕಟವಾದವು. ಇವುಗಳಲ್ಲಿ ದವನದ ಕೊನೆ, ತಿಂಗಳೂರಿನ ತೇರು ಬಹುಮುಖ್ಯವಾಗಿವೆ. ಎಚ್ಚೆಸ್ಕೆಯವರು ಅನೇಕ ಗ್ರಂಥ ಗಳನ್ನು ಸಂಪಾದಿಸಿದರು. ಅವಲೋಕನ, ಕರ್ನಾಟಕ ಪರಂಪರೆಯ ಸಮೀಕ್ಷೆ, ದಾಸ ಸಾಹಿತ್ಯ ದರ್ಶನ, ಗಾಂಧೀಜಿ ಒಂದು ಪುನರ್ದರ್ಶನ, ಬಾನುಲಿ ಬರೆವಣಿಗೆ, ಕನ್ನಡದಲ್ಲಿ ವಿಡಂಬನ ಸಾಹಿತ್ಯ, ನಮ್ಮ ಅಭಿವೃದ್ಧಿ ಯೋಜನೆಗಳು ಇವು ಮುಖ್ಯವಾದ ಕೃತಿಗಳಲ್ಲಿ ಕೆಲವು.

ಇಷ್ಟಲ್ಲದೆ, ಎಚ್ಚೆಸ್ಕೆ ಆಡಳಿತ ಕನ್ನಡ, ಭಾರತದ ಭಾಷಾ ಸಮಸ್ಯೆ, ಪ್ರಜಾಪ್ರಭುತ್ವ ಬ್ಯಾಂಕಿಂಗ್ ಹೆಜ್ಜೆಗುರುತುಗಳು, ನಮ್ಮ ಅಭಿವೃದ್ಧಿ ಯೋಜನೆಗಳು, ನಮ್ಮ ಶರೀರದ ರಚನೆ ಮುಂತಾದ ಸಂಕೀರ್ಣ ಕೃತಿಗಳನ್ನು ರಚಿಸಿದರು. ಪತ್ರಿಕಾ ಅಂಕಣಗಳನ್ನು ಎಚ್ಚೆಸ್ಕೆ ಮುಂದುವರಿಸಿಯೇ ಇದ್ದಾರೆ. ಮೈಸೂರು ಮಿತ್ರ, ಕರ್ಮವೀರ, ತರಂಗ ಮೊದಲಾದ ಅನೇಕ ಪತ್ರಿಕೆಗಳಲ್ಲಿ ಅವರ ಅಂಕಣಗಳು ಪ್ರಕಟವಾಗುತ್ತಿವೆ. ಇಂಗ್ಲಿಷಿನಲ್ಲಿಯೂ ಎಚ್ಚೆಸ್ಕೆ ಬರೆದಿದ್ದಾರೆ.

ಎಚ್ಚೆಸ್ಕೆ ಬನುಮಯ್ಯ ಕಾಲೇಜಿನಿಂದ ತಾತ್ವಿಕ ಭಿನ್ನಾಭಿಪ್ರಾಯದ ಕಾರಣದಿಂದ ನಿವೃತ್ತರಾಗಬೇಕಾಯಿತು. ಆದರೆ ಅವರು ಕೂಡಲೇ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ಮಾನವಿಕ ವಿಭಾಗದ ಸಂಪಾದಕರಾಗಿ ನೇಮಕಗೊಂಡರು. ಅವಿರತವಾಗಿ ಅದಕ್ಕೆ ದುಡಿದರು. 1980ರ ಸಮಯದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಕರ್ನಾಟಕದ ಶಾಖೆಗಳಲ್ಲಿದ್ದ ಕನ್ನಡ ಸಂಘಗಳ ಸಮನ್ವಯಸಮಿತಿಯ ಉತ್ಸಾಹಿಗಳು ಹೊರತರಬಯಸಿದ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆಯ ಸಂಪಾದಕತ್ವದ ಹೊಣೆಯನ್ನು ಹೊರಬೇಕೆಂದು ಕೋರಿದರು. ಎಚ್ಚೆಸ್ಕೆ ಉತ್ಸಾಹವನ್ನೇನೋ ಮೆಚ್ಚಿದರು. ಆದರೆ ಲೇಖಕರ ಅಭಾವವನ್ನು ಮುಂದಿಟ್ಟು ಒಂದು ಸಲಹೆ ನೀಡಿದರು. ನಿಯತವಾಗಿ ಉತ್ಸಾಹಿಗಳು ಲೇಖನಗಳನ್ನು ಬರೆದು ತಂದು ಅವನ್ನು ಒಟ್ಟಿಗೆ ಚರ್ಚಿಸಿ ನಂತರ ಅವುಗಳನ್ನು ತಿದ್ದಿ ಪ್ರಕಟಣೆಗೆ ಸಿದ್ಧಪಡಿಸಬೇಕು. ಇದಕ್ಕೆ ಎದುರು ಕಕ್ಷಿಗಳು ಒಪ್ಪಿದರು. ಈ ಚರ್ಚೆಗೆ ಬ್ಯಾಂಕಿಂಗ್ ಕಮ್ಮಟ ಎಂದು ನಾಮಕರಣವಾಯಿತು. ಪ್ರತಿ ಬ್ಯಾಂಕಿಂಗ್ ಕಮ್ಮಟವೂ ನಾಲ್ಕರಿಂದ ಏಳು ದಿನಗಳ ಕಾಲ ಅವಧಿಯಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದವು. ಸೊಲ್ಲಾಪುರ, ಕಾಸರಗೋಡುಗಳಂತಹ ಗಡಿನಾಡು ಪ್ರದೇಶಗಳಲ್ಲಿಯೂ ಇವು ನಡೆದವು. ಬ್ಯಾಂಕಿಂಗ್ ಲೇಖಕರ ಒಂದು ಪಡೆಯೇ ಇದರಿಂದ ಸೃಷ್ಟಿಯಾಯಿತು. ಮೈಸೂರಿನಲ್ಲಿ ನಡೆದ ಇಪ್ಪತ್ತೈದನೆಯ ಕಮ್ಮಟ ಅನೇಕ ರೀತಿಯಲ್ಲಿ ಸ್ಮರಣೀಯವಾಯಿತು. ಇದು ಎಚ್ಚೆಸ್ಕೆಯವರ

ವಿಶಿಷ್ಟ ಕೊಡುಗೆ. ಈ ಅವಧಿಯಲ್ಲಿ ಅವರು ಸಮನ್ವಯ ಸಮಿತಿ ಹೊರತಂದ ಬ್ಯಾಂಕಿಂಗ್ ನಿಘಂಟನ್ನು ಸಂಪಾದಿಸಿದರು.

1981ರಲ್ಲಿ ಸುರಹೊನ್ನೆ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, 1996ರಲ್ಲಿ ಮಾಧ್ಯಮ ಅಕಾಡೆಮಿಯ ವಿಶೇಷ ಪ್ರಶಸ್ತಿಗಳು ಎಚ್ಚೆಸ್ಕೆಯವರಿಗೆ ಸಂದಿವೆ. ಅವರ ಅಭಿಮಾನಿಗಳು ಅವರಿಗೆ ಸಮದರ್ಶಿ ಎಂಬ ಅಭಿನಂದನಾ ಗ್ರಂಥವನ್ನು ಪ್ರಕಟಿಸಿ ಪುರಸ್ಕರಿಸಿದ್ದಾರೆ. ಅನಾರೋಗ್ಯದಿಂದಾಗಿ 2008 ಆಗಸ್ಟ್ 30 ರಂದು ನಿಧನರಾದರು. (ಜಿ.ಎನ್.ಎಸ್)

**ಕೃಷ್ಣಸ್ವಾಮಿ, ಎ.ಡಿ. :** 1904–1970. ಭಾರತೀಯ ಪುರಾತತ್ತ್ವ ಶಾಸ್ತ್ರಜ್ಞ. ಮದ್ರಾಸಿನಲ್ಲಿ ಜನಿಸಿ, ಅಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಭೂವಿಜ್ಞಾನದಲ್ಲಿ ಎಂ.ಎ. ಪದವೀಧರರಾಗಿ, ಲಂಡನಿನ ಪುರಾತತ್ತ್ವ ಶಾಲೆಯಲ್ಲಿ ಪುರಾತತ್ತ್ವ ವಿಭಾಗದಲ್ಲಿ ಉನ್ನತ ವ್ಯಾಸಂಗ ನಡೆಸಿ ಭಾರತಕ್ಕೆ ಹಿಂದಿರುಗಿದರು. ಅದುವರೆಗೂ ಉಪೇಕ್ಷಿತವಾಗಿದ್ದ ಭಾರತೀಯ ಶಿಲಾಯುಗ ಮತ್ತು ಬೃಹತ್‌ಶಿಲಾ ಸಮಾಧಿ ಸಂಸ್ಕೃತಿಗಳ ಬಗ್ಗೆ ವ್ಯವಸ್ಥಿತ ಅಧ್ಯಯನವನ್ನು ಆರಂಭಿಸಿದ್ದು ಇವರ ಮಹತ್ತ್ವದ ಕಾರ್ಯ. ಮದ್ರಾಸಿನ ಪರಿಸರದಲ್ಲಿರುವ ಕೋರ್ತಲೈಯಾರ್ ನದೀಕಣಿವೆಯಲ್ಲಿ ಇವರು ಮೊಟ್ಟಮೊದಲು ಸಂಶೋಧನ ಕಾರ್ಯನಿರತರಾಗಿದ್ದರು.

ಅನಂತರ 1944ರಲ್ಲಿ ಭಾರತದ ಪುರಾತತ್ತ್ವ ಇಲಾಖೆಯಲ್ಲಿ ಸಂಶೋಧಕರಾಗಿ ಸೇರಿ, 1963ರಲ್ಲಿ ಅದೇ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಜನರಲ್ ಆದರು. ಈ ಹುದ್ದೆಯಿಂದ ನಿವೃತ್ತರಾಗುವವರೆಗೂ ಇವರು ತಮಿಳುನಾಡಿನ ಬೃಹತ್ ಶಿಲಾಯುಗ ಸಂಸ್ಕೃತಿಗಳು, ಭಾರತದ ನವಶಿಲಾಯುಗ ಸಂಸ್ಕೃತಿಗಳು, ಕರ್ನಾಟಕದ ಶಿಲಾಕೆತ್ತನೆಗಳು ಮತ್ತು ರೇಖಾಚಿತ್ರಗಳು, ಭಾರತದ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗಳು ಮುಂತಾದ ವಿಷಯಗಳ ಮೇಲೆ ವಿಶೇಷ ಅಧ್ಯಯನ ನಡೆಸಿದರು. ಇದರ ಫಲವಾಗಿ ಪ್ರಿ–ಹಿಸ್ಟಾರಿಕ್ ಮ್ಯಾನ್ ರೌಂಡ್ ಮದ್ರಾಸ್ (1938), ಸ್ಟೋನ್ ಏಜ್ ಇಂಡಿಯ (1947), ಮೆಗಾಲಿಥಿಕ್ ಟೈಪ್ಸ್ ಆಫ್ ಸೌತ್ ಇಂಡಿಯ (1949), ಲಿಥಿಕ್ ಟೂಲ್ ಇಂಡಸ್ಟ್ರೀಸ್ ಆಫ್ ಸಿಂಗ್ರೌಲಿ (1951), ಪ್ರೋಗ್ರೆಸ್ ಇನ್ ಪ್ರಿ–ಹಿಸ್ಟೋರಿ (1952), ನಿಯೊಲಿಥಿಕ್ ಪ್ಯಾಟರ್ನ್ ಆಫ್ ಇಂಡಿಯ (1962) ಎಂಬ ಲೇಖನಗಳು ಪ್ರಕಟವಾಗಿವೆ. ಭೂವಿಜ್ಞಾನ ರೀತಿಯಾಗಿ ಒಂದು ಪ್ರದೇಶದ ನದೀಮಟ್ಟಗಳ ಕಾಲ ನಿರ್ಣಯ, ನದೀಮಟ್ಟಗಳಲ್ಲಿ ಕಾಣಬರುವ ಶಿಲಾಯುಗ ಸಂಸ್ಕೃತಿಗಳ ವಿಶ್ಲೇಷಣಾತ್ಮಕ ಪರಿಶೀಲನೆ– ಇಂಥ



ಕಾರ್ಯಗಳನ್ನು ಭಾರತದ ಪ್ರಾಗಿತಿಹಾಸ ಸಂಶೋಧನೆಯ ಅಂಗವಾಗಿ ಮೊಟ್ಟಮೊದಲು ಕೈಗೊಂಡವರು ಕೃಷ್ಣಸ್ವಾಮಿ. ಕೋರ್ತಲೈಯಾರ್ ನದೀಕಣಿವೆಯಲ್ಲಿ, ಇವರಿಗೆ ಮುಂಚೆ ಈ ದಿಕ್ಕಿನಲ್ಲಿ ಸ್ವಲ್ಪಮಟ್ಟಿಗೆ ಸಂಘಟಿತ ಕಾರ್ಯ ನಡೆದಿದ್ದುದು 1935ರಲ್ಲಿ–ಯೇಲ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಿಂದ. ಶಿಲಾಯುಗ ಭಾರತದ ಬಗ್ಗೆ ಅಸ್ಪಷ್ಟವಾಗಿ ಹಂಚಿಹೋಗಿದ್ದ ಮಾಹಿತಿಗಳನ್ನು ಒಟ್ಟುಗೂಡಿಸಿ ವೈಜ್ಞಾನಿಕವಾಗಿ ಪರಿಶೀಲಿಸಿ, ಭಾರತದ ಇತಿಹಾಸಪೂರ್ವ ಸಂಸ್ಕೃತಿಗಳ ಬಗ್ಗೆ ಒಂದು ವ್ಯವಸ್ಥಿತ ಚಿತ್ರವನ್ನು ಪ್ರಥಮ ಬಾರಿಗೆ ಒದಗಿಸಿದವರು ಕೃಷ್ಣಸ್ವಾಮಿಯವರು. ಈ ವಿಷಯದ ಅಭ್ಯಾಸಿಗಳಿಗೆ ಇಂದಿಗೂ ಇದು ಮುಖ್ಯ ಆಧಾರ ಮತ್ತು ಮಾದರಿ ಲೇಖನವಾಗಿದೆ. ಅನಂತರ 1952ರವರೆಗೆ ನಡೆದ ಪ್ರಾಗೈತಿಹಾಸಿಕ ಸಂಶೋಧನೆಗಳನ್ನೆಲ್ಲ ಕ್ರೋಢೀಕರಿಸಿ ಈ ಅಧ್ಯಯನದ ವಿಹಂಗಮ ನೋಟವನ್ನು ಒದಗಿಸಿರುವ 'ಪ್ರೋಗ್ರೆಸ್ ಇನ್ ಪ್ರಿ–ಹಿಸ್ಟೋರಿ' ಇವರ ಇನ್ನೊಂದು ಅಮೂಲ್ಯಲೇಖನ. ಭಾರತದ ಬೃಹತ್ ಶಿಲಾಸಮಾಧಿ ಸಂಸ್ಕೃತಿಗಳ ಅಧ್ಯಯನ ಕ್ಷೇತ್ರದಲ್ಲಿ ನಿಖರ ಪರಿಭಾಷೆಯಾಗಲಿ, ಖಚಿತ ಅಭಿಪ್ರಾಯಗಳಾಗಲಿ ಇಲ್ಲದಿದ್ದ ಸ್ಥಿತಿಯಲ್ಲಿ ತಮಿಳುನಾಡು ಮತ್ತು ಕೇರಳದ ಕೆಲವು ಪ್ರದೇಶಗಳಲ್ಲಿ ಈ ಸಂಸ್ಕೃತಿಗಳ ಅವಶೇಷಗಳನ್ನು ವ್ಯಾಪಕವಾಗಿ ಅಭ್ಯಸಿಸಿ ಇವರು ಮೊದಲ ಬಾರಿಗೆ ಒಂದು ವೈಜ್ಞಾನಿಕ ವರ್ಗೀಕರಣವನ್ನು ಒದಗಿಸಿದರು. ಇವರ ಇತರ ಲೇಖನಗಳೂ ಹೀಗೆಯೇ ಹೊಸ ಹೆಜ್ಜೆಗಳು. ಇವರ ಲೇಖನಗಳು ಸಂಖ್ಯೆಯಲ್ಲಿ ಅಲ್ಪವಾದರೂ ಒಂದೊಂದು ಭಾರತೀಯ ಪ್ರಾಗಿತಿಹಾಸದ ಅಧ್ಯಯನದಲ್ಲಿ ಮೈಲಿಗಲ್ಲುಗಳೆಂದು ಪರಿಗಣಿತವಾಗಿವೆ. ಕೃಷ್ಣಸ್ವಾಮಿ ತಮ್ಮ ಅಧಿಕಾರಾವಧಿಯಲ್ಲಿ ಭಾರತದ ಅನೇಕ ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವುದರಲ್ಲಿ ಆಸಕ್ತಿಯನ್ನೂ ಸಕ್ರಿಯಪಾತ್ರವನ್ನೂ ವಹಿಸಿದ್ದರು. ನಿವೃತ್ತಿಯ ಅನಂತರ ಕಲ್ಕತ್ತದ ಭಾರತೀಯ ವಸ್ತುಸಂಗ್ರಹಾಲಯ ಮತ್ತು ಹೈದರಾಬಾದಿನ ಸಾಲಾರ್ಜಂಗ್ ವಸ್ತು ಸಂಗ್ರಹಾಲಯಗಳ ನಿರ್ದೇಶಕರಾಗಿದ್ದು, ಅವನ್ನು ಆಕರ್ಷಕವಾಗಿ ಪುನರ್ವ್ಯವಸ್ಥೆಗೊಳಿಸಲು ಕಾರಣರಾದರು. ತರುಣಪೀಳಿಗೆಯ ಅನೇಕರಿಗೆ ಭಾರತೀಯ ಪುರಾತತ್ತ್ವದಲ್ಲಿ ಯೋಗ್ಯ ತರಬೇತು ನೀಡಿ, ಆ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದು ಕೃಷ್ಣಸ್ವಾಮಿಯವರು ಮಾಡಿದ ಇನ್ನೊಂದು ದೊಡ್ಡ ಕೆಲಸ. (ಎಸ್.ಎನ್.)

**ಕೃಷ್ಣಾಚಾರ್ಯ, ಗರಣಿ :** 1857–1918. ಹೆಸರಾಂತ ವಿದ್ವಾಂಸರು. ಸಂಸ್ಕೃತ ಕನ್ನಡಗಳೆರಡರಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಕೃಷ್ಣಾಚಾರ್ಯ ತಿಮ್ಮಣ್ಣಾಚಾರ್ಯ ಗರಣಿ ಎಂಬುದು ಇವರ ಪೂರ್ತಿ ಹೆಸರು. ಹುಟ್ಟಿದ್ದು ಗರಣಿಯಲ್ಲಿ. ಕೆಲವು ಕಾಲ ಮದ್ರಾಸಿನ ಕ್ರಿಶ್ಚನ್ ಕಾಲೇಜಿನಲ್ಲೂ ಅನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲೂ ಕನ್ನಡ ಪಂಡಿತರಾಗಿ ಕೆಲಸ ಮಾಡಿದರು. ಇವರು ಖ್ಯಾತ ವ್ಯಾಕರಣ ಪಂಡಿತರು. ಮೈಸೂರು ಮಹಾರಾಜರ ಆಸ್ಥಾನವಿದ್ವಾಂಸರೆಂಬ ಗೌರವಕ್ಕಿವರು ಪಾತ್ರರಾಗಿದ್ದರು. ಧರ್ಮ, ವೈದ್ಯಶಾಸ್ತ್ರ, ವನಸ್ಪತಿಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ, ಕಲೆ ಇತ್ಯಾದಿ ವಿಷಯಗಳನ್ನು ಕುರಿತು ಇವರು ರಚಿಸಿರುವ ಗ್ರಂಥಗಳಲ್ಲಿ ಕೆಲವು ಹೀಗಿವೆ:

ಆಯುರಾರೋಗ್ಯ ಸಂಗ್ರಹ; ಕರ್ಣಾಟಕ ಭಾಷಾ ವಿಷಯವು (1891); ಕರ್ಣಾಟಕ ಭಾಷಾ ಸಮೀಕರಣೋಪನ್ಯಾಸ; ಕಾದಂಬರೀ ಕಥೆ(ಬಾಣಕವಿಯ ಸಂಸ್ಕೃತ ಗ್ರಂಥದ ಕಥಾಸಾರ, 1899); ಗಜೇಂದ್ರಮೋಕ್ಷ ಟೀಕೆ; ದೀರ್ಘಾಯುಸೂತ್ರ (1909); ನಾಗಾನಂದ ನಾಟಕಂ (ಸಂಸ್ಕೃತ ನಾಟಕದ ಕಥಾಸಾರ, 1888); ನೀತಿಶತಕ; ಭಗವತ್ಪ್ರಾರ್ಥನೆ–ಎರಡು ಭಾಗಗಳು (1911); ಮೃಚ್ಛಕಟಿಕ ಪ್ರಕರಣಂ (1890); ವಿಶೇಷ ಧರ್ಮ ಪ್ರಶ್ನೆ; ಸತ್ಕಥಾ (1912); ಸದ್ವೃತ್ತಾನುಷ್ಠಾನ (1931); ಸನಾತನಾರ್ಯಧರ್ಮಸಾರ–2 ಭಾಗಗಳು; ಸ್ಮೃತಿಧರ್ಮ ಪದ್ಧತಿ; ಸಂಸ್ಕಾರ ವಿಶೇಷ ಪ್ರಶ್ನೆ (1912); ಸಾಮಾನ್ಯ ಕರ್ಮ ಪ್ರಶ್ನೆ (1912); ಹವ್ಯಪಾಕ ಪದ್ಧತಿ (1911)– ಇವು ಕನ್ನಡ ಗ್ರಂಥಗಳು. ಸಂಸ್ಕೃತದಲ್ಲಿ ಧಾತುರೂಪಾವಳಿ, ಶಬ್ದ ರತ್ನಾವಳಿ ಇತ್ಯಾದಿ ಗ್ರಂಥಗಳನ್ನಿವರು ರಚಿಸಿದ್ದಾರೆ. (ಜಿ.ಎಸ್.ಪಿ.ಎಂ.)

**ಕೃಷ್ಣಾನಂದ, ಕಾಮತ:** 1934–2002. ವಿಜ್ಞಾನಿ, ಲೇಖಕ, ಛಾಯಾಗ್ರಾಹಕ, ಕಲಾವಿದ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ 1934 ಸೆಪ್ಟೆಂಬರ್ 29ರಂದು ಹುಟ್ಟಿದರು. ತಂದೆ ಲಕ್ಷ್ಮಣ ಕಾಮತ, ತಾಯಿ ರಮಾಬಾಯಿ. ಹೊನ್ನಾವರದ ನ್ಯೂ ಇಂಗ್ಲಿಷ್ ಹೈಸ್ಕೂಲಿನಲ್ಲಿ ಓದಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವಿಜ್ಞಾನ ಪದವಿ ಪಡೆದು, ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವೀಧರರಾಗಿ ನ್ಯೂ ಯಾರ್ಕ್‌ನ ಸ್ಟೇಟ್ ಯೂನಿವರ್ಸಿಟಿಯಲ್ಲಿ ಕೀಟವಿಜ್ಞಾನ (ಎಂಟಿಮಾಲಾಜಿ) ಕುರಿತು ಸಂಶೋಧನೆ ಮಾಡಿ ಡಾಕ್ಟೊರೇಟ್ ಪಡೆದರು. ಕೆಲಕಾಲ ರಾಜಸ್ಥಾನದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು ಅನಂತರ ಬೆಂಗಳೂರಿನಲ್ಲಿ ನೆಲಸಿದರು. ಛಾಯಾಗ್ರಹಣ, ಸಾಹಿತ್ಯ ರಚನೆ, ಚಿತ್ರಕಲೆ, ಪ್ರವಾಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರಿಗೆ ಕೊಂಕಣಿ, ಇಂಗ್ಲಿಷ್, ಮರಾಠಿ, ಹಿಂದಿ ಭಾಷೆಗಳ ಮೇಲೂ ಪ್ರಭುತ್ವವಿತ್ತು. ಇಂಗ್ಲಿಷ್, ಕೊಂಕಣಿ ಭಾಷೆಗಳಲ್ಲೂ ಇವರು ಲೇಖನ ಪುಸ್ತಕಗಳನ್ನು ಬರೆದಿದ್ದಾರೆ.

ಕೀಟವಿಜ್ಞಾನದ ಮತ್ತು ಪರಿಸರ ಅಧ್ಯಯನದ ಪಂಡಿತರಾಗಿದ್ದ ಕಾಮತರು ಕನ್ನಡ ಸಾಹಿತ್ಯದಲ್ಲೂ ಆಸಕ್ತಿ ವಹಿಸಿದ್ದರು. ನಾನು ಅಮೇರಿಕೆಗೆ ಹೋಗಿದ್ದೆ (1969) ಎಂಬುದು ಇವರ ಪ್ರಸಿದ್ಧ ಪ್ರವಾಸ ಸಾಹಿತ್ಯ ಕೃತಿ. ವಂಗದರ್ಶನ (1972), ನಾ ರಾಜಸ್ಥಾನದಲ್ಲಿ (1974), ಕಲಾರಂಗ (1982), ಬಸ್ತರ ಪ್ರವಾಸ (1991), ಮಧ್ಯಪ್ರದೇಶದ ಮಡಿಲಲ್ಲಿ (1993), ಪ್ರವಾಸಿಯ ಪ್ರಬಂಧಗಳು (2000) –ಇವು ಇತರ ಕೃತಿಗಳು. ಇವರು ಭಗ್ನಸ್ವಪ್ನ ಎಂಬ ಕಾದಂಬರಿಯನ್ನು ಬರೆದಿದ್ದಾರೆ. ತಮ್ಮ ಪತ್ನಿ ಜ್ಯೋತ್ಸ್ನಾ ಕಾಮತರಿಗೆ ಬರೆದ ಪತ್ರಗಳು ಪ್ರೇಯಸಿಗೆ ಪತ್ರಗಳು ಎಂಬ ಹೆಸರಿನಲ್ಲಿ ಪ್ರಕಟವಾಗಿವೆ.

ಪ್ರಾಣಿವಿಜ್ಞಾನ ಮತ್ತು ಸಸ್ಯವಿಜ್ಞಾನ ಕುರಿತು ಇವರು ಪ್ರಾಣಿಪರಿಸರ (1975), ಪಶುಪಕ್ಷಿ ಪ್ರಪಂಚ (1990), ಸಸ್ಯ ಪ್ರಪಂಚ (1992), ಸಸ್ಯ ಪರಿಸರ (1994), ಕಾಗೆಯ ಕಾಯಕ (1999), ಇರುವೆಯ ಇರುವು (1999), ಸರ್ಪಸಂಕುಲ (1999), ಕೀಟ ಜಗತ್ತು (1992) ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಕರ್ನಾಟಕದ ಕಾವಿಕಲೆಯನ್ನು ಕುರಿತು ಅಧ್ಯಯನ ಮಾಡಿ ಕಾವಿಕಲೆ ಎಂಬ ಪುಸ್ತಕವನ್ನು ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ರಚಿಸಿದ್ದಾರೆ. ಇವರು ಬರೆದ ಕೊನೆಯ ಕೃತಿ ಮರುಪಯಣ (2001). ಇವರ ಕೃತಿಗಳಲ್ಲಿ ನವುರಾದ ಹಾಸ್ಯವನ್ನೂ ಸೂಕ್ಷ್ಮಾವಲೋಕನ ದೃಷ್ಟಿಯನ್ನೂ ಗುರುತಿಸಬಹುದು. ಹೀಗಾಗಿ ಇವು ಓದುಗರ ಮೆಚ್ಚುಗೆ ಗಳಿಸಿವೆ.

ನಾನು ಅಮೇರಿಕೆಗೆ ಹೋಗಿದ್ದೆ, ಪ್ರಾಣಿ ಪರಿಸರ, ಬಸ್ತರ ಪ್ರವಾಸ ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಬಹುಮಾನಗಳೂ ಸಾಹಿತ್ಯ ಯಾತ್ರೆ ಎಂಬ ಕೃತಿಗೆ 1994ರಲ್ಲಿ ಗೌರೀಶ ಕಾಯ್ಕಿಣಿ ಪ್ರತಿಷ್ಠಾನದ ಪ್ರಶಸ್ತಿಯೂ ಲಭಿಸಿವೆ. ಇವರು 2002 ಫೆಬ್ರವರಿ 20ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. (ಎಸ್.ಎಂ.ಕೆ.)

**ಕೃಷ್ಣಾ ನದಿ :** ದಕ್ಷಿಣ ಭಾರತದ ಒಂದು ದೊಡ್ಡ ನದಿ. ಗೋದಾವರಿ ಕಾವೇರಿಗಳಂತೆ ಇದೂ ಭಾರತದ ಪರ್ಯಾಯದ್ವೀಪಭಾಗದಲ್ಲಿ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿದು ಬಂಗಾಲ ಕೊಲ್ಲಿಯನ್ನು ಸೇರುತ್ತದೆ. ಉದ್ದದಲ್ಲಿ ಇದು ಕಾವೇರಿಗಿಂತ ದೊಡ್ಡದು; ಗೋದಾವರಿಗಿಂತ ಚಿಕ್ಕದು. ಆದರೆ ಎರಡು ದೊಡ್ಡ ಉಪನದಿಗಳಾದ ಭೀಮಾ ಮತ್ತು ತುಂಗಭದ್ರೆಯನ್ನೂ ಸೇರಿಸಿಕೊಂಡರೆ ಇದರ ಜಲಾನಯನ ಭೂಮಿಯ ವಿಸ್ತಾರ ಉಳಿದೆರಡು ನದಿಗಳ ಜಲಾನಯನ ಭೂಮಿಗಳಿಗಿಂತ ಹೆಚ್ಚು. ಕೃಷ್ಣಾ ನದಿಯ ಉದ್ದ 1,400 ಕಿಮೀ. ಜಲೋತ್ಸಾರಣ ಪ್ರದೇಶ 2,59,000 ಚ.ಕಿಮೀ. (ಆರ್.ಪಿ.ಎಸ್.)

ಕೃಷ್ಣಾ ನದಿ ಹುಟ್ಟುವುದು ಪಶ್ಚಿಮ ಘಟ್ಟದಲ್ಲಿ, ಮಹಾಬಲೇಶ್ವರ ಗಿರಿಧಾಮದ ಉತ್ತರದಲ್ಲಿ, ಸಮುದ್ರಮಟ್ಟದಿಂದ ಸುಮಾರು 1,338 ಮೀ ಎತ್ತರದಲ್ಲಿ. ಇದರ ಉಗಮ ಸ್ಥಾನಕ್ಕೂ ಅರಬ್ಬೀ ಸಮುದ್ರಕ್ಕೂ ಕೇವಲ 64 ಕಿಮೀ ದೂರ. ಹುಟ್ಟಿದೆಡೆಯಿಂದ ಕುರುಂದವಾಡದವರೆಗೆ ಇದು ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಬೆಟ್ಟಗಳ ಎಡೆಯಲ್ಲಿ ವಂಕಿಯಂತೆ ವೇಗವಾಗಿ ನುಸುಳುವ ನದಿಗೆ ಸಾತಾರಾ ಜಿಲ್ಲೆಯ ಕರ್ಹಾಡ್ ಬಳಿ ಬಲಗಡೆಯಿಂದ ಬಂದು ಸೇರುವ ನದಿ ಕೊಯ್ನಾ. ಇದು ಮಹಾಬಲೇಶ್ವರಕ್ಕೆ ಪಶ್ಚಿಮದಲ್ಲಿ ಹುಟ್ಟುತ್ತದೆ.  ಕೃಷ್ಣೆಯಲ್ಲಿ ಸಂಗಮಿಸುವ ಇನ್ನೊಂದು ನದಿ ವರ್ಣಾ. ಇದು ಕೃಷ್ಣಾ ನದಿಯನ್ನು ಕೂಡುವುದು ಸಾಂಗ್ಲಿಯ ಬಳಿ. ಅನಂತರ ಸಿಕ್ಕುವ ಸ್ಥಳವೇ ಕುರುಂದವಾಡ. ಇಲ್ಲಿ ಕೃಷ್ಣೆಯನ್ನು ಸೇರುವ ನದಿ ಪಂಚಗಂಗಾ. ಇದೂ ಕೃಷ್ಣೆಯ ಬಲಗಡೆಯಿಂದ ಹರಿದು ಬರುತ್ತದೆ.

ಕುರುಂದವಾಡಿಯ ಬಳಿಯಲ್ಲಿ ನದಿಯ ದಿಕ್ಕು ಬದಲಾಗುತ್ತದೆ. ಅಲ್ಲಿಂದ ಮುಂದಕ್ಕೆ ಅದರದು ಪೂರ್ವಾಭಿಗಮನ. ಸ್ವಲ್ಪ ದೂರ ಕರ್ನಾಟಕದ ಗಡಿಗೆ ಸೋಕಿ ಹರಿದು ಆಮೇಲೆ ಈ ರಾಜ್ಯವನ್ನು ಪ್ರವೇಶಿಸಿ ಬೆಳಗಾಂವಿ, ಬಿಜಾಪುರ ಜಿಲ್ಲೆಗಳಲ್ಲಿ ಕ್ರಮಿಸುತ್ತದೆ. ಈ ಘಟ್ಟದಲ್ಲಿ ಕೃಷ್ಣೆಯನ್ನು ಸೇರುವ ನದಿಗಳು ಘಟಪ್ರಭಾ ಮತ್ತು ಮಲಪ್ರಭಾ. ಇವೂ ಪಶ್ಚಿಮ ಘಟ್ಟದಲ್ಲಿ ಜನಿಸುವ ನದಿಗಳೇ. ಇವು ಸಂಗಮಿಸುವುದೂ ಕೃಷ್ಣೆಯ ಬಲಗಡೆಯಲ್ಲೇ.

ಘಟ್ಟ ಸೋಪಾನವನ್ನಿಳಿಯುವಾಗ ನದಿ ಬಹಳ ವೇಗವಾಗಿ ಹರಿಯುತ್ತದೆ. ಸಾತಾರಾ ಜಿಲ್ಲೆಯಲ್ಲೂ ಕರ್ನಾಟಕದಲ್ಲೂ ಇದರ ನೀರು ಬೇಸಾಯಕ್ಕೆ ಸ್ವಲ್ಪ ಮಟ್ಟಿಗೆ ಒದಗಿ ಬಂದಿದೆ. ಬೆಳಗಾಂವಿ ಬಿಜಾಪುರ ಜಿಲ್ಲೆಗಳಲ್ಲಿ ನದಿಯ ದಂಡೆಗಳು ಎತ್ತರವಾಗಿವೆ. ನದಿಯಲ್ಲಿ ಹಲವಾರು ನಡುಗಡ್ಡೆಗಳೂ ಉಂಟು.

ಬಿಜಾಪುರ ಜಿಲ್ಲೆಯನ್ನು ದಾಟಿ ರಾಯಚೂರು ಜಿಲ್ಲೆಯ ಉತ್ತರ ಸೆರಗಿನಲ್ಲಿ ಜಾರುವಾಗ ನದಿಯ ಔನ್ನತ್ಯ ಇನ್ನಷ್ಟು ನಷ್ಟವಾಗುತ್ತದೆ. 4.8 ಕಿಮೀ. ದೂರದಲ್ಲಿ 122 ಮೀಟರುಗಳಷ್ಟು ಕೆಳಕ್ಕೆ ಇಳಿಯುವ ನದಿಯ ವೇಗ ಬಲು ಅಧಿಕ. ಬಂಡೆಗಳ ಮೇಲೆ ಜಿಗಿದು ಹರಿಯುವ ನದಿಯ ಅಬ್ಬರ ವಿಪರೀತ. ಅದು ತುಂತುರಿನ ರಾಶಿಯನ್ನು ಸಿಂಪಡಿಸುತ್ತ ಸಾಗುತ್ತದೆ.

ಕೃಷ್ಣಾ ನದಿ ಕರ್ನಾಟಕ ಸೀಮೋಲ್ಲಂಘನೆ ಮಾಡಿ ಆಂಧ್ರಪ್ರದೇಶವನ್ನು ಪ್ರವೇಶಿಸುವ ಎಡೆಯಲ್ಲಿ ಅದರ ಎಡದಂಡೆಯ ಕಡೆಯಿಂದ ಬಂದು ಸೇರುವ ಉಪನದಿ ಭೀಮ, ಇದೂ ಮಹಾರಾಷ್ಟ್ರದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಹರಿದು ಬರುತ್ತದೆ. ನೀರಾ, ಘೋದ್ ಮತ್ತು ಸೀಮಾ– ಇವು ಭೀಮಾದ ಉಪನದಿಗಳು.

ಆಂಧ್ರಪ್ರದೇಶದಲ್ಲಿ, ಕರ್ನೂಲಿಗೆ ಈಶಾನ್ಯದಲ್ಲಿ, ಕೃಷ್ಣಾ ನದಿಯೊಂದಿಗೆ ಸೇರುವ ಮುಖ್ಯ ನದಿ ತುಂಗಭದ್ರಾ. ಕೃಷ್ಣಾ–ತುಂಗಭದ್ರಾ ಸಂಗಮದಿಂದಾಚೆಗೆ ಅದು ಕರ್ನೂಲು ಮತ್ತು ಗುಂಟೂರು ಜಿಲ್ಲೆಗಳ ಗಡಿಯಲ್ಲೇ ಹರಿಯುತ್ತದೆ. ಇಲ್ಲಿ ಅದರ ಪಾತ್ರ ಬಲು ಆಳ; ಬಲು ಕಡಿದು. ನಲ್ಲಮಲೆ ಬೆಟ್ಟಗಳ ನಡುವೆ ಜಿಗಿದು ಈಶಾನ್ಯಾಭಿಮುಖವಾಗಿ ಹರಿಯುವ ಕೃಷ್ಣಾನದಿಯ ಕೊಟ್ಟ ಕೊನೆಯ ಉಪನದಿ ಮೂಸಿ. ಈ ನದಿ ನಲ್ಗೊಂಡದ ವಜೀರಾಬಾದ್ ಬಳಿಯಲ್ಲಿ ಕೃಷ್ಣಾನದಿಯನ್ನು ಕೂಡುತ್ತದೆ.

ಪೂರ್ವಘಟ್ಟಗಳ ಪ್ರದೇಶದಲ್ಲಿ ನದಿಯ ದಿಕ್ಕು ಮತ್ತೆ ಬದಲಾಗುತ್ತದೆ. ಈಶಾನ್ಯದ ಕಡಗೆ ಹರಿಯುತ್ತಿದ್ದ ನದಿ ಆಗ್ನೇಯದ ಕಡೆಗೆ ಹರಿಯಲಾರಂಭಿಸುತ್ತದೆ. ಕೃಷ್ಣಾ ಜಿಲ್ಲೆಯಲ್ಲಿ ಅದರ ಗತಿ ಬಲು ಮಂದ. ಅದು ತನ್ನ ಪ್ರವಾಹದೊಂದಿಗೆ ಹೊತ್ತು ತರುವ ಮಣ್ಣು ಅಗಾಧ. ಪ್ರವಾಹ ಕಾಲದಲ್ಲಿ ದಿನ ಒಂದಕ್ಕೆ ಸು. 7.50 ಚಕಿಮೀ ಅಗಲ ಮತ್ತು 30 ಸೆಂ.ಮೀ. ದಪ್ಪ ಆಗುವಷ್ಟು ಮಣ್ಣನ್ನು ತಂದು ಗುಡ್ಡೆ ಹಾಕುತ್ತದೆಂದು ಅಂದಾಜು ಮಾಡಲಾಗಿದೆ. ಕೃಷ್ಣಾ ನದಿಯ ಮುಖಜ ಭೂಮಿ ಸಮುದ್ರದೊಳಕ್ಕೆ ಚಾಚಿಕೊಂಡಿದೆ. ವಿಜಯವಾಡವೇ ಈ ಭೂಮಿಯ ಶಿರಃಪ್ರದೇಶ. ಇಲ್ಲೊಂದು ಆಣೆಕಟ್ಟನ್ನು ಕಟ್ಟಲಾಗಿದೆ. ಕರಾವಳಿ ರೈಲ್ವೆ ಸೇತುವೆ ಇರುವುದು ಈ ಆಣೆಕಟ್ಟಿನ ಕೆಳಗಡೆಯಲ್ಲಿ. ಆಣೆಕಟ್ಟಿನ ಮೇಲ್ಗಡೆಯ ನದೀಭಾಗ ನೌಕಾಸಂಚಾರಕ್ಕೆ ಯೋಗ್ಯವಾಗಿಲ್ಲ. ವಿಜಯವಾಡದಿಂದ ಮುಂದಕ್ಕೆ ನದಿ ಹಲವು ಕವಲುಗಳಾಗಿ ಒಡೆಯುತ್ತದೆ. ಮಚಲಿಪಟ್ಟಣ ಇರುವುದು ಉತ್ತರದ ಕವಲು ಸಮುದ್ರವನ್ನು ಸೇರುವೆಡೆಯಲ್ಲಿ.

ಕೃಷ್ಣಾ ನದಿಯ ಮುಖಜ ಭೂಮಿಯ ಕವಲುಗಳೂ ಅವುಗಳ ನಡುವೆ ಹರಿಯುವ ನೀರಾವರಿ ಕಾಲುವೆಗಳೂ ಜಲಮಾರ್ಗಗಳಾಗಿಯೂ ಉಪಯುಕ್ತವಾಗಿವೆ. ಕೃಷ್ಣಾ ಗೋದಾವರಿ ಜಿಲ್ಲೆಗಳ ನಡುವೆ ಇವು ಒಳ್ಳೆಯ ಸಂಪರ್ಕ ಮಾಧ್ಯಮಗಳು.

ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯ ಮೀರ್ಯಾಲ್ಗುಡ ತಾಲ್ಲೂಕಿನಲ್ಲಿ ನಂದಿಕೊಂಡ ಗ್ರಾಮದ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ನಾಗಾರ್ಜುನ ಸಾಗರ ಕಟ್ಟೆಯಲ್ಲಿ 110 ಚ.ಮೈ.ಗಳ ವಿಶಾಲ ಪ್ರದೇಶದಲ್ಲಿ ನೀರು ಶೇಖರವಾಗುತ್ತಿದೆ. ಇದು ಭಾರತದ ಅತ್ಯಂತ ದೊಡ್ಡ, ಪ್ರಪಂಚದಲ್ಲಿ ಮೂರನೆಯ ದೊಡ್ಡ ಮಾನವನಿರ್ಮಿತ ಸಾಗರವಾಗಿದೆ. ಪ್ರಪಂಚದಲ್ಲೇ ಇದು ಅತ್ಯಂತ ಉನ್ನತವಾದ, ಅತಿ ದೊಡ್ಡದಾದ ಕಲ್ಲುಕಟ್ಟಡದ ಕಟ್ಟೆ. ನದಿಯ ಆಚೀಚೆ ದಂಡೆಗಳಲ್ಲಿ ಎರಡು ನೀರಾವರಿ ಕಾಲುವೆಗಳೂ ತಲಾ 50,000 ಕಿವಾ ಸಾಮರ್ಥ್ಯದ 8 ವಿದ್ಯುದುತ್ಪಾದಕ ಘಟಕಗಳೂ ಇರುತ್ತವೆ. ಯೋಜನೆಯ ಮೊದಲ ಹಂತದಲ್ಲಿ ನೀರಾವರಿಗೆ ಒಳಪಟ್ಟ ನೆಲ 20.54 ಲಕ್ಷ ಎಕರೆ. ಕಬ್ಬು, ಹತ್ತಿ, ಮೆಣಸಿನಕಾಯಿ,

ನೆಲಗಡಲೆ, ಮುಸುಕಿನಜೋಳ ಮುಂತಾದ ಬೆಳೆಗಳಿಗೆ ಇದು ಉಪಯುಕ್ತ. ಯೋಜನೆಯ ಮೊದಲ ಹಂತದಲ್ಲಿ ಸುಮಾರು 8 ಲಕ್ಷ ಟನ್ ಆಹಾರ ಧಾನ್ಯ ಬೆಳೆಯಲಾಯಿತು.

ಕರ್ನಾಟಕದಲ್ಲಿ ಬಿಜಾಪುರ ಜಿಲ್ಲೆಯ ಬಾಗೆವಾಡಿ ತಾಲ್ಲೂಕಿನ ಆಲಮಟ್ಟಿಯ ಒಂದು ಕಟ್ಟೆಯನ್ನೂ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ನಾರಾಯಣಪುರದ ಬಳಿ ಇನ್ನೊಂದು ಕಟ್ಟೆಯನ್ನೂ ನಿರ್ಮಿಸುವ ಯೋಜನೆ ಕಾರ್ಯರೂಪಕ್ಕೆ ಬಂದಿದೆ. ಈ ಯೋಜನೆಯಿಂದ ಬಿಜಾಪುರ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ವಿಶಾಲ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಏರ್ಪಟ್ಟಿದೆ.

ರಾಜಮಹೇಂದ್ರದಲ್ಲಿ ಗೋದಾವರಿ ಅಣೆಕಟ್ಟನ್ನು ಕಟ್ಟಿದ ಆರ್ಥರ್ ಕಾಟನನೇ ವಿಜಯವಾಡದಲ್ಲಿ ಕೃಷ್ಣಾ ನದಿಗೆ ಒಂದು ಅಣೆಕಟ್ಟನ್ನು ಕಟ್ಟಿದ್ದಾನೆ. ಅದರ ಎರಡು ದಡಗಳಲ್ಲಿ ಎರಡು ನಾಲೆಗಳಿವೆ. 1852–55ರಲ್ಲಿ ನಿರ್ಮಾಣವಾದ ಈ ಅಣೆಕಟ್ಟನ್ನು 1935ರಲ್ಲಿ ಎತ್ತರಿಸಲಾಯಿತು. 1962ರಲ್ಲಿ ಹೊಸದಾಗಿ ಪ್ರಕಾಶಂ ಬಾರೆಜ್ ಎಂಬ ಹೊಸ ಅಡ್ಡಗಟ್ಟು ಕಟ್ಟಲಾಯಿತು. ಈ ಅಣೆಕಟ್ಟೆಯ ಕಾಲುವೆಗಳಿಂದ ಒಟ್ಟು 12,19,606 ಎಕರೆಗಳಿಗೆ ನೀರಾವರಿ ಸೌಲಭ್ಯ ಒದಗಿದೆ.

ಈ ಕಾಮಗಾರಿಗಳ ಮೇಲೆ ಸರ್ಕಾರ ಮಾಡಿರುವ ಖರ್ಚು ರೂ.2.25 ಕೋಟಿ. ಈ ಕುದುರಿನಲ್ಲಿ ಬೆಳೆಯುವ ಧಾನ್ಯಗಳ ಬೆಲೆ ರೂ. 25 ಕೋಟಿ. ವರ್ಷದಲ್ಲಿ 10 ತಿಂಗಳ ಕಾಲ ದೋಣಿಗಳು ನಾಲೆಯಲ್ಲಿ ಸಂಚರಿಸಿ 2 ಲಕ್ಷ ಜನರನ್ನೂ ರೂ. 35 ಕೋಟಿ ಬೆಲೆಯ ಧಾನ್ಯವನ್ನೂ ರೂ. 2 ಕೋಟಿ ಬೆಲೆಯ ಮರವನ್ನೂ ಸಾಗಿಸುತ್ತದೆ.(ಎಚ್.ಸಿ.ಕೆ.)

ಕೃಷ್ಣಾ ಮೇಲ್ದಂಡೆ ಯೋಜನೆ: ಕರ್ನಾಟಕದ ಉತ್ತರವಲಯದಲ್ಲಿನ ಪ್ರಮುಖ ನೀರಾವರೀ ಯೋಜನೆಗಳಲ್ಲಿ ಒಂದು. ಭಾರತ ಪರ್ಯಾಯದ್ವೀಪದಲ್ಲಿ ಉದ್ದದ ದೃಷ್ಟಿಯಿಂದ ಕೃಷ್ಣಾನದಿಯ ಸ್ಥಾನ ಎರಡನೆಯದು. ಬೆಟ್ಟಗುಡ್ಡಗಳ ಮೂಲಕ ಕೃಷ್ಣಾನದಿಯ ಹರಿವಿನ ಮೊದಲ ಹಂತ. ($150^0$–$250^0$) ವಾರ್ಷಿಕ ಮಳೆ ಸುರಿಯುವುದರಿಂದ ನದಿ ಪುಷ್ಟವಾಗಿ ಮುನ್ನುಗ್ಗುತ್ತದೆ. ಆದರೆ ಇದು ಹರಿಯುವ ಮಟ್ಟಸ ಭೂಮಿಯಲ್ಲಿ (ಕರ್ನಾಟಕ ಮತ್ತು ಆಂಧ್ರ) ಮಳೆ ತೀರ ಕಡಿಮೆ (20"). ಕರ್ನಾಟಕದ ಬಿಜಾಪುರ, ಗುಲ್ಬರ್ಗ ಹಾಗೂ ರಾಯಚೂರು ಜಿಲ್ಲೆಗಳು ಕೃಷ್ಣಾನದಿಯ ಹಾದಿಯಲ್ಲಿದೆ. ಅವು ಛಾಯಾ ಮಳೆ ಪ್ರದೇಶಗಳು–ಬೀಳುವ ಮಳೆ ಕಡಿಮೆ. ಅದೂ ತೀರ ಅಸಮವಾಗಿ ಹರಡಿ ಹೋಗಿದೆ ಇಲ್ಲಿನ ನೆಲ ಬಲು ಫಲವತ್ತಾಗಿದ್ದರೂ ನೀರಿನ ಅಭಾವವೊಂದರಿಂದಲೇ ಇದು ಹಾಳುಗರೆಯುತ್ತ ದಾರಿದ್ರ್ಯದ ಸಂಕೇತವಾಗಿ ನಿಂತಿದೆ. ಇಂಥಲ್ಲಿಗೆ ಕೃಷ್ಣಾ ಮೇಲ್ದಂಡೆ ಯೋಜನೆ, ನೀರನ್ನು ಸರಬರಾಜು ಮಾಡಿ. ಹೊಸ ಹಸುರನ್ನೂ ಆಸೆಯನ್ನೂ ಚಿಗುರಿಸುವ ಉದ್ದೇಶವನ್ನು ಹೊಂದಿದೆ.

ಯೋಜನೆಯ ನಿವೇಶನದ ಆಯ್ಕೆಯನ್ನು ಕುರಿತ ವ್ಯವಹಾರ ಪ್ರಾರಂಭವಾದದ್ದು 1950ರಷ್ಟು ಹಿಂದೆಯೇ. ಮುಂದೆ ಭಾಷಾವಾರು ರಾಜ್ಯಗಳು ರೂಪುಗೊಂಡ (1956) ತರುವಾಯ ಕರ್ನಾಟದಕಲ್ಲಿನ ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಂದು ಖಚಿತ ರೂಪ ಬರುವುದು ಸಾಧ್ಯವಾಯಿತು. ಯೋಜನೆಯ ಈಗಿನ ರೂಪರೇಖೆಗಳ ಪ್ರಕಾರ ಕೃಷ್ಣಾ ನದಿಯ ಅಡ್ಡಕ್ಕೆ ಎರಡು ಕಟ್ಟೆಗಳನ್ನು ಕಟ್ಟಲಾಗುವುದು. ಮೇಲಿನ ಕಟ್ಟೆಯ ನಿವೇಶನ ಆಲಮಟ್ಟಿಯಲ್ಲಿದೆ (ಇದು ಘಟಪ್ರಭಾ–ಕೃಷ್ಣಾ ಸಂಗಮದಿಂದ ಕೆಲವೇ ಮೈಲಿಗಳ ಕೆಳಗೆ ಇದೆ.) ಇಲ್ಲಿ ನದಿ ಬೆಟ್ಟಗಳ ಸಾಲನ್ನು ಅಡ್ಡ ಹಾಯುತ್ತದೆ; ಅಲ್ಲದೇ ಕಟ್ಟೆ ಕಟ್ಟಿದ ಬಳಿಕ ಜಲಸಂಗ್ರಹ ಮಾಡಲು ಸಾಕಷ್ಟು ವಿಸ್ತಾರ ಪ್ರದೇಶವೂ ದೊರೆಯುತ್ತದೆ. ಕೆಳಗಿನ ಕಟ್ಟೆಯ ನಿವೇಶನ ನಾರಾಯಣಪುರದಲ್ಲಿದೆ. (ಇದು ಮಲಪ್ರಭಾ–ಕೃಷ್ಣಾ ಸಂಗಮದಿಂದ ಕೆಲವೇ ಮೈಲಿಗಳ ಕೆಳಗೆ ಛಾಯಾ ಜಲಪಾತದಿಂದ ಸ್ವಲ್ಪ ಮೇಲೂ ಇದೆ). ಅಲ್ಲದೆ ಹಿಪ್ಪರಗಿ ಎನ್ನುವಲ್ಲಿ ಕೃಷ್ಣಾನದಿಗೆ ಒಂದು ಅಣೆಕಟ್ಟನ್ನು ಕಟ್ಟುವ ಏರ್ಪಾಡು ಸಹ ಉಂಟು. ಇವು ಮೂರು ಜಲಾಶಯಗಳ ನೆರವಿನಿಂದ 8,43,333 ಹೆಕ್ಟೇರುಗಳಷ್ಟು (20.84 ಲಕ್ಷ ಎಕರೆಗಳು) ವಿಸ್ತಾರದ ಪ್ರದೇಶವನ್ನು ನೀರಾವರಿ ವ್ಯವಸಾಯದ ಪರಿಧಿಗೆ ಅಳವಡಿಸಬಹುದು. ಕಟ್ಟೆಗಳ ಹಾಗೂ ನಾಲೆಗಳ ಸಮಗ್ರ ಖರ್ಚು ರೂ. 285 ಕೋಟಿಗಳೆಂದು ಅಂದಾಜು ಮಾಡಲಾಗಿದೆ. ಈ ಯೋಜನೆ ಪೂರ್ಣವಾದಾಗ ವಾರ್ಷಿಕವಾಗಿ ಸುಮಾರು 15.54 ಮಿಲಿಯನ್ ಮೆಟ್ರಿಕ್ ಟನ್ನುಗಳಷ್ಟು ಅಧಿಕ ಆಹಾರೋತ್ಪಾದನೆಯನ್ನು ಪಡೆಯುವ ನಿರೀಕ್ಷೆ ಉಂಟು. *

**ಕೃಷ್ಣಾ ಹತೀಸಿಂಗ್ :** 1907–1967. ಪಂಡಿತ ಮೋತಿಲಾಲ್ ನೆಹರು ಮತ್ತು ಸ್ವರೂಪರಾಣಿಯವರ ಕಿರಿಯ ಮಗಳು. ಎಲ್ಲರೂ ಪ್ರೀತಿಯಿಂದ ಇವಳನ್ನು ಕರೆಯುತ್ತಿದ್ದುದು ಬೆಟ್ಟಿಯೆಂದು. ಅಣ್ಣ ಮತ್ತು ಅಕ್ಕ ಇವಳಿಗಿಂತ ತುಂಬ ಹಿರಿಯರಾದುದರಿಂದ ಕೃಷ್ಣಾಳ ಬಾಲ್ಯ ಒಂಟಿತನದಲ್ಲಿಯೇ ಕಳೆಯಿತು. ಸದಾ ಅನಾರೋಗ್ಯದಿಂದ ನರಳುತ್ತಿದ್ದ ತಾಯಿ ಮತ್ತು ನಿರಂತರ ಕಾರ್ಯಮಗ್ನರಾಗಿರುತ್ತಿದ್ದ ತಂದೆ ಇವರ ಸಂಪರ್ಕವೂ ಆಗ ಇವಳಿಗೆ ಅಷ್ಟಾಗಿ ದೊರಕಲಿಲ್ಲ. ಇವಳನ್ನು ನೋಡಿಕೊಳ್ಳಲು ಆಂಗ್ಲ ಉಪಾಧ್ಯಾಯಿನಿಯೊಬ್ಬಳು ನೇಮಕವಾಗಿದ್ದಳು. ಬೆಳಗಿನಿಂದ ಸಂಜೆಯ ತನಕ ಇವಳ ಬಾಳು ಕಟ್ಟುನಿಟ್ಟುಗಳ ಸರಹದ್ದಿನಲ್ಲಿಯೇ ಸಾಗುತ್ತಿತ್ತು. ಇದರಿಂದ ಕೃಷ್ಣಾಳ ಅಸಹನೆ ಹೆಚ್ಚಿ ಒಮ್ಮೊಮ್ಮೆ ನಿಯಮಗಳನ್ನು ಮುರಿದು ಶಿಕ್ಷೆಗೊಳಗಾಗುತ್ತಿದ್ದಳು. ಚಿಕ್ಕಂದಿನಿಂದಲೇ ಈಕೆ ತುಸು ಹಟಗಾತಿ ಹಾಗೂ ಭಾವಾವೇಗದ ಸ್ವಭಾವದವಳಾಗಿದ್ದಳು. ಜೊತೆಗೆ ಯಾರೂ ಇಲ್ಲದಿದ್ದಾಗ ಕುದುರೆ ಲಾಯಗಳಲ್ಲಿ, ತೋಟದಲ್ಲಿ ಸುತ್ತಾಡುವುದೆಂದರೆ ಇವಳಿಗೆ ತುಂಬ ಮೆಚ್ಚು. ಕುದುರೆ ಸವಾರಿ ಇವಳಿಗೆ ಪ್ರಿಯವಾಗಿತ್ತು.

1919ರಲ್ಲಿ ಮೊತ್ತಮೊದಲಿಗೆ ಕೃಷ್ಣಾ ಗಾಂಧೀಜಿಯನ್ನು ನೋಡಿದಳು. ಜಲಿಯನ್‌ವಾಲಾಬಾಗಿನ ಭೀಮಭಯಂಕರ ಘಟನೆಗಳನ್ನು ಓದಿ ಕೇಳಿ ತಿಳಿದಿದ್ದ



ಈಕೆಯಲ್ಲಿ ಆ ಚಿಕ್ಕವಯಸ್ಸಿನಲ್ಲಿಯೇ ಆಳರಸರ ವಿರುದ್ಧ ಪ್ರತೀಕಾರ ಮನೋಭಾವನೆ ಬುಸುಗುಡುತ್ತಿತ್ತು. ಹಿಂಸೆ ರಕ್ತಪಾತಗಳಿಂದಲೇ ಮುಯ್ಯಿ ತೀರಿಸಿಕೊಳ್ಳಬೇಕೆಂಬುದು ಈಕೆಯ ಅಭಿಪ್ರಾಯವಾಗಿತ್ತು. ಆದರೆ ಗಾಂಧೀಜಿಯ ನಿಕಟ ಸಂಪರ್ಕ ಹೆಚ್ಚಿದಂತೆಲ್ಲ ಈಕೆ ಅವರ ಮಾರ್ಗದರ್ಶನವನ್ನೊಪ್ಪಿ ಕೆಲಸ ಮಾಡತೊಡಗಿದಳು.

1920ನೆಯ ಇಸವಿಯಲ್ಲಿ ಸತ್ಯಾಗ್ರಹ ಚಳವಳಿ ಪ್ರಾರಂಭವಾದೊಡನೆ ನೆಹರು ಕುಟುಂಬದ ಆಗುಹೋಗುಗಳೆಲ್ಲ ಸಂಪೂರ್ಣವಾಗಿ ಬದಲಾದುವು. ಕೃಷ್ಣಾಳ ಶಾಲಾ ಜೀವನವೂ ಅಲ್ಲಿಗೇ ಮುಕ್ತಾಯವಾಯಿತು. ಸುಖ ವೈಭವಗಳಲ್ಲಿ ಮೆರೆಯುತ್ತಿದ್ದ ಇವಳ ಮನೆ ತ್ಯಾಗ, ಸಂಯಮಗಳ ಬೀಡಾಯಿತು. ಕುಟುಂಬದ ಇತರರಂತೆ ಕೃಷ್ಣಾಳೂ ಆ ಬದಲಾವಣೆಗೆ ಹೊಂದಿಕೊಂಡಳು. ಒರಟಾದ ಖಾದಿ ಸೀರೆಯನ್ನುಟ್ಟಳು.



ಅಹಮದಾಬಾದಿನಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ತಾಯಿ, ಅತ್ತಿಗೆಯರೊಂದಿಗೆ ಕೃಷ್ಣಾಳೂ ಭಾಗವಹಿಸಿದಳು. ಅಲ್ಲಿಂದ ಅವರೊಟ್ಟಿಗೆ ಗಾಂಧೀಜಿಯ ಸಬರಮತಿ ಆಶ್ರಮದಲ್ಲಿ ಕೆಲವು ದಿನಗಳನ್ನು ಕಳೆದಳು.

ಇಷ್ಟರಲ್ಲಿ ಕೃಷ್ಣಾಳಿಗೆ ಐರೋಪ್ಯ ಪ್ರವಾಸದ ಅವಕಾಶ ಲಭಿಸಿತು. ಮೊದಲೇ ತೆರಳಿದ್ದ ಅಣ್ಣ, ಅತ್ತಿಗೆಯರನ್ನು ಸೇರಲು ಇವಳು 1926ರ ಜೂನ್ ತಿಂಗಳಲ್ಲಿ ಯುರೋಪಿಗೆ ಹೊರಟಳು. ಅದುವರೆಗೂ ದೊರಕದಿದ್ದ ಅಣ್ಣನ ನಿಕಟಸಾಮೀಪ್ಯ ವಿದೇಶದಲ್ಲಿ ಇವಳಿಗೆ ದೊರಕಿತು. ಆತ ಇವಳಿಗೆ ಆದರ್ಶಮಿತ್ರನಂತೆಯೂ ಆನಂದದಾಯಕ ಮಾರ್ಗದರ್ಶಕನಂತೆಯೂ ಕಂಡ. ಅತ್ತಿಗೆ ಅನಾರೋಗ್ಯಪೀಡಿತ ಳಾಗಿದ್ದುದರಿಂದ ಜಿನೀವದ ಮನೆಯಲ್ಲಿ ಗೃಹಕೃತ್ಯದ ಕಾರ್ಯಭಾರವೆಲ್ಲ ಕೃಷ್ಣಾಳ ಮೇಲೆ ಬಿತ್ತು. ರೂಢಿಯಿರದಿದ್ದ ಆ ಕೆಲಸ ಪ್ರಾರಂಭದಲ್ಲಿ ಕಷ್ಟಕರವಾಗಿದ್ದರೂ ಕ್ರಮೇಣ ಅದಕ್ಕಿವಳು ಒಗ್ಗಿಕೊಂಡಳು. ಅಲ್ಲಿಯೇ ಫ್ರೆಂಚ್ ಕಲಿತಳು. ಜಿನೀವದಲ್ಲಿ ನಡೆಯುತ್ತಿದ್ದ ಅಂತಾರಾಷ್ಟ್ರೀಯ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದಳು. ಅಲ್ಲಿ ಪ್ರಪಂಚದ ನಾನಾ ಪ್ರಮುಖರ, ಗಣ್ಯ ವ್ಯಕ್ತಿಗಳ ಉಪನ್ಯಾಸಗಳನ್ನು ಕೇಳುವ ಮತ್ತು ಅವರನ್ನು ಸಂಧಿಸುವ ಅವಕಾಶ ಇವಳಿಗೆ ಲಭಿಸಿತು. ಅಣ್ಣನೊಡನೆ ಅನೇಕ ಸುಪ್ರಸಿದ್ಧ ಗ್ರಂಥಕರ್ತರನ್ನು, ಸಂಗೀತಗಾರರನ್ನು, ವಿಜ್ಞಾನಿಗಳನ್ನು ಸಂದರ್ಶಿಸಿದಳು. ಐನ್‌ಸ್ಟೈನ್, ರೋಮೇನ್ ರೋಲಾ, ಅರ್ನೆಸ್ಟ್ ಟೋಲರ್ ಮುಂತಾದ ಮಹಾನುಭಾವರು ಇವಳ ಸ್ಮೃತಿಪಥದಲ್ಲಿ ಅಚ್ಚಳಿಯದೆ ನಿಂತರು. ಜವಾಹರರ ಕಾರ್ಯದರ್ಶಿತ್ವವನ್ನು ವಹಿಸುತ್ತ ಅವರೊಡನೆ ಅನೇಕ ಊರು, ನಗರಗಳನ್ನು ಸುತ್ತಿದಳು. ಇದರಿಂದೀಕೆಗೆ ದುಡಿಮೆಯ ಜೊತೆಯಲ್ಲಿ ಒಳ್ಳೆಯ ಶಿಕ್ಷಣವೂ ದೊರೆಯಿತು. ಅಡ್ಡಿ ಆತಂಕಗಳಿಲ್ಲದ ಸ್ವತಂತ್ರ ವಾತಾವರಣದಲ್ಲಿ ಬೆಳೆದುದರಿಂದ ಕೃಷ್ಣಾ ಹೊಸಬರೊಂದಿಗೆ ಬಹುಬೇಗನೆ ಹೊಂದಿಕೊಳ್ಳುತ್ತಿದ್ದಳು. ಇದರಿಂದ ಹೋದೆಡೆಯಲ್ಲೆಲ್ಲ ಅನೇಕ ಗೆಳೆಯರನ್ನು ಸಂಪಾದಿಸುತ್ತಿದ್ದಳು. ಸಾಮ್ರಾಜ್ಯಶಾಹಿಗಳನ್ನು ವಿರೋಧಿಸುವ ಸಲುವಾಗಿ ಬ್ರಸಲ್ಸ್ ನಗರದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅಣ್ಣನೊಡನೆ ಭಾಗವಹಿಸಿದಳು. ಅಲ್ಲಿಂದ ಲಂಡನ್, ಬರ್ಲಿನ್, ಮಾಸ್ಕೋಗಳನ್ನು ಸಂದರ್ಶಿಸಿ 1927ರ ಡಿಸೆಂಬರ್‌ನಲ್ಲಿ ಭಾರತಕ್ಕೆ ಹಿಂದಿರುಗಿದಳು. ಐರೋಪ್ಯ ಪ್ರವಾಸ ಹೀಗೆ ಅವಳ ಬಾಳಿನಲ್ಲಿ ಅನೇಕ ಹೊಸ ಅನುಭವಗಳನ್ನು ತಂದುಕೊಟ್ಟಿತು.

ಯುರೋಪಿನಿಂದ ಹಿಂದಿರುಗಿದ ಮೇಲೆ ಮಾಂಟೆಸೋರಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಸೇರಿದಳು. ಮಗಳು ಹೀಗೆ ಕೆಲಸಕ್ಕೆ ಸೇರುವುದನ್ನು ತಂದೆ ತಾಯಿಯರು ಪ್ರಬಲವಾಗಿ ವಿರೋಧಿಸಿದರೂ ಕೊನೆಗೆ ಅಣ್ಣನ ಮಧ್ಯಸ್ಥಿಕೆಯಿಂದ ಇವಳ ಇಚ್ಛೆ ನೆರವೇರಿತು. ದೇಶದಲ್ಲಿ ಮತ್ತೆ ಅಸಹಕಾರ ಆಂದೋಳನ ಮೊದಲಾಯಿತು. ಕೃಷ್ಣಾಳೂ ತನ್ನ ಸಮಯವನ್ನೆಲ್ಲ ಅದಕ್ಕಾಗಿ ಮೀಸಲಿರಿಸಲು ಕಾತರಳಾಗಿ ಒಂದೂವರೆ ವರ್ಷಗಳ ತನ್ನ ವೃತ್ತಿಜೀವನಕ್ಕೆ ರಾಜೀನಾಮೆಯಿತ್ತಳು. ಅಲಹಾಬಾದಿನ ಯುವಕಸಂಘದ ಜಂಟಿಕಾರ್ಯದರ್ಶಿಯಾಗಿ ನಾನಾಬಗೆಯ ಚಟುವಟಿಕೆಗಳಲ್ಲಿ ತೊಡಗಿದಳು. 1930ರಲ್ಲಿ ನಡೆದ ಇತಿಹಾಸ ಪ್ರಸಿದ್ಧವಾದ ದಂಡಿಯ ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಚಳವಳಿಯ ಮುಖಂಡರೆಲ್ಲ ಸೆರೆಮನೆಗೆ ಹೋದರು. ಆಗ ಮಹಿಳೆಯರು ಅಗ್ರಸ್ಥಾನದಲ್ಲಿ ನಿಂತು ಚಳವಳಿಯನ್ನು ಮುಂದುವರಿಸಿದರು. ಕೃಷ್ಣಾಳೂ ಸ್ವಯಂಸೇವಕದಳವನ್ನು ಸೇರಿ ವಿದೇಶಿವಸ್ತ್ರ ಬಹಿಷ್ಕಾರಾದಿ ಕಾರ್ಯಕ್ರಮಗಳಲ್ಲಿ ತೊಡಗಿದಳು. 1932ರ ಜನವರಿ 27ರಂದು ಕೃಷ್ಣಾ ಅಕ್ಕನೊಡನೆ ಬಂಧಿತಳಾದಳು. ಹಿಂದೊಂದು ಬಾರಿ ಸೆರೆಮನೆಯಲ್ಲಿ ಕೇವಲ ಹನ್ನೆರಡು ಗಂಟೆಗಳನ್ನು ಕಳೆದಿದ್ದಳಷ್ಟೆ. ಲಖನೌ ಸೆರೆಮನೆಯಲ್ಲಿ ತಾನು ಕಳೆದ ಹನ್ನೊಂದೂವರೆ ತಿಂಗಳ ಅನುಭವಗಳನ್ನು ತನ್ನ ಆತ್ಮಕಥೆಯಲ್ಲಿ ಮನಮುಟ್ಟುವಂತೆ ಈಕೆ ವರ್ಣಿಸಿದ್ದಾಳೆ.

1933ರ ಅಕ್ಟೋಬರ್ 20ರಂದು ಕೃಷ್ಣಾ ಮತ್ತು ಗುಣೋತ್ತಮ ಹತೀಸಿಂಗ್ (ರಾಜಾ) ಇವರ ವಿವಾಹ ಆನಂದಭವನದಲ್ಲಿ ಯಾವ ವೈಭವಾಡಂಬರಗಳಿಲ್ಲದೆ ಸರಳವಾಗಿ ನಡೆಯಿತು. ಮದುವೆಯಾದ ಕೆಲಕಾಲದಲ್ಲಿಯೆ ಪತಿ ರಾಜಕೀಯ ಆಂದೋಳನದಲ್ಲಿ ಧುಮುಕಿದ. ಕೃಷ್ಣಾಳ ಪಾಲಿಗೆ ಸುಖದ ದಿನಗಳು ಬಹುಬೇಗ ದೂರವಾದುವು; ದೀರ್ಘಾವಧಿಯ ವಿಯೋಗ, ಅನಿಶ್ಚಿತತೆ, ಅಶಾಂತಿಗಳನ್ನಿವಳು ಅನುಭವಿಸಬೇಕಾಯಿತು. ಮಕ್ಕಳಾದ ಹರ್ಷ, ಅಜಿತರಿಬ್ಬರೂ ಆಗ ತುಂಬ ಚಿಕ್ಕವರಾಗಿದ್ದುದರಿಂದ, ಅವರ ಪೋಷಣೆ ಅಗತ್ಯವಾಗಿದ್ದುದರಿಂದ ಕೃಷ್ಣಾ ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸಲಿಲ್ಲ. ಆದರೂ ಸ್ತ್ರೀಸಮಾಜಗಳನ್ನು ಸೇರಿ ಸಮಾಜ ಸೇವೆಯನ್ನು ಕೈಗೊಂಡಳು. ಹರಿಜನಕೇರಿಗಳೇ ಅವಳ ಕಾರ್ಯರಂಗವಾದುವು. ಚಳವಳಿಗೆ ಸಂಬಂಧಪಟ್ಟ ಅನೇಕ ಬಗೆಯ ಗುಪ್ತ ಚಟುವಟಿಕೆಗಳಲ್ಲಿ ಈಕೆಯ ಪಾತ್ರವಿರುತ್ತಿತ್ತು. ಕಾಂಗ್ರೆಸಿನ ಗುಪ್ತಪ್ರಸಾರಕೇಂದ್ರವನ್ನು ನಡೆಸುವುದು, ಚಳವಳಿಗೆ ಅಗತ್ಯವಾದ ಹಣವನ್ನು ಸಂಗ್ರಹಿಸಿ ಬೇರೆಡೆಗೆ ಒಯ್ಯುವುದು, ಗಾಯಗೊಂಡವರಿಗೆ ಪ್ರಾಥಮಿಕ ಚಿಕಿತ್ಸೆ ನೀಡುವುದು-ಮುಂತಾದ ಕಾರ್ಯಗಳಲ್ಲಿವಳು ತೊಡಗಿರುತ್ತಿದ್ದಳು. 1943ರಲ್ಲಿ ಬಂಗಾಲದಲ್ಲಿ ಭೀಕರ ಕ್ಷಾಮ ತಲೆದೋರಿದಾಗ ಹಲವು ತಿಂಗಳು ಕೃಷ್ಣಾ ಸ್ವಯಂಸೇವಕಿಯಾಗಿ ಅಗತ್ಯವಾದ ಸೇವೆ ಸಲ್ಲಿಸಿದಳು. ಈ ನಡುವೆ 1947ರ ಜನವರಿಯಿಂದು ಉಪನ್ಯಾಸಗಳನ್ನು ನೀಡುವ ಸಲುವಾಗಿ ಪತಿಯೊಡಗೂಡಿ ಅಮೆರಿಕೆಗೆ ಹೋಗಿ ಮೇನಲ್ಲಿ ಹಿಂದಿರುಗಿದಳು.

ಆಗಸ್ಟ್ 15ರಂದು ಭಾರತ ಸ್ವತಂತ್ರ್ಯವಾದ ಮೇಲೆ ಕೃಷ್ಣಾಳ ಜೀವನ ಮುಂಬಯಿ ಮತ್ತು ದೆಹಲಿಗಳ ನಡುವೆ ಸಾಗುತ್ತಿತ್ತು. ಬಹು ವೇಳೆ ಅಣ್ಣನ ಮನೆಯಲ್ಲಿ ಆತಿಥೇಯಳ ಕರ್ತವ್ಯವನ್ನು ನಿರ್ವಹಿಸುತ್ತಿದ್ದಳು. ಅಂಗವಿಕಲ ಮಕ್ಕಳ ಚಿಕಿತ್ಸೆಗಾಗಿ ಮುಂಬಯಿಯಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಿದಳು. ಆರಂಭದಲ್ಲಿ ಕೇವಲ ನಾಲ್ಕೈದು ಜನರ ಸಹಕಾರದಿಂದ ಅಲ್ಪ ಬಂಡವಾಳದಿಂದ ಆಸ್ಪತ್ರೆ ಆರಂಭವಾಯಿತು. ಬೆಳಗಿನಿಂದ ಸಂಜೆಯತನಕ ತಾನೂ ಅಲ್ಲಿ ದುಡಿದಳು. ಇದರಿಂದ ಇವಳ ಆರೋಗ್ಯ ಕೆಟ್ಟಿತಾದರೂ ಧೃತಿ ಕೆಡಲಿಲ್ಲ. ಕ್ರಮೇಣ ಆ ಸಂಸ್ಥೆ ಜನಪ್ರಿಯವಾಗಿ ಇಂದು ಅನೇಕ ತಜ್ಞರನ್ನೊಳಗೊಂಡ ಸುಸಜ್ಜಿತವಾದ ಸಂಸ್ಥೆಯಾಗಿ ಬೆಳೆದಿದೆ.

ಬಾಲಾಪರಾಧಿಗಳ ನ್ಯಾಯಾಲಯದಲ್ಲಿ ಗೌರವ ಮ್ಯಾಜಿಸ್ಟ್ರೇಟಳಾಗಿ ಕೃಷ್ಣಾ ಹದಿನೆಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದಳು. 1950ರಲ್ಲಿ ಬಾಲಾಪರಾಧವನ್ನು ತಡೆಗಟ್ಟುವ ಸಲುವಾಗಿ ಒಂದು ಸಮಿತಿಯನ್ನು ಸ್ಥಾಪಿಸಿದಳು. ವಿಚಾರಣೆಯಾಗುವ ತನಕ ಬಾಲಾಪರಾಧಿಗಳು ಅನೇಕ ತಿಂಗಳುಗಳ ತನಕ ಸೆರೆಮನೆಯಲ್ಲಿ ಕೊಳೆಯಬೇಕಾಗುತ್ತಿತ್ತು. ಆ ಸಮಯದಲ್ಲಿ ಅವರಿಗೆ ಅನೇಕ ಬಗೆಯ ಶಿಕ್ಷಣವನ್ನು ಕೊಡುವ ಪ್ರಯತ್ನವನ್ನು ಕೈಗೊಂಡಳು. ಅಲ್ಲಿ ಅವರಿಗೆ ಹೊಲಿಗೆ, ನೇಯ್ಗೆ, ಮಡಕೆ ಕುಡಿಕೆಗಳ ಮೇಲೆ ಚಿತ್ರಣ ಮಾಡುವುದು ಮುಂತಾದ ಕೈಕಸಬುಗಳ ಜೊತೆಗೆ ಓದುಬರೆಹಗಳನ್ನೂ ಕಲಿಸಲಾಗುತ್ತಿತ್ತು. ಸಮಿತಿಯ ದುಡ್ಡಿನಿಂದ ಅವರನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯುತ್ತಿದ್ದಳು. ತನ್ನ ಸೆರೆವಾಸದ ಅವಧಿಯಲ್ಲೀಕೆ ಕಂಡುಂಡ ಅನೇಕ ಕಹಿ ಅನುಭವಗಳು ಈ ಎಲ್ಲ ಕಾರ್ಯಗಳಿಗೂ ಪ್ರೇರಕವಾಗಿದ್ದವು. ತಾನೇ ಸ್ಥಾಪಿಸಿದ ಈ ಸಮಿತಿಗಳಲ್ಲದೆ ಇನ್ನೂ ಅನೇಕಾನೇಕ ಸಮಿತಿಗಳಲ್ಲಿ ಕೃಷ್ಣಾ ಸೇವೆ ಸಲ್ಲಿಸುತ್ತಿದ್ದಳು.

ಸಮಾಜಸೇವಾ ಕಾರ್ಯದೊಡನೆ ಲೇಖನಕಾರ್ಯವೂ ಸತತವಾಗಿ ಸಾಗುತ್ತಿತ್ತು. 1944ರಲ್ಲಿ ಪ್ರಕಟವಾದ ವಿತ್ ನೋ ರಿಗ್ರೆಟ್ಸ್ (ಕನ್ನಡಾನುವಾದ-ನೆನಪು ಕಹಿಯಲ್ಲ-ದೇಜಗೌ) ಇವಳ ಚೊಚ್ಚಲ ಕೃತಿ. ಇಡೀ ಕುಟುಂಬದವರೆಲ್ಲ ಸೆರೆಮನೆ ಸೇರಿದಾಗ ದೀರ್ಘಾವಧಿಯ ಏಕಾಂಗಿತನದ ಬೇಸರ ಕಳೆಯಲು ಕೈಗೊಂಡ ಪ್ರಯತ್ನದ ಫಲ ಈ ಕೃತಿ. ಇದು ಆತ್ಮಕಥೆಯ ಸ್ವರೂಪದ್ದು. ನೆಹರು ಕುಟುಂಬದ ಜೀವಂತಕಥೆಯೂ ಇದರಲ್ಲೇ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ಈಕೆ ಅತ್ಯುತ್ತಮ ಲೇಖಕಿಯೆಂಬಂಶ ಈ ಮೊದಲ ಕೃತಿಯಲ್ಲಿಯೇ ವ್ಯಕ್ತವಾಗುತ್ತದೆ. ವ್ಯಕ್ತಿ ಚಿತ್ರಗಳನ್ನು ಕೊಡುವುದರಲ್ಲೀಕೆ ಸಿದ್ಧಹಸ್ತಳು. ತಂದೆ, ತಾಯಿ, ಅಣ್ಣ, ಅತ್ತಿಗೆ, ದೊಡ್ಡಮ್ಮ, ಸೆರೆಮನೆಯ ಬಚೂಲಿ-ಇವರ ಚಿತ್ರಗಳು ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತವೆ. ಸ್ವಂತ ಅನುಭವಗಳನ್ನು ಹೇಳುವಲ್ಲಿ ಈಕೆಯ ನೇರ, ನಿಷ್ಕಪಟ, ಮುಚ್ಚು ಮರೆಯಿಲ್ಲದ ಬಿಚ್ಚು ಮನೋಭಾವ ವ್ಯಕ್ತವಾಗುತ್ತದೆ. ಸೂಕ್ಷ್ಮಸಂವೇದನಶೀಲತೆ, ಪರಿತವಾದ ನಿರೀಕ್ಷಣ ಸಾಮರ್ಥ್ಯ, ಗುಣದೋಷಗಳೆರಡನ್ನೂ ಎತ್ತಿಹೇಳುವ ಎದೆಗಾರಿಕೆ ಇವಳ ಎಲ್ಲ ಕೃತಿಗಳಲ್ಲೂ ಕಂಡುಬರುತ್ತವೆ. ಈಕೆಯ ನಿರೂಪಣಕ್ರಮ ಓದುಗರನ್ನು ಮೈಮರೆಸುತ್ತದೆ. ಶೈಲಿಯಂತೂ ಹೃದಯಂಗಮವಾದುದು.

ಇದಲ್ಲದೆ ಈಕೆ ಮತ್ತೆ ಆರು ಕೃತಿಗಳನ್ನು ಬರೆದಿದ್ದಾಳೆ: ಷ್ಯಾಡೋಸ್ ಆನ್ ದಿ ವಾಲ್, ಗಾಂಧೀಜಿ (ಮಕ್ಕಳಿಗಾಗಿ), ಬ್ರೈಡ್ಸ್ ಬುಕ್ ಆಫ್ ಬ್ಯೂಟಿ (ಮುಲ್ಕ್ ರಾಜ್ ಆನಂದರೊಡನೆ), ನೆಹ್ರೂಸ್ ಲೆಟರ್ಸ್ ಟು ಹಿಸ್ ಸಿಸ್ಟರ್, ವಿ ನೆಹ್ರೂಸ್. ಇವಳ ಕೊನೆಯ

ಕೃತಿ ಇಂದಿರಾ ಗಾಂಧಿಯನ್ನು ಕುರಿತು ಬರೆದ ಡಿಯರ್ ಟು ಬಿಹೋಲ್ಡ್ ಎಂಬ ಪುಸ್ತಕ. ಈ ಕೃತಿ ಪ್ರಕಟವಾದಾಗ (1969) ಈಕೆ ಬದುಕಿರಲಿಲ್ಲ. ತನ್ನ ಪುಸ್ತಕವೊಂದರ ಪ್ರಕಟಣ ಸಮಾರಂಭದಲ್ಲಿ ಭಾಗವಹಿಸಲು ನ್ಯೂಯಾರ್ಕಿಗೆ ತೆರಳಿದ್ದು 1967ರ ನವೆಂಬರ್ 9ರಂದು ಸ್ವದೇಶಕ್ಕೆ ಹಿಂದಿರುಗುವ ಸಿದ್ಧತೆಯಲ್ಲಿದ್ದಾಗಲೇ ಲಂಡನಿನಲ್ಲಿ ಹೃದಯಾಘಾತದಿಂದ ನಿಧನ ಹೊಂದಿದಳು.

ಕೃಷ್ಣಾ ಹತೀಸಿಂಗ್ ನೆಹರು ಮನೆತನದ ಇತರರಂತೆ ರಾಜಕೀಯದಲ್ಲಿ ಸ್ಥಾನಮಾನಗಳನ್ನು ಗಳಿಸಲಿಲ್ಲ, ನಿಜ. ಆದರೆ ನಿಜವಾದ ದೇಶಭಕ್ತಳಾಗಿ, ಸಮಾಜಸೇವಕಿಯಾಗಿ, ಉತ್ತಮ ಲೇಖಕಿಯಾಗಿ ಈಕೆ ತನ್ನ ಕೃತಿಗಳ ಮೂಲಕ ಬಹುಕಾಲ ಉಳಿಯುತ್ತಾಳೆಂಬುದರಲ್ಲಿ ಸಂದೇಹವಿಲ್ಲ. (ಜಿ.ಎಸ್.ಪಿ.)

**ಕೆಂಗಲೆಸುಂಡು :** ವಿಶಿಷ್ಟವಾದ ಒಂದು ಚರ್ಮವ್ಯಾಧಿ (ಸೋರಿಯಾಸಿಸ್). ಬೆಟ್ಟಿನ ತುದಿಯಲ್ಲಿ ತೋರಬಹುದು; ಅಂಗೈ ಅಗಲದಷ್ಟಕ್ಕೂ ವ್ಯಾಪಿಸಬಹುದು; ಚೆನ್ನಾಗಿ ಅಂಚುಕಟ್ಟಿದ ಕೆಂಪು ಕಲೆಗಳ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಮಚ್ಚೆಗಳ ಮೇಲೆ ಅಲ್ಲಲ್ಲಿರುವ ಬೆಳ್ಳಿ ಬಿಳುಪಿನ ಹೊಳೆವ ಹುರುಪೆಗಳನ್ನು ಮೆಲ್ಲಗೆ ಕಿತ್ತರೆ ಅವು ಕೆಂಪು ಚುಕ್ಕೆ ಬಣ್ಣ ತಳೆದು ಕೊಂಚ ರಕ್ತ ಸುರಿವುದು. ಇದ್ದಕ್ಕಿದ್ದ ಹಾಗೆ ಕಾಣಿಸಿಕೊಂಡು ಕೆಲವೇ ದಿನಗಳಲ್ಲಿಯೋ ವಾರಗಳಲ್ಲಿಯೋ ಚಿತ್ರವಿಚಿತ್ರವಾಗಿ ಹರಡಬಹುದು. ರೋಗ ಜೋರಾದಾಗ ಆ ಭಾಗವೆಲ್ಲ ಮಂದವಾಗಿ ಅಂಚುಗಳು ಕೆಂಪಾಗಿರುವುವು. ತುರಿಕೆ ಅಷ್ಟಾಗಿರದು. ಮೈ ಆರೋಗ್ಯಕ್ಕೆ ಹಾನಿತಟ್ಟದು. ಮೊಣಕೈಗಳ ಮತ್ತು ಮಂಡಿಗಳ ಮೇಲೆ ಕಾಣಿಸಿಕೊಳ್ಳುವುದು ಬಲು ಸಾಮಾನ್ಯ. ಅಲ್ಲಿಂದ ಮೇಲೂ ಕೆಳಗೂ ಹರಡುತ್ತದೆ. ಎಂದೂ ಮುಖಕ್ಕೆ ಹತ್ತದು. ಕೆಲವೇ ವಾರಗಳಲ್ಲಿ ಅದಕ್ಕದೇ ಗುರುತೇ ಉಳಿಯದಂತೆ ಹೋಗಿಬಿಡಬಹುದು. ಹಲವರಲ್ಲಿ ಕೆಂಗಲೆ ಉಳಿದಿರುತ್ತದೆ. ಬಾಳಿನುದ್ದಕ್ಕೂ ತಿಂಗಳು, ವರ್ಷಗಳಿಗೊಮ್ಮೆ ಮರುಕಳಿಸುತ್ತಿರಬಹುದು. ಮೇಲೆ ಹಚ್ಚುವ ಮುಲಾಮುಗಳನ್ನು ಬಿಟ್ಟರೆ ಕೆಂಗಲೆಸುಂಡಿಗೆ ಬೇರೆ ಮದ್ದೇ ಇಲ್ಲ. ಈ ವ್ಯಾಧಿಯ ಕಾರಣ ತಿಳಿಯದು. (ಡಿ.ಎಸ್.ಎಸ್.)

**ಕೆಂಜಿಗ :** ಕೆಂಪುಬಣ್ಣದ ಇರುವೆಗಳಿಗಿರುವ ಸಾಮಾನ್ಯ ಬಳಕೆಯ ಹೆಸರು. ದೇಹದ ಬಣ್ಣ ಕೆಂಪುಮಿಶ್ರಿತ ಕಂದು ಇಲ್ಲವೆ ಅಚ್ಚಕೆಂಪಿನಿಂದ ಹಿಡಿದು ನಸುಹಳದಿ ಮಿಶ್ರಿತ ಕೆಂಪಿನವರೆಗೂ ವ್ಯತ್ಯಾಸವಾಗುತ್ತದೆಯಾಗಿ ಈ ಹೆಸರಿದೆ. ಕೆಂಜಿಗಗಳ ದೇಹದಲ್ಲಿ ನಿರ್ದಿಷ್ಟವಾದ ತಲೆ, ಎದೆ ಮತ್ತು ಉದರ ಭಾಗಗಳಿವೆ. ಭಾರತದಲ್ಲಿ ಸುಮಾರು ಐದು ಜಾತಿಯ ಕೆಂಜಿಗಗಳಿವೆ. ಎಲ್ಲವೂ ಫಾರ್ಮಿಸಿಡೀ ಕುಟುಂಬಕ್ಕೆ ಸೇರಿದ್ದು ಈ ಕುಟುಂಬದ ಪ್ರಮುಖ ಲಕ್ಷಣವೆಂದರೆ ಉನ್ನತಮಟ್ಟದ ಸಂಘ ಜೀವನ. ಇದಕ್ಕೆ ಪ್ರಮುಖ ಕಾರಣ ಕೆಲಸಗಾರ ಇರುವೆಗಳು.




ಭಾರತದಲ್ಲಿ ಕಾಣ ಬರುವ ಕೆಂಜಿಗಗಳ ಮುಖ್ಯ ಜಾತಿಗಳನ್ನು ಕೆಳಗೆ ವಿವರಿಸಲಾಗಿದೆ.

**1. ಈಕೋಫಿಲ ಸ್ಮರಾಗ್ಡಿನ:** ಮರಗಳಲ್ಲಿ ಗೂಡು ಕಟ್ಟಿಕೊಂಡು ವಾಸಿಸುವ ಅತಿ ಸಾಮಾನ್ಯವಾದ ಕೆಂಜಿಗ. ಡಿಂಬಗಳು ಉತ್ಪಾದಿಸುವ ರೇಷ್ಮೆಯಂಥ ವಸ್ತುವನ್ನು ಉಪಯೋಗಿಸಿ ಎಲೆಗಳನ್ನು ಅಂಟಿಸಿ ಕೆಲಸಗಾರ ಕೆಂಜಿಗಗಳು ಗೂಡನ್ನು ನಿರ್ಮಿಸುತ್ತವೆ. ಇವುಗಳ ಪ್ರಧಾನ ಆಹಾರ ಹುರುಪೆ ಕೀಟಗಳು (ಸ್ಕೇಲ್ ಇನ್‌ಸೆಕ್ಟ್ಸ್) ಉತ್ಪಾದಿಸುವ ಕೆಲವು ಬಗೆಯ ವಸ್ತುಗಳು. ಕೆಂಜಿಗದ ಕಡಿತ ಬಹಳ ಉರಿಯನ್ನೂ ನೋವನ್ನೂ ಉಂಟು ಮಾಡುತ್ತದೆ. ತೋಟಗಳಲ್ಲಿಯ ಕೀಟಪೀಡೆಗಳನ್ನು ನಾಶಪಡಿಸುವುದರಿಂದ ಈ ಕೆಂಜಿಗ ಮಾನವನಿಗೆ ಸಹಕಾರಿಯೆನಿಸಿದೆ.

**2. ಕ್ರೆಮಟೋಗ್ಯಾಸ್ಟರ್ ಡಾರ್ಸಿ:** ಇದೂ ಮರಗಳಲ್ಲಿ ವಾಸಿಸುವ ಒಂದು ಕೆಂಜಿಗ. ಸಾಮಾನ್ಯವಾಗಿ 70,000–1,00,000 ಕೆಂಜಿಗಗಳು ಒಟ್ಟುಗೂಡಿ ಗುಂಡನೆಯ ಗೂಡನ್ನು ಕಟ್ಟಿಕೊಂಡು ವಾಸಿಸುತ್ತವೆ.

**3. ಮಾನೋಮೋರಿಯಂ ಗ್ಲೈಸೆಫಿಲಂ:** ಮರಗಳ ಬಳಿ ಗೂಡು ಕಟ್ಟಿ ವಾಸಿಸುವ ಕೆಂಜಿಗ, ಕೆಲವು ಬಾರಿ ಮಾನವವಸತಿಗೂ ಬರುವುದುಂಟು. ಹುರುಪೆ ಕೀಟಗಳು ಉತ್ಪಾದಿಸುವ ಜೇನಿನಂಥ ರಸವನ್ನು ಕುಡಿದು ಬದುಕುತ್ತವೆ.

ಇದೇ ಜಾತಿಯ ಮಾ. ಗ್ರಾಸಿಲಿಮಂ ಮತ್ತು ಮಾ. ಡಿಸ್ಟಕ್ಟರ್ ಎಂಬ ಎರಡು ಪ್ರಭೇದಗಳು ಮನೆಗಳಲ್ಲಿ ವಾಸಿಸುತ್ತವೆ. ಇವನ್ನು ಸಾಮಾನ್ಯವಾಗಿ ಕೆಂಪಿರುವೆಗಳೆನ್ನುತ್ತಾರೆ. ಗೋಡೆ, ನೆಲ ಮುಂತಾದವುಗಳನ್ನು ಕೊರೆದು ಬಿಲ ಮಾಡಿಕೊಂಡು ಇವು ವಾಸಿಸುತ್ತವೆ.

**4. ಇರಿಡೊಮರ್ಮಿಕ್ಸ್ ಆನ್‌ಸೆಪ್ಸ್ :** ನೆಲದಲ್ಲಿ ಬಿಲ ತೋಡಿ ವಾಸಿಸುವ ಕೆಂಜಿಗ. ಏಫಿಡ್ ಕೀಟಗಳು ವಾಸಿಸುವ ಮರಗಳ ಸಮೀಪದಲ್ಲಿ ಗೂಡು ಕಟ್ಟಿ ವಾಸಿಸುತ್ತ ಆ ಕೀಟಗಳು ಉತ್ಪಾದಿಸುವ ರಸವನ್ನೇ ಕುಡಿದು ಬದುಕುತ್ತದೆ.

**5. ಫೈಡೋಲ್ ಇಂಡಿಕ:** ಇದೂ ನೆಲದಲ್ಲಿ ಬಿಲ ತೋಡಿ ವಾಸಿಸುವ ಕೆಂಜಿಗ. ಗೂಡನ್ನು ಎಲೆಗಳಿಂದ ಮರೆ ಮಾಡುತ್ತದೆ. ಸತ್ತ ಕೀಟಗಳನ್ನು ಗೂಡಿಗೆ ಹೊತ್ತು ತಂದು ತಿಂದು ಬದುಕುತ್ತವೆ.

**6. ಸೋಲೆನಾಪ್ಸಿಸ್ ಜೆಮಿನೇಟ:** ಇದೊಂದು ಸಣ್ಣ ಗಾತ್ರದ ಕೆಂಜಿಗ. ಮರಳು ನೆಲದಲ್ಲಿ ಸಣ್ಣ ಬಿಲಗಳನ್ನು ನಿರ್ಮಿಸಿಕೊಂಡು ವಾಸಿಸುತ್ತದೆ. ಬಿಲಗಳ ಸುತ್ತ ಸಣ್ಣ ಮರಳಿನ ಚಿಕ್ಕ ಚಿಕ್ಕ ದಿಣ್ಣೆಗಳಿರುವುದು ಇದರ ವಿಶೇಷ ಗುಣ. ಕಿತ್ತಳೆ, ನಿಂಬೆ ಜಾತಿಯ ಗಿಡಗಳು, ಹತ್ತಿ ಮತ್ತು ತರಕಾರಿ ಗಿಡಗಳಿಗೆ ಉಪದ್ರವಕಾರಿ. ಆದರೂ ಬೇರೆ ಕೀಟಗಳನ್ನು ತಿನ್ನುವುದರಿಂದ ಇದನ್ನು ಕೀಟ ಪೀಡೆಗಳ (ಉದಾ: ಸಂಗ್ರಹಿಸಲಾದ ಅರಗನ್ನು ತಿನ್ನುವ ಕೀಟಪೀಡೆಗಳು) ನಿವಾರಣೆಗೆ ಬಳಸುವುದುಂಟು. (ಕೆ.ಜಿ.ಎನ್.)

**ಕೆಂಜು ಮೊಡವೆ :** ಕೆಲವು ಮಧ್ಯವಯಸ್ಕರಲ್ಲಿ ಕಾಣಬರುವ ಒಂದು ಚರ್ಮವ್ಯಾಧಿ (ಆಕ್ನಿ ರೊಸೇಸಿಯ). ಗಂಡಸರಿಗಿಂತ ಹೆಂಗಸರಲ್ಲಿ ಇದು ಸಾಮಾನ್ಯ. ಮೂಗು ಮತ್ತು ಕೆನ್ನೆಗಳು ಮೊದಲಿಗೆ ಕೆಂಪೇರುತ್ತವೆ. ಅನಂತರ ಕೆಂಪೇರಿದ ಚರ್ಮದ ಮಧ್ಯೆ ಕೆಲವು ಮೊಡವೆಗಳು ಕಾಣಿಸಿಕೊಳ್ಳುತ್ತವೆ. ಈ ಸ್ಥಿತಿ ಅದೇ ರೀತಿ ನಿಂತರೆ ಮೊಡವೆಗಳ ಸುತ್ತಲೂ ದೊಡ್ಡದಾದ ಲೋಮನಾಳಗಳು ಕಾಣಿಸಿಕೊಳ್ಳುತ್ತವೆ. ಈ ವ್ಯಾಧಿಯ ಕಾರಣಗಳು ಹಲವಾರು: ಸಾರಾಯಿ ಸೇವನೆ, ಬಿಸಿ ಬಿಸಿ ಆಹಾರವನ್ನು ನುಂಗುವುದು, ಮಸಾಲೆ ಊಟ, ಜಠರಕ್ಕೆ ರಕ್ತಚಲನೆ ಹೆಚ್ಚಿಸುವ ಪದಾರ್ಥಗಳ ಸೇವನೆ, ಜಠರದ ವ್ಯಾಪಾರದ ಬದಲಾವಣೆ, ಗ್ರಂಥಿಗಳ ವ್ಯಾಪಾರದ ಬದಲಾವಣೆ, ಚಿಂತಾಕುಲ ಮನಃಸ್ಥಿತಿ ಇತ್ಯಾದಿ.

ರೋಗಿ ಸ್ವಲ್ಪ ಸ್ವಲ್ಪ ಆಹಾರ ಸೇವಿಸುವುದರಿಂದಲೂ ಚುರುಕಾದ, ಅತಿ ಪುಷ್ಟಿ ಆಹಾರವನ್ನು ತ್ಯಜಿಸುವುದರಿಂದಲೂ ಮಾನಸಿಕವಾಗಿ ಸಮತೋಲವನ್ನು ಕಾಯ್ದಿಟ್ಟುಕೊಳ್ಳುವುದರ ಮೂಲಕವೂ ಮುಖ ಕೆಂಪೇರುವುದನ್ನೂ ಕೆಂಜುಮೊಡವೆಯನ್ನೂ ಹಿಡಿತದಲ್ಲಿಡಬಹುದು. (ಡಿ.ಪಿ.ಜೆ.)

**ಕೆಂಜ್ವರ :** ರಕ್ತಛಿದ್ರಕ ಸ್ಟ್ರೆಪ್ಟೋಕಾಕಸ್ ದಂಡಾಣುಜೀವಿ ಗಂಟಲನ್ನು ಸೇರಿದಾಗ ಉಂಟಾಗುವ ನಂಜಿನ ಪರಿಣಾಮವಾದ ಜ್ವರ (ಸ್ಕಾರ್ಲೆಟ್ ಫೀವರ್ ಅಥವಾ ಸ್ಕಾರ್ಲೆಟೀಸ್). ಗಂಟಲು ನೋವು, ಗಂಟಲು ಉರಿ ಮತ್ತು ಕೆಂಪು ಗುಳ್ಳೆಗಳ ಸಹಿತವಾದ ಜ್ವರ ಈ ರೋಗದ ಲಕ್ಷಣಗಳು. ಮಧ್ಯ ಕಿವಿ ಕೀವುಗಟ್ಟುವಿಕೆ, ಕೀಲುಜ್ವರ ಮತ್ತು ಮೂತ್ರಜನಕಾಂಗದ ಉರಿ ಇತರ ಬಾಧೆಗಳು. ರೋಗದ ಸೋಂಕು ತುಂತುರು ಹನಿಗಳ ಮೂಲಕವೂ ಮಲಿನ ಆಹಾರ ಪಾನೀಯಗಳ ಮೂಲಕವೂ ಹರಡುತ್ತದೆ. ಈ ರೋಗ ಶಾಲೆಗೆ ಹೋಗುವ ಮಕ್ಕಳಲ್ಲಿ ವಿಶೇಷವಾದರೂ, ಭಾರತದಲ್ಲಿ ಅಷ್ಟಾಗಿ ಕಾಣಸಿಕ್ಕದು. ಈ ಅಣುಜೀವಿ ಗಂಟಲಿನ ಸಂಬಂಧಪಡೆದ ಲಸಿಕೆ ಗ್ರಂಥಿಗಳಲ್ಲಿ ಹುದುಗಿ ಕುಳಿತು ನಾಲ್ಕೈದು ದಿವಸಗಳ ಅನಂತರ ರೋಗದ ಲಕ್ಷಣಗಳನ್ನು ಏಕಾಏಕಿಯಾಗಿ ಪ್ರಕಟಗೊಳಿಸುತ್ತದೆ. ರೋಗ ತೋರಿಬಂದ ಒಂದೆರಡು ದಿವಸಗಳಲ್ಲಿಯೇ ಅದು ಉಲ್ಬಣಸ್ಥಿತಿಗೆ ತಲಪುವುದು. ಪ್ರಾರಂಭದಲ್ಲಿ ಸುಸ್ತು, ಹಸಿವಿಲ್ಲದಿರುವಿಕೆ, ಜ್ವರ, ಚಳಿ, ತಲೆನೋವು ಮತ್ತು ಗಂಟಲಬೇನೆ ಇರುತ್ತವೆ. ಜ್ವರ ತೀವ್ರವಾಗಿರುವಾಗ ಅಣುಜೀವಿ ವಿಸರ್ಜಿಸುವ ಜೀವವಿಷದ ಫಲವಾಗಿ ರಕ್ತದ ಒತ್ತುಕಟ್ಟಾಗಿ ಚರ್ಮ ಕೆಂಪಡರುವುದು. ಕುತ್ತಿಗೆ, ಮುಖ, ಕಿವಿಯ ಸುತ್ತಮುತ್ತ ಎದೆಯ ಮೇಲ್ಭಾಗ, ಹೊಟ್ಟೆ ಮತ್ತು ಕೈಕಾಲುಗಳ ಮೇಲೆ ಕೆಂಪು ದದ್ದು ತೀವ್ರವಾಗಿ ಹರಡುವುದು. ನಾಡಿಯ ಬಡಿತ ತೀವ್ರವಾಗಿರುವುದು. ಗಂಟಲು, ಗಲಗ್ರಂಥಿ, ಕಿರುನಾಲಗೆ ಮತ್ತು ಮೃದ್ವಂಗುಳದ ಮೇಲಿನ ಲೋಳೆಪೊರೆ ಕೆಂದಾವರೆಯಂತೆ ಕೆಂಪಗೆ ಉಬ್ಬಿ ದಪ್ಪನಾಗುವುದು. ಲಸಿಕೆ ಗ್ರಂಥಿಗಳ ಬಾವಿನ ಫಲವಾಗಿ ಗಂಟಲು ಬೆಣಚುಗಲ್ಲಿನ ಹಾಸಿನಂತೆ ತೋರಿಬರುತ್ತದೆ. ಪ್ರಾರಂಭದಲ್ಲಿ ನಾಲಗೆಯ ಲೋಳೆಪೊರೆಯ ಕಣಗಳು ಪೊರೆ ಸಮೇತ ಉದುರಿಬಿದ್ದು ಸವಿಕುಡಿಗಳು ಅದರ ಮೇಲೆದ್ದು ತೋರಿದಾಗ ಅದು ತೊಂಡೆಹಣ್ಣಿನಂತೆ ಕಾಣುವುದು. ಮೈಕೆಂಬಣ್ಣ ತಳೆದಾಗ ದೂರದಿಂದ ನೋಡಿದರೆ ಎಲ್ಲೆಡೆಯಲ್ಲೂ ಒಂದೇ ರೀತಿಯಾಗಿ ತೋರಿಬರುತ್ತದೆ. ಆದರೆ ಹತ್ತಿರದಿಂದ ನೋಡಿದಾಗ ಸೂಜಿಮೊನೆಯಂಥ ಅನೇಕ ಚಿಕ್ಕಚಿಕ್ಕ ಕೆಂಪಾದ ಚುಕ್ಕೆಗಳು ಚರ್ಮದ ಮೇಲೆದ್ದಿರುವುದನ್ನು ಕಾಣಬಹುದು. ಈ ಚರ್ಮವನ್ನು ಮುಟ್ಟಿದಾಗ ಉಪ್ಪು ಕಾಗದದ ಮೇಲೆ ಕೈಯಾಡಿಸಿದಂತೆ ಭಾಸವಾಗುತ್ತದೆ. ಜ್ವರದ ಅವಧಿ 8–10 ದಿವಸಗಳು. ಅಷ್ಟರಲ್ಲಿ ಅದು ತಣಿದು ಗಂಟಲು ನೋವಿನ ಬಾಧೆ ಶಮನಗೊಳ್ಳುವುದು. ಕೆಂಪಡರಿದ ಚರ್ಮ ಒಂದು ವಾರದಲ್ಲಿ ಮೊದಲಿನ ಬಣ್ಣ ಪಡೆಯುವುದು ಮತ್ತು ಹೊರಚರ್ಮವೆಲ್ಲ ಒಣಗಿ ಪಕಳೆಯಾಗಿ ಉದುರಿಹೋಗುವುದು. ರಕ್ತಪರೀಕ್ಷೆ ಮಾಡಿದಾಗ ಬಿಳಿ ಕಣಗಳ ಸಂಖ್ಯೆ ಹೆಚ್ಚಿರುವುದು ತಿಳಿಯುತ್ತದೆ. ಗಂಟಲನ್ನು ಒರೆಸಿ ತೆಗೆದು ದ್ರವವನ್ನು ತಳಿ ಮಾಡಿದರೆ ರಕ್ತಛಿದ್ರಕ ಸ್ಟ್ರೆಪ್ಟೋಕಾಕಸ್ ಬೆಳೆಯುತ್ತದೆ. ಈ

ಅಣುಜೀವಿಯ ಜೀವಿವಿಷವನ್ನು ಮುಂಗೈ ಚರ್ಮದೊಳಗೆ ಕೊಟ್ಟು ಡಿಕ್ ಪರೀಕ್ಷೆ ಮಾಡಿದರೆ ರೋಗಕ್ಕೆ ಈಡಾಗುವ ಸಂಭವ ಇರುವವರಲ್ಲಿ ಆ ಪ್ರದೇಶ ಕೆಂಪಾಗಿ ತೋರಿಬರುತ್ತದೆ. ಪೆನಿಸಿಲಿನ್ ಈ ರೋಗದ ವಿರುದ್ಧ ಪ್ರಬಲವಾದ ಔಷಧ. ಅದನ್ನು ಹತ್ತು ದಿವಸಗಳ ಪರ್ಯಂತ ಕೊಟ್ಟರೆ ಈ ಜೀವಿಗಳೆಲ್ಲ ದೇಹದಿಂದ ದೂರವಾಗುವುವು.

(ಪಿ.ಎಸ್.ಎಸ್.; ಎಚ್.ಎಸ್.ಎಸ್.ಎಚ್.)

**ಕೆಂಟಕಿ :** ಅಮೆರಿಕ ಸಂಯುಕ್ತಸಂಸ್ಥಾನದ ದಕ್ಷಿಣ ಮಧ್ಯದಲ್ಲಿರುವ ಒಂದು ರಾಜ್ಯ. ನೀಲಿಹುಲ್ಲು ಸಮೃದ್ಧಿಯಾಗಿ ಈ ರಾಜ್ಯದಲ್ಲಿ ಬೆಳೆಯುವುದರಿಂದ ನೀಲಿ ಹುಲ್ಲಿನ ರಾಜ್ಯ ಎಂಬುದು ಇದರ ಜನಪ್ರಿಯ ಹೆಸರು. ಇದು 1792ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ 15ನೆಯ ರಾಜ್ಯವಾಯಿತು. ಆಲೆಗೇನಿ ಪರ್ವತಗಳಿಗೆ ಪಶ್ಚಿಮದಲ್ಲಿರುವ ಈ ರಾಜ್ಯದ ವಾಯವ್ಯ ಈಶಾನ್ಯಗಳಲ್ಲಿ ಒಹಾಯೊ ನದಿಯೇ ಗಡಿಯಾಗಿದೆ. ಆ ನದಿಯಿಂದಾಗಿ ಈ ರಾಜ್ಯ ಇಲಿನಾಯ್, ಒಹಾಯೊ ಮತ್ತು ಇಂಡಿಯಾನ ರಾಜ್ಯಗಳಿಂದ ಬೇರ್ಪಟ್ಟಿದೆ. ಪೂರ್ವದಲ್ಲಿ ವರ್ಜೀನಿಯ, ಬಿಗ್ ಸ್ಯಾಂಡಿ ನದಿ ಮತ್ತು ಅದರ ಕವಲಾದ ಟಗ್ ಇವು ಮೇರೆಗಳು. ಟಗ್ ನದಿಯಿಂದಾಗಿ ಕೆಂಟಕಿ ರಾಜ್ಯ ವೆಸ್ಟ್ ವರ್ಜೀನಿಯದಿಂದ ಪ್ರತ್ಯೇಕಗೊಂಡಿದೆ. ಆಗ್ನೇಯ ಮತ್ತು ದಕ್ಷಿಣಗಳಲ್ಲಿ ವರ್ಜೀನಿಯ ಮತ್ತು ಟನೇಸೀಗಳಿವೆ. ಪಶ್ಚಿಮದ ಗಡಿಯಾಗಿ ಹರಿಯುವ ನದಿ ಮಿಸಿಸಿಪಿ. ಈ ನದಿಯಿಂದಾಗಿ ಕೆಂಟಕಿ ರಾಜ್ಯ




ಮಿಸೂರಿಯಿಂದ ಪ್ರತ್ಯೇಕಗೊಂಡಿದೆ. ಕೆಂಟಕಿಯ ವಿಸ್ತೀರ್ಣ 104623 ಚ.ಕಿಮೀ ಇದರಲ್ಲಿ 1378 ಚ.ಕಿಮೀ ಜಲಾವೃತಪ್ರದೇಶವೂ ಸೇರಿದೆ. ಸಂಯುಕ್ತಸಂಸ್ಥಾನದ ರಾಜ್ಯಗಳ ಪೈಕಿ ಇದು ವಿಸ್ತೀರ್ಣದಲ್ಲಿ 37ನೆಯದು ಮತ್ತು ಜನಸಂಖ್ಯೆಯಲ್ಲಿ 22ನೆಯದು. ಕೆಂಟಕಿ ಎಂಬ ಹೆಸರು ಇಂಡಿಯನ್ ಮೂಲದ್ದು. ರಾಜ್ಯದ ಉತ್ತರದ ಮಧ್ಯಭಾಗದಲ್ಲಿ 400 ಕಿಮೀಗಳಷ್ಟು ದೂರ ಹರಿದು ಒಹಾಯೊ ನದಿಯನ್ನು ಸೇರುವ ಕೆಂಟಕಿ ನದಿಯಿಂದಾಗಿ ಇದಕ್ಕೆ ಕೆಂಟಕಿ ಎಂಬ ಹೆಸರು ಬಂದಿದೆ.

**ಭೌತಲಕ್ಷಣ :** ಪೂರ್ವದಲ್ಲಿಯ ಪರ್ವತ ಪ್ರದೇಶಗಳಿಂದ ಪಶ್ಚಿಮದೆಡೆಗೆ ಸಾಗುತ್ತ ಬಂದಂತೆ ನೆಲ ತೆವರುತೆವರಾಗಿ ತಗ್ಗುತ್ತ ಸಾಗುತ್ತದೆ. ಉ.ಅ.36º 30'ಮತ್ತು 39º 6' ಪ.ರೇ. 82º ಮತ್ತು 89º 33'ಗಳಿಗೂ ನಡುವಣ ಮಿಸಿಸಿಪಿ ಜಲಾನಯನ ಪ್ರದೇಶದಲ್ಲಿ ಈ ರಾಜ್ಯ ಹಬ್ಬಿದೆ. ಆಗ್ನೇಯ ದಿಕ್ಕಿನಲ್ಲಿ ಕೆಲಭಾಗ ಕಂಬರ್ಲೆಂಡ್ ಮತ್ತು ಪೈನ್ ಪರ್ವತಗಳಿಂದ ಆವೃತವಾಗಿದೆ. ರಾಜ್ಯದಲ್ಲಿಯ ಅತ್ಯುನ್ನತ ಪ್ರದೇಶವೆಂದರೆ ಹಾರ್ಲಾನ್ ಕೌಂಟಿಯಲ್ಲಿಯ ಬಿಗ್ ಬ್ಲ್ಯಾಕ್ ಪರ್ವತ (1256 ಮೀ); ಅತಿ ತಗ್ಗಿನ ಪ್ರದೇಶವೆಂದರೆ ಮಿಸಿಸಿಪಿ ನದಿಯ ದಂಡೆಯ ಮೇಲಿರುವ ಪುಲ್ಟನ್ ಕೌಂಟಿ (78 ಮೀ). ರಾಜ್ಯದ ಸರಾಸರಿ ಎತ್ತರ 227 ಮೀ. ರಾಜ್ಯದ ಪೂರ್ವದ ಕಾಲುಭಾಗ ಪೂರ್ತಿ ಪರ್ವತಮಯ; ಆದರೆ ವಾಸ್ತವವಾಗಿ ನೋಡಿದರೆ ಕಂಬರ್ಲೆಂಡ್ ಮತ್ತು ಪೈನ್ ಪರ್ವತಗಳನ್ನು ಬಿಟ್ಟು ಉಳಿದೆಲ್ಲ ಭಾಗವೂ ಆಲೆಗೇನಿ ಪ್ರಸ್ಥಭೂಮಿಯೆಂದೇ ಹೇಳಬೇಕು. ಕಿರಿದಾದ ಕಣಿವೆಗಳಿಂದಲೂ ಕಡಿದಾದ ಗುಡ್ಡಗಳಿಂದಲೂ ಕೂಡಿರುವ ಈ ಪ್ರದೇಶದ ಗರಿಷ್ಠ ಎತ್ತರ 454 ಮೀ. ಟೆನೆಸೀ ನದಿಗೆ ಪೂರ್ವಕ್ಕಿರುವ ಉಳಿದ ಭಾಗ ನೀಲಿ ಹುಲ್ಲಿನಿಂದಲೂ ದಕ್ಷಿಣದಲ್ಲಿ ಹೈಲೆಂಡ್ ರಿಮ್ ಪ್ರಸ್ಥಭೂಮಿಯಿಂದಲೂ ಕೂಡಿದೆ. ನೀಲಿ ಹುಲ್ಲಿನ ಭೂಮಿ ಸವೆತಕ್ಕೀಡಾದ್ದು. ಕೆಲವೆಡೆ ಸಮತಲ ಪ್ರದೇಶಗಳಲ್ಲಿ ಸೊಂಪಾದ ನೀಲಿ ಹುಲ್ಲಿನಿಂದೊಡಗೂಡಿದ ಬೆಟ್ಟಗಳು ಹಾಗೂ ಕಣಿವೆಗಳು ಸುತ್ತುವರಿದ ನೈಸರ್ಗಿಕ ಉದ್ಯಾನಗಳು ಮನೋಹರವಾಗಿವೆ. ಜೂನ್ ತಿಂಗಳ ಮಧ್ಯಭಾಗದಲ್ಲಂತೂ ನೀಲಿ ಹುಲ್ಲು ಅತ್ಯಂತ ಸಮೃದ್ಧವಾಗಿ, ಪ್ರಕೃತಿ ನೀಲಿಯನ್ನೇ ಹೊದ್ದಂತೆ ತೋರಿ ಬರುತ್ತದೆ. ರಾಜ್ಯದಲ್ಲಿ ಹರಿಯುವ ನದಿಗಳಲ್ಲಿ ಕೆಂಟಕಿ, ಲಿಕಿಂಗ್, ರಾಕ್ ಕ್ಯಾಸಲ್, ಸಾಲ್ಟ್, ಗ್ರೀನ್ ಮತ್ತು ಟ್ರೇಡ್ ವಾಟರ್ ಮುಖ್ಯವಾದವು. ಕಂಬರ್ಲೆಂಡ್ ನದಿ ರಾಜ್ಯದ ಆಗ್ನೇಯ ಹಾಗೂ ದಕ್ಷಿಣ ಮಧ್ಯಭಾಗಗಳಲ್ಲಿ ಹರಿದು, ದಕ್ಷಿಣ ಎಲ್ಲೆಕಟ್ಟಿನ ಬಳಿ ಟೆನೆಸೀಯನ್ನು ಹೋಗುತ್ತದೆ. ನೈಋತ್ಯಭಾಗದ ಕೊನೆಯಲ್ಲಿ ಕಂಬರ್ಲೆಂಡ್ ನದಿ ಪುನಃ ಕೆಂಟಕಿಯನ್ನು ಪ್ರವೇಶಿಸಿ ಒಹಾಯೊ ನದಿಯನ್ನು ಸೇರುತ್ತದೆ. ಅನತಿ ದೂರದಲ್ಲಿ ಟೆನೆಸೀ ನದಿಯೂ ಈ ರಾಜ್ಯದ ಗಡಿಯನ್ನು ದಾಟಿ ಒಹಾಯೊದಲ್ಲಿ ಸಂಗಮಿಸುತ್ತದೆ.

**ವಾಯುಗುಣ :** ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿದಲ್ಲಿ ಕೆಂಟಕಿಯ ವಾಯುಗುಣ ಹೆಚ್ಚು ಹಿತಕರ. ಆಗ್ನೇಯ ಭಾಗದಲ್ಲಿ ಮಧ್ಯಕ ವಾರ್ಷಿಕ ಉಷ್ಣತೆ 10º ಸೆ. ನೈಋತ್ಯದಲ್ಲಿ ಟನೇಸಿಗೆ ಪಶ್ಚಿಮದಲ್ಲಿ 15.5º ಸೆ. ಇಡೀ ರಾಜ್ಯದ ಮಧ್ಯಕ ಉಷ್ಣತೆ 12.7ºಸೆ. ವಾರ್ಷಿಕ ಸರಾಸರಿ ಅವಪತನ ಈಶಾನ್ಯದಲ್ಲಿ 76 ಸೆ.ಮೀ. ಇಂದ ದಕ್ಷಿಣದಲ್ಲಿ 100 ಸೆ.ಮೀ.ವರೆಗೆ ವ್ಯತ್ಯಾಸವಾಗುತ್ತದೆ. ಇಡೀ ರಾಜ್ಯದಲ್ಲಿ 92 ಸೆ.ಮೀ. ಸಾಮಾನ್ಯವಾಗಿ ವರ್ಷ ಪೂರ್ತಿ ಅವಪತನವಾಗುತ್ತದೆ. ಹಿಮಪಾತ ಇಲ್ಲವೇ ಇಲ್ಲವೆನ್ನಬಹುದು. ಪಶ್ಚಿಮದಿಂದ ಅಥವಾ ನೈಋತ್ಯದಿಂದ ಗಾಳಿ ಬೀಸಿ ತೇವವನ್ನು ಹೊತ್ತು ತರುತ್ತದೆ. ಉತ್ತರ ಹಾಗೂ ವಾಯವ್ಯ ದಿಕ್ಕುಗಳಿಂದ ಬೀಸುವ ಚಳಿಮಾರುತಗಳು ಹಣ್ಣಿನ ತೋಟಗಳಿಗೆ ಅಪಾಯಕರ.

**ಮಣ್ಣಿನ ಗುಣ :** ನದೀತೀರದ ಮೆಕ್ಕಲು ಮಣ್ಣಿನ ಪ್ರದೇಶವನ್ನು ಬಿಟ್ಟರೆ, ರಾಜ್ಯದ ಮಣ್ಣೆಲ್ಲ ಬಂಡೆಗಳ ಸವೆತದಿಂದ ಸಂಭವಿಸಿದ್ದು. ಆದ್ದರಿಂದ ಅವುಗಳ ಫಲವತ್ತು ಕಡಿಮೆ. ನೀಲಿ ಹುಲ್ಲಿನ ಪ್ರದೇಶಗಳಲ್ಲಿಯ ಮಣ್ಣೂ ಫಲವತ್ತಾಗಿರುತ್ತದೆ. ಲೆಕ್ಸಿಂಗ್‌ಟನ್ ಸುತ್ತಮುತ್ತಲ 40 ಕಿಮೀಗಳಷ್ಟು ಪ್ರದೇಶದ ಮಣ್ಣು ಅತ್ಯಂತ ಫಲವತ್ತಾದ್ದು. ಸಮತಲ ಪ್ರದೇಶ ಹಾಗೂ ಟನೇಸಿ ನದಿಯ ಪಶ್ಚಿಮದ ಕೆಳಗಿನ ಪ್ರದೇಶಗಳಲ್ಲಿ ಮಣ್ಣಿನ ಗುಣಗಳೂ ಬದಲಾಗುತ್ತಿರುತ್ತವೆ. ಪರ್ವತ ಪ್ರದೇಶಗಳಲ್ಲಿ ಹಾಗೂ ಆಲೆಗೇನಿಯಲ್ಲಿ ಮಣ್ಣು ಹಗುರವಾಗಿಯೂ ತೆಳುವಾಗಿಯೂ ಇದೆ.

**ಸಸ್ಯಗಳು, ಪ್ರಾಣಿಗಳು :** ಕೆಂಟಕಿಯ ಪೂರ್ವಪರ್ವತ ಪ್ರದೇಶಗಳಲ್ಲಿ ವಿವಿಧ ರೀತಿಯ ಸಸ್ಯಗಳಿವೆ. ಅಜೇಲಿಯ, ಗ್ರೇಟ್ ಲಾರೆಲ್, ಕಣಿಗಲು, ರೋಡೊಡೆಂಡ್ರಾನ್, ಹಕಲ್ ಬೆರಿ. ಮ್ಯಾಗ್ನೋಲಿಯ, ಬ್ಲೂಬೆರಿ ಮತ್ತು ಅನೇಕ ಫರ್ನ್‌ಗಳನ್ನು ಇಲ್ಲಿ ಕಾಣಬಹುದು. ಟ್ಯುಲಿಪ್, ರೆಡ್‌ಬಡ್ ಮತ್ತು ಡಾಗ್‌ವುಡ್ ಮರಗಳು ಸಾಮಾನ್ಯ. ಟ್ರಿಲಿಯಂ ಮುಂತಾದ ಕಾಡುಹೂವುಗಳು, ಜವುಗು ಸಸ್ಯಗಳು, ನೀಲಿ ಹುಲ್ಲು ಮೊದಲಾದವು ಉಳಿದ ಸ್ವಾಭಾವಿಕ ಸಸ್ಯಗಳು.

ರಾಜ್ಯದ ಮಧ್ಯಭಾಗದಲ್ಲಿ ಒಮ್ಮೆ ಕೋಣಗಳೂ ಪ್ಯೂಮಗಳು ಇದ್ದುವು. ಅಳಿಲು, ಮೊಲ, ನರಿ ಮೊದಲಾದ ಸ್ತನಿ ಪ್ರಾಣಿಗಳು ಅಧಿಕ ಸಂಖ್ಯೆಯಲ್ಲಿವೆ. ರಕೂನ್ ಸಾಮಾನ್ಯವಾಗಿ ಕಂಡುಬರುತ್ತದೆ. ವಿವಿಧ ಜಾತಿಯ ಪಕ್ಷಿಗಳೂ ಮೀನುಗಳೂ ರಾಜ್ಯದಾದ್ಯಂತ ಇವೆ.

**ಚರಿತ್ರೆ :** ಐರೋಪ್ಯ ವಲಸೆಗಾರರು ಬರುವ ಮುನ್ನ ಇಲ್ಲಿ ಸಂಸ್ಕೃತಿಯ ಎರಡು ಮೂರು ಘಟ್ಟಗಳಿದ್ದುವೆಂಬುದಕ್ಕೆ ಆಧಾರಗಳು ದೊರೆತಿವೆ. ಇಲ್ಲಿಯ ಆದಿವಾಸಿಗಳದು ಕೃಷಿ ಮತ್ತು ಬೇಟೆಗಾರಿಕೆಯ ನಾಗರಿಕತೆಯಾಗಿತ್ತು. ಅನಂತರ ಕಾಲದಲ್ಲಿದ್ದ ಇಂಡಿಯನರು ಬೇಟೆಯಾಡುತ್ತಿದ್ದರಲ್ಲದೆ ರಾಜ್ಯದ ಎಲ್ಲೆಕಟ್ಟಿನ ಉದ್ದಕ್ಕೂ ಹಳ್ಳಿಗಳನ್ನು ಕಟ್ಟಿ ನೆಲಸಿದ್ದರು. ಒಹಾಯೊ ಕಡೆಯಿಂದ ಷಾನೀ ಜನರೂ ದಕ್ಷಿಣದಿಂದ ಚೆರೊಕೀಗಳೂ ಈ ಪ್ರದೇಶದ ಮೇಲೆ ಆಕ್ರಮಣ ನಡೆಸಿದ್ದರು. ಈ ಜನರಲ್ಲಿ ಪರಸ್ಪರ ಕದನಗಳು ನಡೆಯುತ್ತಲೇ

ಟೆನೆಸೀ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಕೆಂಟಕಿ ಕಟ್ಟೆ : ಆಧಾರ ಶಿಲೆಯಿಂದ 211' ಎತ್ತರ ಇರುವ ಇದರ ಉದ್ದ 3,700'. ಸಾರಿಗೆ ಸೌಲಭ್ಯ ಕಲ್ಪಿಸುವುದರ ಜೊತೆಗೆ ಇದು ವಿದ್ಯುತ್ತಿನ ಉತ್ಪಾದನೆಗೂ ನೆರವಾಗಿದೆ.

ಇದ್ದುವು. 18ನೆಯ ಶತಮಾನದ ನಡುಗಾಲದಲ್ಲಿ ಇದು ವಿಶೇಷವಾಗಿ ಐರೋಪ್ಯರ ಗಮನ ಸೆಳೆಯಿತು. 1749ರಲ್ಲಿ ಮಾಂಟ್ರೇಲಿನಿಂದ ಸೆಲೊರಾನ್-ದ-ಬ್ಲೇನ್ ವಿಲ್

ಇಲ್ಲಿಗೆ ಬಂದು ತನ್ನ ಸ್ವಾಮ್ಯ ಸ್ಥಾಪಿಸಲು ಯತ್ನಿಸಿದ. ವರ್ಜಿನಿಯ ಮತ್ತು ಪೆನ್ಸಿಲ್ವೇನಿಯದ ವ್ಯಾಪಾರಿಗಳೂ ಇದಕ್ಕೆ ಮುಂಚೆ ಇಲ್ಲಿಗೆ ಬಂದಿದ್ದರು. ಫ್ರೆಂಚರೂ ಈ ಸ್ಪರ್ಧೆಯಲ್ಲಿ ಸೇರಿದ್ದರು. ಒಹಾಯೊ ಕಣಿವೆಯ ವಿಸ್ತಾರಪ್ರದೇಶಗಳ ಮೇಲೆ ಹಕ್ಕು ಸ್ಥಾಪಿಸುವ

ಬೌಲಿಂಗ್ ಗ್ರೀನ್ ಬಳಿಯ ಬೃಹತ್ ಗುಹೆ : ಪ್ರವಾಸಿ ಆಕರ್ಷಣೆ

ಉದ್ದೇಶದಿಂದ ಅನೇಕ ಕಂಪನಿಗಳು ಸ್ಥಾಪಿತವಾದುವು. ಫ್ರೆಂಚರಿಗೂ ಸ್ಥಳೀಯ ಇಂಡಿಯನರಿಗೂ ನಡುವೆ ನಡೆದ ಯುದ್ಧದಿಂದಾಗಿ ಕೆಂಟಕಿಯ ಪರಿಶೋಧನೆ ಸ್ವಲ್ಪಕಾಲ ತಟಸ್ಥವಾಗಿತ್ತು. ವರ್ಜಿನಿಯದ ವ್ಯಾಪಾರಿ ಜಾನ್ ಫಿನ್ಲೆ ಈ ಪ್ರದೇಶದಲ್ಲಿ ಸಂಚಾರ ಮಾಡುತ್ತ ಪ್ರಾಣ ನೀಗಿದ. ಅನಂತರ ಬೂನ್ ಬಂದ. ಕ್ರಮಕ್ರಮವಾಗಿ ವಲಸೆಗಾರರು ಪರ್ವತಗಳ ಅಡಚಣೆಗಳನ್ನು ದಾಟಿ ಇಲ್ಲಿಗೆ ಬಂದು ನೆಲಸಲಾರಂಭಿಸಿದರು. ಬ್ರಿಟಿಷರ ಆಡಳಿತದಿಂದ ಸ್ವತಂತ್ರವಾಗಲು ಅಮೆರಿಕನರು ನಡೆಸಿದ ಸಂಗ್ರಾಮದ ಫಲವನ್ನು ಕೆಂಟಕಿಯ ನೆಲಸಿಗರೂ ಅನುಭವಿಸಬೇಕಾಯಿತು. ಇವರ ವಿರುದ್ಧ ಹೋರಾಟ ನಡೆಸಲು ಬ್ರಿಟಿಷರು ಇಂಡಿಯನರನ್ನು ಪ್ರೇರೇಪಿಸಿದರು.

ಇಂಡಿಯನರ ವಿರುದ್ಧ ನಡೆದ ಯುದ್ಧಗಳಲ್ಲಿ ಇವರು ವಿಜಯಸಾಧಿಸುತ್ತಿದ್ದಂತೆ ಇನ್ನೊಂದು ಸಮಸ್ಯೆ ಉದ್ಭವಿಸಿತು. ವರ್ಜಿನಿಯ ಮತ್ತು ಉತ್ತರ ಕೆರೋಲೀನಗಳು ಕೆಂಟಕಿಯ ಮೇಲಿನ ಸ್ವಾಮ್ಯಕ್ಕಾಗಿ ಪರಸ್ಪರ ಬಡಿದಾಡಿದುವು. 1776ರಲ್ಲಿ ವರ್ಜಿನಿಯಾದ ವಿಧಾನಸಭೆ ಕೆಂಟಕಿ ಕೌಂಟಿಯನ್ನು ನಿರ್ಮಿಸಿತು. 1780ರಲ್ಲಿ ಇದನ್ನು ಮೂರು ಕೌಂಟಿಗಳಾಗಿ ವಿಭಾಗಿಸಲಾಯಿತು. ಈ ಮೂರನ್ನು ಒಳಗೊಂಡ ಜಿಲ್ಲೆಗೆ 1783ರಲ್ಲಿ ಕೆಂಟಕಿ ಎಂಬ ಹೆಸರು ಬಂತು.

1775–84ರಲ್ಲಿ ಇಲ್ಲಿಯ ಜನಸಂಖ್ಯೆ 100ರಿಂದ 30,000ಕ್ಕೆ ಏರಿತು. ಅಮೆರಿಕನ್ ಕ್ರಾಂತಿಯ ಅನಂತರ ದೇಶದ ಪೂರ್ವಭಾಗಗಳಿಂದ ಜನರು ಅಧಿಕವಾಗಿ ಬರಲಾರಂಭಿಸಿದರು. ಇವರಲ್ಲಿ ಇಂಗ್ಲೀಷ್, ಸ್ಕಾಟಿಷ್, ಐರಿಷ್, ಜರ್ಮನ್ ಮತ್ತು ಫ್ರೆಂಚ್ ಮೂಲಗಳ ಜನರೇ ಅಲ್ಲದೆ ನೀಗ್ರೋ ಗುಲಾಮರೂ ಇದ್ದರು. ಪಟ್ಟಣಗಳು ಬೆಳೆದವು.

ನಾಡಿನಲ್ಲಿ ನೆಮ್ಮದಿ ನೆಲಸಿ, ಪ್ರಗತಿಯಾಗತೊಡಗಿದ ಮೇಲೆ ಕೆಂಟಕಿಯ ಜನರಲ್ಲಿ ವರ್ಜೀನಿಯಾದಿಂದ ಪ್ರತ್ಯೇಕವಾಗಬೇಕೆಂಬ ಅಭೀಪ್ಸೆ ಬಲವಾಯಿತು. ಇದಕ್ಕಾಗಿ ಚಳವಳಿ ನಡೆಯಿತು. ಕೊನೆಗೆ ಕೆಂಟಕಿ ಪ್ರತ್ಯೇಕವಾದ್ದು 1792ರಲ್ಲಿ. ಆ ವರ್ಷದ ಜೂನ್ 1ರಂದು ಅದು ಒಕ್ಕೂಟ ರಾಜ್ಯವಾಯಿತು.

19ನೆಯ ಶತಮಾನದಲ್ಲಿ ಕೆಂಟಕಿಯಲ್ಲಾದ ಬದಲಾವಣೆಗಳು ಅಗಾಧ. ಕೃಷಿ ಅಭ್ಯುದಯ ಹೊಂದಿತು. ಮಿಸಿಸಿಪಿ ನೀರಿನ ಬಳಕೆಯ ಬಗ್ಗೆ ವ್ಯಾಜ್ಯ ಪರಿಹಾರವಾಗಿತ್ತು. ನೆಲದಾಹ ಅಧಿಕವಾದಾಗ ನೆಲಸಿಗರು ಇಂಡಿಯನ್ ಭೂಮಿಯ ಮೇಲೆ ಕಣ್ಣು ಹಾಯಿಸಿದರು. ಶಾನೀಗಳ ಯಜಮಾನ ಟೆಕುಮ್ಸೇ ಈ ಪ್ರಯತ್ನವನ್ನು ವಿರೋಧಿಸಿದ. ದಕ್ಷಿಣದ ಇಂಡಿಯನ್ನರ ಒಕ್ಕೂಟವೊಂದನ್ನು ಸ್ಥಾಪಿಸಿದ. ಕೆಂಟಕಿಗೂ ಇಂಡಿಯನ್ನರಿಗೂ 1811ರಲ್ಲಿ ನಡೆದ ಕದನವೇ 1812ರ ಯುದ್ಧಕ್ಕೆ ನಾಂದಿಯಾಯಿತು. ಇಂಡಿಯನರಿಗೆ ಪ್ರೇರಣೆ ನೀಡುತ್ತಿದ್ದ ಬ್ರಿಟಿಷರನ್ನೂ ಕೆಂಟಕಿ ಎದುರಿಸಬೇಕಾಯಿತು.

1812ರ ಯುದ್ಧದಿಂದಾಗಿ ಕೆಂಟಕಿಯ ಆರ್ಥಿಕ ಸ್ಥಿತಿ ಹದಗೆಟ್ಟಿತು. ಅಮೆರಿಕನ್ ಮಾರುಕಟ್ಟೆಗಳಲ್ಲಿ ಬ್ರಿಟೀಷರು ತಂದು ತುಂಬಿದ ಸರಕುಗಳಿಂದಾಗಿ ಕೆಂಟಕಿಯನರು ದಿವಾಳಿ ಏಳುವ ಸ್ಥಿತಿಗೆ ಬಂದರು. ಸಾಲ ಮಿತಿ ಮೀರಿ ಬೆಳೆಯಿತು. ಸಾಲಗಾರರ ಪರಿಹಾರಾರ್ಥವಾಗಿ ಕಾನೂನನ್ನು ಜಾರಿಗೆ ತರುವುದನ್ನು ಅಲ್ಲಿಯ ಕೆಲವು ಆಸಕ್ತರು ವಿರೋಧಿಸಿದರು. ಹಳೆಯ ಕಾನೂನುಗಳನ್ನು ಎತ್ತಿ ಹಿಡಿದ ನ್ಯಾಯಾಲಯಗಳನ್ನು ರದ್ದು ಮಾಡಿ ಹೊಸ ನ್ಯಾಯಾಲಯಗಳನ್ನು ಅಲ್ಲಿಯ ವಿಧಾನಮಂಡಲ ಜಾರಿಗೆ ತಂದಿತು. ಇದು ಅನವಶ್ಯಕವಾದ ವಾದ ಪ್ರತಿವಾದಗಳಿಗೆ ಎಡೆಕೊಟ್ಟಿತು.

ಕೆಂಟಕಿಯಲ್ಲಿದ್ದ ಗುಲಾಮಗಿರಿಯನ್ನು ರದ್ದು ಮಾಡಲು ಸಂವಿಧಾನವನ್ನು ತಿದ್ದುಪಡಿ ಮಾಡಬೇಕೆಂದು ನಡೆಸಿದ ಪ್ರಯತ್ನಗಳಿಗೂ ತೀವ್ರ ವಿರೋಧವಿತ್ತು. 1820ರಿಂದ 1860ರ ತನಕ ಈ ಚರ್ಚೆ ಮುಂದುವರಿಯಿತು. ಗುಲಾಮಗಿರಿ ರದ್ದು ಮಾಡುವುದು ಚುನಾವಣೆಗಳ ಒಂದು ಪ್ರಶ್ನೆಯಾಗಿತ್ತಾದರೂ ಸಾಮಾನ್ಯವಾಗಿ ಗುಲಾಮಗಿರಿಯ ಪರವಾಗಿದ್ದವರೇ ಆರಿಸಿ ಬರುತ್ತಿದ್ದರು. ಕೊನೆಗೆ ಇದನ್ನು ತೊಡೆದು ಹಾಕಲು ಸಾಧ್ಯವಾದದ್ದು 1865ರಲ್ಲಿ.

ಅಮೆರಿಕನ್ ಅಂತರ್ಯುದ್ಧದ ಕಾಲದಲ್ಲಿ ಕೆಂಟಕಿಯ ನಾಯಕತ್ವ ನಿರ್ಣಾಯಕವಾದ ರೀತಿಯಲ್ಲಿ ವರ್ತಿಸಲಿಲ್ಲ. ಅದು ತಟಸ್ಥ ನೀತಿ ಅನುಸರಿಸಬಯಸಿತು. ಆದರೂ ಎರಡು ಪಕ್ಷಗಳೂ ಇದರ ಮೇಲೆ ಆಕ್ರಮಣ ನಡೆಸಿದವು. ಯುದ್ಧಾನಂತರವೂ ಬಹುಕಾಲ ಇಲ್ಲಿ ಅಶಾಂತಿಯಿತ್ತು. ಕ್ರಮಕ್ರಮವಾಗಿ ಕೆಂಟಕಿ ಪ್ರಗತಿ ಹೊಂದಿತು. ಒಂದನೇ ಮಹಾಯುದ್ಧದ ಅನಂತರ ಅನೇಕ ಕೈಗಾರಿಕೆಗಳು ಬೆಳೆದವು. ಸಾಮಾಜಿಕವಾಗಿಯೂ ಇಲ್ಲಿ ಅಗಾಧ ಪರಿವರ್ತನೆಗಳಾಗಿವೆ.

**ಆಡಳಿತ :** ರಾಜ್ಯದ ನಾಲ್ಕನೆಯ ಸಂವಿಧಾನದ (1891) ಪ್ರಕಾರ ಅದರ ಕಾರ್ಯಾಂಗದ ಪ್ರಾಧಿಕಾರಿ ಗವರ್ನರ್. ಸೆನೆಟ್ ಸದಸ್ಯರ ಅಧಿಕಾರದ ಅವಧಿ ನಾಲ್ಕು ವರ್ಷ. ಒಟ್ಟು ಸದಸ್ಯರಲ್ಲಿ ಅರ್ಧಸಂಖ್ಯೆಯ ಜನ ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತಿ ಹೊಂದುತ್ತಾರೆ. ಪ್ರತಿನಿಧಿ ಸಭೆಯ ಸದಸ್ಯತ್ವದ ಅವಧಿ ಎರಡು ವರ್ಷ. ರಾಜ್ಯದಲ್ಲಿ ವಿಧಿಬದ್ಧವಾದ ನ್ಯಾಯವ್ಯವಸ್ಥೆಯೂ ಇದೆ. ಪೌರಸಭೆಗಳು ಆಯಾ ಸ್ಥಳಗಳ ಜನಸಂಖ್ಯೆಗೆ ಅನುಗುಣವಾಗಿ ಆರು ವರ್ಗಗಳಾಗಿ ವಿಂಗಡವಾಗಿವೆ.

**ಜನಸಂಖ್ಯೆ :** 1960ರ ಜನಗಣತಿಯ ಪ್ರಕಾರ ರಾಜ್ಯದ ಜನಸಂಖ್ಯೆ 30,38,156. 1960–69ರ ತನಕ ಹತ್ತು ವರ್ಷಗಳಲ್ಲಿ ಜನಸಂಖ್ಯೆ ಶೇಕಡ 3.2ರಷ್ಟು ಹೆಚ್ಚಿತು. ಜನಸಂಖ್ಯೆಯಲ್ಲಿ ಶೇಕಡಾ44.5 ನಗರವಾಸಿಗಳು. ಒಟ್ಟು ಜನಸಂಖ್ಯೆಯಲ್ಲಿ ಶೇಕಡ 92.3 ಜನ ಸ್ಥಳೀಯ ಬಿಳಿಯರು. 72ರಷ್ಟು ಬಿಳಿಯರಲ್ಲದವರು. ಇವರಲ್ಲಿ ಬಹುತೇಕ ನೀಗ್ರೋಗಳೇ. ಉದ್ಯೋಗಿಗಳಾದ ಪುರುಷರಲ್ಲಿ ಶೇ. 7 ಜನರು ವಿವಿಧ ನಿರ್ಮಾಣ ಕಾರ್ಯಗಳಲ್ಲೂ ಶೇ. 31.9 ಜನ ವ್ಯವಸಾಯದಲ್ಲೂ 14.8ರಷ್ಟು ಜನ ವಿವಿಧ ವಸ್ತುಗಳ ತಯಾರಿಕೆಯಲ್ಲೂ ಶೇ. 19.8ರಷ್ಟು ಜನ ವ್ಯಾಪಾರ ಮತ್ತು ಸಾರಿಗೆ ಉದ್ಯಮಗಳಲ್ಲೂ ನಿರತರಾಗಿದ್ದಾರೆ. ಈ ಜನ ಅಂಕಿ ಅಂಶಗಳ ಪ್ರಕಾರ ಜನಸಂಖ್ಯೆ 4,173,405 (2000).

**ವಿದ್ಯಾಭ್ಯಾಸ :** ರಾಜ್ಯದಲ್ಲಿ 1849ರಲ್ಲಿ ಜಾರಿಗೆ ಬಂದ ಮೂರನೆಯ ಸಂವಿಧಾನದ ಮೇರೆಗೆ ಸಾರ್ವಜನಿಕ ಶಾಲೆಗಳು ಅಸ್ತಿತ್ವಕ್ಕೆ ಬಂದುವು. 1908ರಲ್ಲಿ ಸರ್ಕಾರದಿಂದ ಇವಕ್ಕೆ ಹೆಚ್ಚಿನ ಧನ ಸಹಾಯ ದೊರೆಯಲಾರಂಭವಾಯಿತು. 1908ರಿಂದ ಈಚೆಗೆ ಕೆಂಟಕಿ ಸ್ಟೇಟ್ ಕಾಲೇಜು (ಕೆಂಟಕಿ ವಿಶ್ವವಿದ್ಯಾಲಯ) ಸಾಕಷ್ಟು ಪ್ರಮಾಣದಲ್ಲಿ ಸ್ನಾತಕ ಶಿಕ್ಷಣ ನೀಡುತ್ತಿದೆ. 1948ರಲ್ಲಿ ನೀಡಲಾದ ನ್ಯಾಯಾಲಯದ ತೀರ್ಪಿನ ಪ್ರಕಾರ ಕೆಂಟಕಿ ವಿಶ್ವವಿದ್ಯಾಲಯದ ವಿಶೇಷ ಶಾಲೆಗಳಲ್ಲಿ ನೀಗ್ರೋಗಳಿಗೂ ಪ್ರವೇಶ ದೊರಕಿತು. 1954ರಿಂದೀಚೆಗೆ ಮೂಲ ಶಿಕ್ಷಣ ಕ್ಷೇತ್ರದಲ್ಲಿ ವರ್ಣಭೇದವನ್ನು ಸಂಪೂರ್ಣವಾಗಿ ಅಳಿಸಿ ಹಾಕುವಂತೆ ಆಜ್ಞೆ ಮಾಡಲಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕೆಂಟಕಿ ವಿಶ್ವವಿದ್ಯಾಲಯವೂ ಸೇರಿದಂತೆ ಎಂಟು ಚತುರ್ವರ್ಷೀಯ ಕಾಲೇಜುಗಳಿವೆ. ಕೆಂಟಕಿ ವಿಶ್ವವಿದ್ಯಾಲಯದ ಕೇಂದ್ರ ಲೆಕ್ಸಿಂಗ್‌ಟನ್. ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸಾಮಾನ್ಯ ಶಿಕ್ಷಣವನ್ನು ಒದಗಿಸುವ ಕಾಲೇಜುಗಳೇ ಅಲ್ಲದೆ ಕಾನೂನು, ವೈದ್ಯ, ದಂತ ಚಿಕಿತ್ಸೆ ಮುಂತಾದ ಶಿಕ್ಷಣವನ್ನು ಒದಗಿಸುವ ಕಾಲೇಜುಗಳೂ ಇವೆ. ಇವೆ ಅಲ್ಲದೆ ವಿವಿಧ ಎಡೆಗಳಲ್ಲಿ ಅನೇಕ ರಾಜ್ಯ ಕಾಲೇಜುಗಳು ಜೂನಿಯರ್ ಕಾಲೇಜುಗಳೂ ಇವೆ.

**ಕೃಷಿ :** ರಾಜ್ಯದ ಆರ್ಥಿಕ ಜೀವನದ ಮೇಲೆ ಕೃಷಿ ಬೀರಿದಷ್ಟು ಪರಿಣಾಮವನ್ನು ಇನ್ನಾವುದೂ ಬೀರಿಲ್ಲ. ಕೃಷಿನೆಲದ ವಿಸ್ತೀರ್ಣ ಕ್ರಮಕ್ರಮವಾಗಿ ಕಡಿಮೆಯಾಗುತ್ತಿದ್ದರೂ ಧಾನ್ಯದ ಪರಿಮಾಣವೂ ಗುಣಮಟ್ಟವೂ ಏರುತ್ತಿವೆ. ಯಾಂತ್ರೀಕರಣದಿಂದಾಗಿ ನಗರಾಭಿಮುಖವಾಗಿ ಜನರು ಹೋಗುತ್ತಿದ್ದರೂ ಕೃಷಿ ಕುಂಠಿತವಾಗಿಲ್ಲ. ಉಳುವವನಿಗೆ ಭೂಮಿಯ ಸ್ವಾಮ್ಯ ಕೊಟ್ಟಿರುವುದೇ ಇದಕ್ಕೆ ಕಾರಣ. ಸಾಮಾನ್ಯವಾಗಿ ಧಾನ್ಯಗಳೇ ಅಲ್ಲದೆ ಇಲ್ಲಿ ಹೊಗೆಸೊಪ್ಪು, ಹಣ್ಣು, ತರಕಾರಿ, ಕಾಳುಗಳು, ಸೋಯಾಬೀನ್, ಆಲೂಗೆಡ್ಡೆ ಮೊದಲಾದುವನ್ನು ಬೆಳೆಯುತ್ತಾರೆ. ಲೆಕ್ಸಿಂಗ್‌ಟನ್‌ನಲ್ಲಿ ಪಶುಖಾದ್ಯವಸ್ತುಗಳ ಬಗ್ಗೆ ಸಂಶೋಧನೆ ನಡೆಸುವ ಕೇಂದ್ರವೊಂದಿದೆ.

**ಕೈಗಾರಿಕೆ:** ಕೃಷಿಯೇ ಪ್ರಧಾನವಾಗಿದ್ದರೂ ರಾಜ್ಯದಲ್ಲಿ ಕೈಗಾರಿಕೆಗಳೂ ಬೆಳೆದಿವೆ. ಲೂಯಿಸ್‌ವಿಲ್ ಮತ್ತು ಲೆಕ್ಸಿಂಗ್‌ಟನ್‌ಗಳ ಸಿಗರೇಟು ಕಾರ್ಖಾನೆಗಳು ಪ್ರಸಿದ್ಧವಾದವು. ಲೂಯಿಸ್‌ವಿಲ್‌ನಲ್ಲಿ ಅಲ್ಯೂಮಿನಿಯಂ ಮೊದಲಾದ ಲೋಹ ಕೈಗಾರಿಕೆಗಳಿವೆ. ಲೆಕ್ಸಿಂಗ್‌ಟನ್‌ನಲ್ಲಿ ವಿದ್ಯುತ್‌ಚಾಲಿತ ಬೆರಳಚ್ಚುಯಂತ್ರಗಳನ್ನು ತಯಾರಿಸುವ ಕಾರ್ಖಾನೆಯಿದೆ. ಆಹಾರ, ಹೊಗೆಸೊಪ್ಪು, ಲೋಹಗಳೇ ಮೊದಲಾದವಕ್ಕೆ ಸಂಬಂಧಿಸಿದ ಕೈಗಾರಿಕೆಗಳು ಆಷ್‌ಲೆಂಡ್, ಫ್ರಾಂಕ್‌ಫರ್ಟ್, ನ್ಯೂಪೋರ್ಟ್, ಓವೆನ್ಸ್‌ಬರೊ, ಪಡೂಕ ಮೊದಲಾದೆಡೆಗಳಲ್ಲಿವೆ. ಮರದ ಸಾಮಾನು, ಜವಳಿ, ಪೇಯ ಮೊದಲಾದ ವಿವಿಧ ಕೈಗಾರಿಕೆಗಳೂ ಅಸ್ತಿತ್ವದಲ್ಲಿವೆ.

ರಾಜ್ಯದಲ್ಲಿ ದೊರೆಯುವ ಮುಖ್ಯ ಖನಿಜಗಳೆಂದರೆ ಬಿಟ್ಯುಮಿನಸ್ ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಫ್ಲುರೊಸ್ಪಾರ್, ಲವಣ ಮತ್ತು ಜೇಡಿಮಣ್ಣು. 1870ದಿಮದೀಚೆಗೆ ಕೆಲವು ಪ್ರದೇಶಗಳಲ್ಲಿ ಕಬ್ಬಿಣ ಮತ್ತು ಸೀಸ ಉತ್ಪಾದಿಸಲಾಗುತ್ತಿದೆ. ಬಂದೂಕದ ಮದ್ದಿನ ಪುಡಿಯನ್ನು ತಯಾರಿಸಲು ಬೇಕಾದ ಪೊಟ್ಯಾಸಿಯಂ ನೈಟ್ರೇಟ್ ನಿಕ್ಷೇಪಗಳಿವೆ. ಕಲ್ಲಿದ್ದಲ ಗಣಿಗಳು ಕೆಂಟಕಿ ಮತ್ತು ಕಂಬರ್ಲೆಂಡ್ ನದೀತೀರಗಳಲ್ಲಿವೆ. ವಾಹನಗಳ ರಿಪೇರಿ, ಮನೋರಂಜನೆ, ಹೋಟೆಲ್ ವ್ಯಾಪಾರ ಮೊದಲಾದವುಗಳಿಂದಲೂ ಸಾಕಷ್ಟು ವರಮಾನ ಬರುತ್ತಿದೆ.

**ಸಾರಿಗೆ :** 1775ಕ್ಕೆ ಹಿಂದೆ ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ಹೆಚ್ಚಾಗಿ ಬೆಳೆದಿರಲಿಲ್ಲ. ಕಂಬರ್ಲೆಂಡ್ ಮತ್ತು ಒಹಾಯೊ ನದಿಗಳು ಮೊದಲ ವಲಸೆಗಾರರಿಗೆ ಸಂಚಾರ ಮಾಧ್ಯಮಗಳಾಗಿದ್ದುವು. 1830ರಲ್ಲಿ ಮೊದಲ ರೈಲುಮಾರ್ಗವನ್ನು ನಿರ್ಮಿಸಲಾಯಿತು. ಮೊದಮೊದಲು ರೈಲ್ವೆ ಬೆಳವಣಿಗೆ ನಿಧಾನವಾಗಿತ್ತು. ಕೆಂಟಕಿಯ ನೆಲದ ಏರುತಗ್ಗುಗಳೂ ಹೊಳೆಗಳೂ ಅಡಣಚೆಗಳು. 20ನೆಯ ಶತಮಾನದ ಉತ್ತರಾರ್ಧದ ಹೊತ್ತಿಗೆ ರಾಜ್ಯದಲ್ಲಿ 70,000 ಮೈಲಿಗಳಷ್ಟು ರಸ್ತೆಗಳಿದ್ದವು. ಮೂರು ಅಂತರರಾಜ್ಯ ಹೆದ್ದಾರಿಗಳು ರಾಜ್ಯವನ್ನು ಹಾದುಹೋಗುತ್ತವೆ. ಈಗಲೂ ಒಹಾಯೊ ನದಿ ಒಮದು ಸಂಪರ್ಕಸಾಧನ. ನೈಸರ್ಗಿಕ ಅನಿಲ ಹಾಗೂ ಕಚ್ಚಾ ಎಣ್ಣೆಗಳನ್ನು ಒಯ್ಯಲು ರಾಜ್ಯದಾದ್ಯಂತ ಮಾರ್ಗಗಳಿವೆ.

ಕೆಂಟಕಿಯ ರಾಜಧಾನಿ ಫ್ರಾಂಕ್‌ಫರ್ಟ್: ಇತರ ಪಟ್ಟಣಗಳಿವು : ಲೂಯಿಸ್‌ವಿಲ್, ಆಷ್‌ಲೆಂಡ್ ಮತ್ತು ನ್ಯೂಪೋರ್ಟ್. (ಎಸ್.ಎಲ್.ಎ.; ಸಿ.ಎಂ.)

**ಕೆಂಡಲ್, ಎಡ್ವರ್ಡ್ ಕ್ಯಾಲ್ವನ್ :** 1886–1972. ಅಮೆರಿಕ ದೇಶದ ಪ್ರಖ್ಯಾತ ಜೀವರಸಾಯನ ವಿಜ್ಞಾನಿ. ಮಾರ್ಚ್ 8, 1886ರಂದು ಅಮೆರಿಕದ ಕನ್ನೆಕ್ಟಿಕಟ್ಟಿನ ಸೌತ್ ನಾರ್‌ವಾರ್ ಎಂಬಲ್ಲಿ ಜನಿಸಿದ. ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿ ಪಿಎಚ್.ಡಿ. ಪದವಿಯನ್ನು 1910ರಲ್ಲಿ ಪಡೆದ. ಸೇಂಟ್ ಲೂಕನ ಆಸ್ಪತ್ರೆಯಲ್ಲಿ ಮೊದಲ ಹುದ್ದೆ. ಅಲ್ಲಿ ಕೆಲಸ ಮಾಡುತ್ತಿದ್ದಾಗ (1910ರ ಆರಂಭ) ಥೈರಾಯಿಡ್ ಗ್ರಂಥಿಯ ಚಟುವಟಿಕೆಗಳ ವಿಚಾರದಲ್ಲಿ ಈತನಿಗೆ ತೀವ್ರ ಕುತೂಹಲ ಮೂಡಿತು. ಮುಂದೆ 1914ರವರೆಗೂ ಇದೇ ವಿಷಯದಲ್ಲಿ ಬೇಕಾದಷ್ಟು ಪ್ರಯೋಗಗಳನ್ನು ನಡೆಸಿದ. ಹಾರ್ಮೋನಿನ ಅಸ್ತಿತ್ವವನ್ನು ಹಿಂದಿನ ದಶಕದಲ್ಲಿ ಸ್ಟಾರ್ಲಿಂಗ್ ಮತ್ತು ಬೇಲಿಸ್ ಎಂಬವರು ಸೂಚಿಸಿದ್ದರು. ಥೈರಾಯಿಡ್ ಗ್ರಂಥಿ ಇಂಥ ಒಂದು ಹಾರ್ಮೋನನ್ನು ಉತ್ಪತ್ತಿ ಮಾಡುತ್ತಿರುವುದು ಖಚಿತ ಎಂದು ಕೆಂಡಲ್‌ನ ಪ್ರಯೋಗಗಳಿಂದ ವೇದ್ಯವಾಯಿತು. ಮಾನವದೇಹದಲ್ಲಿಯ ಸಮಗ್ರ ಜೀವವಸ್ತುಕರ್ಣದ ವೇಗವನ್ನು ನಿಯಂತ್ರಿಸುವುದು ಥೈರಾಯಿಡೆಂದು ಆಗ ತಿಳಿದಿತ್ತು. ಈ ಗ್ರಂಥಿಯ ಚಟುವಟಿಕೆಯನ್ನು ನಿಯಂತ್ರಿಸುವ ಹಾರ್ಮೋನಿನ ಅನ್ವೇಷಣೆ ಕೆಂಡಲ್‌ನ ಎದುರಿದ್ದ ಗುರಿ. ಈ ಹಾದಿಯಲ್ಲಿ ಅವನು ಥೈರಾಕ್ಸಿನ್ ಎಂಬ ಹಾರ್ಮೋನನ್ನು ಬೇರ್ಪಡಿಸಿ ಮೊದಲ ಜಯ ಪಡೆದ. ಮುಂದೆ ಗ್ಲೂಟೋಥಿಯೋನ್ ಎಂಬ ವಸ್ತುವನ್ನು ಸ್ಫಟಿಕೀಕರಿಸಿ ಅದರ ರಾಸಾಯನಿಕ ರಚನೆಯನ್ನು ಸ್ಥಾಪಿಸಿದ. ಅನಂತರ ಪ್ರಯೋಗವನ್ನು ಮುಂದುವರಿಸಿ ಅಡ್ರಿನಲ್ ಕಾರ್ಟೆಕ್ಸ್‌ನಿಂದ ಕಾರ್ಟಿಸೋನ್ ಮತ್ತು ಹೈಡ್ರೋಕಾರ್ಟಿಸೋನ್ ಎಂಬ ಹಾರ್ಮೋನುಗಳನ್ನು ಬೇರ್ಪಡಿಸಿದ. ಹೆಂಚ್ ಎಂಬಾತನೊಡನೆ ಸೇರಿ ಕಾರ್ಟಿಸೋನನ್ನು ಬೇರ್ಪಡಿಸಿ ಔಷಧವಾಗಿ ಉಪಯೋಗಿಸಿ ಕೀಲುನೋವನ್ನು ಗುಣಪಡಿಸಬಹುದು ಎಂಬುದನ್ನು ತೋರಿಸಿದ. ಈ ಸಿದ್ಧಿಗೋಸ್ಕರ ಈತನಿಗೆ ಫಿಲಿಪ್ ಹೆಂಚ್ ಹಾಗೂ ಸ್ವಿಟ್ಜರ್ಲೆಂಡಿನ ಟಾಡ್ಯೂಜ್ ರೈಖ್‌ಸ್ಟೈನ್ ಎಂಬ ವಿಜ್ಞಾನಿಗಳ ಸಮೇತ ನೊಬೆಲ್ ಬಹುಮಾನ ದೊರೆಯಿತು (1950). ಇದಲ್ಲದೇ ಲ್ಯಾಸ್ಕರ್ ಬಹುಮಾನ, ಕ್ಯಾಮರಾನ್ ಬಹುಮಾನ, ಕೋಬರ್ ಪದಕ ಮುಂತಾದ ಅಸಂಖ್ಯಾತ ಪ್ರಶಸ್ತಿಗಳು ಕೆಂಡಲನಿಗೆ ಲಭಿಸಿವೆ. 1915ರಿಂದ 1951ರಲ್ಲಿ ನಿವೃತ್ತನಾಗುವ ತನಕ ಕೆಂಡಲ್ ಮೇಯೋ ಕ್ಲಿನಿಕ್‌ನಲ್ಲಿ ಜೀವರಸಾಯನವಿಜ್ಞಾನ ವಿಭಾಗದ ಮುಖ್ಯಸ್ಥನಾಗಿದ್ದ. 1952ರಲ್ಲಿ ಆತ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನ ಪ್ರಾಧ್ಯಾಪಕ ಆದ. ಈತ ಮರಣ ಹೊಂದಿದ್ದು ಮೇ 4, 1972ರಂದು. (ಎಸ್‌ಎಚ್.ಪಿ.)

**ಕೆಂಡಾಲ್, ಹೆನ್ರಿ ಕ್ಲಾರೆನ್ಸ್ :** 1839–1882. ಆಸ್ಟ್ರೇಲಿಯದ ಕವಿ. ನ್ಯೂಸೌತ್‌ವೇಲ್ಸ್‌ನ ಉಲ್ಲಾದುಲ್ಲದ ಬಳಿ ಜನಿಸಿದ. ಬಾಲಕನಾಗಿದ್ದಾಗಲೆ ತನ್ನ ಬಂಧುವಿನ ಜೊತೆಯಲ್ಲಿ ಎರಡು ವರ್ಷ ದಕ್ಷಿಣ ಸಮುದ್ರ ದ್ವೀಪಗಳಲ್ಲಿ ಜಲಯಾನ ಮಾಡಿದ. ಆರಂಭದಲ್ಲಿ ಸಿಡ್ನಿಯಲ್ಲಿ ಸಲಹೆ ವಕೀಲನ ಕಚೇರಿಯಲ್ಲಿ ಕೆಲಸ ಮಾಡಿದ. ಅನಂತರ ಮೋಜಣಿ ಇಲಾಖೆಗೆ ಸೇರಿದ. ಈತನ ಪೊಯಮ್ಸ್ ಅಂಡ್ ಸಾಂಗ್ಸ್ ಕವನಸಂಕಲನ 1862ರಲ್ಲಿ ಪ್ರಕಟವಾಯಿತು. ಡೆತ್ ಇನ್ ದಿ ಬುಷ್ ಮತ್ತು ದಿ ಗ್ಲೆನ್ ಆಫ್ ಅರ್ರಾವಟ್ಟ ಕವನಗಳಿಗೆ ಬಹುಮಾನ ದೊರೆತ ಮೇಲೆ ಮೆಲ್ಬೋರ್ನ್‌ಗೆ ತೆರಳಿದ. ಅಲ್ಲಿ ಲೀವ್ಸ್ ಫ್ರಂ ಆಸ್ಟ್ರೇಲಿಯನ್ ಫಾರೆಸ್ಟ್ಸ್ ಎಂಬ ಗ್ರಂಥವನ್ನು ಪ್ರಕಟಿಸಿದ (1869). ಅತಿಯಾದ ಬಡತನದಿಂದ ಜೀವನದಲ್ಲಿ ಯಾವೊಂದು ಪ್ರಗತಿಯನ್ನು ಕಾಣದೆ ನೊಂದ ಈತ ಮತ್ತೆ ಸಿಡ್ನಿಗೆ ಹಿಂತಿರುಗಿ ಮರದ ವ್ಯಾಪಾರಿಯ ಬಳಿ ಗುಮಾಸ್ತನಾಗಿ ನಿಂತ. 1880ರಲ್ಲಿ ಈತನ ಸಾಂಗ್ಸ್ ಫ್ರಂ ದಿ ಮೌಂಟನ್ಸ್ ಪ್ರಕಟವಾಯಿತು. 1881ರಲ್ಲಿ ರಾಜ್ಯದ ಅರಣ್ಯ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಹುದ್ದೆ ದೊರಕಿತು. ತಡವಾಗಿ ದೊರೆತ ಈ ಹುದ್ದೆಯ ಉತ್ಕರ್ಷ ಬಹು ಕಾಲ ನಿಲ್ಲಲಿಲ್ಲ. ದೇಹ ಸ್ವಾಸ್ಥ್ಯವಿಲ್ಲದಿದ್ದ ಕೆಂಡಾಲ್ ಮರು ವರ್ಷವೇ ನಿಧನವಾದ.

ಕೆಂಡಾಲ್‌ನನ್ನು ಆಸ್ಟ್ರೇಲಿಯದ ದೇಶೀಯ ಕಾವ್ಯದ ಜನಕನೆಂದು ಪರಿಗಣಿಸಲಾಗಿದೆ. ಈತ ಶಕ್ತಿವಂತ ಕವಿ, ಪ್ರತಿಭಾಶಾಲಿ. ತನ್ನ ಪದ್ಯಗಳಲ್ಲಿ ಆಸ್ಟ್ರೇಲಿಯಾದ ಪ್ರಕೃತಿ ಸೌಂದರ್ಯ ಸಂಪತ್ತನ್ನು ಯಥಾವತ್ತಾಗಿ ಚಿತ್ರಿಸಿದ್ದಾನೆ. ಈತನ ಮರಣಾನಂತರ ಈತನ ಎಲ್ಲ ಪದ್ಯಗಳೂ ಸೇರಿದ ಬೃಹತ್ ಸಂಪುಟವೊಂದು ಪ್ರಕಟವಾಯಿತು (1903). *

**ಕೆಂಡ್ರೂ, ಜಾನ್ ಕೌಡೆರಿ :** 1917–. ಇಂಗ್ಲೆಂಡಿನ ಜೀವರಸಾಯನ ವಿಜ್ಞಾನಿ. ಆಕ್ಸ್‌ಫರ್ಡ್‌ನಲ್ಲಿ 24 ಮಾರ್ಚ್, 1917ರಲ್ಲಿ ಜನಿಸಿದ. ಈತನ ವಿದ್ಯಾಭ್ಯಾಸ ಆಕ್ಸ್‌ಫರ್ಡ್‌ನಲ್ಲಿಯೂ ಮುಂದೆ ಕೇಂಬ್ರಿಡ್ ವಿಶ್ವವಿದ್ಯಾಲಯದ ಕ್ಲಿಫ್ಟನ್ ಕಾಲೇಜ್ ಮತ್ತು ಟ್ರಿನಿಟಿ ಕಾಲೇಜುಗಳಲ್ಲಿಯೂ ನಡೆಯಿತು. 1939ರಲ್ಲಿ ಬಿ.ಎಸ್‌ಸಿ. ಪದವಿ ಪಡೆದ ಮೇಲೆ ಎರಡನೆಯ ಮಹಾಯುದ್ಧದ ಕಾಲದಲ್ಲಿ(1940–45) ವಿಮಾನ ನಿರ್ಮಾಣ ಇಲಾಖೆಯಲ್ಲಿ ಕೆಲಸ ಮಾಡಿದ ಅನಂತರ ತನ್ನ ವಿಶ್ವವಿದ್ಯಾಲಯಕ್ಕೆ ಮರಳಿದ. ಕ್ಯಾವೆಂಡಿಶ್ ಪ್ರಯೋಗಾಲಯದಲ್ಲಿ ಮಾಡಿದ ನಾಲ್ಕು ವರ್ಷಗಳ ಸಂಶೋಧನೆಯ ಫಲವಾಗಿ 1949ರಲ್ಲಿ ಈತನಿಗೆ ಪಿಎಚ್.ಡಿ. ಪದವಿ ದೊರೆಯಿತು.

ಮೆಡಿಕಲ್ ಕೌನ್ಸಿಲ್ ಪ್ರಯೋಗಾಲಯದ ಉಪಾಧ್ಯಕ್ಷ (1953 ರಿಂದ), ರಾಯಲ್ ಇನ್‌ಸ್ಟಿಟ್ಯೂಟಿನ ಡೇವಿ–ಫ್ಯಾರಡೆ ಪ್ರಯೋಗಾಲಯದಲ್ಲಿ ರೀಡರ್ (1954 ರಿಂದ), ರಕ್ಷಣಾ ಇಲಾಖೆಗೆ ವೈಜ್ಞಾನಿಕ ಸಲಹೆಗಾರ(1960–62), ಅಣುಜೀವ ರಸಾಯನವಿಜ್ಞಾನ ಪತ್ರಿಕೆಯ ಮುಖ್ಯ ಸಂಪಾದಕ–ಇವೇ ಮೊದಲಾದ ಹುದ್ದೆಗಳಲ್ಲಿ ಈ ವಿಜ್ಞಾನಿ ನಿರಂತರ ಸೇವೆ ಸಲ್ಲಿಸಿದ್ದಾನೆ. ಮ್ಯೋಗ್ಲೋಬಿನ್ ಎಂಬ ಪ್ರೋಟೀನಿನ ಅಣು ಮತ್ತು ವಿನ್ಯಾಸರಚನೆಯನ್ನು ಎಕ್ಸ್‌ಕಿರಣ ಸ್ಫಟಿಕಮಾಪನ ವಿಧಾನದಿಂದ ಸಾಧಿಸಿದ ಸಂಶೋಧನೆಗಾಗಿ ಈತನಿಗೆ ರಸಾಯನವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಿಕ ದೊರೆಯಿತು(1962). 1965ರಲ್ಲಿ ರಾಯಲ್ ಸೊಸೈಟಿಯ ರಾಯಲ್ ಪದಕವೂ ದೊರೆಯಿತು. ಪ್ರೋಟೀನುಗಳನ್ನು ಕುರಿತ 'ದಿ ತ್ರೆಡ್ ಆಫ್ ಲೈಫ್' ಎಂಬ ಇವನ ಪುಸ್ತಕ 1966ರಲ್ಲಿ ಪ್ರಕಟವಾಯಿತು. (ಕೆ.ಟಿ.ಎಸ್.)

**ಕೆಂದಲೆ ಹಾವು :** ಕ್ರೋಟಾಲಿಡೀ (ಪಿಟ್‌ವೈಪರ್ಸ್) ಕುಟುಂಬಕ್ಕೆ ಸೇರಿದ ಹಾವು (ಕಾಪರ್ ಹೆಡ್ ಸ್ನೇಕ್) ಶಾಸ್ತ್ರೀಯ ನಾಮ ಅಗ್ಕಿಸ್ಟ್ರಡಾನ್ ಕಂಟಾರ್‌ಟ್ರಿಕ್ಸ್. ಇದರ ತಲೆಯ ಮೇಲ್ಭಾಗ ತಾಮ್ರದಂತೆ ಕೆಂಪಗಿರುವುದರಿಂದ ಈ ಹೆಸರು ಬಂದಿದೆ. ಇದು ಮಂಡಲದ ಹಾವುಗಳಿಗೆ ಹತ್ತಿರದ ಸಂಬಂಧಿ. ಅಮೆರಿಕದಲ್ಲಿ ಸಿಕ್ಕುವ ಕೆಲವೇ ವಿಷಪೂರಿತ ಸರ್ಪಗಳಲ್ಲಿ ಇದೂ ಒಂದು. ಇದು ಅಮೆರಿಕ ಸಂಯುಕ್ತಸಂಸ್ಥಾನದ ಟೆಕ್ಸಾಸ್ ರಾಜ್ಯದ ಪಶ್ಚಿಮ ಭಾಗ, ಮಸ್ಸಾಚೂಸೆಟ್ಸ ಮತ್ತು ಫ್ಲಾರಿಡ ರಾಜ್ಯಗಳ ಉತ್ತರ ಭಾಗಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ವರ್ಣವೈವಿಧ್ಯದ ಆಧಾರದ ಮೇಲೆ ಸುಮಾರು ನಾಲ್ಕು ಬಗೆಯ ಕೆಂದಲೆ ಹಾವುಗಳನ್ನು ಗುರುತಿಸಲಾಗಿದೆ. ಇದೊಂದು ಸಣ್ಣ ಹಾವು. ಅಪೂರ್ವವಾಗಿ 4' ಉದ್ದವಿರುವುದಾದರೂ 3' ಉದ್ದವೇ ಸಾಮಾನ್ಯ. ದೇಹದ ಬಣ್ಣ ಕಂದು. ದೇಹದುದ್ದಕ್ಕೂ ಅಲ್ಲಲ್ಲಿ 15–25 ಕಗ್ಗಂದು ಬಣ್ಣದ ಅಡ್ಡಪಟ್ಟೆಗಳಿವೆ. ಪಟ್ಟೆಗಳು ಬೆನ್ನು ಮೇಲೆ ಕಿರಿದಾಗಿಯೂ ಪಕ್ಕಗಳಲ್ಲಿ ಅಗಲವಾಗಿಯೂ ಇವೆ. ದೇಹದ ತಳಭಾಗದ ಬಣ್ಣ ಹಳದಿ ಮಿಶ್ರಿತ ಕಂದು. ಕಣ್ಣಿಗೂ ನಾಸಿಕರಂಧ್ರಕ್ಕೂ ನಡುವೆ ತಲೆಯ ಎರಡೂ ಪಕ್ಕಗಳಲ್ಲಿಯೂ ಒಂದೊಂದು ಕುಳಿ(ಪಿಟ್) ಇರುವುದು ಕ್ರೋಟಾಲಿಡಿ ಕುಟುಂಬದ ಇತರ ಹಾವುಗಳಂತೆ ಈ ಹಾವಿನ ವೈಶಿಷ್ಟ್ಯವೂ ಹೌದು. ಈ ಕುಳಿಗಳು ಉಷ್ಣಗ್ರಾಹಕಗಳಾಗಿ ಬಿಸಿರಕ್ತದ ಪ್ರಾಣಿಗಳ ಸುಳಿವನ್ನು ತಿಳಿಯಲು ಸಹಾಯಕವಾಗಿವೆ ಎಂದು ತಿಳಿದುಬಂದಿದೆ.

ಇದು ಸಾಮಾನ್ಯವಾಗಿ ಜೌಗುನೆಲ, ಹುಲ್ಲುಗಾವಲು ಮತ್ತು ಕಲ್ಲುಬಂಡೆಗಳಿರುವ ಪ್ರದೇಶಗಳಲ್ಲಿ ಕಂಡುಬರುತ್ತದೆ. ವಸಂತಋತುವಿನಲ್ಲಿ ಹಗಲು ಹೊತ್ತಿನಲ್ಲೆ ಸಂಚರಿಸುತ್ತವೆ. ಆದರೆ ಬೇಸಗೆಯಲ್ಲಿ ಸೆಕೆ ತಾಳಲಾರದೆ ಮರೆಯಲ್ಲಿದ್ದು ರಾತ್ರಿ ಹೊತ್ತಿನಲ್ಲಿ ಮಾತ್ರ ಹೊರ ಹೊರಡುತ್ತದೆ. ಚಳಿಗಾಲದಲ್ಲಿ ಹಲವಾರು ಹಾವುಗಳು ಗುಂಪುಗೂಡಿ ಭೂಮಿಯ ಬಿರುಕುಗಳಲ್ಲಿ ಮತ್ತು ಬಂಡೆಗಳ ಸಂದುಗಳಲ್ಲಿ ಶಿಶಿರನಿದ್ರೆಯಲ್ಲಿ (ಹೈಬರ್‌ನೇಷನ್) ತೊಡಗುತ್ತವೆ. ಈ ಸಮಯದಲ್ಲಿ ಬುಡುಬುಡುಕೆ ಹಾವು (ರ್‍ಯಾಟಲ್ ಸ್ನೇಕ್) ಮುಂತಾದವೂ ಇವುಗಳ ಜೊತೆ ಸೇರುವುದುಂಟು. ಸಣ್ಣ ಗಾತ್ರದ ಸ್ತನಿ, ಹಲ್ಲಿ, ಕಪ್ಪೆ, ಹಕ್ಕಿ ಮತ್ತು ಕೀಟಗಳನ್ನು ತಿನ್ನುವುದಾದರೂ ಇಲಿಗಳೇ ಇದರ ಮೆಚ್ಚಿನ ಆಹಾರ. ಕೆಂದಲೆ ಹಾವು ಸ್ವಭಾವತಃ ಸಾಧುಪ್ರಾಣಿಯಾದರೂ ಹೆದರಿಸಿದರೆ, ಗಾಯಗೊಳಿಸಿದರೆ, ರೇಗಿಸಿದರೆ ಕಚ್ಚುತ್ತದೆ. ಇದರ ವಿಷ ರಕ್ತಗೆರಣೆಕಟ್ಟುವುದರ ಮೇಲೆ ಪರಿಣಾಮವುಂಟು ಮಾಡುತ್ತದೆ.

ಕೆಂದಲೆ ಹಾವಿನ ಸಂತಾನೋತ್ಪತ್ತಿಯ ಕಾಲ ಏಪ್ರಿಲ್–ಮೇ ತಿಂಗಳು. ಒಂದು ಸೂಲಿಗೆ 4–8 ಮರಿಗಳಿರುತ್ತವೆ. (ಎಸ್.ಎಚ್.ಜ.)

**ಕೆಂದಾಳೆ :** ಸ್ಯಾಪಿಂಡೇಸೀ ಕುಟುಂಬಕ್ಕೆ ಸೇರಿದ ಒಂದು ದೊಡ್ಡ ಗಾತ್ರದ ಮರ. ಸ್ಲೀಶೆರ ಟ್ರೈಜುಗ ಇದರ ವೈಜ್ಞಾನಿಕ ನಾಮ. ಬಳಕೆಯ ಇಂಗ್ಲಿಷ್‌ನಲ್ಲಿ ಇದನ್ನು ಸಿಲೋನ್ ಓಕ್ ಎಂದು ಹೇಳುತ್ತಾರೆ. ಕನ್ನಡದಲ್ಲಿ ಸಗಡೆ ಕೆಂದಾಳ, ಚೆಂಡಾಲ, ಚಕೋತ ಎಂಬ ಇತರ ಹೆಸರುಗಳೂ ಇವೆ. ಕರ್ನಾಟಕ, ಪಂಜಾಬ್, ಬಿಹಾರ್, ಮಧ್ಯಪ್ರದೇಶ, ಹಿಮಾಲಯದ ತಪ್ಪಲುಗಳಲ್ಲೂ, ಶ್ರೀಲಂಕದಲ್ಲೂ ಮಿಶ್ರಪರ್ಣ ಪಾತಿ ಕಾಡುಗಳಲ್ಲೂ ಬೆಳೆಯುತ್ತದೆ. ಎಲೆಗಳು ಸಂಯುಕ್ತ ಮಾದರಿಯವು; ಪರ್ಯಾಯವಾಗಿ ಜೋಡಣೆಗೊಂಡಿವೆ; ವೃಂತಪರ್ಣಗಳಿಲ್ಲ. ಡಿಸೆಂಬರಿನಿಂದ ಫೆಬ್ರುವರಿ ತಿಂಗಳಿನ ಮಧ್ಯಾವಧಿಯಲ್ಲಿ ಎಲೆಗಳೆಲ್ಲ ಉದುರಿ ಏಪ್ರಿಲ್ ತಿಂಗಳಲ್ಲಿ ಹೊಸ ಚಿಗುರು ಮೂಡುತ್ತದೆ. ಹೊಸ ಎಲೆಗಳೊಂದಿಗೆ ಹೂಗಳು ಕೂಡ ಹುಟ್ಟುತ್ತವೆ. ಹೂಗಳು ಏಕಲಿಂಗಿಗಳಾಗಿರ ಬಹುದು ಇಲ್ಲವೆ ದ್ವಿಲಿಂಗಿಗಳಾಗಿರಬಹುದು. ಗಂಡು, ಹೆಣ್ಣು ಹಾಗೂ ದ್ವಿಲಿಂಗಿ ಹೂಗಳು ಒಂದೇ ಮರದಲ್ಲಿರಬಹುದು ಇಲ್ಲವೆ ಗಂಡು ಮತ್ತು ಹೆಣ್ಣು ಹೂಗಳು ಬೇರೆ ಬೇರೆ ಮರಗಳಲ್ಲಿರಬಹುದು. ಹೂಗೊಂಚಲು ಸಂಕೀರ್ಣವಾದ ಅಂತ್ಯಾರಂಭಿ ಮಾದರಿಯದು. ಹೂಗಳಲ್ಲಿ ಹಸುರುಮಿಶ್ರಿತ ಹಳದಿ ಬಣ್ಣದ 4–6 ಪುಷ್ಪಪತ್ರಗಳು, 5–8 ಕೇಸರಗಳು, ಮೂರು ಕಾರ್ಪೆಲ್‌ಗಳ ಉಚ್ಚಸ್ಥಾನದ ಅಂಡಾಶಯ ಇವೆ, ದಳಗಳಿಲ್ಲ.

ಭಾರತದಲ್ಲಿ ಬೆಳೆಯುವ ಅರಗು ಮರಗಳಲ್ಲೆಲ್ಲ ಕೆಂದಾಳೆ ಅತ್ಯುತ್ತಮವಾದುದೆಂದು ಹೆಸರು ಪಡೆದಿದೆ. ಇದರ ಎಳೆಯ ರೆಂಬೆಗಳ ಮೇಲೆ ಅರಗುಕೀಟಗಳನ್ನು ಸಾಕಿ ಉತ್ತಮದರ್ಜೆಯ ಹಾಗೂ ಬಹಳ ಬೆಲೆ ಬಾಳುವ ಅರಗನ್ನು ಉತ್ಪಾದಿಸುತ್ತಾರೆ. ಈ ಮರದ ಚೌಬೀನೆ ಹೆಚ್ಚು ಗಡುಸಾದುದು ಮತ್ತು ಬಾಳಿಕೆ ಬರುವಂಥದು. ಇದನ್ನು ಹದಮಾಡುವುದು ಕಷ್ಟ. ಬಿಸಿಲಿನಲ್ಲಿ ಒಣಗಿಸಿದರೆ ಇದು ಸೀಳಿಹೋಗುತ್ತದೆ. ಹಸಿ ಮರವನ್ನು ಸುಲಭವಾಗಿ ಕೊಯ್ಯಬಹುದು. ನೆರಳಿನಲ್ಲಿ ನಿಧಾನವಾಗಿ ಒಣಗಿಸಬೇಕು. ಚೌಬೀನೆ ಬಲು ಭಾರವಾಗಿದ್ದು (ಘನ ಅಡಿಯೊಂದಕ್ಕೆ 65–70 ಪೌಂ. ತೂಗುತ್ತದೆ). ಆದ್ದರಿಂದ ಇದನ್ನು ಗಾಡಿಚಕ್ರ, ಯಂತ್ರಗಳಲ್ಲಿ ಘರ್ಷಣ ಭಾಗಗಳು, ಎಣ್ಣೆ ಮತ್ತು ಅಕ್ಕಿ ಗಿರಣಿಗಳಲ್ಲಿ ಉಪಯೋಗಿಸುತ್ತಾರೆ. ಅಲ್ಲದೆ ಆಯುಧಗಳ ಹಿಡಿಗೂ ಗಣಿಗಳಲ್ಲಿ ಆಸರೆಗಂಬಗಳಾಗಿಯೂ ಇದನ್ನು ಬಳಸುವುದುಂಟು. ಕೆಂದಾಳೆಯ ಬೀಜದಲ್ಲಿ ಒಂದು ಬಗೆಯ ಎಣ್ಣೆಯಿದೆ. ಇದನ್ನು ಸಾಬೂನು, ಸುಗಂಧ ತೈಲಗಳ ತಯಾರಿಕೆಯಲ್ಲಿ ಮತ್ತು ದೀಪ ಉರಿಸಲು ಬಳಸುತ್ತಾರೆ. ಎಣ್ಣೆಯನ್ನೂ ತೊಗಟೆಯನ್ನೂ ಚರ್ಮದ ತುರಿಯಲ್ಲಿ ಔಷಧಿಯಾಗಿಯೂ ತೊಗಟೆಯನ್ನು ಪ್ರತಿಬಂಧಕವಾಗಿಯೂ ಉಪಯೋಗಿಸುತ್ತಾರೆ. (ವಿ.ಕೆ.ಎಸ್.)

**ಕೆಂಪು :** ಸುಂದರವಾದ ಹಾಗೂ ಪಾರದರ್ಶಕವಾದ ರಕ್ತವರ್ಣದ ಕುರಂಗ ಖನಿಜದ ಹರಳು (ರೂಬಿ). ಇದನ್ನು ರತ್ನರಾಜ ಅಥವಾ ರತ್ನನಾಯಕ ಎಂದು ಕರೆಯುವ ವಾಡಿಕೆಯಿದೆ. ರಾಸಾಯನಿಕ ಸಂಯೋಜನೆಯಲ್ಲಿ ಕೆಂಪು ಕುರಂದ ಸಂಪೂರ್ಣವಾಗಿ ಅಲ್ಯೂಮಿನಿಯಂ ಆಕ್ಸೈಡ್ ಆಗಿದ್ದರೂ ಕೊಂಚ ಪ್ರಮಾಣದಲ್ಲಿ ಕ್ರೋಮಿಯಂ ಆಕ್ಸೈಡ್ ಸೇರುವಿಕೆಯಿಂದ ಇದಕ್ಕೆ ಕೆಂಪು ವರ್ಣ ಬಂದಿರುತ್ತದೆ. ಹಾಗೆಂದಲ್ಲಿ ಗಣಿಯಿಂದ ಹೊರಬರುವ ಎಲ್ಲ ಕೆಂಪು ಕುರಂದಗಳ ಬಣ್ಣವೂ ಒಂದೇ ಸಮವಾಗಿರುವುದಿಲ್ಲ. ಕೆಲವು ತಿಳಿಗೆಂಪು, ಮತ್ತೆ ಕೆಲವು ಮಾಸಲುಗೆಂಪು. ಅಲ್ಲದೆ ಹರಳಿನ ಬಣ್ಣ ಒಂದೇ ರೀತಿಯಿರದೆ ಕೆಲವು ಭಾಗಗಳಲ್ಲಿ ಬಣ್ಣ ತಿಳಿಯಾಗಿಯೂ ಮತ್ತೆ ಕೆಲವು ಭಾಗಗಳಲ್ಲಿ ಗಾಢವಾಗಿಯೂ ಇರುವುದುಂಟು. ತಿಳಿಗೆಂಪು ಹರಳುಗಳಿಗಿಂತ ಪಾರಿವಾಳ ರಕ್ತವರ್ಣದ ಹರಳುಗಳೇ ಅತ್ಯಂತ ಅಮೂಲ್ಯವಾದವು. ನವರತ್ನವೆನಿಸಲು ಬಣ್ಣ ಒಂದೇ ಸಾಲದು. ಹರಳುಗಳು ಪಾರಕವಾಗಿರಬೇಕು. ಪಾರಕವಾಗಿರುವ ಕೆಂಪು ರತ್ನವೆನಿಸುತ್ತದೆ. ಸಣ್ಣ ಕೆಂಪುಗಳಿಗೆ ಅದೇ ಗಾತ್ರದ ವಜ್ರಗಳಿಗಿಂತಲೂ ಬೆಲೆ ಕಡಿಮೆಯಾದರೂ ದೊಡ್ಡ ಕೆಂಪುಗಳಿಗೆ ಅದೇ ಗಾತ್ರದ ವಜ್ರಕ್ಕಿಂತಲೂ ಬೆಲೆ ಹೆಚ್ಚು. ಇದಕ್ಕೆ ಕಾರಣ ದೊಡ್ಡದಾದ ಮತ್ತು ಉತ್ಕೃಷ್ಟವಾದ ಕೆಂಪು ರತ್ನಗಳು ಸಿಕ್ಕುವುದು ಅತಿ ವಿರಳ. ಸಾಮಾನ್ಯವಾಗಿ ಕೆಂಪು ಹರಳುಗಳಲ್ಲಿ ಸೂಕ್ಷ್ಮವಾದ ಎಳೆಗಳು ದೋಷಗಳಾಗಿ ಸೇರಿಕೊಂಡಿರುತ್ತವೆ. ಹರಳನ್ನು ಅಂಡಾಕೃತಿಗೆ ಸಾಣೆ ಹಿಡಿದಾಗ ಈ ಎಳೆಗಳು ಆರು ಮೂಲೆಯ ನಕ್ಷತ್ರಗಳಂತೆ ಗೋಚರಿಸುತ್ತವೆ. ಇಂಥವನ್ನು ಸ್ಟಾರ್ ರೂಬಿ ಅಥವಾ ನಕ್ಷತ್ರ ಕೆಂಪುಗಳೆನ್ನುತ್ತಾರೆ.

ಕೆಂಪು ಕುರಂಗ ಕಾಠಿಣ್ಯದಲ್ಲಿ ವಜ್ರಕ್ಕೆ ಎರಡನೆಯದು. ಈ ಸ್ವಭಾವದಿಂದ ಕೆಂಪನ್ನು ಆಭರಣಗಳಲ್ಲಿ ಮಾತ್ರವಲ್ಲದೆ, ಗಡಿಯಾರ ಮುಂತಾದ ಸೂಕ್ಷ್ಮ ಯಂತ್ರಗಳಲ್ಲಿ ಘರ್ಷಕ ನಿರೋಧಕ ಸಾಧನವಾಗಿ ಬಳಸುತ್ತಾರೆ. ಕೆಂಪುರತ್ನಗಳು ಹರಳುಗಳಾಗಿ ಸೈಯನೈಟ್, ಸೆಫಲೀನ್ ಸೈಯನೈಟ್, ಪೆರಿಡೊಟೈಟ್ ಮತ್ತು ಅನಾರ್ಥೊಸೈಟ್ ವರ್ಗದ ಅಗ್ನಿಶಿಲೆಗಳಲ್ಲೂ ಅಮೃತಶಿಲೆಗಳಂಥ ರೂಪಾಂತರಿತ ಶಿಲೆಗಳಲ್ಲೂ ಸಿಕ್ಕುತ್ತವೆ. ಇದಲ್ಲದೆ ನದಿಯ ಮೆಕ್ಕಲುಗಳಲ್ಲೂ ಹಲವು ಕಡೆ ದೊರೆಯುತ್ತವೆ. ವಿಖ್ಯಾತವಾದ ಮೊಗಾಕ್ ಕೆಂಪುಗಳು ದೊರೆತದ್ದು ನದಿಯ ಮೆಕ್ಕಲಿನಲ್ಲಿಯೇ.

ಬಹು ಹಿಂದಿನಿಂದಲೂ ಉತ್ತಮ ದರ್ಜೆಯ ಕೆಂಪುಗಳಿಗೆ ಬರ್ಮದ ಮೊಗಾಕ್ ಜಿಲ್ಲೆ ತೌರುಮನೆ. ಈ ಪ್ರದೇಶ ಉತ್ತರ ಬರ್ಮದಲ್ಲಿರುವ ಮಾಂಡಲೆ ಪಟ್ಟಣಕ್ಕೆ ಸುಮಾರು 161 ಕಿ.ಮೀ. ದೂರದಲ್ಲಿದೆ. ಬರ್ಮ ದೊರೆಗಳು ಇಲ್ಲಿಯ ಗಣಿಗಳ ಒಡೆಯರಾಗಿದ್ದರು. ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಮೇಲೆ ಈ ಗಣಿಗಳು ಪರಿಮಿತ ಕಂಪನಿಯಾಗಿ ಪರಿವರ್ತನೆಯಾದುವು (1889). ಬಹಳ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಈ ಗಣಿಗಳಿಂದ ವರ್ಷಕ್ಕೆ ಸುಮಾರು 2,00,000 ಕ್ಯಾರಟ್ಟು ಕೆಂಪು ಉತ್ಪತ್ತಿಯಾಗುತ್ತಿತ್ತು. ಬರ್ಮ ದೇಶದಿಂದ ಯೂರೋಪಿಗೆ ರವಾನೆಯಾದ ಕೆಂಪುಗಳಲ್ಲಿ ಅತಿ ಸೊಗಸಾದ ಹರಳುಗಳು ಎರಡು ಮಾತ್ರ.. ಸಾಣೆ ಹಿಡಿದ ಮೇಲೆ ಇವುಗಳ ತೂಕ 32.3125 ಕ್ಯಾರಟ್ಟು ಮತ್ತು 38.5625 ಕ್ಯಾರಟ್ಟು.. ಮಾರಾಟವಾದ ಮೇಲೆ ಅನುಕ್ರಮವಾಗಿ ಇವೆರಡಕ್ಕೆ ಬಂದ ಬೆಲೆ 1.5 ಲಕ್ಷ ರೂಪಾಯಿಗಳು ಮತ್ತು 3 ಲಕ್ಷ ರೂಪಾಯಿಗಳು. ಇದುವರೆಗೆ ತೆಗೆದ ಕೆಂಪು ಹರಳುಗಳಲ್ಲಿ ಅತ್ಯಂತ ಹೆಚ್ಚಿನ ತೂಕದ್ದು 304 ಕ್ಯಾರಟ್ಟುಗಳು.

ಮ್ಯಾನ್ಮಾರ್ ದೇಶ ಬಿಟ್ಟರೆ ಕೆಂಪು ದೊರೆಯುವ ಪ್ರದೇಶಗಳು ಥೈಲೆಂಡ್, ಆಫ್ಘಾನಿಸ್ತಾನ, ಕಾಂಬೋಡಿಯ, ಶ್ರೀಲಂಕಾ ಮತ್ತು ಭಾರತ. ಭಾರತದಲ್ಲಿ ದೊರೆಯುವ ಮುಖ್ಯ ಸ್ಥಳಗಳು ಕೇವಲ ಕೆಲವೇ ಕೆಲವು. ತಮಿಳುನಾಡಿನ ತಿರುಚಿನಾಪಳ್ಳಿಯ ಕಿರನೂರಿನ ಹತ್ತಿರವೂ ಸೇಲಂ ಜಿಲ್ಲೆಯ ಕೆಲವು ಕಡೆಗಳಲ್ಲೂ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಮೇಲುಕೊಪ್ಪ, ಶೃಂಗೇರಿ ಹತ್ತಿರದ ಕಾಡುಮನೆ, ಕೋಲಾರ ಜಿಲ್ಲೆಯ ಕಾಮಸಂದ್ರ, ಮೈಸೂರು ಜಿಲ್ಲೆಯ ಕುಪ್ಪ ಹಾಗೂ ಬೂದಿಪಡಗ ಎಂಬ ಸ್ಥಳಗಳಲ್ಲಿಯೂ ಕೆಂಪು ದೊರೆಯುತ್ತದೆ.

ಸ್ವಾಭಾವಿಕವಾಗಿ ದೊರೆಯುವ ಕೆಂಪುಗಳ ಜೊತೆಗೆ ಕೃತಕವಾಗಿಯೂ ಕೆಂಪು ಹರಳುಗಳನ್ನು ತಯಾರಿಸಬಹುದು. ಹೀಗೆ ಮಾಡುವಾಗ ಕೆಲವು ದೊಡ್ಡ ಹರಳುಗಳನ್ನು ಪಡೆಯುವುದು ಕೂಡ ಸಾಧ್ಯ. ಸಾಧಾರಣವಾಗಿ ಎಲ್ಲ ಗುಣಗಳಲ್ಲಿಯೂ ಕೃತಕ ಕೆಂಪುಗಳು ನೈಜ ಕೆಂಪುಗಳನ್ನು ಹೋಲುವುವಾದರೂ ಕೃತಕ ಕೆಂಪುಗಳಿಗೆ ಮಾರುಕಟ್ಟೆಯಲ್ಲಿ ಅಷ್ಟಾಗಿ ಬೆಲೆ ದೊರೆಯುವುದಿಲ್ಲ. (ಎಂ.ಎನ್.ವಿ.)

**ಕೆಂಪು ಆಲ್ಗೆ :** ಆಲ್ಗೆ ಸಸ್ಯಗಳ ಗುಂಪಿನಲ್ಲಿ ರೋಡೋಫೈಸೀ ವರ್ಗಕ್ಕೆ ಸೇರಿದ ಸಸ್ಯಗಳು. ಈ ಸಸ್ಯಗಳ ಜೀವಕೋಶಗಳಲ್ಲಿ ಫೈಕೋಎರಿತ್ರಿನ್ ಎಂಬ ಹೆಸರಿನ ಕೆಂಪು ಬಣ್ಣದ ವರ್ಣಕವಿದ್ದು ಸಸ್ಯಗಳು ಸಾಮಾನ್ಯವಾಗಿ ಕೆಂಪು ಬಣ್ಣದವಾಗಿ ಕಾಣುವುದರಿಂದ ಇವಕ್ಕೆ ಈ ಹೆಸರು ಬಂದಿದೆ. ಸುಮಾರು 400 ಜಾತಿ ಹಾಗೂ 3,000 ಪ್ರಭೇದಗಳನ್ನೊಳಗೊಂಡ ಈ ವರ್ಗ ಆಲ್ಗೆಗಳಲ್ಲೆ ಅತ್ಯಂತ ದೊಡ್ಡದು ಎನ್ನಿಸಿದೆ. ಸಂಪೂರ್ಣವಾಗಿ ಜಲವಾಸಿಗಳಾದ ಇವುಗಳಲ್ಲಿ ಬಹುಪಾಲು ಪ್ರಭೇದಗಳು ಸಮುದ್ರವಾಸಿಗಳು. ಉದಾಹರಣೆಗೆ ಕಾಂಡ್ರಸ್, ಜೆಲಿಡಿಯುವಮ್, ಗ್ರಾಸಿಲೇರಿಯ, ನೆಮಲಿಯನ್, ಬಾಂಗಿಯ ಇತ್ಯಾದಿ. ಸುಮಾರು 10–12 ಜಾತಿಗೆ ಸೇರಿದ 200 ಪ್ರಭೇದಗಳು ಮಾತ್ರ ಸಿಹಿನೀರಿನಲ್ಲಿ ಬೆಳೆಯುವಂಥವು. ಸಿಹಿ ನೀರಿನ ಪ್ರಭೇದಗಳಲ್ಲಿ ಮುಖ್ಯವಾದವು ಲೆಮಾನಿಯ, ಬಟ್ರಕೋಸ್ಪರ್ಮಮ್, ತೋರಿಯ, ಹಿಲ್ಡನ್ ಬ್ರಾಂಡಿಯ, ಕಾಂಪ್ಸೊಪೋಗಾನ್ ಇತ್ಯಾದಿ. ಬಹುಪಾಲು ಪ್ರಭೇದಗಳು ನೀರಿನಲ್ಲಿ ಮುಳುಗಿರುವ ಬಂಡೆಗಳ ಮೇಲೆ ಅಥವಾ ಬೇರೆ ಜಾತಿಯ ಗಿಡಗಳ ಮೇಲೆ ಅಪ್ಪುಗಿಡಗಳಾಗಿ ಬೆಳೆಯುತ್ತವೆ. ಕೆಲವು ಪರತಂತ್ರ ಜೀವಿಗಳಾಗಿ ವಾಸಿಸುವುದೂ ಉಂಟು. ಕೆಂಪು ಆಲ್ಗೆಗಳು ತಮ್ಮ ದೇಹದ ಗಾತ್ರ, ಆಕಾರ, ರಚನೆಗಳಲ್ಲಿ ವೈವಿಧ್ಯವನ್ನು ಪ್ರದರ್ಶಿಸುತ್ತವೆ. ಕೆಲವು ಜಾತಿಗಳು ಸೂಕ್ಷ್ಮ ಗಾತ್ರದ ಏಕಕೋಶಜೀವಿಗಳಾದರೆ (ಉದಾ: ಪಾರ್ ಫೈರಿಡಿಯಮ್) ಉಳಿದವು ಬಹುಕೋಶಜೀವಿಗಳು. ಬಹುಕೋಶಜೀವಿಗಳಲ್ಲಿ ಕೆಲವು ಪ್ರಭೇದಗಳಲ್ಲಿ ದೇಹ ಎಳೆಯಂತಿದ್ದು ಅಕ್ಕಪಕ್ಕಗಳಲ್ಲಿ ಮಾತ್ರ ಕವಲೊಡೆದಿರಬಹುದು (ಉದಾ: ರೋಡೋ ಕಾರ್ಟನ್), ಇಲ್ಲವೆ ಎಲ್ಲದಿಕ್ಕುಗಳಲ್ಲೂ ಕವಲುಗಳಿರಬಹುದು (ಉದಾ: ಲೆಮಾನಿಯ), ಇನ್ನು ಕೆಲವು ಪ್ರಭೇದಗಳಲ್ಲಿ ಹಲವಾರು ಎಳೆಗಳು ವಿಶಿಷ್ಟ ಹಾಗೂ ಸಂಕೀರ್ಣ ರೀತಿಯಲ್ಲಿ ಒಂದರೊಡನೊಂದು ಸೇರಿಕೊಂಡು ಕಾಂಡ, ಬೇರು, ಎಲೆಗಳನ್ನು ಹೋಲುವಂಥ ದೇಹವಾಗಿ ರೂಪುಗೊಳ್ಳಬಹುದು (ಉದಾ: ಕಾಂಡ್ರಸ್, ಜೆಲಿಡಿಯಮ್ ಇತ್ಯಾದಿ). ಮತ್ತೆ ಕೆಲವು ಪ್ರಭೇದಗಳಲ್ಲಿ ದೇಹದ ಹೊರಭಾಗದಲ್ಲಿ ಕ್ಯಾಲ್ಸಿಯಂ ಕಾರ್ಬೋನೇಟಿನ ದಪ್ಪ ಸಂಗ್ರಹವಿದ್ದು ಸಸ್ಯಗಳು ಹವಳಗಳಂತೆ ಕಾಣುತ್ತವೆ. ಬಹುಕೋಶಜೀವಿಗಳಲ್ಲಿ ಕೆಲವು ಪ್ರಭೇದಗಳು ಕೇವಲ ಕೆಲವೇ ಸೆಂಟಿಮೀಟರ್ ಉದ್ದಕ್ಕೆ ಬೆಳೆದರೆ ಮಿಕ್ಕವು 2–3 ಮೀ. ಉದ್ದಕ್ಕೆ ಬೆಳೆಯುವುದು ಕೂಡ ಉಂಟು.



ಕಾಂಡ್ರಸ್ ಪ್ರಭೇದ

ಕೆಂಪು ಆಲ್ಗೆಗಳ ಜೀವಕೋಶ ಭಿತ್ತಿಯಲ್ಲಿ ಪೆಕ್ಟಿನ್ ವಸ್ತುವಿನಿಂದ ಕೂಡಿದ ಹೊರಪದರವನ್ನೂ ಸೆಲ್ಯುಲೋಸಿನಿಂದ ಕೂಡಿದ ಒಳ ಪದರವನ್ನೂ ಗುರುತಿಸಬಹುದು. ಜೀವಕೋಶಗಳ ಒಳಗೆ ಒಂದು ದೊಡ್ಡ ಅವಕಾಶ, ಅದನ್ನು ಸುತ್ತುವರಿದಂತೆ ಕೋಶದ್ರವ್ಯದ ಒಂದು ತೆಳುವಾದ ಪದರು, ಒಂದು ದೊಡ್ಡದಾದ (ಉದಾ: ಪಾರ್ಫೈರ) ಇಲ್ಲವೆ ಹಲವಾರು ಚಿಕ್ಕ ಹಾಗೂ ತಟ್ಟೆಯಾಕಾರದ (ಉದಾ : ಉನ್ನತ ದರ್ಜೆಯ ಕೆಂಪು ಆಲ್ಗೆಗಳು) ಪ್ಲಾಸ್ಟಿಡ್ಡುಗಳಿವೆ. ಪ್ಲಾಸ್ಟಿಡ್ಡುಗಳಲ್ಲಿ ಕ್ಲೋರೋಫಿಲ್ ಎ ಮತ್ತು ಡಿ, $\alpha$ ಮತ್ತು $\beta$ ಕ್ಯಾರೊಟೀನ್, ಜ್ಯಾಂತೋಫಿಲ್, ಫೈಕೋಎರಿತ್ರಿನ್ ಎಂಬ ವರ್ಣಕಗಳಿವೆ. ಕೆಲವು ಪ್ರಭೇದಗಳ ಪ್ಲಾಸ್ಟಿಡ್ಡುಗಳಲ್ಲಿ ಫೈಕೋಸಯಾನಿನ್ ಎಂಬ ನೀಲಿ ವರ್ಣಕವಿರುವುದುಂಟು. ಕೆಳದರ್ಜೆಯ ಕೆಂಪು ಆಲ್ಗೆಗಳ ಒಂದೊಂದು ಜೀವಕೋಶದಲ್ಲಿ ಒಂದೊಂದೇ ಕಣ ಬೀಜವಿರುವುದು (ನ್ಯೂಕ್ಲಿಯಸ್) ಸಾಮಾನ್ಯವಾದರೂ ಉನ್ನತ ದರ್ಜೆಯವುಗಳಲ್ಲಿ ಹಲವಾರು (ಕೆಲವೊಮ್ಮೆ ಸಹಸ್ರಾರು) ಕಣಬೀಜಗಳಿರುವುದನ್ನು ನೋಡಬಹುದು. ದ್ಯುತಿಸಂಶ್ಲೇಷಣೆಯ ಫಲವಾಗಿ ತಯಾರಾಗುವ ಆಹಾರ ಫ್ಲಾರಿಡಿಯನ್ ಪಿಷ್ಟ ಎಂಬ ವಸ್ತುವಾಗಿ ಪರಿವರ್ತಿತವಾಗಿ ಸಣ್ಣಸಣ್ಣ ಕಣಗಳ ರೂಪದಲ್ಲಿ ಸಂಗ್ರಹವಾಗುತ್ತದೆ. ಈ ಗುಣ ಕೆಂಪು ಆಲ್ಗೆಗಳಿಗೆ ವಿಶಿಷ್ಟವಾದುದು. ದೇಹದ ಬೆಳವಣಿಗೆ ಮುಖ್ಯ ಹಾಗೂ ಪಕ್ಕದ ಕವಲುಗಳ ತುದಿ ಭಾಗದಲ್ಲಿರುವ ಅಗ್ರ ಜೀವಕೋಶಗಳ ಚಟುವಟಿಕೆಯಿಂದ ಮುಂದುವರಿಯುತ್ತದೆ. ಕೆಲವೊಮ್ಮೆ ದೇಹದ ಕೆಳಭಾಗದಲ್ಲಿ ಅಲ್ಲಲ್ಲಿ ಇರುವ ವಿಭಜನಶಕ್ತ ಜೀವಕೋಶಗಳ ಚಟುವಟಿಕೆಯಿಂದಲೂ ದೇಹ ಬೆಳೆಯುವುದುಂಟು.

ಗ್ರಾಸಿಲೇರಿಯ ಪ್ರಭೇದ

ಕೆಂಪು ಆಲ್ಗೆಗಳು ನಿರ್ಲಿಂಗ ರೀತಿ ಮತ್ತು ಲಿಂಗರೀತಿ ಎಂಬ ಎರಡು ರೀತಿಯ ಸಂತಾನವೃದ್ಧಿಯ ಕ್ರಮಗಳನ್ನು ಪ್ರದರ್ಶಿಸುತ್ತವೆ. ಲಿಂಗರೀತಿಯಲ್ಲಾಗಲಿ ನಿರ್ಲಿಂಗ ರೀತಿಯಲ್ಲಾಗಲಿ ಯಾವುದೇ ಬಗೆಯ ಕಶಾಂಗೀ ಸಂತಾನೋತ್ಪತ್ತಿಯ ಕಣಗಳು ಇಲ್ಲದಿರುವುದು ಕೆಂಪು ಆಲ್ಗೆಗಳ ಪ್ರಮುಖ ಲಕ್ಷಣಗಳಲ್ಲೊಂದು. ನಿರ್ಲಿಂಗರೀತಿ ಸಂತಾನಾಭಿವೃದ್ಧಿ ವಿಭಿನ್ನ ಸ್ಪೋರುಗಳಿಂದ ನಡೆಯುತ್ತದೆ. ಮಾನೋಸ್ಪೋರ್, ಬೈಸ್ಪೋರ್, ಟೆಟ್ರಸ್ಪೋರ್, ಪಾಲಿಸ್ಪೋರ್, ಪ್ಯಾರಸ್ಪೋರ್ ಮುಂತಾದವು ಈ ಬಗೆಯ ಸಂತಾನಾಭಿವೃದ್ಧಿಯಲ್ಲಿ ಉತ್ಪತ್ತಿಯಾಗುವ ಸ್ಪೋರುಗಳು. ಇವುಗಳಲ್ಲಿ ಯಾವುದಕ್ಕೂ ಕಶಾಂಗವಿಲ್ಲದಿದ್ದರೂ ಇವು ಅಮೀಬ ತೋರುವಂಥ ಚಲನೆಯನ್ನು ಪ್ರದರ್ಶಿಸುತ್ತವೆ.

ಹಿಪ್ನಿಯ ಪ್ರಭೇದ

ಲಿಂಗರೀತಿ ಸಂತಾನಾಭಿವೃದ್ಧಿ ಸಂಕೀರ್ಣ ಬಗೆಯದು. ಇದು ವಿಷಮಯುಗ್ಮ ಗ್ಯಾಮೀಟುಗಳ ಮೂಲಕ ನಡೆಯುತ್ತದೆ. ಈ ವಿಧಾನದಲ್ಲಿ ಕಾಣಬರುವ ಲೈಂಗಿಕ ರಚನೆಗಳು ಕೆಂಪು ಆಲ್ಗೆಗಳಲ್ಲಿ ಮಾತ್ರ ಕಾಣಬರುವಂಥವಾಗಿದ್ದು ಅವಕ್ಕೆ ವಿಶೇಷ ಹೆಸರುಗಳನ್ನು ಕೊಡಲಾಗಿದೆ. ಗಂಡು ಜನನಾಂಗಕ್ಕೆ ಸ್ಪರ್ಮ್ಯಾಟ್ಯಾಂಜಿಯಂ ಎಂದು ಹೆಸರು. ಇದು ಒಂದೇ ನ್ಯೂಕ್ಲಿಯಸ್ ಉಳ್ಳ, ವರ್ಣರಹಿತವಾದ ಸ್ಪರ್ಮೇಷಿಯಂ ಎಂಬ ಒಂದೇ ಒಂದು ಗಂಡು ಗ್ಯಾಮೀಟನ್ನು ಉತ್ಪಾದಿಸುತ್ತದೆ. ಹೆಣ್ಣು ಜನನಾಂಗಕ್ಕೆ ಕಾರ್ಪೊಗೋನಿಯಂ ಎಂದು ಹೆಸರು. ಇದರ ಅಗ್ರಭಾಗ ಉದ್ದವಾದ ಎಳೆಯಂತೆ ಚಾಚಿದೆ. ಈ ಭಾಗಕ್ಕೆ ಟ್ರೈಕೋಗೈನ್ ಎಂದು ಹೆಸರು. ಒಂದು ಸಸ್ಯದಿಂದ ಬಿಡುಗಡೆಯಾದ ಸ್ಪರ್ಮೇಷಿಯಂ ನೀರಿನ ಪ್ರವಾಹದೊಂದಿಗೆ ಚಲಿಸಿ ಹೆಣ್ಣು ಜನನಾಂಗವನ್ನು ತಲಪಿದಾಗ ಟ್ರೈಕೋಗೈನ್‌ಗೆ ಅಂಟಿಕೊಳ್ಳುತ್ತದೆ. ಆಗ ಟ್ರೈಕೋಗೈನಿನ ಭಿತ್ತಿ ಕರಗಿ ಹೋಗಿ ಅದರ ಮೂಲಕ ಸ್ಪರ್ಮೇಷಿಯಮಿನ ನ್ಯೂಕ್ಲಿಯಸ್ ಕಾರ್ಪೊಗೋನಿಯಮಿನ ಒಳಗೆ ಸಾಗಿ ಬಂದು ಅದರ ನ್ಯೂಕ್ಲಿಯಸಿನೊಂದಿಗೆ ಕೂಡಿಕೊಳ್ಳುತ್ತದೆ. ಈ ಕ್ರಿಯೆಯೇ ಗರ್ಭಾಂಕುರತೆ. ಇದರಿಂದಾಗಿ ಉತ್ಪತ್ತಿಯಾದ ಯುಗ್ಮಕಣ ಸ್ವಲ್ಪ ಸಮಯದ ಅನಂತರ ಸಂಖ್ಯಾಕ್ಷೀಣ ವಿಭಜನೆ ಹೊಂದಿ ಕಾರ್ಪೊಸ್ಪೋರ್ ಎಂಬ ಸ್ಪೋರುಗಳನ್ನು ಉತ್ಪಾದಿಸುತ್ತದೆ. ಕೆಲವು ಬಗೆಯ ಕೆಂಪು ಆಲ್ಗೆಗಳಲ್ಲಿ ಕಾರ್ಪೊಸ್ಪೋರುಗಳು ಬಿಡುಗಡೆಯಾಗಿ ನೇರವಾಗಿ ಮೊಳಕೆಯೊಡೆದು ಹೊಸ ಸಸ್ಯಗಳಾಗುತ್ತವೆ. ಇನ್ನು ಕೆಲವು ಬಗೆಗಳಲ್ಲಿ ಯುಗ್ಮಕಣ ಸಂಖ್ಯಾಕ್ಷೀಣ ವಿಭಜನೆಯಾಗದೆ ಕಾರ್ಪೊಸ್ಪೋರುಗಳನ್ನು ಉತ್ಪಾದಿಸುತ್ತದೆ. ಇವು ಟೆಟ್ರಸ್ಪೋರೋಫೈಟ್‌ಗಳೆಂಬ ಅಲೈಂಗಿಕ ಪೀಳಿಗೆಯ ಗಿಡಗಳಾಗಿ ಬೆಳೆಯುತ್ತವೆ. ಇಂಥ ಗಿಡಗಳು ನೋಡಲು ಲೈಂಗಿಕ ಗಿಡಗಳಂತೆಯೇ ಇದ್ದರೂ ಲೈಂಗಿಕ ಕಣಗಳನ್ನು ಉತ್ಪಾದಿಸದೆ ಟೆಟ್ರಸ್ಪೋರ್ ಎಂಬ ಅಲೈಂಗಿಕ ಸ್ಪೋರುಗಲನ್ನು ಉತ್ಪಾದಿಸುತ್ತವೆ. ಟೆಟ್ರಸ್ಪೋರುಗಳು ಕಾಲಕ್ರಮೇಣ ಬಿಡುಗಡೆಯಾಗಿ ಹೊಸ ಸಸ್ಯಗಳಾಗಿ ಬೆಳೆಯುತ್ತವೆ. ಇದರಿಂದಾಗಿ ಕೊನೆಯಲ್ಲಿ ಹೇಳಿದ ಲಿಂಗರೀತಿ ಸಂತಾನಾಭಿವೃದ್ಧಿಯನ್ನು ಪ್ರದರ್ಶಿಸುವ ಕೆಂಪು ಆಲ್ಗೆಗಳ ಜೀವನ ಚಕ್ರದಲ್ಲಿ ಎರಡು ಬಗೆಯ ಪೀಳಿಗೆಗಳನ್ನುಳ್ಳ ಪರ್ಯಾಯ ಕ್ರಮವನ್ನು ನೋಡಬಹುದು. ಒಂದು ಪೀಳಿಗೆ ಲೈಂಗಿಕ ಕಣಗಳನ್ನು ಉತ್ಪಾದಿಸುವ ಗ್ಯಾಮಿಟೋಫೈಟ್, ಇನ್ನೊಂದು ಅಲೈಂಗಿಕ ಕಣಗಳನ್ನು ಉತ್ಪಾದಿಸುವ ಸ್ಪೋರೋಫೈಟ್.

ಪಾಲಿಸೈಫೋನಿಯ ಪ್ರಭೇದ



ಬಟ್ರಕೋಸ್ಪರ್ಮಮ್ ಪ್ರಭೇದ

ಪಾರ್ಫೈರ ಪ್ರಭೇದ

ಕೆಂಪು ಆಲ್ಗೆಗಳಿಂದ ಹಲವಾರು ಉಪಯೋಗಗಳಿವೆ. ಅಟ್ಲಾಂಟಿಕ್ ಸಾಗರದ ತೀರಪ್ರದೇಶಗಳಲ್ಲಿ ಸಿಕ್ಕುವ ರೋಡಿಮೀನಿಯ ಪಾಮೇಟ, ಪಾರ್ಫೈರ ಜಾತಿಯ ಕೆಲವು ಪ್ರಭೇದಗಳು, ಹಾಗೂ ಕಾಂಡ್ರಸ್ ಕ್ರಿಸ್ಪಸ್ ಪ್ರಭೇದಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಗ್ರಾಸಿಲೇರಿಯ ಮತ್ತು ಇತರ ಜಾತಿಗಳಿಂದ ಅಗಾರ್ ಎಂಬ ವಸ್ತುವನ್ನು ತಯಾರಿಸಿ ಸಿಹಿತಿಂಡಿ ಮತ್ತು ಐಸ್‌ಕ್ರೀಮ್‌ಗಳನ್ನು ಮಾಡಲು ಬಳಸುವುದುಂಟು. **(ನೋಡಿ- ಆಲ್ಗೆ ; ಕಂದು–ಆಲ್ಗೆ; ಹಸುರು ಆಲ್ಗೆ)** (ಬಿ.ಪಿ.)

**ಕೆಂಪು ಕೊಕ್ಕರೆ :** ಇಕ್ಸೊಬ್ರೈಕಸ್ ಜಾತಿಯ ಇಕ್ಸೈಲಿಸ್ ಮತ್ತು ಸಿನಮೋಮಿಯಸ್ ಪ್ರಭೇದಗಳಿಗೆ ಸೇರಿದ ಕೊಕ್ಕರೆಯಂಥ ಹಕ್ಕಿ (ಸಿಕೋನೈಯಿಫಾರ್ಮೀಸ್ ಗಣ, ಆರ್ಡೀಯಿಡೀ ಕುಟುಂಬ). ಭಾರತದಲ್ಲಿ ಸಿನಮೋಮಿಯಸ್ ಪ್ರಭೇದ ಇದೆ. ಬಿಟ್ಟರ್ನ್ ಹಕ್ಕಿ ವೈಜ್ಞಾನಿಕ ಹೆಸರು ಇಕ್ಸೋಬ್ರೈಕಸ್ ಸಿನಮೋಮಿಯಸ್ ದಕ್ಷಿಣ ಕೆನಡದಿಂದ ಹಿಡಿದು ದಕ್ಷಿಣ ಅಮೆರಿಕದ ವರೆಗೂ ವ್ಯಾಪಿಸಿದಂತೆ ಇ.ಎಕ್ಸೈಲಿಸ್ ಪ್ರಭೇದ ಕಂಡುಬರುತ್ತದೆ. ಸಾಮಾನ್ಯವಾಗಿ ನೀರು ನಿಂತಿರುವ ಪ್ರದೇಶಗಳು ಹಾಗೂ ಬತ್ತದ ಗದ್ದೆಗಳಲ್ಲಿ ವಾಸಿಸುವ ಹಕ್ಕಿಯಿದು. ಕೊಳ ಮತ್ತು ಜವುಗು ಪ್ರದೇಶಗಳಲ್ಲಿರುವ ಎತ್ತರವಾದ ಹುಲ್ಲುಗಳ ಪೊದೆಗಳ ಮಧ್ಯೆ ವಾಸವಾಗಿರುತ್ತದೆ. ಬಹಳ ಪುಕ್ಕಲು ಸ್ವಭಾವದ ಈ ಹಕ್ಕಿ ಇತರರ ಕಣ್ಣಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನೀರಿನಲ್ಲಿರುವ ಗಿಡಗಳ ಮಧ್ಯೆ ಓಡಾಡುವುದಲ್ಲದೆ ಗಿಡಗಳ ಮೇಲೇರಿ ಅಡಗಿಕೊಳ್ಳುತ್ತದೆ. ಕೆಲವು ಸಾರಿ ತನ್ನ ದೇಹ ಮತ್ತು ಕೊಕ್ಕನ್ನು ನೆಟ್ಟಗೆ ಮೇಲಕ್ಕೆತ್ತಿಕೊಂಡು ಹೆಪ್ಪುಗಟ್ಟಿದಂತೆ ನಿಶ್ಚಲವಾಗಿ, ನೀರಿನಲ್ಲಿರುವ ಜೊಂಡನ್ನು ಹೋಲುವಂತೆಯೇ ನಟಿಸಿ ನಿಂತುಕೊಳ್ಳುತ್ತದೆ. ಹಾಗೆ ಅಲುಗಾಡದೆ ನಿಂತಿದ್ದರೂ ತನ್ನ ಕಣ್ಣುಗಳನ್ನು ನಿಧಾನವಾಗಿ ಚಲಿಸುತ್ತ ಸುತ್ತಲೂ ನೋಡುತ್ತದೆ. ಈ ಚಲನೆ ತಿರುಗಣಿ ಮಣೆ ತಿರುಗುವ ಹಾಗೆ ಇರುತ್ತದೆ.

ಕೆಂಪು ಕೊಕ್ಕರೆ

ಕೆಂಪು ಕೊಕ್ಕರೆ ಸುಮಾರು 15" ಉದ್ದದ ಸಣ್ಣ ಗಾತ್ರದ ಹಕ್ಕಿ. ಗಂಡುಹಕ್ಕಿಯ ಮೇಲ್ಭಾಗದ ಗರಿಗಳು ಮತ್ತು ತಲೆಯ ಪಕ್ಕಗಳು ಕೆಂಪು ಮಿಶ್ರಿತ ಕಂದುಬಣ್ಣದವು. ಗಂಟಲು ಮತ್ತು ಕೆಳಭಾಗದ ಗರಿಗಳು ಕಿತ್ತಳೆಮಿಶ್ರಿತ ಕಂದು ಬಣ್ಣದವು. ಗಂಟಲಿನ ಎರಡು ಕಡೆ ಬಿಳಿಯ ಗೆರೆಯಿದೆ. ಕತ್ತಿನ ಮುಂಭಾಗದಲ್ಲಿ ಕೆಳಕ್ಕೆ ಚಾಚಿಕೊಂಡಿರುವ ಹಾಗೆ ಕಂದುಬಣ್ಣದ ಗೆರೆಯಿದೆ. ಹೆಣ್ಣು ಹಕ್ಕಿ ಮಾಸಲು ಬಣ್ಣದ್ದು.

ಇದರ ಪ್ರಧಾನ ಆಹಾರ ಮೀನು. ಕೆಲವು ಸಾರಿ ಸಣ್ಣ ಸಣ್ಣ ಹಕ್ಕಿ, ಹಲ್ಲಿ, ಹಾವು, ಕಪ್ಪೆ, ಮಿಡತೆ, ಮೃದ್ವಂಗಿಗಳು, ಸೀಗಡಿ, ಏಡಿ ಮುಂತಾದವನ್ನು ತಿನ್ನುತ್ತದೆ. ಮೊಟ್ಟೆಯಿಡುವುದು ಮಳೆಗಾಲದಲ್ಲಿ. ಪ್ರತಿ ಸೂಲಿಗೂ 4 ಮೊಟ್ಟೆಗಳನ್ನಿಡುತ್ತದೆ. ಬತ್ತದ ಗದ್ದೆಗಳಲ್ಲಿ ಈ ಹಕ್ಕಿಗಳು ಹೇರಳವಾಗಿ ಗೂಡುಗಳನ್ನು ಕಟ್ಟುತ್ತವೆ. ಕೊಳಗಳ ಬಳಿ ನೇತಾಡುತ್ತಿರುವ ಪೊದರುಗಳು ಅಥವಾ ಎತ್ತರವಾದ ಜೊಂಡುಗಳ ಮಧ್ಯೆ ಹುಲ್ಲು ಅಥವಾ ಹುಲ್ಲಿನ ಜೊತೆಗೆ ಬತ್ತದ ಕಡ್ಡಿಗಳನ್ನು ಸೇರಿಸಿ ಗೂಡು ಕಟ್ಟುತ್ತದೆ. (ಕೆ.ಪಿ.ಆರ್.)

**ಕೆಂಪು ಕೋಟೆಗಳು :** ಮೊಗಲ್ ಚಕ್ರವರ್ತಿಗಳ ಕಾಲದಲ್ಲಿ ಆಗ್ರ ಮತ್ತು ದೆಹಲಿಗಳಲ್ಲಿ ನಿರ್ಮಿತವಾದ ಪ್ರಸಿದ್ಧ ಕೋಟೆಗಳು. ಕೋಟೆಯ ಗೋಡೆಗಳನ್ನು ಕೆಂಪು ಮರಳುಗಲ್ಲಿನಿಂದ ಕಟ್ಟಿರುವುದರಿಂದ ಇವುಗಳಿಗೆ ಕೆಂಪು ಕೋಟೆಗಳೆಂದು ಹೆಸರು ಬಂದಿದೆ. ಎರಡು ಕೋಟೆಗಳೂ ಯಮುನಾ ನದಿಯ ದಡದ ಮೇಲಿವೆ. ಇವು ಆ ಕಾಲದ ದೊಡ್ಡ ಕೋಟೆಗಳು. ಎತ್ತರವಾದ ಈ ಕೋಟೆಗಳೂ ಇವುಗಳ ಹಲವು ಭವ್ಯ ಕಟ್ಟಡಗಳೂ ಮೊಗಲ್ ಚಕ್ರವರ್ತಿಗಳ ಆಡಳಿತ ವೈಭವದ ಸಂಕೇತಗಳಾಗಿ ಇಂದಿಗೂ ನಿಂತಿವೆ.ಆಗ್ರದಲ್ಲಿ ಬದಲ್‌ಘರ್ ಎಂಬ ಹಳೆಯ ಕೋಟೆಯಿದ್ದ ಸ್ಥಳದಲ್ಲಿ ಅಕ್ಬರ್ ಈಗಿನ ಕೆಂಪು ಕೋಟೆಯನ್ನು ಕಟ್ಟಿಸಿದ. ಇದರ ನಿರ್ಮಾಣಕಾರ್ಯ 1565ರಲ್ಲಿ ಆರಂಭವಾಗಿ ಎಂಟು ವರ್ಷಗಳಲ್ಲಿ ಪೂರೈಸಿತು. ಯಮುನಾ ನದಿಯ ಬಲದಂಡೆಯಲ್ಲಿ ಮುಮ್ಮೂಲೆಯಾಗಿ ಕಟ್ಟಿರುವ ಈ ಕೋಟೆಯ ಸುತ್ತಳತೆ ಸು.2 1/4 ಕಿಮೀ. ಕೋಟೆಗೆ ಎರಡು ಗೋಡೆಗಳಿವೆ. ಹೊರಗೋಡೆಯ ಎತ್ತರ 40′. ಒಳಗೋಡೆ 85′ ಎತ್ತರವಿದೆ. ಈ ಎರಡು ಗೋಡೆಗಳ ನಡುವೆ ಆಳವಾದ ಕಂದಕವಿದೆ. ಸುತ್ತಲೂ ಅಲ್ಲಲ್ಲಿ ಬುರುಜುಗಳುಂಟು. ಕೋಟೆಗೆ ಎರಡು ಮುಖ್ಯ ಪ್ರವೇಶದ್ವಾರಗಳಿವೆ. ಇವುಗಳಲ್ಲಿ ಒಂದು ದಿಲ್ಲಿಯ ಬಾಗಿಲು; ಇನ್ನೊಂದು ಅಮರಸಿಂಗ್ ಬಾಗಿಲು. ಷಹಜಹಾನನ ಆಸ್ಥಾನದಲ್ಲಿದ್ದ ಜೋಧ್‌ಪುರದ ರಾವ್ ಅಮರಸಿಂಗ ಕೋಶಾಧಿಕಾರಿಯೊಬ್ಬನನ್ನು ಕೊಂದು ಕುದುರೆಯ ಮೇಲೆ ಕೋಟೆಯಿಂದ ಹಾರಿ ತಪ್ಪಿಸಿಕೊಳ್ಳಲೆತ್ನಿಸಿ ಸಿಕ್ಕಿಬಿದ್ದು ಕೊಲೆಗೀಡಾದ. ಅವನ ಧೈರ್ಯಕ್ಕೆ ಮೆಚ್ಚಿ ಚಕ್ರವರ್ತಿ ಈ ಬಾಗಿಲಿಗೆ ಅವನ ಹೆಸರನ್ನಿಟ್ಟನಂತೆ.

ನದಿಯ ದಡದ ಮೇಲಿರುವ ಕೋಟೆಯ ಗೋಡೆಗೆ ಹೊಂದಿಕೊಂಡಂತೆ ಮೊಗಲ್ ಚಕ್ರವರ್ತಿಗಳು ಕಟ್ಟಿಸಿದ ಅನೇಕ ಅರಮನೆಗಳು ಮತ್ತು ಇತರ ಕಟ್ಟಡಗಳು ಇವೆ. ಅಕ್ಬರ್ ಅಕ್ಬರೀಮಹಲನ್ನು ಕಟ್ಟಿಸಿದ. ಆದರೆ ಅದು ಈಗ ಉಳಿದಿಲ್ಲ. ಜಹಾಂಗೀರ್ ಕಟ್ಟಿಸಿದ ಜಹಾಂಗೀರಿ ಮಹಲು ಅದಕ್ಕೆ ಹೊಂದಿಕೊಂಡಂತೆಯೇ ಇದೆ. ಇದು ಹಿಂದೂ ಶಿಲ್ಪಶೈಲಿಯನ್ನು ಅಳವಡಿಸಿಕೊಂಡ ಆ ಕಾಲದ ಮೊಗಲ್ ಶಿಲ್ಪಶೈಲಿಗೆ ಮಾದರಿಯಾಗಿದೆ. ಈ ಅರಮನೆ ಚಿನ್ನದ ರೇಕುಗಳಿಂದ, ಬಣ್ಣಗಳಿಂದ ಸಂಪೂರ್ಣವಾಗಿ ಚಿತ್ರಿತವಾಗಿತ್ತು. ಅಕ್ಬರನೇ ಇದನ್ನು ತನ್ನ ರಜಪೂತರಾಣಿಗಾಗಿ ಕಟ್ಟಿಸಿದನೆಂಬ ಒಂದು ಅಭಿಪ್ರಾಯ ಇದೆ. ಜಹಾಂಗೀರನ ರಾಣಿ ಜೋಧ್‌ಬಾಯಿ ಇಲ್ಲಿ ವಾಸಿಸುತ್ತಿದ್ದಳು.

ಆಗ್ರದ ಕೆಂಪು ಕೋಟೆಯ ಅಮರಸಿಂಹನ ದ್ವಾರ

ಷಹಜಹಾನ್ ಇಲ್ಲಿ ಅನೇಕ ಭವ್ಯವಾದ ಕಟ್ಟಡಗಳನ್ನು ಕಟ್ಟಿಸಿದ. ಜಹಾಂಗೀರಿ ಮಹಲಿನ ಉತ್ತರ ಭಾಗದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಸಿ ತನ್ನ ವಾಸಕ್ಕೆ ಅಳವಡಿಸಿಕೊಂಡ. ಇಲ್ಲಿ ಕೆಂಪು ಮರಳುಗಲ್ಲಿನಿಂದ ಕಟ್ಟಿರುವ ವೀಕ್ಷಣಗೋಪುರದಲ್ಲಿ ಷಹಜಹಾನ್ ಕುಳಿತು ಆನೆಕಾಳಗವನ್ನು ವೀಕ್ಷಿಸುತ್ತಿದ್ದನಂತೆ. ಇದರ ಪಕ್ಕದಲ್ಲಿಯೇ ಉತ್ತರಕ್ಕೆ ತನ್ನ ರಾಣೀವಾಸದವರಿಗಾಗಿ ಖಾಸ್ ಮಹಲನ್ನು 1637ರಲ್ಲಿ ಕಟ್ಟಿಸಿದ. ಅಮೃತಶಿಲೆಯಿಂದ ನಿರ್ಮಿತವಾದ ಈ ಅರಮನೆಗೆ ಹೊಂದಿಕೊಂಡಂತೆ ಇರುವ ಶೀಷ್‌ಮಹಲ್ ಅಥವಾ ಕನ್ನಡಿ ತೊಟ್ಟಿ ಅವರ ಸ್ನಾನಗೃಹವಾಗಿತ್ತು. ಇದರ ಒಳಭಾಗದ ಗೋಡೆ ಚಾವಣಿಗಳಿಗೆ ಸುಂದರವಾದ ರೀತಿಯಲ್ಲಿ ಕನ್ನಡಿಯ ಚೂರುಗಳನ್ನು ಹೊದಿಸಿದೆ. ಇಲ್ಲಿ ದೀಪವನ್ನು ಬೆಳಗಿದಾಗ ಅದರ ಪ್ರಕಾಶ ಪ್ರಜ್ವಲಿಸುತ್ತದೆ.ವಸ್ ಮಹಲಿನ ಉತ್ತರಕ್ಕೆ ಕೋಟೆಗೋಡೆ ಉತ್ತರದಿಂದ ಪೂರ್ವಕ್ಕೆ ತಿರುಗುವ ಮೂಲೆಗೆ ಹೊಂದಿಕೊಂಡಂತೆ ಮುಥಾಮನ್ ಬುರುಜು ಇದೆ. ಇದು ಎರಡು ಅಂತಸ್ತುಗಳ ಕಟ್ಟಡ. ಇದರ ಮೇಲೆ ಅಷ್ಟಕೋನಾಕೃತಿಯ ಮಂಟಪವಿದೆ. ಇದನ್ನು ಮಮ್ತಾಜ್‌ಗಾಗಿ ಕಟ್ಟಿಸಿದ. ಇದೇ ಸ್ಥಳದಲ್ಲೇ ಅವನು ಸೆರೆಯಲ್ಲಿದ್ದು 1666ರಲ್ಲಿ ಕೊನೆಯುಸಿರೆಳೆದ. ಇದರ ಬಳಿಯೇ ಕೋಟೆಯ ದಿಡ್ಡಿಬಾಗಿಲಿತ್ತು. ಇದನ್ನು ಔರಂಗ್‌ಜೇಬ್ ಮುಚ್ಚಿಸಿದ.

ಷಹಜಹಾನ್ 1637ರಲ್ಲಿ ಕಟ್ಟಿಸಿದ, ಅತ್ಯಂತ ಸುಂದರವಾದ ಕುಸುರಿ ಕೆಲಸದಿಂದ ತುಂಬಿರುವ ಕಟ್ಟಡ ದಿವಾನ್–ಇ–ಖಾಸ್. ಚಕ್ರವರ್ತಿ ಪ್ರತಿಷ್ಠಿತರನ್ನು ಎದುರುಗೊಳ್ಳುತ್ತಿದ್ದುದು ಇಲ್ಲಿ. ಮತ್ತೊಂದು ಭವ್ಯವಾದ ಕಟ್ಟಡ ದಿವಾನ್–ಇ–ಆಮ್. ಇದು ಒಂದು ವಿಶಾಲವಾದ ಅಂಗಳ. ಇದರ ಹಿಂದೆ ಎತ್ತರವಾದ ಜಗತಿಯ ಮೇಲೆ ನಲವತ್ತು ಕಂಬಗಳ ದೊಡ್ಡ ಮಂಟಪವಿದೆ. ಮಂಟಪಕ್ಕೆ ಹೊಂದಿಕೊಂಡಂತೆ ಸಿಂಹಾಸನವಿರಿಸುವ ಎತ್ತರವಾದ ತಾಣವುಂಟು. ಇದರ ಸುತ್ತಲೂ ಅಮೃತಶಿಲೆಯಲ್ಲಿ ಬಣ್ಣಬಣ್ಣದ ಪ್ರಶಸ್ತ ಶಿಲೆಗಳ ತುಣುಕುಗಳನ್ನು ಹುದುಗಿಸಿ ನವುರಾಗಿ ಬಿಡಿಸಿರುವ ಕುಸುರಿಕೆಲಸ ಸುಂದರವಾಗಿದೆ.

ಚಕ್ರವರ್ತಿ ನಿತ್ಯವೂ ಇಲ್ಲಿ ಕುಳಿತು ಪ್ರಜೆಗಳ ಅಹವಾಲನ್ನು ಕೇಳಿ ನ್ಯಾಯ ತೀರ್ಮಾನಿಸುತ್ತಿದ್ದ. ಸಾರ್ಸನಿಕ್ ಶೈಲಿಯಲ್ಲಿ ಷಾಹಜಹಾನ್ ಕಟ್ಟಿಸಿದ ಶುಭ್ರವಾದ ಹಾಲುಗಲ್ಲಿನ ಸರಳವೂ ಸುಂದರವೂ ಆದ ಕಟ್ಟಡ ಮೋತಿ ಮಸೀದಿ.



ದೆಹಲಿಯ ಕೆಂಪು ಕೋಟೆ

ಮೊಗಲರ ಭೋಗಭಾಗ್ಯಗಳ ಪರಾಕಾಷ್ಠೆಯನ್ನು ಎತ್ತಿ ಹಿಡಿಯುವ ಸ್ಮಾರಕ ದೆಹಲಿಯ ಕೆಂಪು ಕೋಟೆ. ಅದರೊಳಗಿನ ಸೌಂದರ್ಯದ ಖನಿಗಳಂತಿರುವವು ಹಾಲುಗಲ್ಲಿನ ಅರಮನೆಗಳು. ಷಹಜಹಾನ್ ಕಟ್ಟಿಸಿದ ಈ ಕೋಟೆ ಮತ್ತು ಅರಮನೆಗಳು 1639ರಲ್ಲಿ ಆರಂಭವಾಗಿ 9 ವರ್ಷಗಳಲ್ಲಿ ಪೂರ್ಣಗೊಂಡುವು. ಈ ಕೋಟೆಗೆ ಮುಖ್ಯವಾದ ಎರಡು ಪ್ರವೇಶದ್ವಾರಗಳಿವೆ. ಚಾಂದನೀಚೌಕಕ್ಕೆ ಎದುರಾಗಿರುವ ಬಾಗಿಲಿಗೆ ಲಾಹೋರ್ ಬಾಗಿಲು ಎಂದು ಹೆಸರಿದೆ. ಸುಂದರವಾದ ಈ ದ್ವಾರಕ್ಕೆ ಅಡ್ಡಲಾಗಿ ಒಂದು ಗೋಡೆಯುಂಟು. ಭದ್ರತೆಯ ದೃಷ್ಟಿಯಿಂದ ಔರಂಗ್‍ಜೇಬ್ ಈ ಗೋಡೆಯನ್ನು ಕಟ್ಟಿಸಿದ. ಈ ದ್ವಾರದ ಒಳಹೊಕ್ಕ ಕೂಡಲೇ ಕಾಣುವುದು ನಗಾರಿಖಾನೆ. ಇದರ ಕೆಂಪು ಮರಳುಗಲ್ಲಿನ ಗೋಡೆಗಳನ್ನು ಕಲಾತ್ಮಕವಾಗಿ ಕೊರೆಯಲಾಗಿದೆ. ಮುಂದೆ ವಿಶಾಲವಾದ ಬಯಲು; ಬಯಲ ಹಿಂದೆಯೇ ಇರುವುದು ದಿವಾನ್–ಇ–ಆಮ್, ಆಗ್ರಾದಲ್ಲಿರುವಂತೆಯೇ ಇದ್ದರೂ ಇಲ್ಲಿಯ ಸಿಂಹಾಸನದ ಜಗತಿ ಮತ್ತು ಅದರ ಹಿಂದಿನ ಗೋಡೆಗಳಲ್ಲಿ ಕಂಡುಬರುವ ಹಾಲುಗಲ್ಲಿನಲ್ಲಿ ಅತಿ ಬೆಲೆ ಬಾಳುವ ನವರತ್ನಗಳನ್ನು ಹುದುಗಿಸಿ ಬಳ್ಳಿಗಳು, ಹೂವುಗಳು, ಹಕ್ಕಿಗಳು ಮುಂತಾದವನ್ನು ಅವುಗಳ ಸ್ವಾಭಾವಿಕ ಬಣ್ಣಗಳಲ್ಲಿ ಬಿಡಿಸಿರುವ–ಕಲೆ ಅತ್ಯಂತ ಸುಂದರವಾದ್ದು. ಸಾರ್ವಜನಿಕರು ವೀಕ್ಷಿಸಬಹುದಾದ ಸಭೆ ಸಮಾರಂಭಗಳು ನಡೆಯುತ್ತಿದ್ದುದು ಇಲ್ಲಿಯೇ.

ಈ ಅರಮನೆಗೆ ಹೊಂದಿಕೊಂಡಂತೆ ಹಲವು ಸುಂದರವಾದ ಮಹಲುಗಳಿವೆ. ದಿವಾನ್–ಇ–ಆಮ್‍ನ ಹಿಂಭಾಗದಲ್ಲಿರುವುದೇ ರಂಗಮಹಲ್. ರಾಣಿವಾಸದವರು ಇರುತ್ತಿದ್ದ ಈ ಕಟ್ಟಡ ಬಣ್ಣಬಣ್ಣದ ಅಲಂಕರಣಗಳಿಂದ ತುಂಬಿತ್ತು. ಇದರ ನಡುವೆ ಇರುವ, ಹಾಲುಗಲ್ಲಿನ ಸುಂದರವಾದ ಕಮಲದಾಕೃತಿಯ ನೀರಿನ ತೊಟ್ಟಿಯ ಮೂಲಕವೇ ಅರಮನೆಯ ಎಲ್ಲ ಭಾಗಗಳಿಗೂ ಕಾಲುವೆಗಳಿಂದ ನೀರೊದಗಿಸಲಾಗುತ್ತಿತ್ತು. ರಂಗಮಹಲಿನ ದಕ್ಷಿಣಕ್ಕಿರುವುದು ಮುಮ್ತಾಜ್‍ಮಹಲ್ ಅಥವಾ ಶೀಷ್ ಮಹಲ್. ರಂಗಮಹಲಿನ ಉತ್ತರಕ್ಕೆ ಮಹಲ್–ಇ–ಖಾಸ್ ಇದ್ದು ಅದರಲ್ಲಿ ಮೂರು ಭಾಗಗಳಿವೆ. ಇದು ಚಕ್ರವರ್ತಿಯ ಸ್ವಂತ ಉಪಯೋಗಕ್ಕಾಗಿ ನಿರ್ಮಿಸಿದ ಸುಂದರವಾದ ಅರಮನೆ. ಇದರ ಗೋಡೆಗಳು, ಚಾವಣಿಗಳು ಸೂಕ್ಷ್ಮವಾದ ಕುಸುರಿ ಕೆಲಸದಿಂದಲೂ ಚಿತ್ರಗಳಿಂದಲೂ ತುಂಬಿದ್ದವು. ಇದರ ನಡುವೆ ಹಾಲುಗಲ್ಲಿನ ಸುಂದರವಾದ ತೆರೆಯೂ ಅದರ ಮೇಲೆ ನ್ಯಾಯದ ತಕ್ಕಡಿಯೂ ಅದರ ಕೆಳಗೆ ಕಟ್ಟಡದ ಚರಿತ್ರೆಯನ್ನು ತಿಳಿಸುವ ಪರ್ಷಿಯನ್ ಶಾಸನಗಳೂ ಇವೆ. ಖಾಸ್ ಮಹಲಿಗೆ ಸೇರಿದಂತೆ ಅಷ್ಟಕೋನಾಕೃತಿಯ ಮಂಟಪವೊಂದಿದೆ. ಅದರಲ್ಲಿ ನಿಂತು ಚಕ್ರವರ್ತಿ ತನ್ನ ಪ್ರಜೆಗಳಿಗೆ ದರ್ಶನ ಕೊಡುತ್ತಿದ್ದ. ಆನೆಕಾಳಗ, ಕುಸ್ತಿ ಮುಂತಾದವನ್ನು ಅಲ್ಲಿಂದ ವೀಕ್ಷಿಸುತ್ತಿದ್ದ.

ಇದರ ಉತ್ತರಕ್ಕಿರುವುದು ದಿವಾನ್–ಇ–ಖಾಸ್. ಚಕ್ರವರ್ತಿ ಆಡಳಿತದ ವಿಷಯವನ್ನು ಚರ್ಚಿಸುತ್ತಿದ್ದುದು, ಪ್ರತಿಷ್ಠಿತ ವ್ಯಕ್ತಿಗಳಿಗೆ ಸಂದರ್ಶನವೀಯುತ್ತಿದ್ದುದು ಇಲ್ಲಿಯೇ. ಪ್ರಸಿದ್ಧವಾದ ಮಯೂರಾಸನವಿದ್ದುದು ಈ ಅರಮನೆಯಲ್ಲಿಯೇ. ಕಣ್ಣು ಕೋರೈಸುವಂಥ ಅತ್ಯಂತ ಪ್ರಭಾವಪೂರ್ಣವಾದ ಚಿತ್ರಕೆಲಸ, ಕುಸುರಿ ಕೆಲಸಗಳನ್ನು ಇಲ್ಲಿ ನೋಡಬಹುದು. ಇದರ ಚಾವಣಿಯನ್ನು ಬೆಳ್ಳಿಯಿಂದ ನಿರ್ಮಿಸಲಾಗಿತ್ತು. ಇದರ ಪಕ್ಕದಲ್ಲಿ ಮನೋಹರವಾದ ಮೊಗಲ್ ಸ್ನಾನಗೃಹಗಳಿವೆ. ಇಲ್ಲಿಯೂ ಹಾಲುಗಲ್ಲಿನ ಮೇಲಿನ ಅತ್ಯಂತ ನವುರಾದ ಕುಸುರಿ ಕೆಲಸವನ್ನು ನೋಡಬಹುದು. ಇದರಿಂದಾಚೆಗೆ ಔರಂಗ್‍ಜೇಬ್ ಕಟ್ಟಿಸಿದ ಮೋತಿ ಮಸೀದಿಯಿದೆ. ಇದು ಆಗ್ರದ ಮೋತಿ ಮಸೀದಿಯಂತೆ ಶುಭ್ರವಾದ ಹಾಲುಗಲ್ಲಿನಿಂದ ನಿರ್ಮಿತವಾಗಿದ್ದು ಸುಂದರವಾಗಿದ್ದರೂ ಇದರ ಅತಿಯಾದ ಅಲಂಕರಣದಲ್ಲಿ ಕಲಾಭಿರುಚಿ ಇಳಿಮುಖವಾಗುತ್ತಿದ್ದುದನ್ನು ಗುರುತಿಸಬಹುದು. ಅರಮನೆಯ ಉತ್ತರ ಬಾಗಿಲಿನ ಬಳಿಯಲ್ಲಿರುವ ಷಾ ಬುರುಜು ಮತ್ತೊಂದು ಸುಂದರ ಕಟ್ಟಡ. (ಎಂ.ಎಚ್.)

**ಕೆಂಪುದಾಳೆ :** ಸ್ಟರ್ಕ್ಯೂಲಿಯೇಸೀ ಕುಟುಂಬಕ್ಕೆ ಸೇರಿದ ಮಧ್ಯಮ ಗಾತ್ರದ ಪರ್ಣಪಾತಿ ಮರ. ಸ್ಟರ್ಕ್ಯೂಲಿಯ ಯುರೆನ್ಸ್ ಎಂಬುದು ಇದರ ಶಾಸ್ತ್ರೀಯನಾಮ. ಭಾರತದಲ್ಲಿ ಇದು ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ, ಉತ್ತರಪ್ರದೇಶಗಳ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಕಲ್ಲುಬಂಡೆ ಹೆಚ್ಚಾಗಿರುವ ಬೆಟ್ಟಗಳೂ ಬಯಲು ಕಾಡುಗಳೂ ಇದರ ಸಮೃದ್ಧ ಬೆಳವಣಿಗೆಗೆ ಉತ್ತಮ ಸ್ಥಳಗಳು. ಈ ಮರದ ವೈಶಿಷ್ಟ್ಯವೆಂದರೆ ಇದರ ಹಳದಿ ಮಿಶ್ರಿತ ಬೂದು ಬಣ್ಣದ ತೊಗಟೆ ತೆಳ್ಳನೆಯ ಕಾಗದದಂತೆ ಸುಲಿದು ಬರುವುದು. ನವೆಂಬರ್–ಮೇ ತಿಂಗಳವರೆಗೆ ಎಲೆ ಇಲ್ಲದೆ ಬಿಳಿಯ ಬಣ್ಣದ ಕಾಂಡ, ರೆಂಬೆಗಳು ಮಾತ್ರ ಪ್ರಮುಖವಾಗಿ ಕಾಣುತ್ತವೆ. ಈ ಮರದಿಂದ ಔಷಧಿಗೆ ಉಪಯುಕ್ತವಾದ ಕಟೀರಾ ಎಂಬ ಅಂಟು ಸಿಗುತ್ತದೆ. ಇದನ್ನು ಸಿಹಿತಿಂಡಿಗಳ ತಯಾರಿಕೆಯಲ್ಲಿ ಬಳಸುವುದುಂಟು. ಒಳ ತೊಗಟೆಯಿಂದ ಹಗ್ಗ ಮಾಡಲು ಬಳಸುವ ಒಳ್ಳೆಯ ನಾರು ಸಿಗುತ್ತದೆ. ಕೆಂಪುದಾಳೆಯ ಚೌಬೀನೆಯನ್ನು ಆಟದ ಸಾಮಾನುಗಳ ತಯಾರಿಕೆಗೆ ಬಳಸುತ್ತಾರೆ. ಅಭಾವ ಕಾಲದಲ್ಲಿ ಇದರ ಎಲೆಯನ್ನು ದನಗಳ ಮೇವಾಗಿ ಉಪಯೋಗಿಸುವುದಿದೆ.

(ಎ.ಕೆ.ಎಸ್.)

**ಕೆಂಪುನಾರಾಯಣ :** ಮುದ್ರಾಮಂಜೂಷವೆಂಬ ಪ್ರಸಿದ್ಧ ಕನ್ನಡ ಗದ್ಯ ಗ್ರಂಥದ ಕರ್ತೃ. ಮೈಸೂರು ಸಂಸ್ಥಾನವನ್ನು ಆಳಿದ ಮುಮ್ಮಡಿ ಕೃಷ್ಣರಾಜ ಒಡೆಯರ (1794–1868) ಆಶ್ರಿತನಾಗಿದ್ದ ಈತ ಹೊಯ್ಸಳ ಕರ್ಣಾಟಕ ಪಂಗಡಕ್ಕೆ ಸೇರಿದ ಸ್ಮಾರ್ತ ಬ್ರಾಹ್ಮಣ. ಹದಿನೆಂಟು ಆಶಯಗಳನ್ನುಳ್ಳ ಮುದ್ರಾಮಂಜೂಷವೆಂಬ ಗದ್ಯ ಗ್ರಂಥ ಇವನ ಏಕೈಕ ಕೃತಿ. 1823ರಲ್ಲಿ ಈ ಗ್ರಂಥ ರಚಿತವಾಯಿತೆಂದು ಕವಿಯ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ.

ಮಗಧ ದೇಶದ ಅರಸರಾದ ನವನಂದರನ್ನು, ಅವರ ದಾಯಾದಿಯಾದ ಚಂದ್ರಗುಪ್ತ ಮೌರ್ಯ ದಂಡನೀತಿಶಾಸ್ತ್ರದಲ್ಲಿ ಪ್ರವೀಣನಾದ ಚಾಣಕ್ಯನೆಂಬ ಬ್ರಾಹ್ಮಣನ ಸಹಾಯದಿಂದ ಸಂಹರಿಸಿ, ಪಾಟಲೀಪುತ್ರದ ಸಿಂಹಾಸನವನ್ನು ಏರಿದ ಐತಿಹಾಸಿಕ ವೃತ್ತಾಂತವೇ ಮುದ್ರಾಮಂಜೂಷದ ಕಥಾವಸ್ತು. ಪುರಾಣಗಳಲ್ಲಿ ಸಂಕ್ಷೇಪವಾಗಿ ನಿರೂಪಿತವಾದ ಕಥೆಯನ್ನು ತಾನು ವಿಸ್ತಾರವಾಗಿ ಹೇಳುತ್ತಿರುವೆನೆಂದು ಗ್ರಂಥದ ಅವತರಣಿಕೆಯಲ್ಲಿ ಕವಿ ಹೇಳಿಕೊಂಡಿದ್ದರೂ ಸಂಸ್ಕೃತ ಸಾಹಿತ್ಯದಲ್ಲಿ ಪ್ರಖ್ಯಾತವಾಗಿರುವ ವಿಶಾಖದತ್ತನ ಮುದ್ರಾರಾಕ್ಷಸ ನಾಟಕವೇ ಈ ಕನ್ನಡ ಕೃತಿಗೆ ಮೂಲಾಧಾರ. ಕಥೆಯ ರಚನೆಗೆ ಪುರಾಣಗಳಿಂದ ಒದಗಿಬಂದಿರುವ ಸಹಾಯ ಅತ್ಯಲ್ಪ; ಇಲ್ಲವೆ ಇಲ್ಲವೆಂದರೂ ತಡೆಯುತ್ತದೆ. ಮುದ್ರಾಮಂಜೂಷದ ಕಥೆಯ ಮೂರರಲ್ಲಿ ಒಂದು ಭಾಗಕ್ಕೆ ಆಧಾರವಾದ ನಾಟಕವನ್ನು ಕೆಂಪು ನಾರಾಯಣ ನೆನೆಯದಿದ್ದರೂ ರಾಕ್ಷಸನ ಮುದ್ರೆಯುಂಗರದ ಸಂಗ್ರಹದಿಂದ ಮೊದಲಾಗಿ ಚಂದ್ರಗುಪ್ತನ ಪಟ್ಟಾಭಿಷೇಕದಿಂದ ಮುಗಿಯುವ ನಾಟಕದ ಕಥೆಯನ್ನು ವಿಸ್ತಾರವಾಗಿ ಗದ್ಯದಲ್ಲಿ ಅನುವಾದ ಮಾಡಿರುವುದರ ಜೊತೆಗೆ ಪೂರ್ವಕಥೆಗೆ ಸಂಬಂಧಿಸಿದಂತೆ ನಾಟಕದಲ್ಲಿ ಬರುವ ಸೂಚನೆಗಳನ್ನು ಗ್ರಹಿಸಿ, ಸಂಸ್ಕೃತದಲ್ಲಿ ದಕ್ಷಿಣ ದೇಶದ ಕವಿಗಳಾದ ಮಹದೇವ ರವಿನರ್ತಕರು ರಚಿಸಿರುವ ಮುದ್ರಾರಾಕ್ಷಸ ನಾಟಕಕಥಾ, ಮುದ್ರಾರಾಕ್ಷಸಕಥಾಸಾರಗಳೆಂಬ ಚಿಕ್ಕ ಗದ್ಯ ಪದ್ಯ ಗ್ರಂಥಗಳಿಂದಲೂ ಧುಂಡಿರಾಜ ನಾಟಕದ ವ್ಯಾಖ್ಯಾನಕ್ಕೆ ಬರೆದಿರುವ ಉಪೋದ್ಘಾತದಿಂದಲೂ ವಿಷಯವನ್ನು ಸಂಗ್ರಹಿಸಿ, ಮಹಾಭಾರತದಿಂದ ಅನೇಕ ಸೂಚನೆಗಳನ್ನು ಪಡೆದು, ಜೊತೆಗೆ ಸ್ವಂತ ಕಲ್ಪನೆಯಿಂದ ಹೊಸ ಹೊಸ ಸನ್ನಿವೇಶಗಳನ್ನು ಸೃಷ್ಟಿಮಾಡಿ, ಯಾವ ಅದ್ಭುತಗಳೂ ಇಲ್ಲದ, ಶೃಂಗಾರರಸರಹಿತವಾದ, ಕಥೆ ಪಾತ್ರ ಸೃಷ್ಟಿ ಸಂಭಾಷಣೆ ಜೀವನದರ್ಶನ ಇವುಗಳಿಂದ ಪರಿಪುಷ್ಟವಾಗಿ ಆಧುನಿಕ ಕಾದಂಬರಿಯಂತೆ ರಮ್ಯವಾದ ಒಂದು ಗದ್ಯಕಥೆಯನ್ನು ಕನ್ನಡಿಗರಿಗೆ ಒದಗಿಸಿ ಕೊಟ್ಟಿದ್ದಾನೆ. ಕಥೆ ಹೇಳುವುದೇ ಕವಿಯ ಪರಮೋದ್ದೇಶವಲ್ಲ. ಕಥೆಯ ಜೊತೆಗೆ ರಾಜರಿಗೆ ಮಂತ್ರಿಗಳಿಗೆ ರಾಜನೀತಿ ದೊರಕಬೇಕೆಂಬ ಆಶಯದಿಂದ, ಕವಿ ಬಾಣನ ಕಾದಂಬರಿ, ಕಾಮಂದಕ ನೀತಿಸಾರ, ಭರ್ತೃಹರಿಯ ಶತಕತ್ರಯ–ಇದೇ ಮೊದಲಾದ ಗ್ರಂಥಗಳಿಂದ ತನ್ನ ಕೃತಿಗೆ ಬೇಕಾದ ರಾಜನೀತಿಯನ್ನು ಸಂಗ್ರಹಿಸಿದ್ದರೂ ಶುಕ್ರನೀತಿ ಗ್ರಂಥಕ್ಕೇ ವಿಶೇಷವಾಗಿ ಋಣಿಯಾಗಿದ್ದಾನೆ.

ಸಂಗ್ರಹವಾಗಿ ಇದು ಮುದ್ರಾಮಂಜೂಷದ ಕಥೆ : ಮಗಧದೇಶದ ದೊರೆ ಸರ್ವಾರ್ಥಸಿದ್ಧಿ. ಅವನ ಪಟ್ಟದ ರಾಣಿಯ ಮಕ್ಕಳಾದ ನವನಂದರು ದಾಯಾದಮತ್ಸರದಿಂದ, ತಂದೆಯ ಬಂಗಾರದ ಹೆಂಡತಿಯ ಮಗನಾದ ಮೌರ್ಯನನ್ನೂ ಅವನ 99ಜನ ಮಕ್ಕಳನ್ನೂ ನೆಲಮಾಳಿಗೆಯಲ್ಲಿ ಕೂಡಿ ಕೊಂದರು. ದೈವಾನುಗ್ರಹದಿಂದ ಬದುಕಿದ ಮೌರ್ಯಪುತ್ರ ಚಂದ್ರಗುಪ್ತ ಚಾಣಕ್ಯ ಸಹಾಯದಿಂದ ಪರ್ವತರಾಜನ ಮನವೊಲಿಸಿ ನಂದರ ಮೇಲೆ ದಂಡೆತ್ತಿ ಬಂದ. ತನ್ನ ಮೇಲೆ ದಂಡೆತ್ತಿಬರುತ್ತಿದ್ದ ಲಂಪಾಕಾಧಿಪತಿಯನ್ನು ಕಾಮರೂಪಾಧಿಪತಿಗೆ ಬರೆದ ಕೇವಲ ಒಂದು ಪತ್ರದಿಂದ ನಿಗ್ರಹಿಸಿದುದರಿಂದಲೂ

ಅರ್ಧರಾಜ್ಯದ ಆಸೆ ತೋರಿದುದರಿಂದಲೂ ಪರ್ವತರಾಜನಿಗೆ ಚಾಣಕ್ಯನಲ್ಲಿ ನಂಬಿಕೆ ಮೂಡಿತು. ಚಾಣಕ್ಯನ ಸ್ನೇಹಿತನಾದ ಇಂದು ಶರ್ಮ ಕ್ಷಪಣಕನ ವೇಷದಿಂದ, ಅವನ ಶಿಷ್ಯರು ಇತರ ವೇಷಗಳಿಂದ ರಾಕ್ಷಸನನ್ನು ಆಶ್ರಯಿಸಿ ಅವನ ರಹಸ್ಯವನ್ನು ಭೇದಿಸಿದರು. ಇಂದುಶರ್ಮನ ಮಾತಿನಂತೆ ರಾಕ್ಷಸ ಗಂಗಾ ಸರಯೂ ನದಿಗಳ ಸಂಗಮದಲ್ಲಿ ಶತ್ರುಪಲಾಯನ ಜಪಶಾಲೆಯನ್ನು ನಿರ್ಮಿಸಿ ಮಾಸೋಪವಾಸಿಯೆಂಬವವನನ್ನು ಅದರ ಮುಖ್ಯಸ್ಥನನ್ನಾಗಿ ಮಾಡಿದ. ಈ ಮಾಸೋಪವಾಸಿ ಚಾಣಕ್ಯನ ಶಿಷ್ಯನೆಂಬ ವಿಷಯ ರಾಕ್ಷಸನಿಗೆ ತಿಳಿಯದು. ನಂದರಿಗೂ ಪರ್ವತರಾಜನಿಗೂ ನಡೆದ ಯುದ್ಧದಲ್ಲಿ ರಾಕ್ಷಸನ ಪರಾಕ್ರಮದಿಂದ ನಂದರಿಗೆ ಜಯವಾಯಿತು. ರಾಕ್ಷಸ ಯುದ್ಧದ ಆಯಾಸದಿಂದ ನಿದ್ರೆಯಲ್ಲಿದ್ದಾಗ, ಮಾಸೋಪವಾಸಿ ನಂದರನ್ನು ಜಪಶಾಲೆಯ ಬಳಿಗೆ ಬರಮಾಡಿಕೊಂಡ. ನಂದರು ಜಪಶಾಲೆಗೆ ಬಂದದ್ದು ಪೂರ್ಣಾಹುತಿಯ ದರ್ಶನಕ್ಕೆ. ಆಗ ಅವರಿಗೆ ಮೈಗಾವಲಿರಲಿಲ್ಲ. ಅಲ್ಲದೆ ಮಲಯಕೇತು ಸೆರೆಸಿಕ್ಕಿರುವನೆಂಬ ದೂತವಾರ್ತೆಯನ್ನು ಅವರು ನಂಬಿದರು. ಸೆರೆ ಸಿಕ್ಕಿದ್ದವ ಕಪಟ ಮಲಯಕೇತು. ಹೀಗಾಗಿ ಶತ್ರುಗಳಿಂದ ಸುತ್ತುವರಿಯಲ್ಪಟ್ಟ ನಂದರು ಏಕಾಂಗಿಗಳಾದರೂ ವೀರರಂತೆ ಹೋರಾಡಿ ಮಡಿದರು. ಈ ವಿಷಯವನ್ನು ತಿಳಿದುನೊಂದ ರಾಕ್ಷಸ ಸ್ವಾಮಿಭಕ್ತಿಯನ್ನು ಮೆರೆಯಲು ಸಾಯದೆ ಉಳಿದುಕೊಂಡ.

ಸ್ವಾಮಿಭಕ್ತನಾದ ರಾಕ್ಷಸ ಚಂದ್ರಗುಪ್ತನನ್ನು ಕೊಲ್ಲಲು ಮಾಡಿದ ಪ್ರಯತ್ನಗಳು ಚಾಣಕ್ಯನ ಬುದ್ಧಿಶಕ್ತಿಯಿಂದ ವಿಫಲವಾದುವು. ರಾಕ್ಷಸ ಕ್ಷಪಣಕನ ಮೂಲಕ ಕಳುಹಿಸಿದ ವಿಷಕನ್ಯೆಯಿಂದ ಪರ್ವತರಾಜ ಸತ್ತನಾಗಿ ಅವನಿಗೆ ಮಾತಿನಂತೆ ಕೊಡಬೇಕಾದ ಅರ್ಧ ರಾಜ್ಯ ಚಂದ್ರಗುಪ್ತನಿಗೇ ಉಳಿಯಿತು. ಸರ್ವಾರ್ಥಸಿದ್ಧಿ ಆಶ್ರಮದಲ್ಲಿ ಮೃತನಾದ. ಚಾಣಕ್ಯ ತಮ್ಮ ಮೇಲೆ ಮುನಿದಿರುವನೆಂದು ಸುಳ್ಳು ನಂಬಿಕೆ ಹುಟ್ಟಿಸಿ ಸೇನಾಪತಿ ಭಾಗುರಾಯಣಾದಿಗಳು ಮಲಯಕೇತುವನ್ನು ರಾಜಧಾನಿಗೆ ಕರೆದುಕೊಂಡು ಹೋಗಿ ಅವನಲ್ಲಿ ಆಶ್ರಯಪಡೆದರು. ಅವನ ಜೊತೆಗೆ ಭದ್ರಭಟಾದಿಗಳೂ ಬಂದು ಸೇರಿದರು. ವೈದ್ಯ, ಶಿಲ್ಪಿ ದಾರುವರ್ಮ, ಮಾವಟಿಕ ಬರ್ಬರಕ, ಶಯನಾಗಾರದ ಪ್ರಮೋದಕ–ಇವರ ಮೂಲಕ ಚಂದ್ರಗುಪ್ತನನ್ನು ಕೊಲ್ಲಬೇಕೆಂದಿದ್ದ ರಾಕ್ಷಸನ ಉಪಾಯಗಳು ಅವನ ಕಡೆಯವರಿಗೇ ಮೃತ್ಯುವಾಗಿ ಪರಿಣಮಿಸಿದುವು. ಕೊನೆಯದಾಗಿ ಸೇಡನ್ನು ತೀರಿಸಿಕೊಳ್ಳಲು ರಾಕ್ಷಸ ಮಲಯಕೇತುವನ್ನು ಆಶ್ರಯಿಸಿ ಅವನಲ್ಲಿ ಸರ್ವಾಧಿಕಾರವನ್ನು ಪಡೆದ. ಇತ್ತ ಚಾಣಕ್ಯ ಪರ್ವತರಾಜನ ಸಾವಿಗೆ ಕಾರಣನಾದನೆಂಬ ನೆವದಿಂದ ಕ್ಷಪಣಕನನ್ನು ಪಟ್ಟಣದಿಂದ ಹೊರಡಿಸಿದ; ಶಕಟದಾಸನನ್ನು ಶೂಲಕ್ಕೆ ಏರಿಸಿದ; ರಾಕ್ಷಸನ ಹೆಂಡತಿ ಮಕ್ಕಳಿಗೆ ಆಶ್ರಯ ಕೊಟ್ಟಿರುವನೆಂದು ಚಂದನದಾಸನ್ನು ಸೆರೆಯಲ್ಲಿರಿಸಿದ. ಸೂಲಗಿತ್ತಿಯಿಂದ ರಾಕ್ಷಸನ ಮುದ್ರೆಯುಂಗರವನ್ನು ತರಿಸಿಕೊಂಡು ಶಕಟದಾಸನಿಂದ ತನ್ನ ಲೇಖನವನ್ನು ಬರೆಯಿಸಿ ಅದಕ್ಕೆ ರಾಕ್ಷಸನ ಮುದ್ರೆಯೊತ್ತಿ, ಅದನ್ನು ಸಿದ್ಧಾರ್ಥಕನ ವಶಕ್ಕೆ ಕೊಟ್ಟು ಅವನಿಂದ ಶೂಲಕ್ಕೇರಲಿದ್ದ ಶಕಟದಾಸನನ್ನು ಬಿಡಿಸಿ ಅವರಿಬ್ಬರನ್ನೂ ರಾಕ್ಷಸನ ಬಳಿಗೆ ಕಳುಹಿಸಿದ. ಇಷ್ಟೇ ಅಲ್ಲದೆ ಚಾಣಕ್ಯ ಚಂದ್ರಗುಪ್ತನೊಡನೆ ಕಪಟ ಕಲಹ ಮಾಡಿ, ತನಗೂ ಚಂದ್ರಗುಪ್ತನಿಗೂ ವೈರವುಂಟೆಂದು ಪ್ರಕಟಿಸಿದ. ಇದನ್ನು ನಂಬಿ ಮೋಸಹೋದ ರಾಕ್ಷಸ ಮಲಯ ಕೇತುವನ್ನು ಪ್ರೋತ್ಸಾಹಿಸಿ ಪಾಟಲಿಪುತ್ರದ ಮೇಲೆ ದಂಡೆತ್ತಿ ನಡೆದ. ಈ ನಡುವೆ ರಾಕ್ಷಸ ಚಂದ್ರಗುಪ್ತನ ಪಕ್ಷಪಾತಿ ಎಂಬ ವಿಷಬೀಜವನ್ನು ಭಾಗುರಾಯಣ ರಾಜಕುಮಾರನ ಮನಸ್ಸಿನಲ್ಲಿ ಬಿತ್ತಿದ್ದ. ಉಂಡಿಗೆ ಇಲ್ಲದೆ ಪಾಟಲಿಪುರಕ್ಕೆ ಹೋಗಬಯಸಿ ಸಿಕ್ಕುಬಿದ್ದ ಸಿದ್ಧಾರ್ಥಕನಲ್ಲಿದ್ದ ಶಕಟದಾಸ ಬರೆದ ಪತ್ರದಿಂದ, ರಾಕ್ಷಸ ಚಂದ್ರಗುಪ್ತ ಪಕ್ಷಪಾತಿ, ಚಿತ್ರವರ್ಮಾದಿಗಳು ದ್ರೋಹಿಗಳು ಎಂಬುದು ಸ್ಥಿರಪಟ್ಟು, ಮಲಯಕೇತುವಿನ ಆಶ್ರಯದಿಂದ ರಾಕ್ಷಸನ ಉಚ್ಚಾಟನೆಯಾಯಿತು. ನಿಸ್ಸಹಾಯಕನಾದ ಮಲಯಕೇತುವನ್ನು ಭದ್ರಭಟಾದಿಗಳು ಸೆರೆಹಿಡಿದರು. ಆಶ್ರಯವನ್ನು ಕಳೆದುಕೊಂಡ ರಾಕ್ಷಸ ಶೂಲಕ್ಕೇರಲು ಸಿದ್ಧನಾಗಿದ್ದ ಚಂದನದಾಸನನ್ನು ಬಿಡಿಸಲು ಕೈಕತ್ತಿಯನ್ನು ಬಿಸುಟು ಬಂದು, ಚಂದ್ರಗುಪ್ತನ ಮಂತ್ರಿಯಾಗಲು ಒಪ್ಪಿಕೊಳ್ಳಬೇಕಾಯಿತು. ಮಲಯಕೇತುವಿಗೆ ತಂದೆಯ ರಾಜ್ಯ ದೊರಕಿತು. ಚಂದ್ರಗುಪ್ತನ ಪಟ್ಟಾಭಿಷೇಕವಾದ ಮೇಲೆ ಚಾಣಕ್ಯ ತಪೋವನಕ್ಕೆ ತೆರಳಿದ.

ಚಂದ್ರಗುಪ್ತನಿಂದ ನಡೆದ ಪಂಜರಪರೀಕ್ಷೆ, ಲಂಪಾಕದಶರ್ಮ ದೇಶಾಧಿಪತಿಗಳಿಂದ ಪರ್ವತರಾಜನಿಗೆ ಬಂದ ಕುತ್ತನ್ನು ಚಾಣಕ್ಯ ಪರಿಹರಿಸಿದ್ದು, ನಂದವಧೆಗೆ ಅನುಕೂಲಿಸುವಂತೆ ಜಪಶಾಲೆ ಮತ್ತು ಕಪಟಮಲಯಕೇತುಗಳ ವೇಷ ನಿರ್ಮಾಣ, ಭಾಗುರಾಯಣನಿಂದ ಮಲಯಕೇತುವನ್ನು ರಾಜಧಾನಿಯಿಂದ ಓಡಿಸಿದ್ದು, ಸೂಲಗಿತ್ತಿಯ ಮೂಲಕ ರಾಕ್ಷಸನ ಮುದ್ರಿಕೆಯ ಸಂಗ್ರಹ, ಸೇನಾಪತಿಗಳಿಂದ ಮಲಯಕೇತುವಿನ ಕೈಸೆರೆ–ಇವೇ ಮೊದಲಾದ ಸನ್ನಿವೇಶಗಳು ಯಾವ ಮೂಲದಲ್ಲಿಯೂ ಕಾಣಬರದೆ, ಕವಿಕಲ್ಪನೆಯಿಂದ ಮೂಡಿಬಂದು ಕಥೆಯನ್ನು ಉಜ್ವಲಗೊಳಿಸಿವೆ. ಚಾಣಕ್ಯ–ರಾಕ್ಷಸರ ಕಥೆಯೆಂದರೆ ತಂತ್ರ ಪ್ರತಿತಂತ್ರಗಳ ಜಾಲ; ಬುದ್ಧಿಶಕ್ತಿಗಳ ಘರ್ಷಣೆ. ಈ ಎರಡು ಪಾತ್ರಗಳನ್ನು ಆಗಲೇ ವಿಶಾಖದತ್ತ ತನ್ನ ನಾಟಕದಲ್ಲಿ ಅದ್ಭುತವಾಗಿ ಚಿತ್ರಿಸಿದ್ದ. ಆದ್ದರಿಂದ ಕೆಂಪುನಾರಾಯಣ ತಾನು ಸೃಷ್ಟಿಸಿದ ಪೂರ್ವಕಥೆಯಲ್ಲಿ, ನಾಟಕಕಾರನಿಗೆ ಹೆಗಲೆಣೆಯಾಗಿ ಚಾಣಕ್ಯನ ಪ್ರಚಂಡ ಬುದ್ಧಿಶಕ್ತಿ, ರಾಕ್ಷಸನ ಶೌರ್ಯ ಹಾಗೂ ಸ್ವಾಮಿಭಕ್ತಿ, ಇಂದುಶರ್ಮನ ಕಾರ್ಯಕುಶಲತೆ–ಇದನ್ನು ಚಿತ್ರಿಸಿರುವುದಲ್ಲದೆ, ಪರ್ವತರಾಜ, ಶಬರವರ್ಮ, ಉಲೂಕ ಇವರೇ ಮೊದಲಾದ ದೊಡ್ಡ ಸಣ್ಣ ಪಾತ್ರಗಳನ್ನು ಸೃಷ್ಟಿಸಿ ತನ್ನ ವೈಶಿಷ್ಟ್ಯವನ್ನು ಮೆರೆದಿದ್ದಾನೆ.

ಬಾಣನ ಕಾದಂಬರಿಯನ್ನು ಅನುಸರಿಸಿದ ಕಾರಣ ಗ್ರಂಥದ ಆದಿಭಾಗದಲ್ಲಿ ಕಂಡುಬರುವ ಒಂದೆರಡು ಸುದೀರ್ಘ ವರ್ಣನೆಗಳು ಪ್ರಾಚೀನ ಕಥೆಯಲ್ಲಿ ನವೀನ ರಾಜಾಸ್ಥಾನದ ಆವರಣ, ಸರದಾರರ ಹೆಸರುಗಳನ್ನು ಹೇಳುವಲ್ಲಿ ಷಂಷೇರ್ ಬಾಬು, ಅಲ್ಲಿಯ ಬಾಬು ಇವರೇ ಮೊದಲಾದವರ ಹೆಸರುಗಳನ್ನು ಹೇಳಿರುವುದು, ಅನೇಕ ಕಡೆ ಹಳಗನ್ನಡ ಪ್ರತ್ಯಯಗಳನ್ನೊಳಗೊಂಡ ಅಧಿಕ ಸಂಸ್ಕೃತಪದಭೂಯಿಷ್ಠವಾದ ಶೈಲಿ, ಚಿಕ್ಕ ಚಿಕ್ಕ ಹೊಸಗನ್ನಡ ವಾಕ್ಯಗಳೊಡನೆ ಸುದೀರ್ಘ ವಾಕ್ಯಗಳ ಬೆರಕೆ–ಇವು ಗ್ರಂಥದ ದೋಷಗಳಾಗಿ ತೋರಬಹುದು. ಕೃತಿಯ ನಡುವೆ ಬರುವ ಸಂಸ್ಕೃತ ಶ್ಲೋಕಗಳನ್ನು ಗಮನದಲ್ಲಿಟ್ಟುಕೊಂಡು ಕವಿ ತನ್ನ ಕೃತಿಯನ್ನು ಚಂಪೂಕಾವ್ಯವೆಂದು ಕರೆದಿರುವುದೂ ಸರಿಯಾಗಿಲ್ಲ. ಆದರೆ ಕೃತಿಯ ಗುಣಬಾಹುಳ್ಯದಿಂದ ಈ ದೋಷಗಳು ಮರೆಯಾಗುತ್ತವೆ. ಧಾರ್ಮಿಕ ಕಾವ್ಯಗಳಿಂದ ದಟ್ಟೈಸಿ ಹೋಗಿರುವ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ, ಶೃಂಗಾರ ಅದ್ಭುತಗಳಿಂದ ರಹಿತವಾದ, ಭಾರತದ ಒಂದು ಪ್ರಧಾನ ರಾಜ್ಯದ ಏಳುಬೀಳಿನ ಲೌಕಿಕ ಕಥೆಯನ್ನು ನಡುನಡುವೆ ವಿಪುಲವಾಗಿ ರಾಜನೀತಿಯನ್ನು ತಂದರೂ ಪಾತ್ರಪೋಷಣೆಗೆ ಭಂಗ ಬರದಂತೆ, ಕಥಾಸರಣಿ ಕೆಡದಂತೆ ಆಕರ್ಷಕವಾಗಿ ನಿರೂಪಿಸಿರುವುದೇ ಕೆಂಪುನಾರಾಯಣನ ಹಿರಿಮೆ. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಬೀಳದಿದ್ದಾಗ ರಚಿತವಾದ ಮೊತ್ತಮೊದಲನೆಯ ಕಾದಂಬರಿ ಮುದ್ರಾಮಂಜೂಷವೆಂದು ಧಾರಾಳವಾಗಿ ಹೇಳಬಹುದು. ಕವಿ ತನ್ನ ಕಾಲದ ಹಿಂದೂ ಸಂಪ್ರದಾಯಗಳ ಉಲ್ಲೇಖನವನ್ನು ಗ್ರಂಥದುದ್ದಕ್ಕೂ ಮಾಡಿದ್ದಾನೆ. ಕವಿಯ ಶೈಲಿ ಈ ಮೊದಲೇ ಹೇಳಿದಂತೆ ಹಳಗನ್ನಡ ಪ್ರತ್ಯಯ ಮತ್ತು ಸಂಸ್ಕೃತ ಶಬ್ದಗಳಿಂದ ಕೂಡಿದ್ದರೂ ವಿಶೇಷವಾಗಿ ತಿಳಿಗನ್ನಡ ಶಬ್ದಗಳನ್ನು ಬಳಸಿರುವುದರಿಂದ ಗ್ರಾಹ್ಯವಾಗಿದ್ದು, ಮುಂಬರಲಿರುವ ಹೊಸಗನ್ನಡ ಶೈಲಿಗೆ ನಾಂದಿಯಾಗಿದೆ. ತನ್ನ ಗುರುಗಳ ಅಪ್ಪಣೆಯಂತೆ ಚಾಣಕ್ಯ ವೈದಿಕಧರ್ಮವನ್ನು ಮೇಲೆತ್ತಿ ಹಿಡಿದಂತೆ, ಖಿಲವಾಗುತ್ತಿದ್ದ ವೈದಿಕ ಧರ್ಮವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಎತ್ತಿಹಿಡಿದ ಸೂಚನೆ ಗ್ರಂಥದಲ್ಲಿರಬಹುದು. ಅದು ಏನೇ ಇರಲಿ, ಒಟ್ಟಿನಲ್ಲಿ ಮುದ್ರಾಮಂಜೂಷ ಕನ್ನಡ ಸಾಹಿತ್ಯದಲ್ಲಿ ಗಮನಾರ್ಹವಾದ ಒಂದು ಶ್ರೇಷ್ಠ ಗ್ರಂಥ. (ಎಚ್.ಎಂ.ಎಸ್.ಎನ್.)

**ಕೆಂಪುನಾರು : ನೋಡಿ–ಕತ್ತಾಳೆ**

**ಕೆಂಪು ಸಾರಂಗ :** ಆರ್ಟಿಯೊಡ್ಯಾಕ್ಟೈಲ ಗಣದ ಸರ್ವಿಡೀ ಕುಟುಂಬಕ್ಕೆ ಸೇರಿದ ಒಂದು ಪ್ರಾಣಿ (ರೆಡ್ ಡೀರ್). ಸರ್ವಸ್ ಎಲ್ಯಾಫಸ್ ಎಂಬುದು ಇದರ ಶಾಸ್ತ್ರೀಯ ನಾಮ. ಯುರೋಪ್, ಉತ್ತರ ಆಫ್ರಿಕ, ಏಷ್ಯ ಮೈನರ್ ಮತ್ತು ಉತ್ತರ ಇರಾನ್‌ಗಳ ಕಾಡುಗಳಲ್ಲಿ ವಾಸಿಸುತ್ತವೆ. ಬ್ರಿಟಿಷ್ ದ್ವೀಪಗಳಲ್ಲಿ ಸ್ಕಾಟ್ಲೆಂಡಿನ ಪ್ರಸ್ಥಭೂಮಿಯಲ್ಲೂ ಕಂಬರ್‌ಲ್ಯಾಂಡ್ ಮತ್ತು ಎಕ್ಸ್‌ಮೂರ್‌ಗಳಲ್ಲೂ ಕಾಣಬರುತ್ತದೆ.

ಮಿಣಮಿಣನೆ ಮಿರುಗುವ ಕೆಂಗಂದು ಬಣ್ಣದ ದೇಹ, ಮಾಟವಾದ ಹಾಗೂ ಪ್ರಮಾಣಬದ್ಧವಾದ ಅಂಗಸೌಷ್ಠವ, ಶ್ರೀಮಂತಿಕೆಯ ಠೀವಿ, ಬೆಡಗಿನ ನಡಿಗೆ–ಇವು ಕೆಂಪುಸಾರಂಗದ ವಿಶಿಷ್ಟ ಗುಣಗಳು. ಜಿಂಕೆಗಳ ಕುಟುಂಬದಲ್ಲೇ ಇದು ಅತ್ಯಂತ ಚೆಲುವಾದ ಪ್ರಾಣಿ. ಚೆನ್ನಾಗಿ ಬೆಳೆದ ವಯಸ್ಕ ಗಂಡು ಸಾರಂಗದ ಎತ್ತರ 1.25–1.5 ಮೀ.; ಉದ್ದ 1.65–2.5 ಮೀ.; ತೂಕ 100–250 ಕಿ.ಮಿ. ಗಂಡು ಸಾರಂಗದ ತಲೆಯ ಮೇಲೆ ಸುಂದರವಾದ ಎರಡು ಕೊಂಬುಗಳಿವೆ. ಉದ್ದ ಸುಮಾರು 2.5′. 3–6 ಕವಲುಗಳಿವೆ. ಈ ಕೊಂಬುಗಳು ಸಾರಂಗವನ್ನು ರಾಜಸಾರಂಗ ಎಂದು ಕರೆಯಲಾಗುತ್ತದೆ. ಕೊಂಬುಗಳು ಫೆಬ್ರುವರಿ–ಮಾರ್ಚ್ ತಿಂಗಳಿನ ಸುಮಾರಿಗೆ ಉದುರಿಹೋಗುತ್ತವೆ. ಮತ್ತೆ ಏಪ್ರಿಲ್ ತಿಂಗಳಿನಲ್ಲಿ ಹೊಸ ಕೊಂಬುಗಳು ಮೊಳೆಯಲಾರಂಭಿಸಿ ಜುಲೈ ವೇಳೆಗೆ ಪೂರ್ಣವಾಗಿ ಬೆಳೆದು ನಿಲ್ಲುತ್ತವೆ. ಈ ಸಮಯದಲ್ಲಿ ಕೊಂಬುಗಳ ಮೇಲೆ ಮಖಮಲ್ಲಿನಂಥ ಮೃದುವಾದ ಹೊದಿಕೆಯಿದ್ದು ಕೊಂಬುಗಳು ಸೂಕ್ಷ್ಮವೇದಿಗಳಾಗಿರುತ್ತವೆ. ಆಗಸ್ಟ್ ತಿಂಗಳಿನ ಅನಂತರ ಈ ಹೊದಿಕೆ ಸುಲಿದು ಬೀಳುತ್ತದೆ. ಅಪೂರ್ವವಾಗಿ, ಕೊಂಬುಗಳಿಲ್ಲದ ಗಂಡು ಸಾರಂಗಗಳೂ ಇರುವುದುಂಟು. ಕೆಂಪು ಸಾರಂಗದ ದೇಹದ ಬಣ್ಣ ಮಾಗಿಯಲ್ಲಿ ಬೂದು ಬಣ್ಣಕ್ಕೆ ತಿರುಗುತ್ತದೆ. ಕೆಲವು ಸಾರಂಗಗಳಲ್ಲಿ ಬೆನ್ನಿನ ಮೇಲೆ ಕಗ್ಗಂದು ಬಣ್ಣದ ಪಟ್ಟೆಯೊಂದಿರುವುದುಂಟು. ಎಲ್ಲ ಸಾರಂಗಗಳಲ್ಲೂ ಪೃಷ್ಠ ಭಾಗದಲ್ಲಿ ಕಿತ್ತಳೆ ಬಣ್ಣದ ಗುರುತಿರುತ್ತದೆ.

ಕೆಂಪು ಸಾರಂಗ ಸಣ್ಣ ಗುಂಪುಗಳಲ್ಲಿ ಜೀವನ ನಡೆಸುವ ಪ್ರಾಣಿ. ಗುಂಪಿನ ಎಲ್ಲ ಸಾರಂಗಗಳಿಗಿಂತ ಹೆಚ್ಚು ವಯಸ್ಸಾದ ಆದರೆ ಇನ್ನೂ ಮರಿಹಾಕುವ ಸಾಮರ್ಥ್ಯವನ್ನುಳ್ಳ ಹೆಣ್ಣುಸಾರಂಗವೇ ಗುಂಪಿನ ಮುಂದಾಳು. ಅದರ ಮರಿಗಳು ಮತ್ತು ಅವುಗಳ ಮರಿಗಳೇ ಗುಂಪಿನ ಇತರ ಸದಸ್ಯರು. ವಯಸ್ಕ ಗಂಡು ಸಾರಂಗಗಳು ಸಂತಾನೋತ್ಪತ್ತಿಯ ಕಾಲದಲ್ಲಿ ಮಾತ್ರ ಗುಂಪಿನಲ್ಲಿದ್ದು ಉಳಿದ ತಿಂಗಳುಗಳಲ್ಲಿ ಒಂಟಿಯಾಗಿ ಜೀವಿಸುತ್ತವೆ.

ಗುಂಪಿನ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುವ ಮುಂದಾಳು ಗುಂಪಿಗೆ ಅಪಾಯ ಸನ್ನಿಹಿತವಾಗಿದೆಯೆಂದು ಅರಿತಾಗ ಉಚ್ಚಸ್ವರದಲ್ಲಿ ಕೂಗುತ್ತದೆ. ತತ್‌ಕ್ಷಣ ಇಡೀ ಗುಂಪೇ ಮೇಯುವುದನ್ನು ನಿಲ್ಲಿಸಿ ಸ್ತಬ್ಧವಾಗುತ್ತದೆ. ಎಲ್ಲ ಸರಿಯಾಗಿದೆ ಎಂದು ನಾಯಕಿ ಮತ್ತೊಮ್ಮೆ ಸೂಚನೆ ಕೊಡುವ ತನಕ ಹೀಗೆಯೇ ನಿಂತಿದ್ದು ಅನಂತರ ಅದನ್ನು ಹಿಂಬಾಲಿಸಿ ಮುಂದೆ ಸಾಗುತ್ತವೆ.

ಕೆಂಪು ಸಾರಂಗಕ್ಕೆ ಅತ್ಯಂತ ಚುರುಕಾದ ದೃಷ್ಟಿ, ಘ್ರಾಣ ಹಾಗೂ ಶ್ರವಣಶಕ್ತಿಗಳಿವೆ. ಇದು ಚೆನ್ನಾಗಿ ಈಜಲೂ ಬಲ್ಲುದು. ಲೈಮ್, ಬೀಚ್, ಬರ್ಚ್, ಆಲ್ಡರ್, ಹೇಜಲ್ ಮುಂತಾದ ಮರಗಳ ಹಾಗೂ ಕುರುಚಲು ಗಿಡಗಳ ಚಿಗುರೆಲೆಗಳು ಮತ್ತು ಎಳೆಯ ಗರಿಕೆ ಇದರ ಅಚ್ಚುಮೆಚ್ಚಿನ ಆಹಾರ. ಮೇಯುವ ಕಾಲ ಮುಸ್ಸಂಜೆ ಹಾಗೂ ಬೆಳಗಿನ ಜಾವ.

ಕೆಂಪು ಸಾರಂಗ

ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳು ಕೆಂಪುಸಾರಂಗದ ಬೆದೆಗಾಲ. ಈ ಕಾಲದಲ್ಲಿ ಗಂಡುಗಳು ಹೆಣ್ಣುಗಳನ್ನು ಹುಡುಕುತ್ತ ಅಲೆದಾಡುತ್ತವೆ. ಸಾಮಾನ್ಯವಾಗಿ ಒಂದು 1.6 ಕಿ.ಮೀ. ಸುತ್ತಳತೆಯಲ್ಲೇ ಸುತ್ತಾಡುವುದಾದರೂ ಕೆಲವೊಮ್ಮೆ ದಿನವೊಂದಕ್ಕೆ 32 ಕಿ.ಮೀ. ದೂರ ಕ್ರಮಿಸುವುದುಂಟು. ಹೆಣ್ಣುಗಳಿಗಾಗಿ ಗಂಡು ಸಾರಂಗಗಳು ಆಕ್ರೋಶದಿಂದ ಅಸೂಯೆಯಿಂದ ಜೋರಾಗಿ ಗರ್ಜಿಸುತ್ತ, ಪರಸ್ಪರ ಹೋರಾಡುತ್ತವೆ. ಈ ರೀತಿ ಹೋರಾಡಿ ಒಂದೊಂದು ಗಂಡೂ ಹಲವಾರು ಹೆಣ್ಣುಗಳನ್ನು ಪಡೆಯುವುದುಂಟು. ಮರಿಹಾಕುವ ಕಾಲ ಮೇ–ಜೂನ್ ತಿಂಗಳುಗಳು. ಗರ್ಭಧಾರಣೆಯ ಅವಧಿ 8 ತಿಂಗಳುಗಳು. ಸೂಲಿಗೆ ಒಂದೇ ಮರಿ. ಮರಿಯ ಮೈಮೇಲೆ ಬಿಳಿಯ ಚುಕ್ಕೆಗಳಿರುತ್ತವೆ. ಹುಟ್ಟಿದ ಕ್ಷಣದಿಂದಲೇ ಮರಿ ನಿಲ್ಲಲೂ ಓಡಾಡಲೂ ಸಾಮರ್ಥ್ಯವುಳ್ಳದ್ದಾದರೂ ಅದರ ತಾಯಿ, ಮರಿಯನ್ನು ಯಾವುದಾದರೂ ಪೊದೆಯಲ್ಲಿ ಅಡಗಿಸಿಟ್ಟು ಅದರಿಂದ ಹೆಚ್ಚು ದೂರ ಹೋಗದೆ, ಆಗಿಂದಾಗ್ಗೆ ಮರಿಯ ಬಳಿ ಬಂದು ಹಾಲುಣ್ಣಿಸುತ್ತದೆ.

ಕೆಂಪು ಸಾರಂಗದ ಮಾಂಸ ಬಹಳ ರುಚಿಯಾದುದೆಂದು ಹೆಸರಾಗಿದೆ. ಮಾಂಸಕ್ಕಾಗಿಯೂ ಕೊಂಬುಗಳಿಗಾಗಿಯೂ ಯುರೋಪ್ ಮುಂತಾದೆಡೆಗಳಲ್ಲಿ ಇದನ್ನು ಬೇಟೆಯಾಡುತ್ತಾರೆ. ಹೀಗಾಗಿ ಇದರ ವಂಶ ಕ್ಷೀಣಿಸುತ್ತಿದೆ. (ಎ.)

**ಕೆಂಪೇಗೌಡ I** : ಆವತಿ ಪ್ರಭುಗಳಲ್ಲೊಬ್ಬನಾದ ಯಲಹಂಕ ಪ್ರಭು ಜಯಗೌಡನ ವಂಶಜ ಮತ್ತು ಬೆಂಗಳೂರು ನಗರದ ಸ್ಥಾಪಕ. 1513 ರಿಂದ 1569ರ ತನಕ ಮಾಗಡಿಯ ಪಾಳೆಯಗಾರನಾಗಿದ್ದ. ಈತ ಪ್ರಜಾರಂಜಕ. ವಿಜಯನಗರದ ಸಾಮಂತ. ಕೃಷ್ಣದೇವ ಮತ್ತು ಅಚ್ಯುತರಾಯರ ಪ್ರೀತಿ ಗಳಿಸಿದ್ದ. ತನ್ನ ರಾಜಧಾನಿಯಾಗಿದ್ದ ಮಾಗಡಿ ಯಿಂದ ಹೊರಟು ಹೊಸದೊಂದು ರಾಜಧಾನಿಗಾಗಿ ನೆಲೆಯನ್ನರಸು ತ್ತಿದ್ದಾಗ ಒಂದು ಮೊಲ ಈತನ ಬೇಟೆಯ ನಾಯಿಯನ್ನು ಎದುರಿಸಿತೆಂದೂ ಆ ಸ್ಥಳವೇ ರಾಜಧಾನಿಗೆ ಯುಕ್ತವೆಂದು ನಿಶ್ಚಯಿಸಿ ಅಲ್ಲಿ ದುರ್ಗದ ಅಡಿಪಾಯವನ್ನು ಸ್ಥಾಪಿಸಿದನೆಂದೂ ಅದೇ ಬೆಂಗಳೂರೆಂದೂ ಹೇಳಲಾಗಿದೆ. ಆ ಮೊದಲೇ ಅಲ್ಲಿ ಒಂದು ಊರು ಇದ್ದಿರಬಹುದೆಂದೂ ಈತ ಅದನ್ನು ಜೀರ್ಣೋದ್ಧಾರ ಮಾಡಿ 1537ರಲ್ಲಿ ಅಲ್ಲೊಂದು ಕೋಟೆಯನ್ನು ಕಟ್ಟಿಸಿದನೆಂದೂ ತಿಳಿದುಬರುತ್ತದೆ. ನಗರದ ನಾಲ್ಕು ದಿಕ್ಕುಗಳಲ್ಲೂ ಆತ ನಿರ್ಮಿಸಿದ ಕಾವಲುಗೋಪುರಗಳು ಈಗಲೂ ಇವೆ. ಕೋಟೆಯ ನಿರ್ಮಾಣಕಾಲದಲ್ಲಿ ಅದರ ಮಹಾದ್ವಾರ ನಿಲ್ಲಲಿಲ್ಲವೆಂದೂ ಅದಕ್ಕೆ ನರಬಲಿ ಅಗತ್ಯವಾಗಿದ್ದುದರಿಂದ ಕೆಂಪೇಗೌಡನ ಸೊಸೆ ಆತ್ಮಬಲಿದಾನ ಮಾಡಿಕೊಂಡಳೆಂದೂ ಅನಂತರ ದ್ವಾರ ನಿಂತಿತೆಂದೂ ಒಂದು ಐತಿಹ್ಯವುಂಟು.

ಶಿವಗಂಗೆಯ ಗಂಗಾಧರೇಶ್ವರ ದೇವಾಲಯದ ಬಳಿಯಿರುವ ಕೆಂಪೇಗೌಡನ ಪ್ರತಿಮೆ

ಅಚ್ಯುತರಾಯನಿಂದ ಬಳುವಳಿಯಾಗಿ ಬಂದ 12 ಹೋಬಳಿಗಳನ್ನು ಕೆಂಪೇಗೌಡ ಬೆಂಗಳೂರಿಗೇ ಸೇರಿಸಿ ಆ ಊರು ಬೆಳೆಯಲು ಕ್ರಮ ಕೈಗೊಂಡ. ಅಲ್ಲಿ ಬಸವನಗುಡಿಯನ್ನೂ, ಗವಿ ಗಂಗಾಧರೇಶ್ವರನ ಮತ್ತು ವೆಂಕಟ ರಮಣಸ್ವಾಮಿಯ ದೇವಾಲಯ ಗಳನ್ನೂ ನಿರ್ಮಿಸಿದವನೀತನೇ. ಅಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಭೈರವನಾಣ್ಯಗಳನ್ನು ಅಚ್ಚು ಹಾಕಿಸಲು ಕೆಂಪೇಗೌಡನಿಗೆ ಸಮ್ರಾಟನ ಒಪ್ಪಿಗೆ ದೊರಕಿತ್ತು. 1550ರಲ್ಲಿ ಶಿವಗಂಗೆ ಪ್ರದೇಶ ಕೆಂಪೇಗೌಡನಿಗೆ ವಶವಾಯಿತು. ಅಲ್ಲಿಯ ದೇವಾಲಯಗಳನ್ನೂ ಈತ ಜೀರ್ಣೋದ್ಧಾರ ಮಾಡಿಸಿದ.

ಸದಾಶಿವರಾಯ ವಿಜಯನಗರದ ಸಮ್ರಾಟನಾದ ಅನಂತರ ಜಗದೇವರಾಯನೆಂಬ ಸಾಮಂತ ಆಸ್ಥಾನದಲ್ಲಿ ಪ್ರಬಲನಾಗಿದ್ದ. ಅವನು ಕೆಂಪೇಗೌಡನ ವಿರುದ್ಧ ಪಿತೂರಿ ನಡೆಸಿ ಅವನನ್ನು ಸೆರೆಮನೆಗೆ ತಳ್ಳಿಸಿ ತಾನೇ ಯಲಹಂಕನಾಡಿನ ನಾಯಕನಾದ. ಆದರೆ ಸರ್ವಾಧಿಕಾರಿ ಅಳಿಯ ರಾಮರಾಯ ಇವನ ಬಿಡುಗಡೆಗಾಗಿ ಸಂಧಾನ ನಡೆಸಿದ. ಕೆಂಪೇಗೌಡನ ಸ್ವಾಮಿಭಕ್ತಿಯೂ ನಿಷ್ಠೆಯೂ ಸದಾಶಿವರಾಯನಿಗೆ ಮನವರಿಕೆಯಾದುವು. 5 ವರ್ಷಗಳ ಅನಂತರ ಕೆಂಪೇಗೌಡನಿಗೆ ವಿಮೋಚನೆ ದೊರಕಿತು.

ಕೆಂಪೇಗೌಡನಿಗೆ ಶೈವಧರ್ಮದಲ್ಲಿ ಹೆಚ್ಚಿನ ಪ್ರೀತಿ ಇತ್ತೆಂದು ಕಾಣುತ್ತದೆ. ಈತ ಅನೇಕ ಶಿವಾಲಯಗಳನ್ನು ಕಟ್ಟಿಸಿದ್ದಾನೆ. ಆದರೂ ಎಲ್ಲ ಧರ್ಮಗಳಿಗೂ ಸಮಾನವಾಗಿ ಪ್ರೋತ್ಸಾಹ ನೀಡುತ್ತಿದ್ದ. ಪ್ರಜಾಹಿತರಕ್ಷಣೆಯೇ ಈತನ ಮುಖ್ಯ ಗುರಿಯಾಗಿತ್ತು. ಈತ ಸುವ್ಯವಸ್ಥಿತವಾಗಿ ಧರ್ಮದಿಂದ ಆಡಳಿತ ನಡೆಸುತ್ತಿದ್ದ. 1569ರಲ್ಲಿ ಮರಣ ಹೊಂದಿದ. (ಕೆ.ಪಿ.ಎ.)

**ಕೆಂಪೇಗೌಡ II** : 1ನೆಯ ಕೆಂಪೇಗೌಡನ ಅನಂತರ ಆಳಿದ ಮಾಗಡಿ ಪ್ರಭುಗಳಲ್ಲಿ ಪ್ರಮುಖನಾದವ. 1569ರಲ್ಲಿ ಅಧಿಕಾರಕ್ಕೆ ಬಂದು ಮಾಗಡಿ ಮತ್ತು ಬೆಂಗಳೂರುಗಳಲ್ಲಿ 14 ವರ್ಷ ಆಳಿದ. ತರುವಾಯ ಸುಮತಿ ಬಾಗೂರಿನ ಪಾಳೆಯಗಾರ ಬಿಜಾಪುರದ ಸುಲ್ತಾನನೊಂದಿಗೆ ಸಂಚು ನಡೆಸಿದುದರ ಫಲವಾಗಿ ಮಾಗಡಿ ಈತನ ಕೈತಪ್ಪಿತು. ಅನಂತರ ಈತ 1638ರ ತನಕ ಬೆಂಗಳೂರಿನಲ್ಲಿ ತನ್ನ ಆಳ್ವಿಕೆ ಮುಂದುವರಿಸಿದುದಾಗಿ ತಿಳಿದುಬರುತ್ತದೆ. 1623ರಲ್ಲಿ ವಿಜಯನಗರ ಸಾಮ್ರಾಟನ ಪರವಾಗಿ ಗುಡೇಮಾರನಹಳ್ಳಿಯ ತಳವಾರನಾದ ಗಂಗನಿಂದ ಸಾವನದುರ್ಗವನ್ನು ವಶಪಡಿಸಿಕೊಂಡ. 1638ರಲ್ಲಿ ಈತ ಬಹಮನಿ ಸುಲ್ತಾನರ ಪ್ರತಿನಿಧಿ ರಣದುಲ್ಲಾಖಾನನಿಗೆ ಶರಣಾಗತನಾಗಬೇಕಾಗಿ ಬಂದು, ತನ್ನ ರಾಜಧಾನಿಯನ್ನು ಪುನಃ ಮಾಗಡಿಗೆ ವರ್ಗಾಯಿಸಿಕೊಂಡ. ಈ ಕಾರಣದಿಂದ ಇವನಿಗೂ ಇವನ ಉತ್ತರಾಧಿಕಾರಿಗಳಿಗೂ ಮಾಗಡಿ ಕೆಂಪೇಗೌಡರೆಂದೇ ಹೆಸರಾಯಿತು.

ಮಾಗಡಿಯ ಸೋಮೇಶ್ವರ ದೇವಾಲಯವನ್ನು ಪೂರ್ಣಗೊಳಿಸಿದ್ದು ಈತನ ಪ್ರಮುಖ ಸಾಧನೆಗಳಲ್ಲೊಂದು. ತನ್ನ ದೀರ್ಘಕಾಲದ ಆಳ್ವಿಕೆಯಲ್ಲಿ ಅನೇಕ ಗುಡಿ, ಗೋಪುರ, ಕೋಟೆ, ಕೊತ್ತಲಗಳ ನಿರ್ಮಾಣ ಮತ್ತು ದುರಸ್ತಿಕಾರ್ಯಗಳನ್ನು ನಡೆಸಿದ.

ಇವನ ಅನಂತರ ಈ ವಂಶದ ಇನ್ನಿಬ್ಬರು ಕೆಂಪೇಗೌಡರು 1728ರ ತನಕ ಮಾಗಡಿಯಲ್ಲಿ ಆಳಿದರು. ಕೊನೆಗೆ ಆ ಪಾಳೆಯಪಟ್ಟು ಮೈಸೂರು ರಾಜ್ಯದಲ್ಲಿ ವಿಲೀನವಾಯಿತು. (ಕೆ.ಪಿ.ಎ.)

**ಕೆಂಪೇಗೌಡ (ಭೈರವಿ) :** ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಪ್ರಸಿದ್ಧ ಸಂಗೀತಗಾರರು. ಇವರ ಜನನ ಮರಣಗಳ ಬಗ್ಗೆ ಯಾವ ಖಚಿತ ವಿವರವೂ ತಿಳಿಯದು. ಭೈರವಿ ರಾಗವನ್ನು ಆಲಾಪನೆ ಮಾಡುವುದರಲ್ಲಿಯೂ ಆ ರಾಗದಲ್ಲಿ ಪಲ್ಲವಿ ಮತ್ತು ಕೀರ್ತನೆಗಳನ್ನು ಹಾಡುವುದರಲ್ಲಿಯೂ ಅದ್ವಿತೀಯರಾಗಿದ್ದುದರಿಂದ ಇವರಿಗೆ ಭೈರವಿ ಕೆಂಪೇಗೌಡರು ಎಂದೇ ಹೆಸರಾಯಿತು. ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಬೇವೂರು ಗೌಡರ ಜನ್ಮಸ್ಥಳ. ಅಪ್ಪಟ ಬೇಸಾಯಗಾರ ಕುಟುಂಬವಾದ್ದರಿಂದ ಕೆಂಪೇಗೌಡರಿಗೆ ಸಂಗೀತ ದೈವದತ್ತ ಕಲೆಯಾಗಿ ಬಂದಂತೆ ಕಾಣುತ್ತದೆ. ಪ್ರಾರಂಭದಲ್ಲಿ ಹಳ್ಳಿಯ ಹಾಡುಗಳನ್ನು ಇವರು ರಾಗವಾಗಿ ಹಾಡುತ್ತಿದ್ದುದುಂಟು. ಯೌವನ ಪ್ರಾಪ್ತವಾಗಲು ಗೌಡರು ಮೈಸೂರಿಗೆ ಬಂದು ಅನೇಕ ಪ್ರಸಿದ್ಧ ಸಂಗೀತಗಾರರನ್ನು ಕಂಡು ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸುವಂತೆ ಕೇಳಿದರೆಂದೂ ಶೂದ್ರರಾದ್ದರಿಂದ ಅವರಿಗೆ ಪಾಠ ಹೇಳಲು ಯಾರೂ ಒಪ್ಪಲಿಲ್ಲವೆಂದೂ ತಿಳಿದುಬರುತ್ತದೆ. ಕಡೆಗೆ ಅಭಿಮಾನಿಯೊಬ್ಬರ ಸಲಹೆಯ ಮೇರೆಗೆ ಗೌಡರು ತಮಿಳುನಾಡಿನ ಕೊಯಮತ್ತೂರಿಗೆ ಪ್ರಯಾಣ ಮಾಡಿ ಅಲ್ಲಿದ್ದ ತಮ್ಮ ಬಂಧುಗಳೊಡನೆ ಸಮಾಲೋಚನೆ ನಡೆಸಿ ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಶಿಷ್ಯರಾದರು.

ತ್ಯಾಗರಾಜರ ಜನ್ಮಸ್ಥಳವಾದ ತಿರುವಾಯ್ಯಾರಿನಲ್ಲಿ ಪಟ್ಟಣಂ ಅವರಂಥ ಗುರುಗಳು ದೊರೆತುದು ಕೆಂಪೇಗೌಡರ ಭಾಗ್ಯ. ಗೌಡರ ಜೊತೆಯಲ್ಲಿಯೇ ವಾಸುದೇವಾಚಾರ್ಯರೂ ಅಯ್ಯರ್ ಅವರಲ್ಲಿ ಸಂಗೀತ ಕಲಿತರೆಂದೂ ಅನಂತರ ಚಾಮರಾಜ ಒಡೆಯರ ಆಳ್ವಿಕೆಯ ಕಡೆಯ ದಿನಗಳಲ್ಲಿ ಆಸ್ಥಾನ ವಿದ್ವಾಂಸರಾಗಿ ಅರಮನೆ ಸೇರಿದರೆಂದೂ ತಿಳಿದುಬರುತ್ತದೆ. ಶಿಷ್ಯನ ಪಾತ್ರಾಪಾತ್ರತೆಯನ್ನು ತಿಳಿಯುವ ಸಲುವಾಗಿ ಗುರುಗಳು ಗೌಡರಿಗೆ ತಮ್ಮ ಹಸುಕಾಯುವ ಕೆಲಸ ವಹಿಸಿದರಂತೆ. ಸದಾ ಘನ ವಿದ್ವಾಂಸರಿಂದ ತುಂಬಿರುತ್ತಿದ್ದ ಗುರುಗೃಹದಲ್ಲಿ ಅಪೂರ್ವ ರಾಗಸಂಯೋಜನೆ, ಚರ್ಚೆ ಮತ್ತು ಕಚೇರಿಗಳು ನಿರಂತರವಾಗಿ ನಡೆಯುತ್ತಿದ್ದುವಾದ್ದರಿಂದ ಈ ಎಲ್ಲವನ್ನೂ ಹೊರನಿಂತು ಕೇಳುವ ಅವಕಾಶ ಗೌಡರಿಗೆ ದೊರೆತುದೊಂದು ಅಪೂರ್ವ ಸಂಗತಿ. ಇದನ್ನು ಅವರು ತಮ್ಮ ಭಾಗ್ಯವೆಂದೇ ತಿಳಿದರಂತೆ.

ಒಂದು ದಿನ ರಾತ್ರಿ ಅಯ್ಯರ್ ಅವರ ಮಹಡಿಯಲ್ಲಿ ದೊಡ್ಡ ದೊಡ್ಡ ಸಂಗೀತಗಾರರೆಲ್ಲ ಸೇರಿದ್ದರು. ಅಯ್ಯರ್ ಅವರು ತಮಗೆ ಬಹು ಪ್ರಿಯವಾದ ಭೈರವಿಯನ್ನು ಆರಂಭಿಸಿದ್ದರು. ಅದು ಎಷ್ಟು ಹೊತ್ತಾದರೂ ಮುಗಿಯುವಂತಿರಲಿಲ್ಲ. ರಾತ್ರಿ ಊಟದ ಸಮಯ ಮೀರುತ್ತಿತ್ತು. ಊಟ ಮಾಡಿ ಅನಂತರ ಕಚೇರಿಯನ್ನು ಮುಂದುವರಿಸುವಂತೆ ಗುರುಗಳಿಗೆ ಸೂಚನೆ ಕೊಡುವಂತೆ ಗುರುಪತ್ನಿ ಗೌಡರಿಗೆ ಬಿನ್ನೈಸಿಕೊಂಡರಂತೆ. ಗೌಡರಾದರೋ ಹೆದಹೆದರುತ್ತ, ಸಮಯ ಕಾದು ಗುರುಗಳ ಕಿವಿಯಲ್ಲಿ ವಿಷಯವನ್ನು ಹಾಕಿದರಲ್ಲದೆ ಗುರುಗಳು ಊಟ ಮುಗಿಸಿ ಬರುವವರೆಗೆ ತಾವು ಕಚೇರಿ ಮುಂದುವರಿಸುವುದಾಗಿಯೂ ಹೇಳಿದರು. ಈ ಮಾತುಗಳನ್ನು ಕೇಳಿದ ಗುರುಗಳಿಗೆ ಅಸಾಧ್ಯ ಕೋಪ ಬಂದಿತಾದರೂ ಶಿಷ್ಯನನ್ನು ಪರೀಕ್ಷಿಸಿಯೇ ಬಿಡುವ ತೀರ್ಮಾನಕ್ಕೆ ಬಂದು ಶಿಷ್ಯನಿಗೆ ಕಚೇರಿ ವಹಿಸಿ ತಾವು ಊಟಕ್ಕೆ ಎದ್ದರು. ಗೌಡರು ಕಚೇರಿಯನ್ನು ಮುಂದುವರಿಸಿದರು. ಶಿಷ್ಯನ ಕಚೇರಿ ಮುಗಿಯುವ ಹೊತ್ತಿಗೆ ಗುರುಗಳಿಗೆ ಬಹಳ ಸಂತೋಷವಾಗಿತ್ತು. ತಾವು ಹೊದ್ದಿದ್ದ ಜರತಾರಿಯ ಶಾಲನ್ನೇ ತಮ್ಮ ಶಿಷ್ಯನಿಗೆ ಅದೇ ವೇದಿಕೆಯ ಮೇಲೆ ಹೊದಿಸಿ ಸನ್ಮಾನಿಸಿ ಅವನನ್ನು ಅಪ್ಪಿಕೊಂಡರಂತೆ. ಅಲ್ಲಿಂದ ಮುಂದೆ ಗೌಡರಿಗೆ ಕ್ರಮವಾಗಿ ಪಾಠ ಆರಂಭವಾಯಿತು. ಗೌಡರಿಗೆ ಗುರುಕರುಣೆ ಮತ್ತು ಆಶೀರ್ವಾದಗಳು ಸಂಪೂರ್ಣವಾಗಿದ್ದವು. ದೈವದತ್ತವಾಗಿ ಬಂದ ಅಪಾರ ಪ್ರತಿಭೆಯಿತ್ತು. 'ಕೆಂಪೇಗೌಡ, ಭೈರವಿಯಲ್ಲಿ ನಿನ್ನ ಮೀರಿಸುವವರು ಮತ್ತೊಬ್ಬರಿಲ್ಲ, ಮತ್ತೆ ಬರಲಾರರು' ಎಂದು ಗುರುಗಳೇ ಹೊಗಳಿದ್ದುಂಟು. ಇದರಿಂದ ಎಂದೂ ಕೆಂಪೇಗೌಡರು ಅಹಂಕಾರ ಪಟ್ಟವರಲ್ಲ. ಅವರದು ತುಂಬಾ ಸರಳ ಮತ್ತು ವಿನೀತ ವ್ಯಕ್ತಿತ್ವವೆಂದು ಅವರನ್ನು ಕಂಡವರೆಲ್ಲ ಹೇಳುತ್ತಾರೆ. ಇಷ್ಟಾದರೂ ಅವರ ಜೀವನ ಮಾತ್ರ ಅವರು ಸಂಗೀತದಲ್ಲಿ ಮೇಲೇರಿದಂತೆಲ್ಲ ದುರಂತದತ್ತ ಜರುಗುತ್ತಿದ್ದಂತೆ ಕಂಡುಬರುತ್ತದೆ.

ಗೌಡರು ಆಗಿನ ಕಾಲಪದ್ಧತಿಯಂತೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗಿದ್ದರು. ಸಂಗೀತ ಅಭ್ಯಾಸಕ್ಕೆ ಹೊರಡುವ ಕಾಲಕ್ಕೆ ಅವರಿಗೆ ಒಂದು ಗಂಡು ಮಗು ಇತ್ತು. ಗೌಡರು ತಿರುವಾಯ್ಯಾರಿನಲ್ಲಿ ಸಂಗೀತ ಅಭ್ಯಾಸವನ್ನು ಭರದಿಂದ ನಡೆಸಿದ್ದ ಕಾಲದಲ್ಲಿಯೆ ಅವರ ಪತ್ನಿ ತಮ್ಮ ಏಕಮಾತ್ರ ಪುತ್ರನನ್ನು ಬಿಟ್ಟು ಅಕಾಲ ಮರಣಕ್ಕೆ ತುತ್ತಾದರು. ಈ ಘಟನೆ ಕೆಂಪೇಗೌಡರ ಬದುಕಿನ ಮೇಲೆ ಮಹತ್ತರವಾದ ಪರಿಣಾಮವನ್ನುಂಟುಮಾಡಿತು. ಹೆಂಡತಿಯ ಮುಖ ನೋಡಲು ಕಾತರರಾಗಿ ಊರಿಗೆ ಹಿಂತಿರುಗಿದ ಗೌಡರು ಕೆಲವು ದಿನಗಳ ಕಾಲ ಮಗುವಿನೊಂದಿಗೆ ತಮ್ಮ ಹಳ್ಳಿಯಲ್ಲಿಯೇ ಇದ್ದುಬಿಟ್ಟರು.

ಈ ಹೊತ್ತಿಗಾಗಲೇ ಗೌಡರ ಕೀರ್ತಿ ಕನ್ನಡ ನಾಡಿಗೆಲ್ಲ ಹರಡಿತ್ತು. ಅವರಿಗೆ ಅರಮನೆಯಿಂದ ಆಹ್ವಾನ ಬಂತು. ದುಃಖಭಾರದಲ್ಲಿದ್ದ ಗೌಡರು ಅದನ್ನು ನಿರಾಕರಿಸಲು ಯೋಚಿಸಿದ್ದರಂತೆ. ಆದರೆ ಹಿರಿಯರನೇಕರು ಅರಮನೆಯ ಕರೆಯನ್ನು ನಿರಾಕರಿಸಬಾರದೆಂದೂ ದುಃಖವನ್ನು ಮರೆಯಲು ಮತ್ತು ಸಂಗೀತವನ್ನು ಮತ್ತೂ ಅಭಿವೃದ್ಧಿಪಡಿಸಿಕೊಳ್ಳಲು ಇದೊಂದು ಒಳ್ಳೆಯ ಅವಕಾಶವೆಂದೂ ಒತ್ತಾಯಿಸಿದುದರಿಂದ ಗೌಡರು ಅರಮನೆಯ ಕರೆಯನ್ನು ಒಪ್ಪಿ ಮೈಸೂರಿಗೆ ಬಂದರು. ಪ್ರಭುಗಳ ಎದುರಿಗೆ ಕೆಂಪೇಗೌಡರ ಕಚೇರಿ ನಡೆಯಿತು. ಗೌಡರ ಸಂಗೀತವನ್ನು ಬಹಳವಾಗಿ ಮೆಚ್ಚಿಕೊಂಡ ಪ್ರಭುಗಳು ಅವರನ್ನು ಆಸ್ಥಾನವಿದ್ವಾಂಸರನ್ನಾಗಿ ನೇಮಿಸಿಕೊಂಡು ಸತ್ಕರಿಸಿದರು. ಅರಮನೆಯಲ್ಲಿ ಗೌಡರ ಕೀರ್ತಿ ಬೆಳೆಯತೊಡಗಿತು. ಹಿಂದುಳಿದ ವರ್ಗದವರ ಬಗ್ಗೆ ಅಪಾರ ಕರುಣೆಯಿದ್ದ ಯುವರಾಜ ಕಂಠೀರವ ನರಸರಾಜ ಒಡೆಯರು ಕೆಂಪೇಗೌಡರೇ ಆಸ್ಥಾನದ ಮುಖ್ಯ ವಿದ್ವಾಂಸರಾಗಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರಂತೆ. ಈ ವಿಚಾರ ಕೇಳಿದ ಅನೇಕ ಪಟ್ಟಭದ್ರ ಹಿತಾಸಕ್ತ ಆಸ್ಥಾನ ವಿದ್ವಾಂಸರು ಗೌಡರ ಬಗ್ಗೆ ಅಸೂಯೆಯ ಕೆಂಡ ಕಾರತೊಡಗಿದರು. ಅಷ್ಟರಲ್ಲಿ ಗೌಡರ ಬದುಕಿನ ಏಕಮಾತ್ರ ಆಶೆಯಾಗಿದ್ದ ಅವರ ಮಗ ತೀರಿಕೊಂಡ. ಅನಂತರ ಗೌಡರ ಬದುಕು ಶೂನ್ಯಮಯವಾಗತೊಡಗಿತು. ಯಾವುದರಲ್ಲಿಯೂ ಆಸಕ್ತಿ ಉಳಿಯಲಿಲ್ಲ. ದುಃಖದ ತೀವ್ರತೆಯನ್ನು ಮರೆಯಲು ಗೌಡರು ಮದ್ಯಪಾನ ಮಾಡತೊಡಗಿದರು.

ಹೀಗೆ ಮನಸ್ಸು ಸಂಪೂರ್ಣವಾಗಿ ಹದಗೆಟ್ಟಿದ್ದಾಗ ಒಂದು ದಿನ ಅರಮನೆಯ ಅತಿಥಿಯಾಗಿ ಬಂದಿದ್ದವರೊಬ್ಬರ ಮುಂದೆ ಗೌಡರು ಹಾಡಬೇಕಾಗಿ ಬಂತು. ಇದನ್ನರಿತ ಅಸೂಯಾಪರರು ಗೌಡರನ್ನು ಸೇರಿದಂತೆ ಸಂಚು ಹೂಡಿ, ಮಿತ್ರರಂತೆ ನಟಿಸಿ, ಅವರಿಗೆ ಚೆನ್ನಾಗಿ ಕುಡಿಸಿ, ಅನಂತರ ರಾಜನಿರೂಪವನ್ನು ಅವರಿಗೆ ತೋರಿಸಿದರು. ಆದರೂ ಧೈರ್ಯಗುಂದದೆ ಗೌಡರು ಕಚೇರಿಯನ್ನು ಆರಂಭಿಸಿಯೇ ಬಿಟ್ಟರು. ಆದರೆ ಅವರಿಗೆ ಕುಡಿಸಿದ್ದ ಮದ್ಯ ಬಹಳ ಪ್ರಖರವಾದುದರಿಂದ ಹಾಡುಗಾರಿಕೆ ಹಿಡಿತ ತಪ್ಪಿತು. ಇದಕ್ಕೆಲ್ಲ ಕಾರಣವೇನು ಎಂಬುದನ್ನು ತಿಳಿಯುವ ನಿಗೂಢ ವಿವೇಕ ಪ್ರಭುಗಳಿಗಿತ್ತಾಗಿ ಅವರು ಗೌಡರನ್ನು ಅಪಾರ್ಥಮಾಡಿಕೊಳ್ಳಲಿಲ್ಲ. ಈ ಎಲ್ಲ ಘಟನೆಗಳು ಕೆಂಪೇಗೌಡರಲ್ಲಿ ಮಾನವಸ್ವಭಾವದ ಬಗೆಗಿನ ನಂಬಿಕೆಯನ್ನೇ ಅಳಿಸಿಹಾಕಿದವೆಂದು ತೋರುತ್ತದೆ. ಅವರು ಮುಂದೆ ಮನುಷ್ಯರ ಮುಂದೆ ಹಾಡುವುದಿಲ್ಲ ಎಂದು ಶಪಥ ಮಾಡಿ, ಅರಮನೆಯ ತಮ್ಮ ಪದವಿ ತ್ಯಜಿಸಿ ದೇಶಾಂತರ ಹೊರಟರೆಂದು ತಿಳಿದುಬರುತ್ತದೆ. ಅವರಿಗೆ ಹಾಡಬೇಕೆನಿಸಿದರೆ ಯಾವುದಾದರೂ ದೇವಾಲಯದಲ್ಲಿ ದೇವರ ಎದುರಿಗೆ ಕುಳಿತು ಹಾಡುತ್ತಿದ್ದರಂತೆ. ಕೆಲವು ಸಾರಿ ಆಪ್ತರೆಂದು ತಿಳಿದವರ ಎದುರಿಗೆ ಮಾತ್ರ ಹಾಡಿದ್ದುಂಟು. ಇಂಥ ಒಂದು ಸಂದರ್ಭದಲ್ಲಿಯೇ ಡಿ.ವಿ.ಗುಂಡಪ್ಪನವರು ಅವರ ಸಂಗೀತ ಕೇಳಿ ಪ್ರಶಂಸೆಯ ಮಾತುಗಳನ್ನಾಡಿದರಂತೆ.

ಆ ಕಾಲದಲ್ಲಿ ಶ್ರೀಮಂತ ರಸಿಕರು ಗೌಡರ ಭೈರವಿಯನ್ನು ಒತ್ತೆಯಿಟ್ಟುಕೊಂಡು ಸಾವಿರಾರು ರೂಪಾಯಿ ಸಾಲ ಕೊಡುತ್ತಿದ್ದರಂತೆ. ಒಮ್ಮೆ ಬಡವನೊಬ್ಬನಿಗೆ ಸಹಾಯ ಮಾಡಲು ಗೌಡರು ಸೇಲಮಿನ ಚೆಟ್ಟಿಯಾರ್ ಒಬ್ಬನಲ್ಲಿ ಮೂರು ಸಾವಿರ ರೂಪಾಯಿ ಸಾಲ ಮಾಡಿದರಂತೆ. ಅದೇ ಸಮಯದಲ್ಲಿ ಕಂಚಿಯಲ್ಲಿ ಅವರು ಹಾಡುತ್ತಿದ್ದ ಕಚೇರಿಯೊಂದರಲ್ಲಿ ಭೈರವಿ ಹಾಡುವಂತೆ ಕೋರಿಕೆ ಬಂದಾಗ ತಾವು ಏಕೆ ಅದನ್ನು ಹಾಡುವುದಿಲ್ಲವೆಂಬ ನಿಜಸಂಗತಿಯನ್ನು ಸಭೆಗೆ ತಿಳಿಸಲಾಗಿ ಸಾಹುಕಾರರೊಬ್ಬರು ಮೂರು ಸಾವಿರ ತಂದು ದೇವರೆದುರಿಗಿಟ್ಟು ಭೈರವಿ ಹಾಡುವಂತೆ ಪ್ರಾರ್ಥಿಸಿದರಂತೆ. ಗೌಡರು ಆ ಹಣವನ್ನು ಸೇಲಂ ಚೆಟ್ಟಿಯಾರರಿಗೆ ಮನಿಆರ್ಡರ್ ಮಾಡಿಸಿ ಭೈರವಿ ಹಾಡಿ ಸಭಿಕರನ್ನು ಸಂತುಷ್ಟಿಗೊಳಿಸಿದರಂತೆ. ಕೆಂಪೇಗೌಡರ ಬಗ್ಗೆ ಇಂಥ ಅನೇಕ ಘಟನೆಗಳ ಉಲ್ಲೇಖವಿದೆ.

ಅರಮನೆಯನ್ನು ಬಿಟ್ಟು ಹೊರಟ ಕೆಂಪೇಗೌಡರು ಮೈಸೂರು ಮತ್ತು ತಮಿಳುನಾಡಿನ ಅನೇಕ ಕಡೆ ಸುತ್ತಿದರೆಂದು ತಿಳಿದುಬರುತ್ತದೆ. ಕಾಲಕಾಲಕ್ಕೆ ಊಟ ನಿದ್ರೆಗಳಿಲ್ಲದೆ ಅಲೆದುದರಿಂದ ಅವರ ದೇಹಶಕ್ತಿ ಕುಂದುತ್ತ ಬಂತು. ಇದರ ಜೊತೆಗೆ ಅಪಾರವಾದ ಮದ್ಯಸೇವನೆಯೂ ಅವರ ಆಯುಷ್ಯವನ್ನು ಕ್ಷೀಣಿಸುತ್ತಿತ್ತು. ಅಂಥ ಕಾಲದಲ್ಲಿ ಕನ್ನಡ ನಾಡಿನ ಮುಖಂಡರಲ್ಲೊಬ್ಬರಾದ ಎಚ್.ಕೆ.ವೀರಣ್ಣಗೌಡರು ಕೆಂಪೇಗೌಡರನ್ನು ಬಹಳ ಒತ್ತಾಯ ಮಾಡಿ ತಮ್ಮ ಜೊತೆಯಲ್ಲಿರಿಸಿಕೊಂಡಿದ್ದರಂತೆ. ಚನ್ನಪಟ್ಟಣದಲ್ಲಿದ್ದ ವೀರಣ್ಣಗೌಡರ ಕೊಠಡಿಯಲ್ಲಿ ಗೌಡರು ಐದಾರು ತಿಂಗಳಿದ್ದರಂತೆ.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಅಸ್ಸಾಮಿನ ಗಿರಿ ಕಂದರಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ ಕೆಂಪೇಗೌಡರು ಅವರೊಂದಿಗೆ ಕೆಲವು ಕಾಲ ಸಂಚಾರ ಮಾಡುತ್ತ ತಮ್ಮ ಸಂಗೀತ ಸುಧೆಯಿಂದ ಸ್ವಾಮಿಜಿಯವರನ್ನು ತೃಪ್ತಿಪಡಿಸಿದರಂತೆ. ಅದರ ನೆನಪಾಗಿ ವಿವೇಕಾನಂದರು ಗೌಡರಿಗೆ ತಮ್ಮ ನಿಲುವಂಗಿಯೊಂದನ್ನು ದಯಪಾಲಿಸಿದರೆಂದೂ ಗೌಡರು ಅದನ್ನು ಕಡೆಯವರೆಗೂ ಪೂಜ್ಯಭಾವನೆಯಿಂದ ತಮ್ಮ ಬಳಿ ಇಟ್ಟುಕೊಂಡಿದ್ದರೆಂದೂ ಪ್ರತೀತಿ.

'ಗೌಡರು ಘನ ವಿದ್ವಾಂಸರು; ಎಂದೂ ಯಾವ ಹಂಗಿಗೂ ಒಳಪಟ್ಟವರಲ್ಲ. ಎತ್ತರದ ಆಳು. ತೇಜಸ್ವಿಯಾದ ಮುಖ. ಅವರು ಕೆಲವು ಕಾಲ ನನ್ನ ಜೊತೆಗಿದ್ದು ನನ್ನ ಅಲ್ಪ ಸೇವೆ ಸ್ವೀಕರಿಸಿದ್ದು ನನ್ನ ಪುಣ್ಯ'–ಎಂದು ವೀರಣ್ಣಗೌಡರು ಕೃತಜ್ಞತಾಪೂರ್ವಕವಾಗಿ

ಕೆಂಪೇಗೌಡರನ್ನು ನೆನೆದಿದ್ದಾರೆ. ಚನ್ನಪಟ್ಟಣಕ್ಕೆ ಬರುವ ಹೊತ್ತಿಗೆ ಗೌಡರಿಗೆ ಹಲ್ಲು ಬಿದ್ದುಹೋಗಿದ್ದುವಂತೆ. ಕಡೆಗೆ ವೀರಣ್ಣ ಗೌಡರ ಒತ್ತಾಯಕ್ಕೆ ಮಣಿದು ಆ ಬಗ್ಗೆ ಅವರು ಕೊಟ್ಟ ಹಣವನ್ನು ತೆಗೆದುಕೊಂಡು ಗೌಡರು ಬೆಂಗಳೂರು ರೈಲು ಹತ್ತಿದರು. ಆದರೆ ಮತ್ತೆ ಚನ್ನಪಟ್ಟಣಕ್ಕೆ ಹಿಂತಿರುಗಲಿಲ್ಲ. ಅವರಿಗಾಗಿ ವೀರಣ್ಣಗೌಡರು ಬೆಂಗಳೂರೆಲ್ಲ ಅಲೆದರಂತೆ. ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ಮತ್ತೆ ಅವರನ್ನು ಕಂಡವರೆ ಯಾರೂ ಇಲ್ಲ.

(ಎಚ್.ಕೆ.ಆರ್.ಜಿ.)

**ಕೆಂಫೆರಿಯ :** ಜಿಂಜಿಬರೇಸೀ ಕುಟುಂಬಕ್ಕೆ ಸೇರಿದ ಹೂಬಿಡುವ ಲಶುನ ಸಸ್ಯಜಾತಿ. ಸುಂದರವಾದ ಎಲೆ ಮತ್ತು ಹೂಗಳಿಗಾಗಿ ಇದನ್ನು ಕುಂಡಸಸ್ಯ ಇಲ್ಲವೆ ಅಂಚುಸಸ್ಯವಾಗಿ ಉದ್ಯಾನಗಳಲ್ಲಿ, ಮನೆಗಳಲ್ಲಿ ಬೆಳೆಸುತ್ತಾರೆ. ಇದು ಏಕವಾರ್ಷಿಕ ಮೂಲಿಕೆ ಸಸ್ಯ. ಶುಂಠಿಗಿಡವನ್ನು ಇದು ಹೋಲುವುದು ಮಾತ್ರವಲ್ಲ, ಶುಂಠಿಯಂತೆ ಇದರ ಪ್ರಕಂದವೂ (ಜ್ರೈಮ್) ಭೂಮಿಯಲ್ಲಿ ಹುದುಗಿಕೊಂಡಿದೆ. ಎಲೆಗಳ ಆಕಾರ ಕರಣೆಯಂತೆ ಇಲ್ಲವೆ ಭರ್ಜಿಯಂತೆ. ಅವುಗಳ ಮೇಲ್ಭಾಗದಲ್ಲಿ ಬಿಳಿಯ ಗೆರೆಗಳೂ ತಳಭಾಗದ ಅಂಚಿನಲ್ಲಿ ಕಡುಗೆಂಪು ಇಲ್ಲವೆ ಊದಾ ಬಣ್ಣದ ಗೆರೆಗಳೂ ಇವೆ. ಹೂಗಳು ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಜೋಡಣೆಗೊಂಡಿವೆ. ಇವುಗಳ ಬಣ್ಣ ಬಿಳಿ, ಹಳದಿ, ನೇರಿಳೆ, ಊದಾ ಇತ್ಯಾದಿಯಾಗಿ ವೈವಿಧ್ಯಮಯ. ಹೂಗಳಿಗೆ ನವುರಾದ ಸುವಾಸನೆಯೂ ಇದೆ. ಇದರಲ್ಲಿ ಈ ಕೆಳಗಿನ ಮುಖ್ಯ ಪ್ರಭೇದಗಳಿವೆ:

**1 ಕೆಂಫೆರಿಯ ರೊಟಂಡ:** ಈ ಪ್ರಭೇದಕ್ಕೆ ನೆಲಸಂಪಿಗೆ ಎಂಬುದು ಬಳಕೆಯ ಹೆಸರು. ಎಲೆಗಳು ಭರ್ಜಿಯಾಕಾರದವು. ಬಣ್ಣ ಕಡುಹಸುರು. ಇದರ ಹೂ ಬಿಡುವ ಶ್ರಾಯ ಏಪ್ರಿಲ್–ಮೇ ತಿಂಗಳುಗಳು. ಆಗ ಇದು ಭೂಮಿಗೆ ಸಮೀಪವಾಗಿ ನೀಲಿ ಮತ್ತು ಬಿಳಿ ಬಣ್ಣದ ಹೂಗಳನ್ನು ಬಿಡುತ್ತದೆ.

**2 ಕೆಂಫೆರಿಯ ಗಲಾಂಗ:** ಈ ಪ್ರಭೇದಕ್ಕೆ ಚಂದ್ರಮುಖಿ ಎಂಬುದು ಬಳಕೆಯ ಹೆಸರು. ಇದರ ಎಲೆಗಳಿಗೆ ತೊಟ್ಟಿಲ್ಲ. ಎಲೆ ಮತ್ತು ಬೇರುಗಳನ್ನು ಕೊಂಚ ಹಿಸುಕಿದರೆ ಹಿತಕರ ವಾಸನೆ ಬರುತ್ತದೆ. ಹೂಗಳ ಬಣ್ಣ ಬಿಳಿ.

ಇವುಗಳ ಪ್ರಕಂದದ ತುಂಡುಗಳಿಂದ ಕೆಂಫೆರಿಯ ಜಾತಿಯ ಸಸ್ಯಗಳನ್ನು ವೃದ್ಧಿ ಮಾಡಬಹುದು. ಫಲವತ್ತಾದ ಮತ್ತು ಹೆಚ್ಚು ತೇವಾಂಶದಿಂದ ಕೂಡಿದ ಮಣ್ಣು ಅಗತ್ಯ. ನಾಟಿಮಾಡಲು ಫೆಬ್ರುವರಿ ತಿಂಗಳು ಯೋಗ್ಯ ಕಾಲ. (ಬಿ.ಎ.ಸಿ.)

**ಕೆಂಬೂತ :** ಕ್ಯುಕಲಿಫಾರ್ಮೀಸ್ ಗಣ, ಕ್ಯುಕಲಿಡೀ ಕುಟುಂಬ ಹಾಗೂ ಸೆಂಟ್ರೋಪೋಡಿನೀ ಉಪಕುಟುಂಬಕ್ಕೆ ಸೇರಿದ ಹಕ್ಕಿ (ಕ್ರೋ ಫೆಸಂಟ್ ಅಥವಾ ಕೂಕಲ್). ಶಾಸ್ತ್ರೀಯ ನಾಮ *ಸೆಂಟ್ರೋಪಸ್ ಸೈನೆನ್ಸಿಸ್*. ಭಾರತ, ಶ್ರೀಲಂಕ, ಪಾಕಿಸ್ತಾನ ಮತ್ತು ಮ್ಯಾನ್ಮಾರ್‌ಗಳ ಕುರುಚಲು ಕಾಡುಗಳಲ್ಲಿ ಜನವಸತಿಯ ನೆರೆಯಲ್ಲಿರುವ ತೋಪುಗಳಲ್ಲಿ ವಾಸಿಸುತ್ತದೆ. ಸಾಂಬಾರ ಕಾಗೆ ಎಂದೂ ಹೆಸರಿದೆ. ಇದೇ ಜಾತಿಗೆ ಸೇರಿದ ಇನ್ನೂ ಕೆಲವು ಪ್ರಭೇದಗಳು ಆಫ್ರಿಕ, ಆಸ್ಟ್ರೇಲಿಯ, ಮಡ ಗಾಸ್ಕರ್ ದ್ವೀಪಗಳಲ್ಲಿ ಕಾಣಬರುತ್ತವೆ. ಭಾರತದ ಪಶ್ಚಿಮ ಘಟ್ಟಗಳಲ್ಲಿ ಸಣ್ಣ ಕೆಂಬೂತ *(ಸೆಂಟ್ರೋಪಸ್ ಬೆಂಗಾವೆನ್ಸಸಿಸ್)* ಕಂಡುಬಂದರೆ, ಹಸುರು ಕೊಕ್ಕಿನ ಕೆಂಬೂತ ಶ್ರೀಲಂಕಾದಲ್ಲಿ ಕಂಡುಬರುತ್ತದೆ. ಶ್ರೀಲಂಕಕ್ಕೆ

ಸೀಮಿತವಾಗಿದೆ ಇದರ ಹರವು. ಇದೊಂದು ಅಪಾಯದಂಚಿನಲ್ಲಿರುವ ಪ್ರಭೇದ. ಗಾತ್ರದಲ್ಲಿ ಕಾಗೆಗಿಂತ ಕೊಂಚ ದೊಡ್ಡದಾದ ಒಡ್ಡೊಡ್ಡಾದ ಹಕ್ಕಿಯಿದು. ನುಣುಪಾಗಿಯೂ ಅಚ್ಚ ಕಪ್ಪಾಗಿಯೂ ಹೊಳೆಯುವ ದೇಹ, ಕೆಂಗಂದು ಬಣ್ಣದ ರೆಕ್ಕೆಗಳು, ಉದ್ದ ಹಾಗೂ ಅಗಲವಾದ ಕರಿಯ ಬಣ್ಣದ ಬಾಲ, ನಸುಬಾಗಿರುವ ಬಲಯುತವಾದ ಕೊಕ್ಕು, ಉದ್ದವಾದ ಚೂಪಾದ ನಖಗಳು ಇದರ ಮುಖ್ಯ ಲಕ್ಷಣಗಳು. ಈ ಹಕ್ಕಿ ಚೆನ್ನಾಗಿ ಹಾರಲಾರದು. ಸಾಮಾನ್ಯವಾಗಿ ಇದು ನೆಲದ ಮೇಲೆ, ಪೊದೆಗಳ ಸಂದಿಯಲ್ಲಿ ಕೊಂಚ ದೂರ ಹಾರುತ್ತ ಕೊಂಚ ದೂರ ಕುಪ್ಪಳಿಸುತ್ತ ಸಾಗುತ್ತದೆ. ಕಂಬಳಿಹುಳು, ಕೀಟಗಳು, ಓತಿಗಳು, ಇಲಿಗಳು, ಹಕ್ಕಿಗಳ ಮೊಟ್ಟೆ ಹಾಗೂ ಮರಿಗಳು ಇದರ ಪ್ರಧಾನ ಆಹಾರ. ಕೆಂಬೂತ ನೆಲದ ಮೇಲೆ ಇಲ್ಲವೆ ಮುಳ್ಳುಕಂಟಿಯಲ್ಲಿ ದೊಡ್ಡ ಒರಟೊರಟಾದ ಗೂಡು ಕಟ್ಟುತ್ತದೆ. ಮೆತ್ತಗಿರಲೆಂದು ಹಸುರು ಎಲೆಗಳನ್ನು ಹರಡುತ್ತದೆ. ಗೂಡು ಕಟ್ಟುವ ಕಾಲ ಫೆಬ್ರವರಿಯಿಂದ ಸೆಪ್ಟೆಂಬರ್. ಮೊಟ್ಟೆಗಳ ಸಂಖ್ಯೆ 3–5. ಗಂಡು ಹೆಣ್ಣು ಹಕ್ಕಿಗಳೆರಡೂ ಕಾವು ಕೂತು ಮರಿಮಾಡುತ್ತವೆ.

(ಎಚ್.ಎ.ಆರ್.)

**ಕೆಚ್ಚಲು ರೋಗ :** ಜಾನುವಾರುಗಳಲ್ಲಿ ಮತ್ತು ಉಳಿದ ಸ್ತನಿಗಳಲ್ಲಿ ಕೆಚ್ಚಲು ಊದಿಕೊಳ್ಳುವ ಪರಿಸ್ಥಿತಿ. ಈ ರೋಗ ಇದ್ದಾಗ ಹಾಲಿನ ಭೌತ ಮತ್ತು ರಾಸಾಯನಿಕ ಗುಣಗಳು ಬದಲಾಗಿರುತ್ತವೆ. ಅದರಲ್ಲಿಯ ಏಕಾಣುಜೀವಿಗಳ ಸಂಖ್ಯೆ ಸಾಮಾನ್ಯ ಸ್ಥಿತಿಗಿಂತ ಗಣನೀಯವಾಗಿ ಭಿನ್ನವಾಗಿರುವುದು. ಇದಲ್ಲದೆ ರಸಗ್ರಂಥಿ ಅಂಗಾಂಶದ ರಚನೆಯಲ್ಲೂ ತೀವ್ರ ಮಾರ್ಪಾಡು ತಲೆದೋರುತ್ತದೆ. ಹಾಲಿನಲ್ಲಿ ಮುಖ್ಯವಾದ ಬದಲಾವಣೆ ಬಣ್ಣ ಕೆಡುವುದು ಮತ್ತು ಅದರ ಪದರ ಪದರ ಗಂಟುಗಂಟಾಗಿ ಒಡೆದು ಹೋಗುವುದು. ಹೇರಳವಾದ ಪ್ರಮಾಣದಲ್ಲಿ ಬಿಳಿ ರಕ್ತಕಣಗಳು ಕಾಣಬರುತ್ತವೆ. ಕಾಯಿಲೆಯ ಲಕ್ಷಣವಾಗಿ ದನದ ಮೊಲೆ ಊದಿಕೊಂಡು ಶಾಖ ಹೆಚ್ಚಿ, ನೋವುಂಟಾಗಿ ಬಿಗಿತ ಪ್ರಾರಂಭವಾಗುತ್ತದೆ. ಎಲ್ಲ ಜಾತಿಯ ಜಾನುವಾರುಗಳಲ್ಲಿಯೂ ಕೆಚ್ಚಲು ರೋಗ ಕಂಡುಬರಬಹುದಾದರೂ ಅದರ ಪರಿಣಾಮ ಹೆಚ್ಚು ತೋರಿಬರುವುದು ಹಾಲು ಕರೆಯುವ ಹಸುಗಳಲ್ಲೇ. ರೋಗದ ದೆಸೆಯಿಂದ ಹೈನು ಉದ್ಯಮದಲ್ಲಿ ಅಪಾರ ನಷ್ಟ ಉಂಟಾಗುತ್ತದೆ. ದನಗಳ ಸಾವಿನ ನಷ್ಟ ಉಂಟಾಗುತ್ತದೆ. ಹಾಲು ಇಳುವರಿ ಕಡಿಮೆಯಾಗಿ ವರಮಾನ ತಗ್ಗುತ್ತದೆ.

**ರೋಗ ಲಕ್ಷಣ:** ಮೊಲೆಗಳು ಬಹಳವಾಗಿ ಊದಿರುತ್ತವೆ. ರಕ್ತ ನಂಜಾಗಿರುವುದರ ಪರಿಣಾಮವಾಗಿ ಹಾಲು ಉದ್ಭವವಾಗುವ ಮಾಂಸಖಂಡಗಳು ಶಿಥಿಲವಾಗುತ್ತವೆ. ಇದು ನಮಗೆ ತಿಳಿಯುವ ಮೊದಲೇ ಮಾಂಸದ ಅಂಗದ ಬಹುಭಾಗ ನಾಶವಾಗಿ ಹೋಗಿರುತ್ತದೆ. ಈ ಸೋಂಕುಳ್ಳ ಹಸುಗಳ ಹಾಲು ಮನುಷ್ಯನಿಗೆ ಅಪಾಯಕಾರಿ. ಕೆಲವು ವೇಳೆ ಈ ಸೋಂಕು ಮನುಷ್ಯನಿಗೆ ತಗಲುವುದು ಅಸಂಭವವೇನಲ್ಲ. ಕ್ಷಯ, ಗಂಟಲು ಬೇನೆಗಳು ಹರಡುವಿಕೆಗೆ ಇದು ಕಾರಣವಾಗಬಹುದು.

**ರೋಗನಿದಾನ :** ಕೆಚ್ಚಲು ರೋಗದ ಕಾರಣಗಳು ಹಲವಾರು. ಇದೊಂದು ಸೋಂಕು ರೋಗ. ಸ್ಟ್ರೆಪ್ಟೋಕಾಕಸ್ ಆಗ್ಲೂಟಿಯ, ಸ್ಟ್ರೆಪ್ ಯುಬೆರಿಸ್, ಸ್ಟ್ರೆಪ್ ಜೂಯೆಪಿಡೆಮಿಕಸ್, ಸ್ಟ್ರೆಪ್ ಡಿಸ್‌ಗೆಲೇಕ್ಟಿಯ ಮತ್ತು ಸ್ಟ್ರೆಪ್ ನಿಮೋನಿಯೆ ಇವೇ ಮುಂತಾದವು ಈ ರೋಗದ ಕಾರಕಗಳು.

ಕೆಚ್ಚಲು ರೋಗಕ್ಕೆ ಏಕಾಣುಜೀವಿಗಳು ಕಾರಕಗಳೇ ಎನ್ನುವ ವಿಷಯದಲ್ಲಿ ಅಷ್ಟು ಖಚಿತವಾದ ಅಭಿಪ್ರಾಯವಿಲ್ಲ. ಏಕೆಂದರೆ ಈ ರೋಗವಿದ್ದ ಕೆಲವು ಸಂದರ್ಭಗಳಲ್ಲಿ ಏಕಾಣುಜೀವಿಗಳ ಪ್ರಭಾವ ಕಂಡುಬಂದಿಲ್ಲ. ಹಾಗೆಯೇ ರೋಗವಿಲ್ಲದೆಡೆ ಈ ಜೀವಿಗಳು ಇರುವುದು ಕಂಡುಬಂದಿದೆ. ಕೆಚ್ಚಲು ರೋಗದ ಸೋಂಕಿಗೆ ಮುಖ್ಯ ಕಾರಕಗಳು ಎರಡು: ಕಾಯಿಲೆ ತಗುಲಿದ ಕೆಚ್ಚಲು ಮತ್ತು ಅದನ್ನು ಉಲ್ಬಣಿಸುವ ವಾತಾವರಣ. ಹೈನು ಜಾನುವಾರುಗಳಲ್ಲಿ ಮತ್ತು ಮೇಕೆಗಳಲ್ಲಿ ಪ್ರಧಾನ ಸೋಂಕುಗಳು ಕೆಚ್ಚಲಲ್ಲಿ ಉಳಿದಿರುತ್ತವೆ. ವಿಶೇಷವಾಗಿ ಸ್ಟ್ರೆಪ್ ಆಗ್ಲೇಕ್ಟಿಯ ಮತ್ತು ಸ್ಟ್ರೆಪ್ ಆರೆನ್ಸ್ ಈ ರೋಗಗಳು ಹಾಲು ಕರೆಯುವವರ ಕೈಯಿಂದ, ಅವರ ಬಟ್ಟೆಗಳಿಂದ ಮತ್ತು ಹಾಲು ಕರೆಯುವ ಯಂತ್ರಗಳಲ್ಲಿರುವ ಬಟ್ಟಲುಗಳಿಂದ ಬೇರೆ ರಾಸುಗಳಿಗೆ ಹರಡುತ್ತವೆ. ಕೆಚ್ಚಲು ರೋಗ ಹರಡುವುದಕ್ಕೆ ಅನುಕೂಲ ಸ್ಥಿತಿ ಮೊಲೆ ತುದಿ, ಇಲ್ಲವೇ ಕೆಚ್ಚಲು ಮೇಲಿನ ಗಾಯಗಳು.

**ಚಿಕಿತ್ಸೆ :** ಬಂದಿರುವ ರೋಗದ ಹತೋಟಿಗೆ ಅಥವಾ ಮುಂದೆ ಅದರಿಂದ ರಕ್ತ ನಂಜಾಗುವುದನ್ನು ತಡೆಯುವ ಸಲುವಾಗಿ ಹೆಚ್ಚಿನ ಮೊತ್ತದಲ್ಲಿ ಜೀವಿರೋಧಕಗಳು (ಆಂಟಿಬಯೋಟಿಕ್ಸ್) ಅಥವಾ ಸಲ್ಫನಮೈಡ್ ಔಷಧಿಗಳನ್ನು ಕೆಲವು ಗಂಟೆಗಳಿಗೊಮ್ಮೆ ಕೊಡುವುದು ಅಗತ್ಯ. ಯುಕ್ತ ಔಷಧಿಯನ್ನು ನೀರಿನ ಲೋಷನ್ ಮಾಡಿಕೊಂಡು ಕೆಚ್ಚಲಿನ ಮೇಲೆ ಸಿಂಪಡಿಸಿ ಅದರ ಸೋಂಕನ್ನು ಕಡಿಮೆ ಮಾಡಬಹುದು. ಚಿಕಿತ್ಸೆಗೆ ಒಳಪಟ್ಟ ಜಾಗದಲ್ಲಿ ಏಕಾಣುಜೀವಿಗಳು, ಬೂಷ್ಟು, ಯೀಸ್ಟ್ ಮುಂತಾದವು ಸೋಂಕದಂತೆ ಕಟ್ಟುನಿಟ್ಟಾದ ನೈರ್ಮಲ್ಯ ಪಾಲನೆ ಅತ್ಯಗತ್ಯ. ಗಾಯವನ್ನು ಕೆರಳಿಸುವಂಥ ಔಷಧಿಗಳನ್ನು ಬಳಸಬಾರದು. ಕೆಚ್ಚಲು ಊತ ಇಳಿಸಲು ಕಾರ್ಟಿಸೋನ್ ಮತ್ತು ಅದರ ಗುಂಪಿಗೆ ಸೇರಿದ ವಸ್ತುಗಳನ್ನು ಬಳಸುವುದುಂಟು. ಚಿಕಿತ್ಸೆಗೆ ರೋಗಾಣು ಮಾರಕಗಳನ್ನು ಅಥವಾ ಜೀವರೋಧಕಗಳನ್ನು ಉಪಯೋಗಿಸಿದಾಗ ಹಾಲು, ಬೆಣ್ಣೆ, ಮೊಸರುಗಳಲ್ಲಿ ಅವುಗಳ ಅಂಶ ಹೆಚ್ಚಿನ ಮೊತ್ತದಲ್ಲಿ ಇರುವುದು ಅನಿವಾರ್ಯ. ಇದರಿಂದ ಅವು ಮನುಷ್ಯನ ಸೇವನೆಗೆ ಅನರ್ಹವಾಗುತ್ತವೆ. ಈ ಚಿಕಿತ್ಸೆ ಮಾಡಿದ ಮುಂದಿನ 72 ಗಂಟೆಗಳ ವರೆಗೆ ಹಾಲು ಮತ್ತಿತರ ಪದಾರ್ಥಗಳನ್ನು ಮನುಷ್ಯನ ಬಳಕೆಗೆ ಒದಗಿಸಬಾರದು. ಗ್ಲೂಕೋಸಿನೊಡನೆ ಐಸೊಟಾನಿಕ್ ದ್ರವಗಳ ಸೂಜಿ ಮದ್ದು ಮತ್ತು ಆಂಟಿಹಿಸ್ಟೊಮಿನ್ ಔಷಧಿಗಳನ್ನು

ಕೊಡಬಹುದು. ಹಿಮಗಡ್ಡೆಯನ್ನು ಪುಡಿಮಾಡಿ ಕ್ಯಾನ್ವಾಸ್ ಚೀಲದಲ್ಲಿ ಹಾಕಿ ಕೆಚ್ಚಲು ಸುತ್ತ ಕಟ್ಟಿದರೆ ಆ ಪ್ರದೇಶ ಶೀತಲಿಸಿ ನಂಜು ರಕ್ತದೊಳಗೆ ಪಸರುವುದನ್ನು ತಪ್ಪಿಸಬಹುದು.

(ಆರ್.ಎಫ್.ಪಿ.)

**ಕೆತ್ತನೆ ಕೆಲಸ :** ಮರ, ದಂತ, ಕೊಂಬು ಮತ್ತು ಚಿನ್ನ, ಬೆಳ್ಳಿ, ತಾಮ್ರ ಮೊದಲಾದ ಲೋಹಗಳು–ಇವನ್ನು ಬಳಸಿಕೊಂಡು ಉಳಿ, ಬಾಚಿ, ಚಾಣ ಮೊದಲಾದ ಹತಾರುಗಳನ್ನುಪಯೋಗಿಸಿ ಕಲಾತ್ಮಕವಾದ ವಸ್ತುಗಳನ್ನು ತಯಾರಿಸುವ ಕೆಲಸವನ್ನು ಒಟ್ಟಾಗಿ ಈ ಹೆಸರಿನಿಂದ ಕರೆಯುತ್ತಾರೆ (ಕಾರ್ವಿಂಗ್). ಈ ಕೆಲಸದಲ್ಲಿ ಕೆತ್ತನೆಯೊಂದಿಗೆ ಕೊಯ್ತ, ಕೊರೆತ, ಸಮೆತ, ಕೂಡಣೆ, ಜೋಡಣೆ, ಬಣ್ಣಗಾರಿಕೆ, ಮೆರಗು ಕೊಡುವುದು, ಕುಂದಣಗಾರಿಕೆ ಮುಂತಾದ ಅನೇಕ ಕ್ರಿಯೆಗಳೂ ಸೇರುತ್ತವೆ. ಇದು ಶುದ್ಧ ಕಲೆಯೂ ಹೌದು, ಉಪಯುಕ್ತ ಕಲೆಯೂ ಹೌದು. ನೇಗಿಲು, ಗಾಡಿ, ಕಡೆಗೋಲು, ಮಣೆ, ಮಂಚ, ಪೀಠ ಮುಂತಾದ ನಿತ್ಯೋಪಯೋಗಿ ವಸ್ತುಗಳನ್ನೂ ಬಾಚಣಿಗೆ, ಸಮಪುಷ್ಪ ಮೊದಲಾದುವನ್ನೂ ತಪ್ಪಲೆ, ಕವಳಿಗೆ, ಥಾಲಿ, ತಂಬಿಗೆಗಳನ್ನೂ ತಯಾರಿಸುವುದು ಉಪಯುಕ್ತ ಕಲೆಗೆ ಸೇರುತ್ತದೆ. ಇವನ್ನು ಕೂರಿಸುವಾಗ ಉಪಯೋಗದ ಜೊತೆಗೆ ಅಲಂಕರಣಕ್ಕೆ ಗಮನಕೊಟ್ಟಾಗಲೂ ರಥ, ದೇವತಾವಿಗ್ರಹಗಳು, ಮಂದಾಸನ ಮೊದಲಾದುವನ್ನು ಕಲಾತ್ಮಕವಾಗಿ ತಯಾರಿಸುವಾಗಲೂ ಇದು ಶುದ್ಧ ಕಲೆಗೆ ಸಂಬಂಧಪಟ್ಟದಾಗುತ್ತದೆ.

ಲೋಹದ ಬಳಕೆ ಇನ್ನೂ ಏರ್ಪಡದ ಪ್ರಾಚೀನ ಕಾಲದಲ್ಲಿ ಆದಿಮಾನವ ವಿವಿಧ ಕಲ್ಲಿನಾಯುಧಗಳನ್ನು ಬಳಸಿ ತನಗೆ ಬೇಕಾದ ಮರದ ಸಾಮಾನುಗಳನ್ನು ಮಾಡಿಕೊಳ್ಳುತ್ತಿದ್ದನಷ್ಟೆ ಮೊಟ್ಟಮೊದಲಿಗೆ ಮರ ಆದಿಮಾನವನಿಗೆ ದೇವತಾ ಸಮಾನವೆನಿಸಿತ್ತು. ಅದರಿಂದವನು ತನಗೆ ಬೇಕಾದ ನೇಗಿಲು, ದೋಣಿ, ಪೀಠ, ಮೊಗವಾಡ ಮೊದಲಾದುವನ್ನು ಮಾಡಿಕೊಳ್ಳುತ್ತಿದ್ದ. ಮರ ಒಂದೆರಡು ಶತಮಾನಗಳಿಗಿಂತ ಹೆಚ್ಚು ಕಾಲ ಬಾಳಿಕೆ ಬರುವುದಿಲ್ಲವಾಗಿ ಆದಿಮಾನವನಿರ್ಮಿತವಾದ ಯಾವ ಮರದ ಸಾಮಾನೂ ಉಳಿದುಬಂದಿಲ್ಲ. ಗಾಳಿ ಮಳೆ ಬಿಸಿಲು ಚಳಿ ಹುಳುಹುಪ್ಪಟೆಗಳಿಂದಾಗಿ ಅವು ಹಾಳಾದುವು. ಇಷ್ಟಾದರೂ ಮರದ ಕೆತ್ತನೆ ಹಿಂದಿನ ಕಾಲದಲ್ಲಿ ಹೇಗಿತ್ತೆಂಬುದಕ್ಕೆ ಇಂದಿಗೂ ಉಳಿದು ಬಂದಿರುವ ಶಿಲಾಶಿಲ್ಪ ಪ್ರಬಲ ಸಾಕ್ಷಿಯಾಗಿದೆ. ಏಕೆಂದರೆ ಶಿಲೆಯಲ್ಲಿ ಕೆಲಸ ಮಾಡುವ ಶಿಲ್ಪಿಗಳಿಗೆ ಹಿಂದಿನವರ ಮರದ ಕೆತ್ತನೆ ಕೆಲಸಗಳು ಮಾದರಿಗಳಾಗಿದ್ದುವು.

ಮಹಾಭಾರತದ ಆದಿಪರ್ವದಲ್ಲಿ ರಾಕ್ಷಸಶಿಲ್ಪಿ ಮಯ, ಪಾಂಡವರಿಗಾಗಿ ಇಂದ್ರಪ್ರಸ್ಥನಗರದಲ್ಲಿ ಸಾಲಂಕೃತವಾದ ಸಭಾಭವನವೊಂದನ್ನು ಕಟ್ಟಿಕೊಟ್ಟನೆಂದು ಹೇಳಲಾಗಿದೆ. ರಾಕ್ಷಸರಿಗೆ ಮಯ ಹೇಗೋ ಹಾಗೆ ದೇವತೆಗಳಿಗೆ ವಿಶ್ವಕರ್ಮ ಶಿಲ್ಪಿಯಾಗಿದ್ದನೆಂಬ ವಿಷಯವನ್ನಿಲ್ಲಿ ಗಮನಿಸಬಹುದು. ವಿಶ್ವಕರ್ಮ ಎಂಬ ಮಾತಿಗೆ ಕಾಲ ಕ್ರಮೇಣ ಬಡಗಿ ಎಂಬ ಸಾಮಾನ್ಯಾರ್ಥ ಬಂದಿತಲ್ಲದೆ ಇಂದಿನ ಬಡಗಿಗಳು ವಿಶ್ವಕರ್ಮನ ವಂಶಸ್ಥರೆಂದು ಹೇಳಿಕೊಳ್ಳುತ್ತಾರೆ.

ಭಾರತದಲ್ಲಿ ಸದ್ಯಕ್ಕೆ ಅತಿ ಪ್ರಾಚೀನವೆನ್ನಲಾದ ಮರದ ಕೆತ್ತನೆಯ ಕೆಲಸವನ್ನು ಪಾಟಲೀಪುತ್ರದಲ್ಲಿನ ಅಶೋಕನ ಅರಮನೆಯ ಉಳಿಕೆಗಳಲ್ಲಿ ಕಾಣಬಹುದು. ಕಾರ್ಲಿಯ (ಪ್ರ.ಶ.ಸು.120) ಚೈತ್ಯದಲ್ಲಿನ ಒಂದು ಮರದ ತೆರೆ, ಸ್ತೂಪದಲ್ಲಿನ ಒಂದು ಮರದ ಚತ್ರಿ–ಇವೂ ಸಾಕಷ್ಟು ಪ್ರಾಚೀನ ಉಳಿಕೆಗಳೇ ಆಗಿವೆ. ಅಲೆಕ್ಸಾಂಡರನ ದಂಡಯಾತ್ರೆಯಿಂದೀಚೆಗೆ ಭಾರತದ ಮರಗೆಲಸ ಅನೇಕ ಹೊಸ ಪ್ರಭಾವಗಳಿಗೊಳಗಾಗಿ ವಿಸ್ತಾರವಾಗಿ ಬೆಳೆದಿದೆ.

ಕರ್ನಾಟಕದಲ್ಲಿ ವಿಜಯನಗರದ ಕಾಲದಿಂದೀಚಿನ ರಥಗಳು ದೊರೆತಿವೆ. ಬನವಾಸಿಯ ಮರದ ರಥ 150 ವರ್ಷಗಳಷ್ಟು ಹಳೆಯದು. ಹಿಂದಿನಿಂದಲೂ ಅರಮನೆ ಗುರುಮನೆಗಳೂ ಶ್ರೀಮಂತರ ವಾಸಗೃಹಗಳೂ ಸಾರ್ವಜನಿಕ ಕಟ್ಟಡಗಳೂ ಕೆತ್ತನೆಯ ಕೆಲಸದ ಆಗರಗಳಾಗಿವೆ. **(ನೋಡಿ– 1. ಕೊಂಬಿನ ಸಾಮಾನುಗಳು, 2. ಗುಡಿಗಾರಿಕೆ, 3. ಚಿನ್ನ,–ಬೆಳ್ಳಿ,–ಕೆತ್ತನೆ, 4. ದಂತದ–ಕೆತ್ತನೆ, 5. ಮರದ ಕೆತ್ತನೆ)**

*

**ಕೆತ್ತಲು ಮೀನು :** ಮಿಸ್ಟಸ್ ಎಂಬ ವೈಜ್ಞಾನಿಕ ಹೆಸರಿನ ಒಂದು ಮೀನು ಜಾತಿ. ಮೀಸೆ ಮೀನುಗಳ ಸಂಬಂಧಿ. ಉತ್ತರ ಭಾರತದ ನದಿ ಹಾಗೂ ಕೆರೆಕಟ್ಟೆಗಳಲ್ಲಿ ಇದನ್ನು ಕಾಣಬಹುದು. ಇದರ ದೇಹ ನೀಳ ಈಜುರೆಕ್ಕೆಗಳೆಲ್ಲ ಚಿಕ್ಕವು; ಬಾಲದ ಈಜುರೆಕ್ಕೆ ಎರಡಾಗಿ ಸೀಳಿದೆ. ಬಾಯ ಸುತ್ತಲೂ ನಾಲ್ಕು ಜೊತೆ ಮೀಸೆಗಳಿವೆ. ಕೆಲವು ಮೀನುಗಳಲ್ಲಿ ಮೀಸೆಗಳ ಒಂದು ಜೊತೆ ಬಾಲದವರೆಗೂ ಬೆಳೆದಿರುವುದುಂಟು. ಸಾಮಾನ್ಯವಾಗಿ ದೇಹದ ಬಣ್ಣ ಕಂದು ಮಿಶ್ರಿತ ಬಿಳಿ. ಕೆಲವು ಮೀನುಗಳಲ್ಲಿ ದೇಹದ ಮೇಲೆ ನೀಳವಾದ 8 ಪಟ್ಟೆಗಳಿವೆ. ಇವುಗಳಲ್ಲಿ ನಾಲ್ಕು ಕಪ್ಪು, ನಾಲ್ಕು ಬಿಳಿ. ಇವು ತಲೆಯ ಹಿಂಭಾಗದಿಂದ ಬಾಲದ ಈಜು ರೆಕ್ಕೆಯ ವರೆಗೆ ಒಂದಕ್ಕೊಂದು ಪರ್ಯಾಯವಾಗಿ ಹರಡಿಕೊಂಡಿವೆ.

ಕೀಟಗಳು ಹಾಗೂ ಬೇರೆ ಜಾತಿಯ ಮೀನುಮರಿಗಳು ಕೆತ್ತಲು ಮೀನಿನ ಆಹಾರ. ಏಪ್ರಿಲ್–ಜುಲೈ ತಿಂಗಳುಗಳ ನಡುವಣ ಕಾಲ ಇದರ ಸಂತಾನೋತ್ಪತ್ತಿಯ ಅವಧಿ.

**(ನೋಡಿ– ಮೀಸೆಮೀನು)** (ಎಂ.ಜೆ.ಎಸ್.ಆರ್.)

**ಕೆತ್ತು ಗುರುತುಗಳು :** ಕೆಲವು ನೈಜಖನಿಜಗಳ ಹರಳುಗಳ ನಯವಾದ ಸಪಾಟಗಳ ಮೇಲೆ ಅಲ್ಲಲ್ಲೇ ಗುರುತಿಸಬಹುದಾದ ನಿರ್ದಿಷ್ಟ ಆಕೃತಿಯುಳ್ಳ ಸೂಕ್ಷ್ಮ ಕುಳಿಗಳು ಮತ್ತು ಉಬ್ಬುಗಳು (ಎಚ್ಡ್ ಫಿಗರ್ಸ್). ಹೀಗಾಗಲು ಮುಖ್ಯ ಕಾರಣ




ಚಿತ್ರ 1 : ವಿವಿಧ ರೀತಿಯ ಕೆತ್ತು ಗುರುತುಗಳು : 1. ಟೋಪಾಸ್, 2. ಕ್ಯಾಲ್ಸೈಟ್, 3. ಡಾಲೋಮೈಟ್, 4. ಸಲ್ಫ್ಯೂರಿಕ್ ಆಮ್ಲದ ಕ್ರಿಯೆಗೊಳಪಡಿಸಿದ ಸ್ಫ್ಯಾಂಗೊಲೈಟಿನ ಹರಳುಗಳು,

ನೈಸರ್ಗಿಕ ದ್ರಾವಣಗಳು ಅಥವಾ ಆಮ್ಲಗಳು. ಇವು ಖನಿಜದ ನಿರ್ದಿಷ್ಟ ಭಾಗಗಳಲ್ಲಿ ಖನಿಜಾಂಶಗಳನ್ನು ಕೊಚ್ಚಿ ಕೊರೆದು ಈ ಕೆತ್ತು ಗುರುತುಗಳನ್ನು ಉಂಟುಮಾಡುತ್ತವೆ. ಖನಿಜಗಳ ಅಧ್ಯಯನದಲ್ಲಿ ಇವುಗಳಿಗೆ ಪ್ರಮುಖ ಪಾತ್ರ ಉಂಟು. ಇವನ್ನು ಮೊದಲಿಗೆ ಗುರುತಿಸಿದವ ಬಾಮ್ ಹಾಯರ್ ಎಂಬ ಖನಿಜ ವಿಜ್ಞಾನಿ. ಕೆತ್ತುಗುರುತುಗಳ ಸಹಾಯದಿಂದ ಖನಿಜದ ಹರಳುಗಳ ಅಣುರಚನೆಯನ್ನೂ ತನ್ಮೂಲಕ ಅವುಗಳ ಸಮಸೂತ್ರತೆಯನ್ನೂ ತಿಳಿಯಬಹುದು.

ಕೆತ್ತು ಗುರುತುಗಳು ಬಹುಮಟ್ಟಿಗೆ ದ್ರಾವಣಗಳ (ನೀರು, ಖನಿಜಾಮ್ಲಗಳು ಮತ್ತು ಕ್ಷಾರಗಳು) ಪ್ರಭಾವಕ್ಕೆ ಖನಿಜಗಳು ಒಳಗಾದಾಗ ಉಂಟಾಗುತ್ತವೆ. ಅದರಲ್ಲೂ ಹೈಡ್ರೊಫ್ಲೂರಿಕ್ ಆಮ್ಲ ಈ ದೃಷ್ಟಿಯಿಂದ ಬಹು ಪ್ರಭಾವಶಾಲಿ. ಹೆಚ್ಚು ಸ್ಥಿರ ಖನಿಜಗಳೆನಿಸಿದ ಸಿಲಿಕೇಟ್‌ಗಳು ಸಹ ಇದರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅಲ್ಲದೆ ಕೆಲವು ನೈಸರ್ಗಿಕ ಅನಿಲ ಅಥವಾ ಆವಿಗಳು ಸಹ ಖನಿಜಗಳ ಸಪಾಟಗಳ ಮೇಲೆ ಕೆತ್ತು ಗುರುತುಗಳನ್ನು ರೂಪಿಸಬಲ್ಲವು. ನೀರಿನ ಆವಿಯಂತೂ ಇದಕ್ಕೆ ಬಹು ಉತ್ತಮ ಉದಾಹರಣೆ ಎನಿಸಿದೆ. ಹೆಚ್ಚು ಒತ್ತಡ ಮತ್ತು ಉಷ್ಣತೆಯ ಸನ್ನಿವೇಶದಲ್ಲಿ ಇದು ಬಹು ಪ್ರಭಾವಶಾಲಿ. ಈ ಕಾರಕಗಳ ಪ್ರಭಾವಕ್ಕೆ ಖನಿಜಗಳು ಹೆಚ್ಚು ಕಾಲ ಒಳಗಾಗಿದ್ದಲ್ಲಿ ರೂಪ ತಳೆಯುವ ಕೆತ್ತು ಗುರುತುಗಳ ಆಕಾರವೂ ಅಷ್ಟೇ ದೊಡ್ಡದಾಗಿರುತ್ತದೆ. ಅಲ್ಲದೆ ಒಂದೇ ಕಾರಕ ಹರಳಿನ ವಿವಿಧ ದಿಕ್ಕುಗಳಲ್ಲಿ ವಿವಿಧ ರೀತಿಯ ಕೆತ್ತುಗುರುತುಗಳನ್ನು ಸೃಜಿಸಬಲ್ಲದು. ಸಾಮಾನ್ಯವಾಗಿ ಗುರುತುಗಳು ತಮ್ಮ ಬೆಳವಣಿಗೆಯಲ್ಲಿ ಹರಳಿನ ಅಕ್ಷರೇಖೆಗಳನ್ನು ಅನುಸರಿಸುತ್ತವೆ. ಕೆತ್ತು ಗುರುತುಗಳ ಅಂಚುಗಳು ಹರಳಿನ ನಿರ್ದಿಷ್ಟ ದಿಕ್ಕುಗಳಿಗೆ ಸಮಾಂತರವಾಗಿರುತ್ತವೆ (ಚಿತ್ರ 1).

ಅಲ್ಲದೆ ಇವು ಹರಳಿನ ನಿರ್ದಿಷ್ಟ ಜಾಡುಗಳಿಗೂ ಸೀಮಿತವಾಗಿರುತ್ತವೆ. ಸಾಮಾನ್ಯವಾಗಿ ಗುರುತುಗಳು ಮೂಲ ಹರಳಿನ ಸಮಸೂತ್ರತಾ ಸ್ವರೂಪವನ್ನು ಪ್ರತಿಬಿಂಬಿಸುತ್ತವೆ. ನಿಸರ್ಗದಲ್ಲಿ ದೊರೆಯುವ ವಜ್ರ, ಕ್ವಾರ್ಟ್ಸ್, ಗಾರ್ನೆಟ್, ಕ್ಯಾಲ್ಸೈಟ್, ಡಾಲೊಮೈಟ್, ಅಪಟೈಟ್, ಕೊರಂಡಂ, ಫ್ಲೂರೈಟ್, ಟೋಪಾಸ್, ಮಸ್ಕೊವೈಟ್ ಇತ್ಯಾದಿ ಖನಿಜಗಳ ಹರಳುಗಳ ಸಪಾಟಗಳ ಮೇಲೆ ಕೆತ್ತು ಗುರುತುಗಳನ್ನು ಸರ್ವಸಾಮಾನ್ಯವಾಗಿ ಗುರುತಿಸಬಹುದು; ಸ್ಫಟಿಕದ ಹರಳನ್ನು ಒದ್ದೆಬಟ್ಟೆಯಲ್ಲಿ ಸುತ್ತಿ ಕೆಲವು ಗಂಟೆಗಳ ಕಾಲ ಹಾಗೆಯೇ ಇಟ್ಟು ಅನಂತರ ಪರೀಕ್ಷಿಸಿದಲ್ಲಿ ನಯವಾದ ಹರಳಿನ ಮುಖಗಳ ಮೇಲೆಲ್ಲ ಸಣ್ಣ ಸಣ್ಣ ಆದರೆ ನಿರ್ದಿಷ್ಟ ಆಕೃತಿಯ ಕುಳಿಗಳು ಉದ್ಭವವಾಗಿರುವುದನ್ನು ಕಾಣಬಹುದು.

ಕ್ಯಾಲ್ಸೈಟ್ ಮತ್ತು ಡಾಲೋಮೈಟ್ ಖನಿಜಗಳ ಹರಳುಗಳು ಹೊರ ಆಕಾರದಲ್ಲಿ ಯಾವ ಬಗೆಯ ವ್ಯತ್ಯಾಸಗಳನ್ನೂ ತೋರ್ಪಡಿಸುವುದಿಲ್ಲ. ಹೀಗಾಗಿ ಒಂದನ್ನು ಮತ್ತೊಂದರಿಂದ ಗುರುತಿಸುವುದು ಕಷ್ಟ. ಆದರೆ ಇವುಗಳ ಸಪಾಟಗಳ ಮೇಲೆ ಕಾಣುವ ಕೆತ್ತು ಗುರುತುಗಳ ಸಹಾಯದಿಂದ ಈ ಎರಡು ಖನಿಜಗಳನ್ನೂ ಕಷ್ಟವಿಲ್ಲದೆ ಗುರುತಿಸಿ ಬೇರ್ಪಡಿಸಬಹುದು. ಆಕಾರದಲ್ಲಿ ಒಂದರ ಕೆತ್ತು ಗುರುತು ಮತ್ತೊಂದನ್ನು ಹೋಲುವುದೇ ಇಲ್ಲ.

ಮಸ್ಕೊವೈಟ್ ಎಂಬ ಅಭ್ರಕದ ಗುಂಪಿನ ಖನಿಜ ಮಾನೊಕ್ಲಿನಿಕ್ ವರ್ಗಕ್ಕೆ ಸೇರಿದ್ದರೂ ನೋಡಲು ಷಷ್ಟಭುಜ (ಹೆಕ್ಸಾಗೊನಲ್) ವರ್ಗದ ಖನಿಜಗಳ ಆಕೃತಿಯನ್ನೇ ಹೋಲುತ್ತದೆ. ಆದರೆ ಈ ಎರಡು ವರ್ಗದ ಹರಳುಗಳಿಗೂ ಅಕ್ಷೀಯ ಮತ್ತು ಸಮಸೂತ್ರತಾ ಸ್ವಭಾವಗಳಲ್ಲಿ

ನಿರ್ದಿಷ್ಟ ವ್ಯತ್ಯಾಸಗಳಿವೆ. ಈ ಸಂದರ್ಭದಲ್ಲಿ ಕೆತ್ತುಗುರುತುಗಳನ್ನೇ ನೆಚ್ಚಬೇಕಾಗುತ್ತದೆ (ಚಿತ್ರ 2). ಇವು ವಿಶಿಷ್ಟವಾದ ಮಾನೊಕ್ಲಿನಿಕ್ ಲಕ್ಷಣವನ್ನು ಹೊರಸೂಸಿ ಮಾಸ್ಕೊವೈಟ್‌ನ ನೈಜ ಸ್ವಭಾವವನ್ನು ಎತ್ತಿ ತೋರಿಸುತ್ತವೆ.



ಚಿತ್ರ 2 ಮಸ್ಕೊವೈಟ್

ಕ್ವಾರ್ಟ್ಸ್ ಖನಿಜದ ಟ್ರಾಪಸೊಹೀಡ್ರಲ್ ವರ್ಗದ ಹರಳುಗಳನ್ನು ಅವುಗಳ ದೃಗ್ವಿಜ್ಞಾನಗುಣಗಳಿಗನುಸಾರವಾಗಿ ಬಲಗೈ ಮತ್ತು ಎಡಗೈ ಉಪವರ್ಗಗಳಾಗಿ ವಿಂಗಡಿಸಲಾಗಿದೆ. ಕೆಲವು ಸೂಕ್ಷ್ಮ ವೈಜ್ಞಾನಿಕ ಉಪಕರಣಗಳ ತಯಾರಿಕೆಯಲ್ಲಿ ಇವುಗಳ ಆಯ್ಕೆ ಬಹುಮುಖ್ಯ. ಸಾಮಾನ್ಯ ರೀತಿಯಲ್ಲಿ ಒಂದನ್ನು ಮತ್ತೊಂದರಿಂದ ಬೇರ್ಪಡಿಸುವುದಂತೂ ಅಸಾಧ್ಯದ ಮಾತು. ಕಾರಣ ಈ ಎರಡರ ಹೋಲಿಕೆ ಅಷ್ಟು ಹೆಚ್ಚಿನದು. ಆದರೆ ಈ ಹರಳುಗಳ ಹೊರಮೈ ಮೇಲೆ ಉಂಟಾಗುವ ಕೆತ್ತುಗುರುತುಗಳ ಸಹಾಯದಿಂದ ಇವೆರಡನ್ನೂ ಸುಲಭವಾಗಿ ಗುರುತಿಸಿ ಬೇರ್ಪಡಿಸಬಹುದು (ಚಿತ್ರ 3).



ಚಿತ್ರ 3 ಎಡಗಡೆಯದು ಬಲಗೈ ತಿರುಪಿನ ಕ್ವಾರ್ಟ್ಸ್ ಹರಳು, ಬಲಗಡೆಯದು ಎಡಗೈ ತಿರುಪಿನ ಕ್ವಾರ್ಟ್ಸ್ ಹರಳು

ಕಾರಕವಸ್ತುವಿನ ಕೊಚ್ಚಿ ಹಾಗುವ ಕಾರ್ಯ ತೀವ್ರಗತಿಯಲ್ಲಿ ತಕ್ಕಷ್ಟು ಕಾಲ ಮುಂದುವರಿದಲ್ಲಿ ಖನಿಜದ ಹರಳಿನ ನೈಜಸ್ವರೂಪವೇ ಗುರುತಿಸಲಾರದಷ್ಟು ಮಟ್ಟಿಗೆ ಬದಲಾಗುವ ನಿದರ್ಶನಗಳೂ ಉಂಟು. ಸಂಶೋಧನಾಲಯದಲ್ಲೂ ಕೆಲವು ರಾಸಾಯನಿಕ ಕಾರಕಗಳನ್ನು ಉಪಯೋಗಿಸಿ ವಿವಿಧ ಖನಿಜಗಳ ಹರಳುಗಳ ಮೇಲೆ ಕೆತ್ತು ಗುರುತುಗಳನ್ನು ಕೃತಕವಾಗಿ ಸೃಜಿಸಬಹುದು. ಹೀಗಾದ ಗುರುತುಗಳು ಖನಿಜ ವಿಜ್ಞಾನಿಗೆ ಅವನ ಸಂಶೋಧನೆಯಲ್ಲಿ ಹೆಚ್ಚಿನ ನೆರವನ್ನು ನೀಡುತ್ತವೆ.

(ಬಿ.ವಿ.ಜಿ.)

**ಕೆಥೀಡ್ರಲ್ :** ಧರ್ಮಾಧ್ಯಕ್ಷನ (ಬಿಷಪ್) ಆಡಳಿತಕ್ಕೊಳಪಟ್ಟಿರುವ ಪ್ರಧಾನ ಚರ್ಚು. ಬಿಷಪ್, ಆರ್ಚ್‌ಬಿಷಪ್, ಪೋಪ್ ಮೊದಲಾದ ವಿವಿಧ ದರ್ಜೆಯ ಧರ್ಮಾಧಿಕಾರಿಗಳ ಸ್ಥಾನಗಳನ್ನವಲಂಬಿಸಿ ಕೆಥೀಡ್ರಲ್‌ಗಳ ಪ್ರಾಮುಖ್ಯ ವ್ಯತ್ಯಾಸವಾಗುತ್ತದೆ. ಒಬ್ಬ ಧರ್ಮಾಧ್ಯಕ್ಷನ ಆಡಳಿತಕ್ಕೊಳಪಟ್ಟ ಪ್ರದೇಶದಲ್ಲಿರುವ ಅನೇಕ ದೇವಾಲಯಗಳಲ್ಲಿ ಪ್ರಧಾನವಾದುದು ಕೆಥೀಡ್ರಲ್. ಅನೇಕ ಕೆಥೀಡ್ರಲ್‌ಗಳು ಕಾಲಕ್ರಮೇಣ ಸೌಂದರ್ಯದಲ್ಲಿ, ಭವ್ಯತೆಯಲ್ಲಿ ಇತರ ದೇವಾಲಯಗಳನ್ನು ಮೀರಿಸಿವೆಯಾದರೂ ಕೆಥೀಡ್ರಲ್ ಯಾವಾಗಲೂ ಇತರ ದೇವಾಲಯಗಳಿಗಿಂತ ಹೆಚ್ಚು ಸುಂದರವಾಗಿರಬೇಕೆಂಬ ಯಾವ ನಿಯಮವೂ ಇಲ್ಲ.

ಹಿಂದಿನ ಕಾಲದಲ್ಲಿ ಪ್ರಧಾನ ದೇವಾಲಯದಲ್ಲಿ ಧಾರ್ಮಿಕ ವಿಧಿಗಳನ್ನು ನಡೆಸಲು ಕ್ರೈಸ್ತ ಪುರೋಹಿತರ ಒಂದು ವಿಶಿಷ್ಟ ವರ್ಗವಿದ್ದು, ಅವರಿಗೆ ವಿಶೇಷ ಸ್ಥಾನಮಾನಗಳು ಸಲ್ಲುತ್ತಿದ್ದುವು. ಈಚೆಗೆ ಇಂಥ ವ್ಯವಸ್ಥೆ ಇಲ್ಲವಾಗುತ್ತಿದೆ. ಧರ್ಮಾಧ್ಯಕ್ಷನೇ ಪ್ರಧಾನ ದೇವಾಲಯದ ಆಡಳಿತಾಧಿಕಾರಿಯಾದರೂ ಅವನಿಂದ ನೇಮಕಗೊಂಡ ಇತರ ಕ್ರೈಸ್ತ ಗುರುಗಳು ಸಾಮಾನ್ಯವಾಗಿ ಇದರ ಧಾರ್ಮಿಕ ಮತ್ತು ಆರ್ಥಿಕ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ.

(ಡಿ.ವಿ.ಡಬ್ಲ್ಯು.)

**ಕೆಥೊಲಿಕರು : ನೋಡಿ – ರೋಮನ್ ಕೆಥೊಲಿಕರು**

**ಕೆನಡ :** ಉತ್ತರ ಅಮೆರಿಕದ ಕಾಮನ್‌ವೆಲ್ತ್ ರಾಷ್ಟ್ರಸಮುದಾಯದ ಅತ್ಯಂತ ದೊಡ್ಡ ದೇಶ. ಪಶ್ಚಿಮಾರ್ಧಗೋಳದಲ್ಲೂ ಇದೇ ಅತ್ಯಂತ ವಿಸ್ತಾರವಾದ ದೇಶ. ಇಡೀ ಪ್ರಪಂಚದಲ್ಲೆ ಇದಕ್ಕಿಂತ ದೊಡ್ಡದು ಹಿಂದಿನ ಸೋವಿಯತ್ ಸಮಾಜವಾದಿ ಗಣರಾಜ್ಯ ಒಕ್ಕೂಟ ಮಾತ್ರ. ಇದರ ದಕ್ಷಿಣದ ಎಲ್ಲೆ ಪೆಸಿಫಿಕ್ ಸಾಗರದಿಂದ ಲೇಕ್–ಆಫ್–ದಿ–ವುಡ್ ವರೆಗೆ ಉ.ಅ.49º ಗೆ ಸಮಾಂತರದಲ್ಲಿ ಸಾಗಿ, ಪೂರ್ವದ ಕಡೆಗೆ ಇರುವ ಹಲವು ಸಣ್ಣ ಸರೋವರಗಳ ಮತ್ತು ನದಿಗಳ ಸರಪಳಿಯನ್ನು ದಾಟಿ, ಸುಪೀರಿಯರ್ ಸರೋವರದ ವಾಯವ್ಯಕ್ಕಿರುವ ಪಿಜನ್ ನದೀಮುಖವನ್ನು ಮುಟ್ಟಿ, ಮಹಾ ಸರೋವರಗಳನ್ನೂ ಅವುಗಳನ್ನು ಕೂಡಿಸುವ ನದಿಗಳನ್ನೂ ಸೋಕಿ, ಸೇಂಟ್ ಲಾರೆನ್ಸ್ ನದಿಯ ಮೇಲಿರುವ ಕಾರ್ನ್‌ವಾಲ್ ತಲಪಿ, ಅಲ್ಲಿಂದ ಪೂರ್ವಾಭಿಮುಖವಾಗಿ ಜಾರಿ, ಉ.ಅ.45º ಯ ಮೇಲೆ ಹರಿದು ಅಂಕುಡೊಂಕಾಗಿ ಮುಂದುವರಿದು, ಫಂಡಿ ಕೊಲ್ಲಿಯಲ್ಲಿ ಕೊನೆಗೊಳ್ಳುತ್ತದೆ. ಕೆನಡದ ಪಶ್ಚಿಮಕ್ಕೆ ಪೆಸಿಫಿಕ್ ಸಾಗರ ಮತ್ತು ಅಲಾಸ್ಕ, ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ, ಡೇವಿಸ್ ಜಲಸಂಧಿ, ಬ್ಯಾಫಿನ್ ಕೊಲ್ಲಿ, ಎಲ್ಸ್‌ಮಿಯರ್ ದ್ವೀಪಕ್ಕೂ ಗ್ರೀನ್‌ಲೆಂಡಿಗೂ ನಡುವಣ

ಸಮುದ್ರ, ಉತ್ತರದಲ್ಲಿ ಆರ್ಕ್ಟಿಕ್ ಸಾಗರ ಇವೆ. ಕೆನಡದ ಉತ್ತರತಮ ಬಿಂದು ಕೊಲಂಬಿಯ ಭೂಶಿರ (ಉ.ಅ.83º 06'); ದಕ್ಷಿಣತಮ ಬಿಂದು ಈರೀ ಸರೋವರದ ಮಿಡ್ಲ್ ದ್ವೀಪದಲ್ಲಿದೆ (ಉ.ಅ.41º 41') . ಪೂರ್ವ-ಪಶ್ಚಿಮವಾಗಿ ಇದು ಸ್ಪಿಯರ್ ಭೂಶಿರದಿಂದ (ಪ.ರೇ.52º 37') ಅಲಾಸ್ಕದ ಮೇರೆಯ (ಪ.ರೇ.141º) ವರೆಗೆ ಹಬ್ಬಿದೆ. ಆಡಳಿತ ದೃಷ್ಟಿಯಿಂಡ ಹತ್ತು ಪ್ರಾಂತ್ಯಗಳಾಗಿ ಮತ್ತು ಎರಡು ಪ್ರದೇಶಗಳಾಗಿ ವಿಂಗಡವಾಗಿರುವ ಕೆನಡದ ವಿಸ್ತೀರ್ಣ 9,970,610 ಚ.ಕಿಮೀ. ಜನಸಂಖ್ಯೆ 31,244000 (2001) ರಾಜಧಾನಿ ಒಟ್ಟಾವ

**ಭೂರಚನೆ:** ಪ್ರಪಂಚದ ಕೆಲವು ಅತ್ಯಂತ ಪುರಾತನ ಶಿಲೆಗಳು ಕೆನಡದಲ್ಲಿವೆ. ಹಡ್ಸನ್ ಕೊಲ್ಲಿಯ ಅವನತ ಪ್ರದೇಶದ ಸುತ್ತ ಇರುವ ನೆಲದ ಹೊದಿಕೆಯ ತಳದಲ್ಲಿ, ಬಲು ಹತ್ತಿರದಲ್ಲೇ, 4,144,000 ಚ.ಕಿಮೀ ವಿಸ್ತಾರದಲ್ಲಿ, ಅವು ಸಿಗುತ್ತವೆ. ಈ ಪ್ರದೇಶವೇ ಕೆನಡಿಯನ್ ಫಲಕ (ಷೀಲ್ಡ್: ಸ್ಥಿರ ಭೂಪ್ರದೇಶ). ಇಲ್ಲಿ ಪೂರ್ವ ಕೇಂಬ್ರಿಯನ್ ಕಲ್ಪದ (600 ದ.ಲ.ವರ್ಷಗಳಿಗಿಂತಲೂ ಪ್ರಾಚೀನ ಕಾಲ) ಗ್ರಾನೈಟ್, ನೀಸ್ (ಗೀರುಶಿಲೆ), ಷಿಸ್ಟ್ (ಪದರಶಿಲೆ), ಕ್ವಾರ್ಟ್ಸೈಟ್ (ಬೆಣಚುಶಿಲೆ)-ಮುಂತಾದ ಕಣಶಿಲೆಗಳನ್ನು ಕಾಣಬಹುದು. ಚಿನ್ನ, ಬೆಳ್ಳಿ, ಪ್ಲಾಟಿನಂ, ತಾಮ್ರ, ನಿಕ್ಕಲ್, ಕೊಬಾಲ್ಟ್, ಕಬ್ಬಿಣ, ಸೀಸ ಮತ್ತು ಸತುಗಳು ನಿಕ್ಷೇಪಗಳು ಈ ಬಂಡೆಗಳಲ್ಲಿವೆ. ಗಣಿ ಉದ್ಯಮ ಪ್ರಧಾನವಾದ ರಾಷ್ಟ್ರಗಳಲ್ಲಿ ಕೆನಡವೂ ಒಂದು.

ಕೆನೆಡಿಯನ್ ಫಲಕದಲ್ಲಿ ಒಮ್ಮೆ ಬೃಹತ್ ಪರ್ವತ ಪಂಕ್ತಿಗಳಿದ್ದುವೆಂಬುದು ಇಲ್ಲಿಯ ಶಿಲಾರಚನೆಯಿಂದ ವೇದ್ಯವಾಗುತ್ತದೆ. ಆದರೆ ಪೂರ್ವ ಕೇಂಬ್ರಿಯನ್ ಕಲ್ಪದ ಅಂತ್ಯದ ವೇಳೆಗೆ ಈ ಭಾಗವೆಲ್ಲ ಸವೆದು ತಗ್ಗಾಗಿ ಪರಿಣಮಿಸಿತು. ಅನಂತರ ಸಮುದ್ರದ ನೀರು ಇದರೊಳಕ್ಕೆ ನುಗ್ಗಿತು. ಸ್ವಲ್ಪಕಾಲದ ಮೇಲೆ ಈಶಾನ್ಯ ಭಾಗ ಸ್ವಲ್ಪ ಮೇಲಕ್ಕೆದ್ದಿರಬೇಕು. ಉತ್ತರ ಲ್ಯಾಬ್ರಡಾರ್, ಬ್ಯಾಫಿನ್ ದ್ವೀಪ ಇವು ಸಮುದ್ರಮಟ್ಟದಿಂದ 1525 ಮೀ.ಗಿಂತ ಎತ್ತರದಲ್ಲಿವೆ.

ಪುರಾತನ ಭೂಭಾಗದ ಸವೆತದಿಂದುಂಟಾದ ಶಿಲಾಸಾಮಗ್ರಿಗಳು ಸುತ್ತಮುತ್ತಲ ಇಳುಕಲುಗಳಲ್ಲಿ ಶೇಖರಗೊಂಡು, ಪೆಲಿಯೋಜ಼ೋಯಿಕ್ ಯುಗದಲ್ಲಿ ಮರಳುಶಿಲೆ, ಸುಣ್ಣಶಿಲೆ ಮತ್ತು ಜೇಡುಶಿಲಾಸ್ತೋಮಗಳಾಗಿ ಮಾರ್ಪಟ್ಟುವು. ಇವುಗಳಲ್ಲಿ ಉತ್ತಮ ಸ್ತರರಚನೆಯನ್ನು ಕಾಣಬಹುದು. ಖಂಡದ ಮಧ್ಯಭಾಗದಲ್ಲಿ ಈ ಜಲಜ ಶಿಲಾಸ್ತರಗಳು ಫಲಕದ ಗಡುಸಾದ ಶಿಲಾರಾಶಿಯ ಮೇಲೆ ನಿಂತಿವೆ. ಅನಂತರ ತಲೆದೋರಿದ ಭೂ ಚಟುವಟಿಕೆಗಳ ಪ್ರಭಾವಕ್ಕೆ ಇವು ಅಷ್ಟಾಗಿ ಒಳಗಾಗಿದ್ದಂತೆ ಕಂಡುಬರುವುದಿಲ್ಲ. ಆದರೆ ಖಂಡದ ಆಗ್ನೇಯ ಅಂಚಿನ ಶಿಲಾಸ್ತರಗಳು ಮಡಿಕೆಬಿದ್ದು ಆಪಲ್ಯಾಷಿಯನ್ ಪರ್ವತಗಳಾಗಿವೆ. ಪಶ್ಚಿಮ ಮತ್ತು ನೈರುತ್ಯ ಭಾಗಗಳಲ್ಲಿ ಪೇಲಿಯೋಜ಼ೋಯಿಕ್ ಯುಗದ (600 ದ.ಲ.ವ. ಪ್ರಾಚೀನದಿಂದ 225 ದ.ಲ.ವ. ಪ್ರಾಚೀನ ಅವಧಿ) ವಿಸ್ತಾರವಾದ ಶಿಲಾಸ್ತರಗಳ ಮೇಲೆ ಮಿಸೋಜ಼ೋಯಿಕ್ ಯುಗದ (225 ದ.ಲ.ವ. ಪ್ರಾಚೀನದಿಂದ 65 ದ.ಲ.ವ. ಪ್ರಾಚೀನ ಅವಧಿ) ಜಲಜಶಿಲೆಗಳು ಹರಡಿಕೊಂಡುವು. ಈ ಎರಡೂ ಯುಗಗಳ ಶಿಲಾಸ್ತೋಮಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಜಿಪ್ಸಂ ಲವಣ, ಪೊಟ್ಯಾಷ್ ಮುಂತಾದ ಉಪಯುಕ್ತ ಖನಿಜನಿಕ್ಷೇಪಗಳಿವೆ.

ಮೀಸೋಜ಼ೋಯಿಕ್ ಯುಗದ ಕೊನೆಯಲ್ಲಿ ಖಂಡದ ಪಶ್ಚಿಮದ ಅಂಚಿನ ಉದ್ದಕ್ಕೂ ಭೂಮಿಯ ಹೊರಪದರ ಅಸ್ಥಿರವಾಗಿತ್ತು. ಮಂದವಾದ ಶಿಲಾಪ್ರಸ್ತರಗಳು ಅತೀವ ಒತ್ತಡದಿಂದಾಗಿ ಮಡಿಕೆ ಬಿದ್ದುದೇ ಅಲ್ಲದೆ, ಸ್ತರಭಂಗಗಳಿಗೂ ಒಳಗಾಗಿ ಮೇಲಕ್ಕೆದ್ದುವು. ಕಾರ್ಡಿಲೆರಾನ್ ಪರ್ವತಸ್ತೋಮ ಸಂಭವಿಸಿದ್ದು ಹೀಗೆ. ಆಲ್ಬರ್ಟನ್ ಅಡಿಬೆಟ್ಟಗಳಿಂದ ಪೆಸಿಫಿಕಿನ ವರೆಗೆ 800 ಕಿಮೀ ಅಗಲ ಇರುವ ಈ ಪ್ರದೇಶದಲ್ಲಿ ರಾಕಿಯ ಉನ್ನತ ಶಿಖರಗಳೂ ಕೊಲಂಬಿಯ ಪರ್ವತಗಳೂ ಕೋಸ್ಟ್ ಪರ್ವತಗಳೂ ವ್ಯಾಂಕೂವರ್ ದ್ವೀಪದ ಪರ್ವತಗಳೂ ಸೇರಿವೆ. ಮೀಸೊಜ಼ೋಯಿಕ್ ಯುಗದ ಸ್ವಲ್ಪ ಮುಂಚಿನ ಕಾಲದಲ್ಲಿ ಕೆನೆಡಿಯನ್ ಫಲಕದ ಈಶಾನ್ಯ ತುದಿಯ ಉದ್ದಕ್ಕೂ ಭೂಮಿಯ ಹೊರಪದರದಲ್ಲಿ ಅಸ್ಥಿರತೆ ಉಂಟಾಗಿತ್ತು. ಉತ್ತರ ಆರ್ಕ್‌ಟಿಕ್ ದ್ವೀಪಗಳ ಇನ್ಯೂಷಿಯನ್ ಪರ್ವತಶ್ರೇಣಿಗಳು ಸಂಭವಿಸಿದ್ದು ಇದರಿಂದಾಗಿ.

ಪಶ್ಚಿಮ ಕೆನಡದ ಕೆಲವು ಭಾಗಗಳಲ್ಲಿ, ಮುಖ್ಯವಾಗಿ ದಕ್ಷಿಣ ಆಲ್ಬರ್ಟದಲ್ಲಿ, ಪುರಾತನ ರಾಕಿ ಪರ್ವತಶ್ರೇಣಿಗಳ ಸವೆತದಿಂದುಂಟಾಗಿರುವ ಟರ್ಷಿಯರಿ (65 ದ.ಲ.ವ. ಪ್ರಾಚೀನದಿಂದ 1 ದ.ಲ.ವ. ಪ್ರಾಚೀನದ ಅವಧಿ) ಶಿಲಾಸ್ತೋಮಗಳಿವೆ. ಇವು ಸಹ ಭೂಸವೆತಕ್ಕೊಳಗಾದ್ದಕ್ಕೆ ದಾಖಲೆಗಳಿವೆ. ಈ ಭೂಯುಗದ ನುರುಜು ಶಿಲಾಸ್ತರದ ಅಲ್ಪಸ್ವಲ್ಪ ಭಾಗವನ್ನು ಸೈಪ್ರೆಸ್ ಬೆಟ್ಟಗಳ ಮೇಲೂ ರಾಕಿ ಶ್ರೇಣಿಯ ತಪ್ಪಲು ಬೆಟ್ಟಗಳಲ್ಲೂ ಅಲ್ಲಲ್ಲೆ ನೋಡಬಹುದು. ಇಡೀ ಉತ್ತರ ಅಮೆರಿಕದ ಬಹುಮಟ್ಟಿನ ಮೇಲ್ಮೈಲಕ್ಷಣ ಮತ್ತು ಸ್ಥಿರತೆಗೆ ಕಾರಣಭೂತವಾದ ಮತ್ತು ಕಣಶಿಲೆಗಳಿಂದಾದ ಪುರಾತನ ಕೆನೆಡಿಯನ್ ಫಲಕವನ್ನು ಕೆನಡದ ಕೆಲವೆಡೆ ಕಿರಿಯ ಪ್ರಸ್ತರೀಶಿಲೆಗಳು ಸುಮಾರು 3045 ಮೀ.ಗಳಷ್ಟು ಮಂದವಾಗಿ ಆವರಿಸಿಕೊಂಡಿವೆ.

ಪ್ಲೀಸ್ಟೊಸೀನ್ ಕಲ್ಪದಲ್ಲಿ (1 ದ.ಲ.ವ. ಪ್ರಾಚೀನದಿಂದ ಇಂದಿನ ತನಕದ ಅವಧಿ) ಕೆನಡದ ಬಹುಭಾಗ ಹಿಮನದಿಗಳಿಂದ ಆವೃತವಾಗಿತ್ತು. ಇವುಗಳ ಕಾರ್ಯಾಚರಣೆಯಿಂದಾಗಿ ಇದರ ಮೇಲ್ಮೈಯ ನಿಕ್ಷೇಪಗಳು ಮುರುಕಲು ಗುಪ್ಪೆಗಳು, ಟಿಲ್, ಹರಿಯುವ ನೀರಿನಿಂದ ವಿಂಗಡವಾದ ನುರುಜು, ಮರಳು, ಗೋಡು ಅಥವಾ ಜೇಡಿಮಣ್ಣಿನಿಂದ ಕೂಡಿವೆ. ಪುರಾತನ ನದೀಪಾತ್ರಗಳಾಗಿದ್ದೆಡೆಯಲ್ಲಿ ದಪ್ಪ ಕಣಗಳ ನಿಕ್ಷೇಪಗಳೂ ಹಿಮನದಿಯ ಸರೋವರಗಳ ತಳದಲ್ಲಿ ಸೂಕ್ಷ್ಮ ಕಣಗಳ ನಿಕ್ಷೇಪಗಳೂ ಸೇರಿದುವೆಂದು ಕಂಡುಬರುತ್ತದೆ. ಪೂರ್ವ ಮತ್ತು ಪಶ್ಚಿಮ ಕೆನಡದಲ್ಲಿ ಕೃಷಿಗೆ ಅತ್ಯಂತ ಪ್ರಶಸ್ತವೆನಿಸಿದ ಪ್ರದೇಶಗಳು ಹಿಂದೆ ಅಗಾಸಿಸ್ ಮತ್ತು ಇತರ ಪುರಾತನ ಸರೋವರಗಳ ತಳಭಾಗಗಳಾಗಿದ್ದುವು.

**ಮೇಲ್ಮೈ ಲಕ್ಷಣ:** ಭೂಮಿಯ ಮೇಲ್ಮೈ ಏರುತಗ್ಗುಗಳಿಂದ ಕೂಡಿದ ಬೋಗುಣಿಯಂತಿದೆ. ಇದರ ಅತ್ಯಂತ ತಗ್ಗಿನ ಜಾಗದಲ್ಲಿ ಹಡ್ಸನ್ ಕೊಲ್ಲಿ ಇದೆ. ಈ ಅವನತ ಪ್ರದೇಶದ ಸುತ್ತಲೂ ಬಹುತೇಕ ಇರುವವು ಕೆನೆಡಿಯನ್ ಫಲಕದ ಪುರಾತನ ಗಟ್ಟಿಶಿಲೆಗಳು. ಅಲ್ಲಲ್ಲಿ ಒರಟಾದ ಬಂಡೆಗಳು ಮೇಲೆದ್ದಿವೆ. ಆದರೆ ಇವು ಎತ್ತರವಾಗಿಲ್ಲ. ಕೆನಡಿಯನ್ ಫಲಕದ ದಕ್ಷಿಣಕ್ಕೂ ಪಶ್ಚಿಮಕ್ಕೂ ಸಮತಲ ಬಂಡೆಗಳ ಹಾಸಿನ ಮೇಲೆ ವಿಶಾಲ ಬಯಲುಗಳು ಹಬ್ಬಿವೆ. ಸೇಂಟ್ ಲಾರೆನ್ಸ್ ಮತ್ತು ಕೆಳಗಿನ ಮಹಾಸರೋವರಗಳ ಬಳಿಯ ಮತ್ತು ದಕ್ಷಿಣ ಮ್ಯಾನಿಟೋಬದ ಮೈದಾನಗಳು ಸಮುದ್ರಮಟ್ಟದಿಂದ ಸಾಮಾನ್ಯವಾಗಿ 305 ಮೀ.ಗಿಂತ ಎತ್ತರವಾಗಿಲ್ಲ ಸ್ಯಾಸ್ಕ್ಯಾಚೆವನ್‌ನ ಮಹಾ ಮೈದಾನಗಳು ಮತ್ತು ಆಲ್ಬರ್ಟ ಇವು ಸಮುದ್ರಮಟ್ಟದಿಂದ 610-1065 ಮೀ. ಎತ್ತರವಾಗಿವೆ. ಇಲ್ಲಿಯ ವಿಶಾಲ ಪ್ರದೇಶಗಳಲ್ಲಿ ಸ್ಯಾಸ್ಕ್ಯಾಚೆವನ್ ನದೀಕಣಿವೆಗಳನ್ನು ಬಿಟ್ಟರೆ ಬೇರೆಲ್ಲೂ ಏರುತಗ್ಗುಗಳಿಲ್ಲ. ಸೈಪ್ರೆಸ್ ಬೆಟ್ಟಗಳು, ವುಡ್ ಪರ್ವತಗಳು ಮುಂತಾದವು ತಕ್ಕಮಟ್ಟಿಗೆ ಕಡಿದಾಗಿವೆ.

ಕೆನೆಡಿಯನ್ ಕೊಳ್ಳದ ಪಶ್ಚಿಮದ ಏಣಿನ ಪ್ರದೇಶ ಅತ್ಯುನ್ನತವಾದ್ದು. ಇಲ್ಲಿಯ ಕಿರಿಯ ಕಾರ್ಡಿಲ್ಯೇರ ಪರ್ವತ ಪಂಕ್ತಿಯಲ್ಲಿ 3045-6100 ಮೀ. ಎತ್ತರದ ಹಲವಾರು ಶಿಖರಗಳಿವೆ. ಕೆನಡದ ಪೂರ್ವದ ಅಂಚಿನ ಪ್ರದೇಶವೂ ಪರ್ವತಮಯ. ಆದರೆ ಅಲ್ಲಿಯ



ಪ್ಲೇಸ್ ಡಿ ಆರ್ಮ್ಸ್, ಮಾಂಟ್ರಿಯಾಲ್, ಹಿನ್ನೆಲೆಯಲ್ಲಿ ನಾಟರ್‌ಡೇಮ್ ಚರ್ಚ್ ಇದೆ

ಪರ್ವತಗಳು ಹೆಚ್ಚು ಹಳೆಯವು ಮತ್ತು ಸವೆತಕ್ಕೊಳಗಾದಂಥವು. ಆದ್ದರಿಂದ ಅವು ಪಶ್ಚಿಮದ ಪರ್ವತಗಳಷ್ಟು ಉನ್ನತವಾಗಿಲ್ಲ. ಆದರೂ ಆಗ್ನೇಯ ಕ್ವಿಬೆಕ್‌ನ ಕೆಲವು ಶಿಖರಗಳ ಎತ್ತರ ಸುಮಾರು 1220 ಮೀ. ಲ್ಯಾಬ್ರಡಾರಿನ ಟೋರ್ನ್‌ಗಾಟ್ ಪರ್ವತಗಳ ಎತ್ತರ 1370-1525 ಮೀ. ಈಶಾನ್ಯದ ಅಂಚುಪ್ರದೇಶ ಇನ್ನೂ ಎತ್ತರವಾಗಿದೆ. ಇಲ್ಲಿಯ ಎಲ್ಸ್‌ಮೀರ್ ದ್ವೀಪದ ಪರ್ವತಶ್ರೇಣಿಯ ಹಲವಾರು ಶಿಖರಗಳು 1923 ಮೀ.ವರೆಗೆ ಎತ್ತರವಾಗಿವೆ.

ಕೆನಡವನ್ನು ಭೌಗೋಳಿಕವಾಗಿ 1 ಕೆನಡಿಯನ್ ಫಲಕ 2 ಆಕೇಡಿಯ ಪ್ರದೇಶ 3 ಸೇಂಟ್ ಲಾರೆನ್ಸ್ 4 ಹುಲ್ಲುಗಾವಲು ಮತ್ತು 5 ಕಾರ್ಡಿಲ್ಯೇರ ಪ್ರದೇಶ ಎಂದು ಐದು ಭಾಗಗಳಾಗಿ ವಿಂಗಡಿಸಬಹುದು.

**1 ಕೆನಡಿಯನ್ ಫಲಕ:** ಇದರ ವಿಸ್ತೀರ್ಣ 45,86,890 ಚ.ಕಿಮೀ ಇದರಲ್ಲಿ ಲ್ಯಾಬ್ರಡಾರ್, ಕ್ವಿಬೆಕ್ ಪ್ರಾಂತ್ಯದ ಬಹುಭಾಗ, ಉತ್ತರ ಆಂಟೇರಿಯೋ ಮತ್ತು ಆರ್ಕ್‍ಟಿಕ್ ಪ್ರದೇಶ–ಇವು ಸೇರಿವೆ. ಇದರ ಪಶ್ಚಿಮದ ಗಡಿ ಲೇಕ್–ಆಫ್–ದಿ–ವುಡ್ ನಿಂದ ವಾಯವ್ಯಕ್ಕೆ ಮೆಕೆನ್‍ಜಿ ನದಿ ಆರ್ಕ್‍ಟಿಕ್ ಸಾಗರವನ್ನು ಸೇರುವ ಸ್ಥಳದ ವರೆಗೆ ಹಬ್ಬಿದೆ. ಆರ್ಕ್‍ಟಿಕ್ ಸಾಗರದ ದ್ವೀಪಗಳ ದಕ್ಷಿಣ ಭಾಗಗಳು ಸೇರಿರುವುದೂ ಈ ಪ್ರದೇಶಕ್ಕೇ. ನಡುವೆ ಹಡ್ಸನ್ ಕೊಲ್ಲಿಯಿಂದ ಕೂಡಿ ಅರ್ಧಚಂದ್ರಾಕೃತಿಯಲ್ಲಿರುವ ಈ ಪ್ರದೇಶದಲ್ಲಿ ಖನಿಜನಿಕ್ಷೇಪಗಳು ಹೇರಳವಾಗಿವೆ. ನಿಕ್ಕಲ್, ತಾಮ್ರ ಮತ್ತು ಚಿನ್ನ ಮುಖ್ಯವಾದವು. ಈ ಭಾಗದಲ್ಲಿ ಲ್ಯಾಬ್ರಡಾರಿನ ನಚ್ವಾಕ್ ಪರ್ವತ ಶ್ರೇಣಿಯ ಶಿಖರಗಳು 1675 ಮೀ. ಎತ್ತರಕ್ಕೇರಿವೆ. ಇತರ ಕಡೆಗಳಲ್ಲಿ ಕಿರುಬೆಟ್ಟಗಳು ಮತ್ತು ಗಟ್ಟಿಬಂಡೆಗಳ ಸಾಲುಗಳು ಮಾತ್ರ ಉಂಟು. ಭೂಸ್ತರಗಳು ಮೃದುವಾಗಿರುವ ಕಡೆ ಕಣಿವೆಗಳು ಹೆಚ್ಚು. ಅವುಗಳ ಮಧ್ಯೆ ಸರೋವರಗಳಿವೆ. ಕೆನಡಿಯನ್ ಫಲಕದ ಅರ್ಧ ಭಾಗದ ಎತ್ತರ ಸಮುದ್ರ ಮಟ್ಟಕ್ಕೆ 305 ಮೀ.ಗಿಂತ ಕಡಿಮೆ. ಹಡ್ಸನ್ ಕೊಲ್ಲಿಯ ಸುತ್ತ 160–800 ಕಿಮೀಗಳಷ್ಟು ದೂರ ವ್ಯಾಪಿಸಿ, ನೈಋತ್ಯಕ್ಕೆ ವಿನಿಪೆಗ್ ಸರೋವರದ ಆದಿಯುಗದ ಶಿಲೆಗಳ ಅಂಚಿನ ವರೆಗೆ ಭೂಮಿ ಇಳುಕಲಾಗಿದೆ. ಈ ಪ್ರದೇಶದ ಉತ್ತರಕ್ಕೆ ಹೋದಂತೆಲ್ಲ ಮರಗಳು ಹೆಚ್ಚು ಹೆಚ್ಚು ಗಿಡ್ಡಾಗಿರುವುದನ್ನು ಕಾಣಬಹುದು. ಅದಕ್ಕೂ ಮುಂದೆ ಬಂಜರು ಪ್ರದೇಶ. ಋತುಗಳಿಗೆ ತಕ್ಕಂತೆ ಹಿಮಸಾರಂಗ ಮತ್ತು ಕಸ್ತೂರಿ ವೃಷಭಗಳು ಉತ್ತರ–ದಕ್ಷಿಣಗಳ ನಡುವೆ ಸಂಚರಿಸುತ್ತವೆ. ಹಡ್ಸನ್ ಕೊಲ್ಲಿಯ ಉತ್ತರಕ್ಕಿರುವ ಕೆಲವು ವಿಶಾಲ ದ್ವೀಪಗಳಲ್ಲಿ ಅಲ್ಲಲ್ಲಿ ನೀರ್ಗಲ್ಲ ನದಿಗಳಿವೆ. ಅದು ಅತ್ಯಂತ ಶೀತಪ್ರದೇಶ. ಇಂಡಿಯನ್ನರೂ ಎಸ್ಕಿಮೋಗಳೂ ಬೇಸಿಗೆಯಲ್ಲಿ ಮಾತ್ರ ಅಲ್ಲಿಗೆ ಹಿಮಸಾರಂಗಗಳ ಬೇಟೆಗಾಗಿ ಬರುತ್ತಾರೆ.

**2 ಆಕೇಡಿಯ ಪ್ರದೇಶ:** ಕೆನಡಕ್ಕೆ ಮೊದಮೊದಲು ಬಂದ ಫ್ರೆಂಚ್ ವಲಸಿಗರು ನೋವ ಸ್ಕೋಷ ಭಾಗವನ್ನು ಅಕೇಡಿಯ ಎಂದು ಕರೆದರು. ಈ ಪ್ರದೇಶಕ್ಕೆ ಈಗ ನೋವ ಸ್ಕೋಷ, ನ್ಯೂ ಬ್ರನ್ಸ್‍ವಿಕ್ ಮತ್ತು ಪ್ರಿನ್ಸ್ ಎಡ್ವರ್ಡ್ ದ್ವೀಪ. ಕ್ವಿಬೆಕ್ ಪ್ರಾಂತ್ಯದ ಆಗ್ನೇಯ ಭಾಗ ಮತ್ತು ನ್ಯೂ ಫೌಂಡ್ಲೆಂಡ್ ಸೇರುತ್ತವೆ. ನ್ಯೂಬ್ರನ್ಸ್‍ವಿಕ್ ಪ್ರಾಂತ್ಯದ ಪರ್ವತಗಳು ಕಲ್ಲಿದ್ದಲ ಸ್ತರಗಳಿಂದ ಕೂಡಿವೆ. ಈ ಪ್ರಾಂತ್ಯಕ್ಕೆ ಕಡಿದಾದ ಭೂಕಂಠದಿಂದ ಸಂಪರ್ಕ ಹೊಂದಿರುವ ನೋವ ಸ್ಕೋಷ ಪರ್ಯಾಯ ದ್ವೀಪ ಸುತ್ತಲೂ ಕೊಲ್ಲಿಗಳಿಂದಲೂ ರೇವುಗಳಿಂದಲೂ ಕೂಡಿದೆ. ಅಲ್ಲಿ ಬ್ರಿಟನ್ ಭೂಶಿರವೇ ಮೊದಲಾದ ಕಡೆಗಳಲ್ಲಿ ಕಲ್ಲಿದ್ದಲೂ ಪ್ಲಾಸ್ಟರ್ ಆಫ್ ಪ್ಯಾರಿಸ್ ತಯಾರಿಕೆಗೆ ಬಳಸುವ ಜಿಪ್ಸಮ್ ಖನಿಜವು ಸಿಗುತ್ತವೆ. ಕ್ವಿಬೆಕ್ ಭಾಗದಲ್ಲಿ ಕಲ್ನಾರು ದೊರಕುತ್ತದೆ. ಕೆನಡದ ಅತ್ಯಂತ ಕಿರಿ ಪ್ರಾಂತ್ಯವಾದ ಪ್ರಿನ್ಸ್ ಎಡ್ವರ್ಡ್ ದ್ವೀಪ ಕೆಂಪು ಭೂಮಿಯಿಂದ ಕೂಡಿದ್ದು.

**3 ಸೇಂಟ್ ಲಾರೆನ್ಸ್ ನದೀಬಯಲು:** ಮೊಟ್ಟಮೊದಲ ವಲಸಿಗರು ಸೇಂಟ್ ಲಾರೆನ್ಸ್ ನದಿಯ ಮುಖಭಾಗದಿಂದ ಆಗಮಿಸಿದ ಕಾರಣ, ಈ ನದಿಯ ಭಾಗಗಳಲ್ಲಿ ನಗರಗಳು ಜನಭರಿತವಾಗಿರುವುವಲ್ಲದೆ ಶ್ರೀಮಂತರನೇಕರು ಈ ನದಿಯ ತೀರಗಳಲ್ಲಿ ನೆಲಸಿದ್ದಾರೆ. ಅವರಿಗೆ ಅನುಕೂಲವಾಗಿ ಕ್ವಿಬೆಕ್ ನಗರದಿಂದ ಹ್ಯೂರನ್ ಸರೋವರದ ವರೆಗೆ 1555 ಚ.ಕಿಮೀಗಳಷ್ಟು ನೆಲ ಫಲವತ್ತಾದ್ದು. ಹಿಂದೆ ಬೆಟ್ಟಗುಡ್ಡಗಳ ಮತ್ತು ಅರಣ್ಯಗಳ ದೆಸೆಯಿಂದ ಪ್ರತ್ಯೇಕವಾಗಿದ್ದ ಭಾಗಗಳು ಗಣಿಗಳ ಅಭಿವೃದ್ಧಿಯಿಂದಲೂ ವಲಸೆಗಾರರ ನೆಲೆಗಳಿಂದಲೂ ಪರಸ್ಪರ ಸಂಪರ್ಕ ಪಡೆದಿವೆ. ಕೆನಡದ ಅತ್ಯಂತ ದೊಡ್ಡ ಪಟ್ಟಣ ಮಾಂಟ್ರಿಯಾಲ್. ಕೈಗಾರಿಕೆಯ ಕೇಂದ್ರ ಟೊರಾಂಟೋ, ಕೆನಡದ ರಾಜಧಾನಿ ಒಟ್ಟಾವ ಇವು ಈ ಪ್ರದೇಶಕ್ಕೆ ಸೇರಿದವು.

**4 ಹುಲ್ಲುಗಾವಲು:** ಒಳನಾಡ ಹುಲ್ಲುಗಾವಲುಪ್ರದೇಶ ಕೆನಡಿಯನ್ ಫಲಕದ ಅಂಚಿನಿಂದ ವಾಯವ್ಯಕ್ಕೆ ರಾಕಿ ಪರ್ವತಗಳವರೆಗೆ ಹಬ್ಬಿದೆ. ಇದಕ್ಕೆ ಮ್ಯಾನಿಟೋಬದ ದಕ್ಷಿಣ ಭಾಗಗಳು ಸ್ಯಾಸ್ಕ್ಯಾಚೆವನ್ ಪ್ರಾಂತ್ಯ ಮತ್ತು ಆಲ್ಬರ್ಟ ಪ್ರಾಂತ್ಯದ ಬಹುಭಾಗಗಳು ಸೇರಿವೆ. ಇದು ಗೋದಿ ಬೆಳೆಗೆ ಪ್ರಸಿದ್ಧವಾದ್ದು. ಈ ಪ್ರದೇಶ ರಾಕಿ ಪರ್ವತವನ್ನು ಮುಟ್ಟುವ ಕಡೆ ಗ್ಯಾಸೊಲಿನ್ ಎಣ್ಣೆ ಸಿಗುತ್ತದೆ. ಹಿಂದೆ ಅಭಾವಪ್ರದೇಶವೆಂದು ಪರಿಗಣಿತವಾಗಿದ್ದ ಈ ಪ್ರದೇಶ ಎರಡನೆಯ ಮಹಾಯುದ್ಧದ ತರುವಾಯ ಗ್ಯಾಸೊಲಿನ್ ಎಣ್ಣೆಯ ಗಣಿಗಳಿಂದಲೂ ಖನಿಜದ ಗಣಿಗಳಿಂದಲೂ ಉತ್ತಮ ಕೃಷಿಯಿಂದಲೂ ಅಭಿವೃದ್ಧಿ ಹೊಂದಿ ಕೆನಡದ ಪೂರ್ವ ಭಾಗಗಳಷ್ಟೇ ಪ್ರಗತಿ ಹೊಂದಿದೆ.

**5 ಕಾರ್ಡಿಲ್ಯೇರ ಪ್ರದೇಶ:** ಪಶ್ಚಿಮದ ಇಡೀ ರಾಕಿ ಪರ್ವತಗಳ ಪ್ರದೇಶ ಕಾರ್ಡಿಲ್ಯೇರ. ಈ ಪರ್ವತಗಳಿಗೆ ಸಮಾಂತರವಾಗಿ ವಿವಿಧ ಯುಗಗಳ ಶಿಲಾಸ್ತರಗಳಿಂದ ಕೂಡಿದ ಪರ್ವತ ಶ್ರೇಣಿಗಳು ಸಹ ಸೇರಿವೆ. ರಾಕಿ ಪರ್ವತಗಳ ಕಡೆಯ ಅನೇಕ ನದೀ ಕಣಿವೆಗಳ ಫಲವತ್ತಾದ ಭೂಮಿ ಬ್ರಿಟಿಷ್ ಕೊಲಂಬಿಯಕ್ಕೆ ಸೇರಿದೆ. ಈ ಕಣಿವೆಗಳು ವಾಯವ್ಯಕ್ಕೆ 800 ಕಿಮೀ ದೂರ ಹರಡಿವೆ. ಇವುಗಳ ಅಗಲ 160 ಕಿಮೀ ಇವುಗಳ ಮಧ್ಯೆ ಅನೇಕ ನದಿಗಳು ಹರಿಯುತ್ತವೆ.

ಇಲ್ಲಿಯ ಪರ್ವತಗಳಲ್ಲಿ ಮುಖ್ಯವಾದವು ಲೋಗನ್ 6044 ಮೀ (19,850'), ಸೇಂಟ್ ಇಲೈಯಸ್ 5486 ಮೀ (18,008'), ಆಲ್ಬರ್ಟ ಪ್ರಾಂತ್ಯದ ರಾಬ್‍ಸನ್ 3950 ಮೀ (12,972') ಮತ್ತು ಸೆಲ್ಕರ್ಕ್ 3350 ಮೀ (11,000'). ದಕ್ಷಿಣ ಭಾಗದ ಪರ್ವತಗಳಲ್ಲಿ ಸಮುದ್ರಮಟ್ಟಕ್ಕೆ 2284 ಮೀ. ಎತ್ತರದಲ್ಲಿ ಮಂಜು ಕವಿಯುತ್ತದೆ. ಸೆಲ್ಕರ್ಕ್ ಮತ್ತು ರಾಕಿ ಪರ್ವತಗಳಲ್ಲಿ ನೀರ್ಗಲ್ಲಿನ ಅನೇಕ ದೊಡ್ಡ ನದಿಗಳುಂಟು. ಅವುಗಳ ಮಂಜುಗಟ್ಟಿನೆಲ

ಆಲ್ಬರ್ಟದ ಒಂದು ರಾಷ್ಟ್ರೀಯ ವನ

260 ಚ.ಕಿಮೀ ಗಳಷ್ಟು ವ್ಯಾಪಕವಾಗಿದೆ. ಬ್ರಿಟಿಷ್ ಕೊಲಂಬಿಯ ಭಾಗದಲ್ಲಿ 2284 ಮೀ. ಎತ್ತರದಲ್ಲಿ ಮರಗಳು ಯಥೇಚ್ಛ.

**ನದಿಗಳು ಮತ್ತು ಸರೋವರಗಳು:** ಕೆನಡದ ಅನೇಕ ಭಾಗಗಳಲ್ಲಿ ನೂರಾರು ಕಿಲೋಮೀಟರ್ ಉದ್ದವುಳ್ಳ ಸಾವಿರಾರು ಮೀಟರ್‍ಗಳಷ್ಟು ಆಳವಾದ ಮಹಾ ಸರೋವರಗಳಿಂದ ಹಿಡಿದು, ದಟ್ಟಡವಿಗಳಲ್ಲಿ ಕಾಣದಂತಿರುವ ಹೊಂಡಗಳವರೆಗೆ ವಿವಿಧ ಗಾತ್ರಗಳ ಜಲಾಶಯಗಳಿವೆ. ವಿಶಾಲವಾದ ಹಾಗೂ ಒತ್ತಾಗಿ ಹರಡಿ ಕೊಂಡಿರುವ ಸರೋವರಗಳು ಹಡ್ಸನ್ ಕೊಲ್ಲಿಗೆ 800 ಕಿಮೀ.ಗಳಿಂದ ಹಿಡಿದು 1600 ಕಿಮೀಗಳ ಅಂತರದಲ್ಲಿವೆ. ಅವುಗಳಲ್ಲಿ ಪ್ರಖ್ಯಾತವಾದವು ಅಮೆರಿಕ ಸಂಯುಕ್ತಸಂಸ್ಥಾನಕ್ಕೂ ಕೆನಡಕ್ಕೂ ನಡುವಣ ಗಡಿಗಳಾಗಿ ಪರಿಣಮಿಸಿವೆ. ಮಹಾಸರೋವರಗಳೆನಿಸಿಕೊಳ್ಳುವಷ್ಟು ಗಾತ್ರದ ಸರೋವರಗಳು ಕೆನಡದ ಒಳನಾಡಿನಲ್ಲೂ ಇವೆ. ಅವುಗಳಲ್ಲಿ ಗ್ರೇಟ್ ಬೇರ್, ಗ್ರೇಟ್ ಸ್ಲೇವ್ ಮತ್ತು ವಿನಿಪೆಗ್ ಸರೋವರಗಳನ್ನು ಹೆಸರಿಸಬಹುದು.

ಕಾರ್ಡಿಲ್ಯೇರ ಭಾಗದ ಸರೋವರಗಳು ಉದ್ದವಾಗಿಯೂ ಕಡಿದಾಗಿಯೂ ಆಳವಾಗಿಯೂ ಇವೆ. ಅಲ್ಲಿಯ ಸಣ್ಣ ಸರೋವರಗಳ ಸುತ್ತ ಜೌಗುಪ್ರದೇಶಗಳುಂಟು. ಅವನ್ನು ರೆಡ್ ಇಂಡಿಯನ್ ಜನ ಮಸ್ಕೆಗ್ ಎನ್ನುತ್ತಾರೆ. ಕೆನಡದ ಸರೋವರಗಳಲ್ಲಿ ನೀರು ಸಮೃದ್ಧಿಯಾಗಿರುವುದರಿಂದ ಅವುಗಳ ಹೆಚ್ಚಿಗೆ ನೀರು ನದಿಗಳ ಮೂಲಕ ಬಸಿದುಹೋಗುತ್ತದೆ. ಕೆಲವು ಬಂಜರು ಪ್ರದೇಶಗಳಲ್ಲಿ ನೀರಿನ ಅಭಾವದಿಂದ ಸರೋವರಗಳ ನೀರು ಒಂದೇ ಕಡೆ ನಿಂತು, ಬೇಸಗೆಯಲ್ಲಿ ನೀರು ಬತ್ತಿದಾಗ ಸರೋವರದ ಅಂಗಳ ಉಪ್ಪುಗಟ್ಟಿರುವುದುಂಟು. ಕ್ವಿಲ್ ಸರೋವರ ಇದಕ್ಕೆ ಒಂದು ನಿದರ್ಶನ.

ಕೆನಡದ ನದಿಗಳಿಗೆ ಬಳಸು ಹೆಚ್ಚು. ಸರೋವರಗಳ ನಡುವೆ ಅನುಕ್ರಮ ಸಂಬಂಧ ಕಲ್ಪಿಸುವ ನದಿಗಳು ಹಲವು. ಒಂದೇ ನದಿ ಅನೇಕ ಹೆಸರುಗಳನ್ನು ತಾಳಿರುವುದೂ ಉಂಟು. ಆಂಟೇರಿಯೋ ಸರೋವರದ ಈಶಾನ್ಯದ ಕೊನೆಯಿಂದ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುವ ನದಿ ಸೇಂಟ್ ಲಾರೆನ್ಸ್. ಅದರಿಂದಲೂ ಅದು ಸಂಪರ್ಕ ಹೊಂದಿರುವ ಸರೋವರಗಳಿಂದಲೂ ಖಂಡದ ಹೃದಯಭಾಗಕ್ಕೆ ಜಲಸಂಪರ್ಕ ಲಭ್ಯವಾಗಿದೆ. ಮಾಂಟ್ರಿಯಾಲ್ ಮತ್ತು ಕ್ವಿಬೆಕ್ ಪಟ್ಟಣಗಳಿಗೆ ಜಲಮಾರ್ಗ ಏರ್ಪಡಿಸಿರುವುದು ಈ ನದಿ. ಒಳನಾಡಿನಿಂದ ಹರಿದು ಹಡ್ಸನ್ ಕೊಲ್ಲಿಯನ್ನು ಸೇರುವ ನದಿಗಳಲ್ಲಿ ಡೂಬಾಂಟ್, ಚರ್ಚಿಲ್, ನೆಲ್ಸನ್, ಆಲ್ಬನಿ, ಮೂಸ್, ಈಸ್ಟ್‍ಮೇನ್ ಮತ್ತು ನಾಟ್ಟವೇ ಮುಖ್ಯವಾದವು.

ಆರ್ಕ್‍ಟಿಕ್ ಪ್ರದೇಶದ ಅತ್ಯಂತ ದೊಡ್ಡ ನದಿ ಮಕೆನ್‍ಜಿ. ಪೀಸ್ ಮತ್ತು ಅತ ಬ್ಯಾಸ್ಕ ಇದರ ಮುಖ್ಯ ಉಪನದಿಗಳು. ಪೆಸಿಫಿಕ್ ಸಾಗರ ಸೇರುವ ನದಿಗಳಲ್ಲಿ ದೊಡ್ಡವು ಯೂಕಾನ್, ಫ್ರೇಸರ್ ಮತ್ತು ಕೊಲಂಬಿಯ.

ಕೊಲಂಬಿಯ ನದಿ ವಾಯವ್ಯಕ್ಕೆ ಸಾಗಿ 640 ಕಿಮೀಗಳಷ್ಟು ದೂರ ದಕ್ಷಿಣಾಭಿಮುಖವಾಗಿ ಹರಿದು ಅಮೆರಿಕ ಸಂಯುಕ್ತಸಂಸ್ಥಾನವನ್ನು ಪ್ರವೇಶಿಸುತ್ತದೆ. ಈ ನದಿಗಿಂತ ಕಿರಿಯದಾದ ಫ್ರೇಸರ್ ನದಿ ಉತ್ತರದಿಂದ ದಕ್ಷಿಣಕ್ಕೆ ಹರಿದು, ನ್ಯೂ ವೆಸ್ಟ್‍ಮಿನ್‍ಸ್ಟರ್ ಬಳಿ ಪೆಸಿಫಿಕ್ ಸಾಗರವನ್ನು ಸೇರುತ್ತದೆ. ಈ ಭಾಗದ ನದಿಗಳು ಆಳವಾದ ಕಣಿವೆಗಳ ಮೂಲಕ ಹಾದು ಸಾಗರವನ್ನು ಪ್ರವೇಶಿಸುತ್ತವೆ. ಖಂಡಾಂತರ ರೈಲುಮಾರ್ಗಗಳು ಈ ನದೀ ಕಣಿವೆಗಳಲ್ಲಿ ಹಾದುಹೋಗುತ್ತವೆ.

**ವಾಯುಗುಣ:** ಸುಮಾರು 42º ಉ.ಅ.ದಿಂದ ಹಿಡಿದು ಆರ್ಕ್‌ಟಿಕ್ ಪ್ರದೇಶದ ವರೆಗೂ ಸಾಗರಗಳ ತೀರ ಹೊಂದಿರುವ ಕೆನಡ ಸ್ವಾಭಾವಿಕವಾಗಿಯೇ ವಿವಿಧ ವಾಯುಗುಣಗಳಿಂದ ಕೂಡಿದೆ. ಭಾರಿ ವಾಯುರಾಶಿಗಳಿಂದ ಇದರ ವಾಯುಗುಣ ಪ್ರಭಾವಿತವಾಗಿದೆ. ತಣ್ಣಗಿನ ಒಣಗಾಳಿ ಉತ್ತರದಿಂದ ದಕ್ಷಿಣದ ಕಡೆಗೆ ಮೆಕೆನ್‌ಜಿ ಕಣಿವೆ ಮತ್ತು ಹಡ್ಸನ್ ಕೊಲ್ಲಿಗಳ ಮೂಲಕ ಬೀಸುತ್ತದೆ. ಚಳಿಗಾಲದಲ್ಲಿ ಇದು ಮಹಾಸರೋವರಗಳವರೆಗೂ ಬೀಸಿ, ಅವನ್ನೂ ದಾಟಿ ಸಂಯುಕ್ತ ಸಂಸ್ಥಾನದ ಪ್ರದೇಶವನ್ನೂ ತಾಕಬಹುದು. ಬೇಸಗೆಯಲ್ಲಿ ಮೆಕ್ಸಿಕೋ ಖಾರಿ ಮತ್ತು ಅಟ್ಲಾಂಟಿಕ್ ಸಾಗರದಿಂದ ಬೆಚ್ಚನೆಯ ಮತ್ತು ತೇವಗೂಡಿದ ಗಾಳಿ ಉತ್ತರಕ್ಕೆ ಬೀಸಿ, ಆಗ್ನೇಯ ಕೆನಡವನ್ನು ವ್ಯಾಪಿಸುತ್ತದೆ. ಉತ್ತರ ಪೆಸಿಫಿಕ್‌ನಿಂದ ತಂಪಾದ, ತೇವ ತುಂಬಿದ ಗಾಳಿ ಪಶ್ಚಿಮದ ಅಂಚಿನಲ್ಲಿ ವರ್ಷವೆಲ್ಲ ಬೀಸಿ ಪರ್ವತಪಂಕ್ತಿಗಳನ್ನು ದಾಟಿ ಒಳನಾಡಿನಲ್ಲಿ ಮಳೆ ಸುರಿಸುತ್ತದೆ; ಪಶ್ಚಿಮದಲ್ಲಿ ಚಳಿಗಾಲದಲ್ಲಿ ಮಳೆ ಹೆಚ್ಚು. ಅಮೆರಿಕ ಸಂಯುಕ್ತಸಂಸ್ಥಾನದ ನೈಋತ್ಯ ಭಾಗದ ಮರುಭೂಮಿ ಪ್ರದೇಶದ ಮೇಲಿಂದ ಬೀಸುವ ಗಾಳಿ ಬೇಸಗೆಯ ನಡುಗಾಲದಲ್ಲಿ ದಕ್ಷಿಣ ಕೆನಡದ ಮೇಲೆ ಪ್ರಭಾವ ಬೀರುವುದುಂಟು, ಕೆನಡದ ಬಹುಭಾಗ ಶೀತಪ್ರದೇಶ. ವಾಸಕ್ಕೆ ಹೆಚ್ಚು ಅನುಕೂಲಕರವಲ್ಲ. ದಕ್ಷಿಣ ಭಾಗ ಮಾತ್ರ ಉಷ್ಣತರ. ಉಷ್ಣತೆ, ಮಳೆ, ಸಸ್ಯ ಬೆಳೆಯುವ ಕಾಲದ ಅವಧಿ ಇವುಗಳ ದೃಷ್ಟಿಯಿಂದ ಕೆನಡವನ್ನು ಹಲವು ವಾಯುಗುಣ ವಿಭಾಗಗಳಾಗಿ ವಿಂಗಡಿಸಬಹುದು: 1. ಉತ್ತರದ ಆರ್ಕ್‌ಟಿಕ್ ವಾಯುಗುಣ. ಜುಲೈಯ ಸರಾಸರಿ ಉಷ್ಣತೆ 28º ಸೆ. ಇರುವ ರೇಖೆಯ ಉತ್ತರದ ಪ್ರದೇಶ. ಕಡಿಮೆ ಉಷ್ಣತೆ, ಉದ್ದನೆಯ ದಿನ. ಧ್ರುವ ಪ್ರದೇಶದ ಬಳಿ ಸೂರ್ಯ ಹಲವು ವಾರಗಳ ಕಾಲ ಮುಳುಗುವುದಿಲ್ಲ. ಇಲ್ಲಿ ಚಳಿಗಾಲ ದೀರ್ಘ, ತೀವ್ರ, ಅಂಧಕಾರಮಯ. ಅವಪಾತ ಬಲು ಕಡಿಮೆ (13–25 ಸೆಂ.ಮೀ). ಮಣ್ಣಿನ ತಳಭಾಗ ಬಹುತೇಕ ಶಾಶ್ವತವಾಗಿ ಗಡ್ಡೆ ಕಟ್ಟಿರುತ್ತದೆ. 2. ಆರ್ಕ್‌ಟಿಕ್ ವಾಯುಗುಣ ರೇಖೆಯ ದಕ್ಷಿಣಕ್ಕೆ ಉಪ–ಆರ್ಕ್‌ಟಿಕ್ ವಾಯುಗುಣವಿದೆ. 24º ಫ್ಯಾ.ಗಿಂತ ಕಡಿಮೆ ಉಷ್ಣತೆ 5 ತಿಂಗಳುಗಳಿಗಿಂತ ಹೆಚ್ಚು ಕಾಲ ಇರುವುದಿಲ್ಲ. ಚಳಿಗಾಲ ಬಲು ತೀವ್ರ. ಪಶ್ಚಿಮ ಭಾಗದಲ್ಲಿ 25–30 ಸೆಂ.ಮೀ. ಮಳೆ ಅವಪಾತ. ಪೂರ್ವದಲ್ಲಿ ಇನ್ನೂ ಹೆಚ್ಚು. ಇದರಲ್ಲಿ ಹಿಮದ ಭಾಗವೇ ಅಧಿಕ. 3. ಉತ್ತರ ಮಾರುತೀಯ(ಬೋರಿಯಲ್) ವಾಯುಗುಣದಲ್ಲಿ ಜುಲೈ ಉಷ್ಣತೆ 33.4º ಸೆ.ಗಿಂತ ಹೆಚ್ಚು. ಪಶ್ಚಿಮದಲ್ಲಿ ವರ್ಷದಲ್ಲಿ 30–35 ಸೆಂ.ಮೀ. ಮಳೆ (ಬೇಸಗೆಯಲ್ಲಿ). ಪೂರ್ವದಲ್ಲಿ ಹಿಮವೃಷ್ಟಿ ಹೆಚ್ಚು. ಇಲ್ಲಿ ಮೃದು ತಿರುಳಿನ ಮರಗಳ ಕಾಡು ಬೆಳೆಯುತ್ತದೆ. 4. ಅಟ್ಲಾಂಟಿಕ್ ವಾಯುಗುಣದಲ್ಲಿ ಚಳಿಗಾಲದ ನಡುವಣ ಉಷ್ಣತೆಯ ಸರಾಸರಿ 8.3–14º ಸೆ. ಬೇಸಗೆಯಲ್ಲಿ ಮೂರು ತಿಂಗಳುಗಳ ಕಾಲಗಿಂತ ಹೆಚ್ಚು ಉಷ್ಣತೆ. ವಾರ್ಷಿಕ ಅವಪಾತ 100–140 ಸೆಂ.ಮೀ. ಚಳಿಗಾಲದಲ್ಲೇ ಹೆಚ್ಚು ಮಳೆ. ನ್ಯೂಫೌಂಡ್‌ಲೆಂಡ್ ಮತ್ತು ನ್ಯೂ ಬ್ರನ್ಸ್‌ವಿಕ್‌ನ ಕೆಲವು ಭಾಗಗಳಲ್ಲಿ ಚಳಿಗಾಲದಲ್ಲಿ 2.4–3.0 ಮೀ. ಹಿಮ ಬೀಳುತ್ತದೆ. ಅಟ್ಲಾಂಟಿಕ್ ತೀರ ಪ್ರದೇಶದಲ್ಲಿ ಬೇಸಗೆಯಲ್ಲಿ ಆಗಾಗ್ಗೆ ದಟ್ಟವಾದ ಮಂಜು ಬೀಳುವುದುಂಟು. 5. ಮಹಾಸರೋವರಗಳ ಮತ್ತು ಸೇಂಟ್ ಲಾರೆನ್ಸ್ ನದಿಯ ಪ್ರದೇಶದಲ್ಲಿ ಸಾಮಾನ್ಯವಾಗಿ ಅಟ್ಲಾಂಟಿಕ್ ಪ್ರದೇಶದಲ್ಲಿದ್ದಂತೆಯೇ ವಾಯುಗುಣ ಇರುತ್ತದೆ. ಆದರೆ ಇಲ್ಲಿ ವಸಂತಾಗಮನವಾಗುವುದು ಬೇಗ. ಬೇಸಗೆ ಹೆಚ್ಚು ದೀರ್ಘ. ಮಾಂಟ್ರಿಯಾಲ್ ಟೊರಾಂಟೋಗಳಲ್ಲಿ ಜುಲೈ ಉಷ್ಣತೆ 39º ಸೆ. ಸರೋವರಗಳ ನಡುವಣ ಪರ್ಯಾಯದ್ವೀಪ ಪ್ರದೇಶದಲ್ಲಿ (ದಕ್ಷಿಣ ಆಂಟೇರಿಯೋ) ಉಷ್ಣತೆ ಇನ್ನೂ ಹೆಚ್ಚು. ವರ್ಷವೆಲ್ಲ ಸಮನಾಗಿ ಅವಪಾತ. ವಾರ್ಷಿಕ ಸರಾಸರಿ 75–100 ಸೆಂ.ಮೀ. ಬೇಸಗೆಯಲ್ಲಿ ಒಮ್ಮೊಮ್ಮೆ ಅನಾವೃಷ್ಟಿ ಸಂಭವಿಸುವುದುಂಟು. 6. ಹುಲ್ಲುಗಾವಲಿನ ಪ್ರದೇಶದಲ್ಲಿ ಮಳೆ ಸಾಧಾರಣ (30–40 ಸೆಂ.ಮೀ). ಇದು ಬೀಳುವುದು ಬಹುತೇಕ ಬೇಸಿಗೆಯಲ್ಲಿ. ಬೇಸಿಗೆಯ ನಡುಗಾಲದಲ್ಲಿ ಉಷ್ಣತೆಯ ಸರಾಸರಿ 36.1º ಸೆ. ವಿನಿಪೆಗ್, ಪ್ರಿನ್ಸ್‌ಆಲ್ಬರ್ಟ್ ಮತ್ತು ಎಡ್ಮಂಟನ್‌ಗಳಲ್ಲಿ ಚಳಿಗಾಲದ ನಡುವಣ ಉಷ್ಣತೆ 0.6º ಸೆ. 7. ಪೆಸಿಫಿಕ್ ಅಂಚಿನಲ್ಲಿ ಚಳಿ ತೀವ್ರವಿಲ್ಲ: ವಾಯುಗುಣ ತೇವಪೂರಿತ. ಹಿಮ ಬಿಂದುವಿಗಿಂತ ಕೆಳಕ್ಕೆ ಉಷ್ಣತೆ ಸಾಮಾನ್ಯವಾಗಿ ಇಳಿಯುವುದಿಲ್ಲ. ಬಹುಭಾಗದಲ್ಲಿ ವರ್ಷಕ್ಕೆ 200 ಸೆಂ.ಮೀ. ಅವಪಾತ. 8. ಪಶ್ಚಿಮ ಪರ್ವತ ಪ್ರದೇಶದಲ್ಲಿ ಎತ್ತರ ಹಾಗೂ ಮಳೆ ಮಾರುತದ ಪ್ರಭಾವಕ್ಕೆ ಅನುಗುಣವಾಗಿ ಶಿಖರಗಳು ಹಿಮಾವೃತ.

**ಸ್ವಾಭಾವಿಕ ಸಸ್ಯಗಳು ಪ್ರಾಣಿಗಳು:** ಸಮುದ್ರತೀರವುಳ್ಳ ಪ್ರಾಂತ್ಯ, ಕ್ವಿಬೆಕ್ ಮತ್ತು ಪಶ್ಚಿಮ ಆಂಟೇರಿಯೋಗಳಲ್ಲಿಯ ಸ್ವಾಭಾವಿಕ ಸಸ್ಯಗಳು ಒಂದೇ ರೀತಿಯವು. ಸೇಂಟ್ ಲಾರೆನ್ಸ್ ನದಿಯ ದಕ್ಷಿಣ ಭಾಗ ಮತ್ತು ಲಾರೆನ್ಸ್ ಖಾರಿಯ ಪ್ರದೇಶಗಳಲ್ಲಿ ಆರ್ಕ್‌ಟಿಕ್ ಹಾಗೂ ಉಪ–ಆರ್ಕ್‌ಟಿಕ್ ವಲಯಗಳಲ್ಲಿ ಬೆಳೆಯುವ ಸಸ್ಯಗಳಿವೆ. ಅರಣ್ಯಗಳಿಂದ ಕೂಡಿದ ಆಂಟೇರಿಯೋ ಪ್ರಾಂತ್ಯದ ಆಚೆ, ಮ್ಯಾನಿಟೋಬ ಪ್ರಾಂತ್ಯದಲ್ಲಿ ಮತ್ತು ವಾಯವ್ಯಭಾಗದಲ್ಲಿ ಹುಲ್ಲುಗಾವಲುಗಳು ರೆಡ್ ನದಿಯಿಂದ ರಾಕಿ ಪರ್ವತಗಳ ತಪ್ಪಲವರೆಗೂ ಹರಡಿವೆ. ಕೊಲಂಬಿಯದ ಪರ್ವತ ಭಾಗಗಳಲ್ಲಿ ವಾಯುಗುಣಕ್ಕನುಗುಣವಾಗಿ ಹಲವಾರು ಬಗೆಯ ಸಸ್ಯಗಳಿವೆ. ಪೆಸಿಫಿಕ್ ಸಾಗರದ ಅಂಚಿನ ಅರಣ್ಯಗಳಲ್ಲಿ ಹಾಗೂ ಬಯಲುಗಳಲ್ಲಿ ಕಾಡುಹೂ ಗಿಡಗಳು ತುಂಬಿವೆ.

ಸೇಂಟ್ ಲಾರೆನ್ಸ್ ತಗ್ಗುನಾಡಿನಲ್ಲಿ ಅರಣ್ಯಗಳನ್ನು ಹೆಚ್ಚಾಗಿ ಕಡಿದುಹಾಕಿದ್ದಾರೆ. ರಕ್ಷಿತ ಅರಣ್ಯಗಳು ಕೆನಡಿಯನ್ ಫಲಕಭಾಗಗಳಲ್ಲಿವೆ. ಉತ್ತರ ಆರ್ಕ್‌ಟಿಕ್ ಭಾಗಗಳಲ್ಲಿ ತಂಡ್ರದ ಪಾಚಿ, ಹುಲ್ಲು, ಬಂಡೆಗೆ ತಗಲುವ ಕಲ್ಲುಹೂ ಹಾಗೂ ಕುಬ್ಜಸಸ್ಯಗಳಿವೆ. ಲ್ಯಾಬ್ರಡಾರ್ ತೀರದಲ್ಲಿ ಅರಣ್ಯಗಳಿದ್ದರೂ ಚೌಬೀನೆಗೆ ಯುಕ್ತವಾದ ಮರಗಳಿಲ್ಲ. ಲಾರೆನ್ಸ್ ನದಿಯ ಉತ್ತರದಲ್ಲಿ ಶಂಕುಧರ ವೃಕ್ಷಗಳು ಹೆಚ್ಚು. ಸುಪೀರಿಯರ್ ಸರೋವರದಿಂದ ಕ್ವಿಬೆಕ್ ವರೆಗೆ ಒತ್ತಾದ ಅರಣ್ಯಗಳಿವೆ. ಅದು ಇಂದಿಗೂ ಪೂರ್ವ ಕೆನಡದ ದಿಮ್ಮಿ ಉತ್ಪಾದನ ಪ್ರದೇಶ. ಅಲ್ಲಿ ಬಿಳಿಯ ಪೈನ್, ಸ್ಪ್ರೂಸ್, ಹೆಮ್ಲಾಕ್, ಹಳದಿ ಬರ್ಚ್ ಹಾಗೂ ಮೇಪಲ್ ಮರಗಳು ಹೇರಳವಾಗಿವೆ. ಲ್ಯಾಬ್ರಡಾರಿನ ದಕ್ಷಿಣ ಭಾಗದಿಂದ ಹಿಡಿದು ಅಲಾಸ್ಕದ ಅಂಚಿನ ವರೆಗೆ ವ್ಯಾಪಕವಾಗಿ ಪೈನ್ ಜಾತಿಯ ವೃಕ್ಷಗಳಿಂದ ಕೂಡಿದ ಉತ್ತರ ಅರಣ್ಯ ವಲಯವುಂಟು. ಅಲ್ಲಿ ಜಾಕ್, ಪೈನ್, ಬಿಳಿಯ ಬರ್ಚ್, ವಿಲೊ ಮೊದಲಾದ ಮರಗಳಿವೆ. ಅಲ್ಲಿಯ ಬಿಳಿ ಸ್ಪ್ರೂಸ್ ಮತ್ತು ಕರಿ ಸ್ಪ್ರೂಸ್ ಮರಗಳ ದಿಮ್ಮಿಗಳು ಕಾಗದ ತಯಾರಿಕೆಗೆ ಬೇಕಾದ ತಿರುಳಿಗೆ ಉಪಯೋಗವಾಗುತ್ತವೆ.

ಉತ್ತರ ಶೀತವಲಯದಲ್ಲಿ ಕಸ್ತೂರಿ ವೃಷಭ; ಅನೇಕ ಕಡೆಗಳಲ್ಲಿ ವಿವಿಧ ಬಗೆಯ ಕಡವೆಗಳು, ವರ್ಜಿನಿಯ ಹುಲ್ಲೆ, ಕರಿಬಾಲದ ಜಿಂಕೆ, ಕವಲು ಕೊಂಬಿನ ಜಿಂಕೆ; ಆಲ್ಬರ್ಟ ಮತ್ತು ಮೆಕೆನ್‌ಜಿ ಉತ್ತರ ಭಾಗಗಳಲ್ಲಿ ಕಾಡುಕೋಣ; ಕ್ವಿಬೆಕ್, ಪೆಸಿಫಿಕ್ ಸಾಗರ ಪ್ರದೇಶ ಮತ್ತು ಪೀಸ್ ನದಿಯ ಕಡೆ ವಾಪಿಟಿ; ಪಶ್ಚಿಮ ಪರ್ವತಗಳಲ್ಲಿ ಮತ್ತು ಇತರ ಕಡೆ ಕರಿಯ

ಕೆನಡ ಮತ್ತು ಸಂಯುಕ್ತ ಸಂಸ್ಥಾನಗಳ ನಡುವಣ ಅತಿ ಚಿಕ್ಕ ಸೇತುವೆ

ಕರಡಿ; ಬ್ರಿಟಿಷ್ ಕೊಲಂಬಿಯದಲ್ಲಿ ಪ್ಯೂಮ; ಎಲ್ಲ ಭಾಗಗಳಲ್ಲೂ ಸಾಮಾನ್ಯವಾಗಿ ಬೆಳ್ಳಿನರಿ, ಲಿಂಕ್ಸ್, ಬೀವರ್, ನೀರುನಾಯಿ, ಮಾರ್ಟಿನ್, ಫಿಷರ್, ಮಿಂಕ್, ಸ್ಕಂಕ್ ಮೊದಲಾದ ತುಪ್ಪುಳು ಪ್ರಾಣಿಗಳು; ರಾಕಿ ಪರ್ವತಗಳಲ್ಲಿ ವಿವಿಧ ಬಗೆಯ ಕಾಡುಮೇಕೆಗಳು ಮತ್ತು ಕಾಡುಕುರಿಗಳು; ಪಶ್ಚಿಮದಲ್ಲಿ ಕಾಡುಕೋಳಿ; ಆರ್ಕ್‌ಟಿಕ್ ಪ್ರದೇಶದಲ್ಲಿ ಬಾತುಗಳು; ಆಂಟೇರಿಯೋದಲ್ಲಿ ಕಾಡು ಟರ್ಕಿಕೋಳಿ ಇವೆ.




**ಜನಜೀವನ:** ಕೆನಡದ ಮಾನವ ಇತಿಹಾಸಕ್ಕೆ ಹಲವಾರು ವಲಸೆಗಳ ಮತ್ತು ನೆಲಸುಗಳ ಹಿನ್ನೆಲೆಯುಂಟು. ಅದರ ಪ್ರಜಾಸಂಖ್ಯೆಯಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಜನರೇ ಹೆಚ್ಚು. 2002ರ ಜನಗಣತಿಯ ಮೇರೆಗೆ ಅದರ ಜನಸಂಖ್ಯೆ 31,244,000 ಫ್ರೆಂಚ್ ಕೆನಡಿಯನರಲ್ಲಿ ಬಹಳ ಮಂದಿ 18ನೆಯ ಶತಮಾನದಲ್ಲಿ ನಾರ್ಮಂಡಿ ಮತ್ತು ವಾಯವ್ಯ

ಫ್ರಾನ್ಸಿನ ಇತರ ಭಾಗಗಳಿಂದ ವಲಸೆ ಬಂದು ನ್ಯೂ ಫ್ರಾನ್ಸ್ ಮತ್ತು ಅಕೇಡಿಯ ಭಾಗಗಳಲ್ಲಿ ನೆಲಸಿದವರ ಸಂತತಿಯವರಾಗಿದ್ದಾರೆ. ಬ್ರಿಟಿಷ್ ಜನರು ಭಾಗಶಃ ಅಮೆರಿಕ ಸಂಯುಕ್ತ ಸಂಸ್ಥಾನದ ಕಡೆಯಿಂದ ಉತ್ತರಕ್ಕೆ ಸಾಗಿಬಂದು ನೆಲಸಿದ ಆಂಗ್ಲರ ಸಂತತಿಯವರಾಗಿದ್ದಾರೆ. ಕಳೆದ ಶತಮಾನದ ಕೊನೆಯಿಂದ ಇಂಗ್ಲೆಂಡಿನಿಂದ ನೇರವಾಗಿ ವಲಸೆ ಬಂದ ಬ್ರಿಟಿಷ್ ಜನರ ಸಂತತಿಯವರೂ ಇದ್ದಾರೆ. ವಲಸೆಗಳನ್ನು ಸ್ವಾಗತಿಸುವ ನೀತಿ 1890ರಲ್ಲಿ ಪ್ರಾರಂಭವಾಯಿತು. ಆಗಿನಿಂದ ಅನೇಕ ಐರೋಪ್ಯ ಬುಡಕಟ್ಟುಗಳ ಜನರು ಸಹ ಕೆನಡದಲ್ಲಿ ನೆಲಸಿದ್ದಾರೆ. ಕೆನಡದ ಹುಲ್ಲುಗಾವಲು ಪ್ರಾಂತ್ಯವನ್ನು ವಸತಿಗೆ

ಪಾರ್ಲಿಮೆಂಟ್‌ಭವನ, ರೆಜೈನ, ಸ್ಯಾಸ್ಕ್ಯಾಚಿವನ್

ತೆರೆದಾಗ, ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿಯ ಬೆಳವಣಿಗೆಯ ದರದಲ್ಲೇ ಕೆನಡದ ಜನಸಂಖ್ಯೆಯೂ ಬೆಳೆಯಲಾರಂಭಿಸಿತು. ಸೇಂಟ್ ಲಾರೆನ್ಸ್ ಕಣಿವೆಯಲ್ಲಿ ದೊಡ್ಡ ಪಟ್ಟಣಗಳು ಸ್ಥಾಪಿತವಾಗಿ ವೃದ್ಧಿಗೊಂಡುವು. 1918–1930ರಲ್ಲಿ ಕೆನಡಕ್ಕೆ 5 ಲಕ್ಷ ಬ್ರಿಟಿಷರು ವಲಸೆ ಬಂದರು. ಕೆನಡಕ್ಕೆ ವಲಸೆ ಬರುವುದನ್ನು 1919ರಿಂದ ನಿಯಂತ್ರಣಕ್ಕೆ ಒಳಪಡಿಸಲಾಗಿದೆ.

ಕೆನಡದ ಮೂಲವಾಸಿಗಳು ಇಂಡಿಯನರು. ಅವರಲ್ಲಿ ಮುಕ್ಕಾಲು ಭಾಗ ಜನ ಕೆನಡಿಯನ್ ಫಲಕ ಮತ್ತು ಕಾರ್ಡಿಲ್ಯೇರ ಪ್ರದೇಶಗಳಲ್ಲಿ ಅವರಿಗಾಗಿ ಏರ್ಪಡಿಸಲಾದ ಮೀಸಲು ಸ್ಥಳಗಳಲ್ಲಿ ವಾಸವಾಗಿದ್ದಾರೆ. ಎಸ್ಕಿಮೋ ಜನರ ಸಂಖ್ಯೆ ಕಡಿಮೆ.

ಕೆನಡದಲ್ಲಿ ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಧರ್ಮಗಳನ್ನು ಅನುಸರಿಸುವ ಜನರಿದ್ದಾರೆ. ಎಸ್ಕಿಮೋ ಮತ್ತು ಇಂಡಿಯನ್ ಜನ ತಮ್ಮ ಸಂಪ್ರದಾಯ ಮತ್ತು ನಂಬಿಕೆಗಳನ್ನೇ ಅನುಸರಿಸುತ್ತಾರೆ.

ವ್ಯಾಂಕೋವರ್‌ನಗರ

**ಕೃಷಿ:** ಗೋದಿ ಕೆನಡದ ಮುಖ್ಯ ಬೆಳೆ. ಅದನ್ನು ಆಲ್ಬರ್ಟ, ಸ್ಯಾಸ್ಕ್ಯಾಚಿವನ್, ಬ್ರಿಟಿಷ್ ಕೊಲಂಬಿಯ ಮತ್ತು ಹುಲ್ಲುಗಾವಲುಗಳಲ್ಲಿ (ಪ್ರೈರಿ) ಹೆಚ್ಚಾಗಿ ಬೆಳೆಯುತ್ತಾರೆ. ಕ್ವಿಬೆಕ್, ಆಂಟೇರಿಯೋಗಳಲ್ಲಿ ಹೈನುಗಾರಿಕೆ ಹೆಚ್ಚು; ಕ್ಷೀರೋತ್ಪನ್ನಗಳನ್ನು ಡಬ್ಬಗಳಲ್ಲಿ ಶೇಖರಿಸಿ ರಫ್ತು ಮಾಡುತ್ತಾರೆ. ನೋವಸ್ಕೋಷ, ದಕ್ಷಿಣ ಕ್ವಿಬೆಕ್, ಆಂಟೇರಿಯೋ, ಬ್ರಿಟಿಷ್ ಕೊಲಂಬಿಯಗಳಲ್ಲಿ ವಿವಿಧ ಹಣ್ಣುಗಳು ಬೆಳೆಯುತ್ತವೆ. ಸಕ್ಕರೆ ಬೀಟನ್ನು ಅನೇಕ ಕಡೆ ಬೇಸಾಯ ಮಾಡುತ್ತಾರೆ. ಕೆನಡದಲ್ಲಿ ಉತ್ತಮ ಬಗೆಯ ತಂಬಾಕು ಬೆಳೆಯುತ್ತದೆ. ಬಾರ್ಲಿ, ಓಟ್ಸ್, ಆಲೂಗೆಡ್ಡೆ ಇವು ಈ ದೇಶದ ಇತರ ಬೆಳೆಗಳು.

**ಕೈಗಾರಿಕೆ:** ಗಣಿಗಳು ಕೆನಡದಲ್ಲಿ ಖನಿಜಸಂಪತ್ತು ಯಥೇಚ್ಛವಾಗಿದೆ. ನೋವ ಸ್ಕೋಷ, ಆಲ್ಬರ್ಟ ಮತ್ತು ಬ್ರಿಟಿಷ್ ಕೊಲಂಬಿಯ ಪ್ರಾಂತ್ಯಗಳಲ್ಲಿ ಹೆಚ್ಚು ಕಲ್ಲಿದ್ದಲು ದೊರಕುತ್ತದೆ. ಬ್ರಿಟಿಷ್ ಕೊಲಂಬಿಯ ಮತ್ತು ಯೂಕಾನ್ ಚಿನ್ನದ ಗಣಿಗಳಿಗೆ ಪ್ರಸಿದ್ಧಿ. ಆಂಟೇರಿಯೋದ ಪಾರ್ಕುಪೈನ್ ಚಿನ್ನದ ಗಣಿ ಪ್ರಪಂಚದ ಪ್ರಮುಖ ಚಿನ್ನದ ಗಣಿಗಳಲ್ಲಿ ಮೂರನೆಯದು. ಗ್ರೇಟ್ ಸ್ಲೇವ್ ಸರೋವರದ ಉತ್ತರಕ್ಕೆ ಎಲ್ಲೋನೈಫ್‌ನಲ್ಲಿ ಮತ್ತು ವ್ಯಾಂಕೂವರ್‌ನಲ್ಲಿ ಚಿನ್ನದ ಗಣಿಗಳು ಪ್ರಾರಂಭವಾಗಿವೆ. ಬೆಳ್ಳಿ, ಸೀಸ, ತವರದ ಗಣಿಗಳು ಕೆನಾಗಮಿ ನಗರ ಮತ್ತು ಯೂಕಾನ್ ಪ್ರಾಂತ್ಯಗಳಲ್ಲಿವೆ. ಕ್ವಿಬೆಕ್, ಆಂಟೇರಿಯೋ ಮತ್ತು ಬ್ರಿಟಿಷ್ ಕೊಲಂಬಿಯಗಳಲ್ಲಿ ತಾಮ್ರ ಹೇರಳ. ನಿಕ್ಕಲ್ ಆಂಟೇರಿಯೋದ ಸಡ್‌ಬರಿ ಜಿಲ್ಲೆಯಲ್ಲಿ ಸಿಗುತ್ತದೆ. 1951ರಲ್ಲಿ ಲಿನ್ ಸರೋವರದ ಬಳಿ (ಮ್ಯಾನಿಟೋಬ) ನಿಕ್ಕಲ್ ಸಿಕ್ಕಿತು. ಅಲ್ಲಿ ಗಣಿಗಳು ಆರಂಭವಾಗಿವೆ. ಕೆನಡದಲ್ಲಿ ಗ್ಯಾಸೊಲಿನ್ ಹೇರಳವಾಗಿ ಸಿಗುತ್ತದೆ. ಆಲ್ಬರ್ಟದ ಟರ್ನರ್ ಕಣಿವೆಯ ಎಣ್ಣೆ ಗಣಿಗಳು ಪ್ರಮುಖವಾದವು. ದೊಡ್ಡ ಕೊಳವೆಗಳಲ್ಲಿ ಇದನ್ನು ದೂರ ಪ್ರಾಂತ್ಯಗಳಿಗೆ ಸಾಗಿಸುತ್ತಾರೆ. ಅವುಗಳಲ್ಲಿ ಎಡ್‌ಮಂಟನ್‌ನಿಂದ ವ್ಯಾಂಕೂವರ್ ವರೆಗೆ ಹಾಕಿರುವ 1149 ಕಿಮೀ. ಕೊಳವೆಯೂ ಹುಲ್ಲುಗಾವಲು ಪ್ರದೇಶದ ಎಣ್ಣೆಯನ್ನು 3200 ಕಿಮೀ.ಗಳಾಚೆಗೆ, ಪೂರ್ವದಲ್ಲಿರುವ ಮಾಂಟ್ರಿಯಾಲ್ ನಗರಕ್ಕೆ, ಸಾಗಿಸುವ ಕೊಳವೆ ಮಾರ್ಗವೂ ಮುಖ್ಯವಾದವು.

ಅರಣ್ಯ ಕೈಗಾರಿಕೆ: ಅಮೆರಿಕದ ಅರಣ್ಯಗಳಲ್ಲಿ ಚೌಬೀನೆಗೆ ಯುಕ್ತವಾದ ಮರಗಳು ದೊರಕುತ್ತವೆ. ಕಾಗದ ತಯಾರಿಕೆಗೆ ತಿರುಳು ಒದಗಿಸುವ ಮರಗಳು ಹೇರಳ. ಕೆನಡದ 40 ಪ್ರಮುಖ ಕೈಗಾರಿಕೆಗಳಲ್ಲಿ ಕಾಗದ ತಯಾರಿಕೆ ಒಂದು. ಕಾರ್ನರ್ ಬ್ರೂಕ್, ಗ್ರ್ಯಾಂಡ್



ಫಾಲ್ಸ್, ಷವಿನಿಗೆನ್ ಫಾಲ್ಸ್, ತ್ರೀ ರಿವರ್ಸ್, ಕಾರ್ನ್‌ವಾಲ್, ಪೋರ್ಟ್ ಅರ್ಥರ್, ಪೋರ್ಟ್ ವಿಲಿಯಂ, ಕ್ವಿಬೆಕ್ ನಗರ, ವ್ಯಾಂಕೂವರ್ ಇವು ಕಾಗದ ತಯಾರಿಕೆ ಕೇಂದ್ರಗಳು.

ತುಪ್ಪುಳು ಕೈಗಾರಿಕೆ: ತುಪ್ಪುಳು ಸಂಗ್ರಹ ಮತ್ತು ವ್ಯಾಪಾರ ಕೆನಡದಲ್ಲಿ ಬಹಳ ಕಾಲದಿಂದ ನಡೆಯುತ್ತಿದೆ. ಇದಕ್ಕೆ ಹೆಚ್ಚು ಬೇಡಿಕೆ ಇರುವುದರಿಂದ ಕೆನಡದ ವಿವಿಧ ಭಾಗಗಳಲ್ಲಿ ತುಪ್ಪುಳು ಪ್ರಾಣಿಗಳನ್ನು ಸಾಕುವ, ಅದರಲ್ಲೂ ವಿಶೇಷವಾಗಿ ಬೆಳ್ಳಿನರಿ ಮತ್ತು ಕರಿಯ ನರಿಗಳನ್ನು ಸಾಕುವ ಕ್ಷೇತ್ರಗಳಿವೆ. ಪ್ರಿನ್ಸ್ ಎಡ್ವರ್ಡ್ ದ್ವೀಪ, ಕ್ವಿಬೆಕ್ ಮತ್ತು ಆಂಟೇರಿಯೋಗಳಲ್ಲಿ ತುಪ್ಪುಳು ಸಂಗ್ರಹದ ಮತ್ತು ತುಪ್ಪುಳು ವಸ್ತುಗಳ ತಯಾರಿಕೆಯ ಉದ್ಯಮಗಳಿವೆ.

**ಮೀನುಗಾರಿಕೆ:** ಕೆನಡದ ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರತೀರಗಳಲ್ಲಿ ಮತ್ತು ಒಳನಾಡ ಸರೋವರಗಳಲ್ಲಿ ಆಧುನಿಕ ಸಾಧನಗಳಿಂದ ಮತ್ತು ವಿಧಾನಗಳಲ್ಲಿ ಮೀನು ಹಿಡಿಯುತ್ತಾರೆ. ಅಮೆರಿಕ ಸಂಯುಕ್ತ ಸಂಸ್ಥಾನದೊಡನೆ ಮಾಡಿಕೊಂಡ ಒಡಂಬಡಿಕೆಯ ಮೇರೆಗೆ ಸಾಗರತೀರಗಳಲ್ಲಿ ಮೀನು ಹಿಡಿಯುವ ಉದ್ಯಮ ಕ್ರಮಗೊಂಡಿರುವುದಲ್ಲದೆ, ಸರ್ಕಾರ ಬೆಸ್ತರಿಗೆ ಉತ್ತೇಜಕವಾಗಿ ಬಹುಮಾನಗಳನ್ನು ನೀಡುತ್ತದೆ.

**ಸಾರಿಗೆ ಸಂಪರ್ಕ:** ಕೆನಡದ ಜನ ಗೋದಿ, ಚೌಬೀನೆ, ಮರದ ತಿರುಳು, ಕಾಗದ, ಖನಿಜಗಳು ಇವೇ ಮೊದಲಾದ ವಸ್ತುಗಳನ್ನು ಒತ್ತಾದ ಜನಸಂಖ್ಯೆಯುಳ್ಳ ಕೈಗಾರಿಕೆಯ ರಾಷ್ಟ್ರಗಳಿಗೆ ರಫ್ತು ಮಾಡುತ್ತಾರೆ. ಈ ಸರಕುಗಳ ರವಾನೆಯಲ್ಲಿ ಅಗ್ಗದ ಜಲಸಾರಿಗೆಯದು ಮುಖ್ಯ ಪಾತ್ರ. ಭೌಗೋಳಿಕ ಪರಿಸ್ಥಿತಿಗಳಿಂದಾಗಿ ಕೆನಡದ

ಬಂದರುಗಳು ಅನೇಕ ಕಡೆ ಅನುಕೂಲವಾಗಿಲ್ಲ. ಶೀತ ಕಾಲದಲ್ಲಿ ಒಳನಾಡಿನ ಮಾಂಟ್ರಿಯಾಲ್ ಬಂದರು ಮುಚ್ಚಿರುತ್ತದೆ; ಹ್ಯಾಲಿಫಾಕ್ಸ್ ಮತ್ತು ಸೇಂಟ್ ಜಾನ್ ಬಂದರುಗಳು ಒಳನಾಡಿಗೆ ಬಲು ದೂರದಲ್ಲಿವೆ. ಪನಾಮಾ ಕಾಲುವೆಯನ್ನು ತೆರೆದ ಮೇಲೆ ವ್ಯಾಂಕೂವರ್ ಬಂದರು ಸರಕುಗಳ ರಫ್ತಿಗೆ ಮುಖ್ಯಕೇಂದ್ರವಾಯಿತು. ಹುಲ್ಲುಗಾವಲಿನಲ್ಲಿ ಬೆಳೆಯುವ ಗೋದಿಯನ್ನು ಪೂರ್ವದ ಮಹಾಸರೋವರಗಳ ಅಂಚಿಗೆ ಸಾಗಿಸಲು ಅನೇಕ ಕಾಲುವೆಗಳು

ಗೋದಿ ಒಕ್ಕಣೆ–ಸ್ಯಾಸ್ಕ್ಯಚೆವನ್ ಪ್ರಾಂತ್ಯದಲ್ಲಿ

ಏರ್ಪಟ್ಟಿವೆ. ಅವುಗಳಲ್ಲಿ ಕೆನೆಡಿಯನ್ ಕಾಲುವೆಯ ಆಳ 5.8 ಮೀ. ವೆಲಂಡ್ ಕಾಲುವೆ 9 ಮೀ. ಆಳವಿದೆ. ಹಡಗುಗಳು ಆಂಟೇರಿಯೋ ಸರೋವರಕ್ಕೆ ಹೋಗಲು ಇದು ಸಹಾಯಕ. ಸೇಂಟ್ ಲಾರೆನ್ಸ್ ನದಿಯ ಜಲಮಾರ್ಗಗಳ ಮೂಲಕ ಹಡಗುಗಳು ಸಾಗರತೀರವನ್ನು ಸೇರುತ್ತವೆ.

ಬಯಲುಗಳಿಂದ ಗೋದಿ ಸಾಗಣೆಗೆ ರೈಲುಮಾರ್ಗಗಳು ಮತ್ತೊಂದು ಅನುಕೂಲ ಸಾಧನ. 1850ರ ದಶಕದಲ್ಲಿ ಕೆನಡದಲ್ಲಿ ರೈಲು ಮಾರ್ಗಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಹಲವಾರು ರೈಲುಮಾರ್ಗಗಳು ಕೆನಡಿಯನ್ ನ್ಯಾಷನಲ್ ರೈಲ್ವೆ ಸಂಸ್ಥೆಗೆ

ಆಂಟೇರಿಯೋದ ಟೊರಾಂಟೋದಲ್ಲಿರುವ ಪಾರ್ಲಿಮೆಂಟ್ ಭವನ

ಸೇರಿವೆ. ಅಂತರವಸಾಹತು ರೈಲುಮಾರ್ಗಗಳು, ಕೆನಡಿಯನ್ ನಾರ್ದರನ್, ಗ್ರಾಂಡ್ ಟ್ರಂಕ್ ಪೆಸಿಫಿಕ್ ಮತ್ತು ನ್ಯಾಷನಲ್ ಟ್ರಾನ್ಸ್ ಕಾಂಟಿನೆಂಟಲ್–ಇವೆಲ್ಲವೂ ಸೇರ್ಪಡೆಯಾಗಿ ಈಗ ಸರ್ಕಾರದ ಮಾಲೀಕತ್ವದಲ್ಲಿ ಕೆನಡಿಯನ್ ನ್ಯಾಷನಲ್ ರೈಲ್ವೆ ಸಂಸ್ಥೆ ಏರ್ಪಟ್ಟಿದೆ. ಅಂತರಕೆನಡ ವಿಮಾನ ಸಂಚಾರದಿಂದ ಅಟ್ಲಾಂಟಿಕ್ ತೀರದಿಂದ ಪೆಸಿಫಿಕ್ ತೀರದ ವರೆಗೆ ತ್ವರಿತ ಪ್ರಯಾಣ ಸಾಧ್ಯವಾಗಿದೆ. ಮೋಟಾರು ಸಂಚಾರ ಹೆಚ್ಚಾಗಿದೆ. ನ್ಯೂ ಫೌಂಡ್‌ಲಂಡಿನಿಂದ ಬ್ರಿಟಿಷ್ ಕೊಲಂಬಿಯ ವರೆಗೆ 8000 ಕಿಮೀ. ಹೆದ್ದಾರಿ ಹೊಸದಾಗಿ ಏರ್ಪಟ್ಟಿದೆ.

**ನಗರಗಳು, ಪಟ್ಟಣಗಳು:** ಕೆನಡದ ಪ್ರಮುಖ ನಗರಗಳು ವ್ಯಾಪಾರಕ್ಕೆ ಯೋಗ್ಯವಾದ ಸ್ಥಳಗಳಲ್ಲಿ ಸ್ಥಾಪಿತವಾಗಿ ಮನೋಹರವಾದ ಪರಿಸರ ಪಡೆದಿವೆ. ಪೆಸಿಫಿಕ್ ಸಾಗರದ ಅಂಚಿನ ವ್ಯಾಂಕೂವರ್ ನಗರದ ಹಿನ್ನೆಲೆಯಲ್ಲಿ ಹಿಮಚುಂಬಿತ ಪರ್ವತಗಳಿವೆ. ಆಂಟೇರಿಯೋ ಸರೋವರದ ಅಂಚಿನಲ್ಲಿರುವ ಟೊರಾಂಟೋ ಪ್ರಕೃತಿಯ ಸೊಬಗಿನ ನಡುವೆ ಇದೆ. ಮಾಂಟ್ರಿಯಾಲ್ ಪಟ್ಟಣ ಸೇಂಟ್ ಲಾರೆನ್ಸ್ ನದಿಗೆ ಎದುರಾಗಿರುವ ಬೆಟ್ಟದ ತಪ್ಪಲಲ್ಲಿ ನಿರ್ಮಿತವಾಗಿದೆ. ಕ್ವಿಬೆಕ್ ನಗರ ಸಹ ಅದೇ ನದಿಯ ಅಂಚಿನಲ್ಲಿದೆ. ಕೆನಡದ ರಾಜಧಾನಿ ಒಟ್ಟಾವ ಅದೇ ಹೆಸರಿನ ನದಿಯ ತೀರದಲ್ಲಿದೆ. ನೋವ ಸ್ಕೋಷದ ಮನೋಹರವಾದ ಕಡಲತೀರದಲ್ಲಿ ಹ್ಯಾಲಿ ಫ್ಯಾಕ್ಸ್ ನಗರವಿದೆ; ಅದಕ್ಕೆ ಅತ್ಯುತ್ತಮವಾದ ಸ್ವಾಭಾವಿಕ ಬಂದರಿದೆ. ಲಾಭವಿದ್ದಲ್ಲಿ ಜನ ಎಂಬಂತೆ ಜನಜೀವನ ಕಷ್ಟವಾದ ಶೀತಪ್ರದೇಶಗಳಲ್ಲಿ ಸಹ ನಗರಗಳು ಏರ್ಪಟ್ಟಿವೆ. ಉತ್ತರದಲ್ಲಿ ಚಿನ್ನ ಸಿಕ್ಕುವೆಡೆ ಇರುವ ನಗರ ಎಲ್ಲೋನೈಫ್. ಮಕೆನ್‌ಜಿ ನದಿಯ ಪಶ್ಚಿಮ ನಾಲೆಯ ಹಿಮಗಟ್ಟಿದ ದಂಡೆಯ ಮೇಲೆ ಇರುವ ಅಕ್ಲಾವಿಕ್ ತುಪ್ಪುಳು ವ್ಯಾಪಾರ ಕೇಂದ್ರ. ಎಡ್‌ಮಂಟನ್ ಮತ್ತು ಕಾಲ್ಗರಿ (ಆಲ್ಬರ್ಟ), ವಿಕ್ಟೋರಿಯ (ಬ್ರಿಟಿಷ್ ಕೊಲಂಬಿಯ), ಸೇಂಟ್ ಜಾನ್ಸ್ (ನ್ಯೂ ಫೌಂಡ್‌ಲೆಂಡ್), ಷಾರ್ಲಟ್ ಟೌನ್ (ಪ್ರಿನ್ಸ್ ಎಡ್ವರ್ಡ್ ದ್ವೀಪ), ರೆಜಿನ, ಸ್ಯಾಸ್ಕ್ಯಾಚೆವನ್ ಮತ್ತು ಹ್ವೈಟ್ ಹಾರ್ಸ್ (ಯೂಕಾನ್)–ಇವು ಇತರ ಮುಖ್ಯ ಸ್ಥಳಗಳು.

ಫುಟ್‌ಬಾಲ್ ಮತ್ತು ಐಸ್ ಹಾಕಿ, ಬೇಸ್ ಬಾಲ್, ಅಥ್ಲೆಟಿಕ್ಸ್, ಚಳಿಗಾಲದ ಕ್ರೀಡೆ ಮತ್ತು ಜಲಕ್ರೀಡೆ ಇವು ಕೆನಡದ ರಾಷ್ಟ್ರೀಯ ಕ್ರೀಡೆಗಳು.

ಕೆನಡಿಯನ್ ಡಾಲರ್ ಇಲ್ಲಿಯ ಹಣ. ಇದನ್ನು 100 ಸೆಂಟುಗಳಾಗಿ ವಿಭಾಗಿಸಲಾಗಿದೆ.

(ವಿ.ಜಿ.ಕೆ.)

**ಕೆನಡದ ಪ್ರಾಂತ್ಯಗಳು ಮತ್ತು ಪ್ರದೇಶಗಳು**

| **ಪ್ರಾಂತ್ಯಗಳು ಮತ್ತು ಪ್ರದೇಶಗಳು** | **ವಿಸ್ತೀರ್ಣ ಚ.ಮೈ** | **ರಾಜಧಾನಿ ಪ್ರಾಂತ್ಯಗಳು** |
|---|---|---|
| ಆಲ್ಬರ್ಟ | 2,55,285 | ಎಡ್ಮಂಟನ್ |
| ಬ್ರಿಟಿಷ್ ಕೊಲಂಬಿಯ | 3,66,255 | ವಿಕ್ಟೋರಿಯ |
| ಮ್ಯಾನಿಟೋಬ | 2,51,000 | ವಿನಿಪೆಗ್ |
| ನ್ಯೂ ಬ್ರನ್ಸ್‌ವಿಕ್ | 28,359 | ಫ್ರೆಡೆರಿಕ್ಟನ್ |
| ನ್ಯೂ ಫೌಂಡ್‌ಲೆಂಡ್ | 1,56,185 | ಸೇಂಟ್‌ಜಾನ್ಸ್ |
| ನೋವ ಸ್ಕೋಷ | 21,425 | ಹ್ಯಾಲಿಫ್ಯಾಕ್ಸ್ |
| ಆಂಟೇರಿಯೋ | 4,12,582 | ಟೊರಾಂಟೋ |
| ಪ್ರಿನ್ಸ್ ಎಡ್ವರ್ಡ್ ದ್ವೀಪ | 2,184 | ಷಾರ್ಲಟ್‌ಟೌನ್ |
| ಕ್ವಿಬೆಕ್ | 5,94,860 | ಕ್ವಿಬೆಕ್ |
| ಸ್ಯಾಸ್ಕ್ಯಾಚೆವನ್ ಪ್ರದೇಶಗಳು | 51,700 | ರೆಜೈನ |
| ಯೂಕಾನ್ ಪ್ರದೇಶ | 2,07,076 | ಹ್ವೈಟ್‌ಹಾರ್ಸ್ |
| ವಾಯವ್ಯ ಪ್ರದೇಶ | 13,04,903 | ಎಲ್ಲೋನೈಫ್ |

**ಕೆನಡದ ಮುಖ್ಯ ನಗರಗಳು ಮತ್ತು ಅವುಗಳ ಜನಸಂಖ್ಯೆ (1966)**

| | | 1966 | 2001 |
|---|---|---|---|
| ಒಟ್ಟಾವ (ರಾಜಧಾನಿ) | .. | 4,94,535 | 774,072 |
| ಮಾಂಟ್ರಿಯಾಲ್ | .. | 24,36,817 | 3,426,350 |
| ಟೊರಾಂಟೋ | .. | 21,58,496 | 2,481,494 |
| ವ್ಯಾಂಕೂವರ್ | .. | 8,92,286 | 1,986,965 |
| ವಿನಿಪೆಗ್ | .. | 5,08,759 | 671,274 |
| ಹ್ಯಾಮಿಲ್ಟನ್ | .. | 4,49,116 | 519,949 |
| ಕ್ವಿಬೆಕ್ | .. | 4,13,396 | 682,757 |
| ಎಡ್ಮಂಟನ್ | .. | 4,01,299 | 666,104 |
| ಕ್ಯಾಲ್‌ಗರಿ | .. | 3,30,575 | 878,866 |
| ವಿಂಡ್‌ಸರ್ | .. | 2,11,697 | 208,402 |
| ಹ್ಯಾಲಿಫಾಕ್ಸ್ | .. | 2,07,396 | 119,292 |
| ಕಿಚನರ್ | .. | 1,98,193 | 219,153 |
| ಲಂಡನ್ | .. | 2,07,396 | 119,292 * |

**ಕೆನಡದ ಆರ್ಥಿಕತೆ:** ಉತ್ತರ ಅಮೆರಿಕ ಖಂಡದ ಉತ್ತರಾರ್ಧವನ್ನಾ ಕ್ರಮಿಸಿಕೊಂಡಿರುವ ಕೆನಡ ಸಂಪನ್ಮೂಲಗಳ ದೃಷ್ಟಿಯಿಂದ ಮತ್ತು ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಪ್ರಪಂಚದಲ್ಲೆ ವಿಶಿಷ್ಟಸ್ಥಾನ ಪಡೆದುಕೊಂಡಿದೆ. ಕೆನಡದ ಸಂಪನ್ಮೂಲಗಳು ವೈವಿಧ್ಯಪೂರ್ಣವಾದವು. ಕೃಷಿ, ಕೈಗಾರಿಕೆ, ಮೀನುಗಾರಿಕೆ, ಅರಣ್ಯಸಂಪತ್ತು ಇವೆಲ್ಲವೂ

ಇಡೀ ಕೆನಡದ ಅರ್ಥವ್ಯವಸ್ಥೆಯ ಜೀವನಾಡಿಗಳಾಗಿವೆ. ಇಷ್ಟೇ ಅಲ್ಲದೆ ಇಡೀ ವಿಶ್ವದಲ್ಲೇ ತಲಾ ವಿದ್ಯುತ್ ಅನುಭೋಗದಲ್ಲಿ ಪ್ರಥಮ ಸ್ಥಾನ ಪಡೆದಿರುವ ಕೆನಡ, ತನ್ನ ಆರ್ಥಿಕ ಬೆಳವಣಿಗೆಗೆ ವಿದ್ಯುತ್ತಿನ ಸಂಪೂರ್ಣ ಉಪಯೋಗ ಪಡೆದುಕೊಂಡಿದೆ. ಕೆನಡದ ಆರ್ಥಿಕ ಬೆಳವಣಿಗೆಗೆ ತಳಹದಿಯಾದ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಮುಂದೆ ಕೊಟ್ಟಿದೆ.

**1 ಕೃಷಿ:** ಕೆನಡದ ಆರ್ಥಿಕ ಬೆಳವಣಿಗೆ ಅವಿರತವಾಗಿ ನಡೆದು ಬರುತ್ತಿದ್ದರೂ ಅದರ ಆರ್ಥಿಕತೆಯಲ್ಲಿ ಕೃಷಿ ತನ್ನದೇ ಆದ ಪ್ರಾಮುಖ್ಯ ಮುಂದುವರಿಸಿಕೊಂಡು ಬಂದಿದೆ. 20ನೆಯ ಶತಮಾನದ ಮಧ್ಯಭಾಗದ ಅನಂತರ ಇತರ ಸಂಪನ್ಮೂಲಗಳ ಅಭಿವೃದ್ಧಿಯಾಗಿ ಕೃಷಿಉತ್ಪನ್ನದ ಪ್ರಾಮುಖ್ಯ ಸಾಪೇಕ್ಷವಾಗಿ ಕಡಿಮೆಯಾಗಿದ್ದರೂ ಕೃಷಿ ಅಲ್ಲಿ ತನ್ನ ಪ್ರತಿಷ್ಠೆಯ ಸ್ಥಾನವನ್ನು ಕಳೆದುಕೊಂಡಿಲ್ಲ. 1966ರಲ್ಲಿ ಕೆನಡದಲ್ಲಿ 17.4 ಕೋಟಿ ಎಕರೆಗಳಷ್ಟು ಕೃಷಿಯೋಗ್ಯ ಜಮೀನಿತ್ತು. ಅದರಲ್ಲಿ 10.8 ಕೋಟಿ ಎಕರೆಗಳಲ್ಲಿ ಕೃಷಿ ನಡೆಯುತ್ತಿತ್ತು. ಉದ್ಯೋಗಿಗಳ ದೃಷ್ಟಿಯಿಂದ ಸಹ ಕೃಷಿಗೆ ಪ್ರಾಧಾನ್ಯ ಇದೆ. ವೈಜ್ಞಾನಿಕ ಬೇಸಾಯದಿಂದಾಗಿ ಕೃಷಿ ಅವಲಂಬಿತರ ಪ್ರತಿಶತತ್ವ ಈಚೆಗೆ ಮಾತ್ರ ಸ್ವಲ್ಪ ಕಡಿಮೆಯಾಗಿದೆ.

ಕೆನಡದ ಮುಖ್ಯ ಬೆಳೆಗಳು ಗೋದಿ, ಓಟ್ಸ್, ಬಾರ್ಲಿ, ಆಲೂಗಡ್ಡೆ, ಹೇ, ಫ್ಲಾಕ್ಸ್‌ಸೀಡ್ಸ್. ಇವುಗಳಲ್ಲಿ ಮುಖ್ಯವಾಗಿ ಗೋದಿ ಮತ್ತು ಓಟ್ಸ್ ಕೃಷಿಯೋಗ್ಯ ಜಮೀನಿನ ಶೇ.50ಕ್ಕಿಂತಲೂ ಹೆಚ್ಚಿನ ಪ್ರದೇಶವನ್ನು ಆಕ್ರಮಿಸಿವೆ. ಇವುಗಳಲ್ಲದೆ ಹೈನುವಸ್ತುಗಳಿಗೆ ಸಹ ಕೆನಡದ ಅರ್ಥವ್ಯವಸ್ಥೆಯಲ್ಲಿ ಮುಖ್ಯ ಸ್ಥಾನವುಂಟು. ಕೆನಡದ ಕೃಷಿಯೋಗ್ಯ ಜಮೀನಿನ ಹೆಚ್ಚಿನ ಭಾಗ ದಕ್ಷಿಣದಲ್ಲಿ ಕೇಂದ್ರೀಕೃತವಾಗಿದೆ. ಇದಕ್ಕೆ ಕಾರಣ ಅಲ್ಲಿಯ ಅನುಕೂಲ ವಾತಾವರಣ. ಕೆನಡದ ಒಟ್ಟು ಕೃಷಿಯೋಗ್ಯ ಜಮೀನಿನಲ್ಲಿ ಶೇ.75ರಷ್ಟು ಇರುವುದು ಹುಲ್ಲುಗಾವಲು ಪ್ರದೇಶದಲ್ಲಿ. ಮುಖ್ಯವಾಗಿ ಗೋದಿ, ಅನಂತರ ಓಟ್ಸ್ ಮತ್ತು ಬಾರ್ಲಿಯನ್ನು ಈ ಪ್ರದೇಶದಲ್ಲಿ ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ಬೆಳೆಯಲಾಗುತ್ತದೆ. ದಕ್ಷಿಣ ಆಲ್ಬರ್ಟ ಮತ್ತು ಸ್ಯಾಸ್ಕ್ಯಾಚೆವನ್‌ಗಳಲ್ಲಿ ನೀರಾವರಿ ಸೌಕರ್ಯವುಂಟು. ಅಲ್ಲಿ ಬೀಟ್, ತರಕಾರಿ ಇತ್ಯಾದಿ ಬೆಳೆಗಳನ್ನು ತೆಗೆಯಲಾಗುತ್ತದೆ.

ಮಹಾಸರೋವರಗಳ ಮತ್ತು ಸೇಂಟ್ ಲಾರೆನ್ಸ್‌ನ ಸುತ್ತಮುತ್ತಣ ಪ್ರದೇಶದಲ್ಲಿ ಮಿಶ್ರ ಬೇಸಾಯ ನಡೆಯುತ್ತಿದ್ದು, ಮುಖ್ಯವಾಗಿ ಹೇ, ಓಟ್ಸ್, ಗೋದಿ, ಬಾರ್ಲಿ, ಫ್ಲಾಕ್ಸ್, ಧಾನ್ಯಗಳು, ಸಕ್ಕರೆಬೀಟ್, ಸೋಯಬೀನ್ಸ್ ಮತ್ತು ಹೊಗೆಸೊಪ್ಪನ್ನು ಬೆಳೆಯಲಾಗುತ್ತದೆ. ಗಾಜಿನ ಮನೆಗಳಲ್ಲಿ ತರಕಾರಿ ಮತ್ತು ಹೂ ಬೆಳೆಯುವುದು ಇಲ್ಲಿಯ ವೈಶಿಷ್ಟ್ಯ.

ಬ್ರಿಟಿಷ್ ಕೊಲಂಬಿಯ ಪ್ರದೇಶದಲ್ಲಿ ಮುಖ್ಯವಾಗಿ ಕಣಿವೆ ಪ್ರದೇಶಗಳಲ್ಲಿ ಕೃಷಿ ಕಾರ್ಯ ನಡೆಯುತ್ತದೆ. ಆದರೂ ದಕ್ಷಿಣ ಕೊಲಂಬಿಯದ ಒಳಕಣಿವೆ ಪ್ರದೇಶಗಳನ್ನು ನೀರಾವರಿ ಸೌಕರ್ಯದ ಮೂಲಕ ಹಣ್ಣು ಬೆಳೆಗೆ ಯೋಗ್ಯವಾಗಿ ಪರಿವರ್ತಿಸಲಾಗಿದೆ. ಸಮುದ್ರತೀರದ ಜಿಲ್ಲೆಗಳಲ್ಲಿ, ಮಿಶ್ರ ಬೇಸಾಯ ಮುಖ್ಯ. ಈ ಪ್ರದೇಶದಲ್ಲಿಯ ಮುಖ್ಯ ಬೆಳೆಗಳು ಆಲೂಗಡ್ಡೆ, ಹುಲ್ಲು, ಓಟ್ಸ್, ಹಣ್ಣು ಮತ್ತು ತರಕಾರಿ.

ಪೂರ್ವ ಕೆನಡದ ತಗ್ಗು ಕೃಷಿ ಪ್ರದೇಶ ಮುಖ್ಯವಾಗಿ ಹೈನು ಉದ್ಯಮಕ್ಕೆ ಪೋಷಕವಾಗುವ ಬೆಳೆಗಳನ್ನು ಬೆಳೆಯುತ್ತ ಇದಕ್ಕೆ ತುಂಬ ಸಹಾಯಕವಾಗಿದೆ. ದಕ್ಷಿಣ ಕ್ವಿಬೆಕ್‌ನ ಜಮೀನಿನಲ್ಲಿ ಮುಖ್ಯವಾಗಿ ಹುಲ್ಲು ಮತ್ತು ಓಟ್ಸನ್ನು ಬೆಳೆಯುತ್ತಾರೆ. ಇದು ಡೈರಿ ಉದ್ಯಮಕ್ಕೆ ಬೆನ್ನೆಲುಬಿನಂತಿದೆ. ದಕ್ಷಿಣ ಆಂಟೇರಿಯೋದಲ್ಲಿ ಸಹ ಈ ಬೆಳೆಗಳು ಪ್ರಧಾನ.

ಕೃಷಿಯ ಜೊತೆಜೊತೆಗೆ ಕೆನಡದಲ್ಲಿ ಅಭಿವೃದ್ಧಿಗೊಂಡಿರುವ ಮತ್ತೊಂದು ಉದ್ಯಮವೆಂದರೆ ಜಾನುವಾರು ಸಾಕಣೆ ಮತ್ತು ಹೈನುಗಾರಿಕೆ. ಇವೂ ರಾಷ್ಟ್ರದಲ್ಲಿ ಸಾಕಷ್ಟು ವ್ಯಾಪಕವಾಗಿವೆ. ಅರ್ಥವ್ಯವಸ್ಥೆಯ ಪ್ರಧಾನ ಅಂಶಗಳಾಗಿವೆ. ಇಲ್ಲಿ ಹಸು ಮತ್ತು ಕುರಿಗಳ ಸಾಕಣೆಗೆ ಅನುಕೂಲವುಂಟು.

**2 ಅರಣ್ಯ ಸಂಪತ್ತು:** ಕೆನಡದ ಅರಣ್ಯ ಸಂಪತ್ತು ಆ ರಾಷ್ಟ್ರದ ಅರ್ಥವ್ಯವಸ್ಥೆಯ ಮತ್ತೊಂದು ಪ್ರಮುಖವಾದ ಅಂಶ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಇದರಿಂದ ರಾಷ್ಟ್ರೀಯ ವರಮಾನದ ಶೇ.20ರಷ್ಟು ಬರುತ್ತದೆ. ಒಟ್ಟು ರಫ್ತಿನ ಶೇ.33ರಷ್ಟು ಅರಣ್ಯೋತ್ಪನ್ನ. ಕೆನಡದ ಅರಣ್ಯಪ್ರದೇಶದ ವಿಸ್ತೀರ್ಣ 17,00,000 ಚ.ಮೈ. ಆದರೆ ಹೆಚ್ಚಿನ ಭಾಗದ ಕಾಡುಪ್ರದೇಶ ವಾಣಿಜ್ಯ ದೃಷ್ಟಿಯಿಂದ ಅಷ್ಟು ಉಪಯುಕ್ತವಾಗಿಲ್ಲ. ಉತ್ಪನ್ನಯೋಗ್ಯ ಕಾಡುಪ್ರದೇಶದ ವಿಸ್ತೀರ್ಣ 9,50,000 ಚ.ಮೈ. ವಿಸ್ತೃತ ಅರಣ್ಯಪ್ರದೇಶದ ಮರಗಳು ಈ ರಾಷ್ಟ್ರದ ಕಾಗದ ಕೈಗಾರಿಕೆ ಮತ್ತು ಮರದ ವಸ್ತುಗಳ ತಯಾರಿಕೆ ಕೈಗಾರಿಕೆಗಳ ಬೆನ್ನೆಲುಬಾಗಿವೆ. ಬ್ರಿಟಿಷ್ ಕೊಲಂಬಿಯ ಪ್ರಾಂತ್ಯ ನಾಟ ಹಾಗೂ ಕುಯ್ದ ಮರದ ವಸ್ತುಗಳ ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿದೆ. ಕ್ವಿಬೆಕ್, ಆಂಟೇರಿಯೋ, ಆಲ್ಬರ್ಟ, ನ್ಯೂ ಬ್ರನ್ಸ್‌ವಿಕ್ ಮತ್ತು ನೋವ ಸ್ಕೋಷ ಇವು ಅನಂತರ ಬರುತ್ತವೆ. ಕೆನಡದ ರಫ್ತಿನ ಪ್ರಮುಖ ವಸ್ತುಗಳಲ್ಲಿ ನಾಟವೂ ಸೇರಿದೆ.

**3 ಖನಿಜ ಸಂಪತ್ತು:** ಖನಿಜಗಳ ಉತ್ಪಾದನೆಯಲ್ಲಿ ಕೆನಡಕ್ಕೆ ಪ್ರಪಂಚದಲ್ಲಿ ಮೂರನೆಯ ಸ್ಥಾನ. ಎರಡನೆಯ ಮಹಾಯುದ್ಧದ ಅನಂತರ ಈ ಕೈಗಾರಿಕೆ ಗಮನಾರ್ಹ ಪ್ರಗತಿ ಸಾಧಿಸಿದೆ. 1945ರಲ್ಲಿ ಈ ರಾಷ್ಟ್ರದ ಗಣಿ ಉತ್ಪನ್ನ ಮೌಲ್ಯ 49.9 ಕೋಟಿ ಡಾಲರ್, 1968ರಲ್ಲಿ ಇದು 473.9 ಕೋಟಿ ಡಾಲರ್‌ಗಳಿಗೆ ಏರಿತ್ತು. ಕೆನಡದ ಆರ್ಥಿಕತೆಯಲ್ಲಿ ಗಣಿಗಾರಿಕೆಯ ಪ್ರಾಧಾನ್ಯ ದಿನೇ ದಿನೇ ಹೆಚ್ಚುತ್ತಿದೆ. ಗಣಿವಸ್ತುಗಳ ರಫ್ತಿನ ಮೌಲ್ಯ (1968) 310 ಕೋಟಿ ಡಾಲರ್ ಇದು ರಾಷ್ಟ್ರದ ಒಟ್ಟು ರಫ್ತಿನ ಸುಮಾರು 1/3 ಭಾಗದಷ್ಟು.. ಕೆನಡದಲ್ಲಿ ಸುಮಾರು 260 ಗಣಿಗಳಲ್ಲಿ ಉತ್ಪಾದನೆ ನಡೆಯುತ್ತಿದೆ. ಇವುಗಳಲ್ಲಿ 1,00,000 ಕೆನಡಿಯನರು ಉದ್ಯೋಗಿಗಳಾಗಿದ್ದಾರೆ.

**4 ಮೀನುಗಾರಿಕೆ:** ಚಾರಿತ್ರಿಕವಾಗಿ ಮತ್ಸ್ಯೋದ್ಯಮ ಕೆನಡದ ಅರ್ಥ ವ್ಯವಸ್ಥೆಯಲ್ಲಿ ಮುಖ್ಯವಾದ ಪಾತ್ರ ವಹಿಸುತ್ತ ಬಂದಿದೆ. ವಾಣಿಜ್ಯಾದಾಯದ ದೃಷ್ಟಿಯಿಂದ ಈ ಕೈಗಾರಿಕೆ ಪ್ರಮುಖವಾದ್ದು. ಕೆನಡದಲ್ಲಿ ಹಿಡಿಯಲಾಗುವ ಹೆಚ್ಚಿನ ಮೀನಿಗೆ ಮಾರುಕಟ್ಟೆ ಅಮೆರಿಕ ಸಂಯುಕ್ತಸಂಸ್ಥಾನ. 1968ರಲ್ಲಿ ಮೀನು ವಿಕ್ರಯದಿಂದ ದೊರೆತ ಆದಾಯ 18.47 ಕೋಟಿ ಡಾಲರ್‌ಗಳು. ವರ್ಷಕ್ಕೆ ಸರಾಸರಿ 200 ಕೋಟಿ ಪೌಂಡ್‌ಗಳಷ್ಟು ಮೀನನ್ನು ಹಿಡಿದು ವಿಕ್ರಯಿಸಲಾಗುತ್ತದೆ. ಕೆಲವು ವರ್ಷಗಳಲ್ಲಿ ಮೀನು ರಫ್ತಿನಲ್ಲಿ ಪ್ರಪಂಚದಲ್ಲೇ ಕೆನಡ ಪ್ರಥಮ ಸ್ಥಾನ ಗಳಿಸಿದ್ದುಂಟು. ಮೌಲ್ಯದ ದೃಷ್ಟಿಯಿಂದ ಬ್ರಿಟಿಷ್ ಕೊಲಂಬಿಯಕ್ಕೆ ಪ್ರಥಮ ಸ್ಥಾನ. ಅಟ್ಲಾಂಟಿಕ್ ಪ್ರಾಂತ್ಯಗಳು ಮತ್ತು ಕ್ವಿಬೆಕ್‌ನ ಗಾಸ್ಪೆ ತೀರ ಉತ್ಪಾದನೆಯ ಪ್ರಮುಖ ಪ್ರದೇಶಗಳು. ಒಟ್ಟು ಮೌಲ್ಯದ ಶೇ.60ರಷ್ಟು ಮೀನನ್ನು ಈ ಪ್ರದೇಶಗಳು ಉತ್ಪಾದಿಸುತ್ತವೆ. ಅರಣ್ಯೋದ್ಯಮ ಮತ್ತು ಗಣಿ ಉದ್ಯಮಗಳಷ್ಟು ಪ್ರಾಮುಖ್ಯ ಮತ್ಸ್ಯೋದ್ಯಮಕ್ಕಿಲ್ಲವಾದರೂ ಇದು ವೈಶಿಷ್ಟ್ಯಪೂರ್ಣವಾದ್ದು.

**5 ಜಲಶಕ್ತಿ:** ಕೆನಡದ ಭೌಗೋಳಿಕ ಸ್ಥಿತಿ, ಅತ್ಯಂತ ಅನುಕೂಲಕರವಾದ ಸರೋವರಗಳು ಮತ್ತು ನದಿಗಳು ಜಲವಿದ್ಯುತ್ತಿನ ಅಪಾರ ಉತ್ಪಾದನೆಗೆ ಸಾಧನಗಳಾಗಿವೆ. ಕೃಷಿ, ಕೈಗಾರಿಕೆ, ಅರಣ್ಯ ಸಂಪತ್ತಿನ ಉಪಯೋಗ, ಗಣಿ ಉತ್ಪಾದನೆ ಮತ್ತು ಪ್ರಗತಿಗೆ ಇದು ಮೂಲಕಾರಣ. 1900ರಲ್ಲಿ ಕೆನಡದ ವಿದ್ಯುತ್ ಉತ್ಪಾದನ ಶಕ್ತಿ 1,33,000 ಕಿವಾ.ಗಳಿದ್ದುದು 1968ರಲ್ಲಿ ಅದು 3,60,00,000 ಕಿವಾ.ಗಳನ್ನು ಮುಟ್ಟಿತು. 1960ರ ಡಿಸೆಂಬರ್ ಕೊನೆಯ ವೇಳೆಗೆ ಕೆನಡದಲ್ಲಿದ್ದ ವಿದ್ಯುತ್ ಉತ್ಪಾದನ ಕೇಂದ್ರಗಳ ವಿವರಗಳನ್ನು ಮುಂದೆ ಕೊಟ್ಟಿದೆ:

| **ಪ್ರಾಂತ್ಯ ಅಥವಾ ಪ್ರದೇಶ** | **('000 ಕಿ.ವಾ.ಗಳಲ್ಲಿ)** | | |
|---|---|---|---|
| | **ಜಲವಿದ್ಯುತ್** | **ಉಷ್ಣಜನ್ಯ ವಿದ್ಯುತ್** | **ಒಟ್ಟು** |
| ನ್ಯೂ ಫೌಂಡ್‌ಲೆಂಡ್ | 819 | 112 | 931 |
| ಪ್ರಿನ್ಸ್ ಎಸ್ಡ್‌ವರ್ಡ್ ದ್ವೀಪ | – | 77 | 77 |
| ನೋವ ಸ್ಕೋಷ | 163 | 543 | 706 |
| ನ್ಯೂ ಬ್ರನ್ಸ್‌ವಿಕ್ | 562 | 551 | 1,113 |
| ಕ್ವಿಬೆಕ್ | 11,935 | 762 | 11,797 |
| ಆಂಟೇರಿಯೋ | 6,413 | 4,876 | 11,289 |
| ಮ್ಯಾನಿಟೋಬ | 1,184 | 369 | 1,553 |
| ಸ್ಯಾಸ್ಕ್ಯಾಚೆವನ್ | 586 | 691 | 1,277 |
| ಆಲ್ಬರ್ಟ | 616 | 1,435 | 2,051 |
| ಬ್ರಿಟಿಷ್ ಕೊಲಂಬಿಯ | 3,531 | 1,515 | 5,046 |
| ಯೂಕಾನ್ ಪ್ರದೇಶ | 18 | 15 | 33 |
| ವಾಯವ್ಯ ಪ್ರದೇಶಗಳು | 35 | 26 | 61 |
| **ಒಟ್ಟು** | **24,962** | **10,972** | **35,934** |

**6 ಕೈಗಾರಿಕೆ:** ಕೆನಡ ಕೈಗಾರಿಕಾಪ್ರಧಾನ ರಾಷ್ಟ್ರವಾದ್ದು 20ನೆಯ ಶತಮಾನದಲ್ಲಿ. ಒಂದನೆಯ ಮಹಾಯುದ್ಧ ವಾಸ್ತವವಾಗಿ ಕೆನಡದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿತು. 1930ರ ಆರ್ಥಿಕ ಕುಸಿತದ ಸಮಯವನ್ನು ಬಿಟ್ಟು ಉಳಿದ ಕಾಲದಲ್ಲಿ ಕೆನಡದ ಕೈಗಾರಿಕೆಗಳು ಅವ್ಯಾಹತ ಪ್ರಗತಿ ಸಾಧಿಸಿದುವು. ಎರಡನೆಯ ಮಹಾಯುದ್ಧ ಕೆನಡದ ಕೈಗಾರಿಕೆಗಳ ಪ್ರಗತಿಗೆ ಅನುಕೂಲವಾಯಿತು. ಎರಡನೆಯ ಮಹಾಯುದ್ಧದ ಅನಂತರ ಕೈಗಾರಿಕೋತ್ಪನ್ನದ ಮೌಲ್ಯ ಕೃಷಿ, ಅರಣ್ಯ, ಮೀನುಗಾರಿಕೆ, ಇವೆಲ್ಲವುಗಳ ಒಟ್ಟು ಉತ್ಪಾದನೆಯ ಮೌಲ್ಯವನ್ನೂ ಮೀರಿಸಿತು. ಕೈಗಾರಿಕೋತ್ಪನ್ನದ ಸೂಚ್ಯಂಕ (1935–39=100), 1946ರಲ್ಲಿ 189.9ಕ್ಕೂ 1952ರಲ್ಲಿ 246.3ಕ್ಕೂ ಏರಿತ್ತು. 1960ರ ವೇಳೆಗೆ ಕೈಗಾರಿಕಾ ಉತ್ಪನ್ನಗಳ ಮೌಲ್ಯ ಇತರೆಲ್ಲ ಉತ್ಪನ್ನ ಮೌಲ್ಯಗಳಿಗಿಂತ ಶೇಕಡ 30ರಷ್ಟು ಹೆಚ್ಚಾಗಿತ್ತು.

ದಕ್ಷಿಣ ಆಂಟೇರಿಯೋ ಮತ್ತು ಕ್ವಿಬೆಕ್ ಪ್ರದೇಶಗಳಲ್ಲಿ ಹೆಚ್ಚಿನ ಕೈಗಾರಿಕೆಗಳು ಕೇಂದ್ರೀಕರಿಸಿವೆ. ಇದಕ್ಕೆ ಚಾರಿತ್ರಿಕವಾಗಿ ಈ ಪ್ರದೇಶಗಳಿಗೆ ಕೈಗಾರಿಕೆಗಳ ಹಿನ್ನೆಲೆ ಇದ್ದುದು ಮುಖ್ಯ ಕಾರಣ. ಹೆಚ್ಚಿನ ಪ್ರಜಾಸಂಖ್ಯೆಯಿಂದ ಕೂಡಿದ ಈ ಪ್ರದೇಶಗಳಲ್ಲಿ ವಸ್ತುಗಳಿಗೆ ಸತತ ಬೇಡಿಕೆ ಇದ್ದುದು ಮತ್ತೊಂದು ಕಾರಣ. ಆಂಟೇರಿಯೋ ಕೆನಡದ ಕೈಗಾರಿಕೋತ್ಪನ್ನದ ಶೇಕಡ 50ರಷ್ಟು, ಕ್ವಿಬೆಕ್ ಶೇಕಡ 30ರಷ್ಟು, ಬ್ರಿಟಿಷ್ ಕೊಲಂಬಿಯ ಶೇಕಡ 9ರಷ್ಟು ಉತ್ಪಾದಿಸುತ್ತವೆ. ಹುಲ್ಲುಗಾವಲು ಪ್ರದೇಶಗಳ ಪಾಲು 9. ಮಾಂಟ್ರಿಯಾಲ್ ಕೆನಡದ ಮುಖ್ಯ ಕೈಗಾರಿಕಾಕೇಂದ್ರ. ಟೊರಂಟೊ ಸಹ ಇತ್ತೀಚೆಗೆ ಮಾಂಟ್ರಿಯಾಲ್ ಒಡನೆ ಸ್ಪರ್ಧಿಸುತ್ತಿದೆ. ಇತರ ಕೈಗಾರಿಕಾ ನಗರಗಳೆಂದರೆ ಹ್ಯಾಮಿಲ್ಟನ್, ವಿಂಡ್ಸರ್, ವ್ಯಾಂಕೂವರ್.

ರಫ್ತು ದೃಷ್ಟಿಯಿಂದ ಪೇಪರ್ ಮತ್ತು ಮರದ ತಿರುಳು ಕೈಗಾರಿಕೆ ಅತ್ಯಂತ ಮುಖ್ಯ. ಇದರ ಉತ್ಪನ್ನದ ಶೇ.80ರಷ್ಟು ರಫ್ತಾಗುತ್ತದೆ. ಇದನ್ನು ರಫ್ತು ಮಾಡುವ ದೇಶಗಳಲ್ಲಿ ಕೆನಡಕ್ಕೆ ಪ್ರಥಮಸ್ಥಾನ. ಪ್ರಪಂಚದ ಪತ್ರಿಕಾ ಮುದ್ರಣ ಕಾಗದದಲ್ಲಿ ಶೇಕಡ 50ನ್ನು ಕೆನಡ ರಫ್ತು ಮಾಡುತ್ತದೆ. ಉತ್ಪಾದನ ಕೈಗಾರಿಕೆಗಳಲ್ಲಿ ಗಣಿ ಉತ್ಪನ್ನದ ಮುಂದಿನ ಕಾರ್ಯಗಳನ್ನು ನಡೆಸುವ ಕೈಗಾರಿಕೆಗಳ ಸ್ಥಾನ ಸಹ ಹಿರಿದು. ಕಬ್ಬಿಣದ ಅದಿರು ಉತ್ಪಾದನೆಯಲ್ಲಿ ಕೆನಡಕ್ಕೆ ಪ್ರಪಂಚದಲ್ಲಿ 4ನೆಯ ಸ್ಥಾನ. 1960ರ ಕೊನೆಯ ವೇಳೆಗೆ ಕೆನಡ 40 ಲಕ್ಷ ಟನ್‌ಗಳಷ್ಟು ಮೆತು ಕಬ್ಬಿಣವನ್ನೂ 50 ಲಕ್ಷ ಟನ್‌ಗಳಷ್ಟು ಉಕ್ಕನ್ನೂ ಉತ್ಪಾದಿಸುವ ಸಾಮರ್ಥ್ಯ ಪಡೆದುಕೊಂಡಿತ್ತು. ಜಲವಿದ್ಯುತ್ ಮತ್ತು ಬಾಕ್ಸೈಟ್ ಆಮದನ್ನು ಅವಲಂಬಿಸಿದ ಅಲ್ಯೂಮಿನಿಯಂ ಕೈಗಾರಿಕೆಯಲ್ಲಿ ಪ್ರಾಮುಖ್ಯದ ದೃಷ್ಟಿಯಿಂದ ಅಮೆರಿಕವನ್ನು ಬಿಟ್ಟರೆ ಕೆನಡಕ್ಕೆ ಪ್ರಥಮಸ್ಥಾನ. ಕೆನಡದ ಇತರ ಪ್ರಮುಖ ಕೈಗಾರಿಕೆಗಳೆಂದರೆ ಪೆಟ್ರೋಲಿಯಂ, ಆಹಾರವಸ್ತುಗಳ ಶುದ್ಧೀಕರಣ ಮತ್ತು ಅವನ್ನು ರಫ್ತಿಗಾಗಿ ಸಿದ್ಧತೆ ಮಾಡುವ ಕೈಗಾರಿಕೆಗಳು ಮತ್ತು ವಾಹನ ಕೈಗಾರಿಕೆಗಳು. ತುಪ್ಪುಳು ಚರ್ಮ ಕೈಗಾರಿಕೆಗೆ ಕೆನಡದಲ್ಲಿ ವಿಶಿಷ್ಟ ಸ್ಥಾನವಿದೆ.

ಕೆನಡದ 100 ಅತ್ಯಂತ ದೊಡ್ಡ ಕೈಗಾರಿಕೆಗಳಲ್ಲಿ ಅರ್ಧಸಂಖ್ಯೆಯ ಮೇಲೆ ವಿದೇಶೀ ಕಾರ್ಪೊರೇಷನ್‌ಗಳ ಮಾಲೀಕತ್ವ ಅಥವಾ ನಿಯಂತ್ರಣ ಇದೆ.

**7 ವಿದೇಶೀ ವ್ಯಾಪಾರ:** ವಿದೇಶೀ ವ್ಯಾಪಾರದ ದೃಷ್ಟಿಯಿಂದ ಕೆನಡ 20ನೆಯ ಶತಮಾನದ ಪ್ರಾರಂಭದಲ್ಲಿ ಹೆಚ್ಚು ಮುಖ್ಯಸ್ಥಾನ ಪಡೆಯಲಾರಂಭಿಸಿತು. ಎರಡನೆಯ ಮಹಾಯುದ್ಧದ ಅನಂತರ ಇದರದು ಪ್ರಪಂಚದಲ್ಲೇ 3ನೆಯ ಸ್ಥಾನ. 1954ರ ಅನಂತರ ಪಶ್ಚಿಮ ಜರ್ಮನಿಯ ಪ್ರಗತಿಯಿಂದಾಗಿ ಕೆನಡದ ಸ್ಥಾನ ನಾಲ್ಕಕ್ಕೆ ಸರಿಯಿತು. 1968ರಲ್ಲಿ ಕೆನಡದ ಒಟ್ಟು ರಾಷ್ಟ್ರೀಯ ವರಮಾನದಲ್ಲಿ ವಿದೇಶೀ ವ್ಯಾಪಾರದ ಭಾಗ ಶೇಕಡ37 ಆಗಿತ್ತು. 1962–68ರಲ್ಲಿ ಕೆನಡದ ರಫ್ತು ಮತ್ತು ಆಮದು ಅಂಕಿಗಳನ್ನು ಮುಂದೆ ಕೊಟ್ಟಿದೆ:

ಪತ್ರಿಕಾ ಮುದ್ರಣಕಾಗದ ಮತ್ತು ವಾಹನಗಳು ಮತ್ತು ವಾಹನ ಭಾಗಗಳ ರಫ್ತು ಉಳಿದವಕ್ಕಿಂತ ಹೆಚ್ಚು. ಇವುಗಳ ಅನಂತರ ಗೋದಿ, ತಿರುಳು, ಮರದ ದಿಮ್ಮಿ, ಪೆಟ್ರೋಲಿಯಂ, ಅಲ್ಯೂಮಿನಿಯಂ, ಕಬ್ಬಿಣದ ಅದಿರು, ನಿಕ್ಕಲ್, ಆಸ್‌ಬೆಸ್ಟಸ್, ರಾಸಾಯನಿಕ ಗೊಬ್ಬರ, ನೈಸರ್ಗಿಕ ಅನಿಲ ಇವು ಮುಖ್ಯ.

ಕೆನಡದ ವಿದೇಶೀ ವ್ಯಾಪಾರ ಮುಖ್ಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದೊಡನೆ ನಡೆಯುತ್ತದೆ. ಇದು ಒಟ್ಟು ವ್ಯಾಪಾರದಷ್ಟಿದೆ. 1968ರಲ್ಲಿ ತನ್ನ ನೆರೆ ರಾಷ್ಟ್ರಗಳಿಗೆ ಅದು ಮಾಡಿದ ರಫ್ತು ಒಟ್ಟು ರಫ್ತಿನ ಶೇಕಡ 67. ಇಷ್ಟೇ ಅಲ್ಲದೆ ಕೇವಲ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ಮಾಡಿಕೊಂಡ ಆಮದಿನ ಪ್ರಮಾಣ ಒಟ್ಟು ಆಮದಿನಲ್ಲಿ ಶೇ.73. ಕೆನಡದ ವ್ಯಾಪಾರದಲ್ಲಿ ಎರಡನೆಯ ಸ್ಥಾನ ಬ್ರಿಟನ್ನಿನದು. ಅದು ತನ್ನ ರಫ್ತಿನ ಶೇಕಡಾ 9ರಷ್ಟನ್ನು ಆ ರಾಷ್ಟ್ರಕ್ಕೆ ಕಳುಹಿಸಿ, ಒಟ್ಟು ಆಮದಿನಲ್ಲಿ ಶೇಕಡ 6ರಷ್ಟನ್ನು ಆ ರಾಷ್ಟ್ರದಿಂದ ಪಡೆದುಕೊಳ್ಳುತ್ತದೆ. ಜಪಾನ್, ಪಶ್ಚಿಮ ಜರ್ಮನಿಗಳು ಕ್ರಮವಾಗಿ 3 ಮತ್ತು 4ನೆಯ ಸ್ಥಾನ ಪಡೆಯುತ್ತವೆ. ಈ ರಾಷ್ಟ್ರದೊಂದಿಗೆ ವ್ಯಾಪಾರ ನಡೆಸುವ ಉಳಿದ ರಾಷ್ಟ್ರಗಳು ನೆದರ್‌ಲೆಂಡ್ಸ್, ಬೆಲ್ಜಿಯಂ, ಲುಕ್ಸೆಂಬರ್ಗ್, ಇಟಲಿ, ರಷ್ಯ, ನಾರ್ವೇ, ಭಾರತ ಮತ್ತು ವೆನಿಜ್ವೆಲ. ಕೆನಡದ ವಿದೇಶೀ ವ್ಯಾಪಾರದಲ್ಲಿ ಕೇವಲ ಶೇಕಡ 5ರಷ್ಟು ಮಾತ್ರ ಇತರ ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ನಡೆಯುತ್ತಿದೆ.

**8 ಬ್ಯಾಂಕಿಂಗ್:** ಕೆನಡದ ಕೇಂದ್ರೀಯ ಬ್ಯಾಂಕು ಬ್ಯಾಂಕ್ ಆಫ್ ಕೆನಡ. ಇದು 1934ರಲ್ಲಿ ಅಸ್ತಿತ್ವಕ್ಕೆ ಬಂತು. ಕೆನಡದ ವಾಣಿಜ್ಯ ಬ್ಯಾಂಕುಗಳನ್ನು ಇದು ಸಮರ್ಥವಾಗಿ ನಿಯಂತ್ರಿಸುತ್ತಿದೆ. 1944ರ ತನಕ ನೋಟುಗಳನ್ನು ನೀಡುವ ಅಧಿಕಾರ ಇತರ ಬ್ಯಾಂಕುಗಳಿಗೂ ಇತ್ತು. ಆದರೆ 1944ರ ಅನಂತರ ಈ ಹಕ್ಕನ್ನು ಸಂಪೂರ್ಣವಾಗಿ ಬ್ಯಾಂಕ್ ಆಫ್ ಕೆನಡಕ್ಕೆ ನೀಡಲಾಯಿತು. ಚಾರ್ಟರ್ಡ್ ಬ್ಯಾಂಕುಗಳು ಕೇಂದ್ರ ಬ್ಯಾಂಕಿನಲ್ಲಿ ಸಂಚಿತಿ ಇಡುವುದು ಅಗತ್ಯ. 1967ರ ಬ್ಯಾಂಕಿಂಗ್ ಕಾಯಿದೆಯ ಪ್ರಕಾರ ಬ್ಯಾಂಕುಗಳು ತಮ್ಮ ಬೇಡಿಕೆ ಠೇವಣಿಗಳ ಶೇಕಡಾ 12ರಷ್ಟು ಮತ್ತು ತಿಳಿವಳಿಕೆ ಠೇವಣಿಗಳ ಶೇಕಡಾ 4ರಷ್ಟನ್ನು ಕೇಂದ್ರೀಯ ಬ್ಯಾಂಕಿನಲ್ಲಿ ಸಂಚಿತಿ ಇಡುವುದು ಅಗತ್ಯವಾಗಿದೆ. ಕೇಂದ್ರೀಯ ಬ್ಯಾಂಕಿನ ಒಡೆತನ ಸರ್ಕಾರದ್ದು.

**9 ಕಾರ್ಮಿಕ ಸಂಘಗಳು ಮತ್ತು ಸಾಮಾಜಿಕ ಭದ್ರತೆ:** 1968ರಲ್ಲಿ ಕೆನಡದಲ್ಲಿ 79,19,000 ಕಾರ್ಮಿಕರಿದ್ದರು. ಇವರಲ್ಲಿ ಕಾರ್ಮಿಕ ಸಂಘಗಳ ಸದಸ್ಯರಾಗಿದ್ದವರು ಸುಮಾರು 20,10,000. ಒಟ್ಟು ಸದಸ್ಯರಲ್ಲಿ ಶೇಕಡ 78 ಮಂದಿ ಕೆನಡಿಯನ್ ಲೇಬರ್ ಕಾಂಗ್ರೆಸ್‌ನ ಸದಸ್ಯರು. ಶೇಕಡಾ 10ಕ್ಕಿಂತಲೂ ಸ್ವಲ್ಪ ಹೆಚ್ಚು ಮಂದಿ ಕಾನ್‌ಫೆಡರೇಷನ್ ಆಫ್ ನ್ಯಾಷನಲ್ ಟ್ರೇಡ್ ಯೂನಿಯನ್ಸ್‌ನ ಸದಸ್ಯರು. ಕೆನಡದ ಕಾರ್ಮಿಕ ಸಂಘಗಳ ಸದಸ್ಯರ ವೈಶಿಷ್ಟ್ಯವೆಂದರೆ 2/3 ಕ್ಕಿಂತಲೂ ಹೆಚ್ಚು ಸದಸ್ಯರು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಗಳ ಸದಸ್ಯರು. ಕೇವಲ ¼ ಭಾಗದಷ್ಟು ಮಾತ್ರ ಕೆನಡದೊಳಗಣ ಕಾರ್ಮಿಕ ಸಂಘಗಳ ಸದಸ್ಯರು.

ಸಾಮಾಜಿಕ ಭದ್ರತಾಕ್ರಮಗಳಲ್ಲಿ ಕೆನಡ ತುಂಬ ಮುಂದುವರಿದಿದೆ. ಕೆನಡದ ಕಾರ್ಮಿಕ ಜೀವನಮಟ್ಟ ಅತ್ಯಂತ ಹೆಚ್ಚಿನದು. ಇದು ಪ್ರಪಂಚದಲ್ಲಿಯೇ ಎರಡನೆಯ ಸ್ಥಾನ ಪಡೆದಿದೆ. ಸಾಮಾಜಿಕ ಭದ್ರತಾರಂಗದಲ್ಲಿ ಸಂಯುಕ್ತ ಸರ್ಕಾರ ಕುಟುಂಬ ಭತ್ಯ, ನಿರುದ್ಯೋಗ ವಿಮೆ, ವೃದ್ಧಾಪ್ಯ ವೇತನ, ಯುದ್ಧ ಸಂತ್ರಸ್ತನಿಧಿ ಇವುಗಳನ್ನು ನೋಡಿಕೊಳ್ಳುತ್ತದೆ. ಇತರ ಸೇವೆಗಳು ಪ್ರಾಂತ್ಯ ಸರ್ಕಾರಗಳಿಗೆ ಸಂಬಂಧಪಟ್ಟ ವಿಷಯ. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಭದ್ರತಾಕ್ರಮಗಳು ಭಿನ್ನವಾಗಿವೆ. ಸಂಯುಕ್ತ ಸರ್ಕಾರ ಬಜೆಟ್‌ನಲ್ಲಿ ಶೇಕಡ 27ರಷ್ಟನ್ನು ಆರೋಗ್ಯ ಮತ್ತು ಸಮಾಜಕಲ್ಯಾಣ ಕಾರ್ಯಗಳಿಗಾಗಿ ವೆಚ್ಚ ಮಾಡುತ್ತಿದೆ. 1966ರಲ್ಲಿ ಆರಂಭವಾದ ಕೆನಡ ವಿಶ್ರಾಂತಿ ವೇತನ ಯೋಜನೆಯಿಂದ ಬಹುತೇಕ ನೌಕರರಿಗೆ ವೃದ್ಧಾಪ್ಯ, ಅಂಗವಿಕಲತೆ ಮತ್ತು ಅವಲಂಬಿತರ ಧನಸಹಾಯ ರಕ್ಷೆ ಲಭಿಸಿದೆ. ಫೆಡರಲ್ ಆರೋಗ್ಯವಿಮಾ ಯೋಜನೆ 1968ರ ಜುಲೈ 1 ರಂದು ಜಾರಿಗೆ ಬಂತು. 7 ಪ್ರಾಂತ್ಯಗಳು ಇದರಲ್ಲಿ ಭಾಗವಹಿಸುತ್ತಿವೆ. ಇದು ಕಾರ್ಮಿಕ ಆರೋಗ್ಯ ರಕ್ಷಣೆಗಾಗಿ ರೂಪುಗೊಂಡಿರುವ ಒಂದು ಯೋಜನೆ. ಕೆನಡದ ವಿಮಾಯೋಗ್ಯ ಜನರಲ್ಲಿ ಶೇಕಡಾ 99ಕ್ಕೆ ಫೆಡರಲ್ ಪ್ರಾಂತ್ಯ ಆಸ್ಪತ್ರೆ ವಿಮಾ ಸೌಲಭ್ಯ ಲಭ್ಯವಾಗಿದೆ.

ಕೆನಡದ ಸಂಪನ್ಮೂಲಗಳನ್ನು ಇನ್ನೂ ಹೆಚ್ಚಾಗಿ ಬಳಸಿಕೊಂಡು, ಇನ್ನೂ ಹೆಚ್ಚಿನ ಆರ್ಥಿಕ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ 1963ರಲ್ಲಿ ಎಕನಾಮಿಕ್ ಕೌನ್ಸಿಲ್ ಆಫ್ ಕೆನಡ ಎಂಬ ಒಂದು ಸ್ವತಂತ್ರ ಸಲಹಾ ಸಮಿತಿಯ ರಚನೆಯಾಯಿತು. ಆರ್ಥಿಕ ಬೆಳೆವಣಿಗೆಯನ್ನು ಸಾಧಿಸಲು, ಪೂರ್ಣೋದ್ಯೋಗವನ್ನು ಮುಟ್ಟಲು ಮತ್ತು ವ್ಯಾಪಾರ ಹೆಚ್ಚಿಸಲು ಅಗತ್ಯವಾದ ಸಲಹೆಗಳನ್ನು ಇದು ಸರ್ಕಾರಕ್ಕೆ ನೀಡುತ್ತದೆ. ವರ್ಷಕ್ಕೆ ಶೇಕಡಾ 5.5ರ ಆರ್ಥಿಕ ಬೆಳೆವಣಿಗೆಯನ್ನು ಸಾಧಿಸಿ ಕೆನಡದ ಒಟ್ಟು ಉತ್ಪನ್ನವನ್ನು ಹೆಚ್ಚಿಸುವ ಯೋಜನೆ ರಚಿಸಲಾಗಿದೆ. (ಸಿ.ಕೆ.ಆರ್.)

**ಕೆನಡದ ಇತಿಹಾಸ :** ಕೆನಡದ ಚರಿತ್ರೆ 15ನೆಯ ಶತಮಾನದಿಂದ, ಅಂದರೆ ಐರೋಪ್ಯರ ನೌಕಾಯಾನ ಸಾಹಸದ ಸುವರ್ಣಯುಗದಿಂದ ಪ್ರಾರಂಭವಾಗುತ್ತದೆ. ಪೌರಸ್ತ್ಯ ದೇಶಗಳಿಗೆ ಸಮುದ್ರಮಾರ್ಗ ಕಂಡುಹಿಡಿಯಲು ಸ್ಪೇನ್, ಪೋರ್ಚುಗಲ್, ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಪ್ರಯತ್ನಿಸಿದುವು. ಈ ಪ್ರಯತ್ನದ ಫಲವಾಗಿ ಸ್ಪೇನ್ ದೇಶ ಕ್ಯಾರಿಬಿಯನ್ ಮತ್ತು ಮಧ್ಯ ಅಮೆರಿಕ ಪ್ರದೇಶಗಳಲ್ಲಿ ತನ್ನ ವಸಾಹತುಗಳನ್ನು ಸ್ಥಾಪಿಸಿ, ಸೈನ್ಯಬಲದಿಂದ ವಿದೇಶೀಯರ ಪ್ರವೇಶವನ್ನು ತಡೆಗಟ್ಟಿತು. ಇಂಗ್ಲೆಂಡಿನ ದೊರೆ 7ನೆಯ ಹೆನ್ರಿಯ ಕಾಲದಲ್ಲಿ (1497) ಜಾನ್ ಕ್ಯಾಬಟ್ ಬ್ರಿಸ್ಟಲ್‌ನಿಂದ ಪ್ರಯಾಣ ಮಾಡಿ ಕೆನಡದ ತೀರವನ್ನು ತಲುಪಿ, ಅಲ್ಲಿಯ ನ್ಯೂ ಫೌಂಡ್‌ಲೆಂಡ್ 7ನೆಯ ಹೆನ್ರಿಗೆ ಸೇರಿದ್ದೆಂದು ಘೋಷಿಸಿದ. 1534ರಲ್ಲಿ ಫ್ರಾನ್ಸಿನ ಅರಸ ಒಂದನೆಯ ಫ್ರಾನ್ಸಿಸ್ ಕಳುಹಿಸಿದ ನೌಕಾಯಾತ್ರೆ ಜಾಕ್ವಿಸ್ ಕಾರ್ಟ್ಯೇನ್ ನೇತೃತ್ವದಲ್ಲಿ ಸೇಂಟ್ ಲಾರೆನ್ಸ್ ಕೊಳ್ಳಿ ಪ್ರವೇಶಿಸಿತು.

ಜಾಕ್ವಿಸ್ ಕಾರ್ಟ್ಯೇ

ಅನಂತರ ಗ್ಯಾಸ್ಪೆ ಪರ್ಯಾಯ ದ್ವೀಪ 1ನೆಯ ಫ್ರಾನ್ಸಿಸನಿಗೆ ಸೇರಿದ್ದೆಂದು ಘೋಷಿತವಾಯಿತು. ಮರುವರ್ಷ ಕಾರ್ಟ್ಯೇರ್ ಮಾಂಟ್ರಿಯಾಲ್‌ವರೆಗೆ ನೌಕಾಯಾನ ಮಾಡಿದ.

17ನೆಯ ಶತಮಾನದ ಪ್ರಾರಂಭದಲ್ಲಿ ಫ್ರಾನ್ಸಿನ ದೊರೆ 4ನೆಯ ಹೆನ್ರಿ ಕೆನಡದ ಬಗ್ಗೆ ಆಸಕ್ತಿ ವಹಿಸಿದ. ಆದ್ದರಿಂದ ಅದರ ಇತಿಹಾಸದ ಹೊಸ ಅಧ್ಯಾಯ ವೊಂದು ಪ್ರಾರಂಭವಾಯಿತು. 1608ರಲ್ಲಿ ಸ್ಯಾಮ್ಯುಯಲ್ ಡಿ ಚಾಂಪ್ಲೆನ್ ಸೇಂಟ್ ಲಾರೆನ್ಸ್ ಕಣಿವೆಯಲ್ಲಿಯ ಕ್ವಿಬೆಕ್ ಪ್ರದೇಶವನ್ನು ಫ್ರಾನ್ಸಿನ ವಸಾಹತನ್ನಾಗಿಸಿ ಅದರ ರಕ್ಷಣೆಗಾಗಿ ಕೋಟೆಕೊತ್ತಳಗಳನ್ನು ನಿರ್ಮಿಸಿದ. ಅನಂತರ ವೆಸ್ಟ್ ಇಂಡೀಸ್‌ನೊಂದಿಗೆ ವ್ಯಾಪಾರ ವಿಸ್ತರಿಸಿದ. ಇದರೊಂದಿಗೆ ಕೆಥೊಲಿಕ್ ಪಾದ್ರಿಗಳಿಂದ ಧರ್ಮ ಪ್ರಸಾರವೂ ಪ್ರಾರಂಭವಾಯಿತು. 1629ರಲ್ಲಿ ಕ್ವಿಬೆಕ್‌ನಲ್ಲಿ ಇಂಗ್ಲಿಷರ ಸೈನ್ಯ ಆಗಮಿಸಿದಾಗ ಚಾಂಪ್ಲೆನ್ ಶರಣಾಗತನಾದ. ಆದರೆ 1632ರಲ್ಲಾದ ಸೇಂಟ್ ಜರ್ಮೈನ್–ಎನ್–ಲಾಯ್ ಒಪ್ಪಂದದಂತೆ ಕೆನಡ ಮತ್ತೆ ಫ್ರೆಂಚರಿಗೆ ದೊರೆಯಿತು. 1642ರಲ್ಲಿ ಮಾಂಟ್ರಿಯಾಲ್ ಫ್ರಾನ್ಸಿನ ವಸಾಹತಾಯಿತು. 1663ರಲ್ಲಿ ಕೆನಡ (ಹೊಸ ಫ್ರಾನ್ಸ್) ಫ್ರಾನ್ಸಿನ ವಸಾಹತೆಂದು ಘೋಷಿಸಲಾಯಿತು. ಅಲ್ಲಿ ಫ್ರೆಂಚ್ ಮಾದರಿಯ ಆಡಳಿತ ಜಾರಿಗೆ ಬಂತು. 14ನೆಯ ಲೂಯಿಯ

ಮಂತ್ರಿ ಕಾಲ್ಬರ್ ಕೆನಡಕ್ಕೆ ವಲಸೆ ಹೋಗಲು ಫ್ರೆಂಚರನ್ನು ಪ್ರೋತ್ಸಾಹಿಸಿದ್ದರ ಪರಿಣಾಮವಾಗಿ 1665ರಲ್ಲಿ ಸುಮಾರು ಎರಡು ಸಾವಿರ ಫ್ರೆಂಚರು ಕೆನಡದಲ್ಲಿ ನೆಲಸಿದರು.

ಅಮೆರಿಕ ಭೂಖಂಡದಲ್ಲಿ ಒಂದು ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಫ್ರಾನ್ಸಿನ ಉದ್ದೇಶವಾಗಿತ್ತು. ಇದರಿಂದಾಗಿ ಇಂಗ್ಲೆಂಡಿನೊಡನೆ ಯುದ್ಧ ಅನಿವಾರ್ಯವಾಯಿತು. ಕೆನಡದ ರಾಜ್ಯಪಾಲ ಫ್ರಾಂಟ್ ನ್ಯಾಕ್ ನ್ಯೂ ಇಂಗ್ಲೆಡಿನ ಮೇಲೆ ಆಕ್ರಮಣ ನಡೆಸಲು ನಿರ್ಧರಿಸಿದ. ಆದರೆ 1690ರಲ್ಲಿ ಸರ್ ವಿಲಿಯಂ ಫಿಫ್ಸ್ ಬಾಸ್ಟನ್‌ನಿಂದ ನೌಕಾಪಡೆಯನ್ನು ಕೊಂಡೊಯ್ದು ನೋವ ಸ್ಕೋಷವನ್ನು ಗೆದ್ದುಕೊಂಡ. 1697ರಲ್ಲಿ ರೈಸ್‌ವಿಕ್ ಒಪ್ಪಂದವಾಗಿ ಫ್ರೆಂಚರು ಮತ್ತೆ ಆ ಪ್ರದೇಶವನ್ನು ಪಡೆದುಕೊಂಡರು. ಆದರೆ ಯುದ್ಧ ಮಾತ್ರ ನಿಲ್ಲಲಿಲ್ಲ. ಕೊನೆಯಲ್ಲಿ ಫ್ರಾನ್ಸ್ ಸೋತು 1713ರಲ್ಲಿ ಒಡಂಬಡಿಕೆ ಮಾಡಿಕೊಳ್ಳಬೇಕಾಯಿತು. ಅದರ ಪ್ರಕಾರ ಹಡ್ಸನ್ ಕೊಲ್ಲಿ, ನ್ಯೂ ಫೌಂಡ್‌ಲೆಂಡ್ ಮತ್ತು ನೋವ ಸ್ಕೋಷಗಳನ್ನು ಫ್ರಾನ್ಸ್ ಇಂಗ್ಲೆಂಡಿಗೆ ಬಿಟ್ಟುಕೊಡಬೇಕಾಯಿತು. ಅಲ್ಲಿ ಸ್ವಲ್ಪ ಕಾಲ ಶಾಂತಿ ನೆಲಸಿದ್ದರೂ 1740ರಲ್ಲಿ ಯುರೋಪಿನಲ್ಲಿ ಆಸ್ಟ್ರಿಯದ ಸಿಂಹಾಸನಕ್ಕಾಗಿ ಯುದ್ಧ ಪ್ರಾರಂಭವಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ವಿರುದ್ಧ ಬಣಗಳಲ್ಲಿದ್ದುದರ ಫಲವಾಗಿ ಅಮೆರಿಕದಲ್ಲೂ ಯುದ್ಧ ಪ್ರಾರಂಭವಾಯಿತು. 1748ರಲ್ಲಿ ಎ-ಲಾ-ಚಾಪೆಲೇ ಒಪ್ಪಂದದಿಂದ ಯುರೋಪಿನಲ್ಲಿ ಯುದ್ಧ ಕೊನೆಗೊಂಡಾಗ ಇಲ್ಲೂ ಶಾಂತಿ ಏರ್ಪಟ್ಟರೂ ಬ್ರಿಟನ್ ಭೂಶಿರದಲ್ಲಿರುವ ಲೂಯಿಬರ್ಗ್ ಫ್ರಾನ್ಸಿನ ಕೈಬಿಟ್ಟಿತು.

1756ರಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ಮಧ್ಯೆ ಏಳು ವರ್ಷಗಳ ಯುದ್ಧ ಪ್ರಾರಂಭವಾಯಿತು. ಅಮೆರಿಕದಲ್ಲಿ ಇಂಗ್ಲೆಂಡಿಗಿದ್ದಷ್ಟು ಅನುಕೂಲಗಳು ಫ್ರಾನ್ಸಿಗೆ ಇರಲಿಲ್ಲ. ಅಲ್ಲದೆ ಇಂಗ್ಲೆಂಡಿನ ನೌಕಾಪಡೆ ಬಲಶಾಲಿಯಾಗಿತ್ತು. 1759ರ ಸೆಪ್ಟೆಂಬರಿನಲ್ಲಿ ಇಂಗ್ಲೆಂಡಿನ ಜೇಮ್ಸ್ ವುಲ್ಫ್ ಕ್ವಿಬೆಕ್‌ನಲ್ಲಿ, ಒಂದು ವರ್ಷದ ಅನಂತರ ಮಾಂಟ್ರಿಯಾಲ್‌ನಲ್ಲಿ ಅದ್ಭುತ ವಿಜಯ ಪಡೆದ. ಕೆನಡದಲ್ಲಿದ್ದ ಫ್ರೆಂಚ್ ಸೈನ್ಯ ಶರಣಾಗತವಾಯಿತು. 1763ರಲ್ಲಿ ಪ್ಯಾರಿಸ್ ಒಪ್ಪಂದವಾಗಿ 7 ವರ್ಷಗಳ ಯುದ್ಧ ಕೊನೆಗೊಂಡಿತು, ಕೆನಡ ಇಂಗ್ಲೆಂಡಿನ ವಶವಾಯಿತು.

ಆಧುನಿಕ ಕೆನಡದ ಚರಿತ್ರೆ ಅಮೆರಿಕದ ಸ್ವಾತಂತ್ರ್ಯ ಯುದ್ಧದ ಅನಂತರ ನಿಖರವಾಗಿ ಪ್ರಾರಂಭವಾಯಿತು. ಅಮೆರಿಕನರ ಕ್ರಾಂತಿಯ ಪರಿಣಾಮವಾಗಿ ರಾಜಪ್ರಭುತ್ವವಾದಿ ಇಂಗ್ಲಿಷರು ಸಹಸ್ರಾರು ಸಂಖ್ಯೆಯಲ್ಲಿ ಕೆನಡದಲ್ಲಿ ಆಶ್ರಯ ಪಡೆದರು. ಇದರಿಂದಾಗಿ ಫ್ರೆಂಚರಂತೆ ಇಂಗ್ಲಿಷರೂ ಕೆನಡದ ನಿವಾಸಿಗಳಾದರು. ಪ್ಯಾರಿಸ್ ಒಪ್ಪಂದದ ಅನಂತರ 1774ರಲ್ಲಿ ಕ್ವಿಬೆಕ್ ಮಸೂದೆ ಜಾರಿಗೆ ಬರುವ ತನಕ ಕೆನಡ ಇಂಗ್ಲೆಂಡಿನ ರಾಜಪ್ರಭುತ್ವಕ್ಕೆ ಒಳಪಟ್ಟಿತ್ತು. 1775ರಲ್ಲಿ ಅಮೆರಿಕದ ಸ್ವಾತಂತ್ರ್ಯ ಯುದ್ಧ ಪ್ರಾರಂಭವಾಯಿತು. ಕೆನಡವನ್ನು ವಶಪಡಿಸಿಕೊಳ್ಳುವುದು ಅಮೆರಿಕನರ ಯೋಜನೆಗಳಲ್ಲಿ ಒಂದಾಗಿತ್ತು. ಆದರೆ ಅದು ವಿಫಲವಾಯಿತು.

ಕೆನಡ ಇಂಗ್ಲಿಷರ ವಶವಾದಮೇಲೆ ಅಲ್ಲಿ ಫ್ರೆಂಚ್ ಮಾದರಿಯ ಆಡಳಿತ ಪದ್ಧತಿ ಕ್ರಮೇಣ ಮಾಯವಾಯಿತು. 1791ರಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟು ಒಂದು ಸಂವಿಧಾನ ರಚಿಸಿ, ಆಟ್ಟವ ನದಿಯ ಆಧಾರದ ಮೇಲೆ ಕೆನಡವನ್ನು ಪ್ರತ್ಯೇಕ ಸರ್ಕಾರಗಳನ್ನು ಹೊಂದಿದ ಎರಡು ಭಾಗಗಳನ್ನಾಗಿ ವಿಭಾಗಿಸಿತು. ದಕ್ಷಿಣ ಕೆನಡದಲ್ಲಿ ಫ್ರೆಂಚ್ ಮಾದರಿಯ ಸರ್ಕಾರ ಉತ್ತರ ಕೆನಡದಲ್ಲಿ ಇಂಗ್ಲೆಂಡ್ ಮಾದರಿಯ ಸರ್ಕಾರ ಅಸ್ತಿತ್ವದಲ್ಲಿ ಬಂದುವು. ಕೆನಡದ ಎರಡು ಪ್ರದೇಶಗಳಿಗೂ ಸೇರಿದಂತೆ ಒಬ್ಬ ರಾಜ್ಯಪಾಲನನ್ನು ಮತ್ತು ಪ್ರತಿಯೊಂದಕ್ಕೂ ಒಬ್ಬ ಉಪರಾಜ್ಯಪಾಲರನ್ನು ನೇಮಕ ಮಾಡಲಾಯಿತು.

ಕೆನಡದ ವಸಾಹತುಗಳು ಪರಿಪೂರ್ಣತೆ ಪಡೆದಂತೆ ಅಲ್ಲಿ ಸ್ವಯಮಾಡಳಿತ ಪಡೆಯಬೇಕೆಂಬ ಉತ್ಕಟ ಅಪೇಕ್ಷೆ ಉಂಟಾಯಿತು. 19ನೆಯ ಶತಮಾನದಲ್ಲಿ ಇಂಗ್ಲೆಂಡ್, ಅಮೆರಿಕ ಮೊದಲಾದ ದೇಶಗಳಲ್ಲಿದ್ದ ಪ್ರಜಾಪ್ರಭುತ್ವ ಭಾವನೆಗಳು ಕೆನಡದ ವಸಾಹತುಗಳಲ್ಲೂ ಪ್ರತಿಧ್ವನಿತವಾದವು.

ಕೆನಡಿಯನರಲ್ಲಿ ಅತೃಪ್ತಿ ಕ್ರಮೇಣ ಬೆಳೆದು 1837ರಲ್ಲಿ ಉಗ್ರಸ್ವರೂಪದ ಚಳವಳಿ ಪ್ರಾರಂಭವಾಯಿತು. ಉತ್ತರ ಕೆನಡದಲ್ಲಿ ಲಿಯಾನ್ ಮೆಕೆನ್‌ಜ಼ಿಯ ನೇತೃತ್ವದಲ್ಲಿ ಕ್ರಾಂತಿ ಪ್ರಾರಂಭವಾಯಿತು. ಆದರೆ ಅದನ್ನು ಸುಲಭವಾಗಿ ಅಡಗಿಸಲಾಯಿತು, ಮತ್ತು ಮೆಕೆನ್‌ಜ಼ಿಗೆ ಗಡಿಪಾರು ಶಿಕ್ಷೆ ವಿಧಿಸಲಾಯಿತು. ದಕ್ಷಿಣ ಕೆನಡದಲ್ಲಿ ಲೂಯಿ ಜೋಸೆಫನ ನೇತೃತ್ವದಲ್ಲಿ ಪ್ರಾರಂಭವಾದ ಕ್ರಾಂತಿ ಬೆಂಬಲ ಸಿಗದೆ ವಿಫಲವಾಯಿತು.

1838ರಲ್ಲಿ ವಿಗ್ ಪಾರ್ಟಿಯ ಮುಖಂಡ ಲಾರ್ಡ್ ಡರ್‌ಹ್ಯಾಮ್ ಕೆನಡದ ರಾಜ್ಯಪಾಲನಾಗಿ ನೇಮಕಗೊಂಡ. ಆಂತರಿಕ ವ್ಯವಹಾರಗಳಲ್ಲಿ ಕೆನಡದ ಪ್ರದೇಶಗಳಿಗೆ ಸ್ವಯಮಾಡಳಿತ ನೀಡಬೇಕು ಮತ್ತು ಎರಡು ಪ್ರದೇಶಗಳ ಏಕೀಕರಣವಾಗಬೇಕು ಎಂದು ಡರ್‌ಹ್ಯಾಮ್ ಸಲಹೆ ನೀಡಿದ. ಅದರಂತೆ 1840-41ರಲ್ಲಿ ಏಕೀಕರಣದ ಮಸೂದೆಯೊಂದು ಜಾರಿಯಾಗಿ ಕೆನಡದ ಎರಡೂ ರಾಜ್ಯಗಳು ಒಂದಾದುವು. ಪಾರ್ಲಿಮೆಂಟಿಗೆ ಎರಡೂ ರಾಜ್ಯಗಳು ಸಮಸಂಖ್ಯೆಯಲ್ಲಿ ಸದಸ್ಯರನ್ನು ಕಳಿಸಿಕೊಡಬೇಕೆಂದು ತೀರ್ಮಾನಿಸಲಾಯಿತು. 1849ರಲ್ಲಿ ಲಾರ್ಡ್ ಎಲ್ಗಿನ್ ಗವರ್ನರ್-ಜನರಲ್ ಆಗಿದ್ದಾಗ ಕೆನಡ ಸ್ವಲ್ಪಮಟ್ಟಿನ ಸ್ವಯಮಾಡಳಿತ ಪಡೆಯಿತು.

ಕೆನಡದ ಎರಡೂ ಪ್ರಾಂತ್ಯಗಳ ಏಕೀಕರಣದಿಂದ ಅನುಕೂಲಕ್ಕಿಂತ ಹೆಚ್ಚಾಗಿ ಪ್ರತಿಕೂಲವುಂಟಾಯಿತು. ಪರಸ್ಪರ ವೈರಿಗಳಾದ ಇಂಗ್ಲಿಷರು ಮತ್ತು ಫ್ರೆಂಚರು ಅದಕ್ಕೆ ಕಾರಣರಾಗಿದ್ದರು. ಇದರಿಂದಾಗಿ ದೇಶದಲ್ಲಿ ಸುಭದ್ರ ಸರ್ಕಾರದ ರಚನೆಗೆ ತೊಡಕಾಯಿತು. ಕೆಥೊಲಿಕರಾಗಿದ್ದ ಫ್ರೆಂಚರೂ ಪ್ರಾಟೆಸ್ಟಂಟರಾಗಿದ್ದ ಇಂಗ್ಲಿಷರೂ ಪಾರ್ಲಿಮೆಂಟಿನಲ್ಲಿ ಸಮಪ್ರಾತಿನಿಧ್ಯ ಹೊಂದಿದ್ದುದರಿಂದ ದೇಶದ ಯಾವ ಕೆಲಸವೂ ಸುಸೂತ್ರವಾಗಿ ನಡೆಯದೆ ರಾಜಕೀಯ ಬಿಕ್ಕಟ್ಟು ಅನಿವಾರ್ಯವಾಯಿತು. 1850-1860ರಲ್ಲಿ ಹಲವಾರು ಸಚಿವ ಸಂಪುಟಗಳ ಬದಲಾವಣೆಯಾಗಿ ದೇಶದ ಪ್ರಗತಿ ಕುಂಠಿತವಾಯಿತು. ಯಾವುದಾದರೊಂದು ರಾಜಕೀಯ ಪರಿಹಾರದ ಆವಶ್ಯಕತೆ ಇತ್ತು. ಇದೇ ಸಮಯದಲ್ಲಿ ನೋವ ಸ್ಕೋಷ, ನ್ಯೂ ಬ್ರನ್ಸ್‌ವಿಕ್ ಮತ್ತು ಪ್ರಿನ್ಸ್ ಎಡ್ವರ್ಡ್ ವಸಾಹತುಗಳಲ್ಲಿ ಕ್ರಾಂತಿ ಪ್ರಾರಂಭವಾಗಿ ಅವು ತಮ್ಮದೇ ಆದ ಒಂದು ಸ್ಥಾನಿಕ ಏಕೀಕರಣ ಮಾಡಿಕೊಳ್ಳಲು ಯೋಜಿಸಿದುವು.

ಕೆನಡದ ಮುತ್ಸದ್ದಿಗಳಾದ ಮ್ಯಾಕ್ಡೊನಾಲ್ಡ್, ಕಾರ್ಟಿಯರ್, ನೋವ ಸ್ಕೋಷದ ಟಪ್ಪರ್, ನ್ಯೂ ಬ್ರನ್ಸ್‌ವಿಕ್‌ನ ಟಿಲ್ಲಿ ಮೊದಲಾದವರು ಸಂಯುಕ್ತ ಕೆನಡ ಒಕ್ಕೂಟ ನಿರ್ಮಾಣಮಾಡಲು ಸಿದ್ಧರಾದರು. ಷಾರ್ಲಟ್‌ಟೌನ್ ಮತ್ತು ಕ್ವಿಬೆಕ್ ನಗರಗಳಲ್ಲಿ ಅನೇಕ ಸಭೆಗಳನ್ನು ನಡೆಸಿ ಅಂತಿಮ ತೀರ್ಮಾನಕ್ಕಾಗಿ ಲಂಡನಿಗೆ ಹೋದರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ 1867ರಲ್ಲಿ ಬ್ರಿಟಿಷ್ ಉತ್ತರ ಅಮೆರಿಕದ ಕಾಯಿದೆಗೆ ಒಪ್ಪಿಗೆ ದೊರಕಿತು. ನೋವ ಸ್ಕೋಷ ನ್ಯೂ ಬ್ರನ್ಸ್‌ವಿಕ್ ವಸಾಹತುಗಳು ಏಕೀಕರಣವನ್ನು ವಿರೋಧಿಸಿದರೂ ಆರ್ಥಿಕ ಸಹಾಯದ ಭರವಸೆಯ ಮೇಲೆ ಶಾಂತವಾದುವು. 1870ರಲ್ಲಿ ಮ್ಯಾನಿಟೋಬ, 1871ರಲ್ಲಿ ಬ್ರಿಟಿಷ್ ಕೊಲಂಬಿಯ, 1873ರಲ್ಲಿ ಪ್ರಿನ್ಸ್ ಎಡ್ವರ್ಡ್ ವಸಾಹತುಗಳು ಒಕ್ಕೂಟವನ್ನು ಸೇರಿಕೊಂಡುವು. ಕೆನಡ ದೇಶ ಅಟ್ಲಾಂಟಿಕ್‌ನಿಂದ ಪೆಸಿಫಿಕ್‌ವರೆಗೆ ವಿಸ್ತರಿಸಿತು. ಹೀಗೆ ಕೆನಡ ರಾಜ್ಯಕ್ಕೆ 1867ರ ಜುಲೈ ಒಂದರಿಂದ ಅಧಿರಾಜ್ಯದ ಸ್ಥಾನ ಲಭ್ಯವಾಯಿತು(ನೋಡಿ-ಕೆನಡದ ಸಂವಿಧಾನ ಮತ್ತು ಆಡಳಿತ ವ್ಯವಸ್ಥೆ).

**ವಿದೇಶಾಂಗ ನೀತಿ :** ಕೆನಡದ ವಿದೇಶಾಂಗ ನೀತಿಯ ವಿಕಾಸವನ್ನು 1867ರಿಂದ 1918ರ ತನಕ, 1919 ರಿಂದ 1939ರ ತನಕ ಹಾಗೂ 1939 ರಿಂದ ಇಂದಿನ ತನಕ ಎಂದು ವಿಭಾಗಿಸಬಹುದು.

**1867-1918 :** ಈ ಅವಧಿಯಲ್ಲಿ ಕೆನಡಕ್ಕೆ ತನ್ನದೇ ಆದ ಪರಿಣಾಮಕಾರಿ ವಿದೇಶಾಂಗ ನೀತಿ ಇರಲಿಲ್ಲ. ಕೆನಡದ ಕಾರ್ಯಾಂಗದ ಅಧಿಕಾರ ಇಂಗ್ಲೆಂಡಿನ ರಾಣಿಯನ್ನು ಪ್ರತಿನಿಧಿಸುತ್ತಿದ್ದ ಗವರ್ನರ್-ಜನರಲನ ಕೈಯಲ್ಲಿತ್ತು. ಅವನು ವಿದೇಶಾಂಗ ನೀತಿಯ ಬಗ್ಗೆ ಇಂಗ್ಲೆಂಡಿನ ಸರ್ಕಾರದಿಂದ ಸಲಹೆಗಳನ್ನು ಪಡೆಯುತ್ತಿದ್ದ. ಇಂಗ್ಲೆಂಡಿನೊಡನೆ ನಿರಂತರ ಸಂಪರ್ಕ ಹೊಂದಲು ಕೆನಡ ಸರ್ಕಾರ ಲಂಡನ್ ನಗರದಲ್ಲಿ ಒಬ್ಬ ಪ್ರತಿನಿಧಿಯನ್ನು ನೇಮಕ ಮಾಡಿತ್ತು. ಇತರ ದೇಶಗಳೊಂದಿಗೆ ಸಂಪರ್ಕ ಪಡೆಯಲು ಕೆನಡದಲ್ಲಿ 1909ರಲ್ಲಿ ವಿದೇಶಾಂಗ ವ್ಯವಹಾರದ ವಿಭಾಗ ಸ್ಥಾಪಿತವಾಯಿತು.

ರಾಜತಾಂತ್ರಿಕ ವಿಷಯದಲ್ಲಿ ಸ್ವಾವಲಂಬಿಯಾಗಲು ವಲಸೆಗಾರರ ಸಮಸ್ಯೆ ಕೆನಡಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಿತು. ಬ್ರಿಟಿಷ್ ಕೊಲಂಬಿಯ ಪ್ರಾಂತ್ಯದಲ್ಲಿ ಚೀನಿಯರ ಮತ್ತು ಜಪಾನೀಯರ ವಲಸೆ ಹೆಚ್ಚಾಗಿ ಅನೇಕ ಕಡೆ ದೊಂಬಿಗೆ ಕಾರಣವಾಯಿತು. ಕೆನಡದ ಕಾರ್ಮಿಕ ಸಚಿವ ಟೋಕಿಯೋಗೆ ಹೋಗಿ ಅಲ್ಲಿದ್ದ ಇಂಗ್ಲೆಂಡಿನ ರಾಯಭಾರಿಯ ಸಹಾಯದಿಂದ ಜಪಾನಿನೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಜಪಾನಿನ ವಲಸೆ ನಿಂತಿತು. ಚೀನದ ಆಂತರಿಕ ಸಮಸ್ಯೆಗಳಿಂದಾಗಿ ಆ ದೇಶದೊಡನೆ ಒಡಂಬಡಿಕೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. 1914ರಲ್ಲಿ ಇಂಗ್ಲೆಂಡ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿದಾಗ ಕೆನಡ ಇಂಗ್ಲೆಂಡ್ ದೇಶವನ್ನನುಸರಿಸಿ ದೊಡ್ಡ ಸೈನ್ಯವನ್ನು ಕಳಿಸಿತು.

**1919-1939 :** ಪ್ಯಾರಿಸ್ ಶಾಂತಿಸಮ್ಮೇಳನದಲ್ಲಿ ಕೆನಡದ ಪ್ರಧಾನಿ ರಾಬರ್ಟ್ ಬೋರ್ಡನ್ ಇಂಗ್ಲೆಂಡಿನಿಂದ ಪ್ರತ್ಯೇಕವಾಗಿ ತಮ್ಮ ದೇಶವನ್ನು ಪ್ರತಿನಿಧಿಸುವ ಹಕ್ಕನ್ನು ಪಡೆದುಕೊಂಡರು. ಇದೇ ನೆಪದಿಂದ ಲೀಗ್ ಆಫ್ ನೇಷನ್ಸ್‌ನಲ್ಲೂ ಕೆನಡ ಪ್ರತ್ಯೇಕ ಸದಸ್ಯತ್ವ ಪಡೆಯಿತು. ಅನಂತರ ಅಂತಾರಾಷ್ಟ್ರೀಯ ಕಾರ್ಮಿಕ ಹಿತರಕ್ಷಣ ಸಂಸ್ಥೆಯಲ್ಲಿ ಕೂಡ ಪ್ರತ್ಯೇಕ ಸ್ಥಾನ ಪಡೆಯಿತು. ಹೀಗೆ ಕೆನಡ ಅಂತಾರಾಷ್ಟ್ರೀಯವಾಗಿ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಿಕೊಂಡಿತು.

1923ರಲ್ಲಿ ಕೆನಡ ಮೊದಲ ಬಾರಿಗೆ ಇಂಗ್ಲೆಂಡಿಗೆ ತಿಳಿಸದೆ ಅಮೆರಿಕದೊಡನೆ ಹ್ಯಾಲಿಬಟ್ ಕೌಲು ಮಾಡಿಕೊಂಡಿತು. ಅಲ್ಲಿಂದ ಕಾಮನ್‌ವೆಲ್ತ್ ಒಕ್ಕೂಟದ ಏಕಮುಖ ವಿದೇಶಾಂಗನೀತಿ ಪದ್ಧತಿ ಮುರಿದುಬೀಳಲಾರಂಭಿಸಿತು.

ಬ್ರಿಟನಿನೊಂದಿಗೆ ಅಧಿರಾಜ್ಯಗಳು ಪಾಲುದಾರ ರಾಷ್ಟ್ರಗಳೆಂದೂ ಅವು ಎಲ್ಲ ರೀತಿಯಲ್ಲೂ ಪರಸ್ಪರ ಸಮಾನವೆಂದೂ ದೊರೆತನಕ್ಕೆ ಇವೆಲ್ಲ ವಿಧೇಯವೆಂದೂ 1926ರಲ್ಲಿ ಸಮಾವೇಶಗೊಂಡಿದ್ದ ಸಾಮ್ರಾಜ್ಯ ಸಮ್ಮೇಳನದಲ್ಲಿ ಸಾರಲಾಯಿತು. ಈ ಘೋಷಣೆಯನ್ನು 1931ರಲ್ಲಿ ವೆಸ್ಟ್‌ಮಿನ್‌ಸ್ಟರ್ ಸ್ಟಾಚ್ಯೂಟಿನ ಮೂಲಕ ಕಾನೂನುಬದ್ಧವಾಗಿ ಮಾಡಲಾಯಿತು.

1939ರಿಂದ: ಎರಡನೆಯ ಮಹಾಯುದ್ಧದಿಂದ ಕೆನಡದಲ್ಲಿ ರಾಷ್ಟ್ರೀಯತೆ ಜಾಗೃತಗೊಂಡಿತು. ಆ ಯುದ್ಧದಿಂದಾಗಿ ಯುರೋಪಿನ ಅನೇಕ ದೇಶಗಳು ದುರ್ಬಲಗೊಂಡಿದ್ದರಿಂದ ಮತ್ತು ಕೆನಡದ ಆರ್ಥಿಕಸ್ಥಿತಿ ಸುಧಾರಿಸಿದ್ದರಿಂದ ಕೆನಡ ವಿಶ್ವದ ವ್ಯವಹಾರಗಳಲ್ಲಿ ಹೆಚ್ಚಿನ ಜವಾಬ್ದಾರಿ ಹೊರುವುದು ಅನಿವಾರ್ಯವಾಯಿತು.

ಎರಡನೆಯ ಮಹಾಯುದ್ಧ ಮುಕ್ತಾಯವಾಗುವುದರೊಳಗೆ ಕೆನಡ ಮಿತ್ರರಾಷ್ಟ್ರಗಳ ಪೈಕಿ ನೌಕಾಪಡೆಯಲ್ಲಿ ಮೂರನೆಯ ಹಾಗೂ ವೈಮಾನಿಕ ಪಡೆಯಲ್ಲಿ ನಾಲ್ಕನೆಯ ರಾಷ್ಟ್ರವಾಗಿ ಪರಿಣಮಿಸಿತು. ಈ ಯುದ್ಧದಲ್ಲಿ ಮಿತ್ರರಾಷ್ಟ್ರಗಳು ಕೆನಡದಿಂದ ಕೋಟ್ಯಂತರ ಡಾಲರುಗಳ ಸಹಾಯ ಪಡೆದುವು. ಇಂಗ್ಲೆಂಡಿಗೂ ಕೆನಡ ಸಾಲ ನೀಡಿತು. ಅಂತಾರಾಷ್ಟ್ರೀಯ ಹಣಕಾಸಿನ ವ್ಯವಹಾರದಲ್ಲಿ, ಅಂತಾರಾಷ್ಟ್ರೀಯ ಆಹಾರ ಮತ್ತು ವ್ಯವಸಾಯ ಸಂಸ್ಥೆಗೆ ಸಂಬಂಧಿಸಿದ ಅನೇಕ ಮಹತ್ತ್ವದ ಕಾರ್ಯಗಳಲ್ಲಿ ಕೆನಡದ ತಜ್ಞರು ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ.

ಕಾಮನ್‌ವೆಲ್ತ್ ರಾಷ್ಟ್ರಸಮುದಾಯದಲ್ಲಿ ಕೆನಡದ ನೀತಿ ಎರಡನೆಯ ಮಹಾಯುದ್ಧದ ಕಾಲದಲ್ಲಾಗಲಿ ಅನಂತರವಾಗಲಿ ಯಾವ ಬದಲಾವಣೆಗೂ ಶ್ರೀಲಂಕ ಒಳಗಾಗಲಿಲ್ಲ. ಭಾರತ, ಪಾಕಿಸ್ತಾನ, ಘಾನ ಮತ್ತು ಮಲಯ ದೇಶಗಳು ಕಾಮನ್‌ವೆಲ್ತ್ ರಾಷ್ಟ್ರ ಸಮುದಾಯದಲ್ಲಿ ಪೂರ್ಣ ಸದಸ್ಯತ್ವ ಪಡೆದಾಗ ಕೆನಡ ಅದನ್ನು ಸ್ವಾಗತಿಸಿತು. ಭಾರತ ಗಣರಾಜ್ಯವಾದಾಗ ಅದು ಕಾಮನ್‌ವೆಲ್ತ್ ಸಮುದಾಯದಲ್ಲೇ ಉಳಿಯುವುದು ಸಾಧ್ಯವಾಗುವಂತೆ ಕಾಮನ್‌ವೆಲ್ತ್ ವ್ಯವಸ್ಥೆಯನ್ನು ಮಾರ್ಪಡಿಸಲು ಕೆನಡ ಸಹಾಯ ಮಾಡಿತು. (ಬಿ.ಎಸ್.ಪಿ.)

**ಕೆನಡದ ಶಿಕ್ಷಣ ಪದ್ಧತಿ :** 1867ರ ಬ್ರಿಟಿಷ್ ನಾರ್ತ್ ಅಮೆರಿಕನ್ ಶಾಸನದ 93ನೆಯ ವಿಧಿಯ ಪ್ರಕಾರ ಕೆನಡದಲ್ಲಿ ಶಿಕ್ಷಣ ಆಯಾ ಪ್ರಾಂತ್ಯದ ಹೊಣೆಗಾರಿಕೆಯಾಗಿದೆ. ಹತ್ತು ಪ್ರಾಂತ್ಯಗಳುಳ್ಳ ಆ ಸಂಯುಕ್ತ ರಾಷ್ಟ್ರದಲ್ಲಿ (ಫೆಡರೇಷನ್) ಪ್ರತಿಪ್ರಾಂತ್ಯವೂ ತನ್ನದೇ ಆದ ಶಿಕ್ಷಣ ಶಾಖೆಯನ್ನು ಹೊಂದಿದ್ದು ಅಲ್ಲಿಯ ಶಾಸನ ಸಭೆಯ ನಿರ್ಣಯಗಳಂತೆ ಕೆಲಸ ಮಾಡುತ್ತದೆ. ಪ್ರತಿ ಪ್ರಾಂತ್ಯದಲ್ಲೂ ಚುನಾಯಿಸಿ ಬಂದ ಅಥವಾ ನೇಮಕಗೊಂಡ ನಗರ, ಊರು ಅಥವಾ ಗ್ರಾಮದ ಶಾಲಾಮಂಡಳಿಗಳು ತಮ್ಮ ತಮ್ಮ ಕ್ಷೇತ್ರದ ಶಾಲೆಗಳನ್ನು ಪ್ರಾಂತೀಯ ನಿಯಮಗಳನ್ನನುಸರಿಸಿ ನಡೆಸಿಕೊಂಡು ಬರುತ್ತಿವೆ.

ಕೆನಡದಲ್ಲಿ ಸಾರ್ವಜನಿಕ ಶಿಕ್ಷಣ ಹನ್ನೆರಡು ಆಡಳಿತಕ್ಕೆ ಒಳಪಟ್ಟಿದೆ. ಕ್ವಿಬೆಕ್ಕನ್ನುಳಿದ ಒಂಬತ್ತು ಪ್ರಾಂತ್ಯಗಳ ಶಿಕ್ಷಣ ಆಯಾ ಪ್ರಾಂತ್ಯಗಳಿಗೇ ಸೇರಿದೆ. ಕ್ವಿಬೆಕ್ಕಿನ ಶಿಕ್ಷಣ ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಎಂಬ ಎರಡು ಆಡಳಿತಗಳಿಗೆ ಸೇರಿದೆ. ಉತ್ತರದ ಮತ್ತು ವಾಯವ್ಯ ಪ್ರದೇಶಗಳ (ಗ್ರೇಟ್ ಟೆರಿಟೊರೀಸ್ ಆಫ್ ದಿ ನಾರ್ತ್ ಅಂಡ್ ನಾರ್ತ್ ವೆಸ್ಟ್) ಶಿಕ್ಷಣವೂ ಇಡೀ ಕೆನಡದ ಎಲ್ಲ ಪ್ರಾಂತ್ಯಗಳಲ್ಲಿಯ ಇಂಡಿಯನ್ನರ ಶಿಕ್ಷಣವೂ ಫೆಡರಲ್ ಸರ್ಕಾರದ ಆಡಳಿತಕ್ಕೆ ಸೇರಿವೆ. ಹನ್ನೆರಡು ಆಡಳಿತಕ್ಕೊಳಪಟ್ಟಿರುವ ಕೆನಡದ ಶಿಕ್ಷಣವನ್ನು ಒಂದು ಪದ್ಧತಿಯೆಂದು ಪರಿಗಣಿಸುವುದು ಸ್ವಾಭಾವಿಕವಾಗಿ ಅಸಮಂಜಸವೆನಿಸಬಹುದಾದರೂ ಅಲ್ಲಿಯ ವೈವಿಧ್ಯದ ನಡುವೆ ಸರ್ವಸಾಮಾನ್ಯ ಲಕ್ಷಣಗಳೂ ಕಂಡುಬರುತ್ತವೆ.

**ಆಡಳಿತ ವ್ಯವಸ್ಥೆ :** ಕ್ವಿಬೆಕ್ಕನ್ನುಳಿದು ಇತರ ಒಂಬತ್ತು ಪ್ರಾಂತ್ಯಗಳಲ್ಲಿ ಆಯಾ ಸರ್ಕಾರದ ಶಿಕ್ಷಣ ಶಾಖೆ ಅಲ್ಲಿಯ ಶಿಕ್ಷಣ ಕ್ಷೇತ್ರದ ಆಡಳಿತವನ್ನು ನೋಡಿಕೊಳ್ಳುತ್ತದೆ. ಅಲ್ಲಿಯ ಶಾಸನಸಭೆಗೆ ಹೊಣೆಗಾರರಾಗಿರುವ ಮಂತ್ರಿಮಂಡಲದ ಸದಸ್ಯರೊಬ್ಬರ ನೇತೃತ್ವದಲ್ಲಿ ಅದು ಕೆಲಸ ಮಾಡುತ್ತದೆ. ಉಪಸಚಿವರು ಅಥವಾ ಸೂಪರಿಂಟೆಂಡೆಂಟರು ಶಿಕ್ಷಣದ ಆಡಳಿತವನ್ನು ನೋಡಿಕೊಳ್ಳುತ್ತಾರೆ. ನ್ಯೂ ಫೌಂಡ್‌ಲೆಂಡಿನಲ್ಲಿ ರೋಮನ್ ಕೆಥೊಲಿಕ್, ಚರ್ಚ್ ಆಫ್ ಇಂಗ್ಲೆಂಡ್, ಯುನೈಟೆಡ್ ಚರ್ಚ್, ಸ್ಯಾಲ್ವೇಷನ್ ಆರ್ಮಿ ಮುಂತಾದ ಪ್ರತಿಯೊಂದು ಧಾರ್ಮಿಕ ಸಂಪ್ರದಾಯಕ್ಕೆ ಸೇರಿದ ಶಾಲೆಗಳ ಆಡಳಿತಕ್ಕೂ ಪ್ರತ್ಯೇಕವಾಗಿ ಒಬ್ಬೊಬ್ಬ ಪ್ರಧಾನ ಕಾರ್ಯನಿರ್ವಾಹಣಾಧಿಕಾರಿಯನ್ನು ನೇಮಿಸಿಕೊಳ್ಳುವ ಅವಕಾಶವಿದೆ. ಪ್ರತಿ ಪ್ರಾಂತ್ಯದಲ್ಲೂ ಅಲ್ಲಿಯ ಶಿಕ್ಷಣ ಶಾಖೆ ಅಲ್ಲಿಯ ಶಾಲೆಗಳ ಸಾಮಾನ್ಯ ಆಡಳಿತವನ್ನು ನೋಡಿಕೊಳ್ಳುವುದರ ಜೊತೆಗೆ ಮೇಲ್ವಿಚಾರಣೆಯನ್ನೂ (ತನಿಖೆ) ನಡೆಸುತ್ತದೆ. ಪ್ರಾಂತೀಯ ಸರ್ಕಾರದ ಸಹಾಯಧನವನ್ನು ಅವಕ್ಕೆ ಹಂಚುತ್ತದೆ; ಅಧ್ಯಾಪಕರ ವೃತ್ತಿಶಿಕ್ಷಣ, ಪಠ್ಯಕ್ರಮದ ನಿಷ್ಕರ್ಷೆ, ಅಂಗವಿಕಲರ ಪಾಠಶಾಲೆಗಳ ವ್ಯವಸ್ಥೆ, ಖಾಸಗಿ ಶಾಲೆಗಳ ಅಂಗೀಕಾರ, ಪರೀಕ್ಷಾ ವ್ಯವಸ್ಥೆ-ಈ ಕಾರ್ಯಗಳನ್ನೂ ನಿರ್ವಹಿಸುತ್ತದೆ; ವೃತ್ತಿ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಗ್ರಂಥಾಲಯಗಳು, ಕೈಗಾರಿಕಾ ಪಾಠಶಾಲೆಗಳು, ಸಂಚಾರಿ ಗ್ರಂಥಾಲಯಗಳು, ಅಂಚೆಶಿಕ್ಷಣ ಮುಂತಾದವನ್ನೂ ನಡೆಸುತ್ತದೆ.

ಕ್ವಿಬೆಕ್ಕಿನಲ್ಲಿ ಶಿಕ್ಷಣ ಎರಡು ಆಡಳಿತ ಶಾಖೆಗಳಿಗೆ ಸೇರಿದೆ. ಫ್ರೆಂಚ್-ಕೆನಡಿಯನ್ ಸಂಪ್ರದಾಯದ ರೋಮನ್ ಕೆಥೊಲಿಕ್ ಶಾಲೆಗಳ ಆಡಳಿತಕ್ಕೇ ಒಂದು ಶಾಖೆ. ಪ್ರಾಟೆಸ್ಟಂಟ್ ಶಾಲೆಗಳಿಗೇ ಇನ್ನೊಂದು ಆಡಳಿತ ಶಾಖೆ. ಭೂ, ನೌಕಾ ಮತ್ತು ವೈಮಾನಿಕ ಸೇನಾಶಿಕ್ಷಣದ ಕಾಲೇಜುಗಳನ್ನು ಕೆನಡದ ರಕ್ಷಣಾಶಾಖೆ ನೋಡಿಕೊಳ್ಳುತ್ತದೆ.

ಶಾಲಾ ಮಂಡಳಿಗಳು ತಮ್ಮ ತಮ್ಮ ಕ್ಷೇತ್ರದ ಶಾಲೆಗಳ ದಿನನಿತ್ಯದ ಕಾರ್ಯಗಳನ್ನು ನಿರ್ವಹಿಸುತ್ತವೆ. ಅವು ತಮ್ಮ ಭೌಗೋಳಿಕ ವ್ಯಾಪ್ತಿಯ ಪ್ರದೇಶದಲ್ಲಿ ನೂತನ ಶಾಲೆಗಳನ್ನು ಆರಂಭಿಸುತ್ತವೆ; ಅಧ್ಯಾಪಕರನ್ನು ನೇಮಿಸಿಕೊಳ್ಳುತ್ತವೆ; ಸಂಬಳ ಬಟವಾಡೆ ಮಾಡುತ್ತವೆ; ಕಟ್ಟಡಗಳ ನಿರ್ಮಾಣ ಮತ್ತು ದುರಸ್ತು ಕಾರ್ಯಗಳನ್ನೂ ನಿರ್ವಹಿಸುತ್ತವೆ. ಶಾಲೆಗಳಿಗೆ ಪೀಠೋಪಕರಣಗಳನ್ನೂ ಇತರ ಸಾಮಾನುಗಳನ್ನೂ ಒದಗಿಸಿಕೊಡುತ್ತವೆ; ಶಿಕ್ಷಣಕ್ಕಾಗಿ ಮೇಲ್ತೆರಿಗೆಯ ದರವನ್ನೂ ನಿರ್ಧರಿಸುತ್ತವೆ. ಸ್ಥಳೀಯ ಮೇಲ್ತೆರಿಗೆಯಿಂದ ಸಂಗ್ರಹಿಸುವ ಹಣದ ಜೊತೆಗೆ ಪ್ರಾಂತೀಯ ಸರ್ಕಾರದ ಧನಸಹಾಯವನ್ನೂ ಪಡೆಯುತ್ತವೆ.

**ಶಿಕ್ಷಣ ವ್ಯವಸ್ಥೆ :** ಪ್ರತಿ ಪ್ರಾಂತ್ಯವೂ ತನ್ನದೇ ಆದ ಶಿಕ್ಷಣ ವ್ಯವಸ್ಥೆಯನ್ನು ಹೊಂದಿದೆ. ಇಂಗ್ಲಿಷ್ ಮಾತನಾಡುವ ಪ್ರಾಂತ್ಯಗಳಲ್ಲಿ ಮಕ್ಕಳು 5-6ನೆಯ ವರ್ಷ ವಯಸ್ಸಿನಲ್ಲಿ ಪ್ರಾಥಮಿಕ ಶಾಲೆಗೆ ಸೇರಿ ಎಂಟು ವರ್ಷಗಳ ಶಿಕ್ಷಣದ ಅನಂತರ ಪ್ರೌಢಶಾಲೆಗೆ ಬರುತ್ತಾರೆ. ಪ್ರೌಢಶಿಕ್ಷಣ ನಾಲ್ಕು ಅಥವಾ ಐದು ವರ್ಷಗಳ ಕಾಲಾವಧಿಯದಾಗಿದ್ದು ಅಲ್ಲಿಯ ಶಿಕ್ಷಣ ಮುಗಿದ ಅನಂತರ ನಡೆಯುವ ಪರೀಕ್ಷೆಯೊಂದರ ಫಲಿತಾಂಶದ ಆಧಾರದ ಮೇಲೆ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ದೊರಕುತ್ತದೆ. ಬೇರೆ ಬೇರೆ ಪದವಿಗಳ ಶಿಕ್ಷಣದ ಕಾಲಾವಧಿ ಮೂರರಿಂದ ಏಳು ವರ್ಷಗಳವರೆಗೆ ವ್ಯತ್ಯಾಸವಾಗುತ್ತದೆ. ಸಾಮಾನ್ಯವಾಗಿ ಸಾಂಸ್ಕೃತಿಕ ಶಿಕ್ಷಣದ ಪ್ರಥಮ ಪದವಿಯ ಕಾಲಾವಧಿ ಮೂರು ವರ್ಷ. ವೃತ್ತಿ ಮತ್ತು ತಾಂತ್ರಿಕ ಶಿಕ್ಷಣದ ಪದವಿಗಳ ಕಾಲಾವಧಿ ಸ್ವಲ್ಪ ಹೆಚ್ಚು. ಫ್ರೆಂಚ್ ಮಾತನಾಡುವ ಕ್ವಿಬೆಕ್ ಮತ್ತು ಇತರ ಕೆಲವು ಪ್ರಾಂತ್ಯಗಳಲ್ಲಿ ಶಿಕ್ಷಣ ವ್ಯವಸ್ಥೆ ಭಿನ್ನವಾಗಿದೆ. ಅಲ್ಲಿ ಆರು ಅಥವಾ ಏಳು ವರ್ಷಗಳ ಪ್ರಾಥಮಿಕ ಶಾಲೆಗಳೂ ಮೂರು ವರ್ಷಗಳ ಜೂನಿಯರ್ ಪ್ರೌಢಶಾಲೆಗಳೂ ಮೂರು ವರ್ಷಗಳ ಸೀನಿಯರ್ ಪ್ರೌಢಶಾಲೆಗಳೂ ಅಸ್ತಿತ್ವದಲ್ಲಿವೆ. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ವಿದ್ಯಾರ್ಥಿಗಳು ಚರ್ಚುಗಳು ನಡೆಸುತ್ತಿರುವ ಕಾಲೇಜ್ ಕ್ಲಾಸಿಕ್‌ಗಳಿಗೆ ಬೇಕಾದರೂ ಸೇರಿ ಅಲ್ಲಿ ಎಂಟು ವರ್ಷಗಳ ಶಿಕ್ಷಣ ಮುಗಿಸಿ ಪದವಿ ತರಗತಿಗೂ ವೃತ್ತಿಶಿಕ್ಷಣ ತರಗತಿಗೂ ಸೇರಬಹುದು. ಅಥವಾ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಪಬ್ಲಿಕ್ ಶಾಲೆಗಳಿಗಾದರೂ ಸೇರಬಹುದು. ತಾಂತ್ರಿಕ ಶಿಕ್ಷಣ, ಕೈಗಾರಿಕಾ ಶಿಕ್ಷಣ, ಕಲಾಶಿಕ್ಷಣ, ಗೃಹ ಅರ್ಥಶಾಸ್ತ್ರ ಶಿಕ್ಷಣ ಇತ್ಯಾದಿ ತರಗತಿಗಳಿಗೆ ಸೇರತಕ್ಕವರಿಗೆ ಅಲ್ಲಿ ಪೂರ್ವಭಾವಿ ಶಿಕ್ಷಣವನ್ನು ನೀಡಲಾಗುವುದು. ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿದ ವಿದ್ಯಾರ್ಥಿಗಳು ಆನ್ವಯಿಕ (ಅಪ್ಲೈಡ್) ವಿಜ್ಞಾನ ಶಿಕ್ಷಣ ಸಂಸ್ಥೆ, ವಾಣಿಜ್ಯ ಶಿಕ್ಷಣ ಸಂಸ್ಥೆ, ವ್ಯವಸಾಯ ಶಿಕ್ಷಣ ಸಂಸ್ಥೆ, ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸೇರಿ ವಿಶ್ವವಿದ್ಯಾಲಯಗಳ ವೃತ್ತಿ ಶಿಕ್ಷಣ ಪದವಿಗಳನ್ನು ಪಡೆಯಬಹುದು. ಪ್ರೌಢಶಾಲೆಯನ್ನು ಮುಗಿಸಿ ಪ್ರಾದೇಶಿಕ ಕೈಗಾರಿಕಾ ಪಾಠಶಾಲೆ ಅಥವಾ ವ್ಯವಸಾಯದ ಪಾಠಶಾಲೆಗಾದರೂ ಸೇರಬಹುದು.

**ಪ್ರಾಥಮಿಕಪೂರ್ವದ ಶಿಕ್ಷಣ:** ಸದ್ಯದಲ್ಲಿ ಪ್ರಾಥಮಿಕ ಪೂರ್ವದ ಶಿಕ್ಷಣವನ್ನು ಕಡ್ಡಾಯ ಮಾಡಿಲ್ಲ. ರಾಷ್ಟ್ರದ ಅನೇಕ ಭಾಗಗಳಲ್ಲಿ ಅದರ ಸೌಲಭ್ಯವೂ ಏರ್ಪಟ್ಟಿಲ್ಲ. ಸರ್ಕಾರ ಈ ಹಂತದ ಶಿಕ್ಷಣವನ್ನು ಇನ್ನೂ ತನ್ನ ಹೊಣೆಗಾರಿಕೆಗೆ ತೆಗೆದುಕೊಂಡಿಲ್ಲ. ಅಲ್ಲಲ್ಲಿ ಇರತಕ್ಕ ಸೌಲಭ್ಯಗಳು ಸರ್ಕಾರೇತರ ಸಂಸ್ಥೆಗಳಿಂದ ಏರ್ಪಟ್ಟಿರುತ್ತವೆ.

ಕೆನಡದಲ್ಲಿ ಫ್ರೋಬೆಲ್ಲನ ಕಿಂಡರ್‌ಗಾರ್ಟನ್ ಶಿಶುಶಾಲೆಗಳು ಪ್ರಚಾರದಲ್ಲಿವೆ. 18ನೆಯ ಶತಮಾನದ ಆದಿಯಲ್ಲೆ ಇಂಥ ಶಾಲೆಗಳು ಆರಂಭವಾಗಿದ್ದರೂ ಕಳೆದ ಅರ್ಧ ಶತಮಾನದಿಂದ ಅವು ಜನಪ್ರಿಯವಾಗುತ್ತಿವೆ. ಮಕ್ಕಳ ಸಾಮಾಜಿಕ, ಬೌದ್ಧಿಕ, ಭಾವಾತ್ಮಕ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ಇಂಥ ಸಂಸ್ಥೆಗಳು ಎಷ್ಟು ಅಗತ್ಯವೆಂಬುದನ್ನು ಅರಿತಂತೆ ಅವುಗಳ ಸಂಖ್ಯೆಯೂ ಹೆಚ್ಚುತ್ತಿದೆ. ಸಾಮಾನ್ಯವಾಗಿ ಈ ಶಾಲೆಗಳು ಮೂರು ವರ್ಷದ ಮಕ್ಕಳನ್ನು ಸೇರಿಸಿಕೊಂಡು ಆರು ವರ್ಷದ ತನಕ ಶಿಕ್ಷಣವೀಯುತ್ತವೆ.

**ಪ್ರಾಥಮಿಕ ಶಿಕ್ಷಣ :** ಪ್ರತಿ ಪ್ರಾಂತ್ಯವೂ ತನ್ನದೇ ಆದ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವುದರಿಂದ ಪ್ರಾಥಮಿಕ ಶಿಕ್ಷಣದ ಕಾಲಾವಧಿಯಲ್ಲಿ ಎಲ್ಲ ಪ್ರಾಂತ್ಯಗಳಲ್ಲೂ ಒಂದೇ ಸಮನಾಗಿಲ್ಲ. ಕಡ್ಡಾಯ ಶಿಕ್ಷಣದ ಕಾಲಾವಧಿಯಲ್ಲೂ ವ್ಯತ್ಯಾಸ ಕಂಡು ಬರುತ್ತದೆ. ಸಾಮಾನ್ಯವಾಗಿ 15-16ನೆಯ ವರ್ಷದ ತನಕ ಶಿಕ್ಷಣವನ್ನು ಕಡ್ಡಾಯ ಮಾಡಲಾಗಿದೆ. ಇದು ಪ್ರಾಂತೀಯ ಮತ್ತು ಪ್ರಾದೇಶಿಕ ಸ್ಥಿತಿಗತಿಗಳನ್ನನುಸರಿಸಿ ವ್ಯತ್ಯಾಸವಾಗುತ್ತದೆ. ಫೆಡರಲ್ ಸರ್ಕಾರ ಪ್ರಾಂತೀಯ ಸರ್ಕಾರಗಳಿಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಸಹಾಯಧನ ನೀಡುತ್ತಿಲ್ಲ. ಆದ್ದರಿಂದ ಕಡ್ಡಾಯ ಶಿಕ್ಷಣದ ಸೌಲಭ್ಯ ಆಯಾ ಪ್ರಾಂತ್ಯದ ಆರ್ಥಿಕ ಶಕ್ತಿಯನ್ನವಲಂಬಿಸಿ ಹೆಚ್ಚು ಕಡಿಮೆಯಾಗುತ್ತದೆ.

ಎಲ್ಲ ಪ್ರಾಂತ್ಯಗಳಲ್ಲೂ ಪ್ರಾಥಮಿಕ ಶಾಲೆಯ ಕಟ್ಟಡಗಳು ಸರಳವಾಗಿದ್ದರೂ ಅಲ್ಲಿಯ ಚಳಿಯ ವಾತಾವರಣದಿಂದ ಮಕ್ಕಳಿಗೆ ರಕ್ಷಣೆ ದೊರಕುವಂತೆ ನಿರ್ಮಾಣವಾಗಿವೆ. ಬಹುಮಟ್ಟಿಗೆ ಅವು ಒಂದಂತಸ್ತಿನ ಮಹಡಿ ಮನೆಗಳಾಗಿವೆ. ಅಲ್ಲಿ, ಒಳಭಾಗವನ್ನು ಶಾಖವಾಗಿರಿಸುವ ವ್ಯವಸ್ಥೆಯೂ ಗಾಳಿಬೆಳಕುಗಳು ಬರುವ ವ್ಯವಸ್ಥೆಯೂ ಸಮರ್ಪಕವಾಗಿ ಏರ್ಪಟ್ಟಿರುತ್ತವೆ. ಮಕ್ಕಳ ವೈದ್ಯಕೀಯ ಪರೀಕ್ಷೆಗೆಂದು ಪ್ರತ್ಯೇಕ ಕೊಠಡಿಯೊಂದಿರುತ್ತದೆ.

ಕೆನಡದಲ್ಲಿ ಒಂದೇ ಕೊಠಡಿಯ ಶಾಲೆಗಳೂ ಉಂಟು. ಅವು ಬಹುಮಟ್ಟಿಗೆ ಗ್ರಾಮಾಂತರ ಪ್ರದೇಶಗಳಲ್ಲಿದ್ದು ಸಂಖ್ಯೆಯಲ್ಲಿ 1500ಕ್ಕಿಂತ ಹೆಚ್ಚಾಗಿವೆ. ಈಚೆಗೆ ಅವುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಸಾಂಪ್ರದಾಯಿಕ ಪಠ್ಯವಿಷಯಗಳ ಬೋಧನೆಯ ಜೊತೆಗೆ ಮಕ್ಕಳಿಗೆ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶವನ್ನೂ ಅಲ್ಲಿ ಕಲ್ಪಿಸಲಾಗಿದೆ. ಯಾವ ಒಂದು ರೀತಿಯ ಬೋಧನ ಕ್ರಮವನ್ನು ಮಾಮೂಲಿಯಾಗಿ ಅನುಸರಿಸದೆ ಅಗತ್ಯಕ್ಕೆ ತಕ್ಕಂತೆ ವಿವಿಧ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಓದು ಬರೆಹ ಲೆಕ್ಕಗಳ ಜೊತೆಗೆ ಸಾಮಾನ್ಯ ವಿಜ್ಞಾನ, ಸಾಮಾಜಿಕ ಪಾಠ, ಇಂಗ್ಲಿಷ್ ಅಥವಾ

ಫ್ರೆಂಚ್ ಭಾಷೆ ಮತ್ತು ಸಾಹಿತ್ಯ, ಸಂಗೀತ, ಚಿತ್ರ ಬರೆಯುವುದು–ಇವು ಇಲ್ಲಿ ಬೋಧಿಸುವ ವಿಷಯಗಳು. 5,6ನೆಯ ತರಗತಿಗಳಿಂದ ಸಮಾಜ ಪಾಠವನ್ನು ಚರಿತ್ರೆ, ಭೂವಿವರಣೆ ಮುಂತಾದ ಪ್ರತ್ಯೇಕ ವಿಷಯಗಳಾಗಿ ಬೋಧಿಸುವುದುಂಟು. ಎಲ್ಲ ಪ್ರಾಂತ್ಯಗಳಲ್ಲೂ ಧಾರ್ಮಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದೆ. ಆದರೆ ಅದಕ್ಕಿರುವ ಕಾಲದ ಪ್ರಮಾಣ ವ್ಯತ್ಯಾಸವಾಗುತ್ತದೆ. ಕ್ವಿಬೆಕ್ಕಿನ ಕೆಥೊಲಿಕ್ ಶಾಲೆಗಳಲ್ಲಿ ಮಕ್ಕಳಿಗೆ ಪೂರ್ಣ ಪ್ರಮಾಣದ ಕಾರ್ಯಕ್ರಮವನ್ನು ಅದಕ್ಕಾಗಿ ಗೊತ್ತುಮಾಡಿದೆ. ಅದೇ ಪ್ರಾಂತ್ಯದ ಪ್ರಾಟೆಸ್ಟಂಟ್ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಅಷ್ಟೊಂದು ಕಾಲವನ್ನು ವಿನಿಯೋಗಿಸುವುದಿಲ್ಲ.

**ಪ್ರೌಢಶಿಕ್ಷಣ :** ಪ್ರೌಢಶಿಕ್ಷಣ ನಾಲ್ಕು ಅಥವಾ ಐದು ವರ್ಷದ್ದಾಗಿದ್ದು 85ರಿಂದ 140 ಐಕ್ಯು ಉಳ್ಳ ಬಾಲಕರನ್ನು ಆಕರ್ಷಿಸುತ್ತದೆ. ಪ್ರತಿ ಪ್ರಾಂತ್ಯದಲ್ಲೂ ಆಯಾ ಪ್ರಾಂತೀಯ ಸರ್ಕಾರದ ಶಿಕ್ಷಣ ಶಾಖೆ ಪ್ರೌಢಶಾಲೆಗೆ ಪಠ್ಯಕ್ರಮವನ್ನು, ಪಠ್ಯಪುಸ್ತಕಗಳನ್ನು ಗೊತ್ತು ಮಾಡುತ್ತದೆ. ಯಾವ ಪ್ರೌಢಶಾಲೆಯೇ ಆಗಲಿ ತನ್ನ ಅರ್ಹತಾ ಪತ್ರದ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಪ್ರವೇಶಕ್ಕೆ ಅರ್ಹತೆ ದೊರಕಿಸಿಕೊಡುವಂತಿಲ್ಲ. ಶಿಕ್ಷಣಶಾಖೆ ನಡೆಸುವ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಅಲ್ಲಿಗೆ ಪ್ರವೇಶಾವಕಾಶ ಸಿಕ್ಕುವುದು.

ಪ್ರೌಢಶಾಲೆಗಳಲ್ಲಿ ಮೂರು ಮಟ್ಟದ ಪಠ್ಯಕ್ರಮವನ್ನು ಅನುಸರಿಸಲಾಗುತ್ತದೆ. ತೀರ ಪ್ರತಿಭಾವಂತರಾಗಿದ್ದು ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ತೆರಳುವವರಿಗೇ ಒಂದು ಪಠ್ಯಕ್ರಮ ಪ್ರೌಢಶಾಲೆಯ ಅನಂತರ ಯಾವುದಾದರೂ ಉದ್ಯೋಗವನ್ನು ಆರಿಸಿಕೊಂಡು ಅದರಲ್ಲಿ ಶಿಕ್ಷಣ ಪಡೆಯುವವರಿಗೆ ಇನ್ನೊಂದು ಪಠ್ಯಕ್ರಮ; ಪ್ರೌಢಶಾಲೆಯ ಶಿಕ್ಷಣವನ್ನೇ ತಮ್ಮ ಅಂತಿಮ ಶಿಕ್ಷಣವೆಂದು ಭಾವಿಸಿ ಮುಂದೆ ವಿಶ್ವವಿದ್ಯಾಲಯಕ್ಕಾಗಲಿ ವೃತ್ತಿ ಶಿಕ್ಷಣಕ್ಕಾಗಲಿ ಹೋಗುವ ಬಯಕೆಯಿಲ್ಲದವರಿಗಾಗಿಯೇ ಇನ್ನೊಂದು ಪಠ್ಯಕ್ರಮ. ಪಠ್ಯಕ್ರಮದಲ್ಲಿ ಆಯಾ ಉದ್ದೇಶಕ್ಕೆ ತಕ್ಕಂತೆ ವ್ಯತ್ಯಾಸವನ್ನು ಕಲ್ಪಿಸಿದೆ. ವಿಶ್ವವಿದ್ಯಾಲಯಕ್ಕೆ ಹೋಗತಕ್ಕವರಿಗೆ ವಿಷಯಗಳ ಆಳವಾದ ಪರಿಚಯವೂ ವೃತ್ತಿಶಿಕ್ಷಣಕ್ಕೆ ಹೋಗತಕ್ಕವರಿಗೆ ಆಯಾ ವೃತ್ತಿಗೆ ನೆರವಾಗತಕ್ಕ ವೃತ್ತಿಪರ ವಿಷಯಗಳ ಪರಿಚಯವೂ ಸಿಕ್ಕಲವಕಾಶವಿದೆ. ವೃತ್ತಿಗಾಗಲೀ ವಿಶ್ವವಿದ್ಯಾಲಯಕ್ಕಾಗಲಿ ಹೋಗಲೆಳಸದವರಿಗೆ ವಿಷಯಗಳ ವಿಶಾಲವೂ ಸಾಮಾನ್ಯವೂ ಆದ ಪರಿಚಯವನ್ನು ಕೊಡಲಾಗುತ್ತದೆ. ಆದರೆ ಈ ಮೂರು ವಿಧವಾದ ಪಠ್ಯಕ್ರಮಗಳು ಎಲ್ಲ ಪ್ರೌಢಶಾಲೆಗಳಲ್ಲೂ ಇರುವುದಿಲ್ಲ. ಗ್ರಾಮಾಂತರ ಪಾಠಶಾಲೆಗಳಲ್ಲಿ ವೃತ್ತಿಪರ ಪಠ್ಯಕ್ರಮ ಅಷ್ಟಾಗಿ ಕಂಡುಬರುವುದಿಲ್ಲ. ಎಲ್ಲ ವಿದ್ಯಾರ್ಥಿಗಳೂ ಮೂಲ ಪಠ್ಯವಿಷಯಗಳನ್ನು (ಕೋರ್ ಸಬ್ಜೆಕ್ಟ್) ಕಡ್ಡಾಯವಾಗಿ ವ್ಯಾಸಂಗ ಮಾಡುವುದರ ಜೊತೆಗೆ ಐಚ್ಛಿಕ ವಿಷಯವನ್ನೂ ಅಧ್ಯಯನ ಮಾಡಬೇಕು.

ಪ್ರೌಢಶಾಲೆಗೆ ಸೇರಿದವರಲ್ಲಿ ಸುಮಾರು ಶೇ.59 ಬಾಲಕರೂ ಶೇ.51 ಬಾಲಕಿಯರೂ ಕಡ್ಡಾಯ ಶಿಕ್ಷಣದ ವಯೋಮಿತಿಯನ್ನು ಮುಟ್ಟಿದೊಡನೆ ಶಾಲೆಯನ್ನು ಬಿಟ್ಟು ಬಿಡುತ್ತಾರೆ. ಅವರೆಲ್ಲ ಕಡ್ಡಾಯ ಶಿಕ್ಷಣದ ವಯೋಮಿತಿಯನ್ನು ಮುಗಿಸುವುದಕ್ಕಾಗಿಯೇ ಶಿಕ್ಷಣವನ್ನು ಅಲ್ಲಿಯತನಕ ಮುಂದುವರಿಸತಕ್ಕವರು (ಲೀವರ್ಸ್).

ಕೆನಡದ ಪ್ರೌಢಶಾಲೆಗಳಲ್ಲಿ ಗ್ರಂಥಾಲಯ, ಪ್ರಯೋಗಾಲಯ, ಆಟಗಳು ಇವೆಲ್ಲಕ್ಕೂ ಒಳ್ಳೆಯ ವ್ಯವಸ್ಥೆ ಮಾಡಿರುತ್ತಾರೆ. ಈಚೆಗೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನದ ಕಾರ್ಯಕ್ರಮವನ್ನೂ ಆಚರಣೆಗೆ ತರಲಾಗಿದೆ.

ಕೆನಡದ ಗ್ರಾಮಾಂತರ ಪ್ರದೇಶಗಳಲ್ಲಿ 'ಕಾಂಪೊಸಿಟ್ ಹೈಸ್ಕೂಲು'ಗಳೆಂಬ ನೂತನ ಪ್ರೌಢಶಾಲೆಗಳು ಜನಪ್ರಿಯವಾಗುತ್ತಿವೆ. ಅಲ್ಲಿ ಗ್ರಾಮಜೀವನಕ್ಕೆ ಅಗತ್ಯವೆನಿಸುವ ಸಾಂಸ್ಕೃತಿಕ ಮತ್ತು ವೃತ್ತಿ ಶಿಕ್ಷಣವನ್ನು ಕೊಡುವುದರ ಜೊತೆಗೆ ಗ್ರಾಮಜೀವನಕ್ಕೆ ಹೊಂದಿಕೊಂಡು ಬಾಳುವ ಮನೋಭಾವವನ್ನೂ ಬೆಳೆಸಲಾಗುವುದು. ಜನರು ಒಳನಾಡಿನಿಂದ ಮಿತಿಯಿಲ್ಲದೆ ಬಂದು ನಗರಗಳನ್ನು ಸೇರಿಕೊಳ್ಳುವ ಪ್ರವೃತ್ತಿಯನ್ನು ತಪ್ಪಿಸಿ ಗ್ರಾಮಾಂತರ ಜನಜೀವನವನ್ನು ಸಮೃದ್ಧಗೊಳಿಸಲು ಈ ಶಾಲೆಗಳು ನೆರವಾಗುತ್ತಿವೆಯೆಂದು ಹೇಳಲಾಗಿದೆ.

**ಉನ್ನತ ಶಿಕ್ಷಣ :** ಕೆನಡದಲ್ಲಿ ಉನ್ನತ ಶಿಕ್ಷಣಕ್ಕಾಗಿ ಮೀಸಲಾಗಿರುವ ಸುಮಾರು ಮುನ್ನೂರು ಸಂಸ್ಥೆಗಳಿವೆ. ಅವೆಲ್ಲ ಒಂದಲ್ಲ ಒಂದು ವಿಶ್ವವಿದ್ಯಾಲಯದ ಪಠ್ಯಕ್ರಮವನ್ನು ಅನುಸರಿಸುತ್ತವೆ. ಅವುಗಳಲ್ಲಿ ಐವತ್ತು ಸಂಸ್ಥೆಗಳು ಪದವಿ ನೀಡುವ ಅಧಿಕಾರ ಪಡೆದಿವೆ. ಮಿಕ್ಕವು ಪದವಿ ನೀಡುವ ಸಂಸ್ಥೆಗಳ ಘಟಕ ಸಂಸ್ಥೆಗಳಾಗಿವೆ. ಪ್ರತಿಪ್ರಾಂತ್ಯವೂ ತನ್ನದೇ ಆದ ವಿಶ್ವವಿದ್ಯಾಲಯವನ್ನೊ ಅದರಂತೆ ಪದವಿ ನೀಡುವ ಕಾಲೇಜನ್ನೊ ಹೊಂದಿರುತ್ತದೆ. ಸಾಮಾನ್ಯವಾಗಿ ಎಲ್ಲ ವಿಶ್ವವಿದ್ಯಾಲಯಗಳೂ ಕಲೆ, ವಿಜ್ಞಾನ, ಎಂಜಿನಿಯರಿಂಗ್, ವೈದ್ಯ, ನ್ಯಾಯ ದೇವತಾಶಾಸ್ತ್ರ ಮುಂತಾದ ವಿಷಯಗಳ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಿವೆ. ಎರಡನೆಯ ಮಹಾಯುದ್ಧದವರೆಗೂ ಕೆನಡದಲ್ಲಿ ಸ್ನಾತಕೋತ್ತರ ತರಗತಿಗಳ ಶಿಕ್ಷಣ ಮತ್ತು ಸಂಶೋಧನೆ ಅಷ್ಟಾಗಿ ಅಭಿವೃದ್ಧಿಯಾಗಿರಲಿಲ್ಲ. ಟಾರಂಟೋ ಮತ್ತು ಮ್ಯಾಗಿಲ್ ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಆ ಸೌಲಭ್ಯ ಕಲ್ಪಿಸಲಾಗಿತ್ತು. ಆದ್ದರಿಂದ ಅಲ್ಲಿಯ ವಿದ್ಯಾರ್ಥಿಗಳು ಉಚ್ಚಶಿಕ್ಷಣಕ್ಕಾಗಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೊ ಯುರೋಪಿಗೊ ಹೋಗುತ್ತಿದ್ದರು. ಅಲ್ಲದೆ ಹಾಗೆ ಶಿಕ್ಷಣಕ್ಕಾಗಿ ಹೋದವರನೇಕರು ಆಯಾದೇಶಗಳಲ್ಲೆ ಉದ್ಯೋಗನಿರತರಾಗಿ ಮಾತೃಭೂಮಿಗೆ ಹಿಂದಿರುಗುತ್ತಿರಲಿಲ್ಲ. ಪ್ರತಿಭೆಯ ಈ ಸೋರುವಿಕೆಯನ್ನು (ಬ್ರೇನ್ ಡ್ರೇನ್) ತಪ್ಪಿಸಲು ಈಚೆಗೆ ಅನೇಕ ವಿಶ್ವವಿದ್ಯಾಲಯಗಳು ತಮ್ಮಲ್ಲೇ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಅವಕಾಶ ಕಲ್ಪಿಸಿಕೊಂಡಿವೆ.

ಹ್ಯಾಲಿಫ್ಯಾಕ್ಸ್‌ನ ಕಿಂಗ್ಸ್ ಕಾಲೇಜ್ (1789)ವಿಶ್ವವಿದ್ಯಾಲಯ ಮತ್ತು ಫೆಡರಿಕ್ಟನ್ನಿನ ನ್ಯೂ ಬ್ರನ್ಸ್‌ವಿಕ್ ವಿಶ್ವವಿದ್ಯಾಲಯ (1785) ಕೆನಡದ ಅತ್ಯಂತ ಹಳೆಯ ವಿಶ್ವವಿದ್ಯಾಲಯಗಳು. ಮ್ಯಾಗಿಲ್, ಟಾರಂಟೋ, ಕ್ವೀನ್ಸ್ ಮತ್ತು ಮ್ಯಾರಿಟೈಂ ಪ್ರಾಂತ್ಯಗಳು, ಕ್ವಿಬೆಕ್ ಮತ್ತು ಆಂಟೇರಿಯೋದಲ್ಲಿಯ ಧಾರ್ಮಿಕ ಸಂಪ್ರದಾಯದ ಕಾಲೇಜುಗಳು ರಾಜ್ಯಗಳ ಒಕ್ಕೂಟವಾಗುವ ವೇಳೆಗೆ ಆರಂಭವಾಗಿದ್ದವು. ಅನಂತರ ಪಶ್ಚಿಮ ಭಾಗದಲ್ಲಿರುವ ವಿಶ್ವವಿದ್ಯಾಲಯಗಳು ಸ್ಥಾಪನೆಯಾದವು. ಅವೆಲ್ಲ ಪ್ರಾಂತ್ಯ ಸರ್ಕಾರಗಳಿಂದ ಸ್ಥಾಪಿತವಾಗಿದ್ದು ರಾಜ್ಯದ ಹಣದಿಂದ ನಡೆದುಕೊಂಡು ಬರುತ್ತಿವೆ. ಅಲ್ಲಿ ಲೌಕಿಕ ಶಿಕ್ಷಣಕ್ಕೆ ಪ್ರಾಧಾನ್ಯವಿದ್ದು, ಅವೆಲ್ಲ ಪದವಿ ನೀಡುವ ಅಧಿಕಾರ ಪಡೆದಿವೆ. ಪಶ್ಚಿಮದ ಈ ವಿಶ್ವವಿದ್ಯಾಲಯಗಳಲ್ಲಿ ಮ್ಯಾನಿಟೋಬ ವಿಶ್ವವಿದ್ಯಾಲಯ ಟಾರಂಟೋ ವಿಶ್ವವಿದ್ಯಾಲಯದಂತೆ ಅತ್ಯಂತ ಹಳೆಯದಾಗಿದ್ದು ರಾಜ್ಯದ ಮತ್ತು ಧಾರ್ಮಿಕ ಸಂಸ್ಥೆಗಳ ಒಕ್ಕೂಟದಿಂದಾಗಿದೆ. ಆಲ್ಬರ್ಟ ಮತ್ತು ಸ್ಯಾಸ್ಕ್ಯಾಚೆವನ್ ವಿಶ್ವವಿದ್ಯಾಲಯಗಳು ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲಿ ಆರಂಭವಾದುವು. ಬ್ರಿಟಿಷ್ ಕೊಲಂಬಿಯ ವಿಶ್ವವಿದ್ಯಾಲಯ 20ನೆಯ ಶತಮಾನದ ಮಧ್ಯಭಾಗದಲ್ಲಿ ಆರಂಭವಾದದ್ದು.

ಫ್ರೆಂಚ್ ಮತ್ತು ಇಂಗ್ಲಿಷ್ ಭಾಷಾ ವಿಶ್ವವಿದ್ಯಾಲಯಗಳು ಕೆಲವು ಪ್ರಧಾನ ವ್ಯತ್ಯಾಸಗಳನ್ನು ವ್ಯಕ್ತಪಡಿಸುತ್ತವೆ. ಫ್ರೆಂಚ್ ಭಾಷಾ ವಿಶ್ವವಿದ್ಯಾಲಯಗಳು ಉದಾರ ಕಲಾಶಾಸ್ತ್ರಗಳು, ತತ್ತ್ವಶಾಸ್ತ್ರ, ಲಾಕ್ಷಣಿಕ ಶಾಸ್ತ್ರಗಳು, ಇತಿಹಾಸ, ಸಾಹಿತ್ಯ ಮುಂತಾದ ವಿಷಯಗಳ ವ್ಯಾಸಂಗಕ್ಕೆ ಮಹತ್ತ್ವ ನೀಡುತ್ತವೆ; ವೃತ್ತಿ ವಿದ್ಯೆಗಳನ್ನು ಆರಂಭಿಸಲಾಗಿದೆ. ಇವೆಲ್ಲ ಮುಖ್ಯವಾಗಿ ಕ್ವಿಬೆಕ್ ಪ್ರಾಂತ್ಯದಲ್ಲಿವೆ. ಇಂಗ್ಲಿಷ್ ಭಾಷಾ ವಿಶ್ವವಿದ್ಯಾಲಯಗಳು ಕ್ವಿಬೆಕ್ಕಿನಲ್ಲೂ ಇತರ ಪ್ರಾಂತ್ಯಗಳಲ್ಲೂ ಇವೆ. ಇಲ್ಲಿಯ ವಿದ್ಯಾರ್ಥಿಗಳು ಪ್ರಥಮ ಪದವಿಯನ್ನು ಪಡೆದ ಮೇಲೆ ಅಥವಾ ಅದರೊಂದಿಗೇ ಸ್ನಾತಕೋತ್ತರ ಶಿಕ್ಷಣವನ್ನೊ ವೃತ್ತಿಶಿಕ್ಷಣವನ್ನೊ ಪಡೆಯುವರು. ಇವುಗಳಲ್ಲಿ ವೃತ್ತಿ ವಿದ್ಯೆಗಳಿಗೂ ಅನ್ವಿತ ವಿಜ್ಞಾನಗಳಿಗೂ ಹೆಚ್ಚಿನ ಪ್ರಾಧಾನ್ಯವುಂಟು.

ಕೆನಡದಲ್ಲಿ ಎಷ್ಟು ವಿಶ್ವವಿದ್ಯಾಲಯಗಳಿವೆಯೆಂದು ನಿಖರವಾಗಿ ಹೇಳುವುದಾಗದು. ಏಕೆಂದರೆ ಅಲ್ಲಿಯ ವಿಶ್ವವಿದ್ಯಾಲಯಗಳಿಗೂ ಪದವಿ ನೀಡುವ ಕಾಲೇಜುಗಳಿಗೂ ವ್ಯತ್ಯಾಸ ಕಲ್ಪಿಸುವುದು ಕಷ್ಟ; ಅಲ್ಲದೆ ಅನೇಕ ಕಾಲೇಜುಗಳು ವಿಶ್ವವಿದ್ಯಾಲಯವೆಂಬ ಹೆಸರನ್ನೂ ಬಳಸುತ್ತವೆ. ವಿಶ್ವವಿದ್ಯಾಲಯವೆಂದು ಕರೆದುಕೊಳ್ಳುವ ಕೆಲವು ಸಂಸ್ಥೆಗಳು ತಮ್ಮವೇ ಆದ ಪದವಿಯನ್ನು ನೀಡುತ್ತಿಲ್ಲ. ಅಂತು ಕೆನಡಿಯನ್ ವಿಶ್ವವಿದ್ಯಾಲಯಗಳ ಸಂಘದಲ್ಲಿ ಒಟ್ಟು 36 ವಿಶ್ವವಿದ್ಯಾಲಯಗಳು ಪಟ್ಟಿಯಾಗಿವೆ.

ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಶುಲ್ಕ, ಶ್ರೀಮಂತರೂ ಸಂಘ ಸಂಸ್ಥೆಗಳೂ ನೀಡಿರುವ ಮುದುವಟ್ಟುಗಳು, ಪ್ರಾಂತೀಯ ಮತ್ತು ಫೆಡರಲ್ ಸರ್ಕಾರಗಳ ಸಹಾಯಧನ– ಈ ಆದಾಯ ಮೂಲಗಳಿಂದ ತಮ್ಮ ವೆಚ್ಚಕ್ಕೆ ಹಣವನ್ನು ಪಡೆದುಕೊಳ್ಳುತ್ತವೆ.

ಸಾಮಾನ್ಯವಾಗಿ ಎಲ್ಲ ವಿಶ್ವವಿದ್ಯಾಲಯಗಳೂ ಪ್ರಸಾರಾಂಗಗಳನ್ನು ಹೊಂದಿದ್ದು ವಿದ್ಯಾವಂತ ವಯಸ್ಕರಿಗೆ ವೃತ್ತಿ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ಮುಂದುವರಿದ ಶಿಕ್ಷಣವನ್ನು ನೀಡುತ್ತವೆ.

**ವೃತ್ತಿ ಮತ್ತು ಔದ್ಯೋಗಿಕ ಶಿಕ್ಷಣ :** ಕೆನಡದಲ್ಲಿ ವೃತ್ತಿ ಮತ್ತು ಉದ್ಯೋಗ ಶಿಕ್ಷಣಗಳು ವಿಶ್ವವಿದ್ಯಾಲಯದ ಪೂರ್ವದ ಹಂತದಲ್ಲಿ ಪ್ರಾಂತೀಯ ಸರ್ಕಾರಗಳಿಗೆ ಸೇರಿವೆ. ಬಹುಮಟ್ಟಿಗೆ ಅದೆಲ್ಲ 20ನೆಯ ಶತಮಾನದ ಆರಂಭದಿಂದ ಅಸ್ತಿತ್ವಕ್ಕೆ ಬಂದಿದೆ. 1910 ರಿಂದ ಫೆಡರಲ್ ಸರ್ಕಾರ ಪ್ರಾಂತ್ಯ ಸರ್ಕಾರಗಳ ಈ ಉದ್ಯಮದಲ್ಲಿ ಆಸಕ್ತಿ ತೋರುತ್ತ ಬಂದಿದೆ. ಆದರೆ ಪ್ರಾಂತೀಯ ಸರ್ಕಾರಗಳ ಹಕ್ಕಿಗೆ ಕುಂದು ಬರದಂತೆ, ತಾನು ಧನಸಹಾಯ, ತಜ್ಞರ ನೆರವು ಮುಂತಾದವನ್ನು ಮಾತ್ರ ನೀಡುತ್ತಿದೆ.

ಒಂದನೆಯ ಮಹಾಯುದ್ಧದವರೆಗೂ ವೃತ್ತಿ ಮತ್ತು ಶಿಕ್ಷಣದಲ್ಲಿ ಜನತೆಗೆ ಆಸಕ್ತಿಯಿರಲಿಲ್ಲ. ಹಾಗೂ ಮಂದಬುದ್ಧಿಯ ಮಕ್ಕಳನ್ನು ಮುಖ್ಯವಾಗಿ ಆ ಶಿಕ್ಷಣಕ್ಕೆ ಸೇರಿಸುತ್ತಿದ್ದುದರಿಂದ ಅದರ ಬಗ್ಗೆ ಜನತೆಗೆ ಗೌರವವೂ ಇರಲಿಲ್ಲ. ರಾಷ್ಟ್ರದ ಅಭಿವೃದ್ಧಿಗೆ ವೃತ್ತಿ ಮತ್ತು ಔದ್ಯೋಗಿಕ ಶಿಕ್ಷಣ ಅಗತ್ಯವಾದಂತೆ ಎಲ್ಲಮಟ್ಟದ ಬುದ್ಧಿಶಕ್ತಿಯವರೂ ಆ ಶಿಕ್ಷಣವನ್ನು ಆರಿಸಿಕೊಳ್ಳುವಂತಾಗಿ ಈಗ ಅದರ ಬಗ್ಗೆ ಗೌರವ ಹೆಚ್ಚುತ್ತ ಬರುತ್ತಿದೆ. ಎರಡನೆಯ ಮಹಾಯುದ್ಧದ ಕಾಲದಲ್ಲಿ ವೃತ್ತಿ ಮತ್ತು ಉದ್ಯೋಗ ಶಿಕ್ಷಣ ಪಡೆದವರ ಅಗತ್ಯ ಹೆಚ್ಚಾಗಿ ಅಂದಿನಿಂದ ಪ್ರಾಂತ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಅವಕ್ಕೂ ಪ್ರಧಾನಸ್ಥಾನ ದೊರಕಿತು.

ಕಾಂಪೊಸಿಟ್ ಹೈಸ್ಕೂಲುಗಳು ವಾಣಿಜ್ಯ, ಕೈಗಾರಿಕೆ, ವ್ಯವಸಾಯ, ಗೃಹ ಅರ್ಥಶಾಸ್ತ್ರ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಶಿಕ್ಷಣವನ್ನು ನೀಡುತ್ತವೆ. ನೋವಸ್ಕೋಷ, ನ್ಯೂ ಬ್ರನ್ಸ್‌ವಿಕ್, ವಿನಿಪೆಗ್, ವ್ಯಾಂಕೂವರ್, ಕ್ವಿಬೆಕ್ ಪ್ರಾಂತ್ಯಗಳಲ್ಲಿ ಒಂದೊಂದು ಅಥವಾ ಎರಡೆರಡು ವೊಕೇಷನಲ್ ಅಥವಾ ಟೆಕ್ನಿಕಲ್ ಹೈಸ್ಕೂಲುಗಳೆಂಬ ಪ್ರೌಢಶಾಲೆಗಳಿವೆ.

ಆದರೂ ಅವು ಜೊತೆಯಲ್ಲಿ ಸಾಂಸ್ಕೃತಿಕ ಶಿಕ್ಷಣವನ್ನೂ ನೀಡುತ್ತಿವೆ. ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದ ವೃತ್ತಿಶಿಕ್ಷಣ ಅಲ್ಲೆಲ್ಲ ಪ್ರಿಯವೆನಿಸಿದೆ. ಗೃಹ ಅರ್ಥಶಾಸ್ತ್ರ ಅಷ್ಟಾಗಿ ವಿದ್ಯಾರ್ಥಿನಿಯರನ್ನು ಆಕರ್ಷಿಸುತ್ತಿಲ್ಲ.

ಟ್ರೇಡ್ ಸ್ಕೂಲುಗಳು ಅಥವಾ ಟೆಕ್ನಿಕಲ್ ಇನ್ಸ್ಟಿಟ್ಯೂಟುಗಳು ಎಂಬ ಸಂಸ್ಥೆಗಳು ತಾಂತ್ರಿಕ ಹಾಗೂ ಉದ್ಯೋಗ ವಿಜ್ಞಾನದಲ್ಲಿ ಶಿಕ್ಷಣವೀಯುತ್ತವೆ. ಅಲ್ಲಿಗೆ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿದವರಿಗೆ ಪ್ರವೇಶಾವಕಾಶವುಂಟು. ಪದವೀ ಮಟ್ಟದ ಹಂತದಲ್ಲಿ ವೃತ್ತಿ ಮತ್ತು ತಾಂತ್ರಿಕ ಶಿಕ್ಷಣವನ್ನು ನೀಡತಕ್ಕ ಕಾಲೇಜುಗಳನ್ನು ಆಗಲೆ ಸೂಚಿಸಿದೆ.

ಕೆನಡದಲ್ಲಿ ಎಲ್ಲ ವೃತ್ತಿ ಮತ್ತು ಉದ್ಯೋಗ ಶಿಕ್ಷಣ ಸಂಸ್ಥೆಗಳೊಡನೆಯೂ ಉದ್ಯೋಗಗಳು ಸಹಕರಿಸುತ್ತವೆ. ಹಲವು ಕಾರ್ಖಾನೆಗಳೂ ವಾಣಿಜ್ಯ ಸಂಸ್ಥೆಗಳೂ ವಿದ್ಯಾರ್ಥಿಗಳಿಗೆ ಉಮೇದುವಾರಿ ಶಿಕ್ಷಣ ನೀಡುತ್ತವೆ. ಅಲ್ಲಿಯ ಶಿಕ್ಷಣದ ಮೇಲ್ವಿಚಾರಣೆಯನ್ನು ಪ್ರಾಂತೀಯ ಕಾರ್ಮಿಕ ಶಾಖೆಯ ಅಧಿಕಾರಿಗಳು ನೋಡಿಕೊಳ್ಳುತ್ತಾರೆ.

ವೃತ್ತಿ ಮತ್ತು ಉದ್ಯೋಗ ಶಿಕ್ಷಣದ ವೆಚ್ಚವನ್ನು ಪ್ರಾಂತೀಯ ಮತ್ತು ಫೆಡರಲ್ ಸರ್ಕಾರಗಳೆರಡೂ ವಹಿಸಿಕೊಳ್ಳುತ್ತವೆ. ಫೆಡರಲ್ ಸರ್ಕಾರ ಕೆನಡಿಯನ್ ವೊಕೇಷನಲ್ ಟ್ರೈನಿಂಗ್ ಎಂಬ ಶಾಖೆಯನ್ನು ಹೊಂದಿದ್ದು ಆ ಶಾಖೆಯ ಮೂಲಕ ಪ್ರಾಂತೀಯ ಸರ್ಕಾರಕ್ಕೆ ಧನಸಹಾಯವನ್ನು ಹಂಚುತ್ತದೆ. ಪ್ರತಿ ಪ್ರಾಂತ್ಯದಲ್ಲೂ ಆ ಶಾಖೆ ತನ್ನ ಪ್ರತಿನಿಧಿಯನ್ನು ಹೊಂದಿದ್ದು ಆ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರೊಡನೆ ಸಂಪರ್ಕವಿಟ್ಟುಕೊಂಡಿದೆ.

**ಖಾಸಗಿ ಶಿಕ್ಷಣಸಂಸ್ಥೆಗಳು :** ಕೆನಡದಲ್ಲಿ ಸುಮಾರು ಒಂದು ಸಹಸ್ರ ಖಾಸಗಿ ವಿದ್ಯಾಲಯಗಳಿವೆ. ಅವುಗಳಲ್ಲಿ 16 ವಿಶ್ವವಿದ್ಯಾಲಯಗಳು, 163 ಕಾಲೇಜುಗಳು, 828 ಪಾಠಶಾಲೆಗಳು. ಕ್ವಿಬೆಕ್ಕಿನವಲ್ಲದೆ ಮತ್ತಾವ ಶಾಲೆಗಳೂ ಸರ್ಕಾರದ ಬೊಕ್ಕಸದಿಂದ ಧನಸಹಾಯವನ್ನು ಪಡೆಯುವುದಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳೆಲ್ಲ ವಿದ್ಯಾರ್ಥಿಗಳನ್ನು ಅಧಿಕ ಸಂಖ್ಯೆಯಲ್ಲಿ ಸೇರಿಸಿಕೊಳ್ಳದೆ ಆಯ್ದ ಕೆಲವರಿಗೆ ಮಾತ್ರ ಪ್ರವೇಶಾವಕಾಶವನ್ನು ಮಿತಿಗೊಳಿಸಿಕೊಳ್ಳುತ್ತಿವೆ. ಬಹುಮಟ್ಟಿಗೆ ಅವು ತಮ್ಮದೇ ಆದ ವ್ಯವಸ್ಥೆಯನ್ನೂ ಬೋಧನ ಕ್ರಮವನ್ನೂ ಆಚರಣೆಗೆ ತಂದಿವೆ. ಮಕ್ಕಳ ಮನಸ್ಸು, ಹೃದಯ ಮತ್ತು ಆತ್ಮ ಇವುಗಳ ಸಂಸ್ಕಾರದ ಮೂಲಕ ಜೀವನದ ವಿವಿಧ ಕ್ಷೇತ್ರಗಳಿಗೆ ಅಗತ್ಯವಾದ ನಾಯಕತನಕ್ಕೆ ಶಿಕ್ಷಣವೀಯುವುದೇ ಇವುಗಳ ಗುರಿ. ಧಾರ್ಮಿಕ ಶಿಕ್ಷಣ ನೀಡಿದ ಕೀರ್ತಿಗೆ ಹೆಸರಾಗಿವೆ. ಇವನ್ನು ಇಂಗ್ಲೆಂಡಿನ ಪಬ್ಲಿಕ್ ಸ್ಕೂಲುಗಳಿಗೆ ಹೋಲಿಸುವುದುಂಟು.

**ವಯಸ್ಕರ ಶಿಕ್ಷಣ :** ವಯಸ್ಕರಲ್ಲಿ ಅಕ್ಷರ ಪ್ರಚಾರಕ್ಕಾಗಿ ರೂಪುಗೊಂಡಿರುವ ಸಂಸ್ಥೆಗಳು ಕೆನಡದಲ್ಲಿ ಇಲ್ಲ. ಹಾಗೂ ಸಮಾಜ ಶಿಕ್ಷಣವನ್ನೇ ಪ್ರಧಾನ ಕಾರ್ಯಕ್ರಮವನ್ನಾಗಿ ಹೊಂದಿರುವ ಸಂಸ್ಥೆಗಳೂ ಅಪರೂಪ. ಆದರೆ ತಮ್ಮ ಮುಖ್ಯ ಕರ್ತವ್ಯದ ಜೊತೆಗೆ ಗೌಣವಾಗಿ ಆ ಕಾರ್ಯಕ್ರಮವನ್ನೂ ಅಳವಡಿಸಿಕೊಂಡಿರುವ ಬೇರೆ ಬೇರೆ ಸಂಸ್ಥೆಗಳಿವೆ. ವಿಶ್ವವಿದ್ಯಾಲಯಗಳು, ಕಾಲೇಜುಗಳು, ಶಾಲಾಮಂಡಲಿಗಳು, ಸರ್ಕಾರದ ಕೆಲವು ಸೇವಾಶಾಖೆಗಳು, ಖಾಸಗಿ ಸ್ವಯಂಸಂಸ್ಥೆಗಳು–ಇವು ಸಮಾಜಶಿಕ್ಷಣವನ್ನು ತಮ್ಮ ಪ್ರಧಾನ ಕಾರ್ಯಕ್ಕೆ ಗೌಣವಾಗಿಯೊ ಪ್ರಾಸಂಗಿಕವಾಗಿಯೊ ನಿರ್ವಹಿಸುತ್ತವೆ. ವಿಶ್ವವಿದ್ಯಾಲಯಗಳು ಅದಕ್ಕಾಗಿ ಪ್ರಸಾರಾಂಗಗಳನ್ನು ಸ್ಥಾಪಿಸಿಕೊಂಡಿವೆ; ಪ್ರಾಂತೀಯ ಸರ್ಕಾರಗಳು ಸಾಮುದಾಯಿಕ ಯೋಜನೆ (ಕಮ್ಯುನಿಟಿ ಪ್ರಾಜೆಕ್ಟ್), ವಯಸ್ಕರ ಶಿಕ್ಷಣ ಅಥವಾ ಸಾಂಸ್ಕೃತಿಕ ಕಾರ್ಯಕ್ರಮ ಇತ್ಯಾದಿ ಉದ್ದೇಶಗಳಿಗಾಗಿ ಪ್ರತ್ಯೇಕ ಆಡಳಿತ ಶಾಖೆಗಳನ್ನು ಹೊಂದಿದೆ. ಕೆನಡದ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್, ಕೆನಡದ ರಾಷ್ಟ್ರೀಯ ಚಲನ ಚಿತ್ರಮಂಡಲಿ, ಕೆನಡದ ರಾಷ್ಟ್ರೀಯ ವಸ್ತು ಸಂಗ್ರಹಾಲಯ, ರಾಷ್ಟ್ರೀಯ ಚಿತ್ರಶಾಲೆ, ಪ್ರಾಂತೀಯ ವಸ್ತು ಸಂಗ್ರಹಾಲಯಗಳು, ಗ್ರಂಥಾಲಯಗಳು–ಇವೆಲ್ಲ ತಮ್ಮ ತಮ್ಮ ಕಾರ್ಯದ ಅಂಗವಾಗಿ ವಯಸ್ಕರ ಶಿಕ್ಷಣವನ್ನು ನಿರ್ವಹಿಸುತ್ತಿವೆ. ಕೆನಡಿಯನ್ ಅಸೋಸಿಯೇಷನ್ ಫಾರ್ ಅಡಲ್ಟ್ ಎಜುಕೇಷನ್ ಮತ್ತು ಇನ್ಸ್ಟಿಟ್ಯೂಟ್ ಕೆನೇಡಿಯನ್ ಡೆಸ್ ಅಡಲ್ಟಿಸ್ ಎಂಬೆರಡು ಸಂಸ್ಥೆಗಳು ಮೇಲೆ ಸೂಚಿಸಿದ ವಿವಿಧ ಸಂಘ ಸಂಸ್ಥೆಗಳ ಶೈಕ್ಷಣಿಕ ಪ್ರಯತ್ನಗಳನ್ನು ಸಮನ್ವಯಗೊಳಿಸಿಕೊಂಡು ಅವೆಲ್ಲ ಒಂದಕ್ಕೊಂದಕ್ಕೆ ಪೂರಕವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುತ್ತವೆ.

**ಅಧ್ಯಾಪಕರ ವೃತ್ತಿ ಶಿಕ್ಷಣ :** ಪ್ರಾಥಮಿಕ ಶಾಲೆಯ ಅಧ್ಯಾಪಕರು ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ ಒಂದು ವರ್ಷದ ವೃತ್ತಿ ಶಿಕ್ಷಣವನ್ನಾದರೂ ಪಡೆದಿರಬೇಕೆಂದೂ ಪ್ರೌಢಶಾಲೆಯ ಅಧ್ಯಾಪಕರು ವಿಶ್ವವಿದ್ಯಾಲಯದ ಪದವಿಯನ್ನು ಪಡೆದಿದ್ದು ಒಂದು ವರ್ಷದ ವೃತ್ತಿ ಶಿಕ್ಷಣವನ್ನು ಪಡೆದಿರಬೇಕೆಂದೂ ಅನೇಕ ಪ್ರಾಂತ್ಯಗಳಲ್ಲಿ ನಿಯಮ ಮಾಡಲಾಗಿದೆ. ಎರಡನೆಯ ಮಹಾಯುದ್ಧದ ಅನಂತರ ಅಧ್ಯಾಪಕರು ದೊರಕುವುದು ದುರ್ಲಭವಾದುದರಿಂದ ಈ ನಿಯಮವನ್ನು ಕೆಲವು ಪ್ರಾಂತಗಳಲ್ಲಿ ಸಡಿಲಿಸಲಾಗುತ್ತಿದೆ.

ಪ್ರಾಥಮಿಕ ಶಾಲೆಯ ಅಧ್ಯಾಪಕರ ವೃತ್ತಿ ಶಿಕ್ಷಣಕ್ಕಾಗಿ ನಾರ್ಮಲ್ ಸ್ಕೂಲುಗಳು ವ್ಯವಸ್ಥೆಗೊಂಡಿವೆ. ಸಾಮಾನ್ಯವಾಗಿ ಜೂನಿಯರ್ ಅಥವಾ ಸೀನಿಯರ್ ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿದವರಿಗೆ ಅಲ್ಲಿಗೆ ಸೇರಲು ಅವಕಾಶ ನೀಡಲಾಗುವುದು. ಅನೇಕ ಪ್ರಾಂತ್ಯಗಳಲ್ಲಿ ಆ ಶಿಕ್ಷಣ ಒಂದು ವರ್ಷದ ಕಾಲಾವಧಿಯದು. ಕ್ವಿಬೆಕ್ಕಿನ ಕಥೊಲಿಕ್ ನಾರ್ಮಲ್ ಸ್ಕೂಲುಗಳಲ್ಲಿ ಅಧ್ಯಾಪಕರಿಗೆ ಮೂರು ವರ್ಷದ ವೃತ್ತಿ ಶಿಕ್ಷಣದ ವ್ಯವಸ್ಥೆಯುಂಟು. ಅಧ್ಯಾಪಕರ ಕೊರತೆಯನ್ನು ನೀಗಲು ಪ್ರವೇಶಾರ್ಹತೆಯನ್ನು ತಗ್ಗಿಸಿರುವುದೂ ಉಂಟು; ಅಲ್ಪಾವಧಿಯ ವೃತ್ತಿಶಿಕ್ಷಣ ಕಾರ್ಯಕ್ರಮಗಳೂ ಆಚರಣೆಯಲ್ಲಿವೆ.

ಪ್ರೌಢಶಾಲೆಯ ಶಿಕ್ಷಕರ ವೃತ್ತಿ ಶಿಕ್ಷಣ ವಿದ್ಯಾಲಯಗಳಲ್ಲೂ ನೀಡಲಾಗುತ್ತಿದೆ. ಅದು ಒಂದು ವರ್ಷದ ಕಾಲಾವಧಿಯದು. ಆ ಮಟ್ಟದ ಶಿಕ್ಷಣವನ್ನು ಬಿ.ಎಡ್. ಪದವಿಗೆ ಹೋಲಿಸಬಹುದು. ಅದನ್ನು ಮುಗಿಸಿದವರಿಗೆ ಎರಡು ವರ್ಷದ ಮಾಸ್ಟರ್ ಪದವಿಯ ಶಿಕ್ಷಣವನ್ನು ವ್ಯವಸ್ಥೆಗೊಳಿಸಿದೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಮೂರು ವರ್ಷದ ಡಾಕ್ಟೊರೇಟ್ ಪದವಿಯ ಶಿಕ್ಷಣಕ್ಕೂ ಸೌಲಭ್ಯ ಕಲ್ಪಿಸಿದೆ.

ಈಚೆಗೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರ ವೃತ್ತಿಶಿಕ್ಷಣವನ್ನು ಒಂದೇ ಸಂಸ್ಥೆಯಲ್ಲಿ ಏರ್ಪಡಿಸುವ ಪ್ರವೃತ್ತಿ ಕಂಡುಬರುತ್ತಿದೆ. ಆಲ್ಬರ್ಟ ಮುಂತಾದೆಡೆಗಳಲ್ಲಿ ಎಲ್ಲ ಮಟ್ಟದ ಅಧ್ಯಾಪಕರ ಶಿಕ್ಷಣವನ್ನೂ ವಿಶ್ವವಿದ್ಯಾಲಯವೇ ವ್ಯವಸ್ಥೆಗೊಳಿಸುತ್ತಿದೆ.

ಕೆನಡದಲ್ಲಿ ಪ್ರಾಥಮಿಕ ಶಿಕ್ಷಕರ ಕೊರತೆ ಅತಿಯಾಗಿದ್ದು ಅದನ್ನು ನಿವಾರಿಸಲು ಅಧ್ಯಾಪಕರ ವೃತ್ತಿಶಿಕ್ಷಣಕ್ಕೆ ಸೇರತಕ್ಕವರ ವಿದ್ಯಾರ್ಹತೆಯನ್ನು ಕಡಿಮೆ ಮಾಡಿ ಅಭ್ಯರ್ಥಿಗಳಿಗೆ ಆರ್ಥಿಕ ನೆರವನ್ನೂ ನೀಡಲಾಗುತ್ತಿದೆ; ಅಲ್ಪಾವಧಿಯ ವೃತ್ತಿ ಶಿಕ್ಷಣದ ಕಾರ್ಯಕ್ರಮಗಳನ್ನೂ ಏರ್ಪಡಿಸುವುದರೊಂದಿಗೆ ಪರದೇಶದ ಅಧ್ಯಾಪಕರನ್ನೂ ನೇಮಿಸಿಕೊಳ್ಳಲಾಗುತ್ತಿದೆ.

**ಶಿಕ್ಷಣದ ವೆಚ್ಚ :** ಶಿಕ್ಷಣಕ್ಕಾಗಿ ಕೆನಡ ಸದ್ಯದಲ್ಲಿ ವರ್ಷಂಪ್ರತಿ ಸುಮಾರು ನೂರು ಕೋಟಿ ಡಾಲರ್ ವೆಚ್ಚ ಮಾಡುತ್ತಿದೆ. ಇದು ರಾಷ್ಟ್ರದ ಒಟ್ಟು ಆದಾಯದಲ್ಲಿ ಶೇಕಡ ಮೂರರಷ್ಟಾಗುತ್ತದೆ. ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 35 ಲಕ್ಷ ವಿದ್ಯಾರ್ಥಿಗಳೂ ಖಾಸಗಿ ಶಾಲೆಗಳಲ್ಲಿ 14½ ಲಕ್ಷ ವಿದ್ಯಾರ್ಥಿಗಳೂ ವ್ಯಾಸಂಗ ಮಾಡುತ್ತಿದ್ದಾರೆ. ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ 5 ಲಕ್ಷ ಮಂದಿಯೂ ವಿಶ್ವವಿದ್ಯಾಲಯಗಳಲ್ಲಿ ಸುಮಾರು ಒಂದು ಲಕ್ಷ ಮಂದಿಯೂ ವ್ಯಾಸಂಗ ಮಾಡುತ್ತಿದ್ದಾರೆ. ಸುಮಾರು 1½ ಲಕ್ಷ ಮಂದಿ ಅಧ್ಯಾಪಕರೂ ಪ್ರಾಧ್ಯಾಪಕರೂ ರಾಷ್ಟ್ರದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸುಮಾರು ಎರಡು ಕೋಟಿ ಜನಸಂಖ್ಯೆಯುಳ್ಳ ಈ ದೇಶದಲ್ಲಿ ಶಿಕ್ಷಣೋದ್ಯಮದಲ್ಲಿ ಸುಮಾರು ಕಾಲುಭಾಗದಷ್ಟು ಮಂದಿ (ವಿದ್ಯಾರ್ಥಿಗಳೂ ಅಧ್ಯಾಪಕರೂ) ತೊಡಗಿರುವುದರಿಂದ ಶಿಕ್ಷಣ ಇಲ್ಲಿಯ ಪ್ರಮುಖ ಉದ್ಯೋಗದಂತಾಗಿದೆ.

ಶಿಕ್ಷಣದಲ್ಲಿ ಫೆಡರಲ್ ಸರ್ಕಾರದ ಆಸಕ್ತಿ: ಶಿಕ್ಷಣ ಪ್ರಾಂತೀಯ ಸರ್ಕಾರದ ಹೊಣೆಯಾಗಿದ್ದರೂ ಫೆಡರಲ್ ಸರ್ಕಾರವೂ ಕೆಲವು ವಿಶಿಷ್ಟ ಕ್ಷೇತ್ರದಲ್ಲಿ ನೇರವಾದ ಹೊಣೆಯನ್ನು ಹೊತ್ತಿದೆ. ವಾಯವ್ಯ ಪ್ರದೇಶಗಳಲ್ಲಿ ಅದು ಕೆಲವು ಪಾಠಶಾಲೆಗಳನ್ನು ತಾನೇ ನಡೆಸುತ್ತಿದೆ; ಅಲ್ಲಿಯ ಇನ್ನುಳಿದ ಶಾಲೆಗಳನ್ನು ನಡೆಸುತ್ತಿರುವ ಮಿಷನರಿ ಸಂಸ್ಥೆಗಳಿಗೆ ಸಹಾಯಧನವನ್ನು ನೀಡುತ್ತದೆ; ಇವೆರಡು ಕಾರ್ಯಗಳನ್ನೂ ಫೆಡರಲ್ ಸರ್ಕಾರದ ಉತ್ತರ ಭಾಗದ ವ್ಯವಹಾರಗಳ ಮತ್ತು ನೈಸರ್ಗಿಕ ಸಂಪನ್ಮೂಲಗಳ ಶಾಖೆ ನಿರ್ವಹಿಸುತ್ತಿದೆ; ಇಡಿ ಕೆನಡದಲ್ಲಿ ಇಂಡಿಯನ್ನರ ಮಕ್ಕಳಿಗಾಗಿ ಏರ್ಪಡಿಸಿರುವ ಶಾಲೆಗಳನ್ನು ಇಂಡಿಯನ್ನರ ವ್ಯವಹಾರ ಶಾಖೆ ನೋಡಿಕೊಳ್ಳುತ್ತಿದೆ. ಈ ಶಾಲೆಗಳಲ್ಲಿ ಕೆಲವು ಸಾಮಾನ್ಯ ಪಾಠಶಾಲೆಗಳು; ಇನ್ನು ಕೆಲವು ವಸತಿ ವಿದ್ಯಾಲಯಗಳು. ವಸತಿ ವಿದ್ಯಾಲಯಗಳನ್ನು ಸಾಮಾನ್ಯವಾಗಿ ಯಾವುದಾದರೂ ಧಾರ್ಮಿಕ ಸಂಸ್ಥೆ ನಡೆಸುತ್ತಿದೆ. ಆ ಸಂಸ್ಥೆಗೆ ಅಲ್ಲಿ ಶಿಕ್ಷಣ ಪಡೆಯುತ್ತಿರುವ ಇಂಡಿಯನ್ನರ ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಫೆಡರಲ್ ಸರ್ಕಾರ ಧನಸಹಾಯವನ್ನು ನೀಡುತ್ತಿದೆ. (ಎನ್.ಎಸ್.ವಿ.)

**ಕೆನಡದ ಸಂವಿಧಾನ ಮತ್ತು ಆಡಳಿತ ವ್ಯವಸ್ಥೆ :** ಕೆನಡದ ಇಂದಿನ ಸಂವಿಧಾನ 1867ರ ಬ್ರಿಟಿಷ್ ಉತ್ತರ ಅಮೆರಿಕ ಅಧಿನಿಯಮವನ್ನೆ ಆಧಾರವಾಗಿಟ್ಟುಕೊಂಡು ರೂಪಿತವಾಗಿದೆ. ಈ ಅಧಿನಿಯಮದ ಪ್ರಕಾರ ಅಂದು ಅಸ್ತಿತ್ವದಲ್ಲಿದ್ದ ನಾಲ್ಕು ಪ್ರಾಂತ್ಯಗಳನ್ನು ಒಟ್ಟುಗೂಡಿಸಿ ಕೆನಡ ಅಧಿರಾಜ್ಯ ಎಂಬ ಸಂಯುಕ್ತರಾಜ್ಯವನ್ನು ನಿರ್ಮಿಸಲಾಯಿತು. ನ್ಯೂ ಬ್ರನ್‌ಸ್‌ವಿಕ್, ನೋವ ಸ್ಕೋಷ, ಆಂಟೇರಿಯೋ, ಕ್ವಿಬೆಕ್ ಇವೇ ಅಂದಿನ ನಾಲ್ಕು ಪ್ರಾಂತ್ಯಗಳು. ಈ ಸಂಯುಕ್ತರಾಜ್ಯ ವ್ಯವಸ್ಥೆ ಇಂದಿಗೂ ಅಸ್ತಿತ್ವದಲ್ಲಿದೆ. ಕೆನಡದ ಸಂವಿಧಾನ ತಾತ್ತ್ವಿಕವಾಗಿ ಬ್ರಿಟನಿನ ಸಂವಿಧಾನಕ್ಕನುಗುಣವಾಗಿಯೇ ಇರಬೇಕೆಂದು ಇದರಲ್ಲಿ ನಮೂದಿಸಲಾಗಿತ್ತು. ಅದರಂತೆ ಕೆನಡ ಸಂಯುಕ್ತರಾಜ್ಯದ ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಗಳು ಮತ್ತು ಆಡಳಿತ ವ್ಯವಸ್ಥೆ ಬ್ರಿಟಿಷ್ ಮಾದರಿಯಲ್ಲಿಯೇ ರೂಪಿತವಾಗಿವೆ. ಇಂದು ಕೆನಡ ಸಂಯುಕ್ತರಾಜ್ಯದ ಪ್ರಾಂತ್ಯಗಳ ಸಂಖ್ಯೆ ನಾಲ್ಕರಿಂದ ಹತ್ತಕ್ಕೆ ಏರಿದೆ. ನ್ಯೂ ಫೌಂಡ್‌ಲೆಂಡ್, ನೋವ ಸ್ಕೋಷ, ನ್ಯೂ ಬ್ರನ್‌ಸ್‌ವಿಕ್, ಪ್ರಿನ್ಸ್ ಎಡ್ವರ್ಡ್ ಐಲೆಂಡ್, ಕ್ವಿಬೆಕ್, ಆಂಟೇರಿಯೋ, ಮ್ಯಾನಿಟೋಬ, ಸ್ಯಾಸ್ಕ್ಯಾಚೆವನ್, ಆಲ್ಬರ್ಟ ಮತ್ತು ಬ್ರಿಟಿಷ್ ಕೊಲಂಬಿಯ–ಇವು ಈಗಿನ ಪ್ರಾಂತ್ಯಗಳು, ಯೂಕಾನ್ ನುನಾವತ್ ಸೇರಿಸಿ ಮತ್ತು ವಾಯವ್ಯ ಪ್ರದೇಶಗಳೂ ಕೆನಡಕ್ಕೆ ಸೇರಿವೆ.

ಕೆನಡದ ಪ್ರಾಂತ್ಯಗಳಿಂದ ಮತ್ತು ಬ್ರಿಟಿಷ್ ಸಂಸತ್ತಿನಿಂದ ಅಂಗೀಕೃತವಾದ 1867ರ ಬ್ರಿಟಿಷ್ ಉತ್ತರ ಅಮೆರಿಕ ಅಧಿನಿಯಮ ಸಾಕಷ್ಟು ವಿಶದವಾಗಿದ್ದು ಅದರಲ್ಲಿ 145 ವಿಧಿಗಳು ಮತ್ತು 5 ಅನುಬಂಧಗಳು ಇವೆ. ಕಾಲಕಾಲಕ್ಕೆ ಈ ಮೂಲ ಅಧಿನಿಯಮದಲ್ಲಿ ತಿದ್ದುಪಡಿಗಳಾಗಿ ಅದರ ಗಾತ್ರ ಇನ್ನೂ ಹೆಚ್ಚಾಗಿದೆ. ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಅಧಿಕಾರ ಬ್ರಿಟಿಷ್ ಸಂಸತ್ತಿಗೆ ಇದ್ದರೂ ರೂಢಿಯಲ್ಲಿ ಕೆನಡದ ಸಂಸತ್ತಿನ ಶಿಫಾರಸಿನಂತೆಯೇ ಅದನ್ನು

ಮಾಡಲಾಗುತ್ತಿತ್ತು. ಆದರೆ 1949ರಲ್ಲಿ ಕೆನಡದ ಇಪ್ಪತ್ತೊಂದನೆಯ ಸಂಸತ್ತಿನ ಕೋರಿಕೆಯ ಮೇರೆಗೆ ಈ ಅಧಿಕಾರವನ್ನು ಕೆನಡದ ಸಂಸತ್ತಿಗೆ ವಹಿಸಿಕೊಡಲಾಯಿತು. ಆದರೂ ಪ್ರಾಂತ್ಯಗಳಿಗೆ ಸಂಬಂಧಿಸಿದ ಮತ್ತು ಪ್ರಾಂತ್ಯಗಳ ಮೇಲೆ ಪರಿಣಾಮ ಉಂಟುಮಾಡುವಂಥ ಕೆಲವು ವಿಷಯಗಳು ಕೇಂದ್ರೀಯ ಅಥವಾ ಪ್ರಾಂತೀಯ ಅಧಿಕಾರವ್ಯಾಪ್ತಿಯ ಒಳಗೆ ಬರುವುದಿಲ್ಲ.

**ಸಂಯುಕ್ತರಾಜ್ಯ ವ್ಯವಸ್ಥೆ :** ಕೆನಡದ ಸಂವಿಧಾನದ (ಬ್ರಿಟಿಷ್ ಉತ್ತರ ಅಮೆರಿಕ ಅಧಿನಿಯಮ 1867) ಪ್ರಕಾರ ಕೆನಡ ಸಂಯುಕ್ತರಾಜ್ಯವಾಗಿದೆ. ಈ ರಾಜ್ಯವ್ಯವಸ್ಥೆಯಲ್ಲಿ ಆಟ್ಟವದಲ್ಲಿರುವ ಕೇಂದ್ರ ಅಥವಾ ಸಂಯುಕ್ತ ಸರ್ಕಾರ ಮತ್ತು ಹತ್ತು ಪ್ರಾಂತ್ಯಗಳ ಸರ್ಕಾರಗಳ ನಡುವೆ ಅಧಿಕಾರದ ವಿತರಣೆಯಾಗಿದೆ. ಕೇಂದ್ರ ಸರ್ಕಾರಕ್ಕೇ ಹೆಚ್ಚು ಅಧಿಕಾರ ಕೊಡಲಾಗಿದೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಕೇಂದ್ರ ಸರ್ಕಾರದ ಅಧಿಕಾರದ ಅಭಾವದಿಂದಲೇ ಅಲ್ಲಿ ಅಂತರ್ಯುದ್ಧಕ್ಕೆಡೆಯಾಯಿತೆಂದು ಈ ದೇಶದ ಜನ ಭಾವಿಸಿದ್ದರು. ಆದ್ದರಿಂದಲೇ ಕೆನಡದಲ್ಲಿ ತದ್ವಿರುದ್ಧವಾಗಿ ಪ್ರಾಂತ್ಯ ಸರ್ಕಾರಗಳ ಅಧಿಕಾರಗಳನ್ನು ನಮೂದಿಸಿ ಉಳಿದೆಲ್ಲ ಅಧಿಕಾರಗಳನ್ನೂ ಕೇಂದ್ರಕ್ಕೆ ಕೊಡಮಾಡಲಾಗಿದೆ. ಇದರಿಂದ ಕೇಂದ್ರಸರ್ಕಾರದ ಬಲಸಂವರ್ಧನೆಯಾಗುವುದು ಸಹಜ. ಕೆನಡದ ಕೇಂದ್ರಸರ್ಕಾರದ ಸಂಪೂರ್ಣ ಅಧಿಕಾರಕಕ್ಷೆಯಲ್ಲಿ ರಕ್ಷಣೆ, ಅಂಚೆ, ನಾಣ್ಯ, ಬ್ಯಾಂಕುಗಳು, ವಿವಾಹ, ವಿವಾಹ ವಿಚ್ಛೇದನ, ದಂಡನ್ಯಾಯ, ಪೌರತ್ವ, ಮೀನುಗಾರಿಕೆ, ಜನಗಣತಿ, ಹಡಗು ಸಾರಿಗೆ, ಅಂತರಪ್ರಾಂತ್ಯ ಮತ್ತು ಅಂತರ ರಾಷ್ಟ್ರೀಯ ಜಲಮಾರ್ಗ ಮುಂತಾದ ವಿಷಯಗಳು ಸೇರಿವೆ. ತೆರಿಗೆಗಳನ್ನು ವಿಧಿಸುವ ಹಾಗೂ ಸಾಲ ಎತ್ತುವ ಅಧಿಕಾರವೂ ಅದಕ್ಕಿದೆ. ಪ್ರಾಂತ್ಯ ಸರ್ಕಾರಗಳಿಗೆ 16 ವಿಷಯಗಳ ಮೇಲೆ ಅಧಿಕಾರವನ್ನು ಕೊಡಲಾಗಿದೆ. ತಮ್ಮ ಪ್ರಾಂತ್ಯದ ಸಂವಿಧಾನಕ್ಕೆ ತಿದ್ದುಪಡಿ ತರುವುದು (ಲೆಫ್ಟನಂಟ್ ಗವರ್ನರರ ಸ್ಥಾನಮಾನಗಳನ್ನು ಹೊರತುಪಡಿಸಿ), ಪ್ರಾಂತ್ಯದೊಳಗೆ ತೆರಿಗೆ ವಿಧಿಸುವುದು, ಸಾಲ ಎತ್ತುವುದು, ಮುಂತಾದ ಸ್ಥಳೀಯ ಮಹತ್ತ್ವದ ವಿಷಯಗಳನ್ನು ಪ್ರಾಂತ್ಯ ಸರ್ಕಾರಗಳಿಗೆ ವಹಿಸಿಕೊಡಲಾಗಿದೆ.

**ಕಾರ್ಯಾಂಗ :** ಕೆನಡ 1952ರ ಫೆಬ್ರವರಿ 6ರಿಂದ ಬ್ರಿಟನ್ನಿನ ರಾಣಿ ದ್ವಿತೀಯ ಎಲಿಜಬತ್‍ಳನ್ನೇ ತನ್ನ ರಾಣಿಯೆಂದು ಮಾನ್ಯ ಮಾಡಿದೆ. ತತ್ಪರಿಣಾಮವಾಗಿ ಕೆನಡದ ಸಂವಿಧಾನವು ಸ್ವರೂಪದಲ್ಲಿ ಘಟನಾತ್ಮಕ ಅರಸೊತ್ತಿಗೆಯಾಗಿದೆ. ಆದ್ದರಿಂದಲೇ ಕೆನಡ ಸಂಯುಕ್ತರಾಜ್ಯದ ಕಾರ್ಯಾಂಗದ ಅಧಿಕಾರಗಳು ರಾಣಿಗೆ ಸೇರಿವೆ. ಅವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಕೆನಡದ ಗವರ್ನರ್–ಜನರಲನೇ ಪ್ರಮುಖ. ಗವರ್ನರ್–ಜನರಲನ ಸ್ಥಾನಮಾನಗಳು ಹೆಚ್ಚು ಕಡಿಮೆ ಬ್ರಿಟನಿನ ದೊರೆತನದವನ್ನೆ ಹೋಲುತ್ತವೆ. ಆದರೆ ಇವನು ಅನುವಂಶಿಕವಾಗಿ ಅಧಿಕಾರದಲ್ಲಿರುವುದಿಲ್ಲ; ರಾಣಿಯಿಂದ (ರಾಜನಿಂದ) ನೇಮಕವಾಗುತ್ತಾನೆ. ಈ ನೇಮಕ ನಾಮಮಾತ್ರ. ಮೂಲತ: ಕೆನಡದ ಪ್ರಧಾನಮಂತ್ರಿ ತನ್ನ ಮಂತ್ರಿಮಂಡಲದೊಂದಿಗೆ ಚರ್ಚಿಸಿ ಸೂಚಿಸಿದ ವ್ಯಕ್ತಿಯನ್ನೇ ಬ್ರಿಟನಿನ ರಾಣಿ (ದೊರೆ) ನೇಮಕ ಮಾಡುವುದು. ಆದರೂ ಗವರ್ನರ್–ಜನರಲ್ ರಾಣಿಯ (ದೊರೆಯ) ಪ್ರತಿನಿಧಿ ಎಂದೇ ಪರಿಗಣಿಸತಕ್ಕದ್ದು. ಗವರ್ನರ್–ಜನರಲನ ಅಧಿಕಾರಾವಧಿ 5 ಅಥವಾ 6 ವರ್ಷಗಳು. ಆದರೂ ಅದಕ್ಕೆ ಮುಂಚೆಯೇ ಅವನನ್ನು ತೆಗೆಯಲು ಬರುತ್ತದೆ. ಕೆನಡದ ಗವರ್ನರ್–ಜನರಲನಿಗೆ ಬ್ರಿಟಿಷ್ ದೊರೆಯಂತೆ (ಅಥವಾ ರಾಣಿಯಂತೆ) ನಾಮಮಾತ್ರ ಅಧಿಕಾರ ಇದ್ದರೂ ಆತನಿಗೆ ಬ್ರಿಟಿಷ್ ದೊರೆಗಿಂತ ಹೆಚ್ಚು ಪ್ರಾಧಾನ್ಯವುಂಟು. ನ್ಯಾಯಾಧೀಶರು, ಆಯುಕ್ತರು ಪ್ರಾಂತ್ಯಗಳ ಲೆಫ್ಟನಂಟ್–ಗವರ್ನರ್‌ಗಳು ಮುಂತಾದವರ ನೇಮಕ, ಪ್ರಧಾನಮಂತ್ರಿ ಮತ್ತು ಇತರ ಮಂತ್ರಿಗಳ ನೇಮಕ, ಅವರನ್ನು ತೆಗೆದುಹಾಕುವುದು ಮುಂತಾದವು ಪ್ರಮುಖವಾದವು. ಆತ ದೇಶದ ಸೈನ್ಯದ ಪ್ರಮುಖನೂ ಆಗಿರುತ್ತಾನೆ. ಪ್ರಧಾನ ಮಂತ್ರಿ ಮತ್ತು ಇತರ ಮಂತ್ರಿಗಳ ನೇಮಕ ಮತ್ತು ವಜಾ ಮಾಡುವ ಅಧಿಕಾರಗಳು ನಾಮಮಾತ್ರ, ಈ ಅಧಿಕಾರಗಳನ್ನು ಆತ ಚಲಾಯಿಸುವುದು ಶಾಸಕಾಂಗದ ನಿರ್ಣಯದ ಮೇರೆಗೆ.

**ಪ್ರಿವಿ ಕೌನ್ಸಿಲ್ :** ಗವರ್ನರ್–ಜನರಲನಿಗೆ ದೇಶದ ಆಡಳಿತವನ್ನು ನಡೆಸಿಕೊಂಡು ಹೋಗುವ ಕಾರ್ಯದಲ್ಲಿ ಸಲಹೆ ನೀಡಲು ಮತ್ತು ಆಡಳಿತದ ಮೇಲ್ವಿಚಾರಣೆ ಮಾಡಲು ಪ್ರಿವಿ ಕೌನ್ಸಿಲ್ ಎಂಬ ಸಮಿತಿಯನ್ನು ನಿಯುಕ್ತಗೊಳಿಸಲಾಗಿತ್ತು. ಆದರೆ ಈ ಸಮಿತಿಯ ಸಂಖ್ಯೆ ಹೆಚ್ಚಾಗಿದ್ದುದರಿಂದ ಇದು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗದಾಯಿತು. ಆದ್ದರಿಂದ ಗವರ್ನರ್–ಜನರಲ್ ಈ ಸಮಿತಿಯಿಂದಲೇ ಆಯ್ದುಕೊಂಡ ಕೆಲವು ಸದಸ್ಯರ ಒಂದು ಸಣ್ಣ ಸಮಿತಿಯನ್ನು ರಚಿಸಿಕೊಳ್ಳತೊಡಗಿದ. ಈ ಸಣ್ಣ ಸಮಿತಿಯೇ ಕ್ರಮೇಣ ಬಲಯುತವಾಯಿತಲ್ಲದೆ ಮುಂದೆ ಅದು ಪ್ರಿವಿ ಕೌನ್ಸಿಲ್‌ಗಿಂತ ಪ್ರಮುಖವಾಗಿ, ಸಂಪುಟವಾಯಿತು.

**ಸಂಪುಟ :** ಸಂಪುಟದ ಸದಸ್ಯರ ಆಯ್ಕೆಯ ಬಗ್ಗೆ ಯಾವ ನಿರ್ದಿಷ್ಟ ನಿಯಮಗಳೂ ಇಲ್ಲ. ಆದರೂ ಬ್ರಿಟನ್ನಿನಲ್ಲಿ ಪಾಲಿಸುತ್ತಿರುವ ಸಂಪ್ರದಾಯದಂತೆಯೇ ಕೆನಡದ ಮಂತ್ರಿ ಮಂಡಲವನ್ನು ರಚಿಸಲಾಗುತ್ತದೆ. ಈ ಮಂಡಳಿ ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವೆ ಸಂಪರ್ಕವನ್ನು ಕಲ್ಪಿಸುವ ಸಮಿತಿಯಾಗಿದೆ. ಸರ್ಕಾರದ ಎಲ್ಲ ಅಧಿಕಾರಗಳೂ ಈ ಮಂತ್ರಿಮಂಡಲದ ಕೈಯಲ್ಲಿದ್ದು ಗವರ್ನರ್–ಜನರಲನವೆಂದು ಹೇಳಲಾದ ಎಲ್ಲ ಅಧಿಕಾರದಲ್ಲಿರುತ್ತದೆ. ಪ್ರಧಾನಮಂತ್ರಿಯೇ ಸಂಪುಟದ ಪ್ರಮುಖ. ಸಂಪುಟವನ್ನು ಅವನೇ ರಚಿಸುತ್ತಾನೆ. ಸಂಪುಟಸದಸ್ಯರನ್ನು ಅವನ ಸಲಹೆಯಂತೆ ಗವರ್ನರ್–ಜನರಲ್ ನೇಮಿಸುತ್ತಾನೆ. ಅವನು ಇದರ ಕೋನಶಿಲೆ ಇದ್ದಂತೆ. ಆತ ರಾಜಿನಾಮೆ ಕೊಟ್ಟರೆ ಇಡೀ ಸಂಪುಟ ಅಧಿಕಾರದಿಂದ ಕೆಳಗಿಳಿಯುತ್ತದೆ.

**ಶಾಸಕಾಂಗ :** ಸಂವಿಧಾನದನ್ವಯ ಕೆನಡದ ಶಾಸನಾಧಿಕಾರ ಬ್ರಿಟನಿನಲ್ಲಿದ್ದಂತೆ ರಾಣಿಯಿಂದ ಕೂಡಿದ ಸಂಸತ್ತಿಗೆ ಸೇರಿದ್ದಾಗಿದೆ. ರಾಣಿಯ ಪ್ರತಿನಿಧಿಯಾಗಿ ಗವರ್ನರ್–ಜನರಲ್ ಇರುತ್ತಾನೆ. ಕೆನಡದ ಸಂಸತ್ತು ಕಾಮನ್ಸ್ ಸಭೆ ಕೆಳಗಿನ ಸದನ. ಅದು ಜನರಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ್ದು. ಸಾಮಾನ್ಯವಾಗಿ 5 ವರ್ಷಗಳಿಗೊಮ್ಮೆ ಈ ಸಭೆಗೆ ಚುನಾವಣೆಗಳು ಜರುಗುತ್ತವೆ. ಆದರೂ ಅದಕ್ಕೂ ಮೊದಲೇ ಈ ಸಭೆಯನ್ನು ವಿಸರ್ಜಿಸಬಹುದಾಗಿದೆ. ಈ ಸಭೆಯ ಸದಸ್ಯರ ಸಂಖ್ಯೆಯನ್ನು ನಿಗದಿ ಮಾಡಿಲ್ಲ. ಅದು ಕಾಲಕಾಲಕ್ಕೆ ಬದಲಾಗುತ್ತದೆ. ಏಕೆಂದರೆ, ಪ್ರತಿ ಜನಗಣತಿಯ ಅನಂತರವೂ ಜನಸಂಖ್ಯೆಗೆ ಅನುಗುಣವಾಗಿ ಪ್ರತಿ ಪ್ರಾಂತ್ಯದಿಂದ ಚುನಾಯಿತರಾಗುವ ಸದಸ್ಯರ ಸಂಖ್ಯೆಯನ್ನು ನಿಗದಿಗೊಳಿಸಲಾಗುವುದು. ಕೆನಡದಲ್ಲಿ ವಯಸ್ಕರ ಮತದಾನ ಪದ್ಧತಿಯಿದೆ. 21 ವರ್ಷ ತುಂಬಿ, ಬ್ರಿಟಿಷ್ ನಾಗರಿಕರಾಗಿದ್ದು 12 ತಿಂಗಳು ಕೆನಡದಲ್ಲಿ ವಾಸವಾಗಿರುವವರು ಮತದಾನ ಮಾಡಬಹುದು. ಆದರೆ ನ್ಯಾಯಾಧೀಶರು, ಚುನಾವಣಾ ಮುಖ್ಯಾಧಿಕಾರಿ, ಚುನಾವಣಾ ಸಿಬ್ಬಂದಿ, ಚುನಾವಣೆಗಳಲ್ಲಿ ಭ್ರಷ್ಟಾಚಾರಕ್ಕಾಗಿ ಶಿಕ್ಷೆಗೊಳಗಾದವರು ಮುಂತಾದವರು ಮತದಾನ ಮಾಡುವಂತಿಲ್ಲ. ಕಾಮನ್ಸ್ ಸಭೆಯ ಕಲಾಪಗಳನ್ನು ನಡೆಸಲು ಒಬ್ಬ ಸಭಾಪತಿ ಮತ್ತು ಉಪಸಭಾಪತಿಗಳನ್ನು ಆರಿಸಲಾಗುತ್ತದೆ. ಈ ಸಭೆಯ ಕಲಾಪಗಳು ಹೆಚ್ಚು ಕಡಿಮೆ ಬ್ರಿಟನಿನ ಕಾಮನ್ಸ್ ಸಭೆಯ ಮಾದರಿಯಲ್ಲಿಯೇ ನಡೆಯುತ್ತವೆ. ಸೆನೆಟ್ ಸಭೆ ಕೆನಡ ಸಂಸತ್ತಿನ ಮೇಲಿನ ಸದನ. ಇದರಲ್ಲಿ 96 ಸದಸ್ಯರಿರುತ್ತಾರೆ. ಗವರ್ನರ್–ಜನರಲ್ ಇದರ ಸದಸ್ಯರ ಸಂಖ್ಯೆಯನ್ನು 104ಕ್ಕೆ ಮೀರದಂತೆ ಹೆಚ್ಚಿಸಬಹುದು. ಸೆನೆಟ್ ಸದಸ್ಯರನ್ನು ಮಂತ್ರಿ ಮಂಡಲದ ಸಲಹೆಯ ಮೇರೆಗೆ ಗವರ್ನರ್–ಜನರಲ್ ನಾಮಕರಣ ಮಾಡುತ್ತಾನೆ. ಅವರು ತಮ್ಮ 75ನೆಯ ವಯಸ್ಸಿನವರೆಗೂ ಸದಸ್ಯತ್ವವನ್ನು ಹೊಂದಿರುತ್ತಾರೆ.

**ನ್ಯಾಯಾಂಗ :** ಕೆನಡದಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಎಂದು ಎರಡು ಬಗೆಯ ನ್ಯಾಯಾಲಯಗಳಿವೆ. ಬ್ರಿಟಿಷ್ ಉತ್ತರ ಅಮೆರಿಕ ಅಧಿನಿಯಮದ ಅಧಿಕಾರ ಪ್ರಕಾರ ಪಡೆದಿವೆ. ಇದರಂತೆ ಪ್ರಾಂತ್ಯಗಳಲ್ಲಿ ಮೂರು ವಿಧದ ನ್ಯಾಯಾಲಯಗಳುಂಟು: ಶ್ರೇಷ್ಠ ನ್ಯಾಯಾಲಯಗಳು, ಜಿಲ್ಲಾ ನ್ಯಾಯಾಲಯಗಳು ಮತ್ತು ಕೌಂಟಿ ನ್ಯಾಯಾಲಯಗಳು. ಇವುಗಳ ನ್ಯಾಯಾಧೀಶರನ್ನು ಗವರ್ನರ್–ಜನರಲನೇ ನೇಮಿಸುತ್ತಾನೆ. ನಾಗರಿಕ ಮತ್ತು ಅಪರಾಧ ವಿಷಯಗಳು ಇವುಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಪ್ರಾಂತ್ಯ ನ್ಯಾಯಾಲಯಗಳಲ್ಲದೆ ಎರಡು ಕೇಂದ್ರ ನ್ಯಾಯಾಲಯಗಳು, ಸರ್ವೋಚ್ಚ ನ್ಯಾಯಾಲಯ ದೇಶದ ಅತ್ಯುನ್ನತ ನ್ಯಾಯಾಧೀಶರನ್ನೊಳಗೊಂಡಿರುತ್ತದೆ. ಇವರು ಗವರ್ನರ್–ಜನರಲನಿಂದ ನೇಮಕವಾಗುತ್ತಾರೆ. ಸಂಸತ್ತಿನ ಉಭಯ ಸದನಗಳ ನಿರ್ಣಯದ ಮೂಲಕ ಇವರನ್ನು ಪದಚ್ಯುತಗೊಳಿಸಬಹುದು.

**ಸಾರ್ವಜನಿಕ ಆಡಳಿತ :** ಕೆನಡದ ಸಂಯುಕ್ತಸರ್ಕಾರದಲ್ಲಿ ಸುಮಾರು ಇಪ್ಪತ್ತು ಇಲಾಖೆಗಳಿವೆ. ಇವು ದೇಶದ ಆಡಳಿತದ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತದೆ. ಪ್ರತಿಯೊಂದು ಇಲಾಖೆಯೂ ಒಬ್ಬ ಸಚಿವನ ನಿಯಂತ್ರಣಕ್ಕೊಳಪಟ್ಟಿರುತ್ತದೆ. ಮೊದಮೊದಲು ಸೇವಾ ಸಿಬ್ಬಂದಿಯ ಭರ್ತಿಯ ನಿಯಮಗಳಿರಲಿಲ್ಲ. ಈಚೆಗೆ ಅರ್ಹತೆಯ ತತ್ತ್ವವನ್ನು ಹೆಚ್ಚಾಗಿ ಪಾಲಿಸಲಾಗುತ್ತಿದೆ. ಕೆಲವೇ ವರ್ಷಗಳ ಹಿಂದೆ ಈ ದೇಶದಲ್ಲಿ ಆಡಳಿತ ಸಿಬ್ಬಂದಿಯನ್ನು ನೇಮಿಸುವ ಕಾರ್ಯಗಳನ್ನು ವೈಧಾನಿಕವಾಗಿ ನಿರ್ವಹಿಸುವ ದೃಷ್ಟಿಯಿಂದ ಲೋಕಸೇವಾ ಆಯೋಗವನ್ನು ನೇಮಿಸಲಾಯಿತು.

**ರಾಜಕೀಯ ಪಕ್ಷಗಳು :** ಕೆನಡದಲ್ಲಿ ಲಿಬರಲ್ ಮತ್ತು ಕನ್‌ಸರ್ವೆಟಿವ್ ಎಂಬ ಎರಡು ಪ್ರಮುಖ ರಾಜಕೀಯ ಪಕ್ಷಗಳಿವೆ. ಆದರೆ ಈಚೆಗೆ ಕೆಲವು ಹೊಸ ಸಣ್ಣ ಪುಟ್ಟ ಪಕ್ಷಗಳು ತಲೆ ಎತ್ತಿವೆ. ಕೋ–ಆಪರೇಟಿವ್ ಕಾಮನ್‌ವೆಲ್ತ್ ಫೆಡರೇಷನ್, ಯುನೈಟೆಡ್ ಫಾರ್ಮರ್ಸ್ ಅಂಡ್ ಇಂಡಿಪೆಂಡೆಂಟ್ಸ್–ಇವು ಇತ್ತೀಚೆಗೆ ತಲೆಯೆತ್ತಿರುವ ಎರಡು ಪಕ್ಷಗಳು. ಇವು ಕಾಮನ್ಸ್ ಸಭೆಯಲ್ಲಿ ಪ್ರಭಾವ ಬೀರುವಲ್ಲಿ ಹೆಚ್ಚು ಸಫಲವಾಗಿಲ್ಲ. ಅಲ್ಲಿಯ ಇತರ ಹಲವು ಸಂಸ್ಥೆಗಳಂತೆ ರಾಜಕೀಯ ಪಕ್ಷಗಳೂ ಬ್ರಿಟಿಷ್ ಮೂಲದಿಂದ ಉದ್ಭವಿಸಿ ಉತ್ತರ ಅಮೆರಿಕದ ಪರಿಸರದಿಂದ ಪ್ರಭಾವಿತವಾಗಿದೆ. ಒಂದೊಂದು ಪಕ್ಷದಲ್ಲೂ ಬ್ರಿಟನಿನ ಪಕ್ಷದಲ್ಲಿರುವಂತೆ ಎಡದಿಂದ ಬಲದ ವರೆಗೆ ನಾನಾ ಅಭಿಪ್ರಾಯಗಳ ಛಾಯೆಗಳನ್ನು ಕಾಣಬಹುದು. ಆದರೆ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿರುವಂತೆ ಪಕ್ಷಪಕ್ಷಗಳ ನಡುವೆಯೂ ಪಕ್ಷದೊಳಗಿನ ವಿವಿಧ ಗುಂಪುಗಳ ನಡುವೆಯೂ ತೀವ್ರ ಭಿನ್ನತೆಗಳೂ ಇವೆ. (ಎ.ಎಂ.ಆರ್.)

**ಕೆನಡ ಬಾಲ್ಸಂ :** ಕೋನಿಫೆರೇಲ್ಸ್ ಗಣಕ್ಕೆ ಸೇರಿದ ಏಬಿಸ್ ಬಾಲ್ಸಾಮಿಯ ಎಂಬ ಅನಾವೃಬೀಜ ಮರದಿಂದ ಸ್ರವಿಸುವ ಒಂದು ಬಗೆಯ ತೈಲಮಿಶ್ರಿತ ರಾಳ (ಓಲಿಯೋ–ರೆಸಿನ್). ಈ ಮರ ಕೆನಡದಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಕಾಂಡದಲ್ಲಿ ತೊಗಟೆ ಮತ್ತು ಕಾಷ್ಠದ ಮಧ್ಯೆ ಇರುವ ಕೆಲವು ವಿಶಿಷ್ಟ ಬಗೆಯ ನಾಳಗಳಲ್ಲಿ ರಾಳ

ಇರುತ್ತದೆ. ಇದನ್ನು ಮರಗಳ ಮೇಲೆ ಕಚ್ಚುಗಾಯ ಮಾಡಿ ಹೊರತೆಗೆಯಲಾಗುತ್ತದೆ. ವಾರ್ಷಿಕ ಉತ್ಪತ್ತಿ ಮರವೊಂದಕ್ಕೆ 10 ಔನ್ಸು. ಒಂದು ಮರದಿಂದ ಎರಡು ವರ್ಷ ರಾಳ ತೆಗೆದು ಒಂದು ವರ್ಷ ವಿಶ್ರಾಂತಿ ಕೊಡುವುದು ವಾಡಿಕೆ. ಕೆನಡ ಬಾಲ್ಸಂ ನಸುಹಳದಿ ಬಣ್ಣದ ಸ್ನಿಗ್ಧ ಗುಣವುಳ್ಳ ಪಾರದರ್ಶಕ ದ್ರವ. ಇದಕ್ಕೆ ಒಂದು ಬಗೆಯ ಹಿತಕರವಾದ ವಾಸನೆಯೂ ಕಟುವಾದ ರುಚಿಯೂ ಉಂಟು. ಸೀಸೆಗಳಲ್ಲಿಟ್ಟರೆ ಆರುವುದು ನಿಧಾನ. ಗಾಳಿಯ ಸಂಪರ್ಕಕ್ಕೆ ಬಂದರೆ ಕೊಂಚಕಾಲದಲ್ಲೆ ಒಣಗಿ ಗಟ್ಟಿಯಾಗುತ್ತದೆ. ನೀರಿನಲ್ಲಿ ಕರಗದು. ಆಲ್ಕೊಹಾಲ್, ಕ್ಸೈಲೀನ್, ಬೆಂಜೀನ್, ಕ್ಲೋರೋಫಾರಂ, ಈಥರ್ ಮುಂತಾದುವುಗಳಲ್ಲಿ ಸುಲಭವಾಗಿ ಕರಗುತ್ತದೆ. ಕೆನಡ ಬಾಲ್ಸಂನಲ್ಲಿ ಶೇ. 24 ಚಂಚಲ ತೈಲವೂ ಶೇ. 50 ಕೆನಡಿನೋಲಿಕ್ ಆಮ್ಲವೂ ಶೇ. 13 ಕೆನಡಿನಿಕ್ ಆಮ್ಲವೂ ಶೇ.11–12 ರೆಸೀನ್ ಎಂಬ ವಸ್ತುವೂ ಇವೆ. ಕೆನಡ ಬಾಲ್ಸಮಿನ ರಿಫ್ರೇಕ್ಷಣಾಂಕ ಗಾಜಿನದರಷ್ಟೆ ಇದೆ. ಇದನ್ನು ಗಾಜು ಮತ್ತು ಮಸೂರಗಳನ್ನು ಅಂಟಿಸುವ ಪದಾರ್ಥವಾಗಿಯೂ ಸೂಕ್ಷ್ಮದರ್ಶಕದ ಪರೀಕ್ಷಾಫಲಕದ ಮೇಲೆ ವಸ್ತುಗಳನ್ನು ನೆಲೆಗೊಳಿಸಲೂ ಉತ್ತಮ ದರ್ಜೆಯ ಅರಗಿನ ಮೆರುಗು ದ್ರವ್ಯದ (ಲ್ಯಾಕರ್) ತಯಾರಿಕೆಯಲ್ಲೂ ಬಳಸುತ್ತಾರೆ. (ಎಂ.ಎಸ್.ಎಸ್.ಆರ್.)

**ಕೆನಡಿಯನ್ ಸಾಹಿತ್ಯ :** ಕೆನಡ ದ್ವಿಭಾಷಾ ಮತ್ತು ದ್ವಿಸಾಂಸ್ಕೃತಿಕ ರಾಷ್ಟ್ರವಾದ್ದರಿಂದ ಅಲ್ಲಿ ಏಕಸ್ವರೂಪವಾದ ರಾಷ್ಟ್ರೀಯ ಸಾಹಿತ್ಯ ಕಂಡುಬರುವುದಿಲ್ಲ. ಅಲ್ಲಿಗೆ ಹೋಗಿ ನೆಲೆಸಿದವರು ಕೆನಡ ದೇಶ, ಇತಿಹಾಸ, ಪ್ರಕೃತಿ, ವೀರರ ಸಾಹಸ ಕಾರ್ಯಗಳು ಮುಂತಾದವನ್ನು ಕುರಿತು ತಂತಮ್ಮ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ತತ್ಪರಿಣಾಮವಾಗಿ ಇಂಗ್ಲಿಷ್–ಕೆನಡಿಯನ್ ಮತ್ತು ಫ್ರೆಂಚ್–ಕೆನಡಿಯನ್ ಸಾಹಿತ್ಯಗಳು ರೂಪುಗೊಂಡಿವೆ.

ಜೋಸೆಫ್ ಹೊ

**ಇಂಗ್ಲಿಷ್–ಕೆನಡಿಯನ್ ಸಾಹಿತ್ಯ :** 18ನೆಯ ಶತಮಾನದಲ್ಲಿ ಮತ್ತು 19ನೆಯ ಶತಮಾನದ ಪ್ರಾರಂಭದಲ್ಲಿ ಅಲೆಕ್ಸಾಂಡರ್ ಹೆನ್ರಿ, ಸಾಮ್ಯುಯಲ್ ಹರ್ನ್ ಮತ್ತು ಸರ್ ಅಲೆಕ್ಸಾಂಡರ್ ಮೆಕೆನ್ಸಿ ಮೊದಲಾದ ಪ್ರವಾಸಿಗರು ಬರೆದ ದೇಶಾಟನೆಗಳ ಹಾಗೂ ಸಾಹಸಕಾರ್ಯಗಳ ವಿವರಣೆಗಳಿಂದ ಕೂಡಿದ ಸಾಹಿತ್ಯ ರಚಿತವಾಗಿದೆ.

19ನೆಯ ಶತಮಾನದ ಆದಿಭಾಗದ ಮುಖ್ಯ ಕವಿಗಳು ಅಲಿವರ್ ಗೋಲ್ಡ್‌ಸ್ಮಿತ್ (ಇವನು ಇದೇ ಹೆಸರಿನ ಇಂಗ್ಲಿಷ್ ಕವಿಯ ಮೊಮ್ಮಗ), ಟಿ.ಸಿ.ಹ್ಯಾಲಿಬರ್ಟನ್ ಮತ್ತು ಜೋಸೆಫ್ ಹೊ. ಗೋಲ್ಡ್‌ಸ್ಮಿತ್ತನಲ್ಲಿ ನೋವಸ್ಕೋಷಿಯ ಬಗ್ಗೆ ಆತನಿಗಿರುವ ಪ್ರಾದೇಶಿಕ ಮಮತೆ ಎದ್ದುಕಾಣುತ್ತದೆ. ದಿ ರೈಸಿಂಗ್ ವಿತ್ ಈಸ್ ಎಂಬ ಕವನದಲ್ಲಿ ಪ್ರದೇಶಾಭಿಮಾನ ಸ್ಪಷ್ಟವಾಗಿ ವ್ಯಕ್ತವಾಗಿದೆ. ಅಲ್ಲದೆ ತಮ್ಮ ನಾಡಿನ ಅಭ್ಯುದಯ, ಏಳಿಗೆ ಬಗ್ಗೆ ಜನಗಳಿಗಿರುವ ಉತ್ಸಾಹ, ಭರವಸೆಗಳನ್ನೂ ಈ ಕವನ ಪ್ರತಿಬಿಂಬಿಸುತ್ತದೆ. ಸ್ವಾರಸ್ಯ ಪೂರ್ಣವಾದ ವರ್ಣನೆ ಇದೆಯಾದರೂ ಇವನ ತಾತನ ಕವನ ದಿ ಡಿಸರ್ಟೆಡ್ ವಿಲೇಜ್‌ಗೆ ಹೋಲಿಸಿದಾಗ ಕವಿಯ ಕಾವ್ಯಪ್ರತಿಭೆಯ ಕೊರತೆಗಳು ಕಂಡುಬರುತ್ತವೆ. ಇದರ ಪ್ರಾಮುಖ್ಯ ಪ್ರಾದೇಶಿಕ. ಗೋಲ್ಡ್‌ಸ್ಮಿತ್ತನ ಹಾಗೆ ಜೋಸೆಫ್ ಹೊ ಸಹ ಒಬ್ಬ ಪ್ರಾದೇಶಿಕ ಕವಿ. ಆದರೆ ಇವನಲ್ಲಿ ನೋವಸ್ಕೋಷಿಯ ಬಗ್ಗೆ ಅಮಿತವಾದ ಪ್ರಾದೇಶಿಕ ಪ್ರೇಮ ಕಂಡುಬರುತ್ತದೆಯೇ ಹೊರತಾಗಿ ಕೆನಡ ತನ್ನ ದೇಶ ಎಂಬ ವಿಶಾಲ ಮನೋಭಾವ ಕಾಣುವುದಿಲ್ಲ. ಇವನ ಅಕೇಡಿಯ ಮತ್ತು ಮೆಲ್‌ವಿಲ್ ಐಲೆಂಡ್ ಎಂಬ ಕವನಗಳು ಇದಕ್ಕೆ ಸಾಕ್ಷಿಯಾಗಿವೆ ರಾಷ್ಟ್ರಪ್ರೇಮಕ್ಕಿಂತ ಪ್ರಾದೇಶಿಕ ಸ್ವಾಭಿಮಾನ ಇವನಲ್ಲಿ ತೀವ್ರವಾಗಿದ್ದ ಕಾರಣ ಈತ ಸಂಯುಕ್ತ ಕೆನಡದ ರಚನೆಗೆ ಹೃತ್ಪೂರ್ವಕವಾದ ಬೆಂಬಲ ಕೊಡಲಿಲ್ಲ. ಈತ ಲಾರ್ಡ್ ಜಾನ್ ರಸೆಲ್‌ಗೆ ಬರೆದಿರುವ ಪತ್ರಗಳು ಇವನ ಸ್ವಾಭಿಮಾನ ಮತ್ತು ಸ್ವತಂತ್ರ ಮನೋವೃತ್ತಿಯನ್ನು ಸಾರುತ್ತವೆ. ಇವನ ಸಂಪಾದಕತ್ವದಲ್ಲಿ ನೋವಸ್ಕೋಷಿಯ ಹೊಸ ಬರೆಹಗಾರರಿಗೆ ಉತ್ತೇಜನ ಕೊಟ್ಟಿತು. ಎಷ್ಟಾದರೂ ಮೊದಲಿಗೆ ಇಂಗ್ಲಿಷ್ ಮತ್ತು ಫ್ರೆಂಚ್ ಕೆನಡಗಳಲ್ಲಿ ಪ್ರಾಂತ್ಯಾಭಿಮಾನವೇ ಅತಿಯಾಗಿದ್ದರಿಂದ 1867ರ ಕಾನ್‌ಫೆಡರೇಷನ್ ತನಕ ಒಂದು ಸಮಗ್ರ ರಾಷ್ಟ್ರೀಯ ಸಾಹಿತ್ಯವಾಗಲೀ ರಾಷ್ಟ್ರಾಭಿಮಾನ ಮೂಡಿಸುವ ಬರೆವಣಿಗೆಯಾಗಲೀ ಕೆನಡದ್ದೇ ಆದ ಸಂಸ್ಕೃತಿಯಾಗಲೀ ರೂಪುಗೊಂಡಿರಲಿಲ್ಲ. ರಾಷ್ಟ್ರೀಯ ಸಾಹಿತ್ಯ, ಸಂಸ್ಕೃತಿ ಅಸ್ತಿತ್ವಕ್ಕೆ ಬರಬೇಕಾದರೆ ಕೆಲವು ತಲೆಮಾರುಗಳು ಕಳೆಯಬೇಕಾಯಿತು.

ಒಂದನೆಯ ಮಹಾಯುದ್ಧದ ಅನಂತರ ಕೆನಡಕ್ಕೆ ಬಂದ ಬ್ರಿಟಿಷ್ ವಲಸೆಗಾರರಲ್ಲಿ ಸುಸನ್ನ ಮೂಡಿ ಮತ್ತು ಕ್ಯಾಥರಿನ್ ಪಾರ್ ಟ್ರೇಲ್ ಸೋದರಿಯರು ಮುಖ್ಯರು. ಮೂಡಿಯ ರಫಿಂಗ್ ಇಟ್ ಇನ್ ದಿ ಬುಷ್ ಮತ್ತು ಟ್ರೇಲಳ ದಿ ಬ್ಯಾಕ್‌ವುಡ್ಸ್ ಆಫ್ ಕೆನಡ–ಇವು ಪ್ರಥಮವಾಗಿ ವಸಾಹತುಗಳ ಸ್ಥಾಪನೆಯ ಹೋರಾಟ ಕುರಿತ ಶ್ರೇಷ್ಠ ಕೃತಿಗಳು. ಇದೇ ಕಾಲಕ್ಕೆ ಸೇರಿದ ಇಬ್ಬರು ಕವಿಶ್ರೇಷ್ಠರಲ್ಲಿ ಚಾರ್ಲ್ಸ್ ಹವಿಸೇಜ್ ಬರೆದಿರುವ ಬೈಬಲ್ ಆಧಾರಿತ ಸಾಲ್ ಎಂಬ ಕಾವ್ಯ ನಾಟಕ ಇಂಗ್ಲಿಷ್ ಮತ್ತು ಅಮೆರಿಕನ್ನರ ಮೆಚ್ಚುಗೆ ಪಡೆದಿದೆ. ರಮ್ಯ ಕವಿಗಳಿಂದ ಪ್ರಭಾವಿತನಾದ ಚಾರ್ಲ್ಸ್‌ಸ್ಯಾಂಗ್ಸ್ಟರ್ ಕೆನಡದ ಪ್ರಕೃತಿ ಸೌಂದರ್ಯ, ಭೂದೃಶ್ಯ ಹಾಗೂ ದೇಶಭಕ್ತಿ ಕವನಗಳನ್ನು ರಚಿಸಿ ಕೆನಡದ ಮೊದಲ ಗಂಭೀರ ಪದ್ಯಕಾರ ಎಂಬ ಹೆಸರು ಪಡೆದಿದ್ದಾನೆ. ರಾಷ್ಟ್ರಮನೋಭಾವವುಳ್ಳ ಈ ಕವಿ ಒಂದು ಕಾಲಕ್ಕೆ ಕೆನಡದ ರಾಜಕವಿ ಎಂದು ಪ್ರಖ್ಯಾತನಾಗಿದ್ದ. ಕಾನ್‌ಫೆಡರೇಷನ್‌ಗೆ ಮುಂಚೆ ಬರುವ ಮತ್ತೊಬ್ಬ ಪ್ರಖ್ಯಾತ ಹಾಗೂ ಪ್ರಥಮ ರಾಷ್ಟ್ರೀಯ ಐತಿಹಾಸಿಕ ಕಾದಂಬರಿಕಾರ ಮೇಜರ್ ಜಾನ್ ರಿಚರ್ಡ್‌ಸನ್. ಈತನ ಗಡಿನಾಡಿನ ವೀರಕಥೆ ವೆಕೂಸ್ಟ ಎಂಬುದು ಪಾಂಟಿಯಾಕನ ಪಿತೂರಿಯನ್ನು ಕುರಿತ ಒಂದು ಭಾವಾತಿರೇಕದ ಕಾದಂಬರಿ. ಈಗಲೂ ಇದರ ಪ್ರಸಿದ್ಧಿ ಕಡಿಮೆಯಾಗಿಲ್ಲ. ವಿಲಿಯಂ ಕರ್ಬಿಯ ಇನ್ನೊಂದು ಐತಿಹಾಸಿಕ ವೀರಕಥೆ ದಿ ಗೋಲ್ಡನ್ ಡಾಗ್ ಅತ್ಯಂತ ಜನಪ್ರಿಯ ಕಾದಂಬರಿ. ಗಿಲ್ಬರ್ಟ್ ಪಾರ್ಕರ್ ಮತ್ತು ಥಾಮಸ್ ರೆಡಾಲ್ ಈ ಕಾಲಾವಧಿಯ ಇನ್ನಿಬ್ಬರು ಕಾದಂಬರಿಕಾರರು.

1867ರಲ್ಲಿ ಕೆನಡ ಸಂಯುಕ್ತ ರಾಷ್ಟ್ರವಾದ ಅನಂತರ ರಾಷ್ಟ್ರಾಭಿಮಾನ ಹೆಚ್ಚಿದಂತೆ ರಾಷ್ಟ್ರೀಯ ಸಾಹಿತ್ಯಪ್ರಜ್ಞೆ ಗರಿಗಟ್ಟಿತು. ಅಪ್ಪಟ ಕೆನಡ ಸಾಹಿತ್ಯಕ್ಕೆ ಬೇಡಿಕೆಯೂ ಹೆಚ್ಚಿತು.

ವಿಲಿಯಂ ಕರ್ಬಿ

ದಿ ಕೆನಡಿಯನ್ ಮಂತ್ಲಿ, ದಿ ಲಿಟರರಿ ಗಾರ್‌ಲೆಂಡ್, ದಿ ನೇಷನ್, ದಿ ವೀಕ್–ಈ ನಿಯತಕಾಲಿಕಗಳು ಕೆನಡಿಯನ್ನರ ರಾಜಕೀಯ ಸಾಂಸ್ಕೃತಿಕ ಸಾಮಾಜಿಕ ಹಾಗೂ ಸಾಹಿತ್ಯ ವಿಚಾರಗಳ ಮಟ್ಟವನ್ನು ಹೆಚ್ಚಿಸಿದುವು. ಇವುಗಳ ಮೂಲಕ ಹಲವಾರು ಬರೆಹಗಾರರು ಬೆಳಕಿಗೆ ಬಂದರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬಿರುಸಿನ ಚಟುವಟಿಕೆ ಕಂಡುಬಂತು. 1880ರ ದಶಕದಲ್ಲಿ ನಿಜವಾದ ರಾಷ್ಟ್ರೀಯ ಸಾಹಿತ್ಯ ಚಳವಳಿಯ ನವೋದಯ ವಾಯಿತು. ಕೆನಡ ಸಾಹಿತ್ಯದ ಸುವರ್ಣಯುಗ ಅತ್ಯಂತ ದೊಡ್ಡ ಕವಿ ಚಾರ್ಲ್ಸ್ ಜಿ.ಡಿ.ರಾಬರ್ಟ್ಸ್‌ನಿಂದ ಆರಂಭವಾಯಿತು. ಇಂಗ್ಲಿಷ್–ಕೆನಡಿಯನ್ನರ ಮೇಲೆ ಅತ್ಯಂತ ಆಳವಾದ ಪ್ರಭಾವ ಬೀರಿದ ಕವಿ ಈತ. ಪ್ರಾದೇಶಿಕ ಕವಿಯಾದರೂ 19ನೆಯ ಶತಮಾನಾಂತ್ಯದ ಜನರಲ್ಲಿ ರಾಷ್ಟ್ರಾಭ್ಯುದಯದ ಬಗ್ಗೆ ಇದ್ದ ಆಶೋತ್ತರಗಳು ಈತನ ಕಾವ್ಯದಲ್ಲಿ ಅಭಿವ್ಯಕ್ತವಾಗಿವೆ. ವಿಕ್ಟೋರಿಯನ್ ಕಾವ್ಯ ಸಂಪ್ರದಾಯದಲ್ಲಿ ಮುಳುಗಿರುವ ಒರೈಯನ್ ಅಂಡ್ ಅದರ್ ಪೊಯೆಮ್ಸ್ ಎಂಬ ಕಾವ್ಯಸಂಗ್ರಹದಲ್ಲಿ ರಾಷ್ಟ್ರೈಕ್ಯ ಹಾಗೂ ಅದರ ಹಾದಿಯಲ್ಲಿ ಬರುವ ಎಡರು ತೊಡರುಗಳನ್ನು ಕುರಿತ ಕವನಗಳಿವೆ. ಈತನಿಗೆ ಅತ್ಯಂತ ಅದ್ಭುತ ಯಶಸ್ಸು ತಂದು ಕೊಟ್ಟ ಕವನ ಸಂಕಲನ ದಿ ಸಾಂಗ್ಸ್ ಆಫ್ ದಿ ಕಾಮನ್ ಡೇ. ಸ್ಪಷ್ಟತೆ, ವಾಸ್ತವಿಕತೆ, ಸರಳತೆ ಹಾಗೂ ಸ್ವಕೀಯತೆ ಈ ಪ್ರಾದೇಶಿಕ ಕವನಗಳ ವೈಶಿಷ್ಟ್ಯ. ಸಾಕಷ್ಟು ಕಾವ್ಯ ಪ್ರತಿಭೆ, ಕಾವ್ಯ ಕೌಶಲ ಪ್ರದರ್ಶಿಸಿರುವ ಈತ ಕೆನಡಿಯನ್ ಪುನರುಜ್ಜೀವನ ಕಾಲದ ನೇತಾರ ಎಂದು ಹೆಸರುಗಳಿಸಿದ್ದಾನೆ. ರಾಬರ್ಟ್ಸನ ಪಂಥಕ್ಕೆ ಸೇರಿದ ಆರ್ಕಿಬಾಲ್ಡ್ ಲ್ಯಾಂಪ್‌ಮನ್, ಬ್ಲಿಸ್ ಕಾರ್ಮನ್ ಮತ್ತು ಡಂಕನ್ ಕ್ಯಾಂಪ್‌ಬೆಲ್ ಸ್ಕಾಟ್–ಇವರು ಮೊತ್ತಮೊದಲಿಗೆ ಇಂಗ್ಲಿಷ್ ಮಾತನಾಡುವ ದೇಶಗಳ ಗಮನ ಸೆಳೆದರು. ಬಹಳ ಪ್ರಸಿದ್ಧನಾದ ಬ್ಲಿಸ್ ಕಾರ್ಮನ್ ಕವಿ ಸ್ಯಾಪೊ, ಸಾಂಗ್ಸ್ ಆಫ್ ದಿ ಸೀ ಚಿಲ್ಡ್ರನ್ ಮತ್ತು ಪೈಪ್ಸ್ ಆಫ್ ಪ್ಯಾನ್ ಎಂಬ ಕವನ ಸಂಗ್ರಹಗಳಲ್ಲಿ ವಿಸ್ಮಯಕಾರಿಯಾದ ಒಂದು ಮಾಂತ್ರಿಕ ಶಕ್ತಿಯನ್ನು ಸೃಷ್ಟಿಸಿ ಓದುಗರನ್ನು ಅಚ್ಚರಿಗೊಳಿಸಿದ್ದಾನೆ. ಇವನ ಪ್ರಕೃತಿ ಮತ್ತು ಭೂದೃಶ್ಯಕವನಗಳಲ್ಲಿ ಕಂಡುಬರುವ ಕಾವ್ಯ ಮಾಧುರ್ಯ ಎಂದೆಂದಿಗೂ ಮರೆಯುವಂಥದ್ದಲ್ಲ. ಕೆನಡದ ಹೆಸರಾಂತ ವರ್ಣನಾತ್ಮಕ ಕವಿ ಲ್ಯಾಂಪ್‌ಮನ್ ತನ್ನ ಹೀಟ್ ಅಂಡ್ ವಿಂಟರ್ ಈವ್ನಿಂಗ್ ಮತ್ತು ಇತರ ಕವನಗಳಲ್ಲಿ ಅದ್ಭುತವರ್ಣನಾಶಕ್ತಿಯನ್ನು ತೋರಿಸಿಕೊಂಡಿದ್ದಾನೆ. ಈತ ಆಂಟೇರಿಯೊ ಪ್ರಾಂತ್ಯದ ಒಬ್ಬ ಗ್ರಾಮೀಣ ಕವಿ. ಸ್ಥಳೀಯರಾದ ಕೆನಡಿಯನ್ ಇಂಡಿಯನ್ನರ ಸರಳ ಜೀವನವನ್ನು ಕುರಿತು ಬರೆದ ಮೊದಲನೆಯ ಕವಿ ಡಿ.ಸಿ.ಸ್ಕಾಟ್. ದಿ ಫರ್ಸೇಕನ್, ಮಿಷನ್ ಆಫ್ ದ ಟ್ರೀಸ್, ಮತ್ತು ನೈಟ್ ಬರಿಯಲ್ ಇನ್ ದಿ ಫಾರೆಸ್ಟ್ ಮುಂತಾದ ಕವನಗಳು ಕವಿಗೆ ಅವರ ಬಗ್ಗೆ ಇರುವ ಅನುಕಂಪ ವ್ಯಕ್ತಪಡಿಸುವುದರ ಜೊತೆಗೆ ಓದುಗರಲ್ಲಿ ಜೀವನದ ದುರಂತ ಪ್ರಜ್ಞೆಯನ್ನು ಜಾಗ್ರತಗೊಳಿಸುತ್ತವೆ. ಈತನಿಗೆ ದ್ವಿಸಾಂಸ್ಕೃತಿಕ ಪ್ರಜ್ಞೆ ಇತ್ತೆಂಬುದಕ್ಕೆ

ಈತ ಫ್ರೆಂಚ್–ಕೆನಡಿಯನ್ನರ ಬಗ್ಗೆ ಬರೆದಿರುವ ದಿ ವಿಲೇಜ್ ಆಫ್ ವೈಗರ್ ಮತ್ತು ದಿ ವಿಚಿಂಗ್ ಆಫ್ ಎಲ್‌ಸ್ಪ್ರೀ ಎಂಬ ಕತೆಗಳು ನಿದರ್ಶನಗಳಾಗಿವೆ.

ಕೆನಡದ ಸಾಹಿತ್ಯ ಸುಗ್ಗಿ ಇಪ್ಪತ್ತನೆಯ ಶತಮಾನದ ಆದಿಭಾಗದಿಂದ ಪ್ರಾರಂಭವಾಯಿತು. ಓದುಗರಿಗಿಂತ ಲೇಖಕರೇ ಹೆಚ್ಚಾದರು. ಬರೆವಣಿಗೆಯನ್ನೇ ವೃತ್ತಿಯಾಗಿಟ್ಟುಕೊಂಡ ಮಾರ್ಲೆ ಕಲಗನ್, ಮೇಜೋ಼ ಡ ಲ ರೋಶ್ ಮತ್ತು ಈಥೆಲ್ ವಿಲ್ಸನ್–ಇವರು ಇಂಗ್ಲಿಷ್ ಮತ್ತು ಅಮೆರಿಕನ್ ಪ್ರಕಾಶಕರನ್ನು ಹಿಡಿಯಬೇಕಾಯಿತು. ಆದರೂ ಸಾಹಿತ್ಯ ಕೃಷಿ ತಡೆಯಿಲ್ಲದೆ ಸಾಗಿತು. ನೆಲಿ ಮ್ಯಾಕ್‌ಲಿಂಗ್, ಆರ್ಥರ್ ಸ್ಟ್ರಿಂಗರ್, ರಾಲ್ಫ್ ಕೊನರ್–ಇವರು ಪ್ರೈರಿ ಪ್ರಾಂತ್ಯಗಳನ್ನು ಕೆನಡದವರಿಗೆ ಪರಿಚಯ ಮಾಡಿಕೊಟ್ಟರು. ಜನಪದಗೀತೆಗಳು ಮತ್ತು ಗಡಿನಾಡಿನ ಕಥೆಗಳು ಅತ್ಯಂತ ಜನಪ್ರಿಯವಾದ ಮಾದರಿಗಳಾದುವು. ರಾಲ್ಫ್ ಕೊನರ್‌ನ ರೊಮಾನ್ಸಸ್ ಮತ್ತು ರಾಬರ್ಟ್ ಸರ್ವಿಸ್‌ನ ಯೂಕೋನ್ ಬ್ಯಾಲಡ್ಸ್‌ಗಳ ಲಕ್ಷಾಂತರ ಪ್ರತಿಗಳು ಮಾರಾಟವಾದುವು. ಟಾಮ್ ಮ್ಯಾಕಿನೀಸ್, ಮರ್ಜೊರಿ ಪಿಕ್ಥಾಲ್, ಡಬ್ಲ್ಯೂ.ಎಚ್.ಡ್ರಮಂಡ್, ಲ್ಯೂಸಿ ಎಂ. ಮಾಂಟಗೋಮರಿ–ಇವರು ಇದೇ ಕಾಲದ ಮುಖ್ಯ ಕವಿಗಳು. 1930ರಲ್ಲಿ ಮಾಂಟ್ರಿಯಾಲ್ ಗುಂಪಿನ ಕವಿಗಳಾದ ಇ.ಜೆ.ಪ್ರಾಟ್, ಎಫ್.ಆರ್.ಸ್ಕಾಟ್, ಎ.ಜೆ.ಎಂ.ಸ್ಮಿತ್ ಮತ್ತು ಲಿಯೊ ಕೆನಡಿ–ಇವರ ಆಗಮನದಿಂದ ಇಂಗ್ಲಿಷ್–ಕೆನಡಿಯನ್ ಕಾವ್ಯ ಗಣನೀಯ ಪ್ರಗತಿ ಸಾಧಿಸಿತು. ಕೆನಡದ ಪಶ್ಚಿಮ ಭಾಗವನ್ನು ಪ್ರತಿಭಾವಂತ ಕಾದಂಬರಿಕಾರ ಫ್ರೆಡ್ರಿಕ್ ಫಿಲಿಪ್ ಗ್ರೂವ್ ವಾಸ್ತವಿಕತೆಯಿಂದ ವರ್ಣಿಸಿದ್ದಾನೆ. ಮಾರ್ಥಾ ಆಸ್ಟೆನ್ಸೊ. ರಾಬರ್ಟ ಸ್ಟೆಡ್, ಫ್ರೆಡ್ರಿಕ್ ನಿವೆನ್, ಸಿಂಕ್ಲೇರ್, ರಾಸ್ ಡಬ್ಲ್ಯೂ. ಒ.ಮಿಟ್ಚೆಲ್, ಇ.ಎ.ಮ್ಯಾಕ್‌ಕೋರ್ಟ್–ಇವರು ಈ ಪ್ರೈರಿ ಪಂಥಕ್ಕೆ ಸೇರಿದ ಇತರ ಮುಖ್ಯ ಕಾದಂಬರಿಕಾರರು. ಈಥೆಲ್ ವಿಲ್ಸನ್ನಳ ಈಕ್ವೇಷನ್ಸ್ ಆಫ್ ಲವ್, ಗೇಬ್ರಿಯಲ್ ರಾಯಳ ದಿ ಕ್ಯಾಷಿಯರ್ ಮತ್ತು ಥಾಮಸ್ ರೆಡಾಲ್‌ನ ದಿ ನಿಂಫ್ ಅಂಡ್ ದಿ ಲ್ಯಾಂಪ್–ಇವು ಪ್ರಾದೇಶಿಕ ಕಾದಂಬರಿಗಳಾದರೂ ತಮ್ಮ ಸಾಂಕೇತಿಕತೆ ಹಾಗೂ ಕಾಲ್ಪನಿಕತೆಯ ದರ್ಶನ ಬಲದಿಂದ ಪ್ರಾದೇಶಿಕತೆಯನ್ನು ಮೀರಿ ಹೋಗಿವೆಯಲ್ಲದೆ ರಾಷ್ಟ್ರೀಯ ಸಾಹಿತ್ಯಸೃಷ್ಟಿಗೆ ನಾಂದಿಯಾಗಿವೆ. ಇಂಗ್ಲಿಷ್ ಮತ್ತು ಫ್ರೆಂಚ್ ಸಾಹಿತ್ಯವೆಂಬ ವಿಭಿನ್ನತೆ ಕ್ರಮೇಣವಾಗಿ ಕಡಿಮೆಯಾಗುತ್ತ ಬಂತು. ದ್ವಿಸಾಂಸ್ಕೃತಿಕ ಪ್ರಜ್ಞೆಯುಳ್ಳ ಲೆಮ್‌ಲಿನ್ ತನ್ನ ಲೆಪ್ಲೂಫೆ ಕಾದಂಬರಿಯಲ್ಲಿ ಏಕಕಾಲದಲ್ಲಿ ಫ್ರೆಂಚ್ ಮತ್ತು ಇಂಗ್ಲಿಷ್ ಸಾಹಿತಿಯ ದೃಷ್ಟಿಕೋನದಿಂದ ಪಾತ್ರಗಳನ್ನು ಸೃಷ್ಟಿಸಿ ರಾಷ್ಟ್ರದ ಭಾವೈಕ್ಯತೆಗೆ ಹಾದಿ ತೋರಿಸಿದ್ದಾನೆ. ಹ್ಯೂ ಮ್ಯಾಕ್ಲೆನಾನ್ ಸಹ ತನ್ನ ಟೂ ಸಾಲಿಟ್ಯೂಡ್ಸ್‌ನಲ್ಲಿ ಇಂಗ್ಲಿಷ್ ಮತ್ತು ಫ್ರೆಂಚರ ನಡುವೆ ಇರುವ ತುಯ್ತ, ಪ್ರಾಂತೀಯತೆ ಮತ್ತು ರಾಷ್ಟ್ರೀಯತೆಗಳ ಅನಿಶ್ಚಿತ ಹೊಯ್ದಾಟಗಳನ್ನು ಪ್ರತಿಬಿಂಬಿಸಿದ್ದಾನೆ. ಫ್ರೆಂಚ್–ಇಂಗ್ಲಿಷ್ ಸಂಸ್ಕೃತಿ ಮತ್ತು ಸಾಹಿತ್ಯಗಳ ನಡುವಿನ ಭಿನ್ನತೆ ಕಡಿಮೆಯಾಗಿ ಒಂದು ಸಮಗ್ರವಾದ ರಾಷ್ಟ್ರೀಯತೆ ಏರ್ಪಡಬೇಕೆಂಬ ಹೆಬ್ಬಯಕೆಯ ವ್ಯಂಗ್ಯಾತ್ಮಕ ದ್ವಂದ್ವವನ್ನು ಪ್ರಸಿದ್ಧ ಕಾದಂಬರಿಕಾರ ಮಾರ್ಲೆ ಕಲಗನ್ ತನ್ನ ಸ್ಮರಣಯೋಗ್ಯ ಕಾದಂಬರಿಗಳಾದ ಸಚ್ ಈಸ಼್ ಮೈ ಬಿಲವೆಡ್, ದೆ ಷಲ್ ಇನ್‌ಹೆರಿಟ್ ದಿ ಅರ್ತ್, ಮೋರ್ ಜಾಯ್ ಇನ್ ಹೆವನ್, ದಿ ಲವ್ಡ್ ಅಂಡ್ ದಿ ಲಾಸ್ಟ್‌ಗಳಲ್ಲಿ ಬಹಳ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ. ಇದೇ ವ್ಯಂಗ್ಯ ವಿಧಾನವನ್ನು ಅನುಸರಿಸಿದ ಫ್ರೆಂಚ್–ಕೆನಡಿಯನ್ ಕಾದಂಬರಿಗಾರ್ತಿ ಗೇಬ್ರಿಯಲ್ ರಾಯ್ ತನ್ನ ದಿ ಕ್ಯಾಷಿಯರ್, ವೇರ್ ನೆಸ್ಟ್ಸ್ ದಿ ವಾಟರ್ ಹೆನ್ ಕಾದಂಬರಿಗಳಲ್ಲಿ ರಾಷ್ಟ್ರೀಯ ಲಕ್ಷಣಗಳುಳ್ಳ ಪಾತ್ರಸೃಷ್ಟಿಯ ಮೂಲಕ ಎರಡು ಸಂಸ್ಕೃತಿಗಳನ್ನೂ ಬೆಸೆಯುವ ಪ್ರಯತ್ನ ಮಾಡಿದ್ದಾಳೆ.

ಲ್ಯೂಸಿ ಎಂ. ಮಾಂಟಿಗೋಮರಿ

ಯುರೋಪಿನ ವಿವಿಧ ದೇಶಗಳಿಂದ ವಲಸೆಬಂದ ಕೆಲವು ಬರೆಹಗಾರರು ಕೆನಡದ ಸಾಹಿತ್ಯ ಸಂಪತ್ತು ಹಾಗೂ ವೈವಿಧ್ಯವನ್ನು ಹೆಚ್ಚಿಸಿದ್ದಾರೆ. ಇಪ್ಪತ್ತನೆ ಶತಮಾನದ ಉತ್ತರಾರ್ಧದ ಕೆಲವು ಕಾದಂಬರಿಕಾರರನ್ನು ಈಗ ಹೆಸರಿಸಬಹುದು. ಫಿಲಿಪ್ ಚೈಲ್ಡ್ (ದಿ ವಿಲೇಜ್ ಆಫ್ ಸೋಲ್ಸ್ (ದಿ ಡೇಸ್ ಆಫ್ ರಾತ್), ಹ್ಯೂ ಗಾರ್ನರ್ (ಸ್ಟಾರಮ್ ಬಿಲೊ), ಹೆನ್ರಿ ಕ್ರಿಸೆಲ್ (ದಿ ರಿಚ್ ಮ್ಯಾನ್), ರಾಬರ್ಟ್‌ಸನ್ ಡೇವಿಸ್ (ಲೀವ್ಸ್ ಆಫ್ ಮ್ಯಾಲಿಸ್). ಡೆವಿಡ್ ವಾಕರ್ ಬ್ರಿಯಾನ್ ಮೂರ್, ನಿಕೊಲಾಸ್ ಮಾನ್‌ಸೆರಾಟ್–ಇವರು ಬ್ರಿಟಿಷ್ ದ್ವೀಪಗಳಿಂದ ಬಂದ ಪ್ರಮುಖ ಕಾದಂಬರಿಕಾರರು.

20ನೆಯ ಶತಮಾನದಲ್ಲಿ ಕಾವ್ಯವೂ ವಿಪುಲವಾಗಿ ಬೆಳೆದಿದೆ. ವಿಲ್ಸನ್ ಮ್ಯಾಕ್‌ಡೊನಾಲ್ಡ್ 19ನೆಯ ಶತಮಾನದ ರಮ್ಯ ಕಾವ್ಯ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾನೆ. ಇವನ ಬಹಳ ಮುಖ್ಯ ಕಾವ್ಯಕೃತಿ ಔಟ್ ಆಫ್ ದಿ ವಿಲ್ಡರ್‌ನೆಸ್. ಈ ಶತಮಾನದ ಅತ್ಯಂತ ದೊಡ್ಡ ಕವಿ ನಿಸ್ಸಂದೇಹವಾಗಿಯೂ ಎಡ್ವಿನ್ ಜಾನ್ ಪ್ರಾಟ್. ಸಮುದ್ರ, ನೀರ್ಗಲ್ಲಿನ ಗುಡ್ಡ, ಭಯಂಕರ ಪ್ರಾಣಿಗಳು ಮತ್ತು ಇತರ ಮನುಷ್ಯೇತರ ವಸ್ತುಗಳ ಬಗ್ಗೆ ಕಾವ್ಯಚಿತ್ತವೃತ್ತಿಯುಳ್ಳ ಈತ ಇವುಗಳ ನಿರೂಪಣೆಯಲ್ಲಿ ತನ್ನದೇ ಆದ ಒಂದು ಸ್ವಕೀಯತೆಯನ್ನು ತೋರಿಸಿಕೊಂಡಿದ್ದಾನೆ. ಈತನ ದಿ ವಿಚಸ್ ಬ್ರ್ಯೂ, ದಿ ಟೈಟಾನ್ಸ್ ಎಂಬ ಕಾವ್ಯಕೃತಿಗಳು ಮನುಷ್ಯೇತರ ವಸ್ತುಗಳ ಬಗ್ಗೆ ಆದಿಕಾಲದ, ಇತಿಹಾಸಪೂರ್ವದ ಮನೋಭಾವವನ್ನೊಳಗೊಂಡಿವೆ. ಪ್ರಕೃತಿಯ ಪ್ರಕೋಪಗಳಿಗೆ ಮಾನವ ಹೇಗೆ ತುತ್ತಾಗುತ್ತಾನೆಂಬುದರ ವರ್ಣನೆ ಇಲ್ಲಿದೆ. ಬ್ರೆ ಬೂಫ್ ಅಂಡ್ ಹಿಸ್ ಬ್ರದ್ರನ್ ಎಂಬ ಕಾವ್ಯದಲ್ಲಿ ಬ್ರೆ ಬೂಫ್ ತನ್ನ ಆತ್ಮಬಲಿಯಿಂದ ಮಾನವ ಪ್ರಕೃತಿಯನ್ನು ಜಯಿಸಿದ ರೀತಿಯ ವರ್ಣನೆ ಇದೆ. ಟುವರ್ಡ್ಸ್ ದಿ ಲಾಸ್ಟ್ ಸ್ಪೈಕ್ ಎಂಬ ಕಾವ್ಯ ಸಂಕಲನದಲ್ಲಿ ಅಂತರ ಖಂಡೀಯ ಬೃಹತ್ ರೈಲ್ವೆ ನಿರ್ಮಾಣದಲ್ಲಿ ಮನುಷ್ಯೇತರ ಶಕ್ತಿಯ ಮೇಲೆ ಮಾನವ ತೋರುವ ಅಸಾಧಾರಣ ಯಶಸ್ಸಿನ ಸಾಧನೆಯ ವರ್ಣನೆ ಇದೆ. ಈ ಶತಮಾನದಲ್ಲಿ ಅದ್ಭುತ ಯಶಸ್ಸನ್ನು ಸಾಧಿಸಿದ ವೈಯಕ್ತಿಕ ಕೀರ್ತಿ ಪ್ರ್ಯಾಟ್‌ಗೆ ಸೇರಿದ್ದು.



ಲೀಕಾಕ್ ಸ್ಟೀವನ್

1930ರಲ್ಲಿ ಒಂದು ಹೊಸ ಹಾಗೂ ಸತ್ತ್ವಪೂರ್ಣ ಕಾವ್ಯ ಚಳವಳಿ ಪ್ರಾರಂಭವಾಯಿತು. ರಾಬರ್ಟ್ಸ್‌ನ ರೊಮ್ಯಾಂಟಿಕ್ ಪಂಥದ ವಿರುದ್ಧ ಹೋರಾಡುವುದೇ ಇದರ; ಉದ್ದೇಶ. ಈ ಚಳವಳಿಯ ಮುಖಂಡ ಯಹೂದಿ ವಂಶಸ್ಥನಾದ ಏಬ್ರಹಾಂ ಎಮ್. ಕ್ಲೇನ್ ತಾಲ್ಮೂಡಿಕ್ ಪಂಡಿತ ಹಾಗೂ ದೊಡ್ಡ ವಿದ್ವಾಂಸ. ಪುರಾಣ ಕಥೆ, ಸಾಂಪ್ರದಾಯಿಕ ನುಡಿಗಟ್ಟು ಮತ್ತು ಪುರಾತನ ಉಪಾಸನಾ ಕ್ರಮಗಳನ್ನೊಳಗೊಂಡ ಕಾವ್ಯಸೃಷ್ಟಿಯಲ್ಲಿ ಅಗ್ರಗಣ್ಯ. ಎ.ಜೆ.ಎಮ್.ಸ್ಮಿತ್ತನ ದಿ ಬುಕ್ ಆಫ್ ಕೆನಡಿಯನ್ ಪೊಯೆಟ್ರಿ ನವ್ಯ ಪಂಥಕ್ಕೆ ಸೇರಿದ ಕವನಗಳ ಸಂಗ್ರಹ. ಈ ಹೊಸ ಕಾವ್ಯ ಪಂಥಕ್ಕೆ ಸೇರಿದ ಇನ್ನೊಬ್ಬ ಯಹೂದಿ ವಂಶಸ್ಥನಾದ ಅರ್ವಿಂಗ್ ಲೇಟನ್ ಹಾಗೂ ಪೋಲಿಷ್ ವಲಸೆಗಾರ ಡ್ಯೂಡೆಕ್ ಈ ಚಳವಳಿಗೆ ಚೈತನ್ಯಪ್ರಾಯರಾಗಿರುವರಲ್ಲದೆ ತನ್ಮೂಲಕ ಫ್ರೆಂಚ್ ಮತ್ತು ಇಂಗ್ಲಿಷ್ ಸಾಹಿತ್ಯವೆಂಬ ತಾರತಮ್ಯವನ್ನು ಸಂಪೂರ್ಣವಾಗಿ ಹೋಗಲಾಡಿಸಿ ಕೆನಡತನವನ್ನೊಳಗೊಂಡ ಹೊಸ ಸಾಹಿತ್ಯ ಸೃಷ್ಟಿಗೆ ಮಾರ್ಗದರ್ಶಕರಾಗಿದ್ದಾರೆ.

ಆಧುನಿಕ ಕೆನಡದ ಅತಿದೊಡ್ಡ ಪ್ರಬಂಧಕಾರ ಮಾಂಟ್ರಿಯಾಲ್‌ನ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕನಾಗಿದ್ದ ಸ್ಟೀವನ್ ಲೀಕಾಕ್. ಈತ ಕೆನಡ ಮಾದರಿಯ ವ್ಯಂಗ್ಯ ಸಾಹಿತ್ಯದ ಸೃಷ್ಟಿಕರ್ತ. ಸಾಮಾಜಿಕ ನ್ಯೂನತೆಗಳನ್ನು ವಿನೋದಾತ್ಮಕ ಪ್ರಬಂಧಗಳಲ್ಲಿ ಎತ್ತಿ ತೋರಿಸಿದ್ದಾನೆ. ಈತನ ಲಿಟರರಿ ಲ್ಯಾಪ್ಸಸ್ ಮತ್ತು ಸನ್‌ಷೈನ್ ಸ್ಕೆಚಸ್ ಆಫ್ ಎ ಲಿಟ್ಲ್ ಟೌನ್ ಎಂಬ ಗ್ರಂಥಗಳು ಈತ ಒಬ್ಬ ಪ್ರಸಿದ್ಧ ವಿನೋದಕಾರನೆಂದು ಸ್ಥಿರಪಡಿಸುತ್ತವೆ. ಟಿ.ಸಿ. ಹ್ಯಾಲಿ ಬರ್ಟನ್ನನ ಅನಂತರ ಓದುಗರಲ್ಲಿ ನಗೆಯ ಹೊಳೆಯನ್ನೇ ಹರಿಸಿದವ ಲೀಕಾಕ್ ಒಬ್ಬನೇ. **(ನೋಡಿ– ಲೀಕಾಕ್, ಸ್ಟೀವನ್)**.

ಕೆನಡದ, ಅಷ್ಟೇಕೆ, ಉತ್ತರ ಅಮೆರಿಕದ, ಮೊದಲನೆಯ ಕಾದಂಬರಿ. ಫ್ರಾನ್ಸೆಸ್ ಮೂರ್ ಬ್ರ್ಯುಕ್ ಎಂಬಾಕೆ ಬರೆದ 'ದ ಹಿಸ್ಟರಿ ಆಫ್ ಎಮಿಲ ಮ್ಯಾರಿಟನ್ಸ್' (1769) ಎಂಬ ಕೃತಿ. ಇದು ಪತ್ರಗಳ ರೂಪದಲ್ಲಿರುವ 'ರೊಮಾನ್ಸ್' ಕೆನಡದ ಇತಿಹಾಸವನ್ನು ಆಧರಿಸಿದ ಮೊದಲನೆಯ ಕಾದಂಬರಿ ಜಾನ್ ರಿಚರ್ಡ್‌ಸನ್ ಬರೆದ 'ವಕೌಸ್ಟ' (1832) ಇಬ್ಬರು ಸೋದರಿಯರು ಆತ್ಮವೃತ್ತಗಳಲ್ಲಿ ಕ್ಯಾಥರೀನ್ ಪಾರ್ ಟ್ರೈಯ್ಲ್ 'ಬ್ಯಾಕ್‌ವುಡ್ಸ್ ಆಫ್ ಕೆನಡಾ' (1836) ಎನ್ನುವ ಪುಸ್ತಕದಲ್ಲಿ ಮತ್ತು ಸುಸನ್ನ ಮೂಡಿ 'ರಫಿಂಗ ಇಟ್ ಇನ್ ದಿ ಬುಷ್' (1952) ಎನ್ನುವ ಪುಸ್ತಕದಲ್ಲಿ ಇಲ್ಲಿಗೆ ಬಂದ ಪ್ರಾರಂಭದ ಧೀರರ ಕಷ್ಟಗಳನ್ನು ಬಿತ್ತರಿಸಿದರು.

19ನೆಯ ಶತಮಾನದ ಇಬ್ಬರು ಪ್ರಧಾನ ಕಾದಂಬರಿಕಾರರು ವಿಲಿಯಂ ಕರ್ಬಿ ಮತ್ತು ಗಿಲ್ಬರ್ಟ್ ಪಾರ್ಕರ್. ಕರ್ಬಿಯ 'ದಿ ಗೋಲ್ಡನ್ ಡಾಗ್' (1877) ಮತ್ತು ಪಾರ್ಕರನ 'ದಿ ಸೀಟ್ಸ್ ಆಫ್ ದಿ ಮೈಟಿ' (1897) ಗತಕಾಲವನ್ನು ವೈಭವೀಕರಿಸಿದವು. ಇವರನ್ನು ಹಲವರು ಕಾದಂಬರಿಕಾರರು ಅನುಕರಿಸಿದರು. ಈ ಶತಮಾನದ ಕಡೆಯ ವರ್ಷಗಳಲ್ಲಿ ಗ್ರಾಮಜೀವನವನ್ನು ವೈಭವೀಕರಿಸಿದ ರಾಲ್ಫ್ ಕಾನರ್‌ನ (ಸಿ.ಡಬ್ಲು, ಗಾರ್ಡನ್‌ನ ಕಾವ್ಯನಾಮ) 'ಬ್ಯಾಕ್ ರಾಕ್' (1898) ಮತ್ತು 'ದಿ ಮ್ಯಾನ್ ಫ್ರಮ್ ಗ್ಲೆನ್‌ಗರಿ' (1901) ಈ ಒಲವನ್ನು ಪ್ರಾರಂಭಿಸಿದವು.

‘ಕೆನಡಿಯನ್ ಫೋರ್ಮ್’ (ಪ್ರಾರಂಭ 1920) ಮತ್ತು ‘ಮೆರ್‌ಗಿಲ್ಸ್ ಫಾರ್ಟ್‌ನೈಟ್‌ಲಿ ರಿವ್ಯೂ’ (1925–27) ಈ ಪ್ರಕಟಣೆಗಳು ಹೊಸ ಕಾವ್ಯದ ಪ್ರಕಟಣೆಗೆ ನೆರವಾದವು. ಈ ಘಟ್ಟದ ಶ್ರೇಷ್ಠ ಕವಿ ಎಡ್ವಿನ್ ಜಾನ್ ಪ್ರಾ ಟ್. ಇವನ ಸಾಗರಪ್ರೀತಿ, ನಿಸರ್ಗದಲ್ಲಿಯ ಕ್ರೌರ್ಯದ ಅರಿವು ಮತ್ತು ಬದುಕಿನ ದುರಂತ ದೃಷ್ಟಿ ಇವು ಇವನ ಕಾವ್ಯದಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ.

ಸಮಾಜಶಾಸ್ತ್ರೀಯ ಮನೋಧರ್ಮದ ಕಾದಂಬರಿಯನ್ನು ಪ್ರಾರಂಭಿಸಿದವನು ಫ್ರೆಡರಿಕ್ ಫಿಲಿಪ್ ಗ್ರೋತ್. ‘ಸೆಟ್ಲರ್ಸ್ ಆಫ್ ದಿ ಮಾರ್ಷ್’ (1925) ಮತ್ತು ‘ಫ್ರೂಟ್ಸ್ ಆಫ್ ದಿ ಅರ್ತ್’ (1933) ಕಾದಂಬರಿಗಳಲ್ಲಿ ಪ್ರಾರಂಭದ ಸಾಹಸಿಗಳ ಬದುಕನ್ನು ಪುನರ್ ಸೃಷ್ಟಿಸಿದ. ಮೇಸ್ಗೋ ಡಲ ರೋಷ್ ಎನ್ನುವ ಕಾದಂಬರಿಕಾರ್ತಿ 16 ಸಂಪುಟಗಳಲ್ಲಿ ವೈಟ್‌ಓಕ್ ಕುಟುಂಬ ಮತ್ತು ಅವರ ತೋಟದ ಕಥೆಯನ್ನು ಬಿತ್ತರಿಸಿದಳು. ಮಾರ್ಲಿ ಕೆಲಿಗಾನ್ ರಚಿಸಿದ ‘ದೆ ಷಲ್ ಇನ್‌ಹೆರಿಟ್ ದಿ ಅರ್ತ್’ (1935) ಮತ್ತು ದಿಲವ್‌ಡ್ ಅಂಡ್ ದಿ ಲಾಸ್ಟ್ (1961) ಕಾದಂಬರಿಗಳಲ್ಲಿ ವ್ಯಕ್ತಿ ಸಮಾಜಗಳ ಘರ್ಷಣೆಯನ್ನು ಕಾಣಬಹುದು.

ಅರ್ಲ್ ಬರ್ನೆ ಮತ್ತು ಡೊರೊತಿ ಲೈವ್‌ಸೇ 20ನೆಯ ಶತಮಾನದ ಉತ್ತರಾರ್ಧದ ಪ್ರಮುಖ ಕವಿಗಳು. ಹ್ಯೂಮನಿಸಮ್ ಎಂಬುದು ಬರ್ನೆಯ ಕಾವ್ಯ. ಲೈವ್‌ಸೇಯ ಕಾವ್ಯದ ವಸ್ತು ವಿನಾಶಕ ಶಕ್ತಿಗಳೊಡನೆ ವ್ಯಕ್ತಿಯ ಹೋರಾಟ. ರೇಮಂಡ್ ಸೂಸ್ಟರ್ ಲೂಯಿ ಡುಡೆಕ್ ಮತ್ತು ಇರ್ವಿಂಗ್ ಟೆಲ್ಟಿನ್ ಕೆನಡ ಸಮಾಜದ ಪ್ರಾಪಂಚಿಕ ಸಂಪತ್ತಿನ ಒಲವಿನ ಮನೋಧರ್ಮವನ್ನು ಟೀಕಿಸಿದರು. ಪೆಟ್ರಿಷಿಯ ಕೆ. ಪೇಜಳಿಗೆ ಮನೋವ್ಯಾಪಾರದಲ್ಲಿ ಆಸಕ್ತಿ. ಅರ್ನೆಸ್ಟ್ ಬರ್‌ಲರ್‍ನ ‘ದಿ ಮೌಂಟನ್ ಅಂಡ್ ದಿ ವಾಲಿ’ (1952) ನೊವ ಸ್ಕಾಟಿಯದ ಕಲಾವಿದರ ಹತಾಶೆಯನ್ನು ಚಿತ್ರಿಸಿದ ಎಥೆಲ್ ವಿಲ್ಸನ್, ‘ದಿ ಈಕ್ವೇಷನ್ಸ್ ಆಫ್ ಲವ್’ (1952) ಮತ್ತು ‘ಸ್ವ್ಯಾಂಪ್ ಏಂಜೆಲ್’ (1954) ಕಾದಂಬರಿಗಳಲ್ಲಿ ಸ್ತ್ರೀಯರು ಬದುಕನ್ನು ಸಾರ್ಥಕ ಪಡಿಸಿಕೊಳ್ಳಲು ಪಡುವ ಪಾಡನ್ನು ಚಿತ್ರಿಸಿದಳು. 1960ರ ಮತ್ತು 1970ರ ದಶಕಗಳ ಪ್ರಮುಖ ಕಾದಂಬರಿಕಾರರು ರಾಬರ್ಟ್‌ಸನ್ ಡೇವಿಸ್ ಮತ್ತು ಮಾರ್ಗರೆಟ್ ಲಾರೆನ್ಸ್. ಡೇವಿಸ್ ಮನೋವಿಜ್ಞಾನಿ ಯಾಂಗನ ಸಿದ್ಧಾಂತಗಳ ಬೆಳಕಿನಲ್ಲಿ ಪಾತ್ರಗಳ ಮನಸ್ಸಿನ ವ್ಯಾಪಾರಗಳನ್ನು ವಿಶ್ಲೇಷಿಸಿದ; ಲಾರೆನ್ಸಳ ಕಾದಂಬರಿಗಳಲ್ಲಿ ಸೂಕ್ಷ್ಮ ಪಾತ್ರ ವಿಶ್ಲೇಷಣೆ ಇದೆ. ಮೈಕೆಲ್ ಒಂಡಾಟ್‌ಜೆಯ ‘ದಿ ಇಂಗ್ಲಿಷ್ ಪೇಷೆಂಟ್’ ಕಾದಂಬರಿಗೆ (1992) ಬುಕರ್ ಬಹುಮಾನ ಬಂದಿದೆ.

ನಾಟಕದ ಬೆಳೆವಣಿಗೆ ಬಹಳ ನಿಧಾನವಾಗಿದೆ. ರೆಪರ್ಟರಿ ಥಿಯೇಟರ್‌ಗಳು 20ನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾದವು.

ಸಾಹಿತ್ಯ ವಿಮರ್ಶೆಯಲ್ಲಿ ಖ್ಯಾತರಾದವರು ಜಾರ್ಜ್ ಮಡ್ ಕಾಕ್ ಮತ್ತು ನಾರ್ತ್ರಾಪ್ ಫ್ರೈ. ಫ್ರೈ ಬರೆದ ‘ದಿ ಅನಾರ್ಮಿ ಆಫ್ ಕ್ರಿಟಿಸಿಸಂ’ ಕೆನಡದಾಚೆ ಸಹ ಪ್ರಭಾವ ಬೀರಿತು.

(ಎಲ್.ಎಸ್.ಎಸ್.)

**ಫ್ರೆಂಚ್ ಕೆನಡಿಯನ್ ಸಾಹಿತ್ಯ :** 1763ರಲ್ಲಿ ಫ್ರೆಂಚ್–ಕೆನಡ ಇಂಗ್ಲಿಷರ ಕೈಸೇರಿದ ಪರಿಣಾಮವಾಗಿ ಫ್ರೆಂಚರು ತಮ್ಮ ಸಂಸ್ಕೃತಿಯನ್ನು ಇನ್ನೂ ಭದ್ರಪಡಿಸಿಕೊಳ್ಳಲು ಪ್ರಯತ್ನಿಸಿದರು. ಪರಕೀಯರ ಕೈಕೆಳಗಿರಬೇಕಾದ ಪರಿಸ್ಥಿತಿಯಲ್ಲಿ ತಾವು ಹೆಚ್ಚಾಗಿ ನೆಲಸಿದ್ದ ಕ್ವಿಬೆಕ್ ಪ್ರಾಂತ್ಯದ ಬಗ್ಗೆ ಅವರಿಗೆ ಅಭಿಮಾನ ಹೆಚ್ಚಾಯಿತು. ಅಂದರೆ 19ನೆಯ ಶತಮಾನದ ಆದಿಭಾಗದಿಂದ ಪ್ರಾರಂಭವಾದ ಫ್ರೆಂಚ್–ಕೆನಡಿಯನ್ ಸಾಹಿತ್ಯವೂ ಅವರ ಸಂಸ್ಕೃತಿ ಮತ್ತು ಪ್ರಾಂತ್ಯಾಭಿಮಾನದಿಂದ ಪಡೆದ ಸ್ಫೂರ್ತಿಯ ಫಲವಾಗಿದೆ.

ಫ್ರೆಂಚ್–ಕೆನಡಿಯನ್ ಸಾಹಿತ್ಯಾಭ್ಯುದಯಕ್ಕೆ ಸ್ಫೂರ್ತಿದಾಯಕವಾದ ಗ್ರಂಥ ಎಫ್.ಎಕ್ಸ್. ಗಾರ್‍ನೂವಿನ ಹಿಸ್ಟರಿ ಆಫ್ ಕೆನಡ. ಇದು ಫ್ರೆಂಚ್–ಕೆನಡಿಯನರಲ್ಲಿ ಸುಪ್ತವಾಗಿದ್ದ ಸಾಂಸ್ಕೃತಿಕಾಭಿಮಾನ ಮತ್ತು ರಾಷ್ಟ್ರಾಭಿಮಾನಗಳನ್ನು ಹೊಡೆದೆಬ್ಬಿಸಿತು. ಸಾಹಿತ್ಯ ಚಟುವಟಿಕೆಯಲ್ಲಿ ಚೈತನ್ಯ ಉಂಟುಮಾಡಿತಲ್ಲದೆ, ಸಾಹಿತ್ಯದ ದಾರಿಯನ್ನೂ ರೂಪಿಸಿತು. ಈ ಶತಮಾನದ ಮೊತ್ತಮೊದಲ ರಮ್ಯ ಹಾಗೂ ದೇಶಭಕ್ತಿಕವಿ ಕ್ವಿಬೆಕ್‌ನ ಪುಸ್ತಕ ವ್ಯಾಪಾರಿ ಜೋಸೆಫ್ ಆಕ್ಟೇವ್ ಕ್ರೆಮ್ಯಾಜೀ. ಈತ ಮತ್ತು ಈತನ ಸಮಕಾಲೀನರ ಪದ್ಯ, ಗದ್ಯಗಳಲ್ಲಿ ಮೂಲ ದೇಶವಾದ ಫ್ರಾನ್ಸಿನ ವಿಕ್ಟರ್ ಹ್ಯೂಗೊ ಮತ್ತು ಆಲ್ಫಾನ್ಸ್ ಡಿ ಲ್ಯಾಮರ್ಟೈನರ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಕ್ರೆಮ್ಯಾಜೀಯ ಗ್ರಂಥಗಳು ಇಂದಿಗೂ ಜನಪ್ರಿಯವಾಗಿವೆ. ಕ್ರೆಮ್ಯಾಜೀ, ಪಿ.ಒ.ಶಾವೂ, ಆಂಟೋನ್ ಗೆರಿನ್ ಲೆಜೋಯಿ–ಇವರ ಬರೆಹಗಳಲ್ಲಿ ಫ್ರೆಂಚ್–ಕೆನಡ ತನದ ವೈಶಿಷ್ಟ್ಯವನ್ನೂ ಫ್ರೆಂಚ್ ಪದ್ಧತಿ ಹಾಗೂ ಕೆನಡಿಯನ್ ಮನೋಧರ್ಮಗಳ ಸಮ್ಮಿಲನವನ್ನೂ ಕಾಣಬಹುದು. ಕೆನಡದ ಜನಜೀವನ, ಸಂಪ್ರದಾಯ, ಧಾರ್ಮಿಕ ಶ್ರದ್ಧೆಯನ್ನೊಳಗೊಂಡ ಕಾವ್ಯರಚನೆಯಲ್ಲಿ ಪ್ರಸಿದ್ಧರಾದವರು ಕ್ರೆಮ್ಯಾಜೀಯ ಅನುಯಾಯಿಗಳಾದ ವಿಲಿಯಂ ಚಾಪ್‌ಮನ್, ಪ್ಯಾಂಫಿಲ್ ಲಿಮೆ, ಆಲ್ಫ್ರೆಡ್ ಗಾರ್‍ನೂ ಮತ್ತು ನೆರಿ ಬೀಚೆಮಿನ್. ಇವರು ಕ್ವಿಬೆಕ್ಕಿನ ಪ್ರಾದೇಶಿಕ ಕಾವ್ಯಸಂಪ್ರದಾಯದ ಪೂರ್ವಗಾಮಿಗಳು. ಬ್ಲಾಂಚೆಲ್ಯಾಮಂಟೇನ್, ಆಲ್ಬರ್ಟ್ ಫರ್‌ಲ್ಯಾಂಡ್, ಎಂಗಲ್‌ಬರ್ಟ್ ಗ್ಯಾಲೆಜ಼್ ಮತ್ತು ಆಲ್ಫಾನ್ಸ್ ಡಿಸಿಲೆಟ್ಸ್ ಇವರು ಈ ಪಂಥಕ್ಕೆ ಸೇರಿದ ಇತರ ಮುಖ್ಯ ಕವಿಗಳು.

ಈ ಕಾಲಾವಧಿಯ ಸಾಹಿತ್ಯ ಫ್ರೆಂಚ್–ಕೆನಡಿಯನರ ಸಂಸ್ಕೃತಿ ಇಂಗ್ಲಿಷ್–ಕೆನಡಿಯನ್ನರ ಸಂಪರ್ಕದಿಂದ ದೂರವಾಗಿರಬೇಕೆಂಬ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಇಂಗ್ಲಿಷರು ಮತ್ತು ಫ್ರೆಂಚರು ಅಮೆರಿಕ ಸಂಯುಕ್ತಸಂಸ್ಥಾನಗಳಿಂದ ಪ್ರಬಲವಾಗಿ ಬರುತ್ತಿದ್ದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಒತ್ತಡವನ್ನು ವಿರೋಧಿಸಬೇಕೆಂಬ ಮನವರಿಕೆಯುಳ್ಳವರಾಗಿದ್ದರು. ಆದರೂ ಆರಂಭದ ಫ್ರೆಂಚ್–ಕೆನಡಿಯನ್ ಸಾಹಿತ್ಯ ಇಂಗ್ಲಿಷ್–ಕೆನಡಿಯನ್ ಸಾಹಿತ್ಯದಂತೆ ಪ್ರಾಂತ್ಯ ಮಮತೆ, ಸಂಪರ್ಕರಹಿತ ಫ್ರೆಂಚ್ ಸಂಪ್ರದಾಯ, ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತದೆ.

ಕಾನ್‌ಫೆಡರೇಷನ್ ಅನಂತರ ಬಂದ ಅಗ್ರಗಣ್ಯ ಕವಿ ಲೂಯಿ ಫ್ರೆಚೆಟ್. ಈತ ತನ್ನ ಕವನಗಳಲ್ಲಿ ಸಂಯುಕ್ತ ಸಂಸ್ಥಾನದೊಡನೆ ಕೆನಡದ ರಾಜಕೀಯ ವಿಲೀನಕ್ಕೆ ಬೆಂಬಲವನ್ನು ಸ್ಪಷ್ಟಪಡಿಸಿ ಜನರ ಮನಸ್ಸಿನ ಮೇಲೆ ಅನಿರೀಕ್ಷಿತವಾದ ಆಘಾತವನ್ನುಂಟು ಮಾಡಿದ್ದಾನೆ. ವಿಕ್ಟರ್ ಹ್ಯೂಗೋವಿನ ಅಲಂಕಾರಿಕ ಶೈಲಿಯಲ್ಲಿ ರಚಿಸಿರುವ ದೇಶಭಕ್ತಿ ಗೀತೆಗಳ ಸಂಗ್ರಹ ಮತ್ತು ಫ್ರೆಂಚ್ ಅನ್ವೇಷಣಾಕರ ಕಾರ್ಟಿಯರನಿಂದ ಹಿಡಿದು ಲೂಯಿ ರಿಯಲ್‌ವರೆಗಿನ ಫ್ರೆಂಚ್–ಕೆನಡಿಯನರ ಸಾಹಸಮಯ ಕಥೆಯನ್ನೊಳಗೊಂಡ ಲ ಲೆಜೆಂಡೆ ಡನ್ ಪ್ಯೂಪಲ್ ಎಂಬ ಕಾವ್ಯಕೃತಿ ಈತನಿಗೆ ಅಪಾರ ಯಶಸ್ಸನ್ನು ತಂದಿತು. ಗಾರ್‍ನೂವಿನ ಹಿಸ್ಟರಿ ಆಫ್ ಕೆನಡ ಮತ್ತು ಫ್ರೆಚೆಟ್‌ನ ಈ ಕೃತಿ ಫ್ರೆಂಚ್–ಕೆನಡಿಯನರಲ್ಲಿ ದೇಶ, ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯಾಭಿಮಾನಗಳನ್ನು ಹೆಚ್ಚಿಸಿದುವು.

19ನೆಯ ಶತಮಾನಾಂತ್ಯದಲ್ಲಿ ಸಾಹಿತ್ಯ ಚಟುವಟಿಕೆ ಕ್ವಿಬೆಕ್‌ನಿಂದ ಮಾಂಟ್ರಿಯಾಲ್‌ಗೆ ಬದಲುಗೊಂಡಿತು. ಸಾಹಿತ್ಯ ಸೃಷ್ಟಿಯಲ್ಲಿದ್ದ ಪ್ರಾದೇಶಿಕ ಮನೋಭಾವ ರಾಷ್ಟ್ರ ಹಾಗೂ ವಿಶ್ವಮನೋಭಾವಕ್ಕೆ ಎಡೆಮಾಡಿಕೊಟ್ಟಿತು. 1895ರಲ್ಲಿ ಜೀನ್ ಶಾರ್‌ಬನೊ ಮತ್ತು ಪಾಲ್ ಡಿ ಮಾರ್ಟಿನಿಗಳು ಮಾಟ್ರಿಯಾಲ್ ಸಾಹಿತ್ಯ ಪಂಥವನ್ನು ಸ್ಥಾಪಿಸಿದರು. ಕೆನಡದ ಜನ, ಜೀವನ, ದೇಶಭಕ್ತಿ, ಪ್ರಾದೇಶಿಕತೆ, ಸಂಸ್ಕೃತಿ–ಇವು ಇವರನ್ನು ಆಕರ್ಷಿಸಲಿಲ್ಲ. ಸಾಂಕೇತಿಕ ಕವಿಗಳೂ ಸೌಂದರ್ಯೋಪಾಸಕರೂ ಆದ ಇವರು ಸೌಂದರ್ಯದ ಸನ್ನಿಧಿಯಲ್ಲಿ ಕಾವ್ಯಜೀವನ ನಡೆಸಿದರು. ಶಾರ್‌ಬನೊ ತನ್ನ ಸುರ್ ಲ ಬೋನ ಪೆನ್ಸಿವ್ ಎಂಬ ಕಾವ್ಯದಲ್ಲಿ ವಿವಿಧ ಪುಷ್ಪಗಳು, ಲತಾಗೃಹ ಬುಗ್ಗೆಗಳು, ಹಾಗೂ ಪಾಳು ಗುಡಿಗೋಪುರಗಳಿಂದ ತುಂಬಿದ ಒಂದು ಹರ್ಷಮಯವಾದ ಉದ್ಯಾನಕ್ಕೆ ಓದುಗರನ್ನು ಕರೆದೊಯ್ಯುತ್ತಾನೆ. ಅಲ್ಬರ್ಟ್ ಲೋಜ಼ೂ ಸಂಯುಕ್ತ ಕೆನಡದ ಭೂದೃಶ್ಯ, ಪ್ರಕೃತಿ ಸೌಂದರ್ಯವನ್ನು ವರ್ಣಿಸಿದರೆ, ಎಮಿಲಿ ನೆಲಿಗನ್ ಅಂತರ್ಮುಖಿಯಾಗಿ ಆತ್ಮಾನ್ವೇಷಣೆಯಲ್ಲಿ ತೊಡಗಿದ್ದಾನೆ. ತನ್ನ ಆತ್ಮವೇ ಒಂದು ಸುಂದರ ವಸ್ತು ಎಂದು ತಿಳಿದು ಅದು ಒಂದು ಐಶ್ವರ್ಯಭರಿತ ಬೃಹದಾಕಾರವಾದ ಸ್ವರ್ಣನೌಕೆ ಎಂದು ವರ್ಣಿಸುತ್ತಾನೆ. ಈ ಪಂಥದ ಮತ್ತೊಬ್ಬ ಇಮೇಜಿಸ್ಟ್ ಕವಿ ಪಾಲ್ ಮೋರಿನ್ ತನ್ನ ಅತ್ಯುತ್ತಮ ಕಾವ್ಯಗಳಲ್ಲಿ ಫ್ರೆಂಚ್–ಕೆನಡವೆಂಬ ಸಂಕುಚಿತ ಭಾವನೆ ತೋರಿಸದೆ ರಾಷ್ಟ್ರ ಹಾಗೂ ವಿಶ್ವಾಭಿಮಾನವನ್ನು ವ್ಯಕ್ತಪಡಿಸಿದ್ದಾನೆ. ಆಲ್ಫ್ರೆಡ್ ಡೆ ರೋಶರ್ಸ್ ಮತ್ತು ಕ್ಲಿಮೆಂಟ್ ಮರ್ಚೆಂಡ್ ಇವರು ಈ ಪಂಥಕ್ಕೆ ಸೇರಿದ ಇತರ ಕವಿಗಳು.

20ನೆಯ ಶತಮಾನದ ಪೂರ್ವಾರ್ಧದಲ್ಲಿ ಶ್ರೇಷ್ಠ ಸಾಹಿತ್ಯ ಸೃಷ್ಟಿಯ ಮೂಲಕ ಫ್ರೆಂಚ್–ಕೆನಡಿಯನ್ನರ ಸಹಜ ವ್ಯಕ್ತಿತ್ವ ಹಾಗೂ ಸಾಹಿತ್ಯದ ಹಿರಿಮೆ ಬೆಳಕಿಗೆ ಬಂದವು. ರಾಬರ್ಟ್ ಶಾರ್‌ಬನೊ ಸಾಹಿತ್ಯ ಪತ್ರಿಕೆಯೊಂದರ ಸಂಪಾದಕನಾಗಿ, ಶ್ರೇಷ್ಠ ಕಾದಂಬರಿಕಾರನಾಗಿ ಪ್ರಸಿದ್ಧನಾದ. ಡೆನಿಸ್ ಗಾರ್‍ನೂವಿಗೆ ಕಾವ್ಯ ತನ್ನಲ್ಲಿಯ ನಿರಾಶಾ ಮೂಲವನ್ನು ಕಾಣಿಸುವ ಒಂದು ಸಾಧನವಾಯಿತು. ಇವನ ತೀವ್ರ ಭಾವಪೂರ್ಣತೆ ಮತ್ತು ಉಚ್ಚಮಟ್ಟದ ಕಾವ್ಯತಂತ್ರ ಇವನ ಅನಂತರ ಬಂದ ಕವಿಗಳ ಮೇಲೆ ದೊಡ್ಡ ಪ್ರಭಾವವನ್ನು ಬೀರಿವೆ. ಫ್ರಾಂ ಸ್ವಾಹರ್ಟೆಲ್ ವಿನೋದ ಪ್ರವೃತ್ತಿಯ ಹಾಗೂ ದ್ವಂದ್ವ ದೃಷ್ಟಿಯುಳ್ಳ ಕವಿ. ತನ್ನ ಕಾವ್ಯದಲ್ಲಿ ತನ್ನ ಧಾರ್ಮಿಕ ಅಶಾಂತಿ ಮತ್ತು ಅಧ್ಯಾತ್ಮಿಕ ಪ್ರತಿಭಟನೆಗಳನ್ನು ವ್ಯಕ್ತಪಡಿಸಿಕೊಂಡಿದ್ದಾನೆ. ಮನೋಜ್ಞ ಕವಿ ಆಲೆನ್ ಗ್ರ್ಯಾಂಡ್ ಬಾ ತನ್ನ ಮನಸ್ಸಿನಲ್ಲಿ ಉದ್ಭವಿಸುವ ಘೋರ ಸ್ವಪ್ನಗಳನ್ನು ವಿಶ್ವಪ್ರತಿಮೆಗಳನ್ನಾಗಿ (ಕಾಸ್ಮಿಕ್ ಇಮೇಜಸ್) ಮಾರ್ಪಾಡುಮಾಡಿದ್ದಾನೆ. ಅದೃಶ್ಯವಾಗುವ ಜಗತ್ತುಗಳು, ಕಗ್ಗತ್ತಲಿನಲ್ಲಿ ಕಪ್ಪುಕಣ್ಣುಗಳು, ವೇಗವಾಗಿ ಹರಿಯುವ ಕಪ್ಪುನದಿಯ ಮೇಲೆ ಚಲಿಸುವ ಪೈಶಾಚಿಕ ಆಕೃತಿಗಳು ಆತನ ಕವನಗಳಲ್ಲಿ ಬರುವ ಕವಿದೃಷ್ಟಿಯ ಕೆಲವು ನಿದರ್ಶನಗಳು. ಮಾಂಟ್ರಿಯಾಲ್‌ನಲ್ಲಿ ಹೆಕ್ಸಗನ್ ಗ್ರೂಪನ್ನು ಸ್ಥಾಪಿಸಿದ ಬಹಳ ಉತ್ಸಾಹಪೂರ್ಣಕವಿ ಜೀನ್ ಗೈ ಪಿಲಾನ್. ರೋನಾಲ್ಡ್ ಜಿಗರ್‌ನ ಶ್ರೇಷ್ಠ ಕವನಗಳಲ್ಲಿ ಅತಿವಾಸ್ತವಿಕತೆಯ ಪ್ರಭಾವ ಸುಸ್ಪಷ್ಟವಾಗಿದೆ.

ಇಬ್ಬರು ಶ್ರೇಷ್ಠ ಕವಯಿತ್ರಿಯರನ್ನು ಇಲ್ಲಿ ಹೆಸರಿಸಬಹುದು. ಹಳೆಯ ಒಡಂಬಡಿಕೆಯ ಸ್ತ್ರೀರತ್ನಗಳಿಂದ ಪ್ರಭಾವಿತಳಾದ ರೀನಾ ಲೆಸ್ನಿಯರ್ ತನ್ನ ಎಸ್ಕಲೆಸ್, ಪ್ರೆಸೆನ್ಸ್ ಡಿ ಲ ಆಬ್ಸೆನ್ಸ್ ಮತ್ತು ಮೆಮಾಯಿರ್ ಸ್ಯಾನ್ಸ್ ಜೂರ್ ಎಂಬ ಕಾವ್ಯ ಕೃತಿಗಳಿಂದ ಪ್ರಸಿದ್ಧಳಾಗಿದ್ದಾಳೆ. ಆನ್ ಹೆಬರ್ಟ್ ಸಮಕಾಲೀನ ಕವಿಗಳಲ್ಲಿ ಹೆಚ್ಚಿನ ಪ್ರತಿಭೆ ಹಾಗೂ ಉತ್ತಮ ಕಾವ್ಯಕಲೆಯುಳ್ಳವಳು. ಸಾಂಗ್ಸ್ ಎನ್ ಈಕ್ವಿಲಿಬ್ರೆ, ಪೊಯಮ್ಸ್, ಲೆ ಟಾರೆಂಟ್, ಲೆ ಚೇಂಬರ್ಸ್ ಡಿಬೊ–ಇವು ಈಕೆಯ ಪ್ರಖ್ಯಾತ ಕಾವ್ಯ ಸಂಗ್ರಹಗಳು.

ಪ್ರಾರಂಭದ ಫ್ರೆಂಚ್–ಕೆನಡಿಯನ್ ಕಾದಂಬರಿಯಲ್ಲೂ ಪ್ರಾದೇಶಿಕತೆಗೆ ಆದ್ಯತೆ ದೊರೆತಿದೆ. ನೆಲ, ಜನ, ಭಾಷೆ, ಧರ್ಮ, ಸಂಸ್ಕೃತಿ–ಇವುಗಳ ಬಗ್ಗೆ ಹೆಚ್ಚಿನ ಮಮತೆ ಅಲ್ಲಿ ಬಹಳವಾಗಿ ಕಾಣುತ್ತದೆ. ಫ್ರೆಂಚ್–ಕೆನಡದ ಮೊತ್ತ ಮೊದಲ ಕಾದಂಬರಿ ಪಿ.ಎ.ಡಿ ಗ್ಯಾಸ್ಪೆ

(ಜೂ.) ವಿರಚಿತ ಲೆ ಚೆರ್ಚೂರ್ ಡಿ ಟ್ರೆಸೋರ್. ಸಾಹಸ ಮತ್ತು ಯಕ್ಷಿಣಿ ವಿದ್ಯೆ ಇದರ ಕಥಾವಸ್ತು. ಪಿ.ಎ.ಡಿ ಗ್ಯಾಸ್ಪೆಯ (ಸೀ) ಲೆ ಎನ್ಸಿಯೆನ್ಸ್ ಕೆನಡಿಯೆನ್ಸ 19ನೆಯ ಶತಮಾನದ ಪ್ರಖ್ಯಾತ ಕಾದಂಬರಿ ಎಂದು ಹೆಸರು ಪಡೆದಿದೆ. ಪಿ.ಜೆ.ಓ. ಶಾವೂವಿನ ಚಾರ್ಲ್ಸ್ ಗೆರಿನ್ ಮತ್ತು ಆಂಟಾನ್ ಗೆರಿನ್ ಲೆಜೋಯಿಯ ಜೀನ್ ರಿವಾರ್ಡ್ ಎಂಬ ಕಾದಂಬರಿಗಳೂ ವಲಸೆಬಂದು ನೆಲಸಲಪೇಕ್ಷಿಸಿದ ಫ್ರೆಂಚ್ ಜನ ಪ್ರಾರಂಭದಲ್ಲಿ ಎದುರಿಸಬೇಕಾಗಿಬಂದ ಕಷ್ಟ, ಸಮಸ್ಯೆಗಳನ್ನು ಕುರಿತವಾಗಿವೆ. 20ನೆಯ ಶತಮಾನದ ಆದಿಭಾಗದಲ್ಲಿ ಲೂಯಿ ಹಮಾನನ ಮೇರಿಯಾ ಚಾಪ್ ಡಿ ಲೇನ್ ಸಹ ದೇಶಪ್ರೇಮವನ್ನು ಜಾಗೃತಗೊಳಿಸುವ ಕಾದಂಬರಿ, ಕ್ಲಾಡ್ ಹೆನ್ರಿ ಗ್ರಿಗ್ ನಾನ್ ತನ್ನ ಅನ್ ಹೋಂ ಎಟ್ ಸನ್ ಪೀಛೇ ಮತ್ತು ಲೆ ಡೆಸರ್ಟರ್ ಕಾದಂಬರಿಗಳಲ್ಲಿ ಯುವಕರು ತಮ್ಮ ನಾಡನ್ನು ತ್ಯಜಿಸಿ ಪರನಾಡಿಗೆ ವಲಸೆ ಹೋಗುವುದನ್ನು ವರ್ಣಿಸಿದ್ದಾನೆ. ಪೂರ್ವಿಕರ ಕುಟುಂಬವೊಂದು ಕ್ಷೀಣಿಸಿದ ರೀತಿಯನ್ನು ಹಾಗೂ ರೈತಾಪಿ ಜನಗಳ ಜೀವನವನ್ನು ಕುರಿತು ಜರ್ಮೈನ್ ಗೌರ್‌ಮಂಟ್ ಬರೆದಿರುವ ಲೆ ಸರ್ವೆನ್ಯಾಂಟ್ ಮತ್ತು ಮೇರಿ–ಡಿಡೇಸ್ ಎಂಬ ಎರಡು ಕಾದಂಬರಿಗಳನ್ನು ಇಲ್ಲಿ ಹೆಸರಿಸಬಹುದು.

20ನೆಯ ಶತಮಾನದ ಪೂರ್ವಾರ್ಧದಲ್ಲಿ ಹೊರಬಂದ ಐತಿಹಾಸಿಕ ಕಾದಂಬರಿಗಳೆಲ್ಲ ಕೆನಡದ ಗತಕಾಲದ ವೈಭವವನ್ನು ವ್ಯಾಪಕವಾಗಿ, ಸಮಗ್ರವಾಗಿ ವರ್ಣಿಸಿವೆ. ಇವುಗಳಲ್ಲಿ ರಾಬರ್ಟ್ ಡಿ ರಾಕ್‌ಬ್ರೂನ್ ಮತ್ತು ಲಿಯೋಪಾಲ್ ಡೆಸ್ರೋಸಿಯರ್ಸ್–ಇವರ ಕಾದಂಬರಿಗಳು ಮುಖ್ಯವಾದವು. ಗೇಬ್ರಿಯಲ್ ರಾಯಳ ಬಾನ್‌ಹ್ಯುರ್ ಡಿ'ಅಕೇಷನ್ ಎಂಬುದು ಮಾಂಟ್ರಿಯಾಲ್‌ನ ಕಾರ್ಮಿಕರ ಜೀವನವನ್ನು ಚಿತ್ರಿಸುವ ಅತ್ಯುತ್ತಮ ಕಾದಂಬರಿಯೆಂದು ಪ್ರಸಿದ್ಧಿಯಾಗಿದೆ. ಅಲೆಕ್ಸಾಂಡರ್ ಚೆನೆವರ್ಟ್ ಎಂಬ ಈಕೆಯ ಇನ್ನೊಂದು ಕಾದಂಬರಿ ನಗರದ ಅರ್ಥರಹಿತ ಹಾಗೂ ಕೃತ್ರಿಮ ಜೀವನವನ್ನು ಚಿತ್ರಿಸುತ್ತದೆ. ರ್‍ಯೂ ಡೆಶ್ಚಾಂಬುಲ್ಟ್ ಎಂಬುದು ಈಕೆಯ ಆತ್ಮಚರಿತ್ರೆಯನ್ನೊಳಗೊಂಡ ಕಾದಂಬರಿ. ಈಕೆಯ ಸಮಕಾಲೀನನಾದ ರೋಜರ್ ಲೆಮ್ಲಿನ್ ಸಹ ತನ್ನ ಆ ಪೈಡ್ ಡಿ ಲ ಪೆಂಟೆಡೂಸ್, ಲೆ ಪ್ಲೂಫ್ ಮತ್ತು ಪಿಯರ್ ಡಿ ಮ್ಯಾಗ್ನಿಫಿಕ್ ಕಾದಂಬರಿಗಳಲ್ಲಿ ಕ್ವಿಬೆಕ್ ನಗರದಲ್ಲಿನ ಜೀವನವನ್ನು ಚಿತ್ರಿಸಿದ್ದಾನೆ. ಐವ್ಸ್ ತೆರಿಯಾಲ್ಟ್ ಎಂಬ ಲೇಖಕ ಯಹೂದಿ, ಎಸ್ಕಿಮೊ ಮತ್ತು ಸ್ಥಳೀಯ ಇಂಡಿಯನ್ನರ ಜೀವನ ವಿಧಾನವನ್ನೊಳಗೊಂಡ ಎರಾನ್, ಎಗಾಗುಕ್ ಮತ್ತು ಎಷಿನಿ ಎಂಬ ಮೂರು ಕಾದಂಬರಿಗಳನ್ನು ಬರೆದಿದ್ದಾನೆ. ಗೆರಾರ್ಡ್ ಬೆಸೆಟ್‌ನ ಲ ಬಗಾರೆ ಮತ್ತು ಲೆ ಪೆಡಗಾಗ್ಸ್–ಎಂಬವು ಫ್ರೆಂಚ್–ಕೆನಡದ ಸಾಮಾಜಿಕ ಜೀವನ ಹಾಗೂ ವಿದ್ಯಾಭ್ಯಾಸಗಳನ್ನು ನಿರೂಪಿಸುವ ಕಾದಂಬರಿಗಳು. ರಾಬರ್ಟ್ ಶಾರ್‌ಬನೊ ತನ್ನ ಫಾಂಟೈಲ್, ಲೆ ಡಿಸ್ಯೆರ್ಸ್ ಎಟ್ ಲೆ ಜೂರ್ಸ್ ಎಂಬ ಕಾದಂಬರಿಗಳಲ್ಲಿ ಮನುಷ್ಯನ ಆತ್ಮವಿಕಾಸವಾಗುವ ಕಾಲದಲ್ಲೇ ಹೇಗೆ ಬಾಡಿ ಹೋಗುತ್ತದೆ ಎಂಬುದನ್ನು ಚಿತ್ರಿಸಿದ್ದಾನೆ. ಆಂದ್ರೆ ಗಿರೂ, ರಾಬರ್ಟ್ ಐಲ್, ಆಂದ್ರೆ ಲಾಂಗೆವಿನ್–ಇವರು ಪ್ರಸಿದ್ಧ ಕಾದಂಬರಿಕಾರರು.

ಕೆನಡದಲ್ಲಿ ಕಾವ್ಯ ಮತ್ತು ಕಾದಂಬರಿಯ ಹಾಗೆ ನಾಟಕಸಾಹಿತ್ಯ ಅಷ್ಟೇನೂ ಗಮನಾರ್ಹ ಪ್ರಗತಿ ಸಾಧಿಸಿಲ್ಲ. 20ನೆಯ ಶತಮಾನದ ಮೊದಲ ದಶಕದಲ್ಲಿ ಹೊರ ಬಂದ ಲೂಯಿ ಫ್ರೆಚೆಟ್ಟ ವೆರೋನಿಕ ಎಂಬುದು ಹೆಸರುವಾಸಿಯಾದ ನಾಟಕ. 1951ರಲ್ಲಿ ಲಿ ಥಿಯೇಟರ್ ಡು ನೊವೂ ಮಾಂಡೆ ಮತ್ತು 1956ರಲ್ಲಿ ಲಾ ಕಾಡಿಮೆ ಕೆನಡಿಯನ್ ಎಂಬ ಎರಡು ನಾಟಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ನಾಟಕ ಕಲೆಗೆ ಒಂದು ಹೊಸ ಚೈತನ್ಯ ತಂದುವು. ಗ್ರಾಷಿಯನ್ ಗೆಲಿನಾಸ್ ಎಂಬಾತ ಟಿಟ್ಕಾಕ್ ಮತ್ತು ಬೊಸಿಲ್ ಎಟ್ ಲೆ ಜಸ್ಟೀಸ್ ಎಂಬ ನಾಟಕಗಳ ಕರ್ತೃವಾಗಿ ಮತ್ತು ಪ್ರಧಾನ ಅಭಿನಯಕಾರನಾಗಿ ಅಪಾರ ಯಶಸ್ಸುಗಳಿಸಿದ್ದಾನೆ. ಆಧುನಿಕ ನಾಟಕಕಾರರಾದ ಮೆರಿಲ್ ಡೆನಿಸನ್, ಪೆಟ್ರಿಷಿಯ ಜೋರ್ಡ್ರೆ, ರಾಬರ್ಟ್‌ಸನ್ ಡೇವಿಸ್, ಎಲಾಯ್ ಡಿ ಗ್ರಾಂಡ್‌ಮಾಂಟ್, ರಾಬರ್ಟ್ ಎಲಿ, ಆಂದ್ರೆ ಲಾರೆಂಡೊ ಮತ್ತು ಮಾರ್ಸೆ ದೂಬೆ–ಇವರು ಸಾಮಾಜಿಕ, ಐತಿಹಾಸಿಕ ನಾಟಕಗಳನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ. (ಜಿ.ಆರ್.)

ಕೆನಡದಲ್ಲಿ ಪ್ರಾರಂಭದಲ್ಲಿ ಫ್ರೆಂಚ್ ಭಾಷೆಯಲ್ಲಿ ಬರೆದವರು 16ನೆಯ ಮತ್ತು 17ನೆಯ ಶತಮಾನಗಳ ಪ್ರಥಮ ಅನ್ವೇಷಕರು ಮತ್ತು ಧರ್ಮ ಪ್ರಚಾರಕರು. ಇವರು ತಮ್ಮ ಹಿಂದಿನ ಸಾಹಸಿಗಳ ವಿಷಯವಾಗಿಯೂ ಬರೆದರು.

ಇಂಗ್ಲಿಷರು ಕೆನಡವನ್ನು ಗೆದ್ದುದರಿಂದ ಫ್ರೆಂಚ್ ಭಾಷೆಯನ್ನಾಡುತ್ತಿದ್ದ ಕೆನಡಿಯನರಿಗೆ ಆದ ಅಸಮಾಧಾನವು 1840ರ 'ಯೂನಿಯನ್ ಆ್ಯಕ್ಟ್' ಮತ್ತು 1867ರ ಕಾನ್‌ಫೆಡರೇಷನ್‌ಗಳಿಂದ ತೀವ್ರವಾಯಿತು; ಫ್ರೆಂಚ್ ಕೆನಡಿಯನ್ ಅಭಿಮಾನ ಗರಿಗೆದರಿತು. 20ನೆಯ ಶತಮಾನದ ಪ್ರಾರಂಭದಲ್ಲಿ ನೆರಿನಿ ಬೂಷ್‌ಮಿ ಮತ್ತು ಅವನನ್ನು ಅನುಸರಿಸಿದ ಕವಿಗಳು ರೈತಾಪಿ ಜನ ಹಾಗೂ ಅವರ ಪೂರ್ವಿಕರ ಸಂಬಂಧಗಳನ್ನು ಹಾಡಿಹೊಗಳಿದರು. 1895ರಿಂದ 1930ರತನಕ ಪ್ರಭಾವಶಾಲಿಯಾಗಿದ್ದ ಮಾಟ್ರಿಯೆಲ್ ಪಂಥದ ಕವಿಗಳು ಫ್ರಾನ್ಸಿನ ಸಾಹಿತ್ಯದ ಪ್ರಭಾವಕ್ಕೆ ಒಳಗಾದರು.

ನಗರೀಕರಣ, ದೇಶದ ಆರ್ಥಿಕ ಮುಗ್ಗಟ್ಟು ಮತ್ತು ಎರಡನೆಯ ಪ್ರಪಂಚದ ಯುದ್ಧಗಳಿಂದಾಗಿ ಫ್ರೆಂಚ್ ಕೆನಡ ಸಾಂಸ್ಕೃತಿಕವಾಗಿ ದೂರ ಉಳಿಯುವುದು ಸಾಧ್ಯವಿಲ್ಲವಾಯಿತು.

20ನೆಯ ಶತಮಾನದ ಪ್ರಮುಖ ಕವಿಗಳಲ್ಲಿ ಆ್ಯನ್ ಹರ್ಬರ್ಟ್ ಒಬ್ಬಳು; ಈಕೆ ಸರ್ರಿಯಲಿಸ್ಟ್ ಪ್ರತೀಕ ಪಂಥದಲ್ಲಿ ಬರೆದಳು. ಮಾನಸಿಕ ಯಾತನೆ, ಏಕಾಂತತೆ, ನೋವು ಇವು ಇವಳ ಕವನಗಳ ವಸ್ತುಗಳು. ಪಾಲ್ ಮರೀ ಲಪಾಂಯ್ ಆಧುನಿಕ ಪ್ರಪಂಚದ ರೀತಿ ನೀತಿಗಳನ್ನು ವಿಷಾದದಿಂದ ಕಾಣುತ್ತಾನೆ. ಗೇಬ್ರಿಯಲ್ ರಾಯ್ ಬರೆದ ಕಾದಂಬರಿಯಲ್ಲಿ ಕೈಗಾರಿಕೀಕರಣದ ಅನಾರೋಗ್ಯಕರ ಪರಿಣಾಮಗಳ ಮತ್ತು ನಗರ ಜೀವನದಲ್ಲಿ ಮಾನವೀಯ ಘನತೆಯ ನಷ್ಟದ ನಿರೂಪಣೆ ಇದೆ. (ಎಲ್.ಎಸ್.ಎಸ್.)

**ಕೆನರಾ ಬ್ಯಾಂಕ್ :** ಕರ್ನಾಟಕದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹಲವಾರು ಬ್ಯಾಂಕುಗಳು ಜನ್ಮ ತಾಳಿವೆ. ಅವುಗಳಲ್ಲಿ ಮುಖ್ಯವಾದವು ಕೆನರಾ ಹಿಂದು ಪರ್ಮನೆಂಟ್ ಫಂಡ್ ಲಿಮಿಟೆಡ್ (ಈಗಿನ ಕೆನರಾ ಬ್ಯಾಂಕ್), ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಈಗಿನ ಕಾರ್ಪೊರೇಷನ್ ಬ್ಯಾಂಕ್), ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಎಂಟರ್‌ಪ್ರೈಸಸ್ ಲಿಮಿಟೆಡ್, ದಿ ಪಂಗಾಳ್‌ನಾಯಕ್ ಬ್ಯಾಂಕ್, ದಿ ಜಯಲಕ್ಷ್ಮಿ ಬ್ಯಾಂಕ್ ಲಿಮಿಟೆಡ್, ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಉಡುಪಿ ಬ್ಯಾಂಕ್, ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಕ್ಯಾಥೋಲಿಕ್ ಬ್ಯಾಂಕ್ ಲಿಮಿಟೆಡ್, ಮುಲ್ಕಿ ಬ್ಯಾಂಕ್ ಲಿಮಿಟೆಡ್, ತುಳುನಾಡ್ ಬ್ಯಾಂಕ್ ಆಫ್ ಸಪ್ಲೈ ಏಜೆನ್ಸಿ ಲಿಮಿಟೆಡ್, ಪೈ ಮನಿ ಬ್ಯಾಂಕ್ ಪ್ರೈವೇಟ್ ಲಿಮಿಟೆಡ್ . ಈ ಎಲ್ಲ ಬ್ಯಾಂಕುಗಳು 20 ನೇ ಶತಮಾನದ ಆದಿಭಾಗದಲ್ಲಿ ಸ್ಥಾಪಿತವಾಗಿವೆ. ಅದರೆ ಇಂದು ಅವುಗಳ ಪೈಕಿ ಕೆಲವು ಬ್ಯಾಂಕುಗಳು ಮಾತ್ರ ಉಳಿದುಕೊಂಡಿವೆ. ಇನ್ನು ಉಳಿದ ಬ್ಯಾಂಕುಗಳು ಬೇರೆ ಬೇರೆ ಬ್ಯಾಂಕುಗಳೊಡನೆ ವಿಲೀನವಾಗಿವೆ.

ಕೆನರಾ ಬ್ಯಾಂಕ್ ಮಂಗಳೂರಿನಲ್ಲಿ 1906ರ ಜುಲೈ ತಿಂಗಳ ಒಂದನೆಯ ತಾರೀಖಿನಂದು ಆರಂಭವಾಯಿತು. ಇದರ ಸ್ಥಾಪಕರು ಅಮ್ಮೆಂಬಾಳ್ ಸುಬ್ಬರಾವ್ ಪೈ.

ಬ್ಯಾಂಕು ಉತ್ತಮ ಬ್ಯಾಂಕಿಂಗ್ ಅನ್ನು ತನ್ನ ಧ್ಯೇಯವಾಗಿ ಹೊಂದಿದೆ.. ಅಭಿವೃದ್ಧಿಗಾಗಿ ಸೇವೆ, ಸೇವೆಗಾಗಿ ಅಭಿವೃದ್ಧಿ ಎಂಬುದು ಬ್ಯಾಂಕಿನ ಘೋಷಣೆಯಾಗಿದೆ.

ಇಂದಿನ ಮಂಗಳೂರು ಜಿಲ್ಲೆಯು ಹಿಂದೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. 19 ನೆಯ ಶತಮಾನದಲ್ಲಿ ಈ ಪ್ರದೇಶದಲ್ಲಿ ಹಣಕಾಸು ವ್ಯವಹಾರ ಮಾಡಲು ಇಂದಿನಂತೆ ಯಾವುದೇ ಪ್ರಮುಖ ಬ್ಯಾಂಕಿಂಗ್ ಸಂಸ್ಥೆಗಳಿರಲಿಲ್ಲ. ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಅರ್ಬುತ್ನಾಟ್ ಅಂಡ್ ಕೋ ಎಂಬ ಖಾಸಗಿ ಲೇವಾದೇವಿ ಸಂಸ್ಥೆಯೊಂದು ಇದ್ದಿತು. ಆದರೆ ಈ ಸಂಸ್ಥೆಯು 20 ನೆಯ ಶತಮಾನದ ಆದಿಯಲ್ಲಿ ಹಲವಾರು ಪ್ರಮುಖ ಕಾರಣಗಳಿಂದಾಗಿ ತನ್ನ ಅವನತಿಯನ್ನು ಕಂಡಿತು. ಈ ವಿಷಯ ಸಾರ್ವಜನಿಕರಲ್ಲಿ, ಪ್ರಮುಖವಾಗಿ ವಾಣಿಜ್ಯ ಪ್ರಪಂಚದಲ್ಲಿ ಹೆಚ್ಚಿಗೆ ಚರ್ಚೆಗೆ ಬಂದಿತು. ಈ ಸಮಯಕ್ಕೆ ಮುಂಚಿತ ವಾಗಿಯೇ ಮದ್ರಾಸ್ ನ್ಯಾಯಾಲಯದಲ್ಲಿ ವಕೀಲಿವೃತ್ತಿಯನ್ನು ಮಾಡುತ್ತಿದ್ದ ಅಮ್ಮೆಂಬಾಳ್ ಸುಬ್ಬರಾವ್ ಪೈ ಎಂಬುವರು ಜನತೆಯ ಉಳಿತಾಯ ಮತ್ತು ಆಪತ್ತಿನಕಾಲಕ್ಕೆ ಬೇಕಾದ ಹಣಕಾಸಿನ ವಿಚಾರವನ್ನು ಯೋಚಿಸುತ್ತಿದ್ದರು. ಇನ್ನೊಂದು ಪ್ರಮುಖ ವಿಷಯವೆಂದರೆ ಮಂಗಳೂರಿನ ಪಟ್ಟಣಶೆಟ್ಟಿ ಎಂಬ ಶ್ರೀಮಂತವರ್ಗದ ಜನರಲ್ಲಿ ಯಾವುದೇ ಕುಟಂಬದಲ್ಲಿ ಮಗುವು ಹುಟ್ಟಿದ ತಕ್ಷಣವೇ ಅದರ ಹೆಸರಿನಲ್ಲಿ ಸ್ವಲ್ಪ ಹಣವನ್ನು ಊರಿನ ಪ್ರತಿಷ್ಠಿತ ವ್ಯಕ್ತಿಯ ಬಳಿ ತೊಡಗಿಸಿ ಆ ಮಗುವು ಪ್ರಾಪ್ತವಯಸ್ಕ ನಾದಮೇಲೆ ಆ ಹಣವನ್ನು ಹಿಂತಿರುಗಿಸುವ ಪದ್ಧತಿಯಿತ್ತು. ಈ ರೀತಿ ತೊಡಗಿಸಿದ ಹಣಕ್ಕೆ ಯಾವ ವಿಧವಾದ ರಸೀತಿಯೂ ಇರುತ್ತಿರಲಿಲ್ಲ. ಆದ್ದರಿಂದ 18 ವರ್ಷದ ದೀರ್ಘ ಅವಧಿಯು ಮುಗಿದ ಮೇಲೆ ತೊಡಗಿಸಿದ ಹಣವನ್ನು ಹಿಂತಿರುಗಿ ಪಡೆಯಲು ಅನೇಕ ವೇಳೆ ಕಷ್ಟಪಡುತ್ತಿದ್ದರು. ಸುಬ್ಬರಾವ್ ಪೈಗಳ ಮುಂದೆ ಊರಿನ ಜನರು ತಮ್ಮ ಕಷ್ಟವನ್ನು ಹೇಳಿ ಕೊಳ್ಳುತ್ತಿದ್ದರು. ಆಗ ಈ ವಕೀಲರ ಮನಸ್ಸಿನಲ್ಲಿ ನಾವೇ ಏಕೆ ಒಂದು ಬ್ಯಾಂಕಿಂಗ್ ಸಂಸ್ಥೆಯನ್ನು ಪ್ರಾರಂಭಿಸಬಾರದು ಎಂಬ ವಿಚಾರ ಬಂದಿತು. ಅವರು 1906ನೆಯ ಇಸವಿ ಜುಲೈ ಒಂದನೆಯ ತಾರೀಖು "ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಲಿಮಿಟೆಡ್" ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಸಂಸ್ಥೆ ಮುಂದೆ "ಕೆನರಾ ಬ್ಯಾಂಕ್" ಎಂದು ಬೃಹದಾಕಾರವಾಗಿ ಬೆಳೆಯಿತು. ಇದರಲ್ಲಿ ಪ್ರಾರಂಭದಲ್ಲಿ 18 ಜನ ಡೈರೆಕ್ಟರ್‌ಗಳು ಇದ್ದರು. ಅವರಲ್ಲಿ ಪ್ರಮುಖರು ಮದ್ರಾಸ್ ಹೈಕೋರ್ಟ್‌ನ ವಕೀಲರು, ಪ್ರಮುಖ ವ್ಯಾಪಾರಿಗಳು ಮತ್ತು ಜಮೀನುದಾರರುಗಳು. ಸಂಸ್ಥೆಯು ಮೂಲಭೂತ ವಾಗಿ ಈ ಮುಂದಿನ ಆದರ್ಶಗಳನ್ನಿಟ್ಟುಕೊಂಡು ಪ್ರಾರಂಭವಾಯಿತು. ಅಜ್ಞಾನ ಮತ್ತು ಮೂಢ ನಂಬಿಕೆಗಳನ್ನು ಹೋಗಲಾಡಿಸುವುದು. ಈ ಗುರಿ ಸಾಧಿಸಲು ವಿದ್ಯೆಯನ್ನು ಎಲ್ಲೆಡೆಗೂ ಹರಡುವುದು. ಉಳಿತಾಯ ಪ್ರವೃತ್ತಿಯನ್ನು ಬೆಳೆಸುವುದು. .ಹಣಕಾಸಿನ ಸಂಸ್ಥೆಯೆಂಬುದನ್ನು ಸಮಾಜದ ಜತೆ ಸ್ಪಂದಿಸುವಂತಹ ಸಂಸ್ಥೆಯನ್ನಾಗಿ ಪರಿವರ್ತಿಸುವುದು..ನೆರವು ಬೇಕಾದವರಿಗೆ ಸಹಾಯ ಹಸ್ತವನ್ನು ಚಾಚುವುದು. ಸೇವಾ ಮತ್ತು ಶ್ರದ್ಧೆಯಿಂದ ದುಡಿಯುವ ಪ್ರವೃತ್ತಿಯನ್ನು ಬೆಳೆಸುವುದು..ಮಾನವೀಯತೆಯನ್ನು ಬೆಳೆಸಿಕೊಂಡು ನಮ್ಮ ಸುತ್ತಲಿನ ಆಗುಹೋಗುಗಳಿಗೆ, ಕಷ್ಟನಷ್ಟ ಗಳಿಗೆ ಸ್ಪಂದಿಸುವುದು. ಬೆಲೆ ಬಾಳುವ ವಸ್ತುಗಳನ್ನು ಒತ್ತೆಯಿಟ್ಟುಕೊಂಡು ಸಾಲ ಕೊಡುವುದು. ಸ್ಥಿರ ಆಸ್ತಿಗಳನ್ನು ಅಡಮಾನ ಮಾಡಿಕೊಂಡು ಅದರ ಆಧಾರದ ಮೇಲೆ ಸದುದ್ದೇಶಗಳಿಗಾಗಿ ಸಾಲಗಳನ್ನು ಕೊಡುವುದು. ಬೆಲೆ ಬಾಳುವ ವಸ್ತುಗಳನ್ನು ಸಂಸ್ಥೆಯ ಭದ್ರತಾ ಕಪಾಟುಗಳಲ್ಲಿ ಇಟ್ಟುಕೊಳ್ಳುವ ಸೇವೆಯನ್ನು ಕೊಡುವುದು. ಶ್ರೀಸಾಮಾನ್ಯನಿಗೂ ಬ್ಯಾಂಕಿಂಗ್ ಸೇವೆಯನ್ನು ಪರಿಚಯಿಸುವುದು ಮತ್ತು ಅದನ್ನು ಉಪಯೋಗಿಸಿಕೊಳ್ಳುವಂತೆ ಮಾಡುವುದು.

ದಕ್ಷಿಣ ಜಿಲ್ಲೆಯಲ್ಲಿ ಬ್ಯಾಂಕುಗಳು ಪ್ರಸಿದ್ಧಿಗೆ ಬರಲು ಪ್ರಮುಖ ಕಾರಣವೆಂದರೆ ಇಲ್ಲಿ ಅಕ್ಷರಸ್ಥರ ಸಂಖ್ಯೆಯು ಬಹಳವಾಗಿತ್ತು. ಜನರಿಗೆ ಬ್ಯಾಂಕಿಂಗ್ ಸೇವೆಯನ್ನು ಉಪಯೋಗಿಸಿಕೊಳ್ಳುವಷ್ಟು ತಿಳಿವಳಿಕೆಯು ಇದ್ದಿತು. ಶ್ರೀಯುತ ಪಿ. ಗೋಪಾಲ್ ನಾಯಕ್‌ರವರು. ಈ ಸಂಸ್ಥೆಯ ಮೊದಲನೆಯ ಕಾರ್ಯದರ್ಶಿಗಳಾಗಿದ್ದರು.

ದಿ ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಲಿ ಸಂಸ್ಥೆಯು ತಿಂಗಳಿಗೆ 120 ರೂಪಾಯಿಗಳ ಬಾಡಿಗೆಯ ಕರಾರಿನ ಮೇಲೆ ತೆಗೆದುಕೊಂಡ ಒಂದು ಕೊಠಡಿಯಲ್ಲಿ ಪ್ರಾರಂಭವಾಯಿತು. ಇದರ ವಿಳಾಸವೆಂದರೆ "ನಂ.75/ಎ , ಡೋಂಗರಕೇರಿ, ಮಂಗಳೂರು. ಕಾರ್ಯದರ್ಶಿಗಳು, ಒಬ್ಬ ಗುಮಾಸ್ತ, ಇಬ್ಬರು ಬಿಲ್ ಕಲೆಕ್ಟರ್‌ಗಳು ಈ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಸಂಸ್ಥೆಯನ್ನು 1910ನೆಯ ಇಸವಿಯಲ್ಲಿ 'ಕೆನರಾ ಬ್ಯಾಂಕ್ ಲಿಮಿಟೆಡ್' ಎಂದು ಪುನಾರಚಿಸಲಾಯಿತು. 1915ನೆಯ ಇಸವಿಯಲ್ಲಿ ಈ ಸಂಸ್ಥೆಯ ಪ್ರಗತಿಯ ವಿಚಾರ ಈ ರೀತಿ ಇದ್ದಿತು.

(ಲಕ್ಷ ರೂಪಾಯಿಗಳಲ್ಲಿ)

| | | | | |
|---|---|---|---|---|
| 1. | ವಿನಿಯೋಜಿತ (ಹೂಡಿದ) ಬಂಡವಾಳ | 1 . 94 | | |
| 2. | ಮೀಸಲು ಧನ (ಸಂಚಿತಿ) | | | 0 . 57 |
| 3. | ಠೇವಣಿಗಳ ಮೊತ್ತ | | | 4 . 33 |
| 4. | ಮುಂಗಡಗಳು(ಅಡ್ವಾನ್ಸ್) | | 6 . 17 | |
| 5. | ವಿನಿಯೋಜಿತ ಧನ(ಇನ್ವೆಸ್ಟ್‌ಮೆಂಟ್ಸ್) | | 0 . 28 | |

ಈ ಕೆಳಗೆ ನಮೂದಿಸಿರುವ ಬ್ಯಾಂಕುಗಳು ಕಾಲಾನುಕ್ರಮದಲ್ಲಿ ಕೆನರಾ ಬ್ಯಾಂಕಿನಲ್ಲಿ ವಿಲೀನಗೊಂಡವು.

| | | | | |
|---|---|---|---|---|
| 1. | ದಿ ಬ್ಯಾಂಕ್ ಆಫ್ ಕೇರಳ ಲಿಮಿಟೆಡ್ | | | 20.05.1961 |
| 2. | ಸೇಸಿಯಾ ಮಿಡ್‌ಲ್ಯಾಂಡ್ ಬ್ಯಾಂಕ್ ಲಿಮಿಟೆಡ್ | | 17.06.1961 | |
| 3. | ಜಿ. ರಘುನಾಥಮಲ್ ಬ್ಯಾಂಕ್ ಲಿಮಿಟೆಡ್ | | 04.09.1961 | |
| 4. | ಟ್ರಿವೇಂಡ್ರಂ ಪರ್ಮನೆಂಟ್ ಬ್ಯಾಂಕ್ ಲಿಮಿಟೆಡ್ | | 11,09,1961 | |
| 5. | ಶ್ರೀ ಪೂರ್ಣತ್ರಾಯೀಶ ವಿಲಾಸಂ ಬ್ಯಾಂಕ್ ಲಿಮಿಟೆಡ್ | 29.04.1963 | | |
| 6. | ದಿ ಆರ್ನಾಡ್ ಬ್ಯಾಂಕ್ ಲಿಮಿಟೆಡ್ | | | 03.10.1963 |
| 7. | ದಿ ಕೊಚಿನ್ ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್. | | 18.11.1963 | |
| 8. | ದಿ ಪಾಂಡ್ಯನ್ ಬ್ಯಾಂಕ್ ಲಿಮಿಟೆಡ್ | | | 02.12.1963 |
| 9. | ಪೊಲ್ಲಾಚಿ ಯೂನಿಯನ್ ಬ್ಯಾಂಕ್ ಲಿಮಿಟೆಡ್ | | 05.03.1963 | |
| 10. | ಪಂಗಾಳ್ ನಾಯಕ್ ಬ್ಯಾಂಕ್ ಲಿಮಿಟೆಡ್ | | 26.09.1968 | |
| 11. | ಲಕ್ಷ್ಮೀ ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್ | | 24.08.1985 | |

ಸಂಸ್ಥೆಯು ಸ್ಥಾಪಿತವಾದಾಗಿನಿಂದ ಅನೇಕ ಪ್ರಮುಖ ಘಟನೆಗಳು ಜರುಗಿದವು. ಮುಖ್ಯವಾಗಿ ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಸಂಸ್ಥೆಗೆ ಕೆನರಾ ಬ್ಯಾಂಕ್ ಎಂದು ಮರುನಾಮಕರಣ ಮಾಡಿಲಾಯಿತು. ಬೆಂಗಳೂರು ನಗರದಲ್ಲಿ ಮೊದಲನೆಯ ಶಾಖೆಯನ್ನು ಸ್ಥಾಪಿಸಿಲಾಯಿತು. ಬ್ಯಾಂಕಿನ ಠೇವಣಿಯು 1.00 ಕೋಟಿ ರೂಪಾಯಿಗಳವರೆಗೆ ಬೆಳಯಿತು. ಮಹಾಪ್ರಬಂಧಕರ ಕಛೇರಿಯನ್ನು ಮಂಗಳೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಮೊತ್ತಮೊದಲ ಬಾರಿಗೆ ಮಂಗಳೂರು, ಮದ್ರಾಸು ಮತ್ತು ಮುಂಬಯಿನಗರಗಳ ಕಛೇರಿಗಳಿಗೆ ವಿಭಾಗ ವ್ಯವಸ್ಥಾಪಕರುಗಳನ್ನು ನೇಮಕ ಮಾಡಲಾಯಿತು.

ಬ್ಯಾಂಕಿನ ಆಡಳಿತ ವರ್ಗವು ಮೆಸರ್ಸ್ ಇಬ್ಕಾನ್ ಎಂಬ ಸಂಸ್ಥೆಯ ಸೇವೆಯನ್ನು ಬಳಸಿಕೊಂಡು ತನ್ನ ಕಾರ್ಯಕ್ಷಮತೆಯನ್ನು ಸುಧಾರಿಸಿತು. ವಿದೇಶಿ ವಿನಿಮಯ ಶಾಖೆಯನ್ನು ತೆರೆಯಲು ಪರವಾನಗಿಯನ್ನು ಪಡೆದು 27.04.1953ರಲ್ಲಿ ತನ್ನ ಮೊದಲ ವಿದೇಶಿ ಖಾತೆಯನ್ನು ತೆರೆಯಲಾಯಿತು. ಅಂತಾರಾಷ್ಟ್ರೀಯ ಮಟ್ಟವನ್ನು ಮುಟ್ಟಲು ಕೆನರಾ ಬ್ಯಾಂಕ್ ಕೈರೋ ಸಮ್ಮೇಳನ, ಟೊರಾಂಟೋ ಸಮ್ಮೇಳನ ಮತ್ತು ಸ್ವಿಟ್ಜರ್ಲೆಂಡ್ ಸಮ್ಮೇಳನಗಳಲ್ಲಿ ಭಾಗವಹಿಸಿದುದು. ಪ್ರಧಾನ ಕಛೇರಿಯನ್ನು ಮಂಗಳೂರಿನಿಂದ ಬೆಂಗಳೂರಿಗೆ ವರ್ಗಾಯಿಸುವ ಪ್ರಕ್ರಿಯೆ ಆರಂಭವಾಯಿತು. ಬ್ಯಾಂಕ್ 'ಎ' ದರ್ಜೆಗೆ ಏರಿದುದು. ಠೇವಣಿಯು 50 ಕೋಟಿರೂಪಾಯಿಗಳಿಗೆ ಏರಿತು. ದಿನಾಂಕ 19–07–1969ರಂದು ಕೆನರಾ ಬ್ಯಾಂಕ್ ಇನ್ನಿತರ 13 ಪ್ರಮುಖ ಬ್ಯಾಂಕುಗಳೊಂದಿಗೆ ರಾಷ್ಟ್ರೀಕರಣವಾಯಿತು. ಪೂರ್ಣಪ್ರಮಾಣದಲ್ಲಿ ಅಂತಾರಾಷ್ಟ್ರೀಯ ವಿಭಾಗವನ್ನು ಮುಂಬಯಿ ನಗರದಲ್ಲಿ ಮತ್ತು ಕರ್ನಾಟಕದ ಬಸವಕಲ್ಯಾಣದಲ್ಲಿ ಸಾವಿರದ ಶಾಖೆಯನ್ನು ಸ್ಥಾಪಿಸಲಾಯಿತು. ಬ್ಯಾಂಕಿನ ಪ್ಲಾಟಿನಂ ಜುಬಿಲಿ ಮಹೋತ್ಸವ ಆಚರಣೆ. ಹೊರದೇಶದಲ್ಲಿ ತನ್ನ ಸೇವೆಯನ್ನು ವಿಸ್ತರಿಸಲು ದುಬೈನ ಅಲ್ ರಜಾಕಿ ವಿನಿಮಯ ಸಂಸ್ಥೆಯ ಹಾಗೂ ಮಧ್ಯ ಪೂರ್ವರಾಷ್ಟ್ರದ ಒಂದು ವಿನಿಮಯ ಸಂಸ್ಥೆಯ ಆಡಳಿತವನ್ನು ವಹಿಸಿಕೊಂಡಿತು.ಬ್ಯಾಂಕು ಕ್ಯಾನ್‌ಕಾರ್ಡ್ ಸೇವೆಯನ್ನು ಪ್ರಾರಂಭಿಸಿತು.

ಬ್ಯಾಂಕು 1080ರ ದಶಕದಲ್ಲಿ ಕೆಲವು ಏರುಪೇರುಗಳನ್ನು ಕಂಡಿತು ಬಂಡವಾಳ ಮಾರುಕಟ್ಟೆ ವ್ಯವಹಾರಗಳಲ್ಲಿ ನಷ್ಟವನ್ನು ಭರಿಸಿತು. ಇದರ ಪರಿಣಾಮ ಹಲವು ವರ್ಷಗಳತನಕ ವಿಸ್ತರಿಸಿತು. ಆದರೆ ಬ್ಯಾಂಕು ಶೀಘ್ರವಾಗಿ ಚೇತರಿಸಿಕೊಂಡು ಮುನ್ನಡೆಯತೊಡಗಿತು.

ಬ್ಯಾಂಕಿನ ದಶಕದ ಅಭಿವೃದ್ಧಿಯ ಒಂದು ಪಕ್ಷಿ ನೋಟ ಹೀಗಿದೆ.

**ರೂ. ಗಳು ಕೋಟಿಗಳಲ್ಲಿ**

| | 1995–96 | 1996–97 | 1997–98 | 1998–99 | 1999–2000 | 2000–01 | 2001–02 | 2002–03 | 2003–04 | 2004–05 |
|---|---|---|---|---|---|---|---|---|---|---|
| ಶಾಖೆಗಳ ಸಂಖ್ಯೆ | 2192 | 2262 | 2312 | 2379 | 2397 | 2405 | 2409 | 2424 | 2469 | 2513 |
| ಬಂಡವಾಳ | 485 | 485 | 578 | 578 | 578 | 578 | 578 | 410 | 410 | 40 |
| ಮೀಸಲು ನಿಧಿಗಳು | 1446 | 1564 | 1725 | 1835 | 2018 | 2237 | 2894 | 3739 | 4842 | 5699 |
| ಠೇವಣಿಗಳು | 26243 | 31445 | 38045 | 41959 | 48001 | 59070 | 64030 | 72095 | 86345 | 96908 |
| ಪರಿಮಾಣದಲ್ಲಿ ಹೆಚ್ಚುವರಿ | 3768 | 5202 | 6600 | 3914 | 6042 | 11069 | 4960 | 8065 | 14250 | 10563 |
| ಶೇಕಡಾವಾರು ಹೆಚ್ಚಳ | 16.77 | 19.82 | 20.99 | 10.29 | 14.40 | 23.06 | 8.40 | 12.60 | 19.77 | 12.23 |
| ಅನಿವಾಸಿ ಭಾರತೀಯರ ಠೇವಣಿ | 3879 | 4984 | 6302 | 7589 | 8918 | 9877 | 11358 | 12482 | 12909 | 12476 |
| ವಿದೇಶಿ ವ್ಯವಹಾರದ ಒಟ್ಟು ವಹಿವಾಟು | 26438 | 27741 | 34238 | 39859 | 53634 | 61119 | 59333 | 65676 | 67347 | 84517 |
| ನಿವ್ವಳ ಸಾಲ–ಮುಂಗಡಗಳು | 13096 | 14413 | 16825 | 19530 | 23547 | 27832 | 33127 | 40472 | 47639 | 60421 |
| ಒಟ್ಟು ಆದ್ಯತಾ ಸಾಲಗಳು | 4892 | 5702 | 6735 | 7034 | 7667 | 9139 | 10536 | 14604 | 19580 | 24777 |
| ರಫ್ತು ಸಾಲ | 2434 | 2603 | 2813 | 2789 | 3007 | 3517 | 3672 | 4429 | 5497 | 6183 |
| ಸಿಬ್ಬಂದಿ ವರ್ಗದ ಒಟ್ಟು ಸಂಖ್ಯೆ | 54044 | 54316 | 54703 | 55097 | 55363 | 48257 | 47796 | 47566 | 47613 | 47389 |
| ಒಟ್ಟು ಆದಾಯ | 3382 | 3869 | 4431 | 5319 | 5687 | 6536 | 7799 | 8170 | 9080 | 9116 |
| ಒಟ್ಟು ವೆಚ್ಚ | 3129 | 3721 | 4228 | 5094 | 5451 | 6251 | 7058 | 6173 | 6221 | 6513 |
| ವ್ಯಾವಹಾರಿಕ ಒಟ್ಟು ಲಾಭ | 651 | 654 | 673 | 957 | 923 | 1131 | 1656 | 1997 | 2859 | 2585 |
| ನಿವ್ವಳ ಲಾಭ | 253 | 147 | 203 | 225 | 236 | 285 | 741 | 1019 | 1338 | 1110 |

ಬ್ಯಾಂಕಿನಲ್ಲಿ ಪೂರ್ಣಮಟ್ಟದ ಗಣಕದ ಸೇವೆಯನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮೊದಲನೆಯ ಸಂಸ್ಥೆಯಾಗಿ ಪ್ರಾರಂಭವಾಯಿತು 1995– 96ರಲ್ಲಿ ಐ.ಎಸ್.ಓ 1996–97ರಲ್ಲಿ ಬ್ಯಾಂಕಿನ ಮೊದಲ ಎಟಿಎಂ ಯಂತ್ರವನ್ನು ಅನೇಕ ನಗರಗಳ ಶಾಖೆಗಳೊಂದಿಗೆ ಪರಸ್ಪರ ಜಾಲಬಂಧದೊಂದಿಗೆ ಸ್ಥಾಪಿಸಲಾಯಿತು. 2001–02ರಲ್ಲಿ ಮೊದಲ ಮಹಿಳಾ ಶಾಖೆ ಪ್ರಾರಂಭವಾಯಿರು. ಆಯ್ದ ಪ್ರಮುಖ 180 ಶಾಖೆಗಳಲ್ಲಿ ಯಾವ ಶಾಖೆಯಲ್ಲಿ ಬೇಕಾದರೂ ವ್ಯವಹರಿಸುವ ಸರ್ವಸ್ಥಳ ಸೇವೆ ಆರಂಭವಾಯಿತು.

2003–04ರಲ್ಲಿ ಬ್ಯಾಂಕಿನ ನಿವ್ವಳ ಆದಾಯವು 1019 ಕೋಟಿ ರೂಪಾಯಿಗಳನ್ನು ಮುಟ್ಟಿತು. ಅಂತರಜಾಲ ಚರದೂರವಾಣಿ ಬ್ಯಾಂಕಿಂಗ್ ಸೇವೆಯು ಪ್ರಾರಂಭವಾಯಿತು..

31 ಮಾರ್ಚ್ 2005 ರವರೆಗೆ ಬ್ಯಾಂಕಿನಲ್ಲಿ ಇರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ 47388. ಇವರಲ್ಲಿ 14, 958 ಅಧಿಕಾರಿಗಳು, 21, 512 ಕ್ಲರ್ಕ್‌ಗಳು ಮತ್ತು 10, 918 ಜನ ಅಧೀನ ಸಿಬ್ಬಂದಿ. ಒಟ್ಟು 9876 ಮಹಿಳೆಯರು ಇದ್ದರು. ಬ್ಯಾಂಕಿನ 2004–05 ವಾರ್ಷಿಕ ವರದಿ ಮೇರೆಗೆ ಸೇನೆಯಲ್ಲಿ ಸೇವೆ ಸಲ್ಲಿಸಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದವರ ಸಂಖ್ಯೆ 2815. ಇದುವರೆಗೆ 14, 844 ಜನ ಸಿಬ್ಬಂದಿಗೆ ಬ್ಯಾಂಕಿನ ವಿವಿಧ ಮಹಾ ತರಬೇತಿ ವಿದ್ಯಾಲಯದಲ್ಲಿ ಹಲವಾರು ಕ್ಷೇತ್ರಗಳಲ್ಲಿ ತರಬೇತಿಯನ್ನು ಕೊಡಲಾಗಿದೆ.

ಬೆಂಗಳೂರು, ಮಂಗಳೂರು, ಚೆನ್ನೈ, ಮದುರೈ, ತಿರುವನಂತರಪುರ (ಟ್ರಿವೇಂಡ್ರಂ), ಹೈದರಾಬಾದ್, ಮುಂಬಯಿ ನಗರ, ಮುಂಬಯಿ ಉತ್ತರ, ಕೊಲ್ಕತ್ತಾ, ಪಾಟ್ನಾ, ಲಕ್ನೋ, ದೆಹಲಿ, ಚಂಡಿಗಡ.ಗಳಲ್ಲಿ ಬ್ಯಾಂಕಿನ ವಲಯ ಕಛೇರಿಗಳಿವೆ.

ಈ ಎಲ್ಲ ವಲಯ ಕಛೇರಿಗಳೂ ಸಹ ಜನರಲ್ ಮ್ಯಾನೇಜರ್‌ಗಳ ನೇತೃತ್ವದಲ್ಲಿ ತಮ್ಮ ಕಾರ್ಯಭಾರವನ್ನು ನಡೆಸುತ್ತಿವೆ. ಇದಲ್ಲದೆ ಹಲವಾರು ಮುಖ್ಯ ಪಟ್ಟಣಗಳಲ್ಲಿರುವ 38 ಸ್ಥಳೀಯ ಕಛೇರಿಗಳನ್ನೂ, ವಲಯ ಕಛೇರಿಗಳಿರುವ ಊರುಗಳಲ್ಲಿ ಸಿಬ್ಬಂದಿ ತರಬೇತಿಯ ಮಹಾವಿದ್ಯಾಲಯಗಳನ್ನೂ ಹೊಂದಿದೆ. ಪ್ರಮುಖ ವ್ಯಾಪಾರ ಸ್ಥಳಗಳಲ್ಲಿ ತನ್ನದೇ ಆದ ಕೋಶಾಗಾರಗಳನ್ನು ಹೊಂದಿದೆ. ಕೆಲವು ಪ್ರಮುಖ ನಗರಗಳಲ್ಲಿ ತೀರುವಳಿ ವ್ಯವಸ್ಥೆಯ ಜವಾಬ್ದಾರಿಯನ್ನು ರಿಸರ್ವ್ ಬ್ಯಾಂಕಿನ ಆದೇಶದ ಮೇರೆಗೆ ಒಪ್ಪಿಕೊಂಡು ಯಶಸ್ವಿಯಾಗಿ ನಿರ್ವಹಿಸುತ್ತಿದೆ. (ಉದಾಹರಣೆಗೆ : ಬೆಂಗಳೂರು ನಗರದಲ್ಲಿ) ಕರ್ನಾಟಕದಲ್ಲಿ ದಿನಾಂಕ 01–09–2005ರಂದು ಬ್ಯಾಂಕಿನ 536 ಶಾಖೆಗಳಿವೆ. ಅವುಗಳಲ್ಲಿ :

| ಮಹಾನಗರ | ಪಟ್ಟಣ | ಅರೆ–ಪಟ್ಟಣ | ಗ್ರಾಮೀಣ | ಒಟ್ಟು ಶಾಖೆಗಳು |
|---|---|---|---|---|
| 102 | 85 | 115 | 234 | 536 |

ಕೆನರಾ ಬ್ಯಾಂಕ್ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಗಳ ವಿವರಗಳು :

ಗ್ರಾಮೀಣ ಪ್ರದೇಶಗಳಲ್ಲಿ : ಇದುವರೆಗೆ ಬ್ಯಾಂಕು 8 ಗ್ರಾಮೀಣ ಬ್ಯಾಂಕುಗಳನ್ನು ಪ್ರಾಯೋಜಿಸಿದೆ. (31–03–2005ರ ವರೆಗೆ)

**ಕೆನರಾ ಬ್ಯಾಂಕ್ ಪ್ರಾಯೋಜಿಸಿದ ಗ್ರಾಮೀಣ ಬ್ಯಾಂಕ್‌ಗಳು :**

ತುಂಗಭದ್ರ ಗ್ರಾಮೀಣ ಬ್ಯಾಂಕ್

ಸೌತ್ ಮಲಬಾರ್ ಗ್ರಾಮೀಣ ಬ್ಯಾಂಕ್

ಅಲಿಘರ್ ಗ್ರಾಮೀಣ ಬ್ಯಾಂಕ್

ಜಮುನಾ ಗ್ರಾಮೀಣ ಬ್ಯಾಂಕ್

ಸಹ್ಯಾದ್ರಿ ಗ್ರಾಮೀಣ ಬ್ಯಾಂಕ್

ಏಟಾ ಗ್ರಾಮೀಣ ಬ್ಯಾಂಕ್

ಕೋಲಾರ್ ಗ್ರಾಮೀಣ ಬ್ಯಾಂಕ್

ಚಿತ್ರದುರ್ಗ ಗ್ರಾಮೀಣ ಬ್ಯಾಂಕ್

ಈ ಎಲ್ಲ ಗ್ರಾಮೀಣ ಬ್ಯಾಂಕ್‌ಗಳು ಅತ್ಯುತ್ತಮವಾಗಿ ಕಾರ್ಯಭಾರ ಮಾಡುತ್ತಿವೆ.

ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ಕೆನರಾ ಬ್ಯಾಂಕು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಸ್ವಯಂ ಉದ್ಯೋಗವನ್ನು ಪಡೆಯಲು ಸಹಾಯವಾಗುವಂತೆ ಗ್ರಾಮೀಣ ಪ್ರದೇಶದ ಜನತೆಗಾಗಿ 2005 ಮಾರ್ಚ್ ವರೆಗೆ 20 ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿದೆ. ಇದುವರೆಗೆ ಈ ಸಂಸ್ಥೆಗಳಲ್ಲಿ ಸುಮಾರು 1,56,000 ಅಭ್ಯರ್ಥಿಗಳನ್ನು ತಯಾರುಮಾಡಲಾಗಿದೆ. ಕೆನರಾ ಬ್ಯಾಂಕ್ ಪ್ಲಾಟಿನಂ ಮಹೋತ್ಸವ ಗ್ರಾಮೀಣ ಅಭಿವೃದ್ಧಿ ದತ್ತಿಸಂಸ್ಥೆಯ ವತಿಯಿಂದ ಪ್ರತ್ಯೇಕವಾಗಿ 13 ಸ್ವಯಂ ಉದ್ಯೋಗ ಸಂಸ್ಥೆಗಳನ್ನು ಪ್ರಾರಂಭಿಸಿದೆ. ಈ ಸಂಸ್ಥೆಗಳಲ್ಲಿ 2005 ಮಾರ್ಚ್ ವರೆಗೆ ಸುಮಾರು 43 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಿದೆ.

2. ಅತಿ ದೂರದಲ್ಲಿರುವ ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶದಿಂದ ಅನೇಕ ಚಿಕಿತ್ಸಾಲಯಗಳನ್ನು ಇದುವರೆಗೆ ತೆರೆದಿದ್ದಾರೆ. ಇದುವರೆಗೆ ಅಂದರೆ 31–03–2005 ತನಕ 442 ಚಿಕಿತ್ಸಾಲಯ ಗಳನ್ನು ತೆರೆಯಲಾಗಿದೆ.

3. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಉದ್ದೇಶಕ್ಕಾಗಿ ಇದುವರೆಗೆ 'ಜಲಯೋಗ' ಯೋಜನೆಯಡಿಯಲ್ಲಿ 32 ಪೂರ್ಣ ಯೋಜನೆಗಳನ್ನು ಪೂರೈಸಿದೆ. 1985 ನೆಯ ಇಸವಿಯಿಂದ ಇದುವರೆಗೆ ಸುಮಾರು 2 ಲಕ್ಷ ಜನಗಳಿಗೆ ಸಹಾಯಹಸ್ತವನ್ನು ನೀಡಿದೆ.

**ಅಗ್ರ ಬ್ಯಾಂಕ್ ಯೋಜನೆ :** ಈ ಯೋಜನೆಯಡಿಯಲ್ಲಿ ದೇಶಾದ್ಯಂತ 23 ಜಿಲ್ಲೆಗಳಲ್ಲಿ ತನ್ನ ಅಗ್ರಬ್ಯಾಂಕ್ ಜವಾಬ್ದಾರಿಯನ್ನು ಹೊತ್ತಿದೆ. [ಕರ್ನಾಟಕದಲ್ಲಿ ಏಳು, ತಮಿಳುನಾಡಿನಲ್ಲಿ ಆರು, ಕೇರಳದಲ್ಲಿ ಐದು, ಉತ್ತರ ಪ್ರದೇಶದಲ್ಲಿ ನಾಲ್ಕು ಮತ್ತು ಬಿಹಾರದಲ್ಲಿ ಒಂದು] ರಾಜ್ಯಮಟ್ಟದಲ್ಲಿ ನಡೆಸುವ ಬ್ಯಾಂಕರುಗಳ ಸಮಿತಿಯನ್ನು ನಿರ್ವಹಿಸುವ ಜವಾಬ್ದಾರಿಯನ್ನೂ ಹೊತ್ತಿದೆ.

**ವಿದೇಶೀ ಸೇವಾ ವಿಭಾಗ:** ಕೆನರಾ ಬ್ಯಾಂಕಿಗೆ 1953 ರಲ್ಲಿ ವಿದೇಶಿ ವಿಭಾಗವನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕಿನ ಪರವಾನಿಗೆ ದೊರೆಯಿತು. ಬ್ಯಾಂಕ್ ತನ್ನ ಮೊದಲ ವಿದೇಶಿ ಶಾಖೆಯನ್ನು ಲಂಡನ್ನಿನಲ್ಲಿ ಶ್ರೀಯುತ ಫ್ರೀಮನ್ ಅವರ ನೇತೃತ್ವದೊಂದಿಗೆ 27.04.1953 ರಲ್ಲಿ ಪ್ರಾರಂಭಿಸಿತು. ನಂತರದ ದಶಕಗಳಲ್ಲಿ ನಮ್ಮ ದೇಶದಲ್ಲಿ ವಿದೇಶಿ ವ್ಯವಹಾರ ವಿಭಾಗಗಳನ್ನು ಪ್ರಾರಂಭಿಸಿತು. ಇಂದು ಕೆನರಾ ಬ್ಯಾಂಕ್ ಒಂದು ಅಂತಾರಾಷ್ಟ್ರೀಯ ವಿಭಾಗವನ್ನು ಹೊಂದಿದೆ. ಇದರ ಪ್ರಮುಖ ಕಛೇರಿಯು ಮುಂಬಯಿ ನಗರದಲ್ಲಿದೆ. ಇದಲ್ಲದೆ ದೆಹಲಿ, ಕೊಲ್ಕತ್ತಾ, ಚೆನ್ನೈ, ಬೆಂಗಳೂರು, ಮೊದಲಾದ ದೊಡ್ಡ ದೊಡ್ಡ ನಗರಗಳಲ್ಲಿ ವಿದೇಶಿ ವಿಭಾಗಳನ್ನು ಹೊಂದಿದೆ. ಪ್ರಸ್ತುತ ವರ್ಷ ಅಂದರೆ 31.03.2005ರಲ್ಲಿ ಕೆನರಾ ಬ್ಯಾಂಕ್ 84,517 ಕೋಟಿ ರೂಪಾಯಿಗಳ ವಿದೇಶಿ ವಹಿವಾಟನ್ನು ಮಾಡಿದೆ. ಮಾರ್ಚ್ 2005 ರವರೆಗೆ ಬ್ಯಾಂಕ್ 98 ಅನ್ಯ ದೇಶಗಳಲ್ಲಿ 698 ವಿವಿಧ ಬ್ಯಾಂಕಗಳ ಅಂತರಜಾಲರೂಪೀ ಸಂಪರ್ಕವನ್ನು ಹೊಂದಿದೆ. ಭಾರತೀಯ ಹಣವನ್ನು ಅನ್ಯದೇಶಗಳಲ್ಲಿ ವ್ಯವಹರಿಸುವಂತಹ 20 ವಿನಿಮಯ ಸಂಸ್ಥೆಗಳನ್ನು ಮಧ್ಯಪ್ರಾಚ್ಯ ದೇಶಗಳಲ್ಲಿ ಹೊಂದಿದೆ. ಅನಿವಾಸಿ ಭಾರತೀಯರಿಗೆ ಉತ್ತಮ ಸೇವೆಗಳನ್ನು ನೀಡಲು ದೇಶದ ಒಳಗೆ ಅನೇಕ ಪ್ರತ್ಯೇಕ ಶಾಖೆಗಳನ್ನು ತೆರೆದಿದೆ. ಇದಲ್ಲದೆ ತನ್ನ ಪ್ರತಿನಿಧಿ ಕಛೇರಿಗಳನ್ನು ವಿದೇಶಗಳಲ್ಲಿ ಸ್ಥಾಪಿಸಿದೆ.

ಬ್ಯಾಂಕಿನ ಗಣಕೀಕರಣ : ಇದಕ್ಕಾಗಿಯೇ ಬ್ಯಾಂಕ್ ಒಂದು ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಿದೆ. ಹೆಚ್ಚು ಕಡಿಮೆ ಎಲ್ಲ ನಗರ ಹಾಗೂ ಅರೆ ನಗರ ಶಾಖೆಗಳನ್ನು ಗಣಕೀಕರಣಗೊಳಿಸಲಾಗಿದೆ. 2005 ನೇ ಮಾರ್ಚ್ ತಿಂಗಳವರೆಗೆ 1420 ಶಾಖೆಗಳ ಅಂತರಜಾಲ ಸಂಪರ್ಕವನ್ನು ಸಾಧಿಸಿದೆ. 710 ಯಾವ ಸಮಯದಲ್ಲಾದರೂ ಹಣ ನೀಡುವ ಯಂತ್ರಗಳ ಜಾಲ()ವನ್ನು ಹೊಂದಿದೆ. ಇದುವರೆಗೆ 11 ಲಕ್ಷ ಗ್ರಾಹಕರು ಈ ಸೌಲಭ್ಯವನ್ನು ಉಪಯೋಗಿಸುತ್ತಿದ್ದಾರೆ. ಯಾವ ಊರಿನಲ್ಲಿದ್ದರೂ ಅಂತರಜಾಲದ ಒಳಗೆ ಇರುವ ಶಾಖೆಗಳ ವ್ಯವಹಾರವನ್ನು ಸೌಲಭ್ಯವನ್ನು 901 ಶಾಖೆಗಳಲ್ಲಿ ಒದಗಿಸಲಾಗಿದೆ. ಬ್ಯಾಂಕಿನ ಎಲ್ಲ ನಗರ ಹಾಗು ಪಟ್ಟಣ ಬ್ಯಾಂಕುಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಗೆ ಸದ್ಯದಲ್ಲೇ ಅಳವಡಿಸಲಾಗುತ್ತಿದೆ.

ಬ್ಯಾಂಕ್ ಇದುವರೆಗೆ ಪಡೆದ ಪ್ರಶಸ್ತಿಗಳು : ಕೆನರಾ ಬ್ಯಾಂಕ್ 26.02.1990 ರಲ್ಲಿ ತನ್ನ ಮಾನವ ಸಂಪನ್ಮೂಲ ಅಭಿವೃದ್ಧಿಯ ವಿಭಾಗಕ್ಕೆ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಪಡೆದಿದೆ. ರಾಜಭಾಷಾ ಪ್ರಶಸ್ತಿಯನ್ನು ಅನೇಕ ವರ್ಷಗಳವರೆಗೆ ಪಡೆದಿದೆ. ಇದಲ್ಲದೆ 2002 – 03ರಲ್ಲಿ ಉತ್ತಮ ರಫ್ತು ವಹಿವಾಟಿನ ವಿಭಾಗಕ್ಕೆ "ನಿರ್ಯಾತ್ ಬಂಧು" ಎಂಬ ಪ್ರಶಸ್ತಿಯನ್ನು ಪಡೆದಿದೆ. ಭಾರತ ಸರ್ಕಾರದ ಗೃಹ ಖಾತೆಯವರು ಇಟ್ಟಿರುವ ಇಂದಿರಾಗಾಂಧಿ ರಾಜಭಾಷಾ ಪುರಸ್ಕಾರ ಯೋಜನೆಯಯಡಿಯಲ್ಲಿ 2002 –03ರಲ್ಲಿ ಪ್ರಶಸ್ತಿಯನ್ನು ಪಡೆದಿದೆ. ಬ್ಯಾಂಕಿನ ನಿಯತಕಾಲಿಕವಾದ "ಶ್ರೇಯಸ್" ಅಖಿಲ ಭಾರತ ನಿಯತಕಾಲಿಕೆಗಳ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು 08.02.1990 ಇಸವಿಯಲ್ಲಿ ಮತ್ತು 2003ನೆಯ ವರ್ಷಕ್ಕೆ "ಅತ್ಯುತ್ತಮ ಮುದ್ರಣದ" ಬಹುಮಾನವನ್ನು ಪಡೆದಿದೆ.

ನಿಷ್ಕ್ರಿಯ ಆಸ್ತಿ ನಿರ್ವಹಣೆ : ಈ ವಿಭಾಗದಲ್ಲಿ ಕೆನರಾ ಬ್ಯಾಂಕ್ ಗಣನೀಯ ಪ್ರಗತಿಯನ್ನು ಸಾಧಿಸಿದೆ. 2004–05 ನೆಯ ವರ್ಷದಲ್ಲಿ ಲಾಭವನ್ನು ತರದ ಸಾಲ / ಮುಂಗಡಗಳ ಪ್ರಮಾಣವು ಗಣನೀಯವಾಗಿ ಇಳಿದಿದೆ. ಕೆನರಾ ಬ್ಯಾಂಕಿನ 2004–2005ನೆಯ ಸಾಲಿನ ವಾರ್ಷಿಕ ವರದಿಯಂತೆ 2004–05 ನೆಯ ವರ್ಷದಲ್ಲಿ ಇವುಗಳ ಪ್ರಮಾಣ 2371 ಕೋಟಿ ರೂಪಾಯಿಗಳು (2003–04 ನೆಯ ವರ್ಷದಲ್ಲಿ ಇದರ ಪ್ರಮಾಣವು 3127 ಕೋಟಿ ರೂಪಾಯಿಗಳಿದ್ದವು.)

ರಿಸರ್ವ್ ಬ್ಯಾಂಕ್ ವಾಣಿಜ್ಯ ಬ್ಯಾಂಕುಗಳ ಮೇಲೆ ವಿಧಿಸಿರುವ ಬಂಡವಾಳ ಪರ್ಯಾಪ್ತತಾ ಅನುಪಾತ (ಕ್ಯಾಪಿಟಲ್ ಅಡಿಕ್ವೆಸಿ ರೇಷಿಯೋ–: 2004 –05 ನೆಯ ವರ್ಷದಲ್ಲಿ ಈ ಅನುಪಾತವು 12 . 78 . [ರಿಸರ್ವ್ ಬ್ಯಾಂಕ್ ವಿಧಿಸಿರುವ ಅನುಪಾತ 5% ಈ ಅನುಪಾತವು ಹೆಚ್ಚಿದಷ್ಟೂ ಸಂಸ್ಥೆಯ ಉತ್ತಮ ಕಾರ್ಯದಕ್ಷತೆಯನ್ನು ಸೂಚಿಸುತ್ತದೆ.]
**(ನೋಡಿ : ಕೇಂದ್ರೀಯ ಬ್ಯಾಂಕ್)**

ಬ್ಯಾಂಕಿನ ಠೇವಣಿ, ಸಾಲ-ಮುಂಗಡ ಮತ್ತು ಸೇವಾ ವಿವರಗಳು :

| ಕ್ರಮ | ಠೇವಣಿ ಯೋಜನೆಗಳು | ಸಾಲ-ಮುಂಗಡಗಳ ವಿವರಗಳು | ಸೇವಾ ವಿವರಗಳು |
|---|---|---|---|
| 1 | ಉಳಿತಾಯ ಖಾತೆ | ಮೀರೆಳೆತ ಸಾಲ | ಭದ್ರತಾ ಕಪಾಟು |
| 2 | ಚಾಲ್ತಿ ಖಾತೆ | ನಗದು ಉದರಿ ಸಾಲ | ವಿಶ್ವಸ್ಥ ಮಂಡಳಿ ಕಾರ್ಯ ನಿರ್ವಾಹಕ ಮತ್ತು ತೆರಿಗೆ |
| 3 | ಚೆಕ್ಕುಗಳು ಮತ್ತು ಬಿಲ್ಸ್‌ಗಳ ಖರೀದಿ ಮತ್ತು ವಟಾಯಿಸುವುದು. | ಬ್ಯಾಂಕ್ ಡ್ರಾಫ್ಟ್, ಪಾವತಿ ಆದೇಶ | |
| 4 | ಸಾವಧಿ ಠೇವಣಿ | ಸಾವಧಿ ಠೇವಣಿ ಮೇಲಿನ ಸಾಲ | ಆದಾಯ ತೆರಿಗೆದಾರರ ಫಾರಂ ಸಲ್ಲಿಸುವ ಸೇವೆ. |
| 5 | ಕಾಮಧೇನು ಠೇವಣಿ | ವ್ಯಾಪಾರಸ್ಥರಿಗೆ ಸಾಲ | ಆಯ್ದ ಶಾಖೆಗಳಲ್ಲಿ ಗ್ರಾಹಕರ ವಿದ್ಯುತ್ ಶುಲ್ಕ ಪಾವತಿ ಸೇವೆ |
| 6 | ಕೆನರಾ ಸ್ವಯಂ ವಿಸ್ತರಣಾ ಠೇವಣಿ | ಸಣ್ಣ ಕೈಗಾರಿಕೆಗಳಿಗೆ ಸಾಲ | ಚೆಕ್ಕು ಮತ್ತು ಬಿಲ್ಸ್‌ಗಳನ್ನು ವಸೂಲು ಮಾಡಿ ಕೊಡುವುದು |
| 7 | ಕ್ಯಾನ್ ಫ್ಲೆಕ್ಸಿ | ಕೃಷಿ ಸಾಲಗಳು | ದೂರವಾಣಿ ಮೂಲಕಬ್ಯಾಂಕಿಂಗ್ |
| 8 | ಆಶ್ರಯ ಠೇವಣಿ | ಇತರೇಆದ್ಯತಾ ಕ್ಷೇತ್ರದ ಸಾಲಗಳು | |
| | ಅ).ಸಣ್ಣ ಉದ್ದಿಮೆದಾರರಿಗೆ ಮತ್ತು ಸಣ್ಣ ವ್ಯಾಪಾರಿಗಳಿಗೆ | | |
| | ಬ).ವೃತ್ತಿಪರ ಮತ್ತು ಸ್ವಯಂ ಉದ್ಯೋಗಿಗಳಿಗೆ | ಅಂತರಜಾಲ ಮೂಲಕ ಬ್ಯಾಂಕಿಂಗ್ | |
| 9 | ಚರ ದರ ಠೇವಣಿ) | ವಿದ್ಯಾಸಾಗರ ಸಾಲ (ಶಿಕ್ಷಣಕ್ಕೆ ಸಾಲ) | ಚರ ದೂರವಾಣಿ ಬ್ಯಾಂಕಿಂಗ್ |
| 10 | ಅನಿವಾಸಿ ಠೇವಣಿಗಳು | | |
| | ಅ)ಅನಿವಾಸಿ ರೂಪಾಯಿ ಠೇವಣಿಗಳು | ಮನೆ ಕಟ್ಟಲು ಸಾಲ | ಎ. ಟಿ. ಎಮ್. |
| 11 | ವಿದೇಶಿ ಕರೆನ್ಸಿ ಅನಿವಾಸಿಗಳ ಠೇವಣಿ (ಬಿ)) | ಕ್ಯಾನ್-ಆಭರಣ ಸಾಲ | ಬಿ.ಡಿ.ಎ. ಮೊದಲಾದ ಸಂಸ್ಥೆಗಳ ಪರವಾಗಿ ಅರ್ಜಿ/ಹಣ ಸ್ವೀಕೃತಿ |
| 12 | ನಿವಾಸಿಗಳ ವಿದೇಶಿ ಕರೆನ್ಸಿ ಉಳಿತಾಯ ಖಾತೆ( | ಕ್ಯಾನ್ ಟೆಕ್ ಸಾಲ | ವಣಿಕ ಬ್ಯಾಂಕಿಂಗ್ |
| 13 | ನಿವಾಸಿಗಳ ವಿದೇಶಿ ಕರೆನ್ಸಿ ಸಾವಧಿ ಠೇವಣಿ ಖಾತೆ | ಕ್ಯಾನ್ ಟ್ರಾವೆಲ್ ಸಾಲ | |
| 14 | ಕ್ಯಾನ್-ಮೋಬೈಲ್(ಕಾರ್ ಸಾಲ) | | |
| 15 | ಕ್ಯಾನ್ - ನಗದು | | |
| 16 | ಕ್ಯಾನ್-ಕ್ಯಾರಿ(ದ್ವಿಚಕ್ರವಾಹನ ಸಾಲ) | | |

**ಚಿನ್ನದ ಕಾರ್ಡ್ ಸೇವೆ :** ಕೆನರಾ ಬ್ಯಾಂಕಿನ ರಫ್ತುದಾರ ಗ್ರಾಹಕರಿಗೆ ವಿಶೇಷವಾಗಿ ಚಿನ್ನದ ಕಾರ್ಡು ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಚಿನ್ನದ ಕಾರ್ಡನ್ನು ಕೇವಲ ಆಯ್ದ ಮತ್ತು ಈ ಕೆಳಗಿನ ನಿಯಮಗಳಿಗೆ ಹೊಂದುವ ರಫ್ತುದಾರರಿಗೆ ಮಾತ್ರ ನೀಡಲಾಗುವುದು.

ರಫ್ತುದಾರನ ಎಲ್ಲ ಆಸ್ತಿಗಳು ಕನಿಷ್ಠ ಮೂರು ವರ್ಷಗಳವರೆಗೆ ಶಿಷ್ಟ ಆಸ್ತಿಯಗಿರಬೇಕು. ಆ ಮೂರು ವರ್ಷಗಳು ಬ್ಯಾಂಕಿನೊಡನೆ ಮಾಡಿದ ವ್ಯವಹಾರಗಳು ಉತ್ತಮ ಗುಣಮಟ್ಟದ್ದಾಗಿರಬೇಕು.

ಈ ಚಿನ್ನದ ಕಾರ್ಡನ್ನು ಕೇವಲ ಮೂರು ವರ್ಷಗಳ ಅವಧಿಯವರೆಗೆ ಮಾತ್ರ ನೀಡಲಾಗುವುದು ಮತ್ತು ಅದನ್ನು ರಫ್ತುದಾರರ ಶ್ರೇಣಿಯನ್ನನುಸರಿಸಿ ಮತ್ತೆ ಮೂರು ವರ್ಷಗಳವರೆಗೆ ಬ್ಯಾಂಕೇ ನವೀಕರಿಸುವುದು.

ರಫ್ತುದಾರ ಗ್ರಾಹಕರಿಗೆ ಚಿನ್ನದ ಕಾರ್ಡಿನ ಲಾಭಗಳು: ಸಾಲ ಬೇಡಿಕೆಯ ಅರ್ಜಿಗಳನ್ನು ಬೇರೆ ರಫ್ತುದಾರರಿಗಿಂತ ಶೀಘ್ರವಾಗಿ ವಿಲೇವಾರಿ ಮಾಡಲಾಗುವುದು. ಬಡ್ಡಿದರ ಮತ್ತು ಸೇವಾ ಶುಲ್ಕಗಳಲ್ಲಿ ಬೇರೆ ರಫ್ತುದಾರರಿಗಿಂತ ಶೇಕಡಾ 25ರಷ್ಟು ಕಡಿಮೆ ಮಾಡಲಾಗುವುದು. ಶೀಘ್ರದಲ್ಲಿ ಈ ಚಿನ್ನದ ಕಾರ್ಡು ಹೊಂದಿದವರಿಗೆ ಅಂತರರಾಷ್ಟ್ರೀಯ ಉದರಿ ಕಾರ್ಡು ಹಾಗು ಋಣಿಕೆ ಕಾರ್ಡುಗಳನ್ನು, ಅಂತರಜಾಲ ಬ್ಯಾಂಕಿಂಗ್, ಮೋಬೈಲ್ ಬ್ಯಾಂಕಿಂಗ್, ಎಟಿಎಂ ಕಾರ್ಡುಗಳನ್ನು ನೀಡಲಾಗುವುದು. ರಫ್ತಾದನಂತರದ ಸಾಲದ ಅವಧಿಯನ್ನು 90 ದಿನಗಳಿಂದ 365 ದಿನಗಳಿಗೆ ಹೆಚ್ಚಿಸಲಾಗುವುದು. ಉಳಿದ ವಿವರಣೆಗೆ ಹತ್ತಿರದ ಶಾಖೆಯನ್ನು ಸಂಪರ್ಕಿಸಬಹುದು.

ಕೋರ್ ಬ್ಯಾಂಕಿಂಗ್ : ಬ್ಯಾಂಕಿನ ಬಹುತೇಕ ಶಾಖೆಗಳನ್ನು ಏಕೀಕರಿಸಿ ಯಾವುದೇ ಶಾಖೆಯ ಖಾತೆಯನ್ನು ಯಾವುದೇ ಶಾಖೆಯಿಂದಲೂ ಅವಲೋಕಿಸುವ, ವ್ಯವಹರಿಸುವ, ಜಮಾಖರ್ಚು ಹಾಕುವ, ಖಾತಾ ನಕಲು ಸಮಗ್ರ ಗಣಕೀಕರಣ ಪದ್ಧತಿಯನ್ನು ಕೋರ್ ಬ್ಯಾಂಕಿಂಗ್ ಪದ್ಧತಿ ಎನ್ನುತ್ತಾರೆ. ಇಂದು ಎಲ್ಲ ಸರ್ಕಾರೀ ಸ್ವಾಮ್ಯದ ಬ್ಯಾಂಕುಗಳು, ವಿದೇಶೀ ಬ್ಯಾಂಕುಗಳು, ಬಹುರಾಷ್ಟ್ರೀಯ ಕಂಪನಿಗಳ ಬ್ಯಾಂಕುಗಳು ಈ ಪದ್ಧತಿಯನ್ನು ಅಳವಡಿಸಿಕೊಂಡಿವೆ. ಕೆನರಾ ಬ್ಯಾಂಕಿನಲ್ಲೂ ಈ ಪದ್ಧತಿಯು ಆಗಲೇ ಪ್ರಮುಖ ಶಾಖೆಗಳಲ್ಲಿ ಚಾಲನೆಗೆ ಬಂದು ಉಳಿದ ಬಹುತೇಕ ಶಾಖೆಗಳನ್ನು ಈ ವ್ಯಾಪ್ತಿಯಲ್ಲಿ ತರುವ ಪ್ರಯತ್ನಗಳು ನಡೆದಿವೆ.

ಕೆನರಾ ಬ್ಯಾಂಕ್ ಇದುವರೆಗೆ ಈ ಕೆಳಗೆ ಕಾಣಿಸಿರುವ ಅಂಗಸಂಸ್ಥೆಗಳನ್ನು ಪ್ರಾಯೋಜಿಸಿದೆ.

ಇಂಡೋ ಹಾಂಕಾಂಗ್ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ನಿಯಮಿತ
ಕ್ಯಾನ್ ಬ್ಯಾಂಕ್ ವೆಂಚರ್ ಕ್ಯಾಪಿಟಲ್ ಫಂಡ್ ಲಿಮಿಟೆಡ್
ಕ್ಯಾನ್‌ಫಿನ್ ಹೋಂಸ್ ಲಿಮಿಟೆಡ್
ಕ್ಯಾನ್‌ಬ್ಯಾಂಕ್ ಇನ್ವೆಸ್ಟ್‌ಮೆಂಟ್ ಮಾನೇಜ್‌ಮೆಂಟ್ ಸರ್ವಿಸಸ್ ಲಿಮಿಟೆಡ್
ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿಮಿಟೆಡ್
ಕ್ಯಾನ್‌ಬ್ಯಾಂಕ್ ಕಂಪ್ಯೂಟರ್ ಸರ್ವಿಸಸ್ ಲಿಮಿಟೆಡ್/ಗಿಲ್ಟ್ ಸೆಕ್ಯೂರಿಟೀಸ್ ಟ್ರೇಡಿಂಗ್ ಕಾರ್ಪೊರೇಷನ್ ಲಿಮಿಟೆಡ್
ಕ್ಯಾನ್‌ಬ್ಯಾಂಕ್ ಫೈನಾನ್ಷಿಯಲ್ ಸರ್ವಿಸಸ್ ಲಿಮಿಟೆಡ್

ಕೆನರಾ ಬ್ಯಾಂಕು ತನ್ನದೇ ಆದ ಅಂತರಜಾಲ ತಾಣವನ್ನು ಹೊಂದಿದೆ. ತಾಣದ ವಿಳಾಸ : www.canbankindia.com. ಅದರಲ್ಲಿ ಬ್ಯಾಂಕು ತನ್ನ ಬ್ಯಾಂಕಿನ ವ್ಯವಹಾರಗಳು, ಮಾರುಕಟ್ಟೆಯಲ್ಲಿರುವ ತನ್ನ ಠೇವಣಿ, ಸಾಲ-ಮುಂಗಡಗಳು, ವಿವಿಧ ಸೇವೆಗಳು ಮತ್ತು ಉತ್ಪನ್ನಗಳ ಬಗ್ಗೆ ವಿವರಗಳನ್ನು ನೀಡುತ್ತದೆ. ಹಲವಾರು ಪ್ರಚಲಿತ ಬ್ಯಾಂಕಿನ ವಿಷಯಗಳು, ವಿವಿಧ ಪ್ರಗತಿಗಳ ಅಂಕಿ-ಅಂಶಗಳು ಇಲ್ಲಿ ದೊರೆಯುತ್ತವೆ. ಅಲ್ಲದೆ ಕೆಲವು ಬ್ಯಾಂಕಿಂಗ್ ವ್ಯವಹಾರಗಳಿಗೆ ಬೇಕಾಗುವ ವಿವಿಧ ನಮೂನೆಗಳನ್ನು ಬ್ಯಾಂಕಿನ ಅಂತರಜಾಲತಾಣದಿಂದ ನೇರವಾಗಿ ಇಳಿಸಿಕೊಂಡು ಅದನ್ನೇ ಭರ್ತಿಮಾಡಿ ಸಂಬಂಧಪಟ್ಟ ಶಾಖೆ, ಕಛೇರಿಗಳಿಗೆ ಸಲ್ಲಿಸಬಹುದು. ಇದರಲ್ಲಿ ನೇರವಾಗಿ ಪತ್ರ ಬರೆಯಬಹುದು. ಏನೇ ದೂರುಗಳಿದ್ದರೂ ಇಲ್ಲಿನ ವಿಳಾಸಕ್ಕೆ ವಿದ್ಯುನ್ಮಾನ ಅಂಚೆ ಕಳಿಸಬಹುದು. ಇದಲ್ಲದೆ ಬ್ಯಾಂಕು 24 ಗಂಟೆಗಳೂ ಕಾರ್ಯ ನಿರ್ವಹಿಸುವ ಶುಲ್ಕ ರಹಿತ ದೂರವಾಣಿಯನ್ನು ಗ್ರಾಹಕರ ದೂರು ನಿವಾರಣಾ ಸೌಲಭ್ಯಕ್ಕಾಗಿಯೆ ವ್ಯವಸ್ಥೆ ಮಾಡಿದೆ.

ಒಟ್ಟಾರೆ ಕೆನರಾಬ್ಯಾಂಕು ದೇಶದ ಪ್ರಮುಖ ಬ್ಯಾಂಕುಗಳ ಪೈಕಿ ಒಂದಾಗಿ ಸಮಾಜಕ್ಕೆ ಆರ್ಥಿಕ ರಂಗಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತ ಮುನ್ನಡೆದಿದೆ. *

**ಕೆನಿಶಿ ಫುಕುಯಿ:** 1918-98. ನೊಬೆಲ್ ಪುರಸ್ಕೃತ ರಸಾಯನ ವಿಜ್ಞಾನಿ. 1918ರಲ್ಲಿ ಜಪಾನಿನ ನಾರಾ ಎಂಬಲ್ಲಿ ಜನಿಸಿದ. ಕೈಗಾರಿಕೋದ್ಯಮಿಯಾಗಿದ್ದ ರ್‍ಯೊಕಿಶಿ ಫುಕುಯಿ ಇವನ ತಂದೆ, ಮತ್ತು ತಾಯಿ ಶಿ ಫುಕುಯಿ. ಇವರ ಮೂವರು ಮಕ್ಕಳಲ್ಲಿ ಕೆನಿಶಿ ಫುಕುಯಿ ಮೊದಲನೆಯವನು. ಸೈದ್ಧಾಂತಿಕ ರಸಾಯನವಿಜ್ಞಾನದಲ್ಲಿ ರಾಸಾಯನಿಕ ಪ್ರತಿಕ್ರಿಯೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿಪಡಿಸಿದ ಸಿದ್ಧಾಂತಗಳಿಗಾಗಿ 1982ರಲ್ಲಿ ಇವನಿಗೆ ನೊಬೆಲ್ ಪ್ರಶಸ್ತಿ ಲಭಿಸಿದೆ.

ಸಣ್ಣವನಿದ್ದಾಗ ಇವನಿಗೆ ರಸಾಯನವಿಜ್ಞಾನದಲ್ಲಿ ಅಂತಹ ಶ್ರದ್ಧೆಯಿರಲಿಲ್ಲವಾದರೂ ತಂದೆಯವರ ಒತ್ತಾಸೆಯ ಮೇರೆಗೆ ಕೈಗಾರಿಕಾ ರಸಾಯನ ವಿಜ್ಞಾನದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವಂತಾಯಿತು. ಈ ಕಾರಣದಿಂದ ಮುಂದೆ ರಸಾಯನವಿಜ್ಞಾನವೇ ಇವನ ಅಧ್ಯಯನ ಕ್ಷೇತ್ರವಾಯಿತು. ವಿದ್ಯಾಭ್ಯಾಸದ ಅನಂತರ ಸೈನ್ಯದ ಇಂಧನ ಪ್ರಯೋಗಾಲಯದಲ್ಲಿ ಸಿಂಥೆಟಿಕ್ ಇಂಧನ ರಸಾಯನದ ಬಗ್ಗೆ ಪ್ರಾಯೋಗಿಕ ಸಂಶೋಧನೆಯಲ್ಲಿ ತೊಡಗಿದ. ಅದಕ್ಕಾಗಿ 1944ರಲ್ಲಿ ಬಹುಮಾನವನ್ನೂ ಗಳಿಸಿದ. 1943ರಲ್ಲಿ ಕ್ಯೂತೋ ಇಂಪೀರಿಯಲ್ ವಿಶ್ವವಿದ್ಯಾಲಯದಲ್ಲಿ ಇಂಧನ ರಸಾಯನವಿಜ್ಞಾನ ವಿಭಾಗದಲ್ಲಿ ಅಧ್ಯಾಪಕನಾಗಿಯೂ (1943) ಸಹಪ್ರಾಧ್ಯಾಪಕನಾಗಿಯೂ (1945) ಪ್ರಾಧ್ಯಾಪಕನಾಗಿಯೂ (1951) ಸೇವೆ ಸಲ್ಲಿಸಿದ್ದಾನೆ. 1947ರಲ್ಲಿ ತಮೊಯಿ ಹೊರಿ ಎಂಬುವವಳೊಂದಿಗೆ ವಿವಾಹವಾಯಿತು.

1956ರ ಮೊದಲೇ ಸ್ವತಂತ್ರ ಸಿದ್ಧಾಂತಗಳನ್ನು ಮಂಡಿಸುವಂತಹ ಯುವವಿಜ್ಞಾನಿಗಳ ಗುಂಪನ್ನು ಹುಟ್ಟುಹಾಕಿದ್ದ. ಅವರೊಂದಿಗೆ ಸೇರಿ ಜೈವಿಕ ರಸಾಯನವಿಭಾಗದಲ್ಲಿ ಪ್ರಯೋಗಗಳನ್ನು ನಡೆಸತೊಡಗಿದ. 1944-72ರ ಹೊತ್ತಿಗೆ 137ಕ್ಕಿಂತಲೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದ.

1952ರಲ್ಲಿ ಆರೋಮ್ಯಾಟಿಕ್ ಹೈಡ್ರೋಕಾರ್ಬನ್ನಿನ ಫ್ರಾಂಟಿಯರ್ ಎಲೆಕ್ಟ್ರಾನ್ ಡೆನ್‌ಸಿಟಿ ಮತ್ತು ರಾಸಾಯನಿಕ ಪ್ರತಿಕ್ರಿಯೆಗಳ ನಡುವಿನ ಸಹ ಸಂಬಂಧವನ್ನು ಕಂಡುಹಿಡಿಯುವ ಮೂಲಕ ಇವನ ಮೊದಲ ವೈಜ್ಞಾನಿಕ ಆಸಕ್ತಿ ಮೂಡಿತು. ಇದೇ ಮುಂದಿನ ರಾಸಾಯನಿಕ ಪ್ರತಿಕ್ರಿಯೆಗಳ ಸಿದ್ಧಾಂತವನ್ನು ಬೆಳೆಸಲು ಉತ್ಸಾಹ ಮೂಡಿಸಿತು.

ಇವನ ವೈಜ್ಞಾನಿಕ ಸಂಶೋಧನೆಗಳಿಗೆ ಹಲವಾರು ಪ್ರಶಸ್ತಿ, ಗೌರವಗಳು ಲಭಿಸಿವೆ. ಜಪಾನ್‌ನ ಅಕಾಡೆಮಿ ಪ್ರಶಸ್ತಿ (1962); ರಾಷ್ಟ್ರೀಯ ವಿಜ್ಞಾನ ಫೌಂಡೇಶನ್‌ನ ಸೀನಿಯರ್ ಫಾರಿನ್ ಸೈಂಟಿಸ್ಟ್ ಫೆಲೊ (1970); ಅಂತಾರಾಷ್ಟ್ರೀಯ ಕ್ವಾಂಟಂ ಮಾಲೆಕ್ಯುಲರ್ ಸೈನ್ಸ್‌ನ ಸದಸ್ಯತ್ವ (1970); ಕ್ಯೂತೊ ವಿಶ್ವವಿದ್ಯಾಲಯದ ಕೌನ್ಸಿಲರ್ (1970–73); ಇಂಪೀರಿಯಲ್‌ನಿಂದ 'ಗ್ರಾಂಡ್ ಕಾರ್‌ಡನ್ ಆಫ್ ದ ಆರ್ಡರ್ ಆಫ್ ದ ರೈಸಿಂಗ್ ಸನ್' ಗೌರವ (1980); ಜಪಾನಿನ ಕೆಮಿಕಲ್ ಸೊಸೈಟಿಯ ಅಧ್ಯಕ್ಷ (1983); ಗ್ರೇಟ್‌ಬ್ರಿಟನ್ನಿನ ರಾಯಲ್ ಇನ್‌ಸ್ಟಿಟ್ಯೂಟ್‌ನ ಗೌರವ ಸದಸ್ಯತ್ವ. (ಪಿ.ಎಸ್.ಪಿ.)

**ಕೆನಿಸ್ ವೆನಾಟಿಸಿ :** ಖಗೋಲದ 88 ನಕ್ಷತ್ರಪುಂಜಗಳ ಪೈಕಿ ಒಂದು (ಕಾಳಭೈರವ). ಇದರ ವ್ಯಾಪ್ತಿ ವಿಷುವದಂಶ 12 ಗಂಟೆ 5ಮಿ.–14ಗಂ 5ಮಿ, ಮತ್ತು ಘಂಟಾವೃತ್ತಾಂಶ 28°–52° ಉ. ಬರಿಗಣ್ಣಿನಿಂದ ಈ ಪುಂಜವನ್ನು ಗುರುತಿಸುವುದು ಕಷ್ಟ. ಸಪ್ತರ್ಷಿ ಮಂಡಲ, ಸಿಂಹರಾಶಿ, ಕನ್ಯಾರಾಶಿ ಮತ್ತು ಸಹದೇವ ನಕ್ಷತ್ರ ಪುಂಜಗಳು ಆವೃತಿಸುವ ಆಕಾಶವಲಯದ ಒಳಗೆ ಕೆನಿಸ್ ವೆನಾಟಿಸೈ ಇದೆ. ಇದರಲ್ಲಿರುವ ಪ್ರಧಾನ ನಕ್ಷತ್ರದ ಹೆಸರು ಕಾರ್ ಕರೋಲಿ. *

**ಕೆನೆಡಿ, ಜಾನ್ ಫಿಟ್ಸ್‌ಜೆರಲ್ಡ್ :** 1917–1963. ಅಮೆರಿಕ ಸಂಯುಕ್ತ ಸಂಸ್ಥಾನದ 35ನೆಯ ಅಧ್ಯಕ್ಷ. ಆ ಸ್ಥಾನಕ್ಕೆ ಆವರೆಗೆ ಆಯ್ಕೆಯಾದವರಲ್ಲಿ ಅತ್ಯಂತ ಕಿರಿಯ; ರೋಮನ್ ಕೆಥೊಲಿಕ್ ಪಂಥದವರಲ್ಲಿ ಪ್ರಥಮ. ಕೊಲೆಗಡುಕನ ಗುಂಡಿಗೆ ಬಲಿಯಾದ ಅಮೆರಿಕಾಧ್ಯಕ್ಷರ ಪೈಕಿ ನಾಲ್ಕನೆಯವ. ಮ್ಯಾಸಚೂಸೆಟ್ಸಿನ ಬಾಸ್ಟನ್‌ನ ಉಪನಗರಗಳಲ್ಲೊಂದಾದ ಬ್ರೂಕ್ಲಿನಿನಲ್ಲಿ 1917ರ ಮೇ 29ರಂದು ಜನಿಸಿದ. ತಂದೆ ಜೋಸೆಫ್ ಪ್ಯಾಟ್ರಿಕ್ ಕೆನೆಡಿ, ತಾಯಿ ರೋಸ್. ತಂದೆ–ತಾಯಿಯರಿಬ್ಬರ ಹಿರಿಯರೂ ಐರ್ಲೆಂಡಿನಿಂದ ಬಂದವರು. ಅವರ ಒಂಬತ್ತು ಜನ ಮಕ್ಕಳ ಪೈಕಿ ಜಾನ್ ಎಫ್.ಕೆನಡಿ ಎರಡನೆಯವ.



ಕೆನಡಿಯ ಬಾಲ್ಯ ಬಾಸ್ಟನಿನ ಕೆಳಮಧ್ಯಮ ವರ್ಗದ ವಸತಿಪ್ರದೇಶದಲ್ಲಿ ಆರಂಭವಾಯಿತಾದರೂ ತಂದೆಯ ಆರ್ಥಿಕ ಸ್ಥಿತಿ ಉತ್ತಮಗೊಂಡಂತೆ ಹೆಚ್ಚು ಹೆಚ್ಚು ಉತ್ತಮ ವಾತಾವರಣದಲ್ಲಿ ಬೆಳೆಯುವ ಅವಕಾಶ ಅವನಿಗೆ ಒದಗಿಬಂತು. ಕೆನೆಡಿಯ ಸಂಸಾರವೂ ಕ್ರಮಕ್ರಮವಾಗಿ ಬೆಳೆಯುತ್ತಿತ್ತು. ತಮ್ಮಂದಿರ, ತಂಗಿಯರ ಪ್ರೀತಿ, ತಂದೆತಾಯಿಯರ ವಾತ್ಸಲ್ಯ, ದಾದಿಯರ ಆರೈಕೆ–ಇವೆಲ್ಲ ಅವನಿಗೆ ಲಭ್ಯವಾದುವು. ಸ್ಥಳೀಯ ಶಾಲೆಗಳಲ್ಲಿ ಆರಂಭಿಕ ಶಿಕ್ಷಣ ಪಡೆದ ಮೇಲೆ ನ್ಯೂ ಮಿಲ್ಫರ್ಡಿನ ಕ್ಯಾಂಟರ್‌ಬೆರಿ, ವಾಲಿಂಗ್ ಫರ್ಡಿನ ಕೊಯೆಟ್, ಪ್ರಿನ್ಸ್‌ಟನ್ ಮತ್ತು ಹಾರ್ವರ್ಡ್‌ಗಳಲ್ಲಿ ವ್ಯಾಸಂಗ ಮಾಡಿದ ಕೆನೆಡಿಯ ಬುದ್ಧಿಮತ್ತೆ ಆತನ ವಿದ್ಯಾಭ್ಯಾಸದ ಕೊನೆಯ ವರ್ಷಗಳಲ್ಲಿ ಹೆಚ್ಚು ಪ್ರಕಾಶಕ್ಕೆ ಬಂತು. ಈ ಕಾಲದಲ್ಲಿ ಆತ ಇತಿಹಾಸ ರಾಜಕಾರಣಗಳಲ್ಲಿ ಹೆಚ್ಚು ಆಸಕ್ತಿ ತಳೆದನಲ್ಲದೆ ದೇಶವಿದೇಶ ಸಂಚಾರ ಮಾಡಿ ಅನುಭವಗಳಿಸಿದ. ಎರಡನೆಯ ಮಹಾಯುದ್ಧದ ಆದಿಕಾಲದಲ್ಲಿ ಯುರೋಪು ಹಿಟ್ಲರನ ಆಕ್ರಮಣಕ್ಕೊಳಗಾಗುತ್ತಿದ್ದಾಗ ಈತ ಹಾರ್ವರ್ಡ್‌ನ ಪ್ರಗತಿಪರ ಇತಿಹಾಸಕಾರರ, ರಾಜ್ಯಶಾಸ್ತ್ರಜ್ಞರ ಪ್ರಭಾವಕ್ಕೊಳಗಾದ. ಜರ್ಮನಿ ಪ್ರಬಲವಾಗುತ್ತಿದ್ದಾಗಲೇ ಬ್ರಿಟನ್ ಏಕೆ ಎಚ್ಚತ್ತುಕೊಳ್ಳಲಿಲ್ಲವೆಂಬುದನ್ನು ವಿವರಿಸಿ ಹಾರ್ವರ್ಡಿನ ವ್ಯಾಸಂಗಕ್ರಮದ ಕೊನೆಯ ವರ್ಷದಲ್ಲಿ ಬರೆದ ಪ್ರೌಢಪ್ರಬಂಧ 1940ರಲ್ಲಿ ಬ್ರಿಟನ್–ಅಮೆರಿಕಗಳಲ್ಲಿ ಪ್ರಕಟವಾಗಿ ಜನಪ್ರಿಯತೆ ಗಳಿಸಿತು. ಕೆನೆಡಿ 1940ರಲ್ಲಿ ಹಾರ್ವರ್ಡ್ ವ್ಯಾಸಂಗ ಪೂರೈಸಿದ ಮೇಲೆ ಕ್ಯಾಲಿಫೋರ್ನಿಯದ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಕೆಲವು ತಿಂಗಳುಗಳ ಕಾಲ ಗ್ರಾಜುಯೇಟ್ ಸ್ಕೂಲ್ ಆಫ್ ಬಿಸಿನೆಸ್ ವಿದ್ಯಾರ್ಥಿಯಾಗಿದ್ದು ದಕ್ಷಿಣ ಅಮೆರಿಕದಲ್ಲಿ ಪ್ರವಾಸ ಮಾಡಿದ. 1941ರಲ್ಲಿ ಅಮೆರಿಕದ ನೌಕಾಪಡೆಯನ್ನು ಸೇರಿ ಮೋಟಾರ್ ಟಾರ್ಪೆಡೊ ದೋಣಿಯೊಂದರ ಕಮ್ಯಾಂಡರ್ ಆಗಿ, ಆಗ್ನೇಯ ಪೆಸಿಫಿಕಿನ ಸಾಲೊಮನ್ ದ್ವೀಪಗಳಲ್ಲಿ ಜಪಾನ್ ನೌಕಾಪಡೆಯ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿದ್ದ. 1943ರಲ್ಲಿ ಜಪಾನಿ ಡಿಸ್ಟ್ರಾಯರ್ ಒಂದು ಇವನ ದೋಣಿಯ ಮೇಲೆ ಏರಿ ಬಂದು ಅದನ್ನು ಮುಳುಗಿಸಿತು. ಕೆನೆಡಿಯೂ ಅವನ ಜೊತೆಗಾರರ ಪೈಕಿ ಸಾಯದೆ ಉಳಿದವರೂ ಸುಮಾರು ಮೂರು ಮೈಲಿಗಳ ದೂರ ಸಮುದ್ರದಲ್ಲಿ ಈಜಿ ದ್ವೀಪವೊಂದನ್ನು ಸೇರಿ ಬದುಕಿಕೊಂಡರು. ನೌಕಾ ಮತ್ತು ಸಮುದ್ರ ಪಡೆಯ ಪದಕವೂ ಪರ್ಪಲ್ ಹಾರ್ಟ್ ಪ್ರಶಸ್ತಿಯೂ ಕೆನಡಿಗೆ ಲಭ್ಯವಾದುವು. ಸಮರದಲ್ಲಿ ಗಾಯಗೊಂಡಿದ್ದುದಲ್ಲದೆ ಮಲೇರಿಯ ವ್ಯಾಧಿಗ್ರಸ್ತನಾಗಿದ್ದ ಕೆನೆಡಿಯನ್ನು ಸ್ವದೇಶಕ್ಕೆ ಕಳುಹಿಸಲಾಯಿತು.

1945ರಲ್ಲಿ ಕೆನೆಡಿಗೆ ನೌಕಾಪಡೆಯಿಂದ ಬಿಡುಗಡೆಯಾಯಿತು. ಮುಂದೇನು ಮಾಡಬೇಕೆಂಬುದು ನಿರ್ಧಾರವಾಗಿರಲಿಲ್ಲ. ಆತ ಪತ್ರಿಕೋದ್ಯಮದಲ್ಲಿ ಸ್ವಲ್ಪಕಾಲ ನಿರತನಾಗಿದ್ದ. ಅಣ್ಣ ಜೋಸೆಫ್ ಪಿ. ಕೆನೆಡಿ ರಾಜಕೀಯ ಪ್ರವೇಶ ಮಾಡಬೇಕೆಂಬುದು ಕುಟುಂಬದ ಹಿರಿಯರ ಮೊದಲಿನ ಉದ್ದೇಶವಾಗಿತ್ತು. ಆದರೆ ಆತ 1944ರಲ್ಲಿ ಯುದ್ಧದಲ್ಲಿ ಪ್ರಾಣ ಕಳೆದುಕೊಂಡ. ಅಣ್ಣನ ಸಾವಿನಿಂದಾದ ಆ ಅರಕೆಯನ್ನು ತುಂಬುವುದೂ ಜಾನ್ ಕೆನೆಡಿಯ ರಾಜಕೀಯ ಪ್ರವೇಶದ ಒಂದು ಉದ್ದೇಶವಾಗಿತ್ತು. ಅಂತೂ ಪೂರ್ವ ಬಾಸ್ಟನಿನ ಕ್ಷೇತ್ರದಲ್ಲಿ ಅವನು ರಾಜಕಾರಣದಲ್ಲಿ ಧುಮುಕಿದ. ಕೆನೆಡಿಯ ಹಿರಿಯರು ರಾಜಕೀಯದಲ್ಲಿ ಸಕ್ರಿಯವಾದ ಪಾತ್ರ ವಹಿಸುತ್ತಿದ್ದುದು ಅಲ್ಲಿಂದಲೇ. 1946ರಲ್ಲಿ ಆತ ಡೆಮೊಕ್ರಾಟಿಕ್ ಪಕ್ಷದಿಂದ ಕಾಂಗ್ರೆಸ್ಸಿಗೆ ಸ್ಪರ್ಧಿಸುವ ತೀರ್ಮಾನ ಮಾಡಿದ. ಹಾರ್ವರ್ಡ್ ಮತ್ತು ನೌಕಾ ಗೆಳೆಯರು ಇವನ ಹಿಂದೆ ನಿಂತು ಕೆಲಸ ಮಾಡಿದರು. ಪ್ರಾಥಮಿಕದಲ್ಲಿ ಭಾಗವಹಿಸಿ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು, 1947ರ ಜನವರಿಯಲ್ಲಿ ಪ್ರತಿನಿಧಿ ಸಭೆಯನ್ನು ಪ್ರವೇಶಿಸಿದ. ಆಗ ಅವನಿಗೆ ಇನ್ನೂ 29 ವರ್ಷ. ಅನ್ಯಸ್ವಾತಂತ್ರ್ಯ, ಕಾರ್ಮಿಕರ ಸಮಸ್ಯೆ, ಸಮಾಜ ಕಲ್ಯಾಣ, ಸಾಮಾಜಿಕ ರಕ್ಷಣೆ ಮುಂತಾದ ಕಾರ್ಯನೀತಿಗಳಿಗೆ ಕೆನೆಡಿ ಬೆಂಬಲ ನೀಡಿದ. ಇದರಿಂದ ಕೆನೆಡಿಯ ಜನಪ್ರಿಯತೆ ಹೆಚ್ಚಿತು. ಮತ್ತೆ ಎರಡು ಬಾರಿ–1948 ಮತ್ತು 1950ರಲ್ಲಿ–ಅವನು ಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಜಯ ಗಳಿಸಿದ. 1952ರಲ್ಲಿ ಸೆನೆಟಿಗೆ ಸ್ಪರ್ಧಿಸಿಯೂ ಗೆದ್ದ. 1953ರ ಸೆಪ್ಟೆಂಬರಿನಲ್ಲಿ ಕೆನೆಡಿಗೆ ಜಾಕ್ವಿಲೀನ್ ಲೀ ಬೌವಿಯೇರಳೊಂದಿಗೆ ವಿವಾಹವಾಯಿತು. ಯುದ್ಧ ಸಮಯದಲ್ಲಿ ಕೆನಡಿಯ ಬೆನ್ನುಮೂಳೆಗೆ ಆಗಿದ್ದ ಆಘಾತದಿಂದಾಗಿ ನೋವು ಅತಿಯಾಗಿ, 1954ರಲ್ಲಿ ಆತ ಆಸ್ಪತ್ರೆ ಹೋಗಬೇಕಾಯಿತು. ಅಲ್ಲಿ ಎರಡು ಬಾರಿ ಅಪಾಯಕಾರಿ ಶಸ್ತ್ರಕ್ರಿಯೆಗೆ ಒಳಗಾಗಿ ಮೃತ್ಯುಮುಖದಿಂದ ಪಾರಾದ. ಅನಂತರದ ಚೇತರಿಕೆಯ ಅವಧಿಯಲ್ಲಿ ಒಂದು ಪುಸ್ತಕ ರಚಿಸಿದ. ಅದರ ಹೆಸರು ಪ್ರೊಫೈಲ್ಸ್ ಇನ್ ಕರೇಜ್ (1956). ತಂತಮ್ಮ ಕ್ಷೇತ್ರಗಳಲ್ಲಿ ಜನಪ್ರಿಯವೆನಿಸದಿರುವ ನಿಲುವು ತಳೆದು ಅಸಾಧಾರಣ ಧೈರ್ಯ ಪ್ರದರ್ಶಿಸಿದ ರಾಜಕಾರಣಿಗಳ ಜೀವನಚಿತ್ರಗಳು ಅದರಲ್ಲಿವೆ. ಅಭ್ಯರ್ಥಿಗಳು ತಂತಮ್ಮ ಚುನಾವಣಾ ಕ್ಷೇತ್ರಗಳ ಹಿತಸಾಧನೆ ಮಾಡುವುದಷ್ಟೇ ಅಲ್ಲದೆ ರಾಷ್ಟ್ರಹಿತದೃಷ್ಟಿಯನ್ನೂ ಸಾಧಿಸಬೇಕೆಂದು ಮತದಾರರು ಬಯಸುವರೆಂದು ಕೆನೆಡಿ ಆ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾನೆ. ಆಪುಸ್ತಕಕ್ಕೆ 1957ರಲ್ಲಿ ಪುಲಿಟ್ಜರ್ ಬಹುಮಾನ ಬಂತು. 1956ರಲ್ಲಿ ಅವನು ರಾಷ್ಟ್ರದ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಪಕ್ಷದ ನಾಮಕರಣ ಪಡೆಯಲು ಯತ್ನಿಸಿ ಸ್ವಲ್ಪದರಲ್ಲಿ ವಿಫಲನಾದ. ಆದರೆ 1958ರಲ್ಲಿ ಸೆನೆಟಿಗೆ ನಡೆದ ಚುನಾವಣೆಯಲ್ಲಿ ಆತನಿಗೆ ಅಧಿಕ ಬಹುಮತ ಲಭ್ಯವಾಯಿತು. 1960ರಲ್ಲಿ ಅಧ್ಯಕ್ಷಸ್ಥಾನಕ್ಕೆ ಪಕ್ಷದ ನಾಮಕರಣ ಪಡೆಯಲು ಪ್ರಯತ್ನ ನಡೆಸಿ ಸಫಲನಾದ. ಚುನಾವಣೆಗೆ ಪೂರ್ವಭಾವಿಯಾಗಿ ದೀರ್ಘಕಾಲದ ಪ್ರಚಾರ, ಗೆಳೆಯರ ಸ್ನೇಹ ಸಾಧನೆ, ಜನಹಿತದೃಷ್ಟಿಯ ಪ್ರತಿಪಾದನೆ, ಔತಣಕೂಟ–ಮುಂತಾದ ವಿಧಾನಗಳನ್ನು ಅಚ್ಚುಕಟ್ಟಾಗಿ ಅನುಸರಿಸಿದ ಕೆನಡಿಯನ್ನು 1960ರಲ್ಲಿ ಲಾಸ್ ಆಂಜೆಲೆಸ್‌ನಲ್ಲಿ ಅಧ್ಯಕ್ಷಸ್ಥಾನಕ್ಕೆ ಡೆಮೊಕ್ರಾಟ್ ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಯಿತು. ಆ ವರ್ಷ ನವೆಂಬರ್ 8ರಂದು ನಡೆದ ಚುನಾವಣೆಯಲ್ಲಿ ಕೆನೆಡಿ ವಿಜಯಿಯಾದ. ಅವನ ಪ್ರತಿಸ್ಪರ್ಧಿ ರಿಪಬ್ಲಿಕನ್ ಪಕ್ಷದ ರಿಚರ್ಡ್ ಎಂ. ನಿಕ್ಸನ್.

1961ರ ಜನವರಿ 20ರಂದು ಅಧ್ಯಕ್ಷಾಧಿಕಾರ ಸ್ವೀಕಾರ ಮಾಡಿದ ಕೆನೆಡಿಯ ಪ್ರಾರಂಭ ಭಾಷಣ ಗಮನಾರ್ಹವಾದ್ದು. ಭೂಮಿಯ ಅರ್ಧಭಾಗದಲ್ಲಿ ಗುಡಿಸಲುಗಳಲ್ಲೂ ಹಳ್ಳಿಗಳಲ್ಲೂ ವಾಸಿಸುವ ಜನರಿಗೆ ನೆರವು ನೀಡುವುದಾಗಿ ಆತ ಪ್ರತಿಜ್ಞೆ ಮಾಡಿದ. ಕಮ್ಯೂನಿಸ್ಟ್ ರಾಷ್ಟ್ರಗಳೊಂದಿಗೆ ಸಂಧಾನ ಮಾಡಲು ಹೆದರಬಾರದು; ಆದರೆ ಹೆದರಿಕೆಯಿಂದ ಸಂಧಾನ ಮಾಡಬಾರದು–ಎಂದ. ನಿಮ್ಮ ದೇಶನಿಮಗೇನು ಮಾಡಬಲ್ಲುದೆಂದು ಕೇಳಬೇಡಿ. ನೀವು ನಿಮ್ಮ ದೇಶಕ್ಕಾಗಿ ಏನು ಮಾಡಬಲ್ಲಿರೆಂದು ಕೇಳಿಕೊಳ್ಳಿ ಎಂಬುದು ಕೆನೆಡಿಯ ಪ್ರಸಿದ್ಧ ವಾಕ್ಯ.

ಕೆನೆಡಿ ತನ್ನ ಸಂಪುಟಕ್ಕೂ ಇತರ ಸ್ಥಾನಗಳಿಗೂ ನೇಮಿಸಿಕೊಂಡ ವ್ಯಕ್ತಿಗಳು ದಕ್ಷರು, ನಿಷ್ಠಾವಂತರು. ಈ ನೇಮಕಗಳು ಅವನ ಕೀರ್ತಿಪ್ರತಿಷ್ಠೆ ಬೆಳೆಯಲು ಸಾಧಕವಾದುವು. ಅವನ ಚೇತನ ಅದ್ಭುತವಾದ್ದು, ಪತ್ನಿ ಕಲಾಪ್ರಿಯೆ. ಇದರಿಂದ ಅಧ್ಯಕ್ಷನ ಅಧಿಕೃತ ನಿವಾಸವಾದ ಶ್ವೇತಭವನ ಎಲ್ಲರ ಗಮನ ಸೆಳೆಯಿತು. ಅದೊಂದು ರಾಜಕೀಯ ಮಧುಚಂದ್ರದ ಕಾಲ. ಆ ಕಾಲದಲ್ಲಿ ಕೆನೆಡಿ ಅನೇಕ ವಿಶ್ವಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಶ್ರಮಿಸಿದ. ಆದರೆ ಬಲುಬೇಗ ಭ್ರಮನಿರಸನ ಅವನಿಗಾಗಿ ಕಾದಿತ್ತು. ಕ್ಯೂಬದಲ್ಲಿ ಅಧಿಕಾರ ಗಳಿಸಿದ್ದ ಫಿಡೆಲ್ ಕ್ಯಾಸ್ಟ್ರೋನನ್ನು ಕೆಳಗಿಳಿಸಲು ಪ್ರಯತ್ನಿಸುತ್ತಿದ್ದವರಿಗೆ ಬೆಂಬಲವಾಗಿ ಆಕ್ರಮಣಕಾರ್ಯ ನಡೆಸಬೇಕೆಂಬ ಕೆನೆಡಿಯ ಸೂಚನೆಗೆ ಕಾಂಗ್ರೆಸ್ ಒಪ್ಪಲಿಲ್ಲ. ಲಾವೋಸ್ ವಿಯೆಟ್ನಾಂಗಳಲ್ಲಿ ಕಮ್ಯೂನಿಸ್ಟ್ ಕಾರ್ಯಾಚರಣೆಯ ವಿರುದ್ಧ ಅಮೆರಿಕನ್ ಪಡೆಗಳು ಸತ್ವಹೀನವಾಗಿದ್ದುವು.

ಪಶ್ಚಿಮಬರ್ಲಿನಿಗೂ ಪೂರ್ವಬರ್ಲಿನಿಗೂ ಸಂಪರ್ಕವನ್ನು ಕಡಿದುಹಾಕಲು ಪೂರ್ವಜರ್ಮನ್ ಸರ್ಕಾರ ಅವೆರಡು ಭಾಗಗಳ ನಡುವೆ ಗೋಡೆ ಎಬ್ಬಿಸಿತು. ಈ ಪ್ರತಿಕೂಲ ಪರಿಸ್ಥಿತಿಯಲ್ಲೂ ಕೆನೆಡಿ ಕೆಲವು ದೃಢ ಕ್ರಮಗಳನ್ನು ಕೈಗೊಂಡ. ಲ್ಯಾಟಿನ್ ಅಮೆರಿಕದ ಆರ್ಥಿಕ ಬೆಳವಣಿಗೆ, ಅಭಿವೃದ್ಧಿ ಹೊಂದದ ರಾಷ್ಟ್ರಗಳಿಗೆ ಆರ್ಥಿಕ ಸಹಾಯ, ಸಶಸ್ತ್ರ ಪಡೆಗಳಿಗೆ ಹೆಚ್ಚಿನ ಸ್ವಾತಂತ್ರ್ಯದಾನ, ಅಂತಾರಾಷ್ಟ್ರೀಯ ವ್ಯಾಪಾರ ಕುದುರಿಸಲು ಸುಂಕದ ಇಳಿತಾಯ–ಇವು ಕೆಲವು ಉದಾಹರಣೆಗಳು.

ಆಂತರಿಕವಾಗಿಯೂ ಕೆನೆಡಿ ಅನೇಕ ಕ್ರಮಗಳನ್ನು ಕೈಕೊಂಡ. ದೇಶದ ಆರ್ಥಿಕ ಹಿಂಜರಿತವನ್ನು ತಡೆಯಲು 1961ರಲ್ಲಿ ಅನೇಕ ದೃಢಕ್ರಮಗಳು ಜಾರಿಗೆ ಬಂದುವು. ಆದರೆ 1962ರಲ್ಲಿ ಇವು ಸತ್ತ್ವಹೀನವಾದುವು. 1962ರಲ್ಲಿ ಉಕ್ಕಿನ ಬೆಲೆಗಳು ಏರದಂತೆ ಅಧ್ಯಕ್ಷಾಧಿಕಾರ ಚಲಾಯಿಸಿದ್ದು ಇನ್ನೊಂದು ದೃಢಕ್ರಮ, ವಸತಿ ನಿರ್ಮಾಣ, ಕನಿಷ್ಠ ಕೂಲಿ ಏರಿಕೆ, ಕಲ್ಯಾಣ ಕಾರ್ಯಕ್ರಮಗಳ ವಿಸ್ತರಣ–ಇವುಗಳಿಗಾಗಿ ತಂದ ಸೂಚನೆಗಳಿಗೆ ಕಾಂಗ್ರೆಸಿನ ಒಪ್ಪಿಗೆ ದೊರಕಿತು. ಶಿಕ್ಷಣಕ್ಕೆ ನೆರವು, ತೆರಿಗೆ ಸುಧಾರಣೆ, ವೃದ್ಧರಿಗೆ ವೈದ್ಯಕೀಯ ಸೌಲಭ್ಯ ನೀಡಿಕೆ, ಹೊಸ ಕೃಷಿ ನೀತಿ, ನಗರ ವಿಚಾರಗಳಿಗಾಗಿ ಸಂಪುಟಮಟ್ಟದ ಇಲಾಖೆಯ ರಚನೆ, ಖಜಾನೆಯಿಂದ ಸಾಲ ಪಡೆದು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ದೀರ್ಘಕಾಲಿಕ ಆರ್ಥಿಕ ನೆರವು ನೀಡಿಕೆ–ಈ ಕ್ರಮಗಳಿಗೆ ಕಾಂಗ್ರೆಸಿನ ಒಪ್ಪಿಗೆ ದೊರಕಲಿಲ್ಲ. ಕಾಂಗ್ರೆಸಿನ ಡೆಮೊಕ್ರಾಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳಲ್ಲಿದ್ದ ಸಂಪ್ರದಾಯಶರಣರೆಲ್ಲ ಒಂದಾಗಿ ಕೆನೆಡಿಯ ಪ್ರಗತಿಪರ ಕ್ರಮಗಳನ್ನೆಲ್ಲ ವಿರೋಧಿಸುತ್ತಿದ್ದರು. ಅವರನ್ನು ಬಯಲಿಗೆಳೆದು ಧೈರ್ಯವಾಗಿ ಮುನ್ನಡೆಯಬೇಕೆಂಬುದು ಕೆಲವರ ಸಲಹೆಯಾಗಿತ್ತು. ಆದರೆ ಅವರನ್ನು ಕ್ರಮಕ್ರಮವಾಗಿ ಒಲಿಸಿಕೊಳ್ಳಬೇಕೆಂಬುದು ಕೆನೆಡಿಯ ನೀತಿಯಾಗಿತ್ತು.

ಕೆನೆಡಿಯ ಅಧ್ಯಕ್ಷಾಧಿಕಾರದ ಶಿಖರಸದೃಶ ಘಟನೆಯೆಂದರೆ ಕ್ಯೂಬದ ಬಿಕ್ಕಟ್ಟು. ಸೋವಿಯೆತ್ ದೇಶ ಕ್ಯೂಬದಲ್ಲಿ ದೂರಗಾಮಿ ಕ್ಷಿಪಣಿಗಳನ್ನು ಸ್ಥಾಪಿಸುತ್ತಿದೆಯೆಂಬ ಸುದ್ದಿ ತಿಳಿದ ಕೆನೆಡಿ ಆ ದ್ವೀಪಕ್ಕೆ ದಿಗ್ಬಂಧನ ವಿಧಿಸಿದ. ಇವನ್ನೆಲ್ಲ ಕೂಡಲೇ ಕಿತ್ತು ಸಾಗಿಸಬೇಕೆಂದು ಸೋವಿಯೆತ್ ದೇಶಕ್ಕೂ ಕ್ಯೂಬಕ್ಕೂ ಎಚ್ಚರಿಕೆ ನೀಡಿದ. ಸ್ವಲ್ಪಕಾಲ ಪರಿಸ್ಥಿತಿ ಆತಂಕಕಾರಿಯಾಗಿತ್ತು. ಕ್ಯೂಬದತ್ತ ಸಾಗಿ ಬರುತ್ತಿದ್ದ ಶಸ್ತ್ರ ತುಂಬಿದ ಹಡಗುಗಳು ಹಿಂದಿರುಗಿದುವು. ಕ್ಯೂಬದಲ್ಲಿ ಸ್ಥಾಪಿಸಲಾಗಿದ್ದ ಕ್ಷಿಪಣಿಗಳನ್ನೂ ಸೋವಿಯೆತ್ ದೇಶ ಹಿಂತೆಗೆದುಕೊಂಡಿತು.

1963ರ ನವೆಂಬರಿನಲ್ಲಿ ಕೆನೆಡಿ ಟೆಕ್ಸಾಸಿನಲ್ಲಿ ಭಾಷಣಪ್ರವಾಸ ಕೈಗೊಂಡಿದ್ದ. ನವೆಂಬರ್ 22ರಂದು ಡ್ಯಾಲಸಿನ ವಿಮಾನ ನಿಲ್ದಾಣದಲ್ಲಿ ಬಂದಿಳಿದು ಅಲ್ಲಿಂದ ಮೋಟಾರಿನಲ್ಲಿ ಪರಿವಾರದೊಡನೆ ಸಾಗುತ್ತಿದ್ದಾಗ ಹಂತಕನೊಬ್ಬ ಮೂರು ಗುಂಡು ಹಾರಿಸಿದ. ಎರಡು ಗುಂಡುಗಳು ಕೆನಡಿಯನ್ನು ತಾಕಿ ಅವನು ಮೃತಪಟ್ಟ. ಲೀ ಹಾರ್ವೆ ಆಸ್ವಾಲ್ಡ್ ಕೊಲೆಗಡುಕನೆಂದು ಆರೋಪಿಸಿ ಪೋಲೀಸರು ಅವನನ್ನು ಬಂಧಿಸಿದರು. ನವೆಂಬರ್ 24ರಂದು ಆಸ್ವಾಲ್ಡನನ್ನು ಡ್ಯಾಲಸ್ ಕೌಂಟಿ ಜೈಲಿಗೆ ಸಾಗಿಸುತ್ತಿದ್ದಾಗ ಅವನನ್ನು ಜಾಕ್ ರೂಬಿ ಗುಂಡಿಕ್ಕಿ ಕೊಂದ.

ಕೆನೆಡಿಯ ಕೊಲೆಗೆ ಸಂಬಂಧಿಸಿದ ವಿಚಾರಗಳ ತನಿಖೆ ಮಾಡಲು ಅಮೆರಿಕದ ಪರಮೋಚ್ಚ ನ್ಯಾಯಮೂರ್ತಿ ಅರ್ಲ್‌ವಾರೆನ್ ಅಧ್ಯಕ್ಷತೆಯಲ್ಲಿ ಒಂದು ಆಯೋಗ ನೇಮಕವಾಗಿತ್ತು. ಕೆನೆಡಿಯ ಸಾವಿಗೆ ಕಾರಣವಾದ ಗುಂಡುಗಳನ್ನು ಹಾರಿಸಿದವರು ಲೀ ಹಾರ್ವೆ ಆಸ್ವಾಲ್ಡನೆಂದೂ ಕೊಲೆಯ ಸ್ಥಳದ ಬಳಿಯಲ್ಲಿರುವ ಟೆಕ್ಸಾಸ್ ಸ್ಕೂಲ್ ಬುಕ್ ಡಿಪಾಸಿಟರಿ ಸಂಸ್ಥೆಯ ಕಟ್ಟಡದ ಆರನೆಯ ಮಹಡಿಯ ಕಿಟಕಿಯಿಂದ ಆತ ಪಿಸ್ತೂಲಿನಿಂದ ಗುಂಡು ಹಾರಿಸಿದನೆಂದೂ ಈ ಕೊಲೆಗಾಗಿ ಸಂಚು ನಡೆದಿತ್ತೆಂಬುದಕ್ಕೆ ಸಾಕ್ಷಿ ದೊರಕಿಲ್ಲವೆಂದೂ ಆ ನಿಯೋಗ ವರದಿ ಮಾಡಿತು. (ಎಂ.ಬಿ.ಆರ್.ಯು.)

**ಕೆನೆತ್ ಜೋಸೆಫ್ ಆರೋ:** 1921–. ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ. 1921ರಲ್ಲಿ ಅಮೆರಿಕದ ನ್ಯೂಯಾರ್ಕ್ ಪಟ್ಟಣದಲ್ಲಿ ಜನಿಸಿದ. ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ನೊಬೆಲ್ ಪ್ರಶಸ್ತಿ ಗಳಿಸಿದ ಹಿರಿಮೆ ಇವನದಾಗಿದೆ (1972).

ಕೆನೆತ್ ಟೌನ್‌ಸೆಂಡ್ ಹ್ಯಾರಿಸ್ ಹೈಸ್ಕೂಲ್ ಮತ್ತು ಸಿಟಿ ಕಾಲೇಜ್ ನ್ಯೂಯಾರ್ಕ್‌ನಲ್ಲಿ ವಿದ್ಯಾಭ್ಯಾಸ ಮಾಡಿ ಅಲ್ಲಿಯೇ ಸಿಗ್ಮ ಫಿ ಎಪ್‌ಸಿಲನ್‌ನಲ್ಲಿ ಸದಸ್ಯನಾಗಿದ್ದ. 1941ರಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ. 1946ರಿಂದ 49ರ ತನಕ ಸಂಶೋಧನ ಸಹಾಯಕನಾಗಿ, ಸಹಾಯಕ ಪ್ರಾಧ್ಯಾಪಕನಾಗಿ ಕೆಲಸ ನಿರ್ವಹಿಸಿದ. 1951ರಲ್ಲಿ ಪಿಎಚ್.ಡಿ. ಪದವಿ ಪಡೆದ.

ಇವನ ಕುಟುಂಬದ ಕೆಲವು ಸದಸ್ಯರೂ ಕೂಡ ಅರ್ಥಶಾಸ್ತ್ರಜ್ಞರೇ ಆಗಿದ್ದಾರೆ. ಪತ್ನಿ ಸೆಲ್ಮ ಹಾಗೂ ಇಬ್ಬರು ಮಕ್ಕಳನ್ನು ಹೊಂದಿದ್ದಾನೆ.

ಇವನು ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದಲ್ಲಿ ಎಮೆರಿಟಸ್ ಪ್ರಾಧ್ಯಾಪಕನಾಗಿ ಮತ್ತು ಆಪರೇಷನ್ ಸಂಶೋಧನೆಯಲ್ಲಿ ಪ್ರಾಧ್ಯಾಪಕನಾಗಿದ್ದಾನೆ. ಅಲ್ಲದೆ ಪೊಂಟಿಫಿಕಲ್ ಅಕಾಡೆಮಿ ಆಫ್ ಸೋಷಿಯಲ್ ಸೈನ್ಸ್‌ನ ಸಂಸ್ಥಾಪಕ ಸದಸ್ಯನಾಗಿದ್ದಾನೆ. ಜೊತೆಗೆ ಶಾಂತಿ ಮತ್ತು ಸಂರಕ್ಷಣೆಗಾಗಿ ಅರ್ಥಶಾಸ್ತ್ರಜ್ಞರ ಸಂಸ್ಥೆಯ ಟ್ರಸ್ಟೀ ಕೂಡ ಆಗಿದ್ದಾನೆ.

ಹಲವಾರು ಅರ್ಥಶಾಸ್ತ್ರಜ್ಞರ ಮೇಲೆ ಇವನು ಪ್ರಭಾವ ಬೀರಿದ್ದಾನೆ. ಇವನಿಂದ ಪ್ರಭಾವಿತರಾದ ಅಮರ್ತ್ಯಸೇನ್, ಅಲಾನ್ ಗಿಬರ್ಡ್, ಜಾನ್ ಸಿ ಹರಸ್ನಾಯಿ, ಮೈಕೆಲ್ ಸ್ಪೆನ್ಸ್ ಮೊದಲಾದವರು ಐವರು ಇವನ ವಿದ್ಯಾರ್ಥಿಗಳು ನೊಬೆಲ್ ಪಾರಿತೋಷಕ ವಿಜೇತರು.

ಪ್ರಪಂಚದ ಎರಡನೆಯ ಮಹಾಯುದ್ಧದ ಅನಂತರ ರೂಪಿತವಾದ ನಿಯೊ–ಕ್ಲಾಸಿಕಲ್ ಎಕಾನಾಮಿಕ್ ಥಿಯರಿಯಿಂದ ಪ್ರಸಿದ್ಧಿ ಪಡೆದ. ಇವನ ಸಾಮಾಜಿಕ ಆಯ್ಕೆ ಸಿದ್ಧಾಂತ (ಸೋಷಿಯಲ್ ಚಾಯ್ಸ್ ಥಿಯರಿ) ಅದರಲ್ಲೂ ವಿಶೇಷವಾಗಿ ಆರೋಸ್ ಇಕ್ವಿಲಿಬ್ರಿಯಂ ಥಿಯೋರಂ ಮತ್ತು ಜನರಲ್ ಈಕ್ವಿಲಿಬ್ರಿಯಂ ಅನಾಲಿಸಿಸ್ ಎಂಬ ಸಿದ್ಧಾಂತಗಳು ಅರ್ಥಶಾಸ್ತ್ರ ಕ್ಷೇತ್ರಕ್ಕೆ ಬಹುಮುಖ್ಯ ಕೊಡುಗೆಗಳಾಗಿವೆ.

ನೊಬೆಲ್ ಬಹುಮಾನದೊಂದಿಗೆ ಇವನಿಗೆ ದೊರೆತಿರುವ ಇತರ ಪ್ರಮುಖ ಗೌರವಗಳು ಮತ್ತು ಪ್ರಶಸ್ತಿಗಳೆಂದರೆ: ಇವನು ಆರೊ ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಆ್ಯಂಡ್ ಸೈನ್ಸ್‌ನ 'ಫೆಲೊ' ಆಗಿ 1959ರಲ್ಲಿ ಆಯ್ಕೆಯಾದ. ರಾಷ್ಟ್ರದ ಅತ್ಯುನ್ನತ ವೈಜ್ಞಾನಿಕ ಗೌರವವಾದ ನ್ಯಾಷನಲ್ ಮೆಡಲ್ ಆಫ್ ಸೈನ್ಸ್ ಪ್ರಶಸ್ತಿ 2004ರಲ್ಲಿ ಇವನಿಗೆ ಲಭಿಸಿದೆ. (ಸಿ.ಎಸ್.ಪಿ.)

**ಕೆನೆತ್, ಡಿ. ವಿಲ್ಸನ್ :** 1936–. ನೊಬೆಲ್‌ಪ್ರಶಸ್ತಿ ಪುರಸ್ಕೃತ ಭೌತವಿಜ್ಞಾನಿ. ಮೆಸ್ಸಾಚುಸೆಟ್ಸ್‌ನ ವಾಲ್‌ಥಮ್‌ನಲ್ಲಿ 1936ರಲ್ಲಿ ಜನಿಸಿದ. ಇವನ ತಂದೆ ಇ ಬ್ರೈಟ್ ವಿಲ್ಸನ್ ಜೂನಿಯರ್. ಹಾರ್ವರ್ಡ್ ವಿಶ್ವವಿದ್ಯಾಲಯದ ರಸಾಯನವಿಜ್ಞಾನ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ತಾಯಿ ಎಮಿಲಿ ಬಕಿಂಗ್‌ಹ್ಯಾಮ್. ವಿಲ್ಸನ್ ಭೌತವಿಜ್ಞಾನದಲ್ಲಿ ನಿರೂಪಿಸಿದ 'ಥಿಯರಿ ಫಾರ್ ಕ್ರಿಟಿಕಲ್ ಫೆನೊಮೆನನ್ ಕನೆಕ್ಷನ್ ವಿತ್ ಫೇಸ್ ಟ್ರಾನ್ಸಿಷನ್' ಎಂಬ ಸಿದ್ಧಾಂತಕ್ಕೆ ನೊಬೆಲ್ ಪ್ರಶಸ್ತಿ ಲಭಿಸಿದೆ.

ವಿಲ್ಸನ್‌ನ ವಿದ್ಯಾಭ್ಯಾಸ ವೆಲ್ಲೆಸ್ಲಿ, ಕೇಂಬ್ರಿಡ್ಜ್, ಆಕ್ಸ್‌ಫಡ್, ಪೆನ್ಸಿಲ್‌ವೇನಿಯಾಗಳಲ್ಲಿ ನಡೆಯಿತು. ವಿದ್ಯಾಭ್ಯಾಸದಲ್ಲಿ ಗಣಿತವಿಜ್ಞಾನವನ್ನು ಪ್ರಮುಖ ವಿಷಯವಾಗಿ ಆರಿಸಿಕೊಂಡರೂ ಭೌತವಿಜ್ಞಾನವನ್ನು ಅಭ್ಯಸಿಸಿದ. ಕ್ಯಾಲಿಫೋರ್ನಿಯಾದ ತಾಂತ್ರಿಕ ಸಂಸ್ಥೆಯಲ್ಲಿ ಇವನ ಪದವಿ ವ್ಯಾಸಂಗ ನಡೆಯಿತು. ಅನಂತರ ಎರಡು ವರ್ಷಗಳು ಕೆಲ್ಲಾಗ್ ಲ್ಯಾಬೋರೇಟರಿಯ ನ್ಯೂಕ್ಲಿಯರ್ ಫಿಸಿಕ್ಸ್ ಪ್ರಯೋಗದಲ್ಲಿ ತೊಡಗಿದ. ಮುರ್ರೆ ಜೆಲ್‌ಮನ್ ಇವನ ಸಂಶೋಧನಕಾರ್ಯಕ್ಕೆ ಮಾರ್ಗದರ್ಶಕರಾಗಿದ್ದರು. 1963ರಲ್ಲಿ ಕಾರ್ನಲ್‌ನಲ್ಲಿ ಸಹಪ್ರಾಧ್ಯಾಪಕನಾಗಿ, 1971ರಲ್ಲಿ ಪೂರ್ಣಪ್ರಮಾಣದ ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸಿದ. 1986ರಲ್ಲಿ ಅಲಿಸನ್ ಬ್ರೌನ್‌ಳನ್ನು ಮದುವೆಯಾದ. ಅನಂತರದಲ್ಲಿ ವ್ಯೂಹಗಣಕಯಂತ್ರ ಸಂಸ್ಕಾರಕದ ಚಲನಾಂಕ ಪದ್ಧತಿಯಾಧಾರಿತ ಕಂಪ್ಯೂಟರ್ ಸಹಾಯಕ ಯೋಜನೆಯನ್ನು ಕೈಗೊಂಡ.

ವಿಲ್ಸನ್ 1985ರಲ್ಲಿ ನ್ಯಾಷನಲ್ ಸೈನ್ಸ್ ಫೌಂಡೇಶನ್ ಪ್ರಾರಂಭಿಸಿದ ಐದು ರಾಷ್ಟ್ರೀಯ ಸೂಪರ್ ಕಂಪ್ಯೂಟರ್ ಕೇಂದ್ರಗಳಲ್ಲಿ ಒಂದಾದ ಕಾರ್ನಲ್ ಥಿಯರಿ ಸೆಂಟರ್‌ನ ಅಧ್ಯಕ್ಷನಾದ. ಓಹಿಯೊ ವಿಶ್ವವಿದ್ಯಾಲಯದ ಭೌತವಿಜ್ಞಾನ ವಿಭಾಗದಲ್ಲಿಯ ಓಹಿಯೊ ಪ್ರಾಜೆಕ್ಟ್ ಡಿಸ್ಕವರಿಯ ಸಂಶೋಧನ ಸಹಪ್ರಾಚಾರ್ಯನಾದ. 1975ರಲ್ಲಿ ನ್ಯಾಷನಲ್ ಸೈನ್ಸ್ ಅಕಾಡೆಮಿಗೆ, 1975ರಲ್ಲಿಯೇ ಅಮೆರಿಕದ ಆರ್ಟ್ ಅಂಡ್ ಸೈನ್ಸ್ ಅಕಾಡೆಮಿಗೆ ಮತ್ತು 1984ರಲ್ಲಿ ಅಮೆರಿಕದ ಫಿಲೋಸಾಫಿಕಲ್ ಸೊಸೈಟಿಗೆ ಆಯ್ಕೆಯಾದ. (ಸಿ.ಎಸ್.ಪಿ.)

**ಕೆನ್ಜ಼ಬುರೊ ಓಯಿ:** 1935–. ನೊಬೆಲ್ ಪ್ರಶಸ್ತಿ ಪುರಸ್ಕೃತ ಜಪಾನಿ ಕಾದಂಬರಿಕಾರ ಹಾಗೂ ಕಥೆಗಾರ. ಈತ ಜಪಾನಿನ ಯುಚಿಕೊದಲ್ಲಿ ಜನಿಸಿದ. ಜಪಾನಿನ ನಾಲ್ಕು ಪ್ರಮುಖ ದ್ವೀಪಗಳಲ್ಲಿ ಒಂದಾದ ಶಿಕೊಕೊ ಕಾಡಿನ ಹತ್ತಿರದ ಗ್ರಾಮದಲ್ಲಿ ಇವನ ಪೋಷಕರು ನೆಲೆಸಿದ್ದು ಗ್ರಾಮವನ್ನು ಬಿಟ್ಟು ಹೊರಹೋಗಿರಲಿಲ್ಲ. ಎರಡನೆಯ ಮಹಾಯುದ್ಧದ ಅನಂತರ ಜಪಾನಿನಲ್ಲಿ ಪ್ರಜಾಪ್ರಭುತ್ವದ ಕಡೆಗೆ ಒಲವು ಬೆಳೆಯಿತು. ಅದು ಓಯಿಯ ಮೇಲೂ ಪ್ರಭಾವ ಬೀರಿ, ಇವನು ಟೋಕಿಯೋಗೆ ಬರುವಂತಾಯಿತು. ಟೋಕಿಯೊ ವಿಶ್ವವಿದ್ಯಾಲಯದಲ್ಲಿ ಪದವಿ ಗಳಿಸಿ ಸಾಹಿತ್ಯಕೃಷಿಯಲ್ಲಿ ತೊಡಗಿದ. ಅನೇಕ ಕಥೆ, ಕಾದಂಬರಿ, ಪ್ರಬಂಧಗಳನ್ನು ರಚಿಸಿದ. ಇವನ ಬರೆವಣಿಗೆಗಳಲ್ಲಿ ಕಾವ್ಯಾತ್ಮಕ ಗುಣವೂ ಕಾಲ್ಪನಿಕ ಕಥೆಗಳಲ್ಲಿ ಕಾಲ್ಪನಿಕ ಪ್ರಪಂಚ ಸೃಷ್ಟಿಸುವ ಕ್ರಿಯಾಶೀಲತೆ ಹಾಗೂ ಮನುಷ್ಯನ ಇಂದಿನ ತೊಳಲಾಟದ ಬಗೆಗಿನ ನಿರ್ಲಕ್ಷ್ಯದ ಖಂಡನೆಗಳೂ ಇವೆ. ಇಂಥ ಅಂಶಗಳಿಂದ ಕೂಡಿದ ಇವನ ಕೃತಿಗಳಿಗೆ ನೊಬೆಲ್ ಪ್ರಶಸ್ತಿ ಲಭಿಸಿತು (1994).

ಇವನ ತಾಯಿ ಇವನಿಗೆ ನೀಡಿದ 'ದಿ ಅಡ್ವೆಂಚರ್ಸ್ ಆಫ್ ಹಕಲ್‌ಬರಿಫಿನ್' ಮತ್ತು 'ದಿ ಸ್ಟ್ರೇಂಜ್ ಅಡ್ವೆಂಚರ್ಸ್ ಆಫ್ ನಿಲ್ಸ್ ಹೋಲ್ಗೆರ್‌ಸನ್' ಎಂಬ ಪುಸ್ತಕಗಳು ಇವನ ಮೇಲೆ ಗಾಢ ಪ್ರಭಾವ ಬೀರಿವೆ. ಅಲ್ಲದೆ ರಾಬೆಲ್ಲಾಸ್ ಮತ್ತು ಮಿಖೈಲ್ ಬಕ್ತಿನ್‌ನ ಚಿಂತನೆಗಳ ಪ್ರಭಾವದಿಂದ ಇವನ ಕೃತಿಗಳಲ್ಲಿ ಧನಾತ್ಮಕ ಚಿಂತನೆಗಳು ಮೂಡಿಬಂದಿವೆ.

ಇವನ ಸಣ್ಣಕಥೆಗಳಲ್ಲಿ 'ದಿ ಕ್ಯಾಚ್ ಅಕ್ವಾತಗವ' ಎಂಬುದಕ್ಕೆ ಪ್ರಶಸ್ತಿ ಲಭಿಸಿದೆ. 'ಬಡ್–ನಿಪ್ಪಿಂಗ್' ಎಂಬುದು ಇವನ ಪ್ರಥಮ ಕಾದಂಬರಿ. ಲ್ಯಾವಿಷ್ ಆರ್ ದಿ ಡೆಡ್ (1957), ಲ್ಯಾಂಬ್ ಶೂಟಿಂಗ್ (1958) ಮತ್ತು ದಿ ಯೂತ್ ಹೂ ಕೇಮ್ ಲೇಟ್ (1961) – ಈ ಕಾದಂಬರಿಗಳಲ್ಲಿ ಟೋಕಿಯೊದಲ್ಲಿ ಕಳೆದ ತನ್ನ ವಿದ್ಯಾರ್ಥಿ ಜೀವನವನ್ನು

ಚಿತ್ರಿಸಿದ್ದಾನೆ. ಈ ಕೃತಿಗಳಲ್ಲಿ ಜೀನ್‌ಪಾಲ್ ಸಾರ್ತ್ರೆ ಹಾಗೂ ಇತರ ಆಧುನಿಕ ಫ್ರೆಂಚ್ ಬರೆಹಗಾರರ ಪ್ರಭಾವವಿರುವುದನ್ನು ಗುರುತಿಸಬಹುದು. 'ಎ ಪರ್ಸನಲ್ ಮ್ಯಾಟರ್' ಎಂಬ ಕೃತಿಯಲ್ಲಿ ಮಿದುಳು ತೊಂದರೆಗೆ ಒಳಗಾದ ಮಗುವಿನ ಪೋಷಕರ ನೋವಿನ ಜೀವನಚಿತ್ರಣವಿದೆ. 'ಹಿರೋಷಿಮ ನೋಟ್ಸ್' (1965) ಎಂಬ ಕೃತಿಯಲ್ಲಿ ಬಾಂಬ್ ದಾಳಿಗೆ ಗುರಿಯಾದವರ ಬದುಕಿನ ವಿವರಗಳಿವೆ. 'ದಿ ಸೈಲೆಂಟ್ ಕ್ರೈ' (1967), 'ಟೀಚ್ ಅಸ್ ಟು ಔಟ್ ಗ್ರೋ ಅವರ್ ಮ್ಯಾಡ್‌ನೆಸ್' (1969) – ಈ ಕೃತಿಗಳು ಎರಡು ಸಂಪುಟಗಳಾಗಿ ಹೊರಬಂದಿವೆ. ಲೆಟರ್ಸ್ ಟು ಮೈ ಸ್ವೀಟ್ ಬೈಗಾನ್ ಇಯರ್ಸ್ (1987), ಎಂ/ಟಿ ಮತ್ತು ದಿ ವಂಡರ್ಸ್ ಆಫ್ ದಿ ಫಾರೆಸ್ಟ್ (1986) ಎಂಬ ಕೃತಿಗಳು ಓದುಗರ ಮೆಚ್ಚುಗೆ ಪಡೆದಿವೆ. ಡಬ್ಲ್ಯು.ಬಿ. ಯೇಟ್ಸ್‌ನ ಕಾವ್ಯರೂಪಕಗಳೊಂದಿಗೆ 'ದಿ ಫ್ಲೇಮಿಂಗ್ ಗ್ರೀನ್ ಟ್ರೆ' ಕೃತಿ ಬರೆದ. ಈತ ತನ್ನ ಕಾದಂಬರಿತ್ರಯಗಳಾದ 'ಸೇವಿಯರ್ ಗೆಟ್ಸ್ ಸೋಕ್ಡ್' (1993), ವ್ಯಾಸಿಲ್ಲೇಟಿಂಗ್ (1994), ಆನ್ ದಿ ಗ್ರೇಟ್ ಡೇ (1994) ಈ ರಚನೆಗಳ ಮೂಲಕ ಸಾಹಿತ್ಯಕ್ಕೆ ಹೊಸ ಆಯಾಮ ನೀಡುವ ಪ್ರಯತ್ನ ಮಾಡಿದ.

(ಸಿ.ಎಸ್.ಪಿ.)

**ಕೆನ್ನೀಲಿಕೆ [1] :** ಚರ್ಮದ ಕೆಳಗೆ ದೊಡ್ಡ ಅಥವಾ ಚಿಕ್ಕ ರಕ್ತಸ್ರಾವಗಳ ದದ್ದುಗಳಾಗುವ ಜಾಡ್ಯ (ಪರ್ಪ್ಯುರ). ಈ ರೀತಿ ರಕ್ತಸ್ರಾವಗಳು ಒಳಮಾಂಸ ವಿಶೇಷಗಳಲ್ಲೂ ಒಳಾವಕಾಶಗಳಲ್ಲೂ ಆಗಬಹುದು. ಗಡ್ಡೆ ಕಟ್ಟುವ ಸ್ವಭಾವವನ್ನು ರಕ್ತ ಕಳೆದುಕೊಂಡು ರಕ್ತಸ್ರಾವ ಸುಲಭವಾಗಿ ಆಗುವುದು ಅಥವಾ ನಿಲ್ಲದಿರುವುದರಿಂದ ಹೀಗಾಗುತ್ತದೆ. ಇದರ ಮುಖ್ಯ ಕಾರಣಗಳು ಐದು: (1) ಸಣ್ಣ ಶುದ್ಧ ರಕ್ತನಾಳಗಳ ಭಿತ್ತಿ ಶಿಥಿಲಗೊಳ್ಳುವುದು (ರಕ್ತನಾಳ ಕೆನ್ನೀಲಿಕೆ). ವಿಟಮಿನ್ ಸಿ ಕೊರತೆಯಿಂದ ತಲೆದೋರುವ ಸ್ಕರ್ವಿ ಎಂಬ ರೋಗ, ಕ್ರಿಮಿರೋಗ, ವೈರಸ್ ರೋಗ, ಒಗ್ಗದಿಕೆಯ ಪ್ರತಿಕ್ರಿಯೆ ಇವೇ ಮುಂತಾದವುಗಳಲ್ಲಿ ರಕ್ತನಾಳಗಳು ಶಿಥಿಲಗೊಳ್ಳುತ್ತವೆ. ಅವು ಸಮರ್ಪಕವಾಗಿದ್ದಂತೆ ಕಂಡರೂ ಗಾಯವಾದಾಗ ಸಂಕೋಚವಾಗದೆ ರಕ್ತ ಸೋರುವ ವಂಶಪಾರಂಪರ್ಯರೋಗವಾದ ಹುಸಿ ಹೀಮೊಫಿಲಿಯದಿಂದ ಕೆನ್ನೀಲಿಕೆ ಉಂಟಾಗುತ್ತದೆ. (2) ರಕ್ತ ಗಡ್ಡೆಕಟ್ಟಲು ಬೇಕಾಗುವ ರಾಸಾಯನಿಕ ವಸ್ತುಗಳು ಮತ್ತು ರಕ್ತನಾಳಗಳಲ್ಲಿ ತಲೆದೋರಬಹುದಾದ ತೂತುಗಳನ್ನು ಮುಚ್ಚಲು ಬೇಕಾದ ಕಿರಿಬಿಲ್ಲೆಗಳು ಇವುಗಳಿಗೆ ಪ್ಲೇಟ್‌ಲೆಟ್ ಎಂದು ಹೆಸರು. ಇದರ ನ್ಯೂನತೆ ಒಂದು ಕಾಯಿಲೆ, ಥ್ರಾಂಬೊಸೈಟೊಪಿನಿಯ ಎಂದು ಅದರ ಹೆಸರು. ಇದಕ್ಕೆ ಕಾರಣಗಳು (i) ಲ್ಯೂಕೀಮಿಯ ರೋಗ. ಕೆಲವು ಮದ್ದುಗಳಿಂದ ಅಥವಾ ಎಕ್ಸ್‌ಕಿರಣಗಳಿಂದ ಎಲುಬಿನ ಮಜ್ಜೆಯಲ್ಲಿರುವ ಮೆಗಕ್ಯಾರಿಯೊಸೈಟ್ಸ್ ಎಂಬ ಅತಿದೊಡ್ಡ ಕಣಗಳ ನಾಶ ಅಥವಾ ಉತ್ಪತ್ತಿಯಾಗದಿರುವಿಕೆ. (ii) ಗುಲ್ಮ ಅಥವಾ ರಕ್ತದಲ್ಲಿ ಉತ್ಪತ್ತಿಯಾಗುವ ಪ್ರತಿವಸ್ತುಗಳೆಂಬ (ಆಂಟಿಬಾಡಿಸ್) ಪ್ರೋಟೀನ್‌ಗಳು ಅತಿಯಾಗಿ ಪ್ಲೇಟಿಲೆಟ್‌ಗಳನ್ನು ನಾಶಮಾಡುವುದರಿಂದ ಕೆನ್ನೀಲಿಕೆಯುಂಟಾಗಬಹುದು. ಲ್ಯೂಪಸ್ ಎರಿಥಿಮಟೋಸಿಸ್ ಮುಂತಾದ ರೋಗಗಳಿಂದಲೂ ವೈರಸ್, ಕ್ರಿಮಿ ಮತ್ತು ಕೆಲವು ಮದ್ದುಗಳ ಪ್ರಭಾವದಿಂದಲೂ ಪ್ಲೇಟ್‌ಲೆಟ್‌ಗಳನ್ನು ನಾಶಪಡಿಸುವ ಪ್ರತಿವಸ್ತುಗಳು ಉತ್ಪತ್ತಿಯಾಗುತ್ತದೆ. ಥ್ರಾಂಬ್ಯಾಸ್ತೀನಿಯ ಎಂಬ ರೋಗದಲ್ಲಿ ಪ್ಲೇಟ್‌ಲೆಟ್‌ಗಳ ಸಂಖ್ಯೆ ರಕ್ತದಲ್ಲಿ ಸರಿಯಾಗಿದ್ದರೂ ಅಶಕ್ತತೆಯಿಂದಾಗುವ ಅಸಮರ್ಪಕ ಕೆಲಸದ ಪರಿಣಾಮವಾಗಿ ಕೆನ್ನೀಲಿಕೆ ರೋಗ ತಲೆದೋರುತ್ತದೆ. (3) ಹೀಮೊಫಿಲಿಯ, ಕ್ರಿಸ್ಮಸ್‌ರೋಗ, ಹೈಪೊಪ್ರೊಥ್ರಾಂಬಿನೀಮಿಯ, ಎಫೈಬ್ರಿನೊಜೆನೀಮಿಯ ಮುಂತಾದ ವಂಶಪಾರಂಪರ್ಯ ರೋಗಗಳಲ್ಲಿ ಮತ್ತು ಕೆಲವು ಯಕೃತ್ ರೋಗಗಳಲ್ಲಿ ಕೆನ್ನೀಲಿಕೆ ಉಂಟಾಗುತ್ತದೆ. ಅಲ್ಲದೆ ರಕ್ತಗರಣೆ ತಪ್ಪಿಸುವ ಮದ್ದು ಮುಂತಾದವುಗಳಿಂದ ರಕ್ತಗರಣೆಗೆ ಬೇಕಾದ ಸಾಮಗ್ರಿಗಳ ಕೊರತೆ ರಕ್ತದಲ್ಲುಂಟಾಗುವುದರಿಂದ ಕೆನ್ನೀಲಿಕೆ ತಲೆದೋರುವುದು. (4) ಮಲ್ಟಿಪಲ್‌ಮೈಲೋಮ, ಲ್ಯೂಕೀಮಿಯ ಮುಂತಾದ ರಕ್ತ ರೋಗಗಳಿಂದಲೂ ಕೆಲವು ಮದ್ದುಗಳ ಪ್ರತಿಕ್ರಿಯೆಗಳಿಂದಲೂ ನಾರುಮಾಂಸದ ರೋಗಗಳಿಂದಲೂ ಎಕ್ಸ್‌ಕಿರಣಗಳ ಮಿತಿಮೀರಿದ ಪರಿಣಾಮದಿಂದಲೂ ರಕ್ತಗರಣೆಯನ್ನು ತಡೆಗಟ್ಟುವ ಪ್ರೋಟೀನ್ ಪ್ರತಿವಸ್ತು ವಿಶೇಷಗಳಿಂದಲೂ ರಕ್ತದಲ್ಲಿರುವ ಗಡ್ಡೆಕಟ್ಟುವ ತಂತ್ರಕ್ಕೆ ಅಡಚಣೆಯಾಗಿ ಕೆನ್ನೀಲಿಕೆಯುಂಟಾಗಬಹುದು. (5) ರಕ್ತಗಡ್ಡೆಯನ್ನು ಕರಗಿಸಬಲ್ಲ ಏರ್ಪಾಡೊಂದು ಸಾಧಾರಣವಾಗಿ ಸುಪ್ತಸ್ಥಿತಿಯಲ್ಲಿರುತ್ತದೆ. ಇದು ಕೆಲವು ಸಂದರ್ಭಗಳಲ್ಲಿ ಜಾಗೃತವಾದಾಗ ಕರಗಿದ ರಕ್ತಗಡ್ಡೆಯ ನೀಸಿನಿಂದ ರಕ್ತಗರಣೆಗೆ ಆತಂಕವುಂಟಾಗುತ್ತದೆ. ಬಸಿರು, ಹೆರಿಗೆ ಮತ್ತು ಶಸ್ತ್ರಕ್ರಿಯೆಗಳಲ್ಲಿ ಆಗಬಹುದಾದ ಆಕಸ್ಮಿಕಗಳಿಂದ ಈ ರೀತಿಯಾಗಬಹುದು. ಮೂರ್ಛೆ, ಆಕಸ್ಮಿಕ ಗಾಯ, ಸುಟ್ಟಗಾಯ ಮತ್ತು ಇನ್ನೂ ಇಂಥ ಸ್ಥಿತಿಗಳಲ್ಲಿ ಕೆಟ್ಟ ಮಾಂಸದ ಸಾರ ರಕ್ತವನ್ನು ಸೇರಿ ರಕ್ತನಾಳಗಳಲ್ಲಿ ಗರಣೆಯುಂಟುವಾಡುವುದರಿಂದ ಒಂದು ರೀತಿಯ ವಿಪರ್ಯಾಸ ರಕ್ತಸ್ರಾವ ಸ್ಥಿತಿಯುಂಟಾಗುತ್ತದೆ. ರಕ್ತ ಗಡ್ಡೆಕಟ್ಟಲು ಬೇಕಾದ ವಸ್ತುಗಳ ಕುಂದು ರಕ್ತದಲ್ಲುಂಟಾಗುವುದೇ ಇದರ ಕಾರಣ. ಪ್ರಸವದಲ್ಲಿ ಕೆಲವೇಳೆ ಆಗಬಹುದಾದ ಅತಿರಕ್ತಸ್ರಾವಕ್ಕೂ ದೇಹದಲ್ಲಾಗುವ ಈ ಅವ್ಯವಸ್ಥೆಯೇ ಕಾರಣ.

**ಚಿಕಿತ್ಸೆ :** ಕೆನ್ನೀಲಿಕೆಗೆ ಚಿಕಿತ್ಸೆ ಕಾರಣಕ್ಕೆ ತಕ್ಕಂತೆ ನಡೆಯಬೇಕು. ರಕ್ತದಲ್ಲಿ ಅತಿಕಡಿಮೆ ಪ್ಲೇಟ್‌ಲೆಟ್ ಸಂಖ್ಯೆಯಿಂದಾಗುವ ಕೆನ್ನೀಲಿಕೆ ಅಥವಾ ನಿಲ್ಲದ ರಕ್ತಸೋರಿಕೆಗೆ ಆಡ್ರಿನೋ ಕಾರ್ಟಿಕೋಟ್ರೋಫಿಕ್ ಹಾರ್ಮೋನ್(ACTH) ಮತ್ತು ಸ್ಟಿರಾಯ್ಡ್ ಒಳರಸಗಳು ಪರಿಣಾಮಕಾರಿಗಳು. ರಕ್ತದಾನದಿಂದ ಪ್ಲೇಟ್‌ಲೆಟ್‌ಗಳು ರೋಗಿಗೆ ಸೇರುವಂತೆ ಮಾಡುವುದು ಲಾಭಕರ ಸಾಧನೆ. ಪ್ಲೇಟಿಲೆಟ್ ಕೊರತೆಯ ಕೆನ್ನೀಲಿಕೆಯಲ್ಲಿ ಇತರ ಎಲ್ಲ ಚಿಕಿತ್ಸೆಗಳು ನಿಷ್ಪ್ರಯೋಜಕವಾದಾಗ ಪ್ಲೇಟಿಲೆಟ್‌ಗಳನ್ನು ನಾಶಪಡಿಸುತ್ತಿರುವ ಪ್ಲೀಹವನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕುವುದು ಕೊನೆಯ ಚಿಕಿತ್ಸಾ ವಿಧಾನ. ರಕ್ತದಾನ, ಪ್ಲಾಸ್ಮ (ಕಣಗಳಿಲ್ಲದ ರಕ್ತ) ಅಥವಾ ರಕ್ತದಲ್ಲಿ ಯಾವ ಅಂಶ (ಫೈಬ್ರಿನೋಜೆನ್), ಆಂಟಿಹೀಮೊಫಿಲಿಕ್, ಗ್ಲಾಬ್ಯುಲಿನ್ ಇತ್ಯಾದಿ ಪ್ರೋಟೀನುಗಳು ಇಲ್ಲವೋ ಅದನ್ನು ರೋಗಿಯ ರಕ್ತಕ್ಕೆ ಸೇರಿಸುವುದು ರಕ್ತಗರಣೆ ಶಕ್ತಿಯ ಅಭಾವದಿಂದಾಗುವ ತೀವ್ರರಕ್ತಸ್ರಾವದ ಚಿಕಿತ್ಸೆಯ ಮುಖ್ಯ ವಿಧಾನ. (ಎಂ.ಡಿ.)

**ಕೆನ್ನೀಲಿಕೆ[2] :** ಕೆನ್ನೀಲಿಕೆಗಳೂ (ಪಾರ್ಫಿರಿನ್ಸ್) ಅವುಗಳ ಮೂಲ ವಸ್ತುಗಳೂ ಮೈಯಲ್ಲಿ ಹೆಚ್ಚಾಗಿ ಹುಟ್ಟಿ ಮೂತ್ರದಲ್ಲಿ ಹೊರಬೀಳುತ್ತಿರುವ ತಳಿ ಸಂಬಂಧವಾದ (ಜೆನೆಟಿಕ್) ಒಂದು ವಿರಳ ಬೇನೆ (ಪಾರ್ಫಿರಿಯ). ಮೂತ್ರ ವಿಸರ್ಜನೆಯಾದ ಕ್ಷಣ ಅದು ಎಂದಿನಂತೆ ಕಂಡರೂ ಕೆಲವೇ ತಾಸುಗಳಲ್ಲಿ ಕಗ್ಗೆಂಪಿಗೆ ತಿರುಗುವುದು. ನಿಸರ್ಗದಲ್ಲಿ ಎಷ್ಟೋ ಕಡೆಗಳಲ್ಲಿರುವ ಆದಿಕೆನ್ನೀಲಿಕದ (ಪ್ರೋಟೊಪಾರ್ಫಿರಿನ್) ಹಾಗೆಯೇ ಕೆನ್ನೀಲಿಕಗಳೂ ಕೆಂಪನೆಯ ಬಣ್ಣವಸ್ತುಗಳು. ಕೆಂಪು ರಕ್ತಕಣಗಳಲ್ಲಿರುವ ಹೀಮೋಗ್ಲೊಬಿನ್ ಕೆಂಪಗಿರಲು ಕೆನ್ನೀಲಿಕವೇ ಕಾರಣ. ಕಾರಣವಿಲ್ಲದ ಹೊಟ್ಟೆ ನೋವು, ಕೈಕಾಲುರಿ, ಮನೋವಿಕಲತೆ ಇವೆಲ್ಲ ಒಟ್ಟಾಗಿ ಕಂಡಾಗ ಕೆನ್ನೀಲಿಕೆ ರೋಗವನ್ನು ಅನುಮಾನಿಸಬಹುದು. ಈ ಬೇನೆ ಒಬ್ಬನಲ್ಲಿ ನಿರ್ಧಾರವಾಗಿ ಇರುವುದಾದರೆ, ಅವನ ತಲೆವಾರಿನವರನ್ನೆಲ್ಲ ಪರೀಕ್ಷಿಸಬೇಕಾಗುವುದು. ಸುಪ್ತವಾಗಿದ್ದ ಈ ಬೇನೆ ಬಹಳ ದಿನಗಳು ಹೊಟ್ಟೆಗಿಲ್ಲವಾದಾಗ, ಬಾರ್ಬಿಟುರೇಟು, ಕಾರ್ಬಮೆಜಪಿನ್, ಕ್ಲೋರ್‌ಪ್ರೊಪಮೈಡ್, ಬಾಯಿಗರ್ಭನಿರೋಧಕ ಮಾತ್ರೆಗಳು, ಫಿನೈಟಾಯಿನ್, ಪೈರಜನ್‌ಎಮೈಡ್, ಟಾಲ್‌ಬುಟಮೈಡ್ ಸಲ್ಫೋನೇಮೈಡುಗಳನ್ನು ಸೇವಿಸಿದಾಗ, ಬಸಿರಾದಾಗ ಕೆರಳುತ್ತದೆ.

**ಕೆನ್ನೀಲಿಕೆಯಲ್ಲಿ ಎರಡು ಬಗೆಗಳಿವೆ:** ಕೆಂಗಣವಿಕಾಸದ ಬಗೆಯಲ್ಲಿ ಮೈ ಮೂಳೆಗಳ ಮಜ್ಜೆಯಲ್ಲಿ ವಿಕಾಸವಾಗುತ್ತಿರುವ ಕೆಲವು ಕೆಂಪು ರಕ್ತಕಣಗಳಲ್ಲಿ ಕೆನ್ನೀಲಿಕ ಮಿತಿಗೆಟ್ಟು ತಯಾರಾಗುತ್ತಿರುವುದು. ಮೈಯಲ್ಲಿ ಎಂದಿಗಿಂತಲೂ ಹೆಚ್ಚಾಗಿ ಮೂತ್ರ ಕೆನ್ನೀಲಿಕ(ಯೂರೊಪಾರ್ಫಿರಿನ್) ಹೊರಬೀಳುವುದರಿಂದ ಮೂತ್ರ ಕಗ್ಗೆಂಪಾಗಿಯೂ ಮೂಳೆ ಮತ್ತು ಹಲ್ಲು ಬೂದುಗೆಂಪಾಗಿಯೂ ಕಾಣುವುವು. ಇದೇ ಕಾರಣದಿಂದ ಎಳೆಗೂಸು ರೋಗಿಗಳಿಗೆ ಬೆಳಕು ತಾಗಿದರೆ ಹಾನಿಕರ. ಮೊಗ, ಕೈಗಳ ಮೇಲೆ ಬೊಬ್ಬೆಗಳೆದ್ದು ವಾಸಿಯಾದಾಗ ಕಲೆಗಟ್ಟಿ ವಿಕಾರವಾಗಿ ಸುಕ್ಕುಗಟ್ಟುವುದು. ತೊರಳೆ ದೊಡ್ಡದಾಗಿ ರಕ್ತ ಕೊರೆಯಾಗುತ್ತದೆ. ತೊರಳೆಯನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕುವುದು ಯೋಗ್ಯ. ಬಿಸಿಲಿಗೆ ಮೈ ತಾಗದಿದ್ದರೆ ರೋಗಿಗೆ ನೆಮ್ಮದಿ.

ಇನ್ನೊಂದು ಬಗೆಯಾದ ಈಲಿ ಕೆನ್ನೀಲಿಕೆ (ಹೆಪಾಟೊಪಾರ್ಫಿರಿಯ) ಆಗಾಗ್ಗೆ ಕೆರಳಬಹುದು. ವಯಸ್ಸಾದ ಮೇಲೆ ಬರಬಹುದು, ಇಲ್ಲವೇ ಇವೆರಡು ರೀತಿಗಳಲ್ಲೂ ಕಾಡಬಹುದು. ಆಗಾಗ್ಗೆ ಕೆರಳುವ ಬಗೆಯಲ್ಲಿ, ಈಲಿಯಲ್ಲಿ ಬಣ್ಣವಿರದ ರೂಪದಲ್ಲಿ ಕೆನ್ನೀಲಿಕ ತಯಾರಾಗುವುದರಿಂದ ಪದೇ ಪದೇ ಹೊಟ್ಟೆ ನೋವು, ಮುಕ್ಕಲುತನ, ಸುಸ್ತು ಇಲ್ಲವೇ ಮೈಯಲ್ಲಿ ಅಲ್ಲಲ್ಲಿ ಅರನಾರಿಗಳು ಕಾಣಿಸಿಕೊಂಡು ಕೆಲವೇಳೆ ಸಾವಿಗೀಡಾಗಲೂಬಹುದು. ವಯಸ್ಸಾದ ಮೇಲೆ ಕಾಣಿಸಿಕೊಳ್ಳುವ ಈಲಿಕೆನ್ನೀಲಿಕೆಯಲ್ಲಿ ಕೇವಲ ಬೆಳಕಿಗೊಡ್ಡಿದಾಗ ಚರ್ಮದ ಮೇಲೆ ಬೊಬ್ಬೆಗಳೆದ್ದು ವಾಸಿಯಾಗಿ ಚರ್ಮ ಸುಕ್ಕುಗಟ್ಟುತ್ತದೆ. ಬೇನೆ ಹೆಚ್ಚಾದಾಗ ಶಮನಕ್ಕಾಗಿ ಮೈಯಲ್ಲಿಯ ರಕ್ತ ಒಂದಿಷ್ಟನ್ನು ತೆಗೆದುಹಾಕುವುದುಂಟು. (ಡಿ.ಎಸ್.ಎಸ್.)

**ಕೆನ್ಯೂಟ್ :** ಡೆನ್ಮಾರ್ಕ್, ನಾರ್ವೇ ಮತ್ತು ಇಂಗ್ಲೆಂಡ್ ದೇಶಗಳ ದೊರೆ. ಡೆನ್ಮಾರ್ಕಿನ ದೊರೆಯಾಗಿದ್ದ ಸ್ವೇನನ ಮಗ. ಸ್ವೇನ್ ಇಂಗ್ಲೆಂಡಿನ ಮೇಲೆ ದಂಡೆತ್ತಿ ಹೋಗಿ ಅದನ್ನು ಗೆದ್ದು ಅಲ್ಲಿಯ ದೊರೆ 2ನೆಯ ಎತೆಲ್‌ರೆಡ್ಡನ್ನು ಓಡಿಸಿದ್ದ. 1014ರಲ್ಲಿ ಸ್ವೇನ್ ತೀರಿಕೊಂಡಾಗ ಎತೆಲ್‌ರೆಡ್ ಇಂಗ್ಲೆಂಡಿಗೆ ಹಿಂದಿರುಗಿದ. ಆದರೆ ತಂದೆಯ ಸ್ಥಾನದಲ್ಲಿ ಪಟ್ಟಕ್ಕೆ ಬಂದಿದ್ದ ಕೆನ್ಯೂಟ್ ಕೈಕಟ್ಟಿ ಕೂರಲಿಲ್ಲ. 1015ರಲ್ಲಿ ಆತ ಇಂಗ್ಲೆಂಡಿನ ಮೇಲೆ ಏರಿ ಹೋಗಿ, ಬಹುಭಾಗವನ್ನಾಕ್ರಮಿಸಿಕೊಂಡ.

ಕೆನ್ಯೂಟನಿಂದ ಸೋತಿದ್ದ ಎತೆಲ್‌ರೆಡ್ 1016ರಲ್ಲಿ ತೀರಿಕೊಂಡ ಮೇಲೆ ಅವನ ಮಗ ಎಡ್ಮಂಡ್ ಐರನ್‌ಸೈಡನೊಂದಿಗೆ ಕೆನ್ಯೂಟ್ ಹೋರಾಡಬೇಕಾಗಿ ಬಂತು. ಆಷಿಂಗ್‌ಟನ್‌ನಲ್ಲಿ ಎಡ್ಮಂಡ್ ಸೋತ. ಆಗ ಆದ ಒಪ್ಪಂದದ ಪ್ರಕಾರ ಅವರಿಬ್ಬರೂ ನಾಡನ್ನು ಹಂಚಿಕೊಂಡರು. ವೆಸೆಕ್ಸ್ ಪ್ರದೇಶ ಎಡ್ಮಂಡನಿಗೂ ಮರ್ಸಿಯ ಪ್ರದೇಶ ಕೆನ್ಯೂಟನಿಗೂ ಸೇರಿದುವು.

ಈ ಒಪ್ಪಂದ ಶಾಶ್ವತವಾಗಿ ಜಾರಿಯಲ್ಲಿರುವುದೆಂಬ ಸೂಚನೆಗಳೇನೂ ಇರಲಿಲ್ಲ. ಅಷ್ಟರಲ್ಲಿ ಎಡ್ಮಂಡ್ ಸತ್ತ. ಕೆನ್ಯೂಟನೇ ಅಖಿಲ ಇಂಗ್ಲೆಂಡಿನ ಪ್ರಭುವಾಗಲು ಯಾವ ತಡೆಯೂ ಉಳಿಯಲಿಲ್ಲ. ಎಡ್ಮಂಡನ ಮಕ್ಕಳು ಹಂಗರಿಗೆ ಓಡಿಹೋದರು. ಎತೆಲ್‌ರೆಡ್ಡನ

ವಿಧವೆಯನ್ನು (ನಾರ್ಮಂಡಿಯ ಎಮ್ಮ) ಕೆನ್ಯೂಟ್ ಮದುವೆಯಾದ್ದರಿಂದ ಆ ಕಡೆಯಿಂದ ಬರಬಹುದಾಗಿದ್ದ ವಿರೋಧ ತಣ್ಣಗಾಯಿತು. ಇಂಗ್ಲೆಂಡನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಆತ ಅದರ ಆಡಳಿತದಲ್ಲಿ ಸುಧಾರಣೆಗಳನ್ನು ತಂದ. ಡೆನ್ಮಾರ್ಕಿನ ಮಾದರಿಯಲ್ಲಿ ಇಂಗ್ಲೆಂಡನ್ನೂ ಹಲವು ಅರ್ಲ್ ಪ್ರಭುತ್ವಗಳಾಗಿ ವಿಂಗಡಿಸಿದ. ಡೆನ್ಮಾರ್ಕಿನಿಂದ ಕರೆತಂದಿದ್ದ ಸೈನಿಕರನ್ನು ಹಿಂದಕ್ಕೆ ಕಳುಹಿಸಿ ಸ್ಯಾಕ್ಸನರನ್ನು ಮುಖ್ಯ ಹುದ್ದೆಗಳಿಗೆ ನೇಮಿಸಲು ಆತ ಒಪ್ಪಿಕೊಂಡದ್ದರಿಂದ ಕೆನ್ಯೂಟನ ಜನಪ್ರಿಯತೆ ವರ್ಧಿಸಿತು. ಸ್ಯಾಕ್ಸನ್ ಶ್ರೀಮಂತರು ಅವನೊಂದಿಗೆ ನಾರ್ವೇ ಸ್ವೀಡನ್‌ಗಳ ದಂಡಯಾತ್ರೆಯಲ್ಲಿ ಭಾಗವಹಿಸಿದರು.

ಕೆನ್ಯೂಟ್‌ನ ಆಳ್ವಿಕೆಯಲ್ಲಿ ಇಂಗ್ಲೆಂಡಿನ ವ್ಯಾಪಾರ ಅಧಿಕವಾಯಿತು. ಯುರೋಪಿನೊಂದಿಗೆ ಸಾಂಸ್ಕೃತಿಕ ಸಂಬಂಧ ಬೆಳೆಯಿತು. ಸಮಗ್ರವಾದ ನ್ಯಾಯ ಸಂಹಿತೆಯೊಂದು ರಚಿತವಾದ್ದು ಆತನ ಆಳ್ವಿಕೆಯ ಮುಖ್ಯ ವಿಕ್ರಮ. ಕೆನ್ಯೂಟ್ ದಯಾಮಯನಾದ ದೊರೆಯೆಂದು ಜನರ ನೆನಪಿನಲ್ಲಿ ಉಳಿದಿದ್ದಾನೆ. ಆದರೆ ಸ್ವಹಿತಸಾಧನೆಗಾಗಿ ಆತ ಅನೇಕ ಕ್ರೂರಕೃತ್ಯಗಳನ್ನು ಎಸಗಲು ಹಿಂದೆಗೆಯಲಿಲ್ಲ. ಅವನಿಂದ ಇಂಗ್ಲೆಂಡಿಗೆ ಅನೇಕ ಅನುಕೂಲಗಳೇನೋ ಲಭ್ಯವಾದುವು. ಆದರೆ ವಿದೇಶಗಳಲ್ಲಿ ಆತ ಇರಿಸಿದ್ದ ಹಲವಾರು ಸೈನಿಕ ಠಾಣ್ಯಗಳಿಗೂ ಅವನು ನಡೆಸಿದ ಅನೇಕ ಯುದ್ಧಗಳಿಗೂ ಇಂಗ್ಲೆಂಡಿನ ಪ್ರಜೆಗಳು ವಿಪರೀತವಾದ ತೆರಿಗೆಯ ಭಾರ ಹೊರಬೇಕಾಯಿತು. ತನ್ನ ಅನುಯಾಯಿಗಳಿಗೆ ಕೆನ್ಯೂಟ್ ಇಂಗ್ಲೆಂಡಿನ ನೆಲವನ್ನು ಧಾರಾಳವಾಗಿ ಉಂಬಳಿಯಾಗಿ ಕೊಟ್ಟ. ಈ ಬಗ್ಗೆ ಅನೇಕ ಉಲ್ಲೇಖಗಳಿವೆ.

ಕೆನ್ಯೂಟ್ 1018ರಲ್ಲಿ ಡೆನ್ಮಾರ್ಕಿಗೂ 1030ರಲ್ಲಿ ನಾರ್ವೇಗೂ ದೊರೆಯಾದ. 1035ರಲ್ಲಿ ಆತ ಮರಣ ಹೊಂದಿದಾಗ ಅವನ ಅನೌರಸ ಪುತ್ರ 1ನೆಯ ಹೆರಲ್ಡ್ ಸಿಂಹಾಸನವನ್ನೇರಿದ.

ಕೆನ್ಯೂಟ್ ತನ್ನ ಆಸ್ಥಾನದಲ್ಲಿ ಹೊಗಳುಭಟ್ಟರಿಗೆ ಛೀಮಾರಿ ಮಾಡಿದ ಪ್ರಸಂಗವೊಂದನ್ನು ಹಂಟಿಂಗ್ಟನಿನ ಹೆನ್ರಿ ಬಣ್ಣಿಸಿದ್ದಾನೆ. ಒಮ್ಮೆ ದೊರೆ ಸಮುದ್ರದಂಡೆಯ ಬಳಿ ಆಸೀನನಾಗಿದ್ದ. ಕಡಲತೆರೆ ಒಂದೇ ಸಮನೆ ಅವನ ಬಳಿಗೆ ಬರುತ್ತಿತ್ತು. ನೀವು ನನ್ನನ್ನು ದೊರೆಯೆಂದು ಕರೆಯುತ್ತೀರಿ. ಆದರೂ ಈ ಕಡಲಿನ ಆಕ್ರಮಣವನ್ನು ನಾನು ತಡೆಯಲಾರೆ ಎಂದು ದೊರೆ ಆ ಆಸ್ಥಾನಿಕರಿಗೆ ಹೇಳಿದನಂತೆ.

ಅಖಿಲ ಇಂಗ್ಲೆಂಡನ್ನು ರೂಪಿಸಿ, ಆಳ್ವಿಕೆ ಸ್ಥಾಪಿಸಿದ ಮೊದಲನೆಯ ದೊರೆ ಕೆನ್ಯೂಟ್. ಇಂಗ್ಲಿಷ್ ಮತ್ತು ಡೇನ್ ಜನರ ಪ್ರೇಮವನ್ನು ಈತ ಸಂಪಾದಿಸಿದ್ದ. ನಾರ್ವೇಯನ್ನು ತನ್ನ ಆಳ್ವಿಕೆಗೆ ಸೇರಿಸುವ ಸಲುವಾಗಿ ಪಿತೂರಿಗಳನ್ನು ನಡೆಸಿ, ಯುದ್ಧ ಹೂಡಿ ಜಯಶಾಲಿಯಾದರೂ ಕೊನೆಗೂ ನಾರ್ವೇ ಇವನ ಕೈ ತಪ್ಪಿತು. ಚರ್ಚು, ಮಠ ಮೊದಲಾದ ಧಾರ್ಮಿಕ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಿ ಜನತೆಗೋಸ್ಕರ ಉಪಯುಕ್ತ ಸುಧಾರಣೆಗಳನ್ನು ಮಾಡಿದ. ಕೆನ್ಯೂಟ್ ದಕ್ಷತೆಯಿಂದ ಹತ್ತೊಂಬತ್ತು ವರ್ಷ ರಾಜ್ಯವಾಳಿದ.

(ಎ.ಎಸ್.ಆರ್‌ಎ.)

**ಕೆಪ್ :** ಕೂಪಗಳಲ್ಲಿ ಗೊತ್ತಾದ ಅಂತರದಲ್ಲಿ ಪಂಜರವನ್ನು (ಕೇಜ್) ತಡೆ ಹಿಡಿದು ನಿಲ್ಲಿಸುವ ಸಾಧನ. ಗಣಿಕಾಯಿದೆ ಪ್ರಕಾರ, ಚಲಿಸುವ ಪಂಜರಗಳಿರುವ ಎಲ್ಲ ಕೂಪಗಳಲ್ಲಿಯೂ, ಕೆಪ್ ಸಾಧನವನ್ನು ಅಳವಡಿಸಬೇಕು. ಗಣಿ ಮಟ್ಟಗಳಲ್ಲಿ (ಮೈನ್ ಲೆವೆಲ್ಸ್) ಪಂಜರ ಪೂರ್ಣವಾಗಿ ಕೆಪ್‌ಗಳ ಮೇಲೆ ಕೂರುವುದರಿಂದ ಉಕ್ಕಿನ ಹಗ್ಗದ ಮೇಲೆ ಇಲ್ಲವೆ ವರ್ತುಲ ಯಂತ್ರದ ಮೇಲೆ ತೂಕ ಬೀಳುವುದಿಲ್ಲ. ಇದರಿಂದ ಯಾವ ಆತಂಕವಿಲ್ಲದೆ ಪಂಜರಕ್ಕೆ ಹೊರೆ ತುಂಬುವುದು ಅಥವಾ ಅದರಿಂದ ಹೊರೆ ತೆಗೆಯುವುದು ಸುಲಭಸಾಧ್ಯವಾಗುತ್ತದೆ. (ಟಿ.ಟಿ.)

**ಕೆಪ್ಲರ್, ಯೋಹಾನ್ :** 1571–1630. ಜರ್ಮನಿಯ ಖಗೋಳವಿಜ್ಞಾನಿ. ಈತನ ತನಕ ವಿವರಣಾತ್ಮಕ ವಿಜ್ಞಾನವೆಂದು ಪರಿಗಣಿಸಲ್ಪಟ್ಟಿದ್ದ ಖಗೋಳವಿಜ್ಞಾನವನ್ನು ಭೌತವಿಜ್ಞಾನದ ಭದ್ರ ತಳಪಾಯದ ಮೇಲೆ ಸ್ಥಾಪಿಸಿ ಇದರ ಸರ್ವತೋಮುಖ ವಿಸ್ತರಣೆಗೆ ನಾಂದಿ ಹಾಕಿದ ಯುಗಪ್ರವರ್ತಕ ಮೇಧಾವಿ. ಮುಖ್ಯವಾಗಿ, ಸೌರವ್ಯೂಹದ ಕ್ರಿಯಾತಂತ್ರವನ್ನು ಮೂರು ಮೂಲಭೂತ ಹಾಗೂ ಬಲು ಸರಳ ನಿಯಮಗಳಿಂದ ವಿವರಿಸಿದ್ದು ಈತನ ಮಹತ್ತಮ ಕೊಡುಗೆ. **(ನೋಡಿ– ಕೆಪ್ಲರನ–ನಿಯಮಗಳು)**

**ಬಾಲ್ಯ:** ಸೈನಿಕ ತಂದೆ, ಅವಿದ್ಯಾವಂತ ತಾಯಿ, ಈ ಬಡ ಕುಟುಂಬದಲ್ಲಿ ಯೋಹಾನನ ಜನನ (27, ಡಿಸೆಂಬರ್, 1571). ಇವನೇ ಅವರ ಮೊದಲ ಮಗು. ಬಡತನ, ಅನಾರೋಗ್ಯ, ಜನ್ಮದಾತರ ಅನಾಸ್ಥೆ ಇವುಗಳ ದುಷ್ಪರಿಣಾಮ ತೀವ್ರವಾಗಿದ್ದಾಗಲೇ ನಾಲ್ಕು ವರ್ಷದ ಯೋಹಾನನಿಗೆ ಸಿಡುಬುರೋಗ ಅಂಟಿತು. ಆಗ ಇವನು ಬದುಕಿ ಉಳಿದದ್ದು ಒಂದು ಪವಾಡ. ಈ ಕಾಯಿಲೆಯ ಪರಿಣಾಮವಾಗಿ ಇವನ ಅವಯವಗಳು ದುರ್ಬಲವಾದುವು, ದೃಷ್ಟಿ ಮಂದವಾಯಿತು. ಆ ಎಳೆ ಪ್ರಾಯದಲ್ಲಿ ಕಠಿನ ದೇಹ ಶ್ರಮದ ಕೆಲಸಗಳನ್ನು ಈತ ಮಾಡಿ ಸಂಸಾರದ ಪೋಷಣೆಗೆ ನೆರವಾಗಬೇಕಾಗಿತ್ತು. ಅಲ್ಲದೇ ಸಂಸಾರ ಊರಿಂದೂರಿಗೆ ಜೀವನೋಪಾಯಕ್ಕಾಗಿ ಅಲೆಯುತ್ತಿತ್ತು. ಮುಂದೊಂದು ದಿವಸ ಹೈನ್ರಿಕ್ ಕೆಪ್ಲರ್ (ಯೋಹಾನನ ತಂದೆ) ಯಾರಿಗೂ ತಿಳಿಸದೇ ಊರು ಬಿಟ್ಟು ಓಡಿ ಹೋದ (1588). ಹೀಗಾಗಿ ಸಾಂಪ್ರದಾಯಿಕ ಓದುಬರೆಹಗಳಲ್ಲಿ ಯೋಹಾನ್ ಸಾಧಿಸಿದ ಪ್ರಗತಿ ತೀರ ಅಲ್ಪ.

**ವಿದ್ಯಾಭ್ಯಾಸ:** ಪ್ರಾಟೆಸ್ಟಂಟ್ ಧರ್ಮ (ಸ್ಥಾಪನೆ 1529) ಯುರೋಪ್ ಖಂಡದಲ್ಲಿ, ಅದರಲ್ಲೂ ವಿಶೇಷವಾಗಿ ಅದರ ಉಗಮಸ್ಥಾನವಾದ ಜರ್ಮನಿಯ ಕೆಲವು ಪ್ರಾಂತ್ಯಗಳಲ್ಲಿ, ಪ್ರಸಾರವಾಗುತ್ತಿದ್ದ ಕಾಲವದು. ಕೆಪ್ಲರನ ಮನೆತನದವರು ಈ ಪಂಥದ ಅನುಯಾಯಿಗಳು. ಈ ಧರ್ಮ ಪ್ರಚಾರಕ್ಕಾಗಿ ಧಾರ್ಮಿಕ ಗುರುಗಳನ್ನು ತರಬೇತುಗೊಳಿಸಲು ಹಲವಾರು

ಮಿಷನರಿಗಳನ್ನು ಸ್ಥಾಪಿಸಲಾಗಿತ್ತು. ಅಡೆಲ್‌ಬರ್ಗ್ ಎಂಬಲ್ಲಿದ್ದ ಇಂಥ ಒಂದು ಸೆಮಿನರಿಗೆ ಯೋಹಾನನಿಗೆ ಪ್ರವೇಶ ದೊರೆತಾಗ (1584) ಇವನ ಜೀವನದ ಎರಡು ಮುಖ್ಯ ಸಮಸ್ಯೆಗಳು ಪರಿಹಾರವಾಗಿದ್ದುವು: ಒಂದು – ನೆಲೆ, ಎರಡು – ಭವಿಷ್ಯದಲ್ಲಿ ನಿರ್ದಿಷ್ಟ ವೃತ್ತಿ. ಆ ಸೆಮಿನರಿಯಲ್ಲಿ ಯೋಹಾನನಿಗೆ ಶಿಕ್ಷಣ ದೊರೆತದ್ದು ಧಾರ್ಮಿಕ ವಿಷಯಗಳಲ್ಲಿ; ಆನುಷಂಗಿಕವಾಗಿ ಸಾಹಿತ್ಯ, ಒಂದಿಷ್ಟು ಅಂಕಗಣಿತ ಇವುಗಳ ಅಧ್ಯಯನವೂ ಇತ್ತು. ಕೆಪ್ಲರನ ನಿಶಿತಮತಿ ಇವುಗಳಲ್ಲೆಲ್ಲ ಪ್ರಾವೀಣ್ಯ ಸಾಧಿಸಿತು. ಶ್ರದ್ಧೆ, ಕಠಿಣ ಪರಿಶ್ರಮ, ಚಿಂತನಪರತೆ, ವಿಧೇಯತೆ, ಕೆಲಸಕಾರ್ಯಗಳಲ್ಲಿ ಅಚ್ಚುಗಟ್ಟು ಇವೇ ಇವನ ಬಂಡವಾಳ. ಅನಾರೋಗ್ಯದೊಡನೆ ನಿರಂತರ ಹೋರಾಟ ಮುಂದುವರಿದುಕೊಂಡೇ ಹೋಯಿತು. ಮುಂದೆ ಸ್ನಾತಕ ಶಿಕ್ಷಣಕ್ಕಾಗಿ ಕೆಪ್ಲರನನ್ನು ಟ್ಯುಬಿಂಗನಿನ ಸ್ಟಿಫ್ಟ್ ಸೆಮಿನರಿಗೆ ಕಳಿಸಿದರು (1589). ಅಲ್ಲಿ ಮ್ಯಾಸ್‌ಟ್ಲಿನ್ ಎಂಬ ಸುವಿಖ್ಯಾತ ಖಗೋಳವಿಜ್ಞಾನಿ ಮತ್ತು ಶ್ರೇಷ್ಠ ಬೋಧಕನ ಪ್ರಭಾವ ಈತನ ಮೇಲೆ ಬಿತ್ತು. ಆತನ ಅಂತರಂಗದ ಶಿಷ್ಯನಾದ ಕೆಪ್ಲರ್ ಖಗೋಳವಿಜ್ಞಾನದ ಅದುವರೆಗಿನ ಪ್ರವಾಹವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿ ಕಲಿತದ್ದು ಮಾತ್ರವಲ್ಲ, ಅದರ ವಹನದಲ್ಲಿ ಟಾಲೆಮಿ ಮತ್ತು ಕೊಪರ್ನಿಕಸ್ ಎಂಬ ವಿಜ್ಞಾನಿಗಳ ಕೊಡುಗೆಗಳ ಅರ್ಥಸ್ವಾರಸ್ಯವನ್ನು ಕೂಡ ಗ್ರಹಿಸಿದ. ಟಾಲೆಮಿಯ ಭೂಕೇಂದ್ರವಾದವನ್ನು ಪರಿಷ್ಕಾರವಾಗಿ ಸ್ಥಾನಾಂತರಗೊಳಿಸಿದ್ದ ಕೊಪರ್ನಿಕಸನ ಸೂರ್ಯಕೇಂದ್ರವಾದದ ನಿಷ್ಕೃಷ್ಟತೆಗೂ, ಬೌದ್ಧಿಕ ಸೌಂದರ್ಯಕ್ಕೂ ತರುಣ ಕೆಪ್ಲರ್ ಮಾರುಹೋದ. ಸೂರ್ಯನಲ್ಲಿರುವ ಏನೋ ಒಂದು ವಿಶೇಷ ಬಲದ ಪರಿಣಾಮವಾಗಿ ಎಲ್ಲ ಗ್ರಹಗಳ ಕ್ರಮಬದ್ಧ ಚಲನೆ ಸಂಭವಿಸುತ್ತಿದೆ ಎಂದು ಕೆಪ್ಲರನ ಪ್ರತಿಭೆ ಅಂದು (1589–91) ಮಿಡಿಯುತ್ತಿತ್ತು. 1591ರಲ್ಲಿ ಮಾಸ್ಟರ್ಸ್ ಪದವಿಯನ್ನು ದ್ವಿತೀಯಸ್ಥಾನ ಪಡೆದು ಗಳಿಸಿದ. ಇವನ ಧಾರ್ಮಿಕ ಶಿಕ್ಷಣ ಮತ್ತೆಯೂ ಮುಂದುವರಿಯಬೇಕಾಗಿತ್ತು. ಆದರೆ ಅಷ್ಟರಲ್ಲಿಯೇ ವರಿಷ್ಠರ ಆದೇಶದ ಪ್ರಕಾರ ಈತ ಗ್ರಾಟ್ಸ್ ನಗರದಲ್ಲಿದ್ದ ಪ್ರಾಟೆಸ್ಟಂಟ್ ಸೆಮಿನರಿಗೆ ಹೋಗಿ ಗಣಿತಾಧ್ಯಾಪಕನಾಗಿ ಸೇರಬೇಕಾಯಿತು (1594).

**ವೃತ್ತಿ:** ಗ್ರಾಟ್ಸ್‌ನಲ್ಲಿ ಕೆಪ್ಲರ್ ಜಿಲ್ಲಾ ಗಣಿತಜ್ಞ, ಪಂಚಾಂಗಕಾರ ಮತ್ತು ಗಣಿತಾಧ್ಯಾಪಕನಾಗಿ ಸೇವೆ ಸಲ್ಲಿಸಲು ತೊಡಗಿದ. ಖಗೋಳವಿಜ್ಞಾನಾಭ್ಯಾಸ ಇವನ ಪ್ರಿಯ ಹವ್ಯಾಸ. ಸೌರವ್ಯೂಹದಲ್ಲಿ 6 ಗ್ರಹಗಳೇ ಏಕಿರಬೇಕು, ಸೂರ್ಯನಿಂದ ಆ ಗ್ರಹಗಳ ದೂರಗಳು (ಇವು ಗೊತ್ತಿತ್ತು.) ಅಷ್ಟೇ ಏಕಿರಬೇಕು ಇವೇ ಮುಂತಾದ ಸಂಶಯಗಳಿಗೆ ಇವನು ಉತ್ತರ ಅರಸುತ್ತ ಹಿಂದಿನಿಂದ ಬಂದು ಉಪಲಬ್ಧವಾಗಿದ್ದ ಎಲ್ಲ ಖಗೋಳವೀಕ್ಷಣಾ ವರದಿಗಳನ್ನೂ ಅಭ್ಯಾಸ ಮಾಡಿದ. ಇದರ ಫಲವಾಗಿ ಸೌರವ್ಯೂಹದ ಒಂದು ಜ್ಯಾಮಿತೀಯ ಪ್ರರೂಪವನ್ನು ರಚಿಸಿ ಅದನ್ನು ಸೌರವ್ಯೂಹದ ವಿವರಗಳಿಗೆ ಹೊಂದಿಸುವಲ್ಲಿ ತಕ್ಕಮಟ್ಟಿನ ಯಶಸ್ಸನ್ನು ಪಡೆದ (1595). ಇವೆಲ್ಲ ಸಂಶೋಧನೆಗಳ ಫಲವನ್ನು ಒಂದು ಗ್ರಂಥರೂಪದಲ್ಲಿ ಬರೆದು ಮುದ್ರಿಸಿ ಅದನ್ನು ಸಮಕಾಲೀನ ವಿದ್ವಜ್ಜನರಿಗೆ ವಿಮರ್ಶೆಗೋಸ್ಕರ ಕಳಿಸಿದ. ಗೆಲಿಲಿಯೋ ಮತ್ತು ಬ್ರಾಹೆ ಈ ಸಮಕಾಲೀನ ವಿಜ್ಞಾನಿಗಳ ಪರಿಚಯ ಈ ಮೂಲಕ ಕೆಪ್ಲರನಿಗೆ ಆಯಿತು.

**ಟೈಕೊ ಬ್ರಾಹೆಯ ಒಡನಾಟ:** ಮತೀಯ ವೈಷಮ್ಯದಿಂದ ಕಲುಷಿತವಾಗಿದ್ದ ಗ್ರಾಟ್ಸ್ ನಗರದ ವಾಸ್ತವ್ಯ ಕೆಪ್ಲರನಿಗೆ ಹಿತವೆನಿಸಲಿಲ್ಲ. ಖಗೋಳ ವೀಕ್ಷಣ ಚತುರ ಟೈಕೊ ಬ್ರಾಹೆಯ ಆಹ್ವಾನವನ್ನು ಮನ್ನಿಸಿ ಇವನು ಪ್ರಾಹಾ ನಗರದಲ್ಲಿದ್ದ ಆತನ ವೀಕ್ಷಣ ಮಂದಿರದಲ್ಲಿ ಸಹಾಯಕನಾಗಿ ಸೇರಿದ (1600). ಮುಂದೆ, ಟೈಕೊ ಬ್ರಾಹೆಯ ವೀಕ್ಷಣಾಲಯದ ಅಧಿಕಾರ ಪ್ರಾಪ್ತವಾದುದರ ಜೊತೆಗೆ, ಆತನ ಖಗೋಳ ವೀಕ್ಷಣವರದಿಗಳ ಮಹಾ ಸಂಗ್ರಹಾಗಾರಕ್ಕೆ ಮುಕ್ತ ಪ್ರವೇಶವನ್ನೂ ಪಡೆದ. ಕೆಪ್ಲರನನ್ನು ಟೈಕೊ ಬ್ರಾಹೆಯ

ಉತ್ತರಾಧಿಕಾರಿಯಾಗಿ ಚಕ್ರವರ್ತಿ ನೇಮಿಸಿದನಾದರೂ ಸಂಬಳವನ್ನು ಸಕಾಲಕ್ಕೆ ಕೊಡುತ್ತಿರಲಿಲ್ಲ. ಇದರಿಂದಾಗಿ ಜೀವನಕ್ಕೆ ಕೆಪ್ಲರ್ ಜ್ಯೋತಿಷವನ್ನು ಆಶ್ರಯಿಸಿದ. ಮೊದಲಿನಿಂದಲೂ ಇವನಿಗೆ ಜ್ಯೋತಿಷದಲ್ಲಿ ಬಹಳ ಆಸಕ್ತಿಯಿತ್ತು. ಹೀಗಾಗಿ ಟಾಲೆಮಿ ಮತ್ತು ಕಾರ್ಡನರು ಸೂಚಿಸಿದ್ದ ನಿಯಮಗಳನ್ನು ವ್ಯಾಸಂಗ ಮಾಡಿದ. ಜ್ಯೋತಿಷವನ್ನು ಖಗೋಳವಿಜ್ಞಾನದಲ್ಲಿ ಆಗಾಗ ಉಪಯೋಗಿಸಿಕೊಂಡು ಜಾತಕಗಳನ್ನು ಬರೆದು ಫಲ ಹೇಳಿ ಹಣ ಪಡೆದು ಜೀವಿಸುತ್ತಿದ್ದ. ಒಂದು ಕಡೆ ಕೆಪ್ಲರ್ ಹೀಗೆ ಬರೆದಿದ್ದಾನೆ 'ಜ್ಯೋತಿಷ ಒಂದು ದೊಡ್ಡ ಅವಿವೇಕದ ಮಗು. ಆದರೆ, ಓ, ದೈವವೇ! ಅತಿ ವಿವೇಕಿಯಾದ ಖಗೋಳವಿಜ್ಞಾನ ತನ್ನ ಅನೌರಸ ಶಿಶುವನ್ನು ಬಿಟ್ಟಿರಲು ಹೇಗೆ ಸಾಧ್ಯ? ಗಣಿತಜ್ಞರ ಸಂಬಳ ಬಲು ಕಡಿಮೆಯಾದುದರಿಂದ, ಜ್ಯೋತಿಷದ ಸಹಾಯದಿಂದ ಹೊಟ್ಟೆ ಹೊರೆಯದಿದ್ದರೆ, ವಿಜ್ಞಾನಿ ಖಂಡಿತವಾಗಿಯೂ ಹಸಿವಿನಿಂದಲೇ ಇರಬೇಕು'.

***ಖಗೋಳವಿಜ್ಞಾನದಲ್ಲಿ ಸಂಶೋಧನೆ:*** ಕೆಪ್ಲರನ ಆಸಕ್ತಿಯನ್ನು ವಿಶೇಷವಾಗಿ ಕೆರಳಿಸಿದ್ದು ಮಂಗಳಗ್ರಹದ ವಿಪರೀತ ವರ್ತನೆ.

ಈ ಗ್ರಹವನ್ನು ಕುರಿತ ಮಾಹಿತಿಗಳನ್ನು ಒಂದು ಸುಸಂಗತ ಸಿದ್ಧಾಂತರೂಪಕ್ಕೆ ತರುವುದು ಕೆಪ್ಲರನ ಮುಂದಿದ್ದ ಪ್ರಶ್ನೆ. ಸೌರವ್ಯೂಹವನ್ನು ಕುರಿತ ವಿವರಣೆಯಾದ ಸೂರ್ಯಕೇಂದ್ರವಾದದಲ್ಲಿ ಸೂರ್ಯನ ಸ್ಥಾನ ವೃತ್ತಕೇಂದ್ರ. ಭಿನ್ನ ಏಕಕೇಂದ್ರೀಯ ವೃತ್ತಗಳಲ್ಲಿ ಭಿನ್ನ ಕಕ್ಷಾವೇಗಗಳಿಂದ ಸೂರ್ಯನ ಸುತ್ತ ಗ್ರಹಗಳು ಪರಿಭ್ರಮಿಸುತ್ತಿವೆ ಎಂಬುದು ಆ ವಾದದ ಸಾರ. ಕೆಪ್ಲರ್ ಒಂದು ದಿಟ್ಟ ಹೆಜ್ಜೆಯನ್ನು ಮುಂದಿಟ್ಟು ಸೂರ್ಯನ ಸ್ಥಾನವನ್ನು ಕೇಂದ್ರದಿಂದ ವಿಚಲಿತಗೊಳಿಸಿದ. ಈಗ ಸೂರ್ಯನ ಸ್ಥಾನ ವೃತ್ತದ ಒಂದು ವ್ಯಾಸದ ಮೇಲೆ ಕೇಂದ್ರವಲ್ಲದ ಒಂದು ಬಿಂದು (S). ಕೇಂದ್ರದಿಂದ (O) ಸೂರ್ಯನ ದೂರ OSಗೆ ಗ್ರಹದ ಕಕ್ಷೆಯ (ಇದು ವೃತ್ತ ಪರಿಧಿ) ಉತ್ಕೇಂದ್ರತೆ ಎಂದು ಹೆಸರು.

ಮಂಗಳದ ಚಲನೆಯನ್ನು ಅಭ್ಯಸಿಸಲು ಕೆಪ್ಲರ್ AOSG ವ್ಯಾಸ ಆಧಾರ ರೇಖೆಯಾಗಿರುವಂತೆ Sನ್ನು ಕುರಿತು ವೃತ್ತವನ್ನು ಹಲವಾರು ಸಮ ಸಲೆಗಳಿರುವ ಖಂಡಗಳಾಗಿ ವಿಭಾಗಿಸಿದ. ಎಂದರೆ, ಖಂಡ SAB=ಖಂಡ SBC=ಖಂಡ SCD=ಖಂಡ SDE=ಖಂಡ SEF=ಖಂಡ SFG. ಈ ದಿಶೆಯಲ್ಲಿ ಸಾಗಿದ ಅವನ ಅಧ್ಯಯನ ಮಂಗಳಕ್ಕೆ Aಯಿಂದ Bಗೆ, Bಯಿಂದ Cಗೆ, Cಯಿಂದ Dಗೆ, Dಯಿಂದ Eಗೆ, Eಯಿಂದ Fಗೆ, Fನಿಂದ Gಗೆ ಇತ್ಯಾದಿ ಸಾಗಲು ಬೇಕಾಗುವ ಕಾಲಗಳು ಪರಸ್ಪರ ಸಮವಾಗಿವೆ ಎಂಬ ಹೊಸ ಅಂಶವನ್ನು ಪ್ರಕಟಪಡಿಸಿತು. (ಈ ಕಂಸಗಳ ಉದ್ದಗಳು ಅಸಮವೆಂಬುದನ್ನು ಗಮನಿಸಬೇಕು). ಆದ್ದರಿಂದ ಮಂಗಳ ಸೂರ್ಯನನ್ನು ಕುರಿತಂತೆ ಸಮಸಲೆಗಳನ್ನು ಸಮಕಾಲಗಳಲ್ಲಿ ರೇಖಿಸುವುದು ಎಂದಾಯಿತು. ಇದೇ ಕೆಪ್ಲರನ ಎರಡನೆಯ ನಿಯಮ. ಐತಿಹಾಸಿಕವಾಗಿ ಇದೇ ಮೊದಲು ಆದ ಆವಿಷ್ಕಾರ. ಮಂಗಳದ ಚಲನೆಯನ್ನು ಕುರಿತು ನೀಡಿದ ಈ ವಿವರಣೆಯನ್ನು ಸಾರ್ವತ್ರೀಕರಿಸುವಲ್ಲಿ ಕೆಪ್ಲರ್ ಗಣಿತವಿಧಾನಗಳನ್ನು ಬಹುವಾಗಿ ಅವಲಂಬಿಸಬೇಕಾಯಿತು. ಅವನ ಅನ್ವೇಷಣೆಯ ಫಲವಾಗಿ ಮುಂದೆ 1605ರಲ್ಲಿ ಸೌರವ್ಯೂಹವನ್ನು ಕುರಿತ ಇನ್ನೊಂದು ನಿಯಮ ಬೆಳಕನ್ನು ಕಂಡಿತು. ಇದು ಕೆಪ್ಲರನ ಮೊದಲನೆಯ ನಿಯಮ. ಇದರ ಪ್ರಕಾರ ಒಂದೊಂದು ಗ್ರಹವೂ ಸೂರ್ಯನ ಸುತ್ತ ಒಂದೊಂದು ದೀರ್ಘವೃತ್ತದ ಮೇಲೆ, ಸೂರ್ಯ ಆ ದೀರ್ಘವೃತ್ತದ ಒಂದು ನಾಭಿಯಲ್ಲಿ ಇರುವಂತೆ, ಪರಿಭ್ರಮಿಸುತ್ತಿದೆ. ಕೆಪ್ಲರನ ಮೂರನೆಯ ನಿಯಮದ ಆವಿಷ್ಕಾರವಾದದ್ದು 1618ರಲ್ಲಿ. ಅದರ ಪ್ರಕಾರ (ಗ್ರಹಗಳ) ಅವಧಿಗಳ ವರ್ಗಗಳು (ಸೂರ್ಯನಿಂದ ಗ್ರಹಗಳ) ಸರಾಸರಿ ದೂರಗಳ ಘನಗಳ ಅನುಪಾತದಲ್ಲಿವೆ.




**ಜೀವನ:** ತೀರ ಸಾತ್ತ್ವಿಕ ಸ್ವಭಾವದ ಕೆಪ್ಲರನ ವೈಯಕ್ತಿಕ ಜೀವನ ಬಡತನ, ಕಾಯಿಲೆ, ಗೃಹ ತಾಪತ್ರಯ, ಮತೀಯ ವೈಷಮ್ಯಗಳಿಂದ ಒದಗಿದ ಮಾನಸಿಕ ಜಂಜಡ ಇವುಗಳಿಂದ ಸದಾ ದುಃಖಮಯವೇ ಆಗಿತ್ತು. ಬಹುಶಃ ಖಗೋಳವಿಜ್ಞಾನ ಮತ್ತು ವಿಜ್ಞಾನದ ಇತರ ಭಾಗಗಳಲ್ಲಿಯ ಅನ್ವೇಷಣೆಗಳೇ ಇವನ ಮಾನಸಿಕ ಸಮತೋಲವನ್ನು ಕಾಪಾಡಿಕೊಂಡು ಬರಲು ಸಹಕಾರಿಗಳಾದುವು. ಮೊದಲನೆಯ ಹೆಂಡತಿ ಇವನಿಗೆ ಅನುಕೂಲೆಯಾಗಿರಲಿಲ್ಲ. ಆಕೆಯಲ್ಲಿ ಜನಿಸಿದ ಕೆಲವು ಮಕ್ಕಳು ತೀರಿಕೊಂಡವು. 1611ರಲ್ಲಿ ಆಕೆಯೂ ಸತ್ತುಹೋದಳು. 1612ರಲ್ಲಿ ಕೆಪ್ಲರ್ ಪ್ರಾಹದಿಂದ ಆಸ್ಟ್ರಿಯ ದೇಶದ ಲಿಂಟ್ಸ್ ನಗರಕ್ಕೆ ಹೊಸ ಹುದ್ದೆ ಹಿಡಿಯಲು ಸಾಗಿದ. ಮರುವರ್ಷ (1613) ಎರಡನೆಯ ಮದುವೆ ಆಗಿ ತಕ್ಕಮಟ್ಟಿನ ಸಾಂಸಾರಿಕ ನೆಮ್ಮದಿ ಪಡೆದ. ಮತೀಯ ವೈಷಮ್ಯಗಳ ದೆಸೆಯಿಂದ ಲಿಂಟ್ಸ್ ನಗರದಲ್ಲಿಯ ವಾಸ ಅಸಹನೀಯವಾಯಿತು. ಹೀಗಾಗಿ 1626ರಲ್ಲಿ ಅಲ್ಲಿಂದ ಈ ಕುಟುಂಬ ಹೊರಟು ಬೇರೆ ಬೇರೆ ಊರುಗಳಲ್ಲಿ ನೆಲೆ ಅರಸುತ್ತ ಅಲೆಯತೊಡಗಿತು. ಈ ಮಧ್ಯೆ ಕೆಪ್ಲರ್ ಪ್ರಾಹದಿಂದ ತನಗೆ ಬರಲು ಬಾಕಿ ಇದ್ದ ಸಂಬಳದ ದೊಡ್ಡ ಮೊತ್ತದ ಹಣವನ್ನು ಪಡೆಯಬೇಕೆಂದು ಸುದೀರ್ಘ ಪ್ರಯಾಣ ಮಾಡಿ ಆ ನಗರವನ್ನು ಸೇರಿದ. ನವೆಂಬರಿನ ಆ ಚಳಿ, ಪ್ರಯಾಣದ ಆಯಾಸ, ಮಾನಸಿಕ ಅಸ್ವಾಸ್ಥ್ಯ ಇವೆಲ್ಲವೂ ಈ ಕೃಶಾಂಗನ ಮೇಲೆ ತೀವ್ರ ಪರಿಣಾಮ ಮಾಡಿದುವು. ರಾಜನ ದರ್ಬಾರಿಗೆ ಹೋಗಿ ತನ್ನ ನ್ಯಾಯಸಮ್ಮತ ಬೇಡಿಕೆಯನ್ನು ಸಕಾರಣವಾಗಿ ಮಂಡಿಸಿ ಮರಳಿದ ಕೆಪ್ಲರ್ ಮತ್ತೆ ಏಳಲಿಲ್ಲ. ಕೆಪ್ಲರ್ ಅಸು ನೀಗಿದ್ದು 1630 ನವಂಬರ್ 15ರಂದು.

ಖಗೋಳವಿಜ್ಞಾನದ ವೀಕ್ಷಣೆಗಳ ಗೊಂಡಾರಣ್ಯದಲ್ಲಿ ಜ್ಞಾನದ ಬೆಳಕನ್ನು ಬೀರಿ ಮೂರು ಮಹಾಸೂತ್ರಗಳನ್ನು ಆವಿಷ್ಕರಿಸಿದ ಕೀರ್ತಿ ಕೆಪ್ಲರನದು. ***(ಆರ್.ಜಿ.ಆರ್.)***

**ಕೆಪ್ಲರನ ನಿಯಮಗಳು :** ಸೌರವ್ಯೂಹದಲ್ಲಿ ಗ್ರಹಚಲನೆಯನ್ನು ವಿವರಿಸುವ ಮೂರು ಪ್ರಮುಖ ನಿಯಮಗಳು (ಕೆಪ್ಲರ್ ಲಾಸ್). ಕೆಪ್ಲರ್‌ನಿಂದ (1571–1630) ಪ್ರತಿಪಾದಿಸಲ್ಪಟ್ಟುದರಿಂದ ಆತನ ಹೆಸರಿನಿಂದಲೇ ಪ್ರಖ್ಯಾತವಾಗಿವೆ **(ನೋಡಿ– ಕೆಪ್ಲರ್,– ಯೋಹಾನ್)**.

ಮೊದಲನೆಯ ನಿಯಮ : ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ಒಂದು ದೀರ್ಘವೃತ್ತ ಕಕ್ಷೆಯಲ್ಲಿ ಪರಿಭ್ರಮಿಸುತ್ತದೆ; ಸೂರ್ಯ ಈ ದೀರ್ಘವೃತ್ತದ ಒಂದು ನಾಭಿಯಲ್ಲಿದೆ.

ಎರಡನೆಯ ನಿಯಮ : ಗ್ರಹ ಸಮಕಾಲಗಳಲ್ಲಿ ಸೂರ್ಯನನ್ನು ಕುರಿತು ಸಮಸಲೆಗಳನ್ನು ರೇಖಿಸುತ್ತದೆ; ಎಂದರೆ ಗ್ರಹದ ಸಲೆ ವೇಗ ಸ್ಥಿರವಾಗಿದೆ.

ಮೂರನೆಯ ನಿಯಮ: ಗ್ರಹದ ಅವಧಿಯ ವರ್ಗ ಸೂರ್ಯನಿಂದ ಗ್ರಹದ ಸರಾಸರಿ ದೂರದ ಘನದ ಅನುಪಾತದಲ್ಲಿದೆ.

ವಿವರಣೆ: ಚಿತ್ರ 1 ರಲ್ಲಿ ತೋರಿಸಿರುವ ವಕ್ರರೇಖೆ ದೀರ್ಘವೃತ್ತ. ಇದಕ್ಕೆ ಎರಡು ನಾಭಿಗಳೂ (S, S') ಒಂದು ಕೇಂದ್ರವೂ (C) ಇವೆ; **(ನೋಡಿ– ದೀರ್ಘವೃತ್ತ)**. ಯಾವುದೇ ಗ್ರಹದ ಕಕ್ಷೆ ಇಂಥ ಒಂದು ದೀರ್ಘವೃತ್ತವೆಂದೂ ಸೂರ್ಯನ ಸ್ಥಾನ S ಎಂದೂ ಮೊದಲನೆಯ ನಿಯಮ ಹೇಳುತ್ತದೆ. ಸೂರ್ಯ Sನಲ್ಲಿಯೇ ಇರುವಂತೆ ಮತ್ತು ಅದು ಪ್ರತಿಯೊಂದು ದೀರ್ಘವೃತ್ತದ ಒಂದು ನಾಭಿಯಾಗಿರುವಂತೆ ಅಸಂಖ್ಯಾತ ದೀರ್ಘವೃತ್ತಗಳನ್ನು ರಚಿಸಬಹುದು. ಆದ್ದರಿಂದ ಭಿನ್ನ ಗ್ರಹಗಳ ದೀರ್ಘವೃತ್ತ ಕಕ್ಷೆಗಳು ಭಿನ್ನವಾಗಿದ್ದರೂ ಸೂರ್ಯ ಅವೆಲ್ಲವುಗಳಿಗೂ ಸಾಮಾನ್ಯವಾಗಿರುವುದು ಸಾಧ್ಯ.

ಇಂಥ ಒಂದು ಕಕ್ಷೆಯ ಮೇಲೆ ಗ್ರಹವೊಂದರ ನಾಲ್ಕು ಭಿನ್ನ ಸ್ಥಾನಗಳನ್ನು ($E_1$, $E_2$, $E_3$, $E_4$) ಈ ಕೆಳಗಿನ ನಿರ್ಬಂಧದ ಪ್ರಕಾರ ಗುರುತಿಸೋಣ: $E_1$ ರಿಂದ $E_2$ ಕ್ಕೆ ಸಾಗಲು ಗ್ರಹ ತೆಗೆದುಕೊಂಡ ಕಾಲ $E_3$ ರಿಂದ $E_4$ಕ್ಕೆ ಸಾಗಲು ತೆಗೆದುಕೊಂಡ ಕಾಲಕ್ಕೆ ಸಮ. ಕೆಪ್ಲರನ ಎರಡನೆಯ ನಿಯಮದ ಪ್ರಕಾರ ಖಂಡ $SE_1E_2$ ಮತ್ತು ಖಂಡ $SE_3E_4$ಸಮಸಲೆಯವು.




ಚಿತ್ರ 1

CP=CAಗೆ ದೀರ್ಘವೃತ್ತದ ಅರ್ಧದೀರ್ಘಾಕ್ಷವೆಂದು ಹೆಸರು. ಇದು a ಆಗಿರಲಿ. ಗ್ರಹ ತನ್ನ ಕಕ್ಷೆಯ ಮೇಲೆ ಯಾವುದೇ ಬಿಂದುವಿನಿಂದ ಹೊರಟು (ಉದಾಹರಣೆಗೆ P) ಒಂದು ಪೂರ್ಣ ಪರಿಭ್ರಮಣೆ ಮುಗಿಸಿ ಪುನಃ ಅಲ್ಲಿಗೆ ಮರಳುವ ತನಕ ಕಾಲಾವಧಿಗೆ ಗ್ರಹದ ಅವಧಿ ಎಂದು ಹೆಸರು. ಇದು T ಆಗಿರಲಿ. ಈ ಅವಧಿಯಲ್ಲಿ ಸೂರ್ಯನಿಂದ ಗ್ರಹದ ದೂರ ಕನಿಷ್ಠಮಿತಿ SP ಮತ್ತು ಗರಿಷ್ಠಮಿತಿ SA ವರೆಗೆ ಕ್ರಮಬದ್ಧವಾಗಿ

ಆವರ್ತಿಸಿರುತ್ತದೆ ಎಂದು ಚಿತ್ರದಿಂದ ತಿಳಿಯಬಹುದು. ಬದಲಾಗುತ್ತಿರುವ ಈ ದೂರಗಳ ವಾರ್ಷಿಕ ಸರಾಸರಿ a ಆಗುತ್ತದೆ. ಮೂರನೆಯ ನಿಯಮದ ಪ್ರಕಾರ.

$$T^2 \propto a^3$$

$$T^2 = \mu c \ a^3$$

ಇಲ್ಲಿ μ ಒಂದು ಸ್ಥಿರಾಂಕ.

ಹೀಗೆ ಕೆಪ್ಲರನ ಮೊದಲನೆಯ ನಿಯಮ ಗ್ರಹಕಕ್ಷೆಯ ಆಕಾರ ವಿನ್ಯಾಸಗಳನ್ನು ನಿರ್ಧರಿಸಿದರೆ ಎರಡನೆಯ ನಿಯಮ ಕಕ್ಷಾವೇಗವನ್ನು ವಿವರಿಸುತ್ತದೆ. ಮೂರನೆಯ ನಿಯಮವಾದರೋ ಗ್ರಹದ ಪರಿಭ್ರಮಣಕಾಲವನ್ನೂ ಸೂರ್ಯನಿಂದ ಗ್ರಹದ ಸರಾಸರಿ ದೂರವನ್ನೂ ಒಂದು ನಿರ್ದಿಷ್ಟ ಸೂತ್ರದಿಂದ ಬಂಧಿಸುತ್ತದೆ.

ಭೂಮಿಗೂ ಸೂರ್ಯನಿಗೂ ಇರುವ ಸರಾಸರಿ ಅಂತರ 1 ಖಗೋಳಮಾನ ಮತ್ತು ಭೂಮಿಯ ಅವಧಿ 1 ವರ್ಷವೆಂದು ಆಯೋಣ. ಗ್ರಹಗಳಿಗೆ ಸಂಬಂಧಿಸಿದಂತೆ ಈ ಪರಿಮಾಣಗಳು ಅನುಕ್ರಮವಾಗಿ d ಮತ್ತು T ಆಗಿರಲಿ. ಭಿನ್ನ ಗ್ರಹಗಳನ್ನು ಕುರಿತಂತೆ ಈ ಪರಿಮಾಣಗಳನ್ನು ಮುಂದಿನ ಕೋಷ್ಟಕದಲ್ಲಿ ಬರೆದಿದೆ.

| ಗ್ರಹ | ಅವಧಿ T ವರ್ಷ | ಸೂರ್ಯನಿಂದ ಗ್ರಹದ ಸರಾಸರಿ ದೂರ d ಖಮಾ | $T^2$ | $d^3$ | $T^2/d^3$ |
|---|---|---|---|---|---|
| ಬುಧ | 0.24 | 0.387 | 0.058 | 0.058 | 1 |
| ಶುಕ್ರ | 0.61 | 0.723 | 0.378 | 0.378 | 1 |
| ಭೂಮಿ | 1 | 1 | 1 | 1 | 1 |
| ಮಂಗಳ | 1.88 | 1.524 | 3.54 | 3.54 | 1 |
| ಗುರು | 11.86 | 5,202 | 140.7 | 140.8 | 1 |
| ಶನಿ | 29.46 | 9.539 | 8,679 | 868 | 1 |

ಪ್ರತಿಯೊಂದು ಗ್ರಹವನ್ನೂ ಕುರಿತಂತೆ $T^2/d^3$ ಒಂದೇ ಸ್ಥಿರಾಂಕವಾಗಿದೆ ಎಂಬುದನ್ನೂ ಸೂರ್ಯನಿಂದ ಭೂಮಿಯ ಸರಾಸರಿ ದೂರ ಮತ್ತು ಭೂಮಿಯ ಅವಧಿಕಾಲ ಇವನ್ನು ಏಕಮಾನಗಳಾಗಿ ಆಯ್ದಾಗ ಈ ಸ್ಥಿರಾಂಕ ಸರಿಸುಮಾರಾಗಿ 1 ಆಗುವುದೆಂಬುದನ್ನೂ ಗಮನಿಸಬೇಕು.

**ಗಣಿತ ವಿಶ್ಲೇಷಣೆ :** Sನ್ನು ಮೂಲಬಿಂದುವಾಗಿಯೂ ದೀರ್ಘಾಕ್ಷವನ್ನು, ಎಂದರೆ SPಯನ್ನು, x-ಅಕ್ಷವಾಗಿಯೂ ಆಯ್ದರೆ ದೀರ್ಘ ವೃತ್ತದ ಸಮೀಕರಣ $1/r = 1 + e\cos\theta$ ಆಗುತ್ತದೆ. ಇಲ್ಲಿ l ಅರ್ಧ ನಾಭೀಲಂಬ, e ಕಕ್ಷೆಯ ಉತ್ಕೇಂದ್ರತೆ.

$CP=a$ ಆಗಿದ್ದರೆ $l=a(1-e^2)$ ಆಗುವುದು. ಕಕ್ಷೆಯ ಮೇಲೆ ಗ್ರಹದ ಒಂದು ಸ್ಥಾನ E ಆಗಿರಲಿ. ಆಗ E ಯ ಧ್ರುವೀಯ ನಿರ್ದೇಶಕಗಳು (r, θ). ಈಗ, ಗ್ರಹದ ಮೇಲೆ ವರ್ತಿಸುತ್ತಿರುವ ಏಕಮಾತ್ರ ಬಲ ES ದಿಶೆಯಲ್ಲಿ ಇರುವುದರಿಂದ SEಗೆ ಲಂಬ ದಿಶೆಯಲ್ಲಿ Eಗೆ ವೇಗೋತ್ಕರ್ಷವಿರುವುದಿಲ್ಲ.

$$\therefore \ \frac{1}{r}\frac{d}{dt}\left(r^2\frac{d\theta}{dt}\right)=0$$

$$\therefore \ r^2\frac{d\theta}{dt} = \text{ಸ್ಥಿರಾಂಕ, h ಆಗಿರಲಿ}$$

ಈಗ $\frac{1}{2}r^2 d\theta/dt$ ಉತ್ಪನ್ನ ಖಂಡ SPE ಯ ಸಲೆವೇಗವನ್ನು (ಎಂದರೆ SPEಯ ಸಲೆ ಏರುವ ದರ) ಸೂಚಿಸುತ್ತದೆ. ಮೇಲಿನ ಫಲಿತಾಂಶದಿಂದ ಗ್ರಹದ ಸಲೆವೇಗ ಸ್ಥಿರವೆಂದೂ



ಚಿತ್ರ 2

ಅದರ ಪರಿಮಾಣ h/2 ಅಥವಾ h ಸಲೆವೇಗದ ಎರಡರಷ್ಟು ಎಂದೂ ತಿಳಿಯುವುದು.

ಸೂರ್ಯನಿಂದ ಗ್ರಹದ ಮೇಲೆ ವರ್ತಿಸುತ್ತಿರುವ ಬಲದ ಪರಿಣಾಮವಾಗಿ ES ದಿಶೆಯಲ್ಲಿ ಗ್ರಹದ ವೇಗೋತ್ಕರ್ಷ Fನ್ನು

$$F = h^2u^2 \,(u + d^2u/d\theta^2)$$

ಸಮೀಕರಣ ನೀಡುತ್ತದೆ. ಇಲ್ಲಿ $U=1/r$. ದೀರ್ಘವೃತ್ತದ ಧ್ರುವೀಯ ಸಮೀಕರಣ $l/r=1+e\cos\theta$ ದ ನೆರವಿನಿಂದ ಮೇಲಿನ ಸಮೀಕರಣವನ್ನು ಸರಳೀಕರಿಸಿದಾಗ

$$F= h^2u^2/l = h^2/l.\ l/r^2 = u/r^2$$

ದೊರೆಯುತ್ತದೆ. ಇಲ್ಲಿ $U=h^2/l$. ಆದ್ದರಿಂದ ಸೂರ್ಯ ಒಂದು ಗ್ರಹವನ್ನು ಸೂರ್ಯ–ಗ್ರಹ ದೂರದ ವ್ಯಸ್ತ ವರ್ಗಾನುಪಾತದಲ್ಲಿ ಆಕರ್ಷಿಸುತ್ತಿದೆ ಎಂದಾಯಿತು. ಕೆಪ್ಲರ್ ಒದಗಿಸಿದ ತಳಹದಿ ನ್ಯೂಟನ್ನನ ಸಾರ್ವತ್ರಿಕ ಗುರುತ್ವಾಕರ್ಷಣ ಬಲದ ನಿಯಮದ ಪ್ರತಿಪಾದನೆಯಲ್ಲಿ ಅತಿ ಪರಿಣಾಮಕಾರಿಯಾಯಿತು. ಬಲದ ಭೌತ ವ್ಯಾಖ್ಯೆಯನ್ನು ನ್ಯೂಟನ್ ನಿಖರವಾಗಿ ಮಂಡಿಸಿ ಆಕಾಶಕಾಯಗಳ ಪರಸ್ಪರ ಆಕರ್ಷಣೆಯ ಸೂತ್ರವನ್ನು ನಿರೂಪಿಸಲು ಸಾಧ್ಯವಾಯಿತು.

ಕೆಪ್ಲರನ ನಿಯಮಗಳು ಸನ್ನಿಕಟ ನಿಯಮಗಳು ಮಾತ್ರವೆಂದು ತಿಳಿಯಬೇಕು. ಆಕಾಶದ ಬಲು ಸಂಕೀರ್ಣ ರಚನೆಯಲ್ಲಿ ಒಂದು ಕಾಯದ ಮೇಲೆ ಪ್ರಯುಕ್ತವಾಗುವ ಬಲಗಳ ವ್ಯವಸ್ಥೆ ಸಂಕೀರ್ಣವಾದದ್ದರಿಂದ ಪರಿಸ್ಥಿತಿ ಹೀಗಿದೆ. (ಆರ್.ಜಿ.ಆರ್.)

**ಕೆಪ್ಲರನ ಸಮೀಕರಣ :** ದೀರ್ಘವೃತ್ತದ ಮೇಲೆ ಇರುವ ಒಂದು ಬಿಂದುವಿನ ಕೋನಮಾಪನವನ್ನು ಎರಡು ಭಿನ್ನವ್ಯವಸ್ಥೆಗಳಲ್ಲಿ ಮಾಡಿದಾಗ ಅವುಗಳ ನಡುವಿನ ಸಂಬಂಧವನ್ನು ನಿರೂಪಿಸುವ ಸಮೀಕರಣ. ಮುಖ್ಯವಾಗಿ ಖಗೋಳ ವಿಜ್ಞಾನದಲ್ಲಿ, ಸೂರ್ಯನ ಸುತ್ತ ಗ್ರಹಗಳ ಪರಿಭ್ರಮಣೆಯ ಗಣಿತ ವಿಶ್ಲೇಷಣೆ ಮಾಡುವಾಗ, ಈ ಸಮೀಕರಣದ ಉಪಯೋಗ ಉಂಟು.

ಚಿತ್ರದಲ್ಲಿ ದೀರ್ಘವೃತ್ತದ ಒಂದು ನಾಭಿಯಲ್ಲಿ ಸೂರ್ಯ ಖ ಇದೆ. ಅ ದೀರ್ಘವೃತ್ತದ ಕೇಂದ್ರ, E ಗ್ರಹದ ಒಂದು ಸ್ಥಾನ $\angle PSE = v$ ಆಗಿರಲಿ. ಇದರ ಹೆಸರು ನಿಜಕೋನಾಂತರ (ಟ್ರೂ ಅನಾಮಲಿ). '= u ಆಗಿರಲಿ. ಇದರ ಹೆಸರು ಉತ್ಕೇಂದ್ರೀಯ ಕೋನಾಂತರ (ಅಕ್ಸೆಂಟ್ರಿಕ್ ಅನಾಮಲಿ) ಆಗ

$$\tan\frac{u}{2}$$

ಎಂಬ ಸಂಬಂಧ ದೊರೆಯುತ್ತದೆ. ಇದು ಕೆಪ್ಲರನ ಸಮೀಕರಣಕ್ಕೆ ಒಂದು ನಿದರ್ಶನ.

ಗ್ರಹ E ಸೂರ್ಯ Sನ್ನು ಪರಿಭ್ರಮಿಸುವಾಗ ಸಲೆವೇಗ ಸ್ಥಿರವಾಗಿರುತ್ತದೆ. **(ನೋಡಿ–ಕೆಪ್ಲರನ ನಿಯಮಗಳು)**. ಆದ್ದರಿಂದ ಕೋನವೇಗ, ಎಂದರೆ v ಏರುವ ದರ




ಅಥವಾ $\frac{dv}{dt}$ ಸ್ಥಿರವಾಗಿರುವುದಿಲ್ಲ. ಕಾಲ ಸಂಸ್ಕರಣೆ (ನೋಡಿ–ಕಾಲಮಾಪನ) ಮಾಡುವಾಗ $E_1$ ಎಂಬ ಒಂದು ಕಾಲ್ಪನಿಕ ಕಾಯ P ಯಿಂದ (ಸೂರ್ಯನೀಚ ಬಿಂದು ಎಂದು ಇದರ ಹೆಸರು) Eಯೊಡನೆ ಹೊರಟು Eಯ ದಿಶೆಯಲ್ಲೇ ಅದೇ ಕಕ್ಷೆಯ ಮೇಲೆ ಅದರ ಸ್ಥಿರಕೋನವೇಗದಿಂದ ಚಲಿಸಲು ತೊಡಗುವ್ವದೆಂದು ಭಾವಿಸುತ್ತೇವೆ. $E_1$ರ ಸ್ಥಿರಕೋನವೇಗ Eಯ ವಾರ್ಷಿಕ ಸರಾಸರಿ ಕೋನವೇಗಕ್ಕೆ ಸಮ. ಆದ್ದರಿಂದ Pಯಿಂದ A (ಸೂರ್ಯೋಚ್ಚ ಬಿಂದು ಎಂದು ಹೆಸರು) ವರೆಗೆ E ಮೊದಲೂ $E_1$ ಹಿಂದೆಯೂ A ಯಿಂದ P ವರೆಗೆ $E_1$ ಮೊದಲೂ E ಹಿಂದೆಯೂ ಇರುತ್ತವೆ. Pಯಲ್ಲಿ ಅವು ಐಕ್ಯವಾಗಿರುತ್ತವೆ. ಈಗ $E_1$ ರ ಯಾವುದೇ ಸ್ಥಾನದಲ್ಲಿ $\angle PSE_1$ನ್ನು ಮಾಧ್ಯ ಕೋನಾಂತರ ಎನ್ನುತ್ತೇವೆ. ಇದನ್ನು m ಸಂಕೇತದಿಂದ ಸೂಚಿಸಿದರೆ $\angle PSE_1=m$ ಆಗುವುದು. ಈಗ m ಮತ್ತು u ನಡುವೆ $m=u^-e\sin u$ ಎಂಬ ಸಂಬಂಧವನ್ನು ಸ್ಥಾಪಿಸಬಹುದು. ರೂಢಿಯಲ್ಲಿ ಈ ಸಮೀಕರಣವನ್ನು ಕೆಪ್ಲರನ ಸಮೀಕರಣ ಎನ್ನುತ್ತೇವೆ. (ಆರ್.ಜಿ.ಆರ್.)

**ಕೆಮ್ಮೀನು :** *ಸಬಾಸ್ಟಿಸ್ ಮ್ಯಾರಿನಸ್ ಮತ್ತು ಎನ್‌ಗ್ರಾಲಿಸ್ ಕಮರ್‌ಸೋನಿಯಾನಸ್* ಎಂಬ ಶಾಸ್ತ್ರೀಯ ಹೆಸರಿನ ಮೀನುಗಳಿಗಿರುವ ಸಾಮಾನ್ಯ ಹೆಸರು (ರೆಡ್‌ಫಿಷ್). ಇವುಗಳಲ್ಲಿ ಮೊದಲನೆಯದು ಉತ್ತರ ಅಟ್ಲಾಂಟಿಕ್ ಸಮುದ್ರದಲ್ಲಿ ಸುಮಾರು 300′–700′ ಆಳದಲ್ಲಿ ಬಂಡೆಗಳ ಸಮೀಪದಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಇದರ ಉದ್ದ 2′; ಕೆಲವೊಮ್ಮೆ 3′ ಉದ್ದಕ್ಕೂ ಬೆಳೆಯುವುದುಂಟು. ತೂಕ ಸುಮಾರು 6 ಕೆಜಿ. ಈ ಮೀನು ಮೊಟ್ಟೆ ಇಡುವುದಿಲ್ಲ; ನೇರವಾಗಿ ಮರಿಗಳನ್ನೇ ಈಯುತ್ತದೆ. ಒಂದು ಮೀನು ಒಂದೇ ಸಲ ಇಪ್ಪತ್ತು ಸಾವಿರ ಮರಿಗಳನ್ನು ಹೊತ್ತುಕೊಂಡಿರಬಲ್ಲುದು. ಈ ಜಾತಿಯ ಮೀನುಗಳಲ್ಲಿ ವಲಸೆ ಹೋಗುವ ಅಭ್ಯಾಸವಿಲ್ಲ. ಇದು ಒಳ್ಳೆಯ ಆಹಾರದ ಮೀನೆಂದು ಹೆಸರಾಗಿದೆ.

ಇನ್ನೊಂದು ಜಾತಿಯ ಕೆಮ್ಮೀನು ಭಾರತ ಹಾಗೂ ಮಲಯ ದೇಶಗಳ ಸಮುದ್ರಗಳಲ್ಲಿ ವಾಸಿಸುತ್ತದೆ. ದೇಹದ ಉದ್ದ ಸುಮಾರು 8". ಒಳ್ಳೆಯ ಆಹಾರವೆಂದು ಹೆಸರು ಪಡೆದಿದೆ. ಇದನ್ನು ಸಂಸ್ಕರಿಸಿ ಒಂದು ರೀತಿಯ ಮಸಾಲೆ ಮೀನನ್ನು ತಯಾರಿಸುತ್ತಾರೆ. ಮೊದಲಿಗೆ ಮೀನಿನ ತಲೆಯನ್ನು ತೆಗೆದು ದೇಹವನ್ನು ಶುಚಿಗೊಳಿಸುತ್ತಾರೆ. ಅನಂತರ ಎಂಟು ಭಾಗ ಮೀನಿಗೆ ಒಂದು ಭಾಗದಂತೆ ಉಪ್ಪು ಬೆರೆಸಿ ಒಂದು ಮಣ್ಣಿನ ಪಾತ್ರೆಯಲ್ಲಿ ಹಾಕಿ ಪಾತ್ರೆಯ ಮೇಲೆ ತೆಳುವಾದ ಹಲಗೆ ಅಥವಾ ಬಾಳೆಎಲೆ ಹಾಸಿ ದೊಡ್ಡ ದೊಡ್ಡ ಕಲ್ಲುಗಳನ್ನು ಹೇರುತ್ತಾರೆ. 3–4 ದಿವಸಗಳ ಅನಂತರ ಮೀನನ್ನು ಉಪ್ಪಿನಿಂದ ಬೇರ್ಪಡಿಸಿ ಹೆಂಡದಿಂದ ಸಂತೃಪ್ತಗೊಳಿಸುತ್ತಾರೆ. ಆಮೇಲೆ ಅದಕ್ಕೆ ಶುಂಠಿ ಪುಡಿ, ಮೆಣಸು, ಬ್ರಾಂದಿ ಮತ್ತು ಕೆಂಪು ಅಕ್ಕಿ ಹಿಟ್ಟನ್ನು ಬೆರೆಸಿ ಮೂರು ದಿವಸಗಳ ತರುವಾಯ ಮತ್ತೊಂದಿಷ್ಟು ಹೆಂಡವನ್ನು ಸೇರಿಸಿ ಸೀಸೆಗಳೊಳಗೆ ತುಂಬುತ್ತಾರೆ. ನಾಲ್ಕು ಐದು ತಿಂಗಳುಗಳ ಅನಂತರ ಇದನ್ನು ಉಪಯೋಗಿಸುತ್ತಾರೆ. ಇದಕ್ಕೂ ಕೆಮ್ಮೀನೆಂದೇ ಹೆಸರು.

(ಎಂ.ಜೆ.ಎಸ್.ಆರ್.)

**ಕೆಮ್ಮು :** ಶ್ವಾಸೇಂದ್ರಿಯ ಪ್ರದೇಶಕ್ಕೆ ರೋಗಾಣುಗಳು, ಹಾನಿಕರವಾದ ಕೊಳೆ, ಕೆಟ್ಟವಾಯು, ದೂಳು, ಪುಷ್ಪಪರಾಗಗಳು ಇತ್ಯಾದಿ ಬಾಹ್ಯ ಸೂಕ್ಷ್ಮವಸ್ತುಗಳು ಸೇರಿಕೊಂಡಾಗ ಆ ಪ್ರದೇಶ ಕೆರಳಿ ಉಂಟಾಗುವ ಒಂದು ನಿರಿಚ್ಛಾ ಪ್ರತಿಕ್ರಿಯೆ. ಇದು ಶ್ವಾಸೇಂದ್ರಿಯಗಳನ್ನು ಶುದ್ಧಗೊಳಿಸುವ ನೈಸರ್ಗಿಕ ವಿಧಾನ. ಸಾಮಾನ್ಯವಾಗಿ ಕೆಮ್ಮು ರೋಗದ ಚಿಹ್ನೆ. ಹೊಗೆಸೊಪ್ಪಿನ ಅತಿಯಾದ ಸೇವನೆ, ಅತಿಯಾದ ಮದ್ಯಪಾನ, ಧ್ವನಿನಾಳಗಳನ್ನು ಸರಿಯಾಗಿ ಉಪಯೋಗಿಸದೆ ಇರುವುದು ಮುಂತಾದ ಕಾರಣಗಳಿಂದ ಕೆಮ್ಮು ಉಂಟಾಗುತ್ತದೆ. ಕಿರುನಾಲಗೆ ಮತ್ತು ಅಡಿನಾಯ್ಡ್ ಗ್ರಂಥಿಗಳ ಊತದಿಂದಲೂ ತೀವ್ರವಾದ ಶೀತದಿಂದಲೂ ಕೆಮ್ಮು ಕೆರಳುವುದುಂಟು. ಕೆಮ್ಮಿನ ಕ್ರಿಯಾತಂತ್ರ ಈ ರೀತಿ ಇದೆ: ದೀರ್ಘವಾಗಿ ಉಸಿರನ್ನು ತೆಗೆದುಕೊಂಡ ತರುವಾಯ ಧ್ವನಿತಂತುಗಳು ಇದ್ದಕ್ಕಿದ್ದಂತೆ ತೆರೆದುಕೊಂಡು ಶ್ವಾಸಕೋಶಗಳಿಂದ ಗಾಳಿ ಬಲವಂತವಾಗಿ ಹೊರದೂಡಲ್ಪಡುತ್ತದೆ; ಆಗ ಅದು ಧ್ವನಿಪೆಟ್ಟಿಗೆ ಅಥವಾ ಕೆಳವಾಯುನಾಳಗಳಲ್ಲಿ ಸೇರಿಕೊಂಡಿದ್ದ ಕೆರಳಿಕೆ ಉಂಟು ಮಾಡುವ ವಸ್ತುಗಳನ್ನು ತನ್ನ ಜೊತೆಯಲ್ಲೇ ಒಯ್ಯುತ್ತದೆ; ಇದರಿಂದ ಕೆಮ್ಮು ಉಂಟಾಗುತ್ತದೆ. ದೇಹದ ಯಾವುದಾದರೂ ಒಂದು ಭಾಗದಲ್ಲಿ ಕೆರಳಿಕೆ ಆದಾಗ ಕೆಮ್ಮು ಉಂಟಾಗುವುದರಿಂದ ಇದೊಂದು ನಿರಿಚ್ಛಾ ಪ್ರತಿಕ್ರಿಯೆ. ಕೆರಳಿಕೆ ಮಿದುಳು ಅಥವಾ ಬೆನ್ನುಹುರಿಯಲ್ಲಿ ಒಂದು ನರದ ಕೇಂದ್ರಕ್ಕೆ ನರದ ಪ್ರೇರಣೆಯನ್ನು ಒಯ್ಯುವಂತೆ ಮಾಡಿ ಆ ಕೇಂದ್ರದಲ್ಲಿ ನರಗಳ ಶಕ್ತಿಯನ್ನು ಬಿಡುಗಡೆ ಮಾಡುತ್ತದೆ. ಆ ಶಕ್ತಿ ಬೇರೆ ನರಗಳ ಮೂಲಕ ಹಾದು, ಸ್ನಾಯುಗಳ ಸಂಕೋಚನೆಗೆ, ಗ್ರಂಥಿಯ ಚಟುವಟಿಕೆಗೆ ಕಾರಣವಾಗುತ್ತದೆ. ಕೆಮ್ಮಿನ ನರದ ಕೇಂದ್ರ ಮಿದುಳಿನ ಅತ್ಯಂತ ಕೆಳಭಾಗವಾದ ಮಿಡುಲ ಅಬ್ಲಾಂಗೇಟದಲ್ಲಿದೆ.

ಕೆರಳಿಕೆ ಸಾಮಾನ್ಯವಾಗಿ ಉಂಟಾಗುವುದು ಧ್ವನಿಪೆಟ್ಟಿಗೆ ಅಥವಾ ಅದರ ಕೆಳಗಿನ ವಾಯು ನಾಳಗಳಲ್ಲಿ. ತಪ್ಪು ದಾರಿಯಲ್ಲಿ ಹೋದ ಆಹಾರದ ಚೂರು ಬಲವಂತವಾಗಿ ಹೊರದೂಡಲ್ಪಡುತ್ತದೆ. ಕೆಮ್ಮು ಹೇಗೆ ಉಪಯೋಗಕರವಾಗಿ ಪರಿಣಮಿಸಬಹುದು ಎಂಬುದಕ್ಕೆ ಇದು ನಿದರ್ಶನ. ರಕ್ತಸ್ರಾವ ಅಥವಾ ಯಾವುದೇ ಹೊರಗಿನ ವಸ್ತು ಕೆರಳಿಕೆಯನ್ನು ಉಂಟುಮಾಡಬಹುದು. ಆಗ ಇದೇ ವಿಧಾನದಿಂದ ಅದು ಹೊರ ಹಾಕಲ್ಪಡುತ್ತದೆ. ಇಂಥ ಸಂದರ್ಭಗಳಲ್ಲೆಲ್ಲ ಕೆಮ್ಮನ್ನು ನಿಲ್ಲಿಸುವುದು ಸರಿಯಲ್ಲ. ಬೇಕಾದರೆ ಅಂಥ ಕೆರಳಿಕೆಯ ವಸ್ತುವನ್ನು ಹೊರಹಾಕಲು ಸುಲಭವಾಗುವಂಥ ಬೇರೆ ಯಾವುದಾದರೂ ವಿಧಾನವನ್ನು ಅನುಸರಿಸಬಹುದು.

ಕೆಮ್ಮು ಈ ಮುಂದಿನ ಅನೇಕ ರೋಗಗಳಲ್ಲಿ ಕಾಣಿಸಿಕೊಳ್ಳುತ್ತದೆ: ನೆಗಡಿ, ಗಂಟಲುನೋವು, ಎದೆಯ ಕ್ಷಯ, ನ್ಯುಮೋನಿಯ, ದಡಾರ, ಸಿಡುಬು, ನಾಯಿ ಕೆಮ್ಮು, ಪ್ಲೂರಸಿ, ಬ್ರಾಂಕೈಟಿಸ್, ಬ್ರಾಂಕಿಯೆಕ್‌ಟೇಸಿಸ್, ಉಸಿರುನಾಳ ಗಂತಿ ಮುಂತಾದವು. ಸಾಮಾನ್ಯವಾಗಿ ಕೆಮ್ಮಿನ ಲಕ್ಷಣಗಳನ್ನು ಗಮನಿಸಿ ಕಾಯಿಲೆಯ ಸ್ವರೂಪವನ್ನು ನಿರ್ಧರಿಸಬಹುದು.

ನಾಯಿಕೆಮ್ಮು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡು ತಿಂಗಳುಗಟ್ಟಲೆ ಕಾಡುತ್ತದೆ. ಒಂದೇ ಸಮನೆ ಕೆಮ್ಮು ಬಂದು ಉಸಿರು ಕಟ್ಟುವಂತೆ ಮಾಡುತ್ತದೆ. ಪ್ರಾರಂಭದಲ್ಲಿ ಸ್ವಲ್ಪ ನೆಗಡಿ, ಜ್ವರ, ಕೆಮ್ಮು ಇರುತ್ತವೆ. ರಾತ್ರಿ ಹೊತ್ತು ಕೆಮ್ಮು ಉಲ್ಬಣವಾಗುತ್ತದೆ. ಉಸಿರನ್ನು ಎಳೆದುಕೊಳ್ಳುವುದಕ್ಕೆ ಆಗುವುದೇ ಇಲ್ಲ. ಕೆಮ್ಮು ನಿಂತು ಉಸಿರು ತೆಗೆದುಕೊಂಡಾಗ ವಿಕಾರವಾದ ಧ್ವನಿ ಹೊರಡುತ್ತದೆ. ಕೆಮ್ಮು ಹೆಚ್ಚಿದಾಗ ವಾಂತಿಯಾಗುತ್ತದೆ. ಇದರ ಕಫದಿಂದ ಸೋಂಕು ಹರಡುತ್ತದೆ. **(ನೋಡಿ– ನಾಯಿಕೆಮ್ಮು)** ನ್ಯುಮೋನಿಯದ ಕೆಮ್ಮಾದರೆ ಎದೆ ನೋಯುತ್ತದೆ. ಕಫ ಸ್ವಲ್ಪ ಕೆಂಪು ಅಥವಾ ಹಳದಿ ಬಣ್ಣದ್ದಾಗಿರಬಹುದು. ಈ ಕೆಮ್ಮಿನ ಜೊತೆ ಜ್ವರವೂ ಇರುತ್ತದೆ. ಉಸಿರು ಬೇಗ ಬೇಗ ಕಷ್ಟದಿಂದ ಬರುತ್ತಿರುತ್ತದೆ.

ದೀರ್ಘಕಾಲ ಉಳಿಯುವ ಕೆಮ್ಮು ಕ್ಷಯದ ಲಕ್ಷಣಗಳಲ್ಲಿ ಒಂದು. ನಿಡುಗಾಲದ ಬ್ರಾಕೇಂಕೈಟಿಸ್ ಕೆಮ್ಮು, ಕಫವನ್ನು ಉಂಟುಮಾಡುತ್ತದೆ. ಕೆಲವರಲ್ಲಿ ಕೆಮ್ಮು ಪ್ರಾತಃಕಾಲದಲ್ಲಿ ಬರುವುದು. ಕೆಲವರಲ್ಲಿ ರಾತ್ರಿ ಕಾಲದಲ್ಲಿ ಮಾತ್ರ ಕೆಮ್ಮು ಕಾಣಿಸಿಕೊಳ್ಳುವುದುಂಟು. ಇನ್ನು ಕೆಲವರಲ್ಲಿ ಕುಕ್ಕಲು ಕೆಮ್ಮಿನ ಹಾಗೆ ಬಂದು ವಾಂತಿಯಾಗುವವರೆಗೂ ನಿಲ್ಲುವುದಿಲ್ಲ. ರೋಗ ಪ್ರಬಲವಾಗುತ್ತ ಬಂದಾಗ ಕೆಮ್ಮು ಸರಾಗವಾಗಿ ಜೊತೆಗೆ ಶ್ಲೇಷ್ಮ ಸಹ ಬರುವುದಕ್ಕೆ ಪ್ರಾರಂಭವಾಗುತ್ತದೆ. ಶ್ಲೇಷ್ಮದಲ್ಲಿ ರಕ್ತವೂ ಇರಬಹುದು. ಎಡಬಿಡದ ಕೆಮ್ಮು ಗಂಟಲಿನ ಏಡಿಗಂತಿಯನ್ನು ಸೂಚಿಸುತ್ತದೆ. ಕೆಮ್ಮಿಗೆ ಚಿಕಿತ್ಸೆ ಆಯಾ ರೋಗವನ್ನು ಅವಲಂಬಿಸಿದೆ.

(ಎಸ್‌ಎಚ್.ಪಿ.)

**ಕೆರ್, ಜಾನ್ :** 1824–1907. ಬ್ರಿಟನ್ನಿನ ಭೌತವಿಜ್ಞಾನಿ. ಬೆಳಕು ಮತ್ತು ಸ್ಥಾಯೀ ವಿದ್ಯುತ್ ಕ್ಷೇತ್ರಗಳ ಪರಸ್ಪರ ಸಂಬಂಧವನ್ನು ಅನುಮಾನಿಸಿ ಮೊದಲು ಗುರುತಿಸಿದಾತ. ಸಾಮಾನ್ಯ ಗಾಜು, ಎಣ್ಣೆ ಮೊದಲಾದವು ಪಾರದರ್ಶಕಗಳಾಗಿದ್ದು ಬೆಳಕಿನ ಒಂದು ವರ್ಣದ ಒಂದು ಕಿರಣವನ್ನು ಒಂದೇ ನಿಶ್ಚಿತ ದಿಕ್ಕಿನಲ್ಲಿ ಹಾಯಗೊಡುತ್ತವೆ. ಆದರೆ ಪ್ರಬಲ ವಿದ್ಯುತ್ ಕ್ಷೇತ್ರದಲ್ಲಿ ಇಂಥ ಪಾರದರ್ಶಕ ವಸ್ತುಗಳನ್ನಿಟ್ಟರೆ ಮೇಲಿನ ಬೆಳಕಿನ ಕಿರಣ ಪೃಥಕ್ಕಾದ ಎರಡು ದಿಕ್ಕುಗಳಲ್ಲಿ ಚಲಿಸುತ್ತದೆ. ಇದನ್ನು ವಕ್ರೀಭವನ (ಡಬಲ್ ರಿಫ್ರಾಕ್ಷನ್) ಎನ್ನುತ್ತಾರೆ. ಕೆರ್ ಈ ವೈಚಿತ್ರ್ಯವನ್ನು 1875ರಲ್ಲಿ ತನ್ನ ಪ್ರಯೋಗಗಳ ಮೂಲಕ ತೋರಿಸಿದ. ಇದಕ್ಕೆ ಬೆಳಕಿನ ಕೆರ್ ಪರಿಣಾಮ ಎಂದು ಹೆಸರು. ಪರಸ್ಪರ ಲಂಬವಾದ ನಿಲುವುಳ್ಳ ಎರಡು ನಿಕ್ಕಲ್ ಅಶ್ರಗಳ ನಡುವೆ ನೈಟ್ರೋಬೆನ್ಜೀನನ್ನು ಇರಿಸಿ ಇದರ ಸುತ್ತಲೂ ಆವರ್ತಶೀಲ ವಿದ್ಯುತ್ ಕ್ಷೇತ್ರವನ್ನು ಉಂಟುಮಾಡಿದರೆ ಕಿರಣ ಬೆಳಕು ಕತ್ತಲುಗಳ ಕಣ್ಣುಮುಚ್ಚಾಲೆಯಾಡುತ್ತದೆ. ಇದನ್ನು ಗಮನಿಸಿ ತಕ್ಕ ಅಳತೆಗಳಿಂದ ಬೆಳಕಿನ ವೇಗವನ್ನು ನಿರ್ಣಯಿಸಲಾಗಿದೆ (1926), ಮಾತ್ರವಲ್ಲದೆ ಕೆರ್ ಪರಿಣಾಮ ಕಾಂತಕ್ಷೇತ್ರ ಮತ್ತು ಬೆಳಕಿನ ಸಂಬಂಧದ ಪರಿಣಾಮವನ್ನು ಅನುಮಾನಿಸಲು ನೆರವಾಗಿದೆ.

(ಯು.ಎಲ್.ಎ.)

**ಕೆರಟೈಟಿಸ್ :** ಇದು ಕಣ್ಣಿನಲ್ಲಿರುವ ಪಾರದರ್ಶಕ ಪಟಲ ಕಾರ್ನಿಯದ ಉರಿಯೂತ – ಗಾಳಿದೂಳುಗಳಿಗೆ ಕಾರ್ನಿಯ ತೆರೆದೊಡ್ಡಿರುವುದರಿಂದ ಇದಕ್ಕೆ ಹೊರಗಿನಿಂದ ಗಾಯ. ಪೆಟ್ಟುಗಳಾಗಬಹುದಲ್ಲದೆ ಕೂಡುಪೊರೆಯಲ್ಲಿ (ಕಂಜಂಕ್ಟೈವ) ರೋಗಾಣುಗಳೂ ಸೇರಿ ಉರಿಯೂತ ತಲೆದೋರಬಹುದು. ಇದರ ಹೊರಗಿನ ಪದರಗಳಲ್ಲಿ ಮಾತ್ರ ಹೀಗಾದರೆ ಅದು ಮೇಲುಭಾಗದ ಕೆರಟೈಟಿಸ್ ಎನಿಸುತ್ತದೆ. ಅಪೂರ್ವವಾಗಿ ಉರಿಯೂತ ಒಳಗಿನಿಂದ ಆಗುವುದಾದರೆ ಅದು ಈ ಕಾರ್ನಿಯದ ಅಂಚಿನಿಂದ ಆರಂಭವಾಗಿ ಇನ್ನೂ ಆಳದ ಪದರಗಳಲ್ಲಿರುತ್ತದೆ. ಕಣ್ಣುನೋವು, ಬೆಳಕಿನಲ್ಲಿ ಕಣ್ಣುಬಿಡಲಾಗದ ಬೆಳಕಂಜಿಕೆ, ರೆಪ್ಪೆನಡುಕ, ಕಣ್ಣೀರು ಸುರಿತ, ದೃಷ್ಟಿ ಕಡಿಮೆಯಾಗುವುದು ಇದರ ಲಕ್ಷಣಗಳು. ಉಬ್ಬರಿಸಿಕೊಂಡು ಬಿಳಿರಕ್ತಕಣಗಳು ಒಳನುಗ್ಗುವುದರಿಂದ ಕಾರ್ನಿಯದ ಸುತ್ತಲೂ ರಕ್ತನಾಳಗಳು ಎದ್ದುಕಾಣುತ್ತವೆ. ಕಾರ್ನಿಯ ಮಸಕಾಗುತ್ತದೆ. ಮೇಲುಭಾಗದ ಕೆರಟೈಟಿಸ್‌ನಲ್ಲಿ ಕೀವು ತುಂಬಿ ಹುಣ್ಣಾಗಬಹುದು. ಕೀವು ತುಂಬದಿರಲೂಬಹುದು, ಅಂಚುಗಳಲ್ಲೊ ನಡುವೆಯೊ ಆಗಿರಬಹುದು. ಅಂಚುಗಳಲ್ಲಾಗುವ ಕೆರಟೈಟಿಸನ್ನು ಶೀತಸುರಿತದ ಹುಣ್ಣುಗಳು (ಸುಮಾರು ಶೇ. 90). ಅಂಚುಗಳಿಂದ ಒಳನುಗ್ಗಿದವು, (ಸುಮಾರು ಶೇ. 70), ಮೂರೆನ್‌ನ ಹುಣ್ಣುಗಳು (ಸುಮಾರು ಶೇ. 3), ಅಲ್ಲದೆ ಹೊಪ್ಪಳೆಯ ರೋಗ, ರವೆಗಣ್ಣು (ಟ್ರಾಕೋಮ), ಪೊರೆಗಟ್ಟುವ ಕೂಡುಪೊರೆಯುರಿತಗಳಿಂದ ದ್ವಿತೀಯಕವಾಗಿಬಂದವು ಎಂದು ವಿಂಗಡಿಸಬಹುದು. ಕ್ಷಯ, ವಿಷಕಣಗಳ ಸೋಂಕುಗಳಿಂದಲೂ ಹಾಗೂ ಗೊತ್ತಿರದ ಕಾರಣಗಳಿಂದಲೂ ನಡುವಣ ಪದರಗಳ ಕೆರಟೈಟಿಸ್ ಆಗಬಹುದು. ಇಲ್ಲೆಲ್ಲ ತುರ್ತಿನ ಚಿಕಿತ್ಸೆ ಅತ್ಯಗತ್ಯ. ಹಾಗೇ ಬಿಟ್ಟರೆ, ಮುಂದೆ ಕುರುಡೂ ಆಗಬಹುದು. ಏಕೆಂದರೆ ಗಾಯದ ಹುಣ್ಣು ಹೆಚ್ಚಾಗಿ, ವಾಸಿಯಾದಾಗ ಕಾರ್ನಿಯ ಬಿಳಿಯಾಗಿ, ಮಸಕಾಗಿ ಉಳಿದ ನೋಟಕ್ಕೆ ಅಡ್ಡಿಪಡಿಸುತ್ತದೆ. ಕಣ್ಣನ್ನು ಕೆರಳಿಸುವ ಕಾರಣವನ್ನು ಪಿಸರನ್ನೂ ತೆಗೆಯಬೇಕು. ಅಟ್ರೋಪೀನ್ ದ್ರಾವಣದ ತೊಟ್ಟುಗಳು ಮತ್ತು ಜೀವಿರೋಧಕಗಳು (ಆಂಟಿಬಯೋಟಿಕ್ಸ್) ಬೇಕಾಗಬಹುದು. ಬೇಗನೆ ವಾಸಿಯಾಗುವಂತೆ ರಕ್ತದ ಹರವನ್ನು ಹೆಚ್ಚಿಸಲು ಕಣ್ಣಿಗೆ ಕಾವು ಕೊಡಬೇಕು. ಕಣ್ಣುಗಳಿಗೆ ಕಪ್ಪುಕನ್ನಡಕ ಹಾಕಬೇಕು. ಚಿಕಿತ್ಸೆಗೆ ಜಗ್ಗದಿದ್ದರೆ ಕೆರಟೈಟಿಸ್ ಹುಣ್ಣನ್ನು ರಾಸಾಯನಿಕದಿಂದ ಸುಡಬೇಕಾಗಬಹುದು. ಇನ್ನೂ ಮುಂದಿನ ತೀವ್ರ ಹಂತದಲ್ಲಿ ಶಸ್ತ್ರಕ್ರಿಯೆ ಕಾರ್ನಿಯಲ್ ಟ್ರಾನ್ಸ್‌ಪ್ಲಾಂಟೇಷನ್ ಅಥವಾ ಕಸಿಯೂ ಅಗತ್ಯಬೀಳಬಹುದು.

(ಡಿ.ಸಿ.)

**ಕೆರಟೊಮಲಶಿಯ :** ಜಿಡ್ಡಿನಲ್ಲಿ ಕರಗುವ ಜೀವಸತ್ತ್ವ ಎ ಯ ಕೊರತೆ ಆಹಾರದಲ್ಲಿದ್ದಾಗ ತಲೆದೋರುವ ವ್ಯಾಧಿ. ಪುಷ್ಟಿಕರ ಆಹಾರ ದೊರೆಯದ ಮಕ್ಕಳಲ್ಲಿ ಇದು ಸಾಮಾನ್ಯ. ಎಳೆಗೂಸುಗಳಲ್ಲಿ ನಿವಾರಿಸಬಹುದಾದ ಕುರುಡುತನಕ್ಕೆ ಹೆಚ್ಚಾಗಿ ಹಳ್ಳಿಗಳಲ್ಲಿ ಮುಖ್ಯಕಾರಣವಿದು. ಈ ವ್ಯಾಧಿಯ ಚಿಹ್ನೆಗಳು ಮುಖ್ಯವಾಗಿ ಹೊಟ್ಟೆ ಊದುವುದು, ರಕ್ತಹೀನತೆ, ಸುಲಭವಾಗಿ ನೆಗಡಿ ಕೆಮ್ಮು ಬರುವಿಕೆ, ಶ್ವಾಸಕೋಶಗಳ ಉರಿತ, ಕಿವಿ ಸೋರಿಕೆ, ಅಲ್ಲದೆ ಹಲ್ಲು, ಮೂಳೆ, ಮೆಲ್ಲಲು ಬೆಳೆಯದೆ ಕೂಸು ಬಡಕಲಾಗಿರುವುದು. ಸಂಜೆ ಹೊತ್ತಿನಲ್ಲಿ ಕಣ್ಣು ಮಬ್ಬಾಗಿ ರಾತ್ರಿಕುರುಡೂ ಅತಿಸಾರವೂ ಕಂಡು ಬಂದಾಗ ತಂದೆತಾಯಿ ಇವನ್ನು ಹಲ್ಲುಬರುವುದಕ್ಕಾಗಿ ಎಂದು ಭಾವಿಸಿ ಅಷ್ಟಾಗಿ ಗಮನಿಸುವುದಿಲ್ಲ. ಕಣ್ಣು ಗುಡ್ಡೆಯ ಮುಂದಿರುವ ಪಾರದರ್ಶಕ ಪಟಲ ಕಾರ್ನಿಯ ಮಸಕುಮಸಕಾದ ಮೇಲೆಯೇ ವೈದ್ಯರಲ್ಲಿಗೆ ಕೂಸನ್ನು ತರುವರು. ಆ ಹೊತ್ತಿಗೆ ಕೈಮೀರಿರುತ್ತದೆ. ಬಹುಪಾಲು ಕೂಸುಗಳು ಸತ್ತುಹೋಗುತ್ತವೆ. ಇದರ ಲಕ್ಷಣಗಳು ಕಾಣಿಸಿಕೊಳ್ಳುವುದು ಎಷ್ಟು ನಿಧಾನವೋ ಇದು ವಾಸಿಯಾಗುವುದು ಅಷ್ಟೇ ತಡ. ಕಣ್ಣಿನ ಕೂಡುಪೊರೆ (ಕಂಜಂಕ್ಟೈವ) ಕಣ್ಣೀರಿಲ್ಲದೆ ಒಣಗಿ ಒಣಗಣ್ಣಾಗುವುದು. ಕಾರ್ನಿಯಾದ ಪಕ್ಕಗಳಲ್ಲಿ ರೆಪ್ಪೆಯಂಚಿನ ಗ್ರಂಥಿಗಳಿಂದ ಬರುವ ಸುರಿತವೇ ಪಟ್ಟೆಚೂರಿನಂತೆ ಅಂಟಿಕೊಂಡು ಸಾಬೂನಿನ ನೊರೆಯಂತೆ ಬಿಳುಪಾಗಿ ಕಾಣುವುದು. ಇದನ್ನು ಬೀಟಾಟ್‌ನ ಚುಕ್ಕೆಗಳೆನ್ನುವರು. ಬರಬರುತ್ತ ಕಾರ್ನಿಯ ಒಣಗಿ, ಇದರಲ್ಲಿ ಅರಿವೇ ಇಲ್ಲದಂತಾಗಿ, ಕೆಲವೇ ಗಂಟೆಗಳಲ್ಲಿ ಕರಗಿ ಹುಣ್ಣಾಗುವ ಹೊತ್ತಿಗೆ ಪ್ರಾಣಕ್ಕೆ ಊನವಾಗಬಹುದು. ಕೂಸು ಅಪ್ಪಿತಪ್ಪಿ ಉಳಿದರೂ ಕಣ್ಣು ಪೂರ ಕುರುಡಾಗಿ ದಟ್ಟತಲೆಗಟ್ಟುತ್ತದೆ. ಶ್ವಾಸಕೋಶಗಳಿಗೆ ಸುಲಭವಾಗಿ ಸೋಂಕು ಹತ್ತಿ ಕೂಸು ಸಾಯುವುದು. ಸಾಕಾದಷ್ಟು ಹಾಲು, ಮೊಸರು, ಬೆಣ್ಣೆ ಗಜ್ಜರಿ, ಹಸಿರು ಹಳದಿ ಬಣ್ಣಗಳ ತರಕಾರಿಗಳು, ಅನಾನಸು, ನಿಂಬೆ, ಕಿತ್ತಳೆ ಹಣ್ಣುಗಳನ್ನು ಆಹಾರದೊಂದಿಗೆ ಸೇವಿಸುವುದರಿಂದ ಎ ಜೀವಸತ್ತ್ವದ ಕೊರತೆಯನ್ನು ತಡೆಯಬಹುದು. ಇಲ್ಲವೇ ಷಾರ್ಕ್ ಮೀನೆಣ್ಣೆಯಲ್ಲಿ ಹೇರಳವಾಗಿರುವಂಥ ಎ ಜೀವಸತ್ತ್ವವನ್ನು ದಿನವೂ ಇಂಥ ರೋಗಿಗೆ 5.000, ಬಸುರಿಯರಿಗೆ 6.000,ಹಾಲೂಡಿಸುವವರಿಗೆ 8.000 ಹೀಗೆ ಅಂತರ ರಾಷ್ಟ್ರೀಯ ಏಕಮಾನಗಳಲ್ಲಿ ಕೊಡಬೇಕು. ಒಣಗಣ್ಣು ಸ್ವಲ್ಪ ಕಂಡಕೂಡಲೆ ತುರ್ತಿನ ಚಿಕಿತ್ಸೆ ಕೊಟ್ಟರೆ ಉಳಿಯುವ ಕೆಡುಕನ್ನು ತಪ್ಪಿಸಿ ಕೂಸನ್ನು ಉಳಿಸಬಹುದು.

ಕಳೆದ 15-20 ವರ್ಷಗಳಿಂದ ಈಚೆಗೆ ಈ ರೀತಿಯ ಕೆರಟೋಮಲೇಷಿಯ ಹಾಗೂ ವಿಟಮಿನ್ 'ಎ' ಕೊರತೆ ತುಂಬಾ ಕಡಿಮೆಯಾಗಿದೆ. ಪ್ರಾಥಮಿಕ ಆರೋಗ್ಯ ಘಟಕ, ಆರೋಗ್ಯ ಕೇಂದ್ರಗಳ ಮೂಲಕ ಕೇಂದ್ರಸರ್ಕಾರ 'ಎ' ಅನ್ನಾಂಗದ ಗುಳಿಗೆಗಳನ್ನು ದಾದಿಯರ ಮೂಲಕ ವಿತರಿಸಿದ ವ್ಯವಸ್ಥೆ ಬಹಳವಾಗಿ ಇದಕ್ಕೆ ಕಾರಣವಾಗಿದೆ. (ಡಿ.ಪಿ.)

**ಕೆರಾಟಿನ್‌ಗಳು :** ಸ್ಕ್ಲೀರೊಪ್ರೋಟೀನ್ ವರ್ಗಕ್ಕೆ ಸೇರಿದ ಕೆಲವು ವಿಶಿಷ್ಟ ಅದ್ರಾವ್ಯ ಸಸಾರಜನಕಗಳ ಗುಂಪು. ಪ್ರಾಣಿಗಳ ಚರ್ಮ, ಕೂದಲು, ಉಗುರು, ಗೊರಸು, ಪಂಜ ಮತ್ತು ಉಣ್ಣೆಯಲ್ಲಿ ಕೆರಾಟಿನ್‌ಗಳಿರುತ್ತವೆ. ಸಾಮಾನ್ಯವಾಗಿ ಸಸಾರಜನಕಗಳು ಲೀನವಾಗುವ ದ್ರವಗಳಲ್ಲಿ ಇವು ಕರಗುವುದಿಲ್ಲ. ಪೆಪ್ಸಿನ್ ಮತ್ತು ಟ್ರಿಪ್ಸಿನ್ ಕಿಣ್ವಗಳು ಕೆರಾಟಿನ್‌ಗಳೊಡನೆ ವರ್ತಿಸಲಾರವು. ಮೇಲ್ಕಂಡ ಯಾವುದಾದರೂ ಕೆರಾಟಿನ್‌ಯುಕ್ತ ವಸ್ತುವನ್ನು ಆಲ್ಕೊಹಾಲ್ ಈಥರ್ ಮತ್ತು ನೀರಿನಿಂದ ಸಂಸ್ಕರಿಸಿದಾಗ ಸಸಾರಜನಕಗಳು ಲಭಿಸುವುವು. ಇವನ್ನು ಕಿಣ್ವಗಳ ನೆರವಿನಿಂದ ಜಲವಿಶ್ಲೇಷಣೆಗೊಳಿಸಿದರೆ ಕೆರಾಟಿನ್ ಮಾತ್ರ ಉಳಿಯುವುದು. ಜಲವಿಶ್ಲೇಷಣೆಗೆ ಪ್ರಬಲ ಆಮ್ಲವನ್ನು ಬಳಸಿದರೆ ಗಂಧಕಯುಕ್ತ ಅಮೈನೋ ಆಮ್ಲವಾದ ಸಿಸ್ಟೈನ್ ಅಧಿಕ ಪರಿಮಾಣದಲ್ಲಿ ದೊರೆಯುವುದು. ಅಂದರೆ ಕೆರಾಟಿನ್‌ಗಳ ಪ್ರಧಾನಾಂಶ ಸಿಸ್ಟೈನ್ ಎಂದಾಯಿತು. ಸೆರೈನ್ ಅರ್ಜಿನೈನ್ ಪ್ರೋಲೀನ್ ಮತ್ತು ಹೈಡ್ರಾಕ್ಸಿ ಪ್ರೋಲೀನ್ ಮುಂತಾದ ಅಮೈನೊ ಆಮ್ಲಗಳೂ ಇರುವುದುಂಟು.

ಭೌತಲಕ್ಷಣಗಳು, ಅಂಗಾಂಶ ಮತ್ತು ರಾಸಾಯನಿಕ ರಚನೆಗಳನ್ನು ಅವಲಂಬಿಸಿ ಗಡುಸು ಮತ್ತು ಮೆದು ಕೆರಾಟಿನ್‌ಗಳೆಂದು ಎರಡು ಸ್ಥೂಲ ವರ್ಗಗಳಾಗಿ ವಿಂಗಡಿಸುವುದು ವಾಡಿಕೆ. ಪ್ರಾಣಿಗಳ ಚರ್ಮದ ಹೊರಪೊರೆ ಮೆದು ಕೆರಾಟಿನ್‌ಗೂ ಕೊಂಬು ಉಗುರು ಗೊರಸು ಇತ್ಯಾದಿಗಳು ಗಡಸು ಕೆರಾಟಿನ್‌ಗೂ ಉದಾಹರಣೆಗಳು. ಮೆದು ಕೆರಾಟಿನ್‌ನಲ್ಲಿ ಸಿಸ್ಟೈನ್ ಪರಿಮಾಣ ಕಡಿಮೆ; ಮೆಥಯೊನೈನ್ ಪರಿಮಾಣ ಹೆಚ್ಚು. ಪೋಷಣೆಗೆ ಅಗತ್ಯ ಎನಿಸಿಕೊಂಡಿರುವ ಅಮೈನೋ ಆಮ್ಲಗಳಾದ ಹಿಸ್ಟಿಡಿನ್ ಮೆಥಯೊನೈನ್ ಮತ್ತು ಟ್ರಿಪ್ಟೊಫ್ಯಾನ್‌ಗಳು ಅಲ್ಪಪರಿಮಾಣಗಳಲ್ಲಿ ಇರುವುದು ಗಡಸು ಕೆರಾಟಿನ್‌ಗಳ ವೈಶಿಷ್ಟ್ಯ.

ಕೆರಾಟಿನ್‌ಗಳ ರಚನಾ ವಿನ್ಯಾಸವನ್ನು ಕುರಿತು ಆಸ್ಟ್‌ಬರಿ ಎಂಬಾತ ವಿಶೇಷ ಅಧ್ಯಯನ ನಡೆಸಿದ್ದಾನೆ. ಎಕ್ಸ್ ಮತ್ತು ಅತಿರಕ್ತ ಕಿರಣಗಳನ್ನು ಬಳಸಿ ಪರೀಕ್ಷಿಸಿದಾಗ ಕೆರಾಟಿನ್‌ಗಳಲ್ಲಿ ಆಲ್ಫ ಮತ್ತು ಬೀಟ ರೂಪಗಳಿರುವುದು ವ್ಯಕ್ತವಾಗಿದೆ. ಬೀಟ ಕೆರಾಟಿನ್‌ನಲ್ಲಿ ನೇರ ಸರಣಿ (ಸ್ಟ್ರೇಟ್ ಚೇನ್) ರಚನೆಯೂ ಆಲ್ಫರೂಪದಲ್ಲಿ ನಿರಿಗೆ (ಫೋಲ್ಡೆಡ್) ವಿನ್ಯಾಸವೂ ಇರುವುವೆಂದು ಗೊತ್ತಾಗಿದೆ. ಇವನ್ನು ಕೆಳತೋರಿಸಿರುವಂತೆ ಚಿತ್ರಿಸಿಕೊಳ್ಳಬಹುದು.




ಸಿಸ್ಟೈನ್




ಬೀಟಾ ಕೆರಾಟಿನ್




ಆಲ್ಫ ಕೆರಾಟಿನ್

(R= ಅಮೈನೋ ಆಮ್ಲದ ಭಾಗ)

ಹಬೆಯ ವರ್ತನೆಯಿಂದ ಆಲ್ಫ ಕೆರಾಟಿನ್ ಬೀಟರೂಪಕ್ಕೆ ಪರಿವರ್ತಿತವಾಗುವುದು. ಕೆರಾಟಿನ್‌ಗಳು ಅದ್ರಾವ್ಯ ವಸ್ತುಗಳಷ್ಟೆ. ಸಿಸ್ಟೈನ್ ಅಮೈನೋ ಆಮ್ಲದ ಅಣುಗಳು ಗಂಧಕದ ಪರಮಾಣುಗಳ ಮೂಲಕ ಹಾಸುಹೊಕ್ಕಾಗಿ ಹೆಣೆದುಕೊಂಡಿರುವುದೇ ಹೀಗಾಗಲು ಕಾರಣ. ಉತ್ಕರ್ಷಣ, ಅಪಕರ್ಷಣ ಅಥವಾ ಜಲವಿಶ್ಲೇಷಣೆ ಮೊದಲಾದ ಕ್ರಿಯೆಗಳಿಗೆ ಗುರಿಪಡಿಸಿದಾಗ ಈ ಜಟಿಲ ರಚನೆ ಶಿಥಿಲವಾಗುವುದು. ಲಭ್ಯವಸ್ತುಗಳು ಯೂರಿಯದ ಪ್ರಬಲ ದ್ರಾವಣ, ದುರ್ಬಲ ಅಮೋನಿಯ ದ್ರಾವಣ ಮತ್ತು ಅನ್‌ಅಯಾನಿಕ್ ಮಾರ್ಜಕಗಳ ದ್ರಾವಣಗಳಲ್ಲಿ ಸರಾಗವಾಗಿ ಲೀನವಾಗುವುವು. (ಎಚ್.ಜಿ.ಎಸ್.)

**ಕೆರಾಬಿಡೀ :** ಕೀಟವರ್ಗದಲ್ಲಿಯ ಕೋಲಿಯಾಪ್ಟರ ಗಣಕ್ಕೆ ಸೇರಿದ ಕೆಲವು ಬಗೆಯ ಜೀರುಂಡೆಗಳ ಕುಟುಂಬ. ಈ ಕುಟುಂಬದ ಕೀಟಗಳನ್ನು ಸಾಮಾನ್ಯವಾಗಿ ನೆಲಜೀರುಂಡೆಗಳೆನ್ನುತ್ತಾರೆ. ಇವು ನಿಶಾಚರಿಗಳು. ಹಗಲಿನಲ್ಲಿ ಮರದ ಪೊಟರೆ ಇಲ್ಲವೆ ನೆಲದಲ್ಲಿ ನಿರ್ಮಿಸಿಕೊಂಡ ಗೂಡುಗಳಲ್ಲಿ ಅವಿತುಕೊಂಡಿರುತ್ತವೆ. ಕಾಲುಗಳ ಮುಂಭಾಗದಲ್ಲಿ (ಟಾರ್ಸಿ) ಕೀಲುಗಳಿರುವುದು, ದಾರದಂಥ ಕುಡಿಮೀಸೆಗಳು, ಬಹಳ ಕ್ಷೀಣಗೊಂಡ ರೆಕ್ಕೆಗಳು, ಮಧ್ಯಭಾಗದಲ್ಲಿ ಕೂಡಿಕೊಂಡು ದೃಢವಾದ ಕವಚದಂತೆ ಮಾರ್ಪಾಟ್ಟಿರುವ ಎರಡನೆಯ ಜೊತೆ ರೆಕ್ಕೆಗಳು (ಎಲಿಟ್ರ) ಈ ಕೀಟಗಳ ಪ್ರಮುಖ ಲಕ್ಷಣಗಳು. ಕೆಲವು ಜೀರುಂಡೆಗಳ ಕವಚದ ಮೇಲೆ ಉದ್ದುದ್ದವಾದ ಏಣುಗಳಿವೆ. ಈ ಕೀಟಗಳು ಸಾಮಾನ್ಯವಾಗಿ ಥಳಥಳಿಸುವ ಕಪ್ಪು ಅಥವಾ ಕಂದು ಬಣ್ಣದವು. ಕೆಲವು ಕೀಟಗಳಲ್ಲಿ ಹಸಿರು ಮತ್ತು ನೀಲಿ ಬಣ್ಣವಿರಬಹುದು. ಇತರ ಬಗೆಯ ಕೀಟಗಳನ್ನು ತಿಂದು ಜೀವಿಸುವ ಈ ಜೀರುಂಡೆಗಳು ಕೃಷಿಪಿಡುಗುಗಳಾದ ಹಲವಾರು ಬಗೆಯ ಕೀಟಗಳನ್ನು ತಿಂದು ಜೀವಿಸುವುದರಿಂದ ಮಾನವನಿಗೆ ಉಪಕಾರಿಗಳೆನಿಸಿವೆ. ಬಲು ಸಾಮಾನ್ಯವಾಗಿ ಸಿಕ್ಕುವ ನೆಲಜೀರುಂಡೆ ಕ್ಯಾಲಸೋಮ ಸ್ಕ್ರುಟೇಟರ್ ಎಂಬುದು. ಸುಂದರವಾಗಿರುವ ಇದಕ್ಕೆ ಸರ್ಚರ್ ಎಂಬ ರೂಢಿಯ ಹೆಸರಿದೆ. ಇದರ ಕವಚದ ಬಣ್ಣ ಹಸಿರು. ಅದರ ಅಂಚು ಕೆಂಪಗಿರುತ್ತದೆ. ದೇಹದ ಉಳಿದ ಭಾಗ ಬಂಗಾರ, ನೀಲಿ ಅಥವಾ ತಾಮ್ರದ ಬಣ್ಣಕ್ಕಿರಬಹುದು. ಇನ್ನೊಂದು ನೆಲಜೀರುಂಡೆಯಾದ ಕ್ಯಾಲಸೋಮ ಸೈಕೊಫ್ಯಾಂಟ ಎಂಬುದು ಯೂರೋಪಿನಲ್ಲಿದೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕೃಷಿಪೀಡೆಗಳಾದ ಜಿಪ್ಸಿ ಪತಂಗಗಳು ಮತ್ತು ಕಂದು ಬಾಲದ ಪತಂಗಗಳನ್ನು ನಾಶಮಾಡುವುದಕ್ಕೆ ಇದನ್ನು ಯುರೋಪಿನಿಂದ ಅಮೆರಿಕಕ್ಕೆ ತರಲಾಯಿತು. *ಹಾರ್‌ಪಾಲಸ್ ಕ್ಯಾಲಿಜಿನೋಸಸ್* ಮತ್ತು *ಪಾಯಿಸಿಲಸ್ ಲ್ಯೂಕೊಬ್ಲಾಂಡಸ್*‌ಗಳು ಅಮೆರಿಕಾ ಸಂಯುಕ್ತಸಂಸ್ಥಾನದಲ್ಲಿ ಸಿಕ್ಕುವ ಇತರ ನೆಲಜೀರುಂಡೆಗಳು. ಭಾರತದಲ್ಲಿ *ಅಂತಿಯ ಸೆಕ್ಸ್‌ಗಟೇಟ* ಮತ್ತು *ಫೀರಾಪ್ಸೋಫಸ್ ಹಿಲೇರಿಸ್* ಎಂಬ ಎರಡು ಬಗೆಯ ನೆಲಜೀರುಂಡೆಗಳು ಕಾಣಬರುತ್ತವೆ. ಇವುಗಳಲ್ಲಿ ಎರಡನೆಯ ಬಗೆಯದು ನೆಲದ ಬಿರುಕುಗಳಲ್ಲಿ ವಾಸಿಸುತ್ತದೆ. ಇದರ ದೇಹದ ಬಣ್ಣ ಕಪ್ಪು. ಅಲ್ಲಲ್ಲೆ ಹಳದಿ ಪಟ್ಟೆಗಳಿವೆ. (ಜಿ.ಎಸ್‌ಆರ್.)

**ಕೆರೆನ್ಸ್ಕಿ, ಅಲೆಕ್ಸಾಂಡರ್ ಫೆಡೊರೋವಿಚ್ :** ರಷ್ಯದ ರಾಜಕೀಯ ನಾಯಕ. ರಷ್ಯನ್ ಕ್ರಾಂತಿಯ ಕಾಲದಲ್ಲಿ 1917ರ ಜುಲೈಯಿಂದ ನವೆಂಬರ್‌ವರೆಗೆ ತಾತ್ಕಾಲಿಕ ಸರ್ಕಾರದಲ್ಲಿ ಪ್ರಧಾನ ಮಂತ್ರಿಯಾಗಿದ್ದ. ಜನನ 1881 ಸಿಂಬಿರ್ಸ್ಕ್‌ನಲ್ಲಿ (ಈಗಿನ ಉಲ್ಯಾನೋವ್ಸ್ಕ್). ತಂದೆ ಶಾಲಾ ಉಪಾಧ್ಯಾಯ. ಕೆರೆನ್‌ಸ್ಕಿ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ನ್ಯಾಯಶಾಸ್ತ್ರ ಪದವೀಧರನಾಗಿ 1904ರಲ್ಲಿ ವಕಾಲತ್ತು ಪ್ರಾರಂಭಿಸಿದ. ಕೆರೆನ್‌ಸ್ಕಿಗೆ ಕ್ರಾಂತಿಕಾರಿ ವಿಚಾರಗಳ ಪರಿಚಯವಾದದ್ದು ಆ ವಿಶ್ವವಿದ್ಯಾಲಯದಲ್ಲಿದ್ದಾಗಲೇ. ರಾಜಕೀಯ ಆಪಾದನೆಗಳಿಗೆ ಗುರಿಯಾಗಿದ್ದ ಕ್ರಾಂತಿಕಾರರ ಪರವಾಗಿ ವಕಾಲತ್ತು ವಹಿಸಿ ಇವನು ವಿಶೇಷವಾಗಿ ಹೋರಾಡಿದ. 1912ರಲ್ಲಿ ನಾಲ್ಕನೆಯ ಡ್ಯೂಮ ಸಭೆಗೆ ಕೂಲಿಕಾರರ ಪ್ರತಿನಿಧಿಯಾಗಿ ಆಯ್ಕೆ ಹೊಂದಿದ. ಒಂದನೆಯ ಮಹಾಯುದ್ಧದ ಕಾಲದಲ್ಲಿ ಈತನ ಪಕ್ಷ ಪ್ರಗತಿಪರರೊಂದಿಗೆ ಸೇರದೆ ಪ್ರತ್ಯೇಕವಾಗಿತ್ತು. ಯುದ್ಧದಲ್ಲಿ ಭಾಗವಹಿಸಲು ಸೈನಿಕರಿಗೆ ಉತ್ಸಾಹ ಬರಬೇಕಾದರೆ ದೇಶದಲ್ಲಿ ಪ್ರಜಾಸತ್ತಾತ್ಮಕ ಸುಧಾರಣೆ ಜಾರಿಗೆ ಬರಬೇಕೆಂಬುದು ಈತನ ಅಭಿಪ್ರಾಯವಾಗಿತ್ತು. ಕೆರೆನ್‌ಸ್ಕಿ ಒಳ್ಳೆಯ ವಾಗ್ಮಿಯಾಗಿದ್ದ. ಮಾನವಸ್ವಾತಂತ್ರ್ಯ ಸಾಧನೆಗಾಗಿ ನಡೆಸಿದ ಮಹಾ ಪ್ರಯತ್ನವೇ ಕ್ರಾಂತಿ–ಎಂಬುದಾಗಿ ಅವನು ಕಂಡುಕೊಂಡಿದ್ದ. ಆದರೆ ತನ್ನ ಅದಮ್ಯ ಉತ್ಸಾಹದ ಉರುಬಿನಲ್ಲಿ ಅವನು ಮಾಡಿದ ಪ್ರಮಾದಗಳು ಅನೇಕ. ಇದರಿಂದಾಗಿ ಅವನ ತೀರ್ಮಾನಗಳು ಪದೇಪದೇ ವ್ಯತ್ಯಾಸವಾಗುತ್ತಿದ್ದುವು. ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಅವನು ಪದೇಪದೇ ಬದಲಾಗುತ್ತಿದ್ದುದರಿಂದ ಅವನು ಸ್ಥೈರ್ಯ ಸಾಧಿಸಲಾರದೆ ಹೋದ.

ಪೆಟ್ರೋಗ್ರಾಡ್ ಕಾರ್ಮಿಕ ಪ್ರತಿನಿಧಿಗಳ ಸೋವಿಯತ್ತಿನ ಬೂರ್ಷ್ವಾವಿರೋಧಿ ಸಿದ್ಧಾಂತವನ್ನು ಕೆರೆನ್‌ಸ್ಕಿ ಒಪ್ಪಲಿಲ್ಲ. ಪರಿಸ್ಥಿತಿಯೊಂದಿಗೆ ಒಪ್ಪಂದ ಮಾಡಿಕೊಂಡ. 1917ರ ಮಾರ್ಚ್ 15ರಂದು ರಾಜಕುಮಾರ ಲ್ವಾಫನ ಸರ್ಕಾರದಲ್ಲಿ ಮಂತ್ರಿಯಾದ. ಸೋವಿಯತ್ತಿನ ಸಮಾಜವಾದಿ ಕ್ರಾಂತಿಕಾರಿ ಮತ್ತು ಮೆನ್ಷೆವಿಕ್ ಸದಸ್ಯರೊಂದಿಗೆ ಸಖ್ಯ ಸಾಧಿಸಿದ. ಅವರನ್ನು ಒಳಗೊಂಡ ಸಂಮಿಶ್ರ ಸರ್ಕಾರ ಸ್ಥಾಪಿತವಾಗಲು ಕೆರೆನ್‌ಸ್ಕಿಯ ಪ್ರಯತ್ನಗಳೇ ಕಾರಣ. ಸಂಮಿಶ್ರ ಸರ್ಕಾರದಲ್ಲಿ ಕೆರೆನ್‌ಸ್ಕಿಗೆ ಯುದ್ಧಸಚಿವತ್ವ ದೊರಕಿತು. ಕ್ರಾಂತಿಯಿಂದ ಲಭ್ಯವಾಗಿದ್ದ ಸ್ವಾತಂತ್ರ್ಯವನ್ನು ಶಿಸ್ತಿನಿಂದ ರಕ್ಷಿಸಬೇಕೆಂದು ಈತ ಸೈನ್ಯಕ್ಕೆ ಮಾಡಿಕೊಂಡ ಮನವಿ ವ್ಯರ್ಥವಾಯಿತು. ಸೈನ್ಯದಲ್ಲಿ ಮೊದಲೇ ಕಡಿಮೆಯಾಗಿದ್ದ ಶಿಸ್ತು ಈತನ ಸುಧಾರಣೆಯಿಂದ ಇನ್ನೂ ಕಡಿಮೆಯಾಗಿ ಕೊನೆಗೆ ಕುಸಿದೇ ಹೋಯಿತು.

ಸರ್ಕಾರದಲ್ಲಿ ಮತ್ತೊಮ್ಮೆ ಬಿಕ್ಕಟ್ಟು ಸಂಭವಿಸಿತು. ಜುಲೈ 21ರಂದು ಕೆರೆನ್‌ಸ್ಕಿಯೇ ಪ್ರಧಾನಿಯಾದ. ಆದರೆ ಈತನ ಆಡಳಿತದ ಕಾಲದಲ್ಲಿ ಎಡಬಲ ಪಕ್ಷಗಳೆರಡೂ ಇವನನ್ನು ತೊರೆದುವು. ಪ್ರತಿಕ್ರಾಂತಿಯ ಅಂಜಿಕೆ ಪ್ರಬಲವಾಯಿತು. ಮಹಾದಂಡನಾಯಕನಾದ ಜನರಲ್ ಎಲ್.ಜಿ.ಕಾರ್ನಿಲಾಫನನ್ನು ಸೆಪ್ಟೆಂಬರ್ 9ರಂದು ಕೆರೆನ್‌ಸ್ಕಿ ಒಮ್ಮೆಗೇ ಬರ್ತರ್ಫ್ ಮಾಡಿದ. ಸೌಮ್ಯವಾದಿಗಳ ಪ್ರತಿನಿಧಿಯೆನಿಸಿದ್ದ ಕಾರ್ನಿಲಾಫನನ್ನು ವಜಾ ಮಾಡಿದ್ದರಿಂದ ಅವರಿಗೆ ಅಸಮಾಧಾನವಾಯಿತು. ಸರ್ವಾಧಿಕಾರಿಯಾಗಬೇಕೆಂದು ಕೆರೆನ್‌ಸ್ಕಿ ಸಂಚು ಹೂಡಿದ್ದಾನೆಂದು ತೀವ್ರವಾದಿಗಳು ಅವನ ಬಗ್ಗೆ ಕೋಪಗೊಂಡರು. ಅಲ್ಲದೆ ಅವರು ಬಯಸಿದ್ದ ತೀವ್ರ ಕ್ರಮಗಳನ್ನು ಜಾರಿಗೆ ತರಲು ಕೆರೆನ್‌ಸ್ಕಿ ಒಪ್ಪಲಿಲ್ಲ. ಅವನ ಸಂಪುಟದಲ್ಲೇ ಒಡಕು ಉದ್ಭವಿಸಿತು. ಬಾಲ್ಷೆವಿಕರಿಗೆ ಜನರು ಬೆಂಬಲ ನೀಡುವುದಿಲ್ಲವೆಂದು ಕೆರೆನ್‌ಸ್ಕಿ ಭಾವಿಸಿದ್ದ. ಆದರೆ ನವೆಂಬರ್ 6ರಂದು ಬಾಲ್ಷೆವಿಕರು ಪ್ರಹರಿಸಿದರು. ಚಳಿಗಾಲದ ಅರಮನೆಯಿಂದ ಕೆರೆನ್‌ಸ್ಕಿ ತಲೆತಪ್ಪಿಸಿಕೊಂಡ. ಸನಿಯದಲ್ಲಿದ್ದ ಸೇನಾತುಕಡಿಗಳ ನೆರವಿಗಾಗಿ ಪ್ರಾರ್ಥಿಸಿದ. ಆದರೆ ಅವರು ಇವನನ್ನು ಲಕ್ಷಿಸಲಿಲ್ಲವಷ್ಟೇ ಅಲ್ಲ, ಅವರಿಂದ ವಿರೋಧವೇ ಕಾದಿತ್ತು. ಕೆರೆನ್‌ಸ್ಕಿ ಇಂಗ್ಲೆಂಡಿಗೆ ಪಲಾಯನ ಮಾಡಿದ. ಅಲ್ಲಿಂದ ಫ್ರಾನ್ಸಿಗೆ ಹೋಗಿ, ಕೊನೆಗೆ ಅಮೆರಿಕದಲ್ಲಿ ನೆಲಸಿದ. ಪ್ರೆಲ್ಯೂಡ್ ಟು ಬಾಲ್ಷೆವಿಸಮ್; ದಿ ಕಾರ್ನಿಲಾಫ್ ರಿವೋಲ್ಟ್ (1919), ದಿ ಕೆಟಾಸ್ಟ್ರಫಿ (1927), ದಿ ಕ್ರುಸಿಫಿಕ್ಷನ್ ಆಫ್ ಲಿಬರ್ಟಿ (1934)–ಇವು ಕೆರೆನ್‌ಸ್ಕಿ ಬರೆದಿರುವ ಕೆಲವು ಪುಸ್ತಕಗಳು. (ಬಿ.ಎಸ್.ಪಿ.)

**ಕೆರೆಯ ಪದ್ಮರಸ :** ಕವಿಯಾಗಿ, ಮಂತ್ರಿಯಾಗಿ, ವಿದ್ವಾಂಸನಾಗಿ, ವಿರಕ್ತನಾಗಿ, ಪರೋಪಕಾರಿಯಾಗಿ ಪ್ರಸಿದ್ಧನಾಗಿರುವ ಈತ ಹರಿಹರ ರಾಘವಾಂಕರ ಸಮಕಾಲೀನ. ಈತನ ಕಾಲದ ಬಗ್ಗೆ ವಿದ್ವಾಂಸರಲ್ಲಿ ವಿಪುಲ ಚರ್ಚೆ ನಡೆದಿದೆ. ಹರಿಹರ, ಕೆರೆಯ ಪದ್ಮರಸರಿಬ್ಬರೂ ಹೊಯ್ಸಳ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿದ್ದುದಾಗಿ ತಿಳಿದು ಬಂದಿದೆ. ಬಹುಜನ ವಿದ್ವಾಂಸರ ಅಭಿಪ್ರಾಯದಂತೆ ಈತ 13ನೆಯ ಶತಮಾನದ ಪೂರ್ವಾರ್ಧದಲ್ಲಿದ್ದಂತೆ ಸದ್ಯಕ್ಕೆ ತಿಳಿಯಬಹುದು.

ಸಕಲಶಾಬ್ದಿಕಸಾರ್ವಭೌಮ, ಉದ್ಧತವಾದಿನಿಕರವೇಶ್ಯಾಭುಜಂಗ, ತಾರ್ಕಿಕ ಚಕ್ರವರ್ತಿ, ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯ, ಶರಣಕವಿ, ಭವಿದೂರ–ಎಂಬ ಬಿರುದುಗಳನ್ನು ಪಡೆದು, ತ್ರಿಭುವನತಾತನನ್ನು ವಾದದಲ್ಲಿ ಸೋಲಿಸಿ, ಬೇಲೂರಿನಲ್ಲಿ ಕೆರೆಯನ್ನು ಕಟ್ಟಿಸಿ, ಉಭಯಭಾಷಾಪಂಡಿತನೂ ಚತುಸ್ತ್ರಕೋವಿದನೂ ವೀರಶೈವಾಗಮಪಾರಂಗತನೂ ಕವಿಯೂ ಕಲಿಯೂ ಎನಿಸಿ, ಅತ್ಯಂತ ಪ್ರಭಾವಶಾಲಿಯಾಗಿದ್ದ ಕೆರೆಯ ಪದ್ಮರಸ ಉಜ್ವಲ ಗುರುವಂಶವೊಂದರಲ್ಲಿ ಜನ್ಮ ತಾಳಿದ ಪುಣ್ಯಶಾಲಿ. ಈತನ ಮುತ್ತಜ್ಜನಾದ ಶಿವಯೋಗಿ ಮಲ್ಲಿಕಾರ್ಜುನ ಪಂಡಿತ (ಮಲ್ಲರಸ) ಕರ್ಣಾಟಕದ ಕಲ್ಲುಕುರಿಕೆಯಲ್ಲಿ ದೊರೆಯಾಗಿದ್ದನಂತೆ. ಮಲ್ಲರಸನ ಮಗನೇ ವಚನಕಾರ ಸಕಲೇಶ ಮಾದರಸ. ಇವರಿಬ್ಬರೂ ವಿರಕ್ತರಾಗಿ ಶ್ರೀಶೈಲಕ್ಕೆ ಹೋದರಂತೆ. ಸಕಲೇಶ ಮಾದರಸ ಶ್ರೀಶೈಲಕ್ಕೆ ಹೋಗುವಾಗ ದಾರಿಯಲ್ಲಿ ಶಿಷ್ಯರ ಪ್ರಾರ್ಥನೆಯಂತೆ ಅಂಬೆ ಎಂಬ ಊರಿನಲ್ಲಿ ಕೆಲಕಾಲ ತಂಗಿದ್ದು ಬಳಿಕ ಶ್ರೀಶೈಲಕ್ಕೆ ಹೋಗಿ ತಂದೆಯನ್ನು ಕಂಡಾಗ ಆತ ಮಾದರಸನನ್ನು ಇನ್ನೂ ಐವತ್ತು ವರ್ಷ ಭೂಲೋಕದಲ್ಲಿದ್ದು ಧರ್ಮಸಂಸ್ಥಾಪನಾರ್ಥವಾಗಿ ಬರುವ ಬಸವನೊಡನೆ ಕಾಲಕಳೆಯಲು ಹೇಳಿ ಮರಳಿ ಕಳುಹಿದನಂತೆ. ಇವನ ಮಗ ಮಾಯಿದೇವ ಅಂಬೆಯಲ್ಲಿದ್ದ. ಇವನಿಗೆ ನರಸಿಂಹಬಲ್ಲಾಳನ ದಂಡನಾಯಕನಾದ ಕಮ್ಮವಲ್ಲಭ ಗೌರಪನ ಅಕ್ಕ ಮಂಗಲೆಯನ್ನು ಕೊಟ್ಟು ಮದುವೆಯಾಗಿತ್ತು. ಇವರ ಮಗನೇ ಕೆರೆಯ ಪದ್ಮರಸ. ಇವನ ಹೆಂಡತಿ ದಂಡನಾಯಕ ಗೌರಪನ ಮಗಳಾದ ಮಾದೇವಿ. ಗೌರಪನ ಕಾಲಾನಂತರ ನರಸಿಂಹ ಬಲ್ಲಾಳ ಕೆರೆಯ ಪದ್ಮರಸನಿಗೆ ದಂಡೇಶ ಪದವಿಯನ್ನಿತ್ತು ಮಂತ್ರಿಯನ್ನಾಗಿ ಮಾಡಿಕೊಂಡ.

ತಮ್ಮ ಬಗ್ಗೆ ಕಾವ್ಯಗಳನ್ನು ಬರೆಸಿಕೊಂಡ ಕೆಲವೇ ಕವಿಗಳಲ್ಲಿ ಕೆರೆಯ ಪದ್ಮರಸ ಒಬ್ಬ. ಇವನ ವಂಶಜನಾದ ಪದ್ಮಣಾಂಕನೇ ಪದ್ಮರಾಜ ಪುರಾಣವನ್ನು ಬರೆದು ಕೆರೆಯ ಪದ್ಮರಸನ ಬಹುಮುಖವೂ ಪ್ರಭಾವಪೂರ್ಣವೂ ಆದ ವ್ಯಕ್ತಿತ್ವವನ್ನು ಚಿತ್ರಿಸಿರುವುದು ಇನ್ನೂ ಗಮನಾರ್ಹವಾಗಿದೆ. ಪದ್ಮಣಾಂಕ ಕಂಡ ಪದ್ಮರಸನ ವ್ಯಕ್ತಿ ಚಿತ್ರವಿದು:

ಪರಮಭಕ್ತಿಗೆ ಶಿವಮೊದವಿತೊ ಶಾಂತಿಗೆ ಮುಖಂ
ಸ್ಫುರಿಸಿತೋ ಶಿವನ ದಾನಾಭಯದ ಗುಣಯುಗಕೆ
ಕರಮದುರ್ದುವೋ ಚಿದ್ವಿಲಾಸಕೆರ್ದೆ ರಾಜಿಸಿತೊ ಸಂಚರಿತಕೆ ಕಾಲ್‌ಬಂದುವೋ
ಇರದಖಿಳ ಲೋಕವನನುಗ್ರಹಿಪ ಶಿವಶಕ್ತಿ
ಗರರೆ ಬೆನ್ನುಂ ಬಸಿರುಮೊಗೆದುವೋ ಕಡೆಗಿದೇಂ
ಗಿರೀಶನಿಪ್ಪತ್ತಾರನೆಯ ಲೀಲೆಯೋ ಎಂದು ವಿಬುಧರ್ ಬಗೆಯಲೊಪ್ಪಿದಂ

ಹೊಯ್ಸಳ ಸಾಮ್ರಾಟನ ಮಂತ್ರಿಯಾಗಿದ್ದೂ ಶಿವಭಕ್ತರ ಕಿಂಕರರ ಕಿಂಕರ ತಾನೆಂದು ತಿಳಿದು ನಡೆದ ಕೆರೆಯ ಪದ್ಮರಸ 'ಅಖಿಳವಸ್ತುಚಯಮಂ ಆ ಮಲಹರನ ಭಕ್ತತತಿಗಿತ್ತು ನುತಿಸುತುದ್ದಾಮರಿರ ನಿಮ್ಮ ಬಾಗಿಲ್ಗಾಪಿನಾಳ್ ನಿಮ್ಮ ಕೋಮಲಾಂಘ್ರಿಯ ಕೆರ್ಪುದಳೆವವಂ ನಿಮ್ಮ ಭೃತ್ಯ ರ ಭೃತ್ಯ ತತಿಯ ಭೃತ್ಯಂ' (ಪದ್ಮರಾಜಪುರಾಣ) ಎಂದು ಭಕ್ತರ ಭಕ್ತನಾಗಿ ಬಾಳಿದ. 'ನಡೆವಲ್ಲಿ ನುಡಿವಲ್ಲಿಯುಡುವಲ್ಲಿಯುಣ್ಬಲ್ಲಿ ಪೊಡರ್ವ ನಿದ್ರಾವಸ್ಥೆಯಲ್ಲಿ ದರ್ಶನದಲ್ಲಿ ಪಿಡಿವಲ್ಲಿ ಬಿಡುವಲ್ಲಿ ಕೊಡುವಲ್ಲಿ ಕೊಳ್ವಲ್ಲಿ ಯಡಸಿದುದ್ಯೋಗದಲ್ಲಿ ತೊಡುವಲ್ಲಿ ಪೊದೆವಲ್ಲಿ . . . ಮೃಡಮಂತ್ರವವನನಿಡಿದಡಸಿ ಬಿಡದಿರ್ಪುದೇಂ ವಶಮಾದುದೋ' ಎಂಬ ಪದ್ಮರಾಜಪುರಾಣದ ಮಾತು ಪದ್ಮರಸನ ಭಕ್ತಿಯನ್ನು ತೋರುತ್ತದೆ.

ಇಂಥ ದಿವ್ಯಜೀವನವನ್ನು ನಡೆಸಿದ ಕೆರೆಯ ಪದ್ಮರಸ ಕೇವಲ ಮಂತ್ರಿಯಾಗಿ, ಕೇವಲ ಕವಿಯಾಗಿ ಉಳಿಯಲಿಲ್ಲ; ಮಹಾಭಕ್ತನಾದ, ಮಹಾಜ್ಞಾನಿಯಾದ, ಮಹಾನುಭವಿಯಾದ. ಇವನ ಕೃತಿ ದೀಕ್ಷಾಬೋಧೆಯ (ಈತನ ಸಂಸ್ಕೃತ ಕೃತಿ ಸಾನಂದ ಚರಿತ್ರೆಯ ಬಗ್ಗೆ ತಿಳಿದಿಲ್ಲ) ಬರೆವಣಿಗೆಯಲ್ಲಿ ಪ್ರಸಾದವಿದೆ, ಪ್ರವಾಹವಿದೆ. ಭಕ್ತಿಯ ಆರ್ತತೆ ಆವೇಶಗಳನ್ನು ವರ್ಣಿಸುವಲ್ಲಿ ಪರತತ್ತ್ವಸ್ವರೂಪ ಹೇಳುವಲ್ಲಿ ಸಹಜ ಕವಿತೆ ಹೊಮ್ಮಿದೆ. ಅನುಭಾವಿ–ತಾತ್ತ್ವಿಕ ಕವಿಗಳಲ್ಲಿ ಇವನಿಗೆ ಮೇಲಾದ ಸ್ಥಾನವಿದೆ.

ಆದರೆ ಕವಿತ್ವಕ್ಕಿಂತ, ಮಂತ್ರಿತ್ವಕ್ಕಿಂತ, ವಿದ್ವತ್ತಿಗಿಂತ ಇವನ ವ್ಯಕ್ತಿತ್ವ ಹಿರಿದಾದುದೆಂದು ಹೇಳಲೇಬೇಕು. ಕೊನೆಗೆ ವಿರಾಗವಿಭುವಾಗಿ, ಮಗನಿಗೆ ಜ್ಞಾನೋಪದೇಶ ಮಾಡಿ ಹಂಪೆಗೆ ಬಂದು ಹರಿಹರನನ್ನು 'ಉಮಾವರಂ ನಿಮ್ಮನಿಂದಿಗೆಂಟನೆಯ ದಿನಕೆ ತನ್ನೊಳೆ ನೆರಪಲಿರ್ದಪಂ; ಅಂತಜೆಂ ನೀವೀಗಳೊರೆವೀ ಮಹಾಕಾವ್ಯಮಂ ತಡೆಯದನಿತಜೊಳಂ ಪಾರವೈದಿಪುದು' ಎಂದು ಎಚ್ಚರಿಸಿ, ಕಾಶಿಗೆ ಹೋಗಿ ವಿಶ್ವನಾಥನಲ್ಲಿ ಬೆರೆದ ಕೆರೆಯ ಪದ್ಮರಸ ಶರಣಕವಿ. ಇವನನ್ನು ಪ್ರಶಂಸಿಸಿದ ಕವಿಗಳ ಸಂಖ್ಯೆದೊಡ್ಡದು. ಅದರಲ್ಲಿ ಒಬ್ಬನಾದ ಅತಿರಸಿಕ ಕರ್ಣಾಭರಣಂ ಬುಧವರನೆಂಭ ಕವಿಹೀಗೆ ಹಾಡಿದ್ದಾನೆ:

ಲತೆಯಂ ಖಗಮಂ ಮೃಗಮಂ
ಸತಿಯರುಮಂ ಪೊಗಟ್ದು ಕವಿತೆಯಂ ನೀಗದೆ ಪಾ
ರ್ವತಿಯರಸನನೇ ಪೊಗಟ್ದಂ
ಕ್ಷಿತಿಯೊಳೆ ಪದ್ಮರಸ ಶರಣಕವಿ ಭವಿದೂರಂ

ಇದು ಕೆರೆಯ ಪದ್ಮರಸನ ಕಾವ್ಯೋದ್ವೇಗಕ್ಕೆ ಕನ್ನಡಿಯಂತಿರುವ ಕಂದಪದ್ಯ. ಇವನ ಕೃತಿ ದೀಕ್ಷಾಬೋಧೆ. ಕಾವ್ಯೋದ್ವೇಗದಲ್ಲಿ ಕೃತಾರ್ಥವಾದ ಕೃತಿ. ಅನುಭಾವವನ್ನು ವಿವರಿಸುವ 'ಸರ್ವಾಂಗದೊಳು ಸರ್ವಮಯನಾದ ಸದ್ಗುರುವೆ ಸರ್ವಚೇತನಕೆ ಚೇತನವಾದ ಸದ್ಗುರುವೆ– ಎಂಬ ಮಾತುಗಳೂ ಕುಲದ ಹೊಲಬು ವಿವರಿಸುವ 'ಕುಲಮಂ ವಿಚಾರಿಪೊಡೆ ಸೆಲವಿಲ್ಲ ಫಲವಿಲ್ಲ. ನೆಲೆಯನಱಿವೊಡೆ ಶುದ್ಧ ಹೊಲೆಯ್ಯೆಸೆ ಕುಲವಲ್ಲ ಕಾಯಕ್ಕೆ ಕುಲವೂ ಜೀವಕ್ಕೆ ಕುಲವೂ ಪೀಟಿ ಈ ಯೆರಡರೊಳಗೆ ಇನ್ನಾವುದಕ್ಕೆ ಕುಲ ಪೇಟಿ ಕಾಯವಾದೊಡೆ ಶುದ್ಧ ಹೊಲೆಯಾಗಿ ಕುಲವಿಲ್ಲ ವಾಯವಹ ಜೀವ ನಿರವಯವಾಗಿ ಕುಲವಿಲ್ಲ'–ಎಂಬ ಮಾತುಗಳೂ ಮಮಕಾರನಿರಸನವನ್ನು ಕುರಿತ 'ಒಡವೆಯಾರದು ಒಡೆಯರಾರೆಂಬುದನು ಅರಿಯೆ ಕಡುಲೋಭಿ

ಜಡನೆಯಕಟಟಿಯಲಾನರಗುಟಿಯೆ ಕಟ್ಟೊಡೆಯತನವ ಬಲಿದಿಂತು ಹೋರುವೆ ನೀನು ಹುಟ್ಟುವಾಗಲೆ ಧನವ ಕಟ್ಟಿತಂದೆಯೊ ನೀನು?'–ಎಂಬ ಮಾತುಗಳೂ ಪರತತ್ತ್ವ ಸ್ವರೂಪದರ್ಶನವನ್ನು ತೋರುವ 'ಸಕಲನೆಂಬುದು ನಾನು ನಿಃಕಲವೆನಲು ತಾನು ಸಕಲನಿಃಕಲವೆನಿಸಿಯೆನಿಸದಿರ್ಪುದು ತಾನು ಒಳಗೆಂದೊಡಂ ತಾನು ಹೊರಗೆಂದೊಡಂ ತಾನು ಒಳಗುಹೊಟಿಗಜಿದ್ದ ಬಱು ಬೆಳಗಿನ ಬೆಳಗು ತಾನು'–ಎಂಬ ಉಕ್ತಿಗಳೂ ಕೆರೆಯ ಪದ್ಮರಸನೊಬ್ಬ ಮೇಲಾದ ತಾತ್ತ್ವಿಕ ಕವಿಯೆಂಬುದನ್ನು ಸ್ಥಿರಪಡಿಸುತ್ತದೆ. (ಎಸ್.ಪಿ.ಯು.)

**ಕೆರೊಟಿನಾಯ್ಡುಗಳು :** ಕ್ಯಾರಟ್‌ನಲ್ಲಿ ಪ್ರಥಮವಾಗಿ ಕಂಡದ್ದರಿಂದ ಕೆರೊಟೀನ್ ಎಂಬ ಹೆಸರು ಪಡೆದ ಮೂರು ವರ್ಣದ್ರವ್ಯಗಳಿಗೆ ($\alpha$–,$\beta$–ಮತ್ತು $\Psi$ ಕೆರೊಟೀನ್) ನಿಕಟ ರಾಸಾಯನಿಕ ಸಂಬಂಧವಿರುವ ವರ್ಣದ್ರವ್ಯಗಳ ವರ್ಗ. ಇವು ಮೇದಸ್ಸಿನಲ್ಲಿ ದ್ರಾವ್ಯ. ಕೆರೊಟಿನಾಯ್ಡುಗಳು ಸಸ್ಯಗಳಲ್ಲಿಯೂ ಪ್ರಾಣಿಗಳಲ್ಲಿಯೂ ವ್ಯಾಪಕವಾಗಿ ಹರಡಿವೆ. ಇವು ಅಸ್ಥಿರ ವಸ್ತುಗಳು. ಇವನ್ನು ಸುಲಭವಾಗಿ ಉತ್ಕರ್ಷಣೆಗೊಳಿಸಬಹುದು. ತಿಳಿ ಅರಿಸಿನ, ಅರಿಸಿನ, ಕಿತ್ತಳೆ ಅರಿಸಿನ, ಕೆಂಪು ಮತ್ತು ಊದಾ ಬಣ್ಣಗಳಲ್ಲಿ ಇವು ದೊರೆಯುತ್ತವೆ.

ಪ್ರಕೃತಿಸಹಜವಾಗಿ ದೊರೆಯುವ ವರ್ಣಸಮುದಾಯದಲ್ಲಿ ಕೆರೊಟಿನಾಯ್ಡುಗಳು ವ್ಯಾಪಕವಾಗಿ ಹರಡಿವೆ. ಜೀವರಸಾಯನ ವಿಜ್ಞಾನ್ರದ ಆಧುನಿಕ ವಿಧಾನಗಳಾದ ಕ್ರೊಮಾಟಾಗ್ರಫಿ, ಸ್ಪೆಕ್ಟ್ರೊಫೋಟೋಮಿಟ್ರಿ ಮತ್ತು ಟ್ರೇಸರ್ ತಂತ್ರಗಳ ಉಪಯೋಗದಿಂದ ಕೆರೊಟಿನಾಯ್ಡುಗಳ ಅಧ್ಯಯನದಲ್ಲಿ ಸಾಕಷ್ಟು ಪ್ರಗತಿಯನ್ನು ಗಳಿಸಲಾಗಿದೆ. ಕೆರೊಟಿನಾಯ್ಡುಗಳ ದೊರೆಯುವಿಕೆ, ವಿತರಣೆ ಮತ್ತು ಗುರುತಿಸುವಿಕೆಯ ಬಗ್ಗೆ ಸಾಕಷ್ಟು ತಿಳಿದಿದ್ದರೂ ಅವು ರೂಪಗೊಳ್ಳುವ ರೀತಿ ಮತ್ತು ಅವುಗಳ ಪಾತ್ರದ ಬಗ್ಗೆ ತಿಳಿದಿರುವುದು ಅತ್ಯಲ್ಪ.

ಸಸ್ಯವರ್ಗಗಳಲ್ಲಿ ಮಾತ್ರ ಕೆರೊಟಿನಾಯ್ಡುಗಳು ಸಂಯೋಜಿಸಲ್ಪಡುವುವು. ಪ್ರಾಣಿಗಳು ಇವನ್ನು ತಮ್ಮ ಆಹಾರದ ಮೂಲಕ ಸೇವಿಸಿ ಅನಂತರ ನಾನಾ ರೀತಿಗಳಲ್ಲಿ ಶೇಖರಿಸಿಡುತ್ತವೆ. ಇವನ್ನು ದೇಹ ಆಯ್ದೋ ಆಯದೆಯೋ ಸ್ವೀಕರಿಸಬಹುದು. ದೇಹದ ಬೇರೆ ಬೇರೆ ಅಂಗಗಳಲ್ಲಿ ಕೆರೊಟಿನಾಯ್ಡುಗಳನ್ನು ಸಂಗ್ರಹಿಸಿ ಇಡುವ ಮೊದಲು ಅವು ಉತ್ಕರ್ಷಣೆಗೆ ಒಳಗಾಗಿ ಮಾರ್ಪಾಡುಗೊಳ್ಳಬಹುದು. ನಿರ್ದಿಷ್ಟ ರಚನೆಗಳಿರುವ ಕೆಲವು ಕೆರೊಟಿನಾಯ್ಡುಗಳು ವಿಟಮಿನ್ ಎ ಆಗಿ ಪರಿವರ್ತನೆ ಹೊಂದಬಹುದು. ಈ ವಿಟಮಿನ್ ರಾತ್ರಿಕುರುಡುತನವನ್ನು ತಡೆಗಟ್ಟುತ್ತದೆ. ಸ್ತನಿಗಳಿಗೆ, ಪಕ್ಷಿಗಳಿಗೆ ಮತ್ತು ಮೀನುಗಳಿಗೆ ಕೆಲವು ಕೆರೊಟಿನಾಯ್ಡುಗಳನ್ನು ವಿಟಮಿನ್ ಎ ಆಗಿ ಮಾರ್ಪಡಿಸುವ ವಿಶೇಷ ಸಾಮರ್ಥ್ಯ ಉಂಟು.

ಕೆರೊಟಿನಾಯ್ಡುಗಳನ್ನು ವಿಟಮಿನ್ ಎ ಆಗಿ ಪರಿವರ್ತಿಸುವಲ್ಲಿ ಪ್ರಾಣಿಯ ಕರುಳಿನಲ್ಲಿರುವ ಕಿಣ್ವಗಳ ಪಾತ್ರ ಅತಿಮುಖ್ಯ. ಆಡುಗಳಲ್ಲಿಯೂ ಎಮ್ಮೆಗಳಲ್ಲಿಯೂ ಇರುವ ಮೇದಸ್ಸಿನ ಅಂಗಾಂಶಗಳಲ್ಲಿ ಕೆರೊಟಿನಾಯ್ಡುಗಳಿರುವುದಿಲ್ಲ. ಇದರ ಕಾರಣ ಆ ಪ್ರಾಣಿಗಳ ಕರುಳುಗಳಲ್ಲಿರುವ ಕಿಣ್ವ ವ್ಯವಸ್ಥೆಗಳ ದಕ್ಷತೆ–ಒಂದಿಷ್ಟು ವರ್ಣದ್ರವ್ಯವೂ ರಕ್ತಕ್ಕೆ ಸಾಗದಂತೆ ಅವು ತಡೆ ಹಾಕಿರುತ್ತವೆ. ಆದರೆ ಮನುಷ್ಯ ಮತ್ತು ಹಸುವಿನಲ್ಲಿ ಹೀಗಲ್ಲ. ಈ ಪರಿವರ್ತನಕಾರಿಗಳು ದುರ್ಬಲವಾಗಿರುವುದರಿಂದ ವರ್ಣದ್ರವ್ಯಗಳು ರಕ್ತವನ್ನು ಸೇರುತ್ತವೆ. ಆದ್ದರಿಂದ ಮನುಷ್ಯ ಮತ್ತು ಹಸುವಿನ ಹಾಲು ತಿಳಿ ಹಳದಿಯಾಗಿದೆ. ಆಡು, ಎಮ್ಮೆಯದಾದರೋ ಸ್ವಚ್ಛ ಬಿಳಿ.

ಮೊಟ್ಟೆಗಳಲ್ಲಿ ಕ್ಯಾಂತೋಫಿಲ್ಸ್ ಎಂಬ ಉತ್ಕರ್ಷಣದ ರೂಪದ ಕೆರೊಟಿನ್ ಹೇರಳವಾಗಿ ಉಂಟು. ಸಸ್ಯಗಳಲ್ಲಿಯ ದ್ಯುತಿಸಂಶ್ಲೇಷಣೆ (ಫೋಟೋಸಿಂಥೆಸಿಸ್) ಮತ್ತು ದ್ಯುತಿ ಆಕರ್ಷಣ (ಫೋಟೋಟ್ರಾಪಿಸಂ) ಕಾರ್ಯಗಳು ಬಹುಶಃ ಕೆರೊಟಿನಾಯ್ಡುಗಳಿಂದ ರೂಪಗೊಳ್ಳುವುವು. ಅಧಿಕ ಪರಿಮಾಣದಲ್ಲಿ ವಿಟಮಿನ್ ಎ ಆಗಿ ಮಾರ್ಪಾಡಾಗುವ ಅತಿ ಮುಖ್ಯ ಕೆರೊಟಿನಾಯ್ಡು ಎನಿಸಿಕೊಂಡ ಬೀಟ ಕೆರೊಟೀನ್ ಗುಲ್‌ಮೊಹರ್ ಮರದ ಹೂ, ಮಾವು, ಪರಂಗಿ ಮತ್ತು ಇತರ ಹಣ್ಣು ಗಳಲ್ಲಿ ಯಥೇಚ್ಛವಾಗಿ ಅಡಗಿದೆ.

ಕರುಳಿನಲ್ಲಿ ಕೇವಲ ಅಲ್ಪ ಪರಿಮಾಣದಲ್ಲಿ ಕೆರೊಟಿನಾಯ್ಡುಗಳು ವಿಲೀನಗೊಳ್ಳುವುವು. ಅದರಂತೆ ಮಕ್ಕಳಲ್ಲಿ, ಯುವಕರಲ್ಲಿ ದೃಷ್ಟಿದೋಷ ಕಾಯಿಲೆ ಬರದಂತೆ ತಡೆಯುವುದಕ್ಕೆ ಅಗತ್ಯ ಪರಿಮಾಣದಲ್ಲಿ ವಿಟಮಿನ್ ಸರಬರಾಜಾಗಲು ಗಣನೀಯವಾಗಿ ಹಣ್ಣುಗಳು, ತರಕಾರಿ, ಮೊಟ್ಟೆ, ಹಾಲು, ಹಾಲಿನ ಪದಾರ್ಥಗಳು ಮತ್ತು ಮೀನಿನ ಎಣ್ಣೆ ಮುಂತಾದವನ್ನು ಸೇವಿಸುವುದು ವಿಹಿತ. (ಎಚ್.ಆರ್.ಸಿ.ಎ.)

**ಕೆಲಂಚೊ :** ಕ್ರ್ಯಾಸ್ಸುಲೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯಜಾತಿ; ಸು.125 ಪ್ರಭೇದಗಳನ್ನೊಳಗೊಂಡಿದೆ. ಇವು ಸದಾ ಹಸಿರಾಗಿರುವುದರಿಂದಲೂ ಇವುಗಳ ಎಲೆಗಳು ರಸಭರಿತವಾಗಿದ್ದು ಆಕಾರವೈವಿಧ್ಯವನ್ನು ಪ್ರದರ್ಶಿಸುವುದರಿಂದಲೂ ಈ ಜಾತಿಯ ಸಸ್ಯಗಳನ್ನು ಉದ್ಯಾನಗಳ ಸೊಗಸಿಗಾಗಿ ಕುಂಡಸಸ್ಯಗಳನ್ನಾಗಿಯೊ ಇಲ್ಲವೆ ಕಲ್ಲೇರಿಸಸ್ಯಗಳನ್ನಾಗಿಯೊ ಬೆಳೆಸುತ್ತಾರೆ. ಬಹುಪಾಲು ಪ್ರಭೇದಗಳು ಮೂಲತಃ ಆಫ್ರಿಕಖಂಡ ಮತ್ತು ಮಡಗಾಸ್ಕರ್ ದ್ವೀಪದ ನಿವಾಸಿಗಳು. ಇದು ದೃಢಕಾಯದ ಸಸ್ಯ: ಸುಮಾರು 2'–4' ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ಅಭಿಮುಖವಾಗಿ ಜೋಡಣೆಗೊಂಡಿವೆ; ರಸಭರಿತವಾಗಿವೆ. ಅವುಗಳ ಅಂಚು ನಯವಾಗಿರಬಹುದು. ಗರಗಸದಂತಿರಬಹುದು, ಇಲ್ಲವೆ ಹಲವಾರು ಸೀಳುಗಳಾಗಿರಬಹುದು. ಹೂಗೊಂಚಲು ಮಧ್ಯಾರಂಭಿ ಮಾದರಿಯದು; ಬಹುವಾಗಿ ಕವಲೊಡೆಯುವ ಇದು ಕಾಂಡದ ತುದಿಯಲ್ಲಿ ಹುಟ್ಟುತ್ತದೆ. ಹೂಗಳು ಚಿಕ್ಕವು; ಬಣ್ಣ ಹಳದಿ, ಊದಾ, ಕಡುಗೆಂಪು ಮುಂತಾಗಿ ವೈವಿಧ್ಯಮಯ. ಪ್ರತಿಹೂವಿನಲ್ಲಿ 4 ಪುಷ್ಪ ಪತ್ರಗಳು, 4 ದಳಗಳು, 8 ಕೇಸರಗಳು ಮತ್ತು 4 ಕಾರ್ಪೆಲುಗಳಿಂದ ಕೂಡಿದ ಅಂಡಾಶಯ ಉಂಟು. ಫಲ ಬಹುಬೀಜಗಳುಳ್ಳ ಫಾಲಿಕಲ್ ಮಾದರಿಯದು.

ಕ್ಯಾಲ್ಯಾಂಕೋಯಿ ಜಾತಿಯ ವಿವಿಧ ಪ್ರಭೇದಗಳಲ್ಲಿ ಮುಖ್ಯವಾದವನ್ನು ಕೆಳಗೆ ವಿವರಿಸಲಾಗಿದೆ.

**1. ಕ್ಯಾಡೈಗ್ರಿಮೊಂಟಿಯಾನ :** ಕ್ಯಾಲ್ಯಾಂಕೋಯಿ ಪ್ರಭೇದಗಳಲ್ಲೆಲ್ಲ ಹೆಚ್ಚು ಸುಲಭವಾಗಿಯೂ ದೃಢಕಾಯವಾಗಿಯೂ ಬೆಳೆಯುವಂಥದು. ಸುಮಾರು 3' ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳ ಆಕಾರ ತ್ರಿಕೋನದಂತೆ; ಬಣ್ಣ ನೀಲಿ ಮಿಶ್ರಿತ ಹಸಿರು. ಮೇಲೆ ಕಡುಗೆಂಪು ಬಣ್ಣದ ಮಚ್ಚೆಗಳಿವೆ. ಹೂಗೊಂಚಲು ಬೂದಿ ಮಿಶ್ರಿತ ನೀಲಿ ಬಣ್ಣದ್ದು.

**2. ಕ್ಯಾಲ್ಯಾಂಕೋಯಿ ಲ್ಯಾಕ್ಸಿಫ್ಲೋರ :** ಇದನ್ನು ಬ್ರಯೊಫಿಲಮ್ ಕ್ರಿನೆಟಮ್ ಎಂದು ಕರೆಯುವುದೂ ಉಂಟು. ಕಾಂಡ ಕವಲುಗಳಿಲ್ಲದೆ ಸುಮಾರು 2' ಎತ್ತರ ಬೆಳೆದು ಬುಡದಲ್ಲಿ ತೊಡಕು ಬೇರುಗಳನ್ನು ಬಿಡುತ್ತದೆ. ಉದ್ದವಾದ ತೊಟ್ಟಿರುವ ದೀರ್ಘ ವೃತ್ತಾಕಾರದ ನೀಲಿಮಿಶ್ರಿತ ಹಸಿರು ಎಲೆಗಳಿವೆ. ತೊಟ್ಟಿನ ಬಳಿ ನಿರ್ದಿಷ್ಟವಾಗಿ ಭಾಗವಾಗಿದೆ. ಹೂಗೊಂಚಲಿನ ಬಣ್ಣ ಕಿತ್ತಳೆಮಿಶ್ರಿತ ನಸುಗೆಂಪು.

**3. ಕ್ಯಾಲ್ಯಾಂಕೋಯಿ ಪಿನ್ನೇಟ :** ಇದಕ್ಕೆ ಬ್ರಯೊಫಿಲಮ್ ಕ್ಯಾಲಿಸಿನಮ್ ಎಂಬ ಹೆಸರೂ ಬಳಕೆಯಲ್ಲಿದೆ. ಇದು ದೃಢಕಾಯವಾಗಿ ಸುಮಾರು 3' ಎತ್ತರಕ್ಕೆ ಬೆಳೆಯುತ್ತದೆ. ಇದರ ಎಳೆಯ ಎಲೆ ಸರಳವಾಗಿದ್ದು ದೀರ್ಘವೃತ್ತಾಕಾರವಾಗಿರುತ್ತದೆ; ಬಲಿತ ಅನಂತರ ಅದರ ಅಂಚುಗಳು ಆಳವಾಗಿ ಸೀಳುವುದರಿಂದ ಸಣ್ಣ ಗರಿರೂಪದ ಸಂಯುಕ್ತ ಪತ್ರವಾಗುತ್ತದೆ. ಉಪಪತ್ರಗಳ ಬಣ್ಣ ನೀಲಿ ಮಿಶ್ರಿತ ಹಸಿರು, ಇಲ್ಲವೆ ಕೆಂಪು. ಉದ್ದವಾದ, ಗಂಡೆಯಾಕಾರದ ಹೂಗಳಿರುವ ಹೂಗೊಂಚಲು ಸಸ್ಯದ ತುದಿಯಿಂದ ಹೊರಬರುತ್ತದೆ. ಈ ಸಸ್ಯ ಇತರ ಪ್ರಭೇದಗಳಿಗಿಂತ ಹೆಚ್ಚಾಗಿ ವಿಶ್ವದ ಎಲ್ಲ ಭಾಗಗಳಲ್ಲೂ ಬೇಸಾಯದಲ್ಲಿದೆ.

**4. ಕ್ಯಾಲ್ಯಾಂಕೋಯಿ ಸೆರೇಟ :** ಇದು ಹೆಚ್ಚು ಕವಲೊಡೆದು ನಿಬಿಡವಾದ ಎಲೆಗಳಿಂದ ಕೂಡಿದ್ದು ಹರಡಿಕೊಂಡು ಬೆಳೆಯುತ್ತದೆ. ಚಿಕ್ಕ ತೊಟ್ಟಿರುವ ಕಿರಿದಾದ ಇದರ ಎಲೆ, ಗರಗಸದ ಅಂಚಿನಿಂದ ಕೂಡಿದೆ. ಹೂಗಳ ಬಣ್ಣ ಕಿತ್ತಳೆ.

**5. ಕ್ಯಾಲ್ಯಾಂಕೋಯಿ ಟ್ಯೂಬಿಫ್ಲೋರ :** ಸುಮಾರು 5' ಎತ್ತರ ಬೆಳೆಯುವ ಪ್ರಭೇದ ಇದು. ಕವಲೊಡೆಯದ ನೇರವಾಗಿ ಬೆಳೆಯುತ್ತದೆ. ಎಲೆಗಳು ಕೊಳವೆಯಾಕಾರದಲ್ಲಿದ್ದು, ಮೇಲುಭಾಗದಲ್ಲಿ ಕಾಲುವೆಯಿಂದ ಕೂಡಿರುತ್ತವೆ. ಇದು ಕೆಂಪು ಅಥವಾ ಊದಾ ಬಣ್ಣದ ಗಂಟೆಯಾಕಾರದ ಹೂಗಳನ್ನು ಬಿಡುತ್ತದೆ.

**6. ಕ್ಯಾಲ್ಯಾಂಕೋಯಿ ಬೆಹರೆನ್‌ಸಿಸ್ :** ಈ ಪ್ರಭೇದದ ಸಸ್ಯದ ಎಳೆಯ ಕಾಂಡ ಮತ್ತು ಎಲೆಗಳ ಮೇಲೆ ನಿಬಿಡವಾದ ನವುರಾದ ರೋಮಗಳಿವೆ. ಸಸ್ಯದ ತುದಿಯಿಂದ ಹೊಸ ಎಲೆಗಳು ಹೊರಬಂದಂತೆಲ್ಲ ತಳಭಾಗದಲ್ಲಿರುವ ಹಳೆಯ ಎಲೆಗಳು ಉದುರಿ ಹೋಗಿ ಅವುಗಳ ಕಲೆಗಳು ಮಾತ್ರ ಉಳಿಯುತ್ತವೆ. ಹೂಗೊಂಚಲು ಉಳಿದ ಪ್ರಭೇದಗಳಿಗೆ ಹೋಲಿಸಿದರೆ ಅಷ್ಟು ಸುಂದರವಾಗಿಲ್ಲ.

**7. ಕ್ಯಾಲ್ಯಾಂಕೋಯಿ ಮಾರ್ಮೊರೇಟ :** ಇದು ಅತ್ಯಂತ ಸುಂದರವಾದ ಪ್ರಭೇದಗಳಲ್ಲಿ ಒಂದು. ತೊಟ್ಟಿಲ್ಲದ ವಿರುದ್ಧ ಕರನೆಯಾಕಾರದ ಇದರ ಎಲೆಯ ಅಂಚು ಹಲ್ಲುಗಳಾಗಿ ಒಡೆದಿದೆ; ಮೇಲ್ಭಾಗದಲ್ಲಿ ನೀಲಿ ಮಿಶ್ರಿತ ಬೂದಿ ಬಣ್ಣದ ಚುಕ್ಕೆಗಳಿರುವುದರಿಂದ ನೋಡಲು ಬಹಳ ಸುಂದರವಾಗಿ ಕಾಣುತ್ತದೆ. ಇದು ಹೂಬಿಡುವುದು ಬಹುವಿರಳ.

**8 ಕ್ಯಾಲ್ಯಂಕೋಯಿ ಟೊಮೆಂಟೋಸ:** ಇದು ಬಹು ಸುಂದರವಾದುದು ಎಂದು ಪ್ರಸಿದ್ಧಿಯಾಗಿದೆ. ಇದರ ಕಾಂಡ ದಪ್ಪ. ಬುಡದಲ್ಲಿ ಕವಲೊಡೆದು ಸುಮಾರು 2' ಎತ್ತರ ಬೆಳೆಯುತ್ತದೆ. ಇದರ ಮೇಲೆ ನಿಬಿಡವಾದ ರೋಮಗಳಿವೆ. ಇದರ ಎಲೆಯ ಆಕಾರ ದೀರ್ಘ ವೃತ್ತದಂತೆ. ಇದು ದಪ್ಪ ಮತ್ತು ಮೆದುವಾಗಿರುತ್ತದೆ. ಅಂಚು ಹಲ್ಲು ಹಲ್ಲಾಗಿ ಒಡೆದು ತುದಿ ಗುಂಡಾಗಿರುತ್ತದೆ. ಇಡೀ ಸಸ್ಯವನ್ನು ಬಿಳುಪು ಮಿಶ್ರಿತ ಬೂದಿ ಬಣ್ಣದ ರೋಮಗಳು ನಿಬಿಡವಾಗಿ ಅವರಿಸಿರುತ್ತವೆ. ಎಲೆಗಳ ತುದಿಯ ಭಾಗದ ಅಂಚಿನಲ್ಲಿ ಕಂದು ಬಣ್ಣದ ಚುಕ್ಕೆಗಳಿರುವುದರಿಂದ ಈ ಸಸ್ಯ ಬಹಳ ರಮ್ಯವಾಗಿ ಕಾಣುತ್ತದೆ.

(ಎಂ.ಎಚ್.ಎಂ.)

**ಕೆಲಬಾರ್ ಬೀಜ :** ಪಶ್ಚಿಮ ಆಫ್ರಿಕದ ಮೂಲವಾಸಿಯಾದ ಫೈಸೊಸ್ಟಿಗ್ಮ ವೆನಿಲೋಸ ಎಂಬ ಶಾಸ್ತ್ರೀಯ ಹೆಸರಿರುವ ಬಳ್ಳಿಯಿಂದ ದೊರೆಯುವ ಕಾಳುಬೀಜ. ಈ ಬಳ್ಳಿ ಸುಮಾರು 50' ಎತ್ತರ ಬೆಳೆಯುತ್ತದೆ. ಇದರ ಒಂದೊಂದು ಬಾಳಿನ ಉದ್ದ 6"–7". ಇದರಲ್ಲಿ 2–3 ಕಾಳುಗಳಿರುತ್ತವೆ. ಇವು ಅತ್ಯಂತ ವಿಷಕಾರಿ. ಆದರೆ ಹೊರನೋಟಕ್ಕೆ ಬಾಳು ಇತರ ಸೇವ್ಯ ಬಾಳುಗಳಂತೆಯೇ ತೋರುವುದರಿಂದ ಮಕ್ಕಳು ವಿಶೇಷವಾಗಿ ಮೋಸ ಹೋಗಿ ಪ್ರಾಣಾಪಾಯ ತಂದುಕೊಂಡಿರುವ ನಿದರ್ಶನ ಉಂಟು. ಕಾಳಿನಲ್ಲಿ ಶೇ. 1 ಕ್ಕಿಂತಲೂ ಕಡಿಮೆ ಆಲ್ಕಲಾಯ್ಡುಗಳಿವೆ. ಇವುಗಳಲ್ಲಿ ಹೆಚ್ಚಿನವನ್ನು

ಪ್ರತ್ಯೇಕಿಸಿ ಸ್ಫಟಿಕೀಕರಿಸಲಾಗಿದೆ. ಫೈಸೊಸ್ಟಿಗ್ಮೀನ್ (ಎಸರೀನ್) ಇವುಗಳಲ್ಲಿ ಮುಖ್ಯವಾದದ್ದು. ಇದಕ್ಕೆ ಔಷಧೀಯ ಮಹತ್ತ್ವ ಉಂಟು. ದೇಹದಲ್ಲಿ ತಯಾರಾಗುವ ಅಸಿಟೈಲ್ ಕೋಲೀನ್ ನರಚೋದನೆಗಳಲ್ಲಿ ಇದು ಮುಖ್ಯ ಪಾತ್ರ ವಹಿಸುತ್ತದೆ. ಇದರ ನಾಶ ದೇಹಕ್ಕೆ ಅಹಿತಕಾರಿ. ಫೈಸೊಸ್ಟಿಗ್ಮೀನನ್ನು ಔಷಧಿಯಾಗಿ ಸೇವಿಸಿದಾಗ ಅದು ಅಸಿಟೈಲ್ ಕೋಲೀನಿನ ನಾಶವನ್ನು ತಡೆಗಟ್ಟುವುದರ ಮೂಲಕ ನರಚೋದನೆಗಳಿಗೆ ನೆರವಾಗುತ್ತದೆ. ಈ ಔಷಧಿಯ ಪರಿಣಾಮ ಅಟ್ರೊಪೀನಿನ ಪರಿಣಾಮಕ್ಕೆ ವಿರುದ್ಧವಾದದ್ದು. ಪೂರ್ವ ಕಾಲದಲ್ಲಿ ಅನಾಗರಿಕರು ಅಪರಾಧಿಗಳ ವಿಷಮ ಪರೀಕ್ಷೆಗಾಗಿ ಕೆಲಬಾರ್ ಬೀಜವನ್ನು ತಿನ್ನಿಸುತ್ತಿದ್ದರು. ಇದನ್ನು ತಿಂದ ಕೂಡಲೇ ಕರುಳು ವಿಪರೀತ ಕೆರಳಿ ಓಕರಿಕೆ, ವಾಂತಿ, ಹೊಟ್ಟೆಶೂಲೆ, ಭೇದಿ, ತಳಮಳಗಳಾಗಿ ಮೈಯಲ್ಲೆಲ್ಲ ಸ್ನಾಯುಗಳು ಚಿಲುಗುಟ್ಟುತ್ತವೆ. ಕಣ್ಣುಪಾಪೆ ಸೂಜಿಮೊನೆ ಗಾತ್ರಕ್ಕೆ ಕುಗ್ಗಿ, ಜೊಲ್ಲೂ ಬೆವರೂ ಸುರಿಯುತ್ತವೆ. ಕಣ್ಣೀರೂ ಹರಿಯುತ್ತದೆ. ಉಸಿರಾಟ ಕಷ್ಟಕ್ಕಿಟ್ಟುಕೊಳ್ಳುತ್ತದೆ. ಅರಿವಂತೂ ತಪ್ಪುವುದಿಲ್ಲ. ಕೊನೆಗೆ ಉಸಿರು ನಿಂತುಹೋಗಿ ತಿಂದವ ಸಾಯುತ್ತಾನೆ. ಸ್ನಾಯು ತುಡಿತ ಒಂದರ ಹೊರತಾಗಿ ಉಳಿದ ಲಕ್ಷಣಗಳನ್ನೆಲ್ಲ ಅಟ್ರೋಪೀನಿನಿಂದ ಹೋಗಲಾಡಿಸಬಹುದು. (ಡಿ.ಎಸ್.ಎಸ್.)

**ಕೆಲರ್, ಗಾಟ್‌ಫ್ರೀಟ್ :** 1819–90 ಸ್ವಿಟ್ಜರ್‌ಲೆಂಡಿನ ಕವಿ ಮತ್ತು ಕಾದಂಬರಿಕಾರ. ಜರ್ಮನ್ ಭಾಷೆಯ ಪ್ರಖ್ಯಾತ ಗದ್ಯ ಬರೆಹಗಾರರಲ್ಲಿ ಒಬ್ಬ. ಜ್ಯೂರಿಕ್‌ನಲ್ಲಿ ಹುಟ್ಟಿದ. ಮ್ಯೂನಿಕ್‌ನಲ್ಲಿ ಎರಡು ವರ್ಷ ಕಲಾಭ್ಯಾಸದಲ್ಲಿ ನಿರತವಾದ. ಆದರೆ ಸಾಹಿತ್ಯ ತನ್ನ ಜಾಯಮಾನಕ್ಕೆ ಅಂಟಿದ್ದೆಂದು ಕಂಡುಕೊಂಡು ಬಹುಬೇಗ ಸಾಹಿತ್ಯಸೃಷ್ಟಿಗೆ ತೊಡಗಿದ. 1850 ರಿಂದ ಐದು ವರ್ಷ ಬರ್ಲಿನಿನಲ್ಲಿ ವಾಸಿಸಿದ. 1861 ರಿಂದ ಸುಮಾರು 15 ವರ್ಷಗಳ ಕಾಲ ತನ್ನ ಊರಿನ ಒಂದು ಸಣ್ಣ ಪ್ರದೇಶದ ಕಾರ್ಯದರ್ಶಿ ಕೆಲಸವನ್ನು ನಿರ್ವಹಿಸಿದ. 1846ರಲ್ಲಿ ಪ್ರಕಟವಾದ ಗೆಡಿಚೆ ಎಂಬ ಕವನ ಸಂಕಲನ ಈತನಲ್ಲಿ ಸುಪ್ತವಾಗಿದ್ದ ಸಾಹಿತ್ಯಸೃಷ್ಟಿಯನ್ನು ಶ್ರುತಪಡಿಸಿತು. 1851–53ರಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟಗೊಂಡ ಈತನ ಡರ್ ಗ್ರುನೆ ಹೆನ್ರಿ (ಹಸಿರು ಹೆನ್ರಿ) ಕಾದಂಬರಿ ಈತನಿಗೆ ಯಶಸ್ಸು ತಂದ ಪುಸ್ತಕ. ಪ್ರಧಾನವಾಗಿ ಇದು ಆತ್ಮಕಥೆ. ಇದರಲ್ಲಿ ಕೆಲರ್ ತನ್ನ ಕಲ್ಪನಾಶಕ್ತಿ, ಸೌಂದರ್ಯಪ್ರಜ್ಞೆ, ಸತ್ಯನಿಷ್ಠೆಗಳನ್ನು ತೋರಿದ್ದಾನೆ. ನೀಳ್ಗತೆಗಳ ಸೃಷ್ಟಿಯಲ್ಲೂ ಈತ ಅದ್ವಿತೀಯ ಈತನ ನೀಳ್ಗತೆಗಳ ಸಂಕಲನವೊಂದು ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿದೆ.

ಮಾರ್ಟಿನ್ ಸಲಾಂದರ್ (1886) ಗ್ರಂಥದಲ್ಲಿ ಪ್ರಜಾತಂತ್ರ ಹಾಗೂ ಯುರೋಪಿನ ಸಂಸ್ಕೃತಿಗಳ ನಡುವಣ ತಿಕ್ಕಾಟವಿದೆ. 1882ರಲ್ಲಿ ಪ್ರಕಟಗೊಂಡ ಕಥೆಗಳು ಈತನ ಕಥನಕೌಶಲದ ಶ್ರೇಷ್ಠತೆಯನ್ನು ತೋರಿಸುತ್ತವೆ. ಈತನ ಕಥೆಗಳಲ್ಲಿ ಬರುವ ಮಧ್ಯಮ ವರ್ಗದವರ ಜೀವನ ಚಿತ್ರಣದಲ್ಲಿ ವಿಡಂಬನೆ, ಜೀವಂತವಾಗಿ ಅತಿಶಯೋಕ್ತಿ, ಅನುಕಂಪೆಯಿಂದ ಕೂಡಿದ ಪಾತ್ರಗಳು, ದೃಶ್ಯಗಳು ಮೂಡಿವೆ. ರಾಜಕೀಯ ಸ್ವಾತಂತ್ರ್ಯ ಮತ್ತು ಕ್ರೈಸ್ತಧರ್ಮದಲ್ಲಿ ಕಾಣುವ ಮಾನವೀಯತೆಗಳಿಂದ ಪ್ರೇರಿತನಾಗಿ, ಧರ್ಮಶ್ರದ್ಧೆಯೇ ಜೀವನದ ಪ್ರಾಯೋಗಿಕ ನೀತಿಯೆಂದು ಭಾವಿಸಿ. ಸತ್ತ್ವಯುತವಾದ ಬರೆವಣಿಗೆಯಿಂದ ಈತ ಜನಜೀವನವನ್ನು ಚಿತ್ರಿಸಿರುವುದರಿಂದ ಜರ್ಮನ್ ಸಾಹಿತ್ಯದಲ್ಲಿ ಈತನಿಗೊಂದು ವಿಶಿಷ್ಟಸ್ಥಾನ ಏರ್ಪಟ್ಟಿದೆ. (ಟಿ.ವಿ.ಎಸ್.)

**ಕೆಲರ್, ಹೆಲನ್ ಆಡಮ್ಸ್ :** 1880–. ಅಮೆರಿಕದ ಲೇಖಕಿ ಮತ್ತು ಅಂಧರ ಶಿಕ್ಷಕಿ. ಅಲಬಾಮದ ಟಸ್ಕುಂಬಿಯಲ್ಲಿ ಜನಿಸಿದಳು. ಒಂದೂವರೆ ವರ್ಷದ ಮಗುವಾಗಿದ್ದಾಗ ಮಿದುಳು ಜ್ವರದ ತೀವ್ರ ಕಾಯಿಲೆಯಿಂದ ಕಣ್ಣು ಕುರುಡಾಗಿ ಕಿವಿಗೇಳದಂತಾಗಿ ಮೂಕಳಾದಳು. ಹೆತ್ತವರ ಕೋರಿಕೆಯಂತೆ 7ನೆಯ ವರ್ಷದಲ್ಲಿ ಆನ ಮ್ಯಾನ್ಸ್‌ಫೀಲ್ಡ್ ಸಲ್ಲಿವನ್ ಎಂಬ ಉಪಾಧ್ಯಾಯಿನಿಯ ಕೈಕೆಳಗೆ ಈಕೆಯ ವಿದ್ಯಾಭ್ಯಾಸ ಪ್ರಾರಂಭ ವಾಯಿತು. ಅರೆ ಕುರುಡಾಗಿದ್ದು, ಕುರಡರ ಶಾಲೆಯಲ್ಲಿ ಪದವೀಧರೆಯಾಗಿದ್ದ 20 ವರ್ಷ ಪ್ರಾಯದ ಸಲ್ಲಿವನಳೊಂದಿಗೆ ವಾಸಿಸುತ್ತ ಕೆಲರ್ ಮೊದಲು ಕಿವುಡು ಮೂಕರ ಸನ್ನೆಗಳನ್ನು ಕಲಿತು ಅನಂತರ ಬ್ರೇಲ್ ಪದ್ಧತಿಯಲ್ಲಿ ಓದುವುದನ್ನೂ ವಿಶೇಷ ಬೆರಳಚ್ಚು ಯಂತ್ರದ ಸಹಾಯ ದಿಂದ ಬರೆವುದನ್ನೂ ಅಭ್ಯಾಸ ಮಾಡಿ ದಳು. ಆಮೇಲೆ ಮಾತಾಡುವುದನ್ನೂ ಕಲಿತಳು (1890). ಜೊತೆಗೆ ಬಾಸ್ಟನ್, ನ್ಯೂಯಾರ್ಕುಗಳ ಇನ್ನೆರಡು ಶಾಲೆಗಳ ಪಾಠಗಳಿಂದ ಸಾಮಾನ್ಯ ಪಠ್ಯಭಾಗಗಳಲ್ಲಿ ಪ್ರವೀಣೆ ಎನಿಸಿಕೊಂಡಳು. ಕಾಲೇಜು ಮೆಟ್ಟಲು ಹತ್ತಿ (1900) ನಾಲ್ಕೇ ವರ್ಷಗಳಲ್ಲಿ ರ್‍ಯಾಡ್‌ಕ್ಲಿಫ್ ಕಾಲೇಜಿನ ಪದವೀಧರೆಯಾದಳು. ದುಡ್ಡಿನ ಮುಗ್ಗಟ್ಟು ತಪ್ಪಲಿಲ್ಲವಾಗಿ ತಾನು ಬದುಕಿ ಬಾಳಲೂ ತಾನು ಆರಿಸಿಕೊಂಡಿರುವ ಅಂಗವಿಕಲರ ಏಳಿಗೆಗೆ ಹಣ ಕೂಡಿಸಲೂ ಭಾಷಣ ಪ್ರವಾಸಗಳನ್ನು ಕೈಗೊಂಡಳು. ಪ್ರಪಂಚಾದ್ಯಂತ ಪ್ರವಾಸಮಾಡಿ ಅಂಧ ಮತ್ತು ಕಿವುಡರ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿ ಎಲ್ಲರ ಪ್ರಶಂಸೆಗೆ ಪಾತ್ರಳಾದಳು. 1955ರಲ್ಲಿ ಈಕೆ ಭಾರತಕ್ಕೆ ಭೇಟಿ ನೀಡಿದ್ದಳು. ಗೋಲ್ಡ್ ಕೀ ಆಫ್ ದಿ ನ್ಯಾಷನಲ್ ಅಸೋಸಿಯೇಷನ್ ಪ್ರಶಸ್ತಿಯಲ್ಲದೆ (1938) ಹಲವಾರು ದೇಶಗಳ ಪ್ರಶಸ್ತಿಗಳೂ ಈಕೆಗೆ ಲಭ್ಯವಾದುವು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿಯ ಅಮೆರಿಕನ್ ಫೌಂಡೇಷನ್ ಫಾರ್ ದಿ ಬ್ಲೈಂಡ್ ಸಂಸ್ಥೆಯ ಕಾನ್ಸಲರ್ ಆಗಿ ಈಕೆ ಕೆಲಸ ಮಾಡಿದ್ದಾಳೆ. ಹತ್ತು ದೊಡ್ಡ ಪುಸ್ತಕಗಳನ್ನೂ ಎಷ್ಟೋ ಲೇಖನಗಳನ್ನೂ ಬರೆದ ಕೆಲರ್, ಒಳ್ಳೆಯ ಬರೆಹಗಾರ್ತಿಯೆಂದು ಹೆಸರಾಗಿದ್ದಾಳಲ್ಲದೆ ತನ್ನ ಜೀವನದ ಹೋರಾಟವನ್ನವಲಂಬಿಸಿ ಚಲನಚಿತ್ರ ಒಂದನ್ನೂ ತಯಾರಿಸಿದ್ದಾಳೆ.

ದಿ ಸ್ಟೋರಿ ಆಫ್ ಮೈ ಲೈಫ್ (1902), ಆಪ್ಟಿಮಿಸಮ (1903), ದಿ ವರ್ಲ್ಡ್ ಐ ಲಿವ್ ಇನ್ (1908), ಔಟ್ ಆಫ್ ದಿ ಡಾರ್ಕ್ (1913), ಮಿಡ್‌ಸ್ಟ್ರೀಮ್–ಮೈ ಲೇಟರ್ ಲೈಫ್ (1930), ಪೀಸ್ ಅಟ್ ಈವನ್‌ಟೈಡ್ (1932), ಲೆಟ್ ಅಸ್ ಹ್ಯಾವ್ ಫೇಯ್ತ್ (1940)–ಇವು ಈಕೆ ಬರೆದ ಪ್ರಮುಖ ಗ್ರಂಥಗಳು. (ಡಿ.ಎಸ್.ಎಸ್.)

**ಕೆಲಸಗಾರರ ತರಬೇತು :** ಒಂದು ಸಂಸ್ಥೆಯ ಕೆಲಸಗಾರರನ್ನು ಎಷ್ಟೇ ಎಚ್ಚರಿಕೆಯಿಂದ ಆಯ್ಕೆ ಮಾಡಿರಲಿ, ಅವರ ವಿದ್ಯಾರ್ಹತೆ ಎಷ್ಟೇ ಉತ್ತಮವಾಗಿರಲಿ, ಅವರಿಗೆ ತಮ್ಮ ಕೆಲಸದಲ್ಲಿ ಎಷ್ಟೇ ಸಾಮರ್ಥ್ಯವಿರಲಿ, ಅವರ ಕಾರ್ಯನಿರ್ವಹಣೆ ಸಮರ್ಪಕವಾಗಿರಬೇಕಾದರೆ ಅವರಿಗೆ ತರಬೇತು ಅಗತ್ಯ. ವಿದ್ಯಾರ್ಥಿಗಳಿಗೆ ತರಗತಿಗಳಲ್ಲೇ ತರಬೇತು ನೀಡುವುದು ಸಾಧ್ಯ. ಆದರೆ ಕಾರ್ಖಾನೆಗಳಲ್ಲಿಯ ಕೆಲಸದ ಪರಿಸ್ಥಿತಿಗಳೇ ಬೇರೆ. ಅಕುಶಲಿಗಳಿಗೆ ಕುಶಲತೆಯನ್ನು ದೊರಕಿಸಿಕೊಡುವುದು ಮತ್ತು ಕಡಿಮೆ ಕುಶಲಿಗಳನ್ನು ಹೆಚ್ಚು ಕುಶಲಿಗಳನ್ನಾಗಿ ಮಾಡುವುದು ತರಬೇತಿನ ಉದ್ದೇಶ. ಒಂದು ಕೆಲಸವನ್ನು ತಪ್ಪಿಲ್ಲದಂತೆ ಮಾಡುವುದನ್ನು ಆರಂಭದಿಂದಲೇ ಹೊಸ ಕೆಲಸಗಾರರಿಗೆ ಕಲಿಸುವುದು ಅವಶ್ಯ. ಹೊಸ ಹೊಸ ಕೆಲಸ ವಿಧಾನಗಳು ರೂಪುಗೊಂಡಂತೆ ಅವನ್ನು ಹಳೆಯ ಕೆಲಸಗಾರರಿಗೆ ಹೇಳಿಕೊಡುವುದಕ್ಕೂ ತರಬೇತು ನೀಡಬೇಕಾಗುತ್ತದೆ.

ತರಬೇತು ಕಾರ್ಯಕ್ರಮದಿಂದ ಇನ್ನೂ ಅನೇಕ ಪ್ರಯೋಜನಗಳುಂಟು. ತಮ್ಮ ಸಂಸ್ಥೆಯ ನೀತಿನಿಯಮಾವಳಿಗಳನ್ನು ಕೆಲಸಗಾರರಿಗೆ ವಿಶದವಾಗಿ ವಿವರಿಸುವ ಅವಕಾಶ ಅದರ ಕಾರ್ಯನಿರ್ವಾಹಕರಿಗೆ ಲಭ್ಯವಾಗುತ್ತದೆ. ಹಳೆಯ ಕೆಲಸಗಾರರ ನಡುವೆ ಕೆಲಸವನ್ನಾರಂಭಿಸಿದ ಹೊಸಬರೂ ಅವರ ಪೂರ್ವಾಗ್ರಹಗಳನ್ನು ಪಡೆದುಕೊಳ್ಳುವುದನ್ನು ತಪ್ಪಿಸಿದಂತಾಗುತ್ತದೆ. ಕಾರ್ಮಿಕ ಆವರ್ತಪ್ರಮಾಣ, ಕೆಲಸಗೇಡು, ಯಂತ್ರ ಸಾಮಗ್ರಿ ನಷ್ಟ–ಮುಂತಾದವನ್ನು ತಗ್ಗಿಸುವುದಕ್ಕೂ ಕೆಲಸಗಾರರ ತರಬೇತು ಆವಶ್ಯಕ. ಕೆಲಸದ ಗುಣಗಾತ್ರಗಳೆರಡನ್ನೂ ಅಧಿಕಗೊಳಿಸಲು ಇದು ಸಾಧಕ. ಕೆಲಸಗಾರ ಉತ್ತಮಗೊಳ್ಳಬೇಕು–ಎಂಬುದೇ ತರಬೇತು ವ್ಯವಸ್ಥೆಯ ಉದ್ದೇಶವಾದ್ದರಿಂದ ಕೆಲಸಗಾರರ ಮತ್ತು ವ್ಯವಸ್ಥಾಪಕವರ್ಗದ ನಡುವೆ ಒಳ್ಳೆಯ ಸಂಬಂಧ ಬೆಳೆಯುತ್ತದೆ.

ಕೆಲಸಗಾರರ ತರಬೇತು ವಿಧಾನಗಳು ಅನೇಕ. ಉದ್ಯೋಗಿಗೆ ನೇರವಾಗಿ ಅವನ ಕೆಲಸದ ತಾಣದಲ್ಲಿಯೇ ತರಬೇತು ನೀಡುವುದು ಹಳೆಯ ವಿಧಾನ. ಅವಲೋಕನ ಮತ್ತು ಮಾರ್ಗದರ್ಶನದಿಂದ ಉದ್ಯೋಗಿ ಕೆಲಸ ಕಲಿತುಕೊಳ್ಳುತ್ತಾನೆ. ಈ ವಿಧಾನದಲ್ಲಿ ಕೆಲವು ಅನುಕೂಲಗಳು ಉಂಟು. ತರಬೇತಿನ ಅವಧಿ ಮುಗಿದ ಮೇಲೆ ತರಬೇತು ಶಾಲೆಯಿಂದ ಕೆಲಸಮಾಡುವ ತಾಣಕ್ಕೆ ಉದ್ಯೋಗಿಯನ್ನು ವರ್ಗಮಾಡುವ ಆವಶ್ಯಕತೆಯಿಲ್ಲ. ಕೆಲಸದ ಸ್ಥಿತಿಗತಿಗಳಿಗೆ ಉದ್ಯೋಗಿ ನೇರವಾಗಿ ಹೊಂದಿಕೊಳ್ಳುತ್ತಾನಲ್ಲದೆ ಕೆಲಸ ವಿಧಿವಿಧಾನಗಳನ್ನು ಸಹಜವಾಗಿ ಅರಿತುಕೊಳ್ಳುತ್ತಾನೆ. ಉದ್ಯೋಗಿಯ ತರಬೇತಿನ ಕಾಲದಲ್ಲಿ ಅವನ ಯೋಗ್ಯತೆಯನ್ನರಿತುಕೊಳ್ಳುವ ಅವಕಾಶ ವ್ಯವಸ್ಥಾಪಕವರ್ಗಕ್ಕೆ ಲಭ್ಯವಾಗುತ್ತದೆ. ಆದರೆ ಈ ವಿಧಾನದಲ್ಲಿ ನ್ಯೂನತೆಗಳೂ ಉಂಟು. ಹೊಸ ಉದ್ಯೋಗಿಗೆ ಬೋಧಿಸುವ ಸಾಮರ್ಥ್ಯ ಹಳಬನಾದ ನುರಿತ ಕೆಲಸಗಾರನಿಗೆ ಅನೇಕ ವೇಳೆಗಳಲ್ಲಿ ಇರುವುದಿಲ್ಲ. ಅಲ್ಲದೆ ಬೋಧನೆಯ ಕಾಲದಲ್ಲಿ ಅವನ ಕೆಲಸಕ್ಕೆ ಅಡಚಣೆಯಾಗುವ ಸಂಭವವುಂಟು. ನುರಿತ ಕೆಲಸಗಾರರಿಗೆ ಸಹಾಯಕರು ಆವಶ್ಯಕವಾಗಿರುವಂಥ ಕಡೆಗಳಲ್ಲಿ ಈ ವಿಧಾನ ಉಪಯುಕ್ತವಾಗಿದೆ.

ಜೊತೆಗಾರ ಕೆಲಸಗಾರನ ಬದಲು ಕಾರ್ಯಪ್ರಮುಖನೇ ತರಬೇತು ನೀಡುವುದು ಅನಂತರ ಜಾರಿಗೆ ಬಂದ ವಿಧಾನ. ಆದರೆ ಕೆಲಸದ ಮೇಲ್ವಿಚಾರಣೆ ಮತ್ತು ತರಬೇತು ನೀಡಿಕೆ–ಇವೆರಡನ್ನೂ ಏಕಕಾಲದಲ್ಲಿ ನಿರ್ವಹಿಸುವುದು ಅನೇಕ ವೇಳೆ ಕಾರ್ಯಪ್ರಮುಖನಿಗೆ ಸಾಧ್ಯವಾಗದು. ಆದ್ದರಿಂದ ಇದು ಕೂಡ ಅಸಮರ್ಪಕವೇ. ಆದರೆ ಕೆಲಸಗಾರನ ಯೋಗ್ಯತೆಯನ್ನಳೆಯಲು ಈ ವಿಧಾನದಿಂದ ಹೆಚ್ಚು ಅನುಕೂಲ.

ಅನಂತರ ಜಾರಿಗೆ ಬಂದ, ಹಿಂದಿನದಕ್ಕಿಂತ ಉತ್ತಮವಾದ, ವ್ಯವಸ್ಥೆಯೆಂದರೆ ಉದ್ಯಮ ಸಂಸ್ಥೆಯ ಆವರಣದಲ್ಲಿಯೇ, ಆದರೆ ಬೇರೊಂದು ಸ್ಥಳದಲ್ಲಿ, ಒಂದು ವಿಶೇಷ ತರಬೇತು ಶಾಲೆಯ ಸ್ಥಾಪನೆ. ಒಳ್ಳೆಯ ಬೋಧಕರೂ ಪ್ರಯೋಗಾನುಭವಿಗಳೂ

ಆದವರನ್ನು ವಿಶೇಷವಾಗಿ ಈ ಕೆಲಸಕ್ಕೆ ನೇಮಿಸಿಕೊಳ್ಳುವುದರಿಂದ ತರಬೇತು ಉನ್ನತಮಟ್ಟದ್ದಾಗಿರುತ್ತದೆ. ಇದರ ಜೊತೆಗೆ, ಕೆಲಸಗಾರರನ್ನು ನಿಯತಕಾಲಗಳಲ್ಲಿ ಕಾರ್ಖಾನೆಗೆ ಕಳುಹಿಸಿಕೊಟ್ಟು ಕೆಲಸದ ತಾಣದಲ್ಲೆ ಅವರಿಗೆ ತರಬೇತು ನೀಡುವ ಕ್ರಮವನ್ನೂ ಇದಕ್ಕೆ ಹೊಂದಿಸಬಹುದು. ತರಬೇತು ಪಡೆಯುವವರಿಗೆ ಇದರಿಂದ ಪ್ರಾಯೋಗಿಕ ಜ್ಞಾನವೂ ಲಭ್ಯವಾದಂತಾಗುತ್ತದೆ.

ವಿಶಿಷ್ಟ ಕ್ಷೇತ್ರಗಳಲ್ಲಿ ಭಾವೀ ಕೆಲಸಗಾರರಿಗೆ ತರಬೇತು ನೀಡುವ ಉದ್ದೇಶದಿಂದ ಸರ್ಕಾರವೂ ಸಾರ್ವಜನಿಕ ಸಂಸ್ಥೆಗಳೂ ತರಬೇತು ಶಾಲೆಗಳನ್ನು ತೆರೆದಿರುವುದುಂಟು.

ಕೆಲಸಗಾರರ ತರಬೇತಿನಲ್ಲಿ ಗಮನಾರ್ಹ ಪ್ರಗತಿಯಾದ್ದು ಎರಡನೆಯ ಮಹಾಯುದ್ಧದ ಕಾಲದಲ್ಲಿ. ಅತಿ ಶೀಘ್ರಕಾಲದಲ್ಲಿ ಅಧಿಕಸಂಖ್ಯೆಯಲ್ಲಿ ಕೆಲಸಗಾರರನ್ನು ತರಬೇತು ಮಾಡುವ ಆವಶ್ಯಕತೆ ಆಗ ಉದ್ಭವವಾಯಿತು. ಕೈಗಾರಿಕೆಯೊಳಗೆ ತರಬೇತು ಎಂಬ ಯೋಜನೆ ಆಗ ಜಾರಿಗೆ ಬಂತು. ಇದರ ಮುಖ್ಯ ಲಕ್ಷಣಗಳು ಹೀಗಿವೆ:

1 ಕೆಲಸಗಾರರಿಗೆ ಮೇಲ್ವಿಚಾರಕನೇ ಕೆಲಸದ ವಿಧಾನವನ್ನು ಕಲಿಸುವುದು ಸಾಧ್ಯವಾಗಬೇಕೆಂಬ ಉದ್ದೇಶದಿಂದ ಕೆಲಸ ಬೋಧನೆಯ ಕಾರ್ಯಕ್ರಮವೊಂದನ್ನು ತಯಾರಿಸಲಾಯಿತು. ಕೆಲಸಗಾರ ಸುಲಭವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುವಂತೆ ಸರಳಬೋಧನಮಾರ್ಗವನ್ನು ಸೂಚಿಸಲಾಯಿತು. ಕೆಲಸವನ್ನು ವಿವಿಧ ಹಂತಗಳಾಗಿ ಮುರಿದು, ವಿಶೇಷವಾಗಿ ಗಮನಿಸಬೇಕಾದ ಮುಖ್ಯಾಂಶಗಳನ್ನು ಗುರುತಿಸಲಾಯಿತು.

2ಕೆಲಸಗಾರರ ನಿರ್ವಹಣೆ, ಅವರ ಕುಂದುಕೊರತೆಗಳ ವಿಚಾರಣೆ–ಈ ವಿಚಾರಗಳಲ್ಲಿ ಮೇಲ್ವಿಚಾರಕ ಕುಶಲನಾಗಿರಬೇಕಾದ್ದು ಅವಶ್ಯವೆನಿಸಿತು. ಇದಕ್ಕಾಗಿ ಕೆಲಸ ಸಂಬಂಧ ಕಾರ್ಯಕ್ರಮವೊಂದು (ಜಾಬ್ ರಿಲೇಷನ್ಸ್ ಪ್ರೋಗ್ರಾಂ) ರೂಪಿತವಾಯಿತು.

3 ಜಾರಿಯಲ್ಲಿದ್ದ ಉತ್ಪಾದನ ವಿಧಾನಗಳನ್ನು ಸತತವಾಗಿ ಪರಿಶೀಲಿಸಿ ಉತ್ತಮಗೊಳಿಸುವುದು ಅವಶ್ಯವೆನಿಸಿದ್ದರಿಂದ ಇದಕ್ಕಾಗಿ ಕೆಲಸ ವಿಧಾನಗಳ ಕಾರ್ಯಕ್ರಮವೊಂದನ್ನು (ಜಾಬ್ ಮೆಥಡ್ಸ್ ಪ್ರೋಗ್ರಾಂ) ರೂಪಿಸಲಾಯಿತು.

ಕೈಗಾರಿಕೆಯೊಳಗೆ ತರಬೇತು ವ್ಯವಸ್ಥೆಯ ಈ ಮುಖ್ಯ ಸೂತ್ರಗಳನ್ನು ಪ್ರಪಂಚಾದ್ಯಂತ ವ್ಯಾಪಕವಾಗಿ ಜಾರಿಗೆ ತರಲಾಗುತ್ತಿದೆ. ಭಾರತದಲ್ಲಿ ಈ ನಿಟ್ಟಿನಲ್ಲಿ ಆಗಿರುವ ಪ್ರಗತಿ ಅತ್ಯಲ್ಪ. ಅಹಮದಾಬಾದ್ ಜವಳಿ ಕೈಗಾರಿಕೆಯ ಸಂಶೋಧನ ಸಂಘ, ಮುಂಬಯಿ ಜವಳಿ ಸಂಶೋಧನ ಸಂಘ, ದಕ್ಷಿಣ ಭಾರತ ಜವಳಿ ಸಂಶೋಧನ ಸಂಘ ಮುಂತಾದ ಕೆಲವು ಸಂಸ್ಥೆಗಳು ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿವೆ. (ಜೆ.ಕೆ.ಐ.)

**ಕೆಲಸದ ಮೌಲ್ಯನಿರ್ಣಯ :** ಕಾರ್ಖಾನೆಯಲ್ಲಿ ಪ್ರತಿಯೊಂದು ಕೆಲಸದ ಸಾಪೇಕ್ಷ ಮೌಲ್ಯವನ್ನು ಕಂಡುಹಿಡಿಯಲು ಮತ್ತು ಆ ಕೆಲಸಕ್ಕೆ ತೃಪ್ತಿಕರವಾದ ಮೂಲ ವೇತನ ಎಷ್ಟೆಂಬುದನ್ನು ನಿರ್ಧರಿಸಲು ಬಳಸಲಾಗುವ ವಿಧಾನ (ಜಾಬ್ ಇವ್ಯಾಲ್ಯುಯೇಷನ್). ಒಂದು ಕಾರ್ಖಾನೆ ಅಥವಾ ಕೈಗಾರಿಕೆಯೊಳಗಿನ ವಿವಿಧ ಕೆಲಸಗಳಿಗೆ ಬೇಕಾಗುವ ಮಾನವ ಆವಶ್ಯಕತೆಗಳನ್ನು ಹೋಲಿಸಲು ಇದು ಆಧಾರ ಒದಗಿಸುತ್ತದೆ. ಇದರಿಂದಾಗಿ, ತೌಲನಿಕವಾಗಿ ಹೆಚ್ಚಿನ ಮನುಷ್ಯ ಶಕ್ತಿ ಅಗತ್ಯವುಳ್ಳ ಕೆಲಸಗಳನ್ನು ಮಾಡುವ ಕೆಲಸಗಾರರಿಗೆ ಸುಸಂಗತವಾಗಿ ಹೆಚ್ಚು ವೇತನ ಕೊಡಲಾಗುತ್ತದೆ. ಸ್ಪಷ್ಟವಾದ ಕೆಲಸದ ಮೌಲ್ಯನಿರ್ಣಯ ಯೋಜನೆಗಳು ಒಂದಿಲ್ಲೊಂದು ರೀತಿಯಲ್ಲಿ ಒಂದನೆಯ ಮಹಾಯುದ್ಧ ಕಾಲದಲ್ಲಿ ಬಳಕೆಯಲ್ಲಿದ್ದುವು. ಪ್ರಾರಂಭದ ದೆಸೆಯಲ್ಲಿ ಈ ಯೋಜನೆಗಳು ಪ್ರತಿ ಗಂಟೆಯ ಕೆಲಸಕ್ಕೆ ವೇತನ ಪಡೆಯುತ್ತಿದ್ದ ಕೆಲಸಗಾರರಿಗಾಗಿ–ಅವರು ಮಾಡುತ್ತಿದ್ದ ಕೆಲಸಗಳು ಸಾಪೇಕ್ಷವಾಗಿ ನಿಖರವಾಗಿ ಮತ್ತು ಪೂರ್ಣವಾಗಿ ವಿವರಿಸಲು ಸಾಧ್ಯವಾಗುತ್ತಿದ್ದ ಕಾರಣ ಉಪಯೋಗದಲ್ಲಿತ್ತು. ಕಾರ್ಖಾನೆಗಳು ಗಾತ್ರದಲ್ಲಿ ಮತ್ತು ಕೆಲಸಗಾರರ ಸಂಖ್ಯೆಯಲ್ಲಿ ಬೆಳೆದಂತೆ ಕೆಲಸಗಾರರು, ವ್ಯವಸ್ಥಾಪಕರು ಮತ್ತು ಕೆಲಸಗಾರರ ಸಂಘಗಳ ನಡುವೆ ತಲೆದೋರುತ್ತಿದ್ದ ವೇತನ ವಿವಾದಗಳ ಸಂಬಂಧವಾಗಿ ಮರುಕೊಳಿಸುತ್ತಿದ್ದ ಕಷ್ಟಗಳನ್ನು ನಿವಾರಿಸಲು ಕ್ರಮಬದ್ಧವೇತನ ಯೋಜನೆಗಳು ಅಗತ್ಯವೆನಿಸಿದುವು.

ಕೆಲಸದ ಮೌಲ್ಯನಿರ್ಣಯಕ್ಕೆ ವಿವಿಧ ಪದ್ಧತಿಗಳು ಬಳಕೆಯಲ್ಲಿವೆ. ಜಟಿಲತೆಗೆ ಅನುಗುಣವಾಗಿ ಅವನ್ನು ಈ ರೀತಿ ವಿಗಡಿಸಲಾಗಿದೆ: 1 ಕೆಲಸ ವರ್ಗೀಕರಣ (ಜಾಬ್ ರ್‍ಯಾಂಕಿಂಗ್), 2 ಗುಣದರ್ಜೆ ವಿವರಣೆ, 3 ಕೆಲಸದ ಅಂಶಗಳ ತೋಲನ ಮತ್ತು 4 ಅಂಕ ಪದ್ಧತಿ.

ಕೆಲಸ ವರ್ಗೀಕರಣ ಪದ್ಧತಿ ಅತ್ಯಂತ ಹಳೆಯ ವಿಧಾನ. ನಿರ್ಣಾಯಕರ ವಿವೇಚನೆಯಲ್ಲಿ ಕೆಲವು ಕೆಲಸಗಳನ್ನು ಮಾಡಲು ಯಾವುದು ಸರಿಯಾದ ಕ್ರಮ ಎನಿಸುತ್ತದೋ ಅದಕ್ಕನುಗುಣವಾಗಿ ಅವರು ಅವನ್ನು ವರ್ಗೀಕರಿಸುತ್ತಾರೆ. ನಿಷ್ಪಕ್ಷಪಾತೆಯಿಂದ ತಯಾರಿಸಿದ ಕೆಲಸ ವಿವರಣೆಗಳು, ಪ್ರತಿಯೊಂದು ಕೆಲಸದ ಸಾಪೇಕ್ಷ ಪ್ರಾಮುಖ್ಯವನ್ನು ತೋರಿಸುವ ಸಂಘಟನ ರೇಖಾಪಟಗಳು, ಮೇಲ್ವಿಚಾರಕರೊಡನೆ ವಿಚಾರ ವಿನಿಮಯ–ಇವು ಕೆಲಸ ವರ್ಗೀಕರಣಕ್ಕೆ (ಜಾಬ್ ರ್‍ಯಾಕಿಂಗ್) ಆಧಾರಗಳು. ಅನಂತರ ಕೆಲಸಗಳನ್ನು ಗುಂಪು ಮಾಡಿ ಪ್ರತಿಯೊಂದು ಹಂತಕ್ಕೂ ಯುಕ್ತವೇತನವನ್ನು ಗೊತ್ತು ಮಾಡಲಾಗುತ್ತದೆ. ಕುಶಲ, ಅರೆಕುಶಲ ಮತ್ತು ಅಕುಶಲ ಕಾರ್ಯ, ಗುಮಾಸ್ತಗಿರಿ ಮುಂತಾಗಿ ಕೆಲಸಗಳನ್ನು ಸ್ಥೂಲವಾಗಿ ವಿಂಗಡಣೆ ಮಾಡಿ, ಅಥವಾ ದರ್ಜೆಗಳನ್ನು ಸೂಚಿಸಿ, ಅನಂತರ ಇವುಗಳೊಡನೆ ಕೆಲಸಗಳನ್ನು ವರ್ಗೀಕರಿಸಿ ಪ್ರತಿಯೊಂದು ದರ್ಜೆ ಮತ್ತು ಕೆಲಸಕ್ಕೆ ವೇತನದರವನ್ನು ಗೊತ್ತುಪಡಿಸುವುದು ಗುಣದರ್ಜೆ ವಿವರಣ ಪದ್ಧತಿಯ ವಿಧಾನ.

ಕೆಲಸದ ಅಂಶಗಳ ತೌಲನಿಕ ಪದ್ಧತಿ 1929ರಲ್ಲಿ ಮೊತ್ತಮೊದಲಿಗೆ ಅನುಷ್ಠಾನಕ್ಕೆ ಬಂತು. ಈ ಪದ್ಧತಿಯಲ್ಲಿ ಭಿನ್ನ ಭಿನ್ನವಾದ ಪ್ರಮುಖ ಕೆಲಸಗಳಲ್ಲಿ ಕೆಲವನ್ನು (15 ಅಥವಾ 20) ನಿರ್ದಿಷ್ಟವಾದ ಹಲವು ಕೆಲಸದ ಅಂಶಗಳಲ್ಲಿ (ಜಾಬ್ ಫ್ಯಾಕ್ಟರ್ಸ್) ವರ್ಗೀಕರಿಸಲಾಗುತ್ತದೆ. ಈ ಕೆಲಸದ ಅಂಶಗಳಲ್ಲಿ ಮುಖ್ಯವಾದವು ಮಾನಸಿಕ, ದೈಹಿಕ ಮತ್ತು ನೈಪುಣ್ಯಗಳ ಅಂಶಗಳು. ಕೆಲಸದಲ್ಲಿ ಜವಾಬ್ದಾರಿ ಮತ್ತು ಕೆಲಸದ ಸ್ಥಿತಿಗತಿಗಳು. ಪ್ರಚಲಿತವಾದ ವೇತನವನ್ನು ಈ ಕೆಲಸದ ಅಂಶಗಳ ನಡುವೆ ಅವುಗಳ ವರ್ಗೀಕರಣಕ್ಕೆ ಹೊಂದುವಂತೆ ಹಂಚಲಾಗುವುದು. ಇದರಿಂದಾಗಿ ಪ್ರಮುಖ ಕೆಲಸದಲ್ಲಿಯ ಐದು ಅಂಶಗಳಿಗೂ ಹಣ ಸಂದಾಯವಾದಂತಾಗುತ್ತದೆ. ಉದಾಹರಣೆಗೆ, ಒಂದು ಗಂಟೆ ಕೆಲಸಕ್ಕೆ ರೂ.1.50 ಕೊಡಲಾಗುವ ಒಂದು ಮುಖ್ಯ ಕೆಲಸದಲ್ಲಿ ಆಗಬಹುದಾದ ವಿಂಗಡಣೆ ಹೀಗೆ:

| | | **ರೂ. ಪೈ.** |
|---|---|---|
| 1 ಮಾನಸಿಕ ಅಂಶ | . . . | 0 40 |
| 2 ಕುಶಲತೆಯ ಅಂಶ | . . . | 0 40 |
| 3 ದೈಹಿಕ ಅಂಶ | . . . | 0 15 |
| 4 ಕೆಲಸದಲ್ಲಿ ಜವಾಬ್ದಾರಿ | . . . | 0 20 |
| 5 ದುಡಿಮೆಯ ಸ್ಥಿತಿಗತಿಗಳು | . . . | 0 35 |

ಕಾರ್ಖಾನೆಯಲ್ಲಿಯ ಅಥವಾ ಕೈಗಾರಿಕೆಯಲ್ಲಿಯ ಇತರ ಕೆಲಸಗಳನ್ನು ಪ್ರಮುಖ ಕೆಲಸಗಳೊಡನೆ ಹೋಲಿಸಿ, ಅವುಗಳಲ್ಲಿ ಕೆಲಸದ ಅಂಶಗಳಿಗೆ ಗೊತ್ತು ಮಾಡಲಾದ ಮೊಬಲಗುಗಳನ್ನು ಕೂಡಿ, ಪ್ರತಿ ಕೆಲಸಕ್ಕೂ ಅಂತಿಮವಾಗಿ ವೇತನದರವನ್ನು ನಿಗದಿ ಮಾಡಲಾಗುತ್ತದೆ. ಮಾನಸಿಕ ಆವಶ್ಯಕತೆಗಳನ್ನೇ ಪ್ರಮುಖ ಅಂಶವಾಗಿಟ್ಟುಕೊಂಡು ಒಂದು ಕಂಪನಿ ಮೌಲ್ಯ ನಿರ್ಣಯಿಸಿರುವುದನ್ನು ಇಲ್ಲಿ ಉದಾಹರಣೆಗಾಗಿ ನೋಡಬಹುದು:

| **ಕೆಲಸ ಅಥವಾ ಹುದ್ದೆ** | . . . | **ಪ್ರತಿ ತಿಂಗಳ ಸಂಬಳ (ರೂಪಾಯಿಗಳಲ್ಲಿ)** |
|---|---|---|
| ಮುಖ್ಯ ಕರಣಿಕ | . . . | 550 ರಿಂದ 575 |
| ನಗದು ಗುಮಾಸ್ತೆ | . . . | 225 “ 250 |
| ಮುಖ್ಯ ಕಾರಕೂನ | . . . | 300 “ 325 |
| ಖಾತೆ ಕಾರಕೂನ | . . . | 220 “ 225 |
| ದೂರವಾಣಿ ಸಹಾಯಕ | . . . | 200 “ 225 |
| ಬೆರಳಚ್ಚುಗಾರ | . . . | 175 “ 200 |

ಮೆರಿಲ್ ಲಾಟ್ 1925ರ ಸುಮಾರಿಗೆ ಮೊತ್ತಮೊದಲಿಗೆ ಕೆಲಸದ ಮೌಲ್ಯದ ನಿರ್ಣಯಕ್ಕಾಗಿ ಅಂಕ ಪದ್ಧತಿಯನ್ನು (ಪಾಯಿಂಟ್ ಸಿಸ್ಟಮ್) ನಿರೂಪಿಸಿದ. ಕೆಲಸಮೌಲ್ಯನಿರ್ಣಯದ ನಾಲ್ಕು ಪದ್ಧತಿಗಳಲ್ಲಿ ಇದು ಹೆಚ್ಚು ಕ್ರಮಬದ್ಧವೂ ವೈಜ್ಞಾನಿಕವೂ ಆಗಿರುವ ಕಾರಣ ಹೆಚ್ಚು ಬಳಕೆಯಲ್ಲಿದೆ. ಈ ಪದ್ಧತಿಯಲ್ಲಿಯ ಮೊದಲ ಹಂತವೆಂದರೆ ವೇತನದರ ನಿಗದಿಯಲ್ಲಿ ಪ್ರಭಾವ ಬೀರುವ ಅಂಶಗಳ ವರ್ಗವೊಂದರ ಆಯ್ಕೆ ಮತ್ತು ನಿರ್ಣಯ. ಪ್ರಾರಂಭದಲ್ಲಿ 250 ರಷ್ಟು ಅಂಶಗಳನ್ನು ವಿವರಿಸಲಾಗಿದ್ದು, ಕಾಲಕ್ರಮೇಣ ಅವುಗಳ ಸಂಖ್ಯೆ 10ಕ್ಕೆ ಇಳಿದಿದೆ. ಕಾರ್ಖಾನೆಯೊಂದರಲ್ಲಿ ಒಂದು ಗಂಟೆ ಕೆಲಸಕ್ಕೆ ಪಡೆಯುವ ವೇತನಕ್ಕೆ ಸಂಬಂಧಿಸಿದಂತೆ ಪ್ರಾತಿನಿಧಿಕ ಪಟ್ಟಿ ಈ ರೀತಿ ಇರುತ್ತದೆ: 1 ಶೈಕ್ಷಣಿಕ ಹಿನ್ನೆಲೆ, 2 ಕೆಲಸ ತರಬೇತು, 3 ಮಾನಸಿಕ ಪ್ರಯಾಸ, 4 ದೃಷ್ಟಿ ಪ್ರಯಾಸ, 5 ದೈಹಿಕ ಪ್ರಯಾಸ, 6 ಮೂಲ ಸಾಮಗ್ರಿ ಅಥವಾ ಉತ್ಪನ್ನಕ್ಕೆ ಸಂಬಂಧಿಸಿದ ಜವಾಬ್ದಾರಿ, 7 ಉಪಕರಣ ಮತ್ತು ಸರಂಜಾಮುಗಳಿಗೆ ಸಂಬಂಧಿಸಿದ ಜವಾಬ್ದಾರಿ, 8 ಇತರರ ಭದ್ರತೆ ಬಗ್ಗೆ ಜವಾಬ್ದಾರಿ, 9 ಕೆಲಸದ ವಾತಾವರಣ ಮತ್ತು 10 ಅನಿವಾರ್ಯ ಅಪಾಯಗಳು. (ಕಚೇರಿಯ ಕೆಲಸಗಳು, ಕಾರ್ಖಾನೆಯಲ್ಲಿಯ ಸಂಬಳದಾರರ ಕೆಲಸಗಳು ಮತ್ತು ಆಡಳಿತ ಕಾರ್ಯಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಅಂಶಗಳನ್ನು ಬಳಸಲಾಗುತ್ತದೆ.)

ಎರಡನೆಯ ಹಂತದಲ್ಲಿ ಪ್ರತಿಯೊಂದು ಕೆಲಸವನ್ನೂ ವಿಶ್ಲೇಷಿಸಲಾಗುವುದು. ಇದಕ್ಕಾಗಿ ಕೆಲಸದ ವಿವರಣೆಗಳನ್ನು (ಜಾಬ್ ಡಿಸ್ಕ್ರಿಪ್ಷನ್) ಬಳಸಲಾಗುತ್ತದೆ. ಈ ವಿಶ್ಲೇಷಣೆಯ ಉದ್ದೇಶವೆಂದರೆ, ಕೆಲಸಕ್ಕೆ ಸಂಬಂಧಿಸಿದ ಪ್ರತಿ ಅಂಶದ ಮಟ್ಟವನ್ನೂ ವಿಧಿಸುವುದು. ಈ ರೀತಿ ಮಾಡುವಾಗ ಕೆಲಸಗಾರನಿಂದ ಭಿನ್ನವಾಗಿ ಕೆಲಸವನ್ನೇ ವಿಶ್ಲೇಷಿಸುವುದು ಮುಖ್ಯ.

ಎಲ್ಲ ಕೆಲಸಗಳನ್ನೂ ವಿಶ್ಲೇಷಿಸಿದ ಅನಂತರ ಪ್ರತಿಯೊಂದು ಮಟ್ಟಕ್ಕೆ ಕೆಲವು ಅಂಕಗಳನ್ನು ಗೊತ್ತುಪಡಿಸಲಾಗುವುದು. ಎಲ್ಲ ಅಂಶಗಳ ಒಟ್ಟು ಅಂಕಗಳು ಒಂದು ಕೆಲಸದ ಬೆಲೆಯನ್ನು ಸೂಚಿಸುತ್ತವೆ. ಅಂಶಗಳ ವಿವಿಧಮಟ್ಟಗಳ ವೇತನರಚನೆಯನ್ನು ನಿರ್ಧರಿಸುವಲ್ಲಿ ಇದು ಎಷ್ಟು ಮುಖ್ಯವಾದುದು ಎಂಬುದನ್ನು ಈ ಲೆಕ್ಕಾಚಾರ ವ್ಯಕ್ತಪಡಿಸುತ್ತದೆ. ಪ್ರತಿಯೊಂದು ಅಂಶಕ್ಕೂ ಅಂಕ ನಿರ್ಧರಿಸುವಾಗ ಅದು ಪ್ರಚಲಿತ ವೇತನ ರಚನೆಗೋ ಕೆಲಸ ಸಂಬಂಧಗಳಿಗೋ ಸಾಧ್ಯವಾದಷ್ಟು ಸಮೀಪವಾಗಿರುವಂತೆ ನೋಡಿಕೊಳ್ಳಬೇಕು.

ಅಂಶಗಳ ತಪ್ಪು ತೋಲನದಿಂದ ವೇತನರಚನೆಯಲ್ಲಿ ಅಸ್ಪಷ್ಟತೆ ಮೂಡಬಹುದು. ಕೆಲಸದ ಮೌಲ್ಯನಿರ್ಣಯದ ಆಧಾರದ ಮೇಲೆ ನಿರ್ಧರಿಸಿದ ವೇತನದರ ಪ್ರಕೃತದಲ್ಲಿ ಕೆಲಸಗಾರರು ಪಡೆಯುತ್ತಿರುವುದಕ್ಕಿಂತ ಕಡಿಮೆಯಾದಲ್ಲಿ ಅವರ ವೇತನದರವನ್ನು ಯೋಜನೆಗೆ ಅನುಗುಣವಾಗಿ ಕಡಿಮೆ ಮಾಡುವುದು ಅಸಾಧ್ಯ. ಆದರೆ ನಿರ್ಣಯಿಸಿದ ವೇತನದರ ಸದ್ಯದಲ್ಲಿ ಕೆಲಸಗಾರರು ಪಡೆಯುತ್ತಿರುವುದಕ್ಕಿಂತ ಹೆಚ್ಚಾಗಿದ್ದಲ್ಲಿ, ಕಾರ್ಖಾನೆ ಸುಸಂಗತ ವೇತನ ಪರಿಪಾಲನ ನೀತಿಯನ್ನು (ಕನ್ಸಿಸ್ಟೆಂಟ್ ವೇಜ್ ಅಡ್ಮಿನಿಸ್ಟ್ರೇಷನ್ ಪಾಲಿಸಿ) ಪಾಲಿಸುವುದಕ್ಕಾಗಿ ವೇತನವನ್ನು ಹೆಚ್ಚಿಸಬೇಕಾಗುತ್ತದೆ. ಕೆಲಸ ಮೌಲ್ಯ ನಿರ್ಣಯದ ಆಧಾರದ ಮೇಲೆ ಒಂದು ನಿರ್ದಿಷ್ಟವಾದ ಕೆಲಸಕ್ಕೆ ಕೊಡಲಾಗುವ ವೇತನದರ ತತ್ಸಮವಾದ ಇತರ ಕೆಲಸಗಳಲ್ಲಿ ನಿರತವಾದ ಸಮುದಾಯದ ಸರಾಸರಿ ವೇತನದರಕ್ಕಿಂತ ಕಡಿಮೆಯಾದರೆ, ಆ ಸಂದರ್ಭದಲ್ಲಿ ಕೆಲಸಗಾರರು ಸಿಗದೆ ತೊಂದರೆಯಾಗಬಹುದು.

ಕೆಲಸ ಮೌಲ್ಯ ನಿರ್ಣಯದಿಂದ ಉದ್ಯಮಿಗೆ ಕೆಲವು ಅನುಕೂಲಗಳಿವೆ: 1. ಪ್ರತಿಯೊಂದು ಕೆಲಸಕ್ಕೆ ಬೇಕಾದ ಅಗತ್ಯ ಅರ್ಹತೆಗಳನ್ನು ವೈಜ್ಞಾನಿಕವಾಗಿ ಮೊದಲೇ ನಿಷ್ಕರ್ಷಿಸುವುದರಿಂದ, ನೇಮಕವಾಗುವ ವ್ಯಕ್ತಿ ಆ ಅರ್ಹತೆಗಳನ್ನು ಪಡೆದಿರಬೇಕು. ಇದರಿಂದಾಗಿ ಅನರ್ಹ ವ್ಯಕ್ತಿಗಳು ಯಾವ ಒಂದು ಕೆಲಸಕ್ಕೂ ನೇಮಕವಾಗಲು ಅವಕಾಶವಿರುವುದಿಲ್ಲ. 2. ಕೆಲಸದ ಮೌಲ್ಯನಿರ್ಣಯ ಕೆಲಸಗಾರರಿಗೆ ತೃಪ್ತಿಯನ್ನೊದಗಿಸುವ ಕಾರಣ. ವ್ಯವಸ್ಥಾಪಕ–ಕಾರ್ಮಿಕ ಸಂಬಂಧ ಹೆಚ್ಚು ಮೈತ್ರಿಯುತವಾಗುವ ಸಾಧ್ಯತೆ ಇದೆ. 3. ಕ್ರಮಬದ್ಧವಾಗಿ ಮೌಲ್ಯ ನಿರ್ಣಯಿಸಿದಲ್ಲಿ ವೇತನದರ ಹೆಚ್ಚು ನ್ಯಾಯಬದ್ಧವಾಗಿರುತ್ತದೆ.

ಕಾರ್ಮಿಕನ ದೃಷ್ಟಿಯಿಂದ ಕೆಲಸದ ಮೌಲ್ಯನಿರ್ಣಯದ ಮುಖ್ಯ ಪ್ರಯೋಜನಗಳು ಇವು: ಕೆಲಸಗಾರನಿಗೆ ತಾನು ಮಾಡುವ ಕೆಲಸದ ಪ್ರಾಮುಖ್ಯದ ಅರಿವು ಮೂಡುವುದರ ಜೊತೆಗೆ, ಅವನಿಗೆ ಆ ಕೆಲಸದ ಬಗ್ಗೆ ಭವಿಷ್ಯದಲ್ಲಿ ಏನನ್ನು ನಿರೀಕ್ಷಿಸಬಹುದೆಂಬುದೂ ಗೊತ್ತಾಗುತ್ತದೆ. ಮೌಲ್ಯನಿರ್ಣಯಕ್ಕೆ ಅನುಗುಣವಾಗಿ ನಿರ್ಧರಿಸಿದ ವೇತನದರ ಕೆಲಸಗಾರನಿಗೆ ಒಪ್ಪಿಗೆಯೆನಿಸಿ ವ್ಯವಸ್ಥಾಪಕನ ಬಗ್ಗೆ ಅವನಿಗಿರುವ ಸಂಶಯವನ್ನು ಹೋಗಲಾಡಿಸಿ, ಅವನನ್ನು ಕೆಲಸದಲ್ಲಿ ಸಂತುಷ್ಟಗೊಳಿಸುತ್ತದೆ. ಕೆಲಸಮೌಲ್ಯನಿರ್ಣಯದಲ್ಲಿಯ ಸಮಸ್ಯೆಗಳಿವು: ಒಂದು ಕಾರ್ಖಾನೆ ಅಥವಾ ಕೈಗಾರಿಕೆಯಲ್ಲಿ ಕೆಲಸಗಳ ಸಂಖ್ಯೆ ಹೆಚ್ಚಿದಂತೆಲ್ಲ ಅವುಗಳ ಲಕ್ಷಣ ನಿರೂಪಣೆ, ದರ್ಜೆ ನಿರ್ಣಯ ಮುಂತಾದವನ್ನು ಮೇಲಿಂದ ಮೇಲೆ ನಡೆಸಬೇಕಾಗುವ ಅಗತ್ಯ ಬೀಳುತ್ತದೆ. ಇಷ್ಟಲ್ಲದೆ, ಕೆಲಸವೊಂದನ್ನು ಮಾಡುವ ವಿಧಾನದಲ್ಲಿಯ ಬದಲಾವಣೆಗಳಿಂದಾಗಿ ಅದರ ಲಕ್ಷಣ ನಿರೂಪಣೆಯಲ್ಲಿ ಕೂಡ ಯುಕ್ತ ಬದಲಾವಣೆ ಮಾಡುವುದು ಅವಶ್ಯವಾಗುತ್ತದೆ. ಸಮಸ್ಯೆಗಳೇನೇ ಇದ್ದರೂ ಕೆಲಸದ ಮೌಲ್ಯನಿರ್ಣಯ ಆಧುನಿಕ ಕೈಗಾರಿಕಾ ಪದ್ಧತಿಯಲ್ಲಿ ಅತ್ಯಗತ್ಯ ಎನಿಸುವಷ್ಟು ಪ್ರಾಮುಖ್ಯ ಪಡೆದಿದೆ. (ಎಸ್.ಬಿ.)

**ಕೆಲಸದ ವಿಶ್ಲೇಷಣೆ :** ಒಂದು ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲು ಕೆಲಸಗಾರ ಪಡೆದಿರಬೇಕಾದ ಗುಣಗಳೇನು ಎಂಬುದನ್ನು ಪತ್ತೆ ಹಚ್ಚುವ ಉದ್ದೇಶದಿಂದ ಆ ಕೆಲಸದ ವಿಭಜನೆ (ಜಾಬ್ ಅನಾಲಿಸಿಸ್). ಜಾಬ್ ಅನಾಲಿಸಿಸ್ ಎಂಬ ಶಬ್ದವನ್ನು ಮೊತ್ತಮೊದಲಿಗೆ ಬಳಸಿದವರು ಅಮೆರಿಕನ್ ಸೇನೆಯ ಕರ್ಮಚಾರೀ ವರ್ಗದವರು. ಉಪಜೀವಿಕಾ ಚಟುವಟಿಕೆಗಳನ್ನು ವಿಶ್ಲೇಷಿಸಿ, ಪ್ರತಿಯೊಂದು ಉಪಜೀವಿಕೆಯ ಕರ್ಮಚಾರಿಯೂ ಏನು ಮಾಡಬೇಕು, ಏನಾಗಬೇಕು ಎಂಬುದನ್ನು ಖಚಿತಗೊಳಿಸುವಂತೆ ಕಾರ್ಯನಿಷ್ಕರ್ಷೆ ಮಾಡುವ ಉದ್ದೇಶದಿಂದ ಅವರು ಈ ವಿಧಾನವನ್ನು ಆರಂಭಿಸಿದರು. ಆ ಕಾಲದಲ್ಲಿ ನಾನಾ ಹುದ್ದೆಗಳಿಗೆ ಕೆಲಸಗಾರರನ್ನು ಆರಿಸಲು ಈ ವಿಶಿಷ್ಟ ವಿವರಣೆಗಳೇ ಆಧಾರವಾಗಿ ಸ್ವೀಕೃತವಾದುವು. ಎರಡನೆಯ ಮಹಾಯುದ್ಧದ ಅನಂತರಕಾಲದಲ್ಲಿ ಕಾರ್ಯ ವಿಶ್ಲೇಷಣೆಯ ತತ್ತ್ವವನ್ನು ಕೈಗಾರಿಕೆ, ಶಿಕ್ಷಣ ಹಾಗೂ ಇವಕ್ಕೆ ಸಂಬಂಧಪಟ್ಟ ಇತರ ಕ್ಷೇತ್ರಗಳಿಗೂ ವಿಸ್ತರಿಸಲಾಯಿತು. ಕಸಬಿನ ಮಾರ್ಗಪ್ರದರ್ಶನವನ್ನು ಕುರಿತು ತನಿಖೆ ನಡೆಸುವವರು ಇದನ್ನು ಕಸಬಿನ ವಿಶ್ಲೇಷಣೆ ಎಂದು ಕರೆಯುತ್ತಾರೆ. ಕಳೆದ ಕೆಲವು ವರ್ಷಗಳಿಂದ ಕಸಬಿನ ಚಟುವಟಿಕೆಗಳನ್ನು ಅವುಗಳ ಸಂಘಟಕಾಂಗಗಳಾಗಿ ವಿಶ್ಲೇಷಿಸುತ್ತಿದ್ದಾರೆ. ಒಬ್ಬ ವ್ಯಕ್ತಿ ಒಂದು ಕಸಬನ್ನು ಆರಿಸಿಕೊಳ್ಳಲು ಆಧಾರವನ್ನು ಗೊತ್ತುಪಡಿಸಲು ಯತ್ನಿಸಿದ್ದಾರೆ. ಆಮೇಲೆ ಈ ಬಗೆಯ ಅನೇಕ ಪಥಗಾಮೀ ಅಧ್ಯಯನಗಳು ಫ್ರೆಡರಿಕ್ ಜೆ.ಅಲೆನ್ ಮುಂತಾದ ಹಲವರಿಂದ ನಡೆದಿವೆ. ಅಮೆರಿಕ ಸಂಯುಕ್ತ ಸಂಸ್ಥಾನದ ಉದ್ಯೋಗ ಸೇವಾ ಸಂಸ್ಥೆಗಳಂಥ ಪರಿಣತ ಸಂಸ್ಥೆಗಳೂ ಈ ವಿಚಾರವಾಗಿ ಅಧ್ಯಯನ ನಡೆಸಿವೆ. ಇವು ಪ್ರತಿಯೊಂದು ಕಾರ್ಯದ ವಿವರಗಳನ್ನೂ ತಯಾರಿಸಿವೆ. ಅಭ್ಯರ್ಥಿಗಳನ್ನು ನಾನಾ ಕಾರ್ಯಗಳಿಗೆ ಆರಿಸುವಾಗ ಈ ವಿವರಗಳು ಸಹಾಯಕವಾಗಿವೆ. ರಿಚ್ಮಂಡ್ ನಗರದವರು ಏರ್ಪಡಿಸಿದ್ದ ಸಮಾಜ ಪರಿಶೀಲನೆ, ಕ್ಲೀವ್‌ಲೆಂಡ್ ನಗರದವರ ಸಮಾಜ ಪರಿಶೀಲನೆ–ಇವು ಉದಾಹರಣೆಗಳು. ಈ ನಾನಾ ಪರಿಶೀಲನೆಗಳಲ್ಲಿ ಕಾರ್ಯ ವಿಶ್ಲೇಷಣೆಯ ವಿಧಾನವನ್ನು ಅಳವಡಿಸಲಾಗಿತ್ತು. ಸಮಾಜಗಳ ನಾನಾ ಉದ್ಯೋಗಗಳಿಗೆ ಸಂಬಂಧಿಸಿದ ಕಲಾಪಗಳ ವರ್ಗೀಕರಣ ಹಾಗೂ ವಿವರಣೆಗಳು ಈ ವರದಿಯಲ್ಲಿ ಅಡಕವಾಗಿವೆ. ಈ ಪರಿಶೀಲನೆಗಳು ಮಾತ್ರವೇ ಅಲ್ಲದೆ ಹೆಚ್ಚು ಕಡಿಮೆ ಪ್ರಯೋಗಶಾಲಾ ವಿಧಾನದಲ್ಲಿ ಅನೇಕ ವಿಶ್ಲೇಷಣೆಗಳನ್ನೂ ಮಾಡಲಾಗಿದೆ. ಶಿಕ್ಷಣ ನೀಡುವ ವಿಧಾನಗಳನ್ನು ರೂಪಿಸುವ ಉದ್ದೇಶದಿಂದ ಉದ್ಯೋಗ ಕಾರ್ಯಗಳನ್ನು ವಿಚ್ಛೇದಿಸಿ ನೋಡುವುದೇ ಇವುಗಳ ಉದ್ದೇಶ. ಮನೋವಿಜ್ಞಾನಿಗಳು ಇನ್ನೂ ಹೆಚ್ಚು ಕಟ್ಟುನಿಟ್ಟಾದ ಪ್ರಯೋಗಶಾಲಾ ವಿಧಾನದಲ್ಲಿ ಈ ವಿಚಾರವಾಗಿ ವಿಶ್ಲೇಷಣೆ ನಡೆಸಿದ್ದಾರೆ. ಶಿಕ್ಷಾರ್ಥಿಗಳ ತರಬೇತಿನಲ್ಲಿ ಉಪಯೋಗಿಸಬಹುದಾದ ಕಲಿಕೆಯ ಅಂಶಗಳನ್ನು ಪತ್ತೆ ಹಚ್ಚುವ ಸಲುವಾಗಿಯೇ ಈ ವಿಶ್ಲೇಷಣೆ. ಮಿನ್ನೆಸೋಟ ವಿಶ್ವವಿದ್ಯಾಲಯದ ಉದ್ಯೋಗ ಸ್ಥಿರೀಕರಣ ಸಂಶೋಧನ ಸಂಸ್ಥೆ (1931–35) ಉದ್ಯೋಗ ಸಾಮರ್ಥ್ಯ ಮಾದರಿಗಳ ರೂಪದಲ್ಲಿ ಮನೋವೈಜ್ಞಾನಿಕ ವಿಶ್ಲೇಷಣೆಗಳನ್ನು ರೂಪಿಸಿದೆ.

**ವಿಧಾನ:** ಕಾರ್ಯವಿವರಣ ಅಥವಾ ಅರ್ಹತಾ ನಿರ್ಣಯ ಮಾಡುವ ಸಲುವಾಗಿ ಅನೇಕ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಬೇಕಾಗುತ್ತದೆ. ಉದಾಹರಣೆಗೆ, ಒಬ್ಬ ಸಂಪಾದಿಸಬಹುದಾದ ವೇತನದ ಮೊತ್ತವೆಷ್ಟು, ಕಾರ್ಮಿಕರಿಗಾಗಿ ಬೇಡಿಕೆ ಯಾವ ರೀತಿಯಲ್ಲಿ ವ್ಯತ್ಯಾಸವಾಗುತ್ತದೆ ಎಂಬ ಪ್ರಶ್ನೆಗಳಿಗೆ ಉತ್ತರ ಪಡೆಯಬೇಕು. ಅಂತೆಯೇ ಭೌತಿಕ ದೈಹಿಕ ಮಾನಸಿಕ ಸಾಮಾಜಿಕ ದೃಷ್ಟಿಗಳಿಂದಲೂ ವಿಶ್ಲೇಷಣೆಯನ್ನು ನಡೆಸಬೇಕು. ಹೀಗೆ ನಿಜವಾದ ವಿಶ್ಲೇಷಣೆಗೆ ಔದ್ಯೋಗಿಕ ಕಾರ್ಯಚಟುವಟಿಕೆಯ ಸಮಗ್ರದೃಷ್ಟಿ ಅಗತ್ಯ; ಇದೇ ವಿಶ್ಲೇಷಣೆಯ ಫಲಿತಾಂಶವೂ ಹೌದು. ಶಾಸ್ತ್ರ ಸಮ್ಮತವಾದ ಫಲಿತಾಂಶಗಳನ್ನು ನೀಡಬಲ್ಲಂತೆ ರೂಪಿತವಾದ ವಿಧಾನ ವೈಜ್ಞಾನಿಕ ವಿಧಾನಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿರಬೇಕು. ಪೂರ್ವಾಗ್ರಹ ಪೀಡಿತವಾಗಿರಬಾರದು: ಪರಿಸ್ಥಿತಿಯ ಖಚಿತನಿರ್ಣಯವಾಗಬೇಕೆಂಬ ಆಶಯವೊಂದೇ ಇರಬೇಕು. ವಿಶ್ಲೇಷಣಾತ್ಮಕವಾದ ಅನುಸಂಧಾನ ಕಾರ್ಯ ನಿರ್ವಹಿಸುವಾಗ ಆ ಕಾರ್ಯ ಯಾವ ವ್ಯಾವಸಾಯಿಕ ಕ್ಷೇತ್ರದಲ್ಲಿದೆಯೋ ಆ ಇಡೀ ಕ್ಷೇತ್ರದ ಪರಿಶೀಲನೆ ನಡೆಸುವುದೇ ಮೊದಲನೆಯ ಕೆಲಸ. ಸಾಮಾಜಿಕ ವ್ಯವಸ್ಥೆಗೂ ಇದಕ್ಕೂ ಇರುವ ಸಂಬಂಧವನ್ನು ನಿಷ್ಕರ್ಷಿಸಲು ಇದು ಅಗತ್ಯ. ಅನಂತರ ಇದನ್ನು ನಾನಾ ಉದ್ಯೋಗಗಳಾಗಿ ವಿಂಗಡಿಸಬೇಕು. ಇವುಗಳ ಪರಸ್ಪರ ಸಂಬಂಧಗಳ ದೃಷ್ಟಿಯಲ್ಲಿ ಇದನ್ನು ವಿವರಿಸಬೇಕು; ಇಡೀ ಕ್ಷೇತ್ರಕ್ಕೂ ಇವಕ್ಕೂ ಇರುವ ಸಂಬಂಧಗಳ ದೃಷ್ಟಿಯಲ್ಲೂ ಇದನ್ನು ಸಮರ್ಥಿಸಬೇಕು. ಅನಂತರ ಪ್ರತಿಯೊಂದು ಉದ್ಯೋಗವಿಭಾಗವನ್ನೂ ವಿವರಿಸಿ, ಅದನ್ನು ಮತ್ತೆ ಸಣ್ಣ ಘಟಕಗಳಾಗಿ ವಿಭಾಗಿಸಬೇಕು. ಈ ವರ್ಗೀಕರಣವನ್ನು ಕೇವಲ ಅವಲೋಕನದಿಂದಲೇ ಮಾಡಬಹುದು. ನಾನಾ ಕ್ರಿಯೆಗಳನ್ನು ಪ್ರಥಮತಃ ಪರಿಮಾಣಾತ್ಮಕವಾಗಿ ವಿವರಿಸಬಹುದು; ಜೊತೆಗೆ ಗುಣಾತ್ಮಕವಾಗಿಯೂ ವಿವರಿಸಬಹುದು.

ಈ ವಿಧಾನದಲ್ಲಿ ಉತ್ಪಾದನಕಾರ್ಯಗಳಿಗೆ ಸಂಬಂಧಿಸಿದ ಚಲನೆಗಳನ್ನು ಮತ್ತು ಕಾಲಾವಕಾಶಗಳನ್ನು ಅಳೆಯುವ ವಿಧಾನಗಳೂ ಸಾಕಷ್ಟು ಪ್ರಾಮುಖ್ಯಗಳಿಸಿವೆ.

ಒಟ್ಟಿನಲ್ಲಿ ಕೆಲಸದ ವಿಶ್ಲೇಷಣೆ ಅನಗತ್ಯಚಲನೆಗಳನ್ನು ನಿವಾರಿಸಿ, ಶಿಷ್ಟ ದಿನದ ಕೆಲಸವನ್ನು ಗೊತ್ತುಪಡಿಸುವುದರಲ್ಲೂ ವೇತನಗಳನ್ನು ನಿರ್ಣಯಿಸುವುದರಲ್ಲೂ ಯಥಾರ್ಥ ವೆಚ್ಚವನ್ನು ಗೊತ್ತುಪಡಿಸುವುದರಲ್ಲೂ ವೇತನ ಶ್ರೇಣಿಗಳನ್ನೂ ಬಡತಿಯ ಮಾರ್ಗಗಳನ್ನೂ ವಿನ್ಯಾಸಗೊಳಿಸುವುದರಲ್ಲೂ ಉದ್ಯೋಗ ಪರೀಕ್ಷಾ ಕ್ರಮಗಳನ್ನು ಕಂಡುಹಿಡಿಯುವುದರಲ್ಲೂ ವ್ಯಾವಸಾಯಿಕ ಶಿಕ್ಷಣದ ಪಾಠಕ್ರಮವನ್ನು ಸ್ಥಾಪಿಸುವುದರಲ್ಲೂ ವ್ಯಾವಸಾಯಿಕ ಚಟುವಟಿಕೆಗಳನ್ನು ಬೋಧಿಸುವ ನಾನಾ ವಿಧಾನಗಳನ್ನು ನಿರ್ಣಯಿಸುವುದರಲ್ಲೂ ಯಾವ ಉದ್ಯೋಗವನ್ನು ಆರಿಸಿಕೊಳ್ಳಬೇಕೆಂಬ ವಿಚಾರವಾಗಿ ಯುಕ್ತ ಆಧಾರವನ್ನು ಪಡೆಯುವುದರಲ್ಲೂ ಕೊನೆಯದಾಗಿ ಕಾರ್ಮಿಕರನ್ನು ಆರಿಸಲು ಸಾಧ್ಯವಾಗುವಂತೆ ಕೆಲಸದ ವಿವರಣೆಗಳನ್ನು ರೂಪಿಸುವುದರಲ್ಲೂ ಪ್ರಮುಖ ಪಾತ್ರ ನಿರ್ವಹಿಸಬಲ್ಲುದು. (ಕೆ.ಎಚ್.)

**ಕೆಲಸದ ಹಾಡುಗಳು :** ಕೆಲಸದ ಸಮಯಗಳಲ್ಲಿ ಶ್ರಮವನ್ನು ಹಗುರ ಮಾಡಿಕೊಳ್ಳುವುದಕ್ಕೂ ಉತ್ಸಾಹ ಪಡೆವುದಕ್ಕೂ ಗ್ರಾಮೀಣ ಜನ ಬಳಸುವ ಹಾಡುಗಳು (ವರ್ಕ್ ಸಾಂಗ್ಸ್). ಇಲ್ಲಿ ಕೆಲಸ ಎಂಬ ಪದ ಜನಬಳಕೆಯಲ್ಲಿರುವ ವಿವಿಧ ಕಾಯಕಗಳನ್ನು ಸೂಚಿಸುತ್ತಾದ್ದರಿಂದ ಈ ಹಾಡುಗಳನ್ನು ಕಾಯಕ ಗೀತೆಗಳು ಎಂದೂ ಕರೆವುದಿದೆ.

ಕೆಲಸದ ಹಾಡುಗಳ ಬಳಕೆ ಜನಪದದಲ್ಲಿ ಆದಿಯಿಂದಲೂ ರೂಢಿಯಲ್ಲಿದೆ. ಇವನ್ನು ವ್ಯಕ್ತಿಗಳು ಒಂಟಿಯಾಗಿಯೂ ಗುಂಪಾಗಿಯೂ ಹಾಡುವುದುಂಟು. ಹಳ್ಳಿಗರಲ್ಲಿ ಮಾತ್ರವಲ್ಲದೆ, ಮುಂದುವರಿದ, ನಾಗರಿಕರೆನಿಸಿಕೊಂಡವರಲ್ಲಿಯೂ ಈ ಗೀತೆಗಳನ್ನು

ಕ್ವಚಿತ್ತಾಗಿ ಕಾಣಬಹುದು. ಇವು ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿಯೂ ಕಂಡುಬರುತ್ತವೆ. ವೈಜ್ಞಾನಿಕವಾಗಿ ಮುಂದುವರಿದ ಯಂತ್ರೋಪಕರಣಗಳ ಸೌಲಭ್ಯ ಹೆಚ್ಚಿದಂತೆ, ನಾಗರಿಕತೆ ಬೆಳೆದಂತೆ ಇಂಥ ಹಾಡುಗಳ ಬಳಕೆ ಕಡಿಮೆಯಾಗುತ್ತ ಬರುತ್ತಿದೆ. ಈ ಹಾಡುಗಳನ್ನು ಎಲ್ಲ ವೃತ್ತಿಯವರೂ ಬಳಸುತ್ತಾರೆ. ಎಲ್ಲರ ಉದ್ದೇಶವೂ ಒಂದೆ. ಆದರೆ ಆಯಾ ಕೆಲಸಕ್ಕನುಗುಣವಾಗಿ ಹಾಡುವ ಗೀತೆಗಳಿಗೆ ಆಯಾ ಕೆಲಸದ ಹೆಸರೇ ಬರಬಹುದು. ಉದಾಹರಣೆಗೆ, ರಾಗಿ ಬೀಸುವ ಸಮಯದಲ್ಲಿ ಹಾಡುವ ಪದಗಳನ್ನು ರಾಗಿಕಲ್ಲಿನ ಪದಗಳು ಎಂದೂ ಗಾಡಿಹೊಡೆಯುವಾಗಿನ ಪದಗಳನ್ನು ಗಾಡಿ ಬಂಡಿ ಪದಗಳೆಂದೂ ಕರೆಯುವುದು ವಾಡಿಕೆಯಾಗಿದೆ.

ಮನೆಗೆಲಸಗಳಿಗೆ, ಬೇಸಾಯಕ್ಕೆ, ಗೃಹಕೈಗಾರಿಕೆಗಳಿಗೆ ಮತ್ತು ಇತರ ನಾನಾ ವೃತ್ತಿಗಳಿಗೆ ಸಂಬಂಧಿಸಿದಂತೆ ಈ ಕೆಲಸದ ಹಾಡುಗಳು ಕಂಡುಬರುತ್ತವೆ. ರಾಗಿ ಬೀಸುವಾಗ, ಬತ್ತಕುಟ್ಟುವಾಗ, ಹೊಲದಲ್ಲಿ ಕಳೆಕೀಳುವಾಗ, ನಾಟಿಮಾಡುವಾಗ, ಧಾನ್ಯಗಳನ್ನು ಒನೆಯುವಾಗ, ನೆಲಗಡಲೆ ಸುಲಿಯುವಾಗ, ಕಣದಲ್ಲಿ ದವಸಧಾನ್ಯಗಳನ್ನು ತೂರುವಾಗ ಸ್ತ್ರೀಯರು ಹಾಡುಗಳನ್ನು ಹೇಳಿಕೊಂಡು ತಮ್ಮ ಕೆಲಸದ ಶ್ರಮವನ್ನು ಕಡಿಮೆಮಾಡಿಕೊಳ್ಳುತ್ತಾರೆ. ರಾಗಿ ಬೀಸುವಾಗ ಸ್ತ್ರೀ ಒಬ್ಬಂಟಿಗಳಾಗಿಯೂ ಕೆಲವು ಸಮಯಗಳಲ್ಲಿ ಇಬ್ಬರು ಜೊತೆಯಾಗಿಯೂ ಹಾಡುವುದುಂಟು.

ಹಿಂದೆ ಯಂತ್ರಸೌಕರ್ಯವಿರಲಿಲ್ಲವಾಗಿ ಸ್ತ್ರೀಯರು ಮುಂಜಾನೆಯೇ ಎದ್ದು ಬೆಳಕು ಹರಿಯುವ ವರೆಗೆ ಬೀಸುತ್ತಿದ್ದರು. ಅಂಥ ಸಂದರ್ಭದಲ್ಲಿನ ಒಂದೆರಡು ಗೀತೆಗಳನ್ನಿಲ್ಲಿ ಗಮನಿಸಬಹುದು:

*ಮೂಡು ಮುಂದಾಗಿ ಹೂಡೇವು ರಾಗೀ ಕಲ್ಲು*
*ರೂಢಿಗೆ ಈಶ್ವರನ ಮಡದೀಯ–ಗೌರಮ್ಮನ*
*ಹೂಡೇವು ಹೊನ್ನ ಗೆರಸೀಯ*

*ಕಲ್ಲು ಹಿಡಿದಾಗ ಒಳ್ಳೊಳ್ಳೆ ನುಡಿ ನುಡಿಯೆ*
*ಸೊಲ್ಲು ಸೊಲ್ಲಿಗೆ ಶಿವ ಬರಲಿ–ಈ ಮನೆ*
*ಮಲ್ಲಯ್ಯ ಬರಲಿ ಮನದಾಗೆ*

*ಬಿದಿರೆ ಬೆಟ್ಟದ ಮೇಲೆ ಚದುರೆ ರಾಗಿಯ ಕಲ್ಲೆ*
*ಮದನಾರಿನೊಂಬೊ ಹಿಡಿಗೂಟ–ಹಿಡುಕೊಂಡು*
*ಮೊದಲೇ ಸಿರಿಗೌರಿ ನೆನೆದೇವು*

*ಕಲ್ಲು ಬಿಟ್ಟೇವೆಂದು ಎಲ್ಲರೂ ಕೇಳಿರಿ*
*ಕುಕ್ಕೇಲಿ ರಾಗಿ ಬಿಳಿ ಎಲೆ–ತಕ್ಕೊಂಡು*
*ಮತ್ತೆ ರಾತ್ರೀಕೆ ಬರುತೀವಿ*

ಉಳಿದ ಸಮಯಗಳಲ್ಲಿ ಗೀತೆಗಳನ್ನು ಗುಂಪಾಗಿಯೇ ಹಾಡುತ್ತಿರುತ್ತಾರೆ. ಹೀಗೆ ಗುಂಪಾಗಿ ಹಾಡುವಾಗ ಮುಮ್ಮೇಳ ಹಿಮ್ಮೇಳಗಳು ಕಂಡುಬರುತ್ತದೆ. ಮುಮ್ಮೇಳ ಎಂದರೆ ಮೊದಲು ಹಾಡುವವರ ಗುಂಪು. ಅವರು ಗೀತೆಯಲ್ಲಿಯ ಕಥೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ ಅಥವಾ ಗೀತೆಯ ಮುಕ್ತಾಯದತ್ತ ಸಾಗುತ್ತಾರೆ. ಹಿಮ್ಮೇಳದವರು ಮೊದಲು ಹಾಡಿದವರ ಪಲ್ಲವಿಯನ್ನು ಮಾತ್ರ ಪುನರುಚ್ಚರಿಸಿಕೊಂಡು ಹೋಗುತ್ತಾರೆ.

ಇನ್ನು ಪುರುಷರು ಗಾಡಿ ಹೊಡೆಯುವಾಗ, ಬತ್ತದ ಹುಲ್ಲನ್ನು ಒಕ್ಕುವಾಗ, ರೋಣುಗಲ್ಲು ಹೊಡೆಯುವಾಗ, ದನಕಾಯುವಾಗ, ಹುಟ್ಟುಹಾಕುವಾಗ, ಮೀನು ಹಿಡಿಯುವಾಗ, ಮನೆಕಟ್ಟುವಾಗ, ಗದ್ದೆಕೆಲಸ ಮಾಡುವಾಗ, ಹೊಲ ಉಳುವಾಗ ಹಾಡುಗಳನ್ನು ಹೇಳುವುದರ ಮೂಲಕ ತಮ್ಮ ಬೇಸರಿಕೆಯನ್ನು ಕಳೆದುಕೊಳ್ಳುವುದನ್ನು ಗಮನಿಸಬಹುದು. ಕಾಯಕದ ದೈಹಿಕ ಶ್ರಮಕ್ಕನುಗುಣವಾಗಿ ಗೀತೆಗಳ ರಾಗ, ಲಯ ಗತಿಗಳನ್ನು ಏರಿಸಿ, ಇಳಿಸುವುದು ಅನಿವಾರ್ಯವಾಗುತ್ತದೆ. ಕಾಯಕದ ಹಾಡುಗಳಲ್ಲಿ ಪ್ರೇಮಗೀತೆಗಳು, ಶೋಕಗೀತೆಗಳು, ದೈವಿಕ ಆವರಣಕ್ಕೆ ಒಳಪಟ್ಟ ಗೀತೆಗಳು, ಸೂತ್ರ ರೂಪದ ಗೀತೆಗಳು. ಮಿಶ್ರಗೀತೆಗಳು, ಕಥನಗೀತೆಗಳು, ಹಾಸ್ಯಗೀತೆಗಳು ಕಂಡು ಬರುತ್ತವೆಯಾದರೂ ಸಾಮಾನ್ಯವಾಗಿ ಪ್ರೇಮಗೀತೆಗಳೇ ಹೆಚ್ಚು. ಹಿಂದೆ ಒಂದೂರಿಂದ ಮತ್ತೊಂದು ಊರಿಗೆ ನೂರಾರು ಮೈಲುಗಳ ದೂರ ಪ್ರಯಾಣವನ್ನೂ ಗಾಡಿಗಳಲ್ಲಿ ಮಾಡುತ್ತಿದ್ದುದುಂಟು. ಆ ಸಮಯದಲ್ಲಿ ಗಟ್ಟಿಯಾಗಿ ಪದಗಳನ್ನು ಹೇಳುತ್ತ ಗಾಡಿ ಹೊಡೆಯುತ್ತಿದ್ದರೆ ದಾರಿಸಾಗಿದ್ದೆ ತಿಳಿಯುತ್ತಿರಲಿಲ್ಲ. ಹಾಡಿನಿಂದ ಎತ್ತುಗಳಿಗೂ ಹಿತವೆನಿಸುತ್ತಿತ್ತೆಂದು ತೋರುತ್ತದೆ. ಅನೇಕ ಗಾಡಿಗಳು ಒಟ್ಟಿಗೆ ಹೋಗುತ್ತಿದ್ದರೆ, ಒಂದು ಗಾಡಿಯವರು ಮತ್ತೊಂದು ಗಾಡಿಯವನನ್ನೋ ದಾರಿಯಲ್ಲಿ ಕಂಡ ಹೆಣ್ಣುಗಳನ್ನೋ ಅಥವಾ ಮತ್ತೇನನ್ನೋ ಕುರಿತು ಹಾಡುಕಟ್ಟಿ ಹೇಳುವುದು ವಾಡಿಕೆ ಆಗಿತ್ತು.

ಬಂಡಿ ಹೊಡೆಯೋನ ಬಂಡಾಟ ನೋಡಿರೊ
ಬಾರುಕೋಲ್ಯೆದು ಬಲಗೈಲಿ–ಹಿಡಕೊಂಡು
ಬೋರಾಡಿ ಘಟ್ಟ ಇಳಿಸ್ಯಾನು

ಕಬ್ಬು ಕಡಿಯೋನೆ ಉಬ್ಬು ನೇರುಳ್ಳೋನೆ
ಗೊಬ್ಬರದ ಗಾಡಿ ಹೊಡೆಯೋನೆ–ತಮ್ಮಯ್ಯನ
ಉಬ್ಬು ತಿದ್ಯವಳೆ ಶ್ರೀಗೌರಿ

ಹಾಡು ಬಂದರೆ ಹಾಡು ಗಾಳಿ ಬಂದರೆ ತೂರೋ
ಹಾಡೇಳೊ ಗೆಣಯ ನನದ್ಯೂಲಿ–ಬಲ್ಲಂಥ
ಜಾಣ ನೀ ಒಡದ್ದೇಳೊ

ಹೋರಿಯ ಹೊಡಕಂಡು ಕೋರ್ ಹುಡುಗಿ ನಾ ಕಂಡೆ
ಗೋರಿಕಾಯಂತ ಎದೆಯೋಳ–ನಾ ಕಂಡು
ಹೋರಿ ಹೊಡೆಯಾಕೆ ಮನಸ್ಸಿಲ್ಲ

ಕೆಂಪಾನೆ ಹೆಣ್ಣಿಗೂ ಸಂಪಿಗೆ ಹೂವಿಗೂ
ಅಂತರದಲ್ಲಾಡೊ ಹುಣುಸೇಯ–ದೋರ್ಹಣ್ಣಿಗೂ
ಎಂತೋರು ಬಾಯಿ ಬಿಡುತಾರೆ

ಅಮೆರಿಕದ ತೋಟಗಳಲ್ಲಿ ಕೂಲಿಯಾಳುಗಳಾಗಿ ಕೆಲಸ ಮಾಡುವ ನೀಗ್ರೋಗಳಲ್ಲಿ ಹೆಚ್ಚಾಗಿ ಈ ಕೆಲಸದ ಹಾಡುಗಳ ಬಳಕೆಯಿತ್ತು. ಫ್ರಾನ್ಸ್ ದೇಶದಲ್ಲಿ ಕೆಲಸದ ಸಮಯದಲ್ಲಿ ಸ್ತ್ರೀಪುರುಷರು ಒಟ್ಟಾಗಿ ಪ್ರೇಮಗೀತೆಗಳನ್ನು ಹಾಡುತ್ತಿದ್ದರು. ಜಪಾನಿನಲ್ಲಿ ಹಗ್ಗಹೊಸೆಯುವ ಸಮಯಗಳಲ್ಲಿ ಇಂಥ ಹಾಡುಗಳ ಬಳಕೆ ಇತ್ತು. ಹಿಂದೆ ಸಮುದ್ರದಲ್ಲಿ ಯಾನಮಾಡುತ್ತಿದ್ದ ನಾವಿಕರು ತಮ್ಮ ಬೇಸರಿಕೆಯನ್ನು ಕಳೆಯುವುದಕ್ಕಾಗಿ ಗೀತೆಗಳನ್ನು ಹಾಡಿಕೊಳ್ಳುತ್ತಿದ್ದರು. ಕೇರಳದಲ್ಲಿ ಈಗಲೂ ದೋಣಿಗಳನ್ನು ನಡೆಸುವ ಸ್ಪರ್ಧೆಗಳೇರ್ಪಟ್ಟಾಗ ಅಲ್ಲದೆ ಮಿಕ್ಕ ಕಾಲಗಳಲ್ಲಿ ಕೂಡ ಗುಂಪುಗುಂಪಾಗಿ ಗೀತೆಗಳನ್ನು ಹೇಳಿಕೊಂಡು ಹುರುಪಿನಿಂದ ಹುಟ್ಟುಹಾಕುವುದನ್ನು ಕಾಣಬಹುದು. (ಎಂ.ಸಿ.ವಿ.)

**ಕೆಲಾಗ್ ಒಪ್ಪಂದ :** ಅಂತಾರಾಷ್ಟ್ರೀಯ ವಿವಾದಗಳನ್ನೆಲ್ಲ ಶಾಂತಿಯುತವಾಗಿ ಪರಿಹರಿಸಿಕೊಳ್ಳಬೇಕೆಂದು 1928ರ ಆಗಸ್ಟ್ 27ರಂದು ಸಹಿಯಾದ ಒಂದು ಒಪ್ಪಂದ. ಈ ಒಪ್ಪಂದ ಪ್ಯಾರಿಸಿನಲ್ಲಿ ಆಗಿದ್ದರಿಂದ ಇದನ್ನು ಪ್ಯಾರಿಸ್ ಒಪ್ಪಂದವೆಂದೂ ಅಮೆರಿಕದ ಸ್ಟೇಟ್ ಸೆಕ್ರೆಟರಿ ಫ್ರಾಂಕ್ ಬಿ. ಕೆಲಾಗನೂ (1856–1937) ಫ್ರಾನ್ಸಿನ ವಿದೇಶಾಂಗ ಮಂತ್ರಿ ಅರಿಸ್ಟೈಡ್ ಬ್ರೀಯಾನನೂ (1862–1932) ಮೂಲತಃ ಇದಕ್ಕೆ ಕಾರಣರಾದ್ದರಿಂದ ಕೆಲಾಗ್–ಬ್ರೀಯಾನ್ ಒಪ್ಪಂದವೆಂದೂ ಇದು ಪ್ರಸಿದ್ಧವಾಗಿದೆ. 1927ರ ಏಪ್ರಿಲ್ ತಿಂಗಳಿನಲ್ಲಿ ಕೆಲಾಗನಿಗೆ ಬ್ರೀಯಾನ್ ಈ ಬಗ್ಗೆ ಪ್ರಥಮತಃ ಸಲಹೆ ಮಾಡಿದ. ರಾಷ್ಟ್ರನೀತಿಯ ಸಾಧನೆಗಾಗಿ ಯುದ್ಧ ಮಾಡುವುದನ್ನು ನಿಷೇಧಿಸಿ ತಮ್ಮೆರಡು ರಾಷ್ಟ್ರಗಳೂ ಒಪ್ಪಂದ ಮಾಡಿಕೊಳ್ಳಬೇಕೆಂದು ಬ್ರೀಯಾನ್ ಸೂಚಿಸಿದ. ಈ ಒಪ್ಪಂದ ದ್ವಿಮುಖವಾಗಿರಬಾರದೆಂದೂ ಬಹುಮುಖವಾದ್ದಾಗಿರಬೇಕೆಂದೂ ಇದು ಎಷ್ಟು ಹೆಚ್ಚು ವ್ಯಾಪಕವಾದರೆ ಪ್ರಪಂಚದಲ್ಲಿ ಅಷ್ಟರಮಟ್ಟಿಗೆ ಶಾಂತಿ ಸಾಧಿಸುವುದೆಂದೂ ಕೆಲಾಗ್ ಅಭಿಪ್ರಾಯಪಟ್ಟ. ಅಂತೆಯೇ ಆಗಸ್ಟ್ 1928ರಲ್ಲಿ ಒಂಬತ್ತು ರಾಷ್ಟ್ರಗಳ ಸಮ್ಮೇಳನವೊಂದು ಪ್ಯಾರಿಸಿನಲ್ಲಿ ಸೇರಿ, ಬ್ರೀಯಾನನ ಮೂಲ ಸೂಚನೆಯಂತೆ ಯುದ್ಧವನ್ನು ನಿಷೇಧಿಸಿತು. ಆದರೆ ಒಪ್ಪಂದಕ್ಕೆ ಸಹಿ ಹಾಕಿದ ಯಾವುದೇ ರಾಷ್ಟ್ರ ಸ್ವಹಿತರಕ್ಷಣೆಗಾಗಿ ಯುದ್ಧ ಮಾಡುವುದು ತಪ್ಪಲ್ಲವೆಂದೂ ಒಪ್ಪಿಕೊಂಡಿತು.

ಇನ್ನೂ ಅನೇಕ ರಾಷ್ಟ್ರಗಳು ಶೀಘ್ರವಾಗಿ ಈ ಒಪ್ಪಂದಕ್ಕೆ ಅನುಮೋದನೆ ನೀಡಿದುವು. ಒಟ್ಟಿನಲ್ಲಿ ಇದಕ್ಕೆ ಸಹಿ ಹಾಕಿದ ರಾಷ್ಟ್ರಗಳ ಸಂಖ್ಯೆ 63. ಈ ಒಪ್ಪಂದ ಅತ್ಯಂತ ಚಿಕ್ಕದಾದರೂ ವಿವಾದಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳುವ ಮಾರ್ಗದಲ್ಲಿ ಇದು ಒಂದು ಮುಖ್ಯ ಹೆಜ್ಜೆಯೆಂಬುದಾಗಿ ಪರಿಗಣಿಸಲಾಗಿತ್ತು. ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳಾಗದಿದ್ದ ಅಮೆರಿಕ ಸಂಯುಕ್ತಸಂಸ್ಥಾನ, ಜರ್ಮನಿ ಮತ್ತು ಸೋವಿಯೆತ್ ದೇಶ ಇದಕ್ಕೆ ಸಹಿ ಹಾಕಿದ್ದೂ ಈ ಆಶಾವಾದಕ್ಕೆ ಕಾರಣ.

ಆದರೆ ಈ ಒಪ್ಪಂದ ಯಶಸ್ವಿಯಾಗಲಿಲ್ಲ. ಯುದ್ಧ ಬೇಡವೆಂಬ ಇಚ್ಛೆ ಉದಾತ್ತವಾಗಿದ್ದರೂ ಆಕ್ರಮಣಕಾರಿಗಳನ್ನು ಶಿಕ್ಷಿಸಲು ಇದರಲ್ಲಿ ಯಾವ ಉಪಾಯಗಳನ್ನೂ ಸೂಚಿಸಿರಲಿಲ್ಲ. ಸಹಿ ಹಾಕಿದ ರಾಷ್ಟ್ರಗಳ ಪರಮಾಧಿಕಾರಕ್ಕೆ ಯಾವ ಮಿತಿಯೂ ಇರಲಿಲ್ಲ. ಮುಂದಿನ ದಶಕದಲ್ಲಿ ತೀವ್ರವಾದ ರಾಜಕೀಯ ರಾಷ್ಟ್ರಾಭಿಮಾನದಿಂದಾಗಿ ಕೆಲಾಗ್ ಒಪ್ಪಂದಕ್ಕೆ ಅದರ ಕಾಗದದ ಬೆಲೆಯೂ ಇಲ್ಲವಾಯಿತು. ಅದರ ಸೂಚಕರಲ್ಲೊಬ್ಬನಾದ ಕೆಲಾಗನಿಗೆ 1929ರಲ್ಲಿ ನೊಬೆಲ್ ಶಾಂತಿ ಪಾರಿತೋಷಿಕ ಬಂದದ್ದೊಂದೇ ಈ ಒಪ್ಪಂದದಿಂದ ಆದ ಮುಖ್ಯವಾದ ಲಾಭ. (ಫ್ರೆಂಚ್ ಮಂತ್ರಿ ಬ್ರೀಯಾನನಿಗೆ 1926ರಲ್ಲೇ ಇದು ಲಭ್ಯವಾಗಿತ್ತು.)
(ವಿ.ಎಸ್.ಎಸ್.)

**ಕೆಲಾಡಿಯಮ್ :** ಒಂದು ಬಹು ಅಂದವಾದ, ವರ್ಣರಂಜಿತವಾದ ಎಲೆಗಳುಳ್ಳ ಲಶುನ ಸಸ್ಯ. ಏರೇಸೀ ಕುಟುಂಬಕ್ಕೆ ಸೇರಿದೆ. ದಕ್ಷಿಣ ಅಮೆರಿಕ ಇದರ ತೌರು. ಸುಂದರವಾದ ಎಲೆಗಳಿಗೋಸ್ಕರ ಅಲಂಕಾರಸಸ್ಯವಾಗಿ ಇದನ್ನು ಬೆಳೆಸುತ್ತಾರೆ. ಕುಂಡಗಳಲ್ಲಿ ಬೆಳೆಸಿ ಮನೆಯ ವರಾಂಡ, ವಾಸದ ಕೋಣೆಗಳು, ಮೊಗಸಾಲೆ ಮುಂತಾದುವನ್ನು ಅಲಂಕರಿಸಲು ಉಪಯೋಗಿಸುವುದು ವಾಡಿಕೆ. ಎಲೆಗಳು ಬಹಳ ಅಗಲವಾಗಿದ್ದು ವರ್ಣವೈವಿಧ್ಯವನ್ನು ತೋರುತ್ತವೆ. ಅವುಗಳ ಆಕಾರ ಬಾಣದ ಮೊನೆಯಂತೆ. ಕೆಲಾಡಿಯಮ್‌ನಲ್ಲಿ ಹಲವಾರು ಬಗೆಗಳಿವೆ. ಒಂದೊಂದು ಬಗೆಯಲ್ಲೂ ಎಲೆಗಳು ತಮ್ಮ ಗಾತ್ರ ಮತ್ತು ಬಣ್ಣಗಳಲ್ಲಿ ವೈವಿಧ್ಯವನ್ನು ಪ್ರದರ್ಶಿಸುತ್ತವೆ. ಹಸಿರು ಹಿನ್ನೆಲೆಯಲ್ಲಿ ಬಿಳಿಯ ಚುಕ್ಕಿಗಳು, ಬಿಳಿ ಬಣ್ಣವಿದ್ದು ಹಸಿರು ಅಂಚು ಮತ್ತು ಅಲ್ಲಲ್ಲೆ ಹಸಿರು ಕೆಂಪು ಚುಕ್ಕಿಗಳು, ಅಪ್ಪಟ ಕೆಂಪು ಬಣ್ಣದ ಮೇಲೆ ಹಸಿರು ಅಂಚು ಮುಂತಾದ ನಾನಾಬಗೆಯ ಕಣ್ಣು ಕೋರೈಸುವಂಥ ಬಣ್ಣಗಳು ಎಲೆಗಳಿಗಿವೆ. ಇದರಿಂದ ಗಿಡ ಬಹಳ ಮನಮೋಹಕ ವಾಗಿ ಕಾಣುತ್ತದೆ.

ಎತ್ತರ ಪ್ರದೇಶಗಳಿಗಿಂತ ಮೈದಾನಪ್ರದೇಶಗಳಲ್ಲಿ ಕೆಲಾಡಿಯಮ್ ಚೆನ್ನಾಗಿ ಬೆಳೆಯುತ್ತದೆ. ಇದನ್ನು ನೆರಳಿನಲ್ಲಿ, ಆದರೆ ಚೆನ್ನಾಗಿ ಬೆಳಕು ಬರುವಂಥ, ಸ್ಥಳಗಳಲ್ಲಿ ಬೆಳೆಸಬೇಕು. ಹಗುರ ಮತ್ತು ಸಾರವತ್ತಾದ ಮಣ್ಣುಳ್ಳ ಭೂಮಿ ಇದಕ್ಕೆ ಒಳ್ಳೆಯದು. ಕುಂಡಗಳಲ್ಲಿ ಬೆಳೆಸುವುದಾದರೆ ಕೆಂಪುಮಣ್ಣು, ಮರಳು, ಎಲೆಗೊಬ್ಬರ ಮತ್ತು ದನದ ಗೊಬ್ಬರಗಳ ಸಮಭಾಗ ಮಿಶ್ರಣದ ಕಾಂಪೋಸ್ಟನ್ನು ಉಪಯೋಗಿಸಬೇಕು. ಇದರ ಜೊತೆಗೆ ಸ್ವಲ್ಪ ಇದ್ದಿಲುಚೂರುಗಳನ್ನು ಸೇರಿಸುವುದರಿಂದ ಕಾಂಪೋಸ್ಟ್ ಹುಳಿಯಾಗಿ ಪರಿವರ್ತನೆ ಹೊಂದುವುದನ್ನು ತಡೆಯಬಹುದು. ಸಾಧಾರಣವಾಗಿ ಎಲ್ಲ ಬಗೆಯ ಕೆಲಾಡಿಯಮ್‌ಗಳು ಡೆಸಿಡ್ಯುಯಸ್ (ಚಳಿಗಾಲದಲ್ಲಿ ಎಲೆ ಉದುರಿ ಹೋಗುವಂಥ) ಸಸ್ಯಗಳು. ಏಪ್ರಿಲ್–ಮೇ ತಿಂಗಳಿನಲ್ಲಿ ಗೆಡ್ಡೆಗಳಲ್ಲಿ ಹೊಸ ಮೊಳಕೆಗಳು ಹೊರಡುತ್ತವೆಯಾದ್ದರಿಂದ ಆ ಕಾಲದಲ್ಲಿ ನೆಡುವುದೊಳ್ಳೆಯದು. ಅಕ್ಟೋಬರ್–ನವೆಂಬರ್ ತಿಂಗಳ ಹೊತ್ತಿಗೆ ಗೆಡ್ಡೆಗಳು ಪೂರ್ಣ ಬೆಳೆಯುತ್ತವೆ. ಎಲೆಗಳು ಮಾತ್ರ ಒಣಗಿ ಹೋಗುತ್ತವೆ. ಆ ಸಂದರ್ಭದಲ್ಲಿ ನೀರು ಕೊಡುವುದನ್ನು ನಿಲ್ಲಿಸಿ, ಮಣ್ಣು ಒಣಗಿದ ಮೇಲೆ ಗೆಡ್ಡೆಗಳನ್ನು ಭೂಮಿಯಿಂದ ಹೊರ ತೆಗೆದು ನೀರು ಬೀಳದ ಸ್ಥಳದಲ್ಲಿ ಮುಂದೆ ನೆಡುವವರೆಗೂ ಶೇಖರಿಸಿಡಬೇಕು ಅಥವಾ ಮರಳಿನಲ್ಲಿ ಹೂತಿಟ್ಟಿರಬೇಕು. ಹೀಗೆ ಹೂತಿಟ್ಟು ಸುಪ್ತಾವಸ್ಥೆಯಲ್ಲಿರುವ ಗೆಡ್ಡೆಗಳ ಮೇಲೆ, ನೆಡುವುದಕ್ಕೆ ಒಂದುವಾರ ಮುಂಚಿತವಾಗಿ, ಸ್ವಲ್ಪ ನೀರು ಹಾಕಿದರೆ ಮೊಳಕೆಯೊಡೆಯುತ್ತದೆ. ಮೊಳಕೆ ಬಂದ ಗೆಡ್ಡೆಗಳನ್ನು ಕುಂಡಗಳಲ್ಲಿ ಅಥವಾ ಬೆಳೆಯುವ ಮಡಿಗಳಲ್ಲಿ ಮೊಳಕೆಯ ಭಾಗ ಹೊರ ಕಾಣುವಂತೆ ನೆಡಬೇಕು. ಗೆಡ್ಡೆ ಬಹಳ ಸಣ್ಣವಾದರೆ 2–3 ಗೆಡ್ಡೆಗಳನ್ನು ಅಥವಾ ದಪ್ಪ ಗಾತ್ರವಾದರೆ ಒಂದೇ ಒಂದನ್ನು ಕುಂಡದಲ್ಲಿ ನೆಡಬಹುದು. ಹದವರಿತು ನೀರ್ರ ಕೊಡಬೇಕು. ಗಿಡ ಬೆಳೆಯುತ್ತಿರುವಾಗ ವಾರಕ್ಕೊಂದು ಸಾರಿ ಬಹು ತೆಳುವಾದ ಹಸುವಿನ ಸೆಗಣಿಯ ನೀರನ್ನು ಹಾಕಿದರೆ ಒಳ್ಳೆಯದು. ಗೆಡ್ಡೆಗಳನ್ನು ನೆಟ್ಟ ಅನಂತರ ಎಲೆಗಳು ಪೂರ್ಣವಾಗಿ ಬೆಳೆಯುವ ಮೊದಲೇ ಹೂಗೊಂಚಲುಗಳು ಹೊರಡುತ್ತವೆ. ಇವನ್ನು ತೆಗೆದುಹಾಕಬೇಕು. ಹೀಗೆ ಮಾಡುವುದರಿಂದ ಎಲೆಗಳು ಚೆನ್ನಾಗಿ ಬೆಳೆಯುತ್ತವೆ.

ಕಲೇಡಿಯಮಿನಲ್ಲಿ ಸುಮಾರು 50 ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಕ. ಆರ್ಜಿರೈಟಸ್, ಕ. ಬೈಕಲರ್, ಕ. ಮಾರ್ಮೋರೇಟಂ, ಕ. ಪಿಕ್ಚರೇಟಮ್, ಕ. ಹಂಬೋಲ್ಟಿಯೈ–ಮುಖ್ಯವಾದವು. (ಕೆ.)

**ಕೆಲೆನ್, ಎಮೆರಿ :** ಅಂತಾರಾಷ್ಟ್ರೀಯ ಖ್ಯಾತಿಯ ರಾಜಕೀಯ ವ್ಯಂಗ್ಯ ಚಿತ್ರಕಾರ ಮತ್ತು ಲೇಖಕ. ಹಂಗರಿಯ ಗ್ಯಾರ್‌ನಲ್ಲಿ 1896ರಲ್ಲಿ ಜನಿಸಿದ. ಬುಡಾಪೆಸ್ಟ್, ಮ್ಯೂನಿಕ್ ಮತ್ತು ಪ್ಯಾರಿಸ್‌ಗಳ ಕಲಾಶಾಲೆಗಳಲ್ಲಿ ಶಿಕ್ಷಣ ಪಡೆದ. ರಾಜಕೀಯ ವ್ಯಂಗ್ಯಚಿತ್ರಕಾರನಾಗಿ ಅವನ ಜೀವನಯಾತ್ರೆ ತೊಡಗಿದ್ದು 1922ರಲ್ಲಿ. ಅದೂ ಒಂದು ಆಕಸ್ಮಿಕ. ಕ್ರೀಡಾ ವ್ಯಂಗ್ಯಚಿತ್ರಕಾರನಾಗಿ ಸ್ವಿಟ್ಸರ್ಲೆಂಡಿನ ಲೊಸ್ಯಾನ್‌ಗೆ ಹೋಗಿದ್ದಾಗ ಅಲ್ಲಿ ನಡೆಯುತ್ತಿದ್ದ ಸಮೀಪಪ್ರಾಚ್ಯ ಶಾಂತಿ ಸಮ್ಮೇಳನ ಅವನ ಗಮನ ಸೆಳೆಯಿತು. ಅವನು ಪ್ವಾನ್‌ಕ್ಯಾರೇ, ವೆನಿಜೆಲಸ್, ಮುಸೊಲೋನಿ, ಇಸ್ಮತ್ ಪಾಷಾ, ಲಾರ್ಡ್ ಕರ್ಜನ್ ಮತ್ತು ಇತರ ನಾಯಕರ ಚಿತ್ರಗಳನ್ನು ಬರೆದ. ಆಮೇಲೆ ಇನ್ನೊಬ್ಬ ಹಂಗೇರಿಯನ್ ಕಲಾವಿದ ಅಲಾಯ್ಸ್ ಡೆರ್ಸೋನೊಂದಿಗೆ ಕೂಡಿ ಆ ಸಮ್ಮೇಳನದ ಬಗ್ಗೆ ಸಂಕಲಿಸಿದ ವ್ಯಂಗ್ಯಚಿತ್ರಸಂಪುಟದಲ್ಲಿ ಈ ಚಿತ್ರಗಳನ್ನೂ ಸೇರಿಸಿದ. ಆತ ಪ್ರಕಟಿಸಿದ ಮಿತಪ್ರಸಾರದ ಇಂಥ ಚಿತ್ರಸಂಪುಟಗಳಲ್ಲಿ ಇದೇ ಮೊದಲನೆಯದು. ಎರಡು ಮಹಾಯುದ್ಧಗಳ ನಡುವಣ ಕಾಲದಲ್ಲಿ ಸಮಾವೇಶಗೊಂಡ ಪ್ರತಿಯೊಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲೂ ಇವರಿಬ್ಬರೂ ಹಾಜರಿರುತ್ತಿದ್ದರು; ಬಣ್ಣದ ಕಡ್ಡಿ ಹರಿಸಿ ಪ್ರತಿಯೊಂದು ಮುಖ್ಯ ಸಂದರ್ಭವನ್ನೂ ವ್ಯಕ್ತಿಯನ್ನೂ ರೇಖಿಸುತ್ತಿದ್ದರು. ಅವರ ಕೃತಿಗಳು ಈಗ ಸಮಕಾಲೀನ ಇತಿಹಾಸದ ವಿಡಂಬನಾತ್ಮಕ ದಾಖಲೆಗಳಾಗಿವೆ. ಕೆಲೆನ್ನನ ಅನೇಕ ವರ್ಣಚಿತ್ರಗಳು ಪ್ಯಾಲೇ ಡಿ ನೇಷನ್ಸ್, ಜಿನೀವದ ಲೀಗ್ ಆಫ಼ ನೇಷನ್ಸ್ ಮ್ಯೂಸಿಯಂ, ನ್ಯೂಯಾರ್ಕಿನ ದಿ ಯುನೈಟೆಡ್ ನೇಷನ್ಸ್ ಪ್ರೆಸ್ ಕ್ಲಬ್ ಮತ್ತು ಪ್ರಪಂಚಾದ್ಯಂತ ಅನೇಕ ಸರ್ಕಾರಿ ಕಟ್ಟಡಗಳ ಮತ್ತು ಗ್ರಂಥಾಲಯಗಳ ಕಟ್ಟಡಗಳ ಗೋಡೆಗಳನ್ನು ಅಲಂಕರಿಸಿವೆ. ಹಲವಾರು ಎಡೆಗಳಲ್ಲಿ ಅವುಗಳ ಪ್ರದರ್ಶನಗಳನ್ನೂ ಏರ್ಪಡಿಸಲಾಗಿದೆ.

ಭಾರತದ ಬಗ್ಗೆ ಲಂಡನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ (1930–31) ಕೆಲೆನ್ ಕೂಡ ಹಾಜರಿದ್ದ. ಅದರಲ್ಲಿ ಭಾಗವಹಿಸಿದ್ದ ಗಾಂಧಿ, ಜಿನ್ನಾ ಮತ್ತು ಇತರ ಎಲ್ಲ ಪ್ರಮುಖರ ಚಿತ್ರಗಳನ್ನೂ ಅವರನ್ನು ನೋಡಿ ನೇರವಾಗಿ ರಚಿಸಿದ. ಈ ವ್ಯಂಗ್ಯಚಿತ್ರಗಳ ಒಂದು ಸಂಪುಟ ರಚಿಸಿಕೊಡಬೇಕೆಂದು ಆತ ಕಾಶ್ಮೀರದ ಮಹಾರಾಜನಿಂದ ನಿಯೋಜಿತನಾಗಿದ್ದ. 1938ರಲ್ಲಿ, ಲೀಗ್ ಆಫ್ ನೇಷನ್ಸ್ ಕುಸಿದು ಬಿದ್ದ ಮೇಲೆ, ಕೆಲೆನ್ ಅಮೆರಿಕಕ್ಕೆ ಹೋದ. 1945ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ವಿಶ್ವಸಂಸ್ಥೆ ರೂಪುಗೊಂಡಿದ್ದನ್ನು ಚಿತ್ರರೂಪದಲ್ಲಿ ರೇಖಿಸಿದ. 1948ರಿಂದ 1957ರ ತನಕ ಆತ ವಿಶ್ವಸಂಸ್ಥೆಯಲ್ಲಿ ಟೆಲಿವಿಷನ್ ನಿರ್ದೇಶಕನೂ ತಯಾರಕನೂ ಆಗಿ ಕೆಲಸಮಾಡಿದ. ಆ ಕಾಲದಲ್ಲಿ ಆತನ ಕೆಲವು ತಯಾರಿಕೆಗಳು ಆ ವೃತ್ತಿಗೆ ಸಂಬಂಧಿಸಿದ ಅತ್ಯುನ್ನತ ಪ್ರಶಸ್ತಿಗಳನ್ನು ಸಂಪಾದಿಸಿಕೊಟ್ಟುವು. ಎಮ್ಮಿ, ಪೀಬಾಡಿ ಮತ್ತು ಒಹಾಯೊ ರಾಜ್ಯಪ್ರಶಸ್ತಿಗಳು ಅವುಗಳಲ್ಲಿ ಮುಖ್ಯವಾದವು. ವಿಶ್ವಸಂಸ್ಥೆಯಿಂದ ನಿವೃತ್ತಿಹೊಂದಿದ ಮೇಲೆ ಆತ ವಯಸ್ಕರಿಗೂ ಮಕ್ಕಳಿಗೂ ಹಲವು ಪುಸ್ತಕಗಳನ್ನು ಬರೆದ. ಪತ್ರಸಂಘ (ಸಿಂಡಿಕೇಟೆಡ್) ಬರೆಹಗಾರನೂ ಕಲಾವಿದನೂ ಟೆಲಿವಿಷನ್ ಸಲಹಾಕಾರನೂ ಆಗಿದ್ದ ಅಮೆರಿಕದ ನ್ಯೂಯಾರ್ಕ್ ಟೈಮ್ಸ್, ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್, ಫಾರ್ಚೂನ್, ಎಸ್ಕ್ವೈರ್, ಕ್ರಿಶ್ಚನ್ ಸೈನ್ಸ್ ಮಾನಿಟರ್, ಮದ್ರಾಸಿನ ದಿ ಹಿಂದೂ ಮುಂತಾದ ಪ್ರಪಂಚದ ಅನೇಕ ಪ್ರಮುಖ ಪತ್ರಿಕೆಗಳಲ್ಲಿ ಅವನ ಲೇಖನಗಳು ಪ್ರಕಟವಾಗಿವೆ. ಸಮಕಾಲೀನ ರಾಜನೀತಿಜ್ಞರ ಮುಖ ಮತ್ತು ವ್ಯಕ್ತಿತ್ವಗಳನ್ನು ಕುರಿತು ಮೂರು ವರ್ಷಕಾಲ ಆತ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಿದ.


ಕೆಲನ್–ಎಮರಿ

ಮಹಾತ್ಮಾ ಗಾಂಧಿ ಎಮರಿ ಕೆಲನ್ ರೇಖಿಸಿದಂತೆ

ತನ್ನ ವೃತ್ತಿಜೀವನದ ಪ್ರಾರಂಭದಲ್ಲಿಯೇ ಕೆಲೆನ್‌ಗೆ ಸಂವಿಧಾನ ಮನೋವಿಜ್ಞಾನದಲ್ಲಿ ಆಸಕ್ತಿ ಉಂಟಾಯಿತು. ರೂಪಕ್ಕೂ ಕಾರ್ಯಭಾರಕ್ಕೂ ಯಾವಾಗಲೂ ಪರಸ್ಪರ ಸಂಬಂಧ ಇದ್ದೇ ಇರುತ್ತದೆಯೆಂಬ ಅಂಶವನ್ನು ಆತ ತನ್ನೆಲ್ಲ ಬರೆವಣಿಗೆಗಳಲ್ಲೂ ಒತ್ತಿ ಹೇಳುತ್ತಾನೆ. ರಾಜನೀತಿಜ್ಞನ ನೀತಿ ಆ ವ್ಯಕ್ತಿಯ ಮುಖದ ಮೇಲೇ ಸುವ್ಯಕ್ತವಾಗಿರುತ್ತದೆ; ಆ ವ್ಯಕ್ತಿಯೇನಾದರೂ ಸುಳ್ಳು ಹೇಳಿದನೋ, ಅವನ ಮುಖ ನಿಜವನ್ನು ನುಡಿಯುತ್ತದೆ; ವ್ಯಕ್ತಿತ್ವಕ್ಕೂ ಮೈಕಟ್ಟಿಗೂ ಅವಿನಾಸಂಬಂಧವುಂಟು–ಎಂಬುದೇ ಕೆಲೆನ್ ಕಲೆಯ ಜೀವಾಳ; ಅದು ಕೇವಲ ವಿಕಟ ವ್ಯಂಗ್ಯ ಚಿತ್ರೀಕರಣವಲ್ಲ. ರೇಖೆಗಳ ಮಿತ ಬಳಕೆಯಲ್ಲಿ ಅವನಿಗೆ ನಂಬಿಕೆ. ವ್ಯಕ್ತಿತ್ವವೊಂದರ ಸಂದೇಶಸೂಚನೆಗೆ ಎಷ್ಟು ರೇಖೆಗಳು ಅಗತ್ಯವೋ ಅಷ್ಟಕ್ಕಿಂತ

ಹೆಚ್ಚಾಗಿ ಅವನ್ನು ಆತ ಬಳಸುವುದಿಲ್ಲ. ಅದು ಖಚಿತವೂ ಸ್ಪಷ್ಟವೂ ಆಗುವಂತೆ ಮಾಡಲು ಹಾಸ್ಯ ವ್ಯಂಗ್ಯ ಬೆರೆಸಿ ಸ್ವಲ್ಪ ಉತ್ಪ್ರೇಕ್ಷೆ ಮಾಡುವುದುಂಟು. ಎರಡು ಮಹಾಯುದ್ಧಗಳನ್ನೂ ಸಾಕಷ್ಟು ಸಂಖ್ಯೆಯಲ್ಲಿ ವಿವಿಧ ವರ್ಣಗಳ ಕ್ರಾಂತಿಗಳನ್ನೂ ಕಂಡಿರುವ ಕೆಲೆನ್ ತನ್ನನ್ನು ಉಗ್ರ ಶಾಂತಿವಾದಿಯೆಂದು ತಾನೇ ಬಣ್ಣಿಸಿಕೊಂಡಿದ್ದಾನೆ.

ಕೆಲೆನ್ ಕೃತಿಗಳಲ್ಲಿ (ಎರಡನೆಯ ಮಹಾಯುದ್ಧಕ್ಕಿಂತ ಮೊದಲು ಎ.ಡೆಸೋರ್ ಒಂದಿಗೆ ಕೂಡಿ ರಚಿಸಿದವೂ ಸೇರಿದಂತೆ) ಮುಖ್ಯವಾದವು ಇವು: ಲೆ ಗಾರ್ಡಿಯನ್ ಡೆ ಲಾ ಪೇಕ್ಸ್ (ಲೀಗ್ ಆಫ್ ನೇಷನ್ಸ್) (1923), ಲೆ ಟೆಸ್ಟಮೆಂಟ್ ಡೆ ಜೆನೀವ (1931), ದಿ ಲೀಗ್ ಅಟ್ ಲಂಚ್ (1936), ಪ್ಲಾಟಿಪಸ್ ಅಟ್ ಲಾರ್ಜ್ (1960), ಪೀಸ್ ಇನ್ ದೇರ್ ಟೈಮ್ (1963), ಹ್ಯಾಮರ್ ಷೀಲ್ಡ್ (1966), ದಿ ಫೇಸ್ ಆಫ್ ಮ್ಯಾನ್ (1972) ಮತ್ತು ಮಕ್ಕಳಿಗಾಗಿ ಬರೆದ ಹಲವಾರು ಸಚಿತ್ರ ಪುಸ್ತಕಗಳು. (ಜಿ.ಎನ್.)

**ಕೆಲೋರಿ :** ಉಷ್ಣದ ಪರಿಮಾಣವನ್ನು ಅಳೆಯಲು ಉಪಯೋಗಿಸುವ ಏಕಮಾನ. ಒಂದು ಗ್ರಾಂ ನೀರಿನ ಉಷ್ಣತೆಯನ್ನು $14.5^0$ ಸೆಂ.ನಿಂದ $15.5^0$ ಸೆಂ.ಗೆ ಏರಿಸಲು ಬೇಕಾಗುವ ಉಷ್ಣ ಪರಿಮಾಣಕ್ಕೆ ಒಂದು ಕೆಲೋರಿ ಎಂದು ಹೆಸರು. ಇದರ ಪರಿಮಾಣ ಅಳೆಯುವ ಪರಿಸ್ಥಿತಿ ಹಾಗೂ ಸ್ಥಳವನ್ನು ಅವಲಂಬಿಸಿದೆ. ಆದರೆ ಈಗ ವಿದ್ಯುನ್ಮಾನಗಳಲ್ಲಿ ಕೆಲೋರಿಯನ್ನು ಹೆಚ್ಚು ನಿಖರವಾಗಿ ಅಳೆಯಬಹುದು. 20ನೆಯ ಶತಮಾನದ ಸಾಧನ ಹಾಗೂ ನಿಖರತೆಯ ವಿಧಾನಗಳಿಂದಾಗಿ ನೀರಿನ ಸಾಪೇಕ್ಷ ಉಷ್ಣತೆಯ ಆದರ್ಶದ ಆಧಾರದಿಂದ ಉಷ್ಣವನ್ನು ಅಳೆಯುವುದರ ಜೊತೆಗೆ ಜೌಲನ್ನು ಆದರ್ಶಮಾನವನ್ನಾಗಿ ತೆಗೆದುಕೊಳ್ಳಲಾಗಿದೆ.

**ಕಿಲೋ ಕೆಲೋರಿ:** ಇದು 1,000 ಕೆಲೋರಿಗಳಿಗೆ ಸಮ. ತಂತ್ರಶಾಸ್ತ್ರಜ್ಞರು ಇದನ್ನು ಬಳಸುತ್ತಾರೆ. ಇನ್ನು, ಒಂದು ಪೌಂಡ್ ಕೆಲೋರಿ 453.6 ಕಿಲೋರಿಗಳಿಗೆ ಸಮ. ಲಂಡನ್ನಿನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಒಂದು ಕೆಲೋರಿ (1/860) ವಾಟ್–ಗಂಟೆಗೆ ಸಮ ಎಂದು ಖಚಿತಪಡಿಸಲಾಯಿತು.

**ಕೆಲೋರಿ ಮಾಪನ:** ಭೌತ ಹಾಗೂ ರಾಸಾಯನಿಕವಾಗಿ ವಸ್ತುವಿನ ಸ್ಥಿತಿಯಲ್ಲಿ ಬದಲಾವಣೆ ಆದಾಗ ಬಿಡುಗಡೆಯಾಗುವ ಅಥವಾ ಹೀರಿಕೊಳ್ಳುವ ಉಷ್ಣದ ಪರಿಮಾಣವನ್ನು ಅಳೆಯುವ ವಿಜ್ಞಾನ (ಕೆಲೋರಿಮೆಟ್ರಿ). ಉಷ್ಣವನ್ನು ಪರೋಕ್ಷವಾಗಿ ಅದು ಉಂಟು ಮಾಡುವ ಪರಿಣಾಮಗಳಿಂದ ಅಳೆಯಬಹುದು. ಉದಾಹರಣೆಗೆ ಉಷ್ಣತಾ ವ್ಯತ್ಯಾಸ, ಭೌತಸ್ಥಿತಿ ಬದಲಾವಣೆ, ಶಕ್ತಿ ರೂಪಾಂತರ ಇತ್ಯಾದಿ. ಯಾವುದಾದರೂ ಒಂದು ವಸ್ತು ಮತ್ತು ವಾತಾವರಣದ ನಡುವಣ ಶಕ್ತಿ ವಿನಿಮಯ ಉಷ್ಣ ಅಥವಾ ಕಾರ್ಯ ಅಥವಾ ಎರಡರ ರೂಪದಲ್ಲೂ ಇರಬಹುದು. ಕೆಲೋರಿಮಾಪನ ಶಕ್ತಿ ಬದಲಾವಣೆಗಳನ್ನು ನಿರ್ಧರಿಸಲು ಬಹಳ ಅನುಕೂಲವಾಗಿದೆ. ಉಷ್ಣರೂಪದ ಶಕ್ತಿಯನ್ನು ಅಳೆಯುವ ಸಾಧನದ ಹೆಸರು ಕೆಲೋರಿಮಾಪಕ. ಇದರಲ್ಲಿ ಅನೇಕ ಬಗೆಗಳಿವೆ: ಶಕ್ತಿ ಉಷ್ಣವಾಗಿ ರೂಪಾಂತರ ಹೊಂದಿದ ಪರಿಮಾಣವನ್ನು ಇವು ಅಳೆಯಬಲ್ಲವು. ಸಾಮಾನ್ಯವಾಗಿ ಮೂರು ಘಟಕಗಳನ್ನು ಅಳೆಯುವುದರಿಂದ ಕೆಲೋರಿಮಾಪನ ಸಾಧ್ಯ:

(i) ಕೆಲೋರಿಮಾಪಕ ಮತ್ತು ಅದರಲ್ಲಿರುವ ವಸ್ತುಗಳ ಉಷ್ಣತೆಯನ್ನು ಅಳೆಯುವಿಕೆ.

(ii) ಹೊರಗಿನಿಂದ ಕೆಲೋರಿಮಾಪಕಕ್ಕೆ ಸೇರಿಸಿದ ಶಕ್ತಿಯ ಪರಿಮಾಣ.

(iii) ಕೆಲೋರಿಮಾಪಕ ಹಾಗೂ ವಾತಾವರಣ ಇವುಗಳ ನಡುವಣ ಶಕ್ತಿವಿನಿಮಯ ಪರಿಮಾಣದ ಅಳೆಯುವಿಕೆ.

ಏರಿದ ಉಷ್ಣತೆ ಹೆಚ್ಚಾದ ಉಷ್ಣದ ಪರಿಮಾಣಕ್ಕೆ ಅನುಪಾತದಲ್ಲಿರುತ್ತದೆಂದು ಹಳೆಯ ಸಾಧನಗಳಿಂದ ಮಾಡಿದ ಪ್ರಯೋಗಗಳಿಂದ ತಿಳಿದುಬಂದಿತು. ಇದರಿಂದ ಉಷ್ಣತೆಯೊಂದಿಗೆ ಏರುವ ಉಷ್ಣದ ದರ ಗೆ ಗ್ರಾಹ್ಯೋಷ್ಣ (ಸ್ಪೆಸಿಫಿಕ್ ಹೀಟ್) ಎನ್ನಬಹುದು.

ಸಾಮಾನ್ಯವಾಗಿ ಇತ್ತೀಚೆಗೆ ಕೆಲೋರಿಮಾಪನ ವಿಧಾನದಲ್ಲಿ ಬಿಡುಗಡೆಯಾದ ಅಥವಾ ಹೀರಿಕೊಂಡ ಶಕ್ತಿಯ ಪರಿಮಾಣವನ್ನು ವಿದ್ಯುಚ್ಛಕ್ತಿಯ ರೂಪದಲ್ಲಿ ಬಿಡಿಸುತ್ತಾರೆ. ಇದನ್ನು ಉಷ್ಣಜನಕ (ಎಕ್ಸೋಥರ್ಮಿಕ್) ವಿಧಾನ, ಉಷ್ಣಗ್ರಾಹಕ (ಎಂಡೋಥರ್ಮಿಕ್) ಮತ್ತು ಉಷ್ಣಧಾರಣ ಸಾಮರ್ಥ್ಯ (ಹೀಟ್ ಕೆಪ್ಯಾಸಿಟಿ) ವಿಧಾನ ಎಂಬ ಮೂರು ರೀತಿಯಲ್ಲಿ ಮಾಡುತ್ತಾರೆ. ವಿದ್ಯುಚ್ಛಕ್ತಿ ಹಾಗೂ ಉಷ್ಣತೆಗಳನ್ನು ನವೀನ ಸಾಧನಗಳಿಂದ ಬಹಳ ನಿಖರವಾಗಿ ಅಳೆಯಬಹುದು. ಕೆಲೋರಿಮಾಪಕ ಹಾಗೂ ವಾತಾವರಣ ಒಂದೇ ಉಷ್ಣತೆಯಲ್ಲಿರದಿದ್ದಾಗ ಹೆಚ್ಚಿನ ಉಷ್ಣತೆಯಿಂದ ಕಡಿಮೆ ಉಷ್ಣತೆ ಇರುವ ಕಡೆಗೆ ಉಷ್ಣ ವಿನಿಮಯಮಾಪಕ ಹಾಗೂ ವಾತಾವರಣದ ನಡುವಣ ಸ್ಥಳವನ್ನು ಶೂನ್ಯ ಮಾಡುವುದರಿಂದಲೂ ಸರಿಯಾದ ಆಕಾರವುಳ್ಳ ಕೆಲೋರಿಮಾಪಕ ಹಾಗೂ ಸರಿಯಾದ ಲೋಹದ ವಿದ್ಯುತ್ ಸಂಪರ್ಕ ತಂತಿಗಳನ್ನು ಆಯ್ಕೆ ಮಾಡುವುದರಿಂದಲೂ ಮಾಪಕಕ್ಕೆ ಮೆರುಗು ಕೊಡುವುದರಿಂದಲೂ ಉಷ್ಣ ವಿನಿಮಯವನ್ನು ಬಹುಮಟ್ಟಿಗೆ ಕಡಿಮೆ ಮಾಡಬಹುದು. **(ನೋಡಿ– ಉಷ್ಣದ–ಪರಿಮಾಣ)** (ಎಸ್.ವಿಐ)

**ಕೆಲ್ಟ್ ಜನವರ್ಗ :** ಪ್ರಸಕ್ತ ಶಕಪೂರ್ವ ಒಂದನೆಯ ಸಹಸ್ರಮಾನದಲ್ಲಿ ಐರೋಪ್ಯ ಸಂಸ್ಕೃತಿಯ ಬೆಳೆವಣಿಗೆಗೆ, ಗಮನಾರ್ಹ ಕೊಡುಗೆಗಳನ್ನು ನೀಡಿದ ಒಂದು ವರ್ಗ. ಕೆಲ್ಟ್ ಜನರು ಪ್ರಾಚೀನ ಕಾಲದಲ್ಲಿ ಆಲ್ಪ್ಸ್ ಪರ್ವತದ ಉತ್ತರದ ಸಮಶೀತೋಷ್ಣ ಪ್ರದೇಶದಲ್ಲಿ ಪ್ರಸಿದ್ಧಿಗೆ ಬಂದರು. ಗ್ರೀಕ್ ಚರಿತ್ರಕಾರರು ಇವರನ್ನು ಕೆಲ್ಟಾಯ್ ಎಂದು ಕರೆದರು. ಇದರ ಆಧಾರದ ಮೇಲೆ ಕೆಲ್ಟ್ ಎಂಬ ಪದ ಬಳಕೆಗೆ ಬಂದಿದೆ. ರೈನ್ ಮತ್ತು ಡ್ಯಾನ್ಯೂಬ್ ನದಿಗಳ ದಂಡೆಗಳಲ್ಲಿ ಮೊತ್ತಮೊದಲು ವಾಸಿಸುತ್ತಿದ್ದ ಇವರು ಕಾಲಕ್ರಮದಲ್ಲಿ ದಕ್ಷಿಣ ಮತ್ತು ಪಶ್ಚಿಮದ ಕಡೆಗೆ ಹರಡಿಕೊಂಡರು.

ಕೆಲ್ಟರ ಉಗಮದ ಬಗೆಗೆ ಸಾಕಷ್ಟು ಮಾಹಿತಿಗಳಿಲ್ಲ. ಪ್ರ.ಶ.ಪೂ.12 ನೆಯ ಶತಮಾನದಲ್ಲಿದ್ದ ಯುರೋಪಿನಲ್ಲಿ ಅರ್ನ್‌ಫೀಲ್ಡ್ ಸಂಸ್ಕೃತಿಯೂ ಅನಂತರ ಹಾಲ್‌ಸ್ಟಾಟ್ ಸಂಸ್ಕೃತಿಯೂ ಅನಂತರ ಹಾಲ್‌ಸ್ಟಾಟ್ ಸಂಸ್ಕೃತಿಯೂ ನೆಲೆಸಿದ್ದ ಪ್ರದೇಶಗಳು ಕೆಲ್ಟರ ಆಧಿಪತ್ಯಕ್ಕೆ ಒಳಪಟ್ಟಿದ್ದುವೆಂದು ಗ್ರೀಕ್ ಚರಿತ್ರಕಾರರು ತಿಳಿಸಿದ್ದಾರೆ. ಪ್ರ.ಶಪೂ.7 ನೆಯ ಶತಮಾನದಲ್ಲಿ ಇವರು ಬವೇರಿಯ ಮತ್ತು ಬೊಹಿಮಿಯಗಳಲ್ಲಿ ವಾಸವಾಗಿದ್ದು, 7ನೆಯ ಮತ್ತು 6ನೆಯ ಶತಮಾನಗಳಲ್ಲಿ ಪಶ್ಚಿಮದ ಕಡೆ ಹರಡಿದರು. ಕೆಲ್ಟರು ಗ್ರೀಕರೊಡನೆ ಮಸ್ಸಿಲಿಯದಲ್ಲಿ ವ್ಯಾಪಾರ ಸಂಬಂಧಗಳನ್ನು ಬೆಳೆಸಿಕೊಂಡ ಮೇಲೆ ಗ್ರೀಕ್ ಚರಿತ್ರಕಾರರ ಬರವಣಿಗೆಗಳಲ್ಲಿ ಕೆಲ್ಟರ ವಿಚಾರ ಹೆಚ್ಚು ಹೆಚ್ಚಾಗಿ ಕಂಡುಬರುತ್ತದೆ. ಇದರಿಂದ ಪ್ರ.ಶ.ಪೂ.5ನೆಯ ಶತಮಾನದ ಅನಂತರ ಕೆಲ್ಟರ ಚರಿತ್ರೆ ಸ್ಪಷ್ಟವಾಗುತ್ತದೆ. ಪ್ರ.ಶ.ಪೂ.390ರಲ್ಲಿ ಇವರು ರೋಂ ನಗರವನ್ನು ದಾಳಿಮಾಡಿ, ಸಿಸಿಲಿಯವರೆಗೂ ಹರಡಿದರು. ಪ್ರ.ಶ.ಪೂ. 335ರಲ್ಲಿ ಕೆಲ್ಟರ ನಿಯೋಗವೊಂದು ಅಲೆಕ್ಸಾಂಡರ್ ಮಹಾಶಯನನ್ನು ಭೇಟಿಮಾಡಿತು. ಪ್ರ.ಶ.ಪೂ. 335ರಲ್ಲಿ ಕೆಲ್ಟರ ನಿಯೋಗವೊಂದು ಅಲೆಕ್ಸಾಂಡರ್ ಮಹಾಶಯನನ್ನು ಭೇಟಿಮಾಡಿತು.



ಗುಂಡೆಸ್ಟ್ರಪ್‌ನಲ್ಲಿ ದೊರಕಿದ ಗಿಂಡಿಯ ಮೇಲಿನ ಚಿತ್ರ

ಪ್ರ.ಶ.ಪೂ. 279ರಲ್ಲಿ ಕೆಲ್ಟರು ಡೆಲ್ಫಿಯ ಮೇಲೆ ದಂಡೆತ್ತಿಹೋದರು. ಆದರೆ ಏಟೋಲಿಯನರು ಇವರನ್ನು ಸೋಲಿಸಿದರು. ಅನಂತರ ಕೆಲ್ಟಿಕ್ ಜನರು ಏಷ್ಯ ಮೈನರ್ ಪ್ರದೇಶದಲ್ಲಿ ದಾಳಿ ನಡೆಸಿ ಅಲ್ಲಿ ಬಹು ಕಷ್ಟನಷ್ಟಗಳನ್ನುಂಟು ಮಾಡಿದರು. ಸುತ್ತಮುತ್ತಲಿನ ಪ್ರದೇಶಗಳ ಮೇಲೆ ದಂಡೆತ್ತಿ ಹೋಗಿ ಅಪಾರ ನಷ್ಟ ಉಂಟುಮಾಡುತ್ತಿದ್ದ ಇವರನ್ನು ಒಂದನೆಯ ಅಟ್ಟಾಲಸ್ ಪ್ರ.ಶ.ಪೂ.230ರಲ್ಲಿ ಸೋಲಿಸಿದ; ಅನಂತರ ಇವರು ಗಾಲ್ ಪ್ರದೇಶದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ಬ್ರಿಟನ್ ಮತ್ತು ಐರ್ಲೆಂಡ್‌ಗಳಲ್ಲೂ ಕೆಲ್ಟಿಕ್ ಜನರ ದಾಳಿಗಳು ನಡೆದುವು. ಬ್ರಿಟನ್ನಿಗೆ ಲಾ ಟೆನೆ ಸಂಸ್ಕೃತಿ ಬರಲು ಕೆಲ್ಟರೇ ಕಾರಣರೆಂದು ಕೆಲವು ವಿದ್ವಾಂಸರು ವಾದಿಸುತ್ತಾರೆ. ಈ ಸಂಸ್ಕೃತಿ ಉನ್ನತಮಟ್ಟದಲ್ಲಿದ್ದು ಕಲೆಯಲ್ಲಿ ಹೆಚ್ಚು ಪ್ರಸಿದ್ಧಿ ಗಳಿಸಿತ್ತು. ಕೆಲಿಕರ ವಿವಿಧ ಗುಂಪುಗಳ ಜನರು ಯುರೋಪಿನ ವಿವಿಧ ಭಾಗಗಳಲ್ಲಿ ತಮ್ಮ ಪ್ರಭಾವ ಬೀರಿದರು.

ಕೆಲ್ಟ್ ಜನರ ಜೀವನ ಮತ್ತು ಧಾರ್ಮಿಕ ಪದ್ಧತಿಗಳನ್ನು ಕುರಿತ ವಿವರಗಳು ಚರಿತ್ರಕಾರರಿಂದ ತಿಳಿದು ಬರುತ್ತವೆ. ಕೆಲ್ಟರು ಆಭರಣಪ್ರಿಯರೆಂದು ಸಾಹಿತ್ಯ ಗ್ರಂಥಗಳಲ್ಲಿ ಉಲ್ಲೇಖಗಳುಂಟು. ಚಿನ್ನದ ಮತ್ತು ಕಂಚಿನ ಕಂಠಾಭರಣಗಳು ಇವರಿಗೆ ಬಹು ಪ್ರಿಯವಾಗಿದ್ದುವು. ಇದು ಲಾ ಟೆನೆ ಸಂಸ್ಕೃತಿಯ ಕಾಲದಲ್ಲಿ ವಿಶೇಷವಾಗಿ ಬಳಕೆಯಲ್ಲಿತ್ತು. ಈ ಆಭರಣಗಳು ವಿಶೇಷವಾಗಿ ಸ್ತ್ರೀಯರ ಮತ್ತು ವೀರಪುರುಷರ ಗೋರಿಗಳಲ್ಲಿ ದೊರಕಿವೆ. ಬಟ್ಟೆಗಳನ್ನು ಸೇರಿಸಿ ಚುಚ್ಚಿಕೊಳ್ಳುವ ಕಂಚಿನ ಪಿನ್ನುಗಳು ವಿಶೇಷವಾಗಿ ದೊರಕಿವೆ,

ಇವರು ಉಣ್ಣೆ ಮತ್ತು ಹತ್ತಿಯ ಇಜಾರಗಳನ್ನು ಧರಿಸುತ್ತಿದ್ದರು. ಬಟ್ಟೆಯನ್ನು ಹೊದ್ದುಕೊಂಡು ಸೊಂಟಕ್ಕೆ ಹಗ್ಗವನ್ನು ಕಟ್ಟಿಕೊಳ್ಳುವ ಪದ್ಧತಿ ವಿಶೇಷ ವಾಗಿತ್ತೆಂಬುದು ಶಿಲ್ಪ ಗಳಿಂದ ಗೊತ್ತಾಗುತ್ತದೆ. ಡೈಯೊಡೋರಸ್, ಪ್ಲಿನಿ ಮುಂತಾದ ಚರಿತ್ರಕಾರರು ಕೆಲ್ಟ್ ಶ್ರೀಮಂತರ ಬಣ್ಣ ಬಣ್ಣದ ಉಡುಪುಗಳನ್ನು ಹೊಗಳಿದ್ದಾರೆ. ಐರ್ಲೆಂಡಿನಲ್ಲಿ ಚರ್ಮದ ಪಾದರಕ್ಷೆ ಗಳನ್ನು ಉಪಯೋಗಿಸು ತ್ತಿದ್ದರು.



ಹಂದಿಯ ಶಿಲ್ಪ, ಮಧ್ಯ ಸ್ಪೇನ್

ಇವರ ಸಾಮಾಜಿಕ ಜೀವನದಲ್ಲಿ ಅನೇಕ ಭೇದಗಳಿವೆ. ಐರ್ಲೆಂಡಿನಲ್ಲಿ ಸಮಾಜದ ಮೂಲಘಟಕ ಟೌತ್. ಟೌತ್ ಎಂದರೆ ಜನ ಎಂದೇ ಅರ್ಥ. ಇದರಲ್ಲಿ ಮೂರು ವಿಭಾಗಗಳಿದ್ದುವು: ರಾಜರು, ಶ್ರೀಮಂತರು ಮತ್ತು ಸಾಮಾನ್ಯರು. ಇವು ಕೇವಲ ಸಾಮಾಜಿಕ ವರ್ಗಗಳು. ರಾಜ ಮರಣ ಹೊಂದಿದಾಗ ಅವನ ಬಂಧುಗಳಲ್ಲಿ ಒಬ್ಬನನ್ನು ಮುಂದಿನ ರಾಜನನ್ನಾಗಿ ಆರಿಸುತ್ತಿದ್ದರು. ರಾಜತ್ವ ವಂಶ ಪಾರಂಪರ್ಯ ವಾಗಿರಲಿಲ್ಲ. ಸಾಮಾನ್ಯವಾಗಿ ಪುರೋಹಿತರು ಶ್ರೀಮಂತ ವರ್ಗಕ್ಕೆ ಸೇರಿದ್ದರು. ಭೂಮಿಯನ್ನು ಉಳುವ ರೈತರು ಸಾಮಾನ್ಯ ವರ್ಗದವರು. ಸಾಮಾನ್ಯರಿಗೆ ಟೌತ್‌ನೊಳಗೇ ಮದುವೆಗೆ ಅವಕಾಶವಿತ್ತು. ವೈಯಕ್ತಿಕ ವಾಗಿ ಯಾರಿಗೂ ಆಸ್ತಿಯ ಹಕ್ಕು ಇರಲಿಲ್ಲ. ಆಸ್ತಿ ಕುಲಕ್ಕೆ ಸೇರಿದ್ದು. ಆ ಕುಲದ ಮುಖಂಡರು ಮಾತ್ರ ಅದನ್ನು ರೂಢಿಸಬಹುದಿತ್ತು. ಆದರೆ ಅದನ್ನು ಮಾರುವ ಹಕ್ಕು ಮುಖಂಡರಿಗೂ ಇರುತ್ತಿರಲಿಲ್ಲ. ಇದರಿಂದ ಕುಲಗಳ ಬೆಳವಣಿಗೆಗೆ ಅವಕಾಶವಾಯಿತು. ಪ್ರತಿಯೊಬ್ಬನ ಅಂತಸ್ತನ್ನೂ ನಿರ್ಧರಿಸಲು ಒಂದು ವಿಧವಾದ ಮೌಲ್ಯವಿತ್ತು. ವ್ಯಕ್ತಿ ಅಪರಾಧ ಮಾಡಿದರೆ ಅವನ ಘನತೆಯ ಮೌಲ್ಯವನ್ನು ಕಡಿಮೆ ಮಾಡುವುದು ಮುಖ್ಯ ಶಿಕ್ಷೆಗಳಲ್ಲೊಂದಾಗಿತ್ತು. ಸಾಮಾನ್ಯವಾದ ಅಪರಾಧಗಳನ್ನು ವಿಚಾರಿಸುವುದು ಮತ್ತು ಶಿಕ್ಷೆಯನ್ನು ವಿಧಿಸುವುದು ಕುಲ ಮುಖ್ಯರ ಕರ್ತವ್ಯ. ದೊಡ್ಡದೊಡ್ಡ ಅಪರಾಧಗಳನ್ನು ಕುರಿತ ವಿಚಾರಣೆಯನ್ನು ರಾಜನೇ ನಡೆಸುತ್ತಿದ್ದ. ಆಗಾಗ್ಗೆ ನಡೆಯುತ್ತಿದ್ದ ಉತ್ಸವಗಳಲ್ಲಿ ಅಪರಾಧ ವಿಮರ್ಶೆ ಕೂಡ ನಡೆಯುತ್ತಿದ್ದುದುಂಟು. ಆಗ ರಾಜ ನ್ಯಾಯಪತಿಗಳ ಸಹಾಯ ಪಡೆಯುತ್ತಿದ್ದ.



ತೋಳ್ಬಂದಿಯ ಮೇಲಣ ಕಂಚಿನ ಶಿಲ್ಪ
ಸಾರ್‌ಬ್ರೂಕೆನ್

ಗಾಲ್ ಸಮಾಜದ ಸ್ಥಿತಿಗಳು ಐರಿಷ್ ಕೆಲ್ಟ್ ಸಮಾಜದವಕ್ಕಿಂತ ಸ್ವಲ್ಪ ಭಿನ್ನವಾಗಿದ್ದವು. ಅಲ್ಲಿ ರಾಜತ್ವಕ್ಕೆ ಪ್ರಾಮುಖ್ಯವಿರಲಿಲ್ಲ. ಸಾಮಾಜಿಕ ವಿಷಯಗಳಲ್ಲಿ ಅವರ ಮುಖಂಡರದೇ ಪ್ರಾಮುಖ್ಯ.



ಜೂಪಿಟರ್ ಸ್ತಂಭ,
ಬರ್‌ಕನ್‌ಸ್ಟಾಟ್

ಇವರ ಮುಖ್ಯ ಕಸಬು ಕೃಷಿ ಮತ್ತು ಪಶುಪಾಲನೆ. ಗೋಧಿ ಮತ್ತು ಬಾರ್ಲಿ ಮುಖ್ಯ ಬೆಳೆಗಳು. ಇವರು ಹಂದಿ, ಕುರಿಗಳನ್ನು ಸಾಕುತ್ತಿದ್ದರು. ಪುರಾತತ್ವ ಶೋಧನೆಗಳಿಂದ ತಿಳಿದುಬಂದಿರುವಂತೆ ಅರ್ನ್‌ಫೀಲ್ಡ್, ಹಾಲ್‌ಸ್ಟಾಟ್ ಮತ್ತು ಲಾ ಟೆನೆ ಸಂಸ್ಕೃತಿಗಳಲ್ಲಿ ಆಯಾಕಾರದ ಮನೆಗಳು ಸಾಮಾನ್ಯವಾಗಿದ್ದುವು. ಆದರೆ ಸ್ಪೇನ್, ಪೋರ್ಚುಗಲ್, ಬ್ರಿಟನ್ ಮತ್ತು ಐರ್ಲೆಂಡ್‌ಗಳಲ್ಲಿ ವೃತ್ತಾಕಾರದ ಮನೆಗಳೇ ವಿಶೇಷವಾಗಿದ್ದುವು. ಈ ಮನೆಗಳು ಮಧ್ಯ ಯುರೋಪಿನ ಪ್ರದೇಶಗಳಲ್ಲಿ ಬಹು ಪ್ರಾಚೀನಕಾಲಕ್ಕೂ, ಅಟ್ಲಾಂಟಕ್ ಕರಾವಳಿಯಲ್ಲಿ ಸುಮಾರಾಗಿ ಹೊಸ ಶಿಲಾಯುಗ ಮತ್ತು ಕಂಚಿನ ಯುಗದ ಕಾಲಕ್ಕೂ, ಅಟ್ಲಾಂಟಿಕ್ ಕರಾವಳಿಯಲ್ಲಿ ಸುಮಾರಾಗಿ ಹೊಸ ಶಿಲಾಯುಗ ಮತ್ತು ಕಂಚಿನ ಯುಗದ ಕಾಲಕ್ಕೂ ಸೇರುತ್ತವೆ. ಐರ್ಲೆಂಡಿನಲ್ಲಿ ದೊರಕಿರುವ, ಮರದಿಂದ ಮಾಡಿದ, ಮನೆಗಳು ಕ್ರಿಸ್ತಶಕದ ಮೊದಲ ಶತಮಾನಕ್ಕೆ ಸೇರುತ್ತವೆ. ಕೆಲ್ಟಿಕ್ ವಾಸಸ್ಥಾನಗಳಲ್ಲಿ ಕಂಡುಬಂದಿರುವ ಇನ್ನೊಂದು ಮುಖ್ಯ ಅಂಶವೆಂದರೆ ಧಾನ್ಯಗಳನ್ನು ಕೂಡಿಡಲು ನೆಲದಲ್ಲಿ ಮಾಡಿದ ಹಗೇವುಗಳು. ಸಾಮಾನ್ಯವಾಗಿ ಇವು ಗದ್ದೆ ಹೊಲ ಇಲ್ಲವೇ ಮನೆಗಳಲ್ಲಿರುತ್ತಿದ್ದುವು. ಕೆಲ್ಟರ ಕಲಾತ್ಮಕವಾದ ನಾಣ್ಯಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು : ಮ್ಯಾಸಿಡೋನಿಯ ರಾಜ್ಯದ ನಾಣ್ಯಗಳ ರೀತಿಯ ಚಿನ್ನದ ನಾಣ್ಯಗಳು ಮತ್ತು ದಕ್ಷಿಣ ಗಾಲ್‌ನಲ್ಲಿ ಬಳಕೆಯಲ್ಲಿದ್ದ ಬೆಳ್ಳಿಯ ನಾಣ್ಯಗಳು.

ಕೆಲ್ಟರು ಶೂರರೂ ಯುದ್ಧಪ್ರಿಯರೂ ಆಗಿದ್ದರೆಂದು ಗ್ರೀಕರ ಬರೆವಣಿಗೆಗಳಿಂದ ಸ್ಪಷ್ಟವಾಗುತ್ತದೆ. ಕಂಚಿನ ಯುಗದಲ್ಲಿ ಕೆಲ್ಟರು ಕತ್ತಿ, ಗುರಾಣಿ, ಬಾಣದ ಮೊನೆಗಳನ್ನು ಉಪಯೋಗಿಸುತ್ತಿದ್ದರು. ಕಬ್ಬಿಣಯುಗದ ಅನಂತರ ಇವರ ಯುದ್ಧಸಾಮಗ್ರಿಗಳು ಸುಧಾರಿಸಿದುವು. ಉದ್ದನೆಯ ಕತ್ತಿ ಮತ್ತು ಭರ್ಜಿಗಳು ಬಳಕೆಗೆ ಬಂದುವು. ರಥ ಮತ್ತು ಅಶ್ವಗಳನ್ನೂ ಯುದ್ಧದಲ್ಲಿ ವಿಶೇಷವಾಗಿ ಬಳಸಲು ಆರಂಭವಾಯಿತು. ಯುದ್ಧಕ್ಕಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟ ಕೆಲವು ಯೋಧರು ಬೆತ್ತಲೆಯಾಗಿ ಯುದ್ಧ ಮಾಡುತ್ತಿದ್ದರೆಂದು ಪಾಲಿಬಸ್ ಉಲ್ಲೇಖಿಸುತ್ತಾನೆ. ಶತ್ರುಗಳ ತಲೆ ಕಡಿದು ಅವರ ರುಂಡಗಳನ್ನು ಕುದುರೆಯ ಲಗಾಮಿಗೆ ತೂಗುಹಾಕುವುದು ಇವರ ಪದ್ಧತಿಯಾಗಿತ್ತೆಂದು ಗ್ರೀಕರ ಬರೆವಣಿಗೆಗಳಿಂದ ಗೊತ್ತಾಗುತ್ತದೆ. ಯುದ್ಧದಲ್ಲಿ ವಿಜಯಗಳಿಸಿದ ಅನಂತರ ವಿವಿಧ ಹಬ್ಬಗಳನ್ನು ಆಚರಿಸುವುದು ಇವರ ಪದ್ಧತಿಯಾಗಿತ್ತು. ಕೆಲ್ಟರ ಧಾರ್ಮಿಕ ಮತ್ತು ಮತೀಯ ಭಾವನೆಗಳು ಆದಿಮಜನರ ಸಂಸ್ಕೃತಿಯನ್ನು ಬಹುವಾಗಿ ಹೋಲುತ್ತವೆ. ಮಾಟಮಂತ್ರಗಳಲ್ಲಿ ಇವರಿಗೆ ವಿಶೇಷ ನಂಬಿಕೆ. ತಮ್ಮ ಜೀವನದ ಎಲ್ಲ ಪರಿಸರಗಳಲ್ಲೂ ಅಲೌಕಿಕ ಶಕ್ತಿ ಅಡಗಿದೆಯೆಂದೂ ಅದನ್ನು ತಮಗೆ ಅನುಕೂಲಕರವಾಗಿ ನಡೆಸಿಕೊಳ್ಳುವುದು ಮುಖ್ಯ ಕರ್ತವ್ಯವೆಂದೂ ಅವರು ನಂಬಿದ್ದರು. ಕೆಲ್ಟ್ ದೇವತೆಗಳಲ್ಲಿ ಡಗ್ದ ಪ್ರಧಾನ. ಈತ ಸೇವಕನಂತೆ ಅರೆ ಬೆತ್ತಲಾಗಿದ್ದು ಬಹು ದೊಡ್ಡ ಗದೆಯನ್ನು ಹಿಡಿದಿರುತ್ತಾನೆ. ಇವನಿಗೆ ಅನಂತ ಶಕ್ತಿಯಿದೆ. ಇದರಿಂದ ನಿಸ್ಸಾರವಾದ ಭೂಮಿಯನ್ನು ಇವನು ಸಾರವತ್ತಾಗಿ ಮಾಡುತ್ತಾನೆ. ಲಗ್ ಮತ್ತೊಂದು ದೇವತೆ. ಈತ ಯುವಕನಾದರೂ ಡಗ್ದನಷ್ಟು ಪ್ರಭಾವಶಾಲಿಯಲ್ಲ. ಐರ್ಲೆಂಡಿನಲ್ಲಿ ಬಹು ಮುಖ್ಯವಾದ ಸಮಾಯಿನ್ ಎಂಬ ಹಬ್ಬದಲ್ಲಿ ಡಗ್ದದೇವತೆ ಪ್ರಕೃತಿದೇವತೆಯಾದ ಮೊರ್ರಿ ಗನ್ ಜೊತೆ ಸೇರಿ ಭೂಮಿಯನ್ನು ಫಲವತ್ತಾಗಿ ಮಾಡಿ ಮುಂದಿನ ವರ್ಷದ ಬೆಳೆಗೆ ಸಹಾಯ ಮಾಡುತ್ತಾಗಿ ಮಾಡಿ ಮುಂದಿನ ವರ್ಷದ ಬೆಳೆಗೆ ಸಹಾಯ ಮಾಡುತ್ತಾನೆಂದು ನಂಬಿಕೆ. ಈ ದೇವತೆಗಳಿಗೆ ಸಮಾಯಿನ್ ಹಬ್ಬದಲ್ಲಿ ಬಲಿಕೊಡುವ ಪದ್ಧತಿ ಇತ್ತು. ಬೆಲಟೈನ್ ಎನ್ನುವುದು ಹಬ್ಬ. ಈ ಹಬ್ಬದ ದಿನದಲ್ಲಿ ಬೆಂಕಿಯನ್ನು ಹೊತ್ತಿಸಿ ಅದರ ಮೇಲೆ ಪಶುಗಳನ್ನು ಓಡಿಸುತ್ತಿದ್ದರು. ಇದರಿಂದ ಪಶುಗಳಿಗೆ ಕಾಯಿಲೆಗಳು ಬರುವುದಿಲ್ಲವೆಂಬುದು ಅವರ ನಂಬಿಕೆಯಾಗಿತ್ತು ಇಂಬಲ್ಕ್ ಮತ್ತು ಲುಗ್ನಸದ್

ಇವು ಕೆಲ್ಟರ ಇತರ ಮುಖ್ಯ ಹಬ್ಬಗಳು. ಯುದ್ಧಗಳಲ್ಲಿ ಕೆಲ್ಟರನ್ನು ಹುರಿದುಂಬಿಸಲು ಅನೇಕ ಸ್ತ್ರೀ ದೇವತೆಗಳಿದ್ದರು. ಬದ್ಬ್ ದೇವತೆಗೆ ಕೆಂಪು ಹುಬ್ಬು, ಕೆಂಪು ಉಡುಪು. ಇವಳ ವಾಹನ ಕುದುರೆ. ಇವಳು ಯೋಧರಿಗೆ ಪೂಜ್ಯಳಾದ ದೇವತೆ. ಇವಳಿಗೆ ಹಕ್ಕಿಯ ರೂಪವೂ ಇತ್ತು.

ಕಲ್ಲಿನ ಶಿಲ್ಪ, ಯೂಫಿನೀಸ್

ಕೆಲ್ಟ್ ಮತೀಯ ನಂಬಿಕೆಗಳಲ್ಲಿ ತ್ರಿಮುಖ ದೇವತೆಗಳಿಗೆ ವಿಶಿಷ್ಟಸ್ಥಾನವಿತ್ತು. ಇವು ಒಬ್ಬ ದೇವತೆಯ ಮೂರು ಶಕ್ತಿಗಳಲ್ಲ ; ಅಥವಾ ಮೂರು ದೇವತೆಗಳು ಕೂಡಿ ಒಂದು. ದೇವತೆಯಾಗಿಯೂ ಇರಲಿಲ್ಲ. ಒಂದೇ ದೇವತೆಗೆ ಮೂರರಷ್ಟು ಅಂದರೆ ಮಿತಿಯಿಲ್ಲದಷ್ಟು ಸಾಮರ್ಥ್ಯವಿದೆಯೆಂದು ತೋರಿಸುವ ಸಾಧನ. ಮೂರು ಎನ್ನುವ ಸಂಖ್ಯೆ ಕೆಲ್ಟರಿಗೆ ಪವಿತ್ರ. ಈ ತ್ರಿವಳಿ ದೇವತೆಗಳಲ್ಲಿ ಸ್ತ್ರೀಯರೂ ಪುರುಷರೂ ಇದ್ದರು. ಮೊರ್ರಿಗನ್, ಬದ್ಬ್ ಮತ್ತು ನೆಮಿಯನ್ ತ್ರಿವಳಿ ಸ್ತ್ರೀ ದೇವತೆಗಳು. ಮೂರು ಮುಖಗಳುಳ್ಳ ಅನೇಕ ವಿಗ್ರಹಗಳು ದೊರಕಿವೆ. ಕೆಲ್ಟರು ಮರಗಳನ್ನು ಪೂಜಿಸುತ್ತಿದ್ದರೆಂದು ಅನೇಕ ಬರೆಹಗಳಿಂದಲೂ ಐರಿಷ್ ಶಾಸನಗಳಿಂದಲೂ ತಿಳಿದುಬರುತ್ತದೆ. ಓಕ್ ಮತ್ತು ಬೀಚ್ ವೃಕ್ಷದೇವತೆಗಳ ಉಲ್ಲೇಖ ಅಲ್ಲಲ್ಲಿ ಕಂಡುಬರುತ್ತದೆ. ಕಲ್ಲಿನ ಅನೇಕ ವಿಗ್ರಹಗಳು ಪೂಜೆಗೋಸ್ಕರ ಮಾಡಿದವಾಗಿದ್ದಿರಬಹುದು. ಕಟ್ಟಡವಿಲ್ಲದ ಅನೇಕ ಸ್ಥಳಗಳು ಕೆಲ್ಟರಿಗೆ ಪೂಜಾರ್ಹವಾಗಿದ್ದುವು. ಇವುಗಳಲ್ಲದೆ ಪೂಜಾಮಂದಿರಗಳೂ ಇದ್ದುವು. ಪೂಜಾಮಂದಿರಗಳ ಸ್ವರೂಪ ವೇನೆಂಬುದು ತಿಳಿದುಬಂದಿಲ್ಲ. ಫ್ರಿಲ್‍ಫೋರ್ಡ್ ಎಂಬಲ್ಲಿರುವ ಕುದುರೆಲಾಳಾಕೃತಿಯ ಕಟ್ಟಡ ಕೆಲ್ಟರ ದೇವಾಲಯವಾಗಿದ್ದಿರಬಹುದು. ರೋಮನರ ಪ್ರಭಾವದಿಂದ ಕೆಲ್ಟರು ಚೌಕಾಕೃತಿಯ ದೇವಾಲಯಗಳನ್ನು ಕಟ್ಟಲು ಪ್ರಾರಂಭಿಸಿದರು. ಈ ರೀತಿಯ ದೇವಾಲಯಗಳಲ್ಲಿ ಚೌಕನೆಯ ಗರ್ಭಗುಡಿ ಮತ್ತು ಅದರ ಸುತ್ತಲೂ ಮಂಟಪ


ಚಿನ್ನ ಮತ್ತು ಕಂಚಿನ ಆಭರಣಗಳು, ವಾಲ್ ಡಾಲ್‍ಗೆಷೀಂ

ಇವೆ. ಮಂಟಪದ ಮುಂಭಾಗದಲ್ಲಿ ಜನರು ಸೇರುತ್ತಿದ್ದರು. ಗಾಲ್‍ನಲ್ಲಿ ದೇವಾಲಯಗಳು ಚೌಕಾಕೃತಿ, ಅಷ್ಟಕೋನಾಕೃತಿ ಮತ್ತು ವೃತ್ತಾಕೃತಿಯಲ್ಲಿವೆ. ಮಧ್ಯ ಸ್ಪೇನ್ ಮತ್ತು ಉತ್ತರ ಪೋರ್ಚುಗಲ್‍ಗಳ ಬೆಟ್ಟದ ಮೇಲಿನ ಕೋಟೆಗಳಲ್ಲಿ ಗೂಳಿ ಮತ್ತು ಹಂದಿಗಳ ದೊಡ್ಡ ಗಾತ್ರದ ಕಲ್ಲಿನ ಶಿಲ್ಪಗಳು ದೊರಕಿವೆ. ಇವು ಫಲಶಕ್ತಿಯ ದೇವತೆಗಳೆಂದೂ ಮೆಡಿಟರೇನಿಯನ್ ಸಂಸ್ಕೃತಿಯ ಪ್ರಭಾವವೆಂದೂ ಊಹಿಸಲಾಗಿದೆ.

ದೇವತೆಗಳ ತೃಪ್ತಿಗೋಸ್ಕರ ಮಾನವರನ್ನೂ ಪಶುಗಳನ್ನು ಬಲಿಕೊಡುವ ಪದ್ಧತಿ ಇವರಲ್ಲಿ ಬೇರೂರಿತ್ತು. ಐರ್ಲೆಂಡಿನಲ್ಲಿ ಸಮಾಯಿನ್ ಹಬ್ಬದಲ್ಲಿ ಮಾನವರನ್ನು ಬಲಿ ಕೊಡುತ್ತಿದ್ದರೆಂದು ತಿಳಿಯುತ್ತದೆ. ಒಂದು ಕಥೆಯ ಪ್ರಕಾರ ಒಬ್ಬ ಕನ್ಯೆಯನ್ನು ಐರ್ಲೆಂಡಿನ ಕೆಲವು ಪುರುಷರು ಪ್ರೇಮಿಸಿದರು. ಪ್ರತಿಯೊಬ್ಬ ಪ್ರೇಮಿಯ ಪರವಾಗಿಯೂ ಅವನ ಕಡೆಯವನೊಬ್ಬನನ್ನು ಬಲಿ ಕೊಡಲಾಯಿತು. ಮತ್ತೊಂದು ಕಥೆಯ ಪ್ರಕಾರ ರಾಜನೊಬ್ಬ ಅಪರಿಚಿತ ಸ್ತ್ರೀಯೊಂದಿಗೆ ಸಂಬಂಧವನ್ನು ಹೊಂದಿದ್ದುದರಿಂದ ರಾಜ್ಯಕ್ಕೆ ವಿಪತ್ತುಗಳು ಬಂದೊದಗಿದುವು. ಇವನ್ನು ನಿವಾರಿಸಲು ಪಾಪವನ್ನರಿಯದ ದಂಪತಿಗಳ ಪುತ್ರನನ್ನು ಬಲಿಕೊಡಲು ತೀರ್ಮಾನಿಸಲಾಯಿತು. ಈ ರೀತಿಯ ಹಲವಾರು ಕಥೆಗಳುಂಟು. ಕೆಲ್ಟರಲ್ಲಿ ಡ್ರೂಯಿಡ್ ಎನ್ನುವ ಮಾಂತ್ರಿಕ ಅಥವಾ ಪುರೋಹಿತನಿರುತ್ತಿದ್ದ. ಮತೀಯ ವಿಚಾರಗಳಲ್ಲಿ ಅವನದೇ ಉಚ್ಚಸ್ಥಾನ. ಮಂತ್ರತಂತ್ರಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ಬಾಯಿಪಾಠದ ಮೂಲಕ ಇವನು ತನ್ನ ಶಿಷ್ಯರಿಗೆ ಹೇಳಿಕೊಡುತ್ತಿದ್ದ. ಆದ್ದರಿಂದ ಕೆಲ್ಟರ ಸಾಹಿತ್ಯ ಪುರಾಣಗಳು ಬಹುಕಾಲದವರೆಗೆ ಬಾಯಿಪಾಠದ ಮೂಲಕವೇ ಬೆಳೆದವು.

ಕೆಲ್ಟರ ಕಲೆಯ ಬಗ್ಗೆ ನಡೆದ ಸಂಶೋಧನೆ ಪ್ರಾಚೀನ ಪ್ರಪಂಚದ ಪುರಾತತ್ತ್ವದ ಮುಖ್ಯ ಅಧ್ಯಯನಗಳಲ್ಲೊಂದು. ಶಿಲ್ಪ ಮತ್ತು ಆಲಂಕಾರಿಕ ವಿನ್ಯಾಸಗಳಲ್ಲಿ ಕೆಲ್ಟಿಕ್ ಕಲೆಯ ಕೊಡುಗೆಗಳು ಗಮನಾರ್ಹ. ದಕ್ಷಿಣ ಫ್ರಾನ್ಸಿನ ಕೆಲ್ಟಿಕ್ ಕಲೆ ಮೆಡಿಟರೇನಿಯನ್, ಎಟ್ರಸ್ಕನ್ ಮತ್ತು ಗ್ರೀಕ್ ಕಲಾಸಂಪ್ರದಾಯಗಳಿಂದ ಪ್ರಭಾವಿತಗೊಂಡಿದೆ. ಕೆಲ್ಟರ ಶೌರ್ಯಪ್ರಧಾನವಾದ ಶಿಲ್ಪಗಳು ವಿಶೇಷವಾಗಿ ಮೃತರಾದ ಶೂರರಿಗೆ ಸಂಬಂಧಿಸಿದವು. ಈ ಶಿಲ್ಪಗಳಲ್ಲಿ ಯುದ್ಧದ ಉಡುಗೆಗಳು ಎದ್ದು ಕಾಣುತ್ತವೆ. ಹೆಚ್ಚು ದಪ್ಪವಿಲ್ಲದ ಶರೀರ, ವಿಶಾಲವಾದ ಎದೆ, ಅಗಲವಾದ ಹಣೆ ಮತ್ತು ಬಾಯಿ, ಎದ್ದುಕಾಣುವ ಕೆನ್ನೆಯೆಲುಬುಗಳು, ಗೋಪುರಾಕಾರದಲ್ಲಿ ಎತ್ತಿಕಟ್ಟಿದ ಕೂದಲು ಮುಂತಾದವು ಈ ಶಿಲ್ಪಗಳ ಪ್ರಮುಖ ಲಕ್ಷಣಗಳು. ಇವು ಯೂರೋಪಿನಲ್ಲಿ ಎಲ್ಲ ಕಡೆಗಳಿಗೂ ಹರಡಿದ್ದುವು. ಮೆಡಿಟರೇನಿಯನ್ ಕೆಲ್ಟರಲ್ಲಿ ಶೂರರ ಶಿಲ್ಪಗಳ ಜೊತೆಗೆ ಅಮಾನುಷ ಮತ್ತು ವಿಲಕ್ಷಣ ಪ್ರಾಣಿಗಳ ಶಿಲ್ಪಗಳೂ ವಿಶೇಷವಾಗಿ ಕಂಡುಬರುತ್ತವೆ. ಮೆಡಿಟರೇನಿಯನ್ ಕೆಲ್ಟರ ಶಿಲ್ಪ ಇತರ ಕೆಲ್ಟರ ಶಿಲ್ಪಗಳಿಗಿಂತ ಹೆಚ್ಚು ಕಲಾತ್ಮಕವಾದ್ದು. ಕಲ್ಲಿನ ಶಿಲ್ಪಗಳಲ್ಲದೆ ಕಂಚಿನ ವಿಗ್ರಹಗಳೂ ದೊರಕಿವೆ. ಬೌರ್ ಎಂಬಲ್ಲಿ ದೊರಕಿರುವ ಕಂಚಿನ ದೇವತಾಶಿಲ್ಪ ಬಹು ಕಲಾತ್ಮಕವಾಗಿದೆ. ಹಿಂಭಾಗದ ಮತ್ತು ಮುಂಭಾಗದ ಎರಡು ಕಂಚಿನ ಭಾಗಗಳನ್ನು ಕೂಡಿಸಿ ಈ ವಿಗ್ರಹಗಳನ್ನು ತಯಾರಿಸಲಾಗಿದೆ. ಕಂಚಿನ ಮುಖವಾಡಗಳು, ಗುಂಡನೆಯ ಮುಖ, ಅಗಲವಾದ ಬಾಯಿ, ತ್ರಿಕೋನಾಕಾರದ ಮೂಗು, ಗೆರೆಗಳಿಂದ ಗುರುತಿಸಬಹುದಾದ ಗಡ್ಡ ಮುಂತಾದ ಲಕ್ಷಣಗಳು ಇರುತ್ತವೆ. ಉತ್ತರ ಭಾಗದ ಕೆಲ್ಟರಲ್ಲಿ ಪೂಜಾಸ್ತಂಭಗಳನ್ನು ವಿಶೇಷ ಕಲಾವಂತಿಕೆಯಿಂದ ತಯಾರಿಸಲಾಗುತ್ತಿತ್ತು. ಇವನ್ನು ಜ್ಯೂಪಿಟರ್ ಕಂಬಗಳೆಂದು ಕರೆಯಲಾಗಿದೆ. ಇವುಗಳ ಮೇಲೆ ಕಾಣಬರುವ ಬರೆಹಗಳಿಂದ ಈ ಕಂಬಗಳು ಜ್ಯೂಪಿಟರ್ ದೇವತೆಗೋಸ್ಕರ ತಯಾರಾದವೆಂದು ಗೊತ್ತಾಗುತ್ತದೆ. ರೋಮನರ ಪ್ರಭಾವ ಇದರಲ್ಲಿ ಕಾಣಬರುತ್ತದೆ. ಕೆಳಭಾಗದ ಪೀಠ ಚೌಕವಾಗಿದ್ದು, ಅದರಲ್ಲಿ ರೋಮನ್ ವೀರನೊಬ್ಬನ ಅರೆ ಉಬ್ಬು ಶಿಲ್ಪವಿದೆ. ಮೇಲೆ ಹೋದಂತೆ ಕಂಬ ಸಣ್ಣಗಾಗುತ್ತಾ ತುದಿಯಲ್ಲಿ ಕೆಲ್ಟರ ವೀರನೊಬ್ಬನ ಅಥವಾ ದೇವತೆಯ ಶಿಲ್ಪವಿದೆ.

ಅಲಂಕಾರ ವಿನ್ಯಾಸಗಳಲ್ಲಿ ಕೆಲ್ಟರ ಅಭಿರುಚಿ ವಿಶಿಷ್ಟವಾದ್ದು. ಅವರು ಆ ಕಲೆಯನ್ನು ಬಹು ಚೆನ್ನಾಗಿ ಸಾಧಿಸಿದ್ದರು. ಜ್ಯಾಮಿತಿಯ ಚಿಹ್ನೆಗಳನ್ನು ಅನೇಕ ರೀತಿಗಳಲ್ಲಿ ಬಳಸಿ ಒಂದು ನೂತನ ವಿನ್ಯಾಸವನ್ನೇ ಸೃಷ್ಟಿಸಿದ್ದರು. ವಿವಿಧ ರೀತಿಯಲ್ಲಿ ಸೇರಿಸಿದ ಚುಕ್ಕಿಗಳು, ರೇಖೆಗಳು, ಅರ್ಧ ಮತ್ತು ಪೂರ್ಣವೃತ್ತಗಳನ್ನು ಒಳಗೊಂಡ ಕತ್ತಿಯ ಹಿಡಿಗಳು, ಪಾತ್ರೆಗಳು ಮುಂತಾದವು ಕಲಾತ್ಮಕವಾಗಿರುತ್ತಿದ್ದುವು. ಲಾ ಟೆನೆ ಸಂಸ್ಕೃತಿಯ ಕಾಲದಲ್ಲಂತೂ ಈ ಪ್ರವೃತ್ತಿ ವಿಶೇಷ ಪ್ರಾಮುಖ್ಯ ಪಡೆಯಿತು. ಕೆಲ್ಟರ ನಾಣ್ಯಗಳು ಈ ದೃಷ್ಟಿಯಿಂದ ಬಹು ಗಮನಾರ್ಹವಾದವು.

ಕೆಲ್ಟರ ಕಲೆ ಐರೋಪ್ಯ ಕಲೆಗೆ ಭದ್ರಬುನಾದಿಯನ್ನು ಹಾಕಿತು. ರೋಮನರ ಪ್ರಭಾವ ಹೆಚ್ಚಿದಾಗ ಹೊಸ ಕಲಾಸಂಪ್ರದಾಯ ಬೆಳೆಯಿತಾದರೂ, ಪ್ರಾಚೀನ ಕೆಲ್ಟಿಕ್ ಜನರ ನಮೂನೆಗಳು ರೋಮನ್ ಕಲಾವಿದರಿಗೂ ಸ್ಫೂರ್ತಿದಾಯಕವಾಗಿದ್ದುವು. ಈ ದೃಷ್ಟಿಯಿಂದ ಐರೋಪ್ಯ ಕಲೆಗೆ ಕೆಲ್ಟಿಕ್ ಕೊಡುಗೆ ಮುಖ್ಯವಾದ್ದು. (ಎ.ವಿ.ಎನ್.)

**ಕೆಲ್ಟಿಕ್ ಭಾಷೆಗಳು :** ಇಂಡೋಯುರೋಪಿಯನ್ ಭಾಷಾಪರಿವಾರಕ್ಕೆ ಸೇರಿದ್ದು ಮುಖ್ಯವಾಗಿ ಐರಿಷ್, ಸ್ಕಾಟ್ಸ್ ಗ್ಯಾಲಿಕ್, ವೆಲ್ಷ್, ಬ್ರೆಟನ್ ಭಾಷೆಗಳನ್ನೊಳಗೊಂಡ ಒಂದು ಉಪ-ಭಾಷಾಸಮೂಹಕ್ಕೆ ಈ ಹೆಸರಿದೆ. ಇವನ್ನು ಕೆಂಟುಮ್ ಗುಂಪಿಗೆ ಸೇರಿಸಿದೆಯಾದರೂ ಈ ಶಾಖೆಯ ಗೋಯ್ಡೆಲಿಕ್ ಭಾಷೆಯಲ್ಲಿ ಮಾತ್ರ ಕ, ಗ ಸ್ಪರ್ಶವರ್ಣಗಳು ತೋರಿಬರುತ್ತದೆ. ಆದರೆ ಗಾಲಿಷ್ ಮತ್ತು ಬ್ರಿಥಾನಿಕ್ ಭಾಷೆಗಳಲ್ಲಿ ಸ್ಪರ್ಶವರ್ಣಗಳು ತೋರಿಬಂದರೂ ಅವು ಓಷ್ಠ್ಯವರ್ಣಗಳು. ಅಂದರೆ ಗೊಯ್ಡೆಲಿಕ್ ಭಾಷೆಯ ಕ ಕಾರ ಸ್ಥಾನದಲ್ಲಿ ಗಾಲಿಷ್ ಭಾಷೆಯಲ್ಲಿ ಪ ಕಾರ ತೋರಿಬರುತ್ತದೆ. ಉದಾ: ಕೊಯಿಕ್ (ಐರಿಷ್)=ಪಿಂಪ್ (ವೆಲ್ಷ್) 'S'.

ಇಂಡೋಯೂರೋಪಿಯನ್ ಪರಿವಾರದ ಇತರ ಶಾಖೆಗಳಲ್ಲಿ ಕಾಣಬರದ ಕೆಲ್ಟಿಕ್ ಶಾಖೆಯ ಕೆಲವು ವಿಶಿಷ್ಟ ಲಕ್ಷಣಗಳಿವು:

1 ಇಂಡೋಯೂರೋಪಿಯನ್ (ಇಂ.ಯೂ.) ಪರಿವಾರದ ಪದಾದಿಯಲ್ಲಿಯ ಮತ್ತು ಎರಡು ಸ್ವರಗಳ ಸ್ವರಗಳ ಮಧ್ಯವರ್ತಿ ಪ್ರಕಾರ ಇಲ್ಲಿ ನಷ್ಟವಾಗಿದೆ. ಉದಾ: ಪತೇರ್ (ಲ್ಯಾಟಿನ್)=ಅಥಿರ್ (ಐರಿಷ್)=ತಂದೆ.

ಈ ಧ್ವನಿಪರಿಣಾಮ ಕೆಲ್ಟಿಕ್ ಶಾಖೆಯ ಭಾಷೆಗಳಿಗೆಲ್ಲ ಸಾಮಾನ್ಯ. ಪ್ರ.ಶ.ಪೂ.1000 ವರ್ಷಕ್ಕೆ ಮುಂಚೆಯೇ ಈ ಪರಿವರ್ತನೆಯಾಗಿರಬೇಕೆಂದು ವಿದ್ವಾಂಸರ ಅಭಿಪ್ರಾಯ.

2 ಇಂ.ಯೂ.ನ ಏಕಾರ ಕೆಲ್ಟಿಕ್ ಭಾಷೆಗಳಲ್ಲಿ ಈಕಾರವಾಗಿ ಪರಿವರ್ತಿತವಾಗಿದೆ. ಉದಾ: ವೇರುಸ್ (ಲ್ಯಾಟಿನ್)=ಫೀರ್ (ಐರಿಷ್)=ನಿಜ.

3 ಇಂ.ಯೂ.ನ ವ್ಯಂಜನಪೂರ್ವದಲ್ಲಿಯ ರ ಕಾರದ ಸ್ವರ ರೂಪ ಇಲ್ಲಿ ರಿ ಆಗಿ ಪರಿಣಾಮ ಹೊಂದಿದೆ. (ಗ್ರೀಕ್‌ನಲ್ಲಿ ಅರ್ ಎಂದಾಗಿದೆ). ಉದಾ: ಹೃದ್ (ಸಂಸ್ಕೃತ)=ಕ್ರಿದೆ (ಐರಿಷ್), ಕರ್ದಿಯ (ಗ್ರೀಕ್)=ಹೃದಯ.

4 ಇಂ.ಯೂ.ನ ಸ್ವರಗಳ ನಡುವಣ ಮಹಾಪ್ರಾಣ ಭ, ಧ, ಘ ಕೆಲ್ಟಿಕ್ ಭಾಷೆಗಳಲ್ಲಿ ಬ, ದ, ಗ ಆಗಿ ಉಳಿದಿವೆ. ಉದಾ: ರುಧಿರ (ಸಂಸ್ಕೃತ)=ರುಅದ್ (ಐರಿಷ್)=ರಕ್ತ.

ಕೆಲ್ಟಿಕ್ ಮತ್ತು ಇಟಾಲಿಕ್ ಶಾಖೆಗಳ ನಡುವೆ ಕಾಣಬರುವ ಹೆಚ್ಚಿನ ಸಾಮ್ಯಗಳನ್ನಾಧರಿಸಿಕೊಂಡು ಇಟಾಲೋ-ಕೆಲ್ಟಿಕ್ ಎಂಬ ಜೋಡಿ ಶಾಖೆಯೊಂದನ್ನು ಕೆಲವರು ರೂಪಿಸಿಕೊಂಡಿದ್ದಾರೆ. ಹೀಗೆ ಅವೆರಡು ಶಾಖೆಗಳಿಗೂ ಸಮಾನವಾದ ಲಕ್ಷಣಗಳಲ್ಲಿ ಕೆಲವು ಹೀಗಿವೆ:

1 ಕ್ರಿಯೆಯ ಕರ್ಮಣಿ ರೂಪದಲ್ಲಿರುವ ರ ಪ್ರತ್ಯಯ (ಈ ಲಕ್ಷಣ ಹಿಟ್ಟೈಟ್ ಮತು ತೊಖಾರಿಯನ್ ಶಾಖೆಗಳಲ್ಲೂ ಕಂಡುಬರುತ್ತದೆ).

2 ಕ್ರಿಯೆಯ ಭವಿಷ್ಯತ್ಕಾಲರೂಪದಲ್ಲಿ ಬ ಪ್ರತ್ಯಯ.

3 ಭಾವನಾಮಗಳಲ್ಲಿಯ ತಿಯೋ-ಎಂಬ ಪ್ರತ್ಯಯ.

4 ಪುಲ್ಲಿಂಗ ಮತ್ತು ನಪುಂಸಕಲಿಂಗ ಓ ಕಾರಾಂತಶಬ್ದಗಳ ಷಷ್ಠೀ ಏಕವಚನದಲ್ಲಿ ಈ ಎಂಬ ಪ್ರತ್ಯಯ.

ಕೆಲ್ಟಿಕ್ ಭಾಷೆಗಳನ್ನಾಡುವ ಜನ ಮೊದಲಿಗೆ ಮಧ್ಯ ಮತ್ತು ಪಶ್ಚಿಮ ಯೂರೋಪಿನಲ್ಲಿ ವಾಸವಾಗಿದ್ದರು. ಈ ಶಾಖೆಯಲ್ಲಿ ಗಾಲಿಷ್, ಗೊಯ್ದೆಲಿಕ್, ಬ್ರಿಥಾನಿಕ್ ಮತ್ತು ಪಿಕ್ಟಿಷ್ ಎಂಬ ನಾಲ್ಕು ಉಪಶಾಖೆಗಳನ್ನು ಗುರುತಿಸಬಹುದು. ಗೊಯ್ದೆಲಿಕ್‌ನಲ್ಲಿ ಐರಿಷ್, ಸ್ಕಾಟಿಷ್, ಗ್ಯಾಲಿಕ್ ಮತ್ತು ಮ್ಯಾಂಕ್ಸ್ ಎಂಬ ಮೂರು ಭಾಷೆಗಳು ಸೇರಿವೆ. ಬ್ರಿಥಾನಿಕ್‌ನಲ್ಲಿ ವೆಲ್ಷ್, ಕಾರ್ನಿಷ್ ಮತ್ತು ಬ್ರೆಟನ್ ಎಂಬ ಮೂರು ಭಾಷೆಗಳಿವೆ.

ಕೆಲ್ಟಿಕ್ ಭಾಷೆಗಳ ಒಂದು ವಿಶೇಷ ಲಕ್ಷಣವೆಂದರೆ, ವಾಕ್ಯಾಂಶಗಳಲ್ಲಿ (ಕ್ಲಾಸಸ್) ಅಂತರ್ಗತವಾಗಿದ್ದಾಗ ಪದಾದಿಯಲಿಯ ವರ್ಣಗಳು ಹಲವು ರೀತಿಯ ವಿಕಾರಕ್ಕೊಳಗಾಗುತ್ತವೆ. ಚಾರಿತ್ರಿಕವಾಗಿ ಪೂರ್ವಪದಾಂತ್ಯ ವರ್ಣಗಳು ಈ ವಿಕೃತಿ ಕಾರ್ಯಕ್ಕೆ ಕಾರಣವಾದವೆನ್ನಬಹುದು. ಆದರೆ, ಈ ಪೂರ್ವಪದಾಂತ್ಯ ವರ್ಣಗಳು ಲೋಪ ಹೊಂದಿದ ಮೇಲೂ ಅವುಗಳಿಂದಾದ ವಿಕೃತಿಗಳು ಹಾಗೆಯೇ ಉಳಿದು ಬಂದುವು.

ಗಾಲಿಷ್ ಭಾಷೆ ಫ್ರಾನ್ಸ್ ದೇಶದ ಗಾಲ್ ಎಂಬಲ್ಲಿಯ ಮತ್ತು ಉತ್ತರ ಇಟಲಿಯ ಭಾಷೆಯಾಗಿತ್ತು. ಈ ಭಾಷೆಯಲ್ಲಿ ಹೆಚ್ಚಿನ ಸಾಹಿತ್ಯ ರಚನೆಯೇನೂ ನಡೆದಿಲ್ಲ. ಪ್ರ.ಶ.ಪೂ. 2ನೆಯ ಶತಮಾನದಲ್ಲಿನ ಉತ್ತರ ಎಟ್ರಸ್ಕನ್ ಬರೆವಣಿಗೆಯಲ್ಲಿ ಕೆಲವು ಶಿಲಾಶಾಸನಗಳು, ರೋಮ್ ಸಾಮ್ರಾಜ್ಯಕಾಲದಲ್ಲಿ ಉಪಯೋಗದಲ್ಲಿದ್ದ ಲ್ಯಾಟಿನ್ ಬರೆವಣಿಗೆಯಲ್ಲಿ ಕೆಲವು ಶಾಸನಗಳು, ಗ್ರೀಕ್ ಮತ್ತು ರೋಮನ್ ಅಭಿಜಾತ ಸಾಹಿತ್ಯ ಗ್ರಂಥಗಳಲ್ಲಿ ಮತ್ತು ನಾಣ್ಯಗಳ ಮೇಲೆ ಉದಾಹರಿಸಲ್ಪಟ್ಟಿರುವ ಜನರ ಮತ್ತು ಸ್ಥಳಗಳ ಹೆಸರುಗಳ-ಇವಿಷ್ಟು ಮಾತ್ರ ಈ ಭಾಷೆ ಒಂದು ಕಾಲದಲ್ಲಿದ್ದಿತೆಂದು ರುಜುವಾತು ಮಾಡಲು ಉಳಿದಿವೆ.

ಗಾಲಿಷ್ ಭಾಷೆಯಲ್ಲಿ ದೊರೆತಿರುವ ಶಿಲಾ ಶಾಸನಗಳು ಕೇವಲ 50. ಅವುಗಳಲ್ಲಿ ಹೆಚ್ಚಿನವು ಚಿಕ್ಕ ಶಾಸನಗಳು. ಉತ್ತರ ಇಟಲಿಯಲ್ಲಿ ದೊರೆತ ಕೆಲವನ್ನು ಬಿಟ್ಟರೆ ಉಳಿದ ಶಾಸನಗಳು ಫ್ರಾನ್ಸಿನಲ್ಲಿ ಕಂಡುಬಂದಿವೆ. ಆ ಕಾರಣದಿಂದಾಗಿ ಗಾಲಿಷ್ ಭಾಷೆಯನ್ನು ಐರೋಪ್ಯ ಕೆಲ್ಟಿಕ್ ಎಂದೂ ಕರೆಯುತ್ತಾರೆ.

ಕೆಲ್ಟಿಕ್ ಭಾಷೆಗಳಲ್ಲಿ ಐರಿಷ್ ಅಥವಾ ಎರ್ಸ್ ಭಾಷೆಯೇ ಅತಿ ಪ್ರಧಾನವಾದದ್ದು. ಸುಮಾರು 750ರಿಂದ 1100ರ ಅವಧಿಯ ಕಾಲವನ್ನು ಐರಿಷ್ ಭಾಷೆಯ ಪ್ರಥಮ ಯುಗವೆಂದೂ 1100 ರಿಂದ 1500ರ ವರೆಗಿನ ಕಾಲವನ್ನು ಮಧ್ಯಾಂತರ ಕಾಲವನ್ನು ಮಧ್ಯಯುಗವೆಂದೂ ಪರಿಗಣಿಸಿದ್ದಾರೆ. ಈ ಭಾಷೆಯ ಆಧುನಿಕ ರೂಪವೇ ಐರ್ಲೆಂಡಿನ ಅಧಿಕೃತ ಭಾಷೆಯಾಗಿದೆ. ಏಳನೆಯ ಶತಮಾನದ ಕೊನೆಯ ಭಾಗಕ್ಕಿಂತ ಮುಂಚಿನ ಕಾಲದ ಹಸ್ತ ಪ್ರತಿಗಳಾವುವೂ ದೊರಕಿಲ್ಲ. ಈ ಭಾಷೆಗಾಗಿಯೇ ಉಪಯೋಗಿಸಲ್ಪಟ್ಟ ಓಗಂ ಬರವಣಿಗೆಯಲ್ಲಿ 4ರಿಂದ 6ನೆಯ ಶತಮಾನದ ಮಧ್ಯಕಾಲಕ್ಕೆ ಸೇರಿದ ಸುಮಾರು 300 ಶಿಲಾಶಾಸನಗಳು ಐರ್ಲೆಂಡಿನ ದಕ್ಷಿಣಭಾಗದಲ್ಲಿ ಉಪಲಬ್ಧವಾಗಿವೆ. ಈ ಶಾಸನಗಳಲ್ಲಿಯ ಭಾಷೆಯನ್ನು ಐರಿಷ್‌ನ ಅತಿ ಪ್ರಾಚೀನ ರೂಪವೆನ್ನಬಹುದು. ಅನಂತರದ ಐರಿಷ್ ಭಾಷೆಯಲ್ಲಿ ತೋರಿಬರುವ ಪದಾಂತ್ಯವರ್ಣಗಳ ಲೋಪವಾಗಲೀ ಪದಮಧ್ಯ ಸ್ವರಗಳ ಲೋಪವಾಗಲೀ ಈ ಭಾಷೆಯಲ್ಲಿ ಕಂಡುಬರುವುದಿಲ್ಲ. ಹಾಗೂ ಶಾಸನಗಳಲ್ಲಿ ಒಂದೇ ಒಂದು ಕ್ರಿಯಾಪದದ ರೂಪವೂ ದೊರೆಯುವುದಿಲ್ಲ.

ಸಂಸ್ಕೃತದಲ್ಲಿರುವಂತೆಯೇ ಹಳೆಯ ಐರಿಷ್‌ನಲ್ಲೂ ನಾಮಪದಗಳಲ್ಲಿ ಸ್ವರಾಂತ ಮತ್ತು ವ್ಯಂಜನಾಂತಗಳೆಂಬ ಭೇದವಿದೆ. ಮೂರು ಲಿಂಗಗಳೂ ಮೂರು ವಚನಗಳೂ ಕಾಣಬರುತ್ತವೆ. ಮಧ್ಯ ಐರಿಷ್‌ನ ವೇಳೆಗೆ ನಪುಂಸಕ ಲಿಂಗ ಇಲ್ಲವಾಗುತ್ತದೆ. ದ್ವಿವಚನಮಾತ್ರ ಐರಿಷ್‌ನಲ್ಲಿ ಈ ತನಕ ಉಳಿದುಬಂದಿದೆ. ಪ್ರಥಮ, ಸಂಬೋಧನ, ದ್ವಿತೀಯಾ, ಚತುರ್ಥೀ ಮತ್ತು ಷಷ್ಠೀ ಎಂದು ಕೇವಲ 5 ವಿಭಕ್ತಿಗಳಿವೆ. ಪದಾಂತ್ಯ ವರ್ಣಗಳ ಲೋಪದಿಂದಾಗಿ ಏಕವಚನದ ದ್ವಿತೀಯ ಮತ್ತು ಚತುರ್ಥೀ ರೂಪಗಳಲ್ಲಿ ವ್ಯತ್ಯಾಸ ಉಳಿಯಲಿಲ್ಲ. ಆಧುನಿಕ ಐರಿಷ್‌ನಲ್ಲಿ ನಾಲ್ಕು ವಿಭಕ್ತಿಗಳು ಮಾತ್ರ ಇವೆ.

ಐರಿಷ್‌ನಲ್ಲಿ ಹೆಚ್ಚು ಪಾಲು ಕ್ರಿಯಾಪದಗಳು ಸಂಯುಕ್ತ ಕ್ರಿಯಾರೂಪಗಳು. ಕ್ರಿಯಾಪದಗಳೊಡನೆ ಒಂದರಿಂದ ನಾಲ್ಕು ಉಪಸರ್ಗಗಳು ಸೇರಿರಬಹುದು. ಮೂರು ಉಪಸರ್ಗಗಳಿಂದ ಕೂಡಿರುವ ಕ್ರಿಯಾರೂಪಗಳಂತೂ ಸಾಮಾನ್ಯವಾಗಿ ಕಂಡುಬರುತ್ತವೆ. ಸಂಸ್ಕೃತದಲ್ಲಿರುವಂತೆ ಇಲ್ಲೂ ಕ್ರಿಯಾರೂಪಗಳು ಕರ್ತೃವನ್ನೂ ಸೂಚಿಸುತ್ತವೆ. ಉದಾ: ಬೆರಿದ್=ಅವನು ಬಯ್ಯುತ್ತಾನೆ.

ಪದಾದಿಯಲ್ಲಿಯ ವರ್ಣಗಳಿಗೆ ಮೂರು ಬಗೆಯ ವಿಕಾರ ಐರಿಷ್‌ನಲ್ಲಿ ಕಂಡುಬರುತ್ತದೆ. ಈ ಮಾರ್ಪಾಡು ಮೊದಲಿಗೆ ಪೂರ್ವಪದದ ಅಂತ್ಯವರ್ಣಗಳಿಂದಾಯಿತೆನ್ನಬಹುದು.

1. ಸ್ಪರ್ಶವರ್ಣಗಳು ಊಷ್ಮ ವರ್ಣಗಳಾಗಿ ಮಾರ್ಪಡುತ್ತವೆ. ಉದಾ: ಗುತ್=ಕಂಠ; ಮೋ ಗುತ್=ನನ್ನ ಕಂಠ (ಮಾತು, ಧ್ವನಿ).

2. ಅಲ್ಪಪ್ರಾಣಗಳು ಮಹಾಪ್ರಾಣಗಳಾಗಿಯೂ ಮಹಾಪ್ರಾಣಗಳು ಅದೇ ವರ್ಗದ ಅನುನಾಸಿಕವಾಗಿಯೂ ಮಾರ್ಪಡುತ್ತವೆ. ಉದಾ: ಬೋ=ಹಸು; ನ ಸೆಮ್ಬೋ=ಆರು ಹಸುಗಳಲ್ಲಿ.

3. ಪದಾದಿಯ ಲಕಾರ ಅನುನಾಸಿಕ ಮತ್ತು ಸಕಾರಗಳು ದ್ವಿತ್ವರೂಪವನ್ನು ತಾಳುತ್ತವೆ. ಉದಾ: ಇನ್ನಮ್ಮೆ-ರ್ಬಿ=ಲೋಪದೋಷಗಳು; ನ-ನ್ನಿ=ಯಾವುದಾದರೂ.

ಸ್ಕಾಟಿಷ್ ಗ್ಯಾಲಿಕ್ ಎಂಬುದು 6ನೆಯ ಶತಮಾನದಲ್ಲಿ ವಲಸೆಬಂದ ಐರಿಷ್ ಜನ ಸ್ಕಾಟ್ಲೆಂಡಿಗೆ ತಂದು ಬೆಳೆಸಿದ ಕೆಲ್ಟಿಕ್ ಭಾಷೆ. ಐಲ್ ಆಫ್ ಮ್ಯಾನ್‌ನಲ್ಲಿ ಬಳಕೆಯಲ್ಲಿದ್ದ ಭಾಷೆ ಮ್ಯಾಂಕ್ಸ್. ಈ ಎರಡು ಭಾಷೆಗಳೂ ಈಗ ಪೂರ್ಣವಾಗಿ ನಶಿಸಿ ಹೋಗಿವೆ. ಮ್ಯಾಂಕ್ಸ್ ಭಾಷೆಯ ಪ್ರಾಚೀನ ರೂಪವನ್ನು ಫಿಲಿಪ್ಸ್ ಪಾದ್ರಿಯ ಬುಕ್ ಆಫ್ ಕಾಮನ್ ಪ್ರೇಯರ್ಸ್ (1610) ಕೃತಿಯಲ್ಲಿ ಕಾಣಬಹುದು.

ಮ್ಯಾಂಕ್ಸ್ ಭಾಷೆಯಲ್ಲಿ ಕೂಡ ಹೆಚ್ಚಿನ ಸಾಹಿತ್ಯ ಸೃಷ್ಟಿಯಾಗಲಿಲ್ಲ. ಉಳಿದು ಬಂದಿರುವುದರಲ್ಲಿ ಕೆಲವು ಮೂಲಕೃತಿಗಳಿವೆ. ಇನ್ನು ಕೆಲವು ಅನುವಾದಗಳು. ಮೂಲಕೃತಿಗಳಲ್ಲಿ ಪದ್ಯರೂಪದ ಕತೆಗಳು ಅಂದರೆ ಕಥನಗೀತೆ (ಬ್ಯಾಲಡ್ಸ್) ಮತ್ತು ಒಂದು ರೀತಿಯ ಹಾಡುಗಳೇ (ಕೆರೋಲ್ಸ್) ಹೆಚ್ಚು. ಈ ಹಾಡುಗಳನ್ನು ಕ್ರಿಸ್‌ಮಸ್ ಹಬ್ಬದ ಹಿಂದಿನ ರಾತ್ರಿ ಚರ್ಚುಗಳಲ್ಲಿ ಹಾಡುತ್ತಿದ್ದರು. ಹಾಡಬೇಕೆಂದೆನಿಸಿದವರು ಎದ್ದುನಿಂತು ಹಾಡಬಹುದಿತ್ತು. ಪ್ರಪಂಚದ ಪ್ರಳಯ, ನರಕದ ಯಾತನೆಗಳು, ಪಾಪಪುಣ್ಯಗಳ ವಿಚಾರಣೆ ದಿನ-ಇತ್ಯಾದಿ ವಿಷಯಗಳೇ ಈ ಹಾಡುಗಳಲ್ಲಿ ತುಂಬಿರುತ್ತಿತ್ತು. ಅನುವಾದ ಸಾಹಿತ್ಯದಲ್ಲಿ ಹೆಚ್ಚುಪಾಲು ಮತೀಯ ವಿಷಯಗಳೇ ಇರುತ್ತಿದ್ದುವು. ಇವುಗಳಲ್ಲೆಲ್ಲ ಮುಖ್ಯವಾದದ್ದು 1775ರಲ್ಲಿ ಪ್ರಕಾಶಗೊಂಡ ಬೈಬಲ್ ಅನುವಾದ. ಮ್ಯಾಂಕ್ಸ್ ಭಾಷೆಯಲ್ಲಿ ಈಸೋಪನ ಕತೆಗಳ ಅನುವಾದ ಕೂಡ ನಡೆದಿದೆ.

ಐರಿಷ್ ಅನಂತರ ಕೆಲ್ಟಿಕ್ ಭಾಷೆಗಳಲ್ಲಿ ವೆಲ್ಷ್‌ಗೇ ಹೆಚ್ಚು ಪ್ರಾಧಾನ್ಯವೆನ್ನಬಹುದು. 12ನೆಯ ಶತಮಾನಕ್ಕೆ ಮುಂಚಿನ ರೂಪವನ್ನು ಹಳೆಯ ವೆಲ್ಷ್ ಎಂದೂ ಅನಂತರ 16ನೆಯ ಶತಮಾನದ ತನಕ ಮಧ್ಯ ವೆಲ್ಷ್ ಎಂದೂ ಪರಿಗಣಿಸುವುದು ರೂಢಿಯಲ್ಲಿದೆ. ವೆಲ್ಷ್‌ನ ಮುಖ್ಯ ಲಕ್ಷಣಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು.

1 ಮೂಲ ಕೆಲ್ಟಿಕ್‌ನ ಏ ಕಾರ ವೆಲ್ಷ್‌ನಲ್ಲಿ ಅವ್ ಆಗಿ ಪರಿವರ್ತಿತವಾಗಿದೆ.

2 ಮೂಲ ಕೆಲ್ಟಿಕ್‌ನ ಔ ಕಾರ ವೆಲ್ಷ್‌ನಲ್ಲಿ ಏ ಎಂದಾಗಿದೆ.

3 ಮೂಲ ಕೆಲ್ಟಿಕ್‌ನ ಊ ಕಾರ ಇ ಕಾರವಾಗುತ್ತದೆ. ಅಂತ್ಯ ಓ ಕಾರ ಮೊದಲಿಗೆ ಊ ಕಾರವಾಗಿ ಮಾರ್ಪಟ್ಟು ಅನಂತರ ಈ ಕಾರವಾಗುತ್ತದೆ.

ಅಂತ್ಯಸ್ವರಗಳೆಲ್ಲ ವೆಲ್ಷ್‌ನಲ್ಲಿ ಲೋಪ ಹೊಂದಿದುವು. ಹೀಗೆ ಲೋಪ ಹೊಂದಿದ್ದರಿಂದ ಇವುಗಳ ಪೂರ್ವಸ್ವರಗಳಲ್ಲಿ ಕೂಡ ಬದಲಾವಣೆಗಳು ತೋರಿ ಬಂದುವು.

ಐರಿಷ್‌ನಲ್ಲಿ ಕಂಡುಬರುವಂತೆ ವೆಲ್ಷ್‌ನಲ್ಲಿ ಕೂಡ ಪದಾದಿಯ ವರ್ಣಗಳಲ್ಲಿ ಮಾರ್ಪಾಟು ಕಂಡುಬರುತ್ತದೆ. ಉದಾ: ಪೆನ್=ತಲೆ; ಫಿ ಮ್ಹೆನ್=ನನ್ನ ತಲೆ; ಐ ಬೆನ್=ಅವನ ತಲೆ; ಐ ಫೆನ್=ಅವಳ ತಲೆ.

ಈಗ ನಷ್ಟವಾಗಿ ಹೋಗಿರುವ ಇನ್ನೊಂದು ಕೆಲ್ಟಿಕ್ ಭಾಷೆಯೆಂದರೆ ಕಾರ್ನಿಷ್. ಇದು 17ನೆಯ ಶತಮಾನದವರೆಗೂ ಕಾರ್ನವಾಲಿನ ಭಾಷೆಯಾಗಿತ್ತು. ಪದಾದಿಯಲ್ಲಿದ್ದ ತ, ದ ಗಳು ಸ, ಜ ಗಳಾಗಿ ಮಾರ್ಪಟ್ಟಿರುವುದು ಈ ಭಾಷೆಯ ಮುಖ್ಯ ಲಕ್ಷಣ. ಕಾರ್ನಿಷ್ ಭಾಷೆಯಲ್ಲಿ ಅತಿ ಹಳೆಯದಾಗಿ ದೊರಕಿರುವುದು ಕೆಲವು ಹೆಸರುಗಳು ಮಾತ್ರ. ಅನ್ಯ ಭಾಷೆಯಲ್ಲಿರುವ ಗ್ರಂಥಗಳಲ್ಲಿ ವ್ಯಾಖ್ಯೆಯ ರೂಪದಲ್ಲಿ ಕೊಟ್ಟಿರುವ ಕಾರ್ನಿಷ್‌ನ ಪದಗಳು, 12ನೆಯ ಶತಮಾನದಲ್ಲಿ ತಯಾರಿಸಿದ ಕಾರ್ನಿಷ್ ಪದಗಳ ಪಟ್ಟಿಯೊಂದು, ಡೂಮ್ಸ್‌ಡೇ ಪುಸ್ತಕದಲ್ಲಿಯ ಮನುಷ್ಯರ ಕೆಲವು ಹೆಸರುಗಳು. ಬೋಡ್ಲೀಯನ್ ಗ್ರಂಥಾಲಯದಲ್ಲಿರುವ ಗ್ರಂಥವೊಂದರಲ್ಲಿ ವ್ಯಾಖ್ಯೆಯನ್ನು ಕಾರ್ನಿಷ್ ಭಾಷೆಯಲ್ಲಿ ಬರೆದಿಟ್ಟಿದೆ. ಈಗ ಬ್ರಿಟಿಷ್ ಮ್ಯೂಸಿಯಂನಲ್ಲಿರುವ 12ನೆಯ ಶತಮಾನದ ಹಸ್ತಲಿಖಿತ ಪುಸ್ತಕಮೊಂದರಲ್ಲಿ ಕಾರ್ನಿಷ್ ಭಾಷೆಯದೆನಿಸಿಕೊಂಡ ಶಬ್ದಗಳ ಪಟ್ಟಿಯೊಂದಿದೆ. ಈ ಗ್ರಂಥ ಆಬಟ್ ಆಲ್‌ಫ್ರಿಕ್‌ನ ಪ್ರಸಿದ್ಧ ಲ್ಯಾಟಿನ್–ಇಂಗ್ಲಿಷ್ ಶಬ್ದಕೋಶದ ಅನುವಾದವೆಂದು ತಿಳಿದುಬಂದಿದೆ. ಕಾರ್ನಿಷ್ ಭಾಷೆಯ ಪ್ರಥಮ ಸ್ವತಂತ್ರ ಕೃತಿಯೆಂದರೆ ಮದುವೆ ವಿಷಯವನ್ನು ಕುರಿತು ಬರೆದ ಕೇವಲ 41 ಪದ್ಯ ಸಾಲುಗಳು. ಇದು ಯಾವುದೋ ನಾಟಕವೊಂದರ ಭಾಗವಾಗಿದ್ದಿರಬೇಕೆಂದೂ ಸುಮಾರು 1400ರಲ್ಲಿದ್ದು ರಚಿತವಾಗಿರಬೇಕೆಂದೂ ಅಭಿಪ್ರಾಯವಿದೆ. ಕಾರ್ನಿಷ್ ಭಾಷೆಯಲ್ಲಿ ರಚಿತವಾಗಿರುವುದರಲ್ಲಿ ಹೆಚ್ಚು ಭಾಗ ನಾಟಕಗಳೇ. ಅವುಗಳಲ್ಲೆಲ್ಲ ಮುಖ್ಯವಾದದ್ದು ಆರ್ಡಿನೇಲಿಯ ಎಂಬ ಮೂರು ಭಾಗಗಳ ನಾಟಕ. ಈ ನಾಟಕದ ಹಳೆಯ ಪ್ರತಿ 15ನೆಯ ಶತಮಾನದಲ್ಲಿ ತಯಾರಿಸಲ್ಪಟ್ಟದ್ದು. ಹಾಡುಗಳು, ಕವನಗಳು, ಗಾದೆಗಳು, ಲೇಖನಗಳು ಇತ್ಯಾದಿಗಳಿರುವ ಕೆಲವು ಅಪೂರ್ಣಗ್ರಂಥಗಳು ಇಲ್ಲವೆ ಗ್ರಂಥ ಭಾಗಗಳು ದೊರಕಿವೆ.

ಬ್ರಿಟನ್ನಿನಲ್ಲಿ ಬಳಕೆಯಲ್ಲಿದ್ದ ಕೆಲ್ಟಿಕ್ ಭಾಷೆಯನ್ನು ಬ್ರೆಟನ್ ಎನ್ನುತ್ತಾರೆ. ಹಳೆಯ ಬ್ರೆಟನ್ ಅನ್ನುವುದಕ್ಕೆ ನಮಗೆ ದೊರಕಿರುವುದು 9 ಮತ್ತು 10ನೆಯ ಶತಮಾನಗಳಲ್ಲಿ ಅನ್ಯಭಾಷೆಯ ಪದಗಳಿಗೆ ಬ್ರೆಟನ್ನಿನಲ್ಲಿ ಕೊಟ್ಟಿರುವ ಅರ್ಥಗಳ ಪಟ್ಟಿ ಮಾತ್ರ. ಮಧ್ಯ ಕಾಲದಲ್ಲಿ ಕೂಡ ಇದರಲ್ಲಿ ಹೆಸರಿಸುವಂಥ ಸಾಹಿತ್ಯವೇನೂ ಇಲ್ಲ. ಅಷ್ಟೇನೂ ಉತ್ತಮಮಟ್ಟಕ್ಕೆ ಸೇರದ ಮತಸಂಬಂಧವಾದ ಪದ್ಯರೂಪಕೃತಿಗಳು ಕೆಲವು ದೊರಕಿವೆ. 17ನೆಯ ಶತಮಾನದಿಂದ ಬ್ರೆಟನ್ ಭಾಷೆಯ ಆಧುನಿಕ ರೂಪ ಕಾಣಸಿಗುತ್ತದೆ. ಮೊದಲಿನಿಂದಲೂ ಬ್ರೆಟನ್ನಿನಲ್ಲಿ ಫ್ರೆಂಚ್ ಭಾಷೆಯಿಂದ ಎರವಲು ಪಡೆದ ಹಲವಾರು ಶಬ್ದಗಳಿವೆ.

ಕಾರ್ನಿಷ್ ಮತ್ತು ಬ್ರೆಟನ್ ಎರಡು ಭಾಷೆಗಳಲ್ಲೂ ಪದಾದಿಯ ವರ್ಣಗಳಿಗೆ ಐರಿಷ್ ಮತ್ತು ವೆಲ್ಷ್‌ನಲ್ಲಿ ಕಂಡುಬರುವ ಅನುನಾಸಿಕ ವಿಕಾರವಿಲ್ಲ. ವಿಭಕ್ತಿ ಪ್ರತ್ಯಯಗಳಲ್ಲಿ ಹೆಚ್ಚುಭಾಗ ನಷ್ಟವಾಗಿ ಹೋಗಿದೆ. ವೆಲ್ಷ್‌ನಂತೆ ಇಲ್ಲೂ ಷಷ್ಠೀ ಸಂಬಂಧ ಸೂಚಿಸಲು ಪ್ರತ್ಯೇಕವಾಗಿ ಪ್ರತ್ಯಯಗಳೇನಿಲ್ಲ. ಷಷ್ಠೀ ರೂಪದಲ್ಲಿರಬೇಕಾದ ಪದ ಎರಡನೆಯ ಪದವಾಗಿ ಬಳಕೆಯಾಗುತ್ತದೆ. ಕನ್ನಡದಲ್ಲಿ ರಾಮನ ತಂದೆ ಎಂದು ಹೇಳುವುದನ್ನು ಕಾರ್ನಿಷ್ ಮತ್ತು ಬ್ರೆಟನ್ನಿನಲ್ಲಿ ತಂದೆ ರಾಮ ಎಂದು ಹೇಳಿದರಾಯಿತು.

ಬ್ರಿಟನ್ನಿನ ಉತ್ತರದಲ್ಲಿದ್ದ ಪಿಕ್ಟಿ ಎಂಬಲ್ಲಿಯ ಭಾಷೆಯಾದ ಪಿಕ್ಟಿಷ್ ಭಾಷೆಯ ಬಗ್ಗೆ ಹೆಚ್ಚಿನದೇನೂ ಉಳಿದುಬಂದಿಲ್ಲ. ಈ ಭಾಷೆಯವೆನ್ನಬಹುದಾದ ಕೆಲವು ಅಂಕಿತ ನಾಮಗಳು ಮಾತ್ರ ಉಳಿದಿವೆ. (ಎಚ್.ಎಸ್.ಎ.)

**ಕೆಲ್ಲಿ, ಹೊವರ್ಡ್ ಅಟ್‌ವುಡ್ :** 1858–1943 ಸ್ತ್ರೀರೋಗ ನಿದಾನಕ್ಕಾಗಿ ಹೆಸರಾಂತ ಅಮೆರಿಕದ ವೈದ್ಯ. ಜನನ ನ್ಯೂಜರ್ಸಿಯಲ್ಲಿ. ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಲ್ಲಿ ವೈದ್ಯ ಪದವೀಧರನಾದ (1882). ವೈದ್ಯ ಕಸುಬನ್ನು ಹಿಡಿದು ಫಿಲಿಡೆಲ್ಫಿಯದಲ್ಲಿ ಹೆಂಗಸರ ಆಸ್ಪತ್ರೆಯನ್ನು ಸ್ಥಾಪಿಸಿದ. ಇದೇ ಮುಂದೆ ಕೆನ್ಸಿಂಗ್‌ಟನ್ ಹೆಂಗಸರ ಆಸ್ಪತ್ರೆಯಾಯಿತು. ಒಂದು ವರ್ಷ (1888) ಹೆರಿಗೆ ವೈದ್ಯ ಪ್ರಾಧ್ಯಾಪಕನಾಗಿ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಲ್ಲೂ ಆಮೇಲೆ 1919ರ ತನಕ ಹೆರಿಗೆ ವೈದ್ಯ ಮತ್ತು ಸ್ತ್ರೀರೋಗ ಪ್ರಾಧ್ಯಾಪಕ ಅಲ್ಲದೆ ಆ ಇಲಾಖೆಯ ಮುಖ್ಯಸ್ಥನಾಗಿ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲೂ ಕೆಲಸದಲ್ಲಿದ್ದ. ಆಸ್ಲರ್, ಹಾಲ್‌ಸ್ಟೆಡ್, ವೆಲ್ಶ್ ಇವರೊಂದಿಗೆ ಸೇರಿಕೊಂಡು ಆ ಸಂಸ್ಥೆಗೆ ಪ್ರಪಂಚದಲ್ಲಿ ಅಪಾರ ಕೀರ್ತಿ ತರಲು ನೆರವಾದ. ತಾನೇ ಎಲ್ಲಕ್ಕೂ ಮುಖ್ಯ ಕಾರ್ಯಕರ್ತನಾಗಿದ್ದ. ಬಾಲ್ಟಿಮೋರಿನ ಆಸ್ಪತ್ರೆಯನ್ನು ಸ್ಥಾಪಿಸಿ (1892)ನಡೆಸಿದ ಕ್ಯಾನ್ಸರ್ ಚಿಕಿತ್ಸೆಯಲ್ಲಿ ರೇಡಿಯಂ ಬಳಕೆಯನ್ನೂ ಸ್ಥಳೀಯ ವೇದನ ಶಮನಕ್ಕಾಗಿ ಕೋಕೇನನ್ನೂ (**ನೋಡಿ**) ಜಾರಿಗೆ ತಂದ ಮೊದಲಿಗ ಕೆಲ್ಲಿ. ಮೂತ್ರಕೋಶದೊಳಗೆ ನೋಡಬಹುದಾದ ಕಂಕೋಶದರ್ಶಕ (ಸಿಸ್ಟೋಸ್ಕೋಪ್), ಹೆರಿಗೆಯಾಗುವಾಗ ತಳಕ್ಕೆ ಹಾಕುವ ರಬ್ಬರಿನ ಮೆತ್ತೆ, ಗುದ ಮತ್ತು ಕಂಕೋಶಗಳ ಒಳಗನ್ನಡಿಗಳನ್ನು (ಸ್ಪೆಕ್ಯುಲಂ) ಈತ ತಯಾರಿಸಿದ. ಸಡಿಲ ಬಿದ್ದ ಗರ್ಭಕೋಶವನ್ನು ಹೊಟ್ಟೆಯ ಗೋಡೆಗೆ ಎತ್ತಿಕಟ್ಟಿ ಹೊಲೆಯುವ ಅವನ ಹೆಸರಿನ ಶಸ್ತ್ರಕ್ರಿಯೆ ಈಗಲೂ ಹೆಸರಾಗಿದೆ. ಕೆಲ್ಲಿ ವೈದ್ಯವಿಜ್ಞಾನದಲ್ಲಿ ಒಳ್ಳೆಯ ಬರೆಹಗಾರನಾಗಿದ್ದ ಕೂಡ. ಸುಮಾರು 500 ಬರೆಹಗಳು ಅವನ ಹೆಸರಲ್ಲಿವೆ. (ಡಿ.ಎಸ್.ಎಸ್.)

**ಕೆಲ್ಲಿ, ಹ್ಯೂ :** 1979–77 ಐರಿಷ್ ನಾಟಕಕಾರ ಮತ್ತು ಪತ್ರಿಕೋದ್ಯಮಿ. ಡಬ್ಲಿನ್ನಿನಲ್ಲಿ ಉಪಾಹಾರ ಗೃಹವಿಟ್ಟಿದ್ದ ಇವನ ತಂದೆ ಈತನನ್ನು ರವಿಕೆ ನಿಪುಣನಾಗಿದ್ದ ದರ್ಜಿಯೊಬ್ಬನ ಹತ್ತಿರ ಕೆಲಸ ಕಲಿಯಲು ಸೇರಿಸಿದ್ದ.

1760ರಲ್ಲಿ ಲಂಡನ್ನಿಗೆ ಬಂದ ಕೆಲ್ಲಿ, ರವಿಕೆ ಹೊಲಿಯಲು ಪ್ರಾರಂಭಿಸಿ ಆಮೇಲೆ ವಕೀಲನ ಗುಮಾಸ್ತೆಯಾಗಿ, ಕೊನೆಗೆ ಚಿಕ್ಕಮಟ್ಟ ಸಾಹಿತ್ಯರಚನೆಯಲ್ಲಿ ತೊಡಗಿದ. ಅತ್ಯಂತ ಬಡತನವನ್ನು ಅನುಭವಿಸಿ ಥೆಸ್ಪಿಸ್ ಎಂಬ ಕುಚೋದ್ಯದ ನಾಟಕವನ್ನು ಪ್ರಕಟಿಸಿ (1766) ಅತ್ಯಂತ ಕ್ಷುದ್ರಮನುಷ್ಯನೆಂದು ಕುಪ್ರಸಿದ್ಧನಾದ. ಈ ನಾಟಕ ಆ ಕಾಲದ ನಟನಟಿಯರ ಒಳಜೀವನವನ್ನು ಬಯಲು ಮಾಡಿತು; ಮ್ಯಾಗ್ಡಲೀನಳ ನೆನಪುಗಳು ಅಥವಾ ಲೂಯಿಸ ಮೈಲ್ಡ್‌ಮೆ ಚರಿತ್ರೆ ಎಂಬ ಕಾದಂಬರಿ 1767ರಲ್ಲಿ ಪ್ರಕಟವಾಯಿತು. ಅದು ಅಂಥ ಉತ್ತಮ ಕೃತಿಯೇನಲ್ಲ. ಒಂದು ಕಾಲಕ್ಕೆ ಆಲಿವರ್ ಗೋಲ್ಡ್‌ಸ್ಮಿತ್ ಮತ್ತು ಕೆಲ್ಲಿ ಬಹಳ ಸ್ನೇಹಿತರಾಗಿದ್ದರು. ಸುಪ್ರಸಿದ್ಧ ನಟ ಡೇವಿಡ್ ಗ್ಯಾರಿಕ್‌ನನ್ನು ಗೋಲ್ಡ್‌ಸ್ಮಿತ್ ಬಹಳ ಹೊಗಳಿದ್ದರಿಂದಲೂ ಗೋಲ್ಡ್‌ಸ್ಮಿತ್ತನ ಗುಡ್ ನೇಚರ್ಡ್ ಮ್ಯಾನ್ ನಾಟಕದ ವಿರೋಧವಾಗಿ ಕೆಲ್ಲಿ ತನ್ನ ಫಾಲ್ಸ್ ಡೆಲಿಕಸಿ ಎಂಬ ನಾಟಕವನ್ನು ಆಡಿಸಿದ್ದರಿಂದಲೂ ಅವರಿಬ್ಬರ ನಡುವಣ ಸ್ನೇಹ ಕಲಕಿತು. ಕೆಲ್ಲಿಯದು ಭಾವಪ್ರಧಾನವಾದ ಸುಖಾಂತನಾಟಕ. ಯೋಗ್ಯತೆಯಿಲ್ಲದಿದ್ದರೂ ಆಗ್ಗೆ ಅದು ಬಹು ಯಶಸ್ಸು ಪಡೆಯಿತು. ಕೆಲ್ಲಿ ಸ್ವಲ್ಪಕಾಲ ಶ್ರೀಮಂತಿಕೆಯನ್ನು ಕಂಡ. ಆದರೆ ಲಾರ್ಡ್‌ನಾರ್ತ್‌ನ ಮಂತ್ರಿಮಂಡಲದ ಪರವಾಗಿ ಪತ್ರಿಕೆಗಳಲ್ಲಿ ಬರೆದದ್ದರಿಂದ ತನಗಿದ್ದ ಜನಪ್ರಿಯತೆಯನ್ನು ಕಳೆದುಕೊಂಡ. ಕೆಲ್ಲಿಯ ಮುಖ್ಯವಾದ ನಾಟಕ ದಿ ಸ್ಕೂಲ್ ಫಾರ್ ವೈವ್ಸ್. ಉಳಿದವು ಕ್ಲೆಮೆಂಟೀನ, ಎ ವರ್ಡ್ ಟು ದಿ ವೈಸ್, ದಿ ರೊಮಾನ್ಸ್ ಆಫ್ ಎನ್ ಅವರ್, ದಿ ಮ್ಯಾನ್ ಆಫ್ ರೀಸನ್; ಈತನ ಫಾಲ್ಸ್ ಡೆಲಿಕಸಿ ನಾಟಕ ಫ್ರೆಂಚ್, ಇಟಾಲಿಯನ್, ಜರ್ಮನ್ ಮತ್ತು ಪೋರ್ಚುಗೀಸ್ ಭಾಷೆಗಳಿಗೆ ತರ್ಜುಮೆಯಾಗಿ ಪ್ಯಾರಿಸ್ ಮತ್ತು ಲಿಸ್ಬನ್ ನಗರಗಳಲ್ಲಿ ಅಭಿನಯಿಸಲ್ಪಟ್ಟಿತು. ಬಡತನದಲ್ಲಿ ಕ್ಷುದ್ರನಾಗಿದ್ದ ಕೆಲ್ಲಿ ಶ್ರೀಮಂತಿಕೆಯಲ್ಲಿ ದಯಾಳುವೂ ಧಾರಾಳಿಯೂ ಆಗಿದ್ದ. ಅಲ್ಪ ವಿದ್ಯೆಯ ಕೆಲ್ಲಿಯನ್ನು ಡಾ.ಜಾನ್‌ಸನ್ 'ಅವನು ಓದಿದ್ದಕ್ಕಿಂತ ಹೆಚ್ಚಾಗಿ ಬರೆದ' ಎಂದು ಜರಿದ. ಗೋಲ್ಡ್‌ಸ್ಮಿತ್ ಸತ್ತಾಗ ಎಲ್ಲರ ಗಮನ ಸೆಳೆಯುವಂತೆ ಕೆಲ್ಲಿ ಅತಿಯಾಗಿ ದುಃಖ ಪ್ರದರ್ಶನ ಮಾಡಿದ. ಆದರೂ ಕೆಲ್ಲಿ ಗೋಲ್ಡ್‌ಸ್ಮಿತ್‌ನ ಅಯೋಗ್ಯ ವಿರೋಧಿ ಎಂದೇ ಜನತೆಯ ನೆನಪಿನಲ್ಲಿ ಉಳಿದಿದ್ದಾನೆ. ಕೆಲವು ಕಾಲ ವಕೀಲಿವೃತ್ತಿ ಮಾಡಿದ ಕೆಲ್ಲಿ ಬಡತನದ ಜೀವನ ನಡೆಸಿ, ಕುಡುಕನಾಗಿ ಚಿಕ್ಕ ವಯಸ್ಸಿನಲ್ಲಿ ಗತಿಸಿದ. (ಎಂ.ಸಿ.ಎಚ್.)

**ಕೆಲ್ವಿನ್ ಉಷ್ಣತಾಮಾನ ಪದ್ಧತಿ :** ಸ್ಕಾಟ್ಲೆಂಡಿನ ಗಣಿತ ಹಾಗೂ ಭೌತವಿಜ್ಞಾನಿ ಕೆಲ್ವಿನ್ (1824–1907) ರೂಪಿಸಿದ (1848) ಒಂದು ಉಷ್ಣತಾಮಾನ ಪದ್ಧತಿ. ಒಂದು ಅನಿಲದ ಘನಗಾತ್ರ, ಒತ್ತಡ ಮತ್ತು ಉಷ್ಣತೆಗಳಿಗೆ ಸಂಬಂಧಪಟ್ಟಂತೆ ಅಧ್ಯಯನಗಳನ್ನು ನಡೆಸುವಲ್ಲಿ ಈ ಉಷ್ಣತಾಮಾನಪದ್ಧತಿ ಅಕಸ್ಮಾತ್ತಾಗಿ ಒದಗಿಬರಲು ಅವಕಾಶವಾಯಿತು. ಇದರ ರಚನೆಗೆ ಪೋಷಕವಾಗುವ ಹಿನ್ನೆಲೆಯ ವಿವರವಿಷ್ಟು. ನಿಯತಪರಿಮಾಣದ ದ್ರವ್ಯರಾಶಿಯಿರುವ ಒಂದು ಅನಿಲದ ಘನಗಾತ್ರ (v) ಸ್ಥಿರವಾಗಿರುವಂತೆ ಅದರ ಉಷ್ಣತೆಯನ್ನು (t) ಮಾತ್ರ ಹೆಚ್ಚಿಸುತ್ತ ಹೋದಾಗಲೆಲ್ಲ ಆ ಅನಿಲದ ಒತ್ತಡ (p) ವ್ಯತ್ಯಾಸವಾಗುವುದನ್ನೂ ಹಾಗೆಯೇ ನಿಯತ ಪರಿಮಾಣದ ದ್ರವ್ಯರಾಶಿಯಿರುವ ಒಂದು ಅನಿಲದ ಒತ್ತಡ (p) ಸ್ಥಿರವಾಗಿರುವಂತೆ ಅದರ ಉಷ್ಣತೆಯನ್ನು (t) ಮಾತ್ರ ಹೆಚ್ಚಿಸುತ್ತ ಹೋದಾಗಲೆಲ್ಲ ಆ ಅನಿಲದ ಘನಗಾತ್ರ (v) ವ್ಯತ್ಯಾಸವಾಗುವುದನ್ನೂ ಫ್ರೆಂಚ್ ಭೌತವಿಜ್ಞಾನಿ ಜೆ.ಎ.ಸಿ. ಚಾರಲ್ಸ್ (1746–1823) ತಾನು ಮಾಡುತ್ತಿದ್ದ ಅನಿಲದ ಮೇಲಣ ಪ್ರಯೋಗದ ಸಮಯದಲ್ಲಿ ಗಮನಿಸಿದ್ದ. ಇದನ್ನು ಒಂದು ನಿಯಮವಾಗಿ ರೂಪಿಸಿದ. ಪ್ರತಿ 1 ಸೆಂಟಿಗ್ರೇಡ್ ಉಷ್ಣತೆಯ ಕುಸಿತಕ್ಕೂ ಅನಿಲಗಳು ಅವು $0^0$ ಸೆಂ.ಯಲ್ಲಿನ ಘನಗಾತ್ರದ 1/273 ರಷ್ಟನ್ನು ಕಳೆದುಕೊಳ್ಳುತ್ತವೆ ಎಂಬುದು ಚಾರಲ್ಸನ ನಿಯಮ. ಈ ನಿಯಮವನ್ನು ಅನುಸರಿಸಿ ಒಂದು ನಿರ್ದಿಷ್ಟಪರಿಮಾಣದ ದ್ರವ್ಯರಾಶಿಯ ಅನಿಲದ ಘನಗಾತ್ರ, ಒತ್ತಡ ಮತ್ತು ಉಷ್ಣತೆಗಳಿಗೆ ಸಂಬಂಧಿಸಿದಂತೆ

$$v_t = v_o\left(I + \frac{t}{273}\right)$$

ಮತ್ತು

$$p_t = p_o\left(I + \frac{t}{273}\right)$$

ಎಂಬ ಸಮೀಕರಣಗಳು ಇವೆ. ಇಲ್ಲಿ $v_o$ ಮತ್ತು $p_o$ ಎಂಬುವು $0^0$ ಸೆಂಟಿಗ್ರೇಡ್ ಉಷ್ಣತೆಯಲ್ಲಿ ಅನುಕ್ರಮವಾಗಿ ಅನಿಲದ ಘನಗಾತ್ರ ಮತ್ತು ಒತ್ತಡ. ಅನಿಲದ ಉಷ್ಣತೆಯನ್ನು ಸೆಂಟಿಗ್ರೇಡ್ ಮಾನಕದಲ್ಲಿ ಬಳಸಿ, ಚಾರಲ್ಸ್ ನಿಯಮವನ್ನು ಅನ್ವಯಿಸಿದಾಗ,–$273^0$

ಸೆಂ.ನಲ್ಲಿ ಅನಿಲದ ಘನಗಾತ್ರ ಮತ್ತು ಒತ್ತಡಗಳು ಶೂನ್ಯವನ್ನೈದುತ್ತದೆ ಎಂಬುದನ್ನು ಕೆಲ್ವಿನ್ ಗಮನಿಸಿದನಾದರೂ [ತನ್ನ ಪರಿಷ್ಕೃತ ನಿಯಮದಲ್ಲಿ–273$^0$ ಸೆಂ.ನಲ್ಲಿ ಅನಿಲಗಳ ಅಣುಗಳ ಚಲನಶಕ್ತಿ (ಘನಗಾತ್ರವಲ್ಲ) ಶೂನ್ಯವಾಗುತ್ತದೆ ಎಂದು ತಿಳಿಯಪಡಿಸಿದ] ಈ ಉಷ್ಣತೆಯನ್ನು ತಾತ್ತ್ವಿಕವಾಗಿ ಸೆಂಟಿಗ್ರೇಡ್ ಮಾನಕದಲ್ಲಿ ಒಂದು ನೈಜಶೂನ್ಯವೆಂದು ಕೆಲ್ವಿನ್ ಪರಿಗಣಿಸಿದ. ಇದಕ್ಕೆ ನಿರಪೇಕ್ಷ ಶೂನ್ಯ (ಆ್ಯಬ್ಸಲ್ಯೂಟ್ ಜೀರೊ) ಎಂಬ ಹೆಸರಿದೆ. ಇದನ್ನು ಉಷ್ಣತೆಯ ನಿರಪೇಕ್ಷ ಮಾನಕದ (ಅಬ್ಸೊಲ್ಯೂಟ್ ಸ್ಕೇಲ್) ಆರಂಭಬಿಂದುವನ್ನಾಗಿ ಇಟ್ಟುಕೊಂಡು ಅದನ್ನು 0$^0$A ಅಥವಾ 0$^0$K ಎಂಬುದಾಗಿ ಸೂಚಿಸುವುದು ರೂಢಿ. ಯಾವ ಒಂದು ಗೊತ್ತಾದ ವಸ್ತುವಿನ ಒಂದು ಲಕ್ಷಣದ ಮೇಲೂ ಈ ನಿರಪೇಕ್ಷಮಾನಕ ಆಧಾರಿತವಾಗಿಲ್ಲ. ಆದ್ದರಿಂದ ಇದನ್ನು ಉಷ್ಣಗತಿಮಾನಕವೆಂದೂ ಕರೆಯುವುದಿದೆ. ನಿರಪೇಕ್ಷ ಶೂನ್ಯವನ್ನು ಆರಂಭ ಬಿಂದುವನ್ನಾಗಿಸಿಕೊಂಡು, ಮಾನಕವನ್ನು ರಚಿಸಿ, ಅದರಂತೆ ಉಷ್ಣತೆಯನ್ನು ಅಳೆಯುವ ಒಂದು ಪದ್ಧತಿಗೆ ಸಲ್ಸಿಯಸ್ ಆಬ್ಸೊಲ್ಯೂಟ್ ಮಾನಕ ಪದ್ಧತಿ ಅಥವಾ ಕೆಲ್ವಿನ್ ಉಷ್ಣತಾಮಾನ ಪದ್ಧತಿ ಎಂದು ಹೆಸರಾಯಿತು.

ನಿರಪೇಕ್ಷಶೂನ್ಯ ಬಿಂದು (0$^0$K) ಅಥವಾ–273$^0$.16 ಸೆಂ. (ಆಧುನಿಕ ನಿಖರಬೆಲೆ) ಎಂಬುದು ತತ್ತ್ವಶಃ ಸಾಧ್ಯವಾದ ಒಂದು ಕನಿಷ್ಠ ಉಷ್ಣತೆಯ ಮಿತಿ. ಪ್ರಾಯೋಗಿಕವಾಗಿ ಆ ಮಿತಿಯನ್ನು ತಲಪುವುದು ಸಾಧ್ಯವಾಗಿಲ್ಲ. ಇದು ಕೆಲವು ಅನಿಲಗಳನ್ನು ದ್ರವೀಕರಿಸಿ **(ನೋಡಿ– ಅನಿಲ–ದ್ರವೀಕರಣ)** ಅಂತಿಮವಾಗಿ ಅವನ್ನು ಘನೀಭವಿಸುವಲ್ಲಿ ಕಂಡುಬಂದ ಒಂದು ಅಂಶ. ಆದರೂ ಗಾಳಿಯನ್ನು ದ್ರವೀಕರಿಸುವಲ್ಲಿ–184$^0$ ಸೆಂ. ತಲಪಿರುವುದೂ–269$^0$ ಸೆಂ.ವರೆಗೆ ಹೈಡ್ರೊಜನ್ ತನ್ನ ಘನಗಾತ್ರದಲ್ಲಿ ಸಮಾನರೀತಿಯಲ್ಲಿ ಸಂಕೋಚಗೊಳ್ಳುವುದನ್ನೂ ದ್ರವ ಹೀಲಿಯಮನ್ನು ಬಾಷ್ಪೀಕರಿಸುವಲ್ಲಿ–172$^0$ ಸೆಂ.ಅನ್ನು ಮುಟ್ಟಿರುವುದನ್ನೂ ಗಮನಿಸಿದಾಗ ನಿರಪೇಕ್ಷ ಶೂನ್ಯಬಿಂದು ಒಂದು ತಲಪಲಾರದಂಥ ತತ್ತ್ವಸಾಧ್ಯ ಕನಿಷ್ಠಮಿತಿ ಎಂಬುದು ಗಮನಾರ್ಹ. *

**ಕೆಲ್ವಿನ್ ಬ್ರಿಜ್ :** ವಿದ್ಯುದ್ರೋಧವನ್ನು ಅಳೆಯಲು ಉಪಯೋಗಿಸುವ ಒಂದು ವಿದ್ಯುತ್ ಸಲಕರಣೆ. ವೀಟ್‌ಸ್ಟೋನ್ ಬ್ರಿಜ್‌ನ (ನೋಡಿ) ಸುಧಾರಿತ ವಿದ್ಯುತ್ ಸಲಕರಣೆಯಿದು. ವಿದ್ಯುದ್ರೋಧಗಳ ಹೋಲಿಕೆಯ ವಿಧಾನದ ಮೇಲೆ ಆಧಾರಿತವಾಗಿರುವ ವೀಟ್‌ಸ್ಟೋನ್ ಬ್ರಿಜ್‌ನಂತೆಯೇ ಕೆಲ್ವಿನ್ ಬ್ರಿಜ್‌ನಲ್ಲೂ ಹೋಲಿಕೆಯ ವಿಧಾನವನ್ನು ಅನುಸರಿಸಲಾಗುತ್ತದೆ. ಇಲ್ಲಿ ಸಂಪರ್ಕರೋಧವನ್ನು (ಕಾಂಟ್ಯಾಕ್ಟ್ ರೆಸಿಸ್ಟೆನ್ಸ್) ಮತ್ತು ಲೀಡ್ ಪರಿಣಾಮವನ್ನು ತೆಗೆದುಹಾಕಿಯೋ ಇಲ್ಲವೇ ಬಹುಪಾಲು ಕಡಿಮೆ ಮಾಡಿಯೋ ಕಡಿಮೆ ಪರಿಮಾಣದ ವಿದ್ಯುದ್ರೋಧವನ್ನು ನಿಖರವಾಗಿ ಅಳೆಯಬಹುದಾಗಿದೆ. ಕೆಲ್ವಿನ್ ಬ್ರಿಜ್‌ನ ವಿದ್ಯುನ್ಮಂಡಲದ ವಿವರ ಹೀಗಿದೆ:

$R_A$ ಮತ್ತು $R_B$–ಪ್ರಧಾನ ಅನುಪಾತ ರೋಧಕಗಳು. $R_a$ ಮತ್ತು $R_b$ ಸಹಾಯಕ ಅನುರೋಧಕಗಳು. $R_X$ ಎಂಬುದು ಒಂದು ಅಜ್ಞಾತ ಪರಿಮಾಣದ ರೋಧಕ. $R_S$




ಒಂದು ಶಿಷ್ಟ ರೋಧಕ. ಅಜ್ಞಾತ ರೋಧಕ ಮತ್ತು $R_a$, $R_b$ ಗಳ ನಡುವೆ ಕಡಿಮೆ ಪರಿಮಾಣದ ರೋಧವುಳ್ಳ ($R_y$) ಭಾರವಾದ ಒಂದು ತಾಮ್ರದಪಟ್ಟಿ ಇದೆ. $R_a$,$R_y$ ಮತ್ತು $R_b$ ವ್ಯೂಹಕ್ಕೆ ಡೆಲ್ಟ–ವೈ ಪರಿವರ್ತನೆಯನ್ನು ಅನ್ವಯಿಸಿದರೆ ವ್ಹೀಟ್‌ಸ್ಟೋನ್ ಬ್ರಿಜ್‌ನ ವಿದ್ಯುನ್ಮಂಡಲದ ಪರಿಕಲ್ಪನೆ ಮೂಡುತ್ತದೆ. ಇದರ ಚಿತ್ರಣವನ್ನು ಮುಂದೆ ತೋರಿಸಿದೆ. ಈ ವಿದ್ಯುನ್ಮಂಡಲಕ್ಕೆ

$$Rs^1 = \frac{Ry\ Ra}{Ry+Ra+Rb}$$

$$Rx^1 = \frac{Ry\ Rb}{Ry+Ra+Rb} \quad ......(1)$$

$$R_G{}^1 = \frac{RaRb}{Ry+Ra+Rb}$$

ಎಂಬ ಮೂರು ಸಮೀಕರಣಗಳು ಅನ್ವಯಿಸುತ್ತದೆ.




ಸಲಕರಣೆಯಲ್ಲಿ ಅಳವಡಿಸಿರುವ ಗ್ಯಾಲ್ವನೋಮೀಟರಿನಲ್ಲಿ ಯಾವ ಬದಲಾವಣೆಯೂ ತೋರಿಬರದಿದ್ದಾಗ ಅಂದರೆ, ವ್ಹೀಟ್‌ಸ್ಟೋನ್ ಬ್ರಿಜ್‌ನಂತೆ ಇಲ್ಲೂ ಸ್ಥಗಿತ ಸ್ಥಿತಿ ಏರ್ಪಟ್ಟಾಗ

$$R_x = \frac{R_B}{R_A}R_S + R_Y\left(\frac{R_b}{R_a+R_b+R_y}\right)\left(\frac{R_B}{R_A}-\frac{R_b}{R_a}\right) \quad ......(2)$$

ಎಂಬ ಸಮೀಕರಣ ಲಭಿಸುತ್ತದೆ. ಹೋಲಿಕೆಯ ತತ್ತ್ವವನ್ನು ಅಂದರೆ,

$$\frac{R_B}{R_A} = \frac{R_b}{R_b} \quad ......(3)$$

ಅನ್ವಯಿಸಿದಾಗ ಸಮೀಕರಣ (1)ರ ಎರಡನೆಯ ಪದ ಶೂನ್ಯವಾಗುತ್ತದೆ. ಆಗ ಅಜ್ಞಾತ ರೋಧದ ಬೆಲೆಯ RY ಯನ್ನು ಅವಲಂಬಿಸಿರುವುದಿಲ್ಲ. ಅಂತಿಮವಾಗಿ

$$R_X = \frac{R_B}{R_A}R_S$$

ಎಂಬ ಸಮೀಕರಣ ಲಭಿಸಿ ಕಡಿಮೆ ಪರಿಮಾಣದ ರೋಧಕದ ಬೆಲೆಯನ್ನು ನಿರ್ಧರಿಸಲು ಅನುಕೂಲವಾಗುತ್ತದೆ.

ಬಲು ದಪ್ಪವಾದ ಟ್ರಾಲಿತಂತಿಗಳಂಥ ವಿದ್ಯುತ್ ತಂತಿಗಳ ರೋಧವನ್ನು ಅಳೆಯಲು ಕೆಲ್ವಿನ್ ಬ್ರಿಜ್ ಬಹಳ ಸಹಾಯಕಾರಿ. (ಎಂ.ಡಿ.ಕೆ.)

**ಕೆಲ್ವಿನ್ ವಿಲಿಯಂ ಥಾಮ್ಸನ್, ಲಾರ್ಡ್ :** 1824–1907. ಸ್ಕಾಟ್ಲೆಂಡಿನ ಗಣಿತ ಹಾಗೂ ಭೌತವಿಜ್ಞಾನಿ. ಜನನ ಐರ್ಲೆಂಡಿನ ಬೆಲ್‌ಫಾಸ್ಟಿನಲ್ಲಿ, 1824ರ ಜೂನ್ 26ರಂದು. ಇವನ ತಂದೆ ಜೇಮ್ಸ್ ಥಾಮ್ಸನ್ ಆ ಕಾಲದ ಪ್ರಸಿದ್ಧ ಗಣಿತ ಪ್ರಾಧ್ಯಾಪಕ. ಅಣುಗ ವಿಲಿಯಂ ಗಣಿತದಲ್ಲಿ ಅಸಾಮಾನ್ಯ ಪ್ರತಿಭೆಯನ್ನು ತೀರ ಎಳವೆಯಲ್ಲಿ ಪ್ರದರ್ಶಿಸಿದ ಪವಾಡ ಶಿಶು. ತಂದೆಯ ಉಪನ್ಯಾಸಗಳನ್ನು ಅತ್ಯಾಸಕ್ತಿಯಿಂದ ಕೇಳಿ ತಿಳಿದುಕೊಂಡಾಗ ಈತನ ಪ್ರಾಯ ಕೇವಲ ಎಂಟು. 1845ರಲ್ಲಿ ವಿಶ್ವವಿದ್ಯಾನಿಲಯದ ಪದವೀಧರನಾದ. ಮರುವರ್ಷ ಗ್ಲಾಸ್ಗೋ ವಿಶ್ವವಿದ್ಯಾಲಯದಲ್ಲಿ ನೈಸರ್ಗಿಕ ಶಾಸ್ತ್ರಗಳ ಅಧ್ಯಾಪಕನಾಗಿ ನೇಮಕಗೊಂಡ. ಅರ್ಧ ಶತಮಾನಕ್ಕೂ ಮಿಕ್ಕಿದ ಸೇವಾವಧಿಯಲ್ಲಿ ಕೆಲ್ವಿನ್ ನಡೆಸಿದ ಪ್ರಯೋಗಗಳ ಮತ್ತು ತಾತ್ತ್ವಿಕ ವಿಮರ್ಶೆಗಳ ವ್ಯಾಪ್ತಿ ಅಪರಿಮಿತವಾಗಿದೆ. ಬಹುಶಃ ಈತ ಮಾಡಿದ ಮೊತ್ತ ಮೊದಲಿನ ಅವಿಷ್ಕಾರ ಭೂಮಿಯ ವಯಸ್ಸನ್ನು ಕುರಿತು. ಸೂರ್ಯನಿಂದ ಸಿಡಿದ ಅನಿಲದ ಹನಿ ಭೂಮಿ ಎಂದೂ ಸ್ಥಿರ ದರದಲ್ಲಿ ಭೂಮಿ ಉಷ್ಣನಷ್ಟವನ್ನು ಅನುಭವಿಸಿ ಇಂದಿನ ಉಷ್ಣತೆಯನ್ನು ಪಡೆದಿದೆಯೆಂದೂ ಈತ ಭಾವಿಸಿದ. ಈ ಅಂಗೀಕೃತ ಭಾವನೆಗಳ ಆಧಾರದಿಂದ ಭೂಮಿಯ ವಯಸ್ಸು 20 ಮಿಲಿಯನ್‌ನಿಂದ 400 ಮಿಲಿಯನ್ ವರ್ಷಗಳ ತನಕ ಎಂದು ತೀರ್ಮಾನಿಸಿದ; ಪ್ರಾಯಶಃ ಅದು 100 ಮಿಲಿಯನ್ ವರ್ಷಗಳಿರಬಹುದೆಂದು ಅಂದಾಜು ಸೂಚಿಸಿದ. ಕೆಲ್ವಿನ್ನನ ಈ ವಾದ ಅಂದು ಭೂವಿಜ್ಞಾನಿಗಳ ತೀರ್ಮಾನಕ್ಕೆ ತೀರ ವಿರೋಧವಾಗಿತ್ತು. ಹೀಗಾಗಿ ವಿಜ್ಞಾನ

ಪ್ರಪಂಚದಲ್ಲಿ ದೊಡ್ಡ ಗೊಂದಲವೇ ಉಂಟಾಯಿತು. ಭೂಮಿಗೆ ಸ್ವತಂತ್ರವಾಗಿ ಉಷ್ಣೋತ್ಪಾದನೆ ಮಾಡುವ ಸಾಮರ್ಥ್ಯವಿಲ್ಲ ಎಂಬುದು ಕೆಲ್ವಿನ್ನನ ವಾದದಲ್ಲಿ ಅಧ್ಯಾಹಾರವಾಗಿದೆ. ಇದು ಸರಿಯಲ್ಲ; ಭೂಮಿಯಲ್ಲಿರುವ ರೇಡಿಯೋವಿಕಿರಣ ಧಾತುಗಳ ನಿರಂತರ ವಿದಳನದಿಂದ ಉಷ್ಣೋತ್ಪತ್ತಿಯಾಗುತ್ತದೆ; ಆದ್ದರಿಂದ ಬಾಹ್ಯ ಉಷ್ಣನಷ್ಟವೇನೇ ಇದ್ದರೂ ಈ ಆಂತರಿಕ ಉಷ್ಣದ ಉತ್ಪತ್ತಿಯ ಪರಿಣಾಮವಾಗಿ ಭೂಮಿ ಬಹುಕಾಲ ಒಂದೇ ಉಷ್ಣತೆಯನ್ನು ಕಾಯ್ದಿಟ್ಟುಕೊಳ್ಳಬಲ್ಲುದು ಮಾತ್ರವಲ್ಲ; ಹಲವು ವೇಳೆ ಇದು ಏರುವ ಸಾಧ್ಯತೆಯೂ ಉಂಟು. ಕೆಲ್ವಿನ್ನನ ವಾದಕ್ಕೆ ಇಂದು ಉಳಿದಿರುವುದು ಕೇವಲ ಐತಿಹಾಸಿಕ ಮಹತ್ವ ಮಾತ್ರ.



ಕೆಲ್ವಿನ್ ಮಾಡಿದ ಮುಂದಿನ ಪ್ರಯೋಗಗಳು ಉಷ್ಣವಿಜ್ಞಾನಕ್ಕೆ ಸಂಬಂಧಿಸಿದವು. ಈ ಕ್ಷೇತ್ರದಲ್ಲಿ ಈತ ಜೇಮ್ಸ್ ಪ್ರೆಸ್ಕಟ್ ಜೌಲ್ ಎಂಬ ವಿಜ್ಞಾನಿಯೊಡನೆ ಕೆಲಸ ಮಾಡಿ ಜೌಲ್–ಥಾಮ್ಸನ್ ಪರಿಣಾಮವನ್ನು ಆವಿಷ್ಕರಿಸಿದ. ಅನಿಲಗಳು ಒಂದು ನಿರ್ವಾತ ಪ್ರದೇಶದಲ್ಲಿ ವಿಕಾಸಗೊಳ್ಳುವಾಗ ಅವುಗಳ ಉಷ್ಣತೆಯ ಮಟ್ಟ ಹೇಗೆ ತಗ್ಗುತ್ತದೆ ಎನ್ನುವುದನ್ನು ಕುರಿತ ಅಧ್ಯಯನವಿದು. ಆ ಮೊದಲೇ ಚಾರಲ್ಸ್ ಹೇಳಿದ್ದ ನಿಯಮದ (ಪ್ರತಿ $1^{\circ}$ ಸೆಂ. ಉಷ್ಣತೆಯ ಕುಸಿತಕ್ಕೂ ಅನಿಲಗಳು ಅವುಗಳ $0^{\circ}$ಯಲ್ಲಿಯ ಘನಗಾತ್ರದ 1/273ರಷ್ಟನ್ನು ಕಳೆದುಕೊಳ್ಳುತ್ತವೆ ಎಂಬ ಆವಿಷ್ಕಾರ) ಪರಿಣಾಮಗಳನ್ನು ಕೆಲ್ವಿನ್ ಪರಿಶೋಧಿಸಿ ಹೊಸ ಒಂದು ನಿಯಮವನ್ನು ಸ್ಥಾಪಿಸಿದ (1848). ಅದರ ಪ್ರಕಾರ–$273^{\circ}$ಸೆಂ.ನಲ್ಲಿ ಅನಿಲಗಳ (ಘನಗಾತ್ರವಲ್ಲ) ಅಣುಗಳ ಚಲನಶಕ್ತಿ ಶೂನ್ಯವನ್ನೈದುತ್ತದೆ ಎಂದಿತ್ತು. ಆದ್ದರಿಂದ ತಾತ್ತ್ವಿಕವಾಗಿ ಸೆಂಟಿಗ್ರೇಡ್ ಮಾನಕದಲ್ಲಿ–$273^{\circ}$ಸೆಂ. ನಿಜವಾದ ಶೂನ್ಯವಾಗಬೇಕು ಎಂದು ಕೆಲ್ವಿನ್ ತೀರ್ಮಾನಿಸಿದ.–$273^{\circ}$ಸೆಂ.ಗೆ ನಿರಪೇಕ್ಷ ಶೂನ್ಯ ಎಂದು ಹೆಸರು. ಉಷ್ಣತೆಯ ನಿರಪೇಕ್ಷ ಮಾನಕದ ಆರಂಭ ಬಿಂದು ಈ ಶೂನ್ಯ. ನಿರಪೇಕ್ಷ ಮಾನಕಕ್ಕೆ ಕೆಲ್ವಿನ್ ಮಾನಕವೆಂದೂ ಹೆಸರುಂಟು. (ನಿರಪೇಕ್ಷ ಶೂನ್ಯದ ಆಧುನಿಕ ನಿಖರ ಬೆಲೆ–$273^{\circ}$.16ಸೆಂ.) **(ನೋಡಿ– ಉಷ್ಣತೆ) (ನೋಡಿ– ಉಷ್ಣಮಾಪನ)**

ಉಷ್ಣವನ್ನು ಕುರಿತ ಆಧುನಿಕ ವಿಚಾರ ಲಹರಿಯ ಪ್ರವರ್ತಕರಲ್ಲಿ ಕೆಲ್ವಿನ್ ಒಬ್ಬ. ಮುಂದೆ ಇಂಥದೇ ಆಸಕ್ತಿಯನ್ನು ಈತ ದೂರವಾರ್ತಾ ಪ್ರೇಷಣೆಯಲ್ಲಿ (ಟೆಲಿಗ್ರಫಿ) ತೋರಿಸಿದನಲ್ಲದೆ ಅದರಲ್ಲಿ ಹಲವಾರು ಆವಿಷ್ಕಾರಗಳನ್ನೂ ಮಾಡಿದ. ಲೀಡನ್ ಜಾಡಿಯನ್ನು ಉಪಯೋಗಿಸಿ ಆವರ್ತಶೀಲ ವಿದ್ಯುದುತ್ಸರ್ಜನೆಗಳ (ಎಲೆಕ್ಟ್ರಿಕ್ ಡಿಸ್‌ಚಾರ್ಜಸ್) ಲಕ್ಷಣಗಳನ್ನು ಪರೀಕ್ಷಿಸಿದ. ದೂರವಾರ್ತಾ ಲೇಖನದಲ್ಲಿನ ಕೇಬಲ್‌ಗಳನ್ನು ಪರಿಷ್ಕರಿಸಿ ಶಿಷ್ಟೀಕರಿಸಿದ. ಇವನ ಇತರ ಆವಿಷ್ಕಾರಗಳಲ್ಲಿ ಇಳಿತ ಭರತಗಳ ತೀವ್ರತೆಯನ್ನಳೆಯುವ ಉಪಕರಣ, ನೀರಿನ ಆಳವನ್ನಳೆಯುವ ವಿಧಾನ ಮೊದಲಾದವು ಮತ್ತಷ್ಟು ಸುಧಾರಣೆಗೊಂಡು ಇಂದಿಗೂ ಉಪಯೋಗದಲ್ಲಿವೆ.

ವೃದ್ಧಾಪ್ಯದಲ್ಲಿ ಕೆಲ್ವಿನ್‌ನ ಬುದ್ಧಿ ಒಂದು ವಿಧದ ಜಡತ್ವವನ್ನು ಪಡೆಯಿತು. 1880ರಲ್ಲಿ ಅವನೊಂದು ಹೇಳಿಕೆ ನೀಡಿದನೆಂದೂ ವರದಿ ಆಗಿದೆ. ಅದರ ಪ್ರಕಾರ ಭೌತ ವಿಜ್ಞಾನದಲ್ಲಿ ಆವಿಷ್ಕಾರಗಳೆಲ್ಲವೂ ಮುಗಿದು ಹೋಗಿವೆ; ಮುಂದೆ ಏನಿದ್ದರೂ ಗೊತ್ತಿರುವ ಫಲಿತಾಂಶಗಳ ಪರಿಷ್ಕರಣ ಮಾತ್ರ ಸಾಧ್ಯ ಎಂದಿತ್ತಂತೆ. ಆದರೆ ತನ್ನ ಜೀವಮಾನ ಫಲಿತಾಂಶಗಳ ಪರಿಷ್ಕರಣ ಮಾತ್ರ ಸಾಧ್ಯ ಎಂದಿತ್ತಂತೆ. ಆದರೆ ತನ್ನ ಜೀವಮಾನ ಕಾಲದಲ್ಲಿಯೇ ಭೌತವಿಜ್ಞಾನ ಆ ಹಿಂದೆಂದೂ ಕಾಣದ ಮಹಾ ಕ್ರಾಂತಿಯನ್ನು ರೇಡಿಯೋ ವಿಕಿರಣಶೀಲ ಧಾತುಗಳ ಮೂಲಕ ಸಾಧಿಸಿದ್ದನ್ನು ಈತ ಕಂಡ.

1907ರ ಡಿಸೆಂಬರ್ 17ರಂದು ಕೆಲ್ವಿನ್ ಗತಿಸಿದ. ವೆಸ್ಟ್ ಮಿನ್‌ಸ್ಟರ್ ಅಬೆಯಲ್ಲಿ ನ್ಯೂಟನ್ನನ ಗೋರಿಯ ಪಕ್ಕದಲ್ಲಿಯೇ ಈತನನ್ನು ಸಮಾಧಿ ಮಾಡಿ ಜನತೆ ತನ್ನ ಗೌರವವನ್ನು ಈತನಿಗೆ ವ್ಯಕ್ತಪಡಿಸಿತು. **(ನೋಡಿ– ಕೆಲ್ವಿನ್–ಉಷ್ಣತಾಮಾನ–ಪದ್ಧತಿ)**

(ಯು.ಎಲ್.ಎ.)

**ಕೆಲ್ಸನ್, ಹ್ಯಾನ್ಸ್ :** 1881– ನ್ಯಾಯಶಾಸ್ತ್ರ ಪಂಡಿತ. ಶುದ್ಧ ನ್ಯಾಯತತ್ತ್ವದ ಜನಕ, 1881ರ ಅಕ್ಟೋಬರ್ 11ರಂದು ಪ್ರಾಗ್ ನಗರದಲ್ಲಿ ಜನಿಸಿದ. ಹೈಡಲ್‌ಬರ್ಗ್, ಬರ್ಲಿನ್ ಮತ್ತು ವಿಯೆನ್ನಗಳಲ್ಲಿ ಇವನ ವಿದ್ಯಾಭ್ಯಾಸ ನಡೆಯಿತು. ಆಸ್ಟ್ರಿಯ ದೇಶದ 1920ರ ಸಂವಿಧಾನವನ್ನು ರಚಿಸಿದವನೀತ. ಆಧುನಿಕ ಕಾಲದ ನ್ಯಾಯಶಾಸ್ತ್ರಜ್ಞರಲ್ಲಿ ಪ್ರಮುಖ. ಆಸ್ಟ್ರಿಯದ ಪರಮೋಚ್ಚ ಸಂವಿಧಾನ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯಾಗಿದ್ದ (1920–30). ಸುಮಾರು 30 ವರ್ಷಗಳ ಕಾಲ ವಿಯೆನ್ನ, ಕೊಲೋನ್, ಜಿನೀವ ಮತ್ತು ಪ್ರಾಗ್‌ಗಳಲ್ಲಿ ಪ್ರಾಧ್ಯಾಪಕನಾಗಿದ್ದ. 1940ರಲ್ಲಿ ಅಮೆರಿಕದಲ್ಲಿ ನೆಲಸಿ, ಹಾರ್ವರ್ಡ್, ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯ ಮತ್ತು ನೌಕಾಯುದ್ಧ ಕಾಲೇಜುಗಳಲ್ಲಿ ಬೋಧಿಸಿದ. ಹ್ಯಾನ್ಸ್ ಕೆಲ್ಸನ್ ತಾರುಣ್ಯದಲ್ಲೆ ಬರೆವಣಿಗೆಯನ್ನಾರಂಭಿಸಿದ. ಈತನ ಪ್ರಥಮ ಬೃಹತ್ ಕೃತಿ ಪ್ರಕಟವಾದ್ದು 1911ರಲ್ಲಿ. ಸುಮಾರು 60 ವರ್ಷಗಳಿಗೂ ಮೀರಿದ ಕಾಲದಲ್ಲಿ 40ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ. ಕೆಲ್ಸನನ ಹಲವು ಕೃತಿಗಳು ಪ್ರಪಂಚದ ಅನೇಕ ಭಾಷೆಗಳಿಗೆ ಅನುವಾದವಾಗಿವೆ.

ಕೆಲ್ಸನ್ ಆರಂಭದಲ್ಲಿ ಕಾನೂನು ಮತ್ತು ರಾಜ್ಯ ಇವುಗಳ ಬಗ್ಗೆಯೂ, ನ್ಯಾಯಶಾಸ್ತ್ರದ ವ್ಯಾಪ್ತಿಯನ್ನು ಕುರಿತೂ ಬರೆದ. ಅನಂತರದಲ್ಲಿ ಪ್ರಜಾಪ್ರಭುತ್ವ, ಸಂಸದೀಯ ಸರ್ಕಾರ, ಸಮಾಜವಾದ ಮತ್ತು ಸಾಮ್ಯವಾದ ಇವನ್ನು ಕುರಿತುಗ್ರಂಥಗಳನ್ನು ರಚಿಸಿದ. ಪ್ಲೇಟೋ ಮತ್ತು ಅರಿಸ್ಟಾಟಲರ ಕೃತಿಗಳ ಅಭ್ಯಾಸ ಮಾಡಿದ. ಕೆಲ್ಸನ್ ತನ್ನ ಗ್ರಂಥಗಳಲ್ಲಿ ಅವರ ವಿಚಾರಧಾರೆಯ ಆಳವಾದ ವಿವೇಚನೆ ನಡೆಸಿದ್ದಾನೆ. ನ್ಯಾಯಶಾಸ್ತ್ರಕ್ಕೆ ಈತನ ವಿಶಿಷ್ಟ ಕೊಡುಗೆಗಳೆಂದರೆ ನ್ಯಾಯಸೂತ್ರಗಳ ಸ್ಪಷ್ಟೀಕರಣ, ಸಂಯುಕ್ತ ರಾಷ್ಟ್ರಸಂಸ್ಥೆಯನ್ನು ಕುರಿತ ಗ್ರಂಥ ಮತ್ತು ಅಂತಾರಾಷ್ಟ್ರೀಯ ಕಾನೂನು. ಕಾಂಟನ ನ್ಯಾಯಿಕ ಸಿದ್ಧಾಂತಗಳು ಇವನಿಗೆ ಸ್ಫೂರ್ತಿ ನೀಡಿ ಇವನ ವೈಚಾರಿಕ ಮಂಥನಕ್ಕೆ ಮೂಲ ಸಾಮಗ್ರಿಯಾಗಿ ಪರಿಣಮಿಸಿದುವು. ಆದರೂ ಈತನ ಸಿದ್ಧಾಂತಗಳು ತೀರ ಭಿನ್ನವಾಗಿವೆ. ಸಿಗ್‌ಮಂಡ್ ಫ್ರಾಯ್ಡನ ಪ್ರಭಾವದ ಫಲವಾಗಿ ಮನೋವಿಜ್ಞಾನ ಮತ್ತು ಸಮಾಜಶಾಸ್ತ್ರಗಳಿಗೆ ಇರುವ ಸಂಬಂಧವನ್ನು ಕಂಡುಕೊಂಡು, ನ್ಯಾಯಸೂತ್ರಗಳ ಮೂಲಭೂತ ಪರಿಕಲ್ಪನೆಗಳಿಗೆ ಅವನ್ನು ಹೊಂದಿಸಿದ್ದಾನೆ. ಧರ್ಮವೂ ಧರ್ಮಗ್ರಂಥಗಳೂ ಅವನ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರಿರುವುದನ್ನು ಅವನ ಲೇಖನಗಳಲ್ಲಿ ಕಾಣಬಹುದು.

ಕಾನೂನು ಎಂಬ ಶಬ್ದದ ವ್ಯಾಖ್ಯೆಯನ್ನು ಕುರಿತು ಚಿಂತನ ಮಾಡಿದ ಪ್ರಮುಖರಲ್ಲಿ ಕೆಲ್ಸನನೂ ಒಬ್ಬ. ರಾಜಕೀಯ ಪ್ರಭುತ್ವ ತನ್ನ ಪ್ರಜಾಕೋಟಿಗೆ ವಿಧಿಸಿದ ಆದೇಶವೇ ಕಾನೂನು ಎಂಬ ವ್ಯಾಖ್ಯೆಯನ್ನು ಕೆಲ್ಸನ್ ಒಪ್ಪುವುದಿಲ್ಲ. ಎಲ್ಲ ರೀತಿಯ ನ್ಯಾಯಿಕ ವ್ಯವಸ್ಥೆಗಳಿಗೂ ಎಲ್ಲ ಕಾಲಕ್ಕೂ ಸರ್ವಪ್ರದೇಶಗಳಿಗೂ ಮಾನವನ ಅಭಿವೃದ್ಧಿಯ ಎಲ್ಲ ಹಂತಗಳಿಗೂ ಸರಿಹೊಂದುವಂತೆ ಕಾನೂನಿನ ವ್ಯಾಖ್ಯೆಯೊಂದನ್ನು ರೂಪಿಸಲು ಈತ ಪ್ರಯತ್ನಿಸಿದ. ಪ್ರಜಾಪ್ರಭುತ್ವವಾದಿಯ ಕಾನೂನಿನ ವ್ಯಾಖ್ಯೆ ಒಬ್ಬ ಕಮ್ಯುನಿಸ್ಟ್ ನೀಡುವ ವ್ಯಾಖ್ಯೆಗಿಂತ ಭಿನ್ನವಾಗಿರುವುದು ಸಹಜ. ಒಬ್ಬನ ಮೇರೆಗೆ ವ್ಯಕ್ತಿಸ್ವಾತಂತ್ರ್ಯ ನ್ಯಾಯಿಕ ವ್ಯವಸ್ಥೆಯ ಮುಖ್ಯ ಲಕ್ಷಣವಾದರೆ, ಮತ್ತೊಬ್ಬನ ಮೇರೆಗೆ ಉತ್ಪಾದನೆಗೆ ಅನುಕೂಲವಾಗುವ ಯಾವುದೇ ಆಸ್ತಿ ವ್ಯಕ್ತಿಗತ ಸ್ವಾಮ್ಯದಲ್ಲಿ ಉಳಿಯದಂತೆ ನಿಷೇಧಿಸುವುದೇ ಮುಖ್ಯ ಲಕ್ಷಣವಾಗಬಹುದು. ಕಾನೂನಿನಲ್ಲಿ ವಿವೇಚನೆಗಿಂತ ಅಥವಾ ಯುಕ್ತಾಯುಕ್ತತೆಯ ಪ್ರಜ್ಞೆಗಿಂತ ಕ್ರಿಯೆಯನ್ನು ನಿಯಂತ್ರಣಗೊಳಿಸುವ ಗುರಿಯೇ ಮುಖ್ಯಘಟಕವೆಂಬುದು ಅವನ ಅಭಿಪ್ರಾಯ. ಮಾನವನ ನಡವಳಿಯನ್ನು ನಿಯಂತ್ರಿಸುವ ಬಲಾತ್ಕಾರ ರೂಪದ ಆದೇಶ–ಎಂಬುದಾಗಿ ಕಾನೂನಿನ ಬಗ್ಗೆ ರೂಪಿಸಲಾಗಿರುವ ವ್ಯಾಖ್ಯೆಗೆ ಈ ಅಭಿಪ್ರಾಯವೇ ಹಿನ್ನೆಲೆಯಾಗಿದೆ. ರಾಜಕೀಯ ಧೋರಣೆಗಳ, ಸಾಮಾಜಿಕ ಹಿನ್ನೆಲೆಗಳ, ಕಾಲಗತಿಗಳ ಮತ್ತು ಪ್ರಾದೇಶಿಕ ಪ್ರಭಾವಗಳ ಕೈಗೊಂಬೆಯೆನಿಸದಿರುವಂಥ ಕಾನೂನುವ್ಯಾಖ್ಯೆಯನ್ನು ಈತ ಕಂಡುಹಿಡಿದಿದ್ದಾನೆ.

ನ್ಯಾಯಿಕ ಕಲ್ಪನೆಗಳ ದ್ವೈತ ರೂಪಗಳು ರೂಢಿಗತವಾಗಿವೆ ಎಂಬುದು ಈತನ ಅಭಿಪ್ರಾಯ. ರಾಜ್ಯ, ಕಾನೂನು ಇವು ಬೇರೆಬೇರೆ ಎಂಬ ಅಭಿಪ್ರಾಯಕ್ಕೆ ದ್ವಿತ್ವದ ಈ ತಪ್ಪು ಕಲ್ಪನೆಯೇ ಕಾರಣವಾಗಿದೆ ಎನ್ನುವುದು ಕೆಲ್ಸನನ ಮತ. ಒಂದು ನ್ಯಾಯಿಕ ವ್ಯವಸ್ಥೆಯಲ್ಲಿ ಕಾನೂನನ್ನು ರೂಪಿಸುವ, ಅದನ್ನು ಪ್ರಕಟಿಸುವ ಹಾಗೂ ಆಚರಣೆಯಲ್ಲಿ ತರುವ ಸಾಧನಗಳ ಸ್ವಯಂಪರಿಪೂರ್ಣತೆ ಕಂಡುಬಂದಾಗ ಅದೇ ರಾಜ್ಯವಾಗಿ ಪರಿಣಮಿಸುತ್ತದೆ. ಹೀಗೆ ವ್ಯಕ್ತಿ ಮತ್ತು ವಿಧಿಬದ್ಧವ್ಯಕ್ತಿ, ಕಾನೂನು ರಚನೆ ಮತ್ತು ನ್ಯಾಯ ನಿರ್ಣಯ, ಸರ್ಕಾರಿ ಮತ್ತು ಖಾಸಗಿ ಕಾನೂನುಗಳು–ಇವುಗಳ ನಡುವೆ ವಿಶೇಷ ವ್ಯತ್ಯಾಸ ಇಲ್ಲವೆಂದು ಈತ ವಾದಿಸಿದ್ದಾನೆ.

ಅಂತಾರಾಷ್ಟ್ರೀಯ ಕಾನೂನಿನ ಬಗ್ಗೆ ಕೆಲ್ಸನ ಅಭಿಪ್ರಾಯಗಳು ಪ್ರಪಂಚದ ನ್ಯಾಯಿಕ ಒಕ್ಕಟ್ಟಿನ ಆದರ್ಶದ ತಳಹದಿಯ ಮೇಲೆ ರೂಪಿತವಾಗಿವೆ. ನ್ಯಾಯ ಶಾಂತಿಯನ್ನು ದೊರಕಿಸಿ ಕೊಡಬಲ್ಲದು. ಪ್ರಪಂಚದ ಉಳಿವು ಸಮಾಜದ ಪ್ರಗತಿ ಮತ್ತು ವ್ಯಕ್ತಿಯ

ವಿಕಾಸಕ್ಕೆ ಶಾಂತಿ ಮೂಲಾಧಾರ. ಆದ್ದರಿಂದ ನ್ಯಾಯವನ್ನು ಸಾಪೇಕ್ಷಗೊಳಿಸಬೇಕು. ಹಿತಾಸಕ್ತಿಗಳಿಂದ ಉದ್ಭವಿಸುವ ವಿವಾದಗಳಲ್ಲಿ ಸಾಪೇಕ್ಷ ಮೌಲ್ಯಗಳ ಆಧಾರದ ಮೇಲೆ ರಾಜಿಮಾಡಿಕೊಳ್ಳುವುದರ ಮೂಲಕ ಶಾಂತಿ ನೆಲೆಗೊಳ್ಳುವಂತೆ ಮಾಡುವುದು ವಿಹಿತ. ಇದು ಕೆಲ್ಸನನ ಅಭಿಪ್ರಾಯ.

ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ರಾಜನೀತಿಶಾಸ್ತ್ರ ಪ್ರಾಧ್ಯಾಪಕ ಹುದ್ದೆಯಿಂದ ಕೆಲ್ಸನ್ 1952ರಲ್ಲಿ ನಿವೃತ್ತಿ ಹೊಂದಿದಾಗ ಏರ್ಪಡಿಸಿದ್ದ ಗೌರವಕೂಟದಲ್ಲಿ ನ್ಯಾಯವನ್ನು ಕುರಿತು ಆತ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ. ಆ ಸಮಯದಲ್ಲಿ ನ್ಯಾಯವೆಂದರೇನು– ಎಂಬ ಪ್ರಶ್ನೆಯನ್ನು ಕೇಳಿ, ಆ ಪ್ರಶ್ನೆಗೆ, ನಿರಾತಂಕವಾಗಿ ಸತ್ಯಾನ್ವೇಷಣೆ ನಡೆಯಲು ರಕ್ಷಾ ಕವಚವಾಗುವ ಸಾಮಾಜಿಕ ವ್ಯವಸ್ಥೆಯೇ ನ್ಯಾಯ ಎಂದು ಉತ್ತರಹೇಳಿದ. ಅವನ ದೃಷ್ಟಿಯಲ್ಲಿ ನ್ಯಾಯವೆಂದರೆ ಸ್ವಾತಂತ್ರ್ಯದ ನ್ಯಾಯ, ಶಾಂತಿಯ ನ್ಯಾಯ, ಪ್ರಜಾಪ್ರಭುತ್ವದ ನ್ಯಾಯ, ಪರಮಸಹಿಷ್ಣುತೆಯ ನ್ಯಾಯ. (ಎಲ್.ಎಸ್.ಜಿ.)

**ಕೆಶ್ಶಿಯೋಪಿಯ :** ಉತ್ತರಾಕಾಶದ ಒಂದು ಪ್ರಮುಖ ನಕ್ಷತ್ರ ಪುಂಜ. ಇದರ ವ್ಯಾಪ್ತಿ ಹೀಗಿದೆ: ಘಂಟಾವೃತ್ತಾಂಶ 47°–77° ಉ, ವಿಷುವದಂಶ 23 ಗಂ–3ಗಂ. 35 ಮಿ. ಬಹುಭಾಗ ಆಕಾಶಗಂಗೆಯಲ್ಲೇ ನೆಲೆಸಿದೆ. ಈ ಪುಂಜದಲ್ಲಿ 2ನೆಯ ಮತ್ತು 3ನೆಯ ಕಾಂತಿವರ್ಗಕ್ಕೆ ಸೇರಿದ 5 ನಕ್ಷತ್ರಗಳಿವೆ. ಇವು ಒಟ್ಟಾರೆ ಇಂಗ್ಲಿಷ್‍ನ w ಅಕ್ಷರದ ರೂಪವನ್ನು ಹೋಲುತ್ತವೆ. ಇದನ್ನು ಕೆಶ್ಶಿಯೋಪಿಯದ ಕುರ್ಚಿ(ಕೆಶ್ಶಿಯೋಪಿಯಾಸ್ ಚೇರ್) ಎಂದು ಕರೆಯುವುದುಂಟು. ಬರಿಕಣ್ಣಿನಿಂದ ಸುಲಭವಾಗಿ ಗುರುತಿಸಬಹುದಾದ ಪುಂಜವಿದು. ಧ್ರುವನಕ್ಷತ್ರದ ಇಕ್ಕೆಲಗಳಲ್ಲಿ (ಜ್ಯಾಮಿತೀಯ ವಿರುದ್ಧ ದಿಕ್ಕಿನಲ್ಲಿ) ಒಂದು ಕಡೆ ಕೆಶ್ಶಿಯೋಪಿಯ, ಮತ್ತೊಂದೆಡೆ ಸಪ್ತರ್ಷಿಮಂಡಲ ಇವೆ. ಮಧ್ಯೋತ್ತರ ಹಾಗೂ ಅದಕ್ಕಿಂತ ಹೆಚ್ಚಿನ ಉತ್ತರ ಅಕ್ಷಾಂಶಗಳಲ್ಲಿ ಈ ಪುಂಜ ಎಂದೂ ವೀಕ್ಷಕನ ಕ್ಷಿತಿಜದ ಕೆಳಗೆ ಹೋಗುವುದೇ ಇಲ್ಲ. ಇಲ್ಲಿಯ ತಾರಾಗುಚ್ಛ ಮತ್ತು ಯಮಳಗಳು ಖಗೋಳವಿಜ್ಞಾನ ಹವ್ಯಾಸಿಗಳಿಗೆ ಒಳ್ಳೆಯ ದೃಶ್ಯವನ್ನೊದಗಿಸುತ್ತವೆ. ಡೇನಿಷ್ ಖಗೋಳತಜ್ಞನಾದ ಟೈಕೋಬ್ರಾಹೆ(1546–1601) ಈ ಪುಂಜದಲ್ಲಿ ಒಂದು ನೋವಾ ನಕ್ಷತ್ರವನ್ನು ಕಂಡುಕೊಂಡ (1572) ವರದಿ ಇದೆ. ಆದಕಾರಣ ಅದನ್ನು ಟೈಕೋ ನಕ್ಷತ್ರ ಎಂದು ಕರೆಯುವುದಿದೆ. ಶುಕ್ರಗ್ರಹದ ಪ್ರಕಾಶದಷ್ಟೇ ಪ್ರಕಾಶಮಾನವಾಗಿದ್ದ ಈ ತಾರೆ ಹಲವಾರು ತಿಂಗಳುಗಳ ತನಕ ಹಗಲು ಹೊತ್ತಿನಲ್ಲಿಯೂ ಕಾಣಿಸುತ್ತಿದ್ದು ಅನಂತರ ಅದರ ಪ್ರಕಾಶ ಮಂದವಾಯಿತೆಂದು ವರದಿ ಆಗಿದೆ. ಕೆಶ್ಶಿಯೋಪಿಯ ಪುಂಜದ ಸುತ್ತಮುತ್ತಲ ಪ್ರದೇಶದಲ್ಲಿ ಸಿಫಿಯಸ್, ಪರ್ಸಿಯಸ್, ಸಿಗ್ನಸ್, ಆರಿಗಾ, ಆಂಡ್ರೊಮಿಡ ಮುಂತಾದ ನಕ್ಷತ್ರ ಪುಂಜಗಳೂ ಪೆಗಾಸಸ್ ಮಹಾಚೌಕವೂ ಅಲ್ಗಾಲ್‍ನಂಥ ಪ್ರಮುಖ ನಕ್ಷತ್ರಗಳೂ ಕಾಣಸಿಗುತ್ತವೆ.

ಗ್ರೀಕ್ ಪುರಾಣದ ಪ್ರಕಾರ ಇಥಿಯೋಪಿಯದ ದೊರೆ ಸಿಫಿಯಸನ ಹೆಂಡತಿ ಕೆಶ್ಶಿಯೋಪಿಯ. ಇವರ ಮಗಳೇ ಆಂಡ್ರೊಮಿಡ. **(ನೋಡಿ– ಆಂಡ್ರೊಮಿಡ)** *

**ಕೆಸರು ಮೀನು :** *ಹೋಲೋಸ್ಟಿಯೈ* ಅಧಿಗಣದ *ಏಮಿಯಿಡೆ* ಕುಟುಂಬಕ್ಕೆ ಸೇರಿದ ಅಸ್ಥಿಮೀನು. *ಏಮಿಯ ಕಾಲ್ವ* ಇದರ ಶಾಸ್ತ್ರೀಯ ನಾಮ. ನಾಯಿಮೀನು, ಗ್ರಿಂಡಲ್, ಸ್ಪಾಟಫಿನ್, ಬೋವ್ ಫಿನ್ ಇತರೆ ಸಾಮಾನ್ಯ ಹೆಸರು. ಉತ್ತರ ಅಮೆರಿಕದ ಒಳನಾಡಿನ ಜಲಾಶಯಗಳಲ್ಲೆಲ್ಲ ಕಾಣಬರುತ್ತದೆ. ಸಾಧಾರಣವಾಗಿ 60 ಸೆಂಮೀ. ಉದ್ದಕ್ಕೆ ಬೆಳೆಯುವುದಾದರೂ ಅಪೂರ್ವವಾಗಿ 90 ಸೆಂ.ಮೀ. ಉದ್ದವೂ 3.5 ಕೆಜಿ. ತೂಕವು ಇರುವುದುಂಟು. ನೀಳವಾದ ಬೆನ್ನಿನ ರೆಕ್ಕೆ ಮತ್ತು ಬಾಲದ ರೆಕ್ಕೆಯ ಮೇಲ್ಭಾಗದಲ್ಲಿರುವ ಕಪ್ಪು ಮಚ್ಚೆಯಿಂದ ಈ ಮೀನನ್ನು ಗುರುತಿಸಬಹುದು. ಇವು ಇತರೆ ಮೀನುಗಳನ್ನು ಅಕಶೇರುಕಗಳನ್ನು ತಿಂದು ಬದುಕುತ್ತವೆ. ಗೂಡು ಕಟ್ಟುವುದು, ಮೊಟ್ಟೆ ಮತ್ತು ಮರಿಗಳನ್ನು ಪಾಲಿಸುವುದು ಗಂಡು ಮೀನಿನ ಕೆಲಸ. ಫುಪ್ಪುಸ ಮೀನನ್ನೂ (ಲಂಗ್‍ಫಿಶ್) ಮತ್ತು *ಅಂಬ್ರಿಡೀ* ಕುಟುಂಬದ ಮೀನುಗಳನ್ನೂ ಕೆಸರು ಮೀನುಗಳೆಂದು ಕರೆಯುವುದಿದೆ. (ಸಿ.ಜಿ.ಕೆ.)

**ಕೆಸವು :** ಏರೇಸೀ ಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಗೆಡ್ಡೆಸಸ್ಯ. ಕೊಲೋಕೇಸಿಯ ಆಂಟಿಕೋರಮ್ ಇದರ ವೈಜ್ಞಾನಿಕ ಹೆಸರು. ಕೆಸ, ಕೆಸವು, ಶಾಮಗೆಡ್ಡೆ, ಸಾವಗೆಡ್ಡೆ, ಕಚ್ಚಾಚಿ ಮುಂತಾದವು ಇದರ ಪರ್ಯಾಯ ನಾಮಗಳು. ಇಂಗ್ಲಿಷಿನಲ್ಲಿ ಟ್ಯಾರೊ ಎನ್ನಲಾಗುತ್ತದೆ. ಇದು ಆಗ್ನೇಯ ಏಷ್ಯದ ಮೂಲವಾಸಿ. ಭಾರತದಲ್ಲಿ ಎಲ್ಲ ಕಡೆಗಳಲ್ಲೂ ಸಾಮಾನ್ಯವಾಗಿ ಬೆಳೆಯುತ್ತದೆ. ನದಿ ಮತ್ತು ಕೊಳಗಳ ದಡ, ಚೌಗುಭೂಮಿ, ತೇವಪೂರಿತ ಹಾಗೂ ನೆರಳಿರುವ ಕೆಸರು ಭೂಮಿಗಳಲ್ಲಿದು ಸ್ವಾಭಾವಿಕ. ಇದರ ಗೆಡ್ಡೆ ಮತ್ತು ದಂಟುಗಳು(ಎಲೆಯ ತೊಟ್ಟು) ತರಕಾರಿಯಾಗಿ ಉಪಯೋಗವಾಗುವುದರಿಂದ ಇದನ್ನು ಬೆಳೆಸುವುದೂ ಉಂಟು. ಶ್ರಾದ್ಧಾದಿ ಕರ್ಮಗಳಲ್ಲಿ ಇದರ ಬಳಕೆ ಇರುವುದನ್ನು ಗಮನಿಸಿದರೆ ಭಾರತದ ಜನಕ್ಕೆ ಇದರ ಪರಿಚಯ ಬಹು ಹಿಂದಿನಿಂದ ಇತ್ತು ಎನ್ನಬಹುದು.

ಕೆಸವಿನಲ್ಲಿ ಎಲೆಯ ಹಾಗೂ ತೊಟ್ಟಿನ ಬಣ್ಣಗಳಲ್ಲಿ ಮತ್ತು ಗೆಡ್ಡೆಯ ಗಾತ್ರ, ಆಕಾರ, ಬಣ್ಣ, ರುಚಿ ಮತ್ತು ಪೌಷ್ಟಿಕಾಂಶಗಳ ಪ್ರಮಾಣದಲ್ಲಿ ವೈವಿಧ್ಯವನ್ನು ಪ್ರದರ್ಶಿಸುವ ಹಲವಾರು ಬಗೆಗಳಿವೆ. ಇವೆಲ್ಲ ಬಗೆಗಳನ್ನೂ ಗಾಢ ಊದಾ ಬಣ್ಣದ ಎಲೆ ಮತ್ತು ತೊಟ್ಟುಗಳುಳ್ಳ ಗುಂಪು–ಹೀಗೆ ಎರಡು ಪ್ರಮುಖ ಗುಂಪುಗಳಿಗೆ ಸೇರಿಸಬಹುದು. ಇವುಗಳಲ್ಲೆಲ್ಲ ಅತ್ಯಂತ ಮುಖ್ಯವಾದ ಬಗೆ ಎಸ್ಕ್ಯುಲೆಂಟು ಎಂಬುದು. ಕೆಸವು ಒಂದು ಮೂಲಿಕೆ ಸಸ್ಯ. ಭೂಮಿಯೊಳಗೇ ಹುದುಗಿದ್ದು ವರ್ಷವರ್ಷವೂ ಸ್ವಲ್ಪಸ್ವಲ್ಪ ಬೆಳೆದು ಕವಲುಗಳನ್ನು ಉತ್ಪಾದಿಸುವ ಗೆಡ್ಡೆರೂಪದ ಕಾಂಡವೂ ಕವಲುಗಳಿಂದ ಹೊರಟು

ಮೇಲ್ಮುಖವಾಗಿ ಭೂಮಿಯ ಮೇಲಕ್ಕೆ ಬೆಳೆಯುವ ಎಲೆಗಳೂ ಎಲೆಗಳಿಗಿರುವ ಉದ್ದನೆಯ ತೊಟ್ಟೂ ಕೆಸವಿನ ಪ್ರಮುಖ ಲಕ್ಷಣಗಳು. ಗೆಡ್ಡೆಯ ಕವಲುಗಳು ಆಗಿಂದಾಗ್ಗೆ ಒಂದರಿಂದ ಒಂದು ಬೇರ್ಪಟ್ಟು ಹೊಸಗಿಡಗಳಾಗಿ ವೃದ್ಧಿಗೊಳ್ಳುತ್ತವೆ. ಇದು ಕೆಸವಿನಲ್ಲಿ ಕಾಣಬರುವ ನಿರ್ಲಿಂಗರೀತಿ ವಂಶಾಭಿವೃದ್ಧಿಯ ಮುಖ್ಯ ಕ್ರಮ.

ಕೆಸವಿನ ಹೂಗಳು ಏಕಲಿಂಗಿಗಳು. ಎರಡು ಬಗೆಯ ಹೂಗಳೂ ತಾಳಗುಚ್ಛ(ಸ್ಪೇಡಿಕ್ಸ್) ಮಾದರಿಯ ಹೂಗೊಂಚಲಿನಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲಿನ ಅಕ್ಷ ರಸಭರಿತವಾಗಿದ್ದು ಚರ್ಮಿಲವಾದ ಉಪಪತ್ರದಿಂದ (ಸ್ಪೇದ್) ಅವೃತವಾಗಿದೆ.

ಕೆಸವಿನ ಗೆಡ್ಡೆ ಎಲೆ ಮತ್ತು ದಂಟುಗಳೆಲ್ಲ ನಾಲಗೆಯನ್ನು ಚುರುಗುಟ್ಟಿಸುವ ತೀಕ್ಷ್ಣವಾದ ವಸ್ತುವೊಂದಿದೆ. ಇದಕ್ಕೆ ಕಾರಣ ಇವುಗಳಲ್ಲಿರುವ ಕ್ಯಾಲ್ಸಿಯಂ ಆಕ್ಸಲೇಟ್ ಎಂಬ ರಾಸಾಯನಿಕದ ಹರಳುಗಳು. ಆದ್ದರಿಂದ ಗೆಡ್ಡೆ, ಎಲೆಗಳನ್ನು ಅಡುಗೆಗೆಂದು ಉಪಯೋಗಿಸುವಾಗ ಬೇಯಿಸಿ ಉಳಿಯುವ ನೀರನ್ನು ಚೆಲ್ಲಬೇಕು. ಹೀಗೆ ಮಾಡಿದರೆ ಕೆಸವಿನಲ್ಲಿ ಪೌಷ್ಟಿಕಾಂಶವೆಲ್ಲ ನಷ್ಟವಾಗುವುದರಿಂದ ಇದರ ಬದಲು ಮೊದಲು ಹುಣಿಸೆ ನೀರಿನಿಂದ ತೊಳೆದು ಬೇಯಿಸುವಾಗ ಕೊಂಚ ಅಡುಗೆ ಸೋಡವನ್ನು ಸೇರಿಸಿದರೆ ಕೆಸವಿನ ಕಟುತ್ವ ಕಡಿಮೆಯಾಗುತ್ತದೆ.

ಕೆಸವು ಎಲ್ಲ ಬಗೆಯ ಮಣ್ಣಿನಲ್ಲಿ ಬೆಳೆಯಬಲ್ಲುದಾದರೂ ಸರಾಗವಾಗಿ ನೀರು ಇಳಿಯಬಲ್ಲ, ಸಾವಯವ ವಸ್ತುಗಳನ್ನು ಹೇರಳವಾಗುಳ್ಳ ಗೋಡುಮಣ್ಣಿನಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ. ಎಲ್ಲಿ ಬೆಳೆಸಿದರೂ ಇದಕ್ಕೆ ನೀರು ಮಾತ್ರ ಯಥೇಚ್ಛವಾಗಿ ಬೇಕು. ಇದನ್ನು ಗೆಡ್ಡೆಗಳ ತುಂಡುಗಳಿಂದ ವೃದ್ಧಿಸುತ್ತಾರೆ. ವರ್ಷಪೂರ್ತಿ ಇದನ್ನು ನೆಟ್ಟು ಬೆಳೆಸಬಹುದಾದರೂ ಭಾರತದಲ್ಲಿ ಫೆಬ್ರುವರಿ–ಜುಲೈ ತಿಂಗಳುಗಳ ನಡುವಣ ಅವಧಿಯಲ್ಲಿ ನೆಡುವುದೇ ವಾಡಿಕೆ. ನೆಟ್ಟ 4–8 ತಿಂಗಳುಗಳ ಅನಂತರ ಗೆಡ್ಡೆಗಳನ್ನು ಭೂಮಿಯಿಂದ ಅಗೆದು ತೆಗೆಯಬಹುದು. ಎಲೆಗಳು ಹಳದಿ ಬಣ್ಣಕ್ಕೆ ತಿರುಗಲಾರಂಭಿಸಿದ ಅನಂತರ ಅಗೆಯುವುದು ರೂಢಿಯಲ್ಲಿದೆ. ಕೈಯಿಂದ ಇಲ್ಲವೆ ಸನಿಕೆಯಿಂದ ಗೆಡ್ಡೆಗಳನ್ನು ತೆಗೆದು ಬಳಿಕ ಅವನ್ನು ನೀರಿನಿಂದ ತೊಳೆದು ಗಾತ್ರದ ಆಧಾರದ ಮೇಲೆ ವರ್ಗೀಕರಿಸಲಾಗುತ್ತದೆ. ಇಳುವರಿ ಭೂಮಿಯ ಗುಣವನ್ನೂ ಕೆಸವಿನ ಬಗೆಯನ್ನೂ ಅವಲಂಬಿಸಿ ಎಕರೆಗೆ 2,500 ಪೌಂಡಿನಿಂದ 10,000 ಪೌಂಡ್‍ವರೆಗೂ ವ್ಯತ್ಯಾಸವಾಗುತ್ತದೆ.

ಕೆಸವಿನ ಗಿಡದ ಎಲ್ಲ ಭಾಗಗಳೂ ತಿನ್ನಲು ಯೋಗ್ಯವಾಗಿವೆ. ಗೆಡ್ಡೆಗಳಲ್ಲಿ ಅಧಿಕ ಪರಿಮಾಣದಲ್ಲಿ ಪಿಷ್ಟವಿದೆ. ಬೇಯಿಸಿದಾಗ ಒಂದು ಬಗೆಯ ವಿಶಿಷ್ಟ ವಾಸನೆಯನ್ನು ಹೊರಸೂಸುವ ಇದು ಆಲೂಗೆಡ್ಡೆಯಲ್ಲಿಯ ಪಿಷ್ಟಕ್ಕಿಂತ ಸಿಹಿಯಾದದ್ದೂ ಬೇಗ

ಬೇಯುವಂಥದೂ ಆಗಿದೆ. ಗೆಡ್ಡೆಯ ರಾಸಾಯನಿಕ ಸಂಯೋಜನೆ ಹೀಗಿದೆ : ಕಾರ್ಬೋಹೈಡ್ರೇಟ್ ಶೇ.22.1, ಪ್ರೋಟೀನು ಶೇ.3.0, ಲೋಹಾಂಶಗಳು ಶೇ.1,7, ಕೊಬ್ಬು ಶೇ.0.1, ತೇವಾಂಶ ಶೇ.73.1. ಇದಲ್ಲದೆ ಕ್ಯಾಲ್ಸಿಯಂ ಮತ್ತು ರಂಜಕ ಇವು ಸಹ ಗಣನೀಯ ಪರಿಮಾಣದಲ್ಲಿವೆ. ಕೆಸವಿನ ಗೆಡ್ಡೆ ಆಲೂಗಡ್ಡೆಗಿಂತ ಹೆಚ್ಚು ಪುಷ್ಟಿಯುತವಾದುದು ಮತ್ತು ಸುಲಭವಾಗಿ ಜೀರ್ಣವಾಗುವಂಥದು ಎಂದು ಹೇಳಿಕೆಯಿದೆ. ಇದರಲ್ಲಿನ ಪಿಷ್ಟಕಣಗಳು ಇತರ ಆಹಾರ ಸಸ್ಯದ ಪಿಷ್ಟಕಣಗಳಿಗಿಂತ ಅತ್ಯಂತ ಚಿಕ್ಕವು.

ಕೆಸವಿನ ಗೆಡ್ಡೆಯನ್ನೂ ಎಲೆ ಹಾಗೂ ದಂಟುಗಳನ್ನೂ ತರಕಾರಿಯಾಗಿ ಬಳಸುತ್ತಾರೆ. ಇದರ ಎಲೆಗಳಿಂದ ತಯಾರಿಸುವ ಪತ್ರೊಡೆ ಎಂಬ ತಿಂಡಿ ಬಹಳ ಪ್ರಖ್ಯಾತವಾಗಿದೆ. ಗೆಡ್ಡೆಯಿಂದ ಪಿಷ್ಟವನ್ನು ಹೊರತೆಗೆದು ಅದನ್ನು ಗಂಜಿ, ಬ್ರೆಡ್, ಬಿಸ್ಕಿಟ್ ಮುಂತಾದವನ್ನು ಮಾಡಲು ಬಳಸುವುದುಂಟು. ಅಲ್ಲದೆ ಎಲೆಗಳ ತೊಟ್ಟಿನ ರಸವನ್ನು ಪ್ರತಿಬಂಧಕವಾಗಿ ಔಷಧಿ ರೂಪದಲ್ಲಿ ಉಪಯೋಗಿಸುವುದುಂಟು. (ಎಚ್.ಕೆ.ಎಂ.; ಎನ್.ಆರ್.ವಿ.)

**ಕೆ–ಸಿದ್ಧಾಂತ :** ಕೆ–ಫಂಕ್ಟರನ್ನು ಕುರಿತ ಸಿದ್ಧಾಂತ (k–ಥಿಯೊರಿ). ಭೌತ ಮತ್ತು ಇತರ ವಿಜ್ಞಾನಗಳು ಬೆಳೆದಂತೆ ಗಣಿತಶಾಸ್ತ್ರದ ಬಹುಮುಖವಾದ ವಿಸ್ತೃತ ಬೆಳವಣಿಗೆ ಅನಿವಾರ್ಯವಾಯಿತು. ಹಾಗಾಗಿ ಇದರಲ್ಲಿ ಅನೇಕ ಶಾಖೆಗಳು ಹುಟ್ಟಿಕೊಂಡವು. ಬೀಜಗಣಿತ, ಜ್ಯಾಮಿತಿ, ಅನುಕಲನಜ್ಯಾಮಿತಿ, ಅವಕಲನ ಜ್ಯಾಮಿತಿ, ಪರಿಕರ್ಮಿಗಳ ಸಿದ್ಧಾಂತ (ಥಿಯೊರಿ ಆಫ್ ಆಪರೇಟರ್ಸ್) ಮುಂತಾದವು ಉದಾಹರಣೆಗಳು. ಈ ಎಲ್ಲ ಶಾಖೆಗಳ ಸುಸ್ಪಷ್ಟ ಜ್ಞಾನ ಗಣಿತಶಾಸ್ತ್ರಜ್ಞನಿಗೆ ಅಗತ್ಯವಾದರೂ ಅವುಗಳ ವೈಪುಲ್ಯ ಮತ್ತು ವೈಶಾಲ್ಯ ಇಂಥ ಜ್ಞಾನವನ್ನು ಗಳಿಸಲು ತೊಡಕನ್ನು ಉಂಟುಮಾಡಿದುವಲ್ಲದೆ ಒಂದು ಶಾಖೆಯಿಂದ ಇನ್ನೊಂದಕ್ಕಿರುವ ಸಂಬಂಧವೂ ತಿಳಿಯದಂತಾಗತೊಡಗಿತು. ಆದ್ದರಿಂದ ಅವುಗಳನ್ನೆಲ್ಲ ಸೂತ್ರೀಕರಿಸಿ ಅವೆಲ್ಲವುಗಳ ಸಾಮಾನ್ಯ ಗುಣಧರ್ಮಗಳ ಪರಿಚಯವನ್ನು ಏಕತ್ರ ಮಾಡಿಕೊಳ್ಳುವ ಪ್ರಯತ್ನ ನಡೆಯಿತು. ಇದರ ಫಲವೇ ಐಲೆನ್ ಬರ್ಗ್ ಮತ್ತು ಮೆಕ್ಲೇನರ ಕ್ಯಾಟಿಗೊರಿಗಳು ಮತ್ತು ಫಂಕ್ಟರುಗಳನ್ನು (ನೋಡಿ) ಕುರಿತ ಸಿದ್ಧಾಂತ. ಬೇರೆ ಬೇರೆ ಕ್ಯಾಟಿಗೊರಿಗಳೊಳಗಣ ಸಂಬಂಧವನ್ನೂ ಅವುಗಳ ಗುಣಗಳನ್ನೂ ತಿಳಿಯಲು ಫಂಕ್ಟರುಗಳನ್ನು ಉಪಯೋಗಿಸಿಕೊಳ್ಳಲಾಯಿತು. ಹೀಗೆ ಕಂಡುಹಿಡಿದ ಪೈಕಿ k–ಫಂಕ್ಟರ್ ಒಂದು. ಅದರ ಸಿದ್ಧಾಂತವೇ k–ಸಿದ್ಧಾಂತ. k–ಫಂಕ್ಟರಿನ ಸೃಷ್ಟಿ ಆಕಸ್ಮಿಕವಾದರೂ ಅದರಿಂದ ಉಂಟಾದ ಫಲಿತಾಂಶ ಗಣಿತಶಾಸ್ತ್ರದ ಅತಿಮುಖ್ಯ ಅನ್ವೇಷಣೆಗಳಲ್ಲಿ ಒಂದು. ಆ ಫಲಿತಾಂಶಗಳು ಹೀಗಿವೆ. 1 ಬೋಟ್‌ನ ಆವರ್ತನಪ್ರಮೇಯ (ಪೀರಿಯಾಡಿಸಿಟಿ ಥಿಯೊರಂ); 2 ಅಟಯ–ಸಿಂಗರ್ ಇವರ ಸೂಚ್ಯಂಕ ಸಮಸ್ಯೆಗೆ ಪರಿಹಾರ; 3 ನೈಜಸಂಖ್ಯೆಗಳ ಮೇಲಿನ ಎಲ್ಲ ಭಾಜನ ಬೀಜಗಣಿತಗಳು (ಅವುಗಳ ಕಂಡುಹಿಡಿಯುವಿಕೆ); 4 ಗೋಳದ ಮೇಲಿನ ಸದಿಶ ಕ್ಷೇತ್ರಗಳ ಸಮಸ್ಯೆಗೆ ಪರಿಹಾರ.

ಮೇಲಿನ ಹೇಳಿದ ಅನ್ವೇಷಣೆಗಳ ಸಾಧನೆಗಳು ಟೋಪಾಲೊಜಿಕಲ್ k–ಸಿದ್ಧಾಂತದ ಮೂಲಕ ಸಾಧ್ಯ. ಅದರ ಟೋಪಾಲೊಜಿಕಲ್ k–ಸಿದ್ಧಾಂತದಲ್ಲಿ ಬೀಜಗಣಿತವನ್ನೇನೋ ಬಹಳವಾಗಿ ಉಪಯೋಗಿಸಿಕೊಂಡಿದ್ದರೂ ಬೀಜಗಣಿತದಲ್ಲೇ ಅದಕ್ಕೆ ಸಮಾನವಾದ ಸಿದ್ಧಾಂತ ಇತ್ತೀಚೆಗಿನವರೆಗೆ ತಿಳಿಯದಾಗಿತ್ತು. ಬೀಜಗಣಿತದಲ್ಲಿ ಕೆಲಸಮಾಡುತ್ತಿರುವ ಹೈಮನ್ ಬಾಸ್, ಆರ್.ಜಿ. ಸ್ವಾನ್ ಮತ್ತಿತರರು ಅದಕ್ಕೆ ಸಮಾನವಾದ ಬೀಜಗಣಿತದಲ್ಲಿ k–ಸಿದ್ಧಾಂತವನ್ನು ಹಿಂದಿನ ಒಂದು ದಶಕದಲ್ಲಿ ಸ್ಥಾಪಿಸಿದರು. ಬೀಜಗಣಿತದ k–ಸಿದ್ಧಾಂತದ ಭಾಗವಾಗಿ ಬಾಸ್‌ರವರ ಸ್ಥಿರ ಬೀಜಗಣಿತ (ಸ್ಟೇಬಲ್ ಆಲ್ಜಿಬ್ರ) ಹುಟ್ಟಿಕೊಂಡಿತು. ಈ ಗಣಿತ ರೇಖೀಯ ಬೀಜಗಣಿತದ (ಲೀನಿಯರ್ ಆಲ್ಜಿಬ್ರ) ಒಂದು ರೂಪ.

**k(.) ಯ ಅರ್ಥ:** k–ಸಿದ್ಧಾಂತ ಬಹುತೇಕ ಸದಿಶ ಬಂಧಗಳ (ವೆಕ್ಟರ್ ಬಂಡಲ್ಸ್) ಕ್ಯಾಟಿಗೊರಿಯ ಮೇಲೆ ಸ್ಥಾಪಿತವಾಗಿದೆ. ಸದಿಶಬಂಧಗಳು ಜ್ಯಾಮಿತಿಯಲ್ಲಿ ಸಹಜವಾಗಿ ಬಹಳ ಕಡೆಯಲ್ಲಿ ಬರುವುದರಿಂದ ಗಣಿತಶಾಸ್ತ್ರದ ಬೆಳವಣಿಗೆ ಅವನ್ನು ಹೊಂದಿಕೊಂಡಿದೆ ಎನ್ನಬಹುದು. ಈಗ ಇಲ್ಲಿ ಸದಿಶ ಬಂಧಗಳ ಕ್ಯಾಟಿಗೊರಿ ಮತ್ತು ಫಂಕ್ಟರುಗಳನ್ನು ಕುರಿತು ಸಂಕ್ಷೇಪವಾಗಿ ತಿಳಿದುಕೊಳ್ಳವುದು ಅಗತ್ಯ. ಕ್ಯಾಟಿಗೊರಿ ಎಂದರೆ ಗಣಿತಶಾಸ್ತ್ರದ ಶಾಖೆಯಲ್ಲಿ ನಾವು ತಿಳಿಯಬಯಸುವ ಒಂದೇ ಜಾತಿಯ ವಸ್ತುಗಳ ಸಮೂಹ. ಒಂದು ವಸ್ತು ಸಮೂಹ A ಯನ್ನು ಕ್ಯಾಟಿಗೊರಿ ಎಂದು ಕರೆಯಬೇಕಾದರೆ ಅದು ಈ ಕೆಳಗಿನ ನಿಯಮಗಳಿಗೆ ಬದ್ಧವಾಗಿರಬೇಕು:

1 A ಶೂನ್ಯವಾಗಿರಬಾರದು.

2 A ಯ ಯಾವುದೇ ಎರಡು ವಸ್ತು A ಮತ್ತು B ಗಳನ್ನು ಕೊಟ್ಟಾಗ ಅವುಗಳಿಗೆ ಸಂಬಂಧಿಸಿದ ನಿಯಮ 2(a) ಮತ್ತು 2(b) ಯನ್ನು ಪಾಲಿಸುವ Mor(A,B) ಎಂಬ ಗಣವಿರಬೇಕು.

2(a) A, B, C ಗಳು Aಯ ಮೂರು ವಸ್ತುಗಳು

$f$: Mor (A, B) X Mor (B, C) $\rightarrow$ Mor (A, C)

ಸಹವರ್ತನ ನಿಯಮವನ್ನು (ಅಸೋಸಿಯೇಟಿವ್ ಲಾ) ಪಾಲಿಸುವ $f$ ಎಂಬ ಪರಿಕರ್ಮವಿರಬೇಕು. $h \in$ Mor (A, B) ಮತ್ತು $k \in$ Mor (B, C) ಆಗಿದ್ದರೆ ಆಗ f(h, k) ಯನ್ನು koh ಎಂದು ಬರೆಯುತ್ತೇವೆ.

2(b) A ಮತ್ತು Bಗಳು Aಯ ಎರಡು ವಸ್ತುಗಳು. b ಯು Mor(A,B) ಯ ಮತ್ತು c ಯು Mor (B, A) ಯ ಯಾವುದಾದರೂ ಎರಡು ಧಾತುಗಳು (ಎಲಿಮೆಂಟ್ಸ್). Mor (A, A)ಯಲ್ಲಿ $I_A oc=c$, $boI_A= b_T$ ಆಗುವಂತೆ $I_A$ ಎಂಬ ಧಾತುವಿರಬೇಕು.

**ಫಂಕ್ಟರುಗಳು :** A ಮತ್ತು B ಎರಡು ಕ್ಯಾಟಿಗೊರಿಗಳು. T: A$\rightarrow$ B ಈ ಕೆಳಗಿನ ನಿಯಮವನ್ನು ಪಾಲಿಸುವ ಒಂದು ಉತ್ಪನ್ನ (ಫಂಕ್ಷನ್).

1 ಪ್ರತಿಯೊಂದು Mor (A, B) ಯ ಧಾತುವಿಗೆ $T_f$ ಎಂಬ Mor (T(A), T(B)) ಯ ಧಾತುವಿರಬೇಕು. ಅಥವಾ

1 (a) ಪ್ರತಿಯೊಂದು Mor (A, B) ಯ ಧಾತುವಿಗೆ $T_f$ ಎಂಬ Mor ( T(B), T(A)) ಯ ಧಾತುವಿರಬೇಕು.

2 $T(I_A)=I_T(A)$ ಆಗಿರಬೇಕು.

ಈಗ ನಾವು ಈ ಪ್ರಬಂಧದಲ್ಲಿ ಸದಿಶ ಬಂಧಗಳ ಕ್ಯಾಟಿಗೊರಿ ಮತ್ತು $K^O$-ಫಂಕ್ಟರುಗಳನ್ನು ಕುರಿತು ಹಾಗೂ ವಿಕ್ಷೇಪ ಮಾಡ್ಯೂಲುಗಳ (ಪ್ರೊಜೆಕ್ಟಿವ್ ಮಾಡ್ಯೂಲ್ಸ್) ಕ್ಯಾಟಿಗೊರಿ ಮತ್ತು $K'$- ಫಂಕ್ಟರುಗಳನ್ನು ಕುರಿತು ಪ್ರಸ್ತಾವಿಸುತ್ತೇವೆ.

**ಸದಿಶ ಬಂಧಗಳು:** E ಮತ್ತು X ಎರಡು ಟೋಪಾಲೊಜಿಕಲ್ ಸಮಷ್ಟಿಗಳು (ಸ್ಪೇಸಸ್). P : E$\rightarrow$X ಒಂದು ಅವಿಚ್ಛಿನ್ನ ಉತ್ಪನ್ನ. ಇದು ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕು :

1 ಪ್ರತಿ $X \in X$ ಗೆ $P^{-1}(X) = \{y \in E / p(y) = x\}$ ಗೆ k- ಸದಿಶ ಸಮಷ್ಟಿಯ ರಚನೆ ಇರಬೇಕು. (ಇಲ್ಲಿ k–ಎಂಬುದು ಒಂದು ಕ್ಷೇತ್ರ, ಸಾಮಾನ್ಯವಾಗಿ ನೈಜ ಅಥವಾ ಮಿಶ್ರ ಸಂಖ್ಯೆಗಳ ಕ್ಷೇತ್ರ).

2 ಪ್ರತಿ $X \in X$ಗೆ $P^{-1}(U) = U \times K^n$ ಆಗುವಂತೆ xನಲ್ಲಿ xನ U ಎಂಬ ನೆರೆ (ನೇಬರ್‌ಹುಡ್) ಇರಬೇಕು. ಈಗ {E, P, X} ಒಂದು k ಸದಿಶಬಂಧ. ಇದರ X ಎಂಬ ಟೊಪಾಲೊಜಿಕಲ್ ಸಮಷ್ಟಿಯನ್ನು ಮೂಲಸಮಷ್ಟಿ ಎನ್ನುತ್ತೇವೆ. X ಎಂಬ ಸಮಷ್ಟಿ ಮೂಲಸಮಷ್ಟಿಯಾಗಿರುವ ಎಲ್ಲ k ಸದಿಶ ಬಂಧಗಳ ಸಮೂಹವನ್ನು Vect(x) ಎಂದು ಬರೆಯೋಣ. ಈ ಸಮೂಹ ಒಂದು ಕ್ಯಾಟಿಗೊರಿ ಆಗಬೇಕಾದರೆ $\xi$ ಮತ್ತು nಎಂಬ ಎರಡು Vect(x) ಸದಿಶ ಬಂಧಗಳನ್ನು ಕೊಟ್ಟಾಗ Mor ($\xi$, n)ವನ್ನು ವ್ಯಾಖ್ಯಿಸಬೇಕು. $\xi = < E, p, x > n, = < E', P', X >$ ಎಂಬವು xನ ಮೇಲಿನ ಎರಡು ಸದಿಶ ಬಂಧಗಳು. $f$: E$\rightarrow$E' ಎಂಬುದು p=p' of ಆಗುವಂತೆ ಮತ್ತು $f/p^{-1}(x) : \rightarrow p'^{-1}(x)$ಒಂದು ರೇಖೀಯ ಚಿತ್ರಣವಾದರೆ (ಲೀನಿಯರ್ ಮ್ಯಾಪ್) f: $\xi \rightarrow$ nವನ್ನು ಬಿಂಬನ (ಮಾರ್ಫಿಸಂ) ಎನ್ನುತ್ತೇವೆ. $\xi$ ಯಿಂದ nಕ್ಕೆ ವ್ಯಾಖ್ಯಿಸಬಹುದಾದ ಎಲ್ಲ ಬಿಂಬನಗಳ ಸಮೂಹವನ್ನು Mor($\xi$,n) ಎಂದು ಬರೆಯುತ್ತೇವೆ, $f$ : $\xi \rightarrow$n ಪ್ರತಿಬಿಂಬನವಾಗಬೇಕಿದ್ದರೆ (ಐಸೊಮಾರ್ಫಿಸಂ)f ಬಿಂಬನವಾಗಿರಬೇಕು; ಮತ್ತು $f_o f'$ =IE, ಮತ್ತು ಆಗುವಂತೆ $f'$=E$\rightarrow$E ಒಂದು ಬಿಂಬನ ಇರಬೇಕು.

ಈಗ Vect (X) ಎಂಬುದು ಮೇಲೆ ಹೇಳಿದಂತೆ Mor (.,.)ನ ವ್ಯಾಖ್ಯೆಯಿಂದ ಒಂದು ಕ್ಯಾಟಿಗೊರಿ ಆಗುವುದೆಂದು ಕಂಡುಕೊಳ್ಳಬಹುದು. Vect (X) ನಲ್ಲಿ $\oplus$ ಚಿಹ್ನೆಯಿಂದ ನಮೂದಿಸುವ ಒಂದು ದ್ವಿಪದ ಪರಿಕರ್ಮವನ್ನು ಈಗ ವ್ಯಾಖ್ಯಿಸುತ್ತೇವೆ:

$\xi = < E, p, X >$, $n = < E', p', X >$ಗಳು Xನ ಮೇಲಿನ ಸದಿಶ ಬಂಧಗಳು.

$\xi \oplus^n = < F, p, X >$. ಇಲ್ಲಿ F{ = (x, y) /x $\in E, y \in'$ ಮತ್ತು

p(x) = p' (y) }, p (x, y) = p (x) = p' (y)

ಈಗ $\xi \oplus n$ ಒಂದು ಸದಿಶ ಬಂಧವೆಂಬುದನ್ನು ಸುಲಭವಾಗಿ ಕಂಡುಕೊಳ್ಳಬಹುದು. ಎರಡು ಸದಿಶ ಕ್ಷೇತ್ರ $\xi$ $v_1,v_2$ ಗಳನ್ನು ಕೊಟ್ಟಾಗ $v_1,v_2$ ನ್ನು ಸುಲಭವಾಗಿ ವ್ಯಾಖ್ಯಿಸಬಹುದು. ಇದನ್ನು ಸದಿಶ ಬಂಧಗಳಿಗೂ ವಿಸ್ತರಿಸಬಹುದು. ಈ ಪರಿಕರ್ಮದಿಂದ ಉಂಟಾಗುವ ಹೊಸ ಸದಿಶ ಬಂಧವನ್ನು $\xi \oplus n$ ಎಂದು ಬರೆಯುತ್ತೇವೆ.

ಈಗ Vect (X) ನಲ್ಲಿ ಒಂದು ಸಮಾನತಾಸಂಬಂಧವನ್ನು ನಿರೂಪಿಸೋಣ. $\xi$ ಮತ್ತು nಗಳು ಒಂದು ಇನ್ನೊಂದರ ಪ್ರತಿಬಿಂಬಕಗಳಾದರೆ (ಐಸೊಮಾರ್ಫಿಕ್) [f: $\xi \rightarrow$ n ಒಂದು ಪ್ರತಿಬಿಂಬನವಿದ್ದರೆ] $\xi$ ಮತ್ತು n ಒಂದಕ್ಕೊಂದು ಸಮಾನವೆಂದು ಈ ಸಂಬಂಧ. ಇದು ಸಮಾನತಾ ಸಂಬಂಧ (ಈಕ್ವಿವಲೆನ್ಸ್ ರಿಲೇಶನ್) ಎಂದು ಕಂಡುಕೊಳ್ಳುವುದು ಕಷ್ಟವಲ್ಲ. [$\xi$] ಎಂಬುದು $\xi$ಗೆ ಸಮಾನವಾಗಿರುವ ಎಲ್ಲ ಸದಿಶ ಬಂಧಗಳ ಕೂಟ. ಎಲ್ಲ ಸಮಾನತಾಕೂಟಗಳೂ (ಈಕ್ವಿವಲೆನ್ಸ್ ಕ್ಲಾಸಸ್) ಸೇರಿ ಒಂದು ಗಣವಾಗುತ್ತವೆ. ಇದನ್ನು $\tilde{k}$ (X) ಎಂದು ಕರೆಯೋಣ ಈ ಗಣದಲ್ಲಿ [$\xi$] $\oplus$ [n] = [$\xi$

$\oplus$ n] ಎಂಬುದು ಒಂದು ನಿರ್ದಿಷ್ಟ ಪರಿಕರ್ಮ. ಇದರಲ್ಲಿ $\widetilde{k}$ (X) ಒಂದು ಗ್ರೂಪ್ ಅಲ್ಲದಿದ್ದರೂ ಸ್ವಾಭಾವಿಕ ಸಂಖ್ಯೆಗಳಿಂದ ಪೂರ್ಣಾಂಕಗಳ ಗ್ರೂಪನ್ನು ಪಡೆಯುವ ಕ್ರಮದಂತೆ $\widetilde{k}$ (X)ನಿಂದ $K^o$ (X) ಎಂಬ ಗ್ರೂಪನ್ನು ಪಡೆಯಬಹುದು. ಆದ್ದರಿಂದ ಒಂದು ಸಮಷ್ಟಿ X ನ್ನು ಕೊಟ್ಟಾಗ ಒಂದು ನಿರ್ದಿಷ್ಟವಾದ ವ್ಯತ್ಯಯ ಗ್ರೂಪನ್ನು (ಕಾಮ್ಯುಟೇಟಿವ್ ಗ್ರೂಪ್) ಕಂಡುಹಿಡಿದೆವು. ಈಗ $\xi = [E, p, X]$ ಒಂದು ಸದಿಶ ಬಂಧವಾಗಿರಲಿ. Y ಯಾವುದಾದರೊಂದು ಸಮಷ್ಟಿ $f : y \rightarrow x$ ಒಂದು ಅವಿಚ್ಛಿನ್ನ ಉತ್ಪನ್ನ ಕೊಟ್ಟರೆ $\xi$ ಯನ್ನು ಉಪಯೋಗಿಸಿ $f^{-1}(\xi)$ ಎಂಬ Y ಮೇಲಿನ ಸದಿಶ ಬಂಧವನ್ನು ಈ ರೀತಿ ವ್ಯಾಖ್ಯಿಸುತ್ತೇವೆ.:

$$f^{-1}(\xi) = [F, p', Y]$$

$F = \{ (y,x) \,/\, y \in Y,\ x \in E$ ಮತ್ತು $f(y) = p(x) \}$ ಈ ವ್ಯಾಖ್ಯೆಯಿಂದ $f: Y \rightarrow X$ ಕೊಟ್ಟಾಗ $f^*: K^o(X) \rightarrow K^o(Y)$ ಎಂಬ ಗ್ರೂಪುಗಳ ಒಂದು ಬಿಂಬನವನ್ನು ಸ್ವಾಭಾವಿಕವಾಗಿ ವ್ಯಾಖ್ಯಿಸಬಹುದು. ಆದ್ದರಿಂದ $K^o$ಒಂದು ಪಂಕ್ಚರ್ ಇದೇ K–ಸಿದ್ಧಾಂತದ ಫಂಕ್ಟರ್.

ಒಂದು ಸಮಷ್ಟಿ X ಕೊಟ್ಟಾಗ ನಾವು ವ್ಯಾಖ್ಯಿಸಿದ ಗ್ರೂಪ್ $K^o(X)$ನ್ನು ಗ್ರೊಥೆಂಡಿಕ್ ಗ್ರೂಪ್ ಎಂದು ಅದನ್ನು ಮೊತ್ತಮೊದಲಾಗಿ ಕಂಡುಹಿಡಿದ ಗಣಿತಶಾಸ್ತ್ರಜ್ಞನ ಹೆಸರಿನಿಂದ ಕರೆಯುತ್ತೇವೆ. ಈಗ ಬೀಜಗಣಿತೀಯ K–ಸಿದ್ಧಾಂತದ $K'$ (A)ಯನ್ನು ವ್ಯಾಖ್ಯಿಸೋಣ.

Aಯು Aಎಂಬ ವಲಯದ (ರಿಂಗ್) ಮೇಲಿನ ಸಾಂತ ಕೋಟಿ (ರ್‍ಯಾಂಕ್) ಇರುವ ವಿಕ್ಷೇಪ ಮಾಡ್ಯೂಲ್ P ಮತ್ತು ಅದರ ಸ್ವಬಿಂಬನ a ಇವುಗಳ ಜೊತೆ (p,a) ಗಳ ಕ್ಯಾಟಿಗೊರಿ. ಇದರಲ್ಲಿ ನಾವು ಒಂದು ಸಮಾನತಾ ಸಂಬಂಧ ~ ವನ್ನು ಈ ಕೆಳಗೆ ಹೇಳಿದಂತೆ ಕಲ್ಪಿಸುತ್ತೇವೆ. $(p,a) \sim (Q,\beta)$ ಆಗಬೇಕಾದರೆ $f o a = f o \beta$ ಆಗುವಂತೆ $f: P \rightarrow Q$ಒಂದು ಪ್ರತಿಬಿಂಬನವಾಗಬೇಕು. ~ ಈ ಸಂಬಂಧ ಸಮಾನತಾ ಸಂಬಂಧವೆಂದು ಸುಲಭವಾಗಿ ಕಂಡುಕೊಳ್ಳಬಹುದು. ಸಮಾನತಾಕೂಟಗಳನ್ನು S ಎಂದು ಕರೆದು Sನಿಂದ ರಚಿಸಲ್ಪಟ್ಟ ಮುಕ್ತಗ್ರೂಪನ್ನು F ಎಂದು ಬರೆಯುತ್ತೇವೆ. ಈ ಗ್ರೂಪಿನಲ್ಲಿ

$[(P, \alpha\beta] - [P,\alpha] - [P,\beta]$ ಮತ್ತು

$$\left\{ O \rightarrow (P',\alpha') \underset{j}{\overset{i}{\rightarrow}} (P,\alpha) \overset{a}{\rightarrow} (P'',\alpha'') \rightarrow 0 \text{ ಸೂಕ್ತವಾಗಿದ್ದರೆ} \right\}$$

$[(P,\alpha)] - [(P',\alpha')] - [P^n,\alpha^n]$ ಎಂಬಂಥ ಅಂಶಗಳಿಂದ ಜನಿತವಾದ ಉಪಗ್ರೂಪ್ H ಆಗಿರಲಿ.

$0 \rightarrow (P',\alpha') \overset{j}{\rightarrow} (p,\alpha) \overset{j}{\rightarrow} (P^n,\alpha^n) \rightarrow 0$ ಸೂಕ್ತ ಎಂದು ಬರೆದಾಗ $i: p' \rightarrow p^n$ ಒಂದು ಅನುಬಿಂಬನವೆಂದೂ $j\, p \rightarrow p^n$ಎಂಬುದು $j(p) = p^n$ ಆಗುವಂತೆ ಒಂದು ಬಿಂಬನವೆಂದೂ ತಿಳಿಯಬೇಕು. ಆಗ F/H ಒಂದು ಗ್ರೂಪ್. ಇದನ್ನು $K'$ (A) ಎಂದು ಬರೆಯುತ್ತೇವೆ. ಇದಕ್ಕೆ ಇದನ್ನು ಕಂಡುಹಿಡಿದ ಗಣಿತಶಾಸ್ತ್ರಜ್ಞನ ಹೆಸರನ್ನು– ವೈಟ್‌ಹೆಡ್ ಗ್ರೂಪ್–ಇಡಲಾಗಿದೆ. ಈ $K'$ (A) ಒಂದು ವ್ಯತ್ಯಯಗ್ರೂಪ್. ಬೀಜಗಣಿತೀಯ K-ಸಿದ್ಧಾಂತದಲ್ಲಿ ಈ $K'$ (.) ಅತಿ ಪ್ರಾಮುಖ್ಯ ಫಂಕ್ಟರ್.

**K-ಸಿದ್ಧಾಂತದ ಸಾಧನೆಗಳು :** $A=F[X_1 \ldots X_n]$, K ಇಲ್ಲಿ F ಒಂದು ಕ್ಷೇತ್ರ ಮತ್ತು $F[X_1 \ldots X_n]$, $X_1 \ldots X_n$, ಎಂಬ nಚರಗಳಲ್ಲಿ Fನ ಮೇಲಿನ ಬಹುಪದ ವಲಯ) ಆಗಿದ್ದರೆ ಆಗ ಅದರ ಮೇಲಿನ ಎಲ್ಲ ವಿಕ್ಷೇಪ ಮಾಡ್ಯೂಲುಗಳು ಮುಕ್ತವಾಗಿರಲು ಸಾಧ್ಯವೆ ಎಂಬುದು ಗಣಿತಶಾಸ್ತ್ರದ ಮುಖ್ಯಪ್ರಶ್ನೆಗಳಲ್ಲೊಂದು. n=1 ಆದಾಗ ಇದು ಸತ್ಯವೆಂದು ತಿಳಿದಿತ್ತು. ಆದರೆ nನ ಉಳಿದ ಬೆಲೆಗಳಿಗೆ ಈ ಪ್ರಶ್ನೆಯ ಉತ್ತರವನ್ನು ಕಂಡು ಹಿಡಿಯಲು ಸಂಶೋಧಕರ ಪ್ರಯತ್ನ ಅವಿರತವಾಗಿ ಸಾಗಿತು. ಈ ದಿಶೆಯಲ್ಲಿ ಕೇವಲ ಕೆಲವು ವರ್ಷಗಳ ಹಿಂದೆ ಭಾರತದ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯ ಗಣಿತವಿಭಾಗದ ಶೇಷಾದ್ರಿಯವರು 2–ಎಫೈನ್–ಸಮಷ್ಟಿಯ ಮೇಲಿನ ಸದಿಶಬಂಧಗಳೆಲ್ಲವೂ ಕ್ಷುದ್ರವಾಗಿವೆಯೆಂದು (ಟ್ರಿವಿಯಲ್) ಪ್ರತಿಪಾದಿಸಿದರು. ಬೀಜಗಣಿತದ ಭಾಷೆಯಲ್ಲಿ ಇದನ್ನು ಹೇಳುವುದಾದರೆ $F[X_1, .X_2]$, ರ ಮೇಲೆ ಎಲ್ಲ ವಿಕ್ಷೇಪ ಮಾಡ್ಯೂಲುಗಳೂ ಮುಕ್ತವಾಗಿವೆ ಎಂದರ್ಥ. ಈ ದಿಶೆಯಲ್ಲಿ ಶೇಷಾದ್ರಿಯವರು ಭಾಗಶಃವಾದರೂ ಅತ್ಯಮೂಲ್ಯ ಕೊಡುಗೆ. nನ ಇತರ ಬೆಲೆಗಳಿಗೆ ಮೇಲಿನ ಪ್ರಶ್ನೆಗೆ ಉತ್ತರ ಕಂಡು ಹಿಡಿಯಲು ಯಾರೂ ಸಮರ್ಥರಾಗಿಲ್ಲ.

ಯಾವುದೇ ಎರಡು ಜ್ಯಾಮಿತೀಯ ವಸ್ತುಗಳನ್ನು ಕೊಟ್ಟಾಗ ಗಣಿತ ಶಾಸ್ತ್ರಜ್ಞನ ದೃಷ್ಟಿಯಿಂದ ಅವು ಸಮಾನವಾದುವುಗಳೇ ಅಥವಾ ಅವುಗಳಲ್ಲಿ ವ್ಯತ್ಯಾಸವಿದೆಯೇ ಎಂದು ತಿಳಿಯುವುದು ಅಗತ್ಯ. ಉದಾಹರಣೆಗಾಗಿ ಎರಡು ಬೇರೆ ಬೇರೆ ಘನ ಗಾತ್ರಗಳಿರುವ ಗೋಳಗಳಲ್ಲಿ ಗಣಿತದ ದೃಷ್ಟಿಯಿಂದ ಯಾವ ವ್ಯತ್ಯಾಸವೂ ಇಲ್ಲ. ಅವುಗಳ ರಚನೆ ಒಂದೇ. ವಸ್ತುಗಳಲ್ಲಿ ರಚನಾತ್ಮಕ ಸಾಮಾನ್ಯತೆಯನ್ನು ತಿಳಿಯಲೋಸುಗ ಮೊತ್ತಮೊದಲು ಅವುಗಳಿಗೆ ಸಂಬಂಧಿಸಿದಂತೆ ಸ್ವಾಭಾವಿಕ ಸಂಖ್ಯೆಗಳಿಗೊಂದೊಂದಕ್ಕೂ ಒಂದೊಂದರಂತೆ ಗ್ರೂಪುಗಳನ್ನು ವ್ಯಾಖ್ಯಿಸಲಾಯಿತು. ದತ್ತ ವಸ್ತು X ಆಗಿದ್ದರೆ ಸಂಖ್ಯೆ nಗೆ ಸಂಬಂಧಿಸಿದ ಗ್ರೂಪನ್ನು $\pi_n(X)$ ಎಂದು ಬರೆದು n‑ಆಯಾಮಗಳ (n‑ಡೈಮೆನ್ಷನಲ್) ಹೊಮೊಟೊಪಿ ಗ್ರೂಪುಗಳೆಂದು ಕರೆದರು. X ಮತ್ತು Y ಎಂಬ ವಸ್ತುಗಳಿಗೆ ಪ್ರತಿಪೂರ್ಣಾಂಕ nಗೂ $\pi_n$ (X) $\cong \pi_n$(Y) ($\cong$ಪ್ರತಿಬಿಂಬಕ–ಐಸೊಮಾರ್ಫಿಕ್) ಆಗಿದ್ದರೆ X ಮತ್ತು Yಗಳು ರಚನಾತ್ಮಕ ದೃಷ್ಟಿಯಿಂದ ಒಂದೇ ಆಗಿವೆ. ಆದರೆ ಜ್ಯಾಮಿತೀಯ ವಸ್ತುಗಳ ಹೊಮೊಟೊಪಿ ಗ್ರೂಪುಗಳು ಕ್ರಮಬದ್ಧವಾಗಿಲ್ಲದಿರುವುದರಿಂದಲೂ ಪೂರ್ಣಾಂಕಗಳ ಸಂಖ್ಯೆ ಅನಂತವಾಗಿರುವುದರಿಂದಲೂ ಅವನ್ನು ವ್ಯಾಖ್ಯಿಸಲು ಎಷ್ಟು ಸುಲಭವಾಯಿತೋ ಅಷ್ಟೇ ಅವನ್ನು ಕಂಡುಹಿಡಿಯಲು ಕೂಡ ಸಾಧ್ಯವಾಯಿತು. ಹಾಗಾಗಿ ಅವುಗಳ ವ್ಯಾಖ್ಯೆಯಿಂದ ಯಾವ ಪ್ರಯೋಜನವೂ ಇಲ್ಲದಾದಾಗ ಕೆ–ಸಿದ್ಧಾಂತದ ಸಹಾಯದಿಂದ ಬೋಟ್‌ರವರು ಗಣಿತಶಾಸ್ತ್ರದಲ್ಲಿ ಬಹಳವಾಗಿ ಬರುವ ಕೆಲವು ವಸ್ತುಗಳಿಗಾದರೂ ಹೊಮೊಟೊಪಿ ಗ್ರೂಪುಗಳು ಆವರ್ತಿಸುವುದನ್ನು ಕಂಡುಹಿಡಿದು ತಮ್ಮ ಆವರ್ತನ ಸಿದ್ಧಾಂತವನ್ನು ಸ್ಥಾಪಿಸಿದರು. ಮೊತ್ತ ಮೊದಲು $\pi_n(X)$, X ಗೆ ಸಂಬಂಧಿಸಿದ ಒಂದು ನಿರ್ದಿಷ್ಟವಾದ ಸಮಷ್ಟಿ Yಯ $K^o(Y)$ಗೆ ಸಮವಾಗಿದೆಯೆಂದು ಕಂಡುಹಿಡಿದು ಮತ್ತೆ $K^o$(.)ನ ಆವರ್ತನವನ್ನು ಸಿದ್ಧಪಡಿಸಲಾಯಿತು. ಜ್ಯಾಮಿತಿಯಲ್ಲಿ ಬರುವ ಬಹುಮುಖ್ಯ ವಸ್ತುಗಳ $\pi_n(X)$ನ್ನು ಕಂಡು ಹಿಡಿಯಲು [**R**(ನೈಜಸಂಖ್ಯೆಗಳ ಕ್ಷೇತ್ರ), **C**(ಮಿಶ್ರಸಂಖ್ಯೆಗಳ ಕ್ಷೇತ್ರ) ಇವುಗಳ ಮೇಲಿನ n X nಮಾತ್ರಿಕೆಗಳ (ಮ್ಯಾಟ್ರಿಸಸ್) ಗ್ರೂಪ್ ಮತ್ತು ಲಂಬೀಯ (ಆರ್ಥಾಗೊನಲ್) ಮಾತೃಕೆಗಳ ಉಪಗ್ರೂಪ್ $o_n$ ಮತ್ತು ಏಕಮಾನೀಯ (ಯೂನಿಟರಿ ಮಾತೃಕೆಗಳ ಉಪಗ್ರೂಪ್ $U_n$, $\mathbf{R}^n$ ಮತ್ತು $C^n$ ಇವುಗಳ $\pi_n$ಗಳನ್ನು ತಿಳಿದರೆ ಸಾಕೆಂದು ತಿಳಿಯಲಾಯಿತು. ಮತ್ತು $\pi_n(O) = \pi_{n+2}(O)$, $\pi_n$ =(U) $\pi_{n+8}(U)$, $\pi_n(S^{r-1}) = \pi_{n+1}(S^r)$ ಮತ್ತು $\pi_n(S^n) = \mathbf{Z}$ ಎಂದು K-ಸಿದ್ಧಾಂತವನ್ನು ಉಪಯೋಗಿಸಿ ಬಾಟ್ ಸಾಧಿಸಿದರು. (ಇಲ್ಲಿ $O=O_n$, $U=U_n$, $S^r$=r ಆಯಾಮದ ಗೋಳ, **Z** ಪೂರ್ಣಾಂಕಗಳ ಗ್ರೂಪ್).

ಪೂರ್ಣಾಂಕಗಳಿಂದ ತೊಡಗಿ ಸಂಖ್ಯೆಗಳನ್ನು ವಿಸ್ತರಿಸುತ್ತ ಹೋಗಿ ಕೊನೆಗೆ ನೈಜ ಸಂಖ್ಯೆಗಳನ್ನು ಕಂಡುಕೊಳ್ಳಲಾಯಿತು. ಆಮೇಲೆ ನೈಜಸಂಖ್ಯೆಗಳ ಗಣಕ್ಕೆ ಕ್ಷೇತ್ರ ರಚನೆಯಿದೆಯೆಂದೂ ಅದು ಒಂದು ರೀತಿಯಿಂದ ಪರಿಪೂರ್ಣವೆಂದೂ ತಿಳಿಯಿತು. ಮುಂದೆ ಈ ನೈಜಸಂಖ್ಯೆಗಳ ಕ್ಷೇತ್ರದ ಮೇಲೆ ವಿವಿಧ ಆಯಾಮಗಳ ಸದಿಶ ಸಮಷ್ಟಿಗಳನ್ನು (ವೆಕ್ಟರ್ ಸ್ಪೇಸಸ್) ನಿರ್ಮಿಸಲಾಯಿತು. ಈ ಸಮಷ್ಟಿಗಳಲ್ಲಿ ಯಾವುದಕ್ಕಾದರೂ ಕ್ಷೇತ್ರ ರಚನೆಯನ್ನು ಕೊಡಲು ಸಾಧ್ಯವಿದೆಯೇ ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಹುಟ್ಟಿಕೊಂಡಿತು. 2–ಆಯಾಮಗಳ ಸದಿಶ ಸಮಷ್ಟಿಗೆ ವ್ಯತ್ಯಯ ಕ್ಷೇತ್ರ ರಚನೆಯಿದೆಯೆಂದು ಕಂಡು ಹಿಡಿದರು. ಈ ಸಮಷ್ಟಿಯ ಅಂಶಗಳನ್ನು ಮಿಶ್ರ ಸಂಖ್ಯೆಗಳೆಂದು ಕರೆಯಲಾಯಿತು. ಮುಂದೆ K–ಸಿದ್ಧಾಂತದ ಸಹಾಯದಿಂದ n=1, 2, 4 ಮತ್ತು 8 ಆದಾಗ ಮಾತ್ರ n‑ಆಯಾಮಗಳ R-ಸದಿಶ ಸಮಷ್ಟಿಗೆ ಕ್ಷೇತ್ರರಚನೆಯನ್ನು ಕೊಡಲು ಸಾಧ್ಯವೆಂದೂ n=4 ಮತ್ತು 8ಆದಾಗ ಈ ಸದಿಶ ಸಮಷ್ಟಿಗಳಿಗೆ ಕೊಟ್ಟ ಕ್ಷೇತ್ರ ರಚನೆ ಗುಣನ ವ್ಯತ್ಯಯ ನಿಯಮಬದ್ಧವಾಗಲು ಸಾಧ್ಯವಿಲ್ಲವೆಂದೂ ಕಂಡುಕೊಂಡರು. ಈ ಕ್ಷೇತ್ರ ರಚನೆಯಿರುವ ಸದಿಶ ಸಮಷ್ಟಿಗಳನ್ನು ಭಾಜನ ಬೀಜಗಣಿತಗಳೆಂದು (ಡಿವಿಶನ್ ಆಲ್ಜೀಬ್ರಾಸ್) ಕರೆದರು. ಇವು ನೈಜ (ಸಂಖ್ಯೆಗಳ ಆಯಾಮ 1) (2) ಮಿಶ್ರಸಂಖ್ಯೆಗಳು (ಆಯಾಮ 2), (3) ಹ್ಯಾಮಿಲ್ಟನ್ ಸಂಖ್ಯೆಗಳು (ಆಯಾಮ 4), (4) ಕೇಲಿ ಸಂಖ್ಯೆಗಳು (ಆಯಾಮ8).

ಭೌತವಿಜ್ಞಾನದಲ್ಲಿ ಬರುವ ಅವಕಲನ ಸಮೀಕರಣಗಳನ್ನು ಬಿಡಿಸುವುದು ಫ್ರೆಡ್ಹೋಲ್ಮ್ ಫಂಕ್ಟರುಗಳ ಸೂಚ್ಯಂಕಗಳನ್ನು ಕಂಡು ಹಿಡಿಯುವುದರಿಂದ ಸಾಧ್ಯವೆಂದು ತೀರ್ಮಾನಿಸಲಾಯಿತು. ಫ್ರೆಡ್ಹೋಲ್ಮ್ ಫಂಕ್ಟರುಗಳ ಅವಿಚ್ಛಿನ್ನ ಕುಟುಂಬದ (ಫ್ಯಾಮಿಲಿ) ಸೂಚ್ಯಂಕ ಆ ಕುಟುಂಬದ ಸೂಚೀ ಸಮಷ್ಟಿಯ (ಇಂಡೆಕ್ಸಿಂಗ್ ಸ್ಪೇಸ್) $K^o$(.)ನ ಒಂದು ಧಾತು ಎಂದು ಕಂಡುಹಿಡಿದು ಸಮಸ್ಯೆಯನ್ನು ಬಿಡಿಸಿದ ಕೀರ್ತಿ ಆಟಿಯ ಮತ್ತು ಸಿಂಗರ್ ಇವರಿಗೆ ಸೇರಿದ್ದು.

**ಬೀಜಗಣಿತದ K–ಸಿದ್ಧಾಂತ ಮತ್ತು ಸ್ಥಿರ ಬೀಜಗಣಿತ (ಸ್ಟೇಬಲ್ ಆಲ್ಜಿಬ್ರ):** ಬೀಜಗಣಿತದ ಒಂದು ಮುಖ್ಯಭಾಗ ರೇಖೀಯ ಬೀಜಗಣಿತ. ಈ ಭಾಗದಲ್ಲಿ K–ಸದಿಶ ಸಮಷ್ಟಿಗಳು ಮತ್ತು ಅವುಗಳ ಸ್ವಬಿಂಬನವನ್ನು ಕುರಿತು ಕಲಿಯುತ್ತೇವೆ. K–ಸದಿಶ ಸಮಷ್ಟಿಗಳು Kಯ ಮೇಲಿನ ಮುಕ್ತ ಮಾಡ್ಯೂಲುಗಳು. ಇವುಗಳ ಸ್ವಬಿಂಬನ ಒಂದೊಂದನ್ನೂ ಒಂದೊಂದು ನಿರ್ಧಾರಕ (ಡಿಟರ್ಮಿನೆಂಟ್) ಅಶೂನ್ಯ ಮಾತೃಕೆಗಳಿಂದ ಗುರುತಿಸಬಹುದು. ಆದ್ದರಿಂದ ಸರಳ ಬೀಜಗಣಿತ n X n ಮಾತೃಕೆಗಳ ಗ್ರೂಪನ್ನು ಕುರಿತಾಗಿದೆ. ಈಗ ಕ್ಷೇತ್ರ Kಯ ಬದಲು ಯಾವುದಾದರೂ ಏಕಯುತವಾದ (ವ್ಯತ್ಯಯ ನಿಯಮಬದ್ಧವಾಗಬೇಕಿಲ್ಲ) ವಲಯವನ್ನು ತೆಗೆದುಕೊಂಡರೆ ನಮಗೆ ಸಿಗುವ ಮುಕ್ತಮಾಡ್ಯೂಲ್ (n–ಆಯಾಮಗಳದ್ದು) $A^n = \{(\alpha_1, \alpha_2, \ldots, \alpha_n) | \alpha i \in A\}$. ಈ ಮಾಡ್ಯೂಲಿನ ಸ್ವಬಿಂಬನ ಕೂಡ nXn ಮಾತೃಕೆಯಿಂದ ಗುರುತಿಸಲ್ಪಡಬಹುದು. ಈ nXn ಮಾತೃಕೆಗಳಿಗೆ ವಿಲೋಮ ಉಂಟು.

ಆದರೆ ನಾವು ಅದರ ನಿರ್ಧಾರಕವನ್ನು ಕುರಿತು ಪ್ರಸ್ತಾಪಿಸುವಂತಿಲ್ಲ. ಏಕೆಂದರೆ ಅದಕ್ಕೆ ಅವ್ಯತ್ಯಯ ವಲಯದಲ್ಲಿ ಅರ್ಥವಿಲ್ಲ. ಈ ವಿಲೋಮ ಮಾತೃಕೆಗಳ ಗ್ರೂಪನ್ನು $GL_n(A)$ಎಂದು $\begin{bmatrix}1 & & & 0\\ & 1 & & \\ & & 1 & \\ 0 & & & 1\end{bmatrix}$ಬರೆಯುತ್ತೇವೆ. ಮಾತೃಕೆಯನ್ನು *I* ಎಂದು ಬರೆಯುವುದು ವಾಡಿಕೆ. ಈ ಮಾತೃಕೆಗಳಲ್ಲಿ $I+ale_{ij}$ ಒಂದು ವಿಲೋಮ ಮಾತೃಕೆ $e_{ij}$ಯು i-ಅಡ್ಡಸಾಲು j-ನೀಟಸಾಲಿನಲ್ಲಿರುವ ಅಂಕೆ 1ಆಗಿದ್ದು ಉಳಿದ ಕಡೆ 0ಇರುವ ಮಾತೃಕೆ). ಈ ಜಾತಿಯ ಮಾತೃಕೆಗಳು ಉಂಟು ಮಾಡುವ ಉಪಗ್ರೂಪನ್ನು En(A)ಎಂದು ಬರೆಯುತ್ತೇವೆ $\begin{bmatrix}1 & & & *\\ & 1 & & \\ & & 1 & \\ 0 & & & 1\end{bmatrix}$ಮತ್ತು $\begin{bmatrix}1 & & & *\\ & 1 & & \\ & & 1 & \\ * & & & 1\end{bmatrix}$ ಈ ಜಾತಿಯ ಮಾತೃಕೆಗಳು $E_n(A)$ಯಲ್ಲಿವೆ ಎಂದು ನೆನಪಿಸುತ್ತೇವೆ.

**ಈಗ ನಮ್ಮ ಮುಂದಿರುವ ಸಮಸ್ಯೆ:** $GL_n(A)$ ಯ ಅಂಶಗಳಿಗೆ ನಿರ್ಧಾರಕವಿಲ್ಲದಿದ್ದರೂ ಅದೇ ಗುಣವುಳ್ಳ ಬೇರೇನಾದರೂ ಅಂಕೆಯನ್ನು ನಿರ್ದೇಶಿಸಲು ಸಾಧ್ಯವೇ ಎಂಬುದು. ಅದು ಸಾಧ್ಯವಾದರೆ ನಮ್ಮ ಸರಳಬೀಜಗಣಿತ ವಿಸ್ತೃತವಾಗಿ ಗಣಿತದ ಅನೇಕ ಸಮಸ್ಯೆಗಳನ್ನು ಬಿಡಿಸಲು ಸುಲಭವಾಗುತ್ತದೆ. ಬೀಜಗಣಿತದ ಕೆ–ಸಿದ್ಧಾಂತದಿಂದ ಬಹಳವಾಗಿ ಅದು ಸಾಧ್ಯವೆಂದು ತೋರಿಸಿಕೊಡುತ್ತವೆ. ಈ ವಿಸ್ತೃತ ಬೀಜಗಣಿತವನ್ನು ಸ್ಥಿರಬೀಜಗಣಿತ ಎಂಬ ಅನ್ವರ್ಥನಾಮದಿಂದ ಕರೆಯುತ್ತೇವೆ.

ಈಗ G ಒಂದು ಗ್ರೂಪ್ ಇದ್ದು $H_1, H_2$ಗಳು ಅದರ ಉಪಗ್ರೂಪುಗಳಾದರೆ $[H_1, H_2]$, $h_1h_2h_1^{-1}h_2^{-1}$ ($h_1 \in H_1$, $h_2 \in H_2$) ಗಳಂಥ ಧಾತುಗಳಿಂದ ಉಂಟು ಮಾಡಲ್ಪಟ್ಟ Gಯ ಉಪಗ್ರೂಪು. [G,G] ಅಂತೆಯೇ ವ್ಯಾಖ್ಯಿಸಲ್ಪಟ್ಟ ಅದನ್ನು ವ್ಯತ್ಯಯನೀಯ ಉಪಗ್ರೂಪ್ ಎನ್ನುತ್ತಾರೆ. ಇದು ಒಂದು ಅವ್ಯತ್ಯಸ್ಥ ಉಪಗ್ರೂಪಾಗಿದ್ದು $\frac{G}{[G,G]}$ಒಂದು ವ್ಯತ್ಯಯ ಗ್ರೂಪಾಗಿದೆ.

1 ಸುಲಭವಾಗಿ $n \geq 3$, $E_n(A) = [E_n(A), E_n(A)]$ ಎಂದು ಕಂಡುಕೊಳ್ಳಬಹುದು.

2 $n \geq 1$ ಆಗಿದ್ದರೆ $[GL_n(A), GL_n(A)]$ $C \subset E_{2n}(A)$ ಆಗಿದ್ದರೆ ಎಂದು ವೈಟ್‌ಹೆಡ್‌ರವರು ಪ್ರತಿಪಾದಿಸಿದ್ದಾರೆ.

ಈಗ $m \geq n$ಆಗಿದ್ದರೆ $GL_n(A) \to GL_m(A)$ಒಂದು ಅನುಬಿಂಬನವನ್ನು (ಮಾನೋಮಾರ್ಫಿಸಂ) $\alpha \to \begin{pmatrix}\alpha & 0\\ 0 & I\end{pmatrix}$ ಎಂಬ ನಿಯಮದಿಂದ ವ್ಯಾಖ್ಯಿಸಬಹುದು.

[ಇಲ್ಲಿ I ಎಂಬುದು m-n X m-n ಏಕಮಾನ ಮಾತೃಕೆ (ಯೂನಿಟ್ ಮ್ಯಾಟ್ರಿಕ್ಸ್)]. ಈ ಅನುಬಿಂಬನದಿಂದಾಗಿ $GL_n(A)$ಯನ್ನು $GL_m(A)$ಯ ಉಪಗ್ರೂಪಾಗಿ ಗುರುತಿಸಬಹುದು. ಹಾಗೆಯೇ $E_n(A)$ಯನ್ನು $E_m(A)$ಯ ಉಪಗ್ರೂಪಾಗಿ ತಿಳಿಯಬಹುದು. ಆಗ ನಮಗೆ $GL(A) = UGL_m(A)$ ಎಂಬ ಅನಂತಮಾತೃಕೆಗಳ ಗ್ರೂಪ್ ಸಿಕ್ಕುತ್ತದೆ. ಈ ಗ್ರೂಪನ್ನು ಸ್ಥಿರ ರೇಖೀಯ ಗ್ರೂಪ್ ಎಂದು ಕರೆಯುತ್ತಾರೆ. ಅಂತೆಯೇ $U_nE_n(A)=E(A)$ ಎಂದು ಬರೆಯೋಣ. GL(A)ಯ ಯಾವುದಾದರೊಂದು ಮಾತೃಕೆ $\begin{pmatrix}\alpha & 0\\ 0 & I_\infty\end{pmatrix}$ ರೂಪದಲ್ಲಿದೆ. [ಇಲ್ಲಿ a,n ನ ಯಾವುದಾದರೊಂದು ಬೆಲೆಗೆ $GL_n(A)$ಯ ಅಂಶವಾಗಿದೆ.] ಈಗ ಮೇಲಿನ (1)ರಂತೆ $n \geq 1$ ಆಗಿದ್ದರೆ $E(A)= [E(A), E(A)]$ ಮತ್ತು (2) ರಂತೆ $n \geq 1$ ಆಗಿದ್ದರೆ $[GL(A), GL(A)] \subset E(A)$. ಹಾಗಾಗಿ $E(A)= [E(A), E(A)] \subset [GL(A), GL(A) \subset E(A)]$ ಆದ್ದರಿಂದ $E(A)=[GL(A), GL(A)]$

ಮೇಲೆ ನೋಡಿದಂತೆ $\frac{GL(A)}{E(A)} = \frac{GL(A)}{[GL(A),GL(A)]}$

ಒಂದು ವ್ಯತ್ಯಯ ಗ್ರೂಪ್. ಇದನ್ನು ಸರಿಯಾಗಿ ಪರಿಶೀಲಿಸಿದರೆ ಇದೇ ನಾವು ಹಿಂದೆ ಹೇಳಿದ $K'(A)$. ಈಗ $W : GL(A) \to K_1(A)$ ಯನ್ನು ಸ್ವಾಭಾವಿಕ ವಿಕ್ಷೇಪ ಉತ್ಪನ್ನವನ್ನಾಗಿ ಬರೆದರೆ ಈ ಉತ್ಪನ್ನ Wಗೆ ನಿರ್ಧಾರಕ ಉತ್ಪನ್ನದ ಎಲ್ಲ ಗುಣಗಳೂ ಇವೆ. ಈ ಉತ್ಪನ್ನವನ್ನು ವೈಟ್‌ಹೆಡ್ ನಿರ್ಧಾರಕ ಉತ್ಪನ್ನ ಎಂದು ಕರೆಯುತ್ತೇವೆ. ಆದರೆ $GL_n(A)$ ಕೊಟ್ಟಾಗ ಇಂಥ ಉತ್ಪನ್ನ ಸಾಧ್ಯವೇ ಎಂಬ ಪ್ರಶ್ನೆ ದತ್ತ Aಯನ್ನು ಹೊಂದಿಕೊಂಡು $\frac{GL_n(A)}{E_n(A)} \cong K'(A), \forall_n \geq n$ ಆಗುವಂತೆ ಒಂದು m ಪೂರ್ಣಾಂಕವಿದೆ ಎಂದು ಭಾಸ್‌ರವರು ಕಂಡು ಹಿಡಿದು ಸ್ಥಿರ ಬೀಜಗಣಿತಕ್ಕೆ ಒಂದು ಸುಸ್ಪಷ್ಟರೂಪವನ್ನು ಕೊಟ್ಟರು.

$K^0$ಮತ್ತು $K'$ಗಳಂತೆ ಇನ್ನೂ ಅನೇಕ ಫಂಕ್ಟರುಗಳನ್ನು ಕಂಡು ಹಿಡಿಯುವ ಪ್ರಯತ್ನ ನಡೆಯುತ್ತಿದೆ. ಮಿಲ್ನರ್‌ರವರು $K^2$ಎಂಬ ಒಂದು ಫಂಕ್ಟರನ್ನು ಕಂಡು ಹಿಡಿದಿದ್ದಾರೆ. ಇದರ ಸಿದ್ಧಾಂತ ಹೇಳುವಷ್ಟು ದೊಡ್ಡದಲ್ಲವಾದರೂ ಇದರ ಉಪಯೋಗವನ್ನು ಕಂಡು ಹಿಡಿಯಲು ಗಣಿತಶಾಸ್ತ್ರಜ್ಞರಿಂದ ಪ್ರಯತ್ನ ನಡೆಯುತ್ತಿದೆ. **(ಎ.ಎನ್.ಎ.ಸಿ.)**

**ಕೆಳಗೆ ತಳ್ಳಲ್ಪಡುವ ನೀರು ಚಕ್ರಗಳು :** ನೀರಿನಲ್ಲಿ ಸಂಗ್ರಹೀತವಾದ ಶಕ್ತಿಯನ್ನು ಯಾಂತ್ರಿಕಶಕ್ತಿಯನ್ನಾಗಿ ಪರಿವರ್ತಿಸಬಲ್ಲ ಸಾಧನಗಳು(ಅಂಡರ್ ಶಾಟ್ ವ್ಹೀಲ್ಸ್). ಈ



ಚಿತ್ರ 1 ಚಪ್ಪಟೆ ಅಲಗುಗಳಿರುವ ಜಲಯಂತ್ರ

ಜಲಯಂತ್ರದ ರಚನೆಯನ್ನು ಚಿತ್ರ 1ರಲ್ಲಿ ತೋರಿಸಿದೆ. ಕಾಲುವೆಗೆ ಅಡ್ಡ ಇಟ್ಟಿರುವ ಬಾಗಿಲಿನ ಕೆಳಭಾಗದ ಕಂಡಿಯ ಮೂಲಕ ನೀರಿನ ಧಾರೆ ಹೊರಬಂದು ಚಕ್ರದ ಚಪ್ಪಟೆ



ಚಿತ್ರ 2 ಬಗ್ಗಿದ ಅಲಗುಗಳಿರುವ ಪಾನ್ಸ್‌ಲೇ ಚಕ್ರ

ಅಲಗುಗಳಿಗೆ ಬಡಿಯುತ್ತದೆ. ಅಲಗುಗಳನ್ನು ಚಕ್ರದ ಆರೀಯರೇಖೆಗಳನ್ನು ಅನುಸರಿಸಿ ಜೋಡಿಸಿರುವುದರಿಂದ ನೀರಿನ ಆಘಾತದಿಂದ ಚಕ್ರ ನಿರಂತರವಾಗಿ ಸುತ್ತುತ್ತ ಶಕ್ತಿಯನ್ನು ಉತ್ಪಾದಿಸುವುದು ಸಾಧ್ಯವಾಗುತ್ತದೆ. ಕಾಲುವೆಯ ಅಡ್ಡಲಾಗಿ ಸರಿಯಾದ ಅಳತೆಯುಳ್ಳ ಬಾಗಿಲನ್ನು ಇಡುವುದರಿಂದಲೂ ಚಕ್ರದ ಕೆಳಗೆ ಕಾಲುವೆಯ ತಳಭಾಗವನ್ನು ವೃತ್ತಾಕಾರವಾಗಿ ಮಾಡುವುದರಿಂದಲೂ ಚಕ್ರದ ದಪ್ಪ ಕಾಲುವೆಯ ಅಗಲಕ್ಕೆ ಸಮವಾಗಿರುವಂತೆ ಮಾಡುವುದರಿಂದಲೂ ನೀರಿನ ಸೋರುವಿಕೆಯನ್ನು ಬಲುಮಟ್ಟಿಗೆ ತಡೆಗಟ್ಟಿ ತನ್ಮೂಲಕ ಉಂಟಾಗುವ ಶಕ್ತಿಯ ಅಪವ್ಯಯವನ್ನು ಒಂದು ಕನಿಷ್ಠ ಮಿತಿಯೊಳಗೆ ನಿಲ್ಲಿಸುವುದು ಸಾಧ್ಯವಾಗುತ್ತದೆ. ಇಂಥ ಜಲಯಂತ್ರಗಳ ಕಾರ್ಯದಕ್ಷತೆ ಶೇ. 30–35ರವರೆಗೂ ಇರುತ್ತದೆ. ಚಕ್ರಗಳ ವ್ಯಾಸ 3–8 ಮೀ.ವರೆಗೆ ಇರಬಹುದು.

**ಪಾನ್ಸ್‌ಲೇ ಚಕ್ರ:** ಚಪ್ಪಟೆ ಅಲಗುಗಳುಳ್ಳ ಜಲಯಂತ್ರಗಳ ದಕ್ಷತೆ ಬಲು ಕಡಿಮೆಯಾಗಿರುತ್ತದೆ. ಪಾನ್ಸ್ ಲೇ ಎಂಬ ವಿಜ್ಞಾನಿ ಗಣಿತ ವಿಧಾನದಿಂದ ಅನ್ವೇಷಣೆ ನಡೆಸಿ ಈ ಯಂತ್ರದ ದಕ್ಷತೆಯನ್ನು ಹೆಚ್ಚು ಮಾಡಬಲ್ಲ ಕೆಲವು ನಿಯಮಗಳನ್ನು ರೂಪಿಸಿದ. ಇವುಗಳ ಅನುಸಾರ ನಿರ್ಮಿತವಾದ ಜಲಯಂತ್ರಕ್ಕೆ ಪಾನ್ಸ್‌ಲೇ ಚಕ್ರ (ಚಿತ್ರ2) ಎಂದು ಹೆಸರು. ಇದರಲ್ಲಿ ಚಪ್ಪಟೆಯಾದ ಅಲಗುಗಳಿಗೆ ಬದಲಾಗಿ ಬಗ್ಗಿರುವ ಅಲಗುಗಳನ್ನು ಉಪಯೋಗಿಸುತ್ತಾರೆ. ಇವು ನೀರಿನ ಹೊಡೆತದಿಂದ ಸಂಭವಿಸುವ ಶಕ್ತಿಯ ನಷ್ಟವನ್ನು ಬಲುಮಟ್ಟಿಗೆ ಕಡಿಮೆ ಮಾಡುತ್ತವೆ. ಆದ್ದರಿಂದ ಪಾನ್ಸ್‌ಲೇ ಚಕ್ರದ ದಕ್ಷತೆ, ಇತರ ಜಲಚಕ್ರಗಳ ದಕ್ಷತೆಯ ಎರಡರಷ್ಟಿರುತ್ತದೆ. **(ಬಿ.ಪಿ.ಜಿ.)**

**ಕೆಳತಲೆಯರೆ (ಕೆಳಶಿರಗುಳಿ) :** ಮಿದುಳಿನ ಮಧ್ಯಭಾಗದಲ್ಲಿದ್ದು ಮಿದುಳಿನ ಅರ್ಧಗೋಳಗಳ ಮತ್ತು ಕಾಂಡದ ಚಟುವಟಿಕೆಗಳಲ್ಲಿ ಸಾಮರಸ್ಯವನ್ನು ಕಲ್ಪಿಸಿ ಅವುಗಳ ನಡುವೆ ಸಂಪರ್ಕ ಉಂಟುಮಾಡುವ ಪ್ರಮುಖ ಅಂಗ (ಹೈಪೊತಾಲಮಸ್). ಪಿಟ್ಯುಟರಿ ಗ್ರಂಥಿಯ ತೊಟ್ಟು ಇದರ ಮಧ್ಯೆ ಅಂಟಿಕೊಂಡಿದೆ. ಇದರಲ್ಲಿ ನರತಂತುಗಳೂ ನರಕಣಗಳೂ ಇವೆ. ನರಕಣಗಳ ಗುಂಪುಗಳಿಗೂ ಮಿದುಳಿನ ಇತರ ಭಾಗಗಳಿಗೂ ಬಹಳ ನರತಂತುಗಳ ಸಂಬಂಧಗಳುಂಟು. ಪ್ರಾಣಿಗಳ ಮೇಲೆ ಪ್ರಯೋಗ ಮತ್ತು ಸಂಶೋಧನೆಗಳನ್ನು ಮಾಡಿ ಕೆಳತಲೆಯರೆಯ ಕ್ರಿಯೆಗಳ ವಿಚಾರವಾಗಿ ಹೆಚ್ಚಿನ ವಿವರಗಳನ್ನು ಸಂಗ್ರಹಿಸಲಾಗಿದೆ. ಈ ತಿಳಿವಿಗೆ ಮನುಷ್ಯನ ಕೆಲವು ರೋಗಗಳ ಅಧ್ಯಯನದಿಂದಲೂ ಆಧಾರಗಳು ಸಿಕ್ಕಿವೆ. ಪಿಟ್ಯುಟರಿಯ ಮುಂಭಾಗದ ರಸಗಳು ಮುಖ್ಯವಾಗಿ ದೇಹದ, ಜನನಾಂಗಗಳ, ಉಪವೃಕ್ಕ (ಅಡ್ರಿನಲ್ ಕಾರ್ಟೆಕ್ಸ್) ಮತ್ತು ಥೈರಾಯ್ಡ್ ಗ್ರಂಥಿಗಳ ಬೆಳವಣಿಗೆಗೆ ಬೇಕಾದವು. ಅದೇ ಗ್ರಂಥಿಯ ಹಿಂಭಾಗ ಮೂತ್ರ ಜನನಾಂಗಗಳ ಕೆಲಸವನ್ನು ತಗ್ಗಿಸುವ ಹಾಗೂ ಗರ್ಭಕೋಶವನ್ನು ಹಿಂಡುವಂತೆ ಮಾಡುವ (ಪ್ರಸವಚೋದಕ) ರಸಗಳನ್ನು ಉತ್ಪಾದಿಸುತ್ತದೆ. ಪಿಟ್ಯುಟರಿ ಗ್ರಂಥಿಯ ಚಟುವಟಿಕೆಯನ್ನು ನಿಯಂತ್ರಿಸುವ ರಾಸಾಯನಿಕ ಪದಾರ್ಥಗಳನ್ನು ಕೆಳತಲೆಯರೆಯ ಕೆಲವು ನರಕಣಗಳು ಸ್ರವಿಸುವುವು ಎಂದು ತಿಳಿಯಲು ಆಧಾರಗಳಿವೆ. ಕೆಳತಲೆಯರೆಯ ಕೆಲವು ಭಾಗಗಳ ರೋಗಗಳಿಂದ ಹಸಿವು ಹೆಚ್ಚಿ ಸ್ಥೂಲತ್ವ ಉಂಟಾಗಬಹುದು ಮತ್ತು ಇತರ ಕೆಲವು ಭಾಗಗಳ ರೋಗಗಳಿಂದ ಹಸಿವೆ ಇಲ್ಲದಂತಾಗಿ ದೇಹ ಕ್ಷೀಣಿಸಬಹುದು. ರಕ್ತದ ಒತ್ತಡ, ಜಠರ ಕೋಶ ಮತ್ತು ಕರುಳುಗಳ ಚಟುವಟಿಕೆ, ಪಾಪೆಗಳು ಅರಳುವುದು ಇತ್ಯಾದಿಗಳನ್ನು ಕ್ರಮಪಡಿಸುವುದರಲ್ಲೂ ಮನಸ್ಸಿನ ಉದ್ವೇಗಸ್ಥಿತಿಗಳಲ್ಲಿ ಆಗುವ ಸ್ವಯಂಚಾಲಿತ ಲಕ್ಷಣಗಳನ್ನು ಪ್ರಚೋದಿಸುವುದರಲ್ಲೂ ಕೆಳತಲೆಯರೆಯ ಪ್ರಭಾವವಿದೆ. ಕೋಪ ಮತ್ತು ಭಯಗಳ ಉದ್ವೇಗಗಳಲ್ಲಿ ಆಗುವ ದೇಹದ ಚರ್ಯೆಗಳನ್ನು ಉಂಟುಮಾಡುವುದರಲ್ಲಿ ಸಹ ಅದರ ಪಾತ್ರ ಉಂಟು. ಅರಿವು ಸರಿಯಾಗಿರುವಂತೆ ಇಂದ್ರಿಯಕ್ರಿಯಾದಿ ವಿಭಾಗಗಳೊಡನೆ ಮಿದುಳಿನ ಉಚ್ಚಭಾಗ ಕೆಲಸ ಮಾಡುವ ಮಟ್ಟವನ್ನು ನಿಷ್ಕರ್ಷಿಸುವ ಮಿದುಳಿನಜಾಲಭಾಗವಿದೆ(ರೆಟಿಕ್ಯುಲರ್ ಫಾರ್ಮೇಶನ್). ಇದರ ಮೇಲ್ತುದಿಯಲ್ಲಿ ಕೆಳತಲೆಯರೆಯಿದ್ದು ಇದು ಮಿದುಳಿನ ಚಟುವಟಿಕೆಗಳಲ್ಲಿ ಸ್ವಲ್ಪಮಟ್ಟಿಗೆ ಕೇಂದ್ರಸ್ಥಾನವನ್ನು ಪಡೆದಿದೆ. ಅರಿವಿಗೆ ಬರದ ಒಳ ಅಂಗಚಟುವಟಿಕೆಗಳ ನಿಯಂತ್ರಣ ಕೇಂದ್ರ ಕೆಳತಲೆಯರೆ. ಆದ್ದರಿಂದ ಮನಸ್ಸಿನ ಉದ್ವೇಗದಿಂದ ಒಳಅಂಗಗಳ ಮೇಲೆ ಪರಿಣಾಮವಾಗಲು ಅವಕಾಶ ಉಂಟು. ಉದಾಹರಣೆಗೆ, ದುಃಖವಾದಾಗ ಹೊಟ್ಟೆಯಲ್ಲಿ ಸಂಕಟವಾಗುತ್ತದೆ. ವಾಸನೆಗೆ ಸಂಬಂಧಿಸಿದ ಮಿದುಳ ಭಾಗಗಳೊಡನೆ ಹಾಗೂ ಪ್ರಾಣಿವಿಕಾಸದಲ್ಲಿ ಇತ್ತೀಚೆಗೆ (ಸುಮಾರು ಮೂರು ಕೋಟಿ ವರ್ಷಗಳಿಂದೀಚೆಗೆ) ಬೆಳೆದ ಮಿದುಳು ಭಾಗಗಳ ಕೆಲಸಗಳಲ್ಲಿ ಕೆಳತಲೆಯರಿಗೆ ಸಂಬಂಧ ಉಂಟು. ಇಚ್ಛೆಗೆ ಒಳಪಡದ ಸ್ವಯಂಚಾಲಿತ ಚಟುವಟಿಕೆ, ಅಂತಃಸ್ರಾವಕ ಗ್ರಂಥಿಗಳ ಚಟುವಟಿಕೆ ಮತ್ತು ಭಾವೋದ್ವೇಗಗಳ ವಿಕಾರಗಳಲ್ಲಿ ಬಹುವ್ಯಾಪ್ತಿಯಿರುವ ನರತಂತುಗಳ ಕ್ರಿಯಾಜಾಲಗಳಲ್ಲಿ ಮಿದುಳಿನ ಈ ಚಿಕ್ಕ ಭಾಗವೂ ಪಾತ್ರವಹಿಸುತ್ತದೆ ಎಂಬ ಸಿದ್ಧಾಂತಕ್ಕೆ ಮೇಲೆ ಹೇಳಿದ ವಿಚಾರಗಳು ಆಧಾರ ಕೊಡುತ್ತವೆ.

ಅರಿವಿನ ಮಟ್ಟದಲ್ಲಿ ನಡೆಯದ ಸ್ವಯಂಚಾಲಿತ ಒಳಅಂಗಗಳ ಚಟುವಟಿಕೆಗಳ ನಿಯಂತ್ರಣಕೇಂದ್ರನಾಡಿಯೇ ಕೆಳತಲೆಯರೆಯೆಂದು ಷೆರಿಂಗ್ಟನ್ ಕರೆದ. ಇದರ ಚೋದನೆಯಿಂದ ಮೂತ್ರಕೋಶ ಸಂಕೋಚ, ಮಲವಿಸರ್ಜನೆ, ಹೃದಯದ ಬಡಿತದ ಏರುಪೇರು ಇತ್ಯಾದಿಯಾಗಬಹುದು. ಇದರ ಮೇಲ್ಮಧ್ಯ ಭಾಗದ ಚೋದನೆಯಿಂದ ಅಡ್ರಿನಲ್ ಗ್ರಂಥಿ ಅಡ್ರಿನಲಿನ್ ಎಂಬ ರಸವನ್ನು ರಕ್ತದೊಳಕ್ಕೆ ಹೆಚ್ಚಾಗಿ ಸುರಿದು ಗುಂಡಿಗೆ ಬಡಿತ ಮತ್ತು ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆ; ಅದರ ಹಿಂಭಾಗದ ನಾಶದಿಂದ ದೀರ್ಘನಿದ್ರೆ ಬರುತ್ತದೆ. ಮತ್ತೊಂದು ಭಾಗದ ಚೋದನೆಯಿಂದ ಜಾಗರಣೆಯುಂಟಾಗುತ್ತದೆ. ಹೀಗೆಯೇ ಮಗುದೊಂದು ಭಾಗ ಕಾಮಪ್ರವೃತ್ತಿಯನ್ನು ನಿಯಂತ್ರಿಸುತ್ತದೆ. ಪ್ರಾಣಿಗಳ ತಲೆಯರೆಯ ಮೇಲೆ ಕೆಲವು ಪ್ರಯೋಗಗಳನ್ನು ಮಾಡಿದರೆ ಹೆಣ್ಣಿನ ನಡತೆ ಗಂಡಿಗೆ ಬರುವುದು, ಗಂಡಿನ ನಡತೆ ಹೆಣ್ಣಿಗೆ ಬರುವುದು. ಹೀಗೆಯೇ ಮಾತೃ ಅಥವಾ ಪಿತೃವಾತ್ಸಲ್ಯದಲ್ಲೂ ವ್ಯತ್ಯಾಸವಾಗಬಹುದು. ಕೆಳತಲೆಯರೆ ದೇಹದ ಉಷ್ಣತೆ ಮತ್ತು ನೀರಿನ ಪ್ರಮಾಣಗಳನ್ನು ಸಹ ನಿಯಂತ್ರಿಸುತ್ತದೆ. (ಎಂ.ಡಿ.)

**ಕೆಳತಿ ಮೀನು :** ಭಾರತ, ಪಾಕಿಸ್ತಾನ, ಮಯನ್ಮಾರ್, ಶ್ರೀಲಂಕ, ಸಯಾಂ ಮತ್ತು ಥೈಲೆಂಡ್ ದೇಶಗಳಲ್ಲಿನ ನಿಂತಿರುವ ಹಾಗೂ ಹರಿಯುವ ಸಿಹಿನೀರಿನಲ್ಲಿ ವಾಸಿಸುವ ಮೀನು. ಶಾಸ್ತ್ರೀಯ ಹೆಸರು ಮಿಸ್ಟಸ್ ಅಥವಾ ಮ್ಯಾಕ್ರೊನಸ್ ವಿಟೇಟಸ್. ಕುಟುಂಬ ಬಾಗ್ರಿಡೀ. ಸಣ್ಣ ಗಾತ್ರದ ಈ ಮೀನು 7" ಇಂದ 8" ವರೆಗೆ ಬೆಳೆಯುತ್ತದೆ. ಇದರ ತಲೆಯ ಮೇಲೆ ಕಣ್ಣುಗೂಡಿನ ಹಿಂಭಾಗದಿಂದ ಹಿಡಿದು ದೇಹದ ಮಧ್ಯಭಾಗದವರೆಗೂ ವಿಸ್ತರಿಸಿರುವ ಒಂದು ಉದ್ದ ಗೆರೆಯಿದೆ. ತಲೆಯ ಹಿಂಭಾಗದಲ್ಲಿ ಉದ್ದವಾದ ಹಾಗೂ ಒರಟಾದ ಹೆಡತಲೆ ರಚನೆಯಿದೆ. ಅನೇಕ ವೇಳೆ ಈ ರಚನೆ ಬೆನ್ನಿನ ಕೆಳಗಿನ ಮೂಳೆಯಿಂದ ಚಿಕ್ಕ ಅಂತರದಿಂದ ಬೇರ್ಪಟ್ಟಿದೆ. ಕೆಳತಿ ಮೀನಿನ ಬಾಯಿ ಸುತ್ತ ಎಂಟು ಸ್ಪರ್ಶಾಂಗಗಳಿವೆ (ಬಾರ್ಬೆಲ್ಸ್). ಮೇಲು ದವಡೆಯ ಸ್ಪರ್ಶಾಂಗಗಳು ಹಿಂದಕ್ಕೆ ಬಾಗಿದಾಗ ನಡುವಿನ ಈಜುರೆಕ್ಕೆಗಳವರೆಗೂ ವಿಸ್ತೃತವಾಗುತ್ತವೆ. ಕೆಳತಿ ಮೀನಿನ ಸಂತಾನೋತ್ಪತ್ತಿಯ ಕ್ರಾಯ ಮಳೆಗಾಲ (ಜೂನ್–ಸೆಪ್ಟೆಂಬರ್).

ಕೆಳತಿ ಮೀನಿನ ದೇಹದ ಬಣ್ಣ ನವಿರಾದ ಬೂದಿಮಿಶ್ರಿತ ಬಿಳಿಯ ಬಣ್ಣದಿಂದ ಹಿಡಿದು ಹೊಳೆಯುವ ಚಿನ್ನದ ಬಣ್ಣದವರೆಗೂ ವಿವಿಧ ರೀತಿಯದಾಗಿದೆ. ಈ ಬಣ್ಣಗಳ ಹಿನ್ನೆಲೆಯಲ್ಲಿ ಹಲವಾರು, ಸೊಗಸಾದ, ತಿಳಿ ನೀಲಿ ಅಥವಾ ಕಡು ಕಂದು ಬಣ್ಣದಿಂದ ಹಿಡಿದು ಅತಿ ಕಪ್ಪಗಿರುವ ಉದ್ದುದ್ದವಾಗಿ ಹರಡಿರುವ ಪಟ್ಟೆಗಳು ಕಂಡುಬರುತ್ತವೆ. ಈ ಪಟ್ಟೆಗಳ ಸಂಖ್ಯೆ ಮೀನುಗಳ ಆರೋಗ್ಯಸ್ಥಿತಿ ಮತ್ತು ಮೀನುಗಳು ವಾಸಿಸುವ ಸ್ಥಳಗಳಿಗನುಗುಣವಾಗಿ ಮಾರ್ಪಟ್ಟಿರುತ್ತದೆ. ಜಲವಾಸಿ ಕ್ರಿಮಿಕೀಟಗಳು, ಕೆಳತಿ ಮೀನಿನ ಆಹಾರ. (ಬಿ.ಎಚ್.ಎಂ.)

**ಕೆಳದವಡೆ :** ಬಾಯಿಯನ್ನು ತೆರೆದು ಮತ್ತೆ ಮುಚ್ಚುವಾಗ ಆಡುವ ದವಡೆ, ಸಂಸ್ಕೃತದಲ್ಲಿ ಹನು ಎನ್ನುವುದಿದೆ. ಮನುಷ್ಯೇತರ ಕಶೇರುಕ ಪ್ರಾಣಿಗಳಲ್ಲಿ ಮುಸುಡಿ ಚಾಚಿಕೊಂಡಿರುವುದರಿಂದ ಕೆಳದವಡೆ ಮೂಳೆಯು (ಹನ್ವಸ್ಥಿ, ಮಾಂಡಿಬಲ್) ಉದ್ದವಾಗಿದೆ. ಇದು ಆಕಾರದಲ್ಲಿ ಹೆಚ್ಚು ಕಡಿಮೆ ಕುದುರೆ ಲಾಳವನ್ನು ಹೋಲುತ್ತದೆ. ಮನುಷ್ಯರಲ್ಲಿ ಚಾಚುಮೂತಿ ಇಲ್ಲದಿರುವುದರಿಂದ ಕೆಳದವಡೆ ಮೂಳೆ ಉದ್ದವಾಗಿಲ್ಲ. ಆದರೆ, ಅದರ ಅಗಲ ಹೆಚ್ಚಿದ್ದು ಮಾತನಾಡುವಾಗ ಅದರ ಮಧ್ಯೆ ನಾಲಗೆ ಆಡಲು ಹೆಚ್ಚು ಅವಕಾಶವುಂಟು.

ದವಡೆಯ ಕೀಲು ಮೇಲ್ದವಡೆಯ ಹಿಂದೆ, ಮಿದುಳು ಬುರುಡೆಯ ಕೆಳಗೆ, ಕಿವಿಯ ಮುಂದೆ ಇದೆ. ಈ ಕೀಲು ಒಂದೇ ಅಕ್ಷದ ಮೇಲೆ ತಿರುಗುವುದಿಲ್ಲ. ಇದರಲ್ಲಿ ಹನ್ವಸ್ಥಿಯ ತಲೆಯಂತಿರುವ ಗಂಟು ಹಿಂದಕ್ಕೆ ಮುಂದಕ್ಕೆ ಆಡುವುದನ್ನು ಬಾಯಾಡಿಸುವಾಗ ಕಿವಿಯ ಮುಂದೆ ಮುಟ್ಟಿ ತಿಳಿಯಬಹುದು. ಈ ಗಂಟು ಮುಂದಕ್ಕೆ ಸರಿದಾಗ ಹನ್ವಸ್ಥಿ ಸ್ವಲ್ಪ ಕೆಳಕ್ಕೆ ತಗ್ಗುವುದು. ತೆರೆದ ಬಾಯಿ ಹೆಚ್ಚು ಅಗಲವಾಗಲು ಈ ಏರ್ಪಾಡು ಸಹಾಯಕಾರಿ. ಹನ್ವಸ್ಥಿ ತಗ್ಗಿದಾಗ ಒಮ್ಮೊಮ್ಮೆ ದವಡೆ ಕೀಲು ತಪ್ಪಬಹುದು.

ಮಾಂಸಾಹಾರಿ ಪ್ರಾಣಿಗಳಲ್ಲಿ ಕೆಳದವಡೆ ಅಕ್ಕಪಕ್ಕಕ್ಕೆ ಆಡದೆ ಕೀಲು ಒಂದೇ ಅಕ್ಷದ ಮೇಲೆ ತಿರುಗುತ್ತದೆ. ಸಸ್ಯಹಾರಿಗಳಲ್ಲಿ ಇದು ಅಕ್ಕಪಕ್ಕಕ್ಕೆ ಆಡುತ್ತದೆ. ಮಾನವ ಮರ್ಕಟೇತ್ಯಾದಿಗಳಲ್ಲಿ ಇವೆರಡೂ ವಿಧಗಳು ಕೂಡಿರುವ ದವಡೆ ಕೀಲು ಉಂಟು. ಮನುಷ್ಯ ಕೆಳದವಡೆಯನ್ನು ಮುಂಚಾಚಬಲ್ಲ. ಹನ್ವಸ್ಥಿಯ ತಲೆಯ ಮುಂದೆ ಒಂದು ಮೊನಚು ಶಿಖರದಂತಿರುವ ಭಾಗಕ್ಕೆ ದವಡೆ ಸ್ನಾಯುಗಳಲ್ಲಿ ಅತಿಬಲವಾದ ಟೆಂಪೋರಾಲಿಸ್ ಎಂಬುದರ ಸ್ನಾಯು ಬಂಧನವಿದೆ. ಪ್ರೌಢಾವಸ್ಥೆ ದಾಟಿದವರಲ್ಲಿ ಇದರ ಮುಂದೆ 16 ಹಲ್ಲುಗಳಿರುತ್ತವೆ. 5 ವರ್ಷದ ಮಗುವಿನಲ್ಲಿ 10 ಹಲ್ಲುಗಳಿರುತ್ತವೆ. ಇತರ ಪ್ರಾಣಿಗಳಲ್ಲಿ ಹಲ್ಲುಗಳ ಸಂಖ್ಯೆ ಬೇರೆ ಬೇರೆ. ಮನುಷ್ಯನಲ್ಲಿ ಕೋರೆಗಳಿಲ್ಲ. ಮತ್ತು ಹಲ್ಲು ತುದಿಗಳೆಲ್ಲಾ ಒಂದೇ ಮಟ್ಟದಲ್ಲಿವೆ. ಲಕ್ಷಾಂತರ ವರ್ಷಗಳ ಹಿಂದೆ ಆದಿಮಾನವ ಬೇಟೆಗಾರನಾಗಿದ್ದು ಕೆಲವು ಸಾವಿರ ವರ್ಷಗಳಿಂದೀಚೆಗೆ ತನ್ನ ಬುದ್ಧಿಶಕ್ತಿಯಿಂದ ಬೇಸಾಯ, ಅಡುಗೆಗಳನ್ನು ಕಲಿತು ಅವನ ಆಹಾರ ಮೃದುವಾದಂತೆ ಅವನ ದವಡೆಗಳು ಸಣ್ಣವಾಗುತ್ತಾ ಬಂದು ಹನುಮನ ಮೂತಿ ಇಲ್ಲದಂತಾಗಿದೆ; ಮತ್ತು ಆದಿಮಾನವನಲ್ಲಿದ್ದಂತೆ ಹಲ್ಲುಗಳು ಸಮವಾಗಿ ಬಲವಾಗಿ ಇಲ್ಲದೆ ಕಾಲಕ್ರಮೇಣ ವಕ್ರವಾಗುತ್ತಾ ಬಂದಿವೆ. ಹನ್ವಸ್ಥಿಯ ಹಲ್ಲು ಭಾಗ ಮಿಕ್ಕ ಭಾಗಕ್ಕಿಂತ ಹೆಚ್ಚು ಸಣ್ಣದಾಗಿರುವುದರಿಂದ ಮುಂದಿನ ಹಲ್ಲುಗಳು ಗಡ್ಡದ ಭಾಗಕ್ಕಿಂತ ಹಿಂದಿವೆ. ಹೀಗೆ ಮುಂಚಾಚಿರುವ ಗಡ್ಡದ ಭಾಗ ಮನುಷ್ಯೇತರ ಪ್ರಾಣಿಗಳಲ್ಲಿಲ್ಲ. ಗಡ್ಡ ಮುಂದಕ್ಕಿರುವುದು ಮಾನವನ ಬುದ್ಧಿಸೂಚಕ ಎಂದು ಹೇಳುತ್ತಾರೆ.

ಕೆಳದವಡೆಯನ್ನು ಮೇಲಕ್ಕೆತ್ತಲು ಟೆಂಪೊರಾಲಿಸ್, ಮ್ಯಾಸಿಟರ್, ಒಳಟೆರಿಗಾಯಿಡ್ ಸ್ನಾಯು ಜೊತೆಗಳಿವೆ. ಬಾಯಿಯನ್ನು ತೆರೆಯಲಿರುವ ಸ್ನಾಯುಗಳು ಇಷ್ಟು ಬಲವಾಗಿಲ್ಲ; ಇವುಗಳಲ್ಲಿ ಹೊರಟೆರಿಗಾಯಿಡ್ ಸ್ನಾಯು ಜೊತೆ ಬಲವಾದುದು. ಹನ್ವಸ್ಥಿಯ ಹೊರಗಡೆ ಚರ್ಮ ಮತ್ತು ಮುಖದ ಕೆಲವು ಸ್ನಾಯುಗಳು ಅಂಟಿಕೊಂಡಿವೆ. ಒಳಗಡೆ ಬಾಯಿಯ ಲೋಳೆಪೊರೆ ಮತ್ತು ನಾಲಗೆಯ ಕೆಲವು ಸ್ನಾಯುಗಳು ಅಂಟಿಕೊಂಡಿವೆ. ಹಲ್ಲು ಬುಡಗಳ ಪಕ್ಕಗಳಲ್ಲಿ ಒಸಡುಗಳಲ್ಲಿ ಗಟ್ಟಿಯಾಗಿ ಅಂಟಿಕೊಂಡಿವೆ.

ಗರ್ಭಾವಸ್ಥೆಯಲ್ಲಿ ಕೆಳದವಡೆಯ ಬಲ ಎಡ ಭಾಗಗಳು ಪ್ರತ್ಯೇಕ ಬೆಳೆದು ಗಡ್ಡದಲ್ಲಿ ಕೂಡಿಕೊಳ್ಳುತ್ತವೆ. ಹೀಗೆ ಕೂಡದಿದ್ದರೆ ಹುಟ್ಟಿದ ಮಗುವಿನಲ್ಲಿ ಸೀಳುಗಡ್ಡ ಅಥವಾ ಸೀಳು ದವಡೆಯಿರುವುದು. ಸೀಳುಗಡ್ಡವಿಲ್ಲದಾಗಲು ಕೂಸಿಗೆ 2 ವರ್ಷ ವಯಸ್ಸಾಗುವವರೆಗೂ ಹನ್ವಸ್ಥಿಯ ಎಡ ಬಲ ಭಾಗಗಳು ಗಡ್ಡದಲ್ಲಿ ಮೃದ್ವಸ್ಥಿಯಿಂದ ಬಂಧಿತವಾಗಿರುತ್ತವೆ. ಆಮೇಲೆ ಮೃದ್ವಸ್ಥಿ ಎಲುಬಾಗುವುದರಿಂದ ಹನ್ವಸ್ಥಿ ಒಂದೇ ಮೂಳೆಯಾಗುತ್ತದೆ. ಕೆಳದವಡೆ ಬೆಳೆಯದಿದ್ದರೆ ಹುಟ್ಟಿದ ಕೂಸಿನ ಕತ್ತಿನಲ್ಲಿ ಕಿವಿಗಳು ಅಕ್ಕಪಕ್ಕದಲ್ಲಿರುತ್ತವೆ; ಈ ಸ್ಥಿತಿ ಅತಿ ವಿರಳ. (ಎಂ.ಡಿ.)

**ಕೆಳದಿ :** ಶಿವಮೊಗ್ಗ ಜಿಲ್ಲೆಯ ಸಾಗರದಿಂದ ಸು. 5 ಕಿ.ಮೀ. ಉತ್ತರಕ್ಕಿರುವ ಒಂದು ಸಣ್ಣ ಹಳ್ಳಿ. 16ನೆಯ ಶತಮಾನದ ಆದಿಯಲ್ಲಿ ತಲೆದೋರಿ, ವಿಜಯನಗರ ಸಾಮ್ರಾಜ್ಯದ ಇಳಿಗಾಲದಲ್ಲಿ, ಎಂದರೆ 16ನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾಬಲ್ಯಕ್ಕೆ ಬಂದ ಸಾಮಂತ ರಾಜ್ಯಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ಮೆರೆದ ಕೆಳದಿ ಅಥವಾ ಇಕ್ಕೇರಿ ಸಂಸ್ಥಾನದ ಪ್ರಥಮ ರಾಜಧಾನಿ. ಇದನ್ನು 18ನೆಯ ಶತಮಾನದ ಕವಿ ಲಿಂಗಣ್ಣ ತನ್ನ ಕನ್ನಡ ಚಂಪೂಕಾವ್ಯವಾದ 'ಕೆಳದಿ ನೃಪವಿಜಯ'ದಲ್ಲಿ ಹೀಗೆ ವರ್ಣಿಸಿದ್ದಾನೆ : 'ಅದರೊಳ್ ಮೈಮೆಯಿನೆಸೆವಾ ತ್ರಿದಶತರಂಗಿಣಿಮಧಿಕಮೆನಿಸುವ ವರದಾ । ನದಿಮೂಲಮೊಪ್ಪುಗುಂ ತನ್ನದಿಯುತ್ತರ ತಟದೊಳರ್ಧ ಯೋಜನದೆಡೆಯೊಳ್ ॥ ಆ ಕರ್ಣಾಟದೇಶದ ಭೂಕಾಂತೆಯ ವಕ್ತ್ರಪದ್ಮಮೆನೆ ರಾಜಿಸುಗುಂ । ಶ್ರೀಕರಮೆನಿಸಿಯಜಸ್ರಂ ನಾಕವನಿಳಿಕೈದ ಕೆಳದಿಯೆಂದೆನಿಪ ಪುರಂ ॥

ಆಕಸ್ಮಿಕವಾಗಿ ದೊರೆತ ನಿಕ್ಷೇಪದಿಂದ ಪ್ರಬಲನಾದ ಕೃಷಿಕಾರ ಚೌಡಪ್ಪಗೌಡ 16ನೆಯ ಶತಮಾನದ ಆದಿಯಲ್ಲಿ ವಿಜಯನಗರ ಸಾಮ್ರಾಟನ ಅಪ್ಪಣೆಯ ಮೇರೆಗೆ ಕೆಳದಿಯೇ ಮೊದಲಾದ ಎಂಟು ಮಾಗಣೆಗಳ ನಾಯಕತನವನ್ನು ವಹಿಸಿಕೊಂಡಾಗ ಕೆಳದಿ ಅವನ ರಾಜಧಾನಿಯಾಯಿತು. ಆತ ಚೌಡಪ್ಪನಾಯಕನೆನಿಸಿಕೊಂಡು, ಕೆಳದಿಯಲ್ಲಿ ರಾಜೋಚಿತವಾದ ಅರಮನೆಯನ್ನೂ ಭದ್ರತೆಯ ಸಲುವಾಗಿ 'ಹುಡೆ', 'ಕಾಯ್ಪು', 'ಕಟ್ಟಲೆ'ಗಳನ್ನೂ ನಿರ್ಮಿಸಿ, 1500ರಲ್ಲಿ ಕೆಳದಿಪುರದರಮನೆಯಲ್ಲಿ ರಾಜಪಟ್ಟ ಕಟ್ಟಿಕೊಂಡನೆಂದು ಲಿಂಗಣ್ಣ ಕವಿ ಹೇಳಿದ್ದಾನೆ. ಆ ಅರಮನೆಯ, ಕೋಟೆಕೊತ್ತಲಗಳ ಅವಶೇಷಗಳಾವುವೂ ಇಂದಿಗೆ ಉಳಿದಿಲ್ಲ. ಅಂದಿನಿಂದ ಸು. ಆರು ದಶಕಗಳ ಕಾಲ ಕೆಳದಿ ರಾಜಧಾನಿಯಾಗಿತ್ತಾದ ಕಾರಣ, ಕೆಳದಿಯ ಸೀಮೆ, ಕೆಳದಿವೇಂಟೆ, ಕೆಳದಿ ರಾಜ್ಯ ಎಂಬ ಐತಿಹಾಸಿಕ ಹೆಸರುಗಳು ಹುಟ್ಟಿಕೊಂಡುವು.

'ಕೆಳದಿ ನೃಪವಿಜಯ' ದಿಂದ ತಿಳಿದು ಬರುವಂತೆ ಕೆಳದಿಯ ಸ್ಥಳಮಾಹಾತ್ಮ್ಯ ಸ್ವಾರಸ್ಯಮಯವಾದ್ದು. ಆ ಊರಿನ ಹೊರವಲಯದ ಸೀಗೆವಳ್ಳಿಯ ಮಧ್ಯದಲ್ಲಿ 'ವಲ್ಮೀಕಾಚ್ಛಾದಿತ'ವಾದ ರಾಮೇಶ್ವರ ಎಂಬ ಮಹಾ ದಿವ್ಯಲಿಂಗವಿತ್ತಂತೆ. ಚೌಡಪ್ಪ ನಾಯಕನ ಮನೆಯ ಕವಿಲೆಯೊಂದು ತಾನಾಗಿ ಹೋಗಿ ಆ ಹುತ್ತದ ಮೇಲೆ ಹಾಲ್ಗರೆದು ಬರುವ ಸಂಗತಿ ಅವನಿಗೆ ತಿಳಿಯಿತು. ಅಷ್ಟರಲ್ಲೆ ಪರಮೇಶ್ವರ ವೃದ್ಧಜಂಗಮನ ರೂಪದಲ್ಲಿ ಚೌಡಪ್ಪನ ಬಳಿ ಬಂದು, ರಾಮೇಶ್ವರ ಲಿಂಗವನ್ನು ಅವನು ಪೂಜಿಸಿದರೆ ಅವನಿಗೆ ಅಖಂಡ ಪೃಥ್ವೀಪತಿತ್ವ ಪ್ರಾಪ್ತವಾಗುವುದೆಂದು ಹೇಳಿ ಕಣ್ಮರೆಯಾದ. ಅದರಂತೆಯೆ ಚೌಡಪ್ಪ ಮರಗಿಡಕಲ್ಲುಮುಳ್ಳುಗಳಿಂದ ಕೂಡಿದ್ದ ಆ ಸ್ಥಳವನ್ನು ಶುದ್ಧೀಕರಿಸಿ, ಅಲ್ಲಿ ಕಂಡುಬಂದ ಲಿಂಗಮೂರ್ತಿಗೆ ತೃಣಕುಟಿಯೊಂದನ್ನು ನಿರ್ಮಿಸಿ, ನಿತ್ಯವೂ ಧೂಪದೀಪನೈವೇದ್ಯಗಳಿಗಾಗಿ ಭೂದಾನಮಾಡಿದ. ಅನಂತರ ವಿಜಯನಗರದ ಸಮ್ರಾಟನ ಆಜ್ಞೆಯಂತೆ ಕೆಳದಿ ರಾಜ್ಯದ ಒಡೆಯನಾದಾಗ ಅವನು ರಾಮೇಶ್ವರ ದೇವಾಲಯದ ಗರ್ಭಗೃಹವನ್ನು 'ಶಿಲಾಮಯವಾಗಿಸಿ'ದನಂತೆ.

ಕೆಳದಿಯ ಗತಕಾಲದ ವೈಭವವನ್ನು ಇಂದು ಪರಿಚಯ ಮಾಡಿಕೊಡುವ ಅಲ್ಲಿಯ ಐತಿಹಾಸಿಕ ಕೃತಿಗಳಲ್ಲಿ ರಾಮೇಶ್ವರ ದೇವಾಯತನವೇ ಪ್ರಾಚೀನತಮವಾದ್ದು. ಬೂದು ಹಸಿರು ಬಣ್ಣದ ಕಲ್ಲಿಂದಾದ ಈ ಮಧ್ಯಪ್ರಮಾಣದ ದೇಗುಲ ದ್ರಾವಿಡ ಮತ್ತು ಹೊಯ್ಸಳ ವಾಸ್ತುಶೈಲಿಗಳ ಮಿಶ್ರರೂಪದ್ದಾಗಿದ್ದು, ಒಂದು ಚಿಕ್ಕ ಗರ್ಭಗೃಹ, ಪ್ರದಕ್ಷಿಣಾಪಥ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದೆ. ಗುಡಿಯ ಜಗತಿಯ ಹೊರಮೈಯ ಒಂದು ದಿಂಡಿನ ಮೇಲೆ ವಾದ್ಯಗಾರರ, ನರ್ತಕರ ಶಿಲ್ಪಗಳಿವೆ. ಎರಡೂವರೆ ಅಡಿಯ ಎತ್ತರದ ಮೆರಗುವ ಶಿಲಾಲಿಂಗವಿರುವ ಗರ್ಭಗೃಹದ ಭಿತ್ತಿಯಲ್ಲಿ ಚತರಸ್ರಾಕಾರದ ಅರ್ಧಕಂಬಗಳ ಅಲಂಕರಣವೂ ಅವುಗಳ ನಡುವೆ ಕಣ್ಣಪ್ಪ, ಗರುಡ, ಹನುಮಾನ್, ಒಂಟೆ, ಆನೆ, ಯಾಳಿ, ಮಿಥುನಗಳು, ಆನೆಯ ಜೊತೆಗೆ ಹೋರಾಡುತ್ತಿರುವ ಯೋಧ, ಸೋಮಗ್ರಹಣ, ಮದ್ದಳೆಗಾರ, ಯೋಗಾಸನದಲ್ಲಿರುವ ರಾಮೇಶ್ವರ ಇತ್ಯಾದಿ ಅನೇಕ ಶಿಲ್ಪಗಳಿವೆ. ಛಾವಣಿಯ ಮುಂಚಾಚಿಕೊಂಡಿರುವ ಭಾಗದ ಏಣುಗಳ ಮೇಲೆ ವೀರಭದ್ರ, ತಾಂಡವವೇಶ್ವರ ಪಾರ್ವತಿ, ಮೋಹಿನಿ, ವೇಣುಗೋಪಾಲ, ಕಾಳಿಂಗಮರ್ದನ, ಭೈರವ ಇತ್ಯಾದಿ ದೇವದೇವತೆಗಳ ಶಿಲ್ಪಗಳಿವೆ. ಗರ್ಭಗೃಹದ ಮೇಲಿನ ಗೋಪುರ ಚತುರಸ್ರಾಕಾರದ್ದು. ನಾಲ್ಕು ಅಂಕಣ ಉದ್ದ ಮತ್ತು ಮೂರು ಅಂಕಣ ಅಗಲವಿರುವ, ಹದಿನೆಂಟು ಕಂಬಗಳಿಂದ ಕೂಡಿದ ಮುಖಮಂಟಪದ ಪಡುವಣ ಮೂಲೆಯ ಎರಡು ಮಾಡಗಳಲ್ಲಿ ಗಣಪತಿ ಮತ್ತು ಮಹಿಷಾಸುರಮರ್ದಿನಿಯರ ಶಿಲ್ಪಗಳಿವೆ. ದ್ವಾರಬಂಧದ ಕಂಬತೋಳುಗಳಲ್ಲಿ ಶೈವ ದ್ವಾರಪಾಲಕರಿರುವ ಚಿಕ್ಕ ನವರಂಗ ಮಂಟಪ ಎರಡು ಕಂಬಗಳಿಂದ ಕೂಡಿದೆ. ಬಸವನ ಮೂರ್ತಿಯಿರುವ ಈ ನವರಂಗದಲ್ಲಿ ಶಿವಪಾರ್ವತಿಯರ ಕಂಚಿನ ಪ್ರತಿಮೆಗಳೂ ಇವೆ.

ರಾಮೇಶ್ವರ ದೇವಾಲಯಕ್ಕೆ ಸೇರಿದಂತೆಯೇ ಇರುವ ವೀರಭದ್ರ ದೇವಸ್ಥಾನವನ್ನು ನಿರ್ಮಿಸಿದಾತ ಚೌಡಪ್ಪನಾಯಕನ ತಮ್ಮ ಭದ್ರಪ್ಪನಾಯಕ ಇರಬಹುದು. ದೇವಾಲಯದ ಒಳಮಾಳಿಗೆಯೊಂದರಲ್ಲಿ ಗಂಡಭೇರುಂಡನ ಅದ್ಭುತ ಚಿತ್ರಣವಿದೆ. ಅದು ವಿಜಯನಗರ ಸಮ್ರಾಟ ಅಚ್ಯುತರಾಯನ (1530–42) ಲಾಂಛನವಾಗಿತ್ತಾದ ಕಾರಣ ಅವನ ಆಳ್ವಿಕೆಯ ಅವಧಿಯಲ್ಲಿ ಭದ್ರಪ್ಪನಾಯಕ ಈ ಮಂದಿರವನ್ನು ಕಟ್ಟಿಸಿರಬೇಕೆಂದು ಊಹಿಸಬಹುದಾಗಿದೆ. ಗಂಡಭೇರುಂಡ ಪಕ್ಷಿ ತನ್ನ ಎರಡು ಕೊಕ್ಕುಗಳ ಪೈಕಿ ಒಂದೊಂದರಲ್ಲೂ ಒಂದೊಂದು ಸಿಂಹವನ್ನು ಕಚ್ಚಿ ಹಿಡಿದಿದೆ. ಒಂದೊಂದು ಸಿಂಹದ ಬಾಯಲ್ಲೂ ಒಂದೊಂದು ಆನೆ ಇದೆ. ಹಾರುವ ಭಂಗಿಯಲ್ಲಿರುವ ಪಕ್ಷಿ ತನ್ನ ಕಾಲುಗಳಿಂದ ಒಂದು ಆನೆಯನ್ನು ಹಿಡಿದುಕೊಂಡಿರುವಂತೆ ಚಿತ್ರಿಸಲಾಗಿದೆ. ಈ ಗುಡಿಯ ಗರ್ಭಗೃಹ ಮತ್ತು ಮುಖಮಂಟಪಗಳೂ ರಾಮೇಶ್ವರ ದೇವಾಲಯದ ಮಾದರಿಯವೇ ಆಗಿವೆ. ನವರಂಗದ ಮಧ್ಯದಲ್ಲಿ ತಗ್ಗಾದ ಪಾತಾಳಾಂಕಣವಿರುವುದು ಈ ದೇವಾಲಯದ ವೈಶಿಷ್ಟ್ಯ. ಗರ್ಭಗೃಹದ ಭಿತ್ತಿಯಲ್ಲಿಯ 'ವಾಸ್ತುಪುರುಷ'ನ ಶಿಲ್ಪ ಕುತೂಹಲಕಾರಿಯಾದ್ದು. ಮೇಲಿನ ಗೋಪುರ ರಾಮೇಶ್ವರ ದೇವಾಲಯದ ಶಿಖರದಷ್ಟು ಎತ್ತರದಲ್ಲ.

ವೀರಭದ್ರ ದೇವಾಲಯದ ದ್ವಾರ ಮಂಟಪದ ಎದುರಿನ 7.6ಮೀ. ಎತ್ತರದ ಶಿಲಾಸ್ತಂಭ ಗಣೇಶ, ಶಿವ, ನಂದಿ, ಪಾರ್ವತಿ ಮತ್ತು ಭೈರವರ ಚಿತ್ರಗಳಿಂದ ಕೂಡಿದೆ.

ಶಿಲಾಮಯಗರ್ಭಗೃಹ, ಪ್ರದಕ್ಷಿಣಾಪಥ ಇಟ್ಟಿಗೆಗಳಿಂದ ಕಟ್ಟಿದ ಆಧುನಿಕ ಮಂಟಪ– ಇವುಗಳಿಂದ ಕೂಡಿದ ಪಾರ್ವತಿ ದೇವಾಲಯದಲ್ಲಿ ಉಮಾಮಹೇಶ್ವರ, ಭೈರವ, ಷಣ್ಮುಖ, ಗಣೇಶ, ಅಂಧಕಾಸುರನನ್ನು ವಧಿಸುತ್ತಿರುವ ನಟರಾಜ, ಪುರುಷ ಮೃಗ, ಕಣ್ಣಪ್ಪ ಮತ್ತು ಗಜಲಕ್ಷ್ಮಿಯರ ಸುಂದರ ಶಿಲ್ಪಗಳಿವೆ.

ಇಲ್ಲಿಯವರೆಗೆ ಕೆಳದಿಯಲ್ಲಿ ಐದಾರು ಶಾಸನಗಳು ದೊರೆತಿವೆ. ಇವುಗಳಲ್ಲಿ ಪ್ರಾಚೀನತಮವಾದದ್ದು 1189ರಲ್ಲಿ ಬರೆಯಲಾದ ಶಿಲಾಶಾಸನ. ಇದು ಶಾಂತರ ಮನೆತನದ ಅರಸು ತ್ರಿಭುವನಮಲ್ಲ ಶಾಂತಿದೇವರಸನದು. ವಿಜಯನಗರ ಸಮ್ರಾಟ ಒಂದನೆಯ ದೇವರಾಯನ ಆಳ್ವಿಕೆಯಲ್ಲಿ ಕೆಳದಿಯ ತಿಮ್ಮೇಗೌಡ ತೀರಿಕೊಂಡಾಗ ಅವನ ಪತ್ನಿ ರಾಮಕ್ಕ ಸಹಗಮನ ಮಾಡಿದಳೆಂದು ಮತ್ತೊಂದು ಶಿಲಾಶಾಸನ (1419) ತಿಳಿಸುತ್ತದೆ. 1631 ಹಾಗೂ 1671ರಲ್ಲಿ ಹೊರಡಿಸಲಾದ ಎರಡು ತಾಮ್ರ ಶಾಸನಗಳು ಅನುಕ್ರಮವಾಗಿ ಕೆಳದಿಯ ಅರಸುಗಳಾದ ವೀರಭದ್ರ ನಾಯಕ ಮತ್ತು ಸೋಮಶೇಖರ ನಾಯಕರ ದಾನ ಶಾಸನಗಳು. ಶಿವಪ್ಪನಾಯಕನ ಆಳ್ವಿಕೆಯ ಶಿಲಾಶಾಸನ (1681) ವೀರಭದ್ರ ದೇವಾಲಯದ ಧ್ವಜಸ್ತಂಭದ ಪ್ರತಿಷ್ಠಾಪನೆಗೆ ಸಂಬಂಧಿಸಿದ್ದು.

ಸುಮಾರು 1560ರ ವೇಳೆಗೆ ಕೆಳದಿ ಸಂಸ್ಥಾನದ ರಾಜಧಾನಿಯನ್ನು ಇಕ್ಕೇರಿಗೆ ಬದಲಾಯಿಸಲಾಗಿ ಅಂದಿನಿಂದ ಕೆಳದಿಯ ವೈಭವ ಇಳಿಮುಖವಾಯಿತು. ಹಿಂದಿನ ವೈಭವಗಳೇನೂ ಈಗ ಅಲ್ಲಿ ಇಲ್ಲ.**(ನೋಡಿ: ಇಕ್ಕೇರಿ ಚರಿತ್ರೆ)** (ಕೆ.ವಿ.ಆರ್.; ಎಸ್.ಎಂ.)

**ಕೇಂದ್ರ :** ನಡುವಿನ ಬಿಂದು; ಸಂಧಿಬಿಂದು (ಸೆಂಟರ್). ಉದಾಹರಣೆಗೆ ವೃತ್ತ ಕೇಂದ್ರ, ನರಕೇಂದ್ರ, ಗುರುತ್ವ ಕೇಂದ್ರ, ಪ್ಲವನಕೇಂದ್ರ, ಆಂದೋಳನಕೇಂದ್ರ ಮುಂತಾದವುಗಳಿಗೆ ಸಂಬಂಧಿಸಿದಂತೆ ಇಲ್ಲಿ ಕೇಂದ್ರ ಪದದ ವಿವರಣೆ ನೀಡಿದೆ.

ಗುರುತ್ವ ಕೇಂದ್ರ : ಒಂದು ವಸ್ತು ಅಥವಾ ವಸ್ತುಗಳ ಒಂದು ವ್ಯವಸ್ಥೆಯಲ್ಲಿ ಅದರ ತೂಕ ವರ್ತಿಸುತ್ತದೆ ಎಂದು ಭಾಸವಾಗುವ ಒಂದು ಬಿಂದು (ಸೆಂಟರ್ ಆಫ್ ಗ್ರ್ಯಾವಿಟಿ) ಎಂದರೆ, ಅದನ್ನು ಸರಿದೂಗಿಸಲು ಆಧಾರ ಕೊಡಬೇಕಾದ ಒಂದು ಬಿಂದು. ಸಮತೂಕ ಬಿಂದು (ಪಾಯಿಂಟ್ ಆಫ್ ಬ್ಯಾಲೆನ್ಸ್) ಎಂದೂ ಸಹ ಕರೆಯುವುದುಂಟು. ಜಡತ್ವ ಕೇಂದ್ರ (ಸೆಂಟರ್ ಆಫ್ ಇನರ್ಷಿಯ) ಎಂಬ ಹೆಸರು ಕೂಡ ಇದೆ.

ದ್ರವ್ಯರಾಶಿ ಕೇಂದ್ರ : ಗಣನೆಯ ಸೌಕರ್ಯಕ್ಕೋಸ್ಕರ ಒಂದು ವಸ್ತು ಅಥವಾ ವಸ್ತುಗಳ ಒಂದು ವ್ಯವಸ್ಥೆಯಲ್ಲಿ ಅದರ ಸಮಗ್ರ ದ್ರವ್ಯರಾಶಿ ವರ್ತಿಸುತ್ತದೆ ಎಂದು ಭಾವಿಸಬಹುದಾದ ಒಂದು ಬಿಂದು (ಸೆಂಟರ್ ಆಫ್ ಮಾಸ್). ಭೂಮಿಯ ಗುರುತ್ವದ ಪ್ರಭಾವದಲ್ಲಿರುವ ಕಾಯಗಳಿಗೆ ದ್ರವ್ಯರಾಶಿಕೇಂದ್ರವೂ ಗುರುತ್ವಕೇಂದ್ರವೂ ಒಂದೇ.

ಪ್ಲವನಕೇಂದ್ರ : ತೇಲುತ್ತಿರುವ ವಸ್ತು ಹೊರತಳ್ಳಿರುವ ದ್ರವದ ಅಥವಾ ಅನಿಲದ ಗುರುತ್ವ ಕೇಂದ್ರ (ಸೆಂಟರ್ ಆಫ್ ಬಾಯನ್ಸಿ).

ವಕ್ರತಾಕೇಂದ್ರ : ಒಂದು ವಕ್ರರೇಖೆಯ ಮೇಲಿನ ಎರಡು ಅನುಕ್ರಮ ಬಿಂದುಗಳಲ್ಲಿ ಆ ವಕ್ರರೇಖೆಗೆ ಎಳೆದ ಅಭಿಲಂಬಗಳು ಸಂಧಿಸುವ ಬಿಂದು ವಕ್ರರೇಖೆಯ ಆ ಖಂಡದ ವಕ್ರತಾಕೇಂದ್ರ (ಸೆಂಟರ್ ಆಫ್ ಕರ್ವೇಚರ್).

ತೇಲುಕೇಂದ್ರ : ಒಂದು ಹಡಗಿನ ನೀರುಸಮತಳದ ಗುರುತ್ವ ಕೇಂದ್ರ (ಸೆಂಟರ್ ಆಫ್ ಫ್ಲೋಟೇಷನ್).

ಚಲನಕೇಂದ್ರ : ಚಲಿಸುತ್ತಿರುವ ಒಂದು ವಸ್ತುವಿನಲ್ಲಿರುವ ಒಂದು ವಿರಾಮ ಬಿಂದು; ಉಳಿದ ಬಿಂದುಗಳು ಇದರ ಸುತ್ತಲೂ ಚಲಿಸುತ್ತಿರುವುವು (ಸೆಂಟರ್ ಆಫ್ ಮೋಷನ್).

ಆಂದೋಳನಕೇಂದ್ರ : ಆಂದೋಳಿಸುತ್ತಿರುವ ಒಂದು ವಸ್ತುವಿನ ಆಂದೋಳನ ಕಾಲ ಬದಲಾಗದಂತೆ ಆ ವಸ್ತುವಿನ ಸಂಪೂರ್ಣ ದ್ರವ್ಯರಾಶಿಯನ್ನು ಕೇಂದ್ರೀಕರಿಸಬಹುದಾದ ಬಿಂದು (ಸೆಂಟರ್ ಆಫ್ ಆಸಿಲೇಷನ್).

ಸಮ್ಮಿತಿಕೇಂದ್ರ : ಸಾಮಾನ್ಯವಾಗಿ ಒಂದು ಹರಳನ್ನು ಕುರಿತು ಬಳಸುವ ಪದ. ಹರಳಿನ ಒಂದು ಮುಖದಿಂದ ಸಮಾಂಗತಾಕೇಂದ್ರದ (ಸೆಂಟರ್ ಆಫ್ ಸಿಮಿಟ್ರಿ) ಮೂಲಕ ಎಳೆದ ಎಲ್ಲಾ ಸರಳರೇಖೆಗಳನ್ನೂ ಈ ಕೇಂದ್ರ ಸಮದ್ವಿಭಾಗಿಸುತ್ತದೆ. ಹರಳಿನ ಒಂದು

ಮುಖದಲ್ಲಿರುವ ಯಾವುದೇ ಬಿಂದುವಿಗೆ ಸಂವಾದಿಯಾಗಿ ಇನ್ನೊಂದು ಮುಖದಲ್ಲಿ ಈ ಕೇಂದ್ರದಿಂದ ಸಮದೂರದಲ್ಲಿ ಮತ್ತು ಇದನ್ನು ಕುರಿತು ಅದೇ ಸ್ಥಾನದಲ್ಲಿ ಇನ್ನೊಂದು ಬಿಂದುವಿದೆ. *

## ಕೇಂದ್ರಾಪಗಾಮಿ ಬಲವನ್ನು ಉಪಯೋಗಿಸಿಕೊಳ್ಳುವ ಯಂತ್ರಗಳು:

ಒಂದು ವಸ್ತುವನ್ನು ಸ್ಥಿರಕೇಂದ್ರವನ್ನರಸುತ್ತ ಪರಿಭ್ರಮಿಸುವಂತೆ ಮಾಡಿದಾಗ ಆ ವಸ್ತುವಿನ ಮೇಲೆ ಪ್ರಯುಕ್ತವಾಗುವ ಕೇಂದ್ರಾಪಗಾಮಿ ಬಲವನ್ನು ಉಪಯೋಗಿಸಿಕೊಂಡು ತಯಾರಿಸಿರುವ ಕೆಲವು ಯಂತ್ರಗಳ ವಿವರಣೆ ಇಲ್ಲಿ ಕೊಟ್ಟಿದೆ.

1 **ಕೇಂದ್ರಾಪಗಾಮಿ ನಿರ್ದ್ರವಕಾರಕ (ಸೆಂಟ್ರಿಫ್ಯೂಗಲ್ ಡ್ರೈಯರ್)** : ಭಿತ್ತಿಗಳಲ್ಲಿ ಸಣ್ಣ ರಂಧ್ರಗಳಿರುವ ಒಂದು ಉರುಳೆ ಪಾತ್ರೆಯನ್ನು ಅದರ ಅಕ್ಷದ ಮೇಲೆ ವೇಗವಾಗಿ ಆವರ್ತಿಸುವಂತೆ ಈ ಯಂತ್ರದಲ್ಲಿ ಏರ್ಪಡಿಸಿದೆ. ಒದ್ದೆಯಾದ ಬಟ್ಟೆಗಳು, ನೆನಸಿದ ನೂಲಿನ ಕಂತೆಗಳು ಮುಂತಾದುವನ್ನು ಉರುಳೆಯಲ್ಲಿ ತುಂಬಿ ಅದನ್ನು ಆವರ್ತಿಸುವಂತೆ ಮಾಡಿದರೆ ನೀರು ಕೇಂದ್ರಾಪಗಾಮಿಬಲದ ಪ್ರಭಾವದಿಂದ ರಂಧ್ರಗಳ ಮೂಲಕ ಹೊರಬಿದ್ದು ಒಳಗಿರುವ ಪದಾರ್ಥಗಳು ಕ್ಷಿಪ್ರವಾಗಿ ಒಣಗುತ್ತವೆ. ಸ್ವಾಭಾವಿಕವಾಗಿ ದ್ರವಭಾಗವುಳ್ಳ ಸೊಪ್ಪು, ಮೂಲಿಕೆ ಮುಂತಾದ ಅನೇಕ ವಸ್ತುಗಳನ್ನು ಕುಟ್ಟಿ ಈ ಯಂತ್ರದ ಸಹಾಯದಿಂದ ಅವುಗಳ ಸಾರದ್ರವಗಳನ್ನು ಬೇರ್ಪಡಿಸಬಹುದು.

2 **ಬೆಣ್ಣೆಯನ್ನು ತೆಗೆಯುವ ಕೇಂದ್ರಾಪಗಾಮಿ ಯಂತ್ರ(ಕ್ರೀಂ ಸೆಪರೇಟರ್)** : ಈ ಯಂತ್ರದಲ್ಲಿ ಹಾಲನ್ನು ಹಾಕಿ ಅದರ ಒಳಗಡೆ ಕ್ಷಿಪ್ರವಾಗಿ ತಿರುಗುವಂತೆ ಏರ್ಪಡಿಸಿರುವ ಕಡೆಯುವ ಭಾಗವನ್ನು ಸುತ್ತುವಂತೆ ಮಾಡಿದರೆ ಹಾಲಿನಲ್ಲಿರುವ ದ್ರವ ಭಾಗ ಮತ್ತು ಅದರಲ್ಲಿ ತೇಲುತ್ತಿರುವ ಬೆಣ್ಣೆಯ ಸಣ್ಣ ಗುಳಿಗೆಗಳು ಕೇಂದ್ರ ವಿಮುಖವಾಗಿ ಚಲಿಸುವುದಕ್ಕೆ ಯತ್ನಿಸುತ್ತವೆ.



ಬೆಣ್ಣೆಯನ್ನು ತೆಗೆಯುವ ಕೇಂದ್ರಾಪಗಾಮಿ ಯಂತ್ರ

ಆದರೆ, ಹೆಚ್ಚು ಭಾರವಾದ ದ್ರವ ಇದನ್ನು ಸಾಧಿಸಿ ಹಗುರವಾದ ಬೆಣ್ಣೆಯ ಕಣಗಳನ್ನು ಹಿಂದಕ್ಕೆ ಕೇಂದ್ರಾಭಿಮುಖ ವಾಗಿ ಸಾಗುವಂತೆ ನೂಕುತ್ತದೆ. ಈ ಕಣಗಳು ಒಟ್ಟುಗೂಡಿ ಬೆಣ್ಣೆ ಮುದ್ದೆಂಯಾಗಿ ಇಳಿಜಾರಾಗಿ ಏರ್ಪಡಿಸಿರುವ ಮೇಲುಮೈಗಳ ಮೇಲೆ ಏರಿ ಕೇಂದ್ರಭಾಗದ ನಳಿಕೆಗಳಿಂದ ಹೊರಬರುತ್ತದೆ.

3 **ಕೇಂದ್ರಾಪಗಾಮಿ ವೇಗನಿಯಂತ್ರಕ (ಸೆಂಟ್ರಿಫ್ಯೂಗಲ್ ಗವರ್ನರ್)** : ಹಬೆಯ ಯಂತ್ರ ಸುತ್ತುವ ವೇಗವನ್ನು ಒಂದು ಮಿತಿಯಲ್ಲಿಡಲು ಉಪಯೋಗಿಸುವ ಸಾಧನ. ಯಂತ್ರದ ಆವರ್ತಿಸುವ ಭಾಗಕ್ಕೆ AB ಎಂದು ತೋರಿಸುವ ದಂಡವನ್ನು ಜೋಡಿಸಿರುವುದರಿಂದ ಅದು ಯಂತ್ರಭಾಗದ ವೇಗದಿಂದ ಆವರ್ತಿಸುತ್ತದೆ. ದಂಡ ಆವರ್ತಿಸುವಾಗ P ಮತ್ತು Qಗಳಿಂದ ಸೂಚಿಸಲ್ಪಟ್ಟಿರುವ ಭಾರವಾದ ಗುಂಡುಗಳು ಕೇಂದ್ರಾಪಗಾಮಿ ಬಲದ ಪ್ರಭಾವದಿಂದ ಮೇಲು ಮೇಲಕ್ಕೆ ಏರುತ್ತವೆ. ಹೀಗೆ ಏರುವಾಗ ಅವನ್ನು ಹೊಂದಿರುವ ದಂಡಕ್ಕೆ ಸೇರಿಸಲ್ಪಟ್ಟಿರುವ ಮತ್ತು AB ಯ ಮೇಲೆ ಹರಿಯುವಂತೆ ಇರುವ ಉಂಗುರ R ಅನ್ನು ಮೇಲಕ್ಕೆ ಎತ್ತುತ್ತವೆ.

ಈ ಉಂಗುರವನ್ನು ಹಬೆಯ ಯಂತ್ರಕ್ಕೆ ಪ್ರವೇಶಿಸುವ ಕೊಳವೆಯಲ್ಲಿರುವ ಕವಾಟಕ್ಕೆ ತಗುಲಿಸಿರುವುದರಿಂದ ವೇಗ ಹೆಚ್ಚಾದಾಗ ಉಂಗುರ R ಮೇಲಕ್ಕೆ ಸರಿದು ಕವಾಟ ಮುಚ್ಚುತ್ತಾ ಹೋಗಿ ಹಬೆಯ ಪ್ರವೇಶವನ್ನು ಕಡಿಮೆ ಮಾಡಿ ಯಂತ್ರದ ವೇಗವನ್ನು ಒಂದು ಮಿತಿ ಮೀರದಂತೆ ನಿಯಂತ್ರಿಸುತ್ತದೆ. ಇದೇ ರೀತಿಯ ಸಾಧನವೊಂದು ಗ್ರಾಮಫೋನ್ ತಟ್ಟೆಯ ಆವರ್ತನ ವೇಗವನ್ನು ಒಂದು ಮಿತಿಯಲ್ಲಿ ಇಡಲು ನೆರವಾಗುತ್ತದೆ.




ಕೇಂದ್ರಾಪಗಾಮಿ ವೇಗ ನಿಯಂತ್ರಕ

4 **ಕೇಂದ್ರಾಪಗಾಮಿ (ಸೆಂಟ್ರಿಫ್ಯೂಜ್)** : ಕಲಿಲ ದ್ರಾವಣಗಳಲ್ಲಿ ತೇಲಾಡುತ್ತಿರುವ ಘನ ಪದಾರ್ಥದ ಕಣಗಳು ಅವುಗಳ ತೂಕದಿಂದ ದ್ರಾವಣಗಳ ಕೆಳಭಾಗಕ್ಕೆ ಕ್ರಮೇಣ ಇಳಿಯುತ್ತವೆ. ಆದರೆ ಇದಕ್ಕೆ ಅನೇಕ ದಿವಸಗಳು ಇಲ್ಲವೆ ತಿಂಗಳುಗಳೇ ಬೇಕಾಗಬಹುದು. ಈ ಕಣಗಳನ್ನು ಅತಿಕ್ಷಿಪ್ರವಾಗಿ ಕೆಳಕ್ಕೆ ಇಳಿಸುವುದಕ್ಕೆ ಮತ್ತು ಕಣಗಳನ್ನು ಅವುಗಳ ಗಾತ್ರಕ್ಕೆ ಅನುಸಾರವಾಗಿ ಬೇರ್ಪಡಿಸುವುದಕ್ಕೆ ಈ ಯಂತ್ರವನ್ನು ಉಪಯೋಗಿಸುತ್ತಾರೆ. ಕಲಿಲ ದ್ರಾವಣವನ್ನು ಚಿತ್ರದಲ್ಲಿ ತೋರಿಸಿರುವ P ಮತ್ತು Q ಪಾತ್ರೆಗಳಲ್ಲಿ ಇಟ್ಟು AB ಊರ್ಧ್ವದಂಡವನ್ನು ವಿದ್ಯುಚ್ಚಾಲಕದ (G) ಬಲದಿಂದ ವೇಗವಾಗಿ ಆವರ್ತಿಸುವಂತೆ ಮಾಡಿದರೆ P ಮತ್ತು Q ಪಾತ್ರೆಗಳು ಕೇಂದ್ರಾಪಗಾಮಿ ಬಲದಿಂದ ಊರ್ಧ್ವಸ್ಥಿತಿ ಬಿಟ್ಟು ಅಡ್ಡ ಸ್ಥಿತಿಯಲ್ಲಿ AB ಯ ಸುತ್ತ ಅತಿ ವೇಗದಿಂದ ಪ್ರದಕ್ಷಿಣೆ ಮಾಡುತ್ತವೆ.

ಕೇಂದ್ರಾಪಗಾಮಿ ಬಲಕಣಗಳ ಮೇಲೆ ಅವುಗಳ ತೂಕದ ಹಲವಾರು ಪಟ್ಟು ಆಗಿ ಕಣಗಳು ಕೇಂದ್ರದಿಂದ ದೂರಕ್ಕೆ ಅಂದರೆ ಪಾತ್ರೆಗಳ ತುದಿ ಭಾಗಕ್ಕೆ ಕ್ಷಿಪ್ರವಾಗಿ ಚಲಿಸುತ್ತವೆ.



ಕೇಂದ್ರಾಪಗಾಮಿ

ಆವರ್ತಿಸುವುದನ್ನು ನಿಲ್ಲಿಸಿದಾಗ ಪಾತ್ರೆಗಳು ಊರ್ಧ್ವಸ್ಥಿತಿಗೆ ಬಂದು ಅವುಗಳ ತಳದಲ್ಲಿ ಕಣಗಳು ಶೇಖರಿಸುತ್ತವೆ. ಯಂತ್ರವನ್ನು ಸ್ವಲ್ಪ ಕಾಲ ಮಾತ್ರ ಆವರ್ತಿಸಿದರೆ, ಅತಿ ದಪ್ಪ ಕಣಗಳು ಪಾತ್ರೆಯ ತಳದಲ್ಲಿಯೂ ಸಣ್ಣ ಕಣಗಳು ಅವುಗಳ ಗಾತ್ರ ಕಡಿಮೆಯಾದಂತೆ ಮೇಲು ಮೇಲಿನ ಮಟ್ಟಗಳಲ್ಲಿಯೂ ಶೇಖರಿಸುವುದರಿಂದ ಕಣಗಳನ್ನು ಅವುಗಳ ಗಾತ್ರದ ಪ್ರಕಾರ ವಿಂಗಡಿಸಬಹುದು. ಸೂಕ್ಷ್ಮ ಗಾತ್ರದ ವಿಟಮಿನ್‌ಗಳನ್ನು ಮತ್ತು ಕಾಯಿಲೆಗಳಿಗೆ ಕಾರಣವಾದ ವೈರಸ್ ಎಂಬ ಸೂಕ್ಷ್ಮಜೀವಿಗಳನ್ನು ದ್ರವಗಳಿಂದ ಶೇಖರಿಸುವುದಕ್ಕೆ ಅತಿ ಕ್ಷಿಪ್ರ ಕೇಂದ್ರಾಪಗಾಮಿಗಳನ್ನು ಉಪಯೋಗಿಸುತ್ತಾರೆ. (ಎಚ್.ಎಸ್.ವಿ.)

5 **ಕೇಂದ್ರಾಪಗಾಮಿ ರೇಚಕ (ಸೆಂಟ್ರಿಫ್ಯೂಗಲ್ ಪಂಪ್)** : ಕೇಂದ್ರಾಪಗಾಮಿ ಕ್ರಿಯೆಯ ಮೂಲಕ ಒತ್ತಡವನ್ನು ಸೃಷ್ಟಿಸಿ ದ್ರವಗಳನ್ನು ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಎತ್ತಲು ಉಪಯೋಗಿಸುವ ಸಲಕರಣೆ. ಯಂತ್ರದಲ್ಲಿ ಚಿಮ್ಮುಕಗಳು (ಇಂಪೆಲ್ಲರ್ಸ್– ಹಿಂದಕ್ಕೆ ಬಾಗಿದ ಅಲಗುಗಳು) ದ್ರವಗಳಿಗೆ ಗಿರಗಿರನೆ ಆವರ್ತಿಸುವ ಶಕ್ತಿಯನ್ನು ಕೊಡುತ್ತವೆ. ಚಿಮ್ಮುಕಗಳು ದ್ರವವನ್ನು ಅರೀಯ ದಿಶೆಯಲ್ಲಿ ವೇಗೋತ್ಕರ್ಷಸಹಿತ ಹೊರಕ್ಕೆ ತಳ್ಳುವುದರ ಮೂಲಕ ಚೂಷಣ (ಸಕ್ಷನ್) ಮತ್ತು ನಿರ್ಗಮನ (ಡೆಲಿವರಿ) ನಾಳಗಳ ಮಧ್ಯೆ ಒತ್ತಡದಲ್ಲಿ ವ್ಯತ್ಯಾಸವನ್ನು ಸೃಷ್ಟಿಸುತ್ತವೆ. ಈ ತತ್ತ್ವದ ಮೇಲೆ ಯಂತ್ರವನ್ನು ರಚಿಸಲಾಗಿದೆ. ಯಂತ್ರವನ್ನು ಆರಂಭಿಸುವುದಕ್ಕೆ ಮುಂಚೆ ನಿರ್ಗಮನ ನಾಳದಲ್ಲಿ ದ್ರವವನ್ನು ತುಂಬಬೇಕು. ಇದಕ್ಕೆ ಪ್ರೈಮಿಂಗ್ ಎಂದು ಹೆಸರು. ಚಿಮ್ಮುಕ ಆವರ್ತಿಸಲು ಆರಂಭಿಸಿದಾಗ ಅದರಲ್ಲಿರುವ ದ್ರವ, ಕೇಂದ್ರಾಪಗಾಮಿ ಬಲದಿಂದ ಚಿಮ್ಮುವ ಚಾಲಕಗಳ (ಇಂಪೆಲರ್ ವೇನ್ಸ್) ಕೊನೆಯಲ್ಲಿ ಒತ್ತಡ ಕಡಿಮೆಯಾಗಿರುವುದರಿಂದ, ಆ ಕೊನೆಗೆ ನುಗ್ಗಲು ಪ್ರಾರಂಭಿಸುತ್ತದೆ.

ಇದರಿಂದ ದ್ರವ ಈ ಚಾಲಕಗಳ ಮಧ್ಯೆ ಸಿಕ್ಕಿಕೊಳ್ಳುತ್ತದೆ. ಚಿಮ್ಮುಕಗಳ ವೇಗವಾದ ಆವರ್ತನೆಯಿಂದ ಚೂಷಣನಾಳದಲ್ಲಿರುವ ದ್ರವ ಯಂತ್ರದಿಂದ ಹೀರಲ್ಪಡುತ್ತದೆ; ಮತ್ತು ನಿರ್ಗಮನ ನಾಳದ ಮೂಲಕ ಹೊರಕ್ಕೆ ನೂಕಲ್ಪಡುತ್ತದೆ. ದ್ರವ ಹೆಚ್ಚು ಒತ್ತಡದಿಂದ ಹೊರಬರುವುದರಿಂದ ಎತ್ತರಕ್ಕೆ ಸಾಗಿಸಲು ಉಪಯೋಗವಾಗುತ್ತದೆ. ವೇಗಶಕ್ತಿಯನ್ನು ಒತ್ತಡಶಕ್ತಿಯನ್ನಾಗಿ ಪರಿವರ್ತಿಸುವ ರೀತಿಯಲ್ಲಿ ಈ ಯಂತ್ರದ ಹೊದಿಕೆಯನ್ನು (ಕೇಸಿಂಗ್) ರೂಪಿಸಲಾಗಿದೆ. ತಿರುಬಾನಿ ಅಥವಾ ವಿದ್ಯುತ್‌ಚಾಲಕ ಯಂತ್ರಗಳ ಸಹಾಯದಿಂದ ಈ ಯಂತ್ರಗಳನ್ನು ನೇರವಾಗಿ ನಡೆಸಬಹುದು. ವ್ಯವಸಾಯಕ್ಕೆ ನೀರನ್ನು ಹಾಯಿಸಲು, ಚರಂಡಿ ನೀರನ್ನು ದೂರ ಸಾಗಿಸಲು, ಕುಡಿಯುವ ನೀರನ್ನು ಒದಗಿಸಲು, ಬಾಯ್ಲರುಗಳಿಗೆ ನೀರನ್ನು ಪೂರೈಸಲು ಮತ್ತು ಅಗ್ನಿಶಾಮಕ ಕಾರ್ಯದಲ್ಲಿ ಈ ಯಂತ್ರ ಬಹಳ ಉಪಯುಕ್ತವಾಗಿದೆ. (ಎಚ್.ಎಸ್.ಆರ್.)

**ಕೇಂದ್ರಾಪಗಾಮಿ ಬಲದಿಂದ ಉಂಟಾಗುವ ತೊಂದರೆಗಳ ಹಾಗೂ ಅವುಗಳ ನಿವಾರಣೆ :** ಮೋಟಾರ್‌ಕಾರ್ ಮುಂತಾದ ಸ್ವಯಂಚಾಲಿತ ವಾಹನಗಳು ತಿರುವುಗಳಲ್ಲಿ ವೃತ್ತಾಕಾರಪಥದಲ್ಲಿ ಚಲಿಸಬೇಕಾಗುತ್ತದೆ. ವೃತ್ತಾಕಾರ ಪಥದ ತ್ರಿಜ್ಯ Rಆಗಿ ಅಲ್ಲಿನ ವೇಗ v ಆಗಿದ್ದರೆ ಕೇಂದ್ರಾಭಿಮುಖ ಬಲ $Mv^2/R$ ಆಗುತ್ತದೆ. ಇಲ್ಲಿ Mವಾಹನದ ದ್ರವ್ಯರಾಶಿ. ಈ ಬಲ ರಸ್ತೆಯ ಘರ್ಷಣಬಲಕ್ಕಿಂತ (ಫ್ರಿಕ್ಷನ್) ಅಧಿಕವಾದರೆ ಕೇಂದ್ರದಿಂದ ಹೊರಕ್ಕೆ

ಜಾರಿಸಲ್ಪಡುವುದರಿಂದ ಅಪಾಯ ಸಂಭವಿಸುತ್ತದೆ. ರಸ್ತೆಯ ಘರ್ಷಣ ಅಧಿಕವಾಗಿರುವಾಗ ಜಾರುವ ಅಪಾಯವಿರುವುದಿಲ್ಲ. ಆದರೆ ವೇಗ ಅಧಿಕವಾಗಿದ್ದರೆ, ಕೇಂದ್ರಾಪಗಾಮಿ ಬಲ



ಕೇಂದ್ರಾಪಗಾಮಿ ರೇಚಕ

ವಾಹನದ ಗುರುತ್ವಕೇಂದ್ರದ ಮೂಲಕ ಪ್ರಯೋಗವಾಗಿ, ವಾಹನವನ್ನು ಹೊರಚಕ್ರದ ಆಧಾರದ ಮೇಲೆ ತಿರುಗಿಸಿ ಅದನ್ನು ತಲೆಕೆಳಗಾಗುವಂತೆ ಮಾಡುವ ಅಪಾಯವಿರುತ್ತದೆ. ಈ ಅಪಾಯಗಳನ್ನು ನಿವಾರಿಸುವುದಕ್ಕೆ, ತಿರುವು ರಸ್ತೆಗಳಲ್ಲಿ ತಿರುವಿನ ಹೊರಭಾಗವನ್ನು ಒಳಭಾಗಕ್ಕಿಂತ ಸ್ವಲ್ಪ ಎತ್ತರಿಸಿರುತ್ತಾರೆ. ಇದರಿಂದ ರಸ್ತೆಯ ಅಡ್ಡಭಾಗ ಇಳಿಜಾರನ್ನು (ಬ್ಯಾಂಕಿಂಗ್) ಪಡೆಯುತ್ತದೆ. ಈ ಇಳಿಜಾರಿನ ಬಾಗು $\theta$ ಆಗಿದ್ದರೆ ಸುರಕ್ಷಿತ ವೇಗದ ಮಿತಿ $v$ ಎನ್ನುವುದು $\tan\theta=v^2/Rg$ ಎನ್ನುವುದರಿಂದ ಲಭಿಸುತ್ತದೆ. ಇಲ್ಲಿ $R$ ತಿರುವಿನ ತ್ರಿಜ್ಯ. ರೈಲುಮಾರ್ಗಗಳ ತಿರುವುಗಳಲ್ಲಿ ಇದೇ ರೀತಿಯಲ್ಲಿ ಹೊರಭಾಗದ ಕಂಬಿಯನ್ನು ಒಳಭಾಗದ ಕಂಬಿಗಿಂತ ಎತ್ತರಿಸಿರುತ್ತಾರೆ. ಹೊರ ಕಂಬಿಯ ಹೆಚ್ಚು ಎತ್ತರ $h$ ಆಗಿ, ಕಂಬಿಗಳ ನಡುವೆ ಇರುವ ಅಂತರ $w$ ಆದರೆ ತಿರುವಿನಲ್ಲಿ ರೈಲುಗಾಡಿಯ ವೇಗದ ಮಿತಿ $h/w\tan\theta=v^2/Rg$ ಎನ್ನುವುದರಿಂದ ದೊರೆಯುತ್ತದೆ. (ಎಚ್.ಎಸ್.ವಿ.)

**ಕೇಂದ್ರ ಶಿಕ್ಷಣ ಸಲಹಾ ಮಂಡಲಿ :** ಭಾರತ ಸರ್ಕಾರದ ಶಿಕ್ಷಣ ಶಾಖೆಯ ಕಾರ್ಯಯೋಜನೆಯಲ್ಲಿ ಪ್ರಧಾನ ಪಾತ್ರವಹಿಸುವ ಸ್ಥಾಯೀ ಸಲಹಾ ಮಂಡಲಿ (ಸೆಂಟ್ರಲ್ ಅಡ್ವೈಸರಿ ಬೋರ್ಡ್ ಆಫ್ ಎಜುಕೇಷನ್). 1917ರಲ್ಲಿ ಪ್ರಾಂತ್ಯಗಳಲ್ಲಿ ಅನುಷ್ಠಾನಕ್ಕೆ ತಂದ ದ್ವಿತಂತ್ರ ಆಡಳಿತ (ಡಯಾರ್ಕಿ) ಪದ್ಧತಿಯಿಂದ ಶಿಕ್ಷಣ ಪ್ರಾಂತೀಯ ಸರ್ಕಾರದ ಆಡಳಿತ ವಿಷಯವಾಯಿತು. ಇದರ ಫಲವಾಗಿ ಪ್ರತಿಪ್ರಾಂತ್ಯದಲ್ಲೂ ಶಿಕ್ಷಣ ತನ್ನದೇ ಆದ ಮಾರ್ಗದಲ್ಲಿ ಮುಂದುವರಿಯುವಂತಾಗಿ ಅಖಂಡ ಭಾರತಕ್ಕೊಪ್ಪುವ ಸಾಮಾನ್ಯ ನೀತಿಯನ್ನು ರೂಪಿಸಿಕೊಳ್ಳಲಾರದ ಪರಿಸ್ಥಿತಿ ಸಂಭವಿಸಿತು. ಇದನ್ನು ತಪ್ಪಿಸಿ ಭಾರತೀಯ ಶಿಕ್ಷಣದ ನೀತಿಯಲ್ಲಿ ಸಮನ್ವಯವನ್ನು ಮೂಡಿಸಲು ನೆರವಾಗುವಂತೆ ಸರ್ಕಾರಕ್ಕೆ ಸೂಕ್ತ ಸಲಹೆ ನೀಡಬಲ್ಲ ಸಂಸ್ಥೆಯೊಂದರ ಅಗತ್ಯ ಕಂಡುಬಂತು. ಅದಕ್ಕಾಗಿ ಕೇಂದ್ರ ಸರ್ಕಾರ 1921ರಲ್ಲಿ ಈ ಮಂಡಳಿಯನ್ನು ರಚಿಸಿತು. ಆದರೆ ಆ ಸುಮಾರಿನಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಮಂಡಳಿಯನ್ನು 1923ರಲ್ಲಿ ರದ್ದುಪಡಿಸಲಾಯಿತು. ಹರ್ಟಾಗ್ ಸಮಿತಿಯ (1927) ಸಲಹೆಯಂತೆ ಮತ್ತೆ ಇದನ್ನು 1935ರಲ್ಲಿ ಅಸ್ತಿತ್ವಕ್ಕೆ ತರಲಾಯಿತು.

ಕೇಂದ್ರ ಅಥವಾ ಪ್ರಾಂತ್ಯ ಸರ್ಕಾರಗಳು ಸೂಚಿಸುವ ಶಿಕ್ಷಣ ಸಮಸ್ಯೆಗಳನ್ನು ಪರಿಶೀಲಿಸಿ ಸಲಹೆ ನೀಡುವುದು, ರಾಷ್ಟ್ರಕ್ಕೆ ವಿಶೇಷ ಆಸಕ್ತಿಯ ಅಥವಾ ಉಪಯುಕ್ತವೆನಿಸುವ ಶೈಕ್ಷಣಿಕ ಪ್ರಗತಿಯ ಬಗ್ಗೆ ರಾಜ್ಯಸರ್ಕಾರಗಳಿಂದ ಮಾಹಿತಿಯನ್ನು ಸಂಗ್ರಹಿಸಿ, ಪರಿಶೀಲಿಸಿ, ಅಗತ್ಯವೆನಿಸುವ ಸಲಹೆಗಳೊಡನೆ ಕೇಂದ್ರ ಸರ್ಕಾರಕ್ಕೂ, ರಾಜ್ಯ ಸರ್ಕಾರಗಳಿಗೂ ಒದಗಿಸುವುದು–ಇವು ಇದರ ಮುಖ್ಯ ಕರ್ತವ್ಯಗಳು. ಕೇಂದ್ರ ಸರ್ಕಾರದ ಶಿಕ್ಷಣ ಸಚಿವರು ಇದರ ಅಧ್ಯಕ್ಷರು. ಕೇಂದ್ರ ಸರ್ಕಾರದ ಶಿಕ್ಷಣ ಸಲಹೆಗಾರರು, ಭಾರತ ಸರ್ಕಾರ ನಾಮಕರಣ ಮಾಡುವ 15 ಮಂದಿ (ಅವರಲ್ಲಿ ನಾಲ್ವರು ಮಹಿಳೆಯರು) ಶಿಕ್ಷಣ ತಜ್ಞರು, ಪಾರ್ಲಿಮೆಂಟು ಆರಿಸುವ 5 ಮಂದಿ ಸದಸ್ಯರು, ಅಂತರ ವಿಶ್ವವಿದ್ಯಾಲಯ ಮಂಡಲಿಯ ಇಬ್ಬರು ಪ್ರತಿನಿಧಿಗಳು, ಅಖಿಲ ಭಾರತ ತಾಂತ್ರಿಕ ಶಿಕ್ಷಣದ ಸಲಹಾ ಮಂಡಲಿಯ (ಆಲ್ ಇಂಡಿಯ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್) ಇಬ್ಬರು ಪ್ರತಿನಿಧಿಗಳು, ಪ್ರತಿರಾಜ್ಯದಿಂದಲೂ ಒಬ್ಬೊಬ್ಬ ಪ್ರತಿನಿಧಿ (ಆಯಾ ರಾಜ್ಯದ ಶಿಕ್ಷಣ ಸಚಿವರು ಅಥವಾ ಅವರ ಪ್ರತಿನಿಧಿ), ಕೇಂದ್ರ ಸರ್ಕಾರ ನೇಮಿಸುವ ಮಂಡಲಿಯ ಕಾರ್ಯದರ್ಶಿ–ಇವರು ಇದರ ಸದಸ್ಯರಾಗಿರುವರು. ಸಮಾಜ ಶಿಕ್ಷಣ ಸಮಿತಿ, ಪ್ರೌಢಶಿಕ್ಷಣ ಸಮಿತಿ, ಉನ್ನತ ಶಿಕ್ಷಣ ಸಮಿತಿ–ಈ ಮೂರು ಸಮಿತಿಗಳ ಮೂಲಕ ಮಂಡಲಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ.

ಮಂಡಲಿ ವರ್ಷಕ್ಕೊಮ್ಮೆ ಸಭೆ ಸೇರಿ ಪ್ರಮುಖ ಶಿಕ್ಷಣ ಸಮಸ್ಯೆಗಳನ್ನು ಪರಿಶೀಲಿಸುತ್ತದೆ. ಅದರ ಸ್ಥಾವರ ಸಮಿತಿಗಳಲ್ಲಿ ರಾಜ್ಯಗಳ ಶಿಕ್ಷಣ ಸಚಿವರೂ ಶಿಕ್ಷಣಾಧಿಕಾರಿಗಳೂ ಸದಸ್ಯರಾಗಿದ್ದು, ಚರ್ಚೆಯಲ್ಲಿ ಭಾಗವಹಿಸುವರು. ಮಂಡಳಿ ತಾನು ಕೈಕೊಳ್ಳುವ ತೀರ್ಮಾನಗಳನ್ನು ರಾಜ್ಯ ಸರ್ಕಾರಗಳಿಗೆ ಸಲಹೆಯ ರೂಪದಲ್ಲಿ ಕಳಿಸಿಕೊಡುವುದು. ರಾಜ್ಯ ಸರ್ಕಾರಗಳು ಅವನ್ನು ಅನುಷ್ಠಾನಕ್ಕೆ ತರಲೇಬೇಕೆಂಬ ಕಟ್ಟಿಲ್ಲದಿದ್ದರೂ ಆ ತೀರ್ಮಾನಗಳಲ್ಲಿ ರಾಜ್ಯದ ಪ್ರತಿನಿಧಿಗಳೂ ಪಾತ್ರವಹಿಸುವುದರಿಂದ ಸ್ವಾಭಾವಿಕವಾಗಿ ಅವು ಪರಿಣಾಮಕಾರಿಯಾಗಬಲ್ಲವು.

1935ರಿಂದ ಮಂಡಳಿ ಭಾರತೀಯ ಶಿಕ್ಷಣದ ಪುನರ್ರಚನೆಗೆ ನೆರವಾಗುವ ಅನೇಕ ಸಲಹೆಗಳನ್ನು ನೀಡುತ್ತಿದೆ. ಗ್ರಾಂಥಿಕ ಶಿಕ್ಷಣದಂತೆ ವೃತ್ತಿ ಶಿಕ್ಷಣಕ್ಕೂ ಅವಕಾಶ ಕಲ್ಪಿಸಿ, ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳಿಗೆ ಹೇಗೋ ಹಾಗೆ ವೃತ್ತಿ ಶಿಕ್ಷಣ ಸಂಸ್ಥೆಗಳಿಗೂ ಉದ್ಯೋಗಗಳಿಗೂ ಸೇರಲು ಅವಕಾಶ ಕಲ್ಪಿಸುವುದರಲ್ಲಿ ಇದು ಪ್ರಮುಖ ಪಾತ್ರ ವಹಿಸಿತು. ತನ್ನ ಸಲಹೆಯಂತೆ ರಚನೆಯಾದ ಆರ್ಬಟ್ ಮತ್ತು ವುಡ್ಡರ ವರದಿಯ ಸಲಹೆಗಳನ್ನೊಳಗೊಂಡ ಸಾರ್ಜಂಟ್ ವರದಿಯ ಮೂಲಕ ಅದು 1944ರಲ್ಲಿ ಯುದ್ಧಾನಂತರದ ಶಿಕ್ಷಣದ ಪುನಾರಚನೆಗಾಗಿ ವ್ಯಾಪಕವಾದ ಸಲಹೆ ನೀಡಿತು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಇದರ ಸಲಹೆಯಂತೆ ಭಾರತ ಸರ್ಕಾರ ಶಿಕ್ಷಣ ಆಯೋಗಗಳನ್ನು ರಚಿಸಿ ಕಾಲಕಾಲಕ್ಕೆ ಶಿಕ್ಷಣಕ್ಷೇತ್ರದ ಪುನಾರಚನೆಯನ್ನು ಕೈಕೊಳ್ಳುತ್ತಿದೆ.

ಮಂಡಲಿಯ ನೇತೃತ್ವದಲ್ಲಿ ಶಿಕ್ಷಣದ ಕೇಂದ್ರ ಕಚೇರಿ (ಸೆಂಟ್ರಲ್ ಬ್ಯೂರೊ ಆಫ್ ಎಜುಕೇಷನ್) ಕೆಲಸ ಮಾಡುತ್ತಿದೆ. ಅದು ಭಾರತದ ಮತ್ತು ವಿದೇಶಗಳ ಶಿಕ್ಷಣದ ಪ್ರಮುಖ ಅಂಶಗಳನ್ನು ಸಂಗ್ರಹಿಸುತ್ತದೆ. ಭಾರತೀಯ ಶಿಕ್ಷಣದ ವಾರ್ಷಿಕ ಮತ್ತು ಪಂಚವಾರ್ಷಿಕ ವರದಿಗಳನ್ನೂ ಇತರ ಶೈಕ್ಷಣಿಕ ವರದಿಗಳನ್ನೂ ಅಂಕಿಅಂಶಗಳನ್ನೂ ಪ್ರಕಟಿಸುತ್ತದೆ. ಭಾರತ ಸರ್ಕಾರ ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲೂ, ವಿದೇಶಗಳಲ್ಲೂ ಕಂಡುಬರುವ ಪ್ರಗತಿಯನ್ನು ರಾಜ್ಯ ಸರ್ಕಾರಗಳ ಗಮನಕ್ಕೆ ತನ್ನ ಪ್ರಕಟಣೆಗಳ ಮೂಲಕ ಒದಗಿಸುತ್ತದೆ. (ಕೆ.ಬಿ.)

**ಕೇಂದ್ರಾಭಿಮಿತಿ ಪ್ರಮೇಯ :** ಸಂಭಾವ್ಯತಾ ಸಿದ್ಧಾಂತದಲ್ಲಿಯೂ (ಥಿಯೊರಿ ಆಫ್ ಪ್ರಾಬೆಬಿಲಿಟಿ) ಸೈದ್ಧಾಂತಿಕ ಸಂಖ್ಯಾಕಲನಶಾಸ್ತ್ರದಲ್ಲಿಯೂ (ಥಿಯೊರೆಟಿಕಲ್ ಸ್ಟ್ಯಾಟಿಸ್ಟಿಕ್ಸ್) ಪ್ರಸಾಮಾನ್ಯ ವಿತರಣೆಗೆ ಗಮನಾರ್ಹ ಸ್ಥಾನವನ್ನೂ ಒದಗಿಸಿಕೊಡುವ ಪ್ರಮೇಯ (ಸೆಂಟ್ರಲ್ ಲಿಮಿಟ್ ಥಿಯೊರಂ). ಸಂಭವ ವಿತರಣೆಗಳಲ್ಲಿ, ವಿತರಣೆಯ ಕೇಂದ್ರವೆಂದರೆ ಸಂಭವಚರ ತೆಗೆದುಕೊಳ್ಳುವ ಹಲವಾರು ಬೆಲೆಗಳು ಯಾವ ಬಿಂದುವಿನ (ಬೆಲೆಯ) ಸುತ್ತಮುತ್ತ ಹರಡಿಕೊಂಡಿರುವಂತೆ ಎನಿಸುವುವೋ ಅಂಥ ಒಂದು ಪ್ರಾತಿನಿಧಿಕ ಬೆಲೆ. ಸಂಭವಚರದ ಮಧ್ಯಕ (ಸರಾಸರಿ, ನಿರೀಕ್ಷಿತ ಬೆಲೆ ಅಥವಾ ನಿರೀಕ್ಷೆ–ಎಕ್ಸ್‌ಪೆಕ್ಟೆಡ್ ವ್ಯಾಲ್ಯೂ) ಇಂಥ ಒಂದು ಸ್ಥಾನ ನಿರ್ದೇಶಕ (ಮೆಷರ್ ಆಫ್ ಲೊಕೇಶನ್) ಬಿಂದು. ಅನೇಕ ಸಂದರ್ಭಗಳಲ್ಲಿ ನಮ್ಮ ಕಣ್ಣಿಗೆ ಕಾಣಬಲ್ಲ, ನಾವು ಅಳೆದು ನೋಡಬಲ್ಲ ಚರಗಳು ಸಂಭವಚರಗಳಾಗಿರುತ್ತವೆ. ಅಷ್ಟೇ ಅಲ್ಲ; ಅವು ಸಾಧಾರಣ ಚರಗಳಾಗಿರದೆ ಅವುಗಳಲ್ಲಿ ಹಲವಾರು ಸಂಭವಚರಗಳು ಅಂಗಾಂಶಗಳಾಗಿರುತ್ತವೆ. ಎಂದರೆ ನಮ್ಮ ಆಸಕ್ತಿ ಕೆರಳಿಸುವ ಅನೇಕ ಸಂಭವಚರಗಳು ತೊಡಕಾದ ರಚನೆಯವು. ಅವು ಹಲವಾರು ಸಂಭವಚರಗಳ ಮೊತ್ತವಾಗಿರುತ್ತವೆ. ಈ ಅಂಗಚರಗಳ ಬಗ್ಗೆ ನಮಗೆ ಹೆಚ್ಚಿನ ತಿಳಿವಾಗಲಿ, ಆಸಕ್ತಿಯಾಗಲಿ ಇಲ್ಲದೆ ಹೋಗಬಹುದು; ಇವೆಲ್ಲವುಗಳ ಮೊತ್ತ ಮಾತ್ರವೇ ನಮ್ಮ ಅಧ್ಯಯನ ವಸ್ತುವಾಗಿರಬಹುದು. ಆದ್ದರಿಂದ ಅಂಗಾಂಶಗಳ ವಿತರಣೆಗಳು ಸರಿಯಾಗಿ ತಿಳಿದಿಲ್ಲದಿದ್ದರೂ ಅವುಗಳ ಸಂಖ್ಯೆ ಸಾಕಷ್ಟು ದೊಡ್ಡದು ಆದಾಗಲಾದರೂ ಮೊತ್ತಚರದ ವಿತರಣೆಯ ಬಗ್ಗೆ ಏನಾದರೂ ಹೇಳಬಹುದಾದಲ್ಲಿ ಅಂಥ ತಿಳಿವು ಸ್ವಾಗತಾರ್ಹ. ಕೇಂದ್ರಾಭಿಮಿತಿ ಪ್ರಮೇಯ ಇಂಥ ತಿಳಿವನ್ನು ಕೊಡುತ್ತದೆ.

ಸ್ಥೂಲವಾಗಿ ಹೇಳುವುದಾದರೆ ಅನೇಕ ಸನ್ನಿವೇಶಗಳಲ್ಲಿ, ಸ್ವತಂತ್ರವಾದ ಪರಸ್ಪರ ಅನಾಶ್ರಯಿಗಳಾದ ಹಲವು ಸಂಭವಚರಗಳ ಮೊತ್ತ ಅಂಗಚರಗಳ ಸಂಭವ ವಿತರಣೆ ಏನೇ ಆಗಿದ್ದರೂ ತಾನು ಮಾತ್ರ ಸ್ವಲ್ಪ ಹೆಚ್ಚು ಕಡಿಮೆ ಗೌಸಿಯನ್ (ನಾರ್ಮಲ್) ವಿತರಣೆಯಾಗಿರುತ್ತದೆ. ಅದರ ವಿತರಣೆಗೂ ಗೌಸಿಯನ್ ವಿತರಣೆಗೂ ಇರುವ ಭೇದ ಅಂಗಚರಗಳ ಸಂಖ್ಯೆ ಹೆಚ್ಚಿದಂತೆ ತಾನು ಕಡಿಮೆಯಾಗುತ್ತ ಹೋಗಿ ಮಿತಿಯಲ್ಲಿ ತಾನು ಗೌಸಿಯನ್ ವಿತರಣೆಯೇ ಆಗಿಬಿಡುತ್ತದೆ.

ಈ ಕೇಂದ್ರಾಭಿಮಿತಿ ಪ್ರಮೇಯದಿಂದಾಗಿ ಗೌಸಿಯನ್ (ನಾರ್ಮಲ್) ವಿತರಣೆಗೆ ಸಂಭಾವ್ಯತಾ ಗಣಿತದಲ್ಲೂ ಸಂಖ್ಯಾಕಲನಶಾಸ್ತ್ರ ತತ್ತ್ವದಲ್ಲೂ ಒಂದು ಪ್ರಮುಖ ಸ್ಥಾನ ಸಲ್ಲುತ್ತದೆ. ಮೂಲರೂಪದಲ್ಲಿ ಈ ಪ್ರಮೇಯವನ್ನು ಮೊದಲು ರೂಪಿಸಿದವ ಲಾಪ್ಲಾಸ್ (1812ರಲ್ಲಿ). ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಅದರ ಸತ್ಯತೆಯನ್ನು ಲಿಯಪನಾಫ್ ತರ್ಕಶುದ್ಧವಾಗಿ ಸಾಧಿಸಿ ತೋರಿಸಿದ (1901). ಅನಂತರ ಈ ಕೇಂದ್ರಾಭಿಮಿತಿ ಸಮಸ್ಯೆಯನ್ನು ಅದರ ಸಾರ್ವತ್ರಿಕ ರೂಪದಲ್ಲಿ ಮಾತ್ರವಲ್ಲ, ಕೇಂದ್ರಾಭಿಮಿತಿ ಪ್ರಮೇಯವನ್ನು ಸಾಧಿಸಲು ತಾರ್ಕಿಕವಾಗಿ ಬೇಕಾಗುವ ಲಘುತಮ ಸನ್ನಿವೇಶ ವೈಶಿಷ್ಟ್ಯಗಳನ್ನು ಕುರಿತು ಸಹ ಅಧ್ಯಯನ ನಡೆಸಿರುವವರು ಹಲವು ಮಂದಿ. ಸಂಭವತಃ ಅನ್ಯೋನ್ಯಾಶ್ರಯಿಗಳಾದ ಅಂಗಚರಗಳ ಮೊತ್ತದ ಬಗ್ಗೆಯೂ ಪರಿಶೀಲನೆ ನಡೆದಿದೆ.

$x_1, x_2, \ldots, x_k, \ldots x_n$ಗಳು ಪರಸ್ಪರ ಸಂಭವತಃ ಸ್ವತಂತ್ರವಾಗಿದ್ದು $K$ಯ ಯಾವುದೇ ಬೆಲೆಗೂ ಸಂಭಾವ್ಯತೆ $(x_k=1)=p$, ಸಂಭಾವ್ಯತೆ $(x_k=0)=q=1-p$ ಆಗಿರುವಂಥ ಬಿಂದು ಸಂಕೋಚವ್ಯಾಪ್ತಿಯ (ಡೀಜನರೆಸಿ) ದ್ವಿಭಾವಕ ಸಂಭವಚರಗಳನ್ನು

ಕುರಿತ ಸಾಂಪ್ರದಾಯಿಕ ಕೇಂದ್ರಾಭಿಮಿತಿ ಸಾಮಾನ್ಯ ಪರಿಶೀಲನದ ಮೂಲಾಧಾರಗಳೆಂದರೆ ಬರ್ನೂಲಿ, ಡಿ' ಮಾಯಿವರ್, ಪಾಯಿಸಾನ್ ಇವರು ಅನುಕ್ರಮವಾಗಿ ನಿರೂಪಿಸಿದ ಪ್ರಮೇಯಗಳು.

ಮೊದಲನೆಯದಾದ ಬರ್ನೂಲಿ ಮಿತಿ ಪ್ರಮೇಯವನ್ನು ಹೀಗೆ ನಿರೂಪಿಸಬಹುದು: ಎಲ್ಲ Kಗಳಿಗೂ ಸಂಭವಚರ xkಗಳು ಪರಸ್ಪರ ಅನಾಶ್ರಯಿ ಗಳಾಗಿದ್ದು ಸಂಭಾವ್ಯತೆ ($x_k = 1$)=p ಮತು ಸಂಭಾವ್ಯತೆ ($x_k = 0$) = q =1 – q ಆಗಿರಲಿ. ಇಂಥ nಚರಗಳ ಮೊತ್ತ $\sum_{1}^{n} x_k = s_n$ ಎನ್ನೋಣ. ಈಗ $\frac{S_n}{n}$ಎಂಬೀ ಪ್ರಮಾಣ pಯನ್ನು ಸಂಭವತ: ಉಪಸರಿಸುತ್ತದೆ.

ಸಾಂಕೇತಿಕವಾಗಿ $\underset{n\to\infty}{\text{P lim}} \; \frac{S_n}{n} = P$

ಅರ್ಥಾತ್ ಸಂಭವ $\left(\left|\frac{S_{n-p}}{n}\right| > \epsilon\right) = \eta_n(\epsilon)$ ಆಗಿರಲಿ ಯಾವುದೇ $\epsilon$ ಬೆಲೆಗೂ n ಅನಂತಗಾಮಿಯಾದಂತೆ $\eta_n(\epsilon)$ ಸೊನ್ನೆಯನ್ನು ಉಪಸರಿಸುತ್ತದೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಡಿ' ಮಾಯಿವರ್ ಪ್ರತಿಪಾದಿಸಿದ ಎರಡನೆಯ ಮಿತಿ ಪ್ರಮೇಯವನ್ನು ಹೀಗೆ ಹೇಳಬಹುದು : ಮೇಲಿನ ಮೊತ್ತ $S_n$ನ ಶಿಷ್ಟರೂಪವಾದ ಸಂಭವಚರ $\xi_n \frac{S_n - nP}{\sqrt{npq}}$ನ ವಿತರಣೆ ಮಿತಿಯಲ್ಲಿ ಪ್ರಸಾಮಾನ್ಯ ಆಗಿರುತ್ತದೆ.

ಬರ್ನೂಲಿ ಕಲ್ಪಿಸಿಕೊಂಡ ಸನ್ನಿವೇಶವನ್ನು ಸೂಕ್ತ ರೀತಿಯಲ್ಲಿ ಮಾರ್ಪಡಿಸಿ ಪಾಯಿಸಾನ್ ಸಂಭಾವ್ಯತಾ ವಿತರಣೆಯನ್ನು (ಪ್ರಾಬೆಬಿಲಿಟಿ ಡಿಸ್ಟ್ರಿಬ್ಯೂಷನ್) ಸಾಧಿಸಿದ. ಬರ್ನೂಲಿಯನ್ ಹಾಗೂ ಗೌಸಿಯನ್ (ನಾರ್ಮಲ್) ಮಿತಿ (ಸಾಂದರ್ಭಿಕ) ವಿತರಣೆಗಳಲ್ಲಿ ಸಂವೃತತ್ತ್ವ (ಕ್ಲೋಷರ್) ಎಂಬ ಒಂದು ಮುಖ್ಯ ವೈಲಕ್ಷಣ್ಯವುಂಟು. ಸರ್ವಸಾಂದರ್ಭಿಕವಾಗಿ ಅಲ್ಲದಿದ್ದರೂ ನಿರ್ದಿಷ್ಟ ಸನ್ನಿವೇಶಗಳಲ್ಲಿ ಪಾಯಿಸಾನ್ ವಿತರಣೆಗೂ ಈ ಗುಣವಿಶೇಷವುಂಟು. ಸಂವೃತತ್ತ್ವವೆಂದರೆ ಇಷ್ಟೆ : ಪರಸ್ಪರ ಅನಾಶ್ರಯಿಗಳಾದ $x_1, x_2 \ldots\ldots x_n$ ಎಂಬ nಚರಗಳ ಮೊತ್ತ $\Sigma x_i = y_{(n)}$ ಆಗಿರಲಿ. ಈ $y_{(n)}$ನ ವಿತರಣೆ ಯಾವುದೋ ಅದೇ ಅಂಗಾಂಶಗಳಾದ ಪ್ರತಿ $x_k$ ಯ ವಿತರಣೆಯೂ ಆಗಿರುತ್ತದೆ. ಬರ್ನೂಲಿಯನ್ ವಿತರಣೆಗೆ ಸಂವೃತತ್ತ್ವ ಗುಣವಿದೆಯಾಗಿ ಮೇಲಿನ $y_{(n)}$ ಚರ ಬರ್ನೂಲಿಯನ್ ವಿತರಣೆ ಹೊಂದಿದ್ದಲ್ಲಿ ಅದರ ಅಂಗಾಂಶಗಳಾದ ಪ್ರತಿಯೊಂದು ಚರ $x_k$ಯೂ ಬರ್ನೂಲಿಯನ್ ವಿತರಣೆ ಹೊಂದಿರುತ್ತದೆಂದು ನಿರ್ಧಾರವಾಗಿ ಹೇಳಬಹುದು. ಅದೇ $y_{(n)}$ನ ವಿತರಣೆ ಸಂವೃತತ್ತ್ವ ಗುಣವಿಲ್ಲದ ಮತ್ತಾವುದಾದರೊಂದು ವಿತರಣೆಯಾಗಿದ್ದಲ್ಲಿ ಅದರ ಅಂಗಾಂಶಗಳಾದ xk ಗಳ ಬಗ್ಗೆ ಇಂಥ ಏನೊಂದು ತೀರ್ಮಾನಕ್ಕೂ ಬರಲಾಗುವುದಿಲ್ಲ.

ಸಂಖ್ಯಾಬಾಹುಳ್ಯ ನಿಯಮ ಹಾಗೂ ಗೌಸಿಯನ್ ಕೇಂದ್ರಾಭಿಸರಣ ಪ್ರಮೇಯಗಳು ಸಿದ್ಧಿಸಲು ಬೇಕಾಗುವ ಸನ್ನಿವೇಶಗಳನ್ನು ದುರ್ಬಲಗೊಳಿಸುವ (ವೀಕನ್) ಪ್ರಯತ್ನಗಳು ಲಾಪ್ಲಾಸನ ಕಾಲದಿಂದಲೂ ನಡೆಯುತ್ತ ಬಂದಿವೆ. ಒಟ್ಟಿನಲ್ಲಿ ಕೇಂದ್ರಾಭಿಮಿತಿ ಪ್ರಮೇಯವನ್ನು ಹೀಗೆ ನಿರೂಪಿಸಬಹುದು: $x_1, x_2 \ldots\ldots, x_n$ಎಂಬ ಪರಸ್ಪರ ಅನಾಶ್ರಯಿ ಸಂಭವಚರಗಳ ವೈಯಕ್ತಿಕ ವಿತರಣೆಗಳು ಏನೇ ಇರಲಿ ಬಹು ವಿಶಾಲ ಸನ್ನಿವೇಶಗಳಲ್ಲಿ ಅವುಗಳ ಮೊತ್ತ ಚರ $S_n = \sum_{1}^{n} x_i$ ಅನಂತ ಸ್ಪರ್ಶೀಯವಾಗಿ (ಅಸಿಂಪ್ಟಾಟಿಕಲ್ಲಿ) ಗೌಸಿಯನ್ $(m, \sigma)$ ವಿತರಣೆಯನ್ನು ಹೊಂದಿರುತ್ತದೆ. ಇಲ್ಲಿ $m_i$, $\sigma_i$ಗಳು ಚರ $x_i$ಯ ಮಧ್ಯಕ, ನಿಯತಭಿನ್ನತೆಗಳು ಹಾಗೂ $m = \Sigma m_i$ ಮತ್ತು $\sigma^2 = \Sigma\sigma_i^2$. ಲಿಯಪನಾಫ್ 1901ರಲ್ಲಿ ಈ ಪ್ರಮೇಯವನ್ನು ಸಾಕಷ್ಟು ಸಾರ್ವತ್ರಿಕವಾದ ಸನ್ನಿವೇಶಗಳಲ್ಲಿ ತರ್ಕಶುದ್ಧವಾಗಿ ಸಾಧಿಸಿದ. ಈ ಪ್ರಮೇಯ ಸತ್ಯವಾಗಬಲ್ಲ ಅತ್ಯಂತ ಸಾರ್ವತ್ರಿಕ ಸನ್ನಿವೇಶಗಳನ್ನು ಕಂಡುಕೊಳ್ಳುವಲ್ಲಿ ಸಫಲರಾದವರೆಂದರೆ ಫೆಲ್ಲರ್, ಖಿನ್‌ಚಿನ್, ಲೆವಿ, ನೆಡೆನ್‌ಕೋ ಮತ್ತು ಡಾಬ್ಲಿನ್.

ಚಾರಿತ್ರಿಕ ಮಹತ್ತ್ವವುಳ್ಳ ಕೇಂದ್ರಾಭಿಮಿತಿ ಪ್ರಮೇಯದ ಎರಡು ರೂಪಗಳನ್ನು ಕೆಳಗೆ ಕಾಣಿಸಿದೆ.

1 ಸದೃಶಾಂಗ ಸನ್ನಿವೇಶದಲ್ಲಿನ (ಈಕ್ವಲ್ ಕಾಂಪೊನೆಂಟ್) (ಲಿಂಡ್‌ಬರ್ಗ್–ಲೆವಿಯರು ಮೊದಲಿಗರಾಗಿ ಸಾಧಿಸಿದ) ಕೇಂದ್ರಾಭಿಮಿತಿ ಪ್ರಮೇಯ : $x_1, x_2 \ldots\ldots, x_n, \ldots\ldots$ ಅನಾಶ್ರಯಿ ಸಂಭವ ಚರಗಳೆಲ್ಲ ಒಂದೇ ರೂಪದ ವಿತರಣೆ ಹೊಂದಿರಲಿ. $x_k$ಯ ಮಧ್ಯಕ $E(x_k) = m_k$ ಮತ್ತು ನಿಯತಭಿನ್ನತೆ $\sigma_k$ಆಗಿರಲಿ; k =1, 2,........n........ಈ ಚರಗಳಮೊತ್ತದ ಶಿಷ್ಟರೂಪವಾದ

$$\frac{\sum_{1}^{n} x_k - \sum m_k}{\sqrt{\sum \sigma_k^2}} = \zeta_n$$

ಎಂಬ ಚರ ಅನಂತಸ್ಪರ್ಶೀಯವಾಗಿ (ಎಂದರೆ $n \to \infty$ ಆದಾಗ) N(0,1) ಆಗಿ ವಿತರಣೆಗೊಳ್ಳುತ್ತದೆ. ಗಮನಾರ್ಹ ಸಂಗತಿಯೆಂದರೆ ಒಂದೇ ವಿತರಣರೂಪದ ಎಂದರೆ ಸದೃಶಾಂಗ ಚರಗಳ ಈ ಸಂದರ್ಭದಲ್ಲಿ ಪ್ರತಿ ಅಂಗಚರದ ದ್ವಿತೀಯ ಮೊಮೆಂಟೊ ಸಾಂತವಾಗಿದ್ದರೆ ಸಾಕು. ಕೇಂದ್ರಾಭಿಮಿತಿ ಪ್ರಮೇಯ ಸಿದ್ಧಿಸುತ್ತದೆ. ಅಂಗಚರಗಳ ವಿತರಣರೂಪಗಳು ಒಂದೇ ಆಗಿಲ್ಲದ ವಿಶಾಲತರ ಸಂದರ್ಭಗಳಲ್ಲಿ ಮೊತ್ತ ಚರ $\Sigma x_k$ ಯಲ್ಲಿನ ಯಾವುದೇ ಚರಾಂಶ $x_k$ಯೂ ಮಿಕ್ಕವಕ್ಕಿಂತ ಅತಿ ಹೆಚ್ಚಾಗಿ ಹೋಗದಂತೆ ಮಿಕ್ಕವನ್ನು ಮೂಲೆ ಸೇರಿಸದಂತೆ ಏನಾದರೊಂದು ನಿಯಂತ್ರಣವನ್ನು ಹೇರಬೇಕಾಗುತ್ತದೆ. ಇಂಥ ಒಂದು ನಿಯಂತ್ರಣ ಸ್ಥಿತಿಯನ್ನು ಮುಂದಿನ ಪ್ರಮೇಯ ವರ್ಣಿಸುತ್ತದೆ.

2 ಅಸದೃಶಾಂಗ ಸನ್ನಿವೇಶದಲ್ಲಿನ (ಲಿಯಪನಾಫ್ ನಿರೂಪಿತ) ಕೇಂದ್ರಾಭಿಮಿತಿ ಪ್ರಮೇಯ: $x_1, x_2, \ldots, x_k$ಗಳು ಅನಾಶ್ರಯಿ ಚರಗಳಾಗಿದ್ದು $E(x_k) = m_k$, $\sqrt{E(x_k - m_k)^2} = \sigma_k$ ಮತ್ತು $E(|x_k - m_k|^3) = \rho k^3$ ಗಳು ಅನುಕ್ರಮವಾಗಿ xkಯ ಮಧ್ಯಕ ನಿಯತ ಭಿನ್ನತೆ ಮತ್ತು ಮೂರನೆಯ ನಿಶ್ಚಿಹ್ನ ಮೊಮೆಂಟುಗಳಾಗಿರಲಿ (ಎಂದರೆ ಪ್ರತಿಯೊಂದು $x_k$ಗೂ ಅನಂತವಲ್ಲದ $\rho k^3$ ಇದೆಯೆಂದು ಪರೋಕ್ಷವಾಗಿ ಒಪ್ಪಿಕೊಂಡಂತಾಯಿತು).

$$M_{(n)} = \sum^{n} m_k, \; \sigma^2_{(n)} = \sum_{1}^{n} \sigma_k^2, \text{ ಮತ್ತು } \rho^{3}_{(n)} = \sum_{1}^{n} \rho_k^3 \text{ ಆಗಿರಲಿ } \lim_{n\to\infty} \frac{\rho(n)}{\sigma(n)} = 0$$

ಆಗುವಲ್ಲಿ ಶಿಷ್ಟ ಚರ $\frac{\sum x_k m_{(n)}}{\sigma_{(n)}}$ N(0, 1) ಆಗಿರುತ್ತದೆ; ಎಂದರೆ ಶಿಷ್ಟಪ್ರಸಾಮಾನ್ಯ ವಿತರಣೆ ಹೊಂದಿರುತ್ತದೆ. ಪೂರ್ವೋಕ್ತ ಲಿಂಡಬರ್ಗ್–ಲೆವಿ ಪ್ರಮೇಯದಲ್ಲಿ ಚರಗಳ ನಿಶ್ಚಿಹ್ನ ಮೂರನೆಯ ಮೊಮೆಂಟುಗಳ ಮಾತೇ ಬಂದಿಲ್ಲವೆಂಬುದನ್ನು ಗಮನಿಸಬೇಕು. ಆದ್ದರಿಂದ ಅದನ್ನು ಈ ಲಿಯಪನಾಥ್ ಪ್ರಮೇಯದ ವಿಶಿಷ್ಟರೂಪ ಎನ್ನಲಾಗದು.

(ಟಿ.ಎನ್.ಆರ್.)

**ಕೇಂದ್ರಾಭಿಮುಖ ಮತ್ತು ಕೇಂದ್ರಾಪಗಾಮಿ ಬಲಗಳು :** ವೃತ್ತಾಕಾರದ ಕಕ್ಷೆಯ ಮೇಲೆ ಒಂದು ಕಣ ಚಲಿಸುತ್ತಿರುವಾಗ ಅದರ ಮೇಲೆ ವೃತ್ತಕೇಂದ್ರದೆಡೆಗೆ ವರ್ತಿಸುತ್ತಿರುವ ಬಲ ಕೇಂದ್ರಾಭಿಮುಖ ಬಲ (ಸೆಂಟ್ರಿಪೀಟಲ್ ಫೋರ್ಸ್). ಒಂದು ಜಡ ಚೌಕಟ್ಟನ್ನು ಕುರಿತು W ಕೋನವೇಗದಿಂದ ಆವರ್ತಿಸುತ್ತಿರುವ ಒಂದು ನಿರ್ದೇಶಕ ಚೌಕಟ್ಟಿನಲ್ಲಿರುವ ಒಬ್ಬ ವೀಕ್ಷಕ ಅನುಭವಿಸುವ ಆರೀಯವಾಗಿ ಹೊರಚಾಚಿರುವ ಬಲ ಕೇಂದ್ರಾಪಗಾಮಿ ಬಲ (ಸೆಂಟ್ರಿಫ್ಯೂಗಲ್ ಫೋರ್ಸ್).

m ದ್ರವ್ಯರಾಶಿಯಿರುವ ಒಂದು ಕಣ r ತ್ರಿಜ್ಯದ ವೃತ್ತಾಕಾರದ ಕಕ್ಷೆಯ ಮೇಲೆ ಚಲಿಸುತ್ತಿರುವಾಗ ಆ ಕಣದ ಮೇಲೆ $mv^2/r$ ಪರಿಮಾಣದ ಕೇಂದ್ರಾಭಿಮುಖ ಬಲ ವರ್ತಿಸುತ್ತಿರುವುದು. ಇಲ್ಲಿ v ಕಣದ ಕಕ್ಷಾವೇಗ, ಇದು ಕಣದ ಆಯಾ ಕಣದ ಸ್ಥಾನದಲ್ಲಿ ಕಕ್ಷೆಗೆ ಎಳೆದ ಸ್ಪರ್ಶರೇಖೆಯ ದಿಶೆಯಲ್ಲಿ ಇರುವುದು. ಕಣದ ಕೋನವೇಗ w ಆಗಿದ್ದರೆ ಆಗ rw=v ಆಗಿರುವುದರಿಂದ ಕೇಂದ್ರಾಭಿಮುಖಬಲ mwr' ಆಗುತ್ತದೆ. ಕಣದ ಮೇಲೆ ಈ ಬಲ ಪ್ರಯುಕ್ತವಾಗದಿದ್ದರೆ ಅದು ವೃತ್ತಾಕಾರದ ಕಕ್ಷೆಯ ಮೇಲೆ ಚಲಿಸಲಾರದು. ಈ ಬಲಕ್ಕೆ ಸಮವಾಗಿ ಇರುವ ಪ್ರತಿಬಲದ ಹೆಸರು ಕೇಂದ್ರಾಪಗಾಮಿ ಬಲ.

ಕೇಂದ್ರಾಪಗಾಮಿ ಬಲ ಎನ್ನುವುದು ಒಂದು ಕಲ್ಪನೆ, ನಿಜವಲ್ಲದ ಬಲ ಎಂಬ ಅಭಿಪ್ರಾಯವಿದೆ. ಬಲ, ಪ್ರತಿಬಲಗಳು ಒಂದನ್ನು ಇನ್ನೊಂದು ನಿವಾರಿಸುವುದರಿಂದ ಒಟ್ಟು ಬಲ ಸೊನ್ನೆಯಾಗಿ ಕಣ ಸರಳರೇಖೆಯಲ್ಲಿ ಚಲಿಸಬೇಕಾಗುತ್ತದೆ ಎನ್ನುವುದೇ ಈ ಅಭಿಪ್ರಾಯಕ್ಕೆ ಕಾರಣ. ಆದ್ದರಿಂದ ಕೇಂದ್ರಾಪಗಾಮಿ ಬಲದ ನಿಜಸ್ವರೂಪವನ್ನು ತಿಳಿಯುವುದು ಆವಶ್ಯಕ. ವೇಗವಾಗಿ ತಿರುಗುವ ಗಿರಗಟ್ಟಲೆಯಲ್ಲಿ (ಮೆರಿ ಗೋರೌಂಡ್) ಕುಳಿತು ಒಂದು ಭಾರವಾದ ವಸ್ತುವನ್ನು ಕೈಯಲ್ಲಿ ಹಿಡಿದರೆ ಆ ವಸ್ತು ವೃತ್ತಕಕ್ಷೆಯಲ್ಲಿ ಆವರ್ತಿಸುವಾಗ ನಮ್ಮ ಕೈಯನ್ನು ಕೇಂದ್ರವಿಮುಖ ದಿಕ್ಕಿನಲ್ಲಿ ಜಗ್ಗಿಸುತ್ತದೆ. ವಸ್ತು ಕೇಂದ್ರದಿಂದ ದೂರವಾಗದೆ ಇರಬೇಕಾದರೆ ನಾವು ಆ ವಸ್ತುವನ್ನು ಕೇಂದ್ರದ ಕಡೆಗೆ ಸತತವಾಗಿ ಎಳೆದು ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಆವರ್ತಿಸುತ್ತಿರುವ ಚೌಕಟ್ಟಿನಲ್ಲಿ ಕೇಂದ್ರಾಪಗಾಮಿ ಬಲದ ಅಸ್ತಿತ್ವ ಮತ್ತು ಅದರ ಪರಿಣಾಮ ನಿಜವಾದವೇ. ನೆಲದ ಮೇಲೆ ಇರುವ ವೀಕ್ಷಕನಾದರೋ(ಈತ ಚಲಿಸುತ್ತಿಲ್ಲ) ವಸ್ತು ಸರಳರೇಖೆಯಲ್ಲಿ ಚಲಿಸುವುದನ್ನು ತಪ್ಪಿಸಿ ವೃತ್ತಕಕ್ಷೆಯ ಚಲಿಸುವಂತೆ ಮಾಡಲು ಕೇಂದ್ರಾಭಿಮುಖ ಬಲ ಮಾತ್ರ ಪ್ರಯುಕ್ತವಾಗುತ್ತಿದೆ ಎಂದು ಎಣಿಸುತ್ತಾನೆ. ಕೇಂದ್ರಾಪಗಾಮಿ ಬಲ ಮಾತ್ರ ಈತನ ದೃಷ್ಟಿಯಿಂದ ನಿಜವಲ್ಲ. ಆವರ್ತಿಸುವ ಚೌಕಟ್ಟಿಗೆ ಸಂಬಂಧಿಸಿದಂತೆ ಕೇಂದ್ರಾಪಗಾಮಿ ಬಲ ಇರುವುದು ನಿಜ.

(ಎಚ್.ಎಸ್.ವಿ.)

**ಕೇಂದ್ರೀಕರಣ :** ಸರ್ಕಾರ ಅಗತ್ಯವಾಗಿ ನೆರವೇರಿಸಬೇಕೆಂದು ಗೊತ್ತು ಮಾಡಿರುವ, ಸರ್ಕಾರ ಮಾಡುವ, ಮಾಡಬೇಕೆಂದಿರುವ ಕಾರ್ಯಗಳ ನಿರ್ವಹಣೆ, ಇದಕ್ಕಾಗಿ ನಿರ್ಮಿತಗೊಳ್ಳುವ ಸರ್ಕಾರದ ಅಂಗರಚನೆ, ರಾಜ್ಯಾಡಳಿತ ವ್ಯವಸ್ಥೆ, ಸರ್ಕಾರ ಪಡೆದುಕೊಳ್ಳುವ ಅಧಿಕಾರ, ಹೊಂದುವ ಶಕ್ತಿ ಮತ್ತು ಅಧಿಕಾರ ಚಲಾವಣೆಯ ರೀತಿ ಇವುಗಳ ಹಿನ್ನೆಲೆಯಲ್ಲಿ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ ಎಂಬ ಶಬ್ದಗಳು ರಾಜ್ಯಶಾಸ್ತ್ರದಲ್ಲಿ ಇತ್ತೀಚೆಗೆ ಹೆಚ್ಚು ಪ್ರಾಶಸ್ತ್ಯ ಪಡೆದಿವೆ. ಈ ಹಿನ್ನೆಲೆಯಲ್ಲಿ ಕೇಂದ್ರೀಕರಣ ಎಂಬ ಶಬ್ದಕ್ಕೆ ಈ ರೀತಿ ಅರ್ಥವಿದೆ: ಪಡೆದ ಅಧಿಕಾರದ ಚಲಾವಣೆಯನ್ನು ಕಾರ್ಯನಿರ್ವಹಣೆಗಾಗಿ ಒಂದೆಡೆ ಕ್ರೋಡೀಕರಿಸುವುದು, ಮಾಡುವ ಮತ್ತು ಮಾಡಬೇಕಾದ ಕೆಲಸಗಳ ಬಗ್ಗೆ ನಿರ್ಧಾರ ಕೈಗೊಳ್ಳುವ ಜವಾಬ್ದಾರಿಯನ್ನು, ಉಂಟು ಅಥವಾ ಇಲ್ಲವೆಂದು ಹೇಳುವ ಶಕ್ತಿಯನ್ನು ಆದಷ್ಟು ಮಟ್ಟಿಗೆ ಒಂದೆಡೆ ತಂಗಿರುವಂತೆ ಶೇಖರಣೆ ಮಾಡುವುದು. ಸರ್ಕಾರಕ್ಕೆ ಹಲವಾರು ಕರ್ತವ್ಯಗಳಿವೆ. ಇವನ್ನು ಅದು ತನ್ನ ಅನೇಕ ಇಲಾಖೆಗಳ ಮೂಲಕ ಮಾಡುತ್ತದೆ. ಪ್ರತಿಯೊಂದು ಕಾರ್ಯವನ್ನೂ ಸರ್ಕಾರವೇ ನೇರವಾಗಿ ನಿರ್ವಹಿಸುವ ಜವಾಬ್ದಾರಿ ಹೊರಬಹುದು ಇಲ್ಲವೇ ಕೆಲವು ಕರ್ತವ್ಯಗಳನ್ನು ತಾನು ವಹಿಸಿಕೊಂಡು ಉಳಿದ ಹಲವನ್ನು ಸ್ಥಳೀಯ ಸರ್ಕಾರಗಳಿಗೂ ಸಂಘಸಂಸ್ಥೆಗಳಿಗೂ ವಹಿಸಬಹುದು. ಹಾಗೆ ವಹಿಸಿಕೊಡುವುದಾದರೆ, ಕಾನೂನಿಗೆ ಅನುಸಾರವಾಗಿ ಕಾರ್ಯನಿರ್ವಹಣೆ ಆಗುತ್ತಿದೆಯೇ ಎಂದು ನೋಡುವ ಜವಾಬ್ದಾರಿಯನ್ನು ಮಾತ್ರ ಸರ್ಕಾರ ವಹಿಸಿಕೊಳ್ಳುತ್ತದೆ. ಹೀಗೆ ಮಾಡದೆ ಎಲ್ಲ ಕರ್ತವ್ಯಗಳನ್ನು ಸ್ವತಃ ನಿರ್ವಹಿಸುವ ದೃಷ್ಟಿಯಿಂದ ಸರ್ಕಾರವೇ ಅದನ್ನು ವಹಿಸಿಕೊಳ್ಳುವುದಾದರೆ ಅದು ಅಧಿಕಾರದ ಮತ್ತು ಕರ್ತವ್ಯಗಳ ಕೇಂದ್ರೀಕರಣವಾಗುತ್ತದೆ. ಆಡಳಿತ ವ್ಯವಸ್ಥೆಯ ಸ್ವರೂಪಕ್ಕೆ ಅನುಗುಣವಾಗಿ ಕೇಂದ್ರೀಕರಣದಲ್ಲಿಯ ಸಂಬಂಧಗಳೂ ವ್ಯತ್ಯಾಸಗೊಳ್ಳುತ್ತದೆ. ಅವನ್ನೂ ಈ ರೀತಿ ನಿರೂಪಿಸಬಹುದು: 1 ಏಕಾತ್ಮಕ (ಯೂನಿಟರಿ) ಸರ್ಕಾರವ್ಯವಸ್ಥೆಯಲ್ಲಿ ಸರ್ಕಾರದೊಡನೆ ಸ್ಥಳೀಯ ಸರ್ಕಾರಗಳು ಹೊಂದಿರುವ ಮತ್ತು ಹೊಂದಿರಬೇಕಾದ ಸಂಬಂಧಗಳು; 2 ದ್ವ್ಯಾತ್ಮಕ ಅಥವಾ ಸಂಯುಕ್ತ (ಫೆಡರಲ್) ಸರ್ಕಾರ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದೊಡನೆ ಅದರ ಅಂಗರಾಜ್ಯಗಳು (ಕಾನ್‌ಸ್ಟಿಟ್ಯುಯೆಂಟ್ ಸ್ಟೇಟ್ಸ್) ಹೊಂದಿರುವ ಮತ್ತು ಹೊಂದಿರಬೇಕಾದ ಸಂಬಂಧಗಳು; 3 ಶಾಸನಾಂಗ ಮತ್ತು ಕಾರ್ಯಾಂಗ ಪಡೆದಿರುವ ಮತ್ತು ಪಡೆಯುವ ಅಧಿಕಾರಗಳಲ್ಲಿ ಹೆಚ್ಚುಹೆಚ್ಚಾಗಿ ಮತ್ತು ಅಧಿಕ ಪ್ರಮಾಣದಲ್ಲಿ ಕಾರ್ಯಾಂಗದಲ್ಲಿ ಅಧಿಕಾರದ ಕೇಂದ್ರೀಕರಣದಿಂದ ಏರ್ಪಡುವ ಸಂಬಂಧಗಳು; 4 ಕಾರ್ಯಾಂಗದ ದೊಡ್ಡ ದೊಡ್ಡ ಇಲಾಖೆಗಳಲ್ಲಿ ಅಥವಾ ಸರ್ಕಾರ ನಿರ್ಮಿಸುವ ಅನೇಕ ಆಯೋಗ ಮತ್ತು ನಿಯೋಗಗಳಲ್ಲಿ ಅಧಿಕಾರ ಸಂಪೂರ್ಣವಾಗಿ ನೆಲೆಗೊಳ್ಳುವುದರಿಂದ ಏರ್ಪಡುವ ಸಂಬಂಧಗಳು.

ಕೇಂದ್ರೀಕರಣದ ಹುಟ್ಟು, ಅದರ ವಿನ್ಯಾಸ ಮತ್ತು ವ್ಯಾಪ್ತಿಯನ್ನು ವಿವರಿಸುವಾಗ ಕೇಂದ್ರೀಕರಣವೆಂಬ ಶಬ್ದಕ್ಕೆ ಸಮೀಪದಲ್ಲಿರುವ ಇನ್ನು ಕೆಲವು ಶಬ್ದಗಳಿಗೂ ಇದಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವುದು ಅಗತ್ಯ. ಅಧಿಕಾರವಿಭಜನೆ (ಡಿವಿಷನ್ ಆಫ್ ಪವರ್ಸ್), ಅಧಿಕಾರದ ವಿಂಗಡನೆ ಅಥವಾ ಪ್ರತ್ಯೇಕತೆ (ಸೆಪರೇಷನ್ ಆಫ್ ಪವರ್ಸ್) ಮತ್ತು ಅಧಿಕಾರ ನಿಯೋಜನೆ (ಡೆಲಿಗೇಷನ್ ಆಫ್ ಪವರ್ಸ್)–ಇವೇ ಆ ಶಬ್ದಗಳು. ಅಧಿಕಾರ ವಿಭಜನೆಯನ್ನು ಮುಖ್ಯವಾಗಿ ದ್ವಿಮುಖ ಅಥವಾ ಸಂಯುಕ್ತ ಸಂವಿಧಾನದಲ್ಲಿ ಕಾಣಬಹುದು. ಈ ತೆರನಾದ ಸಂವಿಧಾನದಲ್ಲಿ ಎರಡು ಸರ್ಕಾರಗಳಿರುತ್ತವೆ : ಒಂದು ಕೇಂದ್ರ ಸರ್ಕಾರ, ಇನ್ನೊಂದು ಪ್ರಾಂತ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟ ಹಾಗೆ ಕೆಲವು ವಿಷಯಗಳಿದ್ದರೆ, ಇನ್ನು ಕೆಲವು ವಿಷಯಗಳು ರಾಜ್ಯ ಸರ್ಕಾರಗಳಿಗೆ ಒಳಪಟ್ಟಿರುತ್ತವೆ; ಮತ್ತೆ ಕೆಲವು ವಿಷಯಗಳು ಕೇಂದ್ರ ಮತ್ತು ರಾಜ್ಯಸರ್ಕಾರಗಳೆರಡಕ್ಕೂ ಒಳಪಟ್ಟಿರುತ್ತವೆ. ಆಯಾ ಸರ್ಕಾರಗಳಿಗೆ ಅವುಗಳ ವ್ಯಾಪ್ತಿಗೆ ಸೇರಿದ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಆದರೆ, ಒಂದು ಸಂವಿಧಾನ ಸಂಯುಕ್ತ ಮಾದರಿಯ ಸಂವಿಧಾನವಾಗಿದ್ದರೂ ಕೇಂದ್ರಸರ್ಕಾರದಲ್ಲೂ, ರಾಜ್ಯಸರ್ಕಾರದಲ್ಲೂ ಅವುಗಳಿಗೆ ಒಳಪಟ್ಟ ವಿಷಯಗಳಲ್ಲಿ ಕೇಂದ್ರೀಕರಣವಿರಬಹುದು. ಅಧಿಕಾರದ ವಿಭಜನೆಯಾಗಿದ್ದಾಗಲೂ ಸರ್ಕಾರ ತನ್ನ ಅಧಿಕಾರವನ್ನು ಒಂದೆಡೆಯೇ ಕೇಂದ್ರೀಕರಿಸಬಹುದು; ಅಥವಾ ಹಲವು ಮಟ್ಟಗಳಲ್ಲಿ ಅದನ್ನು ಚಲಾವಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬಹುದು. ಅಧಿಕಾರ ವಿಭಜನೆ ಕೇಂದ್ರೀಕರಣದ ವಿರುದ್ಧದ ಒಂದು ವ್ಯವಸ್ಥೆಯಾದರೂ ಅಷ್ಟು ಮಾತ್ರದಿಂದ ಅಧಿಕಾರದ ಕೇಂದ್ರೀಕರಣ ಮುಕ್ತಾಯಗೊಂಡಂತಾಗುವುದಿಲ್ಲ. ಅಧಿಕಾರ ವಿಂಗಡನೆ ಅಥವಾ ಪ್ರತ್ಯೇಕತೆಯಲ್ಲಿ ಸರ್ಕಾರದ ಮೂರು ಅಂಗಗಳಾದ ಕಾರ್ಯಾಂಗ, ಶಾಸನಾಂಗ ಮತ್ತು ನ್ಯಾಯಾಂಗ ಒಂದು ಅಂಗದ ಅಥವಾ ಒಬ್ಬನ ಅಧೀನಕ್ಕೆ ಒಳಪಟ್ಟು, ಆ ಒಂದರಲ್ಲೊ ಅಥವಾ ಒಬ್ಬನಲ್ಲೊ ಎಲ್ಲ ಶಕ್ತಿಗಳೂ ಕೇಂದ್ರೀಕೃತವಾಗುವಂತೆ ಮಾಡಬಹುದು; ಅಥವಾ ಪ್ರತಿಯೊಂದು ಅಂಗವೂ ಇನ್ನೊಂದರ ಅಧೀನಕ್ಕೆ ಒಳಪಡದೆ ಸ್ವತಂತ್ರವಾಗಿ ಉಸಿರಾಡುವಂತೆ ಮಾಡಬಹುದು.

ಅಧಿಕಾರದ ವಿಕೇಂದ್ರೀಕರಣಕ್ಕೂ ಅಧಿಕಾರದ ಪ್ರತ್ಯೇಕತೆಗೂ ವ್ಯತ್ಯಾಸವಿದೆ. ಪ್ರತ್ಯೇಕತೆ ಇದ್ದರೂ ಒಂದೇ ಅಂಗದಲ್ಲಿ ಅದರ ವ್ಯಾಪ್ತಿಗೆ ಒಳಪಟ್ಟ ಕರ್ತವ್ಯಗಳ ನಿರ್ವಹಣೆ ಕೇಂದ್ರೀಕೃತವಾಗಿರಬಹುದು. ನೇರ ನಿರ್ಧಾರ, ನೇರ ಹೊಣೆ ಇದರ ಗುರುತಾಗಿ ಯಾವ ಹಂತದಲ್ಲೂ ಸ್ವತಂತ್ರ ಅಥವಾ ಪ್ರತ್ಯೇಕ ನಿರ್ಧಾರಕ್ಕೆ ಎಡೆಯಿಲ್ಲದಿರಬಹುದು. ಮಾಡಬೇಕಾದ ಕರ್ತವ್ಯ, ಚಲಾಯಿಸುವ ಅಧಿಕಾರ ಇವುಗಳನ್ನು ಇನ್ನೊಬ್ಬರು ತನ್ನ ಪರವಾಗಿ ಚಲಾಯಿಸುವುದಕ್ಕೆ ಅಧಿಕಾರ ನೀಡುವುದೇ ಅಧಿಕಾರ ನಿಯೋಜನೆ. ಆದರೆ ಅಧಿಕಾರವನ್ನು ನಿಯೋಜನೆಗೊಳಿಸುವವನದೇ ಪರಮಾಧಿಕಾರ. ಇದನ್ನು ಆತ ಕೊಡದಿದ್ದರೂ ಇರಬಹುದು. ಅಧಿಕಾರ ನಿಯೋಜನೆ ಇದ್ದರೂ ಕೇಂದ್ರೀಕರಣವಿರಬಹುದು; ಮತ್ತು ಸ್ವತಂತ್ರವಾಗಿ, ಸರಿಸಮಾನವಾಗಿ, ಪ್ರತ್ಯೇಕವಾಗಿ ಕಾದಿಟ್ಟ ವಿಷಯಗಳಲ್ಲಿ ಸ್ವತಂತ್ರವಾಗಿ ವರ್ತಿಸಲು ಅವಕಾಶವಿಲ್ಲ. ಕೇಂದ್ರೀಕರಣಕ್ಕೆ ಪ್ರತಿಯಾಗಿರುವ ವಿಕೇಂದ್ರೀಕರಣದೊಡನೆ ಹೋಲಿಸಿದರೆ ಕೇಂದ್ರೀಕರಣಕ್ಕೂ ಅಧಿಕಾರ ನಿಯೋಜನೆಗೂ ಇರುವ ಸಂಬಂಧ ವ್ಯಕ್ತವಾಗುತ್ತದೆ.

ರಾಜ್ಯಾಡಳಿತ ನಿರ್ವಹಣೆಯಲ್ಲಿ ಕೇಂದ್ರೀಕರಣದ ಜನ್ಮವನ್ನು ಸಾಮ್ರಾಜ್ಯಗಳ ಮತ್ತು ರಾಷ್ಟ್ರೀಯ ರಾಜ್ಯಗಳ (ನ್ಯಾಷನಲ್ ಸ್ಟೇಟ್ಸ್) ಉದಯದಲ್ಲಿ ಸ್ಪಷ್ಟವಾಗಿ ಕಾಣಬಹುದು. ಇದರ ಹಿನ್ನೆಲೆ ಊಳಿಗಮಾನ್ಯ ಪದ್ಧತಿಯ ಕಾಲದಲ್ಲಿ ನೆಲೆಗೊಂಡಿದ್ದ ರಾಜ್ಯಾಡಳಿತ ವಿಧಾನ. ಈ ವ್ಯವಸ್ಥೆಯಲ್ಲಿ ರಾಜ, ರಾಜ್ಯಸರ್ಕಾರ ಮತ್ತು ಅಧಿಕಾರವರ್ಗ ಇವು ಹೆಸರಿಗೆ ಮಾತ್ರ ಇದ್ದುವೇ ವಿನಾ ಸರ್ಕಾರದ ಅಧಿಕಾರದ ವ್ಯಾಪ್ತಿ ಅತಿ ಕಡಿಮೆಯಿತ್ತು. ಸರ್ಕಾರದ ಅಧಿಕಾರವನ್ನು ಲಕ್ಷಿಸುವವರೇ ಇರಲಿಲ್ಲ. ವಿಶೇಷವಾಗಿ ವಿಚ್ಛಿದ್ರಗೊಂಡ ಹಾಗೂ ಸ್ವತಂತ್ರ ಸ್ವಯಮಾಡಳಿತ ಉಳ್ಳ ಗ್ರಾಮ, ಪಟ್ಟಣ ಮತ್ತು ಪ್ರದೇಶಗಳು ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದವು. ಈ ಪ್ರವೃತ್ತಿಗೆ ಪ್ರತಿಯಾಗಿ ಉದ್ಭವಿಸದ್ದೇ ಸಾಮ್ರಾಜ್ಯಾಧಿಕಾರ ಮತ್ತು ರಾಷ್ಟ್ರೀಯ ರಾಜ್ಯಾಧಿಕಾರ. ಇಂತಹ ರಾಜ್ಯಗಳಲ್ಲಿ ರಾಜ್ಯಕ್ಕೆ ರಾಜನೇ ಒಡೆಯ. ರಾಜಕಾರ್ಯ ಮತ್ತು ಸಾರ್ವಜನಿಕ ಕಾರ್ಯಗಳು ಅವನ ಅಧೀನಕ್ಕೆ ಒಳಪಟ್ಟು ನಡೆಯಬೇಕು. ಯಾವ ಕಾರ್ಯಗಳು ನಡೆಯಬೇಕು, ಯಾವುವು ನಡೆಯಬಾರದು ಎಂಬುದರ ಬಗ್ಗೆ ರಾಜನ ನಿರ್ಧಾರವೇ ಕೊನೆಯದು. ರಾಜ ಒಂದು ನಿರ್ಧಾರಕ್ಕೆ ಬಂದ ಕೂಡಲೇ ಅದನ್ನು ತನ್ನ ಸಾಮಂತರು, ಅಧೀನ ಅಧಿಕಾರಿಗಳು ಇವರ ಮೂಲಕ ನೆರವೇರಿಸಿಕೊಳ್ಳುತ್ತಾನೆ. ರಾಜ್ಯಾಡಳಿತದ ಪ್ರತಿಯೊಂದು ವಿಷಯದಲ್ಲೂ ರಾಜಾಜ್ಞೆಗೆ ಅಥವಾ ರಾಜ ಕೊಡುವ ಆದೇಶಕ್ಕೆ ಎದುರಿಲ್ಲ. ರಾಜನಿಗೆ ಸರಿಸಮಾನರಾಗಿ ಅಧಿಕಾರ ಚಲಾಯಿಸುವ ಹಕ್ಕು ಅಥವಾ ಅಧಿಕಾರ ಯಾರಿಗೂ ಇಲ್ಲ. ಕ್ರಮೇಣ ಪ್ರಜಾಪ್ರತಿನಿಧಿ ಸರ್ಕಾರ ಬಂದರೂ ಇದೇ ತೆರನಾದ ರಾಜ್ಯಾಡಳಿತ ಕ್ರಮವನ್ನೂ ಏಕಾತ್ಮಕ ಸರ್ಕಾರಗಳಲ್ಲಿ ಕಾಣಬಹುದು. ಇದನ್ನು ವಿರೋಧಿಸಿ, ಅಧಿಕಾರ ವಿಕೇಂದ್ರೀಕರಣವಾಗಬೇಕೆಂದೂ ನಡೆಸಿದ ಚಳವಳಿಯೇ ಸ್ಥಳೀಯ ಸರ್ಕಾರಗಳ ಜನ್ಮಕ್ಕೆ ನಾಂದಿ. ಇಂಥ ಸಂದರ್ಭಗಳಲ್ಲಿ ಇಡೀ ದೇಶಕ್ಕೆ ಅನ್ವಯಿಸುವ ಕೆಲವು ಮುಖ್ಯ ವಿಷಯಗಳನ್ನು ಸರ್ಕಾರ ತನ್ನ ಅಧೀನದಲ್ಲಿಟ್ಟುಕೊಂಡು ಸ್ಥಳೀಯ ಸ್ವರೂಪದ ಹಲವಾರು ವಿಷಯಗಳನ್ನು ಸ್ಥಳೀಯ ಸರ್ಕಾರಗಳ ನಿರ್ವಹಣೆಗೆ ಬಿಡುತ್ತದೆ. ಉದಾಹರಣೆ : ಕರ್ನಾಟಕ ರಾಜ್ಯದಲ್ಲಿ ಸ್ಥಳೀಯ ಸರ್ಕಾರ ಪ್ರರೂಪಗಳಾದ ನಿಗಮ (ಕಾರ್ಪೊರೇಷನ್), ಪೌರಸಭೆ, ತಾಲ್ಲೂಕು ಮಂಡಳಿ ಮತ್ತು ಪಂಚಾಯಿತಿಗಳಿಗೂ ರಾಜ್ಯಸರ್ಕಾರಕ್ಕೂ ಇರುವ ಅಧಿಕಾರಗಳ ಹಂಚಿಕೆ. ಇದು ರಾಜ್ಯಾಡಳಿತ ಕ್ರಮದಲ್ಲಿ ವಿಕೇಂದ್ರೀಕರಣ. ಇಂತಹ ವ್ಯವಸ್ಥೆ ಏಕಾತ್ಮಕ ಸರ್ಕಾರಗಳಲ್ಲಿ ಮಾತ್ರವಿರದೇ ದ್ವ್ಯಾತ್ಮಕ ಅಥವಾ ಸಂಯುಕ್ತ ಸರ್ಕಾರಗಳಲ್ಲೂ ಇರಬಹುದು. ರಾಜ್ಯದಲ್ಲಿ ಏಕಾತ್ಮಕ ಸರ್ಕಾರವಿರಲಿ, ದ್ವ್ಯಾತ್ಮಕ ಸರ್ಕಾರವಿರಲಿ, ಮುಖ್ಯವಾಗಿ ಗಮನಿಸಬೇಕಾದ್ದು ಆಡಳಿತ ವಿಭಜನೆಯ ಜೊತೆಗೆ ಅಧಿಕಾರದ ವಿಭಜನೆ. ಈ ಪರಿಣಾಮವಾಗಿ ರಾಜ್ಯಾಡಳಿತದಲ್ಲಿ ಮುಖ್ಯವಾಗಿ ಎರಡು ವಿಧಾನಗಳು ಆಚರಣೆಯಲ್ಲಿ ಬಂದಿವೆ. ಒಂದು, ಫ್ರಾನ್ಸ್ ದೇಶದಲ್ಲಿ ನೆಪೋಲಿಯನ್ನನ ಕಾಲದಲ್ಲಿ ಆಚರಣೆಗೆ ಬಂದ ವಿಧಾನ; ಇನ್ನೊಂದು, ಆಡಳಿತ ಮತ್ತು ಅಧಿಕಾರ ಚಲಾವಣೆಯನ್ನು ಕೇವಲ ಒಬ್ಬ ಅಧಿಕಾರಿಯ ವಿಚಕ್ಷಣೆ ಮತ್ತು ನಿರ್ವಹಣೆಗೆ ಗುರಿಪಡಿಸದೆ, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ತಂತಮ್ಮ ವ್ಯಾಪ್ತಿಗಳಿಗೆ ಒಳಪಟ್ಟ ವಿಷಯಗಳಲ್ಲಿ ಸ್ವತಂತ್ರವಾಗಿ ವರ್ತಿಸಲು ಕೊಡುವ ಅವಕಾಶ.

ಕೇಂದ್ರೀಕರಣದ ವ್ಯಾಪ್ತಿ ಮತ್ತು ಆಧುನಿಕ ರಾಜಕೀಯ ಮತ್ತು ಆರ್ಥಿಕ ಸನ್ನಿವೇಶಗಳಲ್ಲಿ ಕೇಂದ್ರೀಕರಣ ತಳೆಯುತ್ತಿರುವ ಬದಲಾವಣೆಗಳನ್ನು ಗಮನಿಸುವುದು ಅಗತ್ಯ. ಬಹಳ ಕಾಲದವರೆಗೆ ಅಂದರೆ, ಸುಮಾರು ಒಂದನೆಯ ಮಹಾಯುದ್ಧದವರೆಗೆ ಸರ್ಕಾರದ ಕೆಲಸಗಳೆಂದರೆ ಆಂತರಿಕ ಶಾಂತಿ ಮತ್ತು ಶಿಸ್ತುಪಾಲನೆ, ಹೊರಗಿನ ವಿಪತ್ತುಗಳಿಂದ ದೇಶದ ರಕ್ಷಣೆ ಮತ್ತು ನ್ಯಾಯಪಾಲನೆ ಇವು ಮಾತ್ರವಾಗಿದ್ದವು. ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರ, ತನ್ನ ಹಿತವೇನೆಂಬುದನ್ನು ಚೆನ್ನಾಗಿ ಬಲ್ಲ. ಆದ್ದರಿಂದ ಆತ ಕಾನೂನಿನ ಉಲ್ಲಂಘನೆಯಾಗದಂತೆ, ಕಾನೂನಿನಿಂದ ರಕ್ಷಿತವಾದ ಹಕ್ಕುಬಾಧ್ಯತೆಗಳಿಗೆ ಧಕ್ಕೆ ಬರದಂತೆ ಒಬ್ಬೊಂಟಿಗನಾಗಿಯೋ ಇನ್ನೊಬ್ಬರೊಡನೆ ಕೂಡಿಯೋ ವ್ಯವಹಾರಗಳನ್ನು ನಡೆಸಬಹುದು. ಇದನ್ನು ಗಮನಿಸಿಯೇ ಸ್ಥಳೀಯ ಮತ್ತು ಪ್ರಾಂತೀಯ ಸಮಸ್ಯೆಗಳನ್ನು ಬಗೆಹರಿಸಲು ಸ್ಥಳೀಯ ಸರ್ಕಾರಗಳ ರಚನೆಗೆ ಮತ್ತು ಸ್ವಯಮಾಡಳಿತ ಸಂಘಸಂಸ್ಥೆಗಳಿಗೆ ಉತ್ತೇಜನ ಕೊಡಲಾಯಿತು. ಇಲ್ಲಿ ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಪೌರರು ತಾವೇ

ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಡುವುದಕ್ಕೆ ಮುಂದೆ ಬರುವುದಾದರೆ ಸ್ವಾಗತ. ಅದಕ್ಕೆ ಸರ್ಕಾರದ ಬೆಂಬಲ ಮತ್ತು ಪ್ರೋತ್ಸಾಹವಿರುತ್ತದೆ. ಈ ಉದ್ದೇಶ ಸಾಧನೆಗಾಗಿ ಸ್ಥಳೀಯ ಸರ್ಕಾರಗಳಂತೆ ಅನೇಕ ಕಂಪನಿಗಳು, ಸಂಘಸಂಸ್ಥೆಗಳು, ನಿಗಮಗಳು, ಆಯೋಗಗಳು ಮತ್ತು ನಿಯೋಗಗಳು ಏರ್ಪಟ್ಟುವು. ಆದರೆ, ಕ್ರಮೇಣ ಸಾರ್ವಜನಿಕ ವಿಷಯಗಳಲ್ಲಿ ಸರ್ಕಾರ ತಟಸ್ಥ ನೀತಿ ತಾಳುವುದು ಕಷ್ಟವಾಯಿತು. ನಿರುದ್ಯೋಗ ಪರಿಹಾರ, ಕಾರ್ಮಿಕರ ಬೇಡಿಕೆಗಳ ಪೂರೈಕೆ, ದೇಶದ ಆರ್ಥಿಕೋದ್ಯಮಕ್ಕೆ ನೆರವು, ಸಾರ್ವಜನಿಕ ಆರೋಗ್ಯ, ವಿದ್ಯಾಭ್ಯಾಸ ಇತರ ಆರ್ಥಿಕ ಸಮಸ್ಯೆಗಳ ಪರಿಹಾರ–ಇವುಗಳಲ್ಲಿ ಸರ್ಕಾರದ ಅಂತರಾಯಣ (ಇಂಟರ್‌ವೆನ್ಷನ್) ಅಗತ್ಯವಾಯಿತು. ಈ ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ರಾಜ್ಯಾಡಳಿತವನ್ನು ವ್ಯವಸ್ಥೆಗೊಳಿಸುವುದು ಅನಿವಾರ್ಯವಾಗಿ ಕಂಡುಬಂತು. ಅಧಿಕಾರವರ್ಗಕ್ಕೆ ಹೆಚ್ಚುಹೆಚ್ಚಾಗಿ ವಿವೇಚನಾಧಿಕಾರವನ್ನು ಕೊಡಲಾಯಿತು; ಮತ್ತು ಸ್ಥೂಲಶಾಸನಕ್ಕೆ ವಿರೋಧವಿಲ್ಲದೆ ಅಗತ್ಯವಾದ ವ್ಯಾವಹಾರಿಕ ಮತ್ತು ಪರಿಸ್ಥಿತಿಗನುಗುಣವಾದ ವಿಧಿಗಳನ್ನು ರಚಿಸಿಕೊಳ್ಳುವುದಕ್ಕೆ ಕಾರ್ಯಾಂಗಕ್ಕೆ ಶಾಸನಾಂಗ ಅಧಿಕಾರ ನೀಡಿತು. ಈ ಪ್ರವೃತ್ತಿಗಳನ್ನು ಅಧಿಕಾರಶಾಹಿಯ ಮತ್ತು ನವ ನಿರಂಕುಶತೆಯ ಬೆಳವಣಿಗೆ ಎಂದು ಹೇಳಲಾಗಿದೆ.

ಬೆಳವಣಿಗೆ ಅಷ್ಟಕ್ಕೇ ನಿಂತಿಲ್ಲ. ಇದುವರೆಗೆ ಶಾಶ್ವತವೆಂದು ನಂಬಿದ್ದ ರಾಜ್ಯಾಡಳಿತ ಕ್ರಮವನ್ನು ಯೋಜನಾತತ್ತ್ವ ತಲೆಕೆಳಗು ಮಾಡಿದೆ. ಯೋಜನಾತತ್ತ್ವದಲ್ಲಿ ಅಡಗಿರುವ ಅಂಶಗಳು ಎರಡು : ಒಂದು, ಏನು ಮಾಡಬೇಕು ಅಥವಾ ಮಾಡಬಾರದು. ಯಾವುದಕ್ಕೆ ಪ್ರಾಶಸ್ತ್ಯ ಕೊಡಬೇಕು ಅಥವಾ ಬಾರದು, ಯಾವ ಕ್ಷೇತ್ರವನ್ನು ಬೆಳೆಸಬೇಕು, ಬಲಪಡಿಸಬೇಕು, ಎಷ್ಟು ನಿಯೋಜಿತ ಕಾಲದಲ್ಲಿ ಕಾರ್ಯಕ್ರಮ ಕಾರ್ಯಗತವಾಗಬೇಕು ಎಂಬುದು ಒಂದು. ಯೋಜನೆಗೆ ಒಳಪಟ್ಟ ಬೆಳವಣಿಗೆ ಮತ್ತು ವಿಸ್ತಾರವನ್ನು ಸರ್ಕಾರವೇ ನೇರ ಜವಾಬ್ದಾರಿಯಿಂದ ಕೈಗೂಡಿಸುವುದು, ಇದಕ್ಕೆ ಅಡ್ಡಿ ಬರುವ ಸ್ವತಂತ್ರ ಪ್ರವೃತ್ತಿಗಳು ಮತ್ತು ವ್ಯವಹಾರಗಳನ್ನು ತಡೆಗಟ್ಟುವುದು ಮತ್ತು ಯೋಜನೆಯ ರೂಪರೇಖೆಗಳಿಗೆ ಎಲ್ಲ ಪ್ರವೃತ್ತಿಗಳೂ ವ್ಯವಹಾರಗಳೂ ಒಳಪಡುವಂತೆ ಗೊತ್ತು ಮಾಡುವುದು ಇನ್ನೊಂದು. ಯೋಜನೆಯಲ್ಲಿ ಎಲ್ಲ ವ್ಯವಹಾರಗಳೂ ಯೋಜನೆಯ ವ್ಯವಸ್ಥೆಗೆ ಒಳಪಟ್ಟಿರುವುದಲ್ಲದೆ, ಸರ್ಕಾರವೇ ಮುಂದೆ ಬಂದು ಹಲವು ಕಾರ್ಯಗಳನ್ನು ನಿರ್ವಹಿಸುತ್ತದೆ. ಕೃಷಿಪ್ರಧಾನ ದೇಶಗಳು ಕೈಗಾರಿಕಾಕರಣವನ್ನು ಜಾಗ್ರತೆಯಾಗಿ ಸಾಧಿಸಲೂ ದೇಶದ ಆರ್ಥಿಕ ಬೆಳವಣಿಗೆ ಆದಷ್ಟು ಶೀಘ್ರವಾಗಿ ಗರಿಕಟ್ಟಿಕೊಳ್ಳುವಂತೆ ಮಾಡಲು ನಿರುದ್ಯೋಗವನ್ನು ಹೋಗಲಾಡಿಸಲೂ ಯೋಜನಾವಿಧಾನವನ್ನು ಹೆಚ್ಚುಹೆಚ್ಚಾಗಿ ಅನುಸರಿಸುತ್ತಿವೆ. ಯೋಜನಾತತ್ತ್ವ ಕೇಂದ್ರೀಕರಣದ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಬೃಹದ್ಗಾತ್ರದಲ್ಲಿ ಬೆಳವಣಿಗೆಯನ್ನು ಯೋಜಿಸಿದ ಕೂಡಲೇ ನಿಯಂತ್ರಣ, ಅಧಿಕಾರದ ಕೇಂದ್ರೀಕರಣ ಮತ್ತು ಸರ್ಕಾರದ ನೇರ ಜವಾಬ್ದಾರೀ–ಇವು ಬಂದೇ ಬರುತ್ತವೆ. ಇಲ್ಲಿ ಅಧಿಕಾರದ ವಿಭಜನೆಯ ಪ್ರಶ್ನೆಯೇ ಬರುವುದಿಲ್ಲ. ಕೆಲಸದ ಪರಿಮಾಣ, ವ್ಯಾಪ್ತಿ, ಕಾಲಾವಕಾಶ ಎಲ್ಲವೂ ಕೇಂದ್ರೀಕರಣದ ಕಡೆಗೇ ಓಲುತ್ತವೆ. ಸರ್ಕಾರ ಇಂಥ ಹೊಣೆಯನ್ನು ನಿರ್ವಹಿಸಬೇಕಾದರೆ ಅದಕ್ಕೆ ಸಂಪೂರ್ಣ ಪರಮಾಧಿಕಾರವೂ ನಿರ್ಧಾರಕ ಶಕ್ತಿಯೂ ಇರುವುದು ಅಗತ್ಯವಾಗುತ್ತದೆ.

ಕೇಂದ್ರೀಕರಣವಿರಬೇಕೆ? ಇದ್ದರೆ ಎಷ್ಟು ಪ್ರಮಾಣದಲ್ಲಿ ಇರಬೇಕು? ಎಂಬ ಪ್ರಶ್ನೆಗೆ ನೇರವಾಗಿ ಉತ್ತರ ಕೊಡುವುದು ಕಷ್ಟ. ಇದು ಸಂಪೂರ್ಣವಾಗಿ ಆಯಾ ದೇಶದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ ಮತ್ತು ಈ ಪರಿಸ್ಥಿತಿಗೆ ಅನುಗುಣವಾಗಿ ಸರ್ಕಾರದ ಮೇಲೆ ವಿಧಿಸುವ ಕರ್ತವ್ಯಗಳನ್ನೇ ಅನುಸರಿಸುತ್ತದೆ. ಸರ್ಕಾರದ ಕರ್ತವ್ಯಗಳು, ವಿವೇಚನೆ ಮತ್ತು ಜವಾಬ್ದಾರಿ ಹೆಚ್ಚುತ್ತಿರುವಾಗ ಅಧಿಕಾರಕೇಂದ್ರೀಕರಣ ಅಗತ್ಯವಾಗಿಯೇ ತೀರುತ್ತದೆ. ಕೇಂದ್ರೀಕರಣದಿಂದ ಅನೇಕ ಅನಿಷ್ಟಗಳು ಸಂಭವಿಸುವುದು ಸಹಜ: ಮುನ್ನುಗ್ಗಿ ಸ್ವತಂತ್ರವಾಗಿ ನಿರ್ಧಾರದ ಸ್ವೀಕಾರ, ಅಧಿಕಾರಶಾಹಿಯ ಬೆಳವಣಿಗೆ, ಸ್ಥಳೀಯ, ಆದ್ಯತೆಗಳಿಗೆ ಧಕ್ಕೆ–ಇವು ಕೆಲವು. ಆದರೆ ಕೇಂದ್ರೀಕರಣದಿಂದ ಕೆಲಸದಲ್ಲಿ ಏಕಾಗ್ರತೆ, ಹೊಣೆಗಾರಿಕೆ, ಬೃಹದ್ಗಾತ್ರದಲ್ಲಿ ಬೆಳವಣಿಗೆಯನ್ನು ನಿಯೋಜಿಸುವಾಗ ಮಿತವ್ಯಯ, ತಜ್ಞರ ನೆರವು, ಆಧುನಿಕ ತಾಂತ್ರಿಕತೆಯ ಅನ್ವಯ, ಶೀಘ್ರತೆ, ಹೆಚ್ಚಿನ ಹಣಸೌಲಭ್ಯ ಮುಂತಾದ ಅನುಕೂಲಗಳು ಲಭ್ಯವಾಗುತ್ತವೆ. (ಎಲ್.ಎಸ್.)

**ಕೇಂದ್ರೀಯ ಪಾಠಶಾಲೆ :** ಸ್ಥಳದಿಂದ ಸ್ಥಳಕ್ಕೆ ವರ್ಗವಾಗಿ ಬರುವ ಕೇಂದ್ರ (ಭಾರತ) ಸರ್ಕಾರದ ಅಧಿಕಾರಿಗಳ ಮಕ್ಕಳ ಶಿಕ್ಷಣಕ್ಕಾಗಿ ದ್ವಿತೀಯ ವೇತನ ಆಯೋಗದ ಸಲಹೆಯಂತೆ ಕೇಂದ್ರ ಸರ್ಕಾರ ಭಾರತದ ಪ್ರಮುಖ ನಗರಗಳಲ್ಲಿ ಆರಂಭಿಸಿ ನಡೆಸುತ್ತಿರುವ ಪಾಠಶಾಲೆಗಳು (ಸೆಂಟ್ರಲ್ ಸ್ಕೂಲ್ಸ್). ಸದ್ಯದಲ್ಲಿ ಈ ಯೋಜನೆಯಲ್ಲಿ ಕೇಂದ್ರ ಸರ್ಕಾರ ಸುಮಾರು 120ಕ್ಕೂ ಹೆಚ್ಚು ಉನ್ನತ ಪ್ರೌಢಶಾಲೆಗಳನ್ನು ನಡೆಸುತ್ತಿದೆ. ಇಲ್ಲಿ ಹಿಂದಿ ಅಥವಾ ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿದ್ದು ಈ ಎಲ್ಲ ಶಾಲೆಗಳಲ್ಲೂ ಏಕರೀತಿಯ ಪಠ್ಯಕ್ರಮಗಳನ್ನು ಅನುಸರಿಸಲಾಗುತ್ತಿದೆ. ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ನವದೆಹಲಿಯ ಪ್ರೌಢಶಿಕ್ಷಣದ ಕೇಂದ್ರೀಯ ಮಂಡಳಿ(ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್) ಏರ್ಪಡಿಸುವ ಅಖಿಲಭಾರತ ಉನ್ನತ ಪ್ರೌಢಶಾಲಾ ಪರೀಕ್ಷೆಗೆ ಕುಳಿತುಕೊಳ್ಳುವರು. ಇಲ್ಲಿಯ ಶಿಕ್ಷಣದ ಮಟ್ಟ ಉತ್ತಮ ಸ್ಥಿತಿಯಲ್ಲಿದ್ದು ಇತರ ಶಾಲೆಗಳಿಗೆ ಆದರ್ಶವೆನಿಸುವಂತಿದೆ. ಈ ಶಾಲೆಗಳಲ್ಲಿ ಒಂದನೆಯ ತರಗತಿಯಿಂದ ಎಂಟನೆಯ ತರಗತಿಯವರೆಗೆ ಶುಲ್ಕ ಕೊಡಬೇಕಾಗಿಲ್ಲ. ಒಂಬತ್ತು, ಹತ್ತು ಮತ್ತು ಹನ್ನೊಂದನೆಯ ತರಗತಿಗಳಿಗೆ ಶುಲ್ಕವನ್ನು ವಿಧಿಸಲಾಗುವುದು. ಅನುಸೂಚಿತ ಜಾತಿಯ ಮತ್ತು ನಿಮ್ನವರ್ಗದ ವಿದ್ಯಾರ್ಥಿಗಳಿಗೆ ಶುಲ್ಕದಿಂದ ವಿನಾಯತಿ ಉಂಟು. ಸಾಮಾನ್ಯವಾಗಿ ಇವು ವಸತಿ ವಿದ್ಯಾಲಯಗಳಾಗಿವೆ. ಇಲ್ಲಿಯ ಜೀವನದ ವೆಚ್ಚ ಸಾಧಾರಣ ವಿದ್ಯಾರ್ಥಿನಿಲಯಕ್ಕಿಂತ ಅಷ್ಟೇನೂ ಹೆಚ್ಚಾಗುವುದಿಲ್ಲ. ಬೇರೆ ಬೇರೆ ರೀತಿಯ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶಾವಕಾಶ ನೀಡುವಾಗ ಆದ್ಯತೆಯ ನಿಯಮವನ್ನು ಅನುಸರಿಸಲಾಗುವುದು. ರಕ್ಷಣಾ ಶಾಖೆಯನ್ನೊಳಗೊಂಡಂತೆ ಕೇಂದ್ರ ಸರ್ಕಾರದ ಸಿಬ್ಬಂದಿಯವರ ಮಕ್ಕಳಿಗೆ ಪ್ರವೇಶಾವಕಾಶಕ್ಕೆ ಆದ್ಯತೆಯುಂಟು. ಕೇಂದ್ರ ಸರ್ಕಾರದ ಸಹಾಯ ಧನದಿಂದ ನಡೆಯುತ್ತಿರುವ ಪೂರ್ಣ ಅಥವಾ ಅರ್ಧ ಸ್ವಯಮಾಡಳಿತ ಸಂಸ್ಥೆಗಳ ಸಿಬ್ಬಂದಿಯವರ ಮಕ್ಕಳಿಗೆ ದ್ವಿತೀಯ ಆದ್ಯತೆಯನ್ನೂ ಸಂಚಾರಿ ಮತ್ತು ಸ್ಥಳೀಯ ಜನತೆಯ ಮಕ್ಕಳಿಗೆ ತೃತೀಯ ಆದ್ಯತೆಯನ್ನೂ ನೀಡಲಾಗುವುದು.

1968ರಲ್ಲಿ ಈ ಶಾಲೆಗಳಲ್ಲಿ ಸುಮಾರು 64,668 ಮಂದಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಪ್ರತಿವರ್ಷವೂ ವಿದ್ಯಾರ್ಥಿ ಸಂಖ್ಯೆ ಶೇ.13ರಂತೆ ಹೆಚ್ಚುತ್ತ ಹೋಗುತ್ತಿದೆ. ಈ ಶಾಲೆಗಳ ಕಟ್ಟಡ, ಸಾಮಾನು ಸರಬರಾಜು, ಉಪಕರಣಾದಿಗಳು, ಅಧ್ಯಾಪಕರು, ಆಡಳಿತ ನಿರ್ವಹಣೆ–ಇವೆಲ್ಲ ಉತ್ತಮ ಮಟ್ಟದವೆಂದು ಹೆಸರಾಗಿವೆ. ಈ ಶಾಲೆಗಳನ್ನು ನಡೆಸಲು ಬೇಕಾಗುವ ಸಂಪೂರ್ಣ ವೆಚ್ಚವನ್ನು ಕೇಂದ್ರ ಸಚಿವಾಲಯ ವಹಿಸಿಕೊಳ್ಳುತ್ತಿದೆ. *

**ಕೇಂದ್ರೀಯ ಪ್ರಯೋಗಾಲಯಗಳು :** ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೇಂದ್ರ ಸರ್ಕಾರ ಆರಂಭಿಸಿ ನಡೆಸಿಕೊಂಡು ಬರುತ್ತಿರುವ ಆನ್ವಯಿಕ ವಿಜ್ಞಾನ ಸಂಶೋಧನಾಲಯಗಳು (ಸೆಂಟ್ರಲ್ ಲೆಬಾರಟರೀಸ್). ಇವನ್ನು ರಾಷ್ಟ್ರೀಯ ಪ್ರಯೋಗಾಲಯಗಳೆಂದೂ ಕರೆಯುವರು. ಔದ್ಯೋಗಿಕ ಸಂಶೋಧನೆಗಳಿಗಾಗಿ ರಾಷ್ಟ್ರದ ಆಶ್ರಯದಲ್ಲಿ ಏರ್ಪಟ್ಟಿರುವ ಈ ಸಂಸ್ಥೆಗಳು ರಾಷ್ಟ್ರದ ಔದ್ಯೋಗಿಕ ಪ್ರಗತಿಗೂ ಆ ಮೂಲಕ ಆರ್ಥಿಕ ಬೆಳವಣಿಗೆಗೂ ಗಣನೀಯ ಪ್ರಮಾಣದಲ್ಲಿ ನೆರವಾಗುತ್ತಿವೆ; ಕಳೆದ ಹಲವಾರು ದಶಕಗಳಿಂದ ರಾಷ್ಟ್ರದ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅಗತ್ಯವಾದ ಔದ್ಯೋಗಿಕ ತಂತ್ರವಿಜ್ಞಾನದ ಜ್ಞಾನವನ್ನೊದಗಿಸುತ್ತಿವೆ. ದೇಶೀಯ ಮೂಲವಸ್ತುಗಳನ್ನು ಕುರಿತು ಅವು ನಡೆಸುತ್ತಿರುವ ಅನ್ವೇಷಣೆ ಮತ್ತು ಸಂಶೋಧನೆಗಳೂ ಅವನ್ನು ಸಂಸ್ಕರಿಸುವ ವಿಧಾನಗಳನ್ನು ಇಲ್ಲಿನ ಸನ್ನಿವೇಶಗಳಿಗೆ ಹೊಂದಿಸಿಕೊಳ್ಳಲು ಸೂಚಿಸಿರುವ ಕಾರ್ಯವೂ ರಾಷ್ಟ್ರದಲ್ಲಿ ಅನೇಕ ಪ್ರಮುಖ ಉದ್ಯೋಗಗಳನ್ನು ಸ್ಥಾಪಿಸಲು ನೆರವಾಗಿವೆ.

37 ರಾಷ್ಟ್ರೀಯ ಪ್ರಯೋಗಾಲಯ, ಸಂಸ್ಥೆ ಅಥವಾ ಘಟಕಗಳೂ 3 ವಸ್ತು ಸಂಗ್ರಹಾಲಯಗಳೂ ದೇಶದ ಬೇರೆ ಬೇರೆ ಭಾಗಗಳಲ್ಲಿ ಕೆಲಸ ಮಾಡುತ್ತಿವೆ. ಅವೆಲ್ಲ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಸಲಹಾ ಮಂಡಳಿಯ (ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ CSIR) ಆಡಳಿತಕ್ಕೊಳಪಟ್ಟಿವೆ. ಈ ಪ್ರಯೋಗಾಲಯಗಳಲ್ಲಿ ಒಂದೊಂದೂ ತನ್ನದೇ ಆದ ನಿರ್ದಿಷ್ಟವೂ ವಿಶಿಷ್ಟವೂ ಆದ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುತ್ತದೆ. ಇವುಗಳಲ್ಲಿ ಕೆಲವು ತಮ್ಮ ಸಂಶೋಧನೆಗೆ ನೆರವಾಗುವಂಥ ಪ್ರಾದೇಶಿಕ ಎರಕಹೊಯ್ಯುವ ಶಾಲೆಗಳನ್ನೂ ಔಷಧಿಕ್ಷೇತ್ರಗಳನ್ನೂ ಕಾರ್ಖಾನೆ ಮತ್ತು ಇತರ ಪ್ರಾದೇಶಿಕ ಕೇಂದ್ರಗಳನ್ನೂ ಹೊಂದಿವೆ.

ವಿಜ್ಞಾನಿಗಳು, ಉದ್ಯೋಗಗಳ ಸ್ಥಾಪಕರು, ಉದ್ಯೋಗ ವಿಜ್ಞಾನಿಗಳು ಮುಂತಾದ ವಿಶಿಷ್ಟ ಸದಸ್ಯರನ್ನೊಳಗೊಂಡ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನೆಯ ಮಂಡಳಿಯೊಂದು ಈ ಪ್ರಯೋಗಾಲಯಗಳು ನಡೆಸಬೇಕಾದ ಸಂಶೋಧನೆಗಳ ಯೋಜನೆಯನ್ನು ಆದ್ಯತೆಯ ಆಧಾರದ ಮೇಲೆ ಆರಿಸಿಕೊಳ್ಳುವುದು. ಈಚೆಗೆ ಆನ್ವಯಿಕ ಸಂಶೋಧನೆಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗುತ್ತಿದೆ. ದೇಶದ ಆವಶ್ಯಕತೆಗಳನ್ನನುಸರಿಸಿ ದೇಶದ ಸಂಪನ್ಮೂಲಗಳನ್ನು ಆದಷ್ಟು ಲಾಭದಾಯಕವಾಗಿ ಬೆಳೆಸಿಕೊಳ್ಳಲು ನೆರವಾಗುವಂಥ ಸಂಶೋಧನೆಗಳಿಗೆ ಹೆಚ್ಚಿನ ಅವಕಾಶ ಕೊಡುವಂತೆ ಅವುಗಳ ಕಾರ್ಯಕ್ರಮಗಳನ್ನು ಪುನಾರಚಿಸಲಾಗುತ್ತಿದೆ. ಪ್ರಯೋಗಾಲಯಗಳ ತಾಂತ್ರಿಕ ಜನಬಲವೂ ಉಪಕರಣಾದಿಗಳೂ ಆದಷ್ಟು ಫಲದಾಯಕವಾಗಿ ಕೆಲಸ ಮಾಡಲೆಂಬ ಉದ್ದೇಶದಿಂದ ಅವುಗಳ ಆಡಳಿತ ಮತ್ತು ನಿಯಂತ್ರಣದಲ್ಲೂ ಮಾರ್ಪಾಟುಗಳಾಗುತ್ತಿವೆ. ಈಗಾಗಲೇ ಈ ಪ್ರಯೋಗಾಲಯಗಳು ಔದ್ಯೋಗಿಕ ಕ್ಷೇತ್ರಕ್ಕೆ 270ಕ್ಕೂ ಹೆಚ್ಚು ಸಂಸ್ಕರಣವಿಧಾನಗಳನ್ನು ರೂಪಿಸಿ ಒದಗಿಸಿವೆ; ಅವುಗಳಲ್ಲಿ 135ಕ್ಕೂ ಹೆಚ್ಚು ವಿಧಾನಗಳು ಕಾರ್ಯಕ್ಷೇತ್ರದಲ್ಲಿ ಆಗಲೇ ಬೆಳಕಿಗೆ ಬಂದಿವೆ. ಜೊತೆಗೆ, ಇನ್ನೂ 250 ವಿಧಾನಗಳು ಪೂರ್ಣಗೊಂಡು ಕಾರ್ಯಕ್ಷೇತ್ರಕ್ಕೆ ಒದಗಬಹುದಾದ ಮಟ್ಟವನ್ನು ಮುಟ್ಟುತ್ತಿವೆ.

1950ರಿಂದ ಅಸ್ತಿತ್ವಕ್ಕೆ ಬರಲಾರಂಭಿಸಿದ ಈ ಪ್ರಯೋಗಾಲಯಗಳೂ ಅವುಗಳ ಪ್ರಾದೇಶಿಕ ಕೇಂದ್ರಗಳೂ ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಗಣನೀಯ ಪಾತ್ರವಹಿಸುತ್ತಿರುವುದರಿಂದ ಅವುಗಳ ವ್ಯವಸ್ಥೆ ಮತ್ತು ಕಾರ್ಯನಿರ್ವಹಣೆಗಾಗಿ ರಾಷ್ಟ್ರ

ಅಗಾಧ ಪ್ರಮಾಣದಲ್ಲಿ ಜನ ಮತ್ತು ಧನಮೂಲಗಳನ್ನು ತೊಡಗಿಸಿದೆ. ಮೊದಲು ಕೇವಲ 10–11 ಲಕ್ಷ ರೂಪಾಯಿಗಳ ವೆಚ್ಚದೊಂದಿಗೆ ಆರಂಭವಾದ ಈ ಬೃಹದ್ ಯೋಜನೆಗೆ ಈಗ ಪ್ರತಿವರ್ಷವೂ ಹದಿನೇಳು ಕೋಟಿಗೂ ಹೆಚ್ಚು ಹಣ ಖರ್ಚಾಗುತ್ತಿದೆ. ರಾಷ್ಟ್ರದ ಅನೇಕ ವಿಜ್ಞಾನಿಗಳೂ ತಂತ್ರಶಾಸ್ತ್ರಜ್ಞರೂ ಅಲ್ಲಿ ದುಡಿಯುತ್ತಿದ್ದಾರೆ. ಅವರ ದುಡಿಮೆಯ ಫಲವಾಗಿ ರಾಷ್ಟ್ರ ಹೂಡಿದ ಬಂಡವಾಳ ಈಗಾಗಲೇ ಒಳ್ಳೆಯ ಫಲ ನೀಡಲಾರಂಭಿಸಿದೆ. ಈ ಪ್ರಯೋಗಾಲಯಗಳು ಸ್ವಾಭಾವಿಕವಾಗಿ ಉದ್ಯೋಗಗಳೊಡನೆ ನಿಕಟ ಸಂಪರ್ಕವಿಟ್ಟುಕೊಂಡು ಕೆಲಸ ಮಾಡುತ್ತಿವೆ. ಅವುಗಳ ಸಮಸ್ಯೆಗಳನ್ನು ಅರಿತು ಅವನ್ನು ನಿವಾರಿಸಲು ನೆರವಾಗುವಂಥ ಸಂಶೋಧನೆಗಳನ್ನು ನಡೆಸಿ ಇಲ್ಲವೆ ಯಂತ್ರೋಪಕರಣಾದಿಗಳನ್ನು ರಚಿಸಿ ಕೊಟ್ಟು, ನೂತನ ಉತ್ಪನ್ನ ವಿಧಾನಗಳನ್ನು ತೋರಿಸಿಕೊಟ್ಟು ಉದ್ಯೋಗಗಳ ಪ್ರಗತಿಗೆ ನೆರವಾಗುತ್ತಿವೆ. ದೇಶದ ಸಂಪನ್ಮೂಲಗಳ ಅನ್ವೇಷಣೆ ಮತ್ತು ಸಂರಕ್ಷಣೆಯ ವಿಧಾನಗಳನ್ನು ರೂಪಿಸುವುದರ ಜೊತೆಗೆ ಆಮದು ಮಾಡಿಕೊಳ್ಳುವ ಅಥವಾ ಆಮದು ಮಾಡಿಕೊಳ್ಳಲು ದುರ್ಲಭವಾಗಿರುವ ವಸ್ತುಗಳಿಗೆ ಬದಲಾಗಿ ಬಳಸಬಹುದಾದ ಬದಲಿವಸ್ತುಗಳನ್ನು ತಯಾರಿಸುವುದು, ಉತ್ಪಾದನೀಯ ವಸ್ತುಗಳನ್ನು ರೂಪಿಸುವುದು, ಕೈಗಾರಿಕೋದ್ಯಮಿಗಳಿಗೆ ಬೇಕಾದ ಯಂತ್ರಗಳು, ಉಪಕರಣಗಳು ಮತ್ತು ಸಾಧನ ಸಲಕರಣೆಗಳನ್ನು ರೂಪಿಸಿ ರಚಿಸುವುದು ಇತ್ಯಾದಿ ಕಾರ್ಯಗಳ ಮೂಲಕ ಔದ್ಯೋಗಿಕ ಪ್ರಗತಿಗೂ ಆ ಮೂಲಕ ರಾಷ್ಟ್ರದ ಆರ್ಥಿಕ ಮುನ್ನಡೆಗೂ ನೆರವಾಗುತ್ತಿವೆ. ಅದುರು ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಕೆಳದರ್ಜೆಯ ಅದುರುಗಳನ್ನು ಸಾರೀಕರಿಸುವ ಕಾರ್ಯ, ಅಪೇಕ್ಷಿತ ಮಟ್ಟದ ಕಲ್ಲಿದ್ದಲಿನ ಉತ್ಪಾದನೆ, ದೃಶ್ಯೋಪಕರಣಗಳ ಗಾಜುಗಳ (ದರ್ಶಕ ಗಾಜುಗಳ) ತಯಾರಿಕೆ, ಎಮ್ಮೆಯ ಹಾಲಿನಿಂದ ಮಕ್ಕಳಿಗೆ ಹಾಲಿನ ಪುಡಿಯನ್ನು ತಯಾರಿಸುವುದು, ಕಬ್ಬಿಣದ ಮಿಶ್ರಲೋಹಗಳನ್ನು ತಯಾರಿಸುವ ವಿಧಾನಗಳನ್ನು ರೂಪಿಸುವುದು, ಅಭ್ರಕ ಮತ್ತು ಪಿಂಗಾಣಿ ಮುಂತಾದ ಅವಾಹಕಗಳು ಮತ್ತು ಉಕ್ಕುಗಳು ಮೊದಲಾದ ವಸ್ತುಗಳ ಬದಲಾಗಿ ಉಪಯೋಗಿಸಬಹುದಾದ ಪ್ರತಿವಸ್ತುಗಳನ್ನು ರೂಪಿಸುವುದು, ವಿದ್ಯುತ್ ರಾಸಾಯನಿಕೋದ್ಯಮ, ಚರ್ಮ ಮತ್ತು ವಸ್ತ್ರೋದ್ಯಮಗಳಿಗೆ ನೆರವು ನೀಡುವುದು–ಈ ಕಾರ್ಯಗಳನ್ನೂ ನಿರ್ವಹಿಸುತ್ತಿವೆ.

ಸದ್ಯದಲ್ಲಿ ಕೇಂದ್ರ ಪ್ರಯೋಗಾಲಯ ಅಥವಾ ಸಂಶೋಧನ ಸಂಸ್ಥೆಗಳ ಹೆಸರುಗಳನ್ನೂ ಅವು ಸ್ಥಾಪನೆಯಾದ ವರ್ಷ, ಸ್ಥಳ, ನಿರ್ವಹಿಸುತ್ತಿರುವ ಕಾರ್ಯದ ಸ್ವರೂಪ, ಹೊಂದಿರುವ ಪ್ರಾದೇಶಿಕ ಕೇಂದ್ರಗಳು–ಮುಂತಾದ ವಿವರಗಳನ್ನೂ ಮುಂದೆ ಕೊಟ್ಟಿದೆ.

**1. ರಾಷ್ಟ್ರೀಯ ಭೌತವಿಜ್ಞಾನ ಪ್ರಯೋಗಾಲಯ (ನ್ಯಾಷನಲ್ ಫಿಸಿಕಲ್ ಲೆಬಾರಟರಿ), ನವದೆಹಲಿ (1950)** : ಭೌತವಿಜ್ಞಾನಕ್ಕೆ ಸಂಬಂಧಿಸಿದ ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನು ನಡೆಸುತ್ತದೆ. ತೂಕ, ಅಳತೆ ಮೊದಲಾದ ಪ್ರಮಾಣಗಳ ಸಂರಕ್ಷಣೆಯಲ್ಲಿ ಅಗತ್ಯವಾದ ಪರೀಕ್ಷಾ ಸೌಲಭ್ಯಗಳನ್ನು ಒದಗಿಸುತ್ತದೆ.

**2. ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯ (ನ್ಯಾಷನಲ್ ಕೆಮಿಕಲ್ ಲೆಬಾರಟರಿ) ಪುಣೆ (1955)** : ರಸಾಯನವಿಜ್ಞಾನದ ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳು ಹಾಗೂ ಯಾವ ವಿಶಿಷ್ಟ ಕ್ಷೇತ್ರಗಳಿಗೆ ಇತರ ಪ್ರಯೋಗಾಲಯಗಳು ನೇಮಕವಾಗಿಲ್ಲವೊ ಆ ಕ್ಷೇತ್ರಗಳಿಗೆಲ್ಲ ಅನ್ವಯಿಸುವಂತೆ ಸಂಶೋಧನೆಗಳು ಇಲ್ಲಿ ನಡೆಯುತ್ತವೆ. ಟೈಪ್ ಕಲ್ಚರಿನ ರಾಷ್ಟ್ರೀಯ ಸಂಗ್ರಹಾಲಯವೂ ಈ ಸಂಶೋಧನಾಲಯದಲ್ಲಿದೆ.

**3. ಕೇಂದ್ರೀಯ ಇಂಧನ ಸಂಶೋಧನ ಸಂಸ್ಥೆ (ಸೆಂಟ್ರಲ್ ಫ್ಯೂಯಲ್ ರಿಸರ್ಚ್ ಇನ್ಸ್ಟಿಟ್ಯೂಟ್), ಧನ್‌ಬಾದ್ (1950)** : ಘನ, ದ್ರವ ಮತ್ತು ಅನಿಲರೂಪದ ಇಂಧನಗಳನ್ನು ಕುರಿತ ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನೂ ತನ್ನ ಏಳು ಕಲ್ಲಿದ್ದಲು ಸಮೀಕ್ಷಾ ಕೇಂದ್ರಗಳ ಮೂಲಕ ಭಾರತದ ಕಲ್ಲಿದ್ದಲು ನಿಕ್ಷೇಪಗಳಿಗೆ ಸಂಬಂಧಿಸಿದಂತೆ ಭೌತ ಮತ್ತು ರಸಾಯನ ವಿಭಾಗದ ಸಮೀಕ್ಷೆಗಳನ್ನೂ ನಡೆಸುತ್ತದೆ.

**4. ಕೇಂದ್ರೀಯ ಗಾಜು ಮತ್ತು ಪಿಂಗಾಣಿ ಸಂಶೋಧನ ಸಂಸ್ಥೆ (ಸೆಂಟ್ರಲ್ ಗ್ಲಾಸ್ ಅಂಡ್ ಸೆರಾಮಿಕ್ ರಿಸರ್ಚ್ ಇನ್ಸ್ಟಿಟ್ಯೂಟ್), ಕೋಲ್ಕೊತ (1950)** : ಗಾಜು, ಮಣ್ಣಿನ ಪಾತ್ರೆ, ಕುಲುಮೆ, ಗಾಜಿನಂಥ ಎನಾಮಿಲ್, ಅಭ್ರಕ ಮುಂತಾದವುಗಳ ವಿವಿಧ ಮುಖಗಳಿಗೆ ಸಂಬಂಧಿಸಿದ ಆನ್ವಯಿಕ ಸಂಶೋಧನೆ, ದೇಶೀಯ ಕಚ್ಚಾವಸ್ತುಗಳ ಗುಣ ನಿಷ್ಕರ್ಷೆ ಮತ್ತು ಬಳಕೆ, ಆಮದು ವಸ್ತುಗಳಿಗೆ ಬದಲಿ ವಸ್ತುಗಳ ನಿರ್ಮಾಣ, ಹೊಸ ಉತ್ಪನ್ನಗಳನ್ನೂ ವಿಧಾನಗಳನ್ನೂ ಕಂಡುಹಿಡಿಯುವುದು, ಔದ್ಯೋಗಿಕ ಉತ್ಪನ್ನಗಳ ಗುಣವರ್ಧನ ಮತ್ತು ಪ್ರಮಾಣೀಕರಣ–ಇವು ಇದರ ಕಾರ್ಯಕ್ಷೇತ್ರಗಳು. ಉದ್ಯೋಗಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸಿ ಸಂಶೋಧನೆಗಳನ್ನು ನಡೆಸುವುದು ; ದರ್ಶಕ ಗಾಜುಗಳ ತಯಾರಿಕೆ ಮತ್ತು ವಿಕಿರಣ ಸಂರಕ್ಷಣೆಯ ವಾತಾಯನಗಳನ್ನು ತಯಾರಿಸುವ ಪರೀಕ್ಷಾ ಕಾರ್ಖಾನೆಗಳನ್ನು ನಡೆಸುವುದು–ಇದರ ಮುಖ್ಯ ಕೆಲಸಗಳು.

**5. ಕೇಂದ್ರೀಯ ಆಹಾರ ಸಂಶೋಧನ ಸಂಸ್ಥೆ (ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್), ಮೈಸೂರು (1950)** : ಆಹಾರದ ಉಪಯೋಗ ಮತ್ತು ರಕ್ಷಣೆ, ಆಹಾರದ ಎಂಜಿನಿಯರಿಂಗ್, ಹಣ್ಣಿನ ಉದ್ಯೋಗವಿಜ್ಞಾನದ ಎಲ್ಲ ಮುಖಗಳು–ಇವುಗಳಿಗೆ ಸಂಬಂಧಿಸಿದ ಸಂಶೋಧನೆ ನಡೆಸುತ್ತದೆ. ತಿರುಚೂರು, ನಾಗಪುರ, ಮುಂಬಯಿ, ಲಖನೌ, ಮಂಗಳೂರು, ಸಿಮ್ಲ, ಜಮ್ಮು–ತಾವಿ, ಕಡಪ–ಈ ಸ್ಥಳಗಳಲ್ಲಿ ಸ್ಥಳೀಯ ಹಣ್ಣು ಮತ್ತು ತರಕಾರಿಯ ಸಂರಕ್ಷಣ ಕೇಂದ್ರಗಳನ್ನು ಇದು ನಡೆಸುತ್ತಿದೆ.

**6. ರಾಷ್ಟ್ರೀಯ ಧಾತು (ಲೋಹ) ವಿದ್ಯೆಯ ಪ್ರಯೋಗಾಲಯ (ನ್ಯಾಷನಲ್ ಮೆಟಲರ್ಜಿಕಲ್ ಲೆಬಾರ್ಟರಿ), ಜೆಮ್ಷಡ್ಪುರ (1950)** : ಮೂಲಭೂತ ಮತ್ತು ಆನ್ವಯಿಕ ಧಾತು ವಿದ್ಯಾಸಂಶೋಧನೆಗಳನ್ನು ನಡೆಸುವುದರ ಜೊತೆಗೆ ಪಂಜಾಬ್, ತಮಿಳುನಾಡು ಮತ್ತು ಪಶ್ಚಿಮಬಂಗಾಳಗಳಲ್ಲಿ ನಾಲ್ಕು ಪ್ರಾದೇಶಿಕ ಎರಕಹೊಯ್ಯುವ ಕಾರ್ಯದ ಸಂಶೋಧನೆಯ ಕೇಂದ್ರಗಳನ್ನು ಇದು ನಡೆಸುತ್ತದೆ.

**7. ಕೇಂದ್ರೀಯ ಔಷಧ ಸಂಶೋಧನ ಸಂಸ್ಥೆ (ಸೆಂಟ್ರಲ್ ಡ್ರಗ್ ರಿಸರ್ಚ್ ಇನ್ಸ್ಟಿಟ್ಯೂಟ್), ಲಖನೌ (1951)** : ಕಚ್ಚಾ ಔಷಧಗಳ ಮೌಲ್ಯ ನಿಷ್ಕರ್ಷೆ ಮತ್ತು ಪ್ರಮಾಣೀಕರಣ, ಔಷಧವಸ್ತುಗಳನ್ನು ಶಾಸ್ತ್ರೀಯವಾಗಿ ತಯಾರಿಸುವುದು ಸಂಯೋಜಿತ ಔಷಧವಸ್ತುಗಳನ್ನು ತಯಾರಿಸುವುದು, ಜೀವರಸಾಯನವಿಜ್ಞಾನ, ಜೀವಭೌತವಿಜ್ಞಾನ, ಸೋಂಕುರಕ್ಷಾವಿಜ್ಞಾನ, ಸಾಂಕ್ರಾಮಿಕ ರೋಗಗಳು, ಔಷಧವಿಜ್ಞಾನ, ರಾಸಾಯನಿಕ ಚಿಕಿತ್ಸೆ, ಪ್ರಯೋಗಾರ್ಥ ಔಷಧಗಳ ನಿರ್ಮಾಣ–ಇತ್ಯಾದಿಗಳನ್ನೊಳಗೊಂಡಂತೆ ವೈದ್ಯವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲ ಮುಖಗಳ ಸಂಶೋಧನೆ ನಡೆಸುವುದು ಈ ಸಂಸ್ಥೆಯ ಕೆಲಸ.

**8. ಕೇಂದ್ರೀಯ ರಸ್ತೆ ಸಂಶೋಧನ ಸಂಸ್ಥೆ (ಸೆಂಟ್ರಲ್ ರೋಡ್ ರಿಸರ್ಚ್ ಇನ್ಸ್ಟಿಟ್ಯೂಟ್), ನವದೆಹಲಿ (1952)** : ರಸ್ತೆ ನಿರ್ಮಾಣದಲ್ಲಿ ಬಳಸುವ ವಸ್ತುಗಳನ್ನು ಕುರಿತು ಸಂಶೋಧನೆ ನಡೆಸುವುದು; ಆ ವಸ್ತುಗಳನ್ನೂ ರಸ್ತೆಗಳ ನೆಲವನ್ನೂ ಪರೀಕ್ಷೆ ನಡೆಸುವುದು ಇದರ ಕೆಲಸ.

**9. ಕೇಂದ್ರೀಯ ವಿದ್ಯುದ್ರಸಾಯನ ಸಂಶೋಧನ ಸಂಸ್ಥೆ (ಸೆಂಟ್ರಲ್ ಎಲೆಕ್ಟ್ರೋ ಕೆಮಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್), ಕಾರೈಕುಡಿ (1953)** : ವಿದ್ಯುತ್ ಲೋಹವಿಜ್ಞಾನ, ವಿದ್ಯುತ್ ಲೇಪನ ಮತ್ತು ಸಂಬಂಧಿಸಿದ ಇತರ ವಿಷಯಗಳನ್ನೊಳಗೊಂಡಂತೆ ವಿದ್ಯುದ್ರಸಾಯನವಿಜ್ಞಾನದ ವಿವಿಧ ಮುಖಗಳನ್ನು ಕುರಿತು ಸಂಶೋಧನೆಗಳನ್ನು ನಡೆಸುವುದು. ಚೆನ್ನೈ ಮತ್ತು ರಾಮನಾಥಪುರಗಳಲ್ಲಿ ಈ ಸಂಸ್ಥೆ ಎರಡು ಪರೀಕ್ಷಾ ಕೇಂದ್ರಗಳನ್ನು ನಡೆಸುತ್ತಿದೆ.

**10. ಕೇಂದ್ರೀಯ ಚರ್ಮ ಸಂಶೋಧನ ಸಂಸ್ಥೆ (ಸೆಂಟ್ರಲ್ ಲೆದರ್ ರಿಸರ್ಚ್ ಇನ್ಸ್ಟಿಟ್ಯೂಟ್), ಮದ್ರಾಸು (1953)** : ಚರ್ಮಶಿಲ್ಪವಿಜ್ಞಾನಕ್ಕೆ ಸಂಬಂಧಿಸಿದಂತೆ ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನು ನಡೆಸುವುದು. ಕೋಲ್ಕೊತ, ರಾಜಕೋಟೆ, ಜಲಂಧರ್, ಕಾನ್ಪುರ ಮತ್ತು ಮುಂಬಯಿ–ಈ ಸ್ಥಳಗಳಲ್ಲಿ ಸಂಸ್ಥೆ ತನ್ನ ಪ್ರಸಾರಕೇಂದ್ರಗಳನ್ನು ಹೊಂದಿದೆ.

**11. ಕೇಂದ್ರೀಯ ಕಟ್ಟಡ ನಿರ್ಮಾಣ ಸಂಶೋಧನ ಸಂಸ್ಥೆ (ಸೆಂಟ್ರಲ್ ಬಿಲ್ಡಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್), ರೂರ್ಕಿ (1953)**: ಕಟ್ಟಡಗಳ ಶಿಲ್ಪ, ರಚನೆ ಮತ್ತು ವಸತಿ ಸೌಲಭ್ಯ–ಇವನ್ನು ಕುರಿತು ಸಂಶೋಧನೆ ನಡೆಸುವುದು.

**12. ಕೇಂದ್ರೀಯ ಎಲೆಕ್ಟ್ರಾನಿಕ್ಸ್ ಸಂಶೋಧನ ಸಂಸ್ಥೆ (ಸೆಂಟ್ರಲ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್), ಪಿಲಾನಿ (1953)** : ಎಲೆಕ್ಟ್ರಾನಿಕ್ ಉಪಕರಣಗಳ ಮತ್ತು ಭಾಗಗಳ ನಮೂನೆ ತಯಾರಿಸುವುದು ಮತ್ತು ಉಪಕರಣಗಳನ್ನು ಪರೀಕ್ಷಿಸುವುದು.

**13. ರಾಷ್ಟ್ರೀಯ ಸಸ್ಯವಿಜ್ಞಾನೋದ್ಯಾನ (ನ್ಯಾಷನಲ್ ಬೊಟ್ಯಾನಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್), ಲಖನೌ (1953)** : ಔದ್ಯೋಗಿಕ ಪ್ರಾಮುಖ್ಯದ ಔಷಧಿ ಸಸ್ಯಗಳನ್ನು ಸಂಗ್ರಹಿಸುವುದು ಮತ್ತು ವ್ಯವಸಾಯ ಮಾಡುವುದು.

**14. ಕೇಂದ್ರೀಯ ಲವಣ ಮತ್ತು ಸಾಗರ ರಸಾಯನ ಸಂಶೋಧನ ಸಂಸ್ಥೆ (ಸೆಂಟ್ರಲ್ ಸಾಲ್ಟ್ ಅಂಡ್ ಮರಿನ್ ಕೆಮಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್), ಭಾವನಗರ (1954)**: ಶುದ್ಧ ಲವಣದ (ಉಪ್ಪು) ಅನ್ವೇಷಣೆ ಮತ್ತು ತಯಾರಿಕೆ, ತಯಾರಿಕೆಯ ವೆಚ್ಚವನ್ನು ತಗ್ಗಿಸುವಿಕೆ, ಲವಣ ತಯಾರಿಕೆಯ ಉಪ ಉತ್ಪನ್ನಗಳನ್ನು ಲಾಭದಾಯಕವಾಗಿ ಬಳಸಿಕೊಳ್ಳುವಿಕೆ, ಅವನ್ನು ಪ್ರತ್ಯೇಕಿಸಿ ಸಂಗ್ರಹಿಸುವ ಹೊಸ ತಂತ್ರ ಮತ್ತು ವಿಧಾನಗಳನ್ನು ರೂಪಿಸುವುದು, ಸಾಗರಜಲದ ಉತ್ಪನ್ನಗಳನ್ನೂ ಸಂಬಂಧಿಸಿದ ಇತರ ರಾಸಾಯನಿಕ ವಸ್ತುಗಳನ್ನು ತಯಾರಿಸುವುದು ಮತ್ತು ಬಳಸಿಕೊಳ್ಳುವುದು–ಈ ಕಾರ್ಯಗಳಿಗಾಗಿ ಸಂಸ್ಥೆ ಮೀಸಲಾಗಿದೆ.

**15. ಕೇಂದ್ರೀಯ ಗಣಿಕಾರ್ಯ(ಖನಿಜಕರ್ಮ) ಸಂಶೋಧನಾಲಯ (ಸೆಂಟ್ರಲ್ ಮೈನಿಂಗ್ ರಿಸರ್ಚ್ ಸ್ಟೇಷನ್), ಧನ್ಬಾದ್ (1956)** : ಗಣಿಕೆಲಸದ ವಿಧಾನಗಳು, ಗಣಿಗಳಲ್ಲಿ ಕ್ಷೇಮಪಾಲನೆ, ಗಣಿಕೆಲಸದ ಉಪಕರಣಗಳು–ಇವನ್ನು ಕುರಿತು ಸಂಶೋಧನೆಗಳನ್ನು ನಡೆಸುವುದು.

**16. ಪ್ರಾದೇಶಿಕ ಸಂಶೋಧನಾಲಯ (ರೀಜನಲ್ ರಿಸರ್ಚ್ ಲೆಬಾರಟರಿ), ಹೈದರಾಬಾದ್** : ಆ ಪ್ರದೇಶದ ಉದ್ಯೋಗಗಳು ಮತ್ತು ಕಚ್ಚಾವಸ್ತುಗಳನ್ನು ಕುರಿತ ಸಂಶೋಧನೆಗಳನ್ನು ನಡೆಸುವುದು. ಭೋಪಾಲ್, ತಿರುವನಂತಪುರಂಗಳಲ್ಲಿಯೂ ಇದರ ಶಾಖೆಗಳು ಇವೆ.

**17. ಜೀವರಸಾಯನವಿಜ್ಞಾನ ಮತ್ತು ಪ್ರಯೋಗಾರ್ಥ ಔಷಧವಿಜ್ಞಾನಗಳ ಭಾರತೀಯ ಸಂಸ್ಥೆ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಬಯೋಕೆಮಿಸ್ಟ್ರಿ ಅಂಡ್ ಎಕ್ಸ್‌ಪೆರಿಮೆಂಟಲ್ ಮೆಡಿಸಿನ್), ಕಲ್ಕತ್ತ (1956)** : ಜೀವರಸಾಯನವಿಜ್ಞಾನ, ದಂಡಾಣುವಿಜ್ಞಾನ–ಇತ್ಯಾದಿಯಾದ ಔಷಧಿವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುವುದು.

**18. ಔದ್ಯೋಗಿಕ ಮತ್ತು ತಂತ್ರವಿಜ್ಞಾನದ ಬಿರ್ಲಾ ವಸ್ತುಸಂಗ್ರಹಾಲಯ (ಬಿರ್ಲಾ ಇನ್ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಅಂಡ್ ಟೆಕ್ನಾಲಾಜಿಕಲ್ ಮ್ಯೂಸಿಯಂ), ಕೋಲ್ಕೊತ** : ವೈಜ್ಞಾನಿಕ ಮತ್ತು ತಂತ್ರಶಾಸ್ತ್ರದ ಪ್ರಗತಿಯನ್ನು ಚಿತ್ರಿಸುವ ವಸ್ತುಗಳ ಸಂಗ್ರಹಾಲಯವಿದು.

**19. ಪ್ರಾದೇಶಿಕ ಸಂಶೋಧನ ಪ್ರಯೋಗಾಲಯ (ರೀಜನಲ್ ರಿಸರ್ಚ್ ಲೆಬಾರಟರಿ). ಜಮ್ಮು–ತಾವಿ (1957)** : ಈ ಪ್ರದೇಶದ ಉದ್ಯೋಗಗಳನ್ನೂ ಕಚ್ಚಾವಸ್ತುಗಳನ್ನೂ ಹಿಮಾಲಯದ ವೈದ್ಯಕೀಯ ಸಸ್ಯಗಳನ್ನೂ ಕುರಿತು ಸಂಶೋಧನೆ ನಡೆಸುವುದು.

**20. ಕೇಂದ್ರೀಯ ಯಂತ್ರಶಿಲ್ಪ ಸಂಶೋಧನ ಸಂಸ್ಥೆ (ಸೆಂಟ್ರಲ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್), ದುರ್ಗಾಪುರ (1958)** : ಯಂತ್ರಶಿಲ್ಪಕ್ಕೆ ಸಂಬಂಧಿಸಿದ ಎಲ್ಲ ರೀತಿಯ ಸಂಶೋಧನೆಗಳನ್ನೂ ನಡೆಸುವುದು : ಲೂಧಿಯಾನ, ಪುಣೆ ಮತ್ತು ಚೆನ್ನೈಗಳಲ್ಲಿ ಯಂತ್ರಶಿಲ್ಪದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ನಡೆಸುತ್ತಿದೆ.

**21. ಕೇಂದ್ರೀಯ ಸಾರ್ವಜನಿಕ ಆರೋಗ್ಯ ಸಂಶೋಧನ ಸಂಸ್ಥೆ (ಸೆಂಟ್ರಲ್ ಪಬ್ಲಿಕ್ ಹೆಲ್ತ್ ಎಂಜಿನಿಯರಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್), ನಾಗಪುರ (1958)** : ಸಾರ್ವಜನಿಕ ಆರೋಗ್ಯದ ಎಂಜಿನಿಯರಿಂಗ್ ಮತ್ತು ಅನುಬಂಧಿ ಸಂಸ್ಥೆಗಳ ಕಾರ್ಯದಲ್ಲಿ ಸಮೀಕರಣಕ್ಕೆ ಸಂಬಂಧಿಸಿದ ಎಲ್ಲ ಮುಖಗಳಿಗೂ ಸೇರಿದಂತೆ ಸಂಶೋಧನೆ ನಡೆಸುವುದು. ಅಹಮದಾಬಾದ್ ಮತ್ತು ಮುಂಬಯಿ ನಗರಗಳಲ್ಲಿ ಕ್ಷೇತ್ರೀಯ ಕೇಂದ್ರಗಳನ್ನೂ ಘಟಕಗಳನ್ನೂ ಈ ಸಂಸ್ಥೆ ವ್ಯವಸ್ಥೆಗೊಳಿಸಿದೆ.

**22. ರಾಷ್ಟ್ರೀಯ ವಾಯುಯಾನ ವಿಜ್ಞಾನ ಪ್ರಯೋಗಾಲಯ (ನ್ಯಾಷನಲ್ ಏರೋನಾಟಿಕಲ್ ಲೆಬಾರಟರಿ), ಬೆಂಗಳೂರು (1959)** : ಭಾರತದಲ್ಲಿ ವಿಮಾನದ ರಚನೆ, ನಮೂನೆ ಮತ್ತು ಚಲನೆಗೆ ಅನುಕೂಲಿಸುವಂತೆ ವಿಮಾನಯಾನ ಸಮಸ್ಯೆಗಳಿಗೆ ಸಂಬಂಧಿಸಿದ ಸಂಶೋಧನೆ ನಡೆಸುವುದು.

**23. ಪ್ರಾದೇಶಿಕ ಸಂಶೋಧನ ಪ್ರಯೋಗಾಲಯ (ರೀಜನಲ್ ರಿಸರ್ಚ್ ಲೆಬಾರಟರಿ), ಜೊರ್ಹಾತ್ (1959)** : ಅಸ್ಸಾಂ ಮತ್ತು ಸುತ್ತಣ ಪ್ರದೇಶದ ಸಂಪನ್ಮೂಲಗಳನ್ನು ಹೆಚ್ಚು ಸಮರ್ಪಕವಾಗಿ ಬಳಸಿಕೊಂಡು ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬರುವುದರ ಮೂಲಕ ಅಲ್ಲಿನ ಔದ್ಯೋಗಿಕ ಪ್ರಗತಿಗೆ ನೆರವಾಗುವುದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸುವುದು

**24. ಪ್ರಾದೇಶಿಕ ಸಂಶೋಧನ ಪ್ರಯೋಗಾಲಯ (ರೀಜನಲ್ ರಿಸರ್ಚ್ ಲೆಬಾರಟರಿ), ಭುವನೇಶ್ವರ (1964)** : ಸ್ಥಳೀಯ ಉದ್ಯೋಗಗಳಿಗೆ ನೆರವಾಗಬಲ್ಲ ಅಂಶಗಳನ್ನು ಕುರಿತು ಸಂಶೋಧನೆ ನಡೆಸಿ ಅಲ್ಲಿಯ ಉದ್ಯೋಗಿಗಳ ಪ್ರಗತಿಗೆ ನೆರವಾಗುವುದು ಮತ್ತು ತನ್ಮೂಲಕ ಅಲ್ಲಿ ಉತ್ಪನ್ನವಾದ ವಸ್ತುಗಳನ್ನು ಪರೀಕ್ಷಿಸಿ ಗುಣನಿಯಂತ್ರಣ ಮಾಡುವುದು.

**25. ಕೇಂದ್ರೀಯ ಔಷಧೀಯ ವನಸ್ಪತಿಗಳ ಸಂಸ್ಥೆ (ಸೆಂಟ್ರಲ್ ಇಂಡಿಯನ್ ಮೆಡಿಸಿನಲ್ ಪ್ಲಾಂಟ್ಸ್ ಆರ್ಗನೈಸೇಷನ್), ಲಖನೌ:** ಔಷಧೀಯ ಸಸ್ಯಗಳನ್ನು ವ್ಯವಸಾಯ ಮಾಡಿ ಬಳಕೆಗೆ ತರುವ ಕಾರ್ಯಕ್ಕೆ ನೆರವಾಗುತ್ತ ಆ ಕಾರ್ಯದಲ್ಲಿ ಸಮಾಯೋಜನೆಯನ್ನು ಸಾಧಿಸುವುದು; ಮತ್ತು ದೇಶೀಯ ಔಷಧಿಗಳಿಗೆ ಬೇಕಾಗುವ ವನಸ್ಪತಿ ಸಂಪನ್ಮೂಲಗಳನ್ನು ವೃದ್ಧಿಪಡಿಸುವುದು. ಇದು ಬೆಂಗಳೂರು ಮತ್ತು ಹಲದ್ವಾನಿಗಳಲ್ಲಿ (ಉ.ಪ್ರ.) ಎರಡು ವಲಯ ಕೇಂದ್ರಗಳನ್ನೂ ಜಮ್ಮು ಮತ್ತು ಕಾಶ್ಮೀರಗಳಲ್ಲಿ ನಾಲ್ಕು ವನಸ್ಪತಿ ಉದ್ಯಾನಗಳನ್ನೂ ಔಷಧಿ ತಯಾರಿಕಾ ಕೇಂದ್ರಗಳನ್ನೂ ನಡೆಸುತ್ತಿದೆ.

**26. ಕೇಂದ್ರೀಯ ವೈಜ್ಞಾನಿಕ ಉಪಕರಣ ಸಂಸ್ಥೆ (ಸೆಂಟ್ರಲ್ ಸೈಂಟಿಫಿಕ್ ಇನ್ಸ್ಟ್ರುಮೆಂಟ್ಸ್ ಆರ್ಗನೈಸೇಷನ್), ಚಂಡೀಘರ್ (1959)** : ಬೋಧನೆ, ಸಂಶೋಧನೆ ಮತ್ತು ಕಾರ್ಖಾನೆಗಳಿಗೆ ಬೇಕಾಗುವ ವೈಜ್ಞಾನಿಕ ಉಪಕರಣಗಳನ್ನು ಅಭಿವೃದ್ಧಿಪಡಿಸಿ ಉತ್ಪಾದಿಸುವ ಕಾರ್ಯನಿರ್ವಹಿಸುವುದು. ಇದು ತನ್ನ ಸೇವಾಕೇಂದ್ರಗಳನ್ನು ನವದೆಹಲಿಯಲ್ಲೂ ಚೆನ್ನೈನಲ್ಲೂ ನಡೆಸುತ್ತಿದೆ.

**27. ಭಾರತೀಯ ಪೆಟ್ರೋಲಿಯಂ ಸಂಸ್ಥೆ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ), ಡೆಹರಾಡೂನ್ (1959):** ಪೆಟ್ರೋಲ್ ಎಣ್ಣೆಯ ಶುದ್ಧೀಕರಣಕ್ಕೂ ನೈಸರ್ಗಿಕ (ಇಂಧನದ) ಅನಿಲಗಳನ್ನು ಬಳಸುವ ವಿಧಾನಗಳಿಗೂ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುವುದು; ಮತ್ತು ರಾಷ್ಟ್ರದ ತೈಲೋದ್ಯಮಕ್ಕೆ ಬೇಕಾದ ಸಿಬ್ಬಂದಿಗೆ ತರಬೇತು ನೀಡುವುದು.

**28. ರಾಷ್ಟ್ರೀಯ ಭೂಭೌತ ಸಂಶೋಧನ ಸಂಸ್ಥೆ (ನ್ಯಾಷನಲ್ ಜಿಯೊಫಿಸಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್), ಹೈದರಾಬಾದ್ (1961)** : ಭಾರತದ ಭೂಭೌತ ಮೇಲ್ಪದರದ ರಚನೆಯ ಸ್ವರೂಪವನ್ನು ತಿಳಿದುಕೊಳ್ಳಲು ಗುರುತ್ವಾಕರ್ಷಣೆಯ, ಕಾಂತೀಯತೆಯ, ವಿದ್ಯುಚ್ಛಕ್ತಿಯ ಮತ್ತು ಭೂಕಂಪನಶಕ್ತಿಯ ಸಮೀಕ್ಷೆಗಳನ್ನು ನಡೆಸುವುದು; ಮತ್ತು ಆ ಮುಖವಾದ ಪರೀಕ್ಷೆ ನಡೆಸಲು ಬೇಕಾದ ಉಪಕರಣಾದಿಗಳನ್ನು ಉತ್ತಮ ಪಡಿಸುವುದು.

**29. ರಾಷ್ಟ್ರೀಯ ಸಾಗರವಿಜ್ಞಾನ ಸಂಸ್ಥೆ (ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಷನಾಗ್ರಫಿ), ಪಣಜಿ** : ಸಾಗರದ ತಳದಲ್ಲಿಯ ಪೆಟ್ರೋಲಿಯಂ ಎಣ್ಣೆಯನ್ನು ಹುಡುಕುವುದನ್ನೊಳಗೊಂಡಂತೆ ಸಾಗರ ವಿವರಣೆಗೆ ಸಂಬಂಧಿಸಿದ ಭೌತಿಕ, ರಾಸಾಯನಿಕ, ಜೈವಿಕ ಮತ್ತು ಭೂವೈಜ್ಞಾನಿಕ ಅಂಶಗಳನ್ನು ಕುರಿತು ಸಂಶೋಧನೆ ನಡೆಸುವುದು; ಇದು ಎರ್ನಾಕುಲಂನಲ್ಲಿ ಭಾರತೀಯ ಜೀವವಿಜ್ಞಾನ ಕೇಂದ್ರವನ್ನೂ (ಇಂಡಿಯನ್ ಬಯಲಾಜಿಕಲ್ ಸೆಂಟರ್) ಅಂತಾರಾಷ್ಟ್ರೀಯ ಜೀವವಿಜ್ಞಾನ ಕಾರ್ಯಕ್ರಮವನ್ನೂ (ಇಂಟರ್ನ್ಯಾಷನಲ್ ಬಯಲಾಜಿಕಲ್ ಪ್ರೋಗ್ರಾಮ್) ಒಳಗೊಂಡ ಭಾರತೀಯ ಸಾಗರದ ಭೌತವಿಜ್ಞಾನ ವಿವರಣ ಕೇಂದ್ರವನ್ನೂ ನಡೆಸುತ್ತಿದೆ.

**30. ರಾಷ್ಟ್ರೀಯ ಜೀವವೈಜ್ಞಾನಿಕ ಪ್ರಯೋಗಾಲಯ (ನ್ಯಾಷನಲ್ ಬಯಲಾಜಿಕಲ್ ಲೆಬಾರಟರಿ), ಪಾಲಂಪುರ (ಹಿಮಾಚಲ ಪ್ರದೇಶ)** : ಜೀವವಿಜ್ಞಾನದ ಆಧುನಿಕ ಸಮಸ್ಯೆಗಳನ್ನು ಕುರಿತಂತೆ ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನು ನಡೆಸುವುದು.

**31. ರಚನಾಶಿಲ್ಪ ಸಂಶೋಧನ ಕೇಂದ್ರ (ಸ್ಟ್ರಕ್ಚರಲ್ ಎಂಜಿನಿಯರಿಂಗ್ ರಿಸರ್ಚ್ ಸೆಂಟರ್), ರೂರ್ಕಿ (1965)** : ಭವನ, ಸೇತುವೆ ಮತ್ತು ಇತರ ಕಟ್ಟಡಗಳ ರಚನಾ ಸಮಸ್ಯೆಗಳಿಗೆ ಸಂಬಂಧಿಸಿದ ವಿಶಿಷ್ಟ ನಮೂನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕುರಿತು ಸಂಶೋಧನ ನಡೆಸುವುದು. ಘಜಿಯಾಬಾದ್, ಚೆನ್ನೈಗಳಲ್ಲೂ ಇದರ ಶಾಖೆಗಳಿವೆ.

**32. ಔದ್ಯೋಗಿಕ ವಿಷವಿಜ್ಞಾನದ ಸಂಶೋಧನ ಕೇಂದ್ರ (ಇಂಡಸ್ಟ್ರಿಯಲ್ ಟಾಕ್ಸಿಕಾಲಜಿ ರಿಸರ್ಚ್ ಸೆಂಟರ್), ಲಖನೌ:** ಚರ್ಮ, ರಕ್ತ, ಜಠರ, ಕರುಳುನಾಳ, ಕೇಂದ್ರೀಯ ನರಮಂಡಲ, ಮೂಳೆ ಇತ್ಯಾದಿ ಅಂಗಗಳ ಮೇಲೆ ಔದ್ಯೋಗಿಕ ವಿಷಗಳು ಉಂಟುಮಾಡಬಹುದಾದ ಪರಿಣಾಮಗಳನ್ನು ಕುರಿತ ಸಂಶೋಧನೆ ನಡೆಸುವುದು.

**33. ವಿಶ್ವೇಶ್ವರಯ್ಯ ಔದ್ಯಮಿಕ ಮತ್ತು ಔದ್ಯೋಗಿಕ ವಿಜ್ಞಾನದ ವಸ್ತುಸಂಗ್ರಹಾಲಯ (ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಅಂಡ್ ಟೆಕ್ನಾಲಾಜಿಕಲ್ ಮ್ಯೂಸಿಯಂ), ಬೆಂಗಳೂರು** : ವೈಜ್ಞಾನಿಕ ಮತ್ತು ಔದ್ಯೋಗಿಕ ವಿಜ್ಞಾನದ ಪ್ರಗತಿಯನ್ನು ವರ್ಣಿಸುವ ಅಂಶಗಳನ್ನು ಸಂಗ್ರಹಿಸಿಡುವುದು.

**34. ವೈಜ್ಞಾನಿಕ ಮತ್ತು ತಾಂತ್ರಿಕ ಸಿಬ್ಬಂದಿ (ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಪರ್ಸನೆಲ್), ನವದೆಹಲಿ** : ಪ್ರಯೋಗಾಲಯಗಳಿಗೂ ಇತರ ಸಂಶೋಧನ ಸಂಸ್ಥೆಗಳಿಗೂ ವಿಶೇಷ ಸಿಬ್ಬಂದಿ ಅಗತ್ಯ. ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗಗಳು ಅವರನ್ನು ಒದಗಿಸುವ ಪ್ರಮುಖ ಕರ್ತವ್ಯವನ್ನು ಹೊತ್ತಿವೆ. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಸಲಹಾ ಮಂಡಲಿ ಅಂಥ ವೈಜ್ಞಾನಿಕ ಮತ್ತು ತಾಂತ್ರಿಕ ಸಿಬ್ಬಂದಿಯನ್ನು ರಾಷ್ಟ್ರದ ಉದ್ಯೋಗಗಳಿಗೂ ಇತರ ಸಂಸ್ಥೆಗಳಿಗೂ ಒದಗಿಸಲು ಸಹಾಯ ಮಾಡುತ್ತದೆ. ಅದಕ್ಕಾಗಿ ರಾಷ್ಟ್ರದ ವಿಜ್ಞಾನಿಗಳ, ತಂತ್ರಜ್ಞರ, ಎಂಜಿನಿಯರುಗಳ ಉದ್ಯೋಗ ವಿಜ್ಞಾನಿಗಳ, ವೈದ್ಯರ, ಸಾಮಾಜಿಕ ವಿಜ್ಞಾನಿಗಳ ಒಂದು ನೋಂದಣಿಯನ್ನು ಈ ಸಂಸ್ಥೆ ಇಟ್ಟಿರುತ್ತದೆ. ಈ ದಾಖಲಾತಿಯಲ್ಲಿರುವ ವಿಶೇಷ ಸಿಬ್ಬಂದಿಯನ್ನು ಆಧಾರ ಮಾಡಿಕೊಂಡು ದೇಶದ ವೈಜ್ಞಾನಿಕ ಮತ್ತು ತಾಂತ್ರಿಕ ಜನಶಕ್ತಿಯ ಸಾಮಾನ್ಯ ಮತ್ತು ವಿಶಿಷ್ಟ ಲಕ್ಷಣಗಳನ್ನೂ ಆ ಜನಶಕ್ತಿಯ ಬಳಕೆ ಅಥವಾ ಅದರ ನಷ್ಟ–ಇತ್ಯಾದಿಗಳನ್ನೂ ಕುರಿತು ಸಂಶೋಧನೆ ನಡೆಸುವುದು ಇಲ್ಲಿ ಕೆಲಸ. ಈ ಸಂಶೋಧನೆಗಳ ಫಲವನ್ನು (ತೀರ್ಮಾನ) ಟೆಕ್ನಿಕಲ್ ಮ್ಯಾನ್‌ಪವರ್ ಬುಲೆಟಿನ್ ಎಂಬ ಪತ್ರಿಕೆಯ ಮೂಲಕ ಪ್ರಕಟಿಸಿ ವೈಜ್ಞಾನಿಕ ಮತ್ತು ತಾಂತ್ರಿಕ ಸಿಬ್ಬಂದಿಯ ಬಗ್ಗೆ ಅನುಸರಿಸಬೇಕಾದ ನೀತಿ, ನೇಮಕ ಮತ್ತು ಅಂಥ ಜನಶಕ್ತಿಯನ್ನು ಒದಗಿಸಲು ಅನುಸರಿಸಬೇಕಾದ ಯೋಜನೆ–ಇವೆಲ್ಲದರ ಬಗ್ಗೆ ಸಂಬಂಧಿಸಿದವರಿಗೆ ಮಾಹಿತಿಯನ್ನೊದಗಿಸಿ ಸಹಾಯ ಮಾಡುತ್ತದೆ.

ಇದು ವಿಜ್ಞಾನಿಗಳ ಒಂದು ನಿಕಾಯವನ್ನೂ (ಸೈಂಟಿಸ್ಟ್ಸ್ ಪೂಲ್) ನಡೆಸುತ್ತದೆ; ವಿಶೇಷಜ್ಞರಿಗೆ ತಾತ್ಕಾಲಿಕವಾಗಿ ಕೆಲಸ ದೊರಕಿಸುತ್ತದೆ; ಹಾಗೂ ಅನ್ಯದೇಶಗಳಿಂದ ಶಿಕ್ಷಣ ಪಡೆದು ಹಿಂದಿರುಗಿತಕ್ಕವರಿಗೆ ಸಹಾಯ ಮಾಡುತ್ತದೆ; ಹೊಸದಾಗಿ ಶಿಕ್ಷಣ ಮುಗಿಸಿ ಅನ್ಯದೇಶಗಳಿಂದ ಹಿಂದಿರುಗುವ ಭಾರತೀಯರ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಅವರಿಗೆ ಯುಕ್ತ ರೀತಿಯ ಕೆಲಸ ದೊರಕಿಸುವ ಬಗ್ಗೆಯೂ ಸಂಶೋಧನೆ ನಡೆಸಲಾಗುತ್ತಿದೆ.

**35. ಪ್ರಕಟಣೆ ಮತ್ತು ಸಮಾಚಾರ ನಿರ್ವಾಹಕ ಕಛೇರಿ (ಡೈರೆಕ್ಟೊರೇಟ್ ಆಫ್ ಪಬ್ಲಿಕೇಷನ್ ಅಂಡ್ ಇನ್ಫರ್ಮೇಷನ್), ದೆಹಲಿ** : ಭಾರತದ ಕಚ್ಚಾವಸ್ತುಗಳನ್ನೂ ಔದ್ಯೋಗಿಕ ಉತ್ಪನ್ನಗಳನ್ನೂ ಕುರಿತು 'ಭಾರತದ ಸಂಪತ್ತು' (ವೆಲ್ತ್ ಆಫ್ ಇಂಡಿಯ) ಎಂಬ ಮಾಲೆಯಲ್ಲಿ ಪ್ರಕಟಿಸುತ್ತಿರುವ ವಿಶ್ವಕೋಶ ಇದರ ಪ್ರಧಾನ ಪ್ರಕಟಣೆ. ಜೊತೆಗೆ, ವೈಜ್ಞಾನಿಕ

ಮತ್ತು ಔದ್ಯೋಗಿಕ ಸಂಶೋಧನ ಪತ್ರಿಕೆ (ಜರ್ನಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್), ಭಾರತೀಯ ಉದ್ಯೋಗ ವಿಜ್ಞಾನ ಪತ್ರಿಕೆ, ಭಾರತೀಯ ರಸಾಯನವಿಜ್ಞಾನದ ಪತ್ರಿಕೆ, ಭಾರತೀಯ ಶುದ್ಧ ಮತ್ತು ಆನ್ವಯಿಕ ಭೌತವಿಜ್ಞಾನ ಪತ್ರಿಕೆ, ಪ್ರಾಯೋಗಿಕ ಜೀವವಿಜ್ಞಾನ, ಭಾರತೀಯ ಜೀವರಸಾಯನವಿಜ್ಞಾನ, ಸಂಶೋಧನೆ ಮತ್ತು ಉದ್ಯೋಗಗಳ ಪತ್ರಿಕೆ–ಮುಂತಾದ ಪತ್ರಿಕೆಗಳ ಮೂಲಕವೂ ಪ್ರಯೋಗಾಲಯಗಳಲ್ಲಿ ನಡೆದಿರುವ ಸಂಶೋಧನೆಯ ಫಲಗಳನ್ನು ಉದ್ಯೋಗಗಳಿಗೆ ಒದಗಿಸುತ್ತದೆ.

**36. ಪ್ರಮಾಣ (ಆಧಾರ) ಒದಗಿಸುವ ಕೇಂದ್ರ :** ಭಾರತ ರಾಷ್ಟ್ರೀಯ ವೈಜ್ಞಾನಿಕ ದಾಖಲೆಗಳ ಕೇಂದ್ರ ಯುನೆಸ್ಕೊದ ತಾಂತ್ರಿಕ ನೆರವಿನಿಂದ ಆರಂಭವಾಗಿದ್ದು ದೇಶದ ವಿವಿಧ ಸಂಸ್ಥೆಗಳಿಗೂ ವ್ಯಕ್ತಿಗಳಿಗೂ ಆಧಾರಗಳನ್ನು ದೊರಕಿಸಿಕೊಳ್ಳಲು ಅಗತ್ಯ ಸೌಲಭ್ಯಗಳನ್ನೊದಗಿಸುತ್ತದೆ. 'ಗ್ರಂಥಾಲಯ ವಿಜ್ಞಾನದ ಬಖೈರುಗಳು ಮತ್ತು ದಾಖಲೆ ಸಂಗ್ರಹಣ' (ಅನಲ್ಸ್ ಆಫ್ ಲೈಬ್ರರಿ ಸೈನ್ಸ್ ಅಂಡ್ ಡಾಕ್ಯುಮೆಂಟೇಷನ್ ಕ್ವಾರ್ಟರ್ಲಿ–1954) ಎಂಬ ತ್ರೈಮಾಸಿಕ ಪತ್ರಿಕೆಯನ್ನೂ ಪ್ರಕಟಿಸುತ್ತದೆ. ಇದು 'ಭಾರತೀಯ ವಿಜ್ಞಾನದ ಸಾರಾಂಶ' (ಇಂಡಿಯನ್ ಸೈನ್ಸ್ ಆಬ್‌ಸ್ಟ್ರ್ಯಾಕ್ಟ್ಸ್–1965) ಎಂಬ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತದೆ.

**37. ಸಂಪರ್ಕ ಮತ್ತು ವಿಸ್ತರಣ(ಪ್ರಸಾರ) ಸೇವೆ :** ಮೇಲೆ ಉಲ್ಲೇಖಿಸಿದ ಪ್ರತಿಯೊಂದು ರಾಷ್ಟ್ರೀಯ ಪ್ರಯೋಗಾಲಯದಲ್ಲೂ ಉದ್ಯಮಿಗಳೊಡನೆಯೂ ಕೈಗಾರಿಕಾ ಸಂಸ್ಥೆಗಳೊಡನೆಯೂ ವಾಣಿಜ್ಯ ಸಂಘಗಳೊಡನೆಯೂ ಸಂಪರ್ಕ ಕಲ್ಪಿಸುವುದಕ್ಕಾಗಿ ವ್ಯವಸ್ಥೆಗೊಂಡ ಪ್ರತ್ಯೇಕ ಘಟಕ (ಲಯಸನ್ ಮತ್ತು ಎಕ್ಸ್‌ಟೆನ್‌ಷನ್ ಸರ್ವಿಸಸ್). ಇದು ಅವರ ಸಮಸ್ಯೆಗಳನ್ನು ಸಂಗ್ರಹಿಸಿ ಅದನ್ನು ನಿವಾರಿಸಿಕೊಡಲು, ಸೂಕ್ತ ಸಂಶೋಧನೆಯ ಯೋಜನೆಯನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತದೆ. ಅಲ್ಲದೆ, ಪ್ರಯೋಗಾಲಯ ಕಂಡುಹಿಡಿದ ಅಂಶಗಳನ್ನು ಅವರಿಗೆ ದೊರಕಿಸಿ ಕೊಡಲೂ ನೆರವಾಗುತ್ತದೆ.

ಜೀವರಾಸಾಯನಿಕ ತಂತ್ರಜ್ಞಾನ ಸಂಸ್ಥೆ (ಸೆಂಟರ್ ಫಾರ್ ಬಯೊ ಕೆಮಿಕಲ್ ಟೆಕ್ನಾಲಜಿ) ನವದೆಹಲಿ, ಸೆಂಟರ್ ಫಾರ್ ಸೆಲ್ಯೂಲಾರ್ ಮತ್ತು ಮಾಲಿಕ್ಯುಲರ್ ಬಯೊಲಜಿ. ಹೈದರಾಬಾದ್, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಸಿನಲ್ ಅಮಡ್ ಆರೋಮ್ಯಾಟಿಕ್ ಪ್ಲಾಂಟ್ಸ್, ಲಕ್ನೊ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕೆಮಿಕಲ್ ಬಯೊಲಜಿ, ಕೋಲ್ಕೊತ ಇನ್ಸ್ಟಿಟ್ಯೂಟ್ ಆಫ್ ಮೈಕ್ರೊಬಿಯಲ್ ಟೆಕ್ನಾಲಜಿ, ಚಂಡೀಘರ್, ಇನ್ಸ್ಟಿಟ್ಯೂಟ್ ಆಫ್ ಹಿಮಾಲಯನ್ ಬಯೊರಿಸೋರ್ಸ್ ಟೆಕ್ನಾಲಜಿ, ಪಲಂಪೂರ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್, ನಾಗಪುರ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಟೆಕ್ನಾಲಜಿ ಅಂಡ್ ಡೆವಲಪ್‌ಮೆಂಟ್ ಸ್ಟಡೀಸ್, ನವದೆಹಲಿ ಮುಂತಾದ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. (ಎನ್.ಎಸ್.ವಿ.)

**ಕೇಂದ್ರೀಯ ಬ್ಯಾಂಕು :** ಒಂದು ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕೇಂದ್ರಸ್ಥಾನದಲ್ಲಿರುವ ಎಂದರೆ ಸರ್ಕಾರಕ್ಕೂ ಇತರ ಬ್ಯಾಂಕುಗಳಿಗೂ ಬ್ಯಾಂಕಾಗಿರುವ, ದೇಶದ ನಾಣ್ಯ ಚಲಾವಣೆ ಮತ್ತು ಉದ್ದರಿ ನೀತಿಯನ್ನು ನಿರ್ವಹಿಸುವ, ಹಣ ಮತ್ತು ಅಮೂಲ್ಯ ಲೋಹಗಳ ಆಯಾತ ನಿರ್ಯಾತಗಳನ್ನು ನಿಯಂತ್ರಿಸುವ ಕಾರ್ಯಭಾರ ಪ್ರವೃತ್ತವಾದ ಬ್ಯಾಂಕು (ಸೆಂಟ್ರಲ್ ಬ್ಯಾಂಕ್). ದೇಶದ ಆರ್ಥಿಕ ಸ್ಥಿರತೆ ಸಾಧಿಸಿ, ಯುಕ್ತವಾದ ರೀತಿಯಲ್ಲಿ ಅದರ ಆರ್ಥಿಕ ಬೆಳವಣಿಗೆ ಆಗುವಂತೆ ನೋಡಿಕೊಳ್ಳುವುದು ಕೇಂದ್ರೀಯ ಬ್ಯಾಂಕಿನ ಕರ್ತವ್ಯ. ದೇಶದ ಸಂಪನ್ಮೂಲಗಳೂ ಧನಸಾಧನಗಳೂ ರಾಷ್ಟ್ರೋದ್ದೇಶಕ್ಕೆ ಒದಗಿಬರುವಂತೆ ಇದು ತನ್ನ ವ್ಯಾಪ್ತಿಗೆ ಒಳಪಟ್ಟ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕಾಗುತ್ತದೆ. ಈ ಗುರಿಗಳನ್ನು ಸಾಧಿಸುವ ಸಲುವಾಗಿ ಅದರ ಬತ್ತಳಿಕೆಯಲ್ಲಿರುವ ಬಾಣಗಳು ಅನೇಕ.

**ವಿಕಾಸ :** ಆಧುನಿಕ ಕೇಂದ್ರೀಯ ಬ್ಯಾಂಕು ದೀರ್ಘಕಾಲದಲ್ಲಿ ವಿಕಾಸಗೊಂಡಿರುವ ಒಂದು ವ್ಯವಸ್ಥೆ. ಐತಿಹಾಸಿಕವಾಗಿ ಇದರ ಬೆಳವಣಿಗೆಯನ್ನು ಬ್ಯಾಂಕ್ ಆಫ್ ಇಂಗ್ಲೆಂಡಿನ ಸ್ಥಾಪನೆಯ ಕಾಲದಿಂದ(1694) ಗುರುತಿಸಬಹುದು. ಅಂದಿನಿಂದ ಇಂದಿನವರೆಗೆ ಪ್ರಪಂಚದ ಹಲವಾರು ದೇಶಗಳಲ್ಲಿ ಕೇಂದ್ರೀಯ ಬ್ಯಾಂಕುಗಳ ಅಧಿಕಾರ, ಆಡಳಿತ, ಕಾರ್ಯಭಾರ ಮತ್ತು ಕಾರ್ಯವಿಧಾನಗಳು ವೈವಿಧ್ಯಮಯವಾಗಿ ಬೆಳೆದುಬಂದಿವೆ. ಎಲ್ಲ ಕಡೆಗಳಲ್ಲೂ ಅವುಗಳ ಹೊಣೆಗಾರಿಕೆಯಂತೂ ಬಹುವಾಗಿ ವಿಸ್ತಾರಗೊಂಡಿದೆ.

ಇಂಗ್ಲೆಂಡಿನ ಅರಸು ಮೂರನೆಯ ವಿಲಿಯಂ ಪ್ರ.ಶ.1694 ರಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ ಆರಂಭಿಸಿದನು. ಪ್ಯಾಟರ್‌ಸನ್ ಎಂಬುವನು 12,00,000 ಪೌಂಡುಗಳನ್ನು ಸರ್ಕಾರಕ್ಕೆ ಸಾಲ ನೀಡಿ, ಕೆಲವು ಸೌಲಭ್ಯ ಹೊಂದುವ ಕರಾರಿನೊಡನೆ ಈ ಬ್ಯಾಂಕು ಸ್ಥಾಪನೆಗೆ ನೆರವಾದನು. ಟನ್ನೇಜ್ ಕಾಯಿದೆಯ ಮೂಲಕ ಈ ಬ್ಯಾಂಕು ಸ್ಥಾಪಿತವಾಯಿತು. ಪ್ರ.ಶ. 1708ರಲ್ಲಿ ಮತ್ತೊಂದು ಕಾಯಿದೆಯನ್ನು ತಂದು ಬ್ರಿಟಿಷ್ ಸರ್ಕಾರ ಕಾಗದ ಹಣವನ್ನು ಕೇವಲ ಬ್ಯಾಂಕ್ ಆಫ್ ಇಂಗ್ಲೆಂಡ್ ಮಾತ್ರ ಮುದ್ರಿಸುವ ಏಕಸ್ವಾಮ್ಯಾಧಿಕಾರವನ್ನು ನೀಡಿತು.

ಭಾರತದಲ್ಲಿ ಕೇಂದ್ರಬ್ಯಾಂಕನ್ನು ಭಾರತೀಯ ರಿಸರ್ವ್ ಬ್ಯಾಂಕ್ ಎಂದು ಕರೆಯುತ್ತೇವೆ. 1929 ರ ಆರ್ಥಿಕ ಕುಸಿತ ಹಾಗೂ 1931 ರ ಅಸಹಕಾರ ಆಂದೋಲನದ ಕಾರಣವಾಗಿ ಬ್ಯಾಂಕಿಂಗ್ ವ್ಯವಸ್ಥೆಯ ಬೆಳವಣಿಗೆ ಕುಂಠಿತವಾದರೂ ರಿಸರ್ವ್ ಬ್ಯಾಂಕ್‌ನ ಸ್ಥಾಪನೆಯ ತನಕ ಹೀಗೆಯೇ ಮುಂದುವರಿಯಿತು. ಸೆಪ್ಟೆಂಬರ್ 1933 ರಲ್ಲಿ ಸರ್ ಜಾರ್ಜ್ ಶೂಸ್ಟರ್ ಹೊಸ ಮಸೂದೆಯನ್ನು ಮಂಡಿಸಿದರು. ಅದು ಅಂಗೀಕೃತವಾಗಿ 6–3–1934 ರಲ್ಲಿ ಸರ್ಕಾರದಲ್ಲಿ ಮಸೂದೆಯಾಗಿ ಬಂದಿತು. ದಿನಾಂಕ 1–4–1935 ರಂದು ಪ್ರಸ್ತುತ ಭಾರತೀಯ ರಿಸರ್ವ್ ಬ್ಯಾಂಕ್ ಕಾರ್ಯಾರಂಭ ಮಾಡತೊಡಗಿತು. 1947 ರಲ್ಲಿ ಮೊಟ್ಟಮೊದಲಿಗೆ ವಿನಿಯಂತ್ರಣ(ನಿರ್ಬಂಧ ತೆಗೆಯುವ) ಕ್ರಮ ಕೈಗೊಂಡಿತು. ಜನವರಿ, 1952 ರಿಂದ ಹುಂಡಿ ಮಾರುಕಟ್ಟೆಯ ಯೋಜನೆಯನ್ನು ಪ್ರಾರಂಭಿಸಿದ್ದು ಭಾರತೀಯ ಹಣಕಾಸಿನ ಕ್ಷೇತ್ರದಲ್ಲೊಂದು ಐತಿಹಾಸಿಕ ದಾಖಲೆಯಾಯಿತು.

ಕೇಂದ್ರೀಯ ಬ್ಯಾಂಕುಗಳ ಕಲಾಪಗಳು ಕ್ರಮೇಣ ರೂಪುಗೊಳ್ಳಲು ಕಾರಣವಾದ ಪ್ರವೃತ್ತಿಗಳು ಎರಡು ಬಗೆ. ಒಂದು ದೇಶದಲ್ಲಿದ್ದ ಬ್ಯಾಂಕುಗಳು ತಮ್ಮ ಹಿತಗಳನ್ನು ರಕ್ಷಿಸಿಕೊಳ್ಳಲು ನಡೆಸಿದ ಸಂಘಟನೆಯ ಪ್ರಯತ್ನದ ಫಲವಾಗಿ ಬ್ಯಾಂಕುಗಳ ಬ್ಯಾಂಕಾಗಿ ಕೇಂದ್ರೀಯ ಬ್ಯಾಂಕು ರೂಪುಗೊಳ್ಳಲು ಸಾಧ್ಯವಾಯಿತು. ಒಂದು ಗೊತ್ತಾದ ವಿತ್ತೀಯ ನೀತಿಯ ಅನ್ವಯಕ್ಕಾಗಿ ಹಣ ವ್ಯವಸ್ಥೆಯನ್ನು ಸಾಧನವನ್ನಾಗಿ ಮಾಡಿಕೊಳ್ಳಲು ಸರ್ಕಾರ ನಡೆಸಿದ ಪ್ರಯತ್ನದ ಫಲವಾಗಿ ಅದು ಸರ್ಕಾರದ ಬ್ಯಾಂಕಾಗಿ ರೂಪುಗೊಂಡಿತು. ಕೇವಲ ವಿತ್ತೀಯ ನೀತಿಯನ್ನೆ ಅಲ್ಲದೆ ಒಂದು ನಿರ್ದಿಷ್ಟ ಆರ್ಥಿಕ ನೀತಿಯ ಸಾಧನೆಗಾಗಿ ಶ್ರಮಿಸುವ ಹೊಣೆಗಾರಿಕೆಯೂ ಕೇಂದ್ರೀಯವೆನಿಸಿಕೊಂಡ ಬ್ಯಾಂಕಿಗೆ ಪ್ರಾಪ್ತವಾಯಿತು. ಈ ದ್ವಿಮುಖ ಪ್ರಯತ್ನದ ಫಲವಾಗಿ ವಿಕಾಸ ಹೊಂದಿದ ಕೇಂದ್ರೀಯ ಬ್ಯಾಂಕು ಒಂದು ಬ್ಯಾಂಕಾಗಿ ಸಂಘಟಿತವಾಗಿ, ಕೊನೆಗೆ ರಾಷ್ಟ್ರದ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟಿತು–ಎಂದು ಆರ್.ಎಸ್.ಸೇಯರ್ಸ್ ಹೇಳುತ್ತಾನೆ.

20ನೆಯ ಶತಮಾನಕ್ಕೂ ಹಿಂದಿನಿಂದಲೂ ಕೇಂದ್ರೀಯ ಬ್ಯಾಂಕಿನ ಬೆಳವಣಿಗೆಯಾಗಿರುವುದಾದರೂ ಮುಂಚಿನ ಬೆಳವಣಿಗೆಯೆಲ್ಲ ಕೇವಲ ಪ್ರಾಯೋಗಿಕ. ಕೇಂದ್ರೀಯ ಬ್ಯಾಂಕಿನ ತತ್ತ್ವವೂ ವಿಧಾನವೂ ಆಗ ಸ್ಪಷ್ಟವಾಗಿಯೂ ಖಚಿತವಾಗಿಯೂ ರೂಪುಗೊಂಡಿರಲಿಲ್ಲ. ಇಂಗ್ಲೆಂಡ್, ಫ್ರಾನ್ಸ್, ಸ್ವೀಡನ್ ಮುಂತಾದ ದೇಶಗಳಲ್ಲಿ ಇಂದು ಕೇಂದ್ರೀಯವೆನಿಸಿಕೊಂಡಿರುವ ಬ್ಯಾಂಕುಗಳು ಕ್ರಮಕ್ರಮವಾಗಿ ಹೆಚ್ಚು ಹೆಚ್ಚು ಪ್ರಾಮುಖ್ಯ ಗಳಿಸುತ್ತಿದ್ದುವು. ನೋಟು ನೀಡಿಕೆಯ ಬಗ್ಗೆ ಅವಕ್ಕೆ ಬಹಳ ಮಟ್ಟಿಗೆ ಏಕಸ್ವಾಮ್ಯ ಇದ್ದುದರಿಂದಲೂ ಅವು ತಂತಮ್ಮ ಸರ್ಕಾರಗಳ ಪ್ರತಿನಿಧಿಗಳಾಗಿದ್ದುದರಿಂದಲೂ ಅವಕ್ಕೆ ಪ್ರಾಶಸ್ತ್ಯ ಲಭ್ಯವಾಗಿತ್ತು. ಹಿಂದೆ ಅವನ್ನು ನೋಟು ನೀಡಿಕೆ ಬ್ಯಾಂಕುಗಳೆಂದೋ ರಾಷ್ಟ್ರೀಯ ಬ್ಯಾಂಕುಗಳೆಂದೋ ಕರೆಯಲಾಗುತ್ತಿತ್ತು. ಕೇಂದ್ರೀಯ ಬ್ಯಾಂಕುಗಳ ಪೈಕಿ ಅತ್ಯಂತ ಹಳೆಯದು ಸ್ವೀಡನಿನ ರಿಕ್ಸ್ ಬ್ಯಾಂಕು (1656). ಆದರೆ ಕೇಂದ್ರೀಯ ಬ್ಯಾಂಕಿಂಗ್ ವ್ಯವಹಾರವನ್ನು ಮೊತ್ತಮೊದಲಿಗೆ ವ್ಯವಸ್ಥಿತವಾಗಿ ಮಾಡಲಾರಂಭಿಸಿದ್ದು ಇಂಗ್ಲೆಂಡಿನ ಬ್ಯಾಂಕು (1694). ಅದು ಸ್ವತಃ ಈ ರೀತಿ ವಿಕಾಸಗೊಂಡದ್ದಲ್ಲದೆ ಅನೇಕ ದೇಶಗಳ ಕೇಂದ್ರೀಯ ಬ್ಯಾಂಕುಗಳಿಗೆ ಸ್ಫೂರ್ತಿಯ ನೆಲೆಯಾಯಿತು, ಮಾದರಿಯಾಯಿತು. ಹಣ ಮತ್ತು ಬ್ಯಾಂಕಿಂಗುಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಸಮಸ್ಯೆ ಉದ್ಭವಿಸಿದಾಗ ಅದಕ್ಕೆ ಪರಿಹಾರೋಪಾಯಗಳನ್ನು ರೂಪಿಸುವಲ್ಲಿ ಇಂಗ್ಲೆಂಡಿನ ಬ್ಯಾಂಕು (**ನೋಡಿ**) ಅನುಸರಿಸಿದ ಮಾರ್ಗ ವಿಶಿಷ್ಟವಾದ್ದು. ಅಲ್ಲದೆ ಯೂರೋಪಿನ ಇತರ ಕೆಲವು ದೇಶಗಳಲ್ಲೂ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲೂ 19ನೆಯ ಶತಮಾನದಲ್ಲಿ ಈ ಕ್ಷೇತ್ರದಲ್ಲಿ ಕೆಲವು ವಿಶಿಷ್ಟ ಪ್ರಯೋಗಗಳು ನಡೆದುವು. ಆ ಶತಮಾನದ ಕೊನೆಯ ವೇಳೆಗೆ ಯುರೋಪಿನ ಅನೇಕ ರಾಷ್ಟ್ರಗಳಲ್ಲಿ ಕೇಂದ್ರೀಯ ಬ್ಯಾಂಕುಗಳು ಸ್ಥಾಪಿತವಾಗಿದ್ದುವು. ನೋಟು ಚಲಾವಣೆ, ಸರ್ಕಾರದ ಹಣಕಾಸಿನ ವ್ಯವಹಾರಗಳ ನಿರ್ವಹಣೆ–ಇವು ಆ ಬ್ಯಾಂಕುಗಳ ಮುಖ್ಯ ಕಾರ್ಯಭಾರಗಳಾಗಿದ್ದುವು. ಆದರೂ ಕೇಂದ್ರೀಯ ಬ್ಯಾಂಕಿಂಗ್ ಪರಿಕಲ್ಪನೆ ಬಹುತೇಕ 20ನೆಯ ಶತಮಾನದಲ್ಲೇ ಸಂಪೂರ್ಣವಾಗಿ ವಿಕಾಸ ಹೊಂದಿತೆಂದು ಹೇಳಬೇಕು. 1920ರ ಅನಂತರದ ಕೇವಲ ಮೂವತ್ತೈದು ವರ್ಷಗಳಲ್ಲಿ 47 ಕೇಂದ್ರೀಯ ಬ್ಯಾಂಕುಗಳು ಸ್ಥಾಪಿತವಾದುವು. ಇಂದು ಕೇಂದ್ರೀಯ ಬ್ಯಾಂಕು ಇಲ್ಲದಂಥ ದೇಶಗಳು ಇಲ್ಲವೇ ಇಲ್ಲವೆಂದು ಹೇಳಬೇಕು.

ಒಂದನೆಯ ಮಹಾಯುದ್ಧ ಪ್ರಾರಂಭವಾಗುವವರೆಗೂ ಅಂತಾರಾಷ್ಟ್ರೀಯ ಆರ್ಥಿಕ ಬೆಳವಣಿಗೆಗೆ ಅನುಕೂಲವಾದ ವಾತಾವರಣವಿತ್ತು. ಬೆಳೆಯುತ್ತಿದ್ದ ಕೈಗಾರಿಕೆಗಳು, ಮಾರುಕಟ್ಟೆ, ಅಂತಾರಾಷ್ಟ್ರೀಯ ವ್ಯಾಪಾರ, ಅನಿರ್ಬಂಧ ಆರ್ಥಿಕ ನೀತಿ, ಅಂತಾರಾಷ್ಟ್ರೀಯ ಸುವರ್ಣಪ್ರಮಿತಿ–ಇವೇ ಮೊದಲಾದ ಅನುಕೂಲ ಪರಿಸ್ಥಿತಿಗಳಿಂದಾಗಿ ಒಂದು ದೇಶದ ಹಣದ ರೀತಿನೀತಿಗಳನ್ನು ನಡೆಸಿಕೊಂಡು ಬರುವುದು ಸುಲಭವಾಗಿತ್ತು. ಅನಿರ್ಬಂಧವಾಗಿ ಬಂಗಾರ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸಾಗುತ್ತಿದ್ದುದರಿಂದ ಅಂತಾರಾಷ್ಟ್ರೀಯ ಸರಕುವಿನಿಮಯ, ನಾಣ್ಯವಿನಿಮಯ ಮತ್ತು ವ್ಯಾಪಾರ ಶಿಲ್ಕು ತೀರುವೆಗಳು ಯಾರೊಬ್ಬರ ಕೈವಾಡವಿಲ್ಲದೆ ಹೊಂದಿಕೊಂಡು ಹೋಗಲು ಅವಕಾಶವಿತ್ತು. ಯುದ್ಧಾನಂತರ ಈ ಅನುಕೂಲಕರ ವಾತಾವರಣ ಬದಲಾಯಿಸಿತು. ಎಲ್ಲ ದೇಶಗಳೂ ಆರ್ಥಿಕ ಮತ್ತು ಹಣನೀತಿಗಳನ್ನು ತಂತಮ್ಮ ಹಿತದೃಷ್ಟಿಗಳಿಂದ ಬದಲಾಯಿಸತೊಡಗಿದುವು. ಆದ್ದರಿಂದ

1920ರಲ್ಲಿ ಬ್ರಸೆಲ್ಸ್‌ನಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಹಣ ಸಮ್ಮೇಳನ ಎಲ್ಲ ದೇಶಗಳೂ ಕೇಂದ್ರೀಯ ಬ್ಯಾಂಕುಗಳನ್ನು ಸ್ಥಾಪಿಸಿದರೆ ಅಂತಾರಾಷ್ಟ್ರೀಯ ಹಣ ವ್ಯವಸ್ಥೆ ಪರಿಣಾಮಕಾರಿಯಾಗುವುದೆಂಬುದಾಗಿ ವರದಿ ಮಾಡಿತು. ಇದರ ಪರಿಣಾಮವಾಗಿ ಮುಂದಿನ ಎರಡು ದಶಕಗಳಲ್ಲಿ ಅನೇಕ ದೇಶಗಳಲ್ಲಿ ಕೇಂದ್ರೀಯ ಬ್ಯಾಂಕುಗಳು ಸ್ಥಾಪಿತವಾದುವು. ಅಲ್ಲದೆ, ಕೇಂದ್ರೀಯ ಬ್ಯಾಂಕುಗಳ ಸಹಕಾರದಿಂದ ಅಂತಾರಾಷ್ಟ್ರೀಯ ಸಹಕಾರಕ್ಕೆ ಅನುಕೂಲವಾದ ಅಂತಾರಾಷ್ಟ್ರೀಯ ಹಣ ಸಂಸ್ಥೆಗಳನ್ನು ಮುಂದೆ ಪ್ರಾರಂಭಿಸಲು ಅನುಕೂಲವಾಯಿತು.

ಎರಡನೆಯ ಮಹಾಯುದ್ಧವಾದ ಮೇಲೆ ಕೇಂದ್ರೀಯ ಬ್ಯಾಂಕುಗಳ ಇತಿಹಾಸದಲ್ಲಿ ಮತ್ತೊಂದು ಅಧ್ಯಾಯ ಪ್ರಾರಂಭವಾಯಿತು. ಹಿಂದುಳಿದ ಅನೇಕ ದೇಶಗಳು ರಾಜಕೀಯ ಸ್ವಾತಂತ್ರ್ಯ ಗಳಿಸಿ ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡುದರಿಂದ ಕೇಂದ್ರೀಯ ಬ್ಯಾಂಕುಗಳ ಅವಶ್ಯಕತೆ ಹೆಚ್ಚಾಯಿತು. ಆರ್ಥಿಕ ಅಭಿವೃದ್ಧಿಗೆ ಮಾರ್ಗದರ್ಶಕವಾದ ಕೇಂದ್ರೀಯ ಬ್ಯಾಂಕುಗಳು ಹೊಸದಾಗಿ ರಾಜಕೀಯ ಸ್ವಾತಂತ್ರ್ಯ ಪಡೆದ ದೇಶಗಳಲ್ಲೆಲ್ಲ ಸ್ಥಾಪಿತವಾದುವು. ಇದೇ ಕಾಲದಲ್ಲಿ ಕೇಂದ್ರೀಯ ಬ್ಯಾಂಕುಗಳ ಕಾರ್ಯವ್ಯಾಪ್ತಿ ಮತ್ತು ಕೇಂದ್ರೀಯ ಬ್ಯಾಂಕುಗಳ ವಿಚಾರದಲ್ಲಿ ಸರ್ಕಾರದ ಧೋರಣೆ-ಇವುಗಳಲ್ಲೂ ಮುಖ್ಯ ಬದಲಾವಣೆಗಳಾದುವು. ಹೊಸದಾಗಿ ಸ್ಥಾಪಿತವಾದ ಬ್ಯಾಂಕುಗಳು ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲದೆ ಆರ್ಥಿಕ ಅಭಿವೃದ್ಧಿಗೂ ಆದ್ಯತೆ ಕೊಡಲಾರಂಭಿಸಿದುವು. ಕೇಂದ್ರೀಯ ಬ್ಯಾಂಕುಗಳು ಖಾಸಗಿ ಬ್ಯಾಂಕುಗಳಾಗಿ ಸರ್ಕಾರದ ಪ್ರಭಾವದಿಂದ ದೂರವಿರಬೇಕೆಂಬ ಅಭಿಪ್ರಾಯವೂ ಬದಲಾಯಿಸಿತು. ಕೇಂದ್ರೀಯ ಬ್ಯಾಂಕುಗಳು ರಾಷ್ಟ್ರದ ಆರ್ಥಿಕ ಮತ್ತು ಹಣದ ಕಾರ್ಯನಿರ್ವಹಣೆಯಲ್ಲಿ ಮುಖ್ಯಪಾತ್ರ ಹೊಂದಿದ್ದ ಸಂಸ್ಥೆಗಳಾದುದರಿಂದ ಅವುಗಳ ಮೇಲೆ ಸರ್ಕಾರದ ಹತೋಟಿ ಹೆಚ್ಚಲಾರಂಭಿಸಿತು. ಅವುಗಳ ಕಾರ್ಯಕ್ರಮಗಳು ಸರ್ಕಾರದ ಆರ್ಥಿಕ ಧೋರಣೆಗೆ ಹೊಂದಿಕೊಂಡು ಹೋಗಲು ಅನುಕೂಲವಾಗುವುದೆಂದು ಭಾವಿಸಿ ಅನೇಕ ದೇಶಗಳಲ್ಲಿ ಕೇಂದ್ರೀಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಇದರ ಪರಿಣಾಮವಾಗಿ ಇವು ಇಂದು ಸರ್ಕಾರದ ಮುಖ್ಯ ಅಂಗಗಳಾಗಿ ವರ್ತಿಸುತ್ತಿವೆ. ಕೆಲವು ದೇಶಗಳಲ್ಲಿ ಕಾನೂನಿನ ಪ್ರಕಾರ ಇವು ಸ್ವತಂತ್ರವಾಗಿ ಕಾರ್ಯ ನಡೆಸುವ ಅಧಿಕಾರ ಪಡೆದಿದ್ದರೂ, ಕಾರ್ಯತಃ ಸರ್ಕಾರದ ಧೋರಣೆಯನ್ನು ಅನುಸರಿಸಿಯೇ ನಡೆಯಬೇಕಾಗಿದೆ.

**ಸ್ಥಾನ :** ಕೇಂದ್ರೀಯ ಬ್ಯಾಂಕು ಒಂದು ವಿಶಿಷ್ಟ ಸಂಸ್ಥೆ. ಒಂದೊಂದು ದೇಶಕ್ಕೂ ತನ್ನದೇ ಆದ ಕೇಂದ್ರೀಯ ಬ್ಯಾಂಕಿಂಗ್ ವ್ಯವಸ್ಥೆ ಇರುತ್ತದೆ. ಅದು ಇಂಗ್ಲೆಂಡಿನ ಬ್ಯಾಂಕಿನ ಹಾಗೆ ಒಂದೇ ಸಂಸ್ಥೆ ಆಗಿರಬಹುದು; ಇಲ್ಲವೇ ಅಮೆರಿಕದ ಫೆಡರಲ್ ರಿಸರ್ವ್ ವ್ಯವಸ್ಥೆಯ ಹಾಗೆ ಹಲವು ಸಂಸ್ಥೆಗಳ ಹೆಣಿಕೆಯಾಗಿರಬಹುದು. ಕೇಂದ್ರೀಯ ಬ್ಯಾಂಕು ಅಪಾರವಾದ ಲಾಭ ಸಂಪಾದಿಸಬಹುದಾದರೂ ಲಾಭ ಗಳಿಸುವುದು ಅದರ ಉದ್ದೇಶವಲ್ಲ. ಆದರೆ ದೇಶದ ಬ್ಯಾಂಕಿಂಗ್ ವ್ಯವಸ್ಥೆಯನ್ನು ನಿಯಂತ್ರಿಸುವುದಲ್ಲದೆ ಸರ್ಕಾರದ ಆರ್ಥಿಕ ನೀತಿಗೆ ಬೆಂಬಲ ನೀಡುವುದು ಅದರ ಉದ್ದೇಶವಾಗಿರುತ್ತದೆ. ವಾಣಿಜ್ಯ ಬ್ಯಾಂಕುಗಳ ನಿಯಂತ್ರಣಕ್ಕಾಗಿ ಅದಕ್ಕೆ ವಿಶೇಷವಾದ ಅಧಿಕಾರ ಕೊಡಲಾಗಿದೆ. ಅದು ಸಾಮಾನ್ಯವಾಗಿ ಸರ್ಕಾರದ ಯಂತ್ರದ ಅಂಗವಾಗಿದ್ದರೂ ವಿಶೇಷ ಸ್ಥಾನ ಗಳಿಸಿರುತ್ತದೆ. ಅದೊಂದು ಸ್ವತಂತ್ರ ಅಂಗ ಸಂಸ್ಥೆ. ಅದರ ಕಾರ್ಯಚಟುವಟಿಕೆಗಳಲ್ಲಿ ಸರ್ಕಾರ ನೇರವಾಗಿ ಪ್ರವೇಶಿಸುವುದಿಲ್ಲ. ಆದರೆ ಅದರ ನೀತಿಗಳನ್ನು ರೂಪಿಸುವ ಅಧಿಕಾರ ಸರ್ಕಾರಕ್ಕುಂಟು. ಕೇಂದ್ರೀಯ ಬ್ಯಾಂಕುಗಳು ಖಾಸಗಿ ಸಂಸ್ಥೆಗಳಾಗಿದ್ದಾಗಲೂ ಸರ್ಕಾರಗಳು ಅವುಗಳ ಮೇಲೆ ವಿಶೇಷವಾದ ಅಧಿಕಾರ ಚಲಾಯಿಸುತ್ತಿದ್ದುವು. ನೋಟು ಚಲಾವಣೆಯ ವಿಶಿಷ್ಟವಾದ ಅಧಿಕಾರ ಕೇಂದ್ರೀಯ ಬ್ಯಾಂಕಿಗೆ ಸರ್ಕಾರ ಕೊಟ್ಟಿರುವುದರಿಂದ ತುರ್ತು ಸಂದರ್ಭಗಳಲ್ಲಿ ತನ್ನ ಖರ್ಚುಗಳನ್ನು ನಿರ್ವಹಿಸಲು ಅದು ಕೇಂದ್ರೀಯ ಬ್ಯಾಂಕನ್ನು ಒಂದು ಸಾಧನವಾಗಿ ಮಾಡಿಕೊಂಡು ನೋಟುಗಳ ಅತಿಪ್ರಸರಣಕ್ಕೆ ಕಾರಣವಾಗಬಹುದು. ಆದ್ದರಿಂದ ಸರ್ಕಾರಕ್ಕೂ ಕೇಂದ್ರೀಯ ಬ್ಯಾಂಕಿಗೂ ಇರಬೇಕಾದ ಸಂಬಂಧ ಅತ್ಯಂತ ಸೂಕ್ಷ್ಮವಾದ್ದು.

**ಕಾರ್ಯಭಾರಗಳು :** ಆಧುನಿಕ ಕೇಂದ್ರೀಯ ಬ್ಯಾಂಕಿನ ಕಾರ್ಯಭಾರಗಳು ಸ್ಥೂಲವಾಗಿ ಏಳು ಬಗೆ : 1 ನೋಟು ನೀಡಿಕೆ; 2 ಸರ್ಕಾರದ ಹಣ ವಹಿವಾಟುಗಳ ನಿರ್ವಹಣೆ, ಅದರ ಪ್ರತಿನಿಧಿಯಾಗಿ ಸಲಹೆಗಾರನಾಗಿ ಕಾರ್ಯಾಚರಣೆ ; 3 ವಾಣಿಜ್ಯ ಬ್ಯಾಂಕುಗಳ ನಗದು ಸಂಚಿತಿಗಳ ನಿಯಂತ್ರಣ ; 4 ದೇಶದ ವಿದೇಶೀ ವಿನಿಮಯ ಶಿಲ್ಕುಗಳ ನಿಯಂತ್ರಣ; 5 ಬ್ಯಾಂಕುಗಳಿಗೆ ಅಂತಿಮ ಸಾಲ ಸಹಾಯ ನೀಡಿಕೆ ; 6 ಬ್ಯಾಂಕುಗಳಲ್ಲಿ ಪರಸ್ಪರ ಋಣಗಳ ಇತ್ಯರ್ಥ ; 7 ಉದ್ದರಿ ನಿಯಂತ್ರಣ ಹಾಗೂ ದೇಶದ ಆರ್ಥಿಕ / ಹಣಕಾಸಿನ ವ್ಯವಸ್ಥೆಯ ನಿಯಂತ್ರಣ.

**1 ನೋಟು ನೀಡಿಕೆ:** ನಾಣ್ಯ ಚಲಾವಣೆ ಬಹು ಹಿಂದಿನಿಂದಲೂ ಸರ್ಕಾರದ ಪರಮಾಧಿಕಾರ. ನಾಣ್ಯ ಟಂಕಣದ ಕಾರ್ಯ ಇಂದಿಗೂ ಸರ್ಕಾರದ್ದೇ ಆಗಿರುವುದಾದರೂ ನೋಟು ಮುದ್ರಣ ಮತ್ತು ಚಲಾವಣೆಯ ಅಧಿಕಾರವನ್ನು ಅದು ಕೇಂದ್ರೀಯ ಬ್ಯಾಂಕಿಗೆ ನೀಡಿದೆ. ಆರಂಭಕಾಲದ ಕೇಂದ್ರೀಯ ಬ್ಯಾಂಕುಗಳು ನೋಟುನೀಡಿಕೆಯ ಬ್ಯಾಂಕುಗಳಾಗಿಯೇ ಉದಯವಾದುವು. ಹಿಂದೆ ವಾಣಿಜ್ಯ ಬ್ಯಾಂಕುಗಳಿಗೂ ನೋಟು ನೀಡಿಕೆಯ ಅಧಿಕಾರ ಇತ್ತು. ಅಧಿಕಾರವನ್ನು ಸಂಪೂರ್ಣವಾಗಿ ಕೇಂದ್ರೀಯ ಬ್ಯಾಂಕಿಗೆ ಬಿಟ್ಟುಕೊಡುವುದು ಯುಕ್ತವೆಂಬ ಭಾವನೆ ಕ್ರಮೇಣ ಬಲಿಯಿತು. ಏಕರೀತಿಯ ನೋಟು ನೀಡಿಕೆಯಿಂದ ವಾಣಿಜ್ಯ ವ್ಯವಹಾರಗಳು ಸುಸೂತ್ರವಾಗಿ ನಡೆಯಲು ಸಹಾಯವಾಗುತ್ತದೆ. ದೇಶದ ಹಣದ ಸರಬರಾಜಿನ ಮೇಲೆ ಕೇಂದ್ರೀಯ ಬ್ಯಾಂಕು ಹೆಚ್ಚಿನ ನಿಯಂತ್ರಣ ಸಾಧಿಸುವುದೂ ವಾಣಿಜ್ಯ ಬ್ಯಾಂಕುಗಳ ಉದ್ದರಿ ವ್ಯವಹಾರವನ್ನು ಕ್ರಮಬದ್ಧಗೊಳಿಸುವುದೂ ಇದರಿಂದ ಸಾಧ್ಯ. ನೋಟುಗಳ ಅತಿಯಾದ ನೀಡಿಕೆಯಾಗದಂತೆ ಎಚ್ಚರಿಕೆ ವಹಿಸಬಹುದು. ನೋಟು ನೀಡಿಕೆ ಅತ್ಯಂತ ಲಾಭದಾಯಕ ವ್ಯವಹಾರವಾದ್ದರಿಂದ ಈ ಅಧಿಕಾರ ಒಂದೇ ಬ್ಯಾಂಕಿನ ಕೈಯಲ್ಲಿದ್ದರೆ ಇದರ ಲಾಭದಲ್ಲಿ ಪಾಲ್ಗೊಳ್ಳಲು ಸರ್ಕಾರಕ್ಕೆ ಸುಲಭವಾಗುತ್ತದೆ. ಕೇಂದ್ರೀಯ ಬ್ಯಾಂಕಿನ ನೋಟು ನೀಡಿಕೆಯ ಕಾರ್ಯವನ್ನು ನಿಯಂತ್ರಿಸುವ ಉದ್ದೇಶದಿಂದ ಪ್ರತಿಯೊಂದು ದೇಶದಲ್ಲೂ ವಿಶಿಷ್ಟವಾದ ಕಾನೂನು ಜಾರಿಯಲ್ಲಿರುತ್ತದೆ. ಅಮೂಲ್ಯ ಲೋಹಗಳು, ವಿದೇಶೀ ವಿನಿಮಯ, ಇತರ ಪ್ರತಿಭೂತಿಗಳು ಮುಂತಾದವನ್ನು ನೋಟು ನೀಡಿಕೆಗೆ ಬೆಂಗಡೆಯಲ್ಲಿ ಸಂಚಿತಿಯಾಗಿ ಇಡಬೇಕೆಂಬ ನಿಯಮಗಳಿರುವುದುಂಟು.

**2 ಸರ್ಕಾರದ ಬ್ಯಾಂಕು :** ಸರ್ಕಾರದ ಬ್ಯಾಂಕಾಗಿ, ಪ್ರತಿನಿಧಿಯಾಗಿ, ಸಲಹೆಗಾರನಾಗಿ ಕೇಂದ್ರೀಯ ಬ್ಯಾಂಕು ನಿರ್ವಹಿಸಬೇಕಾದ ಹೊಣೆಗಾರಿಕೆಯೂ ಬಹಳ ಭಾರವಾದ್ದೇ. ಕೇಂದ್ರೀಯ ಬ್ಯಾಂಕಿಗೆ ಸರ್ಕಾರವೇ ಮುಖ್ಯ ಗ್ರಾಹಕ. ಅದು ಸರ್ಕಾರಕ್ಕೆ ವಾಣಿಜ್ಯ ಬ್ಯಾಂಕಿನ ಸೇವೆಗಳನ್ನೆಲ್ಲ ಸಲ್ಲಿಸುತ್ತದೆ. ಸರ್ಕಾರದ ಪರವಾಗಿ ಹಣ ಪಾವತಿ ಮಾಡುವುದೂ ಸ್ವೀಕರಿಸುವುದೂ ಅದರ ಕೆಲಸ. ಸರ್ಕಾರಕ್ಕೆ ಅಲ್ಪಾವಧಿಯ ಸಾಲ ಒದಗಿಸುವುದು, ಸರ್ಕಾರದ ಸಾಲಗಳನ್ನು ಸಾರ್ವಜನಿಕರಿಗೆ ನೀಡುವುದು, ಅವುಗಳ ಮೇಲೆ ಬಡ್ಡಿ ಪಾವತಿ, ಸಾಲವಿಮೋಚನೆ ಮುಂತಾದ ಸೇವೆಗಳನ್ನೆಲ್ಲ ಕೇಂದ್ರೀಯ ಬ್ಯಾಂಕು ಸಲ್ಲಿಸುವುದಲ್ಲದೆ, ಹಣ ಮತ್ತು ಆರ್ಥಿಕ ವಿಚಾರಗಳಲ್ಲಿ ಸರ್ಕಾರಕ್ಕೆ ಸಲಹೆ ನೀಡುತ್ತದೆ; ಮಾರ್ಗದರ್ಶಿಯಾಗಿಯೂ ವರ್ತಿಸುತ್ತದೆ.

**3 ಬ್ಯಾಂಕುಗಳ ಬ್ಯಾಂಕು:** ಒಂದು ದೇಶದ ಎಲ್ಲ ವಾಣಿಜ್ಯ ಬ್ಯಾಂಕುಗಳೂ ತಮ್ಮ ನಗದು ಶಿಲ್ಕುಗಳಲ್ಲಿ ಒಂದು ಭಾಗವನ್ನು ಅಲ್ಲಿಯ ಕೇಂದ್ರೀಯ ಬ್ಯಾಂಕಿನಲ್ಲಿ ಠೇವಣಿಯಾಗಿ ಇಡುತ್ತವೆ. ಕೆಲವು ದೇಶಗಳಲ್ಲಿ ಇದು ಒಂದು ಸಂಪ್ರದಾಯವಾಗಿ ಬೆಳೆದು ಬಂದಿದೆ; ಉಳಿದ ದೇಶಗಳಲ್ಲಿ ಕಾನೂನು ರೀತ್ಯ ಕಡ್ಡಾಯ. ವಾಣಿಜ್ಯ ಬ್ಯಾಂಕುಗಳ ಠೇವಣಿ ಲೆಕ್ಕಗಳು ಕೇಂದ್ರೀಯ ಬ್ಯಾಂಕಿನಲ್ಲಿರುವುದರಿಂದ ಅದು ಬ್ಯಾಂಕುಗಳ ಬ್ಯಾಂಕು. ವ್ಯವಹಾರ ಕಡಿಮೆಯಿದ್ದಾಗ ವಾಣಿಜ್ಯ ಬ್ಯಾಂಕುಗಳು ತಮ್ಮ ಹೆಚ್ಚುವರಿ ನಗದನ್ನು ಕೇಂದ್ರೀಯ ಬ್ಯಾಂಕಿನಲ್ಲಿಟ್ಟು, ಅಧಿಕ ಚಟುವಟಿಕೆಯ ಶ್ರಾಯದಲ್ಲಿ ಅದನ್ನು ಸೆಳೆಯುತ್ತವೆ. ಬ್ಯಾಂಕುಗಳ ನಗದು ಸಂಚಿತಿಗಳ ಕೇಂದ್ರೀಕರಣದಿಂದ ಅನೇಕ ಪ್ರಯೋಜನಗಳುಂಟು. ವಾಣಿಜ್ಯ ಬ್ಯಾಂಕುಗಳು ಅನಾವಶ್ಯಕವಾಗಿ ಹೆಚ್ಚು ನಗದನ್ನು ತಮ್ಮ ಬಳಿ ಇಟ್ಟುಕೊಳ್ಳುವ ಅಗತ್ಯ ತಪ್ಪುತ್ತದೆ. ನಗದು ಸಂಚಿತಿಯ ಕೇಂದ್ರೀಕರಣದಿಂದ ಇಡೀ ದೇಶದ ಉದ್ದರಿ ವ್ಯವಸ್ಥೆಯಲ್ಲಿ ಹೆಚ್ಚಿನ ಮಿತಿತತೆ ಸಾಧ್ಯ. ಹಣದ ಒತ್ತಡದ ಸಮಯದಲ್ಲಿ ಅಥವಾ ಜರೂರು ಸಂದರ್ಭಗಳಲ್ಲಿ ತತ್‌ಕ್ಷಣವೇ, ಅತ್ಯಂತ ಪ್ರಭಾವಯುತವಾಗಿ, ಇದು ಒದಗಿ ಬರುತ್ತದೆ. ಇದರಿಂದ ವಾಣಿಜ್ಯ ಬ್ಯಾಂಕುಗಳಿಗೆ ಹೆಚ್ಚಿನ ಸ್ಥಿರತೆ ಲಭ್ಯವಾಗುತ್ತದೆ. ಕಷ್ಟದಲ್ಲಿರುವ ವಾಣಿಜ್ಯ ಬ್ಯಾಂಕುಗಳಿಗೆ ಕೇಂದ್ರೀಯ ಬ್ಯಾಂಕು ನೆರವು ಒದಗಿಸುವುದು ಹೆಚ್ಚು ಸುಲಭ. ಎಲ್ಲ ವಾಣಿಜ್ಯ ಬ್ಯಾಂಕುಗಳೂ ಕೇಂದ್ರೀಯ ಬ್ಯಾಂಕಿನ ಠೇವಣಿದಾರ ಸಂಸ್ಥೆಗಳಾದ್ದರಿಂದ ಅವನ್ನು ಕೇಂದ್ರೀಯ ಬ್ಯಾಂಕು ನಿಯಂತ್ರಣಕ್ಕೆ ಒಳಪಡಿಸಬಹುದು.

**4 ವಿದೇಶಿ ವಿನಿಮಯ ನಿರ್ದೇಶನ ಹಾಗೂ ನಿಯಂತ್ರಣ :** ವಿವಿಧ ದೇಶಗಳ ನಾಣ್ಯ ವ್ಯವಸ್ಥೆಗಳು ಸುವರ್ಣಪ್ರಮಿತಿಯ ತಳಹದಿಯ ಮೇಲೆ ರಚಿತವಾಗಿದ್ದಾಗ ಅದು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದು ಕೇಂದ್ರೀಯ ಬ್ಯಾಂಕುಗಳ ಹೊಣೆಯಾಗಿತ್ತು. ಒಂದು ದೇಶದ ವ್ಯಾಪಾರಶಿಲ್ಕು ಅದಕ್ಕೆ ಪ್ರತಿಕೂಲವಾಗಿದ್ದು ಅಲ್ಲಿಂದ ಚಿನ್ನ ಹರಿದುಹೋಗುವ ಪ್ರವೃತ್ತಿ ತೋರಿದಾಗ, ಅಥವಾ ಅದಕ್ಕೆ ವಿಲೋಮ ಸನ್ನಿವೇಶದಲ್ಲಿ ದೇಶದೊಳಕ್ಕೆ ಚಿನ್ನ ಅತಿಯಾಗಿ ಹರಿದು ಬರುವ ಪ್ರವೃತ್ತಿ ಇದ್ದಾಗ ಉದ್ಭವಿಸುತ್ತಿದ್ದ ಅಸ್ಥಿರ ಪರಿಸ್ಥಿತಿಯನ್ನು ತಪ್ಪಿಸುವ ಉದ್ದೇಶದಿಂದ ಬ್ಯಾಂಕು ದರವೇ ಮುಂತಾದ ಉಪಾಯಗಳಿಂದ ಆ ಪ್ರವೃತ್ತಿಯನ್ನು ನಿವಾರಿಸುವುದು ಕೇಂದ್ರೀಯ ಬ್ಯಾಂಕಿನ ಕರ್ತವ್ಯವಾಗಿತ್ತು. ಸುವರ್ಣ ಪ್ರಮಿತಿ ಸುಸೂತ್ರವಾಗಿ ಕೆಲಸ ಮಾಡುವಂತೆ ಏರ್ಪಡಿಸಲು ಅದು ಚಿನ್ನದ ಸಂಚಿತಿಯ ಸುಫರ್ದು ಹೊಂದಿರಬೇಕಾದ್ದು ಅವಶ್ಯವಾಗಿತ್ತು. ಒಂದನೆಯ ಮಹಾಯುದ್ಧಾನಂತರದ ಕಾಲದಲ್ಲಿ ಬಹುತೇಕ ರಾಷ್ಟ್ರಗಳು ಸುವರ್ಣ ಪ್ರಮಿತಿಯಿಂದ ದೂರ ಸರಿದುವು. ಕೇಂದ್ರೀಯ ಬ್ಯಾಂಕುಗಳು ನೀಡುವ ನೋಟುಗಳು ಚಿನ್ನಕ್ಕೆ ಪರಿವರ್ತನೆಯಾಗುವುದಿಲ್ಲವಾದರೂ ಅವಕ್ಕೆ ಬೆಂಗಾವಲಾಗಿಯೂ ಅಂತಾರಾಷ್ಟ್ರೀಯ ವ್ಯವಹಾರಗಳಿಗಾಗಿಯೂ ವಿದೇಶಿ ವಿನಿಮಯಗಳ

ಸಂಚಿತಿ ಇರುವುದು ಅವಶ್ಯ. ಒಂದು ದೇಶದ ನಾಣ್ಯದ ವಿನಿಮಯ ದರದಲ್ಲಿ ಅಸ್ಥಿರತೆ ಏರ್ಪಡದಂತೆ ಸಂರಕ್ಷಿಸುವುದಕ್ಕೆ ಇದು ಸಾಧಕ. ಆದ್ದರಿಂದ ವಿದೇಶಿ ವಿನಿಮಯದ ಸುಪರ್ದು ಕೇಂದ್ರೀಯ ಬ್ಯಾಂಕುಗಳ ಒಂದು ಕಾರ್ಯಗಾರ.

**5 ಅಂತಿಮ ಸಾಲ ನೆರವು :** ಎಲ್ಲಾ ವಾಣಿಜ್ಯ ಬ್ಯಾಂಕುಗಳು ಕೇಂದ್ರೀಯ ಬ್ಯಾಂಕಿನ ಗ್ರಾಹಕ ಸಂಸ್ಥೆಗಳಾಗಿರುವುದರಿಂದ, ಅವು ಕೇಂದ್ರೀಯ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವುದರಿಂದ ಉತ್ಕಟ ಸಮಯಗಳಲ್ಲಿ ಅವುಗಳ ನೆರವಿಗೆ ಬರುವುದು ಕೇಂದ್ರೀಯ ಬ್ಯಾಂಕಿನ ಹೊಣೆಯಾಗಿರುತ್ತದೆ. ಯಾವುದೇ ವಾಣಿಜ್ಯ ಬ್ಯಾಂಕಿನ ದ್ರವತೆಗೆ ಅಪಾಯ ತಟ್ಟಿದಾಗ, ನಗದಿಗಾಗಿ ಠೇವಣಿದಾರರು ಸಲ್ಲಿಸಿದ ಬೇಡಿಕೆಯನ್ನು ಅದು ತನ್ನೆಲ್ಲ ತತ್‌ಕ್ಷಣದ ಸಾಧನೆಗಳಿಂದಲೂ ಪೂರೈಸುವುದು ಅಸಾಧ್ಯವಾದಾಗ, ಅದು ನಗದಿಗಾಗಿ ಕೇಂದ್ರೀಯ ಬ್ಯಾಂಕಿನ ನೆರವು ಬೇಡುತ್ತದೆ. ತನ್ನಲ್ಲಿರುವ ಪ್ರತಿಭೂತಿಗಳನ್ನು ಕೇಂದ್ರೀಯ ಬ್ಯಾಂಕಿಗೆ ಕೊಂಡೊಯ್ದು ಅವುಗಳ ಮೇಲೆ ಮುಂಗಡ ನೀಡಬೇಕೆಂದು ಕೋರುತ್ತದೆ. ಎಂದರೆ ಅವನ್ನು ಮರು ವಟಾಯಿಸಲು ಬಯಸುತ್ತದೆ. ಇಂಥ ಸಮಯದಲ್ಲಿ ಕೇಂದ್ರೀಯ ಬ್ಯಾಂಕು ಅದಕ್ಕೆ ನೆರವು ನೀಡುವುದು ಅವಶ್ಯವಾದೀತು. ಇದು ಒಂದು ಬಗೆಯ ಆಪದ್ಧರ್ಮ. ಆದರೆ ಅದೇ ಸಮಯದಲ್ಲಿ ಕೇಂದ್ರೀಯ ಬ್ಯಾಂಕು ತನ್ನದೇ ಆದ ನಿಯಮಗಳನ್ನು ಹೇರಿ ವಾಣಿಜ್ಯ ಬ್ಯಾಂಕಿನ ಚಟುವಟಿಕೆಗಳನ್ನು ನಿಯಂತ್ರಿಸಬಹುದು-ಅವುಗಳ ಗಾತ್ರ ಗುಣಗಳ ಮೇಲೆ ಹತೋಟಿ ಏರ್ಪಡಿಸಬಹುದು. ಇದನ್ನು ಸಾಧಿಸಲು ವಾಣಿಜ್ಯ ಬ್ಯಾಂಕುಗಳ ಉದ್ದರಿಯ ಪಡಿತರ, ಅವು ಕೇಂದ್ರೀಯ ಬ್ಯಾಂಕಿನಲ್ಲಿ ಮರು ವಟಾಯಿಸಬಹುದಾದ ಪ್ರತಿಭೂತಿಗಳ ನಿಗದಿ, ಬಡ್ಡಿದರ ಮುಂತಾದ ನಾನಾ ವಿಧಾನಗಳಿವೆ. ಆದರೆ ಹೀಗೆ ಮಾಡಿದಾಗ ಕೇಂದ್ರೀಯ ಬ್ಯಾಂಕಿನ ಪರಂಪರಾಗತವಾದ ಕಾರ್ಯಭಾರವಾದ ಅಂತಿಮ ನೆರವು ನೀಡಿಕೆಯ ಉದ್ದೇಶಕ್ಕೆ ಚ್ಯುತಿ ಬರುವುದಿಲ್ಲವೇ? – ಎಂಬುದು ಹಿಂದಿನಿಂದ ನಡೆದು ಬಂದಿರುವ ಒಂದು ವಾದ. ಕಾಲಾನುಕ್ರಮದಲ್ಲಿ ಕೇಂದ್ರೀಯ ಬ್ಯಾಂಕು ಇವೆರಡರ ಸಾಮರಸ್ಯವನ್ನು ಒಂದು ಕಲೆಯಾಗಿ ಶಾಸ್ತ್ರವಾಗಿ ಬಹಳ ಮಟ್ಟಿಗೆ ಸಾಧಿಸಿದೆ. ಈಚೆಗೆ ಮರು ವಟಾವಣೆಯ ಮೂಲಕ ಕೇಂದ್ರೀಯ ಬ್ಯಾಂಕಿನಿಂದ ಹಣ ಪಡೆಯುವ ಪದ್ಧತಿಯ ಪ್ರಾಮುಖ್ಯವೇ ಬಹಳವಾಗಿ ತಗ್ಗಿದೆ. ಇತರ ವಿಧಾನಗಳು ಪ್ರಮುಖವಾಗಿವೆ.

**6 ಋಣಗಳ ಇತ್ಯರ್ಥ:** ಎಲ್ಲ ವಾಣಿಜ್ಯ ಬ್ಯಾಂಕುಗಳು ಕೇಂದ್ರೀಯ ಬ್ಯಾಂಕಿನಲ್ಲಿ ಲೆಕ್ಕ ತೆರೆದು ನಗದು ಠೇವಣಿ ಇಟ್ಟಿರುವುದರಿಂದ, ಅವೆಲ್ಲವೂ ಕೇಂದ್ರೀಯ ಬ್ಯಾಂಕಿನ ಗ್ರಾಹಕ ಬ್ಯಾಂಕುಗಳಾಗಿರುವುದರಿಂದ ಕೇಂದ್ರೀಯ ಬ್ಯಾಂಕಿಗೆ ಇನ್ನೊಂದು ಕಾರ್ಯಭಾರ ಪ್ರಾಪ್ತವಾಗಿದೆ. ಈ ಬ್ಯಾಂಕುಗಳ ಗ್ರಾಹಕರು ಇವುಗಳ ಮೇಲೆ ದಿನದಿನವೂ ಬರೆಯುವ ಚೆಕ್ಕುಗಳಿಂದಾಗಿ ಇವು ಪರಸ್ಪರವಾಗಿ ಹಣ ಕೊಡಬೇಕಾದ, ಪಡೆಯಬೇಕಾದ ಪರಿಸ್ಥಿತಿ ಉದ್ಭವಿಸುತ್ತದೆ. ಈ ವ್ಯವಹಾರಗಳ ತೀರುವಳಿಯ ವ್ಯವಸ್ಥೆಯ ನಿರ್ವಹಣೆಯು ಕೇಂದ್ರೀಯ ಬ್ಯಾಂಕಿನ ಹೊಣೆ. ಅದೇ ನೇರವಾಗಿ ಈ ಕೆಲಸ ನಿರ್ವಹಿಸಬಹುದು, ತನ್ನ ಪ್ರತಿನಿಧಿಯನ್ನು ನೇಮಿಸಬಹುದು ಅಥವಾ ಅದಕ್ಕಾಗಿ ತೀರುವಳಿ ಸಂಸ್ಥೆಯೊಂದನ್ನು ರಚಿಸಬಹುದು. ಒಂದು ಬ್ಯಾಂಕು ಇನ್ನೊಂದು ಬ್ಯಾಂಕಿನ ಚೆಕ್ಕುಗಳ ಮೇಲೆ ವಸೂಲು ಮಾಡಬೇಕಾದ ಚೆಕ್ಕುಗಳ ಮೊಬಲಗು ಮತ್ತು ಎರಡನೆಯ ಬ್ಯಾಂಕು ಮೊದಲನೆಯ ಬ್ಯಾಂಕಿನ ಚೆಕ್ಕುಗಳ ಮೇಲೆ ಪಡೆಯಬೇಕಾದ ಮೊಬಲಗು ಇವುಗಳಲ್ಲಿ ಒಂದರಿಂದ ಇನ್ನೊಂದನ್ನು ಕಳೆದರೆ, ಅಂತಿಮವಾಗಿ ಯಾವ ಬ್ಯಾಂಕು ಹಣ ಕೊಡಬೇಕಾಗುತ್ತದೋ ಅದು ಕೇಂದ್ರೀಯ ಬ್ಯಾಂಕಿನ ಮೇಲೆ ಆ ಮೊಬಲಗಿಗೆ ಇನ್ನೊಂದು ಬ್ಯಾಂಕಿಗೆ ಚೆಕ್ಕು ನೀಡುತ್ತದೆ. ಹೀಗೆ ಬ್ಯಾಂಕುಗಳು ಪರಸ್ಪರವಾಗಿ ಪ್ರತಿದಿನದ ಲೆಕ್ಕ ಚುಕ್ತಾ ಮಾಡುವುದಕ್ಕೂ ಅದಕ್ಕನುಗುಣವಾಗಿ ಒಂದು ಬ್ಯಾಂಕಿನ ಲೆಕ್ಕದಿಂದ ಇನ್ನೊಂದು ಬ್ಯಾಂಕಿನ ಲೆಕ್ಕಕ್ಕೆ ಹಣವನ್ನು ವರ್ಗ ಮಾಡುವುದಕ್ಕೂ ಕೇಂದ್ರೀಯ ಬ್ಯಾಂಕು ಸಹಾಯಕ.

**7 ಉದ್ದರಿ ನಿಯಂತ್ರಣ :** ಕೇಂದ್ರೀಯ ಬ್ಯಾಂಕಿನ ಕಾರ್ಯಭಾರಗಳ ಪೈಕಿ ಉದ್ದರಿ ನಿಯಂತ್ರಣ ಬಹುಶಃ ಅತ್ಯಂತ ಮುಖ್ಯವಾದದ್ದು ಎಂಬುದು ತಜ್ಞರ ಬಹುಮತ. ಆದರೆ ಅದು ಸರ್ಕಾರದ ಬ್ಯಾಂಕಾಗಿರುವುದರಿಂದ ನೋಟು ನೀಡಿಕೆಯ ಏಕಸ್ವಾಮ್ಯ ಹೊಂದಿರುವುದರಿಂದ, ಬ್ಯಾಂಕುಗಳ ಬ್ಯಾಂಕಾಗಿರುವುದರಿಂದ ಬ್ಯಾಂಕುಗಳ ಪರಸ್ಪರ ಲೆಕ್ಕ ತೀರುವೆಯ ಕಾರ್ಯ ಮಾಡುವುದರಿಂದ, ಅದಕ್ಕೆ ಬ್ಯಾಂಕುಗಳ ಉದ್ದರಿ ನಿಯಂತ್ರಣದ ಶಕ್ತಿ ಲಭ್ಯವಾಗಿದೆ ಎಂಬುದು ನಿಜ. ಅಂತೂ ಉದ್ದರಿ ನಿಯಂತ್ರಣದ ಕಾರ್ಯಭಾರಕ್ಕೆ ಈಚಿನ ವರ್ಷಗಳಲ್ಲಿ ಅತಿ ಹೆಚ್ಚಿನ ಪ್ರಾಮುಖ್ಯ ಲಭ್ಯವಾಗಿದೆ. ಉದ್ದರಿ ನಿಯಂತ್ರಣ ಸ್ಥೂಲವಾಗಿ ಎರಡು ವಿಧ: ಉದ್ದರಿಯ ಪರಿಮಾಣವನ್ನೆ ಹೆಚ್ಚು ಕಡಿಮೆ ಮಾಡುವುದು ಒಂದು ಬಗೆಯಾದರೆ, ಅದರ ಗುಣದಲ್ಲಿ ವ್ಯತ್ಯಾಸ ಮಾಡುವುದು ಇನ್ನೊಂದು ಬಗೆ. ಹಣದ ಮಾರುಕಟ್ಟೆಯ ಎಲ್ಲ ಕ್ಷೇತ್ರಗಳಿಗೂ ಅವಲಂಬಿಸುವಂತೆ ವ್ಯಾಪಕವಾಗಿ ಆಗಲಿ, ನಿಶ್ಚಿತ ವ್ಯವಹಾರಗಳಿಗೆ ಮಾತ್ರ ಅನ್ವಯವಾಗುವ ಹಾಗೆ ಆಗಲಿ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಯೋಗ ಬಹಳಮಟ್ಟಿಗೆ ನಡೆದಿದೆ. ಈ ಉದ್ದೇಶ ಸಾಧನೆಗಾಗಿ ಕೇಂದ್ರೀಯ ಬ್ಯಾಂಕು ಪ್ರಯೋಗಿಸುವ ಅಸ್ತ್ರಗಳು ಹಲವಾರು.

ಕೇಂದ್ರೀಯ ಬ್ಯಾಂಕಿನ ಅತ್ಯಂತ ಹಳೆಯ ಅಸ್ತ್ರವೆಂದರೆ ಬ್ಯಾಂಕ್ ದರದ ಏರಿಳಿತಗಳ ಪ್ರಯೋಗ. ಹಣದ ಮಾರುಕಟ್ಟೆ ಸದಸ್ಯರು ತನಗೆ ಒಪ್ಪಿಸುವ ಹುಂಡಿ ಮತ್ತು ಇತರ ಅಪೇಕ್ಷಣೀಯ ಪತ್ರಗಳ ವಟಾವಣೆ ಅಥವಾ ಮರು ವಟಾವಣೆಯ ಮೇಲೆ ಕೇಂದ್ರೀಯ ಬ್ಯಾಂಕು ವಿಧಿಸುವ ದರವೇ ಬ್ಯಾಂಕ್ ದರ. ಇದು ಕೇಂದ್ರೀಯ ಬ್ಯಾಂಕಿನ ಬಡ್ಡಿ ದರ. ಇದರ ಮೂಲಕ ಕೇಂದ್ರೀಯ ಬ್ಯಾಂಕು ಮಾರುಕಟ್ಟೆಯಲ್ಲಿಯ ಬಡ್ಡಿದರಗಳ ಮೇಲೆ ಪ್ರಭಾವ ಬೀರುತ್ತದೆ. ಇದರಿಂದ ಉದ್ದರಿಯನ್ನು ಅಗ್ಗವಾಗಿ ಆಗಲಿ ಅಧಿಕವಾಗಿ ಆಗಲಿ ಮಾಡಬಹುದು. ಇದಕ್ಕನುಗುಣವಾಗಿ ಉದ್ದರಿ ವ್ಯವಹಾರದ ಗಾತ್ರದ ವ್ಯತ್ಯಾಸವಾಗುತ್ತದೆ. ವಾಣಿಜ್ಯ ಬ್ಯಾಂಕುಗಳು ಅಥವಾ ಇತರ ಹಣ ಸಂಸ್ಥೆಗಳು ಕೇಂದ್ರೀಯ ಬ್ಯಾಂಕಿನಿಂದ ಸಾಲ ಬಯಸಿದಾಗ ಅದು ಈ ದರವನ್ನು ಚಲಾಯಿಸುತ್ತದೆ. ಇದರ ಮೂಲಕ ಉದ್ದರಿಯನ್ನು ಕುಗ್ಗಿಸುವ ಅಥವಾ ಹಿಗ್ಗಿಸುವ ಶಕ್ತಿ ಕೇಂದ್ರೀಯ ಬ್ಯಾಂಕಿಗೆ ಇರುತ್ತದೆ ಎಂಬುದು ತತ್ತ್ವಶಃ ನಿಜ. ಸುವರ್ಣ ಪ್ರಮಿತಿ ಸಾರ್ವತ್ರಿಕವಾಗಿ ಜಾರಿಯಲ್ಲಿದ್ದಾಗ ಬ್ಯಾಂಕು ದರ ಹೆಚ್ಚು ಪರಿಣಾಮಕಾರಿಯಾಗಿತ್ತು. ಈಗ ಕೇಂದ್ರೀಯ ಬ್ಯಾಂಕುಗಳು ಅಧಿಕವಾಗಿ ಇದರೊಂದಿಗೆ ಇತರ ನಿಯಂತ್ರಣಾಸ್ತ್ರಗಳನ್ನು ಪ್ರಯೋಗಿಸುತ್ತವೆ.

ಬ್ಯಾಂಕು ದರ ಪರಿಣಾಮಕಾರಿಯಾಗಬೇಕಾದರೆ ವಾಣಿಜ್ಯ ಬ್ಯಾಂಕುಗಳೂ ಇತರ ಹಣಸಂಸ್ಥೆಗಳೂ ಕೇಂದ್ರೀಯ ಬ್ಯಾಂಕನ್ನೇ ಅವಲಂಬಿಸಿರಬೇಕು. ಕೇಂದ್ರೀಯ ಬ್ಯಾಂಕಿನಲ್ಲಿ ಒತ್ತೆ ಇಡಬಹುದಾದ ಪ್ರತಿಭೂತಿಗಳು ಅವುಗಳ ಬಳಿ ಇದ್ದಿರಬೇಕು. ಕೇಂದ್ರೀಯ ಬ್ಯಾಂಕಿನ ಪ್ರಭಾವ ಹೆಚ್ಚಿನದಿರಬೇಕು. ಹಣದ ಮತ್ತು ಬಂಡವಾಳದ ಮಾರುಕಟ್ಟೆಗಳು ಸುಸಂಘಟಿತವಾಗಿದ್ದು, ಬಡ್ಡಿಯ ದರದ ಏರಿಳಿತಗಳಿಗೆ ಅವು ಒಡನೆಯೇ ಮಿಡಿಯುವಷ್ಟು ಸೂಕ್ಷ್ಮವಾಗಿರಬೇಕು. ಸಾಲ, ಹೂಡಿಕೆಗಳಿಗೆ ಅನುಗುಣವಾಗಿ ಬೆಲೆ, ಕೂಲಿ, ಉದ್ಯೋಗ, ಉತ್ಪಾದನೆಗಳೆಲ್ಲ ವ್ಯತ್ಯಾಸಗೊಳ್ಳುವ ಪರಿಸ್ಥಿತಿ ಇರುವುದೂ ಅವಶ್ಯ. ಆದರೆ ಇವೆಲ್ಲವೂ ಇರುವುದು ಅಪರೂಪ. ಅಭಿವೃದ್ಧಿಶೀಲ ದೇಶದ ವಿಚಾರವಿರಲಿ, ಅಭಿವೃದ್ಧಿ ಹೊಂದಿದ ದೇಶದ ವಿಚಾರಕ್ಕೂ ಈ ಮಾತು ನಿಜ.

ವಾಣಿಜ್ಯ ಬ್ಯಾಂಕುಗಳ ಉದ್ದರಿ ವಿಸ್ತರಣೆಗೆ ಅವುಗಳ ನಗದು ಶಿಲ್ಕುಗಳೇ ಆಧಾರ. ಅವುಗಳ ನಗದು ಶಿಲ್ಕುಗಳಿಗೆ ಅವುಗಳ ಉದ್ದರಿ ಒಂದು ನಿಗದಿಯಾದ ಅನುಪಾತದಲ್ಲಿರುತ್ತದೆ. ಇದನ್ನು ಮೀರಿ ಉದ್ದರಿ ಹಿಗ್ಗಿಸುವುದು ಸಾಧ್ಯವಾಗುವುದಿಲ್ಲ. ವಿಲೋಮವಾಗಿ, ಉದ್ದರಿಯ ಗಾತ್ರ ಕುಗ್ಗಿ, ನಗದು ಶಿಲ್ಕಿಗೆ ಸಂಬಂಧಿಸಿದಂತೆ ಅದರ ಅನುಪಾತವೂ ಗೊತ್ತಾದ ಮಟ್ಟಕ್ಕಿಂತ ಕಡಿಮೆಯಾದರೆ ಆಗ ಬ್ಯಾಂಕಿನ ನಗದು ನಿಷ್ಪತ್ತಿ (ರೇಷಿಯೋ) ಅಗತ್ಯಕ್ಕಿಂತ ಅಧಿಕವಾಗಿ, ಬ್ಯಾಂಕಿನ ಲಾಭ ಕಡಿಮೆಯಾಗುತ್ತದೆ. ಆದ್ದರಿಂದ ಒಂದು ಬ್ಯಾಂಕಿನ ಉದ್ದರಿಯ ಗಾತ್ರವನ್ನು ನಿಷ್ಕರ್ಷಿಸುವ ಮುಖ್ಯ ಅಂಶವೆಂದರೆ ಅದರ ನಗದು ಸಂಚಿತಿ. ಇದನ್ನು ನಿರ್ದಿಷ್ಟ ದಿಕ್ಕಿನಲ್ಲಿ ವ್ಯತ್ಯಾಸಗೊಳಿಸಿ ಆ ಮೂಲಕ ಬ್ಯಾಂಕು ಉದ್ದರಿಯೂ ತಗ್ಗುವಂತೆ ಅಥವಾ ಏರುವಂತೆ ಮಾಡಬಹುದು. ಇದನ್ನು ಸಾಧಿಸಲು ಕೇಂದ್ರೀಯ ಬ್ಯಾಂಕು ಬಹಿರಂಗ ಮಾರುಕಟ್ಟೆಯಲ್ಲಿ ವಹಿವಾಟು ನಡೆಸಬಹುದು. ಕೇಂದ್ರೀಯ ಬ್ಯಾಂಕು ಮಾರುಕಟ್ಟೆಯನ್ನು ಪ್ರವೇಶಿಸಿ ಸಾರ್ವಜನಿಕರಿಂದ ಪ್ರತಿಭೂತಿಗಳನ್ನು ಕೊಳ್ಳಬಹುದು ಅಥವಾ ಅವರಿಗೆ ಪ್ರತಿಭೂತಿಗಳನ್ನು ಮಾರಬಹುದು. ಅದು ಪ್ರತಿಭೂತಿಗಳನ್ನು ಕೊಂಡಾಗ ಪ್ರತಿಯಾಗಿ ಚೆಕ್ಕುಗಳನ್ನು ಕೊಡುತ್ತದೆ. ಕೇಂದ್ರೀಯ ಬ್ಯಾಂಕಿಗೆ ಪ್ರತಿಭೂತಿಗಳನ್ನು ಮಾರಿದವರು ಅದರಿಂದ ಪಡೆದ ಚೆಕ್ಕುಗಳನ್ನು ತಂತಮ್ಮ ಬ್ಯಾಂಕು ಲೆಕ್ಕಗಳಿಗೆ ಜಮಾ ಮಾಡುತ್ತಾರೆ. ಇವೆಲ್ಲ ಕೇಂದ್ರೀಯ ಬ್ಯಾಂಕು ನೀಡಿದ ಚೆಕ್ಕುಗಳಾದ್ದರಿಂದ ಇವನ್ನು ತಮ್ಮ ಗ್ರಾಹಕರಿಂದ ಪಡೆದ ವಾಣಿಜ್ಯ ಬ್ಯಾಂಕುಗಳು ಕೇಂದ್ರೀಯ ಬ್ಯಾಂಕಿನಲ್ಲಿ ತಮ್ಮ ಲೆಕ್ಕಗಳಿಗೆ ಇವನ್ನು ಜಮಾ ಮಾಡುತ್ತವೆ. ಕೇಂದ್ರೀಯ ಬ್ಯಾಂಕಿನಲ್ಲಿ ಅವುಗಳ ಶಿಲ್ಕುಗಳು ಹೆಚ್ಚುತ್ತವೆ. ಈ ಶಿಲ್ಕುಗಳು ನಗದು ಸಂಚಿತಿಗಳೆಂದೇ ಪರಿಗಣಿತವಾಗಿರುವುದರಿಂದ ಆ ಬ್ಯಾಂಕುಗಳ ನಗದು ನಿಷ್ಪತ್ತಿ ಅಧಿಕವಾಗುತ್ತದೆ. ಆದ್ದರಿಂದ ಪ್ರತಿಯಾಗಿ ಅವು ಉದ್ದರಿ ವಿಸ್ತರಿಸಬಹುದು. ಕೇಂದ್ರೀಯ ಬ್ಯಾಂಕು ಬಹಿರಂಗಪೇಟೆಯಲ್ಲಿ ಪ್ರತಿಭೂತಿಗಳನ್ನು ಮಾರುವುದರಿಂದ ವಿಲೋಮಪ್ರಕ್ರಿಯೆ ಸಂಭವಿಸುತ್ತದೆ. ಕೇಂದ್ರೀಯ ಬ್ಯಾಂಕಿನಲ್ಲಿ ವಾಣಿಜ್ಯ ಬ್ಯಾಂಕುಗಳ ಶಿಲ್ಕುಗಳು ತಗ್ಗುವುದರಿಂದ ಅವು ತಮ್ಮ ನಗದು ನಿಷ್ಪತ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ಉದ್ದರಿಯನ್ನು ಕುಗ್ಗಿಸುವುದು ಅವಶ್ಯ.

ಬಹಿರಂಗ ಮಾರುಕಟ್ಟೆ ವಹಿವಾಟು ಯಶಸ್ವಿಯಾಗಬೇಕಾದರೂ ಅನೇಕ ಅನುಕೂಲ ಪರಿಸ್ಥಿತಿಗಳು ಇರಬೇಕಾದ್ದು ಅವಶ್ಯ. ಧಾರಾಳವಾಗಿ ಮಾರುವಷ್ಟು ಅಥವಾ ಕೊಳ್ಳುವಷ್ಟು ಪ್ರತಿಭೂತಿಗಳು ಇರುವುದು ಅವಶ್ಯ. ಎಂದರೆ ದೇಶ ಆರ್ಥಿಕವಾಗಿ ಸಾಕಷ್ಟು ಮುಂದುವರಿದಿರಬೇಕು. ಕೇಂದ್ರೀಯ ಬ್ಯಾಂಕಿನ ಪ್ರಭಾವವೂ ಅಧಿಕಾರವೂ ಅಧಿಕವಾಗಿರಬೇಕು.

ಬಹಿರಂಗ ಮಾರುಕಟ್ಟೆ ವಹಿವಾಟುಗಳನ್ನೂ ಬ್ಯಾಂಕು ದರವನ್ನೂ ಏಕಕಾಲದಲ್ಲಿ ಅಥವಾ ಸ್ವಲ್ಪ ಹಿಂದುಮುಂದಾಗಿ ಪ್ರಯೋಗಿಸುವುದು ಈಚಿನ ರೂಢಿ.

ಹಣದ ಮಾರುಕಟ್ಟೆ ಸುಸಂಘಟಿತವಾಗಿಲ್ಲದ ಮತ್ತು ಪ್ರತಿಭೂತಿಗಳು ಅಧಿಕವಾಗಿ ಇಲ್ಲದ ದೇಶಗಳಲ್ಲಿ ಕೇಂದ್ರೀಯ ಬ್ಯಾಂಕಿನ ಈ ಎರಡು ಅಸ್ತ್ರಗಳೂ ಫಲಪ್ರದವಾಗುವುದು ಅಸಾಧ್ಯ. ಇತರ ದೇಶಗಳಲ್ಲೂ ಹಲವು ಸಂದರ್ಭಗಳಲ್ಲಿ ಇವು ಪರಿಣಾಮಕಾರಿಯಾಗಲಾರವು.

ಆದರೂ ಅವು ಇಡೀ ಬ್ಯಾಂಕಿಂಗ್ ಕ್ಷೇತ್ರಕ್ಕೇ ಅನ್ವಯವಾಗುವಂಥವು. ಆದ್ದರಿಂದ ಕೇಂದ್ರೀಯ ಬ್ಯಾಂಕು ನೇರವಾಗಿ ಬ್ಯಾಂಕುಗಳ ನಗದು ಸಂಚಿತಿಗೇ ಕೈಹಾಕುವ ಕ್ರಮ ಈಚೆಗೆ ಜಾರಿಗೆ ಬಂದಿದೆ. ಪ್ರತಿಯೊಂದು ಬ್ಯಾಂಕೂ ತನ್ನ ಠೇವಣಿಯ ಗಾತ್ರದ ಮೇಲೆ ಕೇಂದ್ರೀಯ ಬ್ಯಾಂಕಿನಲ್ಲಿ ಇಡಬೇಕಾದ ನಗದು ಸಂಚಿತಿಯ ನಿಷ್ಪತ್ತಿಯನ್ನು ಹೆಚ್ಚು ಅಥವಾ ಕಡಿಮೆ ಮಾಡಬಹುದು. ಇದರಿಂದ ವಾಣಿಜ್ಯ ಬ್ಯಾಂಕುಗಳ ಉದ್ದರಿಯ ಮೇಲೆ ಅಗಾಧ ಪರಿಣಾಮವಾಗುತ್ತದೆ. ಉದಾಹರಣೆಗೆ, ಪ್ರತಿಯೊಂದು ಬ್ಯಾಂಕೂ ತಾನು ನೀಡುವ ಪ್ರತಿ ರೂ.100 ಠೇವಣಿಗೂ ರೂ.8ನ್ನು ನಗದು ಸಂಚಿತಿಯಾಗಿ ಇಡಬೇಕೆಂಬುದು ಪ್ರಕೃತ ನಿಯಮವಾಗಿದ್ದು, ಆ ಸಂಚಿತಿಯನ್ನು ರಿಸರ್ವ್ ಬ್ಯಾಂಕು (ಭಾರತೀಯ ಕೇಂದ್ರೀಯ ಬ್ಯಾಂಕು) ರೂ.10ಕ್ಕೆ ಏರಿಸಿದರೆ, ಆಗ ವಾಣಿಜ್ಯ ಬ್ಯಾಂಕು ರಿಸರ್ವ್ ಬ್ಯಾಂಕಿನಲ್ಲಿ ತನ್ನ ಸಂಚಿತಿಯನ್ನು ರೂ.2 ರಷ್ಟು ಹೆಚ್ಚಿಸಬೇಕು. ಇಲ್ಲವೇ ತನ್ನ ಠೇವಣಿಯನ್ನು ರೂ.80 ಕ್ಕೆ ಇಳಿಸಬೇಕು; ಆಗ ಅದರ ಉದ್ದರಿಯೂ ಇಳಿಯುತ್ತದೆ. ನಗದು ಸಂಚಿತಿಯ ನಿಷ್ಪತ್ತಿಯನ್ನು ಎಲ್ಲ ಬ್ಯಾಂಕುಗಳಿಗೂ ವ್ಯತ್ಯಾಸಗೊಳಿಸುವ ಬದಲು, ಯಾವ ಕ್ಷೇತ್ರದಲ್ಲಿ ಉದ್ದರಿಯ ಮೇಲೆ ಪರಿಣಾಮ ಬೀರಬೇಕೋ ಆ ಕ್ಷೇತ್ರದ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಮಾತ್ರ, ಒಂದೇ ಬ್ಯಾಂಕಿಗೆ ಕೂಡ, ಅದನ್ನು ವ್ಯತ್ಯಾಸಗೊಳಿಸಬಹುದು. ಕೇವಲ ಒಂದು ಆದೇಶದಿಂದ ಕೇಂದ್ರೀಯ ಬ್ಯಾಂಕು ಉದ್ದರಿ ಹತೋಟಿ ಸಾಧಿಸುವ ಉಪಾಯವಿದು. ಕೇಂದ್ರೀಯ ಬ್ಯಾಂಕಿಗೆ ಈ ಅಧಿಕಾರ ನೀಡುವ ಕಾನೂನುಗಳು ಅನೇಕ ದೇಶಗಳಲ್ಲಿ ಜಾರಿಗೆ ಬಂದಿವೆ. ಆದರೆ ಅಭಿವೃದ್ಧಿಶೀಲರಾಷ್ಟ್ರಗಳಲ್ಲಿ ಈ ಅಸ್ತ್ರ ಕೂಡ ಪರಿಣಾಮಕಾರಿಯಾಗದೆ ಹೋಗುವ ಸಂಭವವುಂಟು. ಇಂಥ ದೇಶಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಿಂದ ಹೊರಗೆ ನಡೆಯುವ ಹಣ ವ್ಯವಹಾರಗಳು ಅಧಿಕವಾಗಿರುವುದುಂಟು (ಉದಾ: ಭಾರತ). ಕೇಂದ್ರೀಯ ಬ್ಯಾಂಕಿನ ನಗದುಸಂಚಿತಿ ಆಜ್ಞೆ ಈ ವ್ಯವಹಾರಗಳಿಗೆ ಅನ್ವಯವಾಗುವುದಿಲ್ಲವಾದ್ದರಿಂದ ಇಡೀ ಹಣದ ಮಾರುಕಟ್ಟೆಯ ಮೇಲೆ ಬ್ಯಾಂಕಿನ ಆಜ್ಞೆ ಪರಿಣಾಮ ಸಾಧಿಸದೆ ಹೋಗುತ್ತದೆ.

ಮೇಲೆ ಹೇಳಿದ ಉದ್ದರಿ ನಿಯಂತ್ರಣಾಸ್ತ್ರಗಳು ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳ ಮೇಲೂ ಪರಿಣಾಮ ಉಂಟುಮಾಡುವಂಥವು. ಆದರೆ ಉದ್ದರಿ ಬಳಸುವವರಲ್ಲಿ ಕೆಲವರ ಮೇಲೆ ಮಾತ್ರ ಪರಿಣಾಮಕಾರಿಯಾಗುವ ವಿಶಿಷ್ಟ ನಿಯಂತ್ರಣ ವಿಧಾನಗಳನ್ನೂ ಕೇಂದ್ರೀಯ ಬ್ಯಾಂಕುಗಳು ಪ್ರಯೋಗಿಸುತ್ತಿವೆ. ಅನಗತ್ಯವಾದ ಉದ್ದೇಶಗಳಿಗಾಗಿ ಉದ್ದರಿ ಬಳಸುವವರ ಮೇಲೆ ಮಾತ್ರ ನಿಯಂತ್ರಣ ವಿಧಿಸಬಹುದು. 1929ರಲ್ಲಿ ನ್ಯೂಯಾರ್ಕಿನ ಷೇರು ಪೇಟೆ ಕುಸಿದಾಗ, ಷೇರು ಮತ್ತು ಸ್ಟಾಕುಗಳ ಮೇಲೆ ಸಾಲ ಕೊಟ್ಟಿದ್ದ ಬ್ಯಾಂಕುಗಳು ಕಷ್ಟಕ್ಕೀಡಾದುವು. ಈ ಪ್ರತಿಭೂತಿಗಳ ಮೇಲೆ ಉದ್ದರಿ ನೀಡುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಅಲ್ಲಿಯ ಕೇಂದ್ರೀಯ ಬ್ಯಾಂಕಿಂಗ್ ವ್ಯವಸ್ಥೆ ಒಂದು ಕ್ರಮವನ್ನು ಜಾರಿಗೆ ತಂದಿತು. ಇಂಥ ಪ್ರತಿಭೂತಿಗಳನ್ನು ಕೊಳ್ಳಲು ಬ್ಯಾಂಕಿನಿಂದ ಸಾಲ ಪಡೆಯಬಯಸುವವರು ಅದರ ಮೌಲ್ಯದ ಒಂದು ಗೊತ್ತಾದ ಭಾಗದ ಹಣವನ್ನು ತಾವೇ ಬೇರೆ ಮೂಲಗಳಿಂದ ತಂದುಕೊಳ್ಳಬೇಕು-ಎಂದು ವಿಧಿಸಲಾಯಿತು. ಉದಾಹರಣೆಗೆ, ಬ್ಯಾಂಕುಗಳು ಪ್ರತಿಭೂತಿಗಳ ಮೌಲ್ಯದ ಶೇಕಡ 60ಕ್ಕೆ ಮೀರದಷ್ಟು ಮಾತ್ರ ಸಾಲ ನೀಡಬಹುದೆಂದು ವಿಧಿಸಿದಾಗ ಉಳಿದ ಶೇಕಡಾ 40ರಷ್ಟು ಹಣವನ್ನು ಗ್ರಾಹಕ ಇಟ್ಟುಕೊಂಡಿರಬೇಕಾಗುತ್ತದೆ. ಇಲ್ಲದಿದ್ದರೆ ಆ ಪ್ರತಿಭೂತಿಗಳನ್ನು ಕೊಳ್ಳಲು ಅವನು ಬ್ಯಾಂಕಿನಿಂದ ಸಾಲ ಪಡೆಯುವಂತಿಲ್ಲ. ದೇಶದಲ್ಲಿ ಅನುಭೋಗ ವಸ್ತುಗಳಿಗಾಗಿ ವಿಶೇಷವಾಗಿ ಸಾಲ ಪಡೆಯುವ ಪ್ರವೃತ್ತಿ ಇದ್ದು, ಇದರಿಂದ ಉಳಿತಾಯಕ್ಕೆ ಉತ್ತೇಜನ ಕಡಿಮೆಯಾಗಿ, ಬಂಡವಾಳ ವಸ್ತುಗಳ ಉತ್ಪಾದನೆ ತಗ್ಗುತ್ತಿದ್ದು, ಹಣದ ಉಬ್ಬರದ ಪರಿಸ್ಥಿತಿ ಇದ್ದಾಗ, ಅನುಭೋಗ ವಸ್ತುಗಳನ್ನು ಕೊಳ್ಳಲು ಬ್ಯಾಂಕುಗಳು ನೀಡುವ ಸಾಲದ ಮೇಲೆ ಕೇಂದ್ರೀಯ ಬ್ಯಾಂಕು ನಾನಾ ನಿರ್ಬಂಧಗಳನ್ನು ಹಾಕಬಹುದು. ಇದೂ ವಿಶಿಷ್ಟ ಉದ್ದರಿ ನಿಯಂತ್ರಣದ ಇನ್ನೊಂದು ಉದಾಹರಣೆ. ಕೇಂದ್ರೀಯ ಬ್ಯಾಂಕು ತನಗೆ ದತ್ತವಾದ ಅಧಿಕಾರಗಳನ್ನು ಬಳಸಿಕೊಂಡು ವಾಣಿಜ್ಯ ಬ್ಯಾಂಕುಗಳಿಗೆ ನಿರ್ದೇಶನ ನೀಡುವುದೂ, ಅವಕ್ಕೆ ನೀಡುವ ಉದ್ದರಿ ನೆರವಿನ ಪಡಿತರ ಏರ್ಪಡಿಸುವುದೂ, ಬ್ಯಾಂಕುಗಳಿಗೆ ಸೂಕ್ತ ಸಲಹೆ ನೀಡುವುದೂ, ಕೇಂದ್ರೀಯ ಬ್ಯಾಂಕಿನ ಸೂಚನೆಗಳನ್ನು ಲಕ್ಷಿಸದೆ ಬ್ಯಾಂಕುಗಳ ಮೇಲೆ ನೇರ ಕ್ರಮ ಕೈಗೊಳ್ಳುವುದೂ ವಿಶಿಷ್ಟ ಉದ್ದರಿ ನಿಯಂತ್ರಣದ ಇತರ ವಿಧಾನಗಳು. ಆದರೆ ಇವುಗಳ ಪ್ರಯೋಗದಲ್ಲೂ ನಾನಾ ತೊಡಕುಗಳುಂಟು. ಇಂಥ ಕ್ರಮಗಳಿಂದ ನಿರೀಕ್ಷಿಸಿದ್ದಕ್ಕಿಂತ ಕಡಿಮೆ ಅಥವಾ ಅಧಿಕ ಪರಿಣಾಮಗಳಾಗುವ ಸಂಭವವುಂಟು. ವಾಣಿಜ್ಯ ಬ್ಯಾಂಕುಗಳ ವ್ಯವಹಾರದಲ್ಲಿ ಕೇಂದ್ರೀಯ ಬ್ಯಾಂಕು ಅತಿಯಾಗಿ ಕೈ ಹಾಕುವುದರಿಂದ ಅವುಗಳ ಸ್ವಾತಂತ್ರ್ಯ ಹರಣವಾಗಬಹುದು.

ಕೇಂದ್ರೀಯ ಬ್ಯಾಂಕಿನ ಉದ್ದರಿ ನಿಯಂತ್ರಣ ಕ್ರಮಗಳ ಉದ್ದೇಶಗಳೇನು ಎಂಬುದು ಬಹಳ ವಾದಗ್ರಸ್ತವಾದ ಪ್ರಶ್ನೆ. ಹಣದ ಸ್ಥಿರತೆ, ವಿನಿಮಯ ದರದ ಸ್ಥಿರತೆ, ಬೆಲೆಗಳ ಸ್ಥಿರತೆ, ಪೂರ್ಣ ಉದ್ಯೋಗ, ಆರ್ಥಿಕ ಬೆಳವಣಿಗೆ-ಇವು ಉದ್ದರಿ ನಿಯಂತ್ರಣದಿಂದ ಸಾಧಿಸಬಯಸಬಹುದಾದ ಉದ್ದೇಶಗಳು.

ಕೇಂದ್ರೀಯ ಬ್ಯಾಂಕಿಂಗಿನ ಪರಿಣಾಮಕತೆ : ಕೇಂದ್ರೀಯ ಬ್ಯಾಂಕು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಅದಕ್ಕೆ ಅನೇಕ ಅನುಕೂಲ ಪರಿಸ್ಥಿತಿಗಳು ಇರುವುದು ಅವಶ್ಯ. ಅತ್ಯಂತ ಸೂಕ್ಷ್ಮವೇದಿಯಾದ ಹಣಪೇಟೆ ಇರುವ ದೇಶಗಳಲ್ಲಿ ಕೇಂದ್ರೀಯ ಬ್ಯಾಂಕು ಹೆಚ್ಚು ಯಶಸ್ವಿಯಾಗಿ ಕೆಲಸ ಮಾಡಬಲ್ಲದು. ಅದರ ಮೂಲಕ ಕೇಂದ್ರೀಯ ಬ್ಯಾಂಕು ಇಡೀ ಆರ್ಥಿಕತೆಯ ಮೇಲೆ ಉದ್ದಿಷ್ಟ ಪರಿಣಾಮ ಉಂಟುಮಾಡಬಹುದು. ಹಣದ ಮಾರುಕಟ್ಟೆ ಸುಸಂಘಟಿತವಾಗಿದ್ದರೆ ಅದು ಕೇಂದ್ರೀಯ ಬ್ಯಾಂಕಿನ ಬಹಿರಂಗ ಮಾರುಕಟ್ಟೆ ವ್ಯವಹಾರಕ್ಕೂ ಅನುಕೂಲಕರ. ಹುಂಡಿಗಳ ಮಾರುಕಟ್ಟೆ ಇರುವುದೂ ಅವಶ್ಯ. ವಟಾವಣೆ ಪದ್ಧತಿ ಚೆನ್ನಾಗಿ ಬೆಳೆದಿದ್ದರೆ ಅದರ ಮೂಲಕ ಕೇಂದ್ರೀಯ ಬ್ಯಾಂಕು ದೇಶದ ಬಡ್ಡಿದರದ ಮೇಲೆ ಪ್ರಭಾವ ಬೀರಬಲ್ಲದು. ವಾಣಿಜ್ಯ ಬ್ಯಾಂಕುಗಳು ಕೂಡ ಸುವ್ಯವಸ್ಥಿತವಾಗಿ ಶಿಸ್ತಿನಿಂದ ನಡೆದುಕೊಳ್ಳುವಂತಿರುವುದು ಅವಶ್ಯ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಎಲ್ಲ ಅನುಕೂಲ ಪರಿಸ್ಥಿತಿಗಳೂ ಇರುವುದಿಲ್ಲ. ಬಹುತೇಕ ರಾಷ್ಟ್ರಗಳಲ್ಲಿ ಅಸಂಘಟಿತ ಹಾಗೂ ಸಮಾನಾಂತರ ಆರ್ಥಿಕ ವ್ಯವಸ್ಥೆ ಆರಂಭವಾಗಿ ಪ್ರತಿಕೂಲ ಪರಿಸ್ಥಿತಿಯ ನಿರ್ಮಾಣವಾಗಿದೆ. ವಾಣಿಜ್ಯ ಬ್ಯಾಂಕುಗಳು ವ್ಯಾಪಕವಾಗಿ ಬೆಳೆದಿಲ್ಲದಿರುವುದು ಒಂದು ದೊಡ್ಡ ಕೊರತೆ. ಅವುಗಳ ಮೂಲಕ ಇಡೀ ದೇಶದ ಮೇಲೆ ಪರಿಣಾಮಕಾರಿಯಾಗುವಂಥ ಕ್ರಮಗಳನ್ನು ಕೇಂದ್ರೀಯ ಬ್ಯಾಂಕು ಕೈಗೊಳ್ಳಲಾಗುತ್ತಿಲ್ಲ. ಈ ದೇಶಗಳಲ್ಲಿ ಕೇಂದ್ರೀಯ ಬ್ಯಾಂಕುಗಳು ಕೂಡ ಇತ್ತೀಚೆಗೆ ಜನ್ಮತಳೆದಿರುವುದರಿಂದ ಅವು ಇನ್ನೂ ಹೆಚ್ಚು ಪ್ರಭಾವಶಾಲಿಯಾಗಿ ಅಧಿಕಾರಯುತವಾಗಿ ವರ್ತಿಸುವುದು ಸಾಧ್ಯವಾಗಿಲ್ಲ. ಅನುಕೂಲವಾದ ಉದ್ದರಿ ಸಂಲೇಖಗಳು ಅಧಿಕ ಪರಿಮಾಣದಲ್ಲಿ ಇಲ್ಲದಿರುವುದರಿಂದ, ವಿವಿಧ ಬಗೆಯ ಉದ್ದರಿ ಸಂಲೇಖಗಳ ವಹಿವಾಟಿನಲ್ಲಿ ವಿಶೇಷ ಪ್ರಾವೀಣ್ಯ ಪಡೆದ ವ್ಯವಹಾರದಾರರೂ ಇಲ್ಲದಿರುವುದರಿಂದ, ಕೇಂದ್ರೀಯ ಬ್ಯಾಂಕಿಂಗಿನ ನೀತಿ ವ್ಯಾಪಕವಾದುದಾಗಿದೆ. ಹಣ ಮಾರುಕಟ್ಟೆ ಕೂಡ ಸುಸಂಘಟಿತವಾಗಿಲ್ಲದಿರುವುದು ಇನ್ನೊಂದು ಕೊರತೆ. ಆದರೂ ಈ ದೇಶಗಳಲ್ಲಿ ಕೇಂದ್ರೀಯ ಬ್ಯಾಂಕುಗಳು ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ವಿಶೇಷವಾದ ಪಾತ್ರ ವಹಿಸುತ್ತಿವೆ**(ನೋಡಿ- ಭಾರತೀಯ-ರಿಸರ್ವ್‌ಬ್ಯಾಂಕ್)**. (ಜ.ಟಿ.ಎಚ್.)

**ಕೇಂದ್ರೀಯ ವಿಶ್ವವಿದ್ಯಾಲಯಗಳು :** ಭಾರತ ಗಣರಾಜ್ಯದಲ್ಲಿ ಕೇಂದ್ರಸರ್ಕಾರ ನಡೆಸುತ್ತಿರುವ ವಿಶ್ವವಿದ್ಯಾಲಯಗಳು. ಇವು ರಾಜ್ಯಸರ್ಕಾರಗಳು ನಡೆಸುತ್ತಿರುವ ರಾಜ್ಯವಿಶ್ವವಿದ್ಯಾಲಯಗಳಿಗಿಂತ ಭಿನ್ನವಾದವು.

ಭಾರತದಲ್ಲಿ ಐದು ಕೇಂದ್ರೀಯ ವಿಶ್ವವಿದ್ಯಾಲಯಗಳಿವೆ: 1 ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ, 2 ದೆಹಲಿ ವಿಶ್ವವಿದ್ಯಾಲಯ, 3 ಬನಾರಸ್ ಹಿಂದೂ ವಿಶ್ವವಿದ್ಯಾಲಯ, 4 ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯ, 5 ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ.

ರಾಜ್ಯ ವಿಶ್ವವಿದ್ಯಾಲಯಗಳು ತಮ್ಮ ಚಾಲ್ತಿ ಖರ್ಚಿನ ಬಹುಭಾಗವನ್ನು ರಾಜ್ಯಸರ್ಕಾರಗಳಿಂದ ಪಡೆದುಕೊಂಡರೆ ಕೇಂದ್ರೀಯ ವಿಶ್ವವಿದ್ಯಾಲಯಗಳು ಚಾಲ್ತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳೆರಡರ ವೆಚ್ಚಕ್ಕೂ ಹಣವನ್ನು ಕೇಂದ್ರಸರ್ಕಾರದ ಬೊಕ್ಕಸದಿಂದ ಪಡೆದುಕೊಳ್ಳುತ್ತವೆ. ಕೆಲವೊಮ್ಮೆ ರಾಜ್ಯ ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಅಪಾರ ಹಣವನ್ನು ಕೇಂದ್ರ ಸರ್ಕಾರ ಕೊಡುವುದೂ ಉಂಟು. ರಾಜ್ಯ ವಿಶ್ವವಿದ್ಯಾಲಯಗಳ ಅಧಿಕಾರವ್ಯಾಪ್ತಿ ಆಯಾ ರಾಜ್ಯಕ್ಕೆ ಅಥವಾ ಅದರಲ್ಲಿ ನಿರ್ದಿಷ್ಟಗೊಳಿಸಿದ ಕ್ಷೇತ್ರಕ್ಕೆ ಮಾತ್ರ ಅನ್ವಯಿಸುವುದಾದರೆ ಕೆಲವು ಕೇಂದ್ರೀಯ ವಿಶ್ವವಿದ್ಯಾಲಯಗಳ (ಉದಾ: ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ) ಅಧಿಕಾರವ್ಯಾಪ್ತಿ ಇಡೀ ರಾಷ್ಟ್ರಕ್ಕೆ ಅನ್ವಯಿಸುತ್ತದೆ. ರಾಜ್ಯವಿಶ್ವವಿದ್ಯಾಲಯಗಳ ಮೇಲೆ ರಾಜ್ಯದ ನೇರ ನಿಯಂತ್ರಣವಿದ್ದರೆ ಕೇಂದ್ರೀಯ ವಿಶ್ವವಿದ್ಯಾಲಯಗಳು ಕೇಂದ್ರ ಸರ್ಕಾರದ ಅಥವಾ ಅದು ಕಾನೂನುಬದ್ಧವಾಗಿ ರೂಪಿಸಿರುವ ಸ್ವಯಮಾಡಳಿತ ಸಂಸ್ಥೆಯ ನಿಯಂತ್ರಣಕ್ಕೊಳಪಟ್ಟಿರುತ್ತವೆ. ರಾಜ್ಯವಿಶ್ವವಿದ್ಯಾಲಯಗಳಿಗೆ ಆಯಾ ರಾಜ್ಯದ ರಾಜ್ಯಪಾಲರು ಕುಲಪತಿಗಳಾಗಿದ್ದರೆ ಕೇಂದ್ರೀಯ ವಿಶ್ವವಿದ್ಯಾಲಯಗಳಿಗೆ ರಾಷ್ಟ್ರಾಧ್ಯಕ್ಷರು ಸಂದರ್ಶಕರು (ವಿಸಿಟರ್) ಆಗಿರುತ್ತಾರೆ. ವಿ.ಸೂ. ಬನಾರಸ್ ಹಿಂದೂ ವಿವಿ ಒಂದನೆ ಸ್ಥಾನದಲ್ಲಿ ಬರಬೇಕು (1915).

**ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ :** ಇದು 1920ರಲ್ಲಿ ಆರಂಭವಾಯಿತು. ಅಂದಿಗಾಗಲೆ ಅಸ್ತಿತ್ವದಲ್ಲಿದ್ದ ಮಹಮಡನ್ ಆಂಗ್ಲೋ ಓರಿಯಂಟಲ್ ಕಾಲೇಜ್ ಎಂಬ ಸಂಸ್ಥೆಯನ್ನು ಪರಿವರ್ತಿಸಿ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಮಹಮ್ಮದೀಯರ ಉನ್ನತ ಶಿಕ್ಷಣಕ್ಕಾಗಿ ಬೋಧಿಸುವ ಮತ್ತು ಅಂಗೀಕರಿಸುವ (ಅಫಿಲಿಯೇಟಿಂಗ್) ವಿಶ್ವವಿದ್ಯಾಲಯವಾಗಿ ಆರಂಭವಾದ ಈ ಸಂಸ್ಥೆ ಸಯ್ಯದ್ ಅಹಮ್ಮದ್ದರ ಆಸಕ್ತಿಯ ಫಲವಾಗಿ ಅಸ್ತಿತ್ವಕ್ಕೆ ಬಂತು.

**ದೆಹಲಿ ವಿಶ್ವವಿದ್ಯಾಲಯ:** ಇದು 1927ರಲ್ಲಿ ಅಂಗೀಕರಿಸುವ ವಿಶ್ವವಿದ್ಯಾಲಯವಾಗಿ ಆರಂಭವಾಯಿತು. ಆಗ ಇದರ ಅಂಗೀಕರಣ ವ್ಯಾಪ್ತಿಯಲ್ಲಿ ಸೇಂಟ್‌ಸ್ಟೀವನ್ಸ್ ಕಾಲೇಜು, ಹಿಂದೆ ಕಾಲೇಜು ಮತ್ತು ರಾಂಜಾಸ್ ಕಾಲೇಜು ಸೇರಿದ್ದವು.

ಅನಂತರ ಸಮಿತಿಯೊಂದರ ಸಲಹೆಯಂತೆ ಭಾರತ ಸರ್ಕಾರ ಇದನ್ನು ಸಂಯುಕ್ತ(ಫೆಡರಲ್) ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಿತಲ್ಲದೆ, ಕಾಲೇಜುಗಳನ್ನು ಅಂಗೀಕರಿಸುವ ಅವಕಾಶವನ್ನೂ ನೀಡಿತು.

**ಬನಾರಸ್ ಹಿಂದೂ ವಿಶ್ವವಿದ್ಯಾಲಯ:** 1915ರ ಭಾರತ ಸರ್ಕಾರದ ಶಾಸನವೊಂದರ ಪ್ರಕಾರ ಕಾಶಿಯಲ್ಲಿ ಸ್ಥಾಪನೆಯಾದ ಈ ವಿಶ್ವವಿದ್ಯಾಲಯ 1917ರಲ್ಲಿ ಕಾರ್ಯಾರಂಭ ಮಾಡಿತು. ಪಂಡಿತ ಮದನಮೋಹನ ಮಾಳವೀಯರು ಇದರ ಸಂಸ್ಥಾಪಕರು. ಅವರು ವಿಶ್ವವಿದ್ಯಾಯಲಯದ ಮೂಲನಿಧಿಯನ್ನೂ ಸಂಗ್ರಹಿಸಿಟ್ಟರು. ಮುಸ್ಲಿಮರ ಶಿಕ್ಷಣದ ಬಗ್ಗೆ ಅಲಿಘರ್ ವಿಶ್ವವಿದ್ಯಾಲಯ ಆದ್ಯ ಗಮನ ಕೊಟ್ಟಂತೆ ಹಿಂದೂಗಳ ಉನ್ನತ ಶಿಕ್ಷಣದ ಬಗ್ಗೆ ಆದ್ಯ ಗಮನವೀಯುವುದು ಈ ಸಂಸ್ಥೆಯ ಮೂಲೋದ್ದೇಶ.

**ವಿಶ್ವಭಾರತಿ ವಿಶ್ವವಿದ್ಯಾಲಯ:** 1929ರಲ್ಲಿ ಇದನ್ನು ರಾಷ್ಟ್ರದ ಖ್ಯಾತ ಕವಿ ರವೀಂದ್ರನಾಥ ಠಾಕೂರರು ಸ್ಥಾಪಿಸಿದರು. ಆಗ ಅಲ್ಲಿ ಲಲಿತಕಲೆಗಳು, ಶಿಕ್ಷಣಶಾಸ್ತ್ರ, ತತ್ತ್ವಶಾಸ್ತ್ರ, ಮಾನವಿಕ ವಿಷಯಗಳು, ವಿಜ್ಞಾನವಿಷಯಗಳು-ಇವುಗಳ ಶಿಕ್ಷಣಕ್ಕೆ ಸೌಲಭ್ಯ ಕಲ್ಪಿಸಲಾಗಿತ್ತು. ಪಾಶ್ಚಾತ್ಯ ವಿಜ್ಞಾನ ಮತ್ತು ಸಂಸ್ಕೃತಿಗಳ ಉತ್ತಮಾಂಶಗಳನ್ನು ಭಾರತೀಯ ಜ್ಞಾನ ಮತ್ತು ಸಂಸ್ಕೃತಿಗಳೊಡನೆ ಸಮನ್ವಯಗೊಳಿಸಿಕೊಂಡು ವಿಶ್ವ ಸಾಮರಸ್ಯವನ್ನು ಸ್ಥಾಪಿಸಬೇಕೆಂಬ ಹಿರಿಯ ಉದ್ದೇಶವನ್ನು ಇದರ ಸಂಸ್ಥಾಪಕರು ತಳೆದಿದ್ದರು. ಇದು ಭಾರತದ ಬೇರೆ ಬೇರೆ ಭಾಗಗಳಿಂದಲ್ಲದೆ ಅನ್ಯದೇಶಗಳಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತ ಅಂತಾರಾಷ್ಟ್ರೀಯ ಕೀರ್ತಿಯನ್ನು, ಸ್ಥಾಪಕರ ಜೀವಿತ ಕಾಲದಲ್ಲೇ ಗಳಿಸಿತ್ತು.

**ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ:** ಕೇಂದ್ರ ಸರ್ಕಾರ ಇದನ್ನು 1968ರಲ್ಲಿ ಪಂಡಿತ ಜವಹರಲಾಲ್ ನೆಹರು ಅವರ ಸ್ಮಾರಕ ಸಂಸ್ಥೆಯಾಗಿ ಆರಂಭಿಸಿತು. ರಷ್ಯದ ನೆರವಿನಿಂದ ಆಗಿಂದಾಗಲೇ ಅಲ್ಲಿ ಆರಂಭವಾಗಿದ್ದ ರಷ್ಯನ್ ಅಧ್ಯಯನ ಸಂಸ್ಥೆಯನ್ನು (ಇನ್ಸ್ಟಿಟ್ಯೂಟ್ ಆಫ್ ರಷ್ಯನ್ ಸ್ಟಡೀಸ್) ಇದರೊಡನೆ ಸೇರಿಸಲಾಗಿದೆ. ವ್ಯಾಸಂಗಕ್ಕೆ ಅಂತರ್ ಶಿಸ್ತೀಯ ವಿಧಾನಾವಲಂಬನ (ಇಂಟರ್ ಡಿಸಿಪ್ಲಿನರಿ ಅಪ್ರೋಚ್) ಅಗತ್ಯವಿರುವ ವಿಷಯಗಳ ಹಲವು ಅಂತಾರಾಷ್ಟ್ರೀಯ ಪ್ರಾಮುಖ್ಯವನ್ನುಳ್ಳ ಅಧ್ಯಯನ ಕೇಂದ್ರಗಳನ್ನೊಳಗೊಂಡ ಕಾಲೇಜುಗಳನ್ನು ಸ್ಥಾಪಿಸುವ ಯೋಜನೆಯನ್ನು ಇದು ಹೊಂದಿದೆ. ಜೀವವಿಜ್ಞಾನಗಳು, ಪರಿಸರವಿಜ್ಞಾನಗಳು, ಗಣಕ ವಿಜ್ಞಾನಗಳು, ಸಮಾಜವಿಜ್ಞಾನಗಳು, ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ರಾಯಭಾರಕೌಶಲ್ಯ, ಭಾಷೆಗಳು, ರಚನಾ(ಸೃಷ್ಟ್ಯಾ)ತ್ಮಕ ಕಲೆಗಳು-ಇವೇ ಕಾಲೇಜುಗಳಲ್ಲಿ ಅಧ್ಯಯನ ಮಾಡುವ ವಿಷಯಗಳು.

ಸ್ವಾತಂತ್ರ್ಯಾನಂತರ, ರಾಧಾಕೃಷ್ಣನ್ ಶಿಕ್ಷಣ ಆಯೋಗದ ಸಲಹೆಯಂತೆ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ ಮತ್ತು ಬನಾರಸ್ ಹಿಂದೂ ವಿಶ್ವವಿದ್ಯಾಲಯಗಳನ್ನು ಭಾರತ ಸರ್ಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಧಾರ್ಮಿಕ ಪಂಥಗಳ ಹೆಸರುಗಳನ್ನೊಳಗೊಂಡಿರುವ ಈ ಎರಡು ವಿಶ್ವವಿದ್ಯಾಲಯಗಳಿಗೂ ಜಾತಿಮತಗಳ ಭೇದವಿಲ್ಲದೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಹುದಾದ ರೀತಿಯಲ್ಲಿ ಅವುಗಳ ಅಂಗರಚನೆಯನ್ನು ತಿದ್ದುಪಡಿ ಮಾಡಿತು. ಅನಂತರ 1951-52ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಅಂಗರಚನೆಯನ್ನೂ ತಿದ್ದುಪಡಿ ಮಾಡಿ ಬೋಧಿಸುವ ಮತ್ತು ಅಂಗೀಕರಣ ನೀಡುವ ವಿಶ್ವವಿದ್ಯಾಲಯವನ್ನಾಗಿ ಅದನ್ನು ಪರಿವರ್ತಿಸಲಾಯಿತು. ಅದು ತನಕ ಆ ವಿಶ್ವವಿದ್ಯಾಲಯದ ಕುಲಪತಿಗಳಾಗಿರುತ್ತಿದ್ದ ರಾಷ್ಟ್ರಾಧ್ಯಕ್ಷರು ಮುಂದೆ ಅದರ ಸಂದರ್ಶಕ(ವಿಸಿಟರ್)ರಾದರು. ಈ ಬದಲಾವಣೆಯ ಫಲವಾಗಿ ಅದು ತನಕ ಕುಲಪತಿಗಳಿಗಿದ್ದ ಅಧಿಕಾರದ ಬಹುಭಾಗ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ (ಕೋರ್ಟ್) ವರ್ಗವಾಯಿತು. 1951ರಲ್ಲಿ ವಿಶ್ವಭಾರತಿ ವಿಶ್ವವಿದ್ಯಾಲಯವನ್ನು ಕೇಂದ್ರಸರ್ಕಾರ ತನ್ನ ಆಡಳಿತಕ್ಕೆ ಸೇರಿಸಿಕೊಂಡಿತು. 1968-69ರಲ್ಲಿ ಕೇಂದ್ರಸರ್ಕಾರದ ಐದನೆಯ ವಿಶ್ವವಿದ್ಯಾಲಯವಾಗಿ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಅದಕ್ಕೆ ರಾಷ್ಟ್ರಾಧ್ಯಕ್ಷರು ಸಂದರ್ಶಕರಾಗಿಯೂ ಪ್ರಧಾನಮಂತ್ರಿಯವರು ಕುಲಪತಿಗಳಾಗಿಯೂ ಇರುವರು.

1953ರಲ್ಲಿ ಒಂದು ಕಾರ್ಯಕಾರಿ ಆದೇಶದ (ಎಕ್ಸಿಕ್ಯುಟೀವ್ ಆರ್ಡರ್) ಮೂಲಕ ಅಸ್ತಿತ್ವಕ್ಕೆ ಬಂದ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ಮೂಲಕ ಕೇಂದ್ರ ಸರ್ಕಾರ ಈ ವಿಶ್ವವಿದ್ಯಾಲಯಗಳಿಗೆ ಹಣವನ್ನೊದಗಿಸುತ್ತದೆ. 1968-69ರಲ್ಲಿದ್ದ ನಾಲ್ಕು ಕೇಂದ್ರೀಯ-ವಿಶ್ವವಿದ್ಯಾನಿಲಯಗಳ ಮತ್ತು ಅವುಗಳ ಅಂಗೀಕೃತ ಕಾಲೇಜುಗಳ ಚಾಲ್ತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಒಟ್ಟು 8.07 ಕೋಟಿ ರೂಪಾಯಿಗಳನ್ನು ವಿಶ್ವವಿದ್ಯಾಲಯದ ಧನ ಆಯೋಗ ಕೇಂದ್ರ ಸರ್ಕಾರದ ಪರವಾಗಿ ಅನುದಾನದ ರೂಪದಲ್ಲಿ ವೆಚ್ಚ ಮಾಡಿತು.

**ಹೊಸ ಕೇಂದ್ರೀಯ ವಿಶ್ವವಿದ್ಯಾಲಯಗಳು:** ಪ್ರತಿ ರಾಜ್ಯದಲ್ಲೂ ಒಂದೊಂದು ಕೇಂದ್ರೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ಕೋರಿಕೆ ಈಚೆಗೆ ಹೆಚ್ಚುತ್ತಿದೆ. ಇದರಿಂದ ರಾಜ್ಯದ ಶಿಕ್ಷಣ ವ್ಯವಸ್ಥೆಗೆ ಒಂದು ಘನತೆ ಬರುವುದರ ಜೊತೆಗೆ ಅದಕ್ಕಾಗುವ ಪೂರ್ಣವೆಚ್ಚವನ್ನು ಕೇಂದ್ರಸರ್ಕಾರವೇ ವಹಿಸುವುದರಿಂದ ರಾಜ್ಯಸರ್ಕಾರಕ್ಕೆ ಆ ಖರ್ಚಿನ ಹೊರೆ ತಪ್ಪುತ್ತದೆ-ಎಂಬ ಭಾವನೆಯೇ ಇದಕ್ಕೆ ಕಾರಣ. ತಮ್ಮ ರಾಜ್ಯದ ಎಲ್ಲೆಯಲ್ಲಿರುವ ವಿಶ್ವವಿದ್ಯಾಲಯದ ಆಡಳಿತದಲ್ಲಿ ತಮಗಿರುವ ಶಾಸನಬದ್ಧ ಅಧಿಕಾರವನ್ನು ಬಿಟ್ಟುಕೊಡಲು ಇಷ್ಟವಿಲ್ಲದ ಕೆಲವು ರಾಜ್ಯಗಳು ಇದನ್ನು ಒಪ್ಪುತ್ತಿಲ್ಲ. ಆ ಬಗ್ಗೆ ರಾಜ್ಯದ ಬೊಕ್ಕಸಕ್ಕೆ ಅಧಿಕ ಹೊರೆಯಾದರೂ ತಮ್ಮ ವಿಶ್ವವಿದ್ಯಾಲಯವನ್ನು ಕೇಂದ್ರಕ್ಕೆ ವಹಿಸಿಕೊಡಲು ಅವು ಒಪ್ಪುತ್ತಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸಿ ಕೊಠಾರಿ ಶಿಕ್ಷಣ ಆಯೋಗ ಪ್ರತಿರಾಜ್ಯದಲ್ಲೂ ಕೇಂದ್ರೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಸಾಧುವಲ್ಲವೆಂದು ಅಭಿಪ್ರಾಯಪಟ್ಟಿದೆ.

ರಾಜ್ಯದಲ್ಲಿ ಕೇಂದ್ರ ಸರ್ಕಾರ ವಿಶ್ವವಿದ್ಯಾಲಯವೊಂದನ್ನು ನಡೆಸುವುದಾದರೆ ವಿಶ್ವವಿದ್ಯಾಲಯ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುವುದು; ಸ್ಥಳೀಯವೆನ್ನಬಹುದಾದ ಅನುಚಿತ ಕೈವಾಡವಿಲ್ಲದೆ ಅದು ತನ್ನ ಕರ್ತವ್ಯವನ್ನು ಉನ್ನತಮಟ್ಟದಲ್ಲಿ ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಾಗುವುದು ಇದೆಲ್ಲ ನಿಜ. ಆದರೆ ಈ ಎರಡು ಸೌಲಭ್ಯಗಳಿಗಾಗಿ ಪ್ರತಿರಾಜ್ಯದಲ್ಲೂ ಕೇಂದ್ರೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದರ ಬದಲು ಇತರ ಮಾರ್ಗಗಳಿಂದ ಅದೇ ಸೌಲಭ್ಯಗಳನ್ನು ದೊರಕಿಸಿಕೊಳ್ಳಬಹುದೆಂದು ಅಭಿಪ್ರಾಯಪಟ್ಟು ಕೊಠಾರಿ ಶಿಕ್ಷಣ ಆಯೋಗ ಅದಕ್ಕಾಗಿ ಆಯ್ದ ಕೆಲವು ರಾಜ್ಯಗಳಲ್ಲಿ ಒಂದೊಂದು ವಿಶ್ವವಿದ್ಯಾಲಯವನ್ನು ಪ್ರಧಾನ (ಮೇಜರ್) ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸುವ ವಿಷಯವನ್ನು ಪ್ರತಿವಾದಿಸಿದೆ. ಅಲ್ಲದೆ ರಾಜ್ಯ ಸರ್ಕಾರದ ಅನುಚಿತ ಕೈವಾಡವನ್ನು ತಪ್ಪಿಸಲು ಅವುಗಳ ಅಂಗರಚನೆಯಲ್ಲಿ ಅಗತ್ಯವೆನಿಸುವ ಬದಲಾವಣೆಗಳನ್ನು ಮಾಡಿಕೊಳ್ಳಬಹುದೆಂದೂ ಅದು ಸೂಚಿಸಿದೆ.

**ಕೇಂದ್ರೀಯ ವಿಶ್ವವಿದ್ಯಾಲಯಗಳ ಕೆಲವು ಲಕ್ಷಣಗಳೆಂದರೆ**

* ಭಾರತದ ರಾಷ್ಟ್ರಾಧ್ಯಕ್ಷರು ಎಲ್ಲ ಕೇಂದ್ರಿಯ ವಿಶ್ವವಿದ್ಯಾಲಯಗಳ ಸಂದರ್ಶಕರಾಗಿರುತ್ತಾರೆ.
* ವಿಶ್ವವಿದ್ಯಾಲಯ ವಿವಿಧ ಅಧಿನಿಯಮಗಳ ಪ್ರಕಾರ ಕಾರ್ಯನಿರ್ವಾಹಕ ಸಮಿತಿ, ಆಡಳಿತ ಮಂಡಳಿ, ನ್ಯಾಯಾಲಯ, ಆಯ್ಕೆ ಸಮಿತಿ ಮುಂತಾದ ಸಮಿತಿಗಳಿಗೆ ಕೆಲವು ಸದಸ್ಯರುಗಳನ್ನು ನೇಮಕ ಮಾಡುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗಿರುತ್ತದೆ.
* ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಸಹಾಯದೊಂದಿಗೆ ಭಾರತದ ರಾಷ್ಟ್ರಾಧ್ಯಕ್ಷರು ವಿಶ್ವವಿದ್ಯಾನಿಲಯಗಳ ಕುಲಪತಿಗಳು, ನ್ಯಾಯಾಲಯ ಮತ್ತು ಆಯ್ಕೆ ಸಮಿತಿಯ ಸದಸ್ಯರುಗಳನ್ನು ನೇಮಕ ಮಾಡುತ್ತಾರೆ.

ಈ ವಿಚಾರಗಳೇನೇ ಇರಲಿ, ಕೇಂದ್ರ ಸರ್ಕಾರದ ಪ್ರಯತ್ನದಿಂದಾಗಿ ಹಲವಾರು ಕೇಂದ್ರೀಯ ವಿಶ್ವವಿದ್ಯಾಲಯಗಳು ಭಾರತಾದ್ಯಂತ ಸ್ಥಾಪನೆಯಾಗಿವೆ. ಭಾರತದಲ್ಲಿ ಪ್ರಸ್ತುತ 42 ಕೇಂದ್ರೀಯ ವಿಶ್ವವಿದ್ಯಾಲಯಗಳಿದ್ದು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಪಂಚದಲ್ಲಿ ಭಾರತ ಅತಿದೊಡ್ಡ ಸ್ಥಾನವನ್ನು ಪಡೆದಿದೆ.

| ವಿಶ್ವವಿದ್ಯಾಲಯಗಳು | ರಾಜ್ಯ | ಸ್ಥಳ | ಸ್ಥಾಪನೆಯಾದ ವರ್ಷ | ವಿಷಯ |
|---|---|---|---|---|
| 1. ಜಾಮಿಯ ಮಿಲ್ಲಿಯ ಇಸ್ಲಾಮಿಯ ವಿ.ವಿ. | ದೆಹಲಿ | ನವದೆಹಲಿ | 1920 (1988) | ಸಾಮಾನ್ಯ |
| 2. ಡಾ. ಹರಸಿಂಗ್‌ಗೌರ್ ವಿ.ವಿ. | ಮಧ್ಯಪ್ರದೇಶ | ಸಾಗರ್ | 1946 | ಸಾಮಾನ್ಯ |
| 3. ದಿ ಇಂಗ್ಲಿಷ್ ಅಂಡ್ ಫಾರಿನ್ ಲಾಂಗ್ವೇಜಸ್ ಯೂನಿವರ್ಸಿಟಿ | ಆಂಧ್ರಪ್ರದೇಶ | ಹೈದರಾಬಾದ್ | 1958 (1973) | ಇಂಗ್ಲಿಷ್ ಮತ್ತು ವಿದೇಶೀ ಭಾಷೆಗಳು |
| 4. ನಾರ್ತ್ ಈಸ್ಟರ್ನ್ ಹಿಲ್ ಯೂನಿವರ್ಸಿಟಿ | ಮೇಘಾಲಯ | ಶಿಲ್ಲಾಂಗ್ | 1973 | ಸಾಮಾನ್ಯ |
| 5. ಹೇಮಾವತಿನಂದನ್ ಬಹುಗುಣ ಘರ್‌ವಾರ್ ವಿ.ವಿ. | ಉತ್ತರಾಖಂಡ್ | ಶ್ರೀನಗರ | 1973 | ಸಾಮಾನ್ಯ |
| 6. ಯೂನಿವರ್ಸಿಟಿ ಆಫ್ ಹೈದರಾಬಾದ್ | ಆಂಧ್ರಪ್ರದೇಶ | ಹೈದರಾಬಾದ್ | 1974 | ಸಾಮಾನ್ಯ ವಿಷಯ |
| 7. ಮಣಿಪುರ್ ವಿ.ವಿ. | ಮಣಿಪುರ | ಇಂಫಾಲ್ | 1980/2005 | ಸಾಮಾನ್ಯ |
| 8. ಗುರು ಘಾಸಿದಾಸ್ ವಿ.ವಿ. | ಛತ್ತೀಸ್‌ಗಡ | ಬಿಲಾಸ್‌ಪುರ್ | 1983 (2009) | ಸಾಮಾನ್ಯ |

| | | | | |
|---|---|---|---|---|
| 9. ರಾಜೀವ್‌ಗಾಂಧಿ ಯೂನಿವರ್ಸಿಟಿ | ಅರುಣಾಚಲ ಪ್ರದೇಶ | ಇಟಾನಗರ | 1984 | ಸಾಮಾನ್ಯ ವಿಷಯ |
| 10. ಇಂದಿರಾಗಾಂಧಿ ನ್ಯಾಷನಲ್ ಓಪನ್ ಯೂನಿವರ್ಸಿಟಿ | ದೆಹಲಿ | ನವದೆಹಲಿ | 1985 | ದೂರಶಿಕ್ಷಣ |
| 11. ಪಾಂಡಿಚೆರಿ ವಿ.ವಿ. | ಪುದುಚೇರಿ | ಪುದುಚೇರಿ | 1985 | ಸಾಮಾನ್ಯ |
| 12. ತ್ರಿಪುರ ವಿ.ವಿ. | ತ್ರಿಪುರ | ಅಗರ್ತಲ | 1987 | ಸಾಮಾನ್ಯ |
| 13. ಅಲಹಾಬಾದ್ ವಿ.ವಿ. | ಉತ್ತರಪ್ರದೇಶ್ | ಅಲಹಾಬಾದ್ | 1987 (?) | ಸಾಮಾನ್ಯ |
| 14. ಸೆಂಟ್ರಲ್ ಅಗ್ರಿಕಲ್ಚರ್ ಯೂನಿವರ್ಸಿಟಿ | ಮಣಿಪುರ | ಇಂಫಾಲ್ | 1993 | ಕೃಷಿ |
| 15. ಅಸ್ಸಾಂ ವಿ.ವಿ. | ಅಸ್ಸಾಂ | ಸಿಲ್ಚಾರ್ | 1994 | ಸಾಮಾನ್ಯ ವಿಷಯ |
| 16. ತೇಜ್‌ಪುರ್ ವಿ.ವಿ. | ಅಸ್ಸಾಂ | ತೇಜ್‌ಪುರ್ | 1994 | ಸಾಮಾನ್ಯ ವಿಷಯ |
| 17. ನಾಗಾಲ್ಯಾಂಡ್ ವಿ.ವಿ. | ನಾಗಾಲ್ಯಾಂಡ್ | ಕೊಹಿಮ | 1994 | ಸಾಮಾನ್ಯ |
| 18. ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್ ವಿ.ವಿ. | ಉತ್ತರಪ್ರದೇಶ್ | ಲಕ್ನೊ | 1996 | ಸಾಮಾನ್ಯ |
| 19. ಮಹಾತ್ಮಾಗಾಂಧಿ ಅಂತಾರಾಷ್ಟ್ರೀಯ ಹಿಂದಿ ವಿ.ವಿ. | ಮಹಾರಾಷ್ಟ್ರ | ವಾರ್ಧಾ | 1997 | ಹಿಂದಿ |
| 20. ಮೌಲಾನಾ ಆಜ಼ಾದ್ ನ್ಯಾಷನಲ್ ಉರ್ದು ಯೂನಿವರ್ಸಿಟಿ | ಆಂಧ್ರಪ್ರದೇಶ | ಹೈದರಾಬಾದ್ | 1998 | ಉರ್ದು |
| 21. ಮಿಜೊರಾಂ ವಿ.ವಿ. | ಮಿಜೊರಾಮ್ | ಐಜ಼ಾಲ್ | 2000 | ಸಾಮಾನ್ಯ |
| 22. ಇಂದಿರಾಗಾಂಧಿ ನ್ಯಾಷನಲ್ ಟ್ರೈಬಲ್ ಯೂನಿವರ್ಸಿಟಿ | ಮಧ್ಯಪ್ರದೇಶ | ಅಮರಕಾಂತಕ್ | 2007 | ಸಾಮಾನ್ಯ |
| 23. ಸಿಕ್ಕಿಂ ವಿ.ವಿ. | ಸಿಕ್ಕಿಂ | ಗಾಂಗ್‌ಟೊಕ್ | 2007 | ಸಾಮಾನ್ಯ |
| 24. ಇಂಡಿಯನ್ ಮ್ಯಾರಿಟೈಮ್ ಯೂನಿವರ್ಸಿಟಿ | ತಮಿಳುನಾಡು | ಚೆನ್ನೈ | 2008 | ಸಾಗರವಿಜ್ಞಾನ |
| 25. ಸೆಂಟ್ರಲ್ ಯೂನಿವರ್ಸಿಟಿ ಆಫ್ ಬಿಹಾರ್ | ಬಿಹಾರ್ | ಪಟ್ನಾ | 2009 | ಸ್ನಾತಕೋತ್ತರ ಶಿಕ್ಷಣ |
| 26. ಸೆಂಟ್ರಲ್ ಯೂನಿವರ್ಸಿಟಿ | ಗುಜರಾತ್ | ಗಾಂಧಿನಗರ | 2009 | ಸಾಮಾನ್ಯ |
| 27. ಯೂನಿವರ್ಸಿಟಿ ಆಫ್ ಗುಜರಾತ್ | ಗುಜರಾತ್ | ಗಾಂಧಿನಗರ | 2009 | ಸಾಮಾನ್ಯ |
| 28. ಸೆಂಟ್ರಲ್ ಯೂನಿವರ್ಸಿಟಿ ಆಫ್ ಹಿಮಾಚಲಪ್ರದೇಶ | ಹಿಮಾಚಲಪ್ರದೇಶ | ಧರಮ್‌ಸಾಲ | 2009 | ಸಾಮಾನ್ಯ |
| 29. ಸೆಂಟ್ರಲ್ ಯೂನಿವರ್ಸಿಟಿ ಆಫ್ ಕಾಶ್ಮೀರ್ | ಜಮ್ಮು ಮತ್ತು ಕಾಶ್ಮೀರ್ | ಶ್ರೀನಗರ | 2009 | ಸಾಮಾನ್ಯ |
| 30. ಸೆಂಟ್ರಲ್ ಯೂನಿವರ್ಸಿಟಿ ಆಫ್ ಜಾರ್ಖಂಡ್ | ಜಾರ್ಖಂಡ್ | ರಾಂಚಿ | 2009 | ಸಾಮಾನ್ಯ |
| 31. ಸೆಂಟ್ರಲ್ ಯೂನಿವರ್ಸಿಟಿ ಆಫ್ ಕರ್ನಾಟಕ | ಕರ್ನಾಟಕ | ಗುಲ್ಬರ್ಗ | 2009 | ಸಾಮಾನ್ಯ |
| 32. ಸೆಂಟ್ರಲ್ ಯೂನಿವರ್ಸಿಟಿ ಆಫ್ ಕೇರಳ | ಕೇರಳ | ಕಾಸರಗೋಡು | 2009 | ಸಾಮಾನ್ಯ |
| 33. ಸೆಂಟ್ರಲ್ ಯೂನಿವರ್ಸಿಟಿ ಆಫ್ ಒರಿಸ್ಸಾ | ಒಡಿಶಾ | ಕೊರಾಪುಟ್ | 2009 | ಸಾಮಾನ್ಯ |
| 34. ಸೆಂಟ್ರಲ್ ಯೂನಿವರ್ಸಿಟಿ ಆಫ್ ಪಂಜಾಬ್ | ಪಂಜಾಬ್ | ಬಟಿಂಡ | 2009 | ಸಾಮಾನ್ಯ |
| 35. ಸೆಂಟ್ರಲ್ ಯೂನಿವರ್ಸಿಟಿ ಆಫ್ ರಾಜಸ್ತಾನ್ | ರಾಜಸ್ತಾನ್ | ಜೈಪುರ | 2009 | ಸಾಮಾನ್ಯ |
| 36. ಸೆಂಟ್ರಲ್ ಯೂನಿವರ್ಸಿಟಿ ಆಫ್ ತಮಿಳುನಾಡು | ತಮಿಳುನಾಡು | ತಿರುವಾರೂರು | 2009 | ಸಾಮಾನ್ಯ |
| 37. ಸೆಂಟ್ರಲ್ ಯೂನಿವರ್ಸಿಟಿ ಆಫ್ ಹರಿಯಾಣ | ಹರಿಯಾಣ | ಮಹೇಂದ್ರಗಡ | ? | ಸಾಮಾನ್ಯ |

(ಎನ್.ಎಸ್.ವಿ.)

**ಕೇಂಬಿಯಮ್ :** ಕೆಲವು ಬಗೆಯ ಸಸ್ಯಗಳಲ್ಲಿ ಕಾಣಬರುವ ಒಂದು ರೀತಿಯ ವರ್ಧನ ಅಥವಾ ವಿಭಜನಶಕ್ತ ಅಂಗಾಂಶ. ಕೋಶ ವಿಭಜನೆ ಇದರ ಜೀವಕೋಶಗಳ ಪ್ರಮುಖ ಲಕ್ಷಣ. ವಿಭಜನೆಯಿಂದಾಗಿ ರೂಪುಗೊಳ್ಳುವ ಹೊಸಜೀವಕೋಶಗಳು ಕ್ರಮೇಣ ವಿಭೇದನ ಹೊಂದಿ ಆನುಷಂಗಿಕ ಅಂಗಾಂಶಗಳಾಗಿ ಮಾರ್ಪಾಡಾಗುತ್ತವೆ. ಇದರಿಂದ ಸಸ್ಯದ ಗಾತ್ರ ಹೆಚ್ಚುತ್ತ ಬರುತ್ತದೆ. ಹೀಗೆ ಸಸ್ಯಗಳ ಗಾತ್ರದ ಹೆಚ್ಚಳದಲ್ಲಿ ಪ್ರಮುಖ ಪಾತ್ರವಹಿಸುವ ಅಂಗಾಂಶವೆನಿದೆ ಕೇಂಬಿಯಮ್. ಇದರ ಚಟುವಟಿಕೆಯಿಂದ ಉಂಟಾಗುವ ಬೆಳವಣಿಗೆಗೆ ಆನುಷಂಗಿಕ (ಸೆಕೆಂಡರಿ) ಬೆಳವಣಿಗೆಯೆಂದೂ, ರೂಪುಗೊಳ್ಳುವ ಅಂಗಾಂಶಗಳಿಗೆ ಆನುಷಂಗಿಕ ಅಂಗಾಂಶಗಳೆಂದೂ ಹೆಸರಿದೆ.

ಎಲ್ಲ ಬಗೆಯ ಸಸ್ಯಗಳಲ್ಲೂ ಕೇಂಬಿಯಮ್ ಇಲ್ಲ. ನಗ್ನಬೀಜ ಸಸ್ಯಗಳಾದ ಸೈಕ್ಯಾಸ್, ಗಿಂಕೊ, ಪೈನಸ್ ಮುಂತಾದ ಸಸ್ಯಗಳಲ್ಲಿ ಮತ್ತು ಬಹುಪಾಲು ಬಗೆಯ ದ್ವಿದಳ ಸಸ್ಯಗಳಲ್ಲಿ (ಮುಖ್ಯವಾಗಿ ಮರಗಳು ಮತ್ತು ಪೊದೆ ಸಸ್ಯಗಳು) ಮಾತ್ರ ಕೇಂಬಿಯಮ್ ಇದೆ. ಇದಕ್ಕೆ ಅಪವಾದವಾಗಿ ಕೆಲವು ರೀತಿಯ ಮೂಲಿಕೆ ರೂಪದ ದ್ವಿದಳ ಸಸ್ಯಗಳಲ್ಲೂ (ಉದಾ: ಕೀನೊಪೋಡಿಯಮ್, ಅಮರ್‍ಯಾಂತಸ್) ವೃಕ್ಷಸ್ವರೂಪೀ ಏಕದಳ ಸಸ್ಯಗಳಲ್ಲೂ (ಉದಾ: ಡ್ರಸೀನ, ಯುಕ, ಆಲವೀ, ಕಾರ್ಡೈಲೀನ್) ಕೇಂಬಿಯಮ್ ಕಾಣಬರುವುದುಂಟು.

ಕೇಂಬಿಯಮ್‌ನಲ್ಲಿ ವ್ಯಾಸ್ಕ್ಯುಲರ್ ಕೇಂಬಿಯಮ್ ಮತ್ತು ಕಾರ್ಕ್ ಕೇಂಬಿಯಮ್ (ಫೆಲೋಜನ್) ಎಂಬ ಎರಡು ಬಗೆಗಳಿವೆ.

ಕಾಂಡದ ಒಂದೊಂದು ನಾಳಕೂರ್ಚದಲ್ಲೂ ಮೊದಲಿನಿಂದ ಇರುವ ಕ್ಸೈಲಮ್ ಮತ್ತು ಫ್ಲೋಯೆಮ್ಗಳ ನಡುವೆ ಇರುವ ಒಂದು ತೆಳುಪಟ್ಟಿಯಂಥ ರಚನೆಯೇ ವ್ಯಾಸ್ಕ್ಯುಲರ್ ಕೇಂಬಿಯಮ್. ಇದಕ್ಕೆ ಫೆಸಿಕ್ಯುಲಾರ್ ಕೇಂಬಿಯಮ್ ಎಂದು ಹೆಸರು. ಕ್ರಮೇಣ ಆನುಷಂಗಿಕ ಬೆಳವಣಿಗೆ ಉಂಟಾಗುವ ವೇಳೆಗೆ ಒಂದು ಕೂರ್ಚಕ್ಕೂ ಇನ್ನೊಂದಕ್ಕೂ ನಡುವೆ ಇರುವ ಮೆಡಲರಿ ರೇ ಎಂಬ ಭಾಗದಲ್ಲಿ ಫೆಸಿಕ್ಯುಲಾರ್ ಕೇಂಬಿಯಮಿನ ಸಾಲಿನಲ್ಲೇ ಇರುವ ಕೆಲವು ಕೋಶಗಳು ತಮ್ಮ ವಿಭಜನಶಕ್ತಿಯನ್ನು ಮರಳಿ ಪಡೆದು ಹಲವಾರು ಕೋಶಗಳನ್ನು ಉತ್ಪಾದಿಸಲು ಯತ್ನಿಸುತ್ತವೆ. ಈ ಗುಂಪಿಗೆ ಇಂಟರ್ ಫೆಸಿಕ್ಯುಲಾರ್ ಕೇಂಬಿಯಮ್ ಎಂದು ಹೆಸರು. ಕ್ರಮೇಣ ಈ ಎರಡು ಬಗೆಯ ಕೇಂಬಿಯಮ್‌ಗಳು ಅಡ್ಡಡ್ಡಲಾಗಿ ವಿಸ್ತಾರಗೊಂಡು ಒಂದರೊಡನೊಂದು ಕೂಡಿಕೊಂಡು ವೃತ್ತಾಕಾರ ತಾಳಿದ ಒಂದು ಪಟ್ಟಿಯಂತಾಗುತ್ತವೆ. ಇಂಥ ಕೇಂಬಿಯಮ್ ಪಟ್ಟಿಯಿಂದ ಆನುಷಂಗಿಕ ಬೆಳವಣಿಗೆಯೆಂಬುದು ಆರಂಭವಾಗುತ್ತದೆ. ಸತತ ವಿಭಜನೆಯಿಂದ ಈ ಪಟ್ಟಿಯ ಒಳಗೂ ಹೊರಗೂ ಅಸಂಖ್ಯ ಕೋಶಗಳು ಉತ್ಪಾದನೆಯಾಗುತ್ತವೆ. ಹೊರಗಿನ ಭಾಗದಲ್ಲಿ ಉತ್ಪಾದನೆಯಾದ ಕೋಶಗಳು ಫ್ಲೋಯೆಮ್ ಕೋಶಗಳೊಂದಿಗೆ ಬೆರೆತು, ಮುಂದೆ ಆನುಷಂಗಿಕ ಫ್ಲೋಯೆಮ್ ಘಟಕಗಳಾಗಿ ರೂಪುಗೊಳ್ಳುತ್ತವೆ. ಕೇಂಬಿಯಮಿನ ಒಳಭಾಗದಲ್ಲಿ ಉತ್ಪಾದನೆಯಾದ ಕೋಶಗಳೆಲ್ಲಾ ಕ್ಸೈಲಮ್ ಕೋಶಗಳೊಡನೆ ಬೆರೆತು, ಕ್ರಮೇಣ ಆನುಷಂಗಿಕ ಕ್ಸೈಲಮ್ ಘಟಕಗಳಾಗಿ ರೂಪುಗೊಳ್ಳುತ್ತವೆ. ಸಾಮಾನ್ಯವಾಗಿ ಕೇಂಬಿಯಮಿನ ಚಟುವಟಿಕೆ ಹೊರಭಾಗಕ್ಕಿಂತ ಒಳಭಾಗದಲ್ಲಿಯೇ ಹೆಚ್ಚಾಗಿರುತ್ತದೆ. ಇದರಿಂದ ಆನುಷಂಗಿಕ ಕ್ಸೈಲಮಿನ ಪ್ರಮಾಣ ಆನುಷಂಗಿಕ ಫ್ಲೋಯೆಮಿನ ಮೊತ್ತಕ್ಕಿಂತ ಅಧಿಕವಾಗಿರುತ್ತದೆ. ಹೀಗಾಗಿ ಬರುಬರುತ್ತ ಕಾಂಡದ ಬಹುಭಾಗವೆಲ್ಲ ಆನುಷಂಗಿಕ ಕ್ಸೈಲಮಿನಿಂದ ಆವೃತವಾಗುತ್ತದೆ. ಈ ರೀತಿಯ ಬೆಳವಣಿಗೆ ಸಾಕಷ್ಟು ಆದಾಗ ಕೇಂಬಿಯಮಿನ ಹೊರಗಿರುವ ಕೋಶಗಳೆಲ್ಲ ಅಡ್ಡಗಲವಾಗಿ ಹಿಗ್ಗುತ್ತ ಬಂದು ಅವುಗಳಲ್ಲಿ ಮೂಲ ಫ್ಲೋಯೆಮಿನಂಥ ಕೆಲವು ಕೋಶಗಳು ನಶಿಸಿಹೋಗುವುದೂ ಉಂಟು. ಆದರೆ ಮೂಲ ಕ್ಸೈಲಮ್ ಮಾತ್ರ ಕಡೆತನಕ ಅಬಾಧಿತವಾಗಿ ಉಳಿಯುತ್ತದೆ. ಇದೇ ವೇಳೆಗೆ ಆನುಷಂಗಿಕ ಕ್ಸೈಲಮ್ ಮತ್ತು ಫ್ಲೋಯೆಮಿನ ಕೆಲವು ಭಾಗಗಳಲ್ಲಿ ಅಲ್ಲಲ್ಲೆ ಕೇಂದ್ರಾಭಿಗಾಮಿಯಾದ ಹಲವಾರು ಉದ್ದುದ್ದನೆಯ ತೆಳುಭಿತ್ತಿಯುಳ್ಳ ಪ್ಯಾರೆಂಕೈಮ ಕೋಶಗಳನ್ನು ಕೇಂಬಿಯಮ್ ಉತ್ಪಾದಿಸುತ್ತದೆ. ಇವುಗಳಿಗೆ ಆನುಷಂಗಿಕ ಮೆಡಲರಿ ರೇಗಳೆಂದು ಹೆಸರು. ಆಹಾರ ಘಟಕಗಳನ್ನು ಕೇಂದ್ರಭಾಗದಿಂದ ಹೊರಭಾಗಕ್ಕೆ ಸಾಗಿಸುವುದೇ ಇವುಗಳ ಕಾರ್ಯ. ಹೆಚ್ಚು ಕಡಿಮೆ ಮೇಲೆ ಹೇಳಿರುವ ಬಗೆಯ

ಆನುಷಂಗಿಕ ಬೆಳೆವಣಿಗೆ ಬೇರುಗಳಲ್ಲೂ ಕಾಣಬರುತ್ತದೆ. ಬೇರಿನ ನಾಳಕೂರ್ಚಗಳ ಮೂಲ ಕ್ಸೈಲಮ್ ಪಟ್ಟಿಗಳ ಹೊರಗೆ ಪೆರಿಸೈಕಲ್ ಎಂಬ ಭಾಗದಲ್ಲಿಯೂ ಮತ್ತು ಫ್ಲೋಯೆಮಿನ ಒಳಭಾಗವಾದ ಗ್ರೌಂಡ್ ಟಿಷ್ಯು ಎಂಬ ಭಾಗದಲ್ಲಿಯೂ ನಿರ್ದಿಷ್ಟ ಸಾಲುಗಳುಳ್ಳ ಕೇಂಬಿಯಮ್ ಕಾಣಿಸಿಕೊಳ್ಳುತ್ತದೆ. ಇದು ವಿಭಜನೆ ಹೊಂದುತ್ತ ಕೇಂಬಿಯಮ್‌ನ ಒಳಭಾಗಕ್ಕೆ ಹೆಚ್ಚು ಹೆಚ್ಚು ಹೊಸ ಕೋಶಗಳನ್ನೂ ಹೊರಭಾಗಕ್ಕೆ ಸ್ವಲ್ಪ ಪರಿಮಾಣದಲ್ಲಿ ಹೊಸಕೋಶಗಳನ್ನೂ ಉತ್ಪಾದಿಸುತ್ತ ಹೋಗುತ್ತದೆ. ಮುಂದೆ ಕ್ಸೈಲಮ್‌ಗೆ ಹತ್ತಿರದ ಕೋಶಗಳು ಅನುಷಂಗಿಕ ಕ್ಸೈಲಮ್ ಘಟಕಗಳಾಗಿಯೂ, ಫ್ಲೋಯೆಮ್‌ಗೆ ಹತ್ತಿರದ ಕೋಶಗಳು ಆನುಷಂಗಿಕ ಫ್ಲೋಯೆಮ್ ಘಟಕಗಳಾಗಿಯೂ ರೂಪುಗೊಳ್ಳುತ್ತವೆ. ಈ ವೇಳೆಗೆ ಕೇಂಬಿಯಮ್ ಕೋಶಗಳೆಲ್ಲ ಕೂಡಿಕೊಂಡು ಸ್ವಲ್ಪ ಹೆಚ್ಚು ಕಡಿಮೆ ಒಂದು ವಕ್ರಾಕಾರದ ಪಟ್ಟಿಯಂತೆ ಪರಿಣಮಿಸುತ್ತವೆ. ಕ್ರಮೇಣ ಕೇಂಬಿಯಮಿನ ಒಳಭಾಗದಲ್ಲಿ ಆನುಷಂಗಿಕ ಕ್ಸೈಲಮ್ ಹೆಚ್ಚು ಉತ್ಪಾದನೆಯಾಗಿ ಕೇಂಬಿಯಮ್ ಪಟ್ಟಿ ಒಂದು ಪೂರ್ಣ ವೃತ್ತಾಕಾರ ತಾಳುವಂತಾಗುತ್ತದೆ. ಅದರ ಹೊರಗೆ ಉತ್ಪಾದನೆಯಾಗುವ ಅನುಷಂಗಿಕ ಫ್ಲೋಯೆಮ್ ಕೂಡ ಸ್ವಲ್ಪ ಹೆಚ್ಚು ಕಡಿಮೆ ವೃತ್ತಾಕಾರವನ್ನೇ ತಾಳುತ್ತದೆ. ಈ ವೇಳೆಗೆ ಮೂಲ ಫ್ಲೋಯೆಮ್ ಅಲ್ಲಲ್ಲೇ ಕೆಲವು ತೇಪೆ ಅಥವಾ ತುಂಡುಗಳಂತೆ ವಿಭಾಗವಾಗಿ ಕ್ರಮೇಣ ನಶಿಸಿ ಹೋಗುತ್ತದೆ. ಮೂಲ ಕ್ಸೈಲಮ್ ಮಾತ್ರ ಅತ್ಯಂತ ಒಳಭಾಗಕ್ಕೆ ದೂಡಲ್ಪಟ್ಟರೂ ಕಡೆತನಕ ಅದು ಅಬಾಧಿತವಾಗಿ ಉಳಿಯುತ್ತದೆ. ಇನ್ನೂ ಕೆಲವು ಸಮಯದ ಅನಂತರ ಮೂಲ ಕ್ಸೈಲಮಿನ ತುದಿಯಲ್ಲಿದ್ದ ಕೆಲವು ಕೇಂಬಿಯಮ್ ಕೋಶಗಳು ವಿಭಜನೆಯಲ್ಲಿ ತಟಸ್ಥವಾಗಿ ಉಳಿದು, ಕ್ರಮೇಣ ಅವು ಕೇಂದ್ರಾಭಿಗಾಮಿಯಾಗಿ ಉದ್ದುದ್ದನೆಯ ತೆಳುಭಿತ್ತಿಯುಳ್ಳ ಕೋಶಗಳಾಗಿ ರೂಪುಗೊಳ್ಳುತ್ತವೆ. ಅವಕ್ಕೆ ಮೂಲ ಮೆಡಲರಿ ರೇ ಗಳೆಂದು ಹೆಸರು. ಬರುಬರುತ್ತ ಅನುಷಂಗಿಕ ಕ್ಸೈಲಮ್ ಮತ್ತು ಫ್ಲೋಯೆಮ್‌ಗಳ ನಡುವೆಯೂ ಕೇಂಬಿಯಮ್‌ನಿಂದ ಕೇಂದ್ರಾಭಿಗಾಮಿಯಾಗಿ ಹಲವಾರು ಉದ್ದುದ್ದನೆಯ ಕೋಶಗಳು ಕಾಣಿಸಿಕೊಳ್ಳುತ್ತವೆ. ಇವಕ್ಕೂ ಆನುಷಂಗಿಕ ಮೆಡಲರಿ ರೇ ಎಂದು ಹೆಸರಿದ್ದು ತಮ್ಮ ಕಾರ್ಯದಲ್ಲಿ ಕಾಂಡದ ಮೆಡಲರಿ ರೇಗಳನ್ನು ಹೋಲುತ್ತದೆ.

**ಕಾರ್ಕ್‌ಕೇಂಬಿಯಮ್ ಅಥವಾ ಫೆಲೊಜನ್:** ಸಾಮಾನ್ಯವಾಗಿ ಆನುಷಂಗಿಕ ಬೆಳೆವಣಿಗೆ ಒಂದು ಪರಮಾವಧಿ ಮಿತಿ ಮೀರಿದ ಮೇಲೆ, ಬೇರುಗಳ ಪೆರಿಸೈಕಲ್ ಎಂಬ ಭಾಗದಲ್ಲಿಯೂ ಕಾಂಡಗಳ ಕಾರ್ಟೆಕ್ಸ್ ಎಂಬ ಭಾಗದಲ್ಲಿಯೂ ತೀವ್ರ ಚಟುವಟಿಕೆಯಿಂದ ಕಾಣಿಸಿಕೊಳ್ಳುವ ಮತ್ತೊಂದು ರೀತಿಯ ಕೇಂಬಿಯಮ್. ಇದು ತೇಪೆಗಳ ರೂಪದಲ್ಲೊ ಇಲ್ಲವೆ ಸಂಪೂರ್ಣ ವೃತ್ತಾಕಾರವಾಗಿಯೊ ಇರುತ್ತದೆ. ಇದರ ಕೋಶಗಳು ತಮ್ಮ ಸಹಜ ರೀತಿಯಲ್ಲಿಯೇ ತೀವ್ರ ವಿಭಜನೆಗೊಂಡು ಒಳಗೆ ಮತ್ತು ಹೊರಗೆ ಅನೇಕ ಕೋಶಗಳನ್ನು ಉತ್ಪಾದಿಸುತ್ತವೆ. ಒಳಗಿನ ಕೋಶಗಳಿಗೆ ಫೆಲೊಡರ್ಮ್ ಅಥವಾ ಆನುಷಂಗಿಕ ಕಾರ್ಟೆಕ್ಸ್ ಎಂದೂ ಹೊರಗಿನ ಕೋಶಗಳಿಗೆ ಫೆಲೆಮ್ ಅಥವಾ ಕಾರ್ಕ್ ಕೋಶಗಳೆಂದೂ ಹೆಸರು. ಈ ಮೂರು ಪದರಗಳ ಸಮೂಹಕ್ಕೆ (ಅಂದರೆ–ಫೆಲೆಮ್, ಫೆಲೊಜನ್ ಮತ್ತು ಫೆಲೊಡರ್ಮ್ ಕೋಶಗಳು) ಪೆರಿಡರ್ಮ್ ಎಂದು ಹೆಸರು. ಇವುಗಳ ಮುಖ್ಯ ಕಾರ್ಯ ಒಳಗಿನ ಕೋಶ ಸಮೂಹಗಳಿಗೆಲ್ಲ ಸಾಕಷ್ಟು ರಕ್ಷಣೆ ನೀಡುವುದೇ ಆಗಿರುತ್ತದೆ. ಈ ಭಾಗ ಹೆಚ್ಚಾಗಿ ಕಾಂಡದಲ್ಲಿಯೂ ಕೆಲಮಟ್ಟಿಗೆ ಬೇರಿನಲ್ಲಿಯೂ ತೊಗಟೆಯಾಗಿ ಪರಿಣಮಿಸುತ್ತದೆ. ಇದು ಶಾಶ್ವತವಾಗಿ ಉಳಿಯಬಹುದು. ಇಲ್ಲವೆ ಕ್ರಮೇಣ ಕಳಚಿ ಬಿದ್ದು ಹೋಗಬಹುದು. (ಎಂ.ಎಸ್.ಎಸ್.ಆರ್.)

**ಕೇಂಬ್ರಿಕ್ :** ಒತ್ತಾದ ತಟ್ಟು (ರೀಡ್) ಮತ್ತು ಹೊಕ್ಕು ದಾರಗಳಿರುವ ಹಗುರವಾದ ಸಾದಾ ಬಟ್ಟೆ. ಮೊದಲು ಬೆಲ್ಜಿಯಂನಲ್ಲಿರುವ ಕೇಂಬ್ರಿಯದಲ್ಲಿ ತಯಾರಾದ ಲಿನನ್ ಬಟ್ಟೆಗಳಿಗೆ ಈ ಹೆಸರಿತ್ತು. ಈ ಬಟ್ಟೆಯಲ್ಲಿ ಸಾಮಾನ್ಯವಾಗಿ ತಟ್ಟು ಅಂಗುಲಕ್ಕೆ ನೂರು ಮನೆಗಳುಳ್ಳದ್ದು, ಹೊಕ್ಕು ಅಂಗುಲಕ್ಕೆ 80 ಎಳೆಗಳುಳ್ಳದ್ದು ಮತ್ತು ನೂಲು 60ರಿಂದ 80ರದು. ಕೇಂಬ್ರಿಕ್ ಮತ್ತು ಮಸ್ಲಿನ್‌ಗಳಿಗೆ ಬಹುತೇಕ ಸಮಾನ ಗುಣಲಕ್ಷಣಗಳಿವೆ. ಇವನ್ನು ವಿಶೇಷವಾಗಿ ಹೊರ ಅಂಗಿಗಳಿಗೆ ಮತ್ತು ಅಂಥದೇ ಆದ ಉಡುಪುಗಳಿಗೆ ಉಪಯೋಗಿಸುತ್ತಿದ್ದರು. ಫ್ರೆಂಚ್ ಕೇಂಬ್ರಿಕ್ ಬಲು ಹಸನಾದ ಬಟ್ಟೆ. ಇದರಲ್ಲಿ ನೇಯ್ಗೆಯ ತಪ್ಪುಗಳೇ ಇರುವುದಿಲ್ಲ. ಇದನ್ನು ಕಂಠಾಲಂಕಾರ ವಸ್ತುಗಳೇ ಮೊದಲಾದವುಗಳಿಗೆ ಉಪಯೋಗಿಸುತ್ತಾರೆ. ಐರಿಷ್ ಕೇಂಬ್ರಿಕ್ ಲಿನನ್ ಬಟ್ಟೆಯೇ. ಇದನ್ನು ಉಡುಪುಗಳಿಗಾಗಿ ಮತ್ತು ಕರವಸ್ತ್ರಗಳಿಗಾಗಿ ಉಪಯೋಗಿಸುತ್ತಾರೆ. ಒಂದು ವಿಧದ ವಿಶೇಷವಾಗಿ ಒಪ್ಪಗೊಂಡ(ಫಿನಿಷ್ಡ್) ಕೇಂಬ್ರಿಕನ್ನು ಕಿಡ್ ಎಂದು ಕರೆಯುತ್ತಾರೆ. ಇದನ್ನು ಒಳಪದರಕ್ಕೆ (ಲೈನಿಂಗ್) ಉಪಯೋಗಿಸುತ್ತಾರೆ. ಒಪ್ಪಗೊಂಡ ಪ್ರತಿ ವಸ್ತ್ರಕ್ಕೂ ಬಿಗಿತ (ಸ್ಟಿಫ್‌ನೆಸ್), ನುಣುಪು, ಮಂಕು, ಹೊಳಪು ಮೊದಲಾದ ಗುಣಗಳ ವೈವಿಧ್ಯ ಉಂಟು. (ವಿ.ಎಸ್.ವಿ.)

**ಕೇಂಬ್ರಿಜ್[1] :** ಇಂಗ್ಲೆಂಡಿನ ಕೇಂಬ್ರಿಜ್‌ಷೈರ್ ಕೌಂಟಿಯ ಮುಖ್ಯ ಪಟ್ಟಣ; ವಿಶ್ವವಿದ್ಯಾಲಯ ಕೇಂದ್ರ; ಪಾರ್ಲಿಮೆಂಟರಿ ಕ್ಷೇತ್ರ. ಲಂಡನ್ನಿನ ಈಶಾನ್ಯಕ್ಕೆ 99 ಕಿ.ಮೀ. ಮತ್ತು ಆಕ್ಸ್‌ಫರ್ಡಿನ ಈಶಾನ್ಯಕ್ಕೆ 128 ಕಿ.ಮೀ. ದೂರದಲ್ಲಿರುವ ಈ ನಗರ ಜವುಗಿನಿಂದ ಕೂಡಿದ ಮೈದಾನದಲ್ಲಿ, ಸಮುದ್ರಮಟ್ಟಕ್ಕೆ 6–24 ಮೀ. ಎತ್ತರದಲ್ಲಿದೆ. ವಿಶ್ವವಿದ್ಯಾಲಯದ ನಿವಾಸಿಗಳೂ ಸೇರಿದಂತೆ ಇಲ್ಲಿಯ ಜನಸಂಖ್ಯೆ 108863 (2001). ಊಜ್ ನದಿಯ ಉಪನದಿಯಾದ ಕೇಮ್‌ಗೆ ಪೂರ್ವದಡದಲ್ಲಿ ಈ ನಗರದ ಬಹುಭಾಗ ಹಬ್ಬಿದೆ. ನದಿಯ ಇನ್ನೊಂದು ದಡವನ್ನೂ ಇದರ ಉಪನಗರಗಳು ಆವರಿಸಿವೆಯಾದರೂ ಪಶ್ಚಿಮದ ವಿಸ್ತರಣ ಬಹಳ ಮಟ್ಟಿಗೆ ವಿಶ್ವವಿದ್ಯಾಲಯಕ್ಕೇ ಮೀಸಲಾಗಿದೆ. ದಕ್ಷಿಣದಲ್ಲಿ ಸುಣ್ಣಕಲ್ಲಿನ ಮತ್ತು ಪಶ್ಚಿಮದಲ್ಲಿ ಜೇಡಿಮಣ್ಣಿನ ಗುಡ್ಡಗಳ ಸಾಲುಗಳಿವೆ. ಇಂಗ್ಲೆಂಡಿನ ನಿಜವಾದ ವಿಶ್ವವಿದ್ಯಾಲಯನಗರವೆಂದರೆ ಆಧುನಿಕ ಕೇಂಬ್ರಿಜ್ ಒಂದೇ ಎಂದು ಬಣ್ಣಿಸಲಾಗಿದೆ. ಇಲ್ಲಿ 15ರಿಂದ 19ನೆಯ ಶತಮಾನಗಳ ನಡುವೆ ಕಟ್ಟಿದ ಬೃಹದ್ ಚರ್ಚ್‌ಗಳು ಮತ್ತು ಸೌಧಗಳಿವೆ. ವಾಸ್ತುಶಿಲ್ಪದ ಈ ಹಲವಾರು ಮಾದರಿಗಳು ನಗರದ ಸೌಂದರ್ಯವನ್ನು ಹೆಚ್ಚಿಸಿವೆ. ಕಾರ್ಪಸ್ ಕ್ರಿಸ್ಟಿ ಭವನ, ಪೀಟರ್‌ಹೌಸ್‌ನ ಸಂಘ ಭವನ, ಕ್ವೀನ್ಸ್ ಕಾಲೇಜಿನ ಅಧ್ಯಕ್ಷಗೃಹ, ಕ್ಲೇರ್ ಮಂದಿರ, ಕಿಂಗ್ಸ್ ಕಾಲೇಜ್ ಕಟ್ಟಡ, ಟ್ರಿನಿಟಿ ಕಾಲೇಜ್ ಭವನ ಮುಂತಾದವೂ ಅಲ್ಲಲ್ಲಿ ತೆರವಾದ ಹಸುರು ಬಯಲುಗಳೂ ಸಸ್ಯೋದ್ಯಾನವೂ ನಗರದ ಸೌಂದರ್ಯವನ್ನು ಹೆಚ್ಚಿಸಿವೆ. ಇಲ್ಲಿ ಅನೇಕ ಸುಂದರ ಸೇತುವೆಗಳು ಕಂಗೊಳಿಸುತ್ತವೆ. ಕೇಂ ನದಿಯ ಪೂರ್ವಭಾಗದಲ್ಲಿರುವ ಕಿಂಗ್ಸ್ ಕಾಲೇಜಿಗೆ ಅಭಿಮುಖವಾಗಿ ಮನಸೆಳೆಯುವ ಮಳಿಗೆಗಳ ಸಾಲುಗಳುಂಟು. ಕಿಂಗ್ಸ್ ಕಾಲೇಜಿನ ಆರಾಧನ ಮಂದಿರ (1446–1515) ಒಂದು ಪ್ರಖ್ಯಾತ ಕಟ್ಟಡ. ಇದು ಆರನೆಯ ಹೆನ್ರಿಯ ಕಾಲದಲ್ಲಿ ರೂಪುಗೊಂಡು ಇಂಗ್ಲೆಂಡಿನ ಮಧ್ಯಯುಗದ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಈ ಚರ್ಚಿನ ದೊಡ್ಡದೊಡ್ಡ ಒತ್ತು ಗೋಡೆಗಳು, ಉನ್ನತ ಶಿಖರಗಳು, ಅವುಗಳ ಮೇಲಿನ ಅಲಂಕಾರಯುತ ಬುರುಜುಗಳು, ವರ್ಣರಂಜಿತ ಚಿತ್ರಕಲೆಯಿಂದ ಕೂಡಿದ ಗಾಜಿನ ಕಿಟಕಿಗಳು ಅದ್ಭುತವಾಗಿವೆ.

ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಕಿಂಗ್ಸ್ ಪೆರೇಡ್, ಹಿನ್ನೆಲೆಯಲ್ಲಿ ಕಿಂಗ್ಸ್ ಕಾಲೇಜ್ ಮತ್ತು ಅದರ ಆರಾಧನ ಮಂದಿರ

ಸೇಂಟ್ ಬೆನೆಟ್ ಚರ್ಚ್, ಸೇಂಟ್ ಸೆಪಲ್ಕರ್ ಚರ್ಚ್ ಮುಂತಾದ ಅನೇಕ ಪ್ರಸಿದ್ಧ ಚರ್ಚುಗಳು ಇಲ್ಲಿವೆ. 19ನೆಯ ಶತಮಾನದಲ್ಲಿ ಸ್ಥಾಪಿತವಾದ ಫಿಟ್ಜ್‌ವಿಲಿಯಂ ವಸ್ತುಸಂಗ್ರಹಾಲಯ, ಎರಡನೆಯ ಮಹಾಯುದ್ಧಾನಂತರ ನಿರ್ಮಿತವಾದ ಎಂಜಿನಿಯರಿಂಗ್ ಪ್ರಯೋಗಾಲಯ, ಸ್ಕಾಟ್ ಧ್ರುವೀಯ ಸಂಶೋಧನಾಲಯ, ರಸಾಯನವಿಜ್ಞಾನ ಪ್ರಯೋಗಾಲಯ, ಇವು ಇತರ ಕೆಲವು ಮುಖ್ಯ ಭವನಗಳು. ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡ ಕೇಂ ನದಿಗೆ ಪಶ್ಚಿಮದಲ್ಲಿದೆ. ಮ್ಯಾಗ್ಡಲೀನ್ ಕಾಲೇಜಿನ ಬಳಿ ಜನಪದ ವಸ್ತುಸಂಗ್ರಹಾಲಯವಿದೆ.

ಕೇಂಬ್ರಿಜ್‌ಗೆ ಲಂಡನ್ ಮತ್ತು ಇತರ ಸ್ಥಳಗಳೊಂದಿಗೆ ಉತ್ತಮ ಸಾರಿಗೆ ಸಂಪರ್ಕವಿದೆ. ದೋಣಿ ವಿಹಾರ, ದೋಣಿ ಸ್ಪರ್ಧೆ, ತೋಡುದೋಣಿ ಸಂಚಾರ ಮುಂತಾದವಕ್ಕೆ ಕೇಂ ನದಿಯನ್ನು ಉಪಯೋಗಿಸಿಕೊಳ್ಳಲಾಗಿದೆ. ದೊಡ್ಡ ಯಾನಗಳಿಗಾಗಿ ಬಾಡಿಗೆಗೆ ನಾವೆಗಳೂ ದೊರಕುತ್ತವೆ. ಇಲ್ಲೊಂದು ಚಿಕ್ಕ ವಿಮಾನ ನಿಲ್ದಾಣವೂ ವಿಮಾನ ಶಿಕ್ಷಣಶಾಲೆಯೂ ಉಂಟು.

ಇಲ್ಲಿ ವ್ಯಾಪಕವಾಗಿ ಕೈಗಾರಿಕೆ ಬೆಳೆದಿದ್ದರೂ ನಗರಮಧ್ಯದಿಂದ ಬಲು ದೂರ ಚಾಚಿಲ್ಲ. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ, ಅದರ ಬೇಡಿಕೆಗಳನ್ನು ಪೂರೈಸುವ ಕೈಗಾರಿಕೆಗಳೇ ಹೆಚ್ಚು. ಕಟ್ಟಡ, ಮುದ್ರಣ, ಉಪಕರಣ, ರೇಡಿಯೊ ಎಲೆಕ್ಟ್ರಾನಿಕ್ಸ್, ಹಿಟ್ಟುಗಿರಣಿ, ಆಸ್ಫಾಲ್ಟ್–ಇವು ಇಲ್ಲಿಯ ಕೆಲವು ಕೈಗಾರಿಕೆಗಳು. ಅಂತಾರಾಷ್ಟ್ರೀಯ ಖ್ಯಾತಿಯ, ಹೊಸ ಹಳೆಯ ಪುಸ್ತಕಗಳ ಮತ್ತು ಪುರಾತನ ವಸ್ತುಗಳ ಅಂಗಡಿಗಳೂ ಇಲ್ಲುಂಟು.

ಕೇಂಬ್ರಿಜ್‌ನ ಅತ್ಯಂತ ಪುರಾತನ ವಸತಿ ಇದ್ದದ್ದು ಬಹುಶಃ ಕೇಂ ನದಿಯ ಮೇಲೆ, ಸಮುದ್ರಕ್ಕೆ ಅತ್ಯಂತ ಹತ್ತಿರದಲ್ಲಿ, ಮಿಡ್ಲೆಂಡ್ಸ್‌ನ ಒಣ ನೆಲದಿಂದ ಪೂರ್ವದ ಒಣನೆಲಕ್ಕೆ ದಾಟಲು ಸಾಧ್ಯವಿದ್ದ ಸ್ಥಳದಲ್ಲಿ. ಈ ಎಡೆಯಲ್ಲಿ ಬಹಳ ಹಿಂದಿನಿಂದಲೂ ಒಂದು ಸೇತುವೆ ಇದೆ. ಸೇತುವೆಯ ಹೆಸರನ್ನು ಪಡೆದಿರುವ ಕೌಂಟಿ ಇಂಗ್ಲೆಂಡಿನಲ್ಲಿ ಕೇಂಬ್ರಿಜ್ ಒಂದೇ. ಅತ್ಯಂತ ಪ್ರಾಚೀನ ಕೇಂದ್ರವೊಂದರ ಸುತ್ತ ನಿರ್ಮಿತವಾದ ಆಧುನಿಕ

ನಗರದ ಎಲ್ಲ ಸಮಸ್ಯೆಗಳೂ ಕೇಂಬ್ರಿಜಿನಲ್ಲಿವೆ. ಸಾರಿಗೆ ಮತ್ತು ವಸತಿ ಸಮಸ್ಯೆಗಳನ್ನು ಪರಿಹರಿಸಲು ಸಮಗ್ರವಾದ ಯೋಜನೆಯಿದೆ.
*

**ಕೇಂಬ್ರಿಜ್[2] :** ಅಮೆರಿಕ ಸಂಯುಕ್ತಸಂಸ್ಥಾನದ ಮೆಸಾಚುಚೂಸೆಟ್ಸ್ ರಾಜ್ಯದಲ್ಲಿರುವ ಒಂದು ನಗರ. ಮೆಸಾಚುಚೂಸೆಟ್ಸ್‌ನ ರಾಜಧಾನಿಯೂ ಮೆಸಾಚುಚೂಸೆಟ್ಸ್ ಕೊಲ್ಲಿಯ ಮೇಲಿರುವ ಬಂದರೂ ಆದ ಬಾಸ್ಟನ್ ನಗರಕ್ಕೆ ಎದುರಾಗಿದೆ. ಮಿಡ್ಲ್ ಸೆಕ್ಸ್ ಕೌಂಟಿಯ ಕೇಂದ್ರ. ಜನಸಂಖ್ಯೆ 101354 (2000).

ಇಲ್ಲಿ ಮೊತ್ತಮೊದಲ ವಸತಿ ಸ್ಥಾಪಿತವಾದ್ದು 1630ರಲ್ಲಿ–ಮೆಸಾಚುಚೂಸೆಟ್ಸ್ ಕೊಲ್ಲಿ ಕಂಪನಿಯಿಂದ. ಆ ಸ್ಥಳ ಈಗ ಹಾರ್ವರ್ಡ್ ಚೌಕದ ಬಳಿ ಇದೆ. ಮೊದಲು ಇದಕ್ಕೆ ನ್ಯೂಟೌನ್ ಎಂಬ ಹೆಸರಿತ್ತು. ಹಾರ್ವರ್ಡ್ ಕಾಲೇಜಿನ ಸ್ಥಾಪನೆಯಾದ ಎರಡು ವರ್ಷಗಳ ಅನಂತರ (1638) ಇದಕ್ಕೆ ಇಂಗ್ಲೆಂಡಿನ ವಿಶ್ವವಿದ್ಯಾಲಯನಗರವಾದ ಕೇಂಬ್ರಿಜಿನ ಹೆಸರನ್ನೇ

ಹಾರ್ವರ್ಡ್ ವಿಶ್ವವಿದ್ಯಾಲಯದ ಒಂದು ದೃಶ್ಯ. ವಿಶ್ವದಲ್ಲೇ ಅತ್ಯಂತ ದೊಡ್ಡ ವಿಶ್ವಿದ್ಯಾಲಯ ಗ್ರಂಥಾಲಯ (ವೈಡ್ನರ್ ಸ್ಮಾರಕ ಗ್ರಂಥಾಲಯ) ಚಿತ್ರದ ಬಲಗಡೆಯಲ್ಲಿದೆ.

ಇಡಲಾಯಿತು. ಇದು ಮೆಸಾಚುಸೆಟ್ಸ್ ಕೊಲ್ಲಿ ವಸಾಹತಿನ ರಾಜಧಾನಿಯಾಗಬೇಕೆಂಬುದು ಹಲವರ ಇಷ್ಟವಾಗಿತ್ತು. ಆದರೆ ಆ ಗೌರವ ಬಾಸ್ಟನಿಗೆ ಸಂದಿತು. ವಾಣಿಜ್ಯ ಮತ್ತು ರಕ್ಷಣೆಗಳ ದೃಷ್ಟಿಯಿಂದ ಆ ನಗರ ಹೆಚ್ಚು ಸಮರ್ಪಕವೆನಿಸಿದ್ದೇ ಇದಕ್ಕೆ ಕಾರಣ.

ಹಾರ್ವರ್ಡ್ ಚೌಕದ ಸುತ್ತಣ ಅಂಕುಡೊಂಕಾದ ಕಿರುಬೀದಿಗಳಿಗೆ ಐತಿಹಾಸಿಕ ಮಹತ್ತ್ವವುಂಟು. 1637 ಮತ್ತು 1647ರಲ್ಲಿ ನ್ಯೂ ಇಂಗ್ಲೆಂಡ್ ಚರ್ಚುಗಳ ಧರ್ಮಾಧಿಕಾರಿಗಳ ಆಲೋಚನಾಸಭೆಗಳು ಇಲ್ಲಿ ಸಮಾವೇಶಗೊಂಡು ಆ ಮತದ ಸಿದ್ಧಾಂತವನ್ನು ಕುರಿತ ಅನೇಕ ವಾದಗ್ರಸ್ತ ಅಂಶಗಳನ್ನು ಕುರಿತು ಚರ್ಚಿಸಿದುವು. ಅಮೆರಿಕನ್ ಕ್ರಾಂತಿಯ (1775–1783) ಕಾಲದಲ್ಲಿ ಅಮೆರಿಕದ ಪ್ರಥಮ ಸೇನೆ ಇಲ್ಲಿ ಬಿಡಾರ ಹೂಡಿತ್ತು. ಬಂಕರ್ ಹಿಲ್ ಕದನದಲ್ಲಿ ಭಾಗವಹಿಸಿದವರಲ್ಲಿ ಬಹಳ ಮಂದಿ ಸೈನಿಕರು ಇಲ್ಲಿಂದ ಹೋದವರೇ. ಇಲ್ಲಿ 1923ರ ತನಕ ಇದ್ದ ಎಲ್ಮ್ ಮರದ ಕೆಳಗೇ ಜಾರ್ಜ್ ವಾಷಿಂಗ್ಟನ್ 1775ರ ಜುಲೈ 3 ರಂದು ಖಂಡಾಂತರ ಪಡೆಗಳ ದಂಡ ನಾಯಕನಾದನೆಂದು ಪ್ರತೀತಿ. ಆ ಕಾಲದಲ್ಲಿ ವಾಷಿಂಗ್ಟನ್ ಇದ್ದ ಮನೆಯಲ್ಲೇ ಅಮೆರಿಕನ್ ಕವಿ ಹೆನ್ರಿ ವಾಡ್ಸ್‌ವರ್ತ್‌ಲಾಂಗ್‌ಫೆಲೊ ಇದ್ದ (1837–82). 19ನೆಯ ಶತಮಾನದ ಇನ್ನೊಬ್ಬ ಕವಿಯಾದ ಜೇಮ್ಸ್ ರಸೆಲ್ ಲೊವೆಲ್ ಹುಟ್ಟಿ ಬದುಕಿದ್ದೂ ಇಲ್ಲೇ. ಇವರೇ ಅಲ್ಲದೆ ಆಲಿವರ್ ವೆಂಡೆಲ್ ಹೋಮ್ಸ್, ರಿಚರ್ಡ್ ಹೆನ್ರಿ ಡಾನಾ, ಲೂಯಿ ಅಗಾಸಿಸ್, ಅಸಾ ಗ್ರೇ, ಚಾರ್ಲ್ಸ್ ಎಲಿಯಟ್ ನಾರ್ಟನ್, ವಿಲಿಯಂ ಜೇಮ್ಸ್, ಜಾನ್ ಫಿಸ್ಕೆ, ವಿಲಿಯಂ ಡೀನ್ ಹೊವೆಲ್ಸ್, ಬರ್ನಾಡ್ ಡಿ. ವೋಟೊ ಮುಂತಾದ ಅನೇಕ ಸಾಹಿತಿಗಳೂ ವಿಜ್ಞಾನಿಗಳೂ ಕೇಂಬ್ರಿಜಿನೊಂದಿಗೆ ಸಂಬಂಧ ಪಡೆದಿದ್ದರು.

ಹಾರ್ವರ್ಡ್ ಚೌಕದ ಸುತ್ತ ಇರುವ ಹಳೆಯ ಕೇಂಬ್ರಿಜ್ ಅಮೆರಿಕನರ ಸಂಸ್ಕೃತಿಯ ಸಂಕೇತವಾಗಿದೆ. ಹಾರ್ವರ್ಡ್ ಕಾಲೇಜನ್ನು ಸ್ಥಾಪಿಸಿದಾಗಿನಿಂದ ಇದಕ್ಕೆ ಪ್ರಾಮುಖ್ಯ. ಇದಕ್ಕೆ ಹತ್ತಿರದಲ್ಲೇ 20ನೆಯ ಶತಮಾನದಲ್ಲಿ ವಾಣಿಜ್ಯ ಕೇಂದ್ರವೊಂದು ಬೆಳೆದಿದೆ. ಅಮೆರಿಕದ ಪ್ರಥಮ ಅಚ್ಚುಕೂಟ ಸ್ಥಾಪಿತವಾದ್ದು ಇಲ್ಲಿ (1639). ಆದರೆ ನಗರ ಶೀಘ್ರವಾಗಿ ಬೆಳೆದದ್ದು 20ನೆಯ ಶತಮಾನದಲ್ಲಿ, ಬಾಸ್ಟನಿನಿಂದ ಕೇಂಬ್ರಿಜಿಗೆ ಸುರಂಗಮಾರ್ಗವೊಂದು ನಿರ್ಮಾಣವಾದ ಮೇಲೆ (1912). ಬಾಸ್ಟನಿನ ಉದ್ಯಮಿಗಳು ಇಲ್ಲಿಗೆ ಶೀಘ್ರವಾಗಿ ಬರುವುದು ಸಾಧ್ಯವಾದ್ದರಿಂದ ಇಲ್ಲಿ ಕೈಗಾರಿಕೆಗಳು ಬೆಳೆದುವು. ಇಪ್ಪತ್ತನೆಯ ಶತಮಾನದ ನಡುಗಾಲದ ವೇಳೆಗೆ ಇಲ್ಲಿ 400 ಉತ್ಪಾದನೋದ್ಯಮಗಳಿದ್ದುವು. ಲೋಹೋತ್ಪನ್ನಗಳು, ವಿದ್ಯುದುಪಕರಣ, ಮುದ್ರಣ, ಪ್ರಕಾಶನ, ರಾಸಾಯನಿಕ ವಸ್ತುಗಳು, ರಬ್ಬರ್ ಮತ್ತು ಚರ್ಮ ವಸ್ತುಗಳು–ಇವು ಕೆಲವು ಕೈಗಾರಿಕೆಗಳು, ಇವುಗಳ ಜೊತೆಜೊತೆಗೇ ಇಲ್ಲಿ ಅನೇಕ ಸಂಶೋಧನಾಲಯಗಳೂ ಪ್ರಯೋಗಾಲಯಗಳೂ ಬೆಳೆದಿವೆ. ಹಾರ್ವರ್ಡ್ ವಿಶ್ವವಿದ್ಯಾಲಯ ಮತ್ತು ಮೆಸಾಚುಸೆಟ್ಸ್

ಕೇಂಬ್ರಿಜ್ ನಗರದಲ್ಲಿರುವ ಮ್ಯಾಸಚೂಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಭೂವಿಜ್ಞಾನಿಗಳ ಕೇಂದ್ರದ ಭವನ

ತಾಂತ್ರಿಕ ಸಂಸ್ಥೆ (ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ–ಎಂ.ಐ.ಟಿ.)–ಇವು ಹತ್ತಿರದಲ್ಲೇ ಇರುವುದರಿಂದ ಸಂಶೋಧನೆಗೆ ಅನುಕೂಲಗಳು ಲಭ್ಯವಾಗಿವೆ.

ಕೇಂಬ್ರಿಜಿನಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯವಿರುವುದರಿಂದ ಇದನ್ನು ವಿಶ್ವವಿದ್ಯಾಲಯನಗರವೆಂದು ಪರಿಗಣಿಸಲಾಗಿದೆ. ರ್‍ಯಾಡ್‌ಕ್ಲಿಫ್ ಕಾಲೇಜ್ ಫಾರ್ ವಿಮೆನ್ ಇನ್ನೊಂದು ಮುಖ್ಯ ಶಿಕ್ಷಣ ಸಂಸ್ಥೆ. ಇದು ಹಾರ್ವರ್ಡ್ ವಿಶ್ವವಿದ್ಯಾಲಯದ ಮನ್ನಣೆ ಪಡೆದಿದೆ. ಎಪಿಸ್ಕೋಪಲ್ ತಿಯೊಲಾಜಿಕಲ್ ಸ್ಕೂಲ್ – ದಿ ನ್ಯೂ ಚರ್ಚ್ ತಿಯೊಲಾಜಿಕಲ್ ಸ್ಕೂಲ್ ಇವು ಇನ್ನೆರಡು ಮುಖ್ಯ ಸಂಸ್ಥೆಗಳು. ಮೆಸಾಚುಸೆಟ್ಸ್ ತಾಂತ್ರಿಕ ಶಿಕ್ಷಣಸಂಸ್ಥೆ 1916ರಲ್ಲಿ ಬಾಸ್ಟನಿನಿಂದ ಇಲ್ಲಿಗೆ ವರ್ಗವಾಯಿತು. ಎಂಜಿನಿಯರಿಂಗಿನ ಎಲ್ಲ ಶಾಖೆಗಳಲ್ಲೂ ವಾಸ್ತುಶಿಲ್ಪದಲ್ಲೂ ಮಾನವಿಕ ಮತ್ತು ಸಮಾಜ ವಿಜ್ಞಾನಗಳಲ್ಲೂ ಸ್ನಾತಕಪೂರ್ವ ಮತ್ತು ಸ್ನಾತಕ ತರಗತಿಗಳು ಅಲ್ಲಿ ನಡೆಯುತ್ತವೆ. ಮೂಲಭೂತ ಸಂಶೋಧನೆ ನಡೆಸಲು ಅಲ್ಲಿರುವ ಸೌಲಭ್ಯಗಳು ಅಸಾಧಾರಣವಾದವು; ಕೆಲವಂತೂ ವಿಶಿಷ್ಟವಾದಂಥವು. ನ್ಯೂಕ್ಲಿಯರ್ ರಿಯಾಕ್ಟರ್, ಎಲೆಕ್ಟ್ರಾನಿಕ್ಸ್ ಸಂಶೋಧನ ಪ್ರಯೋಗಾಲಯ, ಸರ್ವೋಕ್ರಿಯಾತಂತ್ರ (ಸರ್ವೋಮೆಕ್ಯಾನಿಸಮ್ಸ್) ಪ್ರಯೋಗಾಲಯ, ಅತೀತಶಬ್ದ ಗಾಳಿಸುರಂಗಗಳು, ಅಂತಾರಾಷ್ಟ್ರೀಯ ನಗರೀಯ ಮತ್ತು ಪ್ರಾದೇಶಿಕ ಅಧ್ಯಯನದ ಮತ್ತು ಸಂಪರ್ಕ ವಿಜ್ಞಾನಗಳ ಅಧ್ಯಯನದ ಸೌಲಭ್ಯಗಳು–ಇವು ಕೆಲವು. ವಾಷಿಂಗ್ಟನ್ ಡಿ.ಸಿ.ಯಲ್ಲಿದ್ದ ಸ್ಮಿತ್ಸೋನಿಯನ್ ಖಭೌತ ವೀಕ್ಷಣಾಲಯದ ಮುಖ್ಯ ಕೇಂದ್ರ ಈಗ ಇಲ್ಲಿದೆ.
*

**ಕೇಂಬ್ರಿಜ್ ಪಂಥ :** ಪ್ರಸಿದ್ಧ ಇಂಗ್ಲಿಷ್ ಅರ್ಥವಿಜ್ಞಾನಿ ಆಲ್‌ಫ್ರೆಡ್ ಮಾರ್ಷಲ್ (1842–1924) ಮತ್ತು ಆತನ ಮುಖ್ಯ ಶಿಷ್ಯವರ್ಗದವರ ಬರೆಹಗಳ ಆಧಾರದ ಮೇಲೆ ರಚಿತವಾಗಿ ಇತರ ಅನೇಕ ಪಂಡಿತರಿಂದ ವಿಶದಗೊಂಡ ಆರ್ಥಿಕ ವಿಚಾರಧಾರೆ (ಕೇಂಬ್ರಿಜ್ ಸ್ಕೂಲ್), ನವ ಅಭಿಜಾತ ಪಂಥದ ಒಂದು ಶಾಖೆಯೆಂದೂ ಪರಿಗಣಿತವಾಗಿದೆ. ಇತರ ಪಂಥಗಳ ಅಭಿಪ್ರಾಯಗಳ ಸಮನ್ವಯ ಈ ಪಂಥದ ವೈಶಿಷ್ಟ್ಯ. ಇದು ಅಭಿಜಾತ ಪಂಥದ ಭಾವನೆಗಳನ್ನು ಬಹುಮಟ್ಟಿಗೆ ಅನುಸರಿಸುವುದಾದರೂ ಅವುಗಳ ಮಿತಿಗಳನ್ನು ಒತ್ತಿ ಹೇಳುತ್ತದೆ. ಹೀಗೆಯೇ ಅದು ಐತಿಹಾಸಿಕ ಪಂಥದ ಮಾರ್ಗಗಳನ್ನು ಅನುಸರಿಸುತ್ತದೆಯಾದರೂ ಆ ಮಾರ್ಗಗಳನ್ನು ಸೂಕ್ಷ್ಮ ಪರಿಶೀಲನೆಗೆ ಒಳಪಡಿಸುತ್ತದೆ. ಅಭಿಜಾತ ಪಂಥದ ವಾಸ್ತವ ವೆಚ್ಚ ಭಾವನೆಯನ್ನೂ ಆಸ್ಟ್ರಿಯನ್ ಪಂಥದ ಉಪಯುಕ್ತತೆಯ ಭಾವನೆಯನ್ನೂ ಅದು

ತನ್ನ ವಿಶ್ಲೇಷಣೆಯಲ್ಲಿ ಉಪಯೋಗಿಸುತ್ತದೆ. ಆದರೆ ಇವುಗಳಲ್ಲಿ ಒಂದೊಂದೂ ಅಪೂರ್ಣ ಎಂಬ ಮುಖ್ಯಾಂಶವನ್ನು ಹಿಡಿದೆತ್ತಿ ಇವೆರಡರ ಸಮನ್ವಯದ ಮೇಲ್ಮೆಯನ್ನು ಸಾಧಿಸಿ ತೋರಿಸಿದೆ. ಅರ್ಥಶಾಸ್ತ್ರ ಅಧ್ಯಯನದಲ್ಲಿ ಗಣಿತಮಾರ್ಗ ಒಂದು ಬೌದ್ಧಿಕ ಸಾಧನವೆಂದು ಈ ಪಂಥ ಒಪ್ಪುವುದಾದರೂ ನಿರ್ದಿಷ್ಟ ಸಮಸ್ಯೆಗಳ ವಿಶ್ಲೇಷಣೆಯನ್ನು ವಾಸ್ತವಿಕ ಮಟ್ಟದಲ್ಲಿ ನಡೆಸುವುದರ ಪ್ರಾಮುಖ್ಯವನ್ನು ಇದು ಒತ್ತಿ ಹೇಳುತ್ತದೆ. ಹೀಗೆ ವಿವಿಧ ಪಂಥಗಳ ವಿಚಾರಧಾರೆಯ ವಿಮರ್ಶನಾತ್ಮಕ ಅಧ್ಯಯನದಿಂದ ಕೇಂಬ್ರಿಜ್ ಪಂಥ ಅನೇಕ ಆರ್ಥಿಕ ವಿಷಯಗಳ ಬಗ್ಗೆ ತನ್ನದೇ ಆದ ನಿಲುವನ್ನು ತಾಳಿದೆ. ಇದಕ್ಕೂ ಹೆಚ್ಚಾಗಿ ಈ ಪಂಥ ಮೌಲ್ಯ, ಹಣ, ವಿದೇಶಿ ವ್ಯಾಪಾರ, ಕ್ಷೇಮಾಭ್ಯುದಯ ಇತ್ಯಾದಿ ವಿಷಯಗಳ ಬಗ್ಗೆ ಹೊಸ ಭಾವನೆಗಳನ್ನೂ ಸಿದ್ಧಾಂತಗಳನ್ನೂ ರೂಪಿಸಿದೆ. ಕೆಂಬ್ರಿಜ್ ಪಂಥದ ಅರ್ಥಶಾಸ್ತ್ರಜ್ಞರು ಯಾವುದೇ ಆರ್ಥಿಕ ಸಿದ್ಧಾಂತ ಅಥವಾ ಭಾವನೆಗೂ ಕೇವಲ ಅಂಧಾಭಿಮಾನದಿಂದ ಅಂಟಿಕೊಂಡಿರದೆ, ಇವನ್ನು ಹೊಸ ಅನುಭವದ ಹಾಗೂ ಆರ್ಥಶಾಸ್ತ್ರದ ಬೆಳವಣಿಗೆಯ ದೃಷ್ಟಿಯಲ್ಲಿ ಸತತವೂ ಪುನರ್ವಿಮರ್ಶಿಸುವ ವೈಚಾರಿಕ ದೃಷ್ಟಿಯುಳ್ಳ ಶೀಲವಂತ ಶಾಸ್ತ್ರಜ್ಞರಾಗಿದ್ದಾರೆ.

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿದ್ದು ಸೇವೆ ಸಲ್ಲಿಸಿದ ಆಲ್‌ಫ್ರೆಡ್ ಮಾರ್ಷಲನ ನೇರವಾದ ಪ್ರಭಾವಕ್ಕೆ ಒಳಗಾಗಿ ಬೆಳೆದ ಕೇಂಬ್ರಿಜ್ ಪಂಥದ ಅರ್ಥಶಾಸ್ತ್ರಜ್ಞರಲ್ಲಿ ಆರ್ಥರ್, ಸಿ.ಪಿಗು, ಜೋನ್ ರಾಬಿನ್ಸನ್, ಡೆನಿಸ್ ಹೆಚ್. ರಾಬರ್ಟ್‌ಸನ್, ಮಾರಿಸ್ ಡಾಬ್, ಪಿಯರೋ ಸ್ರಾಫ ಮತ್ತು ಜಾನ್ ಮೇನರ್ಡ್ ಕೇನ್ಸ್ ಇವರು ಅಗ್ರಗಣ್ಯರೆಂದು ಹೇಳಬಹುದು. ಕೇಂಬ್ರಿಜ್ ವಿಶ್ವವಿದ್ಯಾಲಯುವನ್ನು ಮಾರ್ಷಲ್ ಸೇರಿದಾಗ ಅರ್ಥಶಾಸ್ತ್ರ ಸ್ವತಂತ್ರವಿಭಾಗವಾಗಿರಲಿಲ್ಲ; ನೀತಿ ವಿಜ್ಞಾನ ಹಾಗೂ ಇತಿಹಾಸಗಳೊಳಗೆ ಸೇರಿದ್ದ ಅಧ್ಯಯನ ವಿಭಾಗವಾಗಿತ್ತು. ಈತ ಅಲ್ಲಿ ಅರ್ಥಶಾಸ್ತ್ರಕ್ಕೆ ಪ್ರತ್ಯೇಕ ಸ್ಥಾನ ದೊರಕಿಸಿಕೊಟ್ಟನಲ್ಲದೆ, ತನ್ನದೇ ಆದ ವಿಶಾಲವಾದ ಮತ್ತು ಆಳವಾದ ಅಧ್ಯಯನದ ಮೂಲಕ ಅರ್ಥಶಾಸ್ತ್ರಕ್ಕೆ ಹೊಸ ರೂಪ ಕೊಟ್ಟ. ಅರ್ಥಶಾಸ್ತ್ರ ಕೇವಲ ಸಂಪತ್ತಿನ ಶಾಸ್ತ್ರವಲ್ಲ; ಮಾನವನ ಅಧ್ಯಯನವೂ ಹೌದು. ಇದು ಮಾನವನ ಸಾಮಾಜಿಕ ಜೀವನದ ಒಂದು ಅಂಗವನ್ನು ಅಭ್ಯಸಿಸುವ ಶಾಸ್ತ್ರ; ಈ ಶಾಸ್ತ್ರದಲ್ಲಿ ನಿಗಮನ ಮತ್ತು ಅನುಗಮನ ತರ್ಕವಿಧಾನಗಳೆರಡಕ್ಕೂ ಅವಕಾಶವಿದೆ–ಎಂಬ ಅಂಶಗಳನ್ನು ಮಾರ್ಷಲ್ ಒತ್ತಿ ಹೇಳಿದ. ಸ್ವತ: ಪ್ರತಿಭಾವಂತ ಗಣಿತಜ್ಞನಾಗಿದ್ದರೂ ಆರ್ಥಿಕ ಸಿದ್ಧಾಂತವನ್ನು ಅತಿಯಾಗಿ ಗಣಿತಶಾಸ್ತ್ರದ ಕಡೆಗೆ ಒಯ್ಯದೆ ಸಮಾಜದ ಸಮಸ್ಯೆಗಳ ಪರಿಹಾರಕ್ಕೆ ಸಹಾಯಕವಾಗುವಂತೆ ಅರ್ಥಶಾಸ್ತ್ರವನ್ನು ಬಳಸಬೇಕೆಂಬ ಹೆಗ್ಗುರಿ ಆತನದಾಗಿತ್ತು. ಅರ್ಥಶಾಸ್ತ್ರದ ಅಧ್ಯಯನದ ಪರಮಗುರಿ ಸಮಾಜದ ಆರ್ಥಿಕ ಕಲ್ಯಾಣ ಸಾಧನೆ ಎಂಬುದು ಆತನ ನಂಬಿಕೆ. ಈ ಧೋರಣೆ ಕೇಂಬ್ರಿಜ್ ಪಂಥದ ಒಂದು ಮುಖ್ಯ ಲಕ್ಷಣ. ಅದು ಪ್ರತಿಪಾದಿಸಿರುವ ಶುದ್ಧ ಸಿದ್ಧಾಂತ ವಿಭಾಗದಲ್ಲಿ ಕೂಡ ಈ ಮಾನವ ದೃಷ್ಟಿ ಇರುವುದು ಕಂಡುಬರುತ್ತದೆ.

ಮಾರ್ಷಲನ ಕೃತಿಯಲ್ಲಿ ಮೌಲ್ಯ ಸಿದ್ಧಾಂತ ಹೊಸರೂಪ ತಾಳಿತು. ಆರ್ಥಿಕ ಸಮತೋಲನದ ರಚನೆಯ ಆಧಾರದ ಮೇಲೆ ಆತ ಮೌಲ್ಯ ವಿಶ್ಲೇಷಣೆ ಮಾಡಿದ್ದಾನೆ. ಆದರೆ, ಲಾಸೇನ್ ಪಂಥದ ಸಾರ್ವತ್ರಿಕ (ಜನರಲ್) ಸಮತೋಲನವನ್ನು ಅನುಸರಿಸದೆ ಕ್ಷೇತ್ರ (ಪರ್ಟಿಕ್ಯುಲರ್) ಸಮತೋಲನದ ರಚನೆಯನ್ನು ಆತ ಆಧಾರವಾಗಿಟ್ಟುಕೊಂಡ. ಇತರ ಸರಕುಗಳ ಬೆಲೆಗಳು ನಿರ್ದಿಷ್ಟಮಟ್ಟಗಳಲ್ಲಿವೆ ಎಂಬ ಊಹೆಯ ಆಧಾರದ ಮೇಲೆ ಒಂದು ಸರಕಿನ ಬೆಲೆಯ ನಿರ್ಣಯಾಂಶಗಳ ವಿಶ್ಲೇಷಣೆಯನ್ನು ಆತನ ಬೆಲೆ ಸಿದ್ಧಾಂತ ಒಳಗೊಂಡಿದೆ. ಈ ಒಂದು ಸರಕಿನ ಬೇಡಿಕೆ ಮತ್ತು ಸರಬರಾಯಿ ಪಟ್ಟಿಗಳನ್ನು (ಷೆಡ್ಯೂಲ್) ರಚಿಸಿ ಇವೆರಡರ ಸಂಬಂಧಗಳನ್ನು ವಿವೇಚಿಸಿ ಬೇಡಿಕೆ ಸರಬರಾಯಿಗಳ ಸಮತೋಲನ ಬಿಂದುವಿನ ಪ್ರಾಮುಖ್ಯವನ್ನು ತೋರಿಸಿದ್ದಾನೆ. ಅಂಚಿನ ಉಪಯುಕ್ತತೆಯ ಮೂಲಕ ಬೇಡಿಕೆಯೂ ಅಂಚಿನ ವೆಚ್ಚದ ಮೂಲಕ ಸರಬರಾಯಿಯು ಯಾವುದೇ ಒಂದು ಸರಕಿನ ಬೆಲೆಯನ್ನು ನಿರ್ಣಯಿಸುವ ಅಂಶಗಳಾಗಿವೆ. ಈ ವಿಷಯವನ್ನು ಕತ್ತರಿಯ ಉದಾಹರಣೆಯ ಮೂಲಕ ಮಾರ್ಷಲ್ ಸ್ಪಷ್ಟಪಡಿಸಿದ್ದಾನೆ. ಸರಬರಾಯಿ ಮತ್ತು ಬೇಡಿಕೆಗಳು ಕತ್ತರಿಯ ಅಲಗುಗಳಿದ್ದಂತೆ. ಕಾಗದದ ಚೂರೊಂದನ್ನು ಕತ್ತರಿಸುವಾಗ ಎರಡು ಅಲಗುಗಳೂ ಹೇಗೆ ಪಾತ್ರವಹಿಸುವುವೋ ಹಾಗೆಯೇ ಬೆಲೆ ನಿರ್ಣಯದಲ್ಲಿ ಬೇಡಿಕೆ ಸರಬರಾಯಿಗಳೆರಡರ ಪಾತ್ರವೂ ಆವಶ್ಯಕ. ಕೆಲವು ಸಂದರ್ಭಗಳಲ್ಲಿ ಸರಬರಾಯಿಯ ಅಲಗು ಅಚಲವಾಗಿದ್ದು, ಮುಖ್ಯವಾಗಿ ಬೇಡಿಕೆಯ ಅಲಗಿನ ಚಲನೆಯಿಂದ ಬೆಲೆ ನಿರ್ಣಯವಾಗುವುದಾದರೆ, ಇತರ ಸಂದರ್ಭಗಳಲ್ಲಿ ಬೇಡಿಕೆ ಸರಬರಾಯಿಗಳ ಅಲಗುಗಳೆರಡೂ ಚಲಿಸಿ ಬೆಲೆ ನಿರ್ಣಯಿಸುತ್ತವೆ. ಈ ಸಂದರ್ಭಗಳ ವಿವರಣೆಯನ್ನು ಮಾರ್ಷಲ್ ತನ್ನದೇ ಆದ ಕಾಲ ವಿಭಾಗಗಳ ವಿಂಗಡಣೆಯ ಮೂಲಕ ನೀಡಿದ್ದಾನೆ.

ಸಮತೋಲನವನ್ನು ನಿರ್ಮಿಸುವ ಸರಬರಾಯಿ–ಬೇಡಿಕೆ ಶಕ್ತಿಗಳು ನಾಲ್ಕು ಕಾಲಾವಧಿಗಳಲ್ಲಿ ವಿವಿಧ ರೀತಿಯಲ್ಲಿ ಕ್ರಿಯಾತ್ಮಕವಾಗುತ್ತವೆ. ತುಂಬ ಅಲ್ಪಕಾಲಾವಧಿಯಲ್ಲಿ ಸರಬರಾಯಿ ಸ್ಥಿರವಾಗಿದ್ದಾಗ ಬೆಲೆಯ ನಿರ್ಧಾರದಲ್ಲಿ ಬೇಡಿಕೆ ಪ್ರಧಾನಪಾತ್ರ ವಹಿಸುತ್ತದೆ. ಅಲ್ಪ ಕಾಲಾವಧಿಯಲ್ಲಿ ಪ್ರಸ್ತುತ ಇರುವ ಯಂತ್ರೋಪಕರಣಗಳ ಉಪಯೋಗದಿಂದ ಸಾಧ್ಯವಾಗುವಷ್ಟು ಮಟ್ಟಿಗೆ ಉತ್ಪಾದನೆ ಹಾಗೂ ಸರಬರಾಯಿಯನ್ನು ಅಧಿಕಗೊಳಿಸಲು ಅವಕಾಶವಿರುತ್ತದೆ. ದೀರ್ಘಕಾಲಾವಧಿಯಲ್ಲಿ ಸರಬರಾಯಿಯನ್ನು ಹೆಚ್ಚಿಸಲು ಹೊಸ ಯಂತ್ರೋಪಕರಣಗಳೂ ಉತ್ಪಾದನ ಘಟಕಗಳ ನಿರ್ಮಾಣಕ್ಕೆ ಬೇಕಾಗುವಷ್ಟು ಕಾಲಾವಕಾಶವೂ ಇರುವುವೆಂದು ಊಹಿಸಲಾಗಿದೆ. ಅತಿ ದೀರ್ಘ ಕಾಲಾವಧಿಯಲ್ಲಿ ಜನಸಂಖ್ಯೆ, ತಾಂತ್ರಿಕಜ್ಞಾನ, ಜನರ ಅಭಿರುಚಿ, ಉತ್ಪಾದನ ವ್ಯವಸ್ಥೆ ಇತ್ಯಾದಿಗಳಲ್ಲಿ ಆಗುವ ಬದಲಾವಣೆಗಳಿಂದ ಬೇಡಿಕೆ–ಸರಬರಾಯಿ ಶಕ್ತಿಗಳು ಪ್ರಭಾವಿತವಾಗುತ್ತವೆ. ಹೀಗೆ ಆರ್ಥಿಕ ವಿಶ್ಲೇಷಣೆಯಲ್ಲಿ ಕಾಲ ಮಹತ್ತ್ವದ ಅಂಶ ಎಂಬುದನ್ನು ಮಾರ್ಷಲ್ ಒತ್ತಿ ಹೇಳಿದ. ಇದು ಅರ್ಥಶಾಸ್ತ್ರಕ್ಕೆ ಕೇಂಬ್ರಿಜ್ ಪಂಥ ನೀಡಿದ ಮುಖ್ಯ ಕಾಣಿಕೆ.

ಮಾರ್ಷಲನ ವಿತರಣಸಿದ್ಧಾಂತ ನಿರೂಪಣೆಯಲ್ಲಿ ಅಭಿಜಾತ ಪರಂಪರೆಯ ಗುರುತುಗಳು ಎದ್ದು ಕಾಣುತ್ತವೆ. ಉತ್ಪಾದನಾಂಗವಾದ ಪ್ರಾಕೃತಿಕ ಸಂಪತ್ತಿನ ಪ್ರತಿಫಲ ಬಿನ್ನಕ ಹೆಚ್ಚುವರಿ (ಡಿಫರೆನ್ಷಿಯಲ್ ಸರ್ಪ್ಲಸ್) ಎಂಬ, ಡೇವಿಡ್ ರಿಕಾರ್ಡೋನ ಭಾವನೆಯನ್ನು ಮಾರ್ಷಲ್ ಹೆಚ್ಚು ವ್ಯಾಪಕವಾಗಿ ಅನ್ವಯಿಸಿದ್ದಾನೆ. ಉತ್ತಮ ಜಮೀನಿಗೂ ಪರಿಸರದ ಜಮೀನಿಗೂ ಇರುವ ಭಿನ್ನಕ ಹೆಚ್ಚುವರಿಯನ್ನು ಭೂಗೇಣಿ ಎಂದು ಅಭಿಜಾತ ಪಂಥ ಪರಿಗಣಿಸಿತ್ತು. ಇದೇ ಬಗೆಯ ಹೆಚ್ಚುವರಿಯ ಅಂಶ ಇತರ ಉತ್ಪಾದನಾಂಗಗಳ ಪ್ರತಿಫಲಗಳಾದ ಕೂಲಿ, ಬಡ್ಡಿ ಮತ್ತು ಲಾಭಗಳಲ್ಲೂ ಇರುವುದೆಂದು ಮಾರ್ಷಲ್ ತೋರಿಸಿಕೊಟ್ಟ. ಇದರಿಂದಾಗಿ ಅನುಭೋಗಿಯ ಹೆಚ್ಚುವರಿ ಇರುವಂತೆ ಉತ್ಪಾದಕನ ಹೆಚ್ಚುವರಿಯೂ ಇರುವುದುಂಟೆಂದು ಆತ ಹೇಳಿದ್ದಾನೆ. ಈ ಬಗೆಯ ಹೆಚ್ಚುವರಿಯ ಕಾರಣದ ವಿಶ್ಲೇಷಣೆಯಲ್ಲೂ ಮೌಲ್ಯ ಸಿದ್ಧಾಂತದ ವಿವರಣೆಯಲ್ಲಿರುವಂತೆಯೇ ಕಾಲದ ಪ್ರಾಮುಖ್ಯವನ್ನು ಒತ್ತಿ ಹೇಳಿದ್ದಾನೆ. ಅಲ್ಪ ಅವಧಿಯಲ್ಲಿ ಸ್ಥಿರ ಬಂಡವಾಳವನ್ನೂ, ಹೆಚ್ಚು ದಕ್ಷ ಉದ್ಯಮಿಗಳನ್ನೂ ಹೆಚ್ಚಿಸಲಾಗದುದರಿಂದ ಈ ಉತ್ಪಾದನಾಂಗಗಳಿಗೂ ಈ ವಿಚಾರದಲ್ಲಿ ಭೂಮಿಯ ಗುಣಗಳೇ ಇರುತ್ತವೆ. ಆದ್ದರಿಂದ ಇವಕ್ಕೆ ಕೂಡ ಅಲ್ಪ ಅವಧಿಯಲ್ಲಿ ಗೇಣಿಯ ಸ್ವಭಾವದ ಭಿನ್ನಕ ಹೆಚ್ಚುವರಿ–ಎಂದರೆ ಉತ್ತಮ ಅಂಚಿನ ಘಟಕಗಳ ಪ್ರತಿಫಲಗಳ ನಡುವಣ ವ್ಯತ್ಯಾಸಕ್ಕೆ ಸಮಾನವಾದ ಹೆಚ್ಚುವರಿ–ಲಭ್ಯವಾಗುತ್ತದೆ. ದೀರ್ಘ ಅವಧಿಯಲ್ಲಿ ಈ ಉತ್ಪಾದನಾಂಗಗಳ ಸರಬರಾಯಿಯನ್ನು ಹೆಚ್ಚಿಸಲು ಸಾಧ್ಯವಾಗುವುದರಿಂದ ಈ ಭಿನ್ನಕ ಹೆಚ್ಚುವರಿಯ ಅಂಶ ಮಾಯವಾಗುತ್ತದೆ. ಆದರೆ ಗೇಣಿ ಮಾತ್ರ ದೀರ್ಘ ಅವಧಿಯಲ್ಲೂ ಭಿನ್ನಕ ಹೆಚ್ಚುವರಿಯೇ ಆಗಿರುತ್ತದೆ. ಈ ಭಿನ್ನತೆಯನ್ನು ತೋರಿಸಲಿಕ್ಕಾಗಿ ಸ್ಥಿರ ಬಂಡವಾಳಕ್ಕೆ ಅಲ್ಪ ಕಾಲಾವಧಿಯಲ್ಲಿ ಸಿಗಬಹುದಾದ ಭಿನ್ನಕ ಹೆಚ್ಚುವರಿ ಅಂಶಕ್ಕೆ ಅರೆಗೇಣಿ ಎಂಬ ಪದವನ್ನು ಮಾರ್ಷಲ್ ಉಪಯೋಗಿಸಿದ್ದಾನೆ.

ಇಳಿಮುಖ ಮತ್ತು ಏರುಮುಖ ಪ್ರತಿಫಲ ನಿಯಮಗಳನ್ನು ಆಂತರಿಕ ಮಿತವ್ಯಯಾಂಶಗಳು, ಬಾಹ್ಯ ಮಿತವ್ಯಯಾಂಶಗಳೆಂಬ ಭಾವನೆಗಳ ಮೂಲಕ ವಿಶದಪಡಿಸಿರುವುದು ಅರ್ಥಶಾಸ್ತ್ರಕ್ಕೆ ಮಾರ್ಷಲ್ ನೀಡಿದ ಇನ್ನೊಂದು ಮುಖ್ಯ ವಿಶ್ಲೇಷಣ ಮಾರ್ಗವಾಗಿದೆ.

ಅಂತಾರಾಷ್ಟ್ರೀಯ ಮೌಲ್ಯವಿಭಾಗದಲ್ಲಿ ಮಾರ್ಷಲ್ ಪುಟಿತತೆಯ ಆಧಾರದ ಮೇಲೆ ಪರಸ್ಪರ ಬೇಡಿಕೆ ಹಾಗೂ ಸರಬರಾಯಿ ರೇಖೆಗಳ ಭಾವನೆಗಳನ್ನೂ ಸೃಜಿಸಿದ. ರಿಕಾರ್ಡೋವಿನ ಕೊಳ್ಳುವ ಶಕ್ತಿ ಸಮಾನತೆ ಸಿದ್ಧಾಂತವನ್ನೂ, ವಿದೇಶಿ ವಿನಿಮಯಗಳ ಸಂಬಂಧದಲ್ಲಿ ಚಿನ್ನದ ಅಂತರರಾಷ್ಟ್ರೀಯ ಪರ್ಯಟನ ಕುರಿತ ತತ್ತ್ವಗಳನ್ನೂ ಹಣ ವ್ಯವಸ್ಥೆ ಕುರಿತ ಅಂದಿನ ಅನೇಕ ಭಾವನೆಗಳನ್ನೂ ಆತ ಪುನರ್ರಚಿಸಿದ. ಹೀಗೆ ಅರ್ಥಶಾಸ್ತ್ರದ ವಿವಿಧ ವಿಭಾಗಗಳಲ್ಲಿ ಆರ್ಥಿಕ ವಿಶ್ಲೇಷಣೆಗೆ ಸಹಾಯಕವಾಗುವ ಅನೇಕ ಸಾಧನೆಗಳನ್ನು ಮಾರ್ಷಲ್ ಸೃಷ್ಟಿಸಿದ್ದಾನೆ. ಮಾರ್ಷಲನ ತರುವಾಯ ಆತನ ಪರಂಪರೆಯಲ್ಲಿ ಅರ್ಥಶಾಸ್ತ್ರವನ್ನು ಬೆಳೆಸಿದ ಕೇಂಬ್ರಿಜ್ ಪಂಥದ ಮೇಧಾವಿಗಳು ಇವನ್ನೂ ಇನ್ನೂ ಇತರ ವಿಭಾಗಗಳನ್ನೂ ಫಲವತ್ತಾಗುವಂತೆ ಬೆಳೆಸಿಕೊಂಡು ಬಂದಿದ್ದಾರೆ. ಪಿಗು ಸುಖೀ ಅರ್ಥಶಾಸ್ತ್ರವನ್ನೂ ಪಿಗು, ರಾಬರ್ಟ್‌ಸನ್ ಮತ್ತು ಕೇನ್ಸ್ ಆರ್ಥಿಕ ಆವರ್ತಗಳನ್ನೂ ಜೋನ್ ರಾಬಿನ್ಸನ್ ಮತ್ತು ಪಿಯರೋ ಸ್ರಾಫ ಅಪರಿಪೂರ್ಣ ಸ್ಪರ್ಧೆಯ ಸಿದ್ಧಾಂತವನ್ನೂ ಕುರಿತ ವಿಶೇಷ ಅಧ್ಯಯನ ಮಾಡಿದ್ದಾರೆ. ಕೇಂಬ್ರಿಜ್ ಪಂಥದಲ್ಲೇ ಅಲ್ಲದೆ ಇಡೀ ಅರ್ಥಶಾಸ್ತ್ರ ಪ್ರಪಂಚದಲ್ಲೇ ಅತ್ಯಂತ ಶೋಭಾಯಮಾನ ಸ್ಥಾನ ಹೊಂದಿರುವ ಕೇನ್ಸನ ಉದ್ಗ್ರಂಥಗಳು ಅರ್ಥಶಾಸ್ತ್ರ ಅಧ್ಯಯನಕ್ಕೆ ಹೊಸ ದೃಷ್ಟಿಯನ್ನೇ ನೀಡಿವೆ.

ಹಣದ ಮೌಲ್ಯ ಮೀಮಾಂಸೆಯ ಬಗ್ಗೆ ಕೇಂಬ್ರಿಜ್ ಪಂಥ ತನ್ನದೇ ಆದ ದೃಷ್ಟಿಕೋನವನ್ನು ಅನುಸರಿಸಿ ಹೊಸ ಭಾವನೆಗಳನ್ನು ಅರ್ಥಶಾಸ್ತ್ರಕ್ಕೆ ನೀಡಿತು. ಪ್ರೊ. ಆರ್ವಿಂಗ್ ಫಿಷರನ ಪರಿಮಾಣಸಿದ್ಧಾಂತದ ಸಮೀಕರಣಕ್ಕೆ ಪ್ರತಿಯಾಗಿ ಕೇಂಬ್ರಿಜ್ ಪಂಥ ಪ್ರತ್ಯೇಕವಾದ ಸಮೀಕರಣವನ್ನು ರಚಿಸಿತು. ಪ್ರತಿ ವ್ಯಕ್ತಿಯೂ ತನ್ನ ವರಮಾನದ ಒಂದು ಭಾಗವನ್ನು ಸರಕು ಸೇವೆಗಳನ್ನು ಕೊಳ್ಳುವ ಇಚ್ಛೆಯಿಂದ ನಗದಿನ ರೂಪದಲ್ಲಿ ಇಟ್ಟುಕೊಳ್ಳಬಯಸುತ್ತಾನೆ. ಜನಾಂಗದ ವ್ಯಕ್ತಿಗಳೆಲ್ಲ ಸೇರಿ ಹೀಗೆ ಇಟ್ಟುಕೊಳ್ಳಬಯಸುವ ನಗದಿನ ಪ್ರಮಾಣವೇ ಹಣಕ್ಕೆ ಜನಾಂಗದಲ್ಲಿರುವ ಒಟ್ಟು ಬೇಡಿಕೆ. ಈ ಹಣದ ಬೇಡಿಕೆಯಲ್ಲೂ ಸರಬರಾಯಿಯಲ್ಲೂ ಆಗುವ ಬದಲಾವಣೆಗಳು ಬೆಲೆಗಳ ಮಟ್ಟ ನಿರ್ಣಯಿಸುವುದರಲ್ಲಿ

ಸಮಾನ ಪ್ರಾಮುಖ್ಯ ಪಡೆದಿವೆ ಎಂಬುದು ಪರಿಮಾಣ ಸಿದ್ಧಾಂತ ಕುರಿತ ಕೇಂಬ್ರಿಜ್ ಸಮೀಕರಣದ ಸಾರಾಂಶ. ಜೆ.ಎಮ್.ಕೇನ್ಸ್ ತನ್ನ ಎ ಟ್ರೀಟೈಸ್ ಆನ್ ಮನಿ ಎಂಬ ಗ್ರಂಥದಲ್ಲಿ ಇದೇ ವಿಷಯದಲ್ಲಿ ಮೂಲಭೂತ ಸಮೀಕರಣಗಳು ಎಂದು ಕರೆಯಲಾದ ಹೊಸ ಸಮೀಕರಣಗಳನ್ನು ರಚಿಸಿದ. ಬೆಲೆಗಳ ಮಟ್ಟದ ನಿರ್ಣಯದಲ್ಲಿ ಉಳಿತಾಯ-ಹೂಟಿಗಳ ಪರಸ್ಪರ ಸಂಬಂಧ ಮುಖ್ಯ ಅಂಶವೆಂಬೂದೂ ಉಳಿತಾಯ ಮತ್ತು ಹೂಟಿಗಳು ಬಹಳಮಟ್ಟಿಗೆ ಕೇಂದ್ರ ಬ್ಯಾಂಕಿನ ಕ್ರಿಯೆಗಳಿಂದ ಪ್ರಭಾವಿತವಾಗಬಲ್ಲುವೆಂಬುದೂ ಕೇನ್ಸನ ಈ ಸಮೀಕರಣಗಳ ಹಿಂದೆ ಅಡಗಿರುವ ಮುಖ್ಯ ಭಾವನೆಗಳು. ಕೇಂಬ್ರಿಜ್ ಪಂಥದ ಈ ದೃಷ್ಟಿಕೋನ ಹಣದ ಮೌಲ್ಯ ಕುರಿತ ಮೀಮಾಂಸೆಯ ಅಧ್ಯಯನದಲ್ಲಿ ವಿಶೇಷ ಮಾನ್ಯತೆ ಗಳಿಸಿದೆ.

ಮಾರ್ಷಲನ ಶಿಷ್ಯವರ್ಗಕ್ಕೆ ಸೇರಿದ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ಪೀಠವನ್ನಲಂಕರಿಸಿದ ಇಟಲಿಯ ಪಿಯರೋ ಸ್ರಾಫ ಮತ್ತು ಜೋನ್ ರಾಬಿನ್ಸನ್‌ಗಳು ಅಪರಿಪೂರ್ಣ ಸ್ಪರ್ಧೆಯ ಆಧುನಿಕ ಸಿದ್ಧಾಂತದ ಬೆಳವಣಿಗೆಗೆ ಬಹುಮಟ್ಟಿಗೆ ಕಾರಣರಾಗಿದ್ದಾರೆ. ಪಿಯರೋ ಸ್ರಾಫ 1926ರಲ್ಲಿ ಪ್ರಕಟಿಸಿದ ಲೇಖನ ಈ ಸಿದ್ಧಾಂತದ ಚರ್ಚೆಗೆ ಆದಿಯಾಯಿತು. 1934ರಲ್ಲಿ ಜೋನ್ ರಾಬಿನ್ಸನ್ ಪ್ರಕಟಿಸಿದ ದಿ ಎಕನಾಮಿಕ್ಸ್ ಆಫ್ ಇಂಪರ್ಫೆಕ್ಟ್ ಕಾಂಪಿಟೇಷನ್ ಎಂಬ ಗ್ರಂಥ ಈ ವಿಷಯದ ವಿಸ್ತೃತ ನಿರೂಪಣೆಯಾಯಿತು. ಈ ಅಧ್ಯಯನಗಳು ಮೌಲ್ಯ ಮತ್ತು ವಿತರಣ ಸಿದ್ಧಾಂತಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿದುವು.

19ನೆಯ ಶತಮಾನದ ವ್ಯಕ್ತಿ ಸ್ವಾತಂತ್ರ್ಯ ತತ್ತ್ವವನ್ನೂ ವ್ಯಕ್ತಿಗಳ ಉದ್ಯಮಶೀಲತೆಯ ಕ್ರಿಯಾಶಕ್ತಿಯನ್ನೂ ಆರ್ಥಿಕ ರಂಗದಲ್ಲಿ ಸ್ಪರ್ಧಾಶಕ್ತಿಯ ಗುಣ ವಿಶೇಷವನ್ನೂ ಕೇಂಬ್ರಿಜ್ ಪಂಥ ಎತ್ತಿ ಹಿಡಿಯುವುದಾದರೂ ಇಂಥ ಖಾಸಗಿ ವ್ಯಕ್ತಿ ಸ್ವಾತಂತ್ರ್ಯ ಪದ್ಧತಿಯ ಇತಿಮಿತಿಗಳನ್ನೂ ಅದು ಸ್ಪಷ್ಟಗೊಳಿಸಿತು. ಮಾರ್ಷಲನೇ ಶುದ್ಧ ಬಂಡವಾಳ ಪದ್ಧತಿಯ ಇತಿಮಿತಿಗಳನ್ನು ಒತ್ತಿ ಹೇಳಿದ್ದ. ಆದರೆ, ವ್ಯಕ್ತಿಯ ಆರ್ಥಿಕ ಸ್ವಾತಂತ್ರ್ಯ ಪದ್ಧತಿಯ ಬಗ್ಗೆ 19ನೆಯ ಶತಮಾನದಲ್ಲಿ ಇದ್ದ ನಂಬಿಕೆಯನ್ನು ಪ್ರಶ್ನಿಸಿ ಅದರ ಬಗ್ಗೆ ಇದ್ದ ಧೋರಣೆಯಲ್ಲಿ ತೀವ್ರ ಮಾರ್ಪಾಡು ಉಂಟು ಮಾಡಿದವರು ಮುಖ್ಯವಾಗಿ ಮಾರ್ಷಲನ ತರುವಾಯ ಬಂದ ಪಿಗು ಮತ್ತು ಕೇನ್ಸ್.

ಪಿಗುವಿನ ಅಧ್ಯಯನದ ಫಲವಾಗಿ ಯೋಗಕ್ಷೇಮ ಅಥವಾ ಸುಖೀ ಅರ್ಥಶಾಸ್ತ್ರ ಎಂಬ ಹೊಸ ಅರ್ಥಶಾಸ್ತ್ರವಿಭಾಗವೇ ಬೆಳೆದಂತಾಯಿತು. ಮಾರ್ಷಲ್ ನಿರೂಪಿಸಿದ್ದ ಕ್ಷೇಮ ಸೂತ್ರಗಳು, ಉಪಯುಕ್ತತೆ ನಿಯಮಗಳು, ಅನುಭೋಗಿ ಹೆಚ್ಚುವರಿ ಇತ್ಯಾದಿ ವಿಷಯಗಳ ಆಧಾರದ ಮೇಲೆ ಆರ್ಥಿಕ ಯೋಗಕ್ಷೇಮ ಕುರಿತ ಉದ್ಗ್ರಂಥವನ್ನು ಪಿಗು ರಚಿಸಿದ. ಆತನ ವೆಲ್ಫೇರ್ ಎಕನಾಮಿಕ್ಸ್ (ಸುಖೀ ಅರ್ಥಶಾಸ್ತ್ರ) ಕೇಂಬ್ರಿಜ್ ಪಂಥದಲ್ಲಿ, ಮಾರ್ಷಲನ ಪ್ರಿನ್ಸಿಪಲ್ಸ್ ಆಫ್ ಎಕನಾಮಿಕ್ಸ್ ಗ್ರಂಥದ ಅನಂತರ ರಚಿತವಾದ, ಎರಡನೆಯ ಮೇರುಕೃತಿಯಾಗಿದೆ. ಯಾವುದೇ ಸಮುದಾಯದ ಸೌಖ್ಯದ ಮಟ್ಟ ರಾಷ್ಟ್ರೀಯ ವರಮಾನ, ಅದು ಜನಸಾಮಾನ್ಯರಲ್ಲಿ ವಿತರಣೆಯಾಗಿರುವ ಪ್ರಮಾಣ ಇವನ್ನು ಅವಲಂಬಿಸಿದೆಯೆಂಬುದು ಪಿಗುವಿನ ಅಭಿಪ್ರಾಯ. ಅಂದಮೇಲೆ, ರಾಷ್ಟ್ರೀಯ ವರಮಾನ ಹಾಗೂ ವಿತರಣೆಗಳ ಮೂಲಕ ಆರ್ಥಿಕ ಶಕ್ತಿಗಳು ಸಮುದಾಯದ ಕಲ್ಯಾಣದ ಮೇಲೆ ಪ್ರಭಾವಕಾರಕವಾಗಿರುತ್ತವೆ, ಎಂದಂತಾಯಿತು. ಸಮುದಾಯದ ಸೌಖ್ಯದ ಮಟ್ಟ ಗರಿಷ್ಠವಾಗುವಂತೆ ಆರ್ಥಿಕಶಕ್ತಿಗಳನ್ನು ರೂಢಿಸುವುದೇ ಆ ರಾಷ್ಟ್ರೀಯ ಸಂಪತ್ತಿನ ಆದರ್ಶ ಉಪಯೋಗ ಎಂಬುದು ಆತನ ಅಭಿಪ್ರಾಯ. ರಾಷ್ಟ್ರೀಯ ಸಂಪತ್ತಿನ ವಾಸ್ತವ ಉಪಯೋಗ ಆದರ್ಶ ಉಪಯೋಗಕ್ಕಿಂತ ಎಷ್ಟು ಮಟ್ಟಿಗೆ ಕಡಿಮೆ ಮಟ್ಟದಲ್ಲಿದೆ ಎಂಬುದನ್ನು ಅರಿಯಲು ವ್ಯಕ್ತಿಯ ನಿವ್ವಳ ಉತ್ಪನ್ನ, ಸಾಮಾಜಿಕ ನಿವ್ವಳ ಉತ್ಪನ್ನ ಎಂಬ ಎರಡು ಭಾವನೆಗಳನ್ನು ಆತ ಸೃಜಿಸಿದ್ದಾನೆ. ಈ ಎರಡು ಉತ್ಪನ್ನ ಮಟ್ಟಗಳೂ ಸಮನಾಗಿರುವ ಸ್ಥಿತಿಯಲ್ಲಿ ಸಮುದಾಯದ ಕಲ್ಯಾಣ ಗರಿಷ್ಠವಾಗಿರುತ್ತದೆ. ಇತರ ಪರಿಸ್ಥಿತಿಗಳು ಏಕರೀತಿ ಇರುವುದಾದರೆ, ನಿರ್ದಿಷ್ಟ ಪರಿಮಾಣದ ಸಂಪತ್ತು ಹೆಚ್ಚು ಸಮಾನವಾಗಿ ಹಂಚಿಕೆಯಾದರೆ ಇದರಿಂದ ಸಮುದಾಯದ ಕಲ್ಯಾಣ ಹೆಚ್ಚು ಸಾಧಿತವಾಗುತ್ತದೆ. ಉತ್ಪನ್ನ ಸಾಧನಗಳನ್ನು ವಿವಿಧ ಉತ್ಪಾದನಾಶಾಖೆಗಳಲ್ಲಿ ವಿತರಣೆ ಮಾಡುವಾಗ ಈ ವಿವಿಧ ಶಾಖೆಗಳಲ್ಲಿ ಅಂಚಿನ ಘಟಕಗಳ ಸಾಮಾಜಿಕ ಉತ್ಪನ್ನ ಸಮಾನವಾಗಿರುವಂತೆ ವಿತರಣೆ ಮಾಡಿದರೆ ಸಂಪತ್ತಿನ ಉತ್ಪಾದನೆಯೂ ಗರಿಷ್ಠಮಟ್ಟದಲ್ಲಿರುತ್ತದೆ. ವಾಸ್ತವ ಪ್ರಪಂಚದಲ್ಲಿ ಸಮುದಾಯದ ಗರಿಷ್ಠ ಕಲ್ಯಾಣಸಾಧನೆಗೆ ಅವಶ್ಯಕವಾದ ಪರಿಸ್ಥಿತಿಗಳು ಇಲ್ಲದಿರುವುದನ್ನು ದೃಷ್ಟಾಂತ ಸಮೇತವಾಗಿ ವಿವರಿಸಿ, ಸರ್ಕಾರ ತನ್ನ ವಿತ್ತೀಯ ನೀತಿಯ ಮತ್ತು ಇತರ ಕ್ರಮಗಳ ಮೂಲಕ ಸಾಮಾಜಿಕ ಉತ್ಪಾದಕತೆ ಹಾಗೂ ವೈಯಕ್ತಿಕ ಉತ್ಪಾದಕತೆಗಳ ನಡುವಣ ವ್ಯತ್ಯಾಸವನ್ನು ಕನಿಷ್ಠ ಮಟ್ಟಕ್ಕೆ ಇಳಿಸುವುದು ಸಾಧ್ಯವೆಂಬುದನ್ನು ಪಿಗು ತೋರಿಸಿಕೊಟ್ಟಿದ್ದಾನೆ. ಉದಾಹರಣೆಗೆ, ಕೃಷಿಗೆ ಪ್ರೋತ್ಸಾಹಧನ ನೀಡಿಕೆಯನ್ನೂ ಮಾದಕ ದ್ರವ್ಯಗಳ ಉತ್ಪಾದನೆ ಹಾಗೂ ಮಾರಾಟದ ಮೇಲೆ ಹೆಚ್ಚಿನ ತೆರಿಗೆ ಹೇರಿಕೆಯನ್ನೂ ವಿತ್ತೀಯ ಕ್ರಮಗಳ ಮೂಲಕ ವರಮಾನ ಹೆಚ್ಚು ಫಲದಾಯಕವಾಗುವಂತೆ ಸಮಾಜದ ವಿವಿಧ ಪಂಗಡಗಳವರಲ್ಲಿ ವರಮಾನ ವರ್ಗಾವಣೆ ಏರ್ಪಡಿಸುವುದನ್ನೂ ಏಕಸ್ವಾಮ್ಯದ ನಿಯಂತ್ರಣವನ್ನೂ ಆತ ಸಮರ್ಥಿಸುತ್ತಾನೆ. ಹೀಗೆ ಆರ್ಥಿಕ ಕಲ್ಯಾಣವನ್ನೇ ಮುಖ್ಯ ವಸ್ತುವಾಗಿಟ್ಟುಕೊಂಡು ಪಿಗು ರಚಿಸಿದ ಕೃತಿಯೂ ತರುವಾಯ ಆತ ಪ್ರಕಟಿಸಿದ ಸೋಷಿಯಲಿಸಂ ವರ್ಸಸ್ ಕ್ಯಾಪಿಟಲಿಸಂ ಎಂಬ ಗ್ರಂಥವೂ ಬಂಡವಾಳವಾದಿ ಮತ್ತು ಸಮಾಜವಾದಿ ವ್ಯವಸ್ಥೆಗಳ ಬಗ್ಗೆ ಕೇಂಬ್ರಿಜ್ ಪಂಥ ತಾಳಿರುವ ನಿಲುವನ್ನು ಪ್ರತಿನಿಧಿಸುತ್ತದೆಂದು ಹೇಳಬಹುದು.

ಕೇಂಬ್ರಿಜ್ ಪಂಥಕ್ಕೆ ಆಧುನಿಕ ರೂಪ ಕೊಟ್ಟ ಜಾನ್ ಮೇನರ್ಡ್ ಕೇನ್ಸ್ ಆರ್ಥಿಕ ಮೀಮಾಂಸೆಯ ಪ್ರಪಂಚದಲ್ಲಿ ಒಬ್ಬ ಯುಗಪುರುಷನಾಗಿದ್ದಾನೆ. ಈತನ ಆರ್ಥಿಕ ಚಿಂತನೆಗಳು ಮೂಲತ: ಕೇಂಬ್ರಿಜ್ ಪರಂಪರೆಯ ವೈಚಾರಿಕ ಹಾಗೂ ಮಾನವ ಯೋಗಕ್ಷೇಮದ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. ಅಭಿಜಾತ ಪಂಥದ ನಿಲುವಿನ ದೋಷಗಳನ್ನು ತೋರಿಸಿ ಹೊಸ ಅರ್ಥಶಾಸ್ತ್ರಕ್ಕೆ ತಳಹದಿ ಹಾಕಿದ ಕೀರ್ತಿ ಕೇನ್ಸನ ಮೂಲಕ ಕೇಂಬ್ರಿಜ್ ಪಂಥಕ್ಕೆ ಸೇರಿದೆ ಎಂದು ಹೇಳಬಹುದು. ನಿರುಪಾಧಿಕ ಹಾಗೂ ಪರಿಪೂರ್ಣ ಸ್ಪರ್ಧೆ ಇರುವ ಬಂಡವಾಳ ವ್ಯವಸ್ಥೆಯಲ್ಲಿ ಸರಬರಾಯಿ ತನ್ನ ಬೇಡಿಕೆಯನ್ನು ತಾನೇ ಹುಟ್ಟಿಸಿಕೊಳ್ಳುವುದು ಎಂಬುದು ಜೆ.ಬಿ. ಸೇಯ ನಿಯಮ; ಆದ್ದರಿಂದ ಸಾರ್ವತ್ರಿಕ ಅತ್ಯುತ್ಪಾದನೆ ಹಾಗೂ ಅನೈಚ್ಛಿಕ ನಿರುದ್ಯೋಗಗಳು ಅಸಂಭವ; ಪೂರ್ಣೋದ್ಯೋಗ ಮಟ್ಟದಲ್ಲಿ ಮಾತ್ರ ಆರ್ಥಿಕತೆ ಸಮತೋಲದಲ್ಲಿರುತ್ತದೆ; ಮಾರುಕಟ್ಟೆಯ ಅಗೋಚರ ಶಕ್ತಿಗಳ ಕ್ರಿಯೆಯಿಂದ ಪೂರ್ಣೋದ್ಯೋಗದ ಸಮತೋಲಸ್ಥಿತಿಯನ್ನು ಆರ್ಥಿಕತೆ ಸ್ವಯಂನಿಯಂತ್ರಿತವಾಗಿ ತಲುಪುವುದು-ಎಂಬುದು ಆವರೆವಿಗೆ ಪ್ರಚಲಿತವಾಗಿದ್ದ ಅಭಿಜಾತಪಂಥದ ವಾದ. ಈ ವಾದ ದೋಷಯುತ ಎಂಬುದನ್ನು ಕೇನ್ಸ್ ತೋರಿಸಿದ. ಉದ್ಯೋಗ ಮತ್ತು ವರಮಾನಮಟ್ಟಗಳ ಮುಖ್ಯ ನಿರ್ಣಾಯಕ ಅಂಶಗಳ ಬಗ್ಗೆ ಕೇನ್ಸ್ ಹೊಸ ವಿವರಣೆ ನೀಡಿದ್ದಾನೆ. ಆತ ಸೃಜಿಸಿದ ಅನೇಕ ಪಾರಿಭಾಷಿಕ ಪದಗಳೂ ವಿಶ್ಲೇಷಣ ಮಾರ್ಗವೂ ಆಧುನಿಕ ಸಮಷ್ಟಿ ಅರ್ಥಶಾಸ್ತ್ರದ (ಮ್ಯಾಕ್ರೊ-ಎಕನಾಮಿಕ್ಸ್) ಮತ್ತು ಅಭ್ಯುದಯ ಅರ್ಥಶಾಸ್ತ್ರದ ಅಧ್ಯಯನಕ್ಕೆ ಮಾರ್ಗ ಮಾಡಿಕೊಟ್ಟಿವೆ. ಜೋನ್ ರಾಬಿನ್ಸನ್ ಈಚೆಗೆ ಪ್ರಕಟಿಸಿದ ಅಕ್ಯುಮುಲೇಷನ್ ಆಫ್ ಕ್ಯಾಪಿಟಲ್ ಎಂಬುದು ಅಭ್ಯುದಯ ಅರ್ಥಶಾಸ್ತ್ರಕ್ಕೆ ಕೇಂಬ್ರಿಜ್ ಪಂಥದ ಒಂದು ಮುಖ್ಯ ಕೊಡುಗೆಯಾಗಿದೆ.

ಆರ್ಥಿಕ ಆವರ್ತಗಳ ಸಿದ್ಧಾಂತಗಳಿಗೆ ಕೇನ್ಸನ ಮೀಮಾಂಸೆ ಇನ್ನೊಂದು ಮುಖ್ಯವಾದ ಸಿದ್ಧಾಂತವನ್ನು ಸೇರಿಸಿತು. ಬಡ್ಡಿದರಕ್ಕೆ ಸಾಪೇಕ್ಷವಾಗಿ ಬಂಡವಾಳದ ಅಂಚಿನ ದಕ್ಷತೆಯಲ್ಲಿ ಆಗುವ ಏರಿಳಿತಗಳು ಆರ್ಥಿಕ ಚಕ್ರಗಳಿಗೆ ಮುಖ್ಯ ಕಾರಣವಾಗಿವೆ ಎಂಬುದಾಗಿ ಆತ ಹೇಳಿದ್ದಾನೆ. ಕೇನ್ಸನ ವಿಶ್ಲೇಷಣೆಯನ್ನೇ ಆಧಾರವಾಗಿಟ್ಟುಕೊಂಡು ರಾಬರ್ಟ್‌ಸನ್ ಉಳಿತಾಯ, ಹೂಟೆ ಇವುಗಳಲ್ಲಿ ಉಂಟಾಗುವ ಅಸಮತೋಲದಿಂದ ವಿಸ್ತರಣೆ ಮತ್ತು ಸಂಕೋಚಗಳು ಹೇಗೆ ಸಂಭವಿಸುವುವೆಂಬುದನ್ನು ವಿವರಿಸಿದ್ದಾನೆ. ಕೇಂಬ್ರಿಜ್ ಪಂಥದ ಈ ಸೈದ್ಧಾಂತಿಕ ಅಧ್ಯಯನಗಳು ಆಧುನಿಕ ಆರ್ಥಿಕ ಆವರ್ತ ನಿರೋಧಕ ನೀತಿಗಳಿಗೆ ಆಧಾರವಾಗಿವೆ. ಈ ಶತಮಾನದಲ್ಲಿ ವಿಕಾಸವಾಗಿ ಬಂದಿರುವ ಬಂಡವಾಳಶಾಹಿ ಪದ್ಧತಿಯಲ್ಲಿ ಪೂರ್ಣೋದ್ಯೋಗ ಹಾಗೂ ಸ್ತಿಮಿತತೆಯ ಪಾಲನೆಗೆ ಆರ್ಥಿಕ ಕ್ಷೇತ್ರದಲ್ಲಿ ನಿರ್ದಿಷ್ಟ ಸ್ವರೂಪದ ಹಾಗೂ ಗಾತ್ರದ ಸರ್ಕಾರಿ ಅಂತರಾಯಣ ಅವಶ್ಯಕ ಎಂಬ ಅಭಿಪ್ರಾಯವನ್ನು ಕೇನ್ಸ್ ಸಮರ್ಥಿಸಿದ್ದಾನೆ. ಎರಡನೆಯ ಮಹಾಯುದ್ಧದ ಅನಂತರದ ಕಾಲದ ವಿಶ್ವ ಹಣ ವ್ಯವಸ್ಥೆಯ ಪುನರ್ರಚನೆಯಲ್ಲಿ ಕೇನ್ಸನ ಪ್ರಭಾವ ಮಹತ್ತರವಾದ್ದಾಗಿತ್ತು.

ಹೀಗೆ ಅರ್ಥಶಾಸ್ತ್ರದ ವಿವಿಧ ವಿಭಾಗಗಳ ಅಧ್ಯಯನದಲ್ಲಿ ಕೇಂಬ್ರಿಜ್ ಪಂಥ ಗಣನೀಯ ಪಾತ್ರವಹಿಸಿದೆ. ಈ ಪಂಥದ ನಿಲುವುಗಳಲ್ಲಿ ಸಂಕುಚಿತ ಮನೋಭಾವದ ಯಾವ ಮಡಿವಂತಿಕೆಯೂ ಇಲ್ಲ. ಹಳೆಯ ಸಿದ್ಧಾಂತಗಳ ಶಾಶ್ವತ ಮೌಲ್ಯಗಳೊಡನೆ ಹೊಸದಾಗಿ ಹುಟ್ಟಿಸಿದ ಅನೇಕ ಭಾವನೆಗಳನ್ನೂ ಸಿದ್ಧಾಂತಗಳನ್ನೂ ಮೇಳೈಸಿ, ಅರ್ಥಶಾಸ್ತ್ರದ ಸ್ಥಾನಮಾನ ಹೆಚ್ಚಿಸಲು ಅಪೂರ್ವ ಮೇಧಾವಿಗಳ ನೇತೃತ್ವದಲ್ಲಿ ಕೇಂಬ್ರಿಜ್ ಪಂಥ ಶ್ರಮಿಸುತ್ತ ಬಂದಿದೆ. ಅಲ್ಲದೆ ಬದಲಾಯಿಸುತ್ತಿರುವ ಪ್ರಪಂಚಕ್ಕೆ ಸಂದರ್ಭೋಚಿತವಾದ ಆರ್ಥಿಕ ರೀತಿನೀತಿಗಳ ಬಗ್ಗೆ ಉಪಯುಕ್ತವಾದ ಮಾರ್ಗದರ್ಶನವನ್ನೂ ನೀಡುತ್ತಿದೆ. (ಎ.ಪಿ.ಎಸ್.)

**ಕೇಂಬ್ರಿಜ್ ರಿಚರ್ಡ್ ಓಅನ್ :** 1717-1802. ಇಂಗ್ಲಿಷ್ ಕವಿ ಮತ್ತು ಪ್ರಬಂಧಕಾರ. ಲಂಡನಿನಲ್ಲಿ ಹುಟ್ಟಿದ ಈತ ಆಕ್ಸ್‌ಫರ್ಡಿನ ಈಟನ್ ಮತ್ತು ಸೇಂಟ್ ಜಾನ್ಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ 1751ರಲ್ಲಿ ಟ್ವಿಕೆನ್ ಹ್ಯಾಮ್‌ಗೆ ತೆರಳಿದ. ಅಲ್ಲಿ ಈತನ ಸಮಕಾಲೀನರೆನಿಸಿದ ಥಾಮಸ್ ಗ್ರೇ, ಚಾರ್ಲ್ಸ್ ಜೇಮ್ಸ್ ಫಾಕ್ಸ್ ಮತ್ತು ಅರ್ಲ್ ಆಫ್ ಚಾಥಮ್ ಮುಂತಾದ ಪ್ರಸಿದ್ಧ ವ್ಯಕ್ತಿಗಳ ನಡುವೆ ಬಾಳಿದ. ಹೋರೇಸ್ ವಾಲ್‌ಪೋಲ್ ತನ್ನ ಬರಹಗಳಲ್ಲಿ ಬರುವ ಸುದ್ದಿ ಸಂಗ್ರಹಗಾರನ ವ್ಯಕ್ತಿ ಚಿತ್ರಣದಲ್ಲಿ ಕೇಂಬ್ರಿಜ್‌ನ ಹಾಸ್ಯ ಪ್ರಸಂಗಗಳನ್ನು ಉಲ್ಲೇಖಿಸಿದ್ದಾನೆ. 1753-56ರ ಗಡುವಿನಲ್ಲಿ ಕೇಂಬ್ರಿಜ್ 21 ಪ್ರಬಂಧಗಳನ್ನು ನೀಡಿದ್ದಾನೆ. ಈತನ ಪ್ರಖ್ಯಾತ ಕೃತಿ ಸ್ಕ್ರಿಬಲ್ ರೈಡ್ (1751). ಇದು ವಿದ್ಯಾಭ್ಯಾಸದ ವಿಡಂಬನಾತ್ಮಕ ಅಣಕುಕಾವ್ಯ. ಈತ ಟ್ವಿಕೆನ್‌ಹ್ಯಾಮ್‌ನಲ್ಲೇ ಮರಣ ಹೊಂದಿದ. *

**ಕೇಂಬ್ರಿಜ್ ವಿಶ್ವವಿದ್ಯಾಲಯ** : ಇಂಗ್ಲೆಂಡಿನ ಅತ್ಯಂತ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲೊಂದು. 11ನೆಯ ಶತಮಾನದ ವೇಳೆಗೇ ಕೇಂಬ್ರಿಜ್ ನಗರ ಒಂದು ಜ್ಞಾನಕೇಂದ್ರವೆಂದು ಕೀರ್ತಿ ಗಳಿಸಿತ್ತು. ಅಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಕ್ರೈಸ್ತಮಠಗಳೇ ಈ ಪ್ರಸಿದ್ಧಿಗೆ ಕಾರಣ. ಕೇಂಬ್ರಿಜ್ ವಿಶ್ವವಿದ್ಯಾಲಯದ ಇತಿಹಾಸ ಆರಂಭವಾದ್ದು 1209ರಲ್ಲಿ. ಆಕ್ಸ್‌ಫರ್ಡ್‌ನಲ್ಲಿ ಶಿಕ್ಷಣಾರ್ಥಿಗಳಿಗೂ ನಾಗರಿಕರಿಗೂ ನಡುವೆ ಸಂಭವಿಸಿದ ಘರ್ಷಣೆಯಿಂದಾಗಿ ಅನೇಕ ಮಂದಿ ವಿದ್ವಾಂಸರು ಕೇಂಬ್ರಿಜ್‌ಗೆ ಬಂದು ನೆಲಸಿದರು. ಅವರಲ್ಲಿ ಬಹುಮಂದಿ ಆಕ್ಸ್‌ಫರ್ಡ್‌ಗೆ ಹಿಂದಿರುಗಿದರಾದರೂ ಕೆಲವರು ಇಲ್ಲಿಯೇ ಉಳಿದರು. 1226ರಷ್ಟು ಹಿಂದೆಯೇ ಅಲ್ಲೊಬ್ಬ ಕುಲಾಧಿಪತಿ ಇದ್ದನೆಂಬುದು ಗೊತ್ತಾಗುತ್ತದೆ. ಪ್ಯಾರಿಸ್‌ನಿಂದ ಹೊರಬಿದ್ದ ವಿದ್ವಾಂಸರಿಗೆ 3ನೆಯ ಹೆನ್ರಿ ಇಂಗ್ಲೆಂಡಿನಲ್ಲಿ ಆಶ್ರಯ ನೀಡಿದಾಗ (1229) ಅವರಲ್ಲಿ ಕೆಲವರು ಕೇಂಬ್ರಿಜ್‌ಗೆ ಹೋದರೆಂದು ಗೊತ್ತಾಗುತ್ತದೆ. ಅನ್ಯದೇಶಗಳ ವಿದ್ವಾಂಸರ ಆಗಮನದಿಂದ ದೇಶದ ಗೌರವವೂ ಸಂಪತ್ತೂ ಹೆಚ್ಚುವುದರಿಂದ ಅವರನ್ನು ಸಂತೋಷದಿಂದ ಸ್ವಾಗತಿಸಬೇಕೆಂದು 1231ರಲ್ಲಿ ಇಂಗ್ಲೆಂಡಿನ ದೊರೆ ಕೇಂಬ್ರಿಜ್‌ನ ಮೇಯರಿಗೂ ನ್ಯಾಯಾಧಿಕಾರಿಗಳಿಗೂ ತಿಳಿಸಿದ. ಶಿಕ್ಷಣಾರ್ಥಿಗಳಲ್ಲಿ ಅವ್ಯವಸ್ಥೆ ಸಂಭವಿಸದಿರಲೆಂದೂ ಅವನು ತಕ್ಕ ಕ್ರಮ ಕೈಕೊಂಡ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅಧ್ಯಾಪಕನೊಬ್ಬನ ನೇತೃತ್ವಕ್ಕೊಳಪಡತಕ್ಕದ್ದೆಂದು ವಿಧಿಸಿದ. ಕೇಂಬ್ರಿಜ್ ವಿಶ್ವವಿದ್ಯಾಲಯ ಬಹಳ ಮಟ್ಟಿಗೆ ಆಕ್ಸ್‌ಫರ್ಡ್ ಪ್ಯಾರಿಸ್‌ಗಳಲ್ಲಿಯ ವ್ಯವಸ್ಥೆಗಳನ್ನೇ ಅನುಸರಿಸಿತು.

ವ್ಯಾಸಂಗಕ್ರಮ ಬಹಳಮಟ್ಟಿಗೆ ಪರಂಪರೆಯಿಂದ ಬಂದ ಕ್ರಮಕ್ಕೆ ಅನುಗುಣವಾಗಿತ್ತು; ಶಾಸ್ತ್ರತ್ರಯ (ಲ್ಯಾಟಿನ್ ವ್ಯಾಕರಣ, ಅಲಂಕಾರ, ತರ್ಕ) ಮತ್ತು ಚತುಶ್ಶಾಸ್ತ್ರ (ಅಂಕಗಣಿತ, ಜ್ಯಾಮಿತಿ, ಖಗೋಳವಿಜ್ಞಾನ, ಸಂಗೀತ) ಪದ್ಧತಿಗಳ ತಳಹದಿಯ ಮೇಲೆ ರಚಿತವಾಗಿತ್ತು. ಶಾಸ್ತ್ರತ್ರಯದ ವ್ಯಾಸಂಗಾವಧಿ ನಾಲ್ಕು ವರ್ಷ; ಅದಕ್ಕೆ ಬ್ಯಾಚೆಲರ್ ಆಫ್ ಆರ್ಟ್ಸ್ ಪದವಿಯೇ ಗಮ್ಯ. ಚತುಶ್ಶಾಸ್ತ್ರದ ವ್ಯಾಸಂಗಾವಧಿ ಮೂರು ವರ್ಷ ; ಮಾಸ್ಟರ್ ಆಫ್ ಆರ್ಟ್ಸ್ ಗಮ್ಯ. ದೇವತಾಶಾಸ್ತ್ರ (ಡಿವಿನಿಟಿ), ನ್ಯಾಯಶಾಸ್ತ್ರ, ವೈದ್ಯ ಇವುಗಳಲ್ಲಿ ಪದವಿ ಪಡೆಯಲು ಇನ್ನೂ ಮುಂದೆ ಓದಬೇಕಾಗಿತ್ತು. ಅಭ್ಯರ್ಥಿಯ ವಿದ್ವತ್ತು ಮತ್ತು ಸಾಮರ್ಥ್ಯಗಳನ್ನು ವಾದದ ಮೂಲಕ ಪರೀಕ್ಷಿಸಲಾಗುತ್ತಿತ್ತು.

ಮೊಟ್ಟಮೊದಲು ಇಲ್ಲಿ ಕಾಲೇಜುಗಳಿರಲಿಲ್ಲ. ವಿದ್ಯಾರ್ಥಿಗಳು ನಿಲಯಗಳಲ್ಲಿ ವಾಸಿಸುತ್ತಿದ್ದರು. ಅನೇಕರು ಇರುತ್ತಿದ್ದ ಇಂಥ ಸ್ಥಳಗಳಲ್ಲಿ ಶಿಸ್ತುಪಾಲನೆಯೇ ದೊಡ್ಡ ಸಮಸ್ಯೆಯಾಗಿತ್ತು. ಇಲ್ಲಿಯ ಮೊತ್ತಮೊದಲನೆಯ ಕಾಲೇಜಾದ ಪೀಟರ್‌ಹೌಸನ್ನು ಸ್ಥಾಪಿಸಿದ್ದಕ್ಕೆ (1284) ಈ ಸಮಸ್ಯೆಯ ಪರಿಹಾರವೂ ಒಂದು ಉದ್ದೇಶ. ಆ ಕಾಲೇಜಿಗೆ ಆಕ್ಸ್‌ಫರ್ಡಿನ ಮೆರ್ಟನ್ ಕಾಲೇಜೇ ಮಾದರಿಯಾಗಿತ್ತು. ಮುಂದಿನ 70 ವರ್ಷಗಳಲ್ಲಿ ಇನ್ನೂ ಏಳು ಕಾಲೇಜುಗಳು ಸ್ಥಾಪಿತವಾದುವು. ಇವುಗಳಲ್ಲಿ ಕೆಲವು ಇಂದು ಇಲ್ಲ; ಇನ್ನು ಕೆಲವು ಇತರ ಕಾಲೇಜುಗಳೊಂದಿಗೆ ವಿಲೀನಗೊಂಡಿವೆ.

13ನೆಯ ಮತ್ತು 14ನೆಯ ಶತಮಾನಗಳಲ್ಲಿ ವಿಶ್ವವಿದ್ಯಾಲಯ ಅಷ್ಟೇನೂ ಪ್ರಾಧಾನ್ಯ ಗಳಿಸಿರಲಿಲ್ಲ. 1318ರಲ್ಲಿ 22ನೆಯ ಪೋಪ್ ಜಾನ್ ಇದಕ್ಕೆ ಮನ್ನಣೆ ನೀಡಿದನಾದರೂ ಆಕ್ಸ್‌ಫರ್ಡ್‌ನ ಕೆಲವು ಅಧ್ಯಾಪಕರಷ್ಟು ಪ್ರಸಿದ್ಧರಾದ ಅಧ್ಯಾಪಕರು ಇಲ್ಲಿ ಇರಲಿಲ್ಲ. 14ನೆಯ ಶತಮಾನದಲ್ಲಿ ಲೊಲಾರ್ಡಿ ಎಂಬವನಿಂದ ಆಕ್ಸ್‌ಫರ್ಡ್‌ನ ಕೀರ್ತಿಗೆ ಭಂಗ ಬಂದಾಗ ಕೇಂಬ್ರಿಜ್‌ನ ದೆಸೆ ಖುಲಾಯಿಸಿತು. 1441ರಲ್ಲಿ 6ನೆಯ ಹೆನ್ರಿ ಇಲ್ಲಿ ಒಂದು ಕಾಲೇಜು ಸ್ಥಾಪಿಸಿದ. ಮುಂದಿನ 60 ವರ್ಷಗಳಲ್ಲಿ ಇನ್ನು ಮೂರು ಕಾಲೇಜುಗಳು ಸ್ಥಾಪಿತವಾದುವು. 7ನೆಯ ಹೆನ್ರಿಯ ತಾಯಿಯಾದ ಲೇಡಿ ಮಾರ್ಗರೆಟ್ ಬ್ಯೂಫೋರ್ಟ್ 1502ರಲ್ಲಿ ದೇವತಾಶಾಸ್ತ್ರದ ಪ್ರಾಧ್ಯಾಪಕನನ್ನು ನೇಮಿಸಿದಳು. ಇದೇ ಕೇಂಬ್ರಿಜ್ ವಿಶ್ವವಿದ್ಯಾಲಯದ ಪ್ರಥಮ ಪ್ರಾಧ್ಯಾಪಕ ಹುದ್ದೆ. ಈ ಹುದ್ದೆಗೆ 1511ರಲ್ಲಿ ಇರಾಸ್ಮಸ್ ನೇಮಕಗೊಂಡ. ಸಾಂಸ್ಕೃತಿಕ ಪುನರುಜ್ಜೀವನದ ಹಾದಿಯಲ್ಲಿ ಕೇಂಬ್ರಿಜ್‌ನ್ನು ಕೊಂಡೊಯ್ಯಲು ಇರಾಸ್ಮಸ್ ಮಾಡಿದ ಕೆಲಸ ಅಗಾಧ. ಅನೇಕರು ಸುಧಾರಣ ಮನೋಧರ್ಮಕ್ಕೆ ಅಭಿವ್ಯಕ್ತಿ ನೀಡಿದರು. 1535ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ ಥಾಮಸ್ ಕ್ರಾಮ್ವೆಲನ ಆಯ್ಕೆಯಾಯಿತು. ಕೇಂಬ್ರಿಜ್‌ಗೆ ಪ್ರಾಟೆಸ್ಟಂಟ್ ಬಣ್ಣ ಬಂತು. 1540ರಲ್ಲಿ ದೊರೆ ಅನೇಕ ವಿಷಯಗಳಲ್ಲಿ ಪ್ರಾಧ್ಯಾಪಕ ಹುದ್ದೆಗಳನ್ನು ಸ್ಥಾಪಿಸಿದ. ಕೇಂಬ್ರಿಜ್ ವಿಶ್ವವಿದ್ಯಾಲಯದ ಅತ್ಯಂತ ದೊಡ್ಡ ಕಾಲೇಜಾದ ಟ್ರಿನಿಟಿ ಕಾಲೇಜನ್ನು ದೊರೆ ಸ್ಥಾಪಿಸಿದ್ದು 1546ರಲ್ಲಿ. ಮೇರಿಯ ಕಾಲದಲ್ಲಿ ವಿಶ್ವವಿದ್ಯಾಲಯದ ಪ್ರಗತಿಗೆ ತಡೆ ಬಿತ್ತು. ಆದರೆ 1ನೆಯ ಎಲಿಜಬೆತ್‌ಳ ಕಾಲದಲ್ಲಿ ಮತ್ತೆ ಅದು ಮುನ್ನಡೆಯತೊಡಗಿತ್ತು. 1570ರಲ್ಲಿ ಅವಳು ವಿಶ್ವವಿದ್ಯಾಲಯಕ್ಕೆ ಹೊಸ ಅಧಿನಿಯಮಗಳನ್ನು (ಸ್ಟ್ಯಾಚ್ಯೂಟ್ಸ್) ನೀಡಿದಳಲ್ಲದೆ ಮರುವರ್ಷ ವಿಶ್ವವಿದ್ಯಾಲಯವನ್ನು ಪಾರ್ಲಿಮೆಂಟಿನ ಕಾಯಿದೆಯೊಂದರ ಮೂಲಕ ನಿಗಮಿತಗೊಳಿಸಿದಳು. ಹೊಸ ಅಧಿನಿಯಮಗಳು ಮುಂದೆ ಮೂರು ಶತಮಾನಗಳ ಕಾಲ ಜಾರಿಯಲ್ಲಿದ್ದವು. ವಿಶ್ವವಿದ್ಯಾಲಯದ ಆಡಳಿತ ಅಲ್ಲಿಯ ಕಾಲೇಜುಗಳ ಮುಖ್ಯರಲ್ಲಿ ನಿಹಿತವಾಗಿತ್ತು. ಯಾವುದೇ ಕಾಲೇಜಿನ ಸದಸ್ಯತ್ವವಿಲ್ಲದೆ ವಿಶ್ವವಿದ್ಯಾಲಯದ ಸದಸ್ಯತ್ವ ದೊರಕುವಂತಿರಲಿಲ್ಲ.

ಎಲಿಜಬೆತ್‌ಳ ಕಾಲದಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ಯೂರಿಟನ್ ಮನೋಭಾವ ಬೆಳೆಯಿತು. ಆಗ ಸ್ಥಾಪಿತವಾದ ಎರಡು ಕಾಲೇಜುಗಳು ಈ ದೃಷ್ಟಿಯನ್ನೇ ತಳೆದವು. ವಿಶ್ವವಿದ್ಯಾಲಯಕ್ಕೆ ಪ್ರವೇಶಗಳು ಕ್ರಮೇಣ ಹೆಚ್ಚಿದುವು. ಆದರೆ ಇಂಗ್ಲಿಷ್ ಅಂತರ್ಯುದ್ಧದ ಕಾಲದಲ್ಲಿ ಪ್ರವೇಶ ಇಳಿಮುಖವಾಯಿತು. ಇದೇ ಪ್ರವೃತ್ತಿ ಮುಂದಿನ ಎರಡು ಶತಮಾನಗಳ ಕಾಲ ಇತ್ತು. ಸುಪ್ರಸಿದ್ಧ ವಿಜ್ಞಾನಿ ಇಸಾಕ್ ನ್ಯೂಟನ್ ಕೇಂಬ್ರಿಜ್‌ನಲ್ಲಿ ಮೂವತ್ತು ವರ್ಷಗಳ ಕಾಲ ಪ್ರಾಧ್ಯಾಪಕನಾಗಿದ್ದ.

ವಿಶ್ವವಿದ್ಯಾಲಯದ ಆನರ್ಸ್ ಪರೀಕ್ಷೆ ಆರಂಭವಾದ್ದು 18ನೆಯ ಶತಮಾನದಲ್ಲಿ. ಪ್ರಥಮತಃ ಇದು ಗಣಿತಶಾಸ್ತ್ರಕ್ಕೆ ಸಂಬಂಧಿಸಿತ್ತು. ಟ್ರೈಪಾಸ್ ಎಂದು ಅದರ ಹೆಸರು. ವಾದಗಳಲ್ಲಿ ಮೊದಲು ಬಳಸುತ್ತಿದ್ದ ತ್ರಿಪಾದಿ ಪೀಠದಿಂದಾಗಿ ಈ ಹೆಸರು ಬಂತು. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರನ್ನು ರ್‍ಯಾಂಗ್ಲರುಗಳೆಂದು ಕರೆಯಲಾಗುತ್ತಿತ್ತು. ಉಳಿದ ವಿಚಾರಗಳಲ್ಲಿ 18ನೆಯ ಶತಮಾನದಲ್ಲಿ ಅಷ್ಟೇನೂ ಪ್ರಗತಿ ಸಾಧಿಸಲಿಲ್ಲವಾದರೂ ಟ್ರೈಪಾಸ್ ಮತ್ತು ರ್‍ಯಾಂಗ್ಲರುಗಳ ಬಗ್ಗೆ ಗೌರವ ಬೆಳೆಯಿತು. ಈ ವಿಶ್ವವಿದ್ಯಾಲಯ ಅನೇಕ ಗಣಿತವಿಜ್ಞಾನಿಗಳ ತೊಟ್ಟಿಲಾಯಿತು.

ವಿಶ್ವವಿದ್ಯಾಲಯದ ಶೀಘ್ರ ಬೆಳವಣಿಗೆಗೆ ಕಾರಣವಾದ್ದವೆಂದರೆ 1856ರಲ್ಲಿ ಪಾರ್ಲಿಮೆಂಟ್ ಅನುಮೋದಿಸಿದ ಕಾಯಿದೆ. ಇದರಿಂದ ವಿಶ್ವವಿದ್ಯಾಲಯದಲ್ಲಿ ಅನೇಕ ಸುಧಾರಣೆಗಳಾದುವು. ಅದರ ಆಡಳಿತಕ್ಕಾಗಿ ಸೆನೆಟಿನ ಸಮಿತಿಯ ರಚನೆಯಾಯಿತು. ದೇವತಾಶಾಸ್ತ್ರ ಬಿಟ್ಟು ಉಳಿದ ಪದವಿಗಳಿಗೆ ಮತೀಯ ಪರೀಕ್ಷೆಗಳನ್ನು ರದ್ದುಪಡಿಸಲಾಯಿತು. ಹೊಸ ಉಪನ್ಯಾಸ ಭವನಗಳು ವಸ್ತು ಸಂಗ್ರಹಾಲಯಗಳು ಹೊಸ ಟ್ರೈಪಾಸುಗಳು ಪ್ರಾಧ್ಯಾಪಕತ್ವಗಳು ನಿರ್ಮಾಣವಾದುವು. 1871ರಲ್ಲಿ ಡೇವನ್‌ಷೈರಿನ ಡ್ಯೂಕ್ ಆಗಿದ್ದ ವಿಲಿಯಂ ಕ್ಯಾವೆಂಡಿಷನ ನೆರವಿನಿಂದ ವಿಶ್ವವಿದ್ಯಾಲಯದಲ್ಲಿ ಪ್ರಾಯೋಗಿಕ ಭೌತವಿಜ್ಞಾನದ ಕ್ಯಾವೆಂಡಿಷ್ ಪ್ರಾಧ್ಯಾಪಕ ಹುದ್ದೆಯ ಸ್ಥಾಪನೆಯಾಯಿತು. ವಿಶ್ವವಿದ್ಯಾಲಯವನ್ನು ಪ್ರವೇಶಿಸುವರ ಸಂಖ್ಯೆಯೂ ಬೆಳೆಯಿತು. ಮಹಿಳೆಯರ ಪ್ರಥಮ ಕಾಲೇಜು ಆರಂಭವಾದ್ದು 1870ರಲ್ಲಿ.

ಇವೆಲ್ಲ ಕಲಾಪಗಳಿಂದಾಗಿ ವಿಶ್ವವಿದ್ಯಾಲಯದ ಹಣಕಾಸಿನ ಪರಿಸ್ಥಿತಿ ಕಠಿಣವಾಯಿತು. 1877ರ ಕಾಯ್ದೆಯೊಂದರ ಪ್ರಕಾರ ಕಾಲೇಜುಗಳು ವಿಶ್ವವಿದ್ಯಾಲಯಕ್ಕೆ ಚಂದಾ ಸಲ್ಲಿಸುವುದು ಕಡ್ಡಾಯವಾಗಿದ್ದರೂ ಆ ಶತಮಾನದ ಕೊನೆಯ ಭಾಗದಲ್ಲಿ ಸಂಭವಿಸಿದ ಕೃಷಿ ಮುಗ್ಗಟ್ಟಿನಿಂದಾಗಿ ಹಣ ಪಾವತಿ ಬಹುತೇಕ ಅಸಾಧ್ಯವಾಯಿತು. ಸಾರ್ವಜನಿಕರ ನೆರವಿಗಾಗಿ 1897ರಲ್ಲಿ ವಿಶ್ವವಿದ್ಯಾಲಯ ಮಾಡಿಕೊಂಡ ಮನವಿಯೂ ಸಂಪೂರ್ಣವಾಗಿ ಫಲಿಸಲಿಲ್ಲ. ಸರ್ಕಾರದ ಸಹಾಯವನ್ನು ಬೇಡಬೇಕಾಗಿ ಬಂತು. ಅಷ್ಟರಲ್ಲಿ ಒಂದನೆಯ ಮಹಾಯುದ್ಧ ಬಂದದ್ದರಿಂದ ಸರ್ಕಾರದ ನೆರವು ಹೆಚ್ಚಾಗಿ ಬರಲಿಲ್ಲ. ಯುದ್ಧಾನಂತರದ ಕಾಲದಲ್ಲಿ ವಿಶ್ವವಿದ್ಯಾಲಯಗಳ ಧನ ಮೂಲಗಳ ಬಗ್ಗೆ ವಿಚಾರಣೆ ನಡೆಸಲು ಆಯೋಗವೊಂದರ ನೇಮಕವಾಯಿತು. ಅದರ ವರದಿಯ ಪ್ರಕಾರ ವಿಶ್ವವಿದ್ಯಾಲಯದಲ್ಲಿ ವ್ಯಾಪಕ ಸುಧಾರಣೆಗಳಾದುವು. ಸಿಬ್ಬಂದಿಯ ನಿವೃತ್ತಿ ವಯಸ್ಸಿನ ನಿರ್ಧಾರ ಕ್ರಮ, ಶಿಕ್ಷಣ ನಿಕಾಯಗಳಾಗಿ ಅಧ್ಯಾಪಕರ ವರ್ಗೀಕರಣ–ಇವು ಆಗಿನ ಸುಧಾರಣೆಗಳಲ್ಲಿ ಸೇರಿದ್ದವು.

ಒಂದನೆಯ ಮಹಾಯುದ್ಧದ ಅನಂತರದ ಕಾಲದಲ್ಲಿ ಅನೇಕ ಮೇಧಾವಿಗಳು ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡರು. ಜೋಸೆಫ್ ಜೆ. ಥಾಮ್ಸನ್, ಲಾರ್ಡ್ ರೂದರ್‌ಫರ್ಡ್, ಜೆ.ಎಂ. ಕೇನ್ಸ್, ಜಿ.ಎಂ. ಟ್ರೆವಿಲ್ಯನ್–ಇವರು ಕೆಲವರು. ಯುದ್ಧ ನಿಂತ

ಟ್ರಿನಿಟಿ ಕಾಲೇಜಿನ ಒಂದು ಭಾಗ

ಮರುವರ್ಷ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದ ವಿದ್ಯಾರ್ಥಿಗಳ ಸಂಖ್ಯೆ ತೀವ್ರವಾಗಿ ಅಧಿಕವಾಯಿತಾದರೂ (2,400) ಅನಂತರ ಇಳಿಯಿತು. ಈ ಇಳಿತವನ್ನು ತಡೆಗಟ್ಟಲು ಸರ್ಕಾರ ಅನೇಕ ವಿದ್ಯಾರ್ಥಿ ವೇತನಗಳನ್ನು ನೀಡಿತು.

ಎರಡನೆಯ ಮಹಾಯುದ್ಧ ಕಾಲದಲ್ಲಿ ನುರಿತ ವಿಜ್ಞಾನಿಗಳಿಗೆ ಬೇಡಿಕೆ ಅಧಿಕವಾದುದರಿಂದ ಒಂದೆರಡು ವರ್ಷಗಳ ಕಿರು ಅವಧಿಯ ವ್ಯಾಸಂಗ ಕ್ರಮಗಳಿಗೆ

ಅನೇಕ ವಿದ್ಯಾರ್ಥಿಗಳು ಸೇರಿದರು. ಯುದ್ಧಾನಂತರದಲ್ಲಿ ಒಂದನೆಯ ಮಹಾಯುದ್ಧಾನಂತರ ಸಂಭವಿಸಿದಂತೆ ಥಟ್ಟನೆ ಏರಿಳಿತಗಳೇನೂ ಆಗಲಿಲ್ಲ. ಅಧ್ಯಾಪಕರ ಮತ್ತು ಸಂಶೋಧಕರ ಸಂಖ್ಯೆ ಅಧಿಕವಾಯಿತು.

**ರಚನೆ :** ಕೇಂಬ್ರಿಜ್ ವಿಶ್ವವಿದ್ಯಾಲಯ ಒಂದು ಸ್ವಯಂ ಆಡಳಿತ ಸಂಸ್ಥೆ. ಅದರ ಹಿರಿಯ ಸದಸ್ಯರಲ್ಲಿ ಅಧಿಕಾರ ನಿಹಿತವಾಗಿರುತ್ತದೆ. ಸಂಸ್ಥೆಯ ಅಧಿನಿಯಮಗಳನ್ನು ಪ್ರಿವಿ ಕೌನ್ಸಿಲಿನ ಮಂಜೂರಾತಿ ಇಲ್ಲದೆ ಬದಲಿಸಲಾಗದು. ಅವುಗಳ ಪರಿಮಿತಿಯೊಳಗೆ ಆಡಳಿತ ನಿರ್ವಹಣೆಗಾಗಿ ಯುಕ್ತ ಆಜ್ಞೆಗಳನ್ನು ಮಾಡಬಹುದು. ಸೆನೆಟ್ ಮತ್ತು ರೀಜೆಂಟ್ ಹೌಸ್ ಎರಡು ಮುಖ್ಯ ಸದನಗಳು. ಬ್ಯಾಚೆಲರ್ ಅಂತಸ್ತಿಗಿಂತ ಹೆಚ್ಚಿನ ಎಲ್ಲ ಸ್ನಾತಕರೂ ಸೆನೆಟಿನ ಸದಸ್ಯರು. ಸೆನೆಟಿನ ಸದಸ್ಯನಾಗಿರದ ಬ್ಯಾಚೆಲರ್ ಆಫ್ ಆರ್ಟ್ಸ್ ಆದಾತ ಮಾಸ್ಟರ್ ಆಫ್ ಆರ್ಟ್ಸ್ ಪದವಿ ಪಡೆದು ಅದರ ಸದಸ್ಯನಾಗಬಹುದು. ವಿಶ್ವವಿದ್ಯಾಲಯದ ಶಿಷ್ಯರಲ್ಲಿ ಬಹುಮಂದಿ ಅದರ ಸದಸ್ಯರಾಗಿರುವುದರಿಂದ ಅದೊಂದು

ಟ್ರಿನಿಟಿ ಕಾಲೇಜ್ ಗ್ರಂಥಾಲಯದ ಒಂದು ಒಳನೋಟ

ದೊಡ್ಡ ಸದಸ್ಸಾಗಿದೆ. ರೀಜೆಂಟ್ ಹೌಸ್ ಸಣ್ಣದು. ವಿಶ್ವವಿದ್ಯಾಲಯದಲ್ಲೂ ಕಾಲೇಜಿನಲ್ಲೂ ಅಧಿಕಾರ ಅಥವಾ ಹುದ್ದೆ ಪಡೆದಿರುವ ಸೆನೆಟ್ ಸದಸ್ಯರು ರೀಜೆಂಟ್ ಹೌಸಿನ ಸದಸ್ಯರು. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ವಿಷಯಗಳು ರೀಜೆಂಟ್ ಹೌಸಿನ ಮುಂದೆ ಬರುತ್ತವೆ. ಪದವಿ ಪ್ರದಾನ, ಮುಖ್ಯ ಹುದ್ದೆಗಳಿಗೆ ನೇಮಕ–ಈ ಅಧಿಕಾರಗಳಿರುವುದು ಸೆನೆಟ್‌ನಲ್ಲಿ. ಇವಕ್ಕೆ ಕೆಳಗಡೆಯಲ್ಲಿ ಅನೇಕ ವಿಷಯ ಮಂಡಳಿಗಳು ಸಿಂಡಿಕೇಟುಗಳು ಇವೆ. ಪರಿಶೀಲನಾರ್ಹವಾದ ಪ್ರತಿಯೊಂದು ಸೂಚನೆಗೂ ಸೆನೆಟ್ ಸಮಿತಿಯ ಒಪ್ಪಿಗೆ ದೊರಕಬೇಕು. ಕುಲಾಧಿಪತಿ, ಕುಲಪತಿ, ರೀಜೆಂಟ್ ಹೌಸಿನಿಂದ ಅದರ ಸದಸ್ಯರ ಪೈಕಿಯಿಂದಲೇ ಆಯ್ಕೆ ಹೊಂದಿದ 16 ಸದಸ್ಯರು–ಇವರು ಸೆನೆಟ್ ಕೌನ್ಸಿಲಿನ ಸದಸ್ಯರು. ಈ ಸದಸ್ಯರ ಪೈಕಿ ನಾಲ್ವರು ಕಾಲೇಜಿನ ಮುಖ್ಯಾಧಿಕಾರಿಗಳು ಮತ್ತು ನಾಲ್ವರು ಪ್ರಾಧ್ಯಾಪಕರು ಅಥವಾ ಪ್ರವಾಚಕರು ಇರಬೇಕು. ಕುಲಾಧಿಪತಿ ಸಾಮಾನ್ಯವಾಗಿ ವಿಶ್ವವಿದ್ಯಾಲಯದ ನಿವಾಸಿಯಲ್ಲ. ಅವನ ಗೈರು ಹಾಜರಿಯಲ್ಲಿ ಕುಲಪತಿಯೇ ಸಮಿತಿಯ ಅಧ್ಯಕ್ಷನಾಗಿರುತ್ತಾನೆ. ಶಿಕ್ಷಣ ನೀತಿಯ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡುವುದು ಬೋಧನೆ, ಸಂಶೋಧನೆಗಳ ಮಟ್ಟವನ್ನು ರಕ್ಷಿಸುವುದು ಶಿಕ್ಷಣ ನಿಕಾಯಗಳ ಸಾಮಾನ್ಯ ಮಂಡಳಿಯ ಕರ್ತವ್ಯ. ವಿಶ್ವವಿದ್ಯಾಲಯದ ಆಸ್ತಿಯ ನಿರ್ವಹಣೆ, ವೆಚ್ಚದ ನಿಯಂತ್ರಣ ಇವು ಹಣಕಾಸಿನ ಮಂಡಳಿಯ ಹೊಣೆ. ಇವೆರಡಕ್ಕೂ ಕುಲಪತಿಯೇ ಅಧ್ಯಕ್ಷ. ಕಾಲೇಜುಗಳ ಮುಖ್ಯರಲ್ಲಿ ಯಾರನ್ನಾದರೂ ಕುಲಪತಿಯ ಸ್ಥಾನಕ್ಕೆ ಸೆನೆಟ್ ಸಮಿತಿ ನಾಮಕರಣ ಮಾಡಬಹುದು. ಅವನನ್ನು ರೀಜೆಂಟ್ ಹೌಸ್ ಚುನಾಯಿಸುತ್ತದೆ. ಅವನ ಅಧಿಕಾರದ ಅವಧಿ ಎರಡು ವರ್ಷ.

ಈ ವಿಶ್ವವಿದ್ಯಾಲಯವು ಆಕ್ಕಾಲಕ್ಕಾಗಲೇ ಹಲವು ಪುರುಷರ ಕಾಲೇಜುಗಳನ್ನೂ ಕೆಲವು ಮಹಿಳೆಯರ ಕಾಲೇಜುಗಳನ್ನೂ ಮಾನ್ಯ ಮಾಡಿತ್ತು. ಪುರುಷರ ಕಾಲೇಜುಗಳು ಇವು : ಪೀಟರ್‌ಹೌಸ್ ಕಾಲೇಜ್ (1284), ಕ್ಲೇರ್ ಕಾಲೇಜ್ (1326), ಪೆಮ್‌ಬ್ರೋಕ್ ಕಾಲೇಜ್ (1347), ಗಾನ್‌ವಿಲ್ ಕಾಲೇಜ್ (1348), ಟ್ರಿನಿಟಿ ಹಾಲ್ (1350), ಕಾರ್ಪಸ್ ಕ್ರಿಸ್ಟಿ ಕಾಲೇಜ್ (1352), ಕಿಂಗ್ಸ್ ಕಾಲೇಜ್ (1441), ಕ್ವೀನ್ಸ್ ಕಾಲೇಜ್(1448), ಸೆಂಟ್ ಕ್ಯಾಥರೀನ್ ಕಾಲೇಜ್(1473), ಜೀಸಸ್ ಕಾಲೇಜ್(1496), ಕ್ರೈಸ್ಟ್ಸ್ ಕಾಲೇಜ್(1505), ಸೆಂಟ್ ಜಾನ್ಸ್ ಕಾಲೇಜ್(1511), ಮ್ಯಾಗ್ಡಲೀನ್ ಕಾಲೇಜ್(1542), ಟ್ರಿನಿಟಿ ಕಾಲೇಜ್(1546), ಇಮ್ಯಾನ್ಯುಯೆಲ್ ಕಾಲೇಜ್ (1584), ಸಿಡ್ನಿ ಸಸೆಕ್ಸ್ ಕಾಲೇಜ್(1596), ಡೌನಿಂಗ್ ಕಾಲೇಜ್(1800), ಸೆಲ್ವಿನ್ ಕಾಲೇಜ್(1882) ಮಹಿಳೆಯರ ಕಾಲೇಜುಗಳು ಇವು : ಗಿರ್ಟನ್ ಕಾಲೇಜ್(1869) ಮತ್ತು ನ್ಯೂನ್‌ಹ್ಯಾಮ್ ಕಾಲೇಜ್(1871). ಇವುಗಳಲ್ಲದೆ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಇತರ ನಾಲ್ಕು ಪ್ರತಿಷ್ಠಾನಗಳಿವೆ.

ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಈ ಯಾವ ಸಂಸ್ಥೆಯಲ್ಲೂ ಮುಂದುವರಿಯುವಂತಿಲ್ಲ. ವಿಶ್ವವಿದ್ಯಾಲಯದ ಅಧ್ಯಾಪಕರೂ,

ಕೇಂಬ್ರಿಜ್ ವಿಶ್ವವಿದ್ಯಾಲಯದ ಆಡಳಿತ ಕೇಂದ್ರ : ಸೆನೆಟ್ ಭವನ

ಸಂಶೋಧಕರೂ ಯಾವುದಾದರೂ ಕಾಲೇಜಿಗೆ ಸೇರಿರಲೇಬೇಕೆಂಬ ಕಡ್ಡಾಯವೇನೂ ಇಲ್ಲ. ಆದರೂ ಅವರಲ್ಲಿ ಬಹುಸಂಖ್ಯಾತರು ಯಾವುದಾದರೂ ಕಾಲೇಜಿನೊಂದಿಗೆ ಸಂಬಂಧ ಹೊಂದಿಯೇ ಇರುತ್ತಾರೆ. ಆದ್ದರಿಂದ ಕಾಲೇಜುಗಳಿಗೂ ವಿಶ್ವವಿದ್ಯಾಲಯಕ್ಕೂ ಬಹು ನಿಕಟ ಸಂಪರ್ಕವುಂಟು. ಆದರೆ ವಿಶ್ವವಿದ್ಯಾಲಯದಂತೆ ಕಾಲೇಜುಗಳು ಸ್ವಯಂ ಆಡಳಿತ ಸಂಸ್ಥೆಗಳು. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಯಾವ ಅಧಿನಿಯಮವನ್ನೂ ಅದರ ಒಪ್ಪಿಗೆ ಇಲ್ಲದೆ ಮತ್ತು ಪ್ರಿವಿ ಕೌನ್ಸಿಲಿನ ಅನುಮತಿಯಿಲ್ಲದೆ ಮಾಡುವಂತಿಲ್ಲ. ಅವು ವಿಶ್ವವಿದ್ಯಾಲಯದ ನಿಯಂತ್ರಣಕ್ಕೆ ಒಳಪಟ್ಟಿವೆ ಅಲ್ಲದೆ ಅದಕ್ಕೆ ವಾರ್ಷಿಕವಾಗಿ ವಂತಿಗೆ ಸಲ್ಲಿಸುವುದೇ ಮುಂತಾದ ಕೆಲವು ನಿಬಂಧನೆಗಳಿಗೆ ಬದ್ಧವಾಗಿರುತ್ತವೆ. *

**ಕೇಂಬ್ರಿಯನ್ :** ಪೇಲಿಯೋಜೋಯಿಕ್ ಯುಗದ ಪ್ರಥಮ ಕಲ್ಪ; ಸುಮಾರು 600 ದಶಲಕ್ಷ ವರ್ಷ ಪ್ರಾಚೀನದಿಂದ 500 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ; ವಿಪುಲ ಪಳೆಯುಳಿಕೆಗಳನ್ನು ಒಳಗೊಂಡಿರುವ ಅತಿ ಕೆಳಗಿನ ಭೂವೈಜ್ಞಾನಿಕ ವ್ಯವಸ್ಥೆ. ರೂಢಿಯಲ್ಲಿ, ಪಳೆಯುಳಿಕೆಯುಕ್ತ ಸ್ತರಗಳಿಗೂ ಸಮಕಾಲೀನ ಫಾಸಿಲ್‌ರಹಿತ ಶಿಲಾಸ್ತೋಮಗಳಿಗೂ ಇರುವ ಹೆಸರು. ಕೇಂಬ್ರಿಯನ್ ಎಂಬ ಹೆಸರನ್ನೂ ಪರಿಕಲ್ಪನೆಯನ್ನೂ ಸೂಚಿಸಿ (1835) ಬಳಕೆಗೆ ತಂದವ ಎ. ಸೆಡ್ಜಿವಿಕ್. ಸ್ಪಷ್ಟವಾಗಿ ಮತ್ತು ಸಂದೇಹಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ರಕ್ಷಿಸಲ್ಪಟ್ಟಿರುವ ಗತಕಾಲಗಳ ಜೀವರಾಶಿಗಳಲ್ಲಿ ಈ ಶಿಲಾಸ್ತೋಮದ ಜೀವರಾಶಿಯೇ ಅತ್ಯಂತ ಪ್ರಾಚೀನವಾದದ್ದು. ಆದ್ದರಿಂದಲೇ ಕೇಂಬ್ರಿಯನ್ ಸ್ತೋಮ ಭೂ ಇತಿಹಾಸಜ್ಞರ ಗಮನವನ್ನು ಸೆಳೆಯುತ್ತದೆ. ಕೇಂಬ್ರಿಯನ್ ಕಲ್ಪದ ಪ್ರಾರಂಭದಿಂದ ಭೂ ಇತಿಹಾಸದ ಛಾಯೆ ಬದಲಾಗುತ್ತದೆ. ಪೂರ್ವ ಕೇಂಬ್ರಿಯನ್ ಕಾಲಗಳ ಅಧ್ಯಯನದಲ್ಲಿ ಕಾಣುವ ಅಸ್ಪಷ್ಟತೆ ಈ ಕಲ್ಪದಲ್ಲಿ ಮಾಯವಾಗಿ ಸ್ಪಷ್ಟ ಮತ್ತು ನಿಖರವಾದ ಘಟನಾ ಪರಂಪರೆಗಳನ್ನು ಅರಿಯಲು ಸಾಧ್ಯವಾಗುತ್ತದೆ.

ಪ್ರಪಂಚದ ಎಲ್ಲ ಕಡೆಗಳಲ್ಲಿಯೂ ಕೇಂಬ್ರಿಯನ್ ಸ್ತೋಮಗಳಲ್ಲಿ ಶಿಲಾ ಸಂಯೋಜನೆ ಒಂದೇ ರೀತಿ ಇರುವುದು ಕಂಡುಬಂದಿದೆ. ಈ ಶಿಲಾಸ್ತೋಮಗಳಲ್ಲಿ ಸಾಮಾನ್ಯವಾಗಿ ಪೆಂಟೆಶಿಲೆ, ಕೆಂಪು ನೊರಜು ಶಿಲೆ, ಬೆಣಚು ಶಿಲೆ ಮತ್ತು ಗ್ರೇವೇಕ್ ಶಿಲೆಗಳು ಹೆಚ್ಚು ; ಜೇಡು ಶಿಲೆ ಮತ್ತು ಸುಣ್ಣ ಶಿಲೆಗಳ ಪರಿಮಾಣ ಅಲ್ಪ. ಅವುಗಳಲ್ಲಿ ಪ್ರವಾಹದ ಗುರುತು ಅಲೆಗಳ ಗುರುತು ಮತ್ತು ಬಿಸಿಲು ಬಿರುಕುಗಳು ಇವೆ. ಆದ್ದರಿಂದ ಈ ಶಿಲೆಗಳು ಉತಳ ನೀರಿನಲ್ಲಿದ್ದಿರಬೇಕೆಂದೂ ಕೆಲವು ಸಲವಾದರೂ ನೀರು ಆರಿದುದರ ಪರಿಣಾಮವಾಗಿ ಒಣಗಿರಬಹುದೆಂದು ತಿಳಿಯಬಹುದು. ಕೇಂಬ್ರಿಯನ್ ಶಿಲಾಸ್ತೋಮಗಳೂ 500 ದಶಲಕ್ಷ ವರ್ಷಗಳ ಹಿಂದಿನವುಗಳಾದ್ದರಿಂದ ಅವು ಬಹು ಕಲಕಲ್ಪಟ್ಟು ಮಡಿಕೆಗಳಾಗಿಯೂ ಸ್ತರಭಂಗ ಹೊಂದಿ ಸ್ಥಳಾಂತರಿಸಲ್ಪಟ್ಟು ರೂಪಾಂತರ ಹೊಂದಿಯೂ ಇರುವುದು ಸ್ವಾಭಾವಿಕ. ಅವುಗಳಲ್ಲಿ ಕೆಲವೆಡೆಗಳಲ್ಲಿ ಶಿಲಾರಸ ಅಂತಸ್ಸರಣಗೊಂಡಿರುತ್ತದೆ.

ಕೇಂಬ್ರಿಯನ್ ಶಿಲಾಸ್ತೋಮ ಒಲೆನೆಲ್ಲಸ್ ಎಂಬ ಟ್ರೈಲೊಬೈಟ್ ಪ್ರಾಣಿಯ ಅವಶೇಷಗಳಿಂದ ಕೂಡಿರುವ ನಿಕ್ಷೇಪದೊಂದಿಗೆ ಪ್ರಾರಂಭವಾಗುವುದೆಂದು ಪರಿಗಣಿಸಲಾಗಿದೆ. ಆದರೆ ಅದರ ಅಂತ್ಯವನ್ನು ಕುರಿತು ಖಚಿತ ನಿರ್ಧಾರ ಆಗಿಲ್ಲ. ಈ ಶಿಲಾಸ್ತೋಮದ ಮೇಲೆ ಜೇಡು ಶಿಲೆಗಳಿವೆ. ಇವುಗಳಿಗೆ ಟ್ರೆಮೆಡಿಕ್ ಶಿಲೆಗಳು ಎಂದು ಹೆಸರು. ಮೊದಲು ಈ ಶಿಲೆಗಳನ್ನು ಕೇಂಬ್ರಿಯನ್ ಸ್ತೋಮದ ಮೇಲ್ಭಾಗ ಎಂದು

ಪರಿಗಣಿಸಲಾಗಿತ್ತು. ಆದರೆ ಇವುಗಳಲ್ಲಿರುವ ಪಳೆಯುಳಿಕೆಗಳು ಆರ್ಡೋವಿಶಿಯನ್ ಕಲ್ಪದ ಪಳೆಯುಳಿಕೆಗಳ ಸಮೀಪ ಬಾಂಧವ್ಯವನ್ನು ವ್ಯಕ್ತಪಡಿಸುತ್ತವೆ. ಹೀಗಾಗಿ ಈ ಶಿಲೆಗಳನ್ನು ಈಗ ಆರ್ಡೋವಿಶಿಯನ್ ಸ್ತೋಮಕ್ಕೆ (ಸುಮಾರು 500 ದಶಲಕ್ಷ ವರ್ಷ ಪ್ರಾಚೀನದಿಂದ 440 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ, ಕೇಂಬ್ರಿಯನ್ ಕಲ್ಪದ ತರುವಾಯ ಬಂದ ಕಲ್ಪ) ವರ್ಗಾಯಿಸಿದೆ. ಕೇಂಬ್ರಿಯನ್ ಮತ್ತು ಆರ್ಡೋವಿಶಿಯನ್ ಸ್ತೋಮಗಳ ಸಂಪರ್ಕ ಕೆಲವೆಡೆಗಳಲ್ಲಿ ಸ್ಪಷ್ಟ ಅನನುರೂಪತೆಯನ್ನು ತೋರಿಸುತ್ತದೆ.

ಕೇಂಬ್ರಿಯನ್ ಕಲ್ಪದ ಅಂತ್ಯ ಭಾಗಕ್ಕೆ ಸೇರಿರುವ ಸ್ವೀಡನ್ನಿನ ಕೋಮ್ ಶಿಲೆಗಳ ವಯಸ್ಸನ್ನು ಅವುಗಳಲ್ಲಿರುವ ರೇಡಿಯೋ ವಿಕಿರಣ ಖನಿಜಗಳ ಆಧಾರದ ಮೇಲೆ 440 ದಶಲಕ್ಷ ವರ್ಷಗಳೆಂದು ನಿರ್ಧರಿಸಲಾಗಿದೆ. ಬ್ರಿಟನ್ನಿನ ವೇಲ್ಸ್ ಪ್ರದೇಶದಲ್ಲಿ ಕೇಂಬ್ರಿಯನ್ ಸ್ತೋಮವನ್ನು ಈ ರೀತಿ ವಿಭಜಿಸಿರುತ್ತಾರೆ.

| | | |
|---|---|---|
| ಮೇಲ್ಭಾಗ ಅಥವಾ ಒಲೆನಸ್ ಶ್ರೇಣಿಗಳು | } | ಟ್ರೆಮೆಡಿಕ್ ಸ್ಲೇಟುಗಳು ಲಿಂಗ್ಯುಲ ಫ್ಲ್ಯಾಗ್ಸ್ (ಒಲೆನಸ್, ಲಿಂಗ್ಯುಲೆಲ್ಲ) |
| ಮಧ್ಯಭಾಗ ಅಥವಾ ಪ್ಯಾರಡಾಕ್ಸೈಡಿಸ್ ಶ್ರೇಣಿಗಳು | } | ಮೆನೆವಿಯನ್ ಶಿಲೆಗಳು (ಪ್ಯಾರಡಾಕ್ಸೈಡಿಸ್) |
| ಕೆಳಭಾಗ ಅಥವಾ ಒಲೆನೆಲ್ಲಸ್ ಶ್ರೇಣಿಗಳು | } | ಆರ್ಲಿಕ್ ಮತ್ತು ಲ್ಯಾನ್‌ಬೆರಿಸ್ ಶಿಲಾಗುಂಪು ಮತ್ತು ಜ್ವಾಲಾಮುಖಿಜ ಶಿಲೆಗಳು (ತಳ ತಿಳಿದುಬಂದಿಲ್ಲ) (ಒಲೆನೆಲ್ಲಸ್) |

ಉತ್ತರ ಅಮೆರಿಕದಲ್ಲಿ ಪೇಲಿಯೋಜೋಯಿಕ್ ಯುಗದ ಇತಿಹಾಸ ಎರಡು ಸಾಗರ ನಿಕ್ಷೇಪ ಪ್ರದೇಶಗಳೊಡನೆ ಹೆಣೆದುಕೊಂಡಿದೆ. ಅವುಗಳಲ್ಲಿ ಕಾರ್ಡಿಲೆರನ್ ಪ್ರದೇಶ ಒಂದು. ಇದು ಕೆನಡಾದ ಆಲ್ಬರ್ಟ ಪ್ರದೇಶವನ್ನು ಆಕ್ರಮಿಸಿಕೊಂಡಿತ್ತು. ಇದರ ರಾಕಿಪರ್ವತ ಭಾಗದಲ್ಲಿರುವ ಕೇಂಬ್ರಿಯನ್ ಸ್ತೋಮಗಳು ಪ್ರಪಂಚದಲ್ಲೆಲ್ಲ ಅತ್ಯುತ್ತಮ ರೀತಿಯಲ್ಲಿ ನಿಕ್ಷೇಪಗೊಂಡಿರುವ ಶಿಲೆಗಳು. ಅಪಲೇಚಿಯನ್ ಪ್ರದೇಶ ಎರಡನೆಯದು. ಇದು ಅಟ್ಲಾಂಟಿಕ ಸಾಗರದಿಂದ ಸೇಂಟ್ ಲರಮಿ ಮೂಲಕ ಈಗಿನ ಅಪಲೇಚಿಯನ್ ಪರ್ವತಗಳ ಉದ್ದಕ್ಕೂ ಮೆಕ್ಸಿಕೋ ಕೊಲ್ಲಿಯವರೆಗೆ ವ್ಯಾಪಿಸಿತ್ತು. ಅಮೆರಿಕದ ಕೇಂಬ್ರಿಯನ್ ಸ್ತೋಮಗಳು ಯುರೋಪಿನ ಕೇಂಬ್ರಿಯನ್ ಸ್ತೋಮಗಳಿಗಿಂತ ವಿಶಾಲವಾಗಿವೆ. ಅವುಗಳ ದಪ್ಪವೂ ಹೆಚ್ಚು. ಪಳೆಯುಳಿಕೆಗಳ ಸಂಚಯನ ಇಲ್ಲಿ ವಿಪುಲ. ಹೀಗಿದ್ದರೂ ಯುರೋಪಿನಲ್ಲಿ ಕಂಡುಬರುವ ಪ್ರಾಣಿಗಳ ಜಾತಿವಿಧಗಳೇ ಇಲ್ಲಿಯೂ ಕಂಡುಬರುತ್ತವೆ. ಆದ್ದರಿಂದ ಯುರೋಪಿನ ತೆರನಾಗಿ ಇಲ್ಲಿಯ ಶಿಲಾಸ್ತೋಮಗಳನ್ನು ಸಹ ಮೂರು ಭಾಗಗಳಾಗಿ ವಿಭಜಿಸಿ ಅಲ್ಲಿಯ ಭಾಗಗಳಿಗೆ ಕ್ರಮವಾಗಿ ಸರಿದೂಗಿಸಲು ಸಾಧ್ಯವಾಗಿದೆ.

| | | |
|---|---|---|
| ಮೇಲ್ಭಾಗ ಅಥವಾ ಪಾಟ್ಸ್‌ಡಾಮ್ ಶ್ರೇಣಿ | .... | (ಒಲೆನಸ್, ಡೈಕೆಲೊಕೆಫೆಲಸ್) |
| ಮಧ್ಯಭಾಗ ಅಥವಾ ಅಕಡಿಯನ್ | .... | (ಪ್ಯಾರಡಾಕ್ಸೈಡಿಸ್) |
| ಕೆಳಭಾಗ ಅಥವಾ ಜಾರ್ಜಿಯನ್ | .... | (ಒಲೆನೆಲ್ಲಸ್) |

**ಭಾರತ :** ಕೇಂಬ್ರಿಯನ್ ಕಾಲದ ಶಿಲಾನಿಕ್ಷೇಪಗಳು ಭಾರತ ಪರ್ಯಾಯ ದ್ವೀಪದ ಹೊರಭಾಗದಲ್ಲಿ ನಿಕ್ಷೇಪಗೊಂಡಿವೆ. ಅದರಲ್ಲಿ ಈ ಮೂರು ಸ್ಥಳಗಳಲ್ಲಿ ಸಾಕಷ್ಟು ಪರಿಶೋಧನೆ ನಡೆದಿದೆ : 1 ಸಾಲ್ಟ್‌ರೇಂಜ್ ಪ್ರದೇಶ, 2 ಸ್ಪಿಟಿ ಕಣಿವೆ ಪ್ರದೇಶ, 3 ಕಾಶ್ಮೀರ ಪ್ರದೇಶ.

**1 ಸಾಲ್ಟ್‌ರೇಂಜ್ :** ಈ ಪ್ರದೇಶದಲ್ಲಿ ಕೇಂಬ್ರಿಯನ್ ಕಲ್ಪದ ಶಿಲೆಗಳು ಪೂರ್ಣವಾಗಿ ರೂಪುಗೊಂಡಿರುವುದರಿಂದ ಇದನ್ನು ಕೇಂಬ್ರಿಯನ್ ಸ್ತೋಮಗಳ ಮಾದರಿ ಪ್ರದೇಶವೆಂದು ಪರಿಗಣಿಸಲಾಗಿದೆ. ಇದರ ವ್ಯಾಪ್ತಿ ಪಾಟ್‌ವಾರ್ ಮೈದಾನಕ್ಕೆ ದಕ್ಷಿಣದಲ್ಲಿ ಪೂರ್ವ ರೇಖಾಂಶ 71°–74°ಯವರೆಗೆ (ಝೀಲಂ ಮತ್ತು ಸಿಂಧೂ ನದಿಗಳ ಮಧ್ಯೆ) ಇದೆ. ಇಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ತೆರಳಿದಂತೆ ಕಿರಿಯ ಶಿಲೆಗಳು ಸಿಕ್ಕುತ್ತವೆ. ಇಲ್ಲಿಯ ಕೇಂಬ್ರಿಯನ್ ಶಿಲಾ ಪರಂಪರೆ ಈ ರೀತಿ ಇದೆ :

| | | |
|---|---|---|
| ಕೃತಕ ಲವಣ ಸ್ಫಟಿಕದ ಜೇಡು ಶಿಲೆಗಳು | ... | 350' |
| ಮ್ಯಾಗ್ನೀಸಿಯಂ ಮರಳು ಶಿಲೆ | ... | 250' |
| ನಿಯೋಬಲಸ್ ಪದರಗಳು | ... | 150' |
| ಊದಾ ಮರಳು ಶಿಲೆಗಳು | ... | 250'–450' |
| ಲವಣ ಶಿಲಾ ಶ್ರೇಣಿ | ... | 1500' |

ಲವಣಶಿಲಾ ಶ್ರೇಣಿ ಸುಣ್ಣ ಮಿಶ್ರ ಜೇಡಿನಿಂದ ಆಗಿದೆ. ಇದರ ಬಣ್ಣ ಕೆಂಪು ಅಥವಾ ಊದಾ. ಇದರಲ್ಲಿ ಪದರುಗಳಿಲ್ಲ. ಈ ಶ್ರೇಣಿಯಲ್ಲಿ ಉಪ್ಪು, ಜಿಪ್ಸಂ, ಸುಣ್ಣ ಮತ್ತು ಮ್ಯಾಗ್ನೀಸಿಯಂ ಕಾರ್ಬೋನೇಟ್‌ಗಳು ಹರಡಿವೆ. ಗಣಿಗಳ ಆಳ ಪ್ರದೇಶದಲ್ಲಿ ಅಲ್ಲಲ್ಲಿ ಪದರುಗಳಿರುವುದು ಕಂಡುಬಂದಿದೆ. ಇವು ಒತ್ತಡದಿಂದಾದವು. ಲವಣಶಿಲಾ ಶ್ರೇಣಿಯನ್ನು ಮೂರು ಭಾಗಗಳನ್ನಾಗಿ ವಿಭಜಿಸಬಹುದು. ಕೆಳಭಾಗ ಮತ್ತು ಮೇಲ್ಭಾಗಗಳಲ್ಲಿ ಬಿಟ್ಯೂಮಿನಸ್ ಜೇಡುಶಿಲೆ, ಡಾಲೋಮೈಟ್, ಕಲ್ಲಾರ್ ಎಂಬ ಅಶುದ್ಧ ಲವಣ ಶಿಲೆಗಳು ಹೆಚ್ಚಾಗಿವೆ. ಮಧ್ಯಭಾಗದಲ್ಲಿ ಶುದ್ಧ ಲವಣಶಿಲಾ ಪದರುಗಳಿವೆ. ಲವಣಶಿಲೆಯನ್ನು ಖಿವ್ರ, ವಾರ್ಚಾ ಮತ್ತು ಕಲಾಬಾಗ್ ಎಂಬ ಸ್ಥಳಗಳಲ್ಲಿ ಹೊರತೆಗೆಯಲಾಗುತ್ತಿದೆ. ಲವಣ ಶಿಲೆಗಳು ಉತ್ಪತ್ತಿಯಾದ ಬಗ್ಗೆ ಅನೇಕ ರೀತಿಯ ವಿವರಣೆಗಳನ್ನು ನೀಡಲಾಗಿದೆ. ಜಲಶಿಲೆಗಳೊಳಗೆ ಶಿಲಾಪಾಕ ನುಗ್ಗಿದುದರ ಪರಿಣಾಮವಾಗಿ ಲವಣೋತ್ಪತ್ತಿಯಾಗಿರಬೇಕೆಂದು ಮಿಡಲ್‌ಮಿಸ್ ಎಂಬಾತನ ಅಭಿಪ್ರಾಯ. ಹಿಂದಿನ ಶಿಲೆಗಳು ಅನಿಲಾಚರಣೆಯಿಂದ ರೂಪಾಂತರ ಹೊಂದಿ ಜಿಪ್ಸಂ ಮತ್ತು ಲವಣ ಶಿಲೆಗಳಾಗಿರಬೇಕೆಂದು ಓಲ್ಡ್‌ಹ್ಯಾಮ್ ಹೇಳುತ್ತಾನೆ. ಪಾಸ್ಕೋ ಎಂಬಾತನ ಚಿಂತನೆ ಬೇರೆ ವಿಧ. ಅವನ ಪ್ರಕಾರ ಲವಣ ಶಿಲಾ ಶ್ರೇಣಿ ಇಯೋಸೀನ್ ಕಲ್ಪದಲ್ಲಿ ನಿಕ್ಷೇಪಗೊಂಡ ಜಲಶಿಲೆಗಳೆಂದು ಅನಂತರ ಅದು ಊದಾ ಮರಳು ಶಿಲೆಗಳ ಕೆಳಗೆ ನುಗ್ಗಿಸಲ್ಪಟ್ಟಿದೆ ಎಂದು ಇದೆ. ಕ್ರಿಸ್ತಿ ಎಂಬಾತ ಲವಣಶಿಲಾ ಶ್ರೇಣಿ ಜಲಶಿಲೆಗಳೆಂದು ಸಮುದ್ರ ನಿರ್ಗಮನಕ್ಕೆ ಮುಂಚೆ ಲವಣಾಂಶ ಹೆಚ್ಚಾಗಿ ಈ ನಿಕ್ಷೇಪ ಉಂಟಾಗಿರಬೇಕೆಂದು ಹೇಳುತ್ತಾನೆ. ಇದರಲ್ಲಿ ಪದರಗಳಿಲ್ಲದಿರುವಿಕೆ ಹಾಗೂ ಇದರ ಆಕಾರ ಲವಣದ ಮೃದು ಮತ್ತು ಮೇಣ ಸ್ವಭಾವದ ಪರಿಣಾಮವೆಂದು ಆತ ವಾದಿಸುತ್ತಾನೆ.

ಲವಣಶಿಲಾ ಶ್ರೇಣಿಯ ವಯಸ್ಸಿನ ವಿಚಾರ ವಿವಾದವುಂಟು. ಲವಣಶಿಲಾ ವರ್ಗ ಮತ್ತು ಅದರ ಮೇಲಿರುವ ಊದಾ ಮರಳು ಶಿಲೆಯ ಸಂಪರ್ಕ ಅಸಮಾನತರಹದ್ದಾಗಿದೆ. ಅದು ಸಾಮಾನ್ಯ ಜಲಜಶಿಲಾ ಸಂಪರ್ಕದಂತಿಲ್ಲ. ಅಲ್ಲದೆ ಪದರುಗಳ ಕಲಕುವಿಕೆಯನ್ನು ಅದು ಸೂಚಿಸುತ್ತದೆ. ಈ ಅಂಶವನ್ನು ಎರಡೂ ರೀತಿಯಲ್ಲಿ ವಾದ ಮಾಡಲಾಗಿದೆ. ಒಂದನೆಯದಾಗಿ ಲವಣಶಿಲಾ ವರ್ಗ ಬಹು ಮೃದು ಮತ್ತು ಯಾವ ಆಕಾರವನ್ನು ಬೇಕಾದರೂ ಹೊಂದಬಲ್ಲ ಅಶಕ್ತ ಶಿಲೆ. ಅದರ ಮೇಲಿರುವ ಊದಾ ಮರಳು ಶಿಲೆ ಗಟ್ಟಿ ಸ್ವಭಾವದ ಶಕ್ತ ಶಿಲೆ. ಈ ಎರಡು ವಿಭಿನ್ನ ಶಿಲೆಗಳ ಮಧ್ಯೆ ನಡೆದಿರುವ ಚಲನೆಯೆ ಅವೆರಡರ ಮಧ್ಯೆ ಅಸಮಾನ ಸಂಪರ್ಕವನ್ನುಂಟು ಮಾಡಿದೆ. ಎರಡನೆಯದಾಗಿ ಈ ಲವಣ ಶಿಲೆ ಬಹು ಮೃದು ಮತ್ತು ಸುಲಭವಾಗಿ ದ್ರವರೂಪಕ್ಕೆ ತಿರುಗಬಲ್ಲದು. ಆದ್ದರಿಂದ ಇದು ಮತ್ತೆಲ್ಲಿಯೋ ನಿಕ್ಷೇಪಗೊಂಡು ಊದಾ ಮರಳುಶಿಲೆಯ ಕೆಳಗೆ ನುಗ್ಗಿಸಲ್ಪಟ್ಟಿದೆ. ಹೀಗಾಗಿ ಅದು ಈಗ ಆಕ್ರಮಿಸಿಕೊಂಡಿರುವ ಕೋಹಟ್ ಪ್ರದೇಶದಲ್ಲಿ ಮತ್ತೊಂದು ಲವಣಶಿಲಾ ಶ್ರೇಣಿಯಿದೆ. ಅದರ ವಯಸ್ಸು ಇಯೋಸೀನ್ (ಸುಮಾರು 60 ದಶಲಕ್ಷ ವರ್ಷಗಳ ಪ್ರಾಚೀನದಿಂದ ನಲವತ್ತು ದಶಲಕ್ಷ ವರ್ಷಗಳ ಪ್ರಾಚೀನದವರೆಗಿನ ಅವಧಿ). ಈ ಎರಡು ಪ್ರದೇಶಗಳ ಲವಣ ಶಿಲೆಗಳಲ್ಲಿ ಸಾಮ್ಯವಿದೆ. ಆದ್ದರಿಂದ ಸಾಲ್ಟ್‌ರೇಂಜ್ ಪ್ರದೇಶದ ಲವಣ ಶಿಲಾ ಶ್ರೇಣಿ ಸಹ ಇಯೋಸೀನ್ ಕಲ್ಪದ್ದೇ ಇರಬೇಕೆಂದು ಅದು ಊದಾ ಮರಳು ಶಿಲೆಯ ಕೆಳಗೆ ನುಗ್ಗಿಸಲ್ಪಟ್ಟಿರುವುದರಿಂದ ಅದರ ವಯಸ್ಸು ಕೇಂಬ್ರಿಯನ್ ಆಗಲಾರದ್ದೆಂದೂ ಎರಡನೆಯ ಗುಂಪಿನವರ ವಾದ.

ಚಿಟ್ಟಿಡೆಲ್ ಪ್ರವಾಸಮಂದಿರದ ಹತ್ತಿರ ಕೇಂಬ್ರಿಯನ್ ಸ್ತೋಮದ ಪ್ರತಿಯೊಂದು ಭಾಗದೊಡನೆಯೂ ಅವುಗಳ ಮೇಲಿರುವ ತಾಲ್ಚೀರ್ ಗುಂಡುಶಿಲೆಯೊಡನೆಯೂ ಲವಣಶಿಲೆಗಳು ಸಾಮಾನ್ಯ ಜಲಜಶಿಲ ಸಂಪರ್ಕಗೊಂಡಿರುವುದು ಕಂಡುಬಂದಿದೆ. ಈ ಅಂಶ ಸಾಲ್ಟ್‌ರೇಂಜ್ ಲವಣ ಶಿಲಾ ಶ್ರೇಣಿ ಇಯೋಸೀನ್ ಕಲ್ಪದ್ದೆಂದು ನಿರ್ಣಯಿಸಲು ಅಡ್ಡಿಯಾಗಿದೆ. ಲವಣಶಿಲಾ ಶ್ರೇಣಿಯಲ್ಲಿ ಅನೇಕ ಸೂಕ್ಷ್ಮ ಫಾಸಿಲುಗಳನ್ನು ಮುಖ್ಯವಾಗಿ ಹೂ ಬಿಡುವ ಜಾತಿಯ ಗಿಡಗಳ ಅವಶೇಷಗಳು (ಪರಾಗಗಳು) ಇರುವುದನ್ನು ಬೀರ್‌ಬಲ್ ಸಾಹ್‌ನಿ ತೋರಿಸಿರುತ್ತಾರೆ. ಇವು ಲವಣ ಶಿಲಾ ಶ್ರೇಣಿಯ ಬಿಟ್ಯೂಮಿನಸ್ ಜೇಡುಶಿಲೆ ಮತ್ತು ಡಾಲೋಮೈಟ್ ಜೇಡು ಶಿಲೆಗಳಲ್ಲೂ ಇವೆ. ಈ ಶಿಲೆಗಳು ಗಟ್ಟಿ ಸ್ವಭಾವದವು. ಆದ್ದರಿಂದ ಅವುಗಳೊಳಕ್ಕೆ ಪಳೆಯುಳಿಕೆಗಳು ವಲಸೆ ಬಂದಿವೆ ಎಂದು ಹೇಳಲಾಗುವುದಿಲ್ಲ. ಅವು ಈ ಶಿಲೆಗಳ ಮೂಲ ಅವಶೇಷಗಳೆಂದೇ ಹೇಳಬೇಕಾಗುವುದು. ಈ ಅಂಶ ಲವಣಶಿಲಾ ಶ್ರೇಣಿಯ ವಯಸ್ಸು ಕೇಂಬ್ರಿಯನ್ ಎಂದು ನಿರ್ಣಯಿಸಲು ಅಡ್ಡಿಯಾಗಿದೆ.

ಊದಾ ಮರಳು ಶಿಲೆ ಲವಣಶಿಲಾ ಶ್ರೇಣಿಯ ಮೇಲಿದೆ. ಇದು ಸೂಕ್ಷ್ಮ ಕಣಗಳಿಂದ ಕೂಡಿದ ಊದಾ ಬಣ್ಣದ ಮರಳು ಶಿಲೆ. ಇದರಲ್ಲಿ ಪ್ರವಾಹದ ಮತ್ತು ಅಲೆಗಳ ಗುರುತುಗಳಿರುವುದರಿಂದ ಇದು ಆಳವಿಲ್ಲದ ಸಾಗರ ಪ್ರದೇಶದಲ್ಲಿ ನಿಕ್ಷೇಪಗೊಂಡಿದೆ ಎಂದು ಹೇಳಬಹುದು. ಇದು ಸಂಪೂರ್ಣವಾಗಿ ಪಳೆಯುಳಿಕೆ ರಹಿತವಾಗಿದೆ. ಹೀಗೆ ಊದಾ ಮರಳುಶಿಲೆ ವಿಂಧ್ಯನ್ ಸ್ತೋಮದ ರೇವಾ ಮತ್ತು ಬಂಧರ್ ಮರಳು ಶಿಲೆಗಳನ್ನು ಹೋಲುತ್ತದೆ. ಊದಾ ಮರಳುಶಿಲೆಗಳ ಮೇಲೆ ಜೇಡುಶಿಲೆಗಳಿವೆ. ಇವುಗಳಲ್ಲಿ ನಿಯೋಬಲಸ್ ಎಂಬ ಬ್ರೇಕಿಯೋಪೋಡ ಪ್ರಾಣಿಯ ಅವಶೇಷಗಳಿರುವುದರಿಂದ ಇವುಗಳಿಗೆ ನಿಯೋಬಲಸ್ ಪದರುಗಳು ಎಂದು ಹೆಸರು. ನಿಯೋಬಲಸ್ ಅಲ್ಲದೆ ಲಿಂಗ್ಯುಲ, ಲಿಂಗ್ಯುಲೆಲ್ಲಾ ಮತ್ತು ಆರ್ಕಿಸ್ ಎಂಬ ಬ್ರೇಕಿಯೋಪೋಡ ಪ್ರಾಣಿಗಳ ಅವಶೇಷಗಳು ಬೇಕೋಪೇರಾ, ರೆಡ್ಲಿಕಿಯ ಮತ್ತು ಕೋನೋಕೆಪಲಸ್ ಜಾತಿಯ ಟ್ರೈಲೋಬೈಟ್‌ಗಳೂ ಹಯೋಲಿತಿಸ್ ಎಂಬ ಟಿರೋಪಾಡ್ ಪ್ರಾಣಿಯ ಅವಶೇಷಗಳೂ ಇವೆ. ಈ ಅವಶೇಷಗಳು ಕೇಂಬ್ರಿಯನ್ ಕಲ್ಪದ ಮಧ್ಯಭಾಗವನ್ನು ಸೂಚಿಸುತ್ತದೆ. ನಿಯೋಬಲಸ್ ಪದರಗಳ ಮೇಲೆ ಸಾಲ್ಟ್‌ರೇಂಜ್ ಪ್ರದೇಶದ ಪೂರ್ವ ಭಾಗದಲ್ಲಿ ಕೆನೆ ಬಣ್ಣದ ಡಾಲೋಮೈಟ್, ಜೇಡುಮಿಶ್ರ

ಡಾಲೋಮೈಟ್ ಮತ್ತು ತೆಳುವಾದ ಜೇಡುಮಿಶ್ರ ಪದರಗಳೂ ನಿಕ್ಷೇಪಗೊಂಡಿವೆ. ಇವುಗಳಿಗೆ ಮೆಗ್ನೀಷಿಯಂ ಮರಳುಶಿಲೆಗಳೆಂದು ಹೆಸರು. ಈ ಶಿಲೆಗಳ ಮೇಲೆ ಲವಣಸ್ಫಟಿಕದ ಅಚ್ಚುಗಳಿಂದ ಕೂಡಿದ ಮರಳು ಮತ್ತು ಜೇಡು ಶಿಲೆಗಳಿವೆ. ಇವೇ ಕೃತಕ ಲವಣ ಸ್ಫಟಿಕದ ಜೇಡುಶಿಲೆಗಳು.

**2 ಸ್ಪಿಟಿ ಪ್ರದೇಶ :** ಸ್ಪಿಟಿ ನದಿಯ ಉಪನದಿಯಾದ ಪರಹಿಯೋ ನದಿಯ ಕಣಿವೆಯಲ್ಲಿ ಕ್ರಿಟೇಷಿಯಸ್(ನೋಡಿ) ಕಲ್ಪದ (ಸುಮಾರು 135 ದಶಲಕ್ಷ ವರ್ಷ ಪ್ರಾಚೀನದಿಂದ 65 ದಶಲಕ್ಷ ವರ್ಷಗಳ ಪ್ರಾಚೀನದವರೆಗಿನ ಅವಧಿ) ವರೆಗಿನ ಭೂ ಇತಿಹಾಸವನ್ನು ಕಾಣಬಹುದು. ಆರ್ಷೇಯ ಕಲ್ಪದ (ಸುಮಾರು 1850 ದಶಲಕ್ಷ ವರ್ಷಗಳ ಪ್ರಾಚೀನ ಮತ್ತು ಅದಕ್ಕಿಂತ ಹಿಂದೆ) ವೈಕ್ರಿತಾ ಶಿಲಾಸ್ತೋಮದ ಮೇಲೆ ಇರುವ ಶಿಲೆಗಳಿಗೆ ಹೈಮಂತಸ್ತೋಮಗಳೆಂದು ಹೆಸರು. ಇವನ್ನು ಕೆಳ, ಮಧ್ಯ ಮತ್ತು ಮೇಲಣ ಭಾಗಗಳಾಗಿ ವಿಭಜಿಸಿರುತ್ತಾರೆ. ಮೇಲ್ಭಾಗದ ಶಿಲೆಗಳಲ್ಲಿ ಮಾತ್ರ ಪಳೆಯುಳಿಕೆಗಳಿವೆ. ಇವು ಉತ್ತರ ಅಮೆರಿಕದ ಕೇಂಬ್ರಿಯನ್ ಪ್ರಾಣಿವರ್ಗವನ್ನು ಹೋಲುತ್ತವೆ ಮತ್ತು ಕೇಂಬ್ರಿಯನ್ ಕಲ್ಪದ ಅಂತ್ಯಕಾಲವನ್ನು ಸೂಚಿಸುತ್ತವೆ.

**3 ಕಾಶ್ಮೀರ :** ಈ ಕಾಲದ ಶಿಲಾಸ್ತೋಮ ಹುಂಡವಾರ ಪ್ರದೇಶದಲ್ಲಿ ಬಹು ಸೊಗಸಾಗಿ ನಿಕ್ಷೇಪಗೊಂಡಿದೆ. ಈ ಶಿಲೆಗಳ ಕೆಳಭಾಗದಲ್ಲಿ ಎರೆಹುಳು ಜಾತಿಯ ಪ್ರಾಣಿಗಳು ಓಡಾಡಿದ ಜಾಡುಗಳು ಮತ್ತು ಅಸಮರ್ಪಕ ರಕ್ಷಿತ ಪಳೆಯುಳಿಕೆಗಳು ದೊರೆಯುತ್ತವೆ. ಇವು ಕೇಂಬ್ರಿಯನ್ ಕಲ್ಪದ ಆದಿಕಾಲವನ್ನು ಸೂಚಿಸುತ್ತವೆ. ಮೇಲ್ಭಾಗದ ಟ್ರೈಲೋಬೈಟ್ ಮತ್ತು ಬ್ರೇಕಿಯೋಪೋಡ್ ಗುಂಪಿನ ಪ್ರಾಣಿಗಳ ಅವಶೇಷಗಳಿವೆ. ಇವು ಕೇಂಬ್ರಿಯನ್ ಕಾಲದ ಅಂತ್ಯವನ್ನು ಸೂಚಿಸುತ್ತವೆ.

**ಕೇಂಬ್ರಿಯನ್ ಕಲ್ಪದ ಜೀವರಾಶಿ :** ಪೂರ್ವ ಕೇಂಬ್ರಿಯನ್ ಶಿಲಾಸ್ತೋಮಗಳು ಅನೇಕ ಸಾವಿರ ಅಡಿಗಳಷ್ಟು ನಿಕ್ಷೇಪಗೊಂಡಿವೆ. ಅವುಗಳಲ್ಲಿ ಅನೇಕ ಶಿಲೆಗಳು ಪಳೆಯುಳಿಕೆಗಳನ್ನು ಕಾದಿರಿಸಲು ಶಕ್ತವಾಗಿದ್ದವು. ಹಾಗಿದ್ದರೂ ನಿರ್ದಿಷ್ಟವಾದ ಪಳೆಯುಳಿಕೆಗಳು ಮಾತ್ರ ಅವುಗಳಲ್ಲಿ ಇಲ್ಲ. ಆದರೆ ಕೇಂಬ್ರಿಯನ್ ಶಿಲಾಸ್ತೋಮದ ಆದಿಯಲ್ಲೇ ಪಳೆಯುಳಿಕೆಗಳು ಇದ್ದಕ್ಕಿದ್ದ ಹಾಗೆ ಹೇರಳವಾಗಿ ಕಾದಿರಿಸಲ್ಪಟ್ಟಿವೆ. ಅವುಗಳಲ್ಲಿ ಬೆನ್ನೆಲುಬಿಲ್ಲದ ಪ್ರಾಣಿಗಳ ಏಳು ಮುಖ್ಯ ವರ್ಗಗಳು ಇವೆ. ಆ ಪ್ರಾಣಿಗಳು ವಿಕಾಸದ ಉನ್ನತಮಟ್ಟ ತಲಪಿದ್ದುದು ಒಂದು ವಿಶೇಷ ಸಂಗತಿ. ಚಾರ್ಲ್ಸ್ ವಾಲ್‌ಕಾಟ್ ಎಂಬಾತ ಬ್ರಿಟಿಷ್ ಕೊಲಂಬಿಯದ ಫೀಲ್ಡ್ ಎಂಬ ಪಟ್ಟಣದ ಹತ್ತಿರ ಇರುವ ವಾಪ್ತ ಬೆಟ್ಟದ ನೈರುತ್ಯಭಾಗದಲ್ಲಿ ಕೇಂಬ್ರಿಯನ್ ಸ್ತೋಮದ ಮಧ್ಯಭಾಗದಿಂದ ಒಂದು ಅಪೂರ್ವ ಜೀವ್ಯವಶೇಷ ರಾಶಿಯನ್ನೇ ಹೊರತೆಗೆದ (1910). ಗಡಸು ಅಂಗಗಳಿಲ್ಲದ ಮೃದುಶರೀರ ಪ್ರಾಣಿಗಳ ರಾಶಿ ಇದು. ಇದರಲ್ಲಿ ವಾಲ್‌ಕಾಟ್ 70 ಜಾತಿಗಳು ಮತ್ತು 120 ಪ್ರಭೇದಗಳನ್ನು ವರ್ಣಿಸಿದ್ದಾನೆ. ಇವುಗಳಲ್ಲಿ ಜಲ್ಲಿ ಫಿಷ್, ಹೋಲೊತೂರಿಯನ್ ಸ್ಪಾಂಜಸ್, ಎರೆಹುಳು ಮತ್ತು ಮೃದ್ವಂಗಿ ಜಾತಿಯ ಪ್ರಾಣಿಗಳಿವೆ. ಕೇಂಬ್ರಿಯನ್ ಶಿಲೆಗಳಲ್ಲಿ ಕಾದಿರಿಸಲ್ಪಡದ ಕೋಟ್ಯಂತರ ಮೃದು ಶರೀರ ಪ್ರಾಣಿಗಳು ಆ ಕಾಲದಲ್ಲೂ ಪೂರ್ವಕೇಂಬ್ರಿಯನ್ ಕಾಲದಲ್ಲೂ ಇದ್ದಿರಬೇಕೆಂದು ಮೇಲೆ ವಿವರಿಸಿರುವ ಅವಶೇಷಗಳ ಅವಲೋಕನದಿಂದ ತರ್ಕಿಸಬಹುದು.

ಕೇಂಬ್ರಿಯನ್ ಕಾಲದ ಜೀವಿಗಳಲ್ಲಿ ಟ್ರೈಲೊಬೈಟ್‌ಗಳು ಪ್ರಧಾನ. ಅವು ಒಟ್ಟು ಜೀವವರ್ಗದ ಶೇ. 70 ಇವೆ. ಬ್ರೇಕಿಯೊಪೋಡ್ಗಳು ಶೇ. 20 ಮತ್ತು ಉಳಿದ ಪ್ರಾಣಿಗಳೆಲ್ಲ ಸೇರಿ ಶೇ. 10 ಇವೆ. ಟ್ರೈಲೊಬೈಟ್‌ಗಳ ಆಧಾರದ ಮೆಲೆ ಕೇಂಬ್ರಿಯನ್ ಸ್ತೋಮಗಳನ್ನು ಅನೇಕ ಶಿಲಾಪಾದಗಳನ್ನಾಗಿಯೂ ವಿಂಗಡಿಸಲು ಸಾಧ್ಯವಾಗಿದೆ. ಕೇಂಬ್ರಿಯನ್ ಸ್ತೋಮಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿರುವುದು ಸರಿಯಷ್ಟೆ. ಪ್ರತಿಯೊಂದು ಭಾಗದ ಶಿಲೆಗಳೂ ಸುಮಾರು ಎರಡು ಮೂರು ಕೋಟಿ ವರ್ಷಗಳ ಅವಧಿಯಲ್ಲಿ ನಿಕ್ಷೇಪಗೊಂಡಿರುತ್ತವೆ. ಈ ದೀರ್ಘಾವಧಿಯಲ್ಲಿ ಟ್ರೈಲೊಬೈಟ್ ಪ್ರಾಣಿಗಳು ವಿಕಾಸಗೊಂಡು ಹೊಸ ಹೊಸ ಜಾತಿಗಳು ಉದಯಿಸಿರುವುದು ಸ್ವಾಭಾವಿಕ. ಅಮೆರಿಕದಲ್ಲಿ ಕೇಂಬ್ರಿಯನ್ ಸ್ತೋಮಗಳನ್ನು ಹದಿನಾರು ಶಿಲಾಪಾದಗಳನ್ನಾಗಿ ಯುರೋಪಿನಲ್ಲಿ ಹನ್ನೊಂದು ಶಿಲಾಪಾದಗಳನ್ನಾಗಿಯೂ ವಿಭಜಿಸಿರುತ್ತಾರೆ. ಹೀಗೆ ಒಲೆನೆಲ್ಲೆಸ್, ಕೆಲ್ಲವಿಯ ಕೇಂಬ್ರಿಯನ್ ಸ್ತೋಮದ ಕೆಳಭಾಗದಲ್ಲೂ ಪ್ಯಾರಡಾಕ್ಸೈಡಿಸ್, ಕೋನೋಕಾರಿಪೆ ಮಧ್ಯಭಾಗದಲ್ಲೂ ಒಲೆನಸ್, ಅಗ್ನಾಸ್ಟಸ್, ಡೈಕೆಲೋಕೆಫಲಸ್ ಮೇಲ್ಭಾಗದಲ್ಲೂ ವಿಶಿಷ್ಟ ಜಾತಿಯ ಟ್ರೈಲೊಬೈಟ್‌ಗಳೆನಿಸಿವೆ.**(ನೋಡಿ– ಆರ್ಡೋವಿಶಿಯನ್‌ಸ್ತೋಮ)** (ಡಿ.ಆರ್.)

**ಕೇಕೂಲೇ, ಫಾನ್ ಸ್ಟ್ರಾಡೊನಿಟ್ಸ್, ಫ್ರೀಡ್ರಿಕ್ ಆಗಸ್ಟ್ :** 1829–96. ಜರ್ಮನಿಯ ರಸಾಯನ ವಿಜ್ಞಾನಿ. ಜನನ 1829 ಸೆಪ್ಟೆಂಬರ್ 7 ರಂದು ಜರ್ಮನಿಯ ಡಾರ್ಮ್‌ಸ್ಟಾಟಿನಲ್ಲಿ. ಚಿಕ್ಕಂದಿನಿಂದಲೇ ಇವನಿಗೆ ತಾನೊಬ್ಬ ಪ್ರಖ್ಯಾತ ವಾಸ್ತುಶಿಲ್ಪಿಯಾಗಬೇಕೆಂಬ ಹೆಬ್ಬಯಕೆ ಇತ್ತು. ಈ ಹಂಬಲದೊಂದಿಗೆ ಇವನು ಗಿಸನ್ ವಿಶ್ವವಿದ್ಯಾಲಯವನ್ನು ಸೇರಿದ. ಅಲ್ಲಿ ಪ್ರಸಿದ್ಧ ರಸಾಯನ ವಿಜ್ಞಾನಿಯಾದ ಫಾನ್ ಲಿಬಿಗ್‌ನ ಪ್ರಭಾವಕ್ಕೆ ಈತ ಒಳಗಾಗಿ ರಸಾಯನವಿಜ್ಞಾನವನ್ನು ಅಭ್ಯಸಿಸಲು ನಿರ್ಧರಿಸಿದ. ವಾಸ್ತುಶಿಲ್ಪದಲ್ಲಿ ಆಸಕ್ತವಾಗಿದ್ದ ಈತನ ಬುದ್ಧಿ ಬೇಗನೆ ಇಂಗಾಲದ ಸಂಯುಕ್ತಗಳ ರಸಾಯನ ವಿಜ್ಞಾನವನ್ನು (ಆರ್ಗ್ಯಾನಿಕ್ ಕೆಮಿಸ್ಟ್ರಿ) ಅರಗಿಸಿಕೊಂಡಿತು. ಇವನ ಪ್ರತಿಭೆಯನ್ನು ಗುರುತಿಸಿದ ಗಿಸನ್ ವಿಶ್ವವಿದ್ಯಾಲಯ 1852ರಲ್ಲಿ ಇವನಿಗೆ ಡಾಕ್ಟೊರೇಟ್ ಪದವಿಯನ್ನು ಕೊಟ್ಟು ಗೌರವಿಸಿತು. 1856ರಲ್ಲಿ ಇವನು ಹೈಡಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕನಾದ. 1858ರಲ್ಲಿ ಗೆಂಟ್‌ನಲ್ಲಿ ರಸಾಯನ ವಿಜ್ಞಾನದ ಪ್ರೊಫೆಸರ್‌ಹುದ್ದೆ ಇವನಿಗೆ ಲಭಿಸಿತು. ಇಂಗಾಲದ ವೇಲೆನ್ಸಿ ಮತ್ತು ಹಲವಾರು ಸಂಯುಕ್ತಗಳ ಅಣುಗಳ ರಚನೆ ಇವು ಆರ್ಗ್ಯಾನಿಕ್ ಕೆಮಿಸ್ಟ್ರಿಯಲ್ಲಿ ಅಂದು ಬಲು ತೊಡಕಿನ ಸಮಸ್ಯೆಗಳಾಗಿದ್ದುವು. ಕೇಕೂಲೇ 1858ರಲ್ಲಿ ಒಂದು ಪರಿಹಾರ ಸೂಚಿಸಿದ: ಇಂಗಾಲದ ವೇಲೆನ್ಸಿ ನಾಲ್ಕು; ಮತ್ತು ಇಂಗಾಲದ ಪರಮಾಣುಗಳು ಒಂದಕ್ಕೊಂದು ಕೂಡಿಕೊಂಡು ದೊಡ್ಡ ಸರಪಳಿಯಂಥ ಸಂಯುಕ್ತ ಆಗುತ್ತವೆ ಎಂಬುದೇ ಈ ಪರಿಹಾರ. ಇದು ಇಂಗಾಲದ ಸಂಯುಕ್ತಗಳ ರಸಾಯನವಿಜ್ಞಾನ ಆಲಿಫ್ಯಾಟಿಕ್ ವಿಭಾಗದ ಬೆಳವಣಿಗೆಗೆ ನಾಂದಿಯಾಯಿತು. ಇಷ್ಟರಲ್ಲಿ ಇವನ ಗಮನ ಆಗಿನ ಮತ್ತೊಂದು ಗಹನ ವಿಷಯವಾದ ಬೆಂಜೀನಿನ ರಚನೆಯ ಕಡೆಗೆ ಹೊರಳಿತು. ಈ ದಿಶೆಯಲ್ಲಿ ಆಳವಾದ ವ್ಯಾಸಂಗ ಮಾಡಿ ಬೆಂಜೀನಿನ ಅಣುರಚನೆಯನ್ನು ಕೇಕೂಲೇ ವಿಶದೀಕರಿಸಿದ (1855). ಈ ಮುಖ್ಯ ಸಿದ್ಧಾಂತದಿಂದ ಸುವಾಸನಾಯುಕ್ತ ಇಂಗಾಲದ ಸಂಯುಕ್ತಗಳ ರಸಾಯನವಿಜ್ಞಾನ (ಆರೋಮ್ಯಾಟಿಕ್ ಬ್ರಾಂಚ್) ತ್ವರಿತಗತಿಯಿಂದ ಬೆಳೆಯಿತು. ಇದರ ಮೇಲೆ ಇವನು ಒಂದು ಪಠ್ಯಪುಸ್ತಕವನ್ನು ಬರೆದ. ಕೇಕೂಲೇ ಕಾಲವಾದದ್ದು 1896 ಜುಲೈ 13ರಂದು. (ಎಲ್.ಡಿ.ಎಂ.)

**ಕೇ, ಜಾನ್ ವಿಲಿಯಂ :** 1814–76. ಭಾರತೀಯ ವಿದ್ಯಮಾನಗಳ ಇತಿಹಾಸಕಾರ. 1814ರಲ್ಲಿ ಇಂಗ್ಲೆಂಡಿನಲ್ಲಿ ಮಿಡ್ಲ್‌ಸೆಕ್ಸ್‌ನ ಆಕ್ಟನಿನಲ್ಲಿ ಜನಿಸಿದ. ತಂದೆ ಚಾರ್ಲ್ಸ್‌ಕೇ. ವಿದ್ಯಾಭ್ಯಾಸ ಈಟನಿನಲ್ಲಿ ನಡೆಯಿತು. ಕೇ 1839ರಲ್ಲಿ ಮೇರಿ ಕ್ಯಾಥರೀನಳನ್ನು (1813–93) ಮದುವೆಯಾದ. ಈಕೆ 1893ರಲ್ಲಿ ಮರಣ ಹೊಂದಿದಳು. ಈತ 1832ರಲ್ಲಿ ಭಾರತಕ್ಕೆ ಬಂದು ಬಂಗಾಳದ ಫಿರಂಗಿ ದಳದಲ್ಲಿ ಸೇರಿಕೊಂಡು 1841ರ ತನಕ ಸೇವೆ ಸಲ್ಲಿಸಿದ. ಕೇಗೆ ಸೈನಿಕ ವೃತ್ತಿ ಹಿಡಿಸಲಿಲ್ಲ. ಆದ್ದರಿಂದ 1841ರಲ್ಲಿ ಅದಕ್ಕೆ ರಾಜೀನಾಮೆ ಕೊಟ್ಟು ಬರವಣಿಗೆಯಲ್ಲಿ ತೊಡಗಿದ.

ಸಾಹಿತ್ಯ ಕ್ಷೇತ್ರದಲ್ಲಿ ಕೇ ಮಾಡಿದ ಮೊತ್ತಮೊದಲನೆಯ ಕೆಲಸವೆಂದರೆ ಕಲ್ಕತ್ತ ರಿವ್ಯೂ ಎಂಬ ಪತ್ರಿಕೆಯನ್ನು 1844ರಲ್ಲಿ ಹೊರಡಿಸಿದ್ದು. (ನೋಡಿ–ಕಲ್ಕತ್ತ ರಿವ್ಯೂ) ಅನಂತರ ಲಾಂಗ್ ಎಂಗೇಜ್‌ಮೆಂಟ್ಸ್ ಎಂಬ ಕಾದಂಬರಿ ಪ್ರಕಟವಾಯಿತು. ಈತ ಸಾಹಿತ್ಯ ವೃತ್ತಿಯನ್ನೇ ಅವಲಂಬಿಸುವ ಉದ್ದೇಶದಿಂದ 1845ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದ. ಆದರೆ ಅಧಿಕಾರ ಬಿಡಲಿಲ್ಲ. 1856ರಲ್ಲಿ ಈತ ಈಸ್ಟ್ ಇಂಡಿಯ ಕಂಪನಿಯ ಅಧಿಕಾರ ವರ್ಗದಲ್ಲಿ ಸೇರಿದ. 1857ರ ಬಂಡಾಯದ ಅನಂತರ ಕಂಪನಿಯಿಂದ ಬ್ರಿಟಿಷ್ ಸರ್ಕಾರಕ್ಕೆ ಭಾರತದ ಆಡಳಿತ ವರ್ಗವಾದಾಗ ಜಾನ್ ಸ್ಟೂವರ್ಟನ ಉತ್ತರಾಧಿಕಾರಿಯಾಗಿ ಭಾರತದ ರಾಜಕೀಯ ಮತ್ತು ಗುಪ್ತಚಾರಶಾಖೆಯ ಸಚಿವನಾದ. ಈತ ಆ ಶಾಖೆಯ ಆಡಳಿತವನ್ನು ವಿಚಕ್ಷಣತೆಯಿಂದ ನಡೆಸಿದ್ದನ್ನು ಮೆಚ್ಚಿ ಬ್ರಿಟಿಷ್ ಸರ್ಕಾರ 1871ರ ಮೇ 20ರಂದು ನೈಟ್ ಕಮ್ಯಾಂಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯ ಎಂಬ ಪ್ರಶಸ್ತಿ ನೀಡಿತು. ಅನಾರೋಗ್ಯದ ಕಾರಣದಿಂದಾಗಿ 1874ರಲ್ಲಿ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟ. 1874ರ ಜುಲೈ 24ರಂದು ತನ್ನ ನಿವಾಸದ ರೋಸ್ ಹಿಲ್‌ನಲ್ಲಿ ಕಾಲವಾದ.

ಕೇ ಖ್ಯಾತ ಬರಹಗಾರ. ನಿಯತಕಾಲಿಕ ಸಾಹಿತ್ಯಕ್ಕೆ ಈತನ ಕೊಡುಗೆ ಅಪಾರ. ಈತ ಹಿಸ್ಟೊರಿ ಆಫ್ ವಾರ್ ಇನ್ ಆಫ್ಘಾನಿಸ್ತಾನ್ ಎಂಬ ಪುಸ್ತಕವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದ (1851). 1852ರಲ್ಲಿ ಬಕಲ್ಸ್ ಮೆಮ್ವಾರ್ಸ್ ಆಫ್ ದಿ ಸರ್ವಿಸಸ್ ಆಫ್ ದಿ ಬೆಂಗಾಲ್ ಆರ್ಟಿಲರಿ ಎಂಬ ಪುಸ್ತಕವನ್ನೂ 1853ರಲ್ಲಿ ಮೆಮೋರಿಯಲ್ಸ್ ಆಫ್ ಇಂಡಿಯನ್ ಗವರ್ನ್‌ಮೆಂಟ್ ಎಂಬ ಪುಸ್ತಕವನ್ನೂ ಸಂಪಾದಿಸಿದ. ಅದೇ ವರ್ಷ ಅಡ್ಮಿನಿಸ್ಟ್ರೇಷನ್ ಆಫ್ ಈಸ್ಟ್ ಇಂಡಿಯ ಕಂಪೆನಿ, 1854ರಲ್ಲಿ ಲೈಫ್ ಅಂಡ್ ಕರಸ್ಪಾಂಡೆನ್ಸ್ ಆಫ್ ಚಾರ್ಲ್ಸ್ ಅಂಡ್ ಲಾರ್ಡ್ ಮೆಟ್ಕಾಫ್ (ಎರಡು ಸಂಪುಟಗಳು) ಮತ್ತು ಹೆನ್ರಿ ಸೇಂಟ್ ಜಾರ್ಜ್ ಟಕರ್ಸ್ ಲೈಫ್ ಅಂಡ್ ಕರೆಸ್ಪಾಂಡೆನ್ಸ್ ಎಂಬ ಪುಸ್ತಕಗಳು ಪ್ರಕಟವಾದುವು. ಸರ್ ಜಾನ್ ಮಾಲ್ಕಮ್ಸ್ ಲೈಫ್ ಅಂಡ್ ಕರೆಸ್ಪಾಂಡೆನ್ಸ್ ಗ್ರಂಥವನ್ನು ಎರಡು ಸಂಪುಟಗಳಲ್ಲಿ 1856ರಲ್ಲಿ ಪ್ರಕಟಿಸಿದ. ಕ್ರಿಶ್ಚಿಯಾನಿಟಿ ಇನ್ ಇಂಡಿಯ ಪ್ರಕಟವಾದ್ದು 1859ರಲ್ಲಿ. ದಿ ಆಟೋಬಯಾಗ್ರಫಿ ಆಫ್ ಮಿಸ್ ಕಾರ್ನೀಲಿಯ ನೈಟ್ 1861ರಲ್ಲಿ ಸಂಪಾದಿತವಾಯಿತು.

ಕೇ ಯ ಹಿಸ್ಟೋರಿ ಆಫ್ ದಿ ಸಿಪಾಯ್ ವಾರ್ ಇನ್ ಇಂಡಿಯ ಉತ್ತಮ ಪುಸ್ತಕ. ಇದರ ಮೂರು ಸಂಪುಟಗಳು 1864ರಿಂದ 1876ರ ತನಕ ಪ್ರಕಟವಾದುವು. ಭಾರತದ 1857ರ ಬಂಡಾಯ ಕುರಿತ ಈ ಇತಿಹಾಸ ಸುವ್ಯವಸ್ಥಿತ ಹಾಗೂ ಸುಲಭ ಗ್ರಾಹ್ಯ ವ್ಯಾಖ್ಯಾನವಾಗಿದೆ. ಕೇ ರಚಿಸಿದ ಈ ಗ್ರಂಥವನ್ನು ಕರ್ನಲ್ ಜಿ.ಬಿ. ಮಲ್ಲೇಸನ್ ಪರಿಶೀಲಿಸಿ ತನ್ನ ಮತ್ತು ಕೇ ಹೆಸರುಗಳಲ್ಲಿ 1890ರಲ್ಲಿ 6 ಸಂಪುಟಗಳಲ್ಲಿ ಪ್ರಕಟಿಸಿದ. ಕೇ 1867ರಲ್ಲಿ ಲೈವ್ಸ್ ಆಫ್ ಇಂಡಿಯನ್ ಆಫೀಸರ್ಸ್ ಎಂಬ ಪುಸ್ತಕವನ್ನು ಎರಡು

ಸಂಪುಟಗಳಲ್ಲಿ ಪ್ರಕಟಿಸಿದ. 19ನೆಯ ಶತಮಾನದಲ್ಲಿ ಭಾರತೀಯ ಇತಿಹಾಸ ರಚನೆಯ ಕಾರ್ಯದಲ್ಲಿ ತೊಡಗಿದ್ದ ಬ್ರಿಟಿಷ್ ವಿದ್ವಾಂಸರಲ್ಲಿ ಅಗ್ರಗಣ್ಯನೆಂದು ಕೀ ಪ್ರಖ್ಯಾತನಾಗಿದ್ದಾನೆ. (ಬಿ.ಎಸ್.ಐ.)

**ಕೇಟರ್, ಹೆನ್ರಿ :** 1777–1835. ಬ್ರಿಟಿಷ್ ಭೌತವಿಜ್ಞಾನಿ. 18ನೆಯ ವಯಸ್ಸಿನಲ್ಲಿ ಬ್ರಿಟಿಷ್ ಸೇನೆಯನ್ನು ಸೇರಿದ. ಮುಂದೆ ವರ್ಗವಾಗಿ ಭಾರತಕ್ಕೆ ಬಂದ (1799). ಭಾರತದಲ್ಲಿದ್ದಾಗ ಈ ದೇಶದ ಭೂಮಿತಿಯ ಅಳತೆಯ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಿ ಭೂಮಿಯ ಗುರುತ್ವಾಕರ್ಷಣೆಯ ವ್ಯತ್ಯಾಸಗಳನ್ನು ಕುರಿತು ತಾತ್ತ್ವಿಕ ಅಧ್ಯಯನ ನಡೆಸಿದ. ಅಷ್ಟರ ತನಕ gಯ ನಿರ್ಣಯಕ್ಕಾಗಿ ಉಪಯೋಗಿಸುತ್ತಿದ್ದ ಸಂಯುಕ್ತ ಲೋಲಕಗಳಲ್ಲಿನ ಕೊರತೆಗಳನ್ನು ನಿವಾರಿಸಿ ಪರಸ್ಪರ ಪರಿವರ್ತನೀಯ ಸ್ಥಿತಿಗಳಲ್ಲಿ ಅಲಗುಗಳನ್ನಿರಿಸಿ ತೂಗುಹಾಕಿದ ಲೋಲಕವನ್ನು ರಚಿಸಿಕೊಂಡ. ಇದಕ್ಕೆ ಕೇಟರ್‌ನ ಲೋಲಕವೆಂದು ಹೆಸರು. ಲಂಡನ್ನಿಗೆ ಹೋದ ಮೇಲೆ gಯ ನಿಖರ ಬೆಲೆಯನ್ನು ಕಂಡುಹಿಡಿದ. ಇಂಥ ನಿರ್ಣಯಗಳ ಬಗ್ಗೆ ಇಂದಿಗೂ ಕೇಟರನ ಲೋಲಕ ಮತ್ತು ವಿಧಾನಗಳು ಶಿಷ್ಟವೆನಿಸಿವೆ. ಉದ್ದಳತೆಗಳ ಶಿಷ್ಟೀಕರಣ, ಸೆಕೆಂಡು ಲೋಲಕಗಳ ಉದ್ದದ ನಿರ್ಣಯ ಮೊದಲಾದ ಹಲವು ವಿಚಾರಗಳು ಇಂದು ಸುಲಭವೆಂದು ಕಂಡುಬಂದರೂ ಅಂದು ಅವು ಬಲು ಕ್ಲಿಷ್ಟವೆನಿಸಿದ್ದುವು. ಅವನ್ನು ಕುರಿತು ಕೇಟರ್ ವಿಶೇಷ ಅಧ್ಯಯನ ನಡೆಸಿದ. ಬ್ರಿಟನ್ನಿನ ಎಫ್.ಆರ್.ಎಸ್. ಪದವಿ ಮತ್ತು ರಷ್ಯ ದೇಶದಿಂದ ಗೌರವ ಕೇಟರನಿಗೆ ಲಭಿಸಿದುವು. ದೂರದರ್ಶಕಗಳಿಗೆ ಜೋಡಿಸುವ ತೇಲುವ ಸಮಾಂತರಕಾರಕವನ್ನು (ಕಾಲಿಮೇಟರ್) ಮೊತ್ತ ಮೊದಲು ಆವಿಷ್ಕರಿಸಿದವ ಈತನೇ. (ಯು.ಎಲ್.ಎ.)

**ಕೇಟೋ (ಕಿರಿಯ), ಮಾರ್ಕಸ್ ಪೋರ್ಸಿಯಸ್ :** ಪ್ರ.ಶ.ಪೂ. 95–46. ರೋಮಿನ ರಾಜಕಾರಣಿ ಮತ್ತು ತತ್ತ್ವಜ್ಞಾನಿ. ಅಲ್ಲಿಯ ಸೆನೆಟಿನಲ್ಲಿದ್ದ ಪ್ರಬಲ ವ್ಯಕ್ತಿಗಳ, ಅವರಲ್ಲೂ ಮುಖ್ಯವಾಗಿ ಸೀಸರನ ವಿರುದ್ಧ ಪ್ರಜಾತಂತ್ರದ ರಕ್ಷಣೆಗಾಗಿ ಹೋರಾಡಿದ ಬಣದ ನಾಯಕ. ದಕ್ಷ ಆಡಳಿತಗಾರ. ಏಷ್ಯದ ಪ್ರಾಂತ್ಯವೊಂದರಲ್ಲಿ ಅಧಿಕಾರ ಪಡೆದು, ಲಂಚಗುಳಿತನದ ವಿರುದ್ಧ ಹೋರಾಡಿದ. ಪಾಂಪೆ, ಸೀಸರ್ ಮತ್ತು ಕ್ರಾಸಸರಂಥ ಪ್ರಬಲರ ವಿರುದ್ಧ ಹೋರಾಡುತ್ತಿದ್ದುದರ ಫಲವಾಗಿ ಆ ಮೂವರೂ ಒಂದಾಗಿ ತಮ್ಮ ತ್ರಿಪ್ರಭುತ್ವವನ್ನು (ಟ್ರಯಂವಿರೇಟ್) ಸ್ಥಾಪಿಸಿದರು. ಇವನ ಉಪಟಳವನ್ನು ತಪ್ಪಿಸಿಕೊಳ್ಳಲು ಸೀಸರ್ ಇವನನ್ನು ಸೈಪ್ರಸ್ ದಂಡಯಾತ್ರೆಗೆಂದು ಹೊರಕ್ಕೆ ಕಳಿಸಿದರೂ (ಪ್ರ.ಶ.ಪೂ. 58) ಈತ ಪ್ರ.ಶ.ಪೂ. 56ರಲ್ಲಿ ಹಿಂದಿರುಗಿ ಹೋರಾಟ ಮುಂದುವರಿಸಿದ. ಪ್ರ.ಶ.ಪೂ. 54ರಲ್ಲಿ ಈತ ರೋಮಿನ ಪ್ರೇಟರ್ ಆದಾಗ ಲಂಚದ ವಿರುದ್ಧ ಕ್ರಮ ಕೈಕೊಂಡ. ಪ್ರ.ಶ.ಪೂ. 51ರಲ್ಲಿ ಕಾನ್ಸಲ್ ಪದವಿಗಾಗಿ ಪ್ರಯತ್ನಿಸಿದ. ಆದರೆ ಅದು ದೊರಕಲಿಲ್ಲ. ಪ್ರ.ಶ.ಪೂ. 49ರಲ್ಲಿ ಸಂಭವಿಸಿದ ಅಂತರ್ಯುದ್ಧದಿಂದ ಈತ ಬೇಸರಹೊಂದಿ ಸಾರ್ವಜನಿಕ ಕ್ಷೇತ್ರದಿಂದ ನಿವೃತ್ತಿ ಹೊಂದಬಯಸಿದ. ಆದರೆ ಅನಂತರ ಸಿಸಿಲಿಯ ರಕ್ಷಣೆಯಲ್ಲಿ ಪಾಂಪೆಗೆ ನೆರವು ನೀಡಿದುದಲ್ಲದೆ ಸೀಸರನ ವಿರುದ್ಧ ಹೋರಾಟದಲ್ಲೂ ಸಹಾಯ ಮಾಡಿದ. ಪ್ರ.ಶ.ಪೂ. 46ರಲ್ಲಿ ಥಾಪ್ಸಸ್ ಕದನದಲ್ಲಿ ಈತ ಸೋತ. ಹಿಂಬಾಲಕರನ್ನು ಸುರಕ್ಷಿತವಾಗಿ ತನ್ನ ದೇಶಕ್ಕೆ ಕಳುಹಿಸಿ ತಾನು ಆತ್ಮಹತ್ಯೆ ಮಾಡಿಕೊಂಡ. ಜೀವನದ ಉದ್ದಕ್ಕೂ ತನಗೆ ಸರಿತೋರಿದ ಧ್ಯೇಯಕ್ಕಾಗಿ ಹೋರಾಡಿದ ಕೇಟೋನ ಮರಣಾನಂತರ ಇವನ ಸಮಕಾಲೀನರು ಇವನನ್ನು ತಮ್ಮ ಪವಿತ್ರನಾಯಕನೆಂದು ಪರಿಗಣಿಸಿದ್ದರು. (ಎಚ್.ಆರ್.ಡಿ.)

**ಕೇಟೋ (ಹಿರಿಯ) :** ಪ್ರ.ಶ.ಪೂ. 234–149. ರೋಮಿನ ರಾಜಕಾರಣಿ, ವಾಗ್ಮಿ ಮತ್ತು ಮೊದಲನೆಯ ಮುಖ್ಯ ಲ್ಯಾಟಿನ್ ಗದ್ಯಲೇಖಕ. ರೋಮಿನ ರಾಜಕಾರಣ ಮತ್ತು ಸಾಮಾಜಿಕ ಜೀವನದ ಮೇಲಿನ ಗ್ರೀಕ್ ಪ್ರಭಾವದ ವಿರುದ್ಧ ಉಗ್ರವಾಗಿ ಹೋರಾಡಿದ. ಟಸ್ಕುಲಂನ ರೈತ ಕುಟುಂಬವೊಂದರಲ್ಲಿ ಹುಟ್ಟಿದನಾದ್ದರಿಂದ ವ್ಯವಸಾಯ ಕ್ಷೇತ್ರದಲ್ಲಿ ಇವನಿಗೆ ಆಸಕ್ತಿಯಿತ್ತು. ಈತ ಎರಡನೆಯ ಪ್ಯೂನಿಕ್ ಯುದ್ಧದಲ್ಲಿ ಭಾಗವಹಿಸಿದ್ದ. ವಾಲೆರಿಯಸ್ ಫ್ಲಾಕಸನ ಸಹಾಯದಿಂದ ರಾಜಕೀಯಕ್ಕಿಳಿದು ಪ್ರ.ಶ.ಪೂ. 204ರಲ್ಲಿ ಷಿಪಿಯೊ ಆಫ್ರಿಕಾನಸನ ಕೆಳಗೆ ಕ್ವೆಸ್ಟರ್ ಆಗಿದ್ದ. 198ರಲ್ಲಿ ಸಾರ್ಡಿನಿಯದ ಪ್ರೇಟರ್ ಆದಾಗ ರೂಢಿಯಲ್ಲಿದ್ದ ಹೆಚ್ಚಿನ ಬಡ್ಡಿಯ ದರದ ವಿರುದ್ಧ ಕ್ರಮ ಕೈಗೊಂಡು ಆ ಪದ್ಧತಿಯನ್ನು ನಿವಾರಿಸಿದ. ಪ್ರ.ಶ.ಪೂ. 195ರಲ್ಲಿ ಇವನೂ ಫ್ಲಾಕಸನೂ ಕಾನ್ಸಲರಾಗಿ ಆಯ್ಕೆಯಾದರು. ಸ್ತ್ರೀಯರ ಆರ್ಥಿಕ ದುಂದುಗಾರಿಕೆಯ ವಿರುದ್ಧದ ಕಾನೂನನ್ನು ಹಿಂತೆಗೆದುಕೊಳ್ಳುವ ಪ್ರಯತ್ನವನ್ನು ಈತ ಪ್ರತಿಭಟಿಸಿದ್ದು ನಿರರ್ಥಕವಾಯಿತು. ಸ್ಪೇನಿನಲ್ಲಿ ಸಂಭವಿಸಿದ ದಂಗೆಯನ್ನು ಅಡಗಿಸಿದುದಕ್ಕಾಗಿ ಈತನಿಗೆ ವಿಜಯಪಟ್ಟ ದೊರಕಿತು. ಸೆಲ್ಯೂಕಿಡ್ ದೊರೆಯಾದ 3ನೆಯ ಆಂಟಿಯೋಕಸನ ವಿರುದ್ಧದ ಹೋರಾಟದಲ್ಲಿ (ಪ್ರ.ಶ.ಪೂ. 191) ಮೇನಿಯಸ್ ಅಸಿಲಿಯಸ್ ಗ್ಲಾಬ್ರಿಯೋಗೆ ಈತ ಸಹಾಯಕನಾಗಿದ್ದ. ಆದರೂ ಗ್ಲಾಬ್ರಿಯೋ ಮತ್ತು ಥರ್ಮಸರ ವಿರುದ್ಧ ನ್ಯಾಯಾಲಯಗಳಲ್ಲಿ ಹೋರಾಡಿ ಅವರ ಮತ್ತು ಷಿಪಿಯೊ ವಂಶಸ್ಥರ ಪ್ರಭಾವ ರಾಜಕಾರಣದಲ್ಲಿ ಕ್ಷೀಣಿಸುವಂತೆ ಮಾಡಿದ. ಅನಂತರ ಪ್ರ.ಶ.ಪೂ. 184ರಲ್ಲಿ ಫ್ಲಾಕಸನೊಂದಿಗೆ ಸೆನ್ಸಾರ್ ಆಗಿ ಆಯ್ಕೆಯಾದ.

ಈತ ಸೆನ್ಸಾರ್ ಆದ ಮೇಲೆ ಸಂಪ್ರದಾಯಸ್ಥ ರೋಮನ್ ಆಚಾರವಿಚಾರಗಳ ಮೇಲೆ ಗ್ರೀಕ್ ಪ್ರಭಾವಗಳು ಹರಡದಂತೆ ಕ್ರಮ ಕೈಗೊಂಡುದಲ್ಲದೆ, ಅತಿವ್ಯಯವನ್ನು ತಡೆಗಟ್ಟಿದ. ಸೆನೆಟಿನ ಸದಸ್ಯತ್ವದಲ್ಲಿ ಕೆಲವು ಪ್ರಮುಖ ಬದಲಾವಣೆಗಳು ಆದುವು. ತೆರಿಗೆ ವಸೂಲಿಯನ್ನು ಸುವ್ಯವಸ್ಥೆಗೊಳಿಸಿ, ಅನೇಕ ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸಿದ. ಇವನ ತೀವ್ರ ಆಡಳಿತಪದ್ಧತಿಗೂ, ಗ್ರೀಕ್ ಪ್ರಭಾವಗಳ ದ್ವೇಷದ ನೀತಿಗೂ ಹೆಚ್ಚು ಬೆಂಬಲ ದೊರಕಲಿಲ್ಲವಾದರೂ ಅನಂತರದ ಕಾಲದಲ್ಲಿ ಇವನ ಆಡಳಿತಕ್ಕಾಗಿ ಗೌರವಾದರಗಳು ದೊರಕಿದುವು. ಈತನ ಕೊನೆಗಾಲದಲ್ಲಿ ಗ್ರೀಕ್ ಪ್ರಭಾವಗಳ ವಿರುದ್ಧದ ಹೋರಾಟದ ತೀವ್ರತೆ ತಗ್ಗಿತು. ಬಂಡವಾಳ ಪದ್ಧತಿಗನುಸಾರವಾದ ಕೃಷಿಕಾರ್ಯಗಳಲ್ಲಿ ನಿರತನಾಗಿ ಐಶ್ವರ್ಯ ಸಂಪಾದನೆಗೆ ಈತ ಗಮನ ಹರಿಸಿದ. ಇವನು ಮೊದಲಿನಿಂದ ಪ್ರತಿಪಾದಿಸುತ್ತಿದ್ದ, ರೋಮಿನ ಶತ್ರುವಾದ ಕಾರ್ಥೇಜ್ ವಿರುದ್ಧವಾದ ಯುದ್ಧ ಕೊನೆಗೂ, ಪ್ರ.ಶ.ಪೂ. 149ರಲ್ಲಿ ಆರಂಭವಾದಾಗ ಇವನಿನ್ನೂ ಜೀವಂತನಾಗಿದ್ದ.

ಕುಟುಂಬಕ್ಕೆ ಸಮಾಜದಲ್ಲಿ ಪ್ರಮುಖ ಸ್ಥಾನವಿರಬೇಕೆಂಬುದು ಕೇಟೋನ ಅಭಿಪ್ರಾಯವಾಗಿತ್ತು. ಇವನು ಕೌಟುಂಬಿಕ ವಿಚಾರಗಳಲ್ಲಿ ತೀವ್ರ ರೀತಿಯ ಅಧಿಕಾರ ಚಲಾಯಿಸುವ ಪ್ರವೃತ್ತಿ ತೋರುತ್ತಿದ್ದ. ಲ್ಯಾಟಿನ್ ಸಾಹಿತ್ಯಕ್ಕೆ ಇವನ ಕೊಡುಗೆ ಗಮನಾರ್ಹ. ಈ ಭಾಷೆಯಲ್ಲಿ ಮೊದಲ ಬಾರಿಗೆ ರೋಮಿನ ಚರಿತ್ರೆಯನ್ನು ಈತ ರಚಿಸಿದ್ದಾನೆಂದು ತಿಳಿದುಬರುತ್ತದೆ. ವ್ಯವಸಾಯವನ್ನು ಕುರಿತು ಈತ ಬರೆದಿರುವ ಗ್ರಂಥಗಳು ಈ ಕ್ಷೇತ್ರದಲ್ಲಿ ಉತ್ತಮ ಕೈಪಿಡಿಗಳು. ತನ್ನ ಮಗನಿಗೆ ಮಾರ್ಗದರ್ಶನ ನೀಡಲು ಈತ ಒಂದು ವಿಶ್ವಕೋಶ ರಚಿಸಿದ್ದಾನೆ. ಪ್ರಿಸೆಪ್ಟಾ ಎಂಬ ಕೃತಿಯನ್ನೂ ಇನ್ನೂ ಹಲವು ಗ್ರಂಥಗಳನ್ನೂ ಬರೆದಿದ್ದಾನೆ. *

**ಕೇಡು :** ಸಾರ್ವಜನಿಕರಿಗೆ ಅಥವಾ ಯಾರಾದರೊಬ್ಬ ವ್ಯಕ್ತಿಗೆ ಅನ್ಯಾಯವಾದ ನಷ್ಟ ಅಥವಾ ಹಾನಿ ಉಂಟುಮಾಡುವ ಉದ್ದೇಶದಿಂದ ಅಥವಾ ಉಂಟುಮಾಡುವ ಸಂಭವವಿದೆಯೆಂದು ತಿಳಿದಿದ್ದೂ, ಯಾವುದೇ ಸ್ವತ್ತಿನ ನಾಶವನ್ನು ಅಥವಾ ಯಾವುದೇ ಸ್ವತ್ತು ನಾಶವಾಗುವ ಅಥವಾ ಅದರ ಉಪಯುಕ್ತತೆಯೋ ಮೌಲ್ಯವೋ ಕಡಿಮೆಯಾಗುವ ರೀತಿಯಲ್ಲಿ ಅದರ ಸ್ಥಿತಿಯಲ್ಲಿ ಬದಲಾವಣೆಯನ್ನು ಅಥವಾ ಅದಕ್ಕೆ ಹಾನಿಯಾಗುವಂಥ ಪರಿಣಾಮವನ್ನು, ಯಾರಾದರೂ ಮಾಡಿದರೆ ಅದು ಕೇಡು (ಮಿಸ್ಚಿಫ್) ಎನಿಸಿಕೊಳ್ಳುತ್ತದೆಂಬುದು ಭಾರತೀಯ ದಂಡಸಂಹಿತೆಯಲ್ಲಿ ನೀಡಿರುವ ವ್ಯಾಖ್ಯೆ. ಹಾಳು ಮಾಡಲಾದ ಅಥವಾ ನಷ್ಟವನ್ನುಂಟು ಮಾಡಿದ ಸ್ವತ್ತಿನ ಒಡೆಯನಿಗೆ ನಷ್ಟ ಅಥವಾ ಹಾನಿ ತರುವ ಉದ್ದೇಶ ಅಪರಾಧಿಗೆ ಇರಬೇಕೆಂದಿಲ್ಲ. ಯಾವುದೇ ಸ್ವತ್ತಿಗೆ ಹಾನಿ ಉಂಟುಮಾಡುವುದರಿಂದ ಯಾವನೋ ವ್ಯಕ್ತಿಗೆ, ಆ ಸ್ವತ್ತು ಅವನದಾಗಿರಲಿ ಇಲ್ಲದಿರಲಿ, ಅನ್ಯಾಯದ ನಷ್ಟ ಅಥವಾ ಹಾನಿ ಉಂಟು ಮಾಡಬೇಕೆಂಬ ಇಚ್ಛೆ ಒಬ್ಬನಿಗೆ ಇದ್ದರೂ ಅಥವಾ ಅವನಿಗೆ ಅನ್ಯಾಯದ ನಷ್ಟ ಅಥವಾ ಹಾನಿ ಆಗಬಹುದೆಂಬ ತಿಳಿವಳಿಕೆ ಇದ್ದರೂ ಸಾಕು, ಅಂಥವನು ಕೇಡು ಮಾಡಿದಂತೆಯೇ. ತನಗೆ ಸೇರಿದ ಅಥವಾ ತನ್ನ ಮತ್ತು ಇತರರ ಸಂಯುಕ್ತ ಒಡೆತನಕ್ಕೆ ಸೇರಿದ ಒಂದು ಸ್ವತ್ತಿನ ಮೇಲೆ ಪರಿಣಾಮ ಉಂಟಾಗಬಹುದಾದ ಕೃತಿಯಿಂದಲೂ ಕೇಡು ಮಾಡಬಹುದು.

ಒಬ್ಬ ಇನ್ನೊಬ್ಬನಿಗೆ ಅನ್ಯಾಯವಾಗಿ ನಷ್ಟ ಮಾಡುವ ಉದ್ದೇಶದಿಂದ ಆ ಇನ್ನೊಬ್ಬನಿಗೆ ಸೇರಿದ ಯಾವುದೇ ಮೌಲ್ಯವತ್ ಪ್ರತಿಭೂತಿಯನ್ನು ತಾನಾಗಿಯೇ ಸುಡುವುದು; ಒಬ್ಬ ತನ್ನ ವಾಹನವೊಂದಕ್ಕೆ ವಿಮೆ ಇಳಿಸಿ, ವಿಮಾ ಸಂಸ್ಥೆಗೆ ನಷ್ಟ ಉಂಟುಮಾಡುವ ಉದ್ದೇಶದಿಂದ ಅದನ್ನು ಅಪಘಾತಕ್ಕೀಡುಮಾಡುವುದು; ಒಬ್ಬ ತನ್ನ ಮತ್ತು ಇನ್ನೊಬ್ಬನ ಸಂಯುಕ್ತ ಒಡೆತನಕ್ಕೆ ಸೇರಿದ ಕುದುರೆಯನ್ನು, ಆ ಇನ್ನೊಬ್ಬನಿಗೆ ಅನ್ಯಾಯವಾದ ನಷ್ಟವಾಗಲೆಂಬ ಉದ್ದೇಶದಿಂದ, ಗುಂಡಿಟ್ಟು ಕೊಲ್ಲುವುದು; ಒಬ್ಬ ಇನ್ನೊಬ್ಬನ ಬೆಳೆಗೆ ನಷ್ಟವಾಗಬಹುದೆಂದು ತಿಳಿದಿದ್ದೂ ಆ ಇನ್ನೊಬ್ಬನ ಹೊಲದೊಳಕ್ಕೆ ದನಗಳನ್ನು ಹೊಡೆಯುವುದು–ಇವು ಕೇಡಿನ ಕೆಲವು ಉದಾಹರಣೆಗಳು. (ಕೆ.ಜಿ.ಬಿ.)

**ಕೇದಗೆ :** ಪ್ಯಾಂಡನೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ. ಇದಕ್ಕೆ ತಾಳೆಗಿಡ ಎಂಬ ಹೆಸರೂ ಇದೆ. ಇಂಗ್ಲಿಷಿನಲ್ಲಿ ಸಾಮಾನ್ಯವಾಗಿ ಸ್ಕ್ರೂ ಪೈನ್ ಎನ್ನಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ಪ್ಯಾಂಡಾನಸ್ ಒಡರೇಟಿಸಿಮಸ್. ಸುವಾಸನಾಯುಕ್ತವಾದ ಹೂಗೊಂಚಲಿನಿಂದಾಗಿ ಬಹಳ ಹಿಂದಿನಿಂದಲೂ ಪ್ರಸಿದ್ಧವಾಗಿದೆ. ಪ್ರಪಂಚದ ತೇವಪೂರಿತ ಉಷ್ಣಪ್ರದೇಶಗಳಲ್ಲೆಲ್ಲ ಇದು ಸಾಮಾನ್ಯ. ಪಶ್ಚಿಮದಲ್ಲಿ ಆಫ್ರಿಕದಿಂದ ಹಿಡಿದು ಪೂರ್ವದಲ್ಲಿ ಪೆಸಿಫಿಕ್ ದ್ವೀಪಗಳವರೆಗೂ ಇದರ ವ್ಯಾಪ್ತಿ ಇದೆ. ಭಾರತದಲ್ಲಿ ಮೇಲೆ ಹೇಳಿದ ಪ್ರಭೇದವೂ ಇದನ್ನೇ ಬಹುವಾಗಿ ಹೋಲುವ ಇನ್ನಿತರ 35 ಪ್ರಭೇದಗಳೂ ಬೆಳೆಯುತ್ತವೆ. ಉಳಿದ ಪ್ರಭೇದಗಳಲ್ಲಿ ಮುಖ್ಯವಾದವು–ಪ್ಯಾಂಡೇನಸ್ ಫೀಟಿಡಸ್, ಪ್ಯಾ. ಫರ್ಕೇಟಸ್, ಪ್ಯಾ. ಲಿರಾಮ್ ಮತ್ತು ಪ್ಯಾ. ಅಂಡಮಾನೆನ್ಸಿಯಮ್. ಇವೆಲ್ಲಕ್ಕೂ ರೂಢಿಯಲ್ಲಿ ಕೇದಗೆ ಎಂಬ ಹೆಸರೇ ಇದೆ.

ಕೇದಗೆ ಸ್ವಾಭಾವಿಕವಾಗಿ ನದಿ, ಹಳ್ಳ ಹಾಗೂ ಸಮುದ್ರಗಳ ದಂಡೆಗಳಲ್ಲಿ ಬೆಳೆಯುತ್ತದೆ. ಹೊಲಗದ್ದೆಗಳ ಇಕ್ಕೆಲಗಳಲ್ಲೂ ಕಂಡುಬರುವುದುಂಟು. ಅಲ್ಲದೆ ಇದರ ಕೆಲವು ಬಗೆಗಳನ್ನು ಅಲಂಕಾರಕ್ಕಾಗಿ, ಸುವಾಸನಾಯುಕ್ತ ಗುಣಕ್ಕಾಗಿ, ಇವುಗಳಿಂದ

ತೆಗೆಯಲಾಗುವ ಸುಗಂಧದ್ರವ್ಯಕ್ಕಾಗಿ ಬೆಳೆಸುವುದೂ ಉಂಟು. ಕೇದಗೆ ವಿಸ್ತಾರವಾಗಿ ಹರಡಿಕೊಂಡು ಬೆಳೆಯುವ ಹಾಗೂ ನಿತ್ಯಹಸುರಾಗಿರುವ ಸಸ್ಯ. ಇದರಲ್ಲಿ ವಿಭಿನ್ನ ಬಗೆಗಳಿದ್ದು ಕೆಲವು ಪೊದೆಸಸ್ಯಗಳಾಗಿಯೂ ಇನ್ನು ಕೆಲವು ಚಿಕ್ಕ ಮರಗಳಾಗಿಯೂ ಬೆಳೆಯುವುದುಂಟು. ಕೆಲವು ಬಗೆಗಳ ಎಲೆಗಳ ಅಂಚು ಮುಳ್ಳಿನಂತಿದ್ದರೆ ಮತ್ತೆ ಕೆಲವು ಬಗೆಗಳ ಎಲೆಗಳಲ್ಲಿ ಮುಳ್ಳುಗಳೇ ಇಲ್ಲ. ವಿವಿಧ ಬಗೆಗಳಲ್ಲಿಯ ವ್ಯತ್ಯಾಸದಿಂದಾಗಿ ಅವನ್ನು ಬೇರೆ ಬೇರೆ ಪ್ರಭೇದಗಳೆಂದು ಭಾವಿಸಿರುವುದಲ್ಲದೆ ಕೇದಗೆಯನ್ನು ಬಹುರೂಪಿ (ಪಾಲಿಮಾರ್ಫಿಕ್) ಸಸ್ಯ ಎಂದು ಸಹ ಕರೆಯಲಾಗುತ್ತದೆ. ಕೇದಗೆಯ ವಿವಿಧ ಬಗೆಗಳಲ್ಲಿಯ ವ್ಯತ್ಯಾಸ ಹಾಗೂ ಬಗೆಗಳ ಕ್ರಮಬದ್ಧ ಅಂತಸ್ತಿನ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯುತ್ತಿದೆ.

ಕೇದಗೆಯ ಬಲು ಸಾರ್ವತ್ರಿಕ ಹಾಗೂ ಪ್ರಮುಖ ಪ್ರಭೇದವಾದ ಓಡರೇಟಿಸಿಮಸ್ ಸುಮಾರು 6 ಮೀಟರ್ ಎತ್ತರಕ್ಕೆ ಬೆಳೆಯುವ ಚಿಕ್ಕ ಮರ. ಮುಖ್ಯ ಕಾಂಡ ನೇರವಾಗಿ ಬೆಳೆಯುವುದಾದರೂ ಕಾಲಕ್ರಮೇಣ ಇದು ಒಂದು ಕಡೆ ಬಾಗುತ್ತದೆ. ಕಾಂಡದುದ್ದಕ್ಕೂ ಅಲ್ಲಲ್ಲೆ ದಪ್ಪನೆಯ ಹಾಗೂ ದೃಢವಾದ ಬೇರುಗಳು ಹುಟ್ಟಿ ಭೂಮಿಯ ಕಡೆಗೆ ಬೆಳೆದು ನೆಲದಲ್ಲಿ ಆಳವಾಗಿ ಇಳಿದು ಮುಖ್ಯ ಕಾಂಡ ನೆಲದ ಮೇಲೆ ಒರಗಿ ಬೀಳದಂತೆ ತಡೆದು ಕಾಂಡಕ್ಕೆ ಆಧಾರವನ್ನೀಯುತ್ತವೆ. ಇದರಿಂದಾಗಿ ಇವಕ್ಕೆ ಆಧಾರ ಬೇರುಗಳೆಂದು (ಸ್ಟಿಲ್ಟ್ ರೂಟ್ಸ್) ಹೆಸರಿದೆ. ಬೇರುಗಳು ಗಿಡಕ್ಕೆ ಆಧಾರವನ್ನು ಕೊಡುವುದು ಮಾತ್ರವಲ್ಲ ಮಣ್ಣು ಸುಲಭವಾಗಿ ಕುಸಿಯದಂತೆಯೂ ತಡೆಯುತ್ತವೆ. ಮುಖ ಕಾಂಡದಿಂದ ಹೆಚ್ಚಿನ ಸಂಖ್ಯೆಯಲ್ಲಿ ರೆಂಬೆಗಳು ದಟ್ಟವಾಗಿ ಹೆಣೆದುಕೊಂಡು ಬೆಳೆಯುತ್ತವೆ. ಇದರಿಂದಾಗಿ ಇದು ಯಾವ ಪ್ರಾಣಿಯೂ ನುಸುಳಿ ಹೋಗಲಾರದಂಥ ಪೊದೆಯಾಗುತ್ತದೆ. ಕೇದಗೆಯ ಎಲೆಗಳ ಉದ್ದ ಸುಮಾರು 1–1.5 ಮೀ., ಆಕಾರ ಕತ್ತಿಯಂತೆ. ಇವುಗಳ ಬಣ್ಣ ನೀಲಿಮಿಶ್ರಿತ ಹಸುರು. ಮೊನಚಾದ ತುದಿ, ಚರ್ಮದಂತೆ ಒರಟಾಗಿರುವ ಮೇಲ್ಮೈ, ಮಧ್ಯನರ ಹಾಗೂ ಅಂಚಿನ ಮೇಲೆ ಚಿಕ್ಕ ಮುಳ್ಳುಗಳಿರುವುದು ಎಲೆಗಳ ವೈಶಿಷ್ಟ್ಯ. ಕೆಲವು ಬಗೆಗಳಲ್ಲಿ ಮುಳ್ಳುಗಳಿಲ್ಲ. ಹೂಗಳು ಏಕಲಿಂಗಿಗಳು. ಗಂಡು ಮತ್ತು ಹೆಣ್ಣು ಹೂಗಳು ಬೇರೆ ಬೇರೆ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲು ತಾಳಗುಚ್ಛ ಮಾದರಿಯದು. ಗಂಡು ತಾಳಗುಚ್ಛ 25–50 ಸೆಂಮೀ. ಉದ್ದವಿದ್ದು 5–10 ಸೆಂಮೀ. ಉದ್ದದ ಅನೇಕ ಕದಿರು ಗೊಂಚಲುಗಳನ್ನೊಳಗೊಂಡಿದೆ. ಉದ್ದನೆಯ ಹಾಗೂ ಬಿಳಿಯ ಇಲ್ಲವೆ ತಿಳಿಹಳದಿ ಬಣ್ಣದ ಕವಚವೊಂದು ತಾಳಗುಚ್ಛವನ್ನು ಆವರಿಸಿದೆ. ಈ ಕವಚ ಬಹಳ ಸುಗಂಧಪೂರಿತವಾಗಿದೆ. ಗಂಡುಹೂಗಳು ಬಲು ಚಿಕ್ಕ ಗಾತ್ರದವು. ಒಂದೊಂದರಲ್ಲೂ ಅನೇಕ ಕೇಸರಗಳಿವೆ. ಹೆಣ್ಣು ತಾಳಗುಚ್ಛ ಸಾಮಾನ್ಯವಾಗಿ ಗಿಡದ ತುದಿಯಲ್ಲಿ ಹುಟ್ಟುತ್ತದೆ. ಒಂದೊಂದು ಗೊಂಚಲಿನಲ್ಲೂ ಅಸಂಖ್ಯಾತ ಹೆಣ್ಣು ಹೂಗಳಿವೆ. ಒಂದು ಹೂಗೊಂಚಲಿನ ಎಲ್ಲ ಅಂಡಾಶಯಗಳೂ ಗರ್ಭಧಾರಣೆಯಾದ ಮೇಲೆ ಒಟ್ಟಿಗೆ ಕೂಡಿಕೊಂಡು ಬೆಳೆದು ಗುಂಡನೆಯ ಇಲ್ಲವೆ ದೀರ್ಘ ಚತುರಸ್ರಾಕಾರದ ಒಂದೇ ಫಲವಾಗಿ ರೂಪುಗೊಳ್ಳುತ್ತವೆ. ಈ ರೀತಿ ಉತ್ಪತ್ತಿಯಾಗುವ ಫಲಕ್ಕೆ ಸಂಯುಕ್ತ ಫಲ ಎಂದು ಹೆಸರು. ಹಲಸಿನ ಹಣ್ಣಿನಲ್ಲಿರುವಂತೆ ಇದರ ಮೇಲ್ಮೈಯಲ್ಲಿ ಕಾಣುವ ಅನೇಕ ಸಣ್ಣ ಸಣ್ಣ ಗುಬುಟುಗಳಿಂದಾಗಿ ಇದನ್ನು ಸಂಯುಕ್ತಫಲವೆಂದು ಗುರುತಿಸಬಹುದು. ಒಂದೊಂದು ಗುಬುಟೂ ಒಂದೊಂದು ಅಷ್ಟಿಫಲ. ಫಲ ಚಿಕ್ಕದಾಗಿದ್ದಾಗ ಹಸುರು ಬಣ್ಣದ್ದಾಗಿದ್ದು ಮಾಗಿದಂತೆ ಹಳದಿ ಇಲ್ಲವೆ ಕೆಂಪು ಬಣ್ಣಕ್ಕೆ ತಿರುಗುತ್ತದೆ.

ಕೇದಗೆಯ ಸ್ವಾಭಾವಿಕ ಸಂತಾನಾಭಿವೃದ್ಧಿ ಅಬೀಜ ಪುನರುತ್ಪತ್ತಿ ಕ್ರಮದಿಂದ ನಡೆಯುವುದೇ ಹೆಚ್ಚು. ಗಿಡದ ರೆಂಬೆಗಳು ಬೆಳೆಯುತ್ತ ಹೋದಂತೆ ಅಲ್ಲಲ್ಲೆ ಬೇರುಗಳು ಹುಟ್ಟಿಕೊಂಡು ರೆಂಬೆಗಳು ಮೂಲಸಸ್ಯದಿಂದ ಬೇರ್ಪಟ್ಟು ಹೊಸ ಸಸ್ಯಗಳಾಗುತ್ತವೆ. ಇದೇ ಗುಣವನ್ನು ಉಪಯೋಗಿಸಿಕೊಂಡು ಕೇದಗೆಯನ್ನು ಬೆಳೆಸಬಹುದು. ಕಾಂಡವನ್ನು ಒಂದೊಂದೇ ಗೆಣ್ಣುಳ್ಳ ಅನೇಕ ತುಂಡುಗಳನ್ನಾಗಿ ಕತ್ತರಿಸಿ ನೆಟ್ಟು ಹೊಸಗಿಡಗಳನ್ನು ಉತ್ಪಾದಿಸಬಹುದು. ಒಳ್ಳೆಯ ಬೆಳವಣಿಗೆಗೆ ಫಲವತ್ತಾದ ಹಾಗೂ ನೀರಿನ ಸೌಕರ್ಯ ಚೆನ್ನಾಗಿರುವ ಭೂಮಿ ಅತ್ಯಗತ್ಯ. ತುಂಡುಗಳು ನೆಟ್ಟ 3–4 ವರ್ಷಗಳಲ್ಲಿ ಬೆಳೆದು ಹೂಬಿಡಲು ಪ್ರಾರಂಭಿಸುತ್ತವೆ. ಹೂ ಬಿಡುವ ಕಾಲ ಸಾಮಾನ್ಯವಾಗಿ ಜುಲೈಯಿಂದ ಅಕ್ಟೋಬರ್ ತಿಂಗಳುಗಳ ನಡುವಣ ಕಾಲ. ಪೂರ್ಣ ಬಲಿತ ಗಿಡಗಳು ವರ್ಷಕ್ಕೆ 30–40 ಹೂಗೊಂಚಲುಗಳನ್ನು ಬಿಡುತ್ತವೆ.

ಕೇದಗೆಗೆ ಸಾಧಾರಣವಾಗಿ ಯಾವ ಬಗೆಯ ರೋಗಗಳಾಗಲಿ, ಕೀಟಗಳಾಗಲಿ ಅಂಟುವುದಿಲ್ಲ. ಆದರೆ ಅಧಿಕ ತೇವ ಮತ್ತು ಉಷ್ಣತೆ ಇರುವ ಋತುಗಳಲ್ಲಿ ಇದರ ಎಲೆಗಳಿಗೆ ಆಲ್ಟರ್ನೇರಿಯ ಎಂಬ ಹಾನಿಕಾರಕವಾದ ಬೂಷ್ಟು ತಗಲುವುದುಂಟು. ಇದರಿಂದ ಎಲೆಗಳ ಮೇಲೆಲ್ಲ ಕಪ್ಪು ಕಲೆಗಳು ಕಾಣಿಸಿಕೊಂಡು ಕ್ರಮೇಣ ಈ ಜಾಗಗಳಲ್ಲಿ ತೂತುಗಳುಂಟಾಗಿ ಎಲೆಗಳು ಬಿದ್ದು ಹೋಗುತ್ತವೆ. ಇದರ ಫಲವಾಗಿ ಹೂಗಳ ಉತ್ಪತ್ತಿಯೂ ಕ್ಷೀಣಿಸುತ್ತದೆ.

ಕೇದಗೆ ತನ್ನ ಸುಗಂಧಪೂರಿತ ಹೂಗಳಿಂದಾಗಿ ಬಹಳ ಜನಪ್ರಿಯವಾಗಿದೆ. ಭಾರತ ಮತ್ತು ಬರ್ಮಗಳಲ್ಲಿ ಇದರ ಗಂಡು ತಾಳಗುಚ್ಛದ ಕವಚಗಳನ್ನು ಹೆಣ್ಣುಮಕ್ಕಳ ಕೇಶಾಲಂಕಾರಕ್ಕಾಗಿ ಬಳಸುತ್ತಾರೆ. ಅಲ್ಲದೆ ಈ ಹೊದಿಕೆಗಳಿಂದ ಕೆವ್ಡ ಅತ್ತರು ಎಂಬ ಹೆಸರಿನ ಸುಗಂಧ ತೈಲವನ್ನು ತೆಗೆಯುತ್ತಾರೆ. ಹೂಗೊಂಚಲಿನ ಹೊದಿಕೆಗಳನ್ನು ಬೇರ್ಪಡಿಸಿ,

ಆವಿ ಆಸವೀಕರಣಗೊಳಿಸಿ ಹೊರ ಬರುವ ಹಬೆಯನ್ನು ಶ್ರೀಗಂಧ ತೈಲದಲ್ಲೊ ಇಲ್ಲವೆ ಶುದ್ಧವಾದ ಪ್ಯಾರಫಿನ್ ಎಣ್ಣೆಯಲ್ಲೂ ಕರಗಿಸಿದರೆ ದೊರೆಯುವ ತೈಲವೇ ಕೆವ್ಡ ಅತ್ತರು. ಇದಕ್ಕೆ ಆಹ್ಲಾದಕರ ಸುಗಂಧ ಉಂಟು. ಈ ತೈಲ ಅತ್ಯಂತ ಬೆಲೆಬಾಳುವಂಥದೂ ಆಗಿದೆ. ಆಸವೀಕರಣದಲ್ಲಿ ಬಳಸಲಾಗುವ ಗಂಧದೆಣ್ಣೆಯ ಪರಿಮಾಣ ಹಾಗೂ ಕೇದಗೆಯ ಬಗೆಯನ್ನವಲಂಬಿಸಿ ಕೆವ್ಡ ಅತ್ತರಿನ ಗುಣ ವ್ಯತ್ಯಾಸವಾಗುತ್ತದೆ. ಆಸವೀಕರಣದಲ್ಲಿ ಉತ್ಪತ್ತಿಯಾಗುವ ಹಬೆಯನ್ನು ಗಂಧದೆಣ್ಣೆಯಲ್ಲಿ ಕರಗಿಸದೆ ಬರಿಯ ನೀರಿನಲ್ಲಿ ಕರಗಿಸಿದರೆ ಕೆವ್ಡದ್ರವ ದೊರೆಯುತ್ತದೆ. ಕೆವ್ಡ ಅತ್ತರು ನೀರಿನೊಂದಿಗೆ ಸುಲಭವಾಗಿ ಬೆರೆಯಬಲ್ಲದು. ಇದರಲ್ಲಿ ß–ಫೀನೈಲ್ ಈಥೈಲ್ ಆಲ್ಕೊಹಾಲ್, ಮೀಥೈಲ್ ಈಥರ್, ಫೀನೈಲ್ ಈಥರ್, ಅಸಿಟೇಟ್, ಸಿಟ್ರಾಲ್ ಮುಂತಾದ ಅನೇಕ ರಾಸಾಯನಿಕ ಘಟಕಗಳಿವೆ. ಕೆವ್ಡ ಅತ್ತರು ಬಹಳ ಹಿಂದಿನಿಂದಲೂ ಅಲಂಕಾರ ವಸ್ತುವಾಗಿ ಭಾರತದಲ್ಲಿ ಬಳಕೆಯಲ್ಲಿದೆ. ಇದನ್ನು ನೇರವಾಗಿ ಮಾತ್ರವಲ್ಲದೆ ಬೇರೆ ಸುಗಂಧ ದ್ರವ್ಯಗಳೊಂದಿಗೆ ಮಿಶ್ರ ಮಾಡಿಯೂ ಬಳಸಬಹುದು. ಅಗರಬತ್ತಿ ತಯಾರಿಕೆಯಲ್ಲೂ ಸಿಹಿತಿಂಡಿ ಮತ್ತು ಪಾನೀಯಗಳಿಗೆ ಸುವಾಸನೆ ಕೊಡಲು ಇದನ್ನು ಬಳಸುವುದುಂಟು. ಕೇದಗೆಗೆ ಮೇಲೆ ಹೇಳಿದ ಉಪಯೋಗವಲ್ಲದೆ ಇತರ ಉಪಯೋಗಗಳು ಉಂಟು. ಇದರ ತುದಿ ಮೊಗ್ಗನ್ನು ಎಲೆ ಕೋಸಿನಂತೆ ತರಕಾರಿಯಾಗಿ ಉಪಯೋಗಿಸುತ್ತಾರೆ. ಫಿಲಿಪ್ಪೀನ್ಸ್ ದ್ವೀಪಗಳ ನಿವಾಸಿಗಳಲ್ಲಿ ಇದರ ಎಲೆಗಳನ್ನು ಆಹಾರವಾಗಿ ಬಳಸುವ ರೂಢಿಯಿದೆ. ಬರಗಾಲದ ಸಂದರ್ಭಗಳಲ್ಲಿ ಇದರ ಕಾಯಿಗಳನ್ನು ತಿನ್ನುತ್ತಾರೆಂದು ಹೇಳಲಾಗಿದೆ. ಕೇದಗೆಯ ಎಲೆಗಳನ್ನು ಗುಡಿಸಲುಗಳ ಛಾವಣಿ, ಮುಸುಕು, ಚಾಪೆ, ಹಗ್ಗ, ಬುಟ್ಟಿ, ಕೊಡೆ ಮತ್ತು ಒಂದು ಬಗೆಯ ಒರಟು ಕಾಗದ ಮುಂತಾದವನ್ನು ಮಾಡಲೂ ಬಳಸುವುದುಂಟು. ಅಲ್ಲದೆ, ಎಲೆಗಳಿಂದ ಒಂದು ಬಗೆಯ ನಾರನ್ನು ತೆಗೆದು ಚೀಲಗಳನ್ನು ಹೆಣೆಯುವ ರೂಢಿ ಕೆಲವೆಡೆ ಇದೆ. ಕೇದಗೆಯ ಬೇರು ಕೂಡ ಇದೇ ತೆರನ ಉಪಯೋಗಕ್ಕೆ ಬರುತ್ತದೆ. ಬೇರುಗಳಿಂದ ಕುಂಚಗಳ ಹಿಡಿಗಳನ್ನೂ ತಯಾರಿಸಬಹುದು. ಕೇದಗೆಗೆ ಔಷಧೀಯ ಪ್ರಾಮುಖ್ಯವೂ ಉಂಟು. ಎಲೆಗಳನ್ನು ಕುಷ್ಠ, ಸಿಡುಬು ಮತ್ತು ಕೆಲವು ಚರ್ಮ ರೋಗಗಳನ್ನು ಗುಣಪಡಿಸಲು ಉಪಯೋಗಿಸುತ್ತಾರೆ. ಹೃದಯ ಮತ್ತು ಮಿದುಳಿನ ಕೆಲವು ರೋಗಗಳನ್ನು ಶಮನಗೊಳಿಸುವ ಶಕ್ತಿಯೂ ಎಲೆಗಳಿಗಿದೆ. ಕೇಸರಗಳಿಂದ ತಯಾರಿಸಲಾಗುವ ಔಷಧಿಯನ್ನು

ಕಿವಿ ನೋವು, ತಲೆ ನೋವು ಮತ್ತು ರಕ್ತ ಸಂಬಂಧವಾದ ಕಾಯಿಲೆಗಳಲ್ಲಿ ಬಳಸುತ್ತಾರೆ. ಹೂಗೊಂಚಲಿನಿಂದ ತೆಗೆದ ಸಾರ ಪ್ರಾಣಿಗಳ ಸಂಧಿವಾತ ರೋಗದ ಉಪಶಮನಕಾರಿ ಎನ್ನಿಸಿದೆ.

ಕೇದಗೆ ಇನ್ನಿತರ ಪ್ರಭೇದಗಳನ್ನು ಅಲಂಕಾರ ಸಸ್ಯಗಳಾಗಿ ಕುಂಡದಲ್ಲಿ ಬಳಸುವುದುಂಟು. ಇವುಗಳಲ್ಲಿ ಮುಖ್ಯವಾದುವು ಪ್ಯಾಂಡೇನಸ್ ಯೂಟಲಿಸ್, ಪ್ಯಾ. ವೆಚಿಯೈ, ಪ್ಯಾ. ಸ್ಯಾಂಡೆರಿಯಾನ, ಪ್ಯಾ. ಗ್ರಾಮಿನಿಫೋಲಿಯಸ್ ಮುಂತಾದುವು. (ಎಸ್.ಡಿ.ಕೆ.)

**ಕೇದಾರನಾಥ :** ಉತ್ತರಾಂಚಲ್ ಗಢವಾಲ್ ಜಿಲ್ಲೆಯಲ್ಲಿರುವ ಪ್ರಸಿದ್ಧ ಶೈವ ಕ್ಷೇತ್ರ. ಕೇದಾರಪುರಿ ಎಂಬ ಹೆಸರೂ ಉಂಟು. ಇದು ಹಿಮಾಲಯ ತಪ್ಪಲಲ್ಲಿ ಸಮುದ್ರ ಮಟ್ಟಕ್ಕೆ ಸು. 3,573 ಮೀ ಎತ್ತರದಲ್ಲಿದೆ. ಇಲ್ಲಿಯ ಕೇದಾರನಾಥೇಶ್ವರನಿಗೆ ಪೂಜೆ ಸಲ್ಲಿಸಲು ಯಾತ್ರಿಕರು ವರ್ಷವರ್ಷವೂ ತಂಡೋಪತಂಡವಾಗಿ ಬರುತ್ತಾರೆ.

ಈ ಕ್ಷೇತ್ರ ಕೆಲಕಾಲ ಬೌದ್ಧರ ಒಂದು ಮುಖ್ಯ ಕೇಂದ್ರವಾಗಿತ್ತು. ಶಂಕರಾಚಾರ್ಯರು ಇಲ್ಲಿಗೆ ಆಗಮಿಸಿ ಬೌದ್ಧರ ಪ್ರಾಬಲ್ಯವನ್ನು ಕುಗ್ಗಿಸಿದರು. ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಇಲ್ಲಿ ಶಂಕರಾಚಾರ್ಯರು ನಿರ್ವಾಣ ಹೊಂದಿದರೆಂಬ ಹೇಳಿಕೆಯೂ ಇದೆ.



ಕೇದಾರನಾಥ ಮಂದಿರ

ಕೇದಾರನಾಥೇಶ್ವರ ದೇವಾಲಯವನ್ನು ಎತ್ತರವಾದ ಸ್ಥಳದಲ್ಲಿ ಕಟ್ಟಲಾಗಿದೆ. ಸುತ್ತ ಹಿಮದಿಂದ ಆವೃತವಾದ ಪರ್ವತ ಶಿಖರಗಳಿವೆ. ಇಲ್ಲಿಯ ಶಿವಲಿಂಗ ಭಾರತದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಹೆಸರಾಗಿದೆ. ಇದು ಆಕಾರದಲ್ಲಿ ಎಮ್ಮೆಯ ಪೃಷ್ಠದಂತಿದ್ದು ನೋಡಲಿಕ್ಕೆ ಕೈಲಾಸ ಶಿಖರದಂತೆ ಇಲ್ಲವೆ ಧಾನ್ಯದ ಗುಡ್ಡೆಯಂತೆ ಕಾಣುತ್ತದೆ. ಲಿಂಗದ ತಳಭಾಗದ ಪರಿಧಿ ಸು. 3 ರಿಂದ 3.6 ಮೀ ಮತ್ತು ಸು. 6096ಮೀ ಎತ್ತರ. ಪಾಂಡವರು ಸ್ವರ್ಗಾರೋಹಣಕ್ಕೆ ಮುಂಚೆ ಇಲ್ಲಿಗೆ ಬಂದು ಶಿವಾಲಯವನ್ನು ಕಟ್ಟಿಸಿ ಶಿವನನ್ನು ಪೂಜಿಸಿ ಪಾಪವಿಮುಕ್ತರಾದರೆಂದು ಪ್ರತೀತಿ. ಇನ್ನೊಂದು ಆಖ್ಯಾಯಿಕೆ ಪ್ರಕಾರ ಭೀಮ ಮತ್ತು ಆತನ ತಮ್ಮಂದಿರು ಪೂಜಾ ಸಮಯದಲ್ಲಿ ಶಿವಲಿಂಗವನ್ನು ಸ್ಪರ್ಶಿಸಿದ್ದರಿಂದ ಶಿವ ಮಹಿಷ ರೂಪದಲ್ಲಿ ಕಾಣಿಸಿಕೊಂಡು ತನ್ನ ಕಾಲು ಮತ್ತು ಕೊಂಬುಗಳಿಂದ ಹಳ್ಳವನ್ನು ತೋಡಿ ನೆಲಕ್ಕೆ ಹೋಗುತ್ತಿದ್ದಾಗ ಭೀಮ ಕಂಡು ತನ್ನೆರಡು ಕೈಗಳಿಂದ ಅದರ ಬೆನ್ನಿನ ಭಾಗವನ್ನು ತಬ್ಬಿಹಿಡಿದನಾದುದರಿಂದ ಅದರ ಪೃಷ್ಠ ಭಾಗ ಕೇದಾರದಲ್ಲಿ ಉಳಿದು ನೇಪಾಳದಲ್ಲಿ ಪಶುಪತಿನಾಥನ ರೂಪದಲ್ಲಿ ಅದರ ಮುಂಭಾಗ ಕಾಣಿಸಿಕೊಂಡಿತಂತೆ.

ಗರ್ಭಗುಡಿಯಲ್ಲಿ ಕತ್ತಲಿದ್ದು, ಸದಾ ನಂದಾದೀಪ ಉರಿಯುತ್ತಿರುತ್ತದೆ. ದೇವಾಲಯದ ಆವರಣದಲ್ಲಿ ಪಂಚಪಾಂಡವರು, ದ್ರೌಪದಿ, ಕುಂತಿ, ಪಾರ್ವತಿ, ಲಕ್ಷ್ಮಿ ಮುಂತಾದ ವಿಗ್ರಹಗಳಿವೆ. ಇವುಗಳಿಗೂ ನಿತ್ಯ ಪೂಜೆ ನಡೆಯುತ್ತದೆ. ನಿಷಿದ್ಧವಾದ್ದರಿಂದ ಇಲ್ಲಿಯ ಶಿವಲಿಂಗಕ್ಕೆ ನೀರಿನಿಂದ ಅಭಿಷೇಕ ಮಾಡುವುದಿಲ್ಲ. ಆದರೆ ತುಪ್ಪದ ಉಂಡೆಗಳನ್ನು ಮಾಡಿ ಲಿಂಗದ ಮೇಲೆ ಎಸೆಯುತ್ತಾರೆ. ಶಿವಲಿಂಗದ ಪೀಠದ ಬಳಿ ಪಂಡರು(ಪೂಜಾರಿಗಳು) ಕುಳಿತು ಮಂತ್ರ ಘೋಷಣೆ ಮಾಡಿ ಭಕ್ತಾದಿಗಳು ತಂದ ನೈವೇದ್ಯವನ್ನು ದೇವರಿಗೆ ಅರ್ಪಿಸುತ್ತಾರೆ. ಪೂಜೆ ಮುಗಿದ ಆನಂತರ ಪೂಜೆ ಸಲ್ಲಿಸಿದಾತ ಒಮ್ಮೆ ಶಿವಲಿಂಗವನ್ನು ಆಲಿಂಗಿಸಿಕೊಳ್ಳುತ್ತಾನೆ. ಇದರಿಂದ ಶಿವ ಸಾನ್ನಿಧ್ಯವನ್ನು ಪಡೆದನೆಂಬ ಸಂತುಷ್ಟಿ ಭಕ್ತನ ಪಾಲಿನದಾಗುತ್ತದೆ. ಈ ಕ್ಷೇತ್ರದಲ್ಲಿ ಮಡಿ, ಮೈಲಿಗೆಗಳ ನಿಯಮಗಳು ಅಷ್ಟಾಗಿ ಇಲ್ಲ. ಪಂಡರೂ ಅಷ್ಟೇ, ತಮ್ಮ ದೈನಂದಿನ ಪೋಷಾಕಿನಲ್ಲೇ ಪೂಜೆ, ಅರ್ಚನೆಗಳನ್ನು ನಡೆಸಿಕೊಡುತ್ತಾರೆ. ಇಲ್ಲಿಯ ಅರ್ಚಕ ನಂಬೂದಿರಿ ಬ್ರಾಹ್ಮಣ ಮನೆತನಕ್ಕೆ ಸೇರಿದವ.

ಕೇದಾರನಾಥ ಮಂದಿರದಲ್ಲಿ ಪೂಜಾದಿಗಳು ನಡೆಯುವುದು ವರ್ಷದಲ್ಲಿ 6 ತಿಂಗಳು ಮಾತ್ರ. ಏಪ್ರಿಲ್ ತಿಂಗಳ ಕೊನೆಯ ಭಾಗದಲ್ಲಿ ಶುಭ ನಕ್ಷತ್ರದಲ್ಲಿ ಮಂದಿರದ ಬಾಗಿಲುಗಳನ್ನು ತೆರೆಯುವರು. ಕಾರ್ತೀಕ ಮಾಸದಲ್ಲಿ ಬಾಗಿಲನ್ನು ಮುಚ್ಚುವರು. ಉಳಿದ 6 ತಿಂಗಳು ಕೇದಾರನಾಥೇಶ್ವರನ ಉತ್ಸವ ಮೂರ್ತಿಯನ್ನು 40 ಕಿಮೀ. ಕೆಳಗಿರುವ ಉಷಾಮಠಕ್ಕೆ ತಂದು ಪೂಜಾದಿಗಳನ್ನು ಸಲ್ಲಿಸುವರು.

ದೇವಸ್ಥಾನದ ಸುತ್ತ ಪ್ರದಕ್ಷಿಣೆ ಬರುವ ದಾರಿಯಲ್ಲಿ ಎಂಟು ದಿಕ್ಕುಗಳಲ್ಲೂ ಪವಿತ್ರವೆಂದು ಭಾವಿಸಲಾದ ನೀರಿನ ಎಂಟು ಕುಂಡಗಳಿವೆ. ಸಮೀಪದಲ್ಲಿಯೇ ಭೈರವ ಝಾಂಪ್ ಎಂಬ ಬಂಡೆಯಿದೆ. ಈ ಬಂಡೆಯ ಮೇಲಿಂದ ಬಿದ್ದು ಪ್ರಾಣ ತ್ಯಾಗ ಮಾಡಿದರೆ ಮುಂದಿನ ಜನ್ಮದಲ್ಲಿ ಅತೃಪ್ತ ಕಾಮನೆಗಳು ಈಡೇರುತ್ತವೆ ಎಂಬ ನಂಬಿಕೆ ಇದೆ.

ಬದರೀ, ಕೇದಾರ, ಮಧ್ಯಮಹೇಶ್ವರ, ತುಂಗನಾಥ, ರುದ್ರನಾಥ ಮತ್ತು ಕಲ್ಲೇಶ್ವರ ಇವು ಇದರ ಸಮೀಪದಲ್ಲಿರುವ ದೇವಸ್ಥಾನಗಳು. ಇವಿಷ್ಟು ಸೇರಿ ಪಂಚ ಕೇದಾರನಾಥ ಎಂಬ ಹೆಸರಾಗಿವೆ. (ಜಿ.ಎಚ್.)

**ಕೇನ್ ಥಾಮಸ್ ಹೆನ್ರಿ ಹಾಲ್ :** 1853–1931. ಇಂಗ್ಲಿಷ್ ಕಾದಂಬರಿಕಾರ. ಚೆಷೈರಿನ ರನ್‌ಕಾರನ್‌ಲ್ಲಿ ಹುಟ್ಟಿದ. ಈತನ ವಿದ್ಯಾಭ್ಯಾಸ ಐಲ್ ಆಫ್ ಮ್ಯಾನ್ ದ್ವೀಪದಲ್ಲೂ ಲಿವರ್‌ಪೂಲ್‌ನಲ್ಲೂ ನಡೆಯಿತು. ಶಿಲ್ಪಶಾಸ್ತ್ರಜ್ಞನ ಗುಮಾಸ್ತನಾಗಿಯೂ ಕೆಲಕಾಲ ಉಪಾಧ್ಯಾಯನಾಗಿಯೂ ಇದ್ದು ಬಿಡುವಿನ ವೇಳೆಯಲ್ಲಿ ಪತ್ರಿಕೋದ್ಯಮವನ್ನು ಈತ ಅಭ್ಯಾಸ ಮಾಡಿದ. ಇಪ್ಪತ್ತೈದನೆಯ ವಯಸ್ಸಿನಲ್ಲಿ ಡಿ.ಜಿ. ರೊಸೆಟಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ. ಈತನ ರಿಕಲೆಕ್ಷನ್ಸ್ ಆಫ್ ರೊಸೆಟಿ ಎಂಬ ಗ್ರಂಥ 1882ರಲ್ಲಿ ಪ್ರಕಟವಾಯಿತು. ದಿ ಷ್ಯಾಡೋ ಆಫ್ ಎ ಕ್ರೈಂ (1885) ಈತನ ಮೊದಲ ಕಾದಂಬರಿ. 1887ರಲ್ಲಿ ಡೀಮ್‌ಸ್ಟರ್ ಬಂತು. ಅನಂತರ ಅದು ನಾಟಕವಾಗಿಯೂ ಪರಿವರ್ತನೆಗೊಂಡು ಕೇನನಿಗೆ ಅಪಾರ ಖ್ಯಾತಿ ಹಾಗೂ ಹಣವನ್ನು ಕೊಟ್ಟಿತು. 1918ರಲ್ಲಿ ನೈಟ್ ಪದವಿಯೂ 1922ರಲ್ಲಿ ಕಂಪ್ಯಾನಿಯನ್ ಆಫ್ ಆನರ್ ಪ್ರಶಸ್ತಿಯೂ ಈತನಿಗೆ ಲಭಿಸಿದುವು. ದಿ ಬಾಂಡ್‌ಮನ್ (1890), ದಿ ಮ್ಯಾಂಕ್ಸ್‌ಮನ್ (1894), ದಿ ಇಟರ್ನಲ್ ಸಿಟಿ (1901), ದಿ ಪ್ರಾಡಿಕಲ್ ಸನ್ (1904) ಇವು ಈತನ ಇತರ ಖ್ಯಾತ ಕಾದಂಬರಿಗಳು. ಮೈ ಸ್ಟೋರಿ (1908) ಎಂಬುದು ಈತನ ಜೀವನದ ಪೂರ್ವಭಾಗವನ್ನೊಳಗೊಂಡ ಆತ್ಮ ಕಥೆ. 1893ರಲ್ಲೇ ಈತ ಬರೆಯಲು ಮೊದಲು ಮಾಡಿದ ಯೇಸು ಜೀವನ ವೃತ್ತಾಂತ ಈತ ಸತ್ತ ಮೇಲೆ 1938ರಲ್ಲಿ ಪ್ರಕಟವಾಯಿತು. (ಎಚ್.ವಿ.ಎಸ್.)

**ಕೇನಿಸ್ ಮೇಜರ್ : ನೋಡಿ–ಮಹಾಶ್ವಾನ**

**ಕೇನಿಸ್ ಮೈನರ್ : ನೋಡಿ – ಲಘುಶ್ವಾನ**

**ಕೇನಿಸ್ ವೆನಾಟಿಸಿ :** ಆಕಾಶದಲ್ಲಿರುವ 88 ನಕ್ಷತ್ರಪುಂಜಗಳಲ್ಲಿ ಒಂದು. ಇದರ ವ್ಯಾಪ್ತಿ ವಿಷುವದಂಶ 12 ಗಂಟೆ 5 ಮಿ.–14ಗಂ 5ಮಿ, ಮತ್ತು ಘಂಟಾವೃತ್ತಾಂಶ 28°–52° ಉ. ಬರಿಗಣ್ಣಿನಿಂದ ಈ ಪುಂಜವನ್ನು ಗುರುತಿಸುವುದು ಕಷ್ಟ. ಅರಸಾಮೇಜರ್ (ಸಪ್ತರ್ಷಿ ಮಂಡಲ), ಸಿಂಹರಾಶಿ, ಕನ್ಯಾರಾಶಿ ಮತ್ತು ಬೋವೋಟೀಸ್ ಈ ನಕ್ಷತ್ರ ಪುಂಜಗಳು ಆವೃತಿಸುವ ಆಕಾಶವಲಯದ ಒಳಗೆ ಕೇನಿಸ್ ವೆನಾಟಿಸೈ ಇದೆ. ಇದರಲ್ಲಿರುವ ಪ್ರಧಾನ ನಕ್ಷತ್ರದ ಹೆಸರು ಕಾರ್ ಕರೋಲಿ. ಈ ಪುಂಜಕ್ಕೆ ಕಾಲಭೈರವ ಎಂಬ ಹೆಸರಿದೆ. *

**ಕೇನೋಪನಿಷತ್ತು :** ಪ್ರಸಿದ್ಧವಾದ ಉಪನಿಷತ್ತುಗಳಲ್ಲಿ ಒಂದು. ಸಾಮವೇದದ ತಲವಕಾರ ಬ್ರಾಹ್ಮಣಕ್ಕೆ ಅಥವಾ ಜೈಮಿನೀಯ ಬ್ರಾಹ್ಮಣಕ್ಕೆ ಸೇರಿದ್ದು. ಕೇನ ಎಂಬ ಪದ ಪ್ರಾರಂಭದ ಮಂತ್ರದಲ್ಲಿ ಮೊದಲನೆಯದಾಗಿರುವುದರಿಂದ ಈ ಉಪನಿಷತ್ತಿಗೆ ಕೇನೋಪನಿಷತ್ತು ಎಂಬ ಹೆಸರು ಬಂದಿದೆ. ಶಂಕರಾಚಾರ್ಯರ ಪ್ರಕಾರ ಇದು ತಲವಕಾರ ಬ್ರಾಹ್ಮಣದ ಒಂಬತ್ತನೆಯ ಅಧ್ಯಾಯ. ಬರ್ನಲ್ ಮತ್ತು ಹ್ಯಾನ್ಸ್ ಓರ್ಟೆಲ್ಲರು ಇದು ಜೈಮಿನೀಯ ಬ್ರಾಹ್ಮಣದ ನಾಲ್ಕನೆಯ ಅಧ್ಯಾಯದ ಹತ್ತನೆಯ ಅನುವಾಕ ಎಂದು ಅಭಿಪ್ರಾಯಪಡುತ್ತಾರೆ. ಇದು ಗದ್ಯ ಪದ್ಯರೂಪದ ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ, ಐತರೇಯ, ಕೌಶೀತಕೀಗಳ ಗುಂಪಿಗೆ ಸೇರಿದ್ದು. ಆದ್ದರಿಂದ ಅತಿ ಪ್ರಾಚೀನವಾದುದು. ಸಾಂಪ್ರದಾಯಿಕವಾಗಿ ಈಶಾವಾಸ್ಯದ ಅನಂತರ ಬರುತ್ತದೆ. ಇದಕ್ಕೆ ಪ್ರಸಿದ್ಧವಾದ ಎರಡು ಅದ್ವೈತಭಾಷ್ಯಗಳಿವೆ. ಒಂದಕ್ಕೆ ಪದಭಾಷ್ಯವೆಂದೂ ಇನ್ನೊಂದಕ್ಕೆ ವಾಕ್ಯಭಾಷ್ಯವೆಂದೂ ಹೆಸರು. ಇವೆರಡೂ ಶಂಕರಾಚಾರ್ಯಕೃತವೆಂದು ಹೇಳಲಾಗಿದೆಯಾದರೂ ಪದಭಾಷ್ಯ ಮಾತ್ರ ಅದರದೇ ಎಂದು ಖಚಿತವಾಗಿ ತಿಳಿದಿದೆ.

ನಾಲ್ಕು ಖಂಡಗಳನ್ನು ಒಳಗೊಂಡಿರುವ ಈ ಉಪನಿಷತ್ತು ಪರಬ್ರಹ್ಮ ವಿಷಯಕವಾದದ್ದು. ಮೊದಲನೆಯ ಖಂಡದಲ್ಲಿ ಪರಬ್ರಹ್ಮ ಅತೀಂದ್ರಿಯ ವಸ್ತುವೆಂದೂ ಜಡವಾದ ಇಂದ್ರಿಯಗಳ ಚೇತನತ್ವ ಅದರಿಂದಲೇ ಉಂಟಾಗಿದೆಯೆಂದೂ ಅದರ

ಸ್ವರೂಪವನ್ನು ಪ್ರಮಾಣಗಳಿಂದ ಇತರರಿಗೆ ಉಪದೇಶಿಸುವುದು ಅಸಾಧ್ಯವೆಂದೂ ತಿಳಿಸಲಾಗಿದೆ. ಬ್ರಹ್ಮವನ್ನು ಹೇಗೆ ಅರಿಯಬಹುದು ಎಂಬ ಪ್ರಶ್ನೆಗೆ ಎರಡನೆಯ ಖಂಡ ಉತ್ತರ ಕೊಡುತ್ತದೆ. ಯಾವನು ತಾನು ಚೆನ್ನಾಗಿ ತಿಳಿದಿರುತ್ತೇನೆ ಎಂದು ಎಣಿಸಿರುವುದಿಲ್ಲವೋ, ತಿಳಿದಿದ್ದೇನೆ ಎಂಬ ಜ್ಞಾನ ಯಾವನಿಗೆ ಇರುತ್ತದೆಯೋ ಅವನೇ ಅದನ್ನು ಅರಿತಿರುತ್ತಾನೆ. ತಿಳಿದವರಿಗೆ ಅದು ತಿಳಿದಿಲ್ಲ. ತಿಳಿಯದವರಿಗೆ ಅದು ತಿಳಿದಿದೆ. ಚೆನ್ನಾಗಿ ಅರಿತಿದ್ದೇನೆ ಎಂದು ಯಾರೂ ಹೇಳಲಾಗುವುದಿಲ್ಲ. ಇಂದ್ರಿಯಗಳಿಗೆ ವಿಷಯವಾಗದಿದ್ದರೂ ಬ್ರಹ್ಮ ಪ್ರತ್ಯಗಾತ್ಮನೆಂದು ಇದರ ಭಾವ. ಆತ್ಮತತ್ತ್ವವನ್ನು ಅರಿತುಕೊಂಡ ವಿವೇಕಿಗಳು ಅಮೃತರಾಗುತ್ತಾರೆ. ಅರಿತುಕೊಳ್ಳದಿದ್ದರೆ ವಿನಾಶವಾಗುತ್ತಾರೆ. ಮೂರನೆಯ ಖಂಡದಲ್ಲಿ ದೇವತೆಗಳ ಗರ್ವಭಂಗಕ್ಕಾಗಿ ಬ್ರಹ್ಮ ಯಕ್ಷ ರೂಪದಿಂದ ಅಗ್ನಿವಾಯುಗಳಿಗೆ ಕಾಣಿಸಿಕೊಂಡ ಆಖ್ಯಾಯಿಕೆ ಇದೆ. ಅವರು ಈ ಯಕ್ಷನನ್ನು ಅರಿಯಲಿಲ್ಲ. ಇಂದ್ರನಿಗೆ ಮಾತ್ರ ಉಮಾ ಹೈಮವತಿಯ ದರ್ಶನವಾದ ಮೇಲೆ ಅದು ಬ್ರಹ್ಮವೆಂದು ತಿಳಿಯಿತು. ಬ್ರಹ್ಮವಿದ್ಯೆಯ ಸ್ತುತಿಗಾಗಿಯೂ ಬ್ರಹ್ಮದ ಅಸ್ತಿತ್ವವನ್ನು ಪ್ರತಿಪಾದಿಸುವುದಕ್ಕಾಗಿಯೂ ಈ ಆಖ್ಯಾಯಿಕೆಯನ್ನು ಹೇಳಿದೆ. ಈ ದೃಷ್ಟಿಯಿಂದ ಈ ಖಂಡಕ್ಕೂ ಮುಂದಿನ ಖಂಡಕ್ಕೂ ಸಂಬಂಧವಿದೆ. ಕೊನೆಯದಾದ ನಾಲ್ಕನೆಯ ಖಂಡ ಕೇನೋಪಷತ್ತಿನ ಪರಮರಹಸ್ಯವನ್ನೊಳಗೊಂಡಿರುವುದರಿಂದ ಅತ್ಯಂತ ಮುಖ್ಯ ಖಂಡವೆಂದು ಹೇಳಲಾಗಿದೆ. ಉಮಾ ಹೈಮವತಿ ಇಂದ್ರನಿಗೆ ಉಪಮಾನಗಳ ಮೂಲಕ ಬ್ರಹ್ಮವಿದ್ಯೆಯನ್ನು ಉಪದೇಶಿಸುತ್ತಾಳೆ. ಮಿಂಚಿನ ಹೊಳಪಿನಂತೆ, ಕಣ್ಣು ಮಿಟುಕಿಸಿದಂತೆ ಬ್ರಹ್ಮ ಕ್ಷಿಪ್ರವಾಗಿ ಕಾಣಿಸಿಕೊಂಡು ಮಾಯವಾಗುತ್ತದೆ ಎಂಬ ಉಪಮಾನ ಇಲ್ಲಿ ಇದೆ. ಮುಂದಿನ ಮಂತ್ರಕ್ಕೆ ಪ್ರಾಚ್ಯ ಭಾಷ್ಯಕಾರರೂ ಪಾಶ್ಚಾತ್ಯ ಅನುವಾದಕರೂ ನಾನಾ ವಿಧವಾಗಿ ಅರ್ಥವನ್ನು ಕಲ್ಪಿಸಿರುತ್ತಾರೆ. ಬ್ರಹ್ಮತತ್ತ್ವ ಮನಸ್ಸಿನ ಪ್ರತ್ಯಯಗಳೊಂದಿಗೆ ತೋರುವ ಸ್ವಭಾವವುಳ್ಳದ್ದೆಂದು ಶಂಕರಾಚಾರ್ಯರೂ ಮನಸ್ಸಿನಿಂದ ಬ್ರಹ್ಮವನ್ನು ವಿಷಯೀಕರಿಸಲು ಸಾಧ್ಯವಿಲ್ಲವೆಂದು ರಂಗರಾಮಾನುಜರೂ ಅರ್ಥ ಮಾಡುತ್ತಾರೆ. ಏನೇ ಆಗಲಿ ಮನಸ್ಸು ಬ್ರಹ್ಮನ ಬಳಿಗೆ ಹೋಗುತ್ತದೆ ಎಂಬುದು ಸ್ಪಷ್ಟ. ಎಲ್ಲರೂ ಬ್ರಹ್ಮವನ್ನು ಪ್ರೀತಿಸುವುದರಿಂದ ಬಯಸುವುದರಿಂದ ಅದನ್ನು ತದ್ವನ ಅಥವಾ ವನದಿಂದ(ಉತ್ಕಟಾಭಿಲಾಷೆ) ಉಪಾಸಿಸಬೇಕೆಂಬುದೇ ಕೇನೋಪನಿಷತ್ತಿನ ಪರಮರಹಸ್ಯ. ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಸಿಕೊಡಲಾಗದ ಬ್ರಹ್ಮವನ್ನು ಆಗಮದಿಂದಲೂ ತದ್ವನದಿಂದಲೂ ತಿಳಿಯಬಹುದೆಂದು ತಪಸ್ಸು, ದಮ, ಕರ್ಮಗಳು ಅದಕ್ಕೆ ಪ್ರತಿಷ್ಠೆಯೆಂಬುದೂ ಈ ಉಪನಿಷತ್ತಿನ ಸಾರಾಂಶ.

**(ನೋಡಿ– ಉಪನಿಷತ್ತುಗಳು)** (ಎಸ್.ಎಸ್.ಆರ್.)

**ಕೇನ್ಸ್, ಜಾನ್ ಮೇನರ್ಡ್ :** 1883–1946. ಬ್ರಿಟಿಷ್ ಅರ್ಥಶಾಸ್ತ್ರಜ್ಞ, ಆರ್ಥಿಕ ಸಿದ್ಧಾಂತ ಕ್ಷೇತ್ರದ ಒಬ್ಬ ಯುಗಪುರುಷ, ಹಣಕಾಸು ವ್ಯವಹಾರ ತಜ್ಞ, ಗ್ರಂಥಪ್ರಿಯ, ವಿಮರ್ಶಕ, ರಾಜಕೀಯ, ಪ್ರಬಂಧ ಲೇಖಕ, ಕಲಾಪೋಷಕ. 1883ರ ಜೂನ್ 5ರಂದು ಕೇಂಬ್ರಿಜ್‍ನಲ್ಲಿ ಜನಿಸಿದ. ಪ್ರಸಿದ್ಧ ಅರ್ಥಶಾಸ್ತ್ರಜ್ಞನೂ, ತರ್ಕಶಾಸ್ತ್ರಜ್ಞನೂ ಆಗಿದ್ದ ಜೆ.ಎನ್.ಕೇನ್ಸ ಇವನ ತಂದೆ. ವಿದ್ಯಾವತಿಯೂ ಕೇಂಬ್ರಿಜ್ ನಗರಾಧ್ಯಕ್ಷೆಯೂ ಆಗಿದ್ದ ಫ್ಲಾರೆನ್ಸ್ ಅಡ ಇವನ ತಾಯಿ. ಈಟನ್‍ನಲ್ಲಿ ಶಾಲಾ ಶಿಕ್ಷಣ ಪಡೆದು ತರುವಾಯ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞನಾಗಿದ್ದ ಆಲ್‍ಫ್ರೆಡ್ ಮಾರ್ಷಲನ ಪಟ್ಟ ಶಿಷ್ಯನಾದ. ಆಗ ಇವನ ಆಸಕ್ತಿ ಕೇವಲ ಅಧ್ಯಯನಕ್ಕೆ ಸೀಮಿತವಾಗಿರಲಿಲ್ಲ. ಕೇಂಬ್ರಿಜ್ ನಗರದ ಸಾಂಸ್ಕೃತಿಕ ಜೀವನದಲ್ಲಿ ಅಗ್ರಪಾತ್ರ ಹೊಂದಿದ್ದ ಗಣ್ಯವ್ಯಕ್ತಿಗಳ ವಿಶಿಷ್ಟ ಸಂಘವಾಗಿದ್ದ ಬ್ಲೂಮ್ಸ್‍ಬರೀ ತಂಡದ ಸದಸ್ಯನಾಗಿ ಕಲಾಭಿರುಚಿಯನ್ನು ಬೆಳೆಸಿಕೊಂಡ.

ಪದವೀಧರನಾದ ಅನಂತರ ಇಂಡಿಯ ಕಚೇರಿಯಲ್ಲಿ ಎರಡು ವರ್ಷಕಾಲ ಸೇವೆ ಸಲ್ಲಿಸಿ 1908ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾದ. 1911ರಲ್ಲಿ ಎಕನಾಮಿಕ್ ಜರ್ನಲ್ ಎಂಬ ಪ್ರಸಿದ್ಧ ನಿಯತಕಾಲಿಕದ ಸಂಪಾದಕತ್ವ ವಹಿಸಿಕೊಂಡು 1945ರ ತನಕ ಅದನ್ನು ನಡೆಸಿಕೊಂಡು ಬಂದ. 1913ರಲ್ಲಿ ನೇಮಿತವಾದ ರಾಯಲ್ ಕಮಿಷನ್ ಆನ್ ಇಂಡಿಯನ್ಸ್ ಕರೆನ್ಸಿ ಅಂಡ್ ಫಿನಾನ್ಸ್‍ನ ಸದಸ್ಯನಾಗಿ ಅಮೂಲ್ಯ ಸೇವೆ ಸಲ್ಲಿಸಿ, ಅದೇ ವರ್ಷ ಇಂಡಿಯನ್ ಕರೆನ್ಸಿ ಅಂಡ್ ಫಿನಾನ್ಸ್ ಎಂಬ ತನ್ನ ಮೊದಲ ಗ್ರಂಥವನ್ನು ಪ್ರಕಟಿಸಿದ. ಈ ಗ್ರಂಥದಲ್ಲಿ ಸಾಂಪ್ರದಾಯಿಕ ಹಣ ಸಿದ್ಧಾಂತದ ಹಿನ್ನೆಲೆಯಲ್ಲಿ ರೂಪಾಯಿಯ ಬೆಲೆಯ ಸಮಸ್ಯೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾನೆ. ಸ್ವರ್ಣ ವಿನಿಮಯ ಪ್ರಮಿತಿಯ ಬಗ್ಗೆ ಇದು ಮುಖ್ಯ ಆಧಾರ ಗ್ರಂಥವಾಗಿದೆ.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಕೇನ್ಸ್ ಬ್ರಿಟಿಷ್ ಸರ್ಕಾರದ ಆಹ್ವಾನದ ಮೇರೆಗೆ ಅಲ್ಲಿಯ ವಿತ್ತ ಶಾಖೆಯನ್ನು ಸೇರಿದ. ಅಲ್ಲಿ ವಿದೇಶಿ ಹಣ ಕುರಿತ ವಿಷಯದ ಚಿಂತನೆ ಈತನ ಪಾಲಿಗೆ ಸೇರಿದ ವಿಷಯವಾಗಿತ್ತು. 1919ರ ವರ್ಸೇಲ್ಸ್ ಶಾಂತಿ ಸಮ್ಮೇಳನದಲ್ಲಿ ಯುದ್ಧ ಪರಿಹಾರ ದ್ರವ್ಯದ ಇತ್ಯರ್ಥವೂ ಒಂದು ಮುಖ್ಯ ವಿಷಯವಾಗಿತ್ತು. ಈ ಬಗ್ಗೆ ಕೈಕೊಂಡ ಸಂಧಾನಗಳಲ್ಲಿ ಕೇನ್ಸ್ ಭಾಗವಹಿಸಿದ. ಆದರೆ, ಜರ್ಮನಿಯ ಮೇಲೆ ವಿಧಿಸಬಹುದಾದ ಪರಿಹಾರಧನದ ಬಗ್ಗೆ ತಾನು ಹಾಕಿದ ನ್ಯಾಯಸಮ್ಮತ ಅಂದಾಜು ಒಪ್ಪಿಗೆಯಾಗುವುದಿಲ್ಲವೆಂಬ ಸೂಚನೆ ಕಂಡುಬಂದದ್ದರಿಂದ ಸಮ್ಮೇಳನದ ಸದಸ್ಯತ್ವವನ್ನು ತ್ಯಜಿಸಿದ. ಶಾಂತಿ ಒಪ್ಪಂದದ ಪರಿಣಾಮಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಪ್ರಚುರಪಡಿಸುವುದಕ್ಕಾಗಿ ಎಕನಾಮಿಕ್ ಕಾನ್ಸಿಕ್ವೆನ್ಸ್ ಆಫ್ ದಿ ಪೀಸ್ ಎಂಬ ವಿಮರ್ಶಾತ್ಮಕ ಗ್ರಂಥ ರಚಿಸಿದ. ಈತನ ಆಳವಾದ ಜ್ಞಾನ, ವಾಸ್ತವದೃಷ್ಟಿ, ದೂರದರ್ಶಿತ್ವಗಳಿಗೆ ಈ ಗ್ರಂಥ ಒಂದು ನಿದರ್ಶನ. ಶಾಂತಿಕೌಲಿನ ಪ್ರಕಾರ ಜರ್ಮನಿಯ ಮೇಲೆ ವಿಧಿಸಲಾದ ಹೆಚ್ಚು ಮೊತ್ತದ ಸಮರ ಪರಿಹಾರ ಧನದ ಹೊರೆಯನ್ನು ಹೊರಲು ಅದಕ್ಕೆ ಸಾಧ್ಯವಾಗುವುದಿಲ್ಲವೆಂಬ ಅಂಶವನ್ನು ತರ್ಕಬದ್ಧ ರೀತಿಯಲ್ಲಿ ತೋರಿಸಿಕೊಟ್ಟ, ತದನಂತರ ಸಂಭವಿಸಿದ ಘಟನೆಗಳು ಈತನ ತರ್ಕ ಎಷ್ಟು ಸರಿಯೆಂಬುದನ್ನು ದೃಢಪಡಿಸಿದುವು.

ಎ ಟ್ರೀಟೈಸ್ ಆನ್ ಪ್ರಾಬಬಿಲಿಟಿ ಎಂಬ ಗ್ರಂಥ 1921ರಲ್ಲೂ ಎ ರಿವಿಷನ್ ಆಫ್ ದಿ ಟ್ರೀಟಿ 1922ರಲ್ಲೂ ಪ್ರಕಟವಾದುವು. ಮೊದಲನೆಯದು ಆತನ ಅಸಾಧಾರಣ ಮೇಧಾಶಕ್ತಿ, ಗಣಿತವಿಜ್ಞಾನ ಹಾಗೂ ತರ್ಕಶಾಸ್ತ್ರ ಪಾಂಡಿತ್ಯಕ್ಕೆ ನಿದರ್ಶನವಾದರೆ, ಎರಡನೆಯದು ಅಂದಿನ ಪ್ರಪಂಚಸ್ಥಿತಿಗೆ ಸಂದರ್ಭೋಚಿತವಾದ ಆರ್ಥಿಕ ಪುನರುದಯ ನೀತಿರಚಿಸುವ ವಾಸ್ತವದೃಷ್ಟಿಗೆ ನಿದರ್ಶನವಾಗಿದೆ. ಕೇನ್ಸ್ ಅದೇ ಕಾಲದಲ್ಲಿ ನೇಷನ್ ಎಂಬ ಪತ್ರಿಕೆಗೆ ಲೇಖನಗಳನ್ನು ಬರೆದು, ಆರ್ಥಿಕ ತೊಂದರೆಗಳ ನಿವಾರಣೆಯ ಕಾರ್ಯದಲ್ಲಿ ಸರ್ಕಾರ ಹೆಚ್ಚು ಪಾತ್ರವಹಿಸಬೇಕೆಂದು ಪ್ರತಿಪಾದಿಸಿದ.

1923ರಲ್ಲಿ ಕೇನ್ಸ್‍ನ ಟ್ರಾಕ್ಟ್ ಆನ್ ಮಾನಿಟರಿ ರಿಫಾರ್ಮ್ಸ್ ಎಂಬ ಗ್ರಂಥ ಪ್ರಕಟವಾಯಿತು. ಕೇಂಬ್ರಿಜ್ ಪಂಥದ ಹಣ ಸಿದ್ಧಾಂತದ ಸ್ಪಷ್ಟ ವಿವರಣೆ ಮತ್ತು ಹಣ ಪ್ರಮಿತಿಯನ್ನು ಕುರಿತ ಹೊಸ ಧೋರಣೆಯ ನಿರೂಪಣೆ–ಇವು ಈ ಗ್ರಂಥದ ಮುಖ್ಯಾಂಶಗಳಾಗಿವೆ. ಸ್ವರ್ಣಪ್ರಮಿತಿಯ ಅನುಪಯುಕ್ತತೆಯ ಬಗ್ಗೆ ಇತರ ಅರ್ಥಶಾಸ್ತ್ರಜ್ಞರೂ ಹಣ ಪ್ರಪಂಚದ ಕಾರ್ಯನಿರ್ವಾಹಕರೂ ಹತ್ತು ವರ್ಷಗಳ ತರುವಾಯ ಮನಗಂಡದ್ದನ್ನು ಕೇನ್ಸ್ ಆಗಲೇ ಗ್ರಹಿಸಿದ್ದ. ನಿಯಂತ್ರಿತ ಕರೆನ್ಸಿ ಪದ್ಧತಿಯನ್ನೂ ಕೇಂದ್ರೀಯ ಬ್ಯಾಂಕಿಂಗ್ ನೀತಿಯ ಪ್ರಾಮುಖ್ಯವನ್ನೂ ಈ ಗ್ರಂಥದಲ್ಲಿ ಕೇನ್ಸ್ ಪ್ರತಿಪಾದಿಸಿದ್ದಾನೆ.

1925ರಲ್ಲಿ ರಷ್ಯದ ಪ್ರಸಿದ್ಧ ನರ್ತಕಿ ಲಿಡಿಯ ಲೊಪೊಕೋವಳೊಡನೆ ಕೇನ್ಸನ ವಿವಾಹವಾಯಿತು. ಕೇನ್ಸನ ತಾಯಿಯಂತೆ ಆತನ ಪತ್ನಿಯೂ ಅವನ ಬೌದ್ಧಿಕ



ಚಟುವಟಿಕೆಗಳಿಗೆ ಹೆಚ್ಚಿನ ಬೆಂಬಲ ನೀಡಿದಳು. ಕೇನ್ಸನ ಅರ್ಥಶಾಸ್ತ್ರ ಅಧ್ಯಯನ ಎಂದಿಗಿಂತಲೂ ತೀವ್ರವಾಗಿ ಬೆಳೆಯತೊಡಗಿತು. 1930ರಲ್ಲಿ ಆತನ ಎ ಟ್ರೀಟೈಸ್ ಆನ್ ಮನಿ ಎಂಬ ಉದ್ಗ್ರಂಥದ ಎರಡು ಸಂಪುಟಗಳು ಪ್ರಕಟವಾದುವು. ಆ ತನಕ ಬೆಳೆದು ಬಂದಿದ್ದ ಹಣ ಸಿದ್ಧಾಂತಗಳನ್ನು ವಾಸ್ತವಾಂಶಗಳ ಒರೆಗಲ್ಲಿಗೆ ಹಚ್ಚಿ ನೋಡಿ ಅವಕ್ಕೆ ಆತ ನೀಡಿದ ಒಂದು ಹೊಸ ರೂಪವನ್ನೂ ಮುಂದೆ ಆತನ ಅತ್ಯಂತ ಪ್ರಸಿದ್ಧ ಮೂಲಗ್ರಂಥವಾದ ಜನರಲ್ ಥಿಯೊರಿಯಲ್ಲಿ ವಿಶದಪಡಿಸಿರುವ ಕೆಲವು ಹೊಸ ಭಾವನೆಗಳ ಬೀಜರೂಪವನ್ನೂ ಈ ಗ್ರಂಥದಲ್ಲಿ ಕಾಣಬಹುದು. ಆರ್ಥಿಕ ಏರಿಳಿತಗಳ ವಿಶ್ಲೇಷಣೆಯಲ್ಲಿ ಉಳಿತಾಯ ಮತ್ತು ಯೋಜನೆಗಳ ಸಂಬಂಧದ ಪ್ರಾಮುಖ್ಯದ ವಿವರಣೆ, ಹಣ ಸಿದ್ಧಾಂತದ ಹಾಗೂ ಹಣದ ಪೇಟೆಯ ಸಂಸ್ಥೆಗಳ ಸೂಕ್ಷ್ಮ ಪರಿಚಯ, ಬ್ಯಾಂಕುಗಳು ಪಾತ್ರದ ಬಗ್ಗೆ ಸಲಹೆಗಳು–ಇವೇ ಈ ಗ್ರಂಥದ ಮುಖ್ಯ ವಿಷಯಗಳು.

1930ರಲ್ಲಿ ಸಂಭವಿಸಿದ ವಿಶ್ವದ ಆರ್ಥಿಕ ಮುಗ್ಗಟ್ಟಿನಲ್ಲಿ ಇಂಗ್ಲೆಂಡೂ ಸಿಕ್ಕಿಬಿದ್ದಾಗ ಕೇನ್ಸ್ ತನ್ನ ರಾಷ್ಟ್ರದ ಆರ್ಥಿಕ ಸಮಸ್ಯೆಗಳಿಗೆ ವಿಶೇಷ ಗಮನ ನೀಡಿದ. ವಿತ್ತೀಯ ಹಾಗೂ ಕೈಗಾರಿಕಾ ಸಮಸ್ಯೆಗಳ ಪರಿಶೀಲನೆಗಾಗಿ ಬ್ರಿಟಿಷ್ ಸರ್ಕಾರದಿಂದ ನೇಮಿತವಾದ ಮ್ಯಾಕ್ಮಿಲನ್ ಸಮಿತಿಯ ಸದಸ್ಯನಾಗಿ ಸೇವೆ ಸಲ್ಲಿಸಿದ. ಸಾರ್ವಜನಿಕ ಕಾಮಗಾರಿಗಳನ್ನು ಶಿಫಾರಸು ಮಾಡಿದ ಆ ಸಮಿತಿಯ ಅಲ್ಪಮತ ವರದಿಗೆ ತನ್ನ ಬೆಂಬಲ ನೀಡಿದ. ಸಾಂಪ್ರದಾಯಿಕ ಸಿದ್ಧಾಂತಗಳ ಆಧಾರದ ಮೇಲೆ ಆ ತನಕ ನಿರಾತಂಕ ವ್ಯಾಪಾರದ ಬೆಂಬಲಿಗನಾಗಿದ್ದ ಕೇನ್ಸ್ ರಕ್ಷಣಾ ವಾಣಿಜ್ಯ ನೀತಿಯ ಕಡೆ ವಾಲಿದ. ಇದು ಇಂಗ್ಲೆಂಡಿನ ಅಂದಿನ ಪರಿಸ್ಥಿತಿಯಲ್ಲಿ ಅವಶ್ಯಕವಾಗಿತ್ತೆಂಬುದು ಆತನ ಅಭಿಪ್ರಾಯವಾಗಿತ್ತು. 1933ರಲ್ಲಿ ಪ್ರಕಟವಾದ ದಿ ಮೀನ್ಸ್ ಟು ಪ್ರಾಸ್ಪೆರಿಟಿ ಎಂಬ ಕಿರುಹೊತ್ತಗೆಯಲ್ಲಿ ವಿತ್ತೀಯನೀತಿ, ಸಾರ್ವಜನಿಕ ಕಾಮಗಾರಿ, ಬಂಡವಾಳ ಬಜೆಟ್ಟು, ಸರ್ಕಾರಿ ಪ್ರವೇಶ–ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಸಲಹೆಗಳನ್ನು ನೀಡಿದ. ಎಸ್ಸೇಸ್ ಇನ್ ಬಯಾಗ್ರಫಿ ಎಂಬ ಗ್ರಂಥ ಅದೇ ವರ್ಷ

ಪ್ರಕಟವಾಯಿತು. ಉತ್ತಮ ಶೈಲಿಯ ಆಂಗ್ಲ ಸಾಹಿತ್ಯ ನಿರ್ಮಾಣದಲ್ಲಿ ಆತನಿಗಿದ್ದ ಸಾಮರ್ಥ್ಯಕ್ಕೆ ಇದು ನಿದರ್ಶನವಾಗಿದೆ. ಹೀಗೆ ಕೇನ್ಸ್ ನಡೆಸುತ್ತಿದ್ದ ಕ್ರಿಯಾಶೀಲ ಕಾರ್ಯಕ್ರಮದೊಡನೆಯೇ, ತೆರೆಯಮರೆಯಲ್ಲೆಂಬಂತೆ, ಜನರಲ್ ಥಿಯೊರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಅಂಡ್ ಮನಿ (ಉದ್ಯೋಗ, ಬಡ್ಡಿ ಮತ್ತು ಹಣ ಕುರಿತ ಸಾರ್ವತ್ರಿಕ ಸಿದ್ಧಾಂತ) ಎಂಬ ಬೃಹದ್‌ಗ್ರಂಥ ಆತನ ಪರಿಪಕ್ವವಾದ ಬುದ್ಧಿಶಕ್ತಿಯ ಫಲವಾಗಿ ಅವನ ಕುಶಲ ಹಸ್ತದಲ್ಲಿ ರೂಪುಗೊಳ್ಳುತ್ತಿತ್ತು. ಆರ್ಥಿಕ ಚಿಂತನೆಯಲ್ಲಿ ಕ್ರಾಂತಿಯನ್ನೇ ಉಂಟು ಮಾಡಿದ ಈ ಬೃಹದ್‌ಗ್ರಂಥದ ರಚನೆಯೇ ಆತನನ್ನು ಆರ್ಥಿಕ ಸಿದ್ಧಾಂತದ ಕ್ಷೇತ್ರದಲ್ಲಿ ಯುಗಪುರುಷನನ್ನಾಗಿ ಮಾಡಿದ ಮಹಾಕಾರ್ಯ. ಈ ಗ್ರಂಥದ ಭಾಗಗಳ ಹಸ್ತಪ್ರತಿ ಸಿದ್ಧವಾಗುತ್ತಿದ್ದಂತೆಯೇ ಆರ್.ಎಫ್.ಕಾಹ್ನ್, ಡಿ.ಎಚ್. ರಾಬರ್ಟ್‌ಸನ್, ಆರ್.ಜಿ. ಹಾಟ್ರೆ, ಜೋನ್ ರಾಬಿನ್ಸನ್, ರಾಯ್ ಹ್ಯಾರಡ್ ಮೊದಲಾದ ಪ್ರಮುಖ ಅರ್ಥಶಾಸ್ತ್ರಜ್ಞರು ಅವನ್ನು ವಿಮರ್ಶಾತ್ಮಕವಾಗಿ ಓದಿ ನೋಡುವಲ್ಲಿ ನೆರವು ನೀಡಿದರು. 1936ರ ಜನವರಿಯಲ್ಲಿ ಇದು ಪ್ರಕಟವಾಯಿತು. ಆರ್ಥಿಕ ಪ್ರಪಂಚದಲ್ಲಿ ಹೊಸ ವಿಚಾರದ ಉದಯವಾದಂತಾಯಿತು. ಆಧುನಿಕ ಅರ್ಥಶಾಸ್ತ್ರದ ಮುನ್ನಡೆಗೆ ಇದು ಮುಖ್ಯ ಕಾರಣವಾಯಿತು. ಸಮಾಜಶಾಸ್ತ್ರ ಮತ್ತು ಮನಃಶ್ಶಾಸ್ತ್ರಗಳ ಅಧ್ಯಯನಗಳಿಗೂ ಈ ಗ್ರಂಥ ವಿಶೇಷ ಪ್ರಚೋದನೆ ನೀಡಿತು. ನಿರಾತಂಕ ಹಾಗೂ ಪರಿಪೂರ್ಣ ಪೈಪೋಟಿ ಇರುವ ಬಂಡವಾಳ ವ್ಯವಸ್ಥೆಯಲ್ಲಿ ಸರಬರಾಯಿ ತನ್ನ ಬೇಡಿಕೆಯನ್ನು ತಾನೇ ಹುಟ್ಟಿಸಿಕೊಳ್ಳುವುದು–ಎಂಬ ಜೆ.ಬಿ.ಸೇ. ನಿಯಮದ ಪ್ರಕಾರ ಉತ್ಪಾದನೆಯ ಸಾರ್ವತ್ರಿಕ ಆಧಿಕ್ಯ ಮತ್ತು ಅನೈಚ್ಛಿಕ ನಿರುದ್ಯೋಗ ಅಸಂಭವವೆಂಬುದು ಪೂರ್ಣೋದ್ಯೋಗದ ಮಟ್ಟದಲ್ಲಿ ಮಾತ್ರ ಆರ್ಥಿಕತೆ ಸಮತೋಲದಲ್ಲಿರುವುದೆಂಬುದೂ ಅಗೋಚರ ಮಾರುಕಟ್ಟೆ ಶಕ್ತಿಗಳ ಕ್ರಿಯೆಯಿಂದ ಈ ಪೂರ್ಣೋದ್ಯೋಗ ಸಮತೋಲ ಸ್ಥಿತಿಯನ್ನು ಆರ್ಥಿಕತೆ ಸ್ವಯಂನಿಯಂತ್ರಿತವಾಗಿ ತಲುಪುವುದೆಂಬುದೂ ಆ ತನಕ ಪ್ರಚಲಿತವಾಗಿದ್ದ ಅಭಿಜಾತಸಿದ್ಧಾಂತದ ಪ್ರತಿಪಾದನೆಯಾಗಿತ್ತು. ಈ ವಾದ ದೋಷಯುತ ಎಂಬುದನ್ನು ಕೇನ್ಸ್ ತೋರಿಸಿಕೊಟ್ಟ. ಉದ್ಯೋಗ ಮತ್ತು ವರಮಾನ ಮಟ್ಟಗಳ ಮುಖ್ಯ ನಿರ್ಣಾಯಕಾಂಶಗಳು ಯಾವುವು ಎಂಬುದರ ಬಗ್ಗೆ ಹೊಸ ವಿವರಣೆ ನೀಡಿದ. ಈ ಶತಮಾನದಲ್ಲಿ ವಿಕಾಸವಾಗಿ ಬಂದಿರುವ ಬಂಡವಾಳ ವ್ಯವಸ್ಥೆಯಲ್ಲಿ ಪೂರ್ಣೋದ್ಯೋಗ ಮತ್ತು ಸ್ಥಿರತೆಯ ಸ್ಥಾಪನೆಗೆ ಆರ್ಥಿಕ ಕ್ಷೇತ್ರದಲ್ಲಿ ನಿರ್ದಿಷ್ಟ ಸ್ವರೂಪದ ಹಾಗೂ ಪ್ರಮಾಣದ ಸರ್ಕಾರಿ ಪ್ರವೇಶ ಆವಶ್ಯಕ ಎಂಬ ಅಭಿಪ್ರಾಯವನ್ನು ಕೇನ್ಸ್ ಎತ್ತಿ ಹಿಡಿದಿದ್ದಾನೆ. **ಉದ್ಯೋಗವನ್ನು ಕುರಿತ ಕೇನ್ಸ್ ಸಿದ್ಧಾಂತಕ್ಕೆ – (ನೋಡಿ– ಉದ್ಯೋಗ ಮೀಮಾಂಸೆ)**

ಇದು ಕೇವಲ ಮುಗ್ಗಟ್ಟಿನ ಅರ್ಥಶಾಸ್ತ್ರ ಎಂದು ಈ ಗ್ರಂಥ ಕೆಲವರ ಟೀಕೆಗೆ ಒಳಗಾಗಿರುವುದಾದರೂ ಇದರಲ್ಲಿ ಬಂಡವಾಳ ವ್ಯವಸ್ಥೆಯ ಭವಿಷ್ಯ ಕುರಿತ ಒಂದು ವಾಸ್ತವಿಕ ಚಿತ್ರಣ ಇದೆ. ವ್ಯಕ್ತಿಗತ ಆರ್ಥಿಕ ಸ್ವಾತಂತ್ರ್ಯ ಪದ್ಧತಿಯ ಕುಂದು ಕೊರತೆಗಳನ್ನು ಹೋಗಲಾಡಿಸುವುದು ಸಾಧ್ಯವಾದರೆ ಆ ಪದ್ಧತಿಗಿಂತ ಮೇಲಾದ ಆರ್ಥಿಕ ಪದ್ಧತಿ ಇಲ್ಲ ಎಂಬುದು ಕೇನ್ಸ್‌ನ ನಂಬಿಕೆ. ಆ ಕೊರತೆಗಳ ನಿವಾರಣೆಗೆ ಆವಶ್ಯಕವಾದ ಸರ್ಕಾರಿ ಪ್ರವೇಶ ಹಾಗೂ ನೀತಿಗಳನ್ನು ಈತ ವಿವರಿಸಿದ್ದಾನೆ.

ಆಧುನಿಕ ಆರ್ಥಿಕ ನೀತಿಯಂತೆಯೇ ಆಧುನಿಕ ಆರ್ಥಿಕ ಸಿದ್ಧಾಂತದ ಮೇಲೂ ಕೇನ್ಸನ ಅರ್ಥಶಾಸ್ತ್ರ ಗಣನೀಯವಾದ ಪ್ರಭಾವ ಬೀರಿತು. ಆಧುನಿಕ ಅರ್ಥಶಾಸ್ತ್ರ ಬಹುಮಟ್ಟಿಗೆ ಕೇನ್ಸನ ಅರ್ಥಶಾಸ್ತ್ರವಾಗಿದೆ. ಆತ ಸೃಜಿಸಿದ ಪಾರಿಭಾಷಿಕ ಪದಗಳನ್ನೂ ಆತನ ವಿಶ್ಲೇಷಣೆಯ ಮಾರ್ಗವನ್ನೂ ಅನುಸರಿಸಿ ಇತ್ತೀಚೆಗೆ ಅರ್ಥಶಾಸ್ತ್ರ ಮುಂದುವರಿದಿದೆ. ಸ್ಥಿರವಾದ ಹಾಗೂ ಪೂರ್ಣೋದ್ಯೋಗಸಹಿತವಾದ ಆರ್ಥಿಕ ಬೆಳವಣಿಗೆ ಕುರಿತ ಅಧ್ಯಯನವಾದ ಆಧುನಿಕ ಅಭಿವೃದ್ಧಿ ಅರ್ಥಶಾಸ್ತ್ರದ ಇತ್ತೀಚಿನ ಚಿಂತನೆ ಬಹುಮಟ್ಟಿಗೆ ಕೇನ್ಸನ ವಿಶ್ಲೇಷಣೆಯನ್ನೇ ಆಧರಿಸಿದೆ.

ಸಾರ್ವತ್ರಿಕ ಸಿದ್ಧಾಂತ ಪ್ರಕಟವಾದ ಮರುವರ್ಷವೇ ಕೇನ್ಸ್ ಹೃದ್ರೋಗಕ್ಕೀಡಾದ. ಇದರಿಂದ ಚೇತರಿಸಿಕೊಂಡ ಅನಂತರ ಎರಡನೆಯ ಮಹಾಯುದ್ಧಕಾಲದಲ್ಲಿ ಬ್ರಿಟಿಷ್ ಖಜಾನೆ ಶಾಖೆಯಲ್ಲಿ ಉಪಯುಕ್ತ ಸೇವೆ ಸಲ್ಲಿಸಿದ. 1945ರಲ್ಲಿ ಬ್ರಿಟನ್ ಅಮೆರಿಕದಿಂದ ಎತ್ತಿದ ಮುಖ್ಯ ಸಾಲಕ್ಕೆ ಸಂಬಂಧಿಸಿದ ಸಂಧಾನಗಳಲ್ಲಿ ಕೇನ್ಸನ ಪಾತ್ರ ಪ್ರಭಾವಯುತವಾದ್ದು.

ಯುದ್ಧೋತ್ತರ ಪ್ರಪಂಚದ ಪುನರ್ವ್ಯವಸ್ಥೆಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಹಣ ಹಾಗೂ ಬಂಡವಾಳ ಸಂಸ್ಥೆಗಳನ್ನು ರೂಪಿಸಲು ಬ್ರೆಟನ್‌ವೂಡ್ಸ್‌ನಲ್ಲಿ ನಡೆದ ಸಮ್ಮೇಳನದ ಪರಿಶೀಲನೆಗಾಗಿ ಅಂತಾರಾಷ್ಟ್ರೀಯ ತೀರುವೆ ಸಂಘದ ರಚನೆಯನ್ನು ಕುರಿತು ಕೇನ್ಸ್ ಸಿದ್ಧಪಡಿಸಿದ ಯೋಜನೆ ಮುಖ್ಯವಾಗಿ ಒಂದು ಆಧಾರವಾಯಿತು. ತಾನು ರಚಿಸಿದ ಯೋಜನೆಯನ್ನು ಒಳಗೊಂಡ ರೀತಿನೀತಿಗಳನ್ನು ಆ ಸಮ್ಮೇಳನದಲ್ಲಿ ಸಮರ್ಥಿಸಿ ವಾದಿಸಿದ. ಆ ಸಮ್ಮೇಳನದ ಫಲವಾಗಿ ಸ್ಥಾಪಿತವಾದ ಅಂತಾರಾಷ್ಟ್ರೀಯ ದ್ರವ್ಯ ನಿಧಿ ಕೇನ್ಸ್ ಯೋಜನೆಯ **(ನೋಡಿ–ಕೇನ್ಸ್ ಯೋಜನೆ)** ಎಲ್ಲ ಅಂಶಗಳನ್ನೂ ಒಳಗೊಳ್ಳಲಿಲ್ಲವಾದರೂ ಆ ಸಂಸ್ಥೆಯ ವಿಕಾಸಕ್ಕೆ ಇದು ಮಾರ್ಗದರ್ಶಕವಾಯಿತು.

ಕೇನ್ಸ್ ಕೇವಲ ತಾತ್ತ್ವಿಕ ಅರ್ಥಶಾಸ್ತ್ರಜ್ಞನಾಗಿರಲಿಲ್ಲ. ಜೀವವಿಮೆ, ವಿನಿಯೋಜನೆ, ಪ್ರಕಟಣೆ ಇತ್ಯಾದಿ ಉದ್ಯಮಗಳಲ್ಲೂ ಆತ ಆಸಕ್ತಿ ವಹಿಸಿದ್ದ. ಬಂಡವಾಳ ಪೇಟೆಯಲ್ಲೂ ಯಶಸ್ವಿಯಾಗಿ ವ್ಯವಹಾರ ನಡೆಸುತ್ತಿದ್ದ. ಚೆನ್ನಾಗಿ ಹಣ ಸಂಪಾದಿಸಿದ. 1942ರಲ್ಲಿ ಪಿಯರೆಜ್ ಪಡೆದ. 1946ರಲ್ಲಿ ನಿಧನ ಹೊಂದಿದ. ಈತ ಬಿಟ್ಟುಹೋದ ಆಸ್ತಿಯ ಮೌಲ್ಯ ಸು. 4½ ಲಕ್ಷ ಪೌಂಡ್. (ಎ.ಪಿ.ಎಸ್.)

**ಕೇನ್ಸ್ ಯೋಜನೆ :** ಎರಡನೆಯ ಮಹಾಯುದ್ಧದ ಅನಂತರದಲ್ಲಿ ಅಂತಾರಾಷ್ಟ್ರೀಯ ಹಣ ವ್ಯವಸ್ಥೆ ಹೇಗಿರಬೇಕೆಂಬ ವಿಚಾರವನ್ನು ಪರಿಶೀಲಿಸಲು ಅಮೆರಿಕ ಸಂಯುಕ್ತಸಂಸ್ಥಾನದ ಬ್ರೆಟನ್‌ವೂಡ್ಸ್‌ನಲ್ಲಿ 1944ರಲ್ಲಿ ಸೇರಿದ್ದ ತಜ್ಞರ ಸಮ್ಮೇಳನದಲ್ಲಿ ಬ್ರಿಟಿಷ್ ಸರ್ಕಾರದ ಪರವಾಗಿ ಜೆ.ಎಂ. ಕೇನ್ಸ್ ಮಂಡಿಸಿದ ಯೋಜನೆ (ಕೇನ್ಸ್ ಪ್ಲಾನ್). ಇದು ಕೇನ್ಸ್‌ನೇ ರಚಿಸಿದ್ದಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ಇದೇ ರೀತಿ ಅಮೆರಿಕ ಸಂಯುಕ್ತ ಸಂಸ್ಥಾನದ ಪರವಾಗಿ ಹ್ಯಾರಿ ಡೆಕ್ಸ್‌ಟರ್ ಹ್ವೈಟನಿಂದ ಯೋಜನೆ ಮಂಡಿತವಾಗಿತ್ತು. ಮತ್ತೆ ಕೆಲವು ರಾಷ್ಟ್ರಗಳೂ ತಂತಮ್ಮ ಯೋಜನೆಗಳನ್ನು ಮುಂದಿಟ್ಟಿದ್ದುವು. ಆದರೆ ಇವುಗಳಲ್ಲಿ ಕೇನ್ಸ್ ಮತ್ತು ಹ್ವೈಟ್ ಯೋಜನೆಗಳು ಪ್ರಸಿದ್ಧವಾದವು. ಅಂತಾರಾಷ್ಟ್ರೀಯ ಧನ ನಿಧಿ ಸಂಸ್ಥೆ ರೂಪುಗೊಂಡಿದ್ದು ಈ ಸಮ್ಮೇಳನದ ಫಲ.

ಕೇನ್ಸ್ ಯೋಜನೆಯ ಪ್ರಮುಖ ಲಕ್ಷಣವೆಂದರೆ ಕೇಂದ್ರೀಯ ಬ್ಯಾಂಕಿನ ಲಕ್ಷಣವಿರುವ ಒಂದು ಅಂತಾರಾಷ್ಟ್ರೀಯ ತೀರುವೆ ಒಕ್ಕೂಟದ (ಇಂಟರ್‌ನ್ಯಾಷನಲ್ ಕ್ಲೆಯರಿಂಗ್ ಯೂನಿಯನ್) ಸ್ಥಾಪನೆ. ಬ್ಯಾಂಕಾರ್ ಎಂಬ ಅಂತಾರಾಷ್ಟ್ರೀಯ ನಾಣ್ಯಘಟಕ ಇದಕ್ಕೆ ಆಧಾರ. ಈ ಘಟಕದ ಮೌಲ್ಯ ಚಿನ್ನದ ಲೆಕ್ಕದಲ್ಲಿ ನಿಶ್ಚಿತವಾಗಿರುತ್ತದೆ. ಆದರೆ ಈ ಮೌಲ್ಯ ಎಂದೆಂದೂ ಬದಲಾಗಕೂಡದೆಂಬ ಕಡ್ಡಾಯವೇನೂ ಇಲ್ಲ. ಈ ನಾಣ್ಯಘಟಕ ಒಂದು ಪರಿಕಲ್ಪನೆ ಮಾತ್ರ ವಾಸ್ತವವಾಗಿ ಇಂಥ ನಾಣ್ಯ ಚಲಾವಣೆಯಲ್ಲಿರುವುದಿಲ್ಲ. ಅಂತಾರಾಷ್ಟ್ರೀಯ ಲೇಣೆ–ದೇಣೆಗಳನ್ನು ಚುಕ್ತಾ ಮಾಡುವುದರಲ್ಲಿ ಬ್ಯಾಂಕಾರ್‌ನ ನಿಶ್ಚಿತ ಸುವರ್ಣಮೌಲ್ಯವನ್ನು ಎಲ್ಲ ಸದಸ್ಯ ರಾಷ್ಟ್ರಗಳೂ ಒಪ್ಪಬೇಕು. ಸದಸ್ಯರಾಷ್ಟ್ರಗಳ ಕೇಂದ್ರೀಯ ಬ್ಯಾಂಕುಗಳು ಅಂತಾರಾಷ್ಟ್ರೀಯ ತೀರುವೆ ಒಕ್ಕೂಟದಲ್ಲಿ ಲೆಕ್ಕಗಳನ್ನಿಟ್ಟಿರುತ್ತವೆ. ಅಂತಾರಾಷ್ಟ್ರೀಯ ತೀರುವೆ ಒಕ್ಕೂಟಕ್ಕೆ ಚಂದಾ ಎತ್ತಿದ ಬಂಡವಾಳ ಇರುವುದಿಲ್ಲ. ಆದರೆ ಸದಸ್ಯ ರಾಷ್ಟ್ರಗಳ ಅಂತಾರಾಷ್ಟ್ರೀಯ ವ್ಯಾಪಾರದ ಪರಿಮಾಣಕ್ಕೆ ಅನುಗುಣವಾಗಿ ಅವಕ್ಕೆ ಒಕ್ಕೂಟದಿಂದ ಮೀರೆಳೆತದ (ಓವರ್‌ಡ್ರಾಫ್ಟ್) ಸೌಲಭ್ಯ ನೀಡಲಾಗಿರುತ್ತದೆ. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಒಂದು ಸದಸ್ಯರಾಷ್ಟ್ರ ಇತರ ರಾಷ್ಟ್ರಗಳಿಗೆ ಪಾವತಿ ಮಾಡಬೇಕಾದ್ದಕ್ಕಿಂತ ಇತರ ರಾಷ್ಟ್ರಗಳು ಆ ರಾಷ್ಟ್ರಕ್ಕೆ ಪಾವತಿ ಮಾಡಬೇಕಾದ್ದು ಹೆಚ್ಚಾಗಿದ್ದಾಗ ಆ ಹೆಚ್ಚುವರಿ ಆ ರಾಷ್ಟ್ರದ ಲೆಕ್ಕಕ್ಕೆ ಧನಿಕೆಯಾಗುತ್ತದೆ (ಕ್ರೆಡಿಟ್). ವರ್ಷೇವರ್ಷೇ ಈ ಹೆಚ್ಚುವರಿ ಸ್ಥಿತಿಯೇ ಇದ್ದರೆ ಅದರ ಧನಿಕೆ ಶಿಲ್ಕು ಅಧಿಕವಾಗುತ್ತಿರುತ್ತದೆ. ಮತ್ತೊಂದು ರಾಷ್ಟ್ರದ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಪಾವತಿ ಕೊರತೆ ಸಂಭವಿಸುತ್ತಿದ್ದರೆ ಅದರ ಅಂತಾರಾಷ್ಟ್ರೀಯ ತೀರುವೆ ಒಕ್ಕೂಟದಲ್ಲಿ ಅದರ ಲೆಕ್ಕಕ್ಕೆ ಋಣಿಕೆಯಾಗುತ್ತಿರುತ್ತದೆ (ಡೆಬಿಟ್). ಋಣಿಕೆ ಧನಿಕೆ ಶಿಲ್ಕುಗಳೆರಡರ ಮೇಲೂ ಬಡ್ಡಿಯ ಲೆಕ್ಕಾಚಾರವುಂಟು. ಅಂತಾರಾಷ್ಟ್ರೀಯ ತೀರುವೆ ಒಕ್ಕೂಟ ಒಂದು ಸಂವೃತ ವ್ಯವಸ್ಥೆ. ಇದರ ಹೊರಗಡೆ ಯಾವ ರಾಷ್ಟ್ರವೂ ಇನ್ನೊಂದು ರಾಷ್ಟ್ರಕ್ಕೆ ಪಾವತಿ ಮಾಡುವ ಹಾಗಿಲ್ಲ. ಬ್ಯಾಂಕಾರ್ ಎಂಬುದು ಲೆಕ್ಕದ ನಾಣ್ಯ ಘಟಕ ಮಾತ್ರ. ಬ್ಯಾಂಕಾರನ್ನು ಇನ್ನೊಂದು ನಾಣ್ಯಕ್ಕೆ ಅಥವಾ ಚಿನ್ನಕ್ಕೆ ಪರಿವರ್ತಿಸುವಂತಿಲ್ಲ. ಸದಸ್ಯ ರಾಷ್ಟ್ರಗಳಲ್ಲಿ ಕೆಲವಕ್ಕೆ ಧನಿಕೆ ಶಿಲ್ಕು ಇದ್ದರೆ ಇನ್ನು ಕೆಲವಕ್ಕೆ ಋಣಿಕೆ ಶಿಲ್ಕು ಇರುತ್ತದೆ. ಎಲ್ಲ ಋಣಿಕೆ ಶಿಲ್ಕುಗಳ ಮೊತ್ತ ಎಲ್ಲ ಧನಿಕೆ ಶಿಲ್ಕುಗಳ ಮೊತ್ತಕ್ಕೆ ಸಮನಾಗಿಯೇ ಇರುತ್ತದೆ. ಆದ್ದರಿಂದ ಸದಸ್ಯರಾಷ್ಟ್ರಗಳಿಗೆ ನಿಗದಿಯಾದ ಹಸುಗೆಯ (ಕೋಟಾ) ಮಿತಿಯಲ್ಲಿ ಅವುಗಳ ಉದ್ದರಿ ಅಗತ್ಯಗಳನ್ನು ಪೂರೈಸುವುದಕ್ಕೆ ತೊಂದರೆಯಾಗದು. ಪ್ರಾರಂಭದಲ್ಲಿ ಸದಸ್ಯರಾಷ್ಟ್ರಗಳು ಬ್ಯಾಂಕಾರಿನ ಲೆಕ್ಕದಲ್ಲಿ ತಂತಮ್ಮ ನಾಣ್ಯಗಳ ಸಮಮೌಲ್ಯಗಳನ್ನು (ಪಾರ್ ವ್ಯಾಲ್ಯೂ) ನಿರ್ಧರಿಸಿಕೊಳ್ಳಬೇಕು. ಅನಂತರ ಅವುಗಳಲ್ಲಿ ಬದಲಾವಣೆ ಆಗಬೇಕಾದರೆ ಅದಕ್ಕೆ ಅಂತಾರಾಷ್ಟ್ರೀಯ ತೀರುವೆ ಒಕ್ಕೂಟದ ಒಪ್ಪಿಗೆ ಅಗತ್ಯ. ಒಂದು ಸದಸ್ಯರಾಷ್ಟ್ರ ಸತತವಾಗಿ ಕೊರತೆಯ ಪರಿಸ್ಥಿತಿಯನ್ನೇ ಎದುರಿಸಬೇಕಾದರೆ ಅದರ ನಾಣ್ಯದ ಮೌಲ್ಯ ದೃಢವಾಗಿಲ್ಲವೆಂದು ಅರ್ಥ. ಆ ಸದಸ್ಯರಾಷ್ಟ್ರದ ನಾಣ್ಯದ ಮೌಲ್ಯಭೇದನ (ಡೀವ್ಯಾಲ್ಯೂ) ಆಗಬೇಕೆಂದು ಅದಕ್ಕೆ ಒಕ್ಕೂಟ ಸೂಚನೆ ನೀಡಬಹುದು. ಅದು ಒಕ್ಕೂಟಕ್ಕೆ ಕೊಡಬೇಕಾದ ಋಣದಲ್ಲಿ ಒಂದು ಭಾಗವನ್ನು ತನ್ನ ಸ್ವಂತ ಚಿನ್ನ ಮತ್ತು ವಿದೇಶಿ ವಿನಿಮಯ ಸಂಚಿತಿಯಿಂದ ಪಾವತಿ ಮಾಡಬೇಕೆಂದೂ ಕೇಳಬಹುದು. ಇದು ಸ್ಥೂಲವಾಗಿ ಕೇನ್ಸ್ ಯೋಜನೆಯ ಪ್ರಕಾರ ಅಂತಾರಾಷ್ಟ್ರೀಯ ಹಣವ್ಯವಸ್ಥೆಯ ಕಾರ್ಯವಿಧಾನ.

ಒಂದು ರಾಷ್ಟ್ರದೊಳಗೆ ವಾಣಿಜ್ಯ ಬ್ಯಾಂಕುಗಳ ನಡುವೆ ಪರಸ್ಪರ ಚೆಕ್ಕು ತೀರುವೆಗೆ ಯಾವ ವ್ಯವಸ್ಥೆಯನ್ನವಳವಡಿಸಲಾಗಿರುತ್ತದೆಯೋ ಅದೇ ರೀತಿ ಅಂತಾರಾಷ್ಟ್ರೀಯ ತೀರುವೆ ಒಕ್ಕೂಟವೂ ಕೆಲಸ ಮಾಡುವುದಾದರೂ ಇದರಲ್ಲೊಂದು ವ್ಯತ್ಯಾಸವುಂಟು. ಬ್ಯಾಂಕುಗಳ ನಡುವೆ ಆಯಾ ದೇಶಗಳ ನಾಣ್ಯಗಳ ಲೆಕ್ಕದಲ್ಲಿ ಶಿಲ್ಕು ಬದಲಾವಣೆ ಆಗುತ್ತದೆ. ಅಂತಾರಾಷ್ಟ್ರೀಯ ಒಕ್ಕೂಟದಲ್ಲಿ ಬ್ಯಾಂಕಾರ್‌ಗಳ ವರ್ಗಾವಣೆಯಾಗುತ್ತದೆ. ಪಾವತಿ ಶಿಲ್ಕಿನಲ್ಲಿ

ಹೆಚ್ಚುವರಿ ಇರುವ ದೇಶದ ಬ್ಯಾಂಕಾರ್ ಠೇವಣಿ ಅಂತಾರಾಷ್ಟ್ರೀಯ ತೀರುವೆ ಒಕ್ಕೂಟದಲ್ಲಿ ಶೇಖರವಾಗುತ್ತ ಹೋಗುತ್ತದೆ. ಪಾವತಿ ಶಿಲ್ಕಿನಲ್ಲಿ ಕೊರತೆ ಇರುವ ದೇಶದ ಬ್ಯಾಂಕಾರ್ ಠೇವಣಿ ಕಡಿಮೆಯಾಗುತ್ತ ಹೋಗಿ ಅನಂತರ ಏನೂ ಇಲ್ಲದಂತಾಗಿ, ಕೊನೆಗೆ ತೀರುವೆ ಒಕ್ಕೂಟಕ್ಕೆ ಸಾಲಗಾರ ದೇಶವಾಗುತ್ತದೆ.

ಸದಸ್ಯರಾಷ್ಟ್ರಗಳಿಗೆ ಮೊದಲು ಬ್ಯಾಂಕಾರ್ ಹಣವನ್ನು ಒಕ್ಕೂಟ ಹಂಚುವಾಗ ಆಯಾ ದೇಶದ ಹಿಂದಿನ ಆಮದು-ರಫ್ತು ವ್ಯಾಪಾರಗಳ ಮೌಲ್ಯವನ್ನು ಆಧಾರವಾಗಿಟ್ಟುಕೊಂಡಿರುತ್ತದೆ. ಆಮೇಲೆ ಪ್ರತಿವರ್ಷವೂ ಬ್ಯಾಂಕಾರ್ ಹಂಚಿಕೆ ಮಾಡುವಾಗ ಪುನಃ ಪರಿಶೀಲನೆ ಮಾಡಲಾಗುವುದು. ವಾಸ್ತವಿಕವಾಗಿ ಹಂಚಿರುವ ಬ್ಯಾಂಕಾರ್‌ಗಳಿಗಿಂತ ಹೆಚ್ಚಿಗೆ ಶೇಖರಿಸಿದಲ್ಲಿ ಅಥವಾ ಎಲ್ಲವನ್ನೂ ವ್ಯಯಮಾಡಿ ಋಣೋದ್ಭವವಾಗಿದ್ದಲ್ಲಿ ದೇಶಗಳು ತೀರುವೆ ಒಕ್ಕೂಟದ ನಿಯಮವನ್ನು ಮುರಿದಿದ್ದಕ್ಕಾಗಿ ಜುಲ್ಮಾನೆ ಕೊಡಬೇಕಾಗುತ್ತದೆ. ಅಂದರೆ ಪಾವತಿ ಶಿಲ್ಕಿನಲ್ಲಿ ಹೆಚ್ಚುವರಿ ಇರುವ ಒಂದು ರಾಷ್ಟ್ರ ತನ್ನ ಪಾಲಿನ ಬ್ಯಾಂಕಾರ್‌ಗಳಿಗಿಂತ ಶೇಕಡಾ 25ಕ್ಕಿಂತ ಹೆಚ್ಚಿಗೆ ಶೇಖರಿಸಿದಲ್ಲಿ, ಆ ರಾಷ್ಟ್ರ ಹೆಚ್ಚಿನ ಶೇಖರಣೆಗೆ ಶೇ. ಒಂದು ಬ್ಯಾಂಕಾರನ್ನು, ಶೇ.50ಕ್ಕಿಂತ ಹೆಚ್ಚಿಗೆ ಶೇಖರಿಸಿದಲ್ಲಿ ತೀರುವೆ ಒಕ್ಕೂಟಕ್ಕೆ ಶೇ. 2 ಬ್ಯಾಂಕಾರ್‌ಗಳನ್ನು ಜುಲ್ಮಾನೆ ಕೊಡಬೇಕಾಗುತ್ತದೆ. ಅದೇ ರೀತಿ ಪಾವತಿ ಶಿಲ್ಕಿನಲ್ಲಿ ಕೊರತೆ ಇರುವ ದೇಶ ತನ್ನ ಪಾಲಿಗೆ ಬಂದಿದ್ದ ಎಲ್ಲ ಬ್ಯಾಂಕಾರ್‌ಗಳನ್ನು ಖರ್ಚುಮಾಡಿ ಸಾಲಗಾರ ದೇಶವಾದಾಗಲೂ ಮೇಲೆ ಹೇಳಿದಂತೆಯೇ ಜುಲ್ಮಾನೆ ತೆರಬೇಕಾಗುತ್ತದೆ. ಈ ರೀತಿ ಕೇನ್ಸ್ ಯೋಜನೆಯಲ್ಲಿ ಪಾವತಿಶಿಲ್ಕಿನಲ್ಲಿ ಹೆಚ್ಚುವರಿ ಇರುವ ದೇಶಗಳಿಗೂ ತಂತಮ್ಮ ಅಂತಾರಾಷ್ಟ್ರೀಯ ಪಾವತಿಶಿಲ್ಕು ವಿಷಯದಲ್ಲಿ ಹೊಂದಾವಣೆ ಮಾಡಿಕೊಳ್ಳಲು ಪ್ರೋತ್ಸಾಹ ನೀಡುತ್ತದೆ. ಪಾವತಿ ಶಿಲ್ಕಿನಲ್ಲಿ ಕೊರತೆ ಇರುವ ರಾಷ್ಟ್ರಗಳು ತಮ್ಮ ಪಾಲಿನ ಬ್ಯಾಂಕಾರ್‌ಗಳನ್ನು ಖರ್ಚುಮಾಡಿ, ತಮ್ಮ ಪಾಲಿನ ಶೇ. 50ರಷ್ಟಕ್ಕಿಂತ ಹೆಚ್ಚು ಬ್ಯಾಂಕಾರ್‌ಗಳನ್ನು ಉದ್ದರಿ ಪಡೆಯಲು ಬಯಸಿದರೆ ಈ ರಾಷ್ಟ್ರಗಳ ಮೀರೆಳೆತಕ್ಕೆ ಚಿನ್ನ, ವಿದೇಶಿ ವಿನಿಮಯ ಅಥವಾ ಬಾಂಡ್‌ಗಳನ್ನು ತೀರುವೆ ಒಕ್ಕೂಟಕ್ಕೆ ಆಧಾರವಾಗಿ ಕೊಡಬೇಕಾಗುತ್ತದೆ; ಕೊರತೆ ಇರುವ ರಾಷ್ಟ್ರದ ದ್ರವತೆಯ(ಲಿಕ್ವಿಡಿಟಿ) ಆವಶ್ಯಕತೆ ಹೆಚ್ಚಾದಾಗ ತೀರುವೆ ಒಕ್ಕೂಟದಿಂದ ಮೀರೆಳೆತದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಉದ್ದರಿ ಪಡೆಯಬಹುದು. ಮತ್ತೊಂದು ಗಮನಾರ್ಹ ವಿಷಯವೇನೆಂದರೆ, ಬಂಡವಾಳದ ಸಂಚಾರದಿಂದಲೂ ಪಾವತಿ ಶಿಲ್ಕಿನ ಹೊಂದಾವಣೆ ಮಾಡಿಕೊಳ್ಳಲು ಈ ಯೋಜನೆ ಅವಕಾಶ ನೀಡಿ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಬಂಡವಾಳ ಸಂಚಾರಕ್ಕೆ ಪ್ರೋತ್ಸಾಹ ನೀಡುತ್ತದೆ. ಪಾವತಿ ಶಿಲ್ಕಿನಲ್ಲಿ ಹೆಚ್ಚುವರಿ ಇರುವ ರಾಷ್ಟ್ರವಾಗಲಿ, ಕೊರತೆ ಇರುವ ದೇಶವಾಗಲಿ, ಒಕ್ಕೂಟಕ್ಕೆ ಜುಲ್ಮಾನೆ ತೆರುವುದನ್ನು ತಪ್ಪಿಸಿಕೊಳ್ಳಬೇಕಾದರೆ ಉಳಿದಿರುವ ಒಂದೇ ಮಾರ್ಗವೆಂದರೆ, ಕೊರತೆ ಇರುವ ರಾಷ್ಟ್ರ ಹೆಚ್ಚುವರಿ ಇರುವ ರಾಷ್ಟ್ರದಿಂದ ಸಾಲ ಪಡೆಯುವುದು. ಅದೇ ರೀತಿ ಹೆಚ್ಚುವರಿ ಇರುವ ರಾಷ್ಟ್ರ ಕೊರತೆ ಇರುವ ರಾಷ್ಟ್ರಕ್ಕೆ ಸಾಲ ನೀಡುವುದು.

ಪಾವತಿ ಶಿಲ್ಕಿನಲ್ಲಿ ಕೊರತೆ ಇರುವ ದೇಶಗಳು ಒಂದೇ ಸಮನೆ ಬ್ಯಾಂಕಾರ್‌ಗಳನ್ನು ಪಡೆಯುತ್ತಿದ್ದು ಅವು ಭಾರಿ ಋಣಿ ರಾಷ್ಟ್ರಗಳಾದಾಗ ಆ ರಾಷ್ಟ್ರಗಳು ತಮ್ಮ ವಿನಿಮಯದವರನ್ನು ಬದಲಾಯಿಸಬೇಕು. ಬಂಡವಾಳ ಸಂಚಾರದ ನಿಯಂತ್ರಣಕ್ಕೆ ಒಡಂಬಡಬೇಕು; ತೀರುವೆ ಒಕ್ಕೂಟಕ್ಕೆ ಕೊಡಬೇಕಾದ ಋಣದ ಒಂದು ಭಾಗಕ್ಕೆ ಚಿನ್ನ ಕೊಡಬೇಕು; ಅಥವಾ ವಿದೇಶಿ ವಿನಿಮಯ ಕೊಡಬೇಕು-ಎಂದು ಒಕ್ಕೂಟ ತೀರ್ಮಾನಿಸುತ್ತದೆಯಷ್ಟೆ. ಈ ಋಣದ ಒಂದು ಮಿತಿಯನ್ನು ಮೀರಿದರೆ, ಒಕ್ಕೂಟ ಮತ್ತೆ ಅಂಥ ರಾಷ್ಟ್ರಕ್ಕೆ ಉದ್ದರಿ ಒದಗಿಸುವುದನ್ನು ನಿಲ್ಲಿಸುತ್ತದೆ. ಇದೇ ರೀತಿ ಪಾವತಿ ಶಿಲ್ಕಿನಲ್ಲಿ ಹೆಚ್ಚುವರಿ ಇರುವ ದೇಶಗಳು ತಮ್ಮ ಪಾಲಿಗಿರುವ ಬ್ಯಾಂಕಾರ್‌ಗಳಿಗಿಂತ ಹೆಚ್ಚಾಗಿ ಶೇಖರಣೆ ಮಾಡುತ್ತ ಹೋದಲ್ಲಿ ಒಕ್ಕೂಟ ಆ ದೇಶಗಳ ಮೇಲೆ ಯುಕ್ತ ಕ್ರಮ ಕೈಗೊಳ್ಳುತ್ತದೆ. ಸದಸ್ಯರಾಷ್ಟ್ರಗಳ ವಿನಿಮಯ ಹೊಂದಾವಣೆಯ ವಿಷಯದಲ್ಲಿ ದೇಶದಲ್ಲಿ ಹಣದುಬ್ಬರ ಮತ್ತು ಹಣದ ಇಳಿತಾಯಗಳನ್ನು ಹೋರಿಸುವ ವಿಷಯದಲ್ಲಿ ಮತ್ತು ಹಣ ಪಾವತಿ ವಿಷಯದಲ್ಲಿ ಬಿಗಿಯಾದ ಆಚರಣೆಗೆ ಅಪ್ಪಣೆ ಕೊಡುವ ಅಧಿಕಾರ ತೀರುವೆ ಒಕ್ಕೂಟಕ್ಕೆ ಇರುತ್ತದೆ. ಆದರೆ ಈ ಅಧಿಕಾರ ಪಾವತಿಶಿಲ್ಕಿನಲ್ಲಿ ಕೊರತೆ ಇರುವ ರಾಷ್ಟ್ರಗಳಿಗೂ ಹೆಚ್ಚುವರಿ ಇರುವ ರಾಷ್ಟ್ರಗಳಿಗೂ ಒಂದೇ ರೀತಿ ಅನ್ವಯವಾಗುತ್ತದೆ.

ಆವಶ್ಯಕತೆ ಬಂದ ಹಾಗೆ ಒಟ್ಟು ಅಂತಾರಾಷ್ಟ್ರೀಯ ದ್ರವತಾ ಮಟ್ಟವನ್ನು ಮೇಲಕ್ಕಾಗಲಿ ಕೆಳಕ್ಕಾಗಲಿ ಹೊಂದಾವಣೆ ಮಾಡಬಹುದು. ಸದಸ್ಯರಾಷ್ಟ್ರಗಳ ಬ್ಯಾಂಕಾರ್ ಪಾಲನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಬದಲಾವಣೆ ಮಾಡುವುದರ ಮೂಲಕ ಇದು ಸಾಧ್ಯವಾಗುತ್ತದೆ. ಪ್ರಪಂಚದಲ್ಲಿ ಹಣದ ಉಬ್ಬರ ಹೆಚ್ಚುತ್ತಿದೆ ಎಂದು ಕಂಡಾಗ ಸದಸ್ಯರಾಷ್ಟ್ರಗಳ ಬ್ಯಾಂಕಾರ್ ಹಸುಗೆಗಳನ್ನು ಕಡಿಮೆ ಮಾಡಬಹುದು; ಅಥವಾ ಹಣದ ಇಳಿತ ಪರಿಸ್ಥಿತಿ ಒದಗಿದಾಗ ಬ್ಯಾಂಕಾರ್ ಹಸುಗೆಗಳನ್ನು ಹೆಚ್ಚಿಸಬಹುದು.

ಕೇನ್ಸ್ ಯೋಜನೆಯಲ್ಲಿ ಚಿನ್ನಕ್ಕೂ ಪಾತ್ರವುಂಟು. ಅಂತಾರಾಷ್ಟ್ರೀಯ ಪಾವತಿ ಶಿಲ್ಕಿನ ಕೊರತೆಯನ್ನು ಸರಿಪಡಿಸಲು ಬ್ಯಾಂಕಾರ್‌ಗಳೇ ಸಾಕಾಗಿದ್ದರೂ, ರಾಷ್ಟ್ರಗಳು ಚಿನ್ನದ ಮೂಲಕವೂ ಪಾವತಿ ಶಿಲ್ಕಿನ ಕೊರತೆಯನ್ನು ಹೊಂದಾವಣೆ ಮಾಡಿಕೊಳ್ಳಲು ಒಪ್ಪಿಕೊಳ್ಳುತ್ತವೆ. ತೀರುವೆ ಒಕ್ಕೂಟ ಒಂದು ನಿರ್ದಿಷ್ಟ ಬೆಲೆಯಲ್ಲಿ ಬ್ಯಾಂಕಾರ್‌ಗಳನ್ನು ಕೊಟ್ಟು ಚಿನ್ನವನ್ನು ಕಂಡುಕೊಳ್ಳುತ್ತದೆ. ಆದರೆ ಈ ಒಕ್ಕೂಟ ಬ್ಯಾಂಕಾರ್‌ಗಳನ್ನು ತೆಗೆದುಕೊಂಡು ಚಿನ್ನವನ್ನು ಮಾರಬೇಕೆಂಬ ಕಡ್ಡಾಯವಿಲ್ಲ. ಈ ರೀತಿ ಬ್ಯಾಂಕಾರ್ ಮತ್ತು ಚಿನ್ನಗಳ ಪರಿವರ್ತನೆಯನ್ನು ಏಕಮುಖಿಗೊಳಿಸಬೇಕೆಂಬುದು ಒಂದು ದಿಟ್ಟ ಹೆಜ್ಜೆ. ಅಂತಾರಾಷ್ಟ್ರೀಯ ಪಾವತಿ ಪದ್ಧತಿಗೆ ಅಡಿಪಾಯವಾದ ಚಿನ್ನವನ್ನು ಕ್ರಮೇಣ ತೆಗೆದುಹಾಕಲು ಇದು ಪ್ರಥಮ ಕ್ರಮ.

ಅಂದರೆ ಕೇನ್ಸ್ ಯೋಜನೆ ಅಲ್ಪಾವಧಿಯಲ್ಲಿ ವಿನಿಮಯ ದರದ ಅಪುಟಿತತೆಯನ್ನೂ, ದೀರ್ಘಾವಧಿಯಲ್ಲಿ ವಿನಿಮಯ ದರದ ಪುಟಿತತೆಯನ್ನೂ ಸ್ಥಾಪಿಸುತ್ತದೆ. ಹೊಸದಾಗಿ ಸೃಷ್ಟಿಮಾಡುವ ಬ್ಯಾಂಕಾರ್ ನಾಣ್ಯ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಕನಿಷ್ಠ ಪಕ್ಷ ಅರ್ಧಕ್ಕಾದರೂ ಚಿನ್ನದ ಬಳಕೆಯನ್ನು ಕಡಿಮೆ ಮಾಡುತ್ತದೆ. ಕೇನ್ಸ್ ಯೋಜನೆಯಲ್ಲಿ ಉದ್ದರಿ ನಿರ್ಮಾಣ ನಿಯಮಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಅಂತಾರಾಷ್ಟ್ರೀಯ ದ್ರವತೆಯನ್ನು ಸ್ವಯಮೇವ ಹೆಚ್ಚಿಸುತ್ತದೆ. ಈ ಯೋಜನೆಯಲ್ಲಿ ಹೊಂದಾವಣೆಯ ವಿಷಯದಲ್ಲಿ ವಿಧಿಸಲಾಗಿರುವ ನಿಯಮಗಳು ಪಾವತಿ ಶಿಲ್ಕಿನಲ್ಲಿ ಕೊರತೆ ಇರುವ ರಾಷ್ಟ್ರಗಳಿಗೂ ಹೆಚ್ಚುವರಿ ಇರುವ ರಾಷ್ಟ್ರಗಳಿಗೂ ಒಂದೇ ರೀತಿ ಅನ್ವಯಿಸುತ್ತವೆ. ಈಗಿರುವ ವ್ಯವಸ್ಥೆಯಲ್ಲಿ ಕೊರತೆ ಇರುವ ರಾಷ್ಟ್ರ ಹೊಂದಾವಣೆಯ ವಿಷಯದಲ್ಲಿ ಪೂರ್ಣ ಜವಾಬ್ದಾರಿಯನ್ನು ಹೊರಬೇಕೆಂದು ಅಧ್ಯಾಹೃತವಾಗಿರುತ್ತದೆ. ಕೇನ್ಸ್ ಯೋಜನೆಯಲ್ಲಿ, ಕೊರತೆ ರಾಷ್ಟ್ರಗಳಿಗೆ ಈ ಹಣದ ಇಳಿತಾಯ ನೀತಿಯ ಪ್ರೇರಣೆಯ ಆವಶ್ಯಕತೆ ಇರುವುದಿಲ್ಲ.

ಒಟ್ಟಿನಲ್ಲಿ ಕೇನ್ಸ್ ಯೋಜನೆ ಅನೇಕ ಆಕರ್ಷಕ ಗುಣಲಕ್ಷಣಗಳಿಂದ ಕೂಡಿದೆ. ಅದರ ವ್ಯಾಪ್ತಿ ಬಹಳ ಮಿತಿಯುಳ್ಳದ್ದು. ಒಂದು ಅಂತಾರಾಷ್ಟ್ರೀಯ ತೀರುವೆ ಒಕ್ಕೂಟದ ಸ್ಥಾಪನೆ, ಅಂತಾರಾಷ್ಟ್ರೀಯ ನಾಣ್ಯವಾಗಿ ಬ್ಯಾಂಕಾರಿನ ಸೃಷ್ಟಿ, ಇವು ಅದರ ಎರಡು ಮುಖ್ಯ ಸೂಚನೆಗಳು. ಅಷ್ಟರಮಟ್ಟಿಗೆ ಈ ಯೋಜನೆ ಒಂದು ಪ್ರಪಂಚ ಕೇಂದ್ರೀಯ ಬ್ಯಾಂಕಿನ ಕಡೆಗೆ ನಡೆಯುತ್ತದೆ. ಆದರೆ ಪರಿಪೂರ್ಣವಾದ ಪ್ರಪಂಚ ಕೇಂದ್ರೀಯ ಬ್ಯಾಂಕನ್ನು ಸೃಷ್ಟಿಸುವುದಕ್ಕಾಗಲಿ ಪ್ರಪಂಚದ ಹಣ ನೀತಿಗಳನ್ನು ಪರಸ್ಪರ ಸರಿ ಹೊಂದಿಸುವ ಗೋಜಿಗಾಗಲಿ ಇದು ಹೋಗುವುದಿಲ್ಲ. ಕೇನ್ಸ್ ಯೋಜನೆ ಒಂದು ದೃಢವಾದ ಉದ್ದರಿ ಯೋಜನೆ. ಇದು ಹೊಂದಾವಣೆಯ ಮತ್ತು ಬಂಡವಾಳ ಸಂಚಾರದ ಪಾತ್ರವನ್ನು ಅಡಕವಾಗಿಯಾದರೂ ಒತ್ತಿ ಹೇಳುತ್ತದೆ. ಆದರೂ ಕೇನ್ಸ್ ಯೋಜನೆಯಲ್ಲಿ ಕೆಲವು ದೋಷಗಳುಂಟು. ಉದಾಹರಣೆಗೆ, ಅಂತಾರಾಷ್ಟ್ರೀಯ ವ್ಯವಹಾರಗಳ ಆಯವ್ಯಯದ ಲೆಕ್ಕಗಳನ್ನು ಸಮತೋಲನದಲ್ಲಿಡುವುದು ಸಾಧ್ಯವೆಂಬ ನಂಬಿಕೆ ತುಂಬ ಆಶಾದಾಯಕವಾದ್ದು. ಕೇನ್ಸ್ ಯೋಜನೆ ಪರಿಪೂರ್ಣ ಹಂತವನ್ನು ಮುಟ್ಟಿದಾಗ ಎಲ್ಲ ರಾಷ್ಟ್ರಗಳ ಅಂತಾರಾಷ್ಟ್ರೀಯ ಆಯವ್ಯಯಗಳ ಲೆಕ್ಕದಲ್ಲಿ ಸಮತೋಲ ಸಾಧಿತವಾಗುತ್ತದೆ. ಆದ್ದರಿಂದ ಅಂತಾರಾಷ್ಟ್ರೀಯ ದ್ರವತೆಯ ಆವಶ್ಯಕತೆ ಒದಗುವುದಿಲ್ಲವೆನ್ನಬಹುದು. ಆದರೆ ಪ್ರಕೃತ ಪ್ರಪಂಚದ ಸ್ಥಿತಿಗತಿಗಳನ್ನು ನೋಡಿದರೆ ಇದು ಸಾಧ್ಯವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಕೊನೆಯದಾಗಿ, ಕೇನ್ಸ್ ಯೋಜನೆ ಆ ಕಾಲಕ್ಕೆ ಬಹಳ ಮುಂದುವರಿದ ಮತ್ತು ತಜ್ಞರ ಚಿಂತನೆಯನ್ನು ಇನ್ನಷ್ಟು ಕೆರಳಿಸುವಂಥ ಯೋಜನೆಯಾಗಿತ್ತು. ಇದು ಸುವರ್ಣ ಪ್ರಮಿತಿ ಪದ್ಧತಿಯನ್ನು ಅನುಸರಿಸುವುದನ್ನು ಬಿಟ್ಟು ಹೊಸ ಮಾರ್ಗ ಅನುಸರಿಸಲು ಮಾಡಿದ ಪ್ರಯತ್ನ. ಈ ಯೋಜನೆಯನ್ನು ಬ್ರೆಟನ್‌ವುಡ್ಸ್ ಸಮ್ಮೇಳನದಲ್ಲಿ ತಳ್ಳಿಹಾಕಲು ಇದು ಮುಖ್ಯ ಕಾರಣ. ಆದರೆ ಇಪ್ಪತ್ತು ವರ್ಷಗಳ ಅನಂತರ ಕೇನ್ಸ್ ಯೋಜನೆಯನ್ನು ಹೋಲುವ ಅನೇಕ ಯೋಜನೆಗಳು ಮಂಡಿತವಾಗಿವೆ. ವಿಶ್ವರಾಷ್ಟ್ರ ಸಮುದಾಯ ಅವನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಿದೆ. ರಾಬರ್ಟ್ ಟ್ರಿಫಿನ್ ಯೋಜನೆ ಒಂದು ಉದಾಹರಣೆ. ಇದೇ ರೀತಿ ಇತ್ತೀಚೆಗೆ ಅಂತಾರಾಷ್ಟ್ರೀಯ ಹಣನಿಧಿ ಸೃಷ್ಟಿಮಾಡುತ್ತಿರುವ ಎಸ್.ಡಿ.ಆರ್.ಗಳು (ಸ್ಪೆಷಲ್ ಡ್ರಾಯಿಂಗ್ ರೈಟ್ಸ್) ಸಹ ಕೇನ್ಸ್ ಯೋಜನೆಯ ಇನ್ನೊಂದು ರೂಪ ಎನ್ನಬಹುದು. (ಎಂ.ಎ.ಎಂ.)

**ಕೇಪ್ ಟೌನ್ :** ದಕ್ಷಿಣ ಆಫ್ರಿಕ ಗಣರಾಜ್ಯದ ವೈಧಾನಿಕ ರಾಜಧಾನಿ. ಕೇಪ್ ಪ್ರಾಂತ್ಯದ ಆಡಳಿತ ಕೇಂದ್ರ. ಕೇಪ್ ಪರ್ಯಾಯದ್ವೀಪದ ಉತ್ತರದ ಕೊನೆಯಲ್ಲಿದೆ. ಜನಸಂಖ್ಯೆ 2893251 (2001). ನಗರದ ನಡುವಣ ಭಾಗ ವ್ಯಾಪಾರಕೇಂದ್ರ. ಅದರ ಮೂರು ಪಾರ್ಶ್ವಗಳಲ್ಲಿ ಉಪನಗರಗಳು ಹಬ್ಬಿವೆ. ನಗರದ ರಸ್ತೆಗಳ ಪೈಕಿ ಆಡರ್ಲಿ ಬೀದಿ ಮುಖ್ಯವಾದ್ದು. ಹೀರೆನ್‌ಗ್ರಾಕ್ಟ್‌ನಲ್ಲಿ ಇದು ಮುಂದುವರಿದಿದೆ. ಆಡರ್ಲಿ ರಸ್ತೆಯಿಂದ ದಕ್ಷಿಣಕ್ಕೆ ಇರುವ ಸರ್ಕಾರಿ ಅವೆನ್ಯೂ ಒಂದು ಸುಂದರ ತಾಣ. ಆಚೀಚೆ ಓಕ್ ಮರಗಳಿಂದ ಕೂಡಿದ ಈ ಮಾರ್ಗದಲ್ಲಿ ವಾಹನಗಳಿಗೆ ಪ್ರವೇಶವಿಲ್ಲ. ಆಡರ್ಲಿ ಬೀದಿಯ ಪಶ್ಚಿಮಕ್ಕಿರುವ ಗ್ರೀನ್ ಮಾರ್ಕೆಟ್ ಚೌಕ ಹಿಂದೆ ನಗರದ ಕೇಂದ್ರವಾಗಿತ್ತು. ಇನ್ನೂ ಪಶ್ಚಿಮಕ್ಕಿರುವ ರೀಬೀಕ್ ಚೌಕದಲ್ಲಿ ಹಿಂದೆ ಎತ್ತುಗಳನ್ನು ನೊಗಗಳಿಂದ ಕಳಚಿ ಬಿಡುತ್ತಿದ್ದರು. ಗ್ರ್ಯಾಂಡ್ ಪೆರೇಡ್ ಒಂದು ವಿಸ್ತೃತ ದೀರ್ಘಚತುರಸ್ರ ಸ್ಥಳ; ಅಂಗಡಿಗಳ ಕೇಂದ್ರ; ಪ್ರಶಸ್ತ ವಾಹನ ನಿಲ್ದಾಣ.

ಕೇಪ್ ಟೌನಿನಲ್ಲಿರುವ ಕಟ್ಟಡಗಳ ಪೈಕಿ ಅತ್ಯಂತ ಪುರಾತನವಾದ್ದು ಅಲ್ಲಿಯ ದುರ್ಗ; ಗ್ರ್ಯಾಂಡ್ ಪೆರೇಡಿನ ಬಳಿ ಇದೆ. 1666ರಲ್ಲಿ ಇದನ್ನು ನಿರ್ಮಿಸಲಾಯಿತು. 1652ರಲ್ಲಿ ಮರ ಮತ್ತು ಮಣ್ಣಿನಿಂದ ನಿರ್ಮಿಸಿದ ಕೋಟೆಯ ಬದಲು ಇದನ್ನು ಕಟ್ಟಲಾಯಿತು.

ಆಡರ್ಲಿ ಬೀದಿಯಲ್ಲಿರುವ ಡಚ್ ಸುಧಾರಿತ ಚರ್ಚು ದಕ್ಷಿಣ ಆಫ್ರಿಕದಲ್ಲಿರುವ ಈ ಪಂಗಡದ ಚರ್ಚುಗಳ ಪೈಕಿ ಅತ್ಯಂತ ಹಳೆಯದು. ಇದರ ನಿರ್ಮಾಣ ಆರಂಭವಾದ್ದು 1699ರಲ್ಲಿ. ಆಗಿನ ಭಾಗವಾಗಿ ಉಳಿದಿರತಕ್ಕದ್ದು ಗಂಟೆಯ ಗೋಪುರ ಮಾತ್ರ. ಕೇಪ್ ಟೌನಿನಲ್ಲಿ ಆಂಗ್ಲಿಕನ್ ಮತ್ತು ರೋಮನ್ ಕಥೊಲಿಕ್ ಚರ್ಚ್‌ಗಳೂ ಇವೆ. ಡಾರ್ಲಿಂಗ್ ಬೀದಿಯಲ್ಲಿರುವ ನಗರಭವನವನ್ನು 1905ರಲ್ಲಿ ಕಟ್ಟಲಾಯಿತು. ಅದರ ಬದಲು 1960ರಲ್ಲಿ ರಾಗೆಬಾಯಿಯಲ್ಲಿ ಆಧುನಿಕ ಪೌರಕೇಂದ್ರವೊಂದನ್ನು ನಿರ್ಮಿಸಿದೆ. ಮಹಾ ಅಂಚೆಕಚೇರಿ ಒಂದು ಎತ್ತರದ ಕಟ್ಟಡ. ಇದರ ನಿರ್ಮಾಣವನ್ನು 1942ರಲ್ಲಿ ಮುಗಿಸಲಾಯಿತು. ಸರ್ಕಾರಿ ಭವನ, ದಕ್ಷಿಣ ಆಫ್ರಿಕ ರಾಷ್ಟ್ರೀಯ ಕಲಾಕೇಂದ್ರ, ದಕ್ಷಿಣ ಆಫ್ರಿಕ ವಸ್ತುಸಂಗ್ರಹಾಲಯ, ಹಳೆಯ ಪರಮೋಚ್ಚ ನ್ಯಾಯಾಲಯ ಕಟ್ಟಡ ಇವು ಇತರ ಕೆಲವು ಪ್ರೇಕ್ಷಣೀಯ ಭವನಗಳು. ನಗರದ ಪೂರ್ವಕ್ಕೆ ಸು. 8ಕಿಮೀ ದೂರದಲ್ಲಿ ಖಗೋಳವೀಕ್ಷಣಾಲಯ (1827–28) ಇದೆ. ದಕ್ಷಿಣಾರ್ಧಗೋಳದ ಮುಖ್ಯ ವೀಕ್ಷಣಾಲಯಗಳಲ್ಲಿ ಇದೊಂದು.

ಕೇಪ್‌ಟೌನ್ ವಿಶ್ವವಿದ್ಯಾಲಯ ಗುಡ್ಡದ ಮೇಲಿದೆ. 1829ರಲ್ಲಿ ಆಫ್ರಿಕನ್ ಕಾಲೇಜಾಗಿ ಪ್ರಾರಂಭವಾದ ಸಂಸ್ಥೆ 1918ರಲ್ಲಿ ವಿಶ್ವವಿದ್ಯಾಲಯದ ಸ್ಥಾನಮಾನ ಗಳಿಸಿತು. ಗ್ರೂಟ್‌ಷೂರ್‌ನಲ್ಲಿ ಪ್ರಧಾನಿಯ ಅಧಿಕೃತ ನಿವಾಸವುಂಟು. ಅದರ ಬಳಿಯಲ್ಲೇ ರ್‍ಹೋಡ್ಸ್ ಸ್ಮಾರಕವೂ 18ನೆಯ ಶತಮಾನದ ಡಚ್ ಗಿರಣಿಯೊಂದೂ ರಾಷ್ಟ್ರೀಯ ಸಸ್ಯೋದ್ಯಾನವೂ ಇವೆ. ಪೌರಸಭಾ ಸಾರ್ವಜನಿಕ ಉದ್ಯಾನ, ಕ್ಲೇರ್‌ಮಾಂಟ್ ಸಾರ್ವಜನಿಕ ಉದ್ಯಾನ, ವಿನ್‌ಬರ್ಗ್ ಪಾರ್ಕ್–ಇವು ಕೆಲವು ಮುಖ್ಯ ಉದ್ಯಾನಗಳು.

ನಗರದಲ್ಲಿ ಎರಡು ಮುಖ್ಯ ಸಾರಿಗೆ ವ್ಯವಸ್ಥೆಗಳಿವೆ. ಉಪನಗರ ವಿದ್ಯುತ್ ರೈಲ್ವೆ ಸರ್ಕಾರಿ ಒಡೆತನದ್ದು. ಕೇಪ್ ಟೌನ್ ರೈಲುನಿಲ್ದಾಣದಿಂದ ದಕ್ಷಿಣದ ಉಪನಗರವನ್ನು ಹಾದು ಸೈಮನ್‌ಟೌನ್‌ಗೆ ಒಂದು ಮಾರ್ಗವಿದೆ. ಇದಕ್ಕೆ ಹಲವು ಕವಲುಗಳು ಉಂಟು. ಬಸ್‌ಗಳು ಸಂಚರಿಸುತ್ತವೆ. ಟೇಬಲ್ ಪರ್ವತದ ತಂತಿದಾರಿ ಕೇಪ್ ಟೌನಿನ ವೈಶಿಷ್ಟ್ಯ. ಇದು ಪರ್ವತದ ಶಿಖರಕ್ಕೆ ಪ್ರೇಕ್ಷಕರನ್ನು ಕರೆದೊಯ್ಯುತ್ತದೆ. ಅಲ್ಲಿಂದ ನಗರದ ನೋಟ ಅತ್ಯಂತ ರಮಣೀಯ. ರಾಷ್ಟ್ರೀಯ ರೈಲ್ವೆ ವ್ಯವಸ್ಥೆಯ ಕೊನೆಯ ನಿಲ್ದಾಣ ಕೇಪ್‌ಟೌನ್. ಇಲ್ಲಿಂದ ದಕ್ಷಿಣ ಆಫ್ರಿಕದ ಎಲ್ಲ ಮುಖ್ಯ ಸ್ಥಳಗಳಿಗೂ ರೈಲ್ವೆ ಸಂಪರ್ಕವುಂಟು. ನಗರಕ್ಕೆ 19 ಕಿಮೀ. ದೂರದಲ್ಲಿ ವಿಮಾನ ನಿಲ್ದಾಣವುಂಟು. ದಕ್ಷಿಣ ಆಫ್ರಿಕದ ಮುಖ್ಯ ಬಂದರು ಕೇಪ್‌ಟೌನ್. ಚಿನ್ನ, ವಜ್ರ ಮತ್ತು ಹಣ್ಣುಗಳು ಇಲ್ಲಿಂದ ರಫ್ತಾಗುತ್ತವೆ. ವಜ್ರಗೆಲಸ, ನೌಕಾ ನಿರ್ಮಾಣ, ಫಲಸಾರ ಉತ್ಪಾದನೆ, ಸಿಮೆಂಟ್, ಕಲ್ನಾರು, ರಾಸಾಯನಿಕ ಗೊಬ್ಬರ, ಬಣ್ಣ, ಪ್ಲಾಸ್ಟಿಕ್, ಪಾದರಕ್ಷೆ, ಸಾಬೂನು, ಜವಳಿ, ಎಂಜಿನಿಯರಿಂಗ್, ವಿದ್ಯುದುಪಕರಣ, ಮದ್ಯ ಮತ್ತು ಮದ್ಯಸಾರ ಕೈಗಾರಿಕೆಗಳಿವೆ.

ಕೇಪ್‌ಟೌನಿನ ಉಷ್ಣತೆ 11.1 ಸೆ. ಫ್ಯಾ.–20° ಸೆ. ಫ್ಯಾ. ವಾರ್ಷಿಕ ಸರಾಸರಿ ಮಳೆ ಸು.50 ಸೆಂ.ಮೀ. ಸೆಪ್ಟೆಂಬರ್ ತಿಂಗಳಿನಲ್ಲಿ ಕಾಡುಹೂಗಳು ಎಲ್ಲೆಲ್ಲೂ ಅರಳಿ ಕಣ್ಮನ ಸೆಳೆಯುವ ದೃಶ್ಯಗಳನ್ನು ವಿರಚಿಸುತ್ತವೆ. ಆಗ ಇಲ್ಲಿ ವಸಂತಋತು. ಸಮುದ್ರತೀರದ ನುಣ್ಣನೆಯ, ಹಳದಿ ಬಣ್ಣದ ಮರಳು ಮತ್ತು ಹಿತಕರವಾದ ಬಿಸಿಲು ಇವುಗಳಿಂದಾಗಿ ಕೇಪ್‌ಟೌನ್ ಪ್ರವಾಸಿಗಳಿಗೆ ತುಂಬ ಪ್ರಿಯವಾದ ತಾಣವಾಗಿದೆ.

1448ರಲ್ಲಿ ಬಾರ್ತೊಲೋಮ್ಯು ಡೀಯಷ್ ಮತ್ತು 1497ರಲ್ಲಿ ವಾಸ್ಕೋಡಗಾಮ ಗುಡ್‌ಹೋಪ್ ಭೂಶಿರವನ್ನು ಬಳಸಿಕೊಂಡು ಸಮುದ್ರಯಾನ ಮಾಡಿದಂದಿನಿಂದ ದೂರಪ್ರಾಚ್ಯ ರಾಷ್ಟ್ರಗಳತ್ತ ಪ್ರಯಾಣ ಮಾಡುವ ಹಡಗುಗಳಿಗೆ ಕೇಪ್‌ಟೌನ್ ತಂಗುದಾಣವಾಗಿದೆ. ಈಗ ಕೇಪ್‌ಟೌನ್ ನಗರ ಇರುವ ಸ್ಥಳಕ್ಕೆ ಡಚ್ಚರು ಮೊದಲು ವಲಸೆ ಬಂದದ್ದು 1652ರಲ್ಲಿ. ಇವರು ಟೇಬಲ್ ಖಾರಿಯ ತೀರದಲ್ಲಿ ಮಣ್ಣಿನ ಗೋಡೆಗಳ ಕೋಟೆಯಲ್ಲಿ ವಾಸಿಸತೊಡಗಿದರು. ಇಂದು ಇರುವ ವೌಬನ್ ಶೈಲಿಯ ಕೋಟೆಯ ನಿರ್ಮಾಣಕಾರ್ಯ ಮುಗಿದದ್ದು 1780ರಲ್ಲಿ. ಇಂದು ಇದು ರಕ್ಷಣಾ ಇಲಾಖೆಯ ಕೇಂದ್ರ ಕಚೇರಿಯಾಗಿದೆ. ಇದನ್ನು ಸಂರಕ್ಷಿಸಲಾಗಿದೆ. 1780ರ ಹೊತ್ತಿಗೆ, ತುಂಬ ಎಚ್ಚರಿಕೆಯಿಂದ ನಗರದ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿತ್ತು ಹಾಗೂ ಆ ಯೋಜನೆಗನುಗುಣವಾಗಿ ನಗರನಿರ್ಮಾಣವೂ ನಡೆದಿತ್ತು. ಸೈನಿಕ ಕಾರ್ಯಾಚರಣೆಯ ನೆಲೆಯಾಗಿ ಫ್ರೆಂಚರಿಗೆ ಇದನ್ನು ಬಳಸಿಕೊಳ್ಳಲು ಸಾಧ್ಯವಾಗದಂತೆ ಮಾಡುವ ದೃಷ್ಟಿಯಿಂದ 1795ರಲ್ಲಿ ಬ್ರಿಟಿಷರು ಈ ನಗರವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರಾದರೂ ಎಂಟು ವರ್ಷಗಳ ಅನಂತರ ಇದನ್ನು ಡಚ್ಚರಿಗೇ ಹಿಂದಿರುಗಿಸಿದರು. ಮತ್ತೊಮ್ಮೆ 1814ರಲ್ಲಿ ಇದು ಬ್ರಿಟಿಷರ ಆಧಿಪತ್ಯಕ್ಕೆ ಒಳಗಾಯಿತು. ಆಗ ಈ ನಗರ ತೀವ್ರಗತಿಯಲ್ಲಿ ಬೆಳೆಯಿತು. ಬ್ರಿಟಿಷರ ಆಳ್ವಿಕೆಯಲ್ಲಿಯೂ ಇದು ಕೇಪ್ ವಸಾಹತಿನ ರಾಜಧಾನಿಯಾಗಿಯೇ ಮುಂದುವರಿಯಿತು. ಗುಲಾಮರ ವ್ಯಾಪಾರ ಇಳಿಮುಖವಾಗಿ 1876ರಲ್ಲಿ ಅದು ಬಹಿಷ್ಕೃತವಾದದ್ದರಿಂದಲೂ 1869ರಲ್ಲಿ ಸೂಯೆಜ್ ಕಾಲುವೆ ಆರಂಭವಾಗಿ ಪೂರ್ವದ ರಾಷ್ಟ್ರಗಳಿಗೆ ಹತ್ತಿರದ ಸಮುದ್ರಸಂಪರ್ಕ ಸಾಧ್ಯವಾದ್ದರಿಂದಲೂ ಈ ನಗರದ ಪ್ರಾಶಸ್ತ್ಯ ಕಡಿಮೆಯಾಗುವ ಸಂಭವವಿತ್ತು. ಆದರೆ ಆ ವೇಳೆಗೆ ಚಿನ್ನದ (1866) ಮತ್ತು ವಜ್ರದ (1867) ಗಣಿಗಳನ್ನು ಪತ್ತೆಹಚ್ಚಲಾಯಿತು. 1910ರಲ್ಲಿ ರೂಪುಗೊಂಡ ದಕ್ಷಿಣ ಆಫ್ರಿಕ ಒಕ್ಕೂಟದಲ್ಲಿ ಇದು ಕೇಪ್ ಪ್ರಾಂತ್ಯದ ರಾಜಧಾನಿಯಾಗಿ ಪರಿಣಮಿಸಿದಾಗ, ಇದನ್ನು ಒಕ್ಕೂಟದ ವೈಧಾನಿಕ ರಾಜಧಾನಿಯನ್ನಾಗಿಯೂ ಸ್ವೀಕರಿಸಲಾಯಿತು. 1947ರಲ್ಲಿ 6ನೆಯ ಜಾರ್ಜ್ ದೊರೆ ಇಲ್ಲಿಗೆ ಅಧಿಕೃತ ಭೇಟಿಯಿತ್ತಾಗ ಇಲ್ಲಿಯ ಪಾರ್ಲಿಮೆಂಟಿನ ಅಧಿವೇಶನವನ್ನು ಉದ್ಘಾಟಿಸಲಾಯಿತು. (ಪಿ.ಜಿ.ಡಿ.)

**ಕೇಪ್ ಪ್ರಾಂತ್ಯ :** ದಕ್ಷಿಣ ಆಫ್ರಿಕ ಗಣರಾಜ್ಯದ ನಾಲ್ಕು ಪ್ರಾಂತ್ಯಗಳಲ್ಲಿ ಒಂದು; ಅವುಗಳ ಪೈಕಿ ಅತ್ಯಂತ ದೊಡ್ಡದು, ವಿಸ್ತೀರ್ಣ 721224 ಚ.ಕಿ.ಮೀ.

**ಭೌತ ಲಕ್ಷಣ :** ಕೇಪ್ ಪ್ರಾಂತ್ಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಸಮುದ್ರಮಟ್ಟಕ್ಕೆ ಸರಾಸರಿ 909 ಮೀ. ಎತ್ತರದಲ್ಲಿರುವುದು ಮೊದಲನೆಯದು. ಇದು ದಕ್ಷಿಣ ಆಫ್ರಿಕದ ಪ್ರಸ್ಥಭೂಮಿಗೆ ಸೇರಿದೆ. ಆರೆಂಜ್ ನದಿಯ ಬಳಿ ಈ ಪ್ರದೇಶದ ಎತ್ತರ 606 ಮೀ. ಪೂರ್ವದಲ್ಲಿ 1212 ಮೀ. ಈ ಪ್ರಸ್ಥಭೂಮಿಯ ಎಲ್ಲೆಯನ್ನು ಸಮುದ್ರ ತೀರಕ್ಕೆ ಸಮಾಂತರವಾಗಿ ಸಾಗುವ ಪರ್ವತಶ್ರೇಣಿಯ ಮಹಾ ಇಳಿಜಾರಿನಿಂದ ಗುರುತಿಸಬಹುದು. ಈ ಪರ್ವತಶ್ರೇಣಿಯನ್ನು ಡ್ರಾಕೆನ್ಸ್‌ಬರ್ಗ್, ಸ್ಟಾರಂಬರ್ಗ್ ಮುಂತಾದ ಸ್ಥಳೀಯ ಹೆಸರುಗಳಿಂದ ಕರೆಯುತ್ತಾರೆ. ಈ ಪ್ರದೇಶದಲ್ಲಿ ಮಧ್ಯಾಹ್ನದ ಬಿಸಿಲು ತೀಕ್ಷ್ಣವಾಗಿರುತ್ತದೆ. ಸಂಜೆಯ ವರ್ಣರಂಜಿತ ಆಕಾಶ ಮನಮೋಹಕ; ವೆಲ್ಡಿನ(ಹುಲ್ಲುಗಾವಲು) ಸುಂದರ ನಿಶೆಯ ನೋಟ ಮನ ತಣಿಸುವಂಥದು.

ಪರ್ವತಗಳ ಇಳಿಜಾರುಗಳಿಗೂ ಸಮುದ್ರಕ್ಕೂ ನಡುವೆ ಇರುವುದು ಎರಡನೆಯ ವಿಭಾಗ. ಇದರಲ್ಲಿ ಹಲವಾರು ಉಪವಿಭಾಗಗಳುಂಟು. ಅವುಗಳಲ್ಲಿ ಮೊದಲನೆಯದು ಗ್ರೇಟ್ ಕ್ಯಾರೂ ಪ್ರದೇಶ. ಇದು ಬೆಂಗಾಡು. ಇದರ ಉತ್ತರಕ್ಕೆ ಪರ್ವತಗಳ ಇಳಿಭೂಮಿಯೂ ದಕ್ಷಿಣಕ್ಕೆ ಬೆಟ್ಟದ ಸ್ತರಗಳೂ ಇವೆ. ಇದರ ಎತ್ತರ ಸಮುದ್ರಮಟ್ಟದಿಂದ 303–1212 ಮೀ. ಇಲ್ಲಿಯ ಭೂಪದರಗಳು ಬಲವಾದ ಮರಳುಗಲ್ಲುಗಳಿಂದ ಕೂಡಿವೆ; ಈ ಪ್ರದೇಶದ ಮೃದುವಾದ ಜೇಡಿ ಪದರಗಲ್ಲುಗಳು ಸುಲಭವಾಗಿ ಕೊರೆದುಹೋಗುವಂಥವು. ಗ್ರಾಫ್ ರೈನೆಟ್‌ಗೆ ಈಶಾನ್ಯದಲ್ಲಿರುವ ನೆಲ ಎರಡನೆಯ ಉಪವಿಭಾಗ. ಅದು ಕ್ಯಾರೂ ಮರುಭೂಮಿಯ ಬಂಡೆಗಳಿಂದ ರೂಪಗೊಂಡದ್ದು. ಅಲ್ಲಿ ಹಲವಾರು ಇಳಿಮೋಡು ಪದರಗಳುಂಟು. ಈ ಪದರಗಳು ಮರಳುಗಲ್ಲು ಹಾಗೂ ಡಾಲರೈಟ್ ಶಿಲೆಗಳಿಂದ ಕೂಡಿದವು. ಈ ವಿಭಾಗವನ್ನು ಲಿಟ್ಲ್ ಕ್ಯಾರೂ ಪ್ರದೇಶವೆಂದು ಕರೆಯುತ್ತಾರೆ. ಗ್ರಿಕ್ವಲ್ಯಾಂಡ್ ಈಸ್ಟ್ ಎಂಬ ಪ್ರದೇಶ ಶಿಲೆಗಳ ದಿಬ್ಬಸಾಲುಗಳಿಂದ ಕೂಡಿದ್ದು. ಆ ಶ್ರೇಣಿಗಳಲ್ಲಿ ಇಂಜೆಲಿ, ಕರಿ ಮತ್ತು ಇನ್‌ಸಿಜ್ವ ಬೆಟ್ಟಗಳಿವೆ.

ಕ್ಯಾರೂ ಮರಳುಗಾಡು ರಚನೆಯ ಕಾಲದಲ್ಲಿ ಅನೇಕ ಪರ್ವತಶ್ರೇಣಿಗಳು ಹಲವಾರು ಅಕ್ಷರಗಳೊಡನೆ ಪದರಗಳಾಗಿ ರೂಪಗೊಂಡವು. ಕೇಪ್ ಪ್ರಾಂತ್ಯದ ಪಶ್ಚಿಮ ಭಾಗದಲ್ಲಿ ಈ ಪದರಗಳು ಉತ್ತರ–ವಾಯವ್ಯ ಮತ್ತು ದಕ್ಷಿಣ–ಆಗ್ನೇಯ ದಿಕ್ಕುಗಳಿಗೆ ಬಾಗಿವೆ. ಸಿಯರೀಸ್ ಜಿಲ್ಲೆಯ ಕ್ಯಾರೂ ಪೋರ್ಟ್ ಬಳಿ ಈ ಪರ್ವತಗಳು ದಿಕ್ಕು ಬದಲಾಯಿಸುತ್ತವೆ. ಅವುಗಳ ಅಕ್ಷಗಳು ಬಹುಮಟ್ಟಿಗೆ ಪೂರ್ವದಿಂದ ಪಶ್ಚಿಮಕ್ಕೆ ತಿರುಗಿವೆ. ಪ್ರತಿ ಅಕ್ಷದ ಕುಳಿಭಾಗವೂ ಸಮುದ್ರತೀರದ ಕಡೆ ಇದೆ. ಉತ್ತರದಲ್ಲಿ ಈ ಸ್ತರ ವಾನ್‌ರೈನ್ಸ್ ಡ್ರಾಪ್ ಬಳಿ ನಿಂತುಹೋಗುತ್ತದೆ. ಪಶ್ಚಿಮದ ಕಡೆ ಇದು ಕೇಪ್ ಅಗುಲ್ಹಾಸ್ ಮತ್ತು ಪೆಡ್ಡಿ ಜಿಲ್ಲೆಯ ನಡುವೆ ಸಮುದ್ರಕ್ಕೆ ಇಳಿದುಹೋಗುತ್ತದೆ. ಈ ಸ್ತರಗಳ ಶಿಲೆಗಳು ಭೂಶಿರದ ಮತ್ತು ಕ್ಯಾರೂ ಬಯಲ ಶಿಲೆಗಳ ಮಾದರಿಯವು. ಟೇಬಲ್ ಪರ್ವತ ಮರಳುಗಲ್ಲು ಮತ್ತು ವಿಟ್‌ಬರ್ಗ್ ಪರ್ವತಶ್ರೇಣಿಗಳ ಶಿಲೆಗಳು ಈ ಗುಂಪಿಗೆ ಸೇರಿದವು. ಈ ಸ್ತರಶ್ರೇಣಿಗೆ ಸೇರಿದ ಪರ್ವತಗಳು ಸಿಡಾರ್‌ಬರ್ಗ್, ಗ್ರೂಟ್ ಸ್ವಾರ್ಟ್‌ಬರ್ಗ್, ಜೂರ್‌ಬರ್ಗ್, ಡ್ರಾಕೆನ್‌ಸ್ಟೀನ್, ಜೊಂಡರ್ ಇಂಡೆ ನದಿಯ ಪರ್ವತಗಳು, ಲಾಂಗೆಬರ್ನ್ ಮೊದಲಾದವು. ಸ್ವಾರ್ಟ್‌ಬರ್ಗ್ ಶ್ರೇಣಿಯ ಸೆವೆನ್ ವೀಕ್ಸ್ ಪೋರ್ಟ್ ಪರ್ವತ ಅತ್ಯಂತ ಎತ್ತರವಾದ್ದು (2311 ಮೀ.). ಅನೇಕ ಶಿಖರಗಳು 1818 ಮೀ. ಎತ್ತರಕ್ಕಿವೆ. ಆಲಿಫ್ಯಾಂಟ್ಸ್ ನದಿಯ ದಕ್ಷಿಣಕ್ಕೆ, ಮಹಾ ಇಳುಕಲು ಭೂಮಿ ಮತ್ತು ಸಮುದ್ರದ ನಡುವೆ ಮರಳುಗಲ್ಲುಗಳಿಂದ ರಚಿತವಾದ ಪರ್ವತಸಮೂಹಗಳಿವೆ.

ತೀರಪ್ರದೇಶ ಸಮವಾಗಿಲ್ಲ. 212–303 ಮೀ. ಎತ್ತರದ ದಿಬ್ಬಗಳಿಂದ ಕೂಡಿದೆ ಆ ದಿಬ್ಬಗಳಿಂದಾಗಿ ಸಮುದ್ರದ ಅಂಚಿನಲ್ಲಿ ಪ್ರಪಾತಗಳು ಉಂಟಾಗಿವೆ.

**ನದಿಗಳು :** ಮಹಾ ಇಳುಕಲು ಭೂಪ್ರದೇಶ ಪ್ರಮುಖ ಜಲವಿಭಜನೆಯ ನೆಲ, ಒಳನಾಡ ಪ್ರಸ್ಥಭೂಮಿಯಲ್ಲಿ ಆರೆಂಜ್ ನದಿಯೂ ಅದರ ಕೂಡುನದಿಗಳೂ ಹರಿಯುತ್ತವೆ. ಆರೆಂಜ್ ನದಿ ಹರಿಯುವುದು ಪೂರ್ವದಿಂದ ಪಶ್ಚಿಮಕ್ಕೆ, ಅದು ಅಟ್ಲಾಂಟಿಕ್ ಸಾಗರ ಸೇರುತ್ತದೆ. ಇಳಿಭೂಮಿಯ ಪ್ರದೇಶದಲ್ಲಿ ಅನೇಕ ನದಿಗಳು ಹುಟ್ಟಿ ಕ್ಯಾರೂ ಬಂಜರುಭೂಮಿಗೆ ಅಡ್ಡಲಾಗಿಯೂ ಸ್ತರಪ್ರದೇಶಗಳ ನಡುವೆಯೂ ಹರಿದು ಸಮುದ್ರಕ್ಕೆ ಬೀಳುತ್ತವೆ. ಈ ನದಿಗಳಲ್ಲಿ ಮುಖ್ಯವಾದವು ಆಲಿಫ್ಯಾಂಟ್ಸ್, ಕೈ, ಫಿಷ್, ಸಂಡೇ, ಗ್ಯಾಂಟಾಸ್, ಗ್ಯಾಂಕ್ ಮತ್ತು ಬ್ರೀಡ್. ಬೇಸಗೆಯಲ್ಲಿ ಈ ನದಿಗಳು ಸಾಕಷ್ಟು ನೀರಿಲ್ಲದೆ ಅನೇಕ ಮಡುವುಗಳಾಗಿ ಪರಿವರ್ತನೆಗೊಳ್ಳುತ್ತವೆ. ಕೇಪ್ ಪ್ರಾಂತ್ಯದ ಆಗ್ನೇಯ ಭಾಗದಲ್ಲಿ ನದಿಗಳು ಮರಳುಗಲ್ಲು ಮತ್ತು ಡಾಲರೈಟ್ ಶಿಲೆಗಳಿಂದ ಕೂಡಿದ ಭೂಮಿಯಲ್ಲಿ ಹರಿಯುತ್ತವೆ. ಮಳೆ ಕಡಿಮೆ ಇರುವಲ್ಲಿ ಸರೋವರಗಳು ಕಡಿಮೆ.

**ವಾಯುಗುಣ :** ಸಮುದ್ರಕ್ಕಿರುವ ದೂರ ಮತ್ತು ಪರ್ವತಗಳಿರುವ ಸ್ಥಳ– ಇವಕ್ಕೆ ಅನುಗುಣವಾಗಿ ಕೇಪ್ ಪ್ರಾಂತ್ಯದ ವಾಯುಗುಣದಲ್ಲಿ ವ್ಯತ್ಯಾಸ ಉಂಟು. ಕೇಪ್ ಟೌನಿನ ಸರಾಸರಿ ಮಳೆ 55 ಸೆಂ.ಮೀ. ಪರ್ವತ ಶ್ರೇಣಿಗಳ ನಡುವೆ ತೀರಾ ಪ್ರದೇಶಗಿಂತ ಕಡಿಮೆ ಮಳೆ. ಕ್ಯಾರೂ ಪ್ರದೇಶದಲ್ಲಿ ಕಾಣಬರುವುದು ಮರುಭೂಮಿಯ ವಾಯುಗುಣ. ಪೋರ್ಟ್ ಎಲಿಜಬೆತ್‌ನಲ್ಲಿ ಸರಾಸರಿ 46 ಸೆಂ.ಮೀ. ಮಳೆ. ಈಸ್ಟ್ ಲಂಡನ್‌ನಲ್ಲಿ 70 ಸೆಂ.ಮೀ. ನೈರುತ್ಯ ತೀರದ ಕೆಲವು ಭಾಗಗಳಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆಯಾಗುತ್ತದೆ. ಒಳನಾಡು ಸಮುದ್ರಮಟ್ಟಕ್ಕೆ ಎತ್ತರವಾಗಿರುವುದರಿಂದ ಅಲ್ಲಿಯ ವಾಯುಗುಣ ಹಿತಕರ. ಬೆಟ್ಟಗಳ ಮೇಲೆ ಮಂಜು ಮುಸುಕುವುದು ಅಪರೂಪ.

**ಸಸ್ಯಗಳು :** ಸ್ತರ ಪರ್ವತಗಳು, ಆಲಿಫ್ಯಾಂಟ್ಸ್ ಮತ್ತು ಸಂಡೇ ನದಿ ಇರುವ ನೈರುತ್ಯ ಪ್ರದೇಶದಲ್ಲಿ ಕುರುಚಲು ಮತ್ತು ಪೊದೆಗಳು ಹೇರಳ. ಕುರುಚಲು ಗಿಡಗಳಲ್ಲಿ ಸುಮಾರು 262 ಬಗೆಗಳುಂಟು. ಸಿಲ್ವರ್, ಏರಿಕೇಷಿಯಾ ಬೆಳೆಯುತ್ತವೆ. ವಸಂತ ಕಾಲದಲ್ಲಿ ಪರ್ವತಗಳ ಇಳಿಮೋಡುಗಳು ನಾನಾ ಬಗೆಯ ಹೂವುಗಳಿಂದ ಕೂಡಿ ವರ್ಣರಂಜಿತವಾಗಿರುತ್ತವೆ. ನದಿ ಮತ್ತು ಪ್ಲೇ ಜೌಗು ಪ್ರದೇಶದಲ್ಲಿ ಪಾಲ್ಮಿಯಿಟ್ ಮತ್ತು ಪಿಗ್‌ಲಲಿ ಗಿಡಗಳು ಬೆಳೆಯುತ್ತವೆ. ಹಳದಿ ಮರ 40 ಮೀ. ಎತ್ತರಕ್ಕೆ ಬೆಳೆಯುವುದುಂಟು. ಸ್ಟಿಂಕ್‌ವುಡ್ ಮತ್ತು ಬ್ಲಾಕ್ ಐರನ್ ವುಡ್ ಸಹ ಉತ್ತಮ ಚೌಬೀನೇ ಮರಗಳು. ಮಳೆಗಾಲದಲ್ಲಿ ಕ್ಯಾರೂ ಪ್ರದೇಶದಲ್ಲಿ ಗೆಡ್ಡೆಯ ಗಿಡಗಳು ಬೆಳೆದು ಹೂವುಗಳು ಅರಳುತ್ತವೆ; ತರುವಾಯ ಆ ಪ್ರದೇಶ ಮರುಭೂಮಿಯ ಸ್ವರೂಪ ತಾಳುತ್ತವೆ. ಕೇಪ್ ಪ್ರಾಂತ್ಯದ ಈಶಾನ್ಯ ಭಾಗದಲ್ಲಿ ಹುಲ್ಲುಗಾವಲು ಹಾಗೂ ಅರಣ್ಯಗಳುಂಟು. ಮಹಾ ಇಳಿಭೂಮಿ ಮತ್ತು ತೀರಗಳ ನಡುವೆ ಸವನ್ನಾ ಹುಲ್ಲುಗಾವಲುಗಳಿವೆ.

**ಪ್ರಾಣಿಗಳು :** ಕೇಪ್ ಪ್ರಾಂತ್ಯದಲ್ಲಿ ಹಲವಾರು ಬಗೆಯ ಪ್ರಾಣಿಗಳಿದ್ದರೂ ವಸಾಹತು ದಿನಗಳಲ್ಲಿದ್ದ ಪ್ರಾಣಿಗಳಲ್ಲಿ ಹಲವು ಈ ಭಾಗದಿಂದ ಹೊರಟು ಹೋಗಿವೆ. ಕ್ನಿಸ್ನ ಬಳಿ ಆನೆ, ಕಾಡುಕೋಣ, ಹೇಸರಗತ್ತೆ ವಿವಿಧ ಸಾರಂಗಗಳು ಮತ್ತು ಗ್ನು ಕೋಣ, ಜಿಂಕೆ, ಚಿರತೆ, ಕತ್ತೆಕಿರುಬ, ಬಿಳಿನರಿ ವಿವಿಧ ಬಗೆಯ ಕಾಡುಬೆಕ್ಕುಗಳು, ಮುಂಗುಸಿ, ಬಬೂನ್, ನೀರುನಾಯಿ ಮೊದಲಾದ ಪ್ರಾಣಿಗಳುಂಟು. ವಿವಿಧ ಜಾತಿಯ ಹಾವುಗಳು, ಮೊಸಳೆ, ಆಮೆ, ಹಲವು ಬಗೆಯ ಪಕ್ಷಿಗಳು ಇಲ್ಲಿ ಜೀವಿಸುತ್ತವೆ. ಕಡಲಲ್ಲಿ ಶಾರ್ಕ್ ಹೆಚ್ಚು. ಸೀಲ್‌ಗಳು ಈಯುವ ಸಮಯದಲ್ಲಿ ತೀರವನ್ನು ಸಮೀಪಿಸುತ್ತವೆ.

**ಜನಜೀವನ :** ಇದು ವಿವಿಧ ಜನಾಂಗಗಳಿರುವ ಪ್ರಾಂತ್ಯ. ಇಲ್ಲಿ ಆಂಗ್ಲರು, ಡಚ್ಚರು ಮೊದಲಾದ ಐರೋಪ್ಯರು ಆಫ್ರಿಕಾದ ಕರಿಯ ಜನರು ಏಷ್ಯಾದ ವಿವಿಧ ಜನಾಂಗಗಳವರು ಜೀವಿಸುತ್ತಾರೆ. 1960ರ ಜನಗಣತಿಯ ಪ್ರಕಾರ ಇಲ್ಲಿ 9,97,377 ಮಂದಿ ಐರೋಪ್ಯರು, 29,76,827 ಮಂದಿ ಮೂಲವಾಸಿಗಳು, 13,14,392 ಮಂದಿ ಕರಿಯ ಬುಡಕಟ್ಟುಗಳಿಗೆ ಸೇರಿದ ಜನರು ಮತ್ತು 20,243 ಮಂದಿ ಏಷ್ಯಾ ದೇಶಗಳವರು ಇದ್ದರು. ಆಂಗ್ಲರು ಮುಖ್ಯವಾಗಿ ನಗರವಾಸಿಗಳು, ವಿವಿಧ ಐರೋಪ್ಯ ಜನಾಂಗಗಳವರು ವ್ಯವಸಾಯ ಭೂಮಿ ಮತ್ತು ಕೈಗಾರಿಕೆ ಕೇಂದ್ರಗಳಲ್ಲಿ ವಾಸಿಸುತ್ತಾರೆ. ಆಯಾ ಬುಡಕಟ್ಟುಗಳ ಜನ ತಂತಮ್ಮ ಭಾಷೆಗಳನ್ನು ಉಳಿಸಿಕೊಂಡಿರುವುದೇ ಈ ಪ್ರಾಂತ್ಯದ ವೈಶಿಷ್ಟ್ಯ. ವ್ಯವಸಾಯ, ಕುರಿಸಾಕಣೆ, ದ್ರಾಕ್ಷಿ ಬೆಳೆ, ಗಣಿಗೆಲಸ, ಮೀನುಗಾರಿಕೆ ಮೊದಲಾದವು ಜನರ ಮುಖ್ಯ ಕಸಬುಗಳು. 2001ರ ಜನಸಂಖ್ಯೆ : 4.524, 335.

**ಧರ್ಮ, ಶಿಕ್ಷಣ :** ಕ್ರೈಸ್ತರಲ್ಲಿ ಡಚ್ಚರ ಧರ್ಮ ಪಂಥವನ್ನು ಅನುಸರಿಸುವವರೇ ಹೆಚ್ಚು ಮಂದಿ. ಅವರು ಸಿನಡ್‌ಗಳನ್ನು (ಧರ್ಮಾಲೋಚನಾ ಸಭೆಗಳು) ರಚಿಸಿಕೊಂಡಿದ್ದಾರೆ. ಅವರ ಸಾಮಾಜಿಕ ಜೀವನದಲ್ಲಿ ಈ ಸಭೆಗಳು ಮಾರ್ಗದರ್ಶನ ನೀಡುತ್ತವೆ. ಆಂಗ್ಲಿಕನ್ ಮೆಥಾಡಿಸ್ಟ್ ಮತ್ತು ರೋಮನ್ ಕಥೋಲಿಕ್ ಧರ್ಮಗಳು ಪ್ರಚಾರದಲ್ಲಿವೆ. ಹಿಂದೂ ಧರ್ಮ ಮತ್ತು ಇಸ್ಲಾಂ ಸಹ ಆಚರಣೆಯಲ್ಲಿವೆ.

ವಿಶ್ವವಿದ್ಯಾಲಯಕ್ಕಿಂತ ಕೆಳಹಂತದ ಶಿಕ್ಷಣ ಪ್ರಾಂತೀಯ. ಬಿಳಿಯ ಜನರ ಮಕ್ಕಳ ಶಿಕ್ಷಣ ಶಾಲಾ ಮಂಡಳಿಗಳ ಆಡಳಿತಕ್ಕೆ ಒಳಪಟ್ಟಿದೆ. ಇತರ ಮಕ್ಕಳ ಶಿಕ್ಷಣ, ಧಾರ್ಮಿಕ ಸಂಸ್ಥೆಗಳಿಂದ ನಿಯಂತ್ರಿತವಾದದ್ದು. ಶಿಕ್ಷಣದಲ್ಲಿ ಬಿಳಿಯರು ಮತ್ತು ಕರಿಯರು ಎಂಬ ತಾರತಮ್ಯವಿದೆ. ಅವರಿಗೆ ಪ್ರತ್ಯೇಕ ಶಾಲೆಗಳಿವೆ. ಶಿಕ್ಷಣದ ಮಟ್ಟ, ಅದಕ್ಕಾಗಿ ಮಾಡುವ ವೆಚ್ಚ–ಎಲ್ಲ ವಿಚಾರಗಳಲ್ಲೂ ವರ್ಣಭೇದ ನೀತಿ ಅನುಸರಿಸಲಾಗುತ್ತಿದೆ. ಇಂದಿನ ದಿನಗಳಲ್ಲಿ ಸರ್ಕಾರದ ಕ್ರಮದಿಂದಾಗಿ ವರ್ಣಭೇದನೀತಿಯನ್ನು ಸಡಿಲಗೊಳಿಸಲಾಗಿದೆ.

**ಕೃಷಿ :** ಕೇಪ್ ಪ್ರಾಂತ್ಯದ ಬಹುಭಾಗ ಬಂಜರು ಭೂಮಿ. ಕ್ಯಾರೂ ಮತ್ತು ಸ್ತರ ಪರ್ವತಗಳ ಕಣಿವೆಗಳಲ್ಲಿ ಕೃಷಿ ನೀರಾವರಿಯನ್ನು ಅವಲಂಬಿಸಿದೆ. ಪೂರ್ವಜಿಲ್ಲೆಗಳಲ್ಲಿ ಮೆಕ್ಕೆ ಜೋಳ, ಗೋದಿ, ಓಟ್ಸ್ ಮತ್ತು ಹಣ್ಣುಗಳನ್ನು ಬೆಳೆಯುತ್ತಾರೆ. ದ್ರಾಕ್ಷಿ ಬೆಳೆ ಹೆಚ್ಚು. ದ್ರಾಕ್ಷಾರಸ ತಯಾರಿಕೆ ಕೈಗಾರಿಕೆಯ ಅಭಿವೃದ್ಧಿ ಹೊಂದಿದೆ. ಹೊಗೆಸೊಪ್ಪು ಬೆಳೆಯೂ ಹೆಚ್ಚು. ತುಪ್ಪಟಕ್ಕಾಗಿ ಕುರಿ ಸಾಕುತ್ತಾರೆ. ಉಷ್ಟ್ರ ಪಕ್ಷಿಗಳನ್ನು ಅವುಗಳ ಬೆಲೆ ಬಾಳುವ ಗರಿಗಳಿಗಾಗಿ ಸಾಕುತ್ತಾರೆ. ಮೀನುಗಳನ್ನು ಡಬ್ಬಗಳಲ್ಲಿ ಶೇಖರಿಸಿ ಹೊರದೇಶಗಳಿಗೆ ರಫ್ತು ಮಾಡುತ್ತಾರೆ.



**ಖನಿಜ ಸಂಪತ್ತು :** ಕೇಪ್ ಪ್ರಾಂತ್ಯದ ಬಹುಮುಖ್ಯ ಖನಿಜ ಸಂಪತ್ತು ವಜ್ರ. ಕಿಂಬರ್ಲಿಯ ಗಣಿಗಳಲ್ಲಿ ಅಮೂಲ್ಯ ವಜ್ರಗಳು ದೊರಕುತ್ತವೆ. ಅದರ ಉತ್ಪನ್ನ ಈಗ ಏರಿಳಿತಗಳಿಗೆ ಒಳಗಾಗಿದೆ. ವಜ್ರ ಉತ್ಪನ್ನ ಸಂಘದ ಸದಸ್ಯತ್ವ ಪಡೆದ ಪ್ರತಿಯೊಂದು ಉದ್ಯಮ ಸಂಸ್ಥೆಯೂ ಮಾರುಕಟ್ಟೆಗೆ ಕಳುಹಿಸಬೇಕಾದ ವಜ್ರದ ಪ್ರಮಾಣವನ್ನು ನಿಗದಿ ಮಾಡಲಾಗಿದೆ. ಕೇಪ್ ಪ್ರಾಂತ್ಯದಲ್ಲಿ ತಾಮ್ರದ ಗಣಿಗಳೂ ಉಂಟು.

**ವ್ಯಾಪಾರ :** ಕೇಪ್ ಪ್ರಾಂತ್ಯದಿಂದ ರಫ್ತಾಗುವ ಸರಕುಗಳು ವಜ್ರ, ಉಣ್ಣೆ, ಮೊಹೇರ್, ಆಡಿನ ಕೂದಲು, ಹಗುರ ಬಟ್ಟೆ, ಚರ್ಮ, ಹಣ್ಣುಗಳು ಮತ್ತು ದ್ರಾಕ್ಷಾರಸ. ಮುಖ್ಯ ಆಮದುಗಳು ಹತ್ತಿ ಜವಳಿ, ಆಹಾರ ಪದಾರ್ಥಗಳು, ಹ್ವಿಸ್ಕಿ, ಗಾಜಿನ ಪಾತ್ರೆ ಹಾಗೂ ಸಾಮಾನುಗಳು, ಯಂತ್ರೋಪಕರಣ, ಕಲ್ಲಿದ್ದಲು ಮತ್ತು ಚೌಬೀನೆ.

**ನಗರಗಳು :** ಕೇಪ್ ಪ್ರಾಂತ್ಯದ ಪ್ರಮುಖ ನಗರಗಳೆಲ್ಲ ಸಮುದ್ರ ತೀರಗಳಲ್ಲಿವೆ. ಇವುಗಳಲ್ಲಿ ಪ್ರಸಿದ್ಧವಾದವು ಕೇಪ್‍ಟೌನ್, ಪೋರ್ಟ್ ಎಲಿಜಬೆತ್, ಈಸ್ಟ್ ಲಂಡನ್, ಮೋಸೆಲ್‍ಬೇ, ಪೋರ್ಟ್‍ಸೆಂಟ್ ಜಾನ್ಸ್, ಪೋರ್ಟ್ ನೊಲ್ಲೊತ್. ಕಿಂಬರ್ಲಿ ಮುಖ್ಯ ಒಳನಾಡ ಕೇಂದ್ರ. ಕೇಪ್‍ಟೌನ್ ದಕ್ಷಿಣ ಆಫ್ರಿಕಾ ಗಣರಾಜ್ಯದ ಪಾರ್ಲಿಮೆಂಟ್ ಅಧಿವೇಶನ ಸೇರುವ ಸ್ಥಳ, ಪ್ರಸಿದ್ಧ ರೇವು ಮತ್ತು ವಿಮಾನ ನಿಲ್ದಾಣ. ರೈಲ್ವೆ ಮತ್ತು ಮೋಟಾರು ಇವು ಕೇಪ್ ಪ್ರಾಂತ್ಯದ ಪ್ರಧಾನ ಸಂಚಾರ ಸಾಧನಗಳು. ಇಲ್ಲಿಯ ಮುಖ್ಯ ಬಂದರು ಸ್ಥಳಗಳಿಂದ ಒಳನಾಡಿನ ಮೂಲಕ ಇತರ ರಾಜ್ಯಗಳಿಗೂ ಸಂಚಾರ ಸಂಪರ್ಕವಿದೆ. ಕೇಪ್ ಟೌನ್‍ನಿಂದ ಕಿಂಬರ್ಲಿ, ಜೋಹಾನ್ಸ್ ಬರ್ಗ್ ಮತ್ತು ಪ್ರಿಟೋರಿಯಾ ಪಟ್ಟಣಗಳಿಗೆ ರೈಲ್ವೆ ಮತ್ತು ರಸ್ತೆಗಳುಂಟು. ಪೋರ್ಟ್ ಎಲಿಜಬೆತ್‍ನಿಂದಲೂ ಈಸ್ಟ್ ಲಂಡನ್ನಿನಿಂದಲೂ ಒಳನಾಡಿಗೆ ರೈಲು ಮಾರ್ಗವುಂಟು.

**ಇತಿಹಾಸ :** ಬಾರ್ತೊಲೋಮ್ಯು ಡೀಯಷ್ 448ರಲ್ಲಿ ದಕ್ಷಿಣ ಆಫ್ರಿಕಾದ ಕೇಪ್ ಪ್ರಾಂತ್ಯದ ಗುಡ್‍ಹೋಪ್ ಭೂಶಿರವನ್ನು ಕಂಡುಹಿಡಿದ. 1652ರಿಂದ ಜಾನ್‍ವಾನ್ ರೈಬೀಕನ ನಾಯಕತ್ವದಲ್ಲಿ ಈಗಿನ ಕೇಪ್ ನಗರ ಪ್ರದೇಶದಲ್ಲಿ ಡಚ್ಚರು ನೆಲಸತೊಡಗಿದರು. ಪ್ರಾಚ್ಯ ದೇಶಗಳೊಂದಿಗೆ ಸ್ಪೇನ್, ಪೋರ್ಚುಗಲ್‍ಗಳ ವ್ಯಾಪಾರ ಸಂಪರ್ಕ ಕ್ಷೀಣಿಸುತ್ತಿದ್ದುದರ ಫಲವಾಗಿ ಡಚ್ಚರು ಆ ದೇಶಗಳೊಂದಿಗೆ ತಮ್ಮ ವ್ಯಾಪಾರವನ್ನು ಬೆಳೆಸಿಕೊಳ್ಳುತ್ತಿದ್ದರು. ವ್ಯಾಪಾರಕ್ಕಾಗಿ ಪ್ರಾಚ್ಯ ದೇಶಗಳಿಗೆ ಹೋಗುವ ಡಚ್ ಹಡಗುಗಳ ಆವಶ್ಯಕತೆಯನ್ನು ಪೂರೈಸುವ ಸಲುವಾಗಿ ಈ ವಸಾಹತು ಏರ್ಪಟ್ಟಿತು.

1657ರಲ್ಲಿ ನಡೆದ ಎರಡು ಮುಖ್ಯ ಘಟನೆಗಳು ಕೇಪ್ ಪ್ರಾಂತ್ಯದ ಪರಿಸ್ಥಿತಿಯನ್ನು ಬದಲಾಯಿಸಿದುವು; ಒಂಬತ್ತು ಮಂದಿ ಕಂಪನಿ ನೌಕರರು ಕೆಲಸದಿಂದ ಬಿಡುಗಡೆಯಾಗಿ ಕಂಪನಿ ಕೊಟ್ಟ ಭೂಮಿಯಲ್ಲಿ ವ್ಯವಸಾಯವನ್ನು ಕೈಗೊಂಡು ಸ್ವತಂತ್ರ ನಾಗರಿಕರಾಗಿ ನೆಲಸಿದರು. ಅದೇ ವರ್ಷ ಜಾವ ಮತ್ತು ಮಡಗಾಸ್ಕರ್ ದ್ವೀಪಗಳಿಂದ ಮೊದಲ ತಂಡದ ಕರಿಯ ಜನರನ್ನು ದಾಸ್ಯಕ್ಕಾಗಿ ಕಂಪನಿ ಬರಮಾಡಿಕೊಂಡಿತು. ಹೀಗೆ ಕೇಪ್ ಟೌನ್ ಸ್ಥಾಪಿತವಾದ ಏಳು ವರ್ಷಗಳಲ್ಲಿ ಡಚ್ಚರು ಒಳನಾಡನ್ನು ಪ್ರವೇಶಿಸಿ ಗ್ರೋಯ್ನ್ ವೆಲ್ಟ್, ಹಾಲೆಂಡ್ಸ್‍ಟ್ವಿನ್ ಮುಂತಾದ ವ್ಯವಸಾಯ ಕೇಂದ್ರಗಳನ್ನು ಸ್ಥಾಪಿಸಿದರು. ಬೋಯರ್ ಜನರ ಮೂಲಪುರುಷರಾದ ಈ ರೈತರು ಪೂರ್ವದಲ್ಲಿ 160 ಕಿ.ಮೀ. ಮೈಲಿಗಳವರೆಗೆ ಪ್ರವೇಶಿಸಿ ಫಿಷ್ ನದಿಯ ಸುತ್ತಮುತ್ತ ನೆಲಸಿದರು. ಅವರು ಅಲ್ಲಿ ಬಾಂಟು ಜನರನ್ನೂ ಉತ್ತರದಲ್ಲಿ ಬುಷ್‍ಮನ್ ಆದಿವಾಸಿಗಳನ್ನೂ ಎದುರಿಸಬೇಕಾಯಿತು. ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಿದ್ದದ ಬೋಯರ್ ರೈತರಿಗೆ ಕೇಪ್ ಪ್ರಾಂತ್ಯದಲ್ಲಿದ್ದ ಡಚ್ ಅಧಿಕಾರಿಗಳಿಂದ ಸಹಾಯ ದೊರಕುತ್ತಿರಲಿಲ್ಲ. ಆದಿವಾಸಿಗಳು ಅವರ ದನಕರುಗಳನ್ನು ಅಪಹರಿಸುತ್ತಿದ್ದುದರಿಂದ ಬೋಯರ್ ಜನ ಅವರನ್ನು ಕೊಲ್ಲುತ್ತಿದ್ದರು ಅಥವಾ ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದರು.

17ನೆಯ ಶತಮಾನದ ಕೊನೆಯ ಹೊತ್ತಿಗೆ ಡಚ್ ಕಂಪನಿ ಕೇಪ್ ಪ್ರಾಂತ್ಯದಲ್ಲಿ ವಸಾಹತು ಸ್ಥಾಪಿಸಲು ತೀರ್ಮಾನಿಸಿತು. 1679ರಲ್ಲಿ ಬಂದ ಸೈಮನ್ ವಾನ್ ಡೆರ್‍ಸ್ಟೆಲ್‍ನ ನಾಯಕತ್ವದಲ್ಲಿ ಡಚ್ ವಲಸೆಗಾರರೂ 1688ರಲ್ಲಿ ಫ್ರಾನ್ಸ್ ದೇಶದಿಂದ ಧಾರ್ಮಿಕ ಕಿರುಕುಳಕ್ಕೊಳಗಾಗಿದ್ದ 200 ಮಂದಿ ಹ್ಯೂಜನಾಟರೂ ಇಲ್ಲಿ ದ್ರಾಕ್ಷಿ ಬೆಳೆಯನ್ನು ಆರಂಭಿಸಿದರು. 1708ರ ಹೊತ್ತಿಗೆ ಕೇಪ್ ಪ್ರಾಂತ್ಯದಲ್ಲಿ ಡಚ್ ನಾಗರಿಕರೂ ಗುಲಾಮರೂ ಇದ್ದರು ; ಅವರ ಸಂಖ್ಯೆ ಕ್ರಮೇಣ ಏರಿತು. 1714ರಲ್ಲಿ ಬೋಯರ್ ರೈತರು ಬಲು ಸುಲಭ ಬೆಲೆಗೆ 2429 ಹೆಕ್ಟರ್ ಭೂಮಿಯನ್ನು ಗುತ್ತಿಗೆಗೆ ಪಡೆದಿದ್ದರು; ಭೂಮಿಯ ಫಲವತ್ತು ಕಡಿಮೆಯಾದಾಗ ತಮ್ಮ ಭೂಮಿಯನ್ನು ಮಾರಿ ಫಲವತ್ತಾದ ಜಮೀನುಗಳನ್ನು ಹುಡುಕಿಕೊಂಡು ಹೋಗುತ್ತಿದ್ದರು. 1794ರಲ್ಲಿ ಫ್ರೆಂಚ್ ಕ್ರಾಂತಿ ಪಡೆಗಳು ಹಾಲೆಂಡಿನ ಮೇಲೆ ಯುದ್ಧ ಘೋಷಿಸಿದಾಗ ಡಚ್ ದೊರೆ ವಿಲಿಯಂ ಆಫ್ ಆರೆಂಜ್ ಇಂಗ್ಲೆಂಡಿಗೆ ಓಡಿದ. ಈ ಸಂಧಿಯನ್ನು ಸಾಧಿಸಿ ಬ್ರಿಟಿಷರು ಡಚ್ ದೊರೆಯಿಂದ ಸನ್ನದು ಪಡೆದು 1795ರಲ್ಲಿ ಕೇಪ್ ಟೌನ್ ನಗರವನ್ನು ಆಕ್ರಮಿಸಿಕೊಂಡರು. 7 ವರ್ಷಗಳ ಕಾಲ ಬ್ರಿಟಿಷರು ಆ ನಗರದ ಆಡಳಿತ ವಹಿಸಿದ್ದು, 1803ರಲ್ಲಿ ಫ್ರೆಂಚರೊಂದಿಗೆ ಯುದ್ಧ ಪ್ರಾರಂಭವಾದ ಕಾರಣ ತಮ್ಮ ದೇಶಕ್ಕೆ ಹಿಂದಿರುಗಿದರೂ ಕೊನೆಗೆ 1814ರಲ್ಲಿ ಆದ ಒಪ್ಪಂದದ ಮೇರೆಗೆ ಕೇಪ್ ಟೌನ್ ಬ್ರಿಟಿಷರಿಗೆ ಸೇರಿತು.

ಕೇಪ್ ಪ್ರಾಂತ್ಯದಲ್ಲಿ ಬ್ರಿಟಿಷರು ತಮ್ಮ ಆಡಳಿತ ಪದ್ಧತಿಯನ್ನು ತಂದು ಸಂಚಾರ ನ್ಯಾಯಾಲಯಗಳನ್ನು ಸ್ಥಾಪಿಸಿದರು. ಲಂಡನ್ ಮಿಷನ್ ಸೊಸೈಟಿಯ ಪಾದ್ರಿಗಳು ಕ್ರೈಸ್ತಧರ್ಮದ ಪ್ರಚಾರಕ್ಕೆ ಬಂದರು. 1834ರಲ್ಲಿ ಗುಲಾಮಗಿರಿಯನ್ನು ರದ್ದು ಮಾಡಿದರು. ಭೂಮಿಯನ್ನು ಹರಾಜು ಮೂಲಕ ವಿಲೇ ಮಾಡುವ ಪದ್ಧತಿಯನ್ನು ತಂದರು. ಅವರ ಈ ಎಲ್ಲ ಕ್ರಮಗಳೂ ಬೋಯರರಿಗೆ ಅಡ್ಡಿಗಳಾಗಿದ್ದವು. ಅತೃಪ್ತರಾದ ಬೋಯರರು 1834ರ ಅನಂತರ ತಂಡತಂಡಗಳಲ್ಲಿ ಒಳನಾಡಿಗೆ ವಲಸೆ ಹೋಗಲಾರಂಭಿಸಿದರು. ಬೋಯರರ ಈ ಸಂಚಾರವನ್ನು ದಕ್ಷಿಣ ಆಫ್ರಿಕದ ಇತಿಹಾಸದಲ್ಲಿ ಮಹಾವಲಸೆ ಎಂದು ಕರೆದಿದೆ. ಟೇಬಲ್ ಕೊಲ್ಲಿಯಿಂದ ಹೀಗೆ ಸಾಗಿದ ಬೋಯರ್ ಜನ ಮೂರು ತಂಡಗಳಾಗಿ ವ್ಯವಸ್ಥೆಗೊಂಡು ವಿವಿಧ ಪ್ರದೇಶಗಳಲ್ಲಿ ನೆಲಸಲು ಯತ್ನಿಸಿದರು. ಅಲ್ಲಿದ್ದ ಜನರೊಂದಿಗೆ ಘರ್ಷಣೆಗಳು ಸಂಭವಿಸಿದುವು.

ಕೇಪ್ ಪ್ರಾಂತ್ಯದಲ್ಲಿ ಬ್ರಿಟಿಷ್ ಕಾರ್ಯನೀತಿಯಿಂದ ಬೋಯರ್ ಯುದ್ಧ ಪ್ರಾಪ್ತವಾಯಿತು. ಬೋಯರ್ ಜನರಿಗೂ ಬ್ರಿಟಿಷರಿಗೂ ಚಿನ್ನ ಮತ್ತು ವಜ್ರದ ಹೊಸ ಗಣಿಗಳ ಬಗ್ಗೆ ವೈಷಮ್ಯ ಹೆಚ್ಚುತ್ತಿದ್ದ ವೇಳೆಯಲ್ಲಿ ಜರ್ಮನರು ದಕ್ಷಿಣ ಆಫ್ರಿಕಕ್ಕೆ ಬಂದು ಉತ್ತರದ ಮಾರ್ಗಗಳನ್ನು ತಡೆಗಟ್ಟಿದರು ಹಾಗೂ ಭಾರತ ಮತ್ತು ಕೇಪ್ ನಡುವಣ ಬ್ರಿಟಿಷರ ಸಮುದ್ರಮಾರ್ಗಕ್ಕೆ ಅಡಚಣೆಯನ್ನುಂಟು ಮಾಡಿದರು. 1884ರಲ್ಲಿ ಅವರು ಲುಡ್‍ರಿಡ್ಜ್ ಕೊಲ್ಲಿಯನ್ನು ಆಕ್ರಮಿಸಿಕೊಂಡು, ನೈಋತ್ಯ ಆಫ್ರಿಕವನ್ನು ತಮ್ಮ ಪೋಷಿತ ಸಂಸ್ಥಾನವನ್ನಾಗಿ ಮಾಡಿಕೊಂಡರು. ಟ್ರಾನ್ಸ್‍ವಾಲಿನ ಡಚ್ (ಬೋಯರ್) ಪ್ರೆಸಿಡೆಂಟ್ ಪಾಲ್ ಕ್ರೂಜರ್ ಜರ್ಮನರೊಂದಿಗೆ ಸ್ನೇಹದಿಂದ ವರ್ತಿಸುತ್ತಿದ್ದುದು ಜರ್ಮನರ ಆಕಾಂಕ್ಷೆಗಳಿಗೆ ಅನುಕೂಲವಾಗಿಯೂ ಬ್ರಿಟಿಷರ ಕಾರ್ಯನೀತಿಗೆ ವಿರುದ್ಧವಾಗಿಯೂ ಇತ್ತು. 1890–96ರ ತನಕ ಕೇಪ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿದ್ದ ಸಿಸಿಲ್ ಜಾನ್ ರೋಡ್ಸ್, ಬ್ರಿಟಿಷರು ಆಫ್ರಿಕದಲ್ಲಿ ವ್ಯಾಪಿಸುವುದಕ್ಕೆ ಬೆಂಬಲವಿತ್ತ. ಅವನ ಪ್ರಯತ್ನಗಳಿಂದ ಈಗಿನ ರೊಡೀಷಿಯ ಮೊದಲಾದ ಪ್ರಾಂತ್ಯಗಳು ಬ್ರಿಟಿಷರ ಅಧೀನವಾಗಿ, ಪಾಲ್ ಕ್ರೂಜರನ ಟ್ರಾನ್ಸ್‍ವಾಲಿಗೂ ಜರ್ಮನರು ವಶಪಡಿಸಿಕೊಂಡಿದ್ದ ಪ್ರದೇಶಗಳಿಗೂ ನಡುವೆ ಸಂಪರ್ಕ ಕಡಿದುಹೋಯಿತು. ಗೆದ್ದುಕೊಂಡ ಹೊಸ ರಾಜ್ಯಗಳ ಬಗ್ಗೆ ರೋಡ್ಸ್ ಬ್ರಿಟಿಷ್ ದೊರೆಯಿಂದ ಸನ್ನದನ್ನು ಪಡೆದುಕೊಂಡ. 1895ರಲ್ಲಿ ಪರಕೀಯರು (ಬ್ರಿಟಿಷರು) ಅಧಿಕ ಸಂಖ್ಯೆಯಲ್ಲಿ ಟ್ರಾನ್ಸ್‍ವಾಲನ್ನು ಪ್ರವೇಶಿಸಿದರು. ಅವರ ಸಂಖ್ಯೆ ಬೋಯರ್ ಜನರ ಸಂಖ್ಯೆಗಿಂತಲೂ ಹೆಚ್ಚಾಗಿತ್ತು. ಇಷ್ಟಾದರೂ ಪಾಲ್ ಕ್ರೂಜರ್ ಪರಕೀಯರಿಗೆ ಟ್ರಾನ್ಸ್‍ವಾಲಿನಲ್ಲಿ ಮತದಾನದ ಹಕ್ಕನ್ನು ಕೊಡಲಿಲ್ಲ. 1892ರಲ್ಲಿ ಅವನು ನ್ಯಾಷನಲ್ ಯೂನಿಯನ್ ಮೂಲಕ ಬ್ರಿಟಿಷರು ಒಪ್ಪಿಸಿದ ಬೇಡಿಕೆಗಳನ್ನು ನಿರಾಕರಿಸಲು ಕೇಪ್ ಪ್ರಾಂತ್ಯದ ಬ್ರಿಟಿಷ್ ಸರ್ಕಾರ ಟ್ರಾನ್ಸ್‍ವಾಲನ್ನು ವಶಪಡಿಸಿಕೊಳ್ಳಲು ನಿರ್ಧರಿಸಿತು. ರೋಡ್ಸನ ನೆರವಿನಿಂದ ಕೇಪ್ ಸರ್ಕಾರ ಆಯುಧಗಳನ್ನು ರಹಸ್ಯವಾಗಿ ಟ್ರಾನ್ಸ್‍ವಾಲಿಗೆ ಸಾಗಿಸಿತು. ಈ ಸಂಚು 1895ರಲ್ಲಿ ವಿಷಮಘಟ್ಟ ಮುಟ್ಟಿ ಜೊಹಾನ್ಸ್‍ಬರ್ಗ್‍ನಲ್ಲಿ ದಂಗೆ ಎದ್ದಿತು. ಸಿಸಿಲ್ ರೋಡ್ಸ್ ಕಳುಹಿಸಿದ ಸೈನ್ಯ ಮುನ್ನುಗ್ಗಿತು. ಆದರೆ ಈ ದಾಳಿ ವಿಫಲಗೊಂಡು ಬ್ರಿಟಿಷರು ಸೋತರು. ಬೋಯರ್ ಜನ ತಮ್ಮ ಸೈನ್ಯವನ್ನು ಬಲಗೊಳಿಸಿಕೊಂಡರು. ಕೇಪ್ ಪ್ರಾಂತ್ಯದ ರಾಜಕೀಯದಿಂದ ಟ್ರಾನ್ಸ್‍ವಾಲ್ ಬಿಕ್ಕಟ್ಟಿಗೆ ಒಳಗಾಯಿತು. ಕೇಪ್ ಪ್ರಾಂತ್ಯದ ಬ್ರಿಟಿಷ್ ಹೈ ಕಮಿಷನರ್ ಸರ್ ಆಲ್ಫ್ರೆಡ್ ಮಿಲ್ನರ್, ಬೋಯರ್ ಯುದ್ಧಗಳಲ್ಲಿ ಪ್ರಮುಖ ಪಾತ್ರ ವಹಿಸಿದ. ಮಿಲ್ನರ್ ಮತ್ತು ಕ್ರೂಜರರ ನಡುವಣ ಮಾತುಕತೆಗಳು ವಿಫಲಗೊಂಡವು. ಸೆಪ್ಟೆಂಬರ್ 1899ರಲ್ಲಿ ಕ್ರೂಜರ್ ಸೈನ್ಯಗಳನ್ನು ಜಮಾಯಿಸಿದ. ಬ್ರಿಟಿಷರ ಮತದಾನದ ಹಕ್ಕು ಟ್ರಾನ್ಸ್‍ವಾಲ್ ಸರ್ಕಾರಕ್ಕೆ ಸೇರಿದ್ದೆಂದೂ, ಇತ್ತೀಚೆಗೆ ಬಂದ ಬ್ರಿಟಿಷ್ ಸೈನ್ಯವನ್ನು ಟ್ರಾನ್ಸ್‍ವಾಲಿನಿಂದ ವಾಪಸು ಕರೆಸಿಕೊಳ್ಳಬೇಕೆಂದೂ ಕ್ರೂಜರ್ ಮಿಲ್ಲರನಿಗೆ ಸೂಚನೆ ಕೊಟ್ಟ. ಬ್ರಿಟಿಷರು ಈ ಸೂಚನೆಯನ್ನು ನಿರಾಕರಿಸಲು ಬೋಯರ್ ಸೈನ್ಯ ಟ್ರಾನ್ಸ್‍ವಾಲಿನಿಂದ ಹೊರಟು ಕೇಪ್ ಪ್ರಾಂತ್ಯದ ಮೇಲೆ ದಾಳಿ ನಡೆಸಿತು.

ಬೋಯರ್ ಸೈನ್ಯದ ನಾಯಕರಾದ ಜನರಲ್ ಪಿಯಟ್ ಮತು ಪಿಯಟ್ ಕ್ರೋಂಜೆ ಇವರು ನೇಟಾಲಿನ ಲೇಡಿಸ್ಮಿತ್ ದಾಳಿ, ಕಿಂಬರ್ಲಿ ದಾಳಿ ಮತು ಕೇಪ್ ಅಂಚಿನ ಮಫೆಕಿಂಗ್ ಪಟ್ಟಣದ ದಾಳಿಗಳಲ್ಲಿ ಸೋತರು. ಬ್ರಿಟಿಷ್ ಸೈನ್ಯದ ಬುಲ್ಲರ್ ಮತ್ತು ಜನರಲ್ ವಿಲಿಯಂ ಗಟಕ್ರೆ ಸಹ ಬೋಯರರನ್ನು ಎದುರಿಸಲಾರದೆ ಹಿಮ್ಮೆಟ್ಟಿದರು. ಬ್ರಿಟಿಷ್ ಸೋಲುಗಳನ್ನು ತಿದ್ದಲು ಬ್ರಿಟಿಷರು ಫೀಲ್ಡ್ ಮಾರ್ಷಲ್ ಲಾರ್ಡ್ ರಾಬರ್ಟ್ಸನನ್ನು ಕಳುಹಿಸಿದರು. ರಾಬರ್ಟ್ಸ್ 1900ರಲ್ಲಿ ಕಿಂಬರ್ಲಿ ಪಟ್ಟಣವನ್ನು ಆಕ್ರಮಿಸಿಕೊಂಡ. ಬೋಯರ್ ನಾಯಕ ಜನರಲ್ ಕ್ರೋಂಜೆ ತನ್ನ 4000 ಸೈನಿಕರೊಡನೆ ಪಾರ್ಡೆಬರ್ಗ್ ಬಳಿ ಸೆರೆಯಾದ. ಮಾರ್ಚ್ 13ರಲ್ಲಿ ರಾಬರ್ಟ್ಸ್ ಆರೆಂಜ್ ಫ್ರೀ ಸ್ಟೇಟಿನ ರಾಜಧಾನಿ ಬ್ಲೋಯಂಫಾನ್‍ಟೇನ್ ನಗರವನ್ನು ಹಿಡಿದ. ತರುವಾಯ ಲೇಡಿಸ್ಮಿತ್ ನಗರ ವಶವಾಗಿ ಬೋಯರ್ ಜನ ನೇಟಾಲ್ ಪ್ರಾಂತ್ಯವನ್ನು ಬಿಟ್ಟು ಹೊರಟರು. ಜೋಹಾನ್ಸ್‍ಬರ್ಗ್ ಮತ್ತು ಟ್ರಾನ್ಸ್‍ವಾಲಿನ ರಾಜಧಾನಿ ಪ್ರಿಟೋರಿಯ ಸಹ ರಾಬರ್ಟ್ಸ್‍ನ ವಶವಾದುವು, 1900ರ ಸೆಪ್ಟೆಂಬರ್ ತಿಂಗಳಲ್ಲಿ ಟ್ರಾನ್ಸ್‍ವಾಲ್ ರಾಜ್ಯವನ್ನು ಬ್ರಿಟಿಷರು ಪೂರ್ಣವಾಗಿ

ಆಕ್ರಮಿಸಿಕೊಂಡರು. ಪಾಲ್ ಕ್ರೂಜರ ವೃದ್ಧಾಪ್ಯದಿಂದ ಕಾಯಿಲೆಗೆ ತುತ್ತಾಗಿ ಪೋರ್ಚುಗೀಸ್ ಪೂರ್ವ ಆಫ್ರಿಕ ಗಡಿಯನ್ನು ಪ್ರವೇಶಿಸಿ ಅಲ್ಲಿಂದ ಡಚ್ ಹಡಗೊಂದರಲ್ಲಿ ಯೂರೋಪಿಗೆ ಹಿಂದಿರುಗಿದ. ತರುವಾಯ 18 ತಿಂಗಳ ಕಾಲ ಸಣ್ಣಪುಟ್ಟ ಘರ್ಷಣೆಗಳು ನಡೆದು 31, ಮೇ 1902ರ ವೆರೀಂಜಿಂಗ್ ಕೌಲಿನಿಂದ ಕೇಪ್ ಪ್ರಾಂತ್ಯ ಹೂಡಿದ ಬೋಯರ್ ಯುದ್ಧ ಕೊನೆಗೊಂಡಿತು. ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀ ಸ್ಟೇಟ್‌ಗಳೆರಡೂ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟುವು.

ಬೋಯರ್ ಯುದ್ಧವನ್ನು ಇಂಗ್ಲೆಂಡಿನ ಲಿಬರಲ್ ಪಕ್ಷ ಪ್ರಾರಂಭದಿಂದಲೂ ಪ್ರತಿಭಟಿಸಿತ್ತು. ಈ ಪಕ್ಷದ ಆಡಳಿತದಲ್ಲಿ ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀ ಸ್ಟೇಟ್–ಇವುಗಳೆರಡಕ್ಕೂ ಭಾಗಶಃ ಸ್ವಯಮಾಡಳಿತವನ್ನು ಕೊಡಲಾಯಿತು. ತರುವಾಯ ದಕ್ಷಿಣ ಆಫ್ರಿಕದ ರಾಷ್ಟ್ರೀಯ ಸಭೆ ಆಕ್ಟ್ ಆಫ್ ಯೂನಿಯನ್ ರಚಿಸಿತು, ಆ ಮೇರೆಗೆ 1910ರಲ್ಲಿ ಬ್ರಿಟಿಷರ ಕೇಪ್ ಪ್ರಾಂತ್ಯ ಮತ್ತು ನೇಟಾಲ್ ಹಾಗೂ ಬೋಯರ್ ಗಣರಾಜ್ಯಗಳಾದ ಆರೆಂಜ್ ಫ್ರೀ ಸ್ಟೇಟ್ ಮತ್ತು ಟ್ರಾನ್ಸ್‌ವಾಲ್–ಇವು ದಕ್ಷಿಣ ಆಫ್ರಿಕ ಒಕ್ಕೂಟ ರಾಜ್ಯಗಳಾಗಿ ವ್ಯವಸ್ಥೆಗೊಂಡುವು. 1910ರಿಂದ ಕೇಪ್ ಪ್ರಾಂತ್ಯದ ಇತಿಹಾಸ ದಕ್ಷಿಣ ಆಫ್ರಿಕ ಒಕ್ಕೂಟದಲ್ಲಿ ವಿಲೀನಗೊಂಡಿತು. (ವಿ.ಜಿ.ಕೆ.; ಐ.ಆರ್.)

**ಕೇಪ್‌ವರ್ಡ್ ದ್ವೀಪಗಳು :** ಪಶ್ಚಿಮ ಆಫ್ರಿಕದ ತೀರದ ಬಳಿ ಇರುವ ದ್ವೀಪಸ್ತೋಮ. ವರ್ಡ್ ಭೂಶಿರಕ್ಕೆ 448 ಕಿಮೀ. ದೂರದಲ್ಲಿದೆ. ಮರುಭೂಮಿಯ ಶಿರದ ಎದುರಿಗೆ ಹಸಿರು ತುಂಬಿ ನಿಂತ ನೆಲವಾದ್ದರಿಂದ ಇದನ್ನು ಪೋರ್ಚುಗೀಸ್ ನಾವಿಕರು ಕೇಪ್ ವರ್ಡ್ ಎಂದು ಕರೆದರೆಂದು ಹೇಳಲಾಗಿದೆ. ಬಾಲಚಂದ್ರನ ಆಕಾರದಲ್ಲಿರುವ ಈ ದ್ವೀಪಸ್ತೋಮ ಉತ್ತರದಿಂದ ದಕ್ಷಿಣಕ್ಕೆ ಸುಮಾರು 272 ಕಿ.ಮೀ. ಮತ್ತು ಪೂರ್ವದಿಂದ ಪಶ್ಚಿಮಕ್ಕೆ 288 ಕಿ.ಮೀ. ಹರಡಿಕೊಂಡಿದೆ. ಉ.ಅ. 17° 13'–14° 47' ಮತ್ತು ಪ.ರೇ. 22° 40'–25° 22' ನಡುವೆ 14 ದ್ವೀಪಗಳಿಂದ ಕೂಡಿದೆ. ಇದರ ವಿಸ್ತೀರ್ಣ 4333 ಚ.ಕಿಮೀ. ಜನಸಂಖ್ಯೆ : 420979 (2006). ರಾಜಧಾನಿ : ಪ್ರೈಯಾ. ಜನಸಂಖ್ಯೆ 113664 (2006).

ಪಾಶ್ಚಾತ್ಯರು ಈ ದ್ವೀಪಗಳನ್ನು ಕಂಡುಹಿಡಿದದ್ದು ಯಾವಾಗ ಎಂಬ ಬಗ್ಗೆ ಖಚಿತವಾದ ಆಧಾರಗಳಿಲ್ಲ. ವೆನಿಷಿಯನ್ ನಾವಿಕ ಆಲ್ವೈಸ್ ಕ ದ ಮೋಸ್ತೋ ಪೋರ್ಚುಗಲ್ಲಿನ ರಾಜಕುಮಾರ ಹೆನ್ರಿಯ ಸೇವೆಯಲ್ಲಿದ್ದಾಗ–1456ರಲ್ಲಿ–ಈ ದ್ವೀಪ ಸ್ತೋಮವನ್ನು ಗುರುತಿಸಿದನೆಂದು ಹೇಳಲಾಗಿದೆ. 1460ರಲ್ಲಿ ದಿಯೋಗೋ ಗೋಮ್ಸ್ ಮತ್ತು ಆಂಟೋನಿಯೋ ದ ನೋಲ–ಇವರು ಮೈವೋ ದ್ವೀಪವನ್ನು ಗುರುತಿಸಿ ಹೆಸರಿಸಿದರು. ಅವರು ಸೌನ್ ಟ್ಯಾಗೂ ದ್ವೀಪಕ್ಕೆ ಭೇಟಿ ಕೊಟ್ಟರೆಂಬುದಂತೂ ಖಚಿತ.

ಈ ಸ್ತೋಮದ ದ್ವೀಪಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಉತ್ತರದ, ಮಾರುತಸಮ್ಮುಖ ದ್ವೀಪಗಳು ಇವು : ಬೋ ವಿಸ್ಟ, ಸಾಲ್, ಸೌನ್ ನಿಕೂಲಾವು, ಸಾಂಟಾ ಲೂಸೀಯಾ, ಸೌನ್ ವಿಸಾಂಟೆ, ಸ್ಯಾಂಟೊ ಆಂಟೌನ್, ಬ್ರಾಂಕೋ ಮತ್ತು ರಾಸೋ. ದಕ್ಷಿಣದ, ಮಾರುತವಿಮುಖ ದ್ವೀಪಗಳಿವು; ಮೈವೊ, ಸೌನ್ ಟ್ಯಾಗೂ, ಫೋಗೂ, ಬ್ರೇವಾ ಮತ್ತು ಇಲ್ಹೇವೂಸ್ ಡೂ ರಾಂಬೂ. ಇವುಗಳ ಪೈಕಿ ಹತ್ತರಲ್ಲಿ ಮಾತ್ರ ಜನವಸತಿಯಿದೆ. ಈ ದ್ವೀಪಗಳನ್ನು ಕಂಡುಹಿಡಿದಾಗ ಇವು ನಿರ್ಜನ ಪ್ರದೇಶಗಳಾಗಿದ್ದುವು. 1470ರ ಹೊತ್ತಿಗೆ ಇವುಗಳಲ್ಲಿ ಜನ ನೆಲಸಲಾರಂಭಿಸಿದರು. ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡಲು ಪೋರ್ಚುಗೀಸರು ನೀಗ್ರೋಗಳನ್ನು ತಂಡತಂಡವಾಗಿ ಕರೆತಂದರು.

ಈ ದ್ವೀಪಸ್ತೋಮದ ಎಲ್ಲ ದ್ವೀಪಗಳೂ ಅಗ್ನಿ ಪರ್ವತದಿಂದಾದವು. ಇವು ಆಳ ಕಡಲಿನಿಂದ ಪರಸ್ಪರ ಪ್ರತ್ಯೇಕಗೊಂಡಿವೆ. ಇವುಗಳ ಭೂಪ್ರದೇಶ ಬಹುಮಟ್ಟಿಗೆ ಪರ್ವತಮಯ. ಆದರೆ ಆಫ್ರಿಕಕ್ಕೆ ಹತ್ತಿರದಲ್ಲಿರುವ ಸಾಲ್, ಬೋ ವಿಸ್ಟ ಮತ್ತು ಮೈವೊ ದ್ವೀಪಗಳು ಬಹುತೇಕ ಸಮತಲ ಪ್ರದೇಶಗಳು ; ಅಲ್ಲಲ್ಲಿ ಮರಳಿನ ದಿಬ್ಬ ಮತ್ತು ಉಪ್ಪಿನ ಬೆಟ್ಟಗಳು ಕಾಣಬರುತ್ತವೆ. ಇಲ್ಲಿಯ ಮುಖ್ಯ ಶಿಖರಗಳು ಮೂರು : ಫೋಗೂ ದ್ವೀಪದಲ್ಲಿರುವ ಅಗ್ನಿಪರ್ವತದ ಕ್ಯಾನೋ (2666.6 ಮೀ.), ಸ್ಯಾಂಟೂ ಆಂಟೌನ್ ದ್ವೀಪದಲ್ಲಿರುವ ಪಾವೋ ದ ಅಸ್ಸುಕಾರ್ (2424 ಮೀ.) ಮತ್ತು ಸೌನ್ ಟ್ಯಾಗೂ ದ್ವೀಪದಲ್ಲಿರುವ ಪಿಕೋ ದ ಅಂತೋನಿಯ (2236 ಮೀ.). ಫೋಗೂ ದ್ವೀಪದ ಅಗ್ನಿಪರ್ವತ ಜೀವಂತವಾಗಿದ್ದು, ಇದು 16 ಮತ್ತು 17ನೆಯ ಶತಮಾನಗಳಲ್ಲಿ ಆಗಿಂದಾಗ್ಗೆ ಸಿಡಿದೇಳುತ್ತಿತ್ತು. ಮುಂದೆ ಇದರ ಉಪದ್ರವ ಕಡಿಮೆಯಾಯಿತಾದರೂ 1847ರಲ್ಲಿ ಇದು ಸಿಡಿದೆದ್ದಾಗ ತೀವ್ರ ಅನಾಹುತವನ್ನೇ ಉಂಟುಮಾಡಿತು. 1951ರಲ್ಲಿ ಇದು ಮತ್ತೊಮ್ಮೆ ತನ್ನ ಅಸ್ತಿತ್ವವನ್ನು ಸಾರಿತಾದರೂ ಇದರ ಉಪದ್ರವ ಅಷ್ಟೇನೂ ಗಮನಾರ್ಹವಾಗಿರಲಿಲ್ಲ. ಆಗಾಗ್ಗೆ ಭೂಕಂಪನಗಳಾದ ದಾಖಲೂ ಉಂಟು. ಕಡಲ ತೀರ ಬಹುಮಟ್ಟಿಗೆ ಬಂಡೆಗಳಿಂದ ಕುಡಿದ್ದು ತುಂಬ ಅಪಾಯಕಾರಿಯಾಗಿದೆ. ಬೋ ವಿಸ್ಟದ ಪೂರ್ವ ಕರಾವಳಿಯಲ್ಲಿ ಬಂಡೆಯ ಸಾಲುಗಳು, ಮರಳುದಿಬ್ಬಗಳು ಮತ್ತು ಮರಳುದಂಡೆಗಳು ತುಂಬಿಕೊಂಡಿವೆ.

ಕೇಪ್ ವರ್ಡ್ ದ್ವೀಪಗಳದು ಉಷ್ಣವಲಯದ ವಾಯುಗುಣ, ಸರಾಸರಿ ಉಷ್ಣತೆ 23.8° ಸೆ. ಫ್ಯಾ. ಬೇಸಗೆಯ ತಿಂಗಳುಗಳಲ್ಲಿ ಇದು 26.6° ಸೇ. ಫ್ಯಾ.–32°ಸೆ. ಫ್ಯಾ. ವರೆಗೂ ಹೋಗುವುದುಂಟು. ಮಳೆಗಾಲದ ಅವಧಿ ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ. ಮಳೆ ಮಾತ್ರ ಬಹಳ ಕಡಿಮೆ. ಈ ದ್ವೀಪಸ್ತೋಮದಲ್ಲಿಯ ಸಸ್ಯಗಳು ಬಹುಮಟ್ಟಿಗೆ ಆಫ್ರಿಕದವು. ಇದಕ್ಕೇ ವಿಶಿಷ್ಟವಾದವೆಂದು ಹೆಸರಿಸಲಾಗಿರುವ 70 ಜಾತಿಯ ಸಸ್ಯಗಳಿವೆ. ಶುಷ್ಕ ಪ್ರದೇಶಗಳಲ್ಲಿ ಸಸ್ಯಗಳು ಕಾಣಬರುವುದಿಲ್ಲವಾದರೂ, ಫಲವತ್ತಾಗಿರುವ ಕೆಲವು ಕಣಿವೆಗಳಲ್ಲಿ ಉಷ್ಣವಲಯದ ಸಸ್ಯಗಳು ಸಾಕಷ್ಟು ಸಮೃದ್ಧವಾಗಿ ಬೆಳೆದಿವೆ. ಮಾವು, ಖರ್ಜೂರ, ಕಬ್ಬು ಮುಖ್ಯವಾದವು. ಪೋರ್ಚುಗೀಸರು ತಂದು ಬೆಳೆಸಿರುವ ಮುಖ್ಯ ಆರ್ಥಿಕ ಸಸ್ಯಗಳು ಕಾಫಿ, ಹೊಗೆಸೊಪ್ಪು, ಮೆಕ್ಕೆಜೋಳ, ಹತ್ತಿ, ಕಬ್ಬು ಮತ್ತು ಕಿತ್ತಳೆ. ಸಿಂಕೋನ, ಇಂಡಿಗೋ, ಬಟಾಣಿ ಮತ್ತು ಗೆಣಸನ್ನೂ ಬೆಳೆಯಲಾಗುತ್ತಿದೆ. ಇವುಗಳಲ್ಲಿ ಹಲವು ರಫ್ತಿನ ಬೆಳೆಗಳೂ ಹೌದು.

ಪ್ರಾಣಿಗಳ ಸಂಖ್ಯೆ ತೀರ ಕಡಿಮೆ. ದೇಶೀಯ ಸ್ತನಿಗಳಂತೂ ಇಲ್ಲವೇ ಇಲ್ಲ. ದ್ವೀಪಗಳಲ್ಲಿ ಕೆಲವು ಬಗೆಯ ಹಕ್ಕಿಗಳು ಮಾತ್ರ ಕಾಣಬರುತ್ತವೆ. ಈ ದ್ವೀಪಸ್ತೋಮದ ನಿವಾಸಿಗಳು ಪಶುಪಾಲನೆಯನ್ನೂ ಕೈಗೊಂಡಿದ್ದಾರೆ. ಮೇಕೆ, ಕುದುರೆ, ಹಂದಿ ಮತ್ತು ಕತ್ತೆಗಳು ಸಾಕುಪ್ರಾಣಿಗಳು. ಕಡಲತೀರದಲ್ಲಿ ಕಡಲಾಮೆಗಳು ಹೇರಳ.

ಇಲ್ಲಿ ಹುಲ್ಲಿನ ಟೋಪಿ, ಕುಸುರಿಗೆಲಸದ ವಸ್ತ್ರ, ಹತ್ತಿಬಟ್ಟೆ ಮತ್ತು ಬ್ರಾಂದಿಗಳನ್ನು ತಯಾರಿಸಲಾಗುತ್ತವೆ. ಅನೇಕ ದ್ವೀಪಗಳಲ್ಲಿ ಉಪ್ಪಿನ ಗಣಿಗಳುಂಟು. ಮುಖ್ಯ ಧಾನ್ಯಗಳು, ಬಣ್ಣದ ವಸ್ತುಗಳು, ಮೇಕೆಯ ಚರ್ಮ, ಉಪ್ಪು, ಮದ್ಯಸಾರ ಮತ್ತು ಮೀನುಗಳನ್ನು ಪೋರ್ಚುಗಲ್ಲಿಗೂ ಆಫ್ರಿಕದ ಕರಾವಳಿಯಲ್ಲಿರುವ ಪೋರ್ಚುಗೀಸ್ ವಸಾಹತುಗಳಿಗೂ ರಫ್ತು ಮಾಡಲಾಗುತ್ತದೆ.

ಶೇ. 70ರಷ್ಟು ದ್ವೀಪನಿವಾಸಿಗಳಿಗೆ ಕೃಷಿಯೇ ಜೀವನೋಪಾಯ. ಈ ದ್ವೀಪಸ್ತೋಮಕ್ಕಿರುವ ಅಭಿಶಾಪವೆಂದರೆ ನೀರಿನ ಕೊರತೆ. ಮಳೆಯಾದ ವರ್ಷದಲ್ಲಿ ಉತ್ಪಾದನೆ ಹೆಚ್ಚಾಗಿರುತ್ತದೆಯಾದರೂ ಅನಾವೃಷ್ಟಿಯ ಭಯ ಇದ್ದೇ ಇದೆ. ಅನೇಕ ವೇಳೆ ಈ ದ್ವೀಪಸ್ತೋಮ ಮೂರು ವರ್ಷಗಳಷ್ಟು ದೀರ್ಘಕಾಲ ಅನಾವೃಷ್ಟಿಗೆ ತುತ್ತಾಗಿರುವುದೂ ಉಂಟು. ಈ ಪ್ರದೇಶ ದಿನ ಕಳೆದಂತೆಲ್ಲಾ ಶುಷ್ಕವಾಗಿ ಹೋಗುತ್ತಿರುವುದರಿಂದ ಈ ಸಮಸ್ಯೆ ಮತ್ತಷ್ಟು ತೀವ್ರವಾಗಿ ಪರಿಣಮಿಸಿದೆ. ಮೊದಲಿಗೆ ಇಲ್ಲಿ ಬಂದು ನೆಲಸಿದ ಜನ ಅರಣ್ಯನಿರ್ಮೂಲ ಕಾರ್ಯದಲ್ಲಿ ತೊಡಗಿದ್ದು ಮತ್ತು ಮೇಕೆಗಳನ್ನು ಇಲ್ಲಿ ತಂದುಬಿಟ್ಟದ್ದು ಇದಕ್ಕೆ ಕಾರಣವೆಂದು ಹೇಳಲಾಗಿದೆ. ಜಲಸಂಶೋಧನೆ ಮತ್ತು ನೀರಾವರಿ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಅರಣ್ಯಪ್ರದೇಶವನ್ನು ಹೆಚ್ಚಿಸುವ ಕಾರ್ಯಕ್ರಮವೂ ಇದರಲ್ಲಿ ಸೇರಿದೆ. ಕೆಲವು ದ್ವೀಪಗಳು ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಹಣ್ಣುಗಳ ಬೆಳೆಗೆ ಪ್ರಶಸ್ತವಾಗಿವೆಯೆಂದು ತಿಳಿದುಬಂದಿದೆ. ಆದರೆ ಸಾರಿಗೆ ಸಂಪರ್ಕ ವ್ಯವಸ್ಥೆ ಬೆಳೆದಿಲ್ಲದಿರುವುದರಿಂದ ವಾಣಿಜ್ಯ ರೂಪದಲ್ಲಿ ಲಾಭದಾಯಕವಾಗುವಂತೆ ಈ ಉದ್ಯಮವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ. ಈ ದ್ವೀಪಸ್ತೋಮದಲ್ಲಿ ಇರುವುದೇ ಒಟ್ಟು ಸುಮಾರು 544 ಕಿ.ಮೀ.ಗಳಷ್ಟು ಉದ್ದದ ರಸ್ತೆಗಳು. ಸಾಲ್ ದ್ವೀಪದಲ್ಲಿರುವ ಎಸ್ಪಾರ್‌ಗೋಸ್ ಮುಖ್ಯ ವಿಮಾನ ನಿಲ್ದಾಣ. ಮಿಂಡೆಲೋ ಮುಖ್ಯ ಬಂದರು.

ಈ ದ್ವೀಪಸ್ತೋಮದ ನಿವಾಸಿಗಳು ನೀಗ್ರೋಗಳಿಂದ ಸರಳೀಕೃತವಾಗಿರುವ ಪೋರ್ಚುಗೀಸ್ ಭಾಷೆಯನ್ನು ಅಥವಾ ಪೋರ್ಚುಗೀಸಿನ ಅಪಭ್ರಂಶರೂಪವೊಂದನ್ನು ಬಳಸುತ್ತಿದ್ದಾರೆ. ಇದನ್ನು ಲಿಂಗ್ವಾ ಕ್ರಿಯೋಲಾ ಎನ್ನುತ್ತಾರೆ. ಇಲ್ಲಿಯ ದ್ವೀಪಗಳು ಮತ್ತು ಕಿರುದ್ವೀಪಗಳು ಸಮುದ್ರ ಓಣಿಗಳಿಂದ ಪರಸ್ಪರ ಬೇರ್ಪಟ್ಟಿರುವುದರಿಂದ ಹಲವು ಉಪಭಾಷೆಗಳು ಬೆಳೆಯುತ್ತಿವೆ. ಇಲ್ಲಿರುವವರು ಮುಖ್ಯವಾಗಿ ರೋಮನ್ ಕಥೋಲಿಕರು.

ರೈಬೀರಿಯ ಗ್ರಾಂಡ್ ಇದರ ಮೊದಲ ರಾಜಧಾನಿ. 1462ರಲ್ಲಿ ಇದು ರಾಜಧಾನಿಯಾಗಿತ್ತು. 1585ರಲ್ಲಿ ಮತ್ತು 1592ರಲ್ಲಿ ಎರಡು ಬಾರಿ ಫ್ರಾನ್ಸಿಸ್ ಡ್ರೇಕ್ ಇದರ ಮೇಲೆ ದಾಳಿ ಮಾಡಿದ. ಇದನ್ನು ಆಕ್ರಮಿಸಿಕೊಳ್ಳಲು ಡಚ್ಚರು ಒಮ್ಮೆ ವಿಫಲ ಪ್ರಯತ್ನ ನಡೆಸಿದರು. ರಾಜಧಾನಿಯ ಸಂಪದ್ಯುಕ್ತತೆಯೇ ಈ ಆಕ್ರಮಣಗಳಿಗೆ ಕಾರಣ. 1712ರಲ್ಲಿ ಮತ್ತೆ ಇದು ಫ್ರೆಂಚರ ದಾಳಿಗೆ ತುತ್ತಾಯಿತು. ಅನಂತರ ಈ ನಗರವನ್ನು ವಿಸರ್ಜಿಸಲಾಯಿತು. ಪ್ರೈಯಾ ಈಗಿನ ರಾಜಧಾನಿ.

ಪೋರ್ಚುಗಲ್ಲಿನ ದೊರೆಯಾದ ಐದನೆಯ ಆಲ್ಫಾನ್ಸೋ ಈ ದ್ವೀಪಸ್ತೋಮವನ್ನು ತನ್ನ ಸೋದರ ರಾಜಕುಮಾರ ಫರ್ಡಿನೆಂಡನಿಗೆ ಬಳುವಳಿಯಾಗಿ ಕೊಟ್ಟ. 1466ರಲ್ಲಿ ಇಲ್ಲಿಯ ನಿವಾಸಿಗಳಿಗೆ ಗಿನಿಯ ಗುಲಾಮರ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಅಧಿಕಾರ ದೊರೆಯಿತು. 1470ರಲ್ಲಿ ಫರ್ಡಿನೆಂಡ್ ತೀರಿಕೊಂಡ ತರುವಾಯ ಈ ಅಧಿಕಾರಗಳೆಲ್ಲ ದೊರೆಗೇ ಹಿಂದಿರುಗಿದುವು. ಮುಂದೆ ಎರಡನೆಯ ಜಾನ್ ರಾಜಕುಮಾರ ಮ್ಯಾನುಯೆಲ್ಗೆ ಇದು ಬಳುವಳಿಯಾಗಿ ಬಂತು. ಸ್ವಲ್ಪ ಕಾಲಾನಂತರ (1495) ಮ್ಯಾನುಯೆಲ್ ಪಟ್ಟಕ್ಕೆ ಬಂದಾಗ ಈ ದ್ವೀಪಸ್ತೋಮ ರಾಜ್ಯಾಧಿಪತ್ಯದ ಅಂಗವೇ ಆಗಿ ಪರಿಣಮಿಸಿತು. ಗುಲಾಮರ ವ್ಯಾಪಾರ ಉಚ್ಛ್ರಾಯಸ್ಥಿತಿ ತಲಪಿದಂತೆ ಇದರ ಪ್ರಾಮುಖ್ಯವೂ ಹೆಚ್ಚಿತು.

1595ರ ಹೊತ್ತಿಗೆ ಈ ದ್ವೀಪಸ್ತೋಮದ ವ್ಯವಹಾರಗಳಿಗೆಂದೇ ಒಬ್ಬ ಗವರ್ನರನ್ನು ನೇಮಿಸಲಾಯಿತು. ಗುಲಾಮರ ವ್ಯಾಪಾರ ಇಳಿಮುಖವಾಗುತ್ತ ಬಂದು, 1876ರ ಹೊತ್ತಿಗೆ ಅದು ಬಹಿಷ್ಕೃತವಾಗಿ ಪರಿಣಮಿಸಿದಾಗ ಈ ದ್ವೀಪಸ್ತೋಮದ ಪ್ರಾಮುಖ್ಯ ಕಡಿಮೆಯಾಯಿತು. ಇದರ ಭೌಗೋಳಿಕ ನೆಲೆಯಿಂದಾಗಿ ಇದಕ್ಕೆ 19ನೆಯ ಶತಮಾನದ ಹೊತ್ತಿಗೆ ಮತ್ತೆ ಪ್ರಾಮುಖ್ಯ ಬಂತು. ಯೂರೋಪ್, ದಕ್ಷಿಣ ಅಮೆರಿಕ ಮತ್ತು ದಕ್ಷಿಣ ಆಫ್ರಿಕಗಳ ನಡುವಣ ಸಮುದ್ರ ಮಾರ್ಗದಲ್ಲಿ ಇದು ಇರುವುದರಿಂದ ಇಲ್ಲಿ ಕಲ್ಲಿದ್ದಲು ಪೂರೈಕೆ ಮತ್ತು ಕೇಬಲ್ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿದೇಶಗಳಿಗೆ ವಲಸೆ ಹೋದ ಇಲ್ಲಿಯ ನೆಲಸಿಗರು ತಮ್ಮ ತಾಯ್ನಾಡಿಗೆ ಕಳುಹಿಸುತ್ತಿದ್ದ ಹಣದಿಂದಾಗಿ ಈ ದ್ವೀಪಸ್ತೋಮದ ಆರ್ಥಿಕ ಪರಿಸ್ಥಿತಿ ಬಹುಮಟ್ಟಿಗೆ ಸುಧಾರಿಸಿದೆ. ಒಂದನೆಯ ಮಹಾಯುದ್ಧದ ಅನಂತರ ವಲಸೆಯ ನಿರ್ಬಂಧಗಳು ಹೆಚ್ಚಿದುದರಿಂದಲೂ ಪೋರ್ಚುಗೀಸ್ ಸರ್ಕಾರದ ನೆರವು ಮಿತಗೊಂಡದ್ದರಿಂದಲೂ ಇದರ ಪ್ರಗತಿ ಕುಂಠಿತಗೊಂಡಿತು. 1951ರ ಬಳಿಕ ಈ ವಸಾಹತಿನ ಸ್ಥಾನಮಾನಗಳು ಕೊಂಚ ಬದಲಾದುವು. ಇದನ್ನು ಸಮುದ್ರಾಂತರ ಪ್ರಾಂತ್ಯವೆಂದು ಪರಿಗಣಿಸಲಾಯಿತು. ಇದರ ಆಡಳಿತ ನಿರ್ವಹಣೆಗಾಗಿ ಲಿಸ್ಬನ್‌ನಲ್ಲಿ ಗವರ್ನರನ್ನು ನೇಮಿಸಲಾಯಿತು. ಇದಕ್ಕೆ ಸ್ವಲ್ಪಮಟ್ಟಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡಲಾಯಿತು.

ಆಡಳಿತದ ಅನುಕೂಲಕ್ಕಾಗಿ ಈ ದ್ವೀಪಗಳನ್ನು 12 ಜಿಲ್ಲೆಗಳನ್ನಾಗಿಯೂ 31 ಉಪಜಿಲ್ಲೆಗಳನ್ನಾಗಿಯೂ ವಿಭಾಗಿಸಲಾಗಿದೆ. (ಪಿ.ಜಿ.ಡಿ.)

**ಕೇಬಲ್ ವರ್ಗಾವಣೆ :** ಒಂದು ದೇಶದಲ್ಲಿರುವ ಬ್ಯಾಂಕು ಇನ್ನೊಂದು ದೇಶದಲ್ಲಿರುವ ಬ್ಯಾಂಕಿನಿಂದ ಕೇಬಲ್ ಮೂಲಕ ಪಡೆದ ಸೂಚನೆಗೆ ಅನುಗುಣವಾಗಿ ಮಾಡಿದ ಪಾವತಿ (ಕೇಬಲ್ ಟ್ರಾನ್ಸ್‌ಫರ್). ಎಂದರೆ ಇದು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಕೇಬಲ್‌ಗ್ರಾಂ ಮೂಲಕ ಹಣದ ತತ್‌ಕ್ಷಣದ ವರ್ಗಾವಣೆ. ಉದಾಹರಣೆಗೆ, ದೆಹಲಿಯಲ್ಲಿರುವ ಒಬ್ಬ ವ್ಯಕ್ತಿ ಲಂಡನಿನಲ್ಲಿರುವ ಒಬ್ಬ ವ್ಯಕ್ತಿಗೆ ಒಂದು ನಿರ್ದಿಷ್ಟ ಮೊಬಲಗನ್ನು ತಲಪಿಸಲಿಚ್ಛಿಸಿದಲ್ಲಿ, ದೆಹಲಿಯಲ್ಲಿಯ ಒಂದು ವಿದೇಶೀ ವಿನಿಮಯ ಬ್ಯಾಂಕಿನ ಮೂಲಕ ಹೀಗೆ ಮಾಡಬಹುದು. ವರ್ಗಾವಣೆದಾರ ಯಥಾಯುಕ್ತವಾದ ಮೊಬಲಗನ್ನು ತೇವಣಿ ಮಾಡಿದ ಕೂಡಲೇ ದೆಹಲಿಯ ಬ್ಯಾಂಕು ತನ್ನ ಲಂಡನ್ ಶಾಖೆಗೆ ಅಥವಾ ಸಂವಾದಿಗೆ (ಕರೆಸ್ಪಾಂಡೆಂಟ್) ಕೇಬಲ್ ಕಳಿಸಿ, ಸೂಚಿತವಾದ ಮೊಬಲಗನ್ನು ಆ ನಗರದಲ್ಲಿರುವ ಪ್ರಾಪ್ತಿಕರ್ತನಿಗೆ(ಪೇಯೀ) ಕೂಡಲೇ ಕೊಡಬೇಕೆಂದು ತಿಳಿಸುತ್ತದೆ. ಹಣಕ್ಕಾಗಿ ಪ್ರಾಪ್ತಿಕರ್ತ ಎಲ್ಲಿ ಯಾವ ಸಮಯದಲ್ಲಿ ಹಾಜರಾಗಬೇಕೆಂಬುದನ್ನು ಅವನಿಗೆ ಲಂಡನಿನ ಅಭಿಕರ್ತ (ಏಜೆಂಟ್) ಸಾಮಾನ್ಯವಾಗಿ ತಿಳಿಯಹೇಳುತ್ತಾನೆ. ಒಮ್ಮೊಮ್ಮೆ ದೆಹಲಿಯ ಬ್ಯಾಂಕೇ ಕೇಬಲ್ ಮೂಲಕ ತಿಳಿಸುವುದೂ ಉಂಟು.

ಅಗತ್ಯವಾದ ಹಣವನ್ನು ಪಡೆದುಕೊಳ್ಳಲು ಮತ್ತು ವ್ಯವಹಾರದಲ್ಲಿ ಅಲ್ಪ ಲಾಭವನ್ನೂ ಗಳಿಸಿಕೊಳ್ಳಲು ಸಾಕಾಗುವಂತೆ ಕೇಬಲ್ ವಿನಿಮಯದರವನ್ನು ನಿಶ್ಚಯಿಸಲಾಗುತ್ತದೆ. ಈ ದರ ಚೆಕ್ ಅಥವಾ ವಾಯಿದೆ ದರಕ್ಕಿಂತ ಅಧಿಕವಾಗಿರುತ್ತದೆ. ಏಕೆಂದರೆ ಕೇಬಲ್ ವರ್ಗಾವಣೆಯಲ್ಲಿ ಅಭಿಕರ್ತ ಅಥವಾ ಸಂವಾದಿ ತತ್‌ಕ್ಷಣವೇ ಹಣವನ್ನು ಪಾವತಿ ಮಾಡಬೇಕು. ಆದರೆ ವರ್ಗಾವಣೆ ಅಥವಾ ವಾಯಿದೆ ವರ್ಗಾವಣೆಯಲ್ಲಿ ಹೀಗಲ್ಲ. ವರ್ಗಾವಣೆಯ ಮಾರಾಟ ಆದ ಅನಂತರವೂ ಸ್ವಲ್ಪಕಾಲ ಅವನು ವಿದೇಶೀ ಹಣವನ್ನು ಬಳಸಿಕೊಳ್ಳಲು ಅವಕಾಶವುಂಟು. ಕೇಬಲ್ ಬಂದ ಅನಂತರ ಹಣ ಪಾವತಿ ಮಾಡಬೇಕೆಂಬುದು ಕೇಬಲ್ ವರ್ಗಾವಣೆಯ ನಿಯಮ. ಆದರೆ ಇದಕ್ಕೂ ಸ್ವಲ್ಪಕಾಲ ಹಿಡಿಸುತ್ತದೆ. ಪ್ರಾಪ್ತಿಕರ್ತನಿಗೆ ತಿಳಿವಳಿಕೆ ಕಳಿಸುವುದಕ್ಕೂ ಕಾಲ ಬೇಕು. ಭಾರತ–ಇಂಗ್ಲೆಂಡ್‌ಗಳ ನಡುವಣ ವ್ಯವಹಾರಗಳಲ್ಲಿ ವರ್ಗಾವಣೆಯ ಮಾರಾಟ ಆದ ಮರುದಿನ ಪಾವತಿ ಮಾಡುವುದು ವಾಡಿಕೆ. (ಸಿ.ಸಿ.ಪಿ.)

**ಕೇಮಾನ್ ಮೊಸಳೆ :** ಮಧ್ಯ ಹಾಗೂ ದಕ್ಷಿಣ ಅಮೆರಿಕಗಳ ನದಿಗಳಲ್ಲಿ ವಾಸಿಸುವ ಒಂದು ಜಾತಿಯ ಮೊಸಳೆ. ಕ್ರಾಕೊಡಿಲಿಡೇ ಕುಟುಂಬಕ್ಕೆ ಸೇರಿದೆ. **'ಕೇಮನ್'** ಪದ ಸ್ಪಾನಿಷ್ ಭಾಷೆಯಾಗಿದ್ದು ಇದರ ಅರ್ಥ ಅಲಿಗೇಟರ್ ಎಂದಾಗಿದೆ. **'ಕೇಮನ್'** ಪದ ಸ್ಪಾನಿಷ್ ಭಾಷೆಯದು. ಇದರ ಅರ್ಥ ಆಲಿಗೇಟರ್ ಎಂದು. ಈ ಜಾತಿಯ ಶಾಸ್ತ್ರೀಯ ಹೆಸರು ಕೇಮಾನ್ (ಪರ್ಯಾಯ ನಾಮ, ಮೆಲನೋಸೂಕಸ್) ಇದರಲ್ಲಿ 5 ಪ್ರಭೇದಗಳಿವೆ. ಬಹುಪಾಲು ಪ್ರಭೇದಗಳ ಉದ್ದ ಸು. 2.4ಮೀ. ಬ್ರಜಿಲ್ ಮತ್ತು ಗಯಾನಗಳಲ್ಲಿ ಕಾಣಬರುವ ನೈಜರ್ ಎಂಬ ಪ್ರಭೇದ (ಕಪ್ಪು ಕೇಮಾನ್) ಸು. 4.8ಮೀಗಳಿಗೂ ಹೆಚ್ಚು ಉದ್ದ ಬೆಳೆಯುವುದುಂಟು. ಚಿಕ್ಕದಾದ ಹಾಗೂ ಮೊಂಡಾದ ಮೂತಿ, ಬಾಯಿ ಮುಚ್ಚಿಕೊಂಡಾಗ ಕೆಳದವಡೆಯ ನಾಲ್ಕನೆಯ ಹಲ್ಲು ಮೇಲ್ದವಡೆಯಲ್ಲಿರುವ ಕುಳಿಯಲ್ಲಿ ಹುದುಗಿರುವುದು–ಮುಂತಾದ ಲಕ್ಷಣಗಳಲ್ಲಿ ಕೇಮಾನ್ ಮೊಸಳೆ ಅಲಿಗೇಟರ್ ಮೊಸಳೆಯನ್ನು ಹೋಲುತ್ತದೆ. ಆದರೆ ಕೇಮಾನ್ ಮೊಸಳೆಯ ನಾಸಿಕ ಮೂಳೆಗಳು ಮುಂಚಾಚಿಕೊಂಡಿವೆ. ಅಲಿಗೇಟರ್‌ನಲ್ಲಿ ಈ ಲಕ್ಷಣ ಇಲ್ಲ.

ಕೇಮಾನ್ ಮೊಸಳೆಯ ಮೊಟ್ಟೆಗಳನ್ನು ಸುರಿನಮ್ ದ್ವೀಪವಾಸಿಗಳು ಆಹಾರವಾಗಿ ಬಳಸುತ್ತಾರೆ. **(ನೋಡಿ– ಮೊಸಳೆ)** (ಎಂ.ಡಿ.ಪಿ.)

ಕೇಮಾನ್ ಮೊಸಳೆ

**ಕೇಮ್ಯಾನ್ ದ್ವೀಪಗಳು :** ಬ್ರಿಟಿಷ್ ವಸಾಹತು. ಗ್ರ್ಯಾಂಡ್ ಕೇಮ್ಯಾನ್, ಲಿಟ್ಲ್ ಕೇಮ್ಯಾನ್ ಮತ್ತು ಕೇಮ್ಯಾನ್ ಬ್ರ್ಯಾಕ್ ಎಂಬ ಮೂರು ದ್ವೀಪಗಳ ಗುಂಪು. ಕ್ಯಾರಿಬಿಯನ್ ಸಮುದ್ರದಲ್ಲಿ ವೆಸ್ಟ್ ಇಂಡೀಸ್ ಪ್ರದೇಶದಲ್ಲಿರುವ ಇವು ತಗ್ಗಾದ ಹವಳದ್ವೀಪಗಳು. ಇವುಗಳ ಒಟ್ಟು ವಿಸ್ತೀರ್ಣ 260 ಚ.ಕಿಮೀ.ಗಳ ಜನಸಂಖ್ಯೆ 45017(2005). ಇವರಲ್ಲಿ ಐದನೆಯ ನಾಲ್ಕರಷ್ಟು ಮಂದಿ ಗ್ರಾಂಡ್ ಕೇಮ್ಯಾನ್‌ನಲ್ಲಿ ವಾಸಿಸುತ್ತಾರೆ. ಗ್ರಾಂಡ್ ಕೇಮ್ಯಾನ್ ಜಮೈಕದಿಂದ ಪಶ್ಚಿಮ ವಾಯವ್ಯಕ್ಕೆ 304 ಕಿ.ಮೀ. ದೂರದಲ್ಲಿದೆ. ಜಾರ್ಜ್‌ಟೌನ್ ಮತ್ತು ಬಾಡೆನ್ ಟೌನ್ ಇಲ್ಲಿರುವ ಎರಡು ಪಟ್ಟಣಗಳು. ಜಾರ್ಜ್ ಟೌನ್ ರಾಜಧಾನಿ. ಗ್ರಾಂಡ್ ಕೇಮ್ಯಾನ್ 35 ಕಿಮೀ. ಉದ್ದ, 6–12 ಕಿಮೀ. ಅಗಲ ಇದೆ. ಮಿಕ್ಕೆರಡು ದ್ವೀಪಗಳು ಗ್ರಾಂಡ್ ಕೇಮ್ಯಾನ್‌ನಿಂದ ಪೂರ್ವ ಆಗ್ನೇಯಕ್ಕೆ 96 ಕಿಮೀ. ಮತ್ತು 144 ಕಿಮೀ. ನಡುವೆ ಇದೆ. ಕೇಮ್ಯಾನ್ ಬ್ರ್ಯಾಕ್ ದ್ವೀಪದ ಮಧ್ಯೆ ಒಂದು ವಿಶಿಷ್ಟವಾದ ಭಾರೀ ಸುಣ್ಣಕಲ್ಲಿನ ಮುಮ್ಮೈ ದಿಣ್ಣೆಯುಂಟು. ತೀರಗಳು ದಿಣ್ಣೆಗಳಿಂದಲೂ ಕಲ್ಲು ಬಂಡೆಗಳಿಂದಲೂ ತುಂಬಿವೆ. ನದಿಗಳಿಲ್ಲ.

ಕೇಮ್ಯಾನ್ ದ್ವೀಪಗಳು ಮೊದಲು ಜಮೈಕದ ಅಧೀನದಲ್ಲಿದ್ದುವು. 1959ರ ಜುಲೈ ತಿಂಗಳಲ್ಲಿ ಅವಕ್ಕೆ ಸ್ವಯಂಮಾಡಳಿತ ದೊರಕಿತು. ಜಮೈಕದ ಗವರ್ನರ್ ಚುನಾಯಿತ ವಿಧಾನಮಂಡಲದ ಸಲಹೆ ಮತ್ತು ಸಮ್ಮತಿ ಪಡೆದು ಆಡಳಿತ ನಿರ್ವಹಿಸುತ್ತಾನೆ. ವರ್ಷಕ್ಕೊಮ್ಮೆ ಆತ ಅಲ್ಲಿಗೆ ಭೇಟಿ ನೀಡಲೇಬೇಕೆಂಬ ನಿಯಮವುಂಟು. ಉಳಿದ ಕಾಲದಲ್ಲಿ ಅವನನ್ನು ಪ್ರತಿನಿಧಿಸುವ ಆಡಳಿತಾಧಿಕಾರಿ ಇರುತ್ತಾನೆ. ಕೇಮ್ಯಾನ್ ದ್ವೀಪಗಳಲ್ಲಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿದೆ.

ಕಡಲಾಮೆಯೇ ಇಲ್ಲಿಯ ಜನರ ಜೀವನಾಧಾರ. ಕಡಲಾಮೆಯ ಉತ್ಪನ್ನಗಳು ಮುಖ್ಯ ನಿರ್ಯಾತ ವಸ್ತುಗಳು. ತಾಳೆ ಜಾತಿಯ ಮರಗಳಿಂದ ಹಗ್ಗ ತಯಾರಿಸುವುದು ಒಂದು ಮುಖ್ಯ ಕೈಗಾರಿಕೆಯಾಗಿತ್ತು. ಈಗ ಇದು ಕ್ಷೀಣಿಸಿದೆ. ಇದರ ವ್ಯಾಪಾರ ಮುಖ್ಯವಾಗಿ ನಡೆಯುವುದು ಅಮೆರಿಕ ಮತ್ತು ಜಮೈಕಗಳೊಂದಿಗೆ. ಸುಧಾರಿತ ವಸತಿ ಮತ್ತು ಸಾರಿಗೆ ಸೌಲಭ್ಯಗಳಿಂದಾಗಿ ಇದರ ಪ್ರವಾಸೋದ್ಯಮ ಬೆಳೆಯುತ್ತಿದೆ. ಕಿಂಗ್‌ಸ್ಟನ್, ಮಿಯಾಮಿ, ಸ್ಯಾನ್ ಜೋಸೆ ಮತ್ತು ಪನಾಮ ಸಿಟಿಯಿಂದ ಗ್ರಾಂಡ್ ಕೇಮ್ಯಾನ್‌ನಲ್ಲಿಯ ಓವೆನ್ ರಾಬರ್ಟ್ಸ್ ವಿಮಾನ ನಿಲ್ದಾಣಕ್ಕೆ ವಿಮಾನ ಸಂಪರ್ಕವಿದೆ. ಕೇಮ್ಯಾನ್ ಬ್ರ್ಯಾಕ್‌ನಲ್ಲೂ ಒಂದು ವಿಮಾನ ಇಳಿದಾಣವುಂಟು.

ಕೇಮ್ಯಾನ್ ದ್ವೀಪಗಳನ್ನು ಕಂಡುಹಿಡಿದವನು ಕೊಲಂಬಸ್. ಇಲ್ಲಿ ಕಡಲಾಮೆಗಳು(ಟರ್ಟಲ್ಸ್) ಹೇರಳವಾಗಿದ್ದುದನ್ನು ಕಂಡು ಆತ ಈ ದ್ವೀಪಗಳನ್ನು ಟಾರ್ಟೂಗಾಸ್ ಎಂದು ಕರೆದ. 18ನೆಯ ಶತಮಾನದಲ್ಲಿ ಇವು ಬ್ರಿಟಿಷರ ವಸಾಹತಾಗಿ, ಜಮೈಕದ ಆಡಳಿತಕ್ಕೆ ಒಳಪಟ್ಟುವು. (ಆರ್.ಎಲ್.ಎ.)

**ಕೇರ್ ಥಾಮಸ್ :** 1595–1640. ಆಂಗ್ಲಕವಿ. ಹುಟ್ಟಿದ್ದು ವೆಸ್ಟ್ ವಿಕ್‌ಹ್ಯಾಮ್‌ನಲ್ಲಿ. ವಕೀಲನ ಮಗನಾದ ಈತ ಆಕ್ಸ್‌ಫರ್ಡಿನ ಮರ್ಟನ್ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿ ಸರ್ ಡಡ್ಲಿ ಕಾರ್ಲ್‌ಟನ್ನನ ಕಾರ್ಯದರ್ಶಿಯಾಗಿ ವೆನಿಸ್ ಮತ್ತು ಹೇಗ್ ನಗರಗಳಲ್ಲಿದ್ದ. ಒಂದನೆಯ ಚಾರ್ಲ್ಸ್ ದೊರೆಯ ಅನುಗ್ರಹಕ್ಕೆ ಪಾತ್ರನಾಗಿ ರಾಜಸಭಾಸದನಾದ. ಕವಿ ಬೆನ್ ಜಾನ್ಸನ್ ಮತ್ತು ಸರ್ ಜಾನ್‌ಸಕ್ ಲಿಂಗರ ಸ್ನೇಹವನ್ನೀತ ಗಳಿಸಿದ್ದ. ಈತನ ಮೇಲೆ ಡನ್ ಕವಿಯ ಪ್ರಭಾವ ಅಪಾರವಾಗಿತ್ತು. ಡನ್ ಕವಿಯ ಮೇಲೆ ಈತ ಒಂದು ಸತ್ತ್ವಪೂರ್ಣವಾದ ಚರಮಗೀತೆಯನ್ನು ಬರೆದಿದ್ದಾನೆ. ಈ ಗೀತೆಯನ್ನು ಆ ಕಾಲಕ್ಕೆ ಡನ್ ಕವಿಯ ಮೇಲೆ ಬಂದು ಅತ್ಯುತ್ತಮವಾದ ವಿಮರ್ಶೆಯೆಂದು ಪರಿಗಣಿಸಿದ್ದಾರೆ. ಈತನನ್ನು ಪ್ರಥಮ ದರ್ಜೆಯ ಆಸ್ಥಾನಕವಿಯೆಂದೂ ರಾಜಜೀವನ ಹಾಗೂ ಸ್ಥೈರ್ಯ

ಮತ್ತು ಶೌರ್ಯಗಳಿಂದ ಕೂಡಿದ ಪದ್ಯಗಳನ್ನು ಇವನಷ್ಟು ಸರಳ ಸುಂದರವಾಗಿ ವರ್ಣಿಸಿರುವವರು ಬೇರೊಬ್ಬರಿಲ್ಲವೆಂದೂ ಭಾವಿಸಲಾಗಿದೆ. ದಿ ರ್‍ಯಾಪ್ಚರ್ ಎಂಬ ಪ್ರೇಮಗೀತೆ, ಕೋಲಮ್ ಬ್ರಿಟಾನಿಕಮ್ (1634) ಎಂಬ ಮೊಗವಾಡ ನಾಟಕ (ಮಾಸ್ಕ್) ಈತನ ಮುಖ್ಯ ಕೃತಿಗಳು. ಈತನ ಪದ್ಯಗಳು ಬಹುತೇಕ ಭಾವಗೀತೆಗಳಾಗಿವೆ. ಅವನ್ನು ಈತನ ಕಾಲಾನಂತರ ಸಂಗ್ರಹಿಸಿ ಪ್ರಕಟಿಸಲಾಗಿದೆ. ಹಿ ದಟ್ ಲವ್ಸ್ ಎ ರೋಸಿ ಚೀಕ್-ಎಂಬ ಇವನ ಗೀತೆ ಬಹು ಪ್ರಖ್ಯಾತವಾದುದು. (ಎನ್.ಎಸ್.ಎಲ್.)

**ಕೇರಳ :** ಭಾರತದ ಒಂದು ರಾಜ್ಯ. ಪರ್ಯಾಯದ್ವೀಪ ಪ್ರದೇಶದ ಆಗ್ನೇಯದ ತುದಿಯಲ್ಲಿದೆ. ಉ.ಅ. 13° 40' – 8° 20' ನಡುವೆ ಉದ್ದಕ್ಕೆ ಚಾಚಿರುವ ಈ ರಾಜ್ಯದ ಗರಿಷ್ಠ ಅಗಲ 120 ಕಿ.ಮೀ. ಪೂರ್ವದಲ್ಲಿ ತಮಿಳುನಾಡು, ಉತ್ತರದಲ್ಲೂ ಈಶಾನ್ಯದಲ್ಲೂ ಕರ್ನಾಟಕ, ಪಶ್ಚಿಮದಲ್ಲಿ ಅರಬ್ಬಿ ಕಡಲು – ಇವುಗಳ ನಡುವೆ ಇರುವ ಕೇರಳ ರಾಜ್ಯದ ವಿಸ್ತೀರ್ಣ 38,863 ಚ.ಕಿಮೀ. ಜನಸಂಖ್ಯೆ 31,838,619 (2001). ರಾಜಧಾನಿ ತಿರುವನಂತಪುರ.

**ಭೌತಲಕ್ಷಣ :** ಭಾರತದ ಪಶ್ಚಿಮ ಕರಾವಳಿಯಲ್ಲಿರುವ ಈ ಪ್ರದೇಶ ಹಿಂದೊಮ್ಮೆ ಬಲು ತಗ್ಗಿನಲ್ಲಿದ್ದು ಕ್ರಮಕ್ರಮವಾಗಿ ಇದಕ್ಕೆ ಉತ್ಕರ್ಷ ಸಂಭವಿಸಿತೆಂಬುದಕ್ಕೆ ಅನೇಕ ಆಧಾರಗಳುಂಟು. ಈಗಿನ ಕಡಲಕರೆಯಿಂದ ಹಲವು ಕಿ.ಮೀ.ಗಳಷ್ಟು ದೂರ ಮೆಕ್ಕಲುಮಣ್ಣಿನ ಅಡಿಯಲ್ಲಿ ಹವಳದ ದಿಬ್ಬಗಳಿರುವುದು ವ್ಯಕ್ತವಾಗಿದೆ. ಪ್ರಾಗ್ ಐತಿಹಾಸಿಕ ಕಾಲದಲ್ಲಿ ಮಾತ್ರವಲ್ಲದೆ ಐತಿಹಾಸಿಕ ಕಾಲದಲ್ಲಿ ಕೂಡ ನೆಲ ಬೆಳೆಯುತ್ತ ಬಂದುದಕ್ಕೆ ಸಾಹಿತ್ಯಕ ಮತ್ತು ಸ್ಥಳನಾಮಕ ಪುರಾವೆಗಳು ಹಲವುಂಟು. ಎತ್ತರದ ಜಂಬುಮಣ್ಣು ನೆಲ ನಗ್ನೀಕೃತವಾಗಿ ತಗ್ಗುಪ್ರದೇಶದ ಉತ್ಕರ್ಷ ಸಂಭವಿಸಿರಬಹುದು. ಸಾಹಿತ್ಯದಲ್ಲೂ ಐತಿಹ್ಯಗಳಲ್ಲೂ ಇದಕ್ಕೆ ಆಧಾರ ದೊರಕುತ್ತದೆ. ಕಡಲ ಕರೆಯಿಂದ 13 ಕಿಮೀ.ಗಳಷ್ಟು ಒಳನಾಡಿನಲ್ಲಿ ಸಾಲಾಗಿ ಹಬ್ಬಿರುವ ಹಳ್ಳಿಗಳ ಹೆಸರುಗಳಲ್ಲಿ ಸಮುದ್ರ ಅಥವಾ ದ್ವೀಪ ಎಂಬುದೂ ಸೇರಿರುವುದು ಸಾಮಾನ್ಯ. ಸಮುದ್ರರೇವುಗಳೆಂದು ಟಾಲೆಮಿ ಹೆಸರಿಸಿರುವ ಕೆಲವು ಸ್ಥಳಗಳು ಇಂದು ಒಳನಾಡಿನಲ್ಲಿವೆ. ಕೊಚ್ಚಿಯ ಹಿನ್ನೀರಿನ ಬಳಿ ಇವನ್ನು ಕಾಣಬಹುದು. ತಗ್ಗುತೀರದ ಬಳಿಯಲ್ಲಿ ಸಂಚಿತವಾದ ಮಣ್ಣಿನಿಂದಾಗಿ ನೆಲ ವಿಸ್ತಾರಗೊಂಡಿದೆಯೆಂಬುದಕ್ಕೆ ನದೀ ಮುಖಗಳ ಆಚೆಗೆ–ಅನೇಕ ವೇಳೆ 13 ಕಿಮೀ.– ಹಬ್ಬಿರುವ ಮಲಬಾರ್ ಮಣ್ಣೇರಿಗಳೂ ಆಧಾರ ಒದಗಿಸುತ್ತವೆ. ನುಣ್ಣಗೆ ಪುಡಿಯಾದ ಜಂಬುಮಣ್ಣಿನಿಂದ ಕೂಡಿದ ಈ ಏರಿಗಳು ಸಮುದ್ರದ ಉಬ್ಬರವನ್ನು ತಡೆಹಿಡಿದು, ಕರಾವಳಿಯ ಸಣ್ಣ ರೇವುಗಳಿಗೆ ರಕ್ಷಣೆ ಒದಗಿಸುತ್ತವೆ.

ಮೆಕ್ಕಲುಮಣ್ಣಿನಿಂದ ಕೂಡಿದ ಕರಾವಳಿ, ಜಂಬುಮಣ್ಣಿನ ತಗ್ಗುಪ್ರಸ್ಥಭೂಮಿ ಮತ್ತು ಅಡಿಬೆಟ್ಟ ಪ್ರದೇಶ, ನೈಸ್ ಶಿಲಾವೃತ ಪರ್ವತಶ್ರೇಣಿ–ಹೀಗೆ ಕೇರಳದ ನಾಡನ್ನು ಸ್ಥೂಲವಾಗಿ ಮೂರು ಸ್ವಾಭಾವಿಕ ವಿಭಾಗಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ಒಂದೊಂದು ವಿಭಾಗವೂ ಸ್ವಾಭಾವಿಕವಾಗಿ ಮೂರು ಉಪವಿಭಾಗಗಳಾಗಿ ವಿಂಗಡವಾಗುತ್ತದೆ. ಪೌನಯಾರ್ ನದಿಯವರೆಗಿನದು ಒಂದು ಉಪ ವಿಭಾಗ; ಪೌನಯಾರಿನಿಂದ ಪೆರಿಯಾರ್ ನದಿಯವರೆಗಿನದು ಇನ್ನೊಂದು; ಪೆರಿಯಾರಿನಿಂದ ದಕ್ಷಿಣಕ್ಕಿರುವುದು ಮೂರನೆಯದು. ಉತ್ತರ–ದಕ್ಷಿಣವಾಗಿ ವಿಂಗಡಮಾಡಬಹುದಾದ ಮಲಬಾರ್, ಕೊಚ್ಚಿ ಮತ್ತು ತಿರುವಾಂಕೂರು ಪ್ರದೇಶಗಳ ಭೌತಲಕ್ಷಣಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವುದು ಹೆಚ್ಚು ಸುಲಭ. ಇತ್ತೀಚಿನವರೆಗೂ ಮೂರು ಪ್ರತ್ಯೇಕ ರಾಜಕೀಯ ವಿಭಾಗಗಳಾಗಿದ್ದ ಈ ಪ್ರದೇಶಗಳಲ್ಲಿ ಒಂದೊಂದೂ ಕೆಲಕೆಲವು ವೈಶಿಷ್ಟ್ಯಗಳಿಂದ ಒಡಗೂಡಿದೆ.

ಮಲಬಾರ್ ಅಥವಾ ಮಲಯಾಳಂ ಎಂದರೆ ಮಲೆಯ ನೆಲ. ಇದು ಪಶ್ಚಿಮ ಕರಾವಳಿಯ ಅತ್ಯಂತ ಸುಂದರ ಪ್ರದೇಶ; ಪ್ರಕೃತಿ ಸಂಪದ್ಭರಿತ. ಅರಬ್ಬೀ ಸಮುದ್ರದ ಗುಂಟ 240 ಕಿಮೀ. ಉದ್ದಕ್ಕೆ–ದಕ್ಷಿಣ ಕನ್ನಡದಿಂದ ಹಿಡಿದು ದಕ್ಷಿಣದ ಕೊಚ್ಚಿಯವರೆಗೆ ಹಬ್ಬಿರುವ ಈ ಪ್ರದೇಶದ ಪೂರ್ವಕ್ಕಿರುವ ಪಶ್ಚಿಮ ಘಟ್ಟಗಳು; ಇದನ್ನು ಕೊಡಗು, ನೀಲಗಿರಿ ಮತ್ತು ಕೊಯಮತ್ತೂರುಗಳಿಂದ ಪ್ರತ್ಯೇಕಿಸಿವೆ. ಇಲ್ಲಿ 303–818 ಮೀ. ಎತ್ತರವಿರುವ ಪಶ್ಚಿಮಘಟ್ಟಗಳು ಉತ್ತರದಲ್ಲಿ ಕಡಲಕರೆಗೆ ಕೇವಲ 32 ಕಿಮೀ. ದೂರದಲ್ಲಿವೆ. ಕ್ರಮೇಣ ಈ ದೂರ ಹೆಚ್ಚುತ್ತ ಸಾಗುತ್ತದೆ. ಮಲಬಾರಿನ ದಕ್ಷಿಣದ ಕೊನೆಯಲ್ಲಿ ಘಟ್ಟಗಳು ಕಡಲೆಡೆಯಿಂದ 96 ಕಿಮೀ. ದೂರದಲ್ಲಿವೆ. ಅವಿಚ್ಛಿನ್ನವಾಗಿ ಸಾಗಿರುವ ಪರ್ವತಶ್ರೇಣಿಗೆ ತಡೆ ಒದಗಿರುವುದು ಪಾಲಕ್ಕಾಡಿನಲ್ಲಿ. ಈ ಘಾಟಿನ ಅಗಲ 26 ಕಿಮೀ. ಈಶಾನ್ಯದಲ್ಲಿರುವ ವೈನಾಡು 303 ಮೀ. ಎತ್ತರವಿರುವ ಪ್ರಸ್ಥಭೂಮಿ. ವಾಸ್ತವವಾಗಿ ಇದು ಮೈಸೂರು ಪ್ರಸ್ಥಭೂಮಿಯ ಒಂದು ಭಾಗ. ಇದು ಘಟ್ಟದಿಂದಾಚೆಗೆ ಚಾಚಿರುವ ಪ್ರದೇಶ. ಅಂತೆಯೇ ಅಟ್ಟಪಾಡಿ ಮತ್ತು ಸಿಲೆನ್ ಕಣಿವೆಗಳೂ ಘಟ್ಟದಿಂದಾಚೆಗೆ ಹಬ್ಬಿವೆ. ಮಲಬಾರ್ ಬೆಟ್ಟಗಳ ಅತ್ಯಂತ ಎತ್ತರದ ಶಿಖರವೆಂದರೆ ವವುಲ್ ಮಲಾ ಅಥವಾ ಒಂಟಿಯ ದುಬ್ಬು (2870ಮೀ.) ಅಲ್ಲಿಂದ ಮುಂದೆ ಈ ಶ್ರೇಣಿ ತಗ್ಗುತ್ತ ಸಾಗುತ್ತದೆ.

ಘಟ್ಟಪ್ರದೇಶ ಬಹುತೇಕ ಅರಣ್ಯಮಯ. ಪರ್ವತದೃಶ್ಯ ಅತ್ಯಂತ ರಮ್ಯವಾಗಿದೆ. ಶಿಖರಗಳೂ ಅತಿ ಕಡಿದು, ದುರ್ಗಮ. ತಗ್ಗಿನ ಪ್ರದೇಶ ಒಂದು ಹಸಿರು ಸಮುದ್ರದಂತಿದೆ. ಕಡಲಕರೆಯ ಬಳಿಯಲ್ಲಿ ತೆಂಗಿನ ಮರಗಳ ಸೆರಗಿನಿಂದ ಕೂಡಿದ ಬತ್ತದ ಗದ್ದೆಗಳೂ ಲಗೂನ್‌ಗಳೂ ಹಬ್ಬಿವೆ. ಕರಾವಳಿಯ ಮಟ್ಟಸ ಪ್ರದೇಶ ಸಾಮಾನ್ಯವಾಗಿ 3–4 ಕಿಮೀ.ಗಿಂತ ಅಗಲವಿಲ್ಲ. ಮಲಬಾರಿನಲ್ಲಿ ಹರಿಯುವ ಹೊಳೆ ತೊರೆಗಳು ಅಸಂಖ್ಯಾತ. ಇವುಗಳ ಪೈಕಿ ಭವಾನಿ, ಕಪಿಲಾ ಮತ್ತು ರಾಮಪುರ ಇವು ಪೂರ್ವಾಭಿಮುಖವಾಗಿ ಹರಿಯುತ್ತವೆ. ಭವಾನಿ ನದಿ ಅಟ್ಟಪಾಡಿ ಕಣಿವೆಯಲ್ಲಿ ಹುಟ್ಟಿ ಕೊಯಮತ್ತೂರಿನಲ್ಲಿ ಹರಿಯುತ್ತದೆ. ಕಪಿಲಾ ಮತ್ತು ರಾಮಪುರ ವೈನಾಡಿನಲ್ಲಿ ಹುಟ್ಟಿ ಮೈಸೂರಿನಲ್ಲಿ ಪ್ರವಹಿಸುವ ನದಿಗಳು. ಉಳಿದ ನದಿಗಳೆಲ್ಲ ಪಶ್ಚಿಮಾಭಿಮುಖವಾಗಿ ಹರಿದು, ಕಡಲಕರೆಗೆ ಸಮದೂರದಲ್ಲಿ ವಿಸ್ತರಿಸಿರುವ ಹಿನ್ನೀರು ಮತ್ತು ಲಗೂನ್‌ಗಳೊಳಕ್ಕೆ ತಮ್ಮ ಜಲರಾಶಿಯನ್ನು ತಂದು ಸುರಿಯುತ್ತವೆ. ಅನೇಕ ನದಿಗಳ, ಕಡಲ ಭರತಕ್ಕೊಳಗಾಗದ ಭಾಗಗಳು ದೋಣಿ ಸಂಚಾರಕ್ಕೆ ಅನುಕೂಲವಾಗಿವೆ. ಹಲವಾರು ಲಗೂನ್‌ಗಳನ್ನು ಸಣ್ಣ ಸಣ್ಣ ಕಾಲುವೆಗಳಿಂದ ಸೇರಿಸಿರುವುದರಿಂದ ಕೇರಳದ ಒಳನಾಡಿನಲ್ಲಿ ಅನೇಕ ಜಲಮಾರ್ಗಗಳು ಏರ್ಪಟ್ಟಿವೆ. ಮಲಬಾರಿನ ನದಿಗಳ ಪೈಕಿ ಅತ್ಯಂತ ಉದ್ದವಾದ್ದು ಪೊನ್ನಾನಿ. ಆದರೆ ಅತ್ಯಂತ ಮುಖ್ಯವಾದ ನದಿಗಳೆಂದರೆ ಬೇಪೊರೆ ಮತ್ತು ವಲಾರ್ ಪಟ್ಟಣಂ. ಈ ಮೂರೂ ನದಿಗಳು ವಿಸ್ತಾರವಾದ ಹಿನ್ನೀರುಗಳೊಂದಿಗೆ ಕೂಡಿಕೊಂಡಿವೆ.

ಮಲಬಾರ್ ಸಮುದ್ರತೀರ ಬಹುತೇಕ ತೆರೆದಂತಿದೆ. ಅತ್ಯಂತ ಉತ್ತರದಲ್ಲಿ ಮಾತ್ರ ಜಂಬುಮಣ್ಣಿನಿಂದ ಕೂಡಿದ ದಿಬ್ಬವಿರುವ ದ್ವೀಪವೊಂದುಂಟು. ಇದಕ್ಕೆ ಡೆಲ್ಲಿ ಗುಡ್ಡವೆಂದು ಹೆಸರು. ಪೋರ್ಚುಗೀಸರ ಹಡಗುಗಳ ದೃಷ್ಟಿಗೆ ಮೊತ್ತಮೊದಲು ಬಿದ್ದ ಭಾರತೀಯ ನೆಲವಿದು. ಇಲ್ಲಿಂದ ದಕ್ಷಿಣಕ್ಕೆ, ಕೋಳಿಕ್ಕೋಡ್‌ನ ವರೆಗೆ, ತೀರದಲ್ಲಿ ಅಲ್ಲಲ್ಲಿ ಜಂಬುಮಣ್ಣಿನ ದಿಣ್ಣೆಗಳ ಮತ್ತು ಮರಳುಗುಪ್ಪೆಗಳ ನಡುನಡುವೆ ಆಳವಿಲ್ಲದ ಸಣ್ಣ ಕೊಲ್ಲಿಗಳುಂಟು. ಕಡಲಕರೆಯಿಂದ 5 ಕಿಮೀ. ದೂರದವರೆಗೂ ಸಮುದ್ರ ಆಳವಾಗಿಲ್ಲ. ಅಲ್ಲಿಂದ ಒಮ್ಮೆಗೇ 1000 ಫ್ಯಾದಂ ಆಳವಾಗುತ್ತದೆ.

ಕೊಚ್ಚಿಯ ಪ್ರದೇಶದಲ್ಲಿ ಘಟ್ಟ, ಮೈದಾನ ಮತ್ತು ಕಡಲಕರೆ ಎಂದು ಮೂರು ಸ್ವಾಭಾವಿಕ ವಿಭಾಗಗಳುಂಟು. ಘಟ್ಟ ಪ್ರದೇಶ ಕೊಚ್ಚಿಯ ಅರ್ಧಭಾಗವನ್ನಾವರಿಸಿದೆ. ತೇಗ ಮುಂತಾದ ಅಮೂಲ್ಯ ಮರಗಳಿಂದ ತುಂಬಿರುವ ಘಟ್ಟಶ್ರೇಣಿ ಕಡಿದು. ಇದರ ಬದಿಯಲ್ಲಿರುವ ಮೈದಾನದಲ್ಲಿ ಅಡ್ಡಲಾಗಿ ಅನೇಕ ಹೊಳೆಗಳು ಹರಿಯುತ್ತವೆ. ಪಶ್ಚಿಮದ ಕಡಲಕರೆಯ ಉದ್ದಕ್ಕೂ ಹಬ್ಬಿರುವ ಹಿನ್ನೀರುಗಳುಂಟು. ಹಿನ್ನೀರುಗಳಿಗೂ ಸಮುದ್ರಕ್ಕೂ ನಡುವೆ ಇರುವ ಉದ್ದನೆಯ ಕಿರು ಏರಿಯಲ್ಲಿ ತೆಂಗಿನ ಮರಗಳು ಸಾಮಾನ್ಯ. ಮಳೆಗಾಲದಲ್ಲಿ ಈ ಪ್ರದೇಶದಲ್ಲೆಲ್ಲ ನೀರು ತುಂಬಿರುತ್ತದೆ.

ಕೊಚ್ಚಿ ಪ್ರದೇಶದ ಮುಖ್ಯ ನದಿಗಳು ಆಲುವಾ, ಚಾಲಕ್ಕುಡಿ, ಕುರುಮಾಲಿ ಅಥವಾ ಕುರುವಣ್ಣೂರ್, ಪೌನಾಯ್ ಮತ್ತು ಅಣ್ಣಾಮಲೈ. ಆಲುವಾ ನದಿ ಕೊಚ್ಚಿಯಲ್ಲಿ ಕೆಲವು ಕಿಲೋಮೀಟರುಗಳ ದೂರ ಮಾತ್ರ ಕ್ರಮಿಸುತ್ತದೆ. ಚಾಲಕ್ಕುಡಿ ನದಿ ಕೊಡಸೇರಿ ಅರಣ್ಯ ಪ್ರದೇಶದಲ್ಲಿ ಉದ್ಭವವಾಗಿ ಕ್ರಾಂಗನೂರಿನ ಬಳಿ ಹಿನ್ನೀರಿನಲ್ಲಿ ಸಂಗಮಿಸುತ್ತದೆ. ಕುರುಮಾಲಿ ನದಿ ಮಣಾಲಿಯನ್ನು ಸೇರಿದ ಮೇಲೆ ಕುರುವಣ್ಣೂರ್ ಎಂದು ಹೆಸರು ತಳೆದು ಪರವತ್ತಣಿ ಮತ್ತು ಪಾಲಪಳ್ಳಿ ಅರಣ್ಯಗಳಲ್ಲಿ ಹರಡಿಕೊಳ್ಳುತ್ತದೆ. ಪೌನಾಯ್ ಅನೇಕ ಉಪನದಿಗಳಿಂದ ಕೂಡಿ ಮಲಬಾರ್–ಕೊಚ್ಚಿಗಳ ನಡುರೇಖೆಯಲ್ಲಿ ಪ್ರವಹಿಸುತ್ತದೆ. ಅಣ್ಣಾಮಲೈ ಅಥವಾ ಚಿತ್ತೂರ್ ನದಿ ಕೊಯಮತ್ತೂರು ಮತ್ತು ಮಲಬಾರುಗಳ ಮೂಲಕ ಹರಿದು ಕೊಚ್ಚಿಯ ಮೂಲಕವೂ ಹಾದುಹೋಗುತ್ತದೆ.

ಕೊಚ್ಚಿ ಪ್ರದೇಶದಲ್ಲಿ ವಿಸ್ತಾರವಾದ ಲಗೂನ್ ಮತ್ತು ಹಿನ್ನೀರುಗಳ ಜೊತೆಗೆ ಎರಡು ದೊಡ್ಡ ಸಿಹಿನೀರಿನ ಸರೋವರಗಳೂ ಉಂಟು. ಒಂದಕ್ಕೊಂದು ಕೂಡಿದಂತಿರುವ ಇವುಗಳ ಹೆಸರುಗಳು ಎನಮಕ್ಕಲ್ ಮತ್ತು ಮನಕ್ಕೋಡಿ. ಈ ಸರೋವರಗಳು ಹಿನ್ನೀರುಗಳಿಗೆ ತೆರೆದುಕೊಂಡಂತಿವೆ. ಬೇಸಗೆಯಲ್ಲಿ ಇವುಗಳಲ್ಲಿ ನೀರು ಬತ್ತಿದಾಗ ಇವಕ್ಕೆ ಉಪ್ಪುನೀರು ಬಂದು ಸೇರದಂತೆ ತಡೆಯಲು ಏರಿಗಳನ್ನು ಕಟ್ಟಲಾಗಿದೆ. ಆ ಕಾಲದಿಂದಲೂ ಇಲ್ಲಿ ಬತ್ತ ಬೆಳೆಯುತ್ತಾರೆ.

ಕೊಚ್ಚಿಗೆ ದಕ್ಷಿಣದಲ್ಲಿರುವ ತಿರುವಾಂಕೂರು ಅಥವಾ ತಿರುವಳಂಕೋಡಿಯ ಪೂರ್ವಕ್ಕೂ ಪಶ್ಚಿಮ ಘಟ್ಟಗಳು ಹಬ್ಬಿವೆ. ಈಶಾನ್ಯದಲ್ಲಿ ಅಣೈಮುಡಿ ಎಂಬುದು ಅತ್ಯುನ್ನತ ಶಿಖರ. ಇದರ ಸುತ್ತ ಗೊಂಚಲಿನಂತಿರುವ ಶಿಖರ ಸಮೂಹಕ್ಕೆ ದಕ್ಷಿಣದಲ್ಲಿ ಏಲಕ್ಕಿ ಬೆಟ್ಟಗಳು ಮತ್ತು ಪಿರ್ಮೆಡ್‌ಗಳಿವೆ. ಇವುಗಳ ನಡುವೆ ಇರುವ ಪ್ರಸ್ಥಭೂಮಿಯ ಗರಿಷ್ಠ ಎತ್ತರ 1700ಮೀ. ಈ ಶ್ರೇಣಿಯ ಉಳಿದ ಭಾಗದಲ್ಲಿ ಅಲ್ಲಲ್ಲಿ ಉನ್ನತ ಶಿಖರಗಳುಂಟು. ಅಗಸ್ತ್ಯಮಲೈ ಮತ್ತು ಮಹೇಂದ್ರ ಗಿರಿಗಳು ಇವುಗಳಲ್ಲಿ ಮುಖ್ಯವಾದುವು. ಘಟ್ಟಗಳಿಂದ ಅಲ್ಲಲ್ಲಿ ಶಾಖೆಗಳೊಡೆದು ಸಮುದ್ರ ಸನಿಯದವರೆಗೂ ಸಾಗುತ್ತವೆ. ಕೊಲ್ಲಂನಿಂದ ದಕ್ಷಿಣಕ್ಕೆ ಘಟ್ಟದ ಶಾಖೆಗಳು ತಗ್ಗಾಗುತ್ತ ಸಾಗಿ ಕಣಿವೆಗಳನ್ನು ಹಾಯ್ದು ಕರಗಿಹೋಗುತ್ತವೆ.

ತಿರುವಾಂಕೂರು ಪ್ರದೇಶದ ಸುಮಾರು ಅರ್ಧಭಾಗ ಪರ್ವತಮಯವಾಗಿರುವುದರಿಂದ ಇಲ್ಲಿ ಹರಿಯುವ ನದಿಗಳೂ ಹೊಳೆಗಳೂ ಅನೇಕ. ಅವು ಸುತ್ತಿ ಹರಿದು, ಸಮುದ್ರವನ್ನೋ ಹಿನ್ನೀರುಗಳನ್ನೋ ಸೇರುತ್ತವೆ. ಪೆರಿಯಾರ್ (ದೊಡ್ಡ ನದಿ)

ಅವುಗಳಲ್ಲೆಲ್ಲ ದೊಡ್ಡದು. ಇದು ದೇವಿಕೊಳಂಗೆ 96 ಕಿ.ಮೀ. ದಕ್ಷಿಣಕ್ಕೆ, ಶಿವಗಿರಿ ಅರಣ್ಯದ ನಡುವೆ 1000 ಮೀ. ಎತ್ತರದಲ್ಲಿ ಉಗಮಿಸಿ, ಉತ್ತರಾಭಿಮುಖವಾಗಿ ಹರಿದು, ಪಶ್ಚಿಮಕ್ಕೆ ಬಾಗಿ ಕೋಡುಗಲ್ಲುಗಳ ಮೇಲೆ ಜಿಗಿದು ಆಲುವಾವನ್ನು ತಲಪಿ, ಎರಡಾಗಿ ಕವಲೊಡೆಯುತ್ತದೆ. ಉತ್ತರದ ಕವಲು ಪಳ್ಳಿಪುರಂನಲ್ಲಿ ಸಮುದ್ರದಲ್ಲಿ ಸಂಗಮಿಸುತ್ತದೆ.



ದಕ್ಷಿಣದ ಕವಲು ಎರ್ನಾಕುಲಂಗೆ ಪಶ್ಚಿಮದಲ್ಲಿ ಹಿನ್ನೀರಿನಲ್ಲಿ ಒಂದಾಗುತ್ತದೆ. ಪೆರಿಯಾರಿನ ಉದ್ದ 177 ಕಿಮೀ. ಈ ನದಿಯ ಶಿರೋ ಭಾಗದಲ್ಲಿ ಕಟ್ಟಿರುವ ಪೆರಿಯಾರ್ ಕಟ್ಟೆಯಿಂದ ತಮಿಳುನಾಡಿನ ಮಧುರೈ ಜಿಲ್ಲೆಗೆ ನೀರಾವರಿ ಸೌಲಭ್ಯ ಒದಗಿದೆ.

ತಿರುವಾಂಕೂರು ಪ್ರದೇಶದ ಪಶ್ಚಿಮ ಕರಾವಳಿಯಲ್ಲೂ ಅನೇಕ ಹಿನ್ನೀರ ಹರವುಗಳುಂಟು. ಇವಕ್ಕೂ ಸಮುದ್ರಕ್ಕೂ ನಡುವೆ 1/2 ಕಿಮೀ. ನಿಂದ 11 ಕಿಮೀ. ವರೆಗೆ ಅಗಲವಾಗಿರುವ ಮರಳು ದಂಡೆಯಿದೆ. ಹಿನ್ನೀರುಗಳಲ್ಲಿ ಸತತವಾಗಿ ಬಂದು ತುಂಬುವ ನದಿಗಳ ನೀರು ಈ ದಂಡೆಯನ್ನು ಅಲ್ಲಲ್ಲಿ ಕೊರೆದು ಸಮುದ್ರ ಸೇರುತ್ತದೆ. ಕಡಲು ಉಕ್ಕಿದಾಗ ಅದರ ನೀರು ದಂಡೆಯ ಮೇಲೆ ಹರಿದು ಹಿನ್ನೀರುಗಳ ನೀರಿನ ಮಟ್ಟ ಸುಮಾರು 2/3 ಮೀ. ಹೆಚ್ಚುವುದುಂಟು. ಹಿನ್ನೀರುಗಳನ್ನೆಲ್ಲ ಸೇರಿಸಲು ಅಲ್ಲಲ್ಲಿ ಕಾಲುವೆಗಳನ್ನು ತೋಡಲಾಗಿರುವುದರಿಂದ ಅವು ನೌಕಾ ಸಂಚಾರಕ್ಕೆ ಉಪಯುಕ್ತವಾಗಿವೆ. ಈ ಪ್ರದೇಶದಲ್ಲೂ ಕೆಲವು ಸಿಹಿನೀರು ಸರೋವರಗಳುಂಟು.

**ವಾಯುಗುಣ :** ಕೇರಳದ ವಾಯುಗುಣ ಸಮಭಾಜಕೀಯ ವಾಯುಗುಣವನ್ನು ಹೋಲುತ್ತದೆ. ಗರಿಷ್ಠ ಉಷ್ಣತೆ (32° ಸೆಂ.) ಮೀರುವುದು ಅಪರೂಪ. ಕನಿಷ್ಠ ಉಷ್ಣತೆ ಸಾಮಾನ್ಯವಾಗಿ (21° ಸೆಂ.) ಕಡಿಮೆಯಾಗುವುದಿಲ್ಲ. ಪರ್ವತ ಪ್ರದೇಶದಲ್ಲಿ ಮಳೆ ಅಧಿಕ. ಉಳಿದ ಕಡೆ ಉತ್ತರದಿಂದ ದಕ್ಷಿಣಕ್ಕೆ ಹೋದಂತೆ ಕಡಿಮೆಯಾಗುತ್ತದೆ. ಉತ್ತರದಲ್ಲಿ 120" (3008 ಮಿ.ಮೀ.) ಮಳೆಯಾದರೆ ತಿರುವನಂತಪುರದ ಬಳಿ ಅದರಲ್ಲಿ ಅರ್ಧ. ಇನ್ನೂ ದಕ್ಷಿಣಕ್ಕೆ 2/3ಕ್ಕೆ ಇಳಿಯುತ್ತದೆ. 2003ರಲ್ಲಿ 2288ಮೀಮೀ ಮಳೆಯಾಗಿತ್ತು.

**ಕೃಷಿ ಮತ್ತು ಇತರ ಕಸಬುಗಳು :** ಕೇರಳದ ನೆಲದಲ್ಲಿ ಸುಮಾರು 1/5 ಭಾಗ ಅರಣ್ಯಾವೃತವಾಗಿದ್ದು ಉಳಿದ ಭಾಗದಲ್ಲಿ ಕೃಷಿಯೋಗ್ಯವಾದ ನೆಲದ ಬಹುತೇಕ ಭಾಗ ಸಾಗುವಳಿಗೆ ಬಂದಿದೆ. ಬತ್ತ ಮುಖ್ಯ ಬೆಳೆ. ಆದರೆ ಅತ್ಯಂತ ದಕ್ಷಿಣದಲ್ಲಿ ಅದಕ್ಕೆ ಉಳಿದೆಡೆಯಲ್ಲಿದ್ದಷ್ಟು ಪ್ರಾಮುಖ್ಯವಿಲ್ಲ (ಶೇ. 40). ನೀರಾವರಿ ಸೌಲಭ್ಯ ಇರುವಲ್ಲಿಗೆ ಅದು ಸೀಮಿತವಾಗಿದೆ. ಹಿನ್ನೀರಿನ ಪ್ರದೇಶಗಳಲ್ಲಿಯ ಮುಖ್ಯ ಸಮಸ್ಯೆಯೆಂದರೆ ನೀರಾವರಿಯಲ್ಲ, ನೀರಿನ ನಿವಾರಣೆ. ಇದಕ್ಕಾಗಿ ತಲಾ ಸುಮಾರು 20.2 ಹೆ. ತುಕಡಿಗಳ ಸುತ್ತ ಕಾಲುವೆ ತೋಡಿ ಅದರ ಆಚೀಚೆ ಬದಿಗೆ ಏರಿ ಕಟ್ಟಲಾಗುತ್ತದೆ. ಜುಲೈಯಿಂದ ಸೆಪ್ಟೆಂಬರ್–ಅಕ್ಟೋಬರ್‌ವರೆಗೆ ಈ ನೆಲ ನೀರಿನಲ್ಲಿ ಮುಳುಗಿರುವುದುಂಟು. ಮಳೆಗಾಲ ಮುಗಿದ ಮೇಲೆ ಜಮೀನಿನ ನೀರನ್ನು ಪರ್ಷಿಯನ್ ಚಕ್ರದ ಅಥವಾ ಪಂಪಿನ ಸಹಾಯದಿಂದ ಎತ್ತಿ ಕಾಲುವೆಯಲ್ಲಿ ಹರಿಯಿಸಿ, ಸಾಗುವಳಿ ಮಾಡಲಾಗುತ್ತದೆ. ಕಾಲುವೆಯ ಏರಿ ಒಡೆದು ಜಮೀನಿಗೆ ನೀರು ನುಗ್ಗಿದಾಗ ದೋಣಿಯಿಂದ ಪೈರ ತೆನೆಯ ಕುಯಿಲು ಮಾಡಲಾಗುತ್ತದೆ. ಕೊಚ್ಚಿ–ಮಲಬಾರ್‌ಗಳ ಹಿನ್ನೀರು ಪ್ರದೇಶದಲ್ಲಿ ಸಮುದ್ರದ ಉಪ್ಪುನೀರಿನ ಪ್ರಭಾವ ಇರುವುದುಂಟು. ಇಂಥೆಡೆಗಳಲ್ಲಿ 0.3 ಮೀ ಎತ್ತರ ಮತ್ತು 1.5 ಮೀ ಸುತ್ತಳತೆಯ ದಿಬ್ಬಗಳನ್ನು ನಿರ್ಮಿಸಿ ಅವುಗಳಲ್ಲಿ ಬತ್ತವನ್ನು ಬಿತ್ತುತ್ತಾರೆ. ಮುಂಗಾರು ಆರಂಭವಾದಾಗ ಹೊಸ ನೀರು ಹಳೆಯ ಉಪ್ಪುನೀರನ್ನು ಕೊಚ್ಚಿ ಹಾಕುತ್ತದೆ. ಸಸಿಯನ್ನು ನಾಟಿ ಹಾಕಲು ಅದು ಯುಕ್ತಕಾಲ. ಈ ಪದ್ಧತಿಯಲ್ಲಿ ಫಸಲು ಕೈಗೆ ಸಿಕ್ಕೇಸಿಕ್ಕುವುದೆಂಬ ಭರವಸೆಯೇನೂ

ಸರ್ಕಾರಿ ಸಚಿವಾಲಯ, ತಿರುವನಂತಪುರ

ಇರುವುದಿಲ್ಲ. ಆದರೆ ಕೇರಳದಲ್ಲಿ ಜನಸಂಖ್ಯೆಯ ಒತ್ತಡ ಅತ್ಯಂತ ಅಧಿಕವಾಗಿರುವುದರಿಂದ ಇಂಥ ಅನಿಶ್ಚಿತ ಪರಿಸ್ಥಿತಿಯಲ್ಲೂ ಬೇಸಾಯ ಸಾಗುತ್ತದೆ.

ಹಿನ್ನೀರಿನ ಪ್ರದೇಶದ ಪೂರ್ವಕ್ಕಿರುವ ಮೈದಾನದಲ್ಲಿಯ ಸಾಗುವಳಿಯ ವಿಧಾನ

ವಾರ್ಕಾಲದಲ್ಲಿಯ ಸಮುದ್ರದ ದೃಶ್ಯ

ಭಾರತದ ಬೇರೆಡೆಗಳಲ್ಲಿರುವಂಥದೇ. ಆದರೆ ಮುಂಗಾರು ಶೀಘ್ರವಾಗಿ ಬರುವುದರಿಂದ ಏಪ್ರಿಲ್–ಮೇ ವೇಳೆಗೆ ಬಿತ್ತನೆ ಮಾಡಿ ಸೆಪ್ಟೆಂಬರ್ ವೇಳೆಗೆ ಫಸಲು ತೆಗೆಯುತ್ತಾರೆ.

ಮಳೆಗಾಲ ಮುಂದುವರಿದರೆ ಎರಡನೆಯ ಬೆಳೆ ತೆಗೆಯುವುದೂ ಉಂಟು. ಬತ್ತವನ್ನು ಬಿಟ್ಟರೆ ತೆಂಗು ಮುಖ್ಯ ಫಸಲು. ಕರಾವಳಿಯ ಮರಳು ನೆಲದಲ್ಲಿ ಇದು ಸಾಮಾನ್ಯ. ಆದರೆ ಒಳನಾಡಿನಲ್ಲೂ ಇದು ಬೆಳೆಯುತ್ತದೆ. ತಿರುವಾಂಕೂರು ಪ್ರದೇಶದಲ್ಲಿ ಬತ್ತ ಬೆಳೆಯುವಷ್ಟೇ ಜಮೀನು ತೆಂಗಿಗೂ ಮೀಸಲಾಗಿದೆ. ಕೊಲ್ಲಂನಲ್ಲಿ ತೆಂಗೇ ಪ್ರಧಾನ. ಅಕ್ಕಿಯೇ ಕೇರಳದ ಜನರ ಮುಖ್ಯ ಆಹಾರ. ನಾರು, ಕೊಬ್ಬರಿ, ಎಣ್ಣೆ, ಹಿಂಡಿ–ಇವು ತೆಂಗಿನ ಕೆಲವು ಉತ್ಪನ್ನಗಳು. ಅದರ ಕಾಂಡವನ್ನು ಕೊರೆದು ಹಾಕಿ ದೋಣಿಯಾಗಿ ಉಪಯೋಗಿಸುತ್ತಾರೆ. ಅದರ ಗರಿಯೂ ನಾನಾ ಉಪಯೋಗಗಳಿಗೆ ಬರುತ್ತದೆ. ತೆಂಗಿನಿಂದ ಬೆಲ್ಲ, ಸಕ್ಕರೆ, ಹೆಂಡ, ಸಾರಾಯಿಗಳನ್ನೂ ತಯಾರಿಸುತ್ತಾರೆ.

ಕೇರಳದ ಕೈಗಾರಿಕಾ ಕೆಲಸಗಾರರಲ್ಲಿ ಮೂರನೆಯ ಒಂದು ಭಾಗದ ಜನ ತೆಂಗಿನ ಉತ್ಪನ್ನಗಳಿಗೆ ಸಂಬಂಧಿಸಿದ ಉದ್ಯಮಗಳಲ್ಲಿ ಕೆಲಸ ಮಾಡುವರು. ಇವರಲ್ಲಿ ಮೂರನೆಯ ಎರಡು ಭಾಗ ಹೆಂಗಸರು. ತೆಂಗಿನ ಹುರಿ ತಯಾರಿಕೆ ಬಹುತೇಕವಾಗಿ ಗೃಹ ಕೈಗಾರಿಕೆ. ಇದನ್ನು ಚಾಪೆಗಳಾಗಿ (ಮ್ಯಾಟಿಂಗ್) ಹೆಣೆಯುವ ಹಲವಾರು ಸಣ್ಣ ಕಾರ್ಖಾನೆಗಳಿವೆ.

ಕೇರಳದ ವಿಶಿಷ್ಟ ಉಡುಗೆಯಲ್ಲಿ

ರಬ್ಬರ್, ಚಹ, ಮರಗೆಣಸು, ಮೆಣಸು–ಇವು ಇತರ ಮುಖ್ಯ ಬೆಳೆಗಳು. ರಬ್ಬರ್ ಮತ್ತು ಚಹ ತೋಟಗಳು ಇರುವುದು ಘಟ್ಟಗಳ ಮೇಲೆ. ಅಡಿಬೆಟ್ಟಗಳ ಪ್ರದೇಶದಲ್ಲಿ ಮರಗೆಣಸು ಮತ್ತು ಮೆಣಸು ಬೆಳೆಯುತ್ತವೆ. ಬತ್ತ ಬಿಟ್ಟರೆ ಬೇರೆ ಧಾನ್ಯಗಳ ಬೆಳೆ ಬಲು ಕಡಿಮೆ. ಜೋಳ, ರಾಗಿ, ಬೇಳೆ, ಕಬ್ಬು, ಮೆಣಸಿನಕಾಯಿ–ಇವು ಇತರ ಕೆಲವು ಬೆಳೆಗಳು. ಬತ್ತ ಬೆಳೆಯುವೆಡೆಗಳಲ್ಲಿ ಕೆಲವು ಕಡೆ ಎಳ್ಳನ್ನು ಮೂರನೆಯ ಬೆಳೆಯಾಗಿ ಬೆಳೆಯುವುದುಂಟು. ಬಾಳೆ ಮತ್ತು ಇತರ ಹಣ್ಣುಗಿಡಗಳು ಪ್ರತಿಯೊಂದು ಮನೆಯ ಹಿತ್ತಲಿನಲ್ಲೂ ಬೆಳೆಯುತ್ತವೆ. ಎಳ್ಳು, ವೀಳೆಯದೆಲೆ, ಅಡಕೆಗಳೂ ಅಲ್ಲಲ್ಲಿ ಕಾಣಬರುತ್ತದೆ. ಮರಗೆಣಸು ಕೇರಳದಲ್ಲಿ ಬಡವರ ಬೆಳೆ. ಈ ಬೆಳೆಯನ್ನು ಕೇರಳದಲ್ಲಿ 1920ರಲ್ಲಿ ಆರಂಭಿಸಲಾಯಿತು.

ಮತ್ಸ್ಯೋದ್ಯಮ ಕೇರಳದ ಮುಖ್ಯ ಜೀವನೋಪಾಯ. ಆದರೆ ತಾಂತ್ರಿಕವಾಗಿಯೂ ಸಂಘಟನೆಯ ದೃಷ್ಟಿಯಿಂದಲೂ ಇದು ಇನ್ನೂ ಬಹಳ ಹಿಂದುಳಿದಿದೆ. ಇದನ್ನು ಆಧುನಿಕಗೊಳಿಸುವ ಭಾರತ–ನಾರ್ವೆಜಿಯನ್ ಯೋಜನೆಯೊಂದು ಜಾರಿಯಲ್ಲಿದೆ.

ಕೇರಳದ ಮುಖ್ಯ ಅರಣ್ಯ ಪ್ರದೇಶ ಆ ರಾಜ್ಯದ ಪೂರ್ವದ ಅಂಚಿನಲ್ಲಿ ಘಟ್ಟಗಳ ಬದಿಗೆ ದಕ್ಷಿಣೋತ್ತರವಾಗಿ ಹಬ್ಬಿದೆ. ಮರದ ದಿಮ್ಮಿ, ಸೌದೆ, ಬೊಂಬು, ಜೊಂಡು, ದಂತ ಇವು ಮುಖ್ಯ ಅರಣ್ಯೋತ್ಪನ್ನಗಳು.

**ಕೇರಳದ ಮುಖ್ಯ ವಿದ್ಯುದ್ಯೋಜನೆಗಳು :** 1. ಪಳ್ಳಿವಾಸಲ್ : ದೇವಿಕೊಳಂನಲ್ಲಿ ಎತ್ತರದ ಪರ್ವತಶ್ರೇಣಿಗಳ ನಡುವೆ ನಿರ್ಮಿತವಾಗಿರುವ ಈ ಜಲವಿದ್ಯುಜ್ಜನಕ ಕೇಂದ್ರದ ಸ್ಥಾಪಿತ ಸಾಮರ್ಥ್ಯ 37,500 ಕಿವ್ಯಾ. 2. ಸೆಂಗುಳಂ ವಿದ್ಯುತ್ ಯೋಜನೆ: ಪಳ್ಳಿವಾಸಲ್‌ನ ಕೆಳಗಡೆಗೆ, ವೆಳ್ಳತ್ತುವಲ್‌ನಲ್ಲಿ ಸ್ಥಾಪಿತವಾಗಿರುವ ಈ ಕೇಂದ್ರದ ಸ್ಥಾಪಿತ ಸಾಮರ್ಥ್ಯ 48,000 ಕಿವ್ಯಾ. 3. ಪೆರಿಙ್ಙಲ್ ಕುತ್ತು ಜಲವಿದ್ಯುತ್ ಯೋಜನೆ : ಚಾಲಕ್ಕುಡಿ ನದಿಯ ಮೇಲೆ ಪೆರಿಙ್ಙಲ್ ಕುತ್ತುವಿನಲ್ಲಿ ತ್ರಿಚೂರ್ ಜಿಲ್ಲೆಯಲ್ಲಿ ಸ್ಥಾಪಿತವಾಗಿದೆ. ಸ್ಥಾಪಿತ ಸಾಮರ್ಥ್ಯ 32,000 ಕಿ.ವ್ಯಾ. ಉತ್ಪಾದನೆ 1,755.5 ಲಕ್ಷ ಯೂನಿಟ್. 4. ನೆರಿಯಮಂಗಲಂ ಜಲವಿದ್ಯುತ್ ಯೋಜನೆ : ಪೆರಿಯಾರ್ ನದಿಯ ಬಲದಂಡೆಯ ಮೇಲೆ ಪನಂಕುಟ್ಟಿಯಲ್ಲಿ ನಿರ್ಮಿತ. ಸ್ಥಾಪಿತ ಸಾಮರ್ಥ್ಯ 45,000 ಕಿ.ವ್ಯಾ ; ಉತ್ಪಾದನೆ 2175.9 ಲಕ್ಷ ಯೂನಿಟ್. 5. ಪನ್ನಿಯಾರ್ ಯೋಜನೆ : ಮುದಿರಪುಳ ನದಿಯ ಎಡದಂಡೆಯ ಮೇಲೆ ಸೆಂಗುಳಂ ಕೇಂದ್ರಕ್ಕೆ ಸರಿ ಸುಮಾರು

ಕೆಥೊಲಿಕ್ ಚರ್ಚ್, ದಂಡು, ತಿರುವನಂತಪುರ

ಎದುರುಬದಿಯಲ್ಲೆ ನಿರ್ಮಿತವಾಗಿವೆ. ಸ್ಥಾಪಿತ ಸಾಮರ್ಥ್ಯ 30,000 ಕಿವ್ಯಾ. ; ಉತ್ಪಾದನೆ 727.5 ಲಕ್ಷ ಯೂನಿಟ್. 6. ಶಬರಗಿರಿ ಯೋಜನೆ : ಪಂಬ ಮತ್ತು ಕಕ್ಕಿ ನದಿಗಳ ನೀರಿನಿಂದ ವಿದ್ಯುತ್ತನ್ನು ಉತ್ಪಾದಿಸುವುದು ಈ ಯೋಜನೆಯ ಉದ್ದೇಶ. ಸ್ಥಾಪಿತ ಸಾಮರ್ಥ್ಯ 3,00,000 ಕಿವ್ಯಾ. 7. ಇಡಿಕ್ಕಿ ಯೋಜನೆ : ಕೇರಳದಲ್ಲೇ ಅತಿ ದೊಡ್ಡ ಜಲ ವಿದ್ಯುತ್ ಯೋಜನೆ. ಇದಕ್ಕೆ ಕೆನಡಾದ ನೆರವು ಲಭ್ಯವಾಗಿದೆ. ಸ್ಥಾಪಿತ ಸಾಮರ್ಥ್ಯ 7,80,000 ಕಿವ್ಯಾ. ಇರುತ್ತದೆ. ಕೊಟ್ಟಯಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಪೆರಿಯಾರ್ ನದಿಯ ಮೇಲೆ ನಿರ್ಮಿಸಲಾದ ಈ ಯೋಜನೆಯಿಂದ ತೊಡಪುಳ, ಮೀನಚ್ಚಿಲ್, ಮತ್ತು ವೈಕ್ಕಂ ತಾಲ್ಲೂಕುಗಳಲ್ಲಿ 1,15,000 ಎಕರೆಗಳಿಗೆ ನೀರಾವರಿ ಸೌಲಭ್ಯ ಒದಗುತ್ತದೆ. 8. ಕುಟ್ಟಿಯಾಡಿ ಯೋಜನೆ : ಮಲಬಾರ್ ಜಿಲ್ಲೆಯಲ್ಲಿ ಕುಟ್ಟಿಯಾಡಿ ನದಿಯ ಮೇಲೆ ನಿರ್ಮಿಸಲಾಗುವ ವಿದ್ಯುತ್‌ಜನಕ ಕೇಂದ್ರದ ಸ್ಥಾಪಿತ ಸಾಮರ್ಥ್ಯ 75,000 ಕಿವ್ಯಾ. ಇರುತ್ತದೆ. 2003ರಲ್ಲಿ ಕೇರಳದ ವಿದ್ಯುದುತ್ಪಾದನೆ 2608 ಮೆ.ವಾ ಆಗಿದೆ.

ಮಲಂಪುಳ (19271 ಹೆ.) ವಾಳಯಾರ್ (3239 ಹೆ.), ಮಂಗಲಂ (3239 ಹೆ.), ಪಳನಿ(3567 ಹೆ.) ಮತ್ತು ಪೀಚಿ(17563 ಹೆ.)–ಇವು ಈಗಾಗಲೇ ಸಂಪೂರ್ಣವಾಗಿರುವ ನೀರಾವರಿ ಯೋಜನೆಗಳು. ಚಾಲಕ್ಕುಡಿ ಯೋಜನೆಯ ಪ್ರಥಮ

ದೇವಸ್ಥಾನದ ಉತ್ಸವವೊಂದರಲ್ಲಿ ಸಾಲಂಕೃತ ಆನೆ

(11458 ಹೆ.) ಮತ್ತು ದ್ವಿತೀಯ (8198 ಹೆ.) ಹಂತ ಮುಗಿದಿದೆ. ಗಾಯತ್ರಿ, ಕಲ್ಲಡ, ಪಂಬ, ಕುಟ್ಟಿಯಾಡಿ, ಕಾಂಜಿರಪ್ಪುಳ, ಪಳಾಸಿ, ಪೋತುಂಡಿ ಚೇರಕ್ಕುಳಿ ಪೆರಿಯಾರ್ ಕಣಿವೆ ಯೋಜನೆಗಳ ಪೈಕಿ ಕೆಲವು ನಿರ್ಮಾಣವಾಗಿ ಕೆಲವು ಹೊಸ ಯೋಜನೆಗಳನ್ನು ಕೈಗೆತ್ತಿ ಕೊಳ್ಳಲಾಗಿದೆ.



ಸೀಪಿಯರ್ ವಸ್ತುಸಂಗ್ರಹಾಲಯ, ತಿರುವನಂತಪುರ

ತೆಂಗಿನ ನಾರಿನ ವಸ್ತುಗಳು, ಜವಳಿ, ಚಹ, ರಬ್ಬರ್, ಇಟ್ಟಿಗೆ, ಹೆಂಚು, ರಾಸಾಯನಿಕ ಗೊಬ್ಬರ, ರಾಸಾಯನಿಕಗಳು, ವಿದ್ಯುತ್ ಉಪಕರಣ, ಗೋಡಂಬಿ ಸಂಸ್ಕರಣ, ಮುದ್ರಣ, ಸಕ್ಕರೆ, ಮರಕೊಯ್ತ, ಪ್ಲೈವುಡ್, ಬೆಂಕಿಕಡ್ಡಿ, ಅಕ್ಕಿ ಗಿರಣಿ, ಕೈಮಗ್ಗ, ಕುಶಲ ಕಸಬು, ಎಣ್ಣೆ ತಯಾರಿಕೆ–ಇವು ರಾಜ್ಯದ ಮುಖ್ಯ ಕೈಗಾರಿಕೆಗಳು. ರಬ್ಬರ್, ಪ್ಲೈವುಡ್, ರಾಸಾಯನಿಕ ಗೊಬ್ಬರ, ರಾಸಾಯನಿಕಗಳು, ರೇಯಾನ್, ಗಾಜು, ಕಾಗದ, ಅಲ್ಯೂಮಿನಿಯಂ, ಸಕ್ಕರೆ, ಸಿಮೆಂಟ್, ಜವಳಿ, ಟಿಟಾನಿಯಂ ಡೈಯಾಕ್ಸೈಡ್, ಸಾಬೂನು, ಷಾರ್ಕ್‌ಲಿವರ್ ಎಣ್ಣೆ, ಕುಂಭಕಲೆ, ಎಂಜಿನಿಯರಿಂಗ್, ಕೇಬಲ್, ಪೆನ್‌ಸ್ಟಾಕ್, ತಂತಿಹಗ್ಗ, ಭಾರಿ ಟ್ರಾನ್ಸ್‌ಫಾರ್ಮರ್, ನೂಲುಯಂತ್ರ, ಡಿ.ಡಿ.ಟಿ, ಯಂತ್ರೋಪಕರಣ, ಪೆಟ್ರೋಲಿಯಂ ಉತ್ಪನ್ನ–ಇವು ರಾಜ್ಯದ ಮುಖ್ಯ ಬೃಹದ್ಗಾತ್ರ ಕೈಗಾರಿಕೆಗಳು. ತ್ರಿವೇಂದ್ರಂ ರಬ್ಬರ್ ಕಾರ್ಖಾನೆ, ತ್ರಿವೇಂದ್ರ ನೂಲುವ ಗಿರಣಿ, ಮೃಣ್ವಸ್ತು ಸಂಸ್ಥೆ, ಕೇರಳ ವಿದ್ಯುತ್ ಮತ್ತು ತತ್ಸಂಬಂಧ ಎಂಜಿನಿಯರಿಂಗ್ ಕಂಪನಿ, ತಿರುವಾಂಕೂರು ಪ್ಲೈವುಡ್ ಕೈಗಾರಿಕೆ, ಕೇರಳ ಸಾಬೂನು ಮತ್ತು ಎಣ್ಣೆ ಸಂಸ್ಥೆ–ಇವು ಸರ್ಕಾರಿ ಉದ್ಯಮಗಳು.

**ಶಿಕ್ಷಣ** : 1967–68ರಲ್ಲಿದ್ದಂತೆ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 44,52,637 (ಬಾಲಕರು 23,92,030, ಬಾಲಕಿಯರು



ವಿಕ್ಟೋರಿಯ ಜ್ಯೂಬಿಲಿ ಪುರಭವನ, ತಿರುವನಂತಪುರ

20,60,602). ಜನಸಂಖ್ಯೆಯಲ್ಲಿ ಶೇಕಡಾ33.26 ಮಂದಿ ವಿದ್ಯಾರ್ಥಿಗಳು. 1961ರ ಜನಗಣತಿಯ ಪ್ರಕಾರ ಸಾಕ್ಷರರು ಒಟ್ಟು ಜನಸಂಖ್ಯೆಯ ಶೇಕಡ 46.8ರಷ್ಟಿದ್ದರು. ಕೇರಳ ಭಾರತದ ರಾಜ್ಯಗಳಲ್ಲೇ ಅತ್ಯಂತ ಹೆಚ್ಚಿನ ಸಾಕ್ಷರರಿರುವ ರಾಜ್ಯವಾಗಿದೆ 2001 ರ ಅಂಕಿ ಅಂಶದಂತೆ ಶೇ.90.92 ಮಂದಿ ಅಕ್ಷರಸ್ಥರು.

ತಿರುವನಂತಪುರ ಮತ್ತು ಕೋಳಿಕ್ಕೋಡ್‌ಗಳು ಕ್ರಮವಾಗಿ ಕೇರಳ ಮತ್ತು ಕೋಳಿಕ್ಕೋಡ್ ವಿಶ್ವವಿದ್ಯಾಲಯಗಳ ಕೇಂದ್ರಗಳು. ಕೊಚ್ಚಿ ವಿಶ್ವವಿದ್ಯಾಲಯ ಮತ್ತು ಕೃಷಿ ವಿಶ್ವವಿದ್ಯಾಲಯ ಇವು ಕೇರಳದ ಇನ್ನೆರಡು ವಿಶ್ವವಿದ್ಯಾಲಯಗಳು.

**ಜನಸಂಖ್ಯೆ** : 1971ರ ಜನಗಣತಿಯ ಪ್ರಕಾರ ಕೇರಳದ ಜನಸಂಖ್ಯೆ 2,12,80,392. 1961–71ರ ಅವಧಿಯಲ್ಲಿ ಅಲ್ಲಿಯ ಜನಸಂಖ್ಯೆ ಶೇ. 25.89ಕ್ಕೆ ಹೆಚ್ಚಿದೆ. ಕೇರಳದ ಜನಸಾಂದ್ರತೆ ಅತಿ ತೀವ್ರವಾಗಿದೆ. ತಿರುವನಂತಪುರ ಮತ್ತು ಆಲಪ್ಪುಳ್ಳ ಜಿಲ್ಲೆಗಳಲ್ಲಿ ಜನಸಾಂದ್ರತೆ ಅತಿ ಹೆಚ್ಚು ಜನಸಂಖ್ಯೆಯಲ್ಲಿ ಬಹುಪಾಲು ಗ್ರಾಮೀಣರೇ ಹೆಚ್ಚು. ನೆಲದ ಹಿಡುವಳಿಗಳು ಬಲು ಸಣ್ಣ. ಸಾಂದ್ರ ಬೇಸಾಯವೇ ಸಾಮಾನ್ಯ. ಕರಾವಳಿಯ ಅಂಚಿನಲ್ಲಿ ,ಮನೆಗಳು ಸಾಲಾಗಿವೆ. 2001ರ ಜನಸಂಖ್ಯಾ ಗಣತಿ ಪ್ರಕಾರ ಜನಸಂಖ್ಯೆ : 31838619 (2001)

**ಪಟ್ಟಣಗಳು :** ಕೇರಳದ ಬಹುತೇಕ ಪಟ್ಟಣಗಳು, ರೇವುಗಳು; ಅಥವಾ ಹಿನ್ನೀರುಗಳ ದಂಡೆಗಳ ಮೇಲೆ ನೆಲಸಿವೆ. ಪೂರ್ವ ಪಶ್ಚಿಮ ದೇಶಗಳ ವ್ಯಾಪಾರಿಗಳು ಬಹು ಹಿಂದಿನಿಂದಲೂ ಈ ರಾಜ್ಯದ ಜನರೊಂದಿಗೆ ವ್ಯಾಪಾರದಲ್ಲಿ ನಿರತರಾಗಿದ್ದರು. ಅರಬರೂ ಗ್ರೀಕೋ-ರೋಮನರೂ ಚೀನೀಯರೂ ಇಲ್ಲಿಯ ಸಂಬಾರ ಪದಾರ್ಥದಿಂದ ಆಕರ್ಷಿತರಾಗಿದ್ದರು. ಅನಂತರ ಪೋರ್ಚುಗೀಸರಿಗೂ ಇತರ ಐರೋಪ್ಯ ದೇಶಗಳವರಿಗೂ ಮುಸ್ಲಿಮರಿಗೂ ನಡುವೆ ಈ ಪ್ರದೇಶದ ವ್ಯಾಪಾರಕ್ಕಾಗಿ ಸ್ಪರ್ಧೆ ನಡೆದಿತ್ತು. ಕಣ್ಣನ್ನೂರು ಜಿಲ್ಲೆಯ ತೆಲಚ್ಚೇರಿಯಿಂದ ಕೊಡಗಿನ ಕಾಫಿಯೂ ಸ್ವಲ್ಪ ಮೆಣಸೂ ಕೊಬ್ಬರಿಯೂ ರಫ್ತಾಗುತ್ತವೆ. ಕೋಳಿಕ್ಕೋಡ್ ಕೂಡ ಇವುಗಳ ರಫ್ತಿನಲ್ಲಿ ಭಾಗವಹಿಸುತ್ತದೆ. ಇವೆರಡು ಬಂದರುಗಳಲ್ಲೂ ಹಡಗುಗಳು ಸಮುದ್ರದಂಡೆಯಿಂದ ಸು. 3-5 ಕಿಮೀ. ದೂರದಲ್ಲಿ ನಿಲ್ಲುತ್ತವೆ.

ಕಥಕಳಿ

ಕೊಚ್ಚಿ ಮುಖ್ಯ ಬಂದರು. ಭಾರತದಲ್ಲಿ ಐರೋಪ್ಯರು ನೆಲಸಿದ ಮೊತ್ತಮೊದಲ ಸ್ಥಳ. ಇದರ ಸನ್ನಿವೇಶ ಅತ್ಯಂತ ಪ್ರಾಮುಖ್ಯ ಉಳ್ಳದ್ದು. ಇದು ಹಿನ್ನೀರುಗಳ ಪ್ರದೇಶದ ನಡುವೆ ನೆಲಸಿದೆ. ಪಾಲಕ್ಕಾಡು ತೆರವು ಇರುವುದು ಇದರ ಈಶಾನ್ಯಕ್ಕೆ 200 ಕಿಮೀ. ದೂರದಲ್ಲಿ. ಏಡನಿಗೂ ಮುಂಬಯಿಗೂ ಇರುವ ದೂರಕ್ಕಿಂತ ಏಡನ್-ಕೊಚ್ಚಿಗಳ ನಡುವಣ ದೂರ 483 ಕಿಮೀ. ಗಳಷ್ಟು ಕಡಿಮೆ. ಇದು ಕೊಲಂಬೊದೊಂದಿಗೆ ಕೂಡ ಯಶಸ್ವಿಯಾಗಿ ಸ್ಪರ್ಧಿಸಬಲ್ಲುದು. ಸೂಯೆಜ್ ಕಾಲುವೆಯ ಮೂಲಕ ಸಾಗಬಲ್ಲ ಯಾವ ಹಡಗಾದರೂ ನಿಲ್ಲುವುದು ಸಾಧ್ಯವಾಗುವಂತೆ ಇಲ್ಲಿ ಬಂದರು ನಿರ್ಮಾಣವಾಗಿದೆ. ಹಿನ್ನೀರಿಗೆ ಅಡ್ಡಲಾಗಿ ರೈಲ್ವೆ ಮತ್ತು ರಸ್ತೆ ಸೇತುವೆಗಳಿವೆ. ಪಾಲಕ್ಕಾಡ್-ಕೊಚ್ಚಿ ರೈಲುಮಾರ್ಗದ ಮೂಲಕ ಕೊಚ್ಚಿಯೊಂದಿಗೆ ಅದರ ಹಿನ್ನಾಡಿನ ಸಂಪರ್ಕ ಸಾಧಿಸಿದೆ. ತೆಂಗಿನ ನಾರಿನ ವಸ್ತುಗಳು, ಕೊಬ್ಬರಿ, ಚಹ, ರಬ್ಬರ್, ಗೋಡಂಬಿ ಇವು ಮುಖ್ಯ ನಿರ್ಯಾತಗಳು. ಕೊಚ್ಚಿಯಲ್ಲಿ ಹಡಗು ನಿರ್ಮಾಣ ಕೇಂದ್ರ ಸ್ಥಾಪಿಸುವ ಕೆಲಸ ಸಾಗುತ್ತಿದೆ. ಎರ್ನಾಕುಲಂನಲ್ಲಿ ಸಾಬೂನಿನ ಕಾರ್ಖಾನೆಗಳುಂಟು. ಮಟ್ಟನ್‌ಚೇರಿಯಲ್ಲಿ ಅಕ್ಕಿಗಿರಣಿಗಳಿವೆ. ಈ ಎಲ್ಲ ಸ್ಥಳಗಳೂ ಇರುವುದು ಕೊಚ್ಚಿ ವಲಯದಲ್ಲೇ. ಕೊಚ್ಚಿಯ ಜನಸಂಖ್ಯೆ 596473 (2001). ತ್ರಿಚೂರಿನಲ್ಲಿ 317474 (2001) ಹತ್ತಿ ಗಿರಣಿಗಳೂ ಹೆಂಚಿನ ಕಾರ್ಖಾನೆಗಳೂ ಇವೆ.

ಹಳೆಯ ತಿರುವಾಂಕೂರು ಪ್ರದೇಶದಲ್ಲಿ ಹೆಚ್ಚು ಪಟ್ಟಣಗಳಿಲ್ಲ. ಇರುವ ಪಟ್ಟಣಗಳಲ್ಲಿ ತಿರುವನಂತಪುರದ 744739 (2001) ಬಹು ಮುಖ್ಯ. ಇದು ಕೇರಳದ ರಾಜಧಾನಿ. ಆಲಪ್ಪುಳ 177079 (2001) ಮತ್ತು ಕೊಲ್ಲಂ 361441 (2001) ಪುರಾತನ ಪ್ರಸಿದ್ಧ ಬಂದರುಗಳು. ಈಗ ಇವುಗಳ ಪ್ರಾಮುಖ್ಯ ತಗ್ಗಿದೆ. ತಿರುವನಂತಪುರ-ಮಂಗಳೂರು ರೈಲು ಮಾರ್ಗದಲ್ಲಿ ಕೊಲ್ಲಂ ಒಂದು ಸಂಧಿ ಸ್ಥಳ. ಇಲ್ಲಿಂದ ತಮಿಳುನಾಡಿಗೆ ರೈಲ್ವೆ ಸಂಪರ್ಕವುಂಟು. ಕೊಲ್ಲಂನಲ್ಲೂ ಆಲಪ್ಪುಳದಲ್ಲೂ ಗೋಡಂಬಿ ಕಾರ್ಖಾನೆಗಳಿವೆ.

ತಿರುವನಂತಪುರ, ಕೊಲ್ಲಂ, ಕೋಟ್ಟಯಂ 60725 (2001), ಆಲಪ್ಪಳ, ತ್ರಿಚೂರ್ ಕಣ್ಣನ್ನೂರ್ 63795 (2001). ಕೋಳಿಕ್ಕೋಡ್ 436527 (2001), ಪಾಲಕ್ಕಾಡು 130736 (2001), ಎರ್ನಾಕುಳಂ, ಮಲಪ್ಪುರಂ ಇವು ಆಯಾ ಹೆಸರುಗಳು ಜಿಲ್ಲೆಗಳ ಮುಖ್ಯ ಪಟ್ಟಣಗಳು. ರಾಜ್ಯದಲ್ಲಿ 448 ಕಿಮೀ. ರಾಷ್ಟ್ರೀಯ ಹೆದ್ದಾರಿಗಳೂ 2,407 ಕಿಮೀ. ರಾಜ್ಯ ಹೆದ್ದಾರಿಗಳೂ 6,658 ಕಿಮೀ. ಜಿಲ್ಲಾ ರಸ್ತೆಗಳು 5,644 ಕಿಮೀ. ಗ್ರಾಮಾಂತರ ರಸ್ತೆಗಳೂ ಇವೆ. ಜಲಮಾರ್ಗಗಳ ಉದ್ದ 1785 ಕಿಮೀ. ಕೊಚ್ಚಿ ದೊಡ್ಡ ಬಂದರು. ಆಲಪ್ಪುಳ ಕೋಳಿಕ್ಕೋಡ್‌ಗಳು ಮಧ್ಯಮ ಗಾತ್ರದ ಬಂದರುಗಳು. ತಿರುವನಂತಪುರ, ಕೊಲ್ಲಂ, ಕೋಯಿಲ್ ತೋಟಂ, ಪೊನ್ನಾನಿ, ಬಡಗರ, ತಲಚ್ಚೇರಿ, ಕಣ್ಣನ್ನೂರು, ಅಳಿಕ್ಕಲ್ ಮತ್ತು ಕಾಸರಗೋಡು ಸಣ್ಣ ಬಂದರುಗಳು.

ರಾಜ್ಯದ ಮುಖ್ಯ ಭಾಷೆ ಮಲಯಾಳಂ, ತಮಿಳು ಕನ್ನಡ ಭಾಷೆಗಳನ್ನಾಡುವವರೂ ಅಧಿಕ ಸಂಖ್ಯೆಯಲ್ಲಿದ್ದಾರೆ. (ಪಿ.ಎಚ್.)

**ಕೇರಳ ಕರ್ಷಕನ್ :** ಕೇರಳ ಸರ್ಕಾರದ ಕೃಷಿ ಇಲಾಖೆಯ ಮುಖಪತ್ರ, ಮಾಸಿಕೆ; ತಿರುವನಂತಪುರದಿಂದ ಪ್ರಕಟವಾಗುತ್ತಿದೆ. 1954ರಲ್ಲಿ ಸ್ಥಾಪಿತ. ಪ್ರಾರಂಭದಲ್ಲಿ ಇದರ ವಾರ್ಷಿಕ ಚಂದಾ 12 ಆಣೆ. ಈಗ ಬಿಡಿ ಪ್ರತಿಯ ಬೆಲೆ. ಇದರಲ್ಲಿ ಕೃಷಿಕರಿಗೆ ಉಪಯುಕ್ತವಾದ ಲೇಖನಗಳಿರುತ್ತವೆ. ಕೃಷಿಗೆ ಸಂಬಂಧಿಸಿದ ಸಮಸ್ಯೆಗಳು, ಹೊಸ ವಿಧಾನಗಳು ಮತ್ತು ನೂತನ ಪ್ರವೃತ್ತಿಗಳನ್ನು ಕುರಿತ ಸಚಿತ್ರ ಲೇಖನಗಳನ್ನೊಳಗೊಂಡ ಈ ಪತ್ರಿಕೆಗೆ ಬೇಸಾಯ, ಹೈನುಗಾರಿಕೆ, ಪಶುಪೋಷಣೆ, ಸಹಕಾರ ಮುಂತಾದ ನಾನಾಕ್ಷೇತ್ರಗಳ ತಜ್ಞರು ಲೇಖನ ಬರೆಯುತ್ತಾರೆ. ಇದು ಮಲಯಾಳಂ ಭಾಷೆಯ ಪತ್ರಿಕೆ. ಕೃಷಿಯಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಅತ್ಯಂತ ಪ್ರಿಯವಾಗಿದೆ.

ಪತ್ರಿಕೆಯನ್ನು ತಿರುವಾಂಕೂರು-ಕೊಚ್ಚಿಯ ಕೃಷಿ ಇಲಾಖೆ ಆರಂಭಿಸಿತು. 1956ರಲ್ಲಿ ಕೃಷಿ ಸಮಾಚಾರ ಸೇವಾ ವ್ಯವಸ್ಥೆ ಆರಂಭವಾದಾಗ ಪತ್ರಿಕೆಯ ಪ್ರಕಟಣೆಯ ಕಾರ್ಯವನ್ನು ಅದಕ್ಕೆ ವಹಿಸಲಾಯಿತು. 1956ರಲ್ಲಿ ಕೇರಳ ರಾಜ್ಯ ಸ್ಥಾಪಿತವಾದಾಗ ಕೇರಳ ಕರ್ಷಕನ್ ಪತ್ರಿಕೆಯನ್ನು ಇನ್ನೂ ಆಕರ್ಷಕವಾಗಿ ಮಾಡಲು ಸರ್ಕಾರ ತೀರ್ಮಾನಿಸಿತು. ಪತ್ರಿಕೆಗಾಗಿ ಪೂರ್ಣ ವೇಳೆಯ ಸಂಪಾದಕನೊಬ್ಬನ್ನು ನೇಮಿಸಿ, ಕೃಷಿ ಸಮಾಚಾರ ಸೇವಾ ವ್ಯವಸ್ಥೆಯ ಸಿಬ್ಬಂದಿಯನ್ನು ಹೆಚ್ಚಿಸಲಾಯಿತು.

ಪತ್ರಿಕೆಯ ಪ್ರಕಟಣೆಯ ಕಾರ್ಯವನ್ನು ಕೃಷಿ ಸಮಾಚಾರ ಸೇವಾ ವ್ಯವಸ್ಥೆ ವಹಿಸಿಕೊಂಡಾಗ ಅದರ ಪ್ರಸಾರ 1,200. ಸಮಾಚಾರ ಸೇವಾ ವ್ಯವಸ್ಥೆಯ ಅಡಿಯಲ್ಲಿ ಪತ್ರಿಕೆಯ ಪ್ರಥಮ ಸಂಚಿಕೆ ಪ್ರಕಟವಾದ್ದು 1957ರ ಅಕ್ಟೋಬರಿನಲ್ಲಿ. ಅಲ್ಲಿಂದೀಚೆಗೆ ಪತ್ರಿಕೆ ಶೀಘ್ರವಾಗಿ ಪ್ರವರ್ಧಮಾನಕ್ಕೆ ಬಂದಿತು. **(ಕೆ.ಟಿ.)**

**ಕೇರಳ ಕೇಸರಿ :** ಕೇರಳದಲ್ಲಿ 1924ರಲ್ಲಿ ಆರಂಭವಾಗಿ 1926ರಲ್ಲಿ ನಿಂತು ಹೋದ ಮಲಯಾಳಂ ವಾರಪತ್ರಿಕೆ. ಇದರ ಉಗಮ, ಚಾಲನೆ ಮತ್ತು ಅಂತ್ಯಗಳು ಕೇರಳದ ವೃತ್ತಪತ್ರಿಕೆಗಳ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯ. ಆಗಿನ ಪರಿಸ್ಥಿತಿಯಲ್ಲಿ ಕೇರಳ ಕೇಸರಿ ತಳೆದ ಧೋರಣೆಯಿಂದಾಗಿ ಅದಕ್ಕೆ ಶಾಶ್ವತ ಕೀರ್ತಿ ಲಭ್ಯವಾಯಿತು. 500 ಪ್ರತಿಗಳ ಪ್ರಸಾರದೊಂದಿಗೆ ಆರಂಭವಾಗಿ, ಅತ್ಯಂತ ಪ್ರಭಾವಶಾಲಿಯಾಗಿ ಪರಿಣಮಿಸಿ, ಕೇರಳದ-ಮುಖ್ಯವಾಗಿ ಮಲಬಾರ್ ಪ್ರದೇಶದ-ಸಾಮಾಜಿಕ ರಾಜಕೀಯ ಜೀವನದ ಮೇಲೆ ತನ್ನ ಶಾಶ್ವತ ಮುದ್ರೆಯನ್ನೊತ್ತಿ ಮರೆಯಾಯಿತು.

ಪತ್ರಿಕೆಯ ಪ್ರಕಟಣೆ ಆರಂಭವಾದದ್ದು ಉತ್ತರ ಮಲಬಾರಿನ ಹಿಂದುಳಿದ ಪಟ್ಟಣಗಳಲ್ಲೊಂದಾದ ಬಡಗಾರದಲ್ಲಿ. ಕೇರಳದ ಹುಚ್ಚರ ವ್ಯವಸ್ಥೆ ಎಂದು ಕುಖ್ಯಾತಿ ಪಡೆದಿದ್ದ ಸಮಾಜವಿರೋಧಿ ಬಲಗಳನ್ನು ಪ್ರತಿಭಟಿಸುವುದೇ ಪತ್ರಿಕೆಯ ಉದ್ದೇಶವೆಂಬುದು ಅದರ ಸ್ಥಾಪಕ-ಸಂಪಾದಕ ಮೊಯಾರತ್ ಶಂಕರನ್ ಮಾಡಿದ ಘೋಷಣೆ. ಅಸ್ಪೃಶ್ಯತೆ, ಉತ್ತಮ ಕುಲಜರಿಂದಲೂ ದೊಡ್ಡ ಭೂಮಾಲೀಕರಿಂದಲೂ ನಡೆಯುತ್ತಿದ್ದ ದೀನದಲಿತರ ಶೋಷಣೆ-ಇವುಗಳ ವಿರುದ್ಧವಾಗಿ ಪತ್ರಿಕೆ ನಿರ್ದಾಕ್ಷಿಣ್ಯವಾಗಿ ಹೋರಾಟ ನಡೆಸಿತು. ಭಾಗ್ಯವಂತರೆನಿಸಿಕೊಂಡ ಅಲ್ಪಸಂಖ್ಯಾತರ ಹೆಸರಿನಲ್ಲಿ ಉನ್ನತ ಆದರ್ಶಗಳ ಘೋಷಣೆ ಮಾಡುತ್ತಿದ್ದವರನ್ನು ಪತ್ರಿಕೆ ಕಟುವಾಗಿ ಟೀಕಿಸಿತು. ಪಾನ ನಿರೋಧ ಚಳವಳಿಗೆ ಬೆಂಬಲ ನೀಡಿತು.

ಸಮಾಜದ ಅನೇಕ ಗಣ್ಯರೂ ಪ್ರಭಾವಶಾಲಿಗಳೂ ಪತ್ರಿಕೆಗೆ ಬೆಂಬಲವಾಗಿ ನಿಂತರು. ಪೋಲೀಸರ ಮತ್ತು ಅಧಿಕಾರಿಗಳ ಭ್ರಷ್ಟಾಚಾರವನ್ನು ಬಯಲಿಗೆಳೆಯುವುದರಲ್ಲಿ ಪತ್ರಿಕೆ ಹಿಂದೆ ಮುಂದೆ ನೋಡಲಿಲ್ಲ. ಉನ್ನತ ಪೋಲೀಸ್ ಅಧಿಕಾರಿಯೊಬ್ಬ ಅದರ ವಿರುದ್ಧ ಮಾನನಷ್ಟಮೊಕದ್ದಮೆ ಹೂಡಿ, ಬಹು ಭಾರಿ ಮೊತ್ತದ ಹಣದ ಪರಿಹಾರ ಕೇಳಿದ. ಕೋಳಿಕ್ಕೋಡಿನಲ್ಲಿ ಪತ್ರಿಕೆಯನ್ನು ಮುದ್ರಿಸುತ್ತಿದ್ದ ಮನೋರಮ ಮುದ್ರಣಾಲಯ ಅದನ್ನು ಅಚ್ಚು ಮಾಡಲು ಹೆದರಿತು. ಪ್ರಕಟಣೆ ಆರಂಭವಾದ ಆರು ತಿಂಗಳಲ್ಲಿಯೇ ಅದರ ಮುದ್ರಣಕಾರ್ಯ ಕಣ್ಣನ್ನೂರಿನ ಪ್ರಿನ್ಸ್ ಮುದ್ರಣಾಲಯಕ್ಕೆ ವರ್ಗವಾಗಬೇಕಾಯಿತು. ಆ ಮುದ್ರಣಾಲಯದವರೂ ಬ್ರಿಟಿಷ್ ಸರ್ಕಾರದ ಅಧಿಕಾರಿಗಳ, ಅದರಲ್ಲೂ ಪೋಲೀಸರ, ಅಸಮಾಧಾನಕ್ಕೆ ಒಳಗಾಗಲು ಇಷ್ಟಪಡಲಿಲ್ಲವಾಗಿ ಅಲ್ಲಿಯೂ ಬಹುಕಾಲ ಪತ್ರಿಕೆಯನ್ನು ಅಚ್ಚು ಮಾಡಲಾಗಲಿಲ್ಲ. ಪತ್ರಿಕೆಯ ಕತ್ತು ಹಿಸುಕುವ ಇಂಥ ಪರಿಸ್ಥಿತಿಯಲ್ಲೂ ಅದು ಹೆದರಲಿಲ್ಲ. ಅದರ ಮುದ್ರಣ ಮತ್ತು ಪ್ರಕಾಶನಕ್ಕಾಗಿಯೇ ಬಡಗಾರದಲ್ಲಿ ಕೇರಳ ಕೇಸರಿ ಮುದ್ರಣ ಮತ್ತು ಪ್ರಕಾಶನ ಕಂಪನಿ ಎಂಬ ಸಂಸ್ಥೆ ಸ್ಥಾಪಿತವಾಯಿತು. ಮಲಬಾರಿನ ಕಾಂಗ್ರೆಸ್ ಚಟುವಟಿಕೆಗಳಿಗೆ ಈ ಮುದ್ರಣಾಲಯವೊಂದು ಮುಖ್ಯ ಕೇಂದ್ರವಾಗಿ ಪರಿಣಮಿಸಿತು. ವೈಕ್ಕಂ ಸತ್ಯಾಗ್ರಹ ಕಾಲದಲ್ಲಿ ಆ ಚಳವಳಿಯ ಪರವಾಗಿ ಸಾರ್ವಜನಿಕಾಭಿಪ್ರಾಯವನ್ನು ರೂಪಿಸುವ ಕಾರ್ಯದಲ್ಲಿ ಪತ್ರಿಕೆ ವಹಿಸಿದ ಪಾತ್ರ ಪ್ರಮುಖವಾದ್ದು.

ಇಷ್ಟಾದರೂ ಪತ್ರಿಕೆ ಚಿರಾಯುವಾಗಿ ಬಾಳಲಿಲ್ಲ. ಅತ್ಯಂತ ಜನಪ್ರಿಯವಾಗಿ, ಪ್ರಭಾವಶಾಲಿಯಾಗಿ ಬದುಕಿದ ಆ ಪತ್ರಿಕೆಯ ಅಂತ್ಯಕ್ಕೆ ಕಾರಣವಾದ್ದು ಹಣದ ಮುಗ್ಗಟ್ಟಲ್ಲ. ಅದರ ತೀವ್ರ ಧೋರಣೆ, ರಾಜಕೀಯ ಸಾಮಾಜಿಕ ವಿಚಾರಗಳಲ್ಲಿ ನಿರ್ದಾಕ್ಷಿಣ್ಯಪರ ಅಭಿಪ್ರಾಯ–ಇವುಗಳಿಂದಾಗಿ ಅದು ಬಹುಕಾಲ ಬಾಳಲಾಗಲಿಲ್ಲ. ಸಾಮಾನ್ಯನಿಗೆ ನ್ಯಾಯ ದೊರಕಿಸುವ ಹೋರಾಟದಲ್ಲಿ ಕೊನೆಗೆ ಪತ್ರಿಕೆಯೇ ಬಲಿಯಾಯಿತು. (ಕೆ.ಟಿ.)

**ಕೇರಳ ಕೌಮುದಿ :** ಕೇರಳದ ಪ್ರಮುಖ ಮಲಯಾಳಂ ದಿನಪತ್ರಿಕೆಗಳಲ್ಲೊಂದು. 1911ರಲ್ಲಿ ವಾರಪತ್ರಿಕೆಯಾಗಿ ಆರಂಭವಾಯಿತು. ದಿವಂಗತ ಸಿ.ವಿ. ಕುಂಜುರಾಮನ್ ಇದರ ಸ್ಥಾಪಕ–ಸಂಪಾದಕ. ಕುಂಜುರಾಮನ್ ಪುತ್ರ ಕೆ. ಸುಕುಮಾರನ್ ಸಂಪಾದಕತ್ವ ವಹಿಸಿಕೊಂಡ ಮೇಲೆ 1940ರಲ್ಲಿ ಇದು ದಿನಪತ್ರಿಕೆಯಾಗಿ ಪರಿವರ್ತನೆಗೊಂಡಿತು. ಈಗಿನ ಸಂಪಾದಕರು ಎಂ ಎಸ್ ಮಣಿ. ಆಗ ಇದರ ಪ್ರಸಾರ 1,000. ಅಂದಿನಿಂದ ಏಕಪ್ರಕಾರವಾಗಿ ಬೆಳೆಯುತ್ತ ಬಂದು ಈಗ ಆ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಒಂದಾಗಿದೆ. ಕಳೆದ ಮೂರು ದಶಕಗಳಲ್ಲಿ ಕೇರಳರಾಜ್ಯದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪ್ರಗತಿಯಲ್ಲಿ ಇದು ವಹಿಸಿರುವ ಪಾತ್ರ ಗಮನಾರ್ಹವಾದ್ದು.

ಪತ್ರಿಕೆ ಯಾವ ರಾಜಕೀಯ ಪೂರ್ವಾಗ್ರಹಗಳಿಗೂ ತುತ್ತಾಗದೆ ಸ್ವತಂತ್ರ ಧೋರಣೆಯನ್ನು ಪಾಲಿಸಿಕೊಂಡು ಬರುತ್ತಿದೆ. ವಸ್ತುನಿಷ್ಠೆ, ಹಿತಮಿತ ವಿಮರ್ಶೆ–ಇವು ಪತ್ರಿಕೆಯ ಲಕ್ಷಣಗಳು. ಹಳೆಯ ತಿರುವಾಂಕೂರು ಪ್ರದೇಶದಲ್ಲಿ ಇದು ಹೆಚ್ಚು ಜನಪ್ರಿಯವಾಗಿದೆ. ರಾಜ್ಯದ ಇತರ ಕಡೆಗಳಲ್ಲೂ ಇದರ ಪ್ರಸಾರ ವಿಸ್ತರಿಸುತ್ತಿದೆ.

ಪತ್ರಿಕೆ ಪ್ರಕಟವಾಗುತ್ತಿರುವುದು ತಿರುವನಂತಪುರದಿಂದ. ಪ್ರಮುಖ ಸಮಾಚಾರ ಸಂಸ್ಥೆಗಳಿಂದ ಸುದ್ದಿ ತರಿಸುವುದರ ಜೊತೆಗೆ ಒಳನಾಡಿನಲ್ಲಿ ಸ್ವಂತ ಬಾತ್ಮೀದಾರರನ್ನು ನೇಮಿಸಿಕೊಂಡು, ಸುದ್ದಿ ವಿತರಣೆಯಲ್ಲಿ ಆದಷ್ಟು ಮುಂದಿರಲು ಇತರ ಪತ್ರಿಕೆಗಳೊಂದಿಗೆ ಇದು ಸ್ಪರ್ಧಿಸುತ್ತಿದೆ. (ಕೆ.ಟಿ.)

**ಕೇರಳ ಕ್ರಾನಿಕಲ್ :** 1961 ರಿಂದ 1969ರವರೆಗೆ ಕೇರಳದ ತ್ರಿಚೂರಿನಿಂದ ಪ್ರಕಟವಾಗುತ್ತಿದ್ದ ಇಂಗ್ಲಿಷ್ ದಿನಪತ್ರಿಕೆ. ಎಕ್ಸ್‌ಪ್ರೆಸ್ ಎಂಬ ಮಲೆಯಾಳಂ ದಿನಪತ್ರಿಕೆಯ ಪ್ರಕಾಶಕರಿಂದ ಸ್ಥಾಪಿತವಾಗಿತ್ತು. 1965ರವರೆಗೆ ಸಿ.ಎಚ್.ವಿ. ಪತಿ ಮತ್ತು ಅನಂತರ ಕೆ. ಕೃಷ್ಣನ್ ಸಂಪಾದಕರಾಗಿದ್ದರು. ಬಿಡಿಪ್ರತಿಯ ಬೆಲೆ ಏಳು ಪೈಸೆ. ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸುದ್ದಿಗಳನ್ನೂ ವಿಶೇಷ ಲೇಖನಗಳನ್ನೂ ಪ್ರಕಟಿಸುತ್ತಿದ್ದ ಈ ಪತ್ರಿಕೆ ಬದುಕಿದ್ದಷ್ಟು ಕಾಲ ನೇರ ನಿರ್ಭಯ ನೀತಿ ಅನುಸರಿಸುತ್ತಿತ್ತು. ಆರ್ಥಿಕ ಮುಗ್ಗಟ್ಟಿನಿಂದ ಇದು 1969ರಲ್ಲಿ ನಿಂತುಹೋಯಿತು. (ಎಸ್.ಐ.ಕೆ.)

**ಕೇರಳ ಟೈಮ್ಸ್ :** ಕೇರಳದ ಒಂದು ದಿನಪತ್ರಿಕೆ. 1957ರ ಅಕ್ಟೋಬರ್ 2ರಂದು ಆರಂಭವಾಯಿತು. ಕೊಚ್ಚಿಯ ಹಿಂದುಳಿದ ಕರಾವಳಿ ಪ್ರದೇಶದ ಹಿತ ಸಾಧನೆಯೇ ಇದರ ಸ್ಥಾಪನೆಯ ಮುಖ್ಯ ಉದ್ದೇಶ. ಹಿಂದೆ ಇದ್ದ ತಿರುವಾಂಕೂರು–ಕೊಚ್ಚಿ ಸರ್ಕಾರದ ನಿವೃತ್ತ ಕಾರ್ಯದರ್ಶಿ ಓ.ಪಿ. ಚುಮ್ಮರ್ ಮತ್ತು ಇನ್ನು ಕೆಲವರ ಪ್ರಯತ್ನದ ಫಲವಿದು.

ಪತ್ರಿಕೆಗೆ ಧನಪೋಷಣೆ ಮಾಡಲು ನಿರ್ಮಲಾ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಎಂಬ ಸಾರ್ವಜನಿಕ ಪರಿಮಿತ ಹೊಣೆ ಕಂಪನಿಯನ್ನು ಸ್ಥಾಪಿಸಲಾಗಿತ್ತು. ಇದು 1959ರಲ್ಲಿ ಅವಸಾನ ಹೊಂದಿತು. ಆದರೆ ಪತ್ರಿಕೆ ಕೊನೆಗೊಳ್ಳಲಿಲ್ಲ. ಇದರಲ್ಲಿ ಆಸಕ್ತಿ ತಳೆದಿದ್ದ ಕೆಲವು ವಿದ್ಯಾವಂತ, ಕೇರಳೀಯರು ಒಂದಾಗಿ ಸೇರಿ, 'ಕೇರಳ ಸಾಂಸ್ಕೃತಿಕ ಸಂಘ ಪರಿಮಿತ' ಎಂಬ ಲಾಭೋದ್ದೇಶರಹಿತ ಸಂಘವೊಂದನ್ನು ಸ್ಥಾಪಿಸಿಕೊಂಡು, ಅದರ ಪ್ರಕಟಣೆಯನ್ನು ವಹಿಸಿಕೊಂಡರು. ಸಂಘಕ್ಕೆ ವೇರಾಪೊಲಿಯ ಆಗಿನ ಆರ್ಚ್‌ಬಿಷಪರು ಪೋಷಕರಾದರು.

ಕೇರಳ ಟೈಮ್ಸ್ ಜಾತ್ಯತೀತ ಪ್ರಜಾಸತ್ತೆಗೆ ಮುಡಿಪಾದ ಸ್ವತಂತ್ರ ರಾಷ್ಟ್ರೀಯ ಪತ್ರಿಕೆಯೆಂದು ಘೋಷಿಸಿಕೊಂಡಿದೆ. ಅದು ಯಾವ ಪಕ್ಷದ ಪರವನ್ನೂ ವಹಿಸದಿದ್ದರೂ ಸ್ಥೂಲವಾಗಿ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯನೀತಿಯನ್ನು ಅನುಸರಿಸಿಕೊಂಡು ಬರುತ್ತಿದೆ. ಸಾಕಷ್ಟು ಜನಪ್ರಿಯತೆಯನ್ನೂ ಗಳಿಸಿದೆ.

ಪತ್ರಿಕೆ ಸ್ಪರ್ಧೆಯನ್ನೆದುರಿಸಬೇಕಾಗಿದ್ದರೂ ತನ್ನ ಪ್ರಸಾರವನ್ನು ಕ್ರಮವಾಗಿ ಹೆಚ್ಚಿಸಿಕೊಳ್ಳುತ್ತಿದೆ. ಜೇಕಬ್ ಕಿತು, ಕೆ.ಜಿ. ಆಂತೋಣಿ, ಎಂ.ಎಲ್. ಜೋಸೆಫ್–ಇವರು ಕಾಲಾನುಕ್ರಮವಾಗಿ ಇದರ ಸಂಪಾದಕರು. (ಕೆ.ಟಿ.)

**ಕೇರಳದ ಇತಿಹಾಸ : ಪ್ರಾಗಿತಿಹಾಸ:** ಕೇರಳದ ಪ್ರಾಗಿತಿಹಾಸ ನಿಖರವಾಗಿ ಆರಂಭವಾಗುವುದು ಕಬ್ಬಿಣದ ಯುಗದಲ್ಲಿ. ಆ ಕಾಲದ ಬೃಹತ್–ಶಿಲಾಸಮಾಧಿ ಸಂಸ್ಕೃತಿಗೆ ಸೇರಿದ ಅನೇಕ ರೀತಿಯ ಸಮಾಧಿಗಳು ಉತ್ತರದಲ್ಲಿ ಕೋಟ್ಟಾಯಂ ಜಿಲ್ಲೆಯಿಂದ ಹಿಡಿದು ದಕ್ಷಿಣದ ಕೊಲ್ಲಂ ಜಿಲ್ಲೆಯವರೆಗಿನ ಪ್ರದೇಶದಲ್ಲಿ ಬೆಳಕಿಗೆ ಬಂದಿವೆ. ಈ ಸಮಾಧಿಗಳನ್ನು 1 ಒರಟು ಬಂಡೆಗಳ ಕುಳ್ಳುಮಂಟಪ (ಡಾಲ್ಮೆನ್), 2 ಪ್ರವೇಶದ್ವಾರವಿರುವ ಶಿಲಾತೊಟ್ಟಿ (ಪೋರ್ಟ್‌ಹೋಲ್ಡ್ ಸಿಸ್ಟ್), 3 ಜಲ್ಲಿರಾಶಿ (ಕೇರ್ನ್), 4 ಶವಜಾಡಿ (ಅರ್ನ್), 5 ನೆಡುಗಲ್ಲು (ಮೆನ್‌ಹಿರ್), 6 ಟೋಪಿಕಲ್ಲು, 7 ಹೆಡೆಗಲ್ಲು (ಹುಡ್‌ಸ್ಟೋನ್), 8 ಭೂಗತಗುಹೆ ಎಂದು ಎಂಟು ರೀತಿಗಳಲ್ಲಿ ವಿಂಗಡಿಸಬಹುದು. (**ನೋಡಿ: ಬೃಹತ್ ಶಿಲಾಸಮಾಧಿ ಸಂಸ್ಕೃತಿ**). ಒಂದೊಂದು ಶಿಲಾವರ್ತುಲದ ಮಧ್ಯೆಯೂ ಅನೇಕ ಕುಳ್ಳು ಮಂಟಪಗಳು ತ್ರಿಚೂರು ಜಿಲ್ಲೆಯ ವರಂದರಪಲ್ಲಿ, ಕುನ್ನಾತುಪದಂ, ಕರುಣಥರ್‌ಗಳಲ್ಲೂ ಒಂಟಿ ಮಂಟಪಗಳು ಅದಿರಪಿಲ್ಲಿ ಜಲಪಾತ, ಪರಂಬಿಕುಲಮ್ ಮುಂತಾದೆಡೆಗಳಲ್ಲೂ ಇವೆ. ತ್ರಿಚೂರು ಜಿಲ್ಲೆಯಲ್ಲಿ ಶಿಲಾತೊಟ್ಟಿ ಸಮಾಧಿಗಳು ಪೋರ್ಕಲಂ, ತಿರುವಿಲ್ವಮಲ, ಕರಲಂ ಮತ್ತು ಪುಳಕ್ಕಲಗಳಲ್ಲಿಯೂ ಕೋಟ್ಟಾಯಂ ಜಿಲ್ಲೆಯ ವಲ್ಲಿಯನೂರು ಬಳಿಯೂ ದೊರಕಿವೆ. ಜಲ್ಲಿರಾಶಿ ಸಮಾಧಿಗಳು ಕೋಟ್ಟಯಂ ಜಿಲ್ಲೆಯ ಕಲ್ಲರ್, ವೇದಗಿರಿಬೆಟ್ಟ, ಕೊಲ್ಲಂ ಜಿಲ್ಲೆಯ ಪೂಥನ್‌ಕರ, ಕೊಡುಮಾನ್ ಮುಂತಾದೆಡೆಗಳಲ್ಲಿ ಸಿಕ್ಕಿವೆ. ಶವಜಾಡಿ ಸಮಾಧಿಗಳು ಎರ್ನಾಕುಲಂ ಜಿಲ್ಲೆಯ ಚೆಂಗಮನಾಡ್, ತ್ರಿಚೂರು ಜಿಲ್ಲೆಯ ಕಂಜಿರಕುಡ, ಕರುನ್‌ಥರ, ಕೊಲ್ಲಂ ಜಿಲ್ಲೆಯ ಅಂಗಡಿಕಲ್ ಮುಂತಾದ ಅನೇಕ ಸ್ಥಳಗಳಲ್ಲೂ ನೆಡುಗಲ್ಲು ಸಮಾಧಿಗಳು ಪಾಲಕ್ಕಾಡು ಜಿಲ್ಲೆಯ ಅತ್ತಪಡಿ, ಥಚ್ಚನ್ ಥುಕರ, ತ್ರಿಚೂರು ಜಿಲ್ಲೆಯ ಅನಪ್ಪರ, ಕುತ್ತೂರು, ಚುರತ್ತುರ, ಕೋಮಲ ಪರಥಲ, ಕೋಟ್ಟಯಂ ಜಿಲ್ಲೆಯ ಕೆಲ್ಲರ್ ಮುಂತಾದ ಸ್ಥಳಗಳಲ್ಲಿಯೂ ಕಂಡು ಬಂದಿವೆ. ಕೊನೆಯ ಮೂರು ರೀತಿಯ ಸಮಾಧಿಗಳು ಕೇರಳ ಪ್ರದೇಶಕ್ಕೆ ವಿಶಿಷ್ಟವಾದವು. ಟೋಪಿಕಲ್ಲುಗಳು ತ್ರಿಚೂರು ಜಿಲ್ಲೆಯ ಅರಿಯನ್ನೂರು, ಚೇರಮನ್‌ಗಾಡ್, ಪಾಲಕ್ಕಾಡು ಜಿಲ್ಲೆಯ ಉಂಗಲ್ಲೂರ್ ಮೊದಲಾದ ಸ್ಥಳಗಳಲ್ಲಿವೆ. ಹೆಡೆಕಲ್ಲು ಸಮಾಧಿಗಳು ತ್ರಿಚೂರು, ಕೋಟ್ಟಯಂ, ಪಾಲಕ್ಕಾಡು ಜಿಲ್ಲೆಗಳಲ್ಲಿ ಅರಿಯನ್ನೂರು, ಆಲನಲ್ಲೂರು ಮುಂತಾದ ಅನೇಕ ಸ್ಥಳಗಳಿವೆ. ಭೂಗತ ಸಮಾಧಿಗುಹೆಗಳು ಹೆಚ್ಚಾಗಿ ಕೋಳಿಕ್ಕೋಡ್, ಮಲಪ್ಪರಂ, ಕೋಟ್ಟಾಯಂ, ತ್ರಿಚೂರು ಜಿಲ್ಲೆಗಳಲ್ಲಿ ದೊರಕಿವೆ. ಇವೆಲ್ಲ ಲ್ಯಾಟರೈಟ್ ಕಲ್ಲುಗಳಲ್ಲಿ ಕೊರೆಯಲಾದವು. ಭೂಗತ ಗುಹಾಸಮಾಧಿಗಳಲ್ಲಿ ಮುಖ್ಯವಾಗಿ ತ್ರಿಚೂರು ಜಿಲ್ಲೆಯ ಪೋರ್ಕಲಮ್, ಕೋಟ್ಟಯಂ ಜಿಲ್ಲೆಯ ಕಣ್ಣವಂ, ಕಣ್ಣಾನೂರು ಜಿಲ್ಲೆಯ ವಲ್ಲಿಯನೂರು, ಕೋಳಿಕ್ಕೋಡ್ ಜಿಲ್ಲೆಯ ಪಾಲಂಗಾಡ್, ಕುಮಾರನ್ ಪುತ್ತೂರುಗಳನ್ನು ಹೆಸರಿಸಬಹುದು.

ಪೋರ್ಕಲಂನಲ್ಲಿ ನಡೆದಿರುವ ಉತ್ಖನನದಲ್ಲಿ ಮತ್ತು ಪ್ರಾಕೃತಿಕ ಕಾರಣಗಳಿಂದ ಅರೆಬರೆ ನಶಿಸಿರುವ ಅನೇಕ ಸಮಾಧಿಗಳಲ್ಲಿ ವಿವಿಧ ರೀತಿಯ ಕಬ್ಬಿಣದ ಆಯುಧಗಳು, ಕಾರ್ನೀಲಿಯನ್ ಮತ್ತಿತರ ವಸ್ತುಗಳ ಮಣಿಗಳು, ಕಪ್ಪು–ಕೆಂಪು ಮಡಕೆಗಳು ದೊರಕಿವೆ. ಇವೆಲ್ಲ ದಕ್ಷಿಣ ಭಾರತದ ಬೃಹತ್ ಶಿಲಾ ಸಂಸ್ಕೃತಿಯ ಕಾಲದಲ್ಲಿ ಪ್ರಚಲಿತವಾಗಿದ್ದವೇ. ಕೇರಳದ ಈ ಸಮಾಧಿಗಳನ್ನು ಪ್ರ.ಶ.ಪೂ. ಒಂದನೆಯ ಸಹಸ್ರಮಾನಕ್ಕೆ ಸೇರಿಸಬಹುದು.

ಪೋರ್ಕಲಂ ಬಿಟ್ಟರೆ ಬೇರೆಲ್ಲೂ ವೈಜ್ಞಾನಿಕ ರೀತಿಯ ಉತ್ಖನನಗಳು ನಡೆದಿಲ್ಲ. ಇತ್ತೀಚೆಗೆ ಕ್ರಾಂಗನೂರು ಬಳಿಯ ಚೇರಮಾನ್ ಪರಂಬುವಿನಲ್ಲಿ ನಡೆಸಿದ ಸಣ್ಣ ಗಾತ್ರದ ಉತ್ಖನನದಲ್ಲಿ ಪ್ರ.ಶ.ಪೂ. 13 ರಿಂದ 16ನೆಯ ಶತಮಾನಕ್ಕೆ ಸೇರಿದ ಕೆಲವು ಅವಶೇಷಗಳು ಮಾತ್ರ ದೊರಕಿವೆ. (ಎಸ್.ಎನ್.)

**ಇತಿಹಾಸ:** ಕೇರಳದ ಚರಿತ್ರೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು: 1. ಕೊಡಂಗಲ್ಲೂರು ರಾಜರ ಕಾಲ, 2. ತಂಪುರನ್ನರ ಕಾಲ, 3. ಬ್ರಿಟಿಷ್ ಸಾರ್ವಭೌಮತ್ವ ಕಾಲ ಮತ್ತು 4. ಭಾರತ ಸ್ವಾತಂತ್ರ್ಯಾನಂತರದ ಕಾಲ.

ಕೇರಳ ರಾಜ್ಯಕ್ಕೆ ಭಾರತದ ಚರಿತ್ರೆಯಲ್ಲಿ ಒಂದು ಪ್ರಮುಖ ಸ್ಥಾನವಿದೆ. ಭಾರತ ಮತ್ತು ಪಾಶ್ಚಾತ್ಯ ದೇಶಗಳ ನೇರ ಸಂಪರ್ಕ ಕೇರಳ ಪ್ರದೇಶದಲ್ಲಿ ಸಮುದ್ರದ ಮೂಲಕ ಪ್ರ.ಶ.ಪೂ. 1ನೆಯ ಸಹಸ್ರಮಾನದಿಂದ ಪ್ರಾರಂಭವಾಯಿತು. ರೋಮನ್ ನಾವಿಕ ಹಿಪ್ಪಾಲಸ್ ಪ್ರ.ಶ.ಪೂ. 1ನೆಯ ಶತಮಾನದಲ್ಲಿ ವಾಣಿಜ್ಯ ಮಾರುತಗಳ ಸಹಾಯದಿಂದ ಕಂಡುಹಿಡಿದ ಸಮುದ್ರಮಾರ್ಗದ ಮೂಲಕ ಕೊಡಂಗಲ್ಲೂರಿಗೆ ಬಂದ. ಆಗ ಕೇರಳವನ್ನಾಳುತ್ತಿದ್ದ ಚೇರಮನ್ ದೊರೆಗಳು ಲಕ್ಷದ್ವೀಪ ದ್ವೀಪಗಳನ್ನು ಆಕ್ರಮಿಸಿಕೊಂಡಿದ್ದರು. ರೋಮನ್ ಸಾಮ್ರಾಜ್ಯದೊಡನೆ ನಡೆಯುತ್ತಿದ್ದ ಲಾಭದಾಯಕ ವ್ಯಾಪಾರದ ಹತೋಟಿ ಪಡೆದಿದ್ದರು.

11ನೆಯ ಶತಮಾನದ ಪ್ರಾರಂಭದ ತನಕ ಕೇರಳರು ಮತ್ತು ಅವರಿಗೆ ಪೂರ್ವದಲ್ಲಿ ನೆರೆಯವರಾಗಿದ್ದ ಚೋಳರು ಮತ್ತು ಪಾಂಡ್ಯರು ಒಂದೇ ರೀತಿಯ ಭಾಷೆ ಮತ್ತು ಸಂಸ್ಕೃತಿಗಳನ್ನು ಹೊಂದಿದ್ದರು. ಪ್ರಸಕ್ತಶಕದ ಮೊದಲ ಮೂರು ಶತಮಾನಗಳ ಸಂಘಸಾಹಿತ್ಯದ ಪ್ರಕಾರ ಕೊಡಂಗಲ್ಲೂರಿನ ಚೇರಮನ್ ರಾಜರು ಉತ್ತರದಲ್ಲಿ ಕಾಸರಗೋಡಿನವರೆಗೂ ಪೂರ್ವಕ್ಕೆ ಕರೂರು ಮತ್ತು ಕೊಲ್ಲಿಮಲೈವರೆಗೂ ದಕ್ಷಿಣದಲ್ಲಿ ಕನ್ಯಾಕುಮಾರಿ ಭೂಶಿರದವರೆಗೂ ಪಶ್ಚಿಮದಲ್ಲಿ ಲಕ್ಷದ್ವೀಪ ದ್ವೀಪಗಳವರೆಗೂ ಅಧಿಕಾರ ಹೊಂದಿದ್ದರು. ರೋಮನ್ ಸಾಮ್ರಾಜ್ಯ ಮತ್ತು ಚೀನ ದೇಶಗಳೊಡನೆ ವ್ಯಾಪಾರ ಲಾಭದಾಯಕವಾಗಿತ್ತು. ಕೇರಳರು ಉಚ್ಛ್ರಾಯಸ್ಥಿತಿಯಲ್ಲಿದ್ದರು. ಆದರೆ ಪ್ರ.ಶ.4ನೆಯ ಶತಮಾನದಲ್ಲಿ ರೋಮನ್ ಚಕ್ರಾಧಿಪತ್ಯದ ಅವನತಿಯಿಂದಲೂ ನಾಯರರು ಮತ್ತು ಇತರರ ಆಕ್ರಮಣದಿಂದಲೂ ಈ ವ್ಯಾಪಾರಕ್ಕೆ ಧಕ್ಕೆ ಉಂಟಾಯಿತು.

988ರಲ್ಲಿ ಮೊದಲನೆಯ ರಾಜರಾಜ ಚೋಳನ ಕೇರಳ ದಂಡಯಾತ್ರೆ ಪ್ರಾರಂಭವಾಯಿತು. 1120ರಲ್ಲಿ ಚೋಳರು ಹಿಮ್ಮೆಟ್ಟಿದ್ದಾಗಲೇ ಅವರ ಆಕ್ರಮಣ ಕೊನೆಗೊಂಡಿದ್ದು, ಚೋಳರ ಆಕ್ರಮಣಕಾಲದಲ್ಲಿ ಚೇರರ ಆಳ್ವಿಕೆ ಕೊನೆಗೊಂಡು ಕೇರಳ ಸಣ್ಣಸಣ್ಣ ರಾಜ್ಯಗಳಾಗಿ ಒಡೆಯಿತು. ಪ್ರತಿರಾಜ್ಯದಲ್ಲೂ ಒಬ್ಬ ತಂಪುರನ್ ಅಥವಾ

ನಾಯಕನ ಆಳ್ವಿಕೆ ಸ್ಥಾಪಿತವಾಯಿತು. ನಾಯರರು ಮತ್ತು ಇತರರ ಆಕ್ರಮಣವಾಯಿತು. ನಾಯರರು ನಾಗಪೂಜೆ ಮಾಡುತ್ತಿದ್ದ ಸಿಥಿಯನರೆಂದೂ ಅವರು ಭಾರತಕ್ಕೆ ವಾಯವ್ಯ ಗಡಿಯಿಂದ ಬಂದು ಅನೇಕ ಭಾಗಗಳಲ್ಲಿ ನೆಲಸಿದರೆಂದೂ ಪ್ರತೀತಿ ಇದೆ. ನಾಗಪೂಜೆ ಮಾಡುವವರು ನಗರರೆನಿಸಿಕೊಂಡರೆಂದೂ ಈ ಹೆಸರು ಅನಂತರ ನಾಯರ್ ಎಂದು ಬದಲಾಯಿತೆಂದೂ ಒಂದು ಅಭಿಪ್ರಾಯವುಂಟು. ನಾಯರರು ದ್ರಾವಿಡರೆಂದು ಕಾಲ್ಡ್‌ವೆಲ್ ಮತ್ತು ಗುಂಡರ್ಟ್ ಹೇಳುತ್ತಾರೆ. ನಾಯರರು ಆರ್ಯರ ಮತ್ತು ದ್ರಾವಿಡರ ಸಂಸ್ಕೃತಿಯ ಅಂಶಗಳನ್ನು ಪಡೆದುಕೊಂಡಿದ್ದಾರೆ. ಕೇರಳದಲ್ಲಿ ನಂಬೂದರಿಗಳು ಪೂಜಾರಿಗಳಾಗಿದ್ದರು; ನಾಯರರು ದೇವಸ್ಥಾನಗಳ ಒಡೆಯರಾಗಿ ಹತೋಟಿಗಳಿಸಿದ್ದರು.

ಕೇರಳ ಪ್ರಸಕ್ತಶಕದ ಪ್ರಾರಂಭದಲ್ಲಿ ಚೇರರ ಅಧೀನದಲ್ಲಿ ಒಂದು ಚಿಕ್ಕ ರಾಜ್ಯವಾಗಿತ್ತು. ಕೊಡುಗಲ್ಲೂರು ಅದರ ರಾಜಧಾನಿ. ಕ್ರಮೇಣ ಚೇರ ದೊರೆಗಳು ಕೊಂಗಲನಾಡು, ಪುನ್ನಾಡು, ಕೊಲತುನಾಡು ಮತ್ತು ಕುಟ್ಟನಾಡನ್ನು ಆಕ್ರಮಿಸಿಕೊಂಡರು. ಚೇರರ ಅವನತಿಗೆ ಆ ರಾಜರ ಸೋಮಾರಿತನ ಮತ್ತು ಅಸಮರ್ಥತೆ ಕಾರಣ. ರೋಮನ್ ಚಕ್ರಾಧಿಪತ್ಯದಿಂದ ಆಮದು ಮಾಡಿಕೊಂಡ ಭೋಗ ಸಾಮಗ್ರಿಗಳೂ ಇವರ ಅವನತಿಗೆ ಕಾರಣವಾದುವು. ನಾಯರರು ಕೇರಳಕ್ಕೆ ಬಂದು ಈ ದೊರೆಗಳ ಅಧಿಕಾರವನ್ನೂ ನಾಶ ಮಾಡಿದರು. 6ನೆಯ ಶತಮಾನದಲ್ಲಿ ಪಲ್ಲವರು ಮತ್ತು ಪಾಂಡ್ಯರು ತಮ್ಮ ರಾಜ್ಯವನ್ನು ವಿಸ್ತರಿಸಿದರು. 645ರಿಂದ 670ರ ತನಕ ಆಳಿದ ಪಾಂಡ್ಯರಾಜ ಜಯಂತವರ್ಮ ಕೇರಳದ ಮೇಲೆ ದಂಡೆತ್ತಿ ಬಂದಾಗ ಕೇರಳದ ರಾಜರು ಪಾಂಡ್ಯರ ಶತ್ರುಗಳಾದ ಪಲ್ಲವರೊಡನೆ ಸೇರಿದರು. ಪಲ್ಲವರು ಜಯಶೀಲರಾದರು. ಆದರೆ ಚೇರಮನ್ ಪೆರುಮಾಳ್ ರಾಜನಾದ ಮೇಲೆ, ಪಾಂಡ್ಯರ ಮುನ್ನಡೆಯನ್ನು ತಡೆಗಟ್ಟಿದ. 844ರಲ್ಲಿ ಸ್ಥಾಣುರವಿ ಕೇರಳದ ರಾಜನಾದ. ಕೇರಳ ರಾಜನ ಸಹಾಯದಿಂದ ಚೋಳರು ಪ್ರವರ್ಧಮಾನರಾದರು. ಸ್ಥಾಣುರವಿ ಚೋಳರಾಜ 1ನೆಯ ಆದಿತ್ಯನ ಸಹಾಯಕ್ಕೆ ಹೋಗಿ ಪಲ್ಲವರನ್ನು ಸೋಲಿಸಿದ. ಆದರೆ ಚೋಳರು ಪಾಂಡ್ಯ ರಾಜ್ಯವನ್ನು ಆಕ್ರಮಿಸಿ ಕೇರಳದ ಕಡೆ ಗಮನಹರಿಸಿದರು. 1ನೆಯ ರಾಜರಾಜನ (985–1014) ಕಾಲದಲ್ಲಿ ಚೋಳರು ಕೇರಳದ ಮೇಲೆ ಯುದ್ಧ ಪ್ರಾರಂಭಿಸಿದರು. ಇದು 1ನೆಯ ಚೋಳ–ಚೇರ ಯುದ್ಧ, ಇದರಲ್ಲಿ ರಾಜರಾಜ ಸುಚೀಂದ್ರಂ ಕೊಟ್ಟರ್, ನಾಗರ್‌ಕೋಯಿಲ್ ಮತ್ತು ಕುಮಾರಿ ಪ್ರದೇಶಗಳನ್ನು ಆಕ್ರಮಿಸಿ ಅವನ್ನು ರಾಜರಾಜ ತೆನ್ನಾಡು ಎಂಬ ಪ್ರಾಂತ್ಯವನ್ನಾಗಿ ಮಾಡಿದ. ಅನಂತರ ಕೊಡಂಗಲ್ಲೂರಿನಲ್ಲಿ ಚೇರ ರಾಜ ಭಾಸ್ಕರ ರವಿವರ್ಮ ಚೋಳರಾಜನಿಗೆ ಶರಣಾಗತನಾದ. ರಾಜರಾಜನ ಮರಣಾನಂತರ ಭಾಸ್ಕರ ರವಿವರ್ಮ ಚೋಳರಾಜ 1ನೆಯ ರಾಜೇಂದ್ರನ ಸಾರ್ವಭೌಮತ್ವವನ್ನು ಅಂಗೀಕರಿಸಲಿಲ್ಲ. ಇದರಿಂದ 1018ರಲ್ಲಿ ರಾಜೇಂದ್ರ ದಂಡಯಾತ್ರೆ ಕೈಗೊಂಡು ಕೊಡಂಗಲ್ಲೂರನ್ನು ಆಕ್ರಮಿಸಿಕೊಂಡ. ಭಾಸ್ಕರವರ್ಮ ಯುದ್ಧದಲ್ಲಿ ಮರಣ ಹೊಂದಿದ. ಇದು 2ನೆಯ ಚೋಳ–ಚೇರ ಯುದ್ಧ 3ನೆಯ ಯುದ್ಧ 1034ರಲ್ಲಿ ಪ್ರಾರಂಭವಾಯಿತು. 1ನೆಯ ರಾಜಾಧಿರಾಜ ಚೋಳನಿಗೆ ಕೇರಳರು ಶರಣಾಗಲಿಲ್ಲ. 4ನೆಯ ಚೋಳ–ಚೇರ ಯುದ್ಧ 1070ರಲ್ಲಿ ಚೋಳದೊರೆ 1ನೆಯ ಕಲೋತ್ತುಂಗನ ಕಾಲದಲ್ಲಿ ನಡೆಯಿತು. ಆದರೆ 1102ರ ವರೆಗೆ ಕೇರಳದ ದೊರೆ ರಾಮನ್ ತಿರುವಡಿ ರಾಜಧಾನಿ ಕೊಡಂಗಲ್ಲೂರನ್ನು ವಶಪಡಿಸಿಕೊಂಡು ಕ್ರಮೇಣ ಚೋಳರನ್ನು ಹಿಮ್ಮೆಟ್ಟಿಸಿದ. ಚೋಳರು ಹಿಂದಿರುಗಿದ ಮೇಲೆ ತಂಪುರನ್ನರ ಕಾಲ ಪ್ರಾರಂಭವಾಯಿತು.

ಚೇರ–ಚೋಳ ಘರ್ಷಣೆಯಿಂದ ಕೇರಳದಲ್ಲಿ 18 ನಾಯಕರು ತಲೆಯೆತ್ತಿದರು. ಇವರಿಗೆ ಒಬ್ಬ ಸಾಮಾನ್ಯ ಪ್ರಭು ಇಲ್ಲದಿದ್ದುದರಿಂದ ಪರಸ್ಪರ ಕಾದಾಡುತ್ತಿದ್ದರು. ಇವರಲ್ಲಿ ಎರ್ನಾಡ್ ನಾಯಕ ಒಬ್ಬ. ಇವನನ್ನು ಸ್ವಾಮಿ ತಿರುಮುಲ್‌ಪಡ್ (ಗೌರವಯುತ ರಾಜ) ಎಂದು ಕರೆಯುತ್ತಿದ್ದರು. ಅನಂತರ ಇವನು ಸಾಮುರಿ ಎಂದು ಹೆಸರು ಪಡೆದ. ಪೋರ್ಚುಗೀಸರ ಬಾಯಲ್ಲಿ ಈ ಹೆಸರು ಜಾಮುರಿನ್ (ಜಾಮೊರಿನ್) ಎಂದಾಯಿತು. ಜಾಮೊರಿನ್ ಪೊಲನಾಡನ್ನು ಆಕ್ರಮಿಸಿಕೊಂಡು ಕೋಳಿಕ್ಕೋಡ್ ಪಟ್ಟಣವನ್ನು ನಿರ್ಮಿಸಿದ. ಇದನ್ನು ಐರೋಪ್ಯರು ಕ್ಯಾಲಿಕಟ್ ಎಂದರು. ಪಶ್ಚಿಮ ತೀರದಲ್ಲಿ ಇದು ಬಹು ಮುಖ್ಯ ರೇವಾಗಿದ್ದು ಇದರ ಹೆಸರು ಯೂರೋಪಿಗೂ ಹರಡಿತು. 15ನೆಯ ಶತಮಾನದ ಕೊನೆಗೆ ಜಾಮೊರಿನ್ ಕೇರಳದ ಸುಮಾರು ಅರ್ಧ ಭಾಗವನ್ನು ಆಳುತ್ತಿದ್ದ. ಅವನ ಬಳಿ 60,000 ಸಂಖ್ಯೆಯ ನಾಯರ್ ಸೈನ್ಯವಿತ್ತು. 1498ರ ಮೇ 20ರಂದು ಕೋಳಿಕ್ಕೋಡಿಗೆ ಅನಿರೀಕ್ಷಿತವಾಗಿ ಬಂದ ನಾಲ್ಕು ಪೋರ್ಚುಗೀಸ್ ಹಡಗುಗಳು ಕೇರಳದ ಚರಿತ್ರೆಯ ಸ್ವರೂಪವನ್ನೇ ಬದಲಾಯಿಸಿದುವು. ಕೇರಳ ಸುಮಾರು ಎರಡೂವರೆ ಶತಮಾನಗಳವರೆಗೆ ಐರೋಪ್ಯ ಸಾಮ್ರಾಜ್ಯಶಾಹಿಯೊಡನೆ ಹೋರಾಟ ನಡೆಸಿತು.

ಪೋರ್ಚುಗೀಸರು ಕೇರಳದಲ್ಲಿ 1498ರಿಂದ 1663ರ ತನಕ ಇದ್ದರು. 1498ರಲ್ಲಿ ಆಗಮಿಸಿದ ಪೋರ್ಚುಗೀಸರಿಗೆ ಜಾಮೊರಿನ್ ವ್ಯಾಪಾರ ಸೌಲಭ್ಯ ಮತ್ತು ರಕ್ಷಣೆಗಳನ್ನು ನೀಡಿದ. ಪೋರ್ಚುಗೀಸ್ ನಾವಿಕ ವ್ಯಾಸ್ಕೋ ಡ ಗ್ಯಾಮನಿಗೆ ಜಾಮೊರಿನ್ ಸತ್ಕಾರ ಕೂಟ ಏರ್ಪಡಿಸಿ, ಪೋರ್ಚುಗೀಸರ ಸ್ವಾಧೀನಕ್ಕೆ ಒಂದು ಕೋಠಿಯನ್ನು ಕೊಟ್ಟು ಅದನ್ನು ಕಾಯಲು ನಾಯರರನ್ನು ನೇಮಿಸಿದ. ಪೋರ್ಚುಗೀಸ್ ದೊರೆ ಸ್ವಲ್ಪ ಕಾಲದ ಅನಂತರ ಕವ್ರಾಲನನ್ನು ಕಳುಹಿಸಿ, ಜಾಮೊರಿನ್ ತನ್ನ ನಾಡಿನಿಂದ ಮುಸ್ಲಿಮರನ್ನು ಹೊರಗೋಡಿಸದಿದ್ದರೆ ಯುದ್ಧ ಮಾಡುವುದಾಗಿ ಹೇಳಿದ. ಸ್ವಾತಂತ್ರ್ಯಾಕಾಂಕ್ಷಿಯಾಗಿದ್ದ ಕೊಚ್ಚಿ ರಾಜನೊಡನೆ ಕವ್ರಾಲನ ಸ್ನೇಹ ಬೆಳೆಯಿತು. ಕವ್ರಾಲ್ ಹತ್ತು ಮುಸ್ಲಿಂ ಹಡಗುಗಳನ್ನು ಹಿಡಿದು ಅದರಲ್ಲಿದ್ದ ಮುಸ್ಲಿಂ ನಾಯಕರನ್ನು ಕೊಂದು ಹಡಗುಗಳಿಗೆ ಬೆಂಕಿ ಹಚ್ಚಿ ಕೊಚ್ಚಿಗೆ ಹೋಗಿ ಅಲ್ಲಿ ಒಂದು ವ್ಯಾಪಾರದ ಕೋಠಿಯನ್ನು ಸ್ಥಾಪಿಸಿದ. 1502ರಲ್ಲಿ ವ್ಯಾಸ್ಕೋ ಡ ಗ್ಯಾಮ ಪುನಃ ಬಂದು ಕೊಚ್ಚಿಯ ರಾಜನ ಮೇಲೆ ಹಲವು ಷರತ್ತುಗಳನ್ನು ಹಾಕಿದ. ಇದರಿಂದ ಪೋರ್ಚುಗೀಸರಿಗೆ ಕೊಚ್ಚಿಯ ವಿದೇಶೀ ವ್ಯಾಪಾರದ ಮೇಲೆ ಹತೋಟಿ ಲಭ್ಯವಾಯಿತಲ್ಲದೆ ಬೆಲೆ ನಿಗದಿ ಮಾಡುವ ಅಧಿಕಾರವೂ ಪ್ರಾಪ್ತವಾಯಿತು. ಕೋಟೆಗಳು, ಕೋಠಿಗಳು ಮತ್ತು ಚರ್ಚುಗಳನ್ನು ಕಟ್ಟಲು ಅವರು ಹಕ್ಕು ಪಡೆದರು. ಕೊಚ್ಚಿಯ ರಾಜ ಈ ಎಲ್ಲ ಷರತ್ತುಗಳಿಗೂ ಒಪ್ಪಿದರೂ 1503ರಲ್ಲಿ ಜಾಮೊರಿನನ ವಿರುದ್ಧ ಸಹಾಯ ಮಾಡಲಿಲ್ಲ. ಅಲ್ಬುಕರ್ಕ್ 1503ರಲ್ಲಿ ನೌಕಾಬಲದೊಡನೆ ಕೊಚ್ಚಿಗೆ ಬಂದಾಗ ಜಾಮೊರಿನ್ ಕೊಚ್ಚಿಯಿಂದ ಹಿಂದಿರುಗಿದ. ಪೋರ್ಚುಗೀಸರಿಗೂ ಜಾಮೊರಿನನಿಗೂ ಯುದ್ಧವಾಯಿತು. 1505ರಲ್ಲಿ ಆಲ್‌ಮಿಡನನ್ನು ವೈಸ್‌ರಾಯ್ ಆಗಿ ಕೊಚ್ಚಿಗೆ ಕಳುಹಿಸಲಾಯಿತು. ಇವನು ಕೊಚ್ಚಿಯ ರಾಜನನ್ನು ಅಧೀನದಲ್ಲಿಟ್ಟುಕೊಳ್ಳಲು ಉನ್ನಿ ರಾಮವರ್ಮನನ್ನು ರಾಜನನ್ನಾಗಿ ಮಾಡಿದ. 1513ರಲ್ಲಿ ಜಾಮೊರಿನನಿಗೂ ಪೋರ್ಚುಗೀಸರಿಗೂ ಒಪ್ಪಂದವಾಯಿತು. 1661ರಲ್ಲಿ ಡಚ್ಚರು ಕೇರಳಕ್ಕೆ ಆಗಮಿಸಿದ್ದರು. ಜಾಮೊರಿನ್ ಪೋರ್ಚುಗೀಸರನ್ನು ಓಡಿಸಲು ಡಚ್ಚರೊಡನೆ ಒಪ್ಪಂದ ಮಾಡಿಕೊಂಡ. ಡಚ್ಚರು ಪೋರ್ಚುಗೀಸರನ್ನು ಸೋಲಿಸಿದರು. ಹೀಗೆ ಪೋರ್ಚುಗೀಸರ ಆಳ್ವಿಕೆ ಕೊನೆಗೊಂಡಿತು. ಪೋರ್ಚುಗೀಸರ ಆಗಮನದಿಂದ ಜಾಮೊರಿನನ ಮುನ್ನಡೆಗೆ ತಡೆಯುಂಟಾಗಿ ಕೇರಳದ ಐಕ್ಯಕ್ಕೆ ಧಕ್ಕೆಯುಂಟಾಯಿತು. ಪೋರ್ಚುಗೀಸರು ಕೇರಳ ಮಹಿಳೆಯರನ್ನು ವಿವಾಹವಾದರು. 1541ರಲ್ಲಿ ಫ್ರಾನ್ಸಿಸ್ ಕ್ಸೇವಿಯರ್ ತಿರುವಾಂಕೂರಿಗೆ ಬಂದು ಅನೇಕರನ್ನು ಕ್ರೈಸ್ತಮತಕ್ಕೆ ಪರಿವರ್ತಿಸಿದ. ಈತ ಬೈಬಲನ್ನು ಮಲಯಾಳಂ ಭಾಷೆಗೆ ಅನುವಾದಿಸಿದ. ಇದಕ್ಕೆ ವೇದೋಪದೇಶಂ ಎಂದು ಹೆಸರು.

ವೈನಾಡ್ ನಾಯಕರು ತಿರುವಿತಂ ಕೊಡೆಯಲ್ಲಿ ವಾಸಿಸುತ್ತಿದ್ದರು. 16ನೆಯ ಶತಮಾನದಲ್ಲಿ ಬಂದ ಐರೋಪ್ಯರು ವೈನಾಡನ್ನು ಟ್ರಾವಂಕೂರ್ ಎಂದು ಕರೆದರು. ಮಾರ್ತಾಂಡವರ್ಮ ರಾಜನನ್ನು (1729–58) ಆಧುನಿಕ ತಿರುವಾಂಕೂರಿನ ಸ್ಥಾಪಕನೆಂದು ತಿರುವಾಂಕೂರಿನ ಚರಿತ್ರೆಯಲ್ಲಿ ಕರೆಯಲಾಗಿದೆ. ಈತ ಡಚ್ಚರೊಡನೆ ಸ್ನೇಹ ಬೆಳೆಸಿ ಒಪ್ಪಂದ ಮಾಡಿಕೊಂಡ. ಈತ ತನ್ನ ಅಧಿಕಾರವನ್ನು ಪದ್ಮನಾಭ ದೇವರಿಗೆ ಎರೆದುಕೊಟ್ಟು ಆತನ ದಾಸನಾಗಿ ರಾಜ್ಯಭಾರ ಮಾಡಿದ; ಜನ ದಂಗೆ ಎದ್ದರೆ ಅದು ದೇವರ ವಿರುದ್ಧ ದಂಗೆಯಾಗುತ್ತಿತ್ತು. 1754ರಲ್ಲಿ ಕೊಚ್ಚಿಯ ರಾಜ ಇವನಿಗೆ ಅಧೀನನಾದ. ಈತ ರಾಜ್ಯದ ಆಡಳಿತವನ್ನು ಉತ್ತಮಪಡಿಸಿ ಶಕ್ತಿಯುತವಾದ ಕೇಂದ್ರ ಸರ್ಕಾರವನ್ನು ಸ್ಥಾಪಿಸಿದ್ದಲ್ಲದೆ ಇಂಗ್ಲಿಷರೊಡನೆ ಮೈತ್ರಿ ಗಳಿಸಿದ್ದ. ಇವನು ರಾಜಕಾರಣ ನಿಪುಣನೂ, ದೈವಭಕ್ತನೂ ಉತ್ತಮ ಸೈನಿಕನೂ ಕಲಾಪೋಷಕನೂ ಆಗಿದ್ದ. ಡಚ್ಚರು ಈತನ ಶತ್ರುಗಳೊಡನೆ ಮೈತ್ರಿ ಬೆಳೆಸಿದರು. 1748ರಲ್ಲಿ ಈತ ಡಚ್ಚರನ್ನು ಸೋಲಿಸಿದ. 1766ರಲ್ಲಿ ಹೈದರ್ ಆಲಿ ಕೋಳಿಕ್ಕೋಡನ್ನು ಆಕ್ರಮಿಸಿಕೊಂಡ. ತಿರುವಾಂಕೂರಿನ ಮೇಲೆ ಹೈದರನ ದಾಳಿ ಆರಂಭವಾಗುವುದಕ್ಕೆ ಮುಂಚೆ 1789ರಲ್ಲಿ ಡಚ್ಚರು ಕೊಡಂಗಲ್ಲೂರನ್ನು ತಿರುವಾಂಕೂರಿನ ರಾಜನಿಗೆ ಮಾರಿದರು. 1795ರಲ್ಲಿ ಇಂಗ್ಲಿಷರು ಕೊಚ್ಚಿ ಮತ್ತು ಥಂಕಚೇರಿ ಕೋಟೆಗಳನ್ನು ವಶಪಡಿಸಿಕೊಂಡ ಫಲವಾಗಿ ಡಚ್ಚರು ಕೇರಳವನ್ನು ಬಿಡಬೇಕಾಯಿತು. ಮಾರ್ತಾಂಡವರ್ಮನ ಆಳ್ವಿಕೆಯಲ್ಲಿ ತಂಪುರನ್ನರ ಪ್ರಾಬಲ್ಯ ಕೊನೆಗೊಂಡಿತು. ಹೈದರ್ ಮತ್ತು ಟಿಪ್ಪೂಗಳ ದಾಳಿಯಿಂದ ಮಲಬಾರಿನಲ್ಲಿ ತಂಪುರನ್ನರ ಅವನತಿ ಪ್ರಾರಂಭವಾಯಿತು. ಅಂತಿಮವಾಗಿ ಇಂಗ್ಲಿಷರು ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ಇಂಗ್ಲಿಷರು 1615ರಲ್ಲಿ ಕೋಳಿಕ್ಕೋಡಿನಲ್ಲಿ ಒಂದು ವ್ಯಾಪಾರ ಕೋಠಿಯನ್ನು ಸ್ಥಾಪಿಸಿದರು. ಆದರೆ ಅದು ಬಹುಕಾಲ ಉಳಿಯಲಿಲ್ಲ. 1635ರಲ್ಲಿ ಅವರು ಕೊಚ್ಚಿಯಲ್ಲಿ ಮತ್ತೊಂದು ವ್ಯಾಪಾರ ಕೋಠಿಯನ್ನು ಸ್ಥಾಪಿಸಿದರು. 1663ರಲ್ಲಿ ಡಚ್ಚರು ಇಂಗ್ಲಿಷರನ್ನು ಕೊಚ್ಚಿಯಿಂದ ಹೊರದೂಡಿದರು. ಆದರೆ ಜಾಮೊರಿನ್ ಇಂಗ್ಲಿಷರಿಗೆ ವ್ಯಾಪಾರ ಸೌಲಭ್ಯಗಳನ್ನು ಒದಗಿಸಿಕೊಟ್ಟ. 1700ರ ವೇಳೆಗೆ ಇಂಗ್ಲಿಷರು ತಲಚ್ಚೇರಿಯಲ್ಲಿ ಸ್ಥಾಪಿತರಾಗಿದ್ದರು.

1761ರಲ್ಲಿ ಹೈದರ್ ಆಲಿ ಮೈಸೂರಿನ ನವಾಬನಾದ. ಇವನಿಗೆ ಕೇರಳವನ್ನು ಆಕ್ರಮಿಸಿಕೊಳ್ಳಬೇಕೆಂಬ ಅಭಿಲಾಷೆಯಿತ್ತು. 1766ರಲ್ಲಿ ಮಲಬಾರ್ ದಂಡಯಾತ್ರೆಯನ್ನು ಕೈಗೊಂಡು, ಜಾಮೊರಿನನನ್ನು ಸೋಲಿಸಿ, ಕೋಳಿಕ್ಕೋಡನ್ನು ಆಕ್ರಮಿಸಿಕೊಂಡ. ಅನಂತರ ಕೊಚ್ಚಿಯ ರಾಜನ ಶರಣಾಗತಿಯನ್ನು ಒಪ್ಪಿ, ಪಾಲಕ್ಕಾಡಿನಲ್ಲಿ ಕೋಠಿ ಕಟ್ಟಿದ. 1773ರಲ್ಲಿ ಹೈದರ್ ಪುನಃ ಮಲಬಾರಿಗೆ ಬಂದ. ಜಾಮೊರಿನ್ ಫ್ರೆಂಚರ ಸಹಾಯವನ್ನು ಕೇಳಿದರೂ ಪ್ರಯೋಜನವಾಗಲಿಲ್ಲ. 1776ರಲ್ಲಿ ಹೈದರನ ದಳಪತಿ ಸಾದರ್‌ಖಾನ್, ತ್ರಿಚೂರ್ ಮತ್ತು ಚಟ್‌ವೇಗಳನ್ನು ಆಕ್ರಮಿಸಿಕೊಂಡ. 1779ರಲ್ಲಿ ಇಂಗ್ಲಿಷರು ಕೋಳಿಕ್ಕೋಡನ್ನು

ಆಕ್ರಮಿಸಿಕೊಂಡರು. 1782ರಲ್ಲಿ ಹೈದರನ ಮರಣಾನಂತರ ಇಂಗ್ಲಿಷರು ಪಾಲಕ್ಕಾಡನ್ನು ಆಕ್ರಮಿಸಿಕೊಂಡರು. 1784ರಲ್ಲಿ ಆದ ಮಂಗಳೂರು ಒಪ್ಪಂದದ ಪ್ರಕಾರ ಇಂಗ್ಲಿಷರು ಮಲಬಾರನ್ನು ಟಿಪ್ಪು ಸುಲ್ತಾನನಿಗೆ ಬಿಟ್ಟುಕೊಟ್ಟರು. 1789ರಲ್ಲಿ ಟಿಪ್ಪು ತಿರುವಾಂಕೂರು ದಂಡಯಾತ್ರೆಯನ್ನು ಕೈಗೊಂಡು ಕೊಡಂಗಲ್ಲೂರು, ಕುರಿಯಪ್ಪಳ್ಳಿ ಮುಂತಾದ ಪ್ರದೇಶಗಳನ್ನು ಆಕ್ರಮಿಸಿಕೊಂಡ. ಇಂಗ್ಲಿಷರು ಟಿಪ್ಪುವಿನ ವಿರುದ್ಧ ಒಕ್ಕೂಟವನ್ನು ಸಾಧಿಸಿ, ಅವನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಕಡೆಗೆ ನುಗ್ಗಿದರು. ಇಂಗ್ಲಿಷರೊಡನೆ ಉತ್ತರ ಮಲಬಾರಿನ ರಾಜರು ಮತ್ತು ಜಾಮೊರಿನ್ ಒಪ್ಪಂದ ಮಾಡಿಕೊಂಡು, ತಮ್ಮ ನಾಡನ್ನು ತಮಗೆ ಹಿಂದಿರುಗಿಸಿದರೆ ಇಂಗ್ಲಿಷರಿಗೆ ಕಪ್ಪ ಕೊಡಲು ಒಪ್ಪಿದರು. ಕೊಚ್ಚಿಯ ರಾಜ ಟಿಪ್ಪುವಿಗೆ ತನ್ನ ನಿಷ್ಠೆಯನ್ನು ತ್ಯಜಿಸಿ ಇಂಗ್ಲಿಷರೊಡನೆ ಒಪ್ಪಂದ ಮಾಡಿಕೊಂಡು ಅವರಿಗೆ ಪೊಗದಿ ಕೊಡಲು ಒಪ್ಪಿದ. ಈ ಒಕ್ಕೂಟದಿಂದ ಟಿಪ್ಪುವಿಗೆ ಸೋಲಾಯಿತು. ಇಂಗ್ಲಿಷರು ಬೆಂಗಳೂರನ್ನು ಆಕ್ರಮಿಸಿಕೊಂಡು ಶ್ರೀರಂಗಪಟ್ಟಣದ ಕಡೆಗೆ ನುಗ್ಗಿದರು. ತನ್ನ ರಾಜಧಾನಿಯನ್ನು ಉಳಿಸಿಕೊಳ್ಳಲು ಟಿಪ್ಪು 1792ರಲ್ಲಿ ಇಂಗ್ಲಿಷರಿಗೆ ಮಲಬಾರ್, ಕೊಚ್ಚಿ ಮತ್ತು ಕೊಡಗನ್ನು ಬಿಟ್ಟು ಕೊಡಬೇಕಾಯಿತು. 1799ರಲ್ಲಿ ಇಂಗ್ಲಿಷರ ವಿರುದ್ಧ ನಡೆದ ಯುದ್ಧದಲ್ಲಿ ಟಿಪ್ಪು ಮಡಿದಾಗ ಇಂಗ್ಲಿಷರು ಮೈಸೂರು ರಾಜ್ಯವನ್ನು ಒಡೆಯರ್ ರಾಜವಂಶದವರಿಗೆ ಹಿಂದಿರುಗಿಕೊಟ್ಟರು. ಮೈಸೂರು ರಾಜರು ಇಂಗ್ಲಿಷರಿಗೆ ವೈನಾಡ್ ಮತ್ತು ಕನ್ನಡ ಜಿಲ್ಲೆಗಳನ್ನು ಬಿಟ್ಟುಕೊಟ್ಟರು. ಕೊಚ್ಚಿಯ ರಾಜ ಇಂಗ್ಲಿಷರ ಮಿತ್ರನಾದ. 1805ರಲ್ಲಿ ಬ್ರಿಟಿಷರು ಮತ್ತು ತಿರುವಾಂಕೂರು ರಾಜರಿಗೆ ಒಪ್ಪಂದವಾಗಿ ತಿರುವಾಂಕೂರಿನಲ್ಲಿ ಬ್ರಿಟಿಷರ ಸಾರ್ವಭೌಮತ್ವ ಸ್ಥಾಪಿತವಾಯಿತು. ಕೇರಳದ ಚರಿತ್ರೆಯಲ್ಲಿ ಮಧ್ಯಯುಗ ಇಲ್ಲಿಗೆ ಕೊನೆಗೊಂಡಿತು.

ಚೋಳರ ಆಕ್ರಮಣದಿಂದ 11ನೆಯ ಶತಮಾನದಲ್ಲಿ ಕೇರಳ 18 ನಾಡುಗಳಾಗಿ ಒಡೆದು ಹೋಗಿದ್ದುದು 19ನೆಯ ಶತಮಾನದಲ್ಲಿ ಮೂರು ರಾಜಕೀಯ ವಿಭಾಗಗಳಾಗಿ ಒಂದುಗೂಡಿತು. ಇವು 7,625 ಚಕಿಮೀ ವಿಸ್ತಾರದ ತಿರುವಾಂಕೂರು, 1,417 ಚಕಿಮೀ ವಿಸ್ತಾರದ ಕೊಚ್ಚಿ ಮತ್ತು 5,787 ಚಕಿಮೀ ವಿಸ್ತಾರದ ಬ್ರಿಟಿಷ್ ಮಲಬಾರ್. 1758ರಿಂದ 1798ರ ತನಕ ಆಳಿದ ಕಾರ್ತಿಕ ತಿರುನಾಳ್ ರಾಮವರ್ಮ ದೊರೆ ತಿರುವಾಂಕೂರಿನ ರಾಜಧಾನಿಯನ್ನು ಕಲ್‌ಕುಲಂ ಅಥವಾ ಪದ್ಮನಾಭಪುರದಿಂದ ತಿರುವನಂತಪುರಕ್ಕೆ ಬದಲಿಸಿದ. ಈತ ವ್ಯವಸಾಯಕ್ಕೆ ಉತ್ತೇಜನ ಕೊಟ್ಟನಲ್ಲದೆ ಹೊಸ ನಾಣ್ಯಗಳನ್ನೂ ಮುದ್ರಿಸಿದ. ಬಾಲರಾಮವರ್ಮನ (ಆಳ್ವಿಕೆ : 1798–1810) ದಿವಾನ್ ವೇಲುತಂಪಿ ಅನೇಕ ಸುಧಾರಣೆಗಳನ್ನು ಆಚರಣೆಗೆ ತಂದ. 1810 ರಿಂದ 1814ರ ತನಕ ಗೌರಿ ಲಕ್ಷ್ಮೀಬಾಯಿ ತಿರುವಾಂಕೂರಿನ ಪ್ರಥಮ ರಾಣಿಯಾಗಿ ಆಳಿದಳು. 1860 ರಿಂದ 1880ರ ತನಕ ಆಳಿದ ರಾಮವರ್ಮನ ಕಾಲದಲ್ಲಿ ತಿರುವಾಂಕೂರು ಮಾದರಿ ಸಂಸ್ಥಾನವಾಗಿತ್ತು. ಅನಂತರ ಬಂದ ರಾಜರು ಸಂಸ್ಥಾನದ ಈ ಕೀರ್ತಿಯನ್ನು ಉಳಿಸಿಕೊಂಡು ಬಂದರು.

20ನೆಯ ಶತಮಾನದ ಆದಿಯಲ್ಲಿ ಸ್ವಾತಂತ್ರ್ಯ ಚಳವಳಿ ಕೇರಳಕ್ಕೂ ಹಬ್ಬಿತು. 1903ರಲ್ಲಿ ಮಲಬಾರ್ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಸ್ಥಾಪಿಸಲಾಯಿತು. ಸಂಸ್ಥಾನದ ಪ್ರಜೆಗಳ ರಾಜಕೀಯ ಆಶೋತ್ತರಗಳಿಗೆ ಪ್ರಭುತ್ವ ಮಾನ್ಯತೆ ನೀಡುವುದು ಅನಿವಾರ್ಯವಾಯಿತು. 1904ರಲ್ಲಿ ತಿರುವಾಂಕೂರಿನಲ್ಲಿ ಶ್ರೀಮುಲಂ ವಿಧಾನಸಭೆಯನ್ನು ಸ್ಥಾಪಿಸಲಾಯಿತು. 1919ರಲ್ಲಿ ಕೊಚ್ಚಿ ಸಂಸ್ಥಾನದಲ್ಲಿ ಪ್ರಾಂತೀಯ ಕಾಂಗ್ರೆಸ್ ಸಮಿತಿ ಸ್ಥಾಪಿತವಾಯಿತು. 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ 1931ರ ಗುರುವಾಯೂರು ಸತ್ಯಾಗ್ರಹ, ಯುವಜನರಲ್ಲಿ ಜಾಗೃತಿಯನ್ನು ಹೆಚ್ಚಿಸಿದವು. ಅದೇ ವರ್ಷ ತಿರುವಾಂಕೂರಿನಲ್ಲಿ ಯುವಜನ ಸಂಘವನ್ನು ಸ್ಥಾಪಿಸಲಾಯಿತು. 1932ರಲ್ಲಿ ಎರಡನೆಯ ಉಪ್ಪಿನ ಸತ್ಯಾಗ್ರಹ ನಡೆಯಿತು. ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪಿತವಾದ್ದು 1939ರಲ್ಲಿ. 1942ರ ಸ್ವಾತಂತ್ರ್ಯ ಚಳವಳಿ ಕೇರಳದಲ್ಲೂ ನಡೆಯಿತು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಭಾರತ ಒಕ್ಕೂಟಕ್ಕೆ ಸೇರಿದುವು. 1949ರಲ್ಲಿ ಈ ಎರಡು ಸಂಸ್ಥಾನಗಳ ಐಕ್ಯವಾಯಿತು. ಈಗಿನ ಕೇರಳ ರಾಜ್ಯ ಸ್ಥಾಪನೆಯಾದ್ದು 1956ರಲ್ಲಿ. (ಎ.ಎ.ಎ.)

**ಕೇರಳದ ಕಾಡರರು : ನೋಡಿ – ಆದಿವಾಸಿಗಳು**

**ಕೇರಳದ ನಾಣ್ಯಗಳು :** ಕೇರಳದ ನಾಣ್ಯಗಳನ್ನು ಕುರಿತ ಅಧ್ಯಯನ ಇಲ್ಲಿಯ ತನಕ ಕ್ರಮಬದ್ಧವಾಗಿ ನಡೆದಿಲ್ಲ. ಕೋಟ್ಟಯಂ ಹಾಗೂ ಇಯ್ಯಲ್ ಎಂಬಲ್ಲಿ ಹಲವು ವರ್ಷಗಳ ಹಿಂದೆ ಕಂಡು ಬಂದ ಎರಡು ನಾಣ್ಯರಾಶಿಗಳಲ್ಲಿ ಹಲವು ಮುದ್ರಾಂಕಿತ ಅಥವಾ ಅಚ್ಚೊತ್ತಿದ ನಾಣ್ಯಗಳೂ (ಪಂಚ್‌ಮಾರ್ಕ್ಡ್) ರೋಮನ್ ನಾಣ್ಯಗಳೂ ದೊರೆತುವು. ಅಚ್ಚೊತ್ತಿದ ನಾಣ್ಯಗಳು ಭಾರತದಲ್ಲಿ ಪ್ರ.ಶ.ಪೂ. ಸು. 7ನೆಯ ಶತಮಾನದಿಂದಲೂ ಚಲಾವಣೆಯಲ್ಲಿದ್ದುವೆಂದು ತಿಳಿದು ಬರುತ್ತದೆ. ಕೇರಳದಲ್ಲಿ ದೊರೆತಿರುವ ಅಚ್ಚೊತ್ತಿದ ನಾಣ್ಯಗಳ ಕಾಲವನ್ನು ನಿರ್ಣಯಿಸುವುದು ಕಷ್ಟಸಾಧ್ಯ. ಆದರೂ ಅವುಗಳ ಮೇಲೆ ಮುದ್ರಿತವಾಗಿರುವ ಚಿಹ್ನೆಗಳು ಭಾರತದ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ದೊರೆತಿರುವ ಅಂಥ ನಾಣ್ಯಗಳ ಮುದ್ರಿತ ಚಿಹ್ನೆಗಳೊಂದಿಗೆ ಸರಿ ಹೊಂದುತ್ತವೆ. ರೋಮನ್ ನಾಣ್ಯಗಳಲ್ಲಿ ಪ್ರ.ಶ. 1ನೆಯ ಶತಮಾನದ ಅರಸುಗಳಾದ ಟೈಬೀರಿಯಸ್, ಕ್ಲಾಡಿಯಸ್, ನೀರೋ, ಟ್ರೇಜನ್, ಆಗಸ್ಟಸ್ (ಆಕ್ಟೇವಿಯನ್) ಇವರು ಹೊರಡಿಸಿದ ನಾಣ್ಯಗಳೂ ರೋಮನ್ ಪ್ರಜಾರಾಜ್ಯ ನಾಣ್ಯಗಳೂ ದೊರೆತಿವೆ.

ಕೇರಳದ ಮಧ್ಯಯುಗೀನ ಶಾಸನಗಳಲ್ಲಿ ಕವಿಂಜು, ಕಾಣಂ ಎಂಬ ಬಂಗಾರದ ನಾಣ್ಯಗಳ, ಪಣಂ, ಕಾಶು, ಅವಿಗಚ್ಚು ಇತ್ಯಾದಿ ಹಲವು ಬಗೆಯ ಇತರ ನಾಣ್ಯಗಳ ಉಲ್ಲೇಖವಿದೆ. 9ನೆಯ ಶತಮಾನದ ಕೇರಳದ ಶಾಸನವೊಂದರಲ್ಲಿ ಉಕ್ತವಾಗಿರುವ ತೀನಾರಂ ಎಂಬ ನಾಣ್ಯ ದೀನಾರವನ್ನು ನೆನಪಿಸುತ್ತದೆ. ಮಧ್ಯಯುಗದ ಪೂರ್ವಾರ್ಧದಲ್ಲಿ ಕೇರಳದ ಮೇಲೆ ಚೋಳರ ಪ್ರಭಾವ ಗಣನೀಯ ಪ್ರಮಾಣದ್ದಾಗಿತ್ತಾಗಿ, ಇಲ್ಲಿ ಚೋಳರ ನಾಣ್ಯಗಳೂ ಚಲಾವಣೆಯಲ್ಲಿದ್ದಿರಬೇಕು. ಇನ್ನು ಸ್ಥಳೀಯ ಅರಸರಾದ ಚೇರರ ನಾಣ್ಯಗಳು ಕೇರಳದಲ್ಲಿ ದೊರೆತಿಲ್ಲವಾದರೂ 10ನೆಯ ಶತಮಾನದ ವೇಳೆಗೆ ಅವರು ಸ್ವಾಧೀನಪಡಿಸಿಕೊಂಡ ಕೊಂಗು ಪ್ರಾಂತ್ಯದಲ್ಲಿ ಚೇರರ ಬಿಲ್ಲಿನ ಚಿಹ್ನೆಯಿಂದ ಕೂಡಿದ ಬಂಗಾರದ ಹಾಗೂ ತಾಮ್ರದ ನಾಣ್ಯಗಳು ದೊರೆತಿವೆ. ಶ್ರೀ ವೀರಕೇರಲಸ್ಯ ಎಂಬ ನಾಗರೀ ಆಲೇಖ್ಯದಿಂದ ಕೂಡಿದ ನಾಣ್ಯಗಳೂ 11–12ನೆಯ ಶತಮಾನಗಳಲ್ಲಿ ಕೇರಳದಲ್ಲಿ ಚಲಾವಣೆಯಲ್ಲಿದ್ದುವು. ತಿರುವಾಂಕೂರು ಪ್ರದೇಶದಲ್ಲಿ ಚಲಾವಣೆಯಲ್ಲಿದ್ದ ರಾಶಿ ಎಂಬ ನಾಣ್ಯಗಳು 10ನೆಯ ಶತಮಾನದಷ್ಟು ಹಿಂದಿನವಿದ್ದಿರಬಹುದು ಎಂದು ಊಹಿಸಲಾಗಿದೆ.

ಕೇರಳ ಇತಿಹಾಸದ ಮಧ್ಯಯುಗದ ಉತ್ತರಾರ್ಧಕ್ಕೆ ಹಾಗೂ ಅನಂತರದ ಕಾಲಕ್ಕೆ ಸಂಬಂಧಿಸಿದಂತೆ ಮೊಗಲ್ ಅರಸರ ಬೆಳ್ಳಿ ನಾಣ್ಯಗಳೂ ವಿಜಯನಗರದ ನಾಣ್ಯಗಳೂ ಟಿಪ್ಪು ಸುಲ್ತಾನನ ತಾಮ್ರದ ಪೈಸೆಗಳೂ ವೀರರಾಯ ಪಣ, ರಾಶಿಪಣ ಎಂಬ ನಾಣ್ಯಗಳೂ ಇಂಗ್ಲಿಷ್ ದೊರೆ 4ನೆಯ ವಿಲಿಯಂ ಹಾಗೂ ವಿಕ್ಟೋರಿಯ ರಾಣಿಯ ಬೆಳ್ಳಿ ನಾಣ್ಯಗಳೂ ದೊರೆತಿವೆ.

ಇನ್ನು 17–19ನೆಯ ಶತಮಾನಗಳ ಅವಧಿಯಲ್ಲಿ ಕೇರಳದ ತಿರುವಾಂಕೂರು, ಕೊಚ್ಚಿ, ಕಣ್ಣಾನೂರು ಮತ್ತು ಕೋಳಿಕ್ಕೋಡ್ ಸಂಸ್ಥಾನಗಳು ಹೊರಡಿಸಿದ ಹಲವು ಬಗೆಯ ನಾಣ್ಯಗಳಲ್ಲಿ (ಬಂಗಾರದ) ಅನಂತರಾಯನ್ ಪಣಂ, ಅದರ ಅರ್ಧದಷ್ಟು ಮೌಲ್ಯದ ಚಿನ್ನ ಪಣಂ, ಕಲಿಪಣಂ, (ಬೆಳ್ಳಿಯ) ವೆಳ್ಳಿಪಣಂ, ಚಕ್ರಂ, ಚಿನ್ನ ಚಕ್ರಂ, ಪುತ್ತನ್ ಮತ್ತು (ತಾಮ್ರದ) ಕಾಶು, ಅರಚಕ್ರಂ–ಇವು ಮುಖ್ಯವಾದವು.

ಕೇರಳದಲ್ಲಿ ದೊರೆತಿರುವ ವಿದೇಶಿ ನಾಣ್ಯಗಳಲ್ಲಿ ರೋಮನ್ ನಾಣ್ಯಗಳಷ್ಟೇ ಅಲ್ಲದೆ ಈಜಿಪ್ಟಿನ ಆಟೋಮನ್ ಕಲೀಫರು ಹೊರಡಿಸಿದ ಬಂಗಾರದ ನಾಣ್ಯಗಳೂ ಸೇರಿವೆ. ಅಲ್ಲದೆ, ಇತ್ತೀಚೆಗೆ ತಿರುವಂತಪುರಂನ ಅನಂತಪದ್ಮನಾಭ ದೇಗುಲದಲ್ಲಿ ಈಸ್ಟ್‌ಇಂಡಿಯಾ ಕಂಪನಿ ತಿರುವಾಂಕೂರು ರಾಜರ ಇಪ್ಪತ್ತೂ ಕೆ.ಜಿ.ಗೂ ಅಧಿಕ ಸುವರ್ಣ ನಾಣ್ಯಗಳು ದೊರೆತಿವೆ. (ಕೆ.ವಿ.ಆರ್.)

**ಕೇರಳದ ಮೂರ್ತಿಶಿಲ್ಪ :** ಕೇರಳದ ಪ್ರಾಚೀನ ಮೂರ್ತಿಶಿಲ್ಪಗಳು ದ್ರಾವಿಡ ಶೈಲಿಗೆ ಸೇರಿದವು. ಕರಾವಳಿಯ ದಕ್ಷಿಣದ ಅಂಚಿನ ಬಳಿ ಇರುವ ಕವಿಯೂರ್ ಎಂಬಲ್ಲಿ ಬಂಡೆಯಲ್ಲಿ ಕೊರೆದಿರುವ ಶಿಲ್ಪ ಪ್ರಾಯಶಃ ಕೇರಳ ಶೈಲಿಯ ಅತ್ಯಂತ ಪ್ರಾಚೀನ ಉದಾಹರಣೆ. ಇದರಲ್ಲಿ ದ್ವಾರಪಾಲ ಅಥವಾ ಒಬ್ಬ ಸ್ಥಳೀಯ ಗಾಯಕ ಕೈಕಟ್ಟಿ ನಿಂತಂತಿದೆ; ಅಂಗಾಂಗ ಸೌಷ್ಠವ, ಕನಿಷ್ಠ ಅಲಂಕರಣ ಮುಂತಾದ ವೈಶಿಷ್ಟ್ಯಗಳಿಂದ ಕೂಡಿ ಇದು ಪಲ್ಲವ ಶೈಲಿಯಲ್ಲಿದೆ. ವಿಳಿಂಬಜಮ್ ಗುಹೆಯ ಮುಂಭಾಗದಲ್ಲಿರುವ ಶಿಲ್ಪಗಳೂ ಇದೇ ಕಾಲದವು. ಚಿತರಲ್ ಬೆಟ್ಟದಲ್ಲಿರುವ ಜೈನ ಕೆತ್ತನೆಗಳು ಮಾವೆಲಿಕರದ ಬುದ್ಧ ಪ್ರತಿಮೆ 9ನೆಯ ಶತಮಾನದ ಶಿಲ್ಪಗಳು. ಇವೆಲ್ಲವೂ ಪಲ್ಲವ ಶೈಲಿಯಿಂದ ಬೆಳೆದ ಶಿಲ್ಪನಿರೂಪಣ ತಂತ್ರಕ್ಕೆ ಸೇರಿವೆ. ಬುದ್ಧನ ಪ್ರತಿಮೆಯ ರುಂಡ ಮತ್ತು ಕೇಶನಿರೂಪಣೆಗಳು ನಾಗಪಟ್ಟಣದ ಕಂಚಿನ ಪ್ರತಿಮೆಗಳನ್ನು ಜ್ಞಾಪಕಕ್ಕೆ ತರುತ್ತವೆ. ನಿರಮಂಕರದಲ್ಲಿರುವ, ಸುಮಾರು 14ನೆಯ ಶತಮಾನದ ವಿಷ್ಣುಮೂರ್ತಿ ಕೇರಳದ ಉತ್ತಮ ಶಿಲ್ಪಗಳಲ್ಲೊಂದು. ಚತುರ್ಭುಜನಾಗಿ, ಸಮಭಂಗದಲ್ಲಿ ಕಟಿ ಮತ್ತು ವರದ ಹಸ್ತಗಳನ್ನುಳ್ಳ ಈ ಮೂರ್ತಿ ಸಮಕಾಲೀನ ದಕ್ಷಿಣ ಭಾರತದ ಶೈಲಿಯನ್ನನುಸರಿಸಿದೆ. ಪ್ರಾಚೀನ ನಿರೂಪಣ ಸಂಪ್ರದಾಯಗಳನ್ನೇ ಉಳಿಸಿಕೊಂಡಿದೆ. ಈ ಸಂಪ್ರದಾಯನಿಷ್ಠೆ ಕೇರಳ ಶಿಲ್ಪದ ವೈಶಿಷ್ಟ್ಯ. ತ್ರಿಚೂರು ಜಿಲ್ಲೆಯ ಇರುನಿಲಂ ಕೊಡೆಯಲ್ಲಿರುವ ಹಲವು ಅರೆಶಿಲ್ಪಗಳೂ ವೈಕ್ಕಂ ಗುಡಿಯಲ್ಲಿರುವ ಶಿಲ್ಪಗಳೂ ಅನಂತರದ ಕೇರಳ ಶೈಲಿಯಲ್ಲಿವೆ. ತಿರುವನಂತಪುರದ ಕಟ್ಟಡದಲ್ಲಿರುವ ಶಿಲ್ಪಾಕೃತಿಗಳು ದಕ್ಷಿಣ ಭಾರತದ ವಿಜಯನಗರದ ಶೈಲಿಯಲ್ಲಿವೆ. ಕೇರಳದಲ್ಲಿ ಶಿಲಾಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿಲ್ಲ. 8–9ನೆಯ ಶತಮಾನಗಳ ಪ್ರಾಚೀನ ಶಿಲ್ಪಗಳೂ 16ನೆಯ ಶತಮಾನದ ಅನಂತರದ ಕೆಲವು ಶಿಲ್ಪಗಳೂ ಸಮಕಾಲೀನ ದಕ್ಷಿಣ ಭಾರತದ ಶೈಲಿಯಲ್ಲಿದ್ದರೂ 10ನೆಯ ಶತಮಾನಕ್ಕಿಂತ ಹಿಂದಿನ ಶಿಲ್ಪ ಸಂಪ್ರದಾಯವನ್ನೇ ಬಹುಮಟ್ಟಿಗೆ ಉಳಿಸಿಕೊಂಡು ಬಂದಿರುವ ಕೇರಳೀಯ ಶಿಲ್ಪಶೈಲಿ ಸಹ ಆ ಪ್ರದೇಶದಲ್ಲಿ ಬಹುವಾಗಿ ಕಾಣಿಸಿಕೊಳ್ಳುತ್ತವೆ.

ಕೇರಳದ ದಾರುಶಿಲ್ಪ ವಿಶೇಷವಾದ್ದು. ಕಟ್ಟಡದ ಮರದ ಭಾಗಗಳನ್ನು ಖಾಲಿ ಬಿಡದೆ ಅನೇಕ ಜ್ಯಾಮಿತೀಯ ಲತಾ ಅಥವಾ ಮೂರ್ತಿಶಿಲ್ಪಗಳಿಂದ ಅಲಂಕರಿಸುವುದು ರೂಢಿ. ಈ ಶಿಲ್ಪಗಳಲ್ಲಿ ಮೂರ್ತಿಗಳೂ ಕಥಾನಿರೂಪಣೆಗಳೂ ಸಂಕೇರಿ ರೂಪಗಳೂ

ಕಂಡುಬರುತ್ತವೆ. ತ್ರಿಪುನಿಥರ, ತ್ರಿಚೂರು ಮೊದಲಾದ ಅನೇಕ ದೇಗುಲಗಳಲ್ಲಿಯ ನಮಸ್ಕಾರಮಂಟಪಗಳ ಭುವನೇಶ್ವರಿಗಳು ನಯನಮನೋಹರವಾದ ಕೆತ್ತನೆಗಳನ್ನೊಳಗೊಂಡಿವೆ. ಬ್ರಹ್ಮನ ಸುತ್ತಲೂ ಅಷ್ಟದಿಕ್ಪಾಲಕರನ್ನು ರೂಪಿಸುವುದು ಇಲ್ಲಿ ಸಾಮಾನ್ಯ. ಪಥಕುಲಂಗುರ, ಎತ್ತುಮನೂರು ಮುಂತಾದ ಅನೇಕ ಗುಡಿಗಳಲ್ಲಿ ರಾಮಾಯಣದ ಕಥಾಚಿತ್ರಣ ಸಾಲುಸಾಲಾಗಿ ಕಂಡುಬರುತ್ತದೆ. ಕೇರಳೀಯರ ಮನವನ್ನು ಸೂರೆಗೊಂಡ ರಾಮಾಯಣ ಕಥಾವಸ್ತುವಿನ ನಿರೂಪಣೆಯಲ್ಲಿ ಶಾಸ್ತ್ರೀಯ ಸಂಪ್ರದಾಯಗಳನ್ನು ಅಷ್ಟಾಗಿ ಗಮನಿಸಿಲ್ಲ. ಆದರೆ ಅವುಗಳಲ್ಲಿ ಕಂಡುಬರುವ ಚಾತುರ್ಯ, ಸೌಂದರ್ಯ ಸಮನ್ವಯ, ಇವು ಕೇರಳೀಯ ಜಾನಪದ ಶಿಲ್ಪಕಲೆಯ ಔನ್ನತ್ಯವನ್ನು ಸೂಚಿಸುತ್ತವೆ. ಕೇರಳದ ದೇವಾಲಯಗಳಲ್ಲಿ ಮರದ ಮದನಿಕೆ ಬೊಂಬೆಗಳೂ ಇರುವುದುಂಟು. ತ್ರಿಚೂರು ಜಿಲ್ಲೆಯ ಅರಿಯನೂರು ಬಳಿಯ ದೇವಾಲಯವೊಂದರಲ್ಲಿರುವ ನೃತ್ಯಗಾತಿಯರ ಚೇತೋಹಾರಿ ಬೆಡಗು ಲೋಕಪ್ರಸಿದ್ಧವಾಗಿವೆ. ಕೇರಳದ ಉತ್ತಮ ಮರದ ಕೆತ್ತನೆಗಳೆಲ್ಲ ಹೆಚ್ಚಾಗಿ 16–19ನೆಯ ಶತಮಾನಗಳಿಗೆ ಸೇರಿದವು. ಇತ್ತೀಚೆಗೆ ತಿರುವನಂತಪುರದ ಅನಂತಪದ್ಮನಾಭ ದೇವಾಲಯದ ರಹಸ್ಯ ಕೋಣೆಯಲ್ಲಿ 18 ಅಡಿ ಉದ್ದದ ಚಿನ್ನದ ಅನಂತ ಪದ್ಮನಾಭ ಮೂರ್ತಿ ಲಭಿಸಿದೆ. (ಎಸ್.ಎನ್.)

**ಕೇರಳದ ವಾಸ್ತುಶಿಲ್ಪ :** ಕೇರಳ ವನಸಮೃದ್ಧ ರಾಜ್ಯ. ಇಲ್ಲಿಯ ವಾಸ್ತು ರಚನೆಗೆ ಉಪಯೋಗಿಸಲಾಗಿರುವ ಮುಖ್ಯವಸ್ತು ಸಹಜವಾಗಿಯೇ ಮರವಾದ್ದರಿಂದ, ಇಲ್ಲಿಯ ಬಹುಪ್ರಾಚೀನ ವಾಸ್ತು ರಚನೆಗಳು ಉಳಿದುಬಂದಿಲ್ಲ. ಕೇರಳದಲ್ಲಿ ಸಹಸ್ರಾರು ಹಳೆಯ ದೇವಾಲಯಗಳಿದ್ದರೂ ಎಲ್ಲೋ ಕೆಲವಕ್ಕೆ ಮಾತ್ರ ಸ್ಥಳೀಯ ಶಾಸನಾದಿ ಆಧಾರಗಳಿಂದ ಕಾಲನಿಷ್ಕರ್ಷೆ ಮಾಡಬಹುದು. ಇವುಗಳಲ್ಲೂ ಮರದ ಭಾಗಗಳನ್ನು ಕಾಲಕಾಲಕ್ಕೆ ನವೀಕರಿಸಿರುವ ಸಾಧ್ಯತೆ ಇದೆ. ಇಲ್ಲಿಯ ಅನೇಕ ಕಟ್ಟಡದ ರೀತಿಗಳು ಸ್ಥಳೀಯ ಮಾದರಿಗಳನ್ನೇ ಅನುಕರಿಸಿವೆ. ಈ ಶೈಲಿಯ ಬಗ್ಗೆ ವಿಶೇಷ ಅಧ್ಯಯನ ನಡೆದಿಲ್ಲವಾದ್ದರಿಂದ ಈ ನಾಡಿನ ವಾಸ್ತುಕಲೆಯ ನಿಖರ ಇತಿಹಾಸ ರಚನೆ ಕಷ್ಟ. ಆದರೆ ಪ್ರಕೃತ ದೊರೆಯುವ ಮಾಹಿತಿಗಳಿಂದ ಕೆಲವು ಸ್ಥೂಲ ಅಂಶಗಳನ್ನು ಮಾತ್ರ ನಿರೂಪಿಸಬಹುದು.

ದೇಗುಲಗಳಿಂದ ಮಾತ್ರ ತಿಳಿದುಬರುವ ಇಲ್ಲಿಯ ಪ್ರಾಚೀನ ವಾಸ್ತುರಚನೆಗಳು ಎರಡು ಶೈಲಿಗಳಲ್ಲಿವೆ. ಒಂದನೆಯದು ಅದೇ ನೆಲದಲ್ಲಿ ಬೆಳೆದು ಬಹುಮಟ್ಟಿಗೆ ಪಶ್ಚಿಮ ಕರಾವಳಿ ಪ್ರದೇಶಕ್ಕೆ ಸೀಮಿತವಾದ ಕೇರಳ ಶೈಲಿ. ಎರಡನೆಯದು ತಮಿಳುನಾಡಿನ ಪ್ರಭಾವದಿಂದ ಬೆಳೆದ ದ್ರಾವಿಡ ಶೈಲಿ. ದ್ರಾವಿಡ ಶೈಲಿಯ ಕಟ್ಟಡಗಳು, ಈಗ ತಿಳಿದಿರುವಂತೆ, ತಿರುವನಂತಪುರ ಜಿಲ್ಲೆಗಷ್ಟೇ ಸೀಮಿತವಾಗಿವೆ. ಇವುಗಳಲ್ಲಿ ಮುಖ್ಯವಾದವು ವಿಳಿಂಜಂ ಎಂಬಲ್ಲಿವೆ. ಒಂಬತ್ತನೆಯ ಶತಮಾನದ ಈ ಗುಡಿಗಳಲ್ಲಿ ಚಚ್ಚೌಕದ ತಳವಿನ್ಯಾಸವಿರುತ್ತದೆ. ಕಾಲೆಯ ಪಟ್ಟಿ ಮುಂತಾದವು ಪ್ರಾಚೀನ ಚೋಳ ದೇವಾಲಯಗಳ ಮಾದರಿಯಲ್ಲಿವೆ. ಇವುಗಳ ಅಧಿಷ್ಠಾನ ಕಂಬಗಳು, ಅರೆಗಂಬಗಳು ಚಾವಣಿ ಕಲ್ಲಿನವು. ಆದರೆ ಗೋಡೆ ಮತ್ತು ಮೇಲಿನ ಗೋಪುರ ಇಟ್ಟಿಗೆಯವು. ವಿನ್ಯಾಸದಲ್ಲಿ ಕೇವಲ ಗರ್ಭಗೃಹ ಮತ್ತು ಅರ್ಧಮಂಟಪ, ಇಲ್ಲವೇ ಅರ್ಧಮಂಟಪ ಮಾತ್ರ, ಇರುವುದುಂಟು. ನಿರಮಂಕರ ಎಂಬಲ್ಲಿ ವೃತ್ತಾಕಾರದ ದ್ರಾವಿಡಶೈಲಿಯ ದೇವಾಲಯವೊಂದಿದೆ. ಅಧಿಷ್ಠಾನ ಮತ್ತು ಭಿತ್ತಿ ದ್ರಾವಿಡ ರೀತಿಯದಾದರೂ ಈ ವೃತ್ತತಳ ವಿನ್ಯಾಸ ಸ್ಥಳೀಯ ಕೇರಳ ರೀತಿಯದೇನೋ ಎನ್ನಿಸುತ್ತದೆ. ನಿರಮಂಕರ ಗುಡಿಯ ಈ ವಿನ್ಯಾಸ ಹೊರಗೋಡೆಗಳಷ್ಟೇ ಸೀಮಿತವಾಗಿದ್ದು, ಇದರ ಒಳಭಾಗದ ಶ್ರೀಕೋಯಿಲ್ ಚೌಕವಾಗಿಯೇ ಇರುವುದಲ್ಲದೆ, ಪೂರ್ಣ ದ್ರಾವಿಡ ರೀತಿಯ ಇಟ್ಟಿಗೆಯ ಚೌಕಗೋಪುರವನ್ನೂ ಹೊಂದಿದೆ. ನಿರಮಂಕರ ಗುಡಿ ಪ್ರಾಯಶಃ ಕೇರಳ–ದ್ರಾವಿಡ ಮಿಶ್ರಶೈಲಿಯಲ್ಲಿದೆ.

ಕೇರಳದಲ್ಲಿ ಪೂರ್ಣ ಕೇರಳೀಶೈಲಿಯ ಗುಡಿಗಳೇ ಹೆಚ್ಚು. ಇಲ್ಲಿಯ ಗುಡಿಗಳಲ್ಲಿ ವಿಶಾಲ ಪ್ರದೇಶದಲ್ಲಿ ಒಂದು ಅಥವಾ ಅದಕ್ಕೂ ಹೆಚ್ಚಿನ ಪ್ರಾಕಾರ (ನಾಲಂಬಲಮ್) ಮತ್ತು ಮಧ್ಯದಲ್ಲಿ ಮುಖ್ಯಗುಡಿ ಶ್ರೀಕೋಯಿಲ್ ಇರುತ್ತವೆ. ಗುಡಿಗಳಲ್ಲಿ ಸಾಮಾನ್ಯವಾಗಿ ಒಂದೇ ಶ್ರೀಕೋಯಿಲ್ ಇರುವುದಾದರೂ ಹೆಚ್ಚು ಇರುವ ಉದಾಹರಣೆಗಳೂ ಉಂಟು. ಗುಡಿಗಳು ಅಷ್ಟೇನೂ ಎತ್ತರವಿರುವುದಿಲ್ಲ. ಈ ದೇಗುಲಗಳ ಅಧಿಷ್ಠಾನ ಸಾಮಾನ್ಯವಾಗಿ ಗ್ರಾನೈಟ್ ಕಲ್ಲಿನದು. ಮೇಲಿನ ಭಿತ್ತಿ ಹೆಚ್ಚಾಗಿ ಜಂಬಿಟ್ಟಿಗೆಯದು. ಮೇಲೆ ಗಾರೆ ಹಚ್ಚಿ ಅದನ್ನು ಅನೇಕ ವರ್ಣಚಿತ್ರಗಳಿಂದ ಅಲಂಕರಿಸಿರುತ್ತದೆ. ಮೇಲ್ಚಾವಣಿ ಮರದಲ್ಲಿ ಮಾಡಲಾಗಿದ್ದು, ಮೇಲೆ ಹೆಂಚು ಅಥವಾ ತಾಮ್ರದ ತಗಡುಗಳನ್ನು ಹೊದಿಸಲಾಗಿರುತ್ತದೆ. ನಾಲಂಬಲದ ತಳವಿನ್ಯಾಸ ಸಾಮಾನ್ಯವಾಗಿ ಚೌಕ. ಒಳಗಿನ ಶ್ರೀಕೋಯಿಲ್ ಚೌಕ ಅಥವಾ ಗಜಪೃಷ್ಠ ಅಥವಾ ವೃತ್ತಾಕಾರವಾಗಿರಬಹುದು. ಕಲ್ಲಿನ ಅಧಿಷ್ಠಾನದ ಮೇಲೆ ಎತ್ತಿರುವ ಶ್ರೀಕೋಯಿಲ್‌ಗಳ ಒಳಭಾಗದಲ್ಲಿ ಸಾಮಾನ್ಯವಾಗಿ ಒಂದು ಗರ್ಭಗುಡಿಯಿದ್ದು, ಅದರ ಸುತ್ತಲ ಭಾಗ ಪ್ರದಕ್ಷಿಣೆಗೆ ಮೀಸಲಾಗಿರುತ್ತದೆ. ಈ ಭಾಗದಲ್ಲಿ ಕೆಲವು ವೇಳೆ ಕಂಬಗಳಿರುವುದೂ ಉಂಟು. ತಳವಿನ್ಯಾಸಕ್ಕೆ ಹೊಂದಿಕೊಂಡಂತೆ ಚೌಕ, ಗಜಪೃಷ್ಠ ಅಥವಾ ವೃತ್ತಾಕಾರದಲ್ಲಿ, ಇಳಿಜಾರಾಗಿ ಮೇಲಿನ ಚಾವಣಿಯನ್ನು ನಿರ್ಮಿಸಲಾಗಿದ್ದು, ತಳದ ಕುಳ್ಳ ದೇವಾಲಯವನ್ನು ದೊಡ್ಡ ಟೋಪಿಯಿಂದ ಕವುಚಿದಂತಿರುತ್ತದೆ. ಈ ಚಾವಣಿ ಸಹ ಒಂದು ಅಥವಾ ಎರಡು ಘಟ್ಟಗಳಲ್ಲಿ ಮೇಲೇರಿರುವುದುಂಟು. ಎರಡು ಘಟ್ಟಗಳಿದ್ದಲ್ಲಿ ಮೊದಲನೆಯದರ ಮತ್ತು ಎರಡನೆಯದರ ಮಧ್ಯೆ ಸ್ವಲ್ಪ ಎತ್ತರದ ನೇರ ಭಿತ್ತಿಯಿದ್ದು ಶಿಲ್ಪಗಳಿಂದ ಅಲಂಕೃತವಾಗಿರುತ್ತದೆ. ಈ ಚಾವಣಿಯ ಹೆಂಚು ಅಥವಾ ತಾಮ್ರದ ತಗಡಿನಿಂದ ಮುಚ್ಚಲಾದ ಮೇಲ್ಭಾಗ ಸಾಮಾನ್ಯ ರೀತಿಯದಾಗಿದ್ದರೂ ಒಳಭಾಗದಲ್ಲಿ ಉಪಯೋಗಿಸಿರುವ ಮರದ ಭಾಗಗಳು ಸುಂದರವಾದ ಕೆತ್ತನೆಗಳಿಂದ ಅಲಂಕೃತವಾಗಿರುತ್ತವೆ. ಶ್ರೀಕೋಯಿಲಿನ ಎದುರಿಗೆ ಒಂದು ನಮಸ್ಕಾರ ಮಂಟಪ ಇರುವುದೂ ಉಂಟು. ಇದು ಸಾಮಾನ್ಯವಾಗಿ ಕಂಬದ ಮೇಲೆ ಎತ್ತಿದ ಮಂಟಪವಾಗಿರುತ್ತದೆ. ಮೇಲೆ ಪಿರಮಿಡಿನಾಕಾರದ ಚಾವಣಿಯಿಂದ ಆವೃತವಾಗಿರುತ್ತದೆ. ಇಲ್ಲೂ ಬಹು ಸುಂದರವಾದ ಮರದ ಕೆತ್ತನೆಗಳು, ಭುವನೇಶ್ವರಿ ಮತ್ತು ಕಂಬಗಳು ಇರುತ್ತವೆ.

ಕೇರಳದ ಈ ವಾಸ್ತುಕಲೆ ಮೂಲತಃ ಸ್ಥಳೀಯ ಪ್ರಾಚೀನ ಗೃಹಗಳ ಮಾದರಿಯಲ್ಲಿಯೇ ಇದ್ದು, ಅದರ ವಿನ್ಯಾಸ ಮತ್ತು ಅಲಂಕರಣ ಆ ಪ್ರದೇಶದ ಪ್ರಾಕೃತಿಕ ವಾತಾವರಣದಿಂದ ಪ್ರಭಾವಿತವಾಗಿದ್ದು ವೈಶಿಷ್ಟ್ಯಪೂರ್ಣವಾಗಿದೆಯೆಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಇಲ್ಲಿಯ ಎರಡು ಅಥವಾ ಮೂರು ಅಂತಸ್ತುಗಳಲ್ಲಿ ಏರುವ ಇಳಿಜಾರು ಚಾವಣಿಗಳ ವಿನ್ಯಾಸಕ್ಕೂ ಚೀನ, ನೇಪಾಳ, ಟಿಬೆಟ್‌ಗಳಲ್ಲಿ ಕಾಣಬರುವ ವಿನ್ಯಾಸಕ್ಕೂ ಹೋಲಿಕೆ ಇರುವುದರಿಂದ ಆ ಪ್ರದೇಶದ ವಾಸ್ತುಕಲೆಯ ಪ್ರಭಾವ ಕೇರಳದಲ್ಲಿ ಬಿಂಬಿತವಾಗಿರಬಹುದೆಂಬ ಹೇಳಿಕೆಯೂ ಇದೆ. ಆದರೆ ಈ ವಿಷಯದಲ್ಲಿ ಸರ್ವಾನುಮತವಿಲ್ಲ.

ಕೇರಳ ಶೈಲಿಯ ಅತ್ಯಂತ ಪ್ರಾಚೀನ ದೇವಾಲಯಗಳು ಪಾಲಕ್ಕಾಡು ಜಿಲ್ಲೆಯ ಗೋದಪುರಂ ಮತ್ತು ಪೊಲ್ಲುಪ್ಪಳ್ಳಿಗಳಲ್ಲಿವೆ. ಇವುಗಳ ಕಾಲ ಸು.10ನೆಯ ಶತಮಾನ. ಇವೆರಡರಲ್ಲೂ ಶಿಲಾರಚಿತ ಕೆಳಭಾಗಗಳು ಮಾತ್ರ ಉಳಿದಿವೆ. ಗುರುವಾಯೂರಿನ ಕೃಷ್ಣ, ತಿರುವಂಚಿಕುಲಮ್‌ನ ಶಿವ, ತ್ರಿಚೂರಿನ ವಡಕ್ಕನಾಥ, ತಿರುವನಂತಪುರದ ಅನಂತಪದ್ಮನಾಭ ಮುಂತಾದ ಪ್ರಸಿದ್ಧ ದೇವಾಲಯಗಳು 16–18ನೆಯ ಶತಮಾನಗಳ ಕಾಲದಲ್ಲಿ ಕಟ್ಟಿದವಾಗಿರಬಹುದು. ಪ್ರಕೃತ ದೊರೆಯುವ ಮಾಹಿತಿಗಳಿಂದ ಈ ಶೈಲಿಯ ಬೆಳೆವಣಿಗೆಯ ಘಟ್ಟಗಳನ್ನು ಗುರುತಿಸಲು ಸಾಧ್ಯವಾಗದಾದರೂ ಕೇರಳದ ಮೊದಮೊದಲ ದೇವಾಲಯಗಳಲ್ಲಿ ಚೌಕದ ನಾಲಂಬಲದಿಂದ ಆವೃತವಾದ ಪ್ರಾಂಗಣದ ಮಧ್ಯೆ ಚೌಕ, ವೃತ್ತ ಅಥವಾ ಗಜಪೃಷ್ಠಾಕಾರದ ಶ್ರೀಕೋಯಿಲ್ ಮಾತ್ರ ಇರುತ್ತಿತ್ತೆಂದೂ ಶ್ರೀಕೋಯಿಲನ ಒಳಗೆ ಮತ್ತೊಂದು ಗರ್ಭಗೃಹವನ್ನು ನಿರ್ಮಿಸುವ ಪದ್ಧತಿ 12ನೆಯ ಶತಮಾನದ ಹೊತ್ತಿಗೆ ಬೆಳೆಯಿತೆಂದೂ ಕೆಲವು ಆಧಾರಗಳಿಂದ ಊಹಿಸಲಾಗಿದೆ. ಕೇರಳದ ಬಹುಭಾಗದಲ್ಲಿ ಈ ವಿನ್ಯಾಸವೇ ಇನ್ನೂ ಪ್ರಚಲಿತವಾಗಿದೆ. ಆದರೆ ದಕ್ಷಿಣ ತಿರುವನಂತಪುರ ಜಿಲ್ಲೆಯಲ್ಲಿ ಆಗಾಗ್ಗೆ ಅನೇಕ ದ್ರಾವಿಡ ಅಂಶಗಳು ಸೇರ್ಪಡೆಯಾದುವು. ಉದಾಹರಣೆಗೆ ಈಗಿನ ತಿರುವನಂತಪುರದ ಅನಂತಪದ್ಮನಾಭ ದೇವಾಲಯದ ಒಳಮಂಟಪ ಮತ್ತು ಮುಂದಿನ ದ್ವಾರದ ಮೇಲಿರುವ ಇಟ್ಟಿಗೆಯ ಕುಳ್ಳಗೋಪುರ ಈ ಪ್ರಭಾವದಿಂದ ನಿರ್ಮಿತವಾದವು.

ಪಶ್ಚಿಮದಿಂದ ವಲಸೆ ಬಂದ ಕ್ರೈಸ್ತರು, ಮುಸಲ್ಮಾನರು ಕೇರಳದ ಕರಾವಳಿ ಪ್ರದೇಶದಲ್ಲಿ ಬಹಳ ಹಿಂದಿನಿಂದಲೂ ನೆಲಸಿ ತಮ್ಮದೇ ಶೈಲಿಯ ಧಾರ್ಮಿಕ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಅಂಥ ಕಟ್ಟಡಗಳ ಪ್ರಾಚೀನತೆ ಮತ್ತು ಶೈಲಿಯ ಬಗ್ಗೆ ಹೆಚ್ಚು ಅಧ್ಯಯನ ನಡೆದಿಲ್ಲ. ಕ್ರಾಂಗನೂರು ಬಳಿಯ ಕೊತ್ತಪುರಂನಲ್ಲಿರುವ ಇಗರ್ಜಿಯನ್ನು ಪ್ರಸ್ತಕಶಕ 52ರಲ್ಲಿ ಕಟ್ಟಲಾಯಿತೆಂಬ ಹೇಳಿಕೆಯಿದ್ದರೂ ಈಗಿರುವ ಕಟ್ಟಡದ ಕಾಲವನ್ನು ಖಚಿತವಾಗಿ ಹೇಳುವುದು ಕಷ್ಟ. ಕೋಳಿಕ್ಕೋಡಿನಲ್ಲಿರುವ ಸುಂದರವಾದ ರೋಮನ್ ಕಥೊಲಿಕ್ ಇಗರ್ಜಿ 1750ರಲ್ಲಿ ಪೋರ್ಚುಗೀಸರು ಕಟ್ಟಿದ್ದು. ಮಲಬಾರಿನ ಮಾದಾಯಿಯಲ್ಲಿರುವ ಮಸೀದಿ 1124ರೆಂದು ತಿಳಿಯುತ್ತದೆ. ಹಾಗೆಯೇ ಮಂಜೇರಿ, ಮಲಪ್ಪರಂ ಮುಂತಾದೆಡೆ ಪ್ರಾಚೀನ ಮಸೀದಿಗಳೂ ತಲಚ್ಚೇರಿ, ಕೋಳಿಕ್ಕೋಡ್, ಕೊಚ್ಚಿಗಳಲ್ಲಿ ಹಳೆಯ ಇಗರ್ಜಿಗಳೂ ಉಳಿದಿವೆ. 7–8ನೆಯ ಶತಮಾನದಿಂದಲೂ ಕೇರಳದಲ್ಲಿ ನೆಲಸಿದ್ದ ಯಹೂದ್ಯರ ಸ್ನೆನಗೋಗ್‌ಗಳು ಸಹ ಕೊಚ್ಚಿಯ ಸುತ್ತಮುತ್ತ ಅನೇಕವಿವೆ. ಸುಂದರವಾದ ಒಳ ಅಲಂಕರಣವುಳ್ಳ ಒಂದು ಸ್ನೆನಗೋಗ್ ಕೊಚ್ಚಿಯಲ್ಲಿದೆ. ಇದು 1730ರಲ್ಲಿ ಸ್ಪೇನಿನಿಂದ ಬಂದ ಎಜೆಕೀಲ್ ರಹಬಿ ಎಂಬ ಯೆಹೂದ್ಯ ಕಟ್ಟಿದ್ದು.

ಕೇರಳದ ಹಿಂದೂ ಆಳ್ವಿಕೆಗೆ ಸಂಬಂಧಿಸಿದ ಕೋಟೆ ಕೊತ್ತಲಗಳಾವುವೂ ಉಳಿದು ಬಂದಿಲ್ಲ. ಕೋಳಿಕ್ಕೋಡ್ ಜಾಮೊರಿನನ ಅರಮನೆಯ ಕೆಲವು ಉಳಿಕೆಗಳಿವೆ. ಕೊಚ್ಚಿ ಮತ್ತು ತಿರುವನಂತಪುರಗಳಲ್ಲಿ ಉಳಿದು ಬಂದಿರುವ ಅರಮನೆಗಳು ಈಚಿನವು. ಅಲ್ಲಿ, ಕೇರಳೀಯ ಮತ್ತು ಪಾಶ್ಚಾತ್ಯ ಶೈಲಿಯ ಕಟ್ಟಡಗಳಿವೆ. ಪೋರ್ಚುಗೀಸರು ಕಟ್ಟಿದ ಕೋಟೆಗಳಲ್ಲಿ ಕೊತ್ತಪುರಂ (1523), ಕಣ್ಣನ್ನೂರಿನ ಅಂಗೆಲೋಕೋಟೆ (1505) ಇವನ್ನು ಹೆಸರಿಸಬಹುದು. ಡಚ್ಚರ ಚೆತ್ತುವಿ (1729), ಕೊಚ್ಚಿ, ಬ್ರಿಟಿಷರ ತಲಚ್ಚೇರಿ (1708), ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರ ತ್ರಿಚೂರ್ (1774), ಪಾಲಕ್ಕಾಡು (1766), ಫೆರೋಕಾಬಾದ್ (1788)– ಇವು ಕೇರಳದಲ್ಲಿ ಉಳಿದು ಬಂದಿರುವ ಇತರ ಮುಖ್ಯಕೋಟೆಗಳು. (ಎಸ್.ಎನ್.)

**ಕೇರಳದ ಶಾಸನಗಳು :** ಕೇರಳದಲ್ಲಿ ಪ್ರ.ಶ. 3ನೆಯ ಶತಮಾನದಿಂದ 18ನೆಯ ಶತಮಾನದ ಅವಧಿಯ ದೀರ್ಘ ಸಮಯದಲ್ಲಿ ಹುಟ್ಟಿದ ಶಿಲಾ ಮತ್ತು ತಾಮ್ರ ಶಾಸನಗಳು ನೂರಾರು ದೊರೆತಿವೆಯಾದರೂ ಅವನ್ನು ಕುರಿತ ಸಂಶೋಧನೆ ಮತ್ತು ಅಧ್ಯಯನ ಸಾಕಷ್ಟು ಪ್ರಮಾಣದಲ್ಲಿ, ಕ್ರಮಬದ್ಧ ರೀತಿಯಲ್ಲಿ ನಡೆದಿಲ್ಲ. ಕೇರಳದ ಶಾಸನಗಳಲ್ಲಿ ಹೆಚ್ಚಿನವು ಬನವಾಸಿಯ ಕದಂಬ, ಅಯ್, ವೃಷ್ಣಿಕುಲ ಅಥವಾ ಯಾದವ, ಪಾಂಡ್ಯ, ಚೇರ, ಚೋಳ, ಮೂಷಕ ಅಥವಾ ಮೂಷಿಕ ಆಳುಪ, ವಿಜಯನಗರ, ವೇಣಾಡು, ಓನಾಡು ಅಥವಾ ಒಡನಾಡು, ಕೀವಿಪ್ಪೆರೂರ್, ಇಳಯಡ, ಕೋಲಂಬ, ಪರೂರ್, ನೇಟಿಯಿರುಪ್ಪು, ತಿರುವಾಂಕೂರು, ಕೊಚ್ಚಿ, ಮಧುರೆಯ ನಾಯಕ, ಮೈಸೂರು ಸುಲ್ತಾನ್, ರಾಮನಾಥಪುರದ ಸೇತುಪತಿ ಮುಂತಾದ ಮನೆತನಗಳ ಅರಸುಗಳು ಮತ್ತು ಪಾಶ್ಚಾತ್ಯ ಆಕ್ರಮಣಕಾರರು ಹೊರಡಿಸಿದಂಥವು. ಅವನ್ನು ಬರೆಯುವಲ್ಲಿ ತಮಿಳು, ಮಲಯಾಳಂ, ಸಂಸ್ಕೃತ, ಕನ್ನಡ, ತೆಲುಗು, ತುಳು, ಅರಬ್ಬೀ, ಡಚ್, ಇಂಗ್ಲಿಷ್‌ಗಳನ್ನೂ ತಮಿಳು, ವಟ್ಟೆಳುತ್ತು, ಮಲಯಾಳಂ ಕೋಲೆಳುತ್ತು, ನಾಗರೀ, ಗ್ರಂಥ, ಕನ್ನಡ, ತೆಲುಗು, ತುಳು, ಅರಬ್ಬೀ, ರೋಮನ್ ಲಿಪಿಗಳನ್ನೂ ಬಳಸಲಾಗಿದೆ. ಹೀಬ್ರು, ಪಹ್ಲವಿ, ಗ್ರೀಕ್, ಸಿರಿಯಾಕ್, ಲ್ಯಾಟಿನ್ ಶಾಸನಗಳೂ ಕೇರಳದಲ್ಲಿ ದೊರೆತಿವೆ.

ಕೇರಳದ ಶಾಸನಗಳಲ್ಲಿ ತೇದಿಯ ವಿವರಗಳನ್ನು ನೀಡುವಲ್ಲಿ ಶಕ, ಕಲಿಯುಗ, ಕೋಲಂಬ ಅಥವಾ ಕೊಲ್ಲಂ, ಕ್ರಿಸ್ತಶಕ ಅಥವಾ ಮಿಶಿಯ ಮತ್ತು ಪುದುವೈಪ್ಪು ಸಂವತ್ಸರಗಳನ್ನೂ ಹಲವು ಅರಸುಗಳ ರಾಜ್ಯಸಂವತ್ಸರಗಳನ್ನೂ ಅವಲಂಬಿಸಲಾಗಿದೆ. ಅಲ್ಲದೆ ಅನೇಕ ಶಾಸನಗಳಲ್ಲಿ ಗ್ರಹಗಳ ನೆಲೆಯ ಹಾಗೂ ಗತಿಯ ಆಧಾರದ ಮೇಲೂ ತೇದಿಯ ವಿವರಗಳನ್ನು ಕೊಡಲಾಗಿದೆ. ತಿಂಗಳುಗಳನ್ನು ಪ್ರಸ್ತಾಪಿಸುವಲ್ಲಿ ಮೊದಲು ಬಳಕೆಯಲ್ಲಿದ್ದ ಚಾಂದ್ರಮಾನ ಪದ್ಧತಿ ಕಾಲಕ್ರಮದಲ್ಲಿ ಸೌರಮಾನಕ್ಕೆ ಎಡೆಕೊಟ್ಟಿರುವುದನ್ನೂ ಇವುಗಳಲ್ಲಿ ಕಾಣಬಹುದು.

ಕೇರಳದ 9ನೆಯ ಶತಮಾನದವರೆಗಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಕೇರಳದಲ್ಲಿ ದೊರೆಯುವ ಶಾಸನಗಳ ಸಂಖ್ಯೆ ಬಹಳ ಕಡಿಮೆ. ಮಲಬಾರ್ ಪ್ರಾಂತ್ಯದ ವೈನಾಡಿನಲ್ಲಿ, ಸುಲ್ತಾನ್ ಬತೇರಿಯ ನೈರುತ್ಯಕ್ಕಿರುವ ಎಡಕಲ್ ಗುಡ್ಡದ ಗುಹೆಯ ಗೋಡೆಗಳ ಮೇಲಿನ ಸೂರ್ಯ, ಅಗ್ನಿ, ಮಾನವ, ಮೃಗರೂಪದ ಕೆರೆದ ಚಿತ್ರಗಳು ಪ್ರಸಕ್ತಶಕದ ಪ್ರಾರಂಭಕಾಲದವೆಂದು ವಿದ್ವಾಂಸರು ಊಹಿಸಿದ್ದಾರೆ. ಅದೇ ಗುಹೆಯ ಗೋಡೆಯ ಮೇಲೆ ಕೊರೆದಿರುವ ಒಂದೊಂದು ಪಂಕ್ತಿಯ ನಾಲ್ಕು ಬರೆಹಗಳೂ ಲಿಪಿಶಾಸ್ತ್ರ ದೃಷ್ಟಿಯಿಂದ ಪ್ರ.ಶ. 3–5ನೆಯ ಶತಮಾನಗಳಿಗೆ ಸೇರಿದವು. ಕೇರಳದಲ್ಲಿ ಇದುವರೆಗೆ ದೊರೆತಿರುವ ಶಾಸನಗಳಲ್ಲಿ ಇವು ಪ್ರಾಚೀನತಮವಾದವು. ಮಲಬಾರಿನ ಎರ್ನಾಡ್ ತಾಲ್ಲೂಕಿನ ನಿಲಾಂಬೂರಿನಲ್ಲಿ ದೊರೆತ ಬನವಾಸಿಯ ಕದಂಬ ಅರಸು ರವಿವರ್ಮನ ತಾಮ್ರಶಾಸನ 5ನೆಯ ಶತಮಾನದ್ದಾಗಿದೆ.

ಎಡಕಲ್ ಗುಹೆಯ ಬರೆಹಗಳು

9–15ನೆಯ ಶತಮಾನಗಳಿಗೆ ಸಂಬಂಧಿಸಿದಂತೆ ಕೇರಳದಲ್ಲಿ ನೂರಾರು ಶಾಸನಗಳು ದೊರೆತಿವೆ. ಕೇರಳದ ಅಧಿಕೃತ ಭಾಷೆಯಾಗಿರುವ ಮಲಯಾಳದ ಶಾಸನಗಳು 14ನೆಯ ಶತಮಾನದಿಂದ ಮಾತ್ರ ಕಾಣಿಸಿಕೊಂಡರೂ 12–13ನೆಯ ಶತಮಾನಗಳ ತಮಿಳು ಶಾಸನಗಳಲ್ಲೂ ಮಲಯಾಳದ ಪ್ರಭಾವ ಎದ್ದು ಕಾಣುತ್ತದೆ. 9ನೆಯ ಶತಮಾನದಿಂದ ಕೇರಳದ ಹಲವು ಶಾಸನಗಳಲ್ಲಿ ಬಳಸಲಾಗಿರುವ ವಟ್ಟೆಳುತ್ತು ಲಿಪಿ 17ನೆಯ ಶತಮಾನದವರೆಗೂ ಅನಿಯೋಜಿತವಾಗಿ ಶಾಸನಗಳಲ್ಲಿ ಬಳಕೆಯಲ್ಲಿದ್ದರೂ 15ನೆಯ ಶತಮಾನದಿಂದ ಮಲಯಾಳ ಲಿಪಿಯ ಪ್ರಭಾವವೇ ಹೆಚ್ಚಿತು.

ಈ ಕಾಲದ ಶಾಸನಗಳಲ್ಲಿ ಕೆಳಗಿನವು ಗಮನಾರ್ಹ: ತಮಿಳು ಮತ್ತು ಸಂಸ್ಕೃತ ಭಾಷೆ ಹಾಗೂ ತಮಿಳು ಮತ್ತು ಪ್ರಾಚೀನ ನಾಗರೀ ಲಿಪಿಗಳಲ್ಲಿರುವ, 9ನೆಯ ಶತಮಾನದಲ್ಲಿ ಹುಟ್ಟಿದ ವೃಷ್ಣಿಕುಲದ ಅರಸು ವರಗುಣನ ಪಾಲಿಯಂ ತಾಮ್ರ ಶಾಸನ; ಸ್ಥಾಣುರವಿಯ ಆಳ್ವಿಕೆಯ ಐದನೆಯ ವರ್ಷದಲ್ಲಿ ಕ್ರೈಸ್ತಧರ್ಮದ ಈಶೋತಪೀರ್ ಎಂಬಾತ ನಿರ್ಮಿಸಿದ ತರಿಶಾಪ್ಪಳ್ಳಿ (ಸಂತ ತರೇಸಾ) ಇಗರ್ಜಿಗೆ ವೇಣಾಡಿನ ದೊರೆ ಅಯ್ಯನಡಿಗಳ್ ಹಲವು ಕುಟುಂಬಗಳನ್ನು ಒಪ್ಪಿಸಿ ಕೊಟ್ಟ ವಿವರಗಳನ್ನು ನೀಡುವ 9ನೆಯ ಶತಮಾನದ ತಾಮ್ರಶಾಸನ; ಇಲ್ಲಿಯವರೆಗೆ ದೊರೆತಿರುವಂತೆ ಕೊಲ್ಲಂ ಸಂವತ್ಸರದ ಪ್ರಾಚೀನತಮ ಉಲ್ಲೇಖವಿರುವ ಕೊಲ್ಲಂ 149 (ಪ್ರ.ಶ. 973) ಮಾಂಪಳ್ಳಿ ತಾಮ್ರ ಶಾಸನ; ಕೇರಳದ ರಾಜಕೀಯ ಮತ್ತು ಸಾಮಾಜಿಕ ಜೀವನದ ಬಗೆಗೆ ಕುತೂಹಲಕಾರಿ ಅಂಶಗಳನ್ನೊಳಗೊಂಡ, ವೆಳ್ಳಾಯಣಿ ಶಿಲಾಶಾಸನ (1196), ವೇಣಾಡಿನ ಅರಸು ರವಿಕೇರಳವರ್ಮನ ಆಳ್ವಿಕೆಯಲ್ಲಿ ಜಾರಿಗೆ ತರಲಾದ ಭೂಕಂದಾಯ ವ್ಯವಸ್ಥೆಯ ವಿವರಗಳನ್ನು ನೀಡುವ ಮಣಲಿಕ್ಕರೈ ಶಿಲಾಶಾಸನ (1236) ಮಲಯಾಳ ಭಾಷೆ ಮತ್ತು ವಟ್ಟೆಳುತ್ತು ಲಿಪಿಯ, ಅತ್ತಿಂಗಲ್ ಶಿಲಾಶಾಸನ (1452).

15ನೆಯ ಶತಮಾನದ ಕೊನೆಯಲ್ಲಿ ಪಾಶ್ಚಾತ್ಯರು ವಲಸೆ ಬಂದ ಅನಂತರದ ಕೇರಳದ ಇತಿಹಾಸವನ್ನು ಪುನಾರಚಿಸುವ ಶಾಸನೇತರ ದಾಖಲೆಗಳು ಹೆಚ್ಚು ಸಹಾಯ ನೀಡುತ್ತವೆಯಾಗಿ ಆ ಕಾಲದ ಶಾಸನಗಳು ತಮ್ಮ ಮಹತ್ತ್ವವನ್ನು ಕಳೆದುಕೊಂಡಿವೆ. ಆಧುನಿಕ ಶಾಸನಗಳಲ್ಲಿ ಕೊಚ್ಚಿಯ ಸಂಸ್ಥಾನಕ್ಕೂ ಡಚ್ಚರಿಗೂ ನಡುವೆ ಮಾಡಿಕೊಳ್ಳಲಾಗಿದ್ದ ಒಪ್ಪಂದದ ವಿವರಗಳನ್ನು ನೀಡುವ ತಾಮ್ರಶಾಸನಗಳು (ಪ್ರ.ಶ. 1662) ಉಲ್ಲೇಖಾರ್ಹವಾಗಿವೆ. ತೇದಿಯ ವಿವರಗಳನ್ನು ಕೊಡುವಲ್ಲಿ ಈ ಶಾಸನದಲ್ಲಿ ಪುದುವೈಪ್ಪು ಸಂವತ್ಸರದ 322ನೆಯ ವರ್ಷವನ್ನೂ ಪ್ರಸ್ತಾಪಿಸಲಾಗಿದೆ. ಕೊಚ್ಚಿಯ ಉತ್ತರಕ್ಕೆ, ಪಶ್ಚಿಮದ ಸಮುದ್ರದಲ್ಲಿ 1342ರಲ್ಲಿ ಸಣ್ಣ ದ್ವೀಪವೊಂದು ತಾನೇ ತಾನಾಗಿ ಹೊರಬಂತು. ಆ ದ್ವೀಪದ ಹೆಸರು ಬಿಪೀನ್ ಎಂದೂ ಆ ಘಟನೆಯ ಸ್ಮರಣಾರ್ಥವಾಗಿ ಘೋಷಿಸಲಾದ್ದೇ ಪುದುವೈಪ್ಪು ಸಂವತ್ಸರವೆಂದೂ ಗೊತ್ತಾಗುತ್ತದೆ. (ಕೆ.ವಿ.ಆರ್.)

**ಕೇರಳ ಪತ್ರಿಕಾ :** 1884ರಲ್ಲಿ ಕೇರಳದ ಕೋಳಿಕ್ಕೋಡಿನಲ್ಲಿ ಪ್ರಾರಂಭವಾದ ಒಂದು ಪತ್ರಿಕೆ. ಸಿ. ಕುನ್ಹಿರಾಮನ್ ಮೆನನ್ ಸ್ಥಾಪಕ–ಸಂಪಾದಕ. ಪತ್ರಿಕೆ ಇದ್ದಷ್ಟು ಜೀವಿತ ಕಾಲದಲ್ಲಿ ಪ್ರಭಾವಶಾಲಿಗಳೂ ಕ್ರಿಯಾಶೀಲರೂ ಆದರ್ಶ ಪತ್ರಿಕೋದ್ಯಮಿಗಳೂ ಆದಂಥವರು ಅದರ ಮೇಲ್ವಿಚಾರಕರಾಗಿದ್ದರು. ಆರಂಭದಿಂದ ಇದು ಸರ್ಕಾರಿ ನೌಕರರ ಲಂಚಗುಳಿತನವೇ ಮುಂತಾದ ಭ್ರಷ್ಟಾಚಾರಗಳನ್ನೂ ಸರ್ಕಾರದ ಕಾರ್ಯನೀತಿಯನ್ನೂ ನಿರ್ಭಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಖಂಡಿಸಿ ಜನಪ್ರಿಯತೆ ಸಂಪಾದಿಸಿತ್ತು. ಜನರ ನೈತಿಕ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಹೆಚ್ಚಿಸುವ ಕಾರ್ಯದಲ್ಲಿ ನಿರತವಾಗಿತ್ತು. ಬ್ರಿಟಿಷ್ ಆಳ್ವಿಕೆಯಲ್ಲಿ ಇಂಥ ಕೆಲಸ ಸುಲಭ ಸಾಧ್ಯವಾಗಿರಲಿಲ್ಲ. ಕೇಸರಿ ಎಂಬ ಅಂಕಿತದಲ್ಲಿ ಅಂಕಣಲೇಖಕ ವೆಂಗಾಯಿಲ್ ಕುನ್ಹಿರಾಮನ್ ನಾಯನಾರ್ ಪತ್ರಿಕೆಗಾಗಿ ಬರೆಯುತ್ತಿದ್ದ ಲೇಖನಗಳೂ ಪತ್ರಿಕೆಯ ಜನಪ್ರಿಯತೆಗೆ ಮುಖ್ಯ ಕಾರಣ. ವ್ಯಕ್ತಿಗಳ ಮತ್ತು ಸರ್ಕಾರದ ಕಾರ್ಯನೀತಿಗಳ ಬಗ್ಗೆ ನಾಯನಾರ್ ಮಾಡುತ್ತಿದ್ದ ವಿಮರ್ಶೆಗಳು ಗಂಭೀರವಾಗಿಯೂ ವಸ್ತುನಿಷ್ಠವಾಗಿಯೂ ಇರುತ್ತಿದ್ದುವು. ಇದು ಮಲಯಾಳದ ಪ್ರಸಿದ್ಧ ಸಾಹಿತಿಗಳ ವಿಚಾರ ವೇದಿಕೆಯೂ ಆಗಿತ್ತು. ಪತ್ರಿಕೆಯ ಪುಟಗಳಲ್ಲಿ ಸ್ವಾರಸ್ಯವೂ ವಿದ್ವತ್ಪೂರ್ಣವೂ ಆದ ಚರ್ಚೆಗಳಿರುತ್ತಿದ್ದುವು.

ಕುನ್ಹಿರಾಮನ್ ಮೆನನ್ ಸಂಪಾದಕತ್ವದಲ್ಲಿ ಪತ್ರಿಕೆ ಸುಮಾರು 48 ವರ್ಷಗಳ ಕಾಲ ನಡೆಯಿತು. ಅನಂತರ ಮೆನನ್ ಸೋದರಳಿಯನ ಸಂಪಾದಕತ್ವದಲ್ಲಿ ಸ್ವಲ್ಪ ಕಾಲ ಮುಂದುವರಿಯಿತು. ಆಮೇಲೆ ಎಂ. ರಾಮುಣ್ಣಿ ನಾಯರ್ ಸಂಪಾದಕತ್ವದಲ್ಲಿ ಇನ್ನೂ ಪ್ರಗತಿ ಗಳಿಸಿತು. ಸಂಜಯನ್ ಎಂಬ ಲೇಖನನಾಮದಿಂದ ಪ್ರಸಿದ್ಧಿ ಗಳಿಸಿದ್ದ ನಾಯರ್ ಬರೆವಣಿಗೆಯಲ್ಲಿ ಹಾಸ್ಯ ತುಂಬಿರುತ್ತಿತ್ತು. ನ್ಯಾಯವಾದ ಕಾರಣಗಳನ್ನು ನಿರ್ಭಯವಾಗಿ ಎತ್ತಿ ಹಿಡಿಯುವುದೂ ಸಾಮಾಜಿಕ ಕೆಡುಕುಗಳನ್ನು ತಪ್ಪದೆ ಖಂಡಿಸುವುದೂ ಉತ್ತಮಮಟ್ಟದ ಸಾಹಿತ್ಯ ವಿಮರ್ಶೆಯೂ ಅವರ ಸಂಪಾದಕೀಯದ ವೈಶಿಷ್ಟ್ಯ. ಪತ್ರಿಕೆಯ ಮಾಲೀಕತ್ವ ಕೆ.ವಿ. ಅಚ್ಚುತನ್ ನಾಯರದಾಗಿತ್ತು.

20ನೆಯ ಶತಮಾನದ ನಲವತ್ತರ ದಶಕದಲ್ಲಿ ರಾಮುಣ್ಣಿನಾಯರ್ ಅನಾರೋಗ್ಯ ನಿಮಿತ್ತ ಪತ್ರಿಕೆಯ ಸಂಪಾದಕತ್ವವನ್ನು ತ್ಯಜಿಸಿದ ಮೇಲೆ ಪತ್ರಿಕೆ ಕ್ಷೀಣದೆಶೆಗೆ ಬಂದು ಕೊನೆಗೆ ನಿಂತುಹೋಯಿತು. (ಕೆ.ಟಿ.)

**ಕೇರಳ ಸಂದೇಶಂ :** ಕೇರಳ ಸರ್ಕಾರದ ಸಾರ್ವಜನಿಕ ಸಂಪರ್ಕ ಇಲಾಖೆಯ ಆಶ್ರಯದಲ್ಲಿ ತಿರುವನಂತಪುರದಿಂದ ಇಂಗ್ಲಿಷ್ ಮತ್ತು ಮಲಯಾಳಂ ಭಾಷೆಗಳೆರಡರಲ್ಲೂ ಪ್ರಕಟವಾಗುತ್ತಿದ್ದ ಪತ್ರಿಕೆ. 1954ರಲ್ಲಿ ತಿರುವಾಂಕೂರು–ಕೊಚ್ಚಿ ಸರ್ಕಾರದಿಂದ ಪ್ರಾರಂಭವಾಯಿತು. ಇದು ಸರ್ಕಾರದ ವೃತ್ತಾಂತಪತ್ರವಾಗಿದ್ದರೂ ಪಿ.ಕೆ.ಗೋಪಾಲಕೃಷ್ಣನ್ ಸಂಪಾದಕತ್ವದಲ್ಲಿ ಸಾಹಿತ್ಯ ಪತ್ರಿಕೆಯಂತೆ ಸೇವೆ ಸಲ್ಲಿಸುತ್ತಿತ್ತು. ಹನ್ನೊಂದು ವರ್ಷಗಳ ಕಾಲ ಪತ್ರಿಕೆ ನಡೆದ ಮೇಲೆ ಕೇರಳ ಸರ್ಕಾರ ಅದನ್ನು ನಿಲ್ಲಿಸಿತು(1967). ಪತ್ರಿಕೆಯ

ಸಂಪಾದಕ ಹುದ್ದೆಯನ್ನು ರದ್ದುಗೊಳಿಸಿ ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕ ನಿರ್ದೇಶಕ (ಅಡಿಷನಲ್ ಡೈರೆಕ್ಟರ್) ಎಂಬ ಹೊಸ ಹುದ್ದೆಯನ್ನು ರಚಿಸಲಾಯಿತು. ಕೇರಳ ಸಂದೇಶಂ ಪತ್ರಿಕೆಯ ಸ್ಥಾನದಲ್ಲಿ ಜನಪಥಂ ಪತ್ರಿಕೆ ಆರಂಭವಾಯಿತು. (ಕೆ.ಟಿ.)

**ಕೇರೋ :** ಅಮೆರಿಕ ಸಂಯುಕ್ತಸಂಸ್ಥಾನದ ಇಲಿನಾಯ್ ರಾಜ್ಯದ ಅತ್ಯಂತ ದಕ್ಷಿಣದಲ್ಲಿರುವ ನಗರ. ಒಹಾಯೊ ಮತ್ತು ಮಿಸಿಸಿಪಿ ನದಿಗಳ ಸಂಗಮದ ಬಳಿ ಇದೆ. ಅಲೆಕ್ಸಾಂಡರ್ ಕೌಂಟಿಯ ಮುಖ್ಯ ಪಟ್ಟಣ. ಜನಸಂಖ್ಯೆ 9,590(2000). ಇತಿಹಾಸ ಪೂರ್ವದಲ್ಲಿ ಕೊಲ್ಲಿಯೊಂದನ್ನು ಸೇರುತ್ತಿದ್ದ ಒಹಾಯೊ ನದಿಯಿಂದ ನಿರ್ಮಿತವಾದ ತಗ್ಗಾದ ಮುಖಜಭೂಮಿಯ ಮೇಲೆ ಈ ನಗರ ನಿರ್ಮಿತವಾಗಿದೆ. ಈ ನಗರದ ನಿವೇಶನ ಈಜಿಪ್ಟಿನ ಕೈರೋ ನಗರದ ನಿವೇಶನವನ್ನೇ ಹೋಲುತ್ತಿದ್ದುದರಿಂದ ಇದಕ್ಕೆ ಅದೇ ಹೆಸರನ್ನಿಡಲಾಯಿತು. (ರೂಢಿಯಲ್ಲಿ ಇದರ ಉಚ್ಚಾರಣೆ ಕೇರೋ ಎಂದಾಗಿದೆ). ದಕ್ಷಿಣ ಇಲಿನಾಯ್ ಚಿಕ್ಕ ಈಜಿಪ್ಟ್ ಎಂದು ಪ್ರಸಿದ್ಧವಾಗಿದೆ. ಕೇರೋ ನಗರವನ್ನೂ ಕೇರೋ ಬ್ಯಾಂಕನ್ನೂ 1818ರಲ್ಲಿ ಶಾಸಿಸಲಾಯಿತು. ಆಗ ಆ ಸ್ಥಳದಲ್ಲಿ ವಸತಿ ಇರಲಿಲ್ಲ. ಬ್ಯಾಂಕಿಗೆ ಠೇವಣಿದಾರರೂ ಇರಲಿಲ್ಲ. ಅಲ್ಲಿ ನಗರ ಸ್ಥಾಪಿಸಲು ಮತ್ತೆ 1836–37ರಲ್ಲಿ ಕೇರೋ ನಗರ ಮತ್ತು ಕಾಲುವೆ ಕಂಪನಿಯಿಂದ ನಡೆದ ಪ್ರಯತ್ನ ಸಫಲವಾಯಿತು. ಆ ಕಂಪನಿಯ ಸಾಲದ ಬಾಂಡುಗಳನ್ನು ಇಂಗ್ಲೆಂಡಿನಲ್ಲಿ ಮಾರಾಟಕ್ಕೆ ನೀಡಲಾಗಿತ್ತು. ಆದರೆ 1840ರಲ್ಲಿ ಆ ಕಂಪನಿ ಕುಸಿಯಿತು. 1846ರಲ್ಲಿ ಪೂರ್ವಪ್ರದೇಶದ ಕೆಲವು ಬಂಡವಾಳಗಾರರ ಕಂಪನಿಯೊಂದು 10,000 ಎಕರೆ ಭೂಮಿಯನ್ನು ಕೊಂಡಿತು. ಆ ಕಂಪನಿಯವರಲ್ಲಿ ಒಬ್ಬ ವಿನಾ ಬೇರೆ ಯಾರೂ ಅಲ್ಲಿ ನೆಲಸಲಿಲ್ಲ. ಆದರೂ ಆ ನಗರವನ್ನು ಅಭಿವೃದ್ಧಿಪಡಿಸಲು ಅವರಿಗೆ ಆಸಕ್ತಿಯಿತ್ತು. ಇಲಿನಾಯ್ ಕೇಂದ್ರೀಯ ರೇಲ್ ರೋಡ್ ಕಂಪನಿಯೊಂದಿಗೆ ಅವರು ಸಂಬಂಧ ಬೆಳೆಸಿಕೊಂಡು ಅದನ್ನು ಭಾವೀ ರೈಲುದಾರಿಯ ಅಂತಿಮದಾಣವಾಗಿ ಮಾಡಬೇಕೆಂದು ಪ್ರಯತ್ನಿಸಿದರು. 1855ರ ವರೆಗೂ ಅಲ್ಲಿ ನಗರಾಡಳಿತ ವ್ಯವಸ್ಥೆ ಏರ್ಪಟ್ಟಿರಲಿಲ್ಲ. ಅಮೆರಿಕನ್ ಅಂತರ್ಯುದ್ಧದ ಕಾಲದಲ್ಲಿ ಅದು ಒಂದು ಸೇನಾಕೇಂದ್ರವಾಗಿತ್ತು. ಈಗ ದಕ್ಷಿಣ ಇಲಿನಾಯ್ ಮತ್ತು ಒಹಾಯೊ ಮಿಸಿಸಿಪಿ ನದಿಗಳ ಇಡೀ ಕಣಿವೆಯ ಪ್ರದೇಶಕ್ಕೆ ಇದು ಒಂದು ಮುಖ್ಯ ಹಡಗು ಸಾರಿಗೆ ಕೇಂದ್ರ. ಚೌಬೀನೆ ಮರಗೆಲಸ, ಹತ್ತಿಬೀಜದ ತಯಾರಿಕೆ ಮತ್ತು ಸೋಯಾ ಬೀನ್ ಉತ್ಪನ್ನದ ತಯಾರಿಕೆ–ಇವು ಇಲ್ಲಿಯ ಕೈಗಾರಿಕೆಗಳು. ನಗರವನ್ನು ಪ್ರವಾಹದ ಅಪಾಯದಿಂದ ರಕ್ಷಿಸಲು ಇದರ ಬಳಿ ಅಡ್ಡಗಟ್ಟೆಗಳನ್ನು ಕಟ್ಟಲಾಗಿದೆ. 1937ರಲ್ಲಿ ಒಹಾಯೊ ನದಿಯ ನೀರಿನ ಮಟ್ಟ 18 ಮೀ. ಏರಿದಾಗ ಆ ನದೀಕಣಿವೆಯಲ್ಲಿ ಪ್ರವಾಹಪೀಡಿತವಾಗದಿದ್ದ ನಗರ ಇದೊಂದೇ. (ಬಿ.ಎಸ್.ಎಚ್.)

**ಕೇರೋ ಆಮ್ಲ :** ಪರ್‌ಮಾನೋ ಸಲ್ಫ್ಯೂರಿಕ್ ಆಮ್ಲ $H_2SO_5$. ಪೊಟ್ಯಾಸಿಯಂ ಪರ್‌ಸಲ್ಫೇಟನ್ನು ಸಾರ ಸಲ್ಫ್ಯೂರಿಕ್ ಆಮ್ಲದೊಡನೆ ಅರೆದು ಒಂದು ಗಂಟೆಯ ಅನಂತರ ಈ ಮಿಶ್ರಣವನ್ನು ಮಂಜುಗಡ್ಡೆಗೆ ಹಾಕಿ ಪರ್‌ಮಾನೋ ಸಲ್ಫ್ಯೂರಿಕ್ ಆಮ್ಲವನ್ನು ಪ್ರಥಮ ಬಾರಿಗೆ ಕೇರೋ ತಯಾರಿಸಿದ್ದರಿಂದ (1898) ಇದಕ್ಕೆ ಕೇರೋ ಆಮ್ಲವೆಂದು ಹೆಸರಿಡಲಾಯಿತು. ಬೇಯರ್ ಮತ್ತು ವ್ಹಿಲಿಗರ್ ಎಂಬವರು ಬೇರಿಯಂ ಫಾಸ್ಫೇಟಿನೊಂದಿಗೆ ಫಲಿತದ್ರಾವಣದ ಮಿಶ್ರಣವನ್ನು ಕಲಕಿ ಕೇರೋ ಆಮ್ಲವನ್ನು ಬಿಡುಗಡೆಮಾಡಿ ಪಡೆದರು(1901). ಸಾರ ಸಲ್ಫ್ಯೂರಿಕ್ ಆಮ್ಲಕ್ಕೆ ಶೇ. 5 ಹೈಡ್ರೊಜನ್ ಪರಾಕ್ಸೈಡನ್ನು ಸೇರಿಸುವುದರಿಂದ ಕೇರೋ ಆಮ್ಲವನ್ನು ತಯಾರಿಸಬಹುದು.

$$H_2SO_4 + H_2O_2 \rightarrow H_2SO_5 + H_2O$$

ಸಲ್ಫರ್ ಟ್ರೈ ಆಕ್ಸೈಡ್ ಹೆಚ್ಚು ಸಾರದ ಹೈಡ್ರೋಜನ್ ಪರಾಕ್ಸೈಡಿನ ಮೇಲೆ ವರ್ತಿಸಿದಾಗ ಸರಿಸುಮಾರು ಶುದ್ಧವಾದ ಕೇರೋ ಆಮ್ಲ ಉತ್ಪತ್ತಿಯಾದುದನ್ನು ಆರ್ಹಲೆ ಎಂಬಾತ ತೋರಿಸಿಕೊಟ್ಟ(1909). ಮುಂದೆ 1910ರಲ್ಲಿ ಡಿ ಆನ್ಸ್ ಮತ್ತು ಫ್ರೆಡರಿಚ್ ಎಂಬುವರು ಅನ್‌ಹೈಡ್ರಸ್ ಹೈಡ್ರೊಜನ್ ಪರಾಕ್ಸೈಡನ್ನು ಕ್ಲೋರೋ ಸಲ್ಫ್ಯೂರಿಕ್ ಆಮ್ಲದ ಮೇಲೆ ಪರಿವರ್ತಿಸುವುದರ ಮೂಲಕ ಶುದ್ಧವಾದ ಕೇರೋ ಆಮ್ಲವನ್ನು ಪಡೆದರು. ದ್ರವವಸ್ತುವಾಗಿ ಪಡೆಯುವ ಇದನ್ನು ಶೈತ್ಯಗೊಳಿಸಿದಾಗ ನಿಧಾನವಾಗಿ ಹರಳುಗಳಾಗುವುವು.

$$ClSO_3H + H_2O_2 \rightarrow HCl + H_2SO_5$$

ಪರ್‌ಡೈಸಲ್ಫ್ಯೂರಿಕ್ ಆಮ್ಲವನ್ನು (ಮಾರ್ಷಲ್ ಆಮ್ಲ) ತಯಾರಿಸಲು ಉಪಯೋಗಿಸುವ ಉಪಕರಣವನ್ನೇ ಅಳವಡಿಸಿಕೊಂಡು ಅದೇ ವಾತಾವರಣದಲ್ಲಿ ಸಾರಸಲ್ಫ್ಯೂರಿಕ್ ಆಮ್ಲವನ್ನು ವಿದ್ಯುದ್ವಿಶ್ಲೇಷಿಸಿ ಕೇರೋ ಆಮ್ಲವನ್ನು ತಯಾರಿಸಬಹುದು.

ಶುದ್ಧವಾದ ಕೇರೋ ಆಮ್ಲ ಬಿಳಿಬಣ್ಣದ ಸ್ಫಟಿಕಾಕೃತಿಯ ಘನ. ಇದು 45 ಡಿಗ್ರಿ ಸೆಂ. ಉಷ್ಣತೆಯಲ್ಲಿ ದ್ರವವಾಗುವುದು. ಸಾಕಷ್ಟು ದಿನಗಳ ವರೆಗೆ ಸ್ಥಿರವಾಗಿರುತ್ತದೆ. ಪರ್‌ಸಲ್ಫ್ಯೂರಿಕ್ ಆಮ್ಲದಂತೆಯೇ ಇದು ಸಹ ಪ್ರಬಲ ಉತ್ಕರ್ಷಣಕಾರಿ. ಆದರೆ ಅದರಂತಲ್ಲದೆ ಪೊಟ್ಯಾಸಿಯಂ ಅಯೊಡೈಡಿನಿಂದ ಕೂಡಲೆ ಅಯೊಡೀನನ್ನು ಬಿಡುಗಡೆಮಾಡುವುದು. ಮಾರ್ಷಲ್ ಆಮ್ಲದಿಂದ ಇದು ಭಿನ್ನವಾಗಿರುವುದನ್ನು ಈ ಕ್ರಿಯೆಯಿಂದ ಗುರುತಿಸಬಹುದು. ಸಲ್ಫರ್ ಡೈಆಕ್ಸೈಡನ್ನು ($SO_2$) ಸಲ್ಫರ್ ಟ್ರೈ ಆಕ್ಸೈಡಾಗಿಯೂ ($SO_3$) ಫೆರಸ್ ಲವಣಗಳನ್ನು ಫೆರಿಕ್ ಲವಣಗಳಾಗಿಯೂ ಹೈಡ್ರೊಜನ್ ಕ್ಲೋರೈಡನ್ನು ಕ್ಲೋರೀನಾಗಿಯೂ ಹೈಡ್ರೊಜನ್ ಬ್ರೋಮೈಡನ್ನು ಬ್ರೋಮಿನ್ನಾಗಿಯೂ ಹೈಡ್ರೊಜನ್ ಅಯೋಡೈಡನ್ನು ಅಯೊಡೀನಾಗಿಯೂ ಉತ್ಕರ್ಷಿಸುವುದು. ಆದರೆ ಹೈಡ್ರೋಜನ್ ಫ್ಲೋರೈಡಿನ ಮೇಲೆ ವರ್ತಿಸುವುದಿಲ್ಲ. ಅನಿಲೀನನ್ನು ತತ್‌ಕ್ಷಣವೇ ಅನಿಲೀನ್‌ಬ್ಲ್ಯಾಕ್ ಆಗಿ ಉತ್ಕರ್ಷಿಸುತ್ತದೆ. ಉಣ್ಣೆ ಮತ್ತು ಸೆಲ್ಯುಲೋಸನ್ನು ಕಾರ್ಬನೀಕರಿಸುವುದು. ಬೆಳ್ಳಿ, ತಾಮ್ರ, ಮ್ಯಾಂಗನೀಸ್, ಕೋಬಾಲ್ಟ್ ಮತ್ತು ನಿಕ್ಕಲ್ ಲವಣಗಳಿಂದ ಅವುಗಳ ಪರಾಕ್ಸೈಡುಗಳನ್ನು ಒತ್ತರಿಸುತ್ತದೆ. ಪರ್ಮ್ಯಾಂಗನೇಟುಗಳನ್ನು ಚಲುವೆಮಾಡುವುದಿಲ್ಲ. ಕ್ರೋಮಿಕ್ ಅಥವಾ ಟಿಟ್ಯಾನಿಯಂ ಲವಣಗಳನ್ನು ಉತ್ಕರ್ಷಿಸುವುದೂ ಇಲ್ಲ. ಈ ಕ್ರಿಯೆಗಳಲ್ಲಿ ಇದು ಹೈಡ್ರೋಜನ್ ಪರಾಕ್ಸೈಡಿನಿಂದ ಭಿನ್ನವಾಗಿದೆ.

ಹೈಡ್ರೋಜನ್ ಪರಾಕ್ಸೈಡಿನೊಡನೆ ಕೇರೋ ಆಮ್ಲ ವರ್ತಿಸಿ ಆಕ್ಸಿಜನನ್ನು ಬಿಡುಗಡೆ ಮಾಡುವುದು.

$$H_2SO_5 + H_2O_2 \rightarrow H_2SO_4 + H_2O + O_2$$

ಸಲ್ಫ್ಯೂರಿಕ್ ಆಮ್ಲದೊಂದಿಗೆ ಬಟ್ಟಿ ಇಳಿಸಿದಾಗ ಹೈಡ್ರೋಜನ್ ಪರಾಕ್ಸೈಡನ್ನು ಕೊಡುತ್ತದೆ.

$$H_2SO_5 + H_2O \xrightarrow{H_2SO_4} H_2SO_4 + H_2O_2$$

ಕೇರೋ ಆಮ್ಲದ ಘನರೂಪದ ಲವಣಗಳಾವುವೂ ತಿಳಿದಿಲ್ಲ. ಆದರೆ ಹೈಡ್ರೊಜನ್ ಪರಾಕ್ಸೈಡು $KClSO_3$ರ ಮೇಲೆ ವರ್ತಿಸಿದಾಗ $KHSO_5$ ಲವಣ ದ್ರವರೂಪದಲ್ಲಿ ಉತ್ಪತ್ತಿಯಾಗುವುದೆಂದು ತಿಳಿದುಬಂದಿದೆ. ಇದರ ಲವಣಗಳಿಗೆ ಅಂಥ ಪ್ರಾಮುಖ್ಯವೇನೂ ಇಲ್ಲ.

ಕೇರೋ ಆಮ್ಲ ಏಕಪ್ರತ್ಯಾಮ್ಲೀಯ (ಮಾನೋಬೇಸಿಕ್) $H_2SO_5$ ಆಮ್ಲವೇ ಅಥವಾ ದ್ವಿಪ್ರತ್ಯಾಮ್ಲೀಯ (ಡೈಬೇಸಿಕ್) $H_2S_2O_9$ ಆಮ್ಲವೇ ಎಂಬುದರ ಬಗ್ಗೆ ವಿವಾದವಿದ್ದೇ ಇದೆ. ಅದರ ಪೊಟ್ಯಾಸಿಯಂ ಲವಣದ ವಿಶ್ಲೇಷಣೆ ಸಂಪೂರ್ಣವಾದುದಲ್ಲ. ಕಾರಣ $KHSO_5$ ಕೊನೆಯ ಘಟ್ಟದಲ್ಲಿ $K_2S_2O_9H_2O$ ರಚನೆಯನ್ನೇ ಪಡೆಯುತ್ತದೆ.

ಕೇರೋ ಆಮ್ಲದ ದ್ರಾವಣದಲ್ಲಿ $SO_3$ : ಪರಾಕ್ಸೈಡಿನ O (ಆಕ್ಸಿಜನ್ನಿನ) ಪ್ರಮಾಣ 1:1 ಎಂದು ಗೊತ್ತಾಗಿದೆ. ಆದ್ದರಿಂದ ಅದರ ಸೂತ್ರ $SO_3 + O + H_3O$ ಅಥವಾ $H_2SO_5$ ಪರ್‌ಮಾನೋ ಸಲ್ಫ್ಯೂರಿಕ್ ಆಮ್ಲ.

ಕೇರೋ ಆಮ್ಲದ ಪೊಟ್ಯಾಸಿಯಂ ಲವಣದೊಡನೆ ಬೆಂಜಾಯಿಲ್ ಕ್ಲೋರೈಡ್ ವರ್ತಿಸಿ ಬೆಂಜಾಯಿಲ್ ವ್ಯುತ್ಪನ್ನ(ಡಿರೈವೆಟಿವ್) ಆಗುತ್ತದೆ. ಇದು ಪ್ರತ್ಯಾಮ್ಲದೊಡನೆ ಜಲವಿಶ್ಲೇಷಿಸಿ ಕೇರೋ ಮತ್ತು ಬೆಂಜೋಯಿಕ್ ಆಮ್ಲಗಳು ಉತ್ಪತ್ತಿಯಾಗುವುವು; ಮತ್ತು ಆಮ್ಲೀಯ ಜಲವಿಶ್ಲೇಷಿಸಿ ಸಲ್ಫ್ಯೂರಿಕ್ ಆಮ್ಲ ಮತ್ತು ಪರ್‌ಬೆಂಜೋಯಿಕ್ ಆಮ್ಲಗಳನ್ನೀಯುವುದು. ಕೇರೋ ಆಮ್ಲ ಏಕ ಪ್ರತ್ಯಾಮ್ಲೀಯ ಆಮ್ಲವೆಂಬುದನ್ನು ಲವಲೇಶವೂ ಅನುಮಾನವಿಲ್ಲದ ಹಾಗೆ ಈ ಕ್ರಿಯೆ ಸ್ಥಾಪಿಸುವುದು.

ಲೆಕ್ಕಾಚಾರದ ಪ್ರಕಾರ ಬೇಕಾಗುವಷ್ಟು ಕ್ಲೋರೋ ಸಲ್ಫೋನಿಕ್ ಆಮ್ಲವನ್ನು ಶುದ್ಧವಾದ ಹೈಡ್ರೊಜನ್ ಪರಾಕ್ಸೈಡಿನ ಮೇಲೆ ಶೈತ್ಯದಲ್ಲಿರುವಾಗ ಸೇರಿಸಿ ಕೇರೋ



ಚಿತ್ರ 1

ಆಮ್ಲವನ್ನು ವಿಶ್ಲೇಷಿಸುವ ವಿಧಾನ ಮೇಲೆ ಸೂಚಿಸಿರುವ ಅಣುಸೂತ್ರವನ್ನು ಸಮರ್ಥಿಸುವುದು. ಇದರ ಪ್ರಕಾರ ಕೇರೋ ಆಮ್ಲದ ರಚನಾಸೂತ್ರವನ್ನು ಹೀಗೆ ಬರೆಯಬಹುದು.

ಇದನ್ನು ಹೈಡ್ರೋಜನ್ ಪರಾಕ್ಸೈಡಿನ ಮಾನೋ ಸಲ್ಫೋನೇಟಾಗಿ ಭಾವಿಸ ಬಹುದು.



ಚಿತ್ರ 2

ಮೀಥೈಲ್ ಆರೆಂಜ್ ಅಥವಾ ಫೀನಾಲ್‌ಫ್ತಲೀನನ್ನು ಸೂಚಕವಾಗಿ ಅಳವಡಿಸಿಕೊಂಡು ಉತ್ಕರ್ಷಣಕಾರಿಯಾದ ಕೇರೋ ಆಮ್ಲವನ್ನು ಪ್ರಬಲ ಕ್ಷಾರಗಳೊಡನೆ ಅನುಮಾಪನ (ಟ್ರೈಟ್ರೇಷನ್) ಮಾಡಲು ಆಗುವುದಿಲ್ಲ. (ಪಿ.ಜಿ.ಆರ್.)

**ಕೇರೋ, ಹೆನ್ರಿಚ್ :** 1834–1910. ಪೋಲೆಂಡಿನ ಪಾಜ್‌ನಾನ್ಯ ಪಟ್ಟಣದಲ್ಲಿ ಜನಿಸಿದ ರಸಾಯನವಿಜ್ಞಾನಿ. ಈತನ ತಂದೆ ಒಬ್ಬ ಯೆಹೂದಿ ದಿನಸಿ ವ್ಯಾಪಾರಿ. ಜೀವನವನ್ನು ಸಾಗಿಸುವ ಸಲುವಾಗಿ ಈತ 1842ರಲ್ಲಿ ಬರ್ಲಿನ್ನಿಗೆ ವಲಸೆ ಹೋದ. ಅಲ್ಲಿ ಕೇರೋಗೆ ವೃತ್ತಿಶಿಕ್ಷಣ ದೊರೆಯಿತು. ಅಲ್ಲಿಯ ಒಂದು ವ್ಯಾಯಾಮ ಶಾಲೆಯಲ್ಲಿ ಕೆಲಕಾಲ ಇದ್ದ. ಅನಂತರ ಬಟ್ಟೆಗಳಿಗೆ ಬಣ್ಣಹಾಕುವ ಕಾರ್ಖಾನೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡ. ಅಲ್ಲಿ ಈತನಿಗೆ ಬಣ್ಣಹಾಕುವ ಕಲೆಯಲ್ಲಿ ಒಳ್ಳೆಯ ತರಬೇತಿ ದೊರೆಯಿತು. ರಸಾಯನವಿಜ್ಞಾನದಲ್ಲಿ ಮೊದಲಿನಿಂದಲೂ ಈತನಿಗೆ ಹೆಚ್ಚು ಆಸಕ್ತಿ ಇತ್ತು. ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿದ್ದ ರಸಾಯನವಿಜ್ಞಾನದ ಬಗೆಗಿನ ಉಪನ್ಯಾಸಗಳಿಗೆ ತಪ್ಪದೆ ಹೋಗುತ್ತಿದ್ದ. ಕೆಲವು ವರ್ಷಗಳ ಅನಂತರ ಜರ್ಮನಿಯ ಮುಲ್ ಹೈಮ್ ಪಟ್ಟಣದ ಒಂದು ಕ್ಯಾಲಿಕೋಮುದ್ರಣ ಸಂಸ್ಥೆಯಲ್ಲಿ ಬಣ್ಣಹಾಕುವ ಉದ್ಯೋಗ ಈತನಿಗೆ ಸಿಕ್ಕಿತು(1855). ಅಲ್ಲಿ ರಸಾಯನವಿಜ್ಞಾನದ ಬಗ್ಗೆ ತನಗಿದ್ದ ಅಪಾರ ಆಸಕ್ತಿಯನ್ನೂ ಜಾಣ್ಮೆಯನ್ನೂ ಪ್ರದರ್ಶಿಸಿ, ಉತ್ಪಾದನೆಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರೋಪಾಯಗಳನ್ನು ಈತ ಸೂಚಿಸಿದ. ಈತನ ಬುದ್ಧಿಕೌಶಲವನ್ನು ಮೆಚ್ಚಿ ಆ ಸಂಸ್ಥೆಯವರು ಬಣ್ಣಹಾಕುವ ಆಧುನಿಕ ತಂತ್ರಗಳನ್ನು ಅಧ್ಯಯನ ಮಾಡಿಕೊಂಡು ಬರುವ ಸಲುವಾಗಿ ಇವನನ್ನು ಇಂಗ್ಲೆಂಡಿಗೆ ಕಳುಹಿಸಿದರು(1857). ಎರಡು ವರ್ಷಗಳ ತರುವಾಯ ಕೃತಕ ಬಣ್ಣಗಳ ಮೇಲಿನ ಅಧ್ಯಯನಕ್ಕೆ ಈತ ಹೆಚ್ಚು ಗಮನಕೊಡುವ ಸಲುವಾಗಿ ತನ್ನ ಮುಲ್‌ಹೈಮ್ ಕೆಲಸಕ್ಕೆ ರಾಜೀನಾಮೆ ನೀಡಿ ಮತ್ತೆ ಇಂಗ್ಲೆಂಡಿಗೆ ಹಿಂತಿರುಗಿದ. ಇಂಗ್ಲೆಂಡಿನ ಮ್ಯಾಂಚೆಸ್ಟರಿನಲ್ಲಿಯ ರಾಬರ್ಟ್ ಡೇಲ್ ಅಂಡ್ ಕಂಪನಿ ಎಂಬ ರಾಸಾಯನಿಕ ಉದ್ಯಮ ಸಂಸ್ಥೆಯಲ್ಲಿ ಸಂಶ್ಲೇಷಣವಿಜ್ಞಾನಿಯ ಕೆಲಸ ಈತನಿಗೆ ದೊರೆಯಿತು. ಪರ್ಕಿನ್ನನ ವರ್ಣದ್ರವ್ಯ(ಮೋವ್) ಸಂಶ್ಲೇಷಣೆಗೆ ಸಂಬಂಧಿಸಿದಂತೆ ಒಂದು ಹೊಸ ಸಮರ್ಥ ವಿಧಾನವನ್ನು ಕಂಡುಹಿಡಿದದ್ದರಿಂದ ಇವನಿಗೆ ಆ ಉದ್ಯಮಸಂಸ್ಥೆಯ ಪಾಲುಗಾರಿಕೆಯಲ್ಲಿ ಅವಕಾಶ ಲಭಿಸಿತು. ಈ ವಿಧಾನವನ್ನು ವ್ಯಾವಹಾರಿಕವಾಗಿ ಲಾಭಪ್ರದವನ್ನಾಗಿ ಮಾಡುವುದರಲ್ಲಿ ಮತ್ತು ಹೊಸ ಹೊಸ ಅನಿಲೀನ್ ಬಣ್ಣಗಳ ಸಂಶ್ಲೇಷಣೆ ಹಾಗೂ ಅವುಗಳ ರಚನೆಯ ಬಗ್ಗೆ ಜರ್ಮನಿಯ ರಸಾಯನವಿಜ್ಞಾನಿ ಎ.ಡಬ್ಲ್ಯೂ. ಹಾಫ್ ಮನ್ (1818–92) ನಡೆಸಿದ ಸಂಶೋಧನೆಗಳ ಮೇಲೆ ಅಧ್ಯಯನ ನಡೆಸಿದ ಸಲುವಾಗಿ ಕೇರೋಗೆ ಕೈಗಾರಿಕಾಸಾವಯವ ರಸಾಯನತಜ್ಞನ ಸ್ಥಾನ ಸಿಕ್ಕಿತು. ಹಾಫ್‌ಮನ್ನನ ಯುವಜನ ವಿದ್ಯಾರ್ಥಿವೃಂದದೊಡನೆ ಹಾಗೂ ಅವರಲ್ಲಿ ಮುಂದೆ ದೊಡ್ಡ ದೊಡ್ಡ ರಸಾಯನತಜ್ಞರಾಗುವಂತಿದ್ದವರೊಡನೆ ಈತ ಕಲೆತು ವೈಜ್ಞಾನಿಕ ಪ್ರಗತಿಯ ಪಥದಲ್ಲಿ ಅನೇಕ ಸಂಶೋಧನಕಾರ್ಯಗಳನ್ನು ನಡೆಸಿದ. ಡೈಆಜ಼ೋ ಸಂಯುಕ್ತಗಳ ಮೇಲೆ ಪೀಟರ್ ಗ್ರೀಸನ ವಿದ್ವತ್ಪೂರಿತ ಅಧ್ಯಯನಗಳನ್ನು ಕುರಿತು ಅಭ್ಯಸಿಸಿ ಬಲು ಪ್ರಯೋಜನಕಾರಿ ಅನಿಲೀನ್ ಬಣ್ಣವಾದ ಇಂಡ್ಯುಲೀನನ್ನು ಕೇರೋ ಕಂಡುಹಿಡಿದ. ಅನಂತರ ಮಾರ್ಷಿಯಸನೊಡಗೂಡಿ (1864–65) ಬಿಸ್‌ಮಾರ್ಕ್ ಬ್ರೌನ್ ಮತ್ತು ಮಾರ್ಷಿಯಸ್ ಯೆಲ್ಲೋ ಎಂಬ ವರ್ಣದ್ರವ್ಯಗಳ ಲಾಭದಾಯಕ ಸಂಶ್ಲೇಷಣೆಯನ್ನು ರೂಪಿಸಿದ. ಇದಕ್ಕೆ ಮುಂಚೆ ರೋಸನಿಲೀನ್ ಬಣ್ಣಗಳ ಟ್ರೈಫೀನೈಲ್ ಮೀಥೇನ್ ರಚನೆಯನ್ನು ವಿಶದೀಕರಿಸುವಲ್ಲಿಯ ಅಧ್ಯಯನಗಳತ್ತ ಹತ್ತು ವರ್ಷಗಳ ತನಕ ಕೇರೋನ ಗಮನ ಹರಿದಿತ್ತು.

ಇಂಗ್ಲೆಂಡಿನಲ್ಲಿ ತನಗೊದಗಿದ ಯಶಸ್ಸು ಮತ್ತು ಕೀರ್ತಿಗಳು ಹಾಗೂ ಬ್ರಿಟಿಷ್ ಮಹಿಳೆ ಎಡಿತ್ ಈಟನಳೊಂದಿಗೆ ಜರುಗಿದ ವಿವಾಹ–ಇವು ಯಾವುವೂ ಕೇರೋಗೆ ಆ ಊರಿನಲ್ಲಿ ತನ್ನ ಜೀವನವನ್ನು ಮುಂದುವರಿಸಿಕೊಂಡು ಬರಲು ಸಾಕಷ್ಟು ಪೋಷಕವಾಗಲಿಲ್ಲ. ಜರ್ಮನಿಗೆ ಹಿಂತಿರುಗಿ ಹೈಡಲ್‌ಬರ್ಗಿನಲ್ಲಿ ನೆಲಸಿದ (1866). ಅಲ್ಲಿಯ ಬುನ್‌ಸೆನ್ ಪ್ರಯೋಗಾಲಯದಲ್ಲಿ ಈತನ ಸಂಶೋಧನಕಾರ್ಯ ಮುಂದುವರಿಯಿತು. ಎರಡು ವರ್ಷಗಳ ಅನಂತರ ಲಡ್‌ವಿಗ್‌ಷಾಫೆನ್‌ನಲ್ಲಿದ್ದ ಒಂದು ಪ್ರಮುಖ ಕೈಗಾರಿಕಾ ಸಂಶೋಧನ ಸಂಸ್ಥೆಯ ನಿರ್ದೇಶಕನ ಹುದ್ದೆ ಈತನಿಗೆ ಲಭಿಸಿತು. ಜರ್ಮನಿಯ ವಿಶ್ವವಿದ್ಯಾಲಯಗಳಲ್ಲದೆ ಇತರೆಡೆಗಳಲ್ಲೂ ಆರೋಮ್ಯಾಟಿಕ್ ರಸಾಯನವಿಜ್ಞಾನದ ಮೇಲೆ ಸಂಶೋಧನೆ ನಡೆಸುತ್ತಿದ್ದ ಇತರ ಸಂಶೋಧಕರೊಡನೆ ಸೇರಿ ತನ್ನ ಕೆಲಸ ಮುಂದುವರಿಸಿದ. ಅಲಿಜ಼ರಿನ್ ವರ್ಣದ್ರವ್ಯದ ಸಂಶ್ಲೇಷಣೆಯ ಬಗ್ಗೆ ಗ್ರೇಬಿ ಮತ್ತು ಲೀಬರ್‌ಮನ್ನರೆಂಬುವರು ತಮ್ಮ ವಿಧಾನಗಳನ್ನು ಕೇರೋಗೆ ವಿವರಿಸಿದಾಗ ಈತ ವ್ಯವಹಾರದೃಷ್ಟಿಯಿಂದ ಮತ್ತಷ್ಟೂ ಲಾಭತರುವಂಥ ತನ್ನದೇ ಆದ ವಿಧಾನವನ್ನು ಅವರಿಗೆ ತಿಳಿಯಪಡಿಸಿದ. ಬೇಯರ್ ಫ್ಲೂರಸೀನನ್ನು ಬ್ರೋಮಿನೀಕರಿಸಿ (ಬ್ರೋಮಿನೇಟೆಡ್) ಕೆಂಪುಬಣ್ಣದ ಈಯೊಸಿನ್ ಎಂಬ ಪ್ರತಿದೀಪ್ತವಸ್ತುವನ್ನು(ಫ್ಲೂರೊಸೆಂಟ್) ತಯಾರಿಸಿದ. ಬೇಯರ್ ಒಡಗೂಡಿ ಅಮೀನುಗಳ ಮೇಲೆ ಈತನ ಸಂಶೋಧನೆ ಮುಂದುವರಿಯಿತು. ಗ್ರೀಸ್, ಆಟೋ ಮತ್ತು ವಿಟ್ ಮುಂತಾದ ವಿಜ್ಞಾನಿಗಳಿಂದಾಗಿ 1870ರ ದಶಕದ ಮಧ್ಯಭಾಗದಲ್ಲಿ ಆಜ಼ೋ ಬಣ್ಣಗಳ ಒಂದು ದೀರ್ಘ ಸರಣಿಯೇ ಉದ್ಭವವಾಯಿತು. ಇವುಗಳಲ್ಲಿ ಕೇರೋನ ಪಾತ್ರ ಮಹತ್ತರವಾದದ್ದು. ಕ್ರೈಸಾಯ್ಡೀನ್ ಆರೆಂಜ್ ಮತ್ತು ಗಾಢಕೆಂಪು (ಫಾಸ್ಟ್‌ರೆಡ್) ಬಣ್ಣಗಳ ಉತ್ಪಾದನೆಗೆ ಈತ ಬಹುವಾಗಿ ನೆರವಾದ. ಬೇಯರ್ ಮತ್ತು ಫಾರ್ಬ್‌ವೆರ್ಕ್ಸ್ ಹೋಚೆಸ್ಟ್ ಸಂಸ್ಥೆಗಳೊಡನೆ ಸಂಪರ್ಕವಿಟ್ಟುಕೊಂಡು ಇಂಡಿಗೋದ ಲಾಭಪ್ರದ ಸಂಶ್ಲೇಷಣೆಗೆ ಪ್ರಯತ್ನಿಸಿದನಾದರೂ(1880) ಅದು ಅಷ್ಟಾಗಿ ಫಲಪ್ರದವಾಗಲಿಲ್ಲ. ಸಂಶೋಧನ ವಿಭಾಗದ ನಿರ್ದೇಶಕನ ಹುದ್ದೆಗೆ ಕೇರೋ ರಾಜೀನಾಮೆ ಇತ್ತಮೇಲೆ(1889) ಈತನ ಅನಂತರದ ನಿರ್ದೇಶಕ ಹೆನ್ರಿಚ್ ಬ್ರೂನ್ಕ್‌ನ ನೇತೃತ್ವದಲ್ಲಿ ಬಿ.ಎ.ಎಸ್.ಎಫ್. ನ ರಸಾಯನತಜ್ಞರು ಇಂಡಿಗೋ ಸಂಶ್ಲೇಷಣೆಯ ಯೋಜನೆಯನ್ನು ಮುಂದುವರಿಸಿದರು. 1897ರಲ್ಲಿ ಜಯ ಲಭಿಸಿತು. ಕೇರೋ ತನ್ನ ಕೊನೆಯ ವರ್ಷಗಳಲ್ಲಿ ರೂಪಿಸಿದ ವರ್ಣಸಂಯುಕ್ತಗಳಲ್ಲಿ ನೆಫ್ತಾಲ್‌ಯೆಲ್ಲೋ (1879), ಪರ್‌ಸಲ್ಫ್ಯೂರಿಕ್ ಆಮ್ಲ(1898) **(ನೋಡಿ– ಕೇರೋ–ಆಮ್ಲ)** ಮುಖ್ಯವಾದವು.

1883ರ ಹೊತ್ತಿಗೆ ಜರ್ಮನಿಯ ಒಂದು ರಾಸಾಯನಿಕ ಕೈಗಾರಿಕೋದ್ಯಮದ ಮುಖ್ಯವಕ್ತಾರನಾಗಿ ರಸಾಯನವಿಜ್ಞಾನದ ಆವಿಷ್ಕಾರಗಳ ರಕ್ಷಣೆಗೆ ಸಂಬಂಧಿಸಿದಂತೆ ಏಕಸ್ವಾಮ್ಯ ನಿಯಮಗಳನ್ನೂ ಉಲ್ಲಂಘನ ಕ್ರಮಗಳನ್ನೂ ಕೇರೋ ರೂಪಿಸಿದ. ತನ್ನ ಜೀವಿತಕಾಲದಲ್ಲೇ ಬಣ್ಣದ ಕೈಗಾರಿಕೆಯಲ್ಲಿ ಆದಂಥ ಪ್ರಗತಿಯ ಚರಿತ್ರೆ ಬಗ್ಗೆ ತಾನೇ ಬರೆದಂಥ ಅನೇಕ ಲೇಖನಗಳಲ್ಲಿ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾನೆ. *

**ಕೇಲಿ, ಅರ್ಥರ್ :** 1821–95. ಇಂಗ್ಲೆಂಡಿನ ಗಣಿತ ವಿಜ್ಞಾನಿ ಹಾಗೂ ಖಗೋಳಶಾಸ್ತ್ರಜ್ಞ (ಜನನ ಆಗಸ್ಟ್ 16, 1821) ಕೇಂಬ್ರಿಜ್‌ನಲ್ಲಿ ಉನ್ನತ ಗಣಿತ ವ್ಯಾಸಂಗ ನಡೆಸಿದ. 1842ರಲ್ಲಿ ಸ್ಮಿತ್ ಬಹುಮಾನ ವಿಜೇತನಾದ (ಅದನ್ನು ಪಡೆದವರಲ್ಲಿ ಇವನೇ ಮೊದಲಿನವ). ತರುವಾಯ ಅದೇ ಸಂಸ್ಥೆಯಲ್ಲಿ ಈತನಿಗೆ ತಾತ್ಕಾಲಿಕ ಉದ್ಯೋಗ ಲಭಿಸಿತು. ಇದರೊಂದಿಗೆ ನ್ಯಾಯಶಾಸ್ತ್ರವನ್ನು ಸಹ ಅಭ್ಯಸಿಸಿ ಅದರಲ್ಲೂ ಪದವಿ ಗಳಿಸಿದ(1849). ಈತ ವಕೀಲನಾಗಿದ್ದ 14 ವರ್ಷಗಳ ಅವಧಿಯಲ್ಲಿ 300ರಷ್ಟು ಗಣಿತ ಸಂಶೋಧನಪ್ರಬಂಧಗಳನ್ನು ಬರೆದು ಪ್ರಸಿದ್ಧಿಸಿದ. ಇವನ ನಿಶಿತ ಮನಸ್ಸಿನ ಜೀವಂತಿಕೆಗೂ ಸ್ವಂತಿಕೆಗೂ ಇವು ನಿದರ್ಶನಗಳು. ಸಹವಕೀಲನೂ ಗಣಿತ ವಿದ್ವಾಂಸನೂ ಆಗಿದ್ದ ಜೆ.ಜೆ. ಸಿಲ್ವೆಸ್ಟರ್‌ನೊಡನೆ ನಿರಂತರ ಒಡನಾಟ 1846ರಿಂದ ಕೇಲಿಗೆ ದೊರೆತದ್ದು ಒಂದು ಅಪೂರ್ವ ಯೋಗ. ಇವರು ಪರಸ್ಪರ ಪೂರಕರೂ ಪ್ರೇರಕರೂ ಆಗಿ ನೀಡಿದ ಗಣಿತ ಕೊಡುಗೆಗಳು ಅತ್ಯುತ್ಕೃಷ್ಟ ಮಟ್ಟದವು. ರತ್ನಗಳನ್ನೂ ಮುತ್ತುಗಳನ್ನೂ ಉದುರಿಸುವುದು ಕೇಲಿಯ ಪ್ರವೃತ್ತಿ ಎಂದು ಸಿಲ್ವೆಸ್ಟರ್ ಹೇಳಿದ್ದುದಿತ್ತು. 1863ರಲ್ಲಿ ಕೇಲಿಯನ್ನು ಕೇಂಬ್ರಿಜ್‌ನ ಸ್ಯಾಡ್ಲೆರಿಯನ್ ಗಣಿತ ಪೀಠಕ್ಕೆ ಚುನಾಯಿಸಿ ಈತನ ಗಣಿತ ಪ್ರತಿಭೆಯನ್ನು ಗೌರವಿಸಿದರು.

ಕೇಲಿ ಮುಖ್ಯವಾಗಿ ಕಾರ್ಯಪ್ರವೃತ್ತನಾಗಿದ್ದದ್ದು ಸೈದ್ಧಾಂತಿಕ ಗತಿವಿಜ್ಞಾನ ಮತ್ತು ಗಣಿತೀಯ ಖಗೋಳಶಾಸ್ತ್ರ ಕ್ಷೇತ್ರಗಳಲ್ಲಿ. ಈತನ ಟ್ರೀಟೈಸ್ ಆನ್ ಎಲಿಪ್ಟಿಕ್ ಫಂಕ್ಷನ್ ಎಂಬ ಗ್ರಂಥ 1876ರಲ್ಲಿ ಪ್ರಕಟವಾಯಿತು. ಸುಮಾರು ಒಂದು ಸಾವಿರದಷ್ಟು ಇದ್ದ ಈತನ ಸಂಶೋಧನಪ್ರಬಂಧಗಳನ್ನು 13 ಬೃಹದ್ಗ್ರಂಥಗಳಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ಕೋಶಿ, ಆಯ್ಲರ್ ಮಟ್ಟದ ಪ್ರತಿಭಾನ್ವಿತನೀತ ಎಂದು ವಿದ್ವಾಂಸರ ಅಭಿಪ್ರಾಯ. ಅಚರಸಿದ್ಧಾಂತ (ಇನ್ವೇರಿಯಂಟ್ ಥಿಯೊರಿ), ಸಹಚರಗಳ ಉತ್ಪನ್ನಗಳನ್ನು ಪಡೆಯಲು ವಿಧಿಗಳು ಕ್ವಾಂಟಿಕಗಳು. ಮಾತೃಕೆಗಳ ಬೀಜಗಣಿತ (ಆಲ್ಜೀಬ್ರ ಆಫ್ ಮ್ಯಾಟ್ರಿಸಸ್) *n*– ಆಯಾಮಗಳಲ್ಲಿ ವಿಶ್ಲೇಷಣ ಜ್ಯಾಮಿತಿ, ವಕ್ರರೇಖೆಗಳ ಹಾಗೂ ಮೈಗಳ ವಿಕ್ಷೇಪ ಲಕ್ಷಣಗಳು (ಪ್ರೊಜೆಕ್ಟಿವ್ ಕ್ಯಾರೆಕ್ಟರಿಸ್ಟಿಕ್ಸ್ ಆಫ್ ಕರ್ವ್ಸ್ ಅಂಡ್ ಸರ್ಫೇಸಸ್). ಅಮೂರ್ತಗ್ರೂಪ್‌ಗಳ ಸಿದ್ಧಾಂತ. ಭೌತಖಗೋಳವಿಜ್ಞಾನ ಇವೇ ಮುಂತಾದ ಕ್ಷೇತ್ರಗಳಲ್ಲಿ ಕೇಲಿಯ ಸೃಷ್ಟಿಶೀಲ ಮನಸ್ಸು ವಿಹರಿಸಿ ಅಮೂಲ್ಯ ಸಾಧನೆಗಳನ್ನೂ ಸಿದ್ಧಿಗಳನ್ನೂ ನೀಡಿದೆ.

ಜನವರಿ 26, 1895ರಲ್ಲಿ ಕೇಲಿ ಇಂಗ್ಲೆಂಡಿನಲ್ಲಿ ಗತಿಸಿದ. ಉದಾರಿಯೂ 'ಶ್ರೀಮಂತನೂ ಆದ ಕೇಲಿಯನ್ನು ಕುರಿತು ಮ್ಯಾಕ್ಸ್‌ವೆಲ್ ಬರೆದ ಮಾತು 'ಸಾಮಾನ್ಯ ಪ್ರದೇಶಕ್ಕೆ ಹೊಂದದ ಈತನ ಅತಿ ದೊಡ್ಡ ಜೀವ *n*–ಆಯಾಮಗಳಲ್ಲಿ ವಿಹರಿಸಿತು' ತೀರ ಸತ್ಯ. *

**ಕೇಲ್ಡಾಲ್ ವಿಧಾನ :** ಆರ್ಗ್ಯಾನಿಕ್ ವಸ್ತುಗಳಲ್ಲಿರುವ ಸಾರಜನಕವನ್ನು ಪರಿಮಾಣಾತ್ಮಕವಾಗಿ ನಿರ್ಧರಿಸಲು ಬಳಸುವ ಒಂದು ವಿಧಾನ. ಪ್ರಥಮವಾಗಿ ಜೆ.ಕೇಲ್ಡಾಲ್ ಎಂಬಾತ ಅವಿಷ್ಕರಿಸಿದುದರಿಂದ (ಸು.1840) ಈ ಹೆಸರು ಬಂದಿದೆ. ಅತ್ಯಂತ ಅಲ್ಪ ಪರಿಮಾಣದಲ್ಲಿರುವ ಸಾರಜನಕವನ್ನು ಸಹ ಕರಾರುವಕ್ಕಾಗಿ ಅಳೆಯಲು ಸಾಧ್ಯವಿರುವುದರಿಂದ ಪ್ರೋಟೀನುಗಳಂಥ ಜೈವಿಕವಸ್ತುಗಳಲ್ಲಿರುವ ಸಾರಜನಕವನ್ನು ನಿರ್ಧರಿಸಲು ಈ ವಿಧಾನವನ್ನು ಪ್ರಯೋಗಶಾಲೆಯಲ್ಲಿ ಅಧಿಕವಾಗಿ ಬಳಸಲಾಗುತ್ತಿದೆ. ಇದನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. 1.ವಿಶ್ಲೇಷಿತ ಆರ್ಗ್ಯಾನಿಕ್ ವಸ್ತುವನ್ನು ಸಾರ ಸಲ್ಫ್ಯೂರಿಕ್ ಆಮ್ಲದಿಂದ ಉತ್ಕರ್ಷಿಸಲಾಗುವುದು. ಕಾಪರ್ ಸಲ್ಫೇಟ್ ಮತ್ತು ಪೊಟ್ಯಾಸಿಯಂ ನೈಟ್ರೇಟುಗಳ ಮಿಶ್ರಣವನ್ನು ಅಥವಾ ಮರ್ಕ್ಯುರಿಕ್ ಆಕ್ಸೈಡನ್ನು (ಪಾದರಸದ ಆಕ್ಸೈಡನ್ನು) ಅಥವಾ ಸೆಲೆನಿಯಂ ಆಕ್ಸೈಡನ್ನು ವೇಗವರ್ಧಕಗಳನ್ನಾಗಿ ಬಳಸುತ್ತಾರೆ. ಆರ್ಗ್ಯಾನಿಕ್ ವಸ್ತು (ಉದಾ:ಪ್ರೋಟೀನ್) ಮತ್ತು ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣಗಳನ್ನು ಕುದಿಸಿದಾಗ ಇಂಗಾಲ ಮತ್ತು ಜಲಜನಕಗಳು ಅನುಕ್ರಮವಾಗಿ ಇಂಗಾಲದ ಡೈಆಕ್ಸೈಡ್ ಮತ್ತು ನೀರಿನ ರೂಪದಲ್ಲಿ ಹೊರಬೀಳುತ್ತವೆ. ಸಾರಜನಕ ಅಮೋನಿಯ ಆಗಿ ಪರಿವರ್ತನೆಯಾಗಿ ಸಲ್ಫ್ಯೂರಿಕ್ ಆಮ್ಲದೊಂದಿಗೆ ವರ್ತಿಸಿ ಅಮೋನಿಯಂ ಸಲ್ಫೇಟನ್ನು ಉತ್ಪತ್ತಿಮಾಡುತ್ತದೆ. ಈ ಪರಿವರ್ತನೆ ಪರಿಮಾಣಾತ್ಮಕವಾಗಿ ನಡೆಯುತ್ತದೆ. ಇಂಗಾಲ ಪೂರ್ಣವಾಗಿ ಉತ್ಕರ್ಷಣೆಯಾಗುವವರೆಗೆ ಮಿಶ್ರಣವನ್ನು ಕಾಯಿಸಬೇಕು. ಈ ಘಟ್ಟದಲ್ಲಿ ಮಿಶ್ರಣ ತಿಳಿಯಾಗುತ್ತದೆ. ಮತ್ತು ಎಲ್ಲ ಸಾರಜನಕಾಂಶವೂ ಅಮೋನಿಯ ಆಗಿ ಪರಿವರ್ತನೆಯಾಗುತ್ತದೆ. ಇದಕ್ಕೆ ಕೆಲಗಂಟೆಗಳು ಬೇಕಾಗಬಹುದು.

ಎರಡನೆಯ ಹಂತದಲ್ಲಿ ಅಮೋನಿಯಂ ಸಲ್ಫೇಟಿಗೆ ಸಾರಪ್ರತ್ಯಾಮ್ಲವನ್ನು (ಶೇ. 40 ಸೋಡಿಯಂ ಹೈಡ್ರಾಕ್ಸೈಡ್) ಹೆಚ್ಚಿನ ಪರಿಮಾಣದಲ್ಲಿ ಸೇರಿಸಿ, ನೀರಿನ ಆವಿಯಿಂದ ಕಾಸಿದಾಗ ಅಮೋನಿಯ ಹೊರಬಿದ್ದು ಆವಿಯೊಡನೆ ಬರುತ್ತದೆ. ಇದನ್ನು ಶಿಷ್ಟ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದಲ್ಲಿ ಅಥವಾ ಶೇ. 2 ಬೋರಿಕ್ ಆಮ್ಲದಲ್ಲಿ ವಿಲೀನಮಾಡಿ ಅನುಮಾಪನ (ಟೈಟ್ರೇಷನ್) ಕ್ರಮದಿಂದ ಪರಿಮಾಣ ನಿರ್ಧರಣೆಯನ್ನು ಮಾಡಬಹುದು.

ಕೇಲ್ಡಾಲ್ ವಿಧಾನವನ್ನು ಅನೇಕ ವಿಧದಲ್ಲಿ ಮಾರ್ಪಡಿಸಲಾಗಿದೆ. ಇವುಗಳಲ್ಲಿ ಅತಿಮುಖ್ಯವಾದ ಪ್ರೆಗ್ಲ್‌ರ‍್ನ ಮಾರ್ಪಾಡಿನಲ್ಲಿ ಪಾರ್ನಾಸ್–ವ್ಯಾಗ್ನರ್ ಅವರ ಕಿರು ಬಾಷ್ಪೀಕರಣ ಸಲಕರಣೆಯನ್ನೂ ಸೂಕ್ಷ್ಮ ಬ್ಯೂರೆಟ್ಟನ್ನೂ ಬಳಸಲಾಗಿದೆ. ಇದರಿಂದ 0.10 ಮಿಲಿಗ್ರಾಂ ಮತ್ತು ಅದಕ್ಕಿಂತ ಅಲ್ಪವಾದ ಪ್ರಮಾಣದಲ್ಲಿರುವ ಸಾರಜನಕವನ್ನು ಸಹ ನಿರ್ಧರಿಸಬಹುದು.

ಅಮೋನಿಯ ಅನಿಲವನ್ನು ನೇರವಾಗಿ ನೆಸ್ಲರಿನ ಅಭಿಕರ್ಮಕದೊಂದಿಗೆ (ರೀಏಜೆಂಟ್) ಸಂಸ್ಕರಿಸುವ ವಿಧಾನವೂ ಆಚರಣೆಯಲ್ಲಿದೆ. ಈ ಕ್ರಿಯೆಯಲ್ಲಿ ಹಳದಿ ಅಥವಾ ಹಳದಿಮಿಶ್ರಿತ ನಸುಕೆಂತ್ತಳೆಬಣ್ಣ ರಚಿತವಾಗುತ್ತದೆ. ಬಣ್ಣದ ಗಾಢತೆಯನ್ನು ಸ್ಪೆಕ್ಟ್ರೋಫೋಟೋಮೀಟರಿನಲ್ಲಿ ಅಳೆಯಲಾಗುತ್ತದೆ. ಈ ಕ್ರಿಯೆ ಅತ್ಯಂತ ಸೂಕ್ಷ್ಮವಾದದ್ದು ಮತ್ತು ತ್ವರಿತವಾಗಿ ನಡೆಸಬಹುದಾದದ್ದು. ಅಮೋನಿಯ ನೆಸ್ಲರ್ ಅಭಿಕರ್ಮಕದ ಮರ್ಕ್ಯುರಿಕ್ ಅಯೊಡೈಡಿನೊಂದಿಗೆ ಈ ರೀತಿ ವರ್ತಿಸುತ್ತದೆ:

$$NH_4OH + 2(HgI_2.2KI) + 3KOH \rightarrow NHg_2I + 7KI + 4H_2O$$

ಡೈಮರ್ಕ್ಯುರಿಕ್ ಅಮೋನಿಯಂ ಅಯೊಡೈಡ್ ($NHg_2I$) ಒಂದು ಕಲಿಲವಸ್ತು. ಆದ್ದರಿಂದ ಈ ಪ್ರತಿಕ್ರಿಯೆಯನ್ನು ಎಚ್ಚರಿಕೆಯಿಂದ ಪೂರ್ವಭಾವಿಯಾಗಿ ಶಿಷ್ಟಗೊಳಿಸಬೇಕು. (ಎಚ್.ಎಸ್.ಎಸ್.)

**ಕೇವಲಜ್ಞಾನ :** ಜೈನಸಿದ್ಧಾಂತರೀತ್ಯ ಐದು ಬಗೆಯ ಜ್ಞಾನಗಳಲ್ಲಿ ಒಂದು; ಕೊನೆಯದು. ಮತಿ, ಶ್ರುತ, ಅವಧಿ, ಮನಃಪರ್ಯಾಯ– ಇವು ಕ್ರಮವಾಗಿ ಉಳಿದ ನಾಲ್ಕು. ಇಂದ್ರಿಯಜನ್ಯ ಜ್ಞಾನ ಮತಿಜ್ಞಾನ. ಇದರ ಆಧಾರದಿಂದಲೇ ಶ್ರುತಜ್ಞಾನ ಉಂಟಾಗುತ್ತದೆ. ಉಳಿದ ಮೂರು ಜ್ಞಾನಗಳು ಅತೀಂದ್ರಿಯ. ಅವುಗಳಲ್ಲಿ ಶ್ರೇಷ್ಠವಾದುದು ಕೇವಲ ಜ್ಞಾನ. ಜ್ಞಾನವನ್ನು ಮುಚ್ಚುವ ಜ್ಞಾನಾವರಣಾದಿ ಘಾತಿಕರ್ಮಗಳು ನಷ್ಟವಾದಾಗ ಆತ್ಮನಲ್ಲಿ ಕೇವಲಜ್ಞಾನದ ವಿಕಾಸವಾಗುತ್ತದೆ. ಇದರಿಂದ ಆತ್ಮನಿಗೆ ಎಲ್ಲ ಸ್ಥಳದ, ಎಲ್ಲ ಕಾಲದ, ಎಲ್ಲ ವಸ್ತು ವಿಚಾರಗಳ ಜ್ಞಾನ ಒಟ್ಟಿಗೆ ಪ್ರಾಪ್ತವಾಗುತ್ತದೆ. ಈ ಜ್ಞಾನ ಸರ್ವಥಾ ಸಂಪೂರ್ಣ, ನಿರ್ದೋಷ, ಅಖಂಡ ಮತ್ತು ನಿತ್ಯವಾಗಿದ್ದು ಆತ್ಮನ ಆದರ್ಶ ವಿಕಾಸದ ಲಕ್ಷಣವಾಗಿದೆ. ಇದು ಆತ್ಮನಲ್ಲಿ ವಿಕಸಿತವಾದ ಮೇಲೆ ಉಳಿದ ಜ್ಞಾನಗಳಿಗೆ ಆಸ್ಪದವಿಲ್ಲ. ಕೇವಲಜ್ಞಾನದ ಮೂಲಕವೇ ಸರ್ವಜ್ಞತ್ವ. ಇದನ್ನು ಪಡೆದವ ಕೇವಲಿ ಎನಿಸುವನು. **(ನೋಡಿ– ಕೇವಲಿ)** (ಎ.ಎನ್.ಯು.)

**ಕೇವಲಸ್ವಾತ್ಮೈಕವಾದ :** ಜ್ಞಾನ ವ್ಯಕ್ತಿಯ ಮಾನಸಿಕ ಸ್ಥಿತಿಗಳಿಗೆ ಮಾತ್ರ ಸೀಮಿತವಾದದ್ದು ಎಂಬ ಜ್ಞಾನಮೀಮಾಂಸೆಯ ವಾದಕ್ಕೆ ಈ ಹೆಸರಿದೆ (ಸಾಲಿಪ್ಸಿಸಮ್). ಭಾರತೀಯ ವೈದಿಕ ತಾತ್ತ್ವಿಕರು ಯಾರೂ ಸ್ವಾತ್ಮೈಕವಾದಿಗಳಲ್ಲ. ಶಂಕರಾಚಾರ್ಯರು ಬೌದ್ಧರ ವಿಜ್ಞಾನವಾದವನ್ನು ಸ್ವಾತ್ಮೈಕವಾದವೆಂದು ಖಂಡಿಸಿರುತ್ತಾರೆ. ಮಾನಸಿಕ ಪ್ರಪಂಚವನ್ನು ಬಿಟ್ಟು ಹೊರಪ್ರಪಂಚವಿಲ್ಲವೆಂಬ ಈ ಮಾತನ್ನು ಭಾರತೀಯ ಮತ್ತು ಪಾಶ್ಚಾತ್ಯ ತಾತ್ತ್ವಿಕರಲ್ಲಿ ಕೆಲವರು ಮಾತ್ರ ಒಪ್ಪಿರುತ್ತಾರೆ. ಸಾಲಿಪ್ಸಿಸಮ್ ಎಂಬ ಮಾತು ಮೊಟ್ಟಮೊದಲಿಗೆ ಕಾಣಿಸಿಕೊಂಡದ್ದು ನೀತಿಶಾಸ್ತ್ರದಲ್ಲಿ. ಫ್ರಾನ್ಸಿನಲ್ಲಿ ಸ್ವಾರ್ಥಕ್ಕೆ ಹೆಸರುವಾಸಿಯಾದ ಜೆಸುಯಿಟ್ಟರನ್ನು ಸಾಲಿಪ್ಸಿಸ್ಟರೆಂದು ಕರೆಯುತ್ತಿದ್ದರು. ಇಮ್ಯಾನ್ಯುಯಲ್ ಕಾಂಟ್ ಸಾಲಿಪ್ಸಿಸಂ ಎಂಬ ಪದವನ್ನು ಕೇವಲ ಸ್ವಾರ್ಥವೆಂಬ ಅರ್ಥದಲ್ಲೇ ಬಳಸಿದ್ದಾನೆ. ಕೇವಲ ಸ್ವಾತ್ಮೈಕವಾದ ವಿಶೇಷವಾಗಿ ಪ್ರಚಾರದಲ್ಲಿರುವುದು ಜ್ಞಾನ ಮೀಮಾಂಸೆಗೆ ಸಂಬಂಧಪಟ್ಟಂತೆ. ನಡತೆಗೆ ಸಂಬಂಧಪಟ್ಟ ಸ್ವಾತ್ಮೈಕವಾದವನ್ನು ಜ್ಞಾನಕ್ಕೆ ಸಂಬಂಧಪಟ್ಟ ಸ್ವಾತ್ಮೈಕವಾದದಿಂದ ಮೊಟ್ಟಮೊದಲಿಗೆ ಪ್ರತ್ಯೇಕಿಸಿದವ ಷೋಪೆನ್‌ಹೌರ್. ಈಚಿನ ಕಾಲದಲ್ಲಿ ನಡತೆಗೆ ಸಂಬಂಧಪಟ್ಟ ವಾದವನ್ನು ಸ್ವಾರ್ಥವಾದವೆಂದೇ ಕರೆಯುತ್ತಿದ್ದಾರೆ.

ಜ್ಞಾನಮೀಮಾಂಸೆಯ ಸ್ವಾತ್ಮೈಕವಾದದ ಪ್ರಕಾರ ನಾನು ಎಂಬ ಪದಕ್ಕೆ ಮನಸ್ಸಿನ ಈ ಭಾವಗಳು ಎಂದು ಮಾತ್ರ ಅರ್ಥ. ನೇರವಾಗಿ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವ ಭಾವಗಳು ಮಾತ್ರ ನಾನು. ಅವನ್ನು ಮೀರಿ, ಅವಕ್ಕಿಂತ ಬೇರೆಯಾದ ಚಿರಸ್ಥಿರವಾದ ಆತ್ಮ ಇಲ್ಲ ಎಂಬುದು ಈ ಜ್ಞಾನಮೀಮಾಂಸಕರ ವಾದ. ಬಿಡಿಯಾದ ಇಂದ್ರಿಯಾನುಭವಗಳನ್ನು ಬಿಟ್ಟು ಆತ್ಮವಾಗಲಿ ಭೌತವಸ್ತುವಾಗಲಿ ಇಲ್ಲ ಎಂಬುದೇ ಈ ವಾದದ ಅಂತಿಮ ತೀರ್ಮಾನ. ಈ ವಾದದವರು ಇಂದ್ರಿಯ ಪ್ರತ್ಯಕ್ಷವನ್ನು ಮಾತ್ರ ಪ್ರಮಾಣವಾಗಿ ಒಪ್ಪುತ್ತಾರೆ. ಅನುಮಾನ, ಆಪ್ತವಾಕ್ಯ ಮುಂತಾದ ಪ್ರಮಾಣಗಳನ್ನಲ್ಲ.

ಕೇವಲ ಸ್ವಾತ್ಮೈಕವಾದಿಗಳು ನಾನು ಮತ್ತು ನನ್ನ ಭಾವನೆಗಳು ಮಾತ್ರ ಇವೆ ಎಂದು ಹೇಳುತ್ತಾರಷ್ಟೆ ನೇರವಾದ ಇಂದ್ರಿಯಾನುಭವವೇ ಪ್ರಮಾಣ ಎಂದು ಹೇಳುವವರು ಅದಕ್ಕೆ ಸಂಗತವಾದ ಭಾಷೆಯನ್ನು ಉಪಯೋಗಿಸಬೇಕಾದರೆ ಅವರ ಈ ಭಾವನೆಗಳು ಮಾತ್ರ ಇವೆ ಎಂದು ಹೇಳಬೇಕೆ ಹೊರತು, ಸ್ವಾತ್ಮ–ಅಂದರೆ ನಾನು ಎಂಬ ಪದನ್ನು ಉಪಯೋಗಿಸಲು ಅವಕಾಶವಿಲ್ಲ. ನಾನು ಎಂಬ ಭಾವನೆ ಇಂದ್ರಿಯಪ್ರತ್ಯಕ್ಷ ವಿಷಯವಲ್ಲ; ಅದಕ್ಕೆ ಅತೀತವಾದದ್ದು. ಬಿಡಿ ಇಂದ್ರಿಯಾನುಭವಗಳೇ ನಮ್ಮ ಸರ್ವಸ್ವವಾದ ಪಕ್ಷದಲ್ಲಿ ನಾವು ಮೂಕರಾಗಿರಬೇಕಾಗುತ್ತದೆ. ಏಕೆಂದರೆ ಏನನ್ನಾದರೂ ಮಾತಿನ ಮೂಲಕ ತಿಳಿಸಬೇಕಾದರೆ ನಾವು ಸಾಮಾನ್ಯ ಸೂಚಕ ಪದವನ್ನು ಉಪಯೋಗಿಸಬೇಕಾಗುತ್ತದೆ. ಇದು ಕೆಂಪು, ಇದು ಬಿಳುಪು, ಇದು ಸಿಹಿ–ಇಂಥ ಸರಳ ಇಂದ್ರಿಯಾನುಭವಗಳನ್ನು ತಿಳಿಸಬೇಕಾದರೂ ನಾವು ಬಳಸುವ ಬಿಳುಪು, ಕೆಂಪು ಇತ್ಯಾದಿ ಪದಗಳು ಸಾಮಾನ್ಯಸೂಚಕಗಳು. ಸಾಮಾನ್ಯದ ಭಾವನೆ ಇಂದ್ರಿಯಪ್ರತ್ಯಕ್ಷ ವಿಷಯವಲ್ಲ.

ಈಚಿನ ತಾತ್ತ್ವಿಕರಲ್ಲಿ ಕೆಲವರು, ಉದಾಹರಣೆಗಾಗಿ, ಬರ್ಟ್ರಂಡ್ ರಸೆಲ್ ಮತ್ತು ಹ್ಯಾನ್ಸ್ ಡ್ರೀಷ್, ಸ್ವಾತ್ಮ ಇಂದ್ರಿಯಾನುಭವವೇ ಮೂಲಾಧಾರ ಎಂಬ ವಾದವನ್ನು ಹಿಂದಿನವರಂತೆ ಇರವಿನ ಮೀಮಾಂಸೆಯ ತತ್ತ್ವವಾಗಿ ಪ್ರತಿಪಾದಿಸುವುದಿಲ್ಲ. ಅದನ್ನು ಅವರು ವಿಧಾನತತ್ತ್ವವಾಗಿ (ಪ್ರಿನ್ಸಿಪಲ್ ಆರ್ಫ ಮೆಥೆಡ್) ಮಂಡಿಸುತ್ತಾರೆ. ಜ್ಞಾನ ನಿಸ್ಸಂದೇಹಕರವಾದ ಸ್ವಾನುಭವದಿಂದ ಪ್ರಾರಂಭವಾಗಬೇಕು. ಅದು ಜ್ಞಾನದ ಅಡಿಗಲ್ಲು. ಆದರೆ ಜ್ಞಾನ ಇಷ್ಟಕ್ಕೆ ನಿಲ್ಲುವುದಿಲ್ಲ. ಅದರ ಆಧಾರದ ಮೇಲೆ ತಾರ್ಕಿಕ ರಚನೆಗಳು(ಲಾಜಿಕಲ್ ಕನ್‌ಸ್ಟ್ರಕ್ಷನ್) ಬೆಳೆಯುತ್ತದೆ. (ಜಿ.ಎಚ್.)

**ಕೇವಲಿ :** ಜೈನಸಿದ್ಧಾಂತದಂತೆ, ಕೇವಲಜ್ಞಾನವನ್ನು ಪಡೆದವ. ಜೀವಾತ್ಮನ ಆಧ್ಯಾತ್ಮಿಕ ವಿಕಾಸದ ಹದಿನಾಲ್ಕು ಮೆಟ್ಟಿಲುಗಳೆನಿಸಿದ ಹದಿನಾಲ್ಕು ಗುಣಸ್ಥಾನಗಳಲ್ಲಿ ಹದಿಮೂರನೆಯ ಸ್ಥಾನವನ್ನು ಸೇರಿದ ಈತನ ಆತ್ಮ ತನ್ನ ಜ್ಞಾನದರ್ಶನಗಳಿಗೆ ಇಂದ್ರಿಯ ಮೊದಲಾದುವುಗಳ ನೆರವನ್ನು ಅಪೇಕ್ಷಿಸುವುದಿಲ್ಲ. ಆಗ ಈತನಲ್ಲಿ ಪರಿಪೂರ್ಣ ಅಥವಾ ಕೇವಲಜ್ಞಾನ ವಿಕಸಿತವಾಗಿರುತ್ತದೆ. ಇವನಿಗೇ ಪರಮಾತ್ಮ ಎಂಬ ಸಂಜ್ಞೆಯೂ ಸಲ್ಲುತ್ತದೆ. ಇನ್ನೂ ದೇಹಧಾರಿಯಾಗಿರುವುದರಿಂದ ಈತ ಕಾಯಯೋಗ ಅಂದರೆ ಶಾರೀರಕ ಕ್ರಿಯೆಗಳ ಮೂಲಕ ಸಯೋಗಿ ಎನಿಸುತ್ತಾನೆ. ಘಾತಿಕರ್ಮಗಳು ನಷ್ಟಹೊಂದಿರುವುದರಿಂದ ಜಿನನಾಗಿರುತ್ತಾನೆ. **(ನೋಡಿ– ಕೇವಲಜ್ಞಾನ)** (ಎ.ಎನ್.ಯು.)

**ಕೇವಿ : ರೋಡೆನ್ಷಿಯ** ವರ್ಗದಲ್ಲಿಯ **ಕವೈಯಿಡೀ** ಕುಟುಂಬಕ್ಕೆ ಸೇರಿದ ಹಲವಾರು ಪ್ರಾಣಿಗಳಿಗಿರುವ ಸಾಮಾನ್ಯ ಹೆಸರು. ಇವುಗಳಲ್ಲಿ ಮುಖ್ಯವಾದವು ಪಟಗೋನಿಯದ ಕೇವಿ ಅಥವಾ ಮೊಲ **(ಡಾಲಿಕೊಟಿಸ್ ಪಟಗೋನ)**, ಗಿನಿ ಹಂದಿ(ಕೇವಿಯ ಜಾತಿ) ಮತ್ತು ಮೋಕೋ (ಕೆರಾಡಾನ್ ಜಾತಿ). ಬಿರುಸಾದ ಮೈಗೂದಲು, ಚೆನ್ನಾಗಿ ಬೆಳೆದ ಕಿವಿಗಳು, ಮುಂಗಾಲಿನಲ್ಲಿ 4 ಮತ್ತು ಹಿಂಗಾಲಿನಲ್ಲಿ 3 ಬೆರಳುಗಳು, ಬಾಲವಿಲ್ಲದಿರುವುದು ಇವುಗಳ ಮುಖ್ಯ ಲಕ್ಷಣಗಳು. ಪಟಗೋನಿಯದ ಕೇವಿ ಅರ್ಜೆಂಟೀನ, ಪಟಗೋನಿಯ ದೇಶಗಳ ಕುರುಚಲು ಕಾಡುಗಳಲ್ಲಿ ವಾಸಿಸುತ್ತದೆ. ಇದರ ಉದ್ದ ಸುಮಾರು 69–75 ಸೆಂಮೀ. ತೂಕ ಸುಮಾರು 15 ಕೆಜಿ. ದೇಹದ ಬಣ್ಣ ಬೂದು ಮಿಶ್ರಿತ ಕಂದು. ನೆಲವನ್ನು ತೋಡಿ ನಿರ್ಮಿಸಿಕೊಂಡ ಬಿಲಗಳಲ್ಲಿ ವಾಸಿಸುತ್ತದೆ. ಇದು ಶಾಕಾಹಾರಿ. ಇದರ ಚಟುವಟಿಕೆ ಹಗಲಿನಲ್ಲಿ, ಮೊಲಗಳಂತೆ ಕುಪ್ಪಳಿಸುತ್ತ ಓಡಾಡುತ್ತದೆ.

ಪಟಗೋನಿಯದ ಕೇವಿ ಒಂದು ಸಲಕ್ಕೆ 2–5 ಮರಿಗಳನ್ನು ಈಯುತ್ತದೆ. ಗಿನಿಹಂದಿ (**ನೋಡಿ– ಗಿನಿ–ಹಂದಿ**) ಮತ್ತು ಮೋಕೋಗಳು ಪಟಗೋನಿಯದ



ಕೇವಿಯನ್ನು ಬಹುವಾಗಿ ಹೋಲುವುದಾದರೂ ಅವಕ್ಕೂ ಇವಕ್ಕೂ ಅನೇಕ ವ್ಯತ್ಯಾಸಗಳುಂಟು. (ವಿ.ಕೆ.ವಿ.)

**ಕೇವೇಧೋ ಈ ವೀಲ್ಯೆಗಾಸ್, ಪ್ರಾಂಥೀಸ್ಕೋ ಗೋಮೇಥ್ ಡೇ:** 1580–1645. ಸ್ಪೇನಿನ ಪ್ರಖ್ಯಾತ ಕವಿ ಮತ್ತು ವಿಡಂಬನಕಾರ. ಮ್ಯಾಡ್‌ರಿಡ್‌ನಲ್ಲಿ ಜನಿಸಿದ. ಅಲ್ಕಾಲ ಮತ್ತು ವಲ್ಲಡೊಲಿಡ್ ವಿಶ್ವವಿದ್ಯಾಲಯಗಳಲ್ಲಿ 1596ರಿಂದ 1606ರ ತನಕ ಕಲೆ ಮತ್ತು ವೇದಾಂತ ವಿಷಯಗಳನ್ನು ತೆಗೆದುಕೊಂಡು ಅಭ್ಯಾಸ ನಡೆಸಿದ. 1613ರಲ್ಲಿ ಸಿಸಿಲಿಯ ರಾಜಪ್ರತಿನಿಧಿ ಓಸುನ ಡ್ಯೂಕನಿಗೆ ರಾಜಕೀಯ ವಿಷಯಗಳ ಸಲಹೆಗಾರನಾದ. ಸರ್ಕಾರದ ವಿರುದ್ಧ ಒಳಸಂಚಿನ ಪಡೆಯಲ್ಲಿ ಸೇರಿದ್ದನೆಂದು ಈತನನ್ನು ವೆನೀಷನ್ ಸರ್ಕಾರ ಆಪಾದಿಸಿದಾಗ ಭಿಕ್ಷುಕರ ವೇಷದಲ್ಲಿ ತಲೆತಪ್ಪಿಸಿಕೊಂಡನೆಂದು ಹೇಳಲಾಗಿದೆ. ಓಸುನ ಸ್ಥಾನದಿಂದ ಕೆಳಗಿಳಿದ ಮೇಲೆ ಒಂದು ವರ್ಷ(1620) ಸೆರೆಯಲ್ಲಿದ್ದು, ಮರುವರ್ಷ ಹೊರಬಂದ.

ಕೇವೇಧೋ ತನ್ನ ಕಾಲದ ಐರೋಪ್ಯ ಸಾಹಿತ್ಯದ ಪ್ರಖ್ಯಾತ ಲೇಖಕನೆನಿಸಿಕೊಂಡಿದ್ದ. ಪ್ರತಿಭಾವಂತನಾದ ಈತನ ವಿದ್ವತ್ತು ಸಂಸ್ಕೃತಿ ನೀತಿಬೋಧಕ ಕೃತಿಗಳನ್ನು ನೀಡಲು ನೆರವಾಯಿತು. ಮೇಲುಕೀಳೆಂಬ ಭೇದವಿಲ್ಲದೆ ಬಾಳಿದನಾದುದರಿಂದ ಈತನ ಕೃತಿಗಳಲ್ಲಿ ಎಲ್ಲಮಟ್ಟದ ಜೀವನವನ್ನು ಕಾಣಬಹುದು. ಈತ ಏಕಾಂಗಿ, ನಿರಾಶಾವಾದಿ, ಕಠಿಣ ಹೃದಯಿ. ಸ್ಪೇನಿನ ಅವನತಿಯ ಬಗ್ಗೆ ಮೂಡಿದ ಚಿಂತನೆಗಳು ಇವನ ಹಲವಾರು ಕೃತಿಗಳಿಗೆ ಸ್ಫೂರ್ತಿನೀಡಿವೆ.

ಈತನ ಲಾ ವಿಡಾ ಡೆಲ್ ಬುಸ್‌ಕನ್ (La vida del Buscon-1603; ಮೋಸಗಾರನ ಜೀವನ) ಎಂಬ ಗದ್ಯ ಗ್ರಂಥ ಖಳನಾಯಕನೊಬ್ಬನ ಕಥೆಯಾಗಿದೆ. ನಾಯಕ ಪಾಬ್ಲೋಸ್ ಕೆಳವರ್ಗದ ಹುಡುಗ. ಈತ ದೊರೆಯ ಆಸ್ಥಾನವನ್ನು ಪ್ರವೇಶಿಸಿ ಶ್ರೀಮಂತ ಕನ್ಯೆಯನ್ನು ಮದುವೆಯಾಗುವ ಯತ್ನದಲ್ಲಿ ವಿಫಲನಾಗಿ, ಅನೇಕ ರೀತಿಯಲ್ಲಿ ಭಗ್ನಸಾಹಸನಾಗಿ, ಅಮೆರಿಕಕ್ಕೆ ತೆರಳುವುದೇ ಇದರ ಕಥಾವಸ್ತು. ಇದು ಅಜ್ಞಾತ ಕವಿಯೊಬ್ಬನ ಕಾದಂಬರಿ ಲಾಸಾರಿಲ್ಯೊ ಕಥೆಯ ಅನುಕರಣವಾದರೂ ಅದರಷ್ಟು ನೈಜಚಿತ್ರಣವಾಗಿರದೆ ವಿಕಟಹಾಸ್ಯ ಮತ್ತು ವಿಡಂಬನಗಳಿಂದ ತುಂಬಿದೆ. ಈತನ ಸುಪ್ರಸಿದ್ಧ ಗದ್ಯಗ್ರಂಥ ಸ್ವೇನ್ಯೂಸ್ (*suenos;* **ಸ್ವಪ್ನಚಿತ್ರಗಳು**) ಕೃತಿಗೆ ಡಾಂಟೆ ಮತ್ತು ಲೂಷನರ ಕೃತಿಗಳೇ ಮಾದರಿ. ಇದರಲ್ಲಿ ಪ್ರಳಯೋತ್ತರದಲ್ಲಿ ದೇವರು ನ್ಯಾಯ ವಿಚಾರಣೆ ಮಾಡುವುದು, ನರಕದ ಶಿಕ್ಷೆಗಳು ಮುಂತಾದ ಚಿತ್ರಗಳು ಬರುತ್ತವೆ. ಇಲ್ಲಿ ವಿವಿಧ ವೃತ್ತಿಯ ಜನರು ಲೇಖಕನ ದುರಾಗ್ರಹಕ್ಕೆ ಪಾತ್ರರಾಗಿ ಈತನ ಸೂತ್ರಾನುವರ್ತಿಗಳಂತೆ ಚಿತ್ರಿತರಾಗಿ ಉಗ್ರ ವಿಡಂಬನೆಗೆ ತುತ್ತಾಗುತ್ತಾರೆ. ಉದಾಹರಣೆಗೆ: ಚಾವಟಿಯಿಂದ ಹೊಡೆಯುವುದರಲ್ಲಿ ನಿನಗಿಂತ ನಾನೇ ಲೇಸು ಎಂದು ಗಾಡಿ ಹೊಡೆಯುವವನೊಬ್ಬ ಸೈತಾನನಿಗೆ ಸವಾಲು ಹಾಕುತ್ತಾನೆ. ಆವೇಶದಲ್ಲಿ ಬರೆದ ಈ ಪುಸ್ತಕದಲ್ಲಿ ಸಮಾಜದ ಲೋಪದೋಷಗಳು ವಿಸ್ತಾರವಾಗಿ, ಮರ್ಮಭೇದಕವಾಗಿ ಚಿತ್ರಿತವಾಗಿದ್ದರೂ ಪಾತ್ರಾಪಾತ್ರತೆಯ ವಿವೇಚನೆ ಕಡಿಮೆ. ಪ್ರಮೆಂಟಿಕಾಸ್ ಈ ಆರಾನ್ವಿಲೆಸ್ ಜನರಲ್ಸ್ (Prmenticas y Arnceles Generales) ಪುಸ್ತಕದಲ್ಲಿ ಜನಸಾಮಾನ್ಯರ ದುರಾಭ್ಯಾಸಗಳನ್ನು ಚಿತ್ರಿಸಲಾಗಿದೆ. ಉದಾ: ಕೆಲವರು ನಡೆಯುವಾಗ ಪಕ್ಕದ ಗೋಡೆಗಳನ್ನು ಮುಟ್ಟದಿರಲಾರರು; ಮತ್ತು ಕೆಲವರು ದೂರ ತಿಳಿದಿದ್ದರೂ ಎಷ್ಟು ಮೈಲು ಎಂದು ಪ್ರಶ್ನಿಸುವರು; ಇನ್ನು ಕೆಲವರು ಮೂಗನ್ನು ಒರೆಸಿಕೊಂಡಮೇಲೆ ಮುತ್ತುಗಳು ಉದುರಿ ರುವುವೋ ಎಂದು ಕೈಚೌಕವನ್ನು ಬಿಡಿಸಿ ನೋಡುವರು–ಹೀಗೆ. (ಕೆ.ಆರ್.ಜಿ.; ಎಂ.ಕೆ.ಕೆ.)

**ಕೇಶನಾಶಕ :** ಚರ್ಮದ ಅಂದವನ್ನು ಕೆಡಿಸದೆ ಕೂದಲನ್ನು ತೆಗೆಯಬಲ್ಲ ರಾಸಾಯನಿಕ ವಸ್ತು (ಡಿಪಿಲಟೋರೀ), ಅಂಗರಾಗ ವಸ್ತುವಾಗಿ ಮನುಷ್ಯೋಪಯೋಗದಲ್ಲಿದೆ. ಪ್ರಾಣಿಗಳ ಚಕ್ಕಳದಿಂದ ಕೂದಲನ್ನು ತೆಗೆಯಲು ಭಿನ್ನಕೇಶನಾಶಕಗಳ ಬಳಕೆ ಉಂಟು. ಸಾಮಾನ್ಯವಾಗಿ ಸುಟ್ಟ ಸುಣ್ಣ ಮತ್ತು ಆರ್ಸೆನಿಕ್ ಸಲ್ಫೈಡ್‌ಗಳ($As_2 S_3$) ಮಿಶ್ರಣವನ್ನು ಒಂದು ಸಾರ ಪ್ರತ್ಯಾಮ್ಲ ದ್ರಾವಣದಲ್ಲಿ ಬೆರೆಸಿ ಕೇಶನಾಶಕವಾಗಿ ಉಪಯೋಗಿಸುತ್ತಾರೆ. ಅಂಗರಾಗ ಸಾಧನವಾಗಿ ಇದನ್ನು ಬಳಸುವಾಗ ಕೂದಲು ತೆಗೆಯಬೇಕಾದ ಭಾಗಗಳನ್ನು ಮೊದಲು ಈ ಮಿಶ್ರಣದಿಂದ ಉಜ್ಜಬೇಕು. ಸ್ವಲ್ಪಹೊತ್ತಿನ ಮೇಲೆ ಬೆಚ್ಚಗಿನ ನೀರಿನಲ್ಲಿ ಅವನ್ನು ತೊಳೆಯಬೇಕು. ಕೇಶನಾಶಕ ಬಹಳ ತೀಕ್ಷ್ಣ ರಾಸಾಯನಿಕ. ಅದನ್ನು ಚರ್ಮದಮೇಲೆ ಉಜ್ಜಿದಾಗ ಚರ್ಮ ಕೆರಳಿ ಅಪಾಯಉಂಟಾಗದ ಹಾಗೆ ಎಚ್ಚರಿಕೆವಹಿಸಬೇಕು. ಕೆಲವು ಬಾರಿ ಟಾರೆಣ್ಣೆಯಿಂದ ಬರುವ ಕಪ್ಪುರಾಳದ ಲೇಪ ಮತ್ತು ಕರ್ಪೂರ ರಾಳಗಳನ್ನು ಕೇಶನಾಶಕವಾಗಿ ಉಪಯೋಗಿಸಬಹುದು. ಚರ್ಮ ಹದಮಾಡುವ ಕೈಗಾರಿಕೆಗಳಲ್ಲಿ ಕುರಿ ಚರ್ಮದಿಂದ ತುಪ್ಪಟ ಅಥವಾ ಕೇಶಗಳನ್ನು ತೆಗೆಯಲು ಸುಟ್ಟಸುಣ್ಣದ ಗಂಜಿ ಮತ್ತು ಸೋಡಿಯಂ ಸಲ್ಫೈಡ್ ಅಥವಾ ಕ್ಯಾಲ್ಸಿಯಂ ಹೈಡ್ರೋಸಲ್ಫೈಡುಗಳ ಮಿಶ್ರಣವನ್ನು ಉಪಯೋಗಿಸುತ್ತಾರೆ. (ಡಿ.ಎಸ್.ಎಂ.)

**ಕೇಶವಚಂದ್ರ ಸೇನ :** 1838–84. ಆಧುನಿಕ ಭಾರತದ ಸಮಾಜ ಮತ್ತು ಮತಸುಧಾರಕ. ಕಲ್ಕತ್ತೆಯ ಉಚ್ಚವರ್ಗದ ಕುಟುಂಬವೊಂದರಲ್ಲಿ ಜನಿಸಿದ. ಅಲ್ಲಿಯ ಪ್ರೌಢಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಮುಗಿಸಿ ಅನಂತರ ಕೆಲವು ಕಾಲ ಬಂಗಾಳ ಬ್ಯಾಂಕಿನ ನೌಕರನಾಗಿದ್ದನಾದರೂ ಸಾಹಿತ್ಯ ಮತ್ತು ಮತ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಉದ್ದೇಶಿಸಿ ಬ್ಯಾಂಕಿನ ಕೆಲಸವನ್ನು ಬಿಟ್ಟು (1857) ಬ್ರಹ್ಮಸಮಾಜದ ಕೆಲಸದಲ್ಲಿ ನಿರತನಾದ. ಸಮಾಜ ಮತ್ತು ಮತಸುಧಾರಣೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಇಂಡಿಯನ್ ಮಿರರ್ ಎಂಬ ವಾರಪತ್ರಿಕೆಯನ್ನು ಹೊರಡಿಸಿದ. ವಿಗ್ರಹಾರಾಧನೆ ಮತ್ತು ಜಾತಿಭೇದಗಳನ್ನು ತೊರೆದಿದ್ದ ಬ್ರಹ್ಮಸಮಾಜದ ತತ್ತ್ವಗಳನ್ನು ಸಮರ್ಥಿಸಲು ದಿ ಬ್ರಹ್ಮ ಸಮಾಜ್ ವಿಂಡಿಕೇಟೆಡ್ ಎಂಬ ಗ್ರಂಥವನ್ನು ಪ್ರಕಟಿಸಿದ(1863). ಸಮಾಜ ಸುಧಾರಣೆಗಾಗಿ ಸಂಗಾತ್ ಸಭೆಯನ್ನು ಸ್ಥಾಪಿಸಿದ.

ಕಾಲಕ್ರಮದಲ್ಲಿ ಬ್ರಹ್ಮಸಮಾಜದ ಪ್ರಧಾನ ಆಚಾರ್ಯನಾದ ದೇವೇಂದ್ರನಾಥಠಾಕೂರನಿಗೂ ಕೇಶವಚಂದ್ರನಿಗೂ ಅಂತರ್ಜಾತೀಯ ವಿವಾಹ ಮತ್ತು ವಿಧವಾ ವಿವಾಹ ವಿಚಾರಗಳಲ್ಲಿ ಭಿನ್ನಭಿಪ್ರಾಯ ಹುಟ್ಟಿತಾಗಿ ಕೇಶವಚಂದ್ರ ಆದಿಬ್ರಹ್ಮ ಸಮಾಜವನ್ನು ಬಿಟ್ಟು ಹೆಚ್ಚು ವ್ಯಾಪಕವಾದ ಭರತ ವರ್ಷೀಯ ಬ್ರಹ್ಮಸಮಾಜವನ್ನು ಸ್ಥಾಪಿಸಿದ (1866). ಈ ಸಮಾಜದಲ್ಲಿ ಹಿಂದಿನ ಪ್ರಾರ್ಥನೆಗಳ ಜೊತೆಗೆ ವೇದದಿಂದಲೇ, ಬೈಬಲ್, ಕುರಾನು, ಜೆಂಡ್ ಅವೆಸ್ತಾ ಮತ್ತು ಕೂಂಗ್ ಪು ಷೆ–ಮೊದಲಾದ ಆಕರಗಳಿಂದ ಆಯ್ದ ಕೆಲವು ಭಾಗಗಳನ್ನು ಸೇರಿಸಲಾಗಿತ್ತು. ಜಾತಿ ಮತ್ತು ಲಿಂಗಭೇದವನ್ನು ಎಣಿಸದೆ ಎಲ್ಲರಿಗೂ ಈ ಸಮಾಜದ ಸದಸ್ಯರಾಗಲು ಅವಕಾಶ ನೀಡಲಾಗಿತ್ತು. ಈ ಹೊಸ ಸಮಾಜದ ಮುಖ್ಯ ತತ್ತ್ವಗಳು ಇವು; ಈ ವಿಶ್ವವೆಲ್ಲ ಈಶನ ನಿವಾಸ. ಅವನನ್ನು ಹುಡುಕುವುದೇ ತೀರ್ಥಯಾತ್ರೆ. ಅವನ ತಿಳಿವನ್ನು ಕೊಡುವುದೇ ವೇದ. ದೈವಭಕ್ತಿಯೇ ಎಲ್ಲಾ ಮತಗಳ ಮೂಲ. ಮಾನವ ಪ್ರೇಮವೇ ಸಂಸ್ಕೃತಿ. ಸ್ವಾರ್ಥ ತ್ಯಾಗವೇ ಸಂನ್ಯಾಸ. ಈತ ಸ್ಥಾಪಿಸಿದ ಬ್ರಹ್ಮಸಮಾಜದ ಎಲ್ಲ ಕಾರ್ಯಗಳಿಗೂ ಕ್ರೈಸ್ತ ಮತಗಳ ಕಾರ್ಯವಿಧಾನ ಮೇಲು ಪಂಕ್ತಿಯಾಗಿತ್ತೆನ್ನಬಹುದು.

ಕೇಶವಚಂದ್ರ 1870ರಲ್ಲಿ ಇಂಗ್ಲೆಂಡಿಗೆ ಹೋಗಿ ಅಲ್ಲಿಯ ಜನಜೀವನದ ಪರಿಚಯ ಮಾಡಿಕೊಂಡನಲ್ಲದೆ ತನ್ನ ಮತಸುಧಾರಣೆಯ ವಿಚಾರವಾಗಿ ಉಪನ್ಯಾಸ ಮಾಡಿದ. ಇಂಗ್ಲೆಂಡಿನಿಂದ ಹಿಂತಿರುಗಿದ ಮೇಲೆ ಸಮಾಜ ಸುಧಾರಣೆಯ ಸಂಘವೊಂದನ್ನು ಸ್ಥಾಪಿಸಿದ. ಕಡಿಮೆ ಬೆಲೆಯಲ್ಲಿ ಪುಸ್ತಕಗಳನ್ನು ಪ್ರಕಟಿಸುವುದು, ಸಮಾಜದ ಉದ್ಧಾರಕ್ಕಾಗಿ ದಾನವನ್ನು ಪ್ರೋತ್ಸಾಹಿಸುವುದು, ಹೆಂಗಸರ ಜೀವನವನ್ನು ಉತ್ತಮಗೊಳಿಸುವುದು, ಪಾನನಿರೋಧ ಪ್ರಚಾರ, ವಿದ್ಯಾಪ್ರಚಾರ–ಇವು ಆ ಸಂಘದ ಮುಖ್ಯ ಉದ್ದೇಶಗಳು. ಕೇಶವಚಂದ್ರನ ಪ್ರಯತ್ನದ ಪರಿಣಾಮವಾಗಿ 1872ರಲ್ಲಿ ಬ್ರಹ್ಮಸಮಾಜ ರೀತಿಯ ಮದುವೆಗೆ ಸರ್ಕಾರದ ಅಂಗೀಕಾರ ದೊರೆಯಿತು. ಸ್ತ್ರೀ ವಿದ್ಯಾಭ್ಯಾಸಕ್ಕೆ ಮುಡಿಪಾದ ಒಂದು ಪಾಠಶಾಲೆಯನ್ನು ಗಂಡು ಹುಡುಗರಿಗೆಂದು ಒಂದು ಕೈಗಾರಿಕಾ ಪಾಠಶಾಲೆಯನ್ನು ನಿರಾಶ್ರಿತರಿಗಾಗಿ ಒಂದು ಆಶ್ರಮವನ್ನು ಕೇಶವಚಂದ್ರ ಸ್ಥಾಪಿಸಿದ.

1878ರ ವೇಳೆಗೆ ಕೇಶವಚಂದ್ರನ ಸಮಾಜದ ಸದಸ್ಯರಿಗೆ ತಮ್ಮ ನಾಯಕನಲ್ಲಿದ್ದ ಅಭಿಮಾನ ಕಡಿಮೆಯಾಯಿತು. ಇದಕ್ಕೆ ಮೂರು ಮುಖ್ಯ ಕಾರಣಗಳಿದ್ದುವೆನ್ನಬಹುದು; ಸಮಾಜದ ಆಡಳಿತದಲ್ಲಿ ಸದಸ್ಯರು ಭಾಗಿಗಳಾಗಲು ಅನುಕೂಲವಾಗುವಂಥ ನಿಯಮಾವಳಿಯನ್ನು ರಚಿಸುವ ಆಡಳಿತವನ್ನು ಕೇಶವಚಂದ್ರ ತಾನೇ ವೈಯಕ್ತಿಕವಾಗಿ ನಡೆಸುತ್ತಿದ್ದುದು. ಮತಸುಧಾರಣೆಯ ವಿಚಾರವಾಗಿ ತಾನು ದೇವರಿಂದ ನೇರವಾಗಿ ಆದೇಶ ಪಡೆದಿರುವುದಾಗಿ ಕೇಶವಚಂದ್ರ ಹೇಳುತ್ತಿದ್ದುದು. 1872ರ ವಿವಾಹ ಕಾನೂನಿಗೆ ವಿರುದ್ಧವಾಗಿ ಕೇಶವಚಂದ್ರ ಸಣ್ಣವಯಸ್ಸಿನ ತನ್ನ ಮಗಳನ್ನು ಸಣ್ಣ ವಯಸ್ಸಿನ ಕೂಚ್‌ಬಿಹಾರ್

ಮಹಾರಾಜನಿಗೆ ಕೊಟ್ಟು ಮದುವೆಮಾಡಿದ್ದು. ಈ ಕಾರಣಗಳ ಸಲುವಾಗಿ ಅನೇಕ ಸದಸ್ಯರು ಕೇಶವಚಂದ್ರ ಸಮಾಜವನ್ನು ಬಿಟ್ಟು, ಸಾಧಾರಣ ಬ್ರಹ್ಮಸಮಾಜವೆಂಬ ಹೊಸ ಸಮಾಜವನ್ನು ಸ್ಥಾಪಿಸಿದರು (1878).

ಆದರೂ ಕೇಶವಚಂದ್ರ ತನ್ನ ಸಮಾಜವನ್ನು ಮುಂದುವರಿಸಿದ. 1881ರಲ್ಲಿ ನವವಿಧಾನ್ ಎಂಬ ಹೆಸರಿನಲ್ಲಿ ಒಂದು ಹೊಸ ಸಂದೇಶವನ್ನು ಪ್ರಕಟಿಸಿದ. ತಾನು ಮತ್ತು 12 ಮಂದಿ ಪ್ರವರ್ತಕರು ಈ ಸಂದೇಶವನ್ನು ದೇವರಿಂದ ಆದೇಶವಾಗಿ ಪಡೆದಿರುವುದಾಗಿ ತಿಳಿಸಿದ. ಕ್ರೈಸ್ತ ಮತ್ತು ಹಿಂದೂ ಆಚರಣೆಗಳಿಗೆ ಗೂಢಾರ್ಥವನ್ನು ಕಲ್ಪಿಸಿ ಅವನ್ನು ಪ್ರಚಾರಕ್ಕೆ ತಂದ. ಈತನ ಮತಭಾವನೆಗಳು ಮತ್ತು ಆಚಾರಗಳು ವಿಶೇಷವಾಗಿ ಕ್ರೈಸ್ತಮತದ ಅನುಕರಣವಾಗಿದ್ದುದರಿಂದ ಭಾರತೀಯರಿಗೆ ಈತನ ಸಮಾಜದಲ್ಲಿದ್ದ ಆಸಕ್ತಿ ಕ್ರಮೇಣ ಕಡಿಮೆಯಾಯಿತು.

ಕೇಶವಚಂದ್ರ ಒಳ್ಳೆಯ ಬರಹಗಾರನಾಗಿದ್ದನೆಂಬುದಕ್ಕೆ ಈತ ಬರೆದ ಅನೇಕ ಧಾರ್ಮಿಕ ಗ್ರಂಥಗಳು ಸಾಕ್ಷಿಯಾಗಿವೆ. ಸಾಯುವ ಮುನ್ನ ಈತ ಬರೆದ ದಿ ನ್ಯೂ ಸಂಹಿತ ಆರ್ ದಿ ಸೆಕ್ರೆಡ್ ಲಾಸ್ ಆಫ್ ದಿ ಆರ್ಯನ್ಸ್ ಆಫ್ ದಿ ನ್ಯೂ ಡಿಸ್ಪೆನ್ಸೇಷನ್ ಎಂಬುದು ಉಲ್ಲೇಖಾರ್ಹವಾದ ಗ್ರಂಥ. **(ನೋಡಿ- ಬ್ರಹ್ಮಸಮಾಜ)** (ಜಿ.ಎಚ್.)

**ಕೇಶವದಾಸ :** ಸು. 1555–1617. ಸಂಸ್ಕೃತ ಕಾವ್ಯಮೀಮಾಂಸೆಯ ಪರಿಚಯವನ್ನು ಹಿಂದಿಯಲ್ಲಿ ಮೊದಲಿಗೆ ಮಾಡಿಕೊಟ್ಟ ವಿದ್ವಾಂಸ; ಕವಿ. ಸಂತಕವಿ ತುಳಸೀದಾಸನ ಸಮಕಾಲೀನ. ಸಂಸ್ಕೃತ ಪಾಂಡಿತ್ಯಕ್ಕೆ ಹೆಸರಾಗಿದ್ದ ಸನಾಢ್ಯ ಬ್ರಾಹ್ಮಣ ಕುಲದಲ್ಲಿ ಈತ ಹುಟ್ಟಿದ. ವಾಸವಾಗಿದ್ದುದು ತುಂಗರಾಯ್ ಬಳಿ ಬೇತವಾ ನದಿಯ ದಡದಲ್ಲಿದ್ದ ಓಡಾಛಾ ನಗರದಲ್ಲಿ. ಮಹಾರಾಜ ಮಧುಕರಶಾಹನ ಪುತ್ರ ಮಹಾರಾಜ ಇಂದ್ರಜೀತಸಿಂಹ ಈತನ ಆಶ್ರಯದಾತ. ಈತನ ಹಿರಿಯರು ತಲೆಮಾರುಗಳಿಂದ ಆಸ್ಥಾನಪಂಡಿತರಾಗಿದ್ದವರು. ಹೀಗಾಗಿ ರಾಜನೀತಿ ಮತ್ತು ಆಸ್ಥಾನ ಕಾರ್ಯಚಟುವಟಿಕೆಗಳ ಅರಿವು ಈತನಿಗೆ ಆನುವಂಶಿಕವಾಗಿ ಲಭ್ಯವಾಗಿತ್ತು. ಕೇಶವದಾಸನನ್ನು ಹಿಂದಿಯಲ್ಲಿ ರೀತಿ ಸಂಪ್ರದಾಯದ ಪ್ರವರ್ತಕನೆಂದು ಪರಿಗಣಿಸಲಾಗಿದೆ.

ರಸಿಕಪ್ರಿಯ (1591); ಕವಿಪ್ರಿಯ (1601); ರಾಮಚಂದ್ರಿಕಾ (1601); ರತನಬಾವನೀ (1601); ವೀರಸಿಂಹ ದೇವಚರಿತ (1607); ಜಹಾಂಗೀರ ಜಸಚಂದ್ರಿಕ (1612); ಮತ್ತು ವಿಜ್ಞಾನ ಗೀತ (1601)– ಈ 7 ಕೃತಿಗಳು ಕೇಶವದಾಸನ ರಚನೆಗಳೆಂದು ಪಂಡಿತರು ತೀರ್ಮಾನಿಸಿದ್ದಾರೆ. ನಖಸಿಖವನ್ನು ಈತನ ಹೆಸರಿಗೇ ಆರೋಪಿಸಿದ್ದರೂ ಅದು ಈತನ ಅಣ್ಣ ಬಲಭದ್ರನ ರಚನೆಯೆಂದು ಬಹುಮಂದಿ ವಿದ್ವಾಂಸರ ಅಭಿಪ್ರಾಯ. ಛಂದಮಾಲಾ ಎಂಬ ಕೃತಿಯೂ ಈತನ ಹೆಸರಿನಲ್ಲಿದೆ.

ರಸಿಕಪ್ರಿಯಾ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಒಂದು ಪ್ರೌಢ ಗ್ರಂಥ. ಇದರಲ್ಲಿ ಕಾವ್ಯಪರಂಪರೆಗೆ ಅನುಸಾರವಾಗಿ ರಸ, ವೃತ್ತಿ, ಕಾವ್ಯದೋಷ ಮುಂತಾದುವುಗಳ ವರ್ಣನೆ ಮತ್ತು ಉದಾಹರಣೆಗಳು ಕಾಣದೊರೆಯುತ್ತವೆ. ಭರತನ ನಾಟ್ಯಶಾಸ್ತ್ರ, ವಾತ್ಸ್ಯಾಯನನ ಕಾಮಸೂತ್ರ ಮತ್ತು ರುದ್ರಭಟ್ಟನ ಶೃಂಗಾರತಿಲಕ ಕೃತಿಗಳ ಆಧಾರದ ಮೇಲೆ ಈ ಕೃತಿ ರಚಿತವಾಗಿದೆ. ಶೃಂಗಾರರಸವನ್ನು ಕುರಿತ ವಿವೇಚನೆ ಇಲ್ಲಿ ಗಮನಾರ್ಹವಾಗಿದೆ. ಈ ಬಗೆಗಿನ ಲಕ್ಷ್ಯಪದ್ಯಗಳಲ್ಲಿ ಕಾಣುವ ಕೃಷ್ಣನ ಚಿತ್ರವೂ ಬೇರೆಯ ಬಗೆಯದು. ಇಲ್ಲಿಯ ಕೃಷ್ಣ ಒಬ್ಬ ರಸಿಕ. ಹೀಗಾಗಿ ಈ ಕೃಷ್ಣ ಭಕ್ತಕವಿಗಳ ಕೃಷ್ಣನಿಗಿಂತ ಭಿನ್ನನಾಗಿದ್ದಾನೆ. ಇತರ ರಸಗಳ ಸಾಮಾನ್ಯ ನಿರೂಪಣೆಯೂ ಇದರಲ್ಲಿದೆ. ರಸದ ಅಂಗವಾಗಿಯೇ ನಾಯಿಕಾಭೇದಗಳನ್ನು ಕುರಿತು ಚರ್ಚಿಸಲಾಗಿದೆ. ಒಟ್ಟಿನಲ್ಲಿ ವಿಷಯಗಳ ಸಾಂಗೋಪಾಂಗ ವಿವೇಚನೆ ಇಲ್ಲಿ ಕಾಣುವುದಿಲ್ಲ. ಭಾಮಹ, ಉದ್ಭಟ ಮೊದಲಾದ ಕಾವ್ಯಮೀಮಾಂಸಕರನ್ನು ಅನುಸರಿಸಿ ಅಲಂಕಾರ ಶಬ್ದವನ್ನು ತುಂಬ ವ್ಯಾಪಕವಾದ ಅರ್ಥದಲ್ಲಿ–ಅಂದರೆ ರಸ ರೀತಿಗಳನ್ನು ಒಳಗೊಳ್ಳುವಂತೆ ಬಳಸಲಾಗಿದೆ. ಇಲ್ಲಿಯ ಭಾಷೆ ಸರಳವಾಗಿದೆ. ಅಲಂಕಾರಗ್ರಂಥಗಳ ಇತಿಹಾಸದಲ್ಲಿ ಈ ಗ್ರಂಥಕ್ಕೆ ಐತಿಹಾಸಿಕ ಮಹತ್ವ ಮಾತ್ರ ದೊರೆಯಬಹುದಾದರೂ ಕೇಶವದಾಸನ ಕೃತಿಗಳಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವಿದೆ.

ಕವಿಪ್ರಿಯಾ ಕಾವ್ಯಶಿಕ್ಷಾಗ್ರಂಥ. ಬಹಳ ಹಿಂದೆಯೇ ಸಂಸ್ಕೃತದಲ್ಲಿ ಈ ಬಗೆಯ ಕೃತಿಗಳು ರಚಿತವಾಗಿದ್ದುವು. ಕೇಶವಮಿಶ್ರನ ಅಲಂಕಾರಶೇಖರವನ್ನು ಆಧಾರವಾಗಿಟ್ಟುಕೊಂಡು, ಕಾವ್ಯಕಲ್ಪಲತಾವೃತ್ತಿ ಮತ್ತು ಕಾವ್ಯಾದರ್ಶ ಕೃತಿಗಳ ಕ್ರಮದಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಮಹಾರಾಜ ಇಂದ್ರಜೀತಸಿಂಹನ ಗಣಿಕೆ ರಾಯ್ ಪ್ರವೀಣ್ ಎಂಬುವವಳಿಗೆ ಕಾವ್ಯಮೀಮಾಂಸೆಯ ಪರಿಚಯ ಮಾಡಿಕೊಡುವ ಉದ್ದೇಶದಿಂದ ರಚಿಸಿದ ಗ್ರಂಥ ಇದು. ದಂಡಿ, ರುಯ್ಯಕ ಮುಂತಾದ ಅಲಂಕಾರವಾದಿಗಳ ಪಂಥವನ್ನೇ ಅನುಸರಿಸಿ ಕಾವ್ಯಮೀಮಾಂಸೆಯ ವಿವಿಧ ಅಂಗಗಳ– ಕವಿಕರ್ಮ, ಕಾವ್ಯೋದ್ದೇಶ, ಕಾವ್ಯದೋಷಗಳು, ಅಲಂಕಾರ, ರಸ, ವೃತ್ತಿ ಇತ್ಯಾದಿ– ಪರಿಚಯ ಮಾಡಿಕೊಡುವ ಪ್ರಯತ್ನ ಇಲ್ಲಿ ಕಾಣಬರುತ್ತದೆ. ಬಡಥ್ವಾಲ್ ಈ ಕೃತಿಯ ಬಗ್ಗೆ ಹೇಳುತ್ತಾ ಈತ ಲೇಖನಿಯ ಮೂಲಕ ಮಾತ್ರ ಮಾತನಾಡುವ ಆಚಾರ್ಯನಾಗಿರಲಿಲ್ಲ. ತನ್ನ ಶಿಷ್ಯೆಯಾದ ರಾಯ್‌ಪ್ರವೀಣಳನ್ನು ಪ್ರತಿನಿಧಿಯಾಗಿಸಿಕೊಂಡು ಕವಿಸಮುದಾಯಕ್ಕೇ ಕವಿತೆಯ ಬಾಹ್ಯರೂಪವನ್ನು ಕುರಿತ ಶಿಕ್ಷಣ ನೀಡುವ ಹೊಣೆಯನ್ನು ಹೊತ್ತವನಾಗಿದ್ದ–ಎಂದಿದ್ದಾರೆ. ಸುರತಿಮಿಶ್ರ, ಸರದಾರ ಮತ್ತು ನಾರಾಯಣಕವಿಗಳು ಕವಿಪ್ರಿಯಾ ಮತ್ತು ರಸಿಕಪ್ರಿಯಾ ಗ್ರಂಥಗಳಿಗೆ ಟೀಕುಗಳನ್ನು ರಚಿಸಿದ್ದಾರೆ. ಈಚಿನ ವರ್ಷಗಳಲ್ಲಿ ಲಾಲಾಭಗವಾನ್‌ದೀನ್ ಮತ್ತು ಅವರ ಶಿಷ್ಯರು ವಿದ್ವತ್ಪೂರ್ಣ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಈ ಗ್ರಂಥಗಳಲ್ಲಿ ಕಾವ್ಯಮೀಮಾಂಸೆಯ ಎಲ್ಲ ಅಂಗಗಳ ಮೇಲೂ ಬೆಳಕು ಚೆಲ್ಲುವ ಪ್ರಯತ್ನ ಮಾಡಿರುವುದೇ ಕರ್ತೃವಿನ ವೈಶಿಷ್ಟ್ಯ.

ರಾಮಚಂದ್ರಿಕಾ ಈತನ ಮಹತ್ತ್ವಪೂರ್ಣ ಕೃತಿ. ಮಹರ್ಷಿ ವಾಲ್ಮೀಕಿ ಕನಸಿನಲ್ಲಿ ಕಾಣಿಸಿಕೊಂಡು ವ್ಯರ್ಥಕಾವ್ಯರಚನೆಯಲ್ಲಿ ತೊಡಗುವುದನ್ನು ಬಿಟ್ಟು ಸಾರ್ಥಕ ಕಾವ್ಯರಚನೆಯತ್ತ ಗಮನಹರಿಸಬೇಕೆಂದು ಸೂಚನೆಯಿತ್ತ ಮೇರೆಗೆ ಈ ಕಾವ್ಯವನ್ನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಈ ಹೇಳಿಕೆ ಈತನ ಕಾವ್ಯಜೀವನದ ಸಂಕ್ಷಿಪ್ತ ವಿಮರ್ಶೆಯೂ ಆಗಿದೆಯೆಂದು ವಿದ್ವಾಂಸರ ಅಭಿಪ್ರಾಯ. ಈ ಕಾವ್ಯದಲ್ಲಿ ಮೂವತ್ತಾರು ಪ್ರಕಾಶ(ಅಧ್ಯಾಯ)ಗಳಿವೆ. ಶ್ರೀಛಂದಸ್ಸಿನಿಂದ ಹಿಡಿದು ಅನೇಕ ವರ್ಣ ಮತ್ತು ಮಾತ್ರಾಛಂದಸ್ಸುಗಳನ್ನು ಬಳಸಿ ಈ ಕಾವ್ಯವನ್ನು ರಚಿಸಲಾಗಿದೆ. ಛಂದಸ್ಸಿನ ಮೇಲಿನ ಪ್ರಭುತ್ವದ ಪ್ರದರ್ಶನಕ್ಕಾಗಿಯೇ ಕರ್ತೃ ಇಲ್ಲಿ ಕಾವ್ಯರಚನೆ ಮಾಡಿರುವಂತೆ ತೋರುತ್ತದೆ. ರಾಮಚಂದ್ರಿಕಾದ ವೈಶಿಷ್ಟ್ಯವೆಂದರೆ ಸ್ವಾರಸ್ಯಪೂರ್ಣ ಸಂವಾದಗಳು, ನಾಟಕೀಯ ಪ್ರಸಂಗಗಳು. ಇಂಥ ಪ್ರಸಂಗಗಳಲ್ಲಿ ಸರಸ ಸೂಕ್ತಿಗಳನ್ನು ತೇಲಿಬಿಡುವುದೂ ಉಂಟು. ಕವಿಯ ಪ್ರತ್ಯುತ್ಪನ್ನಮತಿಗೂ ಇವು ನಿದರ್ಶನಗಳಾಗಿವೆ. ಸುಮತಿ–ವಿಮತಿ, ರಾವಣ–ಬಾಣಾಸುರ, ಶ್ರೀರಾಮ–ಪರಶುರಾಮ, ರಾವಣ–ಅಂಗದ ಮೊದಲಾದವರ ಸಂವಾದಗಳು ತುಂಬ ರಮಣೀಯವಾಗಿವೆ. ಆದರೂ ಇವನ್ನು ಎಲ್ಲಿಂದಲೋ ತಂದು ಜೋಡಿಸಿದಂತಿವೆಯೇ ಹೊರತು ಸಹಜವಾಗಿ ಮೂಡಿಬಂದಂತಿಲ್ಲ. ಆಶ್ಚರ್ಯದ ಸಂಗತಿಯೆಂದರೆ ರಾಮಜನ್ಮ ಮೊದಲಾದ ವಿವರಗಳೆಲ್ಲ ತುಂಬ ಸಂಕ್ಷೇಪವಾಗಿ ಬಂದಿವೆ. ರಾಮನಿಗೆ ವನವಾಸವನ್ನು ವಿಧಿಸುವ ದಶರಥ–ಕೈಕೇಯಿ ಸಂವಾದವನ್ನು ಏಳು ಪಂಕ್ತಿಗಳಲ್ಲಿ ಮುಗಿಸಲಾಗಿದೆ. ಆದರೆ ಧನುರ್ಯಜ್ಞದ ವರ್ಣನೆ ಸಾಂಗೋಪಾಂಗವಾಗಿ ಬಂದಿದೆ. ಸ್ವಯಂವರ ಸಭೆಗೆ ಬಂದಿದ್ದ ರಾಜರ ವರ್ಣನೆಯನ್ನು ಮಿತಿಮೀರಿ ಬೆಳೆಸಲಾಗಿದೆ. ಆಸ್ಥಾನಜೀವನದ ನಿಕಟ ಪರಿಚಯವಿದ್ದುದೇ ಈ ವರ್ಣನೆಯ ವಿಸ್ತಾರಕ್ಕೂ ಸಹಜತೆಗೂ ಕಾರಣವಾಗಿರಬಹುದು. ಪೇಟೆ, ರಾಜಾಸ್ಥಾನದ ವೈಭವ, ನಗರಾಲಂಕರಣ, ವಿಶೇಷ ಸಂದರ್ಭಗಳಲ್ಲಿಯ ಗಡಿಬಿಡಿ–ಮುಂತಾದವುಗಳ ಸಜೀವ ವರ್ಣನೆ ಇಲ್ಲಿ ಕಾಣಸಿಗುತ್ತದೆ. ಋತುವರ್ಣನೆ ಮತ್ತು ಪಾತ್ರಗಳ ನಖಶಿಖಾಂತ ವರ್ಣನೆಗಳೂ ಚೆನ್ನಾಗಿವೆ. ಆದರೆ, ಪಾತ್ರಗಳ ಪರಿಪೂರ್ಣ ಚಿತ್ರವನ್ನು ಮನಸ್ಸಿನಲ್ಲಿ ಮೂಡಿಸಲು ನೆರವಾಗುವಂಥ ಅನೇಕ ಪ್ರಸಂಗಗಳನ್ನು ನಿರ್ಧಾಕ್ಷಿಣ್ಯವಾಗಿ ಕೈಬಿಡಲಾಗಿದೆ. ಅಲಂಕಾರಕೌಶಲ ಮತ್ತು ವಾಗ್ವಿಲಾಸಪ್ರದರ್ಶನಕ್ಕೆ ಅವಕಾಶಮಾಡಿಕೊಡುವಂಥ ಪ್ರಸಂಗಗಳ ಬಗ್ಗೆ ಕವಿ ವಿಶೇಷ ಆಸಕ್ತಿ ತೋರಿದ್ದಾನೆ. ಉದಾಹರಣೆಗೆ, ಸೀತೆಯ ಮುಖವನ್ನು ವರ್ಣಿಸಲು ಬಳಸಿರುವ ದಂಡಕ ಶ್ಲೇಷಾರ್ಥಗಳಿಂದ ಕೂಡಿದ್ದು, ದುಷ್ಕರವಾಗಿ ಪರಿಣಮಿಸಿದೆ. ಇದೇ ರೀತಿ ವಿವಿಧಾರ್ಥಗಳನ್ನು ಕೊಡುವಂಥ ಅನೇಕ ಪದ್ಯಗಳನ್ನು ಕವಿ ಹೆಣೆದಿದ್ದಾನೆ. ಹೀಗಾಗಿ, ಕಠಿನಕಾವ್ಯಪ್ರೇತ ಎಂಬ ಪ್ರಥೆಗೂ ಕವಿ ಗುರಿಯಾಗಿದ್ದಾನೆ. ಈ ಕೃತಿಯ ರಚನೆಯ ಮೇಲೆ ಅನರ್ಘ್ಯರಾಘವ, ಪ್ರಸನ್ನರಾಘವ, ಹನುಮನ್ನಾಟಕ ಮತ್ತು ನೈಷಧ ಗ್ರಂಥಗಳ ಪ್ರಭಾವ ಬಿದ್ದಿರುವುದನ್ನು ಕಾಣಬಹುದು. ಸಂಸ್ಕೃತ ಕಾವ್ಯಗಳ ಅನೇಕ ಪ್ರಸಿದ್ಧ ಸೂಕ್ತಿಗಳನ್ನು ಭಾಷಾಂತರಿಸಿ ಅಲ್ಲಲ್ಲಿ ಬಳಸಿಕೊಳ್ಳಲಾಗಿದೆ. ತುಳಸೀದಾಸನಂತೆ ಈತ ಭಕ್ತಕವಿಯಲ್ಲ. ಇವನಲ್ಲಿ ಕಾಣುವುದು ಕೇವಲ ಪಾಂಡಿತ್ಯ ಪ್ರದರ್ಶನ. ಹೀಗಾಗಿ ರಾಮಕಥೆಯಂಥ ವಸ್ತುವನ್ನು ಆಯ್ದುಕೊಂಡರೂ ಅದು ಪಾಂಡಿತ್ಯದ ಪ್ರದರ್ಶನ ರಂಗವಾಗಿ ಪರಿಣಮಿಸಿದೆ. ಆದ್ದರಿಂದಲೇ ಇದು ಮಹಾಕಾವ್ಯವಾಗದೆ ಪಂಡಿತರಿಗೆ ಮಾತ್ರ ಪ್ರಿಯವಾದ ಗ್ರಂಥವಾಗಿದೆ.

ರತನಬಾವನೀ ಮಧುಕರಶಾಹನ ಪುತ್ರ ರತನಸೇನನನ್ನು ಕುರಿತ ಪ್ರಶಂಸಾತ್ಮಕ ಕಾವ್ಯ. ಇದೇ ಬಗೆಯ ಮತ್ತೆರಡು ಪ್ರಶಂಸಾತ್ಮಕ ಕಾವ್ಯಗಳೆಂದರೆ ವೀರಸಿಂಹದೇವಚರಿತ ಮತ್ತು ಜಹಾಂಗೀರ ಜಸಚಂದ್ರಿಕಾ. ಮೊದಲನೆಯದರಲ್ಲಿ ಇಂದ್ರಜೀತಸಿಂಹನೂ ಎರಡನೆಯದರಲ್ಲಿ ಜಹಾಂಗೀರನೂ ಕೀರ್ತಿತರಾಗಿದ್ದಾರೆ.

ಪ್ರಬೋಧಚಂದ್ರೋದಯದ ಮಾದರಿಯಲ್ಲಿ ರಚಿತವಾಗಿರುವ ವಿಜ್ಞಾನಗೀತಾ ಒಂದು ಅನ್ಯಾಪದೇಶಿಕ ಕಾವ್ಯ. ಕವಿಯ ದಾರ್ಶನಿಕ ವಿಚಾರಗಳು ಇಲ್ಲಿ ಸಂಗ್ರಹಗೊಂಡಿವೆ. ಭಗವದ್ಗೀತೆಯ ಪ್ರಭಾವ ಇಲ್ಲಿ ಕಾಣಬರುತ್ತದೆ. **(ಪಿ.ಜಿ.ಡಿ.)**

**ಕೇಶವದೇವ್, ಪಿ. :** 1905–. ಕೇರಳದ ಪ್ರಸಿದ್ಧ ಕಾದಂಬರಿಕಾರರಲ್ಲಿ ಒಬ್ಬರು. 1928ರಲ್ಲಿ ಕ್ರಾಂತಿಕಾರಿ ಕಮ್ಯೂನಿಷ್ಟರಾಗಿದ್ದರು. 'ನಾನು ಕ್ರಾಂತಿಕಾರಿಯಾಗಿರುವಾಗಲೇ ಬರೆಯಲಾರಂಭಿಸಿದೆ. ಆದರೆ ನಾನು ಬರೆಯುತ್ತಿರುವುದು ಸಾಹಿತ್ಯವೆಂದು ಓದುಗರು ಹೇಳಿದಾಗ ನನಗೆ ಅದರ ಅರಿವಾಯಿತು. ಮೊದಮೊದಲು ನಮ್ಮ ಪ್ರದೇಶದಲ್ಲಿ ಕಂಡುಬಂದ ಮಾನವ ಸಂಕಷ್ಟಗಳ ಚಿತ್ರಗಳನ್ನು ವಿಪುಲವಾಗಿ

ಬರೆದೆ. ಅನಂತರ ಕೆಲವು ನಾಟಕಗಳನ್ನು ಬರೆದಿರುವೆ. ಈಗ ಕಾದಂಬರಿಗಳನ್ನು ಹೆಚ್ಚಾಗಿ ಬರೆಯುತ್ತಿರುವೆ. ಹೀಗಿದೆ ನನ್ನ ಬರೆಹ ಹರಿದು ಬಂದ ರೀತಿ ಎಂಬುದಾಗಿ ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ. ಅಯಲ್ಕಾರ್(ನೆರೆಹೊರೆ) ಎಂಬ ಇವರ ಕಾದಂಬರಿಗೆ 1964ರಲ್ಲಿ ಕೇಂದ್ರ ಸರ್ಕಾರದ ಸಾಹಿತ್ಯ ಅಕಾಡಮಿ ಬಹುಮಾನ ದೊರೆತಿದೆ. ಸಮಕಾಲೀನ ಕೇರಳ ಸಮಾಜದ, ಅದರಲ್ಲೂ ವಿಶೇಷವಾಗಿ ನಾಯರ್, ಈಟಿವ ಮತ್ತು ಕ್ರೈಸ್ತ ಸಮಾಜಗಳ, ಜೀವನದ ಕಳೆದ ಐವತ್ತು ವರ್ಷಗಳ ಘಟನೆಗಳ ಹಿನ್ನೆಲೆಯಲ್ಲಿ ಚಿತ್ರಿತವಾಗಿದೆ ಈ ಅಯಲ್ಕಾರ್ ಕಾದಂಬರಿ.

ಸುಪ್ರಸಿದ್ಧ ಸಮಾಜ ಸುಧಾರಕರಾದ ನಾರಾಯಣಗುರು ಮತ್ತು ಅವರ ಶಿಷ್ಯರಲ್ಲೊಬ್ಬರಾದ ಅಯ್ಯಪ್ಪನ್ ಅವರ ಪ್ರಭಾವ ಕೇಶವದೇವ್ ಅವರ ಮೇಲೆ ಅಪಾರವಾಗಿದೆ. ತಾವು ಒಬ್ಬ ಮಾನವತಾವಾದಿಯೆಂದೂ ಯಾವ ಇಸಂ ಇಲ್ಲವೇ ಮತಾಂಧತೆಯಲ್ಲೂ ತಮಗೀಗ ವಿಶ್ವಾಸವಿಲ್ಲವೆಂದೂ ಇವರು ಸಾರಿದ್ದಾರೆ.

ಕೇಶವದೇವ್ ಹೆಚ್ಚು ಓದಿದವರಲ್ಲ. ಹುಟ್ಟಿದ್ದು ವಡಕ್ಕನ್ ಪರವೂರ್ ಎಂಬ ಚಿಕ್ಕ ಊರಿನಲ್ಲಿ, ಕೇವಲ ಎಂಟನೆಯ ಇಯತ್ತೆಯವರೆಗೆ ಮಾತ್ರ ಓದಿದ್ದಾರೆ. ಆದರೆ ಸ್ವಂತ ಅಭ್ಯಾಸದಿಂದ ವಿಜ್ಞಾನ, ರಾಜಕಾರಣ, ತತ್ತ್ವಜ್ಞಾನಗಳನ್ನು ಚೆನ್ನಾಗಿ ಮನನ ಮಾಡಿಕೊಂಡಿದ್ದಾರೆ. ಇಲ್ಲಿಯ ತನಕ ಹನ್ನೆರಡು ಕಾದಂಬರಿಗಳನ್ನೂ (ಓಡಯಿಲ್ ನಿನ್ನು ಎಂಬ ಇವರ ಕಾದಂಬರಿ ಚರಂಡಿಯಿಂದ ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಗೊಂಡು ಪ್ರಕಟಗೊಂಡಿದೆ) ಹದಿನಾರು ಕಥಾಸಂಗ್ರಹಗಳನ್ನೂ ಹನ್ನೊಂದು ನಾಟಕಗಳನ್ನೂ ಎದಿರ್ಪು(ಮೂರು ಭಾಗಗಳು) ಎಂಬ ಆತ್ಮಚರಿತ್ರೆಯನ್ನೂ ಏಳು ಏಕಾಂಕ ನಾಟಕಗಳನ್ನೂ ಒಂದು ವಿಮರ್ಶೆಯ ಗ್ರಂಥವನ್ನೂ ಪ್ರಕಟಿಸಿದ್ದಾರೆ.

ಕೇಶವದೇವ್ ಕೇರಳ ಸಾಹಿತ್ಯ ಅಕಾಡಮಿ, ಸಾಹಿತ್ಯ ಪರಿಷತ್ತುಗಳ ಸದಸ್ಯರು; ಪ್ರಗತಿಶೀಲ ಸಾಹಿತ್ಯ ಸಂಘದವರು ಕೇರಳದಲ್ಲಿ ಕೋಲಾಹಲವನ್ನೆಬ್ಬಿಸುತ್ತಿದ್ದ ಕಾಲದಲ್ಲಿವರು ಅವರ ನಾಯಕರಾಗಿದ್ದರು. (ಕೆ.ಕೆ.ಎಸ್.)

**ಕೇಶವಮೂರ್ತಿ, ಎಚ್.ಆರ್. :** 1919–2006. ನೃತ್ಯಗುರು, ಕಥಕ್ ಮತ್ತು ಭರತನಾಟ್ಯದಲ್ಲಿ ಪರಿಣಿತರು. ಅವರು ನಡೆಸುತ್ತಿರುವ ಕೇಶವ ನೃತ್ಯಶಾಲೆಯ ವೈಶಿಷ್ಟ್ಯವೆಂದರೆ, ನೃತ್ಯ-ರೂಪಕಗಳ ಸೃಜನ. ಕೇಶವಮೂರ್ತಿ ಹುಟ್ಟಿದ್ದು ಚಿಕ್ಕಮಗಳೂರು ತಾಲ್ಲೂಕಿನ ಹೋಚಿಹಳ್ಳಿ ಗ್ರಾಮದಲ್ಲಿ 1919ರಲ್ಲಿ. ತಂದೆ ರಾಮಸ್ವಾಮಿ ಮತ್ತು ತಾಯಿ ಸೀತಮ್ಮ. ಬಡತನದ ಬೇಗೆಯಿಂದ, ವಿದ್ಯಾಭ್ಯಾಸ ಮಾಡಲೆಂದು ತುಮಕೂರಿನ ಚಿಕ್ಕಪ್ಪನ ಮನೆಗೆ ಬಂದರು. ಕಾರ್ಪಣ್ಯದ ಜೀವನ ಸಾಗಿಸುತ್ತ ಎಸ್.ಎಸ್.ಎಲ್.ಸಿ ಮುಗಿಸಿದರು. ಮುಂದೆ ಓದಲು ಚೈತನ್ಯವಿಲ್ಲ. ಚಿಕ್ಕಪ್ಪನವರ ಬಳಿ ಸ್ವಲ್ಪ ಸಂಸ್ಕೃತಾಭ್ಯಾಸವೂ ನಡೆಯಿತು. ಆಸ್ಥಾನ ವಿದ್ವಾನರಾಗಿದ್ದ ಸಿ.ಎಸ್. ಶ್ರೀನಿವಾಸಮೂರ್ತಿ ಅವರ ಬಳಿ ಕೊಳಲುವಾದನ ಕಲಿಯಲು ಆರಂಭಿಸಿದರು. ತುಮಕೂರಿನ ನಾಟಕ ಕಂಪನಿಗಳ ಸಂಪರ್ಕ ಬೆಳೆಯಿತು. ಸಂಗೀತ, ನಾಟಕಗಳಲ್ಲಿ ಆಸಕ್ತಿ, ನೃತ್ಯ ಕಲಿಯಲು ಪ್ರೇರಣೆ ನೀಡಿತು. ವಿವಾಹದ ಅನಂತರ ಪತ್ನಿಯೊಡಗೂಡಿ ಬೆಂಗಳೂರಿಗೆ ಬಂದು, ಶಿಶುವಿಹಾರ ಒಂದರಲ್ಲಿ (1943) ಶಿಕ್ಷಕರಾದರು.

ಕೇಶವಮೂರ್ತಿ, ಮೊದಲಿಗೆ ಗುರು ಸೋಹನಲಾಲ್ ಬಳಿ ಕಥಕ್ ಅನಂತರ ಗುಂಡಪ್ಪನವರ ಬಳಿ ಭರತನಾಟ್ಯ ಶಿಕ್ಷಣ ಪಡೆದರು. ಆರು ವರ್ಷಗಳ ಸಾಧನೆಯ ಅನಂತರ, 'ಕೇಶವ ನೃತ್ಯಶಾಲೆ' ಆರಂಭಿಸಿದರು. ಕೇಶವ ನೃತ್ಯಶಾಲೆಯಲ್ಲಿ ಸೆಕೆಂಡರಿ ಎಜುಕೇಶನ್ ಬೋರ್ಡ್ ನಡೆಸುವ ನೃತ್ಯ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತರಬೇತಿ ನೀಡುವ ಕಾರ್ಯಕ್ರಮ ಅನೇಕರನ್ನು ಆಕರ್ಷಿಸಿತು. ಡಿಪ್ಲೊಮ ಮತ್ತು ಡಿಗ್ರಿಕೋರ್ಸ್‌ಗಳೂ ಕಾಲಕ್ರಮೇಣ ಆರಂಭವಾದವು.

ಕೇಶವ ನೃತ್ಯಶಾಲೆದಲ್ಲಿ ಪ್ರದರ್ಶಿಸಲಾಗುವ ಗೀತೆ ನೃತ್ಯಗಳಿಗೆ ಪ್ರತಿವರ್ಷ ನಡೆಸುವ ವಾರ್ಷಿಕೋತ್ಸವಗಳಿಗೆಲ್ಲಾ ಕೇಶವಮೂರ್ತಿ ನೃತ್ಯನಾಟಕಗಳೇ, ಸಾಮಾಜಿಕ, ಚಾರಿತ್ರಿಕ, ಜಾನಪದ ವಸ್ತು ವಿಶೇಷವುಳ್ಳ ನಾಟಕಗಳು, ಸಾಹಿತ್ಯ, ವಿನ್ಯಾಸ ಕೇಶವಮೂರ್ತಿಯವರದೇ. ಈ ಗೀತನೃತ್ಯಗಳಲ್ಲಿ ಹೆಚ್ಚು ಗಮನ ಸೆಳೆದ ರೂಪಕಗಳೆಂದರೆ 'ಕನ್ನಡ ಕವಿಪರಂಪರೆ' ನೃತ್ಯಮಾಲಿಕೆ. ಆದಿಕವಿ ಪಂಪನ 'ಭರತ-ಬಾಹುಬಲಿ', ರನ್ನನ 'ಗದಾಯುದ್ಧ', ನಾಗವರ್ಮನ 'ಕಾದಂಬರಿ', ಜನ್ನನ 'ಯಶೋಧರ ಚರಿತೆ', ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ', ನೇಮಿಚಂದ್ರನ 'ಲೀಲಾವತಿ ಪ್ರಬಂಧ, ಹರಿಹರನ 'ಗಿರಿಜಾ ಕಲ್ಯಾಣ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ', ಚಾಮರಸನ 'ಪ್ರಭುಲಿಂಗ ಲೀಲೆ, ಕುಮಾರವ್ಯಾಸನ 'ಭಾರತ' ಇವು ರಸಿಕರ ಮೆಚ್ಚುಗೆಗೆ ಪಾತ್ರವಾದ ನೃತ್ಯರೂಪಕಗಳು. ಕನ್ನಡ, ಸಂಸ್ಕೃತ ಸಾಹಿತ್ಯ ಭಂಡಾರದಿಂದ ಆಯ್ದ ಸುಮಾರು 30 ನೃತ್ಯನಾಟಕಗಳು ನಾಡಿನಾದ್ಯಂತ ಪ್ರದರ್ಶನಗೊಂಡಿವೆ.

1999ರಲ್ಲಿ ನಡೆದ ಕೇಶವ ನೃತ್ಯಶಾಲೆಯ ಸುವರ್ಣ ಮಹೋತ್ಸವ, ಒಂದು ವರ್ಷ ಪೂರ್ತಿ ಆಚರಿಸಲಾದ ಉತ್ಸವ. 500ಕ್ಕೂ ಹೆಚ್ಚು ಮಂದಿ ನರ್ತಕರು ಪಾಲ್ಗೊಂಡಿದ್ದರು. 50ಕ್ಕೂ ಹೆಚ್ಚು ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ಹಿರಿಯ ಚೇತನಗಳಿಗೆ ನಮನ ಕಾರ್ಯಕ್ರಮವೂ ಇದ್ದದ್ದು ಒಂದು ವಿಶೇಷ. ಕೇಶವಮೂರ್ತಿಗಳು ಬರೆದಿರುವ 'ನಾಟ್ಯವಿಚಾರ ಸಂಗ್ರಹ', ಅವರ ಭಾಷಣಗಳ. ಚಿಂತನೆಗಳ ಸಂಗ್ರಹ. ಭರತನಾಟ್ಯಕ್ಕೆ ಬೇಕಾದ ಜತಿಸ್ವರ, ಶೃಂಗಾರ ಪದಗಳು, ಶಬ್ದ ವರ್ಣ, ತಿಲ್ಲಾನ, ನವರಸ ರಾಮಾಯಣಗಳನ್ನು ರಚಿಸಿದ್ದಾರೆ. ನೃತ್ಯಶಿಕ್ಷಣಕ್ಕೆ ಸಂಬಂಧಪಟ್ಟಂತೆ ಪಠ್ಯವಿಷಯವನ್ನು ನಿರ್ದಿಷ್ಟಗೊಳಿಸುವುದರ ಜೊತೆಗೆ, ನೃತ್ಯ ಪರೀಕ್ಷೆಗಳ ಮೌಲ್ಯಮಾಪಕರೂ ಆಗಿದ್ದರು. ನೃತ್ಯಕಲಾವಿದರ ಪುರೋಭಿವೃದ್ಧಿಗಾಗಿ 'ಕರ್ನಾಟಕ ನೃತ್ಯಕಲಾ ಪರಿಷತ್ತು' ಸಂಘಟಿಸಿದ ಶ್ರೇಯಸ್ಸು ಕೇಶವಮೂರ್ತಿ ಅವರದು. ಹಲವಾರು ಬಾರಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ.

ಸಂಗೀತ ನೃತ್ಯಕಲಾ ಅಕಾಡೆಮಿಯ 'ಕರ್ನಾಟಕ ಕಲಾ ತಿಲಕ ಪ್ರಶಸ್ತಿ'(1981), ಕರ್ನಾಟಕ ನೃತ್ಯ ಕಲಾಪರಿಷತ್ತಿನ 'ನೃತ್ಯ ಕಲಾ ಶಿರೋಮಣಿ ಪ್ರಶಸ್ತಿ'(1993), ಬೆಂಗಳೂರು ಗಾಯನ ಸಮಾಜದ ವರ್ಷದ ಕಲಾವಿದ ಪುರಸ್ಕಾರ(1994), ಕರ್ನಾಟಕ ಸರಕಾರದ ಪ್ರತಿಷ್ಠಿತ 'ನಾಟ್ಯರಾಣಿ ಶಾಂತಲಾ ಪ್ರಶಸ್ತಿ' (1998) ಮತ್ತು 'ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ' (2000) ಇವೇ ಮೊದಲಾದ ಪ್ರಶಸ್ತಿಗಳಿಗೆ ಕೇಶವಮೂರ್ತಿ ಭಾಜನರಾಗಿದ್ದಾರೆ. (ಎಂ.ಬಿ.ಎಸ್.)

**ಕೇಶವಮೂರ್ತಿ, ಆರ್.ಆರ್. :** 1914–2006. ಏಳು ತಂತಿ ಪಿಟೀಲು ವಾದನದಲ್ಲಿ ಅದ್ಭುತ ಸಾಧನೆ ಮಾಡಿರುವ ಇವರು ರುದ್ರಪಟ್ಟಣದವರು. ಅರಕಲಗೂಡು ತಾಲ್ಲೂಕಿನಲ್ಲಿ ಕಾವೇರಿ ತೀರದಲ್ಲಿರುವ ರುದ್ರಪಟ್ಟಣ ಗ್ರಾಮ. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಖ್ಯಾತನಾಮರಾದ ಸುಮಾರು ನಲವತ್ತುಮಂದಿ ಸಂಗೀತಗಾರರು ವಾಗ್ಗೇಯಕಾರರಿಗೆ ಜನ್ಮ ನೀಡಿದ ಪುಣ್ಯ ತಾಣ.

ಕೇಶವಮೂರ್ತಿ ಅವರ ತಂದೆ ರುದ್ರಪಟ್ಟಣದ ರಾಮಸ್ವಾಮಯ್ಯ, ತಾಯಿ ಸುಬ್ಬಮ್ಮ, ಹುಟ್ಟಿದ್ದು 1914ರ ಮೇ 27ರಂದು. ರಾಮಸ್ವಾಮಯ್ಯ ಸಂಗೀತಗಾರರು. ತಾತ ವೆಂಕಟರಾಮಯ್ಯ ಪ್ರಖ್ಯಾತ ಸಂಗೀತಗಾರರು, ವಾಗ್ಗೇಯಕಾರರು. ಆರ್.ಆರ್. ಕೇಶವಮೂರ್ತಿಗಳಿಗೆ ಮೊದಲ ಸಂಗೀತ ಗುರು ಅವರ ತಂದೆ. ಏಳು ವರ್ಷ ವಯಸ್ಸಿನಲ್ಲಿ ಮೈಸೂರಿಗೆ ಪ್ರಯಾಣ. ಹಿರಿಯ ಸಂಗೀತಗಾರರಾದ ಬಿಡಾರಂ ಕೃಷ್ಣಪ್ಪನವರಲ್ಲಿ ಪಿಟೀಲು ವಾದನದ ಅಭ್ಯಾಸ. ಚಿಕ್ಕರಾಮರಾಯರಲ್ಲಿ ಸಂಗೀತ ಪಾಠ. ಅಗ್ರಮಾನ್ಯ ಪಿಟೀಲುವಾದಕರಾದ ಟಿ.ಚೌಡಯ್ಯ, ಬಿ.ದೇವೇಂದ್ರಪ್ಪ, ಟಿ.ಪುಟ್ಟಸ್ವಾಮಯ್ಯ ಮೊದಲಾದವರು ಆವೇಳೆಗಾಗಲೇ ಬಿಡಾರಂ ಅವರ ಶಿಷ್ಯರಾಗಿ ಸಂಗೀತಾಭ್ಯಾಸ ಮಾಡುತ್ತಿದ್ದರು.

ಬಿಡಾರಂ ರವರ ಪಾಠಕ್ರಮ ಅಚ್ಚುಕಟ್ಟು, ಶಿಸ್ತಿನಿಂದ ಕೂಡಿದ್ದು. ಕನಿಷ್ಠ ದಿನಕ್ಕೆ ಎಂಟು ತಾಸು ಸಾಧನೆ ಮಾಡಲೇಬೇಕಾಗಿತ್ತು, ವಾರಕ್ಕೆ ಒಂದೇರಾಗ. ಎಂಟು ಗಂಟೆ ಒಳಗೆ, ವ್ಯಾಯಾಮ ಸ್ನಾನ ಫಲಹಾರ ಮುಗಿಸಿ, ಪಾಠಕ್ಕೆ ಸಿದ್ಧವಾಗಬೇಕಾಗಿತ್ತು. ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಮೂರು ಹೊತ್ತು ಸಾಧನೆ. ಶ್ರುತಿ, ಲಯಗಳಲ್ಲಿ ದೋಷವಾದರೆ ಗುರುಗಳು ಸಹಿಸುತ್ತಿರಲಿಲ್ಲ. ಗುರುಗಳ ಕಣ್ಣೆಚ್ಚರದಲ್ಲಿ ನಡೆಯುತ್ತಿದ್ದ ಕಟ್ಟು ನಿಟ್ಟಾದ ಅಭ್ಯಾಸದ ಜೊತೆಗೆ, ವೈಯಕ್ತಿಕ ಆಸಕ್ತಿ, ಶ್ರದ್ಧೆಯಿಂದ ಕೇಶವಮೂರ್ತಿ ಅವರ ಪಿಟೀಲು ವಾದನ ಕೌಶಲ್ಯ ಪರಿಪಕ್ವಗೊಳ್ಳತೊಡಗಿತು. ದಶಕಗಳ ಸಾಧನೆಯಿಂದ ಗಾಯನ ಕಛೇರಿಗಳಲ್ಲಿ ವಾದ್ಯ ಸಹಕಾರ ನೀಡುವಷ್ಟು ಸಮರ್ಥರಾಗಿದ್ದರು. ಸಂಗೀತ ವಲಯದಲ್ಲಿ ಪ್ರಸಿದ್ಧಿ ಪಡೆಯತೊಡಗಿದರು. ಆರ್.ಆರ್.ಕೆ ಎಂದೇ ಸಂಗೀತ ವಲಯದಲ್ಲಿ ಪರಿಚಿತರಾದ ಕೇಶವಮೂರ್ತಿಗಳು 1934ರಲ್ಲಿ ಮೈಸೂರನ್ನು ಬಿಟ್ಟು, ಬೆಂಗಳೂರಿಗೆ ಬಂದು ಸಂಗೀತ ಶಾಲೆ ಆರಂಭಿಸಿ ಅದಕ್ಕೆ ತಮ್ಮ ಗುರುಗಳ ಹೆಸರನ್ನೇ ಇಟ್ಟರು. 'ಗಾನವಿಶಾರದ ಬಿಡಾರಂ ಕೃಷ್ಣಪ್ಪ ಸ್ಮಾರಕ ಸಂಗೀತ ವಿದ್ಯಾಲಯ' ಸಂಗೀತ ಹಾಗೂ ಪಿಟೀಲು ಶಿಕ್ಷಣಕ್ಕೆ ಮೀಸಲಾಗಿತ್ತು. ಇಲ್ಲಿ ತಮ್ಮ ಗುರುಕುಲದಲ್ಲಿ ನಡೆಯುತ್ತಿದ್ದಂತೆಯೇ ಅಚ್ಚುಕಟ್ಟಾದ, ನಿಷ್ಠುರ ಶಿಸ್ತಿನ ಪಾಠಕ್ರಮ ಜಾರಿಗೆ ಬಂದಿತು.

ತಮ್ಮ ಸಹಪಾಠಿಯಾಗಿದ್ದ ಚೌಡಯ್ಯನವರು ರೂಪಿಸಿದ ಏಳು ತಂತಿ ಪಿಟೀಲು, ಆರ್. ಆರ್.ಕೆಯವರನ್ನು ಆಕರ್ಷಿಸಿತು. ಅದರಲ್ಲಿ ಮಾಡಿದ ಸಾಧನೆ ಅದ್ಭುತವಾದದ್ದು. ಆರಂಭದಲ್ಲಿ ನಾಲ್ಕು ತಂತಿಗಳ ಪಿಟೀಲನ್ನೇ ನುಡಿಸುತ್ತಿದ್ದರು. ಚೌಡಯ್ಯನವರು ಏಳು ತಂತಿ ಪಿಟೀಲು ನುಡಿಸುತ್ತಿದ್ದನ್ನು ಗಮನಿಸಿ, ಅದರಲ್ಲಿ ಆಸಕ್ತಿ ಬೆಳೆಯಿತು. ಏಳು ತಂತಿ ಪಿಟೀಲನ್ನು ನುಡಿಸುವುದರಲ್ಲಿ ಪರಿಣಿತರಾದರು. ನಾಲ್ಕು ತಂತಿ ಪಿಟೀಲು ಸ್ತ್ರೀಯಂತೆ ಕೋಮಲ, ಮೃದು. ಏಳು ತಂತಿ ಪಿಟೀಲು ಗಂಡಿನಂತೆ. ಅದನ್ನು ನುಡಿಸಲು ದೈಹಿಕ ಸಾಮರ್ಥ್ಯ ಬೇಕು. ವೈಜ್ಞಾನಿಕ ಜ್ಞಾನ ಬೇಕು. ಒಳ್ಳೆಯ ಗಾತ್ರವಾದ ಶಾರೀರ ಇರುವವರು ಮಾತ್ರ ಏಳು ತಂತಿ ಪಿಟೀಲನ್ನು ಪಕ್ಕ ವಾದ್ಯವಾಗಿ ಬಳಸಿಕೊಂಡರೆ ಶೋಭೆ, ಇಲ್ಲವಾದರೆ, ಗಾಯಕನ ಧ್ವನಿಯೇ ಮುಚ್ಚಿ ಹೋಗುತ್ತದೆ, ಎನ್ನುತ್ತಾರೆ ಆರ್.ಆರ್.ಕೆ.

ಇವರು ಕಛೇರಿಗಳಲ್ಲಿ ಗಾಯಕನನ್ನು ಅನುಸರಿಸುವುದಿಲ್ಲ. ಗಾಯಕ ಆಲಾಪನೆ ಮಾಡಿದ ಮೇಲೆ ಅದನ್ನೇ ನುಡಿಸುವುದಿಲ್ಲ. ಮುಂದಿನ ಸಂಗತಿ ನುಡಿಸಿ, ಗಾಯಕನಿಗೆ ಮಾರ್ಗದರ್ಶಿ ಆಗುತ್ತಾರೆ. ಇದರಿಂದ ಗಾಯಕರಿಗೆ ಇರಿಸು ಮುರಿಸು. ಇವರ ಈ ವಾದನ ಶೈಲಿಯಿಂದಾಗಿ ಪಿಟೀಲಿನ ಪಕ್ಕವಾದ್ಯಕಾರರಾಗಿ ಅವರು ಜನಪ್ರಿಯರಾಗಿಲ್ಲ.

ಆರ್.ಆರ್.ಕೆ. ಬೆಂಗಳೂರಿಗೆ ಬಂದ ಮೇಲೆ ಅವರು ಕನ್ನಡ ಸಂಸ್ಕೃತ ತಮಿಳು ಹಿಂದಿ ಭಾಷೆಗಳನ್ನು ಅಧ್ಯಯನ ಮಾಡಿದರು. ಲಕ್ಷ್ಯ ಮತ್ತು ಶಾಸ್ತ್ರದಲ್ಲಿ ಪರಿಣಿತರಾದ ಇವರು ಲಕ್ಷ್ಯ ಮತ್ತು ಲಕ್ಷಣಕ್ಕೆ ಸಂಬಂಧ ಪಟ್ಟಂತೆ 14 ಅಮೂಲ್ಯ ಗ್ರಂಥಗಳನ್ನು ರಚಿಸಿದ್ದಾರೆ. ಸಂಗೀತ ಕ್ಷೇತ್ರಕ್ಕೆ ಆರ್.ಆರ್.ಕೆ. ನೀಡಿರುವ ಪಠ್ಯ ಹಾಗೂ ಶಾಸ್ತ್ರ ಗ್ರಂಥಗಳು : ಬಾಲ ಶಿಕ್ಷಣ (ಎರಡು ಭಾಗಗಳಲ್ಲಿ), ವಾಗ್ಗೇಯಕಾರರ ಕೃತಿಗಳು (ಮೂರು ಭಾಗಗಳಲ್ಲಿ), ಲಕ್ಷ್ಯ, ಲಕ್ಷಣ ಪದ್ಧತಿ, ಸಂಗೀತ ಲಕ್ಷ್ಯ ವಿಜ್ಞಾನ, ವಾಗ್ಗೇಯಕಾರರು. ಹಿಂದೂಸ್ಥಾನಿ ರಾಗ ಕೋಶ, ಬೃಹತ್ತರ ಮೇಳರಾಗಮಾಲಿಕಾ, ಮುವ್ವಗೋಪಾಲಾಂಕಿತ ಕ್ಷೇತ್ರಯ್ಯ ಪದಗಳು (ಎರಡು ಭಾಗಗಳಲ್ಲಿ) ಸಂಗೀತ ಶಾಸ್ತ್ರ ಸಾಗರ, ಕಛೇರಿ ಪದ್ಧತಿ, ತಂತಿ ವಾದ್ಯಗಳ ಲಕ್ಷ್ಯ, ಲಕ್ಷಣ, ಲಕ್ಷಣ ಗೀತ ಭಂಡಾರ, ಗೀತ ಗೋವಿಂದ ಅಷ್ಟಪದಿ, ರಾಗಗಳ ರಸ ಮೀಮಾಂಸೆ, ಕೃತಿಗಳ ಮೀಮಾಂಸೆ.

ಸಂಗೀತ ಕ್ಷೇತ್ರದ ದಿಗ್ಗಜರಾದ ಪಲ್ಲಡಂ ಸಂಜೀವರಾವ್, ಮುಸಿರಿ ಸುಬ್ರಹ್ಮಣ್ಯ ಐಯ್ಯರ್, ಅರಿಯಾಕ್ಕುಡಿ ರಾಮಾನುಜ ಐಯ್ಯಂಗಾರ್, ಚೆಂಬೈ ವೈದ್ಯನಾಥ್ ಭಾಗವತರ್, ಟೈಗರ್ ವರದಾಚಾರ್, ಮೈಸೂರು ವಾಸುದೇವಾಚಾರ್, ಜಿ.ಎನ್.ಬಾಲಸುಬ್ರಹ್ಮಣ್ಯಂ, ಗುರುಗಳಾದ ಬಿಡಾರಂ ಕೃಷ್ಣಪ್ಪ ಮೊದಲಾದ ಹಿರಿಯ ಚೇತನಗಳಿಗೆ ಪಿಟೀಲು ಪಕ್ಕವಾದ್ಯ ನೀಡಿದ್ದಾರೆ. ಭಾರತಾದ್ಯಂತ ಪ್ರತಿಷ್ಠಿತ ಸಮ್ಮೇಳನಗಳಲ್ಲಿ, ಆಕಾಶವಾಣಿ, ದೂರದರ್ಶನದಲ್ಲಿ ತನಿ ಕಛೇರಿ ನಡೆಸಿದ್ದಾರೆ.

ಇವರ ಶಿಷ್ಯರಲ್ಲಿ ಅನೇಕರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ್ದಾರೆ. ಟಿ.ರುಕ್ಮಿಣಿ, ದಿ ಆನೂರು ಎಸ್ ರಾಮಕೃಷ್ಣ, ಗಿಟಾರ್ ವಾದನದಲ್ಲಿ ಕರ್ನಾಟಕ ಸಂಗೀತ ನುಡಿಸುವ ನಿಖಿಲ್ ಘೋಷ್, ಜ್ಯೋತ್ಸ್ನಾ ಶ್ರೀಕಾಂತ್ ಇವರು ಮುಖ್ಯರು.

ಏಳು ತಂತಿ ಪಿಟೀಲಿನ ವಾದ್ಯದಲ್ಲಿ ಅದ್ಭುತ ಸಾಧನೆ ಮಾಡಿರುವ ಆರ್.ಆರ್.ಕೆ.ಅವರಿಗೆ ಸಂದಿರುವ ಪ್ರಶಸ್ತಿಗಳು, ಪುರಸ್ಕಾರಗಳು ಅಸಂಖ್ಯ. ತಿರುಮಲ ತಿರುಪತಿ ವಾರ್ತಾ ಕೇಂದ್ರದ 'ಸಂಗೀತ ಶಾಸ್ತ್ರ ಪ್ರವೀಣ' ಬಿರುದು (1975) ಬೆಂಗಳೂರು ಗಾಯನ ಸಮಾಜದ 10ನೇ ವಾರ್ಷಿಕ ಸಮ್ಮೇಳನದಲ್ಲಿ 'ಸಂಗೀತ ಕಲಾ ರತ್ನ' ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾ ತಿಲಕ ಪ್ರಶಸ್ತಿ (1980), ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (1995) ಮತ್ತು ಕರ್ನಾಟಕದ ಪ್ರತಿಷ್ಠಿತ ಕನಕ ಪುರಂದರ ಪ್ರಶಸ್ತಿ (1993) ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (2000) ಇವುಗಳು ಮುಖ್ಯವಾದವು. (ಎಂ.ಬಿ.ಎಸ್)

**ಕೇಶವಮೂರ್ತಿ, ಆರ್.ಎಸ್. :** 1903–82. ಇವರು ಹಾಸನ ಜಿಲ್ಲೆಯ ರುದ್ರಪಟ್ಟಣದ ವೈಣಿಕರ ಮನೆತನಕ್ಕೆ ಸೇರಿದವರು. ಇವರ ತಂದೆ, ತಾತ ಮತ್ತು ಚಿಕ್ಕಪ್ಪ ಎಲ್ಲರೂ ವೈಣಿಕರು. ಇವರು ಚಿಕ್ಕಪ್ಪ ವೆಂಕಟರಮಣಯ್ಯನವರಲ್ಲಿ ವೀಣಾಭ್ಯಾಸ ಮಾಡಿ ಆನಂತರ ಮೈಸೂರಿಗೆ ಬಂದು ಪ್ರೌಢ ಶಿಕ್ಷಣವನ್ನು 15 ವರ್ಷ ಕಾಲ ವೀಣಾಭಕ್ಷಿ ಸುಬ್ಬಣ್ಣನವರಲ್ಲಿ ಪಡೆದರು. ಮಹಾತ್ಮಗಾಂಧಿ, ರವೀಂದ್ರನಾಥಠಾಕೂರರ ಮುಂದೆಯೂ ವೀಣೆ ನುಡಿಸಿದ್ದು ಅವರ ಮೆಚ್ಚುಗೆ ಗಳಿಸಿದ್ದರು. 1931ರಲ್ಲಿ ಮೈಸೂರಿನ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು. ಬೆಂಗಳೂರಿನ ಗಾನಕಲಾ ಪರಿಷತ್ತಿನ ಸಮ್ಮೇಳನಾಧ್ಯಕ್ಷರಾಗಿ ಗಾನಕಲಾರತ್ನ ಎಂಬ ಬಿರುದನ್ನು, ವೈಣಿಕ ಪ್ರವೀಣ ಹಾಗೂ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರಿಗೆ ಗುರುಗಳಾದ ವೀಣಾಭಕ್ಷಿ ಸುಬ್ಬಣ್ಣನವರು ತಮ್ಮ ಕೊನೆಗಾಲದಲ್ಲಿ ಸ್ವಂತ ವೀಣೆಯನ್ನು ಶಿಷ್ಯನಿಗೆ ನೀಡಿದರು. ಇವರ ಶಿಷ್ಯರಲ್ಲಿ ಪ್ರಮುಖರು ಆರ್.ಕೆ. ಶ್ರೀನಿವಾಸಮೂರ್ತಿ, ಆರ್.ಕೆ. ಸೂರ್ಯನಾರಾಯಣ ಮುಂತಾದವರು. (ಆರ್.ಎನ್.ಎಸ್.)

**ಕೇಶವವರ್ಣಿ :** 14ನೆಯ ಶತಮಾನದಲ್ಲಿದ್ದ ಜೈನ ಸಿದ್ಧಾಂತ ಪಂಡಿತ. ಪ್ರಾಕೃತ, ಸಂಸ್ಕೃತ ಆಗಮಗ್ರಂಥಗಳ ಸಾರವನ್ನು ವೃತ್ತಿರೂಪವಾಗಿ ಕನ್ನಡಕ್ಕೆ ತಂದಿದ್ದಾನೆ. ಈತ ಅಭಯಸೂರಿ ಸಿದ್ಧಾಂತಚಕ್ರವರ್ತಿಯ ಪಟ್ಟದ ಶಿಷ್ಯ. ಸಾರತ್ರಯವೇದಿಯೆಂದು ತನ್ನನ್ನು ಕರೆದುಕೊಂಡಿದ್ದಾನೆ. ವೃತ್ತಿಯೊಂದರ ಕೊನೆಯಲ್ಲಿ ತನ್ನ ಹೆಸರನ್ನು ಕೇಶಣ್ಣ ಎಂದು ಹೇಳಿಕೊಂಡಿದ್ದಾನೆ. ಇವನ ಅನಂತರ ಬಂದ ಒಂದನೆಯ ಮಂಗರಾಜ (1360) ಮತ್ತು ದೇವಚಂದ್ರ (1770)–ಇವರಿಬ್ಬರೂ ಈತನನ್ನು ಸಾರತ್ರಯವೇದಿಯೆಂದು ಕೊಂಡಾಡಿರುವರು. ಎರಡನೆಯ ಅಮಿತಗತಿಯ (993) ಶ್ರಾವಕಾಚಾರಕ್ಕೆ ಈತ ಕನ್ನಡ ವೃತ್ತಿಯನ್ನು ರಚಿಸಿದ್ದಾನೆ. ಜಿತೇಂದ್ರಮಾಲೆಗೂ ಈತ ಕನ್ನಡ ಟೀಕೆಯನ್ನು ರಚಿಸಿರುವಂತಿದೆ.

10ನೆಯ ಶತಮಾನದಲ್ಲಿ ಚಾಮುಂಡರಾಯನ ಗುರುವಾದ ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯ ಪ್ರಾಕೃತದಲ್ಲಿ ಬರೆದಿರುವ ಗೋಮಟಸಾರ, ತ್ರಿಲೋಕಸಾರ ಮತ್ತು ಲಬ್ಧಿಸಾರಗಳನ್ನು ಸಾರತ್ರಯವೆಂದು ಕರೆಯುತ್ತಾರೆ. ಈ ಮೂರು ಗ್ರಂಥಗಳ ಮೇಲೂ ಕೇಶವವರ್ಣಿ ಕರ್ಣಾಟಕ ವೃತ್ತಿಯನ್ನು ಬರೆದಿರಬೇಕು. ಆದರೆ ದೊರೆತಿರುವುದು ಗೋಮಟಸಾರದ ಕರ್ಣಾಟಕ ವೃತ್ತಿ ಒಂದೇ. ಗೋಮಟಸಾರ ಕೃತಿ ಜೀವಕಾಂಡ ಮತ್ತು ಕರ್ಮಕಾಂಡವೆಂದು ಎರಡು ಭಾಗವಾಗಿದೆ; ಕೇಶವವರ್ಣಿ ಕರ್ಮ ಮತ್ತು ಜೀವ ಇವುಗಳ ವಿಚಿತ್ರ ವಿನ್ಯಾಸವನ್ನು ಈ ವೃತ್ತಿಯಲ್ಲಿ ಸೊಗಸಾಗಿ ಚಿತ್ರಿಸಿದ್ದಾನೆ. ಈ ವೃತ್ತಿಯ ಕೊನೆಯಲ್ಲಿ 'ಇಂತು ಭಗವದರ್ಹತ್ಪರಮೇಶ್ವರ ಚಾರುಚರಣಾರವಿಂದ ದ್ವಂದ್ವವಂದನಾನಂದಿತ ಪುಣ್ಯ ಪುಂಜಾಯಮಾನ ಶ್ರೀಮದ್ರಾಜರಾಯಗುರು ಮಂಡಲಾಚಾರ್ಯ ಮಹಾವಾದವಾದೀಶ್ವರ ರಾಯವಾದಿಪಿತಾಮಹ ಸಕಲ ವಿದ್ವಜ್ಜನ ಚಕ್ರವರ್ತಿ ಶ್ರೀಮದಭಯಸೂರಿ ಸಿದ್ಧಾಂತಚಕ್ರವರ್ತಿ ಶ್ರೀಪಾದಪಂಕಜ ರಜೋರಂಜಿತ ಲಲಾಟಪಟ್ಟಂ ಶ್ರೀಕೇಶವ ವಿರಚಿತ ಗೋಮಟಸಾರ ಕರ್ಣಾಟಕ ವೃತ್ತಿ ಜೀವತತ್ವ ಪ್ರದೀಪಿಕೆಯೊಳ್' ಎಂಬ ಗದ್ಯಭಾಗವಿದೆ.

ಜೈನಶ್ರಾವಕರ ಆಚರಣೆಯನ್ನು ವಿವರಿಸುವ ಶ್ರಾವಕಾಚಾರಕ್ಕೆ ಕೇಶವವರ್ಣಿ ರಚಿಸಿರುವ ಕರ್ಣಾಟಕ ವೃತ್ತಿಯಲ್ಲಿ 15 ಪರಿಚ್ಛೇದಗಳಿವೆ. ವೃತ್ತಿಯ ಕೊನೆಯಲ್ಲಿ 'ಇಂತು ಪರಮಜಿನಸಮಯಸಿದ್ಧಾಂತಪೀಯೂಷಾರ್ಣವ ವರ್ಧಿಷ್ಣು ಕುಮುದ ಬಾಂಧವ ಶ್ರೀಮದಭಯಸೂರಿ ಸಿದ್ಧಾಂತಚಕ್ರವರ್ತಿ ಶ್ರೀಪಾದಪದ್ಮಾರಾಧಕನಪ್ಪ ಸಾರತ್ರಯವೇದಿ ಕೇಶಣ್ಣ ವಿರಚಿತಾಮಿತಗತಿ ಶ್ರಾವಕಾಚಾರ ವೃತ್ತಿಯೋಳ್' ಎಂಬ ಗದ್ಯವಿದೆ. (ಬಿ.ಜ.)

**ಕೇಶವಸುತ, ದಾಮಲೆ :** 1866–1905. ಆಧುನಿಕ ಮರಾಠೀ ಸಾಹಿತ್ಯದ ಪ್ರವರ್ತಕರಲ್ಲೊಬ್ಬನೆಂದು ಹೆಸರಾಂತ ಕವಿ. ಮಹಾರಾಷ್ಟ್ರದ ದಾಪೋಲಿ ಜಿಲ್ಲೆಯ ವಲನೆ ಎಂಬ ಗ್ರಾಮದಲ್ಲಿ ಹುಟ್ಟಿದನೆನ್ನಲಾದ ಈತ ಕೊಂಕಣಸ್ಥ ಬ್ರಾಹ್ಮಣ ಮನೆತನಕ್ಕೆ ಸೇರಿದವ. ತಂದೆ ಕೇಶೋಪಂತ ದಾಮಲೆ ತಾಯಿ ಮಾಲದೌಲಿನ, ಈತನ ಬಾಲ್ಯದ ವಿವರಗಳು ತಿಳಿದಿಲ್ಲ. ಶಾರೀರಿಕವಾಗಿ ಈತ ಬಹು ಅಶಕ್ತ. ಆಟಪಾಟಗಳಲ್ಲಂತೂ ಅನಾಸಕ್ತ. ಇದರಿಂದಾಗಿ ಇವನಲ್ಲಿ ಗೊಣಗಾಡುವ ಸ್ವಭಾವ ಬೆಳೆದಿತ್ತು. ಯಾವಾಗಲೂ ಒಂಟಿಯಾಗಿರುತ್ತಿದ್ದ. ಸ್ವಭಾವತಃ ಈತ ಬಲು ನಾಚಿಕೆಯವ, ಹೆಚ್ಚು ಮಾತನಾಡುವವನಲ್ಲ. ಕ್ರೈಸ್ತಧರ್ಮದ ಕಡೆಗೆ ಈತನ ಒಲವು ಹೆಚ್ಚಿದ್ದಂತೆ ತೋರುತ್ತದೆ. ರತ್ನಗಿರಿ ಜಿಲ್ಲೆಯ ಖೇಡ, ನಾಗಪುರ ಮತ್ತು ಪುಣೆಗಳಲ್ಲಿ ಮೆಟ್ರಿಕ್‌ವರೆಗೆ ವಿದ್ಯಾಭ್ಯಾಸ ನಡೆಸಿ 1890ರಲ್ಲಿ ಜೀವನ ನಿರ್ವಹಣೆಗಾಗಿ ಮುಂಬಯಿಯಲ್ಲಿ ಅಧ್ಯಾಪಕವೃತ್ತಿ ಹಿಡಿದ. ಅಲ್ಲಿಂದ ಅಮೆರಿಕನ್ ಮಿಷನ್ನಿನ ಜ್ಞಾನೋದಯವೆಂಬ ನಿಯತಕಾಲಿಕದ ಕಚೇರಿಯಲ್ಲಿ ಕೆಲಸಕ್ಕೆ ಸೇರಿ 1892ರ ತನಕ ಮುಂಬಯಿಯಲ್ಲಿ ಇದ್ದ. ಅಲ್ಪ ವರಮಾನದಿಂದ ಜೀವನ ನಿರ್ವಹಣೆ ಕಷ್ಟವೆನಿಸಿದಾಗ ಖಾನದೇಶಕ್ಕೆ ಅಧ್ಯಾಪಕನಾಗಿ ಹೋದ(1897–1904). 1904ರಲ್ಲಿ ಧಾರವಾಡ ಪ್ರೌಢಶಾಲೆಗೆ ಮರಾಠಿ ಶಿಕ್ಷಕನಾಗಿ ಬಂದ. ಮರುವರ್ಷವೇ ಹುಬ್ಬಳ್ಳಿಯಲ್ಲಿ ತನ್ನ 39ನೆಯ ವಯಸ್ಸಿನಲ್ಲಿ ನಿಧನನಾದ.

ಮುಕ್ತಛಂದಸ್ಸಿನಲ್ಲಿ ರಚಿಸಿದ 132 ಭಾವಗೀತೆಗಳ ಸಂಕಲನ ಈತನ ಕೃತಿ. ವಿಶೇಷವಾಗಿ ಇಂಗ್ಲಿಷ್ ಸಾಹಿತ್ಯದಿಂದ ಪ್ರಭಾವಿತನಾದ ಈತ ತನ್ನ ಸಂಕಲನದಲ್ಲಿ 25 ಇಂಗ್ಲಿಷ್ ಕವನಗಳ ಅನುವಾದವನ್ನು ಸೇರಿಸಿದ್ದಾನೆ. ಇವುಗಳಲ್ಲಿ ಲಿರಿಕ್, ಓಡ್ ಮತ್ತು ಸಾನೆಟ್ ಮಾದರಿಗಳನ್ನು ಕಾಣಬಹುದು. ರಘುವಂಶ, ಕಿರಾತಾರ್ಜುನೀಯ ಕಾವ್ಯಗಳ ಭಾಗಶಃ ಮರಾಠಿ ಅನುವಾದವನ್ನೂ ಮಾಡಿದ್ದಾನೆ.

ಈತನಿಗಿಂತ ಹಿಂದೆ ಮರಾಠೀ ಕಾವ್ಯ ಸಂಪ್ರದಾಯಬದ್ಧವಾದ ಹಾದಿಯಲ್ಲಿ ಹರಿದಿದ್ದು ಯಾವ ಹೊಸ ವಿಧಾನಕ್ಕೂ ಒಳಗಾಗಿರಲಿಲ್ಲ. ಅಕ್ಷರವೃತ್ತದ ಲಯವನ್ನು ಹಿಡಿದು 2–4 ಸಾಲುಗಳ ಚರಣವನ್ನು ಕಟ್ಟುವ ಪದ್ಧತಿ ಮಾತ್ರ ರೂಢಿಯಲ್ಲಿತ್ತು. ಯಾವುದೋ ಒಂದು ಭಾವನೆಗೆ ಒಂದು ಗೊತ್ತಾದ ಕಾವ್ಯಬಂಧ ಮಾತ್ರ ಪ್ರಚುರವಾಗಿತ್ತು. ಈತ ಅಕ್ಷರವೃತ್ತಗಳಿಗೆ ಮಾತ್ರಾವೃತ್ತಗಳನ್ನೂ 2–4 ಸಾಲುಗಳ ನುಡಿಗಳಿಗೆ ಬದಲಾಗಿ 5–7 ಇಲ್ಲವೆ 7 ಸಾಲಿನ ನುಡಿಗಳನ್ನೂ ರಚಿಸಿ ಕಾವ್ಯರಚನೆಯಲ್ಲಿ ಹೊಸ ಮಾರ್ಗ ಹಿಡಿದ. ಛಂದಸ್ಸಿನ ಭಾರದಿಂದ ಕಾವ್ಯದ ಸ್ವಚ್ಛಂದ ಅಭಿವ್ಯಕ್ತಿಯ ಉಸಿರು ಕಟ್ಟುತ್ತಿದೆಯೆಂದು ಭಾವಿಸಿ ಅದನ್ನು ತೊರೆದು ಮರಾಠೀ ಕಾವ್ಯದಲ್ಲಿ ಹೊಸ ಸಂಕೇತ, ಸಂಪ್ರದಾಯಗಳನ್ನು ಅಳವಡಿಸಿದ. ಭಾಷೆಯಲ್ಲಿ ಹೊಸತನವನ್ನು ತಂದ.

ನಿಸರ್ಗದ ಬಗ್ಗೆ ಈತ ಅತ್ಯುತ್ತಮ ಕವನಗಳನ್ನು ಬರೆದುದಲ್ಲದೆ ಆಧುನಿಕ ಮರಾಠೀ ಕಾವ್ಯದ ಉತ್ತಮ ಪ್ರೇಮಗೀತೆಗಳನ್ನು ರಚಿಸಿದ. ತೀವ್ರಸಂವೇದನೆಯುಳ್ಳ ಈ ಕವಿ ಮರಾಠೀ ಕಾವ್ಯಪ್ರಪಂಚದಲ್ಲಿ ತೋರಿಸಿದ ಹೊಸ ಹಾದಿಯನ್ನು ಈತನ ಅನಂತರ ಬಂದ ಕವಿಗಳು ಅನುಸರಿಸಿದರು. ಇದರಿಂದಾಗಿ ಮರಾಠೀ ಕಾವ್ಯದ ದಿಕ್ಕೇ ಬದಲಾಯಿತು. ಈ ದೃಷ್ಟಿಯಿಂದ ಕೇಶವಸುತ ಆಧುನಿಕ ಮರಾಠೀ ಕಾವ್ಯದ ಚರಿತ್ರೆಯಲ್ಲಿ ಪ್ರಮುಖನೆನಿಸಿದ್ದಾನೆ. (ಎಚ್.ಆರ್.ಡಿ.ಬಿ.)

**ಕೇಶಾಲಂಕಾರ :** ಕೂದಲನ್ನು ಅಭಿರುಚಿಗೆ ತಕ್ಕಂತೆ ಬೆಳೆಸಿಕೊಳ್ಳುವುದು, ಕತ್ತರಿಸಿಕೊಳ್ಳುವುದು, ಬಾಚುವುದು, ಹೆಣೆಯುವುದು, ಕಟ್ಟುವುದು ಮೊದಲಾದ ಎಲ್ಲ ವಿಷಯಗಳನ್ನೂ ಕೇಶಾಲಂಕಾರ ಒಳಗೊಳ್ಳುತ್ತದೆ. ಕೇಶದ ಅಲಂಕರಣ ಹೆಂಗಸರಿಗೆ ಹೇಗೋ ಹಾಗೆ ಗಂಡಸರಿಗೂ ಸಹಜವಾದುದೇ. ಬಹು ಹಿಂದಿನಿಂದಲೂ ಮನುಷ್ಯ ಇದಕ್ಕೆ ಗಮನ ಕೊಡುತ್ತ ಬಂದಿದ್ದಾನೆನ್ನಲು ದಾಖಲೆಗಳಿವೆ. ಆದಿಮಾನವ ಮೊದಲು ಕಲ್ಲಿನಾಯುಧಗಳಿಂದಲೂ ಅನಂತರ ಹರಿತವಾದ ಲೋಹದ ಆಯುಧಗಳಿಂದಲೂ ತನ್ನ ಕೂದಲನ್ನು ಕತ್ತರಿಸಿಕೊಳ್ಳುತ್ತಿದ್ದ. ಮೊದಮೊದಲು ಕನ್ನಡಿಯ ಉಪಯೋಗ ಅವನಿಗೆ ತಿಳಿದಿರಲಿಲ್ಲ. ಬಹುಶಃ ಒಬ್ಬ ಮತ್ತೊಬ್ಬನ ಕೂದಲನ್ನು ಕತ್ತರಿಸುತ್ತಿದ್ದಿರಬಹುದು. ಇಲ್ಲವೆ ತನ್ನ ಕೂದಲನ್ನು ತಾನೇ ಕತ್ತರಿಸಿಕೊಳ್ಳುತ್ತಿದ್ದಿರಬಹುದು. ಆಗ ಅಲಂಕರಣಕ್ಕಿಂತ ಅನುಕೂಲಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದನೆಂಬ ಮಾತೂ ನಿಜ. ಕ್ರಮೇಣ ನಿಂತ ತಿಳಿಯಾದ ನೀರನ್ನು ಆತ ಕನ್ನಡಿಯಾಗಿ ಬಳಸಿರಬೇಕು. ಅನಂತರ ಮೆರಗು ಕೊಟ್ಟ ಲೋಹದ ತಗಡುಗಳೇ ಅವನ ಕನ್ನಡಿಗಳಾದುವು. ಹೀಗೆ ಶತಶತಮಾನಗಳ ಅಭ್ಯಾಸ, ಪ್ರಯೋಗಗಳಿಂದ ಮಾನವ ತನ್ನ ಕೇಶಾಲಂಕರಣ ಕೌಶಲವನ್ನು ಬೆಳೆಸಿಕೊಂಡಿದ್ದಾನೆ.

ಕೇಶದ ಅಗತ್ಯ ಕಾಲಾನುಕಾಲಕ್ಕೆ ವ್ಯತ್ಯಾಸವಾಗುತ್ತ ಬಂದಿದೆ. ಮೂಲತಃ ದೇಹದ ಪ್ರಮುಖ ಭಾಗಗಳನ್ನು ಬೆಚ್ಚಗಿಟ್ಟು ಕಾಪಾಡುವುದು ಕೂದಲಿನ ಉದ್ದೇಶ. ಸಾಮಾಜಿಕ, ಧಾರ್ಮಿಕ ಹಾಗೂ ಅಲಂಕರಣ ದೃಷ್ಟಿಯಿಂದ ಮಾನವ ತಲೆಗೂದಲನ್ನು ಬೆಳೆಸಿದ್ದುಂಟು; ಪೂರ್ಣ ತೆಗೆಸಿದ್ದುಂಟು. ಸ್ವಲ್ಪ ಉಳಿಸಿಕೊಂಡು ಉಳಿದುದೆಲ್ಲವನ್ನೂ ತೆಗೆಸಿದ್ದುಂಟು, ಗಡ್ಡಮೀಸೆಗಳನ್ನೂ ಅಷ್ಟೆ. ದೇವರ ಹರಕೆಗಾಗಿ ಮುಡಿಕೊಡುವುದನ್ನು ನೋಡಿದರೆ ಮಾನವನಿಗೆ ತಲೆಗೂದಲು ಅದೆಷ್ಟು ಪ್ರಿಯ ಎಂಬ ವಿಷಯ ಗೊತ್ತಾಗುತ್ತದೆ. ಬಹುಕಾಲ ಧಾರ್ಮಿಕ ಕಟ್ಟಳೆಗಳೇ ಅಂದಂದಿನ ಅಲಂಕರಣಕ್ಕೆ ಮಾದರಿ ಹಾಕಿ ಕೊಟ್ಟವು. ಇಂದಿಗೂ ಅವೇ ಅನೇಕ ಕಡೆ ನಿರ್ಣಾಯಕ ಮಾದರಿಗಳನ್ನು ಸೃಷ್ಟಿಸುತ್ತಿವೆ. ಬರಬರುತ್ತ ಸಾಮಾಜಿಕ ವ್ಯವಸ್ಥೆ ಬದಲಾದಂತೆಲ್ಲ ಅಲಂಕರಣ ಪದ್ಧತಿ ವೈಯಕ್ತಿಕ ಅಭಿರುಚಿಗೆ ತಕ್ಕಂತೆ ವೈವಿಧ್ಯಪೂರ್ಣವಾಗಿ ಬೆಳೆಯುತ್ತಿದೆ. ವ್ಯಕ್ತಿತ್ವಕ್ಕೆ, ಮುಖ್ಯವಾಗಿ ಮುಖದ ಅಂದಚಂದಕ್ಕೆ ಒಪ್ಪುವಂತೆ ತಲೆಗೂದಲನ್ನು ತಿದ್ದುವ ಕಲೆ ಈಚೆಗೆ ವಿಪುಲವಾಗಿ ಬೆಳೆದಿದೆ. ಇದಕ್ಕಾಗಿಯೇ ಏರ್ಪಟ್ಟ ಅಲಂಕರಣ ಗೃಹಗಳಿವೆ. ಉದಾಹರಣೆಗೆ ಬೆಂಗಳೂರಿನ ಅಶೋಕ ಹೋಟಲನ್ನು ಹೆಸರಿಸಬಹುದು. ಅಲ್ಲಿ ಇದಕ್ಕಾಗಿ ಏರ್ಪಟ್ಟ ಸಂಕೀರ್ಣ ವಿಭಾಗವಿದೆ.

**ಕೇಶಪೋಷಣೆ, ಅಭಿವೃದ್ಧಿ :** ಕೂದಲು ನೀಳವಾಗಿ, ನುಣುಪಾಗಿ, ಹೊಳಪಾಗಿ ಅಲೆಅಲೆಯಾಗಿ ಇರಬೇಕೆಂಬುದು ಎಲ್ಲರ ಇಚ್ಛೆ. ಇಂಥ ಕೂದಲನ್ನು ವಿಪುಲವಾಗಿ ಬೆಳೆಸಿಕೊಳ್ಳಲು ಮನುಷ್ಯ ಅನೇಕ ಸಾಧನಗಳನ್ನು ಕಂಡುಹಿಡಿದಿದ್ದಾನೆ. ಪೂರ್ವ ರಾಷ್ಟ್ರಗಳವರೆಲ್ಲ ಸಾಮಾನ್ಯವಾಗಿ ಕರಿಗೂದಲನ್ನು ಬಯಸುತ್ತಾರೆ. ಆದರೆ ಪಾಶ್ಚಾತ್ಯರು ಕರಿಗೂದಲನ್ನು ಮೆಚ್ಚುವಂತೆ ಬಂಗಾರದ ಬಣ್ಣದ ಕೂದಲನ್ನೂ ಮೆಚ್ಚುತ್ತಾರೆ. ಪೂರ್ವ ರಾಷ್ಟ್ರಗಳಲ್ಲಿ ಇಂದಿಗೂ ಜಡೆ, ಮುಡಿ ಹೆಚ್ಚು. ಪಾಶ್ಚಾತ್ಯರಲ್ಲಿ ಈ ಶೈಲಿಗಳಿವೆಯಾದರೂ ಬಹುತೇಕ ಮೊಟಕು ಕೂದಲಿನ ಅಲಂಕರಣ(ಬಾಬ್‌ಕಟ್) ಹೆಚ್ಚು. ಈಚೆಗೆ ಪೂರ್ವ ರಾಷ್ಟ್ರಗಳಲ್ಲಿಯ ದೊಡ್ಡ ಪಟ್ಟಣಗಳಲ್ಲಿ ಈ ಬಗೆಯ ಕೇಶಾಲಂಕರಣ ಜನಪ್ರಿಯವಾಗುತ್ತಿದೆ. ಹಿಪ್ಪಿ ಕೇಶಶೈಲಿಯನ್ನು ಅಲಂಕರಣವೆನ್ನಲಾಗುವುದಿಲ್ಲ. ಏಕೆಂದರೆ ಈ ಶೈಲಿ ಪ್ರಾಕೃತ ಮಾದರಿಯದು. ಸ್ವೇಚ್ಛವಾದುದು. ಅಲಂಕರಣವೆಂದೊಡನೆ ಕೃತಕತೆ ಬರುತ್ತದಾಗಿ ಆ ಮಾತನ್ನು ಇಲ್ಲಿ ಬಳಸಲಾಗದು.

ಕಾಲಿಕ ಅಭ್ಯಂಜನ, ನಿತ್ಯಬಾಚುವುದು–ಮೊದಲಾದ ಕ್ರಿಯೆಗಳಿಂದ ತಲೆಯಲ್ಲಿ ಬೆವರು ಸೇರುವುದಿಲ್ಲ. ಹೇನು ಸೀರುಗಳು ಮನೆಮಾಡುವುದಿಲ್ಲ. ಹುರುಪೆ ಏಳುವುದಿಲ್ಲ. ತಲೆಗೆ ಸಮೃದ್ಧವಾಗಿ ಎಣ್ಣೆ ತೀಡಿ ಬಾಚುವುದರಿಂದ ಕೂದಲು ಹೊಳಪಾಗುತ್ತದಲ್ಲದೆ, ನುಣುಪೂ ಅಲೆಯಲೆಯೂ ಆಗುತ್ತದೆ. ಅಭ್ಯಂಜನಕ್ಕೂ ಅನಂತರದ ಲೇಪನಕ್ಕೂ ವಾಸನೆಯ ಎಣ್ಣೆಯನ್ನು ಬಳಸುವ ವಾಡಿಕೆ ಹಿಂದಿನಿಂದ ಬಂದಿದೆ. ಅದಕ್ಕಾಗಿ ಹರಳೆಣ್ಣೆ ಕೊಬ್ಬರಿ ಎಣ್ಣೆಗಳನ್ನು ಶುದ್ಧೀಕರಿಸಿ ಗುಲಾಬಿ, ಮಲ್ಲಿಗೆ, ಸಂಪಿಗೆ, ಪಾರಿಜಾತ, ಕಮಲ, ಲ್ಯಾವೆಂಡರ್ ಮೊದಲಾದ ವಾಸನೆ ಕಟ್ಟುತ್ತಾರೆ. ಈಚೆಗೆ ಕೇಶಪೋಷಣೆಗೆ ಅಗತ್ಯವಾದ ಅನೇಕ ದ್ರವ್ಯಗಳನ್ನು ಎಣ್ಣೆಗಳಿಗೆ ಸೇರಿಸಲಾಗುತ್ತಿದೆ. ತಲೆಗೆ ಹಾಕಿದ ಎಣ್ಣೆಯನ್ನು ತೆಗೆಯಲು ಸೀಗೆಯ ಪುಡಿ, ಅಂಟುವಾಳ, ಚುಜ್ಜಲು, ಕಡಲೆ ಹಿಟ್ಟು, ಹೆಸರುಹಿಟ್ಟನ್ನು ಬಳಸುವುದು ಸಾಮಾನ್ಯವಾದರೂ ಈಚೆಗೆ ಅನೇಕ ಶ್ಯಾಂಪೂಗಳನ್ನು ಈ ಕೆಲಸಕ್ಕಾಗಿ ತಯಾರಿಸಿದ್ದಾರೆ. ಏನೇ ಆಗಲಿ ತಲೆಗೆ ಸೋಪು ಹಾಕಬಾರದೆಂದು ತಜ್ಞರ ಅಭಿಪ್ರಾಯ. ಭಾರತೀಯರಲ್ಲಿ ಎಣ್ಣೆ ನೀರು ಹಾಕಿಕೊಂಡು ಆದಮೇಲೆ ಒರಸಿದ ತಲೆಗೂದಲನ್ನು ಸಾಂಬ್ರಾಣಿ ಹೊಗೆಯಲ್ಲಿ ಕಾಯಿಸುವ ರೂಢಿ ಇದೆ. ಇದರಿಂದ ಕ್ರಿಮಿನಾಶವಾಗುವುದಲ್ಲದೆ ಕೂದಲು ಬೇಗ ಒಣಗಿ ಬಹುಕಾಲ ಘಮಘಮಿಸುತ್ತಿರುತ್ತದೆ. ಈ ದೃಷ್ಟಿಯಿಂದ ತಲೆಗೆ ಹೂಮುಡಿಯುವುದು, ಅಲಂಕರಣ ಮಾತ್ರವಲ್ಲದೆ ಕೂದಲಿಗೆ ವಾಸನೆಕಟ್ಟುವ ಕ್ರಮವೂ ಆಗುತ್ತದೆ.

ಚಿತ್ರ 1 ಬಿಡಿಮುಡಿ, ಪಟ್ಟದಕಲ್ಲು

ತಲೆಗೂದಲಿಗೆ ಬೆಣ್ಣೆ, ಹಾಲು, ಹಾಲಿನ ಕೆನೆ, ಮೊಸರು–ಇವನ್ನು ಹಾಕಿ ಚೆನ್ನಾಗಿ ತಿಕ್ಕಿ ಸ್ನಾನಮಾಡಿದಲ್ಲಿ ಕೂದಲು ನುಣುಪೂ ಹೊಳಪೂ ಆಗುತ್ತದೆ ಎನ್ನಲಾಗಿದೆ. ಈ ಕ್ರಮ ಹಿಂದೆ ಭಾರತದಲ್ಲಿ ಬಳಕೆಯಲ್ಲಿತ್ತು. ಇಂದಿಗೂ ರಷ್ಯದ ಕೆಲವು ಭಾಗಗಳಲ್ಲಿದು ಪ್ರಚಲಿತವಿದೆ. ಇದರಿಂದ ತಲೆಯಲ್ಲಿ ಹುರುಪೆ ಏಳದು, ತೀಡುವುದರಿಂದ ಕೂದಲು ಬೇರುಗಳು ಗಟ್ಟಿಯಾಗುತ್ತವಾಗಿ ಬೇಗ ಕೂದಲು ಉದುರದು. ಚರ್ಮದ ಮುಖಾಂತರ ಕೆಲವು ಪೋಷಕ ದ್ರವ್ಯಗಳು ಕೂದಲ ಮೂಲವನ್ನು ಸೇರುತ್ತವಾಗಿ ಕೂದಲು ಹೊರವಾಗಿ ಬೆಳೆಯುತ್ತದೆ.

ಅಗತ್ಯಕ್ಕಿಂತ ತಲೆಗೂದಲು ಕಡಿಮೆಯಾದಾಗ ಕೊರೆ ತುಂಬಲು ಕೃತಕಸಾಧನಗಳನ್ನು ಬಳಸುತ್ತಾರೆ. ಚವುಲಿ, ಕುಚ್ಚು, ಸಿಂಬಿ ಮೊದಲಾದವು ಕೆಲವು ಮುಖ್ಯ ಸಾಧನಗಳು, ತಲೆಯಲ್ಲಿ ಕೂದಲೇ ಇಲ್ಲದವರು ಟೋಪನ್‌ಗಳನ್ನು ಬಳಸುತ್ತಾರೆ. ಇಂಥ ಉಪಕರಣಗಳನ್ನು ತಯಾರಿಸುವ ಮಾರುವ ಉದ್ಯಮ ಹೇರಳವಾಗಿ ಬೆಳೆದಿದೆ.

ಚಿತ್ರ 2 ಸೂಗದುರಂಬು, ಐಹೊಳ

**ಬಣ್ಣ ಕಟ್ಟುವುದು :** ವಯಸ್ಸಾದಂತೆಲ್ಲ ಕೂದಲು ಬೆಳ್ಳಗಾಗುವುದು ಸಹಜ. ಕೆಲವರಿಗೆ ವಂಶಪಾರಂಪರ್ಯದಿಂದ ಬಂದ ಗುಣಗಳಿಂದಾಗಿ ಅಕಾಲದಲ್ಲಿ ನೆರೆ ಪ್ರಾಪ್ತವಾಗುವುದುಂಟು. ಹಾಗಾದಾಗ ಬಿಳಿಯ ಕೂದಲನ್ನು ಬಣ್ಣ ಹಾಕುವುದರ ಮೂಲಕ ಕಪ್ಪಾಗಿಸಿಕೊಳ್ಳಲು ಮನುಷ್ಯ ಪ್ರಯತ್ನಿಸುತ್ತ ಬಂದಿದ್ದಾನೆ. ಒಣ ಕೊಬ್ಬರಿಯನ್ನು ಕರ್ರಗೆ ಸುಟ್ಟು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಲೇಪಿಸುತ್ತ ಬಂದರೆ ಕೂದಲು ಕಪ್ಪಾಗುತ್ತದೆಂದು ಹೇಳಲಾಗಿದೆ. ಇತ್ತೀಚೆಗೆ ಈ ಬಗ್ಗೆ ತಯಾರಾದ ಅನೇಕ ಸಿದ್ಧ ಬಣ್ಣಗಳು ಮಾರುಕಟ್ಟೆಗೆ ಬಂದಿವೆ.

**ಕೇಶನಾಶನ :** ಅಗತ್ಯವಾದಷ್ಟು ಕೂದಲನ್ನು ಉಳಿಸಿ ಬೆಳೆಸಿಕೊಳ್ಳುವಂತೆ ಅನಗತ್ಯ ವೆನಿಸಿದವನ್ನು ನಿರ್ಮೂಲ ಮಾಡುವುದೂ ಅಲಂಕರಣದ ಒಂದು ಮುಖ್ಯ ಭಾಗ. ಕಂಕುಳು, ಕಿವಿ, ಕೆಲವೊಮ್ಮೆ ಮೂಗಿನ ದಿಂಡು ಮೊದಲಾದೆಡೆ ಬೆಳೆವ ಕೂದಲು, ಅತಿಯಾಗಿ ಬೆಳೆಯುವ ಹುಬ್ಬುಗೂದಲು, ಕೈಕಾಲುಗಳ ಮೇಲಿನ ಕೂದಲ ಬೆಳವಣಿಗೆ–ಇವನ್ನೂ ಅನೇಕ ವೇಳೆ ಹೆಂಗಸಿನ ಮೂಗಿನ ಕೆಳಗೆ ಮೇಲುದುಟಿಯ ಮೇಲೆ ಕಾಣುವ ರೋಮಗಳನ್ನೂ ತೆಗೆದುಹಾಕಬೇಕಾಗುತ್ತದೆ. ಈ ಬಗ್ಗೆ ಅನೇಕ ಪ್ರಯೋಗಗಳನ್ನು ನಡೆಸಲಾಗಿದೆ. ವಿದ್ಯುಚ್ಛಕ್ತಿಯನ್ನು ಬಳಸಿ ಕೇಶ ಲಂಘನ ಮಾಡುವ ವಿಧಾನ ಈಚೆಗೆ ಜನಪ್ರಿಯವಾಗುತ್ತಿದೆ.

**ಅಲಂಕರಣ ವಿಧಾನ–ಕನ್ನಡಿಗರಲ್ಲಿ :** ಪ್ರಾಚೀನ ಕಾಲದಿಂದ ಕನ್ನಡ ಮಹಿಳೆಯರು ಕೇಶಾಲಂಕಾರ ಕಲೆಯಲ್ಲಿ ನಿಪುಣರೆನಿಸಿಕೊಂಡಿದ್ದಾರೆ. ಪ್ರಾಚೀನ ಕರ್ನಾಟಕದ ಶಿಲ್ಪಕಲೆಯಲ್ಲಿ ಮೂಡಿಬಂದ ಮಹಿಳೆಯರ ಅಲಂಕಾರಗಳನ್ನು ಗಮನಿಸಿದರೆ, ಆ ಕಾಲದ ಕನ್ನಡ ಕಾವ್ಯಗಳನ್ನವಲೋಕಿಸಿದರೆ ಇದು ವೇದ್ಯವಾಗುವುದು. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ದೊರೆಯುವ ಜಡೆಮುಡಿಗಳ ವರ್ಣನೆಯನ್ನು, ಶಿಲ್ಪದ ಮೂರ್ತಿಮಂತ ರೂಪದೊಂದಿಗೆ ಸಮನ್ವಯಗೊಳಿಸಿ ನೋಡಿದಾಗ ಆ ಕಾಲದ ಕೇಶಾಲಂಕಾರದ

ವೈವಿಧ್ಯಮಯ ಚಿತ್ರ ನಮಗೆ ಕಂಡುಬರುತ್ತದೆ. 'ಕುಡಿವುಗುರಿಂದಳಲ್ಲುಮ್ಡಿಯ ಗಂಟು ಸಡಲ್ಚಿಸಿ ಗಂಧತೈಲಮಂ ಕುಡಿತೆಯೊಳಾಂತು ನೆತ್ತಿಯೊಳಗೊತ್ತಿ ಬಿದಿರ್ಚುತೆ ಕೇಶಪಾಶವುಂ' 'ಸಹಜ ದಿವ್ಯಸುಗಂಧದ ಕೇಶಪಾಶಮಂ ಮೃಗಗಂಧಿ ಪೂಸಿದಳುಪಾಸಿತ ಚಂಪಕ ಗಂಧತೈಲಮಂ'

ಇತ್ಯಾದಿ ವರ್ಣನೆಗಳನ್ನು ಓದಿದಾಗ ಅಂದಿನ ಮಹಿಳೆಯರು ಕೇಶಾಲಂಕಾರಕ್ಕಾಗಿ ಗಂಧ, ಚಂಪಕ, ಮಲ್ಲಿಗೆ, ದವನಗಳ ಎಣ್ಣೆಗಳನ್ನು ಉಪಯೋಗಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಚಾಳುಕ್ಯರ ರಾಜಧಾನಿಗಳಾದ ಐಹೊಳೆ, ಪಟ್ಟದಕಲ್ಲುಗಳಲ್ಲಿಯ ದೇವಾಲಯಗಳು ಭಾರತದಲ್ಲಿಯೇ ಅತಿ ಪ್ರಾಚೀನ ದೇವಾಲಯ ಗಳಾಗಿವೆಯಷ್ಟೆ. ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಅನೇಕ ವಿಗ್ರಹಗಳ ಜಡೆಮುಡಿಗಳು ಸುಂದರವಾಗಿವೆ. ಐಹೊಳೆಯ ದುರ್ಗಾ, ಲಾಡಖಾನ ಮೊದಲಾದ ದೇವಾಲಯಗಳ ಕೇಶಾಲಂಕಾರ ವೈವಿಧ್ಯಮಯ ವಾಗಿದೆ. ಅವುಗಳಲ್ಲಿ ಬಿಡುಮುಡಿ, ಸೋಗೆದುರುಂಬು, ಮುತ್ತಿನಮುಡಿ, ಎಳಲ್ಮುಡಿ, ಬಳಲ್ಮುಡಿ, ಗೋಡಂಬಿಮುಡಿಗಳು ಆ ಕಾಲದ ಕೇಶಾಲಂಕಾರಗಳನ್ನು ಎತ್ತಿತೋರುತ್ತವೆ. ಚಾಳುಕ್ಯ ವಿಕ್ರಮಾದಿತ್ಯನ ರಾಣಿಯರಾದ ಲೋಕಮಹಾದೇವಿ, ತ್ರೈಲೋಕ್ಯಮಹಾದೇವಿಯರು ಪಟ್ಟದಕಲ್ಲಿನಲ್ಲಿ ಕಟ್ಟಿಸಿದ ದೇವಾಲಯಗಳು ಲೋಕೇಶ್ವರ, ತ್ರೈಲೋಕೇಶ್ವರ ದೇವಾಲಯಗಳೆಂದು ಪ್ರಸಿದ್ಧ ವಾಗಿವೆಯಷ್ಟೇ. ಈಗ ಆ ದೇವಾಲಯಗಳಿಗೆ ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯ ಗಳೆನ್ನುವರು. ಶಿಲ್ಪಕಲೆಯ ಆಗರವಾಗಿರುವ ಆ ದೇವಾಲಯ ಗಳಲ್ಲಿ ಶಿಲಾಬಾಲಿಕೆಯರು ಕಟ್ಟಿದ ಬಿಡುಮುಡಿಯನ್ನು ಕಾಣಬಹುದು.

ಚಿತ್ರ 3 ಮುತ್ತಿನ ಮುಡಿ–ಪಟ್ಟದಕಲ್ಲಿನ ತ್ರಿಲೋಕೇಶ್ವರ ದೇವಾಲಯ

1. ಪ್ರಾಚೀನ ಕೇಶಾಲಂಕಾರ ಗಳಲ್ಲಿನಂತೆ ಬಿಡುಮುಡಿ ಕಟ್ಟುವುದು ಕಠಿಣವೆನಿಸುವುದೇನೋ ನಿಜ; ಆದರೆ ಅದು ಕಲಾಪೂರ್ಣವಾಗಿದೆ. ಮೊದಲು ಒಂದು ಸಿಂಬಿ ಇಟ್ಟುದೊಡ್ಡ ಗಂಟನ್ನು ಕಟ್ಟಬೇಕು. ಉಳಿದರ್ಧ ಕೂದಲನ್ನು ಓರಣವಾಗಿ ಬಾಚಿ ಅರ್ಧಚಂದ್ರಾಕಾರದ ಸಿಂಬಿಯನ್ನು ಒಳಗಿಟ್ಟು ಸುತ್ತಲೂ ಕೂದಲನ್ನು ಸುತ್ತಿ ಅದನ್ನು ಮುಡಿಯ ಕೆಳಭಾಗದಿಂದ ನೆಟ್ಟಗೆ ಮುಡಿಯವರೆಗೆ ಬರುವಂತೆ ಸುತ್ತಿ ಪಿನ್ನುಗಳನ್ನು ಹಾಕಿದರೆ ಬಿಡುಮುಡಿ ಸಿದ್ಧವಾಗುತ್ತದೆ.

ಚಿತ್ರ 4 ಗೋಡಂಬಿ ಮುಡಿ, ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯ

2. ಮುಡಿ ನವಿಲಂತೆ ನರ್ತಿಕುಂ ಎನ್ನುವಂತೆ ನವಿಲು ಗರಿಗೆದರಿ ಕುಣಿಯುತ್ತಿರುವಂತೆ ತೋರುವ ಸೋಗೆದುರುಂಬನ್ನು ಐಹೊಳೆಯ ದೇವಾಲಯಗಳಲ್ಲಿ ಕಾಣಬಹುದು.

ನೆತ್ತಿಯ ಮೇಲಿನ ಕೂದಲುಗಳನ್ನು ಮಾತ್ರ ತೆಗೆದುಕೊಂಡು ಸಣ್ಣ ತುರುಬೊಂದನ್ನು ನೆತ್ತಿಯ ಮೇಲೆ ಕಟ್ಟಿ ಹಿಂಭಾಗದ ಕೂದಲನ್ನು ಚೆನ್ನಾಗಿ ಬಾಚಿ ಅನೇಕ ವಿಭಾಗಮಾಡಿ ನವಿಲುಗರೆಯಂತೆ ಒಂದರ ಮೇಲೊಂದು ಗರಿ ಬರುವ ಹಾಗೆ ತಲೆಯ ಸುತ್ತಲೂ ಕಟ್ಟಬೇಕು. ಈ ಸೋಗೆದುರುಬು ಮಹಿಳೆಯರ ಕೇಶಾಲಂಕಾರ ನಿಪುಣತೆಗೆ ಸಾಕ್ಷಿಯಾಗಿದೆ.

ಚಿತ್ರ 5 ಎಳಲ್ಮುಡಿ, ಪಟ್ಟದಕಲ್ಲಿನ ಪಾಪನಾಥ ದೇವಾಲಯ

3. ಆ ಕಾಲದ ಅರಮನೆಗಳಲ್ಲಿ ಮುತ್ತು ರಾಶಿರಾಶಿಯಾಗಿರುತ್ತಿತ್ತು. ಮಹಿಳೆಯರು ಮುಡಿಯ ಅಲಂಕಾರದ ಸಾಧನವಾಗಿ ಮುತ್ತಿನ ಎಳೆಗಳನ್ನುಪಯೋಗಿಸುತ್ತಿದ್ದರು. ಪಟ್ಟದಕಲ್ಲಿನ ತ್ರಿಲೋಕೇಶ್ವರ ದೇವಾಲಯದಲ್ಲಿರುವ ಶಿಲ್ಪಸುಂದರಿ ಮುತ್ತಿನ ಮುಡಿ ಯಿಂದಲಂಕೃತಳಾಗಿದ್ದಾಳೆ. ತಲೆಯ ಸುತ್ತಲೂ ಮೂರೆಳೆಯ ಮುತ್ತಿನ ಸರವನ್ನು ಅಂದವಾಗಿ ಸುತ್ತಲಾಗಿದೆ. ನೆತ್ತಿಯ ಮೇಲೆ ಮುತ್ತಿನ ಗೊನೆಯನ್ನಿಟ್ಟು ಎಲ್ಲ ಕೂದಲನ್ನೂ ತಲೆಯ ಎಡಭಾಗದಿಂದ ಮುರಿಗೆ ಮಾಡಿ ಮುತ್ತಿನ ಗೊನೆಯ ಸುತ್ತಲೂ ಎತ್ತಿ ಸುತ್ತಿದ್ದಾರೆ. ಆ ಮುಡಿ ಗಟ್ಟಿಯಾಗಿರಲು ಮುತ್ತಿನ ಎರಡೆಳೆಗಳನ್ನು ಕಲಾತ್ಮಕವಾಗಿ ಸುತ್ತ ಸುತ್ತಿದ್ದಾರೆ. ತೋರಮುಡಿಯೊಳೆ ಮುತ್ತಿನ ಶೃಂಗಾರವೊಪ್ಪಿತ್ತು–ಎಂಬಂತೆ ತೋರುವುದು ಮುತ್ತಿನ ಮುಡಿ.

4. ಅದೇ ದೇವಾಲಯದಲ್ಲಿರುವ ಇನ್ನೊರ್ವ ಶಿಲ್ಪಸುಂದರಿ ತನ್ನ ದುಂಡಗಿನ ಮುಖಕ್ಕೊಪ್ಪುವಂತೆ ಗೋಡಂಬಿಮುಡಿ ಕಟ್ಟಿದ್ದಾಳೆ. ತಲೆಗೂದಲನ್ನೆಲ್ಲ ಬಾಚಿ, ಒಳಗೆ ಗೋಡಂಬಿಯಾಕಾರದ ಸಿಂಬಿಯನ್ನಿಟ್ಟು ಅದರ ಸುತ್ತಲೂ ಕೂದಲನ್ನು ಸುತ್ತಿ ತಲೆಯ ಮೇಲ್ಭಾಗದಲ್ಲಿ ಎದ್ದುಕಾಣುವಂತೆ ಕಟ್ಟಿದ ಈ ಮುಡಿಗೆ ಆಭರಣಗಳ ಅವಶ್ಯಕತೆಯಿಲ್ಲ. ನಾರಿಗೆ ಮುಡಿಯೇ ಶೃಂಗಾರವಾಗಿದೆ.

ಚಿತ್ರ 6 ತೆಕ್ಕೆದುರುಂಬು, ವಿಜಯನಗರದ ವಿರೂಪಾಕ್ಷ ವಿಜಯವಿಠ್ಠಲ ದೇವಾಲಯ

5. ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಶಿಲಾಬಾಲಿಕೆಯರಲ್ಲಿ ಕಂಡುಬರುವ ಮುಡಿಗಳಲ್ಲಿ ಎಳಲ್ಮುಡಿ ಸುಂದರವಾಗಿದೆ. ಅರ್ಧಚಂದ್ರಾಕೃತಿಯ ಸಿಂಬಿಗೆ ಕೂದಲನ್ನು ಸುತ್ತಿ ತಲೆಯ ಮೇಲ್ಭಾಗದಲ್ಲಿ ಎದ್ದುಕಾಣುವಂತೆ ಕಟ್ಟಿದ ಮುಡಿಯ ಮಧ್ಯದಲ್ಲೊಂದು ಹರಳು ಹುಗಿಸಿದ ಕೇಶಾಭರಣವಿದೆ. ಹಳೇಬೀಡು ಬೇಲೂರು ಶಿಲಾಬಾಲಿಕೆಯರ ಮುಡಿಗಳು, ಅಜಂತ ಚಿತ್ರಗಳ ಮುಡಿಗಳು ಪ್ರಸಿದ್ಧವಾಗಿವೆ. ಈ ಮುಡಿಗಳು ತಲೆಗಿಂತಲೂ ಎತ್ತರವಾಗಿ ಕಟ್ಟಲಾಗಿದೆ. ಒಂದು ಸುತ್ತು ಜಡೆಯನ್ನು ಚಕ್ರಾಕಾರವಾಗಿ ಸುತ್ತಿದ್ದಾರೆ. ಅದರಸುತ್ತಲೂ ಮಲ್ಲಿಗೆಮಾಲೆ, ಅದರ ಮೇಲೆ ಕೂದಲನ್ನು ದುಂಡಗೆ ಸುತ್ತಿದ್ದಾರೆ. ಮತ್ತೊಂದು ಜಡೆಯನ್ನು ಅದರ ಸುತ್ತಲೂ ಸುತ್ತಲಾಗಿದೆ. ಬೀಸಣಿಕೆಯ ಆಕಾರದಲ್ಲಿ ಜಡೆಮುಡಿ ಅಂದವಾಗಿ ತೋರುತ್ತದೆ. ಜಡೆಗೆ ಕಟ್ಟಿದ ಜರದ ಗೊಂಡೆಗಳು ಹಿಂಭಾಗದಲ್ಲಿ ನರ್ತಿಸುತ್ತಿವೆ. ಈ ಮುಡಿಗೆ ಸಿರಿಮುಡಿ, ಜಡೆಮುಡಿ, ಇಲ್ಲವೆ ಬೇಲೂರಮುಡಿ, ಬೀಸಣಿಕೆಮುಡಿ ಎನ್ನಬಹುದು. ವಿಜಯನಗರದ ಅರಸರ ಕಾಲದ ಶಿಲ್ಪಸುಂದರಿಯರ ಮುಡಿಗಳೆಲ್ಲ ಬಂಬಲ್ಮುಡಿ ಅಥವಾ ತೆಕ್ಕೆದುರುಂಬುಗಳಾಗಿವೆ. ಬಂಬಲ್ಮುಡಿ ಎಂದರೆ

ದೊಡ್ಡಮುಡಿ; ತೆಕ್ಕೆದುರುಬೂ ಅದೇ ಅರ್ಥವುಳ್ಳದ್ದು. ದೊಡ್ಡ ಅಳತೆಯ ಗಂಗಾವನವನ್ನು (ಬನ್) ಕೂದಲಿನ ಮಧ್ಯದಲ್ಲಿಟ್ಟು ದೊಡ್ಡ ಮುಡಿಯನ್ನು ಕಟ್ಟಿದ್ದಾರೆ. ಆ ಕಾಲದ

ಚಿತ್ರ 7 ಕರ್ಣಪೂರದಿಂದೊಪ್ಪುವ ತೆಕ್ಕೆದುರುಬು

ಶಿಲ್ಪಗಳಲ್ಲಿ ಈ ಮುಡಿಯೊಂದೇ ಎದ್ದುತೋರುವುದು. ವಿಜಯನಗರದಲ್ಲಷ್ಟೇ ಅಲ್ಲ ಆ ಅರಸರು ಕಟ್ಟಿಸಿದ ದೇವಾಲಯಗಳಲ್ಲೆಲ್ಲ ಬಂಬಲ್ಮುಡಿಯೇ ಕಂಡುಬರುತ್ತದೆ.

ಆಧುನಿಕ ಕಾಲದ ಕೇಶಾಲಂಕಾರ ದಿನಕ್ಕೊಂದು ಬಗೆಯಾಗಿ ಮಾರ್ಪಡುತ್ತಿದೆ. ಇಂದಿನ ಮಹಿಳೆಯರು ಕೇಶಾಲಂಕಾರಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಶಿಲಾಬಾಲಿಕೆಯರ ಜಡೆಮುಡಿಗಳು ಚಲನಚಿತ್ರ ಜಗತ್ತಿಗೆ ಪ್ರವೇಶಿಸಿ ಆ ಮೂಲಕ ಎಲ್ಲೆಡೆ ಪ್ರಸಾರವಾಗುತ್ತಿವೆ. ಮಹಿಳೆಯರ ಸೌಂದರ್ಯಾಭಿವೃದ್ಧಿಗೆ ಕೇಶಾಲಂಕಾರ ಒಂದು ಮಹತ್ತ್ವದ ಸಾಧನವಾಗಿದೆ.

ಮುಖದ ಆಕೃತಿಗೆ, ದೇಹದ ಗಾತ್ರಕ್ಕೆ, ಎತ್ತರಕ್ಕೆ ತಕ್ಕಂತೆ ಮುಡಿ ಕಟ್ಟುವ ಕಲೆ ಬೆಳೆದುಬರುತ್ತಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕುಶಲ ಕೇಶಾಲಂಕಾರ ಕಲೆಯಲ್ಲಿ ನಿಪುಣೆಯರಾದವರು ಮುಡಿಕಟ್ಟುವ ಉದ್ಯೋಗ ಕೈಗೊಂಡಿದ್ದಾರೆ. ಅಂಥವರು ಮುಡಿಕಟ್ಟಲು ವಿದ್ಯುತ್ ಸಲಕರಣೆಗಳನ್ನೂ ಬಳಸುತ್ತಾರೆ. ಅವರು ಪರಿಶ್ರಮಪಟ್ಟು ಕಟ್ಟುವ ಮುಡಿಗಳನ್ನು ನೋಡುವುದೆಂದರೆ ಕಣ್ಣಿಗೊಂದು ಹಬ್ಬ.

ಪಟ್ಟದಕಲ್ಲು, ಅಜಂತ, ಬೇಲೂರು ಮುಡಿಗಳ ಅನುಕರಣೆ ಚಿತ್ರಪ್ರಪಂಚದಲ್ಲಿ ಪ್ರಾರಂಭವಾಗಿ ಆಧುನಿಕ ಮಹಿಳೆಯರ ಕೇಶಾಲಂಕಾರಕ್ಕೆ ಮಾರ್ಗದರ್ಶಕವಾಗಿದೆ. ಇಂದಿನ ಮಹಿಳೆಯರು ಪೇಟೆಯಲ್ಲಿ ದೊರೆಯುವ ಗಂಗಾವನ, ಸಿಂಬಿಗಳನ್ನು ಬಳಸುತ್ತಾರೆ. ಅವು ಚಕ್ರಾಕಾರ, ಅರ್ಧಚಂದ್ರಾಕಾರ ಹಾಗೂ ದೊಡ್ಡಮುಡಿಗಳ ಆಕಾರದಲ್ಲಿ ದೊರೆಯುತ್ತವೆ. ಅಂಥ ಸಿಂಬಿಗಳನ್ನು ಉಪಯೋಗಿಸಿ ಚಿತ್ತಾಕರ್ಷಕವಾಗಿ, ವೈವಿಧ್ಯಪೂರ್ಣವಾಗಿ ನಾನಾರೀತಿಯಾಗಿ ಮುಡಿಗಳನ್ನು ಕಟ್ಟುತ್ತಾರೆ. ದುಂಡಗಿನ ಮುಖಕ್ಕೆ ತಲೆಗಿಂತ ಎತ್ತರವಾಗಿ ಕಾಣುವ ಮುಡಿ ಒಪ್ಪುತ್ತದೆ. ತಲೆಯ ಹಿಂಭಾಗದಲ್ಲಿ ಅರ್ಧಚಂದ್ರಾಕಾರದ ಗಂಗಾವನ ಹಾಕಿ ಆ ಭಾಗದ ಕೂದಲನ್ನು ಏರಿಸಿ ಬಾಚಬೇಕು. ಮುಂದೆ ನಡು ಬೈತಲೆ ಇರಬೇಕು. ನೆತ್ತಿಯ ಹಿಂಭಾಗದ ಕೂದಲನ್ನು ಕೂಡಿಸಿ ಅಲ್ಲೊಂದು ದೊಡ್ಡ ಗಂಗಾವನ ಹಾಕಿ ಮುಡಿ ಕಟ್ಟಿದರೆ ದುಂಡಗಿನ ಮುಖದ ಅಂದ ಹೆಚ್ಚುವುದು. ಅಂಡಾಕೃತಿ ಮುಖವುಳ್ಳವರು ಚಕ್ರಾಕಾರದ ದೊಡ್ಡ ಅಳತೆಯ ಗಂಗಾವನ ಹಾಕಿ ಬಳಲ್ಮುಡಿಯಂತೆ ಕಾಣುವ ಮುಡಿಯನ್ನು ಕಟ್ಟಿದರೆ ಒಪ್ಪುತ್ತದೆ. ಎತ್ತರ ಹೆಚ್ಚಾಗಿರುವವರು ಉದ್ದವಾಗಿರುವ ಗಂಗಾವನ ಹಾಕಿ ಎಡಭಾಗದಿಂದ ಆ ಗಂಗಾವನಕ್ಕೆ ಕೂದಲುಗಳನ್ನು ಸುತ್ತಿ ಮುಡಿ ತಲೆಯ ಕೆಳಭಾಗದಲ್ಲಿ ಬರುವಂತೆ ಅಂದರೆ ಬಳಲ್ಮುಡಿಯಂತೆ ಕಟ್ಟಿದರೆ ಅವರ ನಿಲುವು ಹೆಚ್ಚು ಎತ್ತರವಾಗಿ ಕಾಣುವುದಿಲ್ಲ. ಚೌಕೋನಾಕೃತಿಯ ಮುಖವುಳ್ಳವರು ಸಮವಾಗಿ ಬಾಚಿಕೊಂಡು ಮುಡಿ ಅಗಲವಾಗಿ

ಚಿತ್ರ 8 ತಲೆಗಿಂತ ಎತ್ತರದಲ್ಲಿ ಕಟ್ಟುವ ತೋರಮುಡಿ

ಕಾಣುವಂತೆ ಗಂಗಾವನ ಹಾಕಿ ಅರ್ಧಕೂದಲಿನಿಂದ ದುಂಡಗಿನ ಮುಡಿ ಕಟ್ಟಬೇಕು. ಉಳಿದರ್ಧ ಕೂದಲನ್ನು ಜಡೆ ಹೆಣೆದು ಆ ಮುಡಿಯ ಸುತ್ತಲೂ ಸುತ್ತಬೇಕು.

ಚಿತ್ರ 9 ಸಂಖ್ಯೆ 8ರಂತೆ ಇಬ್ಭಾಗವಾಗಿ ತೋರುವ ಮುಡಿ. ನಾಗರ ನಡುವಿರದೆ ತುರುಬಿನ ಮೇಲಿದೆ. ಹೂಮಾಲೆ ಅಕ್ಕಪಕ್ಕಗಳಲ್ಲಿದೆ

ಮೇಲೊಂದು ಅರೆಬಿರಿದ ಮಲ್ಲಿಗೆಮಾಲೆ ಹಾಕಿದರೆ ಜಡೆಮುಡಿಯ ಅಂದ ಹೆಚ್ಚುವುದು. ಇತ್ತೀಚೆಗೆ ಮುಖದ ಗಾತ್ರಕ್ಕಿಂತ ದೊಡ್ಡದಾದ ಮುಡಿಯನ್ನು ತಲೆಗಿಂತ ಎತ್ತರವಾಗಿ ಕಾಣುವಂತೆ ಕಟ್ಟುವರು. ತರುಣಿಯರು ಎರಡು ಜಡೆ ಹೆಣೆದುಕೊಳ್ಳುವರು. ಇಲ್ಲವೆ

ಬಾಬ್‌ಕಟ್ ಮಾಡಿಸಿಕೊಂಡು ನಡುಬೈತಲೆ ತೆಗೆಯುವರು. ಪೋನೀಟೇಲ್ ಕಟ್ಟುವುದೂ ವಾಡಿಕೆಯಾಗಿದೆ.

ಜಡೆ ಹೆಣೆಯುವುದು ಒಂದು ವಿಶಿಷ್ಟ ಕಲೆ. ಬೈತಲೆ ನಡುವಿಗೆ ತೆಗೆಯುವವರಿದ್ದಾರೆ. ಎಡಕ್ಕೋ, ಬಲಕ್ಕೋ ತೆಗೆಯುವವರಿದ್ದಾರೆ. ಸ್ವಲ್ಪವೇ ನಡುಬೈತಲೆ ತೆಗೆದು ಕೂದಲನ್ನೆಲ್ಲ ಹಿಂದಕ್ಕೆ ಬಾಚುವವರಿದ್ದಾರೆ. ಕೆಲವರು ಹಾಗೆಯೇ ಎಲ್ಲ ತಲೆಗೂದಲನ್ನು ಬೈತಲೆ ತೆಗೆಯದೆ ಹಿಂದಕ್ಕೆ ಬಾಚುತ್ತಾರೆ. ಜಡೆ ಒಂದೇ ಆದಾಗ ಮೂರು ಕಾಲಿನದಾಗಬಹುದು, ಐದು ಕಾಲಿನದಾಗಬಹುದು. ಎರಡು ಜಡೆ ಹಾಕುವುದು ಬಾಲ್ಯ ಯೌವನಗಳಲ್ಲಿ ಸಹಜ. ಜಡೆ ಬಿಗಿಯಾಗಿರಬಹುದು, ಸಡಿಲವಾಗಿರಬಹುದು. ಎರಡು ಜಡೆಗಳ ತುದಿಗಳನ್ನೂ ಎತ್ತಿ ಜಡೆ ಮೂಲಗಳಲ್ಲಿ ಗಂಟುಕಟ್ಟುವ ವಾಡಿಕೆಯೂ ಇದೆ. ನೀಳವಾದ ಜಡೆಯ ತುದಿಯಲ್ಲೆರಡು ಗೊಂಡೆ ಕಟ್ಟಿದರೆ ಒಂದು ಬಗೆಯ ಅಲಂಕರಣವಾದರೆ ಜಡೆಯನ್ನು ಅರ್ಧವೇ ಹೆಣೆದು ಅದರ ಮೂಲದಲ್ಲಿ ಒಂದು ಉಣ್ಣೆಯ ದಪ್ಪದಾರ ಬಿಗಿದರೆ ಮತ್ತೊಂದು ಅಲಂಕರಣವಾಗುತ್ತದೆ. ನಿತಂಬದವರೆಗೂ ನೀಳವಾಗಿ ಬಳಕುತ್ತಿರುವ ಜಡೆ ಎಲ್ಲರಿಗೂ ಪ್ರಿಯವೇ. ಬೇಕೆಂದವರು ಮಲ್ಲಿಗೆ ಮೊಗ್ಗನ್ನು ಹೆಣೆದು ನಾಗರ ಜಡೆ ಕಟ್ಟುತ್ತಾರೆ. ಕೇದಗೆ ಹೂವಿನ ಜಡೆ ಹಾಕುವವರಿದ್ದಾರೆ.

ಚಿತ್ರ 10 ಮುಡಿಯ ಸುತ್ತ ಜಡೆ ಬಂದು ಮೇಲೆ ಮಲ್ಲಿಗೆ ಮಾಲೆ ಸೂಡಿದ ಕೇಶಾಲಂಕರಣ

ಉಟ್ಟ ಸೀರೆಯ ಬಣ್ಣ, ಮುಡಿದ ಹೂವಿನ ಬಣ್ಣ ಒಂದೇ ಆಗಿರುವಂತೆ ಬಣ್ಣದ ಹೊಂದಾಣಿಕೆಯನ್ನು ಸಾಧಿಸುವ ಪ್ರಯತ್ನ ನಡೆದಿದೆ. ಮೊದಲಿನ ಕಾಲದಲ್ಲಿ ಬಣ್ಣ ಬಣ್ಣದ ಹೂಮಾಲೆಯನ್ನು ಮುಡಿಯ ಸುತ್ತಲೂ ಕಟ್ಟಿಕೊಳ್ಳುವುದು ಅಲಂಕಾರವೆನಿಸಿತ್ತು. ಈಗ ಹೂಮಾಲೆಗಿಂತ ಬಿಡಿಹೂವನ್ನು ಮುಡಿದುಕೊಳ್ಳುವರು. ಅದು ಜಡೆಯ ನಡುವಿಗೆ ಇರಬಹುದು; ಇಲ್ಲವೆ ಕಿವಿಯ ಬಳಿ ಕರ್ಣಪೂರವಾಗಿರಬಹುದು.

ಕೇಶಾಲಂಕರಣಕ್ಕೆ ತೈಲ, ಪುಷ್ಪಗಳಂತೆ ಹಲಕೆಲವು ಆಭರಣಗಳ ಅಗತ್ಯವೂ ಇದೆ. ನೆತ್ತಿಯಲ್ಲಿ ಹಾಕುವ ನಾಗರ, ಜಡೆಯ ಮೇಲರ್ಧದ ಮೇಲಕ್ಕೆ ಧರಿಸುವ ಜಡೆಯಲ್ಲೆ, ತುರುಬಿನ ನಡುವೆ, ಓರೆಯಲ್ಲಿ ಧರಿಸುವ ತುರುಬು ಹೂ, ಜಡೆಯ ತುದಿಯಲ್ಲಿ ತೊನೆದಾಡುವಂತೆ ಕಟ್ಟುವ ಗೊಂಡೆ ಇವು ಕೆಲವು ಪ್ರಸಿದ್ಧ ಆಭರಣಗಳು. ಇವುಗಳ ಮಾಟ ಮಾದರಿಗಳು ಕಾಲಕಾಲಕ್ಕೆ ವ್ಯತ್ಯಾಸವಾಗುತ್ತ ಬಂದಿವೆ. ನಾಗರ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಿದ್ದರೂ ಉಳಿದ ಆಭರಣಗಳು ಕೆಲವು ಮಾರ್ಪಾಟಿನೊಂದಿಗೆ ನಡೆದುಬರುತ್ತಿವೆ.

(ಎಸ್‌ಎಚ್.ಎಂ.)

**ಕೇಶಿಧ್ವಜ :** ಕುಶಧ್ವಜನ ಮಗನಾದ ಧರ್ಮಧ್ವಜನ ಹಿರಿಯಮಗ. ವಿದೇಹ ದೇಶದ ರಾಜ. ದುರಾಸೆಯಿಂದ ಚಿಕ್ಕಪ್ಪನಾದ ಖಾಂಡಿಕ್ಯನ ಮೇಲೆ ಬಿದ್ದು ಆತನ ರಾಜ್ಯಾಪಹರಣಮಾಡಿದ. ಸೋತ ಖಾಂಡಿಕ್ಯ ಅರಣ್ಯವಾಸಿಯಾಗಿ ತಪೋನಿಷ್ಠೆಯಿಂದ ಜೀವನ ನಡೆಸುತ್ತಿದ್ದ.

ಒಮ್ಮೆ ಕೇಶಿಧ್ವಜ ಯಜ್ಞದೀಕ್ಷಿತನಾಗಿ ಯಾಗದ ಕುದುರೆಯನ್ನು ದೇಶಸಂಚಾರಕ್ಕಾಗಿ ಕಳುಹಿಸಿದಾಗ ಅರಣ್ಯ ಮಧ್ಯದಲ್ಲಿ ಅದು ಹುಲಿಯ ಬಾಯಿಗೆ ತುತ್ತಾಯಿತು. ಕಿಂಕರ್ತವ್ಯತಾಮೂಢನಾದ ಕೇಶಿಧ್ವಜ ತಪೋನಿಷ್ಠನಾದ ತನ್ನ ಚಿಕ್ಕಪ್ಪನ ಬಳಿಗೆ ಸಲಹೆಗಾಗಿ ಬಂದ. ಪೂರ್ವದ್ವೇಷಾಸೂಯೆಗಳೆಲ್ಲವನ್ನೂ ಮರೆತ ಖಾಂಡಿಕ್ಯ ಕೇಶಿಧ್ವಜನಿಗೆ ಯುಕ್ತ ಮಾರ್ಗದರ್ಶನ ಮಾಡಿದ. ಈ ಉಪಕಾರಕ್ಕಾಗಿ ಖಾಂಡಿಕ್ಯನಿಗೆ ಗುರುದಕ್ಷಿಣೆ ರೂಪದಲ್ಲಿ ಏನು ಬೇಕಾದರೂ ಕೊಡಲು ಸಿದ್ಧನಿರುವುದಾಗಿ ಕೇಶಿಧ್ವಜ ತಿಳಿಸಲು ಖಾಂಡಿಕ್ಯ ರಾಜ್ಯಕೋಶಾದಿಗಳಾವುದನ್ನೂ ಆಶಿಸದೆ ಆತನಿಂದ ಕೆಲವು ಯೋಗ ರಹಸ್ಯಗಳನ್ನು ಕೇಳಿ ತಿಳಿದುಕೊಂಡ.

(ಸಿ.ಜಿ.ಪಿ.)

**ಕೇಶಿರಾಜ :** ಸು.1260. ಶಬ್ದಮಣಿದರ್ಪಣಂ ಎಂಬ ಪ್ರಸಿದ್ಧವಾದ ಹಳಗನ್ನಡ ವ್ಯಾಕರಣ ಗ್ರಂಥವನ್ನು ಬರೆದ ಶಾಸ್ತ್ರಕಾರ. ಅದೇ ಗ್ರಂಥದ ಕೊನೆಯ ಒಂದು ಪದ್ಯದಿಂದ ಈ ಶಾಸ್ತ್ರಕಾರ ಚೋಳಪಾಲಕ ಚರಿತಂ. ಶ್ರೀ ಚಿತ್ರಮಾಲೆ, ಸುಭದ್ರಾಹರಣಂ, ಪ್ರಬೋಧಚಂದ್ರಂ, ಕಿರಾತಂ ಎಂಬ ಬೇರೆ ಐದು ಗ್ರಂಥಗಳನ್ನೂ ಬರೆದಿರುವಂತೆ ತಿಳಿದು ಬಂದಿದೆ. ಆದರೆ ಶಬ್ದಮಣಿದರ್ಪಣದ ಹೊರತು ಈತನ ಬೇರೆ ಯಾವ ಗ್ರಂಥವೂ ಈ ತನಕ ನಮಗೆ ದೊರೆತಿಲ್ಲ. ಆ ಕೃತಿಗಳ ಕೆಲವು ಪದ್ಯಗಳಾದರೂ ಕವಿಯ ತಂದೆ ಚಿದಾನಂದ ಮಲ್ಲಿಕಾರ್ಜುನ ಕವಿಯ (ಸು.1245) ಸೂಕ್ತಿಸುಧಾರ್ಣವಂ ಎಂಬ ಸಂಕಲನಗ್ರಂಥದಲ್ಲಿ ಸೇರಿಕೊಂಡಿರುವ ಸಾಧ್ಯತೆಯಿದೆಯೆಂದು ವಿದ್ವಾಂಸರು ಸಕಾರಣವಾಗಿಯೇ ಊಹಿಸಿದ್ದಾರೆ. ಹೊಯ್ಸಳ ಇಮ್ಮಡಿ ನರಸಿಂಹನಿಗೆ (1220–35) ಸಂಬಂಧಿಸಿದ ಅಲ್ಲಿಯ ಕೆಲವು ಪದ್ಯಗಳು ಕೇಶಿರಾಜನ ಚೋಳಪಾಲಕ ಚರಿತೆಯದಾಗಿರಬಹುದು ಎಂಬುದೂ ಅಲ್ಲಿಯೇ ದೊರೆಯುವ ಆತನ ಸ್ತುತಿರೂಪವಾದ ಒಂದು ಪದ್ಯ ಆತನೇ ಬರೆದುದಾಗಿರಬಹುದು ಎಂಬುದೂ ಅವರ ಊಹೆಗೆ ಅವಕಾಶ ಮಾಡಿಕೊಟ್ಟಿರುವ ಕಾರಣಗಳಲ್ಲಿ ಮುಖ್ಯವಾದುವು. ಈಗಂತೂ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ, ಕೇಶಿರಾಜ ವೈಯಾಕರಣನಾಗಿ ಪ್ರಸಿದ್ಧನಾಗಿದ್ದಾನೆ.

ಕೇಶಿರಾಜ ಜೈನ. ಕೆಲವರು ವಿದ್ವಾಂಸರು ಈತ ಸ್ಮಾರ್ತಬ್ರಾಹ್ಮಣನೆಂದು ವಾದಿಸಿರುವುದುಂಟು. ಆದರೆ ಅದಕ್ಕೆ ಸರಿಯಾದ ಆಧಾರಗಳಿಲ್ಲ. ಈತ ಪ್ರಸಿದ್ಧ ಕವಿಗಳ ಹಾಗೂ ಪ್ರತಿಷ್ಠಿತ ವಿದ್ವಾಂಸರ ಮನೆತನಕ್ಕೆ ಸೇರಿದವ. ತಂದೆ ಶ್ರೇಷ್ಠ ಹಾಗೂ ಆದ್ಯ ಹಳಗನ್ನಡ ಸಂಕಲನಗ್ರಂಥ ಸೂಕ್ತಿಸುಧಾರ್ಣವದ ಕರ್ತೃ ಚಿದಾನಂದ ಮಲ್ಲಿಕಾರ್ಜುನ; ತಾಯಿಯ ತಂದೆ ಹೊಯ್ಸಳ ಇಮ್ಮಡಿ ನರಸಿಂಹನಲ್ಲಿ ಕಟಕೋಪಾಧ್ಯಾಯನೂ ಜೈನ ಪುರಾಣಕರ್ತೃವೂ ಆಗಿದ್ದ ಕವಿಸುಮನೋಬಾಣ; ಸೋದರಮಾವ ಜನ್ನಕವಿ. ಇವರ ನಡುವೆ ಬೆಳೆದು ಕಲಿತು ಕೇಶಿರಾಜ ಕವಿಯೂ ಪಂಡಿತನೂ ಆದುದು ಸಹಜವೇ ಆಗಿದೆ. ಈತ ಎಂಥ ಒಳ್ಳೆಯ ವಿದ್ವಾಂಸನಾಗಿದ್ದನೆಂಬುದನ್ನೂ ವಿದ್ವಾಂಸನಾಗಿಯೂ ಎಷ್ಟರಮಟ್ಟಿಗೆ ಉತ್ಕೃಷ್ಟ ಕವಿಮನೋಧರ್ಮವನ್ನು ಹೊಂದಿದ್ದ ರಸಿಕನಾಗಿದ್ದನೆಂಬುದನ್ನೂ ಶಬ್ದಮಣಿದರ್ಪದಿಂದಲೇ ತಿಳಿಯಬಹುದು. ಈತ ತನಗೆ ಹಿಂದಿನ ಪ್ರಾಚೀನ ಕನ್ನಡ ಕಾವ್ಯಪುರಾಣಗಳನ್ನೂ ವ್ಯಾಕರಣಾದಿ ಶಾಸ್ತ್ರಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದುದಕ್ಕೆ ಇವನ ವ್ಯಾಕರಣ ಗ್ರಂಥ ಒಳ್ಳೆಯ ಸಾಕ್ಷ್ಯವಾಗಿದೆ. ಲಾಕ್ಷಣಿಕನಾಗಿ ಇವನ ಖ್ಯಾತಿಯನ್ನು ಕವಿಮಲ್ಲ (ಸು.1400) 'ನಿರುತಂ ಕರ್ನಾಟಕದೊಳ್ । ಪರಿಕಿಸೆ ಶಬ್ದಗ್ನ ನಾವನೊರ್ವನೇ ಲೋಕ ॥ ಕ್ಕರಿದಲ್ತೆ ಭಾಷು ಕವಿ ಕುಂ ।ಜರ ಕೇಶವರಾಜ ಗೋಚರಿಸು ಮನ್ನನದೊಳ್' ಎಂದೂ ಈಶ್ವರಕವಿ (ಸು.1450) 'ಲಕ್ಷಣ ಶಿಕ್ಷಾಚಾರ್ಯ ಸು । ಲಕ್ಷಣಿ ಕೇಶವ ' ಎಂದೂ ಕೊಂಡಾಡಿದ್ದಾರೆ. ನಿಟ್ಟೂರು ನಂಜಯ್ಯ(ಸು.1725) ಬರೆದ ಟೀಕೆಯೂ ಲಿಂಗಣಾರಾಧ್ಯ ಬರೆದ ವೃತ್ತಿಯೂ ಕೆಲವು ಪ್ರಾಚೀನ ಅರ್ವಾಚೀನ ವ್ಯಾಖ್ಯಾನಗಳು ಕನ್ನಡ ವ್ಯಾಕರಣದ ಅಭ್ಯಾಸದಲ್ಲಿ ಶಬ್ದಮಣಿದರ್ಪಣದ ಉಪಯುಕ್ತತೆಯನ್ನು ಸಾರಿ ಹೇಳತಕ್ಕವಾಗಿವೆ.

ಶಬ್ದಮಣಿದರ್ಪಣದ ರಚನೆಯ ಕಾಲವನ್ನು ಆ ಗ್ರಂಥದಲ್ಲಿ ನೇರವಾಗಿ ಸೂಚಿಸಿಲ್ಲವಾದ್ದರಿಂದ ಕವಿಯ ಕಾಲವನ್ನು ಬೇರೆ ಆಧಾರಗಳಿಂದ ಗುರುತಿಸಬೇಕಾಗಿದೆ. ಸೂಕ್ತಿ ಸುಧಾರ್ಣವದ ಮಲ್ಲಿಕಾರ್ಜುನ ಕವಿ 1233ರಿಂದ 1254ರ ತನಕ ಆಳಿದ ಹೊಯ್ಸಳ ಸೋಮೇಶ್ವರನ ಕಾಲದಲ್ಲಿ ಇದ್ದುದರಿಂದ, ಆತನ ಮಗನಾದ ಕೇಶಿರಾಜನ ಕಾಲವನ್ನು ಸುಮಾರು 1260 ಎಂಬುದಾಗಿ ಕವಿಚರಿತೆಕಾರರು ಸೂಚಿಸಿದ್ದಾರೆ.

**ಶಬ್ದಮಣಿದರ್ಪಣ :** ಇದು ಹಳಗನ್ನಡ ಭಾಷೆಗೆ ಬರೆದ ವ್ಯಾಕರಣ ಗ್ರಂಥವಾಗಿದ್ದು, 13ನೆಯ ಶತಮಾನಕ್ಕೆ ಮೊದಲು ಹಳಗನ್ನಡ ಭಾಷೆಯ ಸ್ಥಿತಿಗತಿಗಳು ಹೇಗಿದ್ದವೆಂಬ ಬಗೆಗೆ ಸವಿಸ್ತಾರವೂ ಸಪ್ರಮಾಣವೂ ಆದ ವಿವೇಚನೆಯನ್ನು ಒಳಗೊಂಡಿದೆ. ಪೂರ್ವಕವಿಪ್ರಯೋಗಗಳ ಪರಿಶೀಲನೆಯಿಂದ ಭಾಷೆಯ ಸಾಮಾನ್ಯ ನಿಯಮಗಳನ್ನು ಇಲ್ಲಿ ಗುರುತಿಸಿ ಸೂತ್ರೀಕರಿಸಲಾಗಿದೆ. ಗ್ರಂಥದಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ–ಎಂಬ 8 ಪ್ರಕರಣಗಳಿವೆ. ಗ್ರಂಥದ ಆದಿಯಲ್ಲಿ ಮುಖ್ಯವಾಗಿ ಗ್ರಂಥ–ಗ್ರಂಥಕಾರ ಪರಿಚಯಾತ್ಮಕವಾದ ಒಂದು ಪೀಠಿಕೆಯ ಭಾಗವೂ ಅಂತ್ಯದಲ್ಲಿ ಪ್ರಯೋಗಸಾರವೆಂಬ ಒಂದು ಚಿಕ್ಕ ಶಬ್ದಾರ್ಥನಿರ್ಣಯ ಭಾಗವೂ ಸೇರಿಕೊಂಡಿದೆ. ಆಯಾ ಪ್ರಕರಣಕ್ಕೆ ಸಬಂಧಿಸಿದ ವ್ಯಾಕರಣಾಂಶಗಳಲ್ಲಿ ಒಂದೊಂದನ್ನು ಮೊದಲು ಸೂತ್ರ ರೂಪವಾಗಿ ಕಂದಪದ್ಯದಲ್ಲಿ ಸಂಗ್ರಹಿಸಿ, ಅನಂತರದಲ್ಲಿ ಸೂತ್ರಾರ್ಥದ

ವಿವರಣೆಗೆ ಸ್ವಕೀಯವಾದ ವೃತ್ತಿಯನ್ನು ಗದ್ಯರೂಪದಲ್ಲಿ ಬರೆದು, ಕೊನೆಗೆ ಸೂತ್ರ ವೃತ್ತಿಗಳಲ್ಲಿ ಉಕ್ತವಾದ ವ್ಯಾಕರಣಾಂಶಗಳನ್ನು ಅಧಿಕರಿಸಿಕೊಂಡ ಪೂರ್ವಕವಿ ಪ್ರಯೋಗಗಳನ್ನು ಉಚಿತಕ್ಕೆ ತಕ್ಕಷ್ಟುಮಟ್ಟಿಗೆ ಉದಾಹರಿಸುವ ಕ್ರಮವನ್ನು ಇಲ್ಲಿ ಅನುಸರಿಸಿದೆ. ಒಂದು ಎಣಿಕೆಯಂತೆ ಸೂತ್ರಗಳ ಒಟ್ಟು ಸಂಖ್ಯೆ 337. ಸಮಾಪ್ತಿಭಾಗದ ಪದ್ಯಗಳೂ ಸೇರಿ ಒಟ್ಟು ಪದಸಂಖ್ಯೆ 343. ಈ ಸೂತ್ರ, ವೃತ್ತಿ ಮತ್ತು ಪ್ರಯೋಗಗಳ ವಿಷಯದಲ್ಲಿ ಕೆಲವು ಸಮಸ್ಯೆಗಳನ್ನು ವಿದ್ವಾಂಸರು ಗುರುತಿಸಿ ವಿಚಾರ ಮಾಡಿ, ಶಬ್ದಮಣಿದರ್ಪಣದ ಸರ್ವಪಾಠಭೇದಗಳನ್ನೂ ಒಳಗೊಂಡ ಸಶಾಸ್ತ್ರೀಯ ಸವಿಮರ್ಶ ಪರಿಷ್ಕರಣ ಮುಂದೆ ಸಿದ್ಧವಾಗಬೇಕಾದ ಆವಶ್ಯಕತೆಯಿದೆ–ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಬ್ದಮಣಿದರ್ಪಣದ ವಿಷಯಾನುಕ್ರಮ ಈ ರೀತಿಯಾಗಿದೆ; ಸಂಜ್ಞಾ ಪ್ರಕರಣದಲ್ಲಿ ವರ್ಣ ಸಮಾಮ್ನಾಯ, ಶಿಥಲದ್ವಿತ್ವ ವಿಚಾರ–ಇತ್ಯಾದಿ; ಸಂಧಿ ಪ್ರಕರಣದಲ್ಲಿ ಸ್ವರವ್ಯಂಜನ ಸಂಧಿಗಳು, ಸಂಧಿವಿಸಂಧಿಗಳು, ಸಂಧಿದೋಷಗಳು, ಸಂಧಿ ಕಾರ್ಯದಲ್ಲಿ ದ್ವಿತ್ವಾದ್ವಿತ್ವಗಳು; ನಾಮಪ್ರಕರಣದಲ್ಲಿ ಕೃತ್ತಾದಿಯಾದ ಲಿಂಗಚತುಷ್ಟಯ, ನಾಮಭೇದಗಳು, ಸರ್ವನಾಮಗಳು, ಲಿಂಗವಚನ ವಿಭಕ್ತಿಗಳು ಇತ್ಯಾದಿ; ಸಮಾಸ ಪ್ರಕರಣದಲ್ಲಿ ಲೋಪಾಗಮಾದೇಶಗಳು, ತತ್ಪುರುಷ ಕರ್ಮಧಾರಯ ಅವ್ಯಯೀಭಾವ ಕ್ರಿಯಾ ಗಮಕ ಮುಂತಾದ ಸಂಸ್ಕೃತ ಕನ್ನಡ ಸಮಾಸಗಳು; ತದ್ಧಿತ ಪ್ರಕರಣದಲ್ಲಿ ಬಗೆಬಗೆಯ ಅರ್ಥಗಳನ್ನು ಕೊಡುವ ತದ್ಧಿತ ಪ್ರತ್ಯೆಯಗಳನ್ನು ಹಚ್ಚಿದ ಪುಂಸ್ತ್ರೀವಾಚಕಗಳಾದ ತದ್ಧಿತ ನಾಮಗಳು ಹಾಗೂ ತದ್ಧಿತ ಭಾವನಾಮಗಳು; ಅಖ್ಯಾತ ಪ್ರಕರಣದಲ್ಲಿ ಪುರುಷವಾಚಕ ಮತ್ತು ಕಾಲವಾಚಕ ಪ್ರತ್ಯಯಗಳು ಸೇರತಕ್ಕ ರೀತಿ ಪರಿಸರಗಳು, ವಿದ್ಯರ್ಥ ಮತ್ತು ಸತಿಸಪ್ತಮಿಗಳು; ಧಾತುಪ್ರಕರಣದಲ್ಲಿ ಧಾತುಗಳು ಮತ್ತು ಅವುಗಳ ಅರ್ಥ ವಿವರಣೆ; ಅಪಭ್ರಂಶಪ್ರಕರಣದಲ್ಲಿ ಕನ್ನಡದಲ್ಲಿ ಬಳಕೆಯಾಗುವ ರೂಢಿಯ ಸಂಸ್ಕೃತ ಪದಗಳು ಹಾಗೂ ಸಂಸ್ಕೃತ ಸಮಾಸಪದಗಳ ತದ್ಭವ ರೂಪಗಳು, ಸಂಸ್ಕೃತ ಕನ್ನಡ ಪದಗಳೊಡನೆ ಸಮಾನವಾಗಿ ಕೂಡಿ ಸಮಾಸವಾಗಬಹುದಾದ ತತ್ಸಮ ಶಬ್ದಗಳು–ಇತ್ಯಾದಿ; ಅವ್ಯಯ ಪ್ರಕರಣದಲ್ಲಿ ಬೇರೆ ಬೇರೆ ಸಂದರ್ಭಗಳಿಗೆ ಅರ್ಥಗಳಿಗೆ ಬಳಸತಕ್ಕ ಅವ್ಯಯಗಳು; ಕೊನೆಯದಾಗಿ ಪ್ರಯೋಗಸಾರದಲ್ಲಿ ಕೆಲವು ಕ್ಲಿಷ್ಟಪದಗಳ ಅರ್ಥ ವಿವರಣೆ.

ಕನ್ನಡದಲ್ಲಿಯೇ ರಚಿತವಾಗಿರುವ ಸ್ವತಂತ್ರ ಕನ್ನಡ ವ್ಯಾಕರಣಗಳಲ್ಲಿ ಶಬ್ದಮಣಿದರ್ಪಣವೇ ಮೊದಲನೆಯದು. ಇದಕ್ಕೆ ಮೊದಲು ಇಮ್ಮಡಿ ನಾಗವರ್ಮನ (ಸು.1145) ಶಬ್ದಸ್ಮೃತಿಯೂ ಕರ್ಣಾಟಕ ಭಾಷಾ ಭೂಷಣವೂ ಕನ್ನಡ ವ್ಯಾಕರಣಗಳಾಗಿ ರಚಿತವಾಗಿದ್ದವಾದರೂ ಇವುಗಳಲ್ಲಿ ಮೊದಲನೆಯದು ಅಲಂಕಾರ ಗ್ರಂಥವಾದ ಕಾವ್ಯಾವಲೋಕನದ ಪ್ರಥಮಾದಿಕಾರಣವಾಗಿ ಸೇರಿಸಿಕೊಂಡು ಬಂದದ್ದು ಹಾಗೂ ಸಂಕ್ಷೇಪವಾದ್ದು ಎನ್ನುವುದರಿಂದಲೂ ಎರಡನೆಯದು ಸ್ವಲ್ಪ ವಿಸ್ತಾರವಾದುದಾಗಿದ್ದರೂ ಸಂಸ್ಕೃತ ಭಾಷೆಯಲ್ಲಿ ರಚಿತವಾದ್ದು ಎನ್ನುವುದರಿಂದಲೂ ಕೇಶೀರಾಜನ ಗ್ರಂಥಕ್ಕೆ ಇರುವ ಪ್ರಸಿದ್ಧಿ, ವ್ಯಾಪ್ತಿ ಅವುಗಳಿಗೆ ಇಲ್ಲವಾಗಿದೆ. ಕೇಶಿರಾಜ ನಾಗವರ್ಮನ ಆ ಎರಡು ವ್ಯಾಕರಣ ಗ್ರಂಥಗಳನ್ನೇ ಸೂತ್ರ, ವೃತ್ತಿ, ಮತ್ತು ಪ್ರಯೋಗಗಳಲ್ಲಿ ಮುಖ್ಯವಾಗಿ ಆಧರಿಸಿದ್ದಾನೆ. ಆದರೆ ಹಳಗನ್ನಡ ಭಾಷಾ ಸಮರೂಪವನ್ನು ಹೆಚ್ಚು ಗಾಢವಾಗಿಯೂ ವಿವರವಾಗಿಯೂ ಅಭ್ಯಾಸಮಾಡಿದ್ದರ ಫಲವಾಗಿ ಹಿಂದೆ ಹೇಳಿದ್ದ ವಿಷಯಗಳನ್ನು ವಿಸ್ತರಿಸಿಯೂ ಹೆಚ್ಚಿನ ವಿಷಯಗಳನ್ನು ಸೇರಿಸಿಯೂ ತನ್ನ ಗ್ರಂಥವನ್ನು ಹೆಚ್ಚು ಉಪಯುಕ್ತವಾಗುವಂತೆ ಮಾಡಿದ್ದಾನೆ. ಹೊಸದಾಗಿ ಸೇರಿಸಿರುವ ಹಾಗೂ ಬೆಲೆಯುಳ್ಳವಾದ ಸಹಜ ರಳಗಳ ಪಟ್ಟಿ, ಧಾತುಪಾಠ, ಪ್ರಯೋಗಸಾರ–ಇವು ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಿವೆ. 13ನೆಯ ಶತಮಾನದ ನಡುಗಾಲದವರೆಗೆ ಬೆಳೆದುಬಂದ ಹಳಗನ್ನಡ ಭಾಷೆಯ ಸ್ವರೂಪವನ್ನು ಪ್ರಾಮಾಣಿಕವಾದ ಪ್ರಯೋಗ ಪರೀಕ್ಷೆಯಿಂದ ವಿಶ್ಲೇಷಿಸಿ ಶಾಸ್ತ್ರಬದ್ಧವಾಗಿ ನಿಯಂತ್ರಿಸಲು ಯತ್ನಿಸಿರುವುದು ಇಲ್ಲಿ ಕಾಣುತ್ತದೆ. ಪ್ರಧಾನವಾಗಿ, ಶಬ್ದಮಣಿದರ್ಪಣ ವಿದ್ಯಾತ್ಮಕ ಅಥವಾ ಆದರ್ಶ(ಪ್ರಿಸ್ಕಿಪ್ಟಿವ್) ರೀತಿಯ ವ್ಯಾಕರಣ, ಆದರೆ ವಿವರಣಾತ್ಮಕ ಅಥವಾ ವರ್ಣನಾತ್ಮಕ (ಡಿಸ್ಕ್ರಿಪ್ಟಿವ್) ರೀತಿಯನ್ನು ನಿರೂಪಣಾ ದೃಷ್ಟಿಯನ್ನು ಅದು ಒಳಗೊಂಡಿದೆ. ವ್ಯಾಕರಣಾಂಶಗಳ ವಿಶ್ಲೇಷಣೆಯಲ್ಲಿಯೂ ನಿರೂಪಣಕ್ರಮದಲ್ಲಿಯೂ ಅಲ್ಲಲ್ಲಿ ಕೆಲವು ಲೋಪದೋಷಗಳನ್ನು ಅನೌಚಿತ್ಯಗಳನ್ನು ಭಾಷಾತಜ್ಞರು ಎತ್ತಿರುವುದುಂಟು. ಹೀಗಿದ್ದು ಹಳಗನ್ನಡ ಭಾಷಾಸ್ವರೂಪವನ್ನು ಪ್ರಮಾಣಿಕವಾದ ರೀತಿಯಲ್ಲಿ ನಿಷ್ಠೆಯಿಂದ ವಿವರಿಸುವ ಪ್ರಯತ್ನದಿಂದಾಗಿ ಅದು ಪ್ರಸಿದ್ಧವಾಗಿದೆ. ನಿರಾಧಾರವಾಗಿ ಏನನ್ನೂ ಹೇಳದೆ ಪ್ರಯೋಗಬಲವನ್ನು ಅವಲಂಬಿಸಿರುವ ಶಾಸ್ತ್ರಪ್ರಜ್ಞೆ, ಪ್ರಾಮಾಣಿಕತೆಗಳು, ಸಂದೇಹ ಬಂದಲ್ಲಿ ಹಾಗೆಂದು ಒಪ್ಪುವುದು, ವಿಷಯವನ್ನು ನಿರ್ಣಾಯಕವಾಗಿ ಹೇಳಲಾಗದಿದ್ದಾಗ ತೋರುವ ತಾಟಸ್ಥ್ಯ, ತನಗೆ ಒಪ್ಪಿಗೆ ಇಲ್ಲದಿರುವುದನ್ನು ಕಂಠೋಕ್ತವಾಗಿ ನಿಷೇಧಿಸುವುದು, ಗುಣದೋಷಗಳೆರಡಕ್ಕೂ ಒಬ್ಬನೇ ಕವಿಯ ಪ್ರಯೋಗಗಳನ್ನು ಕೂಡುವುದರಲ್ಲಿ ಕಾಣಿಸಿರುವ ನಿಷ್ಪಕ್ಷಪಾತ ದೃಷ್ಟಿ, ಆತ್ಮವಂಚನೆ ಪರವಂಚನೆಗಳ ಅಭಾವ–ಇವೆಲ್ಲ ಕೇಶಿರಾಜನ ವೈಜ್ಞಾನಿಕ ಮನೋಧರ್ಮವನ್ನು ತೋರಿಸುತ್ತವೆ. ಇವೆಲ್ಲಕ್ಕೂ ತಕ್ಕ ನಿದರ್ಶನಗಳನ್ನು ಅವನ ವ್ಯಾಕರಣದಲ್ಲಿ ನೋಡಬಹುದು. ಪ್ರಯೋಗಗಳ ಸಂಗ್ರಹಣೆಯೂ, ಸಂಯೋಜನೆಯೂ ವ್ಯಾಕರಣಾಂಶಗಳ ವಿಶದೀಕರಣಕ್ಕೆ ಸಹಾಯಕವಾಗಿರುವಂತೆಯೇ ಈತನ ಕಾವ್ಯಮನೋಧರ್ಮ, ಸರಸ ಪ್ರವೃತ್ತಿಯ ಪ್ರತೀಕಗಳು ಆಗಿ ಪರಿಣಮಿಸಿವೆ. ಇದರಿಂದ, ಶುಷ್ಕವಾಗಬಹುದಾಗಿದ್ದ ವ್ಯಾಕರಣದ ಅಭ್ಯಾಸ ಆಕರ್ಷಕವಾಗಿದೆ. ವೈಯಾಕರಣ ಪ್ರಯೋಗ ಶರಣನೆಂಬ ಮಾತು ಕೇಶಿರಾಜನಿಗೆ ಚೆನ್ನಾಗಿ ಒಪ್ಪುತ್ತದೆ; ಪ್ರಸಿದ್ಧರಾದ ಪಂಪ, ಪೊನ್ನ, ರನ್ನ ನೇಮಿಚಂದ್ರ, ಜನ್ನ–ಕೃತಿಗಳಿಂದಲೂ ಈಗ ಕೃತಿಗಳು ದೊರೆಯುತ್ತಿಲ್ಲದ ಗಜಗ, ಗುಣನಂದಿ, ಮನಸಿಜ, ಅಸಗ–ಈ ಮೊದಲಾದವರ ಕೃತಿಗಳಿಂದಲೂ ಈತ ಪ್ರಯೋಗಗಳನ್ನು ಸ್ವೀಕಾರಮಾಡಿದ್ದಾನೆ; ಕೆಲವು ಶಾಸನಗಳಿಂದಲೂ ಪ್ರಯೋಗಗಳನ್ನು ಎತ್ತಿಕೊಂಡಿರುವಂತೆ ತೋರುತ್ತದೆ. ಕೇಶಿರಾಜನ ಕನ್ನಡ ಸಾಹಿತ್ಯ ಪರಿಚಯ ಸಾಕಷ್ಟು ವಿಸ್ತಾರವಾದುದು ಎನ್ನುವುದು ಇದರಿಂದ ತಿಳಿಯುತ್ತದೆ. (ಟಿ.ವಿ.ವಿ.)

ಕೇಶಿರಾಜನ ವ್ಯಾಕರಣವನ್ನು ಅಧ್ಯಯನ ಮಾಡಿದ ಯಾರಿಗೆ ಆಗಲಿ ಇವನು ಶುಷ್ಕ ವೈಯಾಕರಣನೆನಿಸುವುದಿಲ್ಲ. ಈತ ಬರೆದಿರುವ ಸೂತ್ರಗಳು ಶಾಸ್ತ್ರವತ್ತಾಗಿದ್ದರೆ, ಆರಿಸಿಕೊಟ್ಟಿರುವ ಪ್ರಯೋಗಗಳು ರಸವತ್ತಾಗಿವೆ. ಇದಲ್ಲದೆ, ಇವನ ಕನ್ನಡ ಪ್ರಜ್ಞೆ ತುಂಬಾ ಪ್ರಶಂಸನೀಯವಾದುದು; ಸಾಂಪ್ರದಾಯಿಕವಾಗಿ ಹೇಳಬೇಕಾದುದನ್ನು ಹೇಳಿ, ಬಳಿಕ ತನ್ನ ನಿಲವನ್ನು ಈತ ಆಗಿಂದಾಗ್ಗೆ ವ್ಯಕ್ತಪಡಿಸುತ್ತಾನೆ. ಆಧುನಿಕ ಭಾಷಾ ವಿಜ್ಞಾನಿಗಳು ಸಮಕಾಲೀನ ಭಾಷೆಯ ಸ್ವರೂಪವನ್ನು ವಿವರಿಸಲು ಹೇಗೆ ಆಸಕ್ತಿ ತೋರುವರೋ ಹಾಗೆಯೇ ಕೇಶೀರಾಜ ಹಳಗನ್ನಡದ ಹೆಸರಿನಲ್ಲಿ ನುಸುಳಿ ಬರುತ್ತಿದ್ದ ನಡುಗನ್ನಡದ ಎಷ್ಟೋ ಅಂಶಗಳನ್ನು ಸಂದರ್ಭೋಚಿತವಾಗಿ ಸೂಚಿಸಿದ್ದಾನೆ. ಕನ್ನಡ ವರ್ಣಮಾಲೆಯನ್ನು ನಿರ್ಣಯಿಸುವಾಗ ದೇಶೀಯ ಅಕ್ಷರಗಳಾದ ಱ, ೞ, ಳ ಮತ್ತು ಎ, ಒ ಗಳ ಚರಿತ್ರೆಯನ್ನು ಬಹಳ ಚೆನ್ನಾಗಿ ತಿಳಿಸಿದ್ದಾನೆ. ಱೞ ಮತ್ತು ಱ ಕಾರಗಳ ಉಚ್ಚಾರಣೆಯ ಸ್ಥಾನವನ್ನು ಹೇಳುವ ಇವನ ಕ್ರಮ ತುಂಬಾ ವಿಚಾರಣೀಯವಾದದ್ದು. ತನ್ನ ಕಾಲಕ್ಕಾಗಲೇ ಬಳಕೆ ತಪ್ಪಿದ್ದ ಱೞ ದ ಇತಿಹಾಸವನ್ನೇ ಬಹಳ ಪರಿಶ್ರಮವಹಿಸಿ ವಿಚಾರಮಾಡಿದ್ದಾನೆ. ಕುಳ ಮತ್ತು ಕ್ಷಳಗಳ ಅಂತರವನ್ನು ಬಹಳ ಚೆನ್ನಾಗಿ ಮನಗಂಡಿದ್ದಾನೆ. ಎ, ಒ ಎಂಬ ವರ್ಣಗಳು ಸ್ವಭಾವತಃ ಸ್ವತಂತ್ರವಾದ ಸ್ಥಾನವನ್ನು ಪಡೆದಿವೆ ಎನ್ನುವುದನ್ನು ಸಮರ್ಥಿಸುವ ಇವನ ವಿಧಾನ ಆಧುನಿಕ ಭಾಷಾ ವಿಜ್ಞಾನಿಗಳು ಒಪ್ಪುವಂತಿವೆ. ಹಳಗನ್ನಡದ ವ್ಯಂಜನಾಂತ ಶಬ್ದಗಳು ಸ್ವರಾಂತವಾಗುತ್ತಿದ್ದ ವಿಚಾರ, ಲಾಂತಾ ಶಬ್ದಗಳು ೞಾಂತಾವಾಗಿ ಬಳಕೆಗೆ ಬರುತ್ತಿದ್ದ ಅಂಶ, ಬಿಂದುಲೋಪ, ಬಿಂದು ವಿಕಲ್ಪ, ಶಿಥಿಲದ್ವಿತ್ವ ಇತ್ಯಾದಿ ಹಲವಾರು ಸಂಗತಿಗಳನ್ನು ಕೇಶಿರಾಜ ತನ್ನದೇ ಆದ ನೂತನ ಸರಣಿಯಲ್ಲಿ ಪ್ರಸ್ತಾಪಿಸಿದ್ದಾನೆ. ಸಂಧಿಕಾರ್ಯಗಳನ್ನು ಪ್ರಸ್ತಾಪಿಸುವಲ್ಲಿಯೂ ಕನ್ನಡಕ್ಕೆ ಸಹಜವಾದ ಲೋಪ, ಆಗಮ, ಆದೇಶ ಸಂಧಿಗಳನ್ನು ಸ್ವೀಕರಿಸಿದ್ದಾನೆ ವಿನಾ ಸಂಸ್ಕೃತದ ಸಂಧಿಕಾರ್ಯಗಳ ಸೊಲ್ಲನ್ನು ಎತ್ತಿಲ್ಲ. ನಾಮಪ್ರಕರಣದಲ್ಲಿ ಸಮಸಂಸ್ಕೃತಕ್ಕೆ ಕೇಶಿರಾಜ ಕೊಟ್ಟಿರುವ ಅನ್ಯದೇಶದ ಸ್ಥಾನವು ಗಮನಾರ್ಹವಾದುದು. ಇಂತೆಯೇ ಇವನ ತತ್ಸಮದ ಕಲ್ಪನೆ ಇತರ ವೈಯಾಕರಣರಂತಿಲ್ಲ. ಪಕಾರಾದಿಯ ದೇಶ್ಯಶಬ್ದ ಹಕಾರವಾಗತೊಡಗಿರುವುದನ್ನು ಈತ ಮನಗಂಡು ಅದಕ್ಕೆ ಅಂಗೀಕಾರದ ಮುದ್ರೆಯನ್ನೊತ್ತಿದ್ದಾನೆ. ಕನ್ನಡದ ದ್ವಿವಚನ ಪ್ರಯೋಗ, ಮೂರು ಲಿಂಗಗಳು ಮಾತ್ರ ಆದರಣೀಯವೆಂಬ ಅಭಿಪ್ರಾಯ, ಪ್ರಥಮ ವಿಭಕ್ತಿಯ ಸ್ವರೂಪ ವೈಶಿಷ್ಟ್ಯ, ತೃತೀಯ, ಪಂಚಮಿ ವಿಭಕ್ತಿಗಳ ಸಮೀಕರಣ, ವಿಭಕ್ತಿ ಪಲ್ಲಟದಲ್ಲಿ ವ್ಯಾವಹಾರಿಕ ಭಾಷೆಯ ಪಾತ–ಮೊದಲಾದವು ಇಂದಿನ ಭಾಷಾತಜ್ಞರ ವಿಚಾರಸರಣಿಯನ್ನೇ ಹೋಲುತ್ತವೆ. ಕನ್ನಡದ ವಾಕ್ಯ ರಚನೆಗೆ ಸಂಬಂಧಿಸಿದಂತೆ ಕರ್ಮಣಿ ಪ್ರಯೋಗದ ಕೃತಕತೆಯನ್ನು ಗಮನಿಸಿ ಅದರ ಕಡೆಗೆ ತನ್ನ ಲಕ್ಷ್ಯವನ್ನೇ ಹೊರಳಿಸದಿರುವ ಕೇಶಿರಾಜನ ಕೆಚ್ಚು ಮೆಚ್ಚಬೇಕಾದದ್ದು. ಕೇಶಿರಾಜ ಕಲ್ಪಿಸಿರುವ ಗಮಕ ಸಮಾಸದ ಸ್ವರೂಪವು ಕುತೂಹಲಕಾರಿಯಾದದ್ದು. ಸಮಾಸಕಾರ್ಯವಾವುದೂ ಇಲ್ಲದೆ, ಸಮಾಸದ ಮೌಲ್ಯವನ್ನು ಪಡೆಯುವ ನಿದರ್ಶನಗಳನ್ನು ಆಧುನಿಕ ಭಾಷಾ ವಿಜ್ಞಾನಿಗಳು ವಿಶ್ಲೇಷಿಸುವ ಶಬ್ದಸಂಯೋಗದ ವಿವಿಧ ವಿನ್ಯಾಸಗಳಿಗೆ ಅಳವಡಿಸಿ ನೋಡಿದ್ದೇ ಆದರೆ ಈ ಬಗ್ಗೆ ಹೆಚ್ಚು ವಿಚಾರ ಬೆಳಕಿಗೆ ಬರಬಹುದು. ಕೇಶಿರಾಜ ಎಷ್ಟರಮಟ್ಟಿಗೆ ಸಾಂಪ್ರದಾಯಕ ವೈಯಾಕರಣನೋ ಅದಕ್ಕೂ ಮಿಗಿಲಾಗಿ ಸ್ವತಂತ್ರವಿಚಾರಪರನಾದ ಭಾಷಾ ವಿಜ್ಞಾನಿಯೂ ಹೌದು. ತನ್ನನ್ನು ಕವಿ ಕೇಶವನೆನ್ ಎಂದು ಹೇಳಿಕೊಂಡು ಹೆಮ್ಮೆಪಟ್ಟಿದ್ದರೂ ಇವನ ಮನೋಧರ್ಮದಲ್ಲಿ ಅಡಗಿರುವ ಶಾಸ್ತ್ರ ತುಂಬಾ ಶ್ಲಾಘ್ಯವಾದುದು. ಇದಲ್ಲದೆ ಈತ ಉತ್ತಮ ನಿಘಂಟುಕಾರನೂ ಹೌದು. ನಾನಾರ್ಥವನ್ನು ತಿಳಿಸುವ ಱೞ ಸಮೇತವಾದ ಶಬ್ದಗಳ ಕೋಶವಾಗಲಿ, ನಿತ್ಯಬಿಂದು, ವಿಕಲ್ಪ ಬಿಂದು, ನಿತ್ಯದ್ವಿತ್ವ, ಶಿಥಿಲದ್ವಿತ್ವಗಳನ್ನು ತಿಳಿಸುವ ಪದಗಳ ಪಟ್ಟಿಯಾಗಲೀ, ಕನ್ನಡ ಧಾತುಗಳನ್ನು ಕುರಿತ ಶಬ್ದಸಂಗ್ರಹವಾಗಲಿ, ಪ್ರಯೋಗಸಾರವೆಂಬ ಶಬ್ದಾರ್ಥಕೋಶವಾಗಲಿ ಇದಕ್ಕೆ ಸಾಕ್ಷಿಯಾಗಿವೆ. ಕೇಶಿರಾಜನ ವ್ಯಾಕರಣವನ್ನು ಆಧುನಿಕ ಭಾಷಾ ವಿಜ್ಞಾನಿಗಳ ದೃಷ್ಟಿಯಿಂದ ಅಧ್ಯಯನ ಮಾಡಬೇಕೆಂಬ

ಕುತೂಹಲ ಇದೀಗ ಮೊದಲಾಗಿದೆ. ಈ ಪ್ರಯತ್ನ ಸಫಲವಾದಂದು, ಕನ್ನಡದ ಈ ವ್ಯಾಕರಣಕ್ಕೆ ಕನ್ನಡಿಗರು ಮಾತ್ರವಲ್ಲದೆ, ಇತರ ದ್ರಾವಿಡ ಭಾಷಾ ವಿಜ್ಞಾನಿಗಳು ಹೆಮ್ಮೆಪಡುವಂತಾಗಬಹುದು. (ವಿ.ಜಿ.)

**ಕೇಶಿರಾಜ, ಕೊಂಡಗುಳಿ :** ಕವಿಯಾಗಿ ವಿದ್ವಾಂಸನಾಗಿ ಮಂತ್ರಿಯಾಗಿ ಬಹುಮುಖ ಖ್ಯಾತಿಗೆ ಪಾತ್ರನಾದ ಕನ್ನಡಿಗ. ಈತನ ಕಾಲ 1160 ಎಂದು ಕನ್ನಡ ಕವಿಚರಿತ್ರೆಯಲ್ಲಿ ಹೇಳಿದೆ. ಈತ ವೀರಶೈವ; ಷಡಕ್ಷರಕಂದ ಎಂಬ ಗ್ರಂಥ ಬರೆದಿದ್ದಾನೆ. ಈ ಗ್ರಂಥಕ್ಕೆ ಮಂತ್ರಮಹತ್ತ್ವದ ಕಂದ ಎಂಬ ಹೆಸರೂ ಉಂಟು. ಓಂ ನಮಃ ಶಿವಾಯ ಎಂಬ ಮಂತ್ರದ ಮಾಹಾತ್ಮ್ಯವನ್ನು ಇದರಲ್ಲಿ ಬಗೆಬಗೆಯಾಗಿ ಬಣ್ಣಿಸಲಾಗಿದೆ. ಇದರಲ್ಲಿ 110 ಕಂದಪದ್ಯಗಳಿವೆ. ಇವನ ಬಂಧ ಪ್ರೌಢವಾದುದು. ಪ್ರಾಚೀನ ಕವಿಗಳಾದ ಹಂಪೆಯ ಹರೀಶ್ವರ, ರಾಘವಾಂಕರು ತಮ್ಮ ಗಿರಿಜಾಕಲ್ಯಾಣ ಮತ್ತು ಹರಿಶ್ಚಂದ್ರ ಕಾವ್ಯಗಳಲ್ಲಿ ಈತನ ಬಗೆಗೆ 'ಫಾಲಲೋಚನನಲ್ಲದೆ ಪೊಗಳದ ಕೇಶಿರಾಜ' ಎಂದು ಮೊದಲಾಗಿ ಸ್ಮರಿಸಿದ್ದಾರೆ. ಪಾಲ್ಕುರಿಕೆ ಸೋಮನಾಥನ ಗಣಸಹಸ್ರನಾಮದಲ್ಲಿ ಇವನ ಹೆಸರಿನ ಉಲ್ಲೇಖವಿದೆ. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿ ಮತ್ತು ಇತರ ವೀರಶೈವ ಗ್ರಂಥಗಳಲ್ಲಿ ಈತನ ವಿಷಯವಾಗಿ ಅನೇಕ ಉಲ್ಲೇಖಗಳಿವೆ. ಶಿಕಾರಿಪುರದ 119 ಮತ್ತು 123ನೆಯ ಶಾಸನಗಳಲ್ಲಿ ಇವನನ್ನು ಕುರಿತು ಬಣ್ಣಿಸಲಾಗಿದೆ. ಈತನೊಬ್ಬ ವೀರಶೈವರಲ್ಲಿ ಮಹಿಮಾ ಪುರುಷನೆಂಬ ನಂಬಿಕೆ ಇದೆ.

ಕೇಶಿರಾಜನ ಊರು ಕೊಂಡಗುಳಿ. ಇದು ಬಿಜಾಪುರ ಜಿಲ್ಲೆ ಸಿಂಧಗಿ ಗ್ರಾಮಕ್ಕೆ 16 ಕಿ.ಮೀ. ದೂರದಲ್ಲಿ ಆಗ್ನೇಯ ದಿಕ್ಕಿಗಿದೆ. ಕೇಶಿರಾಜ ಹುಟ್ಟಿದ ಸ್ಥಳವಿದು. ಈತನ ತಂದೆ ಹೂಳಲಮರಸ, ತಾಯಿ ದುರ್ಗಾದೇವಿ ಎಂದು ಶಿಕಾರಿಪುರದ ಶಾಸನಗಳಲ್ಲಿ ಹೇಳಿದೆ. ಈತನ ಹೆಂಡತಿಯ ಹೆಸರು ಗಂಗಾದೇವಿ. ಗುರುವಿನ ಹೆಸರು ವಿರೂಪಾಕ್ಷ. ಇವನ ಇಷ್ಟ ದೇವತೆ ಸೋಮನಾಥ. ಕೇಶಿರಾಜ ದೊಡ್ಡ ವಿದ್ವಾಂಸನಾಗಿದ್ದ. ಪ್ರತಿದಿನವೂ ಕಂದ, ತ್ರಿಪದಿ, ರಗಳೆ, ವಚನ, ಪದ, ಪದ್ಯ, ದಂಡಕ, ಅಷ್ಟಕ ಮೊದಲಾದವನ್ನು ರಚಿಸಿ, ಪರಮೇಶ್ವರನ ಮುಂದೆ ಹಾಡುತ್ತಿದ್ದ. ಕೆಲವು ಕಾಲಾನಂತರ ಈತ ಭಕ್ತರ ಕೋರಿಕೆಯಂತೆ ಆಗ ಚಾಲುಕ್ಯರ ರಾಜಧಾನಿಯಾದ ಕಲ್ಯಾಣಪಟ್ಟಣಕ್ಕೆ ಸಮೀಪದ ಶಿವಪುರ ಎಂಬ ಗ್ರಾಮಕ್ಕೆ ಬಂದು ನಿಂತ. ಅಲ್ಲಿ ಲಿಂಗಾರ್ಚನೆ, ಜಂಗಮದಾಸೋಹ ಮೊದಲಾದವನ್ನು ನಡೆಸುತ್ತಿದ್ದ. ಇವನ ಶಾಸ್ತ್ರ ಪಾಂಡಿತ್ಯ, ವಿಚಾರಲಹರಿ ಮತ್ತು ಮಹತ್ತ್ವದ ಸದ್ಗುಣಗಳು ಸಮಕಾಲೀನ ಜನರ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿದವು. ಆ ಕಾಲದಲ್ಲಿ ತರ್ದವಾಡಿ ನಾಡಿನ ರಾಜಧಾನಿಯಾದ ಮಂಗಳವಾಡದಲ್ಲಿ(ಸೊಲ್ಲಾಪುರ ಜಿಲ್ಲೆ) ಕಳಚುರಿ ವಂಶೀಯನಾದ ಪೆರ್ಮಾಡಿ ಎಂಬ ರಾಜ ಆಳುತ್ತಿದ್ದ. ಕೇಶಿರಾಜನ ಕೀರ್ತಿ ವಿದ್ವತ್ತು, ಮೊದಲಾದುವನ್ನು ದಿನವೂ ಕೇಳಿದ ರಾಜ ಇವನನ್ನು ಮಂಗಳವಾಡಕ್ಕೆ ಕರೆಸಿದ. ಕೇಶಿರಾಜನ ಪ್ರಭಾವ ಅರಸನ ಮೇಲೆಯೂ ಬಿತ್ತು. ಕೆಲ ದಿನಗಳಲ್ಲಿಯೇ ಕೇಶಿರಾಜ ಪೆರ್ಮಾಡಿಯ ಮಂತ್ರಿಯಾದ. ಈತನಿಗೆ ದಂಡನಾಯಕ ಎಂಬ ಬಿರುದೂ ಸಂದಿತು. ಅಂದಿನಿಂದ ಕೇಶಿರಾಜ ದಣ್ಣಾಯಕ ಕೇಶಿರಾಜ ಎಂದು ಕರೆಸಿಕೊಂಡ.

ಕೇಶಿರಾಜ ಸಕಲಶಾಸ್ತ್ರ ಪಂಡಿತನೂ, ರಾಜನೀತಿ ವಿಶಾರದನು ಎನಿಸಿದ್ದುದರಿಂದ ಇವನ ಆಡಳಿತ ಜನಪ್ರಿಯವೆನಿಸಿತು. ಶಿವಶರಣನಾದುದರಿಂದ ಅವರ ಉದಾರ ತತ್ತ್ವಗಳನ್ನು ಈತ ಪ್ರಸಾರಮಾಡತೊಡಗಿದ. ಇದರಿಂದ ಅಸಮಾಧಾನಗೊಂಡ ಕೆಲವರು ರಾಜನಲ್ಲಿ ದೂರಿತ್ತರು. ದುರಾದೃಷ್ಟದಿಂದ ರಾಜ ಚಾಡಿಕೋರರ ಮಾತನ್ನು ನಂಬಿದ. ರಾಜನಿಗೂ ಕೇಶಿರಾಜನಿಗೂ ವಿರಸವುಂಟಾಗಿ ಕೇಶಿರಾಜ ಮಂತ್ರಿಪದವಿಯನ್ನು ತೊರೆದು ಮನೆಗೆ ಬಂದ. ಈತನ ಹೆಂಡತಿ ಮಹಾಶಿವಶರಣೆಯಾದ್ದರಿಂದ ನರನಸೇವೆ ತೊಲಗಿ ಹರನಸೇವೆಗೆ ಅನುಕೂಲವಾಯಿತು–ಎಂದು ಸಮಾಧಾನ ಪಟ್ಟಳು. ಸತಿಪತಿಗಳಿಬ್ಬರೂ ಮಂಗಳವಾಡದಿಂದ ಹೊರಟಾಗ ತತ್ತ್ವನಿಷ್ಠರಾದ ಜನ ಅವರನ್ನು ಸತ್ಕರಿಸಿದರು. ಕೇಶಿರಾಜನ ತ್ಯಾಗಬುದ್ಧಿ, ಸತ್ಯಸಂಧತೆ, ಧೈರ್ಯಸ್ಥೈರ್ಯಗಳು ನಾಡಿನಲ್ಲಿ ಮನೆಮಾತಾದವು. ಅನಂತರ ಅರಸ ಪೆರ್ಮಾಡಿ ತಾನು ಚಾಡಿಕೋರರ ಮಾತನ್ನು ಕೇಳಿದ್ದು ತಪ್ಪಾಯಿತೆಂದು ಗ್ರಹಿಸಿ, ಹಿಂದಿರುಗುವಂತೆ ಕೇಶಿರಾಜನಿಗೆ ಕರೆ ಕಳುಹಿಸಿದ. ಸ್ವಾಭಿಮಾನಿಯಾದ ಕೇಶಿರಾಜ ಆಹ್ವಾನವನ್ನು ತಿರಸ್ಕರಿಸಿ, ಸ್ವಗ್ರಾಮವಾದ ಕೊಂಡಗುಳಿಗೆ ತೆರಳಿದ. ಮಾರ್ಗಮಧ್ಯದಲ್ಲಿ ಭೀಮಾನದಿ ತೀರದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಅಲ್ಲಿ ಪತ್ನಿ ಸಮೇತ ಶಿವಪೂಜೆಯಲ್ಲಿ ತೊಡಗಿರಲು ಗರುಡಪಕ್ಷಿಯೊಂದು ಬಂದು ಈತ ಪೂಜಿಸುತ್ತಿದ್ದ ಇಷ್ಟಲಿಂಗವನ್ನು ಕಚ್ಚಿಕೊಂಡುಹೋಗಿ ನದಿಯಲ್ಲಿ ಹಾಕಿತು. ಇದರಿಂದ ಬಹಳವಾಗಿ ದುಗುಡಗೊಂಡ ಕೇಶಿರಾಜ ತನ್ನ ಇಷ್ಟಲಿಂಗವನ್ನು ಕುರಿತು ಭಕ್ತಿಯಿಂದ ಪ್ರಾರ್ಥಿಸಲು ಅದು ಭೀಮಾನದಿಯಿಂದ ಬಂದು ಇವನ ಅಂಗೈಯಲ್ಲಿ ಕುಳಿತುಕೊಂಡಿತು. ಪೂಜಾನಂತರ ಇವರು ತಮ್ಮ ಗ್ರಾಮವನ್ನು ಸೇರಿಕೊಂಡರು. ಕೇಶಿರಾಜ ಬಸವೇಶ್ವರನಿಗಿಂತ ಮೊದಲು ಕಳಚುರಿಗಳಲ್ಲಿ ಮಂತ್ರಿ ಯಾಗಿದ್ದ ಪ್ರಪ್ರಥಮ ವೀರಶೈವ. ಕೊಂಡಗುಳಿಯಲ್ಲಿ ಇವನ ಹೆಸರಿನ ದೇವಾಲಯವಿದೆ. ಕೊಂಡಗುಳಿಯಲ್ಲಿಯೇ ಈತ ಐಕ್ಯನಾದಂತೆ ಕಾಣುತ್ತದೆ. ಅಲ್ಲಿ ಈತನ ಸಮಾಧಿ ಉಂಟೆಂದು ಹೇಳುತ್ತಾರೆ. ವೀರಶೈವ ಸಾಹಿತ್ಯದಲ್ಲಿ ಇವನ ಹೆಸರು ವಿಖ್ಯಾತವಾಗಿದೆ. (ಬಿ.ಎಸ್.)

**ಕೇಸರಿ [1] :** **(ನೋಡಿ– ಕುಂಕುಮ ಕೇಸರಿ)**

**ಕೇಸರಿ [2] :** ಒಬ್ಬ ವಾನರ ಶ್ರೇಷ್ಠ. ಹೆಂಡತಿ ಅಂಜನೆ. ಮಗ ಆಂಜನೇಯ. ಸೂರ್ಯನ ವರದಿಂದ ಸ್ವರ್ಣಮಯವಾಗಿದ್ದ ಸುಮೇರುಪರ್ವತ ಈತನ ರಾಜ್ಯ. ಗೋಕರ್ಣ ವಾಸಸ್ಥಳ. ಶಂಭಸಾದನನೆಂಬ ರಾಕ್ಷಸ ಬಲಾಢ್ಯನಾಗಿ ಋಷಿಗಳಿಗೆ ಕಿರುಕುಳ ಕೊಟ್ಟನಾಗಿ, ಅವರೆಲ್ಲರೂ ಸೇರಿ ಕೇಸರಿಯನ್ನು ಪ್ರಾರ್ಥಿಸಿಕೊಳ್ಳಲು ಆತ ಶಂಭಸಾದನನನ್ನು ಕೊಂದು ಋಷಿಕಂಟಕವನ್ನು ಪರಿಹರಿಸಿದ. ಇದರಿಂದ ಸುಪ್ರೀತರಾದ ಋಷಿಗಳು ಕೇಸರಿಗೆ ಸಕಲ ಶಾಸ್ತ್ರಪಾರಂಗತನೂ, ಇಚ್ಛಾ ಸಂಚಾರಿಯೂ, ಬಲಾಧಿಕನೂ ಬ್ರಹ್ಮನಿಷ್ಠನೂ ಆದ ಮಗ ಜನಿಸಲೆಂದು ಹರಸಿದರು. ಜಗದಾಯುವಾದ ವಾಯುದೇವನ ವರಪ್ರಸಾದದಿಂದ ಅಂಜನೆಯಲ್ಲಿ ಆಂಜನೇಯ ಜನಿಸಿ ಋಷಿವಾಕ್ಯವನ್ನು ಅನ್ವರ್ಥಗೊಳಿಸಿದ. ಈ ವಿವರಗಳು ರಾಮಾಯಣದಲ್ಲೂ ಮಹಾಭಾರತದ ವನಪರ್ವದಲ್ಲೂ ಬರುತ್ತವೆ. (ಸಿ.ಜಿ.ಪಿ.)

**ಕೇಸರಿ [3] :** ಮರಾಠಿಯ ರಾಷ್ಟ್ರೀಯ ದಿನಪತ್ರಿಕೆ. ಪುಣೆಯಿಂದ ಪ್ರಕಟವಾಗುತ್ತದೆ. ಪ್ರಾರಂಭದಿಂದಲೂ ಮರಾಠಿಗರ ಆಸೆ ಆಕಾಂಕ್ಷೆಗಳ ಕನ್ನಡಿಯೆನಿಸಿದೆ. ಲೋಕಮಾನ್ಯ ತಿಲಕರು ಕೇಸರಿಯ ಮುಖಾಂತರ ಮರಾಠಿಗರಲ್ಲಿ ಮಾತ್ರವಲ್ಲ, ಭಾರತದಾದ್ಯಂತ ರಾಜಕೀಯ ಚೇತನವನ್ನು ಮೂಡಿಸಲು ಶ್ರಮಿಸಿದರು. ಸರಳ ಮತ್ತು ನೇರಶೈಲಿಯಲ್ಲಿ ರಾಜಕೀಯ ಮತ್ತು ಇತರ ವಿಚಾರಗಳನ್ನು ಸಾದರಪಡಿಸಿ ಜನಮನವನ್ನು ಕೆರಳಿಸಲು ಅವರು ನಡೆಸಿದ ಪ್ರಯೋಗ ಸಫಲವಾಯಿತು. ಬ್ರಿಟಿಷರ ವಿರುದ್ಧ ಭಾರತೀಯರನ್ನು ಬಡಿದೆಬ್ಬಿಸುವಲ್ಲಿ ಅದು ಸಮರ್ಥ ಸೇವೆ ಸಲ್ಲಿಸಿತು. ಸ್ವರಾಜ್ಯ ತಮ್ಮ ಜನ್ಮಸಿದ್ಧ ಹಕ್ಕು ಎಂಬ ಲೋಕಮಾನ್ಯ ತಿಲಕರ ಘೋಷಣೆಯನ್ನು ಅದು ಎತ್ತಿಹಿಡಿಯಿತು. ಅದನ್ನು ಪ್ರಚುರಪಡಿಸಿತು.

ಬಾಲಗಂಗಾಧರ ತಿಲಕರು ವಿಶ್ವನಾಥಶಾಸ್ತ್ರಿ, ಬಿ.ಕೆ.ಚಿಪಳೂಣಕರ, ಜಿ.ಜಿ.ಅಗರಕರ ಅವರೊಂದಿಗೆ ಸೇರಿ 1881 ಜನವರಿ 4 ರಂದು ಕೇಸರಿ ಪತ್ರಿಕೆಯನ್ನು ಪ್ರಾರಂಭಿಸಿದರು. ಪತ್ರಿಕೆಯ ನಿರ್ವಹಣೆಗಾಗಿ ಕೇಸರಿ ಮರಾಠಾ ಟ್ರಸ್ಟ್ ಎಂಬ ಸಂಸ್ಥೆಯ ಸ್ಥಾಪನೆಯಾಯಿತು. ಅಗರಕರ, ತಿಲಕ, ಚಿಪಳೂಣಕರ, ಜಿ.ಕೆ.ಗರ್ಧೆ, ಎಂ.ಬಿ.ನಾಮಜೋಶಿ, ವಿ.ಎಸ್.ಆಪ್ಟೆ ಇವರು ಸಂಸ್ಥಾಪಕ ಮಂಡಳಿಯಲ್ಲಿದ್ದರು. ಈಗಲೂ ಈ ಪತ್ರಿಕೆ ಕೇಸರಿ ಮರಾಠ ಟ್ರಸ್ಟ್ ಸಂಸ್ಥೆಯ ಪರವಾಗಿ ನಡೆಯುತ್ತಿದೆ.

ಪ್ರಾರಂಭದ ಸಂಪಾದಕ ಅಗರಕರ, ಅನಂತರ ಕ್ರಮವಾಗಿ ಲೋಕಮಾನ್ಯ ತಿಲಕ, ಎನ್.ಸಿ.ಕೇಳಕರ, ಕೆ.ಪಿ.ಖಾಡೀಲಕರ, ಜಿ.ವಿ.ಕೇಡಕರ, ಜೆ.ಪಿ.ಕರಂದೀಕರ, ವಿ.ಕೆ.ಭಾವೆ, ಡಿ.ವಿ.ಗೋಖಲೆ, ಜಿ ಎಸ್ ತಿಲಕ್ ಅವರು ಈ ಪತ್ರಿಕೆಯ ಸಂಪಾದಕತ್ವವನ್ನು ನಿರ್ವಹಿಸಿದರು. ಡಾ. ದೀಪಕ್ ಜಯಂತ್ ಟಿಳಕ್ ಈಗಿನ ಸಂಪಾದಕ.

ಕೇಸರಿ ವಾರಪತ್ರಿಕೆಯಾಗಿ ಪ್ರಾರಂಭವಾಯಿತು. ಆಗ 8 ಪುಟಗಳು ಇರುತ್ತಿದ್ದವು. ಬೆಲೆ ಅರ್ಧಾಣೆ. ಪ್ರತಿ ಮಂಗಳವಾರ ಪತ್ರಿಕೆ ಪ್ರಕಟವಾಗುತ್ತಿತ್ತು. 1929ರಲ್ಲಿ ಪುಟಗಳ ಸಂಖ್ಯೆಯನ್ನು 12ಕ್ಕೆ ಹೆಚ್ಚಿಸಲಾಯಿತು. ಅದರ ಜೊತೆಗೆ ಬೆಲೆಯೂ ಒಂದಾಣೆಗೆ ಏರಿತು. ವಾರಕ್ಕೆ ಎರಡು ಸಾರಿ–ಮಂಗಳವಾರ ಮತ್ತು ಶನಿವಾರ– ಪತ್ರಿಕೆ ಪ್ರಕಟವಾಗತೊಡಗಿತು. 1951ರಿಂದ 1962ರ ತನಕ ವಾರದಲ್ಲಿ ಮೂರುದಿನ–ಮಂಗಳವಾರ, ಶುಕ್ರವಾರ ಮತ್ತು ಭಾನುವಾರ–ಪ್ರಕಟವಾಗುತ್ತಿತ್ತು. ಈಗ ಇದು ದಿನಪತ್ರಿಕೆ. ಬೆಳಗ್ಗೆ ಪ್ರಕಟವಾಗುತ್ತದೆ. ಕೇಸರಿ ಮುದ್ರಣಕ್ಕೆ ಹೊಸ ಯಂತ್ರೋಪಕರಣಗಳಿವೆ. ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸುದ್ದಿಗಳ ಪ್ರಕಟಣೆಗೆ ಏರ್ಪಾಡಿದೆ. ಅದರ ನಿಲುವು ರಾಷ್ಟ್ರೀಯ. ಜನರಲ್ಲಿ ರಾಷ್ಟ್ರೀಯ ಭಾವನೆ ಪ್ರಚೋದಿಸುವಲ್ಲಿ ರಾಜಕೀಯ ಅನ್ಯಾಯಗಳ ವಿರುದ್ಧ ನಿರ್ಭೀತವಾಗಿ ಬರೆಯುವಲ್ಲಿ, ಆರ್ಥಿಕ ಅಸಮಾನತೆ ನಿವಾರಿಸುವಲ್ಲಿ ಅದು ಮಹತ್ತ್ವದ ಪಾತ್ರ ನಿರ್ವಹಿಸುತ್ತಿದೆ. (ಎಸ್.ವಿ.ಪಿ.ಎ)

**ಕೇಸರಿಬೇಳೆ ಗಿಡ :** ತೊಗರಿ, ಬಟಾಣಿ ಮುಂತಾದ ಗಿಡಗಳನ್ನು ಹೋಲುವ ಒಂದು ಸಸ್ಯ (ಕುಟುಂಬ:ಲೆಗ್ಯೂಮಿನೋಸೀ, ಉಪಕುಟುಂಬ : ಪ್ಯಾಪಿಲಿಯೋನೇಸೀ, ವೈಜ್ಞಾನಿಕ ಹೆಸರು: ಲ್ಯಾತಿರಸ್ ಸೇಟಿವಸ್). ಇದು ಪಶ್ಚಿಮ ಏಷ್ಯ ಇಲ್ಲವೆ ದಕ್ಷಿಣ ಯುರೋಪಿನ ಮೂಲನಿವಾಸಿ ಎಂದು ಹೇಳಲಾಗಿದೆ. ದನಗಳ ಮೇವಿಗಾಗಿ ಮತ್ತು ಧಾನ್ಯಕ್ಕಾಗಿ ಭಾರತ, ಇರಾನ್, ದಕ್ಷಿಣ ಯೂರೋಪು, ದಕ್ಷಿಣ ಅಮೇರಿಕ, ಮಧ್ಯಪ್ರಾಚ್ಯಗಳಲ್ಲಿ ಇದರ ಸಾಗುವಳಿ ಮಾಡುತ್ತಾರೆ. ಉತ್ತರ, ಮಧ್ಯ ಹಾಗೂ ಪಶ್ಚಿಮ ಭಾರತಗಳಲ್ಲಿ ಸುಮಾರು 40 ಲಕ್ಷ ಎಕರೆಗಳಿಗೂ ಹೆಚ್ಚಿನ ಪ್ರದೇಶಗಳಲ್ಲಿ ಇದರ ಸಾಗುವಳಿಯಾಗುತ್ತದೆ. ಇದು ಭಾರತದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯುವ ಒಟ್ಟು ಪ್ರದೇಶದ ಶೇ. 4 ರಷ್ಟು. ಕೇಸರಿ ಬೇಳೆ ಗಿಡವನ್ನು ಬೆಳೆಯುವ ಮುಖ್ಯ ಪ್ರದೇಶಗಳು ಇವು. ಬಿಹಾರ ರಾಜ್ಯದ ಪಾಟ್ನ, ಗಯ, ಷಹಾಬಾದ್, ಮುಜಫರ್‌ಪುರ, ದರ್ಭಾಂಗ ಮತ್ತು

ಮಾಂಘೀರ್ ಜಿಲ್ಲೆಗಳು, ಮಧ್ಯ ಪ್ರದೇಶದ ರಾಯಪುರ, ಬಿಲಾಸಪುರ, ಬಾಲಘಾಟ್ ಜಿಲ್ಲೆಗಳು, ಪಶ್ಚಿಮ ಬಂಗಾಳದ ಮಿಡ್ನಾಪುರ, ಮುರ್ಷಿದಾಬಾದ್, ಹೂಗ್ಲಿ ಮತ್ತು 24 ಪರಗಣ ಜಿಲ್ಲೆಗಳು, ಮಹಾರಾಷ್ಟ್ರದ ಭಂಡಾರ, ಚಂದಾ ಮತ್ತು ಪರ್ಭಾನಿ ಜಿಲ್ಲೆಗಳು. ಕೊಂಚಮಟ್ಟಿಗೆ ಉತ್ತರಪ್ರದೇಶದ ಪೂರ್ವಭಾಗ ಮತ್ತು ಅಸ್ಸಾಮಿನ ಬ್ರಹ್ಮಪುತ್ರಾ ನದಿ ಕಣಿವೆ ಮತ್ತು ಪಂಜಾಬಿನ ನದಿ ಪಾತ್ರದ ಪ್ರದೇಶಗಳಲ್ಲೂ ಬೆಳೆಸಲಾಗುತ್ತಿದೆ. ಭಾರತದ ಇತರ ಕಡೆಗಳಲ್ಲಿ ಅಲ್ಲಲ್ಲಿ ಕಳೆಯಂತೆ ಸ್ವಾಭಾವಿಕವಾಗಿಯೂ ಬೆಳೆಯುತ್ತದೆ.

ಕೇಸರಿ ಬೇಳೆ ಗಿಡ ಸುಮಾರು 1 ಮಿ.ಎತ್ತರಕ್ಕೆ ಬೆಳೆಯುವ ಏಕವಾರ್ಷಿಕ ಸಸ್ಯ. ಎಲೆಗಳು ಗರಿರೂಪದ ಸಂಯುಕ್ತ ಮಾದರಿಯವು; ಒಂದೊಂದರಲ್ಲೂ ಬುಡದಲ್ಲಿ ಎರಡು ಕಿರು ಎಲೆಗಳು ತುದಿಯಲ್ಲಿ ಹಲವಾರು ಅಡರು ಬಳ್ಳಿಗಳು (ಟೆಂಡ್ರಿಲ್) ಇವೆ. ಅಡರು ಬಳ್ಳಿಗಳು ಮಾರ್ಪಾಡಾದ ಕೆಲವು ಕಿರು ಎಲೆಗಳು. ಎಲೆಗಳ ಕಂಕುಳಲ್ಲಿ ಒಂಟಿ ಹೂಗಳು ಅರಳುತ್ತವೆ. ಹೂಗಳ ಬಣ್ಣ ಕೇಸರಿ; ಕೆಲವೊಮ್ಮೆ ನೀಲಿ ಇಲ್ಲವೇ ಬಿಳಿಯಾಗಿರುವುದುಂಟು. ಫಲ ಪಾಡ್ ಮಾದರಿಯದು. ಅದರ ಬೆನ್ನು ಭಾಗದುದ್ದಕ್ಕೂ ಹಬ್ಬಿದಂತೆ ರೆಕ್ಕೆಯಂತಹ ರಚನೆ ಇದೆ. ಒಳಗೆ 4–5 ಬೀಜಗಳಿವೆ. ಬೀಜಗಳ ಬಣ್ಣ ಬೂದುಮಿಶ್ರಿತ ಕಂದು ಇಲ್ಲವೇ ಹಳದಿ. ಅಲ್ಲಲ್ಲಿ ಚುಕ್ಕಿಗಳಿವೆ.

ಕೇಸರಿ ಬೇಳೆ ಗಿಡ ಎಂಥ ಮಣ್ಣಿನಲ್ಲಾದರೂ ಬೆಳೆಯಬಲ್ಲುದು. ಆದರೂ ಇದರ ಸಾಗುವಳಿಗೆ ಎರೆಭೂಮಿ ಉತ್ಕೃಷ್ಟವಾದುದು. ಶುದ್ಧ ಇಲ್ಲವೇ ಮಿಶ್ರ ಬೆಳೆಯಾಗಿ ಕೃಷಿ ಮಾಡಬಹುದು. ಸಾಮಾನ್ಯವಾಗಿ ಬತ್ತದೊಂದಿಗೆ ಮಿಶ್ರಬೆಳೆಯಾಗಿ ಬೆಳೆಸುತ್ತಾರೆ. ಸಾಗುವಳಿಯ ಕಾಲ ಚಳಿಗಾಲ. ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಸಾಗುವಳಿ ವಿಧಾನವನ್ನನುಸರಿಸಿ ಎಕರೆಯೊಂದಕ್ಕೆ ಸುಮಾರು 5–25 ಕೆ.ಜಿ.ಬೀಜ ಬೇಕಾಗುತ್ತದೆ. ಚೆನ್ನಾಗಿ ಹದಮಾಡಿ ಸರಿಯಾಗಿ ಆರೈಕೆ ಮಾಡಿದ ಭೂಮಿಯಲ್ಲಿ ಬೆಳೆ ಬಲು ಒತ್ತಾಗಿ ಬೆಳೆದು ಕಳೆಗಿಡಗಳು ಬೆಳೆಯಲು ಅವಕಾಶ ಕೊಡುವುದಿಲ್ಲ. ಅದರೆ ಆರೈಕೆ ಸರಿಯಾಗಿಲ್ಲದ ಭೂಮಿಯಲ್ಲಿ ಕೇಸರಿ ಬೇಳೆಯನ್ನೇ ಹೋಲುವ ಮತ್ತು ಅದರದೇ ಕುಟುಂಬದ ವಿವಿಧ ಬಗೆಯ ಕಳೆಗಳು ಬೆಳೆದು ಬಿಡುತ್ತವೆ. ಕಳೆಗಳು ಎಳೆಯವಾಗಿದ್ದಾಗಲೇ ತೆಗೆದುಹಾಕಬೇಕು. ಇಲ್ಲದಿದ್ದಲ್ಲಿ ಅವುಗಳ ಕಾಳುಗಳು ಕೇಸರಿ ಬೇಳೆಯೊಂದಿಗೆ ಮಿಶ್ರವಾಗುವ ಸಂಭವವುಂಟು. ಬಿತ್ತಿದ 4–5 ತಿಂಗಳುಗಳಲ್ಲಿ ಬೆಳೆ ಕೊಯ್ಲಿಗೆ ಬರುತ್ತದೆ. ಎಲೆಗಳು ಹಳದಿ ಬಣ್ಣಕ್ಕೆ ತಿರುಗಲಾರಂಭಿಸಿದಾಗ ಕೊಯ್ಯಬೇಕು. ಆ ಸಮಯದಲ್ಲಿ ಕಾಯಿಗಳು ಇನ್ನೂ ಮಾಗಿರುವುದಿಲ್ಲ. ಕಾಯಿಗಳು ಸಂಪೂರ್ಣ ಮಾಗಿಬಿಟ್ಟರೆ ಅವು ಬಿರಿದು ಕಾಳುಗಳೆಲ್ಲಾ ಉದುರಿಹೋಗುವ ಸಂಭವವಿರುತ್ತದೆ. ಕುಡುಗೋಲಿನಿಂದ ಕೊಯ್ದು ಇಲ್ಲವೇ ಗಿಡಗಳನ್ನು ಬೇರುಸಹಿತ ಕಿತ್ತು ಗುಪ್ಪೆ ಹಾಕಿ ಬಿಸಿಲಿನಲ್ಲಿ ಒಣಗಿಸಲಾಗುತ್ತದೆ. ಅನಂತರ ಒಕ್ಕಣಿಸಿ, ತೂರಿ ಕಾಳುಗಳನ್ನು ಬೇರ್ಪಡಿಸಲಾಗುತ್ತದೆ. ಬಿತ್ತನೆಯ ಪರಿಮಾಣ ಮತ್ತು ಕೃಷಿಯ ಆರೈಕೆಯನ್ನು ಅವಲಂಬಿಸಿ ಕೇಸರಿ ಬೇಳೆಯ ಇಳುವರಿ ಎಕರೆಯೊಂದಕ್ಕೆ 15–45 ಕೆಜಿ ವರೆಗೆ ವ್ಯತ್ಯಾಸವಾಗುತ್ತದೆ. ಜೊತೆಗೆ 20–60 ಕೆಜಿ ಮೇವು ದೊರೆಯುತ್ತದೆ.

ಕೇಸರಿ ಬೇಳೆ ಗಿಡಕ್ಕೆ ಆಯ್ಡಿಯಮ್ ಎರಿಸೈಫಾಯ್ಡಿಸ್ ಮತ್ತು ಪೆರಾನಾಸ್ಪೊರ ಲ್ಯಾಥಿರೀಪಾಲುಸ್ಟ್ರಿಸ್ ಎಂಬ ಶಿಲೀಂಧ್ರಗಳಿಂದ ಬೂಸ್ಟು ರೋಗವೂ ಯೂರೋಮೈಸಿಸ್ ಎಂಬುದರಿಂದ ತುಕ್ಕು ಬೂಸ್ಟು ರೋಗವು ಫ್ಯೂಸೇರಿಯಂ ಆರ್ಥೋಸಿರಾಸ್ ಎಂಬ ಶಿಲೀಂದ್ರದಿಂದ ಬಾಡುರೋಗವು ಉಂಟಾಗುತ್ತದೆ. ಇವುಗಳಲ್ಲೆಲ್ಲ ಬಾಡುರೋಗವೇ ಅತ್ಯಂತ ಹಾನಿಕರ. ಇತ್ತೀಚೆಗೆ ಈ ರೋಗವನ್ನು ನಿರೋಧಿಸುವ ಗುಣವುಳ್ಳ ತಳಿಯೊಂದನ್ನು (T.2–12) ತಳೀಕರಣ ಪ್ರಯೋಗಗಳಿಂದ ಪಡೆಯಲಾಗಿದ್ದು ಸಾಗುವಳಿಗೆ ಇದನ್ನೇ ಉಪಯೋಗಿಸಲಾಗುತ್ತದೆ.

ಬೀಜಗಳ ಬಣ್ಣ ಮತ್ತು ಗಾತ್ರ ಹೂಗಳ ಬಣ್ಣ ಮತ್ತು ಕಾಯಿಗಳ ಮೇಲಿನ ಮಚ್ಚೆಗಳ ಆಧಾರದ ಮೇಲೆ ಕೇಸರಿ ಬೇಳೆ ಗಿಡವನ್ನು ಅನೇಕ ಬಗೆಗಳಾಗಿ ವಿಂಗಡಿಸಲಾಗಿದೆ. ಮಾರುಕಟ್ಟೆಗಳಲ್ಲಿ ಸುಮಾರು 56 ವಿಧದ ಕಾಳುಗಳನ್ನು ಗುರುತಿಸಬಹುದು. ಕೆಲವು ವಿಧಗಳಲ್ಲಿ ಕಾಳುಗಳು ಚಿಕ್ಕವು, ಇನ್ನು ಕೆಲವಲ್ಲಿ ದಪ್ಪಗಾತ್ರದವು. ದಪ್ಪಗಾತ್ರದವನ್ನು ಲಾಕ್ ಎಂದೂ ಸಣ್ಣ ಗಾತ್ರದ ಕಾಳುಗಳನ್ನು ಲಾಖೋರಿ ಎಂದೂ ಕರೆಯಲಾಗುತ್ತದೆ. ಕೇಸರಿ ಬೇಳೆಯನ್ನು ಬಹಳ ಹಿಂದಿನಿಂದಲೂ ಆಹಾರವಾಗಿ ಉಪಯೋಗಿಸಲಾಗುತ್ತಿದೆ. ಬರಗಾಲದಲ್ಲಂತೂ ಇದು ಬಡವರ ಪ್ರಧಾನ ಆಹಾರ. ತೊಗರಿ ಬೇಳೆಯಂತೆ ಇದನ್ನು ಬೇಯಿಸಿ ಉಪಯೋಗಿಸುವುದಲ್ಲದೆ ಇದರಿಂದ ಚಪಾತಿ, ಮುದ್ದೆ ಮುಂತಾದವನ್ನು ಸಹ ಮಾಡುತ್ತಾರೆ. ತೊಗರಿ ಬೇಳೆಯೊಂದಿಗೆ ಕೀಳ್ಬೆರಕೆ ಮಾಡುವುದು ಉಂಟು. ಹಿಂಡಿ, ಉಪ್ಪುಗಳೊಂದಿಗೆ ಮಿಶ್ರಮಾಡಿ ದನಗಳ ಪೌಷ್ಟಿಕ ಆಹಾರದೊಂದಿಗೆ ಬಳಸುವುದಿದೆ. ಕಾಳುಗಳಲ್ಲಿ ಶೇ. 58.2 ಕಾರ್ಬೋಹೈಡ್ರೇಟ್, ಶೇ. 28.2 ಪ್ರೋಟೀನು, ಶೇ. 10.0 ತೇವಾಂಶ, ಶೇ. 3.0 ಲೋಹಾಂಶ, ಶೇ. 0.6 ಕೊಬ್ಬು ಇವೆ. ಇವುಗಳ ಜೊತೆಗೆ ಕ್ಯಾರೋಟಿನ್, ಬಯೋಟೀನ್, ನಿಕೋಟಿನಿಕ್ ಆಮ್ಲ, ಪ್ಯಾಂಟೋಥಿನಿಕ್ ಆಮ್ಲ, ಇನಾಸಿಟಾಲ್, ಆಸ್ಕಾರ್ಬಿಕ್ ಆಮ್ಲ ಮುಂತಾದ ವಿಟಮಿನ್‌ಗಳು ಇವೆ. ಕೇಸರಿ ಬೇಳೆ ಮಾತ್ರವಲ್ಲದೆ ಎಲೆಯನ್ನು ಸೊಪ್ಪು ತರಕಾರಿಯಾಗಿ ಬಳಸುವ ರೂಢಿ ಇದೆ. ಗಿಡವನ್ನು ದನಗಳ ಮೇವಾಗಿ ಬಳಸುತ್ತಾರೆ. ಹಸುರಾಗಿ ಇರುವಾಗಲೇ ಗಿಡಗಳನ್ನು ಕತ್ತರಿಸಿ ತಿನಿಸಬಹುದು, ಇಲ್ಲವೆ ಹೊಲಕ್ಕೆ ದನಗಳನ್ನು ಬಿಟ್ಟು ಮೇಯಿಸಬಹುದು. ಒಣಗಿದ ಮೇಲೂ ಇದನ್ನು ಮೇವಾಗಿ ಬಳಸುವುದುಂಟು.

ಕೇಸರಿ ಬೇಳೆ ಗಿಡದಲ್ಲಿ ಇಷ್ಟೆಲ್ಲ ಪೌಷ್ಟಿಕಾಂಶಗಳಿವೆ, ನಿಜ. ಆದರೆ ಇದರ ಸತತವಾದ ಸೇವನೆಯಿಂದ ಒಂದು ವಿಚಿತ್ರ ಬಗೆಯ ರೋಗ ತಲೆದೋರುತ್ತದೆ. ನರಸಂಬಂಧವಾದ ಈ ರೋಗಕ್ಕೆ ಲ್ಯಾಥಿರಿಸಂ ಎಂದು ಹೆಸರು. ಕೇಸರಿ ಬೇಳೆಯ ಬಳಕೆ ಹೆಚ್ಚಾಗಿರುವ ಬಿಹಾರ, ಮಧ್ಯಪ್ರದೇಶ, ಉತ್ತರಪ್ರದೇಶದ ಪೂರ್ವಭಾಗಗಳಲ್ಲಿ ಸಾಂಕ್ರಾಮಿಕವಾಗಿ ಈ ರೋಗ ಕಾಣಿಸಿಕೊಳ್ಳುತ್ತದೆ. ಮುಂಗಾರು ಮಳೆಯ ಕಾಲದಲ್ಲಿ ಇದು ಹೆಚ್ಚು. ಈ ಜಾಡ್ಯ ತಗುಲಿದ ರೋಗಿಯ ಕಾಲುಗಳು ಪಾರ್ಶ್ವವಾಯು ಹಿಡಿದಂತಾಗಿ ಅವನ ನಡಿಗೆ ಕುಂಟಿತಗೊಳ್ಳುತ್ತದೆ. ನರಹುರಿ ರಚನಾ ವಿಕಾರಕ್ಕೆ ಒಳಗಾಗುತ್ತಾ ಹೋಗುತ್ತದೆ. ತೊಡೆ ಹಾಗೂ ಮುಂಗಾಲುಗಳ ಮಾಂಸಖಂಡಗಳು ಸೆಡೆತುಕೊಳ್ಳುತ್ತವೆ. ನಡಿಗೆ ಥಟ್ಟನೆಯ ಸೆಳೆತಕ್ಕೊಳಗಾಗಿ ನಡೆಯುವಾಗ ಕಾಲುಗಳನ್ನು ಬಳಸಿ ಹಾಕಬೇಕಾಗುತ್ತದೆ. ಕ್ರಮೇಣ ಇಡೀ ಕಾಲುಗಳೇ ಸಂಪೂರ್ಣವಾಗಿ ಪಾರ್ಶ್ವರೋಗಪೀಡಿತವಾಗಿ ನಡೆಯುವುದಕ್ಕಾಗದೆ ಕೈ ಮತ್ತು ಮಂಡಿಯೂರಿ ತೆವಳಬೇಕಾಗುತ್ತದೆ. ಕಾಲುಗಳಿಗೆ ಇಷ್ಟೆಲ್ಲ ಕೇಡುಂಟಾದರೂ ಹೃದಯದ ಬಡಿತದಲ್ಲಿ, ರಕ್ತದ ಒತ್ತಡದಲ್ಲಿ ಮತ್ತು ಶ್ವಾಸಕೋಶಗಳಲ್ಲಿ ಯಾವಕುಂದೂ ಕಾಣುವುದಿಲ್ಲ. ಮನುಷ್ಯರಲ್ಲಿ



ಮಾತ್ರವಲ್ಲದೆ ದನಕರುಗಳಲ್ಲೂ ಕುದುರೆಗಳಲ್ಲೂ ಈ ರೋಗ ಕಾಣಿಸಿಕೊಳ್ಳುತ್ತದೆ. ಕುದುರೆಗಳಲ್ಲಿ ಕಾಲುಗಳು ಮಾತ್ರವಲ್ಲದೆ ಧ್ವನಿಪೆಟ್ಟಿಗೆಯ ಸ್ನಾಯುಗಳೂ ಹಾನಿಗೊಳಗಾಗುತ್ತದೆ. ಇದರಿಂದಾಗಿ ಕುದುರೆಗಳಿಗೆ ಉಸಿರುಕಟ್ಟಿದಂತಾಗಿ ಅವು ವಿಪರೀತ ನರಳುತ್ತವೆ. ಕೆಲವೊಮ್ಮೆ ಸಾಯುವುದೂ ಉಂಟು. ಚಿಕ್ಕ ಪ್ರಾಯದ ಗಂಡಸರಲ್ಲೂ, ಗಂಡು ಪ್ರಾಣಿಗಳಲ್ಲೂ ಈ ರೋಗ ಹೆಚ್ಚು ಪ್ರಕಟಗೊಳ್ಳುತ್ತದೆ. ಲಾಖೋರಿ ಬೆಳೆಗಳಿಗಿಂತ ಲಾಕ್ ಬೇಳೆಗಳ ಬಳಕೆಯಿಂದ ರೋಗ ಸಂಭವನೀಯತೆ ಹೆಚ್ಚು ಎಂದು ಹೇಳಲಾಗಿದೆ. ರೋಗಕಾರಕಗಳು ಬಹುಕಾಲ ಸ್ಪಷ್ಟವಾಗಿ ತಿಳಿದಿರಲಿಲ್ಲ. ಕೆಲವರ ಅಭಿಪ್ರಾಯದ ಪ್ರಕಾರ ಬೆಳೆಯಲ್ಲಿರುವ ವಿಷಪೂರಿತವಾದ ಕ್ಷಾರೀಯ ವಸ್ತುಗಳು ಇಲ್ಲವೇ ಸಾವಯವ

ಫೈಟೇಟ್ ವಸ್ತುಗಳು ಇಲ್ಲವೆ ಅಮೈನ್ ವಸ್ತುಗಳು ರೋಗಕ್ಕೆ ಕಾರಣ. ಕೆಲವು ವರದಿಗಳ ಪ್ರಕಾರ ಕೇಸರಿ ಬೇಳೆಯಲ್ಲಿರುವ ಸೆಲೀನಿಯಂ ಎಂಬ ಧಾತು ದೇಹದೊಳಕ್ಕೆ ಪ್ರವೇಶಿಸಿದಾಗ ಮಿಥಿಯೋನಿನ್ ಎಂಬ ಸಂಯುಕ್ತದ ವರ್ತನಾ ಕ್ರಿಯೆಗಳಿಗೆ ಅಡ್ಡಿಯುಂಟಾಗಿ ಈ ರೋಗ ಸಂಭವಿಸುತ್ತದೆ. ಕೆಲವರು ಹಸಿ ಬೇಳೆಯನ್ನು ಉಗ್ರಾಣದಲ್ಲಿ ಶೇಖರಿಸಿಟ್ಟಾಗ ಅದರ ಮೇಲೆ ಬೆಳೆಯುವ ಬೂಸ್ಟಿನಿಂದಾಗಿ ಈ ರೋಗ ಬರುತ್ತದೆ ಎಂದು ಹೇಳುತ್ತಾರೆ. ಲ್ಯಾಥಿರಿಸಂ ಒಂದು ರೀತಿಯ ವೈರಸ್ ರೋಗವೆಂದು ಹೇಳುವುದಿದೆ. ಹೈದರಾಬಾದಿನಲ್ಲಿರುವ ಪೋಷಣಾ ಸಂಶೋಧನಾಲಯದಲ್ಲಿ ನಡೆಸಿದ ಈಚೀಚಿನ ಪ್ರಯೋಗಗಳಿಂದ ಬೇಳೆಯಲ್ಲಿ ಒಂದು ಬಗೆಯ ಜೀವಾಣುವಿಷ(ಟಾಕ್ಸಿನ್) ಇರುವುದು ಗೊತ್ತಾಗಿದೆ. ಕೋಳಿ, ಪಾರಿವಾಳ, ಕೋತಿ ಮುಂತಾದ ಪ್ರಾಣಿಗಳ ಮೇಲೆ ಈ ವಿಷವನ್ನು ಪ್ರಯೋಗಿಸಿ ಇದೇ ಲ್ಯಾಥಿರಿಸಂ ರೋಗಕ್ಕೆ ಕಾರಣವೆಂದು ಖಚಿತಪಡಿಸಲಾಗಿದೆ. ರೋಗದ ಪ್ರಾರಂಭದ ಹಂತಗಳಲ್ಲಿ ಪ್ರೊಸ್ಟಿಗ್ಮಿನ್ ಎಂಬ ಔಷಧಿಯ ಬಳಕೆಯಿಂದ ಇದನ್ನು ಕೊಂಚಮಟ್ಟಿಗೆ ಪರಿಹರಿಸಬಹುದಾದರೂ ಸಂಪೂರ್ಣವಾಗಿ ಗುಣಮಾಡಲಾಗುವುದಿಲ್ಲ. ಕೇಸರಿ ಬೇಳೆಯ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಪೌಷ್ಟಿಕ ಆಹಾರ ಸೇವನೆಯಿಂದ ರೋಗವನ್ನು ತಡೆಯಬಹುದು. ಇಪ್ಪೆ ಮರದ ಹೂವಿನೊಂದಿಗೆ ಸೇರಿಸಿ ಬೇಳೆಯನ್ನು ಉಪಯೋಗಿಸಿದರೆ ಇಲ್ಲವೇ ಬೇಳೆಯನ್ನು ಬೇಯಿಸುವ ಮೊದಲು 24 ಗಂಟೆಗಳ ಕಾಲ ನೀರಿನಲ್ಲಿ ನೆನೆಯಿಟ್ಟರೆ ರೋಗದ ಅಪಾಯವನ್ನು ನಿವಾರಿಸಬಹುದು ಎಂದು ಹೇಳಲಾಗಿದೆ. ಭಾರತದ ಹಲವಾರು ಸಂಶೋಧನಾಲಯಗಳಲ್ಲಿ ನಡೆದಿರುವ ಸಂಶೋಧನೆಗಳಿಂದ ಕೇಸರಿ ಬೇಳೆಯಲ್ಲಿಯ ವಿಷವಸ್ತು ನೀರಿನಲ್ಲಿ ಕರಗುವುದರಿಂದ ಅದನ್ನು ಸುಲಭವಾಗಿ ಹೊರತೆಗೆಯಬಹುದೆಂದು ಇದರಿಂದ ಬೇಳೆ ನಿರಪಾಯಕಾರಿಯಾಗುವುದೆಂದು ಗೊತ್ತಾಗಿದೆ. ಕಾಳುಗಳಿಂದ ಸಿಪ್ಪೆಯನ್ನು ಬೇರ್ಪಡಿಸಬೇಕು. ಪಾತ್ರೆಯೊಂದರಲ್ಲಿ ನೀರನ್ನು ಚೆನ್ನಾಗಿ ಕಾಯಿಸಿ ಅದರಲ್ಲಿ ಸಿಪ್ಪೆ ತೆಗೆದ ಕಾಳುಗಳನ್ನು ಸುಮಾರು ಒಂದು ಗಂಟೆಯಕಾಲ ನೆನೆಯಿಡಬೇಕು (ಕಾಳುಗಳನ್ನು ಬೇಯಿಸಬಾರದು). ಇದರಿಂದ ಕಾಳಿನಲ್ಲಿಯ ವಿಷವೆಲ್ಲ ನೀರಿಗೆ ವರ್ಗಾವಣೆಯಾಗುತ್ತದೆ. ಅನಂತರ ನೀರನ್ನು ಚೆಲ್ಲಿ ಕಾಳುಗಳನ್ನು ಬಿಸಿಲಿನಲ್ಲಿ ಒಣಗಿಸಬೇಕು. ಇದರಿಂದ ಕಾಳಿನಲ್ಲಿಯ ಪ್ರೋಟೀನುಗಳೆಲ್ಲ ಅಲ್ಲಿಯೇ ಉಳಿದು ವಿಷ ಮಾತ್ರ ಹೊರಟುಹೋಗುತ್ತದೆ.

ಭಾರತಸರ್ಕಾರದ ಆರೋಗ್ಯ ಸಚಿವ ಖಾತೆಯ ಆಹಾರ ಕಲ್ಬೆರಕೆ ಪ್ರತಿಬಂಧನ ನಿಯಮಗಳ (1955) ಪ್ರಕಾರ ಕೇಸರಿ ಬೇಳೆ ಹಾಗೂ ಅದರ ಉತ್ಪನ್ನಗಳ ಬಳಕೆಯನ್ನು ನಿಷೇಧಿಸಲಾಗಿದೆ. (ಎಚ್.ಎನ್.ಸಿ.)

**ಕೇಸೀನ್ :** ಸ್ತನಿಗಳ ಹಾಲಿನಲ್ಲಿ ಕ್ಯಾಲ್ಸಿಯಂ ಕೇಸಿನೇಟ್ ಎಂಬ ಲವಣದ ರೂಪದಲ್ಲಿರುವ ಒಂದು ಪ್ರಮುಖ ಪ್ರೋಟೀನು; ಫಾಸ್ಫೋಪ್ರೋಟೀನುಗಳ ಒಂದು ಬಗೆ; ಇದರ ಪರಿಮಾಣ ಹಾಲಿನಲ್ಲಿಯ ಒಟ್ಟು ಪ್ರೋಟೀನುಗಳ 80% ರಷ್ಟು. ಕೇಸೀನಿನಲ್ಲಿ ಹೆಚ್ಚು ಕಡಿಮೆ ಎಲ್ಲಾ ಬಗೆಯ ಅಮೈನೋಆಮ್ಲಗಳು ಇರುವುದರಿಂದ ಇದು ಹಾಲಿನ ಪ್ರಧಾನ ಪೌಷ್ಟಿಕಾಂಶಗಳಲ್ಲಿ ಒಂದು ಎನ್ನಿಸಿದೆ. ಇದನ್ನು ಹಾಲಿನಿಂದ ಬೇರ್ಪಡಿಸಿ ಶುದ್ಧೀಕರಿಸಿ ಬಿಳಿ ಇಲ್ಲವೇ ಕೆನೆ ಬಣ್ಣದ ಪುಡಿಯಾಗಿ ಪಡೆಯಬಹುದು. ಕೇಸೀನನ್ನು ಹಾಲಿನಿಂದ ನೇರವಾಗಿ ಪಡೆಯುವುದಿಲ್ಲ. ಕೆನೆ ತೆಗೆದ ಹಾಲಿಗೆ (ಸ್ಕಿಮ್ಡ್ ಮಿಲ್ಕ್) ಹೈಡ್ರೋಕ್ಲೋರಿಕ್ ಇಲ್ಲವೆ ಸಲ್ಫ್ಯೂರಿಕ್ ಆಮ್ಲವನ್ನು ಸೇರಿಸಿ ಅಥವಾ ಕರುಗಳ ಜಠರದಿಂದ ಪಡೆಯಲಾಗುವ ರೆನೆಟ್ ಎಂಬ ವಸ್ತುವನ್ನು ಸೇರಿಸಿ ಆ ಹಾಲು ಗರಣೆಗಟ್ಟುವಂತೆ ಮಾಡುತ್ತಾರೆ. ಈ ಕ್ರಿಯೆಗೆ ನಿಗದಿಯಾದ ಒತ್ತಡ ಮತ್ತು ಉಷ್ಣತೆ ಬೇಕು. ಹೀಗೆ ತಯಾರಾಗುವ ಗರಣೆಯೇ ಕೇಸೀನ್ ಸಂಯುಕ್ತ. ಗರಣೆಗಟ್ಟಿ ಉಳಿಯುವ ದ್ರವಾಂಶದಿಂದ ಗರಣೆಯನ್ನು ಬೇರ್ಪಡಿಸಿ, ಹಲವಾರು ಬಾರಿ ತೊಳೆದು ಬಿಸಿಗಾಳಿಯ ಸಹಾಯದಿಂದ ಒಣಗಿಸಿ, ಪುಡಿಮಾಡಿ, ಚೀಲಗಳಲ್ಲಿ ಶೇಖರಿಸುತ್ತಾರೆ. ಆಮ್ಲವನ್ನು ಸೇರಿಸಿ ಪಡೆಯುವ ಕೇಸೀನಿಗೆ ಆಮ್ಲೀಯ ಕೇಸೀನೆಂದೂ ರೆನೆಟ್ ಬಳಸಿ ಪಡೆಯುವ ಕೇಸೀನಿಗೆ ರೆನೆಟ್ ಕೇಸೀನೆಂದು ಹೆಸರು.

ಶುದ್ಧರೂಪದ ಕೇಸೀನ್ ನೀರಿನಲ್ಲಾಗಲಿ ಸಾವಯವ ವಿಲೀನಕಗಳಲ್ಲಾಗಲೀ ಕರಗುವುದಿಲ್ಲ. ಆದರೆ ಕೆಲವು ಲವಣಗಳ ರೂಪದಲ್ಲಿ ಕರಗುತ್ತದೆ. ಆಮ್ಲಗಳೊಂದಿಗೂ ಕ್ಷಾರಗಳೊಂದಿಗೂ ವರ್ತಿಸಿ ಹಲವಾರು ಬಗೆಯ ಸಂಯುಕ್ತಗಳಾಗಿ ಪರಿವರ್ತಿತವಾಗುತ್ತದೆ.

ಕೇಸೀನಿಗೆ ಹಲವಾರು ಕೈಗಾರಿಕಾ ಉಪಯೋಗಗಳಿವೆ. ಇವುಗಳಲ್ಲಿ ಮುಖ್ಯವಾದವು ಕಾಗದ, ಬಣ್ಣ, ಗೋಂದು, ಕೃತಕ ರೇಷ್ಮೆ ಹಾಗೂ ಪ್ಲಾಸ್ಟಿಕ್ ಕೈಗಾರಿಕೆಗಳು. ಕಾಗದದ ಮೇಲೆ ಕೇಸೀನಿನ ತೆಳುವಾದ ಲೇಪಕೊಡುವುದರಿಂದ ಅದರ ಮೇಲೆ ಛಾಯಾಚಿತ್ರಗಳನ್ನು ಮುದ್ರಿಸುವುದು ಸುಲಭವಾಗುತ್ತದೆ. ವಿವಿಧ ಬಗೆಯ ಬಣ್ಣಗಳಿಗೆ ಕೇಸೀನನ್ನು ಸೇರಿಸಿ ಅವನ್ನು ಉತ್ತಮಗೊಳಿಸುವುದು ರೂಢಿಯಲ್ಲಿದೆ. ಆಮ್ಲೀಯ ಕೇಸೀನನ್ನು ಸುಣ್ಣ, ಸೋಡಿಯಮ್ ಸಂಯುಕ್ತ ಮತ್ತು ಯಾವುದಾದರೂ ಒಂದು ಬೂಷ್ಟು ನಿರೋಧಕ ವಸ್ತುವಿನೊಂದಿಗೆ ಸೇರಿಸಿ ಮರದ ಸಾಮಾನುಗಳನ್ನು ಬಂಧಿಸಲು ಬಳಸುವ ಗೋಂದನ್ನು ತಯಾರಿಸಬಹುದು. ಉಣ್ಣೆಯನ್ನು ಹೋಲುವ ಹಲವಾರು ರೀತಿಯ ಕೃತಕ ರೇಷ್ಮೆ ಎಳೆಗಳನ್ನು ತಯಾರಿಸುವುದಕ್ಕೂ ಕೇಸೀನನ್ನು ಉಪಯೋಗಿಸುತ್ತಾರೆ. ರೆನೆಟ್ ಕೇಸೀನನ್ನು ಪ್ಲಾಸ್ಟಿಕ್ ತಯಾರಿಕೆಯಲ್ಲಿ ವಿಪುಲವಾಗಿ ಬಳಸುತ್ತಾರೆ. ಕೊಂಬು, ದಂತ ಮುಂತಾದವನ್ನು ಈ ಪ್ಲಾಸ್ಟಿಕ್ ಹೋಲುತ್ತದೆ. ಇದನ್ನು ಮುಖ್ಯವಾಗಿ ಗುಂಡಿ, ಬ್ರಷ್ಷುಗಳ ಎಳೆಗಳು, ಬಿಲಿಯರ್ಡ್ ಚಂಡುಗಳು ಮುಂತಾದವುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಮೇಲೆ ಹೇಳಿದ ಬಳಕೆಗಳಲ್ಲದೆ ಕೇಸೀನನ್ನು ಔಷಧಿ ಹಾಗೂ ಅಲಂಕಾರ ವಸ್ತುಗಳ ಉತ್ಪಾದನೆಯಲ್ಲೂ ಚರ್ಮ ಹದಗೊಳಿಸುವುದಕ್ಕೂ ಬಿಳಿಯ ಪಾದರಕ್ಷೆಗಳನ್ನು ಶುಭ್ರಗೊಳಿಸುವ ಹಾಗೂ ಹೊಳಪುಕೊಡುವ ವಸ್ತುಗಳ ತಯಾರಿಕೆಯಲ್ಲೂ ಸಾಬೂನು ಮತ್ತು ಕೀಟನಾಶಕ ವಸ್ತುಗಳ ತಯಾರಿಕೆಯಲ್ಲೂ ಉಪಯೋಗಿಸುವುದುಂಟು.

(ಆರ್.ಎಸ್.ಎನ್.; ಪಿ.ಎಸ್.ಆರ್.ಪಿ.)

**ಕೇ–ಸ್ಮಿತ್, ಷೀಲ :** 1887–1956. ಇಂಗ್ಲಿಷ್ ಕಾದಂಬರಿಗಾರ್ತಿ. ವೈದ್ಯನ ಮಗಳು. ಹುಟ್ಟಿದ್ದು ಸೇಂಟ್ ಲೆನರ್ಡ್ಸ್‌ನಲ್ಲಿ. ಸ್ವತಂತ್ರವಾಗಿ ಓದಿಕೊಂಡು ಚಿಕ್ಕಂದಿನಲ್ಲಿಯೇ ಬರವಣಿಗೆಯನ್ನು ಆರಂಭಿಸಿದಳು. ದಿ ಟ್ರ್ಯಾಂಪಿಂಗ್ ಮೆಥಾಡಿಸ್ಟ್ (1908) ಈಕೆಯ ಪ್ರಥಮ ಕಾದಂಬರಿ. ಸ್ಪಾರ್‌ಬ್ರೇಸ್(1909), ಸಸೆಕ್ಸ್ ಗೋರ್ಸ್ (1916), ಟಾಮರಿ ಟೌನ್ (1919), ಗ್ರೀನ್ ಆ್ಯಪಲ್ ಹಾರ್‌ವೆಸ್ಟ್ (1920), ದಿ ಎಂಡ್ ಆಫ್ ದಿ ಹೌಸ್ ಆಫ್ ಆಲಾರ್ಡ್(1923)–ಇವು ಅನಂತರ ಬಂದ ಪುಸ್ತಕಗಳು. ಕೊನೆಯ ಪುಸ್ತಕ ಈಕೆಗೆ ಅಪಾರ ಕೀರ್ತಿಯನ್ನು ತಂದಿತು. 1924ರಲ್ಲಿ ಟಿ.ಪೆನ್‌ರೋಸ್ ಫ್ರೈ ಎಂಬ ಪಾದ್ರಿಯನ್ನು ಈಕೆ ಮದುವೆಯಾದಳು. 1929ರಲ್ಲಿ ಇಬ್ಬರೂ ರೋಮನ್ ಕ್ಯಾಥೊಲಿಕ್ ಗುಂಪಿಗೆ ಮತಾಂತರಹೊಂದಿ ಸಸೆಕ್ಸ್‌ನಲ್ಲಿ ನೆಲೆಯಾಗಿ ನಿಂತು ಸ್ವಲ್ಪ ಜಮೀನು ಕೊಂಡರು. ಷೆಪರ್ಡ್ಸ್ ಇನ್ ಸ್ಯಾಕ್‌ಕ್ಲಾತ್ (1930), ಎಂಬರ್‌ಲೇನ್ (1940), ಟಾಂಬುರಿನ್, ಟ್ರಂಪೆಟ್ ಅಂಡ್ ಡ್ರಮ್ (1943), ದಿ ಲಾರ್ಡ್‌ನರ್ಸ್ ಅಂಡ್ ದಿ ಲಾರೆಲ್‌ವುಡ್ಸ್ (1948), ಟ್ರೆಷರ್ಸ್ ಆಫ್ ದಿ ಸ್ನೋ (1949), ಮಿಸೆಸ್ ಗೇಯ್‌ಲಿ (1951), ದಿ ವ್ಯೂ ಫ್ರಂ ದಿ ಪಾರ್ಸನೇಜ್ (1954)– ಇವು ಈಕೆಯ ಇತರ ಕಾದಂಬರಿಗಳು. ಜೋನ್ಸ್ ಗೊಡ್ಡನ್ ಮ್ಯಾರೀಡ್ (1926) ಎಂಬುದು ಕಥಾ ಸಂಕಲನ. ವಿಲ್ಲೋಸ್ ಫೋರ್ಜ್ (1914), ಸೇಂಟ್ಸ್ ಇನ್ ಸಸೆಕ್ಸ್ (1923), ಸಾಂಗ್ಸ್ ಲೇಟ್ ಅಂಡ್ ಅರ್ಲಿ (1931)– ಇವು ಮೂರು ಕವನ ಸಂಕಲನಗಳು. ತ್ರೀ ವೇಸ್ ಹೋಂ(1937) ಎಂಬುದು ಆತ್ಮ ಚರಿತ್ರೆ. ದಿ ವೀಲ್ಡ್ ಆಫ್ ಕೆಂಟ್ ಅಂಡ್ ಸಸೆಕ್ಸ್ (1953) ತನ್ನ ದೇಶವನ್ನು ಪರಿಚಯಮಾಡಿಕೊಡುವ ವಿವರಣಾತ್ಮಕ ಪುಸ್ತಕ. 1943–49ರ ಅವಧಿಯಲ್ಲಿ ಈಕೆ ಜಿ.ಬಿ. ಸ್ಟರ್ನನ ಸಹಕಾರದೊಂದಿಗೆ ಜೇನ್ ಆಸ್ಟಿನ್ನಳನ್ನು ಕುರಿತ ಎರಡು ಪುಸ್ತಕಗಳನ್ನು ಬರೆದಳು. (ಎಚ್.ವಿ.ಎಸ್.)

ಇವಳ ಕಾದಂಬರಿಗಳು ಹಳ್ಳಿಯ ಬದುಕನ್ನು ಕುರಿತವು. ಅವುಗಳ ಕ್ರಿಯೆಗೆ ಹಳ್ಳಿಯ ಜೀವನದ ಆವರಣವೇ ಬೇಕೆಂದಿಲ್ಲ. ಊರಿನಲ್ಲಾದರೂ ನಡೆಯಬಹುದು; ಆದರೆ ಹಳ್ಳಿಯ ಜೀವನದ ಸರಳತೆಯನ್ನು ಇವಳು ಅಳವಡಿಸಿಕೊಂಡಳು. *

**ಕೇಳಕರ, ನರಸಿಂಹ ಚಿಂತಾಮಣಿ :** 1872–1947. ಸ್ವಾತಂತ್ರ್ಯಪೂರ್ವ ಭಾರತದ ಪ್ರಮುಖ ರಾಜಕಾರಣಿ, ಲೋಕಮಾನ್ಯ ತಿಲಕರ ಅನುಯಾಯಿ. ಮರಾಠಿ ಸಾಹಿತ್ಯ ಸಾಮ್ರಾಟನೆಂಬ ಅಭಿಧಾನ ಪಡೆದ ಸುಪ್ರಸಿದ್ಧ ವ್ಯಕ್ತಿ. ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ (ಆಗಿನ ಮಿರಜ್ ಸಂಸ್ಥಾನಕ್ಕೆ ಸೇರಿದ) ಮೋಡನಿಂಬ ಗ್ರಾಮದಲ್ಲಿ 1872ರ ಆಗಸ್ಟ್ 24ರಂದು ಜನನ. ಮಿರಜ್, ಕೊಲ್ಹಾಪುರ, ಪುಣೆ, ಮುಂಬಯಿಗಳಲ್ಲಿ ಶಿಕ್ಷಣ ಪೂರೈಸಿ ಬಿ.ಎ, ಎಲ್‌ಎಲ್.ಬಿ. ಪದವೀಧರರಾದರು (1894). ಅನಂತರ ಸಾತಾರಾ ನಗರದಲ್ಲಿ ವಕೀಲಿ ಪ್ರಾರಂಭಿಸಿದರು. ಬಹು ಬೇಗ ಅಲ್ಲಿಯ ವೃತ್ತಿ ಬಾಂಧವರಲ್ಲಿ ಜನಪ್ರಿಯರೂ ಪ್ರಭಾವಶಾಲಿಗಳೂ ಆದರು. ಲೇಖನ, ಭಾಷಣ, ಆಟ, ನಾಟಕ, ಗಾಯನ ಮುಂತಾದ ಇತರ ವೃತ್ತಿಗಳಲ್ಲೂ ಇವರು ಹೆಸರು ಗಳಿಸಿದರು. ಇವರ ಬಹುಮುಖ ಪ್ರತಿಭೆಯನ್ನು ಕಂಡು ತಿಲಕರ ಮಿತ್ರರೊಬ್ಬರು ಕೇಳಕರರ ಹೆಸರನ್ನು ತಿಲಕರಿಗೆ ಬರೆದು ತಿಳಿಸಿದರು. 1896ರ ಫೆಬ್ರವರಿಯಲ್ಲಿ ಕೇಳಕರರಿಗೆ ಲೋಕಮಾನ್ಯ ತಿಲಕರ ಭೇಟಿಯಾಯಿತು. ಅವರ ಜೀವನಮಾರ್ಗ ಬದಲಾಯಿತು. ಕೇಸರಿ(ಮರಾಠಿ) ಮತ್ತು ಮರಾಠಾ(ಇಂಗ್ಲಿಷ್) ಪತ್ರಿಕೆಗಳನ್ನು ನಡೆಸುವುದರ ಜೊತೆಗೆ ತಿಲಕರು ಪುಣೆಯಲ್ಲಿ ಕಾಯಿದೆ ವಿದ್ಯಾರ್ಥಿಗಳಿಗಾಗಿ ತರಗತಿಗಳನ್ನೂ ನಡೆಸುತ್ತಿದ್ದರು. ಈ ಕಾರ್ಯಗಳಲ್ಲಿ ತಮಗೆ ಸಹಾಯಕರಾಗಲು ಕೇಳಕರರನ್ನು ಕೇಳಿಕೊಂಡರು. ಕೇಳಕರರು ಪುಣೆಗೆ ತೆರಳಿ ತಿಲಕರ ಸಹಾಯಕರಾಗಿ ಸೇರಿದರು. 1897ರಲ್ಲಿ ತಿಲಕರಿಗೆ ರಾಜದ್ರೋಹದ ಆಪಾದನೆಗಾಗಿ ಶಿಕ್ಷೆಯಾದಾಗ ಅವರ ಇಚ್ಛೆಯ ಮೇರೆಗೆ ಕೇಳಕರರು ಕೇಸರಿ, ಮರಾಠಾ ಎರಡೂ ಪತ್ರಿಕೆಗಳ ಸಂಪಾದಕತ್ವವನ್ನು ವಹಿಸಿಕೊಂಡರು. ಕಾನೂನು ತರಗತಿಗಳು ಆಗ ನಿಂತುಹೋದವು. ಈ ಪತ್ರಿಕೆಗಳ ಹೊಣೆಯನ್ನು ನಿರ್ವಹಿಸುವುದು ಸಾಮಾನ್ಯವಾದ್ದೇನಾಗಿರಲಿಲ್ಲ.

ತಿಲಕರು ಅನುಸರಿಸಿಕೊಂಡು ಬಂದಿದ್ದ ಧೋರಣೆಗಳಿಗೆ ವ್ಯತ್ಯಯ ಬಾರದಂತೆ, ಸಮರ್ಥ ರೀತಿಯಲ್ಲಿ ಎರಡೂ ಪತ್ರಿಕೆಗಳನ್ನು ತಿಲಕರು ಮರಳಿ ಬರುವ ತನಕ (ಜುಲೈ 1899) ನಡೆಸಿಕೊಂಡು ಬಂದರು.

ತಿಲಕರು ಪುನಃ ಕೇಸರಿ, ಮರಾಠಾ ಪತ್ರಿಕೆಗಳ ಸಂಪಾದಕತ್ವವನ್ನು ವಹಿಸಿಕೊಂಡ ಅನಂತರವೂ ಅವುಗಳೊಂದಿಗೆ ಕೇಳಕರ ಸಂಬಂಧ ಘನಿಷ್ಠವಾಗಿಯೇ ಮುನ್ನಡೆಯಿತು. ಮರಾಠಿ, ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಸಮರ್ಥ ರೀತಿಯಲ್ಲಿ ಬರೆಯಬಲ್ಲವರಾಗಿದ್ದ ಕೇಳಕರರು ಪ್ರಚಲಿತ ರಾಜಕೀಯ ಸಮಸ್ಯೆಗಳ ಮೇಲೆ ವಾರವಾರವೂ ಬರೆಯುತ್ತಿದ್ದರು. ಮುಂದೆ ಲೋಕಮಾನ್ಯರು 1910ರಲ್ಲಿ ಪತ್ರಿಕೆಗಳನ್ನು ನಡೆಸುವುದಕ್ಕಾಗಿ ಕೇಸರಿ–ಮರಾಠಾ ಟ್ರಸ್ಟ್ ಎಂಬ ನ್ಯಾಸ ಸಂಸ್ಥೆಯನ್ನು ಸ್ಥಾಪಿಸಿ ತಾವು ನ್ಯಾಸಧಾರರಾಗಿ ಮಾತ್ರ ಉಳಿದು ಸಂಪಾದಕತ್ವವನ್ನು ಪುನಃ ಕೇಳಕರರಿಗೆ ವಹಿಸಿಕೊಟ್ಟರು. ಈ ಸಮಯದಲ್ಲಿ ಒಂದನೆಯ ಮಹಾಯುದ್ಧ ಪ್ರಾರಂಭವಾಯಿತು. ಆ ಸಮಯದಲ್ಲಿ ಕೇಳಕರರು 'ಎ ಕೇಸ್ ಫಾರ್ ಇಂಡಿಯ ಹೋಮ್ ರೂಲ್' ಎಂಬ ಪುಸ್ತಕ ಬರೆದರು. 1920ರ ಆಗಸ್ಟ್‌ನಲ್ಲಿ ಲೋಕಮಾನ್ಯರ ನಿಧನಾನಂತರ ಕೇಳಕರರು ಈ ಟ್ರಸ್ಟಿನ ಇಬ್ಬರು ನ್ಯಾಸಧಾರಿಗಳಲ್ಲಿ ಒಬ್ಬರಾದರು. 1937ರ ಏಪ್ರಿಲ್‌ನಲ್ಲಿ ಈ ಪತ್ರಿಕೆಗಳ ಸಂಪಾದಕ ಮತ್ತು ಸಂಸ್ಥೆಯ ನ್ಯಾಸಧಾರ ಈ ಎರಡೂ ಸ್ಥಾನಗಳಿಂದ ಅವರು ನಿವೃತ್ತರಾದರು. ಅವರು ನಿವೃತ್ತರಾಗುವ ಹೊತ್ತಿಗೆ ಕೇಸರಿ–ಮರಾಠಾ ಟ್ರಸ್ಟ್ ಆಗಲೆ ಹೆಮ್ಮರವಾಗಿ ಬೆಳೆದಿತ್ತು. ಭಾರತದ ಅತ್ಯಂತ ಸಮರ್ಥ ಪತ್ರಿಕೋದ್ಯಮಿಗಳಲ್ಲಿ ಕೇಳಕರರೂ ಒಬ್ಬರು. ಜಗತ್ತಿನಲ್ಲಿ ಯಾವ ಕೆಲಸವೂ ಸಣ್ಣದಲ್ಲ; ಕ್ಷುದ್ರವಲ್ಲ, ಮಾಡುವ ಕೆಲಸ ಚಿಕ್ಕದಿರಲಿ, ದೊಡ್ಡದಿರಲಿ ಅದನ್ನು ಚೊಕ್ಕಟವಾಗಿ ಮಾಡಿ ಮುಗಿಸಬೇಕು–ಎಂಬುದು ಕೇಳಕರರ ಧೋರಣೆ, ಪುಣೆಯಲ್ಲಿ ಪ್ಲೇಗು ಹರಡಿದಾಗ ಅವರ ಮಾನವೀಯಗುಣ ಬಯಲಿಗೆ ಬಂತು. ಅವರು ಸ್ವಯಂ ಸೇವಕರಾಗಿ ಅನೇಕ ರೋಗಿಗಳ ಉಪಚಾರ ಮಾಡಿದರು. ಈ ಸಂದರ್ಭದಲ್ಲಿ ಪುಣೆ ನಗರಪಾಲಿಕೆಯ ಜೊತೆಗೆ ಬೆಳೆದುಬಂದ ಬಾಂಧವ್ಯ ಅನೇಕ ವರ್ಷ ಮುಂದುವರಿಯಿತು. ಅವರು ನಗರಪಾಲಿಕೆಯ ಅಧ್ಯಕ್ಷರೂ ಆದರು. ಪುಣೆಯಲ್ಲಿ ತಿಲಕರ ಮೂರ್ತಿಸ್ಥಾಪನೆಗೆ ಬಹುಮಟ್ಟಿಗೆ ಇವರ ಪ್ರಯತ್ನವೇ ಕಾರಣ.

ಪತ್ರಿಕೋದ್ಯಮದಲ್ಲಿಯಂತೆಯೇ ಲೋಕಮಾನ್ಯರೊಂದಿಗೆ ಮತ್ತು ಅವರ ಅನಂತರ ಗಾಂಧೀಜಿಯವರೊಂದಿಗೆ ಕೇಳಕರರು ಪ್ರತ್ಯಕ್ಷ ರಾಜಕಾರಣದಲ್ಲೂ ಸಕ್ರಿಯವಾಗಿ ಭಾಗವಹಿಸಿದರು. 1924ರಲ್ಲಿ ಸ್ವರಾಜ್ಯ ಪಕ್ಷದ, 1926ರಲ್ಲಿ ಪ್ರತಿಸಹಕಾರ ಪಕ್ಷದ ಉಮೇದುವಾರರಾಗಿ ದೆಹಲಿಯ ಅಸೆಂಬ್ಲಿಗೆ ಆಯ್ಕೆಯಾದರು. ಆದರೆ ಎರಡು ಸಲವೂ ತಮ್ಮ ಅವಧಿ ಮುಗಿಯುವ ಮೊದಲೇ ರಾಜೀನಾಮೆ ಕೊಟ್ಟರು.

1932ರಲ್ಲಿ ಕರೆದ ದುಂಡುಮೇಜಿನ ಪರಿಷತ್ತಿಗೆ ಅವರು ಪ್ರತಿನಿಧಿಯಾಗಿ ಹೋಗಿದ್ದರು. ಅನೇಕ ಕಾಂಗ್ರೆಸ್ ನಾಯಕರು ಸೆರೆಮನೆಯಲ್ಲಿದ್ದಾಗ, ಗಾಂಧೀಜಿಯವರು ಅನುಪಸ್ಥಿತರಾಗಿದ್ದ ಸಭೆಗೆ ಇವರು ಹೋದರೆಂಬ ಕಾರಣಕ್ಕಾಗಿ ಇವರ ಮೇಲೆ ಸಾರ್ವಜನಿಕ ಟೀಕೆಗಳ ಸುರಿಮಳೆಯೇ ಆಯಿತು. ಅನಂತರದ ಕಾಲದಲ್ಲಿ ಮುಸ್ಲಿಮರೆಲ್ಲ ಸೇರಿ ತಮ್ಮ ರಾಜಕೀಯ ಹಕ್ಕುಗಳಿಗಾಗಿ ಪಕ್ಷ ಸ್ಥಾಪಿಸಿದಾಗ ಹಿಂದೂಗಳಿಗೂ ಅಂಥ ಒಂದು ಪಕ್ಷ ಬೇಕೆಂದು ಇವರು ವಾದಿಸಿದರು. ಈ ಕಾರಣದಿಂದ ಇವರ ವರ್ಚಸ್ಸು ಕಾಂಗ್ರೆಸಿನಲ್ಲಿ ಕ್ರಮೇಣ ಕಡಿಮೆ ಆಯಿತು. ಹಿಂದೂ ಮಹಾಸಭೆಯ ಜೊತೆಗೆ ಇವರ ಸಂಪರ್ಕ ಬೆಳೆಯಿತು. ಅನಂತರ ಹಿಂದೂ ಮಹಾಸಭೆಯ ಅನೇಕ ಸಭೆಗಳಿಗೆ ಇವರು ಅಧ್ಯಕ್ಷರಾಗಿದ್ದರು.

1920–1932ರ ಅವಧಿ ಕೇಳಕರರ ಜೀವನದಲ್ಲಿ ಬಲು ಮುಖ್ಯವಾದ್ದು, ಈ ಕಾಲದಲ್ಲಿ ಇವರು 2,000 ಪುಟಗಳ (3 ಸಂಪುಟಗಳು), ದೀರ್ಘವೂ ವಿವರಣಾತ್ಮಕವೂ ಆದ, ತಿಲಕರ ಜೀವನ ಚರಿತ್ರೆ ಬರೆದರು. 1932ರಲ್ಲಿ ತಮ್ಮ ಷಷ್ಟ್ಯಬ್ದಿ ಸಮಾರಂಭದ ಅನಂತರ ಕೇಳಕರರು ಕೆಲಸದಿಂದ ನಿವೃತ್ತರಾದರು. ಅನಂತರದ ಕಾಲವನ್ನು ಬಹುಪಾಲು ಸಾಹಿತ್ಯ ಸೇವೆಗೆ ಮುಡಿಪಾಗಿಟ್ಟರು.

ಕೇಳಕರರ ಮರಾಠಿ ವಾಙ್ಮಯಸೇವೆಯೂ ಅಪಾರವಾದ್ದು, ಕಾವ್ಯ, ನಾಟಕ, ವಿಮರ್ಶೆ, ಚರಿತ್ರೆ ಮುಂತಾದ ಸಾಹಿತ್ಯವಿಭಾಗಗಳಲ್ಲಿ ಗ್ರಂಥರಚನೆಮಾಡಿದ ಅವರು ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಚಿಕ್ಕಂದಿನಿಂದಲೇ ಕಥೆ, ಕಾದಂಬರಿಗಳನ್ನು ಬರೆದು ಹೆಸರುಗಳಿಸಿದ್ದ ಕೇಳಕರರ ಕೆಲವು ಕಾದಂಬರಿಗಳು ಕೇಸರಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದುವು. ಸುಭಾಷಿತ ಆಣಿ ವಿನೋದ, ಹಾಸ್ಯ ವಿನೋದ–ಮಿಮಾಂಸಾ, ಆಯರ್ಲಂಡ್ ಚಾ ಇತಿಹಾಸ, ಮರಾಠೆ ವ ಇಂಗ್ರಜ, ಗರಿಬಾಲ್ಡಿ–ಇವು ಕೇಳಕರರ ಕೆಲವು ಪ್ರಸಿದ್ಧ ಗ್ರಂಥಗಳು. ಇವರ ಸು.800 ಪುಟಗಳ ಆತ್ಮಚರಿತ್ರೆಯೂ ಬಹಳ ಪ್ರಸಿದ್ಧಿ ಪಡೆಯಿತು. ಕೇಳಕರರು 1947ರ ಅಕ್ಟೋಬರ್ 14ರಂದು ಪುಣೆಯಲ್ಲಿ ನಿಧನರಾದರು. (ಎಂ.ಎನ್.ಎಂ.ಎ.)

**ಕೇಳಪ್ಪನ್, ಕೆ. :** 1890–1971. ಕೇರಳದ ಸಮಾಜಸೇವಾ ಧುರೀಣ, ಗಾಂಧಿಯವರ ಅನುಯಾಯಿ, ಕೇರಳದ ಆಧುನಿಕ ಸಾಮಾಜಿಕ–ರಾಜಕೀಯ ಕ್ರಾಂತಿಗಾಗಿ ಶ್ರಮಿಸಿದವರು. ಕೇರಳದ ಗಾಂಧಿಯೆಂದು ಪ್ರಸಿದ್ಧರು. ಉತ್ತರ ಮಲಬಾರಿನ ಕ್ವಿಲಾಂಡಿಯ ಬಳಿ ಇರುವ ಮುಡಡಿಯಲ್ಲಿ 1890ರ ಸೆಪ್ಟೆಂಬರ್ 15ರಂದು ಜನನ. ತಂದೆ ವಕೀಲನೊಬ್ಬನ ಬಳಿ ಗುಮಾಸ್ತೆ. ಕೇಳಪ್ಪನರ ಮೊದಲಿನ ವಿದ್ಯಾಭ್ಯಾಸ ಐನಿಕ್ಕಾಡ್ ಮತ್ತು ಕ್ವಿಲಾಂಡಿಯಲ್ಲಿ ನಡೆಯಿತು. ತಂದೆಯ ಅಲ್ಪ ವರಮಾನದಿಂದ ಮುಂದೆ ಓದುವುದು ಅಸಾಧ್ಯವಾಗಿದ್ದಾಗ ಬಾಸೆಲ್ ಮಿಷನ್ನಿನ ವಿದ್ಯಾರ್ಥಿವೇತನ ದೊರೆತು ತಲಚ್ಚೇರಿಯ ಬಿ.ಇ.ಎಂ. ಪ್ರೌಢಶಾಲೆಯಲ್ಲೂ ಕಲ್ಲಿಕೋಟೆಯ ಜಾಮೊರಿನ್ ಕಾಲೇಜಿನಲ್ಲೂ ಓದು ಮುಂದುವರಿಸಿದರು. ಅವರು ಎಫ್.ಎ ತರಗತಿಯಲ್ಲಿದ್ದಾಗ ಆ ಕಾಲೇಜಿನ ಪ್ರಿನ್ಸಿಪಾಲ್ ಸಂಘಟಿಸಿದ್ದ ಸಮಾಜಸೇವಾ ಕೂಟದಲ್ಲಿ ಕೇಳಪ್ಪನ್ ಭಾಗವಹಿಸಿದ್ದರು. ಹರಿಜನ ವಿದ್ಯಾರ್ಥಿಯೊಬ್ಬನನ್ನು ಕಾಲೇಜಿಗೆ ಸೇರಿಸಿದ್ದಕ್ಕೆ ಸವರ್ಣ ಹಿಂದುಗಳಿಂದ ಬಂದ ವಿರೋಧವನ್ನು ಎದುರಿಸಿ ಕೇಳಪ್ಪನ್ ಮತ್ತು ಅವರ ಗೆಳೆಯರು ಹೋರಾಡಿದರು. ಕೇಳಪ್ಪನ್ ತಮ್ಮ ಜೀವಮಾನವಿಡೀ ನಡೆಸಿದ ಅಸ್ಪೃಶ್ಯತಾ ನಿರೋಧ ಚಳವಳಿಯಲ್ಲಿ ತೊಡಗಿದ್ದು ಆಗ.

ಅರವಿಂದ ಘೋಷರು ಪ್ರಕಟಿಸುತ್ತಿದ್ದ ವಂದೇಮಾತರಂ ಪತ್ರಿಕೆಯನ್ನು ಕೇಳಪ್ಪನ್ ತಪ್ಪದೆ ಓದುತ್ತಿದ್ದರು. ಕ್ರಾಂತಿಕಾರರೊಡನೆ ಸೇರಿದರು. ಬಾಂಬ್ ತಯಾರಿಸುವುದನ್ನೂ ಕಲಿತರು. ಆದರೆ ವ್ಯಾಸಂಗ ಬಿಡಲಿಲ್ಲ. ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿ ಓದಿ ಬಿ.ಎ ಪದವಿ ಪಡೆದರು. ಆರ್ಥಿಕ ಮುಗ್ಗಟ್ಟಿನಿಂದ ಮುಂದೆ ಓದಲಾಗದೆ, ತಂದೆ ಆಶಿಸಿದ್ದಂತೆ ವಕೀಲರಾಗಲಾರದೆ ಚಂಗನಸೇರಿಯ ಸೆಂಟ್ ಬರ್‌ಗ್ರ್ಯಾಂಟ್ಸ್ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾದರು. ಆ ಶಾಲೆಯ ವ್ಯವಸ್ಥಾಪಕರಿಗೂ ಇವರಿಗೂ ಭಿನ್ನಾಭಿಪ್ರಾಯ ಉದ್ಭವಿಸಿ ಇವರು ಆ ಕೆಲಸ ಬಿಟ್ಟರು. ತಮ್ಮ ಸ್ನೇಹಿತರೊಡನೆ ನಾಯರ್ ಸರ್ವಿಸ್ ಸೊಸೈಟಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಕೇಳಪ್ಪನರೇ ಈ ಸಂಸ್ಥೆಯ ಮೊದಲ ಅಧ್ಯಕ್ಷರು. ಮನ್ನಾಥ್ ಪದ್ಮನಾಭನ್ ಅವರ ಕಾರ್ಯದರ್ಶಿ. ಆ ಸಂಸ್ಥೆ ಕಾರುಕಾಚಲ್‌ನಲ್ಲಿ ಒಂದು ಪ್ರೌಢಶಾಲೆ ತೆರೆಯಿತು. ಅದಕ್ಕೆ ಕೇಳಪ್ಪನ್ ಮುಖ್ಯೋಪಾಧ್ಯಾಯರು. ಈಗ ಆ ಸಂಸ್ಥೆ ಬೆಳೆದು ಅನೇಕ ಶಾಲೆ ಮತ್ತು ಕಾಲೇಜುಗಳನ್ನು ನಡೆಸುತ್ತಿದೆ. ಕಾರುಕಾಚಲ್‌ನಲ್ಲಿ ಉಪಾಧ್ಯಾಯರಾಗಿದ್ದಾಗ ಅವರಿಗೆ ಮದುವೆಯಾಯಿತು. ಪತ್ನಿ ಅಮ್ಮಾಳು ಅಮ್ಮ. 6 ವರ್ಷಗಳ ಅನಂತರ ಅವರಿಗೆ ಪತ್ನಿವಿಯೋಗವಾಯಿತು. ಕಾರುಕಾಚಲ್ ಬಿಟ್ಟು ಕೇಳಪ್ಪನ್ ಮುಂಬಯಿಗೆ ಬಂದು ಅಲ್ಲಿ ಉಪಾಧ್ಯಾಯವೃತ್ತಿ ಕೈಗೊಂಡರಲ್ಲದೆ ಜೊತೆಗೆ ಎಲ್‌ಎಲ್. ಬಿ. ವ್ಯಾಸಂಗದಲ್ಲೂ ತೊಡಗಿದರು. ಕೇಳಪ್ಪನ್ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲಾರಂಭಿಸಿದ್ದು ಆ ಸಮಯದಲ್ಲಿ. ಅವರು ಎಲ್‌ಎಲ್.ಬಿ. ಪರೀಕ್ಷೆಗೆ ಕೂರದೆ ಮಲಬಾರಿಗೆ ಹಿಂದಿರುಗಿ ಅಸಹಕಾರ ಚಳವಳಿಯ ನಾಯಕರಾದರು. 1921ರಲ್ಲಿ ಮಲಬಾರಿನಲ್ಲಿ ದಂಗೆಯಾದಾಗ, ಇವರು ಪೊನ್ನಾನಿ ತಾಲ್ಲೂಕ್ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದರು. ಮಲಬಾರಿನ ಮುಸ್ಲಿಮರ ಒಂದು ಗುಂಪು ಪೊನ್ನಾನಿಯ ಖಜಾನೆಯನ್ನು ಲೂಟಿ ಮಾಡಲು ಹೊರಟಿತ್ತು. ಕೇಳಪ್ಪನ್ ಅದನ್ನು ತಡೆದು, ಸಶಸ್ತ್ರ ಪೋಲೀಸರೊಂದಿಗೆ ಆಗುತ್ತಿದ್ದ ಘರ್ಷಣೆ ಮತ್ತು ಅನಾಹುತವನ್ನು ತಪ್ಪಿಸಿದರು. ಹಿಂದೂ ಪತ್ರಿಕೆ ಕೇಳಪ್ಪನರನ್ನು ಹೊಗಳಿ ಬರೆಯಿತು. ಸ್ವಲ್ಪ ಕಾಲದಲ್ಲೆ ಅವರು ಬ್ರಿಟಿಷ್ ಸರ್ಕಾರದ ಬಂಧನಕ್ಕೆ ಒಳಗಾದರು. ಅವರ ಜೊತೆಯವರಾದ ಬಾಲಕೃಷ್ಣ ಮೆನನ್‌ರವರನ್ನು ಜೈಲಿನಲ್ಲಿ ಪೋಲೀಸರು ಕೊಂದರು.

ಕೇಳಪ್ಪನ್ ಜೈಲಿನಿಂದ ಹೊರಬಂದ ಮೇಲೆ ಗಾಂಧೀಜಿವರ ರಚನಾತ್ಮಕ ಮತ್ತು ಹರಿಜನೋದ್ಧಾರ ಕಾರ್ಯಗಳಲ್ಲಿ ಮುಂದಾಳಾದರು. ಕೇರಳ ಪ್ರದೇಶ ಕಾಂಗ್ರೆಸ್ ಸಂಸ್ಥೆಯ ಮೊದಲ ಅಧ್ಯಕ್ಷರು ಅವರೇ. 1930ರ ಉಪ್ಪಿನ ಸತ್ಯಾಗ್ರಹ ನಡೆಸಲು ಮಲಬಾರಿನ ಅನೇಕ ಕಾಂಗ್ರೆಸ್ ನಾಯಕರು ಒಪ್ಪದಿದ್ದರೂ ಕೇಳಪ್ಪನ್ ತಮ್ಮ ಅನುಯಾಯಿಗಳೊಡನೆ ಧೈರ್ಯಮಾಡಿ ಗಾಂಧೀಜಿಯ ಕರೆಯಂತೆ ನಡೆದು ಸತ್ಯಾಗ್ರಹ ನಡೆಸಿದರು. ಮತ್ತೊಮ್ಮೆ ಇವರನ್ನು ಬಂಧಿಸಲಾಯಿತು. ತಿರುವಾಂಕೂರಿನ ವೈಕೆಕ್ಕಂ ಸತ್ಯಾಗ್ರಹದ ನಾಯಕತ್ವವಹಿಸಿದವರು ಕೇಳಪ್ಪನ್.

ಅಸ್ಪೃಶ್ಯತಾ ನಿವಾರಣೆಗಾಗಿ 1931ರಲ್ಲಿ ಕೇಳಪ್ಪನ್ ನಿರಶನವ್ರತ ಕೈಗೊಂಡರು. 1940 ಮತ್ತು 1942ರಲ್ಲಿ ಪುನಃ ಇವರನ್ನು ಬಂಧಿಸಲಾಗಿತ್ತು. 1951ರ ವರೆಗೆ ಕೇಳಪ್ಪನ್ ಪ್ರದೇಶ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿದ್ದರು. 1951ರಲ್ಲಿ ಕಾಂಗ್ರೆಸಿಗೆ ರಾಜೀನಾಮೆ ಕೊಟ್ಟು ಕಿಸಾನ್ ಮಜ್ದೂರ್ ಪ್ರಜಾಪಕ್ಷ ಸೇರಿ ಅದನ್ನು ಬೆಳೆಸಿದರು. ಅನಂತರ ಪ್ರಜಾ ಸಮಾಜವಾದಿ ಪಕ್ಷದ ನಾಯಕರಾದರು. 1952ರಲ್ಲಿ ಪೊನ್ನಾನಿ ಕ್ಷೇತ್ರದಿಂದ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಕೇಳಪ್ಪನ್‌ಗೆ ವಿಜಯ ದೊರಕಿತು. 1955ರಲ್ಲಿ ಇವರು ರಾಜಕೀಯವನ್ನು ತೊರೆದು ಸರ್ವೋದಯ ಚಳವಳಿಯ ನಾಯಕತ್ವ ವಹಿಸಿದರು. ಜಯಪುರದಲ್ಲಿ ನಡೆದ ಸರ್ವೋದಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ರಾಜಕೀಯ ಪಕ್ಷಗಳ ದುರ್ವರ್ತನೆಯ ವಿರುದ್ಧ 1957ರಲ್ಲಿ ಕೇಳಪ್ಪನ್ ನಿರಶನವ್ರತ ಕೈಗೊಂಡರು. ಎಲ್ಲ ರಾಜಕೀಯ ಪಕ್ಷಗಳ ಮುಖಂಡರುಗಳು ಒಟ್ಟಾಗಿ, ಮುಂದೆ ಶಾಂತಿಪಾಲನೆ ಮಾಡುವುದಾಗಿ ಭರವಸೆ ನೀಡಿದ ಮೇಲೆಯೇ ಅವರ ನಿರಶನವ್ರತ

ನಿಂತದ್ದು. ಆಗ ಕೇರಳದಲ್ಲಿದ್ದ ಮಾರ್ಕ್ಸಿಸ್ಟ್–ಮುಸ್ಲಿಂ ಲೀಗ್ ಸರ್ಕಾರದ ನೀತಿಯ ವಿರುದ್ಧವಾಗಿ ತಾಳಿ ದೇವಾಲಯದಲ್ಲಿ ಪೂಜೆ ಮಾಡುವ ಹಕ್ಕಿನ ಸಂರಕ್ಷಣಾರ್ಥ ನಡೆಸಿದ ಚಳವಳಿಗಾಗಿ 1969ರಲ್ಲಿ ಸರ್ಕಾರ ಇವರನ್ನು ಬಂಧಿಸಿತ್ತು. ಪೆರಿಂತಾಳ್ಮನ್ನ ಪೊಲೀಸ್ ಠಾಣೆಯಲ್ಲಿ ಕೇಳಪ್ಪನ್ ಉಪವಾಸ ಆರಂಭಿಸಿದರು. 5 ದಿನಗಳಲ್ಲಿ ಅವರ ಉದ್ದೇಶ ಫಲಿಸಿತ್ತು. ಕೇಳಪ್ಪನರಿಗೆ 1957ರಲ್ಲಿ ರಾಜ್ಯಪಾಲ ಹುದ್ದೆ ನೀಡುವ ಸೂಚನೆ ಬಂದಿತ್ತು. ಅವರು ಅದನ್ನು ಸ್ವೀಕರಿಸಲಿಲ್ಲ. ಪದ್ಮವಿಭೂಷಣ ಪ್ರಶಸ್ತಿಯನ್ನು ಅವರು ನಿರಾಕರಿಸಿದರು.

ಕೇಳಪ್ಪನ್ ಸಹಕಾರ ಚಳವಳಿಯಲ್ಲೂ ಪತ್ರಿಕೋದ್ಯಮದಲ್ಲೂ ಸಾಕಷ್ಟು ಕೆಲಸ ಮಾಡಿದರು. 1936–38ರಲ್ಲಿ ಮಾತೃಭೂಮಿಯ ಸಂಪಾದಕರಾಗಿದ್ದರು. 1940ರಲ್ಲಿ ಬ್ರಿಟಿಷರ ವಿರುದ್ಧ ಗಾಂಧಿಯವರು ನಡೆಸಿದ ಸತ್ಯಾಗ್ರಹ ಹೋರಾಟದಲ್ಲಿ ನೇಮಿತರಾಗಿದ್ದ ಮೊದಲ ಸತ್ಯಾಗ್ರಹಿ ಕೇಳಪ್ಪನ್. 1957ರಲ್ಲಿ ಮಂಜೇಶ್ವರದಲ್ಲಿ ವಿನೋಬಾ ಭಾವೆಯವರು ಇವರನ್ನು ಮೊದಲ ಶಾಂತಿ ಸೈನಿಕನೆಂದು ಗೊತ್ತುಮಾಡಿ ಪುರಸ್ಕರಿಸಿದರು.

ತಮ್ಮ ಕಡೆಯ ದಿನಗಳಲ್ಲಿ ಕೇರಳ ಕೇಳಪ್ಪನ್ ಸರ್ವೋದಯ ಸಂಘದ ಅಧ್ಯಕ್ಷತೆ, ಕೋಳಿಕ್ಕೋಡ್ ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ತಾಳಿ ದೇವಸ್ಥಾನ ಜೀರ್ಣೋದ್ಧಾರ–ಈ ಕಾರ್ಯಗಳಲ್ಲಿ ಮಾತ್ರ ಆಸಕ್ತಿಯಿಟ್ಟುಕೊಂಡಿದ್ದರು. ಅವರು 1971 ಅಕ್ಟೋಬರ್ 7ರಂದು ಕೋಳಿಕ್ಕೋಡಿನಲ್ಲಿ ನಿಧನರಾದರು. (ಕೆ.ಬಿ.ಎಸ್.)

**ಕೇಳುವಿಕೆ :** ಶಬ್ದ ಕಿವಿಗೆ ಬಿದ್ದಾಗ ಆಗುವ ಅನುಭವ. ಶಬ್ದ ಒಂದು ಶಕ್ತಿ. ಇದು ಒಂದು ಮಾಧ್ಯಮದ ಮೂಲಕ ಸಾಮಾನ್ಯವಾಗಿ ಗಾಳಿಯ ಮೂಲಕ ಚಲಿಸಿ ಕಿವಿಗೆ ತಲಪಿದಾಗ ನರಪ್ರಚೋದನೆ ಉಂಟಾಗುತ್ತದೆ. ಇದು ಮಿದುಳಿನ ಒಂದು ವಿಶಿಷ್ಟ ಭಾಗಕ್ಕೆ ತಲುಪಿದಾಗ ಆಗುವ ಪರಿಣಾಮವೇ ಕೇಳುವಿಕೆ. ಈ ಕ್ರಿಯೆ ಹಲವಾರು ಬಿಡಿ ಕ್ರಿಯೆಗಳ ಸಂಕೀರ್ಣ ಫಲ.

ಪ್ರಸಕ್ತ ಲೇಖನವನ್ನು ಈ ಮುಂದೆ ಬರೆದಿರುವ ನಾಲ್ಕು ಪ್ರಧಾನ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗಿದೆ: 1 ಕೇಳುವಿಕೆಯ ವೈಜ್ಞಾನಿಕಾಭ್ಯಾಸದ ಇತಿಹಾಸ, 2 ಕೇಳುವಿಕೆಯಲ್ಲಿ ಶಬ್ದದ ಪಾತ್ರ, 3 ಶ್ರವಣೇಂದ್ರಿಯ, 4 ಶಬ್ದಗ್ರಹಣ ವಿಧಾನ 5 ಕಿವುಡು ಮತ್ತು ಅದರ ನಿವಾರಣೋಪಾಯಗಳು.

**1 ಇತಿಹಾಸ :** ಕೇಳುವಿಕೆಯ ವೈಜ್ಞಾನಿಕಾಭ್ಯಾಸವನ್ನು ಮಾಡಿದ ಮೊದಲಿಗರಾಗಿ ಇಟಲಿಯ ವೆಸೇಲಿಯಸ್ (1515–64), ಫ್ಯಾಲೋಪಿಯಸ್ (1523–62), ಯೂಸ್ಟೇಕಿಯಸ್ (1510–74), ವ್ಯಾಲ್ಸ್ಯಾಲ್ವ (1666–1723), ಮಾರ್ಗಾಗಿ (1682–1771), ಸ್ಕಾರ್ಪ (1747–1832), ಇಂಗ್ಲೆಂಡಿನ ವಿಲ್ಲಿಸ್ (1622–75) ಮತ್ತು ಫ್ರಾನ್ಸಿನ ಡ್ಯೂವರೆ (1648–1730) ಇವರನ್ನು ಹೆಸರಿಸಬೇಕು. ಇವರುಗಳ ಅಧ್ಯಯನದಿಂದ ಕಿವಿ ಮತ್ತು ಕೇಳುವಿಕೆಯ ವಿಷಯವಾಗಿ ಆಗಿನ ಕಾಲಕ್ಕೆ ಎಷ್ಟು ಸಾಧ್ಯವೋ ಅಷ್ಟು ವಿಷಯಗಳು ಸಂಗ್ರಹಿತವಾಗಿದ್ದವು. 19ನೆಯ ಶತಮಾನದಲ್ಲಿ ತುಲನಾತ್ಮಕ ಶರೀರವಿಜ್ಞಾನ ಮತ್ತು ಅಂಗಾಂಶವಿಜ್ಞಾನಗಳು ಬಹುವಾಗಿ ಅಧ್ಯಯಿಸಲ್ಪಟ್ಟವು. ಕಾರ್ಟಿ (1822–76) ಮತ್ತು ರೀಸ್ನರ್ (1824–75) ಎಂಬುವರು ಕಿವಿಯ ವಿಚಾರದಲ್ಲಿ ಈ ವಿಧಾನಗಳನ್ನು ವಿಶೇಷವಾಗಿ ಅಭ್ಯಸಿಸಿ ಕೇಳುವಿಕೆಯ ವಿಧಾನವೆಂದು ಸ್ಥೂಲವಾಗಿ ಒಂದು ಅಭಿಪ್ರಾಯವನ್ನು ಪ್ರತಿಪಾದಿಸುವಷ್ಟು ಜ್ಞಾನವನ್ನು ಗಳಿಸಿಕೊಟ್ಟರು. ಕೇಳುವಿಕೆಯನ್ನು ಶಬ್ದದ ಭೌತಸ್ವಾಭಾವಗಳಿಗೆ ಅಳವಡಿಸಿ ಶಬ್ದಗ್ರಹಣ ಆಗುವ ವಿಧಾನವನ್ನು ಪ್ರಥಮವಾಗಿ ತಿಳಿಯಪಡಿಸಿದ್ದು ಹೆಲ್ಮ್‌ಹೋಲ್ಟ್ಸ್ (1821–1894) ಎಂಬ ಭೌತಶಾಸ್ತ್ರಜ್ಞ. ಇವನ ಪ್ರಾಯೋಗಿಕ ಅಧ್ಯಯನಗಳಿಂದ ಕೇಳುವಿಕೆಯ ವಿಷಯದಲ್ಲಿ ನಿಖರ ಜ್ಞಾನ ಲಭಿಸುವುದು ಸಾಧ್ಯವಾಯಿತು. ಜೊತೆಗೆ ಇನ್ನೆಷ್ಟೋ ಹೊಸ ಸಂಶಯಗಳು ತಲೆದೋರಿದವು. ಇಂದಿಗೂ ನಿರ್ದಿಷ್ಟವಾಗಿ ಪರಿಹರಿಸಲಾಗದ ಸಮಸ್ಯೆಗಳಿವೆ. ಹೆಲ್ಮ್‌ಹೋಲ್ಟ್ಸ್ ಕೇಳುವಿಕೆಯ ವಿಚಾರವನ್ನೊಳಗೊಂಡ ಒಂದು ಪುಸ್ತಕವನ್ನು ಪ್ರಚುರಿಸಿದ(1863). ಕೇಳುವಿಕೆಯ ವಿಧಾನ ಅನುನಾದತತ್ವವನ್ನು (ರೆಸೊನೆನ್ಸ್) ಅನುಸರಿಸುತ್ತದೆಂದು ಸಂಯುಕ್ತಶಬ್ದದ ವಿಶ್ಲೇಷಣೆ ಮತ್ತು ಅದರ ಎಲ್ಲಾ ಘಟಕಗಳ ಆವರ್ತಾಂಕಗಳಿಗೆ(ಫ್ರಿಕ್ವೆನ್ಸೀಸ್) ಅನುಗುಣವಾದ ಪ್ರತಿಕ್ರಿಯೆಗಳು ಏಕಕಾಲಿಕವಾಗಿ ಬೇಸಿಲಾರ್ ಪೊರೆಯಲ್ಲಿ ಉಂಟಾಗುತ್ತದೆಂದೂ ಆ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾನೆ. ಅವನ ಈ ತತ್ತ್ವವನ್ನು ಎಲ್ಲರೂ ಒಪ್ಪದಿದ್ದರೂ 20ನೆಯ ಶತಮಾನದ ಆದಿಯ ತನಕ ಕೇಳುವಿಕೆಯ ವಿಷಯವಾಗಿ ಇದಕ್ಕಿಂತ ಹೆಚ್ಚಿನ ಗಮನಾರ್ಹ ಸಂಶೋಧನೆ ಏನೂ ನಡೆಯಲಿಲ್ಲ. ಜೈವಿಕವಿದ್ಯುತ್ತು, ಅದರ ವರ್ಧನೆ, ಶಕ್ತಿ ಮತ್ತು ಗತಿಮಾಪನೆ–ಇವುಗಳ ವಿಚಾರವಾಗಿ ಅನೇಕ ಪ್ರಯೋಗಗಳನ್ನು ಈ ಶತಮಾನದ ಆದಿಯಲ್ಲಿ ನಡೆಸಿದರು. 1930ರಲ್ಲಿ ವೇವರ್ ಮತ್ತು ಬ್ರೇ ಎಂಬ ವಿಜ್ಞಾನಿಗಳು ಶವ್ರಣನರ ಪ್ರಚೋದನೆಯಲ್ಲಿ ಆಗುವ ವಿದ್ಯುತ್ ಪ್ರವಾಹವನ್ನು ವರ್ಧಿಸಿ ಕಿವಿಯಿಂದ ಕೇಳಿದ ಮೂಲ ಶಬ್ದಗಳ ಪುನರ್ನಿರ್ಮಾಣವನ್ನು ಅದರಿಂದ ಮಾಡಿದರು. ಇದಾದ ಮೇಲೆ ಕೇಳುವಿಕೆಯನ್ನು ಕುರಿತು ವೈದ್ಯರ, ಜೀವಕ್ರಿಯಾ ವಿಜ್ಞಾನಿಗಳ, ಮನೋವಿಜ್ಞಾನಿಗಳ ಮತ್ತು ಇತರ ವಿಜ್ಞಾನಿಗಳ ಅಧ್ಯಯನಗಳಿಂದ ಹೊಸ ಸಂಗತಿಗಳು ಬೆಳಕಿಗೆ ಬಂದಿವೆ.

**2 ಕೇಳುವಿಕೆಯಲ್ಲಿ ಶಬ್ದದ ಪಾತ್ರ:** ಪದಾರ್ಥಗಳು ಒಂದಕ್ಕೊಂದು ತಗುಲಿದಾಗ, ಯಾವುದಾದರೂ ಸ್ಫೋಟನವಾದಾಗ, ಸಂಗೀತ ಸಲಕರಣೆಗಳ ಉಪಯೋಗವಾದಾಗ ಮನುಷ್ಯ ಮೃಗಪಕ್ಷಿ ಕೀಟಾದಿಗಳು ಧ್ವನಿಗೈವಾಗ ಉತ್ಪತ್ತಿಯಾಗುವ ಶಬ್ದ ಎಲ್ಲರಿಗೂ ಪರಿಚಿತ. ಕಂಪಿಸುವ ವಸ್ತುವಿನಿಂದ ಉತ್ಪತ್ತಿಯಾದ ಒಂದು ವಿಧವಾದ ಶಕ್ತಿಯೇ ಶಬ್ದ. ಇದು ಅಲೆಅಲೆಯಾಗಿ ಸುತ್ತಲೂ ಪಸರಿಸುತ್ತದೆ. ಉಷ್ಣ, ಬೆಳಕು ಮುಂತಾದ ಶಕ್ತಿಗಳು ಅಲೆಅಲೆಯಾಗಿಯೇ ಹರಡಿದರೂ ಅವು ಶೂನ್ಯದಲ್ಲೂ ಹಾದುಹೋಗಬಲ್ಲ ಅಡ್ಡಕಂಪನ ತರಂಗಗಳು. ಶಬ್ದತರಂಗಗಳು ಉದ್ದ ಕಂಪನ ರೀತಿಯವಾದ್ದರಿಂದ ಶಬ್ದವ್ಯಾಪಿಸಬೇಕಾದರೆ ಘನ, ದ್ರವ, ಅಥವಾ ಅನಿಲ ಮಾಧ್ಯಮ ಇರಲೇಬೇಕು. ರೈಲುಗಾಡಿಗಳ ಸಾಲಿಗೆ ಹಿಂದಿನಿಂದ ಡಿಕ್ಕಿಹೊಡೆದರೆ ಹೇಗೆ ಪ್ರತಿಗಾಡಿಯೂ ಮುಂದೆ ಹಿಂದಾಗಿ ಚಲಿಸುತ್ತ ಚಲನೆಯನ್ನು ಅದರ ಮುಂದಿನ ಗಾಡಿಗೆ ಒಯ್ಯುತ್ತದೋ ಅದೇ ರೀತಿಯಲ್ಲಿ ವಸ್ತು ಕಂಪನದಿಂದ ಉಂಟಾದ ಶಬ್ದದ ಅಲೆಗಳು ಮಾಧ್ಯಮ ವಸ್ತುವಿನ ಕಣಗಳನ್ನು ಮುಂದು ಹಿಂದಾಗಿಸುತ್ತಾ, ಮಾಧ್ಯಮ ವಸ್ತುವಿನಲ್ಲಿ ಮುಂದು ಮುಂದಕ್ಕೆ ಒಯ್ಯಲ್ಪಡುತ್ತದೆ. ಒಂದು ಶ್ರುತಿ ಕವಲನ್ನು (ಟ್ಯೂನಿಂಗ್ ಫೋರ್ಕ್) ಮಿಡಿದರೆ ಅದನ್ನು ಮುಂದು ಹಿಂದಾಗಿ ಕಂಪಿಸುತ್ತ ಶಬ್ದವನ್ನು ಉಂಟುಮಾಡುತ್ತದೆ. ಆ ಕಂಪನ ಸುತ್ತಲಿನ ಗಾಳಿಗೆ ಸಂಘಟಿಸಿ ಅದರಲ್ಲಿಯೂ ಅನುಗುಣಕಂಪನ ಉಂಟಾಗಿ




ಚಿತ್ರ 1 ಪ್ರಬಲಶಬ್ದದ ಮತ್ತು ದುರ್ಬಲಶಬ್ದದ ಕಂಪನಗಳು ಮಾಧ್ಯಮದಲ್ಲಿ ಚಲಿಸುವ ಬಗೆಯನ್ನು ಕ್ರಮವಾಗಿ (a) ಮತ್ತು (b) ಗಳಲ್ಲೂ ಇಂಥ ಚಲನೆಗಳಲ್ಲಿ ಕಾಲದೊಡನೆ ಆಗುವ ಶಕ್ತಿ (ಒತ್ತಡ) ವ್ಯತ್ಯಾಸಗಳನ್ನು ಸೂಚಿಸುವ ವಕ್ರರೇಖೆಯನ್ನು ಕ್ರಮವಾಗಿ (a') ಮತ್ತು (b')ಗಳಲ್ಲಿ

ಗಾಳಿಯ ಕಣಗಳು ರೈಲು ಗಾಡಿಯ ಸಾಲಿನ ಗಾಡಿಯಂತೆ ಮುಂದು ಹಿಂದಕ್ಕೆ ಕಂಪಿಸುತ್ತಾ ಶಬ್ದವನ್ನು ಮುಂದು ಮುಂದಕ್ಕೆ ಒಯ್ಯುತ್ತವೆ.

ಗಾಳಿಯ ಕಣಗಳು ಹೀಗೆ ಮುಂದು ಹಿಂದಕ್ಕೆ ಕಂಪಿಸುವುದರಿಂದ ಗಾಳಿಯಲ್ಲಿ ಉದ್ದಕ್ಕೂ ಅನುಕ್ರಮವಾಗಿ ಒತ್ತಡ ವಿರಳತೆಯುಂಟಾಗುತ್ತದೆ. ಶ್ರುತಿ ಕವಲಿನ ಚಲನೆಯನ್ನಾಗಲಿ ಸುತ್ತ ಗಾಳಿಯ ಒತ್ತಡ ವಿರಳತೆಯನ್ನಾಗಲೀ ತಕ್ಕ ಯಂತ್ರಗಳ ಸಹಾಯದಿಂದ ಲೇಖಿಸಿದರೆ ಅದು ಚಿತ್ರ ಒಂದರಲ್ಲಿ ತೋರಿಸಿರುವಂತೆ ಅಂಕುಡೊಂಕಾದ ರೇಖೆಯಂತಿರುತ್ತದೆ. ಇದು ಆ ಶಬ್ದದ ತರಂಗಮಾಲೆ. ಈ ಮಾಲೆಯ ಒಂದು ಘಟಕ ~ ಆಕಾರದ ತರಂಗ. ಇಂಥ ಆಕಾರದ ತರಂಗಕ್ಕೆ ಸೈನೂಸಾಯಿಡ್ ಎಂದು ಹೆಸರು. ತರಂಗಗಳು ಸೆಕೆಂಡಿಗೆ ಎಷ್ಟು ಸಲ ಆವರ್ತವಾಗುತ್ತವೋ ಅದು ಆ ಶಬ್ದದ ಆವರ್ತಾಂಕ (ಫ್ರೀಕ್ವೆನ್ಸಿ). ತರಂಗಗಳು ಎತ್ತರವಾಗಿ ಅಥವಾ ತಗ್ಗಾಗಿರುವುದು

ಅವುಗಳ ಅಂತರ್ಗತ ಶಕ್ತಿಯನ್ನು ಸೂಚಿಸುತ್ತದೆ. ತರಂಗ ವೈಶಾಲ್ಯ ಅಥವಾ ವ್ಯಾಪ್ತಿ (ಆಂಪ್ಲಿಟ್ಯೂಡ್) ಎಂದು ಈ ಅಳತೆಗೆ ಹೆಸರು. ಆದರೆ ಇಂಥ ಸರಳ ತರಂಗಗಳು, ಶ್ರುತಿಕವಲನ್ನು ಕಂಪಿಸಿ ಶಬ್ದೋತ್ಪತ್ತಿ ಮಾಡಿದಾಗ ಮಾತ್ರ ಒದಗುತ್ತವೆ. ಮಿಕ್ಕ ಎಲ್ಲ ಶಬ್ದಗಳ ತರಂಗಗಳು ಸಂಯುಕ್ತವಾಗಿರುತ್ತವೆ. ಈ ತರಂಗಗಳನ್ನು ಯಂತ್ರಗಳ ಸಹಾಯದಿಂದ ಲೇಖಿಸಿದರೆ ಅವು ಸೈನೂಸಾಯಿಡ್ ಆಗಿರದೆ ಒಂದು ಡೊಂಕು ಇನ್ನೊಂದು ಡೊಂಕಿನ ಮೇಲೆ ಹೇರಿಕೊಂಡಿರುವ ಜಟಿಲರೀತಿಯ ತರಂಗಗಳ ಮಾಲೆ ಆಗಿರುವುದು ಕಾಣುತ್ತದೆ. ತರಂಗ ಗತಿ ಎಷ್ಟೇ ಜಟಿಲವಾಗಿದ್ದರೂ ಅದನ್ನು ಯಂತ್ರಗಳ ಸಹಾಯದಿಂದ ವಿಶ್ಲೇಷಿಸಿ ಪ್ರಧಾನ ತರಂಗ ಮತ್ತು ಇತರೆ ಸಣ್ಣ ಪುಟ್ಟ




ಚಿತ್ರ 2 ಮಧುರಶಬ್ದದ ವಕ್ರರೇಖೆ (a) ಸರಾಗವಾಗಿದ್ದರೆ ಗಲಭೆಯ ವಕ್ರರೇಖೆ (b) ಯಾವ ನಿಯಮವನ್ನೂ ಪಾಲಿಸದಂತೆ

ತರಂಗಗಳನ್ನು ಗುರುತಿಸಬಹುದು. ಕೇಳಲು ಇಂಪಾದ ಮಧುರ ಸ್ವರಗಳಲ್ಲಿ ಪ್ರಧಾನ ಮತ್ತು ಅನುಷಂಗಿಕ ತರಂಗಗಳು ಕ್ರಮಬದ್ಧವಾಗಿ ಎಲ್ಲ ತರಂಗಗಳಲ್ಲೂ ಒಂದೇ ರೀತಿಯಲ್ಲಿ ಸಂಯುಕ್ತಗೊಂಡಿರುವುದನ್ನು ಕಾಣಬಹುದು. ಸಂಯುಕ್ತತೆ ಒಂದೊಂದು ತರಂಗದಲ್ಲಿ ಒಂದೊಂದು ರೀತಿಯಾಗಿದ್ದು ಯಾವ ಕ್ರಮಬದ್ಧತೆಯೂ ಇಲ್ಲದಿರುವ ಶಬ್ದ ಕೇಳುವುದಕ್ಕೆ ಕರ್ಕಶವಾಗಿರುತ್ತದೆ. ಅನೇಕ ಮಧುರ ಸ್ವರಗಳು ಏಕಕಾಲದಲ್ಲಿ ಉಂಟಾದರೂ ಅವು ಹೊಂದಿಕೊಳ್ಳದಿದ್ದರೆ ಆ ಶಬ್ದ ಕಿವಿಗೆ ಕರ್ಕಶವಾಗಿರುವುದು. ಮಧುರ ಸ್ವರಗಳನ್ನು ಕೇಳಿದಾಗ ಅನುಭವಕ್ಕೆ ಬರುವ ಗುಣಗಳು ಮುಖ್ಯವಾಗಿ ಮೂರು; ಶ್ರುತಿ (ಪಿಚ್), ಘೋಷ (ಇಂಟೆನ್ಸಿಟಿ ಅಥವಾ ಲೌಡ್‌ನೆಸ್), ಭಾವ (ಟಿಂಬರ್). ಈ ಗುಣಗಳು ಶಬ್ದದ ಭೌತಸ್ವಭಾವಗಳನ್ನು ಅನುಸರಿಸಿ ಶ್ರುತಿಮಟ್ಟ ಶಬ್ದ ತರಂಗದ ಆವರ್ತಾಂಕಕ್ಕೂ, ಘೋಷಮಟ್ಟ ಶಬ್ದ ತರಂಗದ ವ್ಯಾಪ್ತಿಗೂ, ಭಾವಶಬ್ದ ತರಂಗದ ಸಂಯುಕ್ತತೆಯ ವೈಶಿಷ್ಟ್ಯಕ್ಕೂ ಅನುಗುಣವಾಗಿದೆ. ಧ್ವನಿ ತಾರ (ಎತ್ತರ, ಕೀರಲು) ಅಥವಾ ಮಂದ್ರ (ತಗ್ಗು, ಗೊಗ್ಗರ) ಎಂದು ಹೇಳುವುದನ್ನು ಕೇಳಿದ್ದೇವೆ. ಇದು ಶಬ್ದದ ಶ್ರುತಿಮಟ್ಟ. ಈ ಮಟ್ಟ ಶಬ್ದದ ಆವರ್ತಾಂಕವನ್ನು ಅವಲಂಬಿಸಿದೆ. ಸ್ತ್ರೀ ಧ್ವನಿಯ ಆವರ್ತಾಂಕ ಹೆಚ್ಚಾಗಿರುವುದರಿಂದ ಎತ್ತರ ಅಥವಾ ಕೀರಲು ಸ್ವಭಾವದ್ದಾಗಿದೆ. ಪುರುಷರ ಧ್ವನಿಯ ಆವರ್ತಾಂಕ ಕಡಿಮೆಯಿರುವುದರಿಂದ ಅದನ್ನು ತಗ್ಗು ಅಥವಾ ಗೊಗ್ಗರ ಸ್ವಭಾವದ ಧ್ವನಿಯೆಂದು ವರ್ಣಿಸುತ್ತಾರೆ. ಶಿಳ್ಳೆಯನ್ನು ಊದಿದಾಗ ಉಂಟಾಗುವ ಶಬ್ದ, ಎರಡು ಮರದ ತುಂಡುಗಳನ್ನು ಒಂದಕ್ಕೊಂದು ತಟ್ಟಿದಾಗ ಉಂಟಾಗುವ ಶಬ್ದಕ್ಕಿಂತ ಬಹುಭಿನ್ನವಾಗಿದೆ. ಇದು ಆ ಶಬ್ದಗಳ ಆವರ್ತಾಂಕಕಗಳ ವ್ಯತ್ಯಾಸದಿಂದಲೆ. ಶಿಳ್ಳೆಯ ಶಬ್ದದ ಆವರ್ತಾಂಕ ಹೆಚ್ಚು. ಮರದ ಸಾಮಾನಿನ ಶಬ್ದದ ಆವರ್ತಾಂಕ ಕಡಿಮೆ. ಶಬ್ದದ ಶ್ರುತಿಮಟ್ಟವನ್ನು ಹೀಗೆ ಅದರ ಕಂಪನದ ಆವರ್ತಾಂಕದಿಂದ ನಿರೂಪಿಸುತ್ತಾರೆ. ಮಾನವರು ಸುಮಾರು 20 ಆವರ್ತಾಂಕದ ತರಂಗದಿಂದ ಹಿಡಿದು 20,000 ಆವರ್ತಾಂಕದ ತರಂಗಗಳನ್ನು ಗ್ರಹಿಸಿ ಅದನ್ನು ಶಬ್ದವೆಂದು ಅರ್ಥಮಾಡಿಕೊಳ್ಳಬಲ್ಲರು. ಈ ಮಿತಿಯನ್ನು ಮೀರಿದ ತರಂಗಗಳು ಮನುಷ್ಯರಿಗೆ ಶಬ್ದವಾಗಿ ಕೇಳಿಸುವುದಿಲ್ಲ. ತರಂಗದ ಆವರ್ತಾಂಕ ಸೆಕೆಂಡಿಗೆ 30ಕ್ಕೆ ಕಡಿಮೆ ಇದ್ದರೆ ಅದು ಕೇಳಿಸದಿದ್ದರೂ ತರಂಗ ಸಾಕಷ್ಟು ಶಕ್ತಿಯುತವಾಗಿದ್ದರೆ ಅದರ ಒತ್ತಡದ ಅನುಭವವಾಗಿ ತಲೆಸುತ್ತುವಿಕೆ ಮುಂತಾದ ತೊಂದರೆಗಳು ಉಂಟಾಗಬಹುದು. 20,000 ಕ್ಕೆ ಮೇಲ್ಪಟ್ಟ ಆವರ್ತಾಂಕದ ತರಂಗಗಳು ಮಾನವರಿಗೆ ಶ್ರವಣಾತೀತವಾದರೂ ನಾಯಿ, ಬೆಕ್ಕು, ಬಾವಲಿ ಇತ್ಯಾದಿ ಪ್ರಾಣಿಗಳು ಇಂಥ ತರಂಗಗಳನ್ನು ಸಹ ಕೇಳಬಲ್ಲುವು. ಮನುಷ್ಯಗ್ರಾಹ್ಯವಲ್ಲದ ಇಂಥ ಶಬ್ದಾತೀತ ತರಂಗಗಳನ್ನು ಉತ್ಪತ್ತಿಮಾಡುವ ಶಿಳ್ಳೆಗಳಿಂದ ಪೊಲೀಸರು ಗುಟ್ಟಾಗಿ ನಾಯಿಗಳಿಗೆ ಮಾರ್ಗದರ್ಶನ ಮಾಡಿಸುವುದುಂಟು. ಮಾನವರಲ್ಲಿ 60ಕ್ಕೆ ಮೇಲ್ಪಟ್ಟು ವಯಸ್ಸಾದಂತೆ ಅವರ ಶಬ್ದಗ್ರಹಣಸಾಮರ್ಥ್ಯ ಕ್ರಮೇಣ ಕಡಿಮೆಯಾಗುತ್ತದೆ. ಈ ದೋಷವು ಮೊದಲಿಗೆ ಹೆಚ್ಚಿನ ಆವರ್ತಾಂಕಕ್ಕೆ ಸೀಮಿತವಾಗಿದ್ದು ಕಾಲಕ್ರಮೇಣ ಎಲ್ಲ ತರಂಗಗಳಿಗೂ ಅನ್ವಯವಾಗುತ್ತದೆ. ಮಾನವರಲ್ಲಿ ಸುಮಾರು 1,500–4000 ಆವರ್ತಾಂಕದ ಮಿತಿಯಲ್ಲಿ ಶಬ್ದಗಳ ಶ್ರುತಿಮಟ್ಟ ಭೇದಜ್ಞಾನ ಬಹು ಸೂಕ್ಷ್ಮವಾಗಿದೆ. ಈ ಮಿತಿಯಲ್ಲಿ ಒಂದು ಶಬ್ದಕ್ಕೂ ಇನ್ನೊಂದು ಶಬ್ದಕ್ಕೂ ಶೇ. 0.3 ರಷ್ಟು ಆವರ್ತಾಂಕ ವ್ಯತ್ಯಾಸವಿದ್ದರೂ ಆ ಶಬ್ದಗಳ ಶ್ರುತಿವ್ಯತ್ಯಾಸವನ್ನು ಗ್ರಹಿಸಬಹುದು. ಈ ಮಿತಿಯನ್ನು ಬಿಟ್ಟು ಬೇರೆ ಶಬ್ದಗಳ ಶ್ರುತಿವ್ಯತ್ಯಾಸಗ್ರಹಣ ಇಷ್ಟು ಸೂಕ್ಷ್ಮವಾಗಿಲ್ಲ. ಒಟ್ಟಿನಲ್ಲಿ ಕೇಳಿಸುವ ಶ್ರುತಿಮಿತಿಯಲ್ಲಿ ಸುಮಾರು 2,000 ಶ್ರುತಿಭೇದಗಳನ್ನು ಗ್ರಹಿಸಬಹುದು.

ಶಬ್ದ ಗಟ್ಟಿಯಾಗಿ ಅಥವಾ ಮೆತ್ತಗೆ ಕೇಳಿಸುವುದು ಎಲ್ಲರಿಗೂ ಗೊತ್ತಿದೆ. ಇದು ಶಬ್ದಘೋಷ. ಶಬ್ದಘೋಷ ಶಬ್ದತರಂಗದ ವ್ಯಾಪ್ತಿಯನ್ನು ಅವಲಂಬಿಸಿ ಶಬ್ದದ ಶಕ್ತಿಯನ್ನು ಸೂಚಿಸುತ್ತದೆ. ಒಂದು ತಂಬೂರಿಯ ತಂತಿಯನ್ನು ಮಿದುವಾಗಿ ಮಿಡಿದರೆ ಅದರ ಕಂಪನವ್ಯಾಪ್ತಿಯೂ ಅದರ ಶಬ್ದದ ತರಂಗವ್ಯಾಪ್ತಿಯೂ ಕಡಿಮೆಯಾಗಿದ್ದು ಶಬ್ದ ಮೆತ್ತಗೆ ಕೇಳಿಸುತ್ತದೆ. ತಂತಿಯನ್ನು ಜೋರಾಗಿ ಮಿಡಿದರೆ ಶಬ್ದವೂ ಗಟ್ಟಿಯಾಗಿ ಕೇಳಿಸುತ್ತದೆ. ಹಾಗೆಯೇ ಶಬ್ದೋತ್ಪತ್ತಿಯ ಸ್ಥಾನ ಹತ್ತಿರದಲ್ಲಿ ಇದ್ದರೆ ಶಬ್ದದ ಘೋಷ ಹೆಚ್ಚಾಗಿಯೂ ದೂರದಲ್ಲಿದ್ದರೆ ಕಡಿಮೆಯಾಗಿಯೂ ಕೇಳಿಸುವುದು ಎಲ್ಲರ ಅನುಭವದಲ್ಲಿದೆ. ಶಬ್ದತರಂಗಗಳು ಕ್ರಮೇಣ ಶಕ್ತಿಗುಂದುವುದರಿಂದ ಮತ್ತು ಕ್ರಮೇಣ ಅವುಗಳ ವ್ಯಾಪ್ತಿ ಕಡಿಮೆ ಆಗುವುದರಿಂದ ಶಬ್ದ ದೂರದೂರಕ್ಕೆ ಹರಡಿದಂತೆಲ್ಲ ಅದರ ಘೋಷವೂ ಕಡಿಮೆ ಆಗಿ ಕೊನೆಗೆ ಕೇಳಿಸುವುದೇ ಇಲ್ಲ. ಶಬ್ದದ ಶ್ರುತಿಮಟ್ಟ ಈ ರೀತಿ ದೂರ ವ್ಯತ್ಯಾಸದಿಂದ ಬದಲಾಯಿಸುವುದಿಲ್ಲ. ಅಂದರೆ ಎಷ್ಟು ದೂರದಿಂದಾದರೂ ಶಬ್ದ ಕೇಳಿಸಿದ್ದೇ ಆದರೆ ಅದರ ಶ್ರುತಿಮಟ್ಟ ಶಬ್ದೋತ್ಪತ್ತಿಸ್ಥಾನದಲ್ಲಿದ್ದಷ್ಟೇ ಇರುತ್ತದೆ. ಶಬ್ದಘೋಷ ವ್ಯತ್ಯಾಸವೂ ಶ್ರುತಿಮಟ್ಟ ವ್ಯತ್ಯಾಸದಂತೆಯೇ ಸುಮಾರು 1,500–4,000 ಆವರ್ತಾಂಕಗಳ ಶಬ್ದಗಳಲ್ಲಿ ಬಹುಸೂಕ್ಷ್ಮವಾಗಿ ಅರಿವಿಗೆ ಬರುತ್ತದೆ. ಈ ಮಿತಿಯಲ್ಲಿ ತರಂಗವ್ಯಾಪ್ತಿಯಲ್ಲಿ ಶೇ. 0.3 ರಷ್ಟು ವ್ಯತ್ಯಾಸವಿದ್ದರೂ ಘೋಷದ ವ್ಯತ್ಯಾಸ ತಿಳಿಯುತ್ತದೆ. ಈ ಪ್ರಮಾಣ ಕೂಡ ಶ್ರುತಿಮಟ್ಟ ವ್ಯತ್ಯಾಸಗ್ರಹಣಕ್ಕೆ ಬೇಕಾಗುವಷ್ಟೇ ಇದೆ. 1,500ಕ್ಕಿಂತ ಕಡಿಮೆ ಆವರ್ತಾಂಕದ ಶಬ್ದಗಳಲ್ಲಿ ತರಂಗ ವ್ಯಾಪ್ತಿ ವ್ಯತ್ಯಾಸ ಸುಮಾರು ಶೇ. 1 ರಷ್ಟು ಮತ್ತು 4,000 ಕ್ಕೆ ಮೇಲ್ಪಟ್ಟ ಆವರ್ತಾಂಕದ ಶಬ್ದಗಳಲ್ಲಿ ಸುಮಾರು ಶೇ. 5ರಷ್ಟು ವ್ಯತ್ಯಾಸವಿದ್ದರೆ ಮಾತ್ರ ಅವುಗಳ ಘೋಷ ವ್ಯತ್ಯಾಸ ತಿಳಿಯುತ್ತದೆ. ಒಟ್ಟಿನಲ್ಲಿ ಕೇಳಿಸುವ ಪರಿಮಿತಿಯಲ್ಲಿ ಸುಮಾರು 325 ಶಬ್ದ ಘೋಷಮಟ್ಟಗಳನ್ನು ಅರಿಯಬಹುದಾಗಿದೆ. ಶ್ರುತಿಮಟ್ಟ ವ್ಯತ್ಯಾಸ ಮತ್ತು ಘೋಷಮಟ್ಟ ವ್ಯತ್ಯಾಸ ಎರಡರಿಂದಲೂ ಮಾನವರು ಸಾಮಾನ್ಯವಾಗಿ ಸುಮಾರು 3,40,000 ಶಬ್ದವ್ಯತ್ಯಾಸಗಳನ್ನು ಗ್ರಹಿಸಬಲ್ಲರೆಂದು ಅಂದಾಜುಮಾಡಲಾಗಿದೆ.

ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು. ಮೊದಲನೆಯದಾಗಿ 1,500–4,000ದ ಆವರ್ತಾಂಕದ ಶಬ್ದಗಳ ಶ್ರುತಿಮಟ್ಟದ ಘೋಷಮಟ್ಟವೂ ಮಿಕ್ಕ ಶಬ್ದಗಳಿಗಿಂತ ಬಹು ಸೂಕ್ಷ್ಮವಾಗಿ ಅರಿವಿಗೆ ಬರುತ್ತವೆ. ಮಾನವರ ಧ್ವನಿಯೂ ಇದೇ ಆವರ್ತಾಂಕದ ಮಿತಿ ಯಲ್ಲಿರುವುದನ್ನು ನೋಡಿದರೆ ಮಾನವರ ಕೇಳುವಿಕೆ ಅವರ ಧ್ವನಿಮಿತಿಯಲ್ಲಿ ಬಹುಸೂಕ್ಷ್ಮವಾಗಿರುವುದು ಮನ ದಟ್ಟಾಗುತ್ತದೆ. ಇದು ಸ್ವಾಭಾವಿಕವಾಗಿ ನಿರೀಕ್ಷಿಸಬೇಕಾದದ್ದೆ. ಎರಡನೆಯದಾಗಿ ಈ ಮಿತಿಯಲ್ಲಿ ಕಾಣಬರುವ ವ್ಯತ್ಯಾಸ ಗ್ರಹಣಸೂಕ್ಷ್ಮತೆ ಮಿಕ್ಕ ಆವರ್ತಾಂಕದ ಶಬ್ದಗಳಲ್ಲಿಲ್ಲದಿರುವುದು. ಇದು ವೇಬರ್ ಎಂಬ ವಿಜ್ಞಾನಿ ಇಂದ್ರಿಯ ಜ್ಞಾನಗಳ ವಿಷಯವಾಗಿ ಪ್ರತಿಪಾದಿಸಿರುವ ತತ್ತ್ವಕ್ಕೆ ವಿರುದ್ಧ. ಇಂದ್ರಿಯ ಕಾರ್ಯಕ್ಷೇತ್ರದ ಎಲ್ಲ ಮಟ್ಟಗಳಲ್ಲೂ ವ್ಯತ್ಯಾಸ ಗ್ರಹಣ ಒಂದೇ ರೀತಿಯದಾಗಿರುವುದೆಂದು ಈ ತತ್ತ್ವ ಪ್ರತಿಪಾದಿಸುತ್ತದೆ. ಇದರ ಪ್ರಕಾರ ಕೇಳಿಸುವ ಎಲ್ಲ ಶಬ್ದಗಳಲ್ಲೂ ಶ್ರುತಿಮಟ್ಟದ ಮತ್ತು ಘೋಷಮಟ್ಟದ ವ್ಯತ್ಯಾಸ ಗ್ರಹಣ ಒಂದೇ ಸೂಕ್ಷ್ಮತೆಯಿಂದ ಇರಬೇಕಾಗಿತ್ತು. 1,500–4,000 ಆವರ್ತಾಂಕದ ಶಬ್ದಗಳ ಘೋಷಣಗ್ರಹಣತೆ ಅದಕ್ಕಿಂತ ಹೆಚ್ಚಿನ ಸೂಕ್ಷ್ಮತೆ ಸಾಧ್ಯವಿಲ್ಲವೆನ್ನುವಷ್ಟು ಸೂಕ್ಷ್ಮವಾಗಿದೆ. ಸೂಕ್ಷ್ಮತೆ ಇನ್ನೂ ಹೆಚ್ಚು ಸಾಧ್ಯವಾಗಿದ್ದರೆ ಗಾಳಿಯ ಕಣಗಳ ನಿರಂತರ ಚಲನವೂ ಗ್ರಾಹ್ಯವಾಗಿ ಕೇಳುವಿಕೆ ನಿಷ್ಪ್ರಯೋಜಕವಾಗಿಬಿಡುತ್ತಿತ್ತು.

ಶಬ್ದಘೋಷವನ್ನು ಬೆಲ್ ಎಂಬ ಘಟಕದಲ್ಲಿ ವಿವರಿಸುವುದು ವಾಡಿಕೆ. ಅಲೆಗ್ಸಾಂಡರ್ ಗ್ರಹಾಂಬೆಲ್ ಎಂಬ ವಿಜ್ಞಾನಿ ಶಬ್ದಜ್ಞಾನದ ವಿಷಯವಾಗಿ ಅನೇಕ ಪರಿಶೋಧನೆಗಳನ್ನು ಮಾಡಿ ಟೆಲಿಫೋನನ್ನು ಕಂಡುಹಿಡಿದು ಪ್ರಸಿದ್ಧನಾದ್ದರಿಂದ ಆತನನ್ನು ಗೌರವಿಸಲು ಶಬ್ದಘೋಷಮಟ್ಟಮಾಪನದ ಘಟಕಕ್ಕೆ ಅವನ ಹೆಸರನ್ನಿಟ್ಟಿದ್ದಾರೆ.

ಒಂದು ಶಬ್ದಘೋಷ ಕನಿಷ್ಠ ಪ್ರಮಾಣದ ಅಂದರೆ ಕೇಳಿಸಿತೋ ಕೇಳಲಿಲ್ಲವೋ ಎನ್ನುವುದಕ್ಕಿಂತ 10ರಷ್ಟು ಹೆಚ್ಚಾಗಿದ್ದರೆ ಆ ಶಬ್ದದ ಘೋಷವನ್ನು ಒಂದು ಬೆಲ್ ಎಂದೂ ನೂರರಷ್ಟು ಅಂದರೆ $10^2$ ರಷ್ಟು ಹೆಚ್ಚಾಗಿದ್ದರೆ ಅದನ್ನು 2 ಬೆಲ್ ಮಟ್ಟದೆಂದೂ ಸಾವಿರದಷ್ಟು ಅಂದರೆ $10^3$ರಷ್ಟು ಹೆಚ್ಚಾಗಿದ್ದರೆ ಅದನ್ನು 3 ಬೆಲ್ ಮಟ್ಟದ್ದೆಂದೂ ವಿವರಿಸುತ್ತಾರೆ. ಆದರೆ ಬೆಲ್ ತೀರ ದೊಡ್ಡ ಘಟಕ. ಒಂದು ಶಬ್ದ ಕನಿಷ್ಠಪ್ರಮಾಣಕ್ಕಿಂತ 4–5ರಷ್ಟೂ 25–30ರಷ್ಟೋ ಹೆಚ್ಚಿಗೆ ಇದ್ದರೆ ಅದರ ಘೋಷವನ್ನು ಬೆಲ್ ಘಟಕದಲ್ಲಿ ನಿಖರವಾಗಿ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಬೆಲ್ ಘಟಕದ ದಶಮಾಂಶವಾದ




ಚಿತ್ರ 3 ಒಂದು ವಾದ್ಯದಿಂದ ಅಥವಾ ಹಾಡುಗಾರನಿಂದ ಹೊರಹೊಮ್ಮುವ ಶಬ್ದದ ಒತ್ತಡ ಒತ್ತಡ ವಕ್ರರೇಖೆಯನ್ನು (a)ಯಲ್ಲಿ ಕಾಣಿಸಿದೆ. ಇದನ್ನು ಭಿನ್ನ ಆವರ್ತಾಂಕಗಳಿರುವ ಹಲವಾರು ವಕ್ರರೇಖೆಗಳ (ಸೈನುಸಾಯಿಡ್ಸ್) ಸರಾಸರಿ ಎಂದು ಭಾವಿಸಬಹುದು. ಒಂದೊಂದಕ್ಕೂ ನಿರ್ದಿಷ್ಟ ಕಂಪನವೈಶಾಲ್ಯವಿರುವ ಈ ಭಿನ್ನ ವಕ್ರರೇಖೆಗಳನ್ನು (b)ಯಲ್ಲಿ ಕಾಣಿಸಿದೆ. ಇವುಗಳ ಸರಾಸರಿಯೇ (a), ಆವರ್ತಾಂಕಗಳ ವ್ಯಾಪ್ತಿಯನ್ನು (c)ಯಲ್ಲಿ

ಡೆಸಿಬೆಲ್(ಇದರ ಸಂಕೇತ dB) ಎಂಬ ಘಟಕವನ್ನು ಉಪಯೋಗಿಸುತ್ತಾರೆ. ಮಾನವರು ತಡೆದುಕೊಳ್ಳಬಹುದಾದಷ್ಟು ಶಕ್ತಿಯುತವಾದ ಘೋಷ ಪ್ರಮಾಣ ಸುಮಾರು 130 ಡೆಸಿಬೆಲ್ಲುಗಳು (dB ಗಳು) ಅಂದರೆ 13 ಬೆಲ್ಲುಗಳು. ಇದು ಕೇಳುವಿಕೆಯ ಕನಿಷ್ಠಪ್ರಮಾಣಕ್ಕಿಂತ $10^{13}$ ಶಕ್ತಿಯುತವಾಗಿದೆ. ಸಾಧಾರಣವಾಗಿ ನಮ್ಮ ಗಣನೆಗೆ ಬರುವ ಶಬ್ದ ಘೋಷವನ್ನು ಡೆಸಿಬೆಲ್ಲುಗಳ ಘಟಕದಲ್ಲಿ ಈ ರೀತಿ ವಿವರಿಸಬಹುದು.

| | | |
|---|---|---|
| ಗಾಳಿಯಿಂದಾಗುವ ಎಲೆಗಳ ಮರ್ಮರ ಶಬ್ದ | . . . . . | 10 dB |
| ಸು. 6096 ಮೀ ದೂರದಲ್ಲಿ ಪಿಸುಮಾತು | . . . . | 20 dB |
| ಸು. 3.6 ಮೀ ದೂರದಲ್ಲಿ ಸಂಭಾಷಣೆ | . . . . | 50 dB |
| ದೂರದ ಸಿಡಿಲು | . . . . | 70 dB |
| ಹತ್ತಿರದಲ್ಲಿ ಸಿಂಹದ ಗರ್ಜನೆ | . . . . | 100 dB |

ವಯಸ್ಸು ಮೂವತ್ತನ್ನು ದಾಟಿದ ಮೇಲೆ ಶಬ್ದಘೋಷಗ್ರಹಣ ಸೂಕ್ಷ್ಮತೆ ಅದರಲ್ಲೂ 1,000ಕ್ಕೆ ಮೇಲ್ಪಟ್ಟ ಆವರ್ತಾಂಕದ ಶಬ್ದಗಳ ವಿಷಯದಲ್ಲಿ ಬಹಳವಾಗಿ ತಗ್ಗುತ್ತದೆ. ಕರ್ಕಶ ಮತ್ತು ಮಧುರಸ್ವರದ ಸಂಯುಕ್ತರಂಗದ ವಿಶ್ಲೇಷಣೆಯನ್ನು ಯಂತ್ರದ ಸಹಾಯದಿಂದ ಮಾಡಬಹುದು ಎಂದು ಮೇಲೆ ಹೇಳಿದೆ. ಮಧುರಸ್ವರದ ವಿಶ್ಲೇಷಣೆಯನ್ನು ಫೂರಿಯರ್ ಎಂಬ ವಿಜ್ಞಾನಿಯ ನಿಯಮದಂತೆ ಗಣಿತರೀತಿಯಲ್ಲೂ ಮಾಡಬಹುದು. ಹಾಗೆ ಮಾಡಿದಾಗ ಪ್ರಧಾನತರಂಗವೂ ಅದರ ಎರಡರಷ್ಟು, ನಾಲ್ಕರಷ್ಟು, ಎಂಟರಷ್ಟು ಮುಂತಾದ ಪ್ರಮಾಣದ ಆವರ್ತಾಂಕದ ಅನುಷಂಗಿಕ ತರಂಗಗಳೂ ಮತ್ತು ಅವು ಹೇಗೆ ಪ್ರಧಾನತರಂಗದ ಮೇಲೆ ಹೇರಿಕೊಂಡಿವೆ ಎನ್ನುವುದೂ ತಿಳಿಯುತ್ತದೆ.

ಇವೆಲ್ಲ ಒಂದು ವಿಶಿಷ್ಟರೀತಿಯಿಂದ ಸಂಯುಕ್ತವಾಗಿರುವುದರಿಂದ ಮಧುರ ಸ್ವರವನ್ನು ಲೇಖಿಸಿದರೆ ಅದರ ತರಂಗವಾಲೆಯಲ್ಲಿ ಅನುಗುಣವಾದ ಒಂದು ವಿಶಿಷ್ಟ ಸಂಯುಕ್ತತರಂಗವೇ ನಿರಂತರವಾಗಿ ಕ್ರಮ ಬದ್ಧವಾಗಿ ಕಾಣಬರುತ್ತ ದೆಂದು ಮೇಲೆ ಹೇಳಿದೆ. ಶಬ್ದದ ಸಂಯುಕ್ತತೆ ಶಬ್ದೋತ್ಪತ್ತಿಯಾಗುವಾಗಲೇ ಉಂಟಾಗುವುದರಿಂದ ಆ ಶಬ್ದಕ್ಕೆ ವಿಶಿಷ್ಟವಾದ ಸ್ವಭಾವ ಉಂಟಾಗುತ್ತದೆ. ಇದೇ ಶಬ್ದದ ಭಾವ ಅಥವಾ ವೈಶಿಷ್ಟ್ಯ. ಶಬ್ದದ ಭಾವ ಶಬ್ದೋತ್ಪತ್ತಿ ಮಾಡುವ ವಸ್ತುವನ್ನೇ ಆಧರಿಸಿರುವುದರಿಂದ ಶಬ್ದದ ಮೂಲ ಕಾರಣ ವನ್ನು ಶಬ್ದದ ಭಾವದಿಂದ ಗುರುತಿಸಬಹುದು. ಶಬ್ದದ ಈ ಭಾವವನ್ನು ಗ್ರಹಿಸಿ ವಿವಿಧ ವಾದ್ಯಗಳನ್ನು ಅವುಗಳ ನಾದವ್ಯತ್ಯಾಸ ದಿಂದಲೂ, ಭಿನ್ನವ್ಯಕ್ತಿ ಗಳನ್ನು ಅವರ ಧ್ವನಿ ವ್ಯತ್ಯಾಸದಿಂದಲೂ ಪತ್ತೆ ಹಚ್ಚಬಹುದಾಗಿದೆ.




ಚಿತ್ರ 4 ದುರ್ಬಲಶಬ್ದಕ್ಕೂ (a) ಪ್ರಬಲ ಶಬ್ದಕ್ಕೂ (b) ಇರುವ ಶಕ್ತಿವ್ಯತ್ಯಾಸವನ್ನು ತೋರಿಸುವ ನಕ್ಷೆಗಳು

ಕ್ರಮಬದ್ಧವಾದ ಸಂಯುಕ್ತತೆ ಮಧುರ ಸ್ವರಗಳಲ್ಲಿ ಮಾತ್ರವೇ ಅಲ್ಲದೆ ಬೇರೆ ರೀತಿಯಲ್ಲೂ ಸಂಭವಿಸಬಹುದು. ಎರಡು ಮಧುರಸ್ವರಗಳು ಏಕಕಾಲದಲ್ಲಿ ಬೇರೆಬೇರೆಯಾಗಿ ಉತ್ಪತ್ತಿ ಆಗುತ್ತಿವೆ ಎನ್ನೋಣ. ಆ ಎರಡು ಸ್ವರಗಳ ಆವರ್ತಾಂಕಗಳಲ್ಲಿ ಎರಡರಷ್ಟೋ, ಐದರಷ್ಟೋ, ಹತ್ತರಷ್ಟೋ ವ್ಯತ್ಯಾಸವಿದ್ದರೆ ಆ ಎರಡು ಶಬ್ದಗಳೂ ಪೂರ್ಣವಾಗಿ ಮಿಲನವಾಗಿ ಒಂದೇ ಸ್ವರದಂತೆ ಕೇಳಿಸುತ್ತವೆ ಮತ್ತು ಆ ಸ್ವರ ಸೆಕೆಂಡಿಗೆ ಅನುಕ್ರಮವಾಗಿ ಎರಡು ಸಾರಿಯೋ, ಐದು ಸಾರಿಯೋ, ಹತ್ತು ಸಾರಿಯೋ ಏರುತ್ತ ಇಳಿಯುತ್ತ ಇರುವಂತೆ ಕೇಳಿಸುತ್ತದೆ. ಈ ವಿಷಯ ಆ ಎರಡು ಶಬ್ದಗಳನ್ನೂ ಕಿವಿ ಪ್ರತ್ಯೇಕವಾಗಿ ಕೇಳುವಷ್ಟು ಸೂಕ್ಷ್ಮವಲ್ಲವೆನ್ನುವುದನ್ನು ಮನಗಾಣಿಸುತ್ತದೆ. ಎರಡು ಶಬ್ದಗಳೂ ಕ್ರಮಬದ್ಧವಾಗಿ ಹೀಗೆ ಮಿಲನವಾದಾಗ ಸಂಯುಕ್ತಸ್ವರ ಮಧುರವಾಗಿಯೇ ಕೇಳಿಸುತ್ತದೆ. ದ್ವಂದ್ವ ವೀಣೆ ಕಛೇರಿಯಲ್ಲಿ ಅಥವಾ ಜೋಡಿಗಾಯಕರು ಹಾಡುವಾಗ ಇದು ಅನುಭವಕ್ಕೆ ಬರಬಹುದು.

ಏಕಕಾಲಿಕವಾಗಿ ಉತ್ಪತ್ತಿಯಾಗುವ ಎರಡು ಶಬ್ದಗಳ ಆವರ್ತಾಂಕಗಳಲ್ಲಿ




ಚಿತ್ರ 5 ಶಬ್ದದ ಅಲೆಯುದ್ದ ಶ್ರುತಿಯನ್ನು ನಿರ್ಧರಿಸುತ್ತದೆ. ಉಚ್ಚಶ್ರುತಿಯ ಶಬ್ದದ ಒತ್ತಡ ವಕ್ರರೇಖೆಯಲ್ಲಿ (a) ಅತಿಸಮೀಪದ ತೀವ್ರ ಏರಿಳಿತಗಳಿರುತ್ತವೆ. ನೀಚ ಶ್ರುತಿಯದರಲ್ಲಿ ವಕ್ರರೇಖೆ (b) ಹೆಚ್ಚು ಕಡಿಮೆ ಮಟ್ಟಸವಾಗಿದ್ದು ಏರಿಳಿತಗಳು ಕಡಿಮೆಯಾಗಿರುತ್ತವೆ.

ಬಹಳ ವ್ಯತ್ಯಾಸವಿದ್ದರೆ ಅವೆರಡು ಕೂಡ ಕ್ರಮಬದ್ಧವಾಗಿ ಮಿಲನವಾಗಿ ಮಧುರಸ್ವರವಾಗಿ ಕೇಳಿಸುವುದೂ ಸಾಧ್ಯ. ಆದರೆ ಇದಕ್ಕೆ ಬೇರೆಯೇ ಕಾರಣ. ಕೇಳಿಸುವ ಶಬ್ದ ವಾಸ್ತವವಾಗಿ ಮೂಲಶಬ್ದಗಳ ಆವರ್ತಾಂಕಗಳ ಮೊತ್ತ ಅಥವಾ ವ್ಯತ್ಯಾಸ ಆವರ್ತಾಂಕವುಳ್ಳ ಹೊಸಶಬ್ದವೇ. ಈ ಮೂಲ ಶಬ್ದಗಳು ಕಿವಿಯ ಒಳಹೊಕ್ಕಾಗ, ಅದರಲ್ಲೂ ಅವುಗಳ ಘೋಷ ಹೆಚ್ಚಾಗಿದ್ದಾಗ, ಕಿವಿಯ ಒಳಗೇ ಜಟಿಲತೆ ಉಂಟಾಗುತ್ತದೆ. ಮೂಲಶಬ್ದಗಳ ಆವರ್ತಾಂಕಗಳ ಎರಡರಷ್ಟು ಮೊತ್ತ ಅಥವಾ ವ್ಯತ್ಯಾಸ ಆವರ್ತಾಂಕವುಳ್ಳ ಹೊಸ ಶಬ್ದವೂ ಇದೇ ರೀತಿ ಕರ್ಣಜನ್ಯವಾಗಿ ಕೇಳಿಸಬಹುದು.

ಭಿನ್ನಭಾವಗಳ ಅನೇಕ ಸಂಯುಕ್ತ ಮಧುರಸ್ವರಗಳು ಏಕಕಾಲಿಕವಾಗಿ ಉತ್ಪತ್ತಿಯಾಗಿ ಅವು ಒಂದಕ್ಕೊಂದು ಹೊಂದಿಕೊಂಡು ಇಂಪಾಗಿ ಕೇಳಿಬರುತ್ತಿದ್ದರೆ ಅದನ್ನು ಶಬ್ದಸಾಂಗತ್ಯವೆನ್ನುತ್ತಾರೆ. ಇದೇ ಪಾಶ್ಚಾತ್ಯ ವಾದ್ಯಸಂಗೀತದಲ್ಲಿ ಕೇಳಿಬರುವ ಮಧುರತೆ ಅಥವಾ ಭಾರತೀಯ ಸಂಗೀತದಲ್ಲಿ ಕಾಣಬರುವ ಇಂಪು. ಇದು ಮಧುರಸ್ವರಗಳು ಒಂದಾದ ಮೇಲೊಂದು ಅವಿರತವಾಗಿ ಬರುತ್ತಿರುವುದರಿಂದ ಲಭಿಸುತ್ತದೆ.

ಒಂದು ಮಧುರಸ್ವರದ ಅನುಭವ ಇನ್ನೂ ಆಗುತ್ತಿರುವಂತೆಯೇ ಅದಕ್ಕೆ ಹೊಂದಿಕೊಳ್ಳುವ ಇನ್ನೊಂದು ಮಧುರಸ್ವರ ಕೇಳಿಬರುವುದರಿಂದ ಉಂಟಾಗುವ ಈ ಮಧುರತೆಗೆ ಶಬ್ದ ಮಾಧುರ್ಯವೆನ್ನುತ್ತಾರೆ. ಈ ಮಧುರಸ್ವರಗಳ ಆವರ್ತಾಂಕಗಳು




ಚಿತ್ರ 6 ಶಬ್ದದ ವೈಶಿಷ್ಟ್ಯವನ್ನು ಅರಿಯಲು ಸಹಕಾರಿಗಳಾದ ಮೂರು ಭಿನ್ನ ವಕ್ರರೇಖೆಗಳು. (a) ಶ್ರುತಿಕವಲಿನಿಂದ ಉತ್ಪನ್ನವಾದ ಶಬ್ದದ ಒತ್ತಡರೇಖೆ. (b) ಎರಡು ಭಿನ್ನವಾದ್ಯಗಳಿಂದ ಉತ್ಪನ್ನವಾದ ಶಬ್ದಗಳ ಒತ್ತಡ ವಕ್ರರೇಖೆಗಳು

ಒಂದಕ್ಕೊಂದು ವಿಶೇಷ ಮತ್ತು ಸರಳರೀತಿಯಲ್ಲಿ ಸಂಬಂಧಪಟ್ಟಿರುವುದರಿಂದ ಅವು ಹೀಗೆ ಹೊಂದಿಕೊಂಡು ಶಬ್ದಮಾಧುರ್ಯ ಲಭಿಸುತ್ತದೆ. ಸ, ರಿ, ಗ, ಮ, ಪ, ದ, ನಿ ಎಂಬ ಸಪ್ತಸ್ವರಗಳಲ್ಲಿರುವ ಪರಸ್ಪರ ಸಂಬಂಧವನ್ನು ಈ ರೀತಿ ವಿವರಿಸಬಹುದು. ಮಂದ್ರ ಸ್ಥಾಯಿಯಲ್ಲಿ ಸ ಎನ್ನುವ ಸ್ವರದ ಆವರ್ತಾಂಕ 120 ಎಂದು ಇಟ್ಟುಕೊಳ್ಳೋಣ (ಸಾಮಾನ್ಯವಾಗಿ ಇದು 100ರಿಂದ 200ರ ವರೆಗೆ ಇರುತ್ತದೆ). ಆಗ ರಿ ಎನ್ನುವ ಸ್ವರದ ಆವರ್ತಾಂಕ ಸ ಕ್ಕಿಂತ 1/8 ಹೆಚ್ಚು ಅಂದರೆ 135 ಆಗುತ್ತದೆ. ಗ, ಸ ಸ್ವರದ 1¼ ಆವರ್ತದ್ದಾಗಿ ಅದರ ಆವರ್ತಾಂಕ 150 ಆಗಿರುತ್ತದೆ. ಮ, ಸ ಸ್ವರದ $1\frac{1}{3}$ ಆಗಿಯೂ ಪ 1½ ಆಗಿಯೂ ಧ $1\frac{2}{3}$ ಆಗಿಯೂ ನಿ $1\frac{7}{8}$ ಆಗಿಯೂ ಅನುಕ್ರಮವಾಗಿ 160,180,200,225 ಆವರ್ತಾಂಕಗಳಾಗಿರುತ್ತವೆ. ಇದಕ್ಕೆ ಮೇಲ್ಪಟ್ಟು ಮಧ್ಯಮ ಸ್ಥಾಯಿಯ ಸ ಸ್ವರ ಮಂದ್ರ ಸ ಸ್ವರದ ಎರಡರಷ್ಟು ಆವರ್ತಾಂಕದ್ದಾಗಿರುತ್ತದೆ. ಅಂದರೆ ಅದರ ಆವರ್ತಾಂಕ 240 ಆಗಿಯೂ ಹಾಗೆ ಮಿಕ್ಕ ಮಧ್ಯಸ್ವರಗಳು ಮಂದ್ರಸ್ಥಾಯಿ ಸ್ವರಗಳ ಎರಡರಷ್ಟು ಆವರ್ತಾಂಕದವಾಗಿಯೂ ಇರುತ್ತವೆ. ಇದೇ ರೀತಿ ತಾರಸ್ಥಾಯಿಯ ಸ್ವರಗಳು ಮಂದ್ರಸ್ಥಾಯಿಯ ಸ್ವರಗಳ ನಾಲ್ಕರಷ್ಟು, ಮಧ್ಯಸ್ಥಾಯಿ ಸ್ವರಗಳ ಎರಡರಷ್ಟು ಆವರ್ತಾಂಕವಾಗಿರುತ್ತವೆ. ಈ ಮೂರು ಸ್ಥಾಯಿಗಳಲ್ಲೂ ಸ್ವರಗಳು ಒಂದಕ್ಕೊಂದು ಹೊಂದಿಕೊಳ್ಳಬಹುದಾದ್ದರಿಂದ ಶಬ್ದಮಾಧುರ್ಯ ಉಂಟಾಗುತ್ತದೆ. ಕೇಳುವಿಕೆಯ ಸೂಕ್ಷ್ಮತೆ ಎಲ್ಲ ಆವರ್ತಾಂಕಗಳ ಶಬ್ದಗಳಿಗೂ ಒಂದೇ ರೀತಿಯಲ್ಲಿಲ್ಲವೆಂದು ಮೇಲೆಯೇ ಹೇಳಿದೆ. ಆದ್ದರಿಂದ ಸಂಯುಕ್ತ ಶಬ್ದ ತರಂಗಗಳು ಅಥವಾ ಹೊಂದಿಕೊಳ್ಳುವ ಎರಡು ಅಥವಾ ಅನೇಕ ಶಬ್ದಗಳು ಏಕಕಾಲಿಕವಾಗಿಯಾಗಲಿ ನಿರಂತರವಾಗಿಯಾಗಲಿ ಕಿವಿಯೊಳಹೊಕ್ಕಾಗ ಮತ್ತು ಕರ್ಣಜನ್ಯಶಬ್ದಗಳು ಉತ್ಪತ್ತಿಯಾದಾಗ ಕೆಲವು ತರಂಗಗಳು ಚೆನ್ನಾಗಿ ಕೇಳಿಯೂ ಕೆಲವು ಅಡಗಿಯೂ ಪ್ರತಿ ಶಬ್ದವೂ ತನ್ನದೇ ಆದ ವೈಶಿಷ್ಟ್ಯದಿಂದ ಕೇಳಿಸಿ ಅರಿವಿಗೆ ಬರುತ್ತದೆ.

**3 ಶ್ರವಣೇಂದ್ರಿಯ :** ಇಡೀ ಪ್ರಾಣಿವರ್ಗದಲ್ಲಿ ಶಬ್ದಾನುಭವ ವಿಕಾಸಗೊಂಡು ಉಪಯುಕ್ತತೆ ಪಡೆದಿರುವುದು ಕೀಟ ಮತ್ತು ಕಶೇರುಕಗಳಲ್ಲಿ ಮಾತ್ರ. ಎರಡು ಕಡೆಗಳಲ್ಲಿಯೂ ಶ್ರವಣೇಂದ್ರಿಯ ಬಹುಸರಳರೂಪದ ಕಂಪನಶಕ್ತಿಯುಳ್ಳ ಅಂಗಗಳಿಂದ ಪ್ರಾರಂಭವಾಗಿದ್ದರೂ ವಿಕಾಸದ ಹಾದಿಯಲ್ಲಿ ಬೇರೆ ರೀತಿಯಲ್ಲಿ ಮುಂದುವರಿದಿದೆ.

ಕೀಟವರ್ಗದಲ್ಲಿ ಕೇಳುವಿಕೆ ಸ್ವಾಭಾವಿಕವಾಗಿಯೇ ಶಬ್ದೋತ್ಪತ್ತಿಮಾಡುವ ಕೀಟಗಳಲ್ಲಿ ಸಾಮಾನ್ಯವಾಗಿಯೂ ಯಾವ ಶಬ್ದವನ್ನೂ ಮಾಡದ ಕೆಲವು ಪತಂಗಗಳಲ್ಲಿ ವಿರಳವಾಗಿಯೂ ಉಂಟು. ಇವುಗಳಲ್ಲಿ ಶ್ರವಣೇಂದ್ರಿಯ ತಲೆಭಾಗದಲ್ಲಿ ಇಲ್ಲ; ಬದಲು ಅದು ಇರುವುದು ದೇಹದ ಇತರ ಭಾಗಗಳಲ್ಲಿಯೇ. ಚಿಮ್ಮಂಡೆಗಳಲ್ಲಿ ಮುಂದಿನ ಕಾಲುಗಳಲ್ಲಿಯೂ, ಪತಂಗಗಳಲ್ಲಿ ಎದೆಭಾಗದಲ್ಲಿಯೂ, ಹಸಿರು ಮಿಡತೆಗಳಲ್ಲಿ ಹೊಟ್ಟೆ ಭಾಗದಲ್ಲಿಯೂ ಶ್ರವಣೇಂದ್ರಿಯದ ಸ್ಥಾನ ಉಂಟು. ರಚನೆ ಅತಿಸರಳವಾಗಿರುವ ಕಡೆಗಳಲ್ಲಿ ಶ್ರವಣೇಂದ್ರಿಯ ಅದು ಇರುವ ಮುಂದಿನ ಕಾಲು ಅಥವಾ ಎದೆ ಅಥವಾ ಹೊಟ್ಟೆಯಲ್ಲಿ ಅಡ್ಡಗಲಕ್ಕೂ ವ್ಯಾಪಿಸಿ ಆ ಭಾಗದ ಎದುರುಬದುರು ಭಿತ್ತಿಯನ್ನು ಸಂಪರ್ಕಿಸುವ ಮೂರು ಜೀವಾಣುಗಳ ಒಂದು ಸರಪಣಿಮಾತ್ರವಾಗಿರುತ್ತದೆ. ಇದರಲ್ಲಿ ಪ್ರತಿಕ್ರಿಯೆಯನ್ನು ತೋರಿಸಬಲ್ಲ ಸೂಕ್ಷ್ಮತೆ ಇರುವುದು ಸಾಮಾನ್ಯವಾಗಿ ಮಧ್ಯದ ಜೀವಾಣುವಿಗೆ ಮಾತ್ರ. ಶಬ್ದತರಂಗಗಳು ಶ್ರವಣೇಂದ್ರಿಯ ಇರುವ ಈ ಭಾಗಗಳನ್ನು ಕಂಪಿಸಿದಾಗ ಆಗುವ ಒತ್ತಡ ವ್ಯತ್ಯಾಸಗಳಿಂದ ಈ ಜೀವಾಣು ಸರಪಣಿಯ ಆಕಾರ ವ್ಯತ್ಯಾಸವಾಗುತ್ತದೆ ಮತ್ತು ಸೂಕ್ಷ್ಮಜೀವಾಣುವಿನ ಸುತ್ತ ಇರುವ ನರಗಳಲ್ಲಿ ಪ್ರಚೋದನೆಯುಂಟಾಗುತ್ತದೆ. ಶ್ರವಣೇಂದ್ರಿಯ ಇನ್ನೂ ಸ್ವಲ್ಪ ಜಟಿಲವಾಗಿರುವ ಕೀಟಗಳಲ್ಲಿ ಈ ಇಂದ್ರಿಯ ಶಬ್ದಕಂಪನದಿಂದ ಒತ್ತಡ ವ್ಯತ್ಯಾಸವಾಗುವ ಗಾಳಿತುಂಬಿದ ಕೋಶದ ಒಳಗಡೆ ಇರುತ್ತದೆ ಮತ್ತು ಆ ಕೋಶದ ಗಾಳಿಯ ಕಂಪನ ಶ್ರವಣೇಂದ್ರಿಯವನ್ನು ಆ ಮೇಲೆ ಪ್ರಚೋದಿಸುತ್ತದೆ. ಶೀಶೆಯಲ್ಲಿ ಚಿರುಗುಟ್ಟುತ್ತಿರುವ ಗಂಡು ಚಿಮ್ಮಂಡೆ ಹುಳುವಿರುವ ಕೊಠಡಿಯಲ್ಲಿ ಹೆಣ್ಣು ಚಿಮ್ಮಂಡೆಯನ್ನು ಹಾರಿಬಿಟ್ಟರೆ ಅದು ಸೀದಾ ಗಂಡಿರುವ ಕಡೆಗೆ ಹೋಗುತ್ತದೆ. ಟೆಲಿಫೋನಿನಲ್ಲಿ ಗಂಡಿನ ಚಿರುಗುಟ್ಟುವಿಕೆಯನ್ನು ಪ್ರಸರಿಸಿದರೆ ಹೆಣ್ಣು ಚಿಮ್ಮಂಡೆಯು ಟೆಲಿಫೋನಿನ ಬಳಿಗೇ ಹಾರಿಹೋಗುತ್ತದೆ. ಹೆಣ್ಣು ಚಿಮ್ಮಂಡೆಯ ಶ್ರವಣೇಂದ್ರಿಯವನ್ನು ಪ್ರಯೋಗಾರ್ಥವಾಗಿ ಘಾಸಿಪಡಿಸಿದಾಗ ಅದು ಹೀಗೆ ವರ್ತಿಸುವುದಿಲ್ಲ. ಪ್ರಾಸಂಗಿಕವಾಗಿ ಈ ಪ್ರಯೋಗ ಶಬ್ದೋತ್ಪತ್ತಿ ಮತ್ತು ಕೇಳುವಿಕೆಗೆ ಸಂತಾನೋತ್ಪತ್ತಿಯಲ್ಲಿರುವ ಪ್ರಾಮುಖ್ಯವನ್ನು ತೋರಿಸುತ್ತದೆ. ಈ ಪ್ರಯೋಗಗಳಿಂದ ಇನ್ನೂ ಗೋಚರವಾಗುವುದು ಕೀಟಗಳಲ್ಲಿ ಉತ್ಪತ್ತಿಯಾಗುವ ಮತ್ತು ಅವು ಕೇಳಿಸಿಕೊಳ್ಳಬಲ್ಲ ಶಬ್ದಗಳು ಅನೇಕ ವೇಳೆ ಮನುಷ್ಯರ ಶ್ರವಣಶಕ್ತಿಯನ್ನು ಮೀರಿರುವ ವಿಷಯ. ಕೀಟಗಳ ಶಬ್ದಲೋಕ ಮನುಷ್ಯರ ಶಬ್ದಲೋಕಕ್ಕಿಂತ ವ್ಯತ್ಯಾಸವಾಗಿರುವುದು ಇದರಿಂದ ವೇದ್ಯ.

ಕಶೇರುಕಗಳಾದ ಕೆಲವು ಮೀನು ಮತ್ತು ಭೂ ಜಲಚರಿಗಳಲ್ಲಿ ಶ್ರವಣೇಂದ್ರಿಯ ಸರಳರೂಪದಲ್ಲಿ ಕಾಣಬರುತ್ತದೆ. ಇವುಗಳಲ್ಲಿ ಹೊರಗಡೆಯೇ ಕಾಣಿಸುವ ಸಮತೂಕ ಸಾಧಕ ಅಂಗವಾದ ಪಕ್ಕ ಸೀಮಾಂಗದ ಒಂದು ಅಂಶವಾಗಿ ಶ್ರವಣೇಂದ್ರಿಯ ಬೆಳೆದಿದೆ. ಅನೇಕ ಮೀನುಗಳಲ್ಲಿ ಸುತ್ತಮುತ್ತ ಮೂಳೆಗಳ ಮೂಲಕ ಒಯ್ಯಲ್ಪಟ್ಟ ಶಬ್ದತರಂಗಗಳನ್ನು ಗುರುತಿಸುವ ಸಾಧನವಾಗಿ ಒಂದು ಕೋಶ ಅಥವಾ ನಿಬಿಡವಾದ ಸ್ಥಳವಿರುತ್ತದೆ ಮತ್ತು ಅದರಲ್ಲಿ ತಾರಸ್ವರ ಶಬ್ದಗ್ರಹಣವಾಗುತ್ತದೆ. ಯಾವುದೋ ವಿಶಿಷ್ಟಶಬ್ದವನ್ನು ಮಾಡಿದಾಗ ಮಾತ್ರ ಆಹಾರ ತೆಗೆದುಕೊಳ್ಳಲು ಬರುವಂತೆ ತರಬೇತು ಮಾಡಿದ ಮೀನುಗಳ ಮೇಲಿನ ಪ್ರಯೋಗಗಳಿಂದ ಈ ವಿಷಯಗಳನ್ನು ತಿಳಿಯಲಾಗಿದೆ. ಗಾಳಿಯಲ್ಲಿ ಸಾಗುವ ಶಬ್ದ ಸಾಮಾನ್ಯವಾಗಿ ನಿಷ್ಫಲ ಎಂದೂ ನೀರಿನಲ್ಲಿ ಗಮಿಸುವ ಶಬ್ದ ಮಾತ್ರ ಗ್ರಾಹ್ಯವೆಂದೂ ಈ ಪ್ರಯೋಗಗಳು ತೋರಿಸುತ್ತವೆ.

ಇನ್ನು ಕೆಲವು ಭೂಜಲಚರಿಗಳಲ್ಲಿ ಸ್ವಲ್ಪ ಜಟಿಲತೆಯುಳ್ಳ ಶ್ರವಣೇಂದ್ರಿಯ ರೂಪತಳೆದಿದೆ. ಇವುಗಳಲ್ಲಿ ಗಾಳಿಯಿಂದ ಒಯ್ಯಲ್ಪಡುವ ತರಂಗಗಳು ಮೈ ಚರ್ಮದ ಒಂದು ಭಾಗದಲ್ಲಿ ಬಡಿದು ಅದು ಕಂಪಿಸುವಂತೆ ಮಾಡುತ್ತವೆ. ಈ ಕಂಪನ ಆಮೇಲೆ ಶ್ರವಣೇಂದ್ರಿಯಕ್ಕೆ ಒಯ್ಯಲ್ಪಡುತ್ತದೆ. ಕಪ್ಪೆಗಳು ತಾರಸ್ವರಗಳಿಗೆ ಪ್ರತಿಕ್ರಿಯೆ ತೋರಿಸುವುದು ಕಡಿಮೆ ಎಂದೂ ಮಂದ್ರಸ್ವರಗಳಿಗೆ ಮಾತ್ರ ಅವು ಸೂಕ್ಷ್ಮಗ್ರಾಹಿಗಳೆಂದೂ ಪ್ರಯೋಗದಿಂದ ಕಂಡುಬಂದಿದೆ. ಮೊಸಳೆಗಳನ್ನು ಬಿಟ್ಟರೆ ಬೇರಾವ ಸರೀಸೃಪದಲ್ಲಿಯೂ ಶ್ರವಣೇಂದ್ರಿಯ ಜಟಿಲವಾಗಿಲ್ಲ. ಮೊಸಳೆಗಳಲ್ಲಿ ಮಾತ್ರ ಇದು ಜಟಿಲವಾಗಿ ಸುಮಾರು 4,000 ಆವರ್ತಾಂಕದ ಶಬ್ದಗಳನ್ನು ಗ್ರಹಿಸಬಲ್ಲವಾಗಿದೆ.

ಪಕ್ಷಿಗಳು ಬೇರೆಬೇರೆ ತಾರಸ್ಥಾಯಿಯಲ್ಲಿ ಇಂಚರಗೈಯುವ ವಿಷಯ ಎಲ್ಲರಿಗೂಗೊತ್ತಿದೆ. ಅದಕ್ಕೆ ತಕ್ಕಂತೆ ಪಕ್ಷಿಗಳ ಶ್ರವಣೇಂದ್ರಿಯಕ್ಕೆ ಸುಮಾರು 10,000 ಆವರ್ತಾಂಕದ ಶಬ್ದಗಳನ್ನು ಗ್ರಹಿಸುವ ಸೂಕ್ಷ್ಮತೆ ಉಂಟು. ಸಹಜವಾಗಿರುವ ಈ ಅರ್ಥವತ್ತಾದ ಏರ್ಪಾಡು ಪಕ್ಷಿಜಾತಿಯ ವೈಶಿಷ್ಟ್ಯವೇನಲ್ಲ. ಅನೇಕ ಸ್ತನಿಗಳು ತಾರಸ್ವರ ಉತ್ಪತ್ತಿಯನ್ನೂ ಅದನ್ನು ಕೇಳಿಸಿಕೊಳ್ಳುವ ಸೂಕ್ಷ್ಮತೆಯನ್ನೂ ಇನ್ನೂ ಹೆಚ್ಚಾಗಿಯೇ ತೋರಿಸುತ್ತವೆ. ಬಾವಲಿಗಳಲ್ಲಿ 98,000 ಆವರ್ತಾಂಕದ ಶಬ್ದವನ್ನು ಮಾಡಬಲ್ಲ ಮತ್ತು ಕೇಳಬಲ್ಲ ಶಕ್ತಿ ಅವುಗಳ ರಾತ್ರಿಕಾಲದ ಹಾರಾಟಕ್ಕೆ ಅತ್ಯಾವಶ್ಯಕವಾಗಿದೆ. ಸಾಮಾನ್ಯವಾಗಿ ಬಾವಲಿಗಳಲ್ಲೂ ರಾತ್ರಿಕಾಲದಲ್ಲಿ ದೃಷ್ಟಿ ಹಗಲಿಗಿಂತ ಮಂದ. ಆದರೂ ಅವು ಕಗ್ಗತ್ತಲಿನಲ್ಲಿ ನಿರಾತಂಕವಾಗಿ ಹಾರಬಲ್ಲುವು. ಕಣ್ಣು ಕುರುಡು ಮಾಡಿದರೂ ಅವುಗಳ ಈ ಸಾಮರ್ಥ್ಯಕ್ಕೆ ಚ್ಯುತಿಬರುವುದಿಲ್ಲ. ಹಾರಾಡುವಾಗ ಬಾವಲಿಗಳು ಮಾನವ

ಶ್ರವಣಾತೀತ ಶಬ್ದಗಳನ್ನುಂಟುಮಾಡಿ ಆ ಶಬ್ದಗಳು ಪ್ರತಿಧ್ವನಿತವಾಗುವುದನ್ನು ಕೇಳಿಸಿಕೊಂಡು ಹಾರುವ ದಿಕ್ಕನ್ನು ನಿರ್ಧರಿಸಿಕೊಳ್ಳುವುದರಿಂದ ಅಡ್ಡಬಂದ ಯಾವ ವಸ್ತುವಿಗೂ ಕತ್ತಲಿನಿಂದಾಗಿ ಅದು ಕಾಣಿಸದೇ ಇರುವುದಾದರೂ ಡಿಕ್ಕಿಹೊಡೆಯದೆ ಮುಂದುವರಿಯುತ್ತದೆ. ಬಾವಲಿಯ ಒಂದು ಕಿವಿಯನ್ನು ಪ್ರಾಯೋಗಿಕವಾಗಿ ಘಾತಿಸಿದರೆ ಅದು ರಾತ್ರಿಕಾಲದಲ್ಲಿ ಮೊದಲಿನಷ್ಟು ಚುರುಕಾಗಿ ಹಾರಾಡಲಾರದು. ಎರಡು ಕಿವಿಗಳನ್ನೂ ಧ್ವಂಸಮಾಡಿ ಅದನ್ನು ಪೂರ್ತಿ ಕಿವುಡುಮಾಡಿದರೆ ಅದಕ್ಕೆ ರಾತ್ರಿ ಹಾರಾಡುವುದಕ್ಕೆ ಆಗುವುದೇ ಇಲ್ಲ. ಬಾವಲಿಗಳಂತೆಯೇ ಅವುಗಳ ಆವರ್ತಾಂಕದ ಹೆಚ್ಚಳದಿಂದ ಮನುಷ್ಯರಿಗೆ ಕೇಳಲು ಆಗದ 30,000–40,000 ಆವರ್ತಾಂಕಗಳ ಶಬ್ದಗಳನ್ನು ನಾಯಿ ಬೆಕ್ಕುಗಳು ಕೇಳಬಲ್ಲವು.

ಮನುಷ್ಯರ ಕಿವಿಯಲ್ಲಿ ಮೂರು ಭಾಗಗಳಿವೆ: ಹೊರಗಿವಿ, ಮಧ್ಯಗಿವಿ ಮತ್ತು ಒಳಗಿವಿ. ಹೊರಗಿವಿ ನಮಗೆ ಗೋಚರವಾಗುವ ಕಿವಿಯ ಭಾಗ. ಮಧ್ಯಗಿವಿ ಹೊರಕಿವಿಯಲ್ಲಿ ಗ್ರಹಿತವಾದ ಶಬ್ದವನ್ನು ಒಳಗಿವಿಗೆ ತಲಪಿಸುವ ಮೂರು ಸಣ್ಣ ಮೂಳೆಗಳಿಂದ ಕೂಡಿದ ಪ್ರದೇಶ. ಒಳಗಿವಿ ಶಬ್ದದ ಕಂಪನಗಳನ್ನು ನರಗಳ ಪ್ರಕ್ಷುಬ್ಧತೆಯನ್ನಾಗಿ ಪರಿವರ್ತಿಸಿ ಮಿದುಳಿಗೆ ಸಂದೇಶಗಳನ್ನು ಕಳುಹಿಸುವ ಸಾಧನ (**ನೋಡಿ– ಕಿವಿ**).

**ಹೊರಗಿವಿ :** ಹೊರಗಿವಿಗೆ ಎರಡು ಭಾಗಗಳುಂಟು. ಕಿವಿ ಎಂದು ಸಾಮಾನ್ಯವಾಗಿ ಕರೆಯುವ ಕಿವಿಯ ರೆಕ್ಕೆ ಅಥವಾ ಹಾಳೆ. ಬೇರೆ ಬೇರೆ ಪ್ರಾಣಿಗಳಲ್ಲಿ ಇದರ ಆಕಾರ, ಗಾತ್ರಗಳು ಬೇರೆ ಬೇರೆ. ಹಲವು ಪ್ರಾಣಿಗಳಲ್ಲಿ ಇದು ಇರುವುದಿಲ್ಲ. ಮೀನು, ಪಕ್ಷಿಗಳು, ಕಪ್ಪೆ, ಕೀಟಗಳಿಗೆ ಕಿವಿಯ ರೆಕ್ಕೆಯೇ ಇಲ್ಲ. ಮೊಲದ ಕಿವಿ ಅದರ ಗಾತ್ರವನ್ನು ಗಮನಿಸಿದರೆ ಅತಿ ದೊಡ್ಡದಾಗಿರುತ್ತದೆ. ಮಾನವನಿಗೆ ಹೊರಗಿವಿಯಿಂದ ಯಾವ ಪ್ರಯೋಜನವೂ ಇರುವಂತೆ ಕಾಣುವುದಿಲ್ಲ. ಇದನ್ನು ಅಲ್ಲಾಡಿಸುವುದು ಅಸಾಧ್ಯವಾದ್ದರಿಂದ ಹಸು ಅಥವಾ ಆನೆಯಂತೆ ನೊಣ ಇತ್ಯಾದಿಗಳನ್ನು ಓಡಿಸುವುದಕ್ಕೂ ಇದು ನಿಷ್ಪ್ರಯೋಜಕ. ಶಬ್ದಗಳನ್ನು ಲಾಳಿಕೆಯಂತೆ ಗ್ರಹಿಸಿ ಕಿವಿಯ ನಾಲೆಯೊಳಕ್ಕೆ ಹೆಚ್ಚಿನ ಮೊತ್ತದಲ್ಲಿ ಪ್ರವಹಿಸುವಂತೆ ಮಾಡಲು ಮಾನವನ ಕಿವಿಗಳ ಗಾತ್ರ ಏನೇನೂ ಸಾಲದು. ಈ ರೀತಿ ಕೆಲಸ ಮಾಡಬೇಕಾದರೆ ಕಿವಿಯ ರೆಕ್ಕೆಗಳ ಉದ್ದ ಶಬ್ದದ ಅಲೆಯುದ್ದಕ್ಕಿಂತ ಹೆಚ್ಚಾಗಿರಬೇಕು. ಮಾನವನ ಕಿವಿಗೆ ಕೇಳುವ ಸ್ವರಗಳ ಅಲೆಯುದ್ದಗಳು ಗಾಳಿಯಲ್ಲಿ ಸುಮಾರು 1.7 ಸೆಂಮೀ–1,650 ಸೆಂಮೀ. ವರೆಗೂ ಇರುವುದರಿಂದ ಕಿವಿಯ ಅಳತೆಗಳು ಇವಕ್ಕಿಂತ ಬಹುಸಣ್ಣವೆಂದು ಹೇಳಬೇಕಾಗಿಲ್ಲ. ಹೆಚ್ಚು ಶ್ರುತಿಯ ಶಬ್ದಗಳನ್ನು ಮಾತ್ರ ಕಿವಿ ಸ್ವಲ್ಪಮಟ್ಟಿಗೆ ಸುಧಾರಿಸಿದ ದಕ್ಷತೆಯಿಂದ ಗ್ರಹಿಸಲು ಕಿವಿಯ ರೆಕ್ಕೆ ಸಹಾಯ ಮಾಡೀತೋ ಏನೋ. ಅದರ ಮಧ್ಯದಲ್ಲಿರುವ ಹಾದಿ ಕಿವಿಯ ಶಬ್ದನಾಲೆ. ಸುಮಾರು 27 ಮಿಮೀ ಉದ್ದ. 10 ಮಿಮೀ ವ್ಯಾಸದ ಒಂದು ವಕ್ರವಾದ ಕೊಳವೆ. ಈ ನಾಲೆಯ ಹೊರಭಾಗ ವಾತಾವರಣಕ್ಕೆ ತೆರೆದಿದ್ದು ಶಬ್ದಗಳನ್ನು ಸ್ವೀಕರಿಸುತ್ತದೆ. ಒಳಗಿನ ತುದಿತಮಟೆ (ಟಿಂಪನಂ) ಎಂದು ಕರೆಯಲಾದ ಚರ್ಮದ ಪೊರೆಯಿಂದ (ಮೆಂಬ್ರೇನ್) ಮುಚ್ಚಲ್ಪಟ್ಟಿದೆ. ಶಬ್ದ ತಮಟೆಯನ್ನು ಬಡಿದಾಗ ಅದನ್ನು ಉದ್ರೇಕಿಸಿ ಮಧ್ಯಕಿವಿಯನ್ನು ಪ್ರವೇಶಿಸುತ್ತದೆ. ಕಿವಿಯ ನಾಲೆಯ ಒಳಗೋಡೆಗಳು ಮಯಣದಂಥ ಪದಾರ್ಥದಿಂದ ಆವೃತವಾಗಿವೆ. ಅಲ್ಲಿ ಕೂದಲುಗಳಿವೆ. ಈ ಸಹಜ ಸೋಸಣಿಗೆಗಳ ಪರಿಣಾಮವಾಗಿ ದೂಳಿನ ಕಣಗಳೂ ಸಣ್ಣ ಕೀಟಗಳೂ ಕಿವಿಯ ತಮಟೆಯನ್ನು ತಲುಪಲಾರವು.

ಕಿವಿಯ ನಾಲೆಯ ಇರುವಿಕೆಯಿಂದ ಶ್ರವಣದ ಆವರ್ತಾಂಕ ಪ್ರತಿಕ್ರಿಯೆ (ಫ್ರೀಕ್ವೆನ್ಸಿ ರೆಸ್ಪಾನ್ಸ್) ಸ್ವಲ್ಪಮಟ್ಟಿಗೆ ಬದಲಾಗಿರುತ್ತದೆ. ನಾಲೆ ಒಂದು ತುದಿಯಲ್ಲಿ ತೆರೆದು ಇನ್ನೊಂದು ತುದಿಯಲ್ಲಿ ಮುಚ್ಚಿದ ಗಾಳಿಯಿಂದ ತುಂಬಿದ ಕೊಳವೆಯಂತಿರುವುದರಿಂದ ಅದಕ್ಕೆ ತನ್ನದೇ ಆದ ಒಂದು ಅನುನಾದ ಆವರ್ತಾಂಕ (ರೆಸೊನೆನ್ಸ್ ಫ್ರೀಕ್ವೆನ್ಸಿ) ಉಂಟು. ಶಬ್ದಗಳಲ್ಲಿ ಇರಬಹುದಾದ ಈ ಆವರ್ತಾಂಕದ ಸ್ವರಗಳನ್ನು ಕೊಳವೆಯ ಗಾಳಿ ಅನುಕಂಪದಿಂದ ಸ್ವೀಕರಿಸಿ ಸಹಜವಾಗಿಯೇ ಹೆಚ್ಚು ಶಕ್ತಿಯಿಂದ ಈ ಆವರ್ತಾಂಕದಲ್ಲಿಯೇ ಕಂಪಿಸುತ್ತದೆ. ಇತರ ಆವರ್ತಾಂಕಗಳಿಗೆ ಹೆಚ್ಚು ಅನುಕಂಪವಿಲ್ಲದೆ ಕಡಿಮೆ ಶಕ್ತಿಯಿಂದ ಕಂಪಿಸುತ್ತದೆ. ಆದ್ದರಿಂದ ಜಟಿಲವಾದ ಶಬ್ದಗಳಲ್ಲಿ ಒಂದು ಆವರ್ತಾಂಕದ ಸ್ವರಗಳನ್ನು ಕಿವಿ ಎತ್ತಿತೋರಿಸುವುದು. ನಾಲೆಯ ಅಳತೆಯಿಂದ ಈ ಸ್ವರದ ಆವರ್ತಾಂಕವನ್ನು ಗಣಿಸಬಹುದು.

$$\text{ಅನುನಾದ ಆವರ್ತಾಂಕ} = \frac{\text{ಶಬ್ದದ ವೇಗ (ಗಾಳಿಯಲ್ಲಿ)}}{4 \times \text{ಕೊಳವೆಯ ಉದ್ದ}} \text{ ಸರಿಸುಮಾರು}$$

$$= \frac{33{,}000 \text{ ಸೆಂಮೀ.ಸೆಕೆಂಡಿಗೆ}}{4 \times 2.7 \text{ ಸೆಂ ಮೀ}}$$

$$= \text{ಸೆಕೆಂಡಿಗೆ ಸರಿಸುಮಾರು } 3{,}000$$

ಕೊಳವೆಯ ತುದಿ ಭದ್ರವಾಗಿ ಮುಚ್ಚಿರುವುದಿಲ್ಲ. ಅದರಲ್ಲಿ ವಕ್ರತೆ ಉಂಟು; ಮೇಲಿನ ಸಮೀಕರಣದಲ್ಲಿಯೇ ಕೆಲವು ನ್ಯೂನತೆಗಳಿವೆ– ಈ ಕಾರಣಗಳಿಂದ ಮೇಲೆ ಪಡೆದ ಬೆಲೆ ಬದಲಾದೀತು. ಆದರೆ ಕಿವಿಯ ಸೂಕ್ಷ್ಮತೆಯನ್ನು ಮುಂದೆ ವಿವರಿಸುವಾಗ ಸುಮಾರು ಇದೇ ಆವರ್ತಾಂಕದಲ್ಲಿಯೇ ಕಿವಿ ಅತ್ಯಂತ ಸೂಕ್ಷ್ಮವಾಗಿದೆ ಎಂಬುದನ್ನು ಕಾಣುತ್ತೇವೆ. ಇದಕ್ಕೆ ಶಬ್ದನಾಲೆಯೇ ಕಾರಣ. ಸುಮಾರು 2,000–4,000ದ ವರೆಗಿನ ಆವರ್ತಾಂಕಗಳ ಶಬ್ದಗಳಿಗೆ ಕಿವಿಯ ನಾಲೆ 5–10 dBಯಷ್ಟು ಹೆಚ್ಚಿನ ಶಕ್ತಿಯನ್ನು ಒದಗಿಸುತ್ತದೆ. ಕಿವಿಯ ಶಬ್ದನಾಲೆಯ ಇನ್ನೊಂದು ಕಾರ್ಯವೆಂದರೆ ಒಳಗಿವಿಯನ್ನು ಹೊರಗಿನ ಉಷ್ಣತೆಯ ವ್ಯತ್ಯಾಸಗಳಿಂದ ರಕ್ಷಿಸುವುದು. ಉಷ್ಣತೆ ಒಂದೇ ಸಮವಾಗಿರುವಂತೆ ಶಬ್ದನಾಲೆ ಮಾಡುತ್ತದೆ. ಇತ್ತೀಚೆಗೆ ಮಾನವದೇಹದ ಉಷ್ಣತೆಯನ್ನು ಅಳೆಯಲು ಇತರ ಭಾಗಗಳಿಗಿಂತ ಶಬ್ದನಾಲೆಯೊಳಗೆ ತಮಟೆಯ ಸಮೀಪದ ಪ್ರದೇಶವೇ ಅತ್ಯುತ್ಕೃಷ್ಟವೆಂದು ಹೇಳಲಾಗುತ್ತಿದೆ. ಉಷ್ಣತೆ ಮತ್ತು ಆರ್ದ್ರತೆಗಳ ವ್ಯತ್ಯಾಸದಿಂದ ಒಳಗಿವಿ ಸುಲಭವಾಗಿ ಪ್ರಭಾವಿತವಾಗುತ್ತದೆ. ಶಬ್ದನಾಲೆ ಉಷ್ಣತೆ ಮತ್ತು ಆರ್ದ್ರತೆಗಳನ್ನು ಏಕರೂಪವಾಗಿರುವಂತೆ ನೋಡಿಕೊಳ್ಳುತ್ತದೆ. ಕಿವಿಯ ತಮಟೆ ಹೊರಗಿವಿ ಮತ್ತು ಮಧ್ಯಕಿವಿಗಳ ನಡುವಿನ ಸೀಮಾಪ್ರದೇಶ.

**ಮಧ್ಯಕಿವಿ:** ತಮಟೆಯಿಂದ ಹಿಡಿದು ಒಳಗಿವಿಯವರೆಗಿನ ಪ್ರದೇಶವೇ ಮಧ್ಯಕಿವಿ. ಇದು ಗಾಳಿಯಿಂದ ತುಂಬಿದ ಒಂದು ಸಣ್ಣ ಭಾಗ. ಇದರಲ್ಲಿ ತಮಟೆಯಿಂದ ಹಿಡಿದು ಒಳಗಿವಿಯ ಬಾದಾಮಿಯಾಕಾರದ ಕಿಟಕಿಯ ವರೆಗೆ ಹಬ್ಬಿರುವ ಮೂರು ಸಣ್ಣ ಅಸ್ಥಿಗಳ ಒಂದು ಸರಪಣಿ ಉಂಟು. ಈ ಪ್ರದೇಶದಿಂದ ಯೂಸ್ಟೇಷಿಯನ್ ಕೊಳವೆ ಗಂಟಲಿನ ಹಿಂಭಾಗಕ್ಕೆ ಗಾಳಿ ಹೋಗಿಬರುವ ಮಾರ್ಗವನ್ನು ಕಲ್ಪಿಸಿದೆ. ಆದ್ದರಿಂದ ಮಧ್ಯಕಿವಿಯಲ್ಲಿ ಗಾಳಿಯ ಒತ್ತಡ ಹೊರಗಿನ ವಾತಾವರಣದ ಒತ್ತಡದಷ್ಟೇ ಆಗಿರುವುದು. ಸಾಮಾನ್ಯವಾಗಿ ಚಪ್ಪಟೆಯಾಗಿ ಗಾಳಿಯ ಮಾರ್ಗವನ್ನು ತಡೆದಿರುವ ಈ ಕೊಳವೆ ನಾವು ಉಗುಳು ನುಂಗಿದಾಗ ತೆರೆಯಲ್ಪಟ್ಟು ಬಾಯಿಯಲ್ಲಿರುವ ಗಾಳಿಯೊಡನೆ ಸಂಪರ್ಕವುಂಟಾಗುವುದು. ವಿಮಾನದಲ್ಲಿ ಪ್ರಯಾಣ ಮಾಡುವಾಗಲೋ, ಎತ್ತುಗದಲ್ಲಿ ಶೀಘ್ರವಾಗಿ ಏರಿ ಇಳಿಯುತ್ತಿರುವಾಗಲೋ ಒಳಗಿವಿಯ ಗಾಳಿಯ ಒತ್ತಡ ಏರುಪೇರಾದರೆ ಆಗ ಎಂಜಲು ನುಂಗಿಕೊಂಡರೆ ಒತ್ತಡ ಕಿವಿಯ ತಮಟೆಯ ಎರಡೂ ಭಾಗಗಳಲ್ಲಿ ಸಮವಾಗಿ ಕಿವಿಯಲ್ಲಿಯ ಅಸ್ವಸ್ಥತೆ ದೂರವಾಗುತ್ತದೆ. ಈ ಕೊಳವೆಯಿಂದ ಮಧ್ಯ ಕಿವಿಯಲ್ಲಿ ಜನಿತವಾದ ದ್ರವಗಳೂ ಹೊರಗೆ ಹರಿಯುತ್ತವೆ. ಗಂಟಲಿನ ರೋಗಗಳಿಂದ ಉತ್ಪತ್ತಿಯಾದ ರೋಗಾಣುಗಳು ಕಿವಿಗೂ ಸೇರಿ ಕಿವಿಯ ನೋವನ್ನು ಉಂಟುಮಾಡಲು ಇದರಿಂದ ಅವಕಾಶವಾಗಿದೆ.

ಮಧ್ಯಕಿವಿಯ ಹೊರಭಾಗ ತಮಟೆ. ಇದು ಒಂದು ಅತಿ ಸೂಕ್ಷ್ಮವಾದ ಚರ್ಮದ ಪೊರೆ. ಇದರ ದಪ್ಪ ಸುಮಾರು 0.01 ಮಿಮೀ. ತಮಟೆಯ ಆಕಾರ ಚಪ್ಪಟೆಯಾಗಿಲ್ಲ. ಇದರ ಮಧ್ಯಭಾಗ ಕಿವಿಯ ಒಳಕ್ಕೆ ಸ್ವಲ್ಪ ಎಳೆಯಲ್ಪಟ್ಟಿರುವುದರಿಂದ ಇದು ಅಗಲವಾದ ಬುಡ ಮತ್ತು ಗಿಡ್ಡವಾದ ಎತ್ತರವುಳ್ಳ ಸಕ್ಕರೆಯ ಪೊಟ್ಟಣದ ಆಕಾರ ತಾಳಿದೆ. ತಮಟೆ ಶಬ್ದನಾಲೆಯಿಂದ ಬಂದ ಶಬ್ದಗಳನ್ನು ಕಂಪನಗಳ ಮೂಲಕ ಸಣ್ಣ ಅಸ್ಥಿಗಳಿಗೆ ತಲುಪಿಸುತ್ತದೆ. ಮೂಳೆಗಳ ಸರಪಣಿಯಲ್ಲಿ ಮೂರು ಅಸ್ಥಿಗಳಿವೆ. ಅವುಗಳ ಆಕಾರವನ್ನು ಅನುಸರಿಸಿ ಲ್ಯಾಟಿನ್ ಭಾಷೆಯಲ್ಲಿ ಮ್ಯಾಲಿಯಸ್ (ಸುತ್ತಿಗೆ), ಇನ್ಕಸ್ (ಬಡಿಗಲ್ಲು) ಮತ್ತು ಸ್ಟೆಪಿಸ್ (ರಿಕಾಪು) ಎಂದು ಕರೆಯುತ್ತಾರೆ. ಸುತ್ತಿಗೆ ತಮಟೆಯ ಒಂದು ಭಾಗಕ್ಕೆ ಜೋಡಿಸಲ್ಪಟ್ಟಿದೆ. ಮಧ್ಯಕಿವಿ ಎರಡು ಮುಖ್ಯವಾದ ಕೆಲಸಗಳನ್ನು ನಿರ್ವಹಿಸುತ್ತದೆ. ಮೊದಲನೆಯದಾಗಿ ಇದು ಗಾಳಿಯಲ್ಲಿಯ ಶಬ್ದವನ್ನು ಹೆಚ್ಚು ನಷ್ಟವಿಲ್ಲದೆ ಒಳಗಿವಿಯ ದ್ರವಗಳಿಗೆ ತಲುಪಿಸುತ್ತದೆ. ಗಾಳಿಗೂ ಭಾರವಾದ ದ್ರವಗಳಿಗೂ ವಿಷಮವಾದ ಪ್ರತಿಬಾಧಾ (ಇಂಪೆಡೆನ್ಸ್) ಸಾಮರ್ಥ್ಯಗಳಿರುವುದರಿಂದ ನೇರವಾದ ಸಂಪರ್ಕದಿಂದ ಶಕ್ತಿಯ ಬದಲಾವಣೆ ದಕ್ಷವಾಗಿ ನಡೆಯದು; ತಮಟೆ ಮತ್ತು ಅಸ್ಥಿಗಳ ಮೂಲಕ ಬದಲಾವಣೆ ದಕ್ಷವಾಗಿ ನಡೆಯುತ್ತದೆ. ಏಕೆಂದರೆ ಈ ವ್ಯವಸ್ಥೆಯಲ್ಲಿ ಪ್ರತಿಬಾಧಾಸಾಮರ್ಥ್ಯಗಳು ಸಾಮ್ಯವಾಗಿಸಲ್ಪಟ್ಟಿವೆ. ಎರಡನೆಯದಾಗಿ ಮೂಳೆಗಳು ಸನ್ನೆಗೋಲುಗಳಂತೆ ವ್ಯವಹರಿಸುವುದರಿಂದ ಕಂಪನಗಳನ್ನು ಯಶಸ್ವಿಯಾಗಿ ಒಯ್ಯುತ್ತವೆ. ಒಳಗಿವಿಯ ಬಾದಾಮಿಯಾಕಾರದ ಕಿಟಕಿ ಸಣ್ಣದು, ಇದರ ವಿಸ್ತೀರ್ಣ ಸುಮಾರು 3 ಚ.ಮಿಮೀ ನಷ್ಟು ಮಾತ್ರ, ಕಿವಿಯ ತಮಟೆ ಇದಕ್ಕಿಂತ ಸುಮಾರು 30ರಷ್ಟು ವಿಸ್ತಾರವಾಗಿದೆ (ಆಯ ಸುಮಾರು 60 ಚ. ಮಿಮೀ). ಕಿವಿಯ ತಮಟೆ ಹೆಚ್ಚು ಶಬ್ದ ಶಕ್ತಿಯನ್ನು ಗ್ರಹಿಸಿ ಅದನ್ನು ಮೂಳೆಗಳ ಮೂಲಕ ಒಳಗಿವಿಗೆ ತಲುಪಿಸುತ್ತದೆ. ಒಳಗಿವಿಗೆ ಹೊರಗಿವಿಯಲ್ಲಿದ್ದ ಕಂಪನಗಳಿಗಿಂತ ಹೆಚ್ಚಿನ ಒತ್ತಡದ ಕಂಪನಗಳು ದೊರೆಯುತ್ತವೆ. ಅತಿ ಗಟ್ಟಿಯಾದ ಶಬ್ದ ಕಿವಿಯ ಮೇಲೆ ಬಿದ್ದಾಗ ಕಿವಿ ತನ್ನನ್ನು ತಾನೇ ಪ್ರತಿವರ್ತಿಕ್ರಿಯೆಯಿಂದ (ರಿಫ್ಲೆಕ್ಸ್ ಆಕ್ಷನ್) ರಕ್ಷಿಸಿಕೊಳ್ಳುತ್ತದೆ. ಈ ವ್ಯವಸ್ಥೆಯಿಂದ ಗಟ್ಟಿಯಾದ ಶಬ್ದ ಕೇಳಿದೊಡನೆಯೇ ಒಂದು ಮಾಂಸಖಂಡ ತಮಟೆಯನ್ನು ಒಳಗೆ ಎಳೆದು ಅದನ್ನು ಹೆಚ್ಚು ಕಠಿಣವನ್ನಾಗಿ ಮಾಡುತ್ತದೆ. ಇನ್ನೊಂದು ಮಾಂಸಖಂಡ

ರಿಕಾಪನ್ನು ಒಳಗಿವಿಯಿಂದ ಹಿಂದೆ ಎಳೆಯುತ್ತದೆ. ಕಾರಿನಲ್ಲಿ ಕ್ಲಚ್ ಎಂಜಿನನ್ನೂ ಗಿಯರನ್ನೂ ಬೇರ್ಪಡಿಸುವಂತೆ. ಆದರೆ ಹಠಾತ್ತಾಗಿ ಗಟ್ಟಿಯಾದ ಶಬ್ದ ಉಂಟಾದರೆ ಈ ರಕ್ಷಣಾಸಾಧನಗಳು ಸಾಕಷ್ಟು ಶೀಘ್ರವಾಗಿ ಪ್ರತಿಕ್ರಿಯೆಯನ್ನು ತೋರಲಾರದೆ ಕಿವಿ ಅಪಾಯಕ್ಕೆ ಒಳಗಾಗುತ್ತದೆ.

**ಒಳಗಿವಿ :** ಡೊಂಕು ಡೊಂಕಾದ ಸುತ್ತುಗಳಿಂದ ಒಳಗೂಡಿದ, ಸುರಂಗ ಮಾರ್ಗಗಳಿಂದ ಕೂಡಿದ ಮತ್ತು ಗಟ್ಟಿಯಾದ ಮೂಳೆಯಿಂದ ನಿರ್ಮಿತವಾದ ಸಂಪುಟ ಒಳಗಿವಿ. ಇದರಲ್ಲಿ ಎರಡು ಮುಖ್ಯ ಭಾಗಗಳುಂಟು: ಕಾಕ್ಲಿಯ ಮತ್ತು ಅರ್ಧವರ್ತುಲಾಕಾರದ ನಾಲೆಗಳು. ಕಾಕ್ಲಿಯ (ಇದರ ಅರ್ಥ ಬಸವನ ಹುಳು ಅಥವಾ ಶಂಖದ ಹುಳು; ಏಕೆಂದರೆ ರೂಪದಲ್ಲಿ ಇದು ಬಸವನ ಹುಳುವನ್ನು ಹೋಲುತ್ತದೆ.) ಎಂದು ಕರೆಯಲ್ಪಡುವ ಭಾಗ ಶ್ರವಣಕಾರ್ಯದಲ್ಲಿ ಅತಿಮುಖ್ಯ. ಇದರೊಂದಿಗೆ, ಶ್ರವಣ ಕ್ರಿಯೆಯಲ್ಲಿ ಸಹಾಯಕವಲ್ಲದ, ಅರ್ಧವರ್ತುಲಾಕಾರದ ನಾಲೆಗಳಿಗೆ ನಿಕಟ ಸಾಮೀಪ್ಯ ಮತ್ತು ಸಂಪರ್ಕ ಉಂಟು. ಇವು ದೇಹದ ಸಮತೋಲವನ್ನು ಕಾಯ್ದಿಡಲು ಅಗತ್ಯ. ನಾಲೆಗಳ ಮತ್ತು ಕಾಕ್ಲಿಯದ ನಡುವೆ ನಾಲೆಗಳ ಕೆಲಸದಲ್ಲಿ ಸಹಕರಿಸುವ ವೆಸ್ಟಿಬ್ಯೂಲ್ (ಎಂದರೆ ಅಂಗಳ ಅಥವಾ ಹಜಾರ) ಎಂಬ ಕ್ಷೇತ್ರವುಂಟು. ಒಳಗಿವಿಯ ಅತಿ ದೊಡ್ಡದಾದ ಅಳತೆ ಸುಮಾರು ಎರಡು ಸೆಂಮೀ. ಅಷ್ಟೆ. ಅಸ್ಥಿನಿರ್ಮಿತವಾದ ಪೆಟ್ಟಿಗೆಯ ಒಳಗೆ ಅದೇ ಆಕಾರದ ಚರ್ಮನಿರ್ಮಿತವಾದ ಪ್ರಕೃತ್ತಿದತ್ತವಾದ, ದ್ರವಗಳಿಂದ ತುಂಬಿದ ಸುರಂಗಮಾರ್ಗಗಳಿವೆ. ಶ್ರವಣನರಗಳೆಲ್ಲ ಈ ಸುರಂಗಮಾರ್ಗಗಳಲ್ಲಿಯೇ ಕೊನೆಗಾಣುತ್ತವೆ. ನರಗಳ ಒಂದು ಗುಂಪು ಕಾಕ್ಲಿಯದಲ್ಲಿ ಪ್ರವೇಶಿಸಿ ಶಬ್ದಗಳನ್ನೂ ಇನ್ನೊಂದು ಗುಂಪು ಅರ್ಧವರ್ತುಲಾಕಾರದ ನಾಲೆಗಳನ್ನು ಪ್ರವೇಶಿಸಿ ಸಮತೋಲದ ಸ್ಥಿತಿಯನ್ನೂ ಮಿದುಳಿಗೆ ತಿಳಿಸುತ್ತದೆ.

**ಕಾಕ್ಲಿಯ :** ಕಿವಿಯ ಅತಿಮುಖ್ಯಭಾಗ ಕಾಕ್ಲಿಯ (ಶಂಖ ಸುರುಳಿ ನಾಳ). ಮನುಷ್ಯನ ಕಿವಿಯಲ್ಲಿ ಇದು ಎರಡೂ ಮುಕ್ಕಾಲು ಸುತ್ತುಗಳಿಂದ ಕೂಡಿದ ಒಂದು ಸುರುಳಿಯಾಕಾರದ ಕೊಳವೆ (**ನೋಡಿ– ಕಿವಿ**). ಕಾಕ್ಲಿಯಾದ ಸುರುಳಿಯನ್ನು ಬಿಡಿಸಿ ಅದನ್ನು ಉದ್ದವಾಗಿ ಎಳೆದರೆ ಸುಮಾರು 30 ಮಿಮೀ. ಉದ್ದದ 3–4 ಮಿಮೀ ವ್ಯಾಸದ ಕೊಳವೆಯಾಗುತ್ತದೆ. ಕೊಳವೆಯನ್ನು ಅಡ್ಡವಾಗಿ ಕತ್ತರಿಸಿದರೆ ಅದರ ಮೂರು ಮಾರ್ಗಗಳನ್ನು ನೋಡಬಹುದು. ಮೇಲುಭಾಗದಲ್ಲಿ ಸ್ಕೇಲ ವೆಸ್ಟಿಬ್ಯುಲ ಇದೆ. ಸ್ಕೇಲ ವೆಸ್ಟಿಬ್ಯುಲ ಎಂದರೆ ವೆಸ್ಟಿಬ್ಯೂಲಿನ ಸೋಪಾನಮಾರ್ಗ ಎಂದರ್ಥ. ಈ ಹೆಸರಿಗೆ ಕಾರಣವೇನೆಂದರೆ ಈ ಮಾರ್ಗಕ್ಕೆ ಒಳಗಿವಿಯ ವೆಸ್ಟಿಬ್ಯೂಲಿನೊಂದಿಗೆ ಸಂಪರ್ಕ ಉಂಟು. ತೆಳುವಾದ ಪೊರೆಯಿಂದ ಆವೃತವಾದ ಸಣ್ಣ ರಂಧ್ರವೊಂದರ ಮೂಲಕ ಶಬ್ದಕಂಪನಗಳು ಮಧ್ಯಕಿವಿಯ ರಿಕಾಪಿನಿಂದ ವೆಸ್ಟಿಬ್ಯೂಲಿನ ಬುಡದ ಅಗಲವಾದ ತುದಿಯನ್ನು ಪ್ರವೇಶಿಸುತ್ತವೆ. ಈ ರಂಧ್ರದ ಹೆಸರು ಓವಲ್ ವಿಂಡೋ (ಬಾದಾಮಿಯಾಕಾರದ ಕಿಟಕಿ). ಇದರ ವಿಸ್ತೀರ್ಣ ಸುಮಾರು 3 ಚ.ಮಿಮೀ. ಸ್ಕೇಲ ವೆಸ್ಟಿಬ್ಯೂಲಿನ ಕೆಳಭಾಗವನ್ನು ರೈಸ್ನರನ ಪೊರೆ ಎಂಬ ತೆಳುವಾದ ಚರ್ಮ ಕಾಕ್ಲಿಯದ ಒಳನಾಲೆಯಿಂದ ಪ್ರತ್ಯೇಕಿಸಿದೆ. ಸ್ಕೇಲ ವೆಸ್ಟಿಬ್ಯೂಲಿನ ಸಣ್ಣತುದಿ ಹೆಲಿಕೊಟ್ರಿಮ ಎಂಬ ಸ್ಥಳದಲ್ಲಿ ಕೊನೆಗೊಂಡು ಇಲ್ಲಿ ಕಾಕ್ಲಿಯದ ಕೆಳಭಾಗದ ಮಾರ್ಗವಾದ ಸ್ಕೇಲ ವೆಸ್ಟಿಬ್ಯೂಲ, ಸ್ಕೇಲ ಟಿಂಪನಿಯೊಂದಿಗೆ ಸಂಪರ್ಕ ಪಡೆದಿದೆ. ಸ್ಕೇಲ ವೆಸ್ಟಿಬ್ಯುಲಿ, ಸ್ಕೇಲ ಟಿಂಪನಿ ಮತ್ತು ವೆಸ್ಟಿಬ್ಯೂಲ್‌ಗಳು ಪೆರಿಲಿಂಫ್ ಎಂಬ ದ್ರವದಿಂದ ತುಂಬಿವೆ. ಸ್ಕೇಲ ಟಿಂಪನಿ ಎಂದರೆ ಟಿಂಪನಂ ಸೋಪಾನಮಾರ್ಗ ಎಂದು ಅರ್ಥ. ಈ ಮಾರ್ಗ ಕಾಕ್ಲಿಯದ ಬುಡದ ಭಾಗದಲ್ಲಿರುವ ರೌಂಡ್ ವಿಂಡೋ (ಗುಂಡು ಕಿಟಕಿ) ಎಂಬ ಹೆಸರಿನ ಸಣ್ಣ ವರ್ತುಲಾಕಾರದ ತೆಳುವಾದ ಪದರದಿಂದ ಆವೃತವಾದ ರಂಧ್ರದ ಮೂಲಕ ಟಿಂಪನಂ ಸ್ಥಳ ಎಂಬ ಹೆಸರಿನ ಮಧ್ಯಕಿವಿಯೊಡನೆ ಸಂಬಂಧ ಪಡೆದಿದೆ. ಸ್ಕೇಲ ಟಿಂಪನಿ ಮಧ್ಯದ ನಾಲೆಯಾದ ಸ್ಕೇಲ ಮೀಡಿಯದಿಂದ ಬೇಸಿಲರ್ ಮೆಂಬ್ರೇನ್ (ಬುಡದ ಚರ್ಮ) ಕಾಕ್ಲಿಯಾ ಉದ್ದಕ್ಕೂ ಹರಡಿ ಮಧ್ಯದ ಅಂಚಿನಲ್ಲಿ ಸುರುಳಿಯಾಗಿರುವ ಮೂಳೆಯ ಒಂದು ಬಡುವಿನ (ಶೆಲ್ಫ್) ಆಧಾರವನ್ನು ಪಡೆದಿರುವ ಒಂದು ಮಂದವಾದ ಪದರದಿಂದ ಪ್ರತ್ಯೇಕಿಸಲ್ಪಟ್ಟಿದೆ. ಸ್ಕೇಲ ಮೀಡಿಯದಲ್ಲಿರುವ ಜಟಿಲವಾದ ರಚನೆಗಳನ್ನು ಕಾಕ್ಲಿಯದೊಳಗೆ ಪ್ರವೇಶಿಸಿರುವ ನರಗಳ ತುದಿಗಳೂ ಕೇಶಕೋಶ (ಹೇರ್ ಸೆಲ್ಸ್) ಎಂಬ ಹೆಸರಿನ ಕೂದಲಿನಂಥ ಸಣ್ಣಕೋಶಗಳನ್ನೂ ಒಳಗೊಂಡಿರುವ ಕಾರ್ಟಿಯ ಅವಯವವೂ ಇವೆ. ಸ್ಕೇಲಮೀಡಿಯವೂ ಕಾಕ್ಲಿಯದ ಹೊರಗೆ ಇರುವ ಅರ್ಧವರ್ತುಲಾಕಾರದ ನಾಲೆಗಳೂ ಎಂಡೋಲಿಂಫ್ ಎಂಬ ದ್ರವದಿಂದ ತುಂಬಿವೆ. ಎಂಡೋಲಿಂಫ್ ವಿಕಾಸಶ್ರೇಣಿಯಲ್ಲಿ ಪುರಾತನವಾದ ಪ್ರಾಣಿಗಳ ಕಿವಿಯಲ್ಲಿ ಸಹ ಉಂಟು. ಪೆರಿಲಿಂಫ್ ಆದರೋ ವಿಕಾಸದ ಅತ್ಯುಚ್ಚ ಪ್ರಾಣಿಗಳಲ್ಲಿ ಮಾತ್ರ ಇರುತ್ತದೆ. ಉದಾಹರಣೆಗೆ ಮೀನುಗಳಲ್ಲಿ ಪೆರಿಲಿಂಫ್ ಇಲ್ಲ. ಕಿಟಕಿಗಳೂ ಇಲ್ಲ. ಬಾದಾಮಿಕಿಟಕಿಯೂ ಗುಂಡುಕಿಟಕಿಯೂ ಎರಡು ರಂಧ್ರಗಳಾದರೂ ಪದರದಿಂದ ಆವೃತವಾಗಿರುವುದರಿಂದ ಪೆರಿಲಿಂಫ್ ಕಾಕ್ಲಿಯದ ಹೊರಗೆ ಚೆಲ್ಲುವುದಿಲ್ಲ. ಶಬ್ದಕಂಪನಗಳು ಹೊರಗಿವಿ ಮಧ್ಯಕಿವಿಗಳ ಮಾರ್ಗವಾಗಿ ಬಾದಾಮಿಕಿಟಕಿಯನ್ನು ತಲುಪುತ್ತವೆ; ಅಲ್ಲಿ ಎಂಡೋಲಿಂಫನ್ನು ಕಂಪನಗಳಿಗೆ ಒಳಪಡಿಸುತ್ತವೆ. ಕಂಪನಗಳ ಚಲನೆ ಬಾದಾಮಿಕಿಟಕಿಯಿಂದ ಸ್ಕೇಲ ವೆಸ್ಟಿಬ್ಯೂಲವನ್ನು ಹಾದು ಹೆಲಿಕೊಟ್ರಿಮದ ಮೂಲಕ ಸ್ಕೇಲ ಟಿಂಪನಿಯನ್ನು ಪ್ರವೇಶಿಸಿ ಕಡೆಗೆ ಗುಂಡು ಕಿಟಕಿಯನ್ನೂ ಕಂಪಿಸುವಂತೆ ಮಾಡುತ್ತದೆ. ದ್ರವಪದಾರ್ಥವನ್ನು ಸಂಕುಚಿಸುವುದು ಅತಿ ಕಷ್ಟವಾದುದರಿಂದ ಬಾದಾಮಿಕಿಟಕಿಯ ಚಲನೆಗಳು ಎಂಡೋಲಿಂಫನ್ನೂ ಚಲಿಸುವಂತೆ ಮಾಡಬೇಕಾದರೆ ಗುಂಡುಕಿಟಕಿಯ ವಿರುದ್ಧ ಗತಿಯಲ್ಲಿ ಚಲಿಸುವುದರಿಂದಲೇ ಅದು ಸಾಧ್ಯ. ಆದ್ದರಿಂದಲೇ ಒಂದು ಕಿಟಕಿ ಯಾವುದಾದರೂ ಕಾರಣದಿಂದ ಅನಾರೋಗ್ಯಯುತವಾದ ಗಡುಸಾದ ಪೊರೆಯಿಂದ ಮುಚ್ಚಿಹೋದರೆ ಕಿವುಡು ಉಂಟಾಗುತ್ತದೆ. ಇದನ್ನು ನಿವಾರಿಸಲು ಶಸ್ತ್ರಕ್ರಿಯೆಯಿಂದ ಒಳಗಿವಿಯ ಅಸ್ಥಿ ಸಂಪುಟದಲ್ಲಿ ಇನ್ನೊಂದು ರಂಧ್ರವನ್ನು ಕೊರೆದು ಅದನ್ನು ಹೊರಗಿವಿಯ ಶಬ್ದನಾಲೆಯಿಂದ ತೆಗೆದ ಸಣ್ಣ ಪದರದ ಚೂರಿನಿಂದ ಮುಚ್ಚುತ್ತಾನೆ. ಈ ಚರ್ಮ ಸರಿಯಾಗಿ ಬೆಳೆದುಕೊಂಡರೆ ಕಿವುಡು ನಿವಾರಣೆಯಾಗುತ್ತದೆ. ರೈಸನ್ನರ ಪೊರೆ ಅತಿ ನಾಜೂಕಾದುದರಿಂದ ಸ್ಕೇಲ ವೆಸ್ಟಿಬ್ಯೂಲಿಯ ಎಂಡೋಲಿಂಫ್ ಕಂಪನಗಳು ಅತಿ ಸುಲಭವಾಗಿ ಸ್ಕೇಲ ಮೀಡಿಯವನ್ನು ಪ್ರವೇಶಿಸಿ ಕಾರ್ಟಿಯ ಅವಯವದಲ್ಲಿರುವ ಕೇಶಕೋಶಗಳನ್ನು ಕಂಪನಗಳ ಪ್ರಭಾವಕ್ಕೆ ಒಳಗಾಗಿಸುತ್ತದೆ.

ಕಾಕ್ಲಿಯದಲ್ಲಿ ನರಗಳ ವಿದ್ಯುದ್ವಿಭವಗಳು ಹೇಗೆ ಜನಿಸುತ್ತವೆ ಎಂಬ ಪ್ರಶ್ನೆಗೆ ಉತ್ತರವಾಗಿ ಎರಡು ಮುಖ್ಯ ಅಭಿಪ್ರಾಯಗಳುಂಟು. ಕೆಲವರು ಬೇಸಿಲಾರ್ ಪೊರೆಯ ಸಮೀಪದಲ್ಲಿರುವ ದ್ರವಗಳು ವಿಭವಗಳನ್ನು ಉಂಟು ಮಾಡುತ್ತವೆ ಎಂದು ತಿಳಿದಿದ್ದಾರೆ. ಕೇಶಕೋಶಗಳಲ್ಲಿಯೇ ಈ ವಿಭವಗಳು ಹುಟ್ಟುತ್ತವೆ ಎಂದು ಹೆಚ್ಚಿನ ಸಂಖ್ಯೆಯ ಶ್ರವಣವಿಜ್ಞಾನಿಗಳು ನಂಬುತ್ತಾರೆ.

**ವಾನ್ ಬೆಕೆಸಿ:** ಒಳಗಿವಿಯ ರಚನೆ ಕಾರ್ಯಗಳ ವಿವರಗಳೆಲ್ಲವನ್ನೂ ಜಾರ್ಜ್ ವಾನ್ ಬೆಕೆಸಿ ನಡೆಸಿದ ಸಂಶೋಧನೆಗಳಿಂದ ತಿಳಿದಿದ್ದೇವೆ. ಉದಾಹರಣೆಗೆ 1940ರಲ್ಲಿ ಆತ ನಡೆಸಿದ ಒಂದು ಪ್ರಯೋಗದಲ್ಲಿ ಒಂದು ಮಾನವಶವವನ್ನು ಕತ್ತರಿಸಿ ಅದರ ಕಾಕ್ಲಿಯವನ್ನು ಇದಕ್ಕಾಗಿಯೇ ಆತನೇ ನಿರ್ಮಿಸಿದ ವಿಶೇಷ ಉಪಕರಣಗಳಿಂದ ಜೋಪಾನವಾಗಿ ಹೊರತೆಗೆದು, ನೀರಿನಲ್ಲಿಟ್ಟು ಅಲ್ಲಿಯೇ ಪರಿಶೀಲಿಸಿದ. ಒಂದು ವಿದ್ಯುತ್ಕಾಂತ ಚಾಲಕ (ಡ್ರೈವರ್) ಉಪಕರಣವನ್ನು ಬಾದಾಮಿಕಿಟಕಿಗೆ ಜೋಡಿಸಿ ವಿದ್ಯುತ್ತಿನ ಸಹಾಯದಿಂದ ಅದನ್ನು ಕಂಪಿಸುವಂತೆ ಮಾಡಿದ. ಕಾಕ್ಲಿಯದ ಗೋಡೆಯಲ್ಲಿ ಒಂದು ರಂಧ್ರಮಾಡಿ ಒಳಗಿನ ಚಲನೆಗಳನ್ನು ನಿರೀಕ್ಷಿಸಿದ. ಬಾದಾಮಿ ಕಿಟಕಿ ಕಂಪಿಸಿದಾಗ (ಶಬ್ದ ಕಿವಿಯಲ್ಲಿ ಬಿದ್ದಾಗಲೂ ರಿಕಾಪಿನಿಂದ ಈ ಕಿಟಕಿ ಕಂಪಿಸುತ್ತದೆ.) ಬೇಸಿಲಾರ್ ಪೊರೆ ಕಂಪಿಸುವುದು ಕಂಡುಬಂತು. ಬೇರೆ ಬೇರೆ ಆವರ್ತಾಂಕದ ಕಂಪನಗಳು ಬೇಸಿಲಾರ್ ಪೊರೆಯೂ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಶಕ್ತಿಯುತವಾದ ಕಂಪನಗಳನ್ನು ಉತ್ಪಾದಿಸುವುದು ಕಂಡಿತು. ಈ ಪ್ರಯೋಗದಿಂದ ಶ್ರವಣ ಸ್ಥಾನವಾದಕ್ಕೆ ಬೆಂಬಲ ದೊರೆಯಿತು. ಬೆಕೆಸಿಯ ಸಂಶೋಧನೆಗಳು ಅಪಾರವಾದ ಕೌಶಲ ಸಹನೆಗಳಿಂದ ಕೂಡಿದ್ದು ಸಾರ್ವತ್ರಿಕವಾದ ಮೆಚ್ಚುಗೆಯನ್ನು ಗಳಿಸಿವೆ. ಅಭೇದ್ಯವಾದ ಮೂಳೆಯ ಕೋಟೆಯಲ್ಲಿ ಸೆರೆ ಹಿಡಿಯಲ್ಪಟ್ಟ ಕಾಕ್ಲಿಯವನ್ನು ಹೊರಗಿನ ಬೆಳಕಿಗೆ ತರುವುದೇನೂ ಸಾಮಾನ್ಯವಾದ ಸಾಧನೆಯಲ್ಲ.

**ನರಗಳ ರಚನೆ ಮತ್ತು ಕಾರ್ಯ :** ಕಿವಿ ಶಬ್ದವನ್ನು ಗ್ರಹಿಸುತ್ತದೆ. ಮಿದುಳು ಶಬ್ದದ ಅನುಭವವನ್ನು ಪಡೆಯುತ್ತದೆ. ನರಗಳು ಕಿವಿಯಿಂದ ಮಿದುಳಿಗೆ ಶಬ್ದದ ಸಂದೇಶವನ್ನು ತಲುಪಿಸುವ ಸೇತುವೆಗಳು. ಶ್ರವಣನರಗಳ ನಾಶ ಅಥವಾ ರೋಗಗಳಿಂದ ಕಿವುಡು ತಲೆದೋರುತ್ತದೆ. ನರಗಳು ವಿದ್ಯುತ್ ಕೇಬಲ್ಲಿನಂತೆ ಸಮಾಚಾರವನ್ನು




ಚಿತ್ರ 7 ಒಂದು ನ್ಯೂರಾನ್ ನರಕೋಶದ ಚಿತ್ರ, ನ್ಯೂಕ್ಲಿಯಸ್ (nu). ಡೆಂಡ್ರೈಟ್‌ಗಳು (d), ಏಕಾನ್ (a) ಮತ್ತು ಅದನ್ನು ಆವರಿಸುವ ಮಯಲಿನ್ ಕವಚ (m), ಮಯಲಿನ್ ಮುಚ್ಚದೆ ಬಿಟ್ಟಿರುವ ಗೆಣ್ಣುಗಳಾದ ರಾನ್‌ವಿಯೇನನ ನೋಡ್‌ಗಳು (n), ನರದ ತುದಿಯಲ್ಲಿ ಟರ್ಮಿನಲ್ ಆರ್ಬರ್ (t)– ಇವನ್ನು ಕಾಣಿಸಿದೆ.

ಒಂದು ತುದಿಯಿಂದ ಇನ್ನೊಂದು ತುದಿಗೆ ತಲಪಿಸುತ್ತವೆ. ಚಿತ್ರ 7 ರಲ್ಲಿ ನ್ಯೂರಾನ್ ಎಂಬ ಹೆಸರಿನ ನರಕೋಶವನ್ನು ತೋರಿಸಿದೆ. ನ್ಯೂರಾನಿನಲ್ಲಿ ಮುಖ್ಯವಾದ ಭಾಗಗಳು ನಾಲ್ಕು. ಮೊದಲು ನರದ ದೇಹ. ಅದರೊಳಗಿನ ನ್ಯೂಕ್ಲಿಯಸ್, ಇದರ ಒಂದು

ಕಡೆಯಿಂದ ಡೆಂಡ್ರೈಟ್ ಎಂಬ ಸಣ್ಣ ನರದ ಶಾಖೆಗಳು ಹೊರಡುತ್ತವೆ. ಇನ್ನೊಂದು ಕಡೆಯಿಂದ ಏಕ್ಸಾನ್ ಎಂಬ ಹೆಸರಿನ ತಂತು ಉದ್ದವಾಗಿ ಬೆಳೆಯುತ್ತದೆ. ಏಕ್ಸಾನ್‌ಗಳ ಉದ್ದ ಕೆಲವು ಮಿಲಿಮೀಟರಿನಿಂದ ಹಿಡಿದು ಕೆಲವು ಸೆಂಟಿಮೀಟರುಗಳವರೆಗೂ ಇರಬಹುದು. ಏಕ್ಸಾನ್‌ಗಳ ಮೂಲಕವೇ ಸಮಾಚಾರಗಳು ಪ್ರವಹಿಸಬೇಕು. ಏಕ್ಸಾನ್‌ನ ತುದಿಯಲ್ಲಿ ನರದ ಕೊನೆಗಳು ಶಾಖೋಪಶಾಖೆಗಳಾಗಿ ಒಡೆದು ಟರ್ಮಿನಲ್ ಅರ್ಬರ್ ಎಂದೆನಿಸಿಕೊಳ್ಳುತ್ತವೆ. ವಿಕಾಸದ ಶ್ರೇಣಿಯಲ್ಲಿ ಕೆಳಗಿರುವ ಪ್ರಾಣಿಗಳಲ್ಲಿ ನರದ ತಂತುವಿನ ಮೇಲೆ ಯಾವ ವಿದ್ಯುದ್ರೋಧೀ (ಇನ್ಸುಲೇಶನ್) ಕವಚವೂ ಇರುವುದಿಲ್ಲ. ಇಂಥ ನರಗಳಲ್ಲಿ ಸಮಾಚಾರ ನಿಧಾನವಾಗಿ ಎಂದರೆ ಸೆಕೆಂಡಿಗೆ ಸುಮಾರು ಒಂದರಿಂದ ಕೆಲವು ಮೀಟರುಗಳಷ್ಟು ವೇಗದಲ್ಲಿ ಚಲಿಸುತ್ತದೆ.

ಸಣ್ಣ ಏಕ್ಸಾನ್‌ಗಳಲ್ಲಿ ವೇಗ ಅತಿ ನಿಧಾನ. ದಪ್ಪದವುಗಳಲ್ಲಿ ಶೀಘ್ರತರ ವಿಕಾಸದ ಮೇಲುಮಟ್ಟದಲ್ಲಿರುವ ಸಸ್ತನಿಗಳಲ್ಲಿ ಏಕ್ಸಾನ್‌ನ ಮೇಲೆ ಅದನ್ನು ವಿದ್ಯುದ್ರೋಧ ಮಾಡುವ ಕೊಬ್ಬಿನಂಥ ಪದಾರ್ಥವಾದ ಮಯಲಿನ್‌ನ ತೋಳು ರಚಿತವಾಗಿರುತ್ತದೆ. ಮಯಲಿನ್‌ನ ತೋಳು ನಿರಂತರವಾಗಿ ಇರದೆ ಮಧ್ಯೆ ಮಧ್ಯೆ ಏಕ್ಸಾನ್‌ನ ಮೇಲು ಮೈ ಅನಾವೃತವಾಗಿರುವ ಗೆಣ್ಣುಗಳಿರುತ್ತವೆ. ಏಕ್ಸಾನ್‌ದಲ್ಲಿ ಸಮಾಚಾರದ ವಿದ್ಯುತ್ ಗೆಣ್ಣಿನಿಂದ ಗೆಣ್ಣಿಗೆ ಹಾರುವ ರೀತಿಯಲ್ಲಿ ಪ್ರವಹಿಸುವುದರಿಂದ ಇದರ ವೇಗ ಹೆಚ್ಚು–ಪ್ರತಿ ಸೆಕೆಂಡಿಗೆ ಸುಮಾರು 100 ಮೀಟರುಗಳಷ್ಟು ಇರುವುದು. ಒಂದೇ ನರ ಇಂದ್ರಿಯದಿಂದ ಮಿದುಳಿನವರೆಗೂ (ಅಥವಾ ಮಿದುಳಿನಿಂದ ಸ್ನಾಯುಗಳವರೆಗೂ) ವ್ಯಾಪಿಸಿರುವುದಿಲ್ಲ. ಹಲವು ನರಗಳ ತುದಿಯಿಂದ ತುದಿಗೆ ಸರಪಳಿಯ ಹಾಗೆ ಜೋಡಿಸಲ್ಪಟ್ಟು ಒಂದರಿಂದ ಒಂದಕ್ಕೆ ಸಮಾಚಾರ ವರ್ಗಾಯಿತವಾಗಿ ಕ್ರಮೇಣ




ಚಿತ್ರ 8 ಉದ್ರಿಕ್ತವಾದಾಗ ನರದಲ್ಲಿ ಹರಿಯುವ ವಿದ್ಯುತ್ ಸ್ಪಂದನವನ್ನು ತೋರಿಸುವ ನಕ್ಷೆ

ತುದಿಯನ್ನು ಮುಟ್ಟುವುದು. ಒಂದು ನರದ ಡೆಂಡ್ರೈಟ್‌ಗಳು ಇತರ ನರಗಳ ಟರ್ಮಿನಲ್ ಆರ್ಬರ್‌ಗಳಿಗೆ ಹೆಣೆದುಕೊಂಡಿರುತ್ತವೆ. ಹೀಗೆ ಹೆಣೆದುಕೊಂಡಿರುವ ಜಾಗಗಳಿಗೆ ಸಿನಾಪ್ಸ್ ಎಂದು ಹೆಸರು. ನರಗಳ ಸಮಾಚಾರವಾಹನ ಕಾರ್ಯದಲ್ಲಿ ಸಿನಾಪ್ಸ್‌ಗಳು ಬಹುಮುಖ್ಯವಾಗಿವೆ.

**ಶ್ರವಣ ನರ :** ಶ್ರವಣ ನರದಲ್ಲಿ ಸುಮಾರು 30,000 ಪ್ರತ್ಯೇಕ ನ್ಯೂರಾನ್‌ಗಳಿವೆ. ನರಗಳು ಕಾಕ್ಲಿಯಿಂದ ಮಧ್ಯಭಾಗದಿಂದ ಹೊರಟು ಕಾಕ್ಲಿಯದ ಸುತ್ತುಗಳನ್ನೇ ಅನುಸರಿಸಿ ಸುತ್ತಿಕೊಂಡಿವೆ. ಕಾಕ್ಲಿಯದ ಇಡೀ ಉದ್ದವನ್ನು ಮುಟ್ಟಲು ನ್ಯೂರಾನ್‌ಗಳು ಮುಖ್ಯವಾದ ನ್ಯೂರಾನ್‌ಗಳ ಹೊರೆಯಿಂದ ಅಲ್ಲಲ್ಲಿ ದಾರಿಯುದ್ದಕ್ಕೂ ಬಿಡಿಸಿಕೊಳ್ಳುತ್ತವೆ. ಕಾಕ್ಲಿಯದ ಮಧ್ಯದ ವಿಂಗಡಿಸುವ ಪೊರೆಯ ಒಳಹೊಕ್ಕು ಕಾರ್ಟಿ ಅವಯವದ ಒಳಕ್ಕೆ ಕೇಶಕೋಶಗಳ ಸಮೀಪವನ್ನು ತಲುಪುತ್ತವೆ. ಶ್ರವಣನರದ ಇನ್ನೊಂದು ತುದಿ ಕೇಂದ್ರನರವ್ಯವಸ್ಥೆಯನ್ನು ಸೇರುತ್ತದೆ. ಹೀಗೆ ಸೇರುವ ಸ್ಥಳಕ್ಕೆ ಕಾಕ್ಲಿಯ ಕೇಂದ್ರಪ್ರವೇಶ (ಕಾಕ್ಲಿಯರ್ ನ್ಯೂಕ್ಲಿಯಸ್) ಎಂದು ಹೆಸರು. ಇಲ್ಲಿ ಅಸಂಖ್ಯಾತವಾದ ಕೋಶಗಳು ಸೇರಿಹೋಗಿವೆ. ಈ ಕೇಂದ್ರದಿಂದ ಹೊರಡುವ ನ್ಯೂರಾನ್‌ಗಳಲ್ಲಿ ಕೆಲವು ಇನ್ನೊಂದು ನರಗಳ ಕೇಂದ್ರವನ್ನೂ ಕೆಲವು ನ್ಯೂರಾನ್‌ಗಳು ವಿವಿಧ ಕೇಂದ್ರ ಪ್ರದೇಶಗಳ ಮೂಲಕ ಮಿದುಳಿನ ಕೆಳಕಾಂಡವನ್ನೂ ಕೆಲವು ಇನ್ನೊಂದು ಕಿವಿಯಿಂದ ಬರುವ ತಮ್ಮಂಥವೇ ನರಗಳನ್ನೂ ತಲುಪುತ್ತವೆ. ಹೀಗೆ ಎರಡು ಕಿವಿಗಳ ನರಗಳೂ ಮಿದುಳನ್ನು ತಲುಪುವ ಮೊದಲೇ ಪರಸ್ಪರ ಸಂಪರ್ಕ ಹೊಂದಿರುತ್ತವೆ. ಕೆಲವು ನ್ಯೂರಾನ್‌ಗಳು ಕಾಕ್ಲಿಯ ಕೇಂದ್ರಪ್ರದೇಶದಿಂದ ಹೊರಟು ಎರಡು ಕೇಂದ್ರಗಳ ಮೂಲಕವಾಗಿ ಮಿದುಳಿನ ಸೆರೆಬ್ರಲ್ ಕಾರ್ಟೆಕ್ಸ್‌ನ (ಮೇಲು ಮಿದುಳಿನ ತೊಗಟೆ) ಶ್ರವಣದ ಭಾಗಗಳನ್ನು ಸೇರುತ್ತವೆ. ಈ ಭಾಗಗಳು ಮಿದುಳಿನ ಎರಡೂ ಪಕ್ಕಗಳಲ್ಲಿ ಇವೆ. ನೇರವಾದ ಮಾರ್ಗವಲ್ಲದೆ ಇನ್ನೂ ಎರಡು ದಾರಿಗಳನ್ನು ಸಹ ಗುರುತಿಸಲಾಗಿದೆ. ಇವಲ್ಲದೆ ಮಿದುಳಿನಿಂದ ಕೆಳಗೆ ಇಳಿಯುವ ಮಾರ್ಗಗಳನ್ನು ಕೂಡ ಕಂಡುಹಿಡಿಯಲಾಗಿದೆ. ಇವು ಮಿದುಳಿನಿಂದ ಆಜ್ಞೆಯ ಸಮಾಚಾರಗಳನ್ನು ಕಿವಿಯ ಕಡೆಗೆ ತಲುಪಿಸುತ್ತವೆ. ಇದು ಅತ್ಯಂತ ಜಟಿಲವಾದ ಸಮಸ್ಯೆ. ಒಂದೊಂದು ನರವೂ ಹಲವು ಕೇಂದ್ರಗಳ ಮೂಲಕ ನೂರಾರು ನರಗಳ ಸಂಪರ್ಕವನ್ನು ಪಡೆಯಬಹುದಾಗಿದೆ. ಇದರಿಂದ ಉಂಟಾಗಬಹುದಾದ ಮಾರ್ಗಗಳ ಸಂಖ್ಯೆ ಅಸಂಖ್ಯಾತ.

**ನರಗಳ ಕಾರ್ಯ :** ನರವೊಂದನ್ನು ಏಕ್ಸಾನಿನಲ್ಲಿ ಅಡ್ಡವಾಗಿ ಕತ್ತರಿಸಿದರೆ ಚಿತ್ರ 9ರಲ್ಲಿ ತೋರಿಸಿರುವಂತೆ ಅದರ ಮಧ್ಯಭಾಗದಲ್ಲಿ ಪೊಟಾಸಿಯಂ ಅಯಾನ್‌ಗಳು ($K^+$) ಹೆಚ್ಚಾಗಿ ಇರುವ ಜೆಲ್ಲಿ ಇದೆ. ಅಯಾನುಗಳನ್ನು ವಿದ್ಯುತ್ ಕ್ಷೇತ್ರದಲ್ಲಿ ಇಟ್ಟಾಗ ಅವು ತಮ್ಮ ವಿರುದ್ಧ ಚಿಹ್ನೆಯ ಧ್ರುವದ ಕಡೆಗೆ ಚಲಿಸುವುವು. ಆದ್ದರಿಂದಲೇ ಇವಕ್ಕೆ ಅಯಾನ್ ಎಂಬ ಹೆಸರು. ಗ್ರೀಕ್ ಭಾಷೆಯಲ್ಲಿ ಅಲೆದಾಡುವವನು ಎಂದು ಇದರ ಅರ್ಥ. ಮಧ್ಯಭಾಗವನ್ನು ಸುತ್ತಿರುವ ಪೊರೆಯ ಆಚೆಗೆ ಸೋಡಿಯಂ ಅಯಾನ್‌ಗಳು ($Na^+$) ಹೆಚ್ಚಾಗಿ ಇರುವ ನೀರಾದ ದ್ರವವೊಂದುಂಟು. ಎರಡು ಲೋಹಗಳ ಮಧ್ಯೆ ದ್ರಾವಣವೊಂದನ್ನು ಇರಿಸಿದಾಗ ಅವೆರಡರ ನಡುವೆ ವಿದ್ಯುತ್ ಕೋಶದ ಕಾರ್ಯ ಏರ್ಪಟ್ಟು ಒಂದು ವಿದ್ಯುದ್ವಿಭವಜನಿಸುತ್ತದೆ. ಏಕ್ಸಾನ್‌ನಲ್ಲಿರುವ ಪೊಟಾಸಿಯಂ ಸೋಡಿಯಂ ಲೋಹಗಳ ನಡುವೆಯೂ ಇಂಥ ವಿದ್ಯುದ್ವಿಭವ ನಿರ್ಮಿತವಾಗುತ್ತದೆ. ಇದನ್ನು ಏಕ್ಸಾನ್‌ನ ಮಧ್ಯ ಮತ್ತು ಹೊರಭಾಗಗಳ ನಡುವೆ ಗುರುತಿಸಬಹುದು. ಏಕ್ಸಾನ್ ಸಮತೋಲ ಸ್ಥಿತಿಯಲ್ಲಿರುವಾಗ ಈ ವಿಭವ ನಿಯತವಾಗಿ ಇರುತ್ತದೆ. ನರದ ಒಂದು ತುದಿ ಶಕ್ತಿಯ ಸ್ಪಂದನದಿಂದ (ಪಲ್ಸ್) ಉದ್ರೇಕಿಸಲ್ಪಟ್ಟರೆ ಶಕ್ತಿಯ ಮೌಲ್ಯ ಒಂದು ಪರಿಮಿತಿಯ ಮೌಲ್ಯಕ್ಕಿಂತ ಹೆಚ್ಚಾಗಿದ್ದ ಪಕ್ಷದಲ್ಲಿ ನರ ಚೇತನಗೊಳ್ಳುತ್ತದೆ ಮತ್ತು ಶಕ್ತಿಯ ಸ್ಪಂದನವನ್ನು ವಿದ್ಯುತ್ ಸ್ಪಂದನದ ರೂಪದಲ್ಲಿ ತನ್ನ ಇನ್ನೊಂದು ತುದಿಗೆ ತಲಪಿಸುತ್ತದೆ. ಉದ್ರೇಕಿಸುವ ಶಕ್ತಿ ಪರಿಮಿತಿಯ ಮೌಲ್ಯಕ್ಕಿಂತ ಕಡಿಮೆಯದಾಗಿದ್ದರೆ ನರ ನಿಶ್ಚೇತನವಾಗಿಯೇ ಉಳಿಯುತ್ತದೆ. ಇದನ್ನು ಎಲ್ಲ ಅಥವಾ ಏನೂ ಇಲ್ಲ ತತ್ತ್ವ (ಆಲ್ ಆರ್ ನನ್ ಪ್ರಿನ್ಸಿಪಲ್) ಎನ್ನುವರು. ಒಂದು ತುದಿಯಲ್ಲಿ ಶಕ್ತಿಯ ಪ್ರಯೋಗವಾದರೆ ಆಗ ಪೊಟಾಸಿಯಂ ಸೋಡಿಯಂ ಅಯಾನ್‌ಗಳ ಮಧ್ಯದಲ್ಲಿರುವ ಪೊರೆ ವಿದ್ಯುದ್ವಾಹಕವಾಗಿ ಮಾರ್ಪಡುತ್ತದೆ. ಸೋಡಿಯಂ ಪೊಟಾಸಿಯಂ ಅಯಾನ್‌ಗಳು ಪೊರೆಯ ಮೂಲಕ ಹರಿದು ವಿದ್ಯುತ್ತಿನ ಸಮತೋಲ ತಪ್ಪುತ್ತದೆ. ನರದ ಮಧ್ಯೆ–ಹೊರಗಿನ ವಿಭವ ಬದಲಾಗುತ್ತದೆ. ಇದು ನರದ ಮುಂದಿನ ಭಾಗಗಳಿಗೂ ಒಂದು ಅಲೆಯಂತೆ ಹರಡುತ್ತದೆ–ವಿಭವದಲ್ಲಿಯ ಬದಲಾವಣೆ ತುದಿಯವರೆಗೂ ಹರಡುತ್ತದೆ. ಹೀಗೆ ಶಕ್ತಿಯ ಸ್ಪಂದನ ವಿದ್ಯುತ್ತಿನ ಸ್ಪಂದನದ ರೂಪದಲ್ಲಿ ಒಂದು ಭಾಗದಲ್ಲಿ ಹೇಗೆ ಕಾಲಕ್ರಮೇಣ ಬದಲಾಗುತ್ತದೆಂಬುದನ್ನು ತೋರಿಸಲಾಗಿದೆ. ಸ್ಪಂದನದ ಅಗಲ (ಕಾಲದಲ್ಲಿ) ಸುಮಾರು 1 ಮಿಲಿ ಸೆಕೆಂಡ್(0.001 ಸೆಕೆಂಡ್). ಒಂದು ನರ ಒಂದು ಸ್ಪಂದನವನ್ನು ಕಳುಹಿಸುವ ಕೆಲಸಮಾಡಿದ ಮೇಲೆ 1–3 ಮಿಲಿಸೆಕೆಂಡ್‌ಗಳ ವರೆಗೂ ವಿಶ್ರಾಂತಿ ತೆಗೆದುಕೊಳ್ಳುತ್ತದೆ. ಆಗ ಇನ್ನೊಂದು ಸ್ಪಂದನ ಅದನ್ನು ತಗಲಿದರೂ ನರ ಚೇತನಗೊಳ್ಳುವುದಿಲ್ಲ. ಈ ಕಾಲಕ್ಕೆ ರಿಫ್ರಾಕ್ಟರಿ ಕಾಲ ಎಂದು ಹೆಸರು. ಒಂದು ನರದ ಡೆಂಡ್ರೈಟ್‌ಗಳಿಂದ ಹೊರಟ ಶಕ್ತಿಯ ಸ್ಪಂದನ ಅದರ ಟರ್ಮಿನಲ್ ಆರ್ಬರ್‌ನ ಶಾಖೆಗಳನ್ನು ತಲಪುತ್ತದೆ. ಇಲ್ಲಿರುವ ಸಿನಾಪ್ಸ್‌ಗಳಲ್ಲಿ ಬೇರೆ ನರದ ಅಥವಾ ನರಗಳ ಡೆಂಡ್ರೈಟ್‌ಗಳು ಈ ವರೆಗೂ ಸರಿಯಾಗಿ ಅರ್ಥವಾಗದೇ ಇರುವ ಒಂದು ವಿಧಾನದಿಂದ ಶಕ್ತಿಯ ಸ್ಪಂದನವನ್ನು ಸ್ವೀಕರಿಸಿ ಮುಂದಕ್ಕೆ ಕಳುಹಿಸುತ್ತವೆ. ಶಕ್ತಿಯ ಸ್ಪಂದನದ ರೂಪದಲ್ಲಿ ಸಮಾಚಾರ ಮುಂದಕ್ಕೆ ಚಲಿಸುತ್ತದೆ. ಹೀಗೆ ಹಲವು ನರಗಳ ಮೂಲಕ ಸಮಾಚಾರ ಮಿದುಳನ್ನು ತಲುಪುತ್ತದೆ (ಬೇರೆ ನರಗಳು–ಇವುಗಳಿಗೆ ಎಫರೆಂಟ್ ನರಗಳೆಂದು ಹೆಸರು–ಮಿದುಳಿನಿಂದ ಆಜ್ಞೆಗಳನ್ನು ಹೊರಗೆ ಕಳುಹುತ್ತವೆ. ಮಿದುಳಿಗೆ ಸಮಾಚಾರವನ್ನು ಹೊರಗಿನಿಂದ ಒಯ್ಯುವ ನರಗಳಿಗೆ ಅಫರೆಂಟ್ ನರಗಳೆಂದು ಹೆಸರು).




ಚಿತ್ರ 9 ನರದ ಅಡ್ಡಕೊಯ್ತ

**ಶಬ್ದವೈಶಾಲ್ಯ :** ಒಂದು ನರದ ಡೆಂಡ್ರೈಟ್‌ಗಳಿಗೆ ಹೆಚ್ಚು ಹೆಚ್ಚು ಮೌಲ್ಯದ ಶಕ್ತಿಯನ್ನು ಮುಟ್ಟಿಸುತ್ತ ಹೋದರೆ ಅದು ಎಲ್ಲ ಅಥವಾ ಏನೂ ಇಲ್ಲ ತತ್ತ್ವದಂತೆ ಶಕ್ತಿಪರಿಮಿತಿಯ ಮೌಲ್ಯಕ್ಕಿಂತ ಕಡಿಮೆಯಾಗಿದ್ದಾಗ ನರದಲ್ಲಿ ಪ್ರತಿಕ್ರಿಯೆ ಇರದು. ಪರಿಮಿತಿಯ ಮೌಲ್ಯಕ್ಕಿಂತ ಹೆಚ್ಚಿನ ಶಕ್ತಿ ದೊರೆತಾಗ ನರ ಒಂದು ವಿದ್ಯುತ್ತಿನ

ಸ್ಪಂದನವನ್ನು ಹರಿಸುತ್ತದೆ. ಶಕ್ತಿಯ ಮೌಲ್ಯ ಎಷ್ಟೇ ಹೆಚ್ಚಾದರೂ ಸ್ಪಂದನದ ರೂಪ ಅದೇ, ಬದಲಾಗದು. ಶಕ್ತಿಯ ಮೌಲ್ಯವನ್ನು ಅಳೆಯಲು ನರಗಳು ಸ್ಪಂದನಗಳ ಆವರ್ತಾಂಕವನ್ನು ಬಳಸುತ್ತವೆ. ನರ ಶಬ್ದದ ಗಾತ್ರವನ್ನು ಸ್ಪಂದನಗಳ ಆವರ್ತಾಂಕವನ್ನಾಗಿ ಪರಿವರ್ತಿಸುತ್ತದೆ. ಹೆಚ್ಚು ಗಾತ್ರವಿದ್ದರೆ ಹೆಚ್ಚು ಸಂಖ್ಯೆಯ ಸ್ಪಂದನಗಳು ಒಂದನ್ನೊಂದು ಹಿಂಬಾಲಿಸಿಕೊಂಡು ಬರುತ್ತವೆ. ಆದರೆ ನರದಲ್ಲಿ ಆವರ್ತಾಂಕಕ್ಕೆ ಮಿತಿಯುಂಟು. ಸ್ಪಂದನದ ಅಗಲವೇ 1–2 ಮಿಲಿಸೆಕೆಂಡುಗಳು. ಅದು ಹರಿದ ಮೇಲೆ ರಿಫ್ರಾಕ್ಟರಿ ಕಾಲ ಇನ್ನೊಂದು ಮಿಲಿಸೆಕೆಂಡು. ಹೀಗೆ ಒಂದು ಸ್ಪಂದನ ಹರಿದ ಮೇಲೆ ಇನ್ನೊಂದು ತೊಡಗಲು ಸುಮಾರು 3 ಮಿಲಿಸೆಕೆಂಡ್‌ಗಳು ಬೇಕು. ಸೆಕೆಂಡಿನಲ್ಲಿ ಸಾವಿರ ಮಿಲಿಸೆಕೆಂಡುಗಳಿವೆಯಾದ್ದರಿಂದ ಒಂದು ನರದಲ್ಲಿ ಸೆಕೆಂಡಿಗೆ ಸುಮಾರು 300 ಸ್ಪಂದನಗಳು ಮಾತ್ರ ಹರಿಯಲು ಸಾಧ್ಯ. (1000/3=333). ಇದಕ್ಕಿಂತ ಹೆಚ್ಚಿನ ಆವರ್ತಾಂಕ ಒಂದೇ ನರದಲ್ಲಿ ದೊರೆಯುವುದಿಲ್ಲ. ಹಲವು ನರಗಳು ಒಂದೇ ಶಬ್ದದ (ಅಥವಾ ಬೇರೆ ಪ್ರಚೋದಕಶಕ್ತಿಯ) ವೈಶಾಲ್ಯವನ್ನು ಹಂಚಿಕೊಂಡು ತಾವು ಸ್ಪಂದನಗಳನ್ನು ಬೇರೆ ಬೇರೆ ಕಾಲಗಳಲ್ಲಿ ಹೊರಡಿಸುವುದರಿಂದ ಒಟ್ಟಿನ ಸ್ಪಂದನಗಳ ಸಂಖ್ಯೆ ಶಬ್ದವೈಶಾಲ್ಯವನ್ನು ತೋರಿಸುತ್ತದೆ.

**ಶಕ್ತಿಯ ಆವರ್ತಾಂಕ:** ನರಗಳಲ್ಲಿ ಹರಿಯುವ ಸ್ಪಂದನಗಳ ಆವರ್ತಾಂಕ ಶಕ್ತಿಯ ವೈಶಾಲ್ಯವನ್ನು ತೋರಿಸುತ್ತದಾದರೆ ಶಕ್ತಿಯ ಆವರ್ತಾಂಕ ನರದಲ್ಲಿ ಯಾವ ರೀತಿಯಲ್ಲಿ ಪ್ರತಿಫಲಿತವಾಗುವುದು? ಬೆಳಕು, ಶಬ್ದ ಎರಡೂ ಶಕ್ತಿಯ ವಿವಿಧ ರೂಪದ ಅಲೆಗಳಾಗಿರುವುದರಿಂದ ಅವುಗಳಿಗೆ ವಿಶಿಷ್ಟವಾದ ಆವರ್ತಾಂಕಗಳಿವೆ. ಶಬ್ದದ ಶ್ರುತಿ (ಪಿಚ್) ಅದರ ಆವರ್ತಾಂಕವನ್ನು ಅವಲಂಬಿಸಿದೆ. ಶಬ್ದದ ಶ್ರುತಿ ಮತ್ತು ಗುಣವನ್ನು ಶ್ರವಣೇಂದ್ರಿಯ ಹೇಗೆ ಗುರುತಿಸುತ್ತದೆ ಎಂಬುದೊಂದು ಅತಿಮುಖ್ಯ ಪ್ರಶ್ನೆ. ಶ್ರವಣದ ಹಲವು ಸಿದ್ಧಾಂತಗಳು ಸಮಸ್ಯೆಗೆ ಉತ್ತರವನ್ನು ಹುಡುಕಲು ಸಹಾಯ ಮಾಡುತ್ತವೆ.

**4. ಶಬ್ದಗ್ರಹಣ ವಿಧಾನ :** ಶಬ್ದತರಂಗಗಳು ಶಬ್ದನಾಲೆಯನ್ನು ಪ್ರವೇಶಿಸಿ ಕಿವಿಯ ತಮಟೆಯನ್ನು ತಟ್ಟಿ ಮಧ್ಯಕಿವಿಯ ಮೂರು ಕಿರುಮೂಳೆಗಳ ಮೂಲಕ ಹೇಗೆ ಒಳಗಿವಿಯ ಕಾಕ್ಲಿಯವನ್ನು ತಲಪುವುವೆಂಬುದು ಚೆನ್ನಾಗಿ ಅರ್ಥವಾಗಿದೆ. ಏಕೆಂದರೆ ಇಲ್ಲಿ ನಡೆಯುವುದೆಲ್ಲ ಸರಳವಾದ ಯಾಂತ್ರಿಕ ಕ್ರಿಯೆ. ಅದೂ ಪರಿಶೀಲನೆಗೆ ಸುಲಭವಾಗಿ ಒಳಪಡಬಹುದಾದ ಸ್ಥಳದಲ್ಲಿ ನಡೆಯುತ್ತದೆ. ಕಾಕ್ಲಿಯದಲ್ಲಿ ಶಬ್ದ–ಸಮಾಚಾರ ಹೇಗೆ ವಿದ್ಯುತ್–ಸಮಾಚಾರವಾಗಿ ಮಾರ್ಪಡುವುದು? ಎಲ್ಲಿ ಮಾರ್ಪಡುವುದು? ಹೇಗೆ ನರಗಳು ಸಮಾಚಾರವನ್ನು ಮಿದುಳಿಗೆ ತಲಪಿಸುವುವು? ಮಿದುಳಿನಲ್ಲಿ ನಡೆಯುವ ಕ್ರಿಯೆ ಏನು? ಶಬ್ದವನ್ನು ಅನುಭವಿಸುವ ಮನಸ್ಸು, ಬುದ್ಧಿ, ಆತ್ಮ ಎಂಬ ಬೇರೆ ಬೇರೆ ತತ್ತ್ವಗಳಿವೆಯೆ? ಇವೆಲ್ಲ ವಿವಾದಾಸ್ಪದವಾದ, ಹಲವು ಅಭಿಪ್ರಾಯಭೇದಗಳಿಗೆ ಎಡೆಕೊಟ್ಟಿರುವ ಸಮಸ್ಯೆಗಳು.

**ಹೆಲ್ಮ್‌ಹೋಲ್ಟ್ಸ್‌ನ ಅನುನಾದ ಸಿದ್ಧಾಂತ :** ಕಳೆದ ಶತಮಾನದ ನಡುವಿನಲ್ಲಿ ಖ್ಯಾತ ಭೌತವಿಜ್ಞಾನಿ, ಹೆಲ್ಮ್‌ಹೋಲ್ಟ್ಸ್ ಈ ಸಿದ್ಧಾಂತವನ್ನು ಮುಂದಿರಿಸಿದ. ಇದನ್ನು ಸ್ಥಳಸಿದ್ಧಾಂತ (ಪ್ಲೇಸ್ ಥಿಯೊರಿ) ಎಂದೂ ಕರೆಯುವುದುಂಟು. ಇದರ ಪ್ರಕಾರ ಶಬ್ದದ ಪ್ರತಿ ಶ್ರುತಿಗೂ ಒಂದು ಪ್ರತ್ಯೇಕ ನರ ಉಂಟು. ಕಾಕ್ಲಿಯವನ್ನು ಆ ಶಬ್ದ ತಲಪಿದಾಗ ಅಲ್ಲಿ ಅನುನಾದದಿಂದ ಸಂಬಂಧಪಟ್ಟ ನರ ಉತ್ತೇಜಿತವಾಗುತ್ತದೆ. ಮತ್ತು ಸಮಾಚಾರವನ್ನು ಮಿದುಳಿಗೆ ಒಯ್ಯುತ್ತದೆ. ಜಟಿಲವಾದ ಹಲವು ಶ್ರುತಿಗಳನ್ನೊಳಗೊಂಡ ಗಾನಸ್ವರ ಕಿವಿಗೆ ಬಿದ್ದಾಗ ಸಂಬಂಧಪಟ್ಟ ಹಲವು ನರಗಳು ಏಕಕಾಲದಲ್ಲಿ ಮಿಡಿಯುವುದರಿಂದ ಜಟಿಲವಾದ ಶಬ್ದದ ಅನುಭವವಾಗುವುದು. ಕಾರ್ಟಿಯ ಅವಯವ ಮತ್ತು ಬೇಸಿಲಾರ್ ಪೊರೆಯ ವಿವಿಧ ಭಾಗಗಳು ವಿವಿಧ ಅನುನಾದ ವ್ಯವಸ್ಥೆಗಳಾಗಿದ್ದು ಅವು ವಿವಿಧ ನರಗಳಿಗೆ ಸುದ್ದಿಯನ್ನು ತಲಪಿಸುವುವು. ಕಾಕ್ಲಿಯದಲ್ಲಿ ನರಗಳ ಶ್ರೇಣಿಯಂಥ ರಚನೆ ಸಿದ್ಧಾಂತಕ್ಕೆ ಪುಷ್ಟಿಕೊಡುತ್ತದೆ. ಆದರೆ ಇದಕ್ಕೆ ಹಲವು ಅಡ್ಡಿಗಳೂ ಉಂಟು. ಮೊದಲನೆಯದಾಗಿ ಬೇಸಿಲಾರ್ ಪೊರೆಯ ಮೇಲೆ ಇರುವ ತಂತುಗಳು ಹ್ರಸ್ವವಾಗಿವೆ. ಇವು ಮಂದ್ರಶ್ರುತಿಯ ಶಬ್ದಗಳನ್ನು ಹೇಗೆ ಅನುನಾದಿಸುತ್ತವೆ? ತಂತುಗಳ ಉದ್ದದಲ್ಲಿ ವ್ಯತ್ಯಾಸ ಹೆಚ್ಚಿಲ್ಲ, ಇವು ಹಲವು ಅಷ್ಟಕಗಳ (ಆಕ್ಟೇವ್ಸ್) ಶ್ರುತಿಗಳನ್ನು ಅನುನಾದಿಸುವುದು ಹೇಗೆ? ತಂತುವಿನ ಎಳೆತ ಒಂದೇ ಸಮವಾಗಿದ್ದಾಗ ಶ್ರುತಿ ಅದರ ಉದ್ದಕ್ಕೆ ವಿಲೋಮಾನುಪಾತವಾಗಿರಬೇಕು, ಎಂದರೆ ಒಂದು ಶ್ರುತಿಗೂ ಅದರ ಒಂದು ಅಷ್ಟಕ ಮೇಲಿನ ಶ್ರುತಿಗೂ 1:2 ಆವರ್ತಾಂಕದ ನಿಷ್ಪತ್ತಿ ಇರುವುದರಿಂದ ಉದ್ದಗಳೂ 1:2 ನಿಷ್ಪತ್ತಿಯಲ್ಲಿರಬೇಕು. ಹಾಗಿಲ್ಲದೆ ಇರಬೇಕಾದರೆ ತಂತುಗಳ ಕರ್ಷಣವಾದರೂ (ಟೆನ್ಷನ್) ಈ ನಿಷ್ಪತ್ತಿಯಲ್ಲಿರಬೇಕು. ಉದ್ದಗಳಂತೂ ಈ ನಿಷ್ಪತ್ತಿಯಲ್ಲಿ ಇಲ್ಲ; ಕರ್ಷಣ ಈ ನಿಷ್ಪತ್ತಿಯಲ್ಲಿರುವುದು ಅತ್ಯಂತ ಸಂದೇಹವಾಗಿದೆ. ಆದರೆ ಈ ಸಿದ್ಧಾಂತಕ್ಕೆ ಅನುಕೂಲವಾದ ಅಂಶಗಳೂ ಇವೆ. ಎತ್ತರದ ಶ್ರುತಿಗಳ ಕಿವುಡುತನದಲ್ಲಿ ಅತಿಸಣ್ಣ ತಂತುಗಳು ನಾಶವಾಗಿರುವುದು ಕಂಡುಬಂದಿದೆ. ಪ್ರಾಣಿಗಳ ಮೇಲೆ ಮಾಡಿದ ಪ್ರಯೋಗಗಳಲ್ಲಿ ಒಂದೇ ಶ್ರುತಿಯನ್ನು ಗಟ್ಟಿಯಾಗಿ ನುಡಿಸಿ ಆ ಶ್ರುತಿಗೆ ಕಿವುಡನ್ನು ಉಂಟುಮಾಡಿದಾಗ ಕಾರ್ಟಿಯ ಅವಯವದ ಒಂದು ಭಾಗ ನಾಶವಾಗಿರುವುದು ಕಂಡುಬಂದಿದೆ. ಒಂದೇ ಶ್ರುತಿಯ ಕೇಳುವಿಕೆಯಿಂದ ಶ್ರವಣಾಯಾಸವನ್ನು (ಹಿಯರಿಂಗ್ ಫೆಟೀಗ್) ಉಂಟುಮಾಡಿದಾಗ ಆಯಾಸ ಆ ಶ್ರುತಿಗೆ ಮಾತ್ರ ಸೀಮಿತವಾಗಿದ್ದು ಕಿವಿ ಇತರ ಶ್ರುತಿಗಳನ್ನು ಸುಖವಾಗಿ ಕೇಳುವುದು. ಸಣ್ಣ ಬೇಸಿಲಾರ್ ಪೊರೆ ಉಳ್ಳ ಪ್ರಾಣಿಗಳು ಎತ್ತರದ ಶ್ರುತಿಗಳನ್ನು ಮಾತ್ರ ಕೇಳುತ್ತವೆ. ಅನುನಾದ ಇಲ್ಲದಿದ್ದರೂ ಬೇಸಿಲಾರ್ ಪೊರೆಯಲ್ಲಿ ನರದ ಸ್ಥಾನ ಶ್ರುತಿಯನ್ನು ಗುರುತಿಸುವುದು ಎನ್ನಬಹುದಾಗಿದೆ.

ಹೆಲ್ಮ್ ಹೋಲ್ಟ್ಸ್‌ನ ಸಿದ್ಧಾಂತವನ್ನು ಹಿಂಬಾಲಿಸಿ ಹಲವು ಸಿದ್ಧಾಂತಗಳು ಮುಂದೆ ಬಂದುವು.

ನರದ ವಿದ್ಯುದ್ವಾಹಕತೆಯ ಎಲ್ಲ ಅಥವಾ ಏನೂ ಇಲ್ಲ ತತ್ತ್ವ ಕಂಡುಹಿಡಿಯಲ್ಪಟ್ಟ ಮೇಲೆ(1912) ಶಬ್ದದ ಘೋಷ (ಇಂಟೆನ್ಸಿಟಿ) ನರದ ಪ್ರವಾಹದಿಂದ ಪ್ರತಿನಿಧಿಸಲ್ಪಟ್ಟಿದೆಯೆಂದು ನಂಬಿದ ಎಲ್ಲ ವಾದಗಳ ಪತನವಾಯಿತು. ಎಲೆಕ್ಟ್ರಾನಿಕ್ಸ್ ಉಪಕರಣಗಳಿಂದ ಹೊಸ ಹೊಸ ಸತ್ಯಾಂಶಗಳು ಹೊರಬಿದ್ದುವು. ವೀವರ್ ಮತ್ತು ಬ್ರೇ ಎಂಬವರು ಬೆಕ್ಕಿನ ಶ್ರವಣ ನರದಲ್ಲಿಯ ವಿದ್ಯುತ್ಪ್ರವಾಹದ ರೂಪ ಅದನ್ನು ಉಂಟು ಮಾಡಿದ ಶಬ್ದದ ರೂಪವನ್ನೇ ಹೋಲುವುದೆಂದು ತೋರಿಸಿದರು (ಪ್ರಿನ್‌ಸ್ಟನ್, 1929). ಕಾಕ್ಲಿಯ ಒಂದು ಮೈಕ್ರೋಫೋನಿನ ಹಾಗೆ ವರ್ತಿಸುವುದೆಂದಾಯಿತು.

**ವಾಲಿ ಸಿದ್ಧಾಂತ :** ಮೇಲಿನ ಸತ್ಯಾಂಶಗಳನ್ನು ವಿವರಿಸಲು ವೀವರ್ ಮತ್ತು ಬ್ರೇ ಮಂಡಿಸಿದ ಸಿದ್ಧಾಂತವಿದು. ವಾಲಿ ಎಂದರೆ ಯುದ್ಧದಲ್ಲಿ ಗುಂಡುಗಳು ಹೆಚ್ಚುಕಡಿಮೆ ಒಟ್ಟಿಗೆ ಹಾರುವ ಒಂದು ಗುಂಪು. ಒಂದು ತಂಡದ ಸೈನಿಕರು ಬಂದೂಕುಗಳನ್ನು ಒಟ್ಟಿಗೆ ಹಾರಿಸುವುದರಿಂದ ಒಂದು ವಾಲಿ ಹಾರುತ್ತದೆ. ಇಲ್ಲಿ ನರಗಳ ಹಾರುವಿಕೆಯೇ ವಾಲಿ. ಸ್ತಬ್ಧವಾಗಿದ್ದ ನರ ವಾಹಕವಾದಾಗ ಆ ಪರಿವರ್ತನೆಯನ್ನು ಹಾರುವಿಕೆ ಎನ್ನಬಹುದು. ಒಂದೇ ನರ ಸೆಕೆಂಡಿಗೆ ಸುಮಾರು 300 ರಷ್ಟು ಸಲಕ್ಕಿಂತ ಹೆಚ್ಚಾಗಿ ಹಾರಲಾರದು–ಆದ್ದರಿಂದ ಇದಕ್ಕಿಂತ ಹೆಚ್ಚಿನ ಆವರ್ತಾಂಕಗಳನ್ನು ಉಂಟುಮಾಡಲು ಹಲವು ನರಗಳು ಒಟ್ಟಿಗೇ ಒಂದು ವಾಲಿಯಾಗಿ ಹಾರುತ್ತವೆ. ಮೊದಲೇ ತಿಳಿಸಿದಂತೆ ನರಗಳ ಹಾರುವಿಕೆಯ ಸಂಖ್ಯೆಯ ದರ ಶಬ್ದಶಕ್ತಿಯನ್ನು ಸೂಚಿಸುತ್ತದೆ. ವಾಲಿ ಸಿದ್ಧಾಂತದ ಪ್ರಕಾರ ವಾಲಿಗಳ ಆವರ್ತಾಂಕವೇ ಶಬ್ದದ ಆವರ್ತಾಂಕವನ್ನು ತೋರಿಸುತ್ತದೆ. ಇವೆರಡೂ ಸಿದ್ಧಾಂತಗಳ ಪ್ರಕಾರ ಕಾಕ್ಲಿಯವೇ ಶಬ್ದವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮುಖ್ಯಸಾಧನೆ. ಆದರೆ ಕೆಲವು ಪ್ರಯೋಗಗಳು ಈ ಸಾಧನೆ ಮಿದುಳಿನಲ್ಲಿ ಇದೆ ಎಂದು ತೋರಿಸುತ್ತವೆ.

**ಮಿದುಳಿನ ಪಾತ್ರ:** ಒಂದು ಪ್ರಯೋಗದಲ್ಲಿ ಗಾನಸ್ವರವೊಂದರ(ಮ್ಯೂಸಿಕಲ್ ನೋಟ್) ಮೂಲ ಸ್ತರವನ್ನು ಎಲೆಕ್ಟ್ರಾನಿಕ್ ಉಪಕರಣಗಳಿಂದ ತೆಗೆದುಹಾಕಿ ಉಳಿದ ಶಬ್ದದ ಭಾಗವನ್ನು ಮಾತ್ರ ಕಿವಿಗೆ ಕೇಳಿಸಲಾಯಿತು. ಎಂದರೆ ಪ್ರತಿ ಸೆಕೆಂಡಿಗೆ 100 ಆವರ್ತಾಂಕದ ಪ್ರಧಾನ ಸ್ವರ ಮತ್ತು ಅದರ ಸಂಗತಾಂಗಗಳಾದ ಪ್ರತಿ ಸೆಕೆಂಡಿಗೆ 200,300, 400, 500 . . . . . . . . . . ಆವರ್ತಾಂಕದ 2, 3, 4, 5 ಸಂಗತಾಂಗಗಳು ಇರುವಾಗ ಸಂಗತಾಂಗಗಳನ್ನು ಮಾತ್ರ ಕಿವಿಗೆ ಕೇಳಿಸಿದರೆ ಕಿವಿ ಸಂಗತಾಂಗಗಳನ್ನು ಮಾತ್ರವಲ್ಲ, ಗಾನಸ್ವರದಿಂದ ತೆಗೆದುಹಾಕಲ್ಪಟ್ಟ ಪ್ರಧಾನಸ್ವರವನ್ನು (100 ಆವರ್ತಾಂಕ) ಕೇಳುವ ಅನುಭವವನ್ನು ಪಡೆಯುತ್ತದೆ. ಹೀಗೆ ಕಾಕ್ಲಿಯವಾಗಲೀ ನರಗಳಾಗಲೀ ಅನುಭವಿಸದಿದ್ದ ಸ್ವರ ಕೇಳಿಸಬೇಕಾಗಿದ್ದರೆ ಇದರ ಜನನ ಮಿದುಳಿನಲ್ಲಿಯೇ ಆಯಿತೆಂದು ತಿಳಿಯಬಹುದಲ್ಲವೆ? ನೆದರ್ಲೆಂಡಿನ ಷೌಟೆನ್ ಈ ಪ್ರಖ್ಯಾತವಾದ ಪ್ರಯೋಗವನ್ನು ಮಾಡಿದ. ಇಲ್ಲಿ ಇನ್ನೊಂದು ವಿಶೇಷವೇನೆಂದರೆ ಪ್ರಧಾನಸ್ವರವನ್ನು ಮುಸುಕುವಂಥ ಶಬ್ದವನ್ನು ಈ ಸಂಗತಾಂಗಗಳ ಜೊತೆಯಲ್ಲಿ ಸೇರಿಸಿದಾಗಲೂ ಇಲ್ಲದಿದ್ದ ಪ್ರಧಾನಸ್ವರ ಸ್ಪಷ್ಟವಾಗಿ ಕೇಳುತ್ತದೆ. ಆದ್ದರಿಂದ ಕಾಕ್ಲಿಯವೇ ಶ್ರವಣಕ್ಕೆ ಅತಿಮುಖ್ಯ. ಮಿದುಳು ಸಾಕ್ಷಿರೂಪವಾಗಿ ಮಾತ್ರ ಶಬ್ದಾನುಭವವನ್ನು ಪಡೆಯುತ್ತದೆ ಎಂಬ ಸಿದ್ಧಾಂತ ಈ ಪ್ರಯೋಗದ ಮುಂದೆ ಬಿದ್ದುಹೋಗುತ್ತದೆ. ಎರಡು ಹತ್ತಿರದ ಆವರ್ತಾಂಕಗಳ(ಉದಾಹರಣೆಗೆ ಸೆಕೆಂಡಿಗೆ 100, 102) ಸ್ವರಗಳನ್ನು ಒಟ್ಟಿಗೆ ನುಡಿಸಿದರೆ ಆಗ ಶಬ್ದದ ಘೋಷ ಪ್ರತಿಸೆಕೆಂಡಿನಲ್ಲೂ ಆವರ್ತಾಂಕಗಳ ವ್ಯತ್ಯಾಸದಷ್ಟು ಸಲ (ಈ ಉದಾಹರಣೆಯಲ್ಲಿ 102–100=2 ಸಲ) ಏರಿ ತಗ್ಗುತ್ತ ಇರುತ್ತದೆ. ಇದನ್ನು ವಿಸ್ಪಂದಗಳು (ಬೀಟ್ಸ್) ಎನ್ನುತ್ತಾರೆ. ಎರಡು ಸ್ವರಗಳೂ ಒಂದೇ ಕಿವಿಯಲ್ಲಿ ನುಡಿದರೆ ಬೇಸಿಲಾರ್ ಪೊರೆ ಎರಡೂ ಸ್ವರಗಳ ಪ್ರಭಾವದಿಂದ ಹೇಗೆ ವಿಸ್ಪಂದಗಳನ್ನು ಉಂಟುಮಾಡುವುದೆಂಬುದನ್ನು ಸುಲಭವಾಗಿ ತೋರಿಸಬಹುದು. ಆದರೆ ಎರಡು ಸ್ವರಗಳನ್ನು ಬೇರೆ ಬೇರೆ ಕಿವಿಗಳಲ್ಲಿ ಕೇಳಿದಾಗಲೂ ವಿಸ್ಪಂದಗಳು ಉಂಟಾಗುತ್ತವೆ. ಇದಕ್ಕೆ ಕಾರಣವೇನು? ಮಿದುಳೇ ಶಬ್ದದ ಅಂತಿಮ ಗ್ರಾಹಕ, ವಿಶ್ಲೇಷಕ ಎಂದು ಹೇಳದೆ ವಿಧಿಯಿಲ್ಲ. ಶಬ್ದದ ವಿಶ್ಲೇಷಣೆ ಕಾಕ್ಲಿಯದಲ್ಲಿಯೇ ಆಗುತ್ತದೆ ಎಂದು ಹೇಳುವುದು ತಪ್ಪು.

ಪ್ರಾಣಿಗಳ ಮೇಲೆ ಮಾಡಿದ ಕೆಲವು ಪ್ರಯೋಗಗಳು ಈ ವಿಷಯವನ್ನು ಒತ್ತಿ ತಿಳಿಸುತ್ತವೆ. ಒಂದು ಬೆಕ್ಕಿಗೆ ಶಸ್ತ್ರಕ್ರಿಯೆ ಮಾಡಿ ಶ್ರವಣನರದಲ್ಲಿ ವಿದ್ಯುದ್ವಾಹಕ ತಂತಿಯ ತುದಿಯೊಂದನ್ನು ಜೋಡಿಸಿ ಇನ್ನೊಂದು ತುದಿಯನ್ನು ತಲೆಯ ಹೊರಗೆ ತಂದು ಚರ್ಮವನ್ನು ಮತ್ತೆ ಸೇರಿಸಿ ಹೊಲಿಯಲಾಯಿತು. ಇದಕ್ಕೆ ಹುಟ್ಟುಹಾಕಿದ (ಇಂಪ್ಲಾಂಟೆಡ್) ಎಲೆಕ್ಟ್ರೋಡ್ ಎಂದು ಹೆಸರು. ಶಸ್ತ್ರಕ್ರಿಯೆಯ ಗಾಯ ಮಾಗಿದ ಮೇಲೆ ಬೆಕ್ಕಿನ ಕಿವಿಯಲ್ಲಿ ಕ್ಲಿಕ್ ಎಂದು ಶಬ್ದವನ್ನು ಮಾಡಿದಾಗಲೆಲ್ಲ ಅದೇ ರೂಪದ ವಿದ್ಯುತ್ಪ್ರವಾಹವನ್ನು ಎಲೆಕ್ಟ್ರೋಡ್‌ನಲ್ಲಿಯೂ ಕಾಕ್ಲಿಯದ ಮೈಕ್ರೊಫೋನ್ ಕಾರ್ಯದಿಂದ ಕಾಣಲಾಯಿತು. ಆದರೆ ಶಬ್ದ ಮಾಡುವಾಗ ಬೆಕ್ಕಿನ ಎದುರಿಗೆ ಮೀನನ್ನು ತಂದಿಟ್ಟಾಗ ನರದಲ್ಲಿಯ ಕಾರ್ಯ ನಿಂತುಹೋಯಿತು. ಈಗ ಬೆಕ್ಕಿನ ಮಿದುಳು(ಮನಸ್ಸು) ತನ್ನ ಕಾಕ್ಲಿಯ–ಮೈಕ್ರೊಫೋನನ್ನು (ನಮಗೆ ಇಷ್ಟವಿಲ್ಲದ ಕಾರ್ಯಕ್ರಮ ಮೂಡಿಬಂದಾಗ ನಾವು ರೇಡಿಯೋವನ್ನು ಆರಿಸುವಂತೆ) ಆರಿಸಿಬಿಟ್ಟಿರುತ್ತದೆ; ಇನ್ನೊಂದು ಪ್ರಯೋಗದಲ್ಲಿ ಪ್ರಾಣಿಗಳಿಗೆ ಹಲವು ದಿವಸಗಳ ಕಾಲ ಕ್ಲಿಕ್ ಶಬ್ದಗಳನ್ನು ಕೇಳಿಸುತ್ತಲೇ ಇದ್ದರೆ ಆ ಮೇಲೆ ಅವುಗಳಿಗೆ ಈ ಶಬ್ದ ಕೇಳಿಸುವುದೇ ಇಲ್ಲ. ಎಂದರೆ ಮೈಕ್ರೊಫೋನ್ ಆರಿಸಲ್ಪಟ್ಟಿರುತ್ತದೆ. ಈಗ ಕ್ಲಿಕ್ ಶಬ್ದ ಬಂದಾಗಲೆಲ್ಲ ಜೊತೆಯಲ್ಲಿ ಒಂದು ಷಾಕ್ ಹೊಡೆಯುವಂತೆ ಏರ್ಪಡಿಸಿದರೆ ಬೆಕ್ಕು ಆಸ್ಥೆಯಿಂದ ಆಲಿಸಲು ಆರಂಭಿಸುತ್ತದೆ. ನರದಲ್ಲಿ ಸ್ಪಂದನಗಳು ಕಂಡುಬರುತ್ತವೆ. ಈ ಪ್ರಯೋಗವೂ ಶ್ರವಣದ ಮೇಲೆ ಮಿದುಳಿನ ಸ್ವಾಮ್ಯವನ್ನು ತೋರಿಸುವುದು.

**ಸಮನ್ವಯ ಸಿದ್ಧಾಂತ:** ಮೇಲೆ ತಿಳಿಸಿದ ವಿವರಗಳನ್ನು ನೋಡಿದರೆ ಈ ಎಲ್ಲ ಸಿದ್ಧಾಂತಗಳಲ್ಲೂ ಹೆಚ್ಚು ಕಡಿಮೆಯ ತಥ್ಯಾಂಶಗಳಿವೆಯೆಂಬುದು ತಿಳಿಯುತ್ತದೆ. ಇವನ್ನೆಲ್ಲ ಸಮಗ್ರದೃಷ್ಟಿಯಿಂದ ನೋಡಿ ಸಮನ್ವಯ ಮಾಡಿದರೆ ಸತ್ಯವನ್ನು ಸಮೀಪಿಸುತ್ತೇವೆಂದು ತೋರುತ್ತದೆ. ಬೆಲ್ ಟೆಲಿಫೋನ್ ಪ್ರಯೋಗಮಂದಿರದ ಶಬ್ದ ಸಂಶೋಧನೆಯ ನಿರ್ದೇಶಕ ಆಗಿದ್ದ ಹಾರ್ವೆ ಫ್ಲೆಚರ್ ಈ ರೀತಿಯ ಒಂದು ದೃಷ್ಟಿಯನ್ನು 1930ರಲ್ಲಿಯೇ ಪ್ರಚುರಪಡಿಸಿದ. ಇದನ್ನೇ ಮುಂದೆ ಸಮರ್ಥಿಸಿ ಬೆಳೆಸಿದ. ಈ ದೃಷ್ಟಿಯಲ್ಲಿ ಎಲ್ಲ ಪ್ರಯೋಗಗಳ ಫಲಿತಾಂಶಗಳನ್ನೂ ಒಳಗೊಳ್ಳುವ ಪ್ರಯತ್ನವಿದೆ. ಆದ್ದರಿಂದ ಫ್ಲೆಚರನ ಸ್ಥಳ–ಕಾಲ–ಚಿತ್ರ ಸಿದ್ಧಾಂತವನ್ನು (ಸ್ಪೇಸ್–ಟೈಂ–ಪ್ಯಾಟರ್ನ್‌ಥಿಯೊರಿ) ಇಲ್ಲಿ ಸೂಕ್ಷ್ಮವಾಗಿ ತಿಳಿಸಬಹುದು. ಶಬ್ದದ ಶ್ರುತಿ ಬೇಸಿಲಾರ್ ಪೊರೆಯ ಅತಿ ತೀಕ್ಷ್ಣ ಕಂಪನದ ಸ್ಥಳದಿಂದಲೂ (ಸ್ಥಳಸಿದ್ಧಾಂತ) ಮಿದುಳಿಗೆ ಕಳುಹಿಸಲ್ಪಟ್ಟ ಕಾಲಚಿತ್ರದಿಂದಲೂ (ವಾಲಿಸಿದ್ಧಾಂತ) ನಿರ್ಧರಿತವಾಗುತ್ತದೆ. ಬಹುಶಃ ಮೊದಲ ವಿಧಾನ ತಾರತರ ಶ್ರುತಿಗಳಿಗೂ ಎರಡನೆಯ ವಿಧಾನ ಮಂದ್ರತರ ಶ್ರುತಿಗಳಿಗೂ ಮುಖ್ಯವಾಗಿರುತ್ತದೆ. ಶಬ್ದದ ಗಾತ್ರ ಮಿದುಳನ್ನು ಪ್ರತಿ ಸೆಕೆಂಡಿನಲ್ಲಿಯೂ ಮುಟ್ಟುವ ನರಗಳ ಹಾರುವಿಕೆಯಿಂದಲೂ (ವಾಲಿಸಿದ್ಧಾಂತ) ಸ್ವಲ್ಪಮಟ್ಟಿಗೆ ಬೇಸಿಲಾರ್ ಪೊರೆಯ ಎಷ್ಟು ಹೆಚ್ಚಿನ ಭಾಗ ಉದ್ರಿಕ್ತವಾಗಿದೆ ಎಂಬುದರಿಂದಲೂ (ಸ್ಥಳಸಿದ್ಧಾಂತ) ನಿರ್ಧರಿತವಾಗುವುದು. ಮನೋವಿಜ್ಞಾನಿಗಳು ಶಬ್ದಘೋಷ (ವಾಲ್ಯೂಂ) ಎಂದು ಕರೆಯುವ ಅನುಭವ ಬೇಸಿಲಾರ್ ಪೊರೆ ಎಷ್ಟು ಉದ್ದ ಉದ್ರಿಕ್ತವಾಗಿದೆ ಎಂಬುದನ್ನು ಅವಲಂಬಿಸಿದೆ. ಮಂದ್ರ ಶ್ರುತಿಗಳಿಗೆ ಹೆಚ್ಚಿನ ಘೋಷ ಉಂಟು. ಅತಿ ಹೆಚ್ಚಿನ ಶ್ರುತಿಗಳಿಗೆ ಕಡಿಮೆ ಘೋಷ ಉಂಟು. ಗಾಳಿಯಲ್ಲಿಯ ಕಾಲಚಿತ್ರ ಬೇಸಿಲಾರ್ ಪೊರೆಯಲ್ಲಿ ಸ್ಥಳಚಿತ್ರವಾಗಿ ಪ್ರತಿಫಲಿತವಾಗುವುದು. ನರಗಳ ತುದಿಗಳ ಉದ್ರೇಕದ ರೀತಿ ಹೇಗಿರುತ್ತದೆಂದರೆ ಸ್ಥಳಚಿತ್ರ ಒಂದನ್ನೊಂದು ಹೋಲುವ ಎರಡು ಸ್ಥಳಚಿತ್ರಗಳನ್ನು ಮಿದುಳಿನ ಎರಡು ಭಾಗಗಳಲ್ಲಿ ಉಂಟುಮಾಡುವುದು. ಈ ಚಿತ್ರಗಳ ಬದಲಾವಣೆಗಳನ್ನು ಗುರುತಿಸುವುದೇ ಶ್ರವಣದ ಎಲ್ಲ ಕಾರ್ಯಗಳಿಗೂ ಕಾರಣ.

ಇಷ್ಟೆಲ್ಲ ಹೇಳಿದಮೇಲೆಯೂ ಈ ಅದ್ಭುತವಾದ, ಜಟಿಲವಾದ ಕಿವಿ–ನರ–ಮಿದುಳಿನ ವ್ಯವಸ್ಥೆ ನಿಖರವಾಗಿ ಹೇಗೆ ಕೆಲಸಮಾಡುತ್ತದೆ ಎಂಬುದರ ವಿವರಗಳು ಇನ್ನೂ ಬಹುಮಟ್ಟಿಗೆ ದೊರೆಯಬೇಕಾಗಿದೆ.

**ಮಾನವನ ಶ್ರವಣಶಕ್ತಿ :** ಸಾವರ್ಟ್ ಎಂಬಾತ ತನ್ನ ಯಂತ್ರದ ಸಹಾಯದಿಂದ ಮಾನವನ ಕಿವಿ 8–24,000 ಪ್ರತಿ ಸೆಕೆಂಡಿನ ಆವರ್ತಾಂಕದ ಶಬ್ದಗಳನ್ನು ಕೇಳುವುದು ಎಂದು ತೋರಿಸಿದ(1830). ಇತರರು ಈ ಶ್ರೇಣಿಯನ್ನು 20–20,000ದ ವರೆಗೂ ಇದೆ ಎನ್ನುತ್ತಾರೆ. ಎಂದರೆ ಹತ್ತು ಅಷ್ಟಕಗಳಿಗೂ (ಅಷ್ಟಕ ಎಂದರೆ ಒಂದು ಶ್ರುತಿಯಿಂದ ಅದರ ಎರಡರಷ್ಟು ಆವರ್ತಾಂಕ ಶ್ರುತಿಯವರೆಗೂ ಇರುವ ಶ್ರುತಿಗಳ ವ್ಯಾಪ್ತಿ. 20–40ರ ವರೆಗೆ ಒಂದು ಅಷ್ಟಕ. 40–80ರ ವರೆಗೆ ಇನ್ನೊಂದು, 80–160 ಇನ್ನೊಂದು ಇತ್ಯಾದಿ) ಹೆಚ್ಚು. ಕಣ್ಣಿಗೆ ಕಾಣುವುದೆಲ್ಲ ಒಂದು ಅಷ್ಟಕಕ್ಕಿಂತ ಕಡಿಮೆಯ ಬೆಳಕಿನ ಕಿರಣಗಳು ಮಾತ್ರ. ಶ್ರುತಿ ಮತ್ತು ಗಾತ್ರಗಳೆರಡರ ದೃಷ್ಟಿಯಿಂದಲೂ ಮಾನವನ ಶ್ರವಣಶಕ್ತಿಗೆ ಮಿತಿಗಳು ಉಂಟು. ಪ್ರತಿ ಸೆಕೆಂಡಿಗೆ 20ರ ಆವರ್ತಾಂಕಕ್ಕಿಂತ ಕಡಿಮೆಯಾದರೂ 20,000 ಕ್ಕಿಂತ ಜಾಸ್ತಿಯಾದರೂ ಆ ಶಬ್ದಗಳು ನಮಗೆ ಕೇಳಿಸುವುದಿಲ್ಲ. ಇತರ ಪ್ರಾಣಿಗಳು (ಉದಾಹರಣೆ ನಾಯಿ, ಬಾವಲಿ, ಜೀರುಂಡೆ) ಮುಂತಾದವುಗಳಿಗೆ 20,000 ಕ್ಕಿಂತ ಹೆಚ್ಚಿನ ಆವರ್ತಾಂಕದ ಶಬ್ದಗಳನ್ನೂ ಕೇಳುವ ಸಾಮರ್ಥ್ಯ ಉಂಟು. ಹೀಗೆಯೇ ಶಬ್ದದ ಗಾತ್ರ ಅತಿಕ್ಷೀಣವಾದರೂ ಕಿವಿಗೆ ಕೇಳಿಸುವುದಿಲ್ಲ. ಗಾತ್ರ ಅತಿ ಹೆಚ್ಚಿದಾಗ ಶಬ್ದ ಕೇಳುವುದರ ಬದಲು ಯಾತನೆ ಉಂಟಾಗುವುದು. ಈ ಶಕ್ತಿಗಳನ್ನು ಶ್ರವಣದೇಹಲಿ (ಥ್ರೆಷೋಲ್ಡ್ ಆಫ್ ಹಿಯರಿಂಗ್) ಮತ್ತು ಯಾತನಾದೇಹಲಿ ಎಂದು ಕರೆಯಲಾಗುತ್ತದೆ. ಬೇರೆ ಬೇರೆ ವ್ಯಕ್ತಿಗಳಲ್ಲಿಯೇ ದೇಹಲಿಗಳ ವ್ಯತ್ಯಾಸ ಇರುತ್ತದೆ. ಶ್ರವಣಮಾಪಕ (ಆಡಿಯೋಮೀಟರ್) ಯಂತ್ರದ ಸಹಾಯದಿಂದ ಮಾನವನ ಶ್ರವಣಶಕ್ತಿಯನ್ನು ಅಳೆಯುತ್ತಾರೆ. ಮಾನವನ ಶ್ರವಣಶಕ್ತಿಯ ಆವರ್ತಾಂಕಗಳ ಮುಖ್ಯ ಭಾಗಗಳನ್ನು ಪ್ರತಿನಿಧಿಸಿರುವ 8–10 ಗಾನಸ್ವರಗಳನ್ನು ವಿವಿಧ ಗಾತ್ರಗಳಲ್ಲಿ ಈ ಯಂತ್ರ ಉತ್ಪಾದಿಸುತ್ತದೆ. ಸ್ವರ ಕಿವಿಗೆ ಕೇಳಿಸುವಂತೆ ಇಯರ್‌ಫೋನ್‌ಗಳು ವ್ಯಕ್ತಿಯ ಕಿವಿಗೆ ಜೋಡಿಸಲ್ಪಡುತ್ತವೆ. ಪ್ರತಿ ಆವರ್ತಾಂಕದ ಸ್ವರವನ್ನೂ ಬಹುಕಡಿಮೆ ಮಟ್ಟದ ಗಾತ್ರದಿಂದ ಕ್ರಮೇಣ ಹೆಚ್ಚಿಸುತ್ತ ಹೋಗಿ ಯಾವ ಮಟ್ಟದಲ್ಲಿ ಶಬ್ದ ಕೇಳಿಸಿತು ಎಂಬುದನ್ನೂ ಹೆಚ್ಚಿನ ಗಾತ್ರದಿಂದ ಕುಗ್ಗಿಸುತ್ತ ಬಂದ ಯಾವ ಮಟ್ಟದ ಗಾತ್ರದಲ್ಲಿ ಶಬ್ದ ಕೇಳಿಸದೆ ಹೋಯಿತೆಂಬುದನ್ನೂ ವ್ಯಕ್ತಿ ಸೂಚಿಸುತ್ತಾನೆ. ಈ ಎರಡು ಮಟ್ಟಗಳ ಸರಾಸರಿಯೇ ಆ ವ್ಯಕ್ತಿಯ ಶ್ರವಣದೇಹಲಿ. ಕಿವುಡರಿಗೆ ಶ್ರವಣದೇಹಲಿ ಜಾಸ್ತಿಯಾಗಿರುತ್ತದೆ. ಸೂಕ್ಷ್ಮವಾದ ಶ್ರವಣಶಕ್ತಿಯುಳ್ಳವರಿಗೆ ದೇಹಲಿ ಅಲ್ಪವಾಗಿರುತ್ತದೆ.

ಅಮೆರಿಕ ಸಂಯುಕ್ತಸಂಸ್ಥಾನದ ಸಾರ್ವಜನಿಕ ಆರೋಗ್ಯ ಇಲಾಖೆಯವರು ಕೇಳುವಿಕೆಯನ್ನು ಕುರಿತು ಒಂದು ಪ್ರಾತಿನಿಧಿಕ ಸರ್ವೇಕ್ಷಣೆಯನ್ನು ನಡೆಸಿದರು. ಡೆಸಿಬೆಲ್ (dB) ಮಾಪನವನ್ನು ಬಳಸಿಕೊಂಡು ತಾವು ಆಯ್ದ ಜನರ ಶ್ರವಣ ದೇಹಲಿಗಳನ್ನು ಗುರುತಿಸಿಕೊಂಡರು. ಒಂದು ಶಬ್ದ ಇನ್ನೊಂದಕ್ಕಿಂತ ಎಷ್ಟು ಡೆಸಿಬೆಲ್ ದೊಡ್ಡದಾಗಿದೆಯೆಂದು dB ತೋರಿಸುತ್ತದೆ.

$$dB = 10 \log_{10} \frac{\text{1ನೆಯ ಶಬ್ದದ ಶಕ್ತಿ}}{\text{2ನೆಯ ಶಬ್ದದ ಶಕ್ತಿ}}$$

ಇಲ್ಲಿ ಎರಡನೆಯ ಶಬ್ದ ಯಾವಾಗಲೂ ಶ್ರವಣದೇಹಲಿಯ ಒಂದು ಶಿಷ್ಟಶಬ್ದದ ಪಾತ್ರ. ಶಬ್ದದ ಶಕ್ತಿಯನ್ನು ಪ್ರತಿ ಚದರ ಸೆಂಟಿಮೀಟರಿಗೆ ವ್ಯಾಟುಗಳಲ್ಲಿಯೂ ಅಥವಾ ಇದಕ್ಕೆ ಸಮಾನವಾದ ಶಬ್ದದ ಒತ್ತಡವನ್ನು ಪ್ರತಿ ಚದರ ಸೆಂಟಿಮೀಟರಿಗೆ ಡೈನ್‌ಗಳಲ್ಲಿಯೂ ಅಳೆಯಬಹುದು. ಈ ರೀತಿ ದತ್ತಾಂಶಗಳನ್ನು ಸಂಗ್ರಹಿಸಿ ಒಂದು ಗ್ರಾಫನ್ನು ಇಲಾಖೆಯವರು ತಯಾರಿಸಿದರು. ವಿವಿಧ ಆವರ್ತಾಂಕಗಳನ್ನು x-ದಿಶೆಯಲ್ಲಿಯೂ ಶ್ರವಣ ದೇಹಲಿಯನ್ನು y–ದಿಶೆಯಲ್ಲಿಯೂ ಅಳೆದು ವಕ್ರರೇಖೆಗಳನ್ನು ಚಿತ್ರಿಸಿದರು. ಹೀಗೆ ದೊರೆತ ಶ್ರವಣಲೇಖನಗಳಿಂದ ಗುಂಪಿನ ಅರ್ಧ ಜನರು ಸೆಕೆಂಡಿಗೆ 60–10,000 ವರೆಗಿನ ಆವರ್ತಾಂಕದ ಸ್ವರಗಳನ್ನು ಕೇಳುವರೆಂದೂ ಎಲ್ಲರ ಕಿವಿಗಳೂ 3,000 ಪ್ರತಿ ಸೆಕೆಂಡಿಗೆ ಆವರ್ತಾಂಕದ ನೆರೆಹೊರೆಯಲ್ಲಿ ಅತಿ ಸೂಕ್ಷ್ಮವಾಗಿರುವುದೆಂದೂ ತಿಳಿಯುತ್ತದೆ.

**ಮುಸುಕುವಿಕೆ :** ಕಿವಿ A ಎಂಬ ಒಂದು ಶಬ್ದವನ್ನು ಕೇಳುತ್ತಿರುವಾಗ B ಎಂಬ ಇನ್ನೊಂದು ಶಬ್ದವನ್ನು ಕ್ರಮವಾಗಿ ಹೆಚ್ಚು ಹೆಚ್ಚು ಗಟ್ಟಿಯಾಗಿ ಕೇಳುವಂತೆ ಅದರ ಗಾತ್ರವನ್ನು ಹೆಚ್ಚಿಸುತ್ತ ಹೋದರೆ ಒಂದು ಘಟ್ಟದಲ್ಲಿ A ಶಬ್ದ ಕಿವಿಗೆ ಕೇಳುವುದೇ ಇಲ್ಲ. ಆಗ B ಶಬ್ದ Aಯನ್ನು ಮುಸುಕಿತು ಎಂದು ಹೇಳುತ್ತೇವೆ. A ಮುಸುಕಲ್ಪಟ್ಟಿತು ಎನ್ನುತ್ತೇವೆ. ಕಳೆದ ಶತಮಾನದಲ್ಲಿಯೇ ಮೇಯರ್ ಎಂಬಾತ ಮುಸುಕುವ ಪ್ರಯೋಗಗಳನ್ನು ಮಾಡಿದ್ದನಾದರೂ ಈ ವಿಷಯವಾಗಿ ವಿಸ್ತಾರವಾದ ಕೆಲಸ ನಡೆದಿರುವುದು ಅಮೆರಿಕದ ಬೆಲ್ ಟೆಲಿಫೋನ್ ಪ್ರಯೋಗಾಲಯದಲ್ಲಿ. ಮೇಯರನ ಪ್ರಕಾರ ಕಡಿಮೆ ಶ್ರುತಿಯ (ಎಂದರೆ ಮಂದ್ರತರವಾದ) ಶಬ್ದ ಹೆಚ್ಚಿನ ಶ್ರುತಿಯ ಹೆಚ್ಚು ಗಾತ್ರದ ಶಬ್ದಗಳನ್ನು ಮುಸುಕುತ್ತದೆ; ಹೆಚ್ಚಿನ ಶ್ರುತಿಯ ಶಬ್ದ (ತಾರತರವಾದುದು) ಕಡಿಮೆ ಶ್ರುತಿಯ ಶಬ್ದವನ್ನು ಮುಸುಕಲಾರದು. ಆದರೆ ಈಚೆಗೆ ನಡೆದ ಪ್ರಯೋಗಗಳಿಂದ ಈ ಫಲಿತಾಂಶಗಳು ಸರಿಯಲ್ಲವೆಂದು ತಿಳಿಯಲಾಗಿದೆ. ಎರಡು ಸ್ವರಗಳ ಆವರ್ತಾಂಕಗಳ ವ್ಯತ್ಯಾಸ ಹೆಚ್ಚಾಗಿದ್ದಾಗ ಕಡಿಮೆ ಶ್ರುತಿಯ ಗಾತ್ರ ಕಡಿಮೆಯಾಗಿದ್ದರೆ ಹೆಚ್ಚಿನ ಶ್ರುತಿಯ ಶಬ್ದವನ್ನು ಮುಸುಕುವುದಿಲ್ಲ. ಹಾಗೆಯೆ ಎರಡು ಶ್ರುತಿಗಳೂ ಅತಿ ಸಮೀಪವಾಗಿದ್ದರೆ ಹೆಚ್ಚಿನ ಶ್ರುತಿಯ ಶಬ್ದ ಕಡಿಮೆಯದನ್ನು ಮುಸುಕುತ್ತದೆ. ಮುಸುಕುವ ಶಬ್ದ ಗಲಭೆ ಅಥವಾ ಘಾತಶಬ್ದದ ರೂಪವನ್ನು ಹೊಂದಿದ್ದರೆ ಅದರಲ್ಲಿ ಎಲ್ಲ ಆವರ್ತಾಂಕದ ಶಬ್ದಗಳೂ ಕಲಸಿಕೊಂಡಿರುತ್ತವೆ. ಆದ್ದರಿಂದ ಅದು ಎಲ್ಲ ಶ್ರುತಿಗಳನ್ನೂ ಸುಲಭವಾಗಿ ಮುಸುಕುತ್ತದೆ. ಈ ಪ್ರಯೋಗಗಳಲ್ಲಿ ಎರಡು ಶಬ್ದಗಳನ್ನೂ ಒಂದೇ ಕಿವಿಗೆ ಕೇಳಿಸಲಾಯಿತು. ಎರಡು (ಮುಸುಕುವ, ಮುಸುಕಲ್ಪಡುವ) ಶಬ್ದಗಳನ್ನೂ ಬೇರೆ ಬೇರೆ ಕಿವಿಗಳಿಗೆ ಕೇಳಿಸಿದಾಗ ಮುಸುಕುವಿಕೆ ಬಹಳ ಕಡಿಮೆಯಾಗಿರುತ್ತದೆ. ಮುಸುಕುವ ಶಬ್ದ ಎದುರು ಕಿವಿಯಿಂದ ತಲೆಯ ಮೂಲಕ ಬಂದು ಮೊದಲನೆಯ ಕಿವಿಯನ್ನೂ ಸೇರಿ ಅಲ್ಲಿಯೇ ಮುಸುಕುವ ಕಾರ್ಯವನ್ನು ಮಾಡುತ್ತದೆ ಎಂದು ಸುಲಭವಾಗಿ ನಿಶ್ಚಯಿಸಬಹುದಾಗಿದೆ. ನಾವು ಟೆಲಿಫೋನಿನಲ್ಲಿ ಮಾತನಾಡುವಾಗ ಗ್ರಾಹಿಯಿಂದ (ರಿಸೀವರ್) ಮುಚ್ಚಲ್ಪಡದೆ

ಇರುವ ಕಿವಿಯನ್ನು ಕೆಲವರು ಕೈಯಿಂದ ಮುಚ್ಚಿಕೊಳ್ಳುವುದುಂಟು. ಇದರ ಉಪಯೋಗ ಸಂದೇಹಕರವಾಗಿದೆ. ತೆರೆದ ಕಿವಿಯಿಂದ ಕೇಳುವ ಶಬ್ದಗಳು ಗ್ರಾಹಿಯಿಂದ ಬರುತ್ತಿರುವ ಸಂಭಾಷಣೆಯನ್ನು ಮುಸುಕಬೇಕಾದರೆ ಅವು ಸುಮಾರು 50 dB ಹೆಚ್ಚಿನ ಗಾತ್ರದವಾಗಿರಬೇಕಾಗುತ್ತದೆ. ಏಕೆಂದರೆ ಅವು ತೆರೆದ ಕಿವಿಯಿಂದ ತಲೆಯ ಮೂಲಕ ಹಾದು ಗ್ರಾಹಿಯಿರುವ ಕಿವಿಯನ್ನು ಸೇರಿ ಅಲ್ಲಿಯೇ ಮುಸುಕುವಿಕೆಯನ್ನು ನೆರವೇರಿಸಬೇಕು. ಮುಸುಕುವಿಕೆ ಶ್ರವಣ ಸಿದ್ಧಾಂತಗಳಲ್ಲಿ ಅತಿಮುಖ್ಯವಾದ ಸಾಕ್ಷ್ಯಸಾಮಾಗ್ರಿಯನ್ನು ಒದಗಿಸುತ್ತದೆ.

**ಶಬ್ದಘೋಷದ ಅಳತೆ :** ಎರಡು ವಿವಿಧ ಆವರ್ತಾಂಕಗಳ ಸ್ವರಗಳಲ್ಲಿ ಇರುವ ಭೌತ ಶಕ್ತಿ ಸಮವಾಗಿದ್ದರೂ ಕಿವಿಗೆ ಅವುಗಳ ಗಾತ್ರದಲ್ಲಿ ವ್ಯತ್ಯಾಸ ತೋರುತ್ತದೆ. ಡೆಸಿಬೆಲ್ ಶ್ರುತಿಯಲ್ಲಿರುವ ಶಕ್ತಿಯನ್ನು ಸೂಚಿಸುತ್ತದೆ. ಶಬ್ದಘೋಷದ ಮಟ್ಟವನ್ನು ಸೂಚಿಸಲು ಫೋನ್ ಎಂಬ ಅಳತೆಯನ್ನು ಉಪಯೋಗಿಸುವರು. ಇದರಲ್ಲಿ ಸೆಕೆಂಡಿಗೆ 1,000 ಆವರ್ತಾಂಕದ ಶ್ರುತಿಯೇ ಶಿಷ್ಟಮಾನ. ಪ್ರತಿ ಸೆಕೆಂಡಿಗೆ 1,000 ಆವರ್ತಾಂಕದ ಶಬ್ದದ 60 dB ಯಷ್ಟೆ ಘೋಷವನ್ನು ಹೊಂದಿದಂತೆ ತೋರಲು 60 ಆವರ್ತಾಂಕದ ಶಬ್ದ 76dB , 10,000 ಆವರ್ತಾಂಕದ ಶಬ್ದ 72 dB ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಈ ಮೂರು ಶಕ್ತಿಯ ಮಟ್ಟವನ್ನೂ ನಾವು 60 ಫೋನ್ ಶಬ್ದದ ಘೋಷವನ್ನು ಹೊಂದಿವೆ ಎನ್ನುತ್ತೇವೆ. ಹೀಗೆಯೇ ಪ್ರತಿ ಸೆಕೆಂಡಿಗೆ 1,000 ಆವರ್ತಾಂಕಗಳು P ಡೆಸಿಬೆಲ್‌ಗಳಷ್ಟೇ ಘೋಷವನ್ನು ಹೊಂದಿರುವ ಎಲ್ಲ ಶಬ್ದಗಳ ಘೋಷವನ್ನೂ P ಫೋನ್‌ಗಳೆಂದು ಅಳೆಯುತ್ತೇವೆ. ಇದು ಶಬ್ದದ ಘೋಷದ ಮಟ್ಟದ (ಲೌಡ್‌ನೆಸ್ ಲೆವೆಲ್) ಅಳತೆ. ಶಬ್ದಘೋಷದ ವೈಯಕ್ತಿಕ ಅನುಭವವನ್ನು ಸೋನ್ ಎಂಬ ಅಳತೆಗೋಲಿನಿಂದ ಅಳೆಯುತ್ತೇವೆ. 40 ಫೋನ್‌ಗಳಿಗೆ 1 ಸೋನ್ ಸಮ ಎಂದು ನಿಶ್ಚಯಿಸಲಾಗಿದೆ.

**ಕಿವಿಯ ವಿವೇಚನಸಾಮರ್ಥ್ಯ :** ಕಿವಿಯ ವಿವೇಚನಸಾಮರ್ಥ್ಯ ವಿವಿಧ ಮಟ್ಟಗಳಲ್ಲಿ ವಿವಿಧ ಹಂತದಲ್ಲಿರುತ್ತದೆ. ಉದಾಹರಣೆಗೆ ಪ್ರತಿ ಸೆಕೆಂಡಿಗೆ 1,000 ಆವರ್ತಾಂಕದ ಶಬ್ದದಲ್ಲಿ ದೇಹಲಿಗಿಂತ 5 dB ಶಕ್ತಿಯನ್ನು ಹೊಂದಿದ್ದಾಗ ಕಿವಿ ಗುರುತಿಸಬಹುದಾದ ಅತಿ ಕಿರಿದಾದ ಘೋಷದ ಬದಲಾವಣೆ 3 dB ಯಷ್ಟು. ಅದೇ 100 dB ಯ ಶಬ್ದದಲ್ಲಿ 0.25 dB ಯಷ್ಟು ಬದಲಾವಣೆಯನ್ನೇ ಗಮನಿಸುವುದು ಸಾಧ್ಯ. ವಿವೇಚನಾಸಾಮರ್ಥ್ಯ ಆವರ್ತಾಂಕವನ್ನು ಸಹ ಅವಲಂಬಿಸಿದೆ. ಹೀಗೆಯೇ ಶ್ರುತಿಯ ಬದಲಾವಣೆಗಳನ್ನು ನೋಡಿದರೆ ಕಿವಿ 1,400 ಪ್ರತ್ಯೇಕ ಶ್ರುತಿಗಳನ್ನು ವಿವೇಚಿಸಿ ಗುರುತಿಸಬಲ್ಲುದು. ಆದರೆ 280 ಮತ್ತು 1,400 ನ್ನು ಗುಣಿಸಿ 3,92,000 ವಿವಿಧ ಶ್ರುತಿಗಳ ವಿವಿಧ ಘೋಷಗಳ ಶಬ್ದಗಳನ್ನು ನಾವು ಗುರುತಿಸಬಲ್ಲೆವೆಂದು ಹೇಳಬಹುದೆ? ಇದು ತಪ್ಪು. ಕಿವಿ ಕೇಳಿ, ಗುರುತಿಸಿ, ಜ್ಞಾಪಕದಲ್ಲಿಟ್ಟುಕೊಳ್ಳಲು ಸಾಧ್ಯವಾದದ್ದು ಸುಮಾರು 7 ಶ್ರುತಿಗಳ 7 ಶಬ್ದ ಘೋಷಗಳನ್ನು ಮಾತ್ರ, ಎಂದರೆ 7 X 7 = 49 ವಿವಿಧ ಶ್ರುತಿಘೋಷಗಳ ಗುಂಪು ಮಾತ್ರ. ವಿವೇಚನಸಾಮರ್ಥ್ಯವೂ ಶ್ರವಣಸಿದ್ಧಾಂತಗಳಲ್ಲಿ ಮುಖ್ಯಪಾತ್ರವನ್ನು ವಹಿಸಿದೆ. ಎಲ್ಲ ಸಿದ್ಧಾಂತಗಳೂ ಈ ಸಾಮರ್ಥ್ಯವನ್ನು ವಿವರಿಸಬೇಕು.

**ಶಬ್ದಮೂಲದ ದಿಕ್ಕು :** ವಾನ್‌ಬರ್ಗ್ಯೆಕ್, ಪಿಯರ್ಸ್ ಮತ್ತು ಡೇವಿಡ್ ಒಂದು ಅನುಭವವನ್ನು ವಿವರಿಸಿದ್ದಾರೆ. ಇದರಲ್ಲಿ ಹೊರಗಿನ ಬೇಡದ ಶಬ್ದಗಳು ಯಾವುವೂ ಒಳಗೆ ಬರದಂತೆ ಭದ್ರಪಡಿಸಿದ ಕೋಣೆಯಲ್ಲಿ ಗುರುತಿಸಿದ ಒಂದು ಭಾಗದಲ್ಲಿ ಶ್ರಾವಕವನ್ನು ನಿಲ್ಲಿಸಲಾಯಿತು. ಆಗ ಸಮದೂರದಲ್ಲಿರಿಸಿದ ಎರಡು ಧ್ವನಿವರ್ಧಕಗಳಲ್ಲಿ ಎರಡು ಧ್ವನಿಗಳನ್ನು ಅವೆರಡೂ ಒಂದು ಇನ್ನೊಂದರ ಋಣರೂಪವಾಗಿರುವಂತೆ ಉಂಟುಮಾಡಿದಾಗ ಶ್ರಾವಕನಿಗೆ ಹೊರಗೆ ಯಾವ ಶಬ್ದಮೂಲವೂ ಇಲ್ಲ, ಧ್ವನಿ ತನ್ನ ತಲೆಯೊಳಗೇ ಹುಟ್ಟುತ್ತಿದೆ ಎಂದು ಭಾಸವಾಗುತ್ತದೆ. ಧ್ವನಿ ಹೀಗೆ ಹೇಳಿತು. "ಎರಡನೆಯ ಅಂತಾರಾಷ್ಟ್ರೀಯ ಶಬ್ದಸಮ್ಮೇಳನದ ಸದಸ್ಯರೆ, ನಾನು ಸಮ್ಮೇಳನದ ಉಸಿರು(ಸ್ಪಿರಿಟ್). ನಾನೆಲ್ಲಿರುವೆನೋ ನಿಮಗೆ ತಿಳಿಯದು. ನಾನು ನಿಮ್ಮ ಅವಿಶ್ರಾಂತವಾಗಿ ದುಡಿಯುತ್ತಿರುವ ಮನಸ್ಸಿನಲ್ಲಿ ಉಲಿಯುತ್ತಿದ್ದೇನೆ" ಎಂದು. ಶಬ್ದ ಎಷ್ಟು ದೂರದಿಂದ, ಯಾವ ದಿಕ್ಕಿನಿಂದ ಜನಿಸಿ ಬರುತ್ತದೆ ಎಂದು ಗುರುತಿಸಲು ಎರಡು ಕಿವಿಗಳೂ ಆವಶ್ಯಕ. ಅಷ್ಟೇ ಅಲ್ಲದೆ ನಮಗೆ ತಿಳಿಯದ ಹಾಗೆಯೇ ತಲೆ ಅತಿಸ್ವಲ್ಪ ಪ್ರಮಾಣದಲ್ಲಿ ಚಲಿಸುವುದೂ ಈ ಕಾರ್ಯದಲ್ಲಿ ನೆರವಾಗುತ್ತದೆ. ಎರಡು ಕಿವಿಗಳನ್ನೂ ತಲಪುವ ಶಬ್ದಗಳು ಘೋಷದಲ್ಲಿ ಹೊಂದಿರುವ ವ್ಯತ್ಯಾಸ ಶಬ್ದದ ದಿಕ್ಕು ಮತ್ತು ದೂರಗಳನ್ನು ಗುರುತಿಸಲು ಅತಿಮುಖ್ಯವಾದ ಸಾಧನ. ಪ್ರಾಣಿಗಳ, ಅದರಲ್ಲಿಯೂ ಮಾನವನ ಶ್ರವಣಶಕ್ತಿಯೂ ಅದರ ವಿವರಗಳೂ ನಾವು ವಿಚಾರಿಸಿದಷ್ಟೂ ಹೆಚ್ಚುಹೆಚ್ಚಾದ ವಿಸ್ಮಯಕಾರಕವಾದ ಹೊಸ ವಿವರಗಳನ್ನೂ ಹೊಸ ಸಮಸ್ಯೆಗಳನ್ನೂ ಒದಗಿಸುತ್ತವೆ. ಈ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಿನ ಪರಿಮಾಣದಲ್ಲಿ ಇಂದಿಗೂ ಸಂಶೋಧನೆಗಳು ನಡೆಯುತ್ತಿವೆ.

**5. ಕಿವುಡು ಮತ್ತು ಅದರ ನಿವಾರಣೋಪಾಯಗಳು :** ಕೇಳುವಿಕೆಯ ಯಾಂತ್ರಿಕ ವಿಧಾನದಲ್ಲಿ ಯಾವ ಘಟ್ಟದಲ್ಲಿ ಅವ್ಯವಸ್ಥೆ ಉಂಟಾದರೂ ಕಿವುಡು ಉಂಟಾಗುತ್ತದೆ. ಹಾಗೆ ಉಂಟಾದ ಕಿವುಡು ಪೂರ್ಣವಾಗಿರಬಹುದು ಅಥವಾ ಆಂಶಿಕವಾಗಿರಬಹುದು. ಕಿವುಡು ಒಂದೇ ಕಿವಿಯಲ್ಲಿರಬಹುದು ಇಲ್ಲವೇ ಎರಡು ಕಿವಿಗಳಿಗೂ ವ್ಯಾಪಿಸಿ ಇರಬಹುದು. ಕಿವುಡು ಹುಟ್ಟಿದಂದಿನಿಂದ ಪ್ರಾಪ್ತವಾಗಿರಬಹುದು ಇಲ್ಲವೇ ಆ ಮೇಲೆ ಉಂಟಾಗಿರಬಹುದು. ಹುಟ್ಟು ಕಿವುಡು ಸಾಧಾರಣವಾಗಿ ಶಬ್ದಘೋಷಮಟ್ಟ ಕಡಿಮೆ ಇರುವ ಶಬ್ದಗಳಿಗೆ ಕಂಡುಬಂದು ಅಂಥವರಲ್ಲಿ ಬೇರೆಯವರು ಆಡಿದ ಮಾತನ್ನು ಕೇಳಿ ಅರ್ಥ ಮಾಡಿಕೊಳ್ಳುವುದು ಪ್ರಯಾಸವಾಗಿರುತ್ತದೆ. ನಡುಗಿವಿ ಅಥವಾ ಒಳಗಿವಿ ಭ್ರೂಣಾವಸ್ಥೆಯಲ್ಲಿ ಸರಿಯಾಗಿ ಬೆಳೆಯದೇ ಇರುವುದರಿಂದ ಹುಟ್ಟು ಕಿವುಡು ಪ್ರಾಪ್ತವಾಗುತ್ತದೆ. ಗರ್ಭಿಣಿಯರಿಗೆ ರೂಬೆಲ್ಲ ಎಂಬ ದಡಾರದಂಥ ರೋಗ ಅಂಟಿದಾಗ ಗರ್ಭದೊಳಗಿರುವ ಶಿಶುವಿಗೆ ಆಗುವ ದುಷ್ಪರಿಣಾಮದಿಂದ ಸಾಮಾನ್ಯವಾಗಿ ಕಾಣಬರುವ ಸ್ಥಿತಿ ಇದು. ಆಮೇಲೆ ಪ್ರಾಪ್ತವಾಗುವ ಕಿವುಡಿಗೆ ಅನೇಕ ಕಾರಣಗಳಿವೆ. ಹೊರಗಿವಿಯ ನಾಳದಲ್ಲಿ ಗುಗ್ಗೆ ತುಂಬಿಕೊಂಡು ಅಥವಾ ಬೇರೆ ಬಾಹ್ಯವಸ್ತು ಒಳಹೊಕ್ಕು ಶಬ್ದದ ಗತಿಗೆ ಅಡಚಣೆಯುಂಟಾಗಿ ಶಬ್ದ ಕೇಳಿಸದೇ ಇರುವುದೂ, ನೆಗಡಿಯಾದಾಗ ಅಥವಾ ಗಣಿಯೊಳಕ್ಕೆ ಶೀಘ್ರವಾಗಿ ಒಯ್ಯಲ್ಪಟ್ಟಾಗ ಹೊರಗಿವಿ ಪೊರೆಯ ಇಕ್ಕಡೆಗಳಲ್ಲೂ ಒತ್ತಡವ್ಯತ್ಯಾಸವಿರುವುದರಿಂದ ಇದು ಸಹಜ ರೀತಿಯಲ್ಲಿ ಕಂಪಿಸುವುದಕ್ಕೆ ಅಡಚಣೆಯುಂಟಾಗಿ ಕೇಳಿಸದೆ ಇರುವುದೂ ಇವನ್ನು ಈಗಾಗಲೇ ಹೇಳಿದೆ. ನಡುಗಿವಿಯ ಮೂಳೆಗಳ ವ್ಯಾಧಿಯಿಂದ ಮತ್ತು ಇದೇ ಕಾರಣವಾಗಿ, ಅಥವಾ ನೇರವಾದ ಆಘಾತದಿಂದ ಹೊರಗಿವಿಪೊರೆ ಅಗಲವಾಗಿ ತೂತುಬಿದ್ದಾಗ ಶಬ್ದತರಂಗಗಳು ಒಳಗಿವಿಗೆ ವರ್ಗಾವಣೆ ಆಗುವುದಕ್ಕೆ ಕಷ್ಟಸಾಧ್ಯವಾಗಿ ಕೇಳುವುದಕ್ಕೆ ಧಕ್ಕೆಯಾಗಬಹುದು. ಕಡಾಯಿಪಾತ್ರೆ, ಸಿಮೆಂಟು ಮುಂತಾದವನ್ನು ತಯಾರು ಮಾಡುವ ಕಡೆ ನಿರಂತರವಾದ ಅಗಾಧಶಬ್ದದಿಂದ ಅಥವಾ ಒಳಗಿವಿಯ ಸೋಂಕು ರೋಗದಿಂದ ಬೇಸಿಲಾರ್ ಪೊರೆಯ ಭಾಗಗಳು ಕ್ರಮೇಣ ಅವನತಿಹೊಂದುವುದರಿಂದ ಕಿವುಡು ಸಂಭವಿಸಬಹುದು. ಸ್ಟ್ರೆಪ್ಟೋಮೈಸಿನ್ ಮುಂತಾದ ಔಷಧಗಳ ಗೌಣ ಕ್ರಿಯೆಯಿಂದ ಶ್ರವಣನರ ದುರ್ಬಲಗೊಂಡು ಕೇಳುವಿಕೆಯ ಅವ್ಯವಸ್ಥೆಯುಂಟಾಗಬಹುದು. ಆಘಾತದಿಂದ ತಲೆಚಿಪ್ಪು ಒಡೆದಾಗ ಮತ್ತು ಮೆನಿಂಜೈಟಿಸ್, ಮಿದುಳಿನ ಬಾವು ಇವುಗಳಿಂದ ಶ್ರವಣನರಾಘಾತ ಅಥವಾ ಅವ್ಯವಸ್ಥೆಯಾಗಿ ಕಿವುಡಾಗಬಹುದು. ಒಳಗಿವಿ, ಶ್ರವಣನರ ಅಥವಾ ಸಂಬಂಧಪಟ್ಟ ಮಿದುಳಿನ ಘಾತ ಅವ್ಯವಸ್ಥೆಗಳಿಂದುಂಟಾದ ಕಿವುಡು ಅನಿವಾರ್ಯ. ನಡುಗಿವಿ, ಒಳಗಿವಿಯ ಅವ್ಯವಸ್ಥೆಯಿಂದ ಅತಿಕಿವುಡಾಗಿದ್ದರೆ ಕೇಳುವಿಕೆಯನ್ನು ಉತ್ತಮಪಡಿಸಿಕೊಳ್ಳಲು ಕೃತಕಸಾಧನಗಳನ್ನು ಉಪಯೋಗಿಸಬೇಕು. ಹಾಗಿಲ್ಲದೆ ಕೇಳುವಿಕೆಯ ಲೋಪ ಮುಂದುವರಿಯುವುದಕ್ಕೆ ಬಿಟ್ಟರೆ ಕಾಲಕ್ರಮದಲ್ಲಿ ಅನೇಕ ವೇಳೆ ಅದು ಮಾನಸಿಕ ಬದಲಾವಣೆಗಳನ್ನೂ ಮಾಡಬಹುದು. ಶೈಶವಾವಸ್ಥೆಯಲ್ಲಿ ಕಿವುಡುಂಟಾದರೆ ಅಂಥ ಕಿವುಡು ಶಿಶುಗಳು ಅನೇಕ ವೇಳೆ ತಕ್ಕ ಚಿಕಿತ್ಸೆ, ತಯಾರಿಕೆಯನ್ನು ಕೊಟ್ಟರೆ, ಬಹುಬುದ್ಧಿವಂತರಾಗಿ ದೊಡ್ಡವರಾದಮೇಲೆ ಉಪಯುಕ್ತ ಜೀವನವನ್ನು ನಡೆಸಬಲ್ಲವರಾಗಿರುತ್ತಾರೆ. ಏಕೆಂದರೆ ಅನೇಕರು ವಾಸ್ತವವಾಗಿ ಮೂಕರಾಗಿರುವುದಿಲ್ಲ.

ಕೇಳುವಿಕೆಯನ್ನು ಉತ್ತಮಪಡಿಸಲು ಉಪಯೋಗಿಸುವ ಕೃತಕ ಸಾಧನಗಳನ್ನು ಸಾಮಾನ್ಯವಾಗಿ ಹೊರಗಿವಿನಾಳದೊಳಗೆ ಅಳವಡಿಸಬೇಕಾಗುತ್ತದೆ. ಈ ಸಾಧನಗಳು, ಮೂಳೆಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಅಥವಾ ಗಾಳಿಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಎರಡು ರೀತಿಯವಾಗಿರುತ್ತವೆ. ಸ್ವಾಭಾವಿಕವಾಗಿಯೇ ಗಾಳಿಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಸಾಧನಗಳು ಉತ್ತಮ ರೀತಿಯವು. ಈ ಕೃತಕ ಸಾಧನಗಳು ಸಾಮಾನ್ಯವಾಗಿ ಸಂಭಾಷಣೆ ಧ್ವನಿಯ ಶ್ರುತಿಮಟ್ಟದಲ್ಲಿ ಧ್ವನಿಯ ಘೋಷವನ್ನು ವರ್ಧಿಸಿ ನಡುಗಿವಿಯ ಗಾಳಿಯಲ್ಲಿ ಅದೇ ರೀತಿ ವರ್ಧಿಸಿದ ಕಂಪನವನ್ನುಂಟುಮಾಡಿಯೋ ಅಥವಾ ಅಂಥ ವರ್ಧಿತವಾದ ಕಂಪನವನ್ನು ಒಳಗಿವಿ ಇರುವ ಮೂಳೆಗೆ ವರ್ಗಾವಣೆ ಮಾಡಿಯೋ ಕೇಳುವಿಕೆಯನ್ನು ಉತ್ತಮಪಡಿಸುತ್ತವೆ. ಅಂಡಾಕಾರದ ಪೊರೆ ಕಂಪಿಸಬಲ್ಲುದೇ ಆಗಿದ್ದರೆ ಗಾಳಿವಾಹಕತೆಯನ್ನು ಉಪಯೋಗಿಸಿಕೊಳ್ಳುವ ಸಾಧನಗಳೇ ಬಹು ಉಪಯುಕ್ತವಾದವು. ಅಂಡಾಕಾರದ ಪೊರೆ ಕಂಪನಗೊಳ್ಳುವ ಸ್ಥಿತಿಯಲ್ಲಿಲ್ಲದಿದ್ದರೆ ಮೂಳೆಯ ಶಬ್ದವಾಹಕತೆಯನ್ನು ಉಪಯೋಗಿಸಿಕೊಳ್ಳುವ ಸಾಧನವನ್ನೇ ಬಳಸಬೇಕಾಗುತ್ತದೆ. ಇಲ್ಲದಿದ್ದರೆ ಶಸ್ತ್ರಚಿಕಿತ್ಸೆಯಿಂದ ಅಂಡಾಕಾರದ ಪೊರೆ ಪುನಃ ಕಂಪನಗೊಳ್ಳುವ ಅನುಕೂಲತೆಯನ್ನು ಉಂಟುಮಾಡಬೇಕು. ಇದೂ ಇಲ್ಲದಿದ್ದರೆ ಬೇರೆಯೇ ಒಂದು ಪೊರೆಯನ್ನು ವೆಸ್ಟಿಬ್ಯುಲರ್ ನಳಿಕೆಯಲ್ಲಿ ಕೃತಕವಾಗಿ ಅಳವಡಿಸಿ ಕಂಪನವರ್ಗಾವಣೆಗೆ ಅನುಕೂಲ ಮಾಡಿಕೊಡಬೇಕು. ಕೃತಕ ಉಪಕರಣವನ್ನು ಉಪಯೋಗಿಸಿದಾಗ ಯಾವ ವಿಧವಾದ ಸಾಧನವನ್ನು ಉಪಯೋಗಿಸಿದರೆ ಕೇಳುವಿಕೆ ಅತ್ಯಂತ ಉಪಯುಕ್ತತೆಯನ್ನು ಪಡೆಯುತ್ತದೆ ಎನ್ನುವುದನ್ನು ತಿಳಿಯಬೇಕಾದರೆ ಕೇಳುವಿಕೆ ಆ ವ್ಯಕ್ತಿಯಲ್ಲಿ ಎಷ್ಟರಮಟ್ಟಿಗೆ ಲೋಪವಾಗಿದೆ ಎನ್ನುವುದನ್ನು ಅರಿಯಬೇಕು. ಇದನ್ನು ಶ್ರವಣಮಾಪಕ (ಆಡಿಯೋಮೀಟರ್) ಎಂಬ ಯಂತ್ರದಿಂದ ತಿಳಿಯಲಾಗುತ್ತದೆ.

ಶ್ರವಣಮಾಪನವನ್ನು ಶುದ್ಧಸ್ವರ ಶ್ರವಣಮಾಪನ ಮತ್ತು ಆಡುಮಾತಿನ ಶ್ರವಣಮಾಪನ ಎಂದು ಎರಡು ರೀತಿಯಲ್ಲಿ ಮಾಡುತ್ತಾರೆ. ಶುದ್ಧ ಸ್ವರ ಶ್ರವಣಮಾಪಕದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಯಾವ ಆವರ್ತಾಂಕದ ಶುದ್ಧ ಸ್ವರವನ್ನಾದರೂ ಎಷ್ಟು ಘೋಷಮಟ್ಟದಲ್ಲಿ ಯಾದರೂ ಉತ್ಪತ್ತಿಮಾಡಬಹುದು; ಒಂದು ಆವರ್ತಾಂಕದ ಶಬ್ದ ಒಂದು ಕಿವುಡು ವ್ಯಕ್ತಿಗೆ ಕೇಳಿಸಬೇಕಾದರೆ ಆ ಸ್ವರದ ಘೋಷ ಎಷ್ಟು ಮಟ್ಟಿಗಿರಬೇಕು ಎಂದು ಈ ಯಂತ್ರದಿಂದ ನಿಷ್ಕರ್ಷಿಸಿ ಅದನ್ನು ಸಹಜ ಶ್ರವಣಶಕ್ತಿಗೆ ಹೋಲಿಸಿ ಕಿವುಡಿನ ಪರಿಮಿತಿಯನ್ನು ತಿಳಿಯಬಹುದು. ಈ ಶ್ರುತಿಮಟ್ಟದಲ್ಲಿ ಶಬ್ದಘೋಷವನ್ನು ಸಾಕಾದಷ್ಟುಮಟ್ಟಿಗೆ ವರ್ಧಿಸಿ ಕೇಳುವಿಕೆಯನ್ನು ಉತ್ತಮಪಡಿಸಬಲ್ಲ ಸಾಧನವನ್ನು ಉಪಯೋಗಿಸಬೇಕು. ಕೇಳುವಿಕೆಯನ್ನು ಉತ್ತಮಪಡಿಸಬಲ್ಲ ಸಾಧನ ಪ್ರಾರಂಭದಲ್ಲಿ ಕಿವಿಯೊಳಗೆ ಸಿಕ್ಕಿಸಿಕೊಳ್ಳಬಹುದಾದ ತುತ್ತೂರಿಯಾಕಾರದ ಕೊಳವೆಯಂತೆ ಇದ್ದವು. ಇದು ಆದಷ್ಟು ಹೆಚ್ಚು ಶಬ್ದತರಂಗಗಳನ್ನು ಸಂಗ್ರಹಿಸಿ ಕಿವಿಗೆ ಒಯ್ದು ಕೇಳುವಿಕೆಯನ್ನು ಉತ್ತಮಪಡಿಸಬಹುದಾದ ಒರಟು ಸಾಧನ. ಆದರೆ ಇದು ಅಷ್ಟು ಉಪಯುಕ್ತವಲ್ಲ. ಈಚಿನ ಕೃತಕ ಸಾಧನಗಳೆಲ್ಲವೂ ಶಬ್ದಘೋಷಮಟ್ಟವನ್ನು ವರ್ಧಿಸುವಂಥವೇ. 1930–35ರ ತನಕ ಇದ್ದ ಈ ಕೃತಕ ಸಾಧನಗಳು ಹೆಚ್ಚು ಕಡಿಮೆ, ಕಿವಿಯ ಒಳಗೇ ಇಡಬಹುದಾದ ಪುಟ್ಟ ಟೆಲಿಫೋನ್‌ಗಳು. ಆದರೆ ಇವುಗಳಲ್ಲಿ ಶಬ್ದಘೋಷವೂ ವೃದ್ಧಿಯಾಗುತ್ತಿತ್ತು. ಸುಮಾರು 1930–50ರ ತನಕ ಇದ್ದ ಕೃತಕ ಸಾಧನಗಳು, ಶಬ್ದತರಂಗವನ್ನು ವೃದ್ಧಿ ಮಾಡಲು ರೇಡಿಯೋನಲ್ಲಿರುವ ವಾಲ್ವ್‌ಗಳಂಥ ಸಣ್ಣ ವಾಲ್ವ್ ಗಳನ್ನು ಉಪಯೋಗಿಸಿ ಪರಿಣಮಿಸುವ ವರ್ಧಿತಕಂಪನ ನಡುಗಿವಿಯ ಗಾಳಿಯನ್ನೋ ಒಳಗಿವಿ ಇರುವ ತಲೆ ಚಿಪ್ಪಿನ ಭಾಗವನ್ನೋ ಕಂಪನಗೊಳಿಸಬಹುದಾಗಿ ಮಾಡಲ್ಪಟ್ಟಿದ್ದವು. 1950ರಿಂದ ಈಚಿನ ಕೃತಕ ಶ್ರವಣಸಹಾಯಕ ಸಾಧನಗಳು ಟ್ರಾನ್‌ಸಿಸ್ಟರ್ ಮತ್ತು ಆಯಸ್ಕಾಂತವುಳ್ಳ ಮೈಕ್ರೋಫೋನನ್ನು ಬಳಸುವುದರಿಂದ, ಅವಕ್ಕೆ ಬೇಕಾದ ವಿದ್ಯುತ್ ಜನಕ ಕೋಶವನ್ನೂ ಒಳಗೊಂಡು ಅವು 5.08ಸೆಂ.ಮೀ × 2.54ಸೆಂ.ಮೀ × 1.27ಸೆಂ.ಮೀ ಗಾತ್ರದಲ್ಲಿ ತಯಾರಾಗುತ್ತಿವೆ. ಇವು ಇನ್ನೂ ಅನುಕೂಲವಾಗಿ ಮಾಡಲ್ಪಟ್ಟಿವೆ. ಇವನ್ನು ಕನ್ನಡಕದ ಫ್ರೇಮಿನಲ್ಲಿ ಕೂಡ ಗುಟ್ಟಾಗಿ ಅಳವಡಿಸಬಹುದು. **(ನೋಡಿ– ಕಿವುಡರ–ಶಿಕ್ಷಣ; ಕಿವುಡು–ಮತ್ತು ಅರೆಗಿವುಡು; ಕೇಳುವಿಕೆಗೆ ಸಹಾಯಕಗಳು.**

(ಎಸ್.ಆರ್.ಆರ್. ; ಎನ್.ಕೆ.ಎಸ್.)

**ಕೇಳುವಿಕೆಗೆ ಸಹಾಯಕಗಳು :** ಕೇಳುವಿಕೆ ಮಂದವಾಗಿರುವವರಿಗೆ ಒದಗಿಸುವ ಉಪಕರಣಗಳು (ಹಿಯರಿಂಗ್ ಏಡ್ಸ್). ಮಾನವನ ಶ್ರವಣೇಂದ್ರಿಯ ಹಲವು ಕಾರಣಗಳಿಂದ ಸರಿಯಾಗಿ ಕೆಲಸಮಾಡದೇ ಇರಬಹುದು. ಇದರ ಪರಿಣಾಮ ಕಿವುಡು. ಇದರಿಂದ ಕೇಳುವಿಕೆ ಮಂದವಾಗಿ ಇತರರಿಗೆ ಸಹಜವಾಗಿ ಕೇಳಿಸುವ ಶಬ್ದಗಳು ಕಿವುಡನಿಗೆ ಕ್ಷೀಣವಾಗಿ ಭಾಸವಾಗುತ್ತವೆ. ಅವನನ್ನು ಮಾತನಾಡಿಸುವಾಗ ಇತರರು ಗಟ್ಟಿಯಾಗಿ ಕಿರುಚಬೇಕಾಗುತ್ತದೆ; ಅವನ ಮಾತುಗಾರಿಕೆಯೂ ಹದಗೆಡುವುದುಂಟು. ಕಿವುಡಿನ ಅನನುಕೂಲತೆಯನ್ನು ನಿವಾರಿಸಲು ಶಸ್ತ್ರಚಿಕಿತ್ಸೆ ಮತ್ತು ಔಷಧೋಪಚಾರಗಳ ಜೊತೆಗೆ ಕೇಳುವಿಕೆಗೆ ಸಹಾಯಕಗಳಾದ ಹಲವಾರು




ಚಿತ್ರ 1 ನಾಲ್ಕು ಟ್ರಾನ್ಸಿಸ್ಟರ್‌ಗಳ ಶ್ರವಣ ಸಹಾಯಕ. ಚಿತ್ರದಲ್ಲಿ M- ಮೈಕ್ರೊಫೋನ್, T–ಇಯರ್ ಫೋನ್, R–ರೆಸಿಸ್ಟರ್, C–ಕೆಪಾಸಿಟರ್, OC 57, OC 58, OC 59, OC 60 ಟ್ರಾನ್ಸಿಸ್ಟರ್‌ಗಳು

ಉಪಕರಣಗಳು ಸಹ ನೆರವಾಗುತ್ತವೆ. ಇವು ಶಬ್ದಗಳನ್ನು ಬೃಹತ್ಕರಿಸಿ ಕಿವಿಯಲ್ಲಿ ಹೊರಭಾಗಕ್ಕೆ ಹೊಗಿಸುತ್ತವೆ. ಶ್ರವಣಸಹಾಯಕಗಳ ನಿರ್ಮಾಣಕ್ಕೆ ಮೊದಲು ಕಿವುಡರು ಕೊಂಬು, ಕೊಳವೆ ಇತ್ಯಾದಿಗಳನ್ನು ಉಪಯೋಗಿಸಿ ಶಬ್ದ ಹೆಚ್ಚಾಗಿ ಚದರಿಹೋಗದೆ ಕಿವಿಯನ್ನೇ ಹೆಚ್ಚಿನ ಸಾಂದ್ರತೆಯಿಂದ ಪ್ರವೇಶಿಸುವಂತೆ ಮಾಡುವುದರಿಂದ ಸ್ವಲ್ಪ ಪ್ರಯೋಜನವನ್ನು ಹೊಂದುತ್ತಿದ್ದರು. ಈ ಸಾಧನಗಳೂ 1936ರ ಸುಮಾರಿನಿಂದ ಉಪಯೋಗಕ್ಕೆ ಬಂದ ಶ್ರವಣಸಹಾಯಕ ನಳಿಗೆ (ಹಿಯರಿಂಗ್ ಏಡ್ ಟ್ಯೂಬ್) ಎಂಬ ಹೆಸರಿನ ಕಿರುಬೆರಳಿಗಿಂತ ಸಣ್ಣದಾದ ಎಲೆಕ್ಟ್ರಾನ್ ವಾಲ್ವ್‌ಗಳನ್ನು ಉಪಯೋಗಿಸಿಕೊಂಡು ನಿರ್ಮಿತವಾದ ಶ್ರವಣಸಹಾಯಕಗಳೂ ಈಗ ಮರೆಯಾಗಿವೆ. 1948ರಿಂದ ಈಚೆಗೆ ಟ್ರಾನ್ಸಿಸ್ಟರ್‌ಗಳಿಂದ ತಯಾರಿಸಲ್ಪಡುವ ಲಘುತರವಾದ ಅತಿ ಸಣ್ಣ ಶ್ರವಣಸಹಾಯಕಗಳು ಬಳಕೆಗೆ ಬಂದಿವೆ.

**ರಚನೆ :** ಶ್ರವಣಸಹಾಯಕದಲ್ಲಿ ಮೂರು ಭಾಗಗಳಿವೆ. ಎಲ್ಲ ಭಾಗಗಳೂ ಚಿಕ್ಕದಾಗಿ ಹಗುರವಾಗಿರಬೇಕಾದುದು ಅಗತ್ಯ. ಮೊದಲ ಭಾಗ ಮೈಕ್ರೋಫೋನ್, ತನ್ನ ಮೇಲೆ ಬೀಳುವ ಶಬ್ದವನ್ನು ತದ್ರೂಪವಾದ ವಿದ್ಯುತ್ ವಿಭವಗಳನ್ನಾಗಿ ಪರಿವರ್ತಿಸುವುದೇ ಮೈಕ್ರೋಫೋನಿನ ಕರ್ತವ್ಯ. ಹೀಗೆ ಜನಿತವಾದ ವಿದ್ಯುತ್ ವಿಭವಗಳನ್ನು ಪ್ರವರ್ಧಕ (ಆಂಪ್ಲಿಫೈಯರ್) ದೊಡ್ಡದನ್ನಾಗಿಸಿ ಇಯರ್‌ಫೋನಿನಲ್ಲಿ ಹಾಯಿಸುತ್ತದೆ. ಕಿವಿಯಲ್ಲಿ ಧರಿಸಲಾಗುವ ಇಯರ್‌ಫೋನ್ ವಿದ್ಯುತ್ಪ್ರವಾಹವನ್ನು ಮತ್ತೆ ಶಬ್ದವನ್ನಾಗಿ ಪರಿವರ್ತಿಸಿ ಕಿವಿಯ ಒಳಗೆ ಕಳುಹಿಸುತ್ತದೆ. ಹೀಗೆ ಶ್ರವಣ ಸಹಾಯಕ ಶಬ್ದವನ್ನು ಆಯ್ದು ದೊಡ್ಡದನ್ನಾಗಿ ಮಾಡಿ ಕಿವಿಗೆ ಮುಟ್ಟಿಸುತ್ತದೆ. ಇಯರ್‌ಫೋನಿನ ರಚನೆಯೂ ಮೈಕ್ರೋಫೋನಿನದರ ಹಾಗೆಯೇ ಇರುತ್ತದೆ. ಇದು ಮಾಡುವ ಕೆಲಸ ಮಾತ್ರ ತದ್ವಿರುದ್ಧ.

**ಇಯರ್‌ಫೋನಿನಲ್ಲಿ ಎರಡು ಬಗೆ :** ವಾಯುವಾಹಕ, ಅಸ್ಥಿವಾಹಕ. ವಾಯುವಾಹಕ ಇಯರ್ ಫೋನನ್ನು ಕಿವಿಯಲ್ಲಿ ಧರಿಸುತ್ತಾರೆ. ಇದು ಶಬ್ದವನ್ನು ಕಿವಿಯ ಒಳಭಾಗಕ್ಕೆ ತಲುಪಿಸುತ್ತದೆ. ಒಳಗಿವಿಯ ದೋಷಗಳ ನಿವಾರಣೆಗೆ ಈ ವಿಧಾನ ಬಲು ಸೂಕ್ತ. ಸಾಮಾನ್ಯವಾಗಿ ಇಂಥ ಇಯರ್‌ಫೋನ್ ಹೆಚ್ಚಾಗಿ ಬಳಕೆಯಲ್ಲಿದೆ. ಅಸ್ಥಿವಾಹಕ ಇಯರ್‌ಫೋನನ್ನು ಕಿವಿಯ ಹಿಂದೆ ಇರುವ ಒಂದು ಮೂಳೆಯ ಹೊರಭಾಗಕ್ಕೆ ಜೋಡಿಸುತ್ತಾರೆ. ಶಬ್ದದ ಕಂಪನಗಳು ಅಸ್ಥಿವಾಹಕ ಇಯರ್‌ಫೋನಿನಿಂದ ಮೂಳೆಯ ಮೂಲಕ ಗಾಳಿಯ ಮಾಧ್ಯಮವಿಲ್ಲದೆಯೇ ಒಳಗಿವಿಗೆ ರವಾನೆಯಾಗುತ್ತವೆ. ಹೊರಗಿವಿಯಲ್ಲಿ ದೋಷವಿದ್ದಾಗ ಅಥವಾ ಶ್ರವಣಮಾಪನ ಪರೀಕ್ಷೆಯಲ್ಲಿ ಅಸ್ಥಿವಾಹಕ ಶ್ರವಣಮಾತ್ರ ಚೆನ್ನಾಗಿದ್ದಾಗ ಅಸ್ಥಿವಾಹಕ ಇಯರ್‌ಫೋನ್ ಉಪಯೋಗಕ್ಕೆ ಬರುತ್ತದೆ. ಇದಕ್ಕೆ ಪ್ರವರ್ಧಕದಿಂದ ಹೆಚ್ಚಿನ ಶಕ್ತಿಯನ್ನು ಒದಗಿಸಬೇಕಾಗುತ್ತದೆ. ಮಧ್ಯಕಿವಿಯ ದೋಷಗಳಿಗೆ ಎರಡೂ ವಿಧದ ಇಯರ್‌ಫೋನುಗಳೂ ಉಪಯೋಗಿಯಾಗುತ್ತವೆ.




ಚಿತ್ರ 2 ಮೂರು ಟ್ರಾನ್ಸಿಸ್ಟರ್ ಮತ್ತು ಇತರ ಏಳು ಭಾಗಗಳನ್ನೊಳಗೊಂಡ ಶ್ರವಣ ಸಹಾಯಕ

ಶ್ರವಣಸಹಾಯಕದ ಗಾತ್ರವನ್ನು ಕುಗ್ಗಿಸುವ ಕಾರ್ಯ ನಡೆದೇ ಇದೆ. ಮೈಕ್ರೋಫೋನ್, ಇಯರ್‌ಫೋನ್‌ಗಳನ್ನು ಸಣ್ಣಗಾತ್ರದಲ್ಲಿ ತಯಾರಿಸಲಾಗಿದೆ. ಟ್ರಾನ್ಸಿಸ್ಟರ್‌ಗಳ ಉಪಯೋಗದಿಂದ ಪ್ರವರ್ಧಕದ ಗಾತ್ರವೂ ಸಣ್ಣದಾಗಿದೆ. ಎರಡನೆಯ ಮಹಾಯುದ್ಧದ ಮೊದಲಿನಲ್ಲಿ ಬಳಕೆಯಲ್ಲಿದ್ದ ಎಲೆಕ್ಟ್ರಾನ್ ನಳಿಗೆ ಶ್ರವಣ ಸಹಾಯಕಗಳಿಗೆ ಇಂದಿನ ಸಣ್ಣ ಪಾಕೆಟ್ ಟ್ರಾನ್ಸಿಸ್ಟರ್ ರೇಡಿಯೋಗಳ ಗಾತ್ರ ಇತ್ತು. ಇವಕ್ಕೆ 1½ ವೋಲ್ಟಿನ ಮತ್ತು 22 ವೋಲ್ಟಿನ ಎರಡು ಬ್ಯಾಟರಿಗಳ ಅಗತ್ಯವೂ ಇತ್ತು. ಟ್ರಾನ್ಸಿಸ್ಟರ್ ಪ್ರವರ್ಧಕ ಸಣ್ಣದಾಗಿರುವುದು ಮಾತ್ರವಲ್ಲ ಇದು ಬಳಸುವ ವಿದ್ಯುಚ್ಛಕ್ತಿಯೂ ಅತ್ಯಲ್ಪ. ಗುಂಡಿಯಷ್ಟೆ ಸಣ್ಣದಾದ ಮತ್ತು ಹೆಚ್ಚಿನ ಜೀವಿತಾವಧಿ ಇರುವ 1–3 ವೋಲ್ಟಿನ ಪಾದರಸದ ಸೆಲ್‌ಗಳನ್ನು ಇವುಗಳಲ್ಲಿ ಉಪಯೋಗಿಸುತ್ತಾರೆ.

ಫಿಲಿಪ್ಸ್ ಸಂಸ್ಥೆಯವರು ತಮ್ಮ ಫಿಲಿಪ್ಸ್ ಸೆಮಿಕಂಡಕ್ಟರ್ಸ್ (1962) ಎಂಬ ಕಿರುಹೊತ್ತಗೆಯಲ್ಲಿ ತೋರಿಸಿರುವ ಒಂದು ಶ್ರವಣಸಹಾಯಕದ ಮಂಡಲವನ್ನು ಚಿತ್ರ 1 ರಲ್ಲಿ ಕೊಡಲಾಗಿದೆ. ಇದರಲ್ಲಿ ನಾಲ್ಕು ಟ್ರಾನ್ಸಿಸ್ಟರ್‌ಗಳ ಸಹಾಯದಿಂದ ಮೈಕ್ರೋಫೋನ್‌ನಲ್ಲಿ ಜನಿತವಾದ (M) ವಿದ್ಯುತ್ಪ್ರವಾಹಗಳನ್ನು ನಾಲ್ಕು ಹಂತಗಳಲ್ಲಿ ಪ್ರವರ್ಧಿಸಿ ಕೊನೆಗೆ ಇಯರ್‌ಫೋನ್ Tನಲ್ಲಿ ಶಬ್ದವನ್ನು ಉಂಟುಮಾಡಲಾಗುತ್ತದೆ. ಮುಲ್ಲಾರ್ಡ್‌ರವರ ರೆಫರೆನ್ಸ್ ಮ್ಯಾನ್ಯುಯಲ್ ಆಫ್ ಟ್ರಾನ್ಸಿಸ್ಟರ್ ಸರ್ಕ್ಯೂಟ್ಸ್ (1961) ಎಂಬ ಪುಸ್ತಕದಲ್ಲಿ ಮೂರು ಟ್ರಾನ್ಸಿಸ್ಟರ್, ಮೂರು ರೆಸಿಸ್ಟರ್ ಮತ್ತು ಒಂದು ಕೆಪಾಸಿಟರ್‌ಗಳನ್ನು ಉಪಯೋಗಿಸಿರುವ ಶ್ರವಣಸಹಾಯಕದ ಮಂಡಲ ಇದೆ (ಚಿತ್ರ 2). ಈ ಮಂಡಲದಲ್ಲಿ ಉಪಯೋಗಿಸಿರುವ ಟ್ರಾನ್ಸಿಸ್ಟರ್‌ಗಳೂ ಸಣ್ಣ ಗಾತ್ರದವೂ

(3–4ಮಿಮೀ. ಉದ್ದ 1–2 ಮಿಮೀ. ವ್ಯಾಸ). ಆದ್ದರಿಂದ ಇಡೀ ಪ್ರವರ್ಧಕವನ್ನೇ ಕನ್ನಡಕದ ಕಿವಿಯ ಮೇಲಿರುವ ಭಾಗದಲ್ಲಿಯೋ ತಲೆಗೂದಲಿನಲ್ಲಿ ಧರಿಸಿರುವ ಬ್ರೂಚಿನಲ್ಲಿಯೋ ಜೋಡಿಸಿರಬಹುದು. ಶ್ರವಣಸಹಾಯಕವನ್ನು ಧರಿಸಿರುವುದೇ ಗೋಚರವಾಗುವುದಿಲ್ಲ.

ಆವರ್ತಾಂಕಪ್ರತಿಕ್ರಿಯೆ (ಫ್ರೀಕ್ವೆನ್ಸಿ ರೆಸ್ಪಾನ್ಸ್) : ಪ್ರತಿ ಪ್ರವರ್ಧಕ್ಕೂ ಪ್ರತಿ ಟ್ರಾನ್ಸ್‌ಡ್ಯೂಸರಿಗೂ (ಶಕ್ತಿರೂಪಾಂತರಕಾರಕ) ತನ್ನದೇ ಆದ ಆವರ್ತಾಂಕ ಪ್ರತಿಕ್ರಿಯೆ ಉಂಟು. ಕಡಿಮೆ ಮೌಲ್ಯದ ಆವರ್ತಾಂಕದಿಂದ ಹೆಚ್ಚಿನ ಮೌಲ್ಯದವುಗಳವರೆಗೆ ವಿವಿಧ ಆವರ್ತಾಂಕಗಳ ಒಂದೇ ಮಟ್ಟದ ಶಕ್ತಿಯನ್ನು ಒಂದು ಸಾಧನಕ್ಕೆ ಒದಗಿಸಿದಾಗ ಅದು ಈ ಶಕ್ತಿಯನ್ನು ಯಾವ ಯಾವ ಆವರ್ತಾಂಕಗಳಲ್ಲಿ ಯಾವ ಯಾವ ಮಟ್ಟಕ್ಕೆ ಹಿಗ್ಗಿಸುವುದು ಅಥವಾ ಕುಗ್ಗಿಸುವುದು ಎಂಬುದನ್ನು ಅದರ ಆವರ್ತಾಂಕ ಪ್ರತಿಕ್ರಿಯೆ ತೋರಿಸುವುದು. ಸಾಮಾನ್ಯವಾಗಿ ಇದನ್ನು ಒಂದು ಗ್ರಾಫಿನ ಸಹಾಯದಿಂದ ಸೂಚಿಸಲಾಗುತ್ತದೆ x–ದಿಶೆಯಲ್ಲಿ ಆವರ್ತಾಂಕವನ್ನು (ಲಘುಗಣಕದ ಮಾನಕದಲ್ಲಿ) y– ದಿಶೆಯಲ್ಲಿ ಸಾಧನದ ಲಾಭವನ್ನೂ (dB ಅಥವಾ ವೋಲ್ಟೇಜ್ ರೂಪದಲ್ಲಿ) ಗುರುತಿಸಿದಾಗ ದೊರೆಯುವ ರೇಖೆಯೇ ಆವರ್ತಾಂಕ ಪ್ರತಿಕ್ರಿಯೆಯ ರೇಖೆ. ಮಾನವನ ಕಿವಿ ಸಾಮಾನ್ಯವಾಗಿ 20 ರಿಂದ 20,000 ಪ್ರತಿ ಸೆಕೆಂಡಿನ ಆವರ್ತಾಂಕದ ಶಬ್ದಗಳನ್ನು ಕೇಳಬಲ್ಲುದು. ಆದರೂ ಮಾತುಕತೆಗಳನ್ನು ವಿವರವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ 250–4,000 ಪ್ರತಿ ಸೆಕೆಂಡಿನ ಆವರ್ತಾಂಕದ ಶಬ್ದಗಳೇ ಸಾಕು. ಇದಕ್ಕಿಂತ ಕೆಳಗಿನ ಸಂಖ್ಯೆಯ ಶಬ್ದಗಳು ಶಬ್ದದ ಗುಣವನ್ನು ಮಾತ್ರ ಉತ್ತಮಗೊಳಿಸುತ್ತವೆ. ಹೆಚ್ಚಿನ ಆವರ್ತಾಂಕದ ಶಬ್ದಗಳಿಂದ ಹಿಸ್ ಕಾರದಿಂದ ಕೂಡಿದವು ಮಾತ್ರ ಉತ್ತಮಗೊಳ್ಳುತ್ತವೆ. ಸಂಗೀತದ ಗುಣವೂ ಆವರ್ತಾಂಕದ ವಿಸ್ತಾರದಿಂದ ಉತ್ತಮಗೊಳ್ಳುತ್ತದೆ. ಶ್ರವಣಸಹಾಯಕ 250–4,000 ಪ್ರತಿಸೆಕೆಂಡಿನ ಶಬ್ದಗಳಿಗೆ ಪ್ರತಿಕ್ರಿಯೆ ತೋರಿಸಿದರೆ ಸಾಕು.

ಆದರೆ ಯಾವುದೇ ಒಂದು ವ್ಯಕ್ತಿಗೆ ಬೇಕಾದ ಶ್ರವಣಸಹಾಯಕ ಎಂಥದೆಂದು ನಿರ್ಧರಿಸಲು ಮೊದಲು ಆ ವ್ಯಕ್ತಿಯ ಶ್ರವಣಲೇಖನವನ್ನು (ಆಡಿಯೋಗ್ರಾಂ) ಪಡೆಯಬೇಕು. ಶ್ರವಣಮಾಪಕ (ಆಡಿಯೋಮೀಟರ್) ಎಂಬ ಯಂತ್ರದ ಸಹಾಯದಿಂದ ವ್ಯಕ್ತಿಯ ಕಿವಿಗಳ ಆವರ್ತಾಂಕ ಪ್ರತಿಕ್ರಿಯೆಯನ್ನು ಕಂಡುಹಿಡಿಯಲಾಗುತ್ತದೆ. ಕಿವಿಗಳು ಯಾವ ಯಾವ ಆವರ್ತಾಂಕಗಳಿಗೆ ಎಷ್ಟು ಎಷ್ಟು ಚುರುಕಾಗಿವೆ ಎಂಬುದನ್ನು ಈ ಯಂತ್ರ ಅಳೆಯುತ್ತದೆ. ಯಾವ ಆವರ್ತಾಂಕಗಳಲ್ಲಿ ಎಷ್ಟರಮಟ್ಟಿನ ಶ್ರವಣನಷ್ಟ ಇದೆ ಎಂಬುದನ್ನು dBಗಳಲ್ಲಿ ತೋರಿಸುವ ಗ್ರಾಫನ್ನು ಶ್ರವಣಲೇಖನ ಎಂದು ಕರೆಯುತ್ತೇವೆ. ಶ್ರವಣನಷ್ಟ




ಎಲ್ಲ ಆವರ್ತಾಂಕಗಳಲ್ಲಿಯೂ ಒಂದೇ ಸಮವಾಗಿದ್ದರೆ ಎಷ್ಟರಮಟ್ಟಿಗೆ ಶ್ರವಣನಷ್ಟವಿದೆಯೋ ಅಷ್ಟೇ dBಯ ಲಾಭವನ್ನು ಎಲ್ಲ ಆವರ್ತಾಂಕಗಳಲ್ಲಿಯೂ ಸಮವಾಗಿ ಹೊಂದಿರುವ ಶ್ರವಣಸಹಾಯಕವನ್ನು ಉಪಯೋಗಿಸಬೇಕು (ಸಮಶ್ರುತಿಶ್ರವಣ ಸಹಾಯಕ). ಉದಾಹರಣೆಗೆ 50dBಯ ಕಿವುಡು ಎಲ್ಲ ಆವರ್ತಾಂಕಗಳಲ್ಲಿಯೂ ಇದ್ದರೆ ಆಗ 250ರಿಂದ 4,000 ಪ್ರತಿಸೆಕೆಂಡಿನ ಆವರ್ತಾಂಕಗಳ ನಡುವೆ ಎಲ್ಲ ಸಮವಾಗಿ 50dB ಲಾಭವನ್ನು ಹೊಂದಿರುವ ಶ್ರವಣ ಸಹಾಯಕವನ್ನು ಉಪಯೋಗಿಸಬೇಕು. ಕಿವಿಯಲ್ಲಿ ಉಚ್ಚ ಆವರ್ತಾಂಕಗಳಲ್ಲಿ ಶ್ರವಣನಷ್ಟವಿದ್ದರೆ ಅದೇ ಆವರ್ತಾಂಕಗಳಲ್ಲಿ ಹೆಚ್ಚಿನ ಲಾಭವನ್ನು ಹೊಂದಿರುವ ಶ್ರವಣಸಹಾಯಕವನ್ನು (ತಾರಶ್ರುತಿ ಶ್ರವಣಸಹಾಯಕ) ಉಪಯೋಗಿಸಬೇಕು. ನಿಮ್ನ ಆವರ್ತಾಂಕದ ಶ್ರವಣನಷ್ಟವನ್ನು ಹೊಂದಿರುವ ಕಿವಿಗೆ ನಿಮ್ನ ಆವರ್ತಾಂಕಗಳಲ್ಲಿ ಹೆಚ್ಚಿನ ಲಾಭವನ್ನು ಹೊಂದಿರುವ ಶ್ರವಣಸಹಾಯಕವನ್ನು (ಮಂದಶ್ರುತಿ ಶ್ರವಣಸಹಾಯಕ) ತೊಡಿಸಬೇಕು. ಎಲ್ಲ ತರಹೆಯ ಕಿವುಡಿಗೂ ಮಟ್ಟವಾದ ಆವರ್ತಾಂಕ ಪ್ರತಿಕ್ರಿಯೆಯ ಶ್ರವಣಸಹಾಯಕವನ್ನು ಉಪಯೋಗಿಸಿದರೆ ಶ್ರವಣನಷ್ಟವಿಲ್ಲದೆ ಇರುವ ಆವರ್ತಾಂಕದ ಶಬ್ದಗಳು ಅತಿ ಹೆಚ್ಚಿನ ಶಕ್ತಿಯಮಟ್ಟದಲ್ಲಿ ಕಿವಿಯನ್ನು ಪ್ರವೇಶಿಸಿ ಅಪಾಯವನ್ನು ಉಂಟುಮಾಡುತ್ತವೆ. ಆದ್ದರಿಂದ ಕಿವಿಯ ಮತ್ತು ಶ್ರವಣಸಹಾಯಕದ ಆವರ್ತಾಂಕ ಪ್ರತಿಕ್ರಿಯೆಗಳು ಪರಸ್ಪರ ಪೂರಕವಾಗಿರಬೇಕು (ಚಿತ್ರ 3 ನೋಡಿ).

ಶ್ರವಣಸಹಾಯಕದ ಲಾಭ : ಕಿವಿಯ ಶ್ರವಣನಷ್ಟ 30dB ಗಿಂತ ಕಡಿಮೆಯಾಗಿದ್ದರೆ ಶ್ರವಣಸಹಾಯಕ ಅಷ್ಟು ಉಪಯೋಗಕಾರಿಯಾಗಲಾರದು. ಏಕೆಂದರೆ ಅತಿ ನಿಶ್ಯಬ್ದವಾದ ಆವರಣಗಳನ್ನು ಬಿಟ್ಟರೆ ಇತರ ಸ್ಥಳಗಳಲ್ಲಿ ಸುತ್ತಮುತ್ತಲಿನ ಗದ್ದಲವೇ 30dB ಗಿಂತ ಹೆಚ್ಚಿನ ಶಕ್ತಿಯುಳ್ಳದ್ದಾಗಿರುತ್ತದೆ. ಶ್ರವಣಸಹಾಯಕದಲ್ಲಿಯೂ ಸುಮಾರು ಇದೆ ಮಟ್ಟದ ಗಲಭೆ ಜನಿಸುತ್ತಿರುತ್ತದೆ. ಆದ್ದರಿಂದ 30dB ಗಿಂತ ಕ್ಷೀಣವಾದ ಶಬ್ದಗಳು ಈ ಗಲಭೆಗಳಲ್ಲಿ ಮುಳುಗಿ ಹೋಗುವುವು. ಹೀಗೆಯೇ 95 dB ಗಿಂತ ಹೆಚ್ಚಿನ ಕಿವುಡು ಇದ್ದರೂ ಶ್ರವಣಸಹಾಯಕ ನಿರುಪಯೋಗಿಯಾಗುತ್ತದೆ. ಏಕೆಂದರೆ ಆಗ ಶ್ರವಣಸಹಾಯಕದ ಲಾಭ ಶಬ್ದವನ್ನು 120 dB ಗಿಂತ ಹೆಚ್ಚಿನದನ್ನಾಗಿ ಮಾಡುವುದರಿಂದ ಕಿವಿಯಲ್ಲಿ ನೋವು ಉಂಟಾಗುವುದೇ ಹೊರತು ಶಬ್ದ ಕೇಳಿಸುವುದಿಲ್ಲ. ಇದು ಯಾವ ಆವರ್ತಾಂಕದಲ್ಲಿಯೂ ಆಗಬಾರದು. ಆದ್ದರಿಂದ ಶ್ರವಣಸಹಾಯಕ 30 ರಿಂದ 95 dB ವರೆಗಿನ ಶ್ರವಣನಷ್ಟವನ್ನು ಮಾತ್ರ ತುಂಬಿಕೊಡುವುದು. ಶ್ರವಣಸಹಾಯಕದ ಪ್ರಯೋಜನವನ್ನು ಅಂದಾಜು ಮಾಡಲು ನಿಶ್ಯಬ್ದವಾದ ಕೋಣೆಯಲ್ಲಿ ಬೇರೆಬೇರೆ ಮಟ್ಟದ ಬೇರೆ ಆವರ್ತಾಂಕದ ಶುದ್ಧಸ್ವರದ ಶಬ್ದಗಳನ್ನು ಪ್ರಯೋಗಿಸಿ ರೋಗಿ ಈ ಶಬ್ದಗಳನ್ನು ಬರಿಯ ಕಿವಿಯಿಂದಲೂ ಶ್ರವಣಸಹಾಯಕದ ನೆರವಿನಿಂದಲೂ ಎಷ್ಟರಮಟ್ಟಿಗೆ ಕೇಳುವನೆಂಬುದನ್ನು ನೋಡಬಹುದು. ಇನ್ನೊಂದು ವಿಧಾನದಲ್ಲಿ ಮೊದಲೇ ನಿರ್ಧರಿತವಾದ ಪಟ್ಟಿಯೊಂದರಿಂದ ಪದಗಳನ್ನು ಓದಿ ಹೇಳಿದಾಗ ರೋಗಿ ಅವುಗಳಲ್ಲಿ ಎಷ್ಟನ್ನು ಸರಿಯಾಗಿ ಗ್ರಹಿಸುತ್ತಾನೆ ಎಂಬುದನ್ನು ಶ್ರವಣಸಹಾಯಕವನ್ನು ಧರಿಸಿರುವಾಗ, ಧರಿಸದೆ ಇರುವಾಗ ಪರಿಗಣಿಸಿ ಈ ಯಂತ್ರದ ಪ್ರಭಾವವನ್ನು ಅಳೆಯಬಹುದು.

ಮುಂದೆ ಸಂಯುಕ್ತಮಂಡಲ (ಇಂಟೆಗ್ರೇಟೆಡ್ ಸರ್ಕೀಟ್) ಎಂಬ ಹೊಸ ತಂತ್ರದಿಂದ ಶ್ರವಣಸಹಾಯಕವನ್ನು ಅತಿಹ್ರಸ್ವರೂಪಕ್ಕೆ ತರುವುದು ಸಾಧ್ಯವಾದೀತು. ಆಗ ಮೈಕ್ರೊಫೋನ್ ಮತ್ತು ಇಯರ್‌ಫೋನ್‌ಗಳೇ ಶ್ರವಣಸಹಾಯಕದ ಅತಿದೊಡ್ಡ ಭಾಗಗಳಾಗುತ್ತವೆ. (ಎನ್.ಕೆ.ಎಸ್)

ದೇಹ ವಿಜ್ಞಾನದ ದೃಷ್ಟಿಯಿಂದ ಹೇಳುವುದಾದರೆ ಸದ್ದು ಹಿಡಿತ, ಆವರ್ತಾಂಕಗಳ ಮಾರುವರ್ತನೆ, ಇಳುವರಿ–ಇವು ಕೇಳುವ ಸಾಧನಗಳ ಸುಗುಣಗಳು. ಇವುಗಳೊಂದಿಗೆ ರೋಗಿಯ ಕಿವುಡಿನ ಬಗೆ, ಪ್ರಮಾಣಗಳಿಗೆ ತಕ್ಕಂತೆ ಕೇಳುವ ಸಾಧನವನ್ನು ಆರಿಸಿಕೊಳ್ಳಬೇಕು. ಒಂಟಿಗಿವಿ ಕಿವುಡಿಗಾಗಿ ಬಳಸುವ ಕ್ರಾಸ್ ಮಾದರಿಯೊಂದು ಹೊಸದಾಗಿ ಬಂದಿದೆ. ಸಾಮಾನ್ಯವಾಗಿ ಶ್ರವಣತಜ್ಞರೋ ಕಿವಿವೈದ್ಯರೋ ಕಿವಿಗೇಳಿಸುವ ಪರೀಕ್ಷೆಗಳನ್ನು ಮಾಡಿ ಶ್ರವಣಸಾಧನಗಳನ್ನು ನಿಯಮಿಸುವರು. ಮೈಸೂರಿನ ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆಯಲ್ಲೂ ಈ ಏರ್ಪಾಡು ಉಂಟು.

ವಯಸ್ಸು, ಹೆಣ್ಣುಗಂಡು ಎಂಬ ಭೇದವೆಣಿಸದೆ ಕಿವುಡರೂ ಮಂದಗಿವಿಯವರೂ ಯಾರೇ ಆಗಿರಲಿ ಎಲ್ಲರೂ ಕೇಳುವ ಸಾಧನವನ್ನು ಹಾಕಿಕೊಳ್ಳಬೇಕು. ಒಬ್ಬೊಬ್ಬನಿಗೆ ಒಂದೊಂದು ತೆರನಾಗಿ ಅನುಕೂಲವಾದರೂ ಈ ಸಾಧನದಿಂದ ಎಲ್ಲರಿಗೂ ಅನುಕೂಲ ಇದ್ದೇ ಇರುವುದು. ಕೆಲವು ಬಗೆಗಳ ಕಿವುಡಿನಲ್ಲಿ ಇದನ್ನು ಹಾಕಿಕೊಂಡರೆ ಸುಖವಿಲ್ಲ. ಆ ನಿರ್ಧಾರವನ್ನು ಪರಿಣತರಿಗೆ ಬಿಡಬೇಕು. ಕಿವುಡ ಮಗುವಿನ ಕಲಿಕೆಗೆ ಕೇಳುವ ಸಾಧನ ಬಲು ಮುಖ್ಯ. ವೈದ್ಯದಿಂದಾಗಲಿ ಶಸ್ತ್ರಕ್ರಿಯೆಯಿಂದಾಗಲಿ ಸರಿಪಡಿಸಲಾಗದ ಕಿವುಡು ಗೊತ್ತಾದ ಮೇಲೆ ಮಗು ಯಾವಾಗಲೂ ಕೇಳುವ ಸಾಧನವನ್ನು ಹಾಕಿಕೊಂಡಿರಲೇಬೇಕು. ಮಗುವಿಗೆ ಬೇಕೆನಿಸಿದಾಗ ಅದಕ್ಕೆ ಇಲ್ಲವಾದರೆ ಕೇಳುವ ಸಾಧನ ಕೆಲಸಕ್ಕೆ ಬಾರದ್ದೆನಿಸುತ್ತದೆ. ಇಂದಿನ ಶಿಕ್ಷಣಪರಿಣತರ ಅಭಿಪ್ರಾಯದಲ್ಲಿ ಕಿವುಡಾಗಿರುವುದು ಗೊತ್ತಾದರೆ ಹಸುಗೂಸಿಗೂ ಕೇಳುವ ಸಾಧನವನ್ನು ಹಾಕಬೇಕು. (ಎಂ.ಎನ್.ವಿ.ಎಂ)

**ಕೈಕಸಿ :** ಬ್ರಹ್ಮಕುಲಸಂಭೂತನಾದ ಸುಕೇಶಿಯ ಮಗ ಸುಮಾಲಿ ಎಂಬ ರಾಕ್ಷಸನ ಮಗಳು. ರಾವಣನ ತಾಯಿ. ಕುಬೇರನ ಮಲತಾಯಿ. ಒಮ್ಮೆ ಸುಮಾಲಿ ಕೈಕಸಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ವಿಶ್ರವಸ ಮಹರ್ಷಿಯ ಆಶ್ರಮಕ್ಕೆ ಕರೆತಂದು ಆತನೇ ಅವಳ ಪತಿಯೆಂದೂ ಆತನ ಶುಶ್ರೂಷೆಯಲ್ಲಿ ನಿರತಳಾಗಿರಬೇಕೆಂದೂ ವಿಧಿಸಿ ಅವಳನ್ನು ಅಲ್ಲಿ ಬಿಟ್ಟುಹೋದ. ತಂದೆಯ ಆದೇಶದಂತೆ ಆಕೆ ಋಷಿಯ ಶುಶ್ರೂಷೆ ಮಾಡುತ್ತಿರಲು ಒಂದು ದಿನ ಬಹಿರ್ಮುಖನಾದ ಋಷಿ ಅವಳನ್ನು ಪ್ರಶ್ನಿಸಲಾಗಿ ಆಕೆ ತನ್ನ ಉದ್ದೇಶವನ್ನಾತನಿಗೆ ತಿಳಿಸಿದಳು. ಸಂಧ್ಯಾ ಸಮಯದಲ್ಲಿ

ಪುತ್ರಸಂತಾನವನ್ನು ಬಯಸಿದ್ದರಿಂದ ಆಕೆಯ ಹೊಟ್ಟೆಯಲ್ಲಿ ಹುಟ್ಟುವವರೆಲ್ಲರೂ ರಾಕ್ಷಸರಾಗುವರು ಎಂದು ಆ ಮಹರ್ಷಿ ನುಡಿದ. ಅಂತೆಯೇ ರಾವಣ, ಕುಂಭಕರ್ಣ, ವಿಭೀಷಣ ಶೂರ್ಪನಖಿಯರು ಜನಿಸಿದರು. *

**ಕೈಕಾಪು :** ಮಧ್ಯಯುಗದಲ್ಲಿ ವೀರ ಸರದಾರರೂ ಖಡ್ಗಮಲ್ಲರೂ ಸೈನಿಕರೂ ತೊಡುತ್ತಿದ್ದ ಕಬ್ಬಿಣದ ಕೈಚೀಲ (ಗಾಂಟ್ಲೆಟ್). ಅದು ಕೈಹರಡಿನಬಳಿ ಸಡಿಲವಾಗಿ ರಕ್ಷಣ ಕವಚಗಳಿಂದ ಸಜ್ಜುಗೊಳಿಸಲ್ಪಟ್ಟು, ಯುದ್ಧ ಕವಚಕ್ಕೇ ಸೇರಿಕೊಂಡು ಸೈನಿಕ ಉಡುಪಿನ ಒಂದು ಅಂಗವಾಗಿತ್ತು. ಅದರಿಂದ ಭರ್ಜಿ, ಕತ್ತಿಯನ್ನು ಹಿಡಿದುಕೊಳ್ಳಲು ಸೌಕರ್ಯವಿತ್ತು. ಅದರ ಆಕಾರ, ರಚನಾಕ್ರಮಗಳು ಆಗಿಂದಾಗ್ಗೆ ಬದಲಾಗುತ್ತಿದ್ದುವು. ಮೊದಲು ಅದಕ್ಕೆ ತೋಳುಗಳಿದ್ದುವು. ಅಂಗೈಕಡೆಯ ಸಂದಿನ ಮೂಲಕ ಕೈಯನ್ನು ಹೊರ ತೆಗೆಯಲು ಸಾಧ್ಯವಾಗಿತ್ತು; ಚೀಲದ ಭಾಗ ಜೇಬಿನಂತೆ ಜೋಲಾಡುತ್ತಿತ್ತು. ಕ್ರಮೇಣ ಈ ಕೈಕಾಪಿನ ಮೇಲ್ಮೈಯಲ್ಲಿ ಚಕ್ಕಳ, ಲೋಹ ಅಥವಾ ಕೊಂಬಿನ ಮುಚ್ಚಿಗೆಯನ್ನು ಸೇರಿಸಿ ಅದು ಯುದ್ಧ ಕವಚಕ್ಕೆ ಬಿಗಿಯಲ್ಪಟು ಅಖಂಡವಾಯಿತು. ತೊಗಲಿನ ಕೈಚೀಲಕ್ಕೆ ಉಕ್ಕಿನ ಬಿಲ್ಲೆಗಳನ್ನು ಸೇರಿಸಿ ಕೈಹಿಂಭಾಗವನ್ನು ಅಗಲವಾದ, ಅಡ್ಡ ಲೋಹತಗಡುಗಳ ಸಣ್ಣ ವರ್ತುಲಗಳು ಶ್ರೇಣಿ ಪರಂಪರೆಯಲ್ಲಿ ಬಿಗಿದಿದ್ದುವು. ಹಿಂಗೈಯ ಬೆರಳುಗೆಣ್ಣುಗಳಿಂದ ಮಣಿಕಟ್ಟಿನವರೆಗೆ ಅಗಲವಾದ ತಗಡಿನಿಂದ ರಕ್ಷಿಸಲ್ಪಟ್ಟಿತ್ತು. ಇದರೊಳಗೆ ತೊಗಲಿನ ಚೀಲವಿತ್ತು. ಅದರ ಮೇಲ್ಭಾಗದ ಬೆರಳುಗಳಿಗೂ ಹೆಬ್ಬೆಟ್ಟಿಗೂ ಮೇಲ್ಚಾಚಿದ ತಗಡುಗಳಿಂದ ರಕ್ಷಣೆ ನೀಡುವ ವ್ಯವಸ್ಥೆಯಿತ್ತು. ಎದುರಾಳಿಗಳಿಗೆ ಬಲವಾಗಿ ಪೆಟ್ಟುಕೊಡಲು ಗೆಣ್ಣುಗಳ ಮೇಲೆ ಚೂಪಾದ ಮತ್ತು ಹರಿತವಾದ ಮೊನೆಗಳೂ ಬುಗಟಗಳೂ ನಿರ್ಮಿತವಾದವು. ಕೈಚೀಲವನ್ನು ತಗಡಿಗೆ ಕೀಲುಗಂಟನಿಂದ(ರಿವೆಟ್) ಬೆಸೆಯುವ ವಿಧಾನ ಬಂದಿತು. ಆಮೇಲೆ ಗೆಣ್ಣಿನ ಭಾಗವನ್ನು ಪ್ರತ್ಯೇಕ ತಗಡಿನಿಂದ ಮಾಡಿ ಮಣಿಕಟ್ಟಿನ ತುಂಡುಗಳಿಗೆ ಕೀಲುಗಂಟನಿಂದ ಬೆಸೆಯುವ ವ್ಯವಸ್ಥೆ ಬಂದಿತು. ಕೊನೆಗೆ ಉಕ್ಕಿನ ಮಿಟನ್ ಎಂಬುದು ಏರ್ಪಾಡಾಯಿತು.



ಪ್ರತ್ಯೇಕವಾದ ಕೈಕಾಪುಗಳು ವಿವಿಧ ಬಗೆಗಳಲ್ಲಿ ತಯಾರಾದವು. ಕೈಯಿಂದ ಕತ್ತಿ ಜಾರದಂತೆ ಮಾಡುವ ಟ್ಯೂರ್ನಿಯಿಂಗ್ ಕೈಕಾಪು, ಕುದುರೆಯ ಲಗಾಮನ್ನು ಚೆನ್ನಾಗಿ ಹಿಡಿದುಕೊಳ್ಳಲು ಸೌಕರ್ಯಕೊಡುವ ಮ್ಯೂನಿಫರ್ ಕೈಕಾಪು, ಕೈ ಜಜ್ಜಿಹೋಗದಂತೆ ರಕ್ಷಿಸುವ ಬ್ಯಾರಿಯರ್ ಕೈಕಾಪು, ವೈರಿಯ ಕೈಯಿಂದ ಕತ್ತಿಯನ್ನು ಸೆಳೆದುಕೊಳ್ಳಲು ತಕ್ಕಂಥ ಕೈಕಾಪು, ಮೊಣಕೈ (ಎಲ್ಬೋ) ಕೈಕಾಪು ಪಕ್ಷಿಗಳನ್ನು ಬೇಟೆಯಾಡುವ ಗಿಡುಗಗಳನ್ನು ಕೈಯಲ್ಲಿ ಹಿಡಿಯಲು ತಕ್ಕ ಕೈಕಾಪು, ಇತ್ಯಾದಿ.

ಒಬ್ಬ ವ್ಯಕ್ತಿ ಇನ್ನಾವನೋ ತನಗೆ ಅಪಮಾನ ಮಾಡಿದ, ಅಪಕೀರ್ತಿ ತಂದ, ಕಳಂಕ ಹಚ್ಚಿದ, ತಿರಸ್ಕಾರ ಮಾಡಿದನೆಂದು ಭಾವಿಸಿದರೆ ಸ್ವಾಭಿಮಾನಕ್ಕಾಗಿ ಅವನನ್ನು ಕಾಳಗಕ್ಕೆ ಕರೆಕೊಡಲು ತನ್ನ ಕೈಕಾಪನ್ನು ಕೆಳಗೆಸೆಯುವುದು ವಾಡಿಕೆಯಲ್ಲಿತ್ತು. ಈ ಸಂಕೇತವನ್ನು ಫ್ಲಿಂಗಿಂಗ್ ಆರ್ ತ್ರೋಯಿಂಗ್ ಡೌನ್ ದಿ ಗಾಂಟ್ಲೆಟ್ ಎಂದು ಕರೆಯುವುದು ಸಂಪ್ರದಾಯವಾಯಿತು. ಎದುರಾಳಿ ಕದನಕ್ಕೆ ಆಹ್ವಾನವನ್ನು ಸ್ವೀಕರಿಸಲು ಒಪ್ಪಿದರೆ ತನ್ನ ಒಪ್ಪಿಗೆಯನ್ನು ಸೂಚಿಸಲು ಆ ಕೈಕಾಪನ್ನು ಎತ್ತಿ ತೆಗೆದುಕೊಳ್ಳುತ್ತಿದ್ದ. ಈ ಸಂಜ್ಞೆಗೆ ಪಿಕ್ಕಿಂಗ್ ಆರ್ ಟೇಕಿಂಗ್ ಆಫ್ ದಿ ಗಾಂಟ್ಲೆಟ್ ಎಂಬ ಶಬ್ದ ಪ್ರಯೋಗವಿತ್ತು. ಎರಡು ಪಕ್ಷದವರು ಕಾಳಗಕ್ಕೆ ಕಾಲವನ್ನು ನಿಶ್ಚಯಿಸುತ್ತಿದ್ದರು. ಈ ಕಾದಾಟಕ್ಕೆ ವಿಧಿ ಪ್ರಕಾರದ ಕಟ್ಟುಕಟ್ಟಲೆಗಳಿದ್ದುವು. ಇಬ್ಬರೂ ಆ ನಿಯಮಗಳನ್ನು ಸಾಕ್ಷಿದಾರರ ಸಮಕ್ಷಮ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಈ ವ್ಯವಹಾರ ನ್ಯಾಯಾಸ್ಥಾನದ ವಿಚಾರಣೆಯಂತೆಯೇ ಸನ್ಮಾನಿಸಲ್ಪಡುತ್ತಿತ್ತು. ಇಂಥ ಕಾಳಗದ ಫಲಿತಾಂಶ ನ್ಯಾಯಾಧಿಪತಿಯ ತೀರ್ಪಿನಂತೆ ಪರಿಗಣಿಸಲ್ಪಡುತ್ತಿತ್ತು. ಕದನದಲ್ಲಿ ಅಪರಾಧಿಯನ್ನು ಸೋಲಿಸಲು ದೇವರು ನಿರಪರಾಧಿಗೆ ಶಕ್ತಿ ಕೊಡುತ್ತಾನೆಂದೂ ಗೆದ್ದವನೇ ಸತ್ಯವಂತನೆಂದು ಗಣಿಸಲ್ಪಡಬೇಕೆಂದೂ ಜನ ನಂಬಿದ್ದರು. ಅನೇಕ ಮಂದಿ ಶ್ರೇಷ್ಠ ಪುರುಷರೇ ಇಂಥ ಕಾಳಗದಲ್ಲಿ ಭಾಗವಹಿಸಿದ್ದರು.

ಉದ್ದವಾಗಿ, ಸಡಿಲ ತೋಳುಗಳ ಮಡಿಕೆಯುಳ್ಳ ಯಾವ ಕೈಕಾಪಿಗೂ ಗಾಂಟ್ಲೆಟ್ ಎಂಬ ಹೆಸರು ಬಂದಿದೆ. ಕ್ರಿಕೆಟ್ ಮೊದಲಾದ ಆಟಗಳಲ್ಲಿ ಚೆಂಡನ್ನು ಜೋರಾಗಿ ಹೊಡೆಯುವುದಕ್ಕೂ ಚಂಡುಹಿಡಿಯಲು ಗುರಿಕೋಲಿನ ಹಿಂದೆ ನಿಲ್ಲುವುದಕ್ಕೂ ಕತ್ತಿವರಸೆಯಲ್ಲಿ ತೊಡುವ ಮಣಿಕಟ್ಟುಳ್ಳ ದಪ್ಪವಾದ ಕೈಕಾಪುಗಳಿಗೂ ಗಾಂಟ್ಲೆಟ್ ಎಂದು ಹೆಸರು. ಸೇನೆಯ ಮತ್ತು ನಾವೆಯ ಶಿಕ್ಷಣದಲ್ಲಿ ಎರಡು ಕಡೆಗಳಲ್ಲೂ ಕೋಲು, ಹಗ್ಗ ಮೊದಲಾದವುಗಳಿಂದ ಹೊಡೆಯುವ ಜನರ ಸಾಲಿನ ಮಧ್ಯೆ ಎರಡೂ ಕಡೆಯ ಹೊಡೆತಕ್ಕೆ ಸಿಕ್ಕಿ ತಪ್ಪಿಸಿಕೊಂಡು ಓಡುವುದಕ್ಕೆ ರನ್ನಿಂಗ್ ದಿ ಗಾಂಟ್ಲೆಟ್ ಎಂದು ಹೇಳುತ್ತಾರೆ. (ಎಂ.ಜಿ.ಕೆ.ಎಂ.)

**ಕೈಗಡಿಯಾರ :** ಕೈಯ ಮಣಿಗಂಟಿಗೆ ಕಟ್ಟಿಕೊಳ್ಳಬಹುದಾದ ಕಾಲಸೂಚಕ ಯಂತ್ರ (ರಿಸ್ಟ್ ವಾಚ್). ಪ್ರಥಮ ಗಡಿಯಾರದ ನಿರ್ಮಾಣ ಎಂದು ಎಲ್ಲಿ ಆಯಿತು ಎಂಬ ಸಂಗತಿ ಅಸ್ಪಷ್ಟವಾಗಿದೆ. ಆದರೆ ಮೇನ್‌ಸ್ಪ್ರಿಂಗನ್ನು ಉಪಜ್ಞಿಸುವ ಮೊದಲು ಕೈಗಡಿಯಾರದ ರಚನೆ ಸಾಧ್ಯವಾಗಿರಲಿಲ್ಲ ಎಂಬುದು ಸ್ಪಷ್ಟ. ಆ ಮೊದಲು ಗುರುತ್ವ ಬಲದಿಂದ ಇಳಿಯುತ್ತಿದ್ದ ತೂಕಗಳ ನಿಯಂತ್ರಣದಿಂದ ಕಾಲಮಾಪನ ಯಂತ್ರಗಳನ್ನು (ಗಡಿಯಾರಗಳು) ನಿರ್ಮಿಸುತ್ತಿದ್ದರು. ಇಂಥ ಗಡಿಯಾರಗಳು, ಅವು ಎಷ್ಟೇ ಸುಧಾರಿತ ಯಾಂತ್ರಿಕ ಕೌಶಲಗಳನ್ನು ಒಳಗೊಂಡಿದ್ದರೂ, ದೊಡ್ಡ ಗಾತ್ರದವೂ ತೂಕದವೂ ಆಗಿರುತ್ತಿದ್ದುದರಿಂದ ಶ್ರೀಮಂತರ ನಿವಾಸಗಳ ಅಲಂಕರಣ ಸಾಮಗ್ರಿಗಳಾಗಿಯೂ ಸರಕಾರದ ಕಚೇರಿಗಳಲ್ಲಿಯ ಆವಶ್ಯಕ ಸಾಧನಗಳಾಗಿಯೂ ಇರುತ್ತಿದ್ದುವೇ ವಿನಾ ಎಲ್ಲಿ ಬೇಕೆಂದರಲ್ಲಿಗೆ ಒಯ್ಯಬಲ್ಲ ಸುಲಭೋಪಕರಣಗಳಾಗಿ ಇರುತ್ತಿರಲಿಲ್ಲ. ಪ್ರಥಮ ಗಡಿಯಾರಗಳ ನಿರ್ಮಾಣ ಜರ್ಮನಿ ಹಾಗೂ ಫ್ರಾನ್ಸ್ ದೇಶಗಳಲ್ಲಿ ಆಯಿತು. ಇಟಲಿಯ ಕೊಡುಗೆಯೂ ಗಮನಾರ್ಹವಾಗಿದೆ. 20ನೆಯ ಶತಮಾನದ ಆರಂಭದವರೆಗೂ ಕೈಗಡಿಯಾರಗಳ ಬಳಕೆ ಬಂದಿರಲಿಲ್ಲ–ಕಿಸೆಗಡಿಯಾರಗಳು, ಪುಟ್ಟ ಗಡಿಯಾರಗಳು ಮುಂತಾದುವು ಅಂದಿನ, ಸುಲಭವಾಗಿ ಒಯ್ಯಬಲ್ಲ, ಕಾಲಮಾಪೀ ಉಪಕರಣಗಳಾಗಿದ್ದುವು. ರಚನಾಕೌಶಲದಲ್ಲಿ ಸುಧಾರಣೆಗಳೂ ಸೂಕ್ಷ್ಮತೆಗಳೂ ಸಿದ್ಧಿಸಿದ ಮೇಲೆ ಹೇರ್‌ಸ್ಪ್ರಿಂಗ್, ಬ್ಯಾಲೆನ್ಸ್ ಚಕ್ರ ಮುಂತಾದ ನಿಷ್ಕೃಷ್ಟಸಾಧನಗಳ ಉಪಜ್ಞೆ ನಡೆಯಿತು. ಈ ಪ್ರಯತ್ನಗಳ ಸಂಯುಕ್ತ ಫಲ ಕೈಗಡಿಯಾರ.

ಎಲ್ಲ ಕಾಲಸೂಚಕ ಉಪಕರಣಗಳಲ್ಲೂ ಮೂರು ಮುಖ್ಯ ಭಾಗಗಳಿವೆ: 1. ಪುನರಾವರ್ತಿಸುವ ಒಂದು ವಿದ್ಯಮಾನವನ್ನು ಸೃಜಿಸುವ ಯಂತ್ರವಿನ್ಯಾಸ, ಲೋಲಕದ ಆಂದೋಳನ, ಚಕ್ರದ ಆವರ್ತನೆ ಮುಂತಾದವು ಉದಾಹರಣೆಗಳು. ಈ ಯಂತ್ರವಿನ್ಯಾಸದ ನಿಷ್ಕೃಷ್ಟತೆಯನ್ನು ಅವಲಂಬಿಸಿ ಕಾಲಸೂಚಕ ಉಪಕರಣದ ನಿಖರತೆ ಇರುವುದು. 2. ಪುನರಾವರ್ತಿಸುವ ವಿದ್ಯಮಾನವನ್ನು ಎಣಿಸಿ ಅದರಿಂದ ಕಾಲಮಾಪನ ಮಾಡಿ ಕಾಲವನ್ನು ಓದುವ ಒಂದು ವಿಧಾನ. ಗಡಿಯಾರದ ಮುಖ ಫಲಕದ ಮೇಲಿನ ಮುಳ್ಳುಗಳು ಮಾಡುವುದು ಈ ಕೆಲಸವನ್ನು. 3 ಪುನರಾವರ್ತಿಸುವ ವಿದ್ಯಮಾನವನ್ನು ಉತ್ಪಾದಿಸಲು ಬೇಕಾದ ಶಕ್ತಿ ಆಕರ.

ಕೈಗಡಿಯಾರದಲ್ಲಿ ಹೇರ್‌ಸ್ಪ್ರಿಂಗಿನ ನೆರವಿನಿಂದ ಬ್ಯಾಲೆನ್ಸ್ ಚಕ್ರ ಪುನರಾವರ್ತಿಸುವ ವಿದ್ಯಮಾನವನ್ನು ಸೃಜಿಸುತ್ತದೆ. ಇದರ ಪರಿಣಾಮವಾಗಿ ಮುಖಫಲಕದ ಮೇಲಿನ ವಿವಿಧ ಮುಳ್ಳುಗಳು–ಸೆಕೆಂಡ್, ಮಿನಿಟ್ ಹಾಗೂ ಗಂಟೆ–ನಿಯತರೀತಿಯಲ್ಲಿ ಚಲಿಸಿ ಕಾಲವನ್ನು ಓದುವುದು ಸುಲಭಸಾಧ್ಯವಾಗುತ್ತದೆ. ಕೈಗಡಿಯಾರದ ಪ್ರಧಾನ (ಮೇನ್) ಸ್ಪ್ರಿಂಗನ್ನು ತಿರುಚಿದಾಗ (ವೈಂಡಿಂಗ್. ರೂಢಿಯ ಮಾತಿನಲ್ಲಿ ಕೀ ಕೊಟ್ಟಾಗ) ಆ ಸ್ಪ್ರಿಂಗ್ ಸಂಕುಚನಗೊಂಡು ಅದರಲ್ಲಿ ಶಕ್ತಿ ಸಂಚಯನವಾಗುತ್ತದೆ. ಇದೇ ಕೈ ಗಡಿಯಾರದ ಶಕ್ತಿ ಆಕರ. ಇಲ್ಲಿಂದ ಶಕ್ತಿ ತಕ್ಕ ನಿಯಂತ್ರಕಗಳ ಮೂಲಕ ಬ್ಯಾಲೆನ್ಸ್ ಚಕ್ರಕ್ಕೆ ಒದಗಿ ಅದರ ಆಂದೋಳನದ ನಿರಂತರತೆಯನ್ನು ಕಾಯ್ದಿಡುತ್ತದೆ. ಬ್ಯಾಲೆನ್ಸ್ ಚಕ್ರದ ಆಂದೋಳನದ ಪರಿಣಾಮವಾಗಿ, ಹಲವಾರು ಪರಸ್ಪರ ಬಂಧಿತ ಹಲ್ಲುಚಕ್ರಗಳ ಮೂಲಕ, ಕೈಗಡಿಯಾರದ ಮುಳ್ಳುಗಳು ನಿಯತ ದರದಲ್ಲಿ ವರ್ತಿಸಿ ಕಾಲದ ಓದಿಕೆ ಸಾಧ್ಯವಾಗುತ್ತದೆ.

ಕೈಗಡಿಯಾರಗಳಲ್ಲಿ ನಾನಾ ಪ್ರಭೇದಗಳಿವೆ. ಗಂಡಸರು ಕಟ್ಟುವ ಕೈಗಡಿಯಾರಗಳ ವ್ಯಾಸಗಳು ಸರಿಸುಮಾರು 23–30 ಮಿಮೀ. ವ್ಯಾಪ್ತಿಯಲ್ಲಿವೆ. ಹೆಂಗಸರ ಕೈಗಡಿಯಾರಗಳ ವ್ಯಾಸವ್ಯಾಪ್ತಿ 14–20 ಮಿಮೀ. ಸೆಕೆಂಡ್ ಮುಳ್ಳನ್ನು ಮುಖಫಲಕದ (ಡಯಲ್) ಮೇಲೆ ಒಂದು ಬದಿಗೆ (ಸಾಮಾನ್ಯವಾಗಿ ಗಂಟೆ 6ರ ಪಕ್ಕದಲ್ಲಿ) ಪ್ರತ್ಯೇಕವಾಗಿ ಜೋಡಿಸಿರುತ್ತಾರೆ. ಮುಖಫಲಕದ ಕೇಂದ್ರಬಿಂದುವಿನಲ್ಲೇ (ಎಂದರೆ ಮಿನಿಟ್ ಹಾಗೂ ಗಂಟೆ ಮುಳ್ಳುಗಳು ಜೋಡಣೆಗೊಂಡಿರುವಲ್ಲೇ) ಜೋಡಣೆಗೊಳಿಸಿರುವ ಸೆಕೆಂಡ್ ಮುಳ್ಳು ಇರುವ (ಸೆಂಟರ್ ಸೆಕೆಂಡ್ಸ್) ಕೈಗಡಿಯಾರಗಳು ಇಂದಿನ ಒಲವು ಇನ್ನಷ್ಟು ಸೂಕ್ಷ್ಮ ಹಾಗೂ ಅಧಿಕ ಕ್ರಿಯದ ಗಡಿಯಾರಗಳಲ್ಲಿ ದಿನಾಂಕವನ್ನು ತೋರಿಸುವ ಏರ್ಪಾಡು ಸಹ ಇರುತ್ತದೆ. ಇನ್ನು ತಿರುಚು ಕ್ರಿಯೆ ಬೇಡವಾದ–ಎಂದರೆ ಸ್ವಯಂ ತಿರುಚು ಸಾಧಿಸಿಕೊಳ್ಳಬಲ್ಲ–ಕೈಗಡಿಯಾರಗಳು ಸಹ ಬಳಕೆಯಲ್ಲಿವೆ. ಮಣಿಗಂಟಿನ ಚಲನೆ, ಕೈ ಕುಲುಕುವಿಕೆ ಮುಂತಾದವುಗಳಿಂದ ಒದಗುವ ಶಕ್ತಿಯನ್ನು ಇಂಥ ಗಡಿಯಾರಗಳ ಸೂಕ್ಷ್ಮ ಸ್ಪ್ರಿಂಗು ಸಂಗ್ರಹಿಸಿ ಚಾಲನ ಶಕ್ತಿಯನ್ನು ಒದಗಿಸಬಲ್ಲುದು. ಎಚ್ಚರಗಂಟೆ (ಅಲಾರಂ) ಹೊಡೆಯುವ ಕೈಗಡಿಯಾರಗಳನ್ನೂ ನಿರಂತರ ತಾರೀಕುಪಟ್ಟಿ ದಾಖಲೆಯನ್ನು ಒಳಗೊಂಡಿರುವ ಕೈಗಡಿಯಾರಗಳನ್ನೂ ತಯಾರಿಸಲಾಗಿದೆ.

ಕೈಗಡಿಯಾರ, ಗಡಿಯಾರ ಮುಂತಾದ ವಿವಿಧ ಕಾಲಮಾಪಿಗಳ ಯಂತ್ರವಿನ್ಯಾಸವನ್ನೂ ಕ್ರಿಯಾವಿನ್ಯಾಸವನ್ನೂ ತಿಳಿಯಲು **(ನೋಡಿ- ಗಡಿಯಾರ)** *

**ಕೈಗಾರಿಕಾ ಅಪಘಾತಗಳು :** ಕೈಗಾರಿಕಾಕರಣದೊಂದಿಗೆ ಅಂಟಿಕೊಂಡು ಬಂದ ಸಮಸ್ಯೆಗಳಲ್ಲೊಂದು (ಇಂಡಸ್ಟ್ರಿಯಲ್ ಆಕ್ಸಿಡೆಂಟ್ಸ್), ಕೈಗಾರಿಕಾಹಾನಿ ಅಥವಾ ಕ್ಷತಿ (ಇಂಡಸ್ಟ್ರಿಯಲ್ ಇಂಜುರಿ) ಎಂದೂ ಕರೆಯುವುದುಂಟು. ಉದ್ಯೋಗದಿಂದ, ಅದರ ಅವಧಿಯಲ್ಲಿ, ಉದ್ಭವಿಸುವ ಆಕಸ್ಮಿಕ ಹಾನಿ ಅಥವಾ ಕ್ಷತಿ ಎಂಬುದು ಇಂಗ್ಲೆಂಡ್–ಅಮೆರಿಕಗಳ ಪ್ರಪ್ರಥಮ ಕಾರ್ಮಿಕ ಪರಿಹಾರ ಕಾಯಿದೆಗಳಲ್ಲಿ ನೀಡಲಾಗಿದ್ದ ವ್ಯಾಖ್ಯೆ. ಕಾರ್ಮಿಕನಿಗೆ ಉದ್ಯೋಗ ಸಂಬಂಧವಾಗಿ ಸಂಭವಿಸಿದ ಹಾನಿಗೆ ಪರಿಹಾರ ದೊರಕಬೇಕಾದರೆ ಆ ಹಾನಿ ಒಂದು ಆಕಸ್ಮಿಕದ ಫಲವಾಗಿರಬೇಕು. ಅದರಿಂದ ಅವನಿಗೆ ಪೆಟ್ಟು ಅಥವಾ ಗಾಯ ಆಗಿರಬೇಕು–ಎಂಬುದಾಗಿ ನ್ಯಾಯಾಲಯಗಳು ಈ ವ್ಯಾಖ್ಯೆಯನ್ನು ಅರ್ಥೈಸಿದುವು. ಕೈಗಾರಿಕಾಹಾನಿಯ ಈ ಪದಶಃ ಅರ್ಥದಿಂದ ಕಾರ್ಮಿಕರಿಗೆ ಬಹಳ ಅನ್ಯಾಯವೇ ಆಗುತ್ತಿತ್ತು. ಪೆಟ್ಟು ಅಥವಾ ಗಾಯವಾಗದೆಯೂ ಆಕಸ್ಮಿಕ ಸಂಭವಿಸದೆಯೂ ಕಾರ್ಮಿಕರಿಗೆ ಹಾನಿ ಅಥವಾ ಕ್ಷತಿ ಆಗಬಹುದು. ಇದು ಉದ್ಯೋಗಮೂಲವಾದ ಅಸಾಮರ್ಥ್ಯವೇ ಆದ್ದರಿಂದ ಇದನ್ನೂ ಪರಿಹಾರ ಯೋಗ್ಯವಾದ ಹಾನಿಯೆಂದೇ ಪರಿಗಣಿಸಬೇಕೆಂಬುದು ಕ್ರಮೇಣ ಬೆಳೆದುಬಂದ ವಿಚಾರಧಾರೆ. ಉದ್ಯೋಗದ ಪರಿಸ್ಥಿತಿಯಿಂದಾಗಿ ಸಂಭವಿಸುವ ಕಾಯಿಲೆಯೇ ಮುಂತಾದ ಅಸಾಮರ್ಥ್ಯಗಳನ್ನೂ ಈ ವ್ಯಾಖ್ಯೆಯಲ್ಲಿ ಸೇರಿಸಲಾಗಿದೆ.

19ನೆಯ ಶತಮಾನದ ಉತ್ತರಾರ್ಧದಿಂದ ಕೈಗಾರಿಕಾ ಅಪಘಾತಗಳ ಸಂಖ್ಯೆ ಹೆಚ್ಚಿದುದರಿಂದ ಅವುಗಳ ವಿರುದ್ಧ ರಕ್ಷಣೆಯ ಕ್ರಮಗಳನ್ನು ಕೈಗೊಳ್ಳಬೇಕಾದ್ದು ಅತ್ಯಂತ ಅವಶ್ಯಕವೆಂಬ ಅಂಶ ವ್ಯಕ್ತವಾಯಿತು. ಐರೋಪ್ಯ ರಾಷ್ಟ್ರಗಳು ಅನೇಕ ಕಾಯಿದೆಗಳನ್ನು ಜಾರಿಗೆ ತಂದು ಕಾರ್ಮಿಕರಿಗೆ ಕೈಗಾರಿಕಾ ಅಪಘಾತದ ವಿರುದ್ಧ ರಕ್ಷಣೆ ನೀಡುವ ಭರವಸೆ ನೀಡಿದವು. ಬ್ರಿಟನಿನ 1802ರ ಕೆಲವು ಕಾಯಿದೆಗಳು, 1810ರ ಬೆಲ್ಜಿಯನ್ ಕಾಯಿದೆ, 1832ರ ಡೇನಿಷ್ ನಿಯಮಾವಳಿಗಳು, 1869ರ ಉತ್ತರ ಜರ್ಮನಿ ಸಂಯುಕ್ತರಾಜ್ಯ ಕೈಗಾರಿಕಾ ಸಂಹಿತೆ–ಇವು ಉದಾಹರಣೆಗಳು.

ಕೈಗಾರಿಕೀಕರಣದ ಮುನ್ನಡೆಯೊಂದಿಗೆ ಕೈಗಾರಿಕಾ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತ ಬಂದಿದೆ. ವ್ಯವಸ್ಥಿತ ಕೈಗಾರಿಕೆಗಳಲ್ಲಿ ಹೆಚ್ಚುಹೆಚ್ಚು ಯಂತ್ರಗಳ ಬಳಕೆ, ಜಟಿಲ ಉತ್ಪಾದನಕ್ರಮ ಇವು ಅಪಘಾತಗಳು ಹೆಚ್ಚಾಗುವುದಕ್ಕೆ ಮುಖ್ಯ ಕಾರಣಗಳು. ಇಂಥ ಅಪಘಾತಗಳ ವಿರುದ್ಧ ರಕ್ಷಣೆಯನ್ನೊದಗಿಸುವ ದೃಷ್ಟಿಯಿಂದ, ಕೈಗಾರಿಕಾ ಅಪಘಾತಗಳ ಕಾರಣ, ಮತ್ತು ಅದನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಹೆಚ್ಚಿನ ಸಂಶೋಧನೆ ಮತ್ತು ಅಧ್ಯಯನ ಯುರೋಪ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ 20ನೆಯ ಶತಮಾನದ ಪ್ರಾರಂಭದಲ್ಲಿ ತೀವ್ರವಾಗಿ ಬೆಳೆಯಿತು. ಹಲವಾರು ಮಾರ್ಗಗಳಿಂದ ಕೈಗಾರಿಕಾ ಅಪಘಾತಗಳನ್ನು ಕಡಿಮೆ ಮಾಡಬಹುದು, ತಪ್ಪಿಸಲೂಬಹುದು: 1 ಪ್ರತಿಯೊಂದು ಕೈಗಾರಿಕೆಯಲ್ಲೂ ಅಪಘಾತಗಳು ನಡೆಯದಂತೆ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳುವುದು. ಉದಾಹರಣೆಗೆ, ಯಂತ್ರಗಳಿಗೆ ಸರಿಯಾದ ರಕ್ಷೆ ನಿರ್ಮಿಸುವುದು, ಕಾರ್ಮಿಕರು ಯಂತ್ರಗಳಿಂದ ಎದುರಿಸಬಹುದಾದ ಅಪಾಯದ ವಿರುದ್ಧ ಅವರಿಗೆ ಸರಿಯಾದ ತರಬೇತು ನೀಡುವುದು, ಅಗ್ನಿಶಾಮಕ ಸಾಧನಗಳನ್ನು ಕೈಗಾರಿಕೆಗಳಲ್ಲಿ ಒದಗಿಸುವುದು, ಇತ್ಯಾದಿ. 2. ಹಾನಿಗೆ ಈಡಾದ ಕಾರ್ಮಿಕರಿಗೆ ಸೂಕ್ತ ಕಾರ್ಮಿಕ ಕಾಯಿದೆಗಳ ಮೂಲಕ ಪರಿಹಾರ ಒದಗಿಸುವುದು 3. ಸುರಕ್ಷಿತವಾದ ಕೈಗಾರಿಕಾ ವಾತಾವರಣ ಕಲ್ಪಿಸುವುದು.

20ನೆಯ ಶತಮಾನದ ಆದಿಯಿಂದ ಅನೇಕ ಕೈಗಾರಿಕಾ ರಾಷ್ಟ್ರಗಳಲ್ಲಿ ಕೈಗಾರಿಕಾ ಆಕಸ್ಮಿಕಗಳ ಬಗ್ಗೆ ಕರಾರುವಾಕ್ಕಾದ ಮಾಹಿತಿಯನ್ನು ಸಂಗ್ರಹಿಸುವ ಮತ್ತು ಅವುಗಳ ವಿರುದ್ಧ ರಕ್ಷಣೆ ಒದಗಿಸುವ ಕಾರ್ಯ ವ್ಯವಸ್ಥಿತ ರೀತಿಯಲ್ಲಿ ನಡೆದುಬಂದಿದೆ. ಕೈಗಾರಿಕಾ ಹಾನಿಯನ್ನು ನಿವಾರಿಸುವುದೂ ಅದಕ್ಕೆ ಪರಿಹಾರ ದೊರಕಿಸಿಕೊಡುವುದೂ ಅನೇಕ ರಾಷ್ಟ್ರಗಳಲ್ಲಿ ಸಾಮಾಜಿಕ ಭದ್ರತೆಯಲ್ಲಿ ಅಂತರ್ಗತವಾಗಿರುವ ವಿಚಾರಗಳಾಗಿವೆ.

ಭಾರತದಲ್ಲಿ ಕೈಗಾರಿಕೀಕರಣದ ಪ್ರಗತಿಯೊಂದಿಗೆ ಆಕಸ್ಮಿಕಗಳ ವಿರುದ್ಧ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರೂ ಉತ್ಪಾದನಕ್ರಮದ ಜಟಿಲತೆಯಿಂದಾಗಿ, ಅಧಿಕ ಯಂತ್ರಗಳ ಬಳಕೆಯಿಂದಾಗಿ ಆಕಸ್ಮಿಕಗಳ ಸಂಭವ ಇರುವುದರಿಂದ ಇಲ್ಲೂ ಇದರಿಂದ ರಕ್ಷಣೆ ಹಾಗೂ ಪರಿಹಾರ ಒದಗಿಸಲು ಹಲವಾರು ಕಾಯಿದೆಗಳು ಜಾರಿಗೆ ಬಂದಿವೆ. **(ನೋಡಿ: ಕಾರ್ಮಿಕ ಕಾನೂನುಗಳು)**

ಕೈಗಾರಿಕಾ ಅಪಘಾತಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಕಾರ್ಮಿಕರಿಗೆ ಸೂಕ್ತ ಉದ್ಯೋಗ ಪರಿಸ್ಥಿತಿಯನ್ನು ಸೃಷ್ಟಿಸಲು ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಶ್ರಮಿಸುತ್ತದೆ. 1921ರಲ್ಲಿ ಅದು ಕೈಗಾರಿಕಾ ಆಕಸ್ಮಿಕ ರಕ್ಷಣ ವಿಭಾಗವನ್ನು ಸ್ಥಾಪಿಸಿತು. ಈ ವಿಭಾಗ ವಿಶ್ವಾದ್ಯಂತ ಎಲ್ಲ ರಾಷ್ಟ್ರಗಳಲ್ಲೂ ಕೈಗಾರಿಕಾ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯವಾದ ಕ್ರಮಗಳನ್ನು ಸೂಚಿಸುವ, ಆಕಸ್ಮಿಕಗಳ ಬಗ್ಗೆ ಮುಖ್ಯವಾದ ಮಾಹಿತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದೆ. ಎಲ್ಲ ರಾಷ್ಟ್ರಗಳ ಕೈಗಾರಿಕಾ ಆಕಸ್ಮಿಕಗಳ ಮಾಹಿತಿಯನ್ನು ಈ ಸಂಸ್ಥೆ ಪ್ರಕಟಿಸುತ್ತಿದೆ. ಕೈಗಾರಿಕಾ ಆಕಸ್ಮಿಕಗಳನ್ನು ತಡೆಗಟ್ಟಲು ಅಗತ್ಯವಾದ ನಿಯಮಾವಳಿಗಳನ್ನು ಎಲ್ಲ ರಾಷ್ಟ್ರಗಳಿಗೂ ಅನ್ವಯವಾಗುವಂತೆ ರೂಪಿಸುವ ಕಾರ್ಯವನ್ನು ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಕೈಗೊಂಡಿದೆ. (ಸಿ.ಕೆ.ಆರ್)

**ಕೈಗಾರಿಕಾ ಆಲೇಖ್ಯ :** ಭೂರಿವಿತರಣೆಗಾಗಿ ಕಾರ್ಖಾನೆಗಳಲ್ಲಿ ಭಾರೀ ಗಾತ್ರದಲ್ಲಿ ಸಿದ್ಧಪಡಿಸುವ ವಸ್ತುಗಳ ಆಲೇಖ್ಯ (ಇಂಡಸ್ಟ್ರಿಯಲ್ ಡಿಸೈನ್), ಸಂಸ್ಕೃತಿಯೊಡನೆ ಕೈಗಾರಿಕೆಯನ್ನು ಸಮನ್ವಯಗೊಳಿಸಲು, ಅದಿನ್ನೂ ಸಿದ್ಧಿಸದಿದ್ದರೂ, ಮಾನವ ನಡೆಸುತ್ತಿರುವ ಪ್ರಯತ್ನವಿದು.

**ಚರಿತ್ರೆ :** ಹಿಂದಿನ ಕಾಲದಲ್ಲಿ ಸ್ವತಃ ಕಲೆಗಾರನೂ ಆಗಿದ್ದ ಕಸಬುಗಾರ ತನ್ನ ಪರಿಕರ್ಮದಲ್ಲಿ ಆಗಾಗ್ಗೆ ಮೂಡಿಬಂದ ನವೀನತೆಗಳನ್ನು ಉಪಯೋಗಿಸಿಕೊಂಡು ಆಲೇಖ್ಯ ರಚನೆ ಮಾಡುತ್ತಿದ್ದ. ಗೃಹೋಪಕರಣಗಳ ತಯಾರಿಕೆಯೆಲ್ಲ ಅವನದೇ ಆಗಿತ್ತು. ಅವನ ಉಪಕರಣಗಳು ಬಲು ಸರಳ. ಅವನ ಗಮನವೆಲ್ಲ ತಯಾರಿಸುತ್ತಿದ್ದ ಒಂದೇ ಪದಾರ್ಥದ ಮೇಲೆ ಕೇಂದ್ರೀಕೃತವಾಗಿರುತ್ತಿತ್ತು. ಅದಕ್ಕೆ ಒಪ್ಪ ನೀಡುವುದರಲ್ಲಿ ಅವನು ಶ್ರಮ, ಕಾಲ ಮುಂತಾದವನ್ನು ಲೆಕ್ಕಿಸುತ್ತಿರಲಿಲ್ಲ. ಹೀಗಾಗಿ ಸಹಜವಾಗಿಯೇ ಪದಾರ್ಥದ ಬೆಲೆ ಹೆಚ್ಚು ಆಗುತ್ತಿತ್ತು. ಆ ಉತ್ಪನ್ನ ಅವನ ವೈಯಕ್ತಿಕ ಕಲಾಭಿಜ್ಞತೆಯ ಪ್ರತಿಬಿಂಬ. ಆದರೆ ಕೈಗಾರಿಕಾ ಕ್ರಾಂತಿ, ತಡೆಯಲು ಅಸಾಧ್ಯವಾದ ಪ್ರವಾಹದಂತೆ, ತನ್ನ ವ್ಯಾಪ್ತಿಯಲ್ಲಿ ಎಲ್ಲವನ್ನೂ ಮುಳುಗಿಸಿದಾಗ ಯಂತ್ರಕ್ಕೆ ಈ ಕುಶಲ ಕಸಬುಗಾರನ ಉತ್ತರಾಧಿಕಾರ ಪ್ರಾಪ್ತವಾಯಿತು. ಆದರೆ ಅದರಿಂದ ಹೊರಬಂದ ಮಾಲಿನಲ್ಲಿ ಕಲಾಸ್ಪರ್ಶ ಅಥವಾ ಸ್ವಂತಿಕೆ ಎಂಬುದು ಉಳಿದಿರಲಿಲ್ಲ. ವಾಸ್ತವಿಕವಾಗಿ ಯಂತ್ರದ ಸಾಮರ್ಥ್ಯವನ್ನೂ ವ್ಯಕ್ತಿತ್ವವನ್ನೂ ಉತ್ಪಾದಕರು ಅರ್ಥಮಾಡಿಕೊಳ್ಳದಿದ್ದುದರಿಂದ ಈ ಪರಿಸ್ಥಿತಿ ತಲೆದೋರಿತು. ಕರಕೌಶಲವನ್ನು ಯಂತ್ರೋತ್ಪನ್ನಗಳಲ್ಲಿ ಅರಸುವುದು ಸರಿಯಲ್ಲ. ಉತ್ಪಾದಕರಿಗಿದ್ದ ಉದ್ದೇಶ ಒಂದೇ: ತುಟ್ಟಿಯ ಕರಕೌಶಲದಿಂದ ಹಿಂದೆ ತಯಾರಾಗುತ್ತಿದ್ದ ಅನೇಕ ಗೃಹೋಪಯೋಗಿ ಪದಾರ್ಥಗಳ ಸುಲಭ ಉತ್ಪಾದನೆ ಹಾಗೂ ಬಳಕೆಯನ್ನು ಹೆಚ್ಚಿಸುವುದು. ಆದ್ದರಿಂದ ಮೊದಮೊದಲಿನ ಯಂತ್ರೋತ್ಪಾದಿತ ಪದಾರ್ಥಗಳು ಸಹಜವಾಗಿಯೇ ತಮ್ಮ ಹಿಂದಿನ ಕರಕೌಶಲದ ಪದಾರ್ಥಗಳ ಅನುಕರಣೆಗಳಾಗಿದ್ದು, ಆ ಸಂಪ್ರದಾಯಗಳ ಮಿತಿಗೇ ಒಳಪಟ್ಟು, ಕುಶಲಕರ್ಮಿಗಿರುತ್ತಿದ್ದ ಸ್ಫೂರ್ತಿಯ ಅಭಾವದಿಂದ ಕೃತಕವಾಗಿರುತ್ತಿದ್ದುವು. ಇತ್ತೀಚಿನವರೆಗೂ ನಡೆದು ಬಂದ ಈ ಹಳೆಯ ಶೈಲಿಯ ಅನುಕರಣೆ ವಾಸ್ತವವಾಗಿ ಯಂತ್ರಗಳ ಉದ್ದೇಶವಲ್ಲ. ಅಲ್ಲದೆ ಅಧಿಕ ಉತ್ಪಾದನೆಯೇ ಗುರಿಯಾದ ಅರ್ಥವ್ಯವಸ್ಥೆಯಲ್ಲಿ ಕಂದಾಚಾರದ ಶೈಲಿಗಳನ್ನೇ ಅನಂತವಾಗಿ ಅನುಕರಿಸಲೂ ಸಾಧ್ಯವಿಲ್ಲ. ಕುಶಲಕರ್ಮಿಯ ಅಳಿವಿನಿಂದ ಕೃತಕ ಶೈಲಿಗಳಿಂದಲೇ ಮಾರುಕಟ್ಟೆ ಮಿತಿಮೀರಿ ತುಂಬಿ ನವಯುಗವನ್ನು ಪ್ರತಿಬಿಂಬಿಸುವ ಹೊಸರೂಪಗಳೇ ಬಾರದಾದವು. ಇದರಿಂದ ಉದ್ಭವವಾದ ಬಳಕೆದಾರರ ತಿರಸ್ಕಾರಮನೋಭಾವವನ್ನು ಎದುರಿಸುವುದೇ ಉತ್ಪಾದಕರಿಗೆ ದೊಡ್ಡ ಸಮಸ್ಯೆಯಾಯಿತು. ಈ ನ್ಯೂನತೆಯನ್ನು ಸರಿಪಡಿಸಲು ಮಾಡಿದ ಮೊದಲ ಪ್ರಯತ್ನಗಳಲ್ಲಿ ಕಲೆಗಾರನ ಕೈವಾಡವಿಲ್ಲದ್ದರಿಂದ ಅವು ವಿಕೃತಿಗಳೇ ಆದವು.

ಕಾರ್ಖಾನೆಯ ಎಂಜಿನಿಯರುಗಳೂ ಮುಖ್ಯ ಕಾರ್ಯಗಾರರೂ ಈ ಅನ್ಯ ಸಂಪ್ರದಾಯವನ್ನು ತೊರೆದು ನಿರಾಡಂಬರವಾದ ಅಲಂಕಾರರಹಿತವಾದ ಹಾಗೂ ಯಂತ್ರಕ್ಕೆ ಸಹಜವಾದ ಸರಳಾಕೃತಿಗಳನ್ನು ರೂಪಿಸಲು ತೊಡಗಿದಾಗ ಸರಿಯಾದ ದಿಕ್ಕಿನಲ್ಲಿ ಮೊದಲು ಹೆಜ್ಜೆಯಿಟ್ಟರೆನ್ನಬಹುದು. ಆದರೂ ಕೊಳ್ಳುವ ಜನಕ್ಕೆ ಇವರು ಕಂಡ ಪರಿಹಾರ ಅಷ್ಟಾಗಿ ಹಿಡಿಸಲಿಲ್ಲ. ಇದಕ್ಕೆ ಪ್ರತಿಕ್ರಿಯೆಯಾಗಿ ಈ ರೀತಿಯನ್ನು ವಿಡಂಬನೆ ಮಾಡುವ ಒಂದು ಚಳವಳಿಯೇ ಕಲಾಸಂಪ್ರದಾಯದಲ್ಲಿ ಸುಮಾರು 1900ರ ವೇಳೆಗೆ ಯೂರೋಪಿನಲ್ಲಿ ಪ್ರಾರಂಭವಾಗಿ ಅಂತಾರಾಷ್ಟ್ರೀಯ ಸ್ವಭಾವವನ್ನೇ ತಾಳಿತು. ಅನಂತರ ಯಂತ್ರಯುಗದ ಪ್ರಭಾವ ಕಲೆಗಳ ಮೇಲೂ ಕಲೆಯ ಪ್ರಭಾವ ಯಂತ್ರದ ಮೇಲೂ ಬೀಳಲಾರಂಭಿಸಿ ಕೈಗಾರಿಕೆ ಹಾಗೂ ವರ್ತಮಾನ ಸಂಸ್ಕೃತಿಗಳ ಸಮನ್ವಯಕಾರ್ಯ ಮೊದಲಾಯಿತು. ಹೀಗಾಗಿ ಜನಸಮ್ಮತಿಯ ಹಿಂದಿನ ಮನೋವಿಜ್ಞಾನದ ಅರಿವೂ ತಯಾರಿಕೆಯ ತಂತ್ರ ವಿಧಾನಗಳ ಜ್ಞಾನವೂ ಉಳ್ಳವನ ಕೊರತೆ ಕಾಣತೊಡಗಿತು. ಯಂತ್ರ ಸರಳತೆಯನ್ನೊಳಗೊಂಡು ರೂಪಿತವಾದ ಕೊಳವೆಗಳ ಕುರ್ಚಿ ಈ ಕಾಲಕ್ಕೆ ಸಂಕೇತವೆನ್ನುವಂತೆ ಹೊರಬಂದಿತು.

ಆದರೂ ಕೇವಲ ಈಚೆಗೆ ಮಾತ್ರ ಯಂತ್ರದ ನಿಜವಾದ ಬೆಲೆಯ ಅರಿವಾಗಿ ಕೈಗಾರಿಕಾ ಆಲೇಖ್ಯಕಾರನೂ ಒಬ್ಬ ವಿಶೇಷಜ್ಞನೆಂದು ಅಂಗೀಕರಿಸಲ್ಪಟ್ಟಿದ್ದಾನೆ. ಕೈಗಾರಿಕೆಯ ಸೇವೆಗೆ ನಿಯೋಜಿತವಾದ ಕಲೆಗಾರ ಅವನು. ಮೂಲತಃ ತನ್ನ ಕ್ರಿಯಾತ್ಮಕ ವಿಶೇಷ ಸಾಮರ್ಥ್ಯವನ್ನೂ ಮೂರು ಆಯಾಮಗಳ ಆಕಾರ ಜ್ಞಾನವನ್ನೂ ನವೀನಯಂತ್ರ ಕಲಾಶಾಸ್ತ್ರದೊಂದಿಗೆ ಸಂಯೋಜಿಸಿರುವ ಶಿಲ್ಪಿ ಅವನು. ಅವನ ಮುಖ್ಯ ಆಸಕ್ತಿ ಯಂತ್ರಗಳಿಂದ ರಾಶಿಯಾಗಿ ತಯಾರಾಗುವ ಪದಾರ್ಥಗಳ ದೃಗಂಶ. ಕಾರ್ಖಾನೆಯಲ್ಲಿ ತಯಾರಾಗುವ ಒಂದು ಪದಾರ್ಥದ ಉದ್ದೇಶ, ಮೂಲಸಾಮಗ್ರಿ, ಸಲಕರಣೆಗಳು

ತಯಾರಿಕಾವಿಧಾನಗಳು ಮತ್ತು ಆರ್ಥಿಕ ನಿರ್ವಹಣ ಎಲ್ಲ ಕೂಡಿದಂತೆ ಒಟ್ಟು ಸಮಸ್ಯೆಯನ್ನು ಅವನು ತನ್ನ ರಸಾಭಿಜ್ಞತೆಯ ಮೌಲ್ಯಗಳಿಗೆ ಸರಿಹೊಂದಿಸುತ್ತಾನೆ. ಮಾರುಕಟ್ಟೆಯ ಜಗಲಿಯ ಮೇಲೆ ಅಥವಾ ಅಂಗಡಿಯ ಮಾರುಗೆಯ ಮೇಜದ ಮೇಲೆ ಮತ್ತು ಕಟ್ಟಕಡೆಗೆ ಮನೆಯಲ್ಲಿಯ ತನ್ನ ಸ್ಥಾನದಲ್ಲಿ ಒಪ್ಪವಾಗಿ ಮೆರೆಯ ಬೇಕಾದ ಅಂತಿಮ ಪದಾರ್ಥವೇ ಸದಾ ಅವನ ಲಕ್ಷ್ಯದಲ್ಲಿರುತ್ತದೆ. ಹೀಗೆ ಉತ್ಪಾದಕನ, ಮಾರಿಗೆಯವನ ಮತ್ತು ಬಳಕೆದಾರನ ಮೂರು ವಿವಿಧ ದೃಷ್ಟಿಕೋನಗಳ ಜಾಣತನದ ಸಮನ್ವಯ ಅವನ ಕರ್ತವ್ಯವಾಗುತ್ತದೆ. ದಿನ ಬಳಕೆಯ ವಸ್ತುಗಳಲ್ಲಿ ಸಮಕಾಲೀನ ಕಲಾಭಿಜ್ಞತೆಯ ಅಭಿವ್ಯಕ್ತಿಯನ್ನು ತೋರಿಸುವುದೇ ಸಮಾಜಕ್ಕೆ ಅವನ ಮುಖ್ಯ ಕಾಣಿಕೆ.

ಯಂತ್ರಸಹಜವಾದ ಕಲೆಯಲ್ಲಿ ಮೇಲ್ಮೈಯ ಅಲಂಕರಣಕ್ಕೆ ಸ್ಥಾನವಿಲ್ಲ. ನಿಷ್ಪಕ್ಷತೆ, ಸರಳತೆ, ಪ್ರತಿರೂಪ ತಯಾರಿಕೆಯ ಸೌಲಭ್ಯ ಇವು ಯಂತ್ರದ ಪ್ರಧಾನ ಲಕ್ಷಣಗಳು. ವಾಸ್ತುಶಿಲ್ಪಕ್ಕೆ ಮೂರು ಪ್ರಮುಖ ಗುಣಗಳಿರಬೇಕೆಂದು ಹೇಳುತ್ತಾರೆ. ಪ್ರಯೋಜನ(ಉಪಯುಕ್ತತೆ) ಸತ್ತ್ವ ಮತ್ತು ಸೌಂದರ್ಯ. ಮಾನವನ ಆವಶ್ಯಕತೆಗಳನ್ನು ಪೂರೈಸುವ ಯಾವ ಕಲಾವಿಭಾಗಕ್ಕಾಗಲಿ, ಹಾಗೆಯೇ ಕೈಗಾರಿಕಾ ರೂಪರಚನೆಗೆ ಸಹ, ಇವೇ ನಿರ್ದೇಶಕಗಳೆಂದು ಹೇಳಬಹುದು. ಕಲಾಲಕ್ಷಣಗಳು ಮೂರ್ತಿಶಿಲ್ಪ ಹಾಗೂ ಚಿತ್ರಕಲೆಗೇ ಮೀಸಲಾಗಿರದೆ ಮಾನವನಿರ್ಮಿತ ವಸ್ತು ಯಾವುದಕ್ಕೂ ಇರಬಹುದು. ಸರ್ವರಂಜಕವಾದ ಈ ಗುಣಗಳನ್ನು ಅಳವಡಿಸುವುದರಿಂದ ಯಾಂತ್ರಿಕ ದಕ್ಷತೆಯನ್ನೇನೂ ಕಳೆದುಕೊಳ್ಳಬೇಕಾಗಿಲ್ಲ ಎಂಬುದು ಉತ್ಪಾದಕರಿಗೆ ಮನದಟ್ಟಾಗಲು ಬಹಳ ಕಾಲವೇ ನಡೆಯಿತು. ರಚನಾಶಾಲೆಯಲ್ಲಿ ನಡೆಸಲಾದ ಪ್ರಯೋಗಗಳು ಯಂತ್ರನಿರ್ಮಿತ ಕೇವಲ ಪಾತಳಿಗಳಲ್ಲೂ ಅಮೂರ್ತ ಆಕೃತಿಗಳಲ್ಲೂ ಸೌಂದರ್ಯವನ್ನು ಕಾಣಬಹುದು ಎಂದೂ ಸೂಕ್ಷ್ಮಗ್ರಹಿಕೆಯಿಂದ ಆಕಾರ, ಬಣ್ಣ, ಹವಣು, ಐಕ್ಯ ಇವುಗಳ ಸಾಮರಸ್ಯವನ್ನು ಉತ್ಪಾದಿತ ಪದಾರ್ಥದಲ್ಲಿ ಸಾಧಿಸಬಹುದು ಎಂದೂ 1919–29ರ ಅವಧಿಯಲ್ಲಿ ಜರ್ಮನಿಯ ವಾಸ್ತುಶಿಲ್ಪಿ ವಾಲ್ಟರ್ ಗ್ರೋಪಿಯಸ್‌ನ ನೇತೃತ್ವದಲ್ಲಿ ಸ್ಥಾಪಿತವಾದ ಆಲೇಖ್ಯ ತೋರಿಸಿಕೊಟ್ಟವು.

ಮೇಲೆ ಹೇಳಿದಂತೆ ಆಲೇಖ್ಯ ರಚನೆಯಲ್ಲಿ ಪ್ರಧಾನ ಲಕ್ಷ್ಯ ಉಪಯುಕ್ತತೆ. ಪ್ರತಿ ಆಕಾರಕ್ಕೂ ಒಂದು ಉದ್ದೇಶವಿರಬೇಕು. ಮೂರ್ತಿಶಿಲ್ಪಕ್ಕೆ ಒಂದು ಉದ್ದೇಶವಿದ್ದರೆ ಕುಡಿಯುವ ಲೋಟಕ್ಕೂ ಒಂದು ಉದ್ದೇಶ ಅಗತ್ಯ. ಮನೆಯಲ್ಲಿ, ಕೆಲಸದಲ್ಲಿ, ಆಟದಲ್ಲಿ ಎಲ್ಲೆಲ್ಲೂ ಮಾನವನೇ ಮತ್ತು ಮಾನವಾಕೃತಿಯ ಅಳತೆ ಹಾಗೂ ಚಲನೆಗಳೇ ಇಲ್ಲಿ ಮುಖ್ಯ. ವಿಶ್ವಸೌಂದರ್ಯವನ್ನೇ ಸೂರೆಗೊಳ್ಳುವಂತೆ ಒಂದು ಕುರ್ಚಿಯನ್ನು ತಯಾರುಮಾಡಿದ್ದರೂ ಒಬ್ಬ ಮಾನವ ಸುಖಾಸೀನನಾಗಿ ಭದ್ರವಾಗಿ ಅದರ ಮೇಲೆ ಕುಳಿತುಕೊಳ್ಳಲಾಗದಿದ್ದರೆ ಒಂದು ಕುರ್ಚಿಯಾಗಿ ಅದರ ರಚನೆ ವ್ಯರ್ಥವೇ. ಎರಡನೆಯ ಗುಣವಾದ ಸತ್ತ್ವವನ್ನು ಸ್ಥೂಲವಾಗಿ ಆಲೇಖ್ಯರಚನೆಯ ಕಾಲ, ಪದಾರ್ಥದ ಮೂಲ ಸಾಮಗ್ರಿಯ ಗುಣ, ಅದನ್ನು ಮಾಡುವಲ್ಲಿ ಉಪಯೋಗಿಸುವ ವಿಧಾನ ಇವುಗಳ ಬಗ್ಗೆ ತೋರಿಸಬೇಕಾದ ಒಂದು ಮಟ್ಟ ಎನ್ನಬಹುದು. ಪುರಾತನ ದೇವಾಲಯದ ಗೋಪುರ ಆ ಕಾಲದ ಸಂಸ್ಕೃತಿಯ ಅಭಿವ್ಯಕ್ತಿ ಎನ್ನಬಹುದಾದರೂ ಇಂದಿನ ಒಂದು ವಿದ್ಯುತ್ ಅಗ್ಗಿಷ್ಟಿಕೆಗೆ ಕೂರ್ಮ ಪೀಠವನ್ನು ಜೋಡಿಸಿದರೆ ಅದು ಈ ಕಾಲದ ಜೀವನದ ರೀತಿಯ ಅಭಿವ್ಯಕ್ತಿ ಅನ್ನಿಸದು. ಹಾಗೆಯೇ ಕಬ್ಬಿಣದಿಂದಾದ ಪದಾರ್ಥವನ್ನು ಮರದಿಂದ ಆದದ್ದೇನೋ ಎಂದು ತೋರುವಂತೆ ಮಾಡುವುದು ಒಂದು ಸಾಹಸವಾಗಬಹುದಾದರೂ ಆಲೇಖ್ಯದ ಹಾಗೂ ಆರ್ಥಿಕ ದೃಷ್ಟಿಯಿಂದ ಅದು ಅಸಂಬದ್ಧ. ಆಯಾ ಪದಾರ್ಥದ ಅಂತರ್ಗತ ಲಕ್ಷಣಗಳಿಗೆ ಸಾಧ್ಯತೆಗಳಿಗೆ ಸರಿಯಾದ ಮನ್ನಣೆ ಇರಬೇಕು. ಅದೇ ರೀತಿ ಕೈ ಕಸಬಿನಲ್ಲಿ ಸಾಧ್ಯವಾಗುವ, ಅಲ್ಲಿ ಅದೇ ಒಂದು ಮಾನ್ಯಗುಣವಾಗುವ ವಿವರವಾದ ಆಲಂಕಾರಿಕ ಕೆತ್ತನೆಗಳು ಯಂತ್ರನಿರ್ಮಿತ ವಸ್ತುವಿನಲ್ಲಿ ಅವಾಸ್ತವ. ಮೂರನೆಯ ಗುಣವಾದ ಸೌಂದರ್ಯ ಸುಲಭವಾಗಿ ಹಿಡಿತಕ್ಕೆ ಸಿಗದ ಆದರೆ ಆಲೇಖ್ಯರಚನೆಯಲ್ಲಿ ಮುಖ್ಯವಾದ ಅಂಶ. ಇದಕ್ಕೆ ಸರ್ವಸಮ್ಮತವಾಗುವ ಲಕ್ಷಣ ನಿರೂಪಣೆ ಮಾಡಲಾಗದಿದ್ದರೂ ಸಾಮಾನ್ಯವಾಗಿ ಹೆಚ್ಚು ಜನಕ್ಕೆ ಪ್ರಿಯವಾಗಬಲ್ಲ ಗುಣಗಳನ್ನು, ಎಂದರೆ–ಭಾವ, ಬಂಧ, ಬಣ್ಣ ಗಾತ್ರದಲ್ಲಿ ಮಂದ ಹಾಗೂ ತೆಳುವಿನ ಹವಣು, ಒಂದು ತೆರನಾದ ಐಕ್ಯ ಇವನ್ನು ಒಳಗೊಂಡು ಸುಸಂಸ್ಕೃತ ರುಚಿಗೆ ದ್ಯೋತಕವಾಗಿರುವುದು ಎನ್ನಬಹುದು. ಆಲೇಖ್ಯಕಾರನ ವಿಶಿಷ್ಟ ಸಾಮರ್ಥ ಬೇಕಾಗುವುದು ಇಲ್ಲಿಯೇ.

ಈವರೆಗಿನ ಬೆಳವಣಿಗೆಯಲ್ಲಿ ಕೈಗಾರಿಕಾ ಆಲೇಖ್ಯ ರಚನೆ ತನ್ನದೇ ಆದ ಸಂಪ್ರದಾಯವನ್ನೇನೂ ಹಾಕಿಕೊಂಡಿಲ್ಲದಿದ್ದರೂ ನಾಲ್ಕುಬಗೆಯ ಪ್ರವೃತಿಗಳನ್ನು ಇಲ್ಲಿ ಗುರುತಿಸಬಹುದು. ಮೊದಲನೆಯದು ಅವೈಯಕ್ತಿಕತೆ. ಕೈಗಾರಿಕೆಗೆ ಬೇಕಾದ ಆಲೇಖ್ಯರಚನೆ ಒಬ್ಬ ವ್ಯಕ್ತಿಯಿಂದಾಗಿರಲಿ, ಇಲ್ಲವೇ ಒಂದು ತಂಡದಿಂದಾಗಿರಲಿ ಅದರ ಅಭಿವ್ಯಕ್ತಿಯಲ್ಲಿ ಒಂದು ನಿಷ್ಪಕ್ಷಪಾತತೆ ಅಥವಾ ಅನಿರ್ದಿಷ್ಟತೆಯನ್ನು ಕಾಣಬಹುದು. ಇದು ಅಧಿಕಗಾತ್ರದ ಉತ್ಪನ್ನ ಹಾಗೂ ಮಾರಿಗೆಯ ಸಹಜ ಮುಖ ಎಂಬ ಪ್ರಶಂಸೆಯಿದ್ದರೂ ಇದರಲ್ಲಿ ವೈಯಕ್ತಿಕ ವೈಶಿಷ್ಟ್ಯಕ್ಕೆ ಅವಕಾಶವಿಲ್ಲ. ಆದ್ದರಿಂದ ಇದು ಯಂತ್ರಕ್ಕೆ ಶರಣಾಗತಿ. ಕರಕೌಶಲದ ಕೈವಾಡಕ್ಕೆ ಬಡಪ್ರತಿ ಎಂಬ ಟೀಕೆಯೂ ಇದೆ. ಎರಡನೆಯದಾಗಿ ಈ ಆಲೇಖ್ಯರಚನೆಯಲ್ಲಿ ಹೊರ ತೋರಿಕೆಯ ಸೊಗಸುಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಜಟಿಲವಾದ ಯಂತ್ರ ಸಂಬಂಧದ ಹಾಗೂ ವಿದ್ಯುನ್ಮಾನದ ಜೋಡಣೆಯ ವಿವರಗಳನ್ನೆಲ್ಲ ಅಲ್ಲಿ ಕೆಲಸಮಾಡುವ ಎಂಜಿನಿಯರುಗಳಿಗೇ ಬಿಟ್ಟುಬಿಡಲಾಗುತ್ತಿದೆ ಎಂಬ ಟೀಕೆ ಉಂಟು. ಹೊರಗಿನ ರೂಪ, ಒಳಗಿನ ರಚನೆ ಮತ್ತು ತಯಾರಿಕಾ ನಿರ್ವಹಣೆ ಇವು ಮೂರರ ಬೆಸುಗೆಯಂತಿರಬೇಕು ಆಲೇಖ್ಯರಚನೆ ಎಂಬುದು ಆದರ್ಶವಾದರೂ ಅದರ ಸಿದ್ಧಿ ಸ್ವಲ್ಪ ಕಠಿಣವೇ. ಆದರೂ ಜಟಿಲ ರಚನೆಯ ಯಂತ್ರಗಳಿಗೆ ನಿರಪಾಯತೆ, ಸ್ವಚ್ಛತೆ ಹಾಗೂ ಓರಣಗಳ ದೃಷ್ಟಿಯಿಂದ ಚೊಕ್ಕವಾದ ಆವರಣವನ್ನು ನಿರ್ಮಿಸಬೇಕಾದದ್ದು ಅಗತ್ಯ. ಮೂರನೆಯದಾಗಿ ಧಾರಾಲೇಖೆಗೆ (ಸ್ಟ್ರೀಂ ಲೈನಿಂಗ್) ಇತ್ತೀಚಿನ ಹೆಚ್ಚಿನ ಪ್ರಾಶಸ್ತ್ಯ. ದ್ರವಮಾಧ್ಯಮದಲ್ಲಿ ದಕ್ಷತೆಯಿಂದ ವೇಗವಾಗಿ ಚಲಿಸಲು ಬೇಕಾದ ವಿಶಿಷ್ಟ ರೀತಿಯ ಡೊಂಕು ಮೇಲ್ಮೈಯ, ಭಾಗಭಾಗಕ್ಕೆ ಕ್ರಮೇಣ ಬದಲಾವಣೆಯಿರುವ ಮೀನಾಕಾರ ಇದು. ಸಂತತ ವೇಗಪ್ರಿಯವಾದ ಈ ಯುಗದಲ್ಲಿ ಈ ಆಕೃತಿ ಪ್ರಗತಿಯ ಸಂಕೇತವೇ ಆಗಿಬಿಟ್ಟಿದೆ. ಕೈಗಾರಿಕಾ ಆಲೇಖ್ಯ ರಚನೆಯಲ್ಲಿ ಈ ಗೀಳನ್ನು ಬಳಸಿಕೊಂಡು ವಾಸ್ತವವಾಗಿ ವೇಗಕ್ಕೆ ಏನೇನೂ ಸಂಬಂಧವಿರದ ಪದಾರ್ಥಗಳಿಗೆಲ್ಲ ಈ ಆಕಾರ ಕೊಡಲಾಗುತ್ತಿದೆ ಎಂಬ ಟೀಕೆ ಉಂಟು. ತರ್ಕಬದ್ಧತೆಗಿಂತ ಮಾನವಸಹಜ ದೌರ್ಬಲ್ಯವೇ ಇಲ್ಲಿ ಎದ್ದು ಕಾಣಿಸುತ್ತಿದೆ ಎನ್ನಬಹುದು. ನಾಲ್ಕನೆಯ ಪ್ರವೃತ್ತಿಯೆಂದರೆ ಲುಪ್ತತೆಯನ್ನು ಕೃತಕವಾಗಿ ತ್ವರಿತಗೊಳಿಸುವುದು. ಜಾಹಿರಾತಿನಿಂದ ರೂಪಿಸಲ್ಪಟ್ಟ ಸಾರ್ವಜನಿಕ ಅಭಿಪ್ರಾಯ ಬೆಲೆಗಳ ಬದಲಾವಣೆ, ಬಾಹ್ಯರೂಪದಲ್ಲಿ ಮತ್ತು ಉಪಯುಕ್ತತೆಯಲ್ಲಿ ಸಾಧಿಸಲಾದ ಮುನ್ನಡೆ ಇವುಗಳ ಮೂಲಕ ಒಮ್ಮೆ ಕೊಂಡ ಪದಾರ್ಥಗಳು ಸಹಜವಾಗಿ ಸವೆಯುವ ಮೊದಲೇ ಹಳತಾಗಿ ಕಾಣುವಂತೆ ಮಾಡಿ, ಬಳಕೆದಾರ ಹೊಸ ಪದಾರ್ಥಗಳನ್ನು ಕೊಳ್ಳುವಂತೆ ಪ್ರಲೋಭಿಸುವ ಆಲೇಖ್ಯರಚನೆ. ಅದರಲ್ಲೂ ಮೋಟಾರು ಕಾರುಗಳು ಮತ್ತು ಅನೇಕ ಗೃಹಪರಿಕರಗಳ ವಿಷಯದಲ್ಲಿ ಉಂಟಾಗಿಸಿರುವ ಈ ಚಪಲ ಪ್ರವೃತ್ತಿ ಎಷ್ಟೋ ಕಡೆ ಉದ್ರೇಕಪರವಾದ ಹಾಗೂ ತರ್ಕಬದ್ಧ ಪ್ರತಿಕ್ರಿಯೆಗೆ ಎಡೆಕೊಟ್ಟಿದ್ದರೂ ಅದರ ಆರ್ಥಿಕ ಪರಿಣಾಮಕ್ಕಾಗಿ ಉಪಯೋಗದಲ್ಲಿದೆ.

ಒಟ್ಟಿನಲ್ಲಿ ಕೈಗಾರಿಕಾ ಆಲೇಖ್ಯರಚನೆ ಪ್ರಪಂಚದ ಅರ್ಥ ವ್ಯವಸ್ಥೆ, ಖಾಸಗಿ ಪ್ರಭಾವ ಮತ್ತು ಅನುಭೋಗ, ಕಲೆಗಳು, ಯಂತ್ರಶಾಸ್ತ್ರ, ಶಿಕ್ಷಣ ಇವೆಲ್ಲವುಗಳಿಂದ ಪ್ರಭಾವಿತವಾಗಿ ಹಾಗೂ ಅವುಗಳ ಮೇಲೆ ತನ್ನ ಪ್ರಭಾವ ಬೀರಿ ವರ್ಧಿಸುತ್ತಿರುವ ಪ್ರಬಲಶಕ್ತಿಯಾಗಿದೆ. ಕಲೆಯ ಸಿದ್ಧಿಗಿಂತಲೂ ಆರ್ಥಿಕ ಚಟುವಟಿಕೆಗೆ ಅದರಿಂದ ಪ್ರಚೋದನೆ ದೊರೆತಿದೆ. ದೊಡ್ಡ ಕೈಗಾರಿಕಾ ವ್ಯವಸ್ಥೆಗಳಲ್ಲಿ ಆಲೇಖ್ಯರಚನೆಗಾಗಿಯೇ ಮೀಸಲಾದ ಇಲಾಖೆಗಳು, ಕಾರ್ಯಶಾಲೆಗಳು ಆವಶ್ಯಕ ವಿಭಾಗಗಳಾಗಿವೆ. ಸಣ್ಣವುಗಳಲ್ಲಿ ಆಲೇಖ್ಯರಚನೆಗಾಗಿ ಸ್ವಂತ ಸಿಬ್ಬಂದಿಯಿರುತ್ತದೆ. ಅಥವಾ ಸ್ವತಂತ್ರವಾದ ವೃತ್ತಿಗಾರರಿಂದ ಅಂಥ ವ್ಯವಸ್ಥೆಗಳು ಸಲಹೆ ಪಡೆಯುತ್ತವೆ. ವೃತ್ತಿ ಹೊಸದಾದರೂ ಮುಂದುವರಿದ ರಾಷ್ಟ್ರಗಳಲ್ಲಿ ತಮ್ಮದೇ ಆದ ನಿಯಮ, ನಿಬಂಧನೆಗಳನ್ನು ಶಿಕ್ಷಣ ಮಟ್ಟಗಳನ್ನು ರೂಪಿಸಿಕೊಂಡು ಊರ್ಜಿತವಾಗಿರುವ ವೃತ್ತಿ ಸಂಸ್ಥೆಗಳು ಮನ್ನಣೆಯನ್ನು ಪಡೆದಿವೆ. (ಕೆ.ವಿ.ಎಸ್.)

**ಕೈಗಾರಿಕೀಕರಣ :** ಉತ್ಪಾದನೆಯ ಕಾರ್ಯಕ್ಕೆ ವೈಜ್ಞಾನಿಕ ಮತ್ತು ತಾಂತ್ರಿಕ ತಿಳಿವಳಿಕೆಯ ಅನ್ವಯ; ಶ್ರಮವಿಭಜನೆ, ವಿಶೇಷೀಕರಣ, ಉತ್ಪಾದನೆಯಲ್ಲಿ ಯಾಂತ್ರಿಕ, ರಾಸಾಯನಿಕ ಮತ್ತು ಶಾಕ್ತಿಕ ಸಹಾಯಕಗಳ ಬಳಕೆ (ಇಂಡಸ್ಟ್ರಿಯಲೈಸೇಷನ್), ಸುಧಾರಿತ ಉತ್ಪಾದನ ವಿಧಾನಗಳನ್ನು ಅನುಸರಿಸಿ ಉತ್ಪನ್ನದ ಪ್ರತಿ ಘಟಕಕ್ಕೂ ತಗಲುವ ಉತ್ಪಾದನ ವೆಚ್ಚವನ್ನು ಗಣನೀಯವಾಗಿ ತಗ್ಗಿಸುವುದು ಮತ್ತು ಉತ್ಪಾದನೆಯನ್ನು ಹೆಚ್ಚಿಸಿ ಆ ಮೂಲಕ ಜನರ ಜೀವನಮಟ್ಟವನ್ನು ಉತ್ತಮಗೊಳಿಸುವುದು ಕೈಗಾರಿಕೀಕರಣದ ಮುಖ್ಯ ಉದ್ದೇಶ. ತಾಂತ್ರಿಕ ಮತ್ತು ವೈಜ್ಞಾನಿಕ ತಿಳಿವಳಿಕೆ ಹೆಚ್ಚಿದಂತೆ ಸುಧಾರಿತ ಉತ್ಪಾದನ ವಿಧಾನಗಳನ್ನು ಅನುಸರಿಸುತ್ತಿರುವುದರಿಂದ ಒಂದು ದಿನವಿಡೀ ಉತ್ಪಾದಿಸುತ್ತಿದ್ದುದನ್ನು ಕೆಲವು ನಿಮಿಷಗಳಲ್ಲಿ ಉತ್ಪಾದಿಸಬಹುದಾಗಿದೆ. ಮಾನವನ ಶಕ್ತಿಗೆ ಮೀರಿದ ಎಷ್ಟೋ ಕೆಲಸಗಳನ್ನು ಯಂತ್ರೋಪಕರಣಗಳ ಸಹಾಯದಿಂದ ಅನಾಯಾಸವಾಗಿ ನಿರ್ವಹಿಸಬಹುದು.

1750–1825ರ ಅವಧಿಯಲ್ಲಿ ಬ್ರಿಟನ್ನಿನಲ್ಲೂ ಅನಂತರ ಇತರ ದೇಶಗಳಲ್ಲೂ ಉಂಟಾದ ಕೈಗಾರಿಕಾಕ್ರಾಂತಿ ಕೈಗಾರಿಕೀಕರಣಕ್ಕೆ ಪ್ರಮುಖ ಕಾರಣ. ಉಗಿ ಶಕ್ತಿಯ ಬಳಕೆಯನ್ನು ಪ್ರಾರಂಭಿಸಿದಾಗಿನಿಂದ ಯಂತ್ರಗಳ ಬಳಕೆ ಹೆಚ್ಚಿತು. ದೊಡ್ಡ ಕಾರ್ಖಾನೆಗಳು ಸ್ಥಾಪಿತವಾದುವು. ಕಡಿಮೆ ವೆಚ್ಚದಲ್ಲಿ ಹೆಚ್ಚು ಉತ್ಪಾದನೆ ಸಾಧ್ಯವಾಯಿತು. ಮೊದಲು ಜವಳಿ ಕೈಗಾರಿಕೆ, ಅನಂತರ ಸಾರಿಗೆ, ಬೃಹತ್ ಕೈಗಾರಿಕೆಗಳು–ಹೀಗೆ ಕೈಗಾರಿಕೀಕರಣ ಕೆಲವು ವಿಭಾಗಗಳಲ್ಲಿ ಪ್ರಾರಂಭವಾಗಿ ಅನಂತರ ಇತರ ವಿಭಾಗಗಳಿಗೆ ಹರಡಿತು. ಇಂದು ಯಂತ್ರಗಳ ಬಳಕೆಯಿಂದ ಉತ್ಪಾದನೆಯೇ ವಿರಳ. ಕುಶಲ ಕೈಗಾರಿಕೆಗಳಲ್ಲಿ

ಕೂಡ ಯಾವುದಾದರೂ ರೂಪದಲ್ಲಿ ಯಂತ್ರದ ಬಳಕೆ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಬ್ರಿಟನ್ನಿನಲ್ಲಿ ಪ್ರಾರಂಭವಾದ ಕೈಗಾರಿಕೀಕರಣ ಅಮೆರಿಕ ಸಂಯುಕ್ತಸಂಸ್ಥಾನ, ಯುರೋಪ್, ರಷ್ಯ, ಜಪಾನ್‌ಗಳಿಗೆ ಹರಡಿ ಅನಂತರ ಇತರ ರಾಷ್ಟ್ರಗಳನ್ನು ಮುಟ್ಟಿತು. ಯುರೋಪ್ ಮತ್ತು ಐರೋಪ್ಯ ಮೂಲದ ರಾಷ್ಟ್ರಗಳೇ ಕೈಗಾರಿಕೆಯಲ್ಲಿ ಹೆಚ್ಚಾಗಿ ಮುಂದುವರಿದಿರುವುದು ಕೈಗಾರಿಕೀಕರಣದ ಒಂದು ವಿಶೇಷ ಲಕ್ಷಣ. 1950ರ ದಶಕದ ತನಕ ಜಪಾನನ್ನು ಬಿಟ್ಟರೆ ಐರೋಪ್ಯ ಸಂಪರ್ಕವಿಲ್ಲದೆ ಬೇರೆ ಯಾವ ರಾಷ್ಟ್ರವೂ ಕೈಗಾರಿಕೆಯಲ್ಲಿ ಪ್ರಗತಿ ಸಾಧಿಸಿರಲಿಲ್ಲ. ಇತ್ತೀಚೆಗೆ ಏಷ್ಯ ಮತ್ತು ಇತರ ಖಂಡಗಳ ರಾಷ್ಟ್ರಗಳಲ್ಲೂ ಕೈಗಾರಿಕಾಭಿವೃದ್ಧಿ ಕಂಡುಬರುತ್ತಿದೆ. 20ನೆಯ ಶತಮಾನದ ಮಧ್ಯಭಾಗದಲ್ಲೂ ಪ್ರಪಂಚದ 2/3 ಭಾಗ ಪ್ರಜಾಸಂಖ್ಯೆ ಕೈಗಾರಿಕೀಕರಣದ ಫಲವನ್ನು ಪಡೆದಿರಲಿಲ್ಲ. ಕೈಗಾರಿಕೆಗಳು ಪ್ರಗತಿಪರವಾಗಿ ಬೆಳೆದ ರಾಷ್ಟ್ರಗಳಲ್ಲಿ ಜೀವನಮಟ್ಟ ಉತ್ತಮಗೊಂಡು ಜನರು ಅದರ ಪ್ರಯೋಜನ ಪಡೆದಿದ್ದರು. ಕೈಗಾರಿಕೆಯಲ್ಲಿ ಹಿಂದುಳಿದ ರಾಷ್ಟ್ರಗಳು ನೇರವಾಗಿ ಅದರ ಫಲವನ್ನು ಪಡೆಯದಿದ್ದರೂ ಕೈಗಾರಿಕೆಯಲ್ಲಿ ಮುಂದುವರಿದ ರಾಷ್ಟ್ರಗಳ ಸಂಪರ್ಕದಿಂದ ಪರೋಕ್ಷವಾಗಿ ಸ್ವಲ್ಪಮಟ್ಟಿಗೆ ಪ್ರಯೋಜನ ಪಡೆದುವು.

ಕೆಲವೇ ರಾಷ್ಟ್ರಗಳು ಕೈಗಾರಿಕೀಕರಣದಲ್ಲಿ ವಿಶೇಷ ಪ್ರಗತಿ ಸಾಧಿಸಲು ಅವಕ್ಕೆ ದೊರಕಿದ ಅನುಕೂಲಪರಿಸ್ಥಿತಿಗಳೇ ಕಾರಣ. ದಕ್ಷರಾದ ಕಾರ್ಮಿಕರು,ಕಚ್ಚಾ ಸಾಮಗ್ರಿಗಳ ಲಭ್ಯತೆ ಮತ್ತು ತಯಾರಾದ ವಸ್ತುಗಳಿಗೆ ಮಾರುಕಟ್ಟೆಯ ಪ್ರಾಪ್ತಿ, ಬಂಡವಾಳ, ವೈಜ್ಞಾನಿಕ ಮತ್ತು ತಾಂತ್ರಿಕ ತಿಳಿವಳಿಕೆಯ ಬೆಳವಣಿಗೆ, ಅಭಿವೃದ್ಧಿಗೆ ಸಹಾಯಕವಾಗುವಂಥ ಕೈಗಾರಿಕೀಕರಣ ತ್ವರಿತವಾಗಿ ಮುಂದುವರಿದು ಇತರ ರಾಷ್ಟ್ರಗಳ ಹಿಂದೆ ಬಿದ್ದುವು.

ಹಿಂದುಳಿದ ರಾಷ್ಟ್ರಗಳು ಕೈಗಾರಿಕೀಕರಣಕ್ಕಾಗಿ ಈ ಶತಮಾನದ ಆದಿಭಾಗದಿಂದಲೂ ಹಾತೊರೆಯುತ್ತಿರುವುದು ಕಂಡುಬರುತ್ತಿದೆ. 20ನೆಯ ಶತಮಾನದ ಮೊದಲ ಮೂರೂವರೆ ದಶಕಗಳಲ್ಲಿ ಕೈಗಾರಿಕೀಕರಣಕ್ಕೆ ಪ್ರೋತ್ಸಾಹ ನೀಡಿದ್ದು ರಾಜಕೀಯ ಕಾರಣಕ್ಕಾಗಿ ಅಥವಾ ರಾಷ್ಟ್ರೀಯ ಮನೋಭಾವದ ಪ್ರಾಬಲ್ಯದ ಪರಿಣಾಮವಾಗಿ, ಫ್ರೆಡರಿಕ್ ಲಿಸ್ಟನ ವಿಚಾರಧಾರೆಯ ಪ್ರಭಾವಕ್ಕೊಳಗಾಗಿ ಅನೇಕ ರಾಷ್ಟ್ರಗಳು ರಾಷ್ಟ್ರೀಯ ಮತ್ತು ರಕ್ಷಣಾ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ಕೈಗಾರಿಕೀಕರಣಕ್ಕೆ ಪ್ರೋತ್ಸಾಹ ನೀಡಿದುವು. 1930ರ ದಶಕದಲ್ಲಿ ಕೈಗಾರಿಕೀಕರಣಕ್ಕೆ ಹೊಸ ಉತ್ತೇಜನ ದೊರಕಿತು. ಹೊರದೇಶಗಳಿಂದ ಬರುವ ಕೈಗಾರಿಕಾ ಸರಕುಗಳ ಮೇಲೆ ಸುಂಕ ವಿಧಿಸಿ ಆಮದನ್ನು ತಗ್ಗಿಸಿ ಸ್ವದೇಶೀ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ ಕೈಗಾರಿಕೀಕರಣಕ್ಕೆ ಅನುವು ಮಾಡಲಾಯಿತು.

ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರದ ಆದಾಯವನ್ನು ಹೆಚ್ಚಿಸಲು ಮತ್ತು ಉದ್ಯೋಗಾವಕಾಶಗಳನ್ನು ಕಲ್ಪಿಸಲು ಕೈಗಾರಿಕೀಕರಣ ಆವಶ್ಯಕವೆಂಬ ವಾದಕ್ಕೆ ಹೆಚ್ಚು ಪುರಸ್ಕಾರ ದೊರೆತಿದೆ. ಬಡತನ, ಹಸಿವು, ದಾರಿದ್ರ್ಯಗಳನ್ನು ಹೋಗಲಾಡಿಸುವುದು ಹಿಂದುಳಿದ ರಾಷ್ಟ್ರಗಳ ಮೂಲಭೂತ ಸಮಸ್ಯೆ. ಇವನ್ನು ತೊಡೆದುಹಾಕಲು ರಾಷ್ಟ್ರದಲ್ಲಿ ಉತ್ಪಾದನೆ ಹೆಚ್ಚಬೇಕು. ಅಂದರೆ ರಾಷ್ಟ್ರೀಯ ವರಮಾನ ಹೆಚ್ಚಬೇಕು. ಯಂತ್ರೋಪಕರಣಗಳ ಬಳಕೆ ಹೆಚ್ಚದೆ ಮತ್ತು ಬೃಹತ್ ಕೈಗಾರಿಕೆಗಳ ಬೆಳವಣಿಗೆಯಾಗದೆ ಕೈಗಾರಿಕಾ ಉತ್ಪಾದನೆಯಾಗಲಿ, ಕೃಷಿ ಉತ್ಪಾದನೆಯಾಗಲಿ ಹೆಚ್ಚುವಂತಿಲ್ಲ. ಆದ್ದರಿಂದ ಕೈಗಾರಿಕೀಕರಣವಾಗಬೇಕೆಂಬ ವಾದ ಬೆಳೆಯಿತು.

ಬೆಳೆಯುತ್ತಿರುವ ಜನಸಂಖ್ಯೆಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಹಿಂದುಳಿದ ರಾಷ್ಟ್ರಗಳ ಒಂದು ದೊಡ್ಡ ಸಮಸ್ಯೆ. ಕೃಷಿ ಕ್ಷೇತ್ರದಲ್ಲೆ ಎಲ್ಲರಿಗೂ ಉದ್ಯೋಗ ದೊರಕುವುದು ಅಸಾಧ್ಯ. ವಾಸ್ತವವಾಗಿ ಕೃಷಿ ಕ್ಷೇತ್ರದಲ್ಲಿ ಈಗ ಕೆಲಸ ಮಾಡುತ್ತಿರುವವರ ಸಂಖ್ಯೆ ಅತಿಯಾಗಿದ್ದು, ಅನೇಕರು ಸಾಕಷ್ಟು ಕೆಲಸವಿಲ್ಲದಿದ್ದರೂ ಆ ಕ್ಷೇತ್ರದಲ್ಲೆ ಉಳಿದಿದ್ದಾರೆ. ಕೃಷಿಯಲ್ಲಿ ತಲಾ ಉತ್ಪಾದನೆ ಹೆಚ್ಚಬೇಕಾದರೆ ಈ ಕ್ಷೇತ್ರದಲ್ಲಿರುವ ಅನೇಕರನ್ನು ಬೇರೆ ಉದ್ಯೋಗ ಕ್ಷೇತ್ರಗಳಿಗೆ ವರ್ಗಾಯಿಸಬೇಕಾದ ಆವಶ್ಯಕತೆಯನ್ನು ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳೂ ಮನಗಂಡಿವೆ. ಕೈಗಾರಿಕಾ ಕ್ಷೇತ್ರವನ್ನು ವಿಸ್ತರಿಸಿ ಹೆಚ್ಚು ಜನರಿಗೆ ಅಲ್ಲಿ ಉದ್ಯೋಗಾವಕಾಶ ದೊರಕುವಂತೆ ಮಾಡಬೇಕಾಗಿರುವುದರಿಂದ ಕೈಗಾರಿಕೀಕರಣ ಆವಶ್ಯಕವೆಂಬ ವಾದಕ್ಕೆ ಈಚೆಗೆ ಹೆಚ್ಚು ಮಾನ್ಯತೆ ಲಭ್ಯವಾಗಿದೆ.

ಕೃಷಿ ಅಭಿವೃದ್ಧಿಯಾಗಿ ಆಹಾರದ ಕೊರತೆ ಹೋಗಬೇಕಾದರೆ ಕೈಗಾರಿಕೀಕರಣ ಆವಶ್ಯಕವೆಂಬುದು ಇನ್ನೊಂದು ವಾದ. ಯಂತ್ರೋಪಕರಣಗಳು, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು ಮುಂತಾದವನ್ನು ಕೃಷಿಯಲ್ಲಿ ವ್ಯಾಪಕವಾಗಿ ಬಳಸದಿದ್ದರೆ ಕೃಷಿ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಇವುಗಳ ಬಳಕೆ ಹೆಚ್ಚಬೇಕಾದರೆ ಇವನ್ನು ಒದಗಿಸುವ ಕೈಗಾರಿಕೆಗಳು ಬೆಳೆಯಬೇಕು. ಕೈಗಾರಿಕೀಕರಣದಲ್ಲಿ ಹಿಂದೆ ಬಿದ್ದಿರುವ ಯಾವ ರಾಷ್ಟ್ರವೂ ಕೃಷಿಯಲ್ಲಿ ಪ್ರಗತಿ ಸಾಧಿಸಿಲ್ಲ. ಆದ್ದರಿಂದ ಕೈಗಾರಿಕೀಕರಣ ಆವಶ್ಯಕವೆಂಬುದು ಈ ವಾದದ ತಿರುಳು.

ಜನಸಂಖ್ಯೆಯ ಸಮಸ್ಯೆಗೆ ಕೈಗಾರಿಕೀಕರಣ ಒಂದು ಪರಿಹಾರ ಎಂಬುದು ಮತ್ತೊಂದು ವಾದ. ಕೈಗಾರಿಕೀಕರಣ ಮುಂದುವರಿದಂತೆ ಜನನದರ ಇಳಿಮುಖವಾಗಿರುವುದು ಕೈಗಾರಿಕೆಯಲ್ಲಿ ಪ್ರಗತಿ ಸಾಧಿಸಿರುವ ಪಾಶ್ಚಾತ್ಯ ರಾಷ್ಟ್ರಗಳ ಅನುಭವ. ಹೀಗಾಗಲು ನಿರ್ದಿಷ್ಟ ಕಾರಣ ಗೊತ್ತಿಲ್ಲ. ನಾಗರಿಕ ಜೀವನವ್ಯವಸ್ಥೆ ಇದಕ್ಕೆ ಕಾರಣವೆಂದು ಹೇಳಬಹುದು. ಕೈಗಾರಿಕೀಕರಣ ಜನನದರವನ್ನು ಇಳಿಮುಖವಾಗುವಂತೆ ಮಾಡುವುದೇನೋ ನಿಜ. ಆದರೆ ಜೀವನಮಟ್ಟ ಉತ್ತಮಗೊಳ್ಳುವುದರಿಂದ, ಔಷಧೋಪಚಾರಗಳ ಅನುಕೂಲ ಹೆಚ್ಚುವುದರಿಂದ ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದರಿಂದ ಮರಣದರವೂ ಇಳಿಮುಖಗೊಳ್ಳುತ್ತದೆಂಬ ಅಂಶವನ್ನು ಗಮನಿಸಬೇಕು.

ಮೇಲೆ ಹೇಳಿರುವ ಕಾರಣಗಳಷ್ಟೇ ಅಲ್ಲದೆ, ರಾಷ್ಟ್ರದ ರಕ್ಷಣಬಲವನ್ನು ಹೆಚ್ಚಿಸಿಕೊಳ್ಳಲೂ ಕೈಗಾರಿಕೆಗಳ ಅಭಿವೃದ್ಧಿ ಆವಶ್ಯಕವೆಂಬ ವಾದವಿದೆ. ಕೃಷಿಯನ್ನೇ ಅವಲಂಬಿಸಿರುವ ಯಾವ ರಾಷ್ಟ್ರವೂ ರಕ್ಷಣಬಲವನ್ನು ಹೆಚ್ಚಿಸಿಕೊಳ್ಳಲು ಶಕ್ಯವಾಗಿಲ್ಲವೆಂದು ಹೇಳಬಹುದು.

ಕೈಗಾರಿಕೀಕರಣ ಆವಶ್ಯಕವೆಂಬ ವಾದಕ್ಕೆ ಈ ಶತಮಾನದ ಆದಿಭಾಗದಿಂದಲೂ ಭಾರತದಲ್ಲಿಯೂ ಬೆಂಬಲವಿದೆ. ಬ್ರಿಟಿಷ್ ಸರ್ಕಾರ ಭಾರತದ ಕೈಗಾರಿಕೀಕರಣಕ್ಕೆ ಹೆಚ್ಚು ಗಮನ ಕೊಡದಿದ್ದಾಗ ಹಲವು ರಾಷ್ಟ್ರನಾಯಕರು ಅದರ ನೀತಿಯನ್ನು ಕಟುವಾಗಿ ಟೀಕಿಸಿದರು. ಅದು ಕಚ್ಚಾಸಾಮಗ್ರಿಗಳನ್ನು ಕೊಂಡೊಯ್ದು, ತಯಾರಾದ ವಸ್ತುಗಳನ್ನು ಭಾರತಕ್ಕೆ ವಿಕ್ರಯಿಸಿ ಸ್ವಾರ್ಥವನ್ನು ಸಾಧಿಸಿಕೊಂಡು ಭಾರತದ ಜನರನ್ನು ಶೋಷಿಸುತ್ತಿದೆಯೆಂಬ ವಾದವಿತ್ತು. ಭಾರತದ ಕೈಗಾರಿಕೀಕರಣದ ಸಾಧ್ಯತೆಯನ್ನು ಪರಿಶೀಲಿಸಿ ಸಲಹೆಗಳನ್ನು ನೀಡಲು 1918ರಲ್ಲಿ ಸರ್ಕಾರ ಕೈಗಾರಿಕಾ ಆಯೋಗವೊಂದನ್ನು ನೇಮಿಸಿ ತನಗೂ ಭಾರತದ ಕೈಗಾರಿಕೀಕರಣದಲ್ಲಿ ಆಸಕ್ತಿ ಇದೆ ಎಂದು ತೋರಿಸಿಕೊಳ್ಳಲು ಯತ್ನಿಸಿತು. ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ 1938ರಲ್ಲಿ ಕೈಗಾರಿಕೀಕರಣದ ಆವಶ್ಯಕತೆಯನ್ನು ಮನಗಂಡು, ಇದಕ್ಕಾಗಿ ಬೃಹತ್ ಹಾಗೂ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಯೋಜನೆಯನ್ನು ರೂಪಿಸಬೇಕೆಂದು ತೀರ್ಮಾನಿಸಿತು. ಆದರೆ ರಾಜಕೀಯ ಸ್ವಾತಂತ್ರ್ಯವಿಲ್ಲದ್ದರಿಂದ ಈ ದಿಕ್ಕಿನಲ್ಲಿ ಯಾವ ಪ್ರಗತಿಯನ್ನೂ ಸಾಧಿಸಲು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯಾನಂತರ, ಪಂಚವಾರ್ಷಿಕ ಯೋಜನೆಗಳ ಮೂಲಕ ಕೈಗಾರಿಕೀಕರಣಕ್ಕೆ ಆದ್ಯತೆ ಕೊಡಲಾಗಿದೆ. ಸ್ವಾತಂತ್ರ್ಯಪೂರ್ವಕಾಲದಲ್ಲಿ ಕಂಡರಿಯದ ಎಷ್ಟೋ ಕೈಗಾರಿಕೆಗಳು ಈಗ ಸ್ಥಾಪಿತವಾಗಿ ದೇಶದ ಪ್ರಗತಿಗೆ ಸಹಾಯಕವಾಗಿವೆ.

ಕೈಗಾರಿಕೀಕರಣದಿಂದ ಮಹತ್ತ್ವಪೂರ್ಣವಾದ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳುಂಟಾಗಿವೆ. ಈ ಬದಲಾವಣೆಗಳಿಂದ ಹಲವಾರು ಅನುಕೂಲತೆಗಳೂ ಹಲವು ಪ್ರತಿಕೂಲಗಳೂ ಉಂಟಾಗಿವೆ. **ಅನುಕೂಲಗಳು** : 1. ರಾಷ್ಟ್ರದ ಒಟ್ಟು ಉತ್ಪಾದನೆ ಮತ್ತು ಜನರ ತಲಾವರಮಾನ ಹೆಚ್ಚಿ ಜೀವನಮಟ್ಟ ಉತ್ತಮಗೊಂಡಿದೆ. 2. ಮಾನವ ಶಕ್ತಿಯ ಸ್ಥಾನವನ್ನು ಯಂತ್ರಗಳು ಬಹುಮಟ್ಟಿಗೆ ಆಕ್ರಮಿಸಿಕೊಂಡಿರುವುದರಿಂದ ಕೆಲಸಗಾರರ ದೈಹಿಕ ಶ್ರಮ ಕಡಿಮೆಯಾಗಿದೆ. 3 ಕೈಗಾರಿಕೆಗಳು ಸ್ಥಾಪಿತವಾದ ಕಡೆಗಳಲ್ಲೆಲ್ಲ ನಗರಗಳು ಬೆಳೆದು ಜನರಿಗೆ ಜೀವನಸೌಲಭ್ಯಗಳು ಹೆಚ್ಚಾಗಿ ದೊರಕುತ್ತಿವೆ. 4. ಕೈಗಾರಿಕೆಗಳು ಹೆಚ್ಚಿದಂತೆ ಉದ್ಯೋಗಾವಕಾಶಗಳು ಹೆಚ್ಚುವುದರಿಂದ ನಿರುದ್ಯೋಗಸಮಸ್ಯೆ ತಕ್ಕ ಮಟ್ಟಿಗೆ ಕಡಿಮೆಯಾಗಿದೆ. 5. ಕೃಷಿಕ್ಷೇತ್ರದಲ್ಲೂ ಯಾಂತ್ರೀಕರಣ ಸಾಧ್ಯವಾಗಿ ಕೃಷಿಉತ್ಪನ್ನ ಹೆಚ್ಚಾಗಿದೆ. **ಪ್ರತಿಕೂಲಗಳು** : 1. ದೊಡ್ಡ ಉದ್ಯಮಸಂಸ್ಥೆಗಳ ಬೆಳವಣಿಗೆಯಿಂದ ಆರ್ಥಿಕಶಕ್ತಿ ಕೆಲವರಲ್ಲೇ ಕೇಂದ್ರೀಕೃತವಾಗಿದೆ. ಸಮಾಜದಲ್ಲಿ ಆರ್ಥಿಕ ಅಸಮತೆ ಹೆಚ್ಚಾಗಿದೆ. 2. ಬಂಡವಾಳಗಾರರು, ಕಾರ್ಮಿಕರು ಎಂಬ ವರ್ಗಗಳು ಹುಟ್ಟಿಕೊಂಡಿವೆ. ಕಾರ್ಮಿಕರನ್ನು ಶೋಷಣೆಮಾಡಿ ತಮ್ಮ ಲಾಭಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಬಂಡವಾಳಗಾರರು ಹವಣಿಸುತ್ತಾರೆ. ಆದರೆ ಕಾರ್ಮಿಕರಿಗೆ ತಮ್ಮ ಹಕ್ಕುಬಾಧ್ಯತೆಗಳ ಅರಿವುಂಟಾಗಿ ಅವರೆಲ್ಲರೂ ಸಂಘಟಿತರಾಗಿ ಬಂಡವಾಳಗಾರರ ಶೋಷಣೆಯಿಂದ ತಪ್ಪಿಸಿಕೊಳ್ಳಲು ಹೋರಾಡುತ್ತಾರೆ. ಹೀಗೆ ಕೈಗಾರಿಕಾ ಕೇಂದ್ರಗಳಲ್ಲಿ ಎಷ್ಟೋಬಾರಿ ಗೊಂದಲಮಯ ಪರಿಸ್ಥಿತಿ ಉಂಟಾಗುತ್ತದೆ. 3. ಕೈಗಾರಿಕೆಗಳು ಕೇಂದ್ರೀಕೃತವಾಗಿರುವ ನಗರಗಳಲ್ಲಿ ಸಾಕಷ್ಟು ವಸತಿ ಸೌಕರ್ಯಗಳಿಲ್ಲದಿರುವುದು. ಕೊಳಚೆ ಪ್ರದೇಶಗಳ ಬೆಳವಣಿಗೆ, ನೀರು ಮತ್ತು ಗಾಳಿ ಕಲುಷಿತಗೊಂಡು ಜನರ ಆರೋಗ್ಯಕ್ಕೆ ಹಾನಿಯುಂಟಾಗುವುದು ಮುಂತಾದ ತೊಂದರೆಗಳಿವೆ. ಇವೆಲ್ಲ ಕೈಗಾರಿಕೀಕರಣದ ಫಲ. 4. ಮನುಷ್ಯ ಯಂತ್ರಗಳಿಗೆ ದಾಸನಾಗಿರುವುದು ಮತ್ತು ಐಶ್ವರ್ಯಗಳಿಕೆಯೇ ಸರ್ವಸ್ವವೆಂದು ಭಾವಿಸಿ ಮಾನವೀಯ ಮೌಲ್ಯಗಳನ್ನು ಕಡೆಗಣಿಸುವ ಪ್ರವೃತ್ತಿ ಹೆಚ್ಚುತ್ತಿರುವುದು–ಇವೆಲ್ಲ ಕೈಗಾರಿಕೀಕರಣದ ಫಲವೆಂದು ಗಾಂಧೀಜಿಯವರು ಭಾವಿಸಿ, ಕೈಗಾರಿಕೀಕರಣಕ್ಕೆ ಪ್ರಾಮುಖ್ಯ ನೀಡುವುದನ್ನು ವಿರೋಧಿಸಿದರು.

ಕೈಗಾರಿಕೀಕರಣದಿಂದ ಕೆಟ್ಟ ಪರಿಣಾಮಗಳುಂಟಾಗಿರುವುದು ನಿಜ. ಆದರೆ ಕೈಗಾರಿಕಾಕರಣದ ಪ್ರಾಮುಖ್ಯವನ್ನು ಕಡೆಗಣಿಸುವಂತಿಲ್ಲ. ಯುಕ್ತ ಕ್ರಮಗಳನ್ನು ಕೈಗೊಂಡು ಕೆಟ್ಟ ಪರಿಣಾಮಗಳನ್ನು ಕಡಿಮೆ ಮಾಡಿ ಕೈಗಾರಿಕೀಕರಣದಿಂದ ಹೆಚ್ಚು ಪ್ರಯೋಜನ ಪಡೆದುಕೊಳ್ಳುವ ಕಡೆಗೆ ಗಮನ ಕೊಡುವುದು ಆವಶ್ಯಕ. ಅದಕ್ಕಾಗಿ ಎಲ್ಲ ದೇಶಗಳಲ್ಲೂ ನಾನಾ ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. (ಬಿ.ಎಸ್.ಎಸ್.ಎ.)

**ಕೈಗಾರಿಕಾ ಕಾರ್ಮಿಕರು, ಪ್ರಪಂಚದ :** 20ನೆಯ ಶತಮಾನದ ಆದಿ ಭಾಗದಲ್ಲಿ ಸ್ಥಾಪಿತವಾದ ಒಂದು ಕ್ರಾಂತಿಕಾರಿ ಕಾರ್ಮಿಕ ಸಂಘ. ಐಡಬ್ಲ್ಯ್ಯ.ಡಬ್ಲ್ಯ್ಯ. ಅಥವಾ ವಾಬ್ಲೀಸ್ ಎಂಬುದು ಇದರ ಜನಪ್ರಿಯ ಸಂಬೋಧನೆ. ಇಲಿನಾಯ್‌ನ ಷಿಕಾಗೋದಲ್ಲಿ ಸ್ಥಾಪಿತವಾಯಿತು(1905). ಪ್ರಪಂಚದ ಕೈಗಾರಿಕಾ ಕಾರ್ಮಿಕರ ಮಹಾಸಂಘ ಸ್ಥಾಪಿತವಾದ ಕಾಲದಲ್ಲಿ ಅಮೆರಿಕದ ಕಾರ್ಮಿಕ ಮುಂದಾಳುಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಹಲವು ಉಗ್ರಗಾಮಿ ಕಾರ್ಮಿಕ ಮುಂದಾಳುಗಳು ರಾಜಕೀಯ ಹಾಗೂ ಕಾರ್ಮಿಕ ಸಂಘ ಚಟುವಟಿಕೆಗಳಲ್ಲಿ ಸ್ವಚ್ಛಂದವಾಗಿ ಭಾಗವಹಿಸಲು ಆಸಕ್ತರಾಗಿದ್ದು ಕೈಗಾರಿಕಾನುಗುಣ ಕಾರ್ಮಿಕ ಸಂಘಗಳನ್ನು (ಇಂಡಸ್ಟ್ರಿಯಲ್ ಯೂನಿಯನ್ಸ್) ಸ್ಥಾಪಿಸಲು ವಾದಿಸಿದರೆ, ಮತ್ತೆ ಕೆಲವು ಮಂದಗಾಮಿ ಕಾರ್ಮಿಕ ಮುಂದಾಳುಗಳು, ಅದರಲ್ಲೂ ಅಮೆರಿಕನ್ ಕಾರ್ಮಿಕ ಮಹಾಕೂಟಕ್ಕೆ (ಅಮೆರಿಕನ್ ಫೆಡರೇಷನ್ ಆಫ್ ಲೇಬರ್) ಸೇರಿದವರು ಕಸಬಿಗೆ ಅನುಗುಣವಾದ ಕಾರ್ಮಿಕ ಸಂಘಗಳ (ಕ್ರಾಫ್ಟ್ಸ್ ಯೂನಿಯನ್ಸ್) ಸ್ಥಾಪನೆಯಾಗಬೇಕೆಂದು ವಾದಿಸಿದರು. ಉಗ್ರಗಾಮಿ ಕಾರ್ಮಿಕರ ಪ್ರಕಾರ ಕೈಗಾರಿಕಾನುಗುಣ ಕಾರ್ಮಿಕ ಸಂಘಗಳು ಉದ್ಯಮಿಗಳ ಶಕ್ತಿಗೆ ಸಮನಾಗಿ ಬಲಗಳಿಸಿ, ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಮಾಲೀಕರ ಮೇಲೆ ಪರಿಣಾಮಕಾರಿಯಾಗಿ ಒತ್ತಡ ಹೇರಬಲ್ಲುವೆಂದೂ ಆದರೆ ಕಸಬಿಗೆ ಅನುಗುಣವಾದ ಕಾರ್ಮಿಕ ಸಂಘಗಳು ಅಷ್ಟು ಬಲಿಷ್ಠವಾಗಿ ಸಂಘಟಿತವಾಗಿರದೆ, ಅವು ನಡೆಸುವ ಮುಷ್ಕರಗಳು ಜಯಪ್ರದವಾಗುವುದಿಲ್ಲವೆಂದೂ ವಾದಿಸಿದರು. ಅಷ್ಟೇ ಅಲ್ಲದೆ, ಅಕುಶಲ ಕಾರ್ಮಿಕರು ಕಸಬಿನ ಸಂಘಗಳ ಸದಸ್ಯರಾಗಲು ಅವಕಾಶವಿಲ್ಲದಿರುವುದರಿಂದ ಅವರಿಂದ ಆ ಸಂಘಗಳಿಗೆ ಬೆಂಬಲವಾಗಲಿ ಅವರಿಗೆ ಆ ಸಂಘಗಳಿಂದ ಸಹಾಯವಾಗಲಿ ದೊರಕುವುದಿಲ್ಲವೆಂದೂ ವಾದಿಸಿದರು. ಈ ವಾದಸರಣಿಯನ್ನು ಅಮೆರಿಕನ್ ಕಾರ್ಮಿಕ ಮಹಾಕೂಟಕ್ಕೆ ಸೇರಿದ ಮಂದಗಾಮಿ ಕಾರ್ಮಿಕರು ಕಟುವಾಗಿ ವಿರೋಧಿಸುತ್ತ ಕಸಬಿಗೆ ಅನುಗುಣವಾದ ಕಾರ್ಮಿಕ ಸಂಘಗಳ ಮುಷ್ಕರಗಳೇ ಹೆಚ್ಚು ಜಯಪ್ರದವಾಗುತ್ತವೆಂದು ವಾದಿಸಿದರು.

ಮೇಲೆ ಹೇಳಿದ ವಾದಪ್ರತಿವಾದಗಳನ್ನು ಬಗೆಹರಿಸಿ ಕಾರ್ಮಿಕ ಸಂಘಗಳ ಬೆಳೆವಣಿಗೆಯನ್ನು ಚುರುಕುಗೊಳಿಸುವುದಕ್ಕಾಗಿ 1905ರ ಜೂನ್ ತಿಂಗಳಲ್ಲಿ ಕಾರ್ಮಿಕ ಹಾಗೂ ಸಮತಾವಾದಿಗಳ ಸಮ್ಮೇಳನವೊಂದನ್ನು ಕರೆಯಲಾಯಿತು. ಈ ಸಮ್ಮೇಳನ ಹನ್ನೆರಡು ದಿನಗಳ ಕಾಲ ನಡೆದು ಇದರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಅನೇಕ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ರೆವರೆಂಡ್ ಹೆಗರ್ಟಿಯ ಯೋಜನೆಯೊಂದು ಅನುಮೋದಿತವಾಗಿ, ಪ್ರಪಂಚದ ಕೈಗಾರಿಕಾ ಕಾರ್ಮಿಕರ ಮಹಾಕೂಟ ಅಸ್ತಿತ್ವಕ್ಕೆ ಬಂತು. ಈ ಯೋಜನೆಯ ಪ್ರಕಾರ ಪ್ರತಿಯೊಂದು ಉದ್ಯಮದ ಕಾರ್ಮಿಕರೆಲ್ಲರನ್ನೂ ಈ ಸಂಘದ ಸದಸ್ಯರನ್ನಾಗಿ ಸ್ವೀಕರಿಸಲಾಯಿತು. ಅಂದರೆ ಕಸಬಿಗೆ ಅನುಗುಣವಾದ ಕಾರ್ಮಿಕ ಸಂಘಗಳಿಗೆ ಅವಕಾಶ ಕೊಡಲಿಲ್ಲವೆಂದಾಯಿತು. ಹೀಗೆ ಪ್ರಾರಂಭವಾದ ಈ ಮಹಾಸಂಸ್ಥೆಯನ್ನು ಹದಿಮೂರು ಕೈಗಾರಿಕಾ ಭಾಗಗಳನ್ನಾಗಿ ವಿಂಗಡಿಸಲಾಯಿತು. ಒಂದೇ ಕೈಗಾರಿಕೆಗೆ ಸೇರಿದ ಪ್ರತಿಯೊಂದು ಪಟ್ಟಣದ ಕಾರ್ಮಿಕರೆಲ್ಲರೂ ಸೇರಿ ಒಂದು ಸ್ಥಳೀಯ ಕೈಗಾರಿಕಾಕಾರ್ಮಿಕ ಸಂಘವನ್ನು ಸ್ಥಾಪಿಸಿದರು. ಸ್ಥಳೀಯ ಕೈಗಾರಿಕಾ ಕಾರ್ಮಿಕ ಸಂಘಗಳೆಲ್ಲವೂ ಒಟ್ಟು ಸೇರಿ ರಾಷ್ಟ್ರೀಯ ಕೈಗಾರಿಕಾ ಕಾರ್ಮಿಕರ ಮಹಾಕೂಟವಾಯಿತು. ರಾಷ್ಟ್ರೀಯ ಕೈಗಾರಿಕಾ ಕಾರ್ಮಿಕ ಕೂಟಗಳು ಸೇರಿ ಒಂದು ಇಲಾಖೆಯಾಗಿ ರೂಪುಗೊಂಡುವು. ಇಂಥ ಇಲಾಖೆಗಳು ಒಟ್ಟು ಸೇರಿ ಪ್ರಪಂಚದ ಕೈಗಾರಿಕಾ ಕಾರ್ಮಿಕರ ಮಹಾಸಂಸ್ಥೆಯಾಗಿ ಕೆಲಸ ಪ್ರಾರಂಭಿಸಿದುವು. ಈ ಸಂಸ್ಥೆಯ ಸದಸ್ಯರೆಲ್ಲರೂ ತಮ್ಮ ಉದ್ದೇಶಗಳನ್ನು ಅಲ್ಪಕಾಲದಲ್ಲಿ ಹಾಗೂ ಅತ್ಯಲ್ಪ ಶ್ರಮದ ವೆಚ್ಚದಿಂದ ಸಾಧಿಸುವುದಕ್ಕಾಗಿ ಎಲ್ಲ ವಿಧಾನಗಳನ್ನೂ ಅನುಸರಿಸಬಹುದಾಗಿತ್ತು. ಅತಿ ದೀರ್ಘಕಾಲದ ಮುಷ್ಕರಗಳು ಪರಿಣಾಮಕಾರಿಯಾದ ವಿಧಾನವಲ್ಲವೆಂದು ಭಾವಿಸಲಾಗಿತ್ತು. ಮುಷ್ಕರವೇನಾದರೂ ಜಯಪ್ರದವಾಗದಿದ್ದರೆ ಕಾರ್ಮಿಕರು ಕಾರ್ಖಾನೆಯಲ್ಲಿ ವಿಧ್ವಂಸಕ ಕಾರ್ಯಗಳನ್ನು ನಡೆಸುವುದಕ್ಕೂ ತಮ್ಮ ಬೇಡಿಕೆಗಳೆಲ್ಲವನ್ನು ಈಡೇರಿಸಿಕೊಡಬೇಕೆಂದು ಉದ್ಯೋಗದಾತರ ಮೇಲೆ ಒತ್ತಾಯ ಹಾಕುವುದಕ್ಕೂ ತಮ್ಮ ತಮ್ಮ ಕೆಲಸಗಳಿಗೆ ವಾಪಸ್ಸು ಹೋಗಬೇಕೆಂಬುದು ಈ ಸಂಸ್ಥೆಯ ವಾದವಾಗಿತ್ತು.

ಪ್ರಾರಂಭದಲ್ಲಿ ಪ್ರಪಂಚದ ಕೈಗಾರಿಕಾ ಕಾರ್ಮಿಕರ ಮಹಾಸಂಘ ತನ್ನ ಸಂಸ್ಥಾಪಕರ ಎಲ್ಲ ಉದ್ದೇಶಗಳನ್ನೂ ಪೂರೈಸಿತು. 1906ರಲ್ಲಿ ನಡೆದ ಈ ಸಂಸ್ಥೆಯ ಎರಡನೆಯ ವಿಧ್ಯುಕ್ತ ಸಭೆಗೆ ಮುಂಚೆ ಇದರ ಸದಸ್ಯರುಗಳ ಸಂಖ್ಯೆ 1,00,000. ಇದು ತನ್ನದೇ ಆದ ಇಂಡಸ್ಟ್ರಿಯಲ್ ಯೂನಿಯನ್ ಬುಲೆಟಿನ್ ಎಂಬ ಸಾಪ್ತಾಹಿಕೆಯೊಂದನ್ನು ಪ್ರಕಟಿಸುತ್ತಿತ್ತು. ಆದರೆ ಈ ಮಹಾಸಂಘದಲ್ಲಿ ವಿಭಿನ್ನ ರಾಜಕೀಯ ಬಣಗಳಿಗೆ ಸೇರಿದ ಸದಸ್ಯರುಗಳಿದ್ದುದರಿಂದ ಅವರಲ್ಲಿ ಕಲಹ ತೀರ ಸಾಮಾನ್ಯವಾಗಿತ್ತು. ಆದ್ದರಿಂದ 1907ರಲ್ಲಿ ಪಶ್ಚಿಮ ಮಹಾಸಂಘ (ವೆಸ್ಟರ್ನ್ ಫೆಡರೇಷನ್) ಎಂಬ ಒಂದು ಕಾರ್ಮಿಕ ಅಂಗಸಂಸ್ಥೆ ಈ ಮಹಾಸಂಘದಿಂದ ಹೊರಬಂತು. ಇದೇ ರೀತಿ ಎರಡು ವರ್ಷಗಳಾದ ಮೇಲೆ ಸಿಂಡಿಕಲಿಸ್ಟ್ ಬಣವೂ ಹೊರಬಂತು. ಕೈಗಾರಿಕಾ ಕಾರ್ಮಿಕ ಸಂಘ ಎರಡು ಸಂಸ್ಥೆಗಳಾಗಿ ಒಡೆಯಿತು. ಅವುಗಳಲ್ಲಿ ಒಂದರ ಕೇಂದ್ರ ಮಿಷಿಗನ್ ರಾಜ್ಯದ ಡೆಟ್ರಾಯಿಟ್‌ನಲ್ಲೂ ಮತ್ತೊಂದರ ಕೇಂದ್ರ ಷಿಕಾಗೋದಲ್ಲೂ ಇತ್ತು. ಆದರೆ ಡೆಟ್ರಾಯಿಟ್‌ನ ಸಂಸ್ಥೆ ಬೇಗ ಅವಸಾನಗೊಂಡಿತು. ಈ ಕಾರಣಗಳಿಂದ ಪ್ರಪಂಚದ ಕೈಗಾರಿಕಾ ಕಾರ್ಮಿಕರ ಮಹಾಸಂಘದ ಸದಸ್ಯಬಲ ಬಹಳವಾಗಿ ಕುಗ್ಗಿತು. ಮೇಲಾಗಿ, ಹೊಸದಾಗಿ ಸೇರಿದ ಸದಸ್ಯರೂ ತಮ್ಮ ಚಂದಾಹಣವನ್ನು ನಿಯತವಾಗಿ ಕೊಡುತ್ತಿರಲಿಲ್ಲವಾದ್ದರಿಂದ ಈ ಮಹಾಸಂಘದ ಹಣಕಾಸಿನ ಸ್ಥಿತಿ ಹದಗೆಟ್ಟಿತು.

ಪ್ರಪಂಚ ಕಾರ್ಮಿಕ ಸಂಘ ನಡೆಸಿದ ಮುಷ್ಕರಗಳ ಪೈಕಿ 1912ರಲ್ಲಿ ನಡೆದ ಲಾರೆನ್ಸ್ ಮುಷ್ಕರ ಬಹಳ ಮುಖ್ಯವಾದ್ದು. ಈ ಕಾರಣದಿಂದಲೇ ಈ ಸಂಸ್ಥೆ ಬಹಳ ಪ್ರಸಿದ್ಧವಾಯಿತೆಂದು ಹೇಳಬಹುದು. ಸುಮಾರು 30,000 ಗಿರಣಿ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದ್ದರು. ಇಂಗ್ಲಿಷ್ ಭಾಷೆಯನ್ನು ಆಡದಿದ್ದ ಸಾವಿರಾರು ಮಂದಿ ಮೊಟ್ಟಮೊದಲಿಗೆ ಇದರಲ್ಲಿ ಭಾಗವಹಿಸಿ ಮುಷ್ಕರವನ್ನು ಯಶಸ್ವಿಗೊಳಿಸಿದರು. ಸದಸ್ಯರು ಉಗ್ರವಾದಿಗಳಾಗಿದ್ದು ಕೊಲೆ, ಲೂಟಿ ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದರು. ಆದ್ದರಿಂದಲೇ ಸುಮಾರು 5,000 ವಾಬ್ಲಿಗಳು ಸೆರೆಗೆ ಒಳಗಾದರು ಮತ್ತು ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಅನೇಕ ಕಡೆ ಈ ಸಂಘವನ್ನು ಮೂಲೋತ್ಪಾಟನ ಮಾಡಲು ಪ್ರಯತ್ನಗಳು ನಡೆದುವು.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಈ ಕಾರ್ಮಿಕ ಸಂಸ್ಥೆಯೊಂದೇ ಯುದ್ಧವನ್ನು ತೀವ್ರವಾಗಿ ವಿರೋಧಿಸಿದ್ದು. ಇದು 1917ರಲ್ಲಿ ಜಾರಿಗೆ ಬಂದ ಗೂಢಚರ್ಯೆಯ ವಿರುದ್ಧ ಕಾನೂನಿನ ಕ್ರಮಕ್ಕೆ ಒಳಗಾಗಿತ್ತು. ಯುದ್ಧವಾದ ಮೇಲೆ ಈ ಸಂಘ ಹಾಗೂ ಕಮ್ಯೂನಿಸ್ಟ್ ಅಂತಾರಾಷ್ಟ್ರೀಯ ಸಂಘಗಳ ನಡುವೆ ಘರ್ಷಣೆಯುಂಟಾಯಿತು. ಇದು ಪ್ರಪಂಚ ಕಾರ್ಮಿಕ ಕೂಟದ ಬಲವನ್ನು ಬಹುವಾಗಿ ಕುಗ್ಗಿಸಿತು. ಈ ಸಂಸ್ಥೆಯನ್ನು ದಮನಮಾಡಲು ಅಮೆರಿಕದಲ್ಲಿ ಅನೇಕ ರಾಜ್ಯ ಸರ್ಕಾರಗಳು ಕೆಲವು ದಂಡಾರ್ಹ ಸಿಂಡಿಕಲಿಸಂ ಕಾನೂನುಗಳನ್ನು ಜಾರಿಗೆ ತಂದುವು. ಅಲ್ಲಿಯ ಪರಮೋಚ್ಚ ನ್ಯಾಯಾಲಯ ಇವನ್ನು ಎತ್ತಿ ಹಿಡಿಯಿತು. ಇದಲ್ಲದೆ 1918ರಲ್ಲಿ ಷಿಕಾಗೋದಲ್ಲಿ ನಡೆದ ಒಂದು ಸಾಮೂಹಿಕ ವಿಚಾರಣೆಯಲ್ಲಿ ಸುಮಾರು 100 ಮಂದಿ ಪ್ರಪಂಚ ಕೈಗಾರಿಕಾ ಕಾರ್ಮಿಕ ಸಂಘ ಮುಂದಾಳುಗಳು ಅತ್ಯುಗ್ರ ಶಿಕ್ಷೆಗೆ ಒಳಗಾದರು. ಬಹು ಸಂಖ್ಯಾತ ಅಕುಶಲ ಕಾರ್ಮಿಕರು ಬೇರೆ ದೇಶಗಳಿಂದ ವಲಸೆ ಬಂದು ಈ ಕೂಟದ ಸದಸ್ಯರಾಗುವುದನ್ನು 1920ರ ವಲಸೆ ನಿರ್ಬಂಧ ಕಾಯಿದೆ ತಪ್ಪಿಸಿದ್ದು ಈ ಕಾರ್ಮಿಕ ಮಹಾಸಂಘದ ವರ್ಚಸ್ಸನ್ನು ಕಡಿಮೆ ಮಾಡಲು ಮತ್ತೊಂದು ಕಾರಣವಾಯಿತು. 1920ರ ಕೊನೆಯ ವೇಳೆಗೆ ಈ ಸಂಘ ತನ್ನ ವರ್ಚಸ್ಸನ್ನು ಸಂಪೂರ್ಣವಾಗಿ ಕಳೆದುಕೊಂಡಿತು. 1949ರಲ್ಲಿ ಈ ಸಂಸ್ಥೆಗೆ 1,500 ಕಾರ್ಮಿಕರು ಮಾತ್ರ ಸದಸ್ಯರಾಗಿದ್ದರೂ ಇದು ಸರ್ಕಾರ ರಚಿಸಿದ್ದ ವಿಧ್ವಂಸಕರ ಪಟ್ಟಿಯಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿತ್ತು.

ಪ್ರಪಂಚದ ಕೈಗಾರಿಕಾ ಕಾರ್ಮಿಕರ ಮಹಾಸಂಘಕ್ಕೆ ಸೇರಿದ ಸ್ಥಳೀಯ ಕಾರ್ಮಿಕ ಸಂಘಗಳು ಸಾಮಾನ್ಯವಾಗಿ ಪ್ರತಿಯೊಂದು ಕೈಗಾರಿಕಾ ದೇಶದಲ್ಲೂ ಅಸ್ತಿತ್ವದಲ್ಲಿದ್ದುವು. ಇಂಗ್ಲೆಂಡಿನಲ್ಲಿ ಲಂಡನ್, ಲಿವರ್‌ಪೂಲ್ ಮತ್ತು ಗ್ಲಾಸ್ಗೋ ಪಟ್ಟಣಗಳಲ್ಲಿ ಇವು ಕಾಣಿಸಿಕೊಂಡಿದ್ದುವು. ಸಂಯುಕ್ತ ಸಂಸ್ಥಾನವಲ್ಲದೆ ಇತರ ದೇಶಗಳ ಪೈಕಿ ಆಸ್ಟ್ರೇಲಿಯದಲ್ಲಿ ಮಾತ್ರ ಇವು ಪ್ರಾಮುಖ್ಯ ಪಡೆದಿದ್ದುವು. ಅಲ್ಲೂ 1917–18ರಲ್ಲಿ ಅವನತಿ ಹೊಂದಿದುವು. (ಎಸ್.ಎನ್.ಎ.)

**ಕೈಗಾರಿಕಾ ಕ್ರಾಂತಿ :** ಯುರೋಪಿನಲ್ಲಿ–ಮುಖ್ಯವಾಗಿ ಬ್ರಿಟನ್ನಿನಲ್ಲಿ–18 ಮತ್ತು 19ನೆಯ ಶತಮಾನಗಳಲ್ಲಿ ಸಂಭವಿಸಿದ ತೀವ್ರ ಆರ್ಥಿಕ ಬದಲಾವಣೆಗಳು. ಕೈಗಾರಿಕೆ ಹಾಗೂ ಇತರ ಕ್ಷೇತ್ರಗಳಲ್ಲಿ ಹಿಂದೆಂದೂ ಕಾಣದಿದ್ದಷ್ಟು ತೀವ್ರತರವಾದ ಮತ್ತು ಅಗಾಧವಾದ ಬದಲಾವಣೆಗಳಾದುವು. ಈ ಬದಲಾವಣೆಗಳು ಒಂದು ಕ್ರಾಂತಿಯಿಂದ ಆಗಬಹುದಾದಷ್ಟೇ ಪರಿಣಾಮಗಳನ್ನುಂಟುಮಾಡಿದುವು. ಈ ಶತಮಾನಗಳಲ್ಲಾದ ಉಪಜ್ಞೆಗಳನ್ನು (ಇನ್‌ವೆನ್ಷನ್ಸ್) ಕೈಗಾರಿಕಾ ಕ್ರಾಂತಿಯೊಡನೆ ಗುರುತಿಸುವುದುಂಟು. ಕೈಗಾರಿಕಾಕ್ರಾಂತಿ ಕೇವಲ ಉಪಜ್ಞೆಗಳನ್ನು ಸೂಚಿಸುವುದಲ್ಲದೆ ಸಮಾಜದಲ್ಲಿ ನಡೆದ ತಾಂತ್ರಿಕ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನೂ ಆವರಿಸಿದೆಯೆಂಬುದು ಗಮನಿಸಬೇಕಾದ ವಿಚಾರ. ತಾಂತ್ರಿಕ ಕ್ಷೇತ್ರದಲ್ಲಿ ಕಂಡುಬಂದ ಗಮನಾರ್ಹ ಬದಲಾವಣೆಗಳೆಂದರೆ ಕಬ್ಬಿಣ ಮತ್ತು ಉಕ್ಕಿನಂಥ ಮೂಲವಸ್ತುಗಳ ಬಳಕೆ, ವಿದ್ಯುತ್, ಪೆಟ್ರೋಲ್, ಉಗಿ ಮೊದಲಾದ ಶಕ್ತಿಯ ಹೊಸ ಆಕರಗಳ ಉಪಯೋಗ, ನೂಲುವ ಜೆನ್ನಿ, ಸ್ವಯಂಚಾಲಿತ ನೇಯ್ಗೆ ಯಂತ್ರ, ಉಗಿಯಂತ್ರ ಮುಂತಾದ ಯಂತ್ರೋಪಕರಣಗಳ ಅನ್ವಯ. ಕೈಗಾರಿಕಾ ವಸ್ತುಗಳನ್ನು ತಯಾರಿಸಲು ನೈಸರ್ಗಿಕ ಸಂಪತ್ತನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಈ ಬದಲಾವಣೆಗಳು ಅನುಕೂಲವಾದುವು. ಇತರ ಗಮನಾರ್ಹ ಬದಲಾವಣೆಗಳೆಂದರೆ, ಮಾನವನಿಗೆ ನಿಸರ್ಗದತ್ತವಾಗಿ ಬಂದ ಸಂಪತ್ತನ್ನು ಉಪಯೋಗಿಸಿಕೊಳ್ಳುವ ತನ್ನ ಶಕ್ತಿಯಲ್ಲಿ

ಭರವಸೆ ನೀಡಿದಂಥ ಮಾನಸಿಕ ಬದಲಾವಣೆ, ಕಾರ್ಮಿಕರ ಕುಶಲತೆಯಲ್ಲಿ ಮೇಲ್ಪಾಡು ಆದಂಥ ಸಾಂಸ್ಕೃತಿಕ ಬದಲಾವಣೆ, ನಗರೀಕರಣ, ಕಾರ್ಮಿಕರು ಮತ್ತು ಬಂಡವಾಳಗಾರರಲ್ಲಿ ಅಂತರ ಕಾರ್ಮಿಕ ಚಳವಳಿ ಮೊದಲಾದವು. ಇವು ಸಾಮಾಜಿಕ ಬದಲಾವಣೆಗಳು.

ಆದರೆ ಈ ಬದಲಾವಣೆಗಳೆಲ್ಲವೂ ಏಕಕಾಲದಲ್ಲಿ ಉಂಟಾದುವು ಎಂದರ್ಥವಲ್ಲ. ಇವು ಪಕ್ವವಾಗಬೇಕಾದರೆ ಬಹಳ ಕಾಲ ಹಿಡಿಯಿತೆಂಬ, ಇವುಗಳ ಮೂಲವನ್ನು ಮಧ್ಯಯುಗದವರೆಗೂ ಗುರುತಿಸಬಹುದೆಂಬ ಒಂದು ಅಭಿಪ್ರಾಯವುಂಟು. ಹಾಗಿದ್ದ ಪಕ್ಷದಲ್ಲಿ ಕೈಗಾರಿಕೆಗಳಲ್ಲಾದ ಬದಲಾವಣೆಗಳನ್ನು ಕ್ರಾಂತಿಯೆನ್ನುವುದಕ್ಕಿಂತ ವಿಕಾಸವೆಂದು ಕರೆಯಬೇಕಾಗುತ್ತದೆ. ಕ್ರಾಂತಿಯೆನಿಸಬೇಕಾದರೆ ಯಾವುದೇ ಬದಲಾವಣೆಗಳು ಅತಿ ತೀವ್ರವಾಗಿ ಹಾಗೂ ಹಠಾತ್ತನೆ ಉಂಟಾಗಬೇಕು. ಆದರೂ ಸಾವಕಾಶವಾಗಿ ಉಂಟಾದ ಈ ಬದಲಾವಣೆಗಳನ್ನು ಕ್ರಾಂತಿ ಎಂಬ ಅರ್ಥದಲ್ಲಿ ತೆಗೆದುಕೊಳ್ಳಲು ಕಾರಣವೆಂದರೆ, ಈ ಬದಲಾವಣೆಗಳಿಂದ ಸಮಾಜದಲ್ಲುಂಟಾದ ಮಹತ್ತರ ಪರಿಣಾಮಗಳು. ಮೊದಲೇ ತಿಳಿಸಿದಂತೆ ಈ ಬದಲಾವಣೆಗಳಿಂದ ಯಾವುದೇ ಕ್ರಾಂತಿಯಿಂದ ಉಂಟಾಗುವಂಥ ಪರಿಣಾಮಗಳೇ ಸಂಭವಿಸಿದುವು. ಈ ಕ್ರಾಂತಿ ಇಂಥ ಕಾಲಾವಧಿಯಲ್ಲಿಯೆ ಉಂಟಾಯಿತು ಎಂದು ಹೇಳುವುದು ಕಷ್ಟ. ಏಕೆಂದರೆ ಮೊದಲೇ ಹೇಳಿದಂತೆ ಈ ಕ್ರಾಂತಿಯಲ್ಲಿ ಕಂಡುಬಂದ ಅನೇಕ ಬದಲಾವಣೆಗಳು ಬ್ರಿಟನ್ನಿನಲ್ಲಿ ಕ್ರಾಂತಿ ವಾಸ್ತವವಾಗಿ ಸಂಭವಿಸಿದ ಅವಧಿಯೆಂದು ಗುರುತಿಸುವ 1760–1840ಕ್ಕೂ ಮೊದಲು ಹಾಗೂ ಅನಂತರದಲ್ಲಿ ಕಂಡುಬಂದುವು. ಇಂಗ್ಲೆಂಡಿನ ಕೈಗಾರಿಕಾಕ್ರಾಂತಿ ಈ ಕಾಲದ್ದಾದರೆ ಇತರ ಐರೋಪ್ಯ ರಾಷ್ಟ್ರಗಳಲ್ಲಿ ಅದು ತಡವಾಗಿ ಉಂಟಾಯಿತು. ಅಲ್ಲದೆ ಚೀನ ಮತ್ತು ಭಾರತದಂಥ ರಾಷ್ಟ್ರಗಳಲ್ಲಿ 20ನೆಯ ಶತಮಾನದ ಆದಿಭಾಗದ ವರೆಗೂ ಕೈಗಾರಿಕಾ ಕ್ರಾಂತಿಯ ಚಿಹ್ನೆಗಳು ಕಂಡುಬರಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈಗಾರಿಕಾಕ್ರಾಂತಿ ಎರಡನೆಯ ಬಾರಿ ಸಂಭವಿಸುತ್ತಿದೆಯೆಂಬ ಅಭಿಪ್ರಾಯವೊಂದಿದೆ. ಹಾಗಿದ್ದ ಪಕ್ಷದಲ್ಲಿ ಕೈಗಾರಿಕಾಕ್ರಾಂತಿಯನ್ನು ಯಾವುದೋ ಒಂದು ನಿರ್ದಿಷ್ಟ ಕಾಲಾವಧಿಯ ಘಟನೆಯೆನ್ನುವ ಬದಲು, ಅದನ್ನು ಒಂದು ಪರಂಪರೆ ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ತೀವ್ರ ಬದಲಾವಣೆಗಳನ್ನು ಪ್ರವರ್ತನಗೊಳಿಸುವ ಅಂಶಗಳೆಲ್ಲವೂ ಒಂದು ದೇಶದಲ್ಲಿ ಕಂಡುಬಂದಾಗ ಅಲ್ಲಿ ಕ್ರಾಂತಿಯುಂಟಾಗುತ್ತದೆ. ಈ ಅಂಶಗಳು ಬೇರೆ ರಾಷ್ಟ್ರಗಳಲ್ಲಿ ತಡವಾಗಿ ಕಂಡುಬಂದರೆ ಅಲ್ಲಿ ಕೈಗಾರಿಕಾ ಕ್ರಾಂತಿ ತಡವಾಗಿ ಉಂಟಾಗುತ್ತದೆ. ಕೈಗಾರಿಕಾ ಕ್ರಾಂತಿ ಹಿಂದೆಯೇ ಸಂಭವಿಸಿದ ರಾಷ್ಟ್ರದಲ್ಲಿ ಕೈಗಾರಿಕೋತ್ಪನ್ನಕ್ಕೆ ಸಂಬಂಧಿಸಿದಂತೆ ಹೊಸ ಬದಲಾವಣೆಗಳು ಕಂಡುಬಂದರೆ ಅಲ್ಲಿ ಕೈಗಾರಿಕಾ ಕ್ರಾಂತಿ ಎರಡನೆಯ ಬಾರಿಗೆ ಉಂಟಾಗುತ್ತದೆ.

**ಕ್ರಾಂತಿಗೆ ಕಾರಣಗಳು :** ಯೂರೋಪಿನಲ್ಲಿ 18, 19ನೆಯ ಶತಮಾನಗಳಲ್ಲಿ ಕೈಗಾರಿಕಾ ಕ್ರಾಂತಿ ಸಂಭವಿಸಲು ಕಾರಣವಾದ ಅಂಶಗಳು ಹಲವು. ಕ್ರಾಂತಿಗೆ ಕಾರಣವಾದ ಅಂಶಗಳನ್ನು ಬ್ರಿಟನಿಗೆ ಸಂಬಂಧಿಸಿದಂತೆ ವಿಭಜಿಸುವುದು ವಾಡಿಕೆ. ಏಕೆಂದರೆ ಕೈಗಾರಿಕಾ ಕ್ರಾಂತಿ ಬ್ರಿಟನಿನಲ್ಲಿ ಮೊತ್ತಮೊದಲು ಸಂಭವಿಸಿತು. ಇದು ಬ್ರಿಟನ್ನಿನಲ್ಲೇ ಮೊತ್ತಮೊದಲು ಏಕಾಯಿತೆಂಬುದಕ್ಕೂ ಕಾರಣಗಳುಂಟು. ಅವನ್ನು ಮುಂದೆ ವಿವೇಚಿಸಲಾಗುತ್ತದೆ. ಕೈಗಾರಿಕಾ ಕ್ರಾಂತಿಗೆ ಕಾರಣವಾದ ಸಾಮಾನ್ಯ ಅಂಶಗಳು ಇವು :

ಕೈಗಾರಿಕಾ ಕ್ರಾಂತಿಯನ್ನು ಪ್ರವರ್ತನಗೊಳಿಸುವುದರಲ್ಲಿ ದೊಡ್ಡ ಪಾತ್ರ ವಹಿಸಿದ ಅಂಶವೆಂದರೆ 18, 19ನೆಯ ಶತಮಾನಗಳಲ್ಲಾದ ಉಪಜ್ಞೆಗಳು ಹಾಗೂ ಅವುಗಳಿಂದ ಸಾಧ್ಯವಾದ ಯಾಂತ್ರಿಕ ಪ್ರಗತಿ, ನೂಲು ಕೈಗಾರಿಕೆಗಳಲ್ಲಿ ಕ್ರಾಂತಿಯನ್ನುಂಟುಮಾಡಿದ ಉಪಜ್ಞೆಗಳಲ್ಲಿ ನೂಲುವ ಜೆನ್ನಿ, ವಾಟರ್ ಫ್ರೇಮ್, ಕ್ರಾಂಪ್ಟನ್ಸ್ ಮ್ಯೂಲ್‍ಗಳನ್ನೂ ನೇಯ್ಗೆ ಕೈಗಾರಿಕೆಯಲ್ಲಿ ಕ್ರಾಂತಿಯನ್ನುಂಟು ಮಾಡಿದ ಫ್ಲೈಯಿಂಗ್ ಷಟಲ್, ಶಕ್ತಿ ಮಗ್ಗ ಮುಂತಾದವನ್ನೂ ಇಲ್ಲಿ ಉಲ್ಲೇಖಿಸಬಹುದು. ಜೇಮ್ಸ್ ವಾಟನ ಉಗಿಯಂತ್ರದ ಉಪಜ್ಞೆ ಕೈಗಾರಿಕೆಗಳಲ್ಲಿ ಮತ್ತು ಗಣಿಗಳಲ್ಲಿ ಯಂತ್ರೋಪಕರಣಗಳನ್ನು ಚಾಲಿಸಲು ಹಾಗೂ ಸಾರಿಗೆ ಕ್ಷೇತ್ರದಲ್ಲಿ ವಾಹನಗಳ ವೇಗ ಹೆಚ್ಚಿಸಲು ಆವಶ್ಯಕವಾದ ಒಂದು ಹೊಸ ಶಕ್ತಿಯನ್ನು ಒದಗಿಸಿತು. ಈ ಉಪಜ್ಞೆಗಳಿಂದಾದ ತಾಂತ್ರಿಕ ಪ್ರಗತಿಯನ್ನು ಕೈಗಾರಿಕೋದ್ಯಮದಲ್ಲಿ ಉಪಯೋಗಿಸಿಕೊಂಡ ಪರಿಣಾಮವೇನೆಂದರೆ ಉದ್ಯಮಿಗಳು ಸ್ವಲ್ಪ ಕಾಲಾವಕಾಶದಲ್ಲೇ ಬೃಹದ್ಗಾತ್ರದಲ್ಲಿ ಸರಕು ಉತ್ಪಾದಿಸುವುದು ಸಾಧ್ಯವಾಯಿತು. ಭೂರಿ ಉತ್ಪಾದನೆಯನ್ನು ಕೈಗೊಳ್ಳಲು ಆವಶ್ಯಕವಾದ ಒಂದಂಶವೆಂದರೆ ವಿಸ್ತೃತ ಮಾರುಕಟ್ಟೆ. ಬ್ರಿಟನಿಗೆ ತನ್ನ ಸರಕುಗಳ ವಿಕ್ರಯಕ್ಕೆ ಮಾರುಕಟ್ಟೆಯ ಅಭಾವವೇನೂ ಇರಲಿಲ್ಲ. ಹದಿನಾರನೆಯ ಶತಮಾನದ ಭೌಗೋಳಿಕ ಆವಿಷ್ಕಾರಗಳಿಂದಾಗಿ ಬ್ರಿಟನಿನ ಅಧೀನದಲ್ಲಿ ಅನೇಕ ವಸಾಹತುಗಳಿದ್ದುವು. ಇವು ಬ್ರಿಟನಿನ ಕೈಗಾರಿಕೆಗಳಿಗೆ ಎರಡು ರೀತಿಯಲ್ಲಿ ಅನುಕೂಲಕಾರಿಯಾದುವು. ಒಂದನೆಯದಾಗಿ, ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಒದಗಿಸಿದವು. ಎರಡನೆಯದಾಗಿ, ತಯಾರಿಸಿದ ವಸ್ತುಗಳಿಗೆ ಇವು ಮಾರುಕಟ್ಟೆಗಳೂ ಆಗಿದ್ದುವು. ಕೈಗಾರಿಕೆಗಳ ವೃದ್ಧಿಗೆ ಆವಶ್ಯಕವಾದ ಇತರ ಅನುಕೂಲಗಳೂ ಒದಗಿ ಬಂದುವು. ಉದ್ಯಮಗಳನ್ನು ಕಟ್ಟಿ ಬೆಳೆಸುವ ಸಾಹಸಿಗಳೂ ಅವುಗಳಲ್ಲಿ ವಿನಿಯೋಜಿಸಲು ಅಗತ್ಯವಾದ ಬಂಡವಾಳವೂ ಅಗತ್ಯವಿದ್ದ ಕುಶಲ ಹಾಗು ತರಬೇತಾದ ಕಾರ್ಮಿಕ ಶಕ್ತಿಯೂ ಸಾರಿಗೆಯ ಸಮರ್ಪಕ ವ್ಯವಸ್ಥೆಯೂ ಶಕ್ತಿಯ ಅನುಕೂಲವೂ ಈ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದದರಿಂದ ಕೈಗಾರಿಕಾ ಕ್ರಾಂತಿ ಸಾಧ್ಯವಾಯಿತು. ಕೈಗಾರಿಕಾ ಕ್ರಾಂತಿಗೆ ಕಾರಣವಾದ ಗಮನಾರ್ಹವಾದ ಮತ್ತೊಂದು ಅಂಶವೆಂದರೆ, ಭಾವನೆಗಳಲ್ಲಾದ ಬದಲಾವಣೆ. ಹದಿನಾರನೆಯ ಶತಮಾನದಿಂದೀಚೆಗೆ ಆದ ತಾಂತ್ರಿಕ ಉಪಜ್ಞೆಗಳು ಯಂತ್ರಶಿಲ್ಪ ಹಾಗೂ ಕೈಗಾರಿಕೋದ್ಯಮದಲ್ಲಿ ಜನರಿಗೆ ಅಲ್ಲಿಯ ತನಕ ಇರದಿದ್ದ ಆಸ್ಥೆಯನ್ನು ಉಜ್ಜೀವನಗೊಳಿಸಲು ಸಹಾಯಕವಾದುವು. ಕೈಗಾರಿಕೋದ್ಯಮದಲ್ಲಿ ದುಡಿಯುವುದು ಕೀಳೆಂಬ ಭಾವನೆ ತೊಡೆದುಹೋಯಿತು. ಕೈಗಾರಿಕೆಯಲ್ಲಿ ಹಣ ವಿನಿಯೋಜಿಸಲು ಪ್ರೇರಣೆ ಬೆಳೆಯಿತು. ಎರಡನೆಯದಾಗಿ, ಪ್ರಕೃತಿಪ್ರಾಧಾನ್ಯವಾದಿಗಳ(ಫಿಸಿಯೋಕ್ರಾಟ್ಸ್) ಬರೆಹಗಳೂ ಕಾರಣವಾದುವು. ಸಮಾಜದಲ್ಲಿ ವ್ಯಕ್ತಿ ಮುಖ್ಯ; ತನ್ನ ಕ್ಷೇಮವನ್ನು ಸಾಧಿಸಲು ವ್ಯಕ್ತಿಯೇ ಸಮರ್ಥ; ಬೇರಾರೂ ಅಲ್ಲ. ಆದ್ದರಿಂದ ವ್ಯಕ್ತಿಯ ಆರ್ಥಿಕ ಜೀವನದಲ್ಲಿ ಸರ್ಕಾರ ಕೈಹಾಕಬಾರದು–ಎಂಬ ವಿಚಾರಧಾರೆ ಬೆಳೆದು ಬಂತು. ಇದರ ಪರಿಣಾಮವಾಗಿ ವ್ಯಕ್ತಿ ತನಗೆ ಇಷ್ಟವಾದ ಆರ್ಥಿಕ ಚಟುವಟಿಕೆಗಳನ್ನು ಆರಿಸಿಕೊಳ್ಳುವ ಮತ್ತು ವೈಯಕ್ತಿಕವಾಗಿ ಸ್ವತ್ತಿನ ಸ್ವಾಮಿತ್ವ ಪಡೆಯುವ ಹಕ್ಕು ಅವನಿಗೆ ದೊರಕಿತು. ಈ ಹಕ್ಕು ದೊರೆತ ಕಾರಣದಿಂದ ಹಣ ಹೂಡುವುದಕ್ಕೂ ಉದ್ಯಮಸಂಸ್ಥೆಗಳನ್ನು ನಡೆಸುವುದಕ್ಕೂ ವ್ಯಕ್ತಿಗಳಿಗೆ ಪ್ರೇರಣೆ ಒದಗಿ ಬಂತು. ಅಲ್ಲದೆ ಈ ಪಂಥದವರ ವಾದದಿಂದಾಗಿ ಅಂತಾರಾಷ್ಟ್ರೀಯ ವ್ಯಾಪಾರದ ಬಗ್ಗೆ ಅಲ್ಲಿಯತನಕ ಪ್ರಮುಖವಾಗಿದ್ದ ಸುವರ್ಣಪ್ರಧಾನ ವಿಚಾರಧಾರೆ ಕಡಿದುಹೋಗಿ ನಿರುಪಾಧಿಕ ವ್ಯಾಪಾರಕ್ಕೆ ಅವಕಾಶವುಂಟಾಯಿತು. ಇದರಿಂದ ಅಂತಾರಾಷ್ಟ್ರೀಯ ವ್ಯಾಪಾರ ಕುದುರಿದ್ದಲ್ಲದೆ ಸ್ಥಳೀಯ ಕೈಗಾರಿಕೆಗಳಿಗೆ ನಿರಾತಂಕವಾಗಿ ಕಚ್ಚಾಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುವ ಹಾಗೂ ತಯಾರಿಸಿದ ವಸ್ತುಗಳನ್ನು ರಫ್ತು ಮಾಡುವ ಅನುಕೂಲವುಂಟಾಯಿತು.

ಕೈಗಾರಿಕಾ ಕ್ರಾಂತಿಗೆ ಕಾರಣವಾದ ಮೇಲೆ ವಿವರಿಸಿದ ಎಲ್ಲ ಅಂಶಗಳೂ ಯುರೋಪಿನ ಫ್ರಾನ್ಸ್, ಜರ್ಮನಿ ಮುಂತಾದ ರಾಷ್ಟ್ರಗಳಲ್ಲೂ ಕಂಡುಬಂದಿದ್ದರೂ ಕೈಗಾರಿಕಾ ಕ್ರಾಂತಿ ಮೊದಲು ಬ್ರಿಟನಿನಲ್ಲಾಯಿತು. ವಸಾಹತುಗಳು, ಉಪಜ್ಞೆಗಳು, ಕೈಗಾರಿಕಾಭಿವೃದ್ಧಿ ಮೊದಲಾದವು ಬ್ರಿಟನಿನಂತೆ ಫ್ರಾನ್ಸಿಗೂ ಲಭಿಸಿದ್ದುವು. ಆದರೆ ಬ್ರಿಟನಿಗೆ ಲಭಿಸಿದ್ದ ರಾಜಕೀಯ ಭದ್ರತೆ ಫ್ರಾನ್ಸಿಗೆ ಲಭಿಸಿರಲಿಲ್ಲ. ಫ್ರಾನ್ಸಿನ ರಾಜಕೀಯ ಅವ್ಯವಸ್ಥೆಯಿಂದಾಗಿ ಕೈಗಾರಿಕಾ ಕ್ರಾಂತಿಗೆ ಬೇಕಾದ ಶಿಸ್ತು, ಭದ್ರತೆ ಮುಂತಾದ ಅನುಕೂಲಗಳು ಅಲ್ಲಿರಲಿಲ್ಲ. ಎರಡನೆಯದಾಗಿ, 18ನೆಯ ಶತಮಾನದ ಹೊತ್ತಿಗೆ ಬ್ರಿಟನ್ ಪ್ರಪಂಚದ ಎಲ್ಲ ಭಾಗಗಳಿಂದಲೂ ಬಂಡವಾಳವನ್ನು ಸಂಚಯಿಸುವ ಕೇಂದ್ರೀಯ ಬ್ಯಾಂಕನ್ನು ಸ್ಥಾಪಿಸಿತ್ತು. ಇದು ಬ್ರಿಟನ್ನಿನಲ್ಲಿ ಬಂಡವಾಳವನ್ನು ವಿನಿಯೋಜಿಸುವ ಸಂಘಟಿತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸ್ಥಾಪಿಸಲು ಕಾರಣವಾಯಿತು. ಆದರೆ ಫ್ರಾನ್ಸಿನಲ್ಲಿ ವ್ಯವಸ್ಥಿತ ಬ್ಯಾಂಕು ವ್ಯವಸ್ಥೆಯಿಲ್ಲದ ಕಾರಣ ಅಲ್ಲಿಯ ಕೈಗಾರಿಕೆಗಳು ಪ್ರಗತಿ ಹೊಂದಲಿಲ್ಲ. ಜರ್ಮನಿಯ ವಿಷಯವೂ ಅಷ್ಟೆ. ಅಲ್ಲಿಯ ಆಂತರಿಕ ಕರನಿರ್ಬಂಧ, ಬಂಡವಾಳ ಕೊರತೆ, ಸೈನಿಕ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಹೆಚ್ಚು ಆಸಕ್ತಿ, ಕೈಗಾರಿಕೆಗಳಿಗೆ ಮಾರುಕಟ್ಟೆಯನ್ನೊದಗಿಸುವ ವಸಾಹತುಗಳ ಅಭಾವ–ಇವುಗಳಿಂದಾಗಿ ಜರ್ಮನಿಯಲ್ಲಿ ಕೈಗಾರಿಕಾ ಕ್ರಾಂತಿ ತಡವಾಗಿ ಸಂಭವಿಸಿತು. ಹೀಗೆ ಯುರೋಪಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ, ಬ್ರಿಟನ್ ಎಲ್ಲ ವಿಧದಲ್ಲೂ ಅನುಕೂಲಕರ ವಾತಾವರಣ ಹೊಂದಿತ್ತು. ಕೈಗಾರಿಕಾ ಕ್ರಾಂತಿ ಪ್ರಪ್ರಥಮವಾಗಿ ಅಲ್ಲಿ ಸಂಭವಿಸಿತು.

**ಪರಿಣಾಮಗಳು :** ಕೈಗಾರಿಕಾ ಕ್ರಾಂತಿಯಿಂದ ಸಮಾಜದಲ್ಲಿ ಕೆಲವು ಪರಿಣಾಮಗಳಾದುವು. ಮೊದಲನೆಯದಾಗಿ, ಉಪಜ್ಞೆಗಳಿಂದಾಗಿ ಕೈಗಾರಿಕಾ ಯಂತ್ರೋಪಕರಣಗಳು ಸಂಕೀರ್ಣವಾದುವು. ಅವನ್ನು ಚಾಲಿಸಲು ಹಾಗೂ ಸರಿಪಡಿಸಲು ತಾಂತ್ರಿಕ ಜ್ಞಾನದ ಆವಶ್ಯಕತೆಯುಂಟಾಯಿತು. ಆದ್ದರಿಂದ ತಾಂತ್ರಿಕ ಶಿಕ್ಷಣ ಜಾರಿಗೆ ಬಂದುದಲ್ಲದೆ ತಂತ್ರಜ್ಞರಿಗೆ ಬೇಡಿಕೆ ಹೆಚ್ಚಾಯಿತು. ಎರಡನೆಯದಾಗಿ, ಕೈಗಾರಿಕಾ ಕ್ರಾಂತಿ ಅನೇಕ ಬದಲಾವಣೆಗಳ ಬೆಳವಣಿಗೆಗೆ ಕಾರಣವಾಯಿತು. ಹೊಸ ವಿಧಾನದಲ್ಲಿ ಉಕ್ಕನ್ನು ತಯಾರಿಸಲು ತೊಡಗಿದ್ದ ಕಾರಣ ಕಲ್ಲಿದ್ದಲು ಮತ್ತು ಕಬ್ಬಿಣಗಳ ಬಳಕೆ ಹೆಚ್ಚಿ ಅವೆರಡೂ ಕೈಗಾರಿಕೆಗಳು ವೃದ್ಧಿಗೊಂಡುವು. ಹೊಲಿಗೆ ಯಂತ್ರ ಮತ್ತು ಹೆಣಿಗೆ ಯಂತ್ರಗಳ ಉಪಜ್ಞೆಯಿಂದ ಹೊಲಿಗೆ ಕೈಗಾರಿಕೆಯಲ್ಲಿ ಕ್ರಾಂತಿ ಉಂಟಾಗಿ ನೇಯ್ಗೆ ಕೈಗಾರಿಕೆ ವಿಕಾಸಗೊಂಡಿತು. ಹಳೆಯ ಕೈಗಾರಿಕೆಗಳಾದ ಪಾದರಕ್ಷೆ, ರೇಷ್ಮೆ ಜವಳಿ ಕೈಗಾರಿಕೆಗಳು ಯಾಂತ್ರೀಕೃತವಾದುವು. ವಿದ್ಯುತ್, ಪೆಟ್ರೋಲ್, ರಬ್ಬರ್ ಮೊದಲಾದ ಹೊಸ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದವು. ಮೂರನೆಯದಾಗಿ, ಕೃಷಿಕ್ಷೇತ್ರದಲ್ಲೂ ಕೈಗಾರಿಕಾ ಕ್ರಾಂತಿಯ ಪರಿಣಾಮ ಕಂಡುಬಂತು. ರಾಸಾಯನಿಕ ಗೊಬ್ಬರದ ಉಪಯೋಗ, ವೈಜ್ಞಾನಿಕ ಸಾಗುವಳಿ ಕ್ರಮ, ಜಾನುವಾರುಗಳ ಗುಣವೃದ್ಧಿ ಮೊದಲಾದ ಕಾರಣಗಳಿಂದ ಕೃಷಿ ಉತ್ಪನ್ನ ವೃದ್ಧಿಗೊಂಡಿತು. ಕೃಷಿಕಾರ್ಯದಲ್ಲಿ ಯಂತ್ರೋಪಕರಣಗಳ ಬಳಕೆ, ಶ್ರಮ ವಿಭಜನೆ, ಮಾರುಕಟ್ಟೆಗಾಗಿಯೇ ಬೆಳೆಯುವುದು–ಮೊದಲಾದ ಪರಿಪಾಟಿಗಳಿಗೆ

ಕೈಗಾರಿಕಾ ಕ್ರಾಂತಿಯಿಂದ ಉತ್ತೇಜನ ಲಭ್ಯವಾಯಿತು. ನಾಲ್ಕನೆಯದಾಗಿ, ಕೈಗಾರಿಕಾ ಕ್ರಾಂತಿಯಿಂದ ಉತ್ಪಾದನ ವ್ಯವಸ್ಥೆಯಲ್ಲೂ ಬದಲಾವಣೆಯುಂಟಾಯಿತು. ಕೈಗಾರಿಕೆ ಗೃಹದ ಹಂತದಿಂದ ಒಂದು ಹೆಜ್ಜೆ ಮುಂದುವರಿಯಿತು. ಉತ್ಪಾದನೆ ನಡೆಯಲಾರಂಭವಾದ್ದು ಕಾರ್ಖಾನೆಗಳಲ್ಲಿ, ಯಂತ್ರೋಪಕರಣಗಳ ಮೂಲಕ, ಕಸಬುದಾರನಿಂದ ಕೈಗಾರಿಕೋದ್ಯಮಿಗೆ ಕೈಗಾರಿಕೆಯ ಹಸ್ತಾಂತರವಾದ್ದು ಒಂದು ಮುಖ್ಯ ಬದಲಾವಣೆ. ಜೊತೆಗೆ ಆಧುನಿಕ ಕೈಗಾರಿಕೆಯಲ್ಲಿ ಅಧಿಕ ಗಾತ್ರದಲ್ಲಿ ಬಂಡವಾಳದ ಆವಶ್ಯಕತೆವುಂಟಾದುದರಿಂದ ಒಬ್ಬ ಅಥವಾ ಕೆಲವು ವ್ಯಕ್ತಿಗಳು ಇಷ್ಟೂ ಬಂಡವಾಳವನ್ನೊದಗಿಸುವುದು ಕಷ್ಟವಾಯಿತು. ಈ ತೊಂದರೆಯ ನಿವಾರಣೆಗಾಗಿ ಅಸ್ತಿತ್ವಕ್ಕೆ ಬಂದ ಹೊಸ ಸಂಘಟನೆಯೆಂದರೆ ಕೂಡುಬಂಡವಾಳ ಸಂಸ್ಥೆ. ಕೂಡು ಬಂಡವಾಳ ಸಂಸ್ಥಾರೂಪದ ಕೈಗಾರಿಕಾ ವ್ಯವಸ್ಥೆಯಲ್ಲಿ ಮಾಲೀಕರು ಮತ್ತು ಕಾರ್ಮಿಕರ ಸಂಬಂಧದ ಸ್ವರೂಪವೇ ವಿಶಿಷ್ಟವಾದ್ದು. ಈ ವ್ಯವಸ್ಥೆಯಲ್ಲಿ ಕಂಪನಿಯ ಷೇರುದಾರರು ಮಾಲೀಕರು. ಇವರು ಬಂಡವಾಳವನ್ನು ಒದಗಿಸದ ವ್ಯವಸ್ಥಾಪಕ ಸಿಬ್ಬಂದಿಗೆ ಕೈಗಾರಿಕೆಯ ಕಾರ್ಯನಿರ್ವಹಣೆಯನ್ನು ವಹಿಸಿದರು. ಆದಕಾರಣ ಮಾಲೀಕರಲ್ಲೂ ಕಾರ್ಮಿಕರಲ್ಲೂ ನೇರಸಂಪರ್ಕಕಡಿದು ಕಾರ್ಮಿಕರ ಕುಂದುಕೊರತೆಗಳು ಬೆಳೆಯಲು ಅವಕಾಶವಾಯಿತು. ಐದನೆಯದಾಗಿ ಕೈಗಾರಿಕಾ ಕ್ರಾಂತಿಯಿಂದ ವಾಣಿಜ್ಯ ಹಾಗೂ ಬ್ಯಾಂಕು ಕ್ಷೇತ್ರಗಳು ವಿಕಾಸಗೊಂಡುವು. ಕೈಗಾರಿಕೆಗಳು ಸುಗಮವಾಗಿ ನಡೆಯಬೇಕಾದರೆ ಕಚ್ಚಾ ಸಾಮಗ್ರಿಗಳ ಸರಬರಾಯಿ ಆಗಬೇಕಲ್ಲದೆ ಅವುಗಳ ಉತ್ಪನ್ನವನ್ನು ಮಾರುವ ವ್ಯವಸ್ಥೆಯೂ ಆಗಬೇಕು. ಶ್ರಮವಿಭಜನೆಯ ಪದ್ಧತಿ ವ್ಯಾಪಕವಾಗಿ ಜಾರಿಗೆ ಬಂದ ಕಾರಣ ವಿನಿಮಯ ವ್ಯಾಪಕವಾಯಿತು. ಜನಸಂಖ್ಯೆ ಹಾಗೂ ವರಮಾನ ವೃದ್ಧಿ ಹೊಂದಿದಂತೆ ವಸ್ತುಗಳ ಬೇಡಿಕೆ ಅಧಿಕಗೊಂಡು ವಾಣಿಜ್ಯಕ್ಷೇತ್ರ ವಿಕಾಸಗೊಂಡಿತು. ವಾಣಿಜ್ಯಕ್ಷೇತ್ರಕ್ಕೆ ಬೇಕಾದ ಹಣದ ನೆರವು ಒದಗಬೇಕಾಗಿ ಬಂದದ್ದು ಬ್ಯಾಂಕು ಕ್ಷೇತ್ರದಿಂದ ವಾಣಿಜ್ಯ ಕ್ಷೇತ್ರ ವಿಕಾಸಗೊಂಡಂತೆ ಸಹಜವಾಗಿಯೇ ಬ್ಯಾಂಕು ಕ್ಷೇತ್ರವೂ ವಿಕಾಸ ಹೊಂದಿತು.

ಕೈಗಾರಿಕಾ ಕ್ರಾಂತಿಯಿಂದ ಇಷ್ಟೆಲ್ಲ ಅನುಕೂಲಗಳಾದರೂ ಪ್ರಾರಂಭದಲ್ಲಿಯ ಕೆಲವು ಪರಿಣಾಮಗಳು ಅತ್ಯಂತ ಅಸಹನೀಯವಾಗಿದ್ದುವು. ಉದಾಹರಣೆಗೆ, ಕಾರ್ಮಿಕರು ತಮ್ಮ ಇತರ ಚಟುವಟಿಕೆಗಳನ್ನೂ ಊರುಗಳನ್ನೂ ಬಿಟ್ಟು ಪಟ್ಟಣಗಳಿಗೆ ಬಂದು ಕೈಗಾರಿಕೆಯನ್ನೇ ಜೀವನೋಪಾಯವಾಗಿ ಅವಲಂಬಿಸಬೇಕಾಯಿತು. ಆದರೆ ಈ ಹೊಸ ಜೀವನ ಅಷ್ಟು ತೃಪ್ತಿಕರವಾಗಿರಲಿಲ್ಲ. ಕೈಗಾರಿಕೆಗಳಲ್ಲಿ ಕೆಲಸವನ್ನು ಅರಸುವವರ ಸಂಖ್ಯೆ ಅಧಿಕವಾಗಿ, ಕಾರ್ಮಿಕರಲ್ಲಿ ನಿರುದ್ಯೋಗ ಸಮಸ್ಯೆ ತಲೆದೋರಿತು. ಕಾರ್ಮಿಕರಲ್ಲಿ ಅಭದ್ರತಾಭಾವ ಮೂಡಿಬಂತು. ಅಲ್ಲದೆ ಆರ್ಥಿಕ ಕುಸಿತ, ತಾಂತ್ರಿಕ ಬದಲಾವಣೆಗಳು ಮೊದಲಾದ ಕಾರಣಗಳಿಂದ ಕೆಲಸವನ್ನು ಕಳೆದುಕೊಳ್ಳುವ ಭಯ ಸದಾ ಕಾರ್ಮಿಕರನ್ನು ಕಾಡಹತ್ತಿತು. ಅಲ್ಲದೆ ಕಾರ್ಮಿಕ ಏನಿಲ್ಲವೆಂದರೂ ದಿನಕ್ಕೆ 13 ಗಂಟೆ ಕೆಲಸ ಮಾಡಬೇಕಾಗಿದ್ದು, ಹಗಲಿನ ಬೆಳಕನ್ನು ಕಾಣುವ ಅವಕಾಶವನ್ನೇ ಕಳೆದುಕೊಂಡ. ಶ್ರಮವಿಭಜನೆಯ ಕಾರಣದಿಂದಾಗಿ ಕಾರ್ಮಿಕ ಯಾವುದೋ ಒಂದು ಕಾರ್ಯದಲ್ಲಿ ಸತತವಾಗಿ ನಿರತನಾಗಿರಬೇಕಾದ ಕಾರಣ ಅವನಿಗೆ ಕೆಲಸದಲ್ಲೂ ತೃಪ್ತಿಯಿಲ್ಲವಾಯಿತು. ಜೊತೆಗೆ ಕಾರ್ಖಾನೆಯಿಂದ ಹೊರಬಂದಾಗ ಅವನಿಗೆ ಸರಿಯಾದ ವಸತಿಯ ಅನುಕೂಲವಿಲ್ಲದ ಕಾರಣ ಕೊಳಚೆ ಪ್ರದೇಶದಲ್ಲಿ ವಾಸ ಮಾಡಬೇಕಾಗಿ ಬಂದು ತತ್ಫಲವಾಗಿ ಅನೇಕ ಸಾಮಾಜಿಕ ಕೇಡುಗಳಿಗೆ ತುತ್ತಾಗಬೇಕಾಯಿತು.

ಕಾರ್ಮಿಕರ ಈ ಬಗೆಯ ಶೋಚನೀಯ ಪರಿಸ್ಥಿತಿಗೆ ಕೈಗಾರಿಕಾ ಕ್ರಾಂತಿಯೇ ಕಾರಣವಾಯಿತೆಂಬುದು ಆಕ್ಷೇಪ. ಮಾನವೀಯ ಮೌಲ್ಯಗಳನ್ನು ಬಿಟ್ಟು ಐಹಿಕ ಹಾಗೂ ದ್ರವ್ಯ ಸಂಬಂಧಿ ವಿಷಯಗಳಲ್ಲಿ ಮನುಷ್ಯ ಹೆಚ್ಚು ಆಸಕ್ತಿ ತೋರಿಸಲು ಕ್ರಾಂತಿ ಕಾರಣವಾಯಿತೆಂಬ ಖಂಡನೆಗೆ ಗುರಿಯಾಯಿತು. ಆದಾಗ್ಯೂ ಕೆಲವು ಆರ್ಥಿಕ ಇತಿಹಾಸಜ್ಞರು ಕ್ರಾಂತಿಯನ್ನು ಈ ಅಪವಾದದಿಂದ ಪಾರುಮಾಡುವ ಪ್ರಯತ್ನ ಕೈಗೊಂಡರು. ಇವರ ವಾದದ ಪ್ರಕಾರ ಕ್ರಾಂತಿಯಿಂದ ಅನನುಕೂಲಗಳುಂಟಾದರೂ ಅದರ ಅನುಕೂಲಗಳನ್ನು ಮರೆಯಬಾರದು. ಹಳ್ಳಿಯಿಂದ ನಗರಕ್ಕೆ, ಗೃಹಕೈಗಾರಿಕೆಯಿಂದ ಆಧುನಿಕ ಬೃಹತ್ ಕೈಗಾರಿಕೆ ಹಂತಕ್ಕೆ ಆದ ಪರಿವರ್ತನೆಯಲ್ಲಿ ಈ ಬಗೆಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಉದ್ಭವಿಸಿದ್ದು ಸ್ವಾಭಾವಿಕ. ಅಲ್ಲದೆ ಕ್ರಾಂತಿಯಿಂದ ರಾಷ್ಟ್ರಗಳ ಸಂಪತ್ತು ಹೆಚ್ಚುವ ಅವಕಾಶವುಂಟಾಗಿ ಅಧಿಕ ದರದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಕನಿಷ್ಠ ಪ್ರಮಾಣದಲ್ಲಾದರೂ ಆವಶ್ಯಕತೆಗಳನ್ನು ಪೂರೈಸುವ ಅನುಕೂಲವಾಯಿತು. ಇಲ್ಲದಿದ್ದಲ್ಲಿ ಬೆಳೆಯುತ್ತಿದ್ದ ಜನಸಂಖ್ಯೆಯಿಂದ ಹಲವು ತೊಂದರೆ ಅನುಭವಿಸಬೇಕಾಗುತ್ತಿತ್ತು. ಈ ವಾದದಲ್ಲಿ ಸತ್ಯಾಂಶವಿಲ್ಲದಿಲ್ಲ. ಏಕೆಂದರೆ ಕೈಗಾರಿಕಾ ಕ್ರಾಂತಿಯಿಂದ ಕೃಷಿ, ಬ್ಯಾಂಕು, ಸಾರಿಗೆ ಮುಂತಾದ ಕ್ಷೇತ್ರಗಳ ಮೇಲೆ ಪರಿಣಾಮವುಂಟಾಗಿ ಅಲ್ಲಿ ಉತ್ಪಾದನೆ ಅಧಿಕವಾಗುವಂತೆ ಸಹಾಯವಾಗಿದೆ. ಉತ್ಪಾದನೆಯಲ್ಲಿ ಹೆಚ್ಚಳ, ವೇಗವಾಗಿ ಪ್ರಯಾಣ ಮಾಡುವ ಅನುಕೂಲ, ಶೀಘ್ರಸುದ್ದಿ ಸಂಪರ್ಕವನ್ನಿಟ್ಟುಕೊಳ್ಳುವ ಸಾಧ್ಯತೆ ಮುಂತಾದವು ಕೈಗಾರಿಕಾ ಕ್ರಾಂತಿಯ ಕೊಡುಗೆ. ಈ ಅನುಕೂಲಗಳ ಮಧ್ಯೆ ಕೆಲವು ಅನನುಕೂಲಗಳೂ ಉಂಟಾದುವು. ಕೈಗಾರಿಕಾ ಕ್ರಾಂತಿಯ ಒಳಿತು ಕೆಡುಕುಗಳನ್ನು ತೌಲನಿಕವಾಗಿ ಪರಿಶೀಲಿಸಿದಾಗ, ಅದರ ಕೆಡಕುಗಳಿಗಿಂತ ಒಳಿತುಗಳು ಹಲವು ಮಡಿ ಅಧಿಕವೆಂಬುದು ನಿರ್ವಿವಾದ.

(ಎಚ್.ಎ.; ಬಿ.ಬಿ.ಕೆ.)

**ಕೈಗಾರಿಕಾ ದಣಿವು :** ಎಡೆಬಿಡದ ಶ್ರಮದ ಫಲವಾಗಿ, ಒಬ್ಬ ಕೆಲಸಗಾರನ ಅಥವಾ ಒಟ್ಟಾಗಿ ಅನೇಕರ ಕಾರ್ಯನಿರ್ವಹಣ ಶಕ್ತಿ ಕುಂದಿದಾಗ ಉಂಟಾಗುವ ಸ್ಥಿತಿಯೇ ದಣಿವು. ಕೈಗಾರಿಕಾ ಕ್ಷೇತ್ರದಲ್ಲಿ ಇದರ ವ್ಯಾಪ್ತಿ ಏನು, ಇದನ್ನು ತಡೆಗಟ್ಟುವ ಬಗೆಗಳಾವುವು ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ. ಹಾಗೆ ಕುಂದಿದ ಶಕ್ತಿಯನ್ನು ವಿಶ್ರಾಂತಿಯ ಅನಂತರ ಪುನಃ ಪಡೆಯಲು ಸಾಧ್ಯ. ಕೆಲಸ ಬಹಳ ತೀವ್ರವಾಗಿದ್ದಷ್ಟೂ ಬೇಗಬೇಗ ಕೆಲಸಗಾರ ದಣಿಯುತ್ತಾನೆ. ಒಂದು ಉದ್ಯಮ ಸನ್ನಿವೇಶದಲ್ಲಿ ಕಂಡುಬರುವ ಕಾರ್ಯಚಟುವಟಿಕೆಗಳಿಂದ ಉಂಟಾಗುವ ದಣಿವು ಕೆಲಸಗಾರನ (ಅ)ಕೆಲಸಕ್ಕಾಗಿ ವ್ಯಯವಾದ ಚೈತನ್ಯ (ಆ) ಕೆಲಸದ ಪರಿಮಾಣ ಮತ್ತು ಗುಣಮಟ್ಟದಲ್ಲಿ ಕಂಡುಬರುವ ಕೊರೆ ಮತ್ತು (ಇ) ವಿಶ್ರಾಂತಿಗಾಗಿ ಅವನ ಹಂಬಲ–ಇವುಗಳ ಮೂಲಕ ಪ್ರಕಟವಾಗುತ್ತದೆ. ದಣಿವು ಎಷ್ಟು ಶಾರೀರಿಕವೋ ಅಷ್ಟು ಮಾನಸಿಕವೂ ಹೌದು.

ಒಬ್ಬ ಕೆಲಸಗಾರನ ಕಾರ್ಯಚಟುವಟಿಕೆಯಲ್ಲಿ ಬಳಸಿಕೊಳ್ಳಲಾದ ಮಾಂಸ ಖಂಡಗಳಲ್ಲಿ, ಚೈತನ್ಯದಾಯಕ ವಸ್ತುವಾದ ಗ್ಲೈಕೋಜನ್ನಿನ ನಾಶವಾಗುತ್ತದಾಗಿ ಶಾರೀರಿಕ ದಣಿವು ಉಂಟಾಗುತ್ತದೆ. ಈ ಕಾರ್ಯಚಟುವಟಿಕೆಯ ಪ್ರಕ್ರಿಯೆಯಲ್ಲಿ, ಗ್ಲೈಕೋಜನ್ನಿನ ಉಪ ಉತ್ಪನ್ನವಾದ ಲ್ಯಾಕ್ಟಿಕ್ ಆಮ್ಲದಿಂದಾಗಿ ಗ್ಲೈಕೋಜನ್ ಸ್ಥಳಾಂತರ ಹೊಂದುತ್ತದೆ. ಹೀಗೆ ಮಾಂಸಖಂಡಗಳಲ್ಲಿ ಶೇಖರವಾದ ಲ್ಯಾಕ್ಟಿಕ್ ಆಮ್ಲ ಅವುಗಳ ಚಟುವಟಿಕೆಯನ್ನು ನಿರೋಧಿಸುತ್ತದೆ. ಆದರೆ ಕಾರ್ಯ ಚಟುವಟಿಕೆ ಬಹಳ ತೀಕ್ಷ್ಣ ಹಾಗೂ ನಿರಂತರವಾಗಿಲ್ಲದಿದ್ದರೆ ಲ್ಯಾಕ್ಟಿಕ್ ಆಮ್ಲ ಶೇಖರವಾಗುವುದಿಲ್ಲ. ಇದರಿಂದಾಗಿ ಕೆಲಸಗಾರ ತನ್ನ ಕೆಲಸವನ್ನು ತೀರ ಹೆಚ್ಚು ವೇಳೆಯವರೆಗೆ ಮುಂದುವರಿಸುವ ಸ್ಥಿತಿಯಲ್ಲಿರುತ್ತಾನೆ.

ಮಾನಸಿಕ ದಣಿವು ಒಬ್ಬ ಕೆಲಸಗಾರ ತನ್ನ ಕೆಲಸಕ್ಕೆ ತೋರಿಸುವ ಪ್ರತಿಕ್ರಿಯೆಗೆ ಸಂಬಂಧಿಸಿರುತ್ತದೆ. ನಿರಂತರವಾಗಿ ಕೂಡಿ ಕಳೆವ ಲೆಕ್ಕಾಚಾರದ ಕೆಲಸ ಮಾಡುವುದರಿಂದ ಒಂದೇ ಕೆಲಸವನ್ನು ಎಡೆಬಿಡದೆ ಮಾಡುವುದರಿಂದ ಮಾನಸಿಕ ಆಲಸ್ಯ ಉಂಟಾಗುತ್ತದೆ. ವ್ಯಕ್ತಿಗೆ ತನ್ನ ಕಸಬಿನಲ್ಲಿ ಅಭಿರುಚಿಯ ಅಭಾವವಿದ್ದಾಗಲೂ ಬೇಸರವುಂಟಾಗುತ್ತದೆ. ಹೆಚ್ಚು ಯಂತ್ರೀಕರಿಸಿದ ಕೆಲವು ಆಧುನಿಕ ಉದ್ಯಮಗಳಲ್ಲಿ ತೊಡಗಿರುವಾಗ ಸಾಕಾದಷ್ಟು ದೈಹಿಕ ಅಥವಾ ಇತರ ಕಾರ್ಯ ಚಟುವಟಿಕೆಗಳು ಇಲ್ಲವಾಗುವುದರಿಂದಲೂ ಬೇಸರವುಂಟಾಗುತ್ತದೆ. ಮಾನಸಿಕ ದಣಿವಿನಿಂದ ಬಳಲುತ್ತಿರುವ ಒಬ್ಬ ಕೆಲಸಗಾರನನ್ನು ತನ್ನ ಕೆಲಸವನ್ನು ಮುಂದುವರಿಸುವಂತೆ ಒತ್ತಾಯ ಪಡಿಸಿದಾಗ, ಆತನ ಸಂವೇದಗ್ರಹಣ (ಪರ್‌ಸೆಪ್ಷುಯಲ್) ಮತ್ತು ಭಾವರೂಪ (ಕಾನ್‌ಸೆಪ್ಚುಯಲ್) ಶಕ್ತಿಗಳು ಕ್ಷಯಿಸುತ್ತವೆಯಲ್ಲದೆ ತತ್ಫಲವಾಗಿ ಆತನ ಕೆಲಸದ ಮಟ್ಟ ಕುಂದುತ್ತದೆ.

ಶಾರೀರಿಕ ಮತ್ತು ಮಾನಸಿಕ ದಣಿವುಗಳ ಮಧ್ಯದ ಸೀಮಾರೇಖೆ ಬಹಳ ತೆಳುವಾಗಿದೆ. ತನ್ನಲ್ಲಿರುವ ಚೈತನ್ಯದ ಕೊನೆಯ ಅಂಶ ಕೆಲಸಕ್ಕಾಗಿ ವಿನಿಯೋಗವಾಗುವುದಕ್ಕಿಂತ ಬಹಳ ಮುಂಚಿತವಾಗಿಯೇ ಕೆಲಸಗಾರ ದಣಿವಿನ ಅನುಭವವನ್ನು ಪಡೆಯಲು ಪ್ರಾರಂಭಿಸುತ್ತಾನೆ. ಮತ್ತೊಂದು ರೀತಿಯಲ್ಲಿ, ಕೆಲಸಗಾರನಿಗೆ ತನ್ನ ಕೆಲಸದತ್ತ ಇರುವ ವಿರುದ್ಧ ಮನೋವೃತ್ತಿ ಶಾರೀರಿಕ ದಣಿವಿನ ಲಕ್ಷಣಗಳನ್ನು ಬೇಗ ಉದ್ರೇಕಗೊಳಿಸಬಹುದು. ವಿಶ್ರಾಂತಿಯಿಂದ ಮಾತ್ರವಲ್ಲದೆ, ಕೆಲವು ಸಂದರ್ಭಗಳಲ್ಲಿ, ಒಬ್ಬನ ಕಾರ್ಯ ಚಟುವಟಿಕೆಯ ರೀತಿಯಲ್ಲಿ ಬದಲಾವಣೆ ಆದಾಗಲೂ ಆತನಿಗೆ ದಣಿವಿನಿಂದ ವಿಮುಕ್ತಿ ದೊರೆಯುತ್ತದೆ. ಚಿಕ್ಕ ಹಾಗೂ ಹಿತಕರವಾದ ಗುಂಪುಗಳಲ್ಲಿ ಕೆಲಸಮಾಡುವುದು, ಒಂಟಿಯಾಗಿ ಕೆಲಸ ಮಾಡುವುದಕ್ಕಿಂತ ಕಡಿಮೆ ದಣಿವನ್ನುಂಟುಮಾಡುತ್ತದೆ.

**ದಣಿವಿನ ಮಾಪನ :** ಒಬ್ಬ ಕೆಲಸಗಾರ ಎಷ್ಟು ದಣಿದಿದ್ದಾನೆ ಎಂದು ಅಳೆಯಲು ಉಸಿರಾಡುವಿಕೆಯ ರೀತಿ, ರಕ್ತದ ಒತ್ತಡ, ಮೂತ್ರದಲ್ಲಿರುವ ಅಂಶಗಳು ಮೊದಲಾದ ವಸ್ತುನಿಷ್ಠ ವಿಧಾನಗಳನ್ನು ಉಪಯೋಗಿಸಲಾಗುತ್ತಿದೆ. ಬಡಿಯುವ (ಟ್ಯಾಪಿಂಗ್) ವೇಗ, ಪ್ರತಿಕ್ರಿಯೆಯ ಸುಸಂಘಟನೆ (ಕೋ ಆರ್ಡಿನೇಷನ್), ದೇಹದ ಓಲಾಟ, ಕೈಗಳ ಸ್ಥಿರತೆ ಮತ್ತು ಮಿಣುಕುವುದನ್ನು ಏಕೀಭವಿಸುವುದು (ಫ್ಲಿಕರ್ ಫ್ಯೂಷನ್) ಮೊದಲಾದ ಮಾನಸಿಕ ಪರೀಕ್ಷೆಗಳನ್ನು ಈ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಆದರೆ, ಕೆಲಸಗಾರನಿಗೆ ದಣಿವನ್ನುಂಟುಮಾಡುತ್ತಿರುವ ಚಟುವಟಿಕೆಗಳನ್ನು ಬಿಟ್ಟು ಬೇರೆಯವನ್ನು ಅವಲಂಬಿಸಲು ಮಾನಸಿಕ ಪರೀಕ್ಷೆಗಳು ಸಹಾಯಮಾಡುತ್ತವಾದರೂ ದಣಿವನ್ನು ಮಾಪನ ಮಾಡುವುದರಲ್ಲಿ ಅವುಗಳ ಉಪಯುಕ್ತತೆ ಅಷ್ಟಕ್ಕಷ್ಟೆ. ಅನೇಕ ವ್ಯಾವಹಾರಿಕ ಉದ್ದೇಶಗಳಿಗಾಗಿ, ಕೆಲಸಗಾರನ ಗಂಟೆ ಗಂಟೆಯ ಉತ್ಪನ್ನದ ಆಧಾರದ ಮೇಲೆ ರಚಿತವಾದ ಕೆಲಸದ ರೇಖೆ(ವರ್ಕ್ ಕರ್ವ್), ಕೆಲಸದ ವಿವಿಧ ಹಂತಗಳಲ್ಲಿ ಉಂಟಾಗುವ ದಣಿವಿನ ಪ್ರಮಾಣವನ್ನು ನಿರ್ಧರಿಸಲು ಸಮರ್ಪಕ ಅಳತೆಗೋಲು ಎಂದು ಸಿದ್ಧವಾಗಿದೆ. ಕೆಲಸ ಯೋಗ್ಯವಾದುದಾಗಿದ್ದು ಕೆಲಸಗಾರ ಆರೋಗ್ಯ ದೃಢಕಾಯನಾಗಿದ್ದಲ್ಲಿ ಕೆಲಸದ ರೇಖೆ ನಿಧಾನವಾಗಿ ಮೇಲೇರುತ್ತ ಹೋಗಿ ದಕ್ಷತೆಯ ಪರಮಾವಧಿಯನ್ನು ಮುಟ್ಟಿದಾಗ

ಅದೇ ನಿಲವಿನಲ್ಲಿ ಸ್ವಲ್ಪಕಾಲ ನಿಂತು ಅನಂತರ ಆಯಾಸವೊದಲಾದಂತೆ ಇಳಿಮುಖವಾಗತೊಡಗುತ್ತದೆ. ಕೆಲಸ ಬೇಸರ ತರುವಂಥದಾಗಿದ್ದಲ್ಲಿ ಕೊನೆಕೊನೆಗೆ ರೇಖೆ ಏರುಮುಖವಾಗುವುದನ್ನು ಕಾಣಬಹುದು.

ಕಾರ್ಯದ ಅವಧಿಗಳು ಮತ್ತು ವಿಶ್ರಾಂತಿಯ ಅಂತರಗಳು ; ಉದ್ಯಮದಲ್ಲಿ




ನಕ್ಷೆ 1 ಕೆಲಸದ ರೇಖೆ–ದಣಿವಿನ ಕೆಲಸ

ಕಾರ್ಯದ ಅವಧಿಗಳು ಮತ್ತು ಅವುಗಳ ವಿತರಣೆಗಳಿಗೂ ದಣಿವಿಗೂ ನಿಕಟ ಸಂಬಂಧವಿದೆ. ಒಬ್ಬ ಕೆಲಸಗಾರ ಒಂದು ಗಂಟೆಯಲ್ಲಿ ಗೊತ್ತಾದ ಕಾರ್ಯದ ಒಂದು ಭಾಗವನ್ನು ಮಾಡಿ ಮುಗಿಸುವುದಾದರೆ, ಹದಿನಾರು ಗಂಟೆಗಳಲ್ಲಿ ಅಂಥ ಹದಿನಾರು ಕಾರ್ಯಭಾಗಗಳನ್ನು ಪೂರ್ಣಗೊಳಿಸುತ್ತಾನೆ–ಎಂಬ ನಂಬಿಕೆ ಒಂದನೆಯ ಮಹಾಯುದ್ಧಕ್ಕೆ ಮುಂಚೆ ಇತ್ತು. ಆದ್ದರಿಂದ ಕೆಲಸಗಾರನಿಗೆ ಎಡೆಬಿಡದೆ ಅನೇಕ ಗಂಟೆಗಳ ಕಾಲ ಕೆಲಸ ಕೊಡಲಾಗುತ್ತಿತ್ತು. ಆದರೆ ಒಂದು ಮಿತಿಯನ್ನು ಮೀರಿ ಮುಂದುವರಿಸುವ ಕೆಲಸದಿಂದ ಅವ್ಯವಸ್ಥೆಯುಂಟಾಗುತ್ತದಲ್ಲದೆ ಅಪಘಾತಗಳೂ ರೋಗ ಮತ್ತು ಗೈರು ಹಾಜರಿಗಳೂ ಹೆಚ್ಚುತ್ತವೆಂದು ಈಚಿನ ಸಂಶೋಧನೆಗಳು ತೋರಿಸಿಕೊಟ್ಟಿವೆ. ಇಂದು ಬಹುಶಃ ಎಲ್ಲ ಕಾರ್ಯ ಕ್ಷೇತ್ರಗಳಲ್ಲೂ ಕೆಲಸದ ಅವಧಿ ಹೆಚ್ಚು ಕಡಿಮೆ ದಿನಕ್ಕೆ ಎಂಟು ಗಂಟೆಗಳೆಂದು ವಿಧಿ ಇದ್ದರೂ ಮಧ್ಯೆ ಮಧ್ಯೆ ಯುಕ್ತ ವಿಶ್ರಾಂತಿ ಇದ್ದೇ ಇರುತ್ತದೆ. ಎಡೆಬಿಡದೆ ದೀರ್ಘಾವಧಿ ಕೆಲಸ ಮಾಡಲು ಸಾಧ್ಯವಿಲ್ಲ ಎಂಬುದನ್ನು ಸಂಶೋಧನೆಗಳು ಸ್ಥಿರಪಡಿಸಿವೆ. ಕೆಲಸಗಾರರು ಕಾರ್ಯದ ಸ್ವಭಾವವನ್ನನುಸರಿಸಿ, ತಮ್ಮ ಕೆಲಸದ ಒಂದು ಗಂಟೆಯ ಅವಧಿಯಲ್ಲಿ 3 ರಿಂದ 15 ನಿಮಿಷಗಳ ವೇಳೆಯನ್ನು ಸುಮ್ಮನೆ ಕಳೆಯುತ್ತಿದ್ದುದನ್ನು ಪತ್ತೆ ಮಾಡಲಾಗಿದೆ. ಆದರೆ ಈ ವಿಧವಾದ ಅನೈಚ್ಛಿಕ ವಿಶ್ರಾಂತಿಗಳಿಂದ ಕೆಲಸಗಾರರಿಗೆ ಸಾಕಷ್ಟು ಉಪಯೋಗ ಕಂಡುಬರುವುದಿಲ್ಲ. ಸರಿಯಾಗಿ ನಿಯಮಿಸಲ್ಪಟ್ಟ, ಅಧಿಕೃತ ವಿಶ್ರಾಂತಿ ವೇಳೆಗಳಿದ್ದಲ್ಲಿ ಕೆಲಸಗಾರರಿಗೂ ಮಾಲೀಕರಿಗೂ ಹಿತ, ಲಾಭದಾಯಕ. ಒಂದು ಉದ್ಯಮದಲ್ಲಿ ಸ್ಥಾನೀಕರಣ (ಪ್ಲೇಸ್‌ಮೆಂಟ್) ಮತ್ತು ವಿಶ್ರಾಂತಿ ವೇಳೆಗಳ ಅವಧಿಗಳು ಕೆಲಸದ ರೇಖೆಯ ಸಹಾಯದಿಂದ ನಿರ್ಧರಿಸಲ್ಪಡುತ್ತವೆ.

ದಕ್ಷತೆ ಇಳಿಮುಖವಾಗುವುದಕ್ಕೆ ಸ್ವಲ್ಪ ಮುಂಚಿತವಾಗಿ ಕೊಟ್ಟಾಗ ವಿರಾಮ




ನಕ್ಷೆ 2 ವಿರಾಮಕಾಲದ ಪರಿಣಾಮ–ಹಗುರವಾದ, ಪುನರಾವರ್ತಿಸುವ ಕೆಲಸ

ವೇಳೆ ಹೆಚ್ಚು ಅನುಕೂಲಕರವಾಗಿ ಪರಿಣಮಿಸುತ್ತದೆ. ಒಬ್ಬ ಕೆಲಸಗಾರ ತನ್ನ ವಿರಾಮವೇಳೆಯ ಆರಂಭದಲ್ಲಿ ಶೀಘ್ರವಾಗಿ, ದಣಿವಿನಿಂದ ಚೇತರಿಸಿಕೊಳ್ಳುತ್ತಾನೆ. ಆದರೆ ಸಹಜಸ್ಥಿತಿಗೆ ಬರುವುದಕ್ಕೆ ಉಳಿದೆಲ್ಲ ವೇಳೆಯನ್ನೂ ಉಪಯೋಗಿಸಿಕೊಳ್ಳುತ್ತಾನೆ. ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ಕೆಲಸಗಾರ ದಣಿವಿನಿಂದ ವಿಮುಕ್ತಿ ಹೊಂದಲು ವಿಶ್ರಾಂತಿವೇಳೆ ನೆರವಾಗಬೇಕು ಎಂಬ ತಥ್ಯಾಂಶವನ್ನು ಗಮನದಲ್ಲಿಟ್ಟುಕೊಂಡು, ಅದರ ಅವಧಿಯನ್ನು ನಿರ್ಧರಿಸಬೇಕು.

ಈಚೆಗೆ ಹೊಸವಿಧಾನವೊಂದನ್ನು ಪರೀಕ್ಷಿಸಿ ನೋಡಲಾಗುತ್ತಿದೆ. ಒಬ್ಬ ಕೆಲಸಗಾರ ನಿಗದಿಯಾಗಿರುವಂತೆ ದಿನಕ್ಕೆ ಎಂಟು ಅಥವಾ ಹತ್ತು ಗಂಟೆ ಕೆಲಸ ಮಾಡಬೇಕಾಗುತ್ತದಷ್ಟೆ. ಅವನು ಎಷ್ಟು ಹೊತ್ತಿಗೆ ಬಂದ, ಯಾವಾಗ ವಿಶ್ರಾಂತಿ ಪಡೆದ ಇತ್ಯಾದಿಗಳನ್ನು ವೇಳಾಪಟ್ಟಿಯಂತೆ ಗಮನಿಸದೆ ಅವನಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟು ನೋಡುವುದು. ಅವನು ಅರ್ಧಗಂಟೆ ತಡವಾಗಿ ಬರಬಹುದು, ಅರ್ಧಗಂಟೆ ಮೊದಲೇ ಮನೆಗೆ ಹೋಗಬಹುದು, ಬೇಕೆಂದಾಗ ಸ್ವಲ್ಪ ಹೆಚ್ಚಾಗಿಯೇ ವಿಶ್ರಾಂತಿ ಪಡೆಯಬಹುದು. ದಿನದಲ್ಲಿ ಎಷ್ಟು ಪರಿಮಾಣ ಕೆಲಸ ನಿರ್ವಹಿಸಿದ್ದಾನೆ ಎಂಬುದನ್ನು ಮಾತ್ರ ಆಡಳಿತ ವರ್ಗ ಗಮನಿಸಿ ನೋಡಿದರಾಯಿತು. ಇಂಥ ಕ್ರಮವನ್ನು ಕೆಲವು ಕ್ಷೇತ್ರಗಳಲ್ಲಿ ಬಳಕೆಗೆ ತಂದಾಗ ಉತ್ತಮ ಪ್ರತಿಫಲ ಸಿಕ್ಕಿದೆಯೆಂದು ತಿಳಿದು ಬಂದಿದೆ. ಪೂರ್ಣಸ್ವಾತಂತ್ರ್ಯ ಕೊಡುವುದರಿಂದ ಇಲ್ಲಿ ಕೆಲಸಗಾರನಿಗೆ ಪೂರ್ಣ ಮಾನಸಿಕ ನೆಮ್ಮದಿ ಸಿಕ್ಕಿದಂತಾಗುತ್ತದೆ. ಆದರೆ ಇದರಿಂದ ಅವನ ಜವಾಬ್ದಾರಿ ಏನೂ ಕಡಿಮೆಯಾಗುವುದಿಲ್ಲ.

**ಪರಿಸರಕ್ಕೆ ಸಂಬಂಧಿಸಿದ ಅಂಶಗಳು :** ಒಂದು ಉದ್ಯಮದಲ್ಲಿ ಒಬ್ಬ ಕೆಲಸಗಾರನ ಮೇಲೆ ದಣಿವಿನ ಆಕ್ರಮಣವನ್ನು ತೀವ್ರಗೊಳಿಸುವ ಕೆಲವು ಮೂಲಾಂಶಗಳಿವೆ. ಉಷ್ಣತೆ, ಆರ್ದ್ರತೆ, ವಾಯುಚಲನೆ, ಅಸಮಂಜಸ ಬೆಳಕು ಮತ್ತು ಗದ್ದಲ ಮೊದಲಾದ ಪರಿಸರ ಸ್ಥಿತಿಗಳು ಕೆಲಸಗಾರನ ದಣಿವಿನ ಮೂಲಗಳು. ಅವನ್ನು ಸರಿಪಡಿಸಿದಾಗ ಕೆಲಸಗಾರನ ಆರೋಗ್ಯ ಹೆಚ್ಚಿ ಕೆಲಸ ಚೆನ್ನಾಗಿ ನಡೆಯುತ್ತದೆ. ಉದ್ಯಮ ಎಂಥದು, ಯಾವ ಪರಿಸರದಲ್ಲಿ ಇದೆ–ಎಂಬ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಲ್ಲಿಯ ವಾತಾವರಣ ಹೇಗಿರಬೇಕೆಂಬುದನ್ನು ನಿರ್ಧರಿಸಬೇಕಾಗುತ್ತದೆ. ಬಿಸಿ ಹಾಗೂ ಆರ್ದ್ರವಾಯುಗುಣವುಳ್ಳ, ಕಲ್ಕತ್ತೆಯ ಸಮೀಪದಲ್ಲಿರುವ ಉದ್ಯಮ ಕ್ಷೇತ್ರಗಳಿಗೆ ನೆಮ್ಮದಿಯ ಪರಿಮಿತಿ $68^{\circ}$ - $76.5^{\circ}$ ಫ್ಯಾ. ವರೆಗಿನ ಪರಿಣಾಮಕಾರಿ ಉಷ್ಣತೆಯ ನಡುವೆ ಇರುತ್ತದೆಯೆಂಬುದನ್ನು ಗುರುತಿಸಲಾಗಿದೆ. ಕೆಳಮಟ್ಟದ ಆರ್ದ್ರತೆ ಮತ್ತು ಹೆಚ್ಚಿನ ವಾಯುವೇಗ– ಇವೆರಡೂ ಕೆಲಸಗಾರನ ದೇಹದಲ್ಲಿ ಆಗುವ ಬಿಸಿಯ ನಷ್ಟದ ವೇಗವನ್ನು ಹೆಚ್ಚಿಸುತ್ತವೆ. ಅದನ್ನು ಸಮತೂಕದಲ್ಲಿಡಲು, ಉಷ್ಣತೆಯನ್ನು ನಿಯಂತ್ರಿಸುವ ಇತರ ಸಲಕರಣೆಗಳ ಜೊತೆಗೆ, ಕೆಲವು ಉದ್ಯಮಗಳ ಕಾರ್ಮಿಕರು ಯುಕ್ತವಾದ ಉಡುಪುಗಳನ್ನು ಉಪಯೋಗಿಸುವಂತೆ ಸಲಹೆ ಮಾಡಲಾಗಿದೆ.

ಸೂಕ್ಷ್ಮ ಪರಿಶೀಲನೆಯ ಆವಶ್ಯಕತೆ ಇರುವ ಕಸಬುಗಳಿಗೆ ಹೆಚ್ಚೆಂದರೆ 400 ಫುಟ್‌ಕ್ಯಾಂಡಲ್‌ಗಳನ್ನು (ಪ್ರಕಾಶಮಾನವಾದ ಹಗಲು ಬೆಳಕಿಗೆ ಸಮವಾದುದು) ಉಪಯೋಗಿಸಿ ಅದು ಸಮರ್ಪಕವಾಗಿದ್ದುದನ್ನು ಗುರುತಿಸಿದ್ದಾರಾದರೂ ಕಾರ್ಯಸ್ಥಾನದಲ್ಲಿ 15–20 ಫುಟ್ ಕ್ಯಾಂಡಲ್‌ಗಳ ಬೆಳಕಿನಿಂದ ದಣಿವು ಇನ್ನೂ ಕಡಿಮೆಯಾಗುತ್ತದೆ ಎಂಬುದನ್ನೂ ಪತ್ತೆ ಮಾಡಿದ್ದಾರೆ. ಫ್ಲೂರೊಸೆಂಟ್ ಅಥವಾ ಪಾದರಸದ ಹಬೆಯ ದೀಪಗಳಿಂದ ಪಡೆದ ಬೆಳಕು ಉತ್ತಮವಾಗಿರುತ್ತದೆ. ಅದಕ್ಕೆ ಕಾರಣ, ಅದು ವ್ಯಾಪಿಸಿದ ಬೆಳಕನ್ನು ಬೀರುವುದಲ್ಲದೆ ಅತಿ ತೀಕ್ಷ್ಣ ಪ್ರಭೆಯನ್ನು ತಪ್ಪಿಸುತ್ತದೆ. ಗೋಡೆಗಳಿಗೆ ಸಮರ್ಪಕವಾದ ಬಣ್ಣಗಳನ್ನು ಬಳಿಯುವುದು ಮತ್ತು ಕಿಟಕಿಗಳು ಹಾಗೂ ಕಾರ್ಖಾನೆಯ ವಿಸ್ತಾರದಲ್ಲಿ ಹಗಲು ಬೆಳಕನ್ನು ಪಡೆಯಲು ಸಹಕಾರಿಗಳಾದ ಇತರ ಮೂಲಗಳನ್ನು ನಿಯಮಬದ್ಧವಾಗಿ ಸ್ವಚ್ಛಗೊಳಿಸುವುದು–ಇವುಗಳಿಂದ ಕೂಡ ಹೆಚ್ಚಿನ ಅನುಕೂಲ ಉಂಟು. ಪರಿಸರದಲ್ಲಿ ಉಂಟಾಗುವ ಗದ್ದಲದ ಪರಿಣಾಮ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಬೇರೆ ಬೇರೆಯಾಗಿರಬಲ್ಲುದಾದರೂ ಸುತ್ತಮುತ್ತ ಮಧ್ಯೆ ಮಧ್ಯೆ ಉಂಟಾಗುವ ಜೋರಾದ ಗದ್ದಲ, ಕರ್ಕಶ ಶಬ್ದ ಅಥವಾ ಕಿರಿಚಾಟಗಳು ಯಾವ ಕೆಲಸಗಾರನಿಗಾದರೂ ತ್ರಾಸದಾಯಿಗಳಾಗಿ ಶೀಘ್ರವಾಗಿ ಆತನನ್ನು ಬಳಲಿಸುತ್ತವೆ. ಕೆಲಸಗಾರನ ಕಿವಿ ತಲಪುವ ಗದ್ದಲದ ಬಹುಪಾಲು ಗೋಡೆ ಮತ್ತು ಮಾಳಿಗೆಯ ಒಳಮೈಗಳಿಂದ ಪ್ರತಿಧ್ವನಿತವಾಗುವುದರಿಂದ ಶಬ್ದದ ಅಲೆಗಳನ್ನು ಹೀರಿಕೊಳ್ಳುವಂಥ ತಡಿಕೆಗಳಿಂದ ಅವನ್ನು ಮುಚ್ಚುವುದು ಉಪಯುಕ್ತವಾಗಿ ಕಂಡುಬಂದಿದೆ.

**ಮಾನವ–ಯಂತ್ರ ಹೊಂದಾಣಿಕೆ:** ಒಂದು ಉದ್ಯಮದಲ್ಲಿ ಉತ್ಕೃಷ್ಟ ಫಲವನ್ನು ನಡೆಯಬೇಕಾದರೆ ಮಾನವ(ಕೆಲಸಗಾರ) ಮತ್ತು ಯಂತ್ರಗಳ ನಡುವೆ ಸುಸಂಗತ ಹೊಂದಾಣಿಕೆ ಇರುವುದು ಅತ್ಯಾವಶ್ಯಕ. ವೇಗವಾಗಿ ನಡೆಯುವ ಯಂತ್ರಗಳನ್ನು ನಿಭಾಯಿಸಲಾರದ ಕೆಲಸಗಾರ ಶೀಘ್ರವಾಗಿ ದಣಿಯುತ್ತಾನೆ. ಆದ್ದರಿಂದ ಕೆಲಸಕ್ಕೆ ಯುಕ್ತನಾದ ಮನುಷ್ಯನನ್ನು ಆರಿಸಿಕೊಳ್ಳುವ ಆವಶ್ಯಕತೆ ಬಹಳ ಮುಖ್ಯವಾದ್ದು. ಇದರಂತೆಯೇ ಒಂದು ಕೆಲಸ ಮಾಡುವಾಗ ಕೆಲಸಗಾರ ಮಾಡುವ ನಿರುಪಯುಕ್ತ ಚಲನೆಗಳು ಮತ್ತು ತೊಡಕಾದ ದೇಹ ಭಂಗಿಗಳು ಅವನ ಚೈತನ್ಯವನ್ನು ಪೋಲು ಮಾಡುತ್ತವೆ. ಆದ್ದರಿಂದ ಒಂದು ಕೆಲಸವನ್ನು ಸಮರ್ಪಕವಾಗಿ ಮಾಡಲು ದೊರೆಯಬೇಕಾದ

ತರಬೇತಿಯ ಪ್ರಾಮುಖ್ಯವನ್ನು ಹೆಚ್ಚು ಒತ್ತಿ ಹೇಳಬೇಕಾಗಿಲ್ಲ. ಯಂತ್ರಸ್ಥಿರಾಂಶ, ಮನುಷ್ಯ ಚರಾಂಶಗಳೆಂಬ ಮನುಷ್ಯನ ದೇಹದ ರಚನೆ, ಕೆಲಸದ ವೈಖರಿ, ಮಾನಸಿಕ ಶಕ್ತಿ ಸಾಮರ್ಥ್ಯಗಳು–ಇವೆಲ್ಲವಕ್ಕೂ ಹೊಂದಿಕೊಳ್ಳುವಂಥ ಹೊಸ ಹೊಸ ಯಂತ್ರಗಳನ್ನು ಈಚೆಗೆ ನಿರ್ಮಿಸುತ್ತಿದ್ದಾರೆ. ಇದರಿಂದಾಗಿ, ಹಿಂದಿನ ಕಾಲದಲ್ಲಿ ಯಂತ್ರಗಳಿಂದಾಗಿ ಮನುಷ್ಯ ಅಗತ್ಯವಾಗಿ ಅನುಭವಿಸಬೇಕಾಗಿದ್ದ ಅನೇಕ ತೊಂದರೆಗಳು ತಪ್ಪುವಂತಾಗಿವೆ.
**(ನೋಡಿ– ಕೈಗಾರಿಕಾ ಮನೋವಿಜ್ಞಾನ)** (ಎಸ್.ಎಲ್.ಡಿ.)

**ಕೈಗಾರಿಕಾ ನೀತಿ :** ಒಂದು ದೇಶದ ಕೈಗಾರಿಕೆಗಳ ಸ್ಥಾಪನೆ, ಬೆಳೆವಣಿಗೆ, ನಿರ್ವಹಣೆ, ಒಡೆತನ, ಅನ್ಯದೇಶೀಯರ ಸಹಭಾಗಿತ್ವ, ಕಾರ್ಮಿಕ–ಮಾಲೀಕ ಸಂಬಂಧ ಮುಂತಾದ ವಿಚಾರಗಳಲ್ಲಿ ಆ ದೇಶದ ಸರ್ಕಾರದ ಅಧಿಕೃತ ನೀತಿ (ಇಂಡಸ್ಟ್ರಿಯಲ್ ಪಾಲಿಸಿ). ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಯ ಪಾತ್ರ ಹಿರಿದಾದ್ದು. ಅಭಿವೃದ್ಧಿಶೀಲ ದೇಶಗಳ ಜನ ಬಹುಸಂಖ್ಯೆಯಲ್ಲಿ ಕೃಷಿಯಲ್ಲಿ ನಿರತರಾಗಿರುವುದರಿಂದ ಆ ಒತ್ತಡವನ್ನು ಕಡಿಮೆ ಮಾಡಲು ಕೈಗಾರಿಕಾಭಿವೃದ್ಧಿ ಅತ್ಯಾವಶ್ಯಕ. ಆ ದೇಶಗಳಲ್ಲಿರುವ ನಿರುದ್ಯೋಗ, ಆಂಶಿಕ ಉದ್ಯೋಗ, ಇವಕ್ಕೆ ಕೈಗಾರಿಕಾಭಿವೃದ್ಧಿಯೇ ಏಕಮಾತ್ರ ಪರಿಹಾರ. ಕೈಗಾರಿಕಾಭಿವೃದ್ಧಿಯ ಅವಶ್ಯಕತೆಯನ್ನು ಒಪ್ಪಿಕೊಂಡರೆ ಕೈಗಾರಿಕಾನೀತಿಯ ಪ್ರಾಮುಖ್ಯ ಉದ್ಭವಿಸುತ್ತದೆ. ಎಲ್ಲ ಬಗೆಯ ಕೈಗಾರಿಕೆಗಳ ಅಭಿವೃದ್ಧಿಯೂ ಸರ್ಕಾರದ ನೀತಿಯನ್ನೇ ಬಹಳಮಟ್ಟಿಗೆ ಅವಲಂಬಿಸಿರುತ್ತದೆ. ಕೈಗಾರಿಕಾನೀತಿ ಭಾಗಶಃ ರಾಜಕೀಯ, ಭಾಗಶಃ ಆರ್ಥಿಕ. ಆಡಳಿತ ನಡೆಸುತ್ತಿರುವ ಪಕ್ಷದ ರಾಜಕೀಯ ಸಿದ್ಧಾಂತಗಳಿಗೆ ಅನುಗುಣವಾಗಿರುವುದರಿಂದ ಇದು ಭಾಗಶಃ ರಾಜಕೀಯ; ಸರ್ಕಾರದ ಧೋರಣೆಯ ಅಂತಿಮಗುರಿ ಆರ್ಥಿಕಾಭಿವೃದ್ಧಿಯಾದುದರಿಂದ ಇದು ಭಾಗಶಃ ಆರ್ಥಿಕ. ಅಧಿಕಾರದಲ್ಲಿರುವ ಪಕ್ಷದ ಗುರಿ ಸಮಾಜವಾದದ ಸ್ಥಾಪನೆಯಾಗಿದ್ದರೆ, ಬಡವರ ಮತ್ತು ಸಮಾಜದಲ್ಲಿರುವ ದುರ್ಬಲರ ಆರ್ಥಿಕಾಭಿವೃದ್ಧಿಗೆ ಹೆಚ್ಚು ಗಮನ ಕೊಡುವುದೂ ವರಮಾನ, ಆಸ್ತಿ ಮತ್ತು ಆರ್ಥಿಕ ಶಕ್ತಿಗಳು ಕೆಲವು ಕಡೆ ಮಾತ್ರ ಕೇಂದ್ರೀಕೃತವಾಗುವುದನ್ನು ತಪ್ಪಿಸುವುದೂ ಅವಶ್ಯವಾಗುತ್ತದೆ. ಇದನ್ನು ಸಾಧಿಸಲು ಸರ್ಕಾರ ಕೈಗಾರಿಕಾಭಿವೃದ್ಧಿಯಲ್ಲಿ ಹೆಚ್ಚಿನ ಪಾತ್ರ ವಹಿಸಬೇಕಾಗುತ್ತದೆ. ಸರ್ಕಾರ ತಾನೇ ಹಲವು ಕೈಗಾರಿಕೆಗಳನ್ನು ವಹಿಸಿಕೊಂಡು ನಡೆಸಬೇಕಾಗುತ್ತದೆ. ಖಾಸಗಿ ವಲಯದ ಮೇಲೆ ಹೆಚ್ಚು ನಿಯಂತ್ರಣ ಹಾಕಬೇಕಾಗುತ್ತದೆ. ಇದನ್ನೆಲ್ಲ ಆಗಮಾಡಿಸಲು ಒಂದು ಕೈಗಾರಿಕಾ ನೀತಿ ಆವಶ್ಯಕ. ಖಾಸಗಿ ಮತ್ತು ಸರ್ಕಾರಿ ಉದ್ಯಮ ವಲಯಗಳ ನಡುವೆ ಘರ್ಷಣೆ–ಅಸಹಕಾರಗಳೂ ಅನಾವಶ್ಯಕವಾದ ನಿಯಂತ್ರಣವೂ ಆರ್ಥಿಕಾಭಿವೃದ್ಧಿಗೆ ಮಾರಕವಾಗಬಹುದು. ಖಾಸಗಿ ಮತ್ತು ಸರ್ಕಾರಿ ವಲಯಗಳ ಬಗ್ಗೆ ಸರ್ಕಾರ ತಳೆಯುವ ನಿಲುವು, ಆ ದೃಷ್ಟಿಯಲ್ಲಿ ಆಡಳಿತದ ಮತ್ತು ಕಾನೂನಿನ ವಿಧಿವಿಧಾನಗಳು–ಇವೆಲ್ಲ ಆರ್ಥಿಕಾಭಿವೃದ್ಧಿಯ ನಿರ್ಣಾಯಕಗಳು, ಆರ್ಥಿಕಾಭಿವೃದ್ಧಿಯಲ್ಲಿ ಖಾಸಗಿ ವಲಯದ ಪಾತ್ರ ಸರ್ಕಾರದ ನೀತಿಯನ್ನು ಅನುಸರಿಸುತ್ತದೆ. ಖಾಸಗಿ ವಲಯವಿರಬೇಕೆಂದು ಸರ್ಕಾರ ಒಪ್ಪಿಕೊಂಡರೆ ಅದರ ಬೆಳೆವಣಿಗೆಗೆ ಸರಿಯಾದ ವಾತಾವರಣವನ್ನು ಕಲ್ಪಿಸಬೇಕು.

ಅಭಿವೃದ್ಧಿಶೀಲ ದೇಶಗಳ ತ್ವರಿತ ಆರ್ಥಿಕಾಭಿವೃದ್ಧಿಯನ್ನು ಆಂತರಿಕ ಸಂಪತ್ಸಾಧನಗಳಿಂದಲೇ ಸಾಧಿಸಲು ಆಗಲಾರದು. ಇವುಗಳ ಆರ್ಥಿಕಾಭಿವೃದ್ಧಿಯಲ್ಲಿ ಹೊರಗಿನ ಸಂಪತ್ಸಾಧನಗಳೂ ತಾಂತ್ರಿಕ ನೆರವೂ ಅನೇಕ ವೇಳೆ ಪ್ರಮುಖ ಪಾತ್ರವಹಿಸಬೇಕಾಗುತ್ತದೆ. ಒಂದು ದೇಶದ ಕೈಗಾರಿಕಾಭಿವೃದ್ಧಿಗೆ ವಿದೇಶಗಳಿಂದ ಬರಬಹುದಾದ ಖಾಸಗಿ ಬಂಡವಾಳ ಅದರ ಕೈಗಾರಿಕಾ ನೀತಿಯನ್ನು ಅವಲಂಬಿಸಿರುತ್ತದೆ. ವಿದೇಶಿ ಬಂಡವಾಳದ ಆಮದನ್ನು ಪ್ರೋತ್ಸಾಹಿಸಬೇಕೆ, ಬೇಡವೆ–ಎಂಬುದನ್ನು ಕೈಗಾರಿಕಾ ನೀತಿಯಲ್ಲಿ ನಿರೂಪಿಸಲಾಗಿರುತ್ತದೆ.

ಆರ್ಥಿಕಾಭಿವೃದ್ಧಿಯಲ್ಲಿ ಆರ್ಥಿಕ ಮತ್ತು ರಾಜಕೀಯ ಅಂಶಗಳ ಜೊತೆಗೆ ಮಾನಸಿಕ ಅಂಶಗಳೂ ಮುಖ್ಯ. ಖಾಸಗಿ ಉದ್ಯಮವೂ ಮುಖ್ಯವೆಂದು ಪರಿಭಾವಿಸಲಾದ ಪಕ್ಷದಲ್ಲಿ, ದೇಶದ ಉದ್ಯಮಿಗಳು ಸರ್ಕಾರದ ಕೈಗಾರಿಕಾ ನೀತಿಯಿಂದ ನಿರಾಶರಾದರೆ ಕೈಗಾರಿಕಾಭಿವೃದ್ಧಿ ಸ್ಥಗಿತವಾಗುತ್ತದೆ. ಅಂಥ ದೇಶದ ಕೈಗಾರಿಕಾ ನೀತಿ ಉದ್ಯಮಿಗಳಲ್ಲಿ ನಿರಾಸೆಯನ್ನುಂಟುಮಾಡದಂತಿರಬೇಕು. ಉದ್ಯಮಿಗಳಲ್ಲಿ ತಮ್ಮ ಭವಿಷ್ಯದ ಬಗ್ಗೆ ಅನಾವಶ್ಯಕವಾಗಿ ಗಾಬರಿಯನ್ನುಂಟುಮಾಡಬಾರದು. ಆದರೆ ಈ ಉದ್ಯಮಿಗಳು ರಾಷ್ಟ್ರದ ಹಿತಕ್ಕೆ ವ್ಯತಿರಿಕ್ತವಾಗಿ ನಡೆದರೆ ಅವರ ಉದ್ಯಮಗಳನ್ನು ನಿಯಂತ್ರಿಸುವುದು ಅಗತ್ಯವಾಗುತ್ತದೆ.

ಕೈಗಾರಿಕಾಭಿವೃದ್ಧಿ ಯಾವ ಮಾದರಿಯಲ್ಲಿರಬೇಕೆಂಬುದು ಇನ್ನೊಂದು ಸಮಸ್ಯೆ: ಬಂಡವಾಳಪ್ರಧಾನ ಕೈಗಾರಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕೇ, ಶ್ರಮಪ್ರಧಾನ ಕೈಗಾರಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕೇ ಎನ್ನುವುದು ಇನ್ನೊಂದು ಮುಖ್ಯ ಸಮಸ್ಯೆ. ಬಂಡವಾಳಪ್ರಧಾನ ಕೈಗಾರಿಕೆಗಳು ಉತ್ಪಾದನೆಯನ್ನು ಹೆಚ್ಚಿಸಿ, ತ್ವರಿತ ಆರ್ಥಿಕಾಭಿವೃದ್ಧಿಗೆ ದಾರಿ ಮಾಡುತ್ತವೆ. ಆದರೆ ಶ್ರಮಪ್ರಧಾನ ಕೈಗಾರಿಕೆಗಳು–ಸಣ್ಣ ಮತ್ತು ಗೃಹಕೈಗಾರಿಕೆಗಳು–ಅಧಿಕ ಉದ್ಯೋಗಾವಕಾಶಗಳನ್ನು ಕಲ್ಪಿಸಿ, ನಿರುದ್ಯೋಗ ಸಮಸ್ಯೆಯನ್ನು ಬೇಗ ನಿವಾರಿಸಬಹುದು. ಒಂದು ಸರಿಯಾದ ಕೈಗಾರಿಕಾ ನೀತಿ ಈ ಎರಡೂ ಅಂಶಗಳ ನಡುವೆ ಸಮತೋಲವನ್ನೇರ್ಪಡಿಸಬೇಕಾಗುತ್ತದೆ.

**ಭಾರತ ಸರ್ಕಾರದ ಕೈಗಾರಿಕಾ ನೀತಿ:** ಭಾರತ ಬ್ರಿಟಿಷರ ಅಧೀನದಲ್ಲಿದ್ದಾಗ ಸರ್ಕಾರ ದೇಶದ ಕೈಗಾರಿಕಾಭಿವೃದ್ಧಿಗೆ ಹೆಚ್ಚು ಗಮನ ನೀಡಿರಲಿಲ್ಲ. ಭಾರತ ಕೃಷಿಪ್ರಧಾನದೇಶವಾದ್ದರಿಂದ ಕೈಗಾರಿಕಾಭಿವೃದ್ಧಿಯಿಂದ ದೇಶದ ಪ್ರಗತಿಗೆ ಅಡ್ಡಿಯುಂಟಾಗುವುದೆಂಬ ವಾದವೂ ಇತ್ತು. ಆದರೂ 1920ರಲ್ಲಿ ಕೈಗಾರಿಕಾ ಮಂಡಳಿಯ ನೇಮಕ, 1923ರಿಂದ ಕೆಲವು ಕೈಗಾರಿಕೆಗಳಿಗೆ ನೀಡಲಾದ ವಿವೇಚನಾತ್ಮಕ ರಕ್ಷಣೆ, 1945ರಲ್ಲಿ ಮಂಡಿಸಲಾದ ಕೈಗಾರಿಕಾ ನೀತಿ ನಿರೂಪಣೆ–ಇವು ಕೈಗಾರಿಕಾಭಿವೃದ್ಧಿಯಲ್ಲಿ ಆಗಿನ ಸರ್ಕಾರ ಕೊಂಚ ಹೆಚ್ಚಿನ ಆಸಕ್ತಿ ವಹಿಸಲಾರಂಭಿಸುತ್ತಿತ್ತೆಂಬುದಕ್ಕೆ ನಿದರ್ಶನಗಳು. ಇವುಗಳಿಂದ ಕೈಗಾರಿಕಾಭಿವೃದ್ಧಿಯಲ್ಲಿ ಸರ್ಕಾರದ ಪಾತ್ರ ಸ್ವಲ್ಪಮಟ್ಟಿಗೆ ಅಧಿಕವಾಯಿತು. ಖಾಸಗಿ ವಲಯದ ಕೈಗಾರಿಕೆಗಳನ್ನು ಸ್ವಲ್ಪಮಟ್ಟಿಗಾದರೂ ನಿಯಂತ್ರಣ ಮಾಡಬೇಕೆಂಬ ವಾದವನ್ನು ಸರ್ಕಾರ ಒಪ್ಪಿಕೊಂಡಂತಾಯಿತು. ಆದರೂ ರಾಜಕೀಯ ಸ್ವಾತಂತ್ರ್ಯವಿಲ್ಲದೆ ಭಾರತ ಪರಿಣಾಮಕಾರಿಯಾದ ಕೈಗಾರಿಕಾನೀತಿಯನ್ನು ರೂಪಿಸಲು ಸಾಧ್ಯವಿರಲಿಲ್ಲ. ಭಾರತ ಸ್ವತಂತ್ರವಾದ ಮೇಲೆ, 1948ರಲ್ಲಿ, ದೇಶದ ಕೈಗಾರಿಕಾ ನೀತಿಯನ್ನು ವಿಶದವಾಗಿ ನಿರೂಪಿಸಲಾಯಿತು. ಮುಂದಿನ ಎಂಟು ವರ್ಷಗಳಲ್ಲಿ ಭಾರತದ ರಾಜಕೀಯ ಮತ್ತು ಆರ್ಥಿಕ ವಲಯಗಳಲ್ಲುಂಟಾದ ಬದಲಾವಣೆಯ ದೃಷ್ಟಿಯಿಂದ 1956ರಲ್ಲಿ ಪರಿಷ್ಕೃತ ಕೈಗಾರಿಕಾ ನೀತಿಯನ್ನು ಮಂಡಿಸಲಾಯಿತು.

ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ಅದನ್ನು ನ್ಯಾಯವಾಗಿ ಹಂಚುವುದು ಸರ್ಕಾರ 1948ರಲ್ಲಿ ಘೋಷಿಸಿದ ನೀತಿಯ ಮುಖ್ಯ ಉದ್ದೇಶಗಳಾಗಿದ್ದುವು. ಕೈಗಾರಿಕೆಗಳನ್ನು ಖಾಸಗಿ ಮತ್ತು ಸರ್ಕಾರಿ ವಲಯಗಳ ನಡುವೆ ಹಂಚಿಕೆ ಮಾಡಿದ್ದು ಈ ನೀತಿಯ ಅತ್ಯಂತ ಮುಖ್ಯ ಅಂಶ. ಕೈಗಾರಿಕೆಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಯಿತು. ಮೊದಲನೆಯ ಗುಂಪಿನ ಕೈಗಾರಿಕೆಗಳ ಒಡೆತನ ಮತ್ತು ನಿರ್ವಹಣೆ ಸರ್ಕಾರದ ಏಕಸ್ವಾಮ್ಯಕ್ಕೆ ಒಳಪಟ್ಟಂಥವು. ಈ ಗುಂಪಿಗೆ ಸೇರಿದ ಕೈಗಾರಿಕೆಗಳು ಇವು : 1.ರಕ್ಷಣ ಕೈಗಾರಿಕೆಗಳು–ಯುದ್ಧೋಪಕರಣಗಳ ಮತ್ತು ಮದ್ದು ಗುಂಡುಗಳ ಉತ್ಪಾದನೆ, 2.ಅಣುಶಕ್ತಿಯ ಉತ್ಪಾದನೆ ಮತ್ತು ನಿಯಂತ್ರಣ, 3.ರೈಲ್ವೆ. ಅಸಾಧಾರಣ ಪರಿಸ್ಥಿತಿಯಲ್ಲಿ ಸರ್ಕಾರ ರಾಷ್ಟ್ರರಕ್ಷಣೆಗೆ ಅಗತ್ಯವಾದ ಯಾವುದಾದರೂ ಕೈಗಾರಿಕೆಯನ್ನು ತೆಗೆದುಕೊಳ್ಳುವ ಹಕ್ಕನ್ನು ಪಡೆದಿದೆ ಎಂದೂ ಹೇಳಲಾಗಿತ್ತು. ಎರಡನೆಯ ಗುಂಪಿಗೆ 6 ಮುಖ್ಯ ಕೈಗಾರಿಕೆಗಳನ್ನು ಸೇರಿಸಲಾಗಿತ್ತು : ಕಲ್ಲಿದ್ದಲು, ಕಬ್ಬಿಣ ಮತ್ತು ಉಕ್ಕು, ವಿಮಾನ ನಿರ್ಮಾಣ, ಟೆಲಿಫೋನ್, ತಂತಿ ಯಂತ್ರೋಪಕರಣಗಳ ಉತ್ಪಾದನೆ (ರೇಡಿಯೊ ಉತ್ಪಾದನೆಯನ್ನು ಬಿಟ್ಟು) ಹಡಗು ನಿರ್ಮಾಣ ಮತ್ತು ಖನಿಜ ಎಣ್ಣೆ. ಈ ಕ್ಷೇತ್ರದಲ್ಲಿ ಹೊಸದಾಗಿ ಕೈಗಾರಿಕೆ ಸ್ಥಾಪಿಸುವ ಏಕಸ್ವಾಮ್ಯ ಸರ್ಕಾರದ್ದು. ಈ ಗುಂಪಿನಲ್ಲಿ ಸೇರಿಸಿದ್ದ ಕೈಗಾರಿಕೆಗಳ ಸಂಖ್ಯೆ ಕಡಿಮೆಯಾದರೂ ಕೈಗಾರಿಕಾಭಿವೃದ್ಧಿಯಲ್ಲಿ ಇವುಗಳದು ಹೆಚ್ಚಿನ ಪ್ರಾಮುಖ್ಯ. ಕೇಂದ್ರ ಸರ್ಕಾರದ ನಿಯಂತ್ರಣ ಮತ್ತು ಕಟ್ಟುಪಾಡಿಗೆ ಒಳಪಟ್ಟ ಕೈಗಾರಿಕೆಗಳದು ಮೂರನೆಯ ಗುಂಪು. ಹತ್ತಿ ಮತ್ತು ಉಣ್ಣೆ ಜವಳಿ ಕೈಗಾರಿಕೆ, ಸಿಮೆಂಟು, ಸಕ್ಕರೆ, ಕಾಗದ ಮತ್ತು ವೃತ್ತಪತ್ರಿಕಾ ಕಾಗದ ತಯಾರಿಕೆ, ವಿಮಾನ ಮತ್ತು ಸಮುದ್ರಯಾನ, ಉಪ್ಪು, ರಬ್ಬರ್, ಗೊಬ್ಬರ, ಭಾರಿ ಯಂತ್ರೋಪಕರಣ, ಮೋಟಾರ್ ವಾಹನ ಮತ್ತು ಟ್ರಾಕ್ಟರ್ ಉತ್ಪಾದಿಸುವ ಕೈಗಾರಿಕೆಗಳು–ಇವುಗಳದು ಮೂರನೆಯ ಗುಂಪು. ಉಳಿದ ಕೈಗಾರಿಕೆಗಳದು ನಾಲ್ಕನೆಯ ಗುಂಪು. ಇವುಗಳಲ್ಲಿ ಖಾಸಗಿ ವ್ಯಕ್ತಿ, ಸಂಸ್ಥೆ ಮತ್ತು ಸಹಕಾರಿ ಸಂಸ್ಥೆಗಳಿಗೆ ಅವಕಾಶ ನೀಡಲಾಗಿತ್ತು. ಈ ಕ್ಷೇತ್ರದ ಕೈಗಾರಿಕೆಗಳ ಅಭಿವೃದ್ಧಿಯನ್ನು ಖಾಸಗಿ ಉದ್ಯಮ ಸಮರ್ಪಕವಾಗಿ ಸಾಧಿಸದಿದ್ದರೆ ಸರ್ಕಾರ ಮಧ್ಯೆ ಪ್ರವೇಶಮಾಡುವ ಹಕ್ಕನ್ನು ಉಳಿಸಿಕೊಂಡಿತ್ತು. ಕೈಗಾರಿಕೆಗಳ ರಾಷ್ಟ್ರೀಕರಣಕ್ಕೆ 1948ರ ಕೈಗಾರಿಕಾ ನೀರೆ ಅಷ್ಟೇನೂ ಪ್ರಾಮುಖ್ಯ ನೀಡಲಿಲ್ಲ. ಆದರೂ ಸರ್ಕಾರ ಯಾವಾಗ ಬೇಕಾದರೂ ಸಾರ್ವಜನಿಕ ಹಿತದೃಷ್ಟಿಯಿಂದ ಯಾವ ಕೈಗಾರಿಕೆಯನ್ನಾದರೂ ರಾಷ್ಟ್ರೀಕರಣ ಮಾಡುವ ಹಕ್ಕನ್ನು ಪಡೆದಿದೆ ಎಂದು ಪ್ರತಿಪಾದಿಸಲಾದ್ದು ಆ ಮೂಲಕ. ಎರಡನೆಯ ಗುಂಪಿನಲ್ಲಿ ಖಾಸಗಿ ವಲಯಕ್ಕೆ ಸೇರಿದ ಕೈಗಾರಿಕೆಗಳಿಗೆ ಅಭಿವೃದ್ಧಿ ಹೊಂದಲು ಹತ್ತು ವರ್ಷಗಳ ಅವಧಿ ಕೊಡಲಾಗುವುದೆಂದೂ ಆ ಕಾಲದ ಅನಂತರ ಆಗಿನ ಪರಿಸ್ಥಿತಿಯ ದೃಷ್ಟಿಯಲ್ಲಿ ಅವುಗಳನ್ನು ಪುನರ್ವಿಮರ್ಶಿಸಲಾಗುವುದೆಂದೂ ಒಂದು ವೇಳೆ ಅವುಗಳ ರಾಷ್ಟ್ರೀಕರಣವಾದರೆ ಸಂವಿಧಾನದಲ್ಲಿ ನಮೂದಿಸಲಾಗಿರುವ ಮೂಲಭೂತ ಹಕ್ಕುಗಳಿಗನುಗುಣವಾಗಿ ಆ ಕೈಗಾರಿಕೆಗಳ ಒಡೆಯರಿಗೆ ನ್ಯಾಯವಾದ ಪರಿಹಾರ ನೀಡಲಾಗುವುದೆಂದೂ ಸಾರಲಾಯಿತು. ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ಸ್ಥಳೀಯ ಸಂಪತ್ಸಾಧನಗಳನ್ನು ಉಪಯೋಗಿಸುವುದು ಮತ್ತು ಕೆಲವು ಬಗೆಯ ಅನುಭೋಗ ವಸ್ತುಗಳ ಸ್ವಯಂಪೂರ್ಣತೆಯನ್ನು ಸಾಧಿಸುವುದು–ಈ ಉದ್ದೇಶಗಳಿಗಾಗಿ ಸರ್ಕಾರ ತನ್ನ ಕೈಗಾರಿಕಾ ನೀತಿಯಲ್ಲಿ ಗೃಹಕೈಗಾರಿಕೆಗಳ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಿತ್ತು. ಬೃಹದ್ಗಾತ್ರದ ಕೈಗಾರಿಕೆ ಮತ್ತು ಸಣ್ಣ ಹಾಗೂ ಗೃಹಕೈಗಾರಿಕೆಗಳ ಹೊಂದಾವಣೆ,

ಅವನ್ನು ಪರಸ್ಪರ ಪೂರಕವಾಗಿ ಮಾಡುವ ಸಾಧ್ಯತೆ-ಇವಕ್ಕೂ ಪ್ರಾಶಸ್ತ್ಯ ನೀಡಲಾಗಿತ್ತು. ಸ್ವಾತಂತ್ರ್ಯ ಬಂದ ಅನಂತರ ಭಾರತ ಸರ್ಕಾರ ವಿದೇಶಿ ಬಂಡವಾಳದ ಬಗ್ಗೆ ಯಾವ ನೀತಿ ಅನುಸರಿಸುತ್ತದೆಯೆಂಬ ವಿಷಯದಲ್ಲಿ ಅನಿಶ್ಚಿತತೆಯಿತ್ತು. ಇದನ್ನು ನಿವಾರಿಸಲು ಸರ್ಕಾರ ವಿದೇಶಿ ಬಂಡವಾಳದ ವಿಷಯವಾಗಿ ತನ್ನ ನೀತಿಯನ್ನು ಸ್ಪಷ್ಟಪಡಿಸಿತು. ತ್ವರಿತ ಕೈಗಾರಿಕಾಭಿವೃದ್ಧಿಗೆ ವಿದೇಶಿ ಬಂಡವಾಳ ಮತ್ತು ಉದ್ಯಮ-ಅದರಲ್ಲೂ ವಿದೇಶಿ ತಾಂತ್ರಿಕ ಜ್ಞಾನ-ಆವಶ್ಯಕ. ಆದರೆ ವಿದೇಶಿ ಬಂಡವಾಳದ ಪಾಲುದಾರಿಕೆಯನ್ನು ರಾಷ್ಟ್ರಹಿತದೃಷ್ಟಿಯಿಂದ ಜಾಗರೂಕತೆಯಿಂದ ನಿಯಂತ್ರಣ ಮಾಡಬೇಕು. ರಾಷ್ಟ್ರಹಿತಕ್ಕೆ ಆದ್ಯತೆ ನೀಡಬೇಕು. ಸಾಮಾನ್ಯವಾಗಿ ಕೈಗಾರಿಕೆಯ ಒಡೆತನ ಮತ್ತು ವ್ಯವಸ್ಥಾಪನದ ಬಹುಭಾಗ ಭಾರತೀಯರ ಕೈಯಲ್ಲೇ ಇರಬೇಕು. ಭಾರತೀಯರಿಗೆ ತರಬೇತು ನೀಡಲು ಹೆಚ್ಚು ಪ್ರಾಮುಖ್ಯ ನೀಡಬೇಕು. ಅಂತಿಮವಾಗಿ ವಿದೇಶಿ ತಜ್ಞರ ಸ್ಥಾನಕ್ಕೆ ಭಾರತೀಯರೇ ಬರಬೇಕು. ಇವು ಮುಖ್ಯ ಅಂಶಗಳು. ಕಾರ್ಮಿಕರ ಮತ್ತು ಬಂಡವಾಳಗಾರರ ಸಂಬಂಧವನ್ನೂ ಅದರಲ್ಲಿ ಚರ್ಚಿಸಲಾಯಿತು. ಕೈಗಾರಿಕಾ ಶಾಂತಿಗೆ ಮುಖ್ಯ ಸ್ಥಾನ ನೀಡಲಾಗಿತ್ತು. ಇದನ್ನು ಏರ್ಪಡಿಸಲು ಸೂಚಿಸಲಾದ ವಿಧಾನಗಳು ಹಲವು. ಕೊನೆಯದಾಗಿ, ಅನೀತಿಯುತವಾದ ವಿದೇಶಿ ಸ್ಪರ್ಧೆಯ ನಿವಾರಣೆ. ದೇಶದ ಸಂಪತ್ಸಾಧನಗಳ ಬಳಕೆಗೆ ಪ್ರೋತ್ಸಾಹ, ಅನುಭೋಗಿಯ ಮೇಲೆ ಅನ್ಯಾಯವಾದ ಭಾರ ಬೀಳದಂತೆ ತಡೆ-ಇವು ಸರ್ಕಾರದ ಆಮದು-ರಫ್ತು ಸುಂಕ ನೀತಿಯ ಗುರಿಯಾಗಿರಬೇಕೆಂದೂ ಹೇಳಲಾಗಿತ್ತು. ಈ ನೀತಿಗೆ ಅನುಗುಣವಾಗಿ ಕೈಗಾರಿಕಾಭಿವೃದ್ಧಿ ಮತ್ತು ನಿಯಂತ್ರಣ ಕಾಯಿದೆ ಜಾರಿಗೆ ಬಂತು. 1953ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ಎಲ್ಲ ಕೈಗಾರಿಕೆಗಳೂ ಸರ್ಕಾರದ ಪರವಾನಗಿ ಪಡೆಯಬೇಕೆಂದೂ ಹೊಸ ಪದಾರ್ಥವನ್ನು ಉತ್ಪಾದನೆ ಮಾಡಲು ಸರ್ಕಾರದ ಅನುಮತಿ ಅಗತ್ಯವೆಂದೂ ಖಾಸಗಿ ಕೈಗಾರಿಕೆಗಳು ಸರಿಯಾಗಿ ನಡೆಯದಿದ್ದರೆ ಸರ್ಕಾರ ಅವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದೆಂದೂ ಕಾಯಿದೆಯಲ್ಲಿ ಹೇಳಲಾಗಿದೆ.

1948ರ ಕೈಗಾರಿಕಾ ನೀತಿ ಪ್ರಕಟವಾದಾಗ ಖಾಸಗಿ ವಲಯ ಸ್ವಲ್ಪ ಭಯಶಂಕೆಗಳಿಗೆ ತುತ್ತಾಗಿತ್ತು. ಸರ್ಕಾರ ಅನೇಕ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬಹುದೆಂಬ ಭೀತಿ ಹರಡಿತ್ತು. ಆದರೆ ಖಾಸಗಿ ಕ್ಷೇತ್ರದಲ್ಲಿದ್ದ ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವ ಉದ್ದೇಶ ತನಗಿಲ್ಲವೆಂದು ಸರ್ಕಾರ ಭರವಸೆ ನೀಡಿತು. ವಿದೇಶಿ ಬಂಡವಾಳವನ್ನು ಪಡೆಯಲು ಯಾವ ವಿಧವಾದ ಅಡ್ಡಿಯೂ ಇರುವುದಿಲ್ಲ; ಭಾರತೀಯ ಮತ್ತು ವಿದೇಶಿ ಕಂಪನಿಗಳ ನಡುವೆ ಯಾವ ವಿಧವಾದ ತಾರತಮ್ಯವನ್ನೂ ತೋರಿಸುವುದಿಲ್ಲ; ವಿದೇಶೀಯರು ಲಾಭ ಮತ್ತು ಲಾಭಾಂಶಗಳನ್ನು ಪಡೆದುಕೊಳ್ಳಲು ಅಡ್ಡಿಯಿಲ್ಲ; ಯಾವುದೇ ವಿದೇಶಿ ಉದ್ಯಮವನ್ನು ರಾಷ್ಟ್ರೀಕರಿಸಿದರೂ ಅದಕ್ಕೆ ನ್ಯಾಯವಾದ ಪರಿಹಾರ ನೀಡಲಾಗುವುದು-ಎಂದು 1949ರಲ್ಲಿ ಪ್ರಧಾನ ಮಂತ್ರಿಗಳು ಭರವಸೆ ನೀಡಿದರು.

ಕೈಗಾರಿಕಾ ನೀತಿ ಪ್ರಕಟವಾದ ಅನಂತರದ ಎಂಟು ವರ್ಷಗಳಲ್ಲಿ ಕೆಲವು ಮುಖ್ಯ ಬದಲಾವಣೆಗಳು ಸಂಭವಿಸಿದುವು. ಈ ಅವಧಿಯಲ್ಲಿ ಒಂದನೆಯ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಿದ್ದು, ಎರಡನೆಯ ಪಂಚವಾರ್ಷಿಕ ಯೋಜನೆಗೆ ಸಿದ್ಧತೆ ನಡೆದಿತ್ತು. 1954ರಲ್ಲಿ ಭಾರತದ ಸಂಸತ್ತು ಸಮಾಜವಾದಿ ವ್ಯವಸ್ಥೆಯ ಗುರಿಯನ್ನು ಒಪ್ಪಿಕೊಂಡಿತು. ರಾಷ್ಟ್ರದ ಕೈಗಾರಿಕಾ ನೀತಿಯೂ ಇದಕ್ಕೆ ಅನುಗುಣವಾಗಿ ಮಾರ್ಪಾಟಾಗಬೇಕಾಯಿತು. ಈ ತತ್ತ್ವದ ಅನುಷ್ಠಾನಕ್ಕಾಗಿ ಆರ್ಥಿಕಾಭಿವೃದ್ಧಿಯನ್ನು ತ್ವರಿತಗೊಳಿಸುವುದು, ಸರ್ಕಾರಿ ವಲಯದ ವಿಸ್ತರಣ, ಖಾಸಗಿ ಮತ್ತು ಸರ್ಕಾರಿ ವಲಯಗಳ ಸಹಕಾರವನ್ನು ಹೆಚ್ಚಿಸುವುದು-ಇವು ಮುಖ್ಯವಾದುವು. ಈ ಉದ್ದೇಶದಿಂದ ಸರ್ಕಾರದ ಪುನರ್ವಿಮರ್ಶಿತ ಕೈಗಾರಿಕಾ ನೀತಿ ಹೊರಬಿದ್ದದ್ದು 1956ರ ಏಪ್ರಿಲಿನಲ್ಲಿ.

ಪರಿಷ್ಕೃತ ನೀತಿಯಲ್ಲಿ ಕೈಗಾರಿಕೆಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಗುಂಪಿನಲ್ಲಿ ಸೇರಿರುವ ಕೈಗಾರಿಕೆಗಳ ಸಂಖ್ಯೆ 17. ಇವುಗಳ ಅಭಿವೃದ್ಧಿ ಸರ್ಕಾರದ ಏಕಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ. ಈ ಪಟ್ಟಿಯಲ್ಲಿ ಕಬ್ಬಿಣ ಮತ್ತು ಉಕ್ಕು, ಕಲ್ಲಿದ್ದಲು, ಖನಿಜತೈಲ, ವಿಮಾನ ತಯಾರಿಕೆ, ಹಡಗು ನಿರ್ಮಾಣ, ವಿಮಾನ ಮತ್ತು ರೈಲುಯಾನ, ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಹಂಚಿಕೆ ಮುಂತಾದವು ಸೇರಿವೆ.

ಎರಡನೆಯ ಗುಂಪಿನಲ್ಲಿರುವ 12 ಕೈಗಾರಿಕೆಗಳನ್ನು ಸರ್ಕಾರ ಕ್ರಮೇಣ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಈ ಕ್ಷೇತ್ರಗಳಲ್ಲಿ ಹೊಸ ಉದ್ಯಮಗಳನ್ನು ಸ್ಥಾಪಿಸುವುದು ಸರ್ಕಾರಿ ವಲಯದ ಹೊಣೆ. ಆದರೆ ಈ ಗುಂಪಿನ ಕೈಗಾರಿಕೋದ್ಯಮಗಳಲ್ಲಿ ಖಾಸಗಿ ವಲಯ ಸಹಕರಿಸಬಹುದು; ಸರ್ಕಾರಿ ವಲಯದ ಉತ್ಪಾದನಕಾರ್ಯಕ್ಕೆ ಸಹಾಯ ನೀಡಬಹುದು. ಈ ಗುಂಪಿನಲ್ಲಿ ಹಿಂದೆ ಇದ್ದ 6 ಕೈಗಾರಿಕೆಗಳ ಜೊತೆಗೆ ಸೀಮೆ ಗೊಬ್ಬರದ ತಯಾರಿಕೆ, ಯಂತ್ರೋಪಕರಣಗಳು, ರಸ್ತೆ ಸಾರಿಗೆ, ಅಗತ್ಯವಾದ ಔಷಧಿಗಳ ತಯಾರಿಕೆ, ನೌಕಾಯಾನ ಇವೇ ಮುಂತಾದ ಕೈಗಾರಿಕೆಗಳನ್ನು ಸೇರಿಸಲಾಗಿದೆ. ಉಳಿದ ಕೈಗಾರಿಕೆಗಳನ್ನು ಮೂರನೆಯ ಗುಂಪಿಗೆ ಸೇರಿಸಿದೆ. ಇವು ಸಾಮಾನ್ಯವಾಗಿ ಖಾಸಗಿ ವಲಯದ ಪರಿಮಿತಿಗೆ ಸೇರಿರುತ್ತದೆ. ಆದರೆ ಈ ಗುಂಪಿನಿಂದಲೂ ಸರ್ಕಾರ ಯಾವುದೇ ಕೈಗಾರಿಕೆಯನ್ನಾದರೂ ದೇಶದ ಹಿತದೃಷ್ಟಿಯಿಂದ ತಾನೇ ತೆಗೆದುಕೊಳ್ಳಬಹುದು. ಗೃಹಕೈಗಾರಿಕೆಗಳ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಪೈಪೋಟಿಯ ಶಕ್ತಿ ಹೆಚ್ಚುವಂತೆ ಕ್ರಮ ಕೈಗೊಳ್ಳಲಾಗುವುದು. ಅದೂ ಅಲ್ಲದೆ ಕೈಗಾರಿಕಾಭಿವೃದ್ಧಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿರುವ ಅಸಮಾನತೆಯನ್ನು ನಿವಾರಿಸುವ ಆವಶ್ಯಕತೆಯನ್ನು ಹೇಳಲಾಗಿದೆ. ಪರಿಷ್ಕೃತ ಕೈಗಾರಿಕಾ ನೀತಿಯಲ್ಲಿ ವ್ಯವಸ್ಥಾಪಕ-ಕಾರ್ಮಿಕ ಸಂಬಂಧಗಳ ಪ್ರಸ್ತಾಪವೂ ಇದೆ. ಸಮಾಜವಾದಿ ವ್ಯವಸ್ಥೆಯಲ್ಲಿ ಕಾರ್ಮಿಕನೂ ಕೈಗಾರಿಕೆಯಲ್ಲಿ ಒಬ್ಬ ಪಾಲುದಾರನೆಂದೂ ಆದ್ದರಿಂದ ಕೈಗಾರಿಕೆಯ ಆಡಳಿತದಲ್ಲಿ ಕಾರ್ಮಿಕನಿಗೆ ಪಾತ್ರವಿರಬೇಕೆಂದೂ ಸಾಧ್ಯವಾದ ಕಡೆಯಲ್ಲೆಲ್ಲ ಕೈಗಾರಿಕೆಯಲ್ಲಿ ಕಾರ್ಮಿಕನಿಗೆ ವ್ಯವಸ್ಥಾಪಕರೊಂದಿಗೆ ಸೇರಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಬೇಕೆಂದೂ ಹೇಳಿದೆ.

ಪರಿಷ್ಕೃತ ಕೈಗಾರಿಕಾ ನೀತಿಯಲ್ಲಿ ಮೂಲಭೂತ ವಿಚಾರಗಳ ಬಗ್ಗೆ ಹಿಂದಿನ ನೀತಿಗಿಂತ ವ್ಯತ್ಯಾಸವಿಲ್ಲ. ಸರ್ಕಾರಿ ವಲಯದ ವ್ಯಾಪ್ತಿಯನ್ನು ಹೆಚ್ಚಿಸುವುದೇ ಅದರ ಮುಖ್ಯ ಧ್ಯೇಯ.

ಭಾರತದ ಕೈಗಾರಿಕಾ ನೀತಿ ಮುಖ್ಯವಾಗಿ ಮಿಶ್ರ ಅರ್ಥವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಜನಜೀವನಕ್ಕೆ ಅತಿಮುಖ್ಯವಾದ ಕೈಗಾರಿಕೆಗಳು, ಆರ್ಥಿಕ ಪ್ರಗತಿಗೆ ಮುಖ್ಯವಾದ ಕೈಗಾರಿಕೆಗಳು, ತ್ವರಿತ ಕೈಗಾರಿಕಾಭಿವೃದ್ಧಿಗೆ ಆವಶ್ಯಕವಾದ, ಆದರೆ ಪ್ರತಿಫಲ ಕೊಡಲು ಬಹಳ ಕಾಲ ತೆಗೆದುಕೊಳ್ಳುವ ಕೈಗಾರಿಕೆಗಳು-ಇವೆಲ್ಲ ಸರ್ಕಾರಿ ವಲಯದಲ್ಲಿರಬೇಕಾದ್ದು ನ್ಯಾಯವೇ. ಸರ್ಕಾರಿ ವಲಯ ತ್ವರಿತವಾಗಿ ಬೆಳೆಯುತ್ತಿದೆಯಲ್ಲದೆ ಖಾಸಗಿ ವಲಯಕ್ಕೂ ಧಾರಾಳವಾಗಿ ಅವಕಾಶ ಲಭ್ಯವಾಗಿದೆ. ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಮಿಶ್ರ ಅರ್ಥವ್ಯವಸ್ಥೆಯ ಮೂಲಕ ತ್ವರಿತ ಕೈಗಾರಿಕಾಭಿವೃದ್ಧಿಯನ್ನುಂಟುಮಾಡಲು ಯೋಜನೆಗಳ ಮೂಲಕ ಪ್ರಯತ್ನ ಮಾಡಲಾಗಿದೆ. ಮಿಶ್ರ ಅರ್ಥವ್ಯವಸ್ಥೆಯನ್ನು ನಡೆಸುವುದು ಕಷ್ಟ; ಅದು ಸರ್ಕಾರಿ ಮತ್ತು ಖಾಸಗಿ ವಲಯಗಳ ಪರಸ್ಪರ ಸಹಕಾರದಿಂದ ಮಾತ್ರ ಸಾಧ್ಯ. ಭಾರತದಲ್ಲಿ ಆಗಬೇಕಾದ ಕೈಗಾರಿಕಾ ಬೆಳೆವಣಿಗೆ ಇನ್ನೂ ಅಗಾಧವಾಗಿರುವುದರಿಂದ ಎರಡು ವಲಯಗಳೂ ಇದಕ್ಕಾಗಿ ಕಾರ್ಯನಿರ್ವಹಿಸಬೇಕಾಗಿದೆ. ಅದೂ ಅಲ್ಲದೆ ಸರ್ಕಾರಿ ವಲಯದಲ್ಲಿರುವ ಉಕ್ಕು, ವಿದ್ಯುಚ್ಛಕ್ತಿ ಉತ್ಪಾದನೆ, ಸಾರಿಗೆ ವ್ಯವಸ್ಥೆ ಇವೆಲ್ಲವೂ ಖಾಸಗಿ ಉದ್ಯಮಗಳಿಗೆ ಉತ್ತೇಜನ ನೀಡುತ್ತವೆ. ಭಾರತದ ಆಯೋಜಿತ ಆರ್ಥಿಕಾಭಿವೃದ್ಧಿಯ ದೃಷ್ಟಿಯಲ್ಲಿ ಖಾಸಗಿ ವಲಯದ ಕೈಗಾರಿಕೆಗಳ ನಿಯಂತ್ರಣ ಅನಿವಾರ್ಯವಾಗಬಹುದು. ಆದರೂ ಅನಾವಶ್ಯಕವಾದ ನಿಯಂತ್ರಣಗಳನ್ನು ನಿವಾರಿಸಬಹುದು. ಖಾಸಗಿ ವಲಯ, ಸಹಕಾರಿ ವಲಯ ಮತ್ತು ಸರ್ಕಾರಿ ವಲಯಗಳು ಪರಸ್ಪರ ಸಂಶಯವನ್ನು ಬಿಟ್ಟು ಸಹಕರಿಸಿದರೆ ಈಗಿರುವ ಕೈಗಾರಿಕಾ ನೀತಿಯ ಮೂಲಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ತ್ವರಿತ ಕೈಗಾರಿಕಾಭಿವೃದ್ಧಿ ಸಾಧಿಸಬಹುದು. (ಎಸ್.ಎಂ.ವಿ.)

**ಕೈಗಾರಿಕಾ ಪದ್ಧತಿ :** ಮಾನವನ ನಾಗರಿಕತೆಯ ಇತಿಹಾಸದಲ್ಲಿ ಈಗಿನದು ಕೈಗಾರಿಕಾ ಪ್ರಧಾನವಾದ ಯುಗ. ಮಾನವನ ತಿಳಿವಿನ ಬೆಳೆವಣಿಗೆಯಲ್ಲಿ ಹಾಗೂ ಪ್ರಕೃತಿಯ ಮೇಲೆ ಪ್ರಭುತ್ವ ಸ್ಥಾಪಿಸುವ ಪ್ರಯತ್ನದಲ್ಲಿ ಇದು ಒಂದು ಪ್ರಮುಖ ಘಟ್ಟ. ಉತ್ಪಾದನೆಯಲ್ಲಿ ಯಂತ್ರಶಕ್ತಿಯನ್ನು ಬೃಹತ್ ಪ್ರಮಾಣದಲ್ಲಿ ಉಪಯೋಗಿಸುವ ಕಲೆಯನ್ನು ಅವನು ಅರಿತುಕೊಂಡಿದ್ದಾನೆ. ಆದರೆ ಅದನ್ನು ಪರಿಪಕ್ವ ಸ್ಥಿತಿಗೆತ್ತುವಷ್ಟು, ಅದರ ಮೇಲೆ ಹಿಡಿತ ಸ್ಥಾಪಿಸುವಷ್ಟು, ಸ್ವಾಮ್ಯ ಅವನಿಗಿನ್ನೂ ಲಭ್ಯವಾಗಿಲ್ಲ. ಐಹಿಕ ಪ್ರಗತಿಯಲ್ಲಿ ಇದೂ ಒಂದು ಘಟ್ಟ. ಆದರೆ ಇದೇ ಕೊನೆಯ ಘಟ್ಟವಲ್ಲ. ಅಭಿವೃದ್ಧಿ ಸಂಪೂರ್ಣವಾದಾಗ ಈ ಘಟ್ಟ ಇದರ ಮುಂದಿನದಕ್ಕೆ ಎಡೆಕೊಡುವುದು ಅನಿವಾರ್ಯ.

ಸಂಪತ್ತಿನ ಉತ್ಪಾದನೆಯ ಸಮಸ್ಯೆಯನ್ನು ಸಂಪೂರ್ಣವಾಗಿ ಇತ್ಯರ್ಥಪಡಿಸಿ, ಇತರ ಅಗತ್ಯಗಳನ್ನೂ, ಬಯಕೆಗಳನ್ನೂ ಪೂರೈಸಿಕೊಳ್ಳುವುದರ ಕಡೆಗೆ ಮಾನವರು ತಮ್ಮ ಲಕ್ಷ್ಯಹರಿಸುವುದು ಸಾಧ್ಯವಾಗುವಂಥ ಸ್ಥಿತಿ ಇನ್ನೂ ಬಂದಿಲ್ಲ. ಇನ್ನೂ ಬಹು ದೀರ್ಘಕಾಲ ಅಂಥ ಸ್ಥಿತಿ ಬಂದೀತೆಂಬ ನಿರೀಕ್ಷೆಯಿಲ್ಲ. ಭಾರತದಂಥ ದೇಶದಲ್ಲಿ ಅಸಂಖ್ಯ ಜನರಿನ್ನೂ ಯುಕ್ತ ಜೀವನಮಟ್ಟ ಸಾಧಿಸುವಷ್ಟು ಉತ್ಪಾದನೆ ಮಾಡುವುದು ಸಾಧ್ಯವಾಗಿಲ್ಲ. ಯೂರೋಪ್-ಅಮೆರಿಕಗಳ ಕೈಗಾರಿಕಾ ರಾಷ್ಟ್ರಗಳಲ್ಲಿಯ ಪರಿಸ್ಥಿತಿ ಬೇರೆ ವಿಧ. ಅಲ್ಲಿ ಗರಿಷ್ಠ ಸಾಮರ್ಥ್ಯಕ್ಕೆ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾಗದಿರುವುದಕ್ಕೆ ವಿತರಣೆಯ ವ್ಯವಸ್ಥೆಯಲ್ಲಿ ಇರುವ ಕೊರತೆಗಳು ಕಾರಣ. ಅಲ್ಲಿ ಪದೇಪದೇ ಬಿಕ್ಕಟ್ಟುಗಳು ಸಂಭವಿಸುತ್ತಿವೆ.

ಕೈಗಾರಿಕಾ ಪದ್ಧತಿ ಮೂಲತಃ ಉತ್ಪಾದನತಂತ್ರದ ಒಂದು ವ್ಯಾಪಾರ. ಸಂಪತ್ತಿನ ಉತ್ಪಾದನೆಯ ಸುಧಾರಿತ ವಿಧಾನಗಳನ್ನು ಕಂಡುಹಿಡಿದು ಅನುಸರಿಸುವುದೇ ಇದಕ್ಕೆ ಆಧಾರ. ಉತ್ಪಾದನೆಯ ಗಾತ್ರದ ಏರಿಕೆ ಇದರ ಮುಖ್ಯ ಲಕ್ಷಣ. ಉತ್ಪಾದನೆ, ಮಾರಾಟ-ಇವೆರಡರಲ್ಲೂ ಬಂಡವಾಳವಾದಿ ಬೆಳೆವಣಿಗೆಯ ಫಲವಿದು. ಇದರಲ್ಲಿ ಕಾರ್ಮಿಕರು ಸಾಮಾನ್ಯವಾಗಿ ಕೂಲಿಗಾರರು. ನಗರ ಪ್ರದೇಶಗಳಲ್ಲಿ ಜನರ ದಟ್ಟಣೆ,

ಅಂತಾರಾಷ್ಟ್ರೀಯ ವ್ಯಾಪಾರದ ಗಾತ್ರದ ಏರಿಕೆ, ಹೆಚ್ಚು ಮುಂದುವರಿದ ದೇಶಗಳಿಂದ ಕಡಿಮೆ ಮುಂದುವರಿದ ದೇಶಗಳಿಗೆ ಬಂಡವಾಳದ ಸಾಲ ನೀಡಿಕೆ, ಮಧ್ಯಮವರ್ಗದ ಜನರ ಸಂಖ್ಯೆಯಲ್ಲಿ ಹೆಚ್ಚಳ. ವಿವಿಧ ವೃತ್ತಿಗಳ ಮತ್ತು ಕೈಗಾರಿಕೆ ವಾಣಿಜ್ಯಗಳ ಆಡಳಿತದಲ್ಲಿ ಈ ವರ್ಗದ ಜನರ ಪ್ರಧಾನ ಪಾತ್ರ–ಇವು ಕೈಗಾರಿಕಾ ಪದ್ಧತಿಯ ಇತರ ಪರಿಣಾಮಗಳು.

ಕೈಗಾರಿಕಾ ಪದ್ಧತಿಗೆ ಯಂತ್ರವೇ ಅಸ್ತಿಭಾರ. ಬಂಡವಾಳವಾದವೂ ಕೂಲಿಯ ಮೇಲೆ ಕಾರ್ಮಿಕರ ನೇಮಕವೂ ಕೈಗಾರಿಕಾಪದ್ಧತಿಗಿಂತ ಹಳೆಯವು. ಯಂತ್ರಶಕ್ತಿಯ ಆಧಾರದ ಮೇಲೆ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಮುಂಚೆಯೂ ಅನೇಕ ಕಾರ್ಖಾನೆಗಳಿದ್ದುವು. ಆದರೆ ಶಕ್ತಿಯ ಕೇಂದ್ರೀಯ ಸರಬರಾಯಿಯಿಂದ ಯಂತ್ರವನ್ನು ನಡೆಸಿ ಉತ್ಪಾದನೆ ಮಾಡುವುದೇ ಸಾಮಾನ್ಯವಾದಾಗ ಕೈಗಾರಿಕಾ ಪದ್ಧತಿ ಆರಂಭವಾಯಿತು. ಆ ಘಟ್ಟ ಬಂದಾಗ ಕೈಗಾರಿಕೆಯೇ ಆರ್ಥಿಕಜೀವನದ ಪ್ರೇರಕಶಕ್ತಿಯಾಯಿತು. ಅದುವರೆಗೂ ವಾಣಿಜ್ಯಕ್ಕೆ ಇದ್ದ ಪ್ರಧಾನ ಸ್ಥಾನವನ್ನು ಕೈಗಾರಿಕೆ ಪಡೆದುಕೊಂಡಿತು. ಉತ್ಪಾದನೆಯ ಗಾತ್ರ, ವ್ಯವಹಾರ ಸಂಘಟನೆಯ ಪ್ರಕಾರಗಳು– ಇವೆಲ್ಲವನ್ನೂ ಯಂತ್ರಶಕ್ತಿಯ ಬೆಳೆವಣಿಗೆ ಮತ್ತು ಸ್ವರೂಪದ ದೃಷ್ಟಿಯಿಂದ ನಿರ್ಣಯಿಸುವ ಕಾಲ ಬಂತು. ವರ್ತಕನಿಗೆ ಹಿಂದೆ ಇದ್ದ ಪ್ರಾಮುಖ್ಯವನ್ನು ಕೈಗಾರಿಕೋದ್ಯಮಿ ಪಡೆದುಕೊಂಡ. ಕೈಗಾರಿಕಾಕ್ರಾಂತಿ ಇಡೀ ಸಮಾಜವ್ಯವಸ್ಥೆಯನ್ನೇ ಬದಲಿಸಿತು. ಉತ್ಪಾದನೆಯ ಸ್ಥಿರ ವ್ಯವಸ್ಥೆಯ ಬದಲು ಚಲನಾತ್ಮಕವಾದ ಸ್ವಯಂ ವಿಕಾಸಯುಕ್ತವಾದ ವ್ಯವಸ್ಥೆ ಬಂತು. ಹೊಸ ಅರ್ಥವ್ಯವಸ್ಥೆಯ ಕೇಂದ್ರಪ್ರಾಯನಾದ ಕೈಗಾರಿಕೋದ್ಯಮಪತಿಯ ಬೆಳೆವಣಿಗೆಗೆ ಯಂತ್ರದಿಂದ ಸಹಾಯವಾದರೂ ಯಂತ್ರದ ಒತ್ತಡದಿಂದಾಗಿ ಅವನು ಹೊಸಹೊಸ ವಿಜಯ ಸಾಧಿಸುವುದು ಅನಿವಾರ್ಯವಾಯಿತು. ಅವನು ಇತರ ಉದ್ಯಮಪತಿಗಳೊಂದಿಗೆ ಸತತವಾಗಿ ಸ್ಪರ್ಧಿಸುತ್ತಿರಬೇಕಾಗಿ ಬಂದು, ತನ್ನ ಸರಕುಗಳ ಬೆಲೆ ಇಳಿಸುತ್ತಿರಬೇಕಾಗಿತ್ತು. ಉತ್ಪಾದನೆಯ ಗಾತ್ರವನ್ನು ಅಧಿಕಗೊಳಿಸುವುದು, ಹೊಸ ಸುಧಾರಿತ ಯಂತ್ರಗಳನ್ನು ಪಡೆದುಕೊಳ್ಳುವುದು–ಇವೇ ಅವನ ಮುಂದಿದ್ದ ಮಾರ್ಗಗಳು. ಸತತವಾದ ಈ ಪ್ರಯತ್ನದಿಂದಾಗಿ ಕೈಗಾರಿಕೆಯ ಅನುಕೂಲತಮ ಗಾತ್ರ ಬಲು ಶೀಘ್ರವಾಗಿ ಹೆಚ್ಚುತ್ತಿತ್ತು. ಹೊಸಹೊಸ ಮಾರುಕಟ್ಟೆಗಳನ್ನು–ಸಾಗರೋತ್ತರ ಮಾರುಕಟ್ಟೆಗಳನ್ನು–ಪತ್ತೆಹಚ್ಚಬೇಕಾಗಿ ಬಂದಿದ್ದಕ್ಕೆ ಉತ್ಪಾದನೆ ಅಧಿಕವಾಗುತ್ತಿದ್ದದ್ದು ಒಂದು ಮುಖ್ಯ ಕಾರಣ.

ಇತರರೊಂದಿಗೆ ಸ್ಪರ್ಧೆಯಲ್ಲಿ ಬೆಲೆಗಳನ್ನು ಇಳಿಸಬೇಕಾಗುತ್ತಿದ್ದುದರಿಂದಲೂ ಯಂತ್ರಗಳನ್ನು ಪದೆಪದೇ ಸುಧಾರಿಸಬೇಕಾಗಿದ್ದುದರಿಂದಲೂ ಉದ್ಯಮಪತಿಗೆ ಅಧಿಕಾಧಿಕ ಬಂಡವಾಳ ಅಗತ್ಯವಾದ್ದೂ ಸಹಜವೇ. ಈ ಬಂಡವಾಳಕ್ಕಾಗಿ ಅವನು ಆರಂಭದೆಸೆಯಲ್ಲಿ ಸ್ವಂತ ಸುಖಭೋಗಗಳನ್ನು ಕಡೆಗಣಿಸಿದ. ಕಾರ್ಮಿಕರಿಗೆ ಕಡಿಮೆಕೂಲಿ ಕೊಟ್ಟ. ಹೀಗೆಲ್ಲ ಉಳಿಸದಿದ್ದರೆ ಕೈಗಾರಿಕೆ ಬೆಳೆಯುವುದಿಲ್ಲವೆಂಬ ಭಾವನೆಯಿತ್ತು. ಹೀಗೆ ಉಳಿಸಿದ ಹಣವನ್ನು ಆತ ಕಟ್ಟಡ ಮತ್ತು ಯಂತ್ರಗಳ ಮೇಲೆ ಹಾಕಿದನೆಂಬುದು ನಿಜ. ಆದರೆ ಕಟ್ಟಡ ಕೈಗಾರಿಕೆಯಲ್ಲಿ ಹೊಸ ವಿಧಾನಗಳು ಬಳಕೆಗೆ ಬರಲಿಲ್ಲ. ಇಂದಿಗೂ ಅದು ಬಹುತೇಕ ಕೈಯಿಂದ ನಡೆಯುವ ಕೆಲಸವೇ ಆಗಿದೆ. ಆದ್ದರಿಂದ ಅಧಿಕ ಗಾತ್ರದಿಂದ ವೆಚ್ಚ ತಗ್ಗುವ ಪ್ರವೃತ್ತಿ ಇಲ್ಲಿ ಬರಲಿಲ್ಲ. ಗಾತ್ರದೊಂದಿಗೆ ವೆಚ್ಚ ತಗ್ಗಿದ್ದೂ, ಬೆಲೆ ಇಳಿದದ್ದೂ ಅನುಭೋಗಸರಕು ಕೈಗಾರಿಕೆಗಳಲ್ಲಿ. ಆದರೆ ಇವಕ್ಕ ಗ್ರಾಹಕರನ್ನು ದೂರ ದೇಶಗಳಲ್ಲಿ ಪಡೆಯಬೇಕಾಗಿತ್ತು. ಅಲ್ಲಿಗೆ ಸರಕುಗಳನ್ನು ಕೊಂಡೊಯ್ಯಲು ಉತ್ತಮ ಸಾರಿಗೆ ವ್ಯವಸ್ಥೆಯ ನಿರ್ಮಾಣವಾಗಬೇಕಾಗಿತ್ತು. ದೂರದೇಶಗಳಲ್ಲಿ ಇದನ್ನು ಬೆಳೆಸಲು ಆ ದೇಶಗಳಿಗೆ ಬಂಡವಾಳ ಇರಲಿಲ್ಲ. ರೈಲ್ವೆ ನಿರ್ಮಾಣ ಮುಂತಾದ ಕಾರ್ಯಗಳಿಗಾಗಿ ಮತ್ತು ಕೈಗಾರಿಕಾ ರಾಷ್ಟ್ರಗಳ ಸರಕು ಕೊಳ್ಳುವಂಥ ವ್ಯವಸ್ಥೆಯನ್ನು ಅಲ್ಲಿ ನಿರ್ಮಾಣಮಾಡುವ ಸಲುವಾಗಿ ಅವಕ್ಕೆ ಬಂಡವಾಳವನ್ನು ಸಾಲ ಕೊಡುವುದು ಕೈಗಾರಿಕಾ ರಾಷ್ಟ್ರಗಳ ದೃಷ್ಟಿಯಿಂದಲೇ ಅಗತ್ಯವೆನಿಸಿದ್ದು ಸಹಜ. ಅನುಭೋಗಸರಕು ಕೈಗಾರಿಕೆ, ಬಂಡವಾಳಸರಕು ಕೈಗಾರಿಕೆ–ಇವೆರಡೂ ಬೆಳೆದದ್ದರಿಂದ ಉದ್ಯಮಗಳ ಗಾತ್ರವೂ ದಿನೇ ದಿನೇ ವರ್ಧಿಸುತ್ತಿದ್ದುದರಿಂದ ಇವಕ್ಕೆ ಅಗತ್ಯವಾದ ಬಂಡವಾಳದ ಅಗತ್ಯ ಎಲ್ಲ ನಿರೀಕ್ಷೆಗಳನ್ನೂ ಮೀರಿ ಬೆಳೆಯಿತು. ಇದಕ್ಕಾಗಿ ಹೆಚ್ಚು ಹಣ ಹೂಡಬಲ್ಲವರ ಸಂಖ್ಯೆ ಅದೇ ವೇಗದಲ್ಲಿ ಹೆಚ್ಚಲಿಲ್ಲ. ಬಂಡವಾಳ ಉಳ್ಳವರು ಬೃಹದ್ಗಾತ್ರ ಉದ್ಯಮಗಳಲ್ಲಿ ಅದನ್ನು ವಿನಿಯೋಜಿಸುವುದೂ ಒಂದು ಸಾಹಸವೇ ಎನಿಸಿತ್ತು. ಸತತ ಸ್ಪರ್ಧೆಯಿಂದಾಗಿ ಅನೇಕ ಉದ್ಯಮಗಳು ಮುಚ್ಚಿಹೋಗುತ್ತಿದ್ದುವು. ಇದರಿಂದ ಸಂಭವಿಸುತ್ತಿದ್ದ ನಷ್ಟ ಅಪಾರ. ಅನೇಕ ಮಂದಿ ದಿವಾಳಿಯಾದದ್ದೂ ಉಂಟು. ಇದನ್ನು ಪರಿಹರಿಸುವ ಉಪಾಯವಾಗಿ ಬಂದದ್ದೇ ಪರಿಮಿತ ಹೊಣೆಯ ಸಂಸ್ಥೆ. ಉದ್ಯಮಸಂಸ್ಥೆಯ ಒಡೆಯರ ಹೊಣೆಯನ್ನು ಅದರಲ್ಲಿ ಅವರು ಹೂಡಿದ ಬಂಡವಾಳಕ್ಕೆ ಪರಿಮಿತಿಗೊಳಿಸುವುದು ಸಾಧ್ಯವಾದಾಗ, ಅದಕ್ಕಿಂತ ಹೆಚ್ಚು ನಷ್ಟ ಹೊರುವ ಭಯವಿಲ್ಲದೆ ಯಾರು ಬೇಕಾದರೂ ಈ ಸಂಸ್ಥೆಗಳಲ್ಲಿ ಬಂಡವಾಳ ವಿನಿಯೋಜಿಸಬಹುದಾಯಿತು. ಕೂಡು ಬಂಡವಾಳ ಸಂಸ್ಥೆ ಕೈಗಾರಿಕಾ ಪದ್ಧತಿಯ ಒಂದು ಮುಖ್ಯ ಬೆಳೆವಣಿಗೆ. ಉದ್ಯಮ ಸಂಸ್ಥೆಗಳು ತಂತಮ್ಮ ಸ್ಪರ್ಧೆಯನ್ನು ನಿವಾರಿಸುವ ಉದ್ದೇಶದಿಂದ ಪರಸ್ಪರ ಸಂಯೋಜನೆಗೊಳ್ಳುವ, ಒಂದರಲ್ಲಿ ಇನ್ನೊಂದು ವಿಲೀನಗೊಳ್ಳುವ, ಹಲವು ಸಂಸ್ಥೆಗಳು ಕೂಡಿ ಒಪ್ಪಂದವನ್ನೂ ಕೂಟವನ್ನೂ ರಚಿಸಿಕೊಳ್ಳುವ, ಮಾರುಕಟ್ಟೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಅನೇಕ ಪ್ರವೃತ್ತಿಗಳು ಬೆಳೆದಿವೆ. ಕೈಗಾರಿಕಾಪದ್ಧತಿಯ ಶುಭಫಲಗಳು ಸಾಮಾನ್ಯರಿಗೆ ತಲುಪದಂತೆ ಮಾಡಲು ದೈತ್ಯ ಆರ್ಥಿಕ ಸಂಸ್ಥೆಗಳು ಅನೇಕ ವೇಳೆ ಪ್ರಯತ್ನಿಸುತ್ತವೆ. ಏಕಸ್ವಾಮ್ಯಸಂಸ್ಥೆಗಳನ್ನು ನಿಯಂತ್ರಣಗೊಳಿಸುವುದು ಹೇಗೆಂಬುದು ಒಂದು ಸಮಸ್ಯೆ. ಇದಕ್ಕಾಗಿ ಅನೇಕ ಕ್ರಮಗಳನ್ನು ಅನುಸರಿಸಲಾಗಿದೆ. **(ನೋಡಿ– ಉದ್ಯಮಕೂಟಗಳು; ಏಕಸ್ವಾಮ್ಯ)**

ಹೆಚ್ಚು ಉತ್ಪಾದನೆ, ಕಡಿಮೆಬೆಲೆ, ಸಂಪತ್ತಿನ ಯುಕ್ತ ವಿತರಣೆ, ಕಡಿಮೆ ದುಡಿತ, ಹೆಚ್ಚು ಸೌಖ್ಯ–ಇವೆಲ್ಲ ಕೈಗಾರಿಕಾಪದ್ಧತಿಯಿಂದ ಲಭ್ಯವಾಗಬೇಕಾದ ಶುಭಫಲಗಳು. ಉತ್ಪಾದನೆ ಯಾರಿಗಾಗಿಯೋ ಅವರ–ಎಂದರೆ ಸಮಾಜದ–ಒಡೆತನ ಹತೋಟಿಗಳಿಗೆ ಉತ್ಪಾದನ ಸಾಧನಗಳು ಒಳಪಡಬೇಕೆಂಬುದು ಕೈಗಾರಿಕಾ ಪದ್ಧತಿಯ ಮುಂದಣ ಸಹಜ ಹಂತ. ಬಂಡವಾಳ ಶೇಖರಣೆಗಾಗಿ, ಉತ್ಪಾದನೆಯ ಗಾತ್ರದ ವಿಸ್ತರಣೆಗಾಗಿ ಪ್ರತಿಯೊಬ್ಬರೂ ತ್ಯಾಗ ಮಾಡಬೇಕೆಂಬ, ಹೆಚ್ಚು ದುಡಿಯಬೇಕೆಂಬ ಪರಿಸ್ಥಿತಿ ಪಾಶ್ಚಾತ್ಯ ದೇಶಗಳಲ್ಲಂತೂ ಮರೆಯಾಗುತ್ತಿದೆ. ಹಿಂದೆ ಹೇಳಿದ ಹಾಗೆ ಅಲ್ಲಿಯದು ವಿತರಣೆಯ ಸಮಸ್ಯೆ. ಕೈಗಾರಿಕಾಕರಣದ ಇತರ ಸಮಸ್ಯೆಗಳಾದ ಅತಿಕೇಂದ್ರೀಕರಣ, ಜನಸಾಂದ್ರತೆ– ಮುಂತಾದವನ್ನೂ ನಿವಾರಿಸಬೇಕಾಗಿದೆ. ಇವನ್ನೆಲ್ಲ ಸಾಧಿಸುವುದಕ್ಕೂ ಅನುಭೋಗ, ಉತ್ಪಾದನೆ–ಇವೆರಡನ್ನೂ ಹೊಂದಿಸುವುದಕ್ಕೂ ಬೆಳೆವಣಿಗೆಯ ಗತಿಯನ್ನು ಮುಂದುವರಿಸುವುದಕ್ಕೂ ಯೋಜನೆ ಅಗತ್ಯವೆನಿಸಿದೆ. ವ್ಯಕ್ತಿಯ ಸ್ವಂತ ಹಿತ ಸಾಧನೆಯ ಉದ್ದೇಶದಿಂದ ಆರಂಭವಾದ ಕೈಗಾರಿಕಾಪದ್ಧತಿ ಈಗ ಸಮಷ್ಟಿಹಿತಸಾಧನೆಯ ಹಂತ ಮುಟ್ಟುತ್ತಿದೆ. (ಬಿ.ಬಿ.ಕೆ.)

**ಕೈಗಾರಿಕಾ ಪ್ರಜಾಪ್ರಭುತ್ವ :** ಮೂಲಭೂತವಾಗಿ ಒಂದು ಉತ್ಪಾದನ ಕೇಂದ್ರ ಅಥವಾ ಕೈಗಾರಿಕಾ ಕೇಂದ್ರದಲ್ಲಿ ಜಾರಿಯಲ್ಲಿರುವ ಪ್ರಜಾಪ್ರಭುತ್ವ–ಎಂಬುದು ಕೈಗಾರಿಕಾ ಪ್ರಜಾಪ್ರಭುತ್ವದ ಸೀಮಿತ ಅರ್ಥವಾದರೂ ಇದೊಂದು ರಚನಾತ್ಮಕ ತತ್ತ್ವ. ಏಕೆಂದರೆ, ಒಂದು ಕೈಗಾರಿಕಾ ಕ್ಷೇತ್ರದ ಆಡಳಿತದಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳನ್ನು ಇಕ್ಕಟ್ಟು–ಬಿಕ್ಕಟ್ಟುಗಳನ್ನು ಬಗೆಹರಿಸಲು ಇದು ಸರ್ವಸಮ್ಮತವಾದ ಮಾರ್ಗವನ್ನು ಒದಗಿಸುತ್ತದೆ. ಆರ್ಥಿಕ ಪ್ರಜಾಪ್ರಭುತ್ವಕ್ಕೆ ಇದು ಬುನಾದಿ. ಇದೊಂದು ಸೂಕ್ಷ್ಮ ಪ್ರಜಾಪ್ರಭುತ್ವ. ರಾಜಕೀಯ ಸಮಾಜದ ಬದಲು ಆರ್ಥಿಕ ಸಮಾಜದ ನಿರ್ಮಾಣ ಮಾಡಬೇಕೆಂಬ ಗ್ರೀಕ್ ಸೂತ್ರದ ಅನ್ವಯವಿದು. ಇದು ಕಾರ್ಮಿಕ ಸ್ವರಾಜ್ಯ. ಪ್ರತಿಯೊಂದು ಕೈಗಾರಿಕೋದ್ಯಮದಲ್ಲೂ ಕಾರ್ಮಿಕರ ನೇರಸ್ವರಾಜ್ಯ. ಇದರ ತಳಹದಿಯ ಮೇಲೆ ರಾಷ್ಟ್ರಮಟ್ಟದಲ್ಲಿ ಕ್ರಿಯಾತ್ಮಕ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂಬುದು ಪರಮಗುರಿ. ಉದ್ಯೋಗಾನುಗುಣ ಪ್ರಾತಿನಿಧ್ಯದ ತಳಹದಿಯ ಮೇಲೆ ರಚಿತವಾದ ರಾಜಕೀಯ ವ್ಯವಸ್ಥೆಯಿದು. ಆದರೆ ಆಚರಣೆಯಲ್ಲಿ ಪ್ರಾಥಮಿಕ ಹಂತದಲ್ಲಿ ಮಾತ್ರ ಕೈಗಾರಿಕಾ ಪ್ರಜಾಪ್ರಭುತ್ವದ ಆದರ್ಶ ಜಾರಿಗೆ ಬಂದಿದೆ. ಕೈಗಾರಿಕೆಗಳ ನಿರ್ವಹಣೆಯಲ್ಲಿ ಕೆಲಸಗಾರರು ಭಾಗವಹಿಸುವಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಜರ್ಮನಿ, ಆಸ್ಟ್ರಿಯಗಳಲ್ಲಿ ರೂಢಿಯಲ್ಲಿರುವ ಸಹ–ನಿರ್ಣಯ (ಕೋ–ಡಿಟರ್ಮಿನೇಷನ್) ಪದ್ಧತಿ, ಯೂಗೊಸ್ಲಾವಿಯದಲ್ಲಿರುವ ಕಾರ್ಮಿಕ ಮಂಡಳಿಗಳು, ಇತರ ಹಲವು ರಾಷ್ಟ್ರಗಳಲ್ಲಿ ಜಾರಿಯಲ್ಲಿರುವ ಕಾರ್ಮಿಕ–ಮಾಲೀಕ ಜಂಟಿ ಸಮಾಲೋಚನಾ ವ್ಯವಸ್ಥೆ–ಇವು ಉದಾಹರಣೆಗಳು.

ಇಂಗ್ಲೆಂಡ್ ಮತ್ತು ಭಾರತದಲ್ಲಿ ಹ್ವಿಟ್ಲೆ ಮಂಡಲಿಗಳು(ಕಾರ್ಮಿಕರ ಮತ್ತು ಉದ್ಯಮಗಳ ಪ್ರತಿನಿಧಿಗಳ ಸಂಯುಕ್ತ ಮಂಡಲಿಗಳು) ಈ ತತ್ತ್ವದ ತಳಹದಿಯ ಮೇಲೆ ಕೆಲಸಮಾಡುತ್ತಿವೆ. ಸಂಬಂಧಪಟ್ಟ ಎಲ್ಲರೂ ಅವುಗಳ ನಿರ್ಣಯಗಳಿಗೆ ಬಾಧ್ಯರಾಗಿರುತ್ತಾರೆ. ಉಭಯಪಕ್ಷಗಳ ಪ್ರತಿನಿಧಿಗಳು ಸಮಾನತೆಯ ತತ್ತ್ವದ ಮೇಲೆ ಒಟ್ಟಿಗೆ ಕುಳಿತು ತಮಗೆ ಸಂಬಂಧಿಸಿದ ಸಮಸ್ಯೆಗಳನ್ನೆಲ್ಲ ಚರ್ಚೆ ಹಾಗೂ ಬಹುಮತದ ನಿರ್ಣಯಗಳ ಮೂಲಕ ಬಗೆಹರಿಸುವ ಪದ್ಧತಿಯನ್ನೇ ಕೈಗಾರಿಕಾ ಪ್ರಜಾಪ್ರಭುತ್ವವೆಂದು ಕರೆಯಲಾಗುತ್ತಿದೆ.

ಜರ್ಮನಿಯಲ್ಲಿ ಪ್ರಚಲಿತವಿರುವ ಸಹನಿರ್ಣಯ ಪದ್ಧತಿಯನ್ನು ಪ್ರಯೋಗಾರ್ಥವಾಗಿ ಕಲ್ಲಿದ್ದಲು ಮತ್ತು ಉಕ್ಕು ಕೈಗಾರಿಕೆಗಳಿಗೆ ಮಾತ್ರ ಅನ್ವಯಿಸಲಾಗಿದೆ. ಈ ಪದ್ಧತಿಯ ಪ್ರಕಾರ ಪ್ರತಿಯೊಂದು ಕೈಗಾರಿಕೆಗೂ ಒಂದು ಮೇಲ್ವಿಚಾರಕ ಮಂಡಳಿ ಇದ್ದು, ಅದರಲ್ಲಿ ಕಾರ್ಮಿಕ ಪ್ರತಿನಿಧಿಗಳೂ ಇರುತ್ತಾರೆ. ಇವರಿಂದ ಸಂಯುಕ್ತವಾಗಿ ಚುನಾಯಿತನಾದ ಒಬ್ಬ ಅಧ್ಯಕ್ಷನಿರುತ್ತಾನೆ. ಇದೂ ಅಲ್ಲದೆ ನಿರ್ದೇಶಕ ಮಂಡಲಿಯಲ್ಲಿ ಕಾರ್ಮಿಕರ ಪ್ರತಿನಿಧಿಯೂ ಇರುತ್ತಾನೆ. ಕಂಪನಿಯ ಮೂವರು ನಿರ್ವಾಹಕರಲ್ಲಿ ಕಾರ್ಮಿಕ ಸಂಘಕ್ಕೆ ಒಪ್ಪಿಗೆಯಾದ ಒಬ್ಬನಿರಬೇಕು. ಹೀಗೆ ರಚಿತವಾದ ವ್ಯವಸ್ಥೆ ಪ್ರಜಾಪ್ರಭುತ್ವ ತತ್ತ್ವಕ್ಕನುಗುಣವಾಗಿರುತ್ತದೆ. ನಿರ್ಣಯಗಳನ್ನು ಕಾರ್ಮಿಕ ಹಾಗೂ ನಿರ್ದೇಶಕ

ಮಂಡಳಿಯ ಸಹಕಾರ ಮತ್ತು ಒಪ್ಪಿಗೆಯ ಮೇರೆಗೆ ಮಾಡಲಾಗುತ್ತದೆ. ಆದ್ದರಿಂದಲೇ ಇದನ್ನು ಸಹನಿರ್ಣಯ ಪದ್ಧತಿಯೆಂದು ಕರೆಯಲಾಗಿದೆ. ಯುಗೊಸ್ಲಾವಿಯದಲ್ಲಿ ಕಾರ್ಮಿಕ ಸ್ವರಾಜ್ಯ ಅಥವಾ ಸ್ವಯಮಾಡಳಿತ ಪದ್ಧತಿ ಜಾರಿಯಲ್ಲಿದೆ. ಉದ್ಯಮದ ವ್ಯವಸ್ಥಾಪದ ನಿರ್ದೇಶಕ ಆ ದೇಶದ ರಾಜಕೀಯ ಆರ್ಥಿಕ ವ್ಯವಸ್ಥೆಗನುಗುಣವಾಗಿ ಅಲ್ಲಿಯ ಆಡಳಿತಕ್ಕೆ ನಿಷ್ಠೆಯುಳ್ಳವನಾಗಿರುವನಾದರೂ ಆತ ಉದ್ಯಮದ ಕಾರ್ಮಿಕರ ಸಮಿತಿಗೂ ಜವಾಬ್ದಾರನಾಗಿರುತ್ತಾನೆ. ಕೈಗಾರಿಕಾ ಪ್ರಜಾಪ್ರಭುತ್ವ ದೇಶದ ರಾಜಕೀಯ ವ್ಯವಸ್ಥೆಯನ್ನೇ ಹೆಚ್ಚಾಗಿ ಅವಲಂಬಿಸಿರುವುದರಿಂದ ಪ್ರಜಾಪ್ರಭುತ್ವರಾಷ್ಟ್ರಗಳಲ್ಲಿ ಇದು ಹೆಚ್ಚು ಯಶಸ್ವಿಯಾಗುವುದು ಸಾಧ್ಯ. ಪ್ರಜಾಪ್ರಭುತ್ವ ಕೇವಲ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗಿರುವಂಥ ತತ್ತ್ವವಲ್ಲ. ಅದು ಒಂದು ಜೀವನಪದ್ಧತಿ. ಇಡೀ ಸಮಾಜವೇ ಪ್ರಜಾಪ್ರಭುತ್ವದ ತಳಹದಿಯ ಮೇಲೆ ರಚಿತವಾಗಿರಬೇಕು. ಕೇವಲ ರಾಜಕೀಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಒದಗಿಸಿಕೊಡುವ ಪ್ರಜಾಪ್ರಭುತ್ವ ಪರಿಪೂರ್ಣವಾಗುವುದಿಲ್ಲ. ಪರಿಪೂರ್ಣತೆ ಬರಬೇಕಾದರೆ ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲೂ ಅಷ್ಟೇ ಸ್ವಾತಂತ್ರ್ಯ ಮತ್ತು ಸಮಾನತೆಗಳಿರಬೇಕು. ಆರ್ಥಿಕ ಹಾಗೂ ಸಮಾಜಿಕ ಸಮಾನತೆಗಳಿಲ್ಲದ ರಾಜಕೀಯ ಸ್ವಾತಂತ್ರ್ಯ ಅರ್ಥರಹಿತವಾಗಿದ್ದು, ಸಮಾನತೆಯ ವಿಪರ್ಯಾಸವೆನಿಸುತ್ತದೆ. ಪ್ರಜಾಪ್ರಭುತ್ವವಾದಿ ಸಮಾಜರಚನೆಗೆ ತಳಹದಿಯಾಗಿ ಆರ್ಥಿಕ ಸಮಾನತೆಯನ್ನೊದಗಿಸುವುದೇ ಕೈಗಾರಿಕಾ ಪ್ರಜಾರಾಜ್ಯದ ಉದ್ದೇಶ. (ಎ.ಎಂ.ಆರ್.)

18ನೆಯ ಶತಮಾನದ ಉತ್ತರಾರ್ಧದಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿ, ಅದರ ಪರಿಣಾಮವಾಗಿ ಏರ್ಪಟ್ಟ ಕಾರ್ಮಿಕ–ಮಾಲೀಕ ತಂಡ, ಮಾಲೀಕರಿಂದ ಕಾರ್ಮಿಕರ ಶೋಷಣೆ–ಇವು 19ನೆಯ ಶತಮಾನದಲ್ಲಿ ಕಾರ್ಮಿಕರ ಹಿತರಕ್ಷಣೆಯ ಚಳವಳಿಯನ್ನು ಪ್ರಚೋದಿಸಿದುವು. ಇದರ ಫಲವಾಗಿ ಕಾರ್ಮಿಕರ ಸ್ಥಿತಿಗತಿಗಳು ಉತ್ತಮಗೊಂಡುವು. ಕಾರ್ಮಿಕರು ಸಾಮೂಹಿಕವಾಗಿ ಮಾಲೀಕರೊಡನೆ ಚೌಕಾಸಿ ನಡೆಸಿ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸಾಧಕವಾದ ಸಂಘಶಕ್ತಿಯನ್ನೂ ಪಡೆದುಕೊಂಡರು.

20ನೆಯ ಶತಮಾನದಲ್ಲಿ ಸಮಾಜವಾದದ ಭಾವನೆಗಳು ಬಲಗೊಂಡಂತೆ, ತನ್ನ ಉದ್ಯಮಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವ ಅವಕಾಶಕೂಡ ಕಾರ್ಮಿಕನಿಗೆ ದೊರೆಯಬೇಕೆಂಬ ಅಭಿಪ್ರಾಯ ಬೆಳೆಯಿತು. ಉದ್ಯಮಿಗಳಿಗೆ ಸೂಕ್ಷ್ಮ ನಿರ್ದೇಶನ ನೀಡುವುದರ ಮೂಲಕ ಅಥವಾ ಸರ್ಕಾರಗಳು ತಾವೇ ನೇರವಾಗಿ ಉದ್ಯಮಗಳನ್ನು ನಡೆಸುವುದರ ಮೂಲಕ ಈ ಧ್ಯೇಯವನ್ನು ಸಾಧಿಸಬೇಕು ಎಂಬ ಭಾವನೆಯೂ ಹುಟ್ಟಿತು. ಕೈಗಾರಿಕೆಯಲ್ಲಿ ಮುಂದುವರಿದಿರುವ ಮತ್ತು ಮುಂದುವರಿಯುತ್ತಿರುವ ಎಲ್ಲ ರಾಷ್ಟ್ರಗಳಲ್ಲು ಈ ಅಭಿಪ್ರಾಯಕ್ಕೆ ಮನ್ನಣೆ ದೊರೆತಿದೆ. ಕಾರ್ಮಿಕನೇ ಕೈಗಾರಿಕಾ ರಾಜ್ಯದ ಪ್ರಜೆ. ಆದ್ದರಿಂದ ಈ ರಾಜ್ಯದಲ್ಲಿ ಅವನಿಗೆ ಗಣ್ಯಸ್ಥಾನವಿರಬೇಕು. ಈ ರಾಜ್ಯದ ಆಗುಹೋಗುಗಳನ್ನು ಕುರಿತ ನಿರ್ಣಯಗಳನ್ನು ರೂಪಿಸುವಲ್ಲಿ ಅವನ ಕೈವಾಡವಿರಬೇಕು ಎಂಬುದನ್ನು ತತ್ತ್ವಶಃ ಎಲ್ಲರೂ ಒಪ್ಪಿದ್ದಾರೆ. ಆದರೆ ಈ ಕೈವಾಡದ ಸ್ವರೂಪ, ವ್ಯಾಪ್ತಿಗಳ ಬಗ್ಗೆ ಇನ್ನೂ ಏಕಾಭಿಪ್ರಾಯ ಏರ್ಪಟ್ಟಿಲ್ಲ.

ಒಂದು ಉದ್ಯಮದ ದುಡಿಮೆಗಾರರಿಗೆ ಆ ಉದ್ಯಮದ ಮೇಲೆ ಸಂಪೂರ್ಣ ಹತೋಟಿಯಿರಬೇಕು ಅಥವಾ ಅದರ ಹತೋಟಿಯಲ್ಲಿ ಇತರರೊಡನೆ ಅವರೂ ಸಮಭಾಗಿಗಳಾಗಿರಬೇಕು ಎಂಬುದು ಕೈಗಾರಿಕಾ ಪ್ರಜಾರಾಜ್ಯದ ಮುಖ್ಯ ಧ್ಯೇಯ; ಹಾಗೆಯೇ ಯಾವುದೇ ಉದ್ಯಮದ ಕೆಲಸಗಾರರನ್ನು ಅವರ ಜನಾಂಗ, ಜಾತಿ ಮತಗಳ ಆಧಾರದ ಮೇಲೆ ಭಿನ್ನ ಭಾವನೆಗಳಿಂದ ಕಾಣಕೂಡದು ಎಂಬುದು ಕೈಗಾರಿಕಾ ಪ್ರಜಾರಾಜ್ಯದ ಇನ್ನೊಂದು ಧ್ಯೇಯ.

ಕಾರ್ಮಿಕ ಯಾವ ಸ್ಥಿತಿಗಳಿಗೆ ಒಳಪಟ್ಟು ಕೆಲಸ ಮಾಡಬೇಕು? ಉದ್ಯಮ ಗಳಿಸುವ ಲಾಭದ ಹಂಚಿಕೆ ಯಾವ ರೀತಿ ಆಗಬೇಕು? ಎಂಬ–ಉದ್ಯಮದ ಆಡಳಿತ, ನಿರ್ವಹಣೆ ಇವುಗಳಿಗೆ ಸಂಬಂಧಿಸಿದ–ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರ ದುಡಿಮೆಗಾರನಿಗೆ ಅವನು ಆರಿಸಿದ ಪ್ರತಿನಿಧಿಗಳ ಮೂಲಕ ದೊರೆಯುವುದರಿಂದ ಈ ಮೊದಲು ಹೇಳಿದ ಎರಡು ಅಂಶಗಳಲ್ಲೂ ಅವನು ತನ್ನ ವರ್ಗದವರ ಹಿತವನ್ನು ಸಾಧಿಸುವುದು ಶಕ್ಯ. ಇದರಿಂದ ದುಡಿಮೆಗಾರನ ವ್ಯಕ್ತಿತ್ವದ ಅಭಿವೃದ್ಧಿ ಮತ್ತು ಅವನ ಸಾಮಾಜಿಕ ಪ್ರಗತಿಗೆ ಸಹಾಯಕವಾದ ಪರಿಸ್ಥಿತಿ ಏರ್ಪಡುತ್ತದೆ ಎಂದು ನಿರೀಕ್ಷಿಸಬಹುದು. (ಎಂ.ಎನ್.ಸಿ.ಎಚ್.)

**ಕೈಗಾರಿಕಾ ಬ್ಯಾಂಕು :** ಸಾಪ್ತಾಹಿಕ ಅಥವಾ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡುವ ಸೌಲಭ್ಯವಿರುವ ಮತ್ತು ಸಣ್ಣ ಮೊಬಲಗುಗಳ ಮಧ್ಯಮಾವಧಿ ಸಾಲ ನೀಡುವ ಹಣಕಾಸಿನ ಸಂಸ್ಥೆಯನ್ನು ಈ ಹೆಸರಿನಿಂದ ಕರೆಯುವ ವಾಡಿಕೆ ಅಮೆರಿಕದಲ್ಲೂ ಇಂಗ್ಲೆಂಡಿನಲ್ಲೂ ಉಂಟು. ಇಂಥ ಸಮಸ್ಯೆಗಳನ್ನು ಬ್ಯಾಂಕುಗಳೆಂದು ಕರೆಯುವುದರ ಔಚಿತ್ಯ ವಾದಗ್ರಸ್ತವಾದದ್ದು. ಆದರೆ ಇವು ಸಾರ್ವಜನಿಕರಿಂದ ಠೇವಣಿಗಳ ಲೆಕ್ಕದಲ್ಲಿ ಹಣ ಪಡೆಯುವುದರಿಂದಲೂ ಸಾರ್ವಜನಿಕರಿಗೆ ಉದ್ದರಿ ನೀಡಲು ಈ ಹಣವನ್ನು ಬಳಸಿಕೊಳ್ಳುವುದರಿಂದಲೂ ಇವನ್ನು ಬ್ಯಾಂಕುಗಳೆಂದು ಕರೆಯಬಹುದೆಂದು ವಾದಿಸಲಾಗಿದೆ. ಕೈಗಾರಿಕೆಗಳಿಗೆ ಅಗತ್ಯವಾದ ದೀರ್ಘಾವಧಿಯ ಸ್ಥಿರಬಂಡವಾಳವನ್ನು ಒದಗಿಸುವ ವಿನಿಯೋಜನ ಬ್ಯಾಂಕುಗಳು ವ್ಯಾಪಕವಾದ ಅರ್ಥದಲ್ಲಿ ಕೈಗಾರಿಕಾ ಬ್ಯಾಂಕುಗಳು. ವಿನಿಯೋಜನ ಬ್ಯಾಂಕುಗಳ ಉದ್ದೇಶಗಳು ವಾಣಿಜ್ಯ ಬ್ಯಾಂಕುಗಳ ಉದ್ದೇಶಗಳಿಗಿಂತ ಭಿನ್ನವಾದಂಥವು. ಕೈಗಾರಿಕಾ ಸಂಸ್ಥೆಗಳ ಷೇರುಗಳನ್ನೂ ಡಿಬೆಂಚರುಗಳನ್ನೂ ಸಾರ್ವಜನಿಕರಿಗೆ ನೀಡುವುದರಲ್ಲಿ ಇವು ಸಹಾಯ ಮಾಡುತ್ತವೆ. ಇವು ಉಳಿತಾಯಗಾರರಿಗೂ ಬಂಡವಾಳ ಹೂಡುವವರಿಗೂ ಮಧ್ಯವರ್ತಿಗಳಾಗಿರುತ್ತವೆ. ಕೆಲವು ಸಾರಿ ಇವು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ ಅನಂತರ ಬಂಡವಾಳಗಾರರಿಗೆ ವಹಿಸುವುದೂ ಉಂಟು. ಷೇರು, ಡಿಬೆಂಚರುಗಳನ್ನು ಅಧಿಕಗಾತ್ರದಲ್ಲಿ ಕೊಂಡು, ಅವನ್ನು ಸಣ್ಣ ಗಾತ್ರಗಳಲ್ಲಿ ಸಾರ್ವಜನಿಕರಿಗೆ ವಿಕ್ರಯಿಸಿ ಲಾಭಗಳಿಸುವುದೂ ಉಂಟು.

**ಬ್ಯಾಂಕುಗಳು ಮತ್ತು ಕೈಗಾರಿಕೆ:** 19ನೆಯ ಶತಮಾನದಲ್ಲಿ ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿಯ ಬ್ಯಾಂಕುಗಳು ವಿನಿಯೋಜನ ವ್ಯವಹಾರ ಮಾಡುತ್ತಿದ್ದುವು. ಆದರೆ ಬ್ರಿಟಿಷ್ ಬ್ಯಾಂಕುಗಳು ಇವುಗಳಲ್ಲಿ ಆಸಕ್ತಿ ವಹಿಸಲಿಲ್ಲ. ಒಂದನೆಯ ಮಹಾಯುದ್ಧಾನಂತರ ವಿನಿಯೋಜನ ಬ್ಯಾಂಕಿಂಗ್ ವ್ಯವಹಾರದ ಪ್ರಾಮುಖ್ಯ ಕಡಿಮೆಯಾಗಿತ್ತು. ಆದರೆ 1945ರ ಅನಂತರ ಫ್ರಾನ್ಸಿನಲ್ಲಿ ವಿವಿಧ ಕೈಗಾರಿಕೆಗಳಿಗೆ ನೆರವು ನೀಡುವ ಉದ್ದೇಶದಿಂದ ಅನೇಕ ವಿಶಿಷ್ಟ ಸಂಸ್ಥೆಗಳನ್ನು ಸರ್ಕಾರ ಸ್ಥಾಪಿಸಿತು. ಜಪಾನಿನಲ್ಲೂ ವಿನಿಯೋಜನ ಬ್ಯಾಂಕಿಂಗ್ ತಕ್ಕಮಟ್ಟಿನ ಪ್ರಾಮುಖ್ಯಗಳಿಸಿತ್ತು.

**ಇಂಗ್ಲೆಂಡ್ :** ಬ್ರಿಟನ್ನಿನ ವಾಣಿಜ್ಯ ಬ್ಯಾಂಕುಗಳ ಮುಖ್ಯ ಗುಣಲಕ್ಷಣವೇನೆಂದರೆ ಕೈಗಾರಿಕೆಗಳಿಗೆ ಅಲ್ಪಾವಧಿ ಸಾಲವನ್ನು ಮಾತ್ರ ಸರಬರಾಯಿ ಮಾಡುವುದು. ಕೈಗಾರಿಕೆಗಳ ಸ್ಥಾಪನೆ, ವ್ಯವಸ್ಥಾಪನೆ ಮತ್ತು ವಿಸ್ತರಣೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಬ್ಯಾಂಕುಗಳು ತಲೆಹಾಕುವುದಿಲ್ಲ. ಕಚ್ಚಾಸಾಮಗ್ರಿಗಳನ್ನು ಕೊಳ್ಳಲೂ ದಿನಚರಿ ಖರ್ಚುಗಳಿಗೂ ಅಗತ್ಯವಾದ ಹಣವನ್ನು ಮಾತ್ರ ಬ್ರಿಟಿಷ್ ಬ್ಯಾಂಕುಗಳು ಕೈಗಾರಿಕೆಗಳಿಗೆ ಒದಗಿಸುತ್ತವೆ. ಎಂದರೆ ಈ ಬ್ಯಾಂಕುಗಳು ಕೈಗಾರಿಕೆಗಳಿಗೆ ಬೇಕಾದ ಸ್ಥಿರ ಆಸ್ತಿಗಳನ್ನು ಕೊಳ್ಳಲೂ ಯಂತ್ರಗಳ ಸ್ಥಾಪನೆಗೂ ದೀರ್ಘಾವಧಿ ವಿಸ್ತರಣ ಕಾರ್ಯಗಳಿಗೂ ಹಣಕಾಸನ್ನು ನೀಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಇಂಗ್ಲೆಂಡಿನ ವಾಣಿಜ್ಯ ಬ್ಯಾಂಕುಗಳಲ್ಲಿರುವ ಸಾರ್ವಜನಿಕ ಠೇವಣಿಗಳು ಬಹಳಮಟ್ಟಿಗೆ ಅಲ್ಪಾವಧಿಯವು. ಬ್ಯಾಂಕುಗಳು ದ್ರವತೆಗೆ ಹೆಚ್ಚಿನ ಗಮನ ನೀಡುವುದು ಬಹಳ ಕಾಲದಿಂದಲೂ ಅಲ್ಲಿ ನಡೆದು ಬಂದಿರುವ ಸಂಪ್ರದಾಯ.

ಇಂಗ್ಲೆಂಡಿನ ಬ್ಯಾಂಕುಗಳು ಕೈಗಾರಿಕೆಗಳ ಅಲ್ಪಾವಧಿ ಸಾಲವನ್ನು ಮಾತ್ರ ಸರಬರಾಯಿ ಮಾಡುತ್ತಿದ್ದರೂ ಆ ದೇಶದ ಕೈಗಾರಿಕಾಭಿವೃದ್ಧಿಗೆ ಎಂದೂ ಅಡಚಣೆಯಾಗಲಿಲ್ಲ. ವಾಣಿಜ್ಯ ಬ್ಯಾಂಕುಗಳು ಪ್ರವರ್ಧಮಾನಕ್ಕೆ ಬರುವುದಕ್ಕೆ ಹಿಂದಿನಿಂದಲೂ ಆ ದೇಶದಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಸುವ್ಯವಸ್ಥಿತವಾದ ಕೈಗಾರಿಕಾ ಬಂಡವಾಳ ಮಾರುಕಟ್ಟೆ ಇತ್ತು. ಇದಲ್ಲದೆ ಲಂಡನ್ ನಗರ ಪ್ರಪಂಚ ಹಣಕಾಸಿನ ಕೇಂದ್ರವಾಗಿದ್ದುದರಿಂದ ಕೈಗಾರಿಕೆಗಳಿಗೆ ಬೇಕಾದ ಹಣಕಾಸಿನ ಸರಬರಾಯಿ ಸತತವಾಗಿ ಬರುತ್ತಿತ್ತು. ಆದ್ದರಿಂದ ವಾಣಿಜ್ಯ ಬ್ಯಾಂಕುಗಳು ತಮ್ಮ ಕಾರ್ಯವ್ಯಾಪ್ತಿಯನ್ನು ದೀರ್ಘಾವಧಿ ಹಣಕಾಸನ್ನು ಒದಗಿಸುವ ಕಡೆ ವಿಸ್ತರಿಸುವ ಆವಶ್ಯಕತೆಯೂ ಇರಲಿಲ್ಲ.

ಆದರೆ ಬರುಬರುತ್ತ ಬ್ರಿಟಿಷ್ ಕೈಗಾರಿಕಾ ಹಣಕಾಸಿನ ವ್ಯವಸ್ಥೆಯಲ್ಲಿ ಮಧ್ಯಮಾವಧಿ ಹಣಕಾಸಿನ ಕೊರತೆ ಹೆಚ್ಚಾಯಿತು. ಏಕೆಂದರೆ ವಾಣಿಜ್ಯ ಬ್ಯಾಂಕುಗಳು ಅಲ್ಪಾವಧಿ ಸಾಲವನ್ನು ಮಾತ್ರ ಒದಗಿಸುತ್ತಿದ್ದುವು. ಬಂಡವಾಳ ಮಾರುಕಟ್ಟೆಯಿಂದ ದೀರ್ಘಾವಧಿ ಸಾಲದ ಸರಬರಾಯಿ ಆಗುತ್ತಿತ್ತು. ಮಧ್ಯಮಾವಧಿ ಹಣಕಾಸಿನ ಕೊರತೆಯನ್ನು ಮ್ಯಾಕ್ ಮಿಲನ್ ಸಮಿತಿ (1929–31) ತನ್ನ ವರದಿಯಲ್ಲಿ ಎತ್ತಿ ತೋರಿಸಿತು. ಅಲ್ಲಿಂದೀಚೆಗೆ ಬ್ರಿಟಿಷ್ ಸರ್ಕಾರ ಕೈಗಾರಿಕೆಗಳಿಗೆ ಮಧ್ಯಮಾವಧಿ ಸಾಲವನ್ನು ನೀಡಲು ಕೆಲವು ಕೈಗಾರಿಕಾ ಹಣಕಾಸು ಕಾರ್ಪೊರೇಷನ್‌ಗಳನ್ನು ಸ್ಥಾಪಿಸಿತು. ಇದಲ್ಲದೆ, ಇತ್ತೀಚೆಗೆ ಬ್ರಿಟಿಷ್ ವಾಣಿಜ್ಯ ಬ್ಯಾಂಕುಗಳು ಸಹ ಕೈಗಾರಿಕೆಗಳಿಗೆ ಒದಗಿಸುವ ಅಲ್ಪಾವಧಿ ಸಾಲವನ್ನು ಕೆಲವು ಸಾರಿ ನವೀಕರಿಸುವುದರ ಮೂಲಕ ಮಧ್ಯಮಾವಧಿ ಸಾಲವನ್ನು ಸರಬರಾಯಿ ಮಾಡುತ್ತಿವೆ.

**ಜರ್ಮನಿ:** ಜರ್ಮನಿಯ ಬ್ಯಾಂಕುಗಳು ಕೈಗಾರಿಕೆಗಳ ಸ್ಥಾಪನೆ ವ್ಯವಸ್ಥಾಪನೆಗಳಲ್ಲೂ ಅವುಗಳಿಗೆ ಬೇಕಾದ ದೀರ್ಘಾವಧಿ ಹಣಕಾಸನ್ನು ಒದಗಿಸುವುದರಲ್ಲೂ ಹೆಚ್ಚಿನ ಪಾತ್ರವಹಿಸಿರುವುದನ್ನು ಕಾಣಬಹುದು. ಜರ್ಮನಿಯಲ್ಲಿ ಬ್ಯಾಂಕುಗಳಿಗೂ ಕೈಗಾರಿಕೆಗಳಿಗೂ ಕಳೆದ ಶತಮಾನದಿಂದ ಈ ಶತಮಾನದ ಮೂವತ್ತರ ದಶಕದ ತನಕ ನಿಕಟ ಸಂಬಂಧವಿತ್ತು. ಕೈಗಾರಿಕಾ ಬಂಡವಾಳದ ಅಭಾವವೂ ದೇಶದಲ್ಲಿದ್ದ ಬಡತನವೂ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಕಷ್ಟು ಜನ ಮುಂದೆ ಬರದಿದ್ದದೂ ಇದಕ್ಕೆ ಕಾರಣ. ಬ್ಯಾಂಕುಗಳು ಕೈಗಾರಿಕೆಗಳ ಸ್ಥಾಪನೆಗೂ ಅವುಗಳ ವಿಸ್ತರಣೆಗೂ ಆವಶ್ಯಕವಾದ ದೀರ್ಘಾವಧಿ ಹಣಕಾಸನ್ನು ಸರಬರಾಯಿ ಮಾಡಲು ಪ್ರಾರಂಭಿಸಿದುವು. ಕೈಗಾರಿಕಾ ವ್ಯವಸ್ಥಾಪಕರ ಪರವಾಗಿ ಷೇರುಗಳನ್ನೂ ಡಿಬೆಂಚರುಗಳನ್ನೂ ಮಾರಿ ಅವಕ್ಕೆ ಬೇಕಾದ

ಹಣಕಾಸನ್ನು ಕೂಡ ಒದಗಿಸುತ್ತಿದ್ದುವು. ಕೈಗಾರಿಕಾಭಿವೃದ್ಧಿಯಲ್ಲಿ ಬಹಳ ಪ್ರಗತಿ ಹೊಂದಿದ್ದ ಇಂಗ್ಲೆಂಡಿನೊಂದಿಗೆ ಸ್ಪರ್ಧಿಸಿ ತಮ್ಮ ಬೆಳೆವಣಿಗೆಯನ್ನು ತ್ವರಿತಗೊಳಿಸಲು ಜರ್ಮನ್ ಕೈಗಾರಿಕೆಗಳು ಬ್ಯಾಂಕುಗಳಿಂದ ಬಂಡವಾಳವನ್ನು ನಿರೀಕ್ಷಿಸಿದುವು. ತಮ್ಮ ಮೇಲೆ ಬಿದ್ದ ಜವಾಬ್ದಾರಿಯನ್ನು ಬ್ಯಾಂಕುಗಳೂ ಅರಿತುಕೊಂಡು ಕೈಗಾರಿಕೆಗಳಿಗೆ ಬೇಕಾದ ಹಣಕಾಸನ್ನು ಸರಬರಾಯಿ ಮಾಡಿದುವಲ್ಲದೆ ಅವುಗಳ ಬೆಳೆವಣಿಗೆಯಲ್ಲೂ ಆಸಕ್ತಿ ವಹಿಸುತ್ತಿದ್ದುವು. ಇಷ್ಟಲ್ಲದೆ ಕೆಲವು ಸಾರಿ ಬ್ಯಾಂಕುಗಳು ಕೂಟಗಳನ್ನು ರಚಿಸಿಕೊಂಡು ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿದ್ದುವು. ಈ ರೀತಿ ಜರ್ಮನ್ ಬ್ಯಾಂಕುಗಳು ಕೈಗಾರಿಕೆಗಳಿಗೆ ಬೇಕಾದ ಹಣಕಾಸನ್ನು ನೀಡುವುದಲ್ಲದೆ ಅವನ್ನು ಸ್ವತಃ ಸ್ಥಾಪಿಸುತ್ತಿದ್ದುವು; ಮತ್ತು ಅವಕ್ಕೆ ಸಲಹೆ ನೀಡುತ್ತಿದ್ದುವು. ಜರ್ಮನಿಯಲ್ಲಿ ಬ್ಯಾಂಕುಗಳಿಗೂ ಕೈಗಾರಿಕೆಗಳಿಗೂ ಇದ್ದ ಸಂಬಂಧ ಕಾರ್ಟೆಲ್ ಚಳವಳಿಯಿಂದ ಇನ್ನೂ ಹೆಚ್ಚಿತು. ಈ ನಿಕಟ ಸಂಬಂಧವನ್ನು ಕುರಿತು ಜೈಡಲ್ಸ್ ಈ ರೀತಿ ಬರೆಯುತ್ತಾನೆ: ಜರ್ಮನ್ ಬ್ಯಾಂಕುಗಳು ಒಂದು ಕೈಗಾರಿಕೆಯನ್ನು ಅದರ ಹುಟ್ಟಿನಿಂದ ಸಾವಿನವರೆಗೂ ನೋಡಿಕೊಳ್ಳುತ್ತಿದ್ದುವು; ಅದರ ಸ್ಥಾಪನೆಯಿಂದ ಹಿಡಿದು ಅದು ಮುಚ್ಚುವ ತನಕವೂ ಬೆಂಬಲವಾಗಿ ನಿಂತುಕೊಳ್ಳುತ್ತಿದ್ದುವು. ಕೈಗಾರಿಕೆ ಹಣದ ಮುಗ್ಗಟ್ಟನ್ನೆದುರಿಸಬೇಕಾದಾಗ ಅಥವಾ ಇತರ ತೊಂದರೆಗಳಿಗೆ ಸಿಕ್ಕಿದಾಗ ಅದಕ್ಕೆ ಆದಷ್ಟು ಸಹಾಯ ಮಾಡುತ್ತಿದ್ದುವು. ಅದೇ ರೀತಿ ಕೈಗಾರಿಕೆಗಳಿಂದ ಲಾಭವನ್ನು ಸಹ ಪಡೆಯುತ್ತಿದ್ದುವು.

ಒಟ್ಟಿನಲ್ಲಿ ಹಣಕಾಸನ್ನು ಒದಗಿಸುವುದರ ಜೊತೆಗೆ ಜರ್ಮನ್ ಬ್ಯಾಂಕುಗಳ ಚೈತನ್ಯಪೂರ್ಣ ವ್ಯವಸ್ಥಾಪನ ಸಾಮರ್ಥ್ಯ, ಕೈಗಾರಿಕಾ ಸ್ಥಾಪನೆಯ ಸಾಮರ್ಥ್ಯ, ಶ್ರದ್ಧಾನ್ವಿತ ಮೇಲ್ವಿಚಾರಣೆ–ಇವೆಲ್ಲವೂ ಆ ದೇಶದ ತ್ವರಿತ ಕೈಗಾರಿಕಾಭಿವೃದ್ಧಿಗೆ ಕಾರಣವಾದುವು.

ಆದರೆ ಈ ಪದ್ಧತಿಯಲ್ಲಿ ಕ್ರಮೇಣ ಕೆಲವು ನ್ಯೂನತೆಗಳು ಕಾಣತೊಡಗಿದುವು. ಬ್ಯಾಂಕುಗಳು ಮತ್ತು ದೊಡ್ಡ ಕೈಗಾರಿಕೆಗಳ ಸಂಬಂಧ ಹೆಚ್ಚಿದ್ದರಿಂದ ಸಣ್ಣ ಬಂಡವಾಳ ಹೂಡುವವರನ್ನು ಕಡೆಗಣಿಸಲಾಯಿತು. ಬ್ಯಾಂಕುಗಳು ದ್ರವತೆಯನ್ನು ಕಳೆದುಕೊಳ್ಳಲು ಆರಂಭಿಸಿದುವು. 1930ರ ದಶಕದಲ್ಲಿ ಜರ್ಮನ್ ಬ್ಯಾಂಕಿಂಗ್ ಪದ್ಧತಿ ಒಡೆದು ಚೂರಾಯಿತು. ಅಲ್ಲಿಂದೀಚೆಗೆ ಜರ್ಮನಿಯಲ್ಲಿ ವಿನಿಯೋಜನ ಮತ್ತು ಠೇವಣಿ ಬ್ಯಾಂಕಿಂಗ್‍ಗಳ ಸಂಮಿಶ್ರಣವನ್ನು ನಿಷೇಧಿಸಲಾಯಿತು. ಬ್ಯಾಂಕುಗಳು ದ್ರವತೆಯನ್ನು ಕಾಪಾಡಿಕೊಂಡು ಬರಬೇಕೆಂದೂ ಸ್ಥಿರ ಆಸ್ತಿಗಳ ಮೇಲೆ ಅವು ಹಣ ವಿನಿಯೋಜಿಸುವುದನ್ನು ಕಡಿಮೆ ಮಾಡಬೇಕೆಂದೂ ಕಾನೂನನ್ನು ಜಾರಿಗೆ ತರಲಾಯಿತು. ಇವುಗಳ ಪರಿಣಾಮವಾಗಿ ಜರ್ಮನಿಯಲ್ಲಿ ಕೈಗಾರಿಕೆಗಳಿಗೆ ದೀರ್ಘಾವಧಿ ಸಾಲವನ್ನು ಒದಗಿಸುವುದರಲ್ಲಿ ಬ್ಯಾಂಕುಗಳ ಪಾತ್ರ ಈಗ ಬಹುಮಟ್ಟಿಗೆ ಕಡಿಮೆಯಾಗಿದೆ. ಪಶ್ಚಿಮ ಜರ್ಮನಿಯಲ್ಲಿ ಕೈಗಾರಿಕೆಗಳಿಗೆ ದೀರ್ಘಾವಧಿ ಹಣಕಾಸನ್ನು ಒದಗಿಸಲು 1948–49ರಲ್ಲಿ ಎರಡು ಪ್ರತ್ಯೇಕ ಹಣಕಾಸಿನ ಸಂಸ್ಥೆಗಳ ಸ್ಥಾಪನೆಯಾಯಿತು.

**ಜಪಾನ್:** ಜಪಾನಿನಲ್ಲಿ ಎರಡನೆಯ ಮಹಾಯುದ್ಧದ ಅನಂತರ ಕೈಗಾರಿಕೆಗಳು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಹಣಕಾಸಿನ ನೆರವಿಗೆ ಬ್ಯಾಂಕುಗಳ ಕಡೆ ತಿರುಗಿದುವು. ಮಹಾಯುದ್ಧದ ಪರಿಣಾಮವಾಗಿ ಅಲ್ಲಿಯ ಆರ್ಥಿಕತೆ ಜರ್ಝರಿತವಾಗಿತ್ತು. ಕೈಗಾರಿಕಾ ಪುನರುಜ್ಜೀವನ ಮತ್ತು ಸ್ಥಾಪನೆಗಳಿಗೆ ಬೇಕಾದ ಹಣವನ್ನು ಒದಗಿಸಲು ಆಗ ಯಾವ ವಿಶೇಷ ಕೈಗಾರಿಕಾ ಹಣಕಾಸು ಕಾರ್ಪೊರೇಷನ್‍ಗಳೂ ಇರಲಿಲ್ಲ. ಈ ಸಂದರ್ಭದಲ್ಲಿ ಬ್ಯಾಂಕುಗಳು ಕೈಗಾರಿಕೆಗಳಿಗೆ ಬೇಕಾದ ಪರಸ್ಪರ ಬಂಡವಾಳವನ್ನು ಕಾರ್ಪೊರೇಟ್ ಷೇರು ಮತ್ತು ಡೆಬೆಂಚರುಗಳನ್ನು ಕೊಳ್ಳುವುದರ ಮೂಲಕವೂ ಇನ್ನೂ ಅನೇಕ ರೀತಿಯಲ್ಲೂ ಸರಬರಾಯಿ ಮಾಡಿದುವು. ಬ್ಯಾಂಕುಗಳು ಈ ರೀತಿ ದ್ರವತಾರಹಿತ ಆಸ್ತಿಗಳ ಆಧಾರದ ಮೇಲೆ ಸಾಲ ನೀಡುತ್ತಿದ್ದುದರಿಂದ ಕೆಲವು ಸಾರಿ ಬ್ಯಾಂಕಿಂಗ್‍ನಲ್ಲಿ ಉತ್ಕಟ ಸ್ಥಿತಿಯುಂಟಾಗಿ, ಕೇಂದ್ರ ಬ್ಯಾಂಕ್ ಆದ ಬ್ಯಾಂಕ್ ಆಫ್ ಜಪಾನ್ ಬಲವಂತದಿಂದ ಅವುಗಳ ಸಹಾಯಕ್ಕೆ ಬರಬೇಕಾಗುತ್ತಿತ್ತು. ಇಂಥ ಸಂದಿಗ್ಧ ಪರಿಸ್ಥಿತಿಯನ್ನು ತೊಡೆದು ಹಾಕಲು ಸರ್ಕಾರ ಕೈಗಾರಿಕಾ ಹಣಕಾಸಿನ ವಿಶೇಷ ಬ್ಯಾಂಕುಗಳಾದ ಯೋಕೊಹಾಮ ಸ್ಪೀಷೀ ಬ್ಯಾಂಕ್, ಇಂಡಸ್ಟ್ರಿಯಲ್ ಬ್ಯಾಂಕ್ ಆಫ್ ಜಪಾನ್, ದಿ ಲಾಂಗ್ ಟರ್ಮ್ ಬ್ಯಾಂಕ್ ಆಫ್ ಜಪಾನ್, ಹೊಕ್ಕೈಡೊ ಕಲೋನಿಯಲ್ ಬ್ಯಾಂಕ್ ಮುಂತಾದವನ್ನು 1952ರಲ್ಲಿ ಸ್ಥಾಪಿಸಿತು. ಆದ್ದರಿಂದ ಅಲ್ಲೂ ಇತ್ತೀಚೆಗೆ ದೀರ್ಘಾವಧಿ ಸಾಲವನ್ನು ಒದಗಿಸುವುದರಲ್ಲಿ ಬ್ಯಾಂಕುಗಳ ಪಾತ್ರ ಕಡಿಮೆಯಾಗಿದೆ.

**ಭಾರತ :** ಭಾರತದ ಬ್ಯಾಂಕುಗಳು ಬ್ರಿಟಿಷ್ ಬ್ಯಾಂಕುಗಳ ಮಾದರಿಯಲ್ಲಿ ಸ್ಥಾಪಿತವಾಗಿವೆ. ಆದ್ದರಿಂದ ಇವು ಕೈಗಾರಿಕೆಗಳಿಗೆ ಅಲ್ಪಾವಧಿ ಸಾಲವನ್ನು ಮಾತ್ರ ಸರಬರಾಯಿ ಮಾಡುತ್ತವೆ. ಜರ್ಮನಿ ಮತ್ತು ಜಪಾನ್‍ಗಳ ಕೈಗಾರಿಕಾಭಿವೃದ್ಧಿಯನ್ನು ನೋಡಿ ಭಾರತದಲ್ಲೂ ಕೊನೆಯ ಪಕ್ಷ ಮೂರು ಸಾರಿ ಬ್ಯಾಂಕುಗಳು ದೀರ್ಘಾವಧಿ ಹಣಕಾಸನ್ನು ಒದಗಿಸುವ ಪ್ರಯತ್ನ ಮಾಡಿದುವು. 1906–13ರಲ್ಲಿ, ಸ್ವದೇಶಿ ಚಳವಳಿಯ ಕಾಲದಲ್ಲಿ, ಹೊಸದಾಗಿ ಸ್ಥಾಪಿತವಾದ ಕೈಗಾರಿಕೆಗಳಿಗೆ, ಅದರಲ್ಲೂ ಪಂಜಾಬ್ ಪ್ರಾಂತ್ಯದಲ್ಲಿ, ಬ್ಯಾಂಕುಗಳು ದೀರ್ಘಾವಧಿ ಹಣಕಾಸನ್ನು ಸರಬರಾಯಿ ಮಾಡಿದುವು. ಕಂಪನಿಗಳ ಷೇರು ಮತ್ತು ಡಿಬೆಂಚರುಗಳನ್ನು ಕೊಳ್ಳುವುದರ ಮೂಲಕವೂ ಸ್ಥಿರ ಆಸ್ತಿಗಳಾದ ಕಾರ್ಖಾನೆ, ಯಂತ್ರಗಳು ಮತ್ತು ಕಟ್ಟಡಗಳ ಆಧಾರದ ಮೇಲೆಯೂ ಬ್ಯಾಂಕುಗಳೂ ಕೈಗಾರಿಕಾ ಹಣಕಾಸು ಸರಬರಾಯಿ ಮಾಡತೊಡಗಿದುವು. ಕೈಗಾರಿಕಾ ಹಣಕಾಸನ್ನು ಒದಗಿಸುತ್ತಿದ್ದ ಮುಖ್ಯ ಬ್ಯಾಂಕುಗಳೆಂದರೆ ಪೀಪಲ್ಸ್ ಬ್ಯಾಂಕ್ ಆಫ್ ಪಂಜಾಬ್, ದಿ ಇಂಡಿಯನ್ ಸ್ಪೀಷೀ ಬ್ಯಾಂಕ್, ದಿ ಹಿಂದೂಸ್ತಾನ್ ಬ್ಯಾಂಕ್, ದಿ ಲಾಹೋರ್ ಬ್ಯಾಂಕ್, ದಿ ಮಾರ್ವಾರಿ ಬ್ಯಾಂಕ್ ಮತ್ತು ದಿ ಇಂಡಸ್ಟ್ರಿಯಲ್ ಅಂಡ್ ಕ್ರೆಡಿಟ್ ಬ್ಯಾಂಕ್ ಆಫ್ ಇಂಡಿಯ. ಇವುಗಳಲ್ಲಿ ಅನೇಕ ಬ್ಯಾಂಕುಗಳು 1913–15ರ ಹಣಕಾಸಿನ ಮುಗ್ಗಟ್ಟಿನಲ್ಲಿ ಪತನ ಹೊಂದಿದುವು. ಈ ಬ್ಯಾಂಕುಗಳು ಯುಕ್ತವಾದ ಬ್ಯಾಂಕಿಂಗ್ ನೀತಿಯನ್ನು ಅನುಸರಿಸದೆ ಕೈಗಾರಿಕಾ ಉದ್ಯಮಗಳಿಗೆ ದೀರ್ಘಾವಧಿ ಹಣಕಾಸನ್ನು ಒದಗಿಸಿದುದು ಇವುಗಳ ಪತನಕ್ಕೆ ಕಾರಣ. ಬಂಡವಾಳ ವಿನಿಯೋಜನೆಗೆ ಸಂಬಂಧಿಸಿದ ಪ್ರತಿಯೊಂದು ಬ್ಯಾಂಕಿಂಗ್ ತತ್ತ್ವವೂ ಈ ಕಾಲದಲ್ಲಿ ಉಲ್ಲಂಘಿತವಾಗಿತ್ತು.

ಒಂದನೆಯ ಮಹಾಯುದ್ಧದ ಅನಂತರ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸಲೂ ಕೈಗಾರಿಕೆಗಳಿಗೆ ದೀರ್ಘಾವಧಿ ಹಣಕಾಸನ್ನು ಒದಗಿಸಲೂ ಮತ್ತೆ ಅನೇಕ ಕೈಗಾರಿಕಾ ಬ್ಯಾಂಕುಗಳು ಜನ್ಮತಾಳಿದುವು. ಯುದ್ಧದ ಪರಿಣಾಮವಾಗಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಅನೇಕ ಸದವಕಾಶಗಳಿದ್ದುದರಿಂದ ಅವಕ್ಕೆ ಬೇಕಾದ ಹಣಕಾಸನ್ನು ಸರಬರಾಯಿ ಮಾಡುವ ಸಲುವಾಗಿ ಬ್ಯಾಂಕುಗಳನ್ನು ಸ್ಥಾಪಿಸುವುದು ಆ ಅವಧಿಯಲ್ಲಿ ದಿನಚರಿಯ ಮಾತಾಗಿತ್ತು. ಈ ಕಾಲದಲ್ಲಿ ಸ್ಥಾಪಿತವಾದ ಬ್ಯಾಂಕುಗಳಲ್ಲಿ ಮುಖ್ಯವಾದವೆಂದರೆ ದಿ ಟಾಟಾ ಇಂಡಸ್ಟ್ರಿಯಲ್ ಬ್ಯಾಂಕ್ (1917), ದಿ ಕಲ್ಕತ್ತ ಇಂಡಸ್ಟ್ರಿಯಲ್ ಬ್ಯಾಂಕ್(1919), ದಿ ಇಂಡಿಯನ್ ಇಂಡಸ್ಟ್ರಿಯಲ್ ಬ್ಯಾಂಕ್ (1919), ದಿ ಇಂಡಸ್ಟ್ರಿಯಲ್ ಬ್ಯಾಂಕ್ ಆಫ್ ವೆಸ್ಟರ್ನ್ ಇಂಡಿಯ (1919), ದಿ ಮೈಸೂರ್ ಇಂಡಸ್ಟ್ರಿಯಲ್ ಬ್ಯಾಂಕ್ (1920), ದಿ ಕರ್ನಾನಿ ಇಂಡಸ್ಟ್ರಿಯಲ್ ಬ್ಯಾಂಕ್(1921), ದಿ ರಾಯ್‍ಕಟ್ ಇಂಡಸ್ಟ್ರಿಯಲ್ ಬ್ಯಾಂಕ್ (1922), ದಿ ಲಕ್ಷ್ಮೀ ಇಂಡಸ್ಟ್ರಿಯಲ್ ಬ್ಯಾಂಕ್(1923) ಮತ್ತು ದಿ ಸೌತ್ ಮಲಬಾರ್ ಇಂಡಸ್ಟ್ರಿಯಲ್ ಬ್ಯಾಂಕ್ (1929). ಈ ಕೈಗಾರಿಕಾ ಬ್ಯಾಂಕುಗಳು ಬಹಳ ವರ್ಷ ಉಳಿಯಲಿಲ್ಲ. ಇದಕ್ಕೆ ಮುಖ್ಯ ಕಾರಣಗಳು ಇವು: 1. ಜರ್ಮನ್ ಬ್ಯಾಂಕಿಂಗ್ ಮಾದರಿಯ ಅನುಕರಣೆ. ಹೀಗೆ ಮಾಡುವಾಗ ಜರ್ಮನ್ ಬ್ಯಾಂಕಿಂಗಿನ ನೈಜರೀತಿ, ವ್ಯವಸ್ಥೆ, ರಚನೆ ಮತ್ತು ಕೆಲಸಕಾರ್ಯಗಳನ್ನು ಸರಿಯಾಗಿ ಮನದಟ್ಟು ಮಾಡಿಕೊಂಡಿರಲಿಲ್ಲ. ಜರ್ಮನಿಯಲ್ಲಿ ಅಲ್ಪಾವಧಿ ಠೇವಣಿಗಳನ್ನು ಅಲ್ಪಾವಧಿ ಸಾಲ ನೀಡಲೂ ದೀರ್ಘಾವಧಿ ಠೇವಣಿಗಳನ್ನು ದೀರ್ಘಾವಧಿ ಸಾಲ ಕೊಡಲೂ ಉಪಯೋಗಿಸುತ್ತಿದ್ದರು. ಆದರೆ ಭಾರತದ ಇಂಡಸ್ಟ್ರಿಯಲ್ ಬ್ಯಾಂಕುಗಳು ಅಲ್ಪಾವಧಿ ಠೇವಣಿಗಳನ್ನು ದೀರ್ಘಾವಧಿ ಸಾಲ ನೀಡಲು ಉಪಯೋಗಿಸಿದುವು. 2. ಸಾಮಾನ್ಯವಾಗಿ ಭಾರತದ ಬ್ಯಾಂಕುಗಳ ವ್ಯವಸ್ಥಾಪಕ ವರ್ಗದವರು ಸ್ವಾರ್ಥಿಗಳಾಗಿಯೂ ಅಸಮರ್ಥರಾಗಿಯೂ ಇದ್ದರು. 3. ಇವರಿಗೆ ಕೈಗಾರಿಕಾ ಬ್ಯಾಂಕಿಂಗಿನಲ್ಲಿ ಒಳ್ಳೆಯ ಪರಿಜ್ಞಾನವಿರಲಿಲ್ಲ. 4. ಬಂಡವಾಳವನ್ನು ಹೂಡುವಾಗ ಸರಿಯಾದ ಉದ್ಯಮಗಳನ್ನು ಆಯ್ಕೆಮಾಡಿಕೊಳ್ಳಲಿಲ್ಲ. ಈ ಸಂಸ್ಥೆಗಳು ಬಂಡವಾಳವನ್ನು ನಾನಾ ಉದ್ಯಮಗಳಲ್ಲಿ ಹೂಡುವ ಬದಲು ಕೆಲವೇ ಉದ್ಯಮಗಳಲ್ಲಿ ಸಾಂದ್ರೀಕರಿಸಿದ್ದುವು.

ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಕೈಗಾರಿಕಾ ಚಟುವಟಿಕೆಗಳಿಗೆ ಬೇಕಾದ ಹಣಕಾಸನ್ನು ಒದಗಿಸಲು ಮತ್ತೆ ಕೆಲವು ಕೈಗಾರಿಕಾ ಬ್ಯಾಂಕುಗಳು ಬಂದುವು. ಯುದ್ಧಕಾಲದಲ್ಲಿ ಬ್ಯಾಂಕುಗಳಲ್ಲಿ ಠೇವಣಿಗಳ ಶೇಖರಣೆ ಹೆಚ್ಚಾಗುತ್ತಿದ್ದುದರಿಂದಲೂ ಕೈಗಾರಿಕಾ ಚಟುವಟಿಕೆ ಬಿರುಸಾಗಿ ನಡೆಯುತ್ತಿದ್ದುದರಿಂದಲೂ ವಾಣಿಜ್ಯ ಬ್ಯಾಂಕುಗಳು ಕೂಡ ಕೈಗಾರಿಕೆಗಳಿಗೆ ದೀರ್ಘಾವಧಿ ಹಣಕಾಸನ್ನು ಒದಗಿಸಲು ಪ್ರಾರಂಭಿಸಿದುವು. ಆದರೆ ಈ ಸಾರಿಯೂ ಕೈಗಾರಿಕಾ ಹಣಕಾಸಿನ ವಿಷಯದಲ್ಲಿ ಬ್ಯಾಂಕುಗಳು ಕಟು ಅನುಭವ ಪಡೆಯಬೇಕಾಯಿತು. ಅನೇಕ ಬ್ಯಾಂಕುಗಳು, ಅದರಲ್ಲೂ ಪಶ್ಚಿಮ ಬಂಗಾಲದಲ್ಲಿ, ಅವನತಿ ಹೊಂದಿದುದಕ್ಕೆ ಮುಖ್ಯ ಕಾರಣವೇನೆಂದರೆ ಅಲ್ಪಾವಧಿ ಠೇವಣಿಗಳನ್ನು ದೀರ್ಘಾವಧಿ ಸಾಲ ಕೊಡಲು ಉಪಯೋಗಿಸಿದ್ದು.

ಈ ರೀತಿ ಎಲ್ಲೆಲ್ಲಿ ಮತ್ತು ಯಾವಾಗ ಕೈಗಾರಿಕಾ ಬ್ಯಾಂಕುಗಳನ್ನು ಸ್ಥಾಪಿಸಿದರೂ ಅವೆಲ್ಲವೂ ಭಾರತದಲ್ಲಿ ಅನರ್ಥಕ್ಕೀಡಾದುವು. ಕೈಗಾರಿಕೆಗಳಿಗೆ ದೀರ್ಘಾವಧಿ ಹಣಕಾಸನ್ನು ಒದಗಿಸಲು ಪ್ರತ್ಯೇಕ ಹಣಕಾಸು ಕಾರ್ಪೊರೇಷನ್‍ಗಳನ್ನು ಸ್ಥಾಪಿಸಬೇಕೆಂದು ಕೇಂದ್ರೀಯ ಬ್ಯಾಂಕಿಂಗ್ ವಿಚಾರಣಾ ಸಮಿತಿ 1931ರಲ್ಲೇ ಸಲಹೆ ಮಾಡಿತ್ತು. ಆದರೆ ಹೇಗೆ ಸ್ಥಾಪಿಸಬೇಕೆಂಬುದರ ವಿಷಯವಾಗಿ ಅದು ವಿವರಗಳನ್ನು ಕೊಟ್ಟಿರಲಿಲ್ಲ. ಆದ್ದರಿಂದ ಈ ಸಮಿತಿಯ ಸಲಹೆಯನ್ನು ಕಾರ್ಯರೂಪಕ್ಕೆ ತರುವುದು ಸ್ವಾತಂತ್ರ್ಯ ಬರುವ ತನಕ ಸಾಧ್ಯವಾಗಲಿಲ್ಲ. ಬ್ಯಾಂಕುಗಳು ಪರೋಕ್ಷವಾಗಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಹಣಕಾಸನ್ನು ಒದಗಿಸುವುದರಲ್ಲಿ ಭಾಗವಹಿಸಬಹುದೆಂದು 1954ರಲ್ಲಿ ಷರಾಫ್ ಸಮಿತಿ ಶಿಫಾರಸು ಮಾಡಿತ್ತು. ಅದೇ ಸಮಯದಲ್ಲಿ

ಭಾರತಕ್ಕೆ ಬಂದಿದ್ದ ಅಂತಾರಾಷ್ಟ್ರೀಯ ಹಣ ನಿಧಿಯ ನಿಯೋಗವೂ ಷರಾಫ್ ಸಮಿತಿಯ ಶಿಫಾರಸನ್ನು ಅನುಮೋದಿಸಿತು. ಭಾರತಕ್ಕೆ ಸ್ವಾತ್ರಂತ್ರ್ಯ ಬಂದಮೇಲೆ, ಅದರಲ್ಲೂ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದಂದಿನಿಂದ, ಕೈಗಾರಿಕಾ ಹಣಕಾಸಿನ ಕೊರತೆ ಹೆಚ್ಚಾಗುತ್ತ ಬಂದಿದೆ. ವಾಣಿಜ್ಯ ಬ್ಯಾಂಕುಗಳು ಅಲ್ಪಾವಧಿ ಸಾಲವನ್ನು ಮಾತ್ರ ಒದಗಿಸುವುದರಿಂದಲೂ ಮಧ್ಯಮಾವಧಿ ಮತ್ತು ದೀರ್ಘಾವಧಿ ಹಣಕಾಸನ್ನು ಒದಗಿಸುತ್ತಿದ್ದ ವ್ಯವಸ್ಥಾಪಕ ನಿಯೋಗಿಗಳ ಮತ್ತು ಇತರ ಸಾಂಪ್ರದಾಯಿಕ ಮೂಲಗಳ ಪಾತ್ರ ಕಡಿಮೆಯಾಗುತ್ತ ಬಂದದ್ದರಿಂದಲೂ ಕೈಗಾರಿಕೆಗಳು ಹಣದ ಮುಗ್ಗಟ್ಟನ್ನು ಅನುಭವಿಸಬೇಕಾಯಿತು. ಆದ್ದರಿಂದ ಸರ್ಕಾರ ಕಳೆದ 25 ವರ್ಷಗಳಲ್ಲಿ ಅನೇಕ ಕೈಗಾರಿಕಾ ಹಣಕಾಸು ಕಾರ್ಪೊರೇಷನ್‌ಗಳನ್ನು ಸ್ಥಾಪಿಸಿತು. ಇವುಗಳಲ್ಲಿ ಮುಖ್ಯವಾದವೆಂದರೆ ಭಾರತದ ಕೈಗಾರಿಕಾ ಹಣಕಾಸು ಕಾರ್ಪೊರೇಷನ್, ರಾಜ್ಯ ಹಣಕಾಸು ಕಾರ್ಪೊರೇಷನ್‌ಗಳು, ರಾಜ್ಯ ಕೈಗಾರಿಕಾಭಿವೃದ್ಧಿ ಕಾರ್ಪೊರೇಷನ್‌ಗಳು, ಭಾರತದ ಕೈಗಾರಿಕಾ ಉದ್ದರಿ ಮತ್ತು ವಿನಿಯೋಜನ ಬ್ಯಾಂಕ್ ಮತ್ತು ಯೂನಿಟ್ ಟ್ರಸ್ಟ್ ಆಫ್ ಇಂಡಿಯ. ಈ ಕೈಗಾರಿಕಾ ಹಣಕಾಸು ಸಂಸ್ಥೆಗಳು ಕೈಗಾರಿಕೆಗಳಿಗೆ ಬೇಕಾದ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸಿ ಕೈಗಾರಿಕಾ ಪ್ರಗತಿಗೆ ಬಹಳ ಸಾಧಕವಾಗಿವೆ. ಇದೇ ರೀತಿ ಅನೇಕ ಹಿಂದುಳಿದ ರಾಷ್ಟ್ರಗಳಲ್ಲಿ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಭಾರತದ ವಾಣಿಜ್ಯ ಬ್ಯಾಂಕುಗಳು ಹೊಸದಾಗಿ ಸ್ಥಾಪಿಸಿರುವ ಹಣಕಾಸಿನ ಕಾರ್ಪೊರೇಷನುಗಳ ಷೇರುಗಳನ್ನೂ, ಡಿಬೆಂಚರುಗಳನ್ನೂ ಕೊಳ್ಳುವುದರ ಮೂಲಕ ಪರೋಕ್ಷವಾಗಿ ದೀರ್ಘಾವಧಿ ಕೈಗಾರಿಕಾ ಹಣಕಾಸಿನಲ್ಲಿ ಭಾಗವಹಿಸುತ್ತಿವೆ. ಇತ್ತೀಚೆಗೆ ವಾಣಿಜ್ಯ ಬ್ಯಾಂಕುಗಳಲ್ಲಿ ಅವಧಿ ಠೇವಣಿಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಅವು ಮಧ್ಯಮಾವಧಿ ಸಾಲವನ್ನೂ ಒದಗಿಸುತ್ತವೆ; ಇದಲ್ಲದೆ ಅಲ್ಪಾವಧಿ ಸಾಲವನ್ನು ನವೀಕರಿಸುವುದರ ಮೂಲಕ ಮಧ್ಯಮಾವಧಿ ಹಣಕಾಸನ್ನು ಕೈಗಾರಿಕೆಗಳಿಗೆ ಸರಬರಾಯಿ ಮಾಡುತ್ತಿವೆ. (ಎಂ.ಎ.ಎಂ.)

**ಕೈಗಾರಿಕಾ ಮಂಡಳಿಗಳು :** ಕೈಗಾರಿಕೆಗಳ ಯಜಮಾನರು ಮತ್ತು ಉದ್ಯೋಗಿಗಳಲ್ಲಿ ಕ್ರಮಬದ್ಧವಾಗಿ ಪರಸ್ಪರ ವಿಚಾರವಿನಿಮಯವನ್ನೇರ್ಪಡಿಸಿ, ಕೈಗಾರಿಕಾ ಸಂಬಂಧಗಳನ್ನು ಉತ್ತಮಗೊಳಿಸುವ ಉದ್ದೇಶದಿಂದ ರಚಿತವಾದ ಮಂಡಳಿಗಳು (ಇಂಡಸ್ಟ್ರಿಯಲ್ ಕೌನ್ಸಿಲ್ಸ್). ಇಂಗ್ಲೆಂಡಿನಲ್ಲಿ ಕಾರ್ಮಿಕ-ಮಾಲೀಕ ಸೌಹಾರ್ದ ಬೆಳೆಸುವ ಮಾರ್ಗವನ್ನು ಸೂಚಿಸುವಂತೆ ಅಲ್ಲಿಯ ಸರ್ಕಾರ 1916ರಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಹ್ವಿಟ್ಲಿಯ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ ಈ ಸಮಿತಿ 1917ರಲ್ಲಿ ತನ್ನ ವರದಿ ಒಪ್ಪಿಸಿ, ಪ್ರತಿ ಸಂಘಟಿತ ಕೈಗಾರಿಕೆಯಲ್ಲೂ ಒಂದು ಕೈಗಾರಿಕಾ ಮಂಡಳಿಯನ್ನು ನೇಮಿಸಬೇಕೆಂದು ಸಲಹೆ ನೀಡಿತು. ಈ ಮಂಡಳಿಯಲ್ಲಿ ಉದ್ಯಮಿಗಳ ಮತ್ತು ಕಾರ್ಮಿಕರ ಪ್ರತಿನಿಧಿಗಳಿರಬೇಕೆಂದೂ ಕೈಗಾರಿಕೆಯ ಬೆಳೆವಣಿಗೆಯ ಮೇಲೆ ಪ್ರಭಾವ ಬೀರಬಹುದಾದ ಅಂಶಗಳ ಮೇಲೆ ಚರ್ಚೆ ನಡೆಸಿ ಉದ್ಯಮ ಸಂಸ್ಥೆಗೆ ಈ ಮಂಡಳಿ ತನ್ನ ಸಲಹೆಗಳನ್ನು ಕೊಡತಕ್ಕದ್ದೆಂದೂ ಸಮಿತಿ ಸೂಚಿಸಿತು. ಈ ವ್ಯವಸ್ಥೆಗೆ ಕಾಲಕ್ರಮದಲ್ಲಿ ಹ್ವಿಟ್ಲಿ ಕ್ರಮವೆಂದು (ಹ್ವಿಟ್ಲಿ ಸ್ಕೀಂ), ಹ್ವಿಟ್ಲಿ ಮಂಡಳಿಯೆಂದು ಹೆಸರು ಬಂತು.

ಈ ವ್ಯವಸ್ಥೆಯ ಪ್ರಕಾರ ಕಾರ್ಮಿಕರೂ ಉದ್ಯಮದ ವ್ಯವಸ್ಥಾಪನದಲ್ಲಿ ಭಾಗವಹಿಸುವಂತಾಯಿತು. ಅವರಿಗೂ ಉದ್ಯಮದ ಆಗುಹೋಗುಗಳ ಪರಿಚಯ ಮಾಡಿಕೊಟ್ಟು ಅದರ ಮುನ್ನಡೆಗೆ ಅಗತ್ಯವಾದ, ಅವರ ಸಹಕಾರವನ್ನು ಪಡೆಯುವುದಲ್ಲದೆ ಉದ್ಯಮಿಗಳೊಡನೆ ಅವರ ಸಂಬಂಧವನ್ನು ಉತ್ತಮಗೊಳಿಸುವುದು ಇದರ ಗುರಿ. ಕಾರ್ಮಿಕರು ಉದ್ಯಮದ ನಿರ್ವಹಣೆಯಲ್ಲಿ ಅನೇಕ ಬಗೆಯಲ್ಲಿ ಭಾಗವಹಿಸಬಹುದು. ಅವುಗಳಲ್ಲಿ ಮುಖ್ಯವಾದುವು ಎರಡು. ಒಂದನೆಯದು ಜಂಟಿ ಸಮಾಲೋಚನೆ, ಇಲ್ಲಿ ಕಾರ್ಮಿಕರ ಹಿತಾಸಕ್ತಿಯ ಮೇಲೆ ಪ್ರತ್ಯಕ್ಷವಾಗಿ ಪರಿಣಾಮ ಬೀರುವ ಸಮಸ್ಯೆಗಳ ವಿಷಯದಲ್ಲಿ, ಎಂದರೆ ಉದ್ಯೋಗಿಗಳಿಗೆ ಸಂಬಂಧಿಸಿದ ನೀತಿ ನಡಾವಳಿ, ಶಿಷ್ಟಾಚಾಲನೆಯ ವ್ಯವಸ್ಥೆ, ಕೈಗಾರಿಕಾ ಸುಧಾರಣೆ, ಸ್ವಯಂಚಾಲನ (ಆಟೊಮೇಷನ್) ಮುಂತಾದ ವಿಚಾರಗಳಲ್ಲಿ ಕಾರ್ಮಿಕರ ಸಲಹೆ ಪಡೆಯಲಾಗುತ್ತದೆ. ಕಾರ್ಮಿಕರು ಉದ್ಯಮದಲ್ಲಿ ಭಾಗವಹಿಸುವ ಮತ್ತೊಂದು ಬಗೆಯೆಂದರೆ, ನೇರ ಸಹಭಾಗಿತ್ವ(ಡೈರೆಕ್ಟ್ ಪಾರ್ಟಿಸಿಪೇಷನ್). ಇಲ್ಲಿ ಕಾರ್ಮಿಕರ ಪ್ರತಿನಿಧಿಗಳು ನಿರ್ದೇಶಕರ ಮಂಡಳಿಗೆ ನೇಮಕವಾಗಿ, ಉದ್ಯಮದ ನಿರ್ವಹಣೆಗೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲೂ ಭಾಗವಹಿಸುವರು. ಇಂಗ್ಲೆಂಡ್, ಸ್ವೀಡನ್ ಮತ್ತು ಸಂಯುಕ್ತಸಂಸ್ಥಾನಗಳಲ್ಲಿಯ ಕಾರ್ಮಿಕರು ಈ ವ್ಯವಸ್ಥೆಯನ್ನು ನಿರಾಕರಿಸಿದ್ದಾರೆ. ಕಾರ್ಮಿಕ ನಾಯಕರು ಉದ್ಯಮದ ನಿರ್ವಹಣೆಯಲ್ಲಿ ನೇರವಾಗಿ ಭಾಗವಹಿಸುವುದರಿಂದ ಉದ್ಯಮದ ಆಗುಹೋಗುಗಳ ಜವಾಬ್ದಾರಿಯನ್ನು ಹೊತ್ತುಕೊಂಡಂತಾಗಿ, ಸಾಮುದಾಯಿಕ ಚೌಕಾಸಿಯಲ್ಲಿ ತಾವು ದುರ್ಬಲರಾಗಬೇಕಾಗುತ್ತದೆಂಬುದೇ ಅವರ ಈ ತೀರ್ಮಾನಕ್ಕೆ ಕಾರಣ, ತಮ್ಮ ಹಿತಗಳ ಮೇಲೆ ಪ್ರತ್ಯಕ್ಷ ಪರಿಣಾಮ ಬೀರುವ ಸಮಸ್ಯೆಗಳ ಇತ್ಯರ್ಥಕ್ಕಾಗಿ ಜಂಟಿ ಸಮಾಲೋಚನೆಯಲ್ಲಿ ಭಾಗವಹಿಸಲು ಮಾತ್ರ ಅವರ ಒಪ್ಪಿಗೆಯುಂಟು. ಆದರೆ ಬೆಲ್ಜಿಯಂ, ಕೆನಡ, ಫ್ರಾನ್ಸ್, ಇಟಲಿ, ನಾರ್ವೆ, ಸ್ವಿಟ್ಜರ್ಲೆಂಡ್, ಪೂರ್ವಜರ್ಮನಿ, ಯುಗೊಸ್ಲಾವಿಯಗಳಲ್ಲಿ ಕಾರ್ಮಿಕರು ನೇರಸಹಭಾಗಿತ್ವದ ಕ್ರಮವನ್ನು ಒಪ್ಪಿಕೊಂಡು ನಿರ್ದೇಶಕರ ಮಂಡಳಿಯ ಸದಸ್ಯರಾಗಿದ್ದಾರೆ.

ಭಾರತದಲ್ಲಿ ಕಾರ್ಮಿಕರು ಉದ್ಯಮದ ನಿರ್ವಹಣೆಯಲ್ಲಿ ಭಾಗವಹಿಸುವ ವ್ಯವಸ್ಥೆ 1920ರಿಂದ ಜಾರಿಯಲ್ಲಿದೆ. ಟಾಟಾ ಕಬ್ಬಿಣ-ಉಕ್ಕು ಸಂಸ್ಥೆಯಲ್ಲಿ ಜಂಟಿ ಸಮಾಲೋಚನೆಯ ವ್ಯವಸ್ಥೆಯನ್ನು 1920ರಲ್ಲಿ ಆಚರಣೆಗೆ ತರಲಾಯಿತು. ಇದನ್ನು ಕಾರ್ಯಗತಗೊಳಿಸಿರುವ ಇನ್ನೆರಡು ಉದ್ಯಮಗಳೆಂದರೆ ದೆಹಲಿ ಬಟ್ಟೆ ಗಿರಣಿ ಮತ್ತು ಭಾರತೀಯ ಅಲ್ಯೂಮಿನಿಯಂ ಕೈಗಾರಿಕೆ. ಈ ವ್ಯವಸ್ಥೆ ಅಷ್ಟು ಯಶಸ್ವಿಯಾಗಲಿಲ್ಲವಾದ್ದರಿಂದ ಇತರ ಉದ್ಯಮಿಗಳು ಇದರಲ್ಲಿ ಹೆಚ್ಚು ಆಸಕ್ತಿ ವಹಿಸಲಿಲ್ಲ. ಭಾರತದಲ್ಲಿ ಯೋಜನೆ ಯಶಸ್ವಿಯಾಗಬೇಕಾದರೆ ಉದ್ಯಮಿಗಳಲ್ಲೂ ಕಾರ್ಮಿಕರಲ್ಲೂ ಸಹಕಾರ ಇರಬೇಕಾದ್ದು ಅತ್ಯಗತ್ಯವೆಂಬ ಭಾವನೆ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಬೆಳೆದುಬಂತು. ಇದಕ್ಕಾಗಿ ಉದ್ಯಮಗಳಲ್ಲಿ ಕಾರ್ಮಿಕರು, ಉದ್ಯಮಿಗಳು ಮತ್ತು ತಜ್ಞರನ್ನೊಳಗೊಂಡ ಉದ್ಯಮ ಮಂಡಳಿಗಳನ್ನು ಸ್ಥಾಪಿಸಬೇಕೆಂಬುದಾಗಿ ಯೋಜನಾ ಆಯೋಗ ಸಲಹೆ ನೀಡಿತು. ಇದರಂತೆ 1956ರಲ್ಲಿ ಕಾರ್ಮಿಕರ, ಉದ್ಯಮಿಗಳ ಮತ್ತು ಸರ್ಕಾರದ ಪ್ರತಿನಿಧಿಗಳನ್ನೊಳಗೊಂಡ ಒಂದು ಆಯೋಗವನ್ನು ಭಾರತದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ನೇಮಿಸಿತು. ಈ ಆಯೋಗ ಐರೋಪ್ಯ ದೇಶಗಳಲ್ಲಿ ಪ್ರವಾಸಮಾಡಿ, ಅಲ್ಲಿ ಈ ಬಗ್ಗೆ ಜಾರಿಯಲ್ಲಿರುವ ಅನೇಕ ಕ್ರಮಗಳನ್ನು ಅಧ್ಯಯನಮಾಡಿ ಭಾರತದಲ್ಲಿ ಜಂಟಿ ವ್ಯವಸ್ಥಾಪನ ಮಂಡಳಿಗಳನ್ನು ರಚಿಸಬಹುದೆಂದು ಸಲಹೆ ನೀಡಿತು. ಕಾರ್ಮಿಕರ, ಉದ್ಯಮಿಗಳ ಮತ್ತು ಸರ್ಕಾರ ಪ್ರತಿನಿಧಿಗಳನ್ನೊಳಗೊಂಡ ಭಾರತೀಯ ಕಾರ್ಮಿಕ ಸಮ್ಮೇಳನ 1957ರಲ್ಲಿ ಸಮಾವೇಶಗೊಂಡು, ಆಯೋಗದ ಸಲಹೆಗಳನ್ನು ಪರಿಶೀಲಿಸಿ ಜಂಟಿ ಆಡಳಿತ ಮಂಡಳಿಗಳನ್ನು ಸ್ಥಾಪಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿತು. ಇದರ ಮೇರೆಗೆ ಸರ್ಕಾರ ಪ್ರಾಯೋಗಿಕವಾಗಿ ಮೊದಲಿಗೆ ಹಲವು ಖಾಸಗಿ ಮತ್ತು ಸರ್ಕಾರಿ ಉದ್ಯಮಗಳಲ್ಲಿ ಜಂಟಿ ವ್ಯವಸ್ಥಾಪನ ಮಂಡಳಿಗಳನ್ನು ಸ್ಥಾಪಿಸಲು ಪ್ರೋತ್ಸಾಹ ಕೊಟ್ಟಿತು. ಕ್ರಮೇಣ ಇವುಗಳ ಸಂಖ್ಯೆ ಹೆಚ್ಚಿತು. 1965ರ ಹೊತ್ತಿಗೆ 36 ಸರ್ಕಾರಿ ಉದ್ಯಮಗಳಲ್ಲೂ, 61 ಖಾಸಗಿ ಉದ್ಯಮಗಳಲ್ಲೂ ಈ ವ್ಯವಸ್ಥೆ ಜಾರಿಯಲ್ಲಿತ್ತು.

ಭಾರತದ ಜಂಟಿ ವ್ಯವಸ್ಥಾಪನ ಮಂಡಳಿಗಳಿಗೆ ಸಾಮಾನ್ಯವಾಗಿ ಕಾರ್ಮಿಕರ ಮತ್ತು ಉದ್ಯಮಿಗಳ ಪ್ರತಿನಿಧಿಗಳು ಸಮಪ್ರಾತಿನಿಧ್ಯದ ಆಧಾರದ ಮೇಲೆ ಆಯ್ಕೆಯಾಗಿರುತ್ತಾರೆ. ಪ್ರತಿಯೊಂದು ಮಂಡಳಿಯಲ್ಲೂ 6 ರಿಂದ 12 ಮಂದಿ ಸದಸ್ಯರಿರುವುದುಂಟು. ಈ ಮಂಡಳಿಗಳ ಕಾರ್ಯಭಾರಗಳು ಮೂರು : ಮೊದಲನೆಯದಾಗಿ ಇದು ಉದ್ಯಮದ ಆಗುಹೋಗುಗಳ ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಉದ್ಯಮಿಗಳಿಂದ ಉದ್ಯಮದ ಆರ್ಥಿಕ ಪರಿಸ್ಥಿತಿ, ಉತ್ಪನ್ನ, ವಿಕ್ರಯ, ಉತ್ಪಾದನ ಕ್ರಮಗಳು, ವಾರ್ಷಿಕ ಆಸ್ತಿ-ಹೊಣೆ ಪಟ್ಟಿ, ಲಾಭ ನಷ್ಟ ತಃಖ್ತೆ ಅಲ್ಲದೆ ಭವಿಷ್ಯತ್ ವಿಕಾಸದ ಯೋಜನೆ ಮುಂತಾದವನ್ನು ಕುರಿತು ವಿಷಯ ಸಂಗ್ರಹಿಸಿಕೊಳ್ಳುತ್ತದೆ. ಜಂಟಿ ಸಮಾಲೋಚನೆ ಇದರ ಎರಡನೆಯ ಕಾರ್ಯಭಾರ. ಉದ್ಯಮಿಗಳು ಅನೇಕ ಸಮಸ್ಯೆಗಳ ವಿಷಯದಲ್ಲಿ ಮಂಡಳಿಯ ಸದಸ್ಯರ ಸಲಹೆ ಕೇಳುತ್ತಾರೆ. ಉದ್ಯೋಗದ ಬಗ್ಗೆ ಸ್ಥಾಯೀ ನಿಯಮಾವಳಿಯ ಜಾರಿ, ಹೊಸ ಉತ್ಪಾದನ ಕ್ರಮಗಳ ಅನುಷ್ಠಾನ, ಯಾವುದೇ ಕ್ರಿಯೆಯನ್ನು ಕೊನೆಗೊಳಿಸುವುದು ಇಲ್ಲವೇ ಖೋತಾ ಮಾಡುವುದು ಮುಂತಾದವುಗಳ ಬಗ್ಗೆ ಮಂಡಳಿಯಲ್ಲಿ ಸಮಾಲೋಚನೆ ನಡೆಯುತ್ತದೆ. ಮೂರನೆಯದಾಗಿ, ಕಾರ್ಮಿಕರ ಕ್ಷೇಮ ಸುರಕ್ಷತೆಯ ಕ್ರಮಗಳ ಪಾಲನೆ, ಕೆಲಸದ ವೇಳಾಪಟ್ಟಿ ಮತ್ತು ರಜಾದಿನಗಳ ಪಟ್ಟಿಗಳ ತಯಾರಿಕೆ, ಉತ್ತಮವಾದ ಸಲಹೆಗಳನ್ನು ಕೊಟ್ಟ ಕಾರ್ಮಿಕರಿಗೆ ಬಹುಮಾನ ವಿನಿಯೋಗ ಮುಂತಾದ ಜವಾಬ್ದಾರಿಗಳನ್ನೂ ಇದು ನಿರ್ವಹಿಸುತ್ತದೆ.

ಜಂಟಿ ವ್ಯವಸ್ಥಾಪನ ಮಂಡಳಿಗಳ ಕಾರ್ಯಭಾರಗಳನ್ನು ಗಮನಿಸಿದರೆ ಇಲ್ಲಿ ಜಂಟಿ ಸಮಾಲೋಚನೆಯ ಜೊತೆಗೆ ಕಾರ್ಮಿಕರು ಉದ್ಯಮದ ವ್ಯವಸ್ಥಾಪನದಲ್ಲೂ ನೇರವಾಗಿ ಸಹಭಾಗಿಗಳಾಗುವ ಅವಕಾಶ ಇರುವುದು ವ್ಯಕ್ತವಾಗುತ್ತದೆ. ಕಾರ್ಮಿಕರು ನಿರ್ದೇಶಕ ಮಂಡಳಿಗೆ ಆಯ್ಕೆಯಾಗದೆಯೆ ಉದ್ಯಮದ ವ್ಯವಸ್ಥಾಪನದಲ್ಲಿ ಭಾಗಿಗಳಾಗುತ್ತಾರೆ. ಆದರೆ ಉದ್ಯಮದ ಕೇವಲ ಸಣ್ಣ ಪುಟ್ಟ ನೀತಿಗಳನ್ನು ಪಾಲಿಸುವುದರಲ್ಲಿ ಮಾತ್ರ ಕಾರ್ಮಿಕರಿಗೆ ಅವಕಾಶವುಂಟೇ ಹೊರತು ಪ್ರಮುಖ ನೀತಿಗಳ-ಎಂದರೆ ಉತ್ಪನ್ನ, ವಿಕ್ರಯ, ಉತ್ಪಾದನ ಕ್ರಮ, ಉದ್ಯಮ ವಿಕಾಸ ಮೊದಲಾದ ವಿಷಯಗಳ - ಪರಿಶೀಲನೆಗೆ ಅವರಿಗೆ ಅವಕಾಶವಿಲ್ಲ. ಈ ಮಂಡಳಿಗಳು ಯಶಸ್ವಿಯಾಗಿ ಕೆಲಸ ಮಾಡುತ್ತಿರುವ ಉದ್ಯಮಗಳಲ್ಲಿ ಅನೇಕ ಅನುಕೂಲಗಳು ಕಂಡು ಬಂದಿವೆ. ಉತ್ಪಾದನ ಸಾಧನ ಸಾಮರ್ಥ್ಯಗಳು ವ್ಯರ್ಥವಾಗುತ್ತಿದ್ದದ್ದು ತಗ್ಗಿದೆ; ಕಾರ್ಮಿಕರ

ಮತ್ತು ಉದ್ಯಮಿಗಳ ನಡುವೆ ಒಳ್ಳೆಯ ಸಂಬಂಧ ಬೆಳೆದು ಬಂದಿದೆ. ಆದರೆ ಹಲವು ಕಡೆ ಇವು ಅಷ್ಟಾಗಿ ಫಲಕಾರಿಯಾಗಿಲ್ಲ. ಉದ್ಯಮದ ವ್ಯವಸ್ಥಾಪಕ ವರ್ಗ ಇದರ ವಿಷಯದಲ್ಲಿ ಹೆಚ್ಚು ಆಸಕ್ತಿವಹಿಸದಿರುವುದು ಇದಕ್ಕೆ ಒಂದು ಕಾರಣ. ಕಾರ್ಮಿಕ ಸಂಘಗಳಲ್ಲಿಯ ಒಳಜಗಳಗಳಿಂದಾಗಿ ಮಂಡಳಿಗಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಷಯದಲ್ಲಿ ಕೆಲವು ಕಡೆ ತೊಂದರೆ ಉದ್ಭವಿಸಿ ಅವು ಕೊನೆಗೊಂಡಿರುವ ಸಂದರ್ಭಗಳೂ ಉಂಟು. (ಎಬಿ.ಎ.)

**ಕೈಗಾರಿಕಾ ಮನೋವಿಜ್ಞಾನ :** ಕೈಗಾರಿಕಾ ಪ್ರಪಂಚದಲ್ಲಿ ಉದ್ಭವಿಸುವ ಮಾನವ ಸಂಬಂಧವಾದ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವ ಪ್ರಯತ್ನದಲ್ಲಿ ತೊಡಗಿರುವ ಮನೋವಿಜ್ಞಾನದ ಒಂದು ಪ್ರಮುಖ ವಿಭಾಗ. (ಇಂಡಸ್ಟ್ರಿಯಲ್ ಸೈಕಾಲಜಿ)

ಕೈಗಾರಿಕಾ ಮನೋವಿಜ್ಞಾನದ ವ್ಯಾಪ್ತಿಗೆ ಒಳಪಟ್ಟ ಮಾನವಿಕ ಸಮಸ್ಯೆಗಳನ್ನು ನಾಲ್ಕು ಗುಂಪಾಗಿ ವಿಭಾಗಿಸಬಹುದು. ಮೊದಲನೆಯದು ವ್ಯಕ್ತಿ ವ್ಯಕ್ತಿಗಳ ನಡುವಿನ ಸಮಸ್ಯೆಗಳು. ಅಂದರೆ ಇಬ್ಬರು ಸಹೋದ್ಯೋಗಿಗಳ ನಡುವಿನ ಸಹಕಾರ ಅಥವಾ ಸಂಘರ್ಷಣೆ. ಎರಡನೆಯದು ವ್ಯಕ್ತಿ ಗುಂಪುಗಳ ನಡುವಿನ ಸಮಸ್ಯೆಗಳು. ಅಂದರೆ ಒಂದು ಶಾಖೆಯ ಮುಖ್ಯಾಧಿಕಾರಿ ತನ್ನ ಕೈಕೆಳಗಿನ ಕೆಲಸಗಾರರ ಮೇಲೆ ಹೊಂದಿರುವ ಹತೋಟಿ ಅಥವಾ ಅವರಿಗೆ ನೀಡುವ ಪ್ರೋತ್ಸಾಹ. ಮೂರನೆಯದು ವ್ಯಕ್ತಿ ಯಂತ್ರಗಳ ನಡುವಿನ ಸಮಸ್ಯೆಗಳು. ಅಂದರೆ ಕೈಗಾರಿಕಾ ಅಪಘಾತಗಳು, ಕೈಗಾರಿಕಾ ಶ್ರಮ ಹಾಗೂ ಉತ್ಪನ್ನದ ಮೇಲೆ ಅದರ ಪರಿಣಾಮಗಳು, ವಿರಾಮದ ಅವಧಿ ಮತ್ತು ಕೈಗಾರಿಕಾ ಶ್ರಮಗಳಿಗಿರುವ ಸಂಬಂಧ–ಇತ್ಯಾದಿ. ನಾಲ್ಕನೆಯದು ವ್ಯಕ್ತಿಯ ಆಂತರಿಕ ಸಮಸ್ಯೆಗಳು. ಅಂದರೆ ಉದ್ಯೋಗಿಯ ಆಸೆ, ಆಕಾಂಕ್ಷೆ, ಮನೋಭಾವಗಳು–ಇತ್ಯಾದಿ. ಈ ಎಲ್ಲ ಸಮಸ್ಯೆಗಳನ್ನೂ ಕುರಿತು ಸಂಶೋಧನೆ ನಡೆದಿರುವುದನ್ನು ಕೈಗಾರಿಕಾ ಮನೋವಿಜ್ಞಾನದ ವಿಕಾಸದ ಹಾದಿಯಲ್ಲಿ ಗುರುತಿಸಬಹುದಾಗಿದೆ.

ಕೈಗಾರಿಕಾ ಮನೋವಿಜ್ಞಾನ ಮೊದಲಿಗೆ 20ನೆಯ ಶತಮಾನದ ಆದಿಭಾಗದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಾರಂಭವಾಗಿ ಸ್ವಲ್ಪ ಕಾಲದಲ್ಲೇ ಇಂಗ್ಲೆಂಡಿನಲ್ಲೂ ಪ್ರಚಾರಕ್ಕೆ ಬಂತು. ಪ್ರಾರಂಭದಲ್ಲಿ ಈ ವಿಜ್ಞಾನಕ್ಕೆ ಹೆಚ್ಚಿನ ವ್ಯಾಪ್ತಿ ಇರಲಿಲ್ಲ. ಇದರ ಬೆಳವಣಿಗೆಯ ಮೊದಲ ಹಂತದಲ್ಲಿ ಮನೋವಿಜ್ಞಾನಿಗಳು ವ್ಯಕ್ತಿಯ ಸಾಮರ್ಥ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯಕೊಟ್ಟು ಅವುಗಳ ನಿರ್ಧಾರ, ಹಾಗು ಅವುಗಳ ಆಧಾರದ ಮೇಲೆ ಉದ್ಯೋಗಿಗಳನ್ನು ಆಯ್ಕೆ ಮಾಡುವುದು, ಕೆಲಸಗಾರನಿಗೆ ತರಬೇತಿ ಕೊಡುವುದು, ಔದ್ಯೋಗಿಕ ನಿರ್ದೇಶನ ನೀಡುವುದು–ಈ ತೆರನಾದ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಮೊದಲ ಮಹಾಯುದ್ಧ ಮುಗಿಯುವ ವೇಳೆಗೆ ತಮ್ಮ ಅನೇಕ ನಿರ್ಧಾರಗಳು ತಪ್ಪು ಎಂದು ಅವರಿಗೆ ಅರಿವಾಗತೊಡಗಿತು. ದೈಹಿಕ ಮತ್ತು ಆರ್ಥಿಕ ಆವಶ್ಯಕತೆಗಳ ಪೂರೈಕೆಯೇ ಉದ್ಯೋಗಿಗಳ ಏಕೈಕ ಗುರಿಯಲ್ಲ ಎನ್ನುವುದನ್ನವರು ಮನಗಂಡರು. ಅಂತೆಯೇ 1925ರ ಸುಮಾರಿಗೆ ಕೈಗಾರಿಕಾ ಸಮಾಜಿಕ ಮನೋವಿಜ್ಞಾನ ರೂಪುಗೊಂಡಿತು. ಇದರಿಂದಾಗಿ ಕೈಗಾರಿಕಾ ಮನೋವಿಜ್ಞಾನದ ವ್ಯಾಪ್ತಿಯೂ ಬಹು ವಿಸ್ತಾರವಾಯಿತು. ಅಭಿಪ್ರೇರಣೆ (ಮೋಟಿವೇಷನ್), ಸಂವಹನ (ಕಮ್ಯೂನಿಕೇಷನ್), ಸಾಮೂಹಿಕ ವರ್ತನೆ(ಗ್ರೂಪ್ ಬಿಹೇವಿಯರ್) ಮೊದಲಾದ ವಿಚಾರಗಳನ್ನು ಕುರಿತ ಸಂಶೋಧನೆ ಈ ವಿಜ್ಞಾನದ ವ್ಯಾಪ್ತಿಗೆ ಒಳಪಟ್ಟಿತು. ಈ ಹಂತದಲ್ಲಿ ಕೈಗಾರಿಕಾ ಮನೋವಿಜ್ಞಾನದಲ್ಲಿ ಉಂಟಾದ ಕ್ರಾಂತಿಗೆ ಕಾರಣವಾದದ್ದು ಶಿಕಾಗೋ ನಗರದ ವೆಸ್ಟರ್ನ್ ಎಲೆಕ್ಟ್ರಿಕ್ ಕಂಪನಿಯಲ್ಲಿ ಜರುಗಿದ ಸಂಶೋಧನೆಗಳು. ಬೆಳಕು, ಉಷ್ಣಾಂಶ, ವಿರಾಮದ ಅವಧಿ ಮುಂತಾದವು ಉತ್ಪಾದನೆಯ ಮೇಲೆ ಯಾವ ರೀತಿಯ ಪರಿಣಾಮಗಳನ್ನುಂಟು ಮಾಡುತ್ತವೆ ಎಂದು ಕಂಡುಹಿಡಿಯುವುದೇ ಈ ಸಂಶೋಧನೆಗಳ ಮೂಲ ಉದ್ದೇಶವಾಗಿತ್ತು. ಬೆಳಕು, ಉಷ್ಣಾಂಶ ಮುಂತಾದವುಗಳು ಉತ್ಪಾದನೆಯ ಮೇಲೆ ನಿರ್ದಿಷ್ಟ ಪರಿಣಾಮ ಹೊಂದಿದ್ದರೂ ಇವುಗಳ ಜೊತೆಗೆ ಮತ್ತು ಇವೆಲ್ಲಕ್ಕಿಂತ ಮಿಗಿಲಾಗಿ, ಉದ್ಯೋಗಿಗಳ ಅಭಿವೃತ್ತಿಗಳು ಮತ್ತು ಅವರ ನಡುವಿನ ಸಾಮಾಜಿಕ ಸಂಬಂಧಗಳು ಉತ್ಪಾದನೆಯ ಮಟ್ಟವನ್ನು ನಿರ್ಧರಿಸುತ್ತವೆಯೆಂಬುದಾಗಿ ಈ ಸಂಶೋಧನೆಗಳು ತೋರಿಸಿಕೊಟ್ಟವು. 1945ರ ಸುಮಾರಿಗೆ ಎಂಜಿನಿಯರಿಂಗ್ ಮನೋವಿಜ್ಞಾನ ಕೈಗಾರಿಕಾ ಮನೋವಿಜ್ಞಾನದ ಹೊಸ ಶಾಖೆಯಾಗಿ ರೂಪುಗೊಂಡಿತು. ಮಾನವ ಮತ್ತು ಯಂತ್ರಗಳ ನಡುವಿನ ಸಂಬಂಧದಲ್ಲಿ ಹುದುಗಿರುವ ಮಾನವ ಸಮಸ್ಯೆಗಳ ಬಗೆಗೆ ಅಧ್ಯಯನ ಪ್ರಾರಂಭವಾಯಿತು. ಹೀಗೆ ಬೆಳೆದುಬಂದ ಈ ವಿಜ್ಞಾನದ ಪ್ರಗತಿಯ ಹಾದಿಯಲ್ಲಿ ಮೂರು ಉಪಶಾಖೆಗಳನ್ನು ಗುರುತಿಸಬಹುದು: ವ್ಯಕ್ತಿಗತ ವ್ಯತ್ಯಾಸಗಳ ಪರಂಪರೆಯಿಂದ ಬೆಳೆದುಬಂದ ಉದ್ಯೋಗಿ ಮನೋವಿಜ್ಞಾನ (ಪರ್ಸನೆಲ್ ಸೈಕಾಲಜಿ), ಸಾಮಾಜಿಕ ಮನೋವಿಜ್ಞಾನ ಸಿದ್ಧಾಂತಗಳ ಮೇಲೆ ರೂಪುಗೊಂಡ ಕೈಗಾರಿಕಾ ಸಾಮಾಜಿಕ ಮನೋವಿಜ್ಞಾನ, ಆನ್ವಯಿಕ ಪ್ರಾಯೋಗಿಕ ಮನೋವಿಜ್ಞಾನದ ಆಧಾರದ ಮೇಲೆ ರೂಪುಗೊಂಡ ಎಂಜಿನಿಯರಿಂಗ್ ಮನೋವಿಜ್ಞಾನ.

**ಉದ್ಯೋಗಿಗಳ ಆಯ್ಕೆ:** ವ್ಯಕ್ತಿಗತ ವ್ಯತ್ಯಾಸಗಳು ಉದ್ಯೋಗಿ ಮನೋವಿಜ್ಞಾನಕ್ಕೆ ಮೂಲಾಧಾರವಾಗಿದೆ. ವ್ಯಕ್ತಿ ವ್ಯಕ್ತಿಗಳ ನಡುವೆ ಬುದ್ಧಿಶಕ್ತಿ, ಸಾಮರ್ಥ್ಯ ಹಾಗೂ ವ್ಯಕ್ತಿತ್ವಗಳಲ್ಲಿ ಅಸಮಾನತೆ ಇರುತ್ತದೆ ಎನ್ನುವುದು ಮನೋವಿಜ್ಞಾನದ ಸಾಮಾನ್ಯ ಸಿದ್ಧಾಂತ. ಜೊತೆಗೆ ವಿದ್ಯಾಭ್ಯಾಸದ ಮಟ್ಟ ಹಾಗೂ ತರಬೇತಿಗಳಲ್ಲೂ ವ್ಯತ್ಯಾಸಗಳಿರುತ್ತವೆ. ಅಂತೆಯೇ ಬೇರೆ ಬೇರೆ ಕೆಲಸಗಳನ್ನು ವಿಶ್ಲೇಷಿಸಿದಾಗ ಆ ಕೆಲಸಗಳಲ್ಲೂ ಅವನ್ನು ನಿರ್ವಹಿಸಲು ಕೆಲಸಗಾರ ಹೊಂದಿರಬೇಕಾದ ಆವಶ್ಯಕತೆಗಳಲ್ಲೂ ವ್ಯತ್ಯಾಸಗಳು ತೋರಿಬರುತ್ತವೆ. ಆದ್ದರಿಂದ ಉದ್ಯೋಗಿ ಮನೋವಿಜ್ಞಾನದ ಪ್ರಥಮ ಹಾಗೂ ಪ್ರಮುಖ ಉದ್ದೇಶ ಬೇರೆ ಬೇರೆ ಕೆಲಸಗಳಿಗೆ ತಕ್ಕಂಥ ಯುಕ್ತ ಸಾಮರ್ಥ್ಯ ಮತ್ತು ಚತುರತೆಗಳನ್ನು ಹೊಂದಿರುವ ವ್ಯಕ್ತಿಗಳನ್ನು ಆರಿಸುವುದೇ ಆಗಿದೆ.

ಈ ಆಯ್ಕೆಯ ಕಾರ್ಯ ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ. ಮೊದಲಿಗೆ ಪ್ರತಿ ಕೆಲಸದ ವಿಶ್ಲೇಷಣೆ ನಡೆಸಿ, ಆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲು ಕೆಲಸಗಾರ ಹೊಂದಿರಬೇಕಾದ ಬುದ್ಧಿಶಕ್ತಿ, ಅಭಿರುಚಿ, ಆಸಕ್ತಿ, ವ್ಯಕ್ತಿತ್ವ, ದೈಹಿಕ ಸಾಮರ್ಥ್ಯಗಳು ಮುಂತಾದ ಇತರ ವಿಶಿಷ್ಟ ಆವಶ್ಯಕತೆಗಳನ್ನು ನಿರ್ಧರಿಸಬೇಕು. ಕೆಲಸಗಳ ವಿಶ್ಲೇಷಣೆ ನಡೆಸಲು ಬೇರೆ ಬೇರೆ ವಿಧಾನಗಳು ಬಳಕೆಯಲ್ಲಿದ್ದರೂ ಪ್ಯಾನಗನ್ ಸೂಚಿಸಿರುವ ಸಂದಿಗ್ಧ ಘಟನಾವಿಧಾನ (ಮೆಥಡ್ ಆಫ್ ಕ್ರಿಟಿಕಲ್ ಇನ್‌ಸಿಡೆಂಟ್ಸ್) ಬಹು ಯುಕ್ತವಾಗಿದೆ. ಈ ವಿಧಾನದಲ್ಲಿ ಒಂದು ಹುದ್ದೆಯ ಜಯ ಅಥವಾ ಅಪಜಯಗಳಿಗೆ ಕಾರಣವಾಗುವ ನಡವಳಿಕೆಗಳನ್ನು ಗುರುತಿಸುವಂತೆ ಮೇಲ್ವಿಚಾರಕರನ್ನು, ಕೆಲಸಗಾರರನ್ನ ಅಥವಾ ಕೆಲಸವನ್ನು ಬಲ್ಲಂಥ ಇತರರನ್ನು ಕೇಳಲಾಗುತ್ತದೆ. ಅವರು ಕೊಡುವ ಸಲಹೆಗಳನ್ನು ಆಧಾರವಾಗಿಟ್ಟುಕೊಂಡು ಒಂದು ಹುದ್ದೆಗೆ ಆವಶ್ಯಕವಾಗಿರುವ ನಡೆವಳಿಕೆಯ ಚಿತ್ರವನ್ನು ರೂಪಿಸಲಾಗುತ್ತದೆ. ಈ ರೀತಿಯ ವಿವರಣೆಗಳು ಒಂದು ಹುದ್ದೆಗೆ ಆವಶ್ಯಕವಾಗಿರುವ ಮಾನವ ಲಕ್ಷಣಗಳನ್ನು ಸೂಚಿಸುವಲ್ಲಿ ತುಂಬ ಸಹಕಾರಿಯಾಗಿರುತ್ತವೆ. ಹೀಗೆ ಕೆಲಸಗಳನ್ನು ವಿಶ್ಲೇಷಿಸಿ, ಅವುಗಳ ನಿರ್ವಹಣೆಗೆ ಕೆಲಸಗಾರ ಹೊಂದಿರಬೇಕಾದ ಅರ್ಹತೆಗಳನ್ನು ನಿರ್ಧರಿಸಿದ ಅನಂತರ, ಆ ಕೆಲಸಗಳಿಗೆ ಬರುವ ಅಭ್ಯರ್ಥಿಗಳ ಸಾಮರ್ಥ್ಯ, ಬುದ್ಧಿಶಕ್ತಿ, ಅಭಿರುಚಿ, ಆಸಕ್ತಿ, ವ್ಯಕ್ತಿತ್ವಗಳನ್ನು ನಿರ್ಧರಿಸುವುದು ಆಯ್ಕೆಯ ಮತ್ತೊಂದು ಪ್ರಮುಖ ಅಂಶ. ಕೆಲಸಗಳಿಗೆ ಬರುವ ಅಭ್ಯರ್ಥಿಗಳ ಸಾಮರ್ಥ್ಯಗಳನ್ನು ನಿರ್ಧರಿಸುವಲ್ಲಿಯೂ ಬುದ್ಧಿವಂತಿಕೆ, ಅಭಿರುಚಿ, ಆಸಕ್ತಿ, ವ್ಯಕ್ತಿತ್ವ ಮತ್ತು ಸಾಧನೆಗಳನ್ನು ನಿರ್ಧರಿಸಲು ಉಪಯೋಗಿಸುವ ಮನೋವಿಜ್ಞಾನ ಪರೀಕ್ಷೆಗಳು ತುಂಬ ಸಹಕಾರಿಯಾಗಿವೆ. ಕೆಲಸಗಾರ ಹೊಂದಿರಬೇಕಾದ ಆವಶ್ಯಕತೆಗಳು ಮತ್ತು ಅಭ್ಯರ್ಥಿಗಳು ಹೊಂದಿರುವ ಸಾಮರ್ಥ್ಯಗಳು ಇವುಗಳ ನಡುವಿನ ಹೊಂದಾಣಿಕೆಯೇ ಆಯ್ಕೆ. ಹೀಗೆ ಆರಿಸಿದ ಅಭ್ಯರ್ಥಿಗಳು ತಮ್ಮ ಕೆಲಸದಲ್ಲಿ ಎಷ್ಟರಮಟ್ಟಿಗೆ ಸಫಲವಾಗಿದ್ದಾರೆ ಎಂಬ ಬಗ್ಗೆಯೂ ಕೈಗಾರಿಕಾ ಮನೋವಿಜ್ಞಾನಿಗಳು ಅಧ್ಯಯನ ನಡೆಸಬೇಕಾಗುತ್ತದೆ. ಆಯ್ಕೆ ಒಮ್ಮೆಗೇ ಮುಗಿದು ಹೋಗುವ ಕಾರ್ಯವಲ್ಲ; ಯಾರೋ ಒಬ್ಬ ಅಭ್ಯರ್ಥಿಯನ್ನು ಯಾವುದೋ ಒಂದು ಹುದ್ದೆಗೆ ನೇಮಿಸಿಕೊಂಡೊಡನೆ ಆಯ್ಕೆಯ ಕಾರ್ಯ ಕೊನೆಗೊಳ್ಳಲಿಲ್ಲ. ಮೇಲಿನ ದರ್ಜೆಗೆ ಬಡ್ತಿ ಕೊಡುವುದು, ಬೇರೆ ಕೆಲಸಕ್ಕೆ ವರ್ಗಾಯಿಸುವುದು–ಇವೇ ಮೊದಲಾದ ಸಂದರ್ಭಗಳಲ್ಲೂ ಆಯ್ಕೆಯ ಪಾತ್ರ ಇದ್ದೇ ಇರುತ್ತದೆ.

**ಉದ್ಯೋಗಿಗಳ ತರಬೇತಿ:** ಒಂದು ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲು ಆವಶ್ಯಕ ಸಾಮರ್ಥ್ಯಗಳನ್ನು ಹೊಂದಿರುವ ಕೆಲಸಗಾರರನ್ನು ಆರಿಸುವುದರ ಜೊತೆಗೆ ಅವರಿಗೆ ಯುಕ್ತವಾದ ತರಬೇತಿ ಕೊಡಬೇಕಾಗುತ್ತದೆ. ಆಯ್ಕೆ ಮತ್ತು ತರಬೇತಿ ಕಾರ್ಯಗಳು ಉದ್ಯೋಗಿ ಮನೋವಿಜ್ಞಾನಿ ಹಲವು ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ. ಮೊದಲಿಗೆ, ಯಾವ ವಿಷಯದಲ್ಲಿ ಕೆಲಸಗಾರನಿಗೆ ತರಬೇತಿ ಕೊಡಬೇಕು ಅಥವಾ ಮೊದಲು ಏನನ್ನು ಕಲಿಸಬೇಕು ಎಂಬ ಬಗ್ಗೆ ಖಚಿತ ಮಾಡಿಕೊಳ್ಳಬೇಕು. ಔದ್ಯೋಗಿಕ ತರಬೇತಿ ಹೊಸ ಚತುರತೆಗಳನ್ನು ಕಲಿಸಿಕೊಡುವುದಾಗಿರಬಹುದು; ತಿಳಿವಳಿಕೆಗಳನ್ನು ನೀಡುವುದಾಗಿರಬಹುದು; ಅಭಿವೃತ್ತಿಗಳನ್ನು ರೂಪಿಸುವುದಾಗಿರಬಹುದು. ಅಥವಾ ನಡವಳಿಕೆಗಳನ್ನು ಮಾರ್ಪಡಿಸುವುದಾಗಿರಬಹುದು. ಒಟ್ಟಿನಲ್ಲಿ, ಯಾವ ಚತುರತೆಗಳು, ತಿಳಿವಳಿಕೆಗಳು ಅಭಿವೃತ್ತಿಗಳು ಅಥವಾ ನಡವಳಿಕೆಗಳು ಒಂದು ಹುದ್ದೆಯ ನಿರ್ವಹಣೆಗೆ ಆವಶ್ಯಕ ಎನ್ನುವುದು ಮನೋವಿಜ್ಞಾನಿಗಳ ಮುಂದಿರುವ ಪ್ರಥಮ ಪ್ರಶ್ನೆ. ಈ ಪ್ರಶ್ನೆಗೆ ಉತ್ತರವನ್ನು (ಈ ಮೊದಲೇ ವಿವರಿಸಿದ) ಕೆಲಸದ ವಿಶ್ಲೇಷಣೆಯಲ್ಲಿ ಕಾಣಿಸಿದೆ.

ಇಷ್ಟು ಆದ ಅನಂತರ ಕಲಿಸುವ ವಿಧಾನಗಳನ್ನು ನಿರೂಪಿಸಬೇಕಾಗುತ್ತದೆ. ಈ ಹಂತದಲ್ಲಿ ಮನೋವಿಜ್ಞಾನಿಗಳು ನಿರೂಪಿಸಿರುವ ಕಲಿಕೆಯ ಸಿದ್ಧಾಂತಗಳು ಮಾರ್ಗದರ್ಶನ ನೀಡುತ್ತವೆ. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಕೆಲವು ಇಚ್ಛೆಗಳನ್ನು, ಆವಶ್ಯಕತೆ ಅಥವಾ ಪ್ರೇರಣೆಗಳನ್ನು ಹೊಂದಿರುತ್ತಾನೆ. ಇವು ಒಬ್ಬೊಬ್ಬ ವ್ಯಕ್ತಿಯಲ್ಲೂ ಭಿನ್ನಭಿನ್ನವಾಗಿರಬಹುದು. ಒಬ್ಬನಲ್ಲಿ ಸಾಧನೆಯ ಪ್ರೇರಣೆ ಪ್ರಮುಖವಾಗಿದ್ದರೆ ಇನ್ನೊಬ್ಬನಲ್ಲಿ ನೆಮ್ಮದಿಯ ಇಚ್ಛೆ ಪ್ರಬಲವಾಗಿರಬಹುದು,

ಮತ್ತೊಬ್ಬನಲ್ಲಿ ಸಾಮಾಜಿಕ ಪ್ರತಿಷ್ಠೆಯ ಆವಶ್ಯಕತೆಯನ್ನು ಕಾಣಬಹುದು. ತರಬೇತಿ ಕಾರ್ಯಕ್ರಮದಲ್ಲಿ ಒಬ್ಬ ಕಲಿಯುವ ಚತುರತೆಗಳು, ಮನೋಭಾವಗಳು ಅಥವಾ ನಡೆವಳಿಕೆಗಳು ಆತನ ಇಚ್ಛೆ, ಆವಶ್ಯಕತೆ ಅಥವಾ ಪ್ರೇರಣೆಗಳನ್ನು ಪೂರೈಸುವಲ್ಲಿ ಸಹಕಾರಿಯಾಗಿರದಿದ್ದರೆ ಕಲಿಕೆ ಫಲಕಾರಿಯಾಗುವುದಿಲ್ಲ. ಆದ್ದರಿಂದ ತರಬೇತಿ ಕಾರ್ಯಕ್ರಮವನ್ನು ಸಿದ್ಧಪಡಿಸುವಲ್ಲಿ ಮನೋವಿಜ್ಞಾನಿ ಕೆಲಸಗಾರನ ಇಚ್ಛೆ, ಆವಶ್ಯಕತೆ ಅಥವಾ ಪ್ರೇರಣೆಗಳನ್ನು ಗಮನದಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ಯಾವ ಪ್ರತಿಕ್ರಿಯೆಗಳು ವ್ಯಕ್ತಿಯ ಇಚ್ಛೆಯನ್ನು ತೃಪ್ತಗೊಳಿಸುತ್ತವೋ ಅವು ಅವನ ನಡೆವಳಿಕೆಯಲ್ಲಿ ಸೇರಿಹೋಗುತ್ತವೆ; ಹಾಗೆಯೆ ಯಾವ ಪ್ರತಿಕ್ರಿಯೆಗಳು ವ್ಯಕ್ತಿಯ ಇಚ್ಛೆಗಳನ್ನು ಪೂರೈಸುವುದಿಲ್ಲವೋ ಅವು ಇಂಗಿ ಹೋಗುತ್ತವೆ. ಅಭ್ಯಾಸ ಮತ್ತು ಪುನರಾವೃತ್ತಿಗಳು ಕಲಿಕೆಗೆ ಅತ್ಯಗತ್ಯ.

ತರಬೇತಿಯಲ್ಲಿ ಬೇರೆ ಬೇರೆ ವಿಧಾನಗಳಿವೆ. ಸಾಂಪ್ರದಾಯಿಕ ವಿಧಾನವಾದ ಉಪನ್ಯಾಸ ಕ್ರಮ ಇಂದಿಗೂ ಬಹುಮಟ್ಟಿಗೆ ಬಳಕೆಯಲ್ಲಿದೆ. ಆದರೆ ಕಲಿಕೆಯ ಸಿದ್ಧಾಂತಗಳ ದೃಷ್ಟಿಯಿಂದ ಉಪನ್ಯಾಸ ಅಷ್ಟೇನೂ ಉತ್ತಮವಾದ ವಿಧಾನವಲ್ಲ. ಇದರಲ್ಲಿ ಕಲಿಯುವವರು ಕಲಿಯುವಿಕೆಯಲ್ಲಿ ಮನಃಪೂರ್ವಕವಾಗಿ ಭಾಗವಹಿಸುವುದಿಲ್ಲ; ಉಪನ್ಯಾಸದ ವಿಚಾರ ಅವರ ಕಿವಿಗೆ ಬಿದ್ದರೂ ಅದೆಲ್ಲವನ್ನೂ ಅವರು ಮನನ ಮಾಡಿಕೊಳ್ಳುವರೆಂಬ ಭರವಸೆಯೇನಿಲ್ಲ. ಬದಲಾಗಿ, ಸಾಮೂಹಿಕ ಚರ್ಚೆ, ವ್ಯಕ್ತಿ ವ್ಯಕ್ತಿಯೂ ನಡೆಸುವ ಅಧ್ಯಯನ, ಸ್ವಯಂ ಕೆಲಸ ಮಾಡುವುದು (ರೋಲ್ ಪ್ಲೇಯಿಂಗ್) ಮುಂತಾದ ತರಬೇತಿ ವಿಧಾನಗಳು ಕಲಿಯುವವರು ಕಲಿಕೆಯಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳಲು ಅವಕಾಶ ಮಾಡಿಕೊಡುತ್ತವೆ. ಅದರ ಹೆಸರೇ ಸೂಚಿಸುವಂತೆ, ಸಾಮೂಹಿಕ ಚರ್ಚೆಯಲ್ಲಿ, ಕಲಿಯಬೇಕಾದ ಸೂತ್ರಗಳನ್ನು ಕುರಿತು ವ್ಯಾಪಕವಾದ ಚರ್ಚೆ ನಡೆಯುತ್ತದೆ. ಚರ್ಚೆಯಲ್ಲಿ ನಾಯಕನೆನಿಸಿಕೊಂಡಾತ ಮುಖ್ಯ ಪಾತ್ರವಹಿಸಿ ಚರ್ಚೆಯ ಮಾರ್ಗವನ್ನು ನಿರ್ದೇಶಿಸುತ್ತಾನೆ. ವೈಯಕ್ತಿಕ ಅಧ್ಯಯನ ವಿಧಾನದಲ್ಲಿ ಕೂಡ ತರಬೇತಿ ಪಡೆಯುವವರು ಯಾವುದೋ ಒಂದು ಸಮಸ್ಯೆಯನ್ನೆತ್ತಿಕೊಂಡು, ಆ ಸಮಸ್ಯೆಯ ಪರಿಹಾರದಲ್ಲಿ ಅಡಗಿರುವ ಸೂತ್ರಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಚರ್ಚಿಸುತ್ತಾರೆ. ಸ್ವಯಂ ಪಾಲುಗೊಳ್ಳುವ ವಿಧಾನದಲ್ಲಿ ಯಾವುದೋ ಸನ್ನಿವೇಶವೊಂದನ್ನು ಸೃಷ್ಟಿಸಿ, ಆ ಸನ್ನಿವೇಶ ಒಳಗೊಂಡಿರಬಹುದಾದ ವ್ಯಕ್ತಿಗಳ ಪಾತ್ರಗಳನ್ನು ಅಭಿನಯಿಸುವ ಮೂಲಕ, ಆ ಸನ್ನಿವೇಶದಲ್ಲಿ ಅಡಕವಾಗಿರುವ ಸಮಸ್ಯೆಗೆ ಯುಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ವೈಯಕ್ತಿಕ ಅಧ್ಯಯನ ಮತ್ತು ಪಾಲುಗೊಳ್ಳಿಕೆ ವಿಧಾನಗಳಲ್ಲಿ ಕಲಿಯುವವರು ತೀವ್ರವಾಗಿ ಭಾಗವಹಿಸುತ್ತಾರೆ; ಅವರು ಉಪಯೋಗಿಸುವ ವಸ್ತುಗಳು ಅವರಿಗೆ ಹೆಚ್ಚು ಅರ್ಥಪೂರ್ಣವಾಗಿರುತ್ತವೆ ಹಾಗೂ ಸ್ವಾರಸ್ಯಪೂರ್ಣವಾಗಿರುತ್ತವೆ.

**ಉದ್ಯೋಗಿ ಮಾರ್ಗದರ್ಶನ:** ಉದ್ಯೋಗಿ ಮಾರ್ಗದರ್ಶನ ಉದ್ಯೋಗಿ ಮನೋವಿಜ್ಞಾನದ ಮತ್ತೊಂದು ಪ್ರಮುಖ ಅಂಶ. ಹೆನ್ರಿ ಫೋರ್ಡ್ ತನ್ನ ಫೋರ್ಡ್ ಮೋಟಾರು ಕಂಪನಿಯಲ್ಲಿ 1914ರಲ್ಲಿ ಉದ್ಯೋಗಿ ಮಾರ್ಗದರ್ಶನ ಕಾರ್ಯಕ್ರಮವನ್ನು ಪ್ರಾರಂಭಿಸಿದ. ಫೋರ್ಡ್ ಸಂಸ್ಥೆಯ ಆ ಕಾರ್ಯಕ್ರಮ ಈ ನಿಟ್ಟಿನಲ್ಲಿ ಮೊದಲನೆಯದಾದರೂ ಶಿಕಾಗೋ ನಗರದ ವೆಸ್ಟರ್ನ್ ಎಲೆಕ್ಟ್ರಿಕ್ ಕಂಪನಿಯ ಉದ್ಯೋಗಿ ಮಾರ್ಗದರ್ಶನ ಕಾರ್ಯಕ್ರಮ ಅದಕ್ಕಿಂತ ಉತ್ತಮವಾದದ್ದೂ ಬೃಹತ್ ಪ್ರಮಾಣದ್ದೂ ಆಗಿತ್ತು. ಕೈಗಾರಿಕಾ ಸನ್ನಿವೇಶಗಳಲ್ಲಿ ಹಲವು ಬಗೆಯ ಮಾರ್ಗದರ್ಶನಗಳ ಆವಶ್ಯಕತೆ ಇರುತ್ತದೆ. ಅದರ ಸರಳ ರೂಪದಲ್ಲಿ, ಮಾರ್ಗದರ್ಶನ ಒಬ್ಬ ಕೆಲಸಗಾರನ ಸಾಮರ್ಥ್ಯಗಳ ಮತ್ತು ಅವನ ಕೆಲಸದಲ್ಲಿ ಆವಶ್ಯಕತೆಗಳ ನಡುವಿನ ಅಂತರವನ್ನು ನಿವಾರಿಸುವ ಕಾರ್ಯ ಆಗಿರಬಹುದು. ಅಂಥ ಸಂದರ್ಭದಲ್ಲಿ ಕೆಲಸಗಾರನನ್ನು ಅವನ ಸಾಮರ್ಥ್ಯಗಳಿಗೆ ಸರಿಹೊಂದುವ ಬೇರೆ ಕೆಲಸಕ್ಕೆ ವರ್ಗಮಾಡುವುದರ ಮೂಲಕ ಅಥವಾ ಅವನ ಕೊರತೆಗಳನ್ನು ಹೋಗಲಾಡಿಸಲು ಹೊಸ ಚತುರತೆಗಳು, ಅಭಿವೃತ್ತಿಗಳು ಅಥವಾ ತಿಳಿವಳಿಕೆಗಳನ್ನು ಕಲಿಸಿಕೊಡುವುದರ ಮೂಲಕ ಮಾರ್ಗದರ್ಶನ ನೀಡಬಹುದು. ಅಥವಾ ಮಾರ್ಗದರ್ಶನ ಇನ್ನೂ ಗಾಢವಾದ ಜೀವನದ ಸಮಸ್ಯೆಗಳನ್ನು ಒಳಗೊಂಡಿರಬಹುದು. ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮಾರ್ಗದರ್ಶನ ನೀಡುವುದು ಒಂದು ಸಂಸ್ಥೆಯ ಸಂಪೂರ್ಣ ಹೊಣೆಯಾದರೂ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಮಾರ್ಗದರ್ಶನ ಕೊಡುವಲ್ಲಿ ಒಂದು ಸಂಸ್ಥೆ ಎಷ್ಟು ಹೊಣೆ ಹೊರಬೇಕು ಎಂದು ಹೇಳಬಹುದು. ಆದರೆ ವೈಯಕ್ತಿಕ ಸಮಸ್ಯೆಗಳು ಒಬ್ಬ ವ್ಯಕ್ತಿಯ ಕೆಲಸದ ಮೇಲೆ, ಉತ್ಪಾದನೆಯ ಪ್ರಮಾಣ, ಅಪಘಾತಗಳ ಪ್ರಮಾಣ, ಕೆಲಸದಲ್ಲಿ ಹಾಜರಿ– ಇವುಗಳ ಮೇಲೆ ತುಂಬ ಪರಿಣಾಮವನ್ನುಂಟು ಮಾಡುತ್ತವೆಯೆನ್ನುವ ವಿಚಾರವನ್ನು ಗಮನಿಸಿದಾಗ, ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ವೈಯಕ್ತಿಕ ಸಮಸ್ಯೆಗಳ ನಡುವಿನ ವ್ಯತ್ಯಾಸ ಕೇವಲ ಕೃತಕವಾಗುತ್ತದೆ. ಕೆಲಸಗಾರನ ವೈಯಕ್ತಿಕ ಸಮಸ್ಯೆಗಳ ಮಾರ್ಗದರ್ಶನ ನಿಡುವುದು ಕೇವಲ ಮಾನವೀಯ ದೃಷ್ಟಿಯಿಂದ ಮಾತ್ರ ಎಂದು ಹೊರನೋಟಕ್ಕೆ ತೋರಬಹುದಾದರೂ ವಾಸ್ತವಿಕವಾಗಿ ಆರ್ಥಿಕ ದೃಷ್ಟಿಯಿಂದಲೂ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಮಾರ್ಗದರ್ಶನ ಅತ್ಯಾವಶ್ಯಕವಾಗುತ್ತದೆ. ಹೀಗೆ ಎಲ್ಲ ದೃಷ್ಟಿಯಿಂದಲೂ ಉದ್ಯೋಗಿ ಮಾರ್ಗದರ್ಶನ ಕೈಗಾರಿಕಾ ಪ್ರಪಂಚದಲ್ಲಿ ಅತ್ಯಗತ್ಯ ಕಾರ್ಯಕ್ರಮವಾಗಿದೆ.

**ಅಭಿಪ್ರೇರಣೆ:** ಒಬ್ಬ ವ್ಯಕ್ತಿ ಹೊಂದಿರುವ ಸಾಮರ್ಥ್ಯಗಳು ಮತ್ತು ಆತ ಪಡೆಯುವ ತರಬೇತಿಗಳು ಆವಶ್ಯಕವೇನೋ ಹೌದು. ಆದರೆ ಅಷ್ಟರಿಂದಲೇ ಆತ ತನ್ನ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲಾರ. ಒಂದು ಕೆಲಸದ ನಿರ್ವಹಣೆಗೆ ವ್ಯಕ್ತಿಯ ಅಭಿಪ್ರೇರಣೆಗಳು ಪೋಷಕವಾಗಿರುತ್ತವೆ. ಪ್ರೇರಣೆಯ ಸ್ವರೂಪ ಕ್ಲಿಷ್ಟವಾಗಿರುವುದಲ್ಲದೆ, ಪ್ರೇರಣೆಗಳನ್ನು ನೇರವಾಗಿ ನಿರ್ಧರಿಸುವುದು ಕಷ್ಟ. ಅಂತೆಯೇ ಮಾನವ ಪ್ರೇರಣೆಯನ್ನು ಕುರಿತ ಮೊದಮೊದಲಿನ ವಿಚಾರಗಳು ಅಷ್ಟು ಯುಕ್ತವಾಗಿರಲ್ಲಿಲ್ಲ. ವೈಜ್ಞಾನಿಕ ಆಡಳಿತದ ಪಿತಾಮಹ ಎನ್ನಿಸಿಕೊಂಡ ಫ್ರೆಡರಿಕ್ ಟೇಯ್‌ಲರ್ ಉತ್ಪಾದನೆಯಲ್ಲಿ ಪ್ರೇರಣೆಯ ಆವಶ್ಯಕತೆಯನ್ನು ಗಮನಿಸಿದರೂ ಆತನ ದೃಷ್ಟಿಯಲ್ಲಿ ಆರ್ಥಿಕ ಪ್ರೇರಣೆಯೊಂದೇ ಪ್ರಮುಖವಾಗಿತ್ತು. ಎಲ್ಲ ಉದ್ಯೋಗಿಗಳೂ ಹಣ ಗಳಿಸುವ ಆರ್ಥಿಕ ಪ್ರೇರಣೆಯೊಂದರಿಂದಲೇ ಪ್ರಚೋದಿತರಾಗುತ್ತಾರೆ. ಬೇರೆ ಪ್ರೇರಣೆಗಳು ಇಲ್ಲವೇ ಇಲ್ಲ. ಇದ್ದರೂ ಉತ್ಪಾದನೆಯ ದೃಷ್ಟಿಯಿಂದ ಅವು ಕ್ಷುಲ್ಲಕ–ಎಂಬುದು ಟೇಯ್‌ಲರನ ಪ್ರತಿಪಾದನೆಯಾಗಿತ್ತು. ಆದರೆ ಈ ಭಾವನೆಯ ದೋಷ ಕ್ರಮವಾಗಿ ಅರಿವಾಗತೊಡಗಿತು. 1920ರ ಸುಮಾರಿಗೆ ಫಿಲಡೆಲ್ಫಿಯದ ಗಿರಣಿ ಕೈಗಾರಿಕೆಯೊಂದರಲ್ಲಿ ಕಾರ್ಮಿಕ ಸಮಸ್ಯೆಗಳ ಅಧ್ಯಯನ ನಡೆಸಿದ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರಜ್ಞ ಎಲ್ಟನ್ ಮೇಯೊ, ಉದ್ಯೋಗಿಗಳು ತಮ್ಮ ಕೆಲಸದಿಂದ ಕೇವಲ ಹಣವನ್ನು ಮಾತ್ರ ನಿರೀಕ್ಷಿಸುವುದಿಲ್ಲ, ಅವರು ಬೇರೆ ಬೇರೆ ಆವಶ್ಯಕತೆಗಳನ್ನು ಹೊಂದಿರುತ್ತಾರೆ. ಬೇರೆ ಬೇರೆ ಪ್ರೇರಣೆಗಳಿಂದ ಪ್ರಚೋದಿತರಾಗುತ್ತಾರೆ–ಎಂಬ ವಾದವನ್ನು ಮಂಡಿಸಿದ.

ಅದೇ ಸಮಯಕ್ಕೆ ವೆಸ್ಟರ್ನ್ ಎಲೆಕ್ಟ್ರಿಕ್ ಕಂಪನಿಯ ಹಾಥಾರ್ನ್ ಶಾಖೆಯ ಸಂಶೋಧನೆಗಳ ನಿರ್ದೇಶಕನಾಗಿ ಮೇಯೊ ನೇಮಕಗೊಂಡ. ಆತ ನಡೆಸಿದ ಅಧ್ಯಯನಗಳಲ್ಲಿ ಚಿಕ್ಕಚಿಕ್ಕ ಪ್ರಾಯೋಗಿಕ ತಂಡಗಳು ಪ್ರಯೋಗಕ್ಕೆ ಅಳವಡಿಸಿದ ಪ್ರತ್ಯೇಕವಾದ ಕೋಣೆಗಳಲ್ಲಿ ತಮ್ಮ ಕೆಲಸಗಳನ್ನು ಮಾಡುವಂತೆ ನಿಯೋಜಿಸಲಾಗಿತ್ತು. ಬೆಳಕು, ಗಾಳಿ, ವಿರಾಮದ ಅವಧಿ ಮುಂತಾದ ಪ್ರಾಯೋಗಿಕ ಸ್ಥಿತಿಗತಿಗಳನ್ನು ಅವಲಂಬಿಸದೆಯೇ ಪ್ರಾಯೋಗಿಕ ತಂಡಗಳು ತಮ್ಮ ಉತ್ಪಾದನಾಮಟ್ಟವನ್ನು ಬಹುಮಟ್ಟಿಗೆ ಹೆಚ್ಚಿಸಿದುವು. ಇದಕ್ಕೆ ಕಾರಣ ಪ್ರಾಯೋಗಿಕ ವ್ಯವಸ್ಥೆ. ಉದ್ಯೋಗಿಗಳ ಹಲವು ಪ್ರೇರಣೆಗಳಿಗೆ ಇದು ಪೋಷಕವಾಯಿತು. ತಾವು ಉಳಿದೆಲ್ಲ ಉದ್ಯೋಗಿಗಳಿಗಿಂತ ಬೇರೆಯಾದವರು. ತಾವು ಒಂದು ನಿರ್ದಿಷ್ಟ ಗುಂಪಿನ ಸದಸ್ಯರು–ಈ ಮೊದಲಾದ ಭಾವನೆಗಳು ಅವರಲ್ಲಿ ಬೇರೂರಿದ್ದುವು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಅನೇಕ ವಿಧದ ಪ್ರೇರಣೆಗಳು ಉದ್ಯೋಗಿಯ ಉತ್ಪಾದನಾ ಪ್ರಮಾಣ ಹಾಗೂ ಕಾರ್ಯಗತಿಯನ್ನು ನಿರ್ಧರಿಸುತ್ತವೆ. ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಪ್ರೇರಣೆಗಳು ಪ್ರಧಾನವಾಗಿದ್ದರೂ ಕೈಗಾರಿಕಾ ಉದ್ಯೋಗಿಗಳ ಕ್ಷೇಮ, ಸಂಯೋಜನೆ(ಅಫಿಲಿಯೇಷನ್), ಪ್ರತಿಷ್ಠೆ (ಎಸ್ಟೀಮ್) ಮತ್ತು ಸಾಧನೆ (ಅಚೀವ್‌ಮೆಂಟ್) ಇವುಗಳಿಗೆ ಸಂಬಂಧವಾದ ಪ್ರೇರಣೆಗಳು ಪ್ರಮುಖವಾಗಿ ತೋರಿಬರುತ್ತವೆ.

ಪ್ರೇರಣೆಗಳು ಉತ್ಪಾದನಾ ಮಟ್ಟವನ್ನು ನಿರ್ಧರಿಸುವಲ್ಲಿ ಪ್ರಮುಖವಾದರೂ ಕೇವಲ ಅವೇ ಉತ್ಪಾದನೆಯನ್ನು ನಿರ್ಧರಿಸಲಾರವು. ಪ್ರೇರಣೆಯನ್ನು ಹೊಂದಿದ್ದು ಒಂದು ಕೆಲಸಕ್ಕೆ ಬೇಕಾದ ಸಾಮರ್ಥ್ಯಗಳು ಇಲ್ಲದಿದ್ದರೆ ಆ ಕೆಲಸವನ್ನು ಸಾಧಿಸಲಾಗದು. ಹೀಗೆಯೇ ಕೇವಲ ಸಾಮರ್ಥ್ಯವನ್ನು ಹೊಂದಿದ್ದು ಪ್ರೇರಣೆಗಳನ್ನು ಪಡೆಯದಿದ್ದಾಗಲೂ ಅಷ್ಟೇ. ಆದ್ದರಿಂದ ವ್ಯಕ್ತಿಯ ಸಾಮರ್ಥ್ಯ ಮತ್ತು ಪ್ರೇರಣೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಪರಿಗಣಿಸಬೇಕು. ಒಬ್ಬ ವ್ಯಕ್ತಿಯ ಉತ್ಪಾದನಾಮಟ್ಟ ಅವನ ಸಾಮರ್ಥ್ಯ ಹಾಗೂ ಪ್ರೇರಣೆಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ

ಉತ್ಪಾದನೆ = ಸಾಮರ್ಥ್ಯ ×ಪ್ರೇರಣೆ.

**ಸಾಮಾಜಿಕ ವಾತಾವರಣ:** ಇದುವರೆಗಿನ ಚರ್ಚೆಯ ಕೇಂದ್ರಬಿಂದು ಒಬ್ಬ ವ್ಯಕ್ತಿ–ಕೈಗಾರಿಕಾ ಉದ್ಯೋಗಿ. ಅವನ ಸಾಮರ್ಥ್ಯಗಳು. ತರಬೇತಿಗಳು, ಪ್ರೇರಣೆಗಳು ಮತ್ತು ಅವು ಅವನ ಉದ್ಯೋಗ ಮತ್ತು ಉತ್ಪಾದನೆಗಳೊಂದಿಗೆ ಹೊಂದಿರುವ ಸಂಬಂಧ ಇತ್ಯಾದಿಗಳನ್ನು ಕುರಿತ ವಿವೇಚನೆ. ಆದರೆ ಕೈಗಾರಿಕೆಯಲ್ಲಿ ಕೆಲಸ ಮಾಡುವ ಯಾವೊಬ್ಬ ಉದ್ಯೋಗಿಯೂ ಒಂಟಿಯಾಗಿರುವುದಿಲ್ಲ. ಆತ ಯಾರ ನೇತೃತ್ವದಲ್ಲೋ ಕೆಲಸ ಮಾಡುತ್ತಾನೆ. ಅಥವಾ ಅವನ ನೇತೃತ್ವದಲ್ಲಿ ಬೇರೆಯವರು ಕೆಲಸ ಮಾಡುತ್ತಾರೆ. ಅವನ ಜೊತೆ ಇನ್ನೂ ಹಲವರು ಸಹಕರಿಸುತ್ತಾರೆ. ಸಹಭಾಗಿಗಳಾಗಿರುತ್ತಾರೆ. ಆದ್ದರಿಂದ ಪ್ರತಿ ಕೈಗಾರಿಕಾ ಸನ್ನಿವೇಶವೂ ಒಂದು ಸಾಮಾಜಿಕ ವಾತಾವರಣವನ್ನು ಹೊಂದಿರುತ್ತದೆ. ಈ ಸಾಮಾಜಿಕ ವಾತಾವರಣ, ಉದ್ಯೋಗಿಯ ವರ್ತನೆಯನ್ನು, ಅಭಿವೃತ್ತಿಗಳನ್ನು, ಪ್ರೇರಣೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಾಗೆಯೇ ವ್ಯಕ್ತಿ ಕೂಡ ಸಾಮಾಜಿಕ ವಾತಾವರಣದ ಸೃಷ್ಟಿಗೆ ತನ್ನದೇ ರೀತಿಯಲ್ಲಿ ಕಾರಣನಾಗುತ್ತಾನೆ. ಅವನ ವರ್ತನೆ, ಅಭಿವೃತ್ತಿ, ಪ್ರೇರಣೆಗಳು ಬೇರೆಯವರ ನಡವಳಿಕೆಯ ಮೇಲೆ

ಪರಿಣಾಮ ಬೀರುತ್ತವೆ. ಈ ಸಾಮಾಜಿಕ ವಾತಾವರಣ, ಅದರಿಂದ ಉದ್ಭವಿಸುವ ಉದ್ಯೋಗಿ ಸಂಬಂಧಗಳು ಔದ್ಯಮಿಕ ಗುರಿಯನ್ನು ಸಾಧಿಸುವಲ್ಲಿ ಬಹುಮಟ್ಟಿಗೆ ಪರಿಣಾಮಕಾರಿಯಾಗಿರುತ್ತವೆ. ಅಂತೆಯೇ ಸಾಮಾಜಿಕ ವರ್ತನೆ, ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧಗಳನ್ನು ಕುರಿತ ಅಧ್ಯಯನ ಇತ್ಯಾದಿಗಳೂ ಕೈಗಾರಿಕಾ ಮನೋವಿಜ್ಞಾನಿಯ ಸಂಶೋಧನಾವ್ಯಾಪ್ತಿಗೆ ಒಳಪಡುತ್ತವೆ.

ಒಂದು ಕಾರ್ಯತಂಡದ ಸದಸ್ಯರ ನಡುವಣ ಸಂಬಂಧಗಳಿಗೆ ಅವರವರ ಕೆಲಸ, ಇಬ್ಬರ ಕೆಲಸಗಳ ನಡುವೆ ಇರುವ ಹೊಂದಾಣಿಕೆ, ಸಹಕಾರ–ಇವು ಬಹುಮಟ್ಟಿಗೆ ಆಧಾರವಾಗಿರುತ್ತವೆ. ಜೊತೆಗೆ, ಒಂದೇ ಗುಂಪಿನ ಸದಸ್ಯರಾಗಿ ಒಂದು ಕಡೆ ಇರುವಾಗ ಹಲವು ಸಂಬಂಧಗಳು ವೈಯಕ್ತಿಕ ಆಧಾರದ ಮೇಲೂ ಬೆಳೆದು ಬರುತ್ತವೆ. ಕೆಲಸವನ್ನು ಆಧಾರವಾಗಿ ಹೊಂದಿರುವ ಉದ್ಯೋಗಿ ಸಂಬಂಧಗಳಲ್ಲಿ ಪ್ರಮುಖವಾಗಿ ಎರಡು ವಿಧಗಳನ್ನು ಗುರುತಿಸಬಹುದು: ಅಧಿಕಾರಿ ಅಧೀನರ ಸಂಬಂಧಗಳು ಮತ್ತು ಸಮಾನ ಸ್ಥಾನಗಳನ್ನು ಹೊಂದಿ, ಒಂದು ಕೆಲಸದಲ್ಲಿ ಸಮಭಾಗಿಗಳಾಗಿರುವವರ ನಡುವಿನ ಸಂಬಂಧಗಳು, ಅಧಿಕಾರಿ ಅಧೀನರ ನಡುವಿನ ಸಂಬಂಧಗಳು ಕೈಗಾರಿಕೆಗಳಲ್ಲಿ ಮೇಲ್ವಿಚಾರಣೆ, ನಾಯಕತ್ವ ಮುಂತಾದ ಸಮಸ್ಯೆಗಳ ಅಧ್ಯಯನಕ್ಕೆ ಎಡೆ ಮಾಡಿಕೊಟ್ಟಿವೆ.

**ಮೇಲ್ವಿಚಾರಣೆ:** ಪ್ರತಿಯೊಂದು ಕೈಗಾರಿಕಾ ಸನ್ನಿವೇಶದಲ್ಲೂ ಮೇಲ್ವಿಚಾರಣೆ ಅಗತ್ಯ. ಒಂದು ತಂಡದವರು ಮಾಡುವ ಕೆಲಸವನ್ನು ಯಾರಾದರೂ ನಿರ್ದೇಶಿಸಬೇಕು, ಮತ್ತು ಆ ಕೆಲಸದ ಜವಾಬ್ದಾರಿಯನ್ನು ಯಾರಾದರೂ ಹೊರಬೇಕು. ಒಳ್ಳೆಯ ಮೇಲ್ವಿಚಾರಣೆಯ ರೀತಿನೀತಿಗಳು ಕೈಗಾರಿಕಾ ಗುರಿಗಳನ್ನು ಸಾಧಿಸುವಲ್ಲಿ ಸಹಕಾರಿಯಾಗುತ್ತವೆ. ಒಳ್ಳೆಯ ಮೇಲ್ವಿಚಾರಕ ತನ್ನ ಉದ್ಯೋಗಿಗಳನ್ನು ಕೆಲಸಕ್ಕೆ ಪ್ರೇರೇಪಿಸುತ್ತಾನೆ; ಅವರಲ್ಲಿ ಭರವಸೆಗಳನ್ನುಂಟುಮಾಡುತ್ತಾನೆ; ತತ್ಪರಿಣಾಮವಾಗಿ, ಉತ್ಪಾದನೆಯ ಮಟ್ಟವನ್ನು ಹೆಚ್ಚಿಸುತ್ತಾನೆ. ಮಿಷಿಗನ್ ವಿಶ್ವವಿದ್ಯಾಲಯದ ಸರ್ವೇಕ್ಷಣ ಸಂಶೋಧನಾ ಕೇಂದ್ರ (ಸರ್ವೆ ರಿಸರ್ಚ್ ಸೆಂಟರ್) ನಡೆಸಿರುವ ಅಧ್ಯಯನಗಳು ಉದ್ಯೋಗಿ ಪಕ್ಷಪಾತಿ (ಎಂಪ್ಲಾಯಿ ಸೆಂಟರ್ಡ್) ಮೇಲ್ವಿಚಾರಕರು ಉತ್ಪಾದನಾ ಪಕ್ಷಪಾತಿ (ಪ್ರೊಡಕ್ಷನ್ ಸೆಂಟರ್ಡ್) ಮೇಲ್ವಿಚಾರಕರಿಗಿಂತ ಹೆಚ್ಚಿನ ಉತ್ಪಾದನಾ ದಾಖಲೆಗಳನ್ನು ಸಾಧಿಸುತ್ತಾರೆ ಎಂದು ನಿರ್ದಿಷ್ಟವಾಗಿ ತೋರಿಸಿಕೊಟ್ಟಿವೆ. ಎಂದರೆ, ಕೇವಲ ಉತ್ಪಾದನೆಗೆ ಪ್ರಾಶಸ್ತ್ಯಕೊಡುವ ಮೇಲ್ವಿಚಾರಕರಿಗಿಂತ ಉದ್ಯೋಗಿ ಸಂಬಂಧಗಳು ಮತ್ತು ಸಮಸ್ಯೆಗಳಿಗೆ ಪ್ರಾಶಸ್ತ್ಯಕೊಡುವ ಮೇಲ್ವಿಚಾರಕರು ಹೆಚ್ಚಿನ ಉತ್ಪಾದನೆಗೆ ಕಾರಣಕರ್ತರಾಗುತ್ತಾರೆ. ಉತ್ಪಾದನೆಗೆ ಪ್ರಾಧಾನ್ಯವನ್ನೇ ಕೊಡಬಾರದು ಎನ್ನುವುದು ಈ ಸಂಶೋಧನೆಗಳ ಸಾರಾಂಶವಲ್ಲ. ಬದಲಾಗಿ ಸರ್ವಪ್ರಾಧಾನ್ಯವೂ ಉತ್ಪಾದನೆಯೊಂದಕ್ಕೇ ಸಲ್ಲಬಾರದು ಎಂದಷ್ಟೇ ಇದರರ್ಥ.

ಹಲವು ಸಂಶೋಧನೆಗಳ ಆಧಾರದ ಮೇಲೆ ಒಳ್ಳೆಯ ಮೇಲ್ವಿಚಾರಕರ ಕೆಲವು ರೀತಿನೀತಿಗಳನ್ನು ನಮೂದಿಸಬಾರದು. ಒಳ್ಳೆಯ ಮೇಲ್ವಿಚಾರಕ ತನ್ನ ಅಧೀನದಲ್ಲಿರುವ ಉದ್ಯೋಗಿಗಳು ತಮ್ಮ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಅವಕಾಶ ಕಲ್ಪಿಸಿಕೊಡುತ್ತಾನೆ. ಆತನ ಅಧೀನದಲ್ಲಿರುವ ಉದ್ಯೋಗಿಗಳು ತಮ್ಮ ಮೇಲ್ವಿಚಾರಕ ತಮ್ಮ ಕೆಲಸದ ಬಗ್ಗೆ ಯಾವ ಅಭಿಪ್ರಾಯಗಳನ್ನು ಹೊಂದಿದ್ದಾನೆ ಎನ್ನುವುದನ್ನು ಬಲ್ಲವರಾಗಿರುತ್ತಾರೆ. ಆತ ತಮ್ಮ ಅಹವಾಲುಗಳಿಗೆ ಸಹಾನುಭೂತಿ, ಬೆಂಬಲ ನೀಡುತ್ತಾನೆ ಎನ್ನುವ ನಂಬಿಕೆಯುಳ್ಳವರಾಗಿರುತ್ತಾರೆ. ಒಳ್ಳೆಯ ಮೇಲ್ವಿಚಾರಕ ಕಟ್ಟುನಿಟ್ಟಾದ ತೀವ್ರ ಮೇಲ್ವಿಚಾರಣೆಗೆ ಬದಲಾಗಿ ಸಾಮಾನ್ಯ ಮೇಲ್ವಿಚಾರಣೆ ನಡೆಸುತ್ತಾನೆ. ಆಗಾಗ ಸಭೆಗಳನ್ನು ಕರೆದು ಕೆಲಸಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುತ್ತಾನೆ. ಒಳ್ಳೆಯ ಮೇಲ್ವಿಚಾರಕ ಅನುಭೂತಿಶಕ್ತಿಯನ್ನು (ಎಂಪತಿ) ಪಡೆದಿರಬೇಕು. ಅನುಭೂತಿಶಕ್ತಿ ಎಂದರೆ, ಬೇರೆಯ ವ್ಯಕ್ತಿಯ ಸ್ಥಾನದಲ್ಲಿ ತನ್ನನ್ನು ಇರಿಸಿಕೊಂಡು, ಬೇರೆ ವ್ಯಕ್ತಿಯ ಪ್ರತಿಕ್ರಿಯೆ, ಭಾವನೆ, ವರ್ತನೆಗಳನ್ನು ಊಹಿಸಿಕೊಳ್ಳುವ ಸಾಮರ್ಥ್ಯ. ಈ ಅನುಭೂತಿ ಶಕ್ತಿಯ ಕೊರತೆಯೆ ಅಧಿಕಾರಿ ಅಧೀನರ ನಡುವಿನ ಘರ್ಷಣೆಗಳಿಗೆ ಬಹುಮುಖ್ಯ ಕಾರಣ ಎಂಬುದು ಹಲವು ತಜ್ಞರ ಅಭಿಪ್ರಾಯವಾಗಿದೆ. ಅನೇಕ ಸಂಶೋಧನೆಗಳಲ್ಲಿ ಕಂಡುಬಂದ ಇನ್ನೊಂದು ಅಂಶವೆಂದರೆ ಒಳ್ಳೆಯ ಮೇಲ್ವಿಚಾರಕ ತನ್ನ ಮೇಲಧಿಕಾರಿಗಳ ಮೇಲೆ ಪ್ರಭಾವಬೀರುವ ಸಾಮರ್ಥ್ಯವನ್ನು ಹೊಂದಿದ್ದು, ತನ್ನ ಅಧೀನದಲ್ಲಿರುವ ಉದ್ಯೋಗಿಗಳ ಆವಶ್ಯಕತೆಗಳನ್ನು ಪೂರೈಸಲು ಸಹಾಯಕನಾಗುತ್ತಾನೆ.

**ಭೌತಿಕ ಸನ್ನಿವೇಶಗಳು :** ಕೈಗಾರಿಕಾ ಮನೋವಿಜ್ಞಾನಿ, ಪ್ರಾರಂಭದಿಂದಲೂ ಭೌತಿಕ ಸನ್ನಿವೇಶ, ಬಳಲಿಕೆ, ಬೇಸರ, ಅಪಘಾತಗಳೇ ಆದಿಯಾದ ವಿಚಾರಗಳನ್ನು ಕುರಿತು ಅಧ್ಯಯನ ನಡೆಸಿದ್ದಾನೆ. ಭೌತಿಕ ಸನ್ನಿವೇಶಕ್ಕೆ ಸಂಬಂಧಪಟ್ಟ ಹಾಗೆ ಬೆಳಕು, ಗಾಳಿ, ಉಷ್ಣಾಂಶ, ಸದ್ದು ಮತ್ತು ಇತರ ವಾತಾವರಣದ ಸ್ಥಿತಿಗತಿಗಳು ಉತ್ಪಾದನೆಯ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರುತ್ತವೆ ಎನ್ನುವ ಬಗ್ಗೆ ವ್ಯಾಪಕವಾದ ಸಂಶೋಧನೆ ನಡೆದಿದೆ. ಯಾವುದೋ ಒಂದು ಇಷ್ಟತಮ (ಆಪ್ಟಿಕಮಲ್) ಮಟ್ಟವನ್ನು ತಲುಪುವ ವರೆಗೆ ಬೆಳಕಿನ ಪ್ರಕಾಶ ಜಾಸ್ತಿಯಾದಂತೆ ಉತ್ಪಾದನೆಯೂ ಏರುತ್ತದೆ. ಈ ಇಷ್ಟತಮ ಮಟ್ಟಕ್ಕೆ ಮಿಗಿಲಾದ ಪ್ರಕಾಶದಿಂದ ಯಾವ ಲಾಭವೂ ದೊರೆಯಲಾರದು. ಅದೂ ಅಲ್ಲದೆ, ಈ ಪ್ರಕಾಶದ ಇಷ್ಟತಮ ಮಟ್ಟ ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ಬೇರೆಯಾಗಿರುತ್ತದೆ. ಹಾಗೂ ವ್ಯಕ್ತಿಗತ ವ್ಯತ್ಯಾಸಗಳೂ ಇರುತ್ತವೆ. ತೀರಾ ಹೆಚ್ಚಿನ ಅಥವಾ ಕಡಿಮೆ ಉಷ್ಣಾಂಶದ ಸ್ಥಿತಿ ಕೆಲಸಗಾರನಿಗೆ ಹಿತಕರವಾಗಿರುವುದಿಲ್ಲ. ಹಲವು ಸಂಶೋಧನೆಗಳು 65$^{\circ}$ ಫ್ಯಾ. ಉಷ್ಣಾಂಶ ಅನೇಕ ಜನರಿಗೆ ಹಿತಕರವಾದ ಸ್ಥಿತಿಯಾಗಿರುತ್ತದೆ ಎನ್ನುವ ತೀರ್ಮಾನಕ್ಕೆ ಎಡೆಮಾಡಿಕೊಟ್ಟಿವೆ. ಬೆಳಕಿನ ವಿಚಾರದಲ್ಲಿ ಹೇಗೋ ಹಾಗೆಯೇ ಉಷ್ಣಾಂಶದಲ್ಲಿ ಕೂಡ ಇಷ್ಟತಮ ಮಟ್ಟ ವ್ಯಕ್ತಿಗಳನ್ನು, ಕೆಲಸಗಳನ್ನು ಅವಲಂಬಿಸಿರುತ್ತದೆ. ಗಾಳಿ, ಬೆಳಕು, ಉಷ್ಣಾಂಶಗಳ ಸರಿಯಾದ ವ್ಯವಸ್ಥೆಯನ್ನು ಹೊಂದಿರುವ ಆಧುನಿಕ ಕಾರ್ಖಾನೆಗಳಲ್ಲಿ ವಾತಾವರಣದ ಸ್ಥಿತಿಗತಿಗಳು ಅಷ್ಟೊಂದು ಬೃಹತ್ ಸಮಸ್ಯೆಯಾಗಿ ಪರಿಣಮಿಸುವುದಿಲ್ಲ. ಕೆಲಸಗಾರನ ಕಾರ್ಯಗತಿಯ ಮೇಲೆ ಸದ್ದು ಬೀರಬಹುದಾದ ಹಾನಿಕರ ಪರಿಣಾಮಗಳ ಬಗ್ಗೆ ಒಮ್ಮತವಿಲ್ಲ.

**ಬಳಲಿಕೆ ಮತ್ತು ಬೇಸರ :** ನಿರಂತರ ಕೆಲಸದ ಪರಿಣಾಮವಾಗಿ ಕೆಲಸಗಾರನಲ್ಲಿ ಉಂಟಾಗುವ ಸಾಮಾನ್ಯ ಸ್ಥಿತಿಯೇ ಬಳಲಿಕೆ. ಬಳಲಿಕೆಯಾದಾಗ ಕೆಲಸಮಾಡುವ ಶಕ್ತಿ ಕುಂದುತ್ತದೆ. ವಿರಾಮಕ್ಕೆ ಎಡೆಯಿಲ್ಲದ ನಿರಂತರ ದುಡಿಮೆ, ಕಷ್ಟತರವಾದ ಕೆಲಸಗಳು, ಕೆಲಸಕ್ಕೆ ಯೋಗ್ಯವಲ್ಲದ ವಾತಾವರಣ ಇವು ಬಳಲಿಕೆಗೆ ಕಾರಣವಾಗಬಹುದು. ಕೆಲವೊಮ್ಮೆ ಅತಿಯಾದ ಬಳಲಿಕೆಗೆ ಮಾನಸಿಕ ಕಾರಣಗಳೂ ಇರುತ್ತವೆ. ಬಳಲಿಕೆಯಿಂದಾಗಿ ಕೆಲಸದ ವೇಗದಲ್ಲಿ ಹಾಗೂ ಗುಣದಲ್ಲಿ ಕೊರತೆಯುಂಟಾಗುತ್ತದೆ. ಬಳಲಿಕೆಯಿಂದಾಗಿ ಅಪಘಾತಗಳೂ ತಲೆದೋರುತ್ತವೆ. ಸತತವಾಗಿ ಬಳಲಿಕೆಗೆ ತುತ್ತಾದರೆ ಕೆಲಸಗಾರನ ಆರೋಗ್ಯದ ಮೇಲೂ ಹಾನಿಕರ ಪರಿಣಾಮಗಳುಂಟಾಗುತ್ತವೆ. ಬಳಲಿಕೆಗೆ ಸಂಬಂಧಪಟ್ಟಿರುವ ಇನ್ನೊಂದು ಸ್ಥಿತಿ ಬೇಸರ. ಒಂದೇ ರೀತಿಯಾದ ಕೆಲಸದಲ್ಲಿ ನಿರಂತರವಾಗಿ ಭಾಗವಹಿಸುವುದರಿಂದಾಗಿ ಬೇಸರ ಬರುತ್ತದೆ. ಬಳಲಿಕೆಗೂ ಬೇಸರಕ್ಕೂ ಇರುವ ಒಂದು ವ್ಯತ್ಯಾಸವೆಂದರೆ ಬಳಲಿಕೆಯನ್ನು ಹೋಗಲಾಡಿಸಲು ಯುಕ್ತ ವಿರಾಮವನ್ನು ಪಡೆಯಬೇಕು; ಬೇಸರವನ್ನು ಹೋಗಲಾಡಿಸಲು ಕೆಲಸದಲ್ಲಿ ಬದಲಾವಣೆಯಾದರೆ ಸಾಕು. ವಿರಾಮದ ಅವಧಿಯ ಬಗೆಗೂ ಸಾಕಷ್ಟು ಸಂಶೋಧನೆ ನಡೆದಿದೆ. **(ನೋಡಿ–ಕೈಗಾರಿಕಾ ದಣಿವು)**

**ಅಪಘಾತಗಳು:** ಅಪಘಾತಗಳು ಮತ್ತು ಅವುಗಳ ನಿಯಂತ್ರಣ ವಿಷಯ ಕೈಗಾರಿಕೆಯ ಬೃಹತ್ ಸಮಸ್ಯೆಯಾಗಿ ಪರಿಣಮಿಸಿದೆ. ಒಂದು ವರ್ಷದಲ್ಲಿ ಸುಮಾರು 20 ಲಕ್ಷಕ್ಕಿಂತಲೂ ಅಧಿಕ ಸಂಖ್ಯೆಯ ಕೆಲಸಗಾರರು ಅಪಘಾತಗಳಿಂದಾಗಿ ಸಾವನ್ನಪ್ಪುತ್ತಾರೆ ಅಥವಾ ತಮ್ಮ ಕೆಲಸ ಮಾಡುವ ಸಾಮರ್ಥ್ಯಗಳನ್ನು ಕಳೆದುಕೊಳ್ಳುತ್ತಾರೆ ಎಂದು ಕೆಲವರ ಅಭಿಪ್ರಾಯ.

ಅಪಘಾತಗಳಲ್ಲಿ ಹಲವು ವಿಧ. ಕೆಲವು ಅಪಘಾತಗಳು ಯಾವ ಪರಿಣಾಮಕಾರಿ ತೊಂದರೆಗಳನ್ನು ಉಂಟುಮಾಡುವುದಿಲ್ಲ. (ಕೆಲಸಗಾರನೊಬ್ಬ ಮೆಲ್ಲನೆ ಜಾರಿ ಬೀಳುತ್ತಾನೆ.) ಇನ್ನು ಕೆಲವು ಅಪಘಾತಗಳು ಚಿಕ್ಕಪುಟ್ಟ ತೊಂದರೆಗಳಿಗೆ ಕಾರಣವಾಗಬಹುದು (ಬಿದ್ದ ಕೆಲಸಗಾರನ ಕಾಲು ಉಳುಕಿಕೊಳ್ಳುತ್ತದೆ). ಇನ್ನೂ ತೀವ್ರತರದ ಅಪಘಾತಗಳು ಸಾವಿನಲ್ಲಿ ಪರ್ಯಾವಸಾನಗೊಳ್ಳುತ್ತವೆ. ಇವೆಲ್ಲಕ್ಕಿಂತ ವಿಭಿನ್ನವಾದ ಅಪಘಾತ ಎಂದರೆ ಯಂತ್ರಕ್ಕೆ ಉಂಟಾಗುವ ಹಾನಿ. ಆದರೆ ಮನೋವಿಜ್ಞಾನಿಯ ದೃಷ್ಟಿಯಿಂದ ಈ ಎಲ್ಲ ಅಪಘಾತಗಳು ಮುಖ್ಯ; ಎಲ್ಲ ರೀತಿಯ ಅಪಘಾತಗಳಿಗೂ ಕಾರಣವನ್ನು ಕಂಡುಹಿಡಿಯುವುದು ಹಾಗೂ ಅವುಗಳ ನಿಯಂತ್ರಣ ಇವೇ ಅವನ ಗುರಿ.

ಅಪಘಾತಗಳು ಮುಖ್ಯವಾಗಿ ಎರಡು ಮೂಲಗಳಿಂದ ಸಂಭವಿಸಬಹುದು: ಒಂದು–ಸುರಕ್ಷಿತವಲ್ಲದ ಕೆಲಸದ ಸನ್ನಿವೇಶಗಳು ಅಥವಾ ತಾಂತ್ರಿಕ ಲೋಪದೋಷಗಳು. ಎರಡು ಮಾನವ ಸಂಬಂಧವಾದ ತಪ್ಪುಗಳು. ಶೇ. 80 ರಿಂದ ಶೇ. 90 ಭಾಗ ಕೈಗಾರಿಕಾ ಅಪಘಾತಗಳು ಮಾನವನ ತಪ್ಪಿನಿಂದಲೇ ಸಂಭವಿಸುತ್ತವೆ. ಆದ್ದರಿಂದ ಅಪಘಾತಗಳ ನಿಯಂತ್ರಣ ಕಾರ್ಯಕ್ರಮದಲ್ಲಿ ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಾಗೂ ಉದ್ಯೋಗಿಯ ಆಯ್ಕೆ ಮತ್ತು ತರಬೇತಿಯ ಹಂತದಲ್ಲಿ ಅಪಘಾತಗಳಿಗೆ ಕಾರಣವಾಗುವ ಮಾನವ ಕುಂದುಕೊರತೆಗಳ ಬಗ್ಗೆ ಎಚ್ಚರವಹಿಸಬೇಕು.

ಉದ್ಯೋಗಿಯ ಅನುಭವ ಹೆಚ್ಚಿದಂತೆಲ್ಲ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತದೆ. ಅಂತೆಯೇ ಉದ್ಯೋಗಿಯ ವಯಸ್ಸು ಜಾಸ್ತಿಯಾದ ಹಾಗೆ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತದೆ. ಅನಾರೋಗ್ಯ, ಶಾರೀರಿಕ ಕುಂದುಕೊರತೆಗಳು, ಮಾನಸಿಕ ಮತ್ತು ಭಾವುಕ ತೊಂದರೆಗಳೇ ಮೊದಲಾದ ಅಂಶಗಳು ಅಪಘಾತಕ್ಕೆ ಎಡೆಮಾಡಿಕೊಡುತ್ತವೆ.

ಔದ್ಯೋಗಿಕ ಕ್ಷೇತ್ರದಲ್ಲಿ ಮನೋವಿಜ್ಞಾನಿ ಹೇಗೆ ಬಳಕೆಗೊಂಡಿದೆ ಎಂದು ತೋರಿಸಿಕೊಡುವ ಉದ್ದೇಶದಿಂದ ಔದ್ಯಮಿಕ ಮನೋವಿಜ್ಞಾನದ ಕೆಲವು ಪ್ರಮುಖ ಅಂಶಗಳನ್ನು ಈ ಲೇಖನದಲ್ಲಿ ಸೂಚಿಸಲಾಗಿದೆ. ಔದ್ಯಮಿಕ ಮನೋವಿಜ್ಞಾನಿಯ ಕಾರ್ಯಕ್ಷೇತ್ರವಾದರೋ ದಿನದಿನಕ್ಕೂ ವಿಶಾಲಗೊಳ್ಳುತ್ತಿದೆ. ಎಲ್ಲ ರೀತಿಯ ಸಮಸ್ಯೆಗಳಿಗೆ ಪರಿಹಾರ ಹುಡುಕುವಲ್ಲಿ ಅವನ ಪಾತ್ರ ಪ್ರಮುಖವಾದದ್ದು. ಒಟ್ಟಿನಲ್ಲಿ, ಅವನು

ಕೈಗಾರಿಕಾ ಪ್ರಪಂಚದ ಸಮಸ್ಯೆಗಳ ನಿವಾರಕ. ಅದಕ್ಕಾಗಿಯೇ ಪ್ರಮುಖ ಕೈಗಾರಿಕೆಗಳು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಮನೋವಿಜ್ಞಾನಿಗೆ ಹೆಚ್ಚು ಹೆಚ್ಚಿನ ಸ್ಥಾನವನ್ನು ಕೊಡುತ್ತಿವೆ.
*

**ಕೈಗಾರಿಕಾ ರಂಗದಲ್ಲಿ ಸಂಖ್ಯಾಕಲನವಿಜ್ಞಾನದ ವಿಧಾನಗಳು :** ಇವುಗಳಲ್ಲಿ ಅತಿ ಮುಖ್ಯವಾದದ್ದು ಸಂಖ್ಯಾಕಲನಾತ್ಮಕ ಗುಣ ನಿಯಂತ್ರಣ(ಸ್ಟಾಟಿಸ್ಟಿಕಲ್ ಕ್ವಾಲಿಟಿ ಕಂಟ್ರೋಲ್). ಅದನ್ನು ಈ ಲೇಖನದಲ್ಲಿ ವಿಶದೀಕರಿಸಿದೆ. ಯಾವುದೇ ಎರಡು ಉತ್ಪನ್ನಗಳು ಸರ್ವಸಮವಾಗಿರುವುದು ಸಾಧ್ಯವಿಲ್ಲ ಎಂಬುದೊಂದು ಅನುಭವದ (ವಿಶೇಷವಾಗಿ ಕೈಗಾರಿಕಾ ರಂಗದಲ್ಲಿ) ಮಾತು. ಎಷ್ಟೇ ಎಚ್ಚರದಿಂದ ಅಥವಾ ಹೆಚ್ಚು ಖರ್ಚಿನಿಂದ ವಸ್ತುಗಳನ್ನು ತಯಾರಿಸಿದರೂ (ಅತಿ ನಿಷ್ಕೃಷ್ಟ ದಕ್ಷತೆ ಇರುವ ಸಾಧನಗಳಿಂದ ಅಳತೆ ಮಾಡಲ್ಪಟ್ಟಾಗ್ಯೂ) ಎರಡು ವಸ್ತುಗಳ ಗುಣಲಕ್ಷಣಗಳಲ್ಲಿ ಕೊನೆಯ ಪಕ್ಷ ಮೊದಲಿನ ಅಥವಾ ಮುಂದಿನ ದಶಮಾಂಶ ಸ್ಥಾನಗಳಲ್ಲಾದರೂ ಗುಣಭೇದ ಅಥವಾ ವ್ಯತ್ಯಾಸ ಕಂಡುಬರುತ್ತದೆ. ಇದು ಅನಿವಾರ್ಯ. ಆದಕಾರಣ ನಾವು ತಯಾರುಗೊಳಿಸುವ ವಸ್ತುಗಳು ಎಷ್ಟರಮಟ್ಟಿಗೆ ನಿಖರವಾಗಿರಬೇಕು ಅಥವಾ ಸಮಾನತೆ ಹೊಂದಿರಬೇಕು ಎಂಬುದನ್ನು ಮೊದಲೇ ನಿರ್ಧರಿಸುವುದು ಉಚಿತ. ಉತ್ಪಾದನೆಯ ಬಳಿಕ ಕಂಡುಬರುವ ಈ ಗುಣಭೇದಗಳು ನಮ್ಮ ನಿತ್ಯ ಉಪಯೋಗದಲ್ಲಿ ಅಡ್ಡ ಬರದಿರಲು ವಸ್ತುಗಳು ನಿಖರವಾಗಿರಬೇಕು ಅಥವಾ ಸಮಾನತೆಯನ್ನು ಹೊಂದಿರಬೇಕು ಎಂದು ಅಸ್ಪಷ್ಟವಾಗಿ ಹೇಳುವುದಕ್ಕೆ ಬದಲಾಗಿ ಗುಣದ ಸಮಾನತೆಯ ಅಂತರದ ವ್ಯಾಪ್ತಿಯ ಪೂರ್ಣ ವಿವರಣೆ ಕೊಡುವುದು ಒಳಿತು.

ಸ್ಥಿರವಾದ (ಸ್ಟೇಬಲ್) ಕಾರ್ಯವಿಧಾನಗಳನ್ನೊಳಗೊಂಡ (ಕೈಗಾರಿಕಾ ಅಥವಾ ಸ್ವಾಭಾವಿಕ) ಉತ್ಪನ್ನ ಕ್ಷೇತ್ರದಲ್ಲಿ ತಯಾರಾಗುವ ಯಾವುದೇ ವಸ್ತುವಿನಲ್ಲಿ (ಸಾಕಷ್ಟು ಕರಾರುವಾಕ್ಕಾಗಿ ಅಳೆದಾಗ) ಕಂಡುಬರುವ ಗುಣಭೇದ ಒಟ್ಟಾಗಿ(ಅಗ್ರಿಗೇಟ್) ಪ್ರಸಾಮಾನ್ಯ ವಿತರಣೆಯನ್ನು ಹೊಂದಿರುವುದಾಗಿ ತಿಳಿದುಬಂದಿದೆ. ಸಂಖ್ಯಾಕಲನತಜ್ಞರ ಪರಿಭಾಷೆಯಲ್ಲಿ ಇದು ನಾರ್ಮಲ್ ಡಿಸ್ಟ್ರಿಬ್ಯೂಷನ್ ಅಥವಾ ಗೌಸಿಯನ್ ಡಿಸ್ಟ್ರಿಬ್ಯೂಷನ್. ಪ್ರಸಾಮಾನ್ಯ ವಿತರಣೆಯ ಲಕ್ಷಣಗಳನ್ನು ಪೂರ್ಣವಾಗಿ ತಿಳಿದುಕೊಂಡಿರುವ ಸಂಖ್ಯಾಕಲನ ವಿಜ್ಞಾನಿಗಳ ಪ್ರಕಾರ ಈ ವಿತರಣೆ ಘಂಟಾಕಾರದ ವಕ್ರವನ್ನು ಪ್ರದರ್ಶಿಸುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಮುಖ್ಯವಾಗಿ ನೋಡಿ ಗಮನಿಸಬೇಕಾದ ಅಂಶವಿದು: ಗುಣನಿಯಂತ್ರಣ ಸಾಧಿಸಿದಾಗ ಉತ್ಪಾದಿಸಿದ ವಸ್ತುಗಳನ್ನು ಒಂದನ್ನೊಂದಕ್ಕೆ ಪರಸ್ಪರ ಹೋಲಿಸಿ ನಿಖರವಾಗಿ ಅಳೆದಾಗ ಗುಣವ್ಯತ್ಯಾಸಗಳು ಕಂಡುಬಂದರೂ ಸಾಮುದಾಯಿಕವಾಗಿ ಇವನ್ನು ಪರಿಶೀಲಿಸಿದಾಗ ವ್ಯತ್ಯಾಸಗಳು ಸ್ಥಿರಪ್ರರೂಪದಲ್ಲಿರುವುದು (ಸ್ಟೇಬಲ್ ಪ್ಯಾಟರ್ನ್) ಕಂಡುಬರುತ್ತದೆ. ಸ್ಥಿರಪ್ರರೂಪವಾಗಿ ಕಂಡುಬರುವ ಭೇದವೇ ವಸ್ತುಗುಣದ ಒರೆಗಲ್ಲು ಅಥವಾ ಅಳತೆಯ ಮಾನ ಎಂದು ಧಾರಾಳವಾಗಿ ಹೇಳಬಹುದು. ನೇರವಾಗಿ ಅಳತೆ ಮಾಡಬಹುದಾದ ವಸ್ತುಗುಣಗಳಲ್ಲಿ ಭೇದಗಳು ಪ್ರಸಾಮಾನ್ಯ ವಿತರಣೆಯನ್ನು ಹೊಂದಿದ್ದರೆ ಇದು ಸಮುದಾಯದಲ್ಲಿ ಕಂಡುಬರುವ ಸ್ಥಿರಮಾದರಿ ಗುಣಭೇದದ ಸಂಕೇತ ಎಂದು ತಿಳಿಯಬಹುದು. ಅಲ್ಲದೆ ಸಮುದಾಯದ ಸರಾಸರಿ ಬೆಲೆ $(\overline{X})$ ಗುಣಮಟ್ಟದ ಅಂದಾಜನ್ನು ಮಾಡುತ್ತದೆ; ಮತ್ತು ಸಮುದಾಯದ ಶಿಷ್ಟವಿಚಲನೆ ($\sigma$, ಸ್ಟಾಂಡರ್ಡ್ ಡೀವಿಯೇಷನ್) ಎಂಬ ಹೆಸರಿನ ಒಂದು ಸಾಮುದಾಯಿಕ ಮಾನ ಉತ್ಪಾದನಕ್ಷೇತ್ರದಲ್ಲಿ ಸಹಜವಾಗಿ ಕಂಡುಬರುವ ಗುಣಭೇದವನ್ನು ನಿರ್ಧರಿಸುತ್ತದೆ. ಉತ್ಪಾದನೆಯನ್ನು ಹತೋಟಿಗೊಳಿಸಿದಾಗ ತಯಾರಾದ ಎಲ್ಲ ವಸ್ತುಗಳು (ಶೇ. 99.73)ರಷ್ಟು ಗುಣಮಾನಗಳ $\bar{X}+3\sigma$ ವ್ಯಾಪ್ತಿಯ ಅಂತರದಲ್ಲಿ ಇದ್ದೇ ಇರುವುವು ಎಂದು ಪೂರ್ವಭಾವೀ ಹೇಳಿಕೆ ಕೊಡಬಹುದು. ವಸ್ತುತಯಾರಿಕೆಗಾರ ಈ ವ್ಯಾಪ್ತಿಯನ್ನು ವಸ್ತುವಿನ ಶಿಷ್ಟಮಾನವಾಗಿ ಕೊಡುತ್ತಾನೆ. ಉತ್ಪಾದನೆಯ ಸಮಯದಲ್ಲಿ ಕಾರ್ಯವಿಧಾನಗಳನ್ನು ಹತೋಟಿಯಲ್ಲಿಡಲು ಹಲವಾರು ವಿಧಾನಗಳು ಬಳಕೆಯಲ್ಲಿವೆ. ಗುಣಪರೀಕ್ಷೆ ಮಾಡಲು ನಾವು ಉತ್ಪಾದನೆ ಪೂರ್ಣವಾಗುವ ತನಕ ಕಾಯಬೇಕಾದ ಆವಶ್ಯಕತೆ ಇಲ್ಲ. ಉತ್ಪಾದನೆ ನಡೆಯುತ್ತಿರುವಾಗಲೇ ಕೆಲವು ಪ್ರತಿದರ್ಶಿಗಳನ್ನು (ಸ್ಯಾಂಪಲ್ಸ್) ಗುಣನಿಯಂತ್ರಕ ಚಿತ್ರಗಳ (ಕಂಟ್ರೋಲ್ ಚಾರ್ಟ್ಸ್) ಸಹಾಯದಿಂದ ಪರೀಕ್ಷಿಸಿ ಸ್ಥಿರವಾದ ಕಾರಣಗಳು ಮಾತ್ರ ಗುಣಭೇದದಲ್ಲಿ ಪ್ರಭಾವ ಬೀರುತ್ತಿವೆಯೇ ಎಂದು ಪರೀಕ್ಷಿಸಲಾಗುತ್ತದೆ. ಬೇರೆ ಕಾರಣಗಳೂ ಕಾರ್ಯವಿಧಾನಗಳಲ್ಲಿ ಸೇರಿಕೊಂಡು ಉತ್ಪಾದನೆಯನ್ನು ಬಾಧಿಸುತ್ತಿವೆ ಎಂದು ತೀರ್ಮಾನವಾದರೆ ಅವನ್ನು ನಿವಾರಿಸಲು ಯುಕ್ತಕ್ರಮವನ್ನು ಕೈಗೊಳ್ಳುತ್ತಾರೆ. ಇದೇ ಸಾಮುದಾಯಕ ಗುಣ ನಿಯಂತ್ರಣದ ಅತ್ಯಂತ ಮುಖ್ಯವಾದ ಮತ್ತು ಉಪಯುಕ್ತ ಕಾರ್ಯ.

ಇತರ ಕೆಲವು ವಿಧಾನಗಳನ್ನು ಮುಂದೆ ವಿವರಿಸಿದೆ. ವಸ್ತುಗುಣವನ್ನು ಅಳತೆ ಮಾಡಲು ಸಾಧ್ಯವಿಲ್ಲದಾಗ ಮತ್ತು ತಯಾರಿಸಿದ ವಸ್ತುಗಳನ್ನು ಸಮರ್ಪಕವಾದವು ಮತ್ತು ಅಸಮರ್ಪಕವಾದವು ಎಂದು ಮಾತ್ರ ವಿಂಗಡಿಸಿದ್ದಾಗ ಯುಕ್ತ ಅಂತರದಲ್ಲಿ ಮಾದರಿಗಳನ್ನು ಆಯ್ಕೆ ಮಾಡಿ ಅಸಮರ್ಪಕವಾದವುಗಳ ಪ್ರಮಾಣವನ್ನು ನಿಯಂತ್ರಣ ಚಿತ್ರದ ಮೇಲೆ ಪರಿಶೀಲಿಸಿ ಈ ಪ್ರಮಾಣ ನಿರ್ಣೀತವಾಗಿ ಇರುವುದನ್ನು ಅಥವಾ ಇಲ್ಲದಿರುವುದನ್ನು ಹೇಳಬಹುದು. ಇದೇ ರೀತಿ, ತಯಾರಿಸಿದ ಒಂದೇ ವಸ್ತುವಿನ ಗಾತ್ರ ಅಥವಾ ಕ್ಷೇತ್ರದಲ್ಲಿ ಹಲವಾರು ದೋಷಗಳನ್ನು ಅಥವಾ ಕಳಂಕಗಳನ್ನು ಎಣಿಸಿದ ಸಂದರ್ಭದಲ್ಲೂ (ಉದಾಹರಣೆಗೆ ಗಾಜಿನ ಮೇಲ್ಭಾಗದಲ್ಲಿ ಕಂಡುಬರುವಂಥ ಪ್ರಹಾರದ ಕುಳಿಗಳು) ಗುಣನಿಯಂತ್ರಣ ಸಾಧಿಸುವ ಬಗೆಗಳು ನಮಗೆ ತಿಳಿದಿವೆ.

**ಅಂಗೀಕಾರ ಪ್ರತಿಚಯನ (ಅಕ್ಸೆಪ್ಟೆನ್ಸ್ ಸ್ಯಾಂಪ್ಲಿಂಗ್):** ವಸ್ತುಗಳನ್ನು ರಾಶಿಗಳಲ್ಲಿ ಕೊಂಡಾಗ ರಾಶಿಗಳನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಅನುಸರಿಸಬೇಕಾದ ವಿಧಾನಗಳನ್ನು ವಿಧಿಸಲು ಸಂಖ್ಯಾಕಲನ ವಿಜ್ಞಾನ ವಿಧಾನಗಳು ಉಪಯೋಗಕ್ಕೆ ಬರುತ್ತವೆ. ಕೆಲವೊಮ್ಮೆ ಒಂದು ರಾಶಿಯನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ತಯಾರಿಕೆಯ ಪ್ರಗತಿಪಥದಲ್ಲಿ ಮುಂದಿನ ಹಂತ ಎನಿಸಿಕೊಳ್ಳುತ್ತದೆ. ಒಮ್ಮೊಮ್ಮೆ ತಿರಸ್ಕರಿಸಿದ ರಾಶಿಯನ್ನು ಕೆಲಸಕ್ಕೆ ಬಾರದ್ದೆಂದು ತ್ಯಜಿಸಬೇಕಾಗುತ್ತದೆ ಮತ್ತೆ ಕೆಲವು ಬಾರಿ ತಿರಸ್ಕರಿಸಿದ ರಾಶಿಯಿಂದ ವಸ್ತುಗಳನ್ನು ಒಂದೊಂದಾಗಿ ಪರೀಕ್ಷಿಸಿ ಯೋಗ್ಯವಾದವುಗಳನ್ನು ಮಾತ್ರ ಆಯ್ದಿರಿಸಿಕೊಂಡು ಉಳಿದವುಗಳನ್ನು ಹಿಂತಿರುಗಿಸಬೇಕಾಗುತ್ತದೆ ಅಥವಾ ನಿರುಪಯುಕ್ತವಾದವುಗಳೆಂದು ತೀರ್ಮಾನಿಸಬೇಕಾಗುತ್ತದೆ. ಒದಗಿಸಿದ ವಸ್ತುಗಳ ರಾಶಿ ಸಮರೂಪವಾಗಿದ್ದಲ್ಲಿ(ಹೊಮೊಜೀನಿಯಸ್) ಸಂಖ್ಯಾಕಲನ ವಿಜ್ಞಾನದ ವಿಧಾನಗಳು ಬಳಕೆದಾರನಿಗೂ ಸರಬರಾಜುಗಾರನಿಗೂ ನ್ಯಾಯುವಾದ ವ್ಯವಹಾರ ದೊರಕಿಸಿಕೊಡುವುದರಲ್ಲಿ ಸಹಾಯಕವಾಗುತ್ತವೆ. ಸರ್ವಸಾಧಾರಣವಾಗಿ ನಿರ್ಮಾಣ ಸಂಸ್ಥೆಗಳಲ್ಲಿ ತಂತ್ರಜ್ಞರಿಗೆ ಸಮರೂಪದ ರಾಶಿಗಳನ್ನು ತಯಾರಿಸುವುದು ತಿಳಿದ ವಿಷಯ. ಇಂಥ ಸಂದರ್ಭಗಳಲ್ಲಿ ಅಂಗೀಕಾರ ನಿದರ್ಶನ ವಿಧಾನಗಳು ಬಹುವಾಗಿ ಉಪಯೋಗಕ್ಕೆ ಬರುತ್ತವೆ. ವಸ್ತುಗುಣವನ್ನು ಅಳೆದಾಗ ಅಥವಾ ವರ್ಗೀಕರಿಸಿದಾಗ ಉಪಯೋಗಕ್ಕೆ ಬರಬಹುದಾದ ಅನೇಕ ನಿದರ್ಶನ ವಿಧಾನಗಳು ಮುದ್ರಿತ ಕೋಷ್ಟಕಗಳಲ್ಲಿ ದೊರೆಯುತ್ತವೆ.

**ಪ್ರಯೋಗ ಆಲೇಖಗಳು :** ಸಂಖ್ಯಾಕಲನ ವಿಜ್ಞಾನ ವಿಧಾನಗಳಲ್ಲಿ ಜನಪ್ರಿಯ ಪ್ರಯೋಗ ಆಲೇಖಗಳು ಕೈಗಾರಿಕೆಯಲ್ಲಿ ಅದರಲ್ಲೂ ಸಂಶೋಧನೆ ಮತ್ತು ಮಾರ್ಗದರ್ಶಕ ಯೋಜನೆಗಳಲ್ಲಿ ವ್ಯಾಪಕವಾಗಿ ಉಪಯೋಗಕ್ಕೆ ಬರುತ್ತವೆ. ಎಲ್ಲ ಮಾದರಿಗಳ ಭೇದಗಳನ್ನು ಆರಂಭದಲ್ಲೇ ಪರೀಕ್ಷಿಸಬೇಕಾದಾಗ ಯುಕ್ತವೆನಿಸಿದ ಪ್ರಯೋಗ ತಂತ್ರಗಳನ್ನು ಬಳಸುವುದರ ಜೊತೆಯಲ್ಲೇ ಭೇದ ವಿಶ್ಲೇಷಣೆಯಂಥ (ಅನಾಲಿಸಿಸ್ ಆಫ್ ವೇರಿಯನ್ಸ್) ಸಂಬಂಧಪಟ್ಟ ತಂತ್ರಗಳನ್ನು ಬಳಸುವುದು ಸಹ ಪ್ರಯೋಜನಕಾರಿ ಎಂಬುದು ಮನದಟ್ಟಾಗಿದೆ. ಕೈಗಾರಿಕಾ ಪ್ರಯೋಗ ತಂತ್ರಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಸಾರ್ಥಕತಾ ಪರೀಕ್ಷೆಗಳು (ಟೆಸ್ಟ್ ಆಫ್ ಸಿಗ್ನಿಫಿಕೆನ್ಸ್) ಈ ದಿಶೆಯಲ್ಲಿ ಬಹುವಾಗಿ ಉಪಯೋಗವಾಗುತ್ತವೆ.

**ಹಿಂಚಲನೆಯ ವಿಶ್ಲೇಷಣೆ (ರಿಗ್ರೆಷನ್ ಅನಾಲಿಸಿಸ್) :** ವಿದ್ಯುದ್ದೀಪದ ಒಳಗಿನ ತಂತುವಿನ ಉದ್ದಕ್ಕೂ ಅದರ ಬಾಳಿಕೆ ಗಂಟೆಗಳಿಗೂ ಪರಸ್ಪರ ಸಂಬಂಧವಿರುವಂತೆ ಕೆಲವು ಪರಿಸ್ಥಿತಿಗಳಲ್ಲಿ ವಸ್ತುವಿನ ಗುಣಲಕ್ಷಣಗಳಲ್ಲಿ ಸಂಬಂಧವಿರುವುದು ಕಂಡುಬರುತ್ತದೆ. ಇಂಥ ಸಂದರ್ಭಗಳಲ್ಲಿ ಎರಡು ಗುಣಗಳ ವೀಕ್ಷಿತ ಫಲಗಳನ್ನು ಗ್ರಾಫ್ ಕಾಗದದ ಮೇಲೆ ಕ್ಷಿತಿಜೀಯ ಅಕ್ಷದಲ್ಲಿ ಒಂದು ಗುಣವನ್ನು ಮತ್ತು ಲಂಬ ಅಕ್ಷದಲ್ಲಿ ಮತ್ತೊಂದು ಗುಣವನ್ನು ಜೊತೆ ಬಿಂದುಗಳಾಗಿ ಗುರುತಿಸುವುದರ ಮೂಲಕ ಚದರಿಕೆ ಚಿತ್ರವನ್ನು ಪಡೆಯಬಹುದು. ಇದೇ ರೀತಿಯಲ್ಲಿ ಎಲ್ಲ ವೀಕ್ಷಿತ ಫಲಗಳನ್ನು ಗುರುತಿಸುವುದರಿಂದ ಗುಣಗಳಿಗಿರಬಹುದಾದ ಪರಸ್ಪರ ಸಂಬಂಧ ನಮಗೆ ತಿಳಿಯುತ್ತವೆ. ಈ ಸಂಬಂಧವನ್ನು ಮತ್ತಷ್ಟು ವಿಶದವಾಗಿ ಹಿಂಚಲನೆಯ ವಿಶ್ಲೇಷಣೆ ಎಂಬ ವಿಶೇಷ ಸಂಖ್ಯಾಕಲನ ವಿಧಾನದಿಂದ ಪರೀಕ್ಷಿಸಲಾಗುವುದು. ಒಂದು ಗುಣದಿಂದ ಮತ್ತೊಂದನ್ನು ಅಳೆಯಲು ಈ ಪರಿಶೀಲನೆಗಳು ಸಹಕಾರಿಯಾಗುತ್ತವೆ. ಎರಡಕ್ಕಿಂತ ಹೆಚ್ಚಾಗಿ ಗುಣಗಳಲ್ಲಿ ಸಂಬಂಧ ಕಂಡುಬಂದರೆ ಬಹುಚಕ ವಿಶ್ಲೇಷಣ ವಿಧಾನಗಳು ಸಹಾಯಕವಾಗುತ್ತವೆ.

ಸಂಖ್ಯಾಕಲನ ವಿಜ್ಞಾನದಲ್ಲಿ ಬೆಳೆದಿರುವ ಎಲ್ಲ ವಿಧಾನಗಳನ್ನು ಕೈಗಾರಿಕೆಗಳ ದೋಷ ನಿವಾರಣೆಯಲ್ಲಿ ಉಪಯೋಗಿಸಬಹುದು. ಆದರೆ ಮೇಲೆ ವಿವರಿಸಿದ ಕೆಲವು ವಿಧಾನಗಳು ಮಾತ್ರ ಸಾಮಾನ್ಯವಾಗಿ ಬಳಕೆಗೆ ಬಂದಿವೆ. ಸಾಮುದಾಯಿಕ ಗುಣನಿಯಂತ್ರಣ ತಂತ್ರಗಳು ಕೈಗಾರಿಕೆಗಳಲ್ಲಿ ಬಹಳವಾಗಿ ಉಪಯೋಗದಲ್ಲಿವೆ. ಇವನ್ನು ಬಿಟ್ಟರೆ ರೂಢಿಯಲ್ಲಿರುವ ವಿಧಾನಗಳೆಂದರೆ ಅಂಗೀಕಾರ ಪ್ರತಿಚಯನ, ಪ್ರಯೋಗ ಆಲೇಖಗಳು, ಹಿಂಚಲನೆಯ ವಿಶ್ಲೇಷಣೆ ಮತ್ತು ಇನ್ನು ಕೆಲವು ವಿಧಾನಗಳು ಎಂದು ಹೇಳಬಹುದು.
(ಎಸ್.ಕೆ.ಇ.)

**ಕೈಗಾರಿಕಾ ರಸಾಯನವಿಜ್ಞಾನ :** ರಾಸಾಯನಿಕಗಳ ವ್ಯಾಪಾರಿ ಉತ್ಪಾದನೆಯಲ್ಲಿ ಅನ್ವಯವಾಗುವ ರಸಾಯನ ವಿಜ್ಞಾನ (ಇಂಡಸ್ಟ್ರಿಯಲ್ ಕೆಮಿಸ್ಟ್ರಿ). ರಸಾಯನ ಶಾಸ್ತ್ರದ ಕ್ರಿಯೆಗಳ ಅಧ್ಯಯನದಿಂದ ಆ ಶಾಸ್ತ್ರದ ತತ್ತ್ವಗಳು ಮನವರಿಕೆ ಆಗುತ್ತವೆ. ಪ್ರಯೋಗಮಂದಿರದ

ಸೀಮಿತ ಪರಿಸರದಲ್ಲಿ ಹಲವಾರು ರಾಸಾಯನಿಕಗಳನ್ನು ನಿರ್ದಿಷ್ಟ ವಿಧಾನದಲ್ಲಿ ಕ್ರಿಯೆಗೆ ಒಳಪಡಿಸಿದಾಗ ಒಂದು ನಿರ್ದಿಷ್ಟ ಅಂತಿಮ ಉತ್ಪನ್ನ ಲಭಿಸುತ್ತದೆ. ಆದರೆ ಇದೇ ವಿಧಾನವನ್ನು ಬೃಹತ್ ಪ್ರಮಾಣದಲ್ಲಿ ಅನುಸರಿಸಿ ಅಂತಿಮ ಉತ್ಪನ್ನದ ವ್ಯಾಪಾರಿ ಉತ್ಪಾದನೆಗೆ ತೊಡಗುವಾಗ ಎದುರಾಗುವ ಸಮಸ್ಯೆಗಳು ಸಂಕೀರ್ಣ–ಅವು ರಸಾಯನ ವಿಜ್ಞಾನ, ಯಂತ್ರ ವಿಜ್ಞಾನ, ಅರ್ಥ ಶಾಸ್ತ್ರ, ವಾಣಿಜ್ಯ ಮುಂತಾದ ಹಲವಾರು ಭಿನ್ನ ಕ್ಷೇತ್ರಗಳಿಗೆ ವ್ಯಾಪಿಸಿರುತ್ತವೆ. ಇವುಗಳ ಪರಿಹಾರದ ಅನ್ವೇಷಣೆ ಕೈಗಾರಿಕಾ ರಸಾಯನವಿಜ್ಞಾನದ ಪ್ರಮುಖ ಅಂಗ.

ಆಧುನಿಕ ಕೈಗಾರಿಕೆಗಳೆಲ್ಲವೂ ಬೃಹತ್ ಪ್ರಮಾಣದಲ್ಲಿವೆ. ಇವುಗಳಿಗೆ ಬೇಕಾಗುವ ಕಚ್ಚಾ ವಸ್ತುಗಳೆಲ್ಲವನ್ನೂ ಮೂಲತಃ ನಿಸರ್ಗದಿಂದಲೇ ಪಡೆದು ಅವುಗಳಿಂದ ಉದ್ದಿಷ್ಟ ವಸ್ತುಗಳನ್ನು ತಯಾರಿಸಬೇಕು. ಒಂದು ಕಾಗದ ಕಾರ್ಖಾನೆಯನ್ನೋ, ಸಕ್ಕರೆ ಕಾರ್ಖಾನೆಯನ್ನೋ ಪರಿಶೀಲಿಸಿದರೆ ಮೇಲಿನ ಹೇಳಿಕೆಯ ಯಥಾರ್ಥ್ಯ ಮನದಟ್ಟಾಗುವುದು. ವಸ್ತುಗಳ ಗುಣ, ರಚನೆ, ಪರಿವರ್ತನೆಗಳ ಸಮಗ್ರ ಅಧ್ಯಯನವೇ ರಸಾಯನ ವಿಜ್ಞಾನವಾಗಿರುವುದರಿಂದ ಕೈಗಾರಿಕೆಗಳಲ್ಲೂ ಈ ವಿಜ್ಞಾನದ ಪಾತ್ರ ಎಷ್ಟು ಮಹತ್ತರವಾದದ್ದು ಎಂಬುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ ನಿಸರ್ಗದಲ್ಲಿ ದೊರೆಯುವ ಲೋಹದ ಅದುರುಗಳಿಂದ ಕುಲುಮೆಗಳಲ್ಲಿ ಅವನ್ನು ಪ್ರತ್ಯೇಕಿಸುವುದು ರಾಸಾಯನಿಕ ಕ್ರಿಯೆಯ ಮೂಲಕವೇ. ಭೂಗರ್ಭದಲ್ಲಿ ಸಿಕ್ಕುವ ಪೆಟ್ರೋಲಿಯಂ ಎಣ್ಣೆಯನ್ನು ಶುದ್ಧೀಕರಿಸುವ ಮತ್ತು ಅದರಲ್ಲಿರುವ ವಿವಿಧ ಸಾವಯವ(ಆರ್ಗ್ಯಾನಿಕ್) ಸಂಯುಕ್ತಗಳನ್ನು ಪ್ರತ್ಯೇಕಿಸುವ ಕೈಗಾರಿಕಾ ಕಾರ್ಯಾಚರಣೆಯಲ್ಲಿಯೂ ರಸಾಯನವಿಜ್ಞಾನದ ಪಾತ್ರ ಇದ್ದೇ ಇದೆ. ಹೀಗಿದ್ದರೂ ಇವು ರಾಸಾಯನಿಕ ಕೈಗಾರಿಕೆಗಳೆಂದೆನ್ನಿಸಿಕೊಳ್ಳುವುದಿಲ್ಲ. ಇವನ್ನು ಲೋಹ ಕೈಗಾರಿಕೆ ಮತ್ತು ಪೆಟ್ರೋಲಿಯಂ ಎಣ್ಣೆ ಕೈಗಾರಿಕೆ ಎಂದು ವರ್ಗೀಕರಿಸಲಾಗಿದೆ. ಹಾಗಾದರೆ ರಾಸಾಯನಿಕ ಕೈಗಾರಿಕೆಗಳಾವುವು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಪ್ರಶ್ನೆಗೆ ಒಂದು ನಿಖರ ಉತ್ತರ ಅಥವಾ ಸಮರ್ಪಕ ವಿವರಣೆ ಸಾಧ್ಯವಾಗಿಲ್ಲ. ಅಂತಾರಾಷ್ಟ್ರೀಯ ಸಂಸ್ಥೆಗಳು ಈ ಪ್ರಶ್ನೆಯ ಮೇಲೆ ಜಿಜ್ಞಾಸೆ ನಡೆಸಿದ ಮೇಲೂ ಸರ್ವವ್ಯಾಪಿ ವಿವರಣೆ ಅಸಾಧ್ಯವಾಗಿ ಕಂಡುಬಂದು ರಾಸಾಯನಿಕ ಕೈಗಾರಿಕೆಗಳ ಪಟ್ಟಿಯೊಂದನ್ನು ಮಾಡುವುದೇ ವಿಹಿತವಾಗಿ ಕಂಡುಬಂದಿತು. ಅಂತೆಯೇ ರಾಸಾಯನಿಕ ಗೊಬ್ಬರಗಳು, ಕ್ರಿಮಿಕೀಟನಾಶಕಗಳು, ಕೃತಕ ದಾರಗಳು, ಬಣ್ಣಗಳು, ಗಾಜು, ಸಾಬೂನು, ಕಾಗದ, ಶಾಯಿಗಳು, ಔಷಧಿಗಳು, ಸುವಾಸನಾ ವಸ್ತುಗಳು, ಹೀಗೆ ನೂರಾರು ಕೈಗಾರಿಕಾ ಉತ್ಪನ್ನಗಳ ಪಟ್ಟಿ ಮಾಡಲಾಯಿತು.

ನಿಸರ್ಗದಲ್ಲಿ ಗಾಳಿ, ನೀರು, ಕಲ್ಲಿದ್ದಲು, ಉಪ್ಪು, ಗಂಧಕ, ಸುಣ್ಣಕಲ್ಲು, ಪೆಟ್ರೋಲಿಯಂ ಎಣ್ಣೆ ಹೇರಳವಾಗಿ ದೊರೆಯುತ್ತವೆ. ಕೈಬೆರಳಿನಲ್ಲಿ ಎಣಿಸಬಹುದಾದ ಇಂಥ ಕೇವಲ ಕೆಲವೇ ಸಾಧಾರಣ ವಸ್ತುಗಳನ್ನು ಆಧರಿಸಿರುವ ರಾಸಾಯನಿಕ ಕೈಗಾರಿಕೆಗಳ ಸಂಖ್ಯೆ ಮಾತ್ರ ಅಪಾರವಾದುದು. ಅವುಗಳ ಉತ್ಪನ್ನಗಳಾದರೋ ಆಶ್ಚರ್ಯಕರ ರೀತಿಯಲ್ಲಿ ವಿಭಿನ್ನವಾದುವು. ರಾಸಾಯನಿಕ ಗೊಬ್ಬರಗಳು, ಸುಗಂಧ ದ್ರವ್ಯಗಳು, ಔಷಧಿಗಳು, ಬಣ್ಣಗಳು, ಸ್ಯಾಕರಿನ್ ಮುಂತಾದವೆಲ್ಲ ಇಂಥ ಉತ್ಪನ್ನಗಳು. ವಸ್ತು ಪರಿವರ್ತನೆಯ ಈ ಸಾಹಸದಲ್ಲಿ ರಸಾಯನ ವಿಜ್ಞಾನದ ಪಾತ್ರ ಹಿರಿದು. ಕೆಲವೇ ಕಚ್ಚಾ ವಸ್ತುಗಳಿಂದ ಕಾಲ ಮತ್ತು ಗ್ರಾಹಕರ ಅಭಿರುಚಿಗೆ ತಕ್ಕಂತೆ ಅನೇಕ ಸಂಖ್ಯೆಯ ಉಪಯುಕ್ತ ವಸ್ತುಗಳನ್ನು ರಾಸಾಯನಿಕ ಪರಿವರ್ತನೆಗಳ ಮೂಲಕ ಸಾಧಿಸಬೇಕಾದುದೇ ರಸಾಯನ ವಿಜ್ಞಾನಿಯ ಜವಾಬ್ದಾರಿ ಮತ್ತು ಕರ್ತವ್ಯ. ಈ ಸಾಧನೆಗೆ ಮೊದಲ ಹೆಜ್ಜೆಯಾಗಿ ಮೂಲ ಕಚ್ಚಾವಸ್ತುವಿನ ಲಕ್ಷಣಗಳು, ರಚನೆ, ರಾಸಾಯನಿಕ ಕ್ರಿಯಾ ಪ್ರವೃತ್ತಿ ಮತ್ತು ಪರಿವರ್ತನೆಯನ್ನು ಎಷ್ಟು ಸುಲಭವಾಗಿ ಶೀಘ್ರವಾಗಿ ನಿರ್ವಹಿಸಬಹುದು ಎಂಬುದರ ಬಗ್ಗೆ ಸಂಶೋಧನೆ ನಡೆಯಬೇಕು. ಪರಿವರ್ತನಾ ಕ್ರಿಯೆ ಸಂಶೋಧನೆಯ ಮಟ್ಟದಲ್ಲಿ ಪ್ರಯೋಗಶಾಲೆಯ ಪ್ರಮಾಣದಲ್ಲಿ ಜಯಪ್ರದವಾಗಿ ಕಂಡುಬಂದರೆ ಮುಂದೆ ಅದೇ ರಾಸಾಯನಿಕ ಪರಿವರ್ತನೆಯನ್ನು ದೊಡ್ಡ ಪ್ರಮಾಣದಲ್ಲಿ ಕೂಡ ನಿರ್ವಹಿಸಲು ಸಾಧ್ಯವೇ ಎಂಬುದನ್ನು ಸಾಧಿಸಿಯೇ ತೋರಿಸಬೇಕು. ಈ ಹಂತದಲ್ಲಿ ಪ್ರಯೋಗಶಾಲೆಯ ಶುದ್ಧ ರಸಾಯನವಿಜ್ಞಾನ ಸಂಶೋಧಕನಿಗೆ ನೇರವಾಗಿ ಭೌತವಿಜ್ಞಾನಿಗಳು, ಗಣಿತವಿಜ್ಞಾನಿಗಳು, ಯಂತ್ರವಿಜ್ಞಾನಿಗಳು ಬೇಕೇ ಬೇಕು. ಅಥವಾ ರಸಾಯನ ವಿಜ್ಞಾನದ ಸಂಶೋಧಕನೆ ತನ್ನ ಕಾರ್ಯ ಪೂರೈಕೆಗೆ ಎಷ್ಟು ಅವಶ್ಯವೋ ಅಷ್ಟು ಭೌತವಿಜ್ಞಾನ, ಗಣಿತವಿಜ್ಞಾನ, ಯಂತ್ರವಿಜ್ಞಾನಿಗಳ ಅಧ್ಯಯನವನ್ನು ನಡೆಸಿ ಪರಿಣಿತನಾಗಿದ್ದರೆ ಮತ್ತೂ ಒಳ್ಳೆಯದು. ಆದ್ದರಿಂದಲೇ ಅಂಥವರನ್ನೇ ಆಧುನಿಕ ರಾಸಾಯನಿಕ ಕೈಗಾರಿಕೆಗಳ ನಿರ್ಮಾಣ ಮತ್ತು ನಿರ್ವಹಣೆಗೆ ಉನ್ನತ ತಾಂತ್ರಿಕ ಪರಿಣತರಾಗಿ ಅಥವಾ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಲು ಅರ್ಹರೆಂದು ಒಪ್ಪಲಾಗಿದೆ. ವಿಶ್ವವಿದ್ಯಾಲಯಗಳಲ್ಲೂ ಕೈಗಾರಿಕಾ ರಸಾಯನವಿಜ್ಞಾನಕ್ಕೆ ಸಂಬಂಧಿಸಿದಂತೆಯೇ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ಪ್ರತ್ಯೇಕವಾಗಿ ಕೊಡಲಾಗುತ್ತದೆ. ಅಂತಿಮವಾಗಿ ಉತ್ಪನ್ನಗಳ ಬೆಲೆಗೆ ಸಂಬಂಧಿಸಿದಂತೆ ಎಲ್ಲ ಕೈಗಾರಿಕೆಗಳ ಗುರಿಯೂ ಒಂದೇ: ಗ್ರಾಹಕರ ಕೊಳ್ಳುವ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಯೋಗ್ಯ ಬೆಲೆಗೆ ಮಾರುವುದು. ಆದ್ದರಿಂದ ಕೈಗಾರಿಕಾ ರಸಾಯನವಿಜ್ಞಾನಿ ಅನಿವಾರ್ಯವಾಗಿ ಅರ್ಥಶಾಸ್ತ್ರ ಪರಿಚಿತಸ್ಥನೂ ಆಗಲೇ ಬೇಕು. ಕಚ್ಚಾವಸ್ತುಗಳು ಮತ್ತು ರಾಸಾಯನಿಕ ಪರಿವರ್ತನಾ ಕ್ರಿಯೆ ಇವುಗಳಿಗೆ ತಗಲುವ ವೆಚ್ಚದ ಗಮನ ಸದಾ ಇರಲೇಬೇಕು. ಹೀಗಾಗಿ ರಾಸಾಯನಿಕ ಕೈಗಾರಿಕೆಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಮೂಲತಹ ಶುದ್ದ ರಸಾಯನವಿಜ್ಞಾನದ ಪಾತ್ರ ಹಿರಿದಾದರೂ ಆ ಕೈಗಾರಿಕೆ ಜಯಪ್ರದವಾಗಿ ಉತ್ಪಾದನೆ ಮಟ್ಟವನ್ನು ಮುಟ್ಟಬೇಕಾದರೆ ಕೈಗಾರಿಕಾ ರಸಾಯನವಿಜ್ಞಾನಿಗಳು ಭೌತವಿಜ್ಞಾನ, ಯಂತ್ರವಿಜ್ಞಾನ, ಅರ್ಥಶಾಸ್ತ್ರಗಳ ಪರಿಚಯಸ್ಥರೂ ಆಗಿರಲೇಬೇಕು.

ವಿಜ್ಞಾನದ ಸಿದ್ಧಿಗಳನ್ನು ಸಾಮಾನ್ಯ ಮಾನವನ ಉಪಯೋಗಕ್ಕೆ ಬಳಸುವ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇದೆ. ವಿಜ್ಞಾನ ಇಂದು ಪರಿಚಿತವಾಗಿರುವಂತೆ ಒಂದು ವಿಶಿಷ್ಟ ಸ್ಥಾನವನ್ನು ಪಡೆಯದಿದ್ದ ಪುರಾತನ ನಾಗರಿಕತೆಗಳ ಕಾಲದಲ್ಲಿಯೂ ರಾಸಾಯನಿಕ ಕೈಗಾರಿಕೆಗಳೂ ಕೈಗಾರಿಕಾ ರಸಾಯನವಿಜ್ಞಾನವೂ ಇದ್ದುವೆಂಬುದು ನಿರ್ವಿವಾದ ವಿಷಯ. ಈಜಿಪ್ಟ್, ಚೀನ ದೇಶಗಳಲ್ಲಿ ಪುರಾತನ ಕಾಲಗಳಲ್ಲೂ ಗಾಜು ತಯಾರಿಕೆ, ಬಟ್ಟೆಗಳಿಗೆ ಬಣ್ಣ ಹಾಕುವುದು, ಚರ್ಮ ಹದಮಾಡುವುದು ಕಲೆಗಳಾಗಿದ್ದುವು. ಆದರೆ ಅವುಗಳ ಜ್ಞಾನ ಮತ್ತು ಸಿದ್ಧಿಯ ಫಲ ಕೇವಲ ಕಲಾಕಾರನಿಗೆ ಅಥವಾ ಅವರ ಪೋಷಕ ಸಿರಿವಂತರಿಗೆ ಮಾತ್ರ ಮೀಸಲಾಗಿತ್ತೆನ್ನಬಹುದು. ಅವು ಸಾಮಾನ್ಯ ಮಾನವನಿಗೆ ಎಟುಕುವಂಥ ರೀತಿಯ ಉತ್ಪನ್ನಗಳಾಗಿರಲಿಲ್ಲ. ಪ್ರಾಯಶಃ ಮೊತ್ತಮೊದಲ ಬಾರಿಗೆ ರಾಸಾಯನಿಕ ಸಂಶೋಧನೆಯ ಫಲವೊಂದನ್ನು ಕೈಗಾರಿಕಾ ಮಟ್ಟದಲ್ಲಿ ವ್ಯಾಪಾರದೃಷ್ಟಿಯಿಂದ ಕಾರ್ಯಾಚರಣೆಗೆ ತಂದ ವಿಜ್ಞಾನಿಯೆಂದರೆ ಲೆಬ್ಲಾಂಕ್. ಈ ಘಟನೆ ನಡೆದದ್ದು 18ನೆಯ ಶತಮಾನದ ಉತ್ತರಾರ್ಧದಲ್ಲಿ; ಉಪ್ಪಿನಿಂದ ಸೋಡಿಯಂ ಕಾರ್ಬೊನೇಟ್ ಎಂಬ ಕ್ಷಾರವಸ್ತುವನ್ನು ಕೈಗಾರಿಕಾ ಪ್ರಮಾಣದಲ್ಲಿ ತಯಾರುಮಾಡಿದ ಕೀರ್ತಿ ಅವನಿಗೆ ಸಲ್ಲುವುದು. ಆತನ ಸಿದ್ಧಿ ಬಟ್ಟೆ ಮತ್ತು ಸಾಬೂನು ಕೈಗಾರಿಕೆಗೆ ಅತ್ಯವಶ್ಯವಾದ ಕ್ಷಾರ ಪೂರೈಕೆಗೆ ನಾಂದಿಯಾಯಿತು. ಲೆಬ್ಲಾಂಕನ ಕ್ಷಾರ ಕೈಗಾರಿಕೆಯ ಸಂಕ್ಷಿಪ್ತ ಚರಿತ್ರೆಯನ್ನು ನಿರೂಪಿಸುವುದರ ಮೂಲಕ, ಆಧುನಿಕ ಕೈಗಾರಿಕಾ ರಸಾಯನವಿಜ್ಞಾನದ ತಳಹದಿ ಹೇಗೆ ನಿರ್ಮಾಣವಾಯಿತು ಅದರ ಇಂದಿನ ಸ್ವರೂಪದ ಛಾಯೆ ಅಂದೇ ಹೇಗೆ ಗ್ರಹಿಸಲ್ಪಟ್ಟಿತು ಎಂಬುದನ್ನು ತಿಳಿಯಬಹುದು. ಉಪ್ಪನ್ನು ಸಾರ ಸಲ್ಫ್ಯೂರಿಕ್ ಆಮ್ಲದೊಡನೆ ಕ್ರಿಯೆಗೆ ಒಳಪಡಿಸಿದರೆ ಸೋಡಿಯಂ ಸಲ್ಫೇಟ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲಗಳು ಉತ್ಪತ್ತಿಯಾಗುವುವು.

$$2NaCl + H_2SO_4 \rightarrow Na_2SO_4 + 2HCl$$

ಸೋಡಿಯಂ ಸಲ್ಫೇಟನ್ನು ಇಂಗಾಲ ಮತ್ತು ಸುಣ್ಣಕಲ್ಲಿನೊಡನೆ ಬೆರೆಸಿ ಮಿಶ್ರಣವನ್ನು ಒಂದು ತಿರುಗುವ ಕುಲುಮೆಯಲ್ಲಿ ಹುರಿದರೆ ಸೋಡಿಯಂ ಕಾರ್ಬೊನೇಟ್ ಉಂಟಾಗುವುದು. ಕ್ರಿಯೆಯ ಅನಂತರ ಮಿಶ್ರಣವನ್ನು ನೀರಿನಲ್ಲಿ ಜಾಲಾಡಿದರೆ ಸೋಡಿಯಂ ಕಾರ್ಬೊನೇಟ್ ಕ್ಷಾರ ನೀರಿನಲ್ಲಿ ವಿಲೀನವಾಗುವುದು. ಫಲಿತ ದ್ರಾವಣವನ್ನು ಕಾಸಿ ಬತ್ತಿಸಿದರೆ ಘನಕ್ಷಾರ ದೊರೆಯುವುದು.

$$Na_2SO_4 + 2C \rightarrow Na_2S + 2CO_2$$

$$Na_2S + CaCO_3 \rightarrow Na_2CO_3 + CaS$$

ಈ ಕೈಗಾರಿಕೆಯ ವಿವಿಧ ಘಟ್ಟಗಳನ್ನು ಅನುಕ್ರಮವಾಗಿ ಪರಿಶೀಲಿಸಿದರೆ ಕೈಗಾರಿಕಾ ರಸಾಯನವಿಜ್ಞಾನದ ಸ್ವರೂಪ ಮತ್ತು ವಿವಿಧ ಘಟ್ಟಗಳಲ್ಲಿ ತಲೆದೋರುವ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅದರ ಪಾತ್ರ ಮತ್ತು ಕೈಗಾರಿಕೆಯ ಆರ್ಥಿಕ ಪ್ರಗತಿಯಲ್ಲಿ ಸಹೋತ್ಪನ್ನಗಳ ಪಾತ್ರ ಮುಂತಾದ ಅನೇಕ ವಿಷಯಗಳು ಬೆಳಕಿಗೆ ಬರುವುವು. ಮೊದಲ ಹಂತದಲ್ಲೇ ಉಪ್ಪಿನೊಡನೆ ರಾಸಾಯನಿಕ ಕ್ರಿಯೆಗೆ ಬೇಕಾಗುವ ಅಗಾಧ ಮೊತ್ತದ ಸಲ್ಫ್ಯೂರಿಕ್ ಆಮ್ಲವನ್ನು ಪೂರೈಸಲು ಕ್ಷಾರ ತಯಾರಿಕೆಗಾರರು ತಮ್ಮ ಕಾರ್ಖಾನೆಯ ಆವರಣದಲ್ಲೇ ಆಮ್ಲ ಕೈಗಾರಿಕೆಯನ್ನು ಕೈಗೊಳ್ಳಬೇಕಾಯಿತು. ಇದರಿಂದ ಗಂಧಕಾಂಶವಿರುವ ಅದುರುಗಳನ್ನು ಹುರಿದು ಗಂಧಕದ ಆಕ್ಸೈಡನ್ನು ಪಡೆದು ಅದರಿಂದ ಆಮ್ಲವನ್ನು ಪಡೆಯುವ ರಾಸಾಯನಿಕ ಕೈಗಾರಿಕೆ ಅಭಿವೃದ್ಧಿಗೆ ಬರುವಂತಾಯಿತು.

ಆಧುನಿಕ ಕೈಗಾರಿಕಾ ರಸಾಯನವಿಜ್ಞಾನವೂ ಈ ತತ್ತ್ವವನ್ನು ಪ್ರತಿಪಾದಿಸುತ್ತದೆ. ಮುಖ್ಯ ಕೈಗಾರಿಕೆಗೆ ಬೇಕಾಗುವ ಎಲ್ಲ ರಾಸಾಯನಿಕಗಳನ್ನು ಆದಷ್ಟುಮಟ್ಟಿಗೆ ತನ್ನ ಆವರಣ ಅಥವಾ ಆಡಳಿತ ನಿಯಂತ್ರಣದಲ್ಲಿಯೇ ಉತ್ಪಾದಿಸುವುದು ಆರ್ಥಿಕವಾಗಿ ಸಾಧುವಾದುದು. ಅಲ್ಲದೆ ಇದರಿಂದ ಅನೇಕ ಸಹಕೈಗಾರಿಕೆಗಳ ಅಭಿವೃದ್ಧಿಗೂ ದಾರಿಯಾಗುತ್ತದೆ. ಆದಷ್ಟು ಸ್ವಾವಲಂಬನೆಯನ್ನು ಗಮನದಲ್ಲಿಟ್ಟುಕೊಂಡೇ ಕೈಗಾರಿಕಾ ರಸಾಯನವಿಜ್ಞಾನಿ ಸಂಶೋಧನೆ ಮತ್ತು ನಿರ್ಮಾಣಕಾರ್ಯವನ್ನು ಕೈಗೊಳ್ಳಬೇಕು. ಲೆಬ್ಲಾಂಕನ ವಿಧಾನ ಮೊದಲು ಕಾರ್ಯಾಚರಣೆಗೆ ಬಂದಾಗ ಕಾರ್ಖಾನೆಗಳ ಸುತ್ತಲೂ ಸಹೋತ್ಪನ್ನವಾದ ಹೈಡ್ರೋಕ್ಲೋರಿಕ್ ಆಮ್ಲದ ಧೂಮ ಹರಡಿ ಸುತ್ತಲಿನ ಪ್ರದೇಶದ ಬೆಳೆಗಳು ನಾಶ

ಆಗತೊಡಗಿದುವು. ಭೂಮಾಲಿಕರ ಆಕ್ಷೇಪಣೆ ಮತ್ತು ಒತ್ತಾಯಗಳಿಗೆ ಮಣಿದು, ಹೈಡ್ರೋಕ್ಲೋರಿಕ್ ಆಮ್ಲವನ್ನು ಹೊರವಾತಾವರಣಕ್ಕೆ ಸೇರಲು ಬಿಡದಂತೆ ನಿಯಂತ್ರಿಸುವ ಸಮಸ್ಯೆಯನ್ನು ಕೈಗಾರಿಕಾ ರಸಾಯನವಿಜ್ಞಾನ ಪರಿಹರಿಸಬೇಕಾಯಿತು. ಅದರ ಫಲವಾಗಿ ಹೈಡ್ರೋಕ್ಲೋರಿಕ್ ಆಮ್ಲದ ಉತ್ಕರ್ಷಣೆಯಿಂದ ಕ್ಲೋರಿನ್ ಅನಿಲವನ್ನು ತಯಾರಿಸುವ ವಿಧಾನ ಮೈದಳೆಯಿತು. ಕ್ಲೋರಿನ್ ಅನಿಲವನ್ನು ಚಲುವೆಕಾರಿಯಾಗಿ ಉಪಯೋಗಿಸುತ್ತಾರೆ. ಹೀಗೆ ಕ್ಷಾರಕೈಗಾರಿಕೆಯ ಸಹೋತ್ಪನ್ನವಾದ ಆಮ್ಲಕ್ಕೆ ಒಂದು ಉಪಯೋಗ, ಬೆಲೆ ದೊರಕಿಸಿಕೊಟ್ಟಂತಾಯಿತು. ಅಂತಿಮವಾಗಿ ಕ್ಷಾರವನ್ನು ನೀರಿನಲ್ಲಿ ವಿಲೀನಗೊಳಿಸಿ ಪ್ರತ್ಯೇಕಿಸಿದ ಮೇಲೆ ಉಳಿಯುವ ಬೂದಿಯಲ್ಲಿ ಗಣನೀಯ ಗಂಧಕಾಂಶವಿರುತ್ತದೆ. ಆ ಬೂದಿಯಿಂದ ಗಂಧಕವನ್ನು ಪುನಃ ಪಡೆಯಲು ಲೆಬ್ಲಾಂಕನೇ ಸ್ವತಃ ರಾಸಾಯನಿಕ ವಿಧಾನವೊಂದನ್ನು ಆಚರಣೆಗೆ ತಂದ. ಹೀಗೆ ಒಂದು ಪ್ರಮುಖ ಉತ್ಪನ್ನದ ಗುರಿಸಾಧನೆಯಲ್ಲಿ ಎದುರಿಸಿ ಪರಿಹರಿಸಬೇಕಾದ ಉಪಸಮಸ್ಯೆಗಳು ಹಲವಾರು. ಕೈಗಾರಿಕಾ ರಸಾಯನವಿಜ್ಞಾನದ ಸಂಶೋಧಕ ಆ ಎಲ್ಲ ಸಮಸ್ಯೆಗಳಿಗೂ ಪರಿಹಾರ, ಎಲ್ಲ ಸಹೋತ್ಪನ್ನಗಳಿಗೂ ಒಂದು ಉಪಯೋಗ ಇರುವಂತೆ ಒಟ್ಟಿನಲ್ಲಿ ಪ್ರಮುಖ ಕೈಗಾರಿಕೆ ಸ್ವಾವಲಂಬಿಯೂ ಆರ್ಥಿಕವಾಗಿ ಸಾಧುವೂ ಆಗುವಂತೆ ಶ್ರಮಿಸಬೇಕು. ಲೆಬ್ಲಾಂಕನ ವಿಧಾನ ಯಶಸ್ವಿಯಾಗಿ ದೊಡ್ಡ ಮೊತ್ತದಲ್ಲಿ ಬಳಕೆಗೆ ಬಂದಿದ್ದಾಗಲೇ ಅದಕ್ಕಿಂತ ಸುಲಭ ವೆಚ್ಚದ ಕೈಗಾರಿಕಾ ವಿಧಾನವೊಂದನ್ನು ಸಾಲ್ವೆ ಎಂಬಾತ ಕಂಡುಹಿಡಿದದ್ದರಿಂದ ಲೆಬ್ಲಾಂಕನ ವಿಧಾನ ನಶಿಸಲಾರಂಭಿಸಿತು. ಈಗ ಅದಕ್ಕೆ ಉಳಿದಿರುವುದು ಕೇವಲ ಐತಿಹಾಸಿಕ ಮಹತ್ತ್ವ ಮಾತ್ರ.. ಇದರಿಂದ ವ್ಯಕ್ತವಾಗುವ ಒಂದು ಪ್ರಮುಖ ಅಂಶವೆಂದರೆ ಕೈಗಾರಿಕಾ ರಸಾಯನವಿಜ್ಞಾನ ಸಂಶೋಧನೆ ಸತತವಾಗಿ ಹೊಸ ಹೊಸ ವಿಧಾನಗಳಿಂದ ಕಡಿಮೆ ವೆಚ್ಚದ ವಸ್ತುಗಳನ್ನು ಒದಗಿಸುವುದರಲ್ಲಿ ಸಾಗುತ್ತಿರಲೇಬೇಕು. ಅಂತಾರಾಷ್ಟ್ರೀಯ ಪೈಪೋಟಿ ಬಹುವಾಗಿರುವ ಸನ್ನಿವೇಶದಲ್ಲಿ ವರ್ಷವರ್ಷಕ್ಕೆ ಗ್ರಾಹಕರ ಅಭಿರುಚಿ ಬೇಡಿಕೆ ಹೆಚ್ಚುತ್ತಿರುವ ಮತ್ತು ಬದಲಾಯಿಸುತ್ತಿರುವ ಪ್ರಪಂಚದಲ್ಲಿ ಕೈಗಾರಿಕಾ ರಸಾಯನವಿಜ್ಞಾನದ ಸಂಶೋಧನೆ ನಿರಂತರವಾಗಿ ನಡೆಯಬೇಕು. ಆದ್ದರಿಂದಲೇ ಪ್ರತಿಯೊಂದು ಬೃಹದ್ರಾಸಾಯನಿಕ ಕೈಗಾರಿಕಾ ಸಂಸ್ಥೆಯೂ ಅದರದೇ ಆದ ವಿಶಿಷ್ಟ ಆಧುನಿಕ ಸಂಶೋಧನಾಲಯವನ್ನಿಟ್ಟುಕೊಂಡು ಮೇಧಾವಿ ಸಂಶೋಧಕರನ್ನು ನೇಮಿಸಿಕೊಂಡಿರುತ್ತದೆ. ಇಲ್ಲಿ ವಿವಿಧ ವಿಜ್ಞಾನಶಾಖೆಗಳ ಸಂಶೋಧಕರು ಕಲೆತು ಪರಸ್ಪರ ಸಹಕರಿಸಿ ಸಮಸ್ಯೆಗಳನ್ನು ಪರಿಹರಿಸುವುದು ಇತ್ತೀಚಿನ ದಿನಗಳ ಒಂದು ವೈಶಿಷ್ಟ್ಯ. ತಮ್ಮ ಸಂಸ್ಥೆಯ ಉತ್ಪನ್ನಗಳ ಗುಣ ಸುಧಾರಿಕೆ, ಬೆಲೆ ತಗ್ಗಿಕೆ, ನೂತನ ವಸ್ತುಗಳ ತಯಾರಿಕೆಯ ದಿಶೆಯಲ್ಲಿ ಪ್ರಯೋಗಗಳು ಅತ್ಯವಶ್ಯ.

ಲೆಬ್ಲಾಂಕ್ ಕ್ಷಾರತಯಾರಿಕೆಯ ಮೂಲಕ ನಿರವಯವ (ಇನಾರ್ಗ್ಯಾನಿಕ್) ರಸಾಯನ ವಿಜ್ಞಾನಾಧ್ಯಯನವನ್ನು ಕೈಗಾರಿಕಾ ತಯಾರಿಕೆಗೆ ಅಳವಡಿಸಿ ನಿರವಯವ ರಾಸಾಯನಿಕ ಕೈಗಾರಿಕೆಗಳ ಪಿತಾಮಹನೆನಿಸಿದರೆ ಪರ್ಕಿನ್ (**ನೋಡಿ– ಪರ್ಕಿನ್,–ವಿಲಿಯಮ್–ಹೆನ್ರಿ**) ಎಂಬ ವಿಜ್ಞಾನಿ ಸಾವಯವ ಅಥವಾ ಇಂಗಾಲ ಸಂಯುಕ್ತಗಳ ಕೈಗಾರಿಕೆಗಳ ಪಿತಾಮಹನೆನಿಸಿಕೊಳ್ಳುತ್ತಾನೆ. ಈ ವಿಭಾಗದ ಆರಂಭ 19ನೆಯ ಶತಮಾನ ಉತ್ತರಾರ್ಧ. ನಿಸರ್ಗದಲ್ಲಿ ಬೆಳೆಯುವ ಅನೇಕ ಗಿಡಮೂಲಿಕೆಗಳಿಂದ ಔಷಧಿಗಳು (ಉದಾಹರಣೆಗೆ ಕ್ವಿನೀನ್), ಆಮ್ಲಗಳು (ಉದಾಹರಣೆಗೆ ಹುಣಿಸೆ, ನಿಂಬೆ ಜಾತಿ ಹಣ್ಣುಗಳಿಂದ ಟಾರ್‌ಟಾರಿಕ್ ಮತ್ತು ಸೈಟ್ರಿಕ್ ಆಮ್ಲ), ಬಟ್ಟೆ ಕೈಗಾರಿಕೆ ದಾರಗಳು(ಉದಾಹರಣೆಗೆ ಹತ್ತಿ, ಪ್ರಾಣಿ ಮೂಲಗಳಿಂದ ರೇಷ್ಮೆ ಉಣ್ಣೆದಾರಗಳು, ರಬ್ಬರ್ ಮರಗಳಿಂದ ರಬ್ಬರ್) ಹೀಗೆ ಪಡೆಯಬಹುದಾದ ಅನೇಕ ಉಪಯುಕ್ತ ವಸ್ತುಗಳೆಲ್ಲವೂ ಇಂಗಾಲಸಂಯುಕ್ತಗಳೆಂದು 19ನೆಯ ಶತಮಾನದಲ್ಲಿ ತಿಳಿದಿತ್ತು. ಇಂಗಾಲ ಸಂಯುಕ್ತವಾದ ಬಣ್ಣವೊಂದನ್ನು ಪ್ರಥಮವಾಗಿ ಪ್ರಯೋಗಾಲಯದಲ್ಲಿ ಕೃತಕವಾಗಿ ನಿರ್ಮಿಸಿದ ಕೀರ್ತಿ ಪಾರ್ಕಿನ್ನನದು. ಕಲ್ಲಿದ್ದಲಿನಿಂದ ಪಡೆಯಬಹುದಾದ ಟಾರೆಣ್ಣೆಯಿಂದ ಬಣ್ಣದ ಅನೇಕ ವಸ್ತುಗಳನ್ನು ತಯಾರಿಸುವುದು ಯೂರೋಪಿನ ದೇಶದಲ್ಲಿ ಬೇಗ ಪ್ರಚಾರಕ್ಕೆ ಬಂದಿತು. ವಿವಿಧ ಬಣ್ಣಗಳ ತಯಾರಿಕೆ ಆಗ ಶೈಶವಾವಸ್ಥೆಯಲ್ಲಿತ್ತು. ಇಂಥ ಬಣ್ಣಗಳ ರಚನೆಯೇನು ಎಂಬುದು ಮಾತ್ರ ತಿಳಿದಿರಲಿಲ್ಲ. 1865ರಲ್ಲಿ ಕೂಲೆಕೆ (ನೋಡಿ) ಎಂಬ ವಿಜ್ಞಾನಿ ಬೆಂಜೀನ್ ಎಂಬ ಇಂಗಾಲ ಸಂಯುಕ್ತವಾದ ಆಂತರಿಕ ರಚನೆಯನ್ನು ಪ್ರತಿಪಾದಿಸಿದ ಮೇಲೆಯೇ ವಿಜ್ಞಾನಿಗಳ ದೃಷ್ಟಿ ಪ್ರತಿಯೊಂದು ಇಂಗಾಲ ಸಂಯುಕ್ತಗಳ ಅಂತರಿಕ ರಚನೆಯ ಕಡೆಗೆ ಹರಿಯಿತು. ಮೂಲತಃ ಒಂದು ವಸ್ತು ಅಥವಾ ರಾಸಾಯನಿಕ ಸಂಯುಕ್ತದ ಆಂತರಿಕ ರಚನೆಗೂ ಅದರ ಗುಣಗಳಿಗೂ ನಿಕಟ ಸಂಬಂಧವಿರುತ್ತದೆ. ಅಂತೆಯೇ ಒಂದು ಸಂಯುಕ್ತದ ರಚನೆಯನ್ನು ಕುರಿತ ಜ್ಞಾನದಿಂದ ನಿಕಟಸಂಬಂಧಿತ ಆದರೆ ಮಾರ್ಪಾಡಾದ ರಚನೆಯ ಸಂಯುಕ್ತವನ್ನು ತಯಾರಿಸುವುದರ ಮೂಲಕ ವಸ್ತುವಿನ ಗುಣಗಳನ್ನೇ ಬದಲಾಯಿಸಬಹುದೆಂದಾಯಿತು. ಈ ಅರಿವಿನಿಂದಾಗಿ ವಿಶೇಷತಃ ಜರ್ಮನಿ ದೇಶದಲ್ಲಿ ಕೃತಕ ಬಣ್ಣಗಳ ರಾಸಾಯನಿಕ ಕೈಗಾರಿಕೆಗಳು ಭರದಿಂದ ಅಸ್ತಿತ್ವಕ್ಕೆ ಬಂದುವು. ಸಸ್ಯಮೂಲಗಳಿಂದ ಪರಿಚಿತವಾಗಿದ್ದ ಅಲಿಜರೀನ್, ಇಂಡಿಗೋನೀಲಿ ಬಣ್ಣಗಳನ್ನು ಅವುಗಳ ಆಂತರಿಕ ರಚನೆಯ ಅರಿವಿನಿಂದ ಕೃತಕವಾಗಿ ಕಡಿಮೆ ವೆಚ್ಚದಲ್ಲಿ ಕೈಗಾರಿಕಾ ಪರಿಮಾಣದಲ್ಲಿ ಪಡೆಯುವುದು ಸಾಧ್ಯವಾಯಿತು. ಇದರಿಂದಾಗಿ ಮ್ಯಾಡರ್ ಮತ್ತು ಇಂಡಿಗೋ ವ್ಯವಸಾಯವೇ ನಶಿಸಿಹೋಗಿ ಕೆಲಕಾಲದವರೆಗೆ ಆ ವ್ಯವಸಾಯಗಾರರಿಗೆ ಬಹಳ ನಷ್ಟವಾಯಿತು. ಈಗಂತೂ ಕೈಗಾರಿಕಾರಸಾಯನವಿಜ್ಞಾನ ಯಾವೊಂದು ವಸ್ತುವಿನ ರಚನೆ, ವಾತಾವರಣದೊಂದಿಗೆ ವಸ್ತುವಿನ ಮೇಲೆ ಉಷ್ಣತೆ ಮತ್ತು ಒತ್ತಡಗಳ ತೀವ್ರ ಬದಲಾವಣೆಯಿಂದಾಗಬಹುದಾದ ಪರಿಣಾಮ, ವಿಕಿರಣ ಕ್ರಿಯೆಯ ಪ್ರಭಾವ ಇವೆಲ್ಲದರ ವಿಶಾಲ ಅಧ್ಯಯನವನ್ನು ಒಳಗೊಂಡಿರುತ್ತದೆ. ಟಾರೆಣ್ಣೆಯಿಂದ ಬಣ್ಣಗಳಲ್ಲದೆ ಆಸ್ಫೋಟಕ ವಸ್ತುಗಳು, ಪ್ಲಾಸ್ಟಿಕ್ ಸಾಮಾನುಗಳನ್ನು ಸಹ ತಯಾರಿಸಬಹುದು. ಈ ಹೊಸ ಕೈಗಾರಿಕೆಗಳ ತೀವ್ರ ಅಭಿವೃದ್ಧಿಯಿಂದ ಇಂಗಾಲ ಸಂಯುಕ್ತಗಳ ಹೊಸ ಮೂಲಗಳನ್ನು ಹುಡುಕುವುದು ಅನಿವಾರ್ಯವಾಗಿ ಪೆಟ್ರೋಲಿಯಂ ಎಣ್ಣೆ ಬಳಕೆಗೆ ಬಂದಿತು. ಈ ಎಣ್ಣೆಯನ್ನು ಕಾಸಿ ಬಟ್ಟಿ ಇಳಿಸುವುದರ ಮೂಲಕ ಪೆಟ್ರೋಲ್, ಸೀಮೆಎಣ್ಣೆ, ಕೀಲೆಣ್ಣೆಗಳು ಮತ್ತು ಇಂಗಾಲ ಸಂಯುಕ್ತಗಳನ್ನು ಪಡೆಯಬಹುದು. ಹೀಗೆ ಪಡೆದ ಇಂಗಾಲ ಸಂಯುಕ್ತಗಳನ್ನು ಆಧರಿಸಿ ಬಂದಿರುವ ಕೃತಕ ರಬ್ಬರ್, ಪ್ಲಾಸ್ಟಿಕ್, ದಾರ, ಸಾಬೂನು ವ್ಯವಸಾಯದಲ್ಲಿ ಉಪಯೋಗಿಸುವ ಕ್ರಿಮಿಕೀಟನಾಶಕಗಳು ಇತ್ಯಾದಿ ಕೈಗಾರಿಕೆಗಳು ರಾಸಾಯನಿಕ ಕೈಗಾರಿಕೆಗಳ ಚರಿತ್ರೆಯಲ್ಲಿ ಮೂರನೆಯ ಮೈಲುಗಲ್ಲು ಎನ್ನಬಹುದು. 20ನೆಯ ಶತಮಾನದಲ್ಲಿ ಪ್ರಗತಿಯ ಸಂಕೇತಗಳಾದ ಪರಮಾಣು ಶಕ್ತಿ ಉತ್ಪಾದನೆ ಮತ್ತು ಚಂದ್ರಯಾನ ಇವುಗಳಲ್ಲೂ ಕೈಗಾರಿಕಾ ರಸಾಯನವಿಜ್ಞಾನ ಆದ ವಿಶಿಷ್ಟ ಪಾತ್ರವನ್ನು ವಹಿಸಿದೆ. ವಿದಳನ ಹೊಂದುವ ಯುರೇನಿಯಂ ಇಂಧನಪೂರೈಕೆ, ಉಷ್ಣಸಹಿಷ್ಣು ಮತ್ತು ವಿಕಿರಣ ಸಹಿಷ್ಣು ರಚನಾ ವಸ್ತುಗಳ ಪೂರೈಕೆ, ವಿಕಿರಣಶೀಲ ಮೂಲವಸ್ತುಗಳ ಸಮಸ್ಥಾನಿಗಳ ಉತ್ಪಾದನೆ, ರಾಕೆಟ್‌ಗಳಿಗೆ ವಿಶೇಷ ಇಂಧನ ಪೂರೈಕೆಯೇ ಮುಂತಾದ ಅನೇಕ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ.

ರಾಸಾಯನಿಕ ಕೈಗಾರಿಕೆಗಳ ಸಂಖ್ಯೆ ಬಹಳವಿರಬಹುದು. ಉತ್ಪನ್ನಗಳು ವೈವಿಧ್ಯಮಯವಾಗಿರಬಹುದು–ಆದರೆ ಎಲ್ಲ ರಾಸಾಯನಿಕ ಕೈಗಾರಿಕೆಗಳಲ್ಲೂ ಅಂತರ್ಗತವಾಗಿರುವ ಸಮಾನಾಂಶವೆಂದರೆ ತಯಾರಿಕೆಯಲ್ಲಿ ಬಳಸುವ ತಂತ್ರಗಳು. ಅವು ತತ್ತ್ವಶಃ ಒಂದೇ ರೀತಿಯವು. ಸಕ್ಕರೆಯ ಹರಳನ್ನು ಪಡೆಯುವುದಕ್ಕಾಗಲೀ ಕ್ಷಾರದ್ರಾವಣಗಳಿಂದ ಘನಕ್ಷಾರವನ್ನು ಪಡೆಯುವುದಕ್ಕಾಗಲೀ ರಾಸಾಯನಿಕ ಗೊಬ್ಬರಗಳಿಗೆ ಅವಶ್ಯವಾದ ಸಾರ ಫಾಸ್ಫಾರಿಕ್ ಆಮ್ಲವನ್ನು ತಯಾರಿಸಲಿಕ್ಕಾಗಲೀ ಉಪಯೋಗಿಸುವ ತಂತ್ರವೆಂದರೆ ದ್ರಾವಣಗಳನ್ನು ಕಾಸಿ ಬತ್ತಿಸುವುದು. ಈ ಕಾರ್ಯಾಚರಣೆಯಲ್ಲಿ ಉಷ್ಣವ್ಯಯವಾಗುವುದು ಮತ್ತು ವಸ್ತುವಿನ ಭೌತಸ್ಥಿತಿ ಬದಲಾಯಿಸುವುದು. ರಾಸಾಯನಿಕ ಪರಿವರ್ತನೆ ಏನಿಲ್ಲ. ಉತ್ಪಾದನೆಯ ಕೊನೆಯ ಹಂತದಲ್ಲಿ ಕೈಗಾರಿಕಾ ರಸಾಯನವಿಜ್ಞಾನಿ ಉಷ್ಣ ಶಕ್ತಿಯ ವ್ಯಯವೆಷ್ಟು, ದ್ರಾವಣಗಳನ್ನು ಕಾಸಿ ಬತ್ತಿಸುವ ಸಲಕರಣೆ ರಚಿಸಲು ಕಾದ ದ್ರಾವಣಗಳೊಡನೆ ರಾಸಾಯನಿಕವಾಗಿ ನಿಷ್ಕ್ರಿಯವಾದಂಥ ಲೋಹವಾವುದು ಎಂಬ ಅಂಶಗಳಿಗೆಲ್ಲ ಗಮನಕೊಡಬೇಕು. ಸಕ್ಕರೆಯ ದ್ರಾವಣವನ್ನು ಕಾಸಲು ಉಕ್ಕಿನ ಬಾಂಡಲೆಗಳೂ ಕ್ಷಾರದ್ರಾವಣಗಳಿಗೆ ನಿಕ್ಕಲ್ ಲೋಹಲೇಪಿತ ಉಕ್ಕಿನ ಬಾಂಡಲೆಗಳೂ ಫಾಸ್ಫಾರಿಕ್ ಆಮ್ಲ ದ್ರಾವಣಕ್ಕೆ ಸೀಸಲೋಹಾವರಿತ ಉಕ್ಕಿನ ಬಾಂಡಲೆಗಳೂ ಯುಕ್ತ. ಇದನ್ನೆಲ್ಲ ಪರಿಶೀಲಿಸಿ ಯುಕ್ತ ನಿರ್ಮಾಣಕಾರ್ಯ ಕೈಗೊಳ್ಳುವುದು ಕೈಗಾರಿಕಾ ರಸಾಯನವಿಜ್ಞಾನ ಸಂಶೋಧನೆಗಳ ಪರಿಣಾಮವಾಗಿ ಈ ಮೇಲೆ ಉದಾಹರಿಸಿರುವಂತೆ ರಾಸಾಯನಿಕ ಪರಿವರ್ತನೆ ಏನೂ ಆಗದೆ ಭೌತ ಬದಲಾವಣೆಗಳೇ ಪ್ರಧಾನವಾದ ಕೆಲ ಮೂಲ ಕಾರ್ಯಾಚರಣೆಗಳನ್ನು ಒಂದು ವರ್ಗದವುಗಳನ್ನಾಗಿ ಪರಿಗಣಿಸಬಹುದು. ಅವನ್ನು ಸಂಗ್ರಹಿಸಿ ಆಚರಣೆಯಲ್ಲಿರುವ ಕೈಗಾರಿಕೆಗಳ ಉದಾಹರಣೆ ಸಮೇತ ಕೆಳಗೆ ಪಟ್ಟಿ ಮಾಡಲಾಗಿದೆ.

| **ಮೂಲ ಕಾರ್ಯಾಚರಣೆ** | **ಕೈಗಾರಿಕೆಯ ಹೆಸರು** |
|---|---|
| **1** | **2** |
| 1. ದ್ರವ ಚಲನೆ | ನೀರು, ಎಣ್ಣೆ, ಪೆಟ್ರೋಲಿಯಂ |
| 2. ಉಷ್ಣ ವ್ಯಯ | ಕಲ್ಲಿದ್ದಲಿನ ಬಟ್ಟಿ, ಸಿಮೆಂಟ್, ಗಾಜು, ಪೆಟ್ರೋಲಿಯಂ ಗಂಧಕವನ್ನು ಉರಿಸುವುದು |
| 3. ಬತ್ತಿಸುವುದು | ಉಪ್ಪು, ಸಕ್ಕರೆ, ಕ್ಷಾರ |
| 4. ಆರ್ದ್ರೀಕರಣ (ಹ್ಯೂಮಿಡಿಫಿಕೇಶನ್) | ಬಟ್ಟೆ, ದಾರ |
| 5. ಅನಿಲಗಳನ್ನು ಹೀರಿಕೊಳ್ಳುವುದು | ಕಲ್ಲಿದ್ದಲಿನ ಬಟ್ಟಿ, ಕೈಗಾರಿಕಾ ಅನಿಲಗಳು, ಚಲುವೆ ಮಾಡುವುದು |
| 6. ಬಟ್ಟಿ ಇಳಿಸುವುದು | ಕಲ್ಲಿದ್ದಲು, ಆಲ್ಕೋಹಾಲ್, ಪೆಟ್ರೋಲಿಯಂ ಸುಗಂಧದ್ರವ್ಯಗಳು, ಗ್ಲಿಸರಿನ್ |
| 7. ಒಣಗಿಸುವುದು | ಸಾಬೂನು, ಕಾಗದ, ಪಿಂಗಾಣಿ, ಸಕ್ಕರೆ, |

| | |
|---|---|
| | ರಬ್ಬರ್ |
| 8. ಬೆರೆಸುವುದು | ರಾಸಾಯನಿಕ ಗೊಬ್ಬರಗಳು, ಕೃತಕ ಬಣ್ಣಗಳು, ಡೈನಮೈಟ್ |
| 9. ಶೋಧಿಸುವುದು | ಪಿಂಗಾಣಿ, ರೇಯಾನ್, ಸಕ್ಕರೆ, ಇಂಗಾಲ ಸಂಯುಕ್ತಗಳು |
| 10. ಜರಡಿಹಿಡಿಯುವುದು | ಸಿಮೆಂಟ್, ಸಕ್ಕರೆ, ಕ್ಷಾರ, |
| 11. ಸ್ಫಟಿಕೀಕರಣ | ಸಕ್ಕರೆ, ಸೋಡಿಯಂ ಪೊಟಾಷಿಯಂ ಮತ್ತು ಕ್ಯಾಲ್ಸಿಯಂ ಲವಣಗಳು |
| 12. ಕೇಂದ್ರಾಪಗಮನ ಶೋಧನೆ | ಅಮೋನಿಯಂ ಸಲ್ಫೇಟ್, ಕ್ಯಾಲ್ಸಿಯಂ ಲವಣಗಳು |
| 13. ಗಾತ್ರವನ್ನು ಕಡಿಮೆ ಮಾಡುವಿಕೆ | ಸಿಮೆಂಟ್, ಗಾಜು, ರಾಳ |
| 14. ಕಚ್ಚಾಮಾಲುಗಳನ್ನು ಸಾಗಿಸುವಿಕೆ | ಸಿಮೆಂಟ್,ಗಾಜು, ರಬ್ಬರ್, ಪಿಂಗಾಣಿ |

ಮೇಲಿನ ಈ ಕಾರ್ಯಾಚರಣೆಗಳಲ್ಲಿ ಮೂಲತಃ ಎಲ್ಲದರಲ್ಲೂ ಶಕ್ತಿ ವ್ಯಯ ಅಥವಾ ಜಡವಸ್ತುವಿನ ಸ್ಥಾನಪಲ್ಲಟ ಮಾತ್ರ ನಡೆಯುತ್ತದೆ ಎಂಬುದನ್ನು ಗ್ರಹಿಸಬಹುದು. ಕೈಗಾರಿಕಾ ರಸಾಯನವಿಜ್ಞಾನದಲ್ಲಿ ಈ ಮೂಲತತ್ತ್ವಗಳ ಅಧ್ಯಯನ ಫಲಿತ ಅನುಭವದ ಆಧಾರದ ಮೇಲೆ ಯಂತ್ರ ಸಲಕರಣೆಗಳ ವಿನ್ಯಾಸ, ನಿರೂಪಣೆಗೆ ಒಂದು ಪ್ರಮುಖ ಅಂಶ.

ರಾಸಾಯನಿಕ ಕೈಗಾರಿಕೆಗಳಲ್ಲಿ ಕಚ್ಚಾ ವಸ್ತುಗಳನ್ನು ಪೂರ್ವನಿಯೋಜಿತ ಉಪಯುಕ್ತ ರಾಸಾಯನಿಕ ವಸ್ತುಗಳಾಗಿ ಮಾರ್ಪಾಡುಮಾಡಲು ನಿರ್ದಿಷ್ಟ ರಾಸಾಯನಿಕ ಕ್ರಿಯೆಗಳನ್ನು ನಡೆಸಬೇಕಾಗುವುದು. ಲೆಂಬ್ಲಾಂಕನ ವಿಧಾನದಲ್ಲಿ ಉಪ್ಪಿನಿಂದ ಕ್ಷಾರವನ್ನು ಪಡೆಯುವಾಗ ಹಂತ ಹಂತವಾಗಿ ಮೊದಲು ಉಭಯ ಅಪಘಟನ (ಡಬಲ್ ಡೀಕಾಂಪೊಸಿಷನ್) ಅನಂತರ ಅಪಕರ್ಷಣ ಮತ್ತೆ ಉಭಯ ಅಪಘಟನ ಕ್ರಿಯೆಗಳು ನಡೆಯುವುದು ಆಗಲೇ ವೇದ್ಯವಾಗಿದೆ. ಒಂದೇ ರೀತಿಯ ರಾಸಾಯನಿಕ ಕ್ರಿಯೆಯನ್ನು ಅನೇಕ ರಾಸಾಯನಿಕ ಕೈಗಾರಿಕೆಗಳಲ್ಲಿ ಬಳಸುವುದು ಸಾಮಾನ್ಯ ಅನುಭವ. ಉದಾಹರಣೆಗೆ ಅಮೋನಿಯದಿಂದ ನೈಟ್ರಿಕ್ ಆಮ್ಲ ತಯಾರಿಕೆ, ಅಸಿಟಾಲ್ಡಿಹೈಡ್‌ನಿಂದ ಅಸಿಟಿಕ್ ಆಮ್ಲ ತಯಾರಿಕೆ ಇವೆಲ್ಲವೂ ಮೂಲತಃ ಉತ್ಕರ್ಷಣ ಕ್ರಿಯೆಯನ್ನು ಆಧರಿಸಿವೆ. ಮೇಲಿನ ಉದಾಹರಣೆಗಳಲ್ಲಿ ನಿರವಯವ ಮತ್ತು ಇಂಗಾಲ ಸಂಯುಕ್ತಗಳ ರಾಸಾಯನಿಕ ಕೈಗಾರಿಕೆಗಳೆರಡೂ ಇವೆ. ಆದ್ದರಿಂದ ಅದು ಯಾವ ವರ್ಗದ ರಾಸಾಯನಿಕ ಕೈಗಾರಿಕೆಯೇ ಆಗಲಿ ಮೂಲತಃ ವಸ್ತುವಿನ ಪರಿವರ್ತನೆಯನ್ನು ನಡೆಸಲು ನಿರ್ದಿಷ್ಟ ರಾಸಾಯನಿಕ ಕ್ರಿಯೆಗಳನ್ನು ನಡೆಸಬೇಕು. ಕೈಗಾರಿಕಾ ರಸಾಯನ ವಿಜ್ಞಾನ ಈ ಮೂಲ ರಾಸಾಯನಿಕ ಕ್ರಿಯೆಗಳು ಆ ಕೈಗಾರಿಕಾ ಉತ್ಪನ್ನಕ್ಕೆ ಸಂಬಂಧಿಸಿದಂತೆ ಹೇಗೆ, ಎಷ್ಟರವರೆಗೆ ಎಷ್ಟು ವೇಗವಾಗಿ, ಯಾವ ಯಾವ ಸಹೋತ್ಪನ್ನಗಳನ್ನು ಹೊರಗೆಡಹುತ್ತಾ ನಡೆಯುತ್ತವೆ ಎಂಬುದನ್ನು ವಿವರವಾಗಿ ವಿಮರ್ಶಾತ್ಮಕವಾಗಿ ಪರಿಚಯ ಮಾಡಿಕೊಡುತ್ತದೆ. ಕೆಲವು ಮೂಲ ರಾಸಾಯನಿಕ ಕ್ರಿಯೆಗಳನ್ನು ಅವನ್ನು ಆಧರಿಸಿರುವ ಕೈಗಾರಿಕೆಗಳನ್ನು ಇಲ್ಲಿ ಪಟ್ಟಿ ಮಾಡಿದೆ.

| ಮೂಲ ರಾಸಾಯನಿಕ ಕ್ರಿಯೆ | ಕೈಗಾರಿಕೆ |
|---|---|
| 1 | 2 |
| 1. ದಹನಕ್ರಿಯೆ | ಇಂಧನಗಳು, ಶಕ್ತಿ |
| 2. ಉತ್ಕರ್ಷಣ | ಕೈಗಾರಿಕಾ ಅನಿಲಗಳು, ರಂಜಕದಿಂದ ಫಾಸ್ಫಾರಿಕ್‌ಆಮ್ಲ ಸಲ್ಫ್ಯೂರಿಕ್ ಆಮ್ಲ, ನೈಟ್ರಿಕ್ ಆಮ್ಲ, ಅಸಿಟಿಕ್ ನೈಟ್ರಿಕ್ ಆಮ್ಲಗಳು, ಸುಗಂಧ ವಸ್ತುಗಳು |
| 3. ಅಪಕರ್ಷಣ | ರಂಜಕ, ಗಂಧಕ, ಅನಿಲೀನ್ |
| 4. ತಟಸ್ಥೀಕರಣ(ಆಮ್ಲಕ್ಷಾರ ಪ್ರತಿಕ್ರಿಯೆ) | ನೀರು, ಅಮೋನಿಯ–ಸೂಪರ್ ಫಾಸ್ಫೇಟ್ ಗೊಬ್ಬರ, ಯೂರಿಯ, ಅಮೋನಿಯಂ ಸಲ್ಫೇಟ್, ಸಾಬೂನು ಅಲ್ಯೂಮಿಯಂ ಸಲ್ಫೇಟ್ |
| 5. ಉಭಯ ಅಪಘಟನ | ನೀರು, ಕ್ಷಾರ, ಫಾಸ್ಫಾರಿಕ್, ಹೈಡ್ರೋಕ್ಲೋರಿಕ್ ಮತ್ತು ಹೈಡ್ರೊಫ್ಲೋರಿಕ್ ಆಮ್ಲಗಳು, ಸೂಪರ್ ಫಾಸ್ಫೇಟ್ ಗೊಬ್ಬರ |
| 6. ವಿದ್ಯುದ್ವಿಶ್ಲೇಷಣೆ | ಜಲಜನಕ, ಆಮ್ಲಜನಕ, ಕ್ಷಾರ, ಕ್ಲೋರಿನ್ |
| 7. ಉಷ್ಣ ವಿಭಜನೆ | ಸುಣ್ಣ |
| 8. ನೈಟ್ರೇಷನ್ | ಆಸ್ಫೋಟಕ ವಸ್ತುಗಳು, ಬಣ್ಣಗಳು, ಸುಗಂಧ ವಸ್ತುಗಳು |
| 9. ಎಸ್ಟ್ರಿಫಿಕೇಷನ್ | ರೇಯಾನ್, ವೀನೈಲ್ ಅಸಿಟೇಟ್, |
| 10. ಅಮಿನೇಷನ್ | ಅನಿಲೀನ್ |
| 11. ಹ್ಯಾಲೋಜಿನೇಷನ್ | ಕೀಟನಾಶಕಗಳು, ಬಣ್ಣಗಳು, ಯುದ್ಧದಲ್ಲಿ ಉಪಯೋಗಿಸುವ ರಾಸಾಯನಿಕ ಸಂಯುಕ್ತಗಳು |
| 12. ಸಲ್ಫೋನೇಷನ್ | ಆಸ್ಫೋಟಕ ವಸ್ತುಗಳು, ಕಾಗದ, ಬಣ್ಣಗಳು |
| 13. ಜಲಯೋಜನೆ ಮತ್ತು ಜಲ ವಿಶ್ಲೇಷಣೆ (ಹೈಡ್ರೇಷನ್ ಅಂಡ್ ಹೈಡ್ರಾಲಿಸಿಸ್) | ಸುಣ್ಣ, ಫಾಸ್ಫಾರಿಕ್ ಆಮ್ಲ, ಸಲ್ಫ್ಯೂರಿಕ್ ಆಮ್ಲ, ಗ್ಲಿಸರಿನ್, ಸಾಬೂನು, ಗ್ಲೂಕೋಸ್, ಫೀನಾಲ್ |
| 14. ಜಲಜನಕೀಕರಣ (ಹೈಡ್ರೋಜಿನೇಷನ್) | ಅಮೋನಿಯ, ಹೈಡ್ರೋಕ್ಲೋರಿಕ್ ಆಮ್ಲ, ವನಸ್ಪತಿ ತುಪ್ಪ ಕೃತಕ ಸಾಬೂನು, ಪೆಟ್ರೋಲಿಯಂ. |
| 15. ಆಲ್ಕಲೈಸೇಷನ್ | ಫೋಟೋಗ್ರಫಿ, ಪೆಟ್ರೋಲಿಯಂ ಔಷಧಿಗಳು, ಲೆಡ್ ಟೆಟ್ರಾ ಈಥೈಲ್, ರಬ್ಬರ್, ಪೆಟ್ರೋಲಿಯಂ |
| 16. ಪಾಲಿಮರೈಸೇಷನ್ | ರಬ್ಬರ್, ಪೆಟ್ರೋಲಿಯಂ |
| 17. ಹುದುಗಿಸುವಿಕೆ | ಆಲ್ಕೋಹಾಲ್, ಇಂಗಾಲದ ಡೈಆಕ್ಸೈಡ್, ವೈನ್, ಬೀರ್ ಮುಂತಾದ ಮದ್ಯ ಪಾನೀಯಗಳು |

ರಾಸಾಯನಿಕ ಕೈಗಾರಿಕೆಗಳಲ್ಲಿ ಕ್ರಿಯಾಗಾರವೇ ಮುಂತಾದ ಸಲಕರಣೆಗಳನ್ನು ರಚಿಸಲು ಉಪಯೋಗಿಸುವ ವಸ್ತುಗಳೆಂದರೆ ಮರ, ಸಿಮೆಂಟ್, ಉಕ್ಕು ಮತ್ತಿತರ ಲೋಹಗಳಾದ ನಿಕ್ಕಲ್, ತಾಮ್ರ, ಅಲ್ಯೂಮಿನಿಯಂ, ಟ್ಯಾಂಟಾಲ್, ಜಿರ್‌ಕೋನಿಯಂ ಮಿಶ್ರ ಲೋಹಗಳಾದ ಸ್ಟೇನ್‌ಲೆಸ್ ಸ್ಟೀಲ್ ಮತ್ತು ಡ್ಯೂರಲ್ಯೂಮಿನಿಯಂ, ರಬ್ಬರ್, ಪ್ಲಾಸ್ಟಿಕ್ಸ್ ಇತ್ಯಾದಿ. ಇವುಗಳ ತುಕ್ಕು ನಿರೋಧಕ ಶಕ್ತಿ, ಉಷ್ಣಸಹಿಷ್ಣುತೆ, ಬೆಲೆ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಯುಕ್ತವಾದುದನ್ನು ಆರಿಸುವುದು ಕೈಗಾರಿಕಾ ರಸಾಯನ ವಿಜ್ಞಾನಿಗಳ ಕೆಲಸ.

ಬೃಹತ್ ರಾಸಾಯನಿಕ ಕೈಗಾರಿಕೆಗಳಲ್ಲಿ ರಾಸಾಯನಿಕ ಕ್ರಿಯೆ ನಿರಂತರವಾಗಿ ನಡೆಯುತ್ತಿರುವಾಗ ಅಗಾಧ ಆದರೂ ನಿರ್ದಿಷ್ಟ ಪ್ರಮಾಣದಲ್ಲಿ ಕಚ್ಚಾ ವಸ್ತುಗಳನ್ನು ಅಥವಾ ಕ್ರಿಯಾ ವಸ್ತುಗಳನ್ನು ಪೂರೈಸುತ್ತಿರಬೇಕು. ರಾಸಾಯನಿಕ ಕ್ರಿಯೆ ನಡೆಯುತ್ತಿರುವಾಗ ಕ್ರಿಯೆ ಸಮರ್ಪಕವಾಗಿ ಸಾಗುತ್ತಿದೆಯೇ ಎಂಬುದನ್ನು ದೃಢೀಕರಿಸಲು ಆಗಾಗ್ಗೆ ಕ್ರಿಯಾಗಾರದೊಳಗಿಂದ ವಸ್ತುವನ್ನು ಹೊರಗೆಳೆದು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಬೇಕು. ಅಂತಿಮವಾಗಿ ಉತ್ಪನ್ನವನ್ನು ವಿಶ್ಲೇಷಣೆಗೆ ಒಳಪಡಿಸಿ ಅದರ ಶುದ್ಧತೆ ಹಾಗೂ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು. ಹೀಗೆ ಆದಿಯಿಂದ ಅಂತ್ಯದವರೆಗೂ ಸದಾ ಎಚ್ಚರದಿಂದ ಕೈಗಾರಿಕ ರಸಾಯನಿಕ ವಿಜ್ಞಾನಿ ರಾಸಾಯನಿಕ ಕ್ರಿಯೆಯನ್ನು ಸಮರ್ಪಕವಾಗಿ ಸಾಧಿಸಬೇಕು. ಈ ಸಾಧನೆಗೆ ಅನುಕೂಲಕರವಾಗಿ ಸುಸಜ್ಜಿತ ರಾಸಾಯನಿಕ ವಿಶ್ಲೇಷಣಾ ಪ್ರಯೋಗಮಂದಿರ, ಸುಶಿಕ್ಷಿತ ತಂತ್ರಜ್ಞರು ಮತ್ತು ಕುಶಲಕರ್ಮಿಗಳು ಎಲ್ಲರೂ ಆವಶ್ಯಕ. ಎಲ್ಲಕ್ಕಿಂತ ಹೆಚ್ಚಾಗಿ ನಿರಂತರ ಸಂಶೋಧನೆ. ಅದೊಂದೇ ಕೈಗಾರಿಕಾ ರಸಾಯನವಿಜ್ಞಾನವನ್ನು ಜೀವಂತವಾಗಿಯೂ ಮಾನವಕೋಟಿಗೆ ಉಪಯುಕ್ತವಾಗಿಯೂ ಇಡಬಲ್ಲುದು. (ಎಚ್.ಎಸ್.ಎನ್.)

**ಕೈಗಾರಿಕಾ ವಾಸ್ತುಶಿಲ್ಪ :** ಕಾರ್ಖಾನೆಗಳು, ಆಡಳಿತಕ್ಕೆ ಸಂಬಂಧಪಟ್ಟ ಕಟ್ಟಡಗಳು, ಪ್ರಯೋಗಶಾಲೆ ಮುಂತಾದವುಗಳ ನಿರ್ಮಾಣಗಳಿಗೆ ಸಂಬಂಧಿಸಿದ ವಿಜ್ಞಾನ (ಇಂಡಸ್ಟ್ರಿಯಲ್ ಆರ್ಕಿಟೆಕ್ಚರ್).

**ಸಾಮಾನ್ಯ ಬೆಳವಣಿಗೆ :** ವಾಸ್ತುಶಿಲ್ಪದ ದೃಷ್ಟಿಯಿಂದ ಕೈಗಾರಿಕಾ ಕಟ್ಟಡಗಳು ಮೂರು ರೀತಿಯ ಅವಸ್ಥೆಗಳನ್ನು ಈ ಕೆಳಕಂಡ ಕ್ರಮದಲ್ಲಿ ಪಡೆದಿವೆಯೆನ್ನಬಹುದು. ಜಲಶಕ್ತಿಯನ್ನು ಬಳಸುತ್ತಿದ್ದ ಕಾಲದಲ್ಲಿ ಮರದ ಮತ್ತು ಕಲ್ಲಿನ ಕಟ್ಟಡಗಳೂ ಉಗಿಶಕ್ತಿ ಬಳಕೆಗೆ ಬಂದಾಗ ಇಟ್ಟಿಗೆ ಮತ್ತು ಲೋಹಗಳನ್ನು ಉಪಯೋಗಿಸಿಕೊಂಡ ನಿರ್ಮಾಣಗಳೂ ವಿದ್ಯುಚ್ಛಕ್ತಿಯ ಕಾಲದಲ್ಲಿ ಉಕ್ಕನ್ನೊಳಗೊಂಡ ಭದ್ರಸಿಮೆಂಟ್ ಕಾಂಕ್ರೀಟಿನ ರಚನೆಗಳೂ ಬಳಕೆಗೆ ಬಂದುವು. 18ನೆಯ ಶತಮಾನದ ಅಂತ್ಯಭಾಗದಲ್ಲಿ ಕಟ್ಟಲಾದ ಗಿರಣಿಗಳು ಹೊರನೋಟಕ್ಕೆ ವಿದ್ಯಾಮಂದಿರಗಳಂತೆ ಕಾಣುತ್ತಿದ್ದುವು. ಎಷ್ಟೋ ವೇಳೆ ಕೃಷೋಲಾಗಳು ಸಾರ್ವಜನಿಕ ಕಟ್ಟಡಗಳಂತಿರುತ್ತಿದ್ದುವು. 19ನೆಯ ಶತಮಾನದಲ್ಲಿ ಕಾರ್ಖಾನೆಗಳು ಆಗಿನ ಕಾಲದ ಶೈಲಿ ಮಾದರಿಗಳಾದ ಗ್ರೀಕ್, ಗಾಥಿಕ್ ಮತ್ತು ಇಟಾಲಿಯನ್ ಭವನಗಳ ಶೈಲಿಗಳನ್ನು ಅನುಸರಿಸಿದುವು. ಆ ಗೃಹಗಳ ಮೇಲೆ ಇರುತ್ತಿದ್ದಂಥ ಗೋಪುರಗಳು ಮತ್ತಿತರ ವಿವರಗಳು ಈ ಕಾರ್ಖಾನೆಗಳ ಮೇಲೂ ಕಂಗೊಳಿಸಿದುವು. ಅದೇ ಶತಮಾನದ ಉತ್ತರಾರ್ಧದಲ್ಲಿ ಬಹುಪಾಲು ವಾಸ್ತುಶಿಲ್ಪಿಗಳು ತಮ್ಮ ಬುದ್ಧಿಚಾತುರ್ಯವನ್ನೆಲ್ಲ ಸಾರ್ವಜನಿಕ ಕಟ್ಟಡಗಳಿಗೆ ಮತ್ತು ರಾಜಗೃಹಗಳಿಗೆ ಮೀಸಲಾಗಿರಿಸಿ ಅಕಲಾತ್ಮಕವೆಂದು ತಿಳಿಯಲಾಗಿದ್ದ ಕಾರ್ಖಾನೆಗಳನ್ನು ಎಂಜಿನಿಯರಿಗೆ ಬಿಟ್ಟುಬಿಟ್ಟಿದ್ದರು. ಎಂಜಿನಿಯರುಗಳು

ಈ ಸಮಸ್ಯೆಯನ್ನು ಬಹಳ ರಚನಾತ್ಮಕವಾಗಿ ನಿಭಾಯಿಸಿ ಅಪ್ಪಟವಾದ ಮೌಲ್ಯಗಳುಳ್ಳ ಕಟ್ಟಡಗಳನ್ನು ರಚಿಸಿದರು. ಇವರು ಈ ಕಾರ್ಯದಲ್ಲಿ ಎಷ್ಟು ಕಸುವನ್ನು ವ್ಯಕ್ತಪಡಿಸಿದರೆಂದರೆ 20ನೆಯ ಶತಮಾನದ ಆರಂಭಕಾಲದಲ್ಲಿ ಕಾರ್ಯಪ್ರವೃತ್ತತೆಯ (ಫಂಕ್ಷನಲಿಸಂ) ಆಧಾರತತ್ತ್ವದ ಮೇಲೆ ಹೊಸ ವಾಸ್ತುಶಿಲ್ಪವೊಂದು ಉದ್ಭವವಾದಾಗ ಎಂಜಿನಿಯರುಗಳು ನಿಯೋಜಿಸಿದ ಕಟ್ಟಡಗಳೇ ಜಯಭೇರಿ ಹೊಡೆದುವು. ಅವು ವೈಜ್ಞಾನಿಕವಾಗಿಯೂ ತರ್ಕಸಮ್ಮತವಾಗಿಯೂ ಇದ್ದುವು. ಅವನ್ನು ನಿರ್ಮಿಸುವಲ್ಲಿ ಇಟ್ಟುಕೊಂಡಿದ್ದ ಉದ್ದೇಶಗಳನ್ನು ಅವು ನೇರವಾಗಿ ಅಭಿವ್ಯಕ್ತಿಗೊಳಿಸುತ್ತಿದ್ದವು. ಅಂಥ ಕಟ್ಟಡಗಳಲ್ಲಿ ಅಸಂಬದ್ಧವಾದ ಅಭಿರುಚಿಗಾಗಿ ನಿರ್ಮಾಣ ವಸ್ತುಗಳನ್ನು ವ್ಯಯ ಮಾಡುತ್ತಿರಲಿಲ್ಲ. ಷಿಕಾಗೋದ ಇಲಿನಾಯ್‌ನಲ್ಲಿ ಕಟ್ಟಲಾದ ಧಾನ್ಯದ ಎತ್ತುಗಗಳು (ಗ್ರೇನ್ ಎಲಿವೇಟರ್ಸ್), ಕಾರ್ಖಾನೆಗಳು ಮತ್ತು ಕಛೇರಿಗಳು ಉತ್ಕೃಷ್ಟವಾದ ರಚನೆಗಳೆಂದು ಘೋಷಿಸಲ್ಪಟ್ಟವು. 1925ರ ಹೊತ್ತಿಗೆ ಒಂದು ಹೊಸದಾದ ವಾಸ್ತು ಶಿಲ್ಪದ ಶೈಲಿಯೇ ಹುಟ್ಟಿಕೊಂಡಿತ್ತು. ಇದಕ್ಕೆ ಆಧುನಿಕ ಶೈಲಿ ಅಥವಾ ಅಂತಾರಾಷ್ಟ್ರೀಯ ಶೈಲಿ ಎಂದು ಹೆಸರು ಬಂದಿತು. ಮಧ್ಯಯುಗಗಳ ಮುಕ್ತಾಯದಿಂದೀಚೆಗೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಹಳೆಯ ಸಂಪ್ರದಾಯದಿಂದ ಸಂಪೂರ್ಣವಾಗಿ ವಿಮುಕ್ತಿಗೊಂಡಂಥ ಯಾವುದೂ ಕಂಡುಬಂದಿರಲಿಲ್ಲ. ಆದ್ದರಿಂದ ಕೈಗಾರಿಕಾ ಕ್ರಾಂತಿಯಿಂದಾದ ತಡವಾದ ಆದರೆ ವಿಲಕ್ಷಣವಾದ ಪರಿಣಾಮವೆಂದರೆ ಒಂದು ಹೊಸಕಲೆಯ ಉಗಮ. ಇದನ್ನು ಅರಿಯಬೇಕಾದರೆ ಜರ್ಮನಿಯ ಡಸೆಲ್ ಡಾರ್ಫ್‌ನಲ್ಲಿ 1911ರಲ್ಲಿ ಕಟ್ಟಲಾದ ಪೀಟರ್ ಬೆಹ್ರಿನ್ ಎಂಬಾತನ ಕೊಳವೆ ಕಾರ್ಖಾನೆಯನ್ನೂ ಆತನೇ 1920–24ರಲ್ಲಿ ಹೋಸ್ಟ್ ಆವ್ ಮೇಯ್ನ್‌ನಲ್ಲಿ ಕಟ್ಟಿಸಿದ ರಾಸಾಯನಿಕ ಕಾರ್ಖಾನೆಯನ್ನು 1912ರಲ್ಲಿ ಹ್ಯಾನ್ಸ್ ಫೋಲ್‌ಜಿಗ್ ಎಂಬಾತ ಪೋಲೆಂಡ್‌ನ ಲ್ಯೂಬಾನ್‌ನಲ್ಲಿ ಕಟ್ಟಿಸಿದ ರಾಸಾಯನಿಕ ಕಾರ್ಖಾನೆಯನ್ನೂ 1916ರಲ್ಲಿ ಆಗಸ್ಟ್ ಪೆರಿ ಎಂಬಾತ ಪ್ಯಾರಿಸಿನಲ್ಲಿ ಕಟ್ಟಿಸಿದ ಬಟ್ಟೆಯ ಕಾರ್ಖಾನೆಯನ್ನು ಗಮನಿಸಬೇಕು. ಈ ಬಟ್ಟೆಯ ಕಾರ್ಖಾನೆಗೆ ಮನೋಹರವಾದ ಉಕ್ಕನ್ನೊಳಗೊಂಡ ಕಾಂಕ್ರೀಟಿನ ಕಮಾನುಗಳನ್ನು ಕೊಡಲಾಗಿತ್ತು. ಇವೆಲ್ಲಾ ಒಂದು ವೀರ್ಯವತ್ತಾದ ಅಭಿವ್ಯಕ್ತಿಯನ್ನು ಪ್ರತಿಪಾದಿಸಿದುವು. ಎಸ್. ವಾನ್ ರ್‍ಯಾವೆಸ್ಟಿನ್ ಎಂಬಾತ ಡಚ್ ರೈಲ್ವೆಗಳಿಗಾಗಿ ಕಟ್ಟಿಸಿದ ಕಟ್ಟಡಗಳಲ್ಲಿ ಸ್ಫುಟತ್ವ, ಲಘುತ್ವ (ಲೈಟ್‌ನೆಸ್) ಇವುಗಳ ಸೂಕ್ಷ್ಮ ಬಳಕೆ ಮತ್ತು ಸಮ್ಮಿಳನವನ್ನು ಕಾಣಬಹುದು. ಇದರ ಆಕರ್ಷಣೆಯನ್ನು 19ನೆಯ ಶತಮಾನದಲ್ಲೇ ಕೆಲವು ಸೂಕ್ಷ್ಮಗ್ರಾಹಿ ವ್ಯಕ್ತಿಗಳು ಕಂಡುಕೊಂಡಿದ್ದರು. ಈ ಶೈಲಿಯ ಗಾತ್ರ ಮತ್ತು ಆಳತೆಗಳ ಅಪರಿಚಿತತ್ವ ಮೊದಲನೆಯ ಮಹಾಯುದ್ಧದ ಅನಂತರ ಕಡಿಮೆಯಾಯಿತು. ಉತ್ತಮವಾದ ಕಟ್ಟಡಗಳ ಸೌಂದರ್ಯಗುಣ ವಿಶೇಷಗಳನ್ನು ಬಲವಂತವಾಗಿ ಪ್ರಚುರಪಡಿಸಲಾಯಿತು. ನ್ಯೂಕ್ಯಾಸಲ್ ಹತ್ತಿರದಲ್ಲಿರುವ ಡನ್‌ಸ್ಟನ್ನಿನಲ್ಲಿ ಕಟ್ಟಿರುವ ಮರ್ಜ್ ಮತ್ತು ಮ್ಯಾಕ್‌ಕ್ಲೆಲ್ಲಾನ್‌ರ ವಿದ್ಯುದುತ್ಪಾದನ ಕೇಂದ್ರಕ್ಕೆ ಉಕ್ಕಿನ ಹಂದರವೂ ಗಾಜಿನ ಮರೆಗೋಡೆಗಳೂ ಇವೆ. ಪ್ರಪಂಚದಾದ್ಯಂತ ಸಾವಿರಗಟ್ಟಲೆ ಕಟ್ಟಿರುವ ಉತ್ತಮವಾದ ಕೈಗಾರಿಕಾ ಕಟ್ಟಡಗಳಲ್ಲಿ ಕೇವಲ ಕೆಲವನ್ನು ಮಾತ್ರ ಹೆಸರಿಸಲು ಸಾಧ್ಯ. ಆದಾಗ್ಯೂ ಎಷ್ಟೋ ಕೆಟ್ಟ ನಿಯೋಜನೆಯ ಕೈಗಾರಿಕಾ ಕಟ್ಟಡಗಳೂ ನಿರ್ಮಿಸಲ್ಪಟ್ಟವು. ಇವುಗಳಲ್ಲಿ ರೇಖೆಗಳು ಮತ್ತು ಮಟ್ಟಕ್ಷೇತ್ರಗಳಿಗೆ(ಪ್ಲೇನ್ಸ್) ಬದಲಾಗಿ ವಸ್ತುರಾಶಿಗೇ(ಮಾಸ್) ಆದ್ಯತೆ ಕೊಡಲಾಗಿತ್ತು. ಈ ಕಟ್ಟಡಗಳು ಸರಳತೆಯ ಸೋಗನ್ನು ಧರಿಸಿದ್ದು, ಸೌಂದರ್ಯಸಾಧನೆಗಾಗಿ ಸರಿಯಾದ ಮಾರ್ಗದರ್ಶನವಿಲ್ಲದ ಪ್ರಯತ್ನವನ್ನು ಮಾಡಿ, ಸಂಪ್ರದಾಯಕ್ಕೆ ಜೋತುಬಿದ್ದಿದ್ದವು. ಎಲ್ಲೆಲ್ಲೂ ಜಾರ್ಜಿಯನ್ ಅಥವಾ ಟ್ಯೂಡರ್ ಮುಂಭಾಗಗಳುಳ್ಳ ಹಾಸ್ಯಾಸ್ಪದವಾದ ಕಾರ್ಖಾನೆಗಳನ್ನು ಕಾಣಬಹುದಾಗಿತ್ತು.

**ಲೋಹ ನಿರ್ಮಾಣಗಳು :** 18ನೆಯ ಶತಮಾನದ ಕೊನೆಯ ವೇಳೆಗೆ, ಕಂಬ ಮತ್ತು ತೊಲೆಗಳಿಗೆ ಮರದ ಬದಲು ಕಬ್ಬಿಣದ ಬಳಕೆ ಪ್ರಾರಂಭವಾಯಿತು. ಇಂಗ್ಲೆಂಡಿನ ಸ್ಯಾಲ್‌ಫರ್ಡಿನಲ್ಲಿ 1801ರಲ್ಲಿ ಕಟ್ಟಲಾದ ಏಳಂತಸ್ತಿನ ಅಗ್ನಿನಿರೋಧಕ ಗಿರಣಿ ಇದಕ್ಕೆ ಉತ್ತಮ ಉದಾಹರಣೆ. ಈ ಕಟ್ಟಡದ ಒಳಭಾಗದಲ್ಲಿ 9–14 ಅಂತರದಲ್ಲಿರುವ ಕಂಬಗಳ ಒಂದು ಅಪಾರಸಮೂಹವೇ ಇದೆ. 1853ರಲ್ಲಿ ಇಂಗ್ಲೆಂಡಿನ ಸಾಲ್ಟೇರ್‌ನಲ್ಲಿ ಸರ್. ವಿಲಿಯಮ್ ಫೆಯರ್ ಬೇಯರ್ನ್ ಎಂಬ ಎಂಜಿನಿಯರ್ ಗಿರಣಿ ಕಟ್ಟಡಗಳನ್ನು ಕಟ್ಟಿದ. ಅರ್ಧ ಶತಮಾನದ ಅನಂತರ ಕಟ್ಟಡಗಳ ಗಾತ್ರದ ಪ್ರಗತಿ ಎಷ್ಟಾಗಿತ್ತೆಂಬುದು ಇವುಗಳಿಂದ ಅರಿವಾಗುತ್ತದೆ. ಇಂಥ ಒಂದು ಕಟ್ಟಡದ ಮೇಲಂತಸ್ತು 550' X 50' ಇದರ ಒಳಗಡೆ ಯಂತ್ರಗಳನ್ನು ಅತ್ಯಂತ ದಕ್ಷವಾಗಿ ಜೋಡಣೆ ಮಾಡಬಹುದು. ಈ ಕಟ್ಟಡಗಳಲ್ಲಿ ತೂಕಗಳನ್ನು ಹೊರಬಲ್ಲ ಕಲ್ಲು ಅಥವಾ ಇಟ್ಟಿಗೆಗೋಡೆಗಳ ಹೊರ ಆವರಣಗಳಿರುತ್ತಿದ್ದುವು. ಸಾಮಾನ್ಯ ರೀತಿಯ ಕಟ್ಟಡವೇ ಇಲ್ಲದೆ ತೂಕವನ್ನು ಹೊರಬಲ್ಲ ಎಲ್ಲ ಭಾಗಗಳನ್ನೂ ಬರಿಯ ಲೋಹದಲ್ಲೇ ನಿರ್ಮಿಸಲಾದ ಮೊದಲ ಕಾರ್ಖಾನೆಯೆಂದರೆ ಮೀನಿಯರ್ ಚಾಕೊಲೇಟ್ ಕಾರ್ಖಾನೆ. ಇದನ್ನು ಫ್ರಾನ್ಸ್‌ನ ನಾಯಿಸೀಲ್‌ನಲ್ಲಿ 1871ರಲ್ಲಿ ಕಟ್ಟಲಾಯಿತು.

ಸಂಯುಕ್ತ ಸಂಸ್ಥಾನಗಳ ಜೇಮ್ಸ್ ಬೋಗಾರ್ಡಸ್ ಎಂಬಾತ ಕಬ್ಬಿಣದ ಹಂದರಗಳುಳ್ಳ ಅತಿ ಜಾಣ್ಮೆಯ ನಿರ್ಮಾಣ ವ್ಯವಸ್ಥೆಗಳನ್ನು 1848ರಿಂದ ನಿಯೋಜಿಸತೊಡಗಿದ. ಉಕ್ಕನ್ನು ರಚಿಸುವಲ್ಲಿ ಬೆಸಿಮರ್ ವಿಧಾನವನ್ನು ಕಂಡುಹಿಡಿದ ಮೇಲೆ ಉಕ್ಕಿನ ಪೂರೈಕೆ ಅಧಿಕವಾಯಿತು. ಉಕ್ಕು ಕ್ರಮೇಣ ಕಬ್ಬಿಣದ ಸ್ಥಾನವನ್ನು ಆಕ್ರಮಿಸಿತು. ಇದರಿಂದಾಗಿ ಅಗಲವಾದ ಕೋಣೆಗಳನ್ನೂ ದೊಡ್ಡದಾದ ಕಿಟಿಕಿಗಳನ್ನೂ ಕೊಡಲು ಸಾಧ್ಯವಾಯಿತು. ಸೇತುವೆಗಳ ಅಗಲವಾದ ಅಂತರಗಳಿಗೆ, ರೈಲುಷೆಡ್ಡುಗಳಿಗೆ ಮತ್ತು ವಸ್ತುಪ್ರದರ್ಶನದ ಅಂಗಳಗಳಿಗೆ ಲೋಹದ ಆಧಾರಗಳ ಉಪಯೋಗ 19ನೆಯ ಶತಮಾನದ ಶಿಲ್ಪವಿಜ್ಞಾನದಲ್ಲಿ ಅತ್ಯಂತ ಗಮನಾರ್ಹವಾದ ಬೆಳವಣಿಗೆ. 1860ರ ಹೊತ್ತಿಗೆ 200 ಅಂತರಗಳನ್ನು ಸುಲಭವಾಗಿ ಸಾಧಿಸಿ ಆ ಶತಮಾನದ ಕೊನೆಯ ವೇಳೆಗೆ 300 ಅಂತರಗಳನ್ನೂ ಬಳಸತೊಡಗಿದರು. ಇತಿಹಾಸದಲ್ಲಿ ಕಲ್ಲು ಕಟ್ಟಡವೇ ಆಗಲಿ ಮರವೇ ಆಗಲಿ 80'ಗಿಂತ ಜಾಸ್ತಿ ಅಂತರವನ್ನು ಸಾಧಿಸಿರಲಿಲ್ಲ. ಈ ಸಾಧನೆಗಳು 20ನೆಯ ಶತಮಾನದ ತನಕ ಕೈಗಾರಿಕಾ ಕಟ್ಟಡಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರಲಿಲ್ಲ. ಇಷ್ಟರಲ್ಲಿ ಒಂದು ಹೊಸ ನಿರ್ಮಾಣಮಾಧ್ಯಮವನ್ನು ಕಂಡು ಹಿಡಿಯಲಾಯಿತು. ಕಾಂಕ್ರೀಟನ್ನೂ ಹೆಚ್ಚು ಎಳೆತ ಶಕ್ತಿಯ ಉಕ್ಕನ್ನೂ ಒಟ್ಟಿಗೆ ಸೇರಿಸಿ ಉಪಯೋಗಿಸುವುದೇ ಆ ಮಾಧ್ಯಮ. 1860ರಲ್ಲಿ ಪ್ರಾರಂಭಿಸಿ ಅನೇಕ ವರ್ಷಗಳ ಕಾಲ ಪ್ರಯೋಗಗಳನ್ನು ನಡೆಸಿದ ಅನಂತರ ಎಂಜಿನಿಯರುಗಳಲ್ಲಿ ಸಾಕಷ್ಟು ವಿಶ್ವಾಸ ಹುಟ್ಟಿ ಆ ಶತಮಾನದ ಮುಕ್ತಾಯದ ವೇಳೆಗೆ ಈ ಮಾಧ್ಯಮದ ವಿಶಾಲ ಉಪಯೋಗ ಪ್ರಾರಂಭವಾಯಿತು. ಮೊದಲ ಮಹಾಯುದ್ಧದ ಅನಂತರ ಸಾಂಪ್ರದಾಯಿಕವಾದ ಕಲ್ಲು ಅಥವಾ ಇಟ್ಟಿಗೆ ರಚನೆಗಳನ್ನು ದೊಡ್ಡ ಕಟ್ಟಡಗಳಿಗೆ ಉಪಯೋಗಿಸುವುದು ಬಹಳ ಕಡಿಮೆಯಾಯಿತು.

**20ನೆಯ ಶತಮಾನದ ಕೈಗಾರಿಕಾ ವಾಸ್ತುಶಿಲ್ಪ :** 1900ರ ಅನಂತರ ಕೈಗಾರಿಕಾ ಕಟ್ಟಡಗಳಲ್ಲಿ ನಾಲ್ಕು ಗಮನಾರ್ಹವಾದ ಬೆಳವಣಿಗೆಗಳಾದವು: (1) ಅಗಾಧವಾದ ಒಂದಂತಸ್ತಿನ ನಕ್ಷೆಗಳು; (2) 40'–80' ಅಂತರಗಳಿಗೆ ಹಗುರವಾದ ಸೂರಿನ ಆಧಾರಗಳನ್ನು ಉಪಯೋಗಿಸುವುದು; (3) ಹೊರಗಡೆಯ ಮರೆಮಾಡುವ ಕಲ್ಲು ಅಥವಾ ಇಟ್ಟಿಗೆ ಕಟ್ಟಡಕ್ಕೆ ಬದಲು ಗಾಜಿನ ಆವರಣವನ್ನು ಕೊಡುವುದು; ಇನ್ನೂ ಕೆಲವು ವಿಧಾನಗಳಲ್ಲಿ ಆವರಣಗಳನ್ನು ಸಂಪೂರ್ಣವಾಗಿ ತೆಗೆದು ಹಾಕಿಬಿಡುವುದು; (4) ಕೈಗಾರಿಕಾ ಕಟ್ಟಡಗಳ ನಿರ್ಮಾಣ ಸ್ಥಳಗಳನ್ನು ಪಟ್ಟಣಕ್ಕೆ ಬದಲು ಊರಿನಿಂದಾಚೆಯ ಪ್ರದೇಶದಲ್ಲಿ ಆಯ್ಕೆ ಮಾಡುವುದು. ಇದಕ್ಕೆ ಮುಖ್ಯ ಕಾರಣ, ಭೂಮಿಯ ಕಡಿಮೆ ಬೆಲೆ ಮತ್ತು ರಸ್ತೆ ಸಾಗಾಣಿಕೆ ಸೌಲಭ್ಯಗಳು ಹೆಚ್ಚಾದುದು.

ಒಂದು ಅಂತಸ್ತಿನ ಕಾರ್ಯಾಗಾರಗಳು: ಉತ್ಪಾದನೆಯ ವಿಭಾಗಗಳಲ್ಲಾದ ಮಹತ್ತರ ಬದಲಾವಣೆಗಳಿಂದಾಗಿ ಸ್ವಯಂಚಾಲಿತ ವಾಹನಗಳ ಭಾಗಗಳನ್ನು ಉತ್ಪಾದಿಸುವ ಕಾರ್ಯಾಗಾರವನ್ನು ನಿರ್ಮಿಸಲು ಸಾಧ್ಯವಾಯಿತು. ಒಂದು ಜೋಡಣೆಯ ಸಾಲನ್ನು ನಿರ್ಮಿಸಿ, ಅದರಲ್ಲಿ ಸಾಗುಪಟ್ಟಿಗಳ ಸಹಾಯದಿಂದ ನಿಖರವಾಗಿ ಯಂತ್ರಕಾರ್ಯಕ್ಕೊಳಪಡಿಸಿದ ಬಿಡಿಭಾಗಗಳನ್ನು ಸೇರಿಸುತ್ತ ಹೋಗಿ, ಕಡೆಗೆ ಆ ಸಾಲಿನಿಂದಾಚೆಗೆ ಲೆಕ್ಕವಿಲ್ಲದಷ್ಟು ಸ್ವಯಂಚಾಲಿತ ವಾಹನಗಳು ಹೊರ ಹೊರಡುವಂತೆ ಮಾಡುವುದು ಇಲ್ಲಿಯ ಮುಖ್ಯ ತತ್ತ್ವ. ಇದಕ್ಕೆ ಬಹು ವಿಶಾಲವಾದ ಜಾಗ ಬೇಕಾಗುತ್ತದೆ. ಒಂದು ಅಂತಸ್ತು ಇದಕ್ಕೆ ಬಹಳ ಯುಕ್ತವಾದುದು. ಮಿಷಿಗನ್ನಿನ ಡೆಟ್ರಾಯಿಟ್‌ನಲ್ಲಿನ ಕಾರ್ಖಾನೆ ಮತ್ತು ಇಟಲಿಯ ಟ್ಯೂರಿನ್‌ನಲ್ಲಿ ಕಟ್ಟಿದ ಮ್ಯಾಟೆಟ್ರೂಕೋರವರ ಫಿಯಟ್ ಕಾರ್ಖಾನೆ (1922) ಇಂಥ ನಿರ್ಮಾಣಗಳ ಮೊದಲ ಉದಾಹರಣೆಗಳು.

**ಸೂರನ್ನು ಮತ್ತು ಗೋಡೆಗಳ ಆಧಾರಗಳನ್ನು ಕಡಿಮೆ ಮಾಡಿದುದು:** ಕಾರ್ಖಾನೆಗಳ ಕಿಟಕಿಗಳು ಮೊದಲಿನಿಂದಲೂ ವಿಪುಲವಾದ ಗಾತ್ರದವಾಗಿದ್ದರೂ ಮುಖ್ಯ ಕಟ್ಟಡದಿಂದ ಬೇರೆಯಾಗಿರುವಂಥ ಗಾಜಿನ ಗೋಡೆ ಬರುವುದು ಬಹಳ ನಿಧಾನವಾಯಿತು. 19ನೆಯ ಶತಮಾನದ ಬಹುಪಾಲು ಕಾರ್ಖಾನೆಗಳು ದೀರ್ಘವಾದ, ಗಡುಸಾದ ವಿಭಾಗಗಳಾಗಿದ್ದು, ಅವು ಮೂರು ನಾಲ್ಕು ಅಂತಸ್ತಿನವಾಗಿದ್ದು, ಮೇಲಂತಸ್ತಿಗೆ ಬೆಳಕು ಗವಾಕ್ಷಗಳಿಂದ ಬರುವಂತಿದ್ದು, ಇಟ್ಟಿಗೆಯ ಗೋಡೆಗಳನ್ನು ಅಲ್ಲಲ್ಲೇ ಕ್ರಮವಾದ ದೂರಗಳಲ್ಲಿ ಕೊರೆದು ಕಿಟಕಿಗಳನ್ನು ಏಕತಾನೀಯವಾಗಿ ರಚಿಸುತ್ತಿದ್ದರು. ಈ ಶತಮಾನದ ಕೊನೆಯ ಹೊತ್ತಿಗೆ, ಮಧ್ಯದ ಆಧಾರಗಳಿಗೆ ಮಾತ್ರ ಉಪಯೋಗಿಸಲ್ಪಡುತ್ತಿದ್ದ ಕಂಬಗಳನ್ನು ಹೊರಗೋಡೆಗಳಿಗೂ ಉಪಯೋಗಿಸಲಾರಂಭಿಸಿದರು. ಈ ಹೊರಗೋಡೆ ತೆಳುವಾದ, ಪಾರದರ್ಶಕವಾದ, ಗಾಳಿಯಿಂದ ಮಾತ್ರ ರಕ್ಷಣೆಯನ್ನು ನೀಡುವ ಒಂದು ಪರದೆಯಾಗಿ ಮಾರ್ಪಟ್ಟಿತು. ಕಟ್ಟಡದ ಹಂದರ ಕಬ್ಬಿಣ ಅಥವಾ ಉಕ್ಕನ್ನೊಳಗೊಂಡ ಕಾಂಕ್ರೀಟಿನದಾಗಿರುತ್ತಿದ್ದು, ಇದನ್ನು ಷಿಕಾಗೋದ ಮಾಂಟ್ಗಮರಿ ವಾರ್ಡ್ (1909) ಮತ್ತು ಜರ್ಮನಿಯ ಆಲ್‌ಫೆಲ್ಡ್‌ನಲ್ಲಿ ವಾಲ್ಟರ್ ಗ್ರೋಪಿಯಸ್ ಮತ್ತು ಅಡೋಲ್ಫ್ ಮೆಯರ್‌ರವರು ಕಟ್ಟಿಸಿದ (1911) ಆಡಳಿತ ಗೃಹಗಳಲ್ಲಿ ಚೆನ್ನಾಗಿ ಗಮನಿಸಬಹುದು. ಇಂಥ ಕಟ್ಟಡಗಳಲ್ಲಿ ಗಾಜು ಮತ್ತು ಗೋಡೆಗಳ ಪರಿಮಾಣ ಮೂರನೆಯ ಒಂದು ಭಾಗದಿಂದ 10ನೆಯ 9 ಭಾಗಕ್ಕೆ ಏರಿಸಲ್ಪಟ್ಟಿದ್ದಿತು. ಇವುಗಳಲ್ಲಿ ಆಧರಿಸುವ ಕಂಬಗಳನ್ನು

ಗೋಡೆಗಳ ಮಟ್ಟಕ್ಷೇತ್ರದಿಂದ ಹಿಂದಕ್ಕೆ ಸರಿಸಿ, ಕಟ್ಟಡದ ಸುತ್ತಲೂ ಗಾಜಿನ ರಚನೆಯನ್ನು ಹಾಕಿರುತ್ತಾರೆ. 20ನೆಯ ಶತಮಾನದ ಮಧ್ಯಭಾಗದವರೆಗಿನ ಈ ಸರಣಿಯ ಕೊನೆಯ ಘಟ್ಟವೆಂದರೆ ಟೆಕ್ಸಾಸ್‌ನ ಕಾರ್ಪಸ್ ಕ್ರಿಸ್ಟಿಯಲ್ಲಿರುವ ಬ್ಲೂ ಬಾನೆಟ್ ಕಾರ್ಯಾಗಾರ. ಇದರಲ್ಲಿ ತಯಾರಿಕಾ ವಿಧಾನದ ಕೆಲವು ಘಟ್ಟಗಳಿಗೆ ಹೊರಗಡೆಯ ಮರೆಗೋಡೆಯಾಗಲೀ ಸೂರಾಗಲೀ ಅಲ್ಲಿಯ ವಾತಾವರಣಕ್ಕೆ ಬೇಕಿಲ್ಲವೆಂಬ ಅಂಶ ಗಮನಾರ್ಹವಾದುದು. ಒಂದು ದೃಷ್ಟಿಯಿಂದ ಪರಿಗಣಿಸಿದರೆ, ಯಂತ್ರಗಳೇ ಒಟ್ಟುಗೂಡಿ ಆ ಕಟ್ಟಡವಾಗಿವೆ ಎನ್ನಬಹುದು.

**ಜಾಗ ವಿತರಣೆ:** ಕೈಗಾರಿಕಾ ಕ್ರಾಂತಿಯ ಮೊದಲ ದಿನಗಳಲ್ಲಿ ಕಾರ್ಖಾನೆಗಳನ್ನು ನದಿಗಳ ದಡಗಳಲ್ಲೋ ಬಂದರುಗಳಲ್ಲೋ ನಿರ್ಮಿಸುತ್ತಿದ್ದರು. ಇದರಿಂದಾಗಿ ಕಾರ್ಖಾನೆಗಳು ಹೊರಬಿದ್ದ ಬೂದಿಯ ಪಟ್ಟೆ ಸಮುದ್ರತೀರಗಳ ಮೇಲೆ ಹರಡುತ್ತಿತ್ತು. ಶಕ್ತಿಯ ಉತ್ಪಾದನೆಗೆ ಕಲ್ಲಿದ್ದಲು ಮತ್ತು ರೈಲುಮಾರ್ಗಗಳ ಬೆಳೆವಣಿಗೆ ಇವುಗಳಿಂದಾಗಿ ಹೊಸ ಹೊಸ ಜಾಗಗಳು ಬೆಳಕಿಗೆ ಬಂದುವು. ಕಟ್ಟಕಡೆಗೆ ವಿದ್ಯುಚ್ಛಕ್ತಿಯ ದಕ್ಷ ಸಾಗಾಣಿಕೆ ಮತ್ತು ಮೋಟಾರ್ ವಾಹನಗಳ ತಯಾರಿಕೆಗಳಿಂದಾಗಿ ಕೈಗಾರಿಕೋದ್ಯಮಿ ಹೆಚ್ಚು ಭೌಗೋಳಿಕ ಸ್ವಾತಂತ್ರ್ಯವನ್ನು ಸಾಧಿಸಲು ಸಾಧ್ಯವಾಯಿತು. ಕಚ್ಚಾವಸ್ತುಗಳನ್ನೂ ಸಿದ್ಧಪಡಿಸಿದ ಪದಾರ್ಥಗಳನ್ನೂ ಟ್ರಕ್ಕುಗಳಿಂದ ಸಾಗಿಸುವ ಅನುಕೂಲವಿದ್ದು, ಕಾರ್ಮಿಕರನ್ನು ಸಾಕಷ್ಟು ದೂರಗಳಿಂದ ಬಸ್ಸುಗಳಲ್ಲಿ ಅಥವಾ ಕಾರುಗಳಲ್ಲಿ ಕರೆತರುವ ಸೌಲಭ್ಯಗಳಿದ್ದರೆ ಕಾರ್ಖಾನೆಗಳನ್ನು ನಗರಗಳ ಆಚೆ ಇರುವ ಕಡಿಮೆ ಬೆಲೆಯ ಜಾಗಗಳ ಮೇಲೆ ಸ್ಥಾಪಿಸಬಹುದು. ಕೆಲವು ಸಂದರ್ಭಗಳಲ್ಲಿ ಈ ಕಾರಣಗಳಿಂದಲೇ ಮನೆಗಳು, ಸಂಗ್ರಹಣಗೃಹಗಳು ಮತ್ತು ಸಾಮಾಜಿಕ ಕಟ್ಟಡಗಳು ಇತ್ಯಾದಿ ಇರುವಂಥ ಸ್ವತಂತ್ರವಾದ ಕೈಗಾರಿಕಾ ನಗರಗಳೇ ಹೊಸದಾಗಿ ನಿರ್ಮಿತವಾದುವು. ಈ ಅಭ್ಯಾಸವನ್ನು ಎರಡನೆಯ ಮಹಾಯುದ್ಧದ ಸಮಯದಲ್ಲಿ ತ್ವರಿತಗೊಳಿಸಲಾಯಿತು. ಏಕೆಂದರೆ ಒಂದೇ ಕಡೆ ಒತ್ತೊತ್ತಾಗಿ ಬೆಳೆದಿರುವ ಕೈಗಾರಿಕಾ ಪ್ರದೇಶ ದೀರ್ಘವ್ಯಾಪ್ತಿಯ ಬಾಂಬರುಗಳ ಹೊಡೆತಕ್ಕೆ ಸಿಕ್ಕಿ ಅಪಾರ ನಷ್ಟ ಉಂಟಾಗುವುದೆಂದೂ ರಾಡಾರ್ ಮುಂದೆ ಮರೆಮಾಚುವ ಯುಕ್ತಿ ನಿರುಪಯುಕ್ತವಾದದ್ದೆಂದೂ ಹೀಗಾಗಿ ಬೇರೆ ಬೇರೆ ಕಡೆಗೆ ಹಂಚಿ ಕೈಗಾರಿಕಾ ಕಟ್ಟಡಗಳನ್ನು ನಿರ್ಮಿಸುವುದೇ ಅತ್ಯಂತ ಸಮರ್ಪಕವಾದ ರಕ್ಷಣಾ ವಿಧಾನವೆಂದೂ ತಿಳಿಯಬಂದಿತು. ಈ ವಿಧಾನದ ಮುಖ್ಯ ಉದಾಹರಣೆ ಎಂದರೆ ಲಾಸ್ ಅಲಮಾಸ್‌ನಲ್ಲಿರುವ ಪರಮಾಣುಶಕ್ತಿ ಕಾರ್ಯಾಗಾರ. ಇದನ್ನು ರಕ್ಷಣೆ ಮತ್ತು ಗೋಪ್ಯತೆಗಳ ದೃಷ್ಟಿಯಿಂದ ರಚಿಸಲಾಗಿದೆ.

**ಭಾರತದಲ್ಲಿ ಕೈಗಾರಿಕಾ ನಿರ್ಮಾಣ ವಿಜ್ಞಾನ :** ಸಂಯುಕ್ತ ರಾಷ್ಟ್ರಸಂಸ್ಥೆಯ ತಾಂತ್ರಿಕ ಸಹಾಯತಜ್ಞರಾದ ವಿಲಿಯಂ ಆರ್. ಪಾಬ್ಸ್ಟ್ ಪ್ರಕಾರ ಭಾರತದೇಶದ ಸದ್ಯದ ಯಂತ್ರಸ್ಥಾವರಗಳು ಮತ್ತು ಸಲಕರಣೆಗಳಿಂದಲೇ ಇಲ್ಲಿಯ ಉತ್ಪಾದನಾ ವಸ್ತುಗಳ ಮೊತ್ತವನ್ನು ಶೇ. 20–50ರಷ್ಟು ಹೆಚ್ಚಿಸಬಹುದು. ಇದನ್ನು ಸಾಧಿಸಬೇಕಾದರೆ ಯಂತ್ರಗಳು ಮತ್ತು ಸೌಲಭ್ಯಗಳ ನಡುವೆ ಸೂಕ್ತವಾದ ಸಮತೋಲವನ್ನು ಕಲ್ಪಿಸಬೇಕು, ಉತ್ಪನ್ನಗಳು ರದ್ದಿಗಳಾಗಿ (ಸ್ಕ್ರೇಪ್ಸ್) ಹಿಂತಿರುಗಿಸಲ್ಪಡುವುದನ್ನು ತಪ್ಪಿಸಬೇಕು, ನಿಶ್ಚಿತಮಟ್ಟವನ್ನು ನಮೂದಿಸಿ ಅದನ್ನು ಸರಿಯಾಗಿ ಸಾಧಿಸಬೇಕು ಮತ್ತು ಅನುಕೂಲತಮ (ಆಪ್ಟಿಮಂ) ಪ್ರಮಾಣದ ವಸ್ತುಗಳನ್ನು ಉಪಯೋಗಿಸಿಕೊಳ್ಳಬೇಕು. ಇವೆಲ್ಲ ಸಾಧ್ಯವಾಗಬೇಕಾದರೆ ಅಂಕಿಶಾಸ್ತ್ರರೀತ್ಯ ಗುಣನಿಯಂತ್ರಣದ (ಕ್ವಾಲಿಟಿ ಕಂಟ್ರೋಲ್) ವಿಧಾನಗಳನ್ನು ಉಪಯೋಗಿಸಬೇಕು.

ಕೈಗಾರಿಕಾ ನಿರ್ಮಾಣ ವಿಜ್ಞಾನದ ವಿಧಾನಗಳ ಉಪಯುಕ್ತತೆಯನ್ನು ಭಾರತ ಸರ್ಕಾರ ಅರಿತುಕೊಂಡಿದೆ. ಭಾರತದ ಅಂಕಿ–ಅಂಶಶಾಸ್ತ್ರ ಸಂಸ್ಥೆಯ ಮುಖಾಂತರ ಅದು ವಿದೇಶೀ ತಜ್ಞರನ್ನು ಆಹ್ವಾನಿಸಿ ಉದ್ಯೋಗಿಗಳಿಗೆ ಮೇಲಿನ ವಿಧಾನಗಳ ಬಗ್ಗೆ ತರಬೇತಿಯನ್ನು ಕೊಡಿಸುತ್ತಿದೆ. ಈ ಸಂಸ್ಥೆ ಕಲ್ಕತ್ತ, ದೆಹಲಿ, ಮುಂಬಯಿ ಮತ್ತು ಬೆಂಗಳೂರು ನಗರಗಳಲ್ಲಿ ಅಂಕಿ ಅಂಶಶಾಸ್ತ್ರರೀತ್ಯ ಗುಣನಿಯಂತ್ರಣದ ಘಟಕಗಳನ್ನು ಸ್ಥಾಪಿಸಿದೆ.

ಪ್ರಪಂಚದ ಅತ್ಯಂತ ದೊಡ್ಡ ಏಕಘಟಕ(ಸಿಂಗಲ್ ಯೂನಿಟ್) ಪಂಖ ಕಾರ್ಖಾನೆಯೆಂದರೆ ಕಲ್ಕತ್ತದಲ್ಲಿರುವ ಜೇ ಇಂಜಿನಿಯರಿಂಗ್ ವರ್ಕ್ಸ್ ಲಿಮಿಟೆಡ್. ಇದರಲ್ಲಿ ಉಷಾ ಪಂಖಗಳನ್ನು ತಯಾರಿಸುತ್ತಾರೆ. ಈ ಕಾರ್ಖಾನೆಯಲ್ಲಿ ತಾಂತ್ರಿಕ ಪರಿಪೂರ್ಣತೆ, ಮಿತವ್ಯಯ, ಅತ್ಯಂತ ವಿನೂತನವಾದ ಗುಣನಿಯಂತ್ರಣ ತಂತ್ರ ಕೌಶಲ ಇವೆಲ್ಲ ಮಿಳಿತವಾಗಿವೆ. ತಯಾರಿಕೆಯ ಪ್ರತಿಹಂತದಲ್ಲಿಯೂ ಕಟ್ಟುನಿಟ್ಟಾದ ಗುಣನಿಯಂತ್ರಣವನ್ನು ಏರ್ಪಡಿಸಲಾಗಿದೆ. ಖರಗ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲೂ ಅತಿ ಆಧುನಿಕ ಗುಣನಿಯಂತ್ರಣ ತಂತ್ರಗಳನ್ನು ಕಲಿಸಲಾಗುತ್ತಿದೆ.

ವಿಜ್ಞಾನದ ಪ್ರಗತಿಯೊಡನೆ ನಿರಂತರವಾಗಿ ಮುನ್ನಡಿ ಇಡುತ್ತಿರುವ ಜೀವಂತ ವಿಜ್ಞಾನ ಕೈಗಾರಿಕಾ ವಾಸ್ತುಶಿಲ್ಪ. (ಎನ್.ಎಸ್.ಎಂ.)

**ಕೈಗಾರಿಕಾ ವೈದ್ಯ :** ಕೈಗಾರಿಕೆಯಲ್ಲಿ ನಿರಂತರಾಗಿರುವ ಜನರು ಆರೋಗ್ಯ ಪಾಲನೆ, ಕಾಯಿಲೆ ಮತ್ತು ಅಪಘಾತಗಳಿಂದ ಅವರು ನರಳದಂತೆ ರಕ್ಷಣೆ ಒದಗಿಸುವಿಕೆ ಮತ್ತು ಇವು ಪೀಡಿಸಿದಾಗ ಯೋಗ್ಯ ಶುಶ್ರೂಷೆಯ ನೀಡಿಕೆ–ಇವನ್ನು ಕುರಿತ ವೈದ್ಯವಿಭಾಗ (ಇಂಡಸ್ಟ್ರಿಯಲ್ ಮೆಡಿಸಿನ್). ಒಬ್ಬ ಕಾರ್ಮಿಕ ದಿನವಹಿ 8–10 ಗಂಟೆಗಳ ಕಾಲ ಕೆಲಸ ಮಾಡುವ ಸಂಭವ ಉಂಟು. ಇಲ್ಲೆಲ್ಲ ಸಾಕಷ್ಟು ಮುನ್ನೆಚ್ಚರಿಕೆ ವಹಿಸುವುದು ಅತ್ಯಗತ್ಯ. ವಿವಿಧ ಕೈಗಾರಿಕೆಗಳಲ್ಲಿ ಉದ್ಯುಕ್ತರಾಗಿರುವವರ ನೆಮ್ಮದಿ, ಆರೋಗ್ಯ ರಕ್ಷಣೆ, ರೋಗ ಚಿಕಿತ್ಸೆಗಳಿಗೆ ಅನ್ವಯಿಸುವ ಅನೇಕ ಕ್ರಮಗಳು ಬಹಳ ಪ್ರಾಮುಖ್ಯಕ್ಕೆ ಬಂದಿವೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಈ ವಿಚಾರವನ್ನು ನೋಡಿಕೊಳ್ಳಲು ಪ್ರತ್ಯೇಕವಾಗಿ ಕೈಗಾರಿಕಾ ಕ್ಷೇತ್ರ ಆರೋಗ್ಯ ಸೇವಾಶಾಖೆಯನ್ನು (ಇಂಡಸ್ಟ್ರಿಯಲ್ ಹೆಲ್ತ್ ಸರ್ವಿಸ್) ತೆರೆಯಲಾಗಿದೆ. ಇದರ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ.

(ಅ) ಕೆಲಸಗಾರರನ್ನು ಕೆಲಸ ಮಾಡುವ ವಾತಾವರಣಕ್ಕೆ ಸರಿಹೊಂದಿಸಿ ಅಲ್ಲಿ ಅವನು ನೆಮ್ಮದಿಯಿಂದ ಕೆಲಸ ಮಾಡುವಂತೆ ಸೌಲಭ್ಯಗಳನ್ನು ಕಲ್ಪಿಸಿ, ತನ್ಮೂಲಕ ಅವನ ಆರೋಗ್ಯಾಭಿವೃದ್ಧಿಗೆ ನೆರವಾಗುವುದು.

(ಆ) ಉದ್ಯೋಗದಿಂದ ಉದ್ಭವಿಸಬಹುದಾದ ರೋಗಗಳನ್ನು ಮುಂಜಾಗ್ರತೆ ವಹಿಸಿ ತಡೆಗಟ್ಟುವುದು.

(ಇ) ಕೆಲಸ ಮಾಡುವಾಗ ಗಾಯಗಳಾಗುವುದನ್ನು ತಪ್ಪಿಸಲು ಸಹಾಯ ಮಾಡುವುದು.

(ಈ) ಗಾಯವಾದವರಿಗೆ ಮತ್ತು ರೋಗಗ್ರಸ್ತರಿಗೆ ತುರ್ತು ಚಿಕಿತ್ಸೆ ನೀಡಲು ಬೇಕಾದ ಸೌಲಭ್ಯಗಳಿಗೆ ತಕ್ಕ ವ್ಯವಸ್ಥೆ ಮಾಡುವುದು.

(ಉ) ಗಾಯದಿಂದ ಅಥವಾ ರೋಗದಿಂದ, ಕೆಲಸಗಾರ ತಾತ್ಕಾಲಿಕವಾದ ಕೆಲಸ ಮಾಡಲು ನಿಶ್ಯಕ್ತನಾದರೆ ಅವನಿಗೆ ಎಲ್ಲ ವಿಧದ ಸೌಕರ್ಯಗಳನ್ನೂ ಒದಗಿಸಿ ಆದಷ್ಟು ಜಾಗ್ರತೆ ಕೆಲಸಕ್ಕೆ ಹಾಜರಾಗುವಂತೆ ಮಾಡುವುದು. ಶಾಶ್ವತವಾದ ನ್ಯೂನತೆ ಉಂಟಾದವರಿಗೆ ತಕ್ಕ ಪರಿಹಾರ ಕೊಟ್ಟು ಜೀವನೋಪಾಯಕ್ಕೆ ಮಾರ್ಗ ಕಲ್ಪಿಸಿಕೊಡುವುದು.

(ಊ) ಆರೋಗ್ಯಾಭಿವೃದ್ಧಿ ಮತ್ತು ಆರೋಗ್ಯರಕ್ಷಣೆಯ ವಿಚಾರದಲ್ಲಿ ಎಲ್ಲ ಕಾರ್ಮಿಕರಿಗೂ ಶಿಕ್ಷಣ ಕೊಡಲು ಏರ್ಪಾಡು ಮಾಡುವುದು.

(ಎ) ಕಡೆಯದಾಗಿ, ಕೈಗಾರಿಕಾ ಕ್ಷೇತ್ರದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಧ್ಯಯನ, ತನಿಖೆ ಮತ್ತು ಸಂಶೋಧನೆಗೆ ವ್ಯವಸ್ಥೆ ಮಾಡುವುದು.

ಈ ಆದರ್ಶ ಉದ್ದೇಶಗಳು ಸಫಲಗೊಳ್ಳಲು ಅನೇಕ ವರ್ಷಗಳಾಗಬಹುದು.

ಭಾರತ ದೇಶದ ಮುಖ್ಯ ಕಸುಬು ಕೃಷಿ. ಆದ್ದರಿಂದ ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳ ಇತಿಹಾಸ ಮತ್ತು ವಿಕಸನಗಳನ್ನು ಅರಿಯಬೇಕಾದರೆ ಅಮೆರಿಕಾ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್ ಇತ್ಯಾದಿ ದೇಶಗಳ ಇತಿಹಾಸಗಳನ್ನು ಅಧ್ಯಯಿಸುವುದು ಆವಶ್ಯಕ. ಈ ದೇಶಗಳಲ್ಲಿ ಕೈಗಾರಿಕೋದ್ಯಮಗಳೇ ಅನೇಕರ ಜೀವನಕ್ಕೆ ಆಧಾರ ಎಂದು ಹೇಳಬಹುದು. ಇಲ್ಲಿ ರೂಪುಗೊಂಡ ವೈದ್ಯವಿಜ್ಞಾನ ಭಾರತದಂಥ ರಾಷ್ಟ್ರಕ್ಕೆ ಅನೇಕ ವಿಚಾರಗಳಲ್ಲಿ ಮೇಲ್ಪಂಕ್ತಿಯಾಗಬಲ್ಲದು. ಈ ಇತಿಹಾಸವನ್ನು ಇಲ್ಲಿ ಸ್ಥೂಲವಾಗಿ ಪರಿಶೀಲಿಸಲಾಗಿದೆ.

ಉದ್ಯೋಗದ ಸಂಪರ್ಕದಿಂದಲೇ ಉಂಟಾಗುವ ರೋಗಗಳ ವಿಚಾರ ಪ್ರಾಚೀನ ಭಾರತ. ಈಜಿಪ್ಟ್ ಹಾಗೂ ರೋಂ ದೇಶಗಳ ವೈದ್ಯರಿಗೆ ತಿಳಿದಿತ್ತೆಂಬುದಕ್ಕೆ ಆಧಾರಗಳಿವೆ. ಆದರೆ ಕೈಗಾರಿಕಾ ಕ್ಷೇತ್ರದಲ್ಲಿಯ ಆಧುನಿಕ ವೈದ್ಯವಿಜ್ಞಾನಕ್ಕೆ ಇಟಲಿ ದೇಶದ ಬರ್ನಾರ್ಡೋ ರಾಮಜ್ಜೀನಿ 17ನೆಯ ಶತಮಾನದಲ್ಲಿ ತಳಹದಿ ಹಾಕಿದನೆಂದು ಹೇಳಬಹುದು. ರೋಗಿಗಳ ರೋಗ ನಿದಾನ ಮಾಡಲು ವೈದ್ಯರು ಆತನ ಉದ್ಯೋಗವನ್ನು ಕೇಳಿ ತಿಳಿದುಕೊಳ್ಳಲೇಬೇಕೆಂದು ಈತ ಒತ್ತಿ ಹೇಳಿದ. 18–19ನೆಯ ಶತಮಾನದ ಕೈಗಾರಿಕಾ ಕ್ಷೇತ್ರದ ಕ್ರಾಂತಿಯ ತರುವಾಯ ರೋಗ ಪ್ರಚೋದಕ ಉದ್ಯೋಗಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ಇದ್ದಕ್ಕಿದ್ದ ಹಾಗೆ ನೂರ್ಮಡಿ ಏರಿತು. ಲೆಕ್ಕವಿಲ್ಲದಷ್ಟು ಕೈಗಾರಿಕೆಗಳು ಕಾಣಿಸಿಕೊಂಡವು. ಯಂತ್ರೀಕರಣ ಮತ್ತು ಹೆಚ್ಚುಹೆಚ್ಚಾಗಿ ರೂಢಿಗೆ ಬರುತ್ತಿರುವ ಸ್ವಯಂಚಾಲನ ವಿಧಾನಗಳಿಂದಾಗಿ ಕೈಗಾರಿಕೆಗಳು ಸರ್ವತೋಮುಖವಾಗಿ ಬೆಳೆದು ಹೊಸ ಹೊಸ ಯಂತ್ರಗಳ ಉಪಯೋಗ ಪ್ರಾರಂಭವಾಯಿತು. ಕೈಗಾರಿಕೆಗಳು ಅತಿ ಹೆಚ್ಚಾಗಿ ಬೆಳೆದುದರ ಪರಿಣಾಮವಾಗಿ ಹೊಸ ಸಮಸ್ಯೆಗಳು ಉದ್ಭವಿಸಿದುವು. ಅಪಘಾತದಿಂದ ಗಾಯ, ಸಂಪೂರ್ಣ ಅಥವಾ ಆಂಶಿಕ ಅಂಗವಿಕಲತೆ, ಇಲ್ಲವೇ ಸಾವುಗಳು ಕಾರ್ಮಿಕರಲ್ಲಿ ಸರ್ವೇಸಾಮಾನ್ಯವಾದುವು. ಕೆಲಸಮಾಡುವ ಕಡೆ ವಿಷಪೂರಿತ ಧೂಮ, ದೂಳುಗಳ ಸಂಪರ್ಕದಿಂದ ಉಸಿರಾಡುವಾಗ ಶ್ವಾಸಕೋಶಗಳಲ್ಲಿ ರೋಗ ಹರಡಲು ಅವಕಾಶ ಕಲ್ಪಿತವಾದವು.

ಉತ್ತರ ಅಮೆರಿಕದಲ್ಲಿ ಉದ್ಯೋಗಗಳಿಂದುಂಟಾಗುವ ರೋಗಗಳ ಕಡೆ ಗಮನ ಸೆಳೆದ ಪ್ರಖ್ಯಾತ ವ್ಯಕ್ತಿ ಎಂದರೆ ಆಲಿಸ್ ಹ್ಯಾಮಿಲ್ಟನ್. ಕೆಲಸಗಾರರ ಆರೋಗ್ಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಅನೇಕ ಕಾರ್ಯಕ್ರಮಗಳು ಆವಶ್ಯಕವೆಂದು ಈಕೆ ಸ್ಪಷ್ಟಪಡಿಸಿದಳು. ಆದರೆ ಹಲವಾರು ಕಾರಣಗಳಿಂದ ಇವು ಕಾರ್ಯಗತವಾಗಲಿಲ್ಲ. ಮಾಲೀಕರಲ್ಲಿಯಾಗಲಿ

ಕೆಲಸಗಾರರಲ್ಲಿಯಾಗಲಿ ಇವನ್ನು ಪ್ರಾರಂಭಿಸಲು ಅಷ್ಟು ಉತ್ಸಾಹವಿರಲಿಲ್ಲ. ಆದರೆ 1907–20ರಲ್ಲಿ ಜಾರಿಗೆ ಬಂದ ಮತ್ತು ಈ ವಿಷಯಕ್ಕೆ ಸಂಬಂಧಿಸಿದ ಅನೇಕ ಶಾಸನಗಳ ಫಲವಾಗಿ ಕುಂಠಿತವಾಗಿದ್ದ ಪ್ರಗತಿ ಚುರುಕುಗೊಂಡಿತೆಂದು ಹೇಳಬಹುದು. ಸಮಸ್ಯೆಗಳ ಅರಿವುಂಟಾಯಿತಾಗಿ ಕೆಲಸಗಾರರ ಸಂಘಗಳೂ ಮಾಲೀಕರೂ ಕೂಲಿಗಾರರ ಆರೋಗ್ಯ ನೆಮ್ಮದಿಯ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಲು ಉಪಕ್ರಮಿಸಿದರು.

ಪ್ರಾರಂಭದಲ್ಲಿ ಒಬ್ಬ ಕೆಲಸಗಾರನಿಗೆ ಪೆಟ್ಟಾದ ತರುವಾಯ ಅಥವಾ ರೋಗ ಬಂದ ಮೇಲೆ ಚಿಕಿತ್ಸೆಗೆ ಹೆಚ್ಚು ಗಮನ ಕೊಡಲಾಗುತ್ತಿತ್ತು. ಬಹು ಬೇಗ ಚಿಕಿತ್ಸೆಗಿಂತ ತಡೆಗಟ್ಟುವುದು ಮುಖ್ಯ ಹಾಗೂ ತಡೆಗಟ್ಟಲು ತಗಲುವ ವೆಚ್ಚ ಚಿಕಿತ್ಸೆಗೆ ತಗಲುವ ಖರ್ಚಿಗಿಂತ ಕಡಿಮೆ ಎಂಬುದು ಮಂದಟ್ಟಾಯಿತು. ಚಲಿಸುವ ಯಂತ್ರಭಾಗಗಳು ಅಪಾಯಕ್ಕೆ ಎಡೆಗೊಡದಂತೆ ಆವರಣಗಳಿಂದ ರಕ್ಷಿತವಾದವು. ಕೆಲಸ ಮಾಡುವ ಕಡೆ ಸಾಕಷ್ಟು ಗಾಳಿ ಬೆಳಕಿನ ಏರ್ಪಾಡಾಯಿತು. ವಿಷಪೂರಿತ ರಾಸಾಯನಿಕಗಳನ್ನು ಬಳಸುವ ಬದಲು ವಿಷರಹಿತ ರಾಸಾಯನಿಕಗಳು ಬಳಕೆಗೆ ಬಂದುವು. ಎಲ್ಲಿ ಈ ರೀತಿಯ ಮಾರ್ಪಾಡು ಸಾಧ್ಯವಿಲ್ಲವೋ ಅಲ್ಲಿ ವಿಶಿಷ್ಟ ರೀತಿಯ ಉಡುಪುಗಳಿಂದ ಹಾಗೂ ಮುಖಕ್ಕೆ ಮುಸುಕು ಹಾಕಿಕೊಂಡು ಕೆಲಸ ಮಾಡುವುದರ ಮೂಲಕ ರಕ್ಷಣೆಯನ್ನು ಒದಗಿಸಲಾಯಿತು. ಈ ಸಾಧನಗಳಿಂದ ಅನೇಕ ಕೈಗಾರಿಕಾ ರೋಗಗಳನ್ನು ತಡೆಗಟ್ಟಿ ಅವುಗಳಿಂದ ನರಳುವವರ ಸಂಖ್ಯೆಯನ್ನು ಕಡಿಮೆ ಮಾಡಲು ಸಾಧ್ಯವಾಯಿತು. ಆದರೆ ಸಮಸ್ಯೆ ಒಂದು ಕಡೆ ಕಡಿಮೆಯಾದಂತೆ ಮತ್ತೊಂದೆಡೆ ಹೊಸ ಹೊಸ ಸಮಸ್ಯೆಗಳು ಉದ್ಭವವಾಗತೊಡಗಿದುವು.

ಕೆಲಸಗಾರರಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಯಾವ ರೋಗಾಪಾಯವೂ ಸಂಭವಿಸದಂತೆ ಕ್ರಮಗಳು ಜಾರಿಗೆ ಬಂದಂತೆಲ್ಲ ಅವರ ಸಾಮಾನ್ಯ ಆರೋಗ್ಯ ಹಾಗೂ ನೆಮ್ಮದಿ ಸಹ ಬಹಳ ಮುಖ್ಯವೆಂಬುದು ಮಾಲೀಕರಿಗೆ ವೇದ್ಯವಾಯಿತು. ಏಕೆಂದರೆ ಕೆಲಸಗಾರ ಆರೋಗ್ಯದಿಂದಿದ್ದು ದೃಢಕಾಯನಾಗಿದ್ದರೆ ಅವನಿಂದ ಉತ್ಪತ್ತಿಯೂ ಹೆಚ್ಚು. ಮಾಲೀಕನಿಗೆ ಲಾಭವೂ ಅಧಿಕ. ಆದ್ದರಿಂದ ಇದೇ ಸಮಯಕ್ಕೆ ಎಲ್ಲ ದೊಡ್ಡ ಕಾರ್ಖಾನೆ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಕಾರ್ಮಿಕನ ಆರೋಗ್ಯರಕ್ಷಣೆಯನ್ನು ಕುರಿತ ಚಟುವಟಿಕೆಗಳು ಪ್ರಾರಂಭವಾದವು. ಕೆಲಸಕ್ಕೆ ಸೇರಿಸಿಕೊಳ್ಳುವ ಮುನ್ನ ಪ್ರತಿಯೊಬ್ಬ ಕಾರ್ಮಿಕನನ್ನೂ ವೈದ್ಯ ಪರೀಕ್ಷೆಗೆ ಒಳಪಡಿಸುತ್ತಿದ್ದರು. ಇದರಿಂದ ಅವನ ಆರೋಗ್ಯ ವಿಚಾರ ತಿಳಿಯುವುದಲ್ಲದೆ ಅವನ ಯೋಗ್ಯತೆಗೆ ತಕ್ಕಂತೆ ಕೆಲಸ ನೀಡಲು ಸಹಾಯಕವಾಯಿತು. ಅಲ್ಲದೇ ಕಾರ್ಮಿಕ ಕೆಲಸಕ್ಕೆ ಸೇರುವ ವೇಳೆಯಲ್ಲಿ ಆತನ ಆರೋಗ್ಯ ಹೇಗಿತ್ತೆಂಬುದಕ್ಕೆ ದಾಖಲೆ ಇದ್ದು ಮುಂದೆ ಉದ್ಭವಿಸಬಹುದಾದ ರೋಗಗಳಿಗೆ ಹೊಣೆಯಾದದ್ದು ಎಂಬುದನ್ನು ಖಚಿತವಾಗಿ ಇತ್ಯರ್ಥ ಮಾಡುವುದು ಸುಲಭವಾಯಿತು. ಇಷ್ಟೇ ಅಲ್ಲದೆ ನಿಯಮಿತ ಕಾಲಗಳಲ್ಲಿ ಪುನಃಪುನಃ ವೈದ್ಯಪರೀಕ್ಷೆಗೆ ಅವಕಾಶ ಕಲ್ಪಿಸಿಕೊಡಲಾಯಿತು. ಈ ಪರೀಕ್ಷೆಗಳು ಕಡ್ಡಾಯ ಅಥವಾ ಐಚ್ಛಿಕವಿರಬಹುದು. ಇವುಗಳಲ್ಲಿ ರೋಗದ ಸುಳಿವು ಗೊತ್ತಾದರೆ ಇನ್ನೂ ಮೊದಲ ಹಂತಗಳಲ್ಲೇ ಚಿಕಿತ್ಸೆಗೆ ಒಳಪಡಿಸಿ ಜಾಗ್ರತೆ ಗುಣಹೊಂದಲು ದಾರಿಯಾಯಿತು. ವೈದ್ಯಪರೀಕ್ಷೆ ಮತ್ತು ಚಿಕಿತ್ಸೆಯೊಂದಿಗೇ ವೈದ್ಯರು ಕಾರ್ಮಿಕರಿಗೆ ಅವರ ಆರೋಗ್ಯಪಾಲನೆಗೆ ಸಂಬಂಧಿಸಿದ ವಿಚಾರವಾಗಿ ತಿಳಿವಳಿಕೆ ಕೊಡಲು ಏರ್ಪಾಡಾಯಿತು. ಉದಾಹರಣೆಗೆ ಆಹಾರದ ಮಹತ್ತ್ವ, ಧೂಮಪಾನದಿಂದ ಆಗುವ ಅಪಾಯ, ಆರೋಗ್ಯ ನಿಯಮಗಳ ಪಾಲನೆ, ಕಾಲಕಾಲಕ್ಕೆ ವೈದ್ಯ ಪರೀಕ್ಷೆ ನಡೆಸುವ ಉದ್ದೇಶ, ಮಲ, ಮೂತ್ರ, ರಕ್ತ, ಇವುಗಳ ಪರೀಕ್ಷೆಯ ಆವಶ್ಯಕತೆ ಮುಂತಾದವನ್ನು ಕುರಿತು ಕಾರ್ಮಿಕರಿಗೆ ವಿವರಿಸಲಾಯಿತು.

ವೈದ್ಯಕೀಯ ಚಿಕಿತ್ಸೆ ಕೊಡಲು ಸೌಲಭ್ಯಗಳನ್ನು ಕಾರ್ಖಾನೆಗಳಲ್ಲಿಯೇ ಒದಗಿಸಬಹುದು ಅಥವಾ ಕಾರ್ಮಿಕನ ಇಚ್ಛಾನುಸಾರ ಅವನ ಸ್ವಂತ ವೈದ್ಯನಿಂದ ಚಿಕಿತ್ಸೆ ಪಡೆಯಲು ಅನುಮತಿ ಕೊಡಬಹುದು. ಕಾರ್ಖಾನೆಗಳಲ್ಲಿಯೇ ಸೌಲಭ್ಯಗಳು ಏನೇನಿರಬೇಕೆಂದು ನಿರ್ದಿಷ್ಟವಾಗಿ ಹೇಳುವುದು ಸುಲಭವಲ್ಲ. ಬೇಕಾದ ಸಿಬ್ಬಂದಿ, ಸಲಕರಣೆ ಇತ್ಯಾದಿ ಮಾಲಿಕರ ಹಿತಾಸಕ್ತಿಯನ್ನು ಅವಲಂಬಿಸುವುದೊಂದೇ ಅಲ್ಲದೆ ಯಾವ ರೀತಿಯ ಕೈಗಾರಿಕಾ ಉತ್ಪಾದನೆ ನಡೆಯುತ್ತಿದೆ, ಎಷ್ಟು ಜನ ಕೆಲಸಗಾರರಿದ್ದಾರೆ, ನೆರೆಕರೆಯಲ್ಲಿರುವ ವೈದ್ಯಕೀಯ ಸೌಲಭ್ಯಗಳು ಏನು ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಇತ್ಯರ್ಥ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ 2,500 ಜನ ಕೆಲಸ ಮಾಡುವ ಕ್ಷೇತ್ರದಲ್ಲಿ ಒಬ್ಬ ವೈದ್ಯನ ಸೇವೆ ಸದಾ ಕಾಲದಲ್ಲಿ ದೊರಕಬೇಕು ಹಾಗೂ 1,250 ಜನ ಕೆಲಸಗಾರರಿಗೆ ಒಬ್ಬ ದಾದಿ, ಒಬ್ಬ ಗುಮಾಸ್ತ ಇರಬೇಕು. ವೈದ್ಯಕೀಯ ಮತ್ತು ಆರೋಗ್ಯ ಕೇಂದ್ರದಲ್ಲಿ ಕಡೇ ಪಕ್ಷ ಪ್ರತಿ ಕೆಲಸಗಾರನಿಗೆ ಒಂದು ಚದರಡಿಯಂತೆ ಸ್ಥಳಾವಕಾಶವಿರಬೇಕು. ಸಣ್ಣ ಕೈಗಾರಿಕೆಗಳಲ್ಲಿ ಅಂದರೆ ಕೆಲವೇ ಜನ ಕೆಲಸ ಮಾಡುವಲ್ಲಿ ಪೂರ್ಣ ಕಾಲದ ವೈದ್ಯನ ಸೇವೆಗೆ ಅಗತ್ಯವಿಲ್ಲ. ಅವಶ್ಯ ಬಿದ್ದಾಗ ವೈದ್ಯರು ಬಂದು ಸೇವೆ ನೀಡುವಂತಿರಬಹುದು.

**ಅಮೆರಿಕ ಸಂಯುಕ್ತಸಂಸ್ಥಾನಗಳು:** ಇಲ್ಲಿ ಕಾರ್ಮಿಕರ ಆರೋಗ್ಯ ರಕ್ಷಣೆಗೆ ಯೋಜನೆಗಳು ಜಾರಿಯಲ್ಲಿರುವುದೊಂದೇ ಅಲ್ಲದೆ ಬಹಳ ಮಟ್ಟಿಗೆ ಪ್ರಗತಿಪರ ಹಾದಿಯಲ್ಲಿ ಅವು ಅಭಿವೃದ್ಧಿಗೊಂಡಿವೆ. ಇಪ್ಪತ್ತನೆಯ ಶತಮಾನದ ಮಧ್ಯದಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮಗಳು ಮೊದಮೊದಲಲ್ಲಿ ರೋಗ ಬಂದಾಗ ಸೌಲಭ್ಯಗಳನ್ನೊದಗಿಸುವುದಕ್ಕೂ ಆರೋಗ್ಯ ವಿಮಾ ಯೋಜನೆಗೆ ನೌಕರರನ್ನೊಳ ಪಡಿಸುವುದಕ್ಕೂ ಸೀಮಿತವಾಗಿದ್ದುವು. ಕಾಲಕ್ರಮೇಣ ರೋಗಪ್ರತಿಬಂಧಕ ಚುಚ್ಚು ಮದ್ದಿಗೆ ಏರ್ಪಾಡು ಮಾಡುವುದು, ಮಾನಸಿಕ ರೋಗ್ಯದ ಕಡೆ ಗಮನ ಕೊಡಲು ಸೌಲಭ್ಯ ಕಲ್ಪಿಸುವುದು ಮತ್ತು ಮಾದಕ ಪಾನೀಯಗಳ ಚಟವಿರುವವರನ್ನು ಸುಧಾರಣೆ ಮಾಡುವುದು ಸಹ ಈ ಯೋಜನೆಗಳಿಗೆ ಸೇರಿದುವು. ಬರಬರುತ್ತ ಉದ್ಯೋಗದಿಂದ ಉಂಟಾಗುವ ಅನಾರೋಗ್ಯ ನಿವಾರಣೆಯ ಮೂಲ ಉದ್ದೇಶ ಕಾರ್ಮಿಕನ ಸಾಮಾನ್ಯ ಆರೋಗ್ಯವನ್ನು ಉತ್ತಮಪಡಿಸುವ ಲಕ್ಷ್ಯಕ್ಕೆ ತಿರುಗಿತೆಂದು ಹೇಳಬಹುದು. ಏಕೆಂದರೆ ಕೆಲಸಕ್ಕೆ ಕಾರ್ಮಿಕರ ಗೈರುಹಾಜರಿಗೆ ಕಾರಣಗಳಲ್ಲಿ ಸಾಮಾನ್ಯ ಅನಾರೋಗ್ಯವೇ ಮುಖ್ಯವೆಂದು ಕಂಡುಬಂದಿತು. ಇದರ ಜೊತೆಗೆ ಉದ್ಯೋಗಕ್ಕೆ ಸಂಬಂಧಪಡದ ಅಪಘಾತಗಳೂ ಇದಕ್ಕೆ ಅನೇಕ ವೇಳೆ ಕಾರಣವೆಂದು ತಿಳಿಯಿತು.

ಅಮೆರಿಕದ ಸಾರ್ವಜನಿಕ ಆರೋಗ್ಯ ಸೇವಾ ಶಾಖೆ ಉದ್ಯೋಗಗಳಿಂದ ಉದ್ಭವಿಸುವ ರೋಗಗಳ ವಿಚಾರವಾಗಿ ಅನೇಕ ಅಧ್ಯಯನಗಳನ್ನು ನಡೆಸಿ ಅಂಕಿ ಅಂಶಗಳನ್ನು ಶೇಖರಿಸಿದೆ; ಶೇಖರಿಸುತ್ತಲೂ ಇದೆ. ಅನೇಕ ಸ್ಥಳೀಯ ಸಂಸ್ಥೆಗಳಲ್ಲಿ ಕೈಗಾರಿಕಾ ಆರೋಗ್ಯ ಮೇಲ್ವಿಚಾರಣೆಗೆ ಒಂದು ಪ್ರತ್ಯೇಕ ಶಾಖೆಯನ್ನೇ ಸ್ಥಾಪಿಸಲಾಗಿದೆ. ಇದರಲ್ಲಿ ಕೈಗಾರಿಕಾ ಕ್ಷೇತ್ರಗಳನ್ನು ಆರೋಗ್ಯ ದೃಷ್ಟಿಯಿಂದ ತಜ್ಞರು ಪರಿಶೀಲಿಸಿ ಅವುಗಳ ಸ್ಥಿತಿಗಳನ್ನು ತಿಳಿದು ಅವನ್ನು ಉತ್ತಮಗೊಳಿಸಲು ಸೂಚನೆಗಳನ್ನು ಕೊಡುತ್ತಾರೆ. ಇದರಿಂದ ಮಾಲೀಕರಿಗೆ ಬಹಳ ಉಪಕಾರವಾಗುತ್ತದೆ. ಕೆಲವು ವಿಪತ್ತು ವಿಮಾ ಕಂಪನಿಗಳು ವೈದ್ಯಕೀಯ ಹಾಗೂ ಕೈಗಾರಿಕೋದ್ಯಮ ಆರೋಗ್ಯ ರಕ್ಷಣ ಸೇವೆಯನ್ನೂ ತಜ್ಞರ ಸಲಹೆಗಳನ್ನೂ ಒದಗಿಸಲು ಮುಂದೆ ಬಂದವೆ. ಕೇವಲ ಸಣ್ಣ ಪುಟ್ಟ ಕ್ಷೇತ್ರಗಳಲ್ಲೂ ಮಾಲೀಕರು ವೈದ್ಯರ ಸೇವೆಯನ್ನು ಒಪ್ಪೊತ್ತು ಪಡೆದು ತಜ್ಞರ ಅಭಿಪ್ರಾಯದಂತೆ ಯಶಸ್ವಿ ಸೇವೆಯನ್ನು ಒದಗಿಸಲು ಅವಕಾಶವಿದೆ. 1960ರ ಹೊತ್ತಿಗೆ ಅಮೆರಿಕದಲ್ಲಿ ನೂರಕ್ಕೆ ಕೇವಲ ಹತ್ತು ಕಾರ್ಮಿಕರು ಮಾತ್ರ ಬೃಹದ್ವ್ಯಾಪಕ ಕೈಗಾರಿಕಾ ಆರೋಗ್ಯ ರಕ್ಷಣಾ ಕಾರ್ಯಕ್ರಮದಲ್ಲಿ ಸೇರಿದ್ದರು. ಆ ಕಾಲದಲ್ಲಿ ಉದ್ಯಮಗಳು ಇನ್ನೂ ಅಷ್ಟಾಗಿ ಬೆಳೆದಿರಲಿಲ್ಲವೆಂದು ಹೇಳಬಹುದು. ಚಿಕ್ಕಪುಟ್ಟ ಉದ್ಯಮಗಳು ಮಾತ್ರ ಬೆಳೆದಿದ್ದುವು. ಇದರಿಂದ ತುರ್ತು ಪರಿಸ್ಥಿತಿಗೆ ಬೇಕಾಗುವ ವೈದ್ಯಕೀಯ ಸೇವೆಗೆ ಏರ್ಪಾಡಿತ್ತೇ ವಿನಾ ಮಿಕ್ಕ ವೇಳೆಗಳಲ್ಲಿ ಯಾವ ವಿಧವಾದ ಸೌಲಭ್ಯಗಳೂ ಇರಲಿಲ್ಲ. ಇದಕ್ಕೆ ಕಾರಣ ಈ ರೀತಿಯ ಬೃಹದ್ವ್ಯಾಪಕ ಸೇವೆಯನ್ನೊದಗಿಸಲು ತಗಲುವ ಮಿತಿ ಮೀರಿದ ಖರ್ಚು. ದೊಡ್ಡ ಕೈಗಾರಿಕಾಕ್ಷೇತ್ರಗಳಲ್ಲಿ ಅಂದರೆ ಮೂರು ನಾಲ್ಕು ಸಾವಿರ ಕೆಲಸಗಾರರು ಕೆಲಸ ಮಾಡುವ ಕಡೆ ವರ್ಷಂಪ್ರತಿ ತಲೆಗೆ ಮೂವತ್ತು ಡಾಲರು ಖರ್ಚು ಆಗುತ್ತಿತ್ತು. ಇದನ್ನು ಉತ್ಪನ್ನ ಮಾಡುವ ಸಾಮಗ್ರಿಗಳ ಡಾಲರು ಖರ್ಚು ಆಗುತ್ತಿತ್ತು. ಇದನ್ನು ಉತ್ಪನ್ನ ಮಾಡುವ ಸಾಮಗ್ರಿಗಳ ಖರ್ಚಿನೊಂದಿಗೆ ಸೇರಿಸಿ ದೊಡ್ಡ ಕೈಗಾರಿಕೆಗಳು ಹಣವನ್ನು ಸರಿತೂಗಿಸಿಕೊಳ್ಳಲು ಅವಕಾಶವಿದೆ. ಆದರೆ ಸಣ್ಣಪುಟ್ಟ ಉದ್ಯಮಗಳಿಗೆ ಈ ರೀತಿ ಮಾಡಲು ಅವಕಾಶವಿಲ್ಲ. ಈ ಯೋಜನೆಯನ್ನು ಕಾರ್ಯಗತ ಮಾಡಿದರೆ ಅವರಿಗೆ ಭಾರಿ ನಷ್ಟವಾಗದಿರದು. ಇಂಥ ಸಮಸ್ಯೆಯನ್ನು ಅಮೆರಿಕದ ಕೆಲವು ಸಂಸ್ಥಾನಗಳಲ್ಲಿ ಐದಾರು ಸಣ್ಣಪುಟ್ಟ ಕೈಗಾರಿಕೆಗಳು ಒಂದಾಗಿ ಬೃಹದ್ವ್ಯಾಪಕ ಕೈಗಾರಿಕಾ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಕಾರ್ಯಗತ ಮಾಡಿಕೊಳ್ಳುವುದರ ಮೂಲಕ ಬಗೆಹರಿಸಿಕೊಂಡವು. ಪ್ರತಿ ಕ್ಷೇತ್ರದಿಂದ, ಅಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆಯನ್ನು ಅವಲಂಬಿಸಿ, ಮಾಲೀಕರು ತಮ್ಮ ಭಾಗದ ಹಣವನ್ನು ನಿಷ್ಕರ್ಷಿಸಿ ತುಂಬಿಕೊಡುತ್ತಿದ್ದರು. ತಜ್ಞರ ಸೇವೆ ಈ ರೀತಿ ಎಲ್ಲರಿಗೂ ದೊರಕುವಂತಾಯಿತು. ಈ ಕೈಗಾರಿಕಾ ಸಂಸ್ಥೆಗಳಲ್ಲಿ ಬೃಹದ್ವ್ಯಾಪಕ ಆರೋಗ್ಯ ರಕ್ಷಣಾ ವ್ಯವಸ್ಥೆಯಿಂದ ಕಾರ್ಮಿಕರ ಅನುಕೂಲ ಒಂದೇ ಅಲ್ಲದೆ ಕೈಗಾರಿಕಾ ರೋಗಗಳ ವಿಚಾರವಾಗಿ ಸಂಶೋಧನೆ ನಡೆಸಲು ಹಾಗೂ ವೈದ್ಯರನ್ನು ಈ ಶಾಖೆಯಲ್ಲಿ ಕೆಲಸ ಮಾಡಲು ಪರಿಣತರನ್ನಾಗಿ ಮಾಡುವ ವಿಶಿಷ್ಟ ರೀತಿಯ ತರಬೇತು ಕೊಡಲು ಸಹ ಬೇಕಾದ ಕ್ಷೇತ್ರ ಸಿಕ್ಕಂತಾಯಿತು. ಉದಾಹರಣೆಗೆ ಕಾರ್ಮಿಕರಲ್ಲಿ ಹೃದಯ, ರಕ್ತನಾಳಗಳಿಗೆ ಸಂಬಂಧಪಟ್ಟ ರೋಗಗಳು, ಏಡಿಗಂತಿ, ಶ್ವಾಸಕೋಶ ಮತ್ತು ಕರುಳಿನ ರೋಗಗಳು ಎಷ್ಟರಮಟ್ಟಿಗೆ ವ್ಯಾಪಿಸಿವೆ, ಉದ್ಯೋಗದಿಂದ ಈ ರೋಗಗಳ ಮೇಲೆ ಏನು ಪರಿಣಾಮ ಮುಂತಾದ ಅಂಶಗಳನ್ನು ಶೇಖರಿಸಬಹುದು. ಕಾಲಕಾಲಕ್ಕೆ ಕಡ್ಡಾಯವಾಗಿ ಪ್ರತಿ ಕಾರ್ಮಿಕರ ವೈದ್ಯ ಪರೀಕ್ಷೆ, ರಕ್ತ ಮಲಮೂತ್ರ ಇತ್ಯಾದಿಗಳ ತನಿಖೆ ನಡೆಯುವುದರಿಂದ ಅತಿ ಮುಖ್ಯವಾಗಿ ಸಂಶೋಧನೆಗೆ ಬೇಕಾದ ಆಧಾರಾಂಶಗಳು ಸುಲಭವಾಗಿ ದೊರೆಯುತ್ತವೆ.

**ಇಂಗ್ಲೆಂಡ್** : ಕೆಲಸದ ಪರಿಣಾಮವಾಗಿ ಕೆಲಸಗಾರನ ದೈಹಿಕ ಮಾನಸಿಕ ಹಾಗೂ ಸಾಮಾಜಿಕ ಆರೋಗ್ಯದ ಮೇಲೆ ಉಂಟಾಗುವ ಪ್ರತಿಕೂಲಗಳು ಇಂಗ್ಲೆಂಡ್ ದೇಶದ ಕೈಗಾರಿಕಾ ಕ್ಷೇತ್ರದ ಇತಿಹಾಸದಲ್ಲಿ ಮೊದಲಿನಿಂದಲೂ ತಿಳಿದಿದ್ದ ಸಂಗತಿ.

ಹದಿನೆಂಟನೆಯ ಶತಮಾನದ ಕಡೆಯವರೆಗೆ (ಅಂದರೆ ಉಗಿ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ನಡೆಯುವ ಸ್ವಯಂಚಾಲನ ಯಂತ್ರಗಳುಳ್ಳ ಕಾರ್ಖಾನೆಗಳು ಸ್ಥಾಪಿತವಾಗುವ ವರೆಗೆ) ಜನಸಾಮಾನ್ಯರಿಗೆ ಈ ಸಮಸ್ಯೆಯ ಅರಿವು ಹಾಗೂ ತೀವ್ರತೆ ತಿಳಿದಿರಲಿಲ್ಲ. ಬಟ್ಟೆ ಗಿರಣಿಗಳಲ್ಲಿ ಕೆಲಸ ಮಾಡುವವರಲ್ಲಿ ಸೋಂಕು ಜಾಡ್ಯಗಳು ಅಂದರೆ ಕಾಲರ, ಸಿಡುಬು, ಟೈಫಸ್ ಮುಂತಾದ ಭೀಕರ ರೋಗಗಳು ತಾಂಡವವಾಡಲು ಉಪಕ್ರಮಿಸಿದಾಗ ಆಡಳಿತದ ಗಮನ ಅತ್ತ ಕಡೆಗೆ ಹರಿಯಿತು. ಈ ಸಮಸ್ಯೆಗಳ ಪರಿಹಾರಕ್ಕೆ ಕಾನೂನುಗಳನ್ನು ಸಿದ್ಧಪಡಿಸಿ ಜಾರಿಗೆ ತರಲಾಯಿತು. ಕಾರ್ಖಾನೆಗಳ ಕಾಯಿದೆಗಳು 1802ರಿಂದ ಪ್ರಾರಂಭವಾದುವು. ಹತ್ತಿ ಮತ್ತು ಉಣ್ಣೆ ಗಿರಣಿಗಳಿಗೆ ಅನ್ವಯಿಸುವ ಕಾಯಿದೆಗಳು ಜಾರಿಗೆ ಬಂದವು. 1833ರಲ್ಲಿ ಮೊತ್ತಮೊದಲು ಕಾರ್ಖಾನೆಗಳನ್ನು ಪರಿಶೀಲಿಸಲು ಅಧಿಕಾರಿಗಳನ್ನು ನೇಮಿಸುವ ಕಾನೂನು ಜಾರಿಗೆ ಬಂದಿತು. ಒಂಬತ್ತರಿಂದ ಹದಿಮೂರು ವರ್ಷದ ಎಲ್ಲ ಬಾಲ ಕಾರ್ಮಿಕರು ದಿನವಹಿ ಕಡೇ ಪಕ್ಷ ಎರಡು ಗಂಟೆಗಳಷ್ಟಾದರೂ ಪಾಠ ಕಲಿಯಲು ಶಾಲೆಗೆ ಹೋಗಲು ಒತ್ತಾಯ ಮಾಡುವ ಕಾನೂನುಗಳು ಸಹ ಆಗಲೇ ಜಾರಿಗೆ ಬಂದವು. ಇಂಗ್ಲೆಂಡಿನಲ್ಲಿ ಮುಂದೆ ಬಂದ ಕಡ್ಡಾಯ ಶಿಕ್ಷಣದ ತಳಹದಿ ಇದು ಎಂದು ಹೇಳಬಹುದು. ಕಾರ್ಖಾನೆಯ ಒಳಭಾಗವನ್ನು ಶುಭ್ರವಾಗಿಡಲು ಸುಣ್ಣಬಣ್ಣಗಳನ್ನು ಬಳಿಯಬೇಕೆಂಬ ನಿಯಮ 1844ರಲ್ಲಿ ಬಂದಿತು. ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ವಯಸ್ಸನ್ನು ನಿರ್ಧರಿಸಿ ಸಮರ್ಥನಪತ್ರಗಳನ್ನು ಪಡೆದು ತರಲು ಕಾರ್ಖಾನೆಗಳ ಪರಿಶೀಲನಾಧಿಕಾರಿ ವೈದ್ಯರನ್ನು ಗೊತ್ತುಪಡಿಸುವ ಅಧಿಕಾರವನ್ನು ಪಡೆದ. ಕ್ರಮೇಣ ವೈದ್ಯಕೀಯ ಪರಿಶೀಲನೆ ಮತ್ತು ನೆರವನ್ನು ಕಡ್ಡಾಯ ಮಾಡುವ ಕಾನೂನುಗಳು ಒಂದೊಂದಾಗಿ ಬಂದವು. ರಕ್ಷಣೆಯಿಲ್ಲದ ಸ್ವಯಂಚಾಲಿತ ಯಂತ್ರಗಳಿಂದ ಹಾಗೂ ಅಡ್ಡಲಾಗಿ ಹಾಯುವ ಯಂತ್ರ ದಂಡಗಳಿಂದ ಉಂಟಾಗುವ ಸಾವುಗಳು ಮತ್ತು ತೀವ್ರ ಗಾಯಗಳಿಗೆ ತಕ್ಕ ರಕ್ಷಣೆ ಮತ್ತು ಪರಿಹಾರ ಕೊಡಲು ಮಾಲೀಕನ ಹೊಣೆ ಅಥವಾ ಜವಾಬ್ದಾರಿ ಕಾನೂನು 1880ರಲ್ಲಿ ಇಂಗ್ಲೆಂಡಿನಲ್ಲಿ ಜಾರಿಗೆ ಬಂದಿತು. 1946ರಲ್ಲಿ ಅಂಗೀಕೃತವಾದ ರಾಷ್ಟ್ರೀಯ ಜೀವ ವಿಮಾ (ಕೈಗಾರಿಕೋದ್ಯಮಗಳಿಂದ ಸಂಭವಿಸುವ ಗಾಯಗಳಿಗೆ ಅನ್ವಯಿಸುವ) ಕಾನೂನಿಗೆ 1880ರ ಮಾಲೀಕನ ಹೊಣೆ ಕಾನೂನೇ ತಳಹದಿ. 1908ರಲ್ಲಿ ರಾಷ್ಟ್ರೀಯ ಆರೋಗ್ಯ ವಿಮಾ ಕಾಯಿದೆ ಜಾರಿಗೆ ಬಂದಿತು. ಎರಡನೆಯ ಮಹಾಯುದ್ಧ ಮುಕ್ತಾಯವಾದ ಅನಂತರ ಸೈನ್ಯದಿಂದ ಹೊರಬಂದ ಅನೇಕ ಅಂಗವಿಕಲರಿಗೆ ಕೆಲಸಗಳನ್ನು ಒದಗಿಸುವ ಪ್ರಶ್ನೆ ಆಡಳಿತದ ತುರ್ತುಗಮನವನ್ನು ಸೆಳೆಯಿತು. ವಿಕಲಗೊಂಡ ಅಂಗಗಳನ್ನು (ಕೈಕಾಲು ಇತ್ಯಾದಿ) ಪುನಃ ಕೆಲಸಕ್ಕೆ ಬರುವಂತೆ ಚಿಕಿತ್ಸೆ ಮಾಡಲು ಶಸ್ತ್ರವೈದ್ಯರು ಸಾಹಸಪಟ್ಟು ಬಹುಮಟ್ಟಿಗೆ ಯಶಸ್ವಿಗಳಾದರು. ಅಂಗವಿಕಲರಿಗೆ ರಕ್ಷಣೆ ಕೊಡುವ ಕಾನೂನು 1944ರಲ್ಲಿ ಜಾರಿಗೆ ಬಂದಿತು. ಈ ಕಾರ್ಯಕ್ರಮಗಳ ಪ್ರಗತಿಯಿಂದಲೇ 1948ರಲ್ಲಿ ರಾಷ್ಟ್ರೀಯ ಆರೋಗ್ಯ ಸೇವೆ ಕಾರ್ಯಗತವಾಯಿತು. ಈ ಕಾರ್ಯಕ್ರಮಗಳಲ್ಲಿ ಕೈಗಾರಿಕೋದ್ಯಮ ಕ್ಷೇತ್ರಗಳಲ್ಲಿ ಸಂಭವಿಸುವ ಗಾಯ ಅಪಘಾತಗಳಿಗೆ ಚಿಕಿತ್ಸೆ, ನೆರವು ಪರಿಹಾರಗಳನ್ನೊದಗಿಸಲು ಅವಕಾಶವಿತ್ತು, ಕೆಲಸಗಾರರ ಆರೋಗ್ಯ, ನೆಮ್ಮದಿ ಹಾಗೂ ಅಪಾಯದಿಂದ ರಕ್ಷಣೆಯನ್ನು ಕಾರ್ಖಾನೆಗಳಿಗೆ ಅನ್ವಯಿಸುವ ಕಾಯಿದೆ 1961ರಲ್ಲಿ ಜಾರಿಗೆ ಬಂದಿತು. ಇದರಲ್ಲಿ ಎಲ್ಲ ವಿಧದ ಕಾರ್ಖಾನೆಗಳಿಗೆ ಅನ್ವಯಿಸುವಂತೆ ಕನಿಷ್ಠ ಪಕ್ಷ ದೊರೆಯಬೇಕಾದ ಸೌಲಭ್ಯಗಳ ಮಟ್ಟ ಸೂಚಿಸಲಾಯಿತು. ಕೆಲವು ಉದ್ಯಮಗಳಲ್ಲಿ ನಿರ್ದಿಷ್ಟವಾದ ಅಪಾಯ, ರೋಗ ಹಾಗೂ ನೆಮ್ಮದಿ ಭಂಗವಾಗುವ ಸಂಭವಗಳು ಹೆಚ್ಚಿಗೆ ಇದ್ದರೆ ಇವನ್ನು ಪ್ರತಿಬಂಧಿಸಲು ಮುಂಜಾಗ್ರತೆ ವಹಿಸಲು ವಿಶಿಷ್ಟ ರೀತಿಯ ರಕ್ಷಣಾ ಕ್ರಮಗಳನ್ನು ಕಡ್ಡಾಯ ಮಾಡುವುದಕ್ಕೆ ಕಾನೂನು ಅವಕಾಶ ಕೊಟ್ಟಿತು. ಇವೆಲ್ಲವನ್ನೂ ಜಾರಿಗೆ ತಂದು ಅವು ಆಯಾ ಕ್ಷೇತ್ರಗಳಲ್ಲಿ ವಾಸ್ತವವಾಗಿ ಆಚರಣೆಗೆ ತರಲ್ಪಟ್ಟಿವೆಯೇ ಇಲ್ಲವೇ ಎಂಬುದನ್ನು ನಿಶ್ಚಯ ಮಾಡಿಕೊಂಡು ಸಲಹೆ ಕೊಡುವ ಜವಾಬ್ದಾರಿ ಕಾರ್ಖಾನೆಗಳ ಪರಿಶೀಲನಾಧಿಕಾರಿಗಳ ಆಡಳಿತಕ್ಕೊಳಪಟ್ಟದ್ದು.

ಗಣಿಗಳಿಂದ ಕಲ್ಲಿದ್ದಲನ್ನು ತೆಗೆಯುವ ಉದ್ಯೋಗ ಇಂಗ್ಲೆಂಡಿನ ಅತಿ ಮುಖ್ಯ ಕೈಗಾರಿಕೆ. ಇಲ್ಲಿ ಕೆಲಸ ಮಾಡುವ ಕಾರ್ಮಿಕರು ಅನುಭವಿಸುವ ಸ್ಥಿತಿಗತಿಗಳೇ ವಿಶಿಷ್ಟ ರೀತಿಯವು. ಸಾವುನೋವುಗಳುಂಟಾಗುವ ಅಪಘಾತಗಳು, ಕಲ್ಲಿದ್ದಲ ದೂಳು ಶ್ವಾಸಕೋಶಗಳನ್ನು ಹೊಕ್ಕು ಅದರಿಂದ ಉಂಟಾಗುವ ಶ್ವಾಸಕೋಶ ರೋಗಗಳು, ಎಡೆಬಿಡದೆ ಅಲುಗುವ ಕಣ್ಣುಗುಡ್ಡೆಗಳ ರೋಗಗಳು, ಸಂಧಿವಾತ ರೋಗಗಳು ಇತ್ಯಾದಿಗಳು ಅನೇಕ ಕಾರ್ಮಿಕರನ್ನು ಪೀಡಿಸುತ್ತವೆ. ಇಷ್ಟೇ ಅಲ್ಲದೆ ಭೂಗರ್ಭಗಣಿಗಳು ಬಹಳ ಕೆಳಗಿರುವುದರಿಂದ ಅಲ್ಲಿಯ ವಾತಾವರಣ ಅಂದರೆ ಅತಿ ಶಾಖ, ತೇವದಿಂದ ಕೂಡಿದ ಗಾಳಿ ಹಾಗೂ ಕಶ್ಮಲ ಮಿಶ್ರಿತ ಗಾಳಿಯಿಂದಲೂ ಕೆಲಸ ಮಾಡುವವನ ಆರೋಗ್ಯ ಬಹಳ ಸುಲಭವಾಗಿ ಕೆಡಬಹುದು. ಇಕ್ಕಟ್ಟಾದ ಜಾಗದಲ್ಲಿ ದಿನವಹಿ ಆರರಿಂದ ಎಂಟು ಗಂಟೆಗಳ ದೈಹಿಕ ಶ್ರಮ ಇವುಗಳೊಂದಿಗೆ ಸೇರಿದರೆ ಕಾರ್ಮಿಕನ ಸ್ಥಿತಿ ಮತ್ತಷ್ಟು ಕೆಡುವುದರಲ್ಲಿ ಯಾವ ಅನುಮಾನವೂ ಇಲ್ಲ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇಲ್ಲಿ ಕೆಲಸ ಮಾಡುವವರಿಗೆ ಆರೋಗ್ಯ ರಕ್ಷಣೆ, ನೆಮ್ಮದಿ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಕಲ್ಲಿದ್ದಲು ಗಣಿಗಳ ಆಡಳಿತಕ್ಕೆ ಒಂದು ಪ್ರತ್ಯೇಕ ಹಾಗೂ ಖಾಯಂ ವೈದ್ಯಕೀಯ ಪರಿಶೀಲನಾಧಿಕಾರಿಯನ್ನು 1927ರಲ್ಲಿ ಗೊತ್ತು ಮಾಡಲಾಯಿತು. ಒಂದನೆಯ ಮಹಾಯುದ್ಧ ನಡೆಯುತ್ತಿದ್ದ ವೇಳೆಯಲ್ಲಿ ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ಷೇತ್ರದ ಆಧುನಿಕ ವೈದ್ಯವಿಜ್ಞಾನ ಪ್ರಾರಂಭವಾಯಿತೆಂದು ಹೇಳಬಹುದು. ಮದ್ದುಗುಂಡುಗಳನ್ನು ತಯಾರಿಸುವ ಕಾರ್ಖಾನೆಯ ಕೆಲಸಗಾರರ ಆರೋಗ್ಯ ರಕ್ಷಣಾ ಸಮಿತಿ ಒಂದನ್ನು ಡೇವಿಡ್ ಲಾಯಿಡ್ ಜಾರ್ಜ್ ಆಗ ರಚಿಸಿದ. ಯುದ್ಧ ಕೊನೆಗೊಂಡಾಗ ಕೆಲವು ಮುಖ್ಯಸ್ಥರು ಕೆಲಸಗಾರರ ಆರೋಗ್ಯ ರಕ್ಷಣೆಯ ಹೊಣೆಯನ್ನು ಕಾರ್ಖಾನೆಗಳು ಹೊತ್ತುಕೊಳ್ಳುವುದು ಅತಿ ಮುಖ್ಯವೆಂಬುದನ್ನು ಅರಿತು ತಮ್ಮ ತಮ್ಮ ಸಂಸ್ಥೆಗಳಲ್ಲಿ ಒಬ್ಬ ವೈದ್ಯನ ಸೇವೆಯನ್ನು ಪೂರ್ಣವಾಗಿ ಒದಗಿಸಿಕೊಂಡರು. ಆದರೆ ಈ ದಿಶೆಯಲ್ಲಿ ಸಾಕಷ್ಟು ಪ್ರಗತಿ ಆಗಲಿಲ್ಲ. 1935ರ ಹೊತ್ತಿಗೆ ಈ ಕಾರ್ಖಾನೆಗಳಲ್ಲಿ ಪೂರ್ಣ ಸೇವೆ ಸಲ್ಲಿಸುತ್ತಿದ್ದ 35 ಮಂದಿ ವೈದ್ಯರು ತಮ್ಮದೇ ಆದ ಒಂದು ಸಂಘವನ್ನು ರಚಿಸಿಕೊಂಡರು. ಇದೇ ಕೈಗಾರಿಕಾ ಕ್ಷೇತ್ರಕ್ಕೆ ಸೇವೆ ಸಲ್ಲಿಸುವ ವೈದ್ಯರ ಸಂಘ. 1960ರಲ್ಲಿ ಈ ಸಂಘದ ಸದಸ್ಯತ್ವ 1,000ವನ್ನು ಮೀರಿತ್ತು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಸರ್ಕಾರದ ಸರಬರಾಜು ಖಾತೆ ಎಲ್ಲ ಮದ್ದು ಗುಂಡು ಕಾರ್ಖಾನೆಗಳಲ್ಲೂ ಈ ವೈದ್ಯ ಇಲಾಖೆ ಒಂದನ್ನು ಸ್ಥಾಪಿಸಿತು. ಇದು ತನ್ನ ಸೇವೆಯನ್ನು ಒದಗಿಸುವುದೊಂದೇ ಅಲ್ಲದೆ ಇಡೀ ಕೈಗಾರಿಕಾ ಕ್ಷೇತ್ರದ ವೈದ್ಯಕೀಯ ಹಾಗೂ ಆರೋಗ್ಯ ರಕ್ಷಣಾ ವ್ಯವಸ್ಥೆಗೆ ಅತ್ಯಗತ್ಯವಾಗಿ ಇರಬೇಕಾದ ಚಟುವಟಿಕೆ ಸಿಬ್ಬಂದಿ ಮತ್ತು ಸಂಸ್ಥೆಯ ಮಾದರಿಯನ್ನು ಸಹ ಸೂಚಿಸಿತು. ಈ ಸೂಚನೆಗಳನ್ನೊಳಗೊಂಡ ಶಿಫಾರಸು ಕಾರ್ಯಗತವಾಗಲಿಲ್ಲ. ಇದಕ್ಕೆ ಮುಖ್ಯಕಾರಣಗಳು ಹಣದ ಕೊರತೆ ಹಾಗೂ ಆಡಳಿತ ಸಮಸ್ಯೆಗಳು. ಸರ್ಕಾರ ಈ ಸುಧಾರಣೆಗಳನ್ನು ಆಚರಣೆಗೆ ತರುವ ಹೊಣೆಯನ್ನು ಖಾಸಗೀ ಕೈಗಾರಿಕೆಗಳ ಆಡಳಿತಕ್ಕೆ ವಹಿಸಿತಾದರೂ ಪ್ರತಿಕ್ರಿಯೆ ಉತ್ತೇಜನಕಾರಿಯಾಗಿರಲಿಲ್ಲ. ಆದರೆ ರಾಷ್ಟ್ರೀಕರಣವಾದ ಕಲ್ಲಿದ್ದಲು, ಹಡಗು ಕಟ್ಟೆ ಕೂಲಿಗಾರರು, ವಿದ್ಯುಚ್ಛಕ್ತಿ, ಪರಮಾಣುಶಕ್ತಿ ಮುಂತಾದ ಕ್ಷೇತ್ರಗಳಲ್ಲಿ ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ನೆರವಿಗೆ ಬೃಹದ್ವ್ಯಾಪಕ ಸೇವೆ ಸ್ಥಾಪಿತವಾಯಿತು. ಉತ್ತಮವಾಗಿ ವ್ಯವಸ್ಥೆ ಮಾಡಿರುವ ತುರ್ತು ಚಿಕಿತ್ಸಾವಿಭಾಗ ಕೂಲಿಗಾರರ ಪೂರ್ಣ ವಿಶ್ವಾಸವನ್ನು ಗಳಿಸಿತು. ಇದರಿಂದ ಕಾಯಿಲೆ ಗೈರುಹಾಜರಿ ಬಹಳ ಮಟ್ಟಿಗೆ ಕಡಿಮೆ ಆಗಿ ಮಾಲೀಕರ ಗಮನವನ್ನು ಆಕರ್ಷಿಸಿತು. ಕೆಲಸಗಾರನಿಗೆ ಯಾವ ವಿಧವಾದ ಕೆಲಸದಲ್ಲಿ ಆಸಕ್ತಿ, ಸಹಜ ಪ್ರವೃತ್ತಿ ಇದೆ ಎಂಬುದನ್ನು ಕೆಲಸಕ್ಕೆ ಸೇರುವ ಮುನ್ನ ವಿಮರ್ಶಿಸುವುದರಿಂದ ಅವನನ್ನು ಸೇರಿದ ತರುವಾಯ ಕೆಲಸದಿಂದ ತೆಗೆದು ಹಾಕುವ ಸಂದರ್ಭಗಳು ಬಹುಮಟ್ಟಿಗೆ ಕಡಿಮೆಯಾದುವು. ತಾತ್ಕಾಲಿಕವಾಗಿಯಾಗಲಿ ಶಾಶ್ವತವಾಗಿ ಆಗಲಿ ರೋಗ, ನ್ಯೂನತೆ ಅಥವಾ ಅಂಗವಿಕಲತೆ ಉಂಟಾದಲ್ಲಿ ಅಂಥವರಿಗೆ ತಕ್ಕ ಚಿಕಿತ್ಸೆಗೆ ಏರ್ಪಾಡು ಮಾಡಿ ಗುಣವಾಗದಿದ್ದಲ್ಲಿ ಯುಕ್ತ ಶಿಕ್ಷಣ ಕೊಟ್ಟು ತಕ್ಕ ಕೆಲಸವನ್ನು ಒದಗಿಸಿ ಪುನಃ ಅವರು ಸಂಪಾದಿಸಲು ಅವಕಾಶ ಕಲ್ಪಿಸಿಕೊಡುವುದು ಕೈಗಾರಿಕಾ ಕ್ಷೇತ್ರಕ್ಕೆ ಅನ್ವಯಿಸುವ ವೈದ್ಯವಿಜ್ಞಾನದ ಒಂದು ಮುಖ್ಯ ಜವಾಬ್ದಾರಿ. ಕಾರ್ಖಾನೆಯ ನೈರ್ಮಲ್ಯ, ಕೈಗಾರಿಕೋದ್ಯಮಗಳಲ್ಲಿ ಉದ್ಭವಿಸುವ ರೋಗಗಳು, ಅವುಗಳ ಕಾರಣ, ಅವುಗಳ ಚಿಕಿತ್ಸೆ ಹಾಗೂ ಪ್ರತಿಬಂಧಕ ಕ್ರಮಗಳು ಮತ್ತು ಅಪಘಾತಗಳನ್ನು ತಪ್ಪಿಸುವ ವಿಧಾನ ಇವೇ ಮುಂತಾದ ವಿಷಯಗಳಲ್ಲಿ, ಕಾರ್ಖಾನೆಯ ವೈದ್ಯ ಯುಕ್ತಸಲಹೆಯನ್ನು ಕೊಡುತ್ತಾನೆ. ಮೊದಮೊದಲು ರೋಗ ಮತ್ತು ಅವುಗಳ ಚಿಕಿತ್ಸೆಯ ಮೇಲೆಯೇ ಹೆಚ್ಚು ಗಮನವಿಡಲಾಗುತ್ತಿತ್ತು. ಪ್ರತಿಬಂಧಕ ಕ್ರಮಗಳ ಮೇಲೆ ಅಷ್ಟು ಲಕ್ಷ್ಯವಿರುತ್ತಿರಲಿಲ್ಲ. ಕಾಲಕ್ರಮೇಣ ಈ ನ್ಯೂನತೆಯನ್ನು ಹೋಗಲಾಡಿಸಲಾಯಿತು. ಇಂಗ್ಲೆಂಡಿನಲ್ಲಿ ಕೈಗಾರಿಕೆಗಳು ಸಣ್ಣ ಸಣ್ಣ ಸಂಸ್ಥೆಗಳಾಗಿದ್ದು ಅವುಗಳಲ್ಲಿ ಕೆಲವೇ ಕೆಲಸಗಾರರಿರುತ್ತಿದ್ದರು. ಇದರಿಂದ ಆಡಳಿತ ವಹಿಸಿದ ಮಾಲೀಕರಿಗೆ ವೈದ್ಯ ಸಹಾಯ ಹಾಗೂ ಆರೋಗ್ಯ ರಕ್ಷಣೆಗೆ ಏರ್ಪಾಡು ಮಾಡುವುದು ಸುಲಭಸಾಧ್ಯವಾಗಲಿಲ್ಲ. ದೊಡ್ಡ ದೊಡ್ಡ ಕೈಗಾರಿಕಾ ಪಟ್ಟಣಗಳಲ್ಲಿ ಉದಾಹರಣೆಗೆ ಬರ್ಮಿಂಗ್‌ಹ್ಯಾಮ್ ಪಟ್ಟಣದಲ್ಲಿ ಕಾರ್ಮಿಕರಿಗೇ ಪ್ರತ್ಯೇಕ ಆಸ್ಪತ್ರೆಯನ್ನು ತೆರೆಯಲಾಯಿತು. ಈ ರೀತಿಯ ಆಸ್ಪತ್ರೆಗಳು ಬಹಳ ಯಶಸ್ವಿಯಾಗಿ ಸೇವೆ ಸಲ್ಲಿಸಿದುವು. ಅಲ್ಲದೆ ಅಲ್ಲಿ ಕೆಲಸ ಮಾಡುತ್ತಿದ್ದ ವೈದ್ಯರು ಸಂಶೋಧನೆಗಳಿಗೂ ಗಮನವಿತ್ತು ಕಾರ್ಮಿಕರ ರೋಗ ರುಜಿನಾದಿಗಳ ವಿಚಾರವಾಗಿ ಅತ್ಯಂತ ಮಹತ್ತರವಾದ ಜ್ಞಾನ ಸಂಪಾದನೆ ಮಾಡಿದರು. ಅಂಗವಿಕಲರಿಗೆ, ಹೃದಯ ರೋಗಿಗಳಿಗೆ, ಪಾರ್ಶ್ವವಾಯುವಿನಿಂದ ನರಳುವವರಿಗೆ ಪ್ರತ್ಯೇಕ ಗಮನ ಕೊಟ್ಟು ಯಶಸ್ವಿ ಚಿಕಿತ್ಸೆ ನಡೆಸಿ, ಅವರು ಪುನಃ ತಮ್ಮ ಜೀವನ ಸಾಗಿಸಲು ಬೇಕಾದ ಶಿಕ್ಷಣ ಸೌಲಭ್ಯಗಳನ್ನು ಹೊಂದಲು ಸಂಸ್ಥೆಗಳು ಸ್ಥಾಪಿತವಾದುವು. ಅನೇಕ ವೇಳೆ ಈ ಸಂಸ್ಥೆಗಳಿಗೆ ಸರ್ಕಾರದಿಂದ ಸಹಾಯ ಮತ್ತು ಸಹಕಾರ ದೊರೆಯುವಂತಾಯಿತು. ಕೈಗಾರಿಕಾ ಕ್ಷೇತ್ರದಲ್ಲಿ ಅಪಘಾತಗಳನ್ನು ಕಡಿಮೆ

ಮಾಡಲು ಹಾಗೂ ತಡೆಗಟ್ಟಲು ಎಂಜಿನಿಯರುಗಳ ಸಹಾಯವನ್ನು ಹೆಚ್ಚು ಹೆಚ್ಚಾಗಿ ಪಡೆಯಲಾಯಿತು. ಯಂತ್ರಗಳನ್ನು ರೂಪಿಸುವಾಗಲೇ ಕೆಲವು ಬದಲಾವಣೆಗಳನ್ನು ಮಾಡಿದ ಅನಂತರ ಅಪಾಯವಾಗಬಹುದಾದ ಭಾಗಗಳಿಂದ ರಕ್ಷಣೆ ಕೊಡುವ ಮಾರ್ಪಾಡುಗಳಾದವು. ಇವೇ ಅಲ್ಲದೆ ಕಾರ್ಮಿಕನೇ ಧರಿಸಿ ರಕ್ಷಣೆ ಪಡೆಯುವ ಕವಚ, ಕನ್ನಡಕ, ಕೈಚೀಲ, ಶ್ವಾಸಶೋಧಕ ಇತ್ಯಾದಿ ಸಲಕರಣೆಗಳು ಅಪಘಾತಗಳಿಂದ ಹಾಗೂ ರೋಗಗಳಿಂದ ರಕ್ಷಣೆ ಕೊಟ್ಟವು. ಕೆಲವು ಕೈಗಾರಿಕಾ ರೋಗಗಳು ಈ ರಕ್ಷಣೆಗಳಿಂದ ನಿರ್ಮೂಲವಾದುವು. ಉದಾಹರಣೆಗೆ ಭೂಗರ್ಭ ಗಣಿಯ ಕೆಲಸಗಾರರಲ್ಲಿ, ಕಲ್ಲು ದೂಳು ಶ್ವಾಸಕೋಶ ಸೇರಿ ಪ್ರೇರೇಪಿಸುವ ಸಿಲಿಕೋಸಿಸ್, ರಾಸಾಯನಿಕಗಳ ಸಂಪರ್ಕದಿಂದ ಧರ್ಮವ್ಯಾಧಿ, ಶ್ವಾಸಕೋಶದ ಏಡಿಗಂತಿ, ವಿದ್ಯುತ್, ವಿಕಿರಣಪಟುತ್ವಗಳಿಂದ ಉಂಟಾದ ಅಪಾಯ ಇವೆಲ್ಲವನ್ನೂ ಯುಕ್ತರೀತಿಯ ರಕ್ಷಣೆ ಪಡೆದು ಯಶಸ್ವಿಯಾಗಿ ಪ್ರತಿಬಂಧಿಸಲು ಸಾಧ್ಯವಾಯಿತು.

**ಭಾರತ:** ಶೇ. 85 ಭಾಗ ಜನ ಐದೂವರೆ ಲಕ್ಷ ಹಳ್ಳಿಗಳಲ್ಲಿ ವಾಸಿಸುವರು. ಇವರ ಮುಖ್ಯ ಕಸುಬು ಬೇಸಾಯ. ಇದು ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಸಂಪ್ರದಾಯ. ಕೈಗಾರಿಕೋದ್ಯಮಗಳಿಗೆ ಸಂಬಂಧಪಟ್ಟಂತೆ ಉದ್ಭವಿಸುವ ರೋಗಗಳ ಸಮಸ್ಯೆ ಈ ದೇಶದಲ್ಲಿ ಇತ್ತೀಚಿನವರೆಗೆ ವಿಶೇಷವಾಗಿ ಇರಲಿಲ್ಲವೆಂದು ಹೇಳಬಹುದು. ಮುಂಬಯಿ, ಚೆನ್ನೈ, ಕೋಲ್ಕೊತ ಇಪ್ಪತ್ತನೆಯ ಅಹಮದಾಬಾದ್, ಜಮ್‌ಷೆಡ್‌ಪುರ ಮತ್ತು ಭೂಗರ್ಭ ಗಣಿಗಳಿರುವ ಸ್ಥಳಗಳಲ್ಲಿ ಕೈಗಾರಿಕೋದ್ಯಮಗಳ ಬೆಳವಣಿಗೆ ಶತಮಾನದಲ್ಲಿ ಅತಿಯಾಗಿ ಅಭಿವೃದ್ಧಿಗೊಂಡಿದೆ. ಅದೂ ಅಲ್ಲದೆ ಹಳ್ಳಿಗಳಿಂದ ಪಟ್ಟಣಗಳಿಗೆ ಜನರು ಯಥೇಚ್ಛವಾಗಿ ವಲಸೆ ಬಂದು ಕೈಗಾರಿಕೋದ್ಯಮಗಳಲ್ಲಿ ಕಾರ್ಮಿಕರಾಗಿ ಸೇರಿದ್ದಾರೆ. ಇಂಥ ವಲಸೆಗಳಿಂದ ಪಟ್ಟಣಗಳಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸಿವೆ. ವಲಸೆ ಬಂದ ಎಲ್ಲ ಜನರಿಗೂ ಉದ್ಯೋಗ ಒದಗಿಸುವುದು ಸುಲಭಸಾಧ್ಯವಲ್ಲ. ಸರ್ಕಾರ ಈ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೇವಲ ವ್ಯವಸಾಯವನ್ನೇ ನಂಬಿದ್ದರೆ ಜನರಿಗೆ ಅದರಿಂದ ಜೀವನ ಸಾಗುವುದು ಕಷ್ಟವೆಂದು ತಿಳಿದು ಒಂದು ಸುಭದ್ರವಾದ ಆರ್ಥಿಕ ಸ್ಥಿತಿ ರಾಷ್ಟ್ರದಲ್ಲಿ ನೆಲೆಸಬೇಕಾದರೆ ಕೈಗಾರಿಕೆಗಳು ಸ್ಥಾಪನೆಯಾಗಬೇಕೆಂಬ ನೀತಿಯನ್ನು ಅಂಗೀಕರಿಸಿತು. 1943ರ ಅಕ್ಟೋಬರಿನಲ್ಲಿ ಭಾರತ ಸರ್ಕಾರ ಒಂದು ಆರೋಗ್ಯ ಸಮೀಕ್ಷಣ ಮತ್ತು ಅಭಿವೃದ್ಧಿ ಮಂಡಲಿಯನ್ನು ಸರ್ ಜೋಸೆಫ್ ಭೋರ್‌ರವರ ನೇತೃತ್ವದಲ್ಲಿ ನೇಮಿಸಿತು. ಅಂದಿನ ಬ್ರಿಟಿಷ್ ಭಾರತದ ಆರೋಗ್ಯ ಸಮಸ್ಯೆ ಹಾಗೂ ಆರೋಗ್ಯ ವ್ಯವಸ್ಥೆ ಮತ್ತು ಅವಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವುದೊಂದೇ ಅಲ್ಲದೆ ಮುಂದೆ ಈ ವಿಷಯದಲ್ಲಿ ಭಾರತ ಸರ್ಕಾರ ರೂಪಿಸಬೇಕಾದ ಮೂಲತತ್ತ್ವಗಳನ್ನು ಶಿಫಾರಸು ಮಾಡಲು ಮಂಡಲಿಗೆ ಆದೇಶ ಕೊಡಲಾಯಿತು. ಇದು ಐದು ಉಪಸಲಹಾಮಂಡಲಿಗಳನ್ನು ಏರ್ಪಡಿಸಿಕೊಂಡು ಕಾರ್ಯೋದ್ಯುಕ್ತವಾಯಿತು. ಆ ಮಂಡಲಿಗಳಿವು: 1 ಜನಾರೋಗ್ಯ, 2 ವೈದ್ಯಕೀಯ ಸೌಲಭ್ಯ, 3 ವೈದ್ಯವೃತ್ತಿ ಶಿಕ್ಷಣ, 4 ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆ, 5 ಕೈಗಾರಿಕೋದ್ಯಮಗಳಿಗೆ ಅನ್ವಯಿಸುವ ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ಸೌಲಭ್ಯಗಳು.

ಆರೋಗ್ಯ ರಕ್ಷಣೆ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಬಯಸುವ ಕಾರ್ಮಿಕರಲ್ಲಿ ಎರಡು ಗುಂಪುಗಳನ್ನು ಕಾಣಬಹುದು. ಜನಸಾಮಾನ್ಯರೊಂದಿಗೆ ಸೇರಿ ಅವರ ಅನಾರೋಗ್ಯ ಹಾಗೂ ರೋಗಗಳೊಂದಿಗೆ ಸೆಣಸಾಡುವ ಕಾರ್ಮಿಕರ ಗುಂಪು ಒಂದು. ಕೇವಲ ಕೈಗಾರಿಕಾ ಕ್ಷೇತ್ರಗಳಲ್ಲಿ ಕೆಲಸ ಮಾಡುವುದರಿಂದಲೇ ಉದ್ಭವಿಸುವ ರೋಗಗಳನ್ನು ಎದುರಿಸುವ ಗುಂಪು ಮತ್ತೊಂದು. ಉದಾಹರಣೆಗೆ ಕುರಿ ತುಪ್ಪಟದೊಂದಿಗೆ ಕೆಲಸ ಮಾಡುವವರಿಗೆ ಅಂತ್ರ್ಯಾಕ್ಸ್ ರೋಗ ಬರುವ ಸಂಭವ ಅಧಿಕ. ಚರ್ಮ ಹದ ಮಾಡುವ ಉದ್ಯೋಗದಲ್ಲಿ ನಿರತರಾದವರು ಚರ್ಮವ್ಯಾಧಿಯಿಂದ ನರಳುವುದು ಸಾಮಾನ್ಯ. ಈ ರೋಗಗಳು ಕೈಗಾರಿಕೆ ಅಥವಾ ಉದ್ಯೋಗದಿಂದಲೇ ಬರುವ ವಿಶಿಷ್ಟ ರೋಗಗಳೆಂದು ಹೇಳಬಹುದು. ಕೆಲಸ ಮಾಡುವ ವಾತಾವರಣ ಮತ್ತಿತರ ಪ್ರಭಾವಗಳಿಂದಲೂ ಕಾರ್ಮಿಕರ ಆರೋಗ್ಯ ಕೆಡುವ ಸಂಭವಗಳುಂಟು. ಬೆಳಕು ಗಾಳಿಗಳ ಕೊರತೆ, ದೂಳು, ಶಬ್ದಗಳ ವೈಪರೀತ್ಯಗಳಿಂದಲೂ ರೋಗ ಉಂಟಾಗಬಹುದು. ಹೀಗಿರುವುದರಿಂದ ಸಾರ್ವಜನಿಕ ಜನಾರೋಗ್ಯಕ್ಕೆ ಅನ್ವಯಿಸುವ ರೋಗ ನಿವಾರಣೆ ವೈದ್ಯಕೀಯ ಸೌಲಭ್ಯಗಳಷ್ಟೇ ಅಲ್ಲದೇ ಕಾರ್ಮಿಕರ ಆರೋಗ್ಯ ಪಾಲನೆಗೆ ಹಾಗೂ ಚಿಕಿತ್ಸೆಗೆ ಪ್ರತ್ಯೇಕ ವ್ಯವಸ್ಥೆ ಅತ್ಯಗತ್ಯವೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ವಿಶಿಷ್ಟ ರೀತಿಯ ಸೌಲಭ್ಯಗಳನ್ನು ಏರ್ಪಡಿಸುವುದು ಕಾರ್ಮಿಕರ ಆರೋಗ್ಯ ರಕ್ಷಣಾ ಹಾಗೂ ವೈದ್ಯಕೀಯ ಸೌಲಭ್ಯ ಸೇವಾಡಳಿತದ ಮುಖ್ಯ ಉದ್ದೇಶ. ಈ ಆಡಳಿತಕ್ಕೊಳಪಡುವ ಕಾರ್ಮಿಕರನ್ನು ಒಂಬತ್ತು ಪ್ರಮುಖ ಗುಂಪುಗಳನ್ನಾಗಿ ವಿಭಾಗಿಸಿದೆ: 1 ಕಾರ್ಖಾನೆ ಕಾಯಿದೆ ಅನ್ವಯಿಸುವ ಸಂಸ್ಥೆಗಳಲ್ಲಿರುವವರು, 2 ನಿಯಮಗಳಿಗೆ ಒಳಪಡದ ಕಾರ್ಖಾನೆಗಳಲ್ಲಿರುವವರು, 3 ಗಣಿ ಕೆಲಸಗಾರರು, 4 ಕಟ್ಟಡ ಕಟ್ಟುವ ಕೆಲಸಗಾರರು, 5 ಲೋಕೋಪಯೋಗಿ ಇಲಾಖೆಗಳಲ್ಲಿರುವ ಕೆಲಸಗಾರರು, 6 ಸಾಗಣೆ ಸಂಸ್ಥೆ, ಅಂದರೆ ಭೂ, ಜಲ, ವಾಯು ಸಂಚಾರ ವಾಹನಗಳನ್ನು ನಡೆಸುವ ಮತ್ತು ಅವಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ನಿರತರಾದವರು, 7 ತೋಟಗಳಲ್ಲಿ ಕೆಲಸ ಮಾಡುವವರು (ಅಂದರೆ ಕಾಫಿ, ಟೀ, ರಬ್ಬರ್ ಇತ್ಯಾದಿ ತೋಟಗಳಲ್ಲಿ), 8 ವ್ಯಾಪರೋದ್ಯಮಗಳಲ್ಲಿರುವವರು. 9 ಭೋಜನಶಾಲೆ ಹಾಗೂ ಹೋಟೇಲ್ ಕೆಲಸಗಾರರು. ಈ ಬಗೆಯ ಕೆಲಸಗಳಲ್ಲಿ ಸುಮಾರು ಎಷ್ಟು ಕೆಲಸಗಾರರಿದ್ದಾರೆಂಬುದನ್ನು ನಿರ್ದಿಷ್ಟವಾಗಿ ತಿಳಿಸಲು ಅಂಕಿ ಅಂಶ ಸಾಲದು. *

ಕೈಗಾರಿಕೆ ಉದ್ಯಮಗಳ ಕಾರ್ಮಿಕರ ಆರೋಗ್ಯದ ಕಡೆ ಗಮನ ಕೊಡುವುದು ಅತಿ ಮುಖ್ಯ. ಭಾರತದಲ್ಲಂತೂ ಈ ಕಾರ್ಮಿಕರ ಆರೋಗ್ಯದ ಕಡೆ ವಿಶಿಷ್ಟ ಗಮನ ಕೊಡಬೇಕಾದದ್ದು ಅತ್ಯಗತ್ಯ. ಏಕೆಂದರೆ ಕೈಗಾರಿಕೆಯೇ ಅತಿ ಪ್ರಧಾನವಾದ ಪಾಶ್ಚಾತ್ಯ ದೇಶಗಳಲ್ಲಿ ಕಾರ್ಮಿಕರು ಒಂದು ಗೊತ್ತಾದ ಪ್ರದೇಶದಲ್ಲಿ ಸ್ಥಿರವಾಗಿ ನೆಲೆಸಿರುವರು. ಭಾರತದಲ್ಲಿ ಬಹುಮಟ್ಟಿಗೆ ಈ ಕಾರ್ಮಿಕರು ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಬಂದಿರುವವರಾದರೂ ಅವರು ತಮ್ಮ ಹಳ್ಳಿಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡಿರುವುದೇ ವಾಡಿಕೆ. ಇಂಥ ಒಬ್ಬ ಕಾರ್ಮಿಕ ವಾಸಿಸುವ ಮನೆ, ಸುತ್ತಮುತ್ತಲಿರುವ ಪ್ರದೇಶ, ಕೆಲಸ ಮಾಡುವ ಸ್ಥಳ ಬಹುಮಟ್ಟಿಗೆ ಅವನ ಹಳ್ಳಿ ವಾಸಕ್ಕಿಂತ ಅನಾರೋಗ್ಯಕರ ಕೊಂಪೆ ಎಂದು ಹೇಳಬಹುದು. ಸಂಸಾರದಿಂದ ದೂರವಾದ ಕಾರ್ಮಿಕ ಪಟ್ಟಣಗಳ ದುಶ್ಚಟಗಳಿಗೆ ಮಾರುಹೋಗಲು ಅವಕಾಶವಿದೆ. ಹೀಗೆ ಅನಾರೋಗ್ಯ ವಾತಾವರಣ ಹಾಗೂ ಸಾಂಕ್ರಾಮಿಕ ಜಾಡ್ಯಗಳ ಬಲೆಯಲ್ಲಿ ಸಿಕ್ಕಿ ಭಾರತದ ಕಾರ್ಮಿಕರು ಕ್ಷಯ, ಕುಷ್ಠ, ಮೇಹ ಮುಂತಾದ ರೋಗಗಳೊಂದಿಗೆ ಹೆಣಗಾಡುವುದು ಸಾಮಾನ್ಯ. ಕಾರ್ಮಿಕರು ಹೋಗಿಬಂದು ಮಾಡುವಾಗ ಈ ರೋಗಗಳು ಪಟ್ಟಣಗಳಿಂದ ಹಳ್ಳಿಗಳಿಗೂ ಹರಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಕೈಗಾರಿಕಾ ಕ್ಷೇತ್ರಗಳಲ್ಲಿ ಕಾರ್ಮಿಕರು ಕಿಕ್ಕಿರಿದು ಸಾಂದ್ರತೆ ಅಧಿಕವಾಗಿದ್ದ ವೇಳೆಯಲ್ಲಿ ಯುದ್ಧಾರಂಭವಾದಾಗ (1939) ಸ್ಥಿತಿಗತಿಗಳು ವಿಪರೀತಕ್ಕಿಟ್ಟುಕೊಂಡವು. ಉದಾಹರಣೆಗೆ 1941ರ ಜನಗಣತಿಯ ಪ್ರಕಾರ ಕಾನ್ಪುರದ ಜನಸಂಖ್ಯೆ 4,87,000 ಇದ್ದದ್ದು 1944ರ ಅಕ್ಟೋಬರ್‌ನಲ್ಲಿ ಎಂಟು ಲಕ್ಷಕ್ಕೂ ಹೆಚ್ಚಿಗೆ ಇತ್ತು ಎಂದು ಅಂದಾಜಾಗಿತ್ತು. ಇದೇ ರೀತಿಯ ಹೆಚ್ಚಳ ಮುಂಬಯಿ, ಕೋಲ್ಕೊತ ಮತ್ತಿತರ ಕೈಗಾರಿಕಾ ಕೇಂದ್ರಗಳಲ್ಲಿಯೂ ಕಂಡು ಬಂದಿತು. ನೆಲೆಸಲು ಕಾರ್ಮಿಕರಿಗೆ ವಸತಿಗಳಿಲ್ಲದೆ, ಈ ರೀತ ಒಮ್ಮಿಂದೊಮ್ಮೆಗೇ ಜನಸಾಂದ್ರತೆ ಅಧಿಕವಾತಿ, ಇರುವ ವಸತಿಗಳಲ್ಲೇ ಜನ ಕಿಕ್ಕಿರಿದು ಅದರ ದುಷ್ಪರಿಣಾಮಗಳನ್ನು ಎದುರಿಸಬೇಕಾಯಿತು. ಅತ್ಯಗತ್ಯವಾಗಿ ಬೇಕಾದ ವಸತಿಗಳ ಸಂಖ್ಯೆ ಮತ್ತು ಅವುಗಳಲ್ಲಿರಬೇಕಾದ ಕನಿಷ್ಟ ಸೌಲಭ್ಯಗಳನ್ನು ಗೊತ್ತುಪಡಿಸಿ ಅವನ್ನು ಆಚರಣೆಗೆ ತಂದರೆ ಈ ದುಷ್ಪರಿಣಾಮಗಳನ್ನು ನಿವಾರಿಸಬಹುದು. ಈ ರೀತಿಯ ಒಂದು ಸುಧಾರಣೆಗೆ ಮಾಲೀಕರಿಂದಲೂ ಯಾವ ರೀತಿಯ ಪ್ರತಿಭಟನೆಗಳು ಬರಲಾರವು. ಏಕೆಂದರೆ ಕಾರ್ಮಿಕರ ಆರೋಗ್ಯ ವೃದ್ಧಿಯಾದಂತೆ ಉತ್ಪತ್ತಿ ಅಧಿಕವಾಗುತ್ತದೆ.

ಭಾರತದ ಕೈಗಾರಿಕೋದ್ಯಮ ಕ್ಷೇತ್ರದ ಆರೋಗ್ಯಪಾಲನೆಗೆ ಹಾಗೂ ವೈದ್ಯಕೀಯ ಸೌಲಭ್ಯಗಳಿಗೆ ಸಂಬಂಧಿಸಿದ ಮುಖ್ಯ ಸಮಸ್ಯೆಗಳನ್ನು ಮುಂದೆ ಯಾದಿ ಮಾಡಿದೆ: 1. ಕಾರ್ಮಿಕರಲ್ಲಿ ಅಸ್ವಸ್ಥತೆ ಹಾಗೂ ಸಾವುಗಳು, 2. ಚಿಕಿತ್ಸಾ ಸೌಲಭ್ಯಗಳು, 3. ಗಾಯಗೊಂಡ ಮತ್ತು ರೋಗಕ್ಕೆ ಬಲಿಯಾದ ಕಾರ್ಮಿಕರು ಕೆಲಸಕ್ಕೆ ಪುನಃ ಅರ್ಹತೆ ಪಡೆಯಲು ಶಿಕ್ಷಣ ಸೌಲಭ್ಯಗಳು, 4. ಅಪಘಾತಗಳು, 5. ಕಾರ್ಖಾನೆಗಳ ನೈರ್ಮಲ್ಯ, ಬೆಳಕು ಮತ್ತು ಗಾಳಿ, 6. ಕುಡಿಯುವ ನೀರಿನ ಸರಬರಾಜು, 7. ವ್ಯಕ್ತಿ ನೈರ್ಮಲ್ಯ, 8. ಕೆಲಸಗಾರನ ಉಡುಪು ಮತ್ತು ಕಣ್ಣುಗಳ ರಕ್ಷಣೆ, 9. ಮಲ ಮೂತ್ರ ವಿಸರ್ಜನೆಗೆ ಶೌಚರೂಪಗಳು, 10. ಪೌಷ್ಟಿಕ ಆಹಾರ, 11. ಕುಡಿತ ಮತ್ತು ಮಾದಕೌಷಧ ಸೇವಿಸುವ ದುಶ್ಚಟಗಳು, 12. ಹೆಣ್ಣಾಳುಗಳು ಹಾಗೂ ಅವರ ಶಿಶುಗಳಿಗೆ ವಿಶಿಷ್ಟ ಸೌಲಭ್ಯಗಳು, 13. ಕೆಲಸದ ವೇಳೆ, 14. ವಿಶ್ರಾಂತಿ ಸ್ಥಳ, 15. ವಸತಿಗಳು, 16. ಸಾರಿಗೆ ಸೌಕರ್ಯ, 17. ಕೈಗಾರಿಕೆ ವಲಯಗಳ ನಿರ್ಮಾಣ, 18. ಕಾನೂನುಬಾಹಿರ ಕಾರ್ಖಾನೆಗಳು, 19. ಕಾರ್ಖಾನೆ ಕಾಯಿದೆಗಳ ಆಡಳಿತ, 20. ಕಾರ್ಖಾನೆಗಳ ಪರೀಕ್ಷೆ.

**1 ಕಾರ್ಮಿಕರಲ್ಲಿ ಅಸ್ವಸ್ಥತೆ ಹಾಗೂ ಸಾವುಗಳು:** ಇವನ್ನು ಕುರಿತ ಅಂಕಿ ಅಂಶಗಳನ್ನು ಸಂಗ್ರಹಿಸಲು ತಕ್ಕ ವ್ಯವಸ್ಥೆ ಸಾಲದು. ಅನೇಕ ಕಾರ್ಖಾನೆಗಳಲ್ಲಿ ಆಸ್ಪತ್ರೆಯಾಗಲೀ ವೈದ್ಯರಾಗಲೀ ಇಲ್ಲ. ಇರುವ ಕಾರ್ಖಾನೆಗಳಲ್ಲಿ ದೊರೆಯುವ ಅಂಕಿ ಅಂಶಗಳು ಅಪೂರ್ಣ, ಆರೋಗ್ಯ ವಿಮಾ ಯೋಜನೆ ಜಾರಿಗೆ ಬಂದಲ್ಲಿ ಕಾರ್ಮಿಕ ಪರಿಹಾರ ನಡೆಯುವ ಮುನ್ನ ವೈದ್ಯರಿಂದ ಅರ್ಹತಾಪತ್ರವನ್ನು ಪಡೆಯಬೇಕಾಗುವುದರಿಂದ ಅಂಕಿ ಅಂಶಗಳ ದಾಖಲಾತಿ ದೊರೆಯಲು ಅವಕಾಶವಿದೆ. ಭಾರತದಲ್ಲಿ ಆರೋಗ್ಯ ವಿಮಾ ಇನ್ನೂ ಕಡ್ಡಾಯವಾಗಿಲ್ಲ. ಎಲ್ಲ ಕಾರ್ಮಿಕರಿಗೂ ವೈದ್ಯಕೀಯ ಸೌಲಭ್ಯಗಳನ್ನು ಉತ್ತಮ ದರ್ಜೆಯಲ್ಲಿ ಒದಗಿಸಬೇಕೆಂಬ ಮಹತ್ತರವಾದ ಉದ್ದೇಶವನ್ನಿಟ್ಟುಕೊಂಡು ಭಾರತ ಸರ್ಕಾರ 1948ರಲ್ಲಿ ಕೆಲಸಗಾರರ ರಾಜ್ಯವಿಮಾ ಕಾಯಿದೆಯನ್ನು ಜಾರಿಗೆ ತಂದಿತು. ಭಾರತದ ಅನೇಕ ರಾಜ್ಯಗಳಲ್ಲಿ ಈಗ ಈ ಯೋಜನೆ ಜಾರಿಯಲ್ಲಿದ್ದರೂ ಯೋಜನೆ ಅತಿ ನಿಧಾನವಾಗಿ ಮುಂದುವರಿಯುತ್ತಿದೆ.

ಈ ಯೋಜನೆಯ ಮುಖ್ಯ ಉದ್ದೇಶಗಳಿವು: (ಅ) ಕೆಲಸಗಾರರಿಗೆ ವೈದ್ಯಕೀಯ ಹಾಗೂ ಆರೋಗ್ಯ ರಕ್ಷಣೆಯ ಸೌಲಭ್ಯಗಳನ್ನು ಒದಗಿಸುವುದು; (ಆ) ಸಾಂಕ್ರಾಮಿಕ ಜಾಡ್ಯಗಳನ್ನು ತಡೆಗಟ್ಟಲು ಮುಂಜಾಗ್ರತೆ ವಹಿಸುವುದು; (ಇ) ಉದ್ಯೋಗದಿಂದ ಉತ್ಪತ್ತಿಯಾಗುವ ರೋಗಗಳನ್ನು ನಿರ್ಬಂಧಿಸಲು ಕ್ರಮ ಕೈಗೊಳ್ಳುವುದು; (ಈ) ಮನೆಗಳಲ್ಲೇ ಹೆರಿಗೆ ಮಾಡಿಸಲು, ತರಬೇತಾದ ದಾದಿಯರ ಸೇವೆಯನ್ನೊದಗಿಸುವುದು ಹಾಗೂ ಕುಟುಂಬಯೋಜನೆ ಆಚರಣೆಗೆ ತರಲು ಸೌಲಭ್ಯಗಳನ್ನು ಕಲ್ಪಿಸುವುದು.

**2 ಚಿಕಿತ್ಸಾಸೌಲಭ್ಯಗಳು:** ಕಾರ್ಖಾನೆಗಳ ಕಾಯಿದೆ ಪ್ರಕಾರ, ಕೈಗಾರಿಕೆಯ ಆಡಳಿತವನ್ನು ವಹಿಸಿರುವವರು ಕಾರ್ಮಿಕರಿಗೆ ಪ್ರಥಮ ಚಿಕಿತ್ಸೆಯನ್ನು ಒದಗಿಸಲೇಬೇಕೆಂಬ ಒತ್ತಾಯವಿದೆ. ಇದನ್ನು ಎಲ್ಲ ಕಾರ್ಖಾನೆಗಳಲ್ಲೂ ಯಶಸ್ವಿಯಾಗಿ ಒದಗಿಸಲಾಗುತ್ತಿದೆ ಎಂಬ ಭರವಸೆ ವರದಿಗಳಿಂದ ತಿಳಿದು ಬಂದಿದೆ. ಆದರೆ ಆಡಳಿತಗಾರರೇ ನಡೆಸಿಕೊಂಡು ಬರುತ್ತಿರುವ ಆಸ್ಪತ್ರೆಗಳಲ್ಲಿ ಅನೇಕವು ಉನ್ನತಮಟ್ಟದಲ್ಲಿಲ್ಲವೆಂದು ಹೇಳಬಹುದು. ಔಷಧ ಸಲಕರಣೆಗಳ ಕೊರತೆ ಇದ್ದೇ ಇದೆ. ಆದರೆ ಇತ್ತೀಚೆಗೆ ಅನೇಕ ಕಾರ್ಖಾನೆಗಳಲ್ಲಿ ಒದಗಿಸುತ್ತಿರುವ ಸೌಲಭ್ಯಗಳು ಬಹಳಮಟ್ಟಿಗೆ ಉತ್ತಮಗೊಂಡಿವೆ. ಈ ಕೆಲಸಗಾರರಿಗೆ ಕಾರ್ಖಾನೆಯ ಹೊರಗೆ ಅಂದರೆ ಸರ್ಕಾರದಿಂದ, ಸ್ಥಳೀಯ ಸಂಸ್ಥೆಗಳಿಂದ ಮತ್ತು ಖಾಸಗಿ ವೈದ್ಯರಿಂದ ದೊರೆಯುತ್ತಿರುವ ವೈದ್ಯಕೀಯ ಹಾಗೂ ಆರೋಗ್ಯ ರಕ್ಷಣಾ ಸೌಲಭ್ಯಗಳನ್ನು ಪರಿಶೀಲಿಸಿದಲ್ಲಿ ಅವು ಕೇವಲ ಅಲ್ಪ ಎಂಬುದರ್ಥವಾಗುತ್ತದೆ. ಕೆಲಸಗಾರರ ರಾಜ್ಯವಿಮಾ ಯೋಜನೆ ಜಾರಿಯಲ್ಲಿದ್ದರೂ ಯೋಜನೆ ಎಲ್ಲ ರಾಜ್ಯಗಳಲ್ಲೂ ಇಲ್ಲ. ಇರುವ ರಾಜ್ಯಗಳಲ್ಲೂ ಎಲ್ಲ ಕೈಗಾರಿಕಾ ಕ್ಷೇತ್ರಗಳಿಗೂ ಅದು ಅನ್ವಯಿಸುವುದಿಲ್ಲ. ಅನ್ವಯಿಸುವ ಸ್ಥಳಗಳಲ್ಲೂ ಅನೇಕ ಕುಂದು ಕೊರತೆಗಳು, ಸಮಸ್ಯೆಗಳು ಇದ್ದೇ ಇವೆ. ಅತಿ ತ್ವರಿತದಿಂದ ಅನೇಕ ಕೈಗಾರಿಕೆಗಳು ಏಕಾಏಕಿ ಉದ್ಭವಿಸಿ ಮತ್ತಷ್ಟು ಸಮಸ್ಯೆಗಳಿಗೆ ಕಾರಣವಾಗಿವೆ. ಅನೇಕ ಕೆಲಸಗಾರರು ಬಡತನದಿಂದಾಗಿ ವೈದ್ಯಕೀಯ ನೆರವನ್ನು ಪಡೆಯಲು ಖಾಸಗಿ ವೈದ್ಯರ ಹತ್ತಿರ ಹೋಗಲು ಶಕ್ತರಾಗಿಲ್ಲ. ಸರ್ಕಾರಿ ಅಥವಾ ಇತರ ಪುಕ್ಕಟೆ ಚಿಕಿತ್ಸೆ ದೊರಕುವ ಸಂಸ್ಥೆಗಳಿಗೆ ಹೋಗಬೇಕು.

**3 ಗಾಯಗೊಂಡ ಮತ್ತು ರೋಗಕ್ಕೆ ಬಲಿಯಾದ ಕಾರ್ಮಿಕರು ಕೆಲಸಕ್ಕೆ ಪುನಃ ಅರ್ಹತೆ ಪಡೆಯಲು ಶಿಕ್ಷಣ ಸೌಲಭ್ಯಗಳು:** ವೈದ್ಯಕೀಯ ಚಿಕಿತ್ಸೆಗೇ ಸೇರಿದ ಈ ಮುಖ್ಯ ವಿಭಾಗದಲ್ಲಿ ಪ್ರಗತಿ ಬಹಳ ಕುಂಠಿತವಾಗಿದೆ. ಕೆಲಸಗಾರ ಒಂದು ಅಪಘಾತದಿಂದ ಅಂಗವಿಕಲನಾದಲ್ಲಿ ಅಥವಾ ರೋಗದಿಂದೆದ್ದು ಪುನಃ ಮೊದಲಿನ ಕೆಲಸಕ್ಕೇ ಹೋಗಲು ಸಾಧ್ಯವಿಲ್ಲದಿದ್ದಲ್ಲಿ, ಅಂಥವನಿಗೆ ಯಾವ ಕೆಲಸ ಮಾಡಲು ಸಾಧ್ಯವೋ ಆ ಕೆಲಸಕ್ಕೆ ಶಿಕ್ಷಣ ಕೊಟ್ಟು ಅರ್ಹತೆ ದೊರಕಿಸಿ ಕೊಡಬೇಕಾದದ್ದು ಆಡಳಿತದ ಹೊಣೆ. ಇಲ್ಲದಿದ್ದಲ್ಲಿ ಕೆಲಸಗಾರ ತನ್ನ ಕೆಲಸವನ್ನು ಕಳೆದುಕೊಂಡು ಸಂಸಾರಕ್ಕೆ ಹೊರೆಯಾಗಿ ಇಡೀ ಸಮಾಜಕ್ಕೆ ಹಾಗೂ ರಾಷ್ಟ್ರಕ್ಕೆ ಭಾರವಾಗುತ್ತಾನೆ. ಇದನ್ನು ತಪ್ಪಿಸಲು ಶಿಕ್ಷಣ, ತರಬೇತಿ, ಚಿಕಿತ್ಸೆ ಇತ್ಯಾದಿಯನ್ನು ರೂಪಿಸಿಕೊಡಬೇಕು. ಸದ್ಯಕ್ಕೆ ಈ ರೀತಿಯ ಸೌಲಭ್ಯಗಳನ್ನೊದಗಿಸುವ ಸಂಸ್ಥೆಗಳು ಬಹಳ ವಿರಳ.

**4 ಅಪಘಾತಗಳು:** ಅಪಘಾತಗಳಿಗೆ ಅನ್ವಯಿಸುವ ಷರತ್ತುಗಳು ರಾಜ್ಯ ಸರ್ಕಾರಗಳು ಮಂಡಿಸಿರುವ ಕಾರ್ಖಾನೆಗಳ ಕಾಯಿದೆಗಳಲ್ಲಿ ಅಡಕವಾಗಿದ್ದು, ಅವುಗಳಿಗೆ ಸಾಕಷ್ಟು ಪ್ರಾಮುಖ್ಯ ಕೊಡಲಾಗಿದೆ ಎಂದು ಹೇಳಬಹುದು. ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಈ ಷರತ್ತುಗಳನ್ನು ಪಾಲಿಸುತ್ತಿದ್ದಾರೆಂದೂ ಖಚಿತವಾಗಿದೆ. ಕೆಲವು ಸಣ್ಣಮಟ್ಟ ಕಾರ್ಖಾನೆಗಳು ತಮ್ಮಲ್ಲಿ ಸಂಭವಿಸುವ ಅಪಘಾತಗಳನ್ನು ವರದಿ ಮಾಡುತ್ತಿಲ್ಲ. ಈ ಅಪಘಾತಗಳನ್ನು ಮೂರು ವಿಧವಾಗಿ ವಿಂಗಡಿಸಿದೆ: ಪ್ರಾಣಾಪಾಯದವು, ಗಂಭೀರವಾದವು ಮತ್ತು ಸಣ್ಣಮಟ್ಟಗಾಯಗಳು.

ಔಷಧ ಶಾಲೆಗಳು ಮತ್ತು ಆಸ್ಪತ್ರೆಗಳನ್ನುಳ್ಳ ಕಾರ್ಖಾನೆಗಳು ಚಿಕಿತ್ಸೆಯನ್ನು ಸ್ಥಳದಲ್ಲೇ ಕೊಡಲು ಅವಕಾಶವಿದೆ. ಆದರೆ ಈ ಸೌಲಭ್ಯವಿಲ್ಲದ ಕಾರ್ಖಾನೆಗಳು ಸಾರ್ವಜನಿಕ ಆಸ್ಪತ್ರೆಗಳನ್ನು ಅವಲಂಬಿಸಬೇಕು. ಅನೇಕ ಕಾರ್ಖಾನೆಗಳಲ್ಲಿ ರೋಗಿಗಳನ್ನು ಹಾಗೂ ಗಾಯವಾದವರನ್ನು ತಕ್ಕ ಚಿಕಿತ್ಸೆಗೆ ಕಾಲವಿಳಂಬವಾಗದಂತೆ ತತ್‌ಕ್ಷಣ ಸಾಗಿಸಲು ಸೌಕರ್ಯವಿಲ್ಲ. ಅನೇಕ ಕಡೆಗಳಲ್ಲಿ ರೋಗಿಗಳೇ ಆಸ್ಪತ್ರೆಗೆ ಹೋಗಲು ವ್ಯವಸ್ಥೆ ಮಾಡಿಕೊಳ್ಳಬೇಕು. ಅಪಘಾತವಾದವರಿಗೆ ಪರಿಹಾರ ಕೊಡುವುದು ಕಾರ್ಖಾನೆಯ ಆಡಳಿತ ಅಥವಾ ಮಾಲೀಕರ ಜವಾಬ್ದಾರಿ. ಇದರಿಂದ ಅನೇಕ ಅಪಘಾತಗಳು ವರದಿಯೇ ಆಗುವುದಿಲ್ಲ. ಆದರೆ ಇತ್ತೀಚೆಗೆ ವೃತ್ತಿಸಂಘಗಳು ಸ್ಥಾಪಿತವಾಗಿ ಪ್ರಾಮುಖ್ಯಕ್ಕೆ ಬಂದಂತೆ ಕೆಲಸಗಾರರು ತಮ್ಮ ಹಕ್ಕು ಬಾಧ್ಯತೆಗಳನ್ನು ಹೆಚ್ಚು ಹೆಚ್ಚಾಗಿ ಅರಿತು ಸುವ್ಯವಸ್ಥಿತ ರೀತಿಯಲ್ಲಿ ಸಂಘಟನೆಗೊಳ್ಳುತ್ತಿದ್ದಾರೆ. ಕೆಲವು ದೊಡ್ಡ ಕಾರ್ಖಾನೆಗಳು ಪರಿಹಾರ ಕೊಡಲು ವಿಮಾ ಮಾಡಿರುವುದರಿಂದ ಪರಿಹಾರ ಕೊಡಲು ಅಡಚಣೆಗಳಿರುವುದಿಲ್ಲ. ಅನೇಕ ವೇಳೆ ಕೆಲಸಗಾರರಿಗೂ ಆಡಳಿತಕ್ಕೂ ಘರ್ಷಣೆಗಳು ನಡೆಯುತ್ತಲೇ ಇರುತ್ತವೆ. ಇತ್ತೀಚೆಗೆ ಇವು ಹೆಚ್ಚುತ್ತಿವೆ. ಈ ಸಂದರ್ಭಗಳಲ್ಲಿ ಎರಡು ಪಕ್ಷದವರೂ ನಿಯಮಿತವಾದ ನ್ಯಾಯಾಲಯಗಳಲ್ಲಿ ತಮ್ಮ ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂಥ ನ್ಯಾಯಾಲಯಗಳಲ್ಲಿ ಬಹುಮಟ್ಟಿಗೆ ಕೆಲಸಗಾರರ ಅಭಿಪ್ರಾಯಗಳಿಗೇ ಮನ್ನಣೆ ಇರುವುದು ಕಂಡುಬರುತ್ತದೆ. ಕಾರ್ಖಾನೆಯ ಆಡಳಿತ ನೊಂದವನಿಗೆ ಕೊಡುವ ಪರಿಹಾರ ತೀರ ಕಡಿಮೆ ಎಂಬ ದೂರು ಇದ್ದೇ ಇದೆ. ಪರಿಹಾರ ಕೊಡಲು ಜರಗಬೇಕಾದ ಕಾನೂನು ಕ್ರಮ ಇನ್ನೂ ಸರಳವಾಗಬೇಕೆಂಬುದು ಎಲ್ಲರ ಆಶೆ.

**5 ಕಾರ್ಖಾನೆಗಳ ನೈರ್ಮಲ್ಯ, ಬೆಳಕು ಮತ್ತು ಗಾಳಿ :** ಕಾನೂನು ಪ್ರಕಾರ ಕಾರ್ಮಿಕರ ಆರೋಗ್ಯ ನೆಮ್ಮದಿ ಹಾಗೂ ಹಿತರಕ್ಷಣೆ ಸಾಧಿಸಲು ಕಾರ್ಖಾನೆಗಳ ಕಾಯಿದೆಯಲ್ಲಿ ಸಾಕಷ್ಟು ಅವಕಾಶವಿದೆ. ಎಲ್ಲ ಕಾರ್ಖಾನೆಗಳೂ ನೈರ್ಮಲ್ಯವನ್ನು ಸದಾ ಕಾಪಾಡಿಕೊಳ್ಳಬೇಕು. ಕಾರ್ಖಾನೆಯಿಂದ ಹೊರಬೀಳುವ ವಿಸರ್ಜಕಗಳು ಕೆಲಸ ಮಾಡುವವರ ಮಲಮೂತ್ರ ಹಾಗೂ ಕಸಗಳು ನಿಯಮಿತವಾದಂತೆ ಯಾರಿಗೂ ಅಪಾಯವಿಲ್ಲದಂತೆ ವಿಲೆವಾರಿಯಾಗಬೇಕು. ಒದಗಿಸಲೇಬೇಕಾದ ಕನಿಷ್ಠ ಸೌಲಭ್ಯಗಳ ವಿವರಣೆ ಇದ್ದರೂ ಇವನ್ನು ಆಚರಣೆಯಲ್ಲಿ ಸದಾ ಇಡಲು ತಕ್ಕ ವ್ಯವಸ್ಥೆ ತ್ವರಿತರೀತಿಯಿಂದ ಸಾಗಬೇಕು. ಕಾರ್ಖಾನೆಗಳಲ್ಲಿ ಕೆಲಸಗಾರರ ಹಿತದೃಷ್ಟಿಯಿಂದ ಸಾಕಷ್ಟು ಗಾಳಿ ಸಂಚಾರವಿರಲು ತಕ್ಕ ಷರತ್ತುಗಳಿವೆ. ಈ ಷರತ್ತುಗಳನ್ನು ಎಲ್ಲ ರಾಜ್ಯ ಸರ್ಕಾರಗಳೂ ಅನುಮೋದಿಸಿ ರೂಢಿಗೆ ತಂದಿವೆ.

**6 ಕುಡಿಯುವ ನೀರಿನ ಸರಬರಾಜು:** ಕೆಲಸಗಾರರಿಗೆ ದಾಹವನ್ನು ಹಿಂಗಿಸಲು ಸಾಕಷ್ಟು ಕುಡಿಯುವ ನೀರನ್ನು ಕೆಲಸ ಮಾಡುವ ಕಡೆ ಸದಾ ದೊರೆಯುವಂತೆ ಏರ್ಪಡಿಸಬೇಕಾದದ್ದು ಪ್ರತಿ ಕಾರ್ಖಾನೆಯ ಆಡಳಿತವರ್ಗದ ಗುರುತರ ಜವಾಬ್ದಾರಿ.

**7 ವ್ಯಕ್ತಿ ನೈರ್ಮಲ್ಯ:** ಕೆಲಸ ಮುಗಿದ ಅನಂತರ ಕಾರ್ಮಿಕರು ತಮ್ಮ ಮನೆಗೆ ಹೋಗುವ ಮೊದಲು, ಸ್ನಾನ ಮಾಡಿ ಹೋಗಲು ತಕ್ಕ ಏರ್ಪಾಡಿರಬೇಕು. ಈ ಸೌಲಭ್ಯ ಭೂಗರ್ಭಗಣಿಗಳಲ್ಲಿ ಹಾಗೂ ಇತರ ಗಣಿಗಳಲ್ಲಿ ಕೆಲಸ ಮಾಡುವವಗೆ ಅತ್ಯವಶ್ಯ.

**8 ಕೆಲಸಗಾರನ ಉಡುಪು ಮತ್ತು ಕಣ್ಣುಗಳ ರಕ್ಷಣೆ:** ಕೆಲವು ಕೆಲಸಗಳಲ್ಲಿ ವಿಶಿಷ್ಟರೀತಿಯ ಉಡುಪು ಅವಶ್ಯಕ. ಆಡಳಿತ ವರ್ಗದವರೇ ಈ ಉಡುಪನ್ನು ಕೆಲಸಗಾರರಿಗೆ ಒದಗಿಸಬೇಕು. ಇದನ್ನು ಕೊಳ್ಳಲು ಕೆಲಸಗಾರರಿಗೆ ಬರುವ ವೇತನದಲ್ಲಿ ಸಾಧ್ಯವಾಗಲಾರದು. ತಾನು ಹಾಕಿರುವ ಉಡುಪಿನಲ್ಲೇ ಕೆಲಸಮಾಡುವುದರಿಂದ ಬಟ್ಟೆ ಮಲಿನವಾಗುವುದೊಂದೇ ಅಲ್ಲದೆ ರಾಸಾಯನಿಕ ಮುಂತಾದ ವಿಷಪದಾರ್ಥಗಳ ಸಂಪರ್ಕವಾದಲ್ಲಿ ಕೆಲಸಗಾರನ ಆರೋಗ್ಯಕ್ಕೆ ಧಕ್ಕೆ ತಗಲುತ್ತದೆ. ಇದನ್ನು ತಪ್ಪಿಸಲು ಮುಂಜಾಗ್ರತೆ ಕ್ರಮ ಅಗತ್ಯ. ಕಣ್ಣುಗಳನ್ನು ರಕ್ಷಿಸಿಕೊಳ್ಳಲು ಕೆಲಸಗಾರ ಕನ್ನಡಕವನ್ನು ಧರಿಸುವುದು ಆವಶ್ಯಕ. ಆಡಳಿತವರ್ಗದವರು ಕನ್ನಡಕವನ್ನು ಒದಗಿಸಿದ್ದರೂ ಅನೇಕ ಕಾರ್ಖಾನೆಗಳಲ್ಲಿ ಕೆಲಸಗಾರರು ಅವನ್ನು ಧರಿಸಿರುವುದಿಲ್ಲ. ಅದರಲ್ಲೂ ಕೆಲವು ಉದ್ಯೋಗಗಳಲ್ಲಿ ಕಣ್ಣಿಗೆ ಹೊರವಸ್ತುಗಳು ಬೀಳುವುದು ಸಾಮಾನ್ಯ. ಹೀಗೆ ಬಿದ್ದರೆ ಅದರ ಪರಿಣಾಮವಾಗಿ ಕಣ್ಣುಗಳೇ ಹೋಗುವುದು ಅಸಂಭವವಲ್ಲ. ಕಣ್ಣುಗಳನ್ನು ಕೆಲಸಗಾರ ಕಳೆದುಕೊಂಡರೆ ಅದಕ್ಕೆ ಮಾಲೀಕರು ಭಾರೀ ಪರಿಹಾರವನ್ನು ಕೊಡಬೇಕಾಗುವುದು.

**9 ಮಲ ಮೂತ್ರ ವಿಸರ್ಜನೆಗೆ ಶೌಚಕೂಪಗಳ ಸೌಲಭ್ಯ:** ಕಾರ್ಖಾನೆಗಳ ಕಾಯಿದೆ ಪ್ರಕಾರ ಪ್ರತಿ 50 ಕೆಲಸಗಾರರಿಗೆ ಒಂದು ಶೌಚಕೂಪವಿರಬೇಕೆಂಬ ಕಡ್ಡಾಯವಿದೆ. ಇಂಥ ಕಕ್ಕಸುಗಳನ್ನು ಚೊಕ್ಕಟವಾಗಿಟ್ಟ ಹೊರತು ಅವುಗಳಿಂದ ಉಪಯೋಗವಿಲ್ಲ. ಹಾಗಿಲ್ಲದಿದ್ದರೆ ಅವುಗಳ ಸುತ್ತಲೂ ಹೇಸಿಗೆಯುಂಟಾಗುತ್ತದೆ.

**10 ಪೌಷ್ಟಿಕ ಆಹಾರ:** ಕಾಫಿ, ಟೀ ಇತರ ತೋಟಗಳಲ್ಲಿ ಹಾಗೂ ಗಣಿಗಳಲ್ಲಿ ಕೆಲಸ ಮಾಡುವವರ ಆಹಾರ ಬಹಳ ಕೆಳಮಟ್ಟದ್ದೆಂದು ಅಧ್ಯಯನಗಳಿಂದ ತಿಳಿದಿದೆ. ಹೊಟ್ಟೆ ತುಂಬುವಷ್ಟು ಆಹಾರ ಇಲ್ಲದಿರುವುದೊಂದೇ ಅಲ್ಲದೆ ತಿನ್ನುವ ಆಹಾರದಲ್ಲಿ ಪೌಷ್ಟಿಕ ಅಂಶವೂ ಬಹಳ ಕಡಿಮೆ. ಆಹಾರದಲ್ಲಿ ಪಿಷ್ಟ, ಸಾರಜನಕ ಹಾಗೂ ಜಿಡ್ಡು ಯುಕ್ತ ಪ್ರಮಾಣದಲ್ಲಿಲ್ಲ. ಪಿಷ್ಟವೇ ಅಧಿಕ. ಪ್ರತಿ ಕಾಖಾನೆಯಲ್ಲೂ ಎಲ್ಲ ಕೆಲಸಗಾರರಿಗೂ ಪೌಷ್ಟಿಕ ಆಹಾರ ರಿಯಾಯಿತಿ ದರದಲ್ಲಿ ದೊರೆಯುವ ವ್ಯವಸ್ಥೆ ಆಗಬೇಕು. ಆಹಾರ ತೆಗೆದುಕೊಳ್ಳಲು ಯುಕ್ತಸ್ಥಳ, ಕೂಡಲು ತಕ್ಕ ಕುರ್ಚಿ, ಮೇಜು, ಶುಭ್ರವಾದ ನೀರು, ಪಾತ್ರೆಪಡಗಗಳ ಸೌಲಭ್ಯವಿರಬೇಕು. ನೈರ್ಮಲ್ಯದ ಕಡೆ ಹೆಚ್ಚು ಗಮನವಿರಬೇಕು. ಈಗಾಗಲೇ ಕ್ಯಾಂಟೀನ್ ವ್ಯವಸ್ಥೆ ಅನೇಕ ಕಾರ್ಖಾನೆಗಳಲ್ಲಿದೆ. ಕೆಲಸಗಾರರಿಗೆ ತಮಗೆ ದಿನವಹಿ ಬೇಕಾಗುವ ಸಾಮಾನುಗಳನ್ನು ಕೊಳ್ಳಲು ಸಹಕಾರ ಸಂಘಗಳಿರಬೇಕು.

**11 ಕುಡಿತ ಮತ್ತು ಮಾದಕೌಷಧ ಸೇವಿಸುವ ದುಶ್ಚಟಗಳು:** ಇವು ಕೆಲಸಗಾರರಲ್ಲಿ ಎಷ್ಟರಮಟ್ಟಿಗೆ ಅಂಟಿವೆ ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟ.. ಕೆಲವು ಕಾನೂನು ಜಾರಿ ಮಾಡಿ ಇವನ್ನು ತಕ್ಕಮಟ್ಟಿಗೆ ನಿಯಂತ್ರಿಸಬಹುದು.

**12 ಹೆಣ್ಣಾಳುಗಳು ಹಾಗೂ ಅವರ ಶಿಶುಗಳಿಗೆ ವಿಶಿಷ್ಟ ಸೌಲಭ್ಯಗಳು:** ಹೆಣ್ಣಾಳುಗಳು ಕೆಲಸ ಮಾಡುವ ಕೈಗಾರಿಕೆಗಳಲ್ಲಿ ಅವರಿಗೆ ವಿಶಿಷ್ಟ ಸೌಲಭ್ಯಗಳಿರಬೇಕೆಂಬುದರಲ್ಲಿ ಭಿನ್ನಮತವಿಲ್ಲ. ಆದರೆ ಈ ಸೌಲಭ್ಯಗಳನ್ನು ಆಡಳಿತ ಒದಗಿಸದಿದ್ದರೆ ಸರ್ಕಾರ

ಯುಕ್ತ ಕ್ರಮ ತೆಗೆದುಕೊಳ್ಳಬೇಕು. ಇವರ ಆರೋಗ್ಯ ರಕ್ಷಣೆಗೆ, ರೋಗ ಚಿಕಿತ್ಸೆಗೆ ಸಾಕಷ್ಟು ಸ್ತ್ರೀವೈದ್ಯರು, ತರಬೇತಾದ ದಾದಿಯರು ಇತ್ಯಾದಿ ಭಾರತದಲ್ಲಿಲ್ಲ. ಸ್ತ್ರೀಕಾರ್ಮಿಕರು ಕೆಲಸ ಮಾಡುವಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಬಾಲವಾಡಿಗಳೂ ಶಿಶುಪೋಷಣ ಮಂದಿರಗಳೂ ಇರಬೇಕು. ಐವತ್ತು ಮಂದಿ ಮಹಿಳೆಯರಿಗಿಂತ ಹೆಚ್ಚು ಮಂದಿ ಕೆಲಸ ಮಾಡುವಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಪ್ರತ್ಯೇಕ ಸ್ಥಳ ಮತು ಸೌಲಭ್ಯಗಳನ್ನು ಒದಗಿಸಲು ಒತ್ತಾಯ ಮಾಡುವುದು ಅಥವಾ ಬಿಡುವ ಹಕ್ಕನ್ನು ರಾಜ್ಯಸರ್ಕಾರಕ್ಕೆ ಬಿಟ್ಟಿದೆ. ಹೀಗಾಗಿ ಕೆಲವು ಕಡೆಗಳಲ್ಲಿ ಹಾಗೂ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಈ ಸೌಲಭ್ಯಗಳಿವೆಯಷ್ಟೆ. ಇದನ್ನು ಕಡ್ಡಾಯ ಮಾಡುವುದೊಂದೇ ಪರಿಹಾರ. ಬಾಲವಾಡಿ ಹಾಗೂ ಶಿಶುಪೋಷಣಮಂದಿರಗಳು ಹೇಗಿರಬೇಕು ಮತ್ತು ಅವುಗಳಲ್ಲಿರಬೇಕಾದ ಕನಿಷ್ಠ ಸೌಲಭ್ಯಗಳೇನು ಇತ್ಯಾದಿಯನ್ನು ಕಾಯಿದೆಯಲ್ಲಿ ನಮೂದಿಸಲಾಗಿದೆ. ಈ ಸ್ಥಳಗಳಲ್ಲಿ ಮಕ್ಕಳಿಗೆ ಕುಡಿಯಲು ಹಾಲನ್ನು ಪುಕ್ಕಟೆಯಾಗಿ ಒದಗಿಸಬೇಕು. ಗರ್ಭಿಣಿಯರು, ಹೆರಿಗೆ ಕಾಲದಲ್ಲಿ ಮತ್ತು ಅನಂತರ ಕೆಲವು ದಿನ ಕೆಲಸದಲ್ಲಿರಲಾಗುವುದಿಲ್ಲ. ಈ ಸಂದರ್ಭದಲ್ಲಿ ಅವರಿಗೆ ಸಾಕಷ್ಟು ರಜಾ ಕಾಲ (ಹೆರಿಗೆಯ ನಿರೀಕ್ಷಿತ ದಿನಕ್ಕೆ ನಾಲ್ಕಾರುವಾರ ಮುಂಚಿತವಾಗಿ ಹಾಗೂ ಆದ ಅನಂತರ ನಾಲ್ಕಾರು ವಾರ) ಮತ್ತು ಈ ಕಾಲದಲ್ಲಿ ವೇತನ ಇತ್ಯಾದಿ ಒದಗಿಸಲು ಹೆರಿಗೆ ಸಹಾಯಾರ್ಥ ನಿಧಿ ಶಾಸನ ಅವಕಾಶ ಕಲ್ಪಿಸಿ ಕಡ್ಡಾಯ ಮಾಡುತ್ತದೆ. ಈ ಶಾಸನ ಎಲ್ಲೆಡೆಗಳಲ್ಲೂ ಜಾರಿಯಲ್ಲಿದೆ. ಇದರಿಂದ ತಾಯಿ ಮತ್ತು ಶಿಶುವಿನ ಆರೋಗ್ಯ ರಕ್ಷಣೆ ಸುಧಾರಿಸುವುದರಲ್ಲಿ ಸಂಶಯವಿಲ್ಲ. ಈ ಶಾಸನದಿಂದ ಕೆಲಸದಲ್ಲಿ ನಿರತರಾಗಿರುವ ಹೆಣ್ಣಾಳುಗಳ ಸಂಖ್ಯೆ ಕಡಿಮೆಯಾಗುವುದಿಲ್ಲ. ಗರ್ಭಿಣಿ ಎಂದು ದೃಢಪಡಿಸುವ ಪ್ರಮಾಣಪತ್ರವನ್ನು ವೈದ್ಯರಿಂದ ಸಾದರಪಡಿಸಬೇಕು. ಇವರನ್ನು ಪರೀಕ್ಷೆ ಮಾಡಿ ಪ್ರಮಾಣಪತ್ರಗಳನ್ನು ಕೊಡಲು ಮಹಿಳಾ ವೈದ್ಯರ ಕೊರತೆ ಇದ್ದೇ ಇದೆ. ಮಹಿಳೆಯರು ಪುರುಷವೈದ್ಯರ ಬಳಿ ಪರೀಕ್ಷೆ ಮಾಡಿಸಿಕೊಳ್ಳಲು ಸಾಮಾನ್ಯವಾಗಿ ಹಿಂಜರಿಯುತ್ತಾರೆ.

**13 ಕೆಲಸದ ವೇಳೆ:** ಕೆಲಸಗಾರನ ಆರೋಗ್ಯ ಅವನ ದೈನಂದಿನ ಕೆಲಸದ ವ್ಯಾಪ್ತಿ, ವಿಶ್ರಾಂತಿ ಅವಧಿ, ಕೆಲಸದ ಸ್ವರೂಪ ಇತ್ಯಾದಿಗಳನ್ನು ಅವಲಂಬಿಸಿದೆ. ಮಾಲೀಕನಿಗೆ ಸಾಕಷ್ಟು ಲಾಭ ಆಗಬೇಕಾದರೆ ಕೆಲಸಗಾರರು ಹೆಚ್ಚು ವೇಳೆ ಕೆಲಸ ಮಾಡಿ ಉತ್ಪತ್ತಿ ಅಧಿಕ ಮಾಡಬೇಕೆಂಬುದನ್ನು ಒಪ್ಪತಕ್ಕದ್ದಾದರೂ ಕೆಲಸಗಾರನೂ ಒಬ್ಬ ಮನುಷ್ಯ, ಅವನ ಆರೋಗ್ಯ ಕೆಡಬಾರದೆಂಬ ಮುಖ್ಯ ಉದ್ದೇಶ ಮುಂದಿರಬೇಕು. ಹೆಚ್ಚು ವೇಳೆ ಕೆಲಸ ಮಾಡುವುದರಿಂದ ಕೆಲಸಗಾರ ಅತಿ ಶೀಘ್ರದಲ್ಲಿ ಆಯಾಸ ಹೊಂದಿ ಕ್ರಮೇಣ ಬಲಹೀನವಾಗಿ ರೋಗಗ್ರಸ್ತನಾಗುತ್ತಾನೆ. ಆಯಾಸ ಹೊಂದಿದವ ಅಪಘಾತಗಳಿಗೆ ಸಿಕ್ಕಿಕೊಳ್ಳುವ ಸಂಭವವೂ ಹೆಚ್ಚು. ಇದರಿಂದ ಉತ್ಪತ್ತಿ ಕಡಿಮೆ ಆಗುವುದು. ವರ್ಷದುದ್ದಕ್ಕೂ ಕೆಲಸ ನಡೆಯುವ ಸಾಮಾನ್ಯ ಕಾರ್ಖಾನೆಗಳಲ್ಲಿ ವಾರಕ್ಕೆ ದುಡಿಮೆ ಐವತ್ತನಾಲ್ಕು ಗಂಟೆಗಳಿಗೆ ಮೀರಿರಬಾರದೆಂದೂ ನಿಯತಕಾಲಿಕ ಕಾರ್ಖಾನೆಗಳಲ್ಲಿ ವಾರಕ್ಕೆ ಅರುವತ್ತು ಗಂಟೆಗಳ ದುಡಿಮೆಗೆ ಮೀರಿರಬಾರದೆಂದೂ ಕಾರ್ಖಾನೆ ಕಾಯಿದೆಯಲ್ಲಿ ನಿಯಮ ಉಂಟು. ಇತ್ತೀಚೆಗೆ ತಜ್ಞರು ಇದನ್ನು ಪುನರ್ವಿಮರ್ಶೆ ಮಾಡಿ ದುಡಿಮೆ ವಾರಕ್ಕೆ ನಲವತ್ತೆಂಟು ಗಂಟೆಗಳಿಗೆ ಮೀರಿರಬಾರದೆಂದು ನಿಶ್ಚಯಿಸಿದ್ದಾರೆ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಹಾಗೂ ಫ್ರಾನ್ಸ್ ದೇಶದಲ್ಲಿ ವಾರಕ್ಕೆ ನಲವತ್ತು ಗಂಟೆಗಳಷ್ಟೇ ಕೆಲಸ. ಇಂಗ್ಲೆಂಡಿನಲ್ಲಿ ವಾರಕ್ಕೆ ನಲವತ್ತೈದು ಗಂಟೆಗಳು. ಇವೆಲ್ಲವನ್ನೂ ಪರಿಶೀಲಿಸಿದರೆ ಭಾರತದಲ್ಲಿ ಕೆಲಸಗಾರನ ದೇಹದಾರ್ಢ್ಯ ಅಷ್ಟಿಲ್ಲ, ತಿನ್ನಲು ಸಾಕಷ್ಟಿಲ್ಲ. ಆರೋಗ್ಯನಿಯಮಗಳಿಗೆ ಅನುಗುಣವಾದ, ವಸತಿ, ಗಾಳಿ ಬೆಳಕು ಇತ್ಯಾದಿಯಂತೂ ಇಲ್ಲವೇ ಇಲ್ಲ. ಹೀಗಿರುವಾಗ ವಾರಕ್ಕೆ ಐವತ್ತನಾಲ್ಕು ಗಂಟೆಗಳ ಕೆಲಸ ಭಾರತದ ಕಾರ್ಮಿಕನಿಗೆ ಆರೋಗ್ಯಪಾಲನೆಯ ದೃಷ್ಟಿಯಿಂದ ಅಧಿಕವೆಂದು ಹೇಳಬಹುದು. ಇದನ್ನು ಗಣನೆಗೆ ತೆಗೆದುಕೊಂಡು ತಜ್ಞರು ವಾರಕ್ಕೆ ನಲವತ್ತೈದು ಗಂಟೆಗಳ ಕೆಲಸವನ್ನು ಶಿಫಾರಸು ಮಾಡಿದ್ದಾರೆ.

**14 ವಿಶ್ರಾಂತಿ ಸ್ಥಳ:** ಅನೇಕ ಕಾರ್ಖಾನೆಗಳಲ್ಲಿ ಕೆಲಸಗಾರರು ವಿಶ್ರಾಂತಿ ಪಡೆಯಲವಕಾಶವಾಗುವಂತೆ ಪ್ರತ್ಯೇಕ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಾಗಿದೆ. ಆದರೆ ಇಂಥ ಬಹುತೇಕ ಕಟ್ಟಡಗಳನ್ನು ನಿರ್ಮಿಸಲು ಉಪಯೋಗಿಸಿರುವ ಸಾಮಗ್ರಿಗಳು ಅಷ್ಟು ಸಮರ್ಪಕವಾಗಿ ಕಂಡುಬಂದಿಲ್ಲ. ಭಾರತ ಬಿಸಿಲು, ಮಳೆಗಳ ದೇಶವಾದ್ದರಿಂದ ಕೆಲಸಗಾರರಿಗೆ ಅವರ ಆರೋಗ್ಯ ದೃಷ್ಟಿಯಿಂದ ಸಾಕಷ್ಟು ರಕ್ಷಣೆ ಕೊಡಬೇಕು. ಸಾಧ್ಯವಾದಷ್ಟು ಮಟ್ಟಿಗೆ ಈ ವಿಶ್ರಾಂತಿ ಗೃಹಗಳು ಕಾರ್ಖಾನೆಯಿಂದ ಹೊರಗಿರುವುದು ಉತ್ತಮ.

**15 ವಸತಿಗಳು:** ಕೈಗಾರಿಕೋದ್ಯಮ ಕ್ಷೇತ್ರದಲ್ಲಿ ಅತಿಮುಖ್ಯವಾಗಿ ಎದುರಿಸಬೇಕಾದ ಸಮಸ್ಯೆ ಎಂದರೆ ಕಾರ್ಮಿಕರ ವಸತಿಗಳು. ಈಗಲಂತೂ ಈ ಸಮಸ್ಯೆ ಬೃಹದಾಕಾರ ತಾಳಿರುವುದೊಂದೇ ಅಲ್ಲದೆ ಅದಕ್ಕೆ ಪರಿಹಾರವೂ ಆಶಾದಾಯಕವಾಗಿಲ್ಲವೆಂದು ಹೇಳಬಹುದು. ಇರುವ ವಸತಿಗಳಲ್ಲಿ ಸಂಸಾರಗಳು ಕಿಕ್ಕಿರಿದಿವೆ. ಅಕ್ಕಪಕ್ಕದ ನೈರ್ಮಲ್ಯವನ್ನಂತೂ ಹೇಳುವ ಹಾಗೇ ಇಲ್ಲ. ಶೇ.30 ಕ್ಕೂ ಮೇಲ್ಪಟ್ಟು ಸಂಸಾರಗಳು ಗೋಣಿಪಟ್ಟೆ, ತಗಡುಗಳಿಂದ ನಿರ್ಮಿತವಾದ ಸೂರುಗಳ ಕೆಳಗಡೆ ವಾಸಿಸುತ್ತಿದ್ದಾರೆ ಎಂದು ಹೇಳಲಾಗಿದೆ. ಇಲ್ಲೆಲ್ಲ ರಸ್ತೆ, ಚರಂಡಿ, ಗಾಳಿ, ಬೆಳಕು, ದೀಪ, ನೀರು, ಕಕ್ಕಸು ಇತ್ಯಾದಿಗಳ ವ್ಯವಸ್ಥೆಯಂತೂ ಇಲ್ಲ. ಕಾಯಿದೆಗಳಲ್ಲಿರುವ ನಿಯಮಗಳು ಈ ವ್ಯವಸ್ಥೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಭೂಮಾಲೀಕನ ಮೇಲೆ ಹೊರಿಸುತ್ತವೆ. ಈ ವಸತಿಗಳ ಸಮಸ್ಯೆಯನ್ನು ಅಧ್ಯಯನ ಮಾಡಿ ಆಯೋಗಗಳಿಂದ ವರದಿಗಳನ್ನೂ ಶಿಫಾರಸುಗಳನ್ನೂ ಪಡೆದಿದೆ. ಆದರೆ ಅವನ್ನು ಕಾರ್ಯರೂಪಕ್ಕೆ ತರುವುದು ಅತ್ಯಂತ ಕಷ್ಟವಾಗಿದೆ. ದೇಶದಲ್ಲಿ ಕೈಗಾರಿಕಾಭಿವೃದ್ಧಿ ನಾಗಾಲೋಟದಲ್ಲಿ ಓಡುತ್ತಿದ್ದರೆ ವಸತಿನಿರ್ಮಾಣ ಕೇವಲ ಬಸವನ ಹುಳುವಿನಂತೆ ತೆವಳುತ್ತಿದೆ ಎಂದು ಹೇಳಬಹುದು.

**16 ಸಾರಿಗೆ ಸೌಕರ್ಯ:** ಕೆಲಸಗಾರರಿಗೆ ತಮ್ಮ ಮನೆಗಳಿಂದ ಕೆಲಸದೆಡೆಗಳಿಗೆ ಬರಲು ವಾಹನಸೌಕರ್ಯ ಇತ್ತೀಚಿನ ವರೆಗೆ ಅಷ್ಟಾಗಿ ಇರಲಿಲ್ಲವೆಂದು ಹೇಳಬಹುದು. ಕಡೆಪಕ್ಷ ಒಬ್ಬ ಕಾರ್ಮಿಕ ದಿನವಹಿ ನಾಲ್ಕು ಐದು ಮೈಲುಗಳಷ್ಟಾದರೂ ಓಡಾಡುತ್ತ ವರ್ಷದುದ್ದಕ್ಕೂ ವಾರಕ್ಕೆ ಐವತ್ತಾಲ್ಕು ಗಂಟೆಗಳಷ್ಟು ಕಾಲ ಕೆಲಸ ಮಾಡಬೇಕೆಂದರೆ ಅತಿ ಕಷ್ಟ.. ಸಾರಿಗೆ ಸೌಲಭ್ಯ ವಸತಿಯ ವ್ಯವಸ್ಥೆಯೊಂದಿಗೆ ಸೇರಿದೆ. ಏಕೆಂದರೆ ಆಡಳಿತ ಕಾರ್ಖಾನೆಗೆ ಸಮೀಪದಲ್ಲಿ ವಸತಿಸೌಕರ್ಯ ಕಲ್ಪಿಸಿಕೊಟ್ಟರೆ ಸಾರಿಗೆ ಸೌಕರ್ಯದ ಆವಶ್ಯಕತೆ ಇರುವುದಿಲ್ಲ. ಆದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕಾರ್ಖಾನೆಯ ಸಮೀಪದಲ್ಲಿ ವಸತಿಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ದೂರದ ಬಡಾವಣೆಗಳಲ್ಲಿ ವಸತಿಗಳನ್ನು ಒದಗಿಸುವುದು ಮಾತ್ರ ಸಾಧ್ಯ. ಈ ಸಂದರ್ಭಗಳಲ್ಲಿ ಸುಲಭದರದಲ್ಲಿ ಸಾರಿಗೆ ಸೌಕರ್ಯವನ್ನೊದಗಿಸುವುದು ಕಾರ್ಖಾನೆಯ ಉತ್ಪತ್ತಿ ಹಾಗೂ ಲಾಭದೃಷ್ಟಿಯಿಂದ ಹಿತ. ಈ ಸೌಕರ್ಯವನ್ನು ಪಟ್ಟಣಗಳಲ್ಲಿ ಅನೇಕ ಕಾರ್ಖಾನೆಗಳು ಕೆಲಸಗಾರರಿಗೆ ಒದಗಿಸಿವೆ.

**17 ಕೈಗಾರಿಕಾ ವಲಯಗಳ ನಿರ್ಮಾಣ:** ಭಾರತದಲ್ಲಿ ಈಗ ಯಥೇಚ್ಛವಾಗಿ ಕೈಗಾರಿಕಾ ನಗರಗಳು ಉದ್ಭವಿಸಿವೆ. ಹಿಂದೆ ಈ ನಗರಗಳು ಯಾವ ಕಟ್ಟುನಿಟ್ಟಿಲ್ಲದೆ ಚೆಲ್ಲಾಪಿಲ್ಲಿಯಾಗಿ ರೂಪುಗೊಂಡವು. ಅನೇಕ ಕಡೆ ಜನನಿವಾಸಗಳ ಮಧ್ಯೆ ಕೈಗಾರಿಕಾ ಕಾರ್ಖಾನೆಗಳು ಕಂಡುಬರುತ್ತದೆ. ಇದರಿಂದ ಜನಾರೋಗ್ಯಕ್ಕೆ ಆಗುವ ಅಪಾಯ ಅಷ್ಟಿಷ್ಟಲ್ಲ. ಆದರೆ ಇತ್ತೀಚೆಗೆ ನಗರಗಳಲ್ಲಿ, ಪೌರಾಡಳಿತ ಸ್ಥಳಗಳಲ್ಲಿ ಕೈಗಾರಿಕೆ ಉದ್ಯಮಗಳಿಗೇ ಬೇರೆ ಪ್ರತ್ಯೇಕವಾಗಿ ನಿವೇಶನಗಳನ್ನು ಏರ್ಪಡಿಸಿ ಕೈಗಾರಿಕಾ ವಲಯಗಳು ನಿರ್ಮಿತವಾಗಿವೆ. ಯಾವುದೇ ಕೈಗಾರಿಕೆ ಕಾರ್ಖಾನೆ ಸ್ಥಾಪಿತವಾದರೂ ಅದು ಈ ವಲಯದಲ್ಲಿ ಆಗಬೇಕು. ಇದರಿಂದ ಸಾಮಾನ್ಯ ಜನರಿಗೆ ಸಂಪರ್ಕ ಕಡಿಮೆಯಾಗಿ ಅಡ್ಡಿ ಆತಂಕಗಳಿಲ್ಲದಂತಾಗಿದೆ. ಹಾಗೂ ಜನಾರೋಗ್ಯವನ್ನು ಕಾಪಾಡಲು ಯುಕ್ತಕ್ರಮಗಳನ್ನು ಕೈಕೊಳ್ಳಲು ಸಹಾಯವಾಗಿದೆ.

**18 ಕಾನೂನುಬಾಹಿರ ಕಾರ್ಖಾನೆಗಳು:** ಇಪ್ಪತ್ತು ಅಥವಾ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಒಂದು ನಿವೇಶನದಲ್ಲಿ ಕೆಲಸ ಮಾಡುತ್ತಿದ್ದರೆ ಅಥವಾ ವರ್ತಮಾನ ಕಾಲದಿಂದ ಹಿಂದಿನ 12 ತಿಂಗಳುಗಳಲ್ಲಿ ಕೆಲಸ ಮಾಡಿದ್ದರೆ ಅಥವಾ ಚಲನಪ್ರೇರಕವಾಗಿ ವಿದ್ಯುತ್ತು ಮೊದಲಾದ ಶಕ್ತಿಯ ಬಳಕೆ ಆಗಿದ್ದರೆ ಆ ನಿವೇಶನ ಕಾರ್ಖಾನೆ ಎನಿಸಿಕೊಳ್ಳುತ್ತದೆ. ಶಕ್ತಿಯನ್ನು ಬಳಸಿ ಅಥವಾ ಬಳಸದೆ ಉತ್ಪತ್ತಿಯಾಗುವ ಇತರ ನಿವೇಶನಗಳನ್ನು ಕಾರ್ಖಾನೆ ಎಂಬುದಾಗಿ ನಿರ್ಧರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಕೊಡಲಾಗಿದೆ. ಚಿಕ್ಕಪುಟ್ಟ ಸಂಸ್ಥೆಗಳನ್ನು ಕೂಡ ರಾಜ್ಯ ಸರ್ಕಾರಗಳು ಇಷ್ಟಪಟ್ಟಲ್ಲಿ ಕಾರ್ಖಾನೆಗಳಾಗಿ ಪರಿಗಣಿಸಬಹುದು. ಆರೋಗ್ಯ ರಕ್ಷಣೆಯ ಮತ್ತು ವೈದ್ಯಕೀಯ ಸೌಲಭ್ಯಗಳ ದೃಷ್ಟಿಯಿಂದ ಉತ್ಪತ್ತಿಯಾಗುತ್ತಿರುವ ಸಂಸ್ಥೆಗಳು ಎಷ್ಟೇ ಚಿಕ್ಕವಾದರೂ ಅವುಗಳ ಮೇಲೆ ಮೇಲ್ವಿಚಾರಣೆ ಮತ್ತು ಹತೋಟಿ ಇರಲೇಬೇಕಾಗುತ್ತದೆ. ಉದಾಹರಣೆಗೆ, ಬೀಡಿ ಕಟ್ಟುವ ಉದ್ಯಮ, ಚರ್ಮ ಹದ ಮಾಡುವ ಕಡೆ, ಗಾಜು ಹಾಗೂ ಗಾಜಿನ ಬಳೆಗಳನ್ನು ಮಾಡುವಲ್ಲಿ ಕೆಲಸಗಾರರು ಬಹಳ ಹೊತ್ತು ಅನಾರೋಗ್ಯವಾದ ವಾತಾವರಣದಲ್ಲಿ ಎಡೆಬಿಡದೆ ಕೆಲಸ ಮಾಡುತ್ತಾರೆ. ಸಾಕಷ್ಟು ಗಾಳಿ ಬೆಳಕು ಕುಡಿಯುವ ನೀರಿನ ಸೌಕರ್ಯ ಸಹ ಈ ಸ್ಥಳಗಳಲ್ಲಿಲ್ಲದಿರುವುದು ಸಾಮಾನ್ಯ. ತೀರ ಎಳೆಯ ವಯಸ್ಸಿನ ಹುಡುಗರೂ ಈ ಉದ್ಯಮಗಳಲ್ಲಿ ಕೆಲಸ ಮಾಡುತ್ತಾರೆ. ದೇಶದ ಆರ್ಥಿಕದೃಷ್ಟಿಯಿಂದ ಈ ಉದ್ಯಮಗಳು ಹಾಗೂ ಮತ್ತಿತರ ಕೆಲವು ಬಹು ಮುಖ್ಯವೆಂದು ಹೇಳಬಹುದು. ದೊಡ್ಡ ದೊಡ್ಡ ಕೈಗಾರಿಕೆಗಳು ಸ್ಥಾಪಿತವಾಗುತ್ತಿರುವಾಗ ಈ ಚಿಕ್ಕಪುಟ್ಟ ಉದ್ಯಮಗಳಿಗೆ ಸಾಕಷ್ಟು ಗಮನವಿಲ್ಲದೆ ಅವು ಸಂಪೂರ್ಣವಾಗಿ ಮಾಯವಾದರೆ ಅದರಿಂದ ದೇಶಕ್ಕೆ ಹಿತವಲ್ಲ.

**19 ಕಾರ್ಖಾನೆ ಕಾಯಿದೆಗಳ ಆಡಳಿತ:** ಈ ಕಾಯಿದೆಗಳಲ್ಲಿ ಕಂಡುಬರುವ ಒಂದು ನ್ಯೂನತೆ ಏನೆಂದರೆ ಕಾರ್ಖಾನೆಗಳನ್ನು ಪರಿಶೀಲಿಸುವ ಮುಖ್ಯ ಮತ್ತು ಇತರ ಅಧಿಕಾರಿಗಳಿಗೆ ಯಥೇಚ್ಛವಾಗಿ ವಿವೇಚನಾಧಿಕಾರಗಳನ್ನು ಕೊಡಲಾಗಿದೆ. ಅಂದರೆ ಕಾಯಿದೆಯ ಷರತ್ತುಗಳನ್ನು ಉಲ್ಲಂಘಿಸುವವರ ಮೇಲೆ ಕಾನೂನು ಪ್ರಕಾರ ಕ್ರಮ ಜರಗಿಸಬೇಕಾದಾಗ ಈ ರೀತಿಯ ವಿವೇಚನಾಧಿಕಾರ ಅಡ್ಡಿಯಾಗುವುದರಲ್ಲಿ ಸಂಶಯವಿಲ್ಲ. ಕಾನೂನುರೀತ್ಯ ಕ್ರಮ ಪ್ರತಿಯೊಬ್ಬರ ಮೇಲೂ ಜರಗಿಸುವಂತಿರಬೇಕೇ ಹೊರತು ಕೆಲವರ ಮೇಲೆ ಜರಗಿಸಿ, ಬೇಕಾದವರನ್ನು ಬಿಟ್ಟುಬಿಡುವ ಸ್ವಾತಂತ್ರ್ಯ ಸಾಮಾನ್ಯವಾಗಿ ಇರಕೂಡದೆಂಬುದು ತಜ್ಞರ ಅಭಿಪ್ರಾಯ. ಕಾನೂನನ್ನು ಉಲ್ಲಂಘಿಸುವವರಿಗೆ ಕಟುವಾದ ಶಿಕ್ಷೆ ಕೊಡಬೇಕು. ಇಲ್ಲದಿದ್ದಲ್ಲಿ ಆಡಳಿತದಲ್ಲಿ ಬಿಗಿತಪ್ಪಿ ಕಾನೂನಿನಿಂದ ನಿರೀಕ್ಷಿಸಿದಷ್ಟು ಪರಿಣಾಮ ಪಡೆಯಲು ಸಾಧ್ಯವಾಗಲಾರದು.

**20 ಕಾರ್ಖಾನೆಗಳ ಪರೀಕ್ಷೆ:** ಕಾರ್ಖಾನೆಗಳನ್ನು ಯಶಸ್ವಿಯಾಗಿ ಆಗಾಗ್ಗೆ ಪರಿಶೀಲನೆ ನಡೆಸಿ ಕಂಡುಬರುವ ನ್ಯೂನತೆಗಳನ್ನು ಆಡಳಿತದ ಗಮನಕ್ಕೆ ತಂದು, ನ್ಯೂನತೆಗಳನ್ನು ಸರಿಪಡಿಸಿದ್ದಾರೆಯೇ ಇಲ್ಲವೇ ಎಂಬುದನ್ನರಿಯಲು ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಹೇಳಲಾಗಿದೆ. ಒಬ್ಬ ನುರಿತ ಪರೀಕ್ಷಕ ವರ್ಷಕ್ಕೆ ಇನ್ನೂರು ಕಾರ್ಖಾನೆಗಳಿಗಿಂತ ಹೆಚ್ಚಿಗೆ ಪರಿಶೀಲನೆ ನಡೆಸಲಾರ. ಎಲ್ಲ ರಾಜ್ಯಗಳಲ್ಲೂ ಪರೀಕ್ಷಕರ ಸಂಖ್ಯೆ ಅಧಿಕಗೊಳ್ಳಬೇಕು. ಪರೀಕ್ಷಕರನ್ನು ಕೆಲಸಕ್ಕೆ ತೆಗೆದುಕೊಂಡ ಅನಂತರ ಅವರಿಗೆ ಕಾರ್ಖಾನೆಗೆ ಅನ್ವಯಿಸುವ ಆರೋಗ್ಯ ಮತ್ತು ವೈದ್ಯಕೀಯ ವಿಷಯಗಳಲ್ಲಿ ಶಿಕ್ಷಣ ಕೊಟ್ಟಲ್ಲಿ ಅವರಿಂದ ಉತ್ತಮ ಮಟ್ಟದ ಪರಿಣಾಮಕಾರಿ ಪರಿಶೀಲನೆಯನ್ನು ನಿರೀಕ್ಷಿಸಬಹುದು.

**ಪರಿಸಮಾಪ್ತಿ:** ಕೈಗಾರಿಕೋದ್ಯಮ ಕ್ಷೇತ್ರಗಳಲ್ಲಿ ಕೆಲಸ ಮಾಡುವವರ ಆರೋಗ್ಯ, ಚಿಕಿತ್ಸೆ, ರೋಗ ಪ್ರತಿಬಂಧಕ ಇತ್ಯಾದಿ ಸೌಲಭ್ಯಗಳು ಪ್ರಪಂಚದ ಯಾವ ದೇಶದಲ್ಲೂ ಪರಿಪೂರ್ಣವಾಗಿವೆ ಎಂದು ಹೇಳಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಎಲ್ಲ ದೇಶಗಳೂ ಮುಂದುವರಿಯುತ್ತಿವೆ ಎಂದು ಹೇಳಬಹುದು. ಕಾರ್ಯಕ್ರಮಗಳನ್ನು ಜಾರಿಗೆ ತರಲು ಮೂಲ ಸಂಪತ್ತಿರುವ ದೇಶಗಳಲ್ಲಿ ಅವೆಲ್ಲವನ್ನೂ ಬಳಸುವಷ್ಟು ಚಟುವಟಿಕೆಗಳಿಲ್ಲ. ಚಟುವಟಿಕೆಗಳು ಸಾಕಷ್ಟಿದ್ದರೂ ಯಶಸ್ವಿಯಾದ ಪ್ರತಿಫಲವಿಲ್ಲ. ಈ ಕ್ಷೇತ್ರಗಳಲ್ಲಿ ಕಂಡುಬರುವ ಸಮಸ್ಯೆಗಳನ್ನು ನಿವಾರಿಸಲು ಅನೇಕ ಮಾರ್ಗಗಳಿದ್ದರೂ ಹಣದ ಕೊರತೆ ಅಥವಾ ಶಿಕ್ಷಣ ಮತ್ತು ತರಬೇತಿ ಪಡೆದ ಸಿಬ್ಬಂದಿಯ ಕೊರತೆ ಮುಂತಾದವನ್ನು ಜಯಿಸಲು ಕಷ್ಟಸಾಧ್ಯವಾಗಿದೆ. ಇದ್ದಷ್ಟು ಹಣದಲ್ಲಿ ಆದಷ್ಟು ಸೌಕರ್ಯಗಳನ್ನು ಒದಗಿಸಿ ಕಾರ್ಮಿಕನ ಆರೋಗ್ಯ ನೆಮ್ಮದಿಯನ್ನು ಪಾಲನೆ ಮಾಡುವುದು ಆಡಳಿತದ ಕರ್ತವ್ಯ. (ಆರ್.ಎಸ್.ವಿ.)

**ಕೈಗಾರಿಕಾ ವ್ಯವಸ್ಥಾಪನ :** ಒಂದು ಕೈಗಾರಿಕೋದ್ಯಮದ ಹೊಣೆಗಾರ ಅಧಿಕಾರಿಗಳು ಇತರರ ಸಂಘಟಿತ ಪ್ರಯತ್ನಗಳ ಮೂಲಕ ಉದ್ದೇಶಿತ ಕಾರ್ಯ ಮಾಡಿಸಿಕೊಳ್ಳುವ ವಿಧಾನ (ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್). ಇದನ್ನು ಕೈಗಾರಿಕಾ ನಿರ್ವಹಣೆಯೆಂದೂ ಕರೆಯುವುದಿದೆ. ವ್ಯವಹಾರಲೋಕದಲ್ಲಿ ವ್ಯವಸ್ಥಾಪನ (ನಿರ್ವಹಣೆ), ಆಡಳಿತ (ಅಡ್ಮಿನಿಸ್ಟ್ರೇಷನ್)–ಇವೆರಡೂ ಶಬ್ದಗಳು ಸಮಾನಾರ್ಥಕಗಳೆಂಬಂತೆ ಬಳಕೆಯಲ್ಲಿವೆ. ವ್ಯವಹಾರದ ಉದ್ದಿಷ್ಟ ಗುರಿ ನಿಲುಕಲು ಕೈಗೊಳ್ಳುವ ನಿರ್ದೇಶನ, ಮಾರ್ಗದರ್ಶನ, ನಿಯಂತ್ರಣ ಮುಂತಾದ ಕಲಾಪಗಳೂ ವ್ಯವಸ್ಥಾಪನದ ವ್ಯಾಪ್ತಿಯಲ್ಲೇ ಬರುವುವೆಂಬುದು ಕೆಲವರ ವಾದ. ಆದರೆ ಇವೆಲ್ಲವೂ ಆಡಳಿತದ ಕಾರ್ಯಭಾರವೆಂಬುದಾಗಿ ಇನ್ನು ಕೆಲವರು ವಾದಿಸುತ್ತಾರೆ. ಮತ್ತೆ ಕೆಲವರು ಇವೆರಡಕ್ಕೂ ನಡುವೆ ಯಾವ ವ್ಯತ್ಯಾಸವನ್ನೂ ಕಾಣುವುದೇ ಇಲ್ಲ. ವ್ಯವಸ್ಥಾಪನ, ಆಡಳಿತ–ಇವೆರಡರ ವ್ಯಾಪ್ತಿಗಳನ್ನು ಶಾಸ್ತ್ರೀಯವಾಗಿ ನಿರ್ಧರಿಸಿರುವವನು ಷೆಲ್ಡನ್. ಸಂಸ್ಥೆಯ ನೀತಿಯನ್ನು ನಿರ್ಧರಿಸುವುದೂ ಹಣ, ಉತ್ಪಾದನೆ, ವಿತರಣೆ ಮುಂತಾದವುಗಳನ್ನು ಸಂಯೋಜಿಸುವುದೂ ಸಂಸ್ಥೆಯ ಘಟನೆ ಹೇಗಿರಬೇಕೆಂಬುದನ್ನು ತೀರ್ಮಾನಿಸುವುದೂ ಆಡಳಿತದ ಕಾರ್ಯಭಾರವೆಂದು ಆತ ಹೇಳುತ್ತಾನೆ. ಆಡಳಿತ ನಿರ್ಧರಿಸಿದ ನೀತಿಯನ್ನು ಅದು ನಿರೂಪಿಸಿದ ಎಲ್ಲೆಯ ಒಳಗೆ ಕಾರ್ಯಗತಗೊಳಿಸುವುದು ವ್ಯವಸ್ಥಾಪನದ ಹೊಣೆ. ನಿಶ್ಚಿತ ಉದ್ದೇಶ ಸಾಧನೆಗೆ ಅಗತ್ಯವಾದ ಸಂಘಟನೆಯನ್ನು ನಿಯೋಜಿಸುವುದೂ ವ್ಯವಸ್ಥಾಪನದ ಕಾರ್ಯಭಾರವೇ–ಎಂಬುದು ಷೆಲ್ಡನನ ಮತ. ಅದು ಮಾನವ ಪ್ರಯತ್ನವನ್ನು ಕ್ರಿಯಾತ್ಮಕ ಮಾರ್ಗಗಳಲ್ಲಿ ನಿರ್ದೇಶಿಸುತ್ತದೆ. ಜನರ ಮೂಲಕ, ಅವರ ಸಹಾಯದೊಡನೆ ಕೆಲಸಗಳನ್ನು ಆಗಮಾಡಿಸುವುದು ವ್ಯವಸ್ಥಾಪನದ ಕರ್ತವ್ಯ. ಆಡಳಿತದ ಹೊಣೆ ನಿರ್ಧಾರಕವಾದರೆ, ವ್ಯವಸ್ಥಾಪನದ್ದು ಕಾರ್ಯಕಾರಕ. ಅನೇಕ ಸಮಯಗಳಲ್ಲಿ ನಿರ್ಧಾರಕ–ಕಾರ್ಯಕಾರಕ ಹೊಣೆಗಳೆರಡನ್ನೂ ಒಬ್ಬನೇ ವ್ಯಕ್ತಿ ನಿರ್ವಹಿಸಬಹುದು. ಒಂದು ಸಂಸ್ಥೆಯ ಅಧ್ಯಕ್ಷ ಅಥವಾ ವ್ಯವಸ್ಥಾಪಕನಿಯೋಗಿ ಅಥವಾ ಮಹಾವ್ಯವಸ್ಥಾಪಕನಾದವನು ಬಹಳಮಟ್ಟಿಗೆ ಅದರ ಆಡಳಿತಕಾರ್ಯಗಳನ್ನೂ ಸ್ವಲ್ಪಮಟ್ಟಿಗೆ ಅದರ ವ್ಯವಸ್ಥಾಪನ ಕಾರ್ಯಗಳನ್ನೂ ಮಾಡಬಹುದು. ಕಾರ್ಖಾನೆಯ ಕಾರ್ಯನೀತಿ ಬಹುತೇಕ ನಿರ್ಧಾರವಾಗುವುದು ಆ ಮಟ್ಟದಲ್ಲಿ. ಅಧಿಕಾರದ ಕೆಳಗಿನ ಹಂತಗಳಿಗೆ ಬಂದಂತೆಲ್ಲ ವ್ಯವಸ್ಥಾಪನದ ಅಥವಾ ನಿರ್ವಹಣೆಯ ಅಂಶ ಅಧಿಕವಾಗುತ್ತದೆ. ಆದರೂ ಆಯಾ ಹಂತಗಳಲ್ಲಿ ಕೆಲಸಮಾಡುವ ಅಧಿಕಾರಿಗಳೂ ತಮತಮಗೆ ನಿಯಮಿತವಾದ ಕಾರ್ಯನಿರ್ವಹಣೆಯ ಜೊತೆಗೆ ತಂತಮ್ಮ ಸೀಮಿತ ಪರಿಧಿಯೊಳಗೆ ನೀತಿ ನಿರ್ಧಾರ ಮಾಡುವುದನ್ನೂ ಕಾಣಬಹುದು. ಈ ಕೆಲಸವನ್ನು ಎಷ್ಟರಮಟ್ಟಿಗೆ ಅವರು ಮಾಡುತ್ತಾರೋ ಅಷ್ಟರಮಟ್ಟಿಗೆ ಅವರು ಆಡಳಿತಗಾರರೂ ಹೌದು. ಒಟ್ಟಿನಲ್ಲಿ ಅಧಿಕಾರಿವರ್ಗದ ಮೇಲಣ ಮಟ್ಟದಲ್ಲಿ ಆಡಳಿತದ ಅಂಶ ಹೆಚ್ಚು; ನಿರ್ವಹಣೆಯ ಅಥವಾ ವ್ಯವಸ್ಥಾಪನದ ಅಂಶ ಕಡಿಮೆ; ಕೆಳಗಣ ಮಟ್ಟದಲ್ಲಿ ಆಡಳಿತದ ಅಂಶ ಕಡಿಮೆ, ನಿರ್ವಹಣೆಯ ಅಂಶ ಹೆಚ್ಚು. ಇದು ಈ ರೀತಿ ಇರುತ್ತದೆ. ವ್ಯವಸ್ಥಾಪನದ ಆಧುನಿಕ ಸಿದ್ಧಾಂತವನ್ನು ನಿರೂಪಿಸಿದವನು ಹೆನ್ರಿ ಫಯೋಲ್ (1841-1925). ಅವನ ಪ್ರಕಾರ ಒಂದು ಕೈಗಾರಿಕೋದ್ಯಮದ ಎಲ್ಲ ಕಲಾಪಗಳನ್ನೂ ಈ ರೀತಿ ವಿಂಗಡಿಸಬಹುದು: 1 ತಾಂತ್ರಿಕ (ಉತ್ಪಾದನೆ, ತಯಾರಿಕೆ, ಸಂಯೋಜನೆ), 2 ವಾಣಿಜ್ಯಕ (ಕ್ರಯ, ವಿಕ್ರಯ, ವಿನಿಮಯ), 3 ವಿತ್ತೀಯ (ಬಂಡವಾಳದ ಅನ್ವೇಷಣೆ, ಅನುಕೂಲತಮ ಬಳಕೆ), 4 ಭದ್ರತೆ (ಸ್ವತ್ತಿನ ಮತ್ತು ಜನರ ರಕ್ಷಣೆ), 5 ಲೆಕ್ಕ (ಸರಕು ಝಡತಿ, ಆಸ್ತಿ–ಹೊಣೆ ತಃಖ್ತೆಯ ರಚನೆ, ವೆಚ್ಚನಿರ್ಣಯ, ಅಂಕಿ–ಅಂಶ) ಮತ್ತು 6 ವ್ಯವಸ್ಥಾಪನ (ಯೋಜನೆ,




ಸಂಘಟನೆ, ಪ್ರಭುತ್ವ, ಸಂಯೋಜನೆ, ನಿಯಂತ್ರಣ).

ಪ್ರತಿಯೊಂದು ಕಾರ್ಯ ಮಾಡುವುದಕ್ಕೂ ಅದಕ್ಕೆ ತಕ್ಕ ಸಾಮರ್ಥ್ಯ ಇರುವುದು ಅವಶ್ಯವಾಗಿರುವಂತೆ, ವ್ಯವಸ್ಥಾಪನಕಾರ್ಯಕ್ಕೂ ಅದಕ್ಕೆ ತಕ್ಕ ಸಾಮರ್ಥ್ಯ ಇರಬೇಕೆಂಬುದು ಫಯೋಲನ ಮತ. ಬಹುತೇಕ ಕೆಲಸಗಾರರಿಗೆ ತಾಂತ್ರಿಕ ಸಾಮರ್ಥ್ಯ ಇರುವುದು ಅವಶ್ಯ. ಅಧಿಕಾರದ ಮೇಲಣ ಹಂತಗಳನ್ನು ಏರಿದಂತೆ ತಾಂತ್ರಿಕ ಸಾಮರ್ಥ್ಯಕ್ಕಿಂತ ನಿರ್ವಹಣ ಸಾಮರ್ಥ್ಯ ಹೆಚ್ಚಾಗಿ ಬೇಕಾಗುತ್ತದೆ. ತಾಂತ್ರಿಕ ಸಾಮರ್ಥ್ಯದಂತೆ ವ್ಯವಸ್ಥಾಪನ ಸಾಮರ್ಥ್ಯವನ್ನು ಕೂಡ ಶಾಲೆ ಕಾಲೇಜುಗಳಲ್ಲೂ ಅನಂತರ ಕಾರ್ಯಾಗಾರದಲ್ಲೂ ಪಡೆದುಕೊಳ್ಳಬಹುದು.

**ವ್ಯವಸ್ಥಾಪನ ಕಾರ್ಯಭಾರಗಳು:** ಪ್ರತಿಯೊಂದು ಕೆಲಸಕ್ಕೂ ಒಂದು ಗುರಿಯನ್ನು ನಿಶ್ಚಯಿಸುವುದೂ ಅದನ್ನು ಸಾಧಿಸುವ ವಿಧಿ ವಿಧಾನಗಳನ್ನು ರೂಪಿಸುವುದೂ ವ್ಯವಸ್ಥಾಪಕನ ಮೊದಲನೆಯ ಕರ್ತವ್ಯ. ಗುರಿಗಳು ಖಚಿತವಾಗಿಯೂ ಸ್ಪಷ್ಟವಾಗಿಯೂ ಇರಬೇಕು. ಗುರಿಗಳನ್ನು ನಿಷ್ಕರ್ಷಿಸುವ ಮುನ್ನ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಾಹಿತಿಯನ್ನು ದೊರಕಿಸಿಕೊಳ್ಳುವುದು ಅವಶ್ಯ. ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ಅದರ ಆಧಾರದ ಮೇಲೆ ಗುರಿಗಳನ್ನು ನಿಷ್ಕರ್ಷಿಸಬೇಕು. ಪ್ರಸ್ತುತ ಪರಿಸ್ಥಿತಿಯಲ್ಲಿ ಯಾವ ಗುರಿಗಳನ್ನು ಸಾಧಿಸಬಹುದೆಂಬುದನ್ನು ತೀರ್ಮಾನಿಸಬೇಕಾಗುತ್ತದೆ. ಅವನ್ನು ಸಾಧಿಸಲು ಯುಕ್ತಕ್ರಮಗಳನ್ನು ನಿಷ್ಕರ್ಷಿಸಬೇಕು; ಅದಕ್ಕಾಗಿ ನಿರ್ದೇಶನವನ್ನು ನೀಡಬೇಕು. ಸಂಘಟನೆ, ಸಿಬ್ಬಂದಿಯ ಪೂರೈಕೆ, ನಿರೂಪಣೆ, ಪ್ರೇರೇಪಣೆ, ದಿಗ್ದರ್ಶನ ಮತ್ತು ಸಂಯೋಜನೆಗಳ ಮೂಲಕ ವ್ಯವಸ್ಥಾಪಕ ತನ್ನ ಉದ್ದೇಶವನ್ನು ಸಾಧಿಸುತ್ತಾನೆ. ಇದು ವ್ಯವಸ್ಥಾಪನದ ಕಾರ್ಯವಿಧಾನ.

ಇದನ್ನು ವ್ಯವಸ್ಥಾಪಕನೇ ಸ್ವತಃ ಸಾಧಿಸುವುದಿಲ್ಲ. ಇದಕ್ಕೆ ಇತರರ ನೆರವು ಪಡೆಯುವುದು ಅವಶ್ಯವಾಗುತ್ತದೆ. ಇದಕ್ಕಾಗಿ ಅವನು ಮಾನವವ್ಯಕ್ತಿಗಳ ಒಂದು ರಚನೆಯನ್ನು ನಿರ್ಮಿಸುತ್ತಾನೆ. ಇದೇ ಸಂಘಟನೆ. ಸಂಘಟನೆಯೆಂಬುದು ಜನಗಳ ಗುಂಪು ಅಥವಾ ತಂಡವಲ್ಲ. ಇಲಾಖೆ ಅಥವಾ ವಿಭಾಗವನ್ನು ಹಾಗೆಂದು ಕರೆಯಬಹುದು; ಅದು ವ್ಯಕ್ತಿಯ ವಿಸ್ತೃತರೂಪ: ಒಂದು ನಿರ್ದಿಷ್ಟಕರ್ತವ್ಯದ ಸಾಧನೆಗಾಗಿ ನಿರ್ಮಿಸಲಾದ ಜನತಂಡ. ಒಂದು ಉದ್ಯಮದಲ್ಲಿ ಅಚ್ಚುಕಟ್ಟಾದ ಇಲಾಖೆಗಳನ್ನು ರಚಿಸಬಹುದು. ಆದರೂ ಅದು ಸಂಘಟಿತವಾಗಿಲ್ಲದಿರಬಹುದು. ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಪ್ರತಿಯೊಂದು ಇಲಾಖೆಯ ವ್ಯಕ್ತಿವ್ಯಕ್ತಿಗೂ ಇರಬೇಕಾದ ಸಂಬಂಧವನ್ನು ನಿರ್ಧರಿಸುವುದು, ಅದನ್ನು ಬೆಳೆಸುವುದು ಸಂಘಟನೆಯ ಕಾರ್ಯ. ಇದೇ ವ್ಯವಸ್ಥಾಪನದ ತಂತ್ರ..

ಸಂಘಟನೆಯ ಸ್ವರೂಪವನ್ನು ನಿರ್ಧರಿಸಿದ ಮೇಲೆ ಸಿಬ್ಬಂದಿಪೂರೈಕೆಯ ಕಾರ್ಯ ಆರಂಭವಾಗುತ್ತದೆ. ಒಂದು ಕೆಲಸಕ್ಕೆ ಅಗತ್ಯವಾದ ಜನರಲ್ಲಿ ಇರಬೇಕಾದ ಸಾಮರ್ಥ್ಯಗಳೇನೆಂಬುದನ್ನು ನಿರೂಪಿಸುವುದು, ಅದಕ್ಕೆ ಯುಕ್ತರಾದ ಜನರನ್ನು ಆರಿಸುವುದು, ಅವರಿಗೆ ತರಬೇತು ನೀಡುವುದು, ಅವರು ಆದಷ್ಟು ಪರಿಣಾಮಕಾರಿಯಾಗಿ ತಮ್ಮ ಕೆಲಸ ಸಾಧಿಸುವಂತೆ ಅವರ ಕರ್ತೃತ್ವಶಕ್ತಿಯನ್ನು ಬೆಳೆಸುವುದು ಇವೆಲ್ಲ ಸಿಬ್ಬಂದಿ ಪೂರೈಕೆಯ ಅಂಶಗಳು.

ಅವಶ್ಯವಾದ ಸಿಬ್ಬಂದಿಯ ಪೂರೈಕೆಯಾದ ಮೇಲೆ ವ್ಯವಸ್ಥಾಪಕ ಮಾಡಬೇಕಾದ ಮುಂದಿನ ಕೆಲಸವೆಂದರೆ ವಿಷಯ ನಿರೂಪಣೆ: ತನ್ನ ಕಾರ್ಯಯೋಜನೆಯನ್ನೂ ತನ್ನ ಭಾವನೆಗಳನ್ನೂ ಸಿಬ್ಬಂದಿಗೆ ತಿಳಿಸುವುದು. ತಮ್ಮಿಂದ ಏನನ್ನು ನಿರೀಕ್ಷಿಸಲಾಗಿದೆಯೆಂಬುದನ್ನು ಸಿಬ್ಬಂದಿಜನ ಅರಿತುಕೊಂಡ ಮೇಲೆ ಮಾತ್ರ ಅವರು ತಮ್ಮ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲರು.

ಪ್ರೇರೇಪಣೆ ಅಥವಾ ಚೋದನೆ ಅತ್ಯಂತ ಮುಖ್ಯವಾದ ಅಂಶ, ಉದ್ಯಮದ ಉದ್ದೇಶವನ್ನು ಸಾಧಿಸುವುದಕ್ಕಾಗಿ ಸಿಬ್ಬಂದಿ ಜನರು ಮನಃಪೂರ್ವಕವಾಗಿ ಏಕೀಭವಿಸುವಂತೆ ಮಾಡಲು ಪ್ರತಿಯೊಂದು ಕೈಗಾರಿಕಾ ಸಂಸ್ಥೆಯೂ ಆದ್ಯಗಮನ ಕೊಡುತ್ತದೆ. ಇದರಲ್ಲಿ ಯಶಸ್ಸುಗಳಿಸಿದಾಗಲೇ ಕಾರ್ಯ ಸಾರ್ಥಕವಾಗುತ್ತದೆ.

ನಿರ್ದೇಶನ, ಮಾರ್ಗದರ್ಶನ, ಸಲಹೆ–ಇವು ಕೂಡ ಮುಖ್ಯ. ಏನನ್ನು ಮಾಡಬೇಕು, ಏಕೆ ಮಾಡಬೇಕು–ಎಂಬುದು ಒಬ್ಬ ಉದ್ಯೋಗಿಗೆ ಗೊತ್ತಿರಬಹುದು. ಆದರೆ ಹೇಗೆ ಮಾಡಬೇಕು–ಎಂಬುದು ಗೊತ್ತಿಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಇದನ್ನು

ತಿಳಿಯಹೇಳುವುದೂ ವ್ಯವಸ್ಥಾಪನದ ಹೊಣೆ. ಪ್ರತಿಯೊಬ್ಬ ಉದ್ಯೋಗಿಯೂ ಪ್ರತಿಯೊಂದು ಇಲಾಖೆಯೂ ಮಾಡಿದ ಕೆಲಸದ ಸಂಯೋಜನೆ, ನಿರ್ವಾಹಕ ವರ್ಗದ ಮತ್ತು ಕಾರ್ಮಿಕವರ್ಗದ ನಡುವೆ ಸಹಕಾರ–ಇವನ್ನು ಸಾಧಿಸುವುದು ಕೂಡ ವ್ಯವಸ್ಥಾಪನದ ಕರ್ತವ್ಯ. ಕೆಲಸದ ಮೇಲ್ವಿಚಾರಣೆ. ನಿಯಂತ್ರಣ, ಹೊಸಹೊಸ ಉತ್ಪಾದನ ವಿಧಾನಗಳನ್ನು ಕಂಡುಹಿಡಿಯಲು ಕೆಲಸಗಾರರಿಗೆ ಪ್ರೋತ್ಸಾಹ ದೊರಕುವಂಥ ವಾತಾವರಣದ ನಿರ್ಮಾಣ–ಇದೆಲ್ಲವೂ ವ್ಯವಸ್ಥಾಪನದ ಹೊಣೆಯೇ.

ವ್ಯವಸ್ಥಾಪನದ ಬಗ್ಗೆ ಪ್ರಚಲಿತ ವಿಚಾರಧಾಟಿ ಬಹಳಮಟ್ಟಿಗೆ ಮುಂದುವರಿದಿದೆ. ವೇತನ ನೀಡಿ ನಿರ್ದಿಷ್ಟ ಕೆಲಸ ಮಾಡಿಸುವುದಷ್ಟೇ ಉದ್ಯಮವ್ಯವಸ್ಥಾಪನದ ಕಾರ್ಯವಲ್ಲ. ಅದರ ಹೊಣೆ ಇನ್ನೂ ಮಿಗಿಲಾದ್ದು. ಕಾರ್ಮಿಕನ ಚಿತ್ತವೃತ್ತಿ, ಭಾವನೆಗಳು–ಇವನ್ನೆಲ್ಲ ಅದು ಪರಿಗಣಿಸಬೇಕಾಗುತ್ತದೆ. ಆದ್ದರಿಂದ ವ್ಯವಸ್ಥಾಪನ ಒಂದು ವರ್ತನವಿಜ್ಞಾನ. ತನ್ನ ಕೆಲಸದ ಪರಿಸ್ಥಿತಿ ಉತ್ತಮವಾಗಬೇಕು, ತಾನು ಮಾಡುವ ಕೆಲಸಕ್ಕೆ ಮನ್ನಣೆ ದೊರಕಬೇಕು, ತನ್ನ ಹಿತಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತ ತೀರ್ಮಾನಗಳಲ್ಲಿ ಭಾಗವಹಿಸಲು ತನಗೆ ಅವಕಾಶ ಇರಬೇಕು–ಎಂದು ಕೆಲಸಗಾರ ಬಯಸುವುದು ಸಹಜವೇ ಆಗಿದೆ. ವ್ಯವಸ್ಥಾಪಕವರ್ಗ ಇದನ್ನು ಗಮನಿಸಲಾರಂಭಿಸಿದೆ. ಹೊಸ ಅರಿವು, ಒಳ್ಳೆಯ ಕೈಗಾರಿಕಾ ಸಂಬಂಧಗಳ ಸ್ಥಾಪನೆ–ಇವು ಇಂದಿನ ವ್ಯವಸ್ಥಾಪನದ ಮುಖ್ಯಲಕ್ಷಣಗಳು. ಒಳ್ಳೆಯ ಮಾನವಸಂಬಂಧದಿಂದ ಒಳ್ಳೆಯ ವ್ಯವಹಾರ–ಎಂಬುದು ಇಂದಿನ ಘೋಷವಾಕ್ಯ. ಕೆಲಸಗಾರರಲ್ಲಿ ಎಷ್ಟು ಹೆಚ್ಚಿನ ನೈತಿಕ ಸ್ಥೈರ್ಯ ಇರುತ್ತದೊ ಅಷ್ಟರಮಟ್ಟಿಗೆ ಲಾಭವೂ ಅಧಿಕವಾಗುತ್ತದೆ. ಸಿಬ್ಬಂದಿಯ ಆಡಳಿತವೇ ವ್ಯವಸ್ಥಾಪನ. ಅದು ಆದೇಶನೀಡಿಕೆಯಲ್ಲ, ಸಿಬ್ಬಂದಿಯ ಅಭಿವೃದ್ಧಿ. ಮಾನವರ ಗುಂಪಿಗೂ ಜೀವಂತಿಕೆಯುಂಟು. ಗುಂಪಿನಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಜನರ ಜೀವಂತಿಕೆಗಳ ಮೊತ್ತಕ್ಕಿಂತಲೂ ಗುಂಪಿನ ಜೀವಂತಿಕೆ ಅಧಿಕ. ಇದನ್ನು ಪರಿಗಣಿಸಿ ಅಧಿಕಾರವನ್ನು ಅವ್ಯೆಯಕ್ತಿಕಗೊಳಿಸಬೇಕು. ಕಾರ್ಯಾತ್ಮಕ ಸಹಕಾರ ತತ್ತ್ವದ ಮೇಲೆ ಯಜಮಾನ–ಉದ್ಯೋಗಿ ಸಂಬಂಧ ರೂಪಿತವಾಗಿದೆಯೇ ವಿನಾ ಅಧಿಕಾರದ ಅಂತಸ್ತಿನ ಮೇಲಲ್ಲ. ವಿವಾದ ಉಂಟಾದಾಗ ಎರಡೂ ಪಕ್ಷಗಳ ಅಭಿಲಾಷೆಗಳನ್ನು ಮಿಳಿತಗೊಳಿಸಿ ವಿರಸವನ್ನು ಬಗೆಹರಿಸಬೇಕೇ ವಿನಾ ಒಂದು ಪಕ್ಷದ ಭಾವನೆಗಳನ್ನು ಇನ್ನೊಂದು ಪಕ್ಷ ಹತ್ತಿಕ್ಕುವುದರಿಂದಲ್ಲ. ಒಂದು ಕೊಠಡಿಯಲ್ಲಿ ಇಬ್ಬರು ವಾಸವಾಗಿದ್ದು, ಆ ಕೊಠಡಿಯ ಕಿಟಕಿಯನ್ನು ತೆರೆಯಬೇಕೆಂಬುದು ಒಬ್ಬನ ಇಚ್ಛೆಯೂ ಅದನ್ನು ಮುಚ್ಚಬೇಕೆಂಬುದು ಇನ್ನೊಬ್ಬನ ಇಚ್ಛೆಯೂ ಆಗಿದ್ದ ಪಕ್ಷದಲ್ಲಿ, ಅವರಿಬ್ಬರಲ್ಲಿ ಯಾರೊಬ್ಬನ ಅಭಿಲಾಷೆ ಪೂರೈಸಿದರೂ ಇನ್ನೊಬ್ಬನ ಅಭಿಲಾಷೆಯನ್ನು ಕಡೆಗಣಿಸಿದಂತೆ. ಈ ಸಮಸ್ಯೆಯ ಪರಿಹಾರಕ್ಕೆ ಮೂರನೆಯ ಮಾರ್ಗವಿರಬಹುದೆಂದು ಭಾವಿಸಿ ಅವನ್ನು ಅರಸುವುದೂ ಸಾಧ್ಯ. ಆ ಕೊಠಡಿಗೆ ಸೇರಿದಂತಿರುವ ಪಕ್ಕದ ಕೊಠಡಿಯ ಕಿಟಕಿಯನ್ನು ತೆರೆದರೆ ಇಬ್ಬರ ಹಟವೂ ಸಾಧಿಸಿದಂತಾಗುತ್ತದೆ. ವಿರಸ ಸಂಭವಿಸಿದಾಗ ಎರಡು ಪಕ್ಷಗಳಲ್ಲಿ ಯಾವುದೂ ಸೋತಂತೆ ಭಾವಿಸಲಾಗದ ಮೂರನೆಯ ಮಾರ್ಗವನ್ನು–ಎರಡು ಪಕ್ಷಗಳಿಗೂ ಒಪ್ಪಿಗೆಯಾಗುವ ಮಾರ್ಗವನ್ನು ಹುಡುಕಬೇಕಾಗುತ್ತದೆ. ಅಂತಿಮವಾಗಿ ಎರಡೂ ಪಕ್ಷಗಳ ಗುರಿ ಒಂದೇ ಆಗಿ ಪರಿಣಮಿಸುವಂತೆ ಮಾಡಬೇಕಾಗುತ್ತದೆ. ಅದಕ್ಕನುಗುಣವಾಗಿ ನಾಯಕತ್ವದ ಸ್ವರೂಪವೂ ವ್ಯತ್ಯಾಸಗೊಳ್ಳುವುದು ಅವಶ್ಯ: ಅದು ಆಳ್ವಿಕೆ ನಡೆಸುವುದಲ್ಲ; ಮಾರ್ಗದರ್ಶನ ನೀಡುವುದು, ಮೇಲ್ಪಂಕ್ತಿ ಹಾಕುವುದು. ನಾಯಕತ್ವದ ಶಕ್ತಿ ಇರುವುದು ಸಂಯೋಜನೆಯಲ್ಲಿ. ನಾಯಕನಾದವನು ವ್ಯಕ್ತಿಗಳಲ್ಲಿರುವ ಉತ್ತಮಾಂಶಗಳನ್ನು ಪ್ರಚೋದಿಸುತ್ತಾನೆ. ವ್ಯಕ್ತಿಗಳಲ್ಲಿ ಒಟ್ಟೊಟ್ಟಾಗಿ, ಬಿಡಿಬಿಡಿಯಾಗಿ ಯಾವ ಭಾವನೆಗಳು ಮೂಡುತ್ತವೆಯೋ ಅವನ್ನೆಲ್ಲ ಅವನು ಕ್ರೋಡೀಕರಿಸಿ ಸಾಂದ್ರೀಕರಿಸುತ್ತಾನೆ. ಪ್ರತಿಯೊಬ್ಬ ಮನುಷ್ಯನಲ್ಲೂ ಭ್ರೂಣಾವಸ್ಥೆಯಲ್ಲಿರುವ ಚೈತನ್ಯಕ್ಕೆ ರೂಪು ಆಕಾರ ನೀಡುವವನೇ ನಾಯಕ. ಮಹಾಕಾರ್ಯಗಳನ್ನು ಮಾಡಿ ಯಾರೂ ಇತರರ ಮೇಲೆ ಶಾಶ್ವತ ಪ್ರಭಾವ ಬೀರಲಾರರು. ತಾವು ಕೂಡ ಮಹಾಕಾರ್ಯಗಳನ್ನು ನಿರ್ವಹಿಸಬಲ್ಲೆವೆಂಬ ಭಾವನೆ ಇತರರಲ್ಲಿ ಮೂಡುವಂತೆ ಮಾಡುವವನೇ ನಿಜವಾದ ಪ್ರಭಾವಶಾಲಿ. ನಿಜವಾದ ನಾಯಕತ್ವಕ್ಕೆ ಈ ಗುಣ ಇರಬೇಕು. ಇಂದು ವ್ಯವಸ್ಥಾಪನ ಈ ಬಗೆಯ ನಿಲುವು ತಳೆಯುತ್ತಿದೆ. ಇದಕ್ಕೆ ಮನೋವಿಜ್ಞಾನ, ಸಮಾಜಶಾಸ್ತ್ರ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ ತಳಹದಿಗಳಾಗಿವೆ. ನಾಯಕನ ಗುಣಲಕ್ಷಣಗಳಿಗೆ ಸಂಬಂಧಿಸಿದ ಅಮೂರ್ತ ಅಂಶಗಳನ್ನು ಸೋಸಿ ಅಳೆಯುವುದು ಇದರ ಕೆಲಸ.

ಇವೆಲ್ಲ ವಿಚಾರಗಳಿಂದ ವ್ಯವಸ್ಥಾಪನ ಸಿದ್ಧಾಂತವೊಂದು ಕ್ರಮಕ್ರಮವಾಗಿ ರೂಪುಗೊಳ್ಳುತ್ತಿದೆ. ವ್ಯವಸ್ಥಾಪನವೂ ಒಂದು ವಿಜ್ಞಾನವೆಂಬ ಭಾವನೆಯೆಂಬ ಕ್ರಮಬದ್ಧವಾಗಿ ಬಿತ್ತಿ ಬೆಳೆಸಿದವರಲ್ಲಿ ಮೊದಲಿಗನೆಂದರೆ ಫ್ರೆಡರಿಕ್ ಡಬ್ಲ್ಯೂ. ಟೇಲರ್ (1856–1915). ಇವನನ್ನು ವೈಜ್ಞಾನಿಕ ವ್ಯವಸ್ಥಾಪನದ ಜನಕನೆಂದು ಪರಿಗಣಿಸುವುದು ರೂಢಿ. ಜೀವವಿಜ್ಞಾನದಲ್ಲಿ ಡಾರ್ವಿನನಿಗೆ ಯಾವ ಸ್ಥಾನವಿದೆಯೋ ಕೈಗಾರಿಕಾ ವ್ಯವಸ್ಥಾಪನದಲ್ಲಿ ಟೇಲರನಿಗೆ ಅದೇ ಸ್ಥಾನವಿದೆಯೆಂದು ಸ್ಪ್ರೀಗಲ್ ಮತ್ತು ಲ್ಯಾನ್ಸ್‌ಬರ್ಗ್ ಅಭಿಪ್ರಾಯಪಡುತ್ತಾರೆ. ಕೆಲಸಗಾರರ ಕಡಿಮೆ ದಕ್ಷತೆಯ ಸಮಸ್ಯೆಯನ್ನು ಅವನು ಅಧ್ಯಯನ ಮಾಡಿದ್ದಾನೆ. ಒಂದು ದಿನದಲ್ಲಿ ಒಬ್ಬ ಕೆಲಸಗಾರ ಎಷ್ಟು ಕೆಲಸ ಮಾಡಬೇಕೆಂಬ ಬಗ್ಗೆ ವ್ಯವಸ್ಥಾಪನಕ್ಕೆ ಸರಿಯಾದ ತಿಳಿವಳಿಕೆ ಇಲ್ಲದಿರುವುದೇ ಇದಕ್ಕೆ ಕಾರಣವೆಂಬುದಾಗಿ ಆತನ ನಂಬಿಕೆ. ವ್ಯವಸ್ಥಾಪನವರ್ಗ ನಿಜವಾಗಿಯೂ ವ್ಯವಸ್ಥಾಪನಕಾರ್ಯ ಮಾಡುತ್ತಿಲ್ಲವೆಂಬುದು ಅವನ ತೀರ್ಮಾನ. ವ್ಯವಸ್ಥಾಪನಕ್ಕೂ ವೈಜ್ಞಾನಿಕ ನಿಲುವು ಅಗತ್ಯ ಎಂದು ಆತ ವಾದಿಸಿದ್ದಾನೆ. ಉತ್ಕೃಷ್ಟ ವ್ಯವಸ್ಥಾಪನವೂ ವಾಸ್ತವವಾಗಿ ಒಂದು ವಿಜ್ಞಾನ. ಖಚಿತವಾಗಿ ವ್ಯಾಖ್ಯಿಸಲಾದ ನಿಯಮಗಳೂ ನಿಬಂಧನೆಗಳೂ ತತ್ತ್ವಗಳೂ ಅದಕ್ಕೆ ಆಧಾರ. ವೀಕ್ಷಣೆ, ಅಳತೆ, ಪ್ರಯೋಗ, ತೀರ್ಪು–ಇವು ವಿಜ್ಞಾನದ ಅಂಶಗಳು. ಕೆಲಸಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯ ವರ್ಗೀಕರಣ ನಿಯಮ, ನಿಬಂಧನೆ ಮತ್ತು ಸೂತ್ರಗಳ ರಚನೆ–ಈ ಕಾರ್ಯವನ್ನು ಕೈಗೊಳ್ಳುವುದು ವ್ಯವಸ್ಥಾಪನದ ಕರ್ತವ್ಯ. ತರಬೇತಾದ ಕಾರ್ಮಿಕರು ಅನುಸರಿಸಬೇಕಾದ ಶಿಷ್ಟತೆಗಳು ಕೂಡ ವ್ಯವಸ್ಥಾಪನದಿಂದ ನಿಷ್ಕರ್ಷೆಯಾಗಬೇಕು. ಯೋಜನೆಯನ್ನೂ ಕೆಲಸವನ್ನೂ ಪ್ರತ್ಯೇಕಿಸಬೇಕು. ಯೋಜಿಸುವುದೂ ಮೇಲ್ವಿಚಾರಣೆ ನಡೆಸುವುದೂ ವ್ಯವಸ್ಥಾಪಕನ ಹೊಣೆ. ನೀಡಲಾದ ಸೂಚನೆಗಳಿಗೆ ಅನುಗುಣವಾಗಿ ಕೆಲಸಮಾಡುವುದು ಕಾರ್ಮಿಕರ ಹೊಣೆ. 1 ಸ್ಥೂಲ ನಿಯಮಗಳ ಬದಲು ವೈಜ್ಞಾನಿಕ ವಿಧಾನಗಳ ಅನುಸರಣೆ, 2 ಕೆಲಸಗಾರರ ವೈಜ್ಞಾನಿಕ ಆಯ್ಕೆ, ನೇಮಕ, ತರಬೇತು, 3 ವ್ಯವಸ್ಥಾಪಕ ಮತ್ತು ಕಾರ್ಮಿಕ ವರ್ಗಗಳ ನಡುವಣ ಸಹಕಾರದ ಮೂಲಕ ಸಾಮರಸ್ಯ ಸಾಧನೆ, 4 ವೈಜ್ಞಾನಿಕ ವಿಧಾನಗಳ ಮೂಲಕ ಗರಿಷ್ಠ ಉತ್ಪತ್ತಿ, 5 ಗರಿಷ್ಠ ದಕ್ಷತೆ ಮತ್ತು ಪ್ರಗತಿ ಸಾಧಿಸುವಂತೆ ಪ್ರತಿಯೊಬ್ಬ ಕೆಲಸಗಾರನ ಅಭಿವೃದ್ಧಿ, 6 ವ್ಯವಸ್ಥಾಪನ ಮತ್ತು ಕಾರ್ಮಿಕರ ನಡುವೆ ಕೆಲಸ ಮತ್ತು ಹೊಣೆಗಳ ನ್ಯಾಯವಾದ ವಿಭಜನೆ–ಇವು ವ್ಯವಸ್ಥಾಪನದ ಕಾರ್ಯಭಾರವೆಂದು ಟೇಲರ್ ಹೇಳಿದ್ದಾನೆ.

ತನ್ನ ಸೂತ್ರಗಳು ವಿಸ್ತೃತವಾಗಿ ಅನ್ವಯವಾಗಬೇಕೆಂಬುದು ಟೇಲರನ ಉದ್ದೇಶವಾಗಿತ್ತಾದರೂ ಇಡೀ ಉದ್ಯಮಕ್ಕಿಂತ ಕಾರ್ಯಶಾಲೆಯ ಹಂತದಲ್ಲಿ ನಡೆಯುವ ಕಲಾಪಗಳ ವ್ಯವಸ್ಥಾಪನಕ್ಕೆ ಆತ ಹೆಚ್ಚು ಗಮನ ನೀಡಿದ್ದಾನೆ. ಯಂತ್ರಗಳು, ಅವುಗಳ ಚಾಲಕರು, ಪದಾರ್ಥೋತ್ಪಾದನೆಯಲ್ಲಿ ನಿರತರಾದ ಕಾರ್ಮಿಕರ ದಕ್ಷತೆ, ವ್ಯವಸ್ಥಾಪಕನ ಹೊಣೆ. ಇವಿಷ್ಟಕ್ಕೆ ಅವನ ಅಧ್ಯಯನ ಸೀಮಿತವಾಗಿದೆ. ವೈಜ್ಞಾನಿಕ ವ್ಯವಸ್ಥಾಪನದ ಅಡಿಗಲ್ಲಾಗಿ ಕಾಲ ಮತ್ತು ಚಲನೆಯ ಅಧ್ಯಯನ ವಿಚಾರವನ್ನು ಆತ ಬೆಳೆಸಿದ್ದಾನೆ. ಆದರೆ ಇಡೀ ಕೈಗಾರಿಕೋದ್ಯಮದ ವ್ಯವಸ್ಥಾಪನ ಹಿಂದೆ ಹೇಳಿದಂತೆ ಇದಕ್ಕಿಂತ ವ್ಯಾಪಕವಾದ್ದು. ಅದು ವಿಜ್ಞಾನ ಮಾತ್ರವಲ್ಲ; ಒಂದು ಕಲೆ ಮತ್ತು ಒಂದು ದರ್ಶನ ಕೂಡ. (ಟಿ.ಎಚ್.ಎನ್.)

**ಕೈಗಾರಿಕಾ ಶಿಲ್ಪ :** ತಯಾರಿಕಾ ಕಾರ್ಯಾಚರಣೆಗಳ ತಾಂತ್ರಿಕ ಅಂಶಗಳನ್ನು ವ್ಯವಸ್ಥೆಗೊಳಿಸುವ ಮತ್ತು ಅಧ್ಯಯಿಸುವ ಕಡೆಗೆ ವಿಶೇಷ ಲಕ್ಷ್ಯ ನೀಡುವ ಶಿಲ್ಪ ವಿಜ್ಞಾನ (ಇಂಡಸ್ಟ್ರಿಯಲ್ ಎಂಜಿನಿಯರಿಂಗ್). ಇದರಲ್ಲಿ ಗಣಿತವಿಜ್ಞಾನ ಮತ್ತು ಭೌತವಿಜ್ಞಾನಗಳನ್ನು ಮಾತ್ರವಲ್ಲದೆ ಸಾಮಾಜಿಕ ವಿಜ್ಞಾನಗಳನ್ನೂ (ಅರ್ಥಶಾಸ್ತ್ರವೂ ಸೇರಿ), ಶಿಲ್ಪವಿಶ್ಲೇಷಣೆ ಮತ್ತು ಸಂಶ್ಲೇಷಣೆಗಳನ್ನೂ ಬಳಸಿಕೊಳ್ಳಲಾಗುತ್ತದೆ. ತಯಾರಿಕಾ ವ್ಯವಸ್ಥೆಗಳನ್ನು ಸರಿಯಾಗಿ ನಿಯೋಜಿಸುವುದು ಮತ್ತು ಅಂಥ ವ್ಯವಸ್ಥೆಗಳಿಂದ ಬರುವ ಫಲವನ್ನು ಪೂರ್ವಭಾವಿಯಾಗಿ ತಿಳಿದು ನಿಯಂತ್ರಿಸಿ, ಮೌಲ್ಯ ಮಾಪನ ಮಾಡುವುದು ಕೈಗಾರಿಕಾಶಿಲ್ಪದ ಕರ್ತವ್ಯಗಳು. ಈ ವಿಜ್ಞಾನದ ಮುಖ್ಯವಾದ ಚಟುವಟಿಕೆಗಳೆಂದರೆ ಚಲನ ಅಧ್ಯಯನ, ಕಾಲದ ಅಧ್ಯಯನ, ಉತ್ಪಾದನಾ ನಿಯೋಜನೆ ಮತ್ತು ನಿಯಂತ್ರಣ ಕಾರ್ಯವಿಧಾನ ವಿಶ್ಲೇಷಣೆ, ವ್ಯವಸ್ಥೆಗಳ ನಿಯೋಜನೆ, ಗುಣನಿಯಂತ್ರಣ, ಕೆಲಸದ ಮೌಲ್ಯಮಾಪನ, ಕೂಲಿ ಪ್ರೋತ್ಸಾಹಗಳು, ಕಾರ್ಯಾಗಾರದ ಜೋಡಣೆ, ಸಂಘಟನಾ ವಿಶ್ಲೇಷಣೆ, ಕಾರ್ಯ ಅಧ್ಯಯನ ಇತ್ಯಾದಿ.

ಒಂದು ಕೈಗಾರಿಕಾ ಸಂಸ್ಥೆಯಲ್ಲಿ ಸಾಮಾನ್ಯವಾಗಿ ಮೂರು ಕಾರ್ಯನಿರ್ವಾಹಕ ಗುಂಪುಗಳಿರುತ್ತವೆ (ಮೆನೇಜೇರಿಯಲ್ ಗ್ರೂಪ್ಸ್):

1. ನಿರ್ವಾಹಕ ಮಂಡಲಿ: ಇದು ಕಾರ್ಯಾಚರಣೆಯ ವಿಭಾಗಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಿರ್ಧಾರಗಳನ್ನು ನೇರವಾಗಿ ಕೈಗೊಳ್ಳುತ್ತದೆ.

2. ಕೈಗಾರಿಕಾ ನಿರ್ಮಾಣ ವಿಜ್ಞಾನಿಗಳು: ಇವರು ತಯಾರಿಕಾ ವಿಧಾನದಲ್ಲಿರುವ ಕೆಲಸವನ್ನು ನಿಯಂತ್ರಿಸಲು ಮತ್ತು ಮೌಲ್ಯಮಾಪನಗಳನ್ನು ಮಾಡಲು ಯೋಜನೆಗಳನ್ನು ರೂಪಿಸುತ್ತಾರೆ. ಅಲ್ಲದೆ ಮುಂದೆ ಮಾಡಬೇಕಾಗಿರುವ ಕೆಲಸದ ಆಲೇಖ್ಯಗಳನ್ನು ವಿಧಿಸುತ್ತಾರೆ.

3. ಕೈಗಾರಿಕಾ ಶಿಲ್ಪದ ತಂತ್ರಜ್ಞರು ಅಥವಾ ಕಾರ್ಯನಿರ್ವಾಹಕ ತಂತ್ರಜ್ಞರು: ಇವರು ಕೈಗಾರಿಕಾಶಿಲ್ಪದ ಯೋಜನೆಗಳಿಗೆ ಆಧಾರವಾದ ಅಂಶಗಳನ್ನು ಸಂಗ್ರಹಿಸುತ್ತಾರೆ. ಕೈಗಾರಿಕಾ ಶಿಲ್ಪದ ತಂತ್ರಕೌಶಲಗಳನ್ನು (ಟೆಕ್ನೀಕ್ಸ್) ಅವುಗಳ ಪ್ರಧಾನ ತಯಾರಿಕಾ

ಕ್ಷೇತ್ರಗಳಲ್ಲಿ ಮಾತ್ರವಲ್ಲದೆ, ಇನ್ನೂ ವಿಶಾಲವಾದ ಕ್ಷೇತ್ರಗಳಲ್ಲಿ, ವೈದ್ಯಕೀಯ ಮತ್ತು ದಂತಚಿಕಿತ್ಸಾ ಕಾರ್ಯಗಳಲ್ಲಿ, ಬೇಸಾಯರಂಗದಲ್ಲಿ ನೌಕಾಯಾನ ಕಾರ್ಯಕ್ರಮದಲ್ಲಿ ಮತ್ತು ಮನೆಕೆಲಸಗಳಲ್ಲಿ ಕೂಡ ಉಪಯೋಗಿಸಲಾಗುತ್ತಿದೆ.

**ಪ್ರಾರಂಭದ ಪ್ರಗತಿ:** ಕೈಗಾರಿಕಾ ಶಿಲ್ಪ ಒಂದು ಸ್ವತಂತ್ರವಾದ ತಂತ್ರ ವಿಜ್ಞಾನವಾಗಿ (ಟೆಕ್ನಾಲಜಿ) 20ನೆಯ ಶತಮಾನದಲ್ಲಿ ಹುಟ್ಟಿಕೊಂಡಿತು. 1930ರ ಹೊತ್ತಿಗೆ ಅದು ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕಾ ದಿನಚರಿಯ ಒಂದು ಆವಶ್ಯಕ ಮತ್ತು ಅವಿಭಾಜ್ಯ ಅಂಗವಾಗಿ ಬಿಟ್ಟಿತ್ತು. ಪಿರಮಿಡ್ಡುಗಳ ನಿರ್ಮಾಣದಲ್ಲಿ ರೋಮನ್ ರಸ್ತೆ ಮತ್ತು ಮೇಲ್ಗಾಲುವೆಗಳ ರಚನೆಗಳಲ್ಲಿ, ಯುದ್ಧ ಮತ್ತು ನೌಕಾಸಮರ ಯೋಜನೆಗಳಲ್ಲಿ ಮತ್ತು ಹೆಚ್ಚು ಮೊತ್ತದ ಗಣಿಕೆಲಸಗಳಲ್ಲಿ ಬಹಳ ಹಿಂದಿನಿಂದಲೂ ಅಗಾಧ ಮೊತ್ತಗಳಲ್ಲಿ ಜನರನ್ನೂ ವಸ್ತುಗಳನ್ನೂ ಉಪಯೋಗಿಸಿದ್ದರೂ 20ನೆಯ ಶತಮಾನದ ಕೈಗಾರಿಕೋದ್ಯಮಗಳಲ್ಲಿ ಬಳಸಲಾಗುತ್ತಿರುವ ಬೃಹತ್ಪರಿಮಾಣದ ಅತ್ಯಂತ ಜಟಿಲವಾದ ಸಲಕರಣೆಗಳ ಮುಂದೆ ಅವೆಲ್ಲ ಕಡಿಮೆಯೇ ಎನ್ನಬಹುದು. ಜೊತೆಗೆ ಹಿಂದಿನಕಾಲದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಒತ್ತಡಗಳು ಕಡಿಮೆಯಿದ್ದು, ಸಾಮುದಾಯಿಕ ಯೋಜನೆಗಳಿಗೆ ಬೇಕಾಗುತ್ತಿದ್ದ ಸಂಘಟನೆ ಈಗಿನಷ್ಟು ಸಂಕೀರ್ಣವಾಗಿರಲಿಲ್ಲ.

ಕೆಲಸಗಾರರು, ವಸ್ತುಗಳು ಮತ್ತು ಉಪಕರಣಗಳ ನಡುವಣ ಸಂಘಟನೆಯನ್ನು ನಿಯೋಜಿಸುವಂಥ ಪರಿಮಾಣಾತ್ಮಕ ಮಾಪನಗಳ ಇಲಾಖೆ (ಡಿಪಾರ್ಟ್‌ಮೆಂಟ್ ಆಫ್ ಕ್ವಾಂಟಿಟೇಟಿವ್ ಮೆಷರ್ಸ್) ಕೈಗಾರಿಕಾಕ್ರಾಂತಿಯೊಂದಿಗೇ ಉದ್ಭವವಾಯಿತೆನ್ನಬಹುದು. ಆಗ ಉಪಯೋಗಿಸುತ್ತಿದ್ದ ಯಂತ್ರಗಳ ಮೇಲಿನ ಬಂಡವಾಳ ಬಹಳ ಜಾಸ್ತಿಯಿರುತ್ತಿದ್ದುದರಿಂದ ಆ ಬಂಡವಾಳವನ್ನು ಆದಷ್ಟು ಎಚ್ಚರಿಕೆಯಿಂದಲೂ ದಕ್ಷತೆಯಿಂದಲೂ ಉಪಯೋಗಿಸುವುದು ಅನಿವಾರ್ಯವಾಗಿತ್ತು. ಒಂದು ಗೊತ್ತಾದ ಕೆಲಸಕ್ಕೆ ಎಷ್ಟು ವ್ಯಕ್ತಿ-ಗಂಟೆಗಳು ಬೇಕಾಗುತ್ತವೆ ಎಂಬುದನ್ನು ನಿರ್ಧರಿಸಲು ಮೊದಲ ಪ್ರಯತ್ನಗಳನ್ನು ನಡೆಸಿದವರೆಂದರೆ ಫ್ರಾನ್ಸಿನ ಜೀನ್ ಪೆರೋನೆ (1760) ಮತ್ತು ಇಂಗ್ಲೆಂಡಿನ ಚಾರಲ್ಸ್ ಬ್ಯಾಬೇಜ್ (1820). ಇಬ್ಬರೂ ಸೂಜಿಗಳ ತಯಾರಿಕೆಯ ಬಗ್ಗೆಯೇ ಅಧ್ಯಯನ ನಡೆಸಿದರು. ಮಾನವ ಅಂಶಕ್ಕೆ ಸಾಕಷ್ಟು ಗಮನವನ್ನು ಕೊಡಬೇಕೆಂಬುದನ್ನು 1813ರಲ್ಲಿ ರಾಬರ್ಟ್ ಓವನ್ ಎಂಬಾತ ಒತ್ತಿ ಹೇಳಿದ. ನಿರ್ಜೀವ ಯಂತ್ರಗಳ ಬಗ್ಗೆ ಎಚ್ಚರವಹಿಸಿದಾಗಲೇ ಅಷ್ಟೊಂದು ಉತ್ತಮ ಫಲಗಳು ಬರುವುದಾದರೆ ಜೀವವಿರುವ ಮಾನವಯಂತ್ರಗಳ ಬಗ್ಗೆ ಸರಿಯಾದ ಗಮನವಿತ್ತರೆ ಇನ್ನೆಷ್ಟು ಉಪಯೋಗಗಳು ಬರುವುದಿಲ್ಲ? ಇವುಗಳ ಬಗ್ಗೆ ನಿಜವಾದ ಜ್ಞಾನವನ್ನು ಪಡೆದು, ಅವುಗಳ ವಿಚಿತ್ರ ಕ್ರಿಯಾವಿನ್ಯಾಸವನ್ನೂ ಸ್ವಯಂ ಅನುಸರಣ ಶಕ್ತಿಗಳನ್ನೂ ತಿಳಿದುಕೊಳ್ಳಬೇಕು.

1900ರ ಅನಂತರದ ಮಾರ್ಪಾಡುಗಳು: ಸಂಯುಕ್ತಸಂಸ್ಥಾನಗಳಲ್ಲಿ 1790ರ ದಶಕದಲ್ಲಿ ಎಲಿ ಹ್ವಿಟ್ನಿ ಮತ್ತು ಸಿಮೀಯನ್ ನಾರ್ತ್ ಎಂಬುವರು ಬಳಕೆಗೆ ತಂದ ಪರಸ್ಪರ ವಿನಿಮಯಾತ್ಮಕ ತಯಾರಿಕೆ ಎಂಬ ವ್ಯವಸ್ಥೆಯಿಂದಾಗಿ ವ್ಯಕ್ತಿಗಳು, ವಸ್ತುಗಳು ಮತ್ತು ಉಪಕರಣಗಳು ಇವನ್ನು ಸಂಘಟಿಸುವಂಥ ವ್ಯವಸ್ಥೆಯನ್ನು ಎಚ್ಚರಿಕೆಯಿಂದ ನಿಯೋಜಿಸುವುದರ ಆವಶ್ಯಕತೆ ಹೆಚ್ಚು ತುರ್ತು ಗಮನವನ್ನು ಪಡೆಯಿತು. ವ್ಯಕ್ತಿಗಳು, ವಸ್ತುಗಳು ಮತ್ತು ಉಪಕರಣಗಳ ಕಾಲಸಂಘಟಿತ ವ್ಯವಸ್ಥೆಯನ್ನು ಸುಸಂಬದ್ಧವಾಗಿ ನಿಯೋಜಿಸುವುದನ್ನು 1903ರಲ್ಲಿ ಫ್ರೆಡೆರಿಕ್ ಡಬ್ಲ್ಯೂ. ಟೇಲರ್ ಪ್ರತಿಪಾದಿಸಿದ. ಟೇಲರ್ ಈ ಕಾರ್ಯವನ್ನು 1881ರಲ್ಲಿ ಪ್ರಾರಂಭಿಸಿದ್ದು. ಫಿಲಡೆಲ್ಫಿಯದ ಮಿಡ್‌ವೇಲ್ ಉಕ್ಕಿನ ಕಾರ್ಖಾನೆಯಲ್ಲಿ ಕಚ್ಚಾವಸ್ತುಗಳನ್ನು ಅಗೆದುಹಾಕುವುದು, ಲೋಹಗಳ ಮೇಲೆ ಯಂತ್ರ ಕಾರ್ಯ ನಡೆಸುವುದು ಮುಂತಾದವಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಆತ ಸುವ್ಯವಸ್ಥಿತ ರೀತಿಯಲ್ಲಿ ಅಳೆದು ನಿಯೋಜಿಸಲಾರಂಭಿಸಿದ. ಅವನ ಕೃತಿಯಿಂದ ಮುಂದೆ ಕಾಲಾಧ್ಯಾಯನವೆಂಬ ವಿಧಾನ ಹುಟ್ಟಿಕೊಂಡಿತು. 1911ರಲ್ಲಿ ಫ್ರ್ಯಾಂಕ್ ಮತ್ತು ಲಿಲಿಯನ್ ಎಂ.ಗಿಲ್‌ಬ್ರೆತ್ ಎಂಬುವರು ಮಾನವಕಾರ್ಯಗಳನ್ನು ನಿಯೋಜಿಸಲು (ಮಾನವ ಸಮಸ್ಯೆಗಳಿಗೆ ಸಾಕಷ್ಟು ಪರಿಗಣನೆಯನ್ನು ನೀಡಿ) ಒಂದು ವಿಧಾನವನ್ನು ಕಂಡುಹಿಡಿದರು. ಇದಕ್ಕೆ ಚಲನಾಧ್ಯಯನವೆಂದು ಹೆಸರು. ಇದು ಕಾರ್ಯ ಸರಳೀಕರಣ ವಿಧಾನಗಳನ್ನು ಉತ್ತಮಪಡಿಸುವಿಕೆ ಮುಂತಾದ ಅನೇಕ ಕೈಗಾರಿಕಾ ಚಟುವಟಿಕೆಗಳಿಗೆ ಮೂಲವಾಯಿತು.

1903-17ರ ಅವಧಿಯಲ್ಲಿ ಕೈಗಾರಿಕಾ ಶಿಲ್ಪದ ಉಪಯೋಗಕ್ಕೆ ವೈಜ್ಞಾನಿಕ ಕಾರ್ಯನಿರ್ವಹಣ (ಸೈಂಟಿಫಿಕ್ ಮ್ಯಾನೇಜ್‌ಮೆಂಟ್) ಎಂಬ ಹೆಸರಿದ್ದಿತು. 1917ರಲ್ಲಿ ಪ್ರಕಟವಾದ ಒಂದು ಪ್ರಕಟಣೆಯ ಪ್ರಕಾರ 1911-15ರ ಅವಧಿಯಲ್ಲಿ ಮೆಯಿನ್ ಮೇರಿಲ್ಯಾಂಡ್ ಮತ್ತು ಇಲಿನಾಯ್‌ಗಳ ನಡುವಣ 12 ರಾಜ್ಯಗಳಲ್ಲಿ ಸುಮಾರು 172 ಕಡೆಗಳಲ್ಲಿ ಕೈಗಾರಿಕಾ ಶಿಲ್ಪದ ತತ್ತ್ವಗಳನ್ನು ಉಪಯೋಗಿಸಲಾಗಿತ್ತು. ಕಾರ್ಖಾನೆಗಳು, ರೈಲುರಸ್ತೆಗಳು, ಉಗಿ ಜಹಜು ಕಂಪನಿಗಳು, ಸಾರ್ವಜನಿಕ ಸೇವಾಸಂಸ್ಥೆಗಳು, ಆಡಳಿತ ಸಂಗ್ರಹಗೃಹಗಳು(ಡಿಪಾರ್ಟ್‌ಮೆಂಟಲ್ ಸ್ಟೋರ್ಸ್), ಬ್ಯಾಂಕುಗಳು, ಪ್ರಕಟಣನಿಲಯಗಳು, ಗೃಹನಿರ್ಮಾಣ ಕಂಪನಿಗಳು ಮುಂತಾದವೆಲ್ಲ ಇವುಗಳಲ್ಲಿ ಮುಖ್ಯವಾದವು.

ಕೈಗಾರಿಕಾ ಶಿಲ್ಪ 1910-30ರ ಅವಧಿಯಲ್ಲಿ ಗ್ರೇಟ್ ಬ್ರಿಟನ್ ಮತ್ತು ಸಂಯುಕ್ತ ಸಂಸ್ಥಾನಗಳಲ್ಲಿ ತನ್ನ ಪ್ರಮುಖವಾದ ಪ್ರಗತಿಯನ್ನು ಸಾಧಿಸಿತ್ತು. 1908ರಲ್ಲಿ ಪೆನ್ಸಿಲ್ವೇನಿಯ ರಾಜ್ಯದ ಕಾಲೇಜಿನಲ್ಲಿ ಹ್ಯೂಗೋ ಡೀಮರ್ ಎಂಬಾತನ ನಿರ್ದೇಶನದಲ್ಲಿ ಕೈಗಾರಿಕಾಶಿಲ್ಪವನ್ನು ಕುರಿತು ವಿಶ್ವವಿದ್ಯಾಲಯದ ಎರಡು ವರ್ಷಗಳ ಮೊತ್ತಮೊದಲ ಪಠ್ಯಕ್ರಮ ಪ್ರಾರಂಭವಾಯಿತು. 1960ರ ದಶಕದ ಮೊತ್ತಮೊದಲು ಸಂಯುಕ್ತ ಸಂಸ್ಥಾನಗಳ ಸುಮಾರು 33 ವಿಶ್ವವಿದ್ಯಾಲಯಗಳು ಕೈಗಾರಿಕಾಶಿಲ್ಪದಲ್ಲಿ ಸ್ನಾತಕಪೂರ್ವ ಪದವಿಗಳಿಗೆ ತರಬೇತಿ ನೀಡುತ್ತಿದ್ದುವು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಕಾರ್ಯನಿರ್ವಾಹಕ ಸಮಸ್ಯೆಗಳ ಗಣಿತೀಯ ಮಾದರಿಗಳನ್ನು ರಚಿಸುವ ವಿಧಾನಗಳನ್ನು ತರಲಾಯಿತು. ಇವಕ್ಕೆ ಪರಿಕರ್ಮಗಳ ಸಂಶೋಧನೆ (ಆಪರೇಶನ್ಸ್ ರಿಸರ್ಚ್) ಎಂಬ ಹೆಸರು ಬಂದಿತು. ಇದರಿಂದಾಗಿ ಕೈಗಾರಿಕಾ ಶಿಲ್ಪದ ಚಟುವಟಿಕೆಗಳಿಗೆ ಬಹಳ ಅನುಕೂಲವಾಗಿ, ವ್ಯವಸ್ಥೆಗಳ ನಿಯೋಜನೆ ಮತ್ತು ಅವು ಹೇಗೆ ನಡೆಯುತ್ತವೆ ಎಂಬುದನ್ನು ಪೂರ್ವಭಾವಿಯಾಗಿ ಅರಿಯುವುದು ಮುಂತಾದವು ನಿಖರವಾಗಿ ಜರುಗಲು ಸಾಧ್ಯವಾಯಿತು. ಹಾಲಿ ಸಂಪ್ರದಾಯದಲ್ಲಿ ಕೈಗಾರಿಕಾ ಶಿಲ್ಪಕ್ಕೆ ಒಂದು ಉತ್ಪನ್ನದ ನಿಯೋಜನೆಯಿಂದ ಹಿಡಿದು ಅದು ಬಳಕೆದಾರನ ಕೈ ಸೇರುವ ತನಕ ಕೈತುಂಬ ಕೆಲಸವಿರುತ್ತದೆ: ಪ್ರಕ್ರಿಯೆಗಳ ಯೋಜನೆ, ಸಲಕರಣೆಗಳ ಸಮರ್ಪಕ ಜೋಡಣೆ, ಕೆಲಸದ ಸಮರ್ಥ ವಿತರಣೆ, ಕೆಲಸಗಾರರಿಗೆ ತರಬೇತಿ, ಗುಣನಿಯಂತ್ರಣ ಇತ್ಯಾದಿ. ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ಕುರಿತಂತೆ ಅಧ್ಯಯನ, ಸಂಶೋಧನೆ, ತರಪೇತು ಇವುಗಳನ್ನು ವೈಜ್ಞಾನಿಕವಾಗಿ ನಡೆಸಲು ಮುಂಬಯಿಯಲ್ಲಿ ಸ್ಥಾಪಿತವಾಗಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಎಂಜಿನಿಯರಿಂಗ್ (IIIE) ಸಂಸ್ಥೆ ಶ್ರಮಿಸುತ್ತಿದೆ. ದೇಶದ ವಿವಿಧ ಭಾಗಗಳಲ್ಲಿ ಇದರ ಅಂಗ ಕಛೇರಿಗಳು ಇವೆ. (ಎನ್.ಎಸ್.ಎಂ.)

**ಕೈಗಾರಿಕಾ ಶುಷ್ಕೀಕರಣ :** ನೀರು ಅಥವಾ ಇತರ ಲೀನಕಾರಿಗಳನ್ನೊಳಗೊಂಡ ಆರ್ದ್ರ ಘನವಸ್ತುಗಳಲ್ಲಿಯ ಆರ್ದ್ರತೆಯನ್ನು ಕೈಗಾರಿಕಾ ಗಾತ್ರದಲ್ಲಿ ನಿವಾರಿಸುವ ಕ್ರಿಯೆ (ಇಂಡಸ್ಟ್ರಿಯಲ್ ಡ್ರೈಯಿಂಗ್). ಅನಿಲಗಳಲ್ಲಿರುವ ಜಲಾಂಶ ಅಥವಾ ಇತರ ಬಗೆಯ ಆರ್ದ್ರತೆಗಳ ನಿವಾರಣೆಯನ್ನು ಸಹ ಈ ಶೀರ್ಷಿಕೆಯಲ್ಲಿ ಸೇರಿಸಬಹುದು. ಆದರೆ ದ್ರವಗಳಲ್ಲಿಯ ಜಲಾಂಶ ನಿವಾರಣೆ ಕೈಗಾರಿಕಾ ಶುಷ್ಕೀಕರಣದ ಅಧ್ಯಾಯಕ್ಕೆ ಸೇರದು. ಆರ್ದ್ರತೆಯನ್ನು ನಿವಾರಿಸಿದಾಗ ವಸ್ತುವಿನಲ್ಲಿ ರಾಸಾಯನಿಕ ಬದಲಾವಣೆಗಳುಂಟಾದರೆ ಇಂಥ ಕ್ರಿಯೆ ಶುಷ್ಕೀಕರಣ ಕ್ರಿಯೆಯಲ್ಲ; ಅದರ ಹೆಸರು ನಿರ್ಜಲೀಕರಣ (ಡೀ ಹೈಡ್ರೇಷನ್).

**ಘನವಸ್ತುಗಳ ಶುಷ್ಕೀಕರಣ:** ಶುಷ್ಕೀಕರಣಕ್ಕೆ ಒಳಗಾಗುವ ವಸ್ತುಗಳು ಪುಡಿ, ಹೆಂಟೆ, ಕದಡುಮಿಶ್ರಣ, ತೆಳುಮಿಶ್ರಣ ಅಥವಾ ಹಿರಿಯಗಾತ್ರದ ಘನರೂಪಗಳು, ಹಾಳೆಗಳು ಎಳೆಗಳು ಮೊದಲಾದ ಅನೇಕ ಬಗೆಯ ಭೌತ ರೂಪಗಳನ್ನು ಪಡೆದಿರಬಹುದು. ಶುಷ್ಕೀಕರಣ ವಿಧಾನ ಮತ್ತು ಉಪಕರಣಗಳ ರಚನೆಗಳು ವಸ್ತುಗಳ ಭೌತರೂಪ, ಅವುಗಳಲ್ಲಿಯ ಆರ್ದ್ರತೆಯ ಮಟ್ಟ, ನಿರೀಕ್ಷಿಸುವ ಶುಷ್ಕೀಕರಣದ ಮಟ್ಟ, ಶುಷ್ಕೀಕರಣಕ್ಕೆ ಒಳಗಾದಾಗ ವಸ್ತುವಿನಲ್ಲಿ ಆಗಬಹುದಾದ ಬದಲಾವಣೆಗಳು ಮೊದಲಾದ ಹಲವು ಅಂಶಗಳನ್ನು ಅವಲಂಬಿಸಿರುತ್ತವೆ.

ಘನವಸ್ತುಗಳ ಕೈಗಾರಿಕಾ ಶುಷ್ಕೀಕರಣದಲ್ಲಿ ಸಾಮಾನ್ಯವಾಗಿ ಉಷ್ಣವನ್ನು ಬಳಸಲಾಗುತ್ತದೆ. ಉಷ್ಣ ವರ್ಗಾವಣೆ ಶುಷ್ಕೀಕರಣ ಉಪಕರಣದ ರಚನೆಗೆ ಅನುಗುಣವಾಗಿ ಬಿಸಿವಸ್ತುಗಳ ಸಂಪರ್ಕದಿಂದ ಆಗುವ ವಹನದಿಂದಾಗಲಿ(ಕಂಡಕ್ಷನ್) ಕಣಗಳ ನಯನದ(ಕನ್ವೆಕ್ಷನ್) ಮೂಲಕವಾಗಿ ಆಗಲಿ ಪ್ರಸರಣದಿಂದಾಗಲಿ(ರೇಡಿಯೇಷನ್) ಆಗಿ ಶುಷ್ಕೀಕರಣಕ್ಕೊಳಗಾಗಿರುವ ವಸ್ತು ಉಷ್ಣವನ್ನು ಪಡೆಯುತ್ತದೆ. ಹಲವು ವಿಶಿಷ್ಟ ಸಂದರ್ಭಗಳಲ್ಲಿ ಉಷ್ಣಪೂರೈಕೆಯಿಲ್ಲದೆ ಶುಷ್ಕೀಕರಣ ಅಗತ್ಯ ಮತ್ತು ಸಾಧ್ಯ.

ಶುಷ್ಕೀಕರಣದ ಪೂರ್ಣ ಜ್ಞಾನವನ್ನು ಪಡೆಯಲು ಘನವಸ್ತುಗಳಲ್ಲಿ ದ್ರವ ವಸ್ತುವಿನ ಕಣಗಳ ಅಥವಾ ಅಣುಗಳ ಸಂಚಲನೆ ಹೇಗೆ ನಡೆಯುವುದೆಂಬುದನ್ನು ತಿಳಿಯುವುದು ಅಗತ್ಯ. ಆದರೆ ಈ ಬಗೆಯ ದ್ರವಸಂಚಲನೆ ಘನವಸ್ತುವಿನ ಒಳಗಿನ ವಿವಿಧ ಎಡೆಗಳಲ್ಲಿರುವ ಒತ್ತಡದ ವ್ಯತ್ಯಾಸಗಳು, ಕೇಶಿಕಾತ್ವ(ಕ್ಯಾಪಿಲ್ಲಾರಿಟಿ), ಉಷ್ಣ ಪ್ರಯೋಗದಿಂದಾಗುವ ಸಂಕೋಚನ ಮತ್ತು ಇತರ ಬದಲಾವಣೆಗಳು, ಸೂಕ್ಷ್ಮಾಭಿಸರಣ(ಆಸ್ಮಾಸಿಸ್), ವಿಸರಣ (ಡಿಫ್ಯೂಷನ್) ಮೊದಲಾದ ಹಲವಾರು ಅಂಶಗಳನ್ನು ಅವಲಂಬಿಸಿದ ಸಂಕೀರ್ಣಕ್ರಿಯೆಯಾದುದರಿಂದ ಶುಷ್ಕೀಕರಣದ ಪೂರ್ಣಜ್ಞಾನ ನಮಗಿನ್ನೂ ಲಭ್ಯವಾಗಿಲ್ಲ. ಆದರೂ ಆರ್ದ್ರವಸ್ತುವಿನ ಮೇಲ್ಭಾಗದಲ್ಲಿ ಚಲಿಸುವ ಗಾಳಿಯ ವೇಗ, ವಾತಾವರಣದಲ್ಲಿಯ ಆರ್ದ್ರತೆ(ಹ್ಯುಮಿಡಿಟಿ), ಉಷ್ಣತೆ, ಶುಷ್ಕೀಕರಣಕ್ಕೊಳಗಾಗಿರುವ ವಸ್ತುವಿನ ಭೌತರೂಪ ಮೊದಲಾದವು ಶುಷ್ಕೀಕರಣದ ಮೇಲೆ ಬೀರುವ ಪ್ರಭಾವಗಳನ್ನು ಸಾಕಷ್ಟು ಅಧ್ಯಯನ ಮಾಡಿ ಉತ್ತಮ ಮತ್ತು ಶೀಘ್ರ ಶುಷ್ಕೀಕರಣವನ್ನು ಸಾಧಿಸಲು ಆವಶ್ಯಕವಾದ ಅಂಶಗಳನ್ನು ಯುಕ್ತರೀತಿಯಲ್ಲಿ ಬದಲಾವಣೆ ಮಾಡಲಾಗುತ್ತಿದೆ.

ಶುಷ್ಕೀಕರಣಕ್ಕೆ ಉಪಯೋಗಿಸುವ ಉಪಕರಣಗಳನ್ನು ಸ್ಥೂಲವಾಗಿ ಮೂರು ಬಗೆಗಳಾಗಿ ವಿಂಗಡಿಸಬಹುದು: 1 ಸರಳ ಉಪಕರಣ (ಡೈರೆಕ್ಟ್ ಡ್ರೈಯರ್) ಅಥವಾ ನಯನ ಬಗೆಯ (ಕನ್ವೆಷನ್ ಟೈಪ್) ಉಪಕರಣಗಳು. 2 ಪರೋಕ್ಷ ಅಥವಾ ಸಂಪರ್ಕವಹನ ಬಗೆಯ (ಕಂಡಕ್ಷನ್ ಟೈಪ್) ಉಪಕರಣಗಳು. 3 ಅತಿನೇರಳೆ (ಇನ್ಫ್ರಾರೆಡ್) ಅಥವಾ ಕಿರಣಪ್ರಸರಣಬಗೆಯ (ರೇಡಿಯೆಂಟ್) ಉಪಕರಣಗಳು.

**ಸರಳ ಶುಷ್ಕೀಕರಣ ಉಪಕರಣಗಳು:** ಈ ಬಗೆಯ ಉಪಕರಣಗಳಲ್ಲಿ ಆರ್ದ್ರ ಘನ ವಸ್ತುವಿಗೆ ಪ್ರವಹಿಸುವ ಬಿಸಿ ಅನಿಲಗಳೊಡನೆ ನೇರ ಸಂಪರ್ಕವಿದೆ. ಅಲ್ಲಿ ಆರ್ದ್ರತೆಗೆ ಕಾರಣವಾದ ದ್ರವ ಅನಿಲರೂಪಕ್ಕೆ ಮಾರ್ಪಟ್ಟು ಪ್ರವಹಿಸುತ್ತಿರುವ ಬಿಸಿ ಅನಿಲಗಳೊಡನೆ ನಿಷ್ಕ್ರಮಿಸುತ್ತದೆ. ಆಗ ಆರ್ದ್ರತೆ ನಿವಾರಣೆಯಾಗುತ್ತದೆ. ಬಿಸಿಗಾಳಿ, ಸಾರಜನಕ, ಅತಿಬಿಸಿಯಾದ ನೀರಿನ ಆವಿ ದಹನಾನಿಲಗಳನ್ನು ಪ್ರವಾಹ ಅನಿಲಗಳಾಗಿ ಉಪಯೋಗಿಸಲಾಗುತ್ತದೆ. ಈ ಅನಿಲಗಳ ಉಷ್ಣತೆ ಸಂದರ್ಭಕ್ಕೆ ಅನುಗುಣವಾಗಿ ವಾತಾವರಣದ ಉಷ್ಣತೆಯಿಂದ ಮೊದಲುಗೊಂಡು 750$^{\circ}$ ಸೆಂ. ವರೆಗೂ ಇರಬಹುದು. ಈ ಬಗೆಯ ಉಪಕರಣಗಳಲ್ಲಿ ಎರಡು ಮುಖ್ಯ ವಿಭಾಗಗಳಿವೆ. ಮೊದಲನೆಯ ಬಗೆಯಾದ ಅವಿಚ್ಛಿನ್ನರೀತಿಯ ಉಪಕರಣಗಳಲ್ಲಿ ಘನವಸ್ತು ಚಲಿಸುವ ಲೋಹದ ತಟ್ಟೆ, ಹಾಳೆ ಅಥವಾ ಜಾಲರಿಗಳ ಮೇಲೆ ಇರುವಾಗ ಬಿಸಿ ಅನಿಲಗಳು ವಿರುದ್ಧ ದಿಕ್ಕಿನಲ್ಲಿ ಪ್ರವಹಿಸುತ್ತಿದ್ದು ಅವಿಚ್ಛಿನ್ನ ಶುಷ್ಕೀಕರಣ ಏಕವೇಗದಲ್ಲಿ ಏಕರೀತಿಯಾಗಿ ನಡೆಯುತ್ತದೆ. ಎರಡನೆಯದಾದ ಪಂಗಡ ರೀತಿಯ (ಬ್ಯಾಚ್ ಟೈಪ್) ಉಪಕರಣಗಳಲ್ಲಿ ಆರ್ದ್ರ ವಸ್ತುವನ್ನುಳ್ಳ ತಟ್ಟೆಗಳು ಚಲಿಸದೆ ಕೇವಲ ಬಿಸಿ ಅನಿಲಗಳ ಪ್ರವಾಹ ಮಾತ್ರವಿದ್ದು ಒಂದು ಪಂಗಡದ ಘನವಸ್ತು ಶುಷ್ಕವಾದ ಅನಂತರ ಅದನ್ನು ಹೊರತೆಗೆದು ಮತ್ತೊಂದು ಪಂಗಡದ ಘನವಸ್ತು ಶುಷ್ಕವಾದ ಅನಂತರ ಅದನ್ನು ಹೊರತೆಗೆದು ಮತ್ತೊಂದು ಪಂಗಡದ ಆರ್ದ್ರವಸ್ತುವನ್ನು ತಟ್ಟೆಗಳಿಗೆ ತುಂಬಲಾಗುತ್ತದೆ.

**ಪರೋಕ್ಷ ಶುಷ್ಕೀಕರಣ ಉಪಕರಣಗಳು:** ಈ ಬಗೆಯ ಉಪಕರಣಗಳಲ್ಲಿ ಅನಿಲ ಪ್ರವಾಹದ ಬದಲು ಉಷ್ಣದ ಪೂರೈಕೆ ಬೇರೊಂದು ರೀತಿಯಲ್ಲಿ ಆಗುತ್ತದೆ. ಆರ್ದ್ರ ವಸ್ತುವನ್ನು ಬಿಸಿಯಾದ ಲೋಹದ ಹಾಳೆಗಳ ಮೇಲೆ ಹರಡಿದಾಗ ಆರ್ದ್ರತೆಗೆ ಕಾರಣವಾದ ದ್ರವವಸ್ತು ಅನಿಲವಾಗಿ ಮಾರ್ಪಟ್ಟು ಘನವಸ್ತುವಿನಿಂದ ಬೇರಾಗುತ್ತದೆ. ಬಿಸಿ ಹಾಳೆಗೂ ಆರ್ದ್ರ ವಸ್ತುವಿಗೂ ಇರುವ ಸಂಪರ್ಕ ಈ ಉಪಕರಣಗಳಲ್ಲಿ ಬಹು ಮುಖ್ಯ ಅಂಶ. ಈ ಬಗೆಯ ಶುಷ್ಕೀಕರಣ ಉಪಕರಣಗಳಲ್ಲಿಯೂ ಅವಿಚ್ಛಿನ್ನ ರೀತಿಯವು ಮತ್ತು ಪಂಗಡ ರೀತಿಯವೆಂಬ ಎರಡು ಬಗೆಗಳಿವೆ. ಕಾಗದ, ಬಟ್ಟೆ ಮೊದಲಾದವುಗಳನ್ನು ಲೋಹದ ಹಾಳೆಗಳ ಬದಲು ಬಿಸಿ ಸಿಲಿಂಡರುಗಳ ಮೇಲೆ ಹಾಯಿಸಿ ಆರ್ದ್ರತೆಯನ್ನು ನಿವಾರಿಸುವಾಗ ಅದು ಅವಿಚ್ಛಿನ್ನ ಶುಷ್ಕೀಕರಣವಾಗುತ್ತದೆ. ಪಂಗಡರೀತಿಯ ಆರ್ದ್ರವಸ್ತುಗಳನ್ನು ಕಂಪನಕ್ಕೆ ಒಳಪಡಿಸಿ ಶುಷ್ಕೀಕರಣ ವೇಗವಾಗಿ ಆಗುವಂತೆ ಮಾಡಲಾಗುತ್ತದೆ. ಉಷ್ಣದ ಪೂರೈಕೆಯನ್ನು ನೇರವಾದ ಉರಿ, ನೀರಿನ ಆವಿ, ಬಿಸಿ ಅನಿಲಗಳು, ವಿದ್ಯುತ್ತು ಮೊದಲಾದ ಯಾವರೀತಿಯಿಂದಲಾದರೂ ಮಾಡಬಹುದು. ಆರ್ದ್ರತೆಯನ್ನು ಬೇಗ ನಿವಾರಿಸಲು ಸಾಮಾನ್ಯವಾಗಿ ನಿರ್ವಾತ ಪಂಪ್ (ವ್ಯಾಕ್ಯೂಂ ಪಂಪ್) ಒಂದರೊಡನೆ ಸಂಪರ್ಕವೇರ್ಪಡಿಸಿ ಆರ್ದ್ರತಾ ದ್ರವವನ್ನು ಅನಿಲರೂಪದಲ್ಲಿ ಹೊರಸೆಳೆಯಲಾಗುತ್ತದೆ. ಆರ್ದ್ರತಾ ದ್ರವವನ್ನು ಪುನಃ ಶೇಖರಿಸಲು ಸಹ ಅವಕಾಶವಿದೆ. ನಿರ್ವಾತಪಂಪನ್ನು ಉಪಯೋಗಿಸುವುದರಿಂದ ಯಾವ ಉಷ್ಣತೆಯಲ್ಲಿ ಬೇಕಾದರೂ ಶುಷ್ಕೀಕರಣವನ್ನು ಮಾಡುವುದು ಸಾಧ್ಯ. ಹಲವು ಪ್ರತ್ಯೇಕ ಸಂದರ್ಭಗಳಲ್ಲಿ 0$^{\circ}$ ಸೆಂ.ಗಿಂತಲೂ ಕಡಿಮೆಯ ಉಷ್ಣತೆಯಲ್ಲಿಯೂ ಶುಷ್ಕೀಕರಣವನ್ನು ಮಾಡಲಾಗುತ್ತದೆ.

ಕಿರಣಪ್ರಸರಣ ಉಪಕರಣಗಳು: ಉಷ್ಣಕಿರಣಗಳನ್ನು ಹೊರಸೂಸುವ ದೀಪಗಳು ಅಥವಾ ಕಿರಣ ಸೂಸಬಲ್ಲ ಬಿಸಿಮಾಡಿದ ವಸ್ತುಗಳನ್ನು ಉಷ್ಣದ ಆಕರವಾಗಿ ಬಳಸುವ ಈ ಬಗೆಯ ಉಪಕರಣಗಳು ಹೆಚ್ಚು ಉಪಯೋಗದಲ್ಲಿಲ್ಲ. ಇಂಥ ಕಿರಣಗಳನ್ನು ಆರ್ದ್ರವಸ್ತು ಎಷ್ಟರಮಟ್ಟಿಗೆ ಹೀರಬಲ್ಲುದು ಎಂಬ ಅಂಶ ಈ ಬಗೆಯ ಶುಷ್ಕೀಕರಣದಲ್ಲಿ ಬಹುಮುಖ್ಯ. ಕಿರಣ ಅಥವಾ ಪ್ರಸರಣ ಮೂಲ ಮತ್ತು ಇದರಿಂದ ವಸ್ತುವಿಗೆ ಇರುವ ದೂರವನ್ನು ಅವಲಂಬಿಸಿದೆ. ಈ ಉಪಕರಣಗಳಲ್ಲಿ ಆರ್ದ್ರವಸ್ತು ಕಿರಣಮೂಲಗಳ ಎದುರಿನಲ್ಲಿ ಚಲಿಸುತ್ತ ತನ್ನ ಆರ್ದ್ರತೆಯನ್ನು ಕಳೆದುಕೊಳ್ಳುತ್ತದೆ.

**ಅನಿಲಗಳ ಶುಷ್ಕೀಕರಣ:** ಹಲವಾರು ಬಗೆಯ ಉಪಯೋಗಗಳಿಗಾಗಿ ಅನಾರ್ದ್ರ ಅನಿಲಗಳ ಅಗತ್ಯವಿದೆ. ಅನಿಲಗಳನ್ನು ಅನಾರ್ದ್ರಗೊಳಿಸಲು ಆರ್ದ್ರತಾದ್ರವವನ್ನು ಹೀರಬಲ್ಲ ಶೋಷಕವಸ್ತುಗಳನ್ನು ಬಳಸಲಾಗುತ್ತದೆ. ಅನಿಲಗಳನ್ನು ಶೋಷಕವಸ್ತುಗಳನ್ನುಳ್ಳ ಕೊಳವೆ ಅಥವಾ ಗೋಪುರಾಕಾರದ ಉಪಕರಣಗಳ ಮೂಲಕ ಹಾಯಿಸಿದಾಗ ಆರ್ದ್ರತಾದ್ರವ ಶೋಷಕಗಳೊಡನೆ ಉಳಿದು ಅನಾರ್ದ್ರ ಅನಿಲಗಳು ಹೊರ ಬರುತ್ತವೆ. ಉಷ್ಣತೆಯನ್ನು ಕೆಳಕ್ಕಿಳಿಸಿ ಆರ್ದ್ರತಾ ದ್ರವವನ್ನು ಘನೀಭವಿಸುವಂತೆ ಮಾಡಿ ಬೇರ್ಪಡಿಸುವುದೂ ಅನಿಲ ಶುಷ್ಕೀಕರಣದ ಒಂದು ವಿಧಾನ. (ಕೆ.ಟಿ.ಎಸ್.)

**ಕೈಗಾರಿಕಾ ಸಂಬಂಧಗಳು :** ಕೈಗಾರಿಕೆಗಳ ಮಾಲೀಕರ ಸಂಘಗಳಿಗೂ ಕಾರ್ಮಿಕ ಸಂಘಗಳಿಗೂ ನಡುವಣ ಸಂಬಂಧಗಳು (ಇಂಡಸ್ಟ್ರಿಯಲ್ ರಿಲೇಷನ್ಸ್).

ಭಾರತದಂಥ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಶೀಘ್ರ ಮತ್ತು ಸಮತೂಕದ ಕೈಗಾರಿಕಾಕರಣಕ್ಕೆ ಪ್ರಾಮುಖ್ಯ ಇರುವುದರಿಂದ, ಕೈಗಾರಿಕಾ ಸಂಬಂಧಗಳು ಕೇವಲ ಎರಡು ಪಕ್ಷಗಳಿಗೆ, ಅಂದರೆ ಒಡೆಯರಿಗೆ ಮತ್ತು ಕೆಲಸಗಾರರಿಗೆ ಸೀಮಿತವಾಗಿಲ್ಲ. ಆಗಾಗ ಕೆಲಸಗಾರರು ಕಾರ್ಮಿಕ ಸಂಘಗಳನ್ನು ಕಟ್ಟಿ ಅವುಗಳ ಮೂಲಕ ಒಡೆಯರೊಡನೆ ತಮ್ಮ ಹಕ್ಕುಗಳಿಗೆ ಹೋರಾಡುವುದಲ್ಲದೆ ಸರ್ಕಾರ ಕೂಡ ಕಾರ್ಮಿಕ ಕಾನೂನು ಮತ್ತು ಕಾರ್ಮಿಕ ಆಡಳಿತಗಳ ಮೂಲಕ ಕೈಗಾರಿಕಾ ಸಂಬಂಧಗಳಲ್ಲಿ ನೇರವಾಗಿ ಪ್ರವೇಶಿಸುತ್ತದೆ. ಇದೂ ಅಲ್ಲದೆ ಸರ್ಕಾರ ಸಾರ್ವಜನಿಕ ಕ್ಷೇತ್ರದಲ್ಲಿ ತಾನೇ ಮಾಲೀಕನಾಗಿದ್ದು ಕೈಗಾರಿಕಾ ಸಂಬಂಧಗಳಲ್ಲಿ ಇಬ್ಬಗೆಯ ಪಾತ್ರ ವಹಿಸುತ್ತದೆ.

ಹೀಗಾಗಿ ಕೈಗಾರಿಕಾ ಸಂಬಂಧಗಳಲ್ಲಿ ಸರ್ಕಾರ, ಒಡೆಯರು, ಕಾರ್ಮಿಕರು ಮತ್ತು ಕಾರ್ಮಿಕ ಸಂಘಗಳು–ಈ ನಾಲ್ಕು ಮುಖಗಳನ್ನು ನೋಡಬಹುದು. ಅಂತಾರಾಷ್ಟ್ರೀಯ ಕಾರ್ಮಿಕ ಸಂಘ (ಐ.ಎಲ್.ಒ.) ಕೈಗಾರಿಕಾ ಸಂಬಂಧಗಳನ್ನು 'ರಾಜ್ಯದ, ಒಡೆಯರ ಮತ್ತು ಕಾರ್ಮಿಕರ ಸಂಘಗಳ ನಡುವಿನ ಸಂಬಂಧಗಳು' ಎಂದು ವಿವರಿಸುವುದು ಈ ಕ್ಷೇತ್ರದ ವ್ಯಾಪ್ತಿಯನ್ನು ತಿಳಿಸುತ್ತದೆ.

ಈ ವಿಶಾಲದೃಷ್ಟಿಯಿಂದ ನೋಡಿದಾಗ, ಕೈಗಾರಿಕಾ ಸಂಬಂಧಗಳು ಇಡೀ ಕಾರ್ಮಿಕ ಕ್ಷೇತ್ರದ ಎಲ್ಲ ಸಮಸ್ಯೆಗಳಿಗೂ ಪರ್ಯಾಯಪದವಾಗಿದ್ದು ಈ ಮುಂದೆ ನೀಡಿರುವ ವಿಷಯಗಳನ್ನು ಒಳಗೊಂಡಿವೆ: ರಾಜ್ಯದ ಕಾರ್ಮಿಕ ನೀತಿ, ಕಾರ್ಮಿಕ ಕಾನೂನು ರಚನೆ ಮತ್ತು ಜಾರಿ, ಕಾರ್ಮಿಕ ನ್ಯಾಯಾಂಗ, ಅದರ ಆಯ್ಕೆ ಮತ್ತು ಶಿಕ್ಷಣ, ಸ್ಥಾಯೀನಿಯಮಗಳು, ಗೈರುಹಾಜರಿ ಮತ್ತು ಕಾರ್ಮಿಕರ ಪ್ರತಿಸ್ಥಾಪನ, ಅವರ ಕಾರ್ಯದ ಷರತ್ತುಗಳು, ಸಾಮಾಜಿಕ ಅನುಕೂಲತೆಗಳು ಮತ್ತು ರಕ್ಷಣೆ, ಆಡಳಿತ ನಿರ್ವಹಣದ ರೀತಿನೀತಿಗಳು, ವೇತನದ ಸಮಸ್ಯೆಗಳು, ದುಡಿಮೆಗೆ ನೀಡುವ ಪ್ರೋತ್ಸಾಹ, ಕಾರ್ಮಿಕ ಮಾಲೀಕರಲ್ಲಿ ವಿಚಾರವಿನಿಮಯದ ಏರ್ಪಾಡು, ಆಡಳಿತ ಮತ್ತು ಕಾರ್ಮಿಕ ವರ್ಗಗಳ ಸಹಸಂಬಂಧ, ಸಾಮೂಹಿಕ ಕರಾರುಗಳು ಮತ್ತು ಒಪ್ಪಂದಗಳು, ವಿವಾದಗಳ ತಡೆ ಮತ್ತು ತೀರ್ಮಾನ; ಮುಷ್ಕರಗಳು ಮತ್ತು ಬೀಗಮುದ್ರೆ (ಲಾಕ್ ಔಟ್), ಸಂಕಟ ನಿವಾರಣಾ ಕ್ರಮ, ಕಾರ್ಮಿಕ ಸಂಘಗಳ ಬಗ್ಗೆ ಆಡಳಿತ ವರ್ಗದವರ ಮನೋವೃತ್ತಿ, ಕಾರ್ಮಿಕ ಸಂಘಗಳು, ಕಾರ್ಯಮಂಡಲಿಗಳು ಮತ್ತು ಆಡಳಿತಾಧಿಕಾರಿಗಳ ನಡುವಿನ ಸಂಬಂಧ–ಇತ್ಯಾದಿ.

ಇದೂ ಅಲ್ಲದೆ, ಈ ನಾಲ್ಕು ಪಕ್ಷಗಳಿಂದ ಹುಟ್ಟದಿದ್ದರೂ ಕೈಗಾರಿಕಾ ಸಂಬಂಧಗಳ ಮೇಲೆ ನೇರವಾಗಿ ಪ್ರಭಾವ ಬೀರುವ ವಿಷಯಗಳೆಂದರೆ ಕಾರ್ಮಿಕ ವರ್ಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಟ್ಟಗಳು; ನಗರ ಜೀವನಕ್ಕೆ ಮತ್ತು ಕೆಲಸಕ್ಕೆ ಅವರ ಹೊಂದಾಣಿಕೆ; ಅವರ ಆರೋಗ್ಯ ಮತ್ತು ಶಿಕ್ಷಣ ಮಟ್ಟಗಳು; ಅವರ ನಿರೀಕ್ಷೆಗಳು, ಗುರಿಗಳು ಮತ್ತು ಸಾಮಾಜಿಕ ಚಲನೆ.

**ಪರಸ್ಪರ ಹೊಂದಿಕೆ ವಿಧಾನ:** ಈ ಎಲ್ಲ ಸಮಸ್ಯೆಗಳನ್ನೂ ಕೇವಲ ಒಂದೇ ಬಗೆಯಾಗಿ ನಿಯಮದ ಸಹಾಯದಿಂದ ಪರಿಹರಿಸಲಾಗುವುದಿಲ್ಲ; ವಿವಿಧ ನಿಯಮಗಳನ್ನೊಳಗೊಂಡ ಸಮಗ್ರ ಪರಿಶೀಲನೆ ಇಲ್ಲಿ ಆವಶ್ಯಕ. ಕೈಗಾರಿಕಾ ವಿವಾದವೊಂದರ ಕಾರಣಗಳು ಆರ್ಥಿಕ, ಸಾಮಾಜಿಕ, ಮಾನಸಿಕ ಅಥವಾ ರಾಜಕೀಯವಿರಬಹುದು. ಬೇಡಿಕೆಗಳು ಕಾರ್ಮಿಕರ ಹೆಚ್ಚಿನ ಗಳಿಕೆ, ಹೆಚ್ಚಿನ ಸ್ಥಾನಮಾನ, ಒಪ್ಪಿಗೆ, ರಾಜಕೀಯ ವಿರೋಧಗಳಿಗೆ ಸಂಬಂಧಿಸಿರಬಹುದು. ಕೈಗಾರಿಕಾ ಸಂಬಂಧಗಳು ನಾನಾ ಕ್ಷೇತ್ರಗಳ ರೀತಿನಿಯಮಗಳನ್ನೊಳಗೊಂಡಿರುತ್ತವೆ. ಯಜಮಾನ, ಕಾರ್ಮಿಕ ಅಥವಾ ನೌಕರ ಇವರ ಸಂಬಂಧದಿಂದುದ್ಭವಿಸುವ ಸಮಸ್ಯೆಗೆ, ಕಾರ್ಮಿಕ ಅರ್ಥಶಾಸ್ತ್ರ ಆರ್ಥಿಕ ವಿವರಣೆ ನೀಡುತ್ತದೆ. ಕೈಗಾರಿಕಾ ಸಮಾಜಶಾಸ್ತ್ರ ಕೆಲಸಗಾರರ ಸಾಮಾಜಿಕ ಹಿನ್ನೆಲೆಯನ್ನು ತಿಳಿಸುತ್ತದೆ. ಇದು ಕೈಗಾರಿಕಾ ಸಂಬಂಧಗಳನ್ನರಿಯಲು ಅತ್ಯವಶ್ಯ. ಕೈಗಾರಿಕಾ ಮನೋವಿಜ್ಞಾನ ಸಾಮಾನ್ಯ ಜ್ಞಾನವನ್ನು ನಿಷ್ಪಕ್ಷಪಾತಗೊಳಿಸುವುದಕ್ಕೆ ಉಪಯುಕ್ತ, ಅಲ್ಲದೆ ಹೊಸಬರ ಆಯ್ಕೆ, ನೇಮಕ, ಉದ್ಯೋಗಶಿಕ್ಷಣ, ದಣಿವು, ಶಿಷ್ಟತೆಯಪಾಲನೆ ಮುಂತಾದ ವಿಷಯಗಳಲ್ಲಿ ಪ್ರಾಯೋಗಿಕ ಸಲಕರಣೆಗಳನ್ನು ಅದು ನೀಡುತ್ತದೆ. ಕಾರ್ಮಿಕರ ಮತ್ತು ಆಡಳಿತ ಮಂಡಲಿಯ ಸಂಬಂಧದ ಕ್ಷೇತ್ರದಲ್ಲಿ ಕಾರ್ಮಿಕ ಕಾಯಿದೆ ಮತ್ತು ಅದಕ್ಕೆ ಸಂಬಂಧಪಟ್ಟ ನ್ಯಾಯಾಲಯಗಳು ಮತ್ತು ತೀರ್ಪುಗಾರರ ಪಾತ್ರ ಹಿರಿದು. ಕಾರ್ಮಿಕ ಅಂಕಿ ಅಂಶಗಳು ಅವುಗಳ ಪರಿಮಾಣ ವಿಶ್ಲೇಷಣದಿಂದ ಕೈಗಾರಿಕಾ ಸಂಬಂಧಗಳ ಮೇಲೆ ಬೆಳಕು ಬೀರುತ್ತವೆ. ಕಡೆಯದಾಗಿ, ಕೇಂದ್ರೀಕೃತ ಯೋಜನೆಯ ಪರಿಣಾಮವಾಗಿ, ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ರಂಗದ ಮೇಲೆ ರಾಜಕೀಯ ಸ್ಥಿತಿಗತಿಗಳೂ ತಮ್ಮ ಪ್ರಭಾವ ಬೀರುತ್ತವೆ. ಹೀಗಾಗಿ, ಸುಸಂಯೋಜಿತ ಪರಸ್ಪರ ಹೊಂದಿಕೆ ವಿಧಾನದೃಷ್ಟಿ ಕೈಗಾರಿಕಾ ಸಂಬಂಧಗಳಲ್ಲಿ ಅಗತ್ಯ ಮತ್ತು ಅಪೇಕ್ಷಣೀಯ. (ಎಸ್.ಡಿ.ಪಿ.)

ಕಾರ್ಮಿಕರಿಗೂ ಮಾಲೀಕರಿಗೂ ವಿರಸ ಉಂಟಾಗಲು ಹಲವಾರು ಕಾರಣಗಳುಂಟು: 1 ಏರುಬೆಲೆಗಳಿಂದ ಕಾರ್ಮಿಕರ ಜೀವನವೆಚ್ಚ ಹೆಚ್ಚುವುದರಿಂದ ಅಧಿಕ ಕೂಲಿಗಾಗಿ ಬೇಡಿಕೆ, 2 ದುಡಿಮೆಯ ಗಂಟೆಗಳ ಇಳಿತಾಯಕ್ಕಾಗಿ ಒತ್ತಾಯ, 3 ಉದ್ಯೋಗದಲ್ಲಿ ಭರವಸೆ, 4 ಕೆಲಸದ ಪರಿಸ್ಥಿತಿಯ ಉತ್ತಮಿಕೆಯ ಬೇಡಿಕೆ, 5 ಕೂಲಿ ಇಳಿತಾಯ, ಕಾರ್ಮಿಕರ ವಜಾ ಮುಂತಾದವುಗಳಿಗೆ ಕಾರ್ಮಿಕರ ವಿರೋಧ–ಇವು ಕೆಲವು ಕಾರಣಗಳು. ಕಾರ್ಮಿಕರು ಕೆಲಸವನ್ನು ನಿಧಾನವಾಗಿ ಮಾಡುವ ಮಾರ್ಗ ಹಿಡಿದರೆ ಮಾಲೀಕರು ಅದನ್ನು ವಿರೋಧಿಸುವುದುಂಟು.

ಕೈಗಾರಿಕಾ ಮಾಲೀಕರಿಗೂ ಕಾರ್ಮಿಕರಿಗೂ ಜರಗುವ ಸಂಘರ್ಷಗಳನ್ನು ಸುಧಾರಿಸಲು ಕೆಲವು ಪದ್ಧತಿಗಳು ಜಾರಿಗೆ ಬಂದಿದೆ. ಅವುಗಳಲ್ಲಿ ಮುಖ್ಯವಾದವು ಇವು:

**1 ಕಾರ್ಮಿಕರಿಗೆ ನ್ಯಾಯವಾದ ವೇತನ:** ಏರುತ್ತಿರುವ ಬೆಲೆಗಳಿಗೆ ಅನುಗುಣವಾಗಿ ಆಗಿಂದಾಗ್ಗೆ ವೇತನಗಳನ್ನು ಪರಿಷ್ಕರಿಸಲಾಗುತ್ತದೆ. ಮೂಲವೇತನದ ಜೊತೆಗೆ ಅಧಿಕ ಜೀವನ ವೆಚ್ಚವನ್ನು ಸರಿದೂಗಿಸಲು ಅದಕ್ಕೆ ಅನುಗುಣವಾಗಿ ಭತ್ಯವನ್ನು ಸೇರಿಸುವುದು ಸಾಮಾನ್ಯವಾಗಿ ಅನುಸರಿಸುವ ಮಾರ್ಗ.

**2 ಲಾಭದಲ್ಲಿ ಪಾಲು:** ಮಾಲೀಕರಿಗೆ ನ್ಯಾಯವಾಗಿ ಸಲ್ಲಬೇಕಾದ ಲಾಭವನ್ನು ಕೊಟ್ಟು, ಕಾರ್ಮಿಕರಿಗೆ ಸಲ್ಲಬೇಕಾದ ವೇತನವನ್ನು ನೀಡಿ, ಉಳಿಯುವ ಲಾಭವನ್ನು ಒಪ್ಪಂದದ ಪ್ರಕಾರ ಕಾರ್ಮಿಕರಲ್ಲಿ ಹಂಚುವುದೇ ಲಾಭ ಹಂಚಿಕೆಯ ಮೂಲೋದ್ದೇಶ. ಭಾರತದಲ್ಲಿ ಕೈಗಾರಿಕಾ ಶಾಂತಿಸಾಧನೆಗಾಗಿ ಲಾಭ ಹಂಚಿಕೆ ಯೋಜನೆಯನ್ನು ಪ್ರಾಯೋಗಿಕವಾಗಿ ಹಲವು ಕೈಗಾರಿಕೆಗಳಲ್ಲಿ ಆಚರಣೆಗೆ ತರಲಾಯಿತು. ಈ ಯೋಜನೆ ಹೆಚ್ಚು ಯಶಸ್ವಿಯಾಗಿಲ್ಲ.

**3 ಸಹಭಾಗಿ ಯೋಜನೆ:** ಕೂಲಿಗಾರರು ಉದ್ಯಮದಲ್ಲಿ ಷೇರುದಾರರಾಗಿ, ತಮ್ಮ ಷೇರಿನ ಮೊತ್ತಕ್ಕನುಗುಣವಾಗಿ ಆಡಳಿತದಲ್ಲೂ ಒಡೆತನದಲ್ಲೂ ಭಾಗವಹಿಸುವುದು. ಈ ಯೋಜನೆ ಹಲವು ಪಾಶ್ಚಾತ್ಯ ದೇಶಗಳಲ್ಲಿ ಯಶಸ್ವಿಯಾಗಿದೆ. ಭಾರತದಲ್ಲೂ ಇದನ್ನು ಪ್ರಯೋಗಿಸಲಾಗಿದೆ.

**4 ಸಂಧಾನ ಮಂಡಲಿ:** ಸಂಧಾನ ಮಂಡಲಿಗಳಲ್ಲಿ ಮಾಲೀಕರು ಮತ್ತು ಕಾರ್ಮಿಕರೇ ಅಲ್ಲದೆ ಮೂರನೆಯ ಒಂದು ಪಕ್ಷ ಇರುವುದುಂಟು. ವಿವಾದಗಳು ಈ ಮಂಡಲಿಯ ಮುಂದೆ ಬಂದು ಇತ್ಯರ್ಥವಾಗುತ್ತವೆ. ಭಾರತದ 1947 ಕೈಗಾರಿಕಾ ವಿವಾದಗಳ ಕಾಯಿದೆಯ ಪ್ರಕಾರ ಭಾರತದಲ್ಲಿ ಕಾರ್ಖಾನೆಗಳಲ್ಲಿ ದಿನಂಪ್ರತಿ ಉದ್ಭವಿಸಬಹುದಾದ ಸಣ್ಣಪುಟ್ಟ ವಿವಾದಗಳನ್ನು ಪರಿಹರಿಸಲು ಮಾಲೀಕರ ಮತ್ತು ಕೆಲಸಗಾರರ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿ ಇರುತ್ತದೆ. ಈ ಸಮಿತಿಯಿಂದ ವಿವಾದಗಳು ತೀರ್ಮಾನವಾಗದೆ ಹೋದರೆ ಅವನ್ನು ಪರಸ್ಪರ ಸಮಾಲೋಚನೆ ಮತ್ತು ಮಧ್ಯಸ್ಥಿಕೆಯ ಮೇಲೆ ತೀರ್ಮಾನಿಸಲು ಸಂಧಾನ ಅಧಿಕಾರಿಗಳಿರುತ್ತಾರೆ. ಇವರ ಪ್ರಯತ್ನದಿಂದ ವಿವಾದ ತೀರ್ಮಾನವಾಗದಿದ್ದರೆ ಸಂಧಾನ ಮಂಡಲಿಯನ್ನು ಸರ್ಕಾರ ನೇಮಿಸಬಹುದು.

**5 ಪಂಚಾಯಿತಿ:** ಸಂಧಾನ ಮುರಿದರೆ ಪಂಚಾಯಿತಿ ಒಂದೇ ಉಳಿದ ಹಾದಿ. ಮಾಲೀಕ–ಕಾರ್ಮಿಕರೇ ಸ್ವತಃ ಪಂಚಾಯಿತಿಯನ್ನೇರ್ಪಡಿಸಿಕೊಳ್ಳಬಹುದು. ಇಲ್ಲವೇ ಸರ್ಕಾರ ಅದನ್ನು ಕಡ್ಡಾಯವಾಗಿ ವಿಧಿಸಬಹುದು. ಪಂಚಾಯಿತಿ ನಡೆಸುವ ಮಧ್ಯಸ್ಥಗಾರರು ವಿವಾದದ ಹಿನ್ನೆಲೆಯನ್ನು ಕೂಲಂಕಷವಾಗಿ ತಿಳಿದು ತೀರ್ಮಾನಿಸುವುದು ಬಹಳ ತಡವಾಗುವುದರಿಂದ ಇದು ಅಷ್ಟೊಂದು ಯುಕ್ತವಾದ ವಿಧಾನವಲ್ಲ. ಭಾರತದಲ್ಲಿ ವಿವಾದಗಳು ಸಮಾಧಾನಕರವಾಗಿ ತೀರ್ಮಾನವಾಗದೆ ಇದ್ದರೆ ಸರ್ಕಾರ ವಿವಾದವನ್ನು ಕೈಗಾರಿಕಾ ವಿವಾದ ವಿಚಾರಣಾ ಮಂಡಳಿಗೆ ಒಪ್ಪಿಸಿ ಅದರ ತೀರ್ಮಾನವನ್ನು ಕಡ್ಡಾಯವಾಗಿ ಜಾರಿಗೆ ತರಲು ಕೈಗಾರಿಕಾ ವಿವಾದಗಳ ಕಾಯಿದೆಯಲ್ಲಿ ಅವಕಾಶ ಕಲ್ಪಿಸಿದೆ. ಕಡ್ಡಾಯದ ತೀರ್ಮಾನ ಪ್ರಜಾಪ್ರಭುತ್ವದಲ್ಲಿ ಉಚಿತವಲ್ಲದಿದ್ದರೂ ದೇಶದಲ್ಲಿ ಕಾರ್ಮಿಕರ ಸಂಘಗಳ ಶಕ್ತಿ ಹೆಚ್ಚುವ ಮುನ್ನ ಅದನ್ನು ಬಿಟ್ಟುಕೊಡಲು ಸಾಧ್ಯವಿಲ್ಲ.

**6 ಕಾರ್ಮಿಕ ಕಾನೂನುಗಳು:** ಕಾರ್ಮಿಕರ ಕೆಲಸ, ಕೂಲಿ, ವಸತಿ ಸೌಕರ್ಯ ಮುಂತಾದವನ್ನು ಅವರಿಗೆ ಹಿತವಾಗುವ ರೀತಿಯಲ್ಲಿ ನಿರ್ವಹಿಸಲು ಕಾಯಿದೆಗಳನ್ನು ರಚಿಸಲಾಗುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಅನಂತರ ದೇಶದಲ್ಲಿ ಇಂಥ ಅನೇಕ ಕಾಯಿದೆಗಳು ಜಾರಿಗೆ ಬಂದು ಕಾರ್ಮಿಕರಿಗೆ ಅನೇಕ ಸೌಲಭ್ಯಗಳು ದೊರೆಕಿವೆ (ನೋಡಿ–ಕಾರ್ಮಿಕ ಕಾನೂನುಗಳು).

**7 ಸಾಮಾಜಿಕ ಭದ್ರತೆ:** ಪ್ರತಿಯೊಂದು ಉದ್ಯಮವೂ ತನ್ನ ಕೂಲಿಗಾರರಿಗೆ ಸಂಭವಿಸಬಹುದಾದ ಮುಪ್ಪು, ವ್ಯಾಧಿ, ನಿರುದ್ಯೋಗ, ಗಾಯ ಮತ್ತು ಸಾವು–ಈ ಹಾನಿಯಿಂದ ಪಾರುಮಾಡಲು ವಿಮಾ ಯೋಜನೆಯನ್ನು ಜಾರಿಗೆ ತರಬಹುದು. ಇದು ಜರ್ಮನಿಯಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಜಾರಿಗೆ ಬಂತು. ಇಂಗ್ಲೆಂಡಿನಲ್ಲಿ ಸಾಮಾಜಿಕ ಭದ್ರತೆಯ ಹೊಣೆ ಸರ್ಕಾರಕ್ಕೆ ಸೇರಿದ್ದು. ಅಲ್ಲಿ ಈ ಬಗ್ಗೆ ಸಮಗ್ರ ಯೋಜನೆಯೊಂದು ಜಾರಿಗೆ ಬಂದಿದೆ. ಭಾರತದಲ್ಲಿ 1948ರ ಉದ್ಯೋಗಿಗಳ ರಾಜ್ಯ ವಿಮಾ ಕಾಯಿದೆ ಈ ನಿಟ್ಟಿನಲ್ಲಿ ಮೊದಲನೆಯ ಪ್ರಯತ್ನ. ಭವಿಷ್ಯ ನಿಧಿ ಕಾಯಿದೆ ಇನ್ನೊಂದು.

ಕೈಗಾರಿಕೆಗಳು ಕಾರ್ಮಿಕರಿಗೆ ಅಧ್ಯಂಶ ನೀಡುವ ಯೋಜನೆಯೂ ಜಾರಿಯಲ್ಲಿದೆ. ಕಾರ್ಮಿಕರಲ್ಲಿ ಶ್ರದ್ಧೆ ಮತ್ತು ತೃಪ್ತಿ ಹೆಚ್ಚಿಸುವುದು ಇದರ ಉದ್ದೇಶ. ವೇತನದ ಜೊತೆಗೆ ಸಾಮಾನ್ಯವಾಗಿ ವರ್ಷಕ್ಕೊಮ್ಮೆ ನೀಡಲಾಗುವ ಸಂಭಾವನೆಯಿದು. ಕಾರ್ಮಿಕ–ಮಾಲೀಕರ ನಡುವೆ ಸೌಹಾರ್ದಯುತ ಸಂಬಂಧ ಬೆಳೆದು ಕೈಗಾರಿಕೆಯಲ್ಲಿ ಶಾಂತಿ ನೆಲಸುವಂತೆ ಮಾಡಲು ಲಭ್ಯವಿರುವ ಉಪಾಯಗಳಿವು. (ಎಸ್.ಎನ್.ಆರ್.ಕೆ.)

**ಕೈಗಾರಿಕಾ ಸಮಾಜ :** 18–19ನೆಯ ಶತಮಾನಗಳಲ್ಲಿ ಯೂರೋಪಿನಲ್ಲಿ ಆರಂಭವಾಗಿ ಕ್ರಮಕ್ರಮವಾಗಿ ಪ್ರಪಂಚದ ಇತರ ಎಡೆಗಳಿಗೆ ಹಬ್ಬಿದ ಕೈಗಾರಿಕಾಕರಣದ ಫಲವಾಗಿ ನಿರ್ಮಿತವಾಗುತ್ತಿರುವ ಸಮಾಜ. ಜನರ ವೃತ್ತಿಗಳಲ್ಲಿ ತೀವ್ರ ಬದಲಾವಣೆ; ವಿವಿಧ ಜನರ ವರ್ಗಗಳ ನೇರ ಸಂಬಂಧಗಳ ಬದಲು ಪರೋಕ್ಷ ಅವ್ಯಕ್ತ ಸಂಬಂಧ ಸ್ಥಾಪನೆ; ಕುಟುಂಬ, ನಂಟು, ನೆರೆಹೊರೆ ಮುಂತಾದ ಸಂಬಂಧಗಳಲ್ಲಿ ಅದೃಢತೆ; ಜನರಲ್ಲಿ ಪರಸ್ಪರಾವಲಂಬನೆಯ ಬೆಳವಣಿಗೆ; ಆರ್ಥಿಕ ಕ್ಷೇತ್ರದಲ್ಲಿ ವ್ಯಕ್ತಿಗಳ, ಪ್ರದೇಶಗಳ, ರಾಷ್ಟ್ರಗಳ ವಿಶೇಷೀಕರಣ ಮತ್ತು ಶ್ರಮವಿಭಜನೆ; ಜನರ ಆಚಾರವಿಚಾರ ಮತ್ತು ಧಾರ್ಮಿಕ ನಂಬಿಕೆಗಳಲ್ಲಿ ಸಡಿಲತೆ–ಇವು ಇದರ ಕೆಲವು ಲಕ್ಷಣಗಳು. ಜನರು ನಗರ ಹಾಗೂ ಕೈಗಾರಿಕಾ ಕೇಂದ್ರಗಳಲ್ಲಿ ಹೆಚ್ಚು ಹೆಚ್ಚಾಗಿ ವಾಸಿಸುತ್ತಾರೆ.

ಕೈಗಾರಿಕಾ ಸಮಾಜಗಳ ಆರ್ಥಿಕತೆ ಸರಳಸಮಾಜಗಳಲ್ಲಿಯದಕ್ಕಿಂತ ಭಿನ್ನವೂ ವೈಶಿಷ್ಟ್ಯಪೂರ್ಣವೂ ಆಗಿರುತ್ತದೆ. ಇವುಗಳ ಅರ್ಥವ್ಯವಸ್ಥೆ ಜಾತಿ, ಕುಲ, ಕಸಬು ಮತ್ತಿತರ ಅಂಶಗಳ ಮೇಲೆ ನಿಂತಿರುವುದಿಲ್ಲ. ಕೈಗಾರಿಕಾ ಸಮಾಜಗಳು ಹಣ ಸಂಬಂಧಿ. ಪ್ರಪಂಚದ ಮಾರುಕಟ್ಟೆಗಳಲ್ಲಿ ಸರಕುಗಳನ್ನು ಕೊಳ್ಳುವವರೂ ವಿಕ್ರಯಿಸುವವರೂ ಪರಸ್ಪರ ಮುಖತಃ ಭೇಟಿಯಾಗದೆ ವ್ಯವಹಾರ ನಡೆಸುವುದು ಸಾಧ್ಯ. ಈ ಸಮಾಜಗಳಲ್ಲಿ ಸರಕು ಮತ್ತು ಸೇವೆಗಳನ್ನು ವಿಕ್ರಯಿಸುವವರಿಗೆ ಅದರ ಉತ್ಪಾದನೆ ಇಲ್ಲವೇ ಬಳಕೆಯ ಅರಿವಿರಬೇಕಾದ್ದಿಲ್ಲ. ಕಾರ್ಪೊರೇಷನ್‌ಗಳು, ಕಾರ್ಮಿಕ ಸಂಘಗಳು, ವೃತ್ತಿ ಪ್ರಧಾನ ಸಂಸ್ಥೆಗಳು, ಸರ್ಕಾರಿ ಉದ್ಯಮಗಳು ಮುಂತಾದವು ಇಂದಿನ ಕೈಗಾರಿಕಾ ಸಮಾಜದ ಆರ್ಥಿಕಘಟಕಗಳಾಗಿವೆ. ಇಂಥ ನೂತನ ಆರ್ಥಿಕ ಸಂಘಗಳ ಜೊತೆಗೆ ಕುಟುಂಬ ಸ್ವಾಮ್ಯ ಉದ್ಯಮಗಳೂ ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯ ಉದ್ಯಮಗಳೂ ಕೆಲಸ ಮಾಡುತ್ತಿರುತ್ತವೆ. ಈ ಸಮಾಜಗಳಲ್ಲಿ ಕೈಗಾರಿಕಾ ಚಟುವಟಿಕೆಗಳು ಜೀವನೋಪಾಯದ ಮುಖ್ಯ ಸಾಧನಗಳು. ಇಲ್ಲಿಯ ಕಸಬುಗಳು ಹೆಚ್ಚಿನ ಶ್ರಮ ವಿಭಜನೆಯಿಂದ ಕೂಡಿರುತ್ತವೆ. ಈ ಸಮಾಜದ ಜನ ಬೇಸಾಯವಲ್ಲದೆ ವಿವಿಧ ಕಸಬುಗಳಲ್ಲಿ ತೊಡಗಿರುತ್ತಾರೆ. ಈ ಜನರ ವಾಸಸ್ಥಳಗಳು ಮತ್ತು ಕೆಲಸ ಮಾಡುವ ಸ್ಥಳಗಳು ಬೇರೆ ಬೇರೆಯಾಗಿರುತ್ತವೆ. ಪ್ರತಿನಿತ್ಯ ಜನಸಾರಿಗೆಯಲ್ಲಿ ಇರುವ ನೂಕುನುಗ್ಗಾಟ ಇದರ ಪ್ರತೀಕ. ಬೇರೆಬೇರೆ ಕಸಬುಗಳಿಗೆ ಸೇರಿದ ಜನ ತಂತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ವೃತ್ತಿಸಂಸ್ಥೆಗಳನ್ನು ಸ್ಥಾಪಿಸಿಕೊಂಡಿರುತ್ತಾರೆ. ಕೈಗಾರಿಕಾ ಸಮಾಜಗಳಲ್ಲಿ ಕೈಗಾರಿಕೋದ್ಯಮಿ ಮತ್ತು ಕಾರ್ಮಿಕರ ನಡುವೆ ಘರ್ಷಣೆ ಉದ್ಭವಿಸುವ ಸಂಭವ ಅಧಿಕ.

ಈ ಸಂಕೀರ್ಣ ಸಾಮಾಜಿಕ ರಚನೆಗೆ ವ್ಯಕ್ತಿ ಹೊಂದಿಕೊಳ್ಳುವುದು ಕಷ್ಟಕರ. ಏಕೆಂದರೆ ಇದು ಸದಾ ವ್ಯತ್ಯಾಸವಾಗತಕ್ಕದ್ದು. ಇದರಲ್ಲಿ ವ್ಯಕ್ತಿಯ ಪಾತ್ರ ಸುಲಭವಾಗಿ ಬೇರ್ಪಡಿಸುವಂಥದು ಮತ್ತು ನಿರ್ದಿಷ್ಟ ಗುರಿ ಸಾಧಿಸಲು ಮಾತ್ರ ಮೀಸಲಾದ್ದು. ಇಲ್ಲಿ ಕಸಬೂ ಕೌಟುಂಬಿಕ ಜೀವನವೂ ಬೇರ್ಪಟ್ಟಿರುತ್ತವೆ. ವ್ಯಕ್ತಿಗಳು ವಿವಿಧ ಗುಂಪು ಇಲ್ಲವೇ ಸಮೂಹಗಳಿಗೆ ಸೇರಿರುತ್ತಾರೆ. ಇಂಥ ಗುಂಪುಗಳು ನಿರ್ದಿಷ್ಟ ಆಸಕ್ತಿ ಮತ್ತು ಗುರಿಗಳನ್ನು ಹೊಂದಿರುತ್ತವೆ. ಇವು ಅಧಿಕಾರಯುತ ಸಂಸ್ಥೆಗಳ ನಿರ್ದೇಶನಕ್ಕೆ ಒಳಗಾಗಿರುತ್ತವೆ. ಕೈಗಾರಿಕಾ ಸಮಾಜಗಳಲ್ಲಿ ಲೋಕರೂಢಿಗಿಂತ ಕಾನೂನು ಪ್ರಧಾನವಾಗಿ, ಅದು ಜನರ ಸಾಮಾಜಿಕ ನಡೆವಳಿಕೆಗಳನ್ನು ನಿಯಂತ್ರಿಸುತ್ತದೆ.

ಕುಟುಂಬದ ನಡೆವಳಿಕೆ ಬದಲಾಗುತ್ತಿರುವುದು ಕೈಗಾರಿಕಾ ಸಮಾಜದ ಫಲ. ಚಾರಿತ್ರಿಕವಾಗಿ ಸಾಮಾಜಿಕ ಸಂಘ ಸಂಸ್ಥೆಗಳಲ್ಲಿ ಪ್ರಧಾನವಾಗಿದ್ದ ಕುಟುಂಬ ವ್ಯವಸ್ಥೆ ಕೈಗಾರಿಕಾಕರಣದಿಂದಾಗಿ ತನ್ನ ಮಹತ್ತ್ವವನ್ನು ಕಳೆದುಕೊಳ್ಳುತ್ತಿದೆ. ಕೌಟುಂಬಿಕ ಜೀವನ ಬಹಳ ಸರಳವಾಗುತ್ತಿರುವುದು ಒಂದು ಪ್ರವೃತ್ತಿ. ಬಂಧುತ್ವ ಭಾವನೆ ಕ್ಷೀಣವಾಗುತ್ತಿದೆ. ಅವಿಭಕ್ತ ಕುಟುಂಬ ಒಡೆದು ಚೆಲ್ಲಾಪಿಲ್ಲಿಯಾಗುತ್ತಿರುವುದರಿಂದ ಅದರ ಸದಸ್ಯರಲ್ಲಿ ಸದುದ್ದೇಶ ಸಂಬಂಧ ಅಸಾಧ್ಯವಾಗಿ ಪರಿಣಮಿಸುತ್ತದೆ. ಇಲ್ಲಿ ವಿವಾಹದ್ದು ಪ್ರಣಯ ದೃಷ್ಟಿ. ಈ ಅಂಶ ಇಂದಿನ ಚಲನಚಿತ್ರ, ನಿಯತಕಾಲಿಕಗಳು ಮತ್ತು ಸಾಹಿತ್ಯ ಸಂಗೀತಗಳಲ್ಲಿ ಪ್ರತಿಬಿಂಬಿತವಾಗಿರುವುದನ್ನು ಕಾಣಬಹುದು. ಮನೆಯಲ್ಲಿ ತಂದೆ ತಾಯಿ ವಿವಾಹದ ಬಗೆಗೆ ಅಭಿಪ್ರಾಯವನ್ನು ಸೂಚಿಸಬಹುದೇ ಹೊರತು ಕಡ್ಡಾಯ ಮಾಡುವಂತಿಲ್ಲ. ಈ ಬದಲಾದ ಸನ್ನಿವೇಶಗಳಲ್ಲಿ ಕನ್ಯಾ ಶುಲ್ಕದಂಥ ಬಳುವಳಿಗಳು ಕಾಲಸ್ಥಿತಿಗೆ ತಕ್ಕುವಲ್ಲ. ಈ ವೈವಾಹಿಕಜೀವನ ನಿರೀಕ್ಷಿತ ಮಟ್ಟ ಮುಟ್ಟಲ್ಲದಿದ್ದಲ್ಲಿ ಅದರ ವಿಸರ್ಜನೆಗೆ

ಆರ್ಥಿಕ ಸಾಮಾಜಿಕ ಇಲ್ಲವೇ ಕಾನೂನಿನ ಬಾಧೆ ಇಲ್ಲ. ಕೈಗಾರಿಕಾ ಕ್ರಾಂತಿಯಿಂದ ಕುಟುಂಬ ರಚನೆ ಹಾಗೂ ಕಾರ್ಯಗಳಲ್ಲೂ ಬದಲಾವಣೆಗಳುಂಟಾಗಿವೆ. ವಿವಾಹದ ವಯಸ್ಸು ಹೆಚ್ಚಿರುವುದರ ಜೊತೆಗೆ ಕುಟುಂಬ ನಿಯಂತ್ರಣ ಈಗಿನ ಆದರ್ಶ. ಕೈಗಾರಿಕಾ ಸಮಾಜದಲ್ಲಿ ಬಹುಪತ್ನಿತ್ವ ಇಲ್ಲವೇ ಬಹುಪತಿತ್ವ ನಿಷೇಧಿತ. ಕುಟುಂಬಗಳು ಮೊಟಕಾಗುತ್ತಿರುವುದು ಆಧುನಿಕ ಕೈಗಾರಿಕಾ ಸಮಾಜದ ಇನ್ನೊಂದು ಫಲ. ಕುಟುಂಬದಲ್ಲಿ ಸ್ತ್ರೀಗೆ ಹೆಚ್ಚಿನ ಸ್ವಾತಂತ್ರ್ಯವಿದ್ದು ಪುರುಷನೊಡನೆ ಸರಿಸಮಾನಳಾಗಿ ದುಡಿಯುವ ಅವಕಾಶವಿದೆ. ಕೈಗಾರಿಕಾಕರಣ ಮತ್ತು ಬದಲಾದ ಕೌಟುಂಬಿಕ, ಬಂಧುತ್ವ ನಡವಳಿಕೆಗಳು ಜನರನ್ನು ಹಲವಾರು ನಿರ್ಬಂಧ ಮತ್ತು ಜವಾಬ್ದಾರಿಗಳಿಂದ ಮುಕ್ತಗೊಳಿಸಿವೆ. ಇದರಿಂದಾಗಿ ಕೈಗಾರಿಕಾ ಸಮಾಜಗಳಲ್ಲಿ ಸಾಮಾಜಿಕ ನಿಯಂತ್ರಣ ಕಡಿಮೆ. ಕುಟುಂಬದ ಸದಸ್ಯರಲ್ಲಿ ಹಿಂದೆ ಇದ್ದ ಪರಸ್ಪರ ಆರ್ಥಿಕ ಸಹಕಾರ ನಶಿಸುತ್ತಿರುವುದರಿಂದ ಸಮಾಜದಲ್ಲಿ ಕುಟುಂಬದ ಯಜಮಾನನ ಮೇಲೆ ಹೆಚ್ಚಿನ ಆರ್ಥಿಕ ಒತ್ತಡ ಬಿದ್ದು ಕುಟುಂಬದ ಹಲವಾರು ಆವಶ್ಯಕತೆಗಳನ್ನು ಪೂರೈಸಲು ಅವನು ಅಸಮರ್ಥನಾಗುವುದುಂಟು. ಇದರ ಜೊತೆಗೆ ದುಡಿಯುವ ಮಹಿಳೆಯ ಸ್ವತಂತ್ರ ಮನೋಭಾವ ಹಲವೊಮ್ಮೆ ಕುಟುಂಬದ ಅವ್ಯವಸ್ಥೆಗೆ ಕಾರಣವಾಗಿರುವುದೂ ಉಂಟು. ಕುಟುಂಬದಲ್ಲಿ ಗಂಡಹೆಂಡಿರಿಬ್ಬರೂ ದಿನದ ಹೆಚ್ಚಿನ ವೇಳೆ ಮನೆಯ ಹೊರಗೆ ದುಡಿಮೆಯಲ್ಲಿ ಕಳೆಯುವುದರಿಂದ ಮಕ್ಕಳ ಪಾಲನೆ ಪೋಷಣೆಗಳಿಗೆ ಮೊದಲಿನಷ್ಟು ಗಮನ ನೀಡುವುದಾಗದು. ಇದರಿಂದಾಗಿ ಬಾಲಾಪರಾಧವೇ ಮುಂತಾದ ಸಾಮಾಜಿಕ ಸಮಸ್ಯೆಗಳು ಉದ್ಭವಿಸುತ್ತವೆ. ಕುಟುಂಬಸಹಜವಾದ ಪ್ರೀತಿಯ ಬೆಸುಗೆ ಒಡೆಯುತ್ತಿರುವುದೊಂದು ಸಾಮಾನ್ಯ ಪ್ರವೃತ್ತಿ.

ಕೈಗಾರಿಕಾಕರಣದಿಂದ ಸಾಂಪ್ರದಾಯಿಕ ನಂಬಿಕೆಗಳು ಮತ್ತು ಧಾರ್ಮಿಕ ಸಂಸ್ಥೆಗಳ ಮೇಲೆ ಆಗಿರುವ ಪ್ರಭಾವವೂ ಅಗಾಧವೇ. ಮತಸಂಸ್ಥೆಗಳ ಹಿಡಿತ ಮೊದಲಿನಷ್ಟಿಲ್ಲ. ಅನೇಕ ವೇಳೆ ಅದು ಕೇವಲ ಸಾಂಕೇತಿಕ. ಕೈಗಾರಿಕಾ ಸಮಾಜದ ವೇಗದ ಜೀವನದಿಂದ ಜನರಲ್ಲಿ ಹಲವಾರು ಆತಂಕಗಳಿಗೆ ಎಡೆಯುಂಟಾಗಿದೆ. ಜನರು ನೆಮ್ಮದಿ ಪಡೆಯಲು ಹೊಸ ರೀತಿಯ ಧಾರ್ಮಿಕ ಪಂಥಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಈ ವಿಧದ ಸಂಸ್ಥೆಗಳು ಬೇರೆ ಬೇರೆ ಆಚಾರ ವಿಚಾರಗಳಿಗೆ ಸೇರಿದ ಸಮಾಜದ ಜನರನ್ನು ಒಗ್ಗೂಡಿಸುವಲ್ಲಿ ಸ್ವಲ್ಪಮಟ್ಟಿಗೆ ಸಫಲವಾಗಿರುವುದನ್ನು ಕಾಣಬಹುದು.
**(ನೋಡಿ: ಕೈಗಾರಿಕಾ ಪದ್ಧತಿ)** (ಎಂ.ಆರ್.ಎಸ್.ಎ.)

**ಕೈಗಾರಿಕಾ ಹಣಕಾಸು :** ಒಂದು ದೇಶದ ಕೈಗಾರಿಕಾಭಿವೃದ್ಧಿ ಬಹಳಮಟ್ಟಿಗೆ ಹಣಕಾಸಿನ ಸರಬರಾಯಿಯನ್ನೆ, ಧನಪೋಷಣೆಯನ್ನೆ, ಅವಲಂಬಿಸಿದೆ. ಹಣಕಾಸು ಕೈಗಾರಿಕಾಭಿವೃದ್ಧಿಗೆ ಜೀವನಾಡಿ ಇದ್ದಂತೆ. ದೇಶದ ಕೈಗಾರಿಕೆಯ ಸುಸೂತ್ರವಾದ ಚಾಲನೆಗೆ ಯಥೋಚಿತವಾದ ಹಣಕಾಸಿನ ಸರಬರಾಯಿ ಅತ್ಯಾವಶ್ಯಕ. ಒಬ್ಬ ವ್ಯಕ್ತಿ ಬೆಳೆದಂತೆಲ್ಲ ಹೇಗೆ ಅವನಿಗೆ ದೊಡ್ಡ ದೊಡ್ಡ ಉಡುಪಿನ ಆವಶ್ಯಕತೆ ಇರುತ್ತದೆಯೋ ಅದೇ ರೀತಿ ಒಂದು ದೇಶದ ಕೈಗಾರಿಕಾಭಿವೃದ್ಧಿ ಆದಂತೆ ಅದರ ಹಣಕಾಸಿನ ಬೇಡಿಕೆಯೂ ಬೆಳೆಯುತ್ತದೆ.

ಕೈಗಾರಿಕೆಗಳಿಗೆ ಸಾಮಾನ್ಯವಾಗಿ 1 ಅಲ್ಪಾವಧಿ, 2 ಮಧ್ಯಮಾವಧಿ ಮತ್ತು 3 ದೀರ್ಘಾವಧಿ ಎಂಬ ಮೂರು ಬಗೆಯ ಹಣಕಾಸಿನ ಅಗತ್ಯವಿರುತ್ತದೆ. ಕಚ್ಚಾಸಾಮಗ್ರಿ ಮತ್ತು ಇತರ ವಸ್ತುಗಳನ್ನು ಕೊಳ್ಳಲೂ ದಿನವಹಿ ಮಾಡಬೇಕಾಗುವ ಖರ್ಚುಗಳಿಗೂ ಅಲ್ಪಾವಧಿ ಹಣಕಾಸು ಬೇಕು. ಇದಲ್ಲದೆ ಕೈಗಾರಿಕಾ ಉತ್ಪಾದನೆಗೆ ಸಾಮಗ್ರಿಗಳನ್ನು ಉಗ್ರಾಣದಲ್ಲಿ ಸಂಗ್ರಹಿಸಲೂ ಸಿದ್ಧಪಡಿಸಿದ ವಸ್ತುಗಳನ್ನು ಬಿಕರಿ ಮಾಡಲೂ ಜಾಹೀರಾತು ಮುಂತಾದ ಖರ್ಚುಗಳಿಗೂ ಅಲ್ಪಾವಧಿ ಹಣಕಾಸಿನ ಅಗತ್ಯವಿರುತ್ತದೆ. ಇದನ್ನು ಕೆಲವರು ಚರಬಂಡವಾಳವೆಂತಲೂ ಕರೆಯುತ್ತಾರೆ.

ಸ್ಥಿರ ಆಸ್ತಿಗಳನ್ನು ಪಡೆಯಲು ಕೈಗಾರಿಕೆಗಳಿಗೆ ದೀರ್ಘಾವಧಿ ಹಣಕಾಸಿನ ಆವಶ್ಯಕತೆ ಇರುತ್ತದೆ. ಹೊಸದಾಗಿ ಕೈಗಾರಿಕೆಯನ್ನು ಸ್ಥಾಪಿಸಲು ಅಗತ್ಯವಾದ ಸ್ಥಳವನ್ನು ಕೊಳ್ಳಲೂ ಕಾರ್ಖಾನೆಗಳಿಗೆ ಬೇಕಾದ ಕಟ್ಟಡಗಳನ್ನು ನಿರ್ಮಿಸಲೂ ಯಂತ್ರಗಳನ್ನೂ ಇತರ ಬಾಳಿಕೆ ಬರುವ ಸಾಧನಗಳನ್ನು ಕೊಳ್ಳಲೂ ದೀರ್ಘಾವಧಿ ಹಣಕಾಸು ಬೇಕಾಗುತ್ತದೆ. ಪ್ರಚಲಿತ ಕೈಗಾರಿಕೆಯೊಂದನ್ನು ವಿಸ್ತರಿಸಲು ಮತ್ತು ಹಳೆಯದಾದ ಯಂತ್ರಗಳನ್ನು ತೆಗೆದುಹಾಕಿ ಹೊಸ ಯಂತ್ರಗಳನ್ನು ಪ್ರತಿಸ್ಥಾಪನೆ ಮಾಡಲು ದೀರ್ಘಾವಧಿ ಹಣಕಾಸು ಬೇಕಾಗುತ್ತದೆ. ಈ ದೀರ್ಘಾವಧಿ ಹಣಕಾಸನ್ನು ಸ್ಥಿರಬಂಡವಾಳವೆಂದು ಕರೆಯುವುದೂ ಉಂಟು. ಸ್ಥಿರ ಆಸ್ತಿಗಳ ಆಯುಸ್ಸು ಹೆಚ್ಚು.

ಕೈಗಾರಿಕೆಯ ವಿಸ್ತರಣೆಗೂ ಸವೆದ ಮತ್ತು ಹಳೆಯ ಯಂತ್ರದ ಬದಲು ಹೊಸ ಯಂತ್ರಗಳನ್ನು ಸ್ಥಾಪಿಸಲೂ ಮಧ್ಯಮಾವಧಿ ಹಣಕಾಸಿನ ಅಗತ್ಯವಿರುತ್ತದೆ. ಆದರೆ ಯಾವುದೇ ಕೈಗಾರಿಕೆಯ ಒಟ್ಟು ಬಂಡವಾಳದಲ್ಲಿ ಮಧ್ಯಮಾವಧಿ ಹಣಕಾಸಿನ ಭಾಗ ಎಷ್ಟು ಎಂದು ಹೇಳುವುದು ಬಹಳ ಕಷ್ಟ. ಏಕೆಂದರೆ ಯಾವುದೇ ಕಂಪನಿಯ ಆಸ್ತಿ-ಹೊಣೆ ತಃಖ್ತೆಯಲ್ಲಾಗಲಿ ಪ್ರಕಟಿತವಾದ ಇತರ ಅಂಕಿಅಂಶಗಳ ಪಟ್ಟಿಯಲ್ಲಾಗಲಿ ಇದರ ವಿಷಯ ಪ್ರತ್ಯೇಕವಾಗಿರುವುದಿಲ್ಲ. ಮತ್ತೊಂದು ಮುಖ್ಯ ಅಂಶವೇನೆಂದರೆ, ಮಧ್ಯಮಾವಧಿ ಹಣಕಾಸಿನ ಆವಶ್ಯಕತೆ ಒಂದು ಕೈಗಾರಿಕೆಯಿಂದ ಇನ್ನೊಂದು ಕೈಗಾರಿಕೆಗೆ ವ್ಯತ್ಯಾಸವಾಗುತ್ತದೆ. ಒಂದೇ ಕೈಗಾರಿಕೆಯಲ್ಲಿ ಇದರ ಆವಶ್ಯಕತೆ ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ.

ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೈಗಾರಿಕಾ ಹಣಕಾಸುಗಳ ಅವಧಿಗಳ ವಿಚಾರದಲ್ಲೂ ಒಮ್ಮತವಿಲ್ಲ. ಒಟ್ಟಿನಲ್ಲಿ ಕೈಗಾರಿಕೆಯ ಹಣಕಾಸಿನ ಆವಶ್ಯಕತೆ ಒಂದು ವರ್ಷದ ಅವಧಿಯದಾಗಿದ್ದರೆ ಅದನ್ನು ಅಲ್ಪಾವಧಿ ಹಣಕಾಸೆಂದೂ ಒಂದರಿಂದ ಐದು ವರ್ಷಗಳವರೆಗಿನ ಅವಧಿಯದಾಗಿದ್ದರೆ ಮಧ್ಯಮಾವಧಿ ಹಣಕಾಸೆಂದೂ ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಯದಾಗಿದ್ದರೆ ಅದನ್ನು ದೀರ್ಘಾವಧಿ ಹಣಕಾಸೆಂದೂ ಹೇಳಬಹುದು.

**ಕೈಗಾರಿಕಾ ಹಣಕಾಸಿನ ಮೂಲಗಳು:** ಈ ಕೆಳಗೆ ಕಂಡ ಮೂಲಗಳಿಂದ ಕೈಗಾರಿಕೆಗಳು ತಮಗೆ ಬೇಕಾದ ಹಣವನ್ನು ಪಡೆಯುತ್ತವೆ: 1 ಬಂಡವಾಳ ಹೂಡುವ ಸಾರ್ವಜನಿಕರು; ಒಂದು ಕೈಗಾರಿಕೆಗೆ ಪ್ರಾರಂಭದಲ್ಲಿ ಬೇಕಾಗುವ ಹಣಕಾಸು ಷೇರು ಬಂಡವಾಳದ ಮೂಲಕ ಬರುತ್ತದೆ. ಷೇರು ಬಂಡವಾಳದ ಸ್ವಲ್ಪ ಭಾಗವನ್ನು ಕೈಗಾರಿಕೆಯ ಪ್ರವರ್ತಕರು, ನಿರ್ದೇಶಕರು ಮುಂತಾದವರು ಕೊಳ್ಳುತ್ತಾರೆ. ಉಳಿದ ಷೇರುಗಳನ್ನು ಸಾರ್ವಜನಿಕರಿಗೆ ನೀಡಿ ಹಣ ಪಡೆಯಲಾಗುತ್ತದೆ. ಹೆಚ್ಚಿನ ಹಣದ ಆವಶ್ಯಕತೆ ಇದ್ದಾಗ ಹೆಚ್ಚು ಷೇರುಗಳನ್ನು ಅಥವಾ ಡಿಬೆಂಚರುಗಳನ್ನು ಮಾರುಕಟ್ಟೆಯಲ್ಲಿ ಮಾರಿ ಹಣ ಪಡೆಯುತ್ತಾರೆ.

**2 ವ್ಯವಸ್ಥಾಪಕ ನಿಯೋಗಿಗಳು:** ಭಾರತದ ಕೈಗಾರಿಕೆಗಳಿಗೆ ಹಣಕಾಸನ್ನು ಒದಗಿಸುವುದರಲ್ಲಿ ವ್ಯವಸ್ಥಾಪಕ ನಿಯೋಗಿಗಳು (ಮ್ಯಾನೇಜಿಂಗ್ ಏಜೆಂಟ್ಸ್) ಇತ್ತೀಚಿನವರೆಗೂ ಪ್ರಮುಖ ಪಾತ್ರ ವಹಿಸಿದ್ದರು. ಕೈಗಾರಿಕೆಗಳ ಸ್ಥಾಪನೆ, ವ್ಯವಸ್ಥಾಪನ, ಅದಕ್ಕೆ ಬೇಕಾಗುವ ಹಣಕಾಸಿನ ಒದಗಣೆ, ಬೇರೆ ಕಡೆ ಸಾಲ ಪಡೆಯಬೇಕಾದಾಗ ಅದಕ್ಕೆ ಜಾಮೀನು ನೀಡಿಕೆ-ಇವು ವ್ಯವಸ್ಥಾಪಕ ನಿಯೋಗಿಗಳು ಮಾಡುತ್ತಿದ್ದ ಕಾರ್ಯಗಳು. ಇವರು ಕೈಗಾರಿಕೆಗಳಿಗೆ ಚರ ಸ್ಥಿರ ಬಂಡವಾಳವನ್ನು ಒದಗಿಸುವುದರ ಜೊತೆಗೆ ಬೇರೆ ಮೂಲಗಳಿಂದ ಡಿಬೆಂಚರು, ಬ್ಯಾಂಕ್ ಸಾಲ, ಸಾರ್ವಜನಿಕರಿಂದ ಠೇವಣಿ ಮುಂತಾದ ರೀತಿಗಳಲ್ಲಿ ಹಣವನ್ನು ಪಡೆದು ಕೈಗಾರಿಕಾಭಿವೃದ್ಧಿಗೆ ಸಹಾಯಕರಾಗಿದ್ದರು. ಆದರೆ ವ್ಯವಸ್ಥಾಪಕ ನಿಯೋಗ ವ್ಯವಸ್ಥೆಯಲ್ಲಿ ಅನೇಕ ನ್ಯೂನತೆಗಳಿದ್ದುವು. ಆದ್ದರಿಂದ ಭಾರತ ಸರ್ಕಾರ ಈ ವ್ಯವಸ್ಥೆಯನ್ನು ನಿವಾರಿಸಲು ಕಾನೂನು ಮಾಡಬೇಕಾಯಿತು. ಇಂದು ಈ ಮೂಲದಿಂದ ಕೈಗಾರಿಕೆಗಳಿಗೆ ಹಣಕಾಸು ಒದಗಿಬರುತ್ತಿಲ್ಲ.

**3 ಸಾರ್ವಜನಿಕರ ಠೇವಣಿಗಳು:** ಕೈಗಾರಿಕಾ ಹಣಕಾಸಿನ ಇನ್ನೊಂದು ಪ್ರಮುಖ ಮೂಲವೆಂದರೆ ಸಾರ್ವಜನಿಕರ ಠೇವಣಿಗಳು. ಸಾರ್ವಜನಿಕರು ಬಡ್ಡಿಯ ಆಸೆಯಿಂದ ಕಂಪನಿಗಳಲ್ಲಿ ತಮ್ಮ ಹಣವನ್ನು ಠೇವಣಿ ಇಡುವುದುಂಟು. ಭಾರತದ ಅನೇಕ ಸಕ್ಕರೆ, ಹತ್ತಿಜವಳಿ, ಎಂಜಿನಿಯರಿಂಗ್ ಮತ್ತು ರಾಸಾಯನಿಕ ಕೈಗಾರಿಕೆಗಳಿಗೆ ಮತ್ತು ವ್ಯಾಪಾರ ಸಂಸ್ಥೆಗಳಿಗೆ ಈ ಮೂಲದಿಂದ ತಕ್ಕಮಟ್ಟಿಗೆ ಹಣ ಒದಗುತ್ತದೆ. ಸಾರ್ವಜನಿಕರ ಠೇವಣಿಗಳು ಅಲ್ಪಾವಧಿ ಹಣಕಾಸಿನ ರೂಪದಲ್ಲಿದ್ದರೂ ಅವನ್ನು ನವೀಕರಿಸಿದಾಗ ಮಧ್ಯಮಾವಧಿ ಮತ್ತು ದೀರ್ಘಾವಧಿ ಹಣಕಾಸಿನ ರೂಪ ತಳೆಯುತ್ತವೆ. ಆದರೆ ಸಾರ್ವಜನಿಕ ಠೇವಣಿಗಳು ಅನುಕೂಲಕಾಲದ ಬಂಧುಗಳಿದ್ದಂತೆ. ಕೈಗಾರಿಕೆ ತೊಂದರೆ ಅನುಭವಿಸುತ್ತಿದೆಯೆಂದು ಸಂಶಯ ಬಂದಕೂಡಲೇ ಠೇವಣಿದಾರರು ತಮ್ಮ ಠೇವಣಿಗಳನ್ನು ವಾಪಸು ಪಡೆಯುತ್ತಾರೆ. ಕೈಗಾರಿಕೆಯ ವಿಸ್ತರಣೆಗೆ, ಅದರಲ್ಲೂ ದೀರ್ಘಾವಧಿ ವಿಸ್ತರಣೆಗೆ ಇವು ಅಷ್ಟು ಸಾಧಕವಾಗುವುದಿಲ್ಲ.

**4 ಸಂಸ್ಥೆಗಳು:** ವಾಣಿಜ್ಯ ಬ್ಯಾಂಕುಗಳು, ವಿಮಾ ಸಂಸ್ಥೆಗಳು, ಕಂಪನಿಗಳು, ವಿನಿಯೋಜನ ನ್ಯಾಸಗಳು (ಇನ್ವೆಸ್ಟ್‌ಮೆಂಟ್ ಟ್ರಸ್ಟ್) ಮತ್ತು ಕೈಗಾರಿಕಾ ಬ್ಯಾಂಕುಗಳು ಈ ಗುಂಪಿಗೆ ಸೇರಿದವು. ಇವು ಎಲ್ಲ ಬಗೆಯ ಕೈಗಾರಿಕಾ ಹಣಕಾಸು ಒದಗಿಸುವುದರಲ್ಲಿ ಇತ್ತೀಚೆಗೆ ಬಹಳ ಪ್ರಾಮುಖ್ಯ ಪಡೆಯುತ್ತಿವೆ. ವಾಣಿಜ್ಯ ಬ್ಯಾಂಕುಗಳು ಸಾಮಾನ್ಯವಾಗಿ ಅಲ್ಪಾವಧಿ ಹಣಕಾಸನ್ನು ಪ್ರತಿಭೂತಿಗಳ ಆಧಾರದ ಮೇಲೆ ಅಥವಾ ಕಂಪನಿಗಳ ನಿರ್ದೇಶಕರ ಜಾಮೀನಿನ ಮೇಲೆ ಒದಗಿಸುತ್ತವೆ. ಕೆಲವೊಮ್ಮೆ ಅಲ್ಪಾವಧಿ ಸಾಲವನ್ನು ನವೀಕರಿಸಿ ಮಧ್ಯಮಾವಧಿ ಸಾಲವಾಗಿ ಪರಿವರ್ತಿಸುತ್ತವೆ. ಭಾರತದಲ್ಲಿ ಸ್ಥಾಪಿತವಾಗಿರುವ ಕೈಗಾರಿಕಾ ಹಣಕಾಸು ಕಾರ್ಪೊರೇಷನ್‌ಗಳ ಮೂಲಕ ದೀರ್ಘಾವಧಿ ಸಾಲವನ್ನು ಒದಗಿಸುವುದರಲ್ಲಿ ವಾಣಿಜ್ಯ ಬ್ಯಾಂಕುಗಳು ಪರೋಕ್ಷಪಾತ್ರ ವಹಿಸುತ್ತಿವೆ.

**ವಿಮಾ ಕಂಪನಿಗಳು:** ಕೈಗಾರಿಕಾ ಹಣಕಾಸನ್ನು ಒದಗಿಸುವುದರಲ್ಲಿ ವಿಮಾ ಕಂಪನಿಗಳು ಮುಖ್ಯ ಸಾಧನಗಳು. ಈ ಕಂಪನಿಗಳು ಕೈಗಾರಿಕೆಗಳ ಷೇರು ಮತ್ತು ಡಿಬೆಂಚರುಗಳನ್ನು ಕೊಳ್ಳುವುದರ ಮೂಲಕ ಅವಕ್ಕೆ ಅಗತ್ಯವಾದ ಹಣಕಾಸನ್ನು ಒದಗಿಸುತ್ತವೆ. ಭಾರತದ ಜೀವವಿಮಾ ಕಾರ್ಪೊರೇಷನ್ ಮತ್ತು ಸಾರ್ವತ್ರಿಕ ವಿಮಾ ಕ್ಷೇತ್ರ ಕೈಗಾರಿಕೆಗಳಿಗೆ ಕೋಟ್ಯಂತರ ರೂಪಾಯಿಗಳನ್ನು ವರ್ಷವರ್ಷವೂ ಒದಗಿಸುತ್ತಿವೆ.

**ಸ್ವಯಂ ಧನಪೋಷಣೆ:** ಒಂದು ಕೈಗಾರಿಕೆಯ ಲಾಭವನ್ನು ಆದಷ್ಟು ಮಟ್ಟಿಗೆ ಅದರಲ್ಲೇ ಉಳಿಯಗೊಟ್ಟು, ಕೈಗಾರಿಕೆಯನ್ನು ಬೆಳೆಸಲೂ ವಿಸ್ತರಿಸಲೂ ಇದನ್ನು ಉಪಯೋಗಿಸಿಕೊಳ್ಳುವುದುಂಟು. ಇದು ಸ್ವಯಂಧನಪೋಷಣೆ. ಇದು ಬಹಳ ಸುಲಭವಾದ ವಿಧಾನ. ಏಕೆಂದರೆ ಇದರಲ್ಲಿ ಬ್ಯಾಂಕುಗಳಿಂದಾಗಲಿ ಸಾರ್ವಜನಿಕರಿಂದಾಗಲಿ ಹಣ ಪಡೆಯುವಾಗ ಎದುರಿಸಬೇಕಾದ ತೊಂದರೆಗಳಿರುವುದಿಲ್ಲ. ಬ್ರಿಟನ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ ಕೈಗಾರಿಕಾಭಿವೃದ್ಧಿಯಲ್ಲಿ ಇದು ಒಂದು ಪ್ರಮುಖ ಅಂಶವಾಗಿದೆ.

**5 ಕೇಂದ್ರ ಮತ್ತು ರಾಜ್ಯ ಸರ್ಕಾರಗಳು:** ಒಂದನೆಯ ಮಹಾಯುದ್ಧದವರೆಗೆ ಸರ್ಕಾರಗಳು ಕೈಗಾರಿಕೆಗಳ ವಿಚಾರದಲ್ಲಿ ತಾಟಸ್ಥ್ಯ ನೀತಿ ಅನುಸರಿಸುತ್ತಿದ್ದುವು. ಈ ನೀತಿ ಕುಸಿದುಬಿದ್ದ ಮೇಲೆ, ಅದರಲ್ಲೂ 1930ರ ವಿಶ್ವ ಆರ್ಥಿಕ ಮುಗ್ಗಟ್ಟಿನ ಅನಂತರ, ಸರ್ಕಾರಗಳು ತಂತಮ್ಮ ದೇಶಗಳ ಕೈಗಾರಿಕೆಗಳಿಗೆ ಸಹಾಯ ಮಾಡಲು ಮುಂದೆ ಬಂದುವು. ಭಾರತದಲ್ಲೂ ಕೈಗಾರಿಕೆಗಳಿಗೆ ಹಣಕಾಸಿನ ಸಹಾಯ ನೀಡಲು ಅನೇಕ ಕಾನೂನುಗಳನ್ನು ಜಾರಿಗೆ ತಂದುವು. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದಾಗಿನಿಂದ ಸರ್ಕಾರವೂ ಕೈಗಾರಿಕೆಗಳನ್ನು ಸ್ಥಾಪಿಸಿ ನಡೆಸುವುದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿತು. ಈಗ ಭಾರತದಲ್ಲಿ ಸರ್ಕಾರಿ ಉದ್ಯಮವಲಯ ಮತ್ತು ಖಾಸಗಿ ಉದ್ಯಮವಲಯ–ಎಂಬ ಎರಡು ವಿಭಾಗಗಳು ಬೆಳೆದಿವೆ. ಸರ್ಕಾರಿ ವಲಯದ ಕೈಗಾರಿಕೆಗಳಿಗೆ ಬೇಕಾದ ಹಣಕಾಸಿನ ಆವಶ್ಯಕತೆಯನ್ನು ಸರ್ಕಾರವೇ ಸಂಪೂರ್ಣವಾಗಿ ಪೂರೈಸುತ್ತದೆ. ಕೈಗಾರಿಕಾ ಹಣಕಾಸು ಕಾರ್ಪೊರೇಷನ್‍ಗಳ ಮೂಲಕ ಖಾಸಗಿ ಕೈಗಾರಿಕೆಗಳಿಗೂ ಧನಪೋಷಣೆ ನೀಡುತ್ತಿದೆ.

**6 ವಿದೇಶಿ ಬಂಡವಾಳ:** ಎಲ್ಲ ದೇಶಗಳೂ ಕೈಗಾರಿಕಾ ಬೆಳವಣಿಗೆಯ ಆರಂಭದಲ್ಲಿ ವಿದೇಶಿ ಬಂಡವಾಳವನ್ನು ಹೇರಳವಾಗಿ ಉಪಯೋಗಿಸಿಕೊಂಡಿವೆ. ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ಅನ್ಯದೇಶಗಳ ಖಾಸಗಿ ಸಂಸ್ಥೆಗಳಿಂದಲೂ ಸರ್ಕಾರಗಳಿಂದಲೂ ಅಂತಾರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳ ಮೂಲಕವೂ ಹಣ ಪಡೆಯಲಾಗಿದೆ.

**ಕೈಗಾರಿಕಾ ಧನಪೋಷಣೆಯ ವಿಧಾನದಲ್ಲಿ ಇತ್ತೀಚಿನ ಬದಲಾವಣೆ:** ಕೈಗಾರಿಕೆಗಳು ಮೊದಮೊದಲು ಹಣಕಾಸಿನ ವಿಷಯದಲ್ಲಿ ಆದಷ್ಟೂ ಸ್ವಾವಲಂಬಿಗಳಾಗಿರುತ್ತಿದ್ದುವು. ಅಂದರೆ ತಮ್ಮ ಆಂತರಿಕ ಮೂಲಗಳಾದ ಮುಕ್ತ ಸಂಚಿತಿಗಳು, ಹಿಡಿದಿಟ್ಟ ಲಾಭ ಮುಂತಾದವುಗಳಿಂದಲೇ ಅಭಿವೃದ್ಧಿ ಸಾಧಿಸಿಕೊಳ್ಳುತ್ತಿದ್ದುವು. ಇತ್ತೀಚೆಗೆ ಕೈಗಾರಿಕೆಗಳು ಅಭಿವೃದ್ಧಿ ಕಾರ್ಯಗಳಿಗೆ ಹೊರಗಡೆಯ ಹಣಕಾಸಿನ ಮೂಲಗಳನ್ನು ನಿರೀಕ್ಷಿಸುತ್ತವೆ. ಈ ಪ್ರವೃತ್ತಿ ಸಹಜವೇ ಎನಿಸಿದೆ. ಒಂದು ದೇಶದ ಕೈಗಾರಿಕಾಭಿವೃದ್ಧಿ ಆದಂತೆಲ್ಲ ಕೈಗಾರಿಕೆಯ ಆಂತರಿಕ ಹಣಕಾಸಿನ ಮೂಲದ ಪ್ರಾಮುಖ್ಯ ಕಡಿಮೆಯಾಗಿ ಹೊರಗಿನ ಹಣಕಾಸಿನ ಮೂಲಗಳ ಪ್ರಾಮುಖ್ಯ ಹೆಚ್ಚುತ್ತದೆಯೆಂಬುದು ಕೆಲವು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಮೊದಮೊದಲು ಕೈಗಾರಿಕಾ ಕಂಪನಿಗಳು ನೇರವಾಗಿ ಉಳಿತಾಯಗಾರರಿಂದ ಹಣ ಪಡೆಯುತ್ತವೆ. ಅನಂತರ ಅದು ಪರೋಕ್ಷವಾಗಿ ಹಣಕಾಸಿನ ಸಂಸ್ಥೆಗಳ ಮೂಲಕ ಹಣ ಪಡೆಯುವ ಪದ್ಧತಿ ಬೆಳೆಯುತ್ತದೆ. ಈ ಪ್ರವೃತ್ತಿ ಆರ್ಥಿಕವಾಗಿ ಮುಂದುವರಿದಿರುವ ರಾಷ್ಟ್ರಗಳ ಆರ್ಥಿಕ ಚರಿತ್ರೆಯಲ್ಲಿ ವ್ಯಕ್ತವಾಗುತ್ತದೆ. ಭಾರತದಲ್ಲಿ ಕೂಡ ಹೊರಗಿನ ಹಣಕಾಸಿನ ಮೂಲಗಳಿಂದ ಕೈಗಾರಿಕೆಗಳು ಹಣ ಪಡೆಯುತ್ತಿರುವುದು ಹೆಚ್ಚಾಗುತ್ತಿದೆ. 1951ರಲ್ಲಿ ಕೈಗಾರಿಕೆಗಳು ಪಡೆದ ಹಣಕಾಸಿನಲ್ಲಿ ಹೊರಗಿನ ಮೂಲಗಳಿಂದ ಬಂದದ್ದು ಶೇ.46. 1968ರ ವೇಳೆಗೆ ಇದು ಸೇಕಡ 53ಕ್ಕೆ ಏರಿತ್ತು. ಒಟ್ಟಿನಲ್ಲಿ ಕೈಗಾರಿಕಾ ಹಣಕಾಸಿನ ಬೇಡಿಕೆ, ನೀಡಿಕೆ ಮತ್ತು ಮೂಲಗಳು ಬೆಳೆದಂತೆಲ್ಲ ಅದರ ವಿಧಾನವೂ ಬದಲಾಗುತ್ತಿದೆ. (ಎಂಎ.ಎಂ.)

**ಕೈಗಾರಿಕೆ :** ಕೈಗಾರಿಕೆ ಶಬ್ದದ ಸಮರ್ಪಕವಾದ ವ್ಯಾಖ್ಯೆ ನೀಡುವುದು ಕಷ್ಟ. ಉತ್ಪಾದನಕಾರ್ಯದಲ್ಲಿ ನಿರತವಾದ ಪರಸ್ಪರ ಸ್ಪರ್ಧಾನಿರತವಾದ ಹಲವು ಉದ್ಯಮಸಂಸ್ಥೆಗಳ ಗುಂಪನ್ನು ಕೈಗಾರಿಕೆ ಎಂದು ಕರೆಯಲಾಗುತ್ತದೆ. ಈ ಗುಂಪಿನಲ್ಲಿರುವ ಒಂದೊಂದು ಉದ್ಯಮ ಸಂಸ್ಥೆಯನ್ನೂ ಘಟಕವನ್ನೂ ಕೈಗಾರಿಕೆಯೆಂದು ಕರೆಯುವ ವಾಡಿಕೆಯೂ ಇದೆ. ಕೈಗಾರಿಕೆಯನ್ನು ಉತ್ಪಾದನ ವ್ಯವಸ್ಥೆಯ ಒಂದು ಘಟಕ ಎಂದು ಭಾವಿಸಿದ್ದೇ ಆದರೆ ಅದು ಯಾವುದಾದರೂ ಒಂದು ವಸ್ತುವನ್ನು ಉತ್ಪಾದಿಸುವುದರಲ್ಲಿ ನಿರತವಾಗಿರುವ ಎಲ್ಲ ಉದ್ಯಮಸಂಸ್ಥೆಗಳ ಸಮೂಹವನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ, ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಹಿಂದೂಸ್ತಾನ್ ಉಕ್ಕಿನ ಸಂಸ್ಥೆ ಮುಂತಾದವು– ಇವು ಒಂದೊಂದೂ ಉದ್ಯಮಸಂಸ್ಥೆ. ಪ್ರತಿ ಉದ್ಯಮಸಂಸ್ಥೆಯೂ ಒಂದೇ ಬಗೆಯ ವಸ್ತುವನ್ನು ತಯಾರಿಸುತ್ತದೆ. ಆದರೆ ಉತ್ಪಾದನೆ, ವಿಕ್ರಯ, ಬೆಲೆಯ ನಿಗದಿ ಮೊದಲಾದ ವಿಷಯಗಳಲ್ಲಿ ಪ್ರತಿಯೊಂದೂ ಸ್ವತಂತ್ರ ಧೋರಣೆ ಅನುಸರಿಸುತ್ತದೆ. ಪ್ರತಿಯೊಂದು ಉದ್ಯಮಸಂಸ್ಥೆಯೂ ಒಂದೊಂದು ಮಾಲೀಕತ್ವಕ್ಕೆ ಒಳಪಟ್ಟಿರುತ್ತದೆ. ಈ ಎಲ್ಲ ಉದ್ಯಮಸಂಸ್ಥೆಗಳನ್ನೂ ಒಟ್ಟಾರೆ ತೆಗೆದುಕೊಂಡ ಪಕ್ಷದಲ್ಲಿ ಇವು ಭಾರತದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಎನಿಸಿಕೊಳ್ಳುತ್ತವೆ. ಆದರೆ ಏಕಸ್ವಾಮ್ಯ ಪರಿಸ್ಥಿತಿಯಲ್ಲಿ ಅಥವಾ ರಾಷ್ಟ್ರೀಕರಣಗೊಂಡ ಕೈಗಾರಿಕೆಯಲ್ಲಿ ಒಂದೇ ಉದ್ಯಮ ಸಂಸ್ಥೆಯಿರುವುದುಂಟು. ಒಂದೊಂದು ಉದ್ಯಮ ಸಂಸ್ಥೆಯೂ ಬೇರೆ ಬೇರೆ ಕೈಗಾರಿಕೆಗಳಿಗೆ ಸಂಬಂಧಿಸಿದ ಹಲವಾರು ಉತ್ಪನ್ನಗಳನ್ನು ತಯಾರಿಸುವುದೂ ಉಂಟು. ಉತ್ಪಾದನ ವ್ಯವಸ್ಥೆಯಲ್ಲಿ ಒಂದೊಂದು ಪದಾರ್ಥವನ್ನು ತಯಾರಿಸುವ ಒಂದೊಂದು ಶಾಖೆಯನ್ನೂ ಒಂದೊಂದು ಕೈಗಾರಿಕೆಯೆಂದು ಪರಿಗಣಿಸುವುದು ಯಾವಾಗಲೂ ಸಮರ್ಪಕವೆನಿಸದು. ಅನೇಕ ವೇಳೆ ಒಂದು ಕೈಗಾರಿಕೆಯೂ ಇನ್ನೊಂದು ಕೈಗಾರಿಕೆಯೂ ಪರಸ್ಪರ ವ್ಯಾಪಿಸಿರುವುದುಂಟು. ಉದಾ: ಹಡಗು ನಿರ್ಮಾಣ.

ಪದಾರ್ಥದ ರೂಪವನ್ನು ಅಥವಾ ಗುಣವನ್ನು ಪರಿವರ್ತಿಸಿ ಅದಕ್ಕೆ ಉಪಯುಕ್ತತೆಯನ್ನು ದೊರಕಿಸಿಕೊಡುವ ಎಲ್ಲ ಕಾರ್ಯಗಳನ್ನೂ ಕೈಗಾರಿಕೆಯೆಂದು ಪರಿಗಣಿಸುವುದುಂಟು. ಇದರಲ್ಲೂ ನಾನಾ ವಿಧಗಳಿವೆ. ನಿಸರ್ಗದಲ್ಲಿ ದೊರಕುವ ಸಾಧನಗಳನ್ನು ತೆಗೆಯುವ, ಅವುಗಳ ಸ್ವರೂಪದಲ್ಲಿ ಪರಿವರ್ತನೆ ಮಾಡುವ ಚಟುವಟಿಕೆಗಳನ್ನು ಪ್ರಾಥಮಿಕ ಕೈಗಾರಿಕೆ ಎನ್ನುತ್ತಾರೆ. ಗಣಿಗಾರಿಕೆ, ಅರಣ್ಯವಸ್ತು ಉತ್ಪಾದನೆ ಇವು ಉದಾಹರಣೆಗಳು. ನಿಸರ್ಗದ ಸಹಕಾರದೊಡನೆ ಮಾನವನ ಶ್ರಮವನ್ನು ಮಿತಗೊಳಿಸಿ ಪದಾರ್ಥ ಉತ್ಪಾದಿಸುವ ಕೃಷಿ, ಪಶುಪಾಲನೆ ಇವನ್ನೂ ಸ್ಥೂಲವಾಗಿ ಪ್ರಾಥಮಿಕ ಕೈಗಾರಿಕೆಗಳ ಗುಂಪಿನಲ್ಲೇ ಸೇರಿಸುವುದುಂಟು. ಪ್ರಾಥಮಿಕ ಕೈಗಾರಿಕೆಗಳು ಇತರ ಕೈಗಾರಿಕೆಗಳಿಗೆ ಅಸ್ತಿಭಾರಪ್ರಾಯವಾದವು ಗಣಿ, ಕೃಷಿ ಇವುಗಳಿಂದ ಬಂದ ಸಾಮಗ್ರಿಗಳನ್ನು ವಿವಿಧ ರೀತಿ ಸಂಸ್ಕರಿಸಿ ಮಾರ್ಪಡಿಸುವ ಕಾರ್ಯಗಳು ಎರಡನೆಯ ಹಂತ. ಇವು ದ್ವಿತೀಯಕ ಕೈಗಾರಿಕೆಗಳು. ಅವನ್ನು ತಯಾರಿಕಾ ಕೈಗಾರಿಕೆಗಳೆನ್ನುತ್ತಾರೆ. ಸಕ್ಕರೆ, ಪಾತ್ರೆ, ಜವಳಿ ಮುಂತಾದವು ಉದಾಹರಣೆಗಳು. ಯಂತ್ರ, ಮೋಟಾರು ಮುಂತಾದವು ಹಲವು ವಸ್ತುಗಳ ಜೋಡಣೆಗಳಾಗಿರುವುದುಂಟು. ಇವು ಯಂತ್ರಗಳ ನಿರ್ಮಾಣಕಾರ್ಯದಲ್ಲಿ ತೊಡಗಿದ ಕೈಗಾರಿಕೆಗಳು. ಇವುಗಳದು ಮೂರನೆಯ ಹಂತ. ಅರಣ್ಯೋತ್ಪಾದನೆ, ಕೃಷಿ, ಪಶುಪಾಲನೆ, ಮತ್ಸ್ಯೋದ್ಯಮ ಇವನ್ನು ಬಿಟ್ಟು ಮಿಕ್ಕವನ್ನು ಕೈಗಾರಿಕೆಗಳೆಂದು ಸಾಮಾನ್ಯವಾಗಿ ಕರೆಯುತ್ತಾರೆ.

ಮೇಲೆ ಹೇಳಿದ ಅರ್ಥದಲ್ಲಿ ಕೈಗಾರಿಕೆಯನ್ನು ಮಾನವನ ಆರ್ಥಿಕಜೀವನ ವಿಕಾಸದ ಕೊನೆಯ ಹಂತವೆಂದು ಪರಿಗಣಿಸಬಹುದಾಗಿದೆ. ಬೇಟೆಯ ಯುಗ, ಪಶುಪಾಲನೆಯ ಯುಗ ಹಾಗೂ ಕೃಷಿಯುಗಗಳನ್ನು ದಾಟಿದ ಅನಂತರ ಮಾನವ ಕೈಗಾರಿಕೆಯನ್ನು ವ್ಯಾಪಕವಾಗಿ ಅವಲಂಬಿಸಿ ಕೈಗಾರಿಕಾಯುಗದಲ್ಲಿ ಕಾಲಿಟ್ಟ. ಬೇಟೆ ಅಥವಾ ಕೃಷಿ ಕಾರ್ಯಗಳಿಗೆ ಬೇಕಾಗುವ ಸಲಕರಣೆಗಳನ್ನು ಮಾನವ ತಯಾರಿಸಿಕೊಳ್ಳಲು ಉದ್ಯುಕ್ತನಾದಾಗಲೇ ಅವನು ಕೈಗಾರಿಕೆಯಲ್ಲೂ ತೊಡಗಿದನಾದರೂ ಆಗ ಅವನಿಗೆ ಅದೇ ಪ್ರಧಾನ ಉದ್ಯಮವಾಗಿರಲಿಲ್ಲ. ಕೈಗಾರಿಕೆಯ ಅಂದಿನ ಸ್ಥಿತಿಗೂ ಇಂದಿನದಕ್ಕೂ ಬಹಳ ಅಂತರವಿದೆ. ಇಂದಿನ ಕೈಗಾರಿಕೆಯ ಹಲವು ಲಕ್ಷಣಗಳನ್ನು ಗಮನಿಸಿದಾಗ ಇದರ ವ್ಯಾಪ್ತಿಯೇನೆಂಬುದು ತಿಳಿದುಬರುತ್ತದೆ.

ಮೂಲವಸ್ತುಗಳನ್ನು ಉಪಯೋಗಿಸಿಕೊಂಡು ಪದಾರ್ಥಗಳನ್ನು ತಯಾರಿಸುವುದು ಕೈಗಾರಿಕೆಯ ಉದ್ದೇಶವಾದ್ದರಿಂದ ಇದು ದ್ವಿತೀಯಕ ಹಂತವೆನಿಸುತ್ತದೆ. ಇಲ್ಲಿ ಪದಾರ್ಥಗಳನ್ನು ಮೂಲತಃ ವಿನಿಮಯ ಮಾಡುವ ದೃಷ್ಟಿಯಿಂದ ಉತ್ಪಾದಿಸಲಾಗುವುದೇ ಹೊರತು ಕೃಷಿ ಉದ್ಯಮದಂತೆ ಅನುಭೋಗಕ್ಕಲ್ಲ. ಸಾಮಾನ್ಯವಾಗಿ ಪದಾರ್ಥಗಳಿಗೆ ಬೇಡಿಕೆಯನ್ನು ನಿರೀಕ್ಷಿಸಿ ದೂರದ ಇಲ್ಲವೆ ಭವಿಷ್ಯದ ಮಾರುಕಟ್ಟೆಗಾಗಿ ಅವನ್ನು ಉತ್ಪಾದಿಸಲಾಗುತ್ತದೆ. ಆದರೆ ಈ ನಿರೀಕ್ಷೆ ತಪ್ಪಾದ ಪಕ್ಷದಲ್ಲಿ ಉದ್ಯಮಿ ನಷ್ಟವನ್ನು ಹೊರಲು ಸಿದ್ಧನಾಗಿರಬೇಕು. ಉತ್ಪಾದನೆಗೆ ಪ್ರೇರಣೆ ಸಾಮಾನ್ಯವಾಗಿ ಲಾಭಗಳಿಕೆ. ಈ ಕಾರಣದಿಂದ ಉದ್ಯಮಿಗಳಲ್ಲಿ ಸ್ಪರ್ಧೆ ಸಂಭವಿಸುತ್ತದೆ. ಸ್ಪರ್ಧೆಯಿರುವ ಕಾರಣದಿಂದಲೂ ತಮ್ಮ ವಸ್ತುಗಳಿಗೆ ಮಾರುಕಟ್ಟೆಯನ್ನು ನಿಶ್ಚಿತಪಡಿಸಿಕೊಳ್ಳುವ ದೃಷ್ಟಿಯಿಂದಲೂ ಉದ್ಯಮಿಗಳು ಜಾಹೀರಾತನ್ನು ನೀಡುವುದುಂಟು. ಸ್ಪರ್ಧೆಯನ್ನು ತೊಡೆಯುವ ದೃಷ್ಟಿಯಿಂದ ಉದ್ಯಮಕೂಟಗಳನ್ನು ಸೃಷ್ಟಿಕೊಳ್ಳುವುದೂ ಉಂಟು.

ವಿನಿಮಯದ ದೃಷ್ಟಿಯಿಂದಲೇ ಮತ್ತು ದೂರದ ಮಾರುಕಟ್ಟೆಗಳಿಗಾಗಿ ಸರಕು ಉತ್ಪಾದನೆಯಾಗುವುದರಿಂದ ಭೂರಿ ಉತ್ಪಾದನೆ ಇದರ ಮುಖ್ಯ ಲಕ್ಷಣ. ಕೈಗಾರಿಕೆಯ ಬೃಹದ್ಗಾತ್ರದಿಂದಾಗಿ ಸ್ವಾಭಾವಿಕವಾಗಿ ಶ್ರಮ, ಬಂಡವಾಳ ಇವನ್ನು ಅಧಿಕ ಪ್ರಮಾಣದಲ್ಲಿಯೇ ಬಳಸಲಾಗುವುದು. ಯಂತ್ರಗಳನ್ನೂ ಆಧುನಿಕ ಉತ್ಪಾದನ ಕ್ರಮಗಳನ್ನೂ ಅಧಿಕವಾಗಿ ಬಳಸಲಾಗುವುದು. ಆಧುನಿಕ ಉತ್ಪಾದನ ವ್ಯವಸ್ಥೆಯ ಇನ್ನೊಂದು ಮುಖ್ಯ ಅಂಶವೆಂದರೆ ಶ್ರಮವಿಭಜನೆ. ಉತ್ಪಾದನಕಾರ್ಯವನ್ನು ಅನೇಕ ಭಾಗಗಳನ್ನಾಗಿ ವಿಭಜಿಸಿ ಪ್ರತಿಭಾಗವನ್ನೂ ಅನೇಕ ಉಪಭಾಗಗಳನ್ನಾಗಿ ವಿಂಗಡಿಸಿ ಒಂದೊಂದು ಉಪಭಾಗವನ್ನೂ ದಕ್ಷನಾದ ಒಬ್ಬ ಅಥವಾ ಅನೇಕ ಕಾರ್ಮಿಕರಿಗೆ ವಹಿಸಿಕೊಡಲಾಗುತ್ತದೆ. ಕೈಗಾರಿಕೆಯಲ್ಲಿ ಕಾರ್ಮಿಕರನ್ನು ಅಧಿಕ ಸಂಖ್ಯೆಯಲ್ಲಿ ನೇಮಿಸಿಕೊಳ್ಳಲಾಗುವುದರಿಂದ ಕಾರ್ಮಿಕರಿಗೂ ಉದ್ಯಮಿಗಳಿಗೂ ನೇರ ಸಂಪರ್ಕವಿಟ್ಟುಕೊಳ್ಳುವ ಅನುಕೂಲವಿಲ್ಲದಂತಾಗಿ ತಪ್ಪು ತಿಳಿವಳಿಕೆಗೆ ಅವಕಾಶವುಂಟಾಗುತ್ತದೆ. ಅಲ್ಲದೆ ಕೈಗಾರಿಕೆಯೊಡೆಯರ ಮತ್ತು ಕಾರ್ಮಿಕರ ಹಿತಗಳು

ಸ್ಪರ್ಧಾತ್ಮಕವಾಗಿ ಪರಿಣಮಿಸಿ, ಇದರಿಂದ ವಿವಾದಗಳು ಉದ್ಭವಿಸುವುದುಂಟು. ಕಾರ್ಮಿಕರು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ದೃಷ್ಟಿಯಿಂದ ಕಾರ್ಮಿಕ ಸಂಘಗಳನ್ನು ರಚಿಸಿಕೊಂಡಿರುತ್ತಾರೆ. (ಎಬಿ.ಎ.;ಟಿ.ಎಸ್.)

**ಕೈಗಾರಿಕೆಗಳ ನಿಯಂತ್ರಣ :** ಕೈಗಾರಿಕೆಯನ್ನು ಎರಡು ತೆರಗಳಲ್ಲಿ ನಿಯಂತ್ರಿಸಬಹುದು: 1 ಕೈಗಾರಿಕೆಯಿಂದಲೇ, 2 ಸರ್ಕಾರದ ಮೂಲಕ. ಒಂದು ಕೈಗಾರಿಕೆಯ ಸ್ವನಿಯಂತ್ರಣ ಸಾಮಾನ್ಯವಾಗಿ ಕೈಗಾರಿಕೆಗಳ ಸಂಘಗಳಿಂದಲೂ ವಾಣಿಜ್ಯ ಸಂಸ್ಥೆಗಳಿಂದಲೂ ಜರಗುತ್ತದೆ. ಉತ್ಪತ್ತಿಯಲ್ಲಿ ಇಷ್ಟು ಭಾಗವನ್ನು ಹೊರಗೆ ರಫ್ತು ಮಾಡಬೇಕೆಂದು ಅವು ವಿಧಿಸಬಹುದು. ಉತ್ಪತ್ತಿ ಹೆಚ್ಚಾಗಿ ಸರಕುಗಳಿಗೆ ಬೇಡಿಕೆ ಲಭ್ಯವಾಗುವುದು ಕಷ್ಟವೆನಿಸಿದಾಗ, ಅವು ತಮ್ಮ ಸದಸ್ಯ ಸಂಸ್ಥೆಗಳ ಉತ್ಪಾದನೆಯನ್ನು ಪರಿಮಿತಗೊಳಿಸಬಹುದು. ಬಗೆಬಗೆಯ ಸರಕುಗಳ ತಯಾರಿಕೆಯನ್ನು ಕ್ರಮಪಡಿಸಲು ಯತ್ನಿಸಬಹುದು.

ಆದರೆ ಇಂಥ ನಿಯಂತ್ರಣಗಳೆಲ್ಲ ಸ್ವಪ್ರೇರಿತವಾದವು. ಕೈಗಾರಿಕೆಯ ಉತ್ಪಾದಕರು ತಮ್ಮತಮ್ಮಲ್ಲಿ ಮಾಡಿಕೊಂಡ ಒಪ್ಪಿಗೆಯ ಪ್ರಕಾರ ಈ ನಡೆವಳಿಕೆಗಳು ಜರಗುತ್ತವೆ. ಇವನ್ನು ಪರಸ್ಪರ ಸಮ್ಮತಿಯಿಂದ ಬದಲಾಯಿಸಬಹುದು ಅಥವಾ ಕೊನೆಗೊಳಿಸಬಹುದು. ಅಥವಾ ಕೈಗಾರಿಕೆಯ ಒಂದು ವಿಭಾಗ ಈ ನಿರ್ಬಂಧಕ್ಕೆ ಒಳಪಡದೆ ಇರಬಹುದು. ಸ್ವನಿಯಂತ್ರಣಕ್ಕೆ ಕಾನೂನಿನ ಬೆಂಬಲವಿಲ್ಲ. ಒಪ್ಪಂದವನ್ನು ಮುರಿದವರನ್ನು ಯಾಕೆ ಹೀಗೆ ಮಾಡಿದಿರಿ ಎಂದು ಕೇಳುವ ಹಾಗಿಲ್ಲ; ತಪ್ಪಿತಸ್ಥರೆಂದು ಕಂಡುಬಂದರೆ ಅವರನ್ನು ಶಿಕ್ಷಿಸುವ ಹಾಗೂ ಇಲ್ಲ.

ವಿಸ್ತೃತವೂ ಪರಿಣಾಮಕಾರಿಯೂ ಆದ ಕೈಗಾರಿಕಾ ನಿಯಂತ್ರಣವನ್ನು ಸರ್ಕಾರಗಳು ತಂತಮ್ಮ ದೇಶಗಳ ವಿಧಾನಮಂಡಲಗಳು ಅಂಗೀಕರಿಸಿದ ಕಾಯಿದೆಗಳ ಮತ್ತು ಅವುಗಳ ನಿಯಮಾವಳಿಗಳ ಮೂಲಕ ಮಾಡುತ್ತವೆ. ಇದಕ್ಕೆ ಕಾನೂನಿನ ಬೆಂಬಲವಿರುತ್ತದೆ. ಇದು ಅನುಮಿತಿ ಮತ್ತು ಶಿಕ್ಷೆ ಇವೆರಡು ರೂಪಗಳನ್ನೂ ಉಳ್ಳದ್ದು.

ಭಾರತದಲ್ಲಿ ಹೊಸ ಕೈಗಾರಿಕೆಗಳ ಪ್ರತಿಷ್ಠಾಪನೆ, ಸ್ಥಳ, ಗಾತ್ರ ಇವು ಕೈಗಾರಿಕಾಭಿವೃದ್ಧಿ ಮತ್ತು ನಿಯಂತ್ರಣ ಕಾಯಿದೆಯಿಂದ ನಿಯಂತ್ರಿತವಾಗುತ್ತವೆ. ಇದಲ್ಲದೆ, ಒಂದು ಕಂಪನಿ ಎಷ್ಟು ಬಂಡವಾಳವನ್ನು ಸಂಗ್ರಹಿಸಬಹುದು, ಇದರಲ್ಲಿ ಷೇರು ಬಂಡವಾಳ ಎಷ್ಟು, ವಿತ್ತೀಯ ಸಂಸ್ಥೆಗಳಿಂದ ಎಷ್ಟನ್ನು ಸಾಲವಾಗಿ ತೆಗೆದುಕೊಳ್ಳಬಹುದು, ಹೊಸ ಕೈಗಾರಿಕೆಗಳಲ್ಲಿ ವಿದೇಶಿ ಬಂಡವಾಳಕ್ಕೆ ಎಷ್ಟರಮಟ್ಟಿಗೆ ಅವಕಾಶ ಕೊಡಬಹುದು ಇವೇ ಮುಂತಾದವೆಲ್ಲವನ್ನೂ ಭಾರತ ಸರ್ಕಾರ ಹಿಡಿತದಲ್ಲಿಟ್ಟುಕೊಳ್ಳುತ್ತದೆ. ಇದರ ಜೊತೆಗೆ, ಎಲ್ಲ ಸಾರ್ವಜನಿಕ ಮತ್ತು ಖಾಸಗಿ ಕೂಡು ಬಂಡವಾಳ ಕಂಪನಿಗಳೂ ನೋಂದಣಿ ಮಾಡಿಕೊಳ್ಳಬೇಕೆಂದು ವಿಧಿಸುವ ಭಾರತೀಯ ಕಂಪನಿಗಳ ಕಾಯಿದೆ ಸಹ ಜಾರಿಯಲ್ಲಿದೆ. ಇದರ ಪ್ರಕಾರ ಕೈಗಾರಿಕೆಗಳ ಆಡಳಿತದ ಮೇಲೆ ಹತೋಟಿಯಿರುವುದಲ್ಲದೆ ನಿಯಮಗಳನ್ನು ಮುರಿದಾಗ ಶಿಕ್ಷೆಗಳನ್ನೂ ವಿಧಿಸಲಾಗುತ್ತದೆ. ಇಷ್ಟಲ್ಲದೆ ವಿವಿಧ ಕೈಗಾರಿಕೆಗಳ ಉತ್ಪಾದನೆ, ವಿತರಣೆ ಮತ್ತು ಬೆಲೆಗಳೂ ಕಾಲಕಾಲಕ್ಕೆ ನಿಯಂತ್ರಿತವಾಗುತ್ತವೆ. ಅಂಥ ಕೈಗಾರಿಕೆಗಳ ಕೆಲವು ಉದಾಹರಣೆಗಳೆಂದರೆ, ಉಕ್ಕು, ಸಿಮೆಂಟ್, ಕಲ್ಲಿದ್ದಲು, ಸಕ್ಕರೆ, ಪೆಟ್ರೋಲಿಯಂ. ವಸ್ತುತಃ ಒಂದಲ್ಲ ಒಂದು ವಿಧದಲ್ಲಿ ನಿಯಂತ್ರಣಕ್ಕೆ ಒಳಗಾಗದ ದೊಡ್ಡ ಉದ್ಯಮವೇ ಭಾರತದಲ್ಲಿಲ್ಲವೆನ್ನಬಹುದು.

ಕೈಗಾರಿಕೆಗಳಲ್ಲಿ ಮುಂದುವರಿದಿರುವ ದೇಶಗಳಲ್ಲಿ ಕೈಗಾರಿಕೆಗಳ ಏಕಸ್ವಾಮ್ಯಗಳನ್ನು ಕಾನೂನಿನಿಂದ ನಿಯಂತ್ರಿಸಲಾಗಿದೆ. ಯಾವುದೊಂದು ಉತ್ಪಾದನ ಸಂಸ್ಥೆಯಾಗಲಿ, ಅಂಥ ಸಂಸ್ಥೆಗಳ ಸಂಘವಾಗಲಿ, ಇತರ ಉತ್ಪಾದಕರ ಮತ್ತು ಅನುಭೋಗಿಗಳ ಹಿತಕ್ಕೆ ಧಕ್ಕೆ ಬರುವಷ್ಟು ಪ್ರಬಲವಾಗದಂತೆ ಮಾಡುವುದು ಇಂಥ ಕಾನೂನಿನ ಉದ್ದೇಶ. (ಎಚ್.ವಿ.)

**ಕೈಗಾರಿಕೆಗಳ ರಕ್ಷಣೆ :** ಒಂದು ದೇಶದ ಕೈಗಾರಿಕೆಗಳು ವಿದೇಶಿ ಸ್ಪರ್ಧೆಯನ್ನೆದುರಿಸಬೇಕಾದ ಪರಿಸ್ಥಿತಿಯಿಂದ ಅವನ್ನು ಪಾರುಮಾಡಿ, ಆ ಪರಿಸ್ಥಿತಿಯಲ್ಲಿ ಅವು ಗಳಿಸಬಹುದಾಗಿದ್ದದ್ದಕ್ಕಿಂತ ಹೆಚ್ಚು ಗಳಿಸುವುದು ಸಾಧ್ಯವಾಗುವಂತೆ ಮಾಡಲು ಸರ್ಕಾರ ಕೈಗೊಳ್ಳುವ ಕಾರ್ಯನೀತಿ (ಪ್ರೊಟೆಕ್ಷನ್ ಆಫ್ ಇಂಡಸ್ಟ್ರೀಸ್). ಆಮದುಗಳೊಂದಿಗೆ ಸ್ಪರ್ಧಿಸುತ್ತಿರುವ, ವಾಸ್ತವವಾಗಿ ಸರಕನ್ನು ರಫ್ತು ಮಾಡುತ್ತಿರುವ, ಭವಿಷ್ಯದಲ್ಲಿ ಸರಕನ್ನು ರಫ್ತು ಮಾಡಬಹುದಾದ ಕೈಗಾರಿಕೆಗಳಿಗೆ ನೆರವು ನೀಡುವ ಸರ್ಕಾರದ ಎಲ್ಲ ಕಾರ್ಯನೀತಿಗಳನ್ನೂ ಒಟ್ಟಿನಲ್ಲಿ ರಕ್ಷಣ ವ್ಯವಸ್ಥೆಯೆಂದು ಪರಿಗಣಿಸುವ ರೂಢಿಯುಂಟು. ರಕ್ಷಣೋಪಾಯಗಳು ಮುಖ್ಯವಾಗಿ ನಾಲ್ಕು: 1 ದೇಶೀಯ ಉತ್ಪಾದಕರಿಗೆ ಸಹಾಯಧನ, 2 ಆಮದುಗಳ ಮೇಲೆ ತೆರಿಗೆ, 3 ಆಮದುಗಳ ಪರಿಮಾಣಾತ್ಮಕ ನಿಯಂತ್ರಣ ಮತ್ತು 4 ಸರ್ಕಾರಿ ವ್ಯಾಪಾರ. ಆಮದುಗಳ ಮೇಲೆ ತೆರಿಗೆ ವಿಧಿಸುವುದು ಮತ್ತು ಅದರಿಂದ ಬಂದ ಮೊಬಲಗನ್ನು ದೇಶೀಯ ಕೈಗಾರಿಕೆಗಳಿಗೆ ಸಹಾಯಧನದ ರೂಪದಲ್ಲಿ ನೀಡುವುದು ಐತಿಹಾಸಿಕವಾಗಿ ಮುಖ್ಯವಾದ ಉಪಾಯ. ಆಮದು ಸುಂಕಗಳನ್ನು ಅವುಗಳ ಉದ್ದೇಶ ಮತ್ತು ಸ್ವರೂಪಗಳಿಗೆ ಅನುಗುಣವಾಗಿ ವಿಂಗಡಿಸಬಹುದು. ಸುಂಕದಿಂದ ಸಾಮಾನ್ಯವಾಗಿ ಸರ್ಕಾರಕ್ಕೆ ವರಮಾನ ಪ್ರಾಪ್ತವಾಗುತ್ತದೆ; ಸ್ವದೇಶಿ ಉತ್ಪಾದನೆಗೆ ರಕ್ಷಣೆ ಲಭ್ಯವಾಗುತ್ತದೆ. ರಕ್ಷಿತ ಉತ್ಪನ್ನವನ್ನು ಹೆಚ್ಚು ಬಳಸದಂತೆ ಅದು ನಿರುತ್ತೇಜಿಸುತ್ತದೆ; ಆಮದನ್ನು ಕಡಿಮೆಗೊಳಿಸುತ್ತದೆ. ಇಷ್ಟೆಲ್ಲ ಸಾಧ್ಯವಾದರೂ ಮೂಲತಃ ವರಮಾನ ಪಡೆಯುವ ಉದ್ದೇಶದಿಂದ, ಒಂದು ಪದಾರ್ಥದ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ, ಇಲ್ಲವೇ ವಿದೇಶಿ ವಿನಿಮಯದ ಪಾವತಿ ಶಿಲ್ಕಿನ ಪ್ರತಿಕೂಲ ಸ್ಥಿತಿಯನ್ನು ನಿವಾರಿಸುವ ಉದ್ದೇಶದಿಂದ ಸುಂಕವನ್ನು ವಿಧಿಸಬಹುದು. ಒಟ್ಟಿನಲ್ಲಿ ಸ್ಥೂಲವಾಗಿ ರಕ್ಷಣೆ ಅಥವಾ ವರಮಾನಗಳಿಕೆಯ ಉದ್ದೇಶದಿಂದ ಸುಂಕ ವಿಧಿಸುವುದು ವಾಡಿಕೆ. ವಾಸ್ತವವಾಗಿ ಸುಂಕಗಳ ಉದ್ದೇಶಗಳೂ ಅವುಗಳ ನಿಜಪರಿಣಾಮಗಳೂ ಪರಸ್ಪರ ಬೆರೆತುಕೊಂಡು, ಅವುಗಳ ಸ್ಪಷ್ಟವಾದ ವಿಶ್ಲೇಷಣೆ ಕಠಿಣವಾಗುತ್ತದೆ.

ರಕ್ಷಣಾನೀತಿಯ ಪರವಾಗಿಯೂ ವಿರೋಧವಾಗಿಯೂ ಇತ್ತೀಚಿನ ಇತಿಹಾಸದ ಉದ್ದಕ್ಕೂ ತೀವ್ರ ವಾದ-ಪ್ರತಿವಾದಗಳು ಬೆಳೆದಿವೆ. ಯಾವ ಕೈಗಾರಿಕೆಗಳಿಗೆ ರಕ್ಷಣೆ ನೀಡಲಾಗುತ್ತದೆಯೋ ಆ ಕೈಗಾರಿಕೆಗಳಲ್ಲಿ ಉದ್ಯೋಗಕ್ಕೆ ಪ್ರೋತ್ಸಾಹ ಲಭ್ಯವಾಗುತ್ತದೆ. ಅದರಿಂದ ಉದ್ಯೋಗ ವೃದ್ಧಿಗೊಳ್ಳುತ್ತದೆ-ಎಂಬುದು ಇದರ ಪರವಾದ ಒಂದು ವಾದ. ನಿರುಪಾಧಿಕ ವ್ಯಾಪಾರದ ಸಮರ್ಥಕರು ಈ ವಾದವನ್ನೊಪ್ಪುವುದಿಲ್ಲ. ರಕ್ಷಿತ ಕೈಗಾರಿಕೆಗಳಲ್ಲಿ ಉದ್ಯೋಗ ಹೆಚ್ಚುವುದಾದರೂ ಬೇರೆ ಕ್ಷೇತ್ರಗಳಿಂದ ಉದ್ಯೋಗಿಗಳು ಇಲ್ಲಿಗೆ ಹೆಚ್ಚಾಗಿ ಬರುವುದರಿಂದ ಇತರ ಕ್ಷೇತ್ರಗಳಲ್ಲಿ ಉದ್ಯೋಗದ ಮಟ್ಟ ಇಳಿಯುತ್ತದೆ. ಆದ್ದರಿಂದ ದೇಶದಲ್ಲಿ ಒಟ್ಟು ಉದ್ಯೋಗಮಟ್ಟ ಅಧಿಕವಾಗದು. ಅಧಿಕ ಉತ್ಪಾದಕತೆಯುಳ್ಳ ಕೈಗಾರಿಕೆಗಳಿಂದ ಕಡಿಮೆ ಉತ್ಪಾದಕತೆಯ ಕೈಗಾರಿಕೆಗೆ ಉದ್ಯೋಗ ಹರಿಯುವುದರಿಂದ ಒಟ್ಟಿನಲ್ಲಿ ದೇಶದ ಆರ್ಥಿಕತೆಗೆ ನಷ್ಟವಾಗುತ್ತದೆ-ಎಂದು ಇವರು ವಾದಿಸುತ್ತಾರೆ.

ರಕ್ಷಣೆಯ ಪರವಾದ ಇನ್ನೊಂದು ವಾದವೆಂದರೆ ವರಮಾನದ ಪುನರ್ವಿಂಗಡಣೆಯನ್ನು ಕುರಿತದ್ದು. ಒಂದು ಗೊತ್ತಾದ ದಿಕ್ಕಿನಲ್ಲಿ ಜನರ ವಾಸ್ತವ ವರಮಾನದ ಹಂಚಿಕೆಯಾಗುವುದಕ್ಕೆ ಇದರಿಂದ ಸಹಾಯವಾಗುತ್ತದೆ. ರಕ್ಷಿತ ಕೈಗಾರಿಕೆಯಲ್ಲಿ ನಿರತರಾಗಿರುವವರ ವರಮಾನ ಉತ್ತಮಗೊಳ್ಳುತ್ತದೆ. ಆದರೆ ಇನ್ನು ಕೆಲವರಿಗೆ ತೊಂದರೆಯೂ ಆಗಬಹುದು. ರಕ್ಷಿತ ಕೈಗಾರಿಕೆಗಳ ಪದಾರ್ಥಗಳ ಬಳಕೆದಾರರಿಗೆ ಇದರಿಂದ ನಷ್ಟವಾಗುತ್ತದೆ. ಅವರು ಅವಕ್ಕೆ ಹೆಚ್ಚು ಬೆಲೆ ಕೊಡಬೇಕು. ಕೈಗಾರಿಕೆಗಳಿಗೆ ಸರ್ಕಾರ ಸಹಾಯಧನ ನೀಡಿ ಅವುಗಳ ಪದಾರ್ಥಗಳ ಬೆಲೆ ಏರದಂತೆ ಮಾಡಬಹುದು. ಆದರೆ ಸರ್ಕಾರ ಸಹಾಯಧನ ನೀಡುವುದು ತೆರಿಗೆದಾರರ ಹಣದಿಂದಲೇ ಆದ್ದರಿಂದ ಅಂತಿಮವಾಗಿ ಸಮಾಜ ಈ ನಷ್ಟ ಭರಿಸಬೇಕಾಗುತ್ತದೆ. ಕಾರ್ಮಿಕರಿಗಾಗಿ ಮತ್ತು ಕಚ್ಚಾಸಾಮಗ್ರಿಗಳಿಗಾಗಿ ರಕ್ಷಿತ ಕೈಗಾರಿಕೆಯೊಂದಿಗೆ ಸ್ಪರ್ಧಿಸುವ ಇತರ ಕೈಗಾರಿಕೆಗಳಿಗೂ ತೊಂದರೆಯಾಗುತ್ತದೆ. ಕಾರ್ಮಿಕರನ್ನೂ ಕಚ್ಚಾ ಸಾಮಗ್ರಿಗಳನ್ನೂ ತಮ್ಮೆಡೆಗೆ ಸೆಳೆದುಕೊಳ್ಳಲು ಅವು ಹೆಚ್ಚು ವೆಚ್ಚ ಮಾಡಬೇಕಾಗಿ ಬರಬಹುದು. ಹೀಗೆ ಒಂದು ಕೈಗಾರಿಕೆಗೆ ರಕ್ಷಣೆ ನೀಡುವುದರಿಂದ ದೇಶದ ಅರ್ಥವ್ಯವಸ್ಥೆಯ ವಿವಿಧ ಹಿತಗಳ ನಡುವೆ ಘರ್ಷಣೆ ಸಂಭವಿಸಬಹುದು. ಇದು ಪರಸ್ಪರ ವಿರುದ್ಧವಾದ ರಾಜಕೀಯ ಒತ್ತಡಗಳಿಗೆ ಕಾರಣವಾಗಬಹುದು. ಆದರೆ ದೇಶದ ಬಹುಸಂಖ್ಯಾತರು ಕೃಷಿಯಲ್ಲೇ ನಿರತರಾಗಿರುವಂಥ ದೇಶಗಳಲ್ಲಿ-ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೃಷಿಯಿಂದ ಕೈಗಾರಿಕೆಗಳಿಗೆ ಜನರು ಚಲಿಸುವಂತೆ ಮಾಡಲು ಕೈಗಾರಿಕೆಗಳಿಗೆ ರಕ್ಷಣೆ, ಪ್ರೋತ್ಸಾಹ ಯುಕ್ತವಾದದ್ದೆಂದು ಹೇಳಲಾಗಿದೆ.

ರಕ್ಷಣೆಯ ಪರವಾದ ಅತ್ಯಂತ ಹಳೆಯ ಮತ್ತು ಗೌರವಾನ್ವಿತ ವಾದವೆಂದರೆ ಶೈಶವಕೈಗಾರಿಕೆಯ ವಾದ. ಕಾಲಕ್ರಮದಲ್ಲಿ ಈ ವಾದ ಹೆಚ್ಚು ನವಿರಾಗಿ ಪರಿಣಮಿಸಿದೆ. ಕೆಲವು ಕೈಗಾರಿಕೆಗಳು ಆರಂಭದಶೆಯಲ್ಲಿ ಲಾಭಪ್ರದವಾಗಿರುವುದಿಲ್ಲ. ಅವುಗಳ ಉತ್ಪಾದನೆಯ ಗಾತ್ರ ಹೆಚ್ಚಿದಂತೆ ಉತ್ಪನ್ನ ಘಟಕದ ಉತ್ಪಾದನವೆಚ್ಚ ತಗ್ಗುತ್ತ ಸಾಗುತ್ತದೆ. ಅಂಥ ಕೈಗಾರಿಕೆಗಳ ಉತ್ಪಾದನವೆಚ್ಚ ಸಾಕಷ್ಟು ಕಡಿಮೆಯಾಗಿ ಆ ಕೈಗಾರಿಕೆಗಳು ಸ್ಪರ್ಧಾತ್ಮಕ ಘಟ್ಟ ಮುಟ್ಟುವವರೆಗೂ-ಅನ್ಯದೇಶಗಳ ಬೃಹತ್ ಕೈಗಾರಿಕೆಗಳ ಉತ್ಪನ್ನಗಳೊಂದಿಗೆ ಸ್ಪರ್ಧಿಸುವ ಬೆಲೆಗೆ ಸರಕನ್ನು ನೀಡುವ ಹಂತ ತಲಪುವವರೆಗೂ-ಅವಕ್ಕೆ ರಕ್ಷಣೆ ನೀಡಬೇಕು. ಆಂತರಿಕ ಆರ್ಥಿಕ ಉಳಿತಾಯ ಸಾಧನೆಗೆ ಇದು ಅವಶ್ಯ-ಎಂದು ವಾದಿಸಲಾಗಿದೆ. ಆದರೆ ಒಂದು ಉದ್ಯಮ ಭವಿಷ್ಯದಲ್ಲಿ ಮಿತವ್ಯಯದಲ್ಲಿ ಉತ್ಪಾದನ ಕಾರ್ಯದಲ್ಲಿ ತೊಡಗುವುದು ಸಾಧ್ಯವಾಗುವುದಾದರೆ, ಹಿಂದಿನ ನಷ್ಟಾನ್ನೆಲ್ಲ ಅನಂತರದ ಲಾಭದಿಂದ ತೊಡೆಯಬಹುದೆಂಬ ಭರವಸೆ ಇರುವುದಾದರೆ, ಅದಕ್ಕೆ ರಕ್ಷಣೆಯೇಕೆ?-ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಆರಂಭದ ವರ್ಷಗಳಲ್ಲಿ ಸಾಲ ಮಾಡಿ ಅನಂತರ ಅದನ್ನು ತೀರಿಸಬಹುದು. ಆದರೆ ಇಂಥ ಶಕ್ತಿಯಿಲ್ಲದ ಕೈಗಾರಿಕೆಗಳ ಆಂತರಿಕ ದೌರ್ಬಲ್ಯ ನಿವಾರಣೆಗಾಗಿ ರಕ್ಷಣೆ ಅಗತ್ಯವಾಗುತ್ತದೆ. ಅಲ್ಲದೆ ಒಂದು ಪದಾರ್ಥದ ಉತ್ಪಾದನೆಯಲ್ಲಿ ನಿರತವಾದ ಎಲ್ಲ ಉದ್ಯಮಗಳ ಒಟ್ಟು ಬೆಳೆವಣಿಗೆಗೆ ರಕ್ಷಣೆ ಅಗತ್ಯವಾಗುತ್ತದೆ.

ಕೈಗಾರಿಕಾ ಕ್ಷೇತ್ರವನ್ನು ತಡವಾಗಿ ಪ್ರವೇಶಿಸುವ ಎಲ್ಲ ರಾಷ್ಟ್ರಗಳಿಗೂ ಶೈಶವ ಕೈಗಾರಿಕಾವಾದ ಅನುಕೂಲಕರವಾಗಿದೆ. ಆ ರಾಷ್ಟ್ರಗಳಲ್ಲಿ ಕೈಗಾರಿಕೆಗಳಿಗೆ ಭವ ಅನುಕೂಲ ವಿಶೇಷವಾಗಿರುತ್ತದೆಯಾದರೂ ಸ್ವಲ್ಪಕಾಲದವರೆಗೆ ವಿದೇಶಿ ಸ್ಪರ್ಧೆಯನ್ನು ತಡೆಹಿಡಿಯದಿದ್ದರೆ

ಅವು ಫಲಪ್ರದವಾಗಿ ಬೆಳೆಯಲಾರವು. ಆದರೆ ಈ ವಾದಕ್ಕೆ ಎರಡು ಆಕ್ಷೇಪಣೆಗಳುಂಟು: ಒಮ್ಮೆ ಒಂದು ಕೈಗಾರಿಕೆ ಶೈಶವಸ್ಥಿತಿಯಲ್ಲಿದೆಯೆಂದು ಪರಿಗಣಿಸಿದರೆ ಅದು ಎಂದೆಂದೂ ಅದೇ ಸ್ಥಿತಿಯಲ್ಲೇ ಇರುತ್ತದೆ. ರಕ್ಷಣೆಯ ಮರೆಯಲ್ಲಿ ಕೆಲವು ಆಸಕ್ತ ಹಿತಗಳು ಮನೆ ಮಾಡಿಕೊಂಡು, ಮುಂದೆ ರಕ್ಷಣೆಯನ್ನು ತೆಗೆದುಹಾಕುವ ಕ್ರಮವನ್ನು ಪ್ರಬಲವಾಗಿ ವಿರೋಧಿಸುತ್ತವೆ. ರಕ್ಷಣೆಯ ನೀತಿಯನ್ನು ಒಮ್ಮೆ ಮಾನ್ಯಮಾಡಿದ್ದೇ ಆದರೆ ಅನೇಕ ಬಗೆಯ ಕೈಗಾರಿಕೆಗಳು ಅದಕ್ಕಾಗಿ ಬೇಡಿಕೆ ಮುಂದೊಡ್ಡುತ್ತವೆ. ಇದು ರಾಜಕೀಯವಾಗಿ ಅನೇಕ ಅನೈತಿಕ ವ್ಯಾಪಾರಗಳಿಗೆ ಎಡೆಕೊಡುವುದುಂಟು. ಹೀಗಾಗದಂತೆ ಎಚ್ಚರ ವಹಿಸುವುದು ಅಗತ್ಯ.

ಒಂದು ದೇಶದ ನೈಸರ್ಗಿಕ ಸಂಪತ್ತು ಅನ್ಯದೇಶಗಳಿಗೆ ಹರಿದು ಹೋಗದ ಹಾಗೆ ಮಾಡಲು ಕೈಗಾರಿಕೆಗಳ ರಕ್ಷಣ ನೀತಿಯಿಂದ ಸಹಾಯವಾಗುತ್ತದೆ. ಕೃಷಿ ಉತ್ಪನ್ನ, ಕಲ್ಲಿದ್ದಲು, ಮ್ಯಾಂಗನೀಸ್, ಅಭ್ರಕ ಮುಂತಾದ ಸಾಮಗ್ರಿಗಳನ್ನು ರಫ್ತು ಮಾಡುವ ದೇಶಗಳೇ ಸ್ವತಃ ಅವನ್ನು ಬಳಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸಿದರೆ ಅವಕ್ಕೆ ಉತ್ಪಾದನೆಯ ಲಾಭವೂ ದೊರಕುತ್ತದೆ. ನಿಸರ್ಗದ ಸಂಪನ್ಮೂಲಗಳು ಅಮೂಲ್ಯವಾದವು. ರಫ್ತಿಗಾಗಿ ಅವನ್ನು ಬರಿದು ಮಾಡುವುದು ತರವಲ್ಲ. ಈ ಕಾರಣಗಳಿಂದಾಗಿ ಸ್ವದೇಶದ ಕೈಗಾರಿಕೆಗಳ ಸ್ಥಾಪನೆ-ಬೆಳೆವಣಿಗೆಗಳಿಗೆ ಪ್ರೋತ್ಸಾಹ, ರಕ್ಷಣೆ ಅಗತ್ಯ.

ಮತ್ತೆ ಕೆಲವು ಕೈಗಾರಿಕೆಗಳಿಗೆ ಒಂದು ದೇಶದಲ್ಲಿ ಅನುಕೂಲ ಪರಿಸ್ಥಿತಿ ಇಲ್ಲದಿದ್ದರೂ ಆ ದೇಶದ ಭದ್ರತೆಯ ದೃಷ್ಟಿಯಿಂದ ಅವಕ್ಕೆ ರಕ್ಷಣೆ ನೀಡುವುದು ಅನಿವಾರ್ಯವಾಗುತ್ತದೆ. ಅಗತ್ಯವಾದ ವಸ್ತುಗಳಿಗಾಗಿ ಅನ್ಯದೇಶಗಳನ್ನು ಅವಲಂಬಿಸುವುದು ಯುಕ್ತವಲ್ಲ. ಯುದ್ಧಕಾಲದಲ್ಲಿ ವಿದೇಶಿ ವ್ಯಾಪಾರಕ್ಕೆ ತಡೆ ಒದಗಿದಾಗ ಆ ವಸ್ತುಗಳ ಅಭಾವ ಸಂಭವಿಸಿ ದೇಶಕ್ಕೆ ಅಪಾಯ ತಟ್ಟಬಹುದು. ರಾಷ್ಟ್ರಾಭಿಮಾನ ದೃಷ್ಟಿಯಿಂದಲೂ ಸ್ವದೇಶಿ ವಸ್ತು ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು ಅವಶ್ಯವೆಂದು ವಾದಿಸಲಾಗಿದೆ. ಆದರೆ ಇವೆಲ್ಲ ಆರ್ಥಿಕ ಕಾರಣಗಳೆನ್ನುವುದಕ್ಕಿಂತ ರಾಜಕೀಯ ಕಾರಣಗಳೆನ್ನುವುದು ಹೆಚ್ಚು ಸರಿ.

ಒಂದು ದೇಶದ ಭದ್ರವಾದ ಆರ್ಥಿಕ ತಳಹದಿಯೇ ಅದರ ಬೆಳವಣಿಗೆಗೆ ಮುಖ್ಯವಾದ್ದು. ಮೂಲ ಕೈಗಾರಿಕೆಗಳೇ ಆ ತಳಹದಿ. ಅವಕ್ಕೆ ದೇಶದಲ್ಲಿ ಹೆಚ್ಚು ಅನುಕೂಲ ಇದ್ದಿರಲಾರದು. ಆದರೂ ಅವನ್ನು ಬೆಳೆಸುವುದು ಅವಶ್ಯವಾದ್ದರಿಂದ ಅವಕ್ಕೆ ರಕ್ಷಣೆ ನೀಡಬೇಕೆಂದು ವಾದಿಸಲಾಗಿದೆ.

ರಕ್ಷಣೆಯ ನೀತಿಗೆ ವಿರೋಧವಾಗಿಯೂ ಅನೇಕ ವಾದಗಳಿವೆ. ಹಿಂದೆ ಹೇಳಿದಂತೆ ರಕ್ಷಣೆಯಿಂದ ಆಸಕ್ತ ಹಿತಗಳ ರಚನೆಯಾಗುತ್ತದೆ. ಒಮ್ಮೆ ರಕ್ಷಣೆ ಲಭ್ಯವಾದರೆ ಸಾಕು, ಅದು ತನ್ನ ಹಕ್ಕು ಎಂಬಂತೆ ಕೆಲವು ಕೈಗಾರಿಕೆಗಳು ಭಾವಿಸುತ್ತವೆ. ಅದನ್ನು ಅನಂತರ ತೆಗೆಯುವುದು ಕಷ್ಟ. ಒಮ್ಮೆ ಶೈಶವ ಸ್ಥಿತಿಯಲ್ಲಿದ್ದ ಕೈಗಾರಿಕೆಗಳು ಬೆಳೆದು ಕೊಬ್ಬಿ, ಒದೆಯಲಾರಂಭಿಸುವುದುಂಟು. ತಾವು ಬೆಳೆದಿರುವುದಾಗಿ ಒಪ್ಪಲು ಅವು ಸಿದ್ಧವಿರುವುದಿಲ್ಲ. ರಕ್ಷಣೆಯಿಂದ ಕೈಗಾರಿಕೆಗಳಿಗೆ ಸ್ಥೂಲಕಾಯ ಬಂದು ಅವು ಜಡವಾಗುವುದುಂಟು. ವಿದೇಶಿ ಸ್ಪರ್ಧೆ ಇಲ್ಲದ್ದರಿಂದ ದಕ್ಷತೆ ಪ್ರಗತಿಗಳಿಗೆ ಅವು ಆದ್ಯಗಮನ ಕೊಡುವುದಿಲ್ಲ. ಅನೇಕ ವೇಳೆ ರಕ್ಷಣೆಯೇ ಭ್ರಷ್ಟಾಚಾರಕ್ಕೆ ಮೂಲ. ಸರ್ಕಾರಗಳು ರಕ್ಷಣೆಯನ್ನು ತೆಗೆಯದಂತೆ ಕೈಗಾರಿಕೆಗಳ ಒಡೆಯರು ಅಧಿಕಾರಿಗಳಿಗೆ ಲಂಚ ಮತ್ತು ಇತರ ಪ್ರಲೋಭನಗಳನ್ನೊಡ್ಡುವುದುಂಟು. ರಕ್ಷಣೆಯಿಂದ ಸ್ಪರ್ಧೆಯ ನಿವಾರಣೆಯಾಗುವುದರಿಂದ ಏಕಸ್ವಾಮ್ಯಗಳು ಬೆಳೆಯುತ್ತವೆ. ದೇಶೀಯ ಕೈಗಾರಿಕೆಗಳು ಒಂದಾಗಿ ಮಾರುಕಟ್ಟೆಯ ಹಿಡಿತ ಹೊಂದಿ, ಅನುಭೋಗಿಗಳನ್ನು ಶೋಷಿಸಬಹುದು. ರಕ್ಷಣೆಯಿಂದ ಅಂತಾರಾಷ್ಟ್ರೀಯವಾಗಿಯೂ ಕೆಡಕುಗಳು ಸಂಭವಿಸುವುದುಂಟು. ಒಂದು ದೇಶ ರಕ್ಷಣನೀತಿಯನ್ನನುಸರಿಸಿದಾಗ ಇತರ ದೇಶಗಳು ಪ್ರತೀಕಾರ ಕ್ರಮ ಕೈಗೊಳ್ಳಬಹುದು. ಇದು ಅಂತಾರಾಷ್ಟ್ರೀಯ ವಿರಸಗಳಿಗೂ ಯುದ್ಧಗಳಿಗೂ ಮೂಲ. ಮುಕ್ತವ್ಯಾಪಾರದ ಪ್ರತಿಪಾದಕರು ರಕ್ಷಣನೀತಿಯನ್ನು ವಿರೋಧಿಸಲು ಇನ್ನೊಂದು ಪ್ರಬಲ ಕಾರಣವುಂಟು. ಸ್ಪರ್ಧೆಯ ಪರಿಸ್ಥಿತಿಯಲ್ಲಿ ಪ್ರತಿಯೊಂದು ರಾಷ್ಟ್ರವೂ ತನಗೆ ಅತ್ಯಂತ ಅನುಕೂಲಕರವಾದ ಕೈಗಾರಿಕೆಗಳಲ್ಲಿ ತೊಡಗುವುದರಿಂದ ಶ್ರಮ ವಿಭಜನೆಯ ತತ್ತ್ವ ಅಂತಾರಾಷ್ಟ್ರೀಯ ಮಟ್ಟಕ್ಕೂ ಅನ್ವಯವಾಗಿ, ಒಂದೊಂದು ರಾಷ್ಟ್ರವೂ ಕೆಲವು ಕೈಗಾರಿಕೆಗಳಲ್ಲಿ ವಿಶೇಷ ಪ್ರಾವೀಣ್ಯಗಳಿಸುವುದರಿಂದ ಪರಸ್ಪರಾವಲಂಬನೆಯೂ ತನ್ಮೂಲಕ ಅಂತಾರಾಷ್ಟ್ರೀಯ ಸೌಹಾರ್ದವೂ ಸಾಧಿಸುವುವೆಂದೂ ಸರ್ವತ್ರ ಲಾಭಕರವಾದ ವ್ಯವಸ್ಥೆ ಏರ್ಪಡುವುದೆಂದೂ ಅವರು ವಾದಿಸುತ್ತಾರೆ. ರಕ್ಷಣ ನೀತಿಯಿಂದ ಈ ಪ್ರವೃತ್ತಿಗೆ ತಡೆಯುಂಟಾಗುತ್ತದೆ. ಇಡೀ ಪ್ರಪಂಚದ ಜೀವನಮಟ್ಟ ಸಹಜವಾಗಿ ಇರಬಹುದಾದ್ದಕ್ಕಿಂತ ಕಡಿಮೆಯಾಗುತ್ತದೆ. ಆದರೆ ಈ ವಾದ ಆದರ್ಶ ಪ್ರಪಂಚದಲ್ಲಿ ಮಾತ್ರ ಸಾಧ್ಯ. ವಾಸ್ತವ ಜಗತ್ತಿನಲ್ಲಿ ಇದಕ್ಕೆ ಅನೇಕ ತಡೆಗಳಿವೆ. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳು ಪ್ರಬಲ ರಾಷ್ಟ್ರಗಳ ಮರ್ಮಘಾತಕ ಸ್ಪರ್ಧೆಯಿಂದ ತಪ್ಪಿಸಿಕೊಂಡು ತಮ್ಮ ಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಲು ರಕ್ಷಣನೀತಿ ಅನಿವಾರ್ಯವೆನಿಸುತ್ತದೆ.

ಕೈಗಾರಿಕೆಯಲ್ಲಿ ಹಿಂದುಳಿದಿದ್ದ ರಾಷ್ಟ್ರಗಳು ಮುಂದುವರಿದಿದ್ದ ರಾಷ್ಟ್ರಗಳ ಸಮಕ್ಕೆ ಬರಲು ರಕ್ಷಣೆಯ ನೀತಿ ಅನುಸರಿಸಿದ ಪ್ರಸಂಗಗಳು ಇತಿಹಾಸದಲ್ಲಿ ಎಷ್ಟೋ ಇವೆ. 19ನೆಯ ಶತಮಾನದಲ್ಲಿ ಅಮೆರಿಕವೂ ಐರೋಪ್ಯ ರಾಷ್ಟ್ರಗಳೂ ಕೈಗಾರಿಕೆಯಲ್ಲಿ ಮುನ್ನಡೆದಿದ್ದ ಬ್ರಿಟನಿನ ವಿರುದ್ಧವಾಗಿ ರಕ್ಷಣನೀತಿ ಅನುಸರಿಸಿದ್ದವು. ಒಮ್ಮೆ ಮುಕ್ತ ವ್ಯಾಪಾರದ ಅಧ್ವರ್ಯುವಾಗಿದ್ದ ಬ್ರಿಟನ್ ಕೂಡ ಶೈಶವಕೈಗಾರಿಕೆಯ ವಾದವನ್ನು ಒಪ್ಪಿಕೊಂಡಿತ್ತು. ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕಾಭಿವೃದ್ಧಿ ಯೋಜನೆಗಳಲ್ಲಿ ರಕ್ಷಣಾಕ್ರಮಗಳಿಗೆ ಮುಖ್ಯ ಸ್ಥಾನವುಂಟು. ಆರ್ಥಿಕ ಬೆಳವಣಿಗೆಯ ಅಂಗವಾಗಿ ಒಂದು ಕೈಗಾರಿಕೆಯನ್ನು ಸ್ಥಾಪಿಸಿದಾಗ ಅದರೊಂದಿಗೆ ಸ್ಪರ್ಧಿಸುವ ವಿದೇಶಿ ಕೈಗಾರಿಕಾ ಉತ್ಪನ್ನಗಳ ಆಮದಿಗೆ ನಿರ್ಬಂಧ ವಿಧಿಸಲಾಗುತ್ತದೆ. ದೇಶೀಯ ಉತ್ಪಾದಕರಿಗೆ ಒಳನಾಡಿನ ಮಾರುಕಟ್ಟೆಯ ಭರವಸೆ ಲಭ್ಯವಾಗುತ್ತದೆ. ಈ ಕ್ರಮ ಕೈಗೊಳ್ಳದಿದ್ದರೆ ಆ ಕ್ಷೇತ್ರದಲ್ಲಿ ಮಾಡಿದ ಬಂಡವಾಳ ವಿನಿಯೋಜನೆಯೆಲ್ಲ ವ್ಯರ್ಥವಾದಂತೆ. ರಕ್ಷಣೆಯ ಭರವಸೆ ಇಲ್ಲದಿದ್ದಾಗ ಬಂಡವಾಳ ಹೂಡುವವರು ಹೊಸ ಉದ್ಯಮ ಕ್ಷೇತ್ರಗಳಿಗೆ ಬರಲು ಅಧೈರ್ಯಪಡುವುದು ಸಹಜ. ಇದರಿಂದ ಅಭಿವೃದ್ಧಿ ಕುಂಠಿತವಾಗುತ್ತದೆ.

**ರಕ್ಷಣೆಯ ಕ್ರಮಗಳು:** ರಕ್ಷಣೆಯ ಕ್ರಮಗಳು ಎರಡು ಬಗೆ: ಒಂದು ಅಭಯ ಪ್ರದಾತ, ಇನ್ನೊಂದು ಅಭಿವೃದ್ಧಿಕಾರಕ. ಭಾರತದಲ್ಲಿ ಮೊದಮೊದಲು ಅನುಸರಿಸಲಾಗುತ್ತಿದ್ದದ್ದು ವಿವೇಚನಾತ್ಮಕ (ಡಿಸ್ಕ್ರಿಮಿನೇಟಿಂಗ್) ರಕ್ಷಣನೀತಿ. ಇದು ಅಭಯ ಪ್ರದಾನಾತ್ಮಕವಾದ್ದು. ಸುಮಾರು ಕಾಲು ಶತಮಾನದ ಕಾಲ ಇದು ಜಾರಿಯಲ್ಲಿತ್ತು. ಭಾರತದಲ್ಲಿ ರಕ್ಷಣ ಸುಂಕ ನೀತಿ 1923ರಲ್ಲಿ ಪ್ರಾರಂಭವಾಯಿತು. ಆಗ ಅಂದಿನ ಸರ್ಕಾರ ವಿದೇಶೀಯರ ಸ್ಪರ್ಧೆಗೆ ವಿರುದ್ಧವಾಗಿ ಭಾರತದ ಉದ್ಯಮಗಳಿಗೆ ರಕ್ಷಣೆ ನೀಡಿ, ಅವುಗಳ ಅಭಿವೃದ್ಧಿಯನ್ನು ಬಲಪಡಿಸಲು ತತ್ತ್ವಶಃ ಒಪ್ಪಿಕೊಂಡಿತ್ತು. ಆಗಿಂದಾಗ್ಗೆ ರಚಿತವಾಗುತ್ತಿದ್ದ ಸುಂಕ ಮಂಡಳಿಯಿಂದ ರಕ್ಷಣ ಸುಂಕದ ನಿರ್ಧಾರವಾಗುತ್ತಿತ್ತು. ರಕ್ಷಣೆಗಾಗಿ ಬೇರೆಬೇರೆ ಉದ್ಯಮಗಳಿಂದ ಬಂದ ಮನವಿಗಳನ್ನು ಈ ಮಂಡಳಿ ಪರಿಶೀಲಿಸುತ್ತಿತ್ತು. 1923 ರಿಂದ 1939ರ ತನಕ ಹದಿಮೂರು ಉದ್ಯಮಗಳು ರಕ್ಷಣೆ ಪಡೆದುವು. ಅವು ಕಬ್ಬಿಣ ಮತ್ತು ಉಕ್ಕು, ಹತ್ತಿ ಗಿರಣಿಗಳು, ಸಕ್ಕರೆ, ಕಾಗದ, ಬೆಂಕಿಕಡ್ಡಿ, ಉಪ್ಪು, ಬೃಹದ್ ರಾಸಾಯನಿಕಗಳು, ರೇಷ್ಮೆ ಕೈಗಾರಿಕೆ, ಮೆಗ್ನೀಶಿಯಂ ಕ್ಲೋರೈಡ್, ಪ್ಲೈವುಡ್, ಚಿನ್ನದ ರೇಕಿನ ಉದ್ಯಮ, ಗೋದಿ ಮತ್ತು ಅಕ್ಕಿ ಉದ್ಯಮಗಳು. ಬೆಂಕಿಕಡ್ಡಿ ಮತ್ತು ರೇಷ್ಮೆ ಕೈಗಾರಿಕೆಗಳನ್ನು ಬಿಟ್ಟು ಮಿಕ್ಕ ಉದ್ಯಮಗಳಿಗೆ ಎರಡನೆಯ ಮಹಾಯುದ್ಧವಾದ ಮೇಲೆ ರಕ್ಷಣೆಯನ್ನು ನಿಲ್ಲಿಸಲಾಯಿತು.

ಯುದ್ಧಕಾಲದಲ್ಲಿ ಹೆಚ್ಚಿನ ಉದ್ಯಮಗಳಿಗೆ ರಕ್ಷಣೆಯನ್ನು ಕೊಡುವ ಪ್ರಶ್ನೆಯನ್ನು ಎತ್ತಿಕೊಳ್ಳಲಾಗಲಿಲ್ಲ; ಏಕೆಂದರೆ ಅವನ್ನು ನಿಯಂತ್ರಿಸಲಾಗಿತ್ತು. ಆದ್ದರಿಂದಲೇ ವಿದೇಶಿ ವಸ್ತುಗಳ ಜೊತೆಗೆ ಹೆಚ್ಚಿನ ಸ್ಪರ್ಧೆ ಇರಲಿಲ್ಲ. ಯುದ್ಧಾನಂತರ 1945ರಲ್ಲಿ ಸರ್ಕಾರ ಮಧ್ಯಂತರ ಸುಂಕ ಮಂಡಲಿಯನ್ನು ರಚಿಸಿತು. 1945ರಿಂದ ಮುಂದಿನ ಐದು ವರ್ಷಗಳಲ್ಲಿ ಈ ಮಂಡಲಿ ನಲವತ್ತಕ್ಕೂ ಹೆಚ್ಚು ಉದ್ಯಮಗಳಿಂದ ಬಂದ ರಕ್ಷಣ ಬೇಡಿಕೆಗಳನ್ನು ಪರಿಶೀಲಿಸಿತು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅಭಿವೃದ್ಧಿಕಾರಕ ರಕ್ಷಣೆಯ ನೀತಿ ಜಾರಿಗೆ ಬಂತು. 1950ರಲ್ಲಿ ನೇಮಕವಾದ, ಭಾರತದ ವಿತ್ತೀಯ ಆಯೋಗ ಈ ದೃಷ್ಟಿಯಿಂದ ವಿಚಾರಣೆ ನಡೆಸಿ ವರದಿ ನೀಡಿತು. ಸುಂಕವನ್ನು ವಿಧಿಸುವ ಅಧಿಕಾರ 'ಸುಂಕ ಆಯೋಗ' ಎಂಬ ಹೆಸರಿನಿಂದ ಕರೆಯಲಾಗುವ ಸ್ಥಿರವಾದ ಅಂಗವಾಗಿ ಉಳಿಯಬೇಕು ಎಂದು ಸಲಹೆ ಮಾಡಿತು. ಈ ಸಲಹೆಯನ್ನು ಸರ್ಕಾರ ಒಪ್ಪಿಕೊಂಡಿತ್ತು. ಈ ಮಂಡಳಿಗೆ ಈಗ ಮುಂಬಯಿಯೇ ಕೇಂದ್ರ. ಇದು ಒಂದು ಸ್ಥಿರಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಆರ್ಥಿಕ ಬೆಳವಣಿಗೆಗೆ ಇಂದು ವಿತ್ತೀಯ ನೀತಿಯೂ ಒಂದು ಸಾಧನ. ಹೆಚ್ಚು ಬಂಡವಾಳದ ಹೂಡಿಕೆ, ಉದ್ಯೋಗ ವೃದ್ಧಿ, ವರಮಾನದ ಹೆಚ್ಚಳ, ವರಮಾನ ಮತ್ತು ಸಂಪತ್ತಿನ ಅಂತರದ ಇಳಿತಾಯ-ಇವು ಆರ್ಥಿಕ ಬೆಳವಣಿಗೆಯ ಮೂಲೋದ್ದೇಶಗಳು. ಈ ಉದ್ದೇಶಗಳ ಸಾಧನೆಯಲ್ಲಿ ರಕ್ಷಣನೀತಿಗೆ ಪ್ರಮುಖ ಸ್ಥಾನವುಂಟು. ಇಂದು ಇದು ನಾನಾ ರೂಪ ತಾಳಿದೆ. ಆಮದು ಸುಂಕ, ಆಮದಿನ ನಿಯಂತ್ರಣ, ಆಮದು ಹಸುಗೆಯ(ಕೋಟಾ) ನಿಷ್ಕರ್ಷೆ-ಇವು ಇಂದು ಅನುಸರಿಸಲಾಗುತ್ತಿರುವ ಕೆಲವು ವಿಧಾನಗಳು. ಆಮದು ಸುಂಕ ವಿಧಿಸುವುದರಿಂದ ಸರ್ಕಾರಕ್ಕೆ ವರಮಾನವೂ ಉಂಟು. ಆದರೆ ಆಮದು ಹಸುಗೆಯನ್ನು ನಿಗದಿ ಮಾಡಿದಾಗ ವರಮಾನಕ್ಕೆ ಅವಕಾಶವಿಲ್ಲ. ಸ್ವದೇಶದ ಕೈಗಾರಿಕೆಗಳ ಸರಕು ಉತ್ಪಾದನೆ ಮತ್ತು ರಫ್ತುಗಳಿಗೆ ಪ್ರೋತ್ಸಾಹದಾಯಕವಾದ ವಸ್ತುಗಳ ಆಮದುಗಳಿಗೆ ಅವಕಾಶ ನೀಡಿ, ಉಳಿದ ವಸ್ತುಗಳ-ಸ್ವದೇಶದಲ್ಲೇ ತಯಾರಿಸಬಹುದಾದ-ವಸ್ತುಗಳ ಆಮದುಗಳ ಮೇಲೆ ನಿರ್ಬಂಧ ಹೇರುವ ಕ್ರಮ ಭಾರತದಲ್ಲಿ ಜಾರಿಯಲ್ಲಿದೆ. ವಿದೇಶಿ ವಿನಿಮಯದ ಅಭಾವ ಸಮಸ್ಯೆಯ ಪರಿಹಾರಕ್ಕೂ ಇದು ಒಂದು ಮಾರ್ಗ. ಸ್ವದೇಶದ ಕೈಗಾರಿಕೆಗಳಿಗೆ ಪ್ರೋತ್ಸಾಹ ಮತ್ತು ರಕ್ಷಣೆ ನೀಡುವ ಉದ್ದೇಶದಿಂದ ವಿದೇಶಿ ವ್ಯಾಪಾರವನ್ನು ಸರ್ಕಾರವೇ ವಹಿಸಿಕೊಳ್ಳಬಹುದು. ದೇಶದ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಅಗತ್ಯವಾದ ಸರಕುಗಳನ್ನು ಆಮದು ಮಾಡುವ, ದೇಶೀಯ ಕೈಗಾರಿಕೆಗಳು ಉತ್ಪಾದಿಸಿದ ಸರಕುಗಳನ್ನು ರಫ್ತುಮಾಡುವ

ಹೊಣೆ ಹೊತ್ತು ಅವಕ್ಕೆ ಬೇಡಿಕೆಯನ್ನು ಸೃಷ್ಟಿಮಾಡುವ ಹೊಣೆ ಸರ್ಕಾರದ್ದಾಗುತ್ತದೆ. ಈ ವ್ಯಾಪಾರದಿಂದ ಬಂದ ಲಾಭವನ್ನು ದೇಶದ ಕೈಗಾರಿಕೆಗಳ ಬೆಳೆವಣಿಗೆಗಾಗಿ ಸಹಾಯಧನ ರೂಪದಲ್ಲಿ ನೀಡುವ ಪದ್ಧತಿಯನ್ನೂ ಜಾರಿಗೆ ತರಬಹುದು. ಭಾರತದಲ್ಲಿ 1956ರಲ್ಲಿ ಸ್ಥಾಪಿತವಾದ ರಾಜ್ಯ ವ್ಯಾಪಾರ ಕಾರ್ಪೊರೇಷನ್ ರಾಷ್ಟ್ರದ ವಿದೇಶಿ ವ್ಯಾಪಾರದಲ್ಲಿ ಅಧಿಕಾಧಿಕ ಪಾತ್ರ ವಹಿಸುತ್ತಿದೆ. ಕೈಗಾರಿಕೆಗಳಿಗೆ ರಕ್ಷಣೆ ನೀಡುವ ತತ್ತ್ವ ಇಂದು ವ್ಯಾಪಕವಾಗಿ ಪರಿಣಮಿಸಿದೆ. (ಎಚ್.ವಿ.)

**ಕೈಗಾರಿಕೆಗಳ ಸಂಯುಕ್ತ ಸಂಘಗಳು :** ಕೈಗಾರಿಕೆಗಳು ಸ್ವಯಂ ಇಚ್ಛೆಯಿಂದ ರಚಿಸಿಕೊಂಡ ಸಂಘಗಳು (ಫೆಡರೇಷನ್ ಆಫ್ ಇಂಡಸ್ಟ್ರೀಸ್). ಇವು ಉದ್ಯಮಿಗಳ ಸಂಘಗಳು. ಒಂದು ರಾಷ್ಟ್ರದ ಕೈಗಾರಿಕಾ ಸಂಘಗಳು ಒಂದಾಗಿ ರಚಿಸಿಕೊಂಡ ಸಂಯುಕ್ತಸಂಘಗಳು ರಾಷ್ಟ್ರೀಯ ಸಂಯುಕ್ತ ಸಂಘಗಳೆನಿಸಿಕೊಳ್ಳುತ್ತವೆ. ಒಂದು ನಿರ್ದಿಷ್ಟ ಕೈಗಾರಿಕೆಯ ವಿವಿಧ ಸಂಘಗಳು ಸೇರಿ ಸಂಯುಕ್ತ ಸಂಘವೊಂದನ್ನು ರಚಿಸಿಕೊಳ್ಳಬಹುದು. ಉದಾಹರಣೆ: ಮುಂಬಯಿಯ ಭಾರತೀಯ ಹತ್ತಿಗಿರಣಿಗಳ ಸಂಘ ಮತ್ತು ಭಾರತದ ವಿದ್ಯುತ್ ಉದ್ಯಮಗಳ ಸಂಘ. ಇಡೀ ಕೈಗಾರಿಕೆಗೆ ಅನ್ವಯಿಸುವಂತೆ ಅದು ರಚಿತವಾಗಬಹುದು. ಉದಾಹರಣೆ: ಅಖಿಲ ಭಾರತ ತಯಾರಿಕೆಗಾರರ ಸಂಘ. ಆಮದು ಹತೋಟಿ, ರಫ್ತಿಗೆ ಪ್ರೋತ್ಸಾಹ, ಪರವಾನೆ, ಧಾರಣೆ, ಮಾರುಕಟ್ಟೆ, ಉತ್ಪಾದನೆ, ಸಮನ್ವಯೀಕರಣ, ತೆರಿಗೆ, ಸಂಶೋಧನೆ ಮುಂತಾದ, ಕೈಗಾರಿಕೆಗಳಿಗೆ ವಿಶಾಲವಾಗಿ ಅನ್ವಯಿಸಬಹುದಾದ, ಸಮಸ್ಯೆಗಳನ್ನು ಪರಿಹರಿಸುವುದೂ ಈ ಬಗ್ಗೆ ಅಧಿಕಾರಯುತವಾಗಿ ಮಾತಾಡಬಲ್ಲ ಸಮಷ್ಟಿ ಶಕ್ತಿಗಳಿಸುವುದೂ ಕಾರ್ಮಿಕರೊಂದಿಗೆ ಪರಿಣಾಮಕಾರಿಯಾಗಿ ಕರಾರು ಮಾಡಿಕೊಳ್ಳುವುದೂ ಈ ಸಂಘದ ಮುಖ್ಯ ಉದ್ದೇಶ.

ಹಲವು ರಾಷ್ಟ್ರಗಳ ಸಂಘಗಳು ಕೂಡಿ ಅಂತಾರಾಷ್ಟ್ರೀಯ ಕೈಗಾರಿಕಾ ಸಂಯುಕ್ತ ಸಂಘಗಳನ್ನು ಏರ್ಪಡಿಸಿಕೊಂಡಿವೆ. ಸ್ವಿಟ್ಜರ್ಲೆಂಡಿನ ಜ್ಯೂರಿಚ್‌ನಲ್ಲಿರುವ ಹತ್ತಿಜವಳಿ ಹಾಗೂ ತತ್ಸಂಬಂಧ ಜವಳಿ ಗಿರಣಿಗಳ ಅಂತಾರಾಷ್ಟ್ರೀಯ ಸಂಯುಕ್ತಸಂಘ, ಫ್ರಾನ್ಸಿನ ಪ್ಯಾರಿಸಿನಲ್ಲಿರುವ ಮೋಟಾರು ತಯಾರಿಕೆಗಾರರ ಅಂತಾರಾಷ್ಟ್ರೀಯ ಖಾಯಂ ಮಂಡಳಿ, ಫ್ರಾನ್ಸಿನ ಲೈಯನ್ಸಿನ ಅಂತಾರಾಷ್ಟ್ರೀಯ ರೇಷ್ಮೆ ಸಂಘ–ಇವು ಉದಾಹರಣೆಗಳು. ಕೈಗಾರಿಕೆ ಎದುರಿಸಬೇಕಾದ ಸಮಸ್ಯೆಗಳನ್ನು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಪರಿಹರಿಸಲು ಯತ್ನಿಸುವುದೇ ಇಂಥ ಸಂಘವನ್ನು ಸ್ಥಾಪಿಸುವುದರ ಉದ್ದೇಶ, ಸಂಶೋಧನೆ, ಉತ್ಪಾದನವಿಧಾನಗಳ ಪರೀಕ್ಷಣ ಹಾಗೂ ಶಿಷ್ಟೀಕರಣ, ನಿಯೋಗಗಳ ರಚನೆ, ಸಂಯುಕ್ತ ಒಪ್ಪಂದಗಳ ರಚನೆ, ಉದ್ಯೋಗ ಸಮಸ್ಯೆಗಳ ಪರಿಹಾರ, ಕಾರ್ಮಿಕ ದಕ್ಷತೆಯ ಪರಿಶೀಲನೆ–ಇವು ಕೆಲವು ಸಮಸ್ಯೆಗಳು. ಆದರೆ ವ್ಯಾವಹಾರಿಕವಾಗಿ ಯಾವ ಅಂತಾರಾಷ್ಟ್ರೀಯ ಸಂಸ್ಥೆಯೂ ರಾಷ್ಟ್ರಪ್ರೇಮಕ್ಕಾಗಲಿ ರಾಷ್ಟ್ರಭದ್ರತೆಗಾಗಲಿ ಪ್ರತಿಯಾಗಿ ನಿಲ್ಲಲಾರದು. ಕೈಗಾರಿಕೆಯ ಕ್ಷೇತ್ರದಲ್ಲೂ ಅಂತಾರಾಷ್ಟ್ರೀಯತೆ ಯಶಸ್ವಿಯಾಗಿದ್ದ ಪಕ್ಷದಲ್ಲಿ ಆಗ ಇಂದಿರುವಂಥ ಪರಿಸ್ಥಿತಿ ಇರುತ್ತಿರಲಿಲ್ಲ. ವಿವಿಧ ದೇಶಗಳು ಕೈಗಾರಿಕಾಭಿವೃದ್ಧಿಯ ನಾನಾ ಘಟ್ಟಗಳಲ್ಲಿ ಇರುತ್ತಿರಲಿಲ್ಲ, ಅಭಿವರ್ಧಿಸಿದ ಮತ್ತು ಅಭಿವೃದ್ಧಿಶೀಲ ದೇಶಗಳ ತಾರತಮ್ಯಗಳಿರುತ್ತಿರಲಿಲ್ಲ ವ್ಯಾಪಾರವಿಚಾರದಲ್ಲಿ ವಿಭೇದ, ಸುಂಕ ಪದ್ಧತಿ, ಹಸುಗೆ ಪದ್ಧತಿ, ಕೈಗಾರಿಕಾರಕ್ಷಣೆ ಮುಂತಾದವು ಇರುತ್ತಿರಲಿಲ್ಲ. ಅಂತಾರಾಷ್ಟ್ರೀಯ ಸಂಘಗಳು ಪ್ರಪಂಚಶಾಂತಿಯ ಹಾಗೂ ಅಭಿವೃದ್ಧಿಯ ವಿಚಾರದಲ್ಲಿ ಶ್ರದ್ಧಾನ್ವಿತ ಆಸೆಯನ್ನು ಹುಟ್ಟಿಸಬಹುದು. ಆದರೆ ಅವು ಯುದ್ಧದ ಅಪಾಯವನ್ನು ಎದುರಿಸುವ ವಿಚಾರದಲ್ಲಿ ಅಸಮರ್ಥಶಕ್ತಿಗಳು. (ಜಿ.ಕೆ.ಐ.)

**ಕೈಗಾರಿಕೆಗಳ ಸ್ಥಾನೀಕರಣ :** ಆಯಾ ಪ್ರದೇಶಗಳ ಹೊಂದಿರುವ ಪ್ರಾಕೃತಿಕ ಹಾಗೂ ಇತರ ಸೌಲಭ್ಯಗಳಿಗೆ ಅನುಗುಣವಾಗಿ ಕೈಗಾರಿಕೆಗಳು ನಿರ್ದಿಷ್ಟ ಪ್ರದೇಶಗಳಲ್ಲಿ ನೆಲೆಗೊಂಡು ಅವುಗಳ ಬಗ್ಗೆ ಈ ಪ್ರದೇಶಗಳು ವಿಶಿಷ್ಟಕೇಂದ್ರಗಳಾಗಿ ಪರಿಣಮಿಸುವ ಆಧುನಿಕ ಆರ್ಥಿಕಯುಗದ ಪ್ರವೃತ್ತಿ (ಲೋಕಲೈಸೇಷನ್ ಆಫ್ ಇಂಡಸ್ಟ್ರೀಸ್). ಇದು ಶ್ರಮವಿಭಜನೆಯ ತತ್ತ್ವದ ಭೌಗೋಳಿಕ ಅಥವಾ ಪ್ರಾದೇಶಿಕ ಅನ್ವಯ. ಕೃಷಿ, ಗಣಿ, ಕೈಗಾರಿಕೆ ಇವುಗಳ ವಿವಿಧ ಶಾಖೆಗಳು ಪ್ರಪಂಚದ ವಿಶಿಷ್ಟ ದೇಶಗಳಲ್ಲಿ ಹಾಗೂ ದೇಶದ ವಿಶಿಷ್ಟ ಭಾಗಗಳಲ್ಲಿ ನಿರ್ದಿಷ್ಟ ರೀತಿಯಲ್ಲಿ ಹಂಚಿಕೆಯಾಗಿರುತ್ತವೆ. ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯ ದೇಶಗಳು ಚಿನ್ನದ ಗಣಿ ಕೈಗಾರಿಕೆ; ಇರಾಕ್ ತೈಲೋದ್ಯಮ; ಭಾರತ ಮತ್ತು ಬಾಂಗ್ಲಾದೇಶಗಳ ಸೆಣಬು ಕೈಗಾರಿಕೆ; ಜಪಾನ್, ಚೀನ ಮತ್ತು ಭಾರತಗಳ ರೇಷ್ಮೆ ಕೈಗಾರಿಕೆ–ಹೀಗೆಯೇ ರಾಷ್ಟ್ರದಲ್ಲಿ ಅದರದರದೇ ಆದ ಒಂದೊಂದು ವಿಶಿಷ್ಟ ಕೈಗಾರಿಕೆ ಇರುತ್ತದೆ. ಕೈಗಾರಿಕಾ ಸ್ಥಾನೀಕರಣದ ಅಂತಾರಾಷ್ಟ್ರೀಯ ಶ್ರಮವಿಭಜನೆಗೆ ಮತ್ತು ಹೋಲಿಕೆ ಮೆಚ್ಚುನಿಯಮಗಳಿಗೆ ಅನುಸಾರವಾಗಿ ಒಂದೊಂದು ರಾಷ್ಟ್ರವೂ ಯಾವ ಸರಕನ್ನು ಉತ್ಪಾದಿಸಲು ಸಾಪೇಕ್ಷವಾಗಿ ಹೆಚ್ಚು ಅನುಕೂಲ ಪಡೆದಿರುವುದೋ ಆ ಸರಕಿನ ಉತ್ಪಾದನೆಯಲ್ಲಿ ಅದು ವಿಶೇಷವಾಗಿ ತೊಡಗುತ್ತದೆ. ಇದರಿಂದ ಆ ಸರಕನ್ನು ಉತ್ಪಾದಿಸುವ ಉದ್ಯಮಗಳು ಹೆಚ್ಚಾಗಿ ಅಲ್ಲಿ ನೆಲಸುತ್ತವೆ. ಆಯಾ ದೇಶದ ನೈಸರ್ಗಿಕ ಮೂಲಸಾಧನಗಳು ಹಾಗೂ ಅದು ಬೆಳೆಸಿಕೊಂಡ ಉತ್ಪಾದನ ಸಾಮರ್ಥ್ಯ ಇವೆರಡಕ್ಕೂ ಅನುಗುಣವಾಗಿ ನಿರ್ದಿಷ್ಟ ಕೈಗಾರಿಕೆಗಳು ಅಲ್ಲಿ ಸ್ಥಾನೀಕರಣಗೊಳ್ಳುತ್ತವೆ. ಇದರಿಂದ ಕೆಲವು ಕೈಗಾರಿಕೆಗಳಿಗೆ ಕೆಲವು ರಾಷ್ಟ್ರಗಳು ಪ್ರಸಿದ್ಧವಾಗಿವೆ.

ಹೀಗೆ ಪ್ರತಿಯೊಂದು ದೇಶವೂ ಸ್ಥಾಪಿಸಬಲ್ಲ ಕೈಗಾರಿಕೆಗಳು ದೇಶದೊಳಗೆ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿರುತ್ತವೆ. ಭಾರತದಲ್ಲಿ ಹತ್ತಿ ಕೈಗಾರಿಕೆ ಬಹುಮಟ್ಟಿಗೆ ಮುಂಬಯಿ, ಅಹಮದಾಬಾದ್‌ಗಳಲ್ಲೂ ಸೆಣಬು ಕೈಗಾರಿಕೆ ಕಲ್ಕತ್ತದಲ್ಲೂ ಸಕ್ಕರೆ ಕೈಗಾರಿಕೆ ಉತ್ತರಪ್ರದೇಶದ ನಗರಗಳಲ್ಲೂ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಜಂಷೆಡ್‌ಪುರ, ದುರ್ಗಾಪುರ, ಭಿಲಾಯಿ, ರೂರ್‌ಕೆಲ, ಬೊಕಾರೊ, ಭದ್ರಾವತಿಗಳಲ್ಲೂ ಒಂದೊಂದು ಬೃಹತ್ ಕೈಗಾರಿಕೆಯೂ ಒಂದು ಅಥವಾ ಕೆಲವೇ ಸ್ಥಳಗಳಲ್ಲೂ ಇವೆ. ಅಮೆರಿಕದಲ್ಲಿ ಮೋಟಾರ್ ತಯಾರಿಕೋದ್ಯಮ ಬಹುಮಟ್ಟಿಗೆ ಡೆಟ್ರಾಯಿಟ್‌ನಲ್ಲೇ ಇದೆ. ಇಂಗ್ಲೆಂಡಿನಲ್ಲಿ ಹತ್ತಿ ಜವಳಿ ಕೈಗಾರಿಕೆ ಲ್ಯಾಂಕಷೈರಿನಲ್ಲಿ ಇದೆ. ಹೀಗೆ ನೈಸರ್ಗಿಕ ಸಂಪತ್ಸಾಧನಗಳು ಹಾಗೂ ಮಾನವ ಸಂಪಾದಿತ ಅನುಕೂಲಗಳಿಗೆ ಅನುಗುಣವಾಗಿ ಒಂದು ದೇಶ ಸ್ಥಾಪಿಸಬಹುದಾದ ಕೈಗಾರಿಕೆಗಳು ಯಾವ ಸ್ಥಳಗಳಲ್ಲಿ ನೆಲೆಗೊಂಡಿರುವುವು, ಈ ಸ್ಥಳವನ್ನು ನಿರ್ಣಯಿಸುವ ಅಂಶಗಳೇನು, ಹೀಗೆ ಅವು ಕೆಲವು ಕೇಂದ್ರಗಳಲ್ಲಿ ನೆಲೆಗೊಂಡಿರುವುದರ ಸಾಧಕಬಾಧಕಗಳೇನು, ಬಾಧಕಗಳಿಗೆ ಪರಿಹಾರವೇನು ಎಂಬವು ಕೈಗಾರಿಕಾ ಸ್ಥಾನೀಕರಣ ಸಮಸ್ಯೆಯನ್ನು ಕುರಿತ ಮುಖ್ಯ ಪ್ರಶ್ನೆಗಳಾಗಿವೆ.

ಸ್ಥಾನೀಕರಣದ ಸೈದ್ಧಾಂತಿಕ ಅಧ್ಯಯನದಲ್ಲಿ ವಾನ್ ಥೂನನನ ಕೃಷಿ ಸ್ಥಾನೀಕರಣ ಸಿದ್ಧಾಂತವೂ ಆಲ್‌ಫ್ರೆಡ್ ವಿಬರನ ಕೈಗಾರಿಕಾ ಸ್ಥಾನೀಕರಣ ಸಿದ್ಧಾಂತವೂ ಮೊದಲು ಪ್ರತಿಪಾದಿತವಾದ ಮುಖ್ಯ ಸಿದ್ಧಾಂತಗಳಾಗಿವೆ. ಕೈಗಾರಿಕಾಸ್ಥಾನೀಕರಣ ಸಿದ್ಧಾಂತವನ್ನು ನಿರೂಪಿಸುವುದರಲ್ಲಿ ನಿಗಮನ (ಡಿಡಕ್ಟಿವ್) ಮತ್ತು ಅನುಗಮನ (ಇಂಡಕ್ಟಿವ್) ಮಾರ್ಗಗಳೆರಡನ್ನೂ ಅರ್ಥಶಾಸ್ತ್ರಜ್ಞರು ಅನುಸರಿಸಿರುತ್ತಾರೆ. ಸ್ಥಾನೀಕರಣಕ್ಕೆ ಅತ್ಯಂತ ಕಡಿಮೆ ವೆಚ್ಚದ ಸ್ಥಳ ನಿರ್ಣಯಿಸುವ ವಿವಿಧ ಅಂಶಗಳನ್ನು ತರ್ಕಬದ್ಧ ರೀತಿಯಲ್ಲಿ ವಿವರಿಸುವುದೇ ನಿಗಮನಮಾರ್ಗ. ಕೈಗಾರಿಕೆಗಳು ವಸ್ತುತಃ ಸ್ಥಾನೀಕರಣವಾಗಿರುವುದರ ಕಾರಣಗಳನ್ನು ವಿವರಿಸಿ, ಈ ವಿಷಯಗಳ ಆಧಾರದ ಮೇಲೆ ಸ್ಥಾನೀಕರಣವನ್ನು ನಿರ್ಣಯಿಸುವ ವಿವಿಧ ಅಂಶಗಳ ವಿಶ್ಲೇಷಣೆಯೇ ಅನುಗಮನ ಅಧ್ಯಯನ ಮಾರ್ಗ. ವಿಬರ್ ನೀಡಿದ ನಿಗಮನ ಸಿದ್ಧಾಂತವನ್ನು ಆಂಡ್ರಿಯಾಸ್ ಪ್ರೀಡ್ಹಾಲ್, ಪಾಲಾಂಡರ್, ಆಗಸ್ಟ್ ಲಾಚ್, ಫ್ಲಾರೆನ್ಸ್ ಇತ್ಯಾದಿ ಅರ್ಥಶಾಸ್ತ್ರಜ್ಞರು ಬೆಳೆಸಿದ್ದಾರೆ. ಎಡ್ಗರ್ ಹೂವರ್, ಗ್ಲೆನ್ ಮೆಕ್ಲಾಹಿನ್, ಫ್ಲಾರೆನ್ಸ್ ಇತ್ಯಾದಿ ಅರ್ಥಶಾಸ್ತ್ರಜ್ಞರು ಹೆಚ್ಚಾಗಿ ಅನುಗಮನ ಮಾರ್ಗಾನುಸಾರವಾಗಿ ಸ್ಥಾನೀಕರಣ ಕುರಿತ ಅಧ್ಯಯನ ನಡೆಸಿದ್ದಾರೆ. ಹೀಗೆ ಅನೇಕ ಅರ್ಥಶಾಸ್ತ್ರಜ್ಞರು ನಡೆಸಿರುವ ಅಧ್ಯಯನಗಳನ್ನು ಒಳಗೊಂಡಿರುವ ಸೈದ್ಧಾಂತಿಕ ವಿಶ್ಲೇಷಣೆಗಳೂ ಸ್ಥಾನೀಕರಣದ ಐತಿಹಾಸಿಕ ಸಂದರ್ಭಗಳ ವಿವರಣೆಗಳೂ ಸ್ಥಾನೀಕರಣದ ಮೇಲೆ ಸಾಮಾನ್ಯವಾಗಿ ಪ್ರಭಾವ ಬೀರುವ ವಿವಿಧ ಅಂಶಗಳನ್ನು ಸ್ಪಷ್ಟಪಡಿಸಿವೆ.

**ಸ್ಥಾನೀಕರಣದ ನಿರ್ಣಾಯಕಾಂಶಗಳು:** ಗಣಿ, ನಾಟ, ಮೀನುಗಾರಿಕೆ, ನೌಕಾ ನಿರ್ಮಾಣ ಇಂಥ ಕೈಗಾರಿಕೆಗಳ ಸ್ಥಾನೀಕರಣದ ವಿವರಣೆ ಸಾಮಾನ್ಯವಾಗಿ ಸುಲಭ. ಏಕೆಂದರೆ, ಅದಿರುಗಳು ಇರುವ ಕಡೆ ಗಣಿಗಳೂ ಅರಣ್ಯ ಸಮೀಪದಲ್ಲಿ ನಾಟ ಉದ್ಯಮವೂ ಮೀನು ಸಿಗುವ ಜಲಾಶಯಗಳಲ್ಲಿ ಮೀನುಗಾರಿಕೆಯೂ ಉತ್ತಮ ಬಂದರುಗಳಲ್ಲಿ ನೌಕಾನಿರ್ಮಾಣ ಉದ್ಯಮವೂ ಸ್ಥಾಪನೆಯಾಗುವುದು ಸ್ವಾಭಾವಿಕ. ಸೇವಾ ಕೈಗಾರಿಕೆಗಳು ಸಾಮಾನ್ಯವಾಗಿ ಹೆಚ್ಚು ಕೇಂದ್ರೀಕೃತವಾಗಲಾರವು. ಆದಷ್ಟು ಮಟ್ಟಿಗೆ ಅನುಭೋಗಿಗಳ ಸಮೀಪದಲ್ಲಿ ಇವು ಇರಬೇಕಾಗಿರುವುದರಿಂದ ಚಿಲ್ಲರೆ ವ್ಯಾಪಾರ ಸಂಸ್ಥೆಗಳು, ಹೋಟೆಲುಗಳು, ಥಿಯೇಟರುಗಳು, ಸಾರಿಗೆ ಸೇವೆ, ಬ್ಯಾಂಕಿಂಗ್ ಇತ್ಯಾದಿ ವಿವಿಧ ಸೇವಾ ಉದ್ಯಮಗಳು ಒಂದೊಂದು ದೇಶದಲ್ಲಿಯೂ ಅನೇಕ ಸ್ಥಳಗಳಲ್ಲಿ ಸ್ಥಾಪನೆಯಾಗಬೇಕಾಗುತ್ತದೆ. ಆದರೆ, ಆಧುನಿಕ ಕೈಗಾರಿಕಾ ಪ್ರಪಂಚದಲ್ಲಿ ಅನೇಕ ಕೈಗಾರಿಕೆಗಳು ಕೆಲವೇ ಸ್ಥಳಗಳಲ್ಲಿ ಬಹುಮಟ್ಟಿಗೆ ಕೇಂದ್ರೀಕೃತವಾಗುವ ಪ್ರವೃತ್ತಿ ಇದೆ. ಇಂಥ ಕೈಗಾರಿಕಾಸ್ಥಾನೀಕರಣದ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ.

ತಾನು ಸ್ಥಾಪಿಸಬೇಕೆಂದಿರುವ ಕೈಗಾರಿಕೆಗೆ ಅತ್ಯುತ್ತಮ ಸ್ಥಳ ಯಾವುದು ಎಂಬುದು ಉದ್ಯಮಿಗಳು ಕೈಗೊಳ್ಳಬೇಕಾದ ಪ್ರಥಮ ನಿರ್ಣಯಗಳಲ್ಲಿ ಒಂದು. ಇದು ಮುಖ್ಯವಾದ್ದು. ಕೆಲವು ವೇಳೆ ಈ ನಿರ್ಣಯಕ್ಕೆ ಉದ್ಯಮಿಗಳ ಕೇವಲ ವೈಯಕ್ತಿಕ ಕಾರಣಗಳಿರಬಹುದು. ಉದಾಹರಣೆಗೆ, ತನ್ನ ಮೋಟಾರು ಕಾರ್ಖಾನೆಗೆ ಅಮೆರಿಕದ ಹೆನ್ರಿ ಫೋರ್ಡ್ ಡೆಟ್ರಾಯಿಟನ್ನು ಆರಿಸಿಕೊಂಡಿದ್ದಕ್ಕೆ ತನ್ನ ಸ್ವಂತ ಸ್ಥಳದ ಮೇಲೆ ಆತನಿಗೆ ಇದ್ದ ಮಮತೆಯೇ ಕಾರಣವೆಂದು ಹೇಳಲಾಗಿದೆ. ತನ್ನ ತಂದೆ ವಿದ್ಯಾಭ್ಯಾಸ ಮಾಡಿದ ಶಾಲಾಕಟ್ಟಡ ಸಕಾಲದಲ್ಲಿ ಮಾರಾಟಕ್ಕೆ ಸಿಕ್ಕಿದ್ದೇ ಕೌಲಿ ಎಂಬ ಸ್ಥಳದಲ್ಲಿ ಲಾರ್ಡ್ ನಫೀಲ್ಡ್ ಮೋಟಾರ್ ಕಾರು ಕೈಗಾರಿಕೆ ಸ್ಥಾಪಿಸಿದ್ದಕ್ಕೆ ಕಾರಣವಾಯಿತೆಂದು ಹೇಳಲಾಗಿದೆ. ಪ್ರತಿಯೊಂದು ಕೈಗಾರಿಕೆಯ ಉಗಮದ ಇತಿಹಾಸದಲ್ಲೂ ಆಯಾ ಕೈಗಾರಿಕಾ ಪ್ರಮುಖರು ಪರಿಗಣಿಸಿದ ಇಂಥ ಕೆಲವು ವೈಯಕ್ತಿಕ ಕಾರಣಗಳನ್ನು ಬಹುಶಃ ಕಾಣಬಹುದು. ಕೈಗಾರಿಕೆಗಳು ನಿರ್ದಿಷ್ಟ ಸ್ಥಳಗಳಲ್ಲಿ ಸ್ಥಾಪನೆಯಾದ್ದನ್ನು ಈ ದೃಷ್ಟಿಯಿಂದ ಕೇವಲ ಐತಿಹಾಸಿಕ ಆಕಸ್ಮಿಕಗಳೆಂಗಿ ಭಾವಿಸಬಹುದು. ಇಂಗ್ಲೆಂಡಿನ ಪ್ರಖ್ಯಾತ ಲ್ಯಾಂಕಷೈರ್ ಹತ್ತಿ ಕೈಗಾರಿಕೆ ಮತ್ತು ಸ್ಟಾಫರ್ಡ್‌ಷೈರಿನ ಕುಂಭೋದ್ಯಮಗಳು ಅಲ್ಲಿ ಸ್ಥಾಪನೆಯಾದ್ದು ಕೂಡ ಕೇವಲ ಆಕಸ್ಮಿಕ ಎಂದು ಹೇಳಲಾಗಿದೆ. ಪ್ರಥಮತಃ ಹೀಗೆ ಯಾವುದೇ ವಿಶೇಷ ಕಾರಣಗಳಿಂದ

ಕೈಗಾರಿಕೆಗಳು ನಿರ್ದಿಷ್ಟ ಸ್ಥಳದಲ್ಲಿ ಸ್ಥಾಪನೆಯಾದರೂ ಅವು ಬಹುಕಾಲ ಅಲ್ಲಿ ನೆಲೆಗೊಂಡು, ವಿಸ್ತರಿಸಿ ಅಭಿವೃದ್ಧಿಯಾಗಲು ವಾಸ್ತವವಾದ ಆರ್ಥಿಕ ಅಥವಾ ಇತರ ಪ್ರಬಲಕಾರಣಗಳು ಇರಲೇಬೇಕು.

ಯಾವ ಸ್ಥಳದಲ್ಲಿ ಕೈಗಾರಿಕೆ ಸ್ಥಾಪನೆಯಾದರೆ ಉತ್ಪಾದನ ವೆಚ್ಚ ಕನಿಷ್ಠವಾಗುವುದೋ ಅದು ಆರ್ಥಿಕ ದೃಷ್ಟಿಯಿಂದ ಆ ಕೈಗಾರಿಕೆಗೆ ಅತ್ಯಂತ ಯೋಗ್ಯವಾದ ಸ್ಥಳವೆಂದು ಹೇಳಬಹುದು. ಉತ್ಪಾದನ ವೆಚ್ಚವನ್ನು ನಿರ್ಣಯಿಸುವ ಅಂಶಗಳನ್ನು ಸಾರಿಗೆವೆಚ್ಚ ಮತ್ತು ಇತರ ವೆಚ್ಚಗಳು ಎಂದು ಸ್ಥೂಲವಾಗಿ ವಿಂಗಡಿಸುವುದು ಸ್ಥಾನೀಕರಣ ನಿರ್ಣಯಾಂಶಗಳ ವಿಶ್ಲೇಷಣೆಯ ದೃಷ್ಟಿಯಿಂದ ಉಪಯುಕ್ತವಾಗುತ್ತದೆ.

ಇತರ ವೆಚ್ಚಗಳಲ್ಲಿ ವಿವಿಧ ಸ್ಥಳಗಳೊಳಗೆ ವ್ಯತ್ಯಾಸವಿಲ್ಲದ ಸಂದರ್ಭದಲ್ಲಿ ಕಚ್ಚಾ ಸಾಮಗ್ರಿಗಳನ್ನು ಕೈಗಾರಿಕಾಕೇಂದ್ರಕ್ಕೆ ಸಾಗಿಸುವ ವೆಚ್ಚ ಮತ್ತು ಸಿದ್ಧವಸ್ತುಗಳನ್ನು ಮಾರುಕಟ್ಟೆಗೆ ತಲಪಿಸುವ ವೆಚ್ಚ ಇವೆರಡೂ ಸೇರಿದ ಸಾರಿಗೆವೆಚ್ಚವನ್ನು ಕನಿಷ್ಠಗೊಳಿಸುವ ದೃಷ್ಟಿಯಿಂದ ಕೈಗಾರಿಕೆಗಳ ಸ್ಥಾನೀಕರಣ ನಿರ್ಣಯವಾಗಬೇಕಾಗುತ್ತದೆ. ಅನೇಕ ಕೈಗಾರಿಕೆಗಳಿಗೆ ಬೇಕಾಗುವ ಆಯಾ ಕಚ್ಚಾಸರಕುಗಳು ನಿರ್ದಿಷ್ಟಸ್ಥಳಗಳಲ್ಲಿ ಮಾತ್ರವೇ ದೊರೆಯುತ್ತವೆ. ಆದ್ದರಿಂದ ಈ ಕಚ್ಚಾಸರಕುಗಳ ಸರಬರಾಯಿಯ ಪ್ರದೇಶದ ಸಾಮೀಪ್ಯ ಕೈಗಾರಿಕಾಸ್ಥಾನೀಕರಣದ ಒಂದು ಮುಖ್ಯ ಕಾರಣ. ಭಾರತದ ಕಬ್ಬಿಣ ಮತ್ತು ಉಕ್ಕು ಕೈಗಾರಿಕಾಕೇಂದ್ರಗಳು ಕಬ್ಬಿಣದ ಅದುರು ಸಿಗುವ ಪ್ರದೇಶಕ್ಕೆ ಹತ್ತಿರದಲ್ಲಿರುವುದೂ ಹತ್ತಿ ಜವಳಿ ಕೈಗಾರಿಕಾಕೇಂದ್ರಗಳಾದ ಮುಂಬಯಿ ಮತ್ತು ಅಹಮದಾಬಾದ್ ನಗರಗಳ ಹಿನ್ನಾಡುಗಳು ಹತ್ತಿ ಬೆಳೆಯುವ ಪ್ರದೇಶಗಳಾಗಿರುವುದೂ ಸಣಬುಕಾರ್ಖಾನೆಗಳು ಬಂಗಾಳದ ಸಣಬು ಬೆಳೆಯುವ ಪ್ರದೇಶಗಳ ಹತ್ತಿರವಿರುವುದೂ ಕಚ್ಚಾ ಸಾಮಗ್ರಿಯ ಆಕರ್ಷಣೆಯನ್ನು ನಿದರ್ಶಿಸುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ, ಯಾವುದೇ ಒಂದು ಸರಕಿನ ಒಂದು ಟನ್ ತೂಕದಷ್ಟು ಪರಿಮಾಣದ ಉತ್ಪಾದನೆಗೆ ಇದಕ್ಕೂ ಹೆಚ್ಚು ತೂಕದ ಕಚ್ಚಾ ಸಾಮಗ್ರಿ ಬೇಕಾಗುವ ಸಿದ್ಧಪಡಿಸಿದ ಉತ್ಪನ್ನಗಳನ್ನು ಮಾರುಕಟ್ಟೆಕೇಂದ್ರಗಳಿಗೆ ಕಳಿಸಲು ಸಾರಿಗೆ ಸೌಕರ್ಯ ಉತ್ತಮವಾಗಿರುವ ಸಂದರ್ಭಗಳಲ್ಲಿ ಕಚ್ಚಾಸಾಮಗ್ರಿಗಳ ಮೂಲಸ್ಥಾನಕ್ಕೆ ಆದಷ್ಟು ಹತ್ತಿರದ ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪನೆಯಾಗುವ ಪ್ರವೃತ್ತಿ ಇರುತ್ತದೆ. ಅಂದರೆ, ಸಿದ್ಧಸರಕುಗಳು ಒಳಗೊಂಡಿರುವ ಕಚ್ಚಾ ಸಾಮಗ್ರಿ ಮೊದಲು ಹೊಂದಿದ್ದ ತೂಕವನ್ನು ಕಳೆದುಕೊಳ್ಳುವುದೆ, ಹೀಗೆ ಕಳೆದುಕೊಳ್ಳುವುದಾದರೆ ಎಷ್ಟರಮಟ್ಟಿಗೆ ತನ್ನ ತೂಕವನ್ನು ಕಳೆದುಕೊಳ್ಳುತ್ತದೆ–ಎಂಬ ವಿಷಯ ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಒಂದು ಮುಖ್ಯ ಅಂಶ. ಉದಾಹರಣೆಗೆ, ಒಂದು ಟನ್ ಬೀಡುಕಬ್ಬಿಣ ತಯಾರಿಸಲು ಎರಡು ಟನ್ ಕಬ್ಬಿಣದ ಅದುರು ಮತ್ತು ಒಂದು ಟನ್ ಕಲ್ಲಿದ್ದಲು ಬೇಕಾಗುವುದಾದರೆ ಊದುಕುಲುಮೆಗಳು ಅದುರು ಮತ್ತು ಕಲ್ಲಿದ್ದಲುಗಳೆರಡೂ ಇರುವ ಪ್ರದೇಶಕ್ಕೆ ಆದಷ್ಟು ಸಮೀಪದಲ್ಲಿ ಸ್ಥಾಪನೆಯಾಗುತ್ತವೆ. ಕಬ್ಬಿಣದ ಅದುರು ಮತ್ತು ಕಲ್ಲಿದ್ದಲುಗಳೆರಡೂ ಇದರ ಸಮೀಪಪ್ರದೇಶಗಳಲ್ಲಿ ದೊರಕದಿದ್ದರೆ ಇವೆರಡರಲ್ಲಿ ಯಾವುದರ ಸಾಗಣೆ ವೆಚ್ಚ ಹೆಚ್ಚಾಗಿರುವುದೊ ಅದು ಸಿಗುವ ಸ್ಥಳಕ್ಕೆ ಹೆಚ್ಚು ಸಮೀಪದಲ್ಲಿ ಕಬ್ಬಿಣದ ಕೈಗಾರಿಕೆ ಸ್ಥಾಪನೆಯಾಗುವುದೆಂದು ಹೇಳಬಹುದು.

ಕನಿಷ್ಠ ಸಾಗಣೆವೆಚ್ಚದ ಸ್ಥಳ ನಿರ್ಣಯ ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಕೆಲವು ನಿದರ್ಶನಗಳಿಂದ ಇದು ಸ್ಪಷ್ಟವಾಗುತ್ತದೆ. ಇಂಗ್ಲೆಂಡಿನಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪನೆಯಾದ ಪ್ರಥಮದಲ್ಲಿ ಅದುರಿನ ಗುಣಮಟ್ಟ ಅತ್ಯುತ್ತಮವಾಗಿದ್ದು ಒಂದು ಟನ್ ಬೀಡುಕಬ್ಬಿಣ ತಯಾರಿಕೆಗೆ ಅನೇಕ ಟನ್‌ಗಳ ಕಲ್ಲಿದ್ದಲು ಬೇಕಾಗಿದ್ದುದರಿಂದ ಕಬ್ಬಿಣ ಕೈಗಾರಿಕೆಗಳೂ ಕಲ್ಲಿದ್ದಲು ಗಣಿಪ್ರದೇಶಗಳ ಸಮೀಪದಲ್ಲಿ ಸ್ಥಾಪನೆಯಾದುವು. ತರುವಾಯ ತಾಂತ್ರಿಕಪ್ರಗತಿಯಿಂದ ಉತ್ಪಾದನೆಗೆ ಆವಶ್ಯಕವಾದ ಕಲ್ಲಿದ್ದಲಿನ ಪ್ರಮಾಣ ಗಣನೀಯವಾಗಿ ಕಡಿಮೆಯಾದ್ದರಿಂದ ಕಬ್ಬಿಣದ ಕೈಗಾರಿಕೆ ಹೆಚ್ಚಾಗಿ ಕಬ್ಬಿಣದ ಅದುರು ಗಣಿಗಳ ಸಮೀಪದಲ್ಲಿ ಸ್ಥಾಪಿಸುವುದು ಹೆಚ್ಚು ಲಾಭದಾಯಕವಾಯಿತು. ಕಬ್ಬಿಣ ಹಾಗೂ ಉಕ್ಕು ತಯಾರಿಕೆಯಲ್ಲಿ ವಿದ್ಯುಚ್ಛಕ್ತಿಯ ಪ್ರಾಮುಖ್ಯ ಹೆಚ್ಚಿರುವ ಕಡೆಗಳಲ್ಲಿ ಕಲ್ಲಿದ್ದಲಿನ ಸಾಮೀಪ್ಯದ ಪ್ರಶ್ನೆ ಮುಖ್ಯವಲ್ಲ. ಅದುರು ಸಾಗಣೆ ವೆಚ್ಚ ಮುಖ್ಯವಾಗುತ್ತದೆ. ಆದರೆ, ಆಧುನಿಕ ಸಾರಿಗೆ ವ್ಯವಸ್ಥೆಯ ಬೆಳೆವಣಿಗೆಗಳಿಂದ ಕೈಗಾರಿಕೆಯ ಸ್ಥಾನೀಕರಣಕ್ಕೆ ಕಚ್ಚಾ ಸಾಮಗ್ರಿಯ ಸಾಮೀಪ್ಯವೊಂದೇ ಮುಖ್ಯವಾಗುವುದಿಲ್ಲ. ಜಪಾನ್ ತನ್ನ ಕಬ್ಬಿಣ ಉಕ್ಕು ಕೈಗಾರಿಕೆಗೆ ಬೇಕಾದ ಅದುರನ್ನು ಆಮದು ಮಾಡಿಕೊಳ್ಳುತ್ತಲೂ ಇದೆ. ಬಹುಕಾಲದಿಂದಲೂ ಲ್ಯಾಂಕಷೈರಿನ ಹತ್ತಿ ಕೈಗಾರಿಕೆ ಆಮದಾದ ಹತ್ತಿಯನ್ನು ಅವಲಂಬಿಸಿದೆ.

ಸಾರಿಗೆವೆಚ್ಚ ಸಾರಿಗೆಶುಲ್ಕನೀತಿಯನ್ನು ಅವಲಂಬಿಸಿರುವುದಕ್ಕೆ ಭಾರತದ ಅನುಭವ ನಿದರ್ಶನ. ಕೈಗಾರಿಕೆಗಳು ಮೊದಲು ಮುಂಬಯಿ ಮತ್ತು ಕಲ್ಕತ್ತಗಳಲ್ಲಿ ಬಹಳ ಮಟ್ಟಿಗೆ ಸ್ಥಾನೀಕರಣವಾಗುವುದಕ್ಕೆ ಆಗಿನ ರೈಲ್ವೆದರ ನೀತಿ ಒಂದು ಕಾರಣವೆಂದೇ ಹೇಳಲಾಗಿದೆ. ತರುವಾಯ ಸಂಭವಿಸಿರುವ ಸಾರಿಗೆ ಅಭಿವೃದ್ಧಿ ಮತ್ತು ಸಾರಿಗೆ ಶುಲ್ಕನೀತಿಯ ಬದಲಾವಣೆಗಳಿಂದ ಈ ಸ್ಥಳಗಳು ಮೊದಲು ಹೊಂದಿದ್ದ ವಿಶೇಷ ಅನುಕೂಲಗಳನ್ನು ಕಳೆದುಕೊಂಡಿವೆ.

ಸಿದ್ಧವಸ್ತುಗಳನ್ನು ಮಾರುಕಟ್ಟೆಗೆ ತಲುಪಿಸುವ ವೆಚ್ಚ ಹಾಗೂ ಸೌಕರ್ಯಗಳು ಕೈಗಾರಿಕೆಗಳನ್ನು ನಿರ್ದಿಷ್ಟ ಸ್ಥಳಗಳಲ್ಲಿ ಸ್ಥಾಪಿಸಲು ಆಕರ್ಷಕವಾಗುವ ಇನ್ನೊಂದು ಅಂಶ. ಕಚ್ಚಾಸಾಮಗ್ರಿಗಳ ಸರಬರಾಯಿ ಮೂಲಗಳ ಆಕರ್ಷಣೆ ಒಂದು ಕಡೆ, ಅನುಭೋಗಿ ಬೇಡಿಕೆಯ ಸ್ಥಳಗಳ ಆಕರ್ಷಣೆ ಇನ್ನೊಂದು ಕಡೆ–ಇವೆರಡನ್ನು ಸಮನ್ವಯಗೊಳಿಸುವ ಕನಿಷ್ಠ ಸಾರಿಗೆ ವೆಚ್ಚದ ಪ್ರದೇಶದಲ್ಲಿ ಕೈಗಾರಿಕೆ ಸ್ಥಾನೀಕರಣವಾಗುವ ಪ್ರವೃತ್ತಿ ಹೊಂದಿರುವುದೆಂದು ಹೇಳಬಹುದು. ಈ ಸ್ಥಳನಿರ್ಣಯ ಕುರಿತ ಸೈದ್ಧಾಂತಿಕ ಮಾದರಿಯೊಂದನ್ನು ಆಲ್‌ಫ್ರೆಡ್ ವಿಬರ್ ತನ್ನ ಗ್ರಂಥದಲ್ಲಿ ರಚಿಸಿದ್ದಾನೆ. ಆದರೆ, ವಾಸ್ತವವಾಗಿ ಹೀಗೆ ನಿರ್ಣಯವಾಗುವ ಸ್ಥಳವೇ ಒಂದು ಕೈಗಾರಿಕೆಯ ಸ್ಥಾನೀಕರಣಕ್ಕೆ ಅತ್ಯುತ್ತಮ ಪ್ರದೇಶವೆಂದು ಭಾವಿಸಲಾಗುವುದಿಲ್ಲ. ಏಕೆಂದರೆ ಕೈಗಾರಿಕಾವೆಚ್ಚದಲ್ಲಿ ಸೇರುವ ಇತರ ಅನೇಕ ಅಂಶಗಳನ್ನೂ ಕೆಲವು ಆರ್ಥಿಕೇತರ ಕಾರಣಗಳನ್ನೂ ಸ್ಥಾನೀಕರಣದಲ್ಲಿ ಪರಿಗಣಿಸಬೇಕಾಗುತ್ತದೆ.

ಒಂದು ಕೈಗಾರಿಕೆಗೆ ಬೇಕಾಗುವ ಉತ್ಪಾದನಂಗಗಳು ಯಾವ ಸ್ಥಳದಲ್ಲಿ ಅತ್ಯಂತ ಸುಲಭ ಬೆಲೆಗೆ ದೊರಕುವುವೋ ಅದು ಆರ್ಥಿಕದೃಷ್ಟಿಯಿಂದ ಆ ಕೈಗಾರಿಕೆಯ ಸ್ಥಾನೀಕರಣಕ್ಕೆ ಅತ್ಯುತ್ತಮ ಸ್ಥಳವಾಗುತ್ತದೆ. ವಾಯುಗುಣ, ಭೂಮಿ, ಲೋಕೋಪಯೋಗಿ ಸೇವೆಗಳು, ವಿದ್ಯುಚ್ಛಕ್ತಿ, ಬಂಡವಾಳ ಮತ್ತು ಬ್ಯಾಂಕಿಂಗ್ ಸೌಲಭ್ಯಗಳು, ಕಾರ್ಮಿಕ ಬಲ–ಇವೆಲ್ಲವುಗಳ ಬಗ್ಗೆಯೂ ಇರುವ ಅನುಕೂಲ ಹಾಗೂ ಪ್ರತಿಕೂಲಗಳು ಸ್ಥಾನೀಕರಣದ ಮೇಲೆ ಪ್ರಭಾವಹೊಂದಿರುತ್ತವೆ. ಏಕಪ್ರಕಾರವಾಗಿ ಹರಿಯುವ ನೀರಿನ ಆವಶ್ಯಕತೆ ಅಥವಾ ನಿರ್ದಿಷ್ಟ ಹವಾಗುಣ ಅಥವಾ ಇಂಥವೇ ಇತರ ನೈಸರ್ಗಿಕ ಗುಣವಿಶೇಷಗಳು ಕೆಲವು ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚು ಪ್ರಾಮುಖ್ಯವುಳ್ಳ ಅಂಶಗಳಾಗಿರಬಹುದು. ವಸತಿ, ವಿದ್ಯಾಭ್ಯಾಸ, ಆರೋಗ್ಯ, ವೈದ್ಯ ಇತ್ಯಾದಿ ಸೌಕರ್ಯಗಳು ಹೆಚ್ಚು ಉತ್ತಮವಾಗಿರುವ ಪರಿಸ್ಥಿತಿ ಕೈಗಾರಿಕಾ ಸ್ಥಾಪಕರಿಗೆ ಆಕರ್ಷಕವಾಗಬಲ್ಲುದು. ಆಧುನಿಕ ಕೈಗಾರಿಕೆಗಳಿಗೆ ಶಕ್ತಿ ಅತ್ಯಾವಶ್ಯಕ. ಶಕ್ತಿಯ ಉತ್ಪಾದನೆಗೆ ಕಲ್ಲಿದ್ದಲು ಮುಖ್ಯ ಮೂಲಸಾಮಗ್ರಿಯಾಗಿದ್ದ ಕಾಲದಲ್ಲಿ ಕೈಗಾರಿಕಾಸ್ಥಾಪನೆಗೆ ಈ ಸಾಮಗ್ರಿ ದೊರಕುವ ಸ್ಥಳದ ಆಕರ್ಷಣೆ ಹೆಚ್ಚಾಗಿತ್ತು. ತಾಂತ್ರಿಕಪ್ರಗತಿಯಿಂದ ಬಾಯಿಲರ್‌ಗಳ ಹಾಗೂ ಶಕ್ತಿಯ ಉತ್ಪಾದನೆಗೆ ಸಂಬಂಧಪಟ್ಟ ಯಂತ್ರೋಪಕರಣಗಳು ಉತ್ತಮವಾದಂತೆಯೂ ತೈಲ ಹಾಗೂ ಜಲ ವಿದ್ಯುಚ್ಛಕ್ತಿಯ ಪ್ರಾಮುಖ್ಯ ಹೆಚ್ಚಿದಂತೆಯೂ ಕೈಗಾರಿಕಾಸ್ಥಾನೀಕರಣಕ್ಕೆ ಕಲ್ಲಿದ್ದಲಿನ ಆಕರ್ಷಣೆ ಕಡಿಮೆಯಾಗಿದೆ. ವಿದ್ಯುಚ್ಛಕ್ತಿ ಸಾಮಾನ್ಯವಾಗಿ ಎಲ್ಲ ಸ್ಥಳಗಳಿಗೂ ಹಬ್ಬಿರುವ ಆಧುನಿಕ ಆರ್ಥಿಕತೆಯಲ್ಲಿ ಅನೇಕ ಕೈಗಾರಿಕೆಗಳು–ಮುಖ್ಯವಾಗಿ ಲಘು ಕೈಗಾರಿಕೆಗಳು–ಹೆಚ್ಚು ಕೇಂದ್ರೀಕೃತವಾಗುವುದರ ಬದಲಾಗಿ ವಿಕೇಂದ್ರೀಕೃತವಾಗುವ ಪ್ರವೃತ್ತಿ ಇದೆ. ಇದು ಎಲ್ಲ ದೇಶಗಳ ಅನುಭವ. ದಕ್ಷಿಣ ಭಾರತದಲ್ಲಿ ಪೈಕಾರ ಜಲವಿದ್ಯುಚ್ಛಕ್ತಿಯೋಜನೆಯ ಕಾರ್ಯ ಮುಗಿದ ಅನಂತರ ಕೊಯಮತ್ತೂರು, ಮಧುರೆ, ತಿನ್ನವೆಲ್ಲಿ–ಇಂಥ ದಕ್ಷಿಣ ಭಾರತ ಕೇಂದ್ರಗಳಲ್ಲಿ ಹತ್ತಿನೂಲುಗಿರಣಿಗಳು ಸ್ಥಾಪನೆಯಾದುದು ಇದಕ್ಕೆ ಒಂದು ನಿದರ್ಶನ. ವಿದ್ಯುಚ್ಛಕ್ತಿಯ ಬೆಳೆವಣಿಗೆ ಕೈಗಾರಿಕಾ ಸ್ಥಾನೀಕರಣದ ಪ್ರವೃತ್ತಿಯನ್ನು ಸ್ವಲ್ಪಮಟ್ಟಿಗೆ ತಡೆದಿರುವುದಾದರೂ ಇತರ ಮುಖ್ಯ ಕಾರಣಗಳಿಂದ ಕೆಲವು ಕೈಗಾರಿಕೆಗಳು ಬಹುಮಟ್ಟಿಗೆ ಕೇಂದ್ರೀಕೃತವಾಗಿಯೇ ಉಳಿಯುವುವು. ಬೃಹದ್ಗಾತ್ರ ವ್ಯವಸ್ಥೆಯಿಂದ ಕೈಗಾರಿಕೆಗೆ ಲಭಿಸುವ ಪ್ರಯೋಜನಗಳು ಈ ಕಾರಣಗಳಲ್ಲಿ ಅತಿಮುಖ್ಯವಾದವು.

ಉತ್ಪಾದನಕಾರ್ಯ ಸಾಧ್ಯವಾದಷ್ಟು ಮಿತವ್ಯಯದಿಂದ ನಡೆಯಬೇಕಾದರೆ ಅದು ಬೃಹದ್ಗಾತ್ರ ತಳೆಯಲೇಬೇಕಾದ ಕೈಗಾರಿಕೆಗಳು ಆಧುನಿಕ ಕಾಲದಲ್ಲಿವೆ. ಇಂಥವು ಸಾಮಾನ್ಯವಾಗಿ ಕೆಲವೇ ಸ್ಥಳಗಳಲ್ಲಿ ಸ್ಥಾನೀಕರಣವಾಗುವುದು ಸ್ವಾಭಾವಿಕ. ಸ್ಥಾನೀಕರಣಕ್ಕೂ ಅನುಕೂಲತಮಗಾತ್ರಕ್ಕೂ (ಆಪ್ಟಿಮಮ್ ಸೈಜ್) ಸಂಬಂಧವಿದೆ.

ಕೈಗಾರಿಕೆಗೆ ಬೇಕಾಗುವ ನುರಿತ ಹಾಗೂ ಇತರ ಕಾರ್ಮಿಕ ಬಲದ ಸರಬರಾಯಿ ಪರಿಸ್ಥಿತಿ ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿ ಇರುವ ಸಂದರ್ಭಗಳಲ್ಲಿ–ಇಂಥ ಸಂದರ್ಭಗಳು ಎಲ್ಲ ದೇಶಗಳಲ್ಲಿಯೂ ಸಾಮಾನ್ಯವಾಗಿ ಇವೆ–ಇದು ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಹೊಂದಿರುವ ಮತ್ತೊಂದು ಮುಖ್ಯ ಅಂಶವಾಗಿದೆ. ಮುಂದುವರಿದಿರುವ ಕೈಗಾರಿಕಾಕೇಂದ್ರಗಳಲ್ಲಿ ನುರಿತ ಕಾರ್ಮಿಕಬಲ ಸಾಮಾನ್ಯವಾಗಿ ಸುಲಭವಾಗಿ ದೊರಕುವುದರಿಂದ ಹೊಸ ಕೈಗಾರಿಕೆಗಳು ಈ ಕಾರಣದಿಂದ ಅಲ್ಲಿ ಸ್ಥಾಪನೆಯಾಗುವ ಒಲವು ಇರುತ್ತದೆ. ಬಂಡವಾಳ ಮತ್ತು ಬ್ಯಾಂಕಿಂಗ್ ಸೌಕರ್ಯಗಳೂ ಇಂಥ ಕೇಂದ್ರಗಳಲ್ಲಿ ಹೆಚ್ಚು ಅಭಿವೃದ್ಧಿಯಾಗಿರುವುದು ಕೂಡ ಈ ಒಲವನ್ನು ಬಲಪಡಿಸುತ್ತದೆ. ಸ್ಥಾಪಿಸಲಾಗುವ ಒಂದು ಪ್ರಮುಖ ಕೈಗಾರಿಕೆಗೆ ಆವಶ್ಯಕವಾದ ಅಂಗಗಳನ್ನು ಒದಗಿಸಬಲ್ಲ ಪೂರಕ ಉದ್ಯಮಗಳು ಸ್ಥಾಪನೆಯಾಗಬಲ್ಲವೇ ಎಂಬುದೂ ಸ್ಥಾನೀಕರಣವನ್ನು ನಿರ್ಣಯಿಸುವ ಇನ್ನೊಂದು ಅಂಶ. ಒಟ್ಟಿನಲ್ಲಿ ಉತ್ಪಾದನಂಗಗಳು ಅತ್ಯಂತ ಸುಲಭಬೆಲೆಗೆ ದೊರಕುವ ಮತ್ತು ಕನಿಷ್ಠ ಸಾರಿಗೆ ವೆಚ್ಚವನ್ನು ಒಳಗೊಳ್ಳುವ ಸ್ಥಳ ಕೈಗಾರಿಕೆಯ ಸ್ಥಾಪನೆಗೆ ಆರ್ಥಿಕ ದೃಷ್ಟಿಯಿಂದ ಅತ್ಯಂತ ಅಪೇಕ್ಷಣೀಯ ಸ್ಥಳವಾಗುತ್ತದೆ.

ಸ್ಥಾನೀಕರಣ ಕೆಲವು ಸಂದರ್ಭಗಳಲ್ಲಿ ಆರ್ಥಿಕೇತರ ಕಾರಣಗಳಿಂದ ಪ್ರಭಾವಿತವಾಗಬಲ್ಲುದು ಎಂಬುದನ್ನು ಗಮನಿಸಬೇಕು. ಸೈನಿಕ ಅಥವಾ ರಕ್ಷಣ ಆಯಕಟ್ಟಿನ ದೃಷ್ಟಿಯಿಂದ ಎಷ್ಟೇ ವೆಚ್ಚವಾಗಲಿ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸಲು ಒಂದು ದೇಶ ತೀರ್ಮಾನಿಸಬಹುದು. ಇಂಥ ಕೈಗಾರಿಕೆಗಳು ಸಾಮಾನ್ಯವಾಗಿ ಶತ್ರುವಿನ ವೀಕ್ಷಣೆಗೆ ಮತ್ತು

ವಿಮಾನಬಲದ ಹೊಡೆತಕ್ಕೆ ಸುಲಭವಾಗಿ ನಿಲುಕದ ಪ್ರದೇಶಗಳಲ್ಲಿ ಸ್ಥಾಪನೆಯಾಗಬೇಕಾಗಬಹುದು. ಇಂಥ ಸಂದರ್ಭಗಳಲ್ಲಿ ಸಾರಿಗೆ ವೆಚ್ಚ ಅಥವಾ ಇತರ ವೆಚ್ಚಗಳನ್ನು ಕನಿಷ್ಠಗೊಳಿಸುವುದು ಸ್ಥಾನೀಕರಣಕ್ಕೆ ಪ್ರಧಾನ ನಿರ್ಣಯಾಂಶವಾಗಲಾರದು.

**ಕೈಗಾರಿಕಾ ಸ್ಥಾನೀಕರಣಾಂಶದ ಅಳತೆ:** ಕೈಗಾರಿಕಾ ಸ್ಥಾನೀಕರಣದ ಮೇಲೆ ಅನೇಕ ಅಂಶಗಳ ಪ್ರಭಾವವಿರುವುದು ಮೇಲಿನ ವಿವರಣೆಯಿಂದ ವ್ಯಕ್ತವಾಗುತ್ತದೆ. ವಿವಿಧ ಅಂಶಗಳಿಂದ ಹೀಗೆ ನಿರ್ಣಯವಾಗುವ ಸ್ಥಾನೀಕರಣದ ತೀವ್ರತೆ ಎಲ್ಲ ಕೈಗಾರಿಕೆಗಳಲ್ಲೂ ಒಂದೇ ಸಮನಾಗಿರುವುದಿಲ್ಲ. ವಜ್ರ, ಚಿನ್ನ, ಪೆಟ್ರೋಲಿಯಂ, ಖನಿಜಗಳು ಇತ್ಯಾದಿ ಕೆಲವು ಕೈಗಾರಿಕೆಗಳಲ್ಲಿ ಸ್ಥಾನೀಕರಣ ಹೆಚ್ಚು ಪ್ರಮಾಣದಲ್ಲಿರುತ್ತದೆ. ಇತರ ಅನೇಕ ತಯಾರಿಕೋದ್ಯಮಿಗಳ ಸ್ಥಾನೀಕರಣಾಂಶಗಳಲ್ಲಿ ವ್ಯತ್ಯಾಸವಿರುತ್ತದೆ. ಕೈಗಾರಿಕಾಸ್ಥಾನೀಕರಣ ಎಷ್ಟು ಪ್ರಮಾಣದಲ್ಲಿದೆ ಎಂಬುದನ್ನು ಗ್ರಹಿಸಲು ಫ್ಲೋರೆನ್ಸ್ ತನ್ನ ಸೈದ್ಧಾಂತಿಕ ವಿವರಣೆಯಲ್ಲಿ ಕೆಲವು ಸಂಖ್ಯಾಶಾಸ್ತ್ರೀಯ ಭಾವನೆಗಳನ್ನು ಕೊಟ್ಟಿದ್ದಾನೆ. ಸ್ಥಾನೀಕರಣಾಂಶ (ಲೊಕೇಷನ್ ಫ್ಯಾಕ್ಟರ್) ಮತ್ತು ಸ್ಥಾನೀಕರಣದ ಸಹಕಾರಕ (ಕೋ-ಎಫಿಷೆಂಟ್ ಆಫ್ ಲೊಕೇಷನ್) ಎಂಬುವು ಎರಡು ಮುಖ್ಯ ಭಾವನೆಗಳು.

ಯಾವುದೇ ಕೈಗಾರಿಕೆಯ ಒಟ್ಟು ಕಾರ್ಮಿಕಬಲದಲ್ಲಿ ಎಷ್ಟು ಶೇಕಡ ಪ್ರಮಾಣ ಒಂದು ಪ್ರದೇಶದಲ್ಲಿ ಇರುವುದೋ ಅದನ್ನು ಆ ಪ್ರದೇಶದ ಒಟ್ಟು ಕೈಗಾರಿಕಾ ಕಾರ್ಮಿಕಬಲದ ಶೇಕಡದಿಂದ ಭಾಗಿಸಿದರೆ ಬರುವ ಸಂಖ್ಯೆಯನ್ನು ಸ್ಥಾನೀಕರಣಾಂಶದ ಸೂಚ್ಯಂಕವೆಂದು ಪರಿಗಣಿಸಲಾಗಿದೆ. ಒಂದು ಕೈಗಾರಿಕೆಯಲ್ಲಿರುವ ಒಟ್ಟು ಕಾರ್ಮಿಕಬಲದ ಪ್ರಾದೇಶಿಕ ಶೇಕಡಗಳು ಮತ್ತು ಎಲ್ಲ ಕೈಗಾರಿಕೆಗಳಲ್ಲಿರುವ ಒಟ್ಟು ಕಾರ್ಮಿಕಬಲದ ಪ್ರಾದೇಶಿಕ ಶೇಕಡಗಳು-ಇವೆರಡರ ಅನುಕ್ರಮವಾದ ದಿಕ್‍ಚ್ಯುತಿಗಳ (ಡೀವಿಯೇಷನ್ಸ್) ಒಟ್ಟು ಮೊತ್ತವನ್ನು 100 ರಿಂದ ಭಾಗಿಸಿದರೆ ಬರುವ ಸಂಖ್ಯೆ ಸ್ಥಾನೀಕರಣದ ಸಹಕಾರಕ ಆಗುತ್ತದೆ. ಒಂದು ಕೈಗಾರಿಕೆ ದೇಶದ ವಿವಿಧ ಪ್ರದೇಶಗಳಲ್ಲಿ ಹಂಚಿಕೆಯಾಗಿರುವಾಗ ಹಂಚಿಕೆಯಲ್ಲಿ ಎಷ್ಟು ಅಂಶದ ಅಸಮಾನತೆ ಇದೆ ಎಂಬುದರ-ಅದು ಎಷ್ಟರಮಟ್ಟಿಗೆ ಕೇಂದ್ರೀಕೃತವಾಗಿದೆ ಅಥವಾ ವಿಕೇಂದ್ರೀಕೃತವಾಗಿದೆ ಎಂಬುದರ-ವಿಶ್ಲೇಷಣೆಯಲ್ಲಿ ಇಂಥ ಸಂಖ್ಯಾಶಾಸ್ತ್ರೀಯ ವಿಧಾನಗಳು ಸಹಾಯಕವಾಗಿವೆ. ಕಾರ್ಮಿಕಬಲ ವಿತರಣೆಯ ಆಧಾರದ ಮೇಲೆ ಹಿಂದೆ ಹೇಳಿದಂತೆ ಫ್ಲೋರೆನ್ಸ್ ರಚಿಸಿರುವ ಸೂಚ್ಯಂಕಗಳಿಗಿಂತ ಉತ್ಪಾದನೆಯ ಪ್ರಮಾಣದ ಆಧಾರದ ಮೇಲೆ ಕೈಗಾರಿಕಾ ಸ್ಥಾನೀಕರಣಾಂಶವನ್ನು ಅಳೆಯುವುದು ಹೆಚ್ಚು ಉಪಯುಕ್ತವಾಗುವುದೆಂಬ ಅಭಿಪ್ರಾಯವೂ ಇದೆ. ಸ್ಥಾನೀಕರಣ ಎಷ್ಟುಮಟ್ಟಿಗೆ ಕೇಂದ್ರೀಕರಣಕ್ಕೆ ಎಡೆಮಾಡಿದೆ ಎಂಬುದರ ಇಂಥ ವಿಶ್ಲೇಷಣೆಗೆ ಪ್ರಾದೇಶಿಕ ಆರ್ಥಿಕ ಸಮತೋಲ ಕುರಿತ ಇತ್ತೀಚಿನ ಅಧ್ಯಯನಗಳು ಸಹಾಯಕವಾಗಿವೆ. ಕೈಗಾರಿಕಾಸ್ಥಾನೀಕರಣಾಂಶವನ್ನು ಅಳೆಯಲು ಮತ್ತು ಈ ಬಗ್ಗೆ ಸ್ಥೂಲ ಚಿತ್ರವೊಂದನ್ನು ರಚಿಸಲು ಸಾಧ್ಯ. ಸ್ಥಾನೀಕರಣದ ಸಾಧಕಬಾಧಕಗಳ ಸೂಕ್ಷ್ಮಪರಿಶೀಲನೆಗೆ ಸ್ಥಾನೀಕರಣದ ಇಂಥ ಅಳತೆ ಆವಶ್ಯಕವಾಗುತ್ತದೆ.

**ಅನುಕೂಲಗಳು:** ಕೈಗಾರಿಕಾಸ್ಥಾನೀಕರಣ ಆಧುನಿಕ ಆರ್ಥಿಕಾಭಿವೃದ್ಧಿಯ ಒಂದು ಗುಣವಿಶೇಷ ಅಂದಮೇಲೆ ಆರ್ಥಿಕಾಭಿವೃದ್ಧಿಯ ಅಂಗವಾದ ಕೈಗಾರಿಕಾಭಿವೃದ್ಧಿಗೆ ಸ್ಥಾನೀಕರಣ ಒಂದು ಕಾರಣವಾಗುವುದೆಂದು ತಿಳಿಯಬಹುದು. ಕೈಗಾರಿಕಾಭಿವೃದ್ಧಿಗೆ ಪೋಷಕವಾಗುವುದರಿಂದ ಸ್ಥಾನೀಕರಣ ಪ್ರವೃತ್ತಿಯನ್ನು ಒಂದು ಅಪೇಕ್ಷಣೀಯ ಬೆಳವಣಿಗೆ ಎಂದು ಹೇಳಬಹುದು. ಉತ್ಪಾದನೆಯಲ್ಲಿ ವಿಶೇಷೀಕರಣದಿಂದ ಲಭಿಸುವ ಪ್ರಯೋಜನಗಳೆಲ್ಲವನ್ನೂ ಸ್ಥಾನೀಕರಣ ದೊರಕಿಸುತ್ತದೆ. ಒಂದೊಂದು ಉದ್ಯಮಸಂಸ್ಥೆಗೂ ಆಂತರಿಕ ಹಾಗೂ ಬಾಹ್ಯ ಮಿತವ್ಯಯಗಳನ್ನು ಪರಮಾವಧಿಗೊಳಿಸಿಕೊಳ್ಳುವ ಅವಕಾಶ ದೊರೆಯುತ್ತದೆ. ಒಂದೊಂದು ಕಾರ್ಖಾನೆಯೂ ಬೃಹದ್ಗಾತ್ರದ ಉತ್ಪಾದನ ಕೇಂದ್ರವಾಗುವುದರಿಂದ ಆಂತರಿಕ ಆಡಳಿತ ವ್ಯವಸ್ಥೆಯಲ್ಲಿ ಶ್ರಮ ವಿಭಜನೆಯ ತತ್ತ್ವವನ್ನು ಹೆಚ್ಚಾಗಿ ಆಚರಣೆಗೆ ತರಬಹುದು. ಕಾರ್ಮಿಕರಿಗೆ ಉಪಯುಕ್ತವಾದ ತಾಂತ್ರಿಕಶಿಕ್ಷಣ ಕೊಡಲು ಏರ್ಪಾಡು ಮಾಡಲು ಸಾಧ್ಯವಾಗುತ್ತದೆ. ಒಂದು ಸ್ಥಳದಲ್ಲಿ ನೆಲೆಸುವ ಕೈಗಾರಿಕೆಗೆ ಸಂಬಂಧಪಟ್ಟ ವಿವಿಧ ಉದ್ಯಮ ಸಂಸ್ಥೆಗಳು ಸಂಘಟಿತವಾಗಿ ಕೈಗಾರಿಕಾಮುನ್ನಡೆಗೆ ಆವಶ್ಯಕವಾದ ಸಂಶೋಧನೆಗಳನ್ನು ಕೈಗೊಳ್ಳಲೂ ಹೊಸ ತಂತ್ರಗಳನ್ನು ಅನುಸರಿಸಲೂ ಸಾಧ್ಯವಾಗುತ್ತದೆ.

ಕೈಗಾರಿಕಾಸ್ಥಾನೀಕರಣ ಕೈಗಾರಿಕಾವಿಸ್ತರಣೆಗೆ ಅನೇಕ ರೀತಿಯಲ್ಲಿ ಮಾರ್ಗ ಮಾಡಿಕೊಡುತ್ತದೆ. ಏಕೆಂದರೆ, ಒಂದು ಪ್ರಮುಖ ಕೈಗಾರಿಕೆಗೆ ಸಂಬಂಧಪಟ್ಟ ಅನೇಕ ಉಪಉದ್ಯಮಗಳು ಅದೇ ಪ್ರದೇಶದಲ್ಲಿ ಸ್ಥಾಪನೆಯಾಗುವುದು ಸ್ವಾಭಾವಿಕ. ಕೈಗಾರಿಕಾಕೇಂದ್ರ ವ್ಯಾಪಾರಸಂಸ್ಥೆಗಳ ಮತ್ತು ಹಣಸಂಸ್ಥೆಗಳ ಬೆಳವಣಿಗೆಗೂ ಉತ್ತೇಜಕ ವಾತಾವರಣವಿರುವ ಪ್ರದೇಶವಾಗುತ್ತದೆ. ಔದ್ಯೋಗಿಕ ಬೆಳವಣಿಗೆ, ವ್ಯಾಪಾರಾಭಿವೃದ್ಧಿ, ಹಣದ ಪೇಟೆಯ ವಿಸ್ತರಣೆ, ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳು ಇತ್ಯಾದಿ ಆರ್ಥಿಕಾಂಗಗಳು ಪರಸ್ಪರ ಪೋಷಕವೆಂದೇ ಹೇಳಬಹುದು. ಹೀಗೆ, ಯಾವುದೇ ಕೈಗಾರಿಕೆ ಒಂದು ಸ್ಥಳದಲ್ಲಿ ನೆಲೆಸಿ ಅದು ಅಲ್ಲಿಯ ವೈಶಿಷ್ಟ್ಯವಾಗುವುದರಿಂದ ಒಂದು ರೀತಿಯ ವಿಸ್ತರಣ ಪರಿಣಾಮದ (ಸ್ಪ್ರೆಡ್ ಎಫೆಕ್ಟ್) ಮೂಲಕ ಆ ಸ್ಥಳದಲ್ಲಿ ಆರ್ಥಿಕ ಚಟುವಟಿಕೆಗಳೆಲ್ಲವೂ ವಿಸ್ತರಿಸುವ ಸಂಭವ ಹೆಚ್ಚು. ಹೀಗೆ ಸ್ಥಾನೀಕರಣಕ್ಕೂ ಪ್ರಾದೇಶಿಕ ಅಭಿವೃದ್ಧಿಗೂ ಸಂಬಂಧ ಕಲ್ಪಿಸಬಹುದು. ಪ್ರಾದೇಶಿಕ ಅಭಿವೃದ್ಧಿಯಿಂದ ಆ ಸ್ಥಳದ ಜನರ ಆರ್ಥಿಕಮಟ್ಟ ಏರುವುದೆಂದೂ ಹೇಳಬಹುದು.

**ಪ್ರತಿಕೂಲಗಳು:** ಕೈಗಾರಿಕಾಸ್ಥಾನೀಕರಣ ಮೇಲೆ ಹೇಳಿರುವಂತೆ ಕೆಲವು ಪ್ರದೇಶಗಳ ವಿಶೇಷ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗುವುದಾದರೂ ಪ್ರಾದೇಶಿಕ ಅಸಮತೆಯ ಸಮಸ್ಯೆಗೆ ಅದು ಮುಖ್ಯಕಾರಣವಾಗಿದೆ ಎಂಬ ಅತಿಮುಖ್ಯ ಅಪವಾದಕ್ಕೆ ಅದು ಗುರಿಯಾಗಿದೆ. ಕೈಗಾರಿಕೆಯಲ್ಲಿ ಮುಂದುವರಿದಿರುವ ಪ್ರತಿಯೊಂದು ದೇಶದಲ್ಲೂ ಹಿಂದುಳಿದ ಪ್ರದೇಶಗಳಿರುವುದು ಇತ್ತೀಚೆಗೆ ಸಾರ್ವತ್ರಿಕಗಮನ ಸೆಳೆದಿರುವ ಮುಖ್ಯ ಸಮಸ್ಯೆ. ಆರ್ಥಿಕಯೋಜನೆಯನ್ನು ಅನುಸರಿಸುತ್ತಿರುವ ರಾಷ್ಟ್ರಗಳು ಸ್ಥಾನೀಕರಣದಿಂದ ಉಂಟಾಗಬಹುದಾದ ಪ್ರಾದೇಶಿಕ ಅಸಮತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಅನೇಕ ವಿಶೇಷಕ್ರಮಗಳನ್ನು ಸಾಮಾನ್ಯವಾಗಿ ಕೈಗೊಳ್ಳುತ್ತಿವೆ.

ಕೈಗಾರಿಕಾ ಸ್ಥಾನೀಕರಣದಿಂದ ಜನರ ಆರ್ಥಿಕ ಪರಿಸ್ಥಿತಿಗಳು ಆಯಾ ಸ್ಥಳಗಳ ನಿರ್ದಿಷ್ಟ ಕೈಗಾರಿಕೆಗಳನ್ನು ಬಹುಮಟ್ಟಿಗೆ ಅವಲಂಬಿಸಿರುತ್ತವೆ. ಕಾರಣಾಂತರದಿಂದ ಈ ಕೈಗಾರಿಕೆಗಳು ವಿಪತ್ತಿಗೆ ಗುರಿಯಾದರೆ ಜನ ತುಂಬ ಕಷ್ಟಕ್ಕೆ ಒಳಗಾಗಬೇಕಾಗುತ್ತದೆ. ಆದರೆ, ಆಧುನಿಕ ಕೈಗಾರಿಕಾವ್ಯವಸ್ಥೆಯಲ್ಲಿ ವಿಶೇಷೀಕರಣಕ್ಕೆ ಸಂಬಂಧಿಸಿದ ಲಾಭಗಳನ್ನು ಪಡೆಯಬೇಕಾದರೆ ಇಂಥ ತಾತ್ಕಾಲಿಕ ಕಷ್ಟಸಂಭವಗಳನ್ನು ಎದುರಿಸಲು ಯುಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಕೈಗಾರಿಕಾ ಸ್ಥಾನೀಕರಣದಿಂದ ಬೆಳೆಯುವ ನಗರಗಳಲ್ಲಿ ಜನಸಾಂದ್ರತೆ ಹೆಚ್ಚುವುದರಿಂದ ನಗರದ ಸ್ವಚ್ಛತೆ, ಒಳ್ಳೆಯ ನೀರಿನ ಸರಬರಾಯಿ, ಮನೆಗಳ ಮತ್ತು ಇತರ ಜೀವನ ಸೌಕರ್ಯಗಳ ಲಭ್ಯತೆ ಇವೆಲ್ಲವೂ ತೀವ್ರ ಸಮಸ್ಯೆಗಳಾಗುತ್ತವೆ. ಆದರೆ, ಕೈಗಾರಿಕಾಭಿವೃದ್ಧಿ ಮತ್ತು ಜನಸಂಖ್ಯಾ ಬೆಳವಣಿಗೆಗಳ ಜೊತೆಗೆ ಇಂಥ ಸಮಸ್ಯೆಗಳು ಅನಿವಾರ್ಯವಾಗಿ ಉದ್ಭವಿಸುತ್ತವೆ. ಆಧುನಿಕ ನಗರಯೋಜನೆಗಳು ಇವನ್ನು ನಿವಾರಿಸಲು ಉಪಾಯಗಳನ್ನು ಹಾಕಿಕೊಂಡಿವೆ. ಸ್ಥಾನೀಕರಣದ ಅನಪೇಕ್ಷಣೀಯ ಪರಿಣಾಮಗಳನ್ನು ತಡೆಗಟ್ಟಿ ಅದರ ಲಾಭಗಳನ್ನು ಪರಮಾವಧಿಗೊಳಿಸುವುದೇ ಸ್ಥಾನೀಕರಣ ನೀತಿಯ ಮುಖ್ಯ ಉದ್ದೇಶ ಎಂದು ಹೇಳಬಹುದು.

**ಕೈಗಾರಿಕೆಗಳ ಪುನಃಸ್ಥಾನೀಕರಣ:** ಯಾವುದೇ ಒಂದು ಕಾಲದಲ್ಲಿ ಸಂಭವಿಸುವ ಕೈಗಾರಿಕಾಸ್ಥಾನೀಕರಣ ಶಾಶ್ವತವೇನೂ ಅಲ್ಲ. ಅದು ಎಂದೆಂದೂ ಬದಲಾಯಿಸದ ಸ್ಥಾನೀಕರಣಸಮತೋಲಸ್ಥಿತಿ ಎಂದು ಪರಿಗಣಿಸಲಾಗದು. ವ್ಯತ್ಯಸ್ತ ಸಂದರ್ಭ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಸ್ಥಾನೀಕರಣದ ಸ್ವರೂಪವೂ ಬದಲಾಯಿಸುವುದೆಂಬುದನ್ನು ಗಮನಿಸಬೇಕು. ಪುನಃಸ್ಥಾನೀಕರಣದ ಮೂಲಕಾರಣಗಳನ್ನು ಋತುವಿನ, ಆವರ್ತದ, ದೀರ್ಘಕಾಲದ ಮತ್ತು ರಚನಾಸಂಬಂಧವಾದ ಬದಲಾವಣೆಗಳೂ ಎಂದು ಹೂವರ್ ವಿಂಗಡಿಸಿದ್ದಾನೆ. ಮೊದಲ ಎರಡೂ ಸ್ಥಾನೀಕರಣದ ಅಲ್ಪಕಾಲಿಕ ಬದಲಾವಣೆಗಳಿಗೆ ಕಾರಣವಾಗುವುದಾದರೆ, ಉಳಿದೆರಡೂ ಹೆಚ್ಚು ಶಾಶ್ವತವಾದ ಸ್ಥಾನೀಕರಣ ಬದಲಾವಣೆಗಳನ್ನು ಉಂಟುಮಾಡುವುವೆಂದು ಹೇಳಬಹುದು. ದೀರ್ಘಕಾಲೀನ ಹಾಗೂ ರಚನಾಸಂಬಂಧಿ ಬೆಳವಣಿಗೆಗಳಿಂದ ಸ್ಥಾನೀಕರಣದ ವಿವಿಧ ನಿರ್ಣಾಯಕಾಂಶಗಳ ಸಾಪೇಕ್ಷ ಪ್ರಾಮುಖ್ಯ ಗಮನಾರ್ಹವಾಗಿ ಬದಲಾಯಿಸುತ್ತದೆ. ಉದಾಹರಣೆಗೆ, ಸಾರಿಗೆ ಸಂಪರ್ಕ ವಿಸ್ತರಣೆ, ವಿದ್ಯುಚ್ಛಕ್ತಿ ಅಭಿವೃದ್ಧಿ, ತಾಂತ್ರಿಕ ಪ್ರಗತಿ ಇತ್ಯಾದಿ ಅಂಶಗಳಿಂದ ಒಂದು ಕೈಗಾರಿಕೆಗೆ ಹೊಸ ಹೊಸ ಸ್ಥಳಗಳು ಅತ್ಯುತ್ತಮ ಸ್ಥಳಗಳಾಗಿ ಆಕರ್ಷಕವಾಗಬಲ್ಲವು. ಭಾರತದಲ್ಲಿ ಉತ್ತರ ಪ್ರದೇಶದಲ್ಲಿ ಕೇಂದ್ರೀಕೃತವಾಗಿದ್ದ ಸಕ್ಕರೆ ಕೈಗಾರಿಕೆ ದಕ್ಷಿಣ ಭಾರತದ ಕೇಂದ್ರಗಳಿಗೆ ಹರಡಿರುವುದೂ ಮುಂಬಯಿ ಮತ್ತು ಅಹಮದಾಬಾದ್‍ಗಳಲ್ಲಿ ಸ್ಥಾನೀಕರಣವಾಗಿದ್ದ ಹತ್ತಿ ಕೈಗಾರಿಕೆ ದೇಶದ ಆದ್ಯಂತವೂ ಅನೇಕ ಕಡೆಗಳಿಗೆ ಹರಡಿರುವುದೂ ಇತರ ಅನೇಕ ಲಘುಕೈಗಾರಿಕೆಗಳು ಕೂಡ ಹೀಗೆ ಪುನಃಸ್ಥಾನೀಕರಣವಾಗುತ್ತಿರುವುದೂ ಸ್ಥಾನೀಕರಣದ ಚಲನಾತ್ಮಕ ಗುಣವಿಶೇಷವನ್ನು ನಿರ್ಧರಿಸುತ್ತವೆ.

ಕೈಗಾರಿಕಾ ಪುನಃಸ್ಥಾನೀಕರಣದ ಇಂಥ ದೀರ್ಘಕಾಲೀನ ಒಲವುಗಳ ಜೊತೆಗೆ ಸ್ಥಾನೀಕರಣದ ಬಗ್ಗೆ ಆಧುನಿಕ ಸರ್ಕಾರಗಳು ಅನುಸರಿಸುತ್ತಿರುವ ನೀತಿ ಹೆಚ್ಚು ನಿರ್ದಿಷ್ಟವಾಗತೊಡಗಿದೆ. ಹಿಂದೆಯೇ ಹೇಳಿದಂತೆ, ಕೈಗಾರಿಕಾ ಸ್ಥಾನೀಕರಣದಿಂದ ಉದ್ಭವಿಸುವ ಸಾಮಾಜಿಕ ಹಾಗೂ ಆರ್ಥಿಕ ದೋಷಗಳನ್ನು-ಮುಖ್ಯವಾಗಿ ಪ್ರಾದೇಶಿಕ ಆರ್ಥಿಕ ಅಸಮತೆಯನ್ನು-ಹೋಗಲಾಡಿಸುವುದು ಇತ್ತೀಚೆಗೆ ಎಲ್ಲ ದೇಶಗಳಲ್ಲಿಯೂ ಪ್ರಾಮುಖ್ಯ ಪಡೆದ ಉದ್ದೇಶವಾಗಿದೆ. ಕೈಗಾರಿಕಾ ಸ್ಥಾನೀಕರಣ ನಿಯಂತ್ರಣ ಅನೇಕ ರಾಷ್ಟ್ರಗಳು ಅನುಸರಿಸುತ್ತಿರುವ ಆರ್ಥಿಕ ಯೋಜನಾಪದ್ಧತಿಯ ಅಂಗವಾಗಿದೆ. ಸಮಗ್ರ ರಾಷ್ಟ್ರೀಯ ಯೋಜನೆ ಅನುಸರಿಸದೆ ಮುಂದುವರಿದ ರಾಷ್ಟ್ರಗಳಲ್ಲಿ ಕೂಡ ಅಲ್ಲಿಯ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ವಿಶೇಷ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಒಟ್ಟಿನಲ್ಲಿ ಕೈಗಾರಿಕಾಸ್ಥಾನೀಕರಣ ಸಮಸ್ಯೆ ಹಿಂದೆ ಇದ್ದುದಕ್ಕಿಂತಲೂ ಇಂದು ಹೆಚ್ಚು ನಿಯಂತ್ರಣಕ್ಕೆ ಒಳಪಟ್ಟಿದೆ. (ಎ.ಪಿ.ಎಸ್.)

**ಕೈಗೊಡಲಿ :** ಪೂರ್ವ ಶಿಲಾಯುಗದಲ್ಲಿ ಬಳಕೆಯಲ್ಲಿದ್ದ ಕಲ್ಲಿನ ಆಯುಧಗಳಲ್ಲಿ ಒಂದು (ಹ್ಯಾಂಡ್ ಆಕ್ಸ್). ಮುಖ್ಯವಾದ ಒಂದು ಸಂಸ್ಕೃತಿಯ ಪ್ರತೀಕ. ಇದನ್ನು ಸಾಮಾನ್ಯವಾಗಿ ಬೆಣಚು ಅಥವಾ ಚಕಮಕಿ (ಫ್ಲಿಂಟ್) ಕಲ್ಲಿನ ತಿರುಳಿನ ಭಾಗದಿಂದ ಮಾಡುತ್ತಿದ್ದರು. ಕಲ್ಲಿನ ಎರಡು ಪಕ್ಕಗಳಿಂದಲೂ ಚಕ್ಕೆಗಳನ್ನು ತೆಗೆದು, ಒಂದು ಕೊನೆಯನ್ನು ಮೊನಚಾಗಿಯೂ

ಅದರ ಎದುರು ಭಾಗವನ್ನು ಕೈಪಿಡಿಯಾಗಿ ಉಪಯೋಗಿಸಲು ಮೊಂಡಾಗಿಯೂ ಪೇರು ಹಣ್ಣಿನ ಆಕಾರದಲ್ಲಿ ಕೆತ್ತುತ್ತಿದ್ದರು. ಕ್ರಮೇಣ ಕೈಗೊಡಲಿಗಳಲ್ಲಿ ಅನೇಕ ವಿಧಗಳುಂಟಾದವು. ಅವುಗಳ ಆಕಾರದಲ್ಲಿ ವೈವಿಧ್ಯ ಬೆಳೆದಂತೆ ಅವಕ್ಕೆ ಅನುಗುಣವಾಗಿ ಬೇರೆಬೇರೆ ಪ್ರದೇಶಗಳಲ್ಲಿ ಬೇರೆಬೇರೆ ಉದ್ಯಮಗಳು ಬೆಳೆದುಬಂದುವು. ಈ ತನಕ ದೊರಕಿರುವ ಮಾಹಿತಿಗಳ ಪ್ರಕಾರ ಇದರ ಉಗಮವಾದ್ದು ಪೂರ್ವ ಮತ್ತು ಮಧ್ಯ ಆಫ್ರಿಕಗಳಲ್ಲಿ. ಆಫ್ರಿಕದ ವಿವಿಧ ಪ್ರದೇಶಗಳಲ್ಲೂ ಯೂರೋಪ್ ಮತ್ತು ಪಶ್ಚಿಮ ಏಷ್ಯ ಪ್ರದೇಶಗಳಲ್ಲೂ ಕೈಗೊಡಲಿ ಸಂಸ್ಕೃತಿ ಹಬ್ಬಿತು. ಭಾರತದಲ್ಲಿ ವಿಂಧ್ಯಪರ್ವತ ಪ್ರದೇಶ ಮತ್ತು ಪರ್ಯಾಯದ್ವೀಪೀಯ ಭಾರತದವರೆಗೂ ಇದು ಕ್ರಮೇಣ ವ್ಯಾಪಿಸಿತು. ಕೈಗೊಡಲಿಗಳನ್ನು ಮೊದಲು ಗುರುತಿಸಿದ್ದು ಫ್ರಾನ್ಸಿನಲ್ಲಿ. ಅಲ್ಲಿ ಅಬೆವಿಲಿಯನ್ ಮತ್ತು ಅಷುಲಿಯನ್ (**ನೋಡಿ– ಅಷುಲಿಯನ್–ಉದ್ಯಮ**) ಎಂಬ ಎರಡು ಹಂತಗಳು ಕಂಡುಬಂದಿವೆ. ಮೃದುವಾದ ಮೇಲ್ಮೈಯಿಂದ ಕೂಡಿದ ಮರದ ಅಥವಾ ಎಲುಬಿನ ಸುತ್ತಿಗೆಯಿಂದ ಹೊಡೆದು ಸಣ್ಣ ಚಕ್ಕೆಗಳನ್ನು ತೆಗೆದು, ಕೊಡಲಿಯ ಅಂಚುಗಳನ್ನು ಚೂಪಾಗಿಯೂ ನೇರವಾಗಿಯೂ ಮಾಡುವ ಕಲೆಯೇ ಅಷುಲಿಯನ್ ಹಂತದ ವಿಶಿಷ್ಟ ಲಕ್ಷಣ. ಅಬೆವಿಲಿಯನ್ ಹಂತದಲ್ಲಿ ಎರಡು ವರ್ಗಗಳನ್ನೂ ಅಷುಲಿಯನ್ ಹಂತದಲ್ಲಿ 4–5 ವರ್ಗಗಳನ್ನೂ ಕಾಣಬಹುದು. ತಿರುಳ್ಗಲ್ಲಿನಿಂದಲೇ ನಿರ್ಮಿಸುತ್ತಿದ್ದ ಕೈಗೊಡಲಿಗಳನ್ನು ಕ್ರಮೇಣ ದಪ್ಪ ಚಕ್ಕೆಗಳಿಂದಲೂ ಮಾಡತೊಡಗಿದರು. ಕೈಗೊಡಲಿ ಸಂಸ್ಕೃತಿಯಲ್ಲಿ ಕೊನೆಯದು ಮಿಕಾಕ್ವಿಯನ್ ಹಂತ. ನಾಲಗೆಯಂತೆ ಚಾಚಿರುವ ಮೊನೆಗಳುಳ್ಳ ಅಂದವಾದ ಕೈಗೊಡಲಿಗಳನ್ನು ಮಾಡುತ್ತಿದ್ದುದು ಈ ಹಂತದ ವೈಶಿಷ್ಟ್ಯ. ಅಗೆಯಲು, ಪ್ರಾಣಿಗಳ ಚರ್ಮವನ್ನು ಸುಲಿದು ಹದಗೊಳಿಸಲು ಮತ್ತು ಅಂಥ ಹಲವಾರು ಕಾರ್ಯಗಳಿಗೆ ಆದಿಮಾನವರು ಕೈಗೊಡಲಿಗಳನ್ನು ಬಳಸುತ್ತಿದ್ದರು. (ಬಿ.ಕೆ.ಜಿ.)

**ಕೈಟಭ** : ಒಬ್ಬ ರಾಕ್ಷಸ. ಮಧು ಎಂಬ ರಾಕ್ಷಸನ ತಮ್ಮ. ಕಲ್ಪಾಂತ್ಯದಲ್ಲಿ ಮಹಾವಿಷ್ಣು ವಟಪತ್ರಶಾಯಿಯಾಗಿ ಯೋಗನಿದ್ರೆಯಲ್ಲಿದ್ದಾಗ ಆತನ ಕಿವಿಯ ಗುಗ್ಗೆಯಿಂದ (ಕರ್ಣಮಲ) ಇಬ್ಬರು ರಾಕ್ಷಸರು ಉದ್ಭವಿಸಿ ಎರಡು ದೊಡ್ಡ ಗೋಡೆಗಳಂತೆ (ಮಹಾಕುಡ್ಯ) ಬೆಳೆದು ಅವಿಚಲರಾಗಿ ನಿಂತರು. ಬ್ರಹ್ಮನ ಪ್ರೇರಣೆಯಿಂದ ಅವರಲ್ಲಿ ವಾಯುಸಂಚಾರವಾಯಿತಾಗಿ ಮಹಾಪ್ರಾಣರಾದ ಅವರು ಮಹಾಬಲರಾಗಿ ದೇವಲೋಕವನ್ನೇ ಆರಿಸಿಕೊಳ್ಳುವವರಂತೆ ಬೆಳೆದು ವಿಜೃಂಭಿಸಿದರು. ಬ್ರಹ್ಮ ಅವರನ್ನು ಸ್ಪರ್ಶಿಸಿ ನೋಡಲು ಒಬ್ಬ ಮೃದುವಾಗಿ ಕಂಡ. ಅವನೇ ಮಧು ಮತ್ತೊಬ್ಬ ಕಲ್ಲಿನಂತೆ ಕರ್ಕಶವಾಗಿ ಕಂಡ. ಅವನೇ ಕೈಟಭ.

ನಿರ್ಭೀತರಾಗಿ ಲೋಕಗಳನ್ನೇ ಎದುರಿಸಿ ನಿಂತ ಅವರು ಬ್ರಹ್ಮನ ಮೇಲೇರಿ ಹೋಗಲು ಆತ ವಿಷ್ಣುವಿನ ನಾಭಿಕಮಲವನ್ನು ಹೊಕ್ಕು ಮರೆಯಾದ. ಬಹಳ ಕಾಲ ಹುಡುಕಿ ಕೊನೆಗೆ ಮಧುಕೈಟಭರು ಬ್ರಹ್ಮನಿದ್ದ ಗುಪ್ತಸ್ಥಳವನ್ನು ಪತ್ತೆಹಚ್ಚಿ ಅವನ ಮೇಲೆ ಬಿದ್ದರು. ಆಗ ಆತ ಯೋಗನಿದ್ರೆಯಲ್ಲಿದ್ದ ವಿಷ್ಣುವನ್ನೆಚ್ಚರಿಸಲು ವಿಷ್ಣುವಿಗೂ ಮಧುಕೈಟಭರಿಗೂ ದೀರ್ಘಕಾಲ ಘೋರ ಯುದ್ಧವಾಯಿತು. ವಿಷ್ಣುವಿನ ಪರಾಕ್ರಮವನ್ನು ಮೆಚ್ಚಿದ ಆ ರಾಕ್ಷಸರು ವರವೊಂದನ್ನು ಬೇಡುವಂತೆ ವಿಷ್ಣುವನ್ನು ಕೇಳಿಕೊಂಡರು. ‘ನೀವು ನನ್ನಿಂದ ವಧ್ಯರಾಗುವ ಉಪಾಯವನ್ನು ತಿಳಿಸಿ’ ಎಂದು ವಿಷ್ಣು ಕೇಳಲು ‘ನಿನ್ನಿಂದ ನಮಗೆ ಮರಣ ಲಭ್ಯವಾಗುವುದು ಪ್ರಶಂಸನೀಯವಾದುದು. ನಾವು ನಿನ್ನ ಪುತ್ರರಾಗಿ ಜನಿಸುವ ಪುಣ್ಯ ಪಡೆವೆವು. ಆದರೆ ಒಂದು ಒಪ್ಪಂದ; ನೀನು ನಮ್ಮನ್ನು ನೀರಿಲ್ಲದ ಸ್ಥಳದಲ್ಲಿ ಕೊಲ್ಲಬೇಕು’ ಎಂದವರು ಹೇಳಿದರು. ವಿಶ್ವವೆಲ್ಲವೂ ಜಲಮಯವಾಗಿರಲು ಮಹಾವಿಷ್ಣು ಅವರನ್ನು ಹಿಡಿದು ತನ್ನ ತೊಡೆಗಳ ಮೇಲೆಯೇ ಹಿಸುಕಿ ಕೊಂದ. ಅವರ ಶವಗಳನ್ನು ನೀರಿಗೆ ಎಸೆದು ಬಿಡಲು ಅವು ಅಲ್ಲಿ ಕರಗಿ ಜಲವೆಲ್ಲವೂ ಮೇದೋಮಯವಾಯಿತು. ಆದ್ದರಿಂದಲೇ ಪೃಥಿವಿಗೆ ಮೇದಿನೀ ಎಂಬ ಹೆಸರು ಬಂತು. ಮಧು ಕೈಟಭರನ್ನು ವಧಿಸಿದ ವಿಷ್ಣುವಿಗೆ ಮಧುಸೂದನ, ಮಧುವೈರಿ, ಮಧುಮಥನ, ಕೈಟಭಾರಿ, ಕೈಟಭಜಿತ್ ಇತ್ಯಾದಿ ಹೆಸರುಗಳಿವೆ. ಮಹಾಭಾರತ, ಭಾಗವತ, ಹರಿವಂಶ, ಬ್ರಹ್ಮವೈವರ್ತ ಪುರಾಣ ಇತ್ಯಾದಿಗಳಲ್ಲಿ ಈ ವಿಷಯದ ಪ್ರಸ್ತಾಪವಿದೆ. ಈ ಕಥನದಲ್ಲಿ ವಿಶ್ವಸೃಷ್ಟಿಯ ರಹಸ್ಯಭೇದನದ ಸೂಚನೆಯಿದೆಯೆಂದು ಕೆಲವರ ಅಭಿಪ್ರಾಯ. (ಸಿ.ಜಿ.ಪಿ.)

**ಕೈಟಿನ್** : ಸಂಧಿಪದಿಗಳ, ವಲಯವಂತಗಳ ಮತ್ತು ಬಹುಪಾಲು ಬಗೆಯ ಶಿಲೀಂಧ್ರಗಳ ಶರೀರ ರಚನೆಯಲ್ಲಿ ಕಾಣಬರುವ ಪ್ರಮುಖ ಬಗೆಯ ಬಹುಶರ್ಕರ(ಪಾಲಿಸ್ಯಾಕರೈಡ್). ಕವಲೊಡೆಯದ ಬಲು ಉದ್ದವಾದ ಸರಪಳಿಯಂತಿರುವ ಕೈಟಿನ್ ಅಣು N–ಅಸಿಟೈಲ್–d–ಗ್ಲೂಕೋಸಮೈನಿನ ಸಾವಿರಾರು ಘಟಕಗಳಿಂದ ರಚಿತವಾಗಿದೆ. ಈ ಘಟಕಗಳು $\beta$-1, 4 ಗ್ಲೈಕೊಸಿಡಿಕ್ ಬಂಧಗಳಿಂದ ಪರಸ್ಪರ ಸೇರಿಕೊಂಡಿವೆ. ಎಕ್ಸ್‌ಕಿರಣ ನಮನ ಅಭ್ಯಾಸಗಳ ಫಲವಾಗಿ ಕೈಟಿನ್ನಿನಲ್ಲಿ $\alpha, \beta$ಮುಂತಾದ ಹಲವಾರು ಸ್ಫಟಿಕಸಂರಚನಾತ್ಮಕ ಪ್ರರೂಪಗಳಿರುವುದು ಕಂಡುಬಂದಿದೆ. ಸ್ವಾಭಾವಿಕವಾಗಿ ಕೈಟಿನ್ ಪ್ರೋಟೀನುಗಳೊಂದಿಗೆ ಕೂಡಿಕೊಂಡು ಗ್ಲೈಕೋ ಪ್ರೋಟೀನ್ ರೂಪದಲ್ಲಿ ಸ್ಥಿತವಾಗಿರುತ್ತದೆ. ಪೊಟಾಸಿಯಮ್ ಇಲ್ಲವೆ ಸೋಡಿಯಮ್ ಹೈಡ್ರಾಕ್ಸೈಡುಗಳೊಂದಿಗೆ ಕಾಯಿಸಿ ಅನಂತರ ಸಾರರಿಕ್ತ ಆಮ್ಲ ಮತ್ತು ಪ್ರಬಲವಾದ ಉತ್ಕರ್ಷಣಕಾರಿಯೊಂದಿಗೆ ವರ್ತಿಸುವುದರಿಂದ ಕೈಟಿನ್ನನ್ನು ಶುದ್ಧ ರೂಪದಲ್ಲಿ ಪಡೆಯಬಹುದು. ಶುದ್ಧರೂಪದ ಕೈಟಿನ್ ಬಣ್ಣವಿಲ್ಲದ ಪುಡಿಯಂತಿರುತ್ತದೆ; ನೀರಿನಲ್ಲಾಗಲಿ ಸಾರರಿಕ್ತ ಆಮ್ಲ ಇಲ್ಲವೆ ಕ್ಷಾರಗಳಲ್ಲಾಗಲೀ ಕರಗುವುದಿಲ್ಲ. ಆದರೆ ಸಾರ ಆಮ್ಲಗಳೊಂದಿಗೆ ಇಲ್ಲವೆ ಕೈಟಿನೇಸ್ ಎಂಬ ಕಿಣ್ವದೊಂದಿಗೆ ಸೇರಿಸಿ ಬಹುಕಾಲ ಇಟ್ಟರೆ ಜಲವಿಶ್ಲೇಷಣೆಗೊಳಗಾಗುತ್ತದೆ. ಕೈಟಿನ್ನಿನ ಸ್ವಾಭಾವಿಕ ಸಂಶ್ಲೇಷಣೆಗೆ UDP-N-ಅಸಿಟೈಲ್ ಗ್ಲೂಕೋಸಮೈನ್ ಎಂಬ ಪೂರ್ವಗಾಮಿ ಸಂಯುಕ್ತ ಹಾಗೂ ನಿರ್ದಿಷ್ಟ ಬಗೆಯ ಕಿಣ್ವ ಬೇಕು. ಅಲ್ಲದೆ ಅತ್ಯಲ್ಪ ಮೊತ್ತದಲ್ಲಿ ಮೊದಲೇ ತಯಾರಾದ ಈ ಬಹುಶರ್ಕರವಾಗಲೀ ಅದರಿಂದ ಉತ್ಪತ್ತಿಯಾಗುವ ಕಡಿಮೆ ಅಣುತೂಕದ ಡೆಕ್ಸ್‌ಟ್ರಿನ್ ಆಗಲಿ ಆವಶ್ಯಕ ಎಂದು ತೋರುತ್ತದೆ. ಇವು ಹೊಸ ಕೈಟಿನ್ ಅಣುಗಳ ಸಂಶ್ಲೇಷಣೆಗೆ ಮಾದರಿಗಳಾಗುತ್ತವೆ. ಬಸವನಹುಳು, ಭೂಮಿಯಲ್ಲಿ ವಾಸಿಸುವ ಬ್ಯಾಕ್ಟೀರಿಯ, ಎರೆಹುಳು ಮುಂತಾದ ಪ್ರಾಣಿಗಳಲ್ಲಿ ಕೈಟಿನ್ನನ್ನು ವಿಭಜಿಸುವ ಕಿಣ್ವವಾದ ಕೈಟಿನೇಸ್ ಎಂಬುದು ಕಂಡುಬರುತ್ತದೆ. (ಎಂ.ಆರ್.ಆರ್.)

**ಕೈದಾಳ** : ತುಮಕೂರು ಜಿಲ್ಲೆಯಲ್ಲಿ ತುಮಕೂರಿನಿಂದ 5 ಕಿ.ಮೀ. ಆಗ್ನೇಯಕ್ಕಿರುವ ಒಂದು ಸ್ಥಳ. ಹಿಂದೆ ಇದು ಒಂದು ಪುಟ್ಟ ರಾಜ್ಯದ ಮುಖ್ಯನಗರವಾಗಿತ್ತೆಂದೂ ಇದಕ್ಕೆ ಕ್ರೀಡಾಪುರವೆಂಬ ಹೆಸರಿತ್ತೆಂದೂ ತಿಳಿದುಬರುತ್ತದೆ. ಪ್ರಸಿದ್ಧ ಶಿಲ್ಪಿ ಜಕಣಾಚಾರಿಯ ಜನ್ಮಸ್ಥಳವಾಗಿತ್ತೆಂದೂ ಐತಿಹ್ಯವುಂಟು. ಜಕಣಾಚಾರಿಯ ಮಗ ಡಕಣಾಚಾರಿ ಬೇಲೂರು ಚೆನ್ನಿಗರಾಯಮೂರ್ತಿಯ ಶಿಲ್ಪವಿಷಯದಲ್ಲಿ ತಂದೆಯನ್ನು ಸೋಲಿಸಿದಾಗ ಆತ ತನ್ನ ಬಲಗೈಯನ್ನು ಕತ್ತರಿಸಿಕೊಂಡನೆಂದೂ ಅವನಿಗೆ ಕನಸಿನಲ್ಲಿ ಬಂದ ಆದೇಶದ ಪ್ರಕಾರ ಸ್ವಸ್ಥಳವಾದ ಕೈದಾಳಕ್ಕೆ ಹಿಂದಿರುಗಿ ಅಲ್ಲಿ ಚೆನ್ನಿಗರಾಯನ ದೇವಾಲಯ ನಿರ್ಮಿಸಲು ಅವನಿಗೆ ಪುನಃ ಕೈ ಬಂತೆಂದೂ ಆದ್ದರಿಂದ ಆ ಊರಿಗೆ ಕೈದಾಳವೆಂಬ ಹೆಸರಾಯಿತೆಂದೂ ಐತಿಹ್ಯವಿದೆ.

ಇಲ್ಲಿ ದ್ರಾವಿಡ ವಾಸ್ತುಶೈಲಿಯಲ್ಲಿ ನಿರ್ಮಿತವಾಗಿರುವ ಚೆನ್ನಕೇಶವ ದೇವಾಲಯದ ಬಳಿಯಲ್ಲಿರುವ ಗಂಗಾಧರೇಶ್ವರ ದೇವಾಲಯದಲ್ಲಿ ಒಂದು ಶಾಸನ ದೊರಕಿದೆ. 1150–51ರಲ್ಲಿ ಹೊಯ್ಸಳ 1ನೆಯ ನರಸಿಂಹನ ಸಾಮಂತನಾಗಿದ್ದ ಬಾಚಿ ಅಥವಾ ಗುಳೇ–ಬಾಚಿ ಎಂಬವನು ಈ ದೇವಸ್ಥಾನವನ್ನೂ ಇತರ ವಿಷ್ಣು ಜಿನ ದೇವಾಲಯಗಳನ್ನೂ ಕಟ್ಟಿಸಿದನೆಂದು ಆ ಶಾಸನದಿಂದ ತಿಳಿದುಬರುತ್ತದೆ. ಈ ದೇವಾಲಯದ ಮಹಾದ್ವಾರದ ಮೇಲಿನ ಸುಂದರವಾದ ಗೋಪುರ ವಿಜಯನಗರ ಕಾಲದಲ್ಲಿ ನಿರ್ಮಿತವಾದ್ದು. ಚೆನ್ನಿಗರಾಯನ ಮೂಲವಿಗ್ರಹ



ಚೆನ್ನಕೇಶವ ದೇವಾಲಯ

ಬಹಳ ಸುಂದರವಾಗಿದೆ; 1.7 ಮೀ. ಎತ್ತರವಿದೆ. 0.8 ಮೀ. ಎತ್ತರದ ಪೀಠದ ಮೇಲೆ ಅದನ್ನು ನಿಲ್ಲಿಸಲಾಗಿದೆ. ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರದ ಚಿತ್ರಗಳಿವೆ. ಮಹಾದ್ವಾರದ ಬಲಬದಿಯ ಕಂಬವೊಂದರ ಮೇಲೆ ಪತ್ನೀಸಹಿತನಾದ ಚೆನ್ನಕೇಶವನನ್ನೂ ಎಡಗಡೆಯ ಕಂಬದ ಮೇಲೆ ಅಂಜಲಿಬದ್ಧನೂ ಉತ್ತರೀಯಧಾರಿಯೂ ಖಡ್ಗಭೂಷಿತನೂ ಆದ ಮೂರ್ತಿಯನ್ನು ಚಿತ್ರಿಸಲಾಗಿದೆ. ಇದು ಜಕಣಾಚಾರಿಯ ಮೂರ್ತಿಯೆಂದು ಹೇಳಲಾಗಿದೆ. ಆದರೆ ಇದು ದೇವಾಲಯವನ್ನು ನಿರ್ಮಿಸಿದ ಬಾಚಿ ಸಾಮಂತನ ಮೂರ್ತಿಯಾಗಿರಬಹುದು.

ಚೆನ್ನಕೇಶವ ಮಂದಿರದ ಪೂರ್ವದಲ್ಲಿರುವ ಗಂಗಾಧರೇಶ್ವರ ದೇವಾಲಯ ದ್ರಾವಿಡ ಶೈಲಿಗೆ ಸೇರಿದ್ದು. ಅದರ ನವರಂಗದಲ್ಲಿ ಹೊಯ್ಸಳ ಶೈಲಿಯಲ್ಲಿ ಕೆತ್ತಲಾದ, ಕರಿಕಲ್ಲಿನ, ನಯವಾದ ನಾಲ್ಕು ಕಂಬಗಳುಂಟು. ಈ ಕಂಬಗಳ ತಳಭಾಗದ ನಾಲ್ಕು ಪಕ್ಕಗಳಲ್ಲೂ ಶಿವ, ಬ್ರಹ್ಮ, ವಿಷ್ಣು, ಭೈರವ, ಕೃಷ್ಣ, ಗಣಪತಿ,

ವೀರಭದ್ರ ಮುಂತಾದ ದೇವತೆಗಳ ಉಬ್ಬುಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಗೋಡೆಗಳ ಹೊರವಲಯ ಆನೆ ಮತ್ತು ಹೂವಿನ ಚಿತ್ರಣಗಳ ಪಟ್ಟಿಕೆಗಳಿಂದ ಅಲಂಕೃತವಾಗಿದೆ. (ಬಿ.ಕೆ.ಜೆ.)

**ಕೈಪಿಡಿ ಗೋಡೆ :** ವೇದಿಕೆ, ಕಡಿದಾದ ದಾರಿ, ಬೋಳುಮಹಡಿ, ಜಗಲಿ, ಸೇತುವೆ ಮುಂತಾದವುಗಳಲ್ಲಿ ಜನರಿಗೆ ರಕ್ಷಣೆ ಒದಗಿಸಲು ಅವುಗಳ ಅಂಚುಗಳಲ್ಲಿ ಕಟ್ಟಿರುವ ಚಿಕ್ಕ ಗೋಡೆ (ಪ್ಯಾರಪಟ್). ವಾಸದ ಮನೆಗಳಲ್ಲಿ ತಾರಸಿಯ ಮೇಲೆ ಅಲಂಕಾರವಾಗಿ ಇಟ್ಟಿಗೆ ಗಾರೆಯ ಕೈಪಿಡಿಗಳನ್ನು ಅನೇಕ ನಮೂನೆಗಳಲ್ಲಿ ಕಟ್ಟುತ್ತಾರೆ. ಮಾಡಿನ ಮೇಲೆ ಬಿದ್ದ ಮಳೆಯ ನೀರು ಸರಾಗವಾಗಿ ಹೊರಗೆ ಹೋಗುವಂತೆ ಕೈಪಿಡಿಯಲ್ಲಿ ಅಲ್ಲಲ್ಲಿ ರಂಧ್ರಗಳನ್ನು ಬಿಟ್ಟು ನೀರು ಸತುವಿನ ಹಾಳೆಯ ಗುಂಡಾದ ಕೊಳವಿಗಳ ಮೂಲಕ ಇಳಿಯುವಂತೆ (ಆದ್ದರಿಂದ ಗೋಡೆಗಳ ಮೇಲೆ ಹರಿಯದಂತೆ) ಮಾಡುತ್ತಾರೆ. ಸೇತುವೆಗಳ ಅಂಚುಗಳಲ್ಲಿಯ ಕೈಪಿಡಿ ಗೋಡೆಗಳು ಅನಿವಾರ್ಯವಾಗಿ ಸೇತುವೆಗಳ ಅಂಗಗಳೇ ಆಗಿವೆ. ನೀರಾವರಿಗಾಗಿಯೂ ಕುಡಿಯುವ ನೀರಿಗಾಗಿಯೂ ಕಟ್ಟುವ ಕೆರೆಗಳ ಏರಿಗಳ ಮೇಲೆ ಇಟ್ಟಿಗೆಗಾರೆಯಿಂದ ಕೈಪಿಡಿಗಳನ್ನು ಕಟ್ಟುವುದೇ ರೂಢಿ. ಈಚೆಗೆ ಭದ್ರಕಾಂಕ್ರೀಟಿನ ಬಳಕೆ ಕೈಪಿಡಿಗಳ ರಚನೆಯಲ್ಲಿ ಸಾಮಾನ್ಯವಾಗುತ್ತಿದೆ. (ಎಚ್.ಸಿ.ಕೆ.)

**ಕೈಫಿಯತ್ತು :** ಪಾರ್ಸಿಭಾಷೆಯ ಈ ಮಾತಿಗೆ ಸಮಾಚಾರ ಎಂಬುದು ಸಾಮಾನ್ಯವಾದ ಅರ್ಥ. ಇಂದೂ ನ್ಯಾಯಸ್ಥಾನಗಳಲ್ಲಿ ಸಾಕ್ಷಿ ನುಡಿಯುವವರ ಕಡೆಯಿಂದ ಪ್ರಮಾಣ ಮಾಡಿಸಿ ಪಡೆಯುವ ಹೇಳಿಕೆಗಳನ್ನು ಕೈಫೀತು ಅನ್ನುತ್ತಾರೆ. ಈ ಮಾತು ಬಿಜಾಪುರದ ಆದಿಲ್‌ಷಾಹಿಗಳ ಕಾಲದಲ್ಲಿ ಕನ್ನಡ ಭಾಷೆಗೆ ಬಂದು ಸೇರಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಕನ್ನಡ ನಾಡಿನಲ್ಲೆಲ್ಲ ವಿಶೇಷವಾಗಿ ಪ್ರಚುರಗೊಂಡಿತು. ಅಂದಿಗಾಗಲೇ ಈ ಮಾತಿನ ಅರ್ಥ ವಿಶಾಲಗೊಂಡು ಚಾರಿತ್ರಿಕ ನಿರೂಪಣೆಯೆಂಬ ಬಣ್ಣವೂ ಬಂದಿತು.

ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಅನೇಕ ಮಂದಿ ಇತಿಹಾಸಪ್ರಿಯರಾದ ಪಾರ್ಸಿಲಿಪಿಕಾರರಿದ್ದರು. ಒಂದು ಐತಿಹಾಸಿಕ ಘಟನೆ ಕುರಿತು ಯಾರು ಏನು ಹೇಳಿದರೂ ತತ್‌ಕ್ಷಣ ಅವರು ಅದನ್ನು ಬರೆದಿಡುತ್ತಿದ್ದರು. ಹೀಗಾಗಿ ಶ್ರೀರಂಗಪಟ್ಟಣದಲ್ಲಿ ಅನೇಕ ಕೈಫಿಯತ್ತುಗಳ ಸಂಗ್ರಹವಾಗಿದ್ದವು. ಅವುಗಳಲ್ಲಿ ಬಹಳಷ್ಟು ಕೈಫಿಯತ್ತುಗಳು ನಾಲ್ಕನೆಯ ಮೈಸೂರು ಯುದ್ಧದ ಕಾಲದಲ್ಲಿ ಬಿದ್ದ ಬೆಂಕಿಯಿಂದ ನಾಶವಾದುವು. ಮುಂದೆ ಪೂರ್ಣಯ್ಯನ ಯುಕ್ತಿಯಿಂದ ರಾಜ್ಯ ಕಳೆದುಕೊಂಡ ಪಾಳೆಯಗಾರರು ತಮ್ಮ ರಾಜ್ಯಗಳನ್ನು ಹಿಂದಕ್ಕೆ ಬರೆಸಿ, ಮದ್ರಾಸಿನಲ್ಲಿದ್ದ ಬ್ರಿಟಿಷರಿಗೆ ಹಾಗೂ ಮೈಸೂರು ಅರಸರಿಗೆ ಸಲ್ಲಿಸಲು ಸಿದ್ಧಪಡಿಸಿದರು. ಇದು ಕರ್ನಾಟಕಕ್ಕೆ ಹೊಸದಾದ್ದರಿಂದಲೂ, ಅರಮನೆಯ ಕಾರಕೂನರಿಗೆ ಕೈಫಿಯತ್ ಎಂಬ ಪದ ಪರಿಚಯವಿದ್ದದ್ದರಿಂದಲೂ ಅದೇ ಹೆಸರಿನಲ್ಲಿ ಇದನ್ನು ಕರೆದರು. ಈ ಕೈಫಿಯತ್ತುಗಳ ಮೂಲಕ ತಮ್ಮ ಗತ ಇತಿಹಾಸದ ವೈಭವವನ್ನು ವೈಭವೀಕರಿಸಿ ಹೇಳಿರುತ್ತಾರೆ. ಈ ಕೈಫಿಯತ್ತುಗಳನ್ನು ಹೀಗಾಗಿ ಹೇಳಿ ಬರೆಯಿಸುವವರ ಗುಂಪೊಂದು, ಹೇಳಿದ್ದನ್ನು ಬರೆದಿಡುವವರ ಗುಂಪೊಂದು–ಇವೆರಡೂ ಗುಂಪುಗಳ ಸಹಕಾರದ ಫಲವಾಗಿ ಕೈಫಿಯತ್ತುಗಳು ವಿಪುಲವಾಗಿ ಸೃಷ್ಟಿಯಾದುವು. ಸಾಮಾನ್ಯವಾಗಿ ಇವೆಲ್ಲ ಪಾಳೆಯಗಾರರ ಜೀವನ ಚರಿತ್ರೆಗಳೇ ಆಗಿದ್ದುವು.

ಶ್ರೀರಂಗಪಟ್ಟಣದ ಪತನಾನಂತರ ಪಾರ್ಸಿ ಭಾಷೆಗೆ ಇದ್ದ ರಾಜಪದ ಕೊಂಚಕಾಲ ಕನ್ನಡಕ್ಕೂ ಮರಾಠಿಗೂ ಲಭ್ಯವಾಯಿತು. ಅನೇಕ ಪಾರ್ಸಿ ಕೈಫಿಯತ್ತುಗಳು ಕನ್ನಡಕ್ಕೂ ಮರಾಠಿಗೂ ಭಾಷಾಂತರಗೊಂಡವು. ಈ ಹಂತದಲ್ಲಿ ಕೈಫಿಯತ್ತು ಕಪಿಯಾತು ಆಯಿತು.

ದಕ್ಷಿಣ ಭಾರತದಲ್ಲಿ ಸಂಚಾರ ಮಾಡಿ, ಇತಿಹಾಸ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಪ್ರಾಚೀನ ವಸ್ತು, ಗ್ರಂಥ ಮುಂತಾದವನ್ನು ಸಂಗ್ರಹ ಮಾಡಿದವರಲ್ಲಿ ಮುಖ್ಯರಾದ ಬುಕ್ಯಾನನ್, ಎಲಿಯಟ್, ಮೆಕೆಂಜಿ. ಸಿ.ಪಿ. ಬ್ರೌನ್, ವಿಲ್ಕ್ಸ್–ಮೊದಲಾದವರು ತಾವು ಭೇಟಿ ಮಾಡಿದ ಹಳಬರನೇಕರ ಕಡೆಯಿಂದ ಕೈಫಿಯತ್ತುಗಳನ್ನು ಪಡೆದರು. ಇವುಗಳಲ್ಲೆಲ್ಲ ಮೆಕೆಂಜಿ ಸಂಗ್ರಹವೇ ಬಹಳ ದೊಡ್ಡದು; ಪ್ರಖ್ಯಾತವೂ ಅಮೂಲ್ಯವೂ ಆದುದು. ಈ ಸಂಗ್ರಹದ ಬಹುಭಾಗ ಲಂಡನ್ನಿನ ಇಂಡಿಯ ಆಫೀಸ್ ಗ್ರಂಥಾಲಯ ಸೇರಿತು. ಕೊಂಚ ಭಾಗ ಕಲ್ಕತ್ತೆಯ ಇಂಪೀರಿಯಲ್ ಗ್ರಂಥಾಲಯಕ್ಕೆ ಹೋಯಿತು. ಉಳಿದ ಅಷ್ಟಿಷ್ಟು ಮದ್ರಾಸಿನ ಓರಿಯಂಟಲ್ ಹಸ್ತಪ್ರತಿ ಗ್ರಂಥಾಲಯಕ್ಕೆ ಬಂದು ಬಿತ್ತು.

ಮೈಸೂರು ದೇಶದ ಇತಿಹಾಸ ಬರೆಯಲು ನಿಯುಕ್ತನಾದ ವಿಲ್ಕ್ಸ್ ಶ್ರೀರಂಗಪಟ್ಟಣಕ್ಕೆ ಬಂದು ದೇಶದ ಚರಿತ್ರೆಗೆ ಸಂಬಂಧಪಟ್ಟ ಸಾಹಿತ್ಯವನ್ನೆಲ್ಲ ದಿವಾನ್ ಪೂರ್ಣಯ್ಯನವರ ಸಹಕಾರದಿಂದ ಪಡೆದುಕೊಂಡ. ಒಡೆಯರ ಮನೆತನದ ಅರಮನೆ ಸರಸ್ವತೀ ಭಂಡಾರವೆಲ್ಲ ಅವನದಾಯಿತು. ಟಿಪ್ಪುವಿನ ಮರಣಾನಂತರ ಅವನ ಅಮೂಲ್ಯವಾದ ಸಮಗ್ರ ಗ್ರಂಥಭಂಡಾರ ವಿಲಾಯಿತಿಗೆ ಸಾಗಿತು. ಅಲ್ಲದೆ ಕೈಫಿಯತ್ತುಗಳ ರಚನೆಗಾಗಿಯೇ ಪೂರ್ಣಯ್ಯನವರು ದೇಶದ ನಾನಾ ಭಾಗಗಳ ಹಿರಿಯರನ್ನಾರಿಸಿ ಕರೆಸಿದರು. ಅವರಲ್ಲಿ ಕೆಲವರು ಇತಿಹಾಸಕಾರರೂ ಇದ್ದರು. ಪೂರ್ಣಯ್ಯನವರ ಅನುಜ್ಞೆಯಂತೆ ಅವರೆಲ್ಲ ಇತಿಹಾಸ ರಚನೆಯಲ್ಲಿ ತೊಡಗಿದರು. ಕೆಲವರು ತಾವೇ ಬರೆದರು; ಬರೆಹಗಾರರಲ್ಲದ ಇತರರು ಹೇಳಿ ಬರೆಯಿಸಿದರು. ನೂರಾರು ಕೈಫಿಯತ್ತುಗಳು ಸಿದ್ಧವಾದುವು. ಈ ಗ್ರಂಥ ರಾಶಿಯನ್ನೆಲ್ಲ ಅಂದರೆ ಇತಿಹಾಸದ ಮೂಲ ಸಾಮಗ್ರಿಯನ್ನೆಲ್ಲ ವಿಲ್ಕ್ಸ್ ತೆಗೆದುಕೊಂಡು ಹೋದ. ಹೀಗಾಗಿ ಮೈಸೂರು ಚರಿತ್ರೆಗೆ ಬೇಕಾದ ಕೈಫಿಯತ್ತುಗಳೆಲ್ಲ ವಿದೇಶಿ ಗ್ರಂಥ ಭಂಡಾರವನ್ನು ಸೇರಿದುವು. ಅನೇಕ ಜಾತಿಗಳವರು ತಮ್ಮ ಜಾತಿ ಇತಿಹಾಸವನ್ನು ಬರೆಸಿ ಅದನ್ನೂ ಕೈಫಿಯತ್ತು ಎಂದು ಕರೆದಿರುತ್ತಾರೆ. (ಟಿ.ಟಿ.ಎಸ್.)

**ಕೈಬಳಕೆ :** ದೇಹದ ಸ್ವಯಂಚಾಲಿತ ಮೋಟರ್ ಕ್ರಿಯೆಗಳಲ್ಲಿ ಯಾವುದೇ ಒಂದು ಪಾರ್ಶ್ವದ ಕೈಯ ಬಳಕೆಗೆ ಇರುವ ಒಲವು (ಹ್ಯಾಂಡೆಡ್‌ನೆಸ್). ಕೈಗಳ ಉಪಯೋಗದಲ್ಲಿ ಜನರಿಗೆ ಸ್ಪಷ್ಟ ಒಲವು (ಪ್ರಿಫರೆನ್ಸ್) ಇರುವುದು ಎಲ್ಲರಿಗೂ ತಿಳಿದದ್ದೇ. ಈ ಕಾರಣದಿಂದ ಜನರನ್ನು ಬಲಗೈ ಬಳಕೆಯವರು (ಬಲ್ಚರು), ಎಡಗೈ ಬಳಕೆಯವರು (ಎಡ್ಚರು) ಮತ್ತು ಇಕ್ಕೈ ಬಳಕೆಯವರು ಎಂಬ ಮೂರು ವರ್ಗಗಳಾಗಿ ವರ್ಗೀಕರಿಸಬಹುದು. ಯಾವ ನಿರ್ದಿಷ್ಟ ಒಲವಿಲ್ಲದವರೇ, ಎಂದರೇ ಎರಡು ಕೈಗಳನ್ನೂ ಸಮಾನ ಲಾಘವದಿಂದ ಬಳಸಬಲ್ಲವರೇ, ಇಕ್ಕೈ ಬಳಕೆಯವರು. **(ನೋಡಿ– ಇಕ್ಕೈಬಳಕೆ)**

ಕೈಬಳಕೆಯನ್ನು ಕುರಿತು ಮೂರು ವೈಜ್ಞಾನಿಕ ಊಹೆಗಳನ್ನು ಮಂಡಿಸಲಾಗಿದೆ. ಅದು ಆನುವಂಶೀಯವಾಗಿ ಬರುತ್ತದೆ ಎಂದು ಒಂದು ಊಹೆ ಹೇಳಿದರೆ ಅಭ್ಯಾಸ ಬಲವೇ ಇಲ್ಲಿ ಪ್ರಧಾನವಾದದ್ದು ಎಂದು ಎರಡನೆಯ ಊಹೆ ತಿಳಿಸುತ್ತದೆ. ಮೂರನೆಯ ಊಹೆಯಾದರೋ ಶಿಶು ಗರ್ಭಸ್ಥವಾಗಿರುವಾಗ ಗರ್ಭದೊಳಗಿನ ಹಾಗೂ ಅದರ ಹೊರಗಿನ ಸನ್ನಿವೇಶಗಳನ್ನು ಅವಲಂಬಿಸಿ ಅದು ಮುಂದೆ ಕೈಬಳಕೆಯನ್ನು ಪಡೆಯುತ್ತದೆ ಎಂದಿದೆ. ವಾಸ್ತವಿಕ ಕಾರಣ ಪ್ರಾಯಶಃ ಈ ಮೂರು ಊಹೆಗಳ ಸಂಯುಕ್ತ ಫಲವಿರಬಹುದು. ಮಗು ಜನಿಸಿದೊಡನೆಯೇ ಸಾಮಾನ್ಯವಾಗಿ ಒಂದು ಕೈಯ್ಯನ್ನು ಆಡಿಸುತ್ತದೆ. ಮುಂದೆ ಅದು ಬೆಳೆದಂತೆ ವಸ್ತುಗಳನ್ನು ಹಿಡಿಯಲು ಮೇಲಿಂದ ಮೇಲೆ ಒಂದು ಕೈಯ ಬಳಕೆಗೆ ಸ್ಪಷ್ಟ ಒಲವನ್ನು ವ್ಯಕ್ತಪಡಿಸುತ್ತದೆ. ಕೈಗಳ ಚಲನವಲನಗಳನ್ನು ನಿಯಂತ್ರಿಸುವ ಮಿದುಳ ಪಾರ್ಶ್ವದ ಚಟುವಟಿಕೆಯ ಪ್ರಕಟಿತರೂಪ ಇದಾಗಿರಬಹುದೆಂದು ಊಹಿಸಿದ್ದಾರೆ. ಆದ್ದರಿಂದ ಒಂದು ಮಗು ಅದರ ಕೈಗಳ ಉಪಯೋಗವನ್ನು ಸಮರ್ಥವಾಗಿ ಪಡೆಯುತ್ತಿರುವಾಗ, ಅದರ ಒಲವು ಹೇಗೆಯೇ ಇದ್ದರೂ ಸಹಜ ವಿಕಾಸಕ್ಕೆ ಅಡ್ಡಿ ಬರಬಾರದು–ಎಂದರೆ ಎಡಗೈ ಬಳಕೆಯ ಮಗುವನ್ನು ಬಲತ್ಕಾರದಿಂದ ಬಲಗೈ ಬಳಕೆಗೆ ಪ್ರವರ್ತಿಸುವಂತೆ ಮಾಡಬಾರದು; ಇದರಿಂದ ಅದರ ಮಿದುಳಿನ ನಿಯಂತ್ರಣದಲ್ಲಿ ಏರುಪೇರು ಉಂಟಾಗಿ ಮಾನಸಿಕ ಉದ್ರೇಕ ತಲೆದೋರಬಹುದು, ಮಾತಿನಲ್ಲಿ ಉಗ್ಗು ಉಂಟಾಗಬಹುದು ಎಂದು ಮನೋವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ಶರೀರದಲ್ಲಿರುವ ಪಾರ್ಶ್ವಸ್ಥತೆ(ಲ್ಯಾಟರೇಲಿಟಿ): ವಾಕ್‌ಶಕ್ತಿಯ ಕೇಂದ್ರ ಮಿದುಳಿನ ಪ್ರಧಾನವಾದ ಗೋಳಾರ್ಧದಲ್ಲಿಯೇ ಇರುತ್ತದೆ ಎನ್ನುವುದಕ್ಕೆ ಕಾರಣಗಳಿವೆ. ಈ ಶಕ್ತಿಕೇಂದ್ರ ಯಾವಾಗಲೂ ಪ್ರಧಾನವಾದ ಕೈಬಳಕೆಯ ಪಾರ್ಶ್ವಸ್ಥ ಕಡೆಯಲ್ಲಿ (ಲ್ಯಾಟರಲ್ ಸೈಡ್) ಇರುತ್ತದೆ. ಮಿದುಳಿನ ಪ್ರಧಾನವಲ್ಲದ ಗೋಳಾರ್ಧದಿಂದ ಬರುವ ಆಲ್ಫ ತರಂಗಗಳು ಪ್ರಧಾನವಾದ ಗೋಳಾರ್ಧದಿಂದ ಬರುವ ಆಲ್ಫ ತರಂಗಗಳಿಗಿಂತ ಎದ್ದುಕಾಣುವ ರೀತಿಯಲ್ಲಿರುತ್ತವೆ. ಇವುಗಳಲ್ಲಿ ಯಾವೊಂದು ಕಾರಣವೂ ನಿರ್ಣಾಯಕವಾಗಿ ವ್ಯಕ್ತಿಯ ಕೈಬಳಕೆ ಆನುವಂಶೀಯವಾಗಿ ಹೇಗೆ ಬರುತ್ತದೆ ಎಂಬುದನ್ನು ತಿಳಿಸುವುದಿಲ್ಲ. ಪ್ರಧಾನ ಗೋಳಾರ್ಧದ ಸಿದ್ಧಾಂತದ ಪ್ರಕಾರ ಮಿದುಳಿನ ಪ್ರಧಾನ ಗೋಳಾರ್ಧದ ಅಧೀನಕ್ಕೊಳಪಟ್ಟಿರುವ ಶರೀರದ ಭಾಗಗಳು ಏಕರೀತಿ ಕಾರ್ಯಪಟುಗಳಾಗಿರುತ್ತವೆ ಎನ್ನುವ ಅಭಿಪ್ರಾಯವನ್ನು ಎತ್ತಿಹಿಡಿಯುವುದಕ್ಕಾಗುವುದಿಲ್ಲ. ಯಾವಾಗಲೂ ಪ್ರಧಾನವಾದ ಕೈ ಪ್ರಧಾನವಾದ ಕಾಲಿನ ಕಡೆಯೇ ಇರುವುದಿಲ್ಲ. ಸುಮಾರು ಮುಕ್ಕಾಲು ಭಾಗ ಬಲಗೈ ಬಳಕೆಯವರೂ ಮೂರನೆಯ ಒಂದು ಭಾಗ ಎಡಗೈ ಬಳಕೆಯವರೂ ಗುರಿಹಿಡಿಯುವುದಕ್ಕೆ ತಮ್ಮ ಬಲಗಣ್ಣನ್ನೇ ಉಪಯೋಗಿಸುತ್ತಾರೆ. (ಡಿ.ಇ.)

**ಕೈಮೀರ :** ಗ್ರೀಕ್ ಪುರಾಣಗಳಲ್ಲಿ ಉಲ್ಲೇಖಿತವಾಗಿರುವ ಒಂದು ವಿಚಿತ್ರ ಕಾಲ್ಪನಿಕ ಹೆಣ್ಣು ಪ್ರಾಣಿ; ಸಿಂಹದ ತಲೆ, ಆಡಿನ ದೇಹ, ಹಾವಿನ ಬಾಲ ಮುಂತಾಗಿ ವಿಭಿನ್ನ ಪ್ರಾಣಿಗಳ ದೇಹಭಾಗಗಳನ್ನು ಒಟ್ಟಾಗಿಸಿ ಹೊಸೆದಿರುವ ಒಂದು ವಿಚಿತ್ರ ರೂಪವುಳ್ಳದ್ದು. ಇದು ನಿಃಶ್ವಸಿಸುವಾಗ ಬೆಂಕಿಯ ಜ್ವಾಲೆಯನ್ನೇ ಉಗುಳುತ್ತಿತ್ತಂತೆ. ಈ ಪ್ರಾಣಿ ಏಷ್ಯಮೈನರಿನ ಪ್ರಾಚೀನ ವಿಭಾಗಗಳಾದ ಲಿಶಿಯ ಹಾಗೂ ಕೇರಿಯಗಳನ್ನು ಧ್ವಂಸ ಮಾಡಿತೆಂದೂ ಗ್ರೀಕ್ ವೀರನಾದ ಬೆಲೆರೊಫಾನ್ ಇದನ್ನು ಸಂಹರಿಸಿದನೆಂದೂ ಕತೆ ಮುಂದುವರಿಯುತ್ತದೆ. ಮಧ್ಯ ಇಟಲಿಯ ಅರೇತ್ಸೊ ಎಂಬಲ್ಲಿಯ ಕಂಚಿನ

ಕೈಮೀರ ಪ್ರತಿಮೆಗೆ ಸಿಂಹದ ತಲೆ ಮತ್ತು ದೇಹ ಇವೆ; ಅದರ ಬೆನ್ನಿನ ಭಾಗದಲ್ಲಿ ಆಡಿನ ತಲೆಯೂ ಉಂಟು. ಈ ಪ್ರತಿಮೆ ಐದನೆಯ ಶತಮಾನದಲ್ಲಿ ರಚಿತವಾದದ್ದೆಂದು

ಅರೇತ್ಸೋವಿನ ಕೈಮೀರ. ಈ ಕಂಚಿನ ಶಿಲ್ಪವನ್ನು ಫ್ಲಾರೆನ್ಸಿನ ಪ್ರಾಕ್ತನಶಾಸ್ತ್ರ ವಸ್ತುಸಂಗ್ರಹಾಲಯದಲ್ಲಿಟ್ಟಿದೆ.

ನಂಬಿಕೆ. ಕೈಮೀರ ಎಂಬ ಶಬ್ದವನ್ನು ಶಿಲ್ಪಕಲೆಯಲ್ಲಿ ಅಸಮಂಜಸ ಹಾಗೂ ವಿಕಟಚಿತ್ರಗಳನ್ನು ಸೂಚಿಸಲು ಬಳಸುವುದಲ್ಲದೆ ಊಹಾಪ್ರಪಂಚದ ಅಸಾಂಗತ್ಯಗಳನ್ನು ಸೂಚಿಸಲು ಸಹ ಉಪಯೋಗಿಸುವುದುಂಟು. (ಬಿ.ಆರ್.ಸಿ.ಆರ್.)

**ಕೈಮೀರ ಮೀನು :** ಕಾಂಡ್ರಿಕ್ಥಿಸ್ ವರ್ಗದ ಹೋಲೊಸೆಫಾಲಿ ಉಪವರ್ಗಕ್ಕೆ ಸೇರಿದ ಕೈಮಿರಿಡೆ ಕುಟುಂಬದ ಮೀನುಗಳಿಗಿರುವ ಸಾಮಾನ್ಯ ಹೆಸರು. ಇವುಗಳಿಗೆ ಇಲಿಮೀನು, ಮೊಲಮೀನು, ಇತ್ಯಾದಿ ಪರ್ಯಾಯ ನಾಮಗಳಿವೆ. ಇವು ಸಮುದ್ರದಂತರಾಳದಲ್ಲಿ ತೀರದ ಆಳ ನೀರುಗಳಲ್ಲಿ ವಾಸಿಸುತ್ತವೆ. ಪೂರ್ವ ಅಟ್ಲಾಂಟಿಕ್, ಮೆಡಿಟರೇನಿಯನ್ ಸಮುದ್ರಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇವು ಮಧ್ಯಮ ಗಾತ್ರದವುಗಳಾಗಿದ್ದು ಸುಮಾರು 2 ರಿಂದ 6 ಅಡಿವರೆಗೆ ಬೆಳೆಯುತ್ತವೆ. ಕೈಮೀರ, ಹೈಡ್ರೋಗಾಲಸ್ ಜಾತಿಯ ಮೀನುಗಳು



ದುಂಡಾದ ಅಥವಾ ಶಂಕಾಕೃತಿ ಮೂತಿಯನ್ನು ಹೊಂದಿವೆ, ಹ್ಯಾರಿಯೊಟ್ಟ ಜಾತಿಯ ಮೀನು ಉದ್ದದ ಚೂಪಾದ ಮೂತಿಯನ್ನು ಹೊಂದಿದೆ. ನೋಡಲು ಇವು ಬಲು ವಿಚಿತ್ರ ಬಗೆಯ ಮೀನುಗಳು. ದೊಡ್ಡ ಕಣ್ಣುಗಳು, ತೆಳುವಾದ ಚಾಟಿಯಂತಿರುವ ಬಾಲ, ದೊಡ್ಡ ಭುಜದ ಈಜುರೆಕ್ಕೆ, ಮೊದಲ ಬೆನ್ನು ಈಜುರೆಕ್ಕೆಯ ಮುಂದೆ ಮುಳ್ಳು ಇದ್ದು ಕೆಲವು ಮೀನುಗಳಲ್ಲಿ ಈ ಮುಳ್ಳಿನಲ್ಲಿ ವಿಷವಿರುತ್ತದೆ. ತಲೆಯ ಇಕ್ಕೆಲದಲ್ಲಿ ನಾಲ್ಕು ಜೊತೆ ಕಿವಿರುಗಳು ಮತ್ತು ಅವನ್ನು ಮುಚ್ಚುವ ಕಿವಿರು ಮುಚ್ಚಳಗಳು, ಹುರುಪೆಗಳಿಲ್ಲದ ನಯವಾದ ಚರ್ಮ, ಮೃದ್ವಸ್ಥಿಯಿಂದ ರಚಿತವಾಗಿರುವ ಅಸ್ಥಿ ಪಂಜರ, ಸಂಪೂರ್ಣವಾಗಿ ಬೆನ್ನೆಲುಬಾಗಿ ಮಾರ್ಪಾಡಾಗಿರದ ನೋಟೋಕಾರ್ಡ್, ಚೆನ್ನಾಗಿ ರೂಪುಗೊಂಡಿರುವ ಪಾರ್ಶ್ವರೇಖೆಯ ಜ್ಞಾನೇಂದ್ರಿಯ, ತಲೆಬುರುಡೆಯೊಂದಿಗೆ ಐಕ್ಯವಾಗಿರುವ ಮೇಲ್ದವಡೆ – ಇವು ಕೈಮೀರ ಮೀನುಗಳ ವಿಶಿಷ್ಟ ಲಕ್ಷಣಗಳು. ಇವಕ್ಕೆ ಕ್ಲೋಯಕಾ ವಿಸರ್ಜನಾ ದ್ವಾರವಾಗಲೀ, ಆನುಷಂಗಿಕ ಶ್ವಾಸನೇಂದ್ರಿಯವಾಗಲಿ ಇಲ್ಲ. ಈ ಮೀನುಗಳು ನಿಶಾಚರಿಗಳಾಗಿದ್ದು ಕೆಲವು ಸಣ್ಣ ಅಕಶೇರುಕಗಳು, ಮತ್ತು ಮೀನುಗಳನ್ನು ತಿನ್ನುತ್ತವೆ. ಗಂಡು ಕೈಮೀರ ಮೀನುಗಳಿಗೆ ಐದು ಆಲಿಂಗನಾಂಗಗಳಿವೆ (ಕ್ಲಾಸ್ಪರ್ಸ್). ತಲೆಯ ಭಾಗದಲ್ಲಿರುವ ಆಲಿಂಗನಾಂಗಕ್ಕೆ ಸೆಫಾಲಿಕ್ ಕ್ಲಾಸ್ಪರ್ ಎಂದು ಹೆಸರು. ಸಂತಾನೋತ್ಪತ್ತಿಯ ಸಮಯದಲ್ಲಿ ಇವು ಹೆಣ್ಣಿನ ಪುಷ್ಠ ಭಾಗದ ರೆಕ್ಕೆಗಳನ್ನು ಬಲವಾಗಿ ತಬ್ಬಿಕೊಳ್ಳಲು ಸಹಾಯಕವಾಗಿವೆ. (ಬಿ.ಆರ್.ಸಿ.ಆರ್.)

**ಕೈಮೊಟ್ರಿಪ್ಸಿನ್ :** ಜಠರ ಮತ್ತು ಕರುಳಲ್ಲಿ ಆಹಾರದ ಪ್ರೋಟೀನನ್ನು ಜಲವಿಶ್ಲೇಷಣೆ ಮಾಡಿ ಪೆಪ್ಟೈಡು ಮತ್ತು ಅಮೈನೋ ಆಮ್ಲಗಳಿಗೆ ಪರಿವರ್ತಿಸುವ ಪ್ರೋಟೀನ್ ವಿಶ್ಲೇಷಕ ಎನ್‌ಜೈಮು(ಕಿಣ್ವ)ಗಳಲ್ಲಿ ಒಂದು. ಇದರಲ್ಲಿ ಪ್ರೋಸ್ಥೆಟಿಕ್ ಗುಂಪು ಇರುವುದಿಲ್ಲ ಮತ್ತು ಇದರ ಕಾರ್ಯನಿರ್ವಹಣೆಗೆ ಕೋಎನ್‌ಜೈಮು (ಸಹಕಿಣ್ವ) ಯಾವುದೂ ಬೇಕಾಗಿಲ್ಲ. ಇದು ಟ್ರಿಪ್ಟೋಫೇನ್, ಫೀನೈಲ್ ಅಲನಿನ್ ಮತ್ತು ಟೈರೋಸಿಲ್ ಗುಂಪುಗಳಿರುವ ಪೆಪ್ಟೈಡ್ ಬಂಧಗಳನ್ನು ಬಹು ಚುರುಕಾಗಿಯೂ ಲ್ಯೂಸೈನ್, ಮೀಥಿಯೊನ್ ಮತ್ತು ಅಸ್ಪರಾಜಿನಿಲ್ ಪೆಪ್ಟೈಡ್ ಬಂಧಗಳನ್ನು ತಕ್ಕಮಟ್ಟಿಗೂ ಜಲವಿಶ್ಲೇಷಣೆಗೆ ಒಳಪಡಿಸುತ್ತದೆ. ಅಲ್ಲದೆ ಪೆಪ್ಟೈಡ್ ಉತ್ಪನ್ನಗಳನ್ನು ಹೋಲುವ ಅಸೈಟಿಲ್–ಎಲ್–ಟೈರೋಸಿನ್ ಈಥೈಲ್ ಎಸ್ಟರ್ ಮತ್ತು ಅಸೆಟಿಲ್–ಎಲ್–ಟೈರೋಸಿನ್ ಅಮೈಡ್ ಇಂಥ ಸಬ್‌ಸ್ಟ್ರೇಟುಗಳೊಡನೆ ಪ್ರಬಲ ಜಲವಿಶ್ಲೇಷಣ ಕ್ರಿಯೆಯನ್ನು ತೋರ್ಪಡಿಸುತ್ತದೆ. ಟ್ರಿಪ್ಸಿನ್ನಿನಂತೆಯೇ ಇದು ಸಹ ಮೇದೋಜೀರಕ ಗ್ರಂಥಿಯಲ್ಲಿ ಸಂಶ್ಲೇಷಿತವಾಗುತ್ತದೆ. ಮೊದಲು ಅಲ್ಲಿ ಇದರ ಪ್ರೊಎನ್‌ಜೈಮು ಅಥವಾ ಜೈಮೊಜೆನ್ ಆದ ಕೈಮೊಟ್ರಿಪ್ಸಿನೊಜೆನ್ ಉತ್ಪತ್ತಿಯಾಗುತ್ತದೆ. ಇದಕ್ಕೆ ಕ್ರಿಯಾಶಕ್ತಿ ಇರುವುದಿಲ್ಲ. ಇದರಲ್ಲಿ 249 ಅಮೈನೋ ಆಮ್ಲ ಅವಶೇಷಗಳಿಂದಾದ ಒಂದೇ ಒಂದು ಪಾಲಿ ಪೆಪ್ಟೈಡ್ ಸರಣಿ ಇದೆ. ಈ ಸರಣಿಯಲ್ಲಿಯೇ ಐದು ಅಡ್ಡವಾದ ಡೈಸಲ್ಫೈಡ್ ಬಂಧಗಳಿವೆ. ಟ್ರಿಪ್ಸಿನ್ ಅಥವಾ ಕೈಮೊಟ್ರಿಪ್ಸಿನಿಂದ ಕರುಳಿನಲ್ಲಿ ಪರಿಮಿತ ಮೊತ್ತದಲ್ಲಿ ನಿರ್ದಿಷ್ಟ ರೀತಿಯಲ್ಲಿ ಕೈಮೊಟ್ರಿಪ್ಸಿನೊಜೆನ್ನಿನ ಜಲವಿಶ್ಲೇಷಣೆಯಾದಾಗ ಕ್ರಿಯಾಶಕ್ತ ಕೈಮೊಟ್ರಿಪ್ಸಿನ್ ಉತ್ಪತ್ತಿಯಾಗುತ್ತದೆ. ಈ ಪರಿವರ್ತನೆಯಲ್ಲಿ ಮೂರು ಹಂತಗಳಿವೆ. ಕೈಮೊಟ್ರಿಪ್ಸಿನೊಜೆನ್ನಿನ ಒಂದು ನಿರ್ದಿಷ್ಟ ಪೆಪ್ಟೈಡು (ಅರ್ಜಿನಿನ್–ಐಸೋಲ್ಯೂಸಿನ್) ಬಂಧದ ಜಲವಿಶ್ಲೇಷಣೆಯಿಂದ $\pi$–ಕೈಮೊಟ್ರಿಪ್ಸಿನ್ ಬರುತ್ತದೆ. ಇದರಿಂದ ಸೆರೀಲ್–ಅರ್ಜಿನೀನ್, ಈ ಡೈಪೆಪ್ಟೈಡು ಬಿಡಿಸಿ ಹೋದಾಗ $\delta$–ಕೈಮೊಟ್ರಿಪ್ಸಿನ್ನೂ ಈ $\delta$–ಎನ್‌ಜೈಮಿನಿಂದ ಥ್ರಿಯೊನೀನ್–ಆಸ್ಪರಾಜೀನ್ ಈ ಡೈಪೆಪ್ಟೈಡು ಕಳಚಿಹೋದಾಗ $\alpha$–ಕೈಮೊಟ್ರಿಪ್ಸಿನ್ನೂ ಬರುತ್ತವೆ. ಒಂದೇ ಸರಣಿಯ ಕೈಮೊಟ್ರಿಪ್ಸಿನೋಜೆನ್ನಿನಿಂದ ಮೂರು ಸರಣಿಗಳ $\alpha$–ಕೈಮೊಟ್ರಿಪ್ಸಿನ್ನು ಬರುತ್ತದೆ. ಇದು ಇವುಗಳೆಲ್ಲ ಸ್ಥಿರತಮವಾದದ್ದು.

ಡೈಐಸೊಪ್ರೊಪೈಲ್ ಫಾಸ್ಫೊ ಫ್ಲೋರಿಡೇಟು ಕೈಮೊಟ್ರಿಪ್ಸಿನ್ನನ್ನು ಕ್ರಿಯಾಹೀನವನ್ನಾಗಿ ಮಾಡುತ್ತದೆ. ಎನ್‌ಜೈಮಿನಲ್ಲಿ 28 ಸೆರೀನ್ ಅವಶೇಷಗಳಿದ್ದರೂ ಇದು ಅವುಗಳಲ್ಲಿ ನಿರ್ದಿಷ್ಟವಾದ ಒಂದು ಸೆರೀನ್ ಗುಂಪಿನೊಡನೆ ಮಾತ್ರ ಡೈಐಸೊ ಪ್ರೊಪೈಲ್ ಫಾಸ್ಫಾರಿಕ್ ವ್ಯುತ್ಪನ್ನವನ್ನು ಉಂಟು ಮಾಡುತ್ತದೆ. ಕೈಮೊಟ್ರಿಪ್ಸಿನ್ನಿನ ಕ್ರಿಯಾಕೇಂದ್ರದಲ್ಲಿರುವ ಸೆರೀನಿನ ಸುತ್ತಲಿನ ಅಮೈನೋ ಆಮ್ಲ ಅನುಕ್ರಮವಾಗಿ ಟ್ರಿಪ್ಸಿನ್, ಕೈಮೊಟ್ರಿಪ್ಸಿನ್ ಮತ್ತು ಎಲಾಸ್ಟೇಸ್‌ಗಳೆಲ್ಲದರಲ್ಲೂ ಗ್ಲೈಸೀನ್–ಅಸ್ಪಾರಜೀನ್–ಸೆರೀನ್–ಗ್ಲೈಸೀನ್ ಆಗಿರುತ್ತದೆ. ಈ ಎನ್‌ಜೈಮುಗಳೆಲ್ಲಕ್ಕೂ ಆನುವಂಶಿಕ ಮೂಲ ಒಂದೇ ಆಗಿರಬೇಕೆಂದು ಇದು ತೋರಿಸುತ್ತದೆ.

ದನದ ಮೇದೋಜೀರಕ ಗ್ರಂಥಿಯ ಕೈಮೊಟ್ರಿಪ್ಸಿನ್ನನ್ನು ಸ್ಫಟಿಕೀಕರಿಸಿದ್ದಾರೆ. ಇದರ ಅಣುತೂಕ 24,300. (ಎಂ.ಆರ್.ಆರ್.)

**ಕೈಯ ರೋಗಗಳು, ಊನಗಳು ಮತ್ತು ನಿರುಪಯುಕ್ತತೆಗಳು :** ಕೈಯ ಚರ್ಮ, ಸ್ನಾಯು, ರಜ್ಜು, ಮೂಳೆ, ಕೀಲು, ನರ ಮುಂತಾದವುಗಳಲ್ಲಿ ಒಂದು ಅಥವಾ ಹೆಚ್ಚು ಅಂಶವನ್ನು ಒಳಗೊಂಡು ಕೈಯ ರೋಗವಾಗಲಿ ಊನವಾಗಲಿ ನಿರುಪಯುಕ್ತತೆಯಾಗಲಿ ಪ್ರಾಪ್ತವಾಗಬಹುದು. ಕೈಯರೋಗಗಳು ಬಾಲ್ಯದಲ್ಲಿ ಅಥವಾ ನಡುವಯಸ್ಸಿನಲ್ಲಿ ಸಾಮಾನ್ಯ. ಕೆಲಸಮಾಡುವಾಗ ಇಲ್ಲವೇ ಮತ್ತೆ ಯಾವಾಗಲೋ ಆದ ಗಾಯವೇ ಅನೇಕ ವೇಳೆ ಇದಕ್ಕೆ ಮೂಲ. ಈ ರೀತಿಯಿಂದ ಸಂಭವಿಸಿದ ಕೈಯ ರೋಗಗಳು ತಾತ್ಕಾಲಿಕವಾದವುಗಳಾಗಲಿ ಬಹುಕಾಲಿಕವಾದವುಗಳಾಗಲಿ ಆಗಿರಬಹುದು. ಇವು ಪೂರ್ಣವಾಗಿ ಗುರುತೇ ಉಳಿಯದಂತೆ ವಾಸಿಯಾಗಿ ಹೋಗಬಹುದು. ಇಲ್ಲವೇ ಶಾಶ್ವತವಾದ ಊನವನ್ನೋ ನಿರುಪಯುಕ್ತತೆಯನ್ನೋ ಉಂಟುಮಾಡಬಹುದು. ಊನಗಳು ರೋಗದ ಪರಿಣಾಮವಾಗಿ ಮಾತ್ರವಲ್ಲ ಹುಟ್ಟುವಾಗ ಸಹ ಇರುವುದುಂಟು. ತೋಳು, ಭುಜ ಮುಂತಾದ ಇತರ ಸ್ಥಳಗಳಲ್ಲಿ ಉಂಟಾದ ಘಾತ, ರೋಗಗಳ ಪರಿಣಾಮವಾಗಿಯೂ ಕೈಗೇ ಆದ ನೇರ ಘಾತದಿಂದಲೂ ಕೈ ಊನಗಳು ಉಂಟಾಗುತ್ತವೆ. ಯಾವುದಾದರೂ ಕಾರಣದಿಂದ ಕೈಯನ್ನು ತಿಂಗಳ ಗಟ್ಟಲೆ ಚಲಿಸದೇ ಇದ್ದರೆ ತಾತ್ಕಾಲಿಕವಾಗಿಯೋ ಶಾಶ್ವತವಾಗಿಯೋ ಕೈ ಸೆಟೆದುಕೊಂಡು ಊನವಾಗಬಹುದು. ಊನವಾದ ಕೈ ಯಾವಾಗಲೂ ನಿರುಪಯುಕ್ತವಾಗಿರುತ್ತದೆ ಎಂದು ಹೇಳುವಂತಿಲ್ಲ. ಜನ್ಮತಃ ಕಂಡುಬರುವ ಅನೇಕ ರೀತಿಯ ಊನಗಳನ್ನು ಬಲುಮಟ್ಟಿಗೆ ಹತ್ತಿಕ್ಕಿ ಕೈಯ ಉಪಯೋಗವನ್ನೇನೋ ಹೆಚ್ಚು ಕಡಿಮೆ ಸಹಜವಾಗಿ ಮಾಡಬಹುದು. ಮುಖ್ಯವಾಗಿ ಮುಷ್ಟಿಯ ಬಿಗಿಹಿಡಿತ ಮತ್ತು ಹೆಬ್ಬೆರಳು ಇತರ ಬೆರಳುಗಳ ಮಧ್ಯೆ ಚಿಮಟದಂಥ ಹಿಡಿತ ಇವುಗಳ ಮೇಲೆಯೇ ಕೈಯ ಉಪಯೋಗ ನಿಂತಿದೆ. ಈ ಮುಷ್ಟಿಹಿಡಿತ ಮತ್ತು ಚಿಮಟಹಿಡಿತ ಮಾನವನ ಕೈಯಲ್ಲಿ ಅಷ್ಟು ಸಾರ್ಥಕವಾಗಿರುವುದು ಹೆಬ್ಬೆರಳು ಮಿಕ್ಕ ಬೆರಳುಗಳ ಕಡೆ ಚಲಿಸಿ ಅವುಗಳ ತುದಿಯನ್ನು (ಕಿರುಬೆರಳಿನ ತುದಿಯನ್ನು ಕೂಡ) ಸಂಧಿಸುವಂತೆ ಇರುವ ವೈಶಿಷ್ಟ್ಯದಿಂದಲೇ. ಈ ಚಲನೆ ಮಾನವನ ಕೈಯಲ್ಲಿ ಅಷ್ಟೊಂದು ಮೇಲ್ಮಟ್ಟದ್ದಾಗಿರುವುದರಿಂದಲೂ ಸೂಕ್ಷ್ಮತೆ ಪಡೆದಿರುವುದರಿಂದಲೂ ಬರೆವಣಿಗೆ, ಹೊಲಿಗೆ ಮುಂತಾದ ಕ್ಲಿಷ್ಟ ಮತ್ತು ನಾಜೂಕಾದ ಕೆಲಸಗಳೂ ಬಿಗಿಹಿಡಿತಬೇಕಾದ ಗಡಸು ಕೆಲಸಗಳೂ ಸಾಧ್ಯವಾಗಿವೆ. ಕೈಚಲನೆ ಪರಿಣಾಮಕಾರಿಯಾಗಬೇಕಾದರೆ ಸ್ಪರ್ಶಜ್ಞಾನ ಸಹಜಸ್ಥಿತಿಯಲ್ಲಿರಬೇಕಾದದ್ದು ಆವಶ್ಯಕ. ಘಾತ, ರೋಗ, ಊನಗಳಿಂದ ಕೈಯ ಸ್ಪರ್ಶಜ್ಞಾನ ನಾಶವಾದಾಗ ಹಾಗೂ ಮುಷ್ಟಿ

ಮತ್ತು ಚಿಮಟ ಹಿಡಿತಗಳು ಸಾಧ್ಯವಾಗದಿದ್ದಾಗ ಸ್ವಾಭಾವಿಕವಾಗಿಯೇ ಕೈ ನಿರುಪಯುಕ್ತವಾಗುತ್ತದೆ. ಇದು ವಿಶೇಷವಾಗಿ ಹೆಬ್ಬೆರಳಿನ ಚಲನೆಗೆ ಅನ್ವಯಿಸುವ ಮಾತು. ಹೆಬ್ಬೆರಳು ಹೀಗೆ ನಿರ್ಬಲಗೊಂಡರೆ ಕೈ ಮುಕ್ಕಾಲು ಪಾಲಿಗಿಂತ ಹೆಚ್ಚೇ ನಿರುಪಯುಕ್ತವಾಯಿತೆಂದು ಭಾವಿಸಬಹುದು. ಹೀಗಿಲ್ಲದೆ ಹೆಬ್ಬೆರಳಿಗೆ ಚಲನ ಸಾಮರ್ಥ್ಯ ಸಹಜವಾಗಿದ್ದು ಮಿಕ್ಕ ಒಂದೋ ಎರಡೋ ಕೊನೆಗೆ ಮೂರು ಬೆರಳುಗಳು ನಾಶವಾದರೂ ಕ್ರಮೇಣ ಅನುಭವದಿಂದ ಕೈಯ ಕ್ರಿಯಾಶಕ್ತಿಯನ್ನು ಹೆಚ್ಚು ಕಡಿಮೆ ಪಡೆಯಬಹುದು. ಅದನ್ನು ತೀರ ಹತಾಶ ಪರಿಸ್ಥಿತಿ ಎಂದು ಪರಿಗಣಿಸಲಾಗದು.

ಕೈಗಳು ಹುಟ್ಟುವಾಗಲೇ ಊನವಾಗಿ ವಿರೂಪವಾಗಿರಬಹುದು. ಕೆಲವರ ಕೈಯಲ್ಲಿ ಆರು ಬೆರಳುಗಳು, ಏಳು ಬೆರಳುಗಳು ಕೂಡ ಇರುವುದನ್ನು ಸಾಮಾನ್ಯವಾಗಿ ಎಲ್ಲರೂ ನೋಡಿರುತ್ತಾರೆ. ಈ ಹೆಚ್ಚಿನ ಬೆರಳು ಸಾಧಾರಣವಾಗಿ ಕಿರುಬೆರಳಿಗೋ ಹೆಬ್ಬೆರಳಿಗೋ ಅದರ ಬುಡದಲ್ಲಿಯೋ ಮಧ್ಯದಲ್ಲಿಯೋ ಒಂದು ಕವಲಿನಂತೆ ಅಂಟಿಕೊಂಡಿರುತ್ತದೆ. ಅಪೂರ್ವವಾಗಿ ಬೇರೆ ಬೆರಳು ಯಾವುದರಲ್ಲಿಯೂ ಈ ರೀತಿಯ ಕವಲು ಇರಬಹುದು. ಈ ಹೆಚ್ಚಿನ ಬೆರಳಿನಲ್ಲಿ ಮೂಳೆ ಮಾಂಸ ನರಗಳೆಲ್ಲ ಸಾಮಾನ್ಯವಾದ ಬೆರಳಿನಲ್ಲಿರುವಂತೆಯೇ ಇದ್ದು ಕೊಂಚಮಟ್ಟಿಗೆ ಅದನ್ನು ಅಲ್ಲಾಡಿಸುವುದು ಸಹ ಸಾಧ್ಯವಾಗಬಹುದು. ಇಲ್ಲವೇ ಆ ಅಧಿಕ ಬೆರಳು ಹತ್ತಿಸಿಂಬಿಯಂತೆ ಮೆತ್ತಗೆ ಇರಬಹುದು. ಈ ಹೆಚ್ಚುವರಿ ಬೆರಳುಗಳಿಂದ ಸಾಮಾನ್ಯವಾಗಿ ಕೈಯ ಸಹಜಕಾರ್ಯ ವಿಚಕ್ಷಣತೆಗೆ ಕುಂದಿರುವುದಿಲ್ಲ. ಹಾಗಿಲ್ಲದೆ ತೊಂದರೆಯಾಗಿದ್ದರೆ ಮಾತ್ರ ಶಸ್ತ್ರಚಿಕಿತ್ಸೆಯನ್ನು ಯೋಚಿಸಬಹುದು. ಅರೂಪವಾಗಿದೆ ಎಂದಮಾತ್ರಕ್ಕೆ ಶಸ್ತ್ರಚಿಕಿತ್ಸೆ ಸಲ್ಲದು. ಈ ಸ್ಥಿತಿಗೆ ವ್ಯತಿರಿಕ್ತವಾಗಿ ಕೈಯಲ್ಲಿ ಒಂದೋ ಎರಡೋ ಕೊನೆಗೆ ಮೂರು ಬೆರಳುಗಳು ಲೋಪವಾಗಿರಬಹುದು. ಕೆಲವು ವೇಳೆ ಒಂದು ಬೆರಳು ಸಹಜವಾಗಿರುವುದಕ್ಕಿಂತ ದೊಡ್ಡದಾಗಿ ದೈತ್ಯಾಕಾರ ತಳೆದಿರಬಹುದು. ಕೈಕೆಲಸಕ್ಕೆ ಅಡಚಣೆ ಆಗದಿದ್ದರೆ ಇದೂ ಅಗಣನೀಯ ಸ್ಥಿತಿ. ಇದಕ್ಕೆ ಬದಲು ಒಂದು ಬೆರಳು ಸಹಜಪ್ರಮಾಣಕ್ಕಿಂತ ಕುಳ್ಳಾಗಿಯೋ ಒಂದೆರಡು ಮಣಿಗಳು ಲೋಪವಾಗಿಯೋ ಇರಬಹುದು. ಹುಟ್ಟುವಾಗಲೇ ಎರಡು ಬೆರಳುಗಳು ಕೂಡಿಕೊಂಡಿರುವುದು ಅನೇಕವೇಳೆ ಕಂಡುಬಂದಿದೆ. ಇದು ಸಾಮಾನ್ಯವಾಗಿ ಎರಡು ಕೈಗಳಲ್ಲೂ ಎರಡು ಕಾಲುಗಳಲ್ಲೂ ಒಟ್ಟಿಗೆ ಕಾಣಬರುವ ಸ್ಥಿತಿ. ಮಧ್ಯದ ಬೆರಳಿನ ಜೊತೆಗೆ ಉಂಗುರದ ಬೆರಳೋ ತೋರುಬೆರಳೋ ಸೇರಿಕೊಂಡಿರುವುದೇ ಸಾಮಾನ್ಯ. ಈ ಬೆರಳುಗಳು ಬುಡದಿಂದ ತುದಿಯವರೆಗೂ ಸೇರಿಕೊಂಡಿರಬಹುದು; ಇಲ್ಲವೇ ಬುಡದಿಂದ ಸ್ವಲ್ಪ ಭಾಗವೇ ಸೇರಿಕೊಂಡಿರಬಹುದು. ಎರಡು ಬೆರಳುಗಳನ್ನು ಸೇರಿಸುವ ಭಾಗ ತೆಳುವಾಗಿ ಅಗಲವಾಗಿ ವಪೆಯಂತೆ ಹರಡಿಕೊಂಡಿರಬಹುದು. ಸಾಮಾನ್ಯವಾಗಿ ಹೆಣ್ಣುಮಕ್ಕಳಲ್ಲಿ ಅನುವಂಶೀಯವಾಗಿ ಕಾಣಬರುವ ಇನ್ನೊಂದು ಸ್ಥಿತಿ ಉಬ್ಬಿಡೊಂಕಾಗಿರುವ ಕಿರುಬೆರಳು. ಈ ಸ್ಥಿತಿಯಲ್ಲಿ ಅಂಗೈಯನ್ನು ನೆಲದಮೇಲೆ ಇಟ್ಟರೆ ಕಿರುಬೆರಳು ಪೂರ್ತ ನೆಲದಮೇಲೆ ಕೂರದೆ ಮಧ್ಯಭಾಗ ಮೇಲುಬ್ಬಿಕೊಂಡಿರುತ್ತದೆ. ಇದರಿಂದಲೂ ಏನೂ ತೊಂದರೆ ಇರುವುದಿಲ್ಲ. ಅನುವಂಶೀಯವಾಗಿ ಕಂಡುಬರುವ ಊನಗಳನ್ನು ಬಿಟ್ಟರೆ ಮಿಕ್ಕ ಆಜನ್ಮ ಊನಗಳು ಆಕಸ್ಮಿಕವಾಗಿಯೋ ಇತರ ತಿಳಿದ ಕಾರಣಗಳಿಂದಲೋ ಭ್ರೂಣಾವಸ್ಥೆಯಲ್ಲಿ ಸಂಭವಿಸುವ ಆಘಾತದಿಂದುಂಟಾಗುತ್ತವೆ. ಥ್ಯಾಲಿಡೊಮೈಡ್ ಎಂಬ ಸಂವೇದನಾ ನಾಶಕ ವಸ್ತುವನ್ನು ಗರ್ಭಿಣಿ ಸೇವಿಸಿದರೆ ಅಥವಾ ಗರ್ಭಿಣಿಯರಿಗೆ ರೂಬೆಲ್ಲ ಎಂಬ ದಡಾರದಂಥ ರೋಗ ಸಂಭವಿಸಿದರೆ ಈ ರೀತಿ ಭ್ರೂಣಾವಸ್ಥೆಯಲ್ಲೇ ಶಿಶುವಿನ ಕೈಕಾಲುಗಳು ಊನವಾಗಬಹುದು. ಜಪಾನಿನ ಹಿರೋಷಿಮ, ನಾಗಸಾಕಿಗಳಲ್ಲಿ ಪರಮಾಣು ಬಾಂಬನ್ನು ಸ್ಫೋಟಿಸಿದ ಮೇಲೆ ಭ್ರೂಣಾವಸ್ಥೆಯಲ್ಲಾದ ಇಂಥ ಕಾರಣದಿಂದಲೇ ಅಲ್ಲಿ ಹುಟ್ಟಿದ ಬಹುಮಕ್ಕಳು ಅಂಗವಿಕಲವಾಗಿದ್ದುವು. ಆಜನ್ಮವಾಗಿಯಲ್ಲದೆ ಗಾಯಗಳಿಂದ ಕೈಗಳು ಪೀಡಿತವಾಗಿ ನಿರುಪಯುಕ್ತವಾಗಬಹುದು, ಊನವಾಗಬಹುದು. ಗಾಯಗಳು ಪ್ರಾರಂಭದಲ್ಲಿ ಅಗಣನೀಯವಾಗಿಯೇ ಇರಬಹುದಾದರೂ ಅನೇಕವೇಳೆ ತಕ್ಕ ಚಿಕಿತ್ಸೆ ಮಾಡದೆ ಬಿಟ್ಟರೆ ಕೈಊನವಾಗುವುದು ಖಂಡಿತ. ಗಾಯ ಕೈಗೇ ಸೀಮಿತವಾಗದೆ ಹರಡಿ ಕೊನೆಗೆ ಪ್ರಾಣಾಂತಕವೂ ಆಗಬಹುದು. ಹೊಪ್ಪಳೆಗಳು, ತರಚು ಮತ್ತು ಜಜ್ಜು ಗಾಯಗಳು, ಬಿರುಕು, ಚಾಕು ಕುಡಗೋಲು ಈಳಿಗೆಮಣೆಗಳಿಂದಾಗುವ ಸಣ್ಣ ಕೊಯ್ತಗಳು, ಮೊಳೆ ಮುಳ್ಳು ಸಿಬಿರು ಸೂಜಿ ಮುಂತಾದುವುಗಳಿಂದಾದ ಚುಚ್ಚುಗಾಯಗಳು, ಗಾಜು ಮರದ ಚೂರು ಹೊಕ್ಕಿಕೊಳ್ಳುವಿಕೆ ಇತ್ಯಾದಿಗಳು ಕೈಯ ಯಾವ ಭಾಗದಲ್ಲೇ ಆಗಲಿ ಉಂಟಾಗಬಹುದು. ಇವುಗಳಿಗೆ ತತ್‌ಕ್ಷಣ ಚಿಕಿತ್ಸೆ ಆವಶ್ಯಕ. ರಸ್ತೆ ಆಕಸ್ಮಿಕದಲ್ಲಿ ಸುಲಿದು ಹೋಗಿಯೋ ಸುಟ್ಟಗಾಯದ ಪರಿಣಾಮವಾಗಿಯೋ ಕೈಯ ಚರ್ಮ ನಾಶವಾಗಬಹುದು. ಗಾಯ ವಾಸಿಯಾದ ಮೇಲೆ ಚರ್ಮ ಸುಕ್ಕಿ ಸೇದಿಕೊಂಡು ಕೈ ಅರೂಪವಾಗಿ ಬೆರಳುಗಳು ತೆಗೆಯುವುದಕ್ಕೂ ಮಡಚುವುದಕ್ಕೂ ಸಾಧ್ಯವಾಗದೆ ಹೋಗುತ್ತವೆ. ಹೀಗಾದಾಗ ಶಸ್ತ್ರಚಿಕಿತ್ಸೆಯಿಂದ ಬಿಗಿದಿರುವ ಸ್ಥಳಗಳನ್ನು ಬಿಡಿಸಿ ನಾಶವಾದ ಚರ್ಮದ ಸ್ಥಳದಲ್ಲಿ ಸ್ವದೇಹದ ಧರ್ಮವನ್ನು ನಾಟಿಹಾಕಿ ಗುಣಪಡಿಸಬೇಕಾಗುತ್ತದೆ. ಬೆರಳಿನ ತುದಿ ಭಾರದ ಪದಾರ್ಥಗಳ ಅಡಿಯಲ್ಲೋ ಕಿಟಕಿಬಾಗಿಲುಗಳ ಸಂದಿಯಲ್ಲೋ ಸಿಕ್ಕಿಹಾಕಿಕೊಂಡು ಅಥವಾ ಸುತ್ತಿಗೆಯ ಏಟು ಬಿದ್ದು ಜಜ್ಜಿಹೋಗಬಹುದು. ಇದು ಪೂರ್ಣವಾಗಿ ವಾಸಿಯಾಗುವುದು ಸಾಮಾನ್ಯ. ಇಲ್ಲವೇ ಕೀತುಗೊಂಡರೂ ಘಾತವಾದ ಬೆರಳಿನ ತುದಿ ನಶಿಸಿ ಕೊನೆಗೆ ಬಿದ್ದುಹೋಗಬಹುದು. ಹೀಗಾದರೂ ಪರವಾಗಿಲ್ಲ. ಅದರ ಬದಲು ಯಾವಾಗಲೂ ನೋಯುತ್ತಿರುವ ಮೂಗಗಾಯ ಉಳಿದುಬಿಟ್ಟರೆ ತೊಂದರೆ. ಹೀಗಾಗಿದ್ದರೆ ನೋಯುತ್ತಿರುವ ಭಾಗವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದು ಹಾಕಿಬಿಡುವುದು ವಾಸಿ. ನೇರ ಗಾಯದ ಪರಿಣಾಮವಾಗಿ ಬೆರಳುಗಳನ್ನು ಚಲಿಸುವ ಸ್ನಾಯು ಮಾಂಸಖಂಡಗಳೋ ಚಲನೆಯನ್ನು ನಿರ್ದೇಶಿಸುವ ನರಗಳೋ ಕಿತ್ತುಹೋಗಬಹುದು. ಹೀಗಾದರೆ ಕೈ ನಿಷ್ಪ್ರಯೋಜಕವಾಗುತ್ತದೆ. ಮೂಗಗಾಯದಿಂದ ಸ್ನಾಯುಗಳು ಒಳಗೇ ಕತ್ತರಿಸಿಹೋಗುವ ಪ್ರಸಂಗಗಳೂ ಇವೆ. ನೆಟ್ಟುಕೊಂಡಿರುವ ಬೆರಳಿನ ತುದಿಮಣಿಯನ್ನು ನೆಟ್ಟಗೆ ಮಾಡುವುದಕ್ಕೆ ಆಗದೆ, ಅದು ಕೊಕ್ಕೆಯಂತೆ ಬಗ್ಗಿಕೊಂಡಿರುತ್ತದೆ. ಇದು ಕ್ರಿಕೆಟ್ ಹಾಗೂ ಬೇಸ್‌ಬಾಲ್ ಆಟಗಾರರಲ್ಲೂ ಸಂಭವಿಸಬಹುದಾದ ಊನ. ಬಹುಕಾಲ ಮೃದಂಗ, ತಬಲ ಮುಂತಾದ ತಾಳ ವಾದ್ಯಗಳನ್ನು ಬಾರಿಸುತ್ತಿರುವವರಲ್ಲಿ ಕೆಲವರಲ್ಲಿ ಹೆಬ್ಬೆರಳಿನ ಸ್ನಾಯುಗಳು ಅತಿಯಾದ ಚಲನದಿಂದ ಜೀರ್ಣಗೊಂಡು ಕೊನೆಗೆ ಕಿತ್ತುಹೋಗಿರುವುದೂ ತಿಳಿದಿದೆ. ಹೀಗಾದರೆ ಹೆಬ್ಬೆರಳಿನ ಚಲನೆ ಅಲ್ಪವಾಗಿಯೋ ಬಹುವಾಗಿಯೋ ಕುಂದಿ ಅಷ್ಟುಮಟ್ಟಿಗೆ ಕೈಯೂ ನಿರ್ಬಲಗೊಳ್ಳುತ್ತದೆ. ನೇರ ಗಾಯದಿಂದ ಕೈ ಮೂಳೆಗಳು ಮುರಿದುಹೋಗಬಹುದು. ಸಾಮಾನ್ಯವಾಗಿ ಮೂಳೆಗಳು ಸೇರಿಕೊಂಡು ಏನೂ ತೊಂದರೆ ಉಳಿಯದೆ ವಾಸಿಯಾಗುತ್ತವೆ. ಚಲಿಸುವ ಯಂತ್ರಗಳ ಮಧ್ಯೆ ಸಿಕ್ಕಿ ಕೈ ನಜ್ಜಿಹೋದರೆ ಬಹು ಮೂಳೆಗಳು ಮುರಿದು ಪುಡಿಪುಡಿಯಾಗಿ, ಗಾಯ ಸಾಮಾನ್ಯವಾಗಿ ಕೀತುಗೊಳ್ಳುತ್ತದೆ. ಗಾಯ ವಾಸಿಯಾದ ಮೇಲೆ ಕೈ ಯಾವ ಸ್ಥಿತಿಯಲ್ಲಿರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ಮೇಲಿನ ಸ್ಥಿತಿ ನೋಡಿಕೊಂಡು ಸಾಧ್ಯವಾದ ಶಸ್ತ್ರಚಿಕಿತ್ಸೆಯನ್ನು ಮಾಡಿ ಕೈ ಆದಷ್ಟು ಕಾರ್ಯಗತವಾಗುವಂತೆ ಮಾಡಬೇಕಾಗುತ್ತದೆ. ಮೂಳೆಗಳು ಮುರಿಯದೆ ಇದ್ದರೂ ನೇರಗಾಯದಿಂದ ಒಂದೋ ಹೆಚ್ಚಾಗಿಯೋ ಕೀಲುಗಳಲ್ಲಿ ಉಳುಕು ಕಾಣಿಸಿಕೊಳ್ಳಬಹುದು. ಉಳುಕನ್ನು ಸರಿಪಡಿಸದೆ ಸಹನೀಯವಾಗಿರಬಹುದಾದ ನೋವು ಅನನುಕೂಲತೆಗಳನ್ನು ಸಹಿಸಿಕೊಂಡು ಉದಾಸೀನದಿಂದ ಬಹುಕಾಲ ಇದ್ದುಬಿಟ್ಟರೆ ಅವು ಹಾಗೇ ಸೆಟೆದುಕೊಂಡು ಕ್ರಮೇಣ ನರಗಳಿಗೋ ರಕ್ತನಾಳಗಳಿಗೋ ಘಾತ ಉಂಟಾಗಿ ಕೈಬೆರಳುಗಳನ್ನು ಚಲಿಸುವ ಮಾಂಸಖಂಡಗಳು ನಶಿಸಿಹೋಗುತ್ತವೆ. ನರ, ರಕ್ತ ನಾಳಗಳ ಹಸ್ತದಲ್ಲಿ ಅಥವಾ ತೋಳಿನಲ್ಲಿ ಸಂಭವಿಸಿದರೂ ಕೈಮಾಂಸಗಳು ಕ್ರಮೇಣ ಶಿಥಿಲಗೊಂಡು ಬೆರಳುಗಳು ಕೊಕ್ಕೆಯಂತೆ ಮಡಚಿಕೊಂಡು, ನೀಡುವುದಕ್ಕಾಗದೆ ಸುತ್ತಮುತ್ತಲಿನ ಸಾಮಾನುಗಳಿಗೆ ಸಿಕ್ಕಿಹಾಕಿಕೊಳ್ಳುವಂತಾಗಿ ತೊಂದರೆ ಆಗಬಹುದು.

ಕೈಯ ಚರ್ಮ, ಸ್ನಾಯುಗಳು, ಮೂಳೆ ಕೀಲು ನರಗಳು ಯಾವುದರಲ್ಲಿಯೂ ಕೈ ರೋಗಗಳು ಕಾಣಿಸಿಕೊಳ್ಳಬಹುದು. ಕೆಲವು ಸ್ಥಾನಿಕವಾಗಿದ್ದರೆ ಕೆಲವು ಹರಡಿಕೊಳ್ಳುವ ರೀತಿಯವು. ಕೆಲವು ಅಣುಜೀವಿ ಆವೃತವಾಗಿ ಕೀತುಗೊಂಡು ಅಂತ್ಯ ಪರಿಣಾಮವನ್ನುಂಟು ಮಾಡಿದರೆ, ಸಂಧಿವಾತ, ಗೌಟ್, ಕೈಮೂಳೆಗಳ ಕ್ಷಯ, ಸೈರಿಂಗೋ ಮೈಯೇಲಿಯ ಮುಂತಾದ ಕೆಲವು ಖಚಿತವಾಗಿ ಕಾರಣವೇ ಗೊತ್ತಿಲ್ಲದೆ ಕಾಲಾನುಕ್ರಮದಲ್ಲಿ ಕೈಯ ಚಲನೆಯನ್ನು ಕುಂದಿಸುತ್ತವೆ. ಚಲನನಾಶದಿಂದ ಕೈಬೆರಳುಗಳು ಕ್ರಮೇಣ ಸೆಟೆದುಕೊಂಡು ಕೈ ನಿಷ್ಪ್ರಯೋಜಕವಾಗುತ್ತದೆ. ಅಥವಾ ಮೇಲೆ ಹೇಳಿದ ಸ್ಥಿತಿಗಳಲ್ಲಿ ಸಾಮಾನ್ಯವಾಗಿ ರೋಗದಿಂದ ಪೀಡಿತವಾದ ಕೀಲುಗಳೆಡೆಯಲ್ಲಿ ಸ್ನಾಯುಗಳು ಯಾವಾಗಲೋ ಇದ್ದಕ್ಕಿದ್ದಂತೆ ಕಿತ್ತುಹೋಗಿ ಬೆರಳುಗಳ ಚಲನೆ ನಾಶವಾಗಬಹುದು. ಉಗುರುಕಣ್ಣಿನಲ್ಲಿ ಆದ ಅಗಣನೀಯ ಗಾಯ ಕೀತುಗೊಳ್ಳುವುದರಿಂದ ಉಗುರುಸುತ್ತು ಬರುತ್ತದೆ. ಸಾಮಾನ್ಯವಾಗಿ ಅದು ವಾಸಿಯಾಗಿ ಹೊಸ ಉಗುರು ಹುಟ್ಟಿ ಕೈ ಸಹಜಕ್ರಿಯೆಯನ್ನು ಪಡೆಯುವುದಾದರೂ ಕೆಲವುವೇಳೆ ಅದು ವ್ಯಾಪಿಸಿ ಕೈ ಊನವಾಗುವಷ್ಟು ಅಗಾಧವಾಗುವುದೂ ಉಂಟು. ಗಣಿಸಬೇಕಾದ ಇನ್ನೊಂದು ಮುಖ್ಯ ಪರಿಸ್ಥಿತಿ ಎಂದರೆ ಸ್ನಾಯುವಿನ ರೋಗ. ಸ್ನಾಯುವಿನ ಸುತ್ತ ಚೀಲದಲ್ಲಿ ಕೀವು ತುಂಬಿಕೊಂಡು ಕೈಚಲನೆಗೆ ಅವಕಾಶವಾಗದೆ ಇರಬಹುದು. ಚಿಕಿತ್ಸೆ ಮಾಡದೆ ಬಿಟ್ಟರೆ ಇದರಿಂದಲೂ ಕೈ ಊನವಾಗುತ್ತದೆ. ಚರ್ಮ, ಮಾಂಸ, ಮೂಳೆ, ನರಗಳಲ್ಲಿ ದುರ್ಮಾಂಸ ಬೆಳೆದು ಆ ಗಡ್ಡೆಯ ಪರಿಣಾಮವಾಗಿ ಕೈ ಊನವಾಗಬಹುದು. ವಿಕೃತಿಗೊಳ್ಳಬಹುದು, ಇಲ್ಲವೆ ದುರ್ಬಲವಾಗಬಹುದು. ಗೌಟ್ ಎಂಬ ರೋಗದಲ್ಲಿ ಕೈಬೆರಳುಗಳ ಕೀಲುಗಳಲ್ಲಿ ಯೂರಿಕ್ ಆಮ್ಲದ ಹರಳುಗಳು ಜಮಾವಣೆಯಾಗಿ ಕೀಲು ವಿರೂಪಗೊಂಡು ಕೈ ನಿರುಪಯುಕ್ತವಾಗುತ್ತದೆ. ಕೆಲವು ಹೃದ್ರೋಗಗಳಲ್ಲಿ ಕೈಬೆರಳುಗಳ ತುದಿಗಳು ಅಗಲವಾಗಿಯೂ ದಪ್ಪವಾಗಿಯೂ ಮಾರ್ಪಾಡಾಗುತ್ತವೆ. ಆದರೆ ಇದರಿಂದ ಕೈಯ ಉಪಯುಕ್ತತೆಗೆ ಏನೂ ಕುಂದು ಇರುವುದಿಲ್ಲ. ಕೈಯಲ್ಲಿ ಸ್ವತಃ ಯಾವ ರೋಗ, ಊನ, ದುರ್ಬಲತೆ ಇಲ್ಲದಿದ್ದರೂ ಕೈಯ ಮಣಿಕಟ್ಟು, ಮೊಳಕೈ ಕೀಲುಗಳು ರೋಗದಿಂದ ಅಥವಾ ಅಪಘಾತದಿಂದ ವಿರೂಪಗೊಂಡಿದ್ದರೆ ಕೈ ಹೆಚ್ಚು ಕಡಿಮೆ ದುರ್ಬಲವಾಗಿರುತ್ತದೆ. ಪಾರ್ಶ್ವವಾಯು, ಪೋಲಿಯೋಮೈಲಿಟಿಸ್ (ಮಕ್ಕಳ ಸೆಳವುರೋಗ) ಮುಂತಾದ ರೋಗಗಳಲ್ಲಿ ಕೈಯನ್ನು

ಚಲಿಸುವ ಮಾಂಸಖಂಡಗಳಿಗೆ ನಿರ್ದೇಶನ ಪೂರ್ಣವಾಗಿ ತಪ್ಪಿ ಅವು ಕ್ರಮೇಣ ಶಿಥಿಲಗೊಂಡು ಕೈಯ ಆಕಾರ, ಕ್ರಿಯಾಶಕ್ತಿ ಕುಂದಿ ಕೈ ಊನ ಆಗಬಹುದು. ಇಂಥ ಸನ್ನಿವೇಶಗಳಲ್ಲಿ ಶಸ್ತ್ರಚಿಕಿತ್ಸೆಯಿಂದ ಮಾಂಸಖಂಡಗಳಿಗೆ ನರನಿರ್ದೇಶನವನ್ನು ಒದಗಿಸಿ ಮತ್ತು ಮಾಂಸಖಂಡಗಳನ್ನು ಸತತ ಸಾಧನೆಯಿಂದ ಪ್ರಚೋದಿಸಿ ಗುಣಪಡಿಸಲು ಪ್ರಯತ್ನಿಸಲಾಗುತ್ತದೆ. ಖಚಿತ ಕಾರಣವೇ ತಿಳಿಯದೆ ಮಧ್ಯವಯಸ್ಕರಲ್ಲಿ ಬೆರಳುಗಳು ಕ್ರಮೇಣ ಮಡಚಿಕೊಂಡು ಸೇದಿಹೋಗಬಹುದು. ಇದನ್ನು ಡ್ಯೂಪೈಟ್ರೆನ್ನಿನ ಕಂಟ್ರಾಕ್ಚರ್ (ಸೆಳವು) ಎನ್ನುತ್ತಾರೆ. ಇದೇ ರೀತಿಯ ಸೆಳವು ಬೇರೆ ಯಾವುದಾದರೂ ಕಾರಣದಿಂದ ಬಹುಕಾಲ ಕೈಯನ್ನು ಚಲನೆಯೇ ಇಲ್ಲದೆ ಬಿಟ್ಟಿದ್ದರೂ ಕಂಡುಬರುತ್ತದೆ.

ಕೈರೋಗಗಳಿಗೆ ಊನಗಳಿಗೆ ಸಂದರ್ಭಾನುಸಾರ ಶಸ್ತ್ರಚಿಕಿತ್ಸೆಯನ್ನು ಮಾಡಬೇಕಾಗುತ್ತದೆ. ಕೈಯ ವ್ಯಾಧಿ ಬಹುಕಾಲಿಕವಾಗಿ ಯಾತನೆ ಕೊಡುತ್ತಿದ್ದರೆ, ಹರಡಿಕೊಳ್ಳುವ ಅಥವಾ ಪ್ರಾಣಾಂತಕವಾಗುವ ಸಂಭವವಿದ್ದರೆ, ಚಿಕಿತ್ಸೆಯಿಂದ ಅನನುಕೂಲತೆ ಕಡಿಮೆ ಆಗಿ ಕೈಗಳ ಕಾರ್ಯ ಸಾಮರ್ಥ್ಯ ಉತ್ತಮಗೊಳ್ಳುವಂತಿದ್ದರೆ, ಶಸ್ತ್ರ ಚಿಕಿತ್ಸೆಯನ್ನು ಯೋಚಿಸಬಹುದು. ಬರೀ ಆಕಾರಪುನರ್ನಿರ್ಮಾಣಕ್ಕೆ ಮಾತ್ರ ಶಸ್ತ್ರ ಚಿಕಿತ್ಸೆ ಮಾಡಬಾರದು. ಮೊದಲಿಗೆ ಶಸ್ತ್ರ ಚಿಕಿತ್ಸೆಯಿಂದ ಊನವಾದ ಕೈಗಳ ಕಾರ್ಯ ಸಾಮರ್ಥ್ಯವನ್ನು ಉತ್ತಮಗೊಳಿಸುವುದು ಅಷ್ಟೇನೂ ಫಲಕಾರಿಯಾಗುತ್ತಿರಲಿಲ್ಲ. ಈಚೆಗೆ ಅಣುಜೀವಿ ನಿರೋಧಕ ಮದ್ದುಗಳ ಉಪಯೋಗದಿಂದ ಮತ್ತು ನೂತನ ಚಿಕಿತ್ಸಾ ವಿಧಾನಗಳಿಂದ ಶಸ್ತ್ರಚಿಕಿತ್ಸೆ ಗಣನೀಯವಾಗಿ ಫಲಕಾರಿಯಾಗಿದೆ. ಶಸ್ತ್ರಚಿಕಿತ್ಸೆಯಿಂದ ಗುಣಪಡಿಸಿದ ಕೈಯ ಉಪಯೋಗವಿಧಾನವನ್ನು ಆದಷ್ಟು ಬೇಗನೆ ಪ್ರಾರಂಭಿಸಿ ಮಾಡಿಸಬೇಕಾದದ್ದು ಅಗತ್ಯ. ಕೈಗಾಯ ವಾಸಿಯಾಗಲಿ ಎಂದು ಕೈಗೆ ಅತಿಯಾದ ವಿಶ್ರಾಂತಿ ಕೊಟ್ಟರೆ ಕೈಬೆರಳುಗಳೂ ಸೆಟೆದುಕೊಂಡು ನಿಷ್ಪ್ರಯೋಜಕವಾಗಬಹುದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಕೈಊನಗಳಿಗೆ ಶಸ್ತ್ರಚಿಕಿತ್ಸೆ ಸಾಧ್ಯವಿಲ್ಲದೆ ಇದ್ದಾಗ ಕೃತಕ ಕೈಗಳ ಅಳವಡಿಕೆಯನ್ನು ಯೋಚಿಸಬಹುದು. (ಎಸ್.ಆರ್.ಆರ್)

**ಕೈಯೋಟ್ ಸಿಡಿತ :** ಸುರಂಗ ಸಿಡಿತ ಪದ್ಧತಿಯ ಹೆಸರು. ಗುಡ್ಡಗಾಡು ಪ್ರದೇಶದಲ್ಲಿ ಸಿಡಿತ ರಂಧ್ರಗಳನ್ನು ಭೂ ಮೇಲ್ಮೈಯಿಂದ ಕೊರೆಯಲು ಅಸಾಧ್ಯವಾದಾಗ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಗುಡ್ಡದ ಒಂದು ಪಾರ್ಶ್ವದಿಂದ ಕೈಯೋಟ್ ರಂಧ್ರಗಳನ್ನು ತೋಡಿ ಸಿಡಿತದ ಕೋಣೆಗೆ ಸೇರಿಸಲಾಗುತ್ತದೆ. ನಿಯೋಜಿತ ಸಿಡಿತದ ಕೋಣೆಯಲ್ಲಿ ಬಂದೂಕು ಸಿಡಿಮದ್ದನ್ನು ಡಬ್ಬಿಗಳಲ್ಲಿ ತುಂಬಿ ಮುಚ್ಚಿ ಇಡುತ್ತಾರೆ. ಸಣ್ಣ ಸಿಡಿಮದ್ದು ತೋಟಾಗಳನ್ನು ಸಹ ಇದೇ ರೀತಿ ಇಡುವುದುಂಟು. ಇವುಗಳ ಮಧ್ಯೆ ದೊಡ್ಡ ಮೊತ್ತದಲ್ಲಿ ಸಿಡಿಮದ್ದು ತೋಟಾಗಳನ್ನು ಅಲ್ಲಲ್ಲಿ ಚೆಲ್ಲಿರುತ್ತಾರೆ. ಅನಂತರ ಸ್ಫೋಟಕವನ್ನು ಒಳಗೊಂಡ ಎರಡು ತೋಟಾಗಳನ್ನು ಸಿಡಿಮದ್ದಿನ ರಾಶಿಯಲ್ಲಿಟ್ಟು ಪ್ರವೇಶ ಸುರಂಗವನ್ನು ಭದ್ರವಾಗಿ ಪ್ರತಿಬಂಧಿಸುತ್ತಾರೆ. ಈ ಪದ್ಧತಿಯನ್ನು ಅನುಸರಿಸುವಾಗ ಸ್ಫೋಟಕದ ವಿದ್ಯುತ್ ತಂತಿಯನ್ನು ಬಹು ಜಾಗರೂಕತೆಯಿಂದ ರಕ್ಷಿಸಬೇಕು. ಕೆಲವು ವೇಳೆ ಎರಡು ಬೇರೆ ಬೇರೆ ವಿದ್ಯುತ್ ಪ್ರವಾಹ ಮಾರ್ಗಗಳನ್ನು ಏರ್ಪಡಿಸುವುದುಂಟು. ಇದರಿಂದ ಅತಿ ಎತ್ತರವಾದ ಪಾರ್ಶ್ವಗಳನ್ನು ಸಿಡಿಸಬಹುದು. (ಟಿ.ಟಿ.)

**ಕೈರಾಪ್ಟರ :** ಸ್ತನಿ (ಮ್ಯಾಮೇಲಿಯ) ವರ್ಗದ ಒಂದು ಗಣ. ಹಕ್ಕಿಗಳಂತೆ ವಾಯುಮಂಡಲದಲ್ಲಿ ಹಾರುವ ಸಾಮರ್ಥ್ಯವುಳ್ಳ ಬಾವಲಿಗಳನ್ನು ಈ ಗಣ ಒಳಗೊಂಡಿದೆ. ಬೇರಾವ ಸ್ತನಿಗಳಲ್ಲೂ ಈ ಗುಣ ಕಂಡುಬರುವುದಿಲ್ಲ. ಬಾವಲಿಗಳು ಸಾಧಾರಣವಾಗಿ ಸಣ್ಣ ಗಾತ್ರದ ಜೀವಿಗಳು. ದೇಹದ ಮುಂಭಾಗದಲ್ಲಿಯ ಉಪಾಂಗಗಳು (ಕೈಗಳು) ರೆಕ್ಕೆಗಳಾಗಿ ಮಾರ್ಪಾಡಾಗಿರುವುದೆ ಬಾವಲಿಗಳ ವೈಶಿಷ್ಟ್ಯ. ತೋಳಿನ ಮೂಳೆಗಳಿಗಿಂತ ಮುಂಗೈ ಮೂಳೆಗಳು ಉದ್ದವಾಗಿರುವುದೂ ಮುಂಗೈಯಲ್ಲಿ ಬಲವಾದ ರೇಡಿಯಸ್ ಮೂಳೆಯಿರುವುದೂ ಅಲ್ನ ಮೂಳೆ ಅಲಗಿನಂತಿದ್ದು ಮೊಣಕೈ ಕೀಲಿಗೆ ಒಂದುಗೂಡಿರುವುದೂ ಮಣಿಕಟ್ಟಿನ ಮೂಳೆಗಳು ಸಣ್ಣಗಿರುವುದೂ ಸ್ಕೇಫಾಯಿಡ್, ಲೂನಾರ್ ಮತ್ತು ಕ್ಯುನಿಫಾರ್ಮ್ ಮೂಳೆಗಳು ಒಟ್ಟುಗೂಡಿರುವುದೂ ಇತರ ಮುಖ್ಯ ಲಕ್ಷಣಗಳು. ಕೈ ಮತ್ತು ಬೆರಳುಗಳಲ್ಲಿರುವ ಮೂಳೆಗಳು ತೆಳುವಾಗಿವೆ ಹಾಗೂ ಉದ್ದವಾಗಿ ಚಾಚಿಕೊಂಡಿವೆ. ಆದರೆ ಮೊದಲನೆಯ ಬೆರಳು (ಹೆಬ್ಬೆಟ್ಟು) ಮೋಟಾಗಿದೆ. ಇದರ ತುದಿಯಲ್ಲಿ ಚಪ್ಪಟೆಯಾದ ಮತ್ತು ಕೊಕ್ಕೆಯಂಥ ಉಗುರು ಇದೆ. ರೆಕ್ಕೆಯ ರಚನೆಯಲ್ಲಿ ಹೆಬ್ಬೆರಳು ಪಾಲುಗೊಳ್ಳುವುದಿಲ್ಲ. ಇದು ಆಸರೆಯನ್ನು ಹಿಡಿದುಕೊಳ್ಳುವುದಕ್ಕೆ ಮಾತ್ರ ನೆರವಾಗುತ್ತದೆ. ಇತರ ನಾಲ್ಕು ಬೆರಳುಗಳು ಉದ್ದವಾಗಿದ್ದು ರೆಕ್ಕೆಯನ್ನು ಬಿಚ್ಚಿ ಅಗಲ ಮಾಡಲು ಸಹಾಯಕವಾಗಿವೆ. ಇವುಗಳ ತುದಿಯಲ್ಲಿ ಉಗುರುಗಳಿಲ್ಲ. ಎರಡನೆಯ ಮತ್ತು ಐದನೆಯ ಬೆರಳುಗಳಲ್ಲಿಯ ಮೂಳೆಗಳ ಸಂಖ್ಯೆ ಮೂರು ಮತ್ತು ನಾಲ್ಕನೆಯ ಬೆರಳುಗಳಲ್ಲಿಯ ಸಂಖ್ಯೆಗಿಂತ ಕಡಿಮೆ.

ತೋಳು ಮತ್ತು ಬೆರಳುಗಳ ನಡುವೆ ಹರಡಿಕೊಂಡಂತಿರುವ ತೆಳುವಾದ ಪೊರೆಯೇ ರೆಕ್ಕೆ. ಇದು ಬೆನ್ನಿನ ಮತ್ತು ಹೊಟ್ಟೆಯ ಭಾಗದ ಚರ್ಮದ ಪಾರ್ಶ್ವರಚನೆ. ರೆಕ್ಕೆಪೊರೆತೋಳಿನ ಬಳಿ ಆರಂಭವಾಗಿ ಮುಂಗೈ ಅಂಚಿನಲ್ಲಿ ಮತ್ತು ಹೆಬ್ಬೆಟ್ಟಿನ ಬುಡದವರೆಗೆ ಹರಡಿ ಉದ್ದವಾಗಿ ಚಾಚಿರುವ ಬೆರಳುಗಳ ನಡುವೆ ಹಿಂಭಾಗದಲ್ಲಿ ಎರಡು ತೊಡೆಗಳ ಮಧ್ಯೆಯೂ ಹರಡಿರುತ್ತದೆ. ಕೆಲವು ಬಗೆಯ ಬಾವಲಿಗಳಲ್ಲಿ ರೆಕ್ಕೆ ಬಾಲವನ್ನೂ ಒಳಗೊಂಡಿರುತ್ತದೆ. ರೆಕ್ಕೆ ಪೊರೆಯಲ್ಲಿ ಎರಡು ಪದರಗಳಿವೆ. ಇವೆರಡರ ಮಧ್ಯೆ ಸಂಯೋಜಕ ಅಂಗಾಂಶವಿದ್ದು ಅದರ ಮೂಲಕ ರಕ್ತನಾಳಗಳ ಮತ್ತು ನರಗಳ ಕವಲುಗಳ ರೆಕ್ಕೆಯೊಳಗೆಲ್ಲ ಪಸರಿಸುತ್ತವೆ. ಮೊಣಕಾಲಿನ ಕೀಲು ಮುಂದಕ್ಕೆ ಮಡಿಚಿ ಕೊಂಡಿರುವುದು ಬಾವಲಿಗಳ ಇನ್ನೊಂದು ವಿಶೇಷಲಕ್ಷಣ. ಇದರಿಂದ ಬಾವಲಿಗಳು ತಲೆಕೆಳಕಾಗಿ ನೇತಾಡುವುದಕ್ಕೂ ತಲೆ ಭಾಗವನ್ನು ಕಾಲ್ಬೆರಳುಗಳ ಬಳಿ ಹತ್ತಿರ ತರುವುದಕ್ಕೂ ಸಾಧ್ಯವಾಗಿದೆ.

ಮೆಗಡರ್ಮ ಬಾವಲಿ

ಹಿಂಗಾಲಿನ ಮೂಳೆಗಳು ತೆಳು ಮತ್ತು ಉದ್ದವಾಗಿ ಇದ್ದರೂ ಮುಂಗೈಯ ಮೂಳೆಗಳಷ್ಟು ಉದ್ದವಾಗಿಲ್ಲ. ಮೊಣಕಾಲಿನಲ್ಲಿ ಟಿಬಿಯ ಮೂಳೆ ಮುಖ್ಯವಾದುದು ಫಿಬುಲ ಮೂಳೆ ಬಹಳ ಕಿರಿದಾಗಿದೆ. ಪಾದದಲ್ಲಿ ಸಮ ಉದ್ದದ ಐದು ಸಣ್ಣ ಬೆರಳುಗಳಿವೆ. ಪ್ರತಿಯೊಂದಕ್ಕೂ ಕೊಕ್ಕೆಯಂತಿರುವ ಉಗುರಿದೆ.

ಸ್ಕೋಟೊಫೈಲಸ್ ಬಾವಲಿ–ಭಾರತದಲ್ಲಿ ಸಾಮಾನ್ಯ

ಕಾಲಿನ ಹರಡಿನ ಒಳಭಾಗದಲ್ಲಿ ಮೃದ್ವಸ್ಥಿಯಿಂದ ಕೂಡಿದ ಕಾಲ್ಕರ್ ಎಂಬ ಕಡ್ಡಿ ಆಕಾರದ ಸಣ್ಣ ರಚನೆಯಿದೆ. ಇದು ಕಾಲಿನ ಮಧ್ಯದಲ್ಲಿರುವ ಚರ್ಮದ ಪೊರೆಯ ಅಂಚಿನೊಂದಿಗೆ ಸೇರಿ ಅದು ಗಡುಸಾಗಿರುವುದಕ್ಕೆ ಸಹಾಯಕವಾಗಿದೆ. ತೊಡೆಯ ಮೂಳೆಯ (ಫೀಮರ್) ಕೀಲು ಆಡುವ ಕುದುರು ಭಾಗ (ಅಸಿಟ್ಯಾಬ್ಯುಲಮ್) ಮೇಲ್ಭಾಗದಲ್ಲಿ ಅಥವಾ ಕೆಳಭಾಗದಲ್ಲಿ ಇಲ್ಲವೆ ಎರಡು ಭಾಗಗಳಲ್ಲಿಯೂ ಅಪೂರ್ಣವಾಗಿ ರೂಪುಗೊಂಡಿದೆ.

ಬಾವಲಿಯ ಅಸ್ಥಿಪಂಜರವೂ ಹಾರುವಿಕೆಗೆ ಅನುಕೂಲವಾಗುವಂತೆ ಮಾರ್ಪಾಡಾಗಿದೆ. ಮುಂಭಾಗದ ಪಕ್ಕೆಲುಬುಗಳು ಚಪ್ಪಟೆಯಾಗಿವೆ. ಕ್ಲಾವಿಕಲ್ (ಕಂಠ ಮೂಲಾಸ್ಥಿ) ಎದೆ ಮೂಳೆಯ ಮೇಲ್ಭಾಗವನ್ನೂ ಭುಜದ ಕೀಲನ್ನೂ ಒಟ್ಟುಗೂಡಿಸುತ್ತದೆ. ಈ ರಚನೆಗಳ ಒಟ್ಟು ಕೂಟದಿಂದ ತೋಳಿಗೆ ದೃಢತೆ ಬರುವುದಲ್ಲದೆ ತೋಳನ್ನು ರೆಕ್ಕೆಯಂತೆ ಉಪಯೋಗಿಸುವುದಕ್ಕೂ ಆಗುತ್ತದೆ. ಎದೆಯ ಮೂಳೆಯ ಮುಂದಿನ ಭಾಗದಲ್ಲಿ T ಆಕಾರದ ಪ್ರೀಸ್ಟರ್ನಮ್ ಅಥವಾ ಮೆನೂಬ್ರಿಯಂ ಎಂಬುದೂ, ಮಧ್ಯಭಾಗ,

ದೇಹಭಾಗ ಮತ್ತು ಹಿಂಭಾಗದಲ್ಲಿ ಮೊಟಕಾದ ಮತ್ತು ತಟ್ಟೆಯಂತಿರುವ ಜೆಫಿಸ್ಟರ್‌ನಮಿನ ಮೂರು ವಿಭಾಗಗಳೂ ಇವೆ. ಎದೆಯ ಮೂಳೆಯ ಕೆಳಭಾಗದಲ್ಲಿ ಉದ್ದಕ್ಕೂ



ರಕ್ತಹೀರುವ ಡೆಸ್ಮೋಡಸ್ (ವ್ಯಾಂಪೈರ್) ಬಾವಲಿ

ಕೀಲ್ ಮೂಳೆ ಇದೆ. ಬಾವಲಿಗೆ ಹಾರಲು ನೆರವಾಗುವ ಪೆಕ್ಟೊರಲ್ ಮಾಂಸಖಂಡಗಳು ಇದಕ್ಕೆ ಅಂಟಿಕೊಂಡಿವೆ.

ಬಾವಲಿಗಳ ಹಿಂಗಾಲುಗಳು ಮತ್ತು ಸೊಂಟಕಟ್ಟು ದುರ್ಬಲವಾಗಿವೆ. ಆದರೂ ಬಾವಲಿ ನಡೆಯುವಾಗ ಮತ್ತು ಆಸರೆಗೆ ತಗಲಿಕೊಂಡು ನೇತಾಡುವಾಗ ಇವು ಸಹಕರಿಸುತ್ತವೆ. ತಾವು ಬಚ್ಚಿಟ್ಟುಕೊಂಡಿರುವ ಸ್ಥಳಗಳಲ್ಲಿ ಬಾವಲಿಗಳು ಚುರುಕಿನಿಂದ ಚಲಿಸಬಲ್ಲವು. ಇತರ ಸ್ತನಿಗಳಲ್ಲಿ ಹಿಂಗಾಲುಗಳಿಗೆ ಇರುವ ಪ್ರಮುಖತೆ ಇವುಗಳಲ್ಲಿಲ್ಲ. ಮುಂದಿನ ಉಪಾಂಗಗಳು ಹಾರಾಟಕ್ಕೆ ಅನುಕೂಲವಾಗುವಂತೆ ಮಾರ್ಪಾಡಾಗಿರುವುದೇ ಬಹುಶಃ ಇದಕ್ಕೆ ಕಾರಣ. ಸೊಂಟಭಾಗದ ಕೆಲವು ಕಶೇರುಮಣಿಗಳು ಒಟ್ಟಗೂಡಿವೆಯಲ್ಲದೆ ಇದರ ಎಡ ಮತ್ತು ಬಲ ಭಾಗಗಳು ಒಟ್ಟುಗೂಡಿದ ಕಶೇರುಮಣಿಗಳೊಂದಿಗೆ ಸೇರಿವೆ. ಹೆಣ್ಣು ಬಾವಲಿಗಳಲ್ಲಿ ಎಡ ಮತ್ತು ಬಲಭಾಗಗಳು ಕೆಳಕ್ಕೆ ಕೂಡುವೆಡೆಯಲ್ಲಿ ಅಸ್ಥಿಬಂಧನವಿಲ್ಲ. ಬಾವಲಿಗಳ ತಲೆಬುರುಡೆಯ ರಚನೆಯೂ ವಿಶಿಷ್ಟವಾಗಿದೆ. ಕೆನ್ನೆಯ ಕಮಾನು ತೆಳುವಾಗಿದೆ. ಹೊರಕಿವಿಯ ಎಲುಬಿನ ಕೋಳವೆಯ ಭಾಗ ತಲೆಬುರುಡೆಯ ಇತರ ಮೂಳೆಗಳೊಂದಿಗೆ ಸ್ವಲ್ಪ ಸಡಿಲವಾಗಿ ಕೂಡಿಕೊಂಡಿದೆ. ಮೇಲ್ದವಡೆಯ ಮುಂಭಾಗದಲ್ಲಿ ಹಲ್ಲುಗಳಿರುವ ಪ್ರೀಮ್ಯಾಕ್ಸಿಲ ಮೂಳೆಗಳು ಸ್ವಲ್ಪ ಕ್ಷೀಣವಾಗಿವೆ ಹಾಗೂ ಇತರ ಮೂಳೆಗಳಿಗೆ ಸ್ವಲ್ಪ ಸಡಿಲವಾಗಿ ಅಂಟಿವೆ. ಪ್ರೀಮ್ಯಾಕ್ಸಿಲಗಳ ಮುಂಭಾಗದಲ್ಲಿ ಉದ್ದವಾದ ಮತ್ತು ಆಳವಾದ ಒಂದು ಕಚ್ಚು (ಕ್ಲೆಫ್ಟ್) ಇದೆ.

ಪ್ರಾಚೀನ ಬಾವಲಿಗಳ ಬಾಲ ಉದ್ದವಾಗಿಯೂ ಕಾಲುಗಳ ಮಧ್ಯೆ ಇರುವ ರೆಕ್ಕೆಪೊರೆಯಿಂದ ಬೇರೆಯಾಗಿಯೂ ಇರುತ್ತದೆ. ದಕ್ಷಿಣ ಪೆಸಿಫಿಕ್ ಸಾಗರದಲ್ಲಿಯ ದ್ವೀಪಗಳಲ್ಲಿ ಜೀವಿಸುವ ನೋಟಾಪ್ಟೆರಿಸ್ ಮತ್ತು ರೈನೊಫೋಮ ಬಾವಲಿಗಳಲ್ಲಿ ಬಾಲ ಹಿಂಗಾಲಿನಷ್ಟೇ ಉದ್ದವಾಗಿದೆ. ಬಾಲ ಇಲ್ಲದಿರುವ ಅಥವಾ ಇದ್ದರೂ ಮೋಟಾಗಿರುವ ಬಾವಲಿಗಳೂ ಇವೆ. ಎಂಬಲೊನ್ಯೂರಿಡೀ ಗುಂಪಿನ ಬಾವಲಿಗಳಲ್ಲಿ ಬಾಲದ ಮುಂದಿನ ಭಾಗ ರೆಕ್ಕೆಪೊರೆಯಲ್ಲಿ ಅಡಗಿದ್ದು ಹಿಂದಿನ ಭಾಗ ಮಾತ್ರ ಹೊರಚಾಚಿದೆ.

ಬಾವಲಿಗಳು ಸಾಧಾರಣವಾಗಿ ಹಿಂಗಾಲುಗಳಲ್ಲಿಯ ಉಗುರುಗಳ ಸಹಾಯದಿಂದ ಆಸರೆಗೆ ತಗುಲಿಕೊಂಡು ನೇತಾಡುತ್ತಿರುತ್ತವೆ. ಆದರೆ ಕೈರಾಪ್ಟಿಡೀ ಮತ್ತು ಮೈಜೊಪೋಡಿಡೀ ಕುಟುಂಬಗಳಿಗೆ ಸೇರಿದ ಬಾವಲಿಗಳು ಮುಂಗೈ ಹೆಬ್ಬೆಟ್ಟಿನಲ್ಲಿ ಮತ್ತು ಕಾಲಿನ ಬುಡದಲ್ಲಿ ಕಾಣಬರುವ ತಟ್ಟೆಗಳಂಥ ರಚನೆಗಳ ಸಹಾಯದಿಂದ ನೇತಾಡುತ್ತವೆ.

ಬಾವಲಿಗಳಲ್ಲಿ ಸಸ್ಯಾಹಾರಿಗಳೂ ಉಂಟು, ಮಾಂಸಾಹಾರಿಗಳೂ ಉಂಟು. ಸಸ್ಯಾಹಾರಿ ಬಾವಲಿಗಳ (ಮೆಗಕೈರಾಪ್ಟರ ಉಪಗಣ) ಪ್ರಧಾನ ಆಹಾರ ಹಣ್ಣುಹಂಪಲು. ಕೆಲವು ಬಾವಲಿಗಳು ಪರಾಗವನ್ನೂ ಮಕರಂದವನ್ನೂ ಸೇವಿಸುವುದುಂಟು. ಮೈಕ್ರೊಕೈರಾಪ್ಟರ ಉಪಗಣಕ್ಕೆ ಸೇರಿದ ಬಾವಲಿಗಳೆಲ್ಲವೂ ಮಾಂಸಾಹಾರಿಗಳು. ಈ ಉಪಗಣದಲ್ಲಿಯ ಮಿಸ್ಟಸಿನಿಡೀ ಮತ್ತು ಮೆಗಡರ್ಮಿಡೀ ಕುಟುಂಬದವು ಕೀಟಗಳನ್ನೂ ಸಣ್ಣಪುಟ್ಟ ಕಶೇರುಕಗಳನ್ನೂ ತಿನ್ನುತ್ತವೆ. ನಾಕ್ಟಿಲಿಯಾನಿಡೀ ಕುಟುಂಬಕ್ಕೆ ಸೇರಿದ ಬಾವಲಿಗಳು ಮೀನುಗಳನ್ನು ಭಕ್ಷಿಸುತ್ತವೆ. ಡೆಸ್ಮೊಡಾಂಟಿಡೀ ಕುಟುಂಬದ ಬಾವಲಿಗಳು ಜೀವಂತ ಸ್ತನಿಗಳ (ಮೇಕೆ, ಜಿಂಕೆ, ಇತ್ಯಾದಿ) ರಕ್ತವನ್ನು ಹೀರುತ್ತವೆ. ಇವಕ್ಕೆ ವ್ಯಾಂಪೈರ್ ಬಾವಲಿಗಳೆಂದು ಹೆಸರಿದೆ.

ಆಹಾರಸೇವನೆಯ ಕ್ರಮವನ್ನನುಸರಿಸಿ ಬಾವಲಿಗಳ ಹಲ್ಲುಗಳ ಸಂಖ್ಯೆ ವ್ಯತ್ಯಾಸವಾಗುತ್ತದೆ. ಸಾಮಾನ್ಯವಾಗಿ ಈ ಸಂಖ್ಯೆ 38ನ್ನು ಮೀರುವುದಿಲ್ಲ. ಮೇಲ್ದವಡೆಯಲ್ಲಿ 4 ಬಾಚಿಹಲ್ಲುಗಳು, 2 ಕೋರೆಹಲ್ಲುಗಳು, 6 ಮುಂದವಡೆ ಹಲ್ಲುಗಳು ಮತ್ತು 6 ಹಿಂದವಡೆ ಹಲ್ಲುಗಳಿವೆ. ಕೆಳದವಡೆಯಲ್ಲಿ ಇವು ಅನುಕ್ರಮವಾಗಿ 6, 2, 6 ಮತ್ತು 6 ಇವೆ.

ಕೀಟಾಹಾರಿ ಬಾವಲಿಗಳಲ್ಲಿ ಕೋರೆಹಲ್ಲುಗಳು ಉದ್ದವಾಗಿಯೂ ತುದಿಯಲ್ಲಿ ಬಹು ಮೊನಚಾಗಿಯೂ ಇವೆ. ಇದರಿಂದ ಇವು ಕೀಟಗಳನ್ನು ಹಿಡಿಯುವುದಕ್ಕೂ ಅವನ್ನು ಸಿಗಿಯುವುದಕ್ಕೂ ಸಹಾಯವಾಗುತ್ತದೆ. ಕೀಟಾಹಾರಿ ಬಾವಲಿಗಳ ಹಿಂದವಡೆ ಹಲ್ಲುಗಳು ಇನ್ಸೆಕ್ಟಿವೋರ ಗಣಕ್ಕೆ ಸೇರಿದ ಮೋಲ್ ಮತ್ತು ಸುಂಡಿಲಿಗಳ ಹಲ್ಲುಗಳನ್ನು ಹೋಲುವುದರಿಂದ ಬಾವಲಿಗಳಿಗೂ ಇನ್ಸೆಕ್ಟಿವೋರ ಗಣಕ್ಕೂ ಸಂಬಂಧವಿದೆಯೆಂದು ಭಾವಿಸಲಾಗಿದೆ.

ಹಣ್ಣುಹಂಪಲು ತಿನ್ನುವ ಫಿಲೊಸ್ಟೋಮಿಡೀ, ಟೀರೋಪಿಡೀ ಕುಟುಂಬಗಳಿಗೆ ಸೇರಿದ ಬಾವಲಿಗಳಲ್ಲಿ ದವಡೆಯ ಹಲ್ಲುಗಳು ವಸಡುಗಳ ಮೇಲೆ ಹೆಚ್ಚಿಗೆ ಎತ್ತರವಿರುವುದಿಲ್ಲ ಮತ್ತು ಇವುಗಳ ಮೇಲ್ಭಾಗ ಅಗಲವಾಗಿಯೂ ಚಪ್ಪಟೆಯಾಗಿಯೂ ಇದ್ದು ಆಹಾರವನ್ನು ಅರೆಯುವುದಕ್ಕೆ ಸಹಕಾರಿಯಾಗಿದೆ.

ಮಕರಂದವನ್ನು ಆಹಾರವಾಗಿ ಸೇವಿಸುವ ಗ್ಲಾಸೊಫೇಗ ಎಂಬ ಬಾವಲಿಗಳಲ್ಲಿ ಮುಸುಡು ಉದ್ದವಾಗಿದ್ದು ಕ್ಷಯಿಸಿದ ಹಲ್ಲುಗಳೂ ಬಹಳ ಉದ್ದವಾದ ಮತ್ತು ತೆಳುವಾದ ನಾಲಗೆಯೂ ಇವೆ. ನೀಳವಾದ ಈ ನಾಲಗೆಯಿಂದ ಹೂವಿನಲ್ಲಿರುವ ಮಕರಂದವನ್ನು ಇವು ಲೊಚಲೊಚ ನೆಕ್ಕುತ್ತವೆ. ಹಲ್ಲುಗಳು ಬೇಕಾಗಿಲ್ಲವಾದ್ದರಿಂದ ಇವು ಕ್ಷೀಣವಾಗಿವೆ. ಇದೇ ರೀತಿ ರಕ್ತಹೀರುವ ವ್ಯಾಂಪೈರ್ ಬಾವಲಿಗಳಲ್ಲೂ ಬಲು ಚಿಕ್ಕಗಾತ್ರದ ಹಲ್ಲುಗಳಿವೆ. ಇವುಗಳಲ್ಲಿ ಕೇವಲ 6 ಬಾಚಿಹಲ್ಲು, 4 ಕೋರೆಹಲ್ಲು, 6

ಫಲಭಕ್ಷಕ ಬಾವಲಿ

ಮುಂದವಡೆಹಲ್ಲು ಮತ್ತು 6 ಹಿಂದವಡೆಹಲ್ಲುಗಳಿವೆ. ಬಾಚಿಹಲ್ಲುಗಳು ಬಲುಚೂಪಾಗಿದ್ದು ಆಹಾರ ಪ್ರಾಣಿಗಳ ಚರ್ಮವನ್ನು ಕತ್ತರಿಸಿ ರಕ್ತ ಹೊರಬರುವಂತೆ ಮಾಡಲು ಅನುಕೂಲವಾಗಿವೆ.

ರೆಕ್ಕೆಪೊರೆ, ಬಾಯಿಯ ಸುತ್ತಣ ಭಾಗ ಮತ್ತು ಮೂಗಿನ ಹೊಳ್ಳೆ ಪ್ರದೇಶವನ್ನುಳಿದು ದೇಹದ ಉಳಿದ ಭಾಗದಲ್ಲೆಲ್ಲ ಮೃದುವಾದ ತುಪ್ಪಳದಿಂದ ಕೂಡಿದ ಕೂದಲಿನ ಹೊದಿಕೆಯಿದೆ.

ಬಾವಲಿಗಳ ಹೊರಗಿವಿಗಳು ಸಾಮಾನ್ಯವಾಗಿ ದೊಡ್ಡವು. ಕೆಲವು ಬಾವಲಿಗಳಲ್ಲಿ ಕಿವಿಗಳು ತಲೆ ಮತ್ತು ದೇಹದ ಉದ್ದದಷ್ಟಿರಬಹುದು. ಹೊರಗಿವಿಗಳು ಸಾಧಾರಣವಾಗಿ ತೆಳುವಾದ ಪೊರೆಯಂತಿವೆ ಮತ್ತು ಕೂದಲುಗಳಿಂದ ಆವೃತವಾಗಿಲ್ಲ. ಹೊರಗಿವಿಯ ಒಳಮೈಮೇಲೆ ಕಿವಿಯ ಬುಡದಿಂದ ಹೊರ ಅಂಚಿನವರೆಗೆ ಚಾಚಿರುವ ತೋಡುಗಳು, ದಿಂಡುಗಳು ಇವೆ. ಇವುಗಳ ಆಕಾರ, ರಚನಾಕ್ರಮ ಮತ್ತು ವ್ಯವಸ್ಥೆ ವಿವಿಧ ನಮೂನೆಗಳಾಗಿರುವುದರಿಂದ ಬಾವಲಿಗಳ ಜಾತಿ ಮತ್ತು ಪ್ರಭೇದಗಳನ್ನು ಗುರುತಿಸುವುದಕ್ಕೆ ಸಹಾಯಕವಾಗುವ ಅನೇಕ ಚಿಹ್ನೆಗಳಲ್ಲಿ ಈ ವ್ಯತ್ಯಾಸವೂ ಒಂದು. ವೆಸ್ಪರ್ಟೀಲಿಯಾನಿಡೀ ಕುಟುಂಬದ ಬಾವಲಿಗಳಲ್ಲಿ ಕಿವಿಯಲ್ಲಿ ಟ್ರೇಗಸ್ ಎಂಬ ದೊಡ್ಡ ದೊಡ್ಡ ಆಲೆ ಇದೆ. ರೈನೊಲೋಫಿಡೀ ಬಾವಲಿಗಳಲ್ಲಿ ಟ್ರೇಗಸ್ ಇಲ್ಲ. ಟ್ರೇಗಸ್‌ನಿಂದ ಉಪಯೋಗವೇನೆಂದು ಇನ್ನೂ ಸರಿಯಾಗಿ ತಿಳಿದಿಲ್ಲ. ಶ್ರವಣಾತೀತ ಶಬ್ದದ ಅಲೆಗಳನ್ನು ಗ್ರಹಿಸಿ ಅವುಗಳ ದಿಕ್ಕನ್ನು ಬಾವಲಿ ಅರಿಯಲು ಇದು ಸಹಕಾರಿಯಾಗಿದೆಯೆಂದು ಹೇಳಲಾಗಿದೆ.

ಕೆಲವು ಬಾವಲಿಗಳಲ್ಲಿ ವಿವಿಧ ಬಗೆಯ ನಾಸಿಕ ಪತ್ರಗಳಿವೆ. ಇವುಗಳ ಉಪಯೋಗ ಖಚಿತವಾಗಿ ಗೊತ್ತಿಲ್ಲ. ಬಾವಲಿ ಹಾರುವಾಗ ದೇಹವನ್ನು ಯಾವ ಪದಾರ್ಥಕ್ಕೂ ತಗುಲಿಸದಂತೆ ಹಾರುವ ಮತ್ತು ಹಾರುವ ದಿಕ್ಕಿನಲ್ಲಿ ಯಾವುದಾದರೂ ಅಡ್ಡಿಯಿದ್ದರೆ ಅದನ್ನು ದೂರದಿಂದಲೇ ತಿಳಿಯುವ ಸಾಮರ್ಥ್ಯಕ್ಕೆ ನಾಸಿಕಪತ್ರಗಳೇ ಕಾರಣ ಎಂದು ಅಭಿಪ್ರಾಯ ಪಡಲಾಗಿದೆ. ಈ ನಾಸಿಕ ಪತ್ರಗಳಿಂದಾಗಿ ಮಾನವ ಗುರುತಿಸಲು

ಸಾಧ್ಯವಾಗದಿರುವ ರೀತಿಯ ಜ್ಞಾನವಾಹಕ ಶಕ್ತಿ ಬಾವಲಿಗಳಿಗೆ ಇದೆಯೆಂದು ಹೇಳುವುದಿದೆ. ನಾಸಿಕಪತ್ರಗಳ ತಳದಲ್ಲಿ ಕಾಣಬರುವ ನರಗಳ ಹರಡುವಿಕೆ ಈ ಊಹೆಗೆ ಪುಷ್ಟಿ ಕೊಡುತ್ತದೆ. ಬಾವಲಿಗಳ ಕಣ್ಣುಗಳು ಸಣ್ಣಗಾತ್ರದವಾದರೂ ದೃಷ್ಟಿ ಬಹುಸೂಕ್ಷ್ಮ.

ಬಾವಲಿಗಳ ಇನ್ನೊಂದು ಲಕ್ಷಣ ಮುಸುಡಿನ ಕೆಳಭಾಗಕ್ಕೂ ತುಪ್ಪಳಕ್ಕೂ ಮಧ್ಯೆ ಇರುವ ಸಿಬೇಷಿಯಸ್ ಗ್ರಂಥಿಗಳು. ಇವುಗಳಿಂದ ಒಂದು ಬಗೆಯ ಕಮಟು ವಾಸನೆಯ ದ್ರವ ಒಸರುತ್ತದೆ. ಇದು ತುಪ್ಪುಳ ಮೃದುವಾಗಿ ನಯವಾಗಿ ಇರುವಂತೆ ಮಾಡುವುದಲ್ಲದೆ ಬಾವಲಿಗಳು ವಾಸಿಸುವ ಸ್ಥಳವನ್ನು ದುರ್ಗಂಧಯುಕ್ತವನ್ನಾಗಿ ಮಾಡಿ ಬೇರಾವ ಪ್ರಾಣಿಯೂ ಸುಳಿಯದಂತೆ ಮಾಡುತ್ತದೆ.

ಬಾವಲಿಗಳ ಹಾರುವಿಕೆ ವೈಶಿಷ್ಟ್ಯಪೂರ್ಣವಾದುದೂ ವೈವಿಧ್ಯಮಯವೂ ಆಗಿದೆ.

ಬಾವಲಿಗಳು ಕೊಳಕು ಪ್ರಾಣಿಗಳೆಂದು ಸಾಮಾನ್ಯ ಜನರ ಅಭಿಪ್ರಾಯ. ಆದರೆ ಈ ಅಭಿಪ್ರಾಯ ತಪ್ಪು. ಇವು ತಲೆಕೆಳಗಾಗಿ ಜೋತಾಡುತ್ತ ವಿಶ್ರಾಂತಿ ಪಡೆಯುವಾಗ ತಮ್ಮ ರೆಕ್ಕೆಗಳ ಹೊರ ಮತ್ತು ಒಳ ಭಾಗಗಳನ್ನು ನಾಲಗೆಯಿಂದ ನೆಕ್ಕಿ ನೀರಿನಲ್ಲಿ ತೊಳೆದಂತೆ ಶುಚಿ ಮಾಡುತ್ತದೆ. ಅಲ್ಲದೆ ಕಾಲಿನಲ್ಲಿನ ನಖಗಳ ಸಹಾಯದಿಂದ ತುಪ್ಪುಳವನ್ನು ಬಾಚಿಕೊಂಡು ಶುಚಿಮಾಡುವುದೂ ಉಂಟು. ಮಲಗಿರುವಾಗ ರೆಕ್ಕೆಗಳನ್ನು ಪೂರ್ತಿ ಅಗಲಿಸಿ ಅನೇಕ ಬಾರಿ ಕೊಡವಿ ಜಾಗರೂಕತೆಯಿಂದ ಪುನಃ ಮಡಿಚಿಕೊಳ್ಳುವುದುಂಟು. ಇಷ್ಟೆಲ್ಲ ಶುಚಿ ಮಾಡಿದರೂ ತುಪ್ಪುಳದಲ್ಲಿ ಕೆಲವು ಪರಾವಲಂಬಿಗಳು ಇದ್ದೇ ಇರುತ್ತವೆ.

ಸಾಮಾನ್ಯವಾಗಿ ಬಾವಲಿಗಳು ಸಂಘಜೀವಿಗಳು. ಒಂದೊಂದು ಗುಂಪು ಕೇವಲ ಕೆಲವೇ ಬಾವಲಿಗಳಿಂದ ಹಿಡಿದು ಲಕ್ಷಾಂತರ ಬಾವಲಿಗಳಿಂದ ಕೂಡಿರಬಹುದು. (ಉದಾಹರಣೆಗೆ ನ್ಯೂ ಮೆಕ್ಸಿಕೋದಲ್ಲಿನ ಕಾರ್ಲ್ಸ್‌ಬಾಡ್ ಗುಹೆಗಳಲ್ಲಿ ಟೆಡಾರಿಡ ಎಂಬ ಜಾತಿಯ 9 ಮಿಲಿಯನ್ ಬಾವಲಿಗಳು ಒಟ್ಟಾಗಿ ವಾಸಿಸುತ್ತವೆ ಎಂದು ಹೇಳಲಾಗಿದೆ) ಸಾಮಾನ್ಯವಾಗಿ ಇವು ಗುಹೆಗಳಲ್ಲೊ ಮರಗಳಲ್ಲೊ ಹಳೆಯ ಮನೆಗಳಲ್ಲೊ ವಾಸಿಸುತ್ತವೆ. ನೂರಾರು ವರ್ಷಗಳಿಂದ ಒಂದೇ ನೆಲೆಯಲ್ಲಿ ಜೀವಿಸುವುದು ಇವುಗಳ ಇನ್ನೊಂದು ವಿಶೇಷ ಗುಣ. ರಾತ್ರಿಯೆಲ್ಲ ಆಹಾರದ ಬೇಟೆಯಲ್ಲಿ ತೊಡಗಿದ್ದು



ನೇತಾಡುತ್ತಲೆ ನಿದ್ರಿಸುತ್ತಿರುವ ಬಾವಲಿ

ಬೆಳಗಿನ ಜಾವ ನೆಲೆಗೆ ವಾಪಸು ಒಂದು ಮೇಲ್ಛಾವಣಿಗೆ ನೇತುಬಿದ್ದು ನಿದ್ರೆ ಹೋಗುತ್ತವೆ.

ವಂಶಾಭಿವೃದ್ಧಿ ಕಾಲದಲ್ಲಿ ಮಾತ್ರ ಗಂಡು ಹೆಣ್ಣು ಬಾವಲಿಗಳು ಒಂದೆಡೆಯಲ್ಲಿಯೇ ಜೀವಿಸುತ್ತದೆ. ಮರಿಗಳನ್ನು ಈಯುವ ಕಾಲದಲ್ಲಿ ಬೇರೆ ಬೇರೆಯಾಗಿ ಮರಿಗಳು ಹುಟ್ಟಿದ ಕೆಲವು ವಾರಗಳ ಅನಂತರ ಮತ್ತೆ ಗಂಡು ಹೆಣ್ಣು ಬಾವಲಿಗಳು ಒಂದುಗೂಡುತ್ತವೆ.

ಸಾಮಾನ್ಯವಾಗಿ ಬಾವಲಿಗಳನ್ನು ಬಂಧನದಲ್ಲಿಡುವುದು ಕಷ್ಟ. ಆದರೂ ಕೆಲವು ಬಾವಲಿಗಳನ್ನು ಸಾಕುವುದುಂಟು. ಸಾಕಿದ ಕೆಲವೆಡೆಗಳಲ್ಲಿ ಸ್ವಲ್ಪಮಟ್ಟಿಗೆ ಕೈಯಿಂದ ಆಹಾರವನ್ನು ತಿನ್ನುವಷ್ಟು ಅವು ಪಳಗಿವೆ. ನಾಕ್ಟ್ಯೂಲ್ ಬಾವಲಿಗಳು ಬಂಧನದಲ್ಲಿ ಪಳಗಿ ಚೆನ್ನಾಗಿ ಆಹಾರವನ್ನು ತಿಂದು ಯಾವ ರೀತಿ ಪ್ರಯತ್ನ ಮಾಡಿದರೂ ಹಾರುವುದಕ್ಕಾಗದಷ್ಟು ಕೊಬ್ಬುತ್ತವೆ.

ಬಾವಲಿಗಳ ಆಯುಸ್ಸಿನ ಬಗ್ಗೆ ಭಿನ್ನಾಭಿಪ್ರಾಯವಿದೆ. ಟೆರೊಪಸ್ ಜಾತಿಯ ಬಾವಲಿ ಬಂಧನದಲ್ಲಿ ಹತ್ತೊಂಬತ್ತು ವರ್ಷಗಳಕಾಲ ವಾಸಿಸಿದ್ದುವೆಂದೂ ವೆಸ್ಪರ್ಟೀಲಿಯಾನಿಡೀ ಕುಟುಂಬದ ಕೆಲವು ಪ್ರಭೇದಗಳು ಇಪ್ಪತ್ತು ವರ್ಷಗಳು ಜೀವಿಸುತ್ತವೆಯೆಂದೂ ವರದಿ ಇದೆ. ಬಹುಸಂಖ್ಯಾತ ಬಾವಲಿಗಳು ಸುಮಾರು 5–6 ವರ್ಷಗಳು ಬದುಕುತ್ತವೆ. ಸಮಶೀತೋಷ್ಣವಲಯಗಳ ಬಾವಲಿಗಳು ಚಳಿಗಾಲವನ್ನು ನಿಶ್ಚೇಷ್ಟ ಸ್ಥಿತಿಯಲ್ಲಿ ಕಳೆಯುವುದು ಒಂದು ವಿಶೇಷ ಸಂಗತಿ. ಬೇಸಗೆಯಲ್ಲಿ ಇವು ಸಮೃದ್ಧಿಯಾಗಿ ಆಹಾರವನ್ನು ತಿಂದು ಶರತ್ಕಾಲ ಮುಗಿಯುವ ವರೆಗೆ ಪುಷ್ಟಿಯಾಗಿ ಬೆಳೆದು ಮೈತುಂಬಿಕೊಂಡಿರುತ್ತವೆ. ಈ ಕಾಲದಲ್ಲಿ ತುಪ್ಪುಳಕ್ಕೂ ಸ್ನಾಯು ಹೊದಿಕೆಗೂ ಮಧ್ಯೆ ಒಂದು ಪದರದ ರೂಪದಲ್ಲಿ ಕೊಬ್ಬು ಶೇಖರವಾಗುತ್ತದೆ. ಚಳಿಗಾಲದಲ್ಲಿ ಈ ಕೊಬ್ಬು ಉಪಯೋಗಕ್ಕೆ ಬರುತ್ತದೆ; ಚಯಾಪಚಯ ಕ್ರಿಯೆಗಳಿಗೆ ಬೇಕಾಗುವ ಶಕ್ತಿ ಇದರಿಂದ ಒದಗುತ್ತದೆ. ಈ ಸ್ಥಿತಿಯಲ್ಲಿ ಹೊರಮೈ, ರೆಕ್ಕೆ ಮತ್ತು ಕಾಲುಗಳ ತುದಿಗಳ ಶಾಖ ಬಾವಲಿಯ ಪರಿಸರದಲ್ಲಿಯ ಶಾಖಕ್ಕೆ ಇಳಿಯುತ್ತದೆ. ಆಮ್ಲಜನಕದ ಬಳಕೆಯೂ ಸಹಜಸ್ಥಿತಿಯ ಬಳಕೆಯಲ್ಲಿ ನೂರರಲ್ಲೊಂದು ಪಾಲಿಗೆ ಇಳಿಯುತ್ತದೆ. ನಿಶ್ಚೇಷ್ಟ ಸ್ಥಿತಿಗೆ ಕಾರಣವೇನೆಂದು ಗೊತ್ತಾಗಿಲ್ಲ. ಚಳಿಗಾಲದಲ್ಲಿ ಆಹಾರ ದೊರಕುವುದು ಕಡಿಮೆಯಾಗುವುದಾಗಲಿ ಹವದ ತೀಕ್ಷ್ಣತೆಯೇ ಆಗಲಿ ನಿಶ್ಚೇಷ್ಟ ಸ್ಥಿತಿಗೆ ಕಾರಣವಲ್ಲ. ಕೊಬ್ಬಿನ ಶೇಖರಣೆಯಿಂದ ದೇಹದಲ್ಲಿ ಉಂಟಾಗುವ ಒಂದು ಬಗೆಯ ಉತ್ತೇಜಕ ವಸ್ತುವೂ ಇಲ್ಲವೆ ಇನ್ನಾವುದೊ ಶಾರೀರಿಕ ವಸ್ತುವೊ ಇದಕ್ಕೆ ಕಾರಣವಿರಬಹುದು.

ಬಾವಲಿಗಳ ಸಂತಾನೋತ್ಪತ್ತಿಯ ಕ್ರಮವೂ ವಿಶೇಷ ರೀತಿಯದು. ಚಳಿಗಾಲವನ್ನು ನಿಶ್ಚೇಷ್ಟಾವಸ್ಥೆಯಲ್ಲಿ ಕಳೆಯುವ ಬಾವಲಿಗಳಲ್ಲಿ ವಿಲಂಬಿತ ಗರ್ಭಧಾರಣೆಯನ್ನು ಕಾಣಬಹುದು. ಇವುಗಳಲ್ಲಿ ಸಂಭೋಗ ಶರತ್ಕಾಲದಲ್ಲೆ ನಡೆದರೂ ಗರ್ಭಧಾರಣೆಯಾಗುವುದು ಮುಂದಿನ ವಸಂತದಲ್ಲಿ. ಈ ಅವಧಿಯಲ್ಲಿ ಪುರುಷಾಣುಗಳು ಹೆಣ್ಣಿನ ಗರ್ಭಕೋಶದಲ್ಲಿ ಇಲ್ಲವೆ ಯೋನಿನಾಳದಲ್ಲಿ ಒಂದು ಮುದ್ದೆಯಂತಾಗಿ ಶೇಖರವಾಗುತ್ತವೆ. ವಸಂತಕಾಲದಲ್ಲಿ ಈ ಮುದ್ದೆ ಕರಗಿ ಪುರುಷಾಣುಗಳು ಬಿಡುಗಡೆಯಾಗಿ ಅಂಡಗಳನ್ನು ನಿಶೇಚನಗೊಳಿಸುತ್ತವೆ. ಈ ವಿಚಿತ್ರ ಬಗೆಯ ಗರ್ಭಧಾರಣೆ ಬೇರಾವ ಬಾವಲಿಗಳಲ್ಲೂ ಕಂಡುಬರುವುದಿಲ್ಲ. ಬಹುಪಾಲು ಬಾವಲಿಗಳು ವರ್ಷಕ್ಕೆ ಒಂದೇ ಒಂದು ಮರಿಯನ್ನು ಈಯುತ್ತವೆ. ಹೊಸದಾಗಿ ಹುಟ್ಟಿದ ಮರಿಗಳಲ್ಲಿ ತುಪ್ಪುಳ ಇರುವುದಿಲ್ಲ. ಕಣ್ಣುಗಳಿನ್ನೂ ತೆರೆದಿರುವುದಿಲ್ಲ. ಕೆಲವು ವಾರಗಳ ವರೆಗೆ ತಾಯಿಯೇ ಇವನ್ನು ಹೊತ್ತು ತಿರುಗಾಡುತ್ತದೆ. ಅನಂತರ ಮರಿಗಳು ಗುಹೆಯ ಸುರಕ್ಷಿತ ಸ್ಥಳವೊಂದರಲ್ಲಿ ಹುದುಗಿದ್ದು ರೆಕ್ಕೆ ಬಲಿತ ಮೇಲೆ (ಸುಮಾರು 1–1½ ವರ್ಷದ ಮೇಲೆ) ಹಾರಲು ತೊಡಗುತ್ತವೆ ; ಎರಡನೆಯ ವರ್ಷದಿಂದ ಇವಕ್ಕೆ ಲೈಂಗಿಕ ಪ್ರಬುದ್ಧತೆ ಬರುತ್ತದೆ.

ಮೆಗಕೈರಾಪ್ಟರದಲ್ಲಿ ಟೀರೋಪೋಡಿಡೀ ಎಂಬ ಒಂದು ಕುಟುಂಬ, 40 ಜಾತಿಗಳು ಮತ್ತು 250 ಪ್ರಭೇದಗಳೂ ಮೈಕ್ರೊಕೈರಾಪ್ಟರದಲ್ಲಿ 18 ಕುಟುಂಬ, 250 ಜಾತಿಗಳು ಮತ್ತು 1030 ಪ್ರಭೇದಗಳೂ ಇವೆ. ಮೈಕ್ರೊಕೈರಾಪ್ಟರದ ಕುಟುಂಬಗಳು ಇವು–ಟಿರೋಪಿಡೀ, ರೈನೊಪೋಮಿಡೀ, ಮೆಗಡರ್ಮಿಡೀ, ನಿಕ್ಟರಿಡೀ, ಹಿಪ್ಪೊಸೈಡೆರಿಡೀ, ಮಿಸ್ಟಸಿನಿಡೀ, ನೇಟಾಲಿಡೀ, ತೈರೋಪ್ಟೆರಿಡೀ, ಫ್ಯೂರಿಟೆರಿಡೀ, ನಾಕ್ಟಿಲಿಯಾನಿಡೀ, ಫಿಲೊಸ್ಟೋಮಿಡೀ, ಡೆಸ್ಮೊಡಾಂಟಿಡೀ, ಎಂಬಲೊನ್ಯೂರಿಡೀ, ರೈನೋಲೋಫಿಡೀ, ಮೈಜೋಪೋಡಿಡೀ, ಮೊಲಾಸ್ಸಿಡೀ ಮತ್ತು ವೆಸ್ಪರ್ಟೀಲಿಯಾನಿಡೀ. ಉಳಿದೆರಡು ಕುಟುಂಬಗಳ ಬಾವಲಿಗಳು ಈಗ ಜೀವಂತವಾಗಿಲ್ಲ. (ಪಿ.ಎ.ಆರ್.)

**ಕೈರೋನಾಮಿಡೀ :** ಕೀಟವರ್ಗದ ಡಿಪ್ಟರ ಗಣಕ್ಕೆ ಸೇರಿದ ಒಂದು ಕುಟುಂಬ. ಟೆಂಡಿಪೆಡಿಡೀ ಎಂಬುದು ಇದರ ಪರ್ಯಾಯ ನಾಮ. ಸೊಳ್ಳೆಗಳನ್ನು ಹೋಲುವ ಮತ್ತು ಸಾಮಾನ್ಯವಾಗಿ ಮಶಕಗಳೆಂದು (ಮಿಜಸ್) ಕರೆಯಲಾಗುವ ಕೀಟಗಳನ್ನೊಳಗೊಂಡಿದೆ. ಈ ಕುಟುಂಬದಲ್ಲಿ ಸುಮಾರು 2,000 ಪ್ರಭೇದಗಳಿವೆ. ಪ್ರಪಂಚಾದ್ಯಂತ ಇವುಗಳ ವ್ಯಾಪ್ತಿ ಉಂಟು. ಬಹುಪಾಲು ಬಗೆಯವು ಜಲವಾಸಿಗಳು; ಕೆಲವು ನದಿ, ಕೊಳ, ಸರೋವರ ಇಲ್ಲವೆ ಜಲಾಶಯಗಳಲ್ಲಿ ವಾಸಿಸುತ್ತವೆ, ಇನ್ನು ಕೆಲವು ಸಮುದ್ರತೀರಗಳಲ್ಲೂ ವಾಸಿಸುವುದುಂಟು. ಮತ್ತೆ ಕೆಲವು ಭೂವಾಸಿಗಳು; ಕೊಳೆಯುತ್ತಿರುವ ಸಸ್ಯರಾಶಿ, ಸಗಣಿ, ಬೂಷ್ಟು, ಮರದ ತೊಗಟೆ ಮುಂತಾದೆಡೆಗಳಲ್ಲಿ ಜೀವಿಸುತ್ತವೆ. ಜಲವಾಸಿ ಮಶಕಗಳು ಸಾಮಾನ್ಯವಾಗಿ ಸೂಕ್ಷ್ಮವಾದ ಕೊಳವೆಗಳನ್ನೊ ಗೂಡುಗಳನ್ನೊ ರಚಿಸಿಕೊಂಡು ಅವುಗಳೊಳಗೆ ವಾಸಿಸುತ್ತವೆ.

ಕೈರೊನಾಮಿಡೀ ಮಶಕಗಳು ಬಲು ಚಿಕ್ಕ ಗಾತ್ರದ ಕೀಟಗಳು. ಸಾಮಾನ್ಯವಾಗಿ 5 ಮಿಮೀ. ಉದ್ದ ಇರುತ್ತವೆ. ತಲೆ ಪುಟ್ಟದು. ಕುಡಿಮೀಸೆಗಳು 5–14 ತುಂಡುಗಳನ್ನೊಳಗೊಂಡಿವೆ. ಗಂಡಿನಲ್ಲಿ ಕುಡಿಮೀಸೆಗಳ ಮೇಲೆಲ್ಲ ನವುರಾದ ಕೂದಲಿನಂಥ ರಚನೆಗಳಿವೆ. ಬಾಯತುದಿಯಲ್ಲಿ ಚಿಕ್ಕದಾದ ಸೊಂಡಿಲಿದೆ. ಕಾಲುಗಳು 3 ಜೊತೆ ; ಉದ್ದವಾಗಿಯೂ ತೆಳುವಾಗಿಯೂ ಇವೆ. ಚೆನ್ನಾಗಿ ರೂಪುಗೊಂಡ ಇಲ್ಲವೆ ಕ್ಷೀಣವಾಗಿರುವ 2 ರೆಕ್ಕೆಗಳಿವೆ. ಕೆಲವು ಪ್ರಭೇದಗಳಲ್ಲಿ ರೆಕ್ಕೆಗಳೇ ಇಲ್ಲ. (ಉದಾಹರಣೆಗೆ ಜಪಾನಿನಲ್ಲಿರುವ ಕ್ಲೂನಿಯೊ ಪ್ಯಾಸಿಫಿಕಸ್ ಎಂಬ ಪ್ರಭೇದದ ಹೆಣ್ಣು ಮಶಕಗಳು.) ಮಶಕಗಳ ಉದರ ಭಾಗ ಬಲು ಉದ್ದವಾಗಿಯೂ ತೆಳುವಾಗಿಯೂ ಇದೆ.

ಈ ಕೀಟಗಳು ಸಾಮಾನ್ಯವಾಗಿ ಸಂಜೆಯ ಹೊತ್ತು ದೊಡ್ಡ ದೊಡ್ಡ ಗುಂಪುಗಳಲ್ಲಿ ಗುಂಯ್‌ಗುಡುತ್ತ ಹಾರಾಡುತ್ತಿರುತ್ತವೆ. ಕೊಳೆಯುತ್ತಿರುವ ಸಾವಯವ ವಸ್ತುಗಳ ಮೇಲೆ ಇಲ್ಲವೆ ಲೋಳೆಯಂಥ ವಸ್ತುವಿನಿಂದ ರಚಿತವಾದ ಉದ್ದನೆಯ ಪಟ್ಟಿಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಡಿಂಬಗಳು ಸಾಮಾನ್ಯವಾಗಿ ಜಲ ವಾಸಿಗಳು. ಕೊಳವೆ

ಯಾಕಾರದ ಇವು ನೀರಿನಲ್ಲಿ ಸೊಳ್ಳೆಗಳ ಡಿಂಬಗಳಂತೆಯೇ ಈಜಾಡುತ್ತ ಕೆಲವು ದಿನಗಳಾದ ಮೇಲೆ ಕೋಶಾವಸ್ಥೆಯ ಹಂತ ದಾಟಿ ಮಶಕ ಗಳಾಗಿ ಪರಿವರ್ತನೆಯಾಗುತ್ತವೆ. ಕೆಲವು ಪ್ರಭೇದಗಳ ಡಿಂಬಗಳಲ್ಲಿ ಹೀಮೋ ಗ್ಲಾಬಿನ್ ವರ್ಣಕವಿದೆ. ಇದರಿಂದಾಗಿ ಕೆಂಪಾದ ಡಿಂಬಗಳಿಗೆ ರಕ್ತಹುಳುಗಳೆಂಬ ಹೆಸರು ರೂಢಿಯಲ್ಲಿದೆ. ಡಿಂಬಗಳು ಮೀನುಗಳ ಪ್ರಮುಖ ಆಹಾರ ಎನಿಸಿವೆ.


ಕೈರೊನಾಮಸ್ ಜಾತಿಯ ಡಿಂಬ ಮತ್ತು ಪ್ರೌಢಜೀವಿ

ಕೈರೊನಾಮಿಡೀ ಕುಟುಂಬದ ಕೆಲವು ಮುಖ್ಯ ಪ್ರಭೇದಗಳಿವು: ಕೈರೊನಾಮಸ್ ಕ್ರಿಸ್ಪೇಟಸ್, ಕೈ. ಜ಼ಿಲ್ಯಾಂಡಿಕಸ್, ಕೈ. ಫೆರುಜಿನಿಯವಿಟೇಟಸ್, ಹ್ಯಾಲಿರೈಟಸ್ ಜಾತಿ, ಕ್ಲೂನಿಯೊ ಮ್ಯೂರಿನಸ್, ತಲಾಸೊಮೈಯಿಯ ಫ್ರಾಯೆನ್‌ಫೀಲ್ಡಿ, ಪಾಂಟೊಮೈಯಿಯ ನೇಟನ್ಸ್, ಪಾಲಿಪೋಡಿಯಮ್ ವ್ಯಾಂಡರ್‌ಪ್ಲಾಂಕೈ ಇತ್ಯಾದಿ. (ವಿ.ಕೆ.ವಿ.)

**ಕೈರೋ :** ಈಜಿಪ್ಟಿನ ರಾಜಧಾನಿ. ನೈಲ್ ನದಿಯ ಪೂರ್ವ ದಂಡೆಯ ಮೇಲೆ ನದೀ ಮುಖಜಭೂಮಿಯ ಅಗ್ರಸ್ಥಳದಿಂದ 19 ಕಿ.ಮೀ. ದಕ್ಷಿಣದಲ್ಲಿದೆ. ನದಿಯ ಪಶ್ಚಿಮ ದಂಡೆಯಲ್ಲಿ ಇದರ ಉಪನಗರಗಳು ಬೆಳೆದಿವೆ. ನಗರದ ಪೂರ್ವಕ್ಕಿರುವ ಅಲ್ ಮೊಕತ್ತಂ ಮರಳುಗುಡ್ಡದಿಂದ ಕೈರೋ ನಗರದ, ನದಿಯ ಮತ್ತು ದೂರದ ಗೀಜ಼ದ ಪಿರಮಿಡ್‌ಗಳ ಸುಂದರ ದೃಶ್ಯವನ್ನು ಕಾಣಬಹುದು. ಪಶ್ಚಿಮ ಏಷ್ಯ ಪ್ರದೇಶದಲ್ಲೇ ಮತ್ತು ಇಡೀ ಆಫ್ರಿಕದಲ್ಲೇ ಇದು ಅತ್ಯಂತ ದೊಡ್ಡ ನಗರ. ಜನಸಂಖ್ಯೆ 7500 000 (2006). ಬಹುತೇಕ ಇಡೀ ವರ್ಷ ಕೈರೋದಲ್ಲಿ ಶುಷ್ಕ ವಾಯುಗುಣ ಇರುತ್ತದೆ. ಹಗಲಿನ ಉಷ್ಣತೆಯ ಸರಾಸರಿ ಜನವರಿಯಿಂದ ಜುಲೈ–ಆಗಸ್ಟ್‌ಗಳ ತನಕ 15.5°–35.5° ಸೆ. ಅಂತರದಲ್ಲಿರುತ್ತದೆ. ಏಪ್ರಿಲ್–ಮೇ ತಿಂಗಳುಗಳಲ್ಲಿ ಮರಳು ತುಂಬಿದ ಬಿಸಿಗಾಳಿ ದಕ್ಷಿಣದಿಂದ ಬೀಸಿದಾಗ 37.7° ಮೀರಿ ಇಲ್ಲಿ ಉಷ್ಣತೆ ಇರುವುದುಂಟು. ಬೇಸಗೆಯ ಗರಿಷ್ಠ ಉಷ್ಣತೆ ಸು.42.2° ವರ್ಷದಲ್ಲಿ ಮೂರು ನಾಲ್ಕು ಬಾರಿ ಮಾತ್ರ–ಅದೂ ಚಳಿಗಾಲದಲ್ಲಿ–ಮಳೆಯಾಗುತ್ತದೆ.

ನಾಗರಿಕ ವಿಮಾನ ನಿಲ್ದಾಣದಿಂದ ಈಶಾನ್ಯಕ್ಕೆ ಸಾಗುವ ರಸ್ತೆ ಕೈರೋದ ಆಧುನಿಕ ಉಪನಗರವಾದ ಹೆಲಿಯೊಪೊಲಿಸಿನ ಮೂಲಕ ಹಾದು, ಷರಿಯ ರ್‍ಯಾಮಿಸೀಸ್ ಮತ್ತು ಷರಿಯ ಅಲ್ ಗೇಷ್‌ಗಳಿಗೆ ಕವಲೊಡೆಯುತ್ತದೆ. ಷರಿಯ ರ್‍ಯಾಮಿಸೀಸ್‌ನ ಕೊನೆಯಲ್ಲಿ ರೈಲ್ವೆ ನಿಲ್ದಾಣದ ಎದುರಿಗೆ ಇರುವುದೇ ರಾಮಿಸೀಸ್ ಚೌಕ. ಇಲ್ಲಿ 2ನೆಯ ರ್‍ಯಾಮಿಸೀಸ್‌ನ ಬೃಹದಾಕಾರದ ಪುರಾತನ ಪ್ರತಿಮೆಯಿದೆ. ಮೆಂಫಿಸ್ ಸ್ಥಳದಿಂದ ಇಲ್ಲಿಗೆ ಈ ಪ್ರತಿಮೆಯನ್ನು 1955ರಲ್ಲಿ ತರಲಾಯಿತು. ಇಲ್ಲಿಂದ ಹೊರಡುವ ಮುಖ್ಯ ರಸ್ತೆಗಳಲ್ಲೊಂದಾದ ಷರಿಯ ಅಲ್ ಗುಮ್ಹುರಿಯದಲ್ಲಿ ಸಾಗಿದರೆ ಒಪೆರ ಚೌಕ ಸಿಗುತ್ತದೆ. ಸೂಯೆಜ಼್ ಕಾಲುವೆಯ ಆರಂಭೋತ್ಸವದ ಅಂಗವಾಗಿ ಇಲ್ಲಿ 1869ರಲ್ಲಿ ಒಪೆರ ಭವನದ ಆರಂಭವಾಯಿತು. ಒಪೆರ ಚೌಕದ ನಡುವೆ ಮಹಮ್ಮದ್ ಆಲೀ ಪಾಷನ ಮಗ ಇಬ್ರಾಹಿಮನ ಸುಂದರ ಪ್ರತಿಮೆಯಿದೆ. ಅದಕ್ಕೆದುರಾಗಿ ಕಾಂಟಿನೆಂಟಲ್–ಸವಾಯ್ ಹೋಟೆಲು. ಹತ್ತಿರದಲ್ಲೇ ಅಲ್ ಎಜ಼್ಬೇಕಿಯ ಸಾರ್ವಜನಿಕ ಉದ್ಯಾನ. ಇದರೊಳಗೆ ಹಾಯ್ದು ಹೋಗುವ ಉದ್ದನೆಯ ಬೀದಿಯೇ ಷರಿಯ ಮುಂದೆ ಇದು ನದಿಯನ್ನು ದಾಟಿ ಜೆಜ಼ೀರ ದ್ವೀಪಕ್ಕೆ ಸಾಗುತ್ತದೆ. ಷರಿಯ ಸುಲಿಮಾನ್ ಪಾಷ ರಸ್ತೆಯಲ್ಲಿ ದಕ್ಷಿಣಾಭಿಮುಖವಾಗಿ ಸಾಗಿದರೆ ಸುಲಿಮಾನ್ ಪಾಷ ಚೌಕ ಸಿಗುತ್ತದೆ. ಅಲ್ಲಿಂದ ಪೂರ್ವಕ್ಕೆ ಷರಿಯ ಕಸ್ರ್ ಅಲ್ ನಿಲ್. ಈಜಿಪ್ಟಿನ ರಾಷ್ಟ್ರೀಯ ಬ್ಯಾಂಕ್ (1898) ಅಲ್ಲಿದೆ. ಷರಿಯ ಸುಲಿಮಾನ್ ಪಾಷದ ಆಚೆಗೆ ಕೆಲವು ಮುಖ್ಯ ಪತ್ರಿಕಾ ಕಚೇರಿಗಳಿವೆ. ಸುಲಿಮಾನ್ ಪಾಷ ಚೌಕಕ್ಕೂ ನೈಲ್ ನದಿಗೂ ನಡುವೆ ಇರುವುದೇ ವಿಮೋಚನಾ (ತಹ್ರಿರ್) ಚೌಕ. ಹತ್ತು ರಸ್ತೆಗಳು ಕೂಡುವ ಸ್ಥಳವಿದು. ಇದರ ದಕ್ಷಿಣ ಪಾರ್ಶ್ವದಲ್ಲಿ ಸರ್ಕಾರಿ ಕಚೇರಿಗಳ ಆಧುನಿಕ ಕಟ್ಟಡಗಳುಂಟು. ಅಲ್ಲೇ ಎದುರಿಗೆ 1902ರಲ್ಲಿ ಕಟ್ಟಲಾದ ಈಜಿಪ್ಟ್ ವಸ್ತುಸಂಗ್ರಹಾಲಯವಿದೆ. 1928ರಲ್ಲಿ ನಿರ್ಮಿತವಾದ ಆಧುನಿಕ ಕಲಾ ವಸ್ತುಸಂಗ್ರಹಾಲಯ ಇರುವುದೂ ಹತ್ತಿರದಲ್ಲೇ.

ಆಧುನಿಕ ಕೈರೋಗೂ ಅಲ್ ಮೊಕತ್ತಂ ಬೆಟ್ಟಗಳಿಗೂ ನಡುವೆ 11 ರಿಂದ 16ನೆಯ ಶತಮಾನಗಳ ನಡುವಣ ಕಾಲದಲ್ಲಿ ನಿರ್ಮಿತವಾದ ಅರಬ್ ನಗರದ ಬಹುಭಾಗವಿದೆ. ಪ್ರಪಂಚದ ಬೇರಾವುದೇ ನಗರದಲ್ಲಿಲ್ಲದಷ್ಟು ಅಧಿಕ ಸಂಖ್ಯೆಯಲ್ಲಿ ಅರಬ್ ವಾಸ್ತುಸಂಪತ್ತು ಇಲ್ಲಿ ಸಾಂದ್ರೀಕೃತವಾಗಿದೆ. ಪಟ್ಟಿಮಾಡಲಾದ ಐತಿಹಾಸಿಕ ಸ್ಮಾರಕಗಳ ಸಂಖ್ಯೆಯೇ ಸುಮಾರು 400. ಇಲ್ಲಿ ಮಹಮ್ಮದ್ ಆಲಿ ಕಟ್ಟಿಸಿದ ಆಟೊಮನ್ ಶೈಲಿಯ ಸುಂದರ ಮಸೀದಿ ಇದೆ. ಇದರಲ್ಲಿ ಈತನನ್ನು 1849ರಲ್ಲಿ ಸಮಾಧಿ ಮಾಡಲಾಯಿತು. ಇದು 12ನೆಯ ಶತಮಾನದಲ್ಲಿ ಸಾಲಾದೀನ್ ಕಟ್ಟಿಸಿದ ಕೋಟೆಯೊಳಗಡೆ ಇದೆ. ಇಲ್ಲಿಯೇ 1946ರಲ್ಲಿ ಬ್ರಿಟಿಷ್ ಸೈನ್ಯ ಈಜಿಪ್ಟ್ ಸೈನ್ಯಕ್ಕೆ ಅಧಿಕಾರವನ್ನು ವಹಿಸಿಕೊಟ್ಟದ್ದು. ಸಾಲಾದಿನ್ ಚೌಕವಿರುವುದು ಈ ಕೋಟೆಯಿಂದ ಕೆಳಕ್ಕೆ. ಇಸ್ಲಾಂ ವಾಸ್ತುಶಿಲ್ಪಕ್ಕೆ ಹೆಸರಾದ, 1361ರಲ್ಲಿ ಸುಲ್ತಾನ್ ಹಸನ್ ಕಟ್ಟಿಸಿದ ಮಸೀದಿ ಈ ಚೌಕದಿಂದಾಚೆಗಿದೆ. 1912ರಲ್ಲಿ ಕಟ್ಟಿ ಮುಗಿಸಿದ ಅಲ್ ರಿಫಾಇಯ ಆಧುನಿಕ ಮಸೀದಿ ಇದೆ. ದೊರೆ ಫೌದ್ ಮತ್ತು ಆತನ ಕುಟುಂಬದವರ ಸಮಾಧಿ ಇರುವುದು ಇಲ್ಲೇ.

ನೈಲ್ ನದಿ ದಂಡೆಯ ಮೇಲಿರುವ ಕೈರೋ ನಗರ

ಕಲೋಪಾಸಕರಿಗೆ, ಪಂಡಿತರಿಗೆ ಮತ್ತು ಪ್ರಾಕ್ತನ ಶಾಸ್ತ್ರಜ್ಞರಿಗೆ ಇಲ್ಲಿಯ ಕಟ್ಟಡಗಳು ಒಂದು ಆಕರ್ಷಣೆ. ಉತ್ತರ ಆಫ್ರಿಕದ ಫಾತಿಮೈಟ್ ಆಕ್ರಮಣಕಾರರು 970ರಲ್ಲಿ ಸ್ಥಾಪಿಸಿದ ವಿಶ್ವವಿದ್ಯಾಲಯ ಅಲ್ ಅಜ಼್ ಹರ್ ಮಸೀದಿ ಇರುವುದು ಈ ಬಳಿಯಲ್ಲೇ. ಇಲ್ಲಿಗೇ ಚೀನ, ಮೊರಾಕೋ, ಇಂಡೋನೇಷ್ಯ ಮತ್ತು ಸೋಮಾಲಿಲ್ಯಾಂಡ್ ಮುಂತಾದ ದೇಶಗಳಿಂದ ಮುಸ್ಲಿಂ ನ್ಯಾಯಶಾಸ್ತ್ರ, ಕೊರಾನ್, ಅರಬೀ ಭಾಷೆ, ತತ್ತ್ವಶಾಸ್ತ್ರ ಮತ್ತು ಇತಿಹಾಸದ ಅಧ್ಯಯನಕ್ಕೆ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಾರೆ. ಅಹ್ಮದ್ ಇಬ್ನ್‌ಟುಲುನ್ 876–879ರಲ್ಲಿ ಕಟ್ಟಿಸಿದ ಪ್ರಸಿದ್ಧ ಮಸೀದಿ ಹಳೆಯ ನಗರದ ದಕ್ಷಿಣಕ್ಕಿದೆ. ಅಹ್ಮದ್ ಇಬ್ನ್‌ಟುಲುನ್ ಬಾಗ್ದಾದಿನಿಂದ ಬಂದವನು. ಆದ್ದರಿಂದ ಈ ಮಸೀದಿಯಲ್ಲೂ ಬಾಗ್ದಾದಿನ ಸುಂದರ ಕೆತ್ತನೆಯನ್ನು ಕಾಣಬಹುದು.

ಮ್ಯಾಮೆಲೂಕರ ಗೋರಿಯ ಆಗ್ನೇಯಕ್ಕೆ ಇರುವ ಅಲ್ ಪುಸ್ತಾತ್ ಜನರಹಿತ ಭಾಗ. ಅರಬರು ಈ ಪ್ರದೇಶವನ್ನು ಗೆದ್ದಾಗ 641ರಲ್ಲಿ ಸ್ಥಾಪಿಸಲಾದ, ಅತ್ಯಂತ ಹಳೆಯ, ವಸತಿಯ ಪ್ರದೇಶವಿದು. ಅಲ್ ಪುಸ್ತಾತ್‌ಗೂ ನೈಲ್‌ನದಿಗೂ ನಡುವೆ ಹಳೆಯ ಕೈರೋ ಎಂದು ಕರೆಯುವ ಭಾಗವಿದೆ. ಇಲ್ಲಿ ಪುರಾತನ ಕಾಲದಿಂದಲೂ ಕಾಪ್ಟಿಕ್ ಕ್ರೈಸ್ತರು ವಾಸವಾಗಿದ್ದಾರೆ. ಇಲ್ಲಿ ಕಾಪ್ಟಿಕ್ ಶೈಲಿಯ ಹಳೆಯ ಚರ್ಚ್‌ಗಳೂ 1910ರಲ್ಲಿ ಸ್ಥಾಪಿಸಿದ ಕಾಪ್ಟಿಕ್ ಕಲಾ ವಸ್ತುಸಂಗ್ರಹಾಲಯವೂ ಇವೆ. ಇದರ ಹತ್ತಿರ ಬಿಜ಼ಾನ್‌ಟೈನ್ ರೋಮನರ ಹೆಬ್ಬಾಗಿಲಿದೆ. ಹಳೆಯ ಕೈರೋದಿಂದ ಆಧುನಿಕ ಕೈರೋಗೆ ಅನೇಕ ರಸ್ತೆಗಳುಂಟು. ಇವುಗಳಲ್ಲಿ ಷರಿಯ ಕಸ್ರ್ ಅಲ್ ಐನಿ ಎಂಬುದು ಮುಖ್ಯ. ಇದು ಕೈರೋ ವಿಶ್ವವಿದ್ಯಾಲಯ ವೈದ್ಯಕೀಯ ಶಾಲೆ ಮತ್ತು ಆ್ಯಂಟಿರಾಬಿಕ್ ಆಸ್ಪತ್ರೆಯನ್ನು ಹಾದು ಹೋಗುತ್ತದೆ. ನೈಲ್ ನದಿಗೂ ಈ ರಸ್ತೆಗೂ ನಡುವೆ ಕೆಲವು ದೂತಾವಾಸಗಳೂ ತೋಟದ ನಗರವೂ ಇವೆ. ಈ ರಸ್ತೆಯ ಇನ್ನೊಂದು ಬದಿಗೆ ಹಲವು ಸಚಿವಾಲಯಗಳೂ 1923ರಲ್ಲಿ ನಿರ್ಮಿತವಾದ ಪಾರ್ಲಿಮೆಂಟ್ ಭವನವೂ ಉಂಟು. ಇದರ ಹತ್ತಿರವೇ ಸಾದ್ ಜ಼ಾಗ್‌ಲುಲ್ ಎಂಬ ಪ್ರಸಿದ್ಧ ರಾಷ್ಟ್ರಪ್ರೇಮಿಯ ಗೋರಿಯೂ ಭೂವಿಜ್ಞಾನ ವಸ್ತುಸಂಗ್ರಹಾಲಯವೂ ಅಮೆರಿಕನ್ ವಿಶ್ವವಿದ್ಯಾಲಯವೂ ಇವೆ. ಪೂರ್ವದಲ್ಲಿರುವ ಗುಮ್ಹೂರಿಯ ಚೌಕದಲ್ಲಿ ಅರಬ್ ಗಣರಾಜ್ಯಾಧ್ಯಕ್ಷರ ಅಧಿಕೃತನಿವಾಸವುಂಟು. ಇದು ಹಿಂದೆ ದೊರೆ ಫರೂಕನ ಅಬ್‌ದಿನ್ ಅರಮನೆಯಾಗಿತ್ತು. ದೊಡ್ಡ ಉದ್ಯಾನದ

ನಡುವೆ ಇರುವ ಸುಂದರ ಕಟ್ಟಡವಿದು. ಅರಮನೆಗೆ ಹಿಂದೆ ಇರುವ ಆಹ್ಮೆದ್ ಮಹೆರ್ ಚೌಕದಲ್ಲಿ ಇಸ್ಲಾಮೀ ಕಲಾವಸ್ತು ಸಂಗ್ರಹಾಲಯವಿದೆ. ಖೆಡಿವ್ ಇಸ್ಮೇಲ್ 1869ರಲ್ಲಿ ಸ್ಥಾಪಿಸಿದ ಈಜಿಪ್ಷಿಯನ್ ಗ್ರಂಥಾಲಯ ಇರುವುದು ಇಲ್ಲೇ. ಈ ಗ್ರಂಥಾಲಯದಲ್ಲಿ ಪಶ್ಚಿಮ ಏಷ್ಯ ಪ್ರದೇಶದ ಅನೇಕ ಗ್ರಂಥಗಳೂ ನಾಣ್ಯಗಳೂ ಇವೆ.



ಪಿರಮಿಡ್ಡುಗಳು

ಕೈರೋಗೆ ಎದುರಾಗಿ ನೈಲ್ ನದಿಯಲ್ಲಿರುವ ಜೆಜೀರ ಮತ್ತು ರೋಡ ದ್ವೀಪಗಳು ಬಹುತೇಕ ನಗರಕ್ಕೆ ಸೇರಿದಂತೆಯೇ ಇವೆ. ಇವಕ್ಕೂ ನಗರಕ್ಕೂ ಸಂಬಂಧ ಕಲ್ಪಿಸುವ ಅನೇಕ ಸೇತುವೆಗಳುಂಟು. ಜೆಜೀರದ ಉದ್ದ 1.2 ಕಿಮೀ. ಗರಿಷ್ಠ ಅಗಲ 0.30 ಕಿಮೀ. ಇದರ ಉತ್ತರಭಾಗ ವಾಸದ ಮನೆಗಳಿಂದ ಕೂಡಿದೆ. ಮಧ್ಯಭಾಗದಲ್ಲಿ ಜೆಜೀರ ಕ್ರೀಡಾಸಂಘ, ಕುದುರೆ ಪಂದ್ಯ ಮೈದಾನ, ಪೋಲೋ ಮೈದಾನ, ಮತ್ತು ಈಜುಕೊಳಗಳಿವೆ. ಡೇವಿಸ್ ಕಪ್ ವಲಯ ಪಂದ್ಯಗಳು ನಡೆಯುವ ಟೆನಿಸ್ ಆಟದ ಅಂಗಳಗಳು ಇರುವುದು ಇಲ್ಲೇ. ಪೂರ್ವ ತೀರದಲ್ಲಿರುವ ಉದ್ಯಾನವೊಂದು ವಿಶ್ರಾಂತಿ ಸ್ಥಳ. ದಕ್ಷಿಣ ಭಾಗದಲ್ಲಿ ಪ್ರದರ್ಶನಾವರಣವೂ ಕೃಷಿಸಚಿವಾಲಯಕ್ಕೆ ಸೇರಿದ ತೋಟಗಾರಿಕೆ ಪ್ರಯೋಗ ಕ್ಷೇತ್ರವೂ ಕ್ರೀಡಾಸಂಘಗಳೂ ಉದ್ಯಾನವೂ ಆಸ್ಪತ್ರೆಯೂ ಇವೆ. ರೋಡದ್ವೀಪ ಜೆಜೀರಕ್ಕಿಂತ ಚಿಕ್ಕದು. ಪ್ರವಾಹಕ್ಕೆ ಎದುರು ದಿಕ್ಕಿನಲ್ಲಿ ರೋಡದಿಂದ ಒಂದು ಮೈಲಿ ದೂರದಲ್ಲಿದೆ. ಇಲ್ಲಿ ಆಸ್ಪತ್ರೆ, ಅರಮನೆ, ಉದ್ಯಾನಗಳು ಮತ್ತು ವಾಸಗೃಹಗಳಿವೆ. ರೋಡ ದ್ವೀಪದ ದಕ್ಷಿಣ ತುದಿಯಲ್ಲಿ 1,000 ವರ್ಷಗಳಿಗಿಂತ ಹೆಚ್ಚು ಕಾಲದಿಂದ ನೈಲ್ ನದಿಯ ಪ್ರವಾಹವನ್ನಳೆಯುತ್ತಿದ್ದ

ಹಳೆಯ ಕೈರೋವಿನ ಒಂದು ನೋಟ

ನೈಲೋಮಾಪಕವನ್ನು ಕಾಣಬಹುದು. ಈ ದ್ವೀಪಗಳ ಪಶ್ಚಿಮಕ್ಕೆ ನದಿಯ ದಂಡೆಯ ಮೇಲೆ, ಅನೇಕ ಗ್ರಾಮಗಳೂ ಉಪನಗರಗಳೂ ಉಂಟು. 1798ರಲ್ಲಿ ನೆಪೋಲಿಯನ್ ಮ್ಯಾಮಲೂಕರನ್ನು ಸೋಲಿಸಿದ ಸ್ಥಳವಾದ ಎಂಬಾಬ ಇಲ್ಲಿದೆ. ಇದು ಈಗ ಕಾರ್ಮಿಕ ವಸತಿ ಪ್ರದೇಶ. ದಕ್ಷಿಣಕ್ಕಿರುವ ಗೀಜ಼ ಬಡಜನರಿರುವ ಹಳೆನಗರ. ಕೈರೋ ವಿಶ್ವವಿದ್ಯಾಲಯ ಇರುವುದೂ ಇಲ್ಲೇ.

ವಿಶ್ವವಿದ್ಯಾಲಯಕ್ಕೆದುರಾಗಿ ನೈಲ್ ನದಿಗೆ ಹೊಸಸೇತುವೆ ಕಟ್ಟಿದ್ದಾರೆ. ಪಿರಮಿಡ್, ಸ್ಫಿಂಕ್ಸ್‌ಗಳಿಗೆ ಹೋಗುವ ಮುಖ್ಯದಾರಿ ಗೀಜ಼ದ ಮುಖಾಂತರವೇ ಹಾದುಹೋಗುತ್ತದೆ. ಕೈರೋಗೆ ಕೆಲವು ಕಿಲೋ.ಮೀಟರು ದಕ್ಷಿಣದಲ್ಲಿ ಪೂರ್ವದಂಡೆಯ ಮೇಲೆ ಇರುವುದು ಅಲ್ ಮಾದಿ ವನೋಪನಗರ. ಇನ್ನೂ ದಕ್ಷಿಣದಲ್ಲಿ ಮರಳುಗಾಡಿನ ಅಂಚಿನಲ್ಲಿರುವ ಹಲ್‌ವಾನ್ ಗಂಧಕದ ಚಿಲುಮೆಗೆ ಪ್ರಸಿದ್ಧ. ಈಗ ಇಲ್ಲೂ ಕೆಲವು ಕೈಗಾರಿಕೆಗಳು ಸ್ಥಾಪಿತವಾಗಿವೆ.

ಕೈರೋದಲ್ಲಿ ಅನೇಕ ಬಗೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿವೆ. ಅವುಗಳಲ್ಲಿ ಮುಖ್ಯವಾದವು ಸಹಕಾರಿ ತರಬೇತು ಕೇಂದ್ರ, ಅರಬ್ಬೀ ಅಕಾಡೆಮಿ, ಅರಬ್ಬೀ ಸಂಗೀತ ಅಕಾಡೆಮಿ ಮತ್ತು ಕಲಾಸಂಘ. ಅಲ್ಲದೆ ವಾಕ್-ಶ್ರವಣ ನೆರವು ಕೇಂದ್ರವೂ ಹಿಂದುಳಿದವರ ಏಳಿಗೆಗಾಗಿ ಶ್ರಮಿಸುತ್ತಿರುವ ಅನೇಕ ಸ್ವಯಂ ನಿಯಂತ್ರಿತ ಶಾಲೆಗಳೂ ಆಸ್ಪತ್ರೆಗಳೂ ಇವೆ. ಅಲ್ ಅಜ಼ಾರ್, ಕೈರೋ, ಗೀಜ಼, ಐನ್ ಷಾಮ್ಸ್ ಮತ್ತು ಅಮೆರಿಕನ್ ವಿಶ್ವವಿದ್ಯಾಲಯಗಳಿವೆ. ಚರ್ಚುಗಳೂ ಯಹೂದ್ಯರ ಆರಾಧನ ಮಂದಿರಗಳೂ ಉಂಟು.

ಕೈರೋ ಒಂದು ಮುಖ್ಯ ಸಾರಿಗೆ ಕೇಂದ್ರ. ಆಫ್ರಿಕದ ಪ್ರಥಮ ರೈಲ್ವೆಯನ್ನು ಜಾರ್ಜ್ ಸ್ಟೀಫನ್‌ಸನನ ಮಗ ರಾಬರ್ಟ್ ನಿರ್ಮಿಸಿದ. 1855ರಲ್ಲಿ ಅಲೆಕ್ಸಾಂಡ್ರಿಯದಿಂದ ಕೈರೋಗೆ ರೈಲ್ವೆ ಸಂಪರ್ಕ ಏರ್ಪಟ್ಟಿತು. ಕೈರೋ-ಅಲೆಕ್ಸಾಂಡ್ರಿಯ, ಕೈರೋ-ಅಲ್ ಫಯ್ಯೂಂ, ಅಲ್ ಮಾಡಿ-ಸೋಖ್ನ (ಕೆಂಪು ಸಮುದ್ರದ ದಂಡೆ) ರಸ್ತೆಗಳು ಮುಖ್ಯವಾದವು. ಕೈರೋ ನಗರದ ಉತ್ತರಕ್ಕೆ 26 ಕಿ.ಮೀ. ದೂರದಲ್ಲಿ ಕೈರೋ ಅಂತಾರಾಷ್ಟ್ರೀಯ ವಿಮಾನನಿಲ್ದಾಣವಿದೆ. ಸರಕು ಸಾಗಿಸಲು ನೈಲ್ ನದಿ ತುಂಬ ಉಪಯುಕ್ತ. ಇಲ್ಲಿಂದ ದೇಶದ ಇತರ ಸ್ಥಳಗಳಿಗೆ ರಸ್ತೆಸಾರಿಗೆ ಸಂಪರ್ಕವುಂಟು.

ಕೈರೋದಲ್ಲಿ ಅನೇಕ ಕೈಗಾರಿಕೆಗಳಿವೆ. ಈಜಿಪ್ಟಿನ ಪಂಚವಾರ್ಷಿಕ ಯೋಜನೆಯಂತೆ 1950ರಲ್ಲಿ ಹಲ್‌ವಾನ್ ಪ್ರದೇಶದಲ್ಲಿ ಉಕ್ಕು, ಕಬ್ಬಿಣ, ಸಿಮೆಂಟ್ ಮುಂತಾದ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಅಲ್ ಬಿಜ಼ಾ ಉಪನಗರ ಅರಬ್ಬೀ ಭಾಷೆಯ ಚಲನಚಿತ್ರಗಳ ತಯಾರಿಕಾ ಕೇಂದ್ರ. ಹೊಗೆಸೊಪ್ಪು, ಚರ್ಮ, ರಸಾಯನವಸ್ತು, ಕಟ್ಟಡ ನಿರ್ಮಾಣ ಮುಂತಾದ ಕೈಗಾರಿಕೆಗಳೂ ಕೈರೋದಲ್ಲಿವೆ. ಈ ಕೈಗಾರಿಕೆಗಳೂ ಸರ್ಕಾರಿ ಕಚೇರಿಗಳು, ವಿದ್ಯಾಸಂಸ್ಥೆಗಳು, ಆಸ್ಪತ್ರೆಗಳು, ನ್ಯಾಯಾಲಯಗಳು ಮುಂತಾದವು ಅನೇಕರಿಗೆ ಉದ್ಯೋಗ ದೊರಕಿಸಿಕೊಟ್ಟಿವೆ.

ಕೈರೋದ ಇತಿಹಾಸ ಬಲು ಪುರಾತನವಾದ್ದು. ಹಳೆಯ ಈಜಿಪ್ಷಿಯನ್ ಸಾಮ್ರಾಜ್ಯದ ರಾಜಧಾನಿ ಮೆಂಫಿಸ್ ಇದ್ದದ್ದು ನೈಲ್ ನದಿಯ ಪಶ್ಚಿಮದಂಡೆಯ ಮೇಲೆ-ಜೆಜೀರಕ್ಕೆ ದಕ್ಷಿಣದಲ್ಲಿ. ಒಮ್ಮೆ ಪ್ರಸಿದ್ಧವಾಗಿದ್ದ ಈ ನಗರದಲ್ಲಿ ಹೆಚ್ಚಾಗಿ ಏನೂ ಉಳಿದಿಲ್ಲ. ಅನಂತರ ರೋಮನ್-ಬಿಜ಼ಾಂಟಿನ್ ನಗರವಾದ ಬ್ಯಾಬಿಲಾನ್ ಸ್ಥಾಪಿತವಾಯಿತು. ಇದು ಈಗಿನ ಹಳೆಯ ಕೈರೋ ಭಾಗ ಇರುವಲ್ಲಿ ಇತ್ತು. ಈಜಿಪ್ಟನ್ನು ಜಯಿಸಿದ ಅರಬ್ಬೀ ವೀರ ಅಮರ್ ಇಬ್ನ್-ಅಲ್ ಅಸ್ ಇದರ ಮಹಾದ್ವಾರವನ್ನು 641ರಲ್ಲಿ ಪ್ರವೇಶಿಸಿದ. 9ನೆಯ ಶತಮಾನದಲ್ಲಿ ಅರಬ್ ರಾಜ್ಯಪಾಲರು ಈಜಿಪ್ಟನ್ನು ಬಾಗ್ದಾದಿನಿಂದ ಆಳುತ್ತಿದ್ದರು. ಅವರ ಪೈಕಿ ಒಬ್ಬನಾದ ಅಹ್ಮದ್ ಇಬ್ನ್ ಟುಲನ್ ಈಜಿಪ್ಟಿನ ಪ್ರಥಮ ಸ್ವತಂತ್ರ ಮುಸ್ಲಿಂ ದೊರೆಯಾದ. ಅಲ್ ಕತಾಯಿಯನ್ನು ಸ್ಥಾಪಿಸಿದವನಾತನೇ. ಅವನು ಕಟ್ಟಿಸಿದ ಪ್ರಸಿದ್ಧ ಮಸೀದಿ ಈಗಲೂ ಅಲ್ಲಿದೆ. 10ನೆಯ ಶತಮಾನದಲ್ಲಿ ಫಾತಿಮೈಟರು ಈಜಿಪ್ಟನ್ನು ಆಕ್ರಮಿಸಿಕೊಂಡರು. ಅವರ ಸೇನಾಪತಿ ಚೌಹರ್ ಅಲ್ ರೂಮಿ ಅಲ್ ಕತಾಯ್ ಉತ್ತರದಲ್ಲಿ ಅಲ್ ಕಹೀರ (ವಿಜೇತ) ಎಂಬ ಹೆಸರಿನ ಹೊಸ ರಾಜಧಾನಿ ಕಟ್ಟಿಸಿದ. ಕೈರೋ ಎಂಬ ಹೆಸರು ಬಂದದ್ದು ಇದರಿಂದ. ಇದರ ಸುತ್ತಣ ಕೋಟೆಯ ಒಂದು ಭಾಗವೂ ಮೂರು ಹೆಬ್ಬಾಗಿಲುಗಳೂ ಇಂದಿಗೂ ಉಳಿದಿವೆ. ಅನಂತರ ಈಜಿಪ್ಟನ್ನು ಅಯುಬೆಟ್ಟರು ಆಳಿದರು (1169-1250). ಈ ವಂಶದ ಮೊದಲಿಗ ಹಾಗೂ ದೊಡ್ಡ ದೊರೆ ಸಲಾದಿನ್. ಈತ ದುರ್ಗದ ಗೋಡೆಯನ್ನು ವಿಸ್ತರಿಸಿದ. 1250 ರಿಂದ 1517ರ ತನಕ ಮ್ಯಾಮಲೂಕ್ ವಂಶದವರು ಆಳಿದರು. ಇವರು ಕ್ರೂರಿಗಳೂ ಅನೈತಿಕರೂ ಆಗಿದ್ದರೂ ಇವರ ಕಾಲದಲ್ಲಿ ಒಳ್ಳೊಳ್ಳೆಯ ಕಟ್ಟಡಗಳೂ ಮಸೀದಿಗಳೂ ನಿರ್ಮಿತವಾದುವು. ಇಂದಿನ ಲೆಬನನ್, ಇಸ್ರೇಲ್, ಜೋರ್ಡನ್, ಸಿರಿಯ, ಈಜಿಪ್ಟ್ ಇವೆಲ್ಲ ಇವರ ಆಳ್ವಿಕೆಗೆ ಒಳಪಟ್ಟಿದ್ದುವು. ಕೈರೋ ಮತ್ತು ಡಮಾಸ್ಕಸ್‌ಗಳು ಈ ಸಾಮ್ರಾಜ್ಯದ ಜಂಟಿ ರಾಜಧಾನಿಗಳಾಗಿದ್ದುವು. ಇವೆರಡರ ನಡುವೆ 800 ಕಿ.ಮೀ. ದೂರವಿದ್ದರೂ ಇವೆರಡಕ್ಕೂ ಪರಸ್ಪರ ಸಂಪರ್ಕ ಏರ್ಪಡಿಸಲಾಗಿತ್ತು.

1517ರಲ್ಲಿ ಕೈರೋ ನಗರ ಆಟೊಮನ್ ತುರ್ಕರಿಗೆ ವಶವಾಯಿತು. ಮ್ಯಾಮಲೂಕರ ಕೊನೆಯ ಸುಲ್ತಾನನ ದೇಹವನ್ನು ಅವರು ಜ಼ುವೇಲ ಮಹಾದ್ವಾರಕ್ಕೆ ನೇಣುಹಾಕಿದರು. ಇವರ ಕಾಲದಲ್ಲಿ ಕಲೆ ತಲೆಯೆತ್ತದಂತಾಯಿತು. ಮುಂದಿನ 300 ವರ್ಷಗಳಲ್ಲಿ ಇಲ್ಲಿ ಅನೇಕ ಮಸೀದಿಗಳ ನಿರ್ಮಾಣವಾದರೂ ಇವೆಲ್ಲ ಬಹುತೇಕ ಒಂದೇ ತೆರನಾಗಿದ್ದುವು.

1798ರಲ್ಲಿ ಕೈರೋ ಫ್ರೆಂಚರ ವಶವಾಯಿತು. 1801ರಲ್ಲಿ ಬ್ರಿಟಿಷ್ ಮತ್ತು ತುರ್ಕಿ ಸೈನ್ಯಗಳು ಫ್ರೆಂಚರನ್ನು ಓಡಿಸಿ ಅದನ್ನು ತುರ್ಕಿಗೆ ಕೊಟ್ಟುವು. ಈಜಿಪ್ಟಿನ ಜನ 1805ರಲ್ಲಿ ಮಹಮದ್ ಅಲಿಯನ್ನು ತಮ್ಮ ರಾಜ್ಯಪಾಲನನ್ನಾಗಿ ಆಯ್ಕೆ ಮಾಡಿದರು. ಈತ ಇನ್ನೂ ಅಳಿದುಳಿದಿದ್ದ, ತನಗೆ ತೊಡಕಾಗಿದ್ದ ಮ್ಯಾಮಲೂಕರನ್ನು ಕೊಂದು ತಾನೇ ಸರ್ವಾಧಿಕಾರಿಯಾದ. ಅಂದಿನಿಂದ ಕೈರೋ ಮತ್ತೆ ಒಂದು ಸ್ವತಂತ್ರ ರಾಜ್ಯದ ರಾಜಧಾನಿಯಾಯಿತು. ಕೈರೋವನ್ನು ಬ್ರಿಟಿಷರು ಆಕ್ರಮಿಸಿಕೊಂಡದ್ದು 1882ರಲ್ಲಿ. ಎರಡನೆಯ ಮಹಾಯುದ್ಧದಲ್ಲಿ ಅದು ಬ್ರಿಟಿಷ್ ಮಧ್ಯಪೂರ್ವ ಸೇನಾಧಿಪತ್ಯದ ಮುಖ್ಯ ಕಚೇರಿಯ ಸ್ಥಳವಾಗಿತ್ತು. ಬ್ರಿಟಿಷ್ ಸೇನೆ ಕೈರೋವನ್ನು ಬಿಟ್ಟು ತೆರಳಿದ್ದು 1946ರಲ್ಲಿ.

(ಬಿ.ಎಸ್.ಎಚ್.)

**ಕೈರ್‍ಯಾಂತಸ್ :** ಬಹು ಸುಂದರವಾದ ವಿವಿಧ ಬಣ್ಣದ ಸುವಾಸನಾಯುಕ್ತವಾದ ಹೂಗಳನ್ನು ಬಿಡುವ ಒಂದು ಸಸ್ಯಜಾತಿ; ಕ್ರೂಸಿಫೆರೀ ಕುಟುಂಬಕ್ಕೆ ಸೇರಿದೆ. ಇದನ್ನು ಸಾಮಾನ್ಯವಾಗಿ ವಾಲ್ ಫ್ಲವರ್ ಎಂದು ಕರೆಯಲಾಗುತ್ತದೆ. ಇದು ವರ್ಷಪೂರ್ತಿ ಹೂಗಳನ್ನು ಬಿಡುವುದರಿಂದ ಇದನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಮನೆ ತೋಟಗಳಲ್ಲಿ ಬೆಳೆಸುತ್ತಾರೆ.

ಕೈರ್‍ಯಾಂತಸ್ ದಕ್ಷಿಣ ಯುರೋಪಿನ ಮೂಲವಾಸಿ. ದ್ವೈವಾರ್ಷಿಕ ಇಲ್ಲವೆ ಏಕವಾರ್ಷಿಕ ಸಸ್ಯ. ಇದು ಸು3048 ಮೀ – 4572 ಮೀ ಎತ್ತರ ಬೆಳೆಯುತ್ತದೆ. ಇದರ ಎಲೆಗಳು ನೀಳಾಕಾರದವೂ ಊದಾಮಿಶ್ರಿತ ಹಸುರು ಬಣ್ಣದವೂ ಆಗಿವೆ. ಅಂಚು ನಯ. ಹೂಗಳು ಚಿಕ್ಕವು. ಅವುಗಳ ಬಣ್ಣ ಕಿತ್ತಳೆ, ಕಂದು, ಕೆಂಪು, ಹಳದಿ, ಕೆನ್ನೀಲಿ, ಗುಲಾಬಿ–ಹೀಗೆ ವೈವಿಧ್ಯಪೂರ್ಣ. ಪುಷ್ಪಪತ್ರದ ಬುಡದಲ್ಲಿ ಒಂದು ರೀತಿಯ ಕೋಶವಿದೆ. ಹಣ್ಣು ಸ್ವಲ್ಪ ಉದ್ದವಾಗಿದೆ. ಇದಕ್ಕೆ ನಾಲ್ಕು ಮೂಲೆಗಳಿವೆ. ಹಣ್ಣಿನ ಒಳಗೆ ಬೀಜಗಳು ಎರಡು ಸಾಲಿನಲ್ಲಿ ಜೋಡಣೆಗೊಂಡಿವೆ.

ಕೈರ್‍ಯಾಂತಸ್ ಕೈರಿ ಪ್ರಭೇದ

ಕೈರ್‍ಯಾಂತಸ್ ಜಾತಿಯಲ್ಲಿ ಕೈರಿ, ಆಲ್ಪಿನಸ್, ಮ್ಯುಟಾಬಿಲಿಸ್, ಮಾರ್ಷಲಿಯೈ, ಅಲಿಯೋನಿಯೈ ಮುಂತಾದ ಹಲವಾರು ಜನಪ್ರಿಯ ಪ್ರಭೇದಗಳಿವೆ. ಒಂದೊಂದು ಪ್ರಭೇದದಲ್ಲೂ ಅನೇಕ ಬಗೆಗಳಿವೆ. ಇವುಗಳಲ್ಲಿ ಪರ್ಷಿಯನ್ ವಾಲ್ ಫ್ಲವರ್, ಅರ್ಲಿವಂಡರ್, ಫೈರ್ ಕಿಂಗ್, ಕ್ಲಾತ್ ಆಫ್ ಗೋಲ್ಡ್, ಸ್ಕಾರ್ಲೆಟ್ ಎಂಪರರ್, ವಲ್ಕನ್, ಟಾಮ್ ತಂಬ್, ಪರ್ಪಲ್ ಕ್ವೀನ್, ಹ್ಯಾಮ್ಲೆಟ್ ಮುಂತಾದವು ಮುಖ್ಯವಾದವು. ಇವಲ್ಲದೆ ಕೈರ್‍ಯಾಂತಸ್ ಕ್ಯಾಯೆನ್ಸಿಸ್ ಎಂಬ ಅಡ್ಡತಳಿಯೊಂದನ್ನು ಪಡೆಯಲಾಗಿದೆ. ಇದರ ಹೂ ಮೊಗ್ಗಿನ ಸ್ಥಿತಿಯಲ್ಲಿ ಕಂದುಬಣ್ಣಕ್ಕಿದ್ದು ಅರಳಿದಾಗ ಕಂದುಮಿಶ್ರಿತ ಕಿತ್ತಳೆಗೆ ತಿರುಗಿ ಕೊನೆಗೆ ಊದಾಬಣ್ಣವನ್ನು ತಾಳುತ್ತದೆ. ಈ ವರ್ಣವೈವಿಧ್ಯದಿಂದಾಗಿ ಕ್ಯಾಯೆನ್ಸಿಸ್ ಅಡ್ಡತಳಿ ಬಹುಜನಪ್ರಿಯವಾಗಿದೆ.

ಕೈರ್‍ಯಾಂತಸ್ ಗಿಡಗಳನ್ನು ಬೀಜಗಳಿಂದ ಇಲ್ಲವೆ ಕಾಂಡದ ತುಂಡುಗಳಿಂದ ವೃದ್ಧಿ ಮಾಡಬಹುದು. ತಂಪಾದ ಹವಾಗುಣ ಮತ್ತು ನೀರು ಚೆನ್ನಾಗಿ ಬಸಿದುಹೋಗುವಂಥ ಫಲವತ್ತಾದ ಮಣ್ಣು ಇದರ ಬೇಸಾಯಕ್ಕೆ ಶ್ರೇಷ್ಠ. ದ್ವೈವಾರ್ಷಿಕ ಬಗೆಗಳು ಮೈದಾನ ಪ್ರದೇಶಕ್ಕಿಂತ ಗುಡ್ಡಗಾಡುಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ. ಏಕವಾರ್ಷಿಕ ಬಗೆಗಳಿಗೆ ಮೈದಾನ ಪ್ರದೇಶ ಉತ್ತಮ. ಮೈದಾನಪ್ರದೇಶಗಳಲ್ಲಿ ಚೆನ್ನಾಗಿ ತಯಾರಿಸಿದ ಮಡಿಗಳಲ್ಲಿ ಸೆಪ್ಟೆಂಬರ್– ಅಕ್ಟೋಬರ್ ತಿಂಗಳಲ್ಲಿಯೂ ಗುಡ್ಡಗಾಡುಗಳಲ್ಲಿ ಫೆಬ್ರವರಿಯಿಂದ ಮಾರ್ಚ್ ಅಥವಾ ಆಗಸ್ಟ್–ಅಕ್ಟೋಬರ್ ತಿಂಗಳಲ್ಲಿಯೂ ಬೀಜಗಳನ್ನು ಬಿತ್ತಬೇಕು. ಸಸಿಗಳು ಸು. 5ಸೆಂ.ಮೀ ಎತ್ತರ ಬೆಳೆದ ಮೇಲೆ ಬೇಕಾದ ಸ್ಥಳಗಳಲ್ಲಿ ಸು. 25ಸೆಂ.ಮೀ ಅಂತರ ಕೊಟ್ಟು ನಾಟಿ ಮಾಡಬೇಕು. ಕಾಂಡದ ತುಂಡುಗಳಿಂದ ವೃದ್ಧಿ ಮಾಡುವುದಾದರೆ ಸೆಪ್ಟೆಂಬರ್ ತಿಂಗಳು ಯುಕ್ತವಾದ ಕಾಲ. ದ್ವೈವಾರ್ಷಿಕ ಬಗೆಗಳು ಬಿತ್ತಿದ 6–8 ತಿಂಗಳ ಅನಂತರವೂ ಏಕವಾರ್ಷಿಕ ಬಗೆಗಳು ಬಿತ್ತಿದ 3–3½ ತಿಂಗಳ ಅನಂತರವೂ ಹೂ ಬಿಡುತ್ತವೆ. (ಎನ್.ಆರ್.ಆರ್.)

**ಕೈಲ್ ಮುಹೂರ್ತ :** ಕೊಡವರ ಒಂದು ಹಬ್ಬ. ಆಗಸ್ಟ್ ಕಡೆಯ ಹೊತ್ತಿಗೆ ಗದ್ದೆಯ ಕೆಲಸವೆಲ್ಲ ಮುಗಿದ ಮೇಲೆ ವಿಶ್ರಾಂತಿಗಾಗಿ, ವಿನೋದಕ್ಕಾಗಿ ಜನ ಒಟ್ಟಾಗಿ ಬೇಟೆಗೆ ತೊಡಗುವುದು ಈ ಹಬ್ಬದ ವೈಶಿಷ್ಟ್ಯ.

ಸಾಮಾನ್ಯವಾಗಿ ಈ ಹಬ್ಬವನ್ನು ಕೈದುಪೊಳುದು, ಕೈಲ್‌ಪೋದು, ಕೈಲ್‌ಪೊಡು ಎಂದೂ ಕರೆಯುತ್ತಾರೆ. ಕೈದು ಎಂದರೆ ಆಯುಧಗಳನ್ನು ಪೊಳುದು ಎಂದರೆ ಬೆಳಗಿ ಪೂಜಿಸುವುದು, ಬಳಸುವುದು ಎಂದು ಕೆಲವರು ವ್ಯಾಖ್ಯಾನ ಮಾಡುತ್ತಾರೆ. ಕೈಲ್‌ಪೊಡು ಎಂದರೆ ಒಬ್ಬರು ಮತ್ತೊಬ್ಬರೊಡನೆ ಕೂಡಿ ನಲಿಯುವ ಹಬ್ಬ (ಕೈಲ್ ಎಂದರೆ ಕೈ ಅಥವಾ ಹಸ್ತ, ಪೊಡು ಎಂದರೆ ಸೇರುವಿಕೆ, ಅಂದರೆ ಪರಸ್ಪರರ ಕೈಕೂಡಿಸಿ ನಡೆಸುವ ಹಬ್ಬ) ಎಂಬುದಾಗಿ ಮತ್ತೆ ಕೆಲವರು ವ್ಯಾಖ್ಯಾನ ಮಾಡುತ್ತಾರೆ. ಇಂದಿಗೂ ದೂರದ ಸ್ಥಳಗಳಲ್ಲಿ ವಾಸಿಸುವ ನಂಟರಿಷ್ಟರು ಈ ಹಬ್ಬಕ್ಕಾಗಿ ಒಂದು ಕಡೆ ಸೇರುತ್ತಾರೆ.

ವ್ಯವಸಾಯದ ಕಾಲ ಪ್ರಾರಂಭವಾದಾಗ, ನಾಟಿ ಕೆಲಸ ಮುಗಿಯುವವರೆಗೂ ಬೇಟೆಗೆ ಹೋಗಬಾರದಾಗಿ ಬೇಟೆಯ ಆಯುಧಗಳನ್ನೆಲ್ಲ ಮನೆಯ ನೆಲ್ಲಕ್ಕಿ ಬಾಡೆ ಅಥವಾ ಕನ್ನಿಕೋಂಬರೆಗಳಲ್ಲಿ (ಒಂದು ವಿಶಿಷ್ಟ ಕೊಠಡಿ; ಪೂಜಾಗೃಹ) ಇಟ್ಟಿರುತ್ತಾರೆ. ಹಬ್ಬದ ದಿನ ಮನೆಯ ಹಿರಿಯರಿಂದ ಮೊದಲ್ಗೊಂಡು ಕಿರಿಯರವರೆಗೆ ಎಲ್ಲರೂ ಆಯುಧಗಳನ್ನು ಪೂಜಿಸಿ ಅನಂತರ ಅಂದೇ ಬೇಟೆಯನ್ನು ಪ್ರಾರಂಭಿಸುತ್ತಾರೆ.

ಸಾಮಾನ್ಯವಾಗಿ ಈ ಹಬ್ಬ ಸೆಪ್ಟೆಂಬರ್ 3ನೆಯ ತಾರೀಖು ನಡೆಯುತ್ತದೆ. ಕೊಡವರ ಲೆಕ್ಕದ ಪ್ರಕಾರ ಸಿಂಹಮಾಸದ 18ರಂದು ಇದು ಬೀಳುತ್ತದೆ. ಆದರೆ ನಾಲ್ಕುನಾಡು ಮತ್ತು ಮುತ್ತನಾಡು ಮುಂತಾದ ಕಡೆಯವರು ಅದೇ ಮಾಸದ 18ರಂದು ಈ ಹಬ್ಬವನ್ನು ಆಚರಿಸುತ್ತಾರೆ.

ಈ ಹಬ್ಬದ ಹಿಂದಿನ ದಿನವೇ ಮನೆಗೆ ಬೇಕಾದ ಹಂದಿಯ ಮಾಂಸವನ್ನು (ಪಂದಿಯರ್ಚಿ) ಸಿದ್ಧ ಮಾಡಿಕೊಳ್ಳುತ್ತಾರೆ. ಹಂದಿ ಸಾಕಲು ಶಕ್ತಿ ಇಲ್ಲದವರು ಕೊಂಡಾದರೂ ಹಂದಿಯ ಮಾಂಸವನ್ನು ಅಂದು ಪಡೆಯಲೇಬೇಕು ಎಂಬ ನಿಯಮವೂ ಉಂಟು. ಅಂತೂ ಅಂದು ಸಂಜೆಯ ಹೊತ್ತಿಗೆ ಎಲ್ಲರ ಮನೆಗೂ ಹಂದಿಯ ಮಾಂಸ ತಲಪಿರಬೇಕು.

ಹಬ್ಬದ ದಿನ ಬೆಳಗ್ಗೆ ಎದ್ದ ತತ್‌ಕ್ಷಣ, ಮನೆಯಿಂದ ದೂರದಲ್ಲಿರುವ ದೇವಸ್ಥಾನದ ಒಂದು ಗೊತ್ತಾದ ಸ್ಥಳಕ್ಕೆ ಊರವರೆಲ್ಲ ಬಂದು ನಿಶ್ಚಿತ ಗಿಡವೊಂದರಿಂದ ಕೈಬೆರಳು ಗಾತ್ರದ ಗೇಣುದ್ದದ ಮೂರು ಮೂರು ತುಂಡುಗಳನ್ನು ಕಡಿದು, ಅವುಗಳ ಒಂದು ತುದಿಯನ್ನು ಚೂಪಾಗಿಸಿ, ಮತ್ತೊಂದು ತುದಿಯನ್ನು ಸೀಳಿ, ನೇರಳೆ ಎಲೆಗಳನ್ನು ಗರಿಗಳಂತೆ ಕಟ್ಟಿ, ಬಾಣಗಳನ್ನು ತಯಾರಿಸಿ, ಹಾಲು ಬರುವ ಒಂದು ಗಿಡಕ್ಕೆ ಗುರಿಯಿಟ್ಟು ಬಾಣಗಳನ್ನು ಪ್ರಯೋಗಿಸುತ್ತಾರೆ. ಈ ಪದ್ಧತಿ ಕೆಲವು ಕಡೆ ಮಾತ್ರ ರೂಢಿಯಲ್ಲಿದೆ. ಅನಂತರ ವ್ಯವಸಾಯಕ್ಕೆ ಬಳಸಿದ ನೇಗಿಲು, ಸನಿಕೆ ಮುಂತಾದ ಪರಿಕರಗಳನ್ನು ಪೂಜಿಸುತ್ತಾರೆ. ದನಕರುಗಳನ್ನು ತೊಳೆದು, ಪೂಜಿಸಿ, ಪಣೆಪುಟ್ ಎಂಬ ತಿನಿಸನ್ನು ನಿವೇದಿಸುತ್ತಾರೆ. ಪಣೆಪುಟ್ ಎಂದರೆ ಅಕ್ಕಿಹಿಟ್ಟು, ಬೆಲ್ಲ, ಏಲಕ್ಕಿ ಮುಂತಾದವುಗಳಿಂದ ತಯಾರಿಸಿದ ಒಂದು ಸಿಹಿ ತಿಂಡಿ. ಅದೇ ಪ್ರಸಾದವನ್ನು ಅನಂತರ ಮನೆಯವರೂ ಸೇವಿಸುತ್ತಾರೆ. ಬೆಳಗಿನ ಪೂಜೆಯಲ್ಲಿ ಅವರು ಪೂಜಿಸುವ ಮುಖ್ಯ ದೇವರು ಸೂರ್ಯ.

ಮಧ್ಯಾಹ್ನ ಪಂದಿಯರ್ಚಿಯ ಸಾರನ್ನು ಅಕ್ಕಿ ಕಡುಬನ್ನು ವಿಶೇಷ ಭಕ್ಷ್ಯವಾಗಿ ಊಟ ಮಾಡುತ್ತಾರೆ. ಆಮೇಲೆ ಸಾರಾಯಿ ಕಳ್ಳು ಮುಂತಾದುವನ್ನು ಮನಸ್ಸು ಬಂದಷ್ಟು ಕುಡಿಯುತ್ತಾರೆ. ಹಬ್ಬದ ಅತಿ ಮಹತ್ತ್ವದ ಘಟ್ಟ ಮಧ್ಯಾಹ್ನದ ಊಟ.

ಊಟದ ಅನಂತರ ಹಬ್ಬ ತನ್ನ ಮೂರನೆಯ ಘಟ್ಟವನ್ನು ತಲುಪುತ್ತದೆ. ಮಧ್ಯಾಹ್ನ ಕನ್ನಿಕೋಂಬರೆಯಲ್ಲಿಟ್ಟಿರುವ ಆಯುಧಗಳಿಗೆ, ಧೂಪ, ದೀಪ, ಗಂಧ, ತಿಲಕಗಳಿಂದ ಪೂಜೆ ನಡೆಸುತ್ತಾರೆ. ಈ ಪೂಜೆಗೆ ಒಂದು ವಿಶಿಷ್ಟ ಬಗೆಯ ಪುಷ್ಪಗಳನ್ನು ಮಾತ್ರ ಬಳಸುತ್ತಾರೆ. ಎಲ್ಲರೂ ಹೊಸ ಬಟ್ಟೆ ಧರಿಸುತ್ತಾರೆ. ಕುಟುಂಬದ ಗಂಡಸರೆಲ್ಲರೂ ಪೂಜೆಗಿಟ್ಟಿರುವ ಆಯುಧಗಳ ಮುಂದೆ ಬಂದು ನಿಲ್ಲುತ್ತಾರೆ. ಕಾರಣನನ್ನು ಪೂಜಿಸುತ್ತಾರೆ. ಕಾರಣ ಎಂದರೆ ಮನೆತನದ ಮೊದಲ ಹಿರಿಯ. ಆಮೇಲೆ ಕುಟುಂಬದ ಹಿರಿಯ ವ್ಯಕ್ತಿ ಒಂದು ಕೋವಿಯನ್ನು ಕೈಗೆ ತೆಗೆದುಕೊಂಡು, ಅಲ್ಲಿ ನಿಂತಿರುವವರಲ್ಲಿ ಹಿರಿಯನೊಬ್ಬನಿಗೆ ಅದನ್ನು ನೀಡುತ್ತಾನೆ. ಹಾಗೆ ಕೋವಿಯನ್ನು ನೀಡುವಾಗ 'ನರಿನೋ ಪಂದಿನೋ ಬಟ್ಟೆ ಕೆಟ್ಟ ಪಣಂಗ್ ಮಿತ್ತುರುಕ್ ತೊಣೆಯಾಯಿತ್ ನಿಲ್, ರಾಜಂಗ್ ಮಿನಿಯತೆ, ದೇವರ ಮರೆಯತೆ' (ಹುಲಿ ಬರುವಾಗ, ಹಂದಿ ಬರುವಾಗ ದಾರಿ ಬಿಟ್ಟು ನಿಲ್ಲು, ಶತ್ರುವನ್ನು ತಡೆಯಲು ಹೋಗಬೇಡ, ಹಾಗೆ ತಡೆಯುವ ಹಾಗಿದ್ದರೆ, ಆತ ಚಲಿಸದಂತೆ ದಾರಿಯನ್ನು ಅಡ್ಡಗಟ್ಟಿ ತಡೆ, ಮಿತ್ರನಿಗೆ

ಸಹಾಯಕನಾಗಿರು, ರಾಜನನ್ನು ಮೀರದೆ, ದೇವರನ್ನು ಮರೆಯದೆ ಇರು) ಎಂದು ಬುದ್ಧಿವಾದ ಹೇಳುತ್ತಾನೆ. ಅನಂತರ ಉಳಿದವರು ಕ್ರಮವಾಗಿ ಆಯುಧಗಳನ್ನು ಪಡೆಯುತ್ತಾರೆ. ಹಾಗೆ ಮಾಡುವಾಗ ಎಲ್ಲರೂ ಆಯುಧಗಳನ್ನು ಕೊಡುವ ಹಿರಿಯನ ಪಾದ ಮುಟ್ಟಿ ನಮಸ್ಕರಿಸುತ್ತಾರೆ.

ಇದಾದ ಅನಂತರ ಎಲ್ಲ ಗಂಡಸರೂ ಊರಿನ ದೇವಾಲಯದ ಬಳಿ ಸೇರಿ, ವಿವಿಧ ರೀತಿಯ ಆಟಗಳ ಸ್ಪರ್ಧೆ ನಡೆಸುತ್ತಾರೆ. ಅದೇ ಸಂದರ್ಭದಲ್ಲಿ ದೂರದಲ್ಲಿ ಕಟ್ಟಿರುವ ತೆಂಗಿನಕಾಯಿಗೆ ಗುಂಡು ಹಾರಿಸುವುದು ಮುಂತಾದ ವಿನೋದಗಳು ನಡೆಯುತ್ತವೆ. ಹಿಂದಿನ ಕಾಲದಲ್ಲಿ ಗಂಡಸರೆಲ್ಲ ಯುದ್ಧಕ್ಕೆ ಹೋಗುತ್ತಿದ್ದರು. ಈಗ ಬೇಟೆಗೆ ಹೋಗುತ್ತಾರೆ.

ಬೇಟೆಗೆ ನಾಯಿ, ನಗಾರಿಗಳನ್ನು ಸಜ್ಜು ಮಾಡಿಕೊಳ್ಳುತ್ತಾರೆ. ನಾಯಿ ಕೂಡಿಸುವವರು ಎಲ್ಲಿ ನಿಲ್ಲಬೇಕು ಎಂಬುದರ ಬಗ್ಗೆ ವಿಧಿವತ್ತಾದ ನಿಯಮಗಳಿವೆ. ಬೇಟೆಯಲ್ಲಿ ಯಾವುದೇ ಕಾಡುಪ್ರಾಣಿಗೆ ಗುಂಡು ಹೊಡೆದು ಕೊಲ್ಲದೆ ಗುರಿ ತಪ್ಪಿದವರಿಗೆ ತಕ್ಕ ಶಿಕ್ಷೆಯೂ ಇದೆ. ಬೇಟೆಯಲ್ಲಿ, ಆಹಾರವಾಗಿ ಉಪಯೋಗಿಸುವ ಪ್ರಾಣಿಯನ್ನು ಕೊಂದವನಿಗೆ ಅದರ ತಲೆ, ಒಂದು ತೊಡೆ ಮತ್ತು ಬೆನ್ನಿನ ಹುರಿಯನ್ನು ಬಹುಮಾನವಾಗಿ ಕೊಡುತ್ತಾರೆ. ಸತ್ತುಬಿದ್ದ ಪ್ರಾಣಿಯನ್ನು ಮೊದಲು ಮುಟ್ಟಿದವನಿಗೆ ಆ ಪ್ರಾಣಿಯ ಒಂದು ಕಾಲು ಮತ್ತು ಬೆನ್ನಿನ ಹುರಿಯ ಒಂದು ಭಾಗ ಬಹುಮಾನವಾಗಿ ಸಿಗುತ್ತದೆ. ಉಳಿದವರು ಮಿಕ್ಕ ಮಾಂಸವನ್ನು ಹಂಚಿಕೊಳ್ಳುತ್ತಾರೆ. ಸಾಮಾನ್ಯವಾಗಿ ಕೈಲ್ ಮುಹೂರ್ತ ದೇವರ ದಿವಸಗಳಾದ ಬುಧವಾರವೋ ಶನಿವಾರವೋ ಬಂದರೆ ಅಂದು ಬೇಟೆಗೆ ಹೋಗುವುದಿಲ್ಲ.

ಹೀಗೆ ಈ ಹಬ್ಬ ಒಂದೇ ದಿನದಲ್ಲಿ ಮುಕ್ತಾಯಗೊಂಡರೂ ಹಬ್ಬದ ನೆನಪು ಮಾತ್ರ ಅನೇಕ ದಿನಗಳವರೆಗೆ ಕೊಡವರ ಮನಸ್ಸಿನಲ್ಲಿ ತೇಲುತ್ತಲೇ ಇರುತ್ತದೆ. ಪ್ರಾಚೀನ ಸಮಾಜದ ಅಗತ್ಯಗಳಲ್ಲೊಂದಾದ ಬೇಟೆಯ ಪ್ರಾಮುಖ್ಯವನ್ನು ಎತ್ತಿ ತೋರಿಸುತ್ತದಾಗಿ ಈ ಹಬ್ಬಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. (ಡಿ.ಬಿ.ಆರ್.)

**ಕೈಲಾಸ [1] :** ಹಿಮಾಲಯದ ಮಾನಸ ಸರೋವರದ ಪಕ್ಕದಲ್ಲಿರುವ ಪರ್ವತ. ಪ್ರಮಥಗಣಗಳ ಒಡೆಯನಾದ ಶಿವನ ವಾಸಸ್ಥಾನವೆಂದು ಹಿಂದೂಗಳ ನಂಬಿಕೆ. ಸತ್ಯಲೋಕ, ವೈಕುಂಠ, ಕೈಲಾಸ–ಇವು ಆಕಾಶದ ಮೇಲಿರುವ ಪವಿತ್ರಲೋಕಗಳೆಂದು ಪುರಾಣಗಳ ಹೇಳಿಕೆ. ಕೈಲಾಸಕ್ಷೇತ್ರ ಪರಮೇಶ್ವರನ ರಾಜಧಾನಿಯೆಂದೂ ಪಾರ್ವತಿ, ಗಣಪತಿ, ವೀರಭದ್ರ, ಕುಮಾರ, ನಂದಿ, ಷಣ್ಮುಖ, ಭೃಂಗಿ ಮೊದಲಾದ ಪ್ರಮಥರು ಇಲ್ಲಿ ವಾಸಮಾಡುವರೆಂದೂ ಪುರಾಣಗಳಿಂದ ತಿಳಿದುಬರುತ್ತದೆ. ಅವುಗಳ ಪ್ರಕಾರ ಇದರ ಸ್ಥಾನ ಮಧ್ಯ ಹಿಮಾಲಯದ ಹಿಂಭಾಗವೆನ್ನಲಾಗಿದೆ. (ಬಿ.ಎಸ್.)

ಭೂಗೋಳವಿಜ್ಞಾನದ ರೀತ್ಯ ಕೈಲಾಸಪರ್ವತಶ್ರೇಣಿ ಹಿಮಾಲಯದ ಲಡಾಖ್ ಶ್ರೇಣಿಗೆ 80 ಕಿಮೀ ದೂರದಲ್ಲಿ ಸಿಂಧೂನದಿಯ ಉತ್ತರ ದಡದ ಕಡೆಗೆ ಹಬ್ಬಿದೆ. ಕೈಲಾಸ ಶಿಖರದ ಎತ್ತರ 6675 ಮೀ. ಶಿಖರದ ಆಕಾರ ಹಿಂದೂ ದೇವಾಲಯದ ಗೋಪುರದಂತಿದೆ.

ಹಿಮದಿಂದ ಆವೃತವಾದ ದೇವಾಲಯದ ಶಿಖರ

ಪರ್ವತಶ್ರೇಣಿ ಆರ್ಕೋಸ್, ಕಂಗ್ಲಾಮರೇಟು ಹಾಗೂ ಇನ್ನಿತರ ಶಿಲೆಗಳಿಂದಾದುದು. ಕಂಗ್ಲಾಮರೇಟು ಶಿಲಾಸ್ತರದ ದಪ್ಪ ಸು. 2,000 ಮೀಟರುಗಳೆಂದು ಅಂದಾಜು ಮಾಡಲಾಗಿದೆ. ಶ್ರೇಣಿಯ ಉತ್ತರ ಭಾಗದಲ್ಲಿ ಕೈಲಾಸ ಗ್ರಾನೈಟ್ ಶಿಲೆಯ ಮೇಲೆ ಕಂಗ್ಲಾಮರೇಟು ಶಿಲೆ ಸಂಗ್ರಹವಾಗಿದೆ. ಕೈಲಾಸಗ್ರಾನೈಟ್ ಶಿಲೆ ಹಾರ್ನ್‌ಬ್ಲೆಂಡ್ ರೀತಿಯದು. ಈ ಶ್ರೇಣಿ ಕ್ರಿಟೇಷಸ್ ಕಲ್ಪದಲ್ಲಿ ನಿರ್ಮಾಣಗೊಂಡದ್ದೆಂದು ಭೂವಿಜ್ಞಾನಿಗಳ ಅಭಿಪ್ರಾಯ. ಇಲ್ಲಿ ಇಯೋಸೀನ್ ಕಲ್ಪದ ಅನಂತರದ ಶಿಲೆಗಳಾವುವೂ ದೊರೆತಿಲ್ಲ. *

**ಕೈಲಾಸ [2] :** ತಾಯಿನಾಡು ಪ್ರಕಾಶನ ಸಂಸ್ಥೆ 1963ರ ಆಗಸ್ಟ್ ತಿಂಗಳಲ್ಲಿ ಆರಂಭಿಸಿದ ಕನ್ನಡ ಮಾಸಪತ್ರಿಕೆ, ಕಿರೀಟ ಅಷ್ಟದಳಾಕಾರದ 148 ಪುಟಗಳ ಈ ಪತ್ರಿಕೆ ಜನಾಭಿರುಚಿಯನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಎಡೆಕೊಡುತ್ತಿತ್ತು. ಅದರಲ್ಲಿ ಕಾಣಬರುತ್ತಿದ್ದ ಲೇಖನವೈವಿಧ್ಯದಿಂದ, ಅದಕ್ಕೆ ಸರಿದೂಗುವಂತಿದ್ದ ವರ್ಣಚಿತ್ರಬಾಹುಳ್ಯದಿಂದ ಪತ್ರಿಕೆ ಬಹು ಬೇಗ ಜನಪ್ರಿಯವಾಯಿತು. ಮೊದಲನೆಯ ಸಂಚಿಕೆಯನ್ನು ಪ್ರಾಯೋಗಿಕ ಸಂಚಿಕೆ ಎಂದು ಕರೆದು ಕನ್ನಡ ನಾಡಿನಲ್ಲೆಲ್ಲ ಉಚಿತವಾಗಿ ಹಂಚಿದ್ದು ಈ ಪತ್ರಿಕೆಯ ವೈಶಿಷ್ಟ್ಯ. ಇಂಥ ಪ್ರಯೋಗವನ್ನು ಬಹುಶಃ ಯಾವ ಪತ್ರಿಕೆಯೂ ಮಾಡಿಲ್ಲ. ಕಿರಿಯ ಬರಹಗಾರರ ಬೆನ್ನು ತಟ್ಟಿ ಹೊಸ ಲೇಖಕರ ಒಂದು ಪೀಳಿಗೆಯನ್ನು ಪತ್ರಿಕೆ ನಿರ್ಮಿಸಿತು. ಬರಹಗಾರರಲ್ಲದಿದ್ದರೂ ಜೀವನದ ಹಲವಾರು ಕ್ಷೇತ್ರಗಳಲ್ಲಿ ಕೆಲಸಮಾಡಿ ಅಪೂರ್ವವಾದ, ಸ್ವಾರಸ್ಯಕರವಾದ ಅನುಭವಗಳನ್ನು ಪಡೆದಿರತಕ್ಕವರಿಂದ ವಿಷಯ ಸಂಗ್ರಹಿಸಿ, ಲೇಖನಗಳನ್ನು ಪ್ರಕಟಿಸುವುದರಲ್ಲಿ ಕೈಲಾಸ ಹೊಸ ಹಾದಿಯನ್ನೇ ತೆರೆಯಿತೆನ್ನಬೇಕು. ಎನ್.ಎಸ್. ಸೀತಾರಾಮಶಾಸ್ತ್ರಿ, ಎಸ್. ವೆಂಕಟರಾವ್ ಇವರ ಸಂಯುಕ್ತಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಈ ಪತ್ರಿಕೆ 1967ರಲ್ಲಿ ನಿಂತುಹೋಯಿತು. (ವಿಇ.ಎಸ್.)

**ಕೈಲಾಸಂ, ತ್ಯಾಗರಾಜ ಪರಮಶಿವ :** 1884–1946. 1918ರಿಂದ ಹೊಸ ನಾಟಕ ಸೃಷ್ಟಿಯಿಂದ ಕನ್ನಡ ನಾಟಕ ಕ್ಷೇತ್ರವನ್ನು ಬೆಳಗಿದ ಜನಪ್ರಿಯ ನಾಟಕಕಾರ. ಕೈ ಎಂಬ ಸಂಕ್ಷಿಪ್ತ ನಾಮದಿಂದ ಪ್ರಸಿದ್ಧರಾಗಿದ್ದಾರೆ. ನುರಿತ ನಟರು ನಿರ್ದೇಶಕರು. ಕೈಲಾಸಂ ತಮ್ಮ ಅನೇಕ ನಾಟಕಗಳಲ್ಲಿ ಪಾತ್ರವಹಿಸಿದ್ದೂ ಉಂಟು.

ಕೈಲಾಸಂ ಹುಟ್ಟಿದ್ದು ಬೆಂಗಳೂರಾದರೂ ಇವರ ಹಿರಿಯರಿದ್ದದ್ದು ತಂಜಾವೂರಿನ ಬಳಿಯ ಒಂದು ಗ್ರಾಮದಲ್ಲಿ. ತಂದೆ ತ್ಯಾಗರಾಜ ಪರಮಶಿವ ಅಯ್ಯರ್ ಅವರು ಬೆಂಗಳೂರಿನಲ್ಲಿ ಮುನ್ಸೀಫರಾಗಿ ಜೀವನ ಪ್ರಾರಂಭಿಸಿ ಮುಖ್ಯ ನ್ಯಾಯಾಧೀಶರ ಪದವಿಗೆ ಏರಿ ನಿವೃತ್ತರಾದರು. ಅವರ ಮೂವರು ಗಂಡು ಮಕ್ಕಳಲ್ಲಿ ಕೈಲಾಸಂ ಹಿರಿಯವರು. ಕೈಲಾಸಂ ಅವರ ಬಾಲ್ಯದ ವಿದ್ಯಾಭ್ಯಾಸ ನಡೆದದ್ದು ಬೆಂಗಳೂರು, ಮೈಸೂರು, ಹಾಸನಗಳಲ್ಲಿ ಅನಂತರ

ಮದ್ರಾಸಿನಲ್ಲಿ. ಕೈಲಾಸಂ ವಿ.ಎಸ್.ಶ್ರೀನಿವಾಸ ಶಾಸ್ತ್ರಿಗಳ ನೆಚ್ಚಿನ ಶಿಷ್ಯ. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಪ್ರಥಮ ದರ್ಜೆಯಲ್ಲಿ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದರು. ಅನಂತರ ಮೈಸೂರು ಸರ್ಕಾರದ ಮಾಸಿಕ ವಿದ್ಯಾರ್ಥಿವೇತನ ಪಡೆದು ಲಂಡನ್ನಿಗೆ ತೆರಳಿ (1908) ರಾಯಲ್ ಕಾಲೇಜ್ ಆಫ್ ಸೈನ್ಸ್ ಸೇರಿ ಭೂ ವಿಜ್ಞಾನ ಅಧ್ಯಯನ ಮಾಡಿ ಏಳು ವಿಷಯಗಳಲ್ಲಿ ಮೊದಲ ದರ್ಜೆಯ ಪ್ರಶಸ್ತಿ ಗಳಿಸಿದರು. ಅನಂತರ ರಾಯಲ್ ಜಿಯಲಾಜಿಕಲ್ ಸೊಸೈಟಿಗೆ ಒಂದು ಮಹಾಪ್ರಬಂಧ ಬರೆದು ಕೊಟ್ಟು ಆ ಸಂಸ್ಥೆಯ ಫೆಲೊ ಆದರು. ಹಾಗೆ ಫೆಲೋಷಿಪ್ ಪಡೆದ ಭಾರತೀಯರಲ್ಲಿ ಇವರೇ ಮೊದಲಿಗರು. ವಿದ್ಯಾರ್ಜನೆ, ಜ್ಞಾನಾರ್ಜನೆಗಳಲ್ಲಿ ಹೇಗೋ ಹಾಗೆ ಕ್ರೀಡಾರಂಗದಲ್ಲಿಯೂ ಅಮಿತವಾದ ಆಸಕ್ತಿಯನ್ನು ಮೆರೆದು, ಹಾಕಿ, ಫುಟ್‌ಬಾಲ್‌ಗಳಲ್ಲಿ ಗೋಲ್‌ಕೀಪರ್ ಆಗಿದ್ದರು. ಅಲ್ಲಿಯೇ ಆಗ ನೆಲಸಿದ್ದ ಪ್ರೊಫೆಸರ್ ಯೂಜೀನ್ ಸ್ಯಾಂಡೋಗೆ ಮೆಚ್ಚಿನ ಶಿಷ್ಯರಾಗಿ ವ್ಯಾಯಾಮ ಪಟುವೆನಿಸಿಕೊಂಡು ಶರೀರದ ಸ್ನಾಯುಗಳ ಮೇಲೂ ಅಸಾಮಾನ್ಯ ಹತೋಟಿಯನ್ನು ಬೆಳೆಸಿಕೊಂಡರು. ಪಾಶ್ಚಾತ್ಯ ಸಂಗೀತವನ್ನು ಕೇಳಿ ಕಲಿತು ಅದರಲ್ಲೂ ಸಾಕಷ್ಟು ಪರಿಶ್ರಮ ಪಡೆದುಕೊಂಡರು. ಭಾರತೀಯ ಸಂಗೀತಕ್ಕೂ ಅದಕ್ಕೂ ಇರುವ ಸಾಮ್ಯ ವೈಷಮ್ಯಗಳನ್ನು ಗುರುತಿಸಿಕೊಂಡರು. ಅಲ್ಲಿಯ ಗಾಯಕರೊಡನೆ ಬೆರೆತು, ಅವರು ಇಂಗ್ಲಿಷಿನಲ್ಲೊ ಫ್ರೆಂಚಿನಲ್ಲೊ ಜರ್ಮನ್ ಭಾಷೆಯಲ್ಲೊ ಯಾವ ಹಾಡನ್ನೇ ನುಡಿಯಲಿ, ಅದಕ್ಕನುಗುಣವಾಗಿ ಕನ್ನಡ ಭಾಷೆಯಲ್ಲಿ ಅದೇ ರಾಗ ತಾಳ ಲಯಕ್ಕೆ ಹೊಂದಿಸಿಕೊಂಡು ಹಾಡಿ ಅವರನ್ನು ಅಚ್ಚರಿಗೊಳಿಸಿದುದುಂಟು. 'ಇಟಿಸ್ ಎ ಲಾಂಗ್ ವೇ ಟು ಟಿಪ್ಪರೇರೀ' ಎಂಬ ಹಾಡಿಗೆ ಪ್ರತಿಯಾಗಿ 'ನಮ್ಮ ತಿಪ್ಪಾರಳ್ಳಿ ಬಲು ದೂರ, ನಡಿಯಾಕೆ ಬಲು ದೂರ' ಎಂದು ಹಾಡಿ ಕನ್ನಡ ತಿಳಿಯದಿದ್ದ ಪ್ರೇಕ್ಷಕರಿಂದಲೂ ನಾಲ್ಕಾರು ಬಾರಿ ಒನ್ಸ್ ಮೋರ್ ಗಿಟ್ಟಿಸಿದವರಿವರು.

ಕೈಲಾಸಂ ಅವರ ತಂದೆ ರಾಮಾಯಣ ಅಧ್ಯಯನವನ್ನು ಚೆನ್ನಾಗಿ ಮಾಡಿದ್ದವರು ಮತ್ತು ದೊಡ್ಡಪ್ಪ ಕೀರ್ತಿ ಶೇಷ ಸರ್.ಟಿ. ಸದಾಶಿವಯ್ಯರ್ ಅವರೂ ಮುನ್ಸಿಫ್ ಪದವಿಯಿಂದ ಮುಖ್ಯ ನ್ಯಾಯಾಧೀಶ ಪದವಿಗೆ ಏರಿದ್ದವರೇ. ಅವರೂ ಮಹಾಭಾರತದ ಅಧ್ಯಯನ ಮಾಡಿದ್ದವರು; ಆ ಇಬ್ಬರೂ ಕೈಲಾಸಂ ಅವರನ್ನೂ ಕೂಡಿಸಿಕೊಂಡು ಮಹಾಭಾರತದಲ್ಲಿಯ ವೀರವ್ಯಕ್ತಿಗಳ ಕತೆಗಳನ್ನು ಹೇಳುತ್ತಿದ್ದರು. ಕೈಲಾಸಂ ಆಗಲೇ ಸಂಸ್ಕೃತವನ್ನೂ ಐಚ್ಛಿಕ ಭಾಷೆಯನ್ನಾಗಿ ಕಲಿತು, ತಮ್ಮ ಮಾವ ಅಮೃತಲಿಂಗ ಅಯ್ಯರವರಲ್ಲಿ ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಮಹಾಭಾರತವನ್ನು ಅಷ್ಟಿಷ್ಟು ತಾವಾಗಿಯೇ ಓದಿ, ಮುಂದೆ ಕಾಳಿದಾಸ, ಭವಭೂತಿ, ಭಾಸ ಮೊದಲಾದ ಮಹಾಕವಿಗಳ ಕೃತಿಗಳನ್ನೂ ಓದಿದರು. ಇವರ ಮೆಚ್ಚುಗೆಗೆ ಪಡೆದವನು ಭಾಸ. ಮುಂದೆ ಕೈಲಾಸಂ ಪ್ರೌಢ ಇಂಗ್ಲಿಷ್ ಭಾಷೆಯಲ್ಲಿ ಬರೆದ ದ ಪರ್ಪಸ್, ದ ಫುಲ್‌ಫಿಲ್‌ಮೆಂಟ್, ಕರ್ಣ–ಈ ನಾಟಕಗಳಲ್ಲಿ ಇದನ್ನು ಕಾಣಬಹುದು.

ಲಂಡನ್ನಿನ ಏಳು ವರ್ಷದ ಜೀವನಾವಕಾಶದಲ್ಲಿ ಕೈಲಾಸಂ ವಿವಿಧ ನಾಟಕ ಮಂದಿರಗಳಲ್ಲಿ ದಿನಗಟ್ಟಲೆ ನಡೆಯುತ್ತಿದ್ದ ನಾಟಕಗಳನ್ನು ಅಧ್ಯಯನ ಮಾಡಿದರು. ಆಗ ಷೇಕ್ಸ್‌ಪಿಯರ್, ಆಸ್ಕರ್ ವೈಲ್ಡ್, ಮೋಲಿಯೆರ್ಸ್ ಇಬ್ಸೆನ್, ಬರ್ನಾರ್ಡ್ ಷಾ, ಗಾಲ್ಸ್‌ವರ್ದಿ ಮುಂತಾದ ಪ್ರತಿಭಾವಂತರ ನಾಟಕಗಳ ಪ್ರದರ್ಶನದಿಂದಾಗಿ ನಾಟಕ ಕ್ಷೇತ್ರದಲ್ಲಿ ಒಂದು ನವೀನಯುಗವೇ ಆರಂಭವಾಗಿತ್ತು. ಈ ನಾವೀನ್ಯದ ಬೃಹತ್ ದರ್ಶನ ಮಾಡಿಕೊಂಡ ಕೈಲಾಸಂ, ಅಲ್ಲಿನ ಪ್ರದರ್ಶನ ತಂತ್ರಗಳನ್ನೂ ಕರತಲಾಮಲಕ ಮಾಡಿಕೊಂಡರು. ಆಗಿನ ಮಹಾ ನಟನಟಿಯರಾಗಿದ್ದ ಎಲ್ಲೆನ್ ಟೆರಿ ಜೂನಿಯರ್, ಹೆನ್ರಿ ಅರ್ವಿಂಗ್ ಜೂನಿಯರ್, ಹೆನ್ರಿ ಐನ್ಲಿ, ಅಯಾನ್ ಹೇ, ಸರ್ ಜಾನ್ ಫೋರ್ಬ್ಸ್ ರಾಬರ್ಟ್‌ಸನ್, ಬೀರ್‌ಬ್ಹಾಂ ಟ್ರೀ ಮುಂತಾದವರನ್ನು ಭೇಟಿ ಮಾಡಿ ಅವರ ಪಾತ್ರಾಭಿನಯಗಳನ್ನು ಕುರಿತು ಸುದೀರ್ಘ ಚರ್ಚೆ ನಡೆಸಿದರು. ಕ್ರಮೇಣ ಅವರನ್ನೆಲ್ಲ ಅನುಕರಿಸಿ ಆಯಾ ಪಾತ್ರಗಳನ್ನು ಅವರೆದುರಿಗೇ ಮಾಡಿ ತೋರಿಸಿ ಅವರ ಮೆಚ್ಚುಗೆ ಗಳಿಸಿದರು. ವಿಜ್ಞಾನ ಮತ್ತು ಕ್ರೀಡಾಶಾಸ್ತ್ರಗಳಲ್ಲಿ ಪಾಂಡಿತ್ಯ ಸಂಪಾದಿಸಿದ್ದಲ್ಲದೆ, ನಾಟಕಾಭಿನಯ ಶಾಸ್ತ್ರದಲ್ಲೂ ಪಾರಂಗತರಾಗಿ ತಮ್ಮ ಏಳು ವರ್ಷದ ಅಧ್ಯಯನ ಮುಗಿಸಿ 1915ರ ಡಿಸೆಂಬರ್‌ನಲ್ಲಿ ಮೈಸೂರಿಗೆ ಮರಳಿ ಮೈಸೂರು ಸರ್ಕಾರದ ಭೂವಿಜ್ಞಾನದ ಇಲಾಖೆಯಲ್ಲಿ ಪ್ರೊಬೇಷನರಿ ನೌಕರಿ ಹಿಡಿದರು. ಐದು ವರ್ಷ ಕೋಲಾರದ ಚಿನ್ನದ ಗಣಿ, ಹಾಸನ, ಶಿವಮೊಗ್ಗ, ಭದ್ರಾವತಿ, ಲಕ್ಕವಳ್ಳಿ, ತರೀಕೆರೆ, ಎಡೇಹಳ್ಳಿ ಮೊದಲಾದ ಸ್ಥಳಗಳಲ್ಲಿ ಕೆಲಸ ಮಾಡಿ ವಿವಿಧ ಮಾದರಿಯ ಕಲ್ಲುಗಳನ್ನು ಶೇಖರಿಸಿ ಪರೀಕ್ಷಿಸಿ ಅವುಗಳಿಗೆಲ್ಲ ಹೆಸರು ಕೊಟ್ಟರು. ಭೂವಿಜ್ಞಾನದಲ್ಲಿ ಪೂರ್ಣಪಾಂಡಿತ್ಯ ಹಾಗೂ ಸಹಜಾಸಕ್ತಿಯಿದ್ದರೂ ಕೈಲಾಸಂ ಒಂದು ದಿನ 1920ರ ಜುಲೈ ಒಂದರಂದು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು.

1918ರ ವೇಳೆಗೆ ಶಿವಮೊಗ್ಗೆಯಲ್ಲಿ ನೌಕರಿ ಹಿಡಿದಿದ್ದಾಗ ಆಗ್ಗೆ, ನ್ಯಾಯವಾದಿಯಾಗಿದ್ದ (ಅನಂತರ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ) ಶಂಕರನಾರಾಯಣರಾಯರ ಒತ್ತಾಯದಿಂದ ಸ್ಕೌಟ್ ತತ್ತ್ವಗಳನ್ನು ಪ್ರತಿಪಾದಿಸಲು ಸಹಾಯವಾಗುವಂತೆ ಕೈಲಾಸಂ ನಾಟಕವೊಂದನ್ನು ರಚಿಸಬೇಕಾಯಿತು. ತುಂಗಾತೀರದಲ್ಲಿ, ತಿಂಗಳಬೆಳಕಿನಲ್ಲಿ ಕೈಲಾಸಂ ನಾಟಕವನ್ನು ಬಾಯಲ್ಲಿ ಹೇಳುತ್ತಾ ಹೋದರು. ಕತೆಗಾರ ಆನಂದರು ಅದನ್ನು ಬರೆದುಕೊಂಡರು. ಕೈಲಾಸಂ ತಾವಾಗಿ ಯಾವತ್ತೂ ಬರೆದುದಿಲ್ಲ. ಇದುವರೆಗೆ ಅಚ್ಚಾಗಿರುವ ಅವರ ಕನ್ನಡ ನಾಟಕಗಳೆಲ್ಲ ಹೀಗೆಯೇ ಹೊರಬಿದ್ದಿರುವುದು. ಆಗ ಹೊರಬಂದ ನಾಟಕ ಮಕ್ಕಳ ಸ್ಕೂಲ್ ಮನೇಲಲ್ವೇ ಅಥವಾ ಟೊಳ್ಳುಗಟ್ಟಿ ಎಂಬ ಏಕಾಂಕ. ಅದೇ ಸಮಯಕ್ಕೆ ಬೆಂಗಳೂರಿಗೆ ಬಂದ ವಿಶ್ವಕವಿ ರವೀಂದ್ರನಾಥ ಠಾಕೂರರ ಸಮ್ಮುಖದಲ್ಲಿ ಇದರ ಪ್ರದರ್ಶನವಾಗಿ, ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಕೈಲಾಸಂ ಕರ್ನಾಟಕ ನಾಟಕ ಪ್ರಹಸನ ಪ್ರಪಿತಾಮಹರಾಗಿದ್ದರು. ಚೊಚ್ಚಲ ನಾಟಕದ ಪಾದಾರ್ಪಣದಿಂದ ಕನ್ನಡ ರಂಗಭೂಮಿಯಲ್ಲೇ ಕ್ರಾಂತಿ ಎಬ್ಬಿಸಿದ ಮಹಾವ್ಯಕ್ತಿ ಕೈಲಾಸಂ. ಅನಂತರ 28 ವರ್ಷಗಳ ಅವಧಿಯಲ್ಲಿ ಹೋಂ ರೂಲು, ಬಹಿಷ್ಕಾರ, ಗಂಡಸ್ಕತ್ರಿ, ನಮ್ಬ್ರಾಹ್ಮಣ್ಕೆ, ಬಂಡ್ವಾಳ್ವಿಲ್ಲದ್ಬಡಾಯಿ, ನಮ್ ಕ್ಲಬ್ಬು, ಅಮ್ಮಾವ್ರಗಂಡ, ಸತ್ತವನ ಸಂತಾಪ, ಅನುಕೂಲಕ್ಕೊಬ್ಬಣ್ಣ, ಸೀಕರ್ಣೆ ಸಾವಿತ್ರಿ, ಶೂರ್ಪನಖಾಕುಲವೈಭವ ಅಥವಾ ನಮ್ ಕಂಪ್ನಿ, ತಾಳೀಕಟ್ಟೋಕ್ಕೂಲೀನೇ, ಪೋಲಿಕಿಟ್ಟಿ, ಬಹಿಷ್ಕಾರ, ವೈದ್ಯನ ವ್ಯಾಧಿ, ಸೂಳೆ–ಎಂಬ ನಾಟಕಗಳೂ ತಾವರೆಕೆರೆ ಎಂಬ ಸಣ್ಣಕತೆಗಳ ಸಂಗ್ರಹವೂ ಇಂಗ್ಲಿಷಿನಲ್ಲಿ ದ ಪರ್ಪಸ್ (ಏಕಲವ್ಯ), ದಿ ಕರ್ಸ್ ಅಥವಾ ಕರ್ಣ ನಾಟಕಗಳೂ ದಿ ಬರ್ಡನ್ ಮತ್ತು ದಿ ಫುಲ್‌ಫಿಲ್‌ಮೆಂಟ್ ಎಂಬ ಕಿರುನಾಟಕಗಳೂ ಲಿಟ್ಲ್ ಲೇಸ್ ಅಂಡ್ ಪ್ಲೇಸ್ ಎಂಬ ಕವನಸಂಗ್ರಹವೂ ಹೊರಬಿದ್ದವು. ಪ್ರಕಟಿತವಾಗಿರುವ ಇವಲ್ಲದೆ, ಇನ್ನೂ ಅಪೂರ್ಣಾವಸ್ಥೆಯಲ್ಲಿದ್ದು ಪ್ರಕಟಗೊಳಿಸಬಹುದಾದ ಅನೇಕ ಪೌರಾಣಿಕ ನಾಟಕಗಳೂ ಸಾಮಾಜಿಕ ನಾಟಕಗಳೂ ಇವೆ. ಮಟ್ಟುಗಳಿಗೆ ಮಟ್ಟ, ಅಥವಾ ವಿವಿಧ ವಿನೋದ್ದಾವಳಿ–ಇವು ಇವರ ನಿಧನಾನಂತರ ಪ್ರಕಟವಾಗಿವೆ. ದಿ ಪರ್ಪಸ್, ಕರ್ಣ, ಕೀಚಕ, ಅಮ್ಮಾವ್ರ ಗಂಡ, ಹೋಂ ರೂಲು, ಬಂಡ್ವಾಳ್ವಿಲ್ಲದ್ಬಡಾಯಿ ನಾಟಕಗಳನ್ನು ಅನುಕ್ರಮವಾಗಿ ಸಂಸ್ಕೃತ, ಮರಾಠಿ, ಬಂಗಾಳಿ, ತೆಲುಗು, ಹಿಂದಿ ಮತ್ತು ಉತ್ತರ ಕರ್ನಾಟಕದ ದೇಸೀ ಭಾಷೆಗಳಿಗೆ ಪರಿವರ್ತಿಸಲಾಗಿದೆ. ಭೀಷ್ಮ ಅಥವಾ ಏಕರಾತ್ರ, ಭರತನ ಭಾರಗಳಲ್ಲದೆ ಅಜ್ಞಾನದ ಅಪಾಯವೇ ಮುಂತಾದ ಸಾಮಾಜಿಕ ನಾಟಕಗಳು ಪ್ರಕಟಗೊಂಡಿವೆ.



ಅಚ್ಚಗನ್ನಡದಲ್ಲಿ ರಚಿಸಬೇಕೆಂದಿದ್ದ 'ಪಾಂಡು ತ್ಯಾಗ'ವೆಂಬ ಮಹಾಭಾರತದ ಭಾಗ–ಕೈಲಾಸಂ ಅವರ ಬರವಣಿಗೆಯಲ್ಲಿ

ಲಂಡನ್ನಿನ ರಂಗಮಂದಿರಗಳಲ್ಲಿ ತಾವು ಅಭ್ಯಸಿಸಿದ ನಾಟಕಗಳಿಂದ ಕೈಲಾಸಂ ಅನೇಕಾನೇಕ ಹೊಸ ವಿಷಯಗಳನ್ನು ಗ್ರಹಿಸಿದರು. ಇಬ್ಸೆನ್, ಷಾ, ಗಾಲ್ಸ್‌ವರ್ದಿಯಂಥ ನಾಟಕಕಾರರ ಕೆಚ್ಚೆದೆ, ಪ್ರಖರ ಬುದ್ಧಿ; ಆಗಿನ ಜನಜೀವನದಲ್ಲಿಯ ಅನ್ಯಾಯ, ದುರ್ವ್ಯಾಪಾರ, ದುರ್ನಡತೆಗಳನ್ನು ಕಂಡು ನಾಟಕಕಾರರು ಕನಲಿದುದು; ದೀನದಲಿತರಲ್ಲಿ ಅನುಕಂಪ, ನಿಜಜೀವನಕ್ಕೆ ದೂರವಾದ ಅನೇಕಾನೇಕ ನಿರರ್ಥಕ ಗೊಡ್ಡು ಸಂಪ್ರದಾಯಗಳನ್ನು ರೂಢಮೂಲವಾಗಿ ಕಿತ್ತೊಗೆಯಬೇಕೆಂಬ ಅವರ ದೃಢಸಂಕಲ್ಪ; ಇಂತಿದ್ದ ಜನಜೀವನವನ್ನು ರಂಗಸ್ಥಳದಲ್ಲಿ ಪ್ರತಿಬಿಂಬಿಸಿ ಸಮಾಜ ಜೀವನವನ್ನು ಪರಿಷ್ಕರಿಸುವ ಅವರ ಸಾಹಸಪೂರ್ಣ ಪ್ರಯತ್ನಗಳು–ಇವು ಕೈಲಾಸಂ ಅವರ ಮನಸ್ಸಿನ ಮೇಲೆ ತುಂಬ ಪರಿಣಾಮ ಮಾಡಿದುವು. ಜೊತೆಗೆ ಈ ಪ್ರಯತ್ನಗಳ ಸಾಧನವಾಗಿ ಜನತೆಯ ದಿನಬಳಕೆಯ ಭಾಷೆಯನ್ನು ಅವರೆಲ್ಲ ಬಳಸಿಕೊಂಡದ್ದೂ ಕೈಲಾಸಂಗೆ ಮೆಚ್ಚುಗೆಯಾಯಿತು. ಚಿಕ್ಕಂದಿನಿಂದಲೂ ತಮ್ಮಲ್ಲಿ ಸುಪ್ತವಾಗಿದ್ದ ಶುದ್ಧಹಾಸ್ಯದ ಪ್ರವೃತ್ತಿಯನ್ನು ಈ ನಾಟಕ ತಂತ್ರಶಿಕ್ಷಣ ಹೊರಗೆಳೆದು ಹಾಕಿತು.

ಸ್ವಯಂ ಅನುಕರಣದಲ್ಲಿ ಅದ್ವಿತೀಯರೂ ಅಭಿನಯದಲ್ಲಿ ಸಿದ್ಧಹಸ್ತರೂ ಪಾಶ್ಚಾತ್ಯ ಭಾರತೀಯ ಸಂಗೀತಶಾಸ್ತ್ರಪಂಡಿತರೂ ಇವೆರಡೂ ಪದ್ಧತಿಯ ಹಾಡುಗಳನ್ನು ನುಡಿಯುವುದರಲ್ಲಿ ಕಟುತರ ಅಭ್ಯಾಸವನ್ನೂ ನಡೆಸಿ ಜ್ಞಾನವೃದ್ಧಿ ಮಾಡಿಕೊಂಡವರೂ ಆದ ಕೈಲಾಸಂ, ತಮ್ಮ ಭಾರತೀಯತೆ, ಪರಂಪರಾಗತವಾಗಿಯೂ ವಂಶಪಾರಂಪರ್ಯದಿಂದಲೂ ಬಂದ ಉಚ್ಚ ಸಂಸ್ಕೃತಿಗಳನ್ನು ಮರೆಯದೆ ತಮ್ಮ ಕೃತಿ ರಚನೆಯಿಂದ ಅವಕ್ಕೆ ಕುಂದಣವಿಕ್ಕಿದರು. ಭಾರತೀಯರಿಗೆ ಪುರಾಣಗಳೇ ಉಸಿರು. ಅಂತೆಯೇ ರಾಮಾಯಣ, ಭಾರತ, ಭಾಗವತಾದಿ ಮಹಾಕಾವ್ಯಗಳ ದಿವ್ಯವ್ಯಕ್ತಿಗಳ ದರ್ಶನವನ್ನು ಮಾಡಿಸಿದರು.

ಕನ್ನಡದಲ್ಲಿ ದಿನಬಳಕೆಯ ಭಾಷೆಯನ್ನು ಬಳಸಿ ನಾಟಕ ರಚಿಸಿದವರಲ್ಲಿ ಕೈಲಾಸಂ ಅಗ್ರಗಣ್ಯರು. ಪಾಶ್ಚಾತ್ಯ ನಾಟಕಗಳಲ್ಲಿ ಆಗ ಪ್ರಚಲಿತವಾಗಿದ್ದ ಈ ನೂತನ ವಿಧಾನವನ್ನು ಕನ್ನಡಕ್ಕೆ ತಂದುಕೊಂಡ ಕೀರ್ತಿಯೂ ಇವರದೇ. ಇವರು ಬಳಸಿದ ಆಡುಭಾಷೆಯಾದರೋ ಅಚ್ಚಕನ್ನಡವಲ್ಲ. ಅರ್ಧಮರ್ಧ ಇಂಗ್ಲಿಷ್ ಬೆರೆತ ಕಲಬೆರಕೆ ಭಾಷೆ. ಅದಕ್ಕೆ ಕಾರಣವೂ ಇಷ್ಟೆ. ವಿದ್ಯಾವಂತರೆಂದು ಆಗ ಮೆರೆಯುತ್ತಿದ್ದ ಮೈಸೂರಿನ ಮಧ್ಯಮವರ್ಗದ ನಾಗರಿಕರು ತಮ್ಮ ನಿತ್ಯವ್ಯವಹಾರದಲ್ಲಿ ಬಳಸುತ್ತಿದ್ದುದೇ ಈ ಭಾಷೆ. ಕೈಲಾಸಂ ತಮ್ಮ ನಾಟಕಗಳಲ್ಲಿ ಉಪಯೋಗಿಸಿರುವ ಭಾಷೆ ಅದನ್ನಾಡುತ್ತಿರುವ ಸಮಾಜದ ಮುಖಕ್ಕೆ ಕನ್ನಡಿ ಹಿಡಿದಂತಿದೆ. ಸ್ವಲ್ಪ ಅತಿ ಎನಿಸುವಂತೆ ಉತ್ಪ್ರೇಕ್ಷಿಸಿ, ವಿಡಂಬಿಸಿ ನಾಟಕಕಾರ ಅದನ್ನು ಪ್ರೇಕ್ಷಕರ ಮನಮುಟ್ಟಿಸುತ್ತಾನೆ.

ಈ ಆಡುಭಾಷೆಯ ಉಪಯೋಗವೂ ಸಮಯೋಚಿತ. ಬೇಕೆಂದೇ ಅದನ್ನು ಜಗ್ಗಿಸುವ ಚಟವೂ ಕೈಲಾಸಂಗಿಲ್ಲ. ಅಂತೆಯೇ ಒಂದು ಇಂಗ್ಲಿಷ್ ಪದವನ್ನೂ ಬೆರೆಸದೆ ಶುದ್ಧವಾಗಿ ಅರ್ಥವತ್ತಾಗಿ ಆದರೂ ಸರಳವಾಗಿ ಮಾತನಾಡುವ ಜನರೂ ಸಮಾಜದಲ್ಲಿ

ಇದ್ದಾರೆಂಬುದನ್ನೂ ಕೆಲವು ನಾಟಕಗಳಲ್ಲಿ ಕಾಣಬಹುದು. ನವೀನ ವಿದ್ಯಾಭ್ಯಾಸ ಪದ್ಧತಿಯಿಂದ ಸಂಸ್ಕೃತಿಯನ್ನು ಮರೆತು ಸಭ್ಯತೆಯ ಗೆರೆದಾಟಿದ ಜನತೆ ಸಮಾಜವನ್ನು ಎಂಥ ದುಃಸ್ಥಿತಿಗೆ ತಂದು ನಿಲ್ಲಿಸಿದೆ ಎಂಬುದನ್ನು ಅನೇಕ ನಾಟಕಗಳು ಎತ್ತಿ ತೋರುತ್ತವೆ. ಈ ದುಃಸ್ಥಿತಿಗಿಳಿದ ಸಮಾಜದಲ್ಲೂ ಸಜ್ಜನರೂ ಸುಶಿಕ್ಷಿತರೂ ಆದ ಹಿರಿಯರೂ ಕಿರಿಯರೂ ಇನ್ನೂ ಇದ್ದಾರೆ, ಅವರ ಹಿರಿತನವನ್ನು ಕಂಡುಕೊಂಡು ಸಮಾಜ ಜೀವನವನ್ನು ಸುಧಾರಿಸಬಹುದು–ಎಂಬ ಧ್ವನಿಯಂತೂ ಈ ನಾಟಕಗಳಲ್ಲಿ ಎದ್ದು ಕಾಣುತ್ತದೆ. ಸಮಾಜದಲ್ಲಿ ಟೊಳ್ಳೂ ಇದೆ ಗಟ್ಟಿಯೂ ಇದೆ. ಪರಿಸ್ಥಿತಿ ಸನ್ನಿವೇಶಗಳ ಪ್ರಭಾವದಿಂದ ಹಾಸ್ಯದ ಕುಲುಮೆಯಲ್ಲಿ ಸಮಾಜಜೀವಿ ಕುದಿದಾಗ ಟೊಳ್ಳು ಮಾಯವಾಗಿ ಗಟ್ಟಿ ಉಳಿಯುತ್ತದೆ. ಅಂಥ ಗಟ್ಟಿ ಉಳಿಯಲೆಂಬುದೇ ಕೈಲಾಸಂ ಕೃತಿಗಳ ಉದ್ದೇಶ.



ಕೈಲಾಸಂ–ವಸಂತಸೇನಾ ಚಲನಚಿತ್ರದಲ್ಲಿ

ಕೈಲಾಸಂ ಪಾಶ್ಚಾತ್ಯ ಸಾಮಾಜಿಕ ಹಾಗೂ ಪೌರಾಣಿಕ ನಾಟಕಾವಲೋಕನ ಮತ್ತು ಅಧ್ಯಯನಗಳಿಂದ ಪ್ರೇರಿತರಾದರಷ್ಟೇ ಹೊರತು ವಸ್ತುತಃ ಅವನ್ನೇ ಇಲ್ಲಿಗೆ ತಂದುಕೊಳ್ಳಲಿಲ್ಲ. ಕನ್ನಡ ಸಮಾಜದಿಂದ ಎತ್ತಿಕೊಂಡ ಕಥಾವಸ್ತುವನ್ನು ಬಳಸಿಕೊಂಡು ತಮ್ಮದೇ ಆದ ವೈಖರಿಯಿಂದ ನಾಟಕ ಕಟ್ಟಿರುವುದು ಕೈಲಾಸಂ ಅವರ ವೈಶಿಷ್ಟ್ಯ.

ಇತರರು ನಡೆದು ಸವೆಸಿದ ಜಾಡು ಹಿಡಿಯದೆ ನಾಟಕ ಪ್ರಪಂಚದಲ್ಲೇ ಹೊಸ ಹಾದಿ ಹಾಕಿಕೊಟ್ಟ ಹಿರಿತನ ಕೈಲಾಸಂಗೆ ಸೇರುತ್ತದೆ. ಸಮಾಜ ಜೀವನದ ವೈವಿಧ್ಯ, ಅಂಕು ಡೊಂಕುಗಳಿಗೆ ಭೂತಗನ್ನಡಿ ಹಿಡಿದು ಅದರ ಉಬ್ಬಿದ ಪ್ರತಿಬಿಂಬಗಳನ್ನು ನಮ್ಮೆದುರಿಗೆ ನಿಲ್ಲಿಸಿ, ಬಾಳನ್ನು ಆಳವಾಗಿ ಹೊಕ್ಕು, ಜನತೆಯ ಕಷ್ಟಕಾರ್ಪಣ್ಯ, ಮರೆಮೋಸ, ಸಾವುನೋವುಗಳನ್ನು ತೀಕ್ಷ್ಣವಾಗಿ ಪರಿಶೀಲಿಸಿ ಸಮಾಜಜೀವನದಲ್ಲಿ ಹೆಜ್ಜೆಹೆಜ್ಜೆಗೂ ಎದುರಾಗುವ ಕಣ್ಣೀರಿನ ಕಡಲನ್ನು ತಮ್ಮ ಹಾಸ್ಯದ ಹರಿಗೋಲಿನಿಂದ ದಾಟಿಸುತ್ತಾರೆ, ಕೈಲಾಸಂ. ಜನಮನದಲ್ಲಿ ತಾಂಡವವಾಡುತ್ತಿರುವ ನೋವು ನಲಿವು ಆಸೆ ಆಮಿಷಗಳನ್ನು ತಾವೂ ಅನುಭವಿಸುವುದಲ್ಲದೆ ತಾವು ಸೃಷ್ಟಿಸಿದ ಪಾತ್ರಗಳಿಗೆ ಜೀವಕಳೆ ತುಂಬಿ ತಾವು ಮಾತ್ರ ದೂರ ನಿಲ್ಲುವುದು ಕೈಲಾಸಂ ನಾಟಕ ನಿರೂಪಣೆಯ ವೈಖರಿ. ಸಂವಿಧಾನ ಚಾತುರ್ಯ, ರಸೈಕ್ಯತೆ, ಸಂಭಾಷಣೆಯ ನಿರೂಪಣೆಗಳಲ್ಲಿ ಮನೋಜ್ಞತೆ, ಇವೆಲ್ಲಕ್ಕೆ ಹೊಂದಿಕೆಯಾಗಿ ಬರುವ ಹಾಸ್ಯದ ಹೊಳೆ, ಭಾವಪೂರ್ಣವಾಗಿ ಅರ್ಥಪೂರ್ಣವಾಗಿ ಜೀವನದ ಸಮಸ್ಯೆಗಳ ವಿವೇಚನೆ, ಸನ್ನಿವೇಶಗಳ ರಸಸ್ಥಾನ ಹಿಡಿದು ಮಿಡಿಯಬಲ್ಲ ಅಮಿತಶಕ್ತಿ ಇವು–ಕೈಲಾಸಂ ಕೃತಿಗಳ ಸಾಮಾನ್ಯ ಲಕ್ಷಣಗಳು. ಕೆಲವೊಮ್ಮೆ ಆರಿಸಿಕೊಂಡ ಸಮಸ್ಯೆಯೂ ಅರ್ಥಪೂರ್ಣ ವಿಶ್ಲೇಷಣೆ ಆಗುವುದಿಲ್ಲ.

ಕೈಲಾಸಂ ಒಬ್ಬ ಮಹಾವಿಸ್ಮಯಕಾರ ವ್ಯಕ್ತಿ, ವಾಕ್ಚತುರ, ರಸಿಕಭಾಷಿ, ನಗೆಗಾರ, ಪ್ರಾಜ್ಞ, ವೇದಾಂತಿ, ಅಭಿನಯಚತುರ, ನಾಟಕಕಾರ. ಇವರಲ್ಲಿ ಕಂಡುಬರುವ ಒಂದು ಅಸಾಧಾರಣ ಶಕ್ತಿಯೆಂದರೆ ಪರಸ್ಪರ ಸಂಬಂಧವಿಲ್ಲದ ಭಾವಗಳ ಅಥವಾ ಮಾತುಗಳ ಅನಿರೀಕ್ಷಿತ ಸಂಯೋಜನೆ ಅಥವಾ ವೈದೃಶ್ಯ ನಿರೂಪಣೆಯಿಂದ ಥಟ್ಟನೆ ಬುದ್ಧಿಗೆ ಆನಂದವನ್ನುಂಟುಮಾಡುವ ಚತುರೋಕ್ತಿ.

1945ರಂದು ಕನ್ನಡ ಸಾಹಿತ್ಯ ಪರಿಷತ್ತು ಮದ್ರಾಸಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿ, ಅದರ ಅಧ್ಯಕ್ಷಸ್ಥಾನಕ್ಕೆ ಕೈಲಾಸಂ ಅವರನ್ನು ಆರಿಸಿತು. ಇದಾದ ಮಾರನೆಯ ವರ್ಷವೇ (1946) ಕೈಲಾಸಂ ಬೆಂಗಳೂರಿನಲ್ಲಿ ಅವರ ವಿಶ್ವಾಸಿಗಳೂ ಬಂಧುಗಳೂ ಆದ ವಿ.ಟಿ. ಶ್ರೀನಿವಾಸನ್ ಅವರ ಮನೆಯಲ್ಲಿ ಅಸುನೀಗಿದರು.

ಕೈಲಾಸಂ ತಮ್ಮ ಸುತ್ತಮುತ್ತಲಿನ ಮಧ್ಯಮವರ್ಗದವರ ನಿತ್ಯಜೀವನದ ಆಗುಹೋಗುಗಳಲ್ಲಿ ಪ್ರೀತಿ ಸ್ನೇಹ ವಿರಸಗಳಲ್ಲಿ ತಮ್ಮ ಕನ್ನಡ ನಾಟಕ ವಸ್ತುಗಳನ್ನು ಕಂಡುಕೊಂಡರು. ಇಂಥ ಜೀವನದ ಮನುಷ್ಯ ಬಾಂಧವ್ಯಗಳನ್ನು ವಿಶ್ಲೇಷಿಸಿದರು. ಸಾಮಾಜಿಕ ಕಾರ್ಯದ ಸೋಗು, ಅಹಂಭಾವ, ಕೃತಕತೆಗಳನ್ನು ಅನಾವರಣಗೊಳಿಸಿದರು. ಪ್ರೀತಿ ಅಂತಃಕರಣಗಳನ್ನು ಎತ್ತಿ ಹಿಡಿದರು. 'ಓಪನ್ ಎಂಡೆಡ್ ಪ್ಲಾಟ್‍ಗಳು' (ಕ್ರಿಯೆ ಬದುಕಿನಲ್ಲಿ ಮುಂದುವರಿಯಬಲ್ಲಂತೆ ರೂಪಿಸಿದ ಕಥಾವಸ್ತುಗಳು) ಅವರವು. ಪಾತ್ರಗಳ ಹಣೆಯ ಬರಹದ ಮುಕ್ತಾಯವನ್ನು ಅವರು ನಿರೂಪಿಸುವುದಿಲ್ಲ. ಮರೆಯಲಾಗದ ಪಾತ್ರಗಳನ್ನು ಸೃಷ್ಟಿಸಿದರು. ಹೆಚ್ಚು ರಂಗಸಜ್ಜಿಲ್ಲದೆ ಉಡುಪುಗಳ ವೈಶಿಷ್ಟ್ಯವಿಲ್ಲದೆ ಹವ್ಯಾಸಿ ಕಲಾವಿದರು ಅಭಿನಯಿಸಬಹುದಾದ ನಾಟಕಗಳನ್ನು ರಚಿಸಿ ಕೈಲಾಸಂ ನಾಟಕಗಳ ಪ್ರದರ್ಶನವನ್ನು ವಿಸ್ತರಿಸಿದರು. ನಟನಟಿಯರ ಸಮೂಹವನ್ನು ಬೆಳೆಸಿದರು. ಆದರೆ ಅವರು ಬಳಸಿದ, ಸಾಮಾನ್ಯವಾಗಿ ಕನ್ನಡಾಂಗ್ಲೋ ಎಂದು ಕರೆಯುವ ಭಾಷೆಯಿಂದಾಗಿ ಕಾಲ ಕಳೆದಂತೆ ಅವರ ನಾಟಕಗಳ ಆಕರ್ಷಣೆ ಮಾಸುತ್ತ ಬಂದಿದೆ.

ಕೈಲಾಸಂ ಇಂಗ್ಲಿಷಿನಲ್ಲಿ ಕವನಗಳನ್ನು ನಾಟಕಗಳನ್ನು ಬರೆದಿದ್ದಾರೆ. ಎರಡು ಕವನಗಳು 'ಕೃಷ್ಣ' ಮತ್ತು (ಗಾಂಧೀಜಿಯನ್ನು ಕುರಿತ) 'ದಿ ರೆಸಿಪಿ' ಸಾಕಷ್ಟು ಪ್ರಸಿದ್ಧವಾದವು. ನಾಟಕಗಳಿಗೆ ಕೈಲಾಸಂ ಪೌರಾಣಿಕ ವಸ್ತುಗಳನ್ನು ಆರಿಸಿಕೊಂಡರು. ಇವಕ್ಕೆ ಮಾತ್ರ ಇಂಗ್ಲಿಷ್ ಮಾಧ್ಯಮವನ್ನು ಏಕೆ ಆರಿಸಿಕೊಂಡರು ಎನ್ನುವುದು ಸ್ಪಷ್ಟವಾಗಿಲ್ಲ. 'ದ ಪರ್ಪಸ್' ಈ ನಾಟಕಗಳಲ್ಲಿ ಅತ್ಯುತ್ತಮವಾದದ್ದು. ಪ್ರಾಯಶಃ ಇದು ಅವರ ಎಲ್ಲ ನಾಟಕಗಳಲ್ಲಿ ಅತ್ಯುತ್ತಮವಾದದ್ದು. ಇದು ಏಕಲವ್ಯನ ಕಥೆ. ದ್ರೋಣನಿಗೆ ಹೆಬ್ಬೆರಳನ್ನು ಕತ್ತರಿಸಿಕೊಟ್ಟ ಕಥೆ. ವ್ಯಕ್ತಿ–ವ್ಯಕ್ತಿಗಳ ಮುಖಾಮುಖಿಯ ಮಾನವೀಯವಾಗಿದೆ, ಇನ್ನು ವಿಶಾಲವಾದ ವಿನ್ಯಾಸದ ಭಾಗವಾಗಿಯೂ ಇದೆ. ವಿದ್ಯೆಯನ್ನು ಕಲಿಯುವಾಗ ಗುರುವಿಗಿದ್ದ ಉದ್ದೇಶಕ್ಕಿಂತ ಅವನ ಶಿಷ್ಯನು ವಿದ್ಯೆಯನ್ನು ಕಲಿಯುವಾಗ ಘನವಾದ ಉದ್ದೇಶವನ್ನು ಹೊಂದಿದ್ದರೆ, ಶಿಷ್ಯನು ಗುರುವನ್ನು ಮೀರಿಸುತ್ತಾನೆ. ಆದುದರಿಂದಲೇ ಏಕಲವ್ಯನು ಗುರುವನ್ನು ಮೀರಿಸುತ್ತಾನೆ. ಇದನ್ನು ದ್ರೋಣನು ಗುರುತಿಸುತ್ತಾನೆ. ಆದರೂ ಅವನು ಹೆಬ್ಬೆರಳನ್ನು ಬೇಡಲೇಬೇಕು. ಇಂಥ ಶಿಷ್ಯನಿಗೆ ಘಾತವನ್ನು ಮಾಡಲೇಬೇಕು. ಇದು ಅವನ ದುರಂತ. ಮನುಷ್ಯನಿಗೆ ಅರ್ಥವಾಗದ ದೈವೀ ಉದ್ದೇಶವೊಂದು 'ಫುಲ್‍ಫಿಲ್‍ಮೆಂಟ್'ನಲ್ಲಿ ಸಾಧಿತವಾಗುತ್ತದೆ. ಕೃಷ್ಣನು ಏಕಲವ್ಯನನ್ನು ಕೊಂದಾಗ 'ಕೀಚಕ'ದಲ್ಲಿ ಕೀಚಕನ ಪಾತ್ರದ ಉದ್ಧಾರದ ಪ್ರಯತ್ನವಿದೆ, ಆದರೆ ಪ್ರಯತ್ನ ಸಫಲವಾಗುವುದಿಲ್ಲ. 'ಕರ್ಸ್ ಆಫ್ ಕರ್ಣ' ಪಾತ್ರದ ನಿರ್ದಯತೆಯ ಚಿತ್ರಣ ಈ ನಾಟಕಗಳಲ್ಲಿಯೂ ಶಬ್ದಾಡಂಬರ ಅಲ್ಲಲ್ಲಿ ಉಂಟು. ಆದರೆ ಈ ನಾಟಕಗಳಲ್ಲಿ ನಾವು ಕಾಣುವುದು ಘನತೆಯ ಅನ್ವೇಷಣೆಯನ್ನು, ಇವೆಲ್ಲ 'ಟ್ರಾಜಡಿ'ಗಳೇ. ಇವುಗಳಲ್ಲಿ ಮನುಷ್ಯನ ಘನತೆ ಬೆಳಗುತ್ತದೆ. (ಬಿ.ಎಸ್.ಆರ್.ಆರ್.; ಕೆ.ಎ.ಐ.)

**ಕೈ – ವರ್ಗಪರೀಕ್ಷೆ :** ಸಂಖ್ಯಾಕಲನಶಾಸ್ತ್ರದಲ್ಲಿ ವ್ಯಾಪಕವಾಗಿ ಬಳಸುವ ಒಂದು ಪರೀಕ್ಷೆ. ಒಂದು ಸಂಭವಚರದ ಸಂಭವತೆ ವಿತರಣೆ (ಪ್ರಾಬೆಬಿಲಿಟಿ ಡಿಸ್ಟ್ರಿಬ್ಯೂಷನ್)

$$\mathrm{P},[\mathrm{x}^2 \le \mathrm{x}_S^2] = \int_0^{\mathrm{x}_S^2} f(\mathrm{x}^2)\mathrm{d}(\mathrm{x})^2 \qquad .....(1)$$

ಆಗಿದ್ದರೆ ಅದನ್ನು k ಸ್ವಾತಂತ್ರ್ಯಾಂಕಗಳುಳ್ಳ (ಡಿಗ್ರೀಸ್ ಆಫ್ ಫ್ರೀಡಂ) ಕೈ–ವರ್ಗ ಚರ ಎನ್ನುತ್ತೇವೆ. ಇಲ್ಲಿ

$$f\left(x^2\right) = 2^{-\frac{k}{2}}\left[\Gamma\left(k/2\right)\right]^{-1}\left(x^2\right)^{\frac{k}{2}-1}\bar{e}^{x^2/2}$$

$$0 < x^2 < \infty \qquad .....(2)$$

ಕಾರ್ಲ್‍ಪಿಯರ್‍ಸನ್ ತಿಳಿಸಿಕೊಟ್ಟಿರುವ ಅನೇಕ ಸಂಭಾವ್ಯತಾ ವಿತರಣೆಗಳಲ್ಲಿ ಇದೂ ಒಂದು. $\chi^2$ ಸಂಕೇತವನ್ನು ಮೊತ್ತಮೊದಲು 1896ರಲ್ಲಿ ಬಳಸಿದವನೂ ಈತನೇ.

**ಆಧಾರ ಭಾವನೆಗಳ (ಹೈಪಾಥಿಸಸ್) ಕೈ – ವರ್ಗ ಪರೀಕ್ಷೆ:** ಒಂದು ಸಮೂಹದಲ್ಲಿರುವ ವಸ್ತುಗಳನ್ನು $\kappa$ ವಿಭಾಗಗಳಾಗಿ ವಿಂಗಡಿಸಬಹುದು ಎಂದು ಭಾವಿಸೋಣ. ಇವು ಗೆಲುವು ಅಥವಾ ಸೋಲು ಎಂಬ ಎರಡು ಸಾಂಕೇತಿಕ ವಿಭಾಗಗಳಾಗಿರಬಹುದು ಅಥವಾ ಎತ್ತರದಂಥ ಅಳೆಯಬಹುದಾದ ಚರದ ಬೆಲೆಗಳ ಸರಣಿಗಳಿರಬಹುದು. ಯಾವುದೋ ಒಂದು ಆಧಾರಭಾವನೆ $H_0$ಯ ಪ್ರಕಾರ ಈ $\kappa$ ವಿಭಾಗಗಳಲ್ಲಿ ವಸ್ತುಗಳ ಬೆಲೆಗಳಿರುವ ಸಂಭವತೆಗಳು. $\pi_1, \pi_2 \ldots\ldots\ldots \pi_k$ ಆಗಿರಲಿ. N ವಸ್ತುಗಳ ಒಂದು ಪ್ರತಿಚಯದಲ್ಲಿ (ಸ್ಯಾಂಪಲ್) ಈ k ವಿಭಾಗಗಳಲ್ಲಿ ಅನುಕ್ರಮವಾಗಿ $f_1, f_2, \ldots\ldots\ldots, f_k$ ವಸ್ತುಗಳಿರಲಿ. ಆಗ $\sum_{i=1}^{k} f_i = N$. ಈ ಪ್ರತಿಚಯನವನ್ನು ಉಪಯೋಗಿಸಿ ಆಧಾರಭಾವನೆ $H_0$ ಅನ್ನು ಪರೀಕ್ಷಿಸಬಹುದು. $\kappa$ ವಿಭಾಗಗಳಲ್ಲಿ N ಪ್ರತಿಚಯ ವಸ್ತುಗಳ ಸಂಭವತೆ ವಿತರಣೆ ಬಹುಪದೀಯ (ಮಲ್ಟಿನಾಮಿಯಲ್) ವಿತರಣೆಯಾಗಿರುತ್ತದೆ. $\sum_{i=1}^{k} f_i = N$. ಈ ಸರಳ ಸಂಬಂಧದಿಂದಾಗಿ ಮೇಲಿನ ಬಹುಪದೀಯ ವಿತರಣೆಯ ಸ್ವಾತಂತ್ರ್ಯಾಂಕ (*k*-1) ಆಗಿರುವುದು. ಆಗ

$$\mathrm{x}_S^2 = \sum_{i=1}^{k}\left[\frac{(f_i - \mathrm{N}\pi_i)^2}{\mathrm{N}\pi_i}\right] \qquad .............(3)$$

ಪರಿಮಿತಿಯಲ್ಲಿ (ಲಿಮಿಟ್) ಕೈ–ವರ್ಗ ವಿತರಣೆ ಹೊಂದಿರುವುದು. ಅದರ ಸ್ವಾತಂತ್ರ್ಯಾಂಕ ಆಧಾರಭಾವನೆ $H_0$ ಯು $\pi_i$ ಗಳ ಬೆಲೆಗಳನ್ನು ಕೊಡುತ್ತದೆಯೇ ಹೊರತು ಅವನ್ನು ಪ್ರತಿಚಯದಿಂದ ಅಂದಾಜು ಮಾಡುವುದಿಲ್ಲ ಎಂದು ಭಾವಿಸುತ್ತೇವೆ. $\pi_i$ ಗಳನ್ನು ಪ್ರತಿಚಯದಿಂದ ಅಂದಾಜು ಮಾಡಿದರೆ ಸ್ವಾತಂತ್ರ್ಯಾಂಕ ಕಡಿಮೆಯಾಗುವುದು. (3)ಅನ್ನು

ಉಪಯೋಗಿಸಿ $x_s^2$ವನ್ನು ಕಂಡುಹಿಡಿಯುತ್ತೇವೆ. ಆಧಾರಭಾವನೆ $H_0$ ನಿಜವಾಗಿದ್ದಲ್ಲಿ ಇಷ್ಟು ಅಥವಾ ಇದಕ್ಕಿಂತ ಜಾಸ್ತಿ ಪರಿಮಾಣವುಳ್ಳ ಸಿಗುವ ಸಂಭವತೆಯನ್ನು ಕಂಡುಹಿಡಿಲಾಗುವುದು. ಪರಿಮಿತಿಯಲ್ಲಿ ಕೈ–ವರ್ಗವಿತರಣೆಯ ಅಂಗೀಕೃತ ಭಾವನೆಯ ಪ್ರಕಾರ ಈ ಸಂಭಾವ್ಯತೆ

$$P_r[x^2 \le x_s^2] = \int_o^{x_s^2} f(x^2)\ d(x^2) \qquad .....(4)$$

ಇಲ್ಲಿ $f\left(x^2\right) = 2^{-\frac{k}{2}}\left[\Gamma\left(k/2\right)\right]^{-1}\left(x^2\right)^{\frac{k}{2}-1}\overline{e}^{x^2/2}, 0 < x^2 < \infty$ ಆಚರಣೆಯಲ್ಲಿ ಈ ಸಂಭವತೆಯನ್ನು ಕೈ–ವರ್ಗ ಕೋಷ್ಟಕದಿಂದ ಓದಿಕೊಳ್ಳಬಹುದು. ಅಂಥ ಒಂದು ಕೋಷ್ಟಕವನ್ನು ಥಾಮ್‌ಸನ್ ಎಂಬಾತ ಬಯೋಮೆಟ್ರಿಕ 32, 1941, ಪು. 187ರಲ್ಲಿ ಕೊಟ್ಟಿದ್ದಾನೆ. ಸೂಕ್ತವಾದ ಸ್ವಾತಂತ್ರ್ಯಾಂಕ k ಮತ್ತು ಕೊಟ್ಟಿರುವ ಲಕ್ಷ್ಯಾರ್ಹ ಮಟ್ಟದಲ್ಲಿ (ಲೆವೆಲ್ ಆಫ್ ಸಿಗ್ನಿಫಿಕೆನ್ಸ್) ಪ್ರತಿಚಯ ಬೆಲೆ ಕೋಷ್ಟಕ ಬೆಲೆಗಿಂತ ಕಡಿಮೆ ಇದ್ದಲ್ಲಿ ಪ್ರತಿಚಯ ಆಧಾರ ಭಾವನೆಗೆ ಅನುಗುಣವಾಗಿದೆ ಎನ್ನುತ್ತೇವೆ. ಆಧಾರಭಾವನೆ ನಿಜ ಎಂದು ಇದರ ಅರ್ಥವಲ್ಲ. ಪ್ರತಿಚಯ ಆಧಾರಭಾವನೆಗೆ ವಿರುದ್ಧವಾಗಿ ಏನೂ ಸಾಕ್ಷ್ಯ ನೀಡುವುದಿಲ್ಲ ಎಂದಿದರ ಅರ್ಥ. ಪ್ರತಿಚಯ ಕೋಷ್ಟಕ ಬೆಲೆಗೆ ಸಮ ಅಥವಾ ಅದಕ್ಕಿಂತ ಅಧಿಕವಾಗಿದ್ದಲ್ಲಿ ಕೊಟ್ಟಿರುವ ಲಕ್ಷ್ಯಾರ್ಹ ಮಟ್ಟದಲ್ಲಿ ಆಧಾರಭಾವನೆಯನ್ನು ತಿರಸ್ಕರಿಸುತ್ತೇವೆ.

$n\pi_i$ ಕೆಲವು ವಿಭಾಗಗಳಲ್ಲಿ ಚಿಕ್ಕವಾಗಿದ್ದಲ್ಲಿ $\chi_s^2$ದ ವಿತರಣೆ ಕೈ–ವರ್ಗ ವಿತರಣೆಗಿಂತ ಭಿನ್ನವಾಗಿರಬಹುದು ಎಂದು ನಿರೀಕ್ಷಿಸಬಹುದು. ಸಾಮಾನ್ಯವಾಗಿ ವಿತರಣೆಯ ಕೊನೆಗಳಲ್ಲಿ ಈ ರೀತಿ ಆಗಬಹುದು. ಇದಕ್ಕಾಗಿ ಪಕ್ಕಪಕ್ಕದ ಚಿಕ್ಕ ವಿಭಾಗಗಳನ್ನು ಪ್ರತಿಯೊಂದರಲ್ಲೂ ಐದಕ್ಕಿಂತ ಕಡಿಮೆ ವಸ್ತುಗಳಿರದಂತೆ ಒಂದುಗೂಡಿಸುವುದು ಪದ್ಧತಿ. ಅಂಥ ಒಂದುಗೂಡಿಸುವಿಕೆಯನ್ನು ಪ್ರತಿ ವಿಭಾಗದಲ್ಲೂ ನಿರೀಕ್ಷಿಸಿದ ಸಂಖ್ಯೆ ಐದಕ್ಕಿಂತ ಕಡಿಮೆ ಇಲ್ಲದವರೆಗೆ ಮುಂದುವರಿಸಬೇಕು ಎಂದು ಕ್ರ್ಯಾಮರನ ಅಭಿಪ್ರಾಯ. ತದ್ವಿರುದ್ಧವಾಗಿ ಕಾಕ್ರನ್ ಎಂಬಾತ ಕೆಲವು ಸಂದರ್ಭಗಳಲ್ಲಿಯಾದರೂ 1ರಷ್ಟು ಚಿಕ್ಕ ಸಂಖ್ಯೆಗಳು ಇರಬಹುದು. ಅದರಿಂದ ಪರೀಕ್ಷೆಯ ಸಿಂಧುತ್ವ ಕೆಡಬೇಕೆಂದಿಲ್ಲ ಎಂದು ತೋರಿಸಿದ್ದಾನೆ. ಒಂದುಗೂಡಿಸುವಿಕೆಗೆ ಗಣಿಸಿದ ಸಂಭವತೆಯನ್ನು ಏರಿಸುವ ಸಾಧ್ಯತೆ ಇದೆ ಎಂದು ತೋರುವುದು. ಇದರಿಂದ ಆಧಾರ ಭಾವನೆಯನ್ನು ತಿರಸ್ಕರಿಸುವ ಸಾಧ್ಯತೆ ಕಡಿಮೆಯಾಗುವುದು.

**ಪೊರ್ದಿಕೆಯ ಸರಿಹೊಂದುವಿಕೆಯ ಕೈ – ವರ್ಗ ಪರೀಕ್ಷೆ :** ಪ್ರತಿಚಯದಲ್ಲಿ ಕಂಡುಬರುವ ವಿತರಣೆ ನಿಜವಾಗಿ ದ್ವಿಪದ, ಪೋಸೋನ್, ಪ್ರಸಾಮಾನ್ಯ ಅಥವಾ ಇನ್ನು ಯಾವುದೇ ತಿಳಿದಿರುವ ತರದ ಸಂಭವತೆ ವಿತರಣೆಯುಳ್ಳ ಸಮೂಹದಿಂದ ಬಂದಿರಬಹುದು. ಬೇರೆ ಬೇರೆ ತರಗತಿಗಳಲ್ಲಿ ಗಮನಿಸಿದ ಅವರ್ತಾಂಕಗಳನ್ನು (ಫ್ರೀಕ್ವೆನ್ಸೀಸ್) ಸೈದ್ಧಾಂತಿಕ ವಿತರಣೆಗಳು ಕೊಡುತ್ತವೆಂದು ನಾವು ಅಂಗೀಕರಿಸಿದ ಆವರ್ತಾಂಕಗಳೊಡನೆ ಹೋಲಿಸಿ ಈ ಆಧಾರಭಾವನೆಯನ್ನು ಪರೀಕ್ಷಿಸಬಹುದು. ಆದರೆ ಸಾಮಾನ್ಯವಾಗಿ ವಿತರಣೆಯ ಪ್ರಾಚಲಗಳು ತಿಳಿಯದಿರುವುದರಿಂದ ಅವನ್ನು ಪ್ರತಿಚಯದಿಂದ ಅಂದಾಜು ಮಾಡಬೇಕಾಗುವುದು. 8 ಪ್ರಾಚಲಗಳನ್ನು ಗರಿಷ್ಠ ಪ್ರಾಯಿಕತೆ (ಮ್ಯಾಕ್ಸಿಮಮ್ ಲೈಕ್‌ಲಿಹುಡ್) ವಿಧಾನದಿಂದ ಅಂದಾಜು ಮಾಡಿದರೆ $\chi_s^2$ದ ವಿತರಣೆ ಪರಿಮಿತಿಯಲ್ಲಿ (k-8-1) ಸ್ವಾತಂತ್ರ್ಯಾಂಕವುಳ್ಳ ಕೈ–ವರ್ಗ ವಿತರಣೆಯಾಗಿರುವುದು. ಪ್ರಾಚಲಗಳ ಬದಲು ಉಪಯೋಗಿಸಲ್ಪಟ್ಟ ಅಂದಾಜುಗಳು ಅನಂತಸ್ಪರ್ಶೀಯವಾಗಿ ಪ್ರಸಾಮಾನ್ಯವಾಗಿದ್ದರೆ (ಅಸಿಂಪ್ಟಾಟಿಕಲಿ ನಾರ್ಮಲ್) ಮತ್ತು ಅನಂತಸ್ಪರ್ಶೀಯವಾಗಿ ದಕ್ಷತಮವಾಗಿದ್ದರೆ ಅವು ಗರಿಷ್ಠ ಪ್ರಾಯಿಕತೆಯ ಅಂದಾಜುಗಳಾಗಬೇಕಾಗಿಲ್ಲ.

**ವಿಂಗಡಿಸಲ್ಪಟ್ಟ ವಿತರಣೆಗೆ ಕೈ – ವರ್ಗ ಪರೀಕ್ಷೆ:** X ಒಂದು ಅವಿಚ್ಛಿನ್ನ ಚರ. ಪ್ರತಿಚಯದಲ್ಲಿರುವ ಅದರ ಅಳೆಯಲ್ಪಟ್ಟ ಬೆಲೆಗಳನ್ನು ಕೆಲವು ವಿಭಾಗಗಳಲ್ಲಿ ವಿಂಗಡಿಸಲಾಗಿದೆ ಎಂದು ಭಾವಿಸೋಣ. ಈ ವಿಭಾಗಗಳ ನಿರೀಕ್ಷಿತ ಆವರ್ತಾಂಕಗಳನ್ನು (ಸಮೂಹ ವಿತರಣೆಯ ಬಗ್ಗೆ ಕೆಲವು ಅಭಿಗೃಹೀತಗಳನ್ನು ಇಟ್ಟುಕೊಂಡು) ಕಂಡುಹಿಡಿಯಬಹುದು. ಹೆಚ್ಚಾಗಿ ಅಂಥ ಸಮೂಹ ವಿತರಣೆ ಸರಳವಾದದ್ದು ಎಂದು ಅಂಗೀಕರಿಸುತ್ತೇವೆ. ಉದಾಹರಣೆಗೆ, ಪ್ರಸಾಮಾನ್ಯ ಎಂದು ಅಂದಾಜು ಮಾಡುತ್ತೇವೆ. ನಿರೀಕ್ಷಿತ ಹಾಗೂ ಕಂಡುಬಂದ ಸಂಖ್ಯೆಗಳ ನಡುವಿನ ಹೊಂದಾಣಿಕೆಯನ್ನು ಕೈ–ವರ್ಗ ಪರೀಕ್ಷೆ ಉಪಯೋಗಿಸಿ ಕಂಡುಹಿಡಿಯಬಹುದು. ಸ್ವಾತಂತ್ರ್ಯಾಂಕ (k-8-1). ಇಲ್ಲಿ k ಪ್ರತಿಚಯದಲ್ಲಿರುವ ವಿಭಾಗಗಳ ಸಂಖ್ಯೆ. (ಕೆಲವು ವಿಭಾಗಗಳನ್ನು ಒಂದುಗೂಡಿಸಲಾಗಿದ್ದಲ್ಲಿ k ಕೊನೆಗೆ ಉಳಿಯುವ ವಿಭಾಗಗಳ ಸಂಖ್ಯೆ). s ಪ್ರತಿಚಯನದಿಂದ ಅಂದಾಜು ಮಾಡಲ್ಪಟ್ಟ ಪ್ರಾಚಲಗಳ ಸಂಖ್ಯೆ.

**ಆಸಂಗ ಕೋಷ್ಟಕಗಳಿಗೆ (ಕಂಟಿಂಜೆನ್ಸಿ ಟೇಬಲ್) ಕೈ – ವರ್ಗದ ಉಪಯೋಗ:** ಪ್ರಾಯೋಗಿಕ ಕೆಲಸಗಳಲ್ಲಿ ಅನೇಕ ವೇಳೆ ನಿಖರವಾಗಿ ಅಳೆಯಲಾಗದ ಗುಣಗಳನ್ನು ಇಲ್ಲವೇ ಸ್ವಭಾವಗಳನ್ನು ಅಭ್ಯಸಿಸುತ್ತೇವೆ. ಆಗ ಸಮೂಹವನ್ನು ಚರದ ಸ್ವಭಾವಕ್ಕೆ ಅನುಗುಣವಾಗಿ ಎರಡು ಅಥವಾ ಹೆಚ್ಚು ವಿಭಾಗಗಳಾಗಿ ವಿಂಗಡಿಸಬಹುದಾದರೆ. ಈ ರೀತಿ ಮುಂದುವರಿಯಬಹುದು. *A, B* ಗಳು ಎರಡು ಸ್ವಭಾವಗಳು. *N* ಪ್ರತಿಚಯ ಗಾತ್ರ. *A, B* ಸ್ವಭಾವಗಳಿಗೆ ಅನುಗುಣವಾಗಿ ಪ್ರತಿಚಯ ವಸ್ತುಗಳನ್ನು ಅನುಕ್ರಮವಾಗಿ *8* ಮತ್ತು *t* ವಿಭಾಗಗಳಾಗಿ ವಿಂಗಡಿಸಬಹುದು. *8 = 5 t=3* ಆಗಿದ್ದಾಗ ದೊರೆಯುವ ಕೋಷ್ಟಕ ಈ ಕೆಳಗಿನಂತೆ ಇರುವುದು:

| | $B_1$ | $B_2$ | $B_3$ | ಮೊತ್ತ |
|---|---|---|---|---|
| $A_1$ | $f_{11}$ | $f_{12}$ | $f_{13}$ | $r_1$ |
| $A_2$ | $f_{21}$ | $f_{22}$ | $f_{23}$ | $r_2$ |
| $A_3$ | $f_{31}$ | $f_{32}$ | $f_{33}$ | $r_3$ |
| $A_4$ | $f_{41}$ | $f_{42}$ | $f_{43}$ | $r_4$ |
| $A_5$ | $f_{51}$ | $f_{52}$ | $f_{53}$ | $r_5$ |
| ಮೊತ್ತ | $c_1$ | $c_2$ | $c_3$ | N |

ಅಡ್ಡಸಾಲುಗಳ ಮೊತ್ತಗಳನ್ನು $r_1, r_2,\ldots\ldots r_s$ ಗಳೆಂದೂ ನೀಟಸಾಲುಗಳ ಮೊತ್ತಗಳನ್ನು $c_1, c_2,\ldots.. c_t$ಗಳೆಂದೂ ಸೂಚಿಸುತ್ತೇವೆ. *A,B* ಸ್ವಭಾವಗಳು ಸಂಪೂರ್ಣ ಸ್ವತಂತ್ರವಾಗಿದ್ದರೆ ಸಮೂಹದಲ್ಲಿ, *B* ವಿಭಾಗದ ಪ್ರಮಾಣಗಳು *A* ವಿಭಾಗದ ವಿತರಣೆಯನ್ನು ಹೊಂದಿಕೊಂಡಿರದೆ ಸಮಾನವಾಗಿರುತ್ತವೆ. ಅಂದರೆ $A_m$ ಸ್ವಭಾವವುಳ್ಳ ಸಮೂಹದ ಭಾಗವನ್ನು ತೆಗೆದುಕೊಂಡರೆ *B* ವಿಭಾಗದ $P_{m1}, P_{m2}\ldots\ldots\ldots P_{mt}$ ಪ್ರಮಾಣಗಳು ಅನುಕ್ರಮವಾಗಿ ಸಮೂಹದಲ್ಲಿ ಈ ವಿಭಾಗಗಳ ಪ್ರಮಾಣಗಳೇ ಆಗಿರುವುವು. ಯಾವುದೇ ನಿರ್ದಿಷ್ಟ *B* ವಿಭಾಗಕ್ಕೆ ಅನುಗುಣವಾದ ಬೇರೆ ಬೇರೆ *A* ಪ್ರಮಾಣಗಳೂ ಇದೇ ರೀತಿ ಇರುವುವು. ಕಂಡುಬಂದ ಆವರ್ತಾಂಕಗಳು ಸಮೂಹದ ವಿವಿಧ ಪ್ರಮಾಣಗಳನ್ನು ಪ್ರತಿಬಿಂಬಿಸಿದಲ್ಲಿ ಮತ್ತು ಸ್ವಭಾವಗಳು ಸಂಪೂರ್ಣ ಸ್ವತಂತ್ರವಾಗಿದ್ದಲ್ಲಿ

$$\frac{f_{mn}}{r_m} = \frac{c_n}{N} \text{ ಅಂದರೆ } f_{mn} = \frac{r_m c_n}{N} \qquad .....(5)$$

ಆಗಿರಬೇಕು. ಕಂಡುಬಂದ ಪ್ರತಿಚಯದಲ್ಲಿ ಈ ಸಮಾನತೆಗಳಲ್ಲಿ ವ್ಯತ್ಯಾಸಗಳಿದ್ದರೆ ಸ್ವಭಾವಗಳ ಸಂಪೂರ್ಣ ಸ್ವಾತಂತ್ರ್ಯದ ಆಧಾರಭಾವನೆಯ ಮೇಲೆ ಅವು ಪ್ರತಿಚಯನ ನಡೆಸುವಾಗಿನ ಏರಿಳಿತಗಳೆಂದು ತಿಳಿಯಬೇಕು. ಅಂಥ ವ್ಯತ್ಯಾಸಗಳ ಸಂಭವತೆಗಳನ್ನು ಇದೇ ಅಂಚು ಮೊತ್ತಗಳಿರುವ (ಮಾರ್ಜಿನಲ್ ಟೋಟಲ್ಸ್) ಸಾಧ್ಯವಿರುವ ಎಲ್ಲ ಕೋಶ ಆವರ್ತಾಂಕಗಳಿಗೆ (ಸೆಲ್ ಫ್ರೀಕ್ವೆನ್ಸೀಸ್) ಸಾಪೇಕ್ಷವಾಗಿ ನೋಡುವುದು ಪದ್ಧತಿ. ಆದರೆ $r_m$, $c_n$ ಗಳು ಸ್ಥಿರವೆಂದು ತಿಳಿಯಬೇಕು. ಆಗ *(m, n)* ನೆಯ ಕೋಶದ ನಿರೀಕ್ಷಿತ ಸಂಖ್ಯೆ $\phi_{m'n} = \frac{r_m c_n}{N}$ .....(6)

ಆಗಿರುತ್ತದೆ. $\chi^2$ ದ ಬೆಲೆ $\sum_{m,n}\left[\frac{\left(f_{mn}-\phi_{mn}\right)^2}{f_{mn}}\right]$ .....(7)

ಇಲ್ಲಿ ಕೋಷ್ಟಕದಲ್ಲಿರುವ *st* ಕೋಶಗಳಿಗೆ ಅನುಗುಣವಾದ ಪದಗಳ ಮೊತ್ತ ಕಂಡು ಹಿಡಿಯಲಾಗುವುದು. ಅಂಚು ಮೊತ್ತಗಳು ಸ್ಥಿರವಾಗಿರುವುದರಿಂದ ಸ್ವಾತಂತ್ರ್ಯಾಂಕ (8-1) (t-1).

ಮೇಲಿನಂಥ ಕೋಷ್ಟಕದಲ್ಲಿ ವಿತರಣೆ ಯಾವಾಗಲೂ ವಿಚ್ಛಿನ್ನ ಆಗಿರುತ್ತದೆ. ಆದರೆ $\chi^2$ ನ್ನು ಕಂಡುಹಿಡಿಯುವಾಗ ಅದನ್ನು ಅವಿಚ್ಛಿನ್ನ $\chi^2$ – ವಿತರಣೆಗೆ ಸಮಾನವೆಂದು ತಿಳಿಯಬೇಕಾಗುತ್ತದೆ. ಇದಕ್ಕೆ 2X2 ಕೋಷ್ಟಕದಲ್ಲಿ ಈ ಕೆಳಗಿನ ತಿದ್ದು ಪಡಿಯನ್ನು ಉಪಯೋಗಿಸಬಹುದೆಂದು ಯೇಟ್ಸ್ ಸೂಚಿಸಿದ್ದಾನೆ ; a,b,c,d ಗಳು ನಾಲ್ಕು ಕೋಶ ಸಂಖ್ಯೆಗಳಾಗಿರಲಿ ; ಯಾವುದೇ ಒಂದು ಕೋಶಸಂಖ್ಯೆಯ ಬದಲು (ಉದಾಹರಣೆಗೆ d) ad > < bcಗೆ ಅನುಗುಣವಾಗಿ $d \pm ½$ ವನ್ನು ಉಪಯೋಗಿಸಬೇಕು. ಅಂಚು ಮೊತ್ತಗಳು ಬದಲಾಗದಂತೆ ಉಳಿದ ಸಂಖ್ಯೆಗಳನ್ನು ಬದಲಾಯಿಸಬೇಕು. ಅವಿಚ್ಛಿನ್ನತೆಗಾಗಿ ಯೇಟ್ಸ್‌ನ ತಿದ್ದುಪಡಿ ಎಂದು ಇದಕ್ಕೆ ಹೆಸರು.

**ಕೈ – ವರ್ಗ ಪರೀಕ್ಷೆಯ ಸಾಮರ್ಥ್ಯ:** ಆಧಾರಭಾವನೆ ಸುಳ್ಳಾಗಿರುವಾಗ ಅದನ್ನು ಪರೀಕ್ಷೆ ತಿರಸ್ಕರಿಸುವ ಸಂಭವತೆಗೆ ಪರೀಕ್ಷೆಯ ಸಾಮರ್ಥ್ಯ ಎಂದು ಹೆಸರು. ಕೈ–ವರ್ಗ ಪರೀಕ್ಷೆಯ ಸಾಮರ್ಥ್ಯವನ್ನು ಪರ್ಯಾಯ ಆಧಾರಭಾವನೆ (ಆಲ್ಟರ್ನೇಟಿವ್ ಹೈಪಾಥಿಸಿಸ್) $H_1$ ತಿಳಿಯದಿದ್ದರೆ ಬರೆಯಲು ಬರದು. ಬಹಳ ದೊಡ್ಡ ಪ್ರತಿಚಯಗಳಿದ್ದರೆ ಕೈ–ವರ್ಗ ಪರೀಕ್ಷೆ ಸಾಮಾನ್ಯವಾಗಿ ಸಮೂಹ ವಿತರಣೆ ಸರಳ ಎಂಬ ಆಧಾರಭಾವನೆಯನ್ನು ತಿರಸ್ಕರಿಸುವುದು. ಅಂಥ ಸರಳ ವಿತರಣೆಯಿಂದ ವ್ಯತ್ಯಾಸಗಳು ತುಸುವೇ ಆಗಿದ್ದರೂ ದೊಡ್ಡ ಪ್ರತಿಚಯಗಳಲ್ಲಿ ಅವು ಗಮನಾರ್ಹವಾಗಿ ಕಾಣಿಸಿಕೊಳ್ಳುವುದು ಈ ಪರಿಸ್ಥಿತಿಗೆ ಕಾರಣ. ಚಿಕ್ಕ ಪ್ರತಿಚಯಗಳಿದ್ದರೆ ಕೈ–ವರ್ಗಪರೀಕ್ಷೆ ಬಹಳ ನಿಖರವಾಗಿರುವುದಿಲ್ಲ.

(ಎಸ್.ಟಿ.)

**ಕೈವಲ್ಯ :** ಜೀವ ಸಂಸಾರದಿಂದ ಪಡೆಯುವ ಬಿಡುಗಡೆಗೆ ಸಾಮಾನ್ಯವಾಗಿ ಈ ಹೆಸರಿದೆ. ಐಕ್ಯ, ಮೋಕ್ಷ, ನಿರ್ವಾಣ ಇವು ಪರ್ಯಾಯ ನಾಮಗಳು. ಕೈವಲ್ಯದ ಅರ್ಥ ಒಂದೊಂದು ದರ್ಶನದಲ್ಲಿ ಒಂದೊಂದು ಬಗೆಯಾಗಿದೆ. ವೇದಾಂತ ಶಾಖೆಯಾದ ಅದ್ವೈತದಲ್ಲಿ ಕೈವಲ್ಯವೆಂದರೆ ಆತ್ಮ–ಬ್ರಹ್ಮರ ಐಕ್ಯ. ಆತ್ಮ ಮಾಯಾ ಸಂಬಂಧದಿಂದ ಕೇವಲತೆಯನ್ನು ಹೊಂದಿ ಬ್ರಹ್ಮವಾಗುವುದು. ದ್ವೈತದಲ್ಲಿ ಕೈವಲ್ಯ ಅಥವಾ ಮೋಕ್ಷವೆಂದರೆ ಆತ್ಮ ಆತ್ಮವಾಗಿಯೇ ಉಳಿದು ವಿಷ್ಣುಸಾಲೋಕ್ಯ, ಸಾಮೀಪ್ಯಗಳನ್ನು ಹೊಂದಿ ಅನುಗುಣವಾದ ಆನಂದವನ್ನು ಅನುಭವಿಸುವುದು. ಸಾಂಖ್ಯದರ್ಶನದ ಪ್ರಕಾರ ಪ್ರಕೃತಿಸಂಪರ್ಕವನ್ನು ಪುರುಷ ಕಳೆದುಕೊಳ್ಳುವುದೇ ಕೈವಲ್ಯ. ಪಾತಂಜಲಯೋಗದರ್ಶನದ ಅರ್ಥ ಇದೇ. ಅವೈದಿಕ ಧರ್ಮವಾದ ಜೈನಸಿದ್ಧಾಂತದ ಪ್ರಕಾರ ಆತ್ಮ ಅಜೀವರೂಪವಾದ ಕರ್ಮದಿಂದ ಬಿಡುಗಡೆ ಹೊಂದುವುದೇ ಕೈವಲ್ಯ. ಬೌದ್ಧರಲ್ಲಿ ಕೈವಲ್ಯ ಅಥವಾ ಬಿಡುಗಡೆಯೆಂದರೆ ನಿರ್ವಾಣ ಹೊಂದುವಿಕೆ ಎಂದರ್ಥ. (ಕೆ.ಬಿ.ಆರ್.)

**ಕೈವಾರ :** ಕೋಲಾರ ಜಿಲ್ಲೆಯಲ್ಲಿ ಚಿಂತಾಮಣಿಯಿಂದ 13 ಕಿಮೀ ದೂರದಲ್ಲಿರುವ ಗ್ರಾಮ. ಇದು ಪುರಾಣಕಾಲದ ಏಕಚಕ್ರಪುರವೆಂದು ಪ್ರಸಿದ್ಧವಾಗಿದೆ. ಅರಗಿನ ಮನೆಯಿಂದ ತಪ್ಪಿಸಿಕೊಂಡು ಹೋದ ಪಾಂಡವರು ಕೆಲಕಾಲ ಇಲ್ಲಿ ವಾಸಿಸುತ್ತಿದ್ದರೆಂದೂ ನೆರೆಯ ಬೆಟ್ಟದಲ್ಲಿ ಸೇರಿಕೊಂಡು ಅಲ್ಲಿಯ ಜನರಿಗೆ ತೊಂದರೆ ಕೊಡುತ್ತಿದ್ದ ಬಕಾಸುರನನ್ನು ಭೀಮ ಕೊಂದು ಅವನ ಶವವನ್ನು ಬೆಟ್ಟದ ಗುಹೆಯೊಂದರಲ್ಲಿ ಮುಚ್ಚಿದನೆಂದೂ ಐತಿಹ್ಯವಿದೆ.

ಕೈವಾರದಲ್ಲಿ ಹಲವಾರು ಹಳೆಯ ದೇವಾಲಯಗಳ ಅವಶೇಷಗಳುಂಟು. 1283ಕ್ಕೂ ಹಿಂದಿನಿಂದಲೂ ಅಮರನಾರಾಯಣ, ಭೀಮೇಶ್ವರ ಮತ್ತು ಸಹದೇವೇಶ್ವರ ವಿಗ್ರಹಗಳಿದ್ದುವೆಂಬುದು ಇಲ್ಲಿ ದೊರಕಿರುವ ತಮಿಳು ಮತ್ತು ಗ್ರಂಥಲಿಪಿಗಳ ಮಿಶ್ರಶಾಸನಗಳಿಂದ ತಿಳಿದುಬರುತ್ತದೆ. ಈಗಿರುವ ದೇವಸ್ಥಾನಗಳನ್ನು ಬಹುಶಃ 1280ರಲ್ಲಿ ಕಟ್ಟಿಸಿ, ಅವಕ್ಕೆ ದತ್ತಿಗಳನ್ನು ಬಿಟ್ಟಂತೆ ತಿಳಿದುಬರುತ್ತದೆ. ಅಮರನಾರಾಯಣ ದೇವಾಲಯ ಇಲ್ಲಿಯ ಮುಖ್ಯ ವಾಸ್ತುಕೃತಿ. ಇಟ್ಟಿಗೆಗಳಿಂದ ಕಟ್ಟಿದ ಶಿಖರವನ್ನುಳ್ಳ ಗರ್ಭಗೃಹ, ಸಣ್ಣ ಸುಕನಾಸಿ, ನಾಲ್ಕು ಕಂಬಗಳಿರುವ ನವರಂಗ, ಉತ್ತರ ಭಾಗದಲ್ಲಿ ಒಂದು ಸಣ್ಣ ಗುಡಿ ಮತ್ತು ಮುಖಮಂಟಪಗಳಿಂದ ಇದು ಕೂಡಿದೆ.

ಮುಖಮಂಟಪ ಬಹಳ ಸುಂದರ. ಮುಂಭಾಗದ ಎರಡು ಕಂಬಗಳ ಮೇಲೆ ಅಮೋಘವಾದ ವಿಮಾನ, ಸಿಂಹ ಮತ್ತು ಇತರ ಪ್ರಾಣಿಗಳ ಚಿತ್ರಗಳನ್ನು ಕೆತ್ತಲಾಗಿದೆ. ಹಾರುತ್ತಿರುವ ಸಿಂಹ, ಮಕರ ಮತ್ತು ಗಂಧರ್ವರ ಚಿತ್ರಗಳನ್ನು ಉತ್ತರ ಭಾಗದ ಕಂಬದ ಮೇಲೆ ಕೆತ್ತಲಾಗಿದೆ. ನವರಂಗದ ಮಹಾದ್ವಾರ ಉತ್ತಮವಾದ ಕೆತ್ತನೆಗಳಿಂದ ತುಂಬಿದೆ; ದಾಲವಂದದ ಮೇಲೆ ನೃತ್ಯಗಾಯನಗಳಲ್ಲಿ ತೊಡಗಿರುವ ಗಂಧರ್ವರ ಮಧ್ಯೆ ಇರುವ ಕಲಶದಿಂದ ಹೂಬಳ್ಳಿಗಳು ಹಬ್ಬುತ್ತಿರುವಂತೆ ಚಿತ್ರಿಸಲಾಗಿದೆ. ದಕ್ಷಿಣದ ದ್ವಾರಸ್ತಂಭದ ಮೇಲೆ ಹಂಸ, ನವಿಲು, ಸಿಂಹ, ಹುಲಿ ಮತ್ತು ಸವಾರಿ ಆನೆಗಳನ್ನು ಚಿತ್ರಿಸಿದೆ. ಉತ್ತರ ದ್ವಾರಸ್ತಂಭ ಮತ್ತು ದಾಲವಂದಗಳ ಮೇಲೆ ಗಂಧರ್ವರ ಚಿತ್ರಗಳನ್ನು ಕೆತ್ತಲಾಗಿದೆ. ದಾಲವಂದದ ಮಧ್ಯದಲ್ಲಿ ಕೆತ್ತಿರುವ ಚಿತ್ರ ಸಿಂಹಮುಖ. 7.5 ಮೀ. ಚಚ್ಚೌಕದ ನವರಂಗದ ದಕ್ಷಿಣಭಾಗದಲ್ಲಿ ಕಲ್ಲಿನ ಕಿಟಕಿಯೂ ಉತ್ತರ ಭಾಗದಲ್ಲಿ ವಿಜಯನಗರಸಾಮ್ರಾಜ್ಯದ ಕಾಲದ, ಸೀತಾರಾಮಲಕ್ಷ್ಮಣರ ಪ್ರತಿಮೆಗಳಿರುವ ಸಣ್ಣ ಗುಡಿಯೂ ಇವೆ. ನವರಂಗದ ಚಾವಣಿಯ ಮಧ್ಯದಲ್ಲಿ ಒಂಬತ್ತು ಫಲಕಗಳುಂಟು. ನಡುವೆ ಹಂಸವಾಹನ ತ್ರಿಮುಖ ಬ್ರಹ್ಮನನ್ನೂ ಸುತ್ತಲೂ ಅಷ್ಟದಿಕ್ಪಾಲಕರನ್ನೂ ಕಡೆಯಲಾಗಿದೆ. ಇಲ್ಲಿಯ ಕಂಬಗಳ ಮೇಲೆ ವಿವಿಧ ದೇವತೆಗಳ, ಗಂಧರ್ವರ ಮತ್ತು ಸಿಂಹಗಳ ಚಿತ್ರಗಳಿವೆ. ಸಣ್ಣದಾದ ಸುಕನಾಸಿ, ಅನಂತರ ಗರ್ಭಗುಡಿ; ಅಲ್ಲಿ ಸ್ಥಾಪಿಸಿರುವ ಸುಂದರ ಪ್ರತಿಮೆ ಅಮರನಾರಾಯಣನದು.

ಭೀಮೇಶ್ವರ ದೇವಾಲಯ ಅಮರನಾರಾಯಣ ದೇವಾಲಯಕ್ಕಿಂತಲೂ ದೊಡ್ಡದು. ಅದರಲ್ಲಿ ಗರ್ಭಗುಡಿ, ಸುಕನಾಸಿ, ಅರ್ಧಮಂಟಪ ಮತ್ತು ರಂಗಮಂಟಪಗಳುಂಟು. ಅಲ್ಲಿರುವ ಹದಿನಾರು ಮುಖಗಳ ಕಂಬಗಳ ಮೇಲೆ, ದೇವತೆಗಳ, ವೀರರ, ಹೂ ಮತ್ತು ಎಲೆಗಳ ಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಮತ್ತು ಮುಂಭಾಗದ ಕಂಬಗಳು ವಿಜಯನಗರದ ಶೈಲಿಗೆ ಸೇರಿದವು. ಚಾವಣಿಯ ಕೆತ್ತನೆಗಳು ಮತ್ತು ಕೆಲವು ತಮಿಳು ಶಾಸನಗಳು 1294ರ ಸುಮಾರಿಗೆ–ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲಕ್ಕೆ–ಸೇರುತ್ತವೆ. ಆಗ ಇದ್ದ ದೇವಾಲಯವನ್ನು ಅಚ್ಯುತರಾಯ–ಕೃಷ್ಣದೇವರಾಯರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿರಬಹುದು.

ಅಲ್ಲಿರುವ ಇತರ ದೇವಾಲಯಗಳಲ್ಲಿ ಸಹದೇವೇಶ್ವರ ಮತ್ತು ನಕುಲೇಶ್ವರ ಮಂದಿರಗಳು ಸಣ್ಣವು. ಸಹದೇವೇಶ್ವರ ಮಂದಿರದ ಗೋಡೆಗಳ ಮೇಲೆ ಅನೇಕ ತಮಿಳು ಶಾಸನಗಳುಂಟು. ಬಹುಶಃ ಹೊಯ್ಸಳ ಸಾಮಂತನಾಗಿದ್ದ, 1280–90ರ ಸುಮಾರಿನಲ್ಲಿ ಕೈವಾರ ನಾಡಿನ ರಾಜ್ಯಪಾಲನಾಗಿದ್ದ, ಚೋಳ ದುಟ್ಟರಾದಿತ್ತ ರಾಜನಾರಾಯಣನ ಉಲ್ಲೇಖ ಈ ಶಾಸನಗಳಲ್ಲಿವೆ. ಇಲ್ಲಿಯ ಶಿವದೇವಾಲಯಗಳನ್ನು ಈತ ಕಟ್ಟಿಸಿರಬಹುದು. (ಬಿ.ಕೆ.ಜಿ.)

**ಕೈಸರ್ – ಎ – ಹಿಂದ್ :** ಮುಂಬಯಿಯಿಂದ ಪ್ರಕಟವಾಗುತ್ತಿರುವ ಆಂಗ್ಲ–ಗುಜರಾತಿ ವಾರಪತ್ರಿಕೆ. 1881ರಲ್ಲಿ ಸ್ಥಾಪಿತವಾಯಿತು. ಮೊದಲು ಇದು ಆರು ಪುಟಗಳಿಂದ ಕೂಡಿತ್ತು. ಜಾಹೀರಾತುಗಳು, ವಾಣಿಜ್ಯ ವಿಷಯಗಳು, ಸಂಪಾದಕರಿಗೆ ಪತ್ರಗಳು ಇವಕ್ಕೆ ತಲಾ ಒಂದೊಂದು ಪುಟವನ್ನು ಮೀಸಲಾಗಿಡಲಾಗಿತ್ತು. ಉಳಿದ ಪುಟಗಳಲ್ಲಿ ಪಾರ್ಸಿಗಳಿಗೆ ಸಂಬಂಧಪಟ್ಟ ಸುದ್ದಿಗಳೂ ಕೆಲವು ವೇಳೆ ಲೇಖನಗಳೂ ಪ್ರಕಟವಾಗುತ್ತಿದ್ದುವು. 19ನೆಯ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಪಾರ್ಸಿಗಳ ಒಳಗಡೆಯೇ ಉದ್ಭವವಾಗಿದ್ದ ಕೆಲವು ವಿವಾದಗಳಲ್ಲಿ ಈ ಪತ್ರಿಕೆಯೂ ಭಾಗವಹಿಸಿತಾದರೂ ಇದರ ಧೋರಣೆ ಸಾಮಾನ್ಯವಾಗಿ ಗಂಭೀರವಾಗಿರುತ್ತಿತ್ತು.

ಈ ಶತಮಾನದ ಮೊದಲ ದಶಕಗಳಲ್ಲಿ ಕೈಸರ್–ಎ–ಹಿಂದ್ ರಾಷ್ಟ್ರೀಯ ಚಳವಳಿಗೆ ಬೆಂಬಲವಾಗಿ ಪ್ರಚಾರ ನೀಡಿದ್ದಲ್ಲದೆ ಸಾಮಾಜಿಕ–ಆರ್ಥಿಕ ವಿಷಯಗಳ ಬಗ್ಗೆ ವಿಚಾರವಿನಿಯಮಕ್ಕೆ ನೆರವಾಯಿತು. ಭಾರತ ಸ್ವಾತಂತ್ರ್ಯ ಗಳಿಸುವವರೆಗೂ ಇದೇ ಧೋರಣೆ ನಡೆದುಕೊಂಡು ಬಂತು. ಈಗ ಇದು ಯಾವ ತೀವ್ರ ಚಳವಳಿಗಳಲ್ಲೂ ಭಾಗವಹಿಸದೆ ವಾರಪತ್ರಿಕೆಯಾಗಿ ಸೇವೆ ಸಲ್ಲಿಸುತ್ತಿದೆ. (ಎಸ್.ಐ.ಕೆ.)

**ಕೈಸರ್ ಜಾರ್ಜ್ :** 1878–1945. ಜರ್ಮನ್ ನಾಟಕಕಾರ ಹಾಗೂ ಕಾದಂಬರಿಕಾರ. ನಾಟಕದಲ್ಲಿ ಅಭಿವ್ಯಕ್ತಿ ಪಂಥದ ಮುಂದಾಳು. ಸಾಮಾಜಿಕ ಹಾಗೂ ನೈತಿಕ ಸಮಸ್ಯೆಗಳನ್ನು ಕುರಿತು ನಗೆನಾಟಕಗಳನ್ನೂ ಗಂಭೀರ ನಾಟಕಗಳನ್ನೂ ಬರೆದ. ಕಲೆ ಮತ್ತು ವ್ಯವಹಾರ–ಎರಡೂ ದೃಷ್ಟಿಗಳಿಂದ ಇವನ ನಾಟಕಗಳು ಯಶಸ್ವಿಯಾದುವು.

ಮಾಗ್ಡೆಬರ್ಗ್‌ನಲ್ಲಿ ಶಾಲಾ ಶಿಕ್ಷಣ ಮುಗಿಸಿ, ಇಟಲಿ, ಸ್ಪೇನ್, ದಕ್ಷಿಣ ಅಮೆರಿಕಗಳಲ್ಲಿ ವಾಣಿಜ್ಯೋದ್ಯಮಿಯಾಗಿ ಈತ ಮೂರು ವರ್ಷ ಕಳೆದ. ಅರ್ಜಂಟೀನದ ಒಳನಾಡಿನಲ್ಲಿದ್ದಾಗ ಮಲೇರಿಯ ರೋಗದಿಂದ ತೊಂದರೆಪಟ್ಟು, ಅಶಕ್ತನಾಗಿ ಜರ್ಮನಿಗೆ ಹಿಂದಿರುಗಿದ. ಅನಂತರ ಚೇತರಿಸಿಕೊಂಡು ಬರವಣಿಗೆಯಲ್ಲಿ ಖ್ಯಾತಿಗಳಿಸಿದ.

1933ರಲ್ಲಿ ನಾಟ್ಸಿಗಳಿಂದ ತೊಂದರೆಪಟ್ಟು ಸ್ವಿಟ್ಜರ್ಲೆಂಡಿಗೆ ಓಡಿಹೋಗಿ, ಸಾಯುವವರೆಗೆ ಅಲ್ಲೇ ಇದ್ದ.

1918ರಲ್ಲಿ ಪ್ರಕಟವಾದ ರೆಕ್ಪೊರ್ ಕ್ಲೈಸ್ಟ್ ನಾಟಕದಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ಹಾಗೂ ದೈಹಿಕ ಶಿಕ್ಷಣ ಬೋಧಕರ ಮಧ್ಯೆ ಉಂಟಾದ ಕಲಹ ವಿದ್ಯಾರ್ಥಿಯೊಬ್ಬನ ಆತ್ಮಹತ್ಯೆಯಲ್ಲಿ ಪರ್ಯವಸಾನವಾಗುತ್ತದೆ.

ಬೈಬಲ್ಲಿನ ಹಳೆಯ ಒಡಂಬಡಿಕೆಯನ್ನು ಆಧರಿಸಿ ಬರೆದ ಡೀ ಜೂಡಿಷೆ ವಿಟ್ವೆ (ಯೆಹೂದಿ ವಿಧವೆ, 1911), ಕೋನಿಂಗ್ ಹ್ಯಾನ್ರೆ (ದೊರೆ ಹೆನ್ರಿ, 1915), ಗ್ರೀಕ್ ಕಥೆಯ ಆಧಾರದ ಯೂರೋಪ, (1915) ಇವು ಈತನ ಕೃತಿಗಳಲ್ಲಿ ಮುಖ್ಯವಾದುವು.

ಡೀ ಬ್ಯೂರ್ಗರ್ ಫಾನ್ ಕಲಾಯ್ಸ್ (ಕೆಲೆ ನಗರದ ಪೌರ 1914) ನಾಟಕದಲ್ಲಿ ಜನರ ಒಳಿತಿಗಾಗಿ, ಅಹಿಂಸೆ, ಶಾಂತಿ ಸ್ಥಾಪನೆಗಾಗಿ, ನಾಯಕ ತ್ಯಾಗ ಮಾಡುತ್ತಾನೆ.

ಫ್ರೆಂಚ್ ಚರಿತ್ರಕಾರ ಫ್ರಾಯ್‌ಸಾರ್ಟ್‌ನ ಚರಿತ್ರೆ ಮತ್ತು ರೋಡಿನ್‌ನ ಕೆಲೆ ನಗರದ ಪೌರರ ಪ್ರತಿಮೆಗಳು–ಇವು ಕೈಸರನ ನಾಟಕಕ್ಕೆ ಸ್ಫೂರ್ತಿ ನೀಡಿದುವು. ಫಾನ್ ಮೊರ್ಗನ್ಸ್ ಬಿಸ್ ಮಿಟರ್‌ನಾಕ್ಟ್ (ಬೆಳಗಿನಿಂದ ಮಧ್ಯರಾತ್ರಿಯವರೆಗೆ) ಅಭಿವ್ಯಕ್ತಿವಾದದ ಸಾಮಾಜಿಕ ನಾಟಕ. 1922ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಪ್ರದರ್ಶಿಸಿದ ಈ ನಾಟಕ ಆಧುನಿಕ ಅಮೆರಿಕನ್ ನಾಟಕರಂಗದಲ್ಲಿ ನೂತನ ಶಕೆಯನ್ನು ಆರಂಭಿಸಿತು. ಹೋಲೆ ವೆಗ್ ಎರ್ಡೆ (ನರಕ, ದಾರಿ, ಭೂಮಿ–1919) ನಾಟಕದಲ್ಲಿ, ಮೊದಲನೆಯ ಭಾಗದಲ್ಲಿ ಶೋಷಣೆ ಮತ್ತು ದುರಾಸೆಯಿಂದ ಪೀಡಿತವಾಗಿರುವ ಇಂದಿನ ಸಮಾಜದ ಚಿತ್ರ, ಎರಡನೆಯ ಭಾಗದಲ್ಲಿ ಸಾಮಾಜಿಕ ಜವಾಬ್ದಾರಿಯ ಆರಂಭದ ಕಥೆ, ಕಡೆಯ ಭಾಗದಲ್ಲಿ ತನ್ನವರಿಗಾಗಿ ಪ್ರೀತಿ ತೋರಿಸುವುದೇ ಮಾನವನ ಗುರಿಯ ವರ್ಣನೆ ಇವೆ. ಮಾನವ ಮರ್ತ್ಯದಲ್ಲೇ ಸ್ವರ್ಗ ನಿರ್ಮಿಸಿದಾಗ ಆತ್ಮ ಪ್ರೇಮಗೀತೆ ಹಾಡುತ್ತದೆ. ಗ್ಯಾಸ್ ನಾಟಕದಲ್ಲಿ ಕೈಗಾರಿಕೆ ವ್ಯವಸ್ಥೆಯನ್ನು ಖಂಡಿಸಿ, ಯಂತ್ರದ ಪ್ರಭುತ್ವದಿಂದ ಮಾನವನ ಬಿಡುಗಡೆಯನ್ನು ಕವಿ ಬೇಡುತ್ತಾನೆ.

ಈ ನಾಟಕಗಳಲ್ಲದೆ ಎಸ್ಟ್ ಇಸ್ಟ್ ಗೆನುಂಗ್ (ಇನ್ನು ಸಾಕು–1932) ಮತ್ತು ವಿಲಾ ಆರಿಯ (ಸಿಸಿಲಿಯ ಹಳ್ಳಿ–1940) ಎಂಬ ಕಾದಂಬರಿಗಳನ್ನೂ ಈತ ಬರೆದಿದ್ದಾನೆ. (ಟಿ.ವಿ.ಎಸ್.)

**ಕೈಸರ್ಲಿಂಗ್, ಎಡ್ವರ್ಡ್ ಫಾನ್ :** 1855–1918. ಕಾದಂಬರಿಕಾರ. ಬಾಲ್ಟಿಕ್ ಪ್ರದೇಶದ ಅಥವಾ ಪ್ರಷ್ಯದ ಪಾಳೆಯಗಾರರ ಜೀವನ ಚಿತ್ರಣ ಇವನ ಕಥೆಗಳ ವಸ್ತು. ಸ್ವಪ್ರತಿಷ್ಠೆಯಿಂದಾಗಿ ಜನಸಾಮಾನ್ಯರಿಂದ ಪ್ರತ್ಯೇಕವಾಗಿ, ಬೇಸರದ ಜೀವನವನ್ನು ಕಳೆಯಬೇಕಾಗಿ ಬಂದರೂ ರಕ್ತಗತಗುಣವಾದ ಅಲಸಿಕೆ, ಸಂಪ್ರದಾಯಗಳಿಂದ ಬಂಧಿತರಾಗಿ, ಬದಲಾಗುತ್ತಿರುವ ಕಾಲಗತಿಗೆ ಹೊಂದಿಕೊಳ್ಳಲಾರದೆ, ಅದನ್ನು ವಿರೋಧಿಸಿದರೂ ಕಡೆಗೆ ಅದನ್ನೇ ಒಪ್ಪಿಕೊಂಡು, ಹಿಂದಿನ ವೈಭವಗಳ ನೆನಪನ್ನು ಮೆಲುಕು ಹಾಕುತ್ತಿರುವ ಪಾಳೆಯಗಾರರ ನಿರರ್ಥಕ ಬಾಳುವೆಯ ಚಿತ್ರಣ ಅಲ್ಲಿದೆ.

ಪಾತ್ರಗಳ ಅತಿ ಸೂಕ್ಷ್ಮಾಭಿರುಚಿ, ವಿಷಣ್ಣತೆ, ಭೋಗ ಜೀವನಗಳನ್ನು ಕೈಸರ್ಲಿಂಗ್ ಪ್ರಭಾವಯುತವಾಗಿ ವಿವರಿಸಿದ್ದಾನೆ.

ವಿಯನ್ನದಲ್ಲಿ ನ್ಯಾಯಶಾಸ್ತ್ರ ಓದಿದ ಈತ ಇಟಲಿಯಲ್ಲಿ ಬಹುಕಾಲವಿದ್ದು ತನ್ನ 52ನೆಯ ವಯಸ್ಸಿನಲ್ಲಿ ಕುರುಡಾಗಿ, ಆಸ್ತಿಯನ್ನು ಕಳೆದುಕೊಂಡು ವ್ಯಾಕುಲದಿಂದ ಮ್ಯೂನಿಕ್ ನಗರದಲ್ಲಿ ಕಾಲವಾದ. (ಟಿ.ವಿ.ಎಸ್.)

**ಕೈಸರ್ಲಿಂಗ್, ಹರ್ಮನ್ ಅಲೆಕ್ಸಾಂಡರ್ :** 1880–1946. ಜರ್ಮನ್ ತತ್ತ್ವಶಾಸ್ತ್ರಜ್ಞ. ಬಾಲ್ಟಿಕ್ ರಷ್ಯದಲ್ಲಿ ಜರ್ಮನ್ ಮಾತನಾಡುವ ಕುಟುಂಬಕ್ಕೆ ಸೇರಿದವ. ಡೋರ್‍ಪಾಟ್, ಹೈಡೆಲ್‍ಬರ್ಗ್, ವಿಯನ್ನ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ನಡೆಸಿ, ಪ್ರಪಂಚಪರ್ಯಟನೆ ಮಾಡಿ, ಪೌರಸ್ತ್ಯ ತತ್ತ್ವಶಾಸ್ತ್ರದಲ್ಲಿ ಆಸಕ್ತಿ ವಹಿಸಿದ. 1917ರ ರಷ್ಯದ ಕ್ರಾಂತಿಯಲ್ಲಿ ಪಿತ್ರಾರ್ಜಿತ ಆಸ್ತಿಯನ್ನು ಕಳೆದುಕೊಂಡು ಬರ್ಲಿನ್ನಿಗೆ ಬಂದು, ಬಿಸ್ಮಾರ್ಕ್‍ನ ಮೊಮ್ಮಗಳನ್ನು ವಿವಾಹವಾದ. ನಾಜಿಗಳನ್ನು ಟೀಕಿಸಿದುದರಿಂದ ಜರ್ಮನ್ ಪೌರತ್ವವನ್ನು ಕಳೆದುಕೊಂಡನಾದರೂ ಜನಾಭಿಪ್ರಾಯದ ಒತ್ತಡದಿಂದ 1934ರಲ್ಲಿ ಪೌರತ್ವ ಈತನಿಗೆ ಪುನಃ ಲಭಿಸಿತು. ತತ್ತ್ವಶಾಸ್ತ್ರ ಜನಸಾಮಾನ್ಯರಿಗೂ ಅರ್ಥವಾಗುವಂತಿರಬೇಕೆಂಬುದು ಈತನ ಉದ್ದೇಶ. ಆತ್ಮೋನ್ನತಿಯೇ ಈತನ ಎಲ್ಲ ಬರವಣಿಗೆಯ ಗುರಿ.

ಈತನ ಬರಹಗಳಲ್ಲಿ ಡಸ್ ರೈಸೆಟಾಗೆ ಬೂಹ್ ಐನ್ಸ್ ಫಿಲೋಸೊಫೆನ್ (ತತ್ತ್ವಶಾಸ್ತ್ರಜ್ಞರ ಪ್ರವಾಸ ದಿನಚರಿ–1925). ಡಸ್ ಗೆಫೂಗೆ ಡೆರ್‍ವೆಲ್ಟ್ (ಪ್ರಪಂಚದ ರಚನೆ–1906), ಉನ್‍ಸ್ಟೆರ್‍ಬ್ಲಿಶ್ಕೈಟ್ (ಅಮರತ್ವ–1922), ಶೋಫೆರಿಶೆ ಎರ್‍ಕೆಂಟ್ನಿಸ್ (ಕ್ರಿಯಾತ್ಮಕ ಅರ್ಥಗ್ರಹಣ–1922), ವೀಡರ್‍ಗೆಬುರ್ಟ್ (ಸತ್ವದ ಪುನಃ ಸ್ಥಾಪನೆ–1927), ಝ್ಯೂಟ್ ಅಮೆರಿಕನಿಶೆ ಮೆಡಿಟೇಷನೆನ್ (ದಕ್ಷಿಣ ಅಮೆರಿಕದಲ್ಲಿ ಧ್ಯಾನ–1932) ಮುಖ್ಯವಾದುವು. (ಟಿ.ವಿ.ಎಸ್.)

**ಕೈಸಿಸ್ :** ಒಂದು ಜಾತಿಯ ಆರ್ಕಿಡ್ ಸಸ್ಯ. ಮೆಕ್ಸಿಕೋದಿಂದ ವೆನಿಜ್ವೇಲವರೆಗಿನ ವ್ಯಾಪಕ ಪ್ರದೇಶದಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಸುಂದರವಾದ, ಸುವಾಸನಾಯುಕ್ತವಾದ ಹಾಗೂ ಗಿಡದ ಮೇಲೆಯೇ ಬಹಳ ಕಾಲ ಇರುವ ಹೂಗಳನ್ನು ಪಡೆದಿರುವುದರಿಂದ ಕೈಸಿಸನ್ನು ಉದ್ಯಾನಗಳಲ್ಲಿ ಅಲಂಕಾರ ಸಸ್ಯವನ್ನಾಗಿ ಬೆಳೆಸುತ್ತಾರೆ. ಸ್ವಾಭಾವಿಕವಾಗಿ ಇದೊಂದು ಅಪ್ಪು ಸಸ್ಯ (ಎಪಿಫೈಟ್). ಕೆಲವೊಮ್ಮೆ ಶಿಲಾಸಸ್ಯವಾಗಿ (ಲಿತೋಫೈಟ್) ಬೆಳೆಯುವುದೂ ಉಂಟು.

ಇಳಿಬಿದ್ದಿರುವ ದಪ್ಪನೆಯ ರಸಭರಿತವಾದ ಮತ್ತು ಗದೆಯಾಕಾರದ ಮಿಥ್ಯಾಲಶುನಗಳೂ(ಸ್ಯೂಡೋ ಬಲ್ಬ್ಸ್) ಒಂದೊಂದು ಗೆಣ್ಣಿನಿಂದ ಒಂಟಿಯಾಗಿ

ಕೈಸಿಸ್ ಬ್ರಾಕ್ಟೆಸೆನ್ಸ್ ಪ್ರಭೇದ

ಮೂಡುವ ಎಲೆಗಳೂ ಮೇಣದಂಥ ವಸ್ತುವಿನಿಂದ ಲೇಪವಾದ ಹೂಗಳೂ ಹೊಸ ರೆಂಬೆಗಳಿಂದ ಹುಟ್ಟುವ ಪುಟ್ಟಗಾತ್ರದ ರೇಸೀಮ್ ಹೂ ಗೊಂಚಲುಗಳೂ ಕೈಸಿಸ್ ಗಿಡದ ಮುಖ್ಯ ಲಕ್ಷಣಗಳು. ಪುಷ್ಪಪತ್ರಗಳು ಮತ್ತು ದಳಗಳು ಹೆಚ್ಚು ಕಡಿಮೆ ಬಟ್ಟಲಿನಂತಿವೆ. ದಳಗಳ ಬಣ್ಣ ಹಳದಿ ಇಲ್ಲವೆ ಬಿಳಿ. ಅಲ್ಲಲ್ಲಿ ಕಂದು, ಕೆಂಪು, ಬೂದಾ ಮುಂತಾದ ಬಣ್ಣಗಳ ಚುಕ್ಕೆ ಇಲ್ಲವೆ ಗೆರೆಗಳು ಇವೆ. ಇದರಿಂದಾಗಿ ಹೂ ಬಲು ಚೆಲುವಾಗಿ ಕಾಣುತ್ತದೆ. ಒಂದು ದಳ ದಪ್ಪನೆಯ ಹೂದುಟಿಯಾಗಿ(ಲೇಬೆಲಮ್) ಮಾರ್ಪಟ್ಟಿದೆ. ಇದಕ್ಕೆ ದಳಗಳಿಗಿಂತ ಭಿನ್ನವಾದ ಬಣ್ಣವಿದೆಯಾಗಿ ಹೂವಿನ ಅಂದ ಹೆಚ್ಚುತ್ತದೆ.

ಕೈಸಿಸ್‍ನಲ್ಲಿ ಸುಮಾರು 6 ಪ್ರಭೇದಗಳಿವೆ. ಇವುಗಳಲ್ಲಿ ಆರಿಯ, ಲೀವಿಸ್ ಮತ್ತು ಚೆಲ್ಲೋನಿಯೈ ಎಂಬವು ಹಳದಿ ಹೂ ಬಿಡುವಂಥವು. ಬ್ರಾಕ್ಟೆಸೆನ್ಸ್, ಲಿಮಿಂಗಿಯೈ ಮತ್ತು ಸೆಡೆನಿಯೈ ಎಂಬ ಇತರ ಪ್ರಭೇದಗಳಲ್ಲಿ ಬಿಳಿಯ ಬಣ್ಣದ ಹೂಗಳು ಅರಳುತ್ತವೆ. ಎಲ್ಲ ಪ್ರಭೇದಗಳನ್ನೂ ತೂಗುಕುಂಡಗಳಲ್ಲಿ ಇಲ್ಲವೇ ಬುಟ್ಟಿಗಳಲ್ಲಿ ಬೆಳೆಸಲಾಗುತ್ತದೆ. ಕೈಸಿಸ್ ಸಹಜವಾಗಿ ಅಪ್ಪುಸಸ್ಯವಾದ್ದರಿಂದ ಅದನ್ನು ಹೀಗೆ ಬೆಳೆಸುವುದೇ ಒಳ್ಳೆಯದು. ಗಿಡದಿಂದ ವಿಪುಲವಾಗಿ ಕವಲೊಡೆದಿರುವ ಚೂಷಕ ಬೇರುಗಳು ಹೊರಟು ಗಾಳಿಯಲ್ಲಿ ಇಳಿಬಿದ್ದು ಗಾಳಿಯಿಂದ ನೇರವಾಗಿ ತೇವವನ್ನು ಹೀರುತ್ತವೆ. ಕೈಸಿಸ್‍ನ ಉತ್ತಮ ಬೆಳವಣಿಗೆಗೆ ಬುಟ್ಟಿ ಇಲ್ಲವೇ ಕುಂಡಗಳಲ್ಲಿ ನೀರು ಸರಾಗವಾಗಿ ಇಳಿದುಹೋಗುವಂತಿರಬೇಕು. ಆದ್ದರಿಂದ ನೀರಿನ ಚಲನೆಗೆ ಅನುಕೂಲವಾಗಿರುವ ಆಸ್ಮಂಡ ಇಲ್ಲವೇ ಬೇರಾವುದಾದರೂ ಫರ್ನ್‍ಸಸ್ಯದ ಕಾಂಡದ ತುಂಡುಗಳನ್ನು ಕಾಂಪೋಸ್ಟ್ ಗೊಬ್ಬರದೊಂದಿಗೆ ಸೇರಿಸಿ ಕುಂಡಗಳಲ್ಲಿ ತುಂಬಿ ಗಿಡಗಳನ್ನು ನೆಡಬೇಕು. ಹೂ ಚೆನ್ನಾಗಿ ಅರಳಲು ಹದವಾದ ಬಿಸಿಲು ಇರುವಂಥ ಸ್ಥಳಗಳಲ್ಲಿ ಕುಂಡಗಳನ್ನು ತೂಗುಹಾಕಬೇಕು. ಬಿಸಿಲು ತೀವ್ರವಾಗಿ ಗಿಡ ಸುಟ್ಟು ಹೋಗದಂತೆ ಎಚ್ಚರವಹಿಸಬೇಕು. ಗಿಡ ಇನ್ನೂ ಬೆಳೆಯುತ್ತಿರುವಾಗ ಯಥೇಚ್ಛವಾಗಿ ನೀರು ಹಾಕಬೇಕು. ಮಿಥ್ಯಾಲಶುನಗಳು ಪೂರ್ಣವಾಗಿ ರೂಪುಗೊಂಡಮೇಲೆ ನೀರಿನ ಪ್ರಮಾಣವನ್ನು ಕಡಿಮೆ ಮಾಡಿ ತಂಪಾದ ಸ್ಥಳಕ್ಕೆ ಕುಂಡಗಳನ್ನು ಸ್ಥಳಾಂತರಿಸಬೇಕು. ಅತ್ಯವಶ್ಯವಾದಾಗ ಮಾತ್ರ ಕೈಸಿಸ್ ಗಿಡಗಳನ್ನು ಬದಲಿ ಕುಂಡಗಳಿಗೆ ಹಾಕಬೇಕು. ಹಾಗಲ್ಲದೆ ಪದೇ ಪದೇ ಕುಂಡಗಳನ್ನು ಬದಲಿಸಿದರೆ ಗಿಡದ ಬೆಳವಣಿಗೆ ಕುಂಠಿತವಾಗುತ್ತದೆ. (ಡಿ.ಎಂ.)

**ಕೊಂಕಣ :** ಭಾರತದ ಪಶ್ಚಿಮತೀರದಲ್ಲಿ, ಮಹಾರಾಷ್ಟ್ರದ ಠಾಣೆ (ಥಾನಾ) ಕೊಲಾಬಾ ಮತ್ತು ರತ್ನಾಗಿರಿ ಜಿಲ್ಲೆಗಳನ್ನೂ ಗೋವವನ್ನೂ ಒಳಗೊಂಡ ಪ್ರದೇಶವನ್ನು ಸ್ಥೂಲವಾಗಿ ಕೊಂಕಣ ಎಂದು ಕರೆಯುವುದಿದೆ. ಪಶ್ಚಿಮಘಟ್ಟಗಳ ಪಶ್ಚಿಮಕ್ಕಿರುವ ಈ ತಗ್ಗುನೆಲವೆಲ್ಲ ಮೈದಾನವಲ್ಲ. 48–80 ಕಿಮೀ ಅಗಲ ಮತ್ತು 560 ಕಿಮೀ ಉದ್ದ ಇರುವ ಈ ಪ್ರದೇಶದಲ್ಲಿ ನಡುನಡುವೆ ಬೆಟ್ಟಗಳು ಹಬ್ಬಿವೆ. ಉತ್ತರದಲ್ಲಿ ಕಡಲಕರೆಯ ಉದ್ದಕ್ಕೂ ಸಮತಲದ ಮೆಕ್ಕಲುಮಣ್ಣಿನ ಪಟ್ಟಿಯೊಂದುಂಟು. ಇದರ ಅಗಲ 6.4–13 ಕಿಮೀ. ಇದರ ಬದಿಯಲ್ಲಿ ಸಮಾಂತರವಾಗಿ ಹಬ್ಬಿರುವ ಅನೇಕ ಬೆಟ್ಟಗಳಿವೆ. ಇವುಗಳಲ್ಲಿ ಕೆಲವು ಶ್ರೇಣಿಗಳ ಎತ್ತರ 454–606 ಮೀ. ಮುಂಬಯಿಗೆ ಉತ್ತರದಲ್ಲಿರುವ ಪ್ರದೇಶದ ನದಿಗಳಲ್ಲಿ ವೈತರಣಾ, ಉಲ್ಹಾಸ್ ಮತ್ತು ಅಂಬಾ ಮುಖ್ಯವಾದವು. ಇವು ಬೆಟ್ಟದಿಂದ ಮೈದಾನಕ್ಕೆ ಇಳಿದ ಮೇಲೆ ಸ್ವಲ್ಪ ದೂರ ಕಡಲಕರೆಗೆ ಹೆಚ್ಚುಕಡಿಮೆ ಸಮಾಂತರವಾಗಿ ಸಾಗಿ ಕೊನೆಗೆ ಓರೆಯಾಗಿ ಸಮುದ್ರ ಸೇರುತ್ತದೆ. ಉಲ್ಹಾಸ್ ಮತ್ತು ಅದರ ಉಪನದಿಗಳು ಅರ್ಧವೃತ್ತಾಕಾರವಾದ ಒಂದು ವಿಶಾಲ ಜಲರೇಖೆಯನ್ನೇ ಸೃಷ್ಟಿಸಿವೆ. ಮುಂಬಯಿಗೆ ದಕ್ಷಿಣದಲ್ಲಿರುವ ನದಿಗಳು ಸಾಮಾನ್ಯವಾಗಿ ಉತ್ತರದ ನದಿಗಳಿಗಿಂತ ಉದ್ದದಲ್ಲಿ ಕಡಿಮೆ. ಸಾವಿತ್ರಿ ಮತ್ತು ವಾಶಿಷ್ಠಿ ನದಿಗಳೂ ಉಲ್ಹಾಸ್ ನದಿಯ ಹಾಗೆ ಅರ್ಧವೃತ್ತಗಳನ್ನು ರಚಿಸಿವೆ. ಇಲ್ಲಿಯ ನದಿಗಳ ತಲೆಗಳ ಭಾಗದ ಪ್ರದೇಶ ಕ್ರಮವಾಗಿ ನಗ್ನೀಕೃತವಾಗುತ್ತಿದೆಯೆಂಬುದು ಸ್ಪಷ್ಟ. ಕೊಯ್ನಾ ನದಿಯ ಮೇಲ್ದಂಡೆಯ ಪ್ರದೇಶ ಇದಕ್ಕೆ ಒಂದು ನಿದರ್ಶನ. ದಕ್ಷಿಣ ರತ್ನಾಗಿರಿ ಪ್ರದೇಶದಲ್ಲೂ ಮೇಲ್ಮಣ್ಣಿನ ಮುಸುಕು ಕಳೆದುಕೊಂಡ ಲ್ಯಾಟರೈಟ್ ಶಿಲಾತೊಪ್ಪಿಗೆಯ ಪ್ರದೇಶಗಳನ್ನು ಕಾಣಬಹುದು. ಇಡೀ ಕೊಂಕಣದ ಬೆಂಗಡೆಗೆ ದೈತ್ಯಾಕಾರದಲ್ಲಿ ಪಶ್ಚಿಮ ಘಟ್ಟಗಳು ಹಬ್ಬಿವೆ. ಒಂದೆರಡು ಕಿಲೋ.ಮೀಟರಗಳಲ್ಲೆ 909 ಮೀ. ಎತ್ತರಕ್ಕೇರುವ ಈ ಘಟ್ಟಗಳ ನಡುನಡುವೆ ಇರುವ ಗಂಭೀರ ಕಂದರಗಳೂ ಕಣಿವೆಯ ಶಿರೋಪ್ರದೇಶಗಳೂ ಹಲವಾರು. (ಎಂ.ಎ.ಎಚ್.ಇ.)

ಕೊಂಕಣವನ್ನು ಸ್ಥೂಲವಾಗಿ ಉತ್ತರ–ದಕ್ಷಿಣ ಭಾಗಗಳಾಗಿ ವಿಂಗಡಿಸಬಹುದು. ಉತ್ತರ ಕೊಂಕಣದಲ್ಲಿರುವ ಉಪವಿಭಾಗಗಳು ಎರಡು : ಮಾಹೀಂ ಪ್ರದೇಶ ಮತ್ತು ಮುಂಬಯಿ–ಕಲ್ಯಾಣ್ ಪ್ರದೇಶ. ದಕ್ಷಿಣ ಕೊಂಕಣವನ್ನು ಮಲ್ಹಾದ್, ರತ್ನಾಗಿರಿ ಮತ್ತು ಗೋವ ಎಂದು ಮರುವಿಂಗಡಿಸಬಹುದು. ನೈಸರ್ಗಿಕ ಬಂದರನ್ನೊಳಗೊಂಡ ಮುಂಬಯಿ ನಗರ ಇರುವ ಉತ್ತರ ಕೊಂಕಣ ಪ್ರದೇಶ ದಕ್ಷಿಣಕ್ಕಿಂತ ಹೆಚ್ಚು ಮುಂದುವರಿದಿದೆ. ಮುಂಬಯಿಯ ಹತ್ತಿರದಲ್ಲಿ ಕರಾವಳಿ ಅತ್ಯಂತ ಅಗಲವಾಗಿದೆ. ಸಹ್ಯಾದ್ರಿಶ್ರೇಣಿಯಲ್ಲಿರುವ ಥಾಳ್‍ಘಾಟ್ ಮತ್ತು ಭೋರ್‍ಘಾಟ್‍ಗಳಿಂದಾಗಿ ಉತ್ತರ ಕೊಂಕಣದೊಂದಿಗೆ ಪೂರ್ವದ ವಿಶಾಲ ಹಿನ್ನಾಡಿನ ಸಂಪರ್ಕ ಏರ್ಪಟ್ಟಿದೆ. ಮುಂಬಯಿ ಭಾರತದ ಪಶ್ಚಿಮದ ಮಹಾದ್ವಾರವಾಗಿ ಪರಿಣಮಿಸಿರುವುದು ಈ ಘಾಟುಗಳಿಂದಾಗಿ.

ಕೊಂಕಣ ಪ್ರದೇಶದಲ್ಲಿ 150–200 ಸೆಂ.ಮೀ. ಮಳೆಯಾಗುವುದರಿಂದ ಬತ್ತವೇ ಮುಖ್ಯ ಬೆಳೆ. ಉಳಿದ ಯಾವ ಬೆಳೆಯೂ ಪ್ರಾಮುಖ್ಯದಲ್ಲಿ ಇದರ ಹತ್ತಿರಕ್ಕೆ ಬರುವುದೇ ಇಲ್ಲ. ರಾಗಿ, ದ್ವಿದಳಧಾನ್ಯಗಳು ಇತರ ಬೆಳೆಗಳು. ಸೆಣಬು ಮತ್ತು ಮೆಸ್ತ 1947ರಿಂದೀಚೆಗೆ ಬೆಳೆಯುತ್ತಿವೆ. ದಕ್ಷಿಣದ ಕಡೆಗೆ ಸಾಗಿದಂತೆ ತೆಂಗು ವಿಶೇಷ. ನದಿಗಳ ಅಳಿವೆಗಳಲ್ಲಿ ಬೆಳೆಯುವ ಗುಲ್ಮ ವೃಕ್ಷಗಳು ಸೌದೆಯಾಗಿ ಉಪಯೋಗಕ್ಕೆ ಬರುತ್ತವೆ. ಲ್ಯಾಟೆರೈಟ್ ಆವೃತ ಪ್ರದೇಶಗಳಲ್ಲಿ ಹಿಂದೆ ದಟ್ಟವಾಗಿ ಕಾಡು ಬೆಳೆದಿತ್ತು. ಈಗ ಅವೆಲ್ಲ ನಗ್ನವಾಗಿವೆ. ನೆಲ ಅಷ್ಟೇನೂ ಫಲವತ್ತಲ್ಲ. ಜೋಳ ಮತ್ತು ಇತರ ಕೆಲವು ಧಾನ್ಯಗಳು ಬೆಳೆಯುತ್ತವೆ. ಘಟ್ಟಗಳೂ ಅವುಗಳ ಸನಿಹದ ಬೆಟ್ಟಗಳೂ ಸದಾ ಹಸುರೆಲೆಯ ಕಾಡುಗಳಿಂದ ಕೂಡಿವೆ.

ಇಡೀ ಕೊಂಕಣ ಪ್ರದೇಶದ ಪ್ರಧಾನ ನಗರ ಮುಂಬಯಿ. ಠಾಣೆ ಮತ್ತು ಕಲ್ಯಾಣ್ ಇದಕ್ಕೆ ಕೂಡಿಕೊಂಡಿವೆ. ಕರಾವಳಿಯ ಉದ್ದಕ್ಕೂ ಹಲವಾರು ಸಣ್ಣಪುಟ್ಟ ಬಂದರುಗಳುಂಟು. ಅವು ಬಹುತೇಕ ಕ್ಷೀಣಸ್ಥಿತಿಯಲ್ಲಿವೆ. ಇವುಗಳಲ್ಲಿ ಕೆಲವು ಒಮ್ಮೆ ಪೋರ್ಚುಗೀಸರಿಗೆ ಸೇರಿದ್ದವು. ಚಾಲ್, ಬ್ಯಾಸೇನ್ ಉದಾಹರಣೆಗಳು. ಉಳಿದವು ಮೊಗಲರ ಮತ್ತು ಮರಾಠರ ವಶದಲ್ಲಿದ್ದುವು. ಅಂಥವುಗಳ ಪೈಕಿ ವಿಜಯದುರ್ಗ ಮುಖ್ಯವಾದ್ದು. ಇದು 240 ಕಿ.ಮೀ. ಉದ್ದದ ಕರಾವಳಿ ಪ್ರದೇಶದ ಮೇಲೆ ತನ್ನ ಪ್ರಭಾವ ಬೀರಿತ್ತು. 1757ರಲ್ಲಿ ನಡೆದ ಭಾರಿ ನೌಕಾ ದಾಳಿಯಿಂದ ಇದರ ಶಕ್ತಿ ಕುಗ್ಗಿತು. ಬ್ಯಾಸೇನ್ ಒಂದು ಆಯಕಟ್ಟಿನ ಸ್ಥಳವಾಗಿತ್ತು. ಈಗ ಇದೊಂದು ಸಣ್ಣ ಪಟ್ಟಣ. ಇಲ್ಲೊಂದು ಕೋಟೆಯಿದೆ. ದಕ್ಷಿಣದ ಬಂದರುಗಳೂ ಒಮ್ಮೆ ಪ್ರಮುಖ ಪಾತ್ರ ವಹಿಸಿದ್ದುವು. ಈಗ ರತ್ನಾಗಿರಿ ಒಂದೇ ಮುಖ್ಯ. ಈ ಸುತ್ತಿನ ಪ್ರದೇಶದಿಂದ ಮುಂಬಯಿಗೆ ಉದ್ಯೋಗಾರ್ಥಿಗಳ ನಿರಂತರ ಯಾತ್ರೆ ಸಾಗುತ್ತದೆ. ಇವರು ಬಹುತೇಕ ಯುವಕರು. ಮುಂಬಯಿಯಲ್ಲಿ ಉದ್ಯೋಗನಿರತರಾದವರು ಕಳುಹಿಸುವ ಹಣ ಈ ಜನರ ಒಂದು ಮುಖ್ಯ ವರಮಾನ. ಕೊಯ್ನಾ ವಿದ್ಯುತ್ ಉತ್ಪಾದನೆಯಿಂದ ಈ ಸುತ್ತಿನ ಪ್ರದೇಶದ ಆರ್ಥಿಕ ಬೆಳೆವಣಿಗೆಗೆ ಹೆಚ್ಚಿನ ಅವಕಾಶವಿದೆ. ಇಲ್ಲಿ ಮಾವಿನಹಣ್ಣು ಮತ್ತು ಗೇರುಬೀಜಗಳ ಬೆಳೆಗಳನ್ನು ವೃದ್ಧಿಪಡಿಸಲು ಅವಕಾಶವುಂಟು.

ಗೋವಾ ಪ್ರದೇಶ ಬಹುಕಾಲದಿಂದ ಪೋರ್ಚುಗೀಸರ ಅಧೀನದಲ್ಲಿದ್ದುದರಿಂದ ವಿಶಿಷ್ಟವಾದ್ದಾಗಿದೆ. ಮಾರ್ಮಗೋವ ಒಂದು ಮುಖ್ಯ ಬಂದರು. ಮಾಂಡವಿ ಮತ್ತು ರಾಚೋಲ್ ಇಲ್ಲಿಯ ನದಿಗಳು.

ಮಹಾಭಾರತ, ಹರಿವಂಶ ಮತ್ತು ವಿಷ್ಣುಪುರಾಣದಲ್ಲಿ ಕೊಂಕಣದ ಜನರ ಬಗ್ಗೆ ಉಲ್ಲೇಖವಿದೆ. 6ನೆಯ ಶತಮಾನದಲ್ಲಿದ್ದ ವರಾಹಮಿಹಿರನ ಕೃತಿಯಲ್ಲೂ 7ನೆಯ ಶತಮಾನದ ಚಾಲುಕ್ಯ ಶಾಸನಗಳಲ್ಲೂ ಇವರ ಪ್ರಸ್ತಾಪ ಉಂಟು. ಪ್ರ.ಶ.ಪೂ. 3ನೆಯ ಶತಮಾನ ಮತ್ತು ಪ್ರ.ಶ.2ನೆಯ ಶತಮಾನಗಳ ನಡುವೆ ಈ ಪ್ರದೇಶಕ್ಕೆ ಅಪರಾಂತ ಎಂಬ ಹೆಸರಿತ್ತು. ಅನಂತರದ ಸಂಸ್ಕೃತ ಗ್ರಂಥಗಳಲ್ಲಿ ತ್ರಿಂಬಕದಿಂದ ಕನ್ಯಾಕುಮಾರಿಯವರೆಗಿನ ಇಡೀ ಕರಾವಳಿ ಪ್ರದೇಶವನ್ನು ಕೊಂಕಣವೆಂದು ಕರೆಯಲಾಗಿದೆಯಲ್ಲದೆ ಇದನ್ನು ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ. ಇವುಗಳ ಹೆಸರುಗಳು ಒಂದೇ ರೀತಿಯಾಗಿಲ್ಲ. ಇವುಗಳಲ್ಲಿ ಮುಖ್ಯವಾಗಿ ಕೊಂಕಣವೆಂದು ಕರೆಯಬಹುದಾಗಿದ್ದ ಭಾಗ ಒಂದೇ. ಚಿಪ್ಲೂನ್ ಸುತ್ತಣ ಪ್ರದೇಶವೇ ಇದಾಗಿರಬಹುದು. ಇತಿಹಾಸದ ಯಾವುದೇ ಕಾಲದಲ್ಲೂ ಕೊಂಕಣ ಒಂದು ರಾಜಕೀಯ ಘಟಕವಾಗಿದ್ದಂತೆ ಕಾಣುವುದಿಲ್ಲ. 9ನೆಯ ಶತಮಾನದಿಂದ 14ನೆಯ ಶತಮಾನದ ಅವಧಿಯ ಅರಬ್ಬಿ ಭೂಗೋಳಶಾಸ್ತ್ರಜ್ಞರು ಈಗ ಕೊಂಕಣ ಎನಿಸಿಕೊಂಡಿರುವ ಪ್ರದೇಶದ ಪರಿಚಯ ಪಡೆದಿದ್ದರು. ಈ ಪ್ರದೇಶದಲ್ಲಿ ಹಲವಾರು ಸಣ್ಣಪುಟ್ಟ ಆಡಳಿತಗಳು ಇದ್ದದ್ದೂ ಉಂಟು. ಮರಾಠರ ಕಾಲದಲ್ಲಿ ಇಡೀ ಪ್ರದೇಶ ಅವರ ಅಧೀನದಲ್ಲಿತ್ತು. *

**ಕೊಂಕಣಿ ಭಾಷೆ :** ಕೊಂಕಣಿ ಕರಾವಳಿಯ ಜನ ಆಡುವ ಮಾತೇ ಕೊಂಕಣಿ. ಇಂದಿನ ಪಶ್ಚಿಮ ಕರಾವಳಿಯನ್ನು ಹಿಂದೆ ಕೊಂಕಣ ಕರಾವಳಿ ಎಂದು ಕರೆಯುತ್ತಿದ್ದರು. ಈ ಪ್ರದೇಶ ಉತ್ತರದ ಕಾಠಿಯಾವಾಡದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಪಸರಿಸಿಕೊಂಡಿತ್ತು. ಇದು ಪ್ರಾಯಶಃ ಸಪ್ತವಿಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದಿರಬೇಕು. ಕಾರಣ ಇದನ್ನು ಸಪ್ತಕೊಂಕಣ ಎಂದು ಕರೆಯುವುದೂ ರೂಢಿಯಲ್ಲಿತ್ತು. ಸ್ಕಂದ ಪುರಾಣದ ಸಹ್ಯಾದ್ರಿಕಾಂಡದಲ್ಲಿರುವ ಉಲ್ಲೇಖದ ಪ್ರಕಾರ ಕೊಂಕಣದ ಸಪ್ತಭಾಗಗಳ ಹೆಸರು ಇಂತಿವೆ: 1 ಬರ್ಬರ, 2 ಸೌರಾಷ್ಟ್ರ, 3 ಕೊಂಕಣ, 4 ಕರ್ಹಾಟ, 5 ಕರ್ಣಾಟ, 6 ತುಲಂಗ, 7 ಕೇರಳ.

ಸದ್ಯಕ್ಕೆ ಭಾರತದ ಪಶ್ಚಿಮ ತೀರದಲ್ಲಿ ಮಹಾರಾಷ್ಟ್ರದ ಠಾಣೆ, ಕೊಲಾಬಾ ಮತ್ತು ರತ್ನಗಿರಿ ಜಿಲ್ಲೆಗಳನ್ನೂ ಗೋವವನ್ನೂ ಒಳಗೊಂಡ ಪ್ರದೇಶವನ್ನು ಸ್ಥೂಲವಾಗಿ ಕೊಂಕಣ ಎಂದು ಕರೆಯುವುದಿದೆ. **(ನೋಡಿ- ಕೊಂಕಣ)**

ಶಕವರ್ಷ 956 ಅರ್ಥಾತ್ ಪ್ರ.ಶ.1034ರ ಸುಮಾರಿನ ಒಂದು ಶಾಸನದಲ್ಲಿ ಚಾಳುಕ್ಯ ಅರಸನಾದ ಮೂರನೆಯ ಜಯಸಿಂಹ ಸಪ್ತಕೊಂಕಣವನ್ನು ಜಯಿಸಿಕೊಂಡನೆಂಬ ಉಲ್ಲೇಖ ಬಂದಿದೆ. ಪುರಾಣದಲ್ಲಿ ಈ ಪ್ರದೇಶವನ್ನು ಪರಶುರಾಮು ಕ್ಷೇತ್ರವೆಂದು ಹೇಳಿದೆ. ಪರಶುರಾಮು ಕೊಡಲಿಯನ್ನೆಸೆದು ಸಮುದ್ರವನ್ನು ಹಿಂದಕ್ಕೆ ಸರಿಸಿ ಕೊಂಕಣ ಪ್ರದೇಶವನ್ನು ಸೃಷ್ಟಿಸಿದನೆಂದು ಪ್ರತೀತಿ.

ಬ್ರಾಹ್ಮಣಭಾಷೆ, ಕೆನರಾಭಾಷೆ, ಗೋವಾ ಬ್ರಾಹ್ಮಣರ ಭಾಷೆ ಮುಂತಾಗಿ ಕೊಂಕಣಿ ಭಾಷೆಗೆ ಅನೇಕ ಹೆಸರುಗಳು ಕಂಡುಬರುತ್ತದೆ. ಕೊಂಕಣಿ ಎಂಬ ಹೆಸರು ಹೇಗೆ ಉತ್ಪನ್ನವಾಯಿತು ಎಂಬುದರ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಹೆಚ್ಚಾಗಿ ಕಲ್ಪನೆಯನ್ನೆ ಅವಲಂಬಿಸಿರುವುದರಿಂದ ಅವನ್ನಿಲ್ಲಿ ಕೈಬಿಡಲಾಗಿದೆ. ಸ್ಥೂಲವಾಗಿ ಹೇಳುವುದಾದರೆ ಕೊಂಕಣ ನಾಡಿನ ಭಾಷೆಯೇ ಕೊಂಕಣಿ. ಆಡುಮಾತಿನಲ್ಲಿದು ಕೊಂಕ್ಣಿ ಆಗಿದೆ. ಗೋವೆಯೇ ಈ ಭಾಷೆಯ ತವರುಮನೆಯೆಂದು ತಿಳಿದು ಅದನ್ನು ಗೋವೆಯ ಭಾಷೆ ಅಥವಾ ಗೋಮಾಂತಾಕೀ ಎಂದು ಕರೆಯುವ ಬಳಕೆಯೂ ಉಂಟು.

**ಕೊಂಕಣಿಯ ವ್ಯಾಪ್ತಿ :** ಗೋವೆ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರವಲ್ಲದೆ ಮಹಾರಾಷ್ಟ್ರ, ಕೇರಳ ಮೊದಲಾದೆಡೆಗಳಲ್ಲಿಯೂ ಕೊಂಕಣಿ ವ್ಯಾಪಿಸಿಕೊಂಡಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೇಲ್ತರಗತಿಯ ಹಾಗೂ ಕೆಳತರಗತಿಯ ಹಿಂದೂ ಸಮಾಜದಲ್ಲಿ ಕೊಂಕಣಿಗೆ ಮಾತೃಭಾಷಾಸ್ಥಾನವುಂಟು. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೊಂಕಣಿ ಸಾರಸ್ವತ ಬ್ರಾಹ್ಮಣರ ಭಾಷೆ ಮಾತ್ರವಲ್ಲದೆ ಕ್ರೈಸ್ತರ ಭಾಷೆಯೂ ಆಗಿದೆ. ಅವರು ಅದನ್ನು ಮನೆಬಳಕೆಗೆ ಮಾತ್ರ ಸೀಮಿತವಾಗಿ ಇರಿಸದೆ ಇಗರ್ಜಿ, ಧ್ಯಾನಮಂದಿರ ಮುಂತಾದೆಡೆಗಳಲ್ಲಿಯೂ ಸಾಮಾಜಿಕ ಹಾಗೂ ಧಾರ್ಮಿಕ ವ್ಯವಹಾರಗಳಲ್ಲಿಯೂ ಬಳಸುತ್ತಾರೆ.

ಗೆರ್ಸೊಂ ದಕುಂಞಾ ಜೊನ್, ವಿಲ್ಸನ್, ಮೊನ್ಸಿಞೂರ್ ಎಸ್.ಆರ್. ದಾಲ್ಗಾದೊ, ಆರ್ಥರ್ ಸಿ. ಬರ್ನೆಲ್, ಫೆರ್ನಾಂಡೊ ಲೆಯಲ್, ಸುನೀತಿಕುಮಾರ್ ಚಟರ್ಜಿ, ಸುಮಿತ್ರ ಮಂಗೇಶ್ ಕತ್ರೆ ಮೊದಲಾದ ಭಾಷಾತಜ್ಞರ ಅಭಿಪ್ರಾಯದಂತೆ ಕೊಂಕಣಿ ಮರಾಠಿಯಿಂದ ಹುಟ್ಟಲೂ ಇಲ್ಲ. ಅದು ಮರಾಠಿಯ ಉಪಭಾಷೆಯೂ ಅಲ್ಲ. ಅವೆರಡರ ಶಬ್ದ ಭಂಡಾರದಲ್ಲಿಯೂ ಧ್ವನಿಮಾ ವ್ಯವಸ್ಥೆಯಲ್ಲಿಯೂ ವ್ಯಾಕರಣದಲ್ಲಿಯೂ ಮೂಲ ವ್ಯತ್ಯಾಸಗಳಿದ್ದು ಅವು ಪರಸ್ಪರ ಅರ್ಥಮಾಡಿಕೊಳ್ಳಲು ಸುಲಭ ಸಾಧ್ಯವಲ್ಲವಾದುದರಿಂದ ಅವು ಎರಡು ಭಿನ್ನ ಸ್ವತಂತ್ರ ಭಾಷೆಗಳು, ಮಹಾಜನ ನಿಯೋಗ ಕೂಡ ಕೊಂಕಣಿಯ ಸ್ವತಂತ್ರ ಅಸ್ತಿತ್ವವನ್ನು ಒಪ್ಪಿದೆ.

1961ನೆಯ ಇಸವಿಯ ಜನಗಣತಿಯಲ್ಲಿ ಕೊಂಕಣಿಯ ಉಪಭಾಷೆಗಳ ಯಾದಿಯನ್ನು ಈ ರೀತಿಯಲ್ಲಿ ಕೊಡಲಾಗಿದೆ. ಭಟ್ಕಳ, ಚಿಟ್ಪಭಾಷಾ–ಕೊಂಕಣಿ, ದಾಲ್ದಿ, ಫಿರಂಗಿ, ಗೋವನೀಸ್, ಗೌಡಪ್ರಾಕೃತ, ಗೌಡಸಾರಸ್ವತ, ಕಾಂಗೋಣಿ, ಕಾರ್ವಾರಿ, ಖೊಕಿಲಿ, ಕೊಂಕಣಿ, ಕೊರ್ಲಾಣಿ, ಕುಡುಬಿ, ಮೋಪಣ್, ನವಾಯತ.

ಗೋವೆಯ ಕೊಂಕಣಿಯಲ್ಲಿ ಪೋರ್ಚುಗೀಸ್ ಪ್ರಭಾವ ಹೆಚ್ಚು. ಕರ್ನಾಟಕದ ಕೊಂಕಣಿಯಲ್ಲಿ ದ್ರಾವಿಡ ಭಾಷೆಗಳ ಪ್ರಭಾವ ಎದ್ದುಕಾಣುತ್ತದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ತುಳು ಹಾಗೂ ಕನ್ನಡ ಪ್ರಭಾವ ಸಾರಸ್ವತ ಹಾಗೂ ಗೌಡಸಾರಸ್ವತ ಕೊಂಕಣಿಯಲ್ಲಿ ಕಾಣುವಷ್ಟು ಕ್ರೈಸ್ತ ಕೊಂಕಣಿಯಲ್ಲಿ ಕಾಣುವುದಿಲ್ಲ.

ಕೊಂಕಣಿ ಭಾಷೆಯ ರೂಪ–ರೇಖೆ: ಧ್ವನಿಮಾಗಳು: ಕೊಂಕಣಿಯಲ್ಲಿ ಎಂಟು ಸ್ವರಗಳೂ ಇಪ್ಪತ್ತೆರಡು ವ್ಯಂಜನಗಳೂ ಅಲ್ಲದೆ ದೀರ್ಘತೆ ಹಾಗೂ ಅನುನಾಸಿಕತೆಗಳೂ ಧ್ವನಿಮಾಗಳಾಗಿವೆ.

**ಸ್ವರಗಳು:**

| | ಪೂರ್ವ | ಮಧ್ಯ | ಪಶ್ಚ |
|---|---|---|---|
| ಉನ್ನತ | i | | u |
| ಉನ್ನತ–ಮಧ್ಯ | e | | o |
| ನಡು–ಮಧ್ಯ | | $\partial$ | |
| ಅವನತ–ಮಧ್ಯ | $\varepsilon$ | | $\supset$ |
| ಅವನತ | | a | |

ಸ್ವರಗಳ ದೀರ್ಘರೂಪಕ್ಕೆ ಉದಾಹರಣೆಗಳು:

| | | | | |
|---|---|---|---|---|
| tik | ಹರಳು | ti : k | ಖಾರ | i ÷ i |
| pend | ನೊರೆ | pe: ṇd | ಹಿಂಡಿ | e ÷ e |

ಸ್ವರಗಳ ಅನುನಾಸಿಕತೆಗೆ ಉದಾಹರಣೆಗಳು:

| | | | | | |
|---|---|---|---|---|---|
| ti : n | ಮೂರು | tĩ | ಅವರು | i | ಇವಳು |
| bi | ಬೀಜ | bĩ | ಬಿತ್ತು | ĩ | ಇವರು(ಸ್ತ್ರೀ) |

**ವ್ಯಂಜನಗಳು**

| | ಓಷ್ಠ್ಯ | ದಂತ್ಯೋಷ್ಠ್ಯ | ದಂತ್ಯ | ವರ್ತ್ಸ್ಯ | ಪರಿವೇಷ್ಠಿತ | ತಾಲವ್ಯ | ಕಂಠ್ಯ | ಗಲಕುಹರ |
|---|---|---|---|---|---|---|---|---|
| ಸ್ಪರ್ಶ | pb | | td | | ṭḍ | cj | kg | h |
| ಘರ್ಷ | | | | cj | | s’ | | |
| ಅನುನಾಸಿಕ | m | m̃ | | u | ṇ | | | |
| ಕಂಪಿತ | | | | r | | | | |
| ಪಾರ್ಶ್ವಿಕ | | | | ι | ḷ | | | |
| ಅರೆ ವ್ಯಂಜನ | w | | | | | y | | |

ಗೋವೆಯಿಂದ ದಕ್ಷಿಣಕ್ಕೆ ಬಂದಂತೆ ಅದರಲ್ಲಿಯೂ ಮಂಗಳೂರಿನ ಕ್ರೈಸ್ತ ಕೊಂಕಣಿಯಲ್ಲಿ ಮಹಾಪ್ರಾಣ ಅದೃಶ್ಯವಾಗುತ್ತ ಬಂದಿದೆ. ಉತ್ತರದ ಕೊಂಕಣಿಯಲ್ಲಿ ಸ್ವರಾಂತ್ಯಪದಗಳೇ ಹೊರತು ವ್ಯಂಜನಾಂತಗಳಿಲ್ಲ. ಆದರೆ ಕಾರವಾರದಿಂದ ದಕ್ಷಿಣಕ್ಕೆ ಬಂದಂತೆ ಕಡೆಯ u–ಕಾರ ವಿವೃತಗೊಂಡು ಆ ಶಬ್ದಗಳು Put∂, kēs∂ ಎಂದು ಉಚ್ಚಾರಗೊಳ್ಳುತ್ತವೆ. ಮಂಗಳೂರು ಕ್ರೈಸ್ತ ಕೊಂಕಣಿಯಲ್ಲಿ ಅವು ವ್ಯಂಜನಾಂತಗಳಾಗುತ್ತವೆ. *pu:t, kc:* */s/c/* ಮತ್ತು */j/* ಗಳಿಗೆ ಎರಡು ಉಚ್ಚಾರಗಳಿವೆ. ಈ ವ್ಯಂಜನಗಳ ಮುಂದೆ ಮಧ್ಯ ಅಥವಾ ಪಶ್ಚ ಸ್ವರಗಳೇ ಬಂದರೆ ಅವು ಕ್ರಮವಾಗಿ [t̄s] [d̄z] ಎಂದು ಉಚ್ಚಾರವಾಗುತ್ತವೆ. ಇತರೆಡೆಗಳಲ್ಲಿ [*c*] ಮತ್ತು [*j*] ಗಳಾಗಿ ಉಳಿಯುತ್ತವೆ. [*cikol*] ಕೊಳೆ [*tsu:k*]/*uc:k*/ ತಪ್ಪು [*jedzv*]*jeju* ಯೇಸು.

**ನಾಮಪದಾಕೃತಿಮಾಗಳು:** ಯಾವ ಆಕೃತಿಮಾಗಳು ವಚನಪ್ರತ್ಯಯಗಳನ್ನು ಸ್ವೀಕರಿಸುತ್ತವೆಯೋ ಅವು ಕೊಂಕಣಿಯಲ್ಲಿ ನಾಮಪದಾಕೃತಿಮಾಗಳು. ಅವುಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳೆಂದು ಮೂರು ವರ್ಗಗಳು $/-\varepsilon$ ಅಥವಾ $/-\phi/$ (ಶೂನ್ಯ) ಬಹುವಚನ ಪ್ರತ್ಯಯವನ್ನು ಸ್ವೀಕರಿಸುವಂಥವುಗಳು ಪುಲ್ಲಿಂಗ $/-i/$ ಅಥವಾ $/-yo/$ ಪ್ರತ್ಯಯವನ್ನು ಸ್ವೀಕರಿಸುವಂಥವು ಸ್ತ್ರೀ ಲಿಂಗ; |–ĩ| ಅಥವಾ |–ã|ಪ್ರತ್ಯಯವನ್ನು ಸ್ವೀಕರಿಸುವಂಥವು ನಪುಂಸಕಲಿಂಗ ವರ್ಗಕ್ಕೆ ಸೇರಿದವು.

ಕೊಂಕಣಿಯಲ್ಲಿ ಲಿಂಗಭೇದ ರೂಪವನ್ನು ಹೊಂದಿಕೊಂಡಿದೆ, ಅರ್ಥವನ್ನಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಏಕೆಂದರೆ ಇಲ್ಲಿ ಕುದುರೆ ಪುಲ್ಲಿಂಗ; ಕೋಗಿಲೆ, ಏಡಿ, ಕಿತ್ತಳೆ–ಇವು ಸ್ತ್ರೀಲಿಂಗ, ಹುಡುಗಿ ನಪುಂಸಕಲಿಂಗ.

**ಕಾರಕಗಳು–ಪ್ರತ್ಯಯಗಳು :** ಸಂಬೋಧನಾ, ಕರಣ, ಸಂಪ್ರಧಾನ, ಸಂಬಂಧ, ಅಧಿಕರಣ–1, ಅಧಿಕರಣ–2, ಅಪಾದಾನ–ಎಂಬವು ಕೊಂಕಣಿಯಲ್ಲಿ ಕಾರಕಗಳು. ಅವನ್ನು ಸೂಚಿಸಲು ಸಕ್ರಮವಾಗಿ ಏಕವಚನದಲ್ಲಿ $-\phi, -n, -k, -e, -nt, -r, -ta:wn$ ಪ್ರತ್ಯಯಗಳನ್ನು ಸೇರಿಸಿದರೆ ಬಹುವಚನದಲ್ಲಿ $-n\tilde{o}, -ni, -k, -c, -ni_2, -\phi, -ta:wn$ ಸೇರಿಸಬೇಕು. ಸಂಬಂಧಕಾರಕವನ್ನು ಕೆಲವೆಡೆ *–gel* ಎಂಬ ಪ್ರತ್ಯಯದಿಂದ ಸೂಚಿಸುವುದೂ ಉಂಟು.

ಕ್ರಿಯಾಪದಾಕೃತಿಮಾಗಳಲ್ಲಿ ಸಕರ್ಮಕ, ಅಕರ್ಮಕಗಳೆರಡೂ ಇವೆ. ವರ್ತಮಾನದಲ್ಲಿ ಲಿಂಗಭೇದ ಸೂಚಿತವಾಗುವುದಿಲ್ಲ, ಭೂತಕಾಲದಲ್ಲಿ (1)nid∂*l* ɔ̃ ಮಲಗಿದೆ (2)*nidtal∂* ಮಲಗುತ್ತಿದ್ದೆ (3)nid*l* ɔ̃ ಮಲಗಿದ್ದೇನೆ (4)nide*ll* ɔ̃ ಮಲಗಿದ್ದೆ–ಈ ನಾಲ್ಕು ಬಗೆಯನ್ನೂ ತಿಳಿಸಲು ಅವಕಾಶವಿದೆ.

**ವಾಕ್ಯರಚನೆ:** ಕೊಂಕಣಿ ವಾಕ್ಯದಲ್ಲಿ (ನಾಮವಿಶೇಷಣ)–ಕರ್ತೃಪದ–ಕ್ರಿಯಾ ವಿಶೇಷಣ)–ಕ್ರಿಯಾಪದ ಈ ಪದಾನುಕ್ರಮಣಿಕೆಯನ್ನು ಕಾಣುತ್ತೇವೆ. /awἑdarwaṛtawn du:d pe:de aḍlyat/ ನಾನು ಧಾರವಾಡದಿಂದ ದೂದ್‌ಪೇಡೆಯನ್ನು ತಂದಿದ್ದೇನೆ. ವಿಶೇಷಾರ್ಥವನ್ನು ಸೂಚಿಸುವುದಕ್ಕಾಗಿ ಪದಾನುಕ್ರಮಣಿಕೆ ಯಲ್ಲಿ ಬದಲಾವಣೆಯನ್ನು ಮಾಡುವುದುಂಟು. /darwaṛtaw ãwɛ̃du:d peḍe aḍlyat/ ಧಾರವಾಡದಿಂದ ನಾನು ದೂದ್‌ಪೇಡೆಗಳನ್ನು ತಂದಿದ್ದೇನೆ. ಗೋವೆಯ ಕೊಂಕಣಿಯಲ್ಲಿ ಪೋರ್ಚುಗೀಸ್ ಪ್ರಭಾವದಿಂದ ವಾಕ್ಯರಚನಾಕ್ರಮದಲ್ಲಿ ಅಲ್ಲಲ್ಲಿ ಬದಲಾವಣೆಯಾಗಿದೆ.

ಕೊಂಕಣಿಯ ರೂಪವನ್ನು ಪರಿಶೀಲಿಸಿದರೆ ಅದು ಗುಜರಾತಿ, ಮರಾಠಿಗಳೊಡನೆ ಸಾಮಾಜಿಕ ಸಂಬಂಧವನ್ನು ಇಟ್ಟುಕೊಂಡಿದೆ ಎಂದು ತಿಳಿದುಬರುತ್ತದೆ. ವ್ಯಾಕರಣವನ್ನು ಗಮನದಲ್ಲಿಟ್ಟರೆ ಕೊಂಕಣಿಗೆ ಸ್ವತಂತ್ರ ಅಸ್ತಿತ್ವ ಇದೆಯೆಂದು ಖಚಿತವಾಗುತ್ತದೆಂದು ಕತ್ರೆಯವರು ಕೊಂಕಣಿಯ ಬಗ್ಗೆ ಭಾಷಾವೈಜ್ಞಾನಿಕ ಅಧ್ಯಯನ ನಡೆಸಿ ತಮ್ಮ ನಿರ್ಧಾರವನ್ನು ಸೂಚಿಸಿದ್ದಾರೆ. **(ಡಬ್ಲ್ಯು.ಎಂ.)**

**ಕೊಂಕಣಿ ಸಾಹಿತ್ಯ :** ಪೋರ್ಚುಗೀಸರು ಬರುವ ಮೊದಲು ಗೋವೆಯಲ್ಲಿ ಕೊಂಕಣಿ ಸಾಹಿತ್ಯ ವಿಪುಲವಾಗಿತ್ತೆಂದೂ ತಮ್ಮ ಆಕ್ರಮಣ ಕಾಲದಲ್ಲವರು ಅದನ್ನು ಸುಟ್ಟುಹಾಕಿದರೆಂದೂ ಹೇಳುವುದು ವಾಡಿಕೆ. ಇದೇ ಕಾಲದಲ್ಲಿ ಕ್ರೈಸ್ತಧರ್ಮ ಪ್ರಚಾರಕರು ಕೊಂಕಣಿಯನ್ನು ಕಲಿತುದು ಮಾತ್ರವಲ್ಲದೆ ಉಪಯುಕ್ತವಾದ ವ್ಯಾಕರಣ ಗ್ರಂಥಗಳನ್ನೂ ನಿಘಂಟುಗಳನ್ನೂ ರಚಿಸಿ ಆ ಭಾಷಾವ್ಯಾಸಂಗ ಸುಲಭ ಸಾಧ್ಯವಾಗುವಂತೆ ಮಾಡಿದರು. ಆರಂಭದಲ್ಲವರು ಸಾಹಿತ್ಯದ ಅಭಿವೃದ್ಧಿಗೆ ಕೈಹಾಕಿದಂತೆ ಕಾಣುವುದಿಲ್ಲ. ಹದಿನೇಳನೆಯ ಶತಮಾನದ ತನಕ ಗೋವೆಯ ಹೊರಗೂ ಕೊಂಕಣಿ ಸಾಹಿತ್ಯ ಕಂಡುಬರದೆ ಇರುವುದರಿಂದ ಅದು ಬಹಳ ಹಿಂದಿನದಲ್ಲವೆಂದು ಎಸ್.ಎಂ. ಕತ್ರೆಯವರು ಅಭಿಪ್ರಾಯಪಡುತ್ತಾರೆ.

**ಜನಪದ ಸಾಹಿತ್ಯ :** ಕೊಂಕಣಿ ಹೆಚ್ಚಾಗಿ ಆಡುಮಾತಾಗಿಯೇ ಬೆಳೆದುಬಂದುದರಿಂದ ಕೊಂಕಣಿ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ಅಗ್ರಸ್ಥಾನ ಸಲ್ಲುತ್ತದೆ. ರೂಪುರೇಖೆಯಲ್ಲಿದ್ದು ಬಂಗಾಳದ ಜನಪದ ಸಾಹಿತ್ಯವನ್ನು ಹೋಲುವಂಥದು ಎಂದು ತಜ್ಞರ ಅಭಿಪ್ರಾಯ. ಕೊಂಕಣಿ ಜನಪದ ಸಾಹಿತ್ಯದಲ್ಲಿ ಹಾಡು ಮತ್ತು ನೃತ್ಯ–ನಾಟಕಗಳು ಪ್ರಸಿದ್ಧ. ಹಾಡುಗಳಲ್ಲಿ ಒವಿ, ವೇರ್ಸ್, ಜೋಗುಳದ ಹಾಡು, ಕುಣ್ಬಿ ಹಾಡು, ಮಾಂಡೊ, ಧುರ್ಪೊದ್–ಇವು ಬಹಳ ಬಳಕೆಯಲ್ಲಿವೆ. ನೃತ್ಯನಾಟಕಗಳಲ್ಲಿ ಜ಼ಾಗೋರ್, ಖೆಳ್– ಇವು ಜನಪ್ರಿಯವಾಗಿವೆ.

ಒವಿ ಎಂಬ ಛಂದಸ್ಸನ್ನು ಸೋಬಾನದ ಹಾಡುಗಳಲ್ಲಿ ಮಾತ್ರವಲ್ಲದೆ ಇತರ ಹಾಡುಗಳಲ್ಲಿಯೂ ಬಳಸುವರು. ಸಾಂಪ್ರದಾಯಿಕ ಮದುವೆ ಸಮಾರಂಭಗಳಲ್ಲಂತೂ ಇದರ ಬಳಕೆ ಅಧಿಕ:

ಅಪ್ರೋಸಾಚಿ ವಾಟ್ಲಿ
ಕಾಂಸಕಾರನ್ ಪೆಟ್ಲಿ
ರುಜಾಯ್ ಮಾಯೇನ್ ಭೆಟ್ಲಿ
ಹೇವಿ ರೊಸಾಲಾಗಿಂ

ರಸ ತುಂಬಿದ ಬಟ್ಟಲನ್ನು ಮಾಡಿದಾತ ಕಂಚುಗಾರನಾದರೂ ರುಜಾಯಿಯಮ್ಮಳು (ಕನ್ಯಾಮರಿಯಮ್ಮಳು) ಇದನ್ನು ಆಶೀರ್ವದಿಸಿದಳು.

ಮಾಣಿಕ್ ಆನಿ ಮೊತೆಂ
ಸಿಂಪ್ಯೆಂತ್ ಆಸ್ಲೆಂ ಗುಪ್ತೆ
ಆತಾಂ ಜಾಲೆಂ ಉಗ್ತೆಂ
ದೊಗಾಂ ಆಂಕ್ವಾರಿಂಚೆಂ

ಮುತ್ತು ಹಾಗೂ ಮಾಣಿಕ್ಯದಂತೆ ಇವರಿಬ್ಬರ ಬ್ರಹ್ಮಚರ್ಯ ಸಿಂಪಿನೊಳಗೆ ಗುಪ್ತವಾಗಿತ್ತು. ಈಗ ಅದು ತನ್ನ ಗೋಪ್ಯವನ್ನು ಕಳೆದುಕೊಂಡಿತು.

ವಧೂವರರು ಮಂಟಪದಲ್ಲಿ ಆಸೀನರಾದಾಗ ವೇರ್ಸ್ ಎಂಬ ಹಾಡುಗಳನ್ನು ಹಾಡಿ ಅವರ ಗುಣಗಾನವನ್ನೂ ಮಾಡುವುದರ ಜೊತೆಗೆ ಅವರಿಗೆ ಕೆಲವು ಹಿತೋಕ್ತಿಗಳನ್ನು ಹೇಳುತ್ತಾರೆ.

ಏಕ್ ಸೆರ್ ತಾಂದು ಬಾಯೆ ವಾಸುಡ್ಣ್ ಕಾಡ್ಗೆ ಕುಂಡೊ
ತುಜಾನೊವ್ರ್ಯಾಚಾ ಗುಸ್ತಾರ್ ಬಾಯೆಲೊಣ್ಯೆಂತ್ ಖಾಗೊ ಉಂಡೊ

ಒಂದು ಸೇರು ಅಕ್ಕಿಯನ್ನು ತಕ್ಕೊಂಡು ತೌಡನ್ನು ತೆಗೆ. ನಿನ್ನ ಗಂಡನ ಜೊತೆ ಇನ್ಮುಂದೆ ಬೆಣ್ಣೆಯಲ್ಲಿಯೇ ಅದ್ದಿ ರೊಟ್ಟಿ ತಿನ್ನು.

**ಜೋಗುಳದ ಹಾಡು:** ಮಗುವನ್ನು ತೊಟ್ಟಿಲಲ್ಲಿ ಹಾಕಿ ತೂಗುತ್ತಿರುವಾಗ ಹಾಡುವಂಥ ಹಾಡುಗಳಿವು. ಇವುಗಳಲ್ಲಿ ಮಮತೆಯನ್ನು ಸೂಚಿಸುವಂಥ ಶಬ್ದಗಳನ್ನೂ ವಿಚಿತ್ರ ಕಲ್ಪನೆಗಳನ್ನೂ ಅಧಿಕ ಪ್ರಮಾಣದಲ್ಲಿ ಕಾಣಬಹುದು:

ಮೊರಿಮ್ಯೊಂ ಬಾಳಾಂತ್ ಮುಣ್
ಸರ್ಗಾರ್ ಪಾವ್ಲಿ ಚೀಟ್
ಉಟಾ ಉಟಾ ಸೊನಾರ್ ಶೆಟಿ
ಪಾಳ್ಣೆ ಘಡೋಂಕ್

ಮೇರಿಯಮ್ಮ ಬಾಣಂತಿ ಎಂಬ ಸುದ್ದಿ ಸ್ವರ್ಗಲೋಕಕ್ಕೆ ತಲಪಿತು. ಆಚಾರಿಯೇ ಎದ್ದೇಳು ಬೇಗನೆ ತೊಟ್ಟಿಲನ್ನು ತಯಾರಿಸು.

ಬಾಳ್ ಆಮ್ಗೊ ಖೆಳೊಂ
ಅಂಗಾಣ್ ಆಮ್ಚೆಂ ಭೊರೊಂ
ಪೀಟಸಾರ್ಕೆಂ ಚನ್ನೆಂ
ದಾರಿಂ ಪೊಡೊಂ

ನಮ್ಮ ಮಗು ಅಂಗಳದಲ್ಲಿ ಆಡಲಿ, ಹಿಟ್ಟಿನಂಥ ಬೆಳದಿಂಗಳು ಮನೆ ಬಾಗಿಲಲ್ಲಿ ಸದಾ ಇರಲಿ.

ಘುಮ್ಟಾಂ–ಪೊದ್:

ಗುಮೊಟ್ ಎಂಬುದೊಂದು ಡೋಲು ವಿಶೇಷ. ಈ ವಾದ್ಯವನ್ನು ಬಾರಿಸಿಕೊಂಡು ಹಾಡುವ ಹಾಡುಗಳು ಹಾಸ್ಯಪ್ರಧಾನವಾದರೂ ಅವುಗಳ ಮೂಲಕ ವ್ಯಂಗ್ಯ, ಇತಿಹಾಸ, ಧಾರ್ಮಿಕ ವಿಚಾರಗಳನ್ನು ತಿಳಿಸುತ್ತಾರೆ:

ಕಸ್ತೂರಿ ಮೊಗ್ರಿ ಕಳೆ
ಮ್ಹೊಸ್ತ್ ಜಾಲ್ಯಾತ್ ಪೊಳೆ
ಚಯ್ಯಾತ್ ದಿಸ್ತಾತ್ ವೆಂಗ್ಸೆ ದೊಳೆ

ಕಸ್ತೂರಿ ಮಲ್ಲಿಗೆ ಮೊಗ್ಗು ಬಹಳಷ್ಟು ಇದ್ದರೂ ಕಣ್ಣಿಗೆ ಬೀಳುವುದು ಹೆಂಡತಿಯ ಮೆಳ್ಳೆಕಣ್ಣುಗಳೇ!

ಆಲ್ತೊಡ್ಚಾನ್ ಪೊಲ್ತೊಡಿ ಗೆಲ್ಯಾರಿ
ಥೈಂ ಆಸಾ ಎಕ್ಲೊ ಕುಂಪಾರಿ
ಏಕ್ ಕಟ್ಟಿ ಸೂರ್‌ಗ್ ಮಾಗ್ಲ್ಯಾರಿ
ಕಟ್ಟಿ ಘೆವ್ನ್ ಮಾಲ್ಲಿ ಬೊಡಾರಿ

ನದಿಯ ಆಚೆಯ ದಂಡೆಯಲ್ಲಿ ನನ್ನ ಕುಂಪಾರಿ–ಸಂಬಂಧಿಕನೊಬ್ಬನಿದ್ದಾನೆ. ಅಲ್ಲಿಗೆ ಹೋಗಿ ಒಂದು ಚಿಪ್ಪು ಹೆಂಡ ಕೇಳಿದಾಗ ಚಿಪ್ಪಿನಿಂದಲೇ ತಲೆಗೆ ಹೊಡೆದನಲ್ಲಾ!

**ಮಾಂಡೊ:** ಇದು ಪ್ರೇಮಗೀತೆ. ಇದರಲ್ಲಿ ಪ್ರಿಯತಮ ತನ್ನ ಪ್ರಿಯತಮೆಯೊಡನೆ ಅನುಭವಿಸಿದ ಸುಖಭೋಗಗಳ ವರ್ಣನೆ ಇರಬಹುದು ಅಥವಾ ವಿರಹ ತಾಪದ ಬೇಗೆಯೂ ಇರಬಹುದು. ಈ ಹಾಡುಗಳಲ್ಲಿ ಭಾವಗಳಿಗೆ ಪ್ರಾಧಾನ್ಯ. ಇವನ್ನು ಹಾಡುವಾಗ ಗುಮೊಟ್ ಎಂಬ ಡೋಲು ವಿಶೇಷವನ್ನೂ ಸಿತಾರ್ ಮೊದಲಾದ ವಾದ್ಯವಿಶೇಷಗಳನ್ನೂ ಬಳಸುವರು.

ತುಕಾ ಪೊಳೆವ್ನರೆ ಮೊಗಾ
ಸೊಗ್ಥೆಂ ಕಾಳಿಜ್ ಮ್ಹೊಜೆಂ ನಾಚ್ತಾಲೆಂ
ಆತಾಂ ಕಿತ್ಯಾಕರೆ ಮೊಗಾ
ಮ್ಹಾಕಾ ತುವೆಂ ಎಕ್ಸುರೆಂ ಸಾಂಡ್ಲೆಂ

ಸೊಗಾಳ್ಯ ಸೊಂವ್ಸಾರಾಂತ್ಲೆಂ ಸುಖ್ ಮ್ಹಾಕಾ
ತುಜಾ ಫ್ಹಾಟ್ಲ್ಯಾನ್ ಕೊಡು ಜಾಲೆಂ
ಜೀವ್ ಹೊ ಪಿಸೊ ಜಾಲೊರೆ ಮೊಗಾ
ಎಕ್ಲೆಂಚ್ ಮ್ಹಾಕಾ ಸಾಂಡ್ಲೆಂ ತುವೆಂ

ರಾವ್ ಆತಾಂ ರಾವ್‌ರೆ ಮೊಗಾ
ತುವೆಂ ಸಾಂಡ್ಲ್ಯಾರ್ ಕೊಣ್ ಅಸಾಮ್ಹಾಕಾ
ಸೊರ್ಗಾರ್ ಸುಖ್ ಭೊಗುಂಕ್ ಮೊಗಾ
ಮ್ಹಾಕಾ ತುಜೆಶಿಂ ವಾಂಟೊ ಆಸಾ

ಪ್ರಿಯತಮನೇ, ನಿನ್ನನ್ನು ನೋಡಿ ನನ್ನ ಹೃದಯ ಸ್ಪಂದಿಸುತ್ತಿತ್ತು. ಆದರೂ ನನ್ನನ್ನು ಯಾತಕ್ಕಾಗಿ ಅಗಲಿಹೋದೆ? ನಿನ್ನಿಂದಾಗಿ ಇಹದ ಸುಖವೆಲ್ಲವೂ ನನಗೆ ಕಹಿಯಾಯಿತು. ಈ ಜೀವನವೆಲ್ಲವೂ ವ್ಯರ್ಥವಾಯಿತು. ನನ್ನನ್ನೀಗ ಒಬ್ಬಂಟಿಗಳಾಗಿ ಮಾಡಿದಿಯಲ್ಲವೇ? ಇನ್ನಾದರೂ ನನ್ನ ಜೊತೆಯಲ್ಲಿಯೇ ಇರು. ನೀನು ನನ್ನನಗಲಿದರೆ ನನಗೆ ಗತಿಯೇನು? ನಿನ್ನ ಜೊತೆಯಲ್ಲಿ ಸ್ವರ್ಗಾನಂದ ಪಡೆಯುವ ಭಾಗ್ಯವೂ ನನಗಿದೆ.

**ಧುಲ್ಪೊದ್** : ಇದು ಮೊಂಡೊ ರೀತಿಯ ಹಾಡೇ ಆದರೂ ಅಷ್ಟೊಂದು ನಯನಾಜೂಕು ಇದರಲ್ಲಿಲ್ಲ. ಇದು ದ್ವಿಪದಿಯಲ್ಲಿದೆ. ಗತಿ ತೀವ್ರ. ಮಾನವ ಜೀವನ, ಗೋವೆಯ ಪ್ರಕೃತಿಸೌಂದರ್ಯ ಮೊದಲಾದ ವಿಷಯಗಳು ಈ ಹಾಡುಗಳ ವಸ್ತುಗಳು. ಕೆಲವು ಸಲ ಈ ಹಾಡುಗಳಲ್ಲಿ ಟೀಕೆಯೂ ಬರುವುದುಂಟು.

ಪಾವ್ಸ್ ಮಾತ್ಯಾರ್ ಪಾವ್ಲೊ ಮ್ಹೊಜೆ ಮ್ಯಾಂ
ದೊರ್ಯೆ ಗಾಜೊತಾ
ದೊರ್ಯಾ ದೆಗೆರ್ ಬೊಸೊನ್ ಮ್ಹೊಜೆ ಮ್ಯಾಂ
ಲ್ಹಾರಾಂ ಮೆಜಿತಾಂ
ತ್ಯಾ ದೊರ್ಯಾಂತುಲ್ಯಾನ್ ಮ್ಹೊಜೆ ಮ್ಯಾಂ
ಏಕ್ ತಾರುಂ ವೆತಾ
ತ್ಯಾ ತಾರ್ವಾರ್ ಬೊಸೊನ್ ಮ್ಹೊಜೆ ಮ್ಯಾಂ
ಪೊತಿ ಮ್ಹೊಜೊಘರ್ ಯೆತಾ

ಮಳೆ ನೆತ್ತಿಯ ಮೇಲೆಯೇ ಇದೆ ಅಮ್ಮಾ. ಸಮುದ್ರ ಗರ್ಜಿಸುತ್ತಿದೆ. ಕರಾವಳಿಯಲ್ಲಿ ನಾನು ಕೂತ್ಕೊಂಡು ತೆರೆಗಳನ್ನು ಎಣಿಸುತ್ತ ಇದ್ದೇನಮ್ಮ.

ಆ ಸಮುದ್ರದಲ್ಲಿ ಹಡಗೊಂದು ತೇಲಿಕೊಂಡು ಬರುತ್ತಿದೆಯಮ್ಮಾ. ಅದರಲ್ಲಿ ಕೂತುಕೊಂಡು ನನ್ನ ಪತಿಯು ಬರುತ್ತಾ ಇದ್ದಾನಮ್ಮಾ!!

**ಶಾಸನ ಸಾಹಿತ್ಯ:** ಕೊಂಕಣಿಯ ಉಪಲಬ್ಧಶಾಸನಗಳಲ್ಲಿ ಗೋವೆಯ ಅರವಲೆಂ ಎಂಬಲ್ಲಿ ಸಿಕ್ಕಿದ ಶಾಸನವೇ ಅತ್ಯಂತ ಪ್ರಾಚೀನವಾದುದು. ಇದರ ಕಾಲ ಪ್ರ.ಶ. ಎರಡನೆಯ ಶತಮಾನ. ಆಮೇಲೆ ದೊರೆತ ಶಾಸನವೆಂದರೆ ಸಿಲ್ಹಾರ ಶಾಸನ. ಇದರ ಕಾಲ ಪ್ರ.ಶ. ಹನ್ನೆರಡನೆಯ ಶತಮಾನ.

**ಗ್ರಂಥ ಸಾಹಿತ್ಯ:** ವರ್ಣನಾಸೌಲಭ್ಯಕ್ಕೋಸ್ಕರ ಕೊಂಕಣಿ ಗ್ರಂಥಸಾಹಿತ್ಯವನ್ನು ಪ್ರಥಮ ಯುಗದ ಸಾಹಿತ್ಯ ಮತ್ತು ದ್ವಿತೀಯ ಯುಗದ ಸಾಹಿತ್ಯವೆಂದು ವಿಂಗಡಿಸಬಹುದು.

**ಪ್ರಥಮ ಯುಗದ ಸಾಹಿತ್ಯ:** ಪ್ರ.ಶ.16ನೆಯ ಶತಮಾನದಿಂದ 19ನೆಯ ಶತಮಾನದ ಮಧ್ಯಭಾಗದವರೆಗಿನ ಸಾಹಿತ್ಯವನ್ನು ಪ್ರಥಮ ಯುಗದ ಸಾಹಿತ್ಯವೆಂದು ಕರೆಯಬಹುದು. ಇದು ಬಹುಪಾಲು ಧಾರ್ಮಿಕ ಸಾಹಿತ್ಯವೇ ಆಗಿದೆ. ಪೋರ್ಚುಗೀಸ್ ಸರ್ಕಾರ ಕೊಂಕಣಿಯನ್ನು ಕಡೆಗಂಡಿತು. ಅಲ್ಲದೆ ಕಾಲಕಾಲಕ್ಕೆ ಪರಭಾಷಾ ಆಕ್ರಮಣ ನಡೆಯುತ್ತಲೇ ಇತ್ತು. ಇಷ್ಟಾದರೂ ಜನ ತಮ್ಮ ಮನೆಮಾತಾಗಿ ಕೊಂಕಣಿ ಬಳಸುವುದನ್ನು ಬಿಡಲಿಲ್ಲ. ಅಲ್ಲದೆ ಮತಪ್ರಚಾರಕ್ಕಾಗಿ ಬಂದ ಕ್ರೈಸ್ತ ಮಿಷನರಿಗಳು ಕೊಂಕಣಿಯನ್ನು ಕೈಗೆತ್ತಿಕೊಂಡು ಪೋಷಿಸಿ ಬೆಳೆಸಿದರಾಗಿ ಕ್ರಮೇಣ ಕೊಂಕಣಿ ಭಾಷೆ ಮತ್ತು ಸಾಹಿತ್ಯಕ್ಕೆ ಪ್ರಾಶಸ್ತ್ಯ ಬಂತು.

ಯೇಸು ಸಭೆಯ ಪೂಜ್ಯ ಥಾಮಸ್ ಸ್ಟೀವನ್ ಸ್ವಾಮಿ ತನ್ನ ಕ್ರಿಸ್ತಪುರಾಣದಲ್ಲಿ ಮೊತ್ತಮೊದಲಿಗೆ ಕೊಂಕಣಿಯನ್ನು ಮರಾಠಿಯೊಂದಿಗೆ ಹಿತಮಿತವಾಗಿ ಬೆರೆಸಿದ. ಆತನೇ ಬರೆದ ಇನ್ನೊಂದು ಕ್ರೈಸ್ತ ಧಾರ್ಮಿಕ ಗ್ರಂಥ ದೊತ್ರಿನಾ ಕ್ರಿಸ್ತಾಂ. ಇದು ಸಂಪೂರ್ಣ ಕೊಂಕಣಿ ಭಾಷೆಯಲ್ಲಿದ್ದು ಭಾರತೀಯ ಭಾಷೆಗಳಲ್ಲಿ ಮುದ್ರಿತವಾದ ಗ್ರಂಥಗಳಲ್ಲಿ ಆದ್ಯಗ್ರಂಥವಾಗಿದೆ. ಇದು ಮುದ್ರಿತವಾದ್ದು 1622ರಲ್ಲಿಯಾದರೂ ಇದರ ಹಸ್ತಪ್ರತಿಗಳನ್ನು ಅದಕ್ಕಿಂತ ಮೊದಲೇ ಬಳಸುತ್ತಿದ್ದರು. ರೋಮನ್ ಲಿಪಿಯಲ್ಲಿ ಮುದ್ರಿತವಾದ ಈ ಪುಸ್ತಕವನ್ನು ಎ.ಕೆ.ಪ್ರಿಯೊಲ್ಕರ್ ದೇವನಾಗರಿ ಲಿಪಿಗೆ ಪರಿವರ್ತಿಸಿದ. ಈ ಗ್ರಂಥವನ್ನು ಪುಣೆ ವಿಶ್ವವಿದ್ಯಾಲಯ 1966ರಲ್ಲಿ ಪ್ರಕಟಿಸಿತು.

1632ರಲ್ಲಿ ದಿಯೊಗೊ ರಿಬೈರೊ ಎಂಬ ಸ್ವಾಮಿ ಕೊಂಕಣಿಯಲ್ಲಿ ಅನೇಕ ಧಾರ್ಮಿಕ ಗ್ರಂಥಗಳನ್ನು ಬರೆದನಲ್ಲದೆ ಅನೇಕ ಗ್ರಂಥಗಳನ್ನು ಕೊಂಕಣಿಗೆ ಭಾಷಾಂತರಿಸಿದ್ದಾನೆನ್ನಲಾಗಿದೆ. ಆದರೆ ಅವುಗಳ ಹೆಸರುಗಳು ಕೂಡ ಈಗ ಸಿಗುತ್ತಿಲ್ಲ.

1655ರಲ್ಲಿ ಅಂತ್ರೋನಿಯೊ ಸಲ್ದಾಞ ಎಂಬಾತ ಅರ್ಚಕ ಅಂತೋನಿಯವರ ಪವಾಡಗಳು ಎಂಬ ಗ್ರಂಥದ ಮೊದಲನೆಯ ಭಾಗವನ್ನು ಕೊಂಕಣಿ ಗದ್ಯದಲ್ಲಿಯೂ ಎರಡನೆಯ ಭಾಗವನ್ನು ಮರಾಠಿ ಪದ್ಯರೂಪದಲ್ಲಿಯೂ ಬರೆದ. ಇದರ ಮೊದಲ ಭಾಗವನ್ನು 1963ರಲ್ಲಿ ಪ್ರಿಯೊಲ್ಕರ್ ಎಂಬಾತ ಸಾಂ ಅಂತೊನಿಚಿಂ ಆಚರ್ಯಾಂ ಎಂಬ ಶಿರೋನಾಮೆಯಿಟ್ಟು ರೋಮನ್ ಲಿಪಿಯಲ್ಲಿ ಮುದ್ರಿಸಿದ್ದಾನೆ.

ಮಿಗ್ವೆಲ್ ದೆ ಅಲ್ಮೈಡಾ ಸ್ವಾಮಿ 1658–59ರ ಸುಮಾರಿಗೆ ವೊನ್ವೊಳ್ಯಾಂಚೊ ಮೊಳೊ (ಗೋವಳರ ವನ) ಎಂಬ ಚೊಚ್ಚಲು ಸಾಹಿತ್ಯಕೃತಿಯನ್ನು ಕೊಂಕಣಿಗೆ ಒದಗಿಸಿಕೊಟ್ಟ.

1660ರಲ್ಲಿ ಜೊ ಆವೊ ದೆ ಪೆಂದ್ರೊಜಾ ಸ್ವಾಮಿ ಡಿವೈನ್ ಸಾಲಿಲೊಕ್ವೀಸ್ ಎಂಬ ಆಂಗ್ಲ ಗ್ರಂಥವನ್ನು ಕೊಂಕಣಿಗೆ ಭಾಷಾಂತರಿಸಿದ. ಈ ಕಾಲದಲ್ಲಿ ಇನ್ನೂ ಅನೇಕ ಗ್ರಂಥಗಳು ಪ್ರಕಟಗೊಂಡಿವೆ ಎಂದು ಇತರ ಗ್ರಂಥಗಳಲ್ಲಿಯ ಉಲ್ಲೇಖಗಳಿಂದ ತಿಳಿದು ಬರುತ್ತದೆ.

1684ರಲ್ಲಿ ಪೋರ್ಚುಗೀಸ್ ಸರ್ಕಾರ ಪ್ರಾದೇಶಿಕ ಭಾಷೆಗಳಲ್ಲಿ ಪುಸ್ತಕ ಪ್ರಕಟಿಸುವುದನ್ನು ಕಾನೂನುಬದ್ಧವಾಗಿ ನಿಲ್ಲಿಸಿತು.

**ದ್ವಿತೀಯ ಯುಗದ ಸಾಹಿತ್ಯ:** ಪ್ರಥಮ ಯುಗದಲ್ಲಿ ಹೊರಗಿನಿಂದ ಬಂದ ಕ್ರೈಸ್ತ ಮಿಷನರಿಗಳೇ ಕೊಂಕಣಿ ಸಾಹಿತ್ಯರಂಗದಲ್ಲಿ ದುಡಿದರೆ ದ್ವಿತೀಯ ಯುಗದಲ್ಲಿ ಕೊಂಕಣಿಗರೂ ಈ ದಿಸೆಯಲ್ಲಿ ದುಡಿದರು.

1678ರಲ್ಲಿ ಪ್ರಕಟಿತವಾದ ಫಾನ್ ರೀಡ್ಸ್‌ನ ಹೊರ್ತುಸ್ ಇಂದಿಕುಸ್ ಮಲಬಾರಿ ಕುಸ್ ಎಂಬ ಡಚ್ ಭಾಷೆಯ ಸಸ್ಯವಿಜ್ಞಾನ ಗ್ರಂಥದ ಪ್ರಸ್ತಾವನೆಯಲ್ಲಿ ನಾಗರಿಲಿಪಿಯನ್ನು ಬಳಸಿ ಕೊಂಕಣಿಯಲ್ಲಿ ಬರೆಯುತ್ತಿದ್ದುದಕ್ಕೆ ಪ್ರಮಾಣ ಸಿಕ್ಕುತ್ತದೆ. ಇದನ್ನು ಬರೆದವರು ಕೊಚ್ಚಿ ಪ್ರದೇಶದ ಆಯುರ್ವೇದ ಚಿಕಿತ್ಸಕರಾದ ಅಪ್ಪುಭಟ್ಟ, ವಿನಾಯಕ ಪಂಡಿತ ಮತ್ತು ರಂಗಭಟ್ಟರು.

1808ರಲ್ಲಿ ವಿಲಿಯಂ ಕ್ಯಾರಿ (1761–1834) ಬೈಬಲನ್ನು ಕೊಂಕಣಿಗೆ ಭಾಷಾಂತರಿಸಿದ. ಇದೂ ದೇವನಾಗರಿ ಲಿಪಿಯಲ್ಲಿದೆ. ಡಚ್ಚರ ಕಾಲದಲ್ಲಿ ಕೇರಳದಲ್ಲಿ ಕೊಂಕಣಿಗೆ ಮಾನ್ಯತೆಯಿದ್ದಿರಬೇಕು. ಎರ್ನಾಕುಲಮಿನಲ್ಲಿಯ ಸಾರ್ವಜನಿಕ ಪತ್ರಾಗಾರದಲ್ಲಿಯ ಅನೇಕ ಕೊಂಕಣಿ ದಸ್ತಾವೇಜುಗಳೇ ಇದಕ್ಕೆ ಆಧಾರ.

ಗೋವೆಯ ರವೀಂದ್ರ ಕೇಳ್ಕರ್ ಅವರು ಎಫ್.ಜೆ. ಮಾರ್ತಿರೆಸ್ ಹಾಗೂ ಎ.ಎ.ಸಲ್ದಾಞ–ಇವರ ಸಹಾಯದಿಂದ 2,000ಕ್ಕೂ ಮಿಕ್ಕಿದ ಕೊಂಕಣಿ ಗ್ರಂಥಗಳ ವಿವರಣ ಪಟ್ಟಿಯೊಂದನ್ನು ತಯಾರಿಸಿದ್ದಾರೆ.

ಪ್ರಪ್ರಥಮ ಕೊಂಕಣಿ ವ್ಯಾಕರಣ ಗ್ರಂಥ 1640ರಲ್ಲಿ ಗೋವೆಯ ರಾಯ್ತೂರಿನಲ್ಲಿ (ರಷೋಲ್) ಪ್ರಕಟವಾಯಿತು. ಇದನ್ನು ಬರೆದಾತ ಯೇಸು ಸಭೆಯ ಥಾಮಸ್

ಸ್ಪೀವನ್ ಸ್ವಾಮಿ. ಈಗ ಕೊಂಕಣಿಯ ಬಗ್ಗೆ ಸುಮಾರು 19 ವ್ಯಾಕರಣಗಳೂ 24 ನಿಘಂಟುಗಳೂ ಇವೆ. ಇವುಗಳಲ್ಲಿ ಯೇಸು ಸಭೆಯ ಎ.ಎಫ್. ಎಕ್ಸಮಾಫ಼ೆ ಸ್ವಾಮಿಯ ಕೊಂಕಣಿ ವ್ಯಾಕರಣ (1882), ಇಂಗ್ಲಿಷ್–ಕೊಂಕಣಿ, ಕೊಂಕಣಿ–ಇಂಗ್ಲಿಷ್ ನಿಘಂಟು (1883) ಇನ್ನೂ ಬಳಕೆಯಲ್ಲಿವೆ.

ಇತ್ತೀಚೆಗೆ ಪೋರ್ಚುಗಲ್ಲಿನ ಬ್ರಾಗದಲ್ಲಿಯ ಸಾರ್ವಜನಿಕ ಗ್ರಂಥಾಲಯದಲ್ಲಿ ಕೊಂಕಣಿ ಸಾಹಿತ್ಯ ಗ್ರಂಥವೊಂದು ಸಿಕ್ಕಿದೆ. ಇದು ಹಸ್ತಪ್ರತಿರೂಪದಲ್ಲಿದೆ. ಈ ಗ್ರಂಥದಲ್ಲಿ ಮಹಾಭಾರತ ಮತ್ತು ರಾಮಾಯಣಗಳಿಂದ ಆರಿಸಿದ ಕೆಲವು ಕಥೆಗಳಿವೆ. ಈ ಕೃತಿಯನ್ನು ಬರೆದಾತ 16ನೆಯ ಶತಮಾನದಲ್ಲಿ ಗೋವೆಯಲ್ಲಿ ಬಾಳಿದ ಕೊಂಕಣಿ ಕವಿ ಕೃಷ್ಣದಾಸ ಶರ್ಮ ಎಂದು ಅಭಿಪ್ರಾಯಪಡುತ್ತಾರೆ. ಈ ಕೃತಿಯ ಶೈಲಿಯನ್ನು ಪರೀಕ್ಷಿಸಿದಾಗ ಇದಕ್ಕಿಂತಲೂ ಪೂರ್ವದಲ್ಲಿ ಕೊಂಕಣಿ ಸಾಹಿತ್ಯ ಹುಟ್ಟಿ ಹುಲುಸಾಗಿ ಬೆಳೆದಿರಬೇಕೆಂದು ಖಚಿತವಾಗುತ್ತದೆ. ಈ ಕೃತಿಯ ಸೂಕ್ಷ್ಮ ಛಾಯಾಚಿತ್ರ (ಮೈಕ್ರೊ ಫಿಲ್ಮ್) ಪಣಜಿಯ ಕೇಂದ್ರ ಗ್ರಂಥಾಲಯದಲ್ಲಿದೆ.

20ನೆಯ ಶತಮಾನ. ಕೊಂಕಣಿ ಸಾಹಿತ್ಯದ ನವೋದಯದ ಕಾಲ. ಕೊಂಕಣಿ ಸಾಹಿತ್ಯ ಇಂದು ಬಹುಮುಖವಾಗಿ ಬೆಳೆಯುತ್ತಿದೆ. ಶೆಣ್ಯೆಗೊಯೆಂಬಾಬ್ ಆಧುನಿಕ ಕೊಂಕಣಿ ಸಾಹಿತ್ಯದ ಪಿತನೆಂದು ಹೆಸರು ಪಡೆದಿದ್ದಾರೆ. ನಾಟಕ, ಸಣ್ಣಕಥೆ, ಜೀವನಚರಿತ್ರೆ, ದಾರ್ಶನಿಕ ಹಾಗೂ ಸಂಶೋಧನಾ ಗ್ರಂಥಗಳು, ವ್ಯಾಕರಣ, ಮಕ್ಕಳ ಸಾಹಿತ್ಯ ಹಾಗೂ ಇನ್ನಿತರ ರಂಗಗಳಲ್ಲಿ ಒಳ್ಳೆಯ ಸಾಹಿತ್ಯ ಕೃತಿಗಳನ್ನಿವರು ರಚಿಸಿದ್ದಾರೆ. ಇವರಿಂದಲೇ ಕೊಂಕಣಿ ಪುನರುಜ್ಜೀವನಗೊಂಡಿತೆಂದರೆ ತಪ್ಪಾಗದು.

ರಾಮಚಂದ್ರ ಎಸ್.ನಾಯಕ್, ರವೀಂದ್ರ ಕೇಳ್ಕರ್, ಜೊಕಿಂ ಅಂತೊನಿಯೊ ಫೆರ್ನಾಂಡಿಸ್, ಫೆಲಿಚಿಯೊ ಕಾರ್ಡೋಜೊ, ಎವಾಗ್ರಿಯೊ ಜಾರ್ಜ್, ಗುರುನಾಥ ಕೇಳ್ಕರ್, ಚಂದ್ರನಾಥ ಕಿಣಿ, ದಿನಕರ ದೇಸಾಯಿ, ಜೆ.ಬಿ. ಮೊರಾಯಸ್, ಬೈಂದೂರು ದೇವೊರಾಯ್, ಮನೋಹರ್ ಸರ್ದೇಸಾಯಿ ಮೊದಲಾದವರ ಕಾವ್ಯಗಳು ಭಾವಗೀತ ಸ್ವರೂಪದ್ದಾಗಿವೆ. ಪ್ರೇಮ, ಪ್ರಕೃತಿ ಸೌಂದರ್ಯ, ದೇಶಭಕ್ತಿ ಮೊದಲಾದುವನ್ನು ಕಾವ್ಯವಸ್ತುವನ್ನಾಗಿ ಆರಿಸಿ ಲಾಲಿತ್ಯಮಯ ಭಾವಗೀತೆಗಳನ್ನಿವರು ಬರೆದಿದ್ದಾರೆ.

ಕಾರವಾರದ ವಿ.ಆರ್.ಪ್ರಭು, ಧಾರವಾಡದ ವಿಜಯ ನಾಡಕರ್ಣಿ, ಪ್ರಭಾನಂದ ಸ್ವಾಮಿ, ಕೆ.ವಿ.ಗುಲ್ವಾಡಿ, ಗಿರೀಶ ಕಾರ್ನಾಡ್ ಮೊದಲಾದವರು ಕೊಂಕಣಿ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ದುಡಿದಿದ್ದಾರೆ.

ಕೇರಳದ ಶ್ರೀಮತಿ ಕಮಲಮ್ಮಳ್ ಅಂಬಾಲಾಪುಜ–ಇವರು ಸಂಪೂರ್ಣ ರಾಮಾಯಣವನ್ನು ಸೋಬಾನೆ ರೂಪದಲ್ಲಿ ರಚಿಸಿದ್ದಾರೆ. ಎಲ್.ನಾರಾಯಣ್ ಮಲ್ಯ, ಎಮ್.ಉಪೇಂದ್ರ ಪೈ, ರಂಗನಾಥ ಪ್ರಭು ಮೊದಲಾದವರು ನಾಟಕ, ಕವನ, ಹಾಡು ಇತ್ಯಾದಿ ಸಾಹಿತ್ಯ ರೂಪಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬೊಳಂತೂರು ಕೃಷ್ಣಪ್ರಭು, ಬಂಗಳೇಕರ್ ನಾರಾಯಣ ಕಾಮತ್, ಪುಂಡಲೀಕ ಶೆಣ್ಯೆ, ಬಿ.ವಿ. ಬಾಳಿಗ, ಜಿ.ಎನ್. ಲಕ್ಷ್ಮಣ ಪೈ–ಇವರು ಕೊಂಕಣಿ ಸಾಹಿತ್ಯಕ್ಕೆ ಅನೇಕ ಕೃತಿಗಳನ್ನು ನೀಡಿದ್ದಾರೆ. ಜೊಕಿಂ ಸಂತಾನ್ ಆಲ್ವಾರಿಸ್ ಮತ್ತು ಖಡಾಪ್–ಇವರ ಸಾಮಾಜಿಕ ಕಾದಂಬರಿಗಳು ಕೊಂಕಣಿ ಸಾಹಿತ್ಯದ ಕೃತಿ ರತ್ನಗಳಾಗಿವೆ.

ಚಾ.ಫ್ರಾ.ಡಿಕೊಸ್ತ, ಸಿರಿವಂತ್, ವಾಸು, ಪಾವುಸ್ತೀನ್ ಡಿಸೋಜ, ಗಬ್ಬು, ಐರಿನ್ ಪಿಂಟೊ ಮೊದಲಾದವರು ಸಣ್ಣಕಥೆಯ ಕ್ಷೇತ್ರವನ್ನು ಚೆನ್ನಾಗಿ ಬೆಳೆಸಿದ್ದಾರೆ.

ಜೆರೊಮ್ ಡಿಸೋಜ, ವಿಲ್ಫಿ ರೆಬಿಂಬಸ್ ಮೊದಲಾದವರು ನಾಟಕ, ಹಾಡು, ಗೀತೆಗಳಲ್ಲಿ ಪ್ರಸಿದ್ಧಿಪಡೆದಿದ್ದಾರೆ. ವಿಲ್ಫಿ ರೆಬಿಂಬಸ್‌ಗೆ ಕೊಂಕಣದ ಕೋಗಿಲೆ ಎಂಬ ಅಪೂರ್ವ ಬಿರುದಿದೆ.

ಕಾವ್ಯದಾಸ್, ಮರಿಯಾದಾಸ್, ರಾನ್, ಫೆಲಿಕ್ಸ್ ಡಾರ್ಜಿಲಿಂಗ್ ಮೊದಲಾದವರು ಕೊಂಕಣಿ ಗೀತೆಗಳನ್ನು ರಚಿಸಿ ಖ್ಯಾತರಾಗಿದ್ದಾರೆ.

ಸರ್ದಾರ್ ಎಲ್.ಸಿ.ಪಾಯ್ಸ್, ಮಾರ್ಕ್ ವಾಲ್ಡರ್, ವಿಲ್ಯಮ್ ಮಾಡ್ತಾ, ಜೆ.ನೊರೊನ್ನ ಮೊದಲಾದವರು ವೈಚಾರಿಕ, ದಾರ್ಶನಿಕ, ಧಾರ್ಮಿಕ, ವ್ಯಾಕರಣ ಲೇಖನಗಳನ್ನು ಬರೆದು ಕೊಂಕಣಿ ಸಾಹಿತ್ಯ ಬಹುಮುಖವಾಗಿ ಬೆಳೆಯುವಂತೆ ದುಡಿಯುತ್ತಿದ್ದಾರೆ.

ಲಘುಹಾಸ್ಯದಲ್ಲಿ ಪಿಡ್ವಾಜ್ ಜನಮೆಚ್ಚುಗೆಯನ್ನು ಪಡೆದಿದ್ದಾರೆ. ಮೊನಿಞೊರ್ ಸಿಲ್ವೆಸ್ತರ್ ಮಿನೇಜಸ್, ಮೊ.ಆರ್.ಮಸ್ಕರೇಞಸ್–ಇವರು ಕನ್ನಡ ಲಿಪಿಯನ್ನು ಬಳಸಿ ಬೈಬಲ್ಲಿನ ಹೊಸ ಒಡಂಬಡಿಕೆಯನ್ನು ಕೊಂಕಣಿಗೆ ಕೊಟ್ಟಿದ್ದಾರೆ. ಅಲ್ಲದೆ ಹಲವಾರು ಭಕ್ತಿಗೀತೆಗಳನ್ನು ರಚಿಸಿದ್ದಾರೆ.

**ಕೊಂಕಣಿ ಪತ್ರಿಕಾ ಸಾಹಿತ್ಯ:** ಮುಂಬಯಿಯ ಆರ್ಯೇಸ್ ಫೆರ್ನಾಂಡಿಸ್ ಸ್ವಾಮಿ ಕೊಂಕಣಿ ಪತ್ರಿಕೆಗಳ ವಿವರಣ ಪಟ್ಟಿಯೊಂದನ್ನು ತಯಾರಿಸಿದ್ದಾರೆ. ದಿವ್ಪಿ (ದೈನಿಕ, ರೋಮನ್ ಲಿಪಿ), ವಾವ್ರಾಡ್ಯಾಂಚೊ ಈಸ್ಟ್ (ವಾರಪತ್ರಿಕೆ, ರೋಮನ್ ಲಿಪಿ), ರಾಕ್ಣೊ, ಕಾಣಿಕ್, ಪಯ್ಣರಿ, ಮಿತ್ರ್, ಸೆವಕ್, ಪಂಚ್ಕಾದಾಯಿ ಇತ್ಯಾದಿ (ಕನ್ನಡ ಲಿಪಿಯಲ್ಲಿಯ ವಾರಪತ್ರಿಕೆಗಳು); ನೊವೆಂ ಗೊಂಯ್ (ಪಾಕ್ಷಿಕ, ದೇವನಾಗರಿ ಲಿಪಿ), ಝೆಲೊ (ಪಾಕ್ಷಿಕ, ಕನ್ನಡ ಲಿಪಿ), ಜೆಜುರಾಯ್, ಆಮ್ಚಿಮಾಯ್, ಆಂಜ್ (ಕನ್ನಡ ಲಿಪಿ), ಸಾರಸ್ವತ ವಾಣಿ (ಮಲಯಾಳಂ ಲಿಪಿ), ಗೊಮಾಂತ ಭಾರತಿ (ರೋಮನ್ ಲಿಪಿ), ಕೊಂಕಣಿ ಭಾರತಿ (ದೇವನಾಗರಿ ಲಿಪಿ)–ಮೊದಲಾದ ಮಾಸ ಪತ್ರಿಕೆಗಳು ಮುಖ್ಯವಾದುವು. ಕೊಂಕಣಿಯಲ್ಲಿ ವಾರ್ತಾಪತ್ರಿಕೆ ಆರಂಭವಾದದ್ದು 1889ರಲ್ಲಿ.

**ಭಾಷಾಂತರ ಸಾಹಿತ್ಯ:** ಭಾಷಾಂತರಿಸಿದ ಕೃತಿಗಳಲ್ಲಿ ಬೈಬಲ್ಲು ಮತ್ತು ವಿನೋಬಾ ಭಾವೆಯವರ ಗೀತಾಪ್ರವಚನ–ಇವು ಮೇರುಕೃತಿಗಳಾಗಿವೆ. ಸಣ್ಣಕಥೆ, ನಾಟಕ ಮಾತ್ರವಲ್ಲದೆ ಕಾದಂಬರಿಗಳನ್ನೂ ಪರಕೀಯ ಭಾಷೆಗಳಿಂದ ಕೊಂಕಣಿಗೆ ಭಾಷಾಂತರಿಸಲಾಗಿದೆ. ಷೇಕ್ಸ್‌ಪಿಯರನ ನಾಟಕಗಳನ್ನು ತರ್ಜುಮೆಗೊಳಿಸಿ ರಂಗಮಂಟಪದಲ್ಲಿ ಅಲ್ಲಲ್ಲಿ ಆಡಿ ತೋರಿಸಿದ್ದಾರೆ. ಗಾಂಧೀಸಾಹಿತ್ಯವನ್ನು ಕೊಂಕಣಿಗೆ ತಂದವರಲ್ಲಿ ಆರ್.ಎನ್.ನಾಯಕ್ ಹಾಗೂ ರವೀಂದ್ರ ಕೇಳ್ಕರ್ ಪ್ರಸಿದ್ಧರು.

ಆಕಾಶವಾಣಿಯ ಮೂಲಕವೂ ಕೊಂಕಣಿ ಸಾಹಿತ್ಯ ತನ್ನ ಕಂಪನ್ನು ಬೀರುತ್ತಿದೆ. ಕೊಂಕಣಿ ಹಾಡು, ಕಥೆ, ನಾಟಕ, ಪ್ರಾಂತೀಯ ಸಮಾಚಾರ, ರೈತವಿಭಾಗ ಇವುಗಳ ಮೂಲಕ ಕೊಂಕಣಿ ಸಾಹಿತ್ಯ, ಸಂಸ್ಕೃತಿಗಳಲ್ಲದೆ ಉಪಯುಕ್ತ ವಿಚಾರ, ಮಾಹಿತಿ– ಮುಂತಾದವು ಅಖಿಲಭಾರತ ಆಕಾಶವಾಣಿ–ಮುಂಬಯಿ, ಧಾರವಾಡ, ದೆಹಲಿ ಹಾಗೂ ಪಣಜಿಗಳಿಂದಲೂ ಪೋರ್ಚುಗಲ್ಲಿನ ಲಿಸ್ಬನಿನಿಂದಲೂ ಪ್ರಸಾರಗೊಳ್ಳುತ್ತಿವೆ. ಕೊಂಕಣಿಯಲ್ಲಿ ಹಲವಾರು ಚಲನಚಿತ್ರಗಳು ತಯಾರಾಗಿ ಜನಪ್ರಿಯವಾಗಿವೆ.

ಗೋವೆಯಲ್ಲಿ ಹಾಗೂ ಕೇರಳದಲ್ಲಿ ಕೊಂಕಣಿ ಮಾಧ್ಯಮದಲ್ಲಿ ಶಿಕ್ಷಣ ಇರುವುದರಿಂದಲೂ ಮಂಗಳೂರಿನಲ್ಲಿ ಅಲೆಕ್ಸಾಂಡರ್ ಡಿ'ಸೋಜಾ ಸ್ವಾಮಿಗಳ ಪರಿಶ್ರಮದಿಂದ ಕೊಂಕಣಿ ಬೇಸಗೆ ಶಿಬಿರ ನಡೆಯುವುದರಿಂದಲೂ ಕೊಂಕಣಿಯಲ್ಲಿ ಪಠ್ಯಪುಸ್ತಕಗಳು ಸಿದ್ಧವಾಗಿ ಪ್ರಕಟವಾಗುತ್ತಿವೆ.

ಕೊಂಕಣಿ ಭಾರತದ ಹೊರಗೂ ಜನಮನವನ್ನು ಸೆಳೆಯುತ್ತಿದೆ. ಅಮೆರಿಕೆಯ ಕಾರ್ನೆಲ್ ವಿಶ್ವವಿದ್ಯಾಲಯದಲ್ಲೂ ಪೋರ್ಚುಗಲ್ಲಿನ ಲಿಸ್ಬನ್ ವಿಶ್ವವಿದ್ಯಾಲಯದಲ್ಲೂ ಕೊಂಕಣಿ ಅಧ್ಯಯನ ಹಾಗೂ ಅಧ್ಯಾಪನಗಳು ನಡೆಯುತ್ತಿವೆ. ಕೇರಳದ ಕೊಂಕಣಿ ಭಾಷಾಪ್ರಚಾರಸಭಾ, ಗೋವೆಯ ಕೊಂಕಣಿ ಭಾಷಾಮಂಡಳಿ, ಕೊಂಕಣಿ ಅಭ್ಯಾಸ ಕೇಂದ್ರ ಮತ್ತು ಕೊಂಕಣಿ ಬರೆಹಗಾರರ ಸಂಘ–ಇವುಗಳ ಮೂಲಕ ಕೊಂಕಣಿ ಭಾಷೆ ಹಾಗೂ ಸಾಹಿತ್ಯ ಬೆಳೆಯುತ್ತಿವೆ. (ಡಬ್ಲ್ಯು.ಎಂ.)

**ಕೊಂಕಿದ ಸಿರ :** ಒಂದು ಸಿರ (ಅಭಿಧಮನಿ) ಅದರ ಸಹಜ ಗಾತ್ರಮಿತಿಯನ್ನು ಮೀರಿ ಹಿಗ್ಗಿ (ಡೈಲೇಟ್) ಉದ್ದವಾಗಿ ವಂಕಿಯಂತಾದಾಗ ಅದನ್ನು ಕೊಂಕಿದ ಸಿರ (ವೆರಿಕೋಸ್ ವೇನ್) ಎನ್ನುತ್ತಾರೆ. ಸಾಮಾನ್ಯವಾಗಿ ಕಾಲಿನ, ಅನ್ನನಾಳದ, ವೀರ್ಯಕೋಶದ ಮತ್ತು ಗುದದ್ವಾರದ ಸಿರಗಳು ಈ ರೋಗಕ್ಕೆ ಈಡಾಗುತ್ತವೆ. ರಕ್ತವನ್ನು ಕಾಲಿನಿಂದ ಸರಿಯಾಗಿ ಗುಂಡಿಗೆಗೆ ಒಯ್ಯಲು ಕಾಲಿನ ಮೀನಖಂಡಗಳ ಕುಗ್ಗುವಿಕೆ, ಸಿರಗಳಲ್ಲಿಯ ಕವಾಟಗಳು ಮತ್ತು ಒಳ ಮತ್ತು ಹೊರ ವ್ಯವಸ್ಥೆಗಳಲ್ಲಿ ಸಂಪರ್ಕ ಏರ್ಪಡಿಸುವ ಸಣ್ಣಸಿರಗಳು (ಕಮ್ಯೂನಿಕೇಟಿಂಗ್ ವೇನ್ಸ್) ಸಹಾಯ ಮಾಡುತ್ತವೆ. ಈ ವ್ಯವಸ್ಥೆಯಲ್ಲಿ ಸರಿಯಾದ ಹೊಂದಾಣಿಕೆ ಇಲ್ಲದಾಗ ರಕ್ತ ಹೊರಸಿರಗಳಲ್ಲಿಯೇ ನಿಂತು ಕೊಂಕಿದ ಸಿರ ಆಗುತ್ತದೆ.

**ಕಾರಣಗಳು:** 1 ಮನುಷ್ಯನ ನೇರ ನಿಲುವಿಗೆ ಕೊಡಬೇಕಾದ ದಂಡ ಕೊಂಕಿದ ಸಿರಗಳು. ಚತುಷ್ಪಾದಿ ಪ್ರಾಣಿಗಳಲ್ಲಿ ಈ ರೀತಿಯ ತೊಂದರೆ ಇಲ್ಲ. 2 ಕವಾಟಗಳಲ್ಲಿಯ ಆನುವಂಶಿಕ ದೋಷಗಳು. 3 ಸ್ನಾಯುಗಳ ದೌರ್ಬಲ್ಯ ಮತ್ತು ಕೃಶತ್ವ. 4 ಕಾಲುಗಳಲ್ಲಿಯ ಸ್ನಾಯುಗಳನ್ನು ಸುತ್ತವರಿಯುವ ಒಳಪದರದ ಎಳೆಯುವಿಕೆಯಿಂದ ಸಿರಗಳಲ್ಲಿನ ರಕ್ತದ ಭಾರ ಕವಾಟಗಳ ಮೇಲೆ ಬಿದ್ದು ಅವು ದುರ್ಬಲವಾಗುತ್ತವೆ. 5 ಸಿರಗಳಲ್ಲಿಯ ರಕ್ತ ಗುಂಡಿಗೆಗೆ ವಾಪಸಾಗುವಾಗ ತಡೆಯುಂಟಾಗುವಿಕೆ. ಉದಾಹರಣೆಗೆ, ಹೊಟ್ಟೆಯೊಳಗಿನ ಗಂತಿಗಳು, ಬಸಿರು, ಒಳಸಿರಗಳ ರಕ್ತಗರಣೆ. 6 ಹುಟ್ಟಿನಿಂದ ಬಂದ ಅಪಧಮನಿ–ಅಭಿಧಮನಿ ವ್ರಣಗಳು (20 ವರ್ಷ ವಯಸ್ಸಿನ ಮೊದಲೇ ತಲೆದೋರಿದಾಗ).

**ಚಿಹ್ನೆಗಳು:** ಕಾಲಿನ ಸ್ನಾಯುಗಳಲ್ಲಿ, ವಿಶೇಷವಾಗಿ ಮೀನಖಂಡಗಳಲ್ಲಿ, ನೋವು ಮತ್ತು ಆಯಾಸವೂ ಸಿರಗಳು ಕೊಂಕಿರುವ ಸ್ಥಳಗಳಲ್ಲಿ ಚುಚ್ಚುವಂಥ ಸೆಳೆತವೂ ಉಂಟಾಗುತ್ತವೆ. ಸಂಜೆಯಾದಂತೆ ಕಾಲಿನ ಕೆಳಗಂಟು ಊದುತ್ತದೆ. ಸಿರಗಳ ಮೇಲಿನ ಚರ್ಮದಲ್ಲಿ ಕೆರೆತವೂ ತಲೆದೋರಬಹುದು. ಕೆಲವರಿಗೆ ಮೀನ ಖಂಡಗಳಲ್ಲಿ ಅಸಾಧ್ಯ ನೋವು ತಲೆದೋರಬಹುದು. ಕಾಲಿನ ಸಿರಗಳು ದಪ್ಪವಾಗಿ ಕೊಂಕಿರುವುದನ್ನು ಸುಲಭವಾಗಿ ಗುರುತಿಸುವುದು ಸಾಧ್ಯ.

**ಉಪಚಾರ:** ಸಮಾಧಾನಕಾರಕ ಅಂಶಗಳನ್ನು ಕೆಳಕಂಡ ಅವಸ್ಥೆಗಳಲ್ಲಿ ಸೂಚಿಸಬಹುದು. 1 ಬಸಿರು, 2 ಶಸ್ತ್ರಚಿಕಿತ್ಸೆಗೊಳಗಾಗಲು ಇಚ್ಛೆಪಡದವರು, 3 ಶಸ್ತ್ರಚಿಕಿತ್ಸೆಗೊಳಗಾಗಲು ಅಸಮರ್ಥರು.

ಸ್ಥಿತಿಸ್ಥಾಪಕ (ಇಲಾಸ್ಟಿಕ್) ಪಟ್ಟಿಗಳನ್ನು ಬಿಗಿಯಾಗಿ ಸುತ್ತುವುದರ ಮೂಲಕ ಅಥವಾ ಉದ್ದವಾದ ಸ್ಥಿತಿಸ್ಥಾಪಕ ಕಾಲುಚೀಲುಗಳನ್ನು ಧರಿಸುವುದರ ಮೂಲಕ ಅಥವಾ ರಾಸಾಯನಿಕ ವಸ್ತುಗಳನ್ನು ಸಿರಗಳಿಗೆ ಚುಚ್ಚುವುದರ ಮೂಲಕ ಉಪಶಮನ ಪಡೆಯಬಹುದು. ಶಸ್ತ್ರಚಿಕಿತ್ಸೆಯ ಮೂಲಕ ಕೊಂಕಿದ ಸಿರಗಳನ್ನು ತೆಗೆದುಹಾಕಬಹುದು.

ಕೊಂಕಿದ ಸಿರಗಳಿಂದ ತಲೆದೋರುವ ಇತರ ವ್ಯಾಧಿಗಳಲ್ಲಿ ಹೆಸರಿಸಬಹುದಾದವು ಇವು–ಕೊಂಕಿದ ಸಿರಚೀಲ, ಮೂಲವ್ಯಾಧಿ ಮತ್ತು ಅನ್ನನಾಳದ ಕೊಂಕಿದ ಸಿರಗಳು.

ವೀರ್ಯನಾಳದಲ್ಲಿಯ ಸಿರಗಳ ಅಸ್ವಾಭಾವಿಕ ಊತದ ಪರಿಣಾಮವಾಗಿ ಕೊಂಕಿದ ಸಿರಚೀಲ (ವೆರಿಕೋಸೀಲ್) ತಲೆದೋರುತ್ತದೆ. ಇದರಿಂದ ರೋಗಿ ತೀವ್ರವಾದ ನೋವನ್ನು ಅನುಭವಿಸುತ್ತಾನೆ. ಇದರ ಕಾರಣಗಳು: 1 ಎಡಮೂತ್ರಪಿಂಡ ಸಿರದ ಮೂಲಕ ವೀರ್ಯಪಿಂಡ ಸಿರಕ್ಕೆ ಆಗಾಗ್ಗೆ ಹಿಮ್ಮೊಗವಾಗಿ ಬರುವ ರಕ್ತ, 2 ಉದ್ದವಾದ ಸಪೂರ ವ್ಯಕ್ತಿಗಳು. 3 ಉಷ್ಣವಾತಾವರಣ. ಚಿಹ್ನೆಗಳು : ಸೆಳೆತದ ನೋವು, ವೀರ್ಯವೃದ್ಧಿಗೆ ತಡೆಯುಂಟಾಗಿ ನಿರ್ವೀರ್ಯತೆ ಉಂಟು ಮಾಡುತ್ತದೆ. ಶೇ. 95 ಭಾಗ ಇದು ಎಡಭಾಗದಲ್ಲಿ ಕಾಣಿಸಿಕೊಳ್ಳುತ್ತದೆ.

**ಉಪಚಾರ:** ವೀರ್ಯಗ್ರಂಥಿ ಚೀಲವನ್ನು ಎತ್ತಿಕಟ್ಟುವುದು. ನೋವು ಮತ್ತು ವೀರ್ಯ ಕ್ಷೀಣತೆ ಉಂಟಾದಾಗ ಶಸ್ತ್ರಚಿಕಿತ್ಸೆ.

**ಮೂಲವ್ಯಾಧಿಯ (ಪೈಲ್ಸ್) ಕಾರಣಗಳು:** 1 ಅನುವಂಶೀಯತೆ, 2 ಗುರುತ್ವ ಬಲ, 3 ಸಿರಗಳು ಗುದನಾಳದ ಶಿಥಿಲ ಲೋಳ್ಪೊರೆಯಲ್ಲಿರುವುದು; 4 ಮಲಬದ್ಧತೆ, 5 ಭೇದಿ.

**ಚಿಹ್ನೆಗಳು:** 1 ಗುದದ್ವಾರದ ಮೂಲಕ ರಕ್ತಸ್ರಾವ, 2 ಮೊಳೆಗಳು ಹೊರಬರುವುದು, 3 ತುರಿಕೆ, 4 ವಿಪರೀತ ನವೆಯಿಂದ ಕೂಡಿದ ಚರ್ಮರೋಗ (ಪ್ರೊರೈಟಸ್), 5 ನೋವು.

**ಉಪಚಾರ:** ಸಮಾಧಾನಕಾರಕವಾಗಿ ಮಲಬದ್ಧತೆ ಅಥವಾ ಭೇದಿಯನ್ನು ನಿವಾರಿಸಬೇಕು; ಚುಚ್ಚುಮದ್ದು ನೀಡಬಹುದು. ಶಸ್ತ್ರಚಿಕಿತ್ಸೆ ಶಾಶ್ವತ ಪರಿಹಾರ ನೀಡಬಹುದು.

**ಅನ್ನನಾಳದ ಕೊಂಕಿದ ಸಿರಗಳು:** ಇವು ಪೋರ್ಟಲ್ ಮತ್ತು ಸಿಸ್ಟೆಮಿಕ್ ಸಿರಗಳ ಸಂಧಿಯಲ್ಲಿ ಕಾಣಿಸಿಕೊಳ್ಳುತ್ತವೆ. ಪೋರ್ಟಲ್ ಸಿಸ್ಟಂನಲ್ಲಿ ರಕ್ತ ಒತ್ತಡವನ್ನು ಹೆಚ್ಚಿಸುವ ರೋಗಗಳಲ್ಲಿ ಈ ಸಿರಗಳು ಉಂಟಾಗುತ್ತವೆ. ಇದರ ಕಾರಣದಿಂದ ಮನುಷ್ಯನಿಗೆ ಪದೇಪದೇ ರಕ್ತವಾಂತಿಯಾಗುತ್ತದೆ. ಇದು ಹೆಚ್ಚಾದಾಗ ಮನುಷ್ಯ ತಕ್ಷಣ ಸಾಯಬಹುದು. ಶಸ್ತ್ರಚಿಕಿತ್ಸೆ ಇದಕ್ಕೆ ಸರಿಯಾದ ಉಪಚಾರ. (ಎಂ.ಪಿ.ಪಿಎ.)

**ಕೊಂಗಾಳ್ವರು:** ಮೈಸೂರು ರಾಜ್ಯದಲ್ಲಿ ಅರಕಲಗೂಡು–ಕೊಡಗು ಪ್ರದೇಶಗಳನ್ನೊಳಗೊಂಡಿದ್ದ ಕೊಂಗನಾಡಿನ ಅರಸರು. ಇವರ ಮೂಲ ಪುರುಷ ಪಂಚವ. ಸು.1004ರಲ್ಲಿ ಹನಸೋಗೆಯ ಕದನದಲ್ಲಿ ಚೆಂಗಾಳ್ವರನ್ನು ಸೋಲಿಸಿದ ಪಂಚವ ಮಹಾರಾಯನಿಗೆ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವನೆಂಬ ಬಿರುದಿನೊಂದಿಗೆ ಈ ಪ್ರದೇಶದ ಆಳ್ವಿಕೆಯನ್ನು ಚೋಳ ಚಕ್ರವರ್ತಿ ರಾಜರಾಜ ವಹಿಸಿಕೊಟ್ಟುದರಿಂದ ಈ ವಂಶದ ಅರಸರಿಗೆ ಕೊಂಗಾಳ್ವರೆಂದು ಹೆಸರಾಯಿತು. ವೆಂಗಿ ಮತ್ತು ಗಂಗ ಮಂಡಲಗಳ ಮಹಾದಂಡನಾಯಕ ಪದವಿಯನ್ನೂ ಈತನಿಗೆ ನೀಡಲಾಗಿತ್ತು. ಇವನು ಮಲಬಾರ್ ಪ್ರದೇಶದಲ್ಲಿ ಚೇರಮನನ್ನೂ ಸೋಲಿಸಿದುದಾಗಿ ಹೇಳಿಕೊಂಡಿದ್ದಾನೆ. ಇವನ ಅನಂತರದ ದೊರೆಗಳಲ್ಲಿ ತ್ರಿಭುವನಮಲ್ಲ ಕೊಂಗಾಳ್ವ (ಆ.1079–1105) ಚೆಂಗಾಳ್ವರನ್ನು ಸದೆಬಡಿದ. ದೊಡ್ಡ ಮಲ್ಲದೇವ ದೇವಾಲಯವನ್ನು ನಿರ್ಮಿಸಿ ದಾನಧರ್ಮಗಳನ್ನು ಮಾಡಿ ಹೆಸರುಗಳಿಸಿದ್ದ. ಸು.1115ರಲ್ಲಿ ಆಳುತ್ತಿದ್ದ ವೀರ ಕೊಂಗಾಳ್ವ ಸತ್ಯವಾಕ್ಯನೇ ಜಿನಾಲಯದ ನಿರ್ಮಾತ. ಈ ವಂಶದ ತ್ರಿಭುವನಮಲ್ಲ ವೀರ ದೊಡ್ಡ ಕೊಂಗಾಳ್ವ (ಆ.1171–1177) ಹೊಯ್ಸಳರ ಆಕ್ರಮಣವನ್ನು ಹಿಮ್ಮೆಟ್ಟಿಸಿದ.

ಕೊಂಗಾಳ್ವರು ಜೈನಧರ್ಮೀಯರು. ಆ ಮತಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಪಂಚಮಹಾಶಬ್ದ, ಪೂರ್ವಶೈಲಸೂರ್ಯ, ಚೋಳಕುಲ ಘರಟ್ಟ, ಸೂರ್ಯವಂಶ ಚೂಡಾಮಣಿ–ಇವು ಇವರ ಕೆಲವು ಬಿರುದುಗಳು. 1390ರ ಸುಮಾರಿನಲ್ಲಿ ಈ ವಂಶದ ರಾಜರು ವಿಜಯನಗರ ಸಾಮ್ರಾಜ್ಯದಲ್ಲಿ ವಿಲೀನರಾಗಿರಬಹುದು. (ಜಿ.ಬಿ.ಆರ್.)

**ಕೊಂಗು ರಾಜ್ಯ :** ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳ ಪ್ರದೇಶವನ್ನೊಳಗೊಂಡಿದ್ದ ಪ್ರಾಚೀನರಾಜ್ಯ. ಕೊಂಗು ಎಂಬ ಹೆಸರು ಹೇಗೆ ಬಂತೆಂಬ ಬಗ್ಗೆ ಅನೇಕ ವಿವರಣೆಗಳುಂಟು. ಹೂ ಗಿಡ ಬಳ್ಳಿಗಳು ತುಂಬಿದ್ದ ಆ ಪ್ರದೇಶ ಹೂವಿನ ನಸುಗಂಪಿನಿಂದಲೂ ಜೇನಿನ ಸವಿಯಿಂದಲೂ ಕೂಡಿದ್ದುದರಿಂದ ಅದಕ್ಕೆ ಈ ಹೆಸರು ಬಂದಿರಬಹುದೆಂಬುದು ಒಂದು ಊಹೆ. ಈ ಪ್ರದೇಶಕ್ಕೆ ಆ ಹೆಸರು ಯಾವಾಗ ಬಂತೆಂದು ನಿರ್ದಿಷ್ಟವಾಗಿ ತಿಳಿದಿಲ್ಲ. ಪ್ರಸಕ್ತಶಕೆಯ ಆರಂಭದ ಅನಂತರ, ರಟ್ಟ ವಂಶದವರು ಇಲ್ಲಿ ತಮ್ಮ ಆಡಳಿತವನ್ನು ಪ್ರಾರಂಭಿಸಿದಂದಿನಿಂದ, ಈ ಹೆಸರು ಕಾಣಬರುತ್ತದೆ. ರಾಜಾಕ್ಕಳ್ ಚರಿತಂ ಗ್ರಂಥದಲ್ಲಿ ಇದನ್ನು ಸ್ವತಂತ್ರ ರಾಜ್ಯವೆಂದು ಹೇಳಲಾಗಿದೆ. ಇದು ಬೆಟ್ಟಗುಡ್ಡಗಳ ಪ್ರದೇಶ. ಇಲ್ಲಿ ಐವತ್ತಕ್ಕಿಂತ ಹೆಚ್ಚು ಬೆಟ್ಟಗಳಿವೆ. ಕಾವೇರಿ ಇಲ್ಲಿಯ ಮುಖ್ಯ ನದಿ. ನೊಯಲ್, ಭವಾನಿ ಮತ್ತು ಅಮರಾವತಿ ಇವು ಉಪನದಿಗಳು. ಕೊಂಗು ನಾಡಿನ 1,800 ವರ್ಷಗಳ ಚರಿತ್ರೆಯಲ್ಲಿ ಅನೇಕ ಅರಸು ಮನೆತನಗಳು ಆಳಿದುವು.

ಪ್ರ.ಶ.ಪೂ.ದಲ್ಲಿ ಈ ಪ್ರದೇಶದಲ್ಲಿ ವ್ಯಾಪಿಸಿದ್ದ ಇತಿಹಾಸ ಪೂರ್ವಕಾಲದ ನಾಗರಿಕತೆ ಪುರಾತತ್ತ್ವಶೋಧನೆಗಳಿಂದ ಬೆಳಕಿಗೆ ಬಂದಿದೆ. ಬೃಹತ್ ಶಿಲಾಸಮಾಧಿಗಳು ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಸೀಸರ್, ಆಗಸ್ಟಸ್, ಟೈಬರಿಯಸ್, ಕ್ಲಾಡಿಯಸ್ ಮುಂತಾದವರ, ಪ್ರಸಕ್ತಶಕದ ಪ್ರಾರಂಭಕಾಲಕ್ಕೆ ಸೇರಿದ, ಅನೇಕ ರೋಮನ್ ನಾಣ್ಯಗಳು ಈ ಪ್ರದೇಶದಲ್ಲಿ ದೊರಕಿರುವುದರಿಂದ ಆ ವೇಳೆಗೆ ಐರೋಪ್ಯದೇಶಗಳೊಂದಿಗೆ ಈ ಪ್ರದೇಶ ವ್ಯಾಪಾರಸಂಪರ್ಕ ಬೆಳೆಸಿಕೊಂಡಿತ್ತೆಂದು ತಿಳಿದುಬರುತ್ತದೆ. ಶಾಸನ ಸಂಶೋಧನ ಇಲಾಖೆ ಈ ಪ್ರದೇಶದಲ್ಲಿ ಸು.900 ಶಾಸನಗಳನ್ನು ಪತ್ತೆ ಹಚ್ಚಿದೆ. ಅವುಗಳಲ್ಲಿ 6 ಚೋಳರ ಕಾಲಕ್ಕೂ 300 ಕೊಂಗು ಚೋಳರ ಕಾಲಕ್ಕೂ 10 ಗಂಗರ ಕಾಲಕ್ಕೂ 60 ಹೊಯ್ಸಳ ಸಂತತಿಯ ಕಾಲಕ್ಕೂ 10 ಮಧುರೆಯ ನಾಯಕಮನೆತನದ ಕಾಲಕ್ಕೂ 120 ಕೊಂಗು ಪಾಂಡ್ಯರ ಕಾಲಕ್ಕೂ, 80 ವಿಜಯನಗರ ಸಾಮ್ರಾಜ್ಯದ ಕಾಲಕ್ಕೂ 20 ಉಮ್ಮತ್ತೂರು ಮತ್ತು ತೆರಕಣಾಂಬಿ ಮನೆತನದ ಕಾಲಕ್ಕೂ 30 ಮೈಸೂರಿನ ಅರಸರಿಗೂ ಸಂಬಂಧಿಸಿದ ಶಾಸನಗಳಾಗಿವೆ. ಅಲ್ಲದೆ ಅನೇಕ ಕೈಬರಹದ ಪ್ರತಿಗಳು ದೊರೆತಿವೆ. ಇಂಥ ಕೃತಿಗಳಲ್ಲಿ ಬಹಳ ಅಮೂಲ್ಯವಾದ್ದು ಕೊಂಗು ದೇಶ ರಾಜಾಕ್ಕಳ್ ಚರಿತಂ. ಮೇಲ್ಕಂಡ ಈ ಆಧಾರಗಳೆಲ್ಲ ಕೊಂಗುನಾಡಿನ ಚರಿತ್ರೆಯನ್ನು ತಿಳಿಯಲು ಬಹುಮಟ್ಟಿಗೆ ಸಹಕಾರಿಯಾಗಿವೆ.

ಪ್ರಾಚೀನ ಕಾಲದಲ್ಲಿ ಪಶುಪಾಲನೆ ಇಲ್ಲಿಯ ಜನರ ಮುಖ್ಯ ಕಸುಬಾಗಿದ್ದುದಾಗಿ ತಿಳಿದುಬಂದಿದೆ. ಸಂಘಸಾಹಿತ್ಯದ ಕಾಲದಿಂದ ಕೊಂಗುಮಂಡಲದ ಇತಿಹಾಸಯುಗ ಪ್ರಾರಂಭವಾಯಿತು. ಮಾಲವರ್, ಕೋಸರ್, ಕೊಂಗರು ಮೊದಲಾದ ಬುಡಕಟ್ಟುಗಳ ಜನರು ಅಲ್ಲಿ ವಾಸಿಸುತ್ತಿದ್ದರು. ಕೊಂಗುನಾಡನ್ನಾಳಿದ ಐತಿಹಾಸಿಕ ಮನೆತನಗಳಲ್ಲಿ ನಾಗಸಂತತಿ ಮೊದಲನೆಯದು. ಅನಂತರ ಸಂಘ ಸಾಹಿತ್ಯಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ತಮಿಳು ಅರಸುಮನೆತನಗಳಲ್ಲೊಂದಾದ ಚೇರ ಸಂತತಿ ಕೊಂಗುನಾಡಿನ ಮೇಲೆ ತನ್ನ ಆಡಳಿತವನ್ನು ಸ್ಥಾಪಿಸಿತು. ಈ ಕಾರಣದಿಂದಲೇ ಚೇರ ರಾಜರಿಗೆ ಕೊಂಗು ಚೇರ ಎಂಬ ಹೆಸರು ರೂಢಿಗೆ ಬಂತು. ಕೊಂಗು ನಾಡಿನ ಕರೂರು ಪಟ್ಟಣ ಚೇರ ಮಂಡಲಾಧಿಕಾರಿಯ ರಾಜಧಾನಿಯಾಗಿತ್ತು. ಕೊಂಗುನಾಡಿನ ಮೇಲೆ ಚೇರರ ಆಡಳಿತ ಪ್ರ.ಶ.3ನೆಯ ಶತಮಾನದ ಮಧ್ಯಭಾಗದಲ್ಲಿ ಕೊನೆಗೊಂಡಿತು. ಅನಂತರ ಕನ್ನಡದ ಅರಸುಮನೆತನಗಳು ಈ ಪ್ರದೇಶದ ಮೇಲೆ ಬಹುಕಾಲ ಆಡಳಿತ ನಡೆಸಿದುವು.

ರಾಜಾಕ್ಕಳ್ ಚರಿತಂ ತಿಳಿಸುವಂತೆ ರಟ್ಟ ಮನೆತನದ ವೀರ ರಾಯ ಚಕ್ರವರ್ತಿ ಅಲ್ಲಿಯ ಸಿಂಹಾಸನವನ್ನೇರಿದ. ರಟ್ಟ, ರಥಿಕ, ರೆಡ್ಡಿ ಹಾಗೂ ರಾಷ್ಟ್ರಕೂಟ ಎಂಬುದಾಗಿ ವಿದ್ವಾಂಸರು ಕರೆದಿರುವ ಈ ಜನರು ಉತ್ತರಭಾಗದಿಂದ ಮೈಸೂರಿನ ಮೂಲಕ ವಲಸೆ ಬಂದು ಕೊಂಗು ಪ್ರದೇಶದಲ್ಲಿ ತಮ್ಮ ಅಧಿಕಾರ ಸ್ಥಾಪಿಸಿದರು. ಸ್ಕಂಧಪುರ ಇವರ ರಾಜಧಾನಿಯಾಗಿತ್ತು. 250ರಿಂದ 450ರ ತನಕ ರಟ್ಟಮನೆತನದ ಏಳು ರಾಜರು ಕೊಂಗು ನಾಡನ್ನಾಳಿದರು. ಇವರ ಆಳ್ವಿಕೆಯಲ್ಲಿ ಜೈನ ಮತ ವಿಶೇಷವಾಗಿ ಪ್ರಸಾರವಾಯಿತು. ಆ ಕಾಲದ ಜೈನ ಬಸದಿಗಳ ಭಗ್ನಾವಶೇಷಗಳು ಕೊಯಮತ್ತೂರು ಜಿಲ್ಲೆಯಲ್ಲಿ ಕಾಣಬಂದಿವೆ. ರಟ್ಟರ ಕೊನೆಯ ರಾಜ, ತಿರುವಿಕ್ರಮ, ಜೈನಮತದಿಂದ ಶೈವಪಂಥಕ್ಕೆ ಪರಿವರ್ತನೆಯಾದ. ರಟ್ಟವಂಶೀಯರು ಸುವ್ಯವಸ್ಥಿತವಾದ ಆಡಳಿತವನ್ನು ಜಾರಿಗೆ ತಂದಿದ್ದರು. 450ರ ಸುಮಾರಿನಲ್ಲಿ ಕೊಂಗು ಮಂಡಲ ಗಂಗರ ಅಧೀನವಾಯಿತು.

ಒಂದನೆಯ ಮಾಧವ ಕೊಂಗಣಿವರ್ಮ ಗಂಗಮನೆತನವನ್ನು ಸ್ಥಾಪಿಸಿ ಕೊಂಗು ದೇಶವನ್ನು ಸ್ವಾಧೀನಪಡಿಸಿಕೊಂಡ. ಸು.450ರಿಂದ 870ರ ತನಕ 21 ಜನ ಗಂಗ ಅರಸರು ಕೊಂಗು ನಾಡನ್ನು ಆಳಿದರು. ದುರ್ವಿನೀತ, ಭೂವಿಕ್ರಮ ಹಾಗೂ 3ನೆಯ ಕೊಂಗುಣಿ ವರ್ಮರ ಆಳ್ವಿಕೆಯ ಕಾಲದಲ್ಲಿ ಕೊಂಗು ನಾಡು ಸಂಪದ್ಭರಿತವಾಗಿತ್ತು. 725ರ ಅನಂತರ ತಲಕಾಡು ಗಂಗ ವಂಶದ ಸ್ವತಂತ್ರ ಶಾಖೆಯೊಂದು ಕೊಂಗು ಗಂಗರೆಂಬ ಹೆಸರಿನಿಂದ ಇಲ್ಲಿ ಸ್ಥಾಪಿತವಾದಂತೆ ಕಂಡುಬರುತ್ತದೆ. ಗಂಗರ ಆಳ್ವಿಕೆಯ ಕಾಲದಲ್ಲಿ ಕೊಂಗು ರಾಜ್ಯವನ್ನು ಆಡಳಿತ ಸೌಕರ್ಯಕ್ಕಾಗಿ ವಿಷಯ ಅಥವಾ ನಾಡುಗಳೆಂದು ವಿಂಗಡಿಸಲಾಗಿತ್ತು. ತೊರೆನಾಡು–500, ಕೊಂಗುನಾಡು–2000 ಮತ್ತು ಮಲೆನಾಡು–1000 ಎಂಬ ವಿಭಾಗಗಳಿದ್ದುವು. ಈ ವಿಭಾಗಗಳು ಒಬ್ಬೊಬ್ಬ ಪ್ರಾಂತ್ಯಾಧಿಕಾರಿಯ

ಆಡಳಿತಕ್ಕೊಳಪಟ್ಟಿದ್ದುವು. ಗ್ರಾಮಗಳು ಆಡಳಿತ ಘಟಕಗಳಾಗಿದ್ದುವು. ಗವುಂಡ (ಗೌಡ) ಮುಖ್ಯ ಗ್ರಾಮಾಧಿಕಾರಿ. ಗವುಂಡನಿಗೆ ಸಹಾಯಕನಾಗಿ ಮಣೆಗಾರ ಎಂಬ ಅಧಿಕಾರಿಯಿದ್ದ. ಕೊಯಮತ್ತೂರು ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಇಂದಿಗೂ ಇರುವ ಗವುಂಡರು ಗಂಗರ ಆಡಳಿತದ ಸಂಕೇತವಾಗಿದ್ದಾರೆ. ಗಂಗರ ಆಳ್ವಿಕೆಯ ಕೊನೆಗಾಲದಲ್ಲಿ ಪಲ್ಲವ, ಬಾಣ ಮತ್ತು ಅಡಿಗೈಮಾನ್ ಶಾಖೆಗಳು ಕೊಂಗುನಾಡಿನ ಹಲವು ಭಾಗಗಳಲ್ಲಿ ತಲೆಯೆತ್ತಿದುವು. ಆ ಕಾಲದಲ್ಲಿ ಶೈವ ಮತ್ತು ಜೈನ ಪಂಥಗಳು ಇಲ್ಲಿ ಪ್ರಬಲವಾಗಿದ್ದುವು.

11ನೆಯ ಶತಮಾನದ ಪ್ರಾರಂಭದಿಂದ ಕೊಂಗು ಮಂಡಲ ಚೋಳರ ಅಧೀನಕ್ಕೆ ಬಂತು. 1114ರಲ್ಲಿ ಹೊಯ್ಸಳ ವಿಷ್ಣುವರ್ಧನ ಗಂಗವಾಡಿಯನ್ನಾಕ್ರಮಿಸಿದ್ದ ಚೋಳರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದಾಗ ಕೊಂಗು ಪ್ರದೇಶದ ಹಲವು ಭಾಗಗಳು ಹೊಯ್ಸಳ ರಾಜ್ಯಕ್ಕೆ ಸೇರಿದುವು. 3ನೆಯ ವೀರಬಲ್ಲಾಳನ ಕಾಲದಲ್ಲಿ ಕೊಂಗು ಮಂಡಲ ಪೂರ್ಣವಾಗಿ ಹೊಯ್ಸಳರ ವಶವಾಯಿತು. ಹೊಯ್ಸಳರ ತರುವಾಯ ಇದು ವಿಜಯನಗರ ಸಾಮ್ರಾಜ್ಯದಲ್ಲಿ ಐಕ್ಯವಾಗಿತ್ತು. ವಿಜಯನಗರದ ಪತನಾನಂತರ ಸ್ವಲ್ಪ ಕಾಲದವರೆಗೂ ಮಧುರೆಯ ನಾಯಕರು ಕೊಂಗುನಾಡನ್ನು ಆಳಿದರು. 17ನೆಯ ಶತಮಾನದ ಮಧ್ಯಭಾಗದಲ್ಲಿ ಕಂಠೀರವ ನರಸರಾಜ ಒಡೆಯರು ಕೊಯಮತ್ತೂರು ಜಿಲ್ಲೆಯನ್ನು ವಶಪಡಿಸಿಕೊಂಡರು. ಚಿಕ್ಕದೇವರಾಜ ಒಡೆಯರು ಕೊಂಗು ಮಂಡಲವನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡರು. ಹೈದರ್ ಮತ್ತು ಟಿಪ್ಪುಸುಲ್ತಾನನ ಕಾಲದಲ್ಲಿ ಕೊಂಗು ನಾಡಿನ ಸುತ್ತಮುತ್ತಣ ಪ್ರದೇಶಗಳು ಮೈಸೂರು ರಾಜ್ಯದಲ್ಲಿ ಸೇರಿದ್ದುವು. 1799ರಲ್ಲಿ ಟಿಪ್ಪುವಿನ ಮರಣಾನಂತರ ಈ ಪ್ರದೇಶ ಬ್ರಿಟಿಷರ ವಶವಾಗಿ ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಯಿತು. ಅನಂತರ ಮದ್ರಾಸು ಪ್ರಾಂತ್ಯದಲ್ಲೂ ತರುವಾಯ ಮದ್ರಾಸು ರಾಜ್ಯದಲ್ಲೂ ಮುಂದುವರಿದ ಕೊಂಗುಮಂಡಲ ಈಗ ತಮಿಳುನಾಡಿನ ಭಾಗವಾಗಿದೆ. (ಜಿ.ಆರ್.ಆರ್.)

**ಕೊಂಟಿ ಮೀನು :** ಸಿಪ್ರಿನಿಡೆ ಕುಟುಂಬಕ್ಕೆ ಸೇರಿದ ಆಸ್ಟಿಯೋಕೈಲಸ್ ಎಂಬ ಶಾಸ್ತ್ರೀಯ ಒಂದು ಜಾತಿಯ ಸಿಹಿನೀರು ಮೀನು. ಕೊಂಟಿ, ಕೀಲಿ ಕೊಂಟಿ, ಬಗರಿ ಕೊಂಟಿ ಮುಂತಾದ ಸ್ಥಳೀಯ ಹೆಸರುಗಳೂ ಇದಕ್ಕಿವೆ. ಪಶ್ಚಿಮ ಏಷ್ಯಾ ಮತ್ತು ಭಾರತದ ಸಿಂಧ್ ಪ್ರದೇಶ, ದಕ್ಷಿಣ ಭಾರತದಲ್ಲಿ ಪಶ್ಚಿಮ ಘಟ್ಟಗಳು ದಕ್ಷಿಣ ಕನ್ನಡ ಹಾಗೂ ನೀಲಗಿರಿ ಬೆಟ್ಟಗಳ ಝರಿಗಳಲ್ಲಿ, ಇದರ ವ್ಯಾಪ್ತಿಯಿದೆ. ಕರ್ನಾಟಕದಲ್ಲಿ ಆಸ್ಟಿಯೋಕೈಲಸ್ ನ್ಯಾಶಿಯೈ, ಅ. ಥಾಮಸಿಯೈ, ಮತ್ತು ಆ. ಬ್ರವಿಡಾರ್ಸಾಲಿಸ್ ಎಂಬ ಮೂರು ಪ್ರಭೇದಗಳಿವೆ. ಇದು ಸುಮಾರು 15.24 ಸೆಂ.ಮೀ. – 17.78 ಸೆಂ.ಮೀ ಉದ್ದಕ್ಕೆ ಬೆಳೆಯುತ್ತವೆ. ಕೊಳವೆಯಂತಹ ದೇಹ, ಮೂತಿಯ ಕೆಳಬಾಗದಲ್ಲಿರುವ ಬಾಯಿ, ಕೆಳದವಡೆಯ ಒಳಭಾಗದಲ್ಲಿರುವ ಕೊಂಬಿನ ಪದರ, ಕೆಳದುಟಿ ಇಲ್ಲದಿರುವುದು, ಗಂಟಲಿನ (ಫ್ಯಾರಿಂಜಿಯಲ್) ಹಲ್ಲುಗಳು, ಮೀಸೆಗಳು (ಬಾರ್ಬಲ್)ಗಳಿರುವುದಿಲ್ಲ, ಯಾವುದೇ ನಿಯಮಬದ್ಧ ಜೋಡಣೆಯನ್ನು ತೋರದ ಸಣ್ಣ ಹುರುಪೆಗಳು, ಕಣ್ಣಿನಿಂದ ಬಾಲದರೆಕ್ಕೆವರೆಗೆ ಇರುವ ಕಪ್ಪು ಬಣ್ಣದ ಪಟ್ಟಿ, – ಇವು ಕೊಂಟಿ ಮೀನಿನ ಲಕ್ಷಣಗಳು. ಇವುಗಳ ಸಂತಾನೋತ್ಪತ್ತಿಯ ಕಾಲ ಜೂನ್ – ಜುಲೈ ತಿಂಗಳುಗಳು. (ಬಿ.ಎಚ್.ಎಂ.)

**ಕೊಂಡ :** ಮಧ್ಯ ದ್ರಾವಿಡ ಭಾಷೆಗಳಲ್ಲೊಂದು. ಕುಬಿ ಎಂದೂ ಇದನ್ನು ಕರೆವುದಿದೆ. ಇದು ಆಂಧ್ರಪ್ರದೇಶದ ವಿಶಾಖಪಟ್ಟಣ ಜಿಲ್ಲೆಯಿಂದ ಸು. 115 ಕಿ.ಮೀ. ವಾಯವ್ಯಕ್ಕಿರುವ ಅರಕು ಕಣಿವೆಯ ನಿವಾಸಿಗಳ ವ್ಯವಹಾರದಲ್ಲಿದೆ. ಈ ಭಾಷೆಯನ್ನು ಮಾತನಾಡುವವರ ಸಂಖ್ಯೆ ಸುಮಾರು 30,000 ಈ ಜನರನ್ನು ಕೊಂಡ ದೊರಲು, ಕೊಂಡಕಾಪುಲು, ಓಜಲು ಮತ್ತು ಪಾಂಡವರ್ರೈತುಲು ಎಂಬುದಾಗಿ ಕರೆಯುತ್ತಾರೆ. ಈ ಭಾಷೆಯಲ್ಲಿರುವ ವರ್ಣಗಳು ಇವು:

| | |
|---|---|
| ಸ್ವರಗಳು 10 : | ಅ, ಆ, ಇ, ಈ, ಉ, ಊ, ಎ, ಏ, ಒ, ಓ |
| ವ್ಯಂಜನಗಳು 23: | ಕ, ?, ಗ, ಜ, ಸ, ಜ಼(z), ಟ, ಡ, ಣ |
| | ತ, ದ, ನ, ಪ, ಬ, ಮ, ಯ, ರ, ಱ, ಱ಼ (R), ಲ, |
| | ಥ, ವ, ಹ |

ಈ ಭಾಷೆಯಲ್ಲಿರುವ ವಿಶಿಷ್ಟ ವರ್ಣಗಳು ಕಂಠಮೂಲೀಯ ಸ್ಪರ್ಶ=/?/, ಪರುಷ, ಸರಳ ಱ=/R/(ಱ಼/r/ಱ); ಈಷತ್ ಸ್ಪೃಷ್ಟ ಥಕಾರ=/r/. ಇತರ ಎಲ್ಲ ದ್ರಾವಿಡ ಭಾಷೆಗಳಲ್ಲಿ ನಷ್ಟವಾಗಿ ಹೋದ ರ ಱ ಭೇದ ಈ ಭಾಷೆಯಲ್ಲಿ ಇನ್ನೂ ಉಳಿದುಕೊಂಡಿದೆ. ಈ ಭಾಷೆಯಲ್ಲಿ ಲಿಂಗ ಎರಡು ವಿಧ : ಮಹತ್ ಮತ್ತು ಅಮಹತ್. ಅಮಹತ್ ಬಹುವಚನ–ಕ್/–ಕು–ಅಥವಾ–/ಜ್–ಜು ಪ್ರತ್ಯಯ ಸೇರಿಸುವುದರಿಂದ ಏರ್ಪಡುತ್ತದೆ.

ಪಂಡು (ಏಕವಚನ), ಪಟ್ಕು (ಬಹುವಚನ)

ಕುಪ್ಪ ( " ), ಕುಪ್ಪೆಜ್ ( " )

ಮಹತ್ ಬಹುವಚನ–ರ್ ಪ್ರತ್ಯಯ ಸೇರಿಸುವುದರಿಂದ ಏರ್ಪಡುತ್ತದೆ.

ಅನ=ಅಣ್ಣ, ಅನಾರ್=ಅಣ್ಣಂದಿರು

ಸರ್ವನಾಮಗಳು: ಉತ್ತಮಪುರುಷ (ಏಕವಚನ)–ನಾನ್

" (ಬಹುವಚನ)–ಮಾಪ್

" (ಬಹುವಚನ)–ಮಾಟ್

ಮಧ್ಯಮಪುರುಷ (ಏ.ವ.) – ನೀನ್

" (ಬ.ವ.) –ಮೀರ್

ಪ್ರಥಮಪುರುಷ (ಮಹತ್ ಏ.ವ.)–ವಾನ್ಲು=ಅವನು

" (ಮಹತ್ ಬ.ವ.)–ವಾರ್=ಅವರು

" (ಅಮಹತ್ ಏ.ವ.)–ಅದಿ=ಅವಳು, ಅದು

" (ಅಮಹತ್ ಬ.ವ.)–ಅವಿ=ಅವು.

ಸಂಖ್ಯಾವಾಚಕಗಳು: ಉನ್ರಿ, ರುಂಡಿ, ಮೂನ್ಜಿ, ನಾಲ್ಗಿ, ಉಳಿದುವೆಲ್ಲ ತೆಲುಗಿನಂತೆ.

ನಾಮವಿಭಕ್ತಿಗಳು: ವಿಭಕ್ತಿ ಪ್ರತ್ಯಯಗಳ ಮುಂದೆ ಏಕವಚನದಲ್ಲಿ ತಿ, ದಿ, ಇ, ಪ್ರತ್ಯಯಗಳನ್ನು ಸೇರಿಸುತ್ತಾರೆ

ಬಹುವಚನದಲ್ಲಿ ಇ, ಅ ಪ್ರತ್ಯಯಗಳನ್ನು ಸೇರಿಸುತ್ತಾರೆ.

ದ್ವಿತೀಯೆ–ಚತುರ್ಥಿ: ಜ್ (ಏ.ವ.) ಮರನ್–ದಿ–ಜ್=ಮರವನ್ನು, ಮರಕ್ಕೆ

ತೃತೀಯೆ–ಪಂಚಮಿ: –ಅಂಡ್ (ಏ.ವ.) ಮರತ್–ಅಂಡ್, ಮರದಿಂದ.

ಷಷ್ಠಿ: ತಿ, ದಿ (ಏ.ವ.) ಮರ–ತಿ,=ಮರದ

ಸಪ್ತಮಿ: ಕ, ತು, ತೊ (ಏ.ವ) ಮರ–ಕ=ಮರದಲ್ಲಿ

ಬಹುವಚನದಲ್ಲಿ ಎಲ್ಲ ಕಡೆಗಳಲ್ಲಿಯೂ–ಜ್ ಸೇರಿಸುತ್ತಾರೆ

ಮರ–ಕ–ಜ್=ಮರಗಳಲ್ಲಿ.

ಕ್ರಿಯಸ್ವರೂಪಗಳು: ಈ ಭಾಷೆಯಲ್ಲಿ ಭೂತ, ವರ್ತಮಾನ ಮತ್ತು ತದ್ಧರ್ಮ (ಹ್ಯಾಬಿಚ್ಯುಯಲ್) ಕ್ರಿಯಾಸ್ವರೂಪಗಳು ಏರ್ಪಡುತ್ತವೆ. ಭೂತಕಾಲದಲ್ಲಿ ವ್ಯತಿರೇಕ ರೂಪಗಳು (ಪಾಸ್ಟ್ ನೆಗೆಟಿವ್ ಫಾರಂಸ್) ಪ್ರತ್ಯಯ ಸೇರಿಸುವುದರಿಂದ ಏರ್ಪಡುತ್ತವೆ.

ತಿನ್–ಅನ್=ಅವನು ತಿನ್ನುವನು

ತಿಜ್ಞನ್=ಅವನು ತಿಂದನು

ತಿನ್–ಜಿನ್–ಅನ್=ಅವನು ತಿನ್ನುತ್ತಾನೆ

ತಿನ್–?–ಎನ್=ಅವನು ತಿನ್ನುವುದಿಲ್ಲ

ತಿನ್–?–ಎತ್–ಅನ್=ಅವನು ತಿನ್ನಲಿಲ್ಲ

ತಿನ್ಜ್=ತಿಂದು

ತಿಜ್ಞೆಜ್=ತಿಂದರೆ, ತಿನ್ಚೆಜ್=ತಿನ್ನುವುದು–ಇತ್ಯಾದಿ (ಬಿಎಚ್.ಕೆ.)

**ಕೊಂಡದೊರ :** ನೋಡಿ – ಆದಿವಾಸಿಗಳು

**ಕೊಂಡನ್ ಮೀನು :** ಬೈಗೆ (ಸಾರ್ಡಿನ್) ಜಾತಿಗೆ ಸೇರಿದ ಒಂದು ಬಗೆಯ ಎಲುಬು ಮೀನು. ಇದರ ವೈಜ್ಞಾನಿಕ ಹೆಸರು ದಸುಮಿಯೆರ ಹ್ಯಾಸೆಲ್ಟೈಯೈ. ಭಾರತದ ಕೋರಮಂಡಲ ತೀರದಿಂದ ಮಲಯದ್ವೀಪ ಸಮುದಾಯದ ವರೆಗೂ ಮತ್ತು ಆಸ್ಟ್ರೇಲಿಯ, ಜಪಾನ್, ಈಸ್ಟ್ ಇಂಡೀಸ್ ಹಾಗೂ ಚೀನದ ಸಮುದ್ರ ತೀರಗಳಲ್ಲಿ ಹೆಚ್ಚಾಗಿ ವಾಸಿಸುತ್ತದೆ. ಇದರ ಉದ್ದ ಸುಮಾರು 20.32 ಸೆಂ.ಮೀ. ತಲೆಯ ಉದ್ದವೇ 11.43 ಸೆಂ.ಮೀ. – 12.70 ಸೆಂ.ಮೀ. ಗಳಷ್ಟಿರುತ್ತದೆ. ದೇಹ ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾಗಿದೆ. ತಲೆಯ ಮೇಲ್ಭಾಗವನ್ನು ಬಿಟ್ಟು ದೇಹದ ಮೇಲೆಲ್ಲ ಅಸ್ಥಿರವಾದ ಹುರುಪೆಗಳಿವೆ. ಬಾಯಿ ಅಗಲ. ಮೇಲಿನ ಹಾಗೂ ಕೆಳಗಿನ ದವಡೆಗಳು ಮುಂಭಾಗದಲ್ಲಿ ಒಂದೇ ಸಮನಾಗಿ ಚಾಚಿರಬಹುದು, ಇಲ್ಲವೆ ಕೆಳದವಡೆ ಸ್ವಲ್ಪ ಮುಂದಕ್ಕೆ ಚಾಚಿಕೊಂಡಿರಬಹುದು. ಹಲ್ಲುಗಳು ದವಡೆಗಳಲ್ಲಿ ಮಾತ್ರವಲ್ಲದೆ ಪ್ಯಲಟೈನ್ ಮತ್ತು ಟೆರಿಗಾಯಿಡ್ ಮೂಳೆಗಳಲ್ಲೂ ಇರುತ್ತವೆ. ಬೆನ್ನಿನ ಮೇಲಿರುವ ಒಂದೇ ಒಂದು ಈಜುರೆಕ್ಕೆ ಕಣ್ಣಿನ ಕೊನೆಯ ಭಾಗದಿಂದ ಬಾಲದವರೆಗೂ ವಿಸ್ತರಿಸಿದೆ. ಉದರದ ಕೆಳಭಾಗ ಹಾಗೂ ಎದೆಯ ಭಾಗಗಳಲ್ಲಿಯೂ ಈಜು ರೆಕ್ಕೆಗಳಿವೆ. ಕೊಂಡನ್ ಮೀನು ಕಿವಿರುಗಳ ಸಹಾಯದಿಂದ ಉಸಿರಾಡುತ್ತದೆ. ಕಿವಿರುಗಳ ಜೊತೆಗೆ ಸರಳವಾದ ದೊಡ್ಡದಾದ ಗಾಳಿಯ ಚೀಲವೂ ಇದೆ. ಈ ಚೀಲ ಸಾಮಾನ್ಯವಾಗಿ ಮೂತ್ರಪಿಂಡಗಳ ತಳ ಭಾಗಕ್ಕೆ ಅಂಟಿಕೊಂಡು ಅನ್ನಕೋಶದ ಮೇಲ್ಭಾಗದಲ್ಲಿ ಬೆನ್ನೆಲುಬಿಗೆ ತಾಗಿಕೊಂಡಂತಿದೆ. ಈ ಚೀಲದಲ್ಲಿ ಆಕ್ಸಿಜನ್, ನೈಟ್ರೋಜನ್ ಮತ್ತು ಸ್ವಲ್ಪ ಕಾರ್ಬಾನಿಕ್ ಆಮ್ಲ ಇವೆ. ಚೀಲದ ಸಣ್ಣದಾದ ಮುಂಭಾಗ ತಲೆಯ ಹಿಂಭಾಗದ ಬೇಸಿಆಕ್ಸಿಪೀಟಲ್ ಮೂಳೆಯಲ್ಲಿರುವ ನಾಳವನ್ನು ಪ್ರವೇಶಿಸಿ ಎರಡು ಕವಲುಗಳಾಗಿ ಒಡೆದು ಅನಂತರ ಮೂಳೆಯ ಒಳಗಡೆ ಉಬ್ಬಿಕೊಂಡು ಮತ್ತೆ ಎರಡಾಗಿ ಒಡೆದು, ದುಂಡಗೆ ಉಬ್ಬಿದ ಚೀಲಗಳಾಗಿ ರೂಪುಗೊಂಡಿದೆ. ಈ ಚೀಲಗಳಿಗೂ ಒಳಕಿವಿಯಲ್ಲಿರುವ ಯುಟ್ರಿಕಲ್ ಎಂಬ ಅಂಗಕ್ಕೂ ಒಂದು ನಾಳದ ಮೂಲಕ ಸಂಪರ್ಕ ಕಲ್ಪಿತವಾಗಿದೆ. ದೇಹದ ಎರಡು ಕಡೆಯ ಯುಟ್ರಿಕಲ್‌ಗಳು ಒಂದು ಅಡ್ಡನಾಳದಿಂದ ಪರಸ್ಪರ ಸೇರಿಕೊಂಡಿವೆ.

ಇವು ಶಬ್ದವನ್ನು ಗ್ರಹಿಸಲೂ ಅದನ್ನು ಒಳಕಿವಿಗೆ ಕಳುಹಿಸಲೂ ಸಹಾಯ ಮಾಡುತ್ತವೆ. ಸಾಧಾರಣವಾಗಿ ಎಲ್ಲ ಮೀನುಗಳಿಗಿರುವ ಪಾರ್ಶ್ವರೇಖಾ ಜ್ಞಾನೇಂದ್ರಿಯಗಳು ಈ ಮೀನಿನಲ್ಲಿ ಇಲ್ಲ.

ಕೊಂಡನ್ ಮೀನು ವರ್ಣರಂಜಿತವಾಗಿದೆ. ದೇಹದ ಮೇಲ್ಭಾಗದ ಬಣ್ಣ ನೀಲಿ ಮಿಶ್ರಿತ ಹಸಿರು, ಉದರಭಾಗ ಬಿಳಿ, ಕಿವಿರುಗಳ ಮುಚ್ಚಳದ ಮೇಲಿನ ಅಂಚು ಮತ್ತು ಹಿಂಭಾಗ ತಿಳಿನೀಲಿ, ಬಾಲ ನೀಲಿಹಸಿರು ಮಿಶ್ರಿತ ಬಂಗಾರದ ಬಣ್ಣ, ಕಣ್ಣು, ಬೆನ್ನಿನ ಈಜುರೆಕ್ಕೆ ಹಳದಿಮಿಶ್ರಿತ ಹಸುರು, ಉಳಿದ ಈಜು ರೆಕ್ಕೆಗಳು ಬಿಳಿ–ಇದರಿಂದಾಗಿ ಕೊಂಡನ್ ಮೀನು ಸುಂದರವಾಗಿ ಕಾಣುವುದಲ್ಲದೆ ಇದಕ್ಕೆ ಕಾಮನ ಬಿಲ್ಲಿನ ಬೈಗೆ ಮೀನು ಎಂಬ ಹೆಸರು ಬಂದಿದೆ. ಇದರ ಆಹಾರ ಸಮುದ್ರದಲ್ಲಿ ತೇಲುವ ಪ್ರಾಣಿ ಹಾಗೂ ಸಸ್ಯಗಳು. ವರ್ಷದ ಕೆಲವು ತಿಂಗಳಲ್ಲಿ ಮಾತ್ರ ಈ ಮೀನು ಹಿಂಡುಹಿಂಡಾಗಿ ಕಾಣಿಸಿಕೊಳ್ಳುತ್ತದೆ. ಇದು ಒಳ್ಳೆಯ ಆಹಾರಮೀನೆಂದು ಹೆಸರಾಗಿದೆ. (ಕೆ.ಪಿ.ಆರ್.)

**ಕೊಂಡ ಮಾವು :** ಕಾಮಿಫೋರ ಕಾಡೇಟ ಎಂಬ ಶಾಸ್ತ್ರೀಯ ಹೆಸರಿನ ಒಂದು ಸಣ್ಣಗಾತ್ರದ ಮರ. ಬೆಟ್ಟಮಾವು ಪರ್ಯಾಯನಾಮ. ಗುಗ್ಗುಳಮರದ (ಕಾಮಿಫೋರ ಮುಕುಲ್ ಪ್ರಭೇದ) ಹತ್ತಿರ ಸಂಬಂಧಿ. ಬರ್ಸರೇಸೀ ಕುಟುಂಬಕ್ಕೆ ಸೇರಿದೆ. ಏಷ್ಯ ಮತ್ತು ಆಫ್ರಿಕಗಳ ಮೂಲ ವಾಸಿಯಾದ ಇದು ದಕ್ಷಿಣಭಾರತದಲ್ಲೆಲ್ಲ ಬಲುಸಾಮಾನ್ಯ. ಶೀಘ್ರವಾಗಿ ಮತ್ತು ಯಾವ ಬಗೆಯ ಆರೈಕೆಯ ಅಗತ್ಯವಿಲ್ಲದೆ ಬೆಳೆಯುವುದರಿಂದ, ಇದನ್ನು ತೋಟಗಳಲ್ಲಿ, ರಸ್ತೆಗಳ ಬದಿಗಳಲ್ಲಿ, ಬೇಲಿಗಳಲ್ಲಿ



ಬೆಳೆಸುವುದಿದೆ. ಕಾಂಡತುಂಡುಗಳನ್ನು ನೆಟ್ಟು ಇದನ್ನು ಬೆಳೆಸುವುದೇ ವಾಡಿಕೆಯಲ್ಲಿರುವ ಕ್ರಮ. ಕೊಂಡಮಾವಿನ ತೊಗಟೆ ಬಹಳ ನವುರಾಗಿದ್ದು ಕಾಗದವನ್ನು ಹೋಲುತ್ತದೆ. ಎಲೆ ಹಾಗೂ ಮರದ ತೊಗಟೆಗಳಿಗೆ ಮಾವಿನಹಣ್ಣಿನ ವಾಸನೆಯಿದೆ. ಎಲೆಗಳು ಸಂಯುಕ್ತ ಮಾದರಿಯವು; ಒಂದೊಂದರಲ್ಲೂ 2–5 ಜೋಡಿ ಕಿರು ಎಲೆಗಳಿವೆ. ಎಲೆಗಳ ಜೋಡಣೆ ಪರ್ಯಾಯ ಮಾದರಿಯದು. ಹೂಗಳೂ ಸಂಕೀರ್ಣ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಒಂದೊಂದು ಹೂವಿನಲ್ಲೂ ಸಾಮಾನ್ಯವಾಗಿ 4 ಪುಷ್ಪಪತ್ರಗಳು, 4 ದಳಗಳು, 8–10 ಕೇಸರಗಳು, ಉಚ್ಚಸ್ಥಾನದ ಅಂಡಾಶಯ ಇವೆ. ಅಂಡಕೋಶದಲ್ಲಿ 2–4 ಕೋಣೆಗಳಿದ್ದು ಒಂದೊಂದರಲ್ಲೂ 2 ಅಂಡಕಗಳಿವೆ. ಫಲ ಅಷ್ಟಿಫಲ ಮಾದರಿಯದು. ಗಾತ್ರ ಬಟಾಣಿ ಕಾಳಿನಷ್ಟು. ಇದರಿಂದ ಉಪ್ಪಿನಕಾಯಿ ಹಾಕುತ್ತಾರೆ. ಈ ಮರದಿಂದ ಗೋಂದು ಮಿಶ್ರಿತ ರೆಸಿನ್ ಪಡೆಯಬಹುದಾಗಿದ್ದು ಅದನ್ನು ಧೂಪದಂತೆ ಬಳಸುವುದುಂಟು. (ಬಿ.ಸಿ.)

**ಕೊಂಡ ಹಾಯುವುದು :** ಹರಕೆ ಹೊತ್ತವರು ಗೊತ್ತಾದ ದಿನ ನಿಗಿನಿಗಿ ಉರಿಯುತ್ತಿರುವ ಕೆಂಡದ ಕೊಂಡದಲ್ಲಿ ಬರಿಗಾಲಿನಲ್ಲಿ ನಡೆದು ಹೋಗುವ ಒಂದು ಕಟ್ಟಳೆಗೆ ಈ ಹೆಸರಿದೆ.

ಜನಪದ ಜೀವನದಲ್ಲಿ ಇಂದಿಗೂ ಕಂಡುಬರುವ ವಿಧ್ಯುಕ್ತ ಆಚರಣೆಗಳಲ್ಲಿ ಇದೂ ಒಂದು. ಸಾಮಾನ್ಯವಾಗಿ ಹೆಣ್ಣುದೇವತೆಗಳ ಗುಡಿಗಳ ಎದುರು ಇಂಥ ಕೊಂಡಗಳಿರುತ್ತವೆ. ಅದರಲ್ಲೂ ಸಾತ್ತ್ವಿಕ ದೇವತೆಗಳಿಗಿಂತ ಉಗ್ರ ಅಥವಾ ತಾಮಸ ದೇವತೆಗಳ ಗುಡಿಗಳೆದುರೇ ಇವು ಇರುವುದು ಹೆಚ್ಚು. ಉದಾಹರಣೆಗೆ, ಪಟ್ಟಲದಮ್ಮ, ಕಳಗುಚ್ಚಮ್ಮ, ಮುಳಕಟ್ಟಮ್ಮ, ಮದ್ದೂರಮ್ಮ, ಕೊಲ್ಲಾಪುರದಮ್ಮ, ಹಳೆವೂರು ಕಾಳಿಕಾದೇವಿ ಮುಂತಾದ ಗ್ರಾಮದೇವತೆಗಳ ಪರಿಷೆಯ ವೇಳೆಯಲ್ಲಿ ಕೊಂಡ ಹಾಯುವ ಕಾರ್ಯಕ್ರಮ ಇದ್ದೇ ಇರುತ್ತದೆ. ಲಕ್ಷ್ಮೀ ಮುಂತಾದ ಸಾತ್ತ್ವಿಕ ದೇವತೆಗಳ ಗುಡಿಗಳಲ್ಲಾಗಲೀ ಗಂಡು ದೇವತೆಗಳ ಗುಡಿಗಳಲ್ಲಾಗಲೀ ಈ ಕಟ್ಟಳೆ ನಡೆಯುವುದಿಲ್ಲ.

ಕೊಂಡ ಹಾಯುವುದು ನಮಗೆ ಸೀತೆಯ ಅಗ್ನಿಪ್ರವೇಶ ಪ್ರಸಂಗವನ್ನು ನೆನಪಿಗೆ ತರುತ್ತದೆ. ನಾನೇನು ತಪ್ಪು ಮಾಡಿಲ್ಲ, ಅನ್ಯಾಯ ಮಾಡಿಲ್ಲ, ನಾನು

ಮೈಮೇಲೆ ಭೂತಬಂದವನೊಬ್ಬ ಕೊಂಡ ಹಾಯುತ್ತಿರುವುದು, ಕೇರಳ

ಪರಿಶುದ್ಧ ಎಂಬುದನ್ನು ದೇವರೆದುರು ಇಂಥ ಅಗ್ನಿದಿವ್ಯದ ಮುಖಾಂತರ ಜನಪದ ಸಾಬೀತು ಪಡಿಸಿಕೊಳ್ಳುವಂತೆ ಕಾಣುತ್ತದೆ. ಸಾಮಾನ್ಯವಾಗಿ ದೇವರಿಗೆ ಅಥವಾ ಜನಗಳಿಗೆ ಎರಡು ಬಗೆದವರು ಕೊಂಡ ಹಾಯುವಾಗ ಮೂರ್ಛೆ ಬೀಳುತ್ತಾರೆ ಎಂಬ ನಂಬಿಕೆಯುಂಟು. ಆದರೆ ಅಂಥವರ ಅಪರಾಧಪ್ರಜ್ಞೆಯೇ ಕೊಂಡ ಹಾಯುವಾಗ ಮೂರ್ಛೆ ಬೀಳುವಂತೆ ಮಾಡಬಹುದು–ಎಂಬುದು ವೈಜ್ಞಾನಿಕ ಸತ್ಯ. ಅದು ಶುದ್ಧ ಮನೋವಿಜ್ಞಾನಕ್ಕೆ ಸಂಬಂಧಪಟ್ಟದ್ದು; ಆದರೂ ಇಂಥ ಅನೇಕ ನಂಬಿಕೆಗಳು ಜನಗಳಲ್ಲಿ ಉಂಟು.

ಹಗಲು ಹೊತ್ತು ಕೊಂಡ ಹಾಯುವ ಹಾಗೂ ಇರುಳು ಹೊತ್ತು ಕೊಂಡ ಹಾಯುವ ಪದ್ಧತಿಗಳುಂಟಾಗಿ ಕೊಂಡಗಳನ್ನು ಹಗಲು ಕೊಂಡ ಮತ್ತು ಇರುಳು ಕೊಂಡ ಎಂದು ವಿಂಗಡಿಸುವ ವಾಡಿಕೆ ಉಂಟು.

ಸಾಮಾನ್ಯವಾಗಿ ಕೊಂಡಗಳು ಒಂದು ಮಾರಗಲ ಇರುತ್ತವೆ. ಆದರೆ ಅವುಗಳ ಉದ್ದದಲ್ಲಿ ವ್ಯತ್ಯಾಸವುಂಟು. ಕೆಲವು ಒಂದೆರಡು ಮಾರುದ್ದದವಾದರೆ ಇನ್ನು ಕೆಲವು ಹತ್ತಾರು ಮಾರುದ್ದದವಾಗಿರುತ್ತವೆ. ಆಯಾ ದೇವತೆಗಳ ಶಕ್ತಿಸಾಮರ್ಥ್ಯಗಳ ಪ್ರತೀಕವಾಗಿ.

ಜಾತ್ರೆಗಳ ಸಂದರ್ಭದಲ್ಲಿ ಕೊಂಡದ ಸಿದ್ಧತೆಗಾಗಿ ಮರದ ದಿಮ್ಮಿಗಳನ್ನು ಗಾಡಿಗಟ್ಟಲೆ ತಂದು ದೇವಸ್ಥಾನದ ಎದುರಿರುವ ಕೆಂಡದ ಮೇಲೆ ಅಡ್ಡಡ್ಡಲಾಗಿ ಪೇರಿಸುತ್ತಾರೆ. ಯಾವ ಹೊತ್ತಿಗೆ ಕೊಂಡ ಹಾಯಬೇಕೋ ಆ ಹೊತ್ತಿಗೆ ದಿಮ್ಮಿಗಳೆಲ್ಲ ಹತ್ತಿ ಉರಿದು ಕೆಂಡವಾಗುವಂತೆ ಮೊದಲೇ ದೇವರ ಪೂಜಾರಿ, ಊರಿನ ಪಣ ಮೊದಲೆಯ ನೇತೃತ್ವದಲ್ಲಿ ಪೂಜೆ ಪುನಸ್ಕಾರಗಳೊಂದಿಗೆ ಕಟ್ಟಿಗೆಗೆ ಬೆಂಕಿ ಕೊಟ್ಟಿರುತ್ತಾನೆ.

ಜ್ವಾಲೆ ಆಕಾಶ ಮುಟ್ಟುವಂತಿರುತ್ತದೆ. ದಿಮ್ಮಿಗಳೆಲ್ಲ ಉರಿದು ಕೆಂಡವಾದ ಮೇಲೆ ಕಂದಕದ ಉದ್ದಕ್ಕೂ ಕೆಂಡವನ್ನು ಸಮನಾಗಿ ಹರಡುತ್ತಾರೆ. ಸಾಮಾನ್ಯವಾಗಿ ಕೊಂಡದಲ್ಲಿ ತೊಡೆಮಟ್ಟ ಅಥವಾ ಸೊಂಟಮಟ್ಟ ಕೆಂಡವಿರುತ್ತದೆ.

ಕೊಂಡ ಹಾಯುವ ಮೊದಲು ಜನ ಮಡೆಗಡಿಗೆಯನ್ನು (ಮಡಿಯ ನೀರುಗಡಿಗೆ) ಹೊತ್ತುಕೊಂಡ ಪೂಜಾರಿಯನ್ನು ಅವನ ಮನೆಯಿಂದ ನಡೆಮಡಿಯ ಮೇಲೆ ವಾದ್ಯ ಸಮೇತ ಕರೆತರುತ್ತಾರೆ. ಬಾಯಿಬೀಗ ಚುಚ್ಚಿಸಿಕೊಂಡು ಕೊಂಡ ಹಾಯುತ್ತೇವೆ ಎಂದು ಹರಸಿಕೊಂಡ ಭಕ್ತಾದಿಗಳೂ ನಡೆಮಡಿಯ ಮೇಲೆ ಪೂಜಾರಿಯ ಹಿಂದೆಯೇ ಹೊರಟುಬರುತ್ತಾರೆ. ಅಂದು ಅವರೆಲ್ಲ ಕಟ್ ಉಪವಾಸ ಮಾಡಿರುತ್ತಾರೆ; ಹನಿ ನೀರನ್ನೂ ನಾಲಗೆಗೆ ಸೋಕಿಸಿರುವುದಿಲ್ಲ. ಮೊದಲು ಮಡೆ ಹೊತ್ತ ಪೂಜಾರಿ ಕೊಂಡ ಹಾಯುತ್ತಾನೆ; ಅವನ ಹಿಂದೆ ಬಾಯಿ ಬೀಗದವರು, ಆರತಿಯನ್ನು ಹೊತ್ತ ಹೆಂಗಸರು ಹಾಗೂ ಉಳಿದವರು ನಡೆಯುತ್ತಾರೆ. ಹಾಗೆ ಹಾದುಹೋಗುವಾಗ ಬೆಂಕಿಯಿಂದಾಗಿ ಯಾರ ಕಾಲಲ್ಲೂ ಬೊಬ್ಬೆ ಏಳುವುದಿಲ್ಲ, ಬೆಂಕಿ ಯಾರನ್ನೂ ಸುಡುವುದಿಲ್ಲ. ಕೊಂಡದ ಕೆಂಡ ಅವರ ಪಾಲಿಗೆ ಕೆಂಡಮಲ್ಲಿಗೆ ಹೂವು ಇದ್ದಂತಾಗುತ್ತದೆ. ಈ ಪವಾಡ ಇನ್ನೂ ಬಿಡಿಸಲಾಗದ ಒಗಟಾಗಿಯೇ ಉಳಿದಿದೆ.

ಇಂಥದೇ ಆಚರಣೆ ದಕ್ಷಿಣ ಕನ್ನಡ, ಕೊಡಗು, ಉತ್ತರ ಕೇರಳ ಪ್ರದೇಶಗಳಲ್ಲಿ ಒತ್ತೆಕೋಲ ಎಂಬ ಹೆಸರಿನಲ್ಲಿ ರೂಢಿಯಲ್ಲಿದೆ ಎಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ದೇವರ ಸಾಕ್ಷಿಯಲ್ಲಿ ತಾವು ಪರಿಶುದ್ಧರೆಂಬುದನ್ನು, ದೈವದ್ರೋಹ ಅಥವಾ ಜನದ್ರೋಹ ಮಾಡಿಲ್ಲವೆಂಬುದನ್ನು ರುಜುವಾತು ಪಡಿಸಿಕೊಳ್ಳಲು ಜನಪದ ಬೆಳಸಿಕೊಂಡು ಹಾಗೂ ಉಳಿಸಿಕೊಂಡು ಬಂದಿರುವ ಪದ್ಧತಿ ಇದು ಎಂದು ಹೇಳಬಹುದು. **(ಎಸ್‌ಯು.)**

**ಕೊಂಡಾನೆ :** ಮಹಾರಾಷ್ಟ್ರದ ಕೊಲಾಬಾ ಜಿಲ್ಲೆಯಲ್ಲಿ ಕಾರ್ಜಕ್‌ನಿಂದ ಪಶ್ಚಿಮಕ್ಕೆ 6.4 ಕಿಮೀ. ಮತ್ತು ಕಾರ್ಲೆಯಿಂದ ನೈಋತ್ಯಕ್ಕೆ 16 ಕಿಮೀ. ದೂರದಲ್ಲಿರುವ ಬೌದ್ಧರಿಗೆ ಪವಿತ್ರ ಒಂದು ಸ್ಥಳ. ಇದರ ಬಳಿಯ ಗುಡ್ಡದ ಕಡಿದಾದ ಮುಖದಲ್ಲಿ ಪ್ರಸಕ್ತಶಕಪೂರ್ವದ ಅಂತ್ಯಕಾಲದಲ್ಲಿ ಕೊರೆಯಲಾದ ಬೌದ್ಧ ಚೈತ್ಯ ಮತ್ತು ವಿಹಾರಗಳಿವೆ. ಚೈತ್ಯದ ಕಟ್ಟಡ 20 ಮೀ. ಉದ್ದ, 8 ಮೀ. ಅಗಲ ಮತ್ತು 8.5 ಮೀ. ಎತ್ತರವಿದೆ. ಹಜಾರದಲ್ಲಿ 30 ಕಂಬಗಳಿದ್ದು, ಅವುಗಳ ತಳಭಾಗ ನಶಿಸಿಹೋಗಿದೆ. ಮೇಲ್ಭಾಗದಲ್ಲಿ ಚೌಕಾಕಾರವಾಗಿದ್ದು ಚಾವಣಿಯಿಂದ 0.45 ಮೀ. ಕೆಳಗೆ ಅಷ್ಟಮುಖಗಳನ್ನು ಉಳ್ಳದ್ದಾಗಿರುವುದು ಕಂಬದ ವೈಶಿಷ್ಟ್ಯ. ಮುಖ್ಯದ್ವಾರದ ಬಳಿಯ ಎರಡು ಕಂಬಗಳ ಮಧ್ಯೆ ಮರದ ಹಲಗೆಗಳಿಂದ ಗೋಡೆಯನ್ನು ನಿರ್ಮಿಸಿ, ಅದರಲ್ಲಿ ಬಾಗಿಲನ್ನು ಇಡಲಾಗಿತ್ತು. ಈಗ ಆ ಭಾಗ ಪೂರ್ಣವಾಗಿ ಹಾಳಾಗಿದೆ. ಕೆಲವು ಕಂಬಗಳು ಒಳಪಾರ್ಶ್ವಕ್ಕೆ ಬಾಗಿವೆ. ಮರದ ಕಟ್ಟಡಗಳಲ್ಲಿ ಚಾವಣಿಯನ್ನು ಭದ್ರವಾಗಿ ಎತ್ತಿ ಹಿಡಿಯಲು ಈ ರೀತಿಯ ಬಾಗಿದ ಕಂಬಗಳನ್ನು ನಿಲ್ಲಿಸುತ್ತಿದ್ದರು. ಆದ್ದರಿಂದ ದಾರುಶಿಲ್ಪದಿಂದ ಕಲ್ಲಿನ ವಾಸ್ತು ನಿರ್ಮಾಣಕ್ಕೆ ಬದಲಾಗುತ್ತಿದ್ದ ಆದಿಕಾಲಕ್ಕೆ ಗುಹಾಚೈತ್ಯಾಲಯ ಸೇರುತ್ತದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕಮಾನಿನಾಕಾರದ ಚಾವಣಿಗೆ ಮರದ ತೊಲೆಗಳಿದ್ದವು. ಈಗ ಅವು ನಶಿಸಿಹೋಗಿವೆ.

ಚೈತ್ಯಾಲಯದ ಈಶಾನ್ಯಕ್ಕೆ ಒಂದಂತಸ್ತಿನ ವಿಹಾರದ ಕಟ್ಟಡವಿದೆ. ವಿಹಾರದ ಮೊಗಸಾಲೆ 5.45 ಮೀ. ಉದ್ದ ಮತ್ತು 1.75 ಮೀ. ಅಗಲವಾಗಿದೆ. ಒಳಗಿನ ಹಜಾರ 8.8 ಮೀ. ಉದ್ದ, 7 ಮೀ. ಅಗಲ ಮತ್ತು 2.5 ಮೀ. ಎತ್ತರವಾಗಿದೆ. ಹೀನಯಾನ ಬೌದ್ಧಪಂಥದ ವಿಹಾರಗಳ ಪೈಕಿ ಇಲ್ಲಿ ಮಾತ್ರ ಹಜಾರದಲ್ಲಿ ಕಂಬಗಳು ಕಂಡುಬರುತ್ತವೆ. ಇದರ ಚಾವಣಿ ಕಟ್ಟಡದಲ್ಲಿ ಮಂದಿರಗಳಲ್ಲಿರುವಂತೆ 5.75 X 2.4 ಮೀ. ತೊಲೆಗಳಿವೆ. ಇದರ ಮೂರು ಪಾರ್ಶ್ವಗಳಲ್ಲಿ ವಾಸದ ಕೋಣೆಗಳನ್ನು ನಿರ್ಮಿಸಲಾಗಿದೆ.

ಈ ಚೈತ್ಯ ಮತ್ತು ವಿಹಾರಗಳಲ್ಲಿ ಮರದ ಕಟ್ಟಡಗಳಲ್ಲಿರುವಂತೆ ವಿವಿಧ ರೀತಿಯ ಅಲಂಕಾರಗಳಿರುವುದರಿಂದ ಆ ಮೊದಲಿನ ಮರದ ಕಟ್ಟಡಗಳ ಮಾದರಿಯಲ್ಲಿ ಇವನ್ನು ನಿರ್ಮಿಸಲಾಗಿದೆಯೆಂದು ಅಭಿಪ್ರಾಯಪಡಲಾಗಿದೆ. ಸುಮಾರು ಇದೇ ಕಾಲಕ್ಕೆ ಸೇರಿದ ಮತ್ತೊಂದು ಬೌದ್ಧಕ್ಷೇತ್ರವಾದ ಭಾಜಾದ ಚೈತ್ಯ ವಿಹಾರಗಳಂತೆ ಕೊಂಡಾನೆಯ ನಿರ್ಮಾಣಗಳೂ ಪಶ್ಚಿಮ ಭಾರತದ ಬೌದ್ಧ ನಿರ್ಮಾಣಗಳಲ್ಲಿ ಮೊದಲ ಹಂತಕ್ಕೆ ಸೇರುತ್ತವೆ. **(ಜಿ.ಎಚ್.; ಎ.ಎಂ.ಎ.)**

**ಕೊಂಡಾಪುರ :** ಹೈದರಾಬಾದಿಗೆ ವಾಯವ್ಯದಲ್ಲಿ ಸು. 70 ಕಿಮೀ. ದೂರದಲ್ಲಿರುವ ಪ್ರಾಕ್ತನ ನೆಲೆ. ಇಲ್ಲಿಯ ಭೂಶೋಧನೆಯಲ್ಲಿ ದೊರಕಿರುವ ಅವಶೇಷಗಳನ್ನು ಸ್ಥಳೀಯ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಇದು ಆಂಧ್ರ–ಸಾತವಾಹನರ ಕಾಲದಲ್ಲಿ ಅತಿ ಮುಖ್ಯ ಪಟ್ಟಣವಾಗಿದ್ದುದಲ್ಲದೆ ಶಿಲಾಯುಗದ ಸೂಕ್ಷ್ಮ ಶಿಲಾಯುಧಗಳೂ ಹೊಸ ಶಿಲಾಯುಗದ ಕಲ್ಲಿನ ಕೊಡಲಿಗಳೂ ಇಲ್ಲಿ ದೊರಕಿವೆ.

ಇಟ್ಟಿಗೆಯಿಂದ ಕಟ್ಟಿದ ವಾಸದ ಮನೆಗಳು, ಗಜಪೃಷ್ಠಾಕಾರದ ಚೈತ್ಯಶಾಲೆಗಳು, ವರ್ತುಲಾಕಾರದ ಸ್ತೂಪಗಳೂ–ಇವು ಇಲ್ಲಿ ಕಂಡುಬಂದಿರುವ ಕಟ್ಟಡಗಳಲ್ಲಿ ಮುಖ್ಯವಾದವು. ಮಣ್ಣಿನಿಂದ ಮಾಡಿದ ಜಾಡಿಗಳೂ ಮುಚ್ಚಳಗಳೂ ಧೂಪಾರತಿಗಳೂ ದೊರಕಿವೆ. ಇಲ್ಲಿಯ ಮಣ್ಣಿನ ಪಾತ್ರೆಗಳ ಮೇಲೆ ಬೌದ್ಧ ಸಂಕೇತಗಳಾದ ತ್ರಿರತ್ನ ಮತ್ತು ಧರ್ಮಚಕ್ರಗಳನ್ನು ಕೊರೆಯಲಾಗಿದೆ. ಕೆಲವು ಮಡಕೆಗಳ ಮೇಲೆ ಬ್ರಾಹ್ಮೀ ಲಿಪಿಯ ಬರವಣಿಗೆಯೂ ಕಾಣಬರುತ್ತದೆ. ಮಡಕೆಗಳನ್ನು ಕೆಂಪು ಮತ್ತು ಬಿಳಿಯ ಜೇಡಿಮಣ್ಣಿನಿಂದ ಮಾಡಿ ಅವುಗಳ ಮೇಲೆ ಬಣ್ಣ ಬಳಿದಿದೆ. ಜೇಡಿಮಣ್ಣು, ತಾಮ್ರ, ಮತ್ತು ಶಂಖದಿಂದ ಮಾಡಿದ ಬಳೆಗಳೂ ಸ್ಫಟಿಕ, ನೀಲಿಕಲ್ಲು ಮತ್ತು ಚಿನ್ನದಿಂದ ಮಾಡಿದ ಮಣಿಗಳೂ ಮಣ್ಣಿನಿಂದ ಮಾಡಿದ ಮಾನವ ಬೊಂಬೆಗಳೂ ಇಲ್ಲಿ ಸಿಕ್ಕಿರುವ ಇತರ ಅವಶೇಷಗಳು.

ಇಲ್ಲಿ 2,000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಚಿನ್ನ, ಬೆಳ್ಳಿ, ತಾಮ್ರ ಮತ್ತು ಸೀಸದ ನಾಣ್ಯಗಳು ದೊರೆತಿವೆ. ಅವುಗಳಲ್ಲಿ ರೋಮನ್ ಚಕ್ರವರ್ತಿ ಆಗಸ್ಟಸ್‌ನ ಚಿನ್ನದ ನಾಣ್ಯಗಳೂ ಸಾತವಾಹನ ರಾಜರಾದ ಗೌತಮೀ ಪುತ್ರ, ವಾಸಿಷ್ಠೀಪುತ್ರ, ಶ್ರೀಪುಲಮಾವಿ, ಯಜ್ಞಶ್ರೀ, ಶಾತಕರ್ಣಿ ಇವರ ಬ್ರಾಹ್ಮೀಲಿಪಿಯ ಸೀಸ–ತಾಮ್ರಮಿಶ್ರವಾದ ಲೋಹದ ನಾಣ್ಯಗಳೂ ಮುಖ್ಯವಾದವು. (ಎ.ವಿ.ಎನ್)

**ಕೊಂತಿ ಪೂಜೆ :** ಕರ್ನಾಟಕದ ವಿಶಿಷ್ಟ ಜಾನಪದ ಸಂಪ್ರದಾಯಗಳಲ್ಲಿ ಒಂದಾದ ಕೊಂತಿಪೂಜೆಯ ನಾಯಿಕೆ ಮಹಾಭಾರತದ ಕುಂತಿದೇವಿ. ಕುಂತಿ ಎಂಬ ಪದ ಆಡುಮಾತಿನಲ್ಲಿ ಕೊಂತಿ ಆಗಿದೆ. ಕೊಂತಿ ಆದರ್ಶ ಸತಿ, ಆದರ್ಶ ಮಾತೆ, ಮಿಗಿಲಾಗಿ ಸತ್ಸಂತಾನ ಪಡೆದ ಆದರ್ಶ ನಾರೀಮಣಿ. ತಮಗೂ ಅವಳಂತೆಯೇ ಸತ್ಸಂತಾನ, ತನ್ಮೂಲಕ ಸತ್ಕೀರ್ತಿ ಲಭ್ಯವಾಗಲೆಂಬ ಸದಭಿಲಾಷೆಯಿಂದ ಹಳ್ಳಿಯ ಜನ ಕೊಂತಿಯನ್ನು ತಮ್ಮ ಇಷ್ಟದೇವತೆಯೆಂದು ಪರಿಗಣಿಸಿ ಪೂಜಿಸುತ್ತ ಬಂದಿದ್ದಾರೆ. ಪ್ರತಿವರ್ಷದ ಮೊದಲ ಕಾರ್ತಿಕದ ಹುಣ್ಣಿಮೆ ರಾತ್ರಿಗಳಲ್ಲಿ ಹದಿನಾರು ದಿವಸಗಳವರೆಗೆ ಅವ್ಯಾಹತವಾಗಿ ಈ ಪೂಜೆ ನಡೆಯುತ್ತದೆ.

ಮೈನೆರೆದ ಕನ್ಯೆಯನ್ನು ಗುಡ್ಲು ಕೂರಿಸುವ ಶಾಸ್ತ್ರ, ಮದುವೆಯಾದ ಹೆಣ್ಣಿನ ಒಸಗೆ ಶಾಸ್ತ್ರ–ಇವುಗಳಿಗೂ ಕೊಂತಿಪೂಜೆಗೂ ಸಾಂಕೇತಿಕ ಸಂಬಂಧವಿರುವಂತಿದೆ. ಕೊಂತಿಪೂಜೆಯ ಮೂಲೋದ್ದೇಶ ಸತ್ ಸಂತಾನಾಭಿಲಾಷೆ ಎಂಬ ಮಾತಿಗೆ ಇದೂ ಪುಷ್ಟಿಕೊಡುತ್ತದೆ.

ರಾತ್ರಿ ಮನೆಗೆಲಸಗಳಾದ ಮೇಲೆ ಹೆಂಗಸರು ಒಂದೆಡೆ ಸೇರಿ ಗೋವಿನ ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸಿದ ಪಡಸಾಲೆಯ ಪಶ್ಚಿಮ ದಿಕ್ಕಿನ ಗೋಡೆಯ ಮೇಲೆ, ನೆಲದಿಂದ ಒಂದು ಮೊಳ ಮೇಲಕ್ಕಾದಂತೆ, ಹಸಿ ಎರೆಮಣ್ಣಿನಿಂದ ಅಥವಾ ಗೋವಿನ ಸೆಗಣಿಯಿಂದ 'ಗ' ಹೀಗೆ ಕುದುರೆಗೊರಸಿನ ಆಕೃತಿಯ ಒಂದು ಪ್ರಾಕಾರವನ್ನು ಬಿಡಿಸುವರು. ಇದೇ ಋತುಮತಿಯಾದ ಕೊಂತಿಯನ್ನು ಕೂರಿಸುವ ಗುಡಿಸಲು. ಪ್ರಾಕಾರದ ಒಳಗಡೆ ಎರೆಮಣ್ಣಿನಿಂದ ತಿದ್ದಿ ಮಾಡಿದ ಸುಂದರವಾದ ಸ್ತ್ರೀವಿಗ್ರಹವನ್ನು ಇಡುವರು. ಇದೇ ಕೊಂತಿ. ಪೂಜಾರ್ಹ ವಿಗ್ರಹವನ್ನು ಹುಚ್ಚೆಳ್ಳು ಹೂ ಮುಂತಾದ ಹೂಪತ್ರೆಗಳಿಂದ ಅಲಂಕರಿಸುವರು. ಪೂಜಾ ಸಾಮಗ್ರಿಗಳನ್ನೂ ತಿಂಡಿ ಪದಾರ್ಥಗಳನ್ನೂ ಮುಂದೆ ಇಟ್ಟು, ಎಲ್ಲರೂ ಕುಳಿತು ಭಕ್ತಿಯಿಂದ ಕೊಂತಿಯನ್ನು ಪೂಜಿಸುವರು.

ಪೂಜೆಯ ಸಮಯದಲ್ಲಿ ತಪ್ಪದೆ ಕೊಂತಿಪದಗಳನ್ನು ಹಾಡುವರು. ಇವು ಜನಪದ ಮಹಿಳೆಯರ ಸಾಂಘಿಕ ಸೃಷ್ಟಿಯಾಗಿದ್ದು ತುಳುನಾಡಿನ ಪಾಡ್ದನಗಳಂತೆ, ದಕ್ಷಿಣ ಕನ್ನಡದ ದಕ್ಕೆಬಲಿಯ ಹಾಡುಗಳಂತೆ, ಬಯಲುನಾಡಿನ ತಿಂಗಳಮಾವನ ಹಾಡುಗಳಂತೆ ವಿಶಿಷ್ಟ ಗೀತೆಗಳಾಗಿವೆ. ಬೆಡಗಿನ ಭಾವಗೀತೆಗಳ ಬೆರಗಿನ ಧಾಟಿಗಳಿಗೆ ಇವು ಪ್ರಸಿದ್ಧವಾಗಿವೆ.

ಒನ್ಕೊಂತಿ ಪೂಜೆ, ಒನ್ನೆಲ್ವ ತಾರ್ಸಿ
ಇಂಬಿಗೆ ಹೋದಣ್ಣ, ಏನೇನು ತಂದಾನು
ಇಂಬಾಳೆ ತಂದಾನು, ಮುಂಬಾಳೆ ತಂದಾನು
ಇಷ್ಟೆಲ್ಲನೂ ತಂದೋನೂss
ನಮ್ಕೊಂತಿಗೆ ಹೂವೇಕೆ ತರಲಿಲ್ಲವೋss

ಇದು ಕುಂತಿಪೂಜೆಯ ನಾಂದಿಹಾಡು. ಕೊಂತಿಪದಗಳಲ್ಲಿ ಕೊಂತಿಯನ್ನು ಪ್ರಧಾನವಾಗಿಟ್ಟುಕೊಂಡು ಪಾಂಡವರಿಗೆ ಸಂಬಂಧಿಸಿದಂತೆ ಹುಟ್ಟಿರುವ ಗೀತೆಗಳೇ ಹೆಚ್ಚಾಗಿವೆ. 'ಮಲ್ಲಿಗೆ ಹೂವ ತಂದ ಕೊಂತಮ್ಮ, ಚಿಲಕ ಬಟ್ಟಲ ನೀಡೋ'; 'ಶಿವರಾಯ ದಂಡೆತ್ತಿ ಕೇಳಿಬಂದಾ, ಸಾಲುಮಲ್ಲಿಗೆ ಕೊಂತಮ್ಮನ ಮಡಿಗೆರಡು ಮುತ್ತಿನ ಕುಚ್ಚು'; 'ತಣ್ಣೀರು ತನುವಾಯಿತೋ, ಕೊಂತಮ್ಮ ತಾವರೆ ಕೊಳವಾಯಿತೋ'; 'ಒಕುಳೋಕುಳಿಯೋ ಬೆಟ್ಟದ ಮೇಲಿರುವ ನೆಲ್ಲಿಮರಕ್ಕೆ ಚೆಲ್ಲಿದರೋಕುಳಿಯೋ'; 'ಅಚ್ಚೆಚ್ಚಳ ಬೆಳುದಿಂಗಲೋ ಕೊಂತಮ್ಮನಿಗೆ ನಿತ್ಯವೈಭೋಗವೋ'; 'ದುಂಡಿ ನಿನಗಂಡ ದಂಡೆತ್ತಿ ಹೋಗುತಾನೆ, ಹೋಗೋಗೆ ಕೊಂತೀ ಗಂಡಾನ ಮನೆಗೆ'–ಈ ಮೊದಲಾದ ಪಲ್ಲವಿಗಳನ್ನೊಳಗೊಂಡ ಕೊಂತಿಪದಗಳು ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತವೆ. ಕೊಂತಿಪೂಜೆಯ ಮುಕ್ತಾಯದ ಗೀತೆ ಹೀಗಿದೆ:

ಬಾಳೆಯ ತೋಟದಲಿ ಬಾಲನಾಡುತ ಬಂದ
ಬಾಲಸ್ತ್ರೀ ಶಿವನ ಪಾದಕ್ಕೆ ಎತ್ತಿದಳಾರತಿಯ
ಶ್ರೀ ದ್ರೌಪದೀ ದೇವಿ ಬೆಳಗಿದಳಾರತಿಯ.

ಮನೆಯಲ್ಲಿ ಪ್ರಾರಂಭವಾಗುವ ಕೊಂತಿಪೂಜೆ ಬಾಳಿಗೆ ಸಂಕೇತವೋ ಎನ್ನುವಂತೆ ಬಯಲಿನಲ್ಲಿ ಮುಕ್ತಾಯವಾಗುತ್ತದೆ. ಇದು ಹಳ್ಳಿಗರಷ್ಟೇ ಸರಳವಾದ ಒಂದು ಕಟ್ಟಳೆ; ಅರ್ಥವತ್ತಾದುದು.

ಕೊಂತಿಪೂಜೆ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬಂದರೂ ಕರ್ನಾಟಕದ ಬಹುಭಾಗಗಳಲ್ಲಿ ಆಚರಣೆಯಲ್ಲಿದೆ. (ಡಿ.ಎಲ್.)

**ಕೊಂಬಿನ ಸಾಮಾನುಗಳು :** ಎಮ್ಮೆ, ದನ ಮುಂತಾದ ಪ್ರಾಣಿಗಳ ಕೊಂಬಿನಿಂದ ನಾಜೂಕಾದ ಸಾಮಾನುಗಳನ್ನು ತಯಾರಿಸುವ ಕಲೆ ಭಾರತದಲ್ಲಿ ಬಹಳ ಹಿಂದಿನಿಂದ ಕೈಕಸಬಾಗಿ ಉಳಿದುಬಂದಿದೆ. ಮುಖ್ಯವಾಗಿ ಗುಜರಾತ್, ರಾಜಸ್ಥಾನ,

ಕೊಂಬಿನಿಂದ ತಯಾರಿಸಿದ ಜಾನಪದ ವಸ್ತುಗಳು: ಬಾರುಕೋಲು ಕಡ್ಡಿ, ಸಿಂಗನಾದ, ನಶ್ಯದ ಡಬ್ಬಿಗಳು ಮತ್ತು ಓಕಳಿ ಹಂಡೆ

ಬಿಹಾರ್, ಒರಿಸ್ಸ ಹಾಗೂ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕುಮಟ, ತಾಲ್ಲೂಕುಗಳಲ್ಲಿಯೂ ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿಯೂ ಈ ಕಸಬಿನವರನ್ನು ಇಂದಿಗೂ ಕಾಣಬಹುದು.

ಮೊದಲು ಡೊಂಬಾರಿ ಜನ ಈ ಸಾಮಾನುಗಳನ್ನು ತಯಾರಿಸುತ್ತಿದ್ದರಾದರೂ ಅವರು ತಯಾರಿಸುತ್ತಿದ್ದ ಸಾಮಾನುಗಳು ಅಷ್ಟು ನಯವಾಗಿಯೂ ಕಲಾತ್ಮಕವಾಗಿಯೂ



ಕೊಂಬಿನಿಂದ ತಯಾರಿಸಿದ ಆಧುನಿಕ ಕಲಾವಸ್ತುಗಳು

ಇರುತ್ತಿರಲಿಲ್ಲ. ಈ ಕಲೆಯನ್ನು ಉತ್ತಮಪಡಿಸಬೇಕೆಂಬ ಉದ್ದೇಶದಿಂದ ಹನುಮಂತರಾವ್ ಕೌಜಲಗಿಯವರು ಡೊಂಬಾರಿ ಜನರನ್ನು ಕಲೆ ಹಾಕಿ ಅವರಿಗೆ ಪ್ರೋತ್ಸಾಹ ಕೊಟ್ಟಿದ್ದುಂಟು. ಆದರೆ ಅಲೆಮಾರಿಗಳಾದ ಡೊಂಬಾರಿಗಳು ಒಂದು ಕಡೆ ನೆಲೆನಿಲ್ಲದೆ ಹೊರಟು ಹೋದರಾದ ಕಾರಣ ಕೌಜಲಗಿಯವರ ಉದ್ದೇಶ ನೆರವೇರಲಿಲ್ಲ. ಅನಂತರ ಸು.1938ನೆಯ ವರ್ಷ ಕೌಜಲಗಿಯವರೂ ಎಸ್. ಕೆ. ಕಲ್ಲಾಪುರ ಅವರೂ ಒಂದಾಗಿ ಹೊನ್ನಾವರದಲ್ಲಿ ಒಂದು ತರಬೇತು ಸಂಸ್ಥೆಯನ್ನು ಸ್ಥಾಪಿಸಿದರು. ಇಲ್ಲಿ ತರಬೇತಿ ಕೊಡಲು ನುರಿತ

ಶಿಕ್ಷಕರನ್ನು ಬಿಹಾರ, ಒರಿಸ್ಸಗಳಿಂದ ಕರೆಸಲಾಗಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಗೂ 15 ರೂಪಾಯಿ ವಿದ್ಯಾರ್ಥಿವೇತನ ಸಿಗುತ್ತಿತ್ತು. ಈ ಸಂಸ್ಥೆ ಮೂರು ವರ್ಷಗಳವರೆಗೆ ತರಬೇತು ಕೊಟ್ಟು ಸುಮಾರು 30–40 ಜನರನ್ನು ತಯಾರಿಸಿತು. ಇವರೆಲ್ಲರೂ ಈ ಕಸಬನ್ನು ಮಾಡುವವರ ಮನೆತನದವರಾಗಿರಲಿಲ್ಲ ಎಂಬುದು ಗಮನಾರ್ಹವಾದ ವಿಷಯ.

ಮುಂದೆ 1942ರಲ್ಲಿ ತರಬೇತು ಪಡೆದ 15 ಜನ ಒಂದಾಗಿ ಒಂದು ಸಹಕಾರಿ ಸಂಘವನ್ನು ಸ್ಥಾಪಿಸಿದರು. ಆರು ವರ್ಷಗಳಲ್ಲಿ ಸದಸ್ಯರ ಸಂಖ್ಯೆ 70, 80ರಷ್ಟಾಯಿತು. ಸಂಘ ತಯಾರಿಸಿದ ಸಾಮಾನುಗಳನ್ನು ಮುಂಬಯಿಯ ಗೃಹಕೈಗಾರಿಕೆ ಮತ್ತು ಚಿಕ್ಕ ಉದ್ದಿಮೆ ಸಾಮಾನುಗಳ ಮಾರಾಟ ಮಳಿಗೆಯವರು ಕೊಂಡು ಮಾರುತ್ತಿದ್ದರು. ಆಗ ಈ ಸಾಮಾನುಗಳಿಗೆ ಪರದೇಶದ ಜನರ ಬೇಡಿಕೆ ಬಹಳಷ್ಟಿತ್ತು. ಕ್ರಮೇಣ ಆ ಬೇಡಿಕೆ ಕಡಿಮೆಯಾದಂತೆ ಕೊಂಬಿನ ಸಾಮಾನಿನ ತಯಾರಿಕೆ ಹಿಂದೆ ಬಿತ್ತು. ಹಿಂದೆ 10 ರಿಂದ 20 ರೂಪಾಯಿ ಸಂಪಾದನೆ ಪಡೆಯುತ್ತಿದ್ದವರು ಇಂದು ದಿನಕ್ಕೆ 2 ಅಥವಾ 3 ರೂಪಾಯಿ ಸಂಪಾದಿಸಿದರೆ ಹೆಚ್ಚು. ಈಚೆಗೆ ಈ ಕಸಬಿನ ಜನ ದೊಡ್ಡ ಊರುಗಳ ರಸ್ತೆ ಅಂಚಿನಲ್ಲಿ ಕೂತು ನಾಜೂಕಾದ ಕೆಲಸ ಮಾಡಿ ಹೊಟ್ಟೆ ಹೊರೆಯುತ್ತಿದ್ದಾರೆ.

ಕೊಂಬಿನಿಂದ ತಯಾರಿಸಿದ ಆಧುನಿಕ ಕಲಾವಸ್ತುಗಳು ಕುಶಲ ಕಲೆಗಳಿಗೆ ಸರ್ಕಾರ ಈಗ ನೀಡುತ್ತಿರುವ ಪ್ರೋತ್ಸಾಹದಿಂದ ಈ ಕಲೆ ಅಭಿವೃದ್ಧಿ ಹೊಂದಬಹುದೆಂಬ

ಭರವಸೆ ಕಂಡುಬರುತ್ತಿದೆ. ವಸ್ತುಗಳ ತಯಾರಿಕೆಗೆ ಮೊದಲು ಕೊಂಬುಗಳನ್ನು ಸ್ವಚ್ಛಪಡಿಸಿ ಹದವಮಾಡಬೇಕಾಗುತ್ತದೆ. ಬಾಚಣಿಕೆ ಮಾಡಬೇಕಾದಾಗ ಪೊಳ್ಳಾದ ಕೊಂಬಿನ ಒಳಭಾಗವನ್ನು ಕಾಯಿಸಿ ಅದನ್ನು ಅಗಲ ಮಾಡಿ ಒತ್ತಡದ ಉಪಕರಣದಲ್ಲಿ 15–20 ನಿಮಿಷಗಳವರೆಗೆ ಇಡುತ್ತಾರೆ. ಅನಂತರ ನೀರಿಗೆ ಹಾಕಿ ಸ್ವಚ್ಛ ಮಾಡುತ್ತಾರೆ. ಆಮೇಲೆ ಅಳತೆಗೆ ತಕ್ಕಂತೆ ಕತ್ತರಿಸಿಕೊಂಡು ಮೇಲ್ಮೈಯನ್ನು ತಿಕ್ಕಿ, ಬಾಚಣಿಕೆಗಳನ್ನು ಮಾಡುತ್ತಾರೆ. ಸಿದ್ಧವಾದ ಬಾಚಣಿಕೆಗಳನ್ನು ಉಪ್ಪು ಕಾಗದದಿಂದ ಉಜ್ಜಿ ಶೃಂಗಕಾಂತ ಮರದ ಎಲೆ ಮತ್ತು ಕರಿಸೀಮೆಸುಣ್ಣದ ಪುಡಿಯಿಂದ ತಿಕ್ಕಿ ನಯ ಮಾಡುತ್ತಾರೆ. ಕೊಂಬಿನಿಂದಾದ ವಸ್ತುಗಳಲ್ಲಿ ಬಾಚಣಿಕೆಗಳು, ಹೂದಾನಿಗಳು, ಪ್ರಾಣಿಪಕ್ಷಿ ನಮೂನೆಗಳು ಬಹು ಜನಪ್ರಿಯವೆನಿಸಿವೆ. ಗೋಡೆಯ ಅಲಂಕಾರಕ್ಕಾಗಿ ಸಿದ್ಧಪಡಿಸಿದ ಜಿಂಕೆ ಮತ್ತು ಕಾಡೆಮ್ಮೆಯ ಕೊಂಬುಗಳ ಮಾರಾಟವೂ ಹಿಂದಿನಿಂದ ಲಾಭದಾಯಕವೆನಿಸಿದೆ. (ಪಿ.ಪಿ.ಯು.)

**ಕೊಂಬು :** ಅಂಗ್ಯುಲೇಟ ಗುಂಪಿಗೆ ಸೇರಿದ ಅನೇಕ ಸ್ತನಿಗಳ ತಲೆಯ ಮೇಲೆ ಬೆಳೆಯುವ ಗಡುಸಾದ ರಚನೆ (ಹಾರ್ನ್). ಕೆರಾಟಿನ್ ಎಂಬ ರಾಸಾಯನಿಕವಸ್ತುವಿನಿಂದ ರಚಿತವಾಗಿದೆ. ಸಾಮಾನ್ಯವಾಗಿ ಜೋಡಿಗಳಲ್ಲೇ ರೂಪುಗೊಂಡಿರುವ ಇದು ರೂಪರಚನೆಯಲ್ಲಿಯೂ ಬೆಳವಣಿಗೆಯ ಕ್ರಮದಲ್ಲೂ ವೈವಿಧ್ಯವನ್ನು ಪ್ರದರ್ಶಿಸುತ್ತದೆ. ಅತ್ಯಂತ ಸರಳಮಾದರಿಯ ಕೊಂಬು ಜಿರಾಫೆಗಳಲ್ಲಿ ಕಂಡುಬರುತ್ತದೆ. ಕಿವಿಗಳ ನಡುವೆ ನೆತ್ತಿಯ ಎರಡು ಪಕ್ಕಗಳಲ್ಲಿ ಸಣ್ಣ ಗುಬುಟುಗಳಂತೆ ಮೂಡಿರುವ ರಚನೆಗಳೇ ಜಿರಾಫೆಯ ಕೊಂಬುಗಳು. ಬೆಳವಣಿಗೆಯ ಪ್ರಾರಂಭದಲ್ಲಿ ಮೃದ್ವಸ್ಥಿಯಿಂದ ಕೂಡಿದ ಇವು ಪ್ರಾಣಿ ಬೆಳೆದಂತೆಲ್ಲ ನಿಧಾನವಾಗಿ ಮೂಳೆಯ ಕೇಂದ್ರಭಾಗವನ್ನೂ ಚರ್ಮ ಹಾಗೂ ಕೂದಲಿನ ಹೊರಭಾಗವನ್ನೂ ಒಳಗೊಳ್ಳುತ್ತವೆ. ಜಿರಾಫೆಯ ಜೀವಮಾನವಿಡೀ ಕೊಂಬುಗಳು ಬೆಳೆಯುತ್ತವಾದರೂ ಬೆಳವಣಿಗೆಯ ಗತಿ ಬಹಳ ನಿಧಾನ. ಗಂಡು ಮತ್ತು ಹೆಣ್ಣು ಜಿರಾಫೆಗಳೆರಡರಲ್ಲೂ ಕೊಂಬುಂಟು. ಅಲ್ಲದೆ ಜಿರಾಫೆಯಲ್ಲಿ ಕೊಂಬುಗಳ ಮುಂಭಾಗದಲ್ಲಿ ಹೆಚ್ಚು ಕಡಿಮೆ ಕಣ್ಣುಗಳ ನಡುವೆ ನೆತ್ತಿಯ ಮೇಲೆ ಮೂರನೆಯ ಕೊಂಬೂ ಇರುತ್ತದೆ. ಹಸು, ಎಮ್ಮೆ ಮುಂತಾದ ಪ್ರಾಣಿಗಳಲ್ಲಿ ಹಣೆಯ ಮೂಳೆಯ ಮೇಲ್ಭಾಗದಲ್ಲಿ ಆಚೀಚೆ ಒಂದೊಂದು ಕೊಂಬು ಹೊರಡುತ್ತದೆ. ನೇರವಾಗಿ ಇಲ್ಲವೆ ಕೊಂಚಬಾಗಿಕೊಂಡು ಕವಲೊಡೆಯದೆ ಬೆಳೆಯುವ ಇದು ಟೊಳ್ಳಾಗಿದೆ. ಈ ಪ್ರಾಣಿಗಳಲ್ಲಿ ಗಂಡು ಹಾಗೂ ಹೆಣ್ಣುಗಳೆರಡರಲ್ಲೂ ಕೊಂಬು ಇದೆ. ಆಡು, ಕುರಿ ಮುಂತಾದ ಪ್ರಾಣಿಗಳಲ್ಲಿ ಕೊಂಬು ಸುರುಳಿಯಂತೆ ಸುತ್ತಿಕೊಂಡಿದೆ. ಜಿಂಕೆಗಳಲ್ಲಿ ಸಾಮಾನ್ಯವಾಗಿ ಗಂಡಿನಲ್ಲಿ ಮಾತ್ರ ಕೊಂಬಿರುತ್ತದೆ. ಈ ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಕೊಂಬು ಕವಲೊಡೆದಿದ್ದು ಒಳಗೆಲ್ಲ ಗಟ್ಟಿಯಾಗಿರುತ್ತದೆ. ಕೊಂಬು ಎಳೆಯದಿದ್ದಾಗ ಅದರ ಮೇಲೆಲ್ಲ ಮಖಮಲ್ಲಿನಂಥ ಮೃದುವಾದ ಚರ್ಮದ ಹೊದಿಕೆಯಿರುತ್ತದೆ. ಕಾಲಕ್ರಮೇಣ ಈ ಹೊದಿಕೆ ಸುಲಿದುಹೋಗಿ ಬರಿಯ ಗಟ್ಟಿಯಾದ ಒಳಭಾಗ ಮಾತ್ರ ಉಳಿಯುತ್ತದೆ. ಜಿಂಕೆಗಳಲ್ಲಿ ಕೊಂಬುಗಳು ವರ್ಷ ವರ್ಷವೂ ಉದುರಿಹೋಗಿ ಮತ್ತೆ ಹುಟ್ಟಿಕೊಳ್ಳುತ್ತವೆ.

ಬಾಚಣಿಕೆ, ಗುಂಡಿ, ಕೊಡೆಗಳ ಹಿಡಿಗಳು, ಸಣ್ಣ ಡಬ್ಬಿಗಳು ಮುಂತಾದ ಉಪಯುಕ್ತ ವಸ್ತುಗಳನ್ನು ತಯಾರುಮಾಡಲು ಕೊಂಬನ್ನು ಬಳಸುತ್ತಾರೆ. (ಬಿ.ಟಿಎಚ್.)

**ಕೊಂಬು ತೆಗೆತ:** ಕೆಲವು ಉದ್ದೇಶಗಳಿಗಾಗಿ ದನಗಳು ಮತ್ತಿತರ ಪ್ರಾಣಿಗಳಲ್ಲಿ ಕೊಂಬುಗಳನ್ನು ಬೆಳೆಯಲು ಬಿಡದಿರುವುದು ಅಥವಾ ಇದ್ದುದನ್ನು ಕಿತ್ತು ಹಾಕುವುದು (ಡಿಹಾರ್ನಿಂಗ್). ಬೆಳೆದ ದನಗಳಲ್ಲಿ ಕೊಂಬುಗಳನ್ನು ತುಂಡರಿಸಿ ತೆಗೆದು ಹಾಕಬಹುದು. ಕರು ಹುಟ್ಟಿದ ವಾರದೊಳಗಾಗಿ, ಅಥವಾ 10 ದಿವಸಗಳೊಳಗಾಗಿ ಕೊಂಬುಗಳನ್ನು ಬುಡಮಟ್ಟ ಕೀಳುವುದರಿಂದ ಮುಂದೆ ಅವು ಬೆಳೆಯುವುದನ್ನು ತಪ್ಪಿಸಬಹುದು. ಕಾಡುದನಗಳಿಗೆ ಆತ್ಮರಕ್ಷಣೆಗಾಗಿ ಕೊಂಬುಗಳು ಬೇಕಾಗುತ್ತವೆ. ಕರಾವಿನ ಸಾಕುಪ್ರಾಣಿಗಳಿಗೆ ಅವು ಬೇಕಿಲ್ಲ. ಅಲ್ಲದೆ ಕೊಂಬಿನಲ್ಲಿ ಏಡಿಗಂತಿಯಂಥ ತೀವ್ರ ವ್ರಣವಾದಾಗ ಕೊಂಬನ್ನು ಅವಶ್ಯ ತೆಗೆಯಬೇಕಾಗುತ್ತದೆ. ತುಂಟದನಗಳು ಮತ್ತು ಕೊಂಬಿನ ರೋಗವಿರುವ ದನಗಳು ಇತರ ದನಗಳನ್ನು ಇರಿದು ಗಾಯಗೊಳಿಸುವುದನ್ನು ತಡೆಯಲು ಈ ಕಟಾವು ಅಗತ್ಯವೆನಿಸುತ್ತದೆ.

ಕರಾವಿನ ದನಗಳ ಕೊಂಬುತೆಗೆತದ ಯೋಗ್ಯವಿಧಾನ ಮೊಳೆಚಿವುಟಿಕೆ (ಡಿಬಡ್ಡಿಂಗ್). ಕೊಂಬಿನ ಮೊಳಕೆಗೆ ಕಾಸ್ಟಿಕ್ ರಾಸಾಯನಿಕಗಳನ್ನು ಹಚ್ಚಿ ಅಥವಾ ಕೊಂಬಿನ ಮೊಳಕೆಯ ಸುತ್ತಲೂ ಬರೆಗುಳವನ್ನು ಲೇಪಿಸಿ ಅಥವಾ ಕೊಂಬಿನ ಮೊಳಕೆಯಲ್ಲಿ ಮೊಳೆವ ಪದರವನ್ನು ಶಸ್ತ್ರಕ್ರಿಯೆಯಿಂದ ಸುಲಿದು ಮೊಳೆ ಚಿವುಟಬಹುದು. ಕರುವಿಗೆ ಹಾಲು ಬಿಡಿಸುವ ಮುಂಚೆ ಇಲ್ಲವೇ ಕೊಂಬು ಒಂದಂಗುಲ ಬೆಳೆವುದರೊಳಗಾಗಿ ಕೊಂಬುಗತ್ತರಿಯಿಂದ ಅದನ್ನು ಕತ್ತರಿಸಿ ಹಾಕಬಹುದು. (ಕೆ.ವಿ.ಎಂ.)

**ಕೋಆಟಿ :** ಕಾರ್ನಿವೊರ ಗಣದ ಪ್ರೋಸಿಯಾನಿಡೀ ಕುಟುಂಬಕ್ಕೆ ಸೇರಿದ ನಾಸುವ ಎಂಬ ಶಾಸ್ತ್ರೀಯ ಹೆಸರಿನ ಒಂದು ಜಾತಿಯ ಸ್ತನಿ. ಇದರಲ್ಲಿ ನಾ. ನಾಸುವ (ಉಂಗುರಬಾಲದ ಕೋಆಟಿ), ನಾ.ನೆಲ್ಸೋನಿ ಮತ್ತು ನಾ. ನಾರಿಕ ಎಂಬ ಮೂರು ಪ್ರಭೇದಗಳಿವೆ. ಇವುಗಳಲ್ಲಿ ಮೊದಲನೆಯದು ದಕ್ಷಿಣ ಅಮೆರಿಕದಲ್ಲೂ ಎರಡನೆಯದು ಮೆಕ್ಸಿಕೋ ಖಾರಿಯಲ್ಲಿಯ ಕೊಸೂಮೆಲ್ ದ್ವೀಪಗಳಲ್ಲೂ ಮೂರನೆಯದು ದಕ್ಷಿಣ ಅಮೆರಿಕ ಮತ್ತು ಉತ್ತರ ಅಮೆರಿಕದ ದಕ್ಷಿಣ ಭಾಗದಲ್ಲೂ ಕಾಣಬರುತ್ತದೆ (ಎಸ್.ಎನ್.ಕೆಯು.)

ಕೋಆಟಿ ರಕೂನ್‍ಗಳನ್ನು ಬಹುವಾಗಿ ಹೋಲುತ್ತದೆ. ಆದರೆ ಇದು ರಕೂನ್‍ಗಿಂತ ಹೆಚ್ಚು ಉದ್ದ ಮತ್ತು ಇದಕ್ಕೆ ಹಂದಿಗಿರುವಂಥ ಉದ್ದವಾಗಿ ಚಾಚಿರುವ ಮೂತಿಯಿದೆ.

ಮೂತಿಯನ್ನು ಅತ್ತಿತ್ತ ಚಲಿಸಬಲ್ಲುದು. ಉದ್ದ ಹಾಗೂ ನೀಳವಾದ ದೇಹ, ದೇಹಕ್ಕಿಂತಲೂ ಉದ್ದವಾದ ಬಾಲ. ಉದ್ದವಾದ ಹಾಗೂ ಕತ್ತಿಯಂತೆ ಮೊನಚಾದ ಹಲ್ಲುಗಳು ಇದರ ವಿಶೇಷ ಲಕ್ಷಣಗಳು. ರಕೂನ್‍ನಲ್ಲಿರುವಂತೆಯೇ ಕೋಆಟಿಯ ಬಾಲದ ಮೇಲೂ ಬಿಳಿಯ ಬಣ್ಣದ ಉಂಗುರಗಳಿವೆ. ದೇಹದ ಬಣ್ಣ ಹಳದಿ, ಕಂದು, ಕೆಂಪು, ಕಪ್ಪು– ಹೀಗೆ ವೈವಿಧ್ಯಮಯ. ಕೋಆಟಿ ಓಡಾಡುವಾಗ ತನ್ನ ಬಾಲವನ್ನು ಮೇಲೆಕ್ಕೆತ್ತಿಕೊಂಡಿರುತ್ತದೆ. ಬಾಲದ ತುದಿ ಮಾತ್ರ ಕೊಂಚ ಬಾಗಿರುತ್ತದೆ.

ಕೋಆಟಿ 5–12 ಪ್ರಾಣಿಗಳನ್ನೊಳಗೊಂಡ ಗುಂಪುಗಳಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಒಂದು ಗುಂಪಿನಲ್ಲಿ ಹೆಣ್ಣುಗಳು ಮತ್ತು ಮರಿಗಳೆಲ್ಲ ಇರುತ್ತವೆ. ಬೆದೆಗಾಲದಲ್ಲಿ ಮಾತ್ರ ಗಂಡು ಕೋಆಟಿಗಳು ಗುಂಪಿಗೊಂದರಂತೆ ಸೇರಿಕೊಳ್ಳುತ್ತವೆ. ಬೇರಾವ ಗಂಡುಪ್ರಾಣಿಯನ್ನೂ ಸಹಿಸದ ಒಂದು ಗಂಡು ಹೆಣ್ಣುಗಳಿಗೆ ಮಾತ್ರ ವಿಧೇಯವಾಗಿರುತ್ತದೆ. ಕೋಆಟಿಯ ಆಹಾರ ವೈವಿಧ್ಯಮಯ. ಸಣ್ಣ ಹಕ್ಕಿಗಳು, ಹಲ್ಲಿಗಳು, ಕೀಟಗಳು, ಹಣ್ಣುಗಳು, ಡಿಂಬಗಳು ಇದರ ಪ್ರಧಾನ ಆಹಾರ. ತನ್ನ ಚೂಪಾದ ಮೂತಿಯಿಂದ ದಾರಿಯಲ್ಲಿ ಸಿಕ್ಕುವ ಎಲ್ಲ ಸಂದುಗಳನ್ನೂ ಕಲ್ಲು ಪೊಟರೆಗಳನ್ನೂ ಕೆದಕಿ ಆಹಾರವನ್ನು ಅರಸುತ್ತ ಸಾಗುತ್ತದೆ. ಕೋಆಟಿ ಬಲು ಚೆನ್ನಾಗಿ ಮರವನ್ನೂ ಹತ್ತಬಲ್ಲದು.

ಕೋಆಟಿಯ ಸಂತಾನೋತ್ಪತ್ತಿಯ ಕಾಲ ವಸಂತ ಋತು. ಗರ್ಭಧರಿಸಿದ ಹೆಣ್ಣು ಕೋಆಟಿ ಗುಂಪಿನಿಂದ ಬೇರ್ಪಟ್ಟು ಯಾವುದಾದರೂ ಒಂದು ಮರದಲ್ಲಿ ಗೂಡು ಕಟ್ಟುತ್ತದೆ. ಸುಮಾರು 11 ವಾರಗಳ ಗರ್ಭಧಾರಣೆಯ ಅವಧಿಯ ಅನಂತರ 2–6 ಮರಿಗಳನ್ನು ಈಯುತ್ತದೆ. ಸುಮಾರು 1 ತಿಂಗಳ ಕಾಲ ಮರಿಗಳನ್ನು ಏಕಾಂತದಲ್ಲಿಯೆ ಸಾಕಿದ್ದು ಅನಂತರ ಮರಿಗಳೊಂದಿಗೆ ಗುಂಪಿಗೆ ಮರಳಿ ಬರುತ್ತದೆ.

ಮೆಕ್ಸಿಕೋದ ಮೂಲವಾಸಿಗಳು ಕೋಆಟಿಯನ್ನು ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ನಾಯಿಗಳನ್ನು ಇದರ ಬೇಟೆಗೆಂದೇ ಸಾಕುವುದುಂಟು. ಹೀಗೆ ನಾಯಿಗಳಿಂದ ಸುತ್ತುವರಿದಾಗ ಕೋಆಟಿ ಉಗ್ರವಾಗಿ ಹೋರಾಡುತ್ತದೆ. ಅಲ್ಲದೆ ತನ್ನ ಚೂಪಾದ ಕೋರೆ ಹಲ್ಲುಗಳಿಂದ ತೀವ್ರವಾದ ಗಾಯಮಾಡುವುದುಂಟು. ಕೆಲವೆಡೆ ಕೋಆಟಿಯನ್ನು ಪಳಗಿಸಿ ಸಾಕುವುದುಂಟು. *

**ಕೋಆಲ :** ಆಸ್ಟ್ರೇಲಿಯ ಖಂಡದ ವಿಶಿಷ್ಟ ಹಾಗೂ ವಿಚಿತ್ರವಾದ ಪ್ರಾಣಿಗಳಲ್ಲಿ ಒಂದು. ಮ್ಯಾಮೇಲಿಯ ವರ್ಗ, ಮಾರ್ಸ್ಯುಪಿಯೇಲಿಯ ಗಣ, ಫಲಾಂಜೆಡೀ ಕುಟುಂಬಕ್ಕೆ ಸೇರಿದೆ. ಇದರ ಶಾಸ್ತ್ರೀಯನಾಮ ಫ್ಯಾಸ್ಕೊಲಾರ್ಕ್ಟಸ್ ಸಿನೆರಿಯಸ್. ಇದು ಸಂಪೂರ್ಣ

ವೃಕ್ಷವಾಸಿ. ಪೂರ್ವ ಆಸ್ಟ್ರೇಲಿಯದ ಯೂಕಲಿಪ್ಟಸ್ ವನಗಳಲ್ಲೇ ಇದರ ವಾಸ. ಇದರ ಗಾತ್ರ ಸಣ್ಣ ನಾಯಿಮರಿಯಷ್ಟಿದೆ (ದೇಹದ ಉದ್ದ 600–850 ಮಿಮೀ., ತೂಕ 4–15 ಕೆಜಿ.). ಮೈಮೇಲೆಲ್ಲ ದಟ್ಟವಾದ ಮೃದು ಉಣ್ಣೆಯಿದೆ. ದೇಹದ ಬೆನ್ನು ಭಾಗದ ಬಣ್ಣ ಬೂದು, ಉದರಭಾಗದ ಬಣ್ಣ ಬಿಳಿ. ಕಿವಿಯ ಅಂಚಿನ ಮೇಲೆ ಉದ್ದವಾದ ಬಿಳಿ ಕೂದಲುಗಳಿವೆ. ದೊಡ್ಡತಲೆ, ಅಗಲವಾದ ಮತ್ತು ಪೊದೆಯಂಥ ಕಿವಿಗಳು, ಮುಂಚಾಚಿದ ಮೂಗು, ಬಾಲವಿಲ್ಲದಿರುವುದು, ಸಣ್ಣ ಆದರೆ ಹೊಳೆಯುವ ಕಣ್ಣುಗಳು ಇದರ ಪ್ರಮುಖ ಲಕ್ಷಣಗಳು. ಈ ಲಕ್ಷಣಗಳಿಂದಾಗಿ ಕೋಆಲ ನೋಡಲು

ಕೋಆಲ ತನ್ನ ಮರಿಯೊಂದಿಗೆ

ಆಟದ ಕರಡಿಯಂತೆ ಮುದ್ದಾಗಿ ಕಾಣುತ್ತದೆ. ಕೋಆಲದ ಕೈಯಲ್ಲಿಯ ಮೊದಲೆರಡು ಬೆರಳುಗಳು ಉಳಿದ ಮೂರು ಬೆರಳುಗಳಿಗೆ ಅಭಿಮುಖವಾಗಿವೆ. ಈ ಏರ್ಪಾಡಿನಿಂದ ಮರ ಹತ್ತುವಾಗ ರೆಂಬೆಗಳನ್ನು ಹಿಡಿಯಲು ಅನುಕೂಲ. ಮಾರ್ಸ್ಯುಪಿಯೇಲಿಯ ಗಣದ ಉಳಿದ ಪ್ರಾಣಿಗಳಿಗಿರುವಂತೆಯೆ ಕೋಆಲದಲ್ಲೂ ಗರ್ಭಚೀಲವಿದೆ.

ಯೂಕಲಿಪ್ಟಸ್ ಎಲೆಗಳು ಮತ್ತು ತೊಗಟೆಯನ್ನು ಬಿಟ್ಟು ಉಳಿದ ಯಾವ ಬಗೆಯ ಆಹಾರವನ್ನೂ ಕೋಆಲ ತಿನ್ನುವುದಿಲ್ಲ. ಅದರಲ್ಲೂ ನಿರ್ದಿಷ್ಟ ಬಗೆಯ ಮಣ್ಣಿನಲ್ಲಿ ಬೆಳೆಯುತ್ತಿದ್ದು ನಿರ್ದಿಷ್ಟ ವಯಸ್ಸಾದ ಸುಮಾರು 12 ಯೂಕಲಿಪ್ಟಸ್ ಪ್ರಭೇದಗಳ ಎಲೆಗಳೇ ಆಗಬೇಕು. ಪ್ರೌಢವಯಸ್ಸಿನ ಒಂದು ಕೋಆಲ ದಿನಕ್ಕೆ ಸು. 1–11/2 ಕೆ.ಜಿ. ಎಲೆಗಳನ್ನು ಭಕ್ಷಿಸುತ್ತದೆ. ಈ ರೀತಿಯ ಆಹಾರಕ್ರಮಕ್ಕೆ ಸಹಾಯಕವಾಗುವಂತೆ ಕೋಆಲದ ಕರುಳಿನ ಬಳಿ 15–20 ಸೆಂ.ಮೀ. ಉದ್ದದ ಸೀಕಮ್ ಎಂಬ ಅನುಬಂಧಿಕೆ ಇದೆ. ಯೂಕಲಿಪ್ಟಸ್ ಎಲೆಗಳನ್ನು ಮಾತ್ರ ತಿನ್ನುವುದರಿಂದ ಕೋಆಲಗಳಿಗೆ ಅದೇ ವಾಸನೆ ಇದೆ.

ಕೋಆಲಗಳು ಒಂಟೊಂಟಿಯಾಗಿ ಇಲ್ಲವೆ ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. ಇವುಗಳ ಸಂತಾನೋತ್ಪತ್ತಿಯ ಕಾಲ ಸೆಪ್ಟೆಂಬರಿನಿಂದ ಜನವರಿ ತನಕ. ಹೆಣ್ಣು ವರ್ಷ ಬಿಟ್ಟು ವರ್ಷಕ್ಕೊಂದು ಸೂಲಿನಂತೆ ಮರಿ ಹಾಕುತ್ತದೆ. ಸೂಲಿಗೆ ಒಂದೇ ಒಂದು ಮರಿ ಹುಟ್ಟುತ್ತದೆ. ಗರ್ಭಧಾರಣೆಯ ಅವಧಿ ಸುಮಾರು 30–35 ದಿವಸಗಳು. ಹುಟ್ಟಿದಾಗ ಮರಿ ಸುಮಾರು 5½ ಗ್ರಾಂ. ತೂಗುತ್ತಿದ್ದು ಬಹಳ ಅಸಹಾಯಕ ಸ್ಥಿತಿಯಲ್ಲಿರುತ್ತದೆ. ಸುಮಾರು 6 ತಿಂಗಳ ಕಾಲ ತಾಯಿಯ ಗರ್ಭಚೀಲದಲ್ಲೇ ಹುದುಗಿಕೊಂಡಿದ್ದು ಅನಂತರ ಹೊರಬಂದು ತಾಯಿಯ ಆರೈಕೆಯಲ್ಲೇ ಸುಮಾರು ಒಂದು ವರ್ಷ ಕಾಲ ಕಳೆದು ಮುಂದೆ ಸ್ವತಂತ್ರ ಜೀವನ ಆರಂಭಿಸುತ್ತದೆ. ಸುಮಾರು 4 ವರ್ಷ ವಯಸ್ಸಾದಾಗ ಲೈಂಗಿಕ ಪ್ರಬುದ್ಧತೆಯನ್ನು ಪಡೆಯುತ್ತದೆ. ಕೋಆಲದ ಒಟ್ಟು ಆಯುಸ್ಸು 20 ವರ್ಷಗಳು. ಒಂದೊಂದು ಮರಿಯೂ ತನ್ನ ತಾಯ ಬಳಿಯಿರುವುದೇ ಸಾಮಾನ್ಯವಾದರೂ ಕೆಲವೊಮ್ಮೆ ಹಲವಾರು ತಾಯಂದಿರು ಒಟ್ಟಿಗೆ ಗುಂಪಾಗಿ ಹಾಲುಣ್ಣಿಸುತ್ತಿರುವಾಗ ಮರಿಗಳ ಅದಲುಬದಲಾಗುವುದುಂಟು. ಆಗ ಯಾವ ಕೋಆಲದ ಹಾಲನ್ನು ಯಾವ ಮರಿಯಾದರೂ ಕುಡಿಯಬಹುದು. ಹಾಲು ಕುಡಿದಾದ ಮೇಲೆ ಮರಿಗಳು ತಮ್ಮ ಸ್ವಂತ ತಾಯಿಪ್ರಾಣಿಗಳ ಬಳಿ ಹೋಗುತ್ತವೆ. ಈ ಕ್ರಮ ಇನ್ಯಾವ ಪ್ರಾಣಿಯಲ್ಲೂ ಕಂಡುಬರುವುದಿಲ್ಲ.

ಕೋಆಲಗಳು ಯೂಕಲಿಪ್ಟಸ್ ಎಲೆಗಳನ್ನು ಮಾತ್ರವೆ ಆಹಾರವಾಗಿ ಸೇವಿಸುವುದರಿಂದ ಇವುಗಳ ಸಂಖ್ಯೆ ಸ್ವಾಭಾವಿಕವಾಗಿಯೇ ಕಡಿಮೆ. 20ನೆಯ ಶತಮಾನದ ಆದಿಯಲ್ಲಿ ಒಂದು ಬಗೆಯ ನಿಗೂಢರೋಗಕ್ಕೆ ತುತ್ತಾಗಿ ಇವುಗಳ ಸಂತತಿ ಬಹಳವಾಗಿ ಕ್ಷೀಣಿಸಿತು. ಇವುಗಳ ಮೃದುವಾದ ತುಪ್ಪಳಕ್ಕಾಗಿ ಇವನ್ನು ಬೇಟೆಯಾಡುತ್ತಿದ್ದುದರಿಂದಲೂ ನಿರ್ವಂಶವಾಗುವ ಸ್ಥಿತಿ ಬಂತು. ಈಗ ಆಸ್ಟ್ರೇಲಿಯ ಸರ್ಕಾರ ಇವುಗಳ ಬೇಟೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಕಾನೂನು ಮಾಡಿರುವುದರಿಂದ ಇವುಗಳ ಸಂಖ್ಯೆ ನಿಧಾನವಾಗಿ ಏರುತ್ತಿದೆ. ಇವನ್ನು ಬೇರೆ ದೇಶಗಳಿಗೆ ಕಳುಹಿಸುವುದನ್ನೂ ನಿಷೇಧಿಸಲಾಗಿದೆ. (ಎ.)

**ಕೊಕ್ಕರೆ :** ಗ್ರೂಯಿಫಾರ್ಮೀಸ್ ಗಣದ ಗ್ರೂಯಿಡೀ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು (ಕ್ರೇನ್). ದಕ್ಷಿಣ ಅಮೆರಿಕ, ಮಲಯ ದ್ವೀಪ ಸಮೂಹ, ಪೆಸಿಫಿಕ್ ದ್ವೀಪಗಳು ಮತ್ತು ನ್ಯೂಜಿ಼ಲೆಂಡ್‍ಗಳನ್ನು ಬಿಟ್ಟು ಪ್ರಪಂಚದ ಉಳಿದೆಲ್ಲ ಪ್ರದೇಶಗಳಲ್ಲೂ ಕೊಕ್ಕರೆಗಳಿವೆ. ಭಾರತದಲ್ಲಿ ಕಾಣ ಬರುವ ಗ್ರಸ್ ಆಂಟಿಗೋನ್ (ಸಾರಸ), ಸೈಬೀರಿಯದಲ್ಲಿಯ ಗ್ರಸ್ ಗ್ರಸ್ ಲಿಲ್‍ಫೋರ್ಡಿ (ಸಾಮಾನ್ಯ ಕೊಕ್ಕರೆ), ಯೂರೋಪ್ ಮತ್ತು ಮಧ್ಯ ಏಷ್ಯಗಳ ಮೂಲವಾಸಿಯಾದ ಆಂತ್ರೊಪಾಯ್ಡಿಸ್ ವರ್ಗೊ (ಡೆಮಾಯ್ಸೆಲ್ ಕೊಕ್ಕರೆ), ಉತ್ತರ ಅಮೆರಿಕದಲ್ಲಿಯ

ಗ್ರಸ್ ಕೆನಡೆನ್ಸಿಸ್ ಮತ್ತು ಗ್ರಸ್ ಅಮೆರಿಕಾನ (ಹೂಪಿಂಗ್ ಕ್ರೇನ್), ಆಫ್ರಿಕದಲ್ಲಿ ಕಾಣಬರುವ ಬಾಲಿಯೇರಿಕ ಪ್ಯಾವೊನಿನ (ಕಿರೀಟಿ ಕೊಕ್ಕರೆ) ಮುಂತಾದವು ಮುಖ್ಯ ಬಗೆಯ ಕೆಲವು ಕೊಕ್ಕರೆಗಳು. ಡೆಮಾಯ್ಸೆಲ್ ಕೊಕ್ಕರೆ ಮತ್ತು ಸಾಮಾನ್ಯ ಕೊಕ್ಕರೆಗಳು ಚಳಿಗಾಲದಲ್ಲಿ ಭಾರತಕ್ಕೆ ವಲಸೆ ಬರುತ್ತವೆ.

ಬತ್ತದ ಗದ್ದೆಗಳು, ಜೌಗುಭೂಮಿ, ಬಯಲುಪ್ರದೇಶ ಮುಂತಾದೆಡೆಯಲ್ಲೆಲ್ಲ ಕೊಕ್ಕರೆಗಳು ವಾಸಿಸುತ್ತವೆ. ಎಲ್ಲ ಬಗೆಯ ಕೊಕ್ಕರೆಗಳೂ ದೊಡ್ಡಗಾತ್ರದ ಹಕ್ಕಿಗಳು. ಉದ್ದವಾದ ಕಾಲುಗಳು ಹಾಗೂ ಕತ್ತು, ಮೋಟಾದ ಮತ್ತು ಅಗಲವಾದ ತೋಕೆ, ವಿಸ್ತಾರವಾದ ರೆಕ್ಕೆಗಳು, ಮೋಟಾದ ಮತ್ತು ಕಾಲಿನ ಉಳಿದೆಲ್ಲ ಬೆರಳುಗಳಿಗಿಂತ ಕೊಂಚ ಎತ್ತರದಲ್ಲಿರುವ ಕಿರುಬೆರಳು–ಇವು ಕೊಕ್ಕರೆಗಳ ಮುಖ್ಯ ಲಕ್ಷಣಗಳು. ಹಾರುವಾಗ ಕತ್ತನ್ನು ನೇರವಾಗಿ ಮುಂದಕ್ಕೂ ಕಾಲುಗಳನ್ನು ನೇರವಾಗಿ ಹಿಂದಕ್ಕೂ ಚಾಚಿರುವುದು ಕೊಕ್ಕರೆಗಳ ಇನ್ನೊಂದು ವಿಶೇಷ ಲಕ್ಷಣ. ಕೊಕ್ಕರೆಗಳ ಶ್ವಾಸನಾಳ (ವಿಂಡ್ ಪೈಪ್) ಅಥವಾ ಗಾಳಿಕೊಳವೆಯೂ ಕಹಳೆಯ ಸುರುಳಿಗಳಂತೆ ಹಲವಾರು ಬಾರಿ ಸುತ್ತಿಕೊಂಡಿದ್ದು ಬೇರಾವ ಹಕ್ಕಿಗಳ ಶ್ವಾಸನಾಳಕ್ಕಿಂತ ಭಿನ್ನವಾದುದೂ ವಿಚಿತ್ರವಾದುದೂ

ಆಗಿದೆ. ಕೆಲವು ಪ್ರಭೇದಗಳಲ್ಲಿ ಇದು ಎದೆಮೂಳೆಯನ್ನೂ ಹಾರಲು ನೆರವಾಗುವ ಸ್ನಾಯುಗಳನ್ನೂ ಭೇದಿಸಿರುವುದುಂಟು. ಕೊಕ್ಕರೆಗಳು ಹಾರುತ್ತಿರುವಾಗಲೂ ನೆಲದ ಮೇಲಿರುವಾಗಲೂ ಮಾಡುವ ಕಹಳೆ ಶಬ್ದದಂಥ ಅನುರಣಿತ ಕೂಗಿಗೆ ಈ ರೀತಿಯ ಗಾಳಿಕೊಳವೆಯೇ ಕಾರಣ. ಬಹುಪಾಲು ಬಗೆಯ ಕೊಕ್ಕರೆಗಳು ಗುಂಪುಗಳಲ್ಲಿಯೇ ವಾಸಿಸುತ್ತವೆ. ಭಾರತದ ಸಾರಸಗಳಲ್ಲಿ ಒಂದು ವಿಶೇಷ ಗುಣವನ್ನು ಕಾಣಬಹುದು. ಇವುಗಳಲ್ಲಿ ಒಂದು ಗಂಡು ಒಂದೇ ಒಂದು ಹೆಣ್ಣನ್ನು ತನ್ನ ಸಂಗಾತಿಯಾಗಿ ಆರಿಸಿಕೊಂಡು ಅದರೊಡನೆ ತನ್ನ ಜೀವಮಾನವನ್ನೆಲ್ಲ ಕಳೆಯುತ್ತದೆ. ಕೊಕ್ಕರೆಗಳಲ್ಲಿ ವಲಸೆಹೋಗುವ ಪರಿಪಾಠವಿದೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ತಮ್ಮ ಮೂಲನೆಲೆಯನ್ನು ಬಿಟ್ಟು ಉಷ್ಣಪ್ರದೇಶಗಳಿಗೆ ದೊಡ್ಡ ದೊಡ್ಡ ಗುಂಪುಗಳಲ್ಲಿ ಹಾರಿ ಹೋಗುತ್ತವೆ. ವಲಸೆಹೋಗುವಾಗ ಇಲ್ಲವೆ ದೈನಂದಿನ ಹಾರುವಿಕೆಯಲ್ಲಿ ವಿಶಿಷ್ಟವಾದ ಹಾಗೂ ರಮಣೀಯವಾದ V ಆಕಾರದ ಸರಪಳಿಯಂತೆ ಹಾರುತ್ತವೆ. ಈ ಚಿಹ್ನೆಯ ಮುಂತುದಿಯಲ್ಲಿ ಗುಂಪಿನ ನಾಯಕ ಇರುತ್ತದೆ. ಕೊಕ್ಕರೆಗಳು ಆಕಾಶದಲ್ಲಿ ಬಹಳ ಎತ್ತರದಲ್ಲಿ (ಕೆಲವೊಮ್ಮೆ ಸು 3.2 ಕಿ.ಮೀ. ಎತ್ತರದಲ್ಲಿ) ಹಾರುವುವಲ್ಲದೆ ಹಾರುವಾಗ ಕ್ರಮಬದ್ಧವಾಗಿಯೂ ಗಂಭೀರವಾಗಿಯೂ ರೆಕ್ಕೆಗಳನ್ನು ಬಡಿಯುತ್ತ ಮುಂಬರಿಯುತ್ತವೆ.

ಕೊಕ್ಕರೆಗಳ ಆಹಾರ ವೈವಿಧ್ಯಪೂರ್ಣ, ಕೀಟ ಮತ್ತು ಅವುಗಳ ಡಿಂಬ, ಹುಳು ಹುಪ್ಪಟೆಗಳು, ಬಸವನ ಹುಳುಗಳು, ಕಪ್ಪೆ, ಹಲ್ಲಿಗಳು, ಸಣ್ಣಪುಟ್ಟ ಹಕ್ಕಿಗಳು, ಕೆಲವೊಮ್ಮೆ ಸಣ್ಣಗಾತ್ರದ ಸ್ತನಿಗಳು ಮುಂತಾದ ಮಾಂಸಾಹಾರವನ್ನೂ ಕಾಳು, ಹಣ್ಣು, ಎಳೆಯ ಚಿಗುರು, ಬೇರು ಮುಂತಾದ ಸಸ್ಯಾಹಾರವನ್ನೂ ಇವು ಸೇವಿಸುತ್ತವೆ. ಸಸ್ಯಾಹಾರವೇ ಇವುಗಳ ಮೆಚ್ಚಿನ ಆಹಾರ. ಮೀನುಗಳನ್ನು ತಿನ್ನುವುದು ಕಡಿಮೆ. ತಮ್ಮ ಬಲವಾದ ಕೊಕ್ಕಿನಿಂದ ನೆಲವನ್ನು ಕೆದಕಿ ಬೇರು, ಹುಳು ಮುಂತಾದವನ್ನು ಆಯ್ದು ತಿನ್ನುತ್ತ ಸಾಗುವುದೇ ಇವುಗಳ ಆಹಾರ ಸೇವನೆಯ ಕ್ರಮ. ಒಣ ನೆಲದಲ್ಲಿ ಆಹಾರವನ್ನು ಅರಸುತ್ತಿರುವಾಗ ಆಗಿಂದಾಗ್ಗೆ ಇವು ಹತ್ತಿರದಲ್ಲಿನ ನೀರಿನ ನೆಲೆಗೆ ಹಾರಿಹೋಗಿ ನೀರು ಕುಡಿಯುತ್ತವೆ.

ಕೊಕ್ಕರೆಗಳ ಅತ್ಯಂತ ಕೌತುಕಮಯ ಹಾಗೂ ಆಕರ್ಷಕ ಪದ್ಧತಿ ಎಂದರೆ ನೃತ್ಯಾಚರಣೆ. ಆಗಿಂದಾಗ್ಗೆ ಹಲವಾರು ಕೊಕ್ಕರೆಗಳು ಗುಂಪುಗೂಡಿಕೊಂಡು ರೆಕ್ಕೆಗಳನ್ನು ಅರ್ಧ ವಿಸ್ತರಿಸಿ ಲಘು ಹೆಜ್ಜೆ ಹಾಕುತ್ತ ಒಂದರ ಸುತ್ತ ಇನ್ನೊಂದು ಕುಣಿಯುತ್ತವೆ. ನಡುನಡುವೆ ಕಾಲುಗಳನ್ನು ನೀಳವಾಗಿ ಚಾಚಿಕೊಂಡು ಮೇಲಕ್ಕೆ ನೆಗೆಯುತ್ತವೆ. ದೇಹವನ್ನು ಉದ್ದಕ್ಕೆ ಚಾಚುವುದು ಮತ್ತೆ ಬಾಗಿಸುವುದು ಮುಂತಾಗಿ ವಿಚಿತ್ರಗತಿಯಲ್ಲಿ ನರ್ತಿಸುತ್ತವೆ. ಅಲ್ಲದೆ, ಹುಲ್ಲಿನ ಎಸಳನ್ನೂ ಇಲ್ಲವೆ ಕಡ್ಡಿಗಳನ್ನೂ ಕೊಕ್ಕಿನಿಂದ ಹಿಡಿದು ಗಾಳಿಯಲ್ಲಿ ತೂರಿ ಅದು ಕೆಳಕ್ಕೆ ಬೀಳುತ್ತಿರುವಾಗ ಕೊಕ್ಕಿನಿಂದ ಹೊಡೆಯುವುದೂ ಉಂಟು. ಈ ವಿಚಿತ್ರ ಬಗೆಯ ನೃತ್ಯವನ್ನು ಬೆದೆಗಾಲದಲ್ಲಿ ಮಾತ್ರವಲ್ಲದೆ ವರ್ಷದ ಯಾವ ಕಾಲದಲ್ಲಾದರೂ ಪ್ರದರ್ಶಿಸಬಹುದು. ಇದು ಕೊಕ್ಕರೆಗಳ ಭಾವಪ್ರದರ್ಶನವೊ ಇಲ್ಲವೆ ತೃಪ್ತಿ ಮತ್ತು ಸಂತೋಷಗಳ ಸೂಚನೆಯೊ ಆಗಿರಬಹುದು.

ಕೊಕ್ಕರೆಗಳು ಜೌಗುಭೂಮಿಯಲ್ಲಿ ನೀರಿನಿಂದ ಆವೃತವಾದ ಸಣ್ಣ ಸಣ್ಣ ಜೊಂಡಿನ ಪೊದೆಗಳಲ್ಲಿ ಗೂಡುಕಟ್ಟುತ್ತವೆ. ಹೆಣ್ಣು ವರ್ಷಕ್ಕೊಂದು ಬಾರಿ 2 ಮೊಟ್ಟೆಗಳನ್ನಿಡುತ್ತದೆ. ಅಪರೂಪಕ್ಕೆ 1 ಇಲ್ಲವೆ 3 ಮೊಟ್ಟೆಗಳನ್ನೂ ಇಡಬಹುದು. ಮೊಟ್ಟೆಗಳ ಬಣ್ಣ ಮಾಸಲು ಬಿಳಿ ಇಲ್ಲವೆ ಕಂದು. ಮೇಲೆಲ್ಲ ಕಗ್ಗಂದು ಬಣ್ಣದ ಚುಕ್ಕೆಗಳಿವೆ. ಗೂಡು ಕಟ್ಟುವ ಮತ್ತು ಕಾವುಕೂತು ಮರಿ ಮಾಡಿ ಅವುಗಳನ್ನು ಪಾಲಿಸುವ ಕಾರ್ಯಗಳನ್ನು ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ಸಹಕರಿಸಿ ಮಾಡುತ್ತವೆ. ಸುಮಾರು 28–35 ದಿನಗಳ ಅನಂತರ ಮೊಟ್ಟೆಗಳೊಡೆದು ಮರಿಗಳು ಹೊರಬರುತ್ತವೆ. ಸುಮಾರು 10 ವಾರಗಳಾದ ಮೇಲೆ ಅವು ಹಾರಲು ಶಕ್ತವಾಗುತ್ತವೆ.

ಕೊಕ್ಕರೆಗಳು ದೀರ್ಘಾಯುಷಿಗಳೆಂದು ಹೆಸರಾಗಿವೆ. ಇವು 100 ವರ್ಷಗಳಿಗೂ ಮೇಲ್ಪಟ್ಟು ಬದುಕುವುವೆಂದು ನಂಬಿಕೆಯಿದೆ. ಬಹುಶಃ ನಿಜವಾಗಿ ಇಷ್ಟು ದೀರ್ಘಕಾಲ ಜೀವಿಸಿರದಿದ್ದರೂ ವಾಷಿಂಗ್‌ಟನ್ ಪ್ರಾಣಿಸಂಗ್ರಹಾಲಯದಲ್ಲಿರುವ ಕೊಕ್ಕರೆಯೊಂದಕ್ಕೆ ಇತ್ತೀಚೆಗೆ 55 ವರ್ಷ ವಯಸ್ಸಾಯಿತು ಎಂದು ಹೇಳಲಾಗಿದೆ. ಜಪಾನಿನಲ್ಲಂತೂ ಕೊಕ್ಕರೆಯನ್ನು ದೀರ್ಘಾಯುಷ್ಯದ ಸಂಕೇತವೆಂದು ಭಾವಿಸುತ್ತಾರೆ. ಕೊಕ್ಕರೆ 1,000 ವರ್ಷ ಬದುಕುತ್ತದೆ ಎಂಬ ನಂಬಿಕೆ ಜಪಾನೀಯರಲ್ಲಿದೆ. ಭಾರತದಲ್ಲಿ ಕಾಣಬರುವ ಕೊಕ್ಕರೆಗಳ ಸ್ಥೂಲವಿವರಣೆಯನ್ನು ಮುಂದೆ ಕೊಡಲಾಗಿದೆ.

1 ಗ್ರಸ್ ಆಂಟಿಗೋನ್ (ಸಾರಸ): ಎತ್ತರ 10.16 ಸೆಂ.ಮೀ. – 13 ಸೆಂ.ಮೀ. ಮೈಬಣ್ಣ ಬೂದಿ. ಕಾಲು, ತಲೆ ಮತ್ತು ಕತ್ತಿನ ಮೇಲ್ಭಾಗ ಕೆಂಪು. ಹೊಲಗದ್ದೆಗಳ ಬಳಿಯೇ ಇದರ ವಾಸ.

2 ಗ್ರಸ್ ಗ್ರಸ್ ಲಿಲ್‌ಫೋರ್ಡಿ (ಸಾಮಾನ್ಯ ಕೊಕ್ಕರೆ): ಚಳಿಗಾಲದಲ್ಲಿ ಉತ್ತರ ಯೂರೋಪಿನಿಂದ ಸೆಪ್ಟೆಂಬರ್ ವೇಳೆಗೆ ವಲಸೆ ಬರುತ್ತದೆ. ಎತ್ತರ ಸುಮಾರು 10.16 ಸೆಂ.ಮೀ. ಮೈಬಣ್ಣ ಬೂದಿ. ತಲೆ ಮತ್ತು ಕತ್ತು ಕಪ್ಪುಬಣ್ಣಕ್ಕಿದ್ದರೂ ನೆತ್ತಿಯ ಮೇಲೆ ಕೆಂಪು ಬಣ್ಣದ ಗುರುತಿದೆ.

3 ಆಂತ್ರೊಪಾಯ್ಡಿಸ್ ವರ್ಗೋ (ಡೆಮಾಯ್ಸೆಲ್ ಕೊಕ್ಕರೆ): ಇದು ಕೂಡ ಚಳಿಗಾಲದಲ್ಲಿ ಯೂರೋಪಿನಿಂದ ವಲಸೆಬರುತ್ತದೆ. ನೋಡುವುದಕ್ಕೆ ಸಾಮಾನ್ಯ ಕೊಕ್ಕರೆಯಂತೆ ಕಂಡರೂ ಅಷ್ಟು ದೊಡ್ಡ ಗಾತ್ರದ್ದಲ್ಲ; ಇದರ ಎತ್ತರ ಸುಮಾರು 7.75 ಸೆಂ.ಮೀ. ನೆತ್ತಿಯ ಮೇಲೆ ಕೆಂಪು ಬಣ್ಣದ ಗುರುತಿಲ್ಲ. ಕಣ್ಣಿನ ಹಿಂಭಾಗದಲ್ಲಿ ಬಿಳಿಯ ಬಣ್ಣದ ಕುಚ್ಚುಗಳಿವೆ. ಕತ್ತಿನ ಕೆಳಭಾಗದಲ್ಲಿಯ ಪುಕ್ಕಗಳು ಉದ್ದವಾಗಿದ್ದು ಎದೆಯ ಮೇಲೆ ಇಳಿಬೀಳುತ್ತವೆ. (ಕೆ.ಎಂ.ವಿ.)

**ಕೊಕ್ಕು :** ಹಕ್ಕಿಗಳಲ್ಲಿ ಕಾಣಬರುವ ವಿಶೇಷ ರೀತಿಯ ಒಂದು ಅಂಗ. ಇದು ಹಕ್ಕಿಗಳಿಗೆ ಅತ್ಯಂತ ಉಪಯುಕ್ತ ರಚನೆ. ಇದರ ಉಪಯೋಗಗಳೂ ವೈವಿಧ್ಯಮಯ: ಆಹಾರವನ್ನು ಹಿಡಿಯುವಲ್ಲಿ ಮತ್ತು ಗೂಡು ಕಟ್ಟುವ ಕಾರ್ಯದಲ್ಲಿ ಇದು ಕೈಯಂತೆಯೂ ಆಹಾರ ಸೇವನೆಯಲ್ಲಿ ಬಾಯಿಯಂತೆಯೂ ಮರಿಗಳಿಗೆ ಗುಟುಕು ಕೊಡುವ ಕಾರ್ಯದಲ್ಲಿ ಚಮಚದಂತೆಯೂ ಶತ್ರುಗಳನ್ನು ಎದುರಿಸುವುದರಲ್ಲಿ ಆಯುಧದಂತೆಯೂ ಕೆಲಸಕ್ಕೆ ಬರುತ್ತದೆ.




ವಿವಿಧ ಮಾದರಿಯ ಕೊಕ್ಕುಗಳು : 1 ಪೆಲಿಕನ್, 2 ಕಾಗೆ, 3 ಹದ್ದು, 4 ಹಾರ್ನ್‌ಬಿಲ್, 5 ಸ್ಪೂನ್‌ಬಿಲ್, 6 ಅಯಿಸ್ಟರ್ ಕ್ಯಚರ್, 7 ಆಲ ಬಟ್ರಾಸ್, 8 ಗುಬ್ಬಚ್ಚಿ 9 ಮರಕುಟಿಗ 10ಎ ಗಂಡು ಹೂಯಿಯ, 10ಬಿ ಹೆಣ್ಣು ಹೂಯಿಯ, 11 ಮೀಂಚುಳ್ಳಿ 12 ಹಮಿಂಗ್ ಬರ್ಡ್, 13 ಮ್ಯಾಂಡರಿನ್ ಬಾತು, 14 ಕ್ರಾಸ್ ಬಿಲ್ 15 ಗಿಳಿ

ಹಕ್ಕಿಯ ಮೇಲ್ದವಡೆ ಮತ್ತು ಕೆಳದವಡೆಗಳ ಮುಂಭಾಗದ ಎಲುಬುಗಳು ನೀಳವಾಗಿ ಚಾಚಿಕೊಂಡು ಕೊಂಬಿನಿಂದ ಕೂಡಿದ ಒರೆಯಿಂದ ಆವೃತವಾಗಿರುವ ರಚನೆಯೇ ಕೊಕ್ಕು. ಕೊಂಬಿನ ಭಾಗಕ್ಕೆ ಚುಂಚು (ಬಿಲ್) ಎಂದು ಹೆಸರು. ಇದು ವಾಸ್ತವವಾಗಿ ಚರ್ಮದ ಎಪಿಡರ್ಮಿಸ್ ಭಾಗ. ಇದರಲ್ಲಿ ಸ್ಟ್ರಾಟಮ್ ಕಾರ್ನಿಯಮ್ ಎಂಬ ಹೊರಪದರವನ್ನೂ ಕೆರಟೊಹೈಯಲಿನ್ ಕಣಗಳಿಂದ ರಚಿತವಾದ ಸ್ಟ್ರಾಟಮ್ ಗ್ರ್ಯಾನ್ಯುಲೋಸಮ್ ಎಂಬ ಮಧ್ಯ ಪದರವನ್ನೂ ಸ್ಟ್ರಾಟಮ್ ಜರ್ಮಿನೇಟಿವಮ್ ಎಂಬ ಒಳಪದರವನ್ನೂ ಗುರುತಿಸಬಹುದು. ಮೊಟ್ಟೆಯಿಂದ ಹೊರಬರುವ ಮರಿಹಕ್ಕಿಗಳ ಕೊಕ್ಕುಗಳಲ್ಲಿ ಮೇಲೆ ಹೇಳಿದ ಮೂರು ಪದರಗಳು ಮಾತ್ರ ಇದ್ದು ಕೊಕ್ಕು ಮೃದುವಾಗಿರುತ್ತದೆ. ಮರಿಗಳು ಬೆಳೆದು ದೊಡ್ಡವಾದಂತೆಲ್ಲ ಈ ಪದರಗಳಿಂದ ಕೆರಾಟಿನ್ ಎಂಬ ವಸ್ತು ಉತ್ಪತ್ತಿಯಾಗಿ ಉದ್ದಕ್ಕೆ ಚಾಚಿದಂತಾಗಿ ಸಹಜವಾದ ಕೊಕ್ಕು ರೂಪುಗೊಳ್ಳುತ್ತದೆ. ಕೆಲವು ಬಗೆಯ ಹಕ್ಕಿಗಳಲ್ಲಿ ಕೊಕ್ಕಿನ ಮೇಲ್ಭಾಗದ ಬುಡದಲ್ಲಿ ಚರ್ಮ ದಪ್ಪವಾಗಿದ್ದು ಸಿರೆ ಎಂಬ ವಿಶಿಷ್ಟವಾದ ಅಂಗವೊಂದು ರೂಪುಗೊಂಡಿರುತ್ತದೆ. ಹಕ್ಕಿಗಳ ಮೂಗಿನ

ಹೊಳ್ಳೆಗಳು ಇದರಲ್ಲಿ ಅಡಕವಾಗಿರುತ್ತವೆ. ನ್ಯೂಜ಼ೀಲೆಂಡ್ ನಿವಾಸಿಗಳಾದ ಕೀವೀ ಹಕ್ಕಿಗಳಲ್ಲಿ ಮಾತ್ರ ಮೂಗಿನ ಹೊಳ್ಳೆಗಳು ಸಿರೆಯಿಂದ ಆಚೆ ಬಂದು ಕೊಕ್ಕಿನ ತುದಿಯಲ್ಲಿ ಸ್ಥಿತವಾಗಿರುತ್ತವೆ. ಸಾಮಾನ್ಯವಾಗಿ ಕೊಕ್ಕನ್ನು ಆವರಿಸಿರುವ ಕೊಂಬು ವಸ್ತು ಏಕಪ್ರಕಾರವಾಗಿ ಲೇಪಿತವಾಗಿರುತ್ತದೆ. ಇದು ಸವೆದಂತೆಲ್ಲ ಕೊಕ್ಕಿನ ತಳ ಭಾಗದಿಂದ ಹೊಸಪದರ ಉತ್ಪತ್ತಿಯಾಗುತ್ತದೆ. ಆದರೆ ಅಟ್ಲಾಂಟಿಕ್ ಸಾಗರದ ತೀರಪ್ರದೇಶಗಳಲ್ಲಿ ವಾಸಿಸುವ ಫ್ರಾಟೆರ್‌ಕ್ಯುಲ ಎಂಬ ಶಾಸ್ತ್ರೀಯ ಹೆಸರಿನ ಪಫಿನ್ ಹಕ್ಕಿಗಳ ಕೊಕ್ಕಿನಲ್ಲಿ ಪರಸ್ಪರ ಪ್ರತ್ಯೇಕವಾಗಿರುವ 9 ಕೊಂಬಿನ ಫಲಕಗಳಿವೆ. ಈ ಹಕ್ಕಿಗಳ ಸಂತಾನೋತ್ಪತ್ತಿಯ ಕಾಲ ಕೊನೆಗೊಳ್ಳುತ್ತ ಬಂದಂತೆ (ಆಗಸ್ಟ್ ತಿಂಗಳಿನ ವೇಳೆಗೆ) ಕೊಂಬಿನ ಫಲಕಗಳು ಉದುರಿಹೋಗಿ ಮತ್ತೆ ಚಳಿಗಾಲದ ವೇಳೆಗೆ ಹೊಸ ಫಲಕಗಳು ಉತ್ಪತ್ತಿಯಾಗುತ್ತವೆ. ಈ ಫಲಕಗಳಿಗೂ ಹಕ್ಕಿಗಳ ಪೂರ್ವಜ ಪ್ರಾಣಿಗಳಾದ ಸರೀಸೃಪಗಳ ಹುರುಪೆಗಳಿಗೂ ಸಾದೃಶ್ಯವಿದೆಯೆಂದೂ ಕೊಂಬಿನ ಫಲಕಗಳು ಪ್ರತಿವರ್ಷ ಉದುರುವುದರಿಂದ ಪಫಿನ್ ಹಕ್ಕಿಗಳ ಕೊಕ್ಕು ಆದಿಮ ಕೊಕ್ಕೆಂದೂ ಪರಿಗಣಿಸಲಾಗಿದೆ.

ಈಗ ಜೀವಂತವಾಗಿರುವ ಯಾವ ಹಕ್ಕಿಯ ಕೊಕ್ಕಿನಲ್ಲೂ ಹಲ್ಲುಗಳಿಲ್ಲ. ಆದರೆ ಗತಕಾಲದ ಹಕ್ಕಿಗಳ ಕೊಕ್ಕಿನಲ್ಲಿ ಹಲ್ಲುಗಳಿದ್ದುವೆಂದು ಆ ಕಾಲದ ಹಕ್ಕಿಗಳ ಪಳೆಯುಳಿಕೆಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ, 130 ದಶಲಕ್ಷ ವರ್ಷಗಳ ಹಿಂದೆ ಬದುಕಿದ್ದ ಆರ್ಕಿಯಾಪ್ಟೆರಿಕ್ಸ್ ಹಕ್ಕಿಯ ಕೊಕ್ಕಿನಲ್ಲಿ ಹಲ್ಲುಗಳನ್ನು ಕಾಣಬಹುದು.

ಸಾಮಾನ್ಯವಾಗಿ ಎಲ್ಲ ಬಗೆಯ ಹಕ್ಕಿಗಳ ಕೊಕ್ಕು ದಪ್ಪವಾಗಿ ಗಟ್ಟಿಯಾಗಿರುತ್ತದೆ. ಆದರೆ ಮುಖ್ಯವಾಗಿ ಹಕ್ಕಿಗಳ ಆಹಾರಕ್ರಮವನ್ನೂ ಕೊಂಚಮಟ್ಟಿಗೆ ಜೀವನರೀತಿಯನ್ನೂ ಅವಲಂಬಿಸಿ ಕೊಕ್ಕು ತನ್ನ ಆಕಾರ ಮತ್ತು ಗಾತ್ರಗಳಲ್ಲಿ ವೈವಿಧ್ಯತೆಯನ್ನು ಪ್ರದರ್ಶಿಸುತ್ತದೆ. ಕೊಕ್ಕಿನ ವಿವಿಧ ಆಕಾರಗಳನ್ನು ಗಮನಿಸಿ ಹಕ್ಕಿಗಳ ಆಹಾರ ಕ್ರಮವನ್ನು ಸ್ಥೂಲವಾಗಿ ಅರಿಯಬಹುದು. ಕೊಕ್ಕುಗಳ ವಿವಿಧತೆಯನ್ನು ಅಭ್ಯಸಿಸುವುದರಿಂದ ಸ್ವಲ್ಪ ಮಟ್ಟಿಗೆ ಕೊಕ್ಕಿನ ವಿಕಾಸಕ್ರಮವನ್ನೂ ತಿಳಿದುಕೊಳ್ಳಬಹುದು. ಆದರೂ ಪ್ರರೂಪೀ ಬಗೆಯದು ಎನಿಸಿಕೊಳ್ಳುವ ಕೊಕ್ಕು ಕಾಣಸಿಗುವುದು ಕಷ್ಟ. ಸಾಮಾನ್ಯವಾಗಿ ಕಾಗೆಯ ಕೊಕ್ಕು ಈ ಬಗೆಯದು ಎಂದು ಹೇಳಲಾಗುತ್ತದೆ. ಸರ್ವಭಕ್ಷಿಯಾದ ಕಾಗೆಯ ಕೊಕ್ಕು ದೊಡ್ಡದು, ಗಡಸು ಮತ್ತು ಬಲಯುತವಾದುದು. ಇದರ ತುದಿ ಚೂಪಾಗಿರುವುದರಿಂದ ಕಾಗೆ ಸಣ್ಣಪುಟ್ಟ ಕೀಟಗಳನ್ನು ಸುಲಭವಾಗಿ ಹಿಡಿಯಬಲ್ಲುದು; ಬಲಯುತವಾಗಿರುವುದರಿಂದ ಇಲಿ, ಅಳಿಲು, ಮುಂತಾದ ಪ್ರಾಣಿಗಳನ್ನು ಕುಕ್ಕಿ ತಿನ್ನಬಲ್ಲುದು. ಅಲ್ಲದೆ ಗಡ್ಡೆಗಳನ್ನು ಕೆದಕುವುದಕ್ಕೂ ಗಟ್ಟಿಯಾದ ಕಾಯಿಗಳನ್ನೊಡೆಯುವುದಕ್ಕೂ ಇದು ಸಹಾಯಕ.

ಹದ್ದು, ಗಿಡುಗ, ಗೂಬೆ ಮುಂತಾದ ಹಕ್ಕಿಗಳ ಕೊಕ್ಕು ಮಾಂಸಾಹಾರ ಸೇವನೆಗೆ ಅನುಕೂಲವಾಗಿದೆ. ಕೊಕ್ಕಿನ ಮೇಲುದವಡೆಯ ಭಾಗ ಬಲಯುತ; ತುದಿ ಚೂಪಾಗಿದ್ದು ಕೊಂಚ ಬಾಗಿದೆ. ಇದರಿಂದ ಎರೆಪ್ರಾಣಿಯನ್ನು ಹಿಡಿಯಲೂ ಅದರ ಮಾಂಸವನ್ನು ಹರಿದು ತಿನ್ನಲೂ ನೆರವಾಗುತ್ತದೆ.

ಸಸ್ಯಹಾರಿಯಾದ ಗಿಳಿಯ ಕೊಕ್ಕು ಹಣ್ಣುಹಂಪಲನ್ನು ಹಿಡಿದುಕೊಳ್ಳುವುದಕ್ಕೆ ಸಹಾಯಕವಾಗಿದೆ. ಹೂವಿನ ಮಕರಂದವನ್ನು ಕುಡಿಯುವ ಹಮಿಂಗ್‌ಬರ್ಡ್ ಮತ್ತು ಕಳ್ಳಿಪೀರ (ಬೀ ಈಟರ್) ಹಕ್ಕಿಗಳ ಕೊಕ್ಕು ಮಕರಂದವನ್ನು ಹೀರಲು ಅನುಕೂಲವಾಗುವಂತೆ ನೀಳವಾಗಿಯೂ ತೆಳುವಾಗಿಯೂ ಇದೆ. ಕೀಟ, ಡಿಂಬ ಮುಂತಾದುವನ್ನು ತಿನ್ನುವ ಪರಿಪಾಠವಿರುವ ಮರಕುಟಗಗಳಲ್ಲಿ ಕೊಕ್ಕು ನೀಳವಾಗಿರುವುದಲ್ಲದೆ ಗಡುಸಾಗಿಯೂ ದಪ್ಪವಾಗಿಯೂ ಇದೆ. ಇದರಿಂದ ಮರದ ಪೊಟರೆಗಳನ್ನು ಕುಕ್ಕಿ ಒಳಗೆ ಅಡಗಿರುವ ಕೀಟಗಳನ್ನು ತಿನ್ನಲು ಈ ಹಕ್ಕಿಗಳಿಗೆ ಸಾಧ್ಯವಾಗಿದೆ. ಸ್ವಿಫ್ಟ್ ಹಕ್ಕಿಗಳ ಕೊಕ್ಕು ಬಲುಚಿಕ್ಕದು. ಆದರೆ ಇದು ಬಹಳ ಅಗಲವಾಗಿ ತೆರೆಯಬಲ್ಲುದು. ಇದರಿಂದ ಈ ಹಕ್ಕಿಗಳು ತಾವು ಹಾರುತ್ತಿರುವಾಗಲೆ ಬಾಯಿತೆರೆದು ಗಾಳಿಯಲ್ಲಿ ಹಾರಾಡುತ್ತಿರುವ ಕೀಟಗಳನ್ನು ಹಿಡಿಯಬಲ್ಲವು. ಮತ್ಸ್ಯಾಹಾರಿ ಹಕ್ಕಿಗಳ ಕೊಕ್ಕೂ ವೈವಿಧ್ಯಮಯ. ಬಾತು, ಹಂಸ ಮುಂತಾದುವುಗಳ ಕೊಕ್ಕು ಅಗಲವಾಗಿಯೂ ಚಪ್ಪಟೆಯಾಗಿಯೂ ಇದೆ. ಕೊಕ್ಕಿನ ಎಡಬಲ ಪಕ್ಕಗಳಲ್ಲಿ ಜರಡಿಯಂಥ ರಚನೆಗಳಿವೆ. ಈ ಹಕ್ಕಿಗಳು ನೀರಿನಲ್ಲಿ ಈಜುವಾಗ ಆಹಾರ ತುಂಬಿದ ನೀರನ್ನು ಬಾಯಿತುಂಬ ತುಂಬಿಕೊಂಡು ಕೊಕ್ಕನ್ನು ಮುಚ್ಚುತ್ತವೆ. ಆಗ ಆಹಾರ ವಸ್ತುಗಳು ಮಾತ್ರ ಬಾಯಲ್ಲಿ ಉಳಿದು ನೀರೆಲ್ಲ ಹೊರಬಂದುಬಿಡುತ್ತದೆ. ಸ್ಪೂನ್‌ಬಿಲ್ ಬಾತಿನ ಕೊಕ್ಕು ಇವುಗಳ ಕೊಕ್ಕಿನಂತೆಯೇ ಇದ್ದರೂ ಅವಕ್ಕಿಂತ ಹೆಚ್ಚು ಉದ್ದ. ಪೆಲಿಕನ್, ಗ್ಯಾನೆಟ್, ಕಾರ್ಮೊರಾಂಟ್ ಹಕ್ಕಿಗಳ ಕೊಕ್ಕು ತುಂಬ ಉದ್ದ. ಇದರಿಂದ ನೀರಿನಲ್ಲಿಯ ಮೀನು, ಬಸವನಹುಳು ಮುಂತಾದ ಪ್ರಾಣಿಗಳನ್ನು ಹಿಡಿಯಲು ಅನುಕೂಲ. ಅಲ್ಲದೆ ಪೆಲಿಕನ್ ಕೊಕ್ಕಿನ ಕೆಳಭಾಗದಲ್ಲಿ ಒಂದು ರೀತಿಯ ಚರ್ಮದ ಚೀಲ ಇದೆ. ನೀರಿನಲ್ಲಿ ಈಜುತ್ತಲೆ ಕೊಕ್ಕನ್ನು ಅಗಲಿಸಿ ಈ ಚೀಲವನ್ನು ಮುಳುಗುಬಲೆಯಂತೆ ಉಪಯೋಗಿಸಿ ಮೀನುಗಳನ್ನು ಪೆಲಿಕನ್ ಹಿಡಿಯಬಲ್ಲುದು. ಆಲ್ಬಟ್ರಾಸ್, ಸ್ಕಿಮರ್ ಮುಂತಾದ ಹಕ್ಕಿಗಳ ಕೊಕ್ಕು ನೀರಿನಿಂದ ಆಗಿಂದಾಗ್ಗೆ ಹೊರನೆಗೆಯುವ ಮೀನುಗಳನ್ನು ನೀರಿನ ಮೇಲೆ ಹಾರುತ್ತಿರುವಂತೆಯೇ ಹಿಡಿಯಲು ಅನುಕೂಲವಾಗಿದೆ. ಆಯಿಸ್ಟರ್‌ಕ್ಯಾಚರ್ ಹಕ್ಕಿಯ (ಹಿಮಟೋಪಸ್ ಪ್ರಭೇದ) ಕೊಕ್ಕು ಮೃದ್ವಂಗಿ ಪ್ರಾಣಿಗಳನ್ನು ಹಿಡಿಯುವುದಕ್ಕೂ ಅವುಗಳ ಚಿಪ್ಪನ್ನು ಒಡೆದು ಒಳಗಿನ ಪ್ರಾಣಿಗಳನ್ನು ತಿನ್ನುವುದಕ್ಕೂ ಹೇಳಿ ಮಾಡಿಸಿದಂತಿದೆ. ಈ ಹಕ್ಕಿ ತನ್ನ ನೀಳವಾದ, ಗಡುಸಾದ ಹಾಗೂ ಎಡಬಲಪಕ್ಕಗಳಲ್ಲಿ ಚಪ್ಪಟೆಯಾದ ಕೊಕ್ಕನ್ನು ಮೃದ್ವಂಗಿಗಳ ಚಿಪ್ಪಿನೊಳಕ್ಕೆ ತೂರಿಸಿ ತರುವಾಯ ತಿರುಗಿಸಿ ಚಿಪ್ಪುಗಳು ಬೇರ್ಪಡುವಂತೆ ಮಾಡಿ ಒಳಗಿನ ಮೃದುವಾದ ಮಾಂಸವನ್ನು ತಿನ್ನುತ್ತದೆ. ಗುಬ್ಬಚ್ಚಿ, ಪಾರಿವಾಳ, ಕೋಳಿ, ಗೀಜುಗಗಳಲ್ಲಿ ಕಾಳುಗಳನ್ನು ಆರಿಸಿ ತಿನ್ನಲು ಅನುಕೂಲವಾಗಿರುವ ಕೊಕ್ಕು ಇದೆ. ಹಾರ್ನ್‌ಬಿಲ್ ಹಕ್ಕಿಯ ಕೊಕ್ಕು ಬಹಳ ದೊಡ್ಡದು ಮತ್ತು ಉದ್ದವಾದುದು; ಹಣ್ಣು ಗಳನ್ನು ತಿನ್ನುವುದರಲ್ಲಿ ಸಹಾಯಕ. ಕ್ರಾಸ್‌ಬಿಲ್ ಎಂಬ ಹಕ್ಕಿಯ ಕೊಕ್ಕು ವಿಚಿತ್ರ ಬಗೆಯದು; ಕೊಕ್ಕಿನ ಮೇಲ್ಭಾಗ ಕೆಳಭಾಗಗಳು ಒಂದನ್ನೊಂದು ಅಡ್ಡ ಹಾಯುತ್ತವೆ. ಮೇಲ್ಭಾಗ ಬಲಕ್ಕೂ ಕೆಳಭಾಗ ಎಡಕ್ಕೂ ತಿರುವಿಕೊಂಡಿರುತ್ತವೆ. ಅಲ್ಲದೆ ಕೊಕ್ಕು ಮುಚ್ಚಿರುವಾಗಲೂ ತುದಿಗಳು ಅಡ್ಡಡ್ಡಲಾಗಿ ಚಲಿಸಬಲ್ಲವು. ಇಂಥ ರಚನೆಯಿಂದಾಗಿ ಕ್ರಾಸ್‌ಬಿಲ್ ಹಕ್ಕಿಗಳಿಗೆ ಪೈನ್ ಮರದ ಶಂಕುಗಳನ್ನು ಬಿಡಿಸಿಕೊಂಡು ಒಳಗಿರುವ ಬೀಜಗಳನ್ನು ತಿನ್ನುವ ನೈಪುಣ್ಯ ಬಂದಿದೆ.

ನ್ಯೂ ಜ಼ೀಲೆಂಡ್ ವಾಸಿಯಾದ ಹೂಯಿಯ ಎಂಬ ಹಕ್ಕಿಗಳಲ್ಲಿ ಗಂಡುಹಕ್ಕಿಯ ಕೊಕ್ಕು ಒಂದು ತೆರನಾದರೆ ಹೆಣ್ಣಿನ ಕೊಕ್ಕು ಇನ್ನೊಂದು ತೆರ. ಗಂಡಿನ ಕೊಕ್ಕು ಚಿಕ್ಕದಾಗಿದ್ದು ಗಡುಸಾಗಿಯೂ ಶಂಕುವಿನಾಕಾರದ್ದೂ ಆಗಿದೆ. ಇದರಿಂದ ಗಂಡು ಹಕ್ಕಿ ಕೀಟಗಳು ವಾಸಿಸುತ್ತಿರುವ ಮರಗಳನ್ನು ಕುಕ್ಕಿ ಕೀಟಗಳ ಗೂಡುಗಳನ್ನು ತೆರವು ಮಾಡಬಲ್ಲುದು. ಹೆಣ್ಣು ಹಕ್ಕಿಯ ಕೊಕ್ಕು ತೆಳುವಾಗಿಯೂ ನೀಳವಾಗಿಯೂ ಇದ್ದು ಕುಡುಗೋಲಿನಂತೆ ಬಾಗಿದೆ. ಇದರಿಂದ ಇದು ಕೀಟಗಳನ್ನು ಹಿಡಿಯಲು ಮಾತ್ರ ಅನುಕೂಲವಾಗಿದೆ; ಆದರೆ ಗಂಡಿನಂತೆ ಕೀಟಗಳ ಗೂಡುಗಳನ್ನು ಕುಕ್ಕಲು ಸಹಾಯಕವಾಗಿಲ್ಲ. ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ತಮ್ಮ ಆಹಾರಸೇವನೆಯಲ್ಲಿ ಪರಸ್ಪರ ಪೂರಕಗಳಾಗಿ ಕಾರ್ಯನಿರ್ವಹಿಸುತ್ತವೆ.

ಕೊಕ್ಕು ತನ್ನ ಆಕಾರ ಮತ್ತು ಗಾತ್ರಗಳಲ್ಲಿ ವೈವಿಧ್ಯಮಯವಾಗಿರುವಂತೆಯೇ ಬಣ್ಣದಲ್ಲೂ ವಿವಿಧತೆಯನ್ನು ಪ್ರದರ್ಶಿಸುತ್ತದೆ. ಕಾಗೆಯ ಕೊಕ್ಕು ಕಪ್ಪಾಗಿದ್ದರೆ, ಗಿಳಿ, ಮೈನ ಮುಂತಾದ ಹಕ್ಕಿಗಳ ಕೊಕ್ಕು ಹಳದಿ, ಕೆಂಪು, ಕಿತ್ತಳೆ, ನೇರಳೆ ಇತ್ಯಾದಿ ಬಣ್ಣಗಳಿಂದ ಕೂಡಿ ವರ್ಣರಂಜಿತವಾಗಿರುತ್ತದೆ. (ಬಿ.ಎನ್.ಬಿ.)

**ಕೊಕ್ಕೆಹುಳು :** ಅಂಕೈಲೊಸ್ಟೋಮ ಡುಯೋಡಿನೇಲ್ ಎಂಬ ಶಾಸ್ತ್ರೀಯ ಹೆಸರಿನ ಪರತಂತ್ರ ಜೀವಿ (ಹೂಕ್ ವರ್ಮ್). ನೆಮಟೋಡ ವರ್ಗದ ಸ್ಟ್ರಾಂಗೈಲಿಡೀ ಕುಟುಂಬಕ್ಕೆ ಸೇರಿದೆ. ಮನುಷ್ಯನ ಸಣ್ಣಕರುಳಿನ ಜೆಜುನಮ್ ಎಂಬ ಭಾಗದ ಒಳಪದರಕ್ಕೆ ಅಂಟಿಕೊಂಡು ವಾಸಿಸುತ್ತದೆ. ಇದು ಉಷ್ಣ ಹಾಗೂ ಉಪೋಷ್ಣವಲಯ ಪ್ರದೇಶಗಳಲ್ಲಿ ಕೊಕ್ಕೆಹುಳು ರೋಗ (ಅಂಕೈಲೊಸ್ಟೋಮಿಯಾಸಿಸ್–ಹೂಕ್‌ವರ್ಮ್‌ಡಿಸೀಸ್) ಎಂಬ ಪ್ರಬಲವಾದ ಸಾಂಕ್ರಾಮಿಕ ರೋಗವನ್ನುಂಟುಮಾಡುತ್ತದೆ. ರಕ್ತ ಹೀನತೆ ಮತ್ತು ದುರ್ಬಲತೆ ಈ ರೋಗದ ಮುಖ್ಯ ಚಿಹ್ನೆಗಳು.

ಪ್ರೌಢಹುಳುಗಳು ಕೊಳವೆಯಾಕಾರದವು. ದೇಹದ ಮುಂತುದಿ ಕೊಂಚ ಬಾಗಿದೆ. ಹೆಣ್ಣು ಹುಳು ಗಂಡಿಗಿಂತ ಹೆಚ್ಚು ಉದ್ದವಾಗಿಯೂ ದಪ್ಪವಾಗಿಯೂ ಇರುತ್ತದೆ. ಹೆಣ್ಣು ಹುಳುವಿನ ಉದ್ದ 10-13 ಮಿಮೀ. ಗಂಡಿನ ಉದ್ದ 8-10 ಮಿಮೀ. ಹೆಣ್ಣಿನ ದೇಹದ ಹಿಂತುದಿ ಮೊಂಡಾಗಿಯೂ ನೇರವಾಗಿಯೂ ಇದೆ. ದೇಹದ ತಳಭಾಗದಲ್ಲಿ, ದೇಹದ 1/3 ಭಾಗದಷ್ಟು ಹಿಂದಕ್ಕೆ ಜನನದ್ವಾರವಿದೆ. ಗಂಡಿನಲ್ಲಿ ಜನನದ್ವಾರ ದೇಹದ ಹಿಂತುದಿಯಲ್ಲಿರುವ ಕ್ಲೋಯಕ ದ್ವಾರದ ಬಳಿ ತೆರೆದಿರುತ್ತದೆ. ಅಲ್ಲದೆ ಇದರ ಅಕ್ಕಪಕ್ಕಗಳಲ್ಲಿ ಕ್ಯೂಟಿಕಲ್ ಪದರ ಅಗಲವಾಗಿ ಹರಡಿಕೊಂಡಿದ್ದು ಒಂದು ಬಗೆಯ ಮುಚ್ಚಳವಾಗಿ ಮಾರ್ಪಟ್ಟಿದೆ. ಇದಕ್ಕೆ ಕಾಪ್ಯುಲೇಟರಿ ಬರ್ಸ ಎಂಬ ಹೆಸರಿದೆ. ಸಂಭೋಗ ಕಾಲದಲ್ಲಿ ಹೆಣ್ಣನ್ನು ಹಿಡಿದುಕೊಳ್ಳಲು ಇದು ನೆರವಾಗುತ್ತದೆ. ದೇಹದ ಮುಂದಿನ ತುದಿಯ ಮೇಲ್ಭಾಗದಲ್ಲಿ ಬಾಯಿ ಇದೆ. ಬಾಯಿ ಸುತ್ತಲೂ ಕೊಕ್ಕೆಯಂಥ 6 ಹಲ್ಲುಗಳಿವೆ. ಗಂಟಲಿನಲ್ಲಿ ತ್ರಿಕೋಣಾಕಾರದ ಮತ್ತು ಚೂಪಾದ ಎರಡು ಹಲ್ಲುಗಳಿವೆ. ಇವುಗಳ ಸಹಾಯದಿಂದ ಕರುಳಿನ ಗೋಡೆಯಲ್ಲಿ ರಂಧ್ರ ಮಾಡಿ ರಕ್ತವನ್ನು ಹೀರಿ ಜೀವಿಸುತ್ತದೆ.

ಪೋಷಕ ಜೀವಿಯ ಕರುಳಿನಲ್ಲಿ ಗಂಡು ಹೆಣ್ಣು ಹುಳುಗಳ ಸಂಭೋಗ ಕ್ರಿಯೆ ನಡೆಯುತ್ತದೆ. ಹೆಣ್ಣಿನ ಗರ್ಭಕೋಶದಲ್ಲಿ ಗರ್ಭಾಂಕುರತೆಯಾಗಿ, ಗರ್ಭಕಟ್ಟಿದ ಮೊಟ್ಟೆಗಳು ಸ್ವಲ್ಪಮಟ್ಟಿಗೆ ಬೆಳೆದು ಪೋಷಕಜೀವಿಯ ಮಲದೊಡನೆ ಹೊರಬರುತ್ತವೆ. ಜೌಗು ಮಣ್ಣು ಮತ್ತು ಸಾಕಷ್ಟು ಉಷ್ಣತೆ ದೊರೆತರೆ 24–48 ಗಂಟೆಗಳ ಕಾಲದಲ್ಲಿ ಡಿಂಬಗಳು ಮೊಟ್ಟೆಯಿಂದ ಹೊರಬೀಳುತ್ತವೆ. ಇವುಗಳ ಮೈ ಸುತ್ತಲೂ ತೆಳುವಾದ ಪಾರದರ್ಶಕ ಪೊರೆ ಉಂಟು. ಈ ಹಂತದ ಡಿಂಬಗಳಿಗೆ ರ್‍ಯಾಬ್ಡಿಟಿ ರೂಪದ ಡಿಂಬಗಳೆಂದು ಹೆಸರು. ಇದು ಕೊಕ್ಕೆಹುಳುವಿನ ಜೀವನಚರಿತ್ರೆಯಲ್ಲಿ ಮೊದಲನೆಯ ಹಂತ. ಡಿಂಬದ ಅನ್ನನಾಳ ಮೊಟಕಾಗಿದ್ದು ಒಂದು ಗೋಳಾಕಾರದ ಉಬ್ಬಿನಂತೆ ಇರುತ್ತದೆ. ಡಿಂಬಗಳು ಜೌಗು ಮಣ್ಣಿನಲ್ಲಿರುವ ಸಾವಯವ ಪದಾರ್ಥವನ್ನು ಆಹಾರವಾಗಿ

ಉಪಯೋಗಿಸಿಕೊಳ್ಳುತ್ತವೆ. ಮೂರು ದಿವಸಗಳ ಅನಂತರ ಫೈಲೆರಿಫಾರಂ ಎಂಬ ಎರಡನೆಯ ಘಟ್ಟವನ್ನು ತಲಪುತ್ತವೆ. ಈ ಹಂತದಲ್ಲಿ ಇವುಗಳ ಅನ್ನನಾಳ ಸ್ವಲ್ಪ ಹೆಚ್ಚಿನ ಉದ್ದವಿರುತ್ತದೆ. ಡಿಂಬಗಳು ಕ್ರಮೇಣ ಬೆಳೆದು ಹೊರಗಿನ ಆಹಾರ ತಿನ್ನದಿರುವ ಫೈಲೆರಿಫಾರಂ ಡಿಂಬ ಎಂಬ ಮೂರನೆಯ ಘಟ್ಟಕ್ಕೆ ಬರುತ್ತವೆ. ಈ ಘಟ್ಟದಲ್ಲಿ ಇವಕ್ಕೆ ಮನುಷ್ಯನ ದೇಹವನ್ನು ಪ್ರವೇಶಿಸುವ ಸಾಮರ್ಥ್ಯ ಬರುತ್ತದೆ. ಯುಕ್ತ ಪೋಷಕಜೀವಿಯ ಆಸರೆ ಸಿಕ್ಕದಿದ್ದರೆ ಇವು ಜೌಗು ಮಣ್ಣಿನಲ್ಲಿ ಒಂದೆರಡು ತಿಂಗಳುಗಳ ಕಾಲ ಜೀವಿಸಿರಲೂ ಬಲ್ಲವು. ಮೂರನೆಯ ಘಟ್ಟದ ಡಿಂಬಗಳು ಹೊರಗಿನಿಂದ ಆಹಾರ ತೆಗೆದುಕೊಳ್ಳದೆ, ತಮ್ಮ ಹಿಂದಿನ ಹಂತಗಳಲ್ಲಿ ಕೂಡಿಟ್ಟ ಆಹಾರಪದಾರ್ಥಗಳನ್ನು ಉಪಯೋಗಿಸಿಕೊಂಡು ಜೀವಿಸಿರುತ್ತವೆ. ಜೌಗು ಪ್ರದೇಶದಲ್ಲಿ ಕಾಲುಗಳಿಗೆ ರಕ್ಷಣೆಯಿಲ್ಲದೆ ನಡೆಯುವ ಅಥವಾ ಕೆಲಸ ಮಾಡುತ್ತಿರುವವರ ಕಾಲಿನ ಚರ್ಮವನ್ನು ಕೊರೆದು ಅವರ ದೇಹವನ್ನು ಪ್ರವೇಶಿಸುತ್ತವೆ. ಮನುಷ್ಯಚರ್ಮದ ಸ್ಪರ್ಶವಾದ ಕೂಡಲೆ ಡಿಂಬದ ಹೊರಕವಚ ಕಳಚಿ ಬೀಳುತ್ತದೆ. ಕ್ರಮೇಣ ಚರ್ಮವನ್ನು ಕೊರೆದು ಒಳತೂರಿ ರಕ್ತ ಪರಿಚಲನಮಂಡಲದಲ್ಲಿ ಸೇರುತ್ತವೆ. ರಕ್ತ ಅಥವಾ ಲಿಂಫ್ ನಾಳಗಳ ಮೂಲಕ ಶ್ವಾಸಕೋಶಗಳು ಶ್ವಾಸನಾಳ, ಅನ್ನನಾಳ ಮತ್ತು ಜಠರವನ್ನು ಹಾಯ್ದು ಸಣ್ಣ ಕರುಳನ್ನು ಪ್ರವೇಶಿಸುತ್ತವೆ. ಹೀಗೆ ಪೋಷಕ ಜೀವಿಯ ಅಂಗಾಂಗಗಳಲ್ಲಿ ಚಲಿಸುವ ಕಾಲದಲ್ಲಿ ಅವುಗಳ ಬೆಳವಣಿಗೆ ಮುಂದುವರಿಯುತ್ತದೆ. ಕೊನೆಗೆ ಸಣ್ಣ ಕರುಳಿನ ಜೆಜುನಮ್ ಭಾಗಕ್ಕೆ ಬಂದು ಒಳಪದರಕ್ಕೆ ಕಚ್ಚಿಕೊಂಡು ಒಂದು ವಾರದಲ್ಲಿ ಪ್ರೌಢಜೀವಿಯಾಗುತ್ತವೆ. ಕೊಕ್ಕೆಹುಳುವಿನ ಆಯುಸ್ಸು ಸುಮಾರು 3–4 ವರ್ಷಗಳು. ಇದು ರಕ್ತಹೀರಿ ಜೀವಿಸುವುದರಿಂದ ಹುಳುಗಳ ಸಂಖ್ಯೆ ಅತಿಯಾಗಿದ್ದರೆ ರೋಗಿ ರಕ್ತಕೊರೆಯಾಗಿ ಬಿಳಿಚಿಕೊಳ್ಳುತ್ತಾನೆ. ಈ ಸಾಂಕ್ರಾಮಿಕ ರೋಗದ ಪ್ರಾಬಲ್ಯವನ್ನು ತಡೆಗಟ್ಟಲು ರೋಗಿಗಳ ಮಲವನ್ನು ನಾಶ ಮಾಡಬೇಕು. ಡಿಂಬಗಳ ಬೆಳವಣಿಗೆಗೆ ನೆರವಾಗುವ ಸನ್ನಿವೇಶಗಳನ್ನು ಹತೋಟಿಯಲ್ಲಿಡಬೇಕು. ಜನ ಕಾಲಿಗೆ ರಕ್ಷಣೆಯಿಲ್ಲದೆ ಜೌಗುಪ್ರದೇಶಗಳಲ್ಲಿ ಓಡಾಡಬಾರದು.

(ಪಿ.ಎ.ಆರ್.; ವಿ.ಎಸ್.ಜೆ.)

**ಕೊಕ್ಕೆ ಹುಳು ರೋಗ :** ನಮ್ಮ ದೇಶದ ಬಹುಪಾಲು ಜನರಿಗೆ ರಕ್ತಹೀನತೆ ಇದೆ. ಇವರ ರಕ್ತ ಹೀನತೆಗೆ ಮುಖ್ಯ ಕಾರಣ ಅವರ ಕರುಳಿನಲ್ಲಿ ನೆಲೆಸಿರುವ ಪುಟ್ಟ ಹುಳುವೆಂದರೆ ಸೋಜಿಗವೆನಿಸುತ್ತದೆ ಅಲ್ಲವೇ?

ಮಾನವನಿಗೆ ಕೊಕ್ಕೆ ಹುಳುಗಳ ಹಿಂಸೆ ಹೊಸತೇನಲ್ಲ. ಕ್ರಿ.ಪೂ. 1600 ರಲ್ಲಿಯೇ ಇವುಗಳ ಉಪಟಳವಿತ್ತೆಂದು ಇತಿಹಾಸ ಹೇಳುತ್ತದೆ. ಮುಂದುವರಿದ ದೇಶಗಳಲ್ಲಿ ಈಗ ಕೊಕ್ಕೆ ಹುಳುವಿನ ಬಾಧ್ಯತೆಯನ್ನು ಹಿಡಿತದಲ್ಲಿರಿಸಲಾಗಿದೆ. ಆದಾಗ್ಯೂ ಇಂದಿಗೂ ಜಗತ್ತಿನ 900 ಮಿಲಿಯನ್ ಜನರು ಹುಳುವಿನ ಹಾವಳಿಗೆ ಒಳಗಾಗಿದ್ದಾರೆ. ಅಷ್ಟೇ ಅಲ್ಲ ಪ್ರತಿವರ್ಷ ಕನಿಷ್ಠ ಅರ್ಧ ಲಕ್ಷದಷ್ಟು ಜನರಾದರೂ ಹುಳುವಿನಿಂದ ಉಂಟಾದ ರಕ್ತಹೀನತೆಯಿಂದ ಅಸುನೀಗುತ್ತಿದ್ದಾರೆ.

ಇಟಲಿ ದೇಶದಲ್ಲಿ ಏನ್ನಿಲೋ ಡಬಿನ್ ಎಂಬುವವರು 1838 ರಲ್ಲಿ ಈ ಹುಳುವನ್ನು ಮೊದಲಬಾರಿಗೆ ಕಂಡರಾದರೂ ಈಜಿಪ್ಟ್ ನ ಲಾಸ್ 1898 ರಲ್ಲಿ ಹುಳುಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿದ್ದಾರೆ. ಈ ಹುಳುವು ಅಂಕುಡೊಂಕಾಗಿದ್ದು ಆಕಾರದಲ್ಲಿ ಕೊಂಡಿಯನ್ನು ಹೋಲುತ್ತದೆ. ಆದುದರಿಂದ ಈ ಹುಳುವಿಗೆ ಅನ್ ಕಿಲೋಸ್ಟೋಮ (ಅನ್‌ಕಿಲೋ=ಕೊಕ್ಕೆ; ಸ್ಟೋಮ=ಬಾಯಿ) ಎಂದು ನಾಮಕರಣವಾಗಿದೆ. ಸ್ಟಿಲ್ಸ ಎಂಬುವವರು 1902 ರಲ್ಲಿ ಕೊಕ್ಕೆ ಹುಳುವಿನ ಮತ್ತೊಂದು ಉಪಜಾತಿಯನ್ನು ಅಮೇರಿಕದಲ್ಲಿ ಪತ್ತೆ ಹಚ್ಚಿ ಇವಕ್ಕೆ 'ಅಮೇರಿಕದ ಕೊಲೆಪಾತಕ' (ನೆಕ್ಟರ್ ಅಮೇರಿಕಾನ್) ಎಂದು ಕರೆದಿದ್ದಾರೆ, ಬಹುಶಃ ಈ ಹುಳುಗಳ ಉಗಮಸ್ಥಾನ ಆಫ್ರಿಕಾವಾಗಿದ್ದು, ಅಲ್ಲಿನ ಜೀತದಾಳುಗಳೊಂದಿಗೆ ಇವು ಅಮೇರಿಕಾವನ್ನು ಪ್ರವೇಶಿಸಿವೆ ಎಂದು ಭಾವಿಸಲಾಗಿದೆ. ಈಗ ಕೊಕ್ಕೆ ಹುಳುಗಳು ಪ್ರಪಂಚ ವ್ಯಾಪಿಯಾಗಿಬಿಟ್ಟಿವೆ.

ಭಾರತದ 200 ಮಿಲಿಯನ್ ಪ್ರಜೆಗಳಿಗೆ ಕೊಕ್ಕೆಹುಳುಗಳ ಬಾಧೆ ಇದೆ ಎಂದು ಸಮೀಕ್ಷೆಗಳು ತಿಳಿಸಿವೆ. ಅಸ್ಸಾಂ, ಬಂಗಾಲ, ಉತ್ತರ ಪ್ರದೇಶ, ಬಿಹಾರ, ಒರಿಸ್ಸಾ, ಪಂಜಾಬ್, ತಮಿಳುನಾಡು ಆಂಧ್ರ –ಪ್ರದೇಶಗಳಲ್ಲಿ ಶೇಕಡಾ 80 ರಷ್ಟು ಜನರಿಗೆ ಕೊಕ್ಕೆ ಹುಳುಗಳು ತಗುಲಿವೆ. ಕೇರಳ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿಯೂ ಈ ವ್ಯಾಧಿ ವ್ಯಾಪಕವಾಗಿಯೇ ಇದೆ. ಉತ್ತರ ಭಾರತೀಯರನ್ನು 'ಅನ್ ಕಿಲೋಸ್ಟೋಮ' ಜಾತಿಯ ಹುಳು ಕಾಡುತ್ತಿದೆ. ದಕ್ಷಿಣದವರನ್ನು ಹೆಚ್ಚಾಗಿ ಕಾಡುತ್ತಿರುವುದು ನೆಕ್ಟರ್ ಅಮೇರಿಕಾನ್ ಜಾತಿಯ ಕೊಕ್ಕೆ ಹುಳುಗಳು. ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಹೊರತುಪಡಿಸಿದಲ್ಲಿ ಎರಡು ಜಾತಿ ಕೊಕ್ಕೆ ಹುಳುಗಳ ಆಕಾರ ಮತ್ತು ಜೀವನಕ್ರಮದಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ. ಕೊಕ್ಕೆ ಹುಳುಗಳನ್ನು, 'ಚಿಲುಮೆ ಹುಳು' 'ಚಿಕ್ಕ ಜಂತು' ಎಂದೂ ಕರೆಯುವುದಿದೆ. ಇವುಗಳ ಬಾಧೆ ನಮ್ಮ ಜೀವನದ ಅವಿಭಾಜ್ಯ ಸಂಗತಿಯಾಗಿಬಿಟ್ಟಿದೆ. ಕೆಲವರಂತೂ ಈ ಹುಳುಗಳೇ ಆಹಾರವನ್ನು ಜೀರ್ಣ ಮಾಡುವ ಉಪಯುಕ್ತ ಜೀವಿಗಳೆಂದು ತಿಳಿದುಕೊಂಡುಬಿಟ್ಟಿದ್ದಾರೆ. ಚಿಲುಮೆ ಹುಳುಗಳಿಗೆ ಹಾಲು ಬಿಳುಪಿನ ಬಣ್ಣವಿದೆ. ಇವು ಕೇವಲ ಎಂಟು ಹತ್ತು ಮಿ.ಮೀ. ಉದ್ದ ಮತ್ತು ಅರ್ಧ ಮಿ.ಮೀ ದಪ್ಪ ಇರುತ್ತದೆ. ಇಡಿ ದೇಹ ಅಂಕು ಡೊಂಕಾಗಿದೆ. ಬಾಯಿಯ ಭಾಗ ಕೊಕ್ಕೆಯಂತೆ ಬಾಗಿದೆ. ಇವುಗಳ ಬಾಯಿಯಲ್ಲಿ ರಕ್ತ ಹೀರಲು ಅನುಕೂಲವಾಗಿರುವ ಗಟ್ಟಿಯಾದ ಆರು ಹಲ್ಲುಗಳಿವೆ. ಇವುಗಳಲ್ಲೂ ಲಿಂಗಬೇಧವಿದ್ದು ಗಂಡಿಗಿಂತ ಹೆಣ್ಣು ಸ್ವಲ್ಪ ದೊಡ್ಡದಾಗಿದೆ ಇವುಗಳ ಜೊಲ್ಲಿನಲ್ಲಿರುವ ರಸಾಯನಿಕಕ್ಕೆ ರಕ್ತವನ್ನು ಹೆಪ್ಪುಗಟ್ಟದಂತೆ ಇರಿಸುವ ಗುಣವಿದೆ. ಹೀಗಾಗಿ ಬಾಯಿಯ ಹಲ್ಲುಗಳಿಂದ ಆಶ್ರಯದಾತನ ಕರುಳನ್ನು ಚುಚ್ಚಿ ರಕ್ತ ಹೀರುತ್ತಾ ಬದುಕುತ್ತವೆ.

ಚಿಲುಮೆ ಹುಳುಗಳು ಚಿಕ್ಕ ಕರುಳಿನ ಪ್ರಥಮ ಭಾಗವಾದ "ಡಿಯೋಡಿನಂ"ನಲ್ಲಿ ವಾಸಿಸುತ್ತವೆ. ಮಾನವ ರಕ್ತವೇ ಇವುಗಳ ಆಹಾರ. ದಕ್ಷಿಣ ಭಾರತದಲ್ಲಿನ ನೆಕ್ಟರ್ ಅಮೇರಿಕಾನ್ ಜಾತಿಯ ಹುಳುಗಳು ದಿನಕ್ಕೆ 0,04ಮಿ.ಲೀ.ರಕ್ತ ಹೀರುತ್ತದೆ. ಕೇವಲ 25 ಹುಳುಗಳು ದೇಹದಲ್ಲಿದ್ದರೂ ದಿನಪ್ರತಿ ಒಂದು ಮಿ. ಲೀ.ರಕ್ತ ನಾಶವಾದಂತೆ ಉತ್ತರ ಭಾರತದಲ್ಲಿ ಹೆಚ್ಚಾಗಿ ಕಾಣಸಿಗುವ ಅನ್ ಕಿಲೋಸ್ಟೋಮ ಜಾತಿಯ ಕೊಕ್ಕೆ ಹುಳು ಹೆಚ್ಚುಭಯಂಕರವಾಗಿದ್ದು ಪ್ರತಿಹುಳು 0.2 ಮಿ.ಲೀ ನಂತೆ ಕೇವಲ ಐದು ಹುಳುಗಳು ಒಂದು ದಿನದಲ್ಲಿ ಒಂದು ಮಿಲಿಲೀಟರ್ ರಕ್ತವನ್ನು ಕುಡಿದುಬಿಡುತ್ತವೆ.

ಹರೆಯದ ಹೆಣ್ಣುಹುಳು ಪ್ರತಿದಿನ 15 ರಿಂದ 20 ಸಾವಿರದಂತೆ ತನ್ನ ಜೀವಿತಾವಧಿಯಲ್ಲಿ 50 ರಿಂದ 60 ಮಿಲಿಯನ್ ಗಳಷ್ಟು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆ ಅಂಡಾಕರವಾಗಿದ್ದು 60 ಮೈಕ್ರಾನ್ ಉದ್ದ 40 ಮೈಕ್ರಾನ್ ದಪ್ಪವಿರುತ್ತದೆ. ಮೊಟ್ಟೆಗೆ ಬಿಳಿಯ ಬಣ್ಣದ ಪಾರದರ್ಶಕ ಕವಚವಿದೆ, ಒಳಗಡೆಯ ತಿರುಳು ನಾಲ್ಕು ಭಾಗವಾಗಿ ವಿಂಗಡನೆಯಾಗಿರುತ್ತದೆ.

ಕೊಕ್ಕೆ ಹುಳುವಿನ ವ್ಯಾಧಿಗೆ ಒಳಗಾದವರ ಮಲದೊಂದಿಗೆ ಅಸಂಖ್ಯಾತ ಸಂಖ್ಯೆಯ ಮೊಟ್ಟೆಗಳು ವಿಸರ್ಜನೆಯಾಗುತ್ತಿರುತ್ತವೆ. ನಮ್ಮ ದೇಶದ ಬಹುಪಾಲು ಜನರು ಮಲ ವಿಸರ್ಜಿಸುವುದು ಬಯಲಿನಲ್ಲಿ. ಹೀಗಾಗಿ ಮೊಟ್ಟೆಗಳು ಮಲದೊಂದಿಗೆ ಭೂಮಿಯನ್ನು ಸೇರುತ್ತವೆ. ನಮ್ಮ ದೇಶದ ಜಿಗುಟು/ಮರಳು ಮಣ್ಣು ಹಾಗೂ ಹವಾಮಾನ ಮೊಟ್ಟೆಗಳ ಬೆಳವಣಿಗೆಗ ಸೂಕ್ತವಾಗಿದೆ. ಒಂದೆರಡು ದಿನಗಳಲ್ಲಿ ಭೂಮಿಯ ಉಷ್ಣತೆಗೆ ಮೊಟ್ಟೆಗಳು ಒಡೆದು ಪುಟ್ಟ ಪುಟ್ಟ ಮರಿಗಳು ಹೊರಬರುತ್ತವೆ. ಇವು ಮತ್ತೆ ಬೆಳವಣಿಗೆ ಹೊಂದಿ ಒಂದೆರಡು ಸಾರಿ ಪೊರೆ ಕಳಚಿಕೊಂಡು ಮಾನವನ ಚರ್ಮವನ್ನು ಚುಚ್ಚಿಕೊಂಡು ಹೋಗಬಲ್ಲ "ರ್‍ಯಾಬ್‌ಡಿಟಿಪಾರಂ" ಎಂಬ ಲಾರ್ವವಾಗುತ್ತದೆ. ಇವು ಭೂಮಿಯಲ್ಲಿ ಹರಿದಾಡಿಕೊಂಡಿದ್ದು, ಹುಲ್ಲಿನ ಎಲೆಯನ್ನು ಏರಿಕೊಂಡು ಅತಿಥೇಯರಿಗಾಗಿ ಕಾಯುತ್ತಾ ತಿಂಗಳು ತನಕ ಬದುಕುತ್ತವೆ.

ಇತರೆ ಜಂತುಗಳಂತೆ ಕೊಕ್ಕೆ ಹುಳುಗಳು ಆಹಾರದ ಮೂಲಕ ದೇಹ ಸೇರದೆ ಲಾರ್ವಾಗಳು ತಮ್ಮ ಸೂಜಿಯಂತಹ ದೇಹವನ್ನು ಚರ್ಮದಲ್ಲಿ ತೂರಿಸಿಕೊಂಡು ದೇಹದೊಳಗೆ ಪ್ರವೇಶಿಸುತ್ತದೆ. ಬರಿಗಾಲಿನಲ್ಲಿ ಓಡಾಡುವವರನ್ನು ಕಂಡರೆ ಅವುಗಳಿಗೆ ಸಂಭ್ರಮ. ಮಾನವ ದೇಹದ ಉಷ್ಣದಿಂದ ಆಕರ್ಷಿತವಾದ ಲಾರ್ವಾಗಳು ಚರ್ಮ ತೂರಿಕೊಂಡು ಒಳ ಪ್ರವೇಶಿಸಿ ರಕ್ತವನ್ನು ಸೇರಿಕೊಳ್ಳುತ್ತವೆ. ಹೊಸ ಆಶ್ರಯ ಸ್ಥಾನದಲ್ಲಿ ಚೂಟಿಯಾಗಿ ಚಲಿಸುತ್ತ ಯಕೃತ್, ಹೃದಯ, ಶ್ವಾಸಕೋಶ, ಶ್ವಾಸನಾಳಗಳಲ್ಲೆಲ್ಲಾ ಸಂಚರಿಸಿ ಕೊನೆಗೆ ಅನ್ನ ನಾಳದ ಮೂಲಕ ಕರುಳನ್ನು ಸೇರಿ ಚಿಕ್ಕ ಕರುಳಿನ ಆದಿ ಭಾಗದಲ್ಲಿ ನೆಲಸುತ್ತವೆ. ಕರುಳಿನ ಗೋಡೆಗೆ ಬಾಯಿಹಚ್ಚಿ ರಕ್ತವನ್ನು ಹೀರುತ್ತಾ ಬೆಳೆಯುತ್ತವೆ. ಬಲಿತ ಹೆಣ್ಣು ಮೊಟ್ಟೆಗಳನ್ನಿಡಲಾರಂಭಿಸುತ್ತದೆ. ಲಾರ್ವ ಚರ್ಮದ ಮೂಲಕ ದೇಹ ಸೇರಿದ ಆರು ವಾರಗಳ ಅನಂತರ ಬೆಳೆದು ದೊಡ್ಡದಾಗಿ ಮೊಟ್ಟೆ ಇಡುವ ಹಂತವನ್ನು ತಲುಪುತ್ತದೆ. ಹುಳುಗಳ ಆಯುಷ್ಯ 3 ರಿಂದ 4 ವರ್ಷಗಳು.

ಯಾವುದೇ ವಯಸ್ಸಿನವರಿಗೆ ಕೊಕ್ಕೆಹುಳುವಿನ ಬಾಧೆ ತಗುಲಬಹುದಾದರೂ 15 ರಿಂದ 25 ವರ್ಷದ ಗ್ರಾಮೀಣ ಕೃಷಿಕರಿಗೆ ಹುಳುಗಳ ಉಪಟಳ ಅಧಿಕ. ಹುಳುವಿನ ಬಾಧೆಗೊಳಗಾದವರಿಗೆ ರಕ್ತಹೀನತೆ ಉಂಟಾಗುತ್ತದೆ. ರಕ್ತಹೀನತೆಯಿಂದ ಅಶಕ್ತತೆ, ಆಯಸ ಮುಖಬಿಳಿಚಿಕೊಳ್ಳುವಿಕೆ, ದೇಹದಲ್ಲಿ ಬಾವು ಹೃದಯ ದೌರ್ಬಲ್ಯ ಮುಂತಾದ ತೊಂದರೆಗಳು ಉದ್ಭವಿಸುತ್ತವೆ. ದುಡಿವ ಸಾಮರ್ಥ್ಯ ಕಡಿಮೆಯಾಗುತ್ತದೆ. ಆರ್ಥಿಕ ಪರಿಸ್ಥಿತಿಯೂ ಹದಗೆಡುತ್ತದೆ.

ರಕ್ತ ಹೀನತೆಯಿಂದ ಬಳಲುವವರಿಗೆ ರೋಗಗಳನ್ನೆದುರಿಸುವ ಸಾಮರ್ಥ್ಯ ಕುಗ್ಗುತ್ತದೆ. ಹೀಗಾಗಿ ಇವರು ಪದೇ ಪದೇ ಕಾಯಿಲೆ ಬೀಳುತ್ತಾರೆ. ರಕ್ತಹೀನತೆಗೊಳಗಾದ ಗರ್ಭಿಣಿಯರು ಅಪೌಷ್ಠಿಕ ಮಗುವನ್ನು ಹೆರುತ್ತಾರೆ. ಮಕ್ಕಳು ಆಟ ಪಾಠದಲ್ಲಿ ಹಿಂದೆ ಬೀಳುತ್ತಾರೆ. ಇವರ ಬೆಳವಣಿಗೆಯೂ ಸಮರ್ಪಕವಾಗಿರಲಾರದು.

ಕೊಕ್ಕೆಹುಳುವಿನ ಮರಿಗಳು ಚರ್ಮವನ್ನು ತೂರಿಕೊಂಡು ದೇಹವನ್ನು ಪ್ರವೇಶಿಸುವುದರಿಂದ ಅವು ಹೊಕ್ಕ ಜಾಗದಲ್ಲಿ ನವೆ, ಉರಿ, ಕೀವಿನ ಗುಳ್ಳೆ ಉಂಟಾಗುವುದಿದೆ. ಕಾಲ್ಬೆರಳುಗಳ ಸಂದಿಯಲ್ಲಿ ಹೀಗಾಗುವುದು ಹೆಚ್ಚು. ಹುಳುಗಳು ಶ್ವಾಸಕೋಶದಲ್ಲೂ ಕೆಲಕಾಲ ಕಳೆದು ಆಶ್ರಯದಾತನನ್ನು ಕೆಮ್ಮಿಸುತ್ತವೆ. ಕೆಲವರಿಗೆ ಹುಳುವಿನಿಂದ ಅಲರ್ಜಿಯಾಗಿ ಮೈ ಕಡಿತ, ದದ್ದು ಉಂಟಾಗುತ್ತದೆ. ಕೊಕ್ಕೆ ಹುಳುಗಳನ್ನು ಸಂಹರಿಸಲು ಪರಿಣಾಮಕಾರಿಯಾದ ಔಷಧಿ ಇದೆ. ನಮ್ಮ ದೇಶದಲ್ಲಿ ಹುಳುಗಳ

ಹಾವಳಿ ವ್ಯಾಪಕವಾಗಿರುವುದರಿಂದ ಪ್ರತಿಯೊಬ್ಬರೂ ಆರು ತಿಂಗಳಿಗೊಮ್ಮೆ ಔಷಧಿ ತೆಗೆದುಕೊಂಡು, ಹುಳುವಿನ ಬಾಧೆಯಿಂದ ಪಾರಾಗಬೇಕಾದ ಅನಿವಾರ್ಯತೆ ಇದೆ. ಕೊಕ್ಕೆ ಹುಳುಗಳು ದೇಹಕ್ಕೆ ಸೇರದಂತೆ ಮಾಡಲು ಎಲ್ಲರೂ ಕಾಲಿಗೆ ಚಪ್ಪಲಿ ಧರಿಸಿಕೊಳ್ಳುವುದನ್ನು ರೂಡಿಮಾಡಿಕೊಳ್ಳಬೇಕಾಗಿದೆ. "ಚಪ್ಪಲಿ ಧರಿಸಿದಲ್ಲಿ ಚಿಲುಮೆ ಹುಳುವಿನ ಬಾಧೆಯಿಲ್ಲ" ಎಂಬ ಹೊಸ ಗಾದೆಯನ್ನು ಮಾನವರು ಮನದಟ್ಟು ಮಾಡಿಕೊಳ್ಳಬೇಕು. ರೈತರು ಮಣ್ಣು ಮತ್ತು ಗೊಬ್ಬರವನ್ನು ಮುಟ್ಟುವಾಗ ಕೈ ಮತ್ತು ಕಾಲಿಗೆ ರಕ್ಷಕ ಕವಚ ಹಾಕಿಕೊಂಡರೆ ಚಿಲುಮೆ ಹುಳುಗಳಿಂದ ರಕ್ಷಣೆ ದೊರೆಯುತ್ತದೆ.

ಹುಳುಗಳನ್ನು ಶಾಶ್ವತವಾಗಿ ಹೊರಗಟ್ಟಬೇಕಾದರೆ ಸರ್ವರಿಗೂ ಶೌಚಾಲಯದ ಸೌಲಭ್ಯ ಸಿಗಬೇಕು. ನೆಲದಲ್ಲಿ ಮಲ ವಿಸರ್ಜಿಸುವ ಪದ್ಧತಿ ನಿಲ್ಲುವವರೆಗೆ ನಮಗೆ ಕೊಕ್ಕೆ ಹುಳುಗಳ ಬಾಧೆ ತಪ್ಪುವುದೇ ಅಸಾಧ್ಯ. ಶೌಚಾಲಯದ ಕ್ರಾಂತಿಯಿಂದ ಕೊಕ್ಕೆ ಹುಳುವಿಗೆ ವಿದಾಯ ಕೋರಲೆಂದೇ "ರಾಕ್ ಫಿಲರ್ ಫೌಂಡೇಶನ್" ಎಂಬ ಸಂಸ್ಥೆ 1913 ರಲ್ಲಿ ಸ್ಥಾಪಿತಗೊಂಡಿದೆ. ಈ ಸಂಸ್ಥೆ ವಿಶ್ವದಾದ್ಯಂತ ತನ್ನ ಚಟುವಟಿಕೆಗಳನ್ನು ನಡೆಸುತ್ತಿದೆ. (ಎಂ.ಡಿ.)

**ಕೊಕ್ಕೊ :** ಇದೊಂದು ಭಾರತೀಯ ಆಟ. ಕರ್ನಾಟಕದಲ್ಲಿ ಹಳ್ಳಿ ಹಳ್ಳಿಗಳಲ್ಲೂ ಬಳಕೆಯಲ್ಲಿದೆ. **(ನೋಡಿ– ಆಟಗಳು)** ಪಶ್ಚಿಮ ಭಾರತದಲ್ಲಿದು ಪ್ರಖ್ಯಾತಿ ಗಳಿಸಿದೆ. ಇದಕ್ಕೆ ನಿಯಮಗಳನ್ನೇರ್ಪಡಿಸಿದ ಕೀರ್ತಿ ಮಹಾರಾಷ್ಟ್ರಕ್ಕೆ ಸಲ್ಲಬೇಕು. ಈಗ ಕೊಕ್ಕೊ ಅಧಿಕೃತ ಕ್ರೀಡೆಗಳಲ್ಲೊಂದಾಗಿದೆ. ಈ ಆಟಕ್ಕೆ ಹೆಚ್ಚಿನ ಪರಿಕರಗಳ ಅಗತ್ಯವಿಲ್ಲ. ಒಳ್ಳೆಯ ಮೈದಾನ, ಹನ್ನೆರಡು ಹನ್ನೆರಡು ಮಂದಿ ಇರುವ ಎರಡು ಗುಂಪು ಆಟಗಾರರು. ನೆಡಲು ಬೇಕಾಗುವ ಎರಡು ಕಂಬಗಳು–ಇಷ್ಟಿದ್ದರಾಯಿತು. ಮಿಕ್ಕಂತೆ ಎಲ್ಲ ಆಟಗಳಲ್ಲೂ ಇರುವಂತೆ ಒಬ್ಬ ತೀರ್ಪುಗಾರ, ಇಬ್ಬರು ಉಪ–ತೀರ್ಪುಗಾರರು, ಒಬ್ಬ ಸ್ಕೋರರ್, ಒಬ್ಬ ಟೈಮರ್ ಬೇಕಾಗುತ್ತದೆ.

30ರಿಂದ 40 ಸೆಂ.ಮೀ. ದಪ್ಪವಿರುವ ಗುಂಡನೆಯ ಕಂಬಗಳೆರಡನ್ನು ನೆಲದಿಂದ 4 ಅಡಿ ಅಂದರೆ 120 ಸೆಂ.ಮೀ. ಇರುವ ಹಾಗೆ ಬಲವಾಗಿ ನೆಡಬೇಕು. ಅವೆರಡರ




ಚಿತ್ರ 1 ಕೊಕ್ಕೊ ಮೈದಾನದ ನಕ್ಷೆ

ಮಧ್ಯದ ಅಂತರ ಸುಮಾರಾಗಿ 20–40 ಮೀಟರುಗಳು. ಈ ಕಂಬಗಳನ್ನು ನಡುಮಾಡಿಕೊಂಡು 30 ಮೀಟರ್ ಉದ್ದ 16 ಮೀಟರ್ ಅಗಲ ಇರುವ ಕಣವನ್ನು ಸಿದ್ಧ ಮಾಡುತ್ತಾರೆ (ವಿವರಗಳಿಗೆ ಚಿತ್ರ 1 ನೋಡಿ). ಈ ಕಂಬಗಳು ಬಹು ನುಣುಪಾಗಿರಬೇಕಾಗುತ್ತದೆ. ಇವುಗಳ ತಲೆಗಳೂ ಅಷ್ಟೆ. ಏಕೆಂದರೆ ಓಡುವವರು ಪದೇ ಪದೇ ಈ ಕಂಬಗಳಿಗೆ ಕೈ ಕೊಟ್ಟು ಓಟ ಮುರಿದು ತಿರುವು ತೆಗೆದುಕೊಳ್ಳುತ್ತಾರೆ.

ಆಟಗಾರರ ಗುಂಪಿನಲ್ಲಿ ಒಂದು ಗುಂಪು ಹಿಡಿಯುವ ಕೆಲಸ ಮಾಡುತ್ತದೆ. ಮತ್ತೊಂದು ತಪ್ಪಿಸಿಕೊಂಡು ಓಡುವ ಕೆಲಸ ಮಾಡುತ್ತದೆ. ಯಾವ ಗುಂಪಿಗೆ ಏನು ಕೆಲಸ ಎಂಬುದನ್ನು ನಾಣ್ಯ ಹಾರಿಸಿ ನಿರ್ಧರಿಸುತ್ತಾರೆ. ಹಿಡಿಯುವ ಗುಂಪಿನಲ್ಲಿ 12 ಜನರಿದ್ದರೂ ಒಮ್ಮೆಗೆ ಆಟಕ್ಕಿಳಿಯುವವರು 9 ಮಂದಿ ಮಾತ್ರ. ಉಳಿದವರು ಮೀಸಲು ಆಟಗಾರರು. ತೀರ್ಪುಗಾರರ ಅಪ್ಪಣೆ ಪಡೆದು, ಆಟಕ್ಕಿಳಿದವರ ಬದಲಿಗೆ ಈ ಮೀಸಲು ಆಟಗಾರರು ರಂಗಕ್ಕಿಳಿಯಬಹುದು.

ಆಟ ಪ್ರಾರಂಭವಾಗುವುದಕ್ಕೆ ಮೊದಲು ಹಿಡಿಯುವ ಗುಂಪಿನ ಒಂಬತ್ತು ಜನರಲ್ಲಿ ಎಂಟು ಮಂದಿ ಎರಡು ಗೂಟಗಳ ನಡುವೆ ನಿಗದಿ ಮಾಡಿರುವ ಜಾಗದಲ್ಲಿದ್ದು ಕೊಕ್ ಬಂದ ಕೂಡಲೇ ಓಡಲು ಸಿದ್ಧರಾಗಿರುತ್ತಾರೆ. ಗೂಟಗಳನ್ನು ಉತ್ತರ ದಕ್ಷಿಣವಾಗಿ ನೆಟ್ಟಿದ್ದರೆ ಕೂಡುವವರಲ್ಲಿ ಒಬ್ಬ ಪೂರ್ವಕ್ಕೆ ಮುಖ ಮಾಡಿದರೆ ಅವನ ಪಕ್ಕದವನು ಪಶ್ಚಿಮಕ್ಕೆ ಮುಖಮಾಡಿರುತ್ತಾನೆ. ಹೀಗೆ ನಾಲ್ಕು ಮಂದಿ ಪೂರ್ವಕ್ಕೂ 4 ಮಂದಿ ಪಶ್ಚಿಮಕ್ಕೂ ಮುಖಮಾಡಿರುತ್ತಾರೆ. ಒಂಬತ್ತನೆಯವನೆ ಓಡಿ ಹಿಡಿಯುವವ. ಹಿಡಿಯುವವ ಕಂಬ ಸುತ್ತಿಯೇ ಹೋಗಬೇಕು, ಕಂಬದ ನಡುವಿನ ಜಾಗದಲ್ಲಿ ಅಡ್ಡಹಾಯ್ದು ಆಚೆ ಬದಿಗೆ ಹೋಗುವಂತಿಲ್ಲ. ಅಲ್ಲದೆ ತಾನು ಓಡುತ್ತಿರುವ ದಿಕ್ಕನ್ನು ಬದಲಾಯಿಸುವಂತೆಯೂ ಇಲ್ಲ. ಓಡುವವರಿಗೆ ಈ ನಿಯಮವಿಲ್ಲ. ಅವರು ಕಂಬದ ನಡುವೆ ಅತ್ತ ಇತ್ತ ಓಡಬಹುದು. ಓಡುವ ದಿಕ್ಕನ್ನೂ ಬದಲಿಸಬಹುದು. ಹಿಡಿಯಲು ಓಡುವವನು ತನಗೆ ಸುಸ್ತು ಎನಿಸಿದಾಗ ಅಥವಾ ಎದುರಾಳಿಗಳು ವಿರುದ್ಧ ಪಾರ್ಶ್ವದಲ್ಲಿದ್ದಾಗ, ಕುಳಿತ ಯಾವನಾದರೊಬ್ಬನ ಬೆನ್ನು ಮುಟ್ಟಿ ಕೊಕ್ ಎಂದು ಕೂಗಿ ಅವನನ್ನು ಹಿಡಿಯಲು ಅಟ್ಟಿ ಅವನ ಜಾಗದಲ್ಲಿ ಕೂರಬಹುದು.

ಚಿತ್ರ 2 ಕಂಬ ಸುತ್ತಿ ಓಡುತ್ತಿರುವ ದೃಶ್ಯ

ಈ ಒಂದು ಅವಕಾಶ ಇರುವುದರಿಂದ ತಪ್ಪಿಸಿಕೊಂಡು ಓಡಿ ಹೋಗುವವರಿಗೂ ಬಹಳ ಕಷ್ಟವಾಗುತ್ತದೆ. ಕೊಕ್ ಕೊಡಿಸಿಕೊಂಡು ಎದ್ದು ಓಡುವವನು ತನ್ನ ಎರಡು ಭುಜಗಳು ಎಡಕ್ಕೆ ತಿರುಗಿದ್ದರೆ ಎಡಕ್ಕೇ ಓಡಬೇಕು. ಬಲಕ್ಕೆ ತಿರುಗಿದ್ದರೆ ಬಲಕ್ಕೆ ಓಡಬೇಕು. ಮನಸ್ವೀ ದಿಕ್ಕು ಬದಲಾಯಿಸುವಂತಿಲ್ಲ. ಇದರಿಂದಾಗಿ ಆಟದ ಸ್ವಾರಸ್ಯ ಹೆಚ್ಚುತ್ತದೆ.

ಹಿಡಿಯುವವರು ಒಂಬತ್ತು ಜನರೂ ಅಖಾಡಕ್ಕೆ ಇಳಿದಂತೆ ಓಡುವ ಒಂಬತ್ತು ಜನರೂ ಒಟ್ಟಿಗೆ ಇಳಿಯಬೇಕಾಗಿಲ್ಲ. ಒಮ್ಮೆಗೆ ಮೂರರಂತೆ ಅವರು ಸಾಮಾನ್ಯವಾಗಿ ಆಟಕ್ಕೆ ಇಳಿಯುತ್ತಾರೆ. ಮೊದಲ ಮೂವರು ಚಿತ್ತಾದ ನಿಮಿಷದಲ್ಲೇ ಮತ್ತೆ ಮೂವರು ಆಟಕ್ಕೆ ಇಳಿಯುತ್ತಾರೆ. ಅಲ್ಪಸ್ವಲ್ಪ ತಡವಾದರೂ ಅವರಿಗೆ ಆಟದ ಅವಕಾಶ ದೊರೆಯದು.

ಚಿತ್ರ 3 ಯಾರಿಗೆ ಕೊಕ್ ಬರುತ್ತದೋ ಎಂದು ಕಾದು ನೋಡುತ್ತಿದ್ದಾರೆ

ಆಟಗಾರರೆಲ್ಲರೂ ನಿಗದಿಯಾದ ಆಟದ ಮೈದಾನದ ಪರಿಮಿತಿಯಲ್ಲೇ ಓಡಬೇಕು. ಹೆಜ್ಜೆ ಗೆರೆಯ ಹೊರಗಾದರೆ ಚಿತ್ತು. ಓಡುವವರು ಕೂತವರನ್ನು ಮುಟ್ಟಬಾರದು.

ಒಂಬತ್ತು ಜನರ ಪ್ರತಿಯೊಂದು ಪಂಗಡವೂ ಒಂದು ಸಾರಿ ಓಡುವುದು (9 ಮಿನಿಟ್) ಮತ್ತು ಒಂದು ಸಾರಿ ಹಿಡಿಯುವುದು (9 ಮಿನಿಟ್) ಮಾಡಿದಲ್ಲಿ ಒಂದು ಇನ್ನಿಂಗ್ಸ್ ಆದಂತೆ. ಇದಕ್ಕೆ ನಿಗದಿಯಾಗಿರುವ ಕಾಲ 18 ಮಿನಿಟುಗಳು. ಒಂದು ಇನಿಂಗ್ಸ್

ಮುಗಿದ ಮೇಲೆ 9 ನಿಮಿಷಗಳ ವಿರಾಮ. ಒಂದು ಸುತ್ತು ಮುಗಿದಾಗ ಐದು ನಿಮಿಷ ವಿರಾಮ. ಕರ್ನಾಟಕದ ಎಸ್. ಪ್ರಕಾಶ್ ಹಾಗೂ ಶೋಭಾ ನಾರಾಯಣ ಕೊಕ್ಕೊನಲ್ಲಿ ಅಪ್ರತಿಮ ಸಾಧನೆಯೊಂದಿಗೆ ಅರ್ಜುನ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಬೆಳಗಾವಿಯ ಕಡೊಲಿ ಎಂಬ ಗ್ರಾಮದ ಶ್ಯಾಮಲಾ ಪಾಟೀಲ ಎಂಬ ಆಟಗಾರ್ತಿ ತನ್ನ ಅಮೋಘ ಆಟದಿಂದ, ಕರ್ನಾಟಕ ಏಳು ಸಲ ರಾಷ್ಟ್ರೀಯ ಪ್ರಶಸ್ತಿ ಗೆಲ್ಲುವಂತೆ ಮಾಡಿದ್ದರು. (ಬಿ.ವಿ.ಕೆ.)

**ಕೊಚಾನೋವ್‌ಸ್ಕಿ, ಜಾನ್ :** 1530–84. ಪೋಲಿಷ್ ಕವಿ ಮತ್ತು ನಾಟಕಕಾರ. ಪೋಲೆಂಡಿನ ರಾಡುಮ್ ಪ್ರದೇಶದ ಸೈಯಾನದ ಶ್ರೀಮಂತ ಕುಟುಂಬದಲ್ಲಿ ಜನಿಸಿದ. ಪೋಲೆಂಡು ಮತ್ತು ಪಾಡುವಗಳಲ್ಲಿ ವಿದ್ಯಾಭ್ಯಾಸ ಪಡೆದು ಯೂರೋಪಿನ ಕೆಲವು ಭಾಗಗಳಲ್ಲಿ ಪ್ರವಾಸಮಾಡಿ ಬಂದ ಅನಂತರ 1559 ರಿಂದ 15 ವರ್ಷಗಳಕಾಲ ರಾಜನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದ. 1575ರ ವೇಳೆಗೆ ತನ್ನ ಸ್ವಂತ ಊರಿಗೆ ಮರಳಿ ಮದುವೆಯಾಗಿ, ಉಳುಮೆಯ ಜೀವನವನ್ನವಲಂಬಿಸಿದ.

ಪ್ರಾಚೀನ ಸಾಹಿತ್ಯದಲ್ಲಿ ಆಳವಾಗಿ ಅಭ್ಯಾಸ ಮಾಡಿದ್ದ ಈತ ತನ್ನ ಬರೆವಣಿಗೆಯ ಮೊದಲ ವರ್ಷಗಳಲ್ಲಿ ಲ್ಯಾಟಿನ್ ಭಾಷೆಯಲ್ಲಿ ಪ್ರೇಮಗೀತೆಗಳನ್ನೂ ಶೋಕಗೀತೆಗಳನ್ನೂ ಚಾಟುಪದ್ಯಗಳನ್ನೂ ರಚಿಸಿದ. ರಾಜನ ಆಸ್ಥಾನದಲ್ಲಿದ್ದ ಕಾಲದಲ್ಲಿ ಲ್ಯಾಟಿನ್ ಹಾಗೂ ಪೋಲಿಷ್ ಭಾಷೆಯಲ್ಲಿ ಕವನ ರಚನೆಮಾಡಿದ. 1570ರ ಅನಂತರ ಪೋಲಿಷ್ ಭಾಷೆಯಲ್ಲಿ ಬರೆದ. ಪೀಸ್‌ನಿ ಎಂಬ ಗ್ರಂಥದಲ್ಲಿ ಈತನ ಪ್ರೇಮಗೀತೆಗಳೂ ದೇಶಪ್ರೇಮಗೀತೆಗಳೂ ತಾತ್ತ್ವಿಕ ಗೀತೆಗಳೂ ಅಡಕವಾಗಿವೆ. ಗ್ರೀಕ್ ಮಾದರಿಯಲ್ಲಿ ಈತ ಒಂದು ಉತ್ತಮ ನಾಟಕ ರಚಿಸಿದ್ದಾನೆ.

ಪೋಲೆಂಡಿನ ಸಾಹಿತ್ಯದ ಸುವರ್ಣಯುಗಕ್ಕೆ ಸೇರಿದವನಾಗಿ ಈತ ಆ ಯುಗದ ಸಾಧನೆಗೆ ಅಸಾಧಾರಣ ಕೊಡುಗೆ ನೀಡಿದ್ದಾನೆ. ತನ್ನ ಕಾಲದ ಸ್ಲಾವ್ ಪ್ರಪಂಚದ ಅತಿ ಶ್ರೇಷ್ಠ ಕವಿ ಎನಿಸಿದ ಈತ ಪೋಲೆಂಡಿನ ಮೊತ್ತಮೊದಲ ಅಭಿಜಾತ ಕವಿ; ಅಸಾಧಾರಣ ಮಾನವೀಯತಾವಾದಿ, ಪೋಲೆಂಡಿನ ರಾನ್‌ಸಾರ್ಡ್(ಫ್ರೆಂಚ್ ಕವಿ) ಎಂದು ಈತನನ್ನು ಕರೆಯಲಾಗಿದೆ. ಪ್ರಾಚೀನ ಸಾಹಿತ್ಯ ಮತ್ತು ಮಾನವೀಯತೆಯ ಮನೋಧರ್ಮಗಳುಳ್ಳ ರಾಷ್ಟ್ರೀಯ ಕಾವ್ಯಸಾಹಿತ್ಯವನ್ನು ಪೋಲೆಂಡಿನಲ್ಲಿ ನಿರ್ಮಿಸಿದವನೀತ. ಉಪದೇಶವಾಗಲಿ ಮನೋರಂಜನೆಯಾಗಲಿ ಇವನ ಉದ್ದೇಶವಲ್ಲ. ಕಾವ್ಯಾಧಿದೇವತೆಗಳಿಗಾಗಿ ಮತ್ತು ನನಗಾಗಿ ನಾನು ಹಾಡಿಕೊಳ್ಳುತ್ತೇನೆ ಎಂದು ತನ್ನ ಕೃತಿಗಳ ಬಗ್ಗೆ ಈತ ಹೇಳಿಕೊಂಡಿದ್ದಾನೆ. ಹತ್ತೊಂಬತ್ತನೆಯ ಶತಮಾನದ ಮಿಕಿಫಿಕ್ಸ್ ಮತ್ತು ಸ್ಲವಕಿಗಳವರೆಗೆ ಇವನನ್ನು ಸರಿಗಟ್ಟುವ ಕವಿಗಳು ಪೋಲೆಂಡಿನಲ್ಲಿ ಹುಟ್ಟಲಿಲ್ಲ. 1580ರಲ್ಲಿ ನಿಧನಳಾದ ತನ್ನ ಮಗಳ ನೆನಪಿಗೆ ಬರೆದ ಚರಮಗೀತೆಯೊಂದೇ ಸಾಕು ಇವನ ಹೆಸರನ್ನು ಅಮರ ಗೊಳಿಸಲು. ಡೇವಿಡನ ಸ್ತೋತ್ರಗೀತೆಯನ್ನು ಈತ ಉಜ್ಜ್ವಲವಾಗಿ ಭಾಷಾಂತರಿಸಿದ್ದಾನೆ. (ಎಲ್.ಎಸ್.ಎಸ್.)

**ಕೊಚ್ಚಿ :** ಕೇರಳ ರಾಜ್ಯದ ಒಂದು ಮುಖ್ಯ ಬಂದರು ಮತ್ತು ಪಟ್ಟಣ. ಭಾರತದ ಪಶ್ಚಿಮ ಸಮುದ್ರತೀರದಲ್ಲಿ ಸುಮಾರು 192 ಕಿಮೀ ಉದ್ದ, 16 ಕಿಮೀ. ಅಗಲ ಇರುವ ಪ್ರಾಯ ದ್ವೀಪದ ಉತ್ತರದ ಕೊನೆಯಲ್ಲಿ, ಉ.ಅ.9º 58' 5" ಮತ್ತು ಪೂ.ರೇ.76º 11' 55" ಮೇಲೆ ಇದೆ. ಪ್ರಪಂಚದ ಅತ್ಯಂತ ಸುಂದರ ನೈಸರ್ಗಿಕ ಬಂದರುಗಳಲ್ಲಿ ಇದೊಂದು. ಸುತ್ತಮುತ್ತಣ ವಸತಿಗಳೂ ಸೇರಿ ಕೊಚ್ಚಿಯ ಜನಸಂಖ್ಯೆ 3,098,378 (2001).

ಕೊಚ್ಚಿ ಇತಿಹಾಸ ಪ್ರಸಿದ್ಧವಾದ ಪಟ್ಟಣ. ಇದು ಅನೇಕ ಶತಮಾನಗಳ ಕಾಲ ಸ್ವತಂತ್ರವಾಗಿದ್ದ ಕೊಚ್ಚಿ ಸಂಸ್ಥಾನದ ಆಡಳಿತಕೇಂದ್ರವಾಗಿತ್ತು. ಇದರ ಪ್ರಾಚೀನ ಇತಿಹಾಸ ಸ್ಪಷ್ಟವಾಗಿಲ್ಲ. ಐತಿಹಾಸಿಕ ದಾಖಲೆ ಸಿಗುವುದು 16ನೆಯ ಶತಮಾನದಿಂದೀಚೆಗೆ ಮಾತ್ರ. ಪೋರ್ಚುಗೀಸ್ ಪರಿಶೋಧಕ ಕಬ್ರಾಲನಿಗೆ ಕೊಚ್ಚಿ ಪ್ರಪ್ರಥಮವಾಗಿ ಆಶ್ರಯ ಕೊಟ್ಟು, ಆತನ ದೇಶದವರೊಂದಿಗೆ ವ್ಯಾಪಾರ ಸಂಬಂಧವನ್ನು ಪ್ರಾರಂಭಿಸಿತು. ಪೋರ್ಚುಗೀಸರು ಇಲ್ಲೊಂದು ಕಾರ್ಖಾನೆಯನ್ನು ಆರಂಭಿಸಿದರು. ಆದರೆ ಅಕ್ಕಪಕ್ಕದ ಸಂಸ್ಥಾನಗಳೊಂದಿಗೆ ಕೊಚ್ಚಿಗೆ ಇದ್ದ ವಿರಸವನ್ನುಪಯೋಗಿಸಿಕೊಂಡು ಪೋರ್ಚುಗೀಸರು ಪ್ರಬಲರಾದರು. ಇಲ್ಲಿಯ ಹಿಂದೂ ದೊರೆ ಬಲುಬೇಗ ಅವರ ಕೈಗೊಂಬೆಯಾದ. 1662–63ರ ಸುಮಾರಿಗೆ ಕೊಚ್ಚಿ ಡಚ್ಚರ ಕೈಸೇರಿತು. ಅನಂತರ 18ನೆಯ ಶತಮಾನದಲ್ಲಿ ಇದು ಹೈದರ್‌ಆಲಿಯ ಸಾಮಂತ ರಾಜ್ಯವಾಯಿತು. ಟಿಪ್ಪುಸುಲ್ತಾನನ ಅವನತಿಯ ಅನಂತರ ಕೊಚ್ಚಿ ಬ್ರಿಟಿಷರ ಅಧೀನವಾಗಿ ಆಶ್ರಿತ ಸಂಸ್ಥಾನವಾಯಿತು. ರಾಮವರ್ಮನ (1790–1805) ಆಡಳಿತ ಕಾಲದಲ್ಲಿ ಕೊಚ್ಚಿ ಸಂಸ್ಥಾನದಲ್ಲಿ ಅನೇಕ ಸುಧಾರಣೆಗಳಾದುವು. ಸಂಸ್ಥಾನದಲ್ಲಿದ್ದ ಅನೇಕ ಪಂಗಡಗಳೂ ಒಳಜಗಳಗಳೂ ಬಗೆಹರಿದುವು. ಆಡಳಿತ, ಕೃಷಿ, ನೀರಾವರಿ ಮತ್ತು ವ್ಯಾಪಾರ ಉತ್ತಮಗೊಂಡುವು. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ರೂಪುಗೊಂಡ ತಿರುವಾಂಕೂರು–ಕೊಚ್ಚಿ ರಾಜ್ಯದಲ್ಲಿ ಕೊಚ್ಚಿ ವಿಲೀನಗೊಂಡಿತು. (ಎಸ್.ಎನ್.ಎಆರ್.)

ಕೊಚ್ಚಿ ಭಾರತದ ಎಂಟು ಪ್ರಮುಖ ಬಂದರುಗಳಲ್ಲೊಂದು. ಇದು ಸರ್ವಋತು ಬಂದರು. ಪೂರ್ವಕ್ಕೆ ಇರುವ ಮುಖ್ಯ ಭೂಮಿಯನ್ನು ಖಾರಿಯೊಂದು ಬೇರ್ಪಡಿಸುತ್ತದೆ. ದಕ್ಷಿಣೋತ್ತರವಾಗಿ ಆಲಪ್ಪುಳದಿಂದ ಕೊಚ್ಚಿಯವರೆಗೆ ಚಾಚಿರುವ ಖಾರಿ ವಿಸ್ತಾರವಾದ್ದು, ಇದಕ್ಕೆ ವೆಂಬನಾಡ್ ಸರೋವರವೆಂದು ಹೆಸರು. 1920–23ರ ಅವಧಿಯಲ್ಲಿ ಇಲ್ಲಿಯ ಬಂದರನ್ನು ಆಧುನಿಕಗೊಳಿಸುವ ಯೋಜನೆಗಳು ಆರಂಭವಾದುವು. ಇಲ್ಲಿ 136 ಮೀ. ಉದ್ದದ ನಾಲ್ಕು ಹಡಗುಗಳು ಒಂದೇ ಕಾಲದಲ್ಲಿ ತಂಗಬಹುದು. ಬಂದರನ್ನೀಗ ಇನ್ನೂ ವಿಸ್ತರಿಸಲಾಗಿದೆ. ಇಲ್ಲೊಂದು ಹಡಗುನಿರ್ಮಾಣ ಕೇಂದ್ರ ಸ್ಥಾಪಿತವಾಗಿದೆ.

ಕೊಚ್ಚಿ ರೇವು ರೈಲ್ವೆಯ ಮೂಲಕ ದಕ್ಷಿಣ ರೈಲ್ವೆಯ ಬ್ರಾಡ್‌ಗೇಜ್ ಮತ್ತು ಮೀಟರ್ ಗೇಜ್ ರೈಲುಮಾರ್ಗಗಳೊಂದಿಗೆ ಇದಕ್ಕೆ ಸಂಬಂಧ ಕಲ್ಪಿಸಲಾಗಿದೆ. ಇಲ್ಲಿ ರಾಸಾಯನಿಕ ಗೊಬ್ಬರದ ಕಾರ್ಖಾನೆಯೂ ತೈಲಪರಿಷ್ಕರಣ ಕೇಂದ್ರವೂ ಇವೆ. ಕೇರಳದ ಆಮದು ರಫ್ತುಗಳು ಬಹಳ ಮಟ್ಟಿಗೆ ಸಾಗುವುದು ಈ ಬಂದರಿನಿಂದ. ಹಿನ್ನಾಡಿನ ಉತ್ಪನ್ನಗಳಾದ ಚಹ, ಕಾಫಿ, ಮೆಣಸು, ತೆಂಗು, ರಬ್ಬರ್, ಮರದ ದಿಮ್ಮಿ, ತೆಂಗಿನ ನಾರಿನ ವಸ್ತುಗಳು, ಗೋಡಂಬಿ, ಸಾಗರಿಕ ಆಹಾರ, ಅದಿರು, ಖನಿಜ ತೈಲೋತ್ಪನ್ನ ಮುಂತಾದುವು ಇಲ್ಲಿಂದ ರಫ್ತಾಗುತ್ತವೆ. ಧಾನ್ಯ, ಖನಿಜ ಪದಾರ್ಥಗಳು, ಪೆಟ್ರೋಲ್, ರಾಸಾಯನಿಕಗಳು ಇವು ಇದರ ಮೂಲಕ ಆಮದಾಗುವ ಮುಖ್ಯ ವಸ್ತುಗಳು. ಕೊಚ್ಚಿಯಲ್ಲಿ ಮುಂಗಾರು ಮಳೆ ಹೆಚ್ಚು. ಸಮುದ್ರತೀರದಲ್ಲಿರುವುದರಿಂದ ಇಲ್ಲಿ ಹವಾಗುಣ ಹಿತಕರವಾಗಿರುತ್ತದೆ. *

**ಕೊಟ್ಟೂರೇಶ್ವರ :** ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ ಶಿವಸಮಾಧಿಸ್ಥನಾಗಿರುವ ಒಬ್ಬ ಶರಣ. ಕೊಟ್ಟೂರು ಬಸವೇಶ್ವರ ಪುರಾಣ ಎಂಬ ಗ್ರಂಥದಲ್ಲಿ ಈತನ ಮಹಿಮೆ ಮತ್ತು ಪವಾಡಗಳು ನಿಯುಕ್ತವಾಗಿವೆ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆ. ಶರಣನ ಗದ್ದಿಗೆಯ ಮೇಲೆ ದಿವ್ಯಭವ್ಯವಾದ ದೇವಾಲಯ ನಿರ್ಮಿತವಾಗಿದೆ. ಇದು ಜಾಗೃತಸ್ಥಾನವೆಂದು ಭಾವಿಸಲ್ಪಟ್ಟಿದೆ. ಕೊಟ್ಟೂರೇಶ್ವರನ ಸರದಿಯಲ್ಲಿ ಯಾರೂ ಎತ್ತರವಾದ ಸ್ಥಳದಲ್ಲಿ ಮಲಗಬಾರದೆಂಬ ನಂಬಿಕೆ ಇರುವುದರಿಂದ ನಿಷ್ಠಾವಂತ ಭಕ್ತರಾರೂ ಈ ಊರಿನಲ್ಲಿ ಮಂಚಗಳ ಮೇಲೆ ಮಲಗುವುದಿಲ್ಲ. (ಬಿ.ಎಸ್.)

**ಕೊಠಾರಿ ಶಿಕ್ಷಣ ಆಯೋಗ:** ಭಾರತೀಯ ಶಿಕ್ಷಣ ಆಯೋಗಗಳ ಪೈಕಿ ಒಂದು. ಭಾರತ ಸರ್ಕಾರ ಶಿಕ್ಷಣದ ಸಂಪೂರ್ಣ ಹಾಗೂ ಸಮಗ್ರ ಬದಲಾವಣೆಗೆ 14.07.1964ರಂದು ವಿಜ್ಞಾನಿಯೂ ಶಿಕ್ಷಣತಜ್ಞರೂ ಆದ ಡಿ.ಎಸ್. ಕೊಠಾರಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಶಿಕ್ಷಣ ಆಯೋಗ ನೇಮಿಸಿತು. ಈ ಆಯೋಗದಲ್ಲಿ ಒಟ್ಟು 17 ಮಂದಿ ಶಿಕ್ಷಣ ತಜ್ಞರಿದ್ದರು. 2 ಅಕ್ಟೋಬರ್ 1964ರಂದು ಇದು ಕಾರ್ಯಾರಂಭ ಮಾಡಿತು. ಆಯೋಗ ದೇಶಾದ್ಯಂತ ಪ್ರವಾಸ ಕೈಗೊಂಡು ಶಿಕ್ಷಣ ಕ್ಷೇತ್ರದಲ್ಲಿದ್ದ ವಿವಿಧ ಸಮಸ್ಯೆಗಳನ್ನು ಅಧ್ಯಯನ ಮಾಡಿ ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿತು. ಪ್ರವಾಸ ಸಮಯದಲ್ಲಿ ಆಯೋಗ ಪ್ರಾಚಾರ್ಯರು, ವಿಶ್ವವಿದ್ಯಾಲಯಗಳ ಅಧ್ಯಾಪಕರು, ಶಾಲಾಶಿಕ್ಷಕರು, ಶಿಕ್ಷಣ ತಜ್ಞರು, ವಿಜ್ಞಾನಿಗಳು ಹಾಗೂ ಮತ್ತಿತರ ಗಣ್ಯವ್ಯಕ್ತಿಗಳೊಂದಿಗೆ ಚರ್ಚಿಸಿತು. ಈ ವರದಿಯಲ್ಲಿ ಇಪ್ಪತ್ತು ಅಧ್ಯಾಯಗಳಿವೆ. ಇದರಲ್ಲಿ ಆರು ಅಧ್ಯಾಯಗಳು ಶಿಕ್ಷಣದ ಪುನರ್ ಸಂಘಟನೆ ಕುರಿತಂತಿವೆ. ಏಳರಿಂದ ಹತ್ತರವರೆಗಿನ ಅಧ್ಯಾಯಗಳು ಶಿಕ್ಷಣದ ಪಠ್ಯಕ್ರಮದ ವಿಕಾಸ, ತನಿಖೆ, ಆಡಳಿತ ಮತ್ತು ಬೋಧನೆಗೆ ಸಂಬಂಧಿಸಿದೆ. ಶಿಕ್ಷಣದ ವಿವಿಧ ಹಂತಗಳನ್ನು ಕುರಿತಂತೆ ಎಂಟು ಅಧ್ಯಾಯಗಳಿವೆ. ಹತ್ತೊಂಬತ್ತನೆಯ ಅಧ್ಯಾಯ ಶೈಕ್ಷಣಿಕ ಆಡಳಿತ ಮತ್ತು ಯೋಜನೆಯ ಸಮಸ್ಯೆಗಳನ್ನು ಒಳಗೊಂಡಿದೆ. ಶೈಕ್ಷಣಿಕ ಹಣಕಾಸಿನ ಸಮಸ್ಯೆಯನ್ನು ಕುರಿತದ್ದು ಕೊನೆಯ ಅಧ್ಯಾಯ.

**ಆಯೋಗದ ಶಿಫಾರಸ್ಸುಗಳು:** ಶಿಕ್ಷಣದ ಮುಖಾಂತರ ಮಾತ್ರ ರಾಷ್ಟ್ರದ ಪ್ರಗತಿ, ಹಣಕಾಸಿನ ಅಭಿವೃದ್ಧಿ, ಸಾಮಾಜಿಕ ಭದ್ರತೆ ಹಾಗೂ ಇನ್ನಿತರ ಉಪಯುಕ್ತ ಚಟುವಟಿಕೆಗಳನ್ನು ಬಲಪಡಿಸಬಹುದೆಂದು ಆಯೋಗ ಪ್ರತಿಪಾದಿಸಿತು. ಆದ್ದರಿಂದ ದೇಶದ ಬೆಳವಣಿಗೆಯ ಯಾವುದೇ ಯೋಜನೆಯಲ್ಲಿ ಶಿಕ್ಷಣಕ್ಕೆ ಪ್ರಥಮ ಪ್ರಾತಿನಿಧ್ಯ ಕೊಡಬೇಕು ಎಂದು ಆಯೋಗ ಅಭಿಪ್ರಾಯಪಟ್ಟಿತು.

**ಶಿಕ್ಷಣ ಮತ್ತು ರಾಷ್ಟ್ರೀಯ ಗುರಿಗಳು:** 1. ಶಿಕ್ಷಣ ಬದುಕಿನ ಅಗತ್ಯಗಳಿಗೆ ಅನುಸಾರವಾಗಿರಬೇಕು. ರಾಷ್ಟ್ರೀಯ ಗುರಿಗಳನ್ನು ಶಿಕ್ಷಣದ ಮುಖಾಂತರ ಸಾಧಿಸಲು ಸಾಧ್ಯ. 2. ಶಿಕ್ಷಣದ ಮುಖಾಂತರ ವ್ಯಕ್ತಿ ತನ್ನ ಸಂಪೂರ್ಣ ವಿಕಾಸಕ್ಕೆ ಉಚಿತ ಅವಕಾಶಗಳನ್ನು ಪಡೆಯುವಂತಾಗಬೇಕು.

**ಶಿಕ್ಷಣದಲ್ಲಿ ಪರಿವರ್ತನೆ:** 1. ಪ್ರತಿಯೊಬ್ಬರೂ ನಿಶ್ಚಿತ ಅವಧಿಯ ತನಕ ಸಾಮಾನ್ಯ ಶಿಕ್ಷಣ ಪಡೆಯಬೇಕು. 2. ಶಿಕ್ಷಣ ಯೋಜಿತವಾಗಿರಬೇಕು. ಹಾಗಾದಾಗ ಅದು ರಾಷ್ಟ್ರೀಯ ಉತ್ಪಾದನೆಗಳನ್ನು ಪ್ರೋತ್ಸಾಹಿಸಬಲ್ಲದು. 3. ಪ್ರಚಲಿತ ಶಿಕ್ಷಣ ಸಮಾಜವಾದದ ತಳಹದಿಯನ್ನು ಬಲಪಡಿಸುವ ಯುಕ್ತ ಮಾರ್ಪಾಡುಗಳನ್ನು ತರುವಂಥದಾಗಿರಬೇಕು 4. ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ವೃತ್ತಿಪರ, ತಾಂತ್ರಿಕ ಹಾಗೂ ಔದ್ಯೋಗಿಕ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಮಾಧ್ಯಮಿಕ ಶಿಕ್ಷಣವನ್ನು ವೃತ್ತಿಪರಗೊಳಿಸಬೇಕು. 5. ಪ್ರಜೆಗಳಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸಬೇಕು. ಸಾಂಸ್ಕೃತಿಕ ಪರಂಪರೆಯ ಪುನರ್‌ಮೌಲ್ಯಮಾಪನ ಮಾಡುವ ಮುಖಾಂತರ ಶಿಕ್ಷಣದ ಗುರಿಯನ್ನು ಸಾಧಿಸಬೇಕು.

ಪ್ರಾಥಮಿಕ ಶಿಕ್ಷಣದ ಮಟ್ಟವನ್ನು ಉನ್ನತೀಕರಿಸಬೇಕು. ತರಬೇತಿ ಹೊಂದಿದ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಬೇಕು. ಶಿಕ್ಷಣದಲ್ಲಿ ಪ್ರಾಯೋಗಿಕ ಅನುಭವಕ್ಕೆ ಪ್ರಾಶಸ್ತ್ಯ ನೀಡಬೇಕು. ಕೃಷಿ ವಿಷಯದಲ್ಲಿ ಶಿಕ್ಷಣ ನೀಡಬೇಕು ಮತ್ತು ಸಂಶೋಧನೆಗೆ ಮಹತ್ತ್ವ ನೀಡಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಅಕ್ಷರಸ್ಥನಾಗಬೇಕು.

ಭಾರತ ವೈವಿಧ್ಯಮಯ ಸಾಮಾಜಿಕ ವರ್ಗಗಳಿಂದ ಕೂಡಿದೆ. ಅದು ಹಲವಾರು ಸಂಸ್ಕೃತಿ, ಧರ್ಮ, ಜಾತಿ, ಪಂಥ, ವರ್ಗ ವೈವಿಧ್ಯಮಯ ಭೌಗೋಳಿಕ ಸನ್ನಿವೇಶವಿರುವ ನಾಡು. ಈ ಎಲ್ಲ ಸಾಮಾಜಿಕ ವರ್ಗಗಳಲ್ಲಿ ಐಕ್ಯತೆ ಮತ್ತು ಸಾಮರಸ್ಯವನ್ನು ತರುವುದೇ ರಾಷ್ಟ್ರೀಯ ಶಿಕ್ಷಣ ಪದ್ಧತಿಯ ಮುಖ್ಯ ಉದ್ದೇಶ.

ಸಾರ್ವಜನಿಕ ಶಾಲೆಗಳು ಮಕ್ಕಳ ಜಾತಿ, ಮತ, ಧರ್ಮ, ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಪ್ರವೇಶಾತಿ ನೀಡಬೇಕು. ಬೋಧನಾ ಶುಲ್ಕವನ್ನು ವಸೂಲಿ ಮಾಡಬಾರದು. ಶಾಲೆಗಳಲ್ಲಿ ಎನ್.ಸಿ.ಸಿ., ಎ.ಸಿ.ಸಿ. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅವು ಮಕ್ಕಳಲ್ಲಿ ಶಿಸ್ತು, ಶೀಲಸಂವರ್ಧನೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಪ್ರಜ್ಞೆ ಬೆಳೆಸುತ್ತವೆ. ಶಾಲೆ ಮತ್ತು ಕಾಲೇಜು ಮಟ್ಟದಲ್ಲಿ ಮಾತೃಭಾಷೆಯೇ ಬೋಧನಾ ಮಾಧ್ಯಮವಾಗಬೇಕು. ವೈಜ್ಞಾನಿಕ, ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಪ್ರಕಟಿಸಬೇಕು. ಮಾನವಶಾಸ್ತ್ರ ಹಾಗೂ ಸಮಾಜವಿಜ್ಞಾನಗಳ ಅಧ್ಯಯನದ ಮುಖಾಂತರ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ತಿಳಿವಳಿಕೆ ನೀಡಬೇಕು. ವಿದ್ಯಾರ್ಥಿಗೆ ತನ್ನ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳಲು ಅವಕಾಶ ನೀಡುವುದೇ ಅಲ್ಲದೆ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಕ್ಕೆ ಪ್ರಾಮುಖ್ಯ ನೀಡಬೇಕು. ವಿಶ್ವವಿದ್ಯಾಲಯಗಳು ಧರ್ಮಗಳ ಅಧ್ಯಯನಕ್ಕೆ ಅವಕಾಶ ಕೊಡಬೇಕು.

**ಶೈಕ್ಷಣಿಕ ಸೌಕರ್ಯಗಳು:** ಶಾಲೆಗಳು ಕೆಲವೇ ದಿನಗಳನ್ನು ರಜಾ ದಿನಗಳೆಂದು ಘೋಷಿಸಬೇಕು. ಶಾಲೆಯಲ್ಲಿ ಕೆಲಸದ ದಿನಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಹಾಗೂ ಕೆಲಸದ ವೇಳೆಯನ್ನು ಹೆಚ್ಚಿಸಬೇಕು, ಪರೀಕ್ಷಾ ದಿನಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ವಿದ್ಯಾರ್ಥಿಗಳಿಗೆ ದೀರ್ಘರಜೆಗಳಲ್ಲಿ 'ಮನೆಗೆಲಸ' ಕೊಡಬೇಕು. ವಿದ್ಯಾರ್ಥಿಗಳಿಗೆ ಗ್ರಂಥಾಲಯಗಳನ್ನು ಉಪಯೋಗಿಸುವ ಬಗ್ಗೆ ತಿಳಿವಳಿಕೆ ನೀಡಬೇಕು.

**ಶಿಕ್ಷಕರ ಗುಣಮಟ್ಟ ಸುಧಾರಣೆ:** ಶಿಕ್ಷಕರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು. ಕೇಂದ್ರ ಸರ್ಕಾರ ಅವರ ಶ್ರೇಣಿಯನ್ನು ನಿಗದಿಪಡಿಸಬೇಕು. ರಾಜ್ಯಗಳಿಗೆ ಹಣಕಾಸು ನೆರವು ನೀಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀತಿಯನ್ನು ಅನುಸರಿಸಬೇಕು. ವೇತನ ಶ್ರೇಣಿಯನ್ನು ಸಾರ್ವತ್ರಿಕಗೊಳಿಸಬೇಕು. ಶಿಕ್ಷಕರಿಗೆ ವಸತಿ ಸೌಲಭ್ಯ ಮತ್ತು ಮನೆಕಟ್ಟಲು ಸಾಲ ಸೌಲಭ್ಯ ನೀಡಬೇಕು. ಸಹಕಾರಿ ಆಧಾರದ ಮೇಲೆ ಶಿಕ್ಷಕರ ಕಾಲನಿಗಳನ್ನು ಅಭಿವೃದ್ಧಿ ಪಡಿಸಬೇಕು. ಅವರಿಗೆ ದಿನಭತ್ಯೆ, ನಗರಭತ್ಯೆಗಳನ್ನು ನೀಡಬೇಕು. ನಿವೃತ್ತಿ ವಯಸ್ಸು 60 ವರ್ಷಗಳಾಗಿರಬೇಕು.

ಶಿಕ್ಷಣದ ಸುಧಾರಣೆಗಾಗಿ ಸಂಶೋಧನ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಅಲ್ಪಾವಧಿ ಶಿಕ್ಷಣ, ಸಂಜೆ ಕಾಲೇಜು, ಅಂಚೆ ಮತ್ತು ತೆರಪಿನ ಶಿಕ್ಷಣ ಪದ್ಧತಿ ಆರಂಭಿಸಬೇಕು. ಶಿಷ್ಯ ವೇತನಗಳ ಸಂಖ್ಯೆ ಹೆಚ್ಚಿಸಬೇಕು. ಸ್ತ್ರೀ ಶಿಕ್ಷಣಕ್ಕೆ ಪ್ರಾಧಾನ್ಯ ನೀಡಬೇಕು. ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿರಬೇಕು.

**ಭಾಷಾನೀತಿ:** ಭಾಷಾ ಸಮಸ್ಯೆಯನ್ನು ನಿವಾರಿಸಲು ಆಯೋಗ ತ್ರಿಭಾಷಾ ಸೂತ್ರವನ್ನು ರೂಪಿಸಿತು. ಅದರ ಪ್ರಕಾರ ಮೊದಲ ಸ್ಥಾನ ಮಾತೃಭಾಷೆ, ಎರಡನೆಯ ಸ್ಥಾನ ಇಂಗ್ಲಿಷ್‌ಗೆ, ಮೂರನೆಯ ಸ್ಥಾನವನ್ನು ಹಿಂದಿಗೆ ನೀಡಬೇಕು. ಹಿಂದಿ ಮಾತೃಭಾಷೆಯ ಅನಂತರದ ಸ್ಥಾನವನ್ನು ಪಡೆದಿರುವುದು. ಇಂಗ್ಲಿಷಿನ ವ್ಯಾವಹಾರಿಕ ಜ್ಞಾನವಿರಬೇಕಾದುದು ಅಗತ್ಯವಾದ್ದರಿಂದ ಅದನ್ನು ಐದನೆಯ ತರಗತಿಯಿಂದಲೇ ಕಲಿಸಬೇಕು. ಮಾತೃಭಾಷೆ ಬೋಧನಾ ಮಾಧ್ಯಮವಾಗಿರಬೇಕು. ಒಂದರಿಂದ ನಾಲ್ಕನೆಯ ತರಗತಿಯವರೆಗೆ ಮಕ್ಕಳು ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು. ಐದರಿಂದ ಎಂಟನೇ ತರಗತಿಯವರೆಗೆ ಎರಡು ಭಾಷೆಗಳನ್ನು ಕಲಿಸಬೇಕು. ಪ್ರಾದೇಶಿಕ ಭಾಷೆ ಅಥವಾ ಮಾತೃಭಾಷೆ ಮತ್ತು ಇಂಗ್ಲಿಷ್ ಅಥವಾ ಹಿಂದಿ ಒಂಬತ್ತು ಮತ್ತು ಹತ್ತನೆಯ ತರಗತಿಗಳಲ್ಲಿ ಮೂರು ಭಾಷೆಗಳನ್ನು ಅಗತ್ಯವಾಗಿ ಕಲಿಸಬೇಕು. ಉಚ್ಚ ಶಿಕ್ಷಣದಲ್ಲಿ ಭಾಷಾಭ್ಯಾಸ ಕಡ್ಡಾಯವಾಗಿರಕೂಡದು. ಸುಧಾರಿಸಿದ ತ್ರಿಭಾಷಾ ಸೂತ್ರವೆಂದರೆ: 1. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ. 2. ಆಡಳಿತ ಭಾಷೆ ಹಿಂದಿ. 3. ಆಧುನಿಕ ಭಾರತೀಯ ಭಾಷೆ ಅಥವಾ ಯುರೋಪಿಯನ್ ಭಾಷೆ. ಆಧುನಿಕ ಭಾರತೀಯ ಭಾಷೆಗಳು ದೇವನಾಗರಿ ಅಥವಾ ರೋಮನ್ ಲಿಪಿ ಬಳಸಬೇಕು; ಅಂತಾರಾಷ್ಟ್ರೀಯ ಅಂಕಿಗಳನ್ನು ಉಪಯೋಗಿಸಬೇಕು. ಹಿಂದಿ ಅಭ್ಯಾಸಕ್ಕೆ ಉತ್ತೇಜನ ನೀಡುವ ಸಲುವಾಗಿ ರಾಷ್ಟ್ರಮಟ್ಟದಲ್ಲಿ ಪ್ರಯತ್ನಗಳನ್ನು ನಡೆಸಬೇಕು. ಪ್ರಾದೇಶಿಕ ಭಾಷೆಯನ್ನು ಬಿಟ್ಟು ದೇಶೀಯ ಭಾಷೆಗಳಿಗೆ ಪ್ರೋತ್ಸಾಹ ನೀಡಬೇಕು. ಇಂಗ್ಲಿಷನ್ನು ಹೊರತುಪಡಿಸಿ ಯುರೋಪಿಯನ್ ಭಾಷೆಗಳನ್ನು ಕಲಿಯಲು ಪ್ರೋತ್ಸಾಹ ನೀಡಬೇಕು.

**ಶೈಕ್ಷಣಿಕ ಅವಕಾಶಗಳ ಸಮಾನತೆ:** ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ನೀಡಬೇಕು. ಕ್ರಮೇಣ ಉಳಿದ ಶಿಕ್ಷಣವನ್ನು ಉಚಿತ ಮಾಡಬೇಕು. ಕನಿಷ್ಠ 30 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಬೇಕು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗ್ರಂಥಾಲಯ, ಓದುವ ಕೊಠಡಿಗಳು ಪುಸ್ತಕಗಳನ್ನು ಎರವಲು ನೀಡುವ ಸೌಲಭ್ಯ ಕಲ್ಪಿಸಬೇಕು. ಗ್ರಂಥಗಳು ಮತ್ತು ಕಲಿಕಾ ಸಾಮಗ್ರಿಗಳನ್ನು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಬೇಕು. ಇವಿಷ್ಟೇ ಅಲ್ಲದೆ ಇನ್ನೂ ಅನೇಕ ಪ್ರಮುಖ ಶಿಫಾರಸ್ಸುಗಳನ್ನು ಈ ಆಯೋಗ ಮಾಡಿದೆ: 1. ಅಂಗವಿಕಲ ಮಕ್ಕಳ ಶಿಕ್ಷಣಕ್ಕಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದು ಶಾಲೆ ಇರಬೇಕು. 2. ಸ್ತ್ರೀ ಶಿಕ್ಷಣಕ್ಕೆ ಮಹತ್ತ್ವ ನೀಡಬೇಕು. ಇದಕ್ಕಾಗಿ ವಿಶೇಷ ಹಣಕಾಸಿನ ನೆರವು ನೀಡಬೇಕು. 3. ಆದಿವಾಸಿ ಮಕ್ಕಳ ಶಿಕ್ಷಣಕ್ಕಾಗಿ ಆಶ್ರಮ ಪದ್ಧತಿಯನ್ನು ಅನುಸರಿಸಬೇಕು. 4. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಶಿಕ್ಷಣಕ್ಕಾಗಿ ವಿಶೇಷ ಆದ್ಯತೆ ನೀಡಬೇಕು.

ಪ್ರತಿಯೊಂದು ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು. ಪ್ರತಿಯೊಂದು ಕೃಷಿ ಕಾಲೇಜು ಕೃಷಿಗೆ ಉಪಯೋಗವಾಗುವ ಭೂಮಿ ಹೊಂದಿರಬೇಕು. ಹೊಸ ಕೃಷಿ ಕಾಲೇಜುಗಳನ್ನು ತೆರೆಯಬಾರದು. ವಿವಿಧ ತೆರನಾದ ವೃತ್ತಿಪರ ಶಿಕ್ಷಣ ಒದಗಿಸಲು ಅವಕಾಶ ಕೊಡಬೇಕು. ಎಂಜನಿಯರಿಂಗ್ ಶಿಕ್ಷಣದ ಗುಣಮಟ್ಟ ಹೆಚ್ಚಿಸಬೇಕು. ಎಂಜನಿಯರಿಂಗ್ ಕಾಲೇಜಿಗೆ ಪ್ರವೇಶ ಪಡೆಯಲು ಬಿ.ಎಸ್‌ಸಿ. ಪದವಿ ಕನಿಷ್ಠ ಅರ್ಹತೆ ಆಗಿರಬೇಕು.

ಆಯೋಗ 20 ವರ್ಷಗಳ ಅವಧಿಯೊಳಗೆ ನೂರಕ್ಕೆ ನೂರರಷ್ಟು ಸಾಕ್ಷರತೆಯನ್ನು ಸಾಧಿಸುವ ಗುರಿಯನ್ನು ಹೊಂದಿತ್ತು. ಇದನ್ನು ತಲುಪುವ ಸಲುವಾಗಿ ಅದು ವಯಸ್ಕರಿಗೆ ವೃತ್ತಿಪರ ಶಿಕ್ಷಣ; ಮಹಿಳೆಯರ ಕಲ್ಯಾಣ ಹಾಗೂ ಶಿಕ್ಷಣದ ಸಲುವಾಗಿ ವಿಶೇಷ ಮಹತ್ತ್ವ ನೀಡಿತು. ವಯಸ್ಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾಮಟ್ಟಗಳಲ್ಲಿ ಸಮಿತಿಗಳನ್ನು ನೇಮಿಸಬೇಕು.

ಭಾರತದ ಶೈಕ್ಷಣಿಕ ಯೋಜನೆಗಳಲ್ಲಿ ಯುಕ್ತ ಎನಿಸುವ ಕ್ಷೇತ್ರದಲ್ಲಿ ಆಡಳಿತವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕರಿಸಿ ಒಟ್ಟಾಗಿ ನಡೆಸಬೇಕು. ಶಾಲಾ ಶಿಕ್ಷಣ ರಾಜ್ಯಸರ್ಕಾರದ ಜವಾಬ್ದಾರಿ. ಅದು ಶಾಲಾ ಸುಧಾರಣಾ ಕಾರ್ಯಕ್ರಮ, ಪಠ್ಯಕ್ರಮದ ಪುನರ್‌ವಿನ್ಯಾಸ, ಪಠ್ಯ ಪುಸ್ತಕಗಳ ತಯಾರಿ, ಶಿಕ್ಷಕರ ಕೈಪಿಡಿ, ಮೌಲ್ಯಮಾಪನದ ಸುಧಾರಣೆ, ಶಾಲಾಸುಧಾರಣಾ ಸಮಿತಿಯ ನೇಮಕ ಮುಂತಾದವನ್ನು ಮಾಡಬೇಕು. ಜಿಲ್ಲಾ ಶಿಕ್ಷಣಾಧಿಕಾರಿಗಳು, ಮುಖ್ಯೋಪಾಧ್ಯಾಯರಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಇಂಥ ಅನೇಕ ಶಿಫಾರಸ್ಸುಗಳು ಆಯೋಗದ ವರದಿಯಲ್ಲಿವೆ. ದೇಶದ ಪುನರುತ್ಥಾನಕ್ಕಾಗಿ ಭಾರತೀಯರ ಹೆಮ್ಮೆಯ ಸಾಧನೆ ಮತ್ತು ಭವಿಷ್ಯ ರೂಪಿಸಿಕೊಳ್ಳುವಲ್ಲಿ ಕೊಠಾರಿ ಶಿಕ್ಷಣ ಆಯೋಗ ಉತ್ತಮವಾದುದೂ ಮಾರ್ಗದರ್ಶಕವಾದುದೂ ಆಗಿದೆ. (ಎಂ.ಎಸ್.ವಿ.)

**ಕೊಡಗು[1]** : ಕರ್ನಾಟಕದ ನೈರುತ್ಯ ಭಾಗದಲ್ಲಿರುವ ಒಂದು ಜಿಲ್ಲೆ. ಉತ್ತರ ಅಕ್ಷಾಂಶ 11° 56′ – 12° 50′ ಮತ್ತು ಪೂರ್ವ ರೇಖಾಂಶ 75° 22′ – 76° 12′ ನಡುವೆ ಹಬ್ಬಿದೆ. ಈ ಜಿಲ್ಲೆ ಪೂರ್ವದಲ್ಲಿ ಮೈಸೂರು, ಉತ್ತರದಲ್ಲಿ ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದಲೂ ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೇರಳ ರಾಜ್ಯದಿಂದಲೂ ಸುತ್ತುವರಿದಿದೆ. ಕೊಡಗಿನ ಗರಿಷ್ಠ ಉದ್ದ ದಕ್ಷಿಣೋತ್ತರವಾಗಿ 96ಕಿಮೀ; ಗರಿಷ್ಠ ಅಗಲ ಪೂರ್ವಪಶ್ಚಿಮವಾಗಿ 64ಕಿಮೀ. ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳೂ ಹನ್ನೊಂದು ಹೋಬಳಿಗಳೂ 304 ಗ್ರಾಮಗಳೂ ಇರುವ ಕೊಡಗು ಜಿಲ್ಲೆಯ ಒಟ್ಟು ವಿಸ್ತೀರ್ಣ 4,110ಚ.ಕಿಮೀ. ಜನಸಂಖ್ಯೆ 5,45,322. ಇದರ ಆಡಳಿತ ಕೇಂದ್ರ ಮಡಿಕೇರಿ.

ಮಲ್ಲಳ್ಳಿ ಜಲಪಾತ

ಇಲ್ಲಿರುವ ಪಶ್ಚಿಮ ಘಟ್ಟಗಳ ಮುಖ್ಯ ಶ್ರೇಣಿ ಕೊಡಗಿನ ಬೆನ್ನುಮೂಳೆಯಂತಿದೆ. ಇದು ವಾಯವ್ಯದಿಂದ ದಕ್ಷಿಣಕ್ಕೆ, ಸುಬ್ರಹ್ಮಣ್ಯದಿಂದ ಬ್ರಹ್ಮಗಿರಿಯ ಪಶ್ಚಿಮಾಗ್ರದವರೆಗೆ ಹಬ್ಬಿದೆ. ಇದರ ಉದ್ದ 96ಕಿಮೀ ಗಿಂತಲೂ ಹೆಚ್ಚು. ಇದರಿಂದ ಪೂರ್ವದ ಕಡೆಗೆ ಕೈಬೆರಳುಗಳಂತೆ ಸಾಗಿರುವ ಉನ್ನತ ಶ್ರೇಣಿಗಳು ಹಲವಾರು. ಸುಬ್ರಹ್ಮಣ್ಯ ಅಥವಾ

# ಕೊಡಗು[1]



ಪುಷ್ಪಗಿರಿಯಲ್ಲಿ ಪರ್ವತ ಹೆಗ್ಗಂಟಿನ ಎತ್ತರ ಸಮುದ್ರಮಟ್ಟಕ್ಕಿಂತ 1908ಮೀ. ಈ ಎಡೆಯಿಂದ ಕವಲೊಡೆಯುವ ಹಲವು ಶ್ರೇಣಿಗಳ ಪೈಕಿ ಅತ್ಯಂತ ಮುಖ್ಯವಾದ್ದು ಕೋಟೆಬೆಟ್ಟ; ಮಡಿಕೇರಿಯಿಂದ 14 ಕಿಮೀ ಉತ್ತರದಲ್ಲಿರುವ ಇದರ ಎತ್ತರ 1792ಮೀ. ಮಡಿಕೇರಿಯ

ಬ್ರಹ್ಮಗಿರಿಯಲ್ಲಿ ಕಾವೇರಿಯ ಉಗಮಸ್ಥಾನ, ತಲಕಾವೇರಿ

ಬಳಿ ಆರಂಭವಾಗಿ ಪಶ್ಚಿಮಕ್ಕೆ ಸಾಗುವುದು ಬೇಂಗುನಾಡು ಶ್ರೇಣಿ. ಇದಕ್ಕೂ ಘಟ್ಟಗಳ ಮುಖ್ಯ ಶ್ರೇಣಿಗೂ ನಡುವೆ ಅತ್ಯಂತ ಕಿರಿದಾದ ಕೋನ ಏರ್ಪಟ್ಟಿದೆ. ಇವೆರಡೂ ಕೂಡುವೆಡೆಯಲ್ಲಿರುವುದೇ ಬ್ರಹ್ಮಗಿರಿ. ಕಾವೇರಿ ನದಿ ಇಲ್ಲಿ ಉಗಮಿಸುತ್ತದೆ. ಇದಕ್ಕೆ ಉತ್ತರಕ್ಕಿರುವುದು ಸಂಪಾಜೆ ಕಣಿವೆ. ಮಂಗಳೂರು ರಸ್ತೆ ಈ ಮೂಲಕ ಸಾಗುತ್ತದೆ. ಬ್ರಹ್ಮಗಿರಿಯೆಡೆಯಿಂದ ಮುಂದಕ್ಕೆ ಪಶ್ಚಿಮ ಘಟ್ಟಗಳ ಮುಖ್ಯಶ್ರೇಣಿ ಸಾಗುವುದು ಆಗ್ನೇಯಾಭಿಮುಖವಾಗಿ. ತುಂಬೆಮಲೆ, ಇಗ್ಗುತಪ್ಪ ದೇವರ ಶಿಖರ, ತಡಿಯಂಡಮೋಳು ಮತ್ತು ಸೋಮಮಲೆ ಮುಖ್ಯ ಶಿಖರಗಳು. ಈ ಶ್ರೇಣಿಗೆ ದಕ್ಷಿಣದಲ್ಲಿರುವ ಪೆರಿಯಂಬಾಡಿ ಘಾಟಿನ ಮೂಲಕ ಕಣ್ಣಾನೂರಿಗೆ ರಸ್ತೆಯುಂಟು. ಕೊಡಗಿನ ಆಗ್ನೇಯ ತುದಿಯಲ್ಲಿರುವ ಶ್ರೇಣಿ ಮಲೆನಾಡು. ಇದೂ ಬ್ರಹ್ಮಗಿರಿಯ ಹೊರಗವಲೂ ಕೊಡಗಿನ ದಕ್ಷಿಣದ ಎಲ್ಲೆಗಳು, ವೈನಾಡಿನಿಂದ ಕೊಡಗನ್ನು ಪ್ರತ್ಯೇಕಿಸುವ ಶ್ರೇಣಿಗಳು ಇವು. ಇಲ್ಲಿರುವ ಅತ್ಯುನ್ನತ ಶಿಖರ ದವಸಿಬೆಟ್ಟ. ಇದರ ಸುತ್ತಣಪ್ರದೇಶ ಬಹಳ ಚೆಲುವಾಗಿದೆ. ಅದರ ಹೆಸರು ಹುಯಲೆ ಮಲೆ. ಕೊಡಗಿನ ಪಶ್ಚಿಮದ ಎಲ್ಲೆಯ ಬಳಿ ಇರುವ ಶಿಖರಗಳಲ್ಲಿ ಮುಖ್ಯವಾದವು ಹನುಮನಬೆಟ್ಟ ಮತ್ತು ಪೆರೆಮಾಲೆಮಲೆ. ಬ್ರಹ್ಮಗಿರಿಯಿಂದ ಕಿಗ್ಗಟ್ಟನಾಡಿನ ಕಡೆಗೆ ಅನೇಕ ಕವಲುಗಳು ಹಬ್ಬಿವೆ. ಇವು ಕಡಿದುಮಲೆಗಳು. ವಿರಾಜಪೇಟೆಯ ಬಳಿಯ ಅಂಬಟೆ ಬೆಟ್ಟ, ಬೆಟ್ಟಂಗಾಲ, ಕುಂಡದಬೆಟ್ಟ, ಸಿದ್ಧೇಶ್ವರ ಬೆಟ್ಟ ಇವು ಮುಖ್ಯ. ಇನ್ನು ಕೆಲವು ಕವಲುಗಳು ಪೂರ್ವದ ಕಡೆಗೆ ಜಾರಿ, ಏರಿಳಿದು ಸಾಗಿ, ವಿಶಾಲವಾದ ಬತ್ತದ ಬಯಲುಗಳು ಆಲಿಂಗಿಸಿಕೊಂಡಿವೆ. ಬೇಂಗುನಾಡು ಶ್ರೇಣಿ ಮಡಿಕೇರಿಯ ದಕ್ಷಿಣದಲ್ಲಿ ಎರಡು ಕವಲುಗಳಾಗಿ ಮುನ್ನಡೆಯುತ್ತದೆ. ಒಂದು ಕವಲು ನೂರೊಕ್ಕಲು ಬೆಟ್ಟದಲ್ಲಿ ಪರ್ಯವಸಾನಗೊಂಡರೆ ಇನ್ನೊಂದು ಕವಲು ಡೊಂಕುಡೊಂಕಾಗಿ ಕುಶಾಲನಗರದ ಕಡೆಗೆ ಸಾಗುತ್ತದೆ. ಇದರ ಉನ್ನತ ಶಿಖರ ಕಲ್ಲೂರುಬೆಟ್ಟ. ಇಲ್ಲಿ ತೇಗದ ಕಾಡು ವಿಶೇಷ. ಕೋಟೆಬೆಟ್ಟದ ಉತ್ತರಕ್ಕಿರುವುದು ಸಂತೆಹಳ್ಳಿ ಬೆಟ್ಟಗಳು. ಮುಕ್ರಿಬೆಟ್ಟವೇ ಇವುಗಳ ತುದಿ. ಕೊಡಗಿನ ಉತ್ತರದ ಗಡಿಯಿಂದ ಕಾವೇರಿಯ ಕಡೆಗೆ ಒಂದು ಶ್ರೇಣಿ ಹಬ್ಬಿದೆ. ಮಾಲಂಬಿ ಮತ್ತು ಕನಗಲುಬೆಟ್ಟ ಇದರ ಮುಖ್ಯಶಿಖರಗಳು.

ದಕ್ಷಿಣದ ಕಾಶ್ಮೀರ ಎಂದು ಕರೆಯುವ ಇಡೀ ಕೊಡಗು ಪ್ರದೇಶ ಪರ್ವತಮಯವಾಗಿದ್ದರೂ ಸ್ಥಳದಿಂದ ಸ್ಥಳಕ್ಕೆ ಇದರ ಲಕ್ಷಣ ವ್ಯತ್ಯಾಸವಾಗುತ್ತದೆ. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಮಡಿಕೇರಿ ಪ್ರಸ್ಥಭೂಮಿಯ ಎತ್ತರ ಕೋಟೆಯ ಬಳಿಯಲ್ಲಿ ಸಮುದ್ರಮಟ್ಟದಿಂದ 1270ಮೀ. ಪೂರ್ವದ ಕುಶಾಲನಗರದ ಬಳಿ 907ಮೀ. ಸರಾಸರಿ 1170ಮೀ. ಎತ್ತರವಿರುವ ಈ ಪ್ರಸ್ಥಭೂಮಿ ಮಡಿಕೇರಿಯ ಉತ್ತರಕ್ಕೆ 42ಕಿಮೀ ದೂರದಲ್ಲಿರುವ ಸೋಮವಾರಪೇಟೆಯ ವರೆಗೂ ಹಬ್ಬಿದೆ. ಸೋಮವಾರಪೇಟೆಯ ಬಳಿ ಪರ್ವತಗಳು ಅಷ್ಟು ಕಡಿದಾಗಿಲ್ಲ.

ಅಲ್ಲಿ ನಡುನಡುವೆ ಹಸುರು ಇಳಿಜಾರುಗಳೂ ದಟ್ಟ ಕಾಡುಗಳೂ ಉಂಟು. ಇವು ಯುರೋಪಿನ ಉದ್ಯಾನ ನೆಲದ ದೃಶ್ಯವನ್ನು ನೆನಪಿಗೆ ತರುತ್ತವೆ ಎಂದು ಹೇಳುವುದುಂಟು. ಮಡಿಕೇರಿಯ ಬಳಿಯ ಬೆಟ್ಟಗಳು ಒತ್ತೊತ್ತು, ಕಡಿದು, ಕಣಿವೆಗಳ ಆಳ ಹೆಚ್ಚು. ಕಾಡು ಬಲು ದಟ್ಟ. ಕುಶಾಲನಗರದ ಬಳಿಗೆ ಸಾಗಿದಂತೆ ಕರ್ನಾಟಕ ಪ್ರಸ್ಥಭೂಮಿಯ ವಿಶಾಲ ಬಯಲುಗಳು ಆರಂಭವಾಗುತ್ತವೆ. ಇಲ್ಲಿ ನಡುನಡುವೆ ಒಂಟಿ ಬೆಟ್ಟಗಳುಂಟು. ವಿರಾಜಪೇಟೆಯ ಕಡೆಯಲ್ಲಿ–ಬೆಪ್ಪುನಾಡು ಮತ್ತು ಕಡ್ಯೆಟ್ ನಾಡುಗಳಲ್ಲಿ ಅರಣ್ಯ ದಟ್ಟವಾಗಿಲ್ಲ. ವಿಶಾಲ ಗದ್ದೆ ಬಯಲುಗಳ ಹೆಗಲ ಮೇಲೆ ಚೆಲುವಾದ ಹುಲ್ಲಿನ ದಿಬ್ಬಗಳನ್ನು ಕಾಣಬಹುದು. ಕೊಡಗಿನ ಪೂರ್ವ ಎಲ್ಲೆಯ ಬಳಿ ಕಾವೇರಿ ಮತ್ತು ಲಕ್ಷ್ಮಣತೀರ್ಥಗಳ ನಡುವೆ– ಪರ್ಣಪಾತೀ ವೃಕ್ಷಗಳ ವಿಶಾಲ ಕಾಡುಂಟು. ಇದಕ್ಕೆ ಪಶ್ಚಿಮದಲ್ಲಿ ನಿತ್ಯಹಸುರುಕಾಡು ಹಬ್ಬಿದೆ. ಬಿದಿರುಮೆಳೆ ವಿಶೇಷ. ಒಟ್ಟಿನಲ್ಲಿ ಪರ್ವತಶಿಖರಗಳು ಹುಲ್ಲಿನಿಂದಲೂ ಕಣಿವೆಗಳು ಮತ್ತು ಪರ್ವತಸಾನುಪ್ರದೇಶದ ತೆರವಾದ ಸ್ಥಳಗಳು ನಿತ್ಯಹಸುರುಕಾಡುಗಳಿಂದಲೂ ಕೂಡಿವೆ. ಇಡೀ ಕೊಡಗು ಹಸುರುಮಯ. ಇಲ್ಲಿ ನಿಸರ್ಗ ಸಸ್ಯವೇ ಹೇರಳ. ಅಲ್ಲಲ್ಲಿ ಕಾಫಿ ಮತ್ತು ಇತರ ಬೆಳೆಗಳಿಗಾಗಿ ಇದನ್ನು ತೆಗೆಯಲಾಗಿದೆ.

ಧಾರವಾಡ ಶಿಲಾರಚನೆಗೆ ಸೇರಿದ ಗಾರ್ನಿಟಿಫೆರಸ್ ಬಯೊಟೈಟ್, ಸಿಲ್ಲಿಮನೈಟ್ ಮತ್ತು ಗಾರ್ನಿಟಿಫೆರಸ್ ನೈಸ್‌ಗಳೂ ಪದರಶಿಲೆಗಳೂ ಜಿಲ್ಲೆಯಲ್ಲಿ ವಿಶೇಷವಾಗಿ ಹರಡಿವೆ. ಮಧ್ಯೆ ಮಧ್ಯೆ ಡಾಲೆರೈಟ್, ಬೆಣಚು, ಗ್ರಾನೈಟ್ ಮತ್ತು ಚಾರ್ನ್‌ಕೈಟ್ ಶಿಲೆಗಳ ಅಂತರ್ಚಾಚುಗಳಿವೆ. ಎತ್ತರದ ಭಾಗಗಳಲ್ಲಿ ಜಂಬಿಟ್ಟಿಗೆಯ ಮಣ್ಣು, ನದಿದಡಗಳಲ್ಲಿ ಮತ್ತು ಕಣಿವೆಗಳಲ್ಲಿ ಮೆಕ್ಕಲು ಮಣ್ಣಿನ ಹರಹು ಇದೆ. ಬಹಳ ಕೆಳದರ್ಜೆಯ ಕಾಗೆಬಂಗಾರದ ನಿಕ್ಷೇಪಗಳು ಕುಶಾಲನಗರ, ಮಡಿಕೇರಿ ಬಳಿಯಲ್ಲೂ ಮತ್ತು ಶ್ರೀಮಂಗಲನಾಡಿನ ಕೆಲವು ಪ್ರದೇಶಗಳಲ್ಲೂ ಇವೆ. ಮಡಿಕೇರಿ ಮತ್ತು ಸಿದ್ಧಾಪುರದ ಬಳಿಯಲ್ಲಿ ಕ್ಯಾನೈಟ್ ದೊರಕುತ್ತದೆ. ಜಿಲ್ಲೆಯ ಖನಿಜಸಂಪತ್ತು ಅಲ್ಪ.

ಕೊಡಗಿನ ಮುಖ್ಯ ನದಿ ಕಾವೇರಿ. ಬ್ರಹ್ಮಗಿರಿಯಲ್ಲಿ ಇದರ ಉಗಮ. ಇದು ಸಿದ್ಧಾಪುರದವರೆಗೂ ಆಗ್ನೇಯಾಭಿಮುಖವಾಗಿ ಹರಿದು, ಅಲ್ಲಿಂದ ಈಶಾನ್ಯಕ್ಕೆ ದಿಕ್ಕು ಬದಲಾಯಿಸಿ, ಸ್ವಲ್ಪ ದೂರ ಜಿಲ್ಲೆಯ ಪೂರ್ವ ಗಡಿಯಾಗಿ ಪರಿಣಮಿಸಿ, ಶಿರಂಗಾಲದ ಬಳಿ ಜಿಲ್ಲೆಯನ್ನು ಬಿಡುತ್ತದೆ. ಇದರ ಎರಡು ಮುಖ್ಯ ಉಪನದಿಗಳಾದ ಹೇಮಾವತಿ ಮತ್ತು ಲಕ್ಷ್ಮಣತೀರ್ಥಗಳು ಕ್ರಮವಾಗಿ ಉತ್ತರ ಮತ್ತು ದಕ್ಷಿಣ ಕೊಡಗುಗಳಲ್ಲಿ ಹರಿಯುತ್ತವೆ.

ಕೊಡವರ ಒಂದು ನೃತ್ಯ. ಕೊಡವ ಹೆಣ್ಣು ಮಕ್ಕಳು ತಮ್ಮ ವಿಶಿಷ್ಟ ಉಡುಗೆ ತೊಡುಗೆಗಳಿಂದ ಅಲಂಕೃತರಾಗಿ ನರ್ತಿಸುತ್ತಿದ್ದಾರೆ

ಹೇಮಾವತೀಯೇ ಕೊಡಗಿನ ಉತ್ತರತಮ ಗಡಿರೇಖೆ. ಕೊಡಗಿನಲ್ಲಿ ಕಾವೇರಿಯನ್ನು ಸೇರುವ ಉಪನದಿಗಳು, ಕನ್ನಿಕೆ, ಕಕ್ಕಬೆ, ಕಾಡನೂರು ಹೊಳೆ, ಮುತ್ತಾರುಮುಡಿ, ಚಿಕ್ಕಹೊಳೆ ಮತ್ತು ಹಾರಂಗಿ. ಕಕ್ಕೆಹೊಳೆ, ಚೇರನಹೊಳೆ, ಮಾದಪುರ ಮತ್ತು ಹಟ್ಟಿಹೊಳೆ –ಇವು ಹಾರಂಗಿಯ ಉಪನದಿಗಳು. ಪಶ್ಚಿಮಕ್ಕೆ ಹರಿಯುವ ಒಂದು ಮುಖ್ಯ ನದಿಯೆಂದರೆ ಬರಪೊಳೆ. ಇದು ನೈಋತ್ಯದಲ್ಲಿ ಮಲಬಾರಿನ ಕಡೆಗೆ ಸಾಗುತ್ತದೆ. ಸಾರತ್, ಕುಮಾರಧಾರಾ ಮತ್ತು ಪಯಸ್ವಿನಿ ಇತರ ನದಿಗಳು. ಸಾರತ್ 131.5ಮೀ. ಎತ್ತರದಿಂದ ದುಮುಕುತ್ತದೆ. ಕೊಡಗಿನ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ಇವನ್ನು ಸುಲಭವಾಗಿ ದಾಟಬಹುದು.

ಕೊಡಗು ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಹಿತಕರ. ಪೂರ್ವಕ್ಕಿಂತ ಪಶ್ಚಿಮ ಭಾಗ ಹೆಚ್ಚು ತಂಪಾಗಿರುತ್ತದೆ. ಏಪ್ರಿಲ್–ಮೇಗಳಲ್ಲಿ ಗರಿಷ್ಠ ಉಷ್ಣತೆ. ಜನವರಿಯಲ್ಲಿ ಕನಿಷ್ಠ. ಮಳೆಯೂ ಪೂರ್ವಕ್ಕಿಂತ ಪಶ್ಚಿಮದಲ್ಲಿ ಅಧಿಕ. ಭಾಗಮಂಡಲದಲ್ಲಿ ವಾರ್ಷಿಕ ಮಳೆ 6030ಮಿಮೀ. ಜಿಲ್ಲೆಯ ಪೂರ್ವದ ಎಲ್ಲೆಯಲ್ಲಿರುವ ಕುಶಾಲನಗರದಲ್ಲಿ 1120ಮಿಮೀ. ಜಿಲ್ಲೆಯ ಸರಾಸರಿ ಮಳೆ 2725ಮಿಮೀ. ಸರಾಸರಿ ವರ್ಷದಲ್ಲಿ 118 ಮಳೆದಿನಗಳು.

ಕೊಡಗಿನ ಪ್ರಾಣಿಗಳು ನೆರೆಯ ಪ್ರದೇಶಗಳ ಪ್ರಾಣಿಗಳಿಗಿಂತ ಭಿನ್ನವಲ್ಲ. ಕೊಡಗಿನಲ್ಲಿ ಅವಕ್ಕೆ ಕಾಡುಗಳ ರಕ್ಷಣೆಯೂ ಯಥೇಚ್ಛವಾಗಿ ಕುಡಿಯುವ ನೀರೂ ಇರುವುದರಿಂದ ಅವು ಇಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಇಲ್ಲಿಯ ಮಾಂಸಾಹಾರಿ ಮೃಗಗಳು ಮಳೆಗಾಲದಲ್ಲಿ ನೆರೆಯ ಜಿಲ್ಲೆಗಳಿಗೆ ಹೋಗುತ್ತವೆ. ಹೊಳೆಗಳಿರುವಲ್ಲಿ ಅತ್ಯಂತ ಕಡಿದಾದ ಬೆಟ್ಟಗಳು

ಇಲ್ಲದಿರುವಲ್ಲಿ ದೊಡ್ಡ ದೊಡ್ಡ ಮೃಗಗಳುಂಟು. ಉತ್ತರ ಪೂರ್ವ ದಕ್ಷಿಣ ಪ್ರದೇಶಗಳಲ್ಲಿ ಅನೇಕ ಬಗೆಯ ಪ್ರಾಣಿಗಳಿವೆ. ಕಪ್ಪು ಬೂದು ಮತ್ತು ಕಂದು ಬಣ್ಣಗಳ ಕೋತಿಗಳು ಹೇರಳ. ನಾಯಿ ಜಾತಿಯ ಪ್ರಾಣಿಗಳಲ್ಲಿ ಕೆನ್ನಾಯಿ ಮುಖ್ಯವಾದ್ದು. ಈ ಪ್ರಾಣಿ ತೋಳವನ್ನು ಹೋಲುತ್ತದೆ, ಬಹು ಭಯಂಕರ. ಹುಲಿ, ಕಿರುಬ, ಹುಲಿಬೆಕ್ಕು, ಕಾಡುಹಂದಿ, ಕರಡಿ, ಕತ್ತೆ ಕಿರುಬ, ಮುಳ್ಳುಹಂದಿ, ಪುನುಗು ಬೆಕ್ಕುಗಳೂ ಮುಂಗುಸಿ, ಆಮೆ, ಜಿಂಕೆ, ಸಾಂಬಾರ್‌ಗಳು, ಆನೆ, ಕಾಡೆಮ್ಮೆಗಳೂ ಇವೆ. ನಾಗರಹಾವು, ಹೆಬ್ಬಾವುಗಳು, ವಿಶೇಷ ನದಿಗಳಲ್ಲಿ ಮೊಸಳೆ ಇರುವುದುಂಟು. ಗಿಡುಗ, ಹದ್ದು, ಮಿಂಚುಳ್ಳಿ, ಮರಕುಟುಕ, ಕೋಗಿಲೆ, ಮೈನಾ ಮುಂತಾದ ಹಕ್ಕಿಗಳಿವೆ.

ಕೊಡಗು ಜಿಲ್ಲೆಯ ಮೂರನೆಯ ಒಂದು ಭಾಗ ಅರಣ್ಯಾವೃತ. ರಕ್ಷಿತ ಅರಣ್ಯ ಪ್ರದೇಶಗಳೂ ಸೇರಿ 1,25,952ಹೆ. ಅರಣ್ಯವಿದೆ. ತೇಗ, ಬೀಟೆ, ಹೊನ್ನೆ, ಶ್ರೀಗಂಧ ಇವು ಮುಖ್ಯವಾದ ಮರಗಳು. ತೇಗದ ಮರಗಳ ಕಾಡುಗಳನ್ನು ಸರ್ಕಾರದ ಅರಣ್ಯ ಇಲಾಖೆ ಅಭಿವೃದ್ಧಿಪಡಿಸುತ್ತಿದೆ. ಬೆಂಕಿಕಡ್ಡಿ ಕೈಗಾರಿಕೆಗೆ ಆವಶ್ಯವಾದ ಮೆದುಮರಗಳನ್ನೂ ನೆಟ್ಟು ಬೆಳೆಸಲಾಗುತ್ತಿದೆ. ಕೊಡಗಿನ ಜನರ ಮುಖ್ಯ ಕಸಬು ಕೃಷಿ. ಬತ್ತ, ರಾಗಿ ಮುಖ್ಯ ಬೆಳೆಗಳು. ಕಾಫಿ, ಕೊಡಗಿನ ಮತ್ತೊಂದು ಮುಖ್ಯ ಕೃಷಿ ಉತ್ಪನ್ನ (ಸು.83,150ಹೆ). ಕಿತ್ತಳೆ ಬೆಳೆಯೂ ವಿಶೇಷ. ಏಲಕ್ಕಿ, ಮೆಣಸು ಬೆಳೆಯುತ್ತಾರೆ. ಅಡಕೆ ಇನ್ನೊಂದು ಫಸಲು. ಮಡಿಕೇರಿಯ ಬಳಿ ಚಹ ತೋಟವೂ ಉಂಟು. ಮಾವುಕೂಟ, ಜೋಡುಪಾಲ, ಸಂಪಾಜೆ ಮತ್ತು ಕಡಮಕಲ್ಲುಗಳಲ್ಲಿ ರಬ್ಬರ್ ತೋಟಗಳಿವೆ. ಬೆಟ್ಟದ ಕೆಳಗೆ ಸಂಪಾಜೆ, ಪೆರಾಜೆ ಮತ್ತು ಚೆಂಬುಗಳಲ್ಲಿ ತೆಂಗು ಮತ್ತು ಗೇರು ಬೆಳೆಯುತ್ತಾರೆ.

ಜೇನುಸಾಕಣೆ ಕೊಡಗಿನ ಒಂದು ಮುಖ್ಯ ಉದ್ಯಮ. ಭಾಗಮಂಡಲದಲ್ಲಿ ಮಧುವನ ಎಂಬ ಜೇನುಸಾಕಣೆ ಕೇಂದ್ರವಿದೆ. ಕೊಡಗು ಜೇನು ಉತ್ಪಾದಕರ ಸಂಘ ಈ ಉದ್ಯಮದ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಭಾಗಮಂಡಲದ ಕೇಂದ್ರದಲ್ಲಿ ಜೇನುಸಾಕುವ ತರಬೇತು ನೀಡಲಾಗುತ್ತಿದೆ. ಶನಿವಾರಸಂತೆ ಮತ್ತು ಶಿರಂಗಾಲದಲ್ಲಿ ಕೈಮಗ್ಗದ ಬಟ್ಟೆ ತಯಾರಾಗುತ್ತದೆ. ಶನಿವಾರಸಂತೆಯಲ್ಲಿ ನೇಯ್ಗೆಯ ಶಾಲೆಯುಂಟು. ಶಿರಂಗಾಲದಲ್ಲಿ ಕೈಮಗ್ಗ ನೇಕಾರರ ಸಹಕಾರ ಸಂಘ ಸ್ಥಾಪಿತವಾಗಿದೆ. ವಿರಾಜಪೇಟೆ ತಾಲ್ಲೂಕಿನ ಮಲೆನಾಡಿನಲ್ಲಿ ಬೆತ್ತದ ಸಾಮಾನು ಮಾಡುವವರ ಒಂದು ಸಹಕಾರ ಸಂಘವುಂಟು. ಪೊನ್ನಂಪೇಟೆಯ ಬಳಿಯ ಮಡಕೆಬೀಡು ಕುಂಭ ಕೈಗಾರಿಕೆಯ ಕೇಂದ್ರ. ಇಲ್ಲಿ ಇದರ ಒಂದು ಶಾಲೆ ಇದೆ. ಮಡಿಕೇರಿಯಲ್ಲಿ ಪ್ಲಾಸ್ಟಿಕ್ ಚೀಲ ತಯಾರಿಸುವ ಕಾರ್ಖಾನೆಯೂ ತುಕ್ಕುಹಿಡಿಯದ ಉಕ್ಕಿನ ಪಾತ್ರೆ ತಯಾರಿಸುವ ಕಾರ್ಖಾನೆಯೂ ಇವೆ. ಕೂಡಿಗೆಯಲ್ಲಿ ಕಾಫಿ ಪರಿಷ್ಕರಣ ಕಾರ್ಖಾನೆಯುಂಟು. ಮಡಿಕೇರಿಯಲ್ಲಿ ಒಂದು ಸರ್ಕಾರಿ ಮುದ್ರಣಾಲಯವೂ ವಾಹನಗಳ ದುರಸ್ತಿ ಕಾರ್ಯಾಗಾರವೂ ಇವೆ. 1954ರಲ್ಲಿ ಸರ್ಕಾರ ಮೂರ್ನಾಲ್‌ನಲ್ಲಿ ಒಂದು ಮರ ಕೊಯ್ಯುವ ಕಾರ್ಖಾನೆ ಸ್ಥಾಪಿಸಿತು. ಕೊಡಗಿನ ಮುಖ್ಯಬೆಳೆ ಬತ್ತವಾದ್ದರಿಂದ ಇಲ್ಲಿ ಹಲವು ಅಕ್ಕಿ ಗಿರಣಿಗಳಿವೆ. ಮಡಿಕೇರಿಯಲ್ಲಿ ನಾಲ್ಕು ಸಣ್ಣ ಎಂಜಿನಿಯರಿಂಗ್ ಕಾರ್ಯಾಗಾರಗಳೂ ಸೋಮವಾರಪೇಟೆ ಮತ್ತು ಕೂಡಿಗೆಗಳಲ್ಲಿ ಒಂದೊಂದು ವ್ಯವಸಾಯೋಪಕರಣ ಕಾರ್ಖಾನೆಯೂ ಉಂಟು. ಕಾಫಿ ತೋಟಗಳಿಗೆ ಅವಶ್ಯವಾದ ಉಪಕರಣಗಳು ಇಲ್ಲಿ ತಯಾರಾಗುತ್ತವೆ. ರಾಜ್ಯದ ಇತರ ಜಿಲ್ಲೆಗಳಲ್ಲಿರುವಂತೆ ಕೊಡಗಿನಲ್ಲೂ ಹಲವು ಜಾತಿ ಮತಗಳ ಜನ ಇದ್ದಾರೆ. ಎರವರು, ಕುಡಿಯರು, ಬೆಟ್ಟ ಕುರುಬರು, ಜೇನು ಕುರುಬರು, ಕೊರಗರು, ಪಣಿಯರು –ಇವರು ಗಿರಿಜನರು; ಹರಿಜನರೂ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇಲ್ಲಿನ ಕೊಡವರು ವಿಶಿಷ್ಟ ಜನ. ಕದಂಬ ವಂಶದ ಚಂದ್ರವರ್ಮ ಇವರ ಮೂಲಪುರುಷನೆಂದು ಹೇಳುತ್ತಾರೆ.

ಶತ್ರುಗಳ ಆಕ್ರಮಣದಿಂದಾಗಿ ಸ್ವಂತ ರಾಜ್ಯ ತೊರೆದುಬಂದು ಕೊಡಗಿನಲ್ಲಿ ನೆಲಸಿದ ಕದಂಬ ಸೈನಿಕರು ಇವರ ಮೂಲಪುರುಷರಿರಬಹುದೆಂದು ಹೇಳಲಾಗಿದೆ. ಕೊಡಗಿನ ಜನರ ಸಂಸ್ಕೃತಿ ವಿಶಿಷ್ಟವಾದ್ದು. ಕತ್ತಿ ಕೋವಿಗಳು ಇವರಿಗೆ ಪ್ರಿಯ. ಹುತ್ತರಿಯ ಕುಣಿತ, ಬೊಳಕಾಟ, ಕೋಲಾಟ ಮೊದಲಾದವು ಕೊಡಗಿನ ಜನಪದ ನೃತ್ಯಗಳು. ಇವು ವೀರರಸ ಪ್ರಧಾನ. ಹುತ್ತರಿ ಹಬ್ಬದ ಸಮಯದಲ್ಲಿ ಕೋಲಾಟ ಮುಖ್ಯವಾದ್ದು. ಪರಿಯಕುಳಿ ಎಂಬುದು ಯುದ್ಧ ನೃತ್ಯ. ಬೊಳುಕಾಟ ಅಖಿಲ ಭಾರತ ಪ್ರಸಿದ್ಧಿ ಪಡೆದಿದೆ. ಕೈಲ್‌ಪೊಳದ್, ಕಾವೇರಿ ಸಂಕ್ರಮಣ, ಹುತ್ತರಿ, ಶಿವರಾತ್ರಿ, ಉಗಾದಿ, ಷಷ್ಠಿ, ವಿಷ್ಣು ಸಂಕ್ರಮಣ –ಇವು ಕೊಡವರ ಮುಖ್ಯ ಹಬ್ಬಗಳು. ಕೊಡಗರ ಉಡುಪೂ ವೈಶಿಷ್ಟ್ಯಪೂರ್ಣ. ಗಂಡಸರು ಹಬ್ಬಹರಿದಿನ ವಿವಾಹ ಸಮಯಗಳಲ್ಲಿ ಜರಿಪೇಟ, ಕರಿಯ ಮೇಲಂಗಿ, ಜರಿಯ ನಡುದಟ್ಟಿ ತೊಟ್ಟು ಬಲಗಡೆಗೆ ಬೆಳ್ಳಿಯ ಒರೆಯಲ್ಲಿ ಕತ್ತಿ ಧರಿಸುತ್ತಾರೆ. ಸೆರಗನ್ನು ಹಿಂದಕ್ಕೆ ಬಿಟ್ಟು ವಿಶಿಷ್ಟ ರೀತಿಯಲ್ಲಿ ಸೀರೆ ಉಡುವುದೂ ತುಂಬುತೋಳಿನ ರವಿಕೆ ತೊಡುವುದು ಸ್ತ್ರೀಯರ ಕ್ರಮ. ವಿಶೇಷ ದಿನಗಳಲ್ಲಿ ಇವರು ತಲೆಗೆ ಜರಿಹೊದಿಕೆ ಕಟ್ಟುತ್ತಾರೆ. ಕೊಡವರಿಗೆ ಅವರದೇ ಆದ ಭಾಷೆಯಿದೆ. ಅದು ಕೊಡವ ನುಡಿ. ಅದಕ್ಕೆ ಲಿಪಿಯಿಲ್ಲ. ಅದು ಕನ್ನಡ ತಮಿಳು ಮಲಯಾಳಂ ಶಬ್ದಗಳಿಂದ ಕೂಡಿದೆ. ಕನ್ನಡ ಮೂಲ ಶಬ್ದಗಳೇ ಅಧಿಕ. ಅಪ್ಪನೆರವಂಡ ಅಪ್ಪಚ್ಚಕವಿ, ನಡಿಕೇರಿಯಂಡ ಚಿಣ್ಣಪ್ಪ ಇವರು ಕೊಡವ ಭಾಷೆಯ ಮುಖ್ಯ ಕೃತಿಕಾರರು. ಕನ್ನಡ ಕೊಡಗಿನ ವ್ಯವಹಾರ ಭಾಷೆ.

ಕೊಡಗಿನ ಜಿಲ್ಲಾ ಕೇಂದ್ರವಾದ ಮಡಿಕೇರಿಗೂ ಜಿಲ್ಲೆಯ ಮುಖ್ಯ ಸ್ಥಳಗಳಿಗೂ ಒಳ್ಳೆಯ ರಸ್ತೆಗಳುಂಟು. ಬೆಂಗಳೂರು, ಮೈಸೂರು, ಮಂಗಳೂರು, ಹಾಸನ, ಚಿಕ್ಕಮಗಳೂರು, ಉಡುಪಿ, ತಲಚೇರಿ, ಕಣ್ಣಾನೂರು ಮುಂತಾದ ಕಡೆಗಳಿಗೆ ಬಸ್ ಮಾರ್ಗಗಳಿವೆ. ಕುಶಾಲನಗರದಲ್ಲಿ ಕೊಡಗು ಜಿಲ್ಲೆಯನ್ನು ಪ್ರವೇಶಿಸಿ, ಮಡಿಕೇರಿಯ ಮಾರ್ಗವಾಗಿ ಸಂಪಾಜೆಗೆ ಸಾಗಿ ಮುಂದುವರಿಯುವ ಮೈಸೂರು –ಮಂಗಳೂರು ಹೆದ್ದಾರಿ, ಮಡಿಕೇರಿಯಿಂದ ಸಿದ್ದಾಪುರ ವಿರಾಜಪೇಟೆಗಳ ಮೂಲಕ ಕಣ್ಣಾನೂರು ತಲಪುವ ಮಡಿಕೇರಿ – ತಲಚೇರಿ ಹೆದ್ದಾರಿ, ಮಡಿಕೇರಿಯಿಂದ ಮಾದಾಪುರ, ಸೋಮವಾರಪೇಟೆ, ಶನಿವಾರ ಸಂತೆಗಳ ಮೂಲಕ ಸಾಗುವ ಮಡಿಕೇರಿ – ಕೊಡ್ಲಿಪೇಟೆ ಹೆದ್ದಾರಿ, ಮಡಿಕೇರಿಯಿಂದ ಮೂರ್ನಾಡು ಮೂಲಕ ವಿರಾಜಪೇಟೆ ತಲಪುವ ದಾರಿ, ಮಡಿಕೇರಿ – ಭಾಗಮಂಡಲ ಮಾರ್ಗ, ವಿರಾಜಪೇಟೆಯಿಂದ ಗೋಣಿಕೊಪ್ಪಲು, ತಿತ್ತಿಮತ್ತಿ ಮತ್ತು ಆನೇಚೌಕೂರು ಮಾರ್ಗ, ವಿರಾಜಪೇಟೆ ಹುಣಸೂರು ಹೆದ್ದಾರಿ, ಗೋಣಿಕೊಪ್ಪಲಿನಿಂದ ಪೊನ್ನಂಪೇಟೆ ಹುದಕೇರಿ ಕುಟ್ಟಗಳ ಮೂಲಕ ಸಾಗುವ ಗೋಣಿಕೊಪ್ಪಲು ಮಾನಂದವಾಡಿ ಹೆದ್ದಾರಿ, ನಾಪೊಕ್ಲು ಕಕ್ಕಬೆ ಕಡಂಗ ಕದನೂರು ವಿರಾಜಪೇಟೆ ಹೆದ್ದಾರಿ, ಕುಶಾಲನಗರದಿಂದ ಕೂಡಿಗೆಯ ಮೂಲಕ ಮಡಕೇರಿ ಕೊಡ್ಲಿಪೇಟೆ ಹೆದ್ದಾರಿಯನ್ನು ಸೇರುವ ದಾರಿ, ಕೂಡಿಗೆ–ಶಿರಂಗಾಲ ಮಾರ್ಗ – ಇವು ಜಿಲ್ಲೆಯ ಮುಖ್ಯ ರಸ್ತೆಗಳು ಕೊಡಗಿನಲ್ಲಿ ರೈಲುಮಾರ್ಗವಿಲ್ಲ.

ಜಿಲ್ಲೆಯ ಕೇಂದ್ರ ಮಡಿಕೇರಿ, ಇದು ಪ್ರವಾಸಿ ಕೇಂದ್ರ ಕೂಡ. ತಲಕಾವೇರಿ, ಭಾಗಮಂಡಲ, ರಾಮಸ್ವಾಮಿ ಕಣಿವೆ, ಕೂಡಿಗೆ, ನಾಲ್ಕುನಾಡು ಅರಮನೆ, ಇಗ್ಗುತಪ್ಪದೇವರ ಶಿಖರ, ಚೆಟ್ಟಳ್ಳಿ ಇವು ಇತರ ಪ್ರೇಕ್ಷಣಿಯ ಸ್ಥಳಗಳು.

ವಿರಾಜಪೇಟೆ, ಪೊನ್ನಂಪೇಟೆ, ಗೋಣಿಕೊಪ್ಪಲು, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ, ಕುಶಾಲನಗರ, ಶುಂಟಿಕೊಪ್ಪ –ಇವು ಇತರ ಮುಖ್ಯ ಊರುಗಳು. ಅಮ್ಮತ್ತಿ, ಸಿದ್ದಾಪುರ, ಪೊಲ್ಲಿಬೆಟ್ಟ, ತಿತ್ತಿಮತ್ತಿ, ಬಾಳೆಲೆ –ಇವು ಕಾಫಿ ವ್ಯವಸಾಯ ಕೇಂದ್ರಗಳು. ಪೊಲ್ಲಿಬೆಟ್ಟ, ತಿತ್ತಿಮತ್ತಿ, ಬಾಳೆಲೆ –ಇವು ಕಿತ್ತಳೆ ತೋಟಗಳಿಗೂ ಪ್ರಸಿದ್ಧವಾಗಿವೆ.

ಕರ್ನಾಟಕ ಭಾಗದ ಸಹ್ಯಾದ್ರಿಯ ದಕ್ಷಿಣ ತುದಿಯಲ್ಲಿರುವ ಈ ಜಿಲ್ಲೆ ಐತಿಹಾಸಿಕವಾಗಿ ಸಾಂಸ್ಕೃತಿಕವಾಗಿ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಈ ಜಿಲ್ಲೆಯ ವಿಶೇಷ ಹೆಸರಾದ ಕೊಡಗು ಪದದ ಮೂಲ ಅಸ್ಪಷ್ಟ. ಕನ್ನಡದ ಕುಡು (ಮಲೆಯ ಪ್ರದೇಶ) ಕೊಡಗು ಆಗಿದೆ; ಹಲವಾರು ಮಲೆಗಳ ಇಳಿಜಾರುಗಳಿರುವುದರಿಂದ ಮೂಲತಃ ಕೊಡಿಮಲೆನಾಡು ಎಂದಿದ್ದ ಇದು ಕೊಡಗಾಗಿ ರೂಪಾಂತರವಾಗಿದೆ; ಕೊಡಗು ಎಂದರೆ ಪಶ್ಚಿಮಕ್ಕಿರುವ ನಾಡು, ಈ ಜಿಲ್ಲೆ ಪಶ್ಚಿಮಕ್ಕಿರುವುದರಿಂದ ಈ ಹೆಸರು ಬಂತು ಎಂದು ಊಹೆಗಳಿವೆ. ಕೊಡಗಿನಲ್ಲಿ ಪ್ರಸಿದ್ಧವಾಗಿರುವ ಕಾವೇರಿ ಮಾಹಾತ್ಮ್ಯವೆಂಬ ಪೌರಾಣಿಕ ಗ್ರಂಥದ ಪ್ರಕಾರ ಇದಕ್ಕೆ ಬ್ರಹ್ಮಕ್ಷೇತ್ರ, ಮತ್ಸ್ಯದೇಶ ಮತ್ತು ಕ್ರೋಡದೇಶ ಎಂಬ ಹೆಸರುಗಳೂ ಇವೆ. ಈ ಹೆಸರುಗಳ ಮೂಲದ ಬಗ್ಗೆ ಹಲವು ಪೌರಾಣಿಕ ಕಥೆಗಳಿವೆ. ಕೊಡಗಿನ ಇತಿಹಾಸ ಕ್ರಿ.ಶ.2ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ. ತಮಿಳು ಸಂಘಂ ಸಾಹಿತ್ಯದಲ್ಲಿ ಕುಡಗು ನಾಡಿನ ಉಲ್ಲೇಖವಿದ್ದು, ಇದು ಪಾಂಡ್ಯರಾಜ್ಯದೊಳಗಿದ್ದಂತೆ ಹೇಳಿಕೆಗಳಿವೆ. 4ನೆಯ ಶತಮಾನದಾರಭ್ಯ ಗಂಗ, ಕದಂಬ, ಚೋಳರ ವಶದಲ್ಲಿತ್ತು. 11–12ನೆಯ ಶತಮಾನದಲ್ಲಿ ಕೊಂಗಾಳ್ವರು, ಚಂಗಾಳ್ವರು ಇಲ್ಲಿ ಆಳುತ್ತಿದ್ದರು. ಅನಂತರ ಇದು ಹೊಯ್ಸಳ, ವಿಜಯನಗರ ರಾಜ್ಯಗಳ ಆಳ್ವಿಕೆಗೊಳಪಟ್ಟಿತ್ತು. ಪುನಃ ಸ್ವಲ್ಪಕಾಲ ಚಂಗಾಳ್ವರ ಕೈಸೇರಿತು. ಸ್ವಲ್ಪ ಕಾಲ ಹಲವು ಪಾಳೆಯಗಾರರ ವಶದಲ್ಲಿತ್ತು. ಅನಂತರ ಹಾಲೇರಿ ವಂಶದವರು ರಾಜ್ಯವಾಳಿದರು. 1780–89ರವರೆಗೆ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನ್ ಆಕ್ರಮಿಸಿದ್ದರು. 1834ರಲ್ಲಿ ಬ್ರಿಟಿಷರ ಆಳ್ವಿಕೆಗೊಳಪಟ್ಟು ಪ್ರತ್ಯೇಕ ಸಂಸ್ಥಾನದ ಸ್ಥಾನವನ್ನು ಹೊಂದಿತ್ತು. ಆ ಕಾಲದಲ್ಲಿ ಬೆಂಗಳೂರಿನಲ್ಲಿರುತ್ತಿದ್ದ ಮೈಸೂರು ಚೀಫ್ ಕಮಿಷನರ್ ಆಡಳಿತ ನಡೆಸುತ್ತಿದ್ದ. ಇವನ ಅಧೀನದಲ್ಲಿ ಕೊಡಗಿನಲ್ಲಿ ಒಬ್ಬ ಸೂಪರಿಂಟೆಂಡೆಂಟ್ ಇರುತ್ತಿದ್ದ. ಕ್ಯಾಪ್ಟನ್ ಲೇಹಾರ್ಡಿ ಕೊಡಗಿನ ಮೊದಲ ಸೂಪರಿಟೆಂಡೆಂಟ್. ಆ ವರೆಗೂ ಕೊಡಗು ರಾಜ್ಯಕ್ಕೆ ಸೇರಿದ್ದ ಪುತ್ತೂರು ಮತ್ತು ಸುಳ್ಯಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾಯಿಸಿದ್ದರಿಂದ ಕೊಡಗು ರಾಜ್ಯದ ವಿಸ್ತಾರ ಕಡಿಮೆಯಾಯಿತು. ಕೊಡಗು ಇದೇ ಸ್ಥಿತಿಯಲ್ಲೇ ಮುಂದುವರಿದು 1947ರಲ್ಲಿ ಭಾರತ ಸ್ವತಂತ್ರವಾದಾಗ ಕೇಂದ್ರ ಸರ್ಕಾರದ ಗೃಹಖಾತೆಯ ನೇರ ಆಡಳಿತಕ್ಕೆ ಒಳಪಟ್ಟಿತು. 1951ರಲ್ಲಿ ಕೊಡಗು 'ಸಿ' ರಾಜ್ಯವೆಂದು ಘೋಷಿತವಾಗಿ ಇಲ್ಲಿ 24 ಸದಸ್ಯರ ಲೆಜಿಸ್ಲೇಟೀವ್ ಅಸೆಂಬ್ಲಿ ಸ್ಥಾಪಿತವಾಯಿತು. 1956ರಲ್ಲಿ ರಾಜ್ಯ ಮರುವಿಂಗಡಣೆಯಾದಾಗ ಕೊಡಗು ಮೈಸೂರು ರಾಜ್ಯದ ಭಾಗವಾಗಿ ಸೇರಿತು.

ಈ ಜಿಲ್ಲೆಯಲ್ಲಿ ವಿರಾಜಪೇಟೆ, ಸುಚಮಕೇರಿ, ಅಂದಗೋವೆ, ದೊಡ್ಡಬಿಳ್ಳ, ಕಿರೇಬಿಳ್ಳ, ಕೊಡಗರಹಳ್ಳಿ, ಹೆಗ್ಗಡೆಹಳ್ಳಿ ಇವುಗಳ ಬಳಿ ಬೃಹತ್ ಶಿಲಾಸಮಾಧಿ ಯುಗದ ಕಲ್ಲುಗುಡ್ಡೆ ಸಮಾಧಿಗಳಿವೆ. ಹಿಂದೆ ಉತ್ಖನನ ನಡೆದಿರುವ ಕೆಲವು ಈ ರೀತಿಯ ಸಮಾಧಿಗಳಲ್ಲಿ ಕಲ್ಲುತೊಟ್ಟಿಯ ರೀತಿಯವೂ ತುದಿಚೂಪಿನ ಮಡಕೆಯ ರೀತಿಯವೂ ಕಂಡುಬಂದಿವೆ. ಇವುಗಳಲ್ಲಿ ವಿಚಿತ್ರ ರೀತಿಯ ಮಡಕೆ ಕುಡಿಕೆಗಳು, ಎಲುಬುಗಳು, ಕಬ್ಬಿಣದ ಉಪಕರಣಗಳು, ಕಲ್ಲಿನ ಮಣಿಗಳು, ಆಟದ ಬೊಂಬೆಗಳು, ರಾಗಿ ಕಾಳು ಇತ್ಯಾದಿ ವಸ್ತುಗಳು ಸೇರಿವೆ.

ಪ್ರಾಚೀನ ವಾಸ್ತುಶಿಲ್ಪದೃಷ್ಟಿಯಿಂದ ಬಹು ಮಹತ್ವದ ಕೃತಿಗಳು ಕೊಡಗಿನಲ್ಲಿ ಇಲ್ಲವೆಂದೇ ಹೇಳಬಹುದು. ಶನಿವಾರಸಂತೆಯ ಬಳಿಯ ಮುಳ್ಳೂರು (**ನೋಡಿ– ಮುಳ್ಳೂರು**) ಹಿಂದೆ ಜೈನ ಕೇಂದ್ರವಾಗಿದ್ದು ಇಲ್ಲಿ ಕೊಂಗಾಳ್ವರ ಕಾಲದ ಕೆಲವು ಬಸದಿಗಳ ಅವಶೇಷಗಳಿವೆ; ಈಗ ಬಸದಿಗಳು ಜೀರ್ಣೋದ್ಧಾರಗೊಂಡಿವೆ. ಶುಂಟಿಕೊಪ್ಪ ಬಳಿಯ ಬೆಟಗೇರಿಯಲ್ಲಿ ವಿಜಯನಗರ ಕಾಲದ ಒಂದು ಜೈನ ಬಸದಿ ಇದೆ. ಇದು ಕಗ್ಗಲ್ಲಿನ ಸಾಮಾನ್ಯ ರಚನೆ. ಹೊರಮಲೆ ಹಾಲೇರಿ ರಾಜರ ಒಂದು ಶಾಖೆಯ ಕೇಂದ್ರವಾಗಿತ್ತು. ಇಲ್ಲಿ ಅರಮನೆಯ ಅವಶೇಷಗಳು ಮತ್ತು ಒಂದು ಭದ್ರಕಾಳಿ ದೇವಾಲಯ ಇದೆ. ಕೊಡಗಿನ ಪ್ರಸಿದ್ಧವಾದ ವಾಸ್ತು ಕೃತಿಗಳೆಂದರೆ 18–19ನೆಯ ಶತಮಾನಕ್ಕೆ ಸೇರಿದ ಮಡಿಕೇರಿಯಲ್ಲಿರುವ ಕೋಟೆ, ಓಂಕಾರೇಶ್ವರ ದೇವಾಲಯ, ರಾಜರ ಸಮಾಧಿಗಳು ಮತ್ತು ಇಗರ್ಜಿ (**ನೋಡಿ– ಮಡಿಕೇರಿ**), ಕೊಡಗಿನ ಇಗ್ಗುತಪ್ಪ ದೇವರ ಶಿಖರ, ಇರ್ಪು, ಭಾಗಮಂಡಲ (**ನೋಡಿ– ಭಾಗಮಂಡಲ**) ಮೊದಲಾದೆಡೆಯದೇವಾಲಯಗಳು ವಾಸ್ತುಶಿಲ್ಪದೃಷ್ಟಿಯಿಂದಲ್ಲದಿದ್ದರೂ ಪವಿತ್ರ ಸ್ಥಾನಗಳಾಗಿ ಪ್ರಸಿದ್ಧವಾಗಿವೆ. *

1973ರಲ್ಲಿ ಪ್ರಕಟವಾಗಿರುವ ಎಪಿಗ್ರಾಫಿಯ ಕರ್ನಾಟಿಕ ನವಮಾಲಿಕೆಯ ಮೊದಲ ಸಂಪುಟದಲ್ಲಿ ನೂರಕ್ಕೂ ಹೆಚ್ಚು ಕೊಡಗಿನ ಶಾಸನಗಳು ಪ್ರಕಟವಾಗಿವೆ. ಹೆಚ್ಚಿನವು ಶಿಲಾಶಾಸನಗಳು. ಕೆಲವು ತಾಮ್ರ ಶಾಸನಗಳು, ಪಾತ್ರೆಗಳ ಹಾಗೂ ಲೋಹದ ಮುದ್ರೆಗಳ ಮೇಲಣ ಬರೆಹಗಳೂ ಇವೆ. ಈ ಶಾಸನಗಳು ಗಂಗ, ಕೊಂಗಾಳ್ವ, ಚಂಗಾಳ್ವ, ವಿಜಯನಗರ, ಬೇಲೂರು ನಾಯಕರು, ಕೊಡಗಿನ ಒಡೆಯರು ಮತ್ತು ಬ್ರಿಟಿಷರ ಕಾಲಕ್ಕೆ ಸೇರಿದವು. ಹೆಚ್ಚಿನ ಶಾಸನಗಳು ಕನ್ನಡದಲ್ಲಿವೆ. ಸಂಸ್ಕೃತ, ಪಾರಸೀ, ಇಂಗ್ಲಿಷ್ ಹಾಗೂ ಗ್ರಂಥಲಿಪಿಯವೂ ಇವೆ. (ಎಸ್.ಕೆ.)

**ಕೊಡಗು²** : ಕೊಡಗಿನಲ್ಲಿ ಪ್ರಾರಂಭವಾದ ಒಂದು ಪತ್ರಿಕೆ. 1921ರ ಜೂನ್ 2ರಂದು ಇದರ ಪ್ರಥಮ ಸಂಚಿಕೆ ಮಡಿಕೇರಿಯಲ್ಲಿ ಪ್ರಕಟವಾಯಿತು. ಮುದ್ರಣವಾಗುತ್ತಿದ್ದದ್ದು ಮೈಸೂರಿನಲ್ಲಿ, ಪ್ರಥಮ ಸಂಪಾದಕರು ಕೊಡಗಿನ ಗಾಂಧಿ ಎಂದು ಪ್ರಖ್ಯಾತರಾಗಿದ್ದ ಪದ್ಯಂಡ ಬೆಳ್ಯಪ್ಪ. ಕೊಡಗಿಗೆ ರೈಲು ಇಲ್ಲವೆ ಬಸ್ ಸೌಕರ್ಯವಿರಲಿಲ್ಲ ಹೊರ ಜಗತ್ತಿನಲ್ಲಿ ಏನು ನಡೆಯುತ್ತಿದೆ ಎಂಬುದು ತಿಳಿಯುತ್ತಿರಲಿಲ್ಲ. ಅದನ್ನು ತಿಳಿಯಲು ಆಸಕ್ತಿಯ ಇಲ್ಲದಿದ್ದಂತಹ ಪರಿಸ್ಥಿತಿ, ಕೊಡಗಿನಲ್ಲಿ ಜನಜಾಗೃತಿ ಮೂಡಿಸುವ ದೃಷ್ಟಿಯಿಂದ ವಾರ ಪತ್ರಿಕೆಯನ್ನು ನಡೆಸಬೇಕೆಂದು 1920ರಲ್ಲಿ ಕೊಡಗಿನ ಕೆಲವು ಹಿರಿಯರ ನಿರ್ಧರಿಸಿದರು. ಪಾಲು ಹಣ ಸಂಗ್ರಹಿಸಿ 'ಕೊಡಗು ಕಂಪೆನಿ' ಸ್ಥಾಪಿಸಿದರು. ಸಂಸ್ಥೆಯ ಪ್ರಕಟಣೆ 'ಕೊಡಗು'.

ದೇಶಕ್ಕೆ ಸಂಬಂಧಿಸುವ ರಾಜಕೀಯ, ಆರ್ಥಿಕ ಸಾಮಾಜಿಕ ವಿಷಯಗಳನ್ನು ಚರ್ಚಿಸಿ, ಜನತೆಗೆ ತಿಳಿವಳಿಕೆ ನೀಡುವುದು.....ರಾಜಕೀಯ ವಿಚಾರದಲ್ಲಿ ಭಾರತ ದೇಶದ ಬೇರೆ ಬೇರೆ ಭಾಗಗಳಿಗೆ ಸಿಕ್ಕುವಂಥಾ ಆಡಳಿತ ತಿದ್ದುಪಾಟು, ಸುಧಾರಣೆಗಳು ನಮಗೆ ದೊರೆಯುವಂತೆಯೂ ಸಿಕ್ಕಿದ ನಂತರ ನ್ಯಾಯ ವಿಧಾಯಕ ಸಭೆಯ ಕೆಲಸಗಳು ಚೆನ್ನಾಗಿ ನಡೆಯುವುದಕ್ಕೆ ಸಹಾಯ ಮಾಡುವುದು ಪತ್ರಿಕೆಯ ಉದ್ದೇಶವೆಂದು ಮೊದಲ ಸಂಚಿಕೆಯಲ್ಲಿ ಸ್ಪಷ್ಟೀಕರಣ ನೀಡಲಾಗಿದೆ. ಮೂರು ವರ್ಷ ಕಾಲ ಪತ್ರಿಕೆ ಮೈಸೂರಿನಲ್ಲೇ ಪ್ರಕಟವಾಗುತ್ತಿತ್ತು. ಆಮೇಲೆ ಮಡಿಕೇರಿಯಲ್ಲಿ ಅವರದೇ ಮುದ್ರಣಾಲಯ ಪ್ರಾರಂಭವಾಗಿ, ಪತ್ರಿಕೆ ಮಡಿಕೇರಿಯಿಂದಲೇ ಪ್ರಕಟವಾಗತೊಡಗಿತು. 1971ರಲ್ಲಿ ಈ ಪತ್ರಿಕೆಗೆ ಐವತ್ತು ವರ್ಷಗಳು ತುಂಬಿತು.

ತನ್ನ ಜೀವನದ ಈ ದೀರ್ಘ ಅವಧಿಯಲ್ಲಿ ಪತ್ರಿಕೆ ಹಲವು ಎಡರು ತೊಡರುಗಳನ್ನು ಕಂಡಿದೆ. ಅಚ್ಚ ರಾಷ್ಟ್ರೀಯತಾವಾದಿಯಾದ ಪತ್ರಿಕೆ ಬ್ರಿಟಿಷ್ ಆಡಳಿತದ ಕಾಲದಲ್ಲಿ ಸರ್ಕಾರದ ಸುಗ್ರೀವಾಜ್ಞೆಗಳನ್ನು ಎದುರಿಸಬೇಕಾಯಿತು. ಪತ್ರಿಕಾ ಕಚೇರಿ ಹಲವು ಬಾರಿ ಪೋಲೀಸ್ ಶೋಧನೆಗೆ ಒಳಗಾಯಿತು. ಪತ್ರಿಕೆಯ ಮೇಲೆ ದಂಡ ವಿಧಿಸಿದ್ದು ಎರಡು ಸಾರಿ. ಸಂಪಾದಕರಾದ ಬೆಳ್ಯಪ್ಪನವರನ್ನೂ ಅವರ ಅನಂತರ ಸಂಪಾದಕರಾದ ಬಿ.ಡಿ.ಗಣಪತಿಯವರನ್ನೂ 1942ರಲ್ಲಿ ಸರ್ಕಾರ ದಸ್ತಗಿರಿ ಮಾಡಿ ಮುದ್ರಣಾಲಯವನ್ನು ಮುಟ್ಟುಗೋಲು ಹಾಕಿಕೊಂಡಿತು. ಆದರೂ ಪತ್ರಿಕೆ ನಿಲ್ಲಲಿಲ್ಲ. ಸ್ವಾತಂತ್ರ್ಯಾನಂತರವೂ ತನ್ನ ಸತ್ಯನಿಷ್ಠೆಯ ಕಾರಣ ಅದು ಅನೇಕ ಎಡರುತೊಡರುಗಳ ದಾರಿಯಲ್ಲೇ ಮುನ್ನಡೆದಿದೆ.

ಈ ಪತ್ರಿಕೆ ಕೊಡಗಿನಲ್ಲಿ ಕನ್ನಡದ ಸ್ಥಾನಮಾನಗಳಿಗಾಗಿಯೂ ಅದರ ಪ್ರಚಾರಕ್ಕಾಗಿಯೂ ಬಹಳ ಸಹಾಯ ಮಾಡಿದೆ. 1921ರಿಂದ ಇದುವರೆಗಿನ ಅದರ ಸಂಚಿಕೆಗಳನ್ನು ಪರಿಶೀಲಿಸಿದಾಗ ಕೊಡಗಿನಲ್ಲಿ ಕನ್ನಡ ಭಾಷೆಯ ಬೆಳವಣಿಗೆ ಯಾವ ರೀತಿ ಆಗಿದೆಯೆಂಬುದರ ಸ್ಪಷ್ಟಚಿತ್ರ ಸಿಗುತ್ತದೆ. ಪತ್ರಿಕೆ ತರುಣ ಬರೆಹಗಾರರಿಗೆ ಪ್ರೋತ್ಸಾಹ ನೀಡಿ ಅನೇಕ ಲೇಖಕರನ್ನು ರೂಪಿಸಿದ ಈ ಪತ್ರಿಕೆ 1977ರಲ್ಲಿ ಪ್ರಕಟಣೆ ನಿಲ್ಲಿಸಿತು. (ಬಿ.ಡಿ.ಜಿ.)

**ಕೊಡಗು ಭಾಷೆ** : ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ವ್ಯವಹಾರದಲ್ಲಿರುವ ಭಾಷೆ. ಹೆಚ್ಚು ಜನ ಇದನ್ನು ಬಳಸುತ್ತಿದ್ದರು ಎಂದು ತಿಳಿದುಬಂದಿದೆ. ಈ ಭಾಷೆಯ ಕ್ಷೇತ್ರ ಮಲಯಾಳಿ, ಕನ್ನಡ ಮತ್ತು ತುಳು ಭಾಷೆಗಳ ಆವರಣದೊಳಗಿರುವುದರಿಂದ, ಈ ಮೂರು ಭಾಷೆಗಳ ದಟ್ಟ ಪ್ರಭಾವ ಇದರ ಮೇಲೆ ಆಗಿರುವುದನ್ನು ಕಾಣಬಹುದು. ಇದು ದ್ರಾವಿಡ ಭಾಷಾ ಪರಿವಾರದಲ್ಲಿ ದಕ್ಷಿಣ ದ್ರಾವಿಡ ಭಾಷಾವರ್ಗಕ್ಕೆ ಸೇರುತ್ತದೆ. ತಮಿಳು ಭಾಷೆಗೆ ತೊದ ಮತ್ತು ಕೊತ ಉಪಭಾಷೆಗಳಿರುವಂತೆ, ಕನ್ನಡಕ್ಕೆ ಬಡಗ ಮತ್ತು ಕೊಡಗು ಉಪಭಾಷೆಗಳು ಎಂಬ ಅಭಿಪ್ರಾಯವನ್ನೊಪ್ಪಿದ ಕಾಲ್ಡ್‌ವೆಲ್ ಇದರ ವಿವರಣೆಯನ್ನು ಕನ್ನಡದಲ್ಲಿಯೇ ಸೇರಿಸಿದ್ದಾನೆ. ಇದು ತುಳುವಿನ ಉಪಭಾಷೆ ಎಂಬ ಅಭಿಪ್ರಾಯವೂ ಇದೆ. ಕನ್ನಡಕ್ಕಿಂತಲೂ ಇದು ತಮಿಳು ಮಲಯಾಳಂ ಭಾಷೆಯನ್ನೇ ಹೆಚ್ಚು ಹೋಲುತ್ತದೆ ಎಂದು ಮೋಗ್ಲಿಂಗನ ಅಭಿಪ್ರಾಯ. ಕನ್ನಡಕ್ಕೆ ಇದು ಹೆಚ್ಚು ಹತ್ತಿರವಾಗಿದೆಯೆಂದು ಆಧುನಿಕ ಭಾಷಾಶಾಸ್ತ್ರಜ್ಞರ ಅಭಿಪ್ರಾಯ. ಕೊಡಗು ಭಾಷೆಗೆ ಲಿಪಿ ಇಲ್ಲವಾಗಿ ಬರೆಯಲು ಮಲಯಾಳಿ ಮತ್ತು ಕನ್ನಡ ಲಿಪಿಗಳೆರಡನ್ನೂ ಬಳಸಲಾಗುತ್ತಿದೆ. ಧ್ವನಿವ್ಯವಸ್ಥೆ, ಆಕೃತಿಮಾರಚನೆ, ವಾಕ್ಯರಚನೆ ಮತ್ತು ವ್ಯಾಕರಣಾಂಶಗಳಲ್ಲಿ ಇದು ದಕ್ಷಿಣ ದ್ರಾವಿಡ ಭಾಷೆಗಳ ಗುಂಪಿಗೆ ಸೇರಿದ್ದು ಎಂಬುದು ನಿರ್ವಿವಾದ ವಿಷಯ.

ಕೊಡಗು ಭಾಷೆಯನ್ನು ಕೂರ್ಗಿಭಾಷೆ ಎಂದು ಕರೆಯುವ ರೂಢಿಯುಂಟು. ಕುಡ, ಕುಡಗು, ಕೊಡಗು, ಕೊಡಗರು, ಕೊಡವ, ಕೂರ್ಗಿ ಇತ್ಯಾದಿ ಪದಗಳು ಬೇರೆ ಬೇರೆ ಆಕರಗಳಲ್ಲಿ ಕಂಡುಬರುತ್ತವೆ. 1174ರ ಹುಣಸೂರು ಶಾಸನದಲ್ಲಿ ಕುಡ, ಕೊಡವ, ಕೊಡಗ ಇತ್ಯಾದಿ ಪದಗಳು ಇರುವುದನ್ನು ಕೆಲವು ವಿದ್ವಾಂಸರು ಗಮನಿಸಿ ಬಹುಶಃ ಇದೇ ಮೊಟ್ಟ ಮೊದಲ ಉಲ್ಲೇಖವಿರಬಹುದೆಂದು ಹೇಳುತ್ತಾರೆ. ಆದರೆ ಇವುಗಳ ಅರ್ಥ ಇನ್ನೂ ಸ್ಪಷ್ಟವಾಗಿಲ್ಲ.

ಕೊಡಗು ಭಾಷೆಯಲ್ಲಿ ಮೊಟ್ಟಮೊದಲ ವ್ಯಾಕರಣವನ್ನು ರಚಿಸಿದ ಕೀರ್ತಿ ಕೋಲ್ ಎಂಬಾತನಿಗೆ ಸಲ್ಲಬೇಕು. ಇದಕ್ಕಿಂತಲೂ ಮೊದಲು ಕಾಲ್ಡ್‌ವೆಲ್ ಮತ್ತು ಗ್ರೆಟರ್ ಮುಂತಾದ ವಿದ್ವಾಂಸರು ಈ ಭಾಷೆಯ ಪರಿಚಯ ಮಾಡಿಕೊಟ್ಟಿದ್ದರು. ಕೋಲ್ ಮಹಾಶಯ ತನ್ನ ವ್ಯಾಕರಣದಲ್ಲಿ ಮಲಯಾಳಿ, ತುಳು ಮತ್ತು ಕನ್ನಡ ಭಾಷೆಗಳೊಡನೆ ಕೊಡಗು ಭಾಷೆಯನ್ನು ಹೋಲಿಸುವ ಯತ್ನ ಮಾಡಿದ್ದಾನೆ. ಈ ಭಾಷೆಯ ಬಗ್ಗೆ ಅಮೆರಿಕದ ಪ್ರಮುಖ ದ್ರಾವಿಡ ಭಾಷಾವಿಜ್ಞಾನಿ ಎಂ.ಬಿ.ಎಮೆನೊ ಕೂಡ ಕೆಲಸ ಮಾಡಿದ್ದಾನೆ.

ಕೊಡಗು ಭಾಷೆಯನ್ನು ಕನ್ನಡ ಭಾಷೆಯೊಡನೆ ಹೋಲಿಸಿದಾಗ ಎರಡಕ್ಕೂ ಧ್ವನಿವ್ಯವಸ್ಥೆ, ಆಕೃತಿಮಾರಚನೆ, ವಾಕ್ಯರಚನೆ ಮತ್ತು ವ್ಯಾಕರಣಾಂಶಗಳಲ್ಲಿ ಹೆಚ್ಚಿನ ಹೋಲಿಕೆ ಕಾಣಿಸುತ್ತದೆ. ಆದ್ದರಿಂದ ಇದು ಕನ್ನಡ ಭಾಷೆಯ ಉಪಭಾಷೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿತ್ತು. ಈಗ ಇದು ಒಂದು ಸ್ವತಂತ್ರ ಭಾಷೆಯಾಗಿ ನಿಲ್ಲಬಲ್ಲ ಶಕ್ತಿ ಪಡೆದುಕೊಂಡಿದೆ ಎಂದು ಭಾಷಾ ವಿಜ್ಞಾನಿಗಳು ಮನಗಂಡಿದ್ದಾರೆ. ಇಲ್ಲಿ ತಮಿಳು ಮತ್ತು ಮಲಯಾಳಿ ಭಾಷೆಗಳ ಪದಸಮೂಹಗಳಂತೆ ವ್ಯಂಜನಾಂತ್ಯಗಳೇ ಹೆಚ್ಚು. ಅಲ್ಲದೆ, ಕೆಲವು ಪದಗಳ ಕೊನೆಯಲ್ಲಿ ಅನುನಾಸಿಕತೆಯೂ ಎದ್ದು ಕಾಣುತ್ತದೆ.

ಕನ್ನಡ ಭಾಷೆಯ ಕೆಲವು ಪದಗಳಲ್ಲಿ ಮೂಲದ್ರಾವಿಡ ಧ್ವನಿಗಳ ಕಕಾರ ಚಕಾರವಾಗಿಯೂ ಪಕಾರ ಹಕಾರವಾಗಿಯೂ ಮತ್ತು ಚಕಾರ ಸಕಾರವಾಗಿಯೂ ಪರಿವರ್ತನೆಗೊಂಡಿರುವಂತೆ ಕೊಡಗುಭಾಷೆಯಲ್ಲಿ ಆಗಿಲ್ಲ.

**ಸ್ವರಗಳು** : ಇ ಈ ಉ ಊ ಎ ಏ ಒ ಓ ಅ ಆ (ಅನುನಾಸಿಕತೆಯೂ ಇಲ್ಲಿ ಸಾರ್ಥಕ ಧ್ವನಿಮಾ).

**ವ್ಯಂಜನಗಳು** : ಪ ಬ ತ ದ ಟ ಡ ಚ ಜ ಕ ಗ ಮ ನ ಣ ಞ ಙ ಸ ಲ ಳ ರ ವ ಯ.

ಕೊಡಗು ಭಾಷೆಯ ಲಿಂಗ, ವಚನ, ವಿಭಕ್ತಿ, ಪ್ರತ್ಯಯಗಳು, ನಾಮಪದ ಸರ್ವನಾಮ, ಸಂಖ್ಯಾವಾಚಕ, ಗುಣವಾಚಕ, ಕ್ರಿಯಾಪದ, ಕ್ರಿಯಾವಿಶೇಷಣ ಇತ್ಯಾದಿ ಅಂಶಗಳು ತಮಿಳು, ಮಲಯಾಳಿ, ಕನ್ನಡ ಮತ್ತೂ ತುಳುವನ್ನೇ ಪ್ರಧಾನವಾಗಿ ಹೋಲುವುದೆಂಬ ಅಭಿಪ್ರಾಯ ಪದೇ ಪದೇ ವ್ಯಕ್ತವಾಗಿದೆ. ಕನ್ನಡಕ್ಕೆ ಸಂಬಂಧಿಸಿದಂತೆ ಇಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ಕೊಟ್ಟಿದೆ.

ಕೊಡಗು ಭಾಷೆಯಲ್ಲಿ ಪಕಾರ ಹಕಾರವಾಗಿ ಪರಿವರ್ತನೆಗೊಳ್ಳದೆ ಹಾಗೆಯೇ ಉಳಿದಿರುವ ಕೆಲವು ಪದಗಳಿವು.

| | **ಕನ್ನಡ** | **ಕೊಡಗು** |
|---|---|---|
| | ಹೂವು | ಪೂವ್ |
| | ಹಾಲು | ಪಾಲ್ |
| | ಹುಳು | ಪುಳು |
| | ಹಂದಿ | ಪಂದಿ |
| **ಕೆಲವು ಸರ್ವನಾಮಗಳು :** | | |
| | ನಾನು | ನಾನ್ |
| | ನಾವು | ನಾಂಗ, ನಂಗ |
| | ನೀನು | ನೀನ್ |
| | ನೀವು | ನೀಂಗ, ನಿಂಗ |
| | ಅದು | ಅದ್ |
| **ಕೆಲವು ಸಂಖ್ಯಾವಾಚಕಗಳು :** | | |
| | ಒಂದು | ಒಂದ್ |
| | ಎರಡು | ದಂಡ್ |
| | ಮೂರು | ಮೂಂಡ್ |

| | |
|---|---|
| ನಾಲ್ಕು | ನಾಲ್ |
| ಐದು | ಅಂಜಿ |
| ಆರು | ಆರ್ |
| ಏಳು | ಏಳ್ |
| ಹತ್ತು | ಪತ್ತ್ |

ಕೆಲವು ಮೂಲದ್ರಾವಿಡ ಧ್ವನಿಗಳನ್ನು ಗಮನಿಸಿದಾಗ *k- > -g-, *c- > -j-,

*ñk > ñg, *ñc > ñj,
*ṇṭ > ṇḍ, *nt > nd,
*nr > -nd-,

ಎಂಬುದಾಗಿ ಕೊಡಗು ಭಾಷೆಯಲ್ಲಿ ಪರಿವರ್ತನೆಗೊಂಡಿರುವುದು ಕಂಡುಬರುತ್ತದೆ. (ಕೆ.ಕೆ.ಜಿ.)

**ಕೊಡತಿಕೀಟ :** ಓಡೊನೇಟ ಗಣ, ಅನೈಸಾಪ್ಟರ ಉಪಗಣದ 8 ಕುಟುಂಬಗಳಿಗೆ ಸೇರಿದ ಹಲವಾರು ಜಾತಿಯ ಕೀಟಗಳಿಗಿರುವ ಸಾಮಾನ್ಯ ಹೆಸರು (ಡ್ರೇಗನ್ ಫ್ಲೈ). ಉಷ್ಣವಲಯ ಪ್ರದೇಶಗಳಲ್ಲೆಲ್ಲ ಇವುಗಳ ವ್ಯಾಪ್ತಿ ಇದೆ. ಹಳ್ಳ, ನದಿ, ಕೆರೆ, ಕೊಳ ಮುಂತಾದವುಗಳ ಬಳಿ ಇವು ವೇಗವಾಗಿ ಚುರುಕಾಗಿ ಹಾರಾಡುತ್ತಿರುವುದನ್ನು



ನೋಡಬಹುದು. ಕನ್ಯಾಕೀಟದಂತೆಯೇ ಹಿಂಸ್ರಕೀಟವಾದ ಕೊಡತಿಕೀಟವೂ ಸೊಳ್ಳೆ, ಮಶಕ, ಕುದುರೆನೊಣ ಮುಂತಾದ ಇತರ ಕೀಟಗಳನ್ನು ಭಕ್ಷಿಸಿ ಜೀವಿಸುತ್ತದೆ. ಇದು ಹಾರುತ್ತಿರುವಾಗಲೇ ಆಹಾರಕ್ಕಾಗಿ ಜೀವಿಯನ್ನು ಹಿಡಿಯಬಲ್ಲದು. ಕೊಡತಿಕೀಟ ದೇಹ ರಚನೆಯಲ್ಲೂ ಜೀವನಕ್ರಮದಲ್ಲೂ ಕನ್ಯಾಕೀಟವನ್ನು ಹೋಲುತ್ತದೆಯಾದರೂ ಇವೆರಡಕ್ಕೂ ಕೆಲವು ಲಕ್ಷಣಗಳಲ್ಲಿ ಭಿನ್ನತೆಯಿದೆ. ಇದು ಕನ್ಯಾಕೀಟಕ್ಕಿಂತ ಗಾತ್ರದಲ್ಲಿ ದೊಡ್ಡದು, ಹಾಗೂ ದಷ್ಟಪುಷ್ಟವಾದುದು (ದಕ್ಷಿಣ ಅಮೆರಿಕದ ಮೆಗಲೊಪ್ರೆಪಸ್ ಸೀರುಲೆಟಸ್ ಎಂಬುದು 19.4ಸೆಂ.ಮೀ. ಅಗಲವಿದೆ). ಸಾಮಾನ್ಯವಾಗಿ ಕೊಡತಿಕೀಟಗಳಲ್ಲಿ ಗಂಡು ಹೆಣ್ಣುಗಳೆರಡೂ ವರ್ಣರಂಜಿತವಾಗಿರುತ್ತವೆ. ದೇಹದ ಬಣ್ಣ ಹಸಿರು, ಕೆಂಪು, ಹಳದಿ, ನೀಲಿ, ಕಂದು ಮುಂತಾಗಿದ್ದು ಮನಮೋಹಕವಾಗಿರುತ್ತದೆ. ಬಿಸಿಲಿನಲ್ಲಿ ಹಾರಾಡುತ್ತಿರುವಾಗಲಂತೂ ಇವು ಅತ್ಯಂತ ಸುಂದರವಾಗಿ ಕಾಣುತ್ತವೆ. ಕನ್ಯಾಕೀಟಗಳಲ್ಲಿ ಕಣ್ಣುಗಳು ತಲೆಯಿಂದ ಸ್ವಲ್ಪ ಹೊರಚಾಚಿಕೊಂಡಿರುತ್ತವೆ. ಆದರೆ ಕೊಡತಿಕೀಟಗಳಲ್ಲಿ ಹೀಗಿಲ್ಲ. ಕನ್ಯಾಕೀಟಗಳು ಕುಳಿತಾಗ ರೆಕ್ಕೆಗಳು ದೇಹದ ಹಿಂಭಾಗಕ್ಕೆ ಮಡಿಚಿಕೊಂಡಿದ್ದರೆ ಕೊಡತಿಕೀಟಗಳಲ್ಲಿ ರೆಕ್ಕೆಗಳು ಅಗಲವಾಗಿ ಹರಡಿಕೊಂಡಿರುತ್ತವೆ. ಅಲ್ಲದೆ ಕೊಡತಿಕೀಟಗಳ ಹಿಂದಿನ ಜೊತೆ ರೆಕ್ಕೆಗಳು ಮುಂದಿನ ಜೊತೆಗಿಂತ ಅಗಲವಾಗಿವೆ (ಕನ್ಯಾಕೀಟಗಳಲ್ಲಿ ಎರಡು ಜೊತೆಗಳೂ ಸಮಗಾತ್ರದವು). ಕನ್ಯಾಕೀಟಗಳ ಡಿಂಬಗಳಿಗೆ ಎಲೆಯಾಕಾರದ ಕಿವಿರುಗಳಿವೆ. ಆದರೆ ಕೊಡತಿಕೀಟಗಳ ಡಿಂಬಗಳಲ್ಲಿ ಗುದದ್ವಾರದ ಬಳಿ ಏಣುಗಳ ರೂಪದ ಕೆಲವು ಕಿವಿರುಗಳಿವೆ. ಈ ವ್ಯತ್ಯಾಸಗಳನ್ನು ಬಿಟ್ಟರೆ ಉಳಿದೆಲ್ಲ ಲಕ್ಷಣಗಳಲ್ಲೂ ಸಂಭೋಗಕ್ರಿಯೆಯಲ್ಲೂ ಡಿಂಬಗಳ ಬೆಳವಣಿಗೆಯ ಕ್ರಮದಲ್ಲೂ ಕೊಡತಿಕೀಟ ಕನ್ಯಾಕೀಟವನ್ನು ಹೋಲುತ್ತದೆ(**ನೋಡಿ– ಕನ್ಯಾಕೀಟ**). ಕೊಡತಿಕೀಟಗಳ ಮುಖ್ಯವಾದ ಪ್ರಭೇದಗಳು ಇವು–ಮ್ಯಾಕ್ರೊಮಿಯ ಮ್ಯಾಗ್ನಿಫಿಕ, ಮೆಗಲೊ ಪ್ರೆಪಸ್, ಸೀರುಲೇಟಸ್, ಗಾಂಫಸ್ ಕ್ವಾಡ್ರಿಕಲರ್, ಅನಾಕ್ಸ್, ಟ್ಯಾಕೊಟೆರಿಕ್ಸ್, ಲೆಸ್ಟಿಸ್, ಲಿಬೆಲ್ಲೂಲ ಪಲ್ಚೆಲ.(ಬಿ.ಎನ್.)

**ಕೊಡತಿಬೆಟ್ಟು :** ಕೊಡತಿಬೆಟ್ಟು (ಹ್ಯಾಮರಟೋ) ಸಾಮಾನ್ಯವಾಗಿ ಕಾಲಿನ ಎರಡನೆಯ ಬೆರಳಿನಲ್ಲಿ ಕಂಡುಬರುವ ಅಂಗವಿಕಾರ. Λ ಆಕಾರವನ್ನು ಈ ಬೆರಳು ತಳೆದಿರುತ್ತದೆ. ಪ್ರಧಾನವಾಗಿ ಬಗ್ಗಿರುವ ಭಾಗದಲ್ಲಿ ಒತ್ತುಗಂಟು ಅಥವಾ ಆಣಿ ಬೆಳೆದು ನೋವುಂಟು ಮಾಡುತ್ತದೆ. ಈ ರೀತಿ ಕೊಡತಿ ಬೆಟ್ಟುಗಳು ಎರಡೂ ಕಾಲುಗಳಲ್ಲಿಯೂ ಒಂದಕ್ಕಿಂತ ಹೆಚ್ಚು ಬೆರಳುಗಳಲ್ಲಿಯೂ ಕಾಣಿಸಿಕೊಳ್ಳಬಹುದು. ಬಿಗಿಯಾದ ಮತ್ತು ಪಾದಗಳಿಗೆ ಹೊಂದಿಕೊಳ್ಳದ ಪಾದರಕ್ಷೆಗಳನ್ನು ಉಪಯೋಗಿಸುವುದರಿಂದಲೂ ಈ ಅಂಗವಿಕಾರ ಉಂಟಾಗುತ್ತದೆ. ಕೆಲವು ಸಲ ಜನ್ಮತಃ ಅಥವಾ ಅನುವಂಶಿಕವಾಗಿಯೂ ಕಾಣಿಸಿಕೊಳ್ಳಬಹುದು. ಎಳೆವಯಸ್ಸಿನಲ್ಲಿ ಬೆರಳನ್ನು ನೆಟ್ಟಗೆ ಮಾಡಿ ಪಟ್ಟಿ ಕಟ್ಟಿ ಸರಿಪಡಿಸಬಹುದು. ವಯಸ್ಕರಲ್ಲಿ ಶಸ್ತ್ರಚಿಕಿತ್ಸೆಯಿಂದ ಕಾಲು ಬೆರಳಿನ ಕೀಲನ್ನು ತೆಗೆದು ಬೆರಳನ್ನು ಸದಾ ನೆಟ್ಟಗೆ ಇರುವಂತೆ ಮಾಡಿ ಸರಿಪಡಿಸಬಹುದು. (ಟಿ.ಸಿ.ಸಿ.)

**ಕೊಡುಗೆ :** ಕೊಡುಗೆ ಶಬ್ದದ ವ್ಯಾಖ್ಯೆಯನ್ನು ಕುರಿತು ವಿವೇಚಿಸುವಾಗ ಭಾರತದ ಸ್ವತ್ತು ವರ್ಗಾವಣೆ ಕಾಯಿದೆ, ಕೊಡುಗೆ ತೆರಿಗೆಗೆ ಸಂಬಂಧಿಸಿದ ಕಾಯಿದೆ, ಹಿಂದೂ ಮತ್ತು ಇಸ್ಲಾಮೀ ನ್ಯಾಯಸೂತ್ರಗಳು ಇವನ್ನು ಗಮನದಲ್ಲಿಡಬೇಕು. ಸಂದರ್ಭಗಳಿಗನುಗುಣವಾಗಿ ಈ ಶಬ್ದದ ವ್ಯಾಖ್ಯೆ ಮತ್ತು ವ್ಯಾಪ್ತಿ ಬದಲಾಗುತ್ತದೆ. ಅಸ್ತಿತ್ವದಲ್ಲಿರುವ, ನಿಶ್ಚಿತವಾದ ಚರ ಅಥವಾ ಸ್ಥಿರ ಸ್ವತ್ತನ್ನು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಸ್ವ ಇಚ್ಛೆಯಿಂದ ಮತ್ತು ಪ್ರತಿಫಲವಿಲ್ಲದೆ ಮಾಡುವ ವರ್ಗಾವಣೆ ಮತ್ತು ಆ ಇನ್ನೊಬ್ಬ ವ್ಯಕ್ತಿಯಿಂದ ಅಥವಾ ಆತನ ಪರವಾಗಿ ಅದರ ಸ್ವೀಕಾರ–ಇದನ್ನು ಕೊಡುಗೆ (ಗಿಫ್ಟ್) ಎಂದು ಭಾರತದ ಸ್ವತ್ತು ವರ್ಗಾವಣೆ ಕಾಯಿದೆಯಲ್ಲಿ ಹೇಳಲಾಗಿದೆ. ಕೊಡುಗೆ ನೀಡುವವನು ದಾನಿ (ಡೋನಾರ್). ಅದನ್ನು ಸ್ವೀಕರಿಸುವವನು ಪ್ರತಿಗ್ರಹಿ (ಡೋನೀ). ಅತ್ಯಂತ ಪ್ರಾಚೀನ ಕಾಲದಿಂದಲೂ ಕೊಡುಗೆಯ ಪದ್ಧತಿ ಬೆಳೆದು ಬಂದಿದೆ. ದೇಶ ಕಾಲ ಸಂದರ್ಭಾನುಗುಣವಾಗಿ ಕೊಡುಗೆಗೆ ಭಿನ್ನಭಿನ್ನ ವ್ಯಾಖ್ಯೆಗಳನ್ನು ಕೊಡಬಹುದಾದರೂ ಅದರ ಮೂಲ ಸ್ವರೂಪಗಳಲ್ಲಿ ಹೆಚ್ಚು ಬದಲಾವಣೆಯಾಗಿಲ್ಲ. ಒಬ್ಬ ವ್ಯಕ್ತಿ ಸ್ವ ಇಚ್ಛೆಯಿಂದ ಮತ್ತು ಯಾವೊಂದು ಪ್ರತಿಫಲವಿಲ್ಲದೆ ಕೇವಲ ಪ್ರೀತಿ ಇಲ್ಲವೇ ಸ್ನೇಹ ವಿಶ್ವಾಸಗಳ ದ್ಯೋತಕವಾಗಿ ತನ್ನ ಸ್ಥಿರ ಅಥವಾ ಚರ ಸ್ವತ್ತನ್ನು ಇನ್ನೊಬ್ಬನಿಗೆ ಕೊಡಮಾಡುವುದು, ಕೊಡುಗೆಯೆಂಬುದನ್ನು ಸ್ಥೂಲವಾಗಿ ಸ್ವೀಕರಿಸಬಹುದಾಗಿದೆ. ಹಣದ ರೂಪದಲ್ಲಿ ಅಥವಾ ಹಣದ ಮೌಲ್ಯವಿರುವ ಸ್ವತ್ತಿನ ರೂಪದಲ್ಲಿ ಪ್ರತಿಫಲವನ್ನು ಪಡೆದು ಏನನ್ನಾದರೂ ನೀಡಿದರೆ ಅದು ಕೊಡುಗೆ ಎನಿಸುವುದಿಲ್ಲ.

ದಾನಿಯ ಜೀವಿತಕಾಲದಲ್ಲಿ ಕೊಟ್ಟದ್ದು, ಮರಣ ನಿರೀಕ್ಷೆಯಿಂದ ಕೊಟ್ಟದ್ದು ಎಂದು ಕೊಡುಗೆಗಳನ್ನು ಎರಡು ಬಗೆಗಳಾಗಿ ವಿಂಗಡಿಸುವುದು ಸಾಮಾನ್ಯವಾಗಿದೆ. ಈ ವಿಂಗಡಣೆಯ ಪದ್ಧತಿ ಅಮೆರಿಕ ಮುಂತಾದ ಅನೇಕ ದೇಶಗಳಲ್ಲಿ ಇದೆ. ದಾನಿಯ ಜೀವಿತ ಕಾಲದಲ್ಲಿ ಕೊಟ್ಟ ಕೊಡುಗೆಗಳನ್ನು ಅಪೂರ್ಣ ಕೊಡುಗೆಗಳು ಮತ್ತು ತತ್‍ಕ್ಷಣ ಆಚರಣೆಯಲ್ಲಿ ಬರುವ ಕೊಡುಗೆಗಳು ಎಂಬುದಾಗಿಯೂ ವಿಂಗಡಿಸಲಾಗುತ್ತದೆ. ದಾನಿ ಮತ್ತು ಪ್ರತಿಗ್ರಹಿ ಇಬ್ಬರೂ ಬದುಕಿದ್ದಾಗ ನೀಡಲಾದ ಕೊಡುಗೆಯನ್ನು ಮಾತ್ರ ಭಾರತದ ಸ್ವತ್ತು ವರ್ಗಾವಣೆ ಕಾಯಿದೆಯಲ್ಲಿ ವಿವೇಚಿಸಲಾಗಿದೆ. ಉಯಿಲು ಅಥವಾ ಅಂತಿಮ ಇಷ್ಟ ಪತ್ರದಿಂದ ಅಥವಾ ವಂಶಪಾರಂಪರ್ಯವಾಗಿ ಬಂದ ಕೊಡುಗೆ ಭಾರತೀಯ ಉತ್ತರಾಧಿಕಾರ ಕಾಯಿದೆಯ ವಿವೇಚನೆಗೆ ಒಳಪಟ್ಟ ವಿಚಾರ. ಮರಣದ ನಿರೀಕ್ಷೆಯಿಂದ ಕೊಡಲಾದ ಕೊಡುಗೆಗಳಿಗೆ ಅನ್ವಯವಾಗುವ ಹಿಂದೂ ಮತ್ತು ಇಸ್ಲಾಮಿ ನ್ಯಾಯ ಸೂತ್ರಗಳು ಸ್ವಲ್ಪ ಭಿನ್ನವಾಗಿವೆ.

ಭಾರತೀಯ ಸ್ವತ್ತು ವರ್ಗಾವಣೆ ಕಾಯಿದೆಯ ಪ್ರಕಾರ ಕೊಡುಗೆಯ ವಸ್ತು ಚರ ಅಥವಾ ಸ್ಥಿರ ಸ್ವತ್ತಾಗಿರಬಹುದು. ಅದು ಅಸ್ತಿತ್ವದಲ್ಲಿರಬೇಕು. ಅದು ದಾನಿಯ ಒಡೆತನದಲ್ಲಿದ್ದು ಅವನ ಸ್ವಾಧೀನದಲ್ಲಿರಬೇಕು. ಅವನು ಅದನ್ನು ಕೊಡಲು ಅರ್ಹತೆ ಪಡೆದಿರಬೇಕು. ಸ್ವ ಇಚ್ಛೆಯಿಂದ ಮತ್ತು ಯಾವ ಪ್ರತಿಫಲವನ್ನೂ ಪಡೆಯದೆ ಕೊಡುಗೆಯನ್ನು ಪ್ರತಿಗ್ರಹಿಯ ಸ್ವಾಧೀನಕ್ಕೆ ವಹಿಸಿಕೊಡಬೇಕು. ದಾನಿಯ ಜೀವಿತ ಕಾಲದಲ್ಲಿ ಹಾಗೂ ಕೊಡಲು ಅವನಿಗೆ ಅರ್ಹತೆಯಿದ್ದಾಗಲೇ ಪ್ರತಿಗ್ರಹಿ ಕೊಡುಗೆಯನ್ನು ಸ್ವೀಕರಿಸಬೇಕು. ಸ್ವತ್ತಿನ ವರ್ಗಾವಣೆ ಕೊಡುಗೆಯ ಅಂತಿಮ ಘಟ್ಟ. ಭಾರತದ ಸ್ವತ್ತು ವರ್ಗಾವಣೆ ಕಾಯಿದೆಯ 122ನೆಯ ಪ್ರಕರಣದಲ್ಲಿ ಹೇಳಲಾಗಿರುವ ಈ ತತ್ತ್ವಗಳು ಸ್ಥೂಲವಾಗಿ ಇಂಗ್ಲಿಷ್ ನ್ಯಾಯದ ತತ್ತ್ವಗಳಿಗೆ ಅನುಗುಣವಾಗಿವೆ.

ಕೊಡುಗೆಯ ಸ್ವತ್ತು ವರ್ಗ ಕೊಡಲು ಸಾಧ್ಯವಾಗದ ಸ್ವರೂಪದ್ದಾಗಿದ್ದರೆ ಅಂಥ ಸಂದರ್ಭದಲ್ಲಿ ವ್ಯಕ್ತಿಗತವಾಗಿ ಸ್ವತ್ತಿನ ವರ್ಗಾವಣೆಯ ಆವಶ್ಯಕತೆಯಿಲ್ಲ. ಪ್ರತಿಗ್ರಹಿ ಅದರ ಒಡೆಯನೆಂಬಂತೆ ನಡೆದುಕೊಳ್ಳಲು ಸಾಧ್ಯವಾಗುವಂತೆ ಸ್ವತ್ತನ್ನು ವಹಿಸಿಕೊಟ್ಟರೆ ಸಾಕು.

ಕೊಡುಗೆಗಳನ್ನು ವರ್ಗಾಯಿಸುವ ವಿಧಾನವನ್ನು ಭಾರತದ ಸ್ವತ್ತು ವರ್ಗಾವಣೆ ಕಾಯಿದೆಯ 123ನೆಯ ಪ್ರಕರಣದಲ್ಲಿ ಹೇಳಲಾಗಿದೆ. ಸ್ಥಿರ ಸ್ವತ್ತಿನ ರೂಪದ ಕೊಡುಗೆಗಳನ್ನು ವರ್ಗಾಯಿಸಬೇಕಾದರೆ ತತ್ಸಂಬಂಧದ ಕೊಡುಗೆ ಪತ್ರಕ್ಕೆ ದಾನಿ ಸಹಿ ಮಾಡಿರಬೇಕು. ಅದನ್ನು ಪುಷ್ಟೀಕರಿಸಲು ಇಬ್ಬರು ಸಾಕ್ಷಿಗಳ ಸಹಿ ಇರಬೇಕು. ಮತ್ತು ಆ ಪತ್ರವನ್ನು ನೋಂದಾಯಿಸಿ ಪ್ರತಿಗ್ರಹಿಗೆ ವಹಿಸಿಕೊಡಬೇಕು. ಚರ ಸ್ವತ್ತಿನ ರೂಪದ ಕೊಡುಗೆಗಳನ್ನು ಮೇಲೆ ಕಾಣಿಸಿದ ರೀತಿಯಲ್ಲಿ ವರ್ಗಾಯಿಸಬಹುದು. ಇಲ್ಲವೆ ಅವನ್ನು ಪ್ರತಿಗ್ರಹಿಯ ಸ್ವಾಧೀನಕ್ಕೆ ವಹಿಸಿಕೊಡಬಹುದು. ಇಂಗ್ಲೆಂಡಿನಲ್ಲಿ ವಂಚನೆಗಳಿಗೆ ಸಂಬಂಧಿಸಿದ ಕಾಯಿದೆಯನ್ವಯ, ಕೊಡುಗೆಯ ಸ್ವತ್ತು ವರ್ಗಾವಣೆ ಪತ್ರಗಳು ವಿಲೇಖ ರೂಪದಲ್ಲಿರಬೇಕಾಗುತ್ತದೆ.

ಕೊಡುಗೆ ದುರುದ್ದೇಶದಿಂದ ಪ್ರೇರಿತವಾಗಿರಬಾರದು. ಯಾರನ್ನಾದರೂ ವಂಚಿಸಲು ಅಥವಾ ತನ್ನ ಸ್ವತ್ತಿನ ಮೇಲಿನ ಋಣದಿಂದ ಅದನ್ನು ವಿಮೋಚನಗೊಳಿಸುವ ಉದ್ದೇಶದಿಂದ ನೀಡಲಾದ ಕೊಡುಗೆಗಳನ್ನು ಸಂಬಂಧಪಟ್ಟವರು ನ್ಯಾಯಾಲಯದಲ್ಲಿ ಪ್ರಶ್ನಿಸಿ ಆ ಬಗ್ಗೆ ಪರಿಹಾರ ಪಡೆಯಬಹುದು.

ಪ್ರಾಚೀನ ಕಾಲದಿಂದಲೂ ಭಾರತದ ಜನಪದದಲ್ಲಿ ಕೊಡುಗೆ ಪ್ರೀತಿಯ ದ್ಯೋತಕವಾಗಿತ್ತು ಎಂಬುದಕ್ಕೆ ಈಗಲೂ ಹಳ್ಳಿಗಳಲ್ಲಿ ಕೊಡುವ ಜನ್ನಿಗೆ ಮತ್ತು ಬಳುವಳಿಗಳು ನಿದರ್ಶನ. ಆದರೆ ಹಲವಾರು ರೀತಿಯ ತೆರಿಗೆಗಳು ಮತ್ತು ಶುಲ್ಕಗಳನ್ನು ತಪ್ಪಿಸಲು ಕೊಡುಗೆ ಒಂದು ಅಕ್ರಮ ಮಾರ್ಗವಾಗ ಹತ್ತಿತ್ತು. ಇದರಿಂದಾಗಿ ಕೊಡುಗೆ ತೆರಿಗೆ ಅಸ್ತಿತ್ವಕ್ಕೆ ಬಂತು. (ಎಲ್.ಎಸ್.ಜೆ.)

**ಕೊಡುಗೆ ಚೀಟಿಗಳು :** ವ್ಯಾಪಾರಗಾರರು ತಮ್ಮ ಸರಕುಗಳ ವಿಕ್ರಯವನ್ನು ಹೆಚ್ಚಿಸಲು ಕೈಗೊಳ್ಳುವ ಜಾಹೀರಾತಿನ ಒಂದು ಸಾಧನ (ಗಿಫ್ಟ್ ಕೂಪನ್ಸ್). ಸರಕುಗಳ ಸಂಗಡವೇ ಅವುಗಳ ಪೊಟ್ಟಣ ಅಥವಾ ಡಬ್ಬಿಯಲ್ಲಿ ಈ ಚೀಟಿಗಳನ್ನು ಇಟ್ಟಿರುತ್ತಾರೆ. ಇಂಥ ಚೀಟಿಗಳಲ್ಲಿ ಎರಡು ವಿಧ : 1. ನಿಜಮೌಲ್ಯವುಳ್ಳವುಗಳು; ಉದಾಹರಣೆಗೆ ಚಲನಚಿತ್ರತಾರೆಯರ ಅಥವಾ ಕ್ರಿಕೆಟ್ ಆಟಗಾರರ ಚಿತ್ರಗಳು : ಅನೇಕರಿಗೆ ಇಂಥ ಚಿತ್ರಗಳನ್ನು ಸಂಗ್ರಹಿಸುವ ಹವ್ಯಾಸವಿರುತ್ತದೆ. ಯಾವ ವಸ್ತುಗಳ ಸಂಗಡ ಚಿತ್ರಗಳು ದೊರಕುತ್ತವೆಯೋ ಅಂಥ ವಸ್ತುಗಳನ್ನು ಅವರು ಕೊಳ್ಳಬಯಸುತ್ತಾರೆ. ಇದರಲ್ಲೊಂದು ಅನಾನುಕೂಲವುಂಟು. ಕೆಲವರಿಗೆ ತಮಗೆ ಬೇಕಾದ ಚಿತ್ರಗಳು ಸಿಗದೆ ಹೋಗಬಹುದು ಅಥವಾ ಒಂದೇ ರೀತಿಯ ಚಿತ್ರಗಳು ಮತ್ತೆ ಮತ್ತೆ ಸಿಗಬಹುದು. ಅಂಥ ಸಂದರ್ಭದಲ್ಲಿ ತಮಗೆ ಬೇಕಾದ ಚಿತ್ರಗಳನ್ನು ಬೇರೆಯವರಿಂದ ಪಡೆದು, ತಮ್ಮಲ್ಲಿರುವ ಚಿತ್ರಗಳನ್ನು ಅವರಿಗೆ ಕೊಟ್ಟು ಪರಸ್ಪರ ಚಿತ್ರಗಳ ವಿನಿಮಯ ಮಾಡಿಕೊಳ್ಳುವುದು ಸಾಧ್ಯ. 2. ಕೊಡುಗೆ ವಸ್ತುವಿಗೆ ವಿನಿಮಯ ಮಾಡಿಕೊಳ್ಳಬಹುದಾದ ಚೀಟಿಗಳು ಇನ್ನೊಂದು ಬಗೆ. ಸರಕುಗಳೊಂದಿಗೆ ಇರುವ ಚೀಟಿಗಳ ನಿಗದಿಯಾದಷ್ಟು ಸಂಖ್ಯೆಯನ್ನು ಕೂಡಿಸಿದ ಮೇಲೆ ಅವುಗಳಿಗೆ ವಿನಿಮಯವಾಗಿ ಒಂದು ಉಪಯುಕ್ತವಸ್ತುವನ್ನು ಪಡೆಯಬಹುದು. ಎಷ್ಟು ಚೀಟಿಗಳಿಗೆ ಒಂದು ವಸ್ತುವನ್ನು ಪಡೆಯಬಹುದು ಎಂಬುದನ್ನು ಮೊದಲೇ ತಿಳಿಸಿರುತ್ತಾರೆ. ಚೀಟಿಗಳನ್ನು ಕೊಡುಗೆ ವಸ್ತುವಿಗೆ ವಿನಿಮಯ ಮಾಡಿಕೊಳ್ಳುವುದಕ್ಕೆ ಕಾಲದ ಅವಧಿಯನ್ನೂ ನಿಗದಿಮಾಡಿರುವುದುಂಟು. ಒಂದು ವಸ್ತುವನ್ನು ಕೊಡುಗೆಯ ರೂಪದಲ್ಲಿ ಪಡೆಯಲು ಎಷ್ಟು ಚೀಟಿಗಳು ಬೇಕಾಗುತ್ತವೆಯೆಂದು ನಿರ್ಧರಿಸಲಾಗಿದೆಯೋ ಅಷ್ಟು ಚೀಟಿಗಳನ್ನು ಕೂಡಿಡುವುದಕ್ಕಾಗಲಿ, ತಮಗೆ ಬೇಕಾದ ಚಲನಚಿತ್ರ ತಾರೆಯರ ಅಥವಾ ಕ್ರಿಕೆಟ್ ಆಟಗಾರರ ಚಿತ್ರಗಳನ್ನು ಕೂಡಿಸುವುದಕ್ಕಾಗಲಿ ಜನರು ಪುನಃಪುನಃ ಅದೇ ಸರಕುಗಳನ್ನು ಕೊಳ್ಳುತ್ತಾರೆ. ಇದರಿಂದ ಆ ಸರಕಿಗೆ ಬೇಡಿಕೆ ಏಕಪ್ರಕಾರವಾಗಿರುತ್ತದೆ.

ಕೊಡುಗೆ ಚೀಟಿಗಳನ್ನು ಜಾಹೀರಾತು ಸಾಧನವನ್ನಾಗಿ ಉಪಯೋಗಿಸುವುದರಲ್ಲಿ ಕೆಲವು ಕೊರತೆಗಳು ಉಂಟು. ಮೊದಲನೆಯದಾಗಿ ಎಲ್ಲ ಬಗೆಯ ಸರಕುಗಳ ವಿಕ್ರಯದಲ್ಲೂ ಇವನ್ನು ಉಪಯೋಗಿಸುವುದಕ್ಕಾಗುವುದಿಲ್ಲ. ಶೀಘ್ರವಾಗಿ ಬಳಸಬಹುದಾದ ಸಿಗರೇಟ್, ಚಾಕಲೇಟ್, ಕಾಫಿ, ಚಹ ಮುಂತಾದುವುಗಳ ವಿಕ್ರಯದಲ್ಲಿ ಕೊಡುಗೆ ಚೀಟಿಗಳನ್ನು ಉಪಯೋಗಿಸಬಹುದು. ಎರಡನೆಯದಾಗಿ, ಕೊಡುಗೆಯಾಗಿ ನೀಡಬೇಕಾದ ವಸ್ತು ತಕ್ಕಮಟ್ಟಿಗೆ ಬೆಲೆ ಬಾಳುವಂಥದಾಗಿರಬೇಕು.

ಕೊಡುಗೆ ಚೀಟಿಗಳು ವ್ಯಾಪಾರಿ, ಅನುಭೋಗಿ ಇಬ್ಬರಿಗೂ ಲಾಭದಾಯಕ. ಇವುಗಳಿಂದ ವ್ಯಾಪಾರಿಯ ಸರಕುಗಳಿಗೆ ಬೇಡಿಕೆ ಹೆಚ್ಚುತ್ತದೆ. ಅನುಭೋಗಿಗೆ ಪರೋಕ್ಷವಾಗಿ ಸರಕಿನ ಬೆಲೆಯಲ್ಲಿ ವಟ್ಟ ಲಭ್ಯವಾದಂತಾಗುತ್ತದೆ.

ಕೊಡುಗೆ ಚೀಟಿಗಳನ್ನು ನೀಡುವುದರಲ್ಲಿ ವ್ಯಾಪಾರಿ ಎಚ್ಚರಿಕೆ ವಹಿಸಬೇಕು. ವಿವೇಚನೆಯಿಲ್ಲದೆ ಅವನ್ನು ನೀಡಿದರೆ ವ್ಯಾಪಾರಕ್ಕೆ ಯೋಗ್ಯವಲ್ಲದ ವಸ್ತುಗಳನ್ನು ವಿಲೇವಾರಿ ಮಾಡುವುದಕ್ಕಾಗಿ ಈ ಉಪಾಯ ಹೂಡಲಾಗಿದೆಯೆಂಬ ಭಾವನೆ ಜನಕ್ಕೆ ಉಂಟಾಗಬಹುದು.

ಭಾರತದಲ್ಲಿ ಹಲವು ಹೆಸರಾಂತ ಕಂಪನಿಗಳು ವ್ಯಾಪಾರವನ್ನು ಹೆಚ್ಚಿಸುವುದಕ್ಕಾಗಿ ಕೊಡುಗೆ ಚೀಟಿಗಳ ವಿಧಾನವನ್ನು ಅನುಸರಿಸುತ್ತಿವೆ. (ಜಿ.ಕೆ.ಐ.)

**ಕೊಡುಗೆ ತೆರಿಗೆ :** ಕೊಡುಗೆಗಳ ಮೇಲೆ ಹಾಕಲಾಗುವ ತೆರಿಗೆ (ಗಿಫ್ಟ್ ಟ್ಯಾಕ್ಸ್). ಇದು ಬಹಳ ಈಚಿನ ಕಾಲದ್ದು. ಭಾರತದಲ್ಲಿ ಈ ತೆರಿಗೆಯನ್ನು 1958ರ ಕೊಡುಗೆ ತೆರಿಗೆ ಕಾಯಿದೆಯನ್ವಯ ಹಾಕಲಾಗುತ್ತದೆ. ಇಂಥ ತೆರಿಗೆಯನ್ನು ವಿಧಿಸುವಂತೆ 1953ರಲ್ಲಿಯೇ ಅನೇಕ ಅರ್ಥಶಾಸ್ತ್ರಜ್ಞರು ಭಾರತದ ತೆರಿಗೆ ವಿಚಾರಣಾ ಸಮಿತಿಗೆ ಸೂಚಿಸಿದ್ದರು. ಭಾರತ ಸರ್ಕಾರದ ಕೋರಿಕೆಯ ಮೇರೆಗೆ ಭಾರತದ ತೆರಿಗೆಗಳ ಸ್ವರೂಪವನ್ನು ಪರಿಶೀಲಿಸಿದ ಅರ್ಥಶಾಸ್ತ್ರಜ್ಞ ಕಾಲ್ಡಾರ್ ಕೂಡ 1955ರಲ್ಲಿ ಈ ರೀತಿ ಸಲಹೆ ಮಾಡಿದ್ದುಂಟು. ಭಾರತದಲ್ಲಿ ಈ ಕಾಯಿದೆ ಜಾರಿಗೆ ಬರುವುದಕ್ಕೂ ಮುಂಚೆಯೇ ಇಂಥ ಕಾಯಿದೆಗಳು ಅಮೆರಿಕ, ಕೆನಡ, ಜಪಾನ್, ಆಸ್ಟ್ರೇಲಿಯ ನ್ಯೂಜಿಲೆಂಡ್ ಮುಂತಾದ ಅನೇಕ ದೇಶಗಳಲ್ಲಿ ಜಾರಿಗೆ ಬಂದಿದ್ದುವು.

ಮೃತನ ಸ್ವತ್ತಿನ ಮೇಲೆ ಆತನ ಮರಣೋತ್ತರದಲ್ಲಿ ಹಾಕಲಾಗುವ ಕರ, ಆದಾಯ ತೆರಿಗೆ, ಸಂಪತ್ತಿನ ಮೇಲೆ ಹಾಕಲಾಗುವ ತೆರಿಗೆ, ವೆಚ್ಚಗಳ ಮೇಲಣ ತೆರಿಗೆ ಇವೇ ಮುಂತಾದ ತೆರಿಗೆಗಳನ್ನು ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸ್ವತ್ತಿನ ಭಾಗವನ್ನೋ ಆದಾಯದ ಭಾಗವನ್ನೋ ಕೊಡುಗೆಯ ರೂಪದಲ್ಲಿ ಹಸ್ತಾಂತರಿಸಲಾಗುತ್ತಿದ್ದದನ್ನು ಗಮನಕ್ಕೆ ತಂದುಕೊಂಡು, ಇದನ್ನು ತಡೆಗಟ್ಟಲು ಕೊಡುಗೆ ತೆರಿಗೆ ಕಾಯಿದೆಯನ್ನು ಜಾರಿಗೆ ತರಬೇಕಾಯಿತು.

ಕೊಡುಗೆ ಶಬ್ದದ ಬಗ್ಗೆ ಕೊಡುಗೆ ತೆರಿಗೆ ಕಾಯಿದೆಯಲ್ಲಿ ನೀಡಲಾಗಿರುವ ವ್ಯಾಖ್ಯೆ ಸ್ವತ್ತು ವರ್ಗಾವಣೆ ಕಾಯಿದೆಯಲ್ಲಿ ನೀಡಲಾದ ವ್ಯಾಖ್ಯೆಗಿಂತ **(ನೋಡಿ– ಕೊಡುಗೆ)** ಸ್ವಲ್ಪ ಭಿನ್ನವಾಗಿದೆ ಮತ್ತು ಹೆಚ್ಚು ವ್ಯಾಪಕವಾಗಿದೆ. ಪ್ರತಿಗ್ರಹಿ ಕೊಡುಗೆಯನ್ನು ಸ್ವೀಕರಿಸುವನೋ ಇಲ್ಲವೋ ಎಂಬುದನ್ನು ಈ ಕಾಯಿದೆ ಗಣನೆಗೆ ತೆಗೆದುಕೊಳ್ಳುವುದಿಲ್ಲ. ದಾನಿ ತನ್ನ ಸ್ವತ್ತಿನ ಮೌಲ್ಯವನ್ನು ಕಡಿತಗೊಳಿಸುವ ಮತ್ತು ಬೇರೊಬ್ಬನ ಸ್ವತ್ತಿನ ಮೌಲ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಕೈಗೊಳ್ಳುವ ಯಾವುದೇ ಕ್ರಮವನ್ನು ಕೂಡ ಈ ಕಾಯಿದೆ ಕೊಡುಗೆ ಎಂದು ಪರಿಗಣಿಸುತ್ತದೆ. ಈ ಕಾಯಿದೆಯ ಇನ್ನೊಂದು ವಿಶೇಷವೆಂದರೆ, ಪ್ರತಿಗ್ರಹಿಯ ಅಸ್ತಿತ್ವ ಮತ್ತು ಅನುಮತಿ ಎರಡನ್ನೂ ಇದು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಇದಕ್ಕೆ ಮೂಲತಃ ಎರಡು ಕಾರಣಗಳು ಉಂಟು. ಮೊದಲನೆಯದಾಗಿ, ದಾನಿಯೇ ಕೊಡುಗೆ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವುದು; ಎರಡನೆಯದಾಗಿ ದಾನಿ ಅನೇಕ ತೆರಿಗೆಗಳಿಂದ ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಲು ಈ ತೆರಿಗೆಯನ್ನು ಹಾಕಿರುವುದು.

ದಾನಿಯಿಂದ ಈ ತೆರಿಗೆಯನ್ನು ಪಡೆಯಲು ಸಾಧ್ಯವಿಲ್ಲದಿದ್ದಾಗ ಮಾತ್ರ ಕೊಡುಗೆಯ ಪ್ರತಿಗ್ರಹಿಯಿಂದ ಅದನ್ನು ಪಡೆಯಬಹುದು. ಮೃತನ ವಿಧಿಸಮ್ಮತ ಪ್ರತಿನಿಧಿ ಈ ತೆರಿಗೆಯನ್ನು ಸಂದಾಯ ಮಾಡಬೇಕಾಗಿದ್ದ ಸಂದರ್ಭದಲ್ಲಿ ಅವನು ಹಿಂದೂ ಅವಿಭಕ್ತ ಕುಟುಂಬದ ಸದಸ್ಯನಾಗಿದ್ದು, ಕುಟುಂಬ ವಿಭಜನೆಯಾಗಿದ್ದರೆ, ಅಂಥ ಕುಟುಂಬದ ಸರ್ವಸದಸ್ಯರೂ ವ್ಯಕ್ತಿಗತವಾಗಿ ಮತ್ತು ಸಂಯುಕ್ತವಾಗಿ ತೆರಿಗೆಯನ್ನು ಸಂದಾಯಮಾಡಲು ಹೊಣೆಯಾಗಿರುತ್ತಾರೆ.

ಈ ಕಾಯಿದೆಯನ್ವಯ ಸಣ್ಣ ಗಾತ್ರದ ಕೊಡುಗೆಗಳ ಮೇಲೆ ತೆರಿಗೆ ಹಾಕಲಾಗುವುದಿಲ್ಲ. ತೆರಿಗೆಯ ದರ, ತೆರಿಗೆಯನ್ನು ನಿರ್ಧರಿಸುವ ಮತ್ತು ವಸೂಲಿ ಮಾಡುವ ಕಾಲ ಮತ್ತು ವಿಧಾನಗಳು, ವಿನಾಯಿತಿಗಳು ಮುಂತಾದ ಅನೇಕ ವಿಷಯಗಳನ್ನು ಈ ಕಾಯಿದೆಯಲ್ಲಿ ಅಳವಡಿಸಲಾಗಿದೆ. ಈ ಕಾಯಿದೆಯಿಂದ ಸರ್ಕಾರಕ್ಕೆ ನಿರೀಕ್ಷಿಸಿದಷ್ಟು ತೆರಿಗೆಯ ಆದಾಯ ಬರುತ್ತಿಲ್ಲ. ಕೊಡುಗೆ ತೆರಿಗೆಯ ಜಾರಿಯಿಂದ ಸ್ವತ್ತು ಮತ್ತು ಆದಾಯಗಳ ಮೇಲೆ ಹಾಕಲಾಗುವ ತೆರಿಗೆಗಳ ಯೋಜನೆ ಪೂರ್ಣವಾದಂತಾಗಿದೆ. ಇಂಥ ತೆರಿಗೆಗಳ ದರಗಳು ಸಾಮಾಜಿಕ ಸಂಘಟನೆ ಮತ್ತು ಅವಶ್ಯಕತೆಗಳನ್ನವಲಂಬಿಸಿರುತ್ತವೆ. (ಎಲ್.ಎಸ್.ಜೆ.)

**ಕೊಡೆಕಲ್ಲು :** ದಕ್ಷಿಣ ಭಾರತದ ಕಬ್ಬಿಣ ಯುಗದಲ್ಲಿ ರೂಢಿಯಲ್ಲಿದ್ದ ಬೃಹತ್ ಶಿಲಾಸಮಾಧಿ ಪದ್ಧತಿಗಳಲ್ಲಿ ಒಂದು; ವಿಶಿಷ್ಟ ರೀತಿಯದು. ಇದು ಪಶ್ಚಿಮ ಘಟ್ಟಗಳಲ್ಲಿ ಅಂಚಿನಲ್ಲಿ ಕೊಚ್ಚಿ ಮತ್ತು ಮಲಬಾರ್ ಪ್ರದೇಶಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಭೂಮಿಯಲ್ಲಿ ತೋಡಿದ ಗುಂಡಿಯಲ್ಲಿ ಶವದ ಅಸ್ಥಿಗಳನ್ನು ಮತ್ತು ಶವ ಸಂಸ್ಕಾರದ ಇತರ ವಸ್ತುಗಳನ್ನು– ಮಡಕೆಗಳು, ಮೃತರ ಆಯುಧೋಪಕರಣಗಳು ಮತ್ತು ಆಭರಣಗಳನ್ನು– ಸಾಮಾನ್ಯವಾಗಿ ಹೂತಿಡುತ್ತಿದ್ದರು. ಅಂಥ ಸ್ಥಳದ ನಿರ್ದೇಶನಕ್ಕಾಗಿ ಶಿಲಾವರ್ತುಲಗಳನ್ನು ನಿರ್ಮಿಸುವ ರೂಢಿಯಿತ್ತು. ಆದರೆ ಒಮ್ಮೊಮ್ಮೆ ಅಂಥ ಶಿಲಾವರ್ತುಲದ ಬದಲು, ನೇರವಾದ ಅಡಿಭಾಗವೂ ಗುಮ್ಮಟಾಕಾರದ ಮೇಲ್ಭಾಗವೂ ಉಳ್ಳ ಗುಂಡಾದ ಕಲ್ಲೊಂದನ್ನು ಭೂಮಿಯ ಮೇಲ್ಭಾಗದಲ್ಲಿ ಸಮಾಧಿ ಗುಂಡಿಯ ಮೇಲೆ, ನಿಲ್ಲಿಸುತ್ತಿದ್ದರು. ಇದು ಬಿಚ್ಚಿದ (ಹಿಡಿಯಿಲ್ಲದ) ಕೊಡೆಯನ್ನು ಹೋಲುವುದೇ ಇದಕ್ಕೆ ಕೊಡೆಕಲ್ಲು ಎಂದು ಹೆಸರು ಬರಲು ಕಾರಣ. *

**ಕೊಡೇಕಲ್ಲು :** ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿರುವ ಒಂದು ಪುಣ್ಯಕ್ಷೇತ್ರ.. ಇಲ್ಲಿ ಶಿವಶರಣರು ರಚಿಸಿದ ವಚನ ಗ್ರಂಥಗಳನ್ನು ಇಟ್ಟು ಭಕ್ತಿಯಿಂದ ಪೂಜಿಸುವ ಪವಿತ್ರ ಗದ್ದಿಗೆಗಳಿವೆ. ಈ ತೆರನ ಗದ್ದಿಗೆ ಬಸವನ ಬಾಗೇವಾಡಿಯಲ್ಲಿಯೂ ಉಂಟು. ಈ ರೀತಿ ಧರ್ಮಗ್ರಂಥಗಳನ್ನು ಪೂಜಿಸುವ ಪದ್ಧತಿಯನ್ನು ಸಿಖ್ಖರಲ್ಲೂ ಕಾಣಬಹುದು.

ವರ್ಷದ ಎಲ್ಲ ಕಾಲದಲ್ಲಿಯೂ ಯಾತ್ರಾರ್ಥಿಗಳು ಇಲ್ಲಿಗೆ ಬರುತ್ತಿರುತ್ತಾರೆ. ಇಲ್ಲಿಯ ಚನ್ನಬಸವೇಶ್ವರ ದೇವಸ್ಥಾನ ಮುಖ್ಯ ಆಕರ್ಷಣ ಕೇಂದ್ರವೆನಿಸಿದೆ. ಇಲ್ಲಿಯ ದರ್ಗ ಹೆಸರುವಾಸಿಯಾದುದು. ಹಿಂದೂಗಳು ಇದಕ್ಕೆ ನಡೆದುಕೊಳ್ಳುತ್ತಾರೆ. ಈ ಕ್ಷೇತ್ರಕ್ಕೆ 16 ಕಿಮೀ. ದೂರದಲ್ಲಿ ಕೃಷ್ಣಾನದಿ ಹರಿಯುತ್ತದೆ. (ಬಿ.ಎಸ್.)

**ಕೊಡೇಕಲ್ಲು ಬಸವಣ್ಣ:** ಹದಿನೈದನೆಯ ಶತಮಾನದ ಶಿವಶರಣ. ಕಲ್ಯಾಣದ ಬಸವಣ್ಣನ ಬದ್ಧ ಅನುಯಾಯಿಯಾಗಿದ್ದು ಹಿಂದು - ಮುಸ್ಲಿಂ ಈ ಎರಡೂ ಸಮುದಾಯಗಳ ಪ್ರೀತಿ ವಿಶ್ವಾಸ ಪಡೆದಿದ್ದ ಸಂತ. ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಕೋಡೇಕಲ್ಲಿನಲ್ಲಿ ನೆಲಸಿದ್ದರಿಂದ ಇವನಿಗೆ ಕೊಡೇಕಲ್ಲು ಬಸವಣ್ಣ ಎಂಬ ಹೆಸರು ಬಂದಿತ್ತು. ವೀರಶೈವ ಅಷ್ಟಾವರಣಗಳನ್ನು ತೊರೆದು, ಲಿಂಗವಿರಹಿತನಾಗಿ ಆರೂಢನಾಗಿದ್ದ, ನಾಥಪಂಥದ

ಪ್ರಭಾವಕ್ಕೊಳಗಾಗಿ ಯೋಗ, ಪವಾಡ ಮೆರೆದ; ಮಹಮದೀಯ ಸುಲ್ತಾನರ ಆಳ್ವಿಕೆಯಲ್ಲಿ ಜೀವಿಸಿದ್ದ ಈತ ಧರ್ಮ ಸಮನ್ವಯಕ್ಕಾಗಿ ಶ್ರಮಿಸಿದ. ಕುದುರೆ ಏರಿ ದೇಶಾದ್ಯಂತ ಸಂಚಾರ ಮಾಡಿ ಅಲ್ಲಾ ಅಲ್ಲಮ ಈರ್ವರೂ ಒಂದೇ ಎಂಬ ಸಂದೇಶ ಸಾರಿದ. ಮುಸ್ಲಿಮರ ಮೆಚ್ಚುಗೆ ಗಳಿಸಿ ಅವರಿಂದ ಪೈಗಂಬರರ ಅವತಾರ ಎಂದು ಕರೆಸಿಕೊಂಡ.

ಆದರೆ ಅದೇ ಕಾಲದಲ್ಲಿ ವಚನ ಸಾಹಿತ್ಯದ ರಕ್ಷಣೆಗಾಗಿ ಕಂಕಣಬದ್ಧನಾದ. ಕಲ್ಯಾಣಕ್ಕೆ ಹೋಗಿ ಅಲ್ಲಿ ಶರಣರ ವಚನಗಳ ಹಸ್ತಪ್ರತಿಗಳನ್ನು ಮಹಮ್ಮದೀಯ ಮೂಲಭೂತವಾದಿಗಳಿಂದ ರಕ್ಷಿಸಲು ಕ್ರಮಕೈಗೊಂಡ. ಪಾರಸೀ ಲಿಪಿಯಂತೆ ಕಾಣುವ ಅಮರಗನ್ನಡ ಲಿಪಿಯನ್ನು ಸೃಷ್ಟಿಸಿ ಅದರಲ್ಲಿ ಸಾಹಿತ್ಯ ರಚಿಸಿದನಂತೆ. ಅಲ್ಲದೆ ತನ್ನದೇ



ಕೊಡೇಕಲ್ಲು ಬಸವಣ್ಣಮಂದಿರ

ಆದ ಸಾಹಿತ್ಯ ಸಂಪ್ರದಾಯವನ್ನು ಹುಟ್ಟು ಹಾಕಿ ದೇಶೀ ಛಂದಸ್ಸಿನಲ್ಲಿ ಕಾವ್ಯ ರಚಿಸಿದ. ಬಸವಣ್ಣನ ಕಾಲಜ್ಞಾನ ಎಂಬ ಇವನ ಕೃತಿ ಪ್ರಸಿದ್ಧವಾಗಿದೆ. ಹಿಂದೆ ಇದನ್ನು ಹಾಡಿ ಪ್ರಚುರಗೊಳಿಸಲು ತರಬೇತಾದ ಸಾರುವ ಅಯ್ಯಗಳು ಎಂಬ ಒಂದು ದಂಡೇ ನಿರ್ಮಾಣವಾಗಿತ್ತು ಅವರನ್ನು ಕರ್ನಾಟಕದ ದಕ್ಷಿಣ ಭಾಗದಲ್ಲಿ ಕರಪಲ್ಲದವರು (ಕರಪಾಲ) ಎಂದು ಕರೆಯುತ್ತಿದ್ದರು. ಸಾತ್ತ್ವಿಕ ಜೀವನ, ಜನಸೇವೆ ಮತ್ತು ಧಾರ್ಮಿಕ ಸಾಧನೆಗಳಿಗೆ ಹೆಸರಾದ ಇವನಿಗೆ ಅನೇಕ ಮಂದಿ ಶಿಷ್ಯರಿದ್ದರು. ಅವರು ದೇಶದ ವಿವಿಧ ಭಾಗಗಳಲ್ಲಿ ನೆಲಸಿ ಈತನ ತತ್ತ್ವ ಪ್ರಚಾರ ಮಾಡಿದರು. ಅವರಲ್ಲಿ ಕೊಡೇಕಲ್ಲು ಸಮೀಪದ ತಿಂಥಿಣಿ ಮೋನಪ್ಪ, ಮೈಸೂರು ಸಮೀಪದ ಕೃಷ್ಣರಾಜನಗರ ತಾಲ್ಲೂಕಿನ ಕಪ್ಪಡಿಯಲ್ಲಿ ನೆಲೆಸಿದ್ದ ರಾಚಪ್ಪ, ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನಪುರದಲ್ಲಿ ನೆಲೆಸಿ ಸಮಾಧಿಸ್ಥನಾದ ಮಂಟೆಸ್ವಾಮಿ ಇವರು ಮುಖ್ಯರು. ಇವರಲ್ಲಿ ಅನೇಕರು ಕೊಡೇಕಲ್ಲು ಸಂಪ್ರದಾಯದ ಸಾಹಿತ್ಯ ರಚಿಸಿದ್ದಾರೆ. ಅವರ ಮಠಗಳ ಅನೇಕ ಶಾಖೆಗಳಿವೆ.

ಕೊಡೇಕಲ್ಲಿನಲ್ಲಿರುವ ಬಸವಣ್ಣನ ಮಂದಿರ ಮುಸ್ಲಿಂ ವಾಸ್ತುಶಿಲ್ಪ ಶೈಲಿಯಲ್ಲಿದೆ. ಅದರಲ್ಲಿರುವ ಗಲ್ಲೀಫ ಹೊದಿಸಿದ ಈತನ ಸಮಾಧಿಯೂ ಅದೇ ಮಾದರಿಯಲ್ಲಿದೆ. ಆ ಸಮಾಧಿಯ ಮೇಲೆ ವಚನಗಳನ್ನು ಕೆತ್ತಿ ಅಲಂಕರಿಸಲಾಗಿದೆ. ಹಿಂದು ಮತ್ತು ಮುಸ್ಲಿಂ ಈ ಎರಡೂ ಸಂಪ್ರದಾಯ ರೀತಿಯಲ್ಲಿ ಇಲ್ಲಿ ಒಮ್ಮೆಲೇ ಪೂಜೆ ನಡೆಯುತ್ತದೆ. ಇಲ್ಲಿಯ ಕೊಡೇಕಲ್ಲು ಹಿಂದು-ಮುಸ್ಲಿಂ ಸಂಸ್ಕೃತಿಗಳ ಸಾಮರಸ್ಯದ ನೆಲೆಯಾಗಿದೆ. (ಎಂ.ಜಿ.ಬಿ.)

**ಕೊಡೈಕ್ಕಾನಲ್ :** ತಮಿಳುನಾಡಿನ ಮಧುರೈ ಜಿಲ್ಲೆಗೆ ಸೇರಿದ ತಾಲ್ಲೂಕು. ಕೊಡೈಕ್ಕಾನಲ್ ತಾಲ್ಲೂಕಿನ ಕೇಂದ್ರ. ತಾಲ್ಲೂಕಿನಲ್ಲಿ ಆರಕ್ಷಿತ ಅರಣ್ಯ ಪ್ರದೇಶವೇ ಹೆಚ್ಚಾಗಿದೆ. ಈ ತಾಲ್ಲೂಕಿನಲ್ಲಿ ಸುಮಾರು 15 ಗ್ರಾಮಗಳಿವೆ. ಪಶ್ಚಿಮಕ್ಕಿರುವ ಪಳನಿ ಬೆಟ್ಟಗಳ ಸಾಲು ತಾಲ್ಲೂಕನ್ನು ಅತಿವೃಷ್ಟಿಯಿಂದ ರಕ್ಷಿಸುತ್ತದೆ. ವಾರ್ಷಿಕ ಮಳೆ ಸುಮಾರು 330 ಸೆಂ.ಮೀ. ನೆಲ್ಲು, ಹಗ್ಗ ತಯಾರಿಕೆ ಮತ್ತು ಕುಂಭಕಲೆ-ಇವು ತಾಲ್ಲೂಕಿನ ಮುಖ್ಯ ಗೃಹಕೈಗಾರಿಕೆಗಳು.

ಕೊಡೈಕ್ಕಾನಲ್ ಪಟ್ಟಣ ಒಂದು ಚಿಕ್ಕ ಗಿರಿಧಾಮ. ಪಳನಿ ಬೆಟ್ಟಗಳ ಪ್ರದೇಶದಲ್ಲಿ 2,343 ಮೀ ಎತ್ತರದಲ್ಲಿದೆ. ತಾಲ್ಲೂಕಿನಲ್ಲಿ ಇದೊಂದೇ ಪಟ್ಟಣ. ಜನಸಂಖ್ಯೆ 32931 (2001). ಸಮೀಪದ ರೈಲುನಿಲ್ದಾಣವಾದ ನೀಲಕೊಟ್ಟೈಗೆ ಇಲ್ಲಿಂದ ಒಳ್ಳೆಯ ರಸ್ತೆಯುಂಟು. ಸುತ್ತಣ ಪ್ರಕೃತಿಸೌಂದರ್ಯದ ನೋಟವನ್ನು ಸವಿಯಲೂ ವಿಶ್ರಾಂತಿ ಪಡೆಯಲೂ ಆರೋಗ್ಯ ಸುಧಾರಿಸಿಕೊಳ್ಳಲೂ ಈ ಗಿರಿಧಾಮಕ್ಕೆ ಬರುವ ಪ್ರವಾಸಿಗಳ ಸಂಖ್ಯೆ ವರ್ಷೇವರ್ಷೇ ಅಧಿಕವಾಗುತ್ತಿದೆ.

ಕೊಡೈಕ್ಕಾನಲ್‌ನಲ್ಲಿರುವ ಸೌರವೀಕ್ಷಣಾಲಯ ಭಾರತದಲ್ಲೇ ವಿಶಿಷ್ಟವಾದ್ದು. ಹಿಂದಿನ ಮದ್ರಾಸ್ ಸರ್ಕಾರ 1792ರಲ್ಲಿ ಸ್ಥಾಪಿಸಿದ್ದ ವೀಕ್ಷಣಾಲಯವನ್ನು 1900ರ ಸುಮಾರಿಗೆ ವಿಸ್ತರಿಸಲಾಯಿತು. ಇಲ್ಲಿ ಭೂಕಂಪನ ವಿಜ್ಞಾನ, ಸೌರ ಭೌತವಿಜ್ಞಾನ ಮುಂತಾದ ವಿಷಯಗಳ ಅಧ್ಯಯನಕ್ಕೆ ಅನುಕೂಲತೆಗಳಿವೆ. (ಎನ್.ಎ.)

**ಕೊಡೈಕ್ಕಾನಲ್ ವೇಧಶಾಲೆ :** ಇದನ್ನು ಈಸ್ಟ್ ಇಂಡಿಯ ಕಂಪನಿಯವರು ಮದ್ರಾಸು ನಗರದಲ್ಲಿ 1791ರಲ್ಲಿ ಸ್ಥಾಪಿಸಿದರು. ನಕ್ಷತ್ರವೀಕ್ಷಣೆ, ವರದಿ ಸಂಗ್ರಹಣೆ, ನಾವಿಕರಿಗೆ ಅವಶ್ಯಮಾಹಿತಿಗಳ ಪೂರೈಕೆ ಪ್ರಧಾನೋದ್ದೇಶಗಳು. ಪೋಗ್‌ಸನ್ ಎಂಬಾತನ ಹಿರಿತನದಲ್ಲಿ ರಘುನಾಥಾಚಾರಿಯವರ ನೆರವಿನಿಂದ ಈ ವೇಧಶಾಲೆ ಅಂದು ಗಮನಾರ್ಹಪ್ರಗತಿಯನ್ನು ಸಾಧಿಸಿತು. ಹಲವಾರು ಕ್ಷುದ್ರಗ್ರಹಗಳನ್ನೂ (ಮೈನರ್ ಪ್ಲಾನೆಟ್ಸ್) ಚಂಚಲ ನಕ್ಷತ್ರಗಳನ್ನೂ (ಮೇರಿಯಬಲ್ ಸ್ಟಾರ್ಸ್) ಶೋಧಿಸಿ ವರದಿಮಾಡಿದ ಹಿರಿಮೆ ಈ ವೀಕ್ಷಣಾಲಯದ್ದು.

19ನೆಯ ಶತಮಾನದ ಕೊನೆಯ ದಶಕದಲ್ಲಿ ಖಭೌತವಿಜ್ಞಾನ ತೀವ್ರವಾಗಿ ಅಭಿವರ್ಧಿಸಿ ಹೊಸ ಅಂತಸ್ತು ಪಡೆಯಿತು. ಅದೇ ವೇಳೆಗೆ ಮದ್ರಾಸಿನ (ಚೆನ್ನೈ) ಈ ವೇಧಶಾಲೆಯನ್ನು

ಸೌರವೀಕ್ಷಣಾಲಯ

ನವೀಕರಿಸಿ ಖಭೌತ ವೀಕ್ಷಣೆಗಳನ್ನು ಬೃಹತ್ಪ್ರಮಾಣದಲ್ಲಿ ಮಾಡುವಂತೆ ಅಳವಡಿಸಿ ಕೊಡೈಕ್ಕಾನಲಿಗೆ ವರ್ಗಾಯಿಸಿದರು (1898). ಸೂರ್ಯನ ಆವರಣದ ವೈಜ್ಞಾನಿಕ ಅಧ್ಯಯನ ಇದರ ಪ್ರಧಾನ ಗುರಿ. ಅಂದಿನಿಂದ ಈ ದಿಶೆಯಲ್ಲಿ ಕೊಡೈಕ್ಕಾನಲಿನ ಸೌರಭೌತ ವೇಧಶಾಲೆ (ಸೋಲಾರ್ ಫಿಸಿಕಲ್ ಆಬ್ಸರ್ವೇಟರಿ-ಈ ಹೆಸರಿನಿಂದ ಇದನ್ನು ಕರೆಯುವುದುಂಟು) ತನ್ನ ಹೆಸರನ್ನು ಸಾರ್ಥಕಗೊಳಿಸುವಂಥ ಸಾಧನೆಗಳನ್ನು ಸಿದ್ಧಿಸಿದೆ. 1904ರಿಂದ ತೊಡಗಿ ವರ್ತಮಾನ ತನಕ ಸೌರ ವರ್ಣಗೋಳದ (ಕ್ರೋಮೋಸ್ಫಿಯರ್) ವರ್ತನೆಯ ಪೂರ್ಣ ಮಾಹಿತಿಗಳ ಸಂಗ್ರಹ ಇಂಥ ಒಂದು ಸಿದ್ಧಿ. ಪ್ರಪಂಚದ ಇನ್ನು ಎರಡು ವೇಧಶಾಲೆಗಳಲ್ಲಿ ಮಾತ್ರ ಇವು ಲಭ್ಯವಷ್ಟೆ.

ಸೌರವೀಕ್ಷಣಾಲಯದ - ದೂರದರ್ಶಕ ಶಾಲೆ

101.5 ಸೆಂ.ಮೀ ವ್ಯಾಸದ ದೂರದರ್ಶಕ ಇಲ್ಲಿದೆ. 1957ರಿಂದ ಈಚೆಗೆ ಈ ವೇಧಶಾಲೆಯಲ್ಲಿ ಸೌರರೇಡಿಯೊ ವಿಕಿರಣಗಳ ಬಗ್ಗೆ ಮುನ್ಸೂಚನೆಗಳನ್ನು ಕೊಡುವ ಕೆಲಸ ನಡೆದಿದೆ. ಸೆಕೆಂಡಿಗೆ 100 ಮೆಗಾಸೈಕಲ್ಲುಗಳ ಮತ್ತು 3,000 ಮೆಕಾಸೈಕಲ್ಲುಗಳ ಸೌರಅಭಿವಾಹವನ್ನು (ಸೋಲಾರ್ ಫ್ಲಕ್ಸ್) ದಾಖಲುಮಾಡಿಕೊಳ್ಳುವಂಥ ಸೌಲಭ್ಯವುಂಟು.

ನಮ್ಮ ಆಕಾಶಗಂಗೆಯ ಹೊರಗಿರುವ ಇತರ ಬ್ರಹ್ಮಾಂಡಗಳಿಂದ (ಗ್ಯಾಲಾಕ್ಸೀಸ್) ಬರುತ್ತಿರುವ ವಿಕಿರಣಗಳ ಅಧ್ಯಯನವನ್ನೂ ಈಚೆಗಿನ ವರ್ಷಗಳಲ್ಲಿ ಇಲ್ಲಿ ಮಾಡುತ್ತಿದ್ದಾರೆ. ನಾಕ್ಷತ್ರಿಕ ಶುದ್ಧಗತಿ ವಿಜ್ಞಾನದಲ್ಲಿ (ಸ್ಟೆಲ್ಲಾರ್ ಕೈನ್ಮ್ಯಾಟಿಕ್ಸ್) ಸಂಶೋಧನೆಗಳು ಈಗ ಇಲ್ಲಿ ನಡೆಯುತ್ತವೆ. 50 ಸೆಂಮೀ ಅಳತೆಯ ಪ್ರತಿಫಲನ ದೂರದರ್ಶಕ (ರಿಫ್ಲೆಕ್ಟರ್) ಮತ್ತು ಕಡಿಮೆ ವರ್ಣವಿಭಜನಸಾಮರ್ಥ್ಯವಿರುವ ಕ್ಯಾಸಿಗ್ರೇನ್ ರೋಹಿತಲೇಖಿಗಳ



ಬೃಹತ್ ಟೆಲಿಸ್ಕೋಪ್

(ಸ್ಪೆಕ್ಟ್ರೊಸ್ಕೋಪ್) ಸಾಧನಗಳೊಂದಿಗೆ ಈ ಸಂಶೋಧನೆಗಳು ಸಾಧ್ಯವೆನಿಸಿವೆ. ಧೂಮಕೇತುಗಳ ಗೊಂಡೆಗಳಿಗೆ ಹಾಗೂ ಬಾಲಗಳಿಗೆ ಸಂಬಂಧಿಸಿದಂತೆ ಅವುಗಳ ತೀಕ್ಷ್ಣತೆ ಧ್ರುವೀಕರಣ ವೈಚಿತ್ರ್ಯಗಳ ಅಧ್ಯಯನವೂ ಈ ವೇಧಶಾಲೆಯಲ್ಲಿ ನಡೆದಿದೆ. ಸೂರ್ಯನಿಂದ ಜನಿತವಾದುದೆಂದು ಹೇಳಲಾದ ಆಯಾನ್‌ಗೋಳ ಮತ್ತು ಭೂಕಾಂತ ಪರಿಣಾಮಗಳ ವೀಕ್ಷಣೆಗೆ ಸಂಬಂಧಿಸಿದಂತೆ ಸೂರ್ಯ–ಭೂಮಿ (ಸೋಲಾರ್ ಟೆರ್‍ಸ್ಟ್ರಿಯಲ್) ಪ್ರಯೋಗಶಾಲೆಯೊಂದನ್ನು ವೇಧಶಾಲೆಯ ವತಿಯಿಂದ ಸ್ಥಾಪಿಸಲಾಗಿದೆ. ಭೂಕಾಂತ ಸಮಭಾಜಕ ವೃತ್ತಕ್ಕೆ ಕೊಡೈಕ್ಕಾನಲ್ ಸಮೀಪವಿರುವುದೇ ಇಂಥ ವಿಷಯಗಳನ್ನು ಕುರಿತ ವಿಶೇಷಾಧ್ಯಯನಕ್ಕೆ ಕಾರಣ. ಆಯಾನ್‌ಗೋಳ ಮತ್ತು ತತ್ಸಂಬಂಧೀ ವಾತಾವರಣ ಪ್ರದೇಶಗಳ ಗುಣಲಕ್ಷಣಗಳ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ.

ಕೊಡೈಕ್ಕಾನಲ್ ವೇಧಶಾಲೆ ಖಗೋಳಾಧ್ಯಯನಕ್ಕೆ ವಿಶೇಷ ಗಮನಕೊಟ್ಟು ಸತತವಾಗಿ ಶ್ರಮಿಸುತ್ತಿದೆ. ಭಾರತದಲ್ಲೇ ಅತ್ಯಂತ ಹಿರಿಯ ವೈಜ್ಞಾನಿಕ ವೇಧಶಾಲೆ ಇದು. ಇದರ ಆಶ್ರಯದಲ್ಲಿ ಮತ್ತೊಂದು ವೇಧಶಾಲೆಯನ್ನು ತುಳುನಾಡಿನ ಕಾವಲೂರಿನಲ್ಲಿ ಸ್ಥಾಪಿಸಿ ಅಲ್ಲಿಯೂ ಅಧಿಕಪ್ರಮಾಣದ ಸಂಶೋಧನಾಧ್ಯಯನಗಳನ್ನು ನಡೆಸಲಾಗುತ್ತದೆ. ಇಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಸ್ಟ್ರೋಫಿಸಿಕ್ಸ್ ಎಂಬ ಹೆಸರು ಪಡೆದಿರುವ ಸಂಸ್ಥೆಯ ಸ್ಥಾಪನೆಗೆ ಮುಖ್ಯ ಕಾರಣ ಈ ಎರಡು ವೇಧಶಾಲೆಗಳು. *

**ಕೊತ :** ತಮಿಳುನಾಡಿನ ನೀಲಗಿರಿಯ ಮೂಲನಿವಾಸಿಗಳಲ್ಲಿ ಒಂದು ಗುಂಪಿನವರ ಭಾಷೆ. ಸುಮಾರು 5000 ಜನ ಈ ಭಾಷೆಯನ್ನು ಬಳಸುತ್ತಿದ್ದಾರೆ. ಇವರು ಮೊದಮೊದಲು ತೊದವ ಮತ್ತು ಬಡಗರೊಂದಿಗೆ ಸಹಬಾಳುವೆ ನಡೆಸುತ್ತ ಕುಂಬಾರರಾಗಿ, ಕಮ್ಮಾರರಾಗಿ, ಹಾಡುಗಾರರಾಗಿ ಕಾಲಹಾಕುತ್ತಿದ್ದರು. ಕೊತ ಎಂಬ ಇವರ ಹೆಸರು ಬಹುಶಃ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಕುಂಬಾರ ಎಂಬ ಅರ್ಥ ಬರುವ ಮೂಲಶಬ್ದಕ್ಕೆ ಸಂಬಂಧಪಟ್ಟುದಾಗಿದೆ (ಎಮಿನೊ ಅವರ ಎ ಡ್ರವಿಡಿಯನ್ ಎಟಿಮೊ ಲೋಜಿಕಲ್ ಡಿಕ್ಷನರಿಯ 'ಪಾಟರ್' (1468) ಶಬ್ದವನ್ನು ನೋಡಬಹುದು). ದ್ರಾವಿಡ ಭಾಷಾ ಪರಿವಾರದಲ್ಲಿ ಕೊತ ಭಾಷೆಯ ಸ್ಥಾನಮಾನಗಳೇನು ಎಂಬುದನ್ನು ನಿರ್ಧರಿಸಬೇಕಾದರೆ ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ. ಕೊತ ಭಾಷೆ ಅನೇಕ ವಿವರಗಳಲ್ಲಿ ತೊದ ಭಾಷೆಯಿಂದ ಭಿನ್ನವಾಗಿ ತೋರಿದರೂ ಅದು ತೊದ ಭಾಷೆಗೆ ತೀರ ಸಮೀಪವಾಗಿದೆ. ತೊದ ಭಾಷೆಯಂತೆ ಕೊತ ಭಾಷೆ ಕೂಡ ಬಹುಮಟ್ಟಿಗೆ ಪದಗಳ ಮಧ್ಯ ಮತ್ತು ಅಂತ್ಯಸ್ವರಗಳನ್ನು ಕಳೆದುಕೊಂಡಿದೆ.

ಅನೇಕ ಸಂದರ್ಭಗಳಲ್ಲಿ ತೊದ ಭಾಷೆಯಲ್ಲಿ ಉಂಟಾಗಿರುವಷ್ಟು ಧ್ವನಿ ಪರಿವರ್ತನೆ ಕೊತ ಭಾಷೆಯಲ್ಲಿ ಉಂಟಾಗಿಲ್ಲ. ತೊದ ಭಾಷೆಯಲ್ಲಿ ಮೂಲ *ರ(*r) ರ(r) ಆಗಿಯೇ ಉಳಿಯುತ್ತದೆ; ಆದರೆ ಕೊತ ಭಾಷೆಯಲ್ಲಿ ಮೂಲ *ರಕಾರದ ಜೊತೆಯಲ್ಲಿ ಸೇರಿಹೋಗುತ್ತದೆ. ಹೀಗಿದ್ದರೂ ಎರಡು ಭಾಷೆಗಳೂ ಮೂಲದ್ರಾವಿಡದ ವರ್ತ್ಸ್ಯಗಳನ್ನು (*nr, *rr) ವರ್ತ್ಸ್ಯಗಳನ್ನಾಗಿಯೇ (d,t) ಉಳಿಸಿಕೊಂಡಿರುವುದರಲ್ಲಿ ಸಮಾನಗುಣವನ್ನು ಪ್ರದರ್ಶಿಸುತ್ತವೆ. ಅಲ್ಲದೆ ಅನುನಾಸಿಕ ಮತ್ತು ಸ್ಪರ್ಶಧ್ವನಿಗಳು ಕೂಡಿದಾಗ ಉಂಟಾಗುವ ಅನುನಾಸಿಕ ಲೋಪವನ್ನು ಎರಡು ಭಾಷೆಗಳಲ್ಲಿಯೂ ಕಾಣಬಹುದು. ಈ ಎರಡು ಭಾಷೆಗಳು ತಮಿಳು–ಮಲಯಾಳಂ ಭಾಷೆಗಳ ಕ್ರಿಯಾಪದದಲ್ಲಿಯ ಸಾಮಾನ್ಯ ಪ್ರಕೃತಿ ಮತ್ತು ಭೂತಪ್ರಕೃತಿಗಳ ಸಂಬಂಧವನ್ನು ಒಪ್ಪಿಕೊಳ್ಳುತ್ತವೆ. ಕೊತ ಭಾಷೆ ತೊದ ಭಾಷೆಯಂತೆಯೇ ವರ್ತಮಾನ–ಭವಿಷ್ಯತ್ (ಅಭೂತ) ಕಾಲಗಳಲ್ಲಿ ಭೂತ (ಕಾಲದ) ಪ್ರಕೃತಿಯನ್ನು ಬಳಸುತ್ತದೆ; ಆದರೆ ತೊದ ಊಷ್ಮಪ್ರತ್ಯಯವನ್ನು ಭೂತಕಾಲದಲ್ಲಿ ಬಳಸಿದರೆ ಕೊತ ಈ ರೂಪವನ್ನು ವಿರೋಧಾತ್ಮಕ ಭೂತಕಾಲದಲ್ಲಿ(ಅನ್‌ರಿಯಲ್ ಪಾಸ್ಟ್) –ವ್–( –v–)ಪ್ರತ್ಯಯವನ್ನು ಭೂತಕಾಲದಲ್ಲಿ ಬಳಸುತ್ತದೆ.

ಕೊತ ಭಾಷೆ ಬಡಗದಿಂದ (ಕನ್ನಡದ ಉಪಭಾಷೆ) ಸಾಕಷ್ಟು ಶಬ್ದಗಳನ್ನು ಎರವಲು ಪಡೆದಿದೆ. ಅದರಲ್ಲೂ ವಿಶೇಷವಾಗಿ 'ಪೋಗು' ಕ್ರಿಯಾಪದವೂ ಸೇರಿದಂತೆ ಆದಿ ಪ ಕಾರವಿಲ್ಲದ ಅನೇಕ ಶಬ್ದಗಳನ್ನು ತೆಗೆದುಕೊಂಡಿದೆ. (ಎಂ.ಬಿ.ಇ.)

**ಕೊತರು : ನೋಡಿ – ಆದಿವಾಸಿಗಳು**

**ಕೊತ್ತಂಬರಿ :** ಅಂಬೆಲಿಫೆರೀ (ಏಪಿಯೇಸೀ) ಕುಟುಂಬಕ್ಕೆ ಸೇರಿದ ಒಂದು ಏಕವಾರ್ಷಿಕ ಮೂಲಿಕ ಸಸ್ಯ (ಕೋರೀಯಾಂಡರ್). ಕೋರಿಯಾಂಡ್ರಮ್ ಸೇಟಿವಂ ಎಂಬುದು ಇದರ ವೈಜ್ಞಾನಿಕ ಹೆಸರು. ಮೆಡಿಟರೇನಿಯನ್ ಪ್ರದೇಶ ಇದರ ತವರು. ಇದರ ಕಾಯಿಗಳನ್ನು (ಕೊತ್ತಂಬರಿ ಬೀಜ) ಸಂಬಾರ ಪದಾರ್ಥವಾಗಿ ಉಪಯೋಗಿಸುವುದರಿಂದ ಹಲವಾರು ದೇಶಗಳಲ್ಲಿ ಇದರ ಬೇಸಾಯ ಇದೆ. ಭಾರತ, ಟರ್ಕಿ, ಇಸ್ರೇಲ್ ಮತ್ತು ಬಾಲ್ಕನ್ ಪ್ರದೇಶಗಳು ಕೊತ್ತಂಬರಿ ಗಿಡದ ಬೇಸಾಯಕ್ಕೆ ಹೆಸರಾಗಿವೆ. ದಕ್ಷಿಣ ಭಾರತದಲ್ಲಿ ಇದರ ಬೇಸಾಯ ಉಳಿದ ಪ್ರದೇಶಗಳಿಗಿಂತ ಹೆಚ್ಚು.

ಕೊತ್ತಂಬರಿ ಸು. 3048 ಮೀ – 9143 ಮೀ ಎತ್ತರಕ್ಕೆ ಬೆಳೆಯುವ ಪುಟ್ಟ ಗಿಡ. ಕಾಂಡ ಬಹುವಾಗಿ ಕವಲೊಡೆದಿದ್ದು ಅಂತರಗೆಣ್ಣುಗಳಲ್ಲಿ ಟೊಳ್ಳಾಗಿದೆ. ಕಾಂಡದ ಮೇಲೆಲ್ಲ ನವುರಾದ ಉದ್ದುದ್ದನೆಯ ಏಣುಗಳಿವೆ. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಕೆಳಗಿನ ಎಲೆಗಳು ಅಗಲವಾದವೂ ಹಾಲೆಗಳಾಗಿ ವಿಭಾಗವಾದ ಅಂಚುಳ್ಳವೂ ಆಗಿವೆ. ಮೇಲಿನ ಎಲೆಗಳು ಕಿರಿದಾಗಿದ್ದು ಛಿದ್ರಛಿದ್ರವಾಗಿ ಸೀಳುಗೊಂಡಿವೆ. ಹೂಗಳು ಬಲುಚಿಕ್ಕವು. ಇವು ದ್ವಿಲಿಂಗಿಗಳು: ಗಿಡದ ತುದಿಯಲ್ಲಿ ಹುಟ್ಟುವ ಸಂಯುಕ್ತ ಛತ್ರಮಂಜರಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಪುಷ್ಪಪತ್ರಗಳು 5, ದಳಗಳು 5, ಕೇಸರಗಳು 5, ಅಂಡಾಶಯ ನೀಚಸ್ಥಾನದ್ದು; ಎರಡು ಕಾರ್ಪೆಲ್‌ಗಳಿಂದ ಕೂಡಿದೆ. ಫಲ ಕ್ರೀಮೊಕಾರ್ಪ್ ಎಂಬ ಬಗೆಯದು; ಗುಂಡನೆಯ ಆಕಾರದ್ದೂ ಮೇಲೆಲ್ಲ ಹಲವಾರು ಏಣುಗಳುಳ್ಳದ್ದೂ ಆಗಿದೆ. ಸಾಮಾನ್ಯವಾಗಿ ಫಲವನ್ನೇ ಕೊತ್ತಂಬರಿ ಬೀಜ ಎಂದು ಕರೆಯಲಾಗುತ್ತದೆ. ಇದು ಒಣಗಿದಾಗ ಒಂದೊಂದು ಬೀಜವುಳ್ಳ ಎರಡು ಭಾಗಗಳಾಗಿ ಒಡೆಯುತ್ತದೆ. ಇವಕ್ಕೆ ಮೆರಿಕಾರ್ಪ್‌ಗಳೆಂದು ಹೆಸರು. ಬೀಜದ ಮೇಲಿರುವ ಏಣುಗಳಲ್ಲಿ ಹಲವಾರು ಸೂಕ್ಷ್ಮವಾದ ಗ್ರಂಥಿಗಳಿದ್ದು ಅವುಗಳಲ್ಲಿ ಒಂದು ಬಗೆಯ ಚಂಚಲ ತೈಲವಿರುತ್ತದೆ. ಈ ಎಣ್ಣೆಯೇ ಕೊತ್ತಂಬರಿಯ ವಿಶಿಷ್ಟ ವಾಸನೆಗೂ ರುಚಿಗೂ ಕಾರಣ.

ಕೊತ್ತಂಬರಿ ಮುಖ್ಯವಾಗಿ ಸಂಬಾರಸಸ್ಯ. ಇದರ ಒಣಗಿಸಿದ ಬೀಜಗಳನ್ನು ಸಂಬಾರ ವಸ್ತುಗಳ ತಯಾರಿಕೆಯಲ್ಲಿಯೂ ದೇಶೀಯ ಔಷಧಿ ಪದ್ಧತಿಯಲ್ಲಿ ಕೆಲವು ಔಷಧಿಗಳ ವಾಸನೆಯನ್ನು ಹೋಗಲಾಡಿಸಲೂ ಉಪಯೋಗಿಸುತ್ತಾರೆ. ಬೀಜದ ಪುಡಿ ಮತ್ತು ಇತರ ಉತ್ಪನ್ನಗಳಿಗೆ ವಿದೇಶಗಳಲ್ಲೂ ಹೆಚ್ಚಿನ ಬೇಡಿಕೆ ಇದ್ದು ಹೆಚ್ಚಿನ ಮೊತ್ತದಲ್ಲಿ ಇದು ರಫ್ತಾಗುತ್ತದೆ. ಇದರಿಂದ ಕೊತ್ತಂಬರಿ ಭಾರತಕ್ಕೆ ವಿದೇಶಿ ವಿನಿಮಯವನ್ನು ಗಳಿಸಿಕೊಡುವ ಬೆಳೆಗಳಲ್ಲಿ ಪ್ರಮುಖವಾಗಿದೆ. ಕೊತ್ತಂಬರಿ ಸೊಪ್ಪನ್ನು ಸಂಬಾರ ಪದಾರ್ಥವಾಗಿ ಬಳಸುವುದು ಸರ್ವವಿದಿತ. ಚಟ್ನಿ, ಸಾರು ಮುಂತಾದ ವಸ್ತುಗಳಲ್ಲೆಲ್ಲ ಕೊತ್ತಂಬರಿ ಇರಲೇಬೇಕು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಯೂರೋಪಿನಲ್ಲಿ ಮಾದಕ ಪಾನೀಯಗಳಿಗೆ ಮುಖ್ಯವಾಗಿ ಜಿನ್ ಎಂಬ ಪಾನೀಯಕ್ಕೆ ವಾಸನೆ ಕಟ್ಟಲು ಕೊತ್ತಂಬರಿ ಬೀಜಗಳನ್ನು ಬಳಸುತ್ತಾರೆ. ಬೀಜಗಳಿಗೂ ಸೊಪ್ಪಿಗೂ ಹಲವಾರು ಔಷಧೀಯ ಗುಣಗಳುಂಟು; ಪಚನಕಾರಿ, ಮೂತ್ರಸ್ರಾವ ಉತ್ತೇಜಕ, ಶಕ್ತಿವರ್ಧಕ, ತಂಪುಕಾರಕ, ಪಿತ್ತಹರ, ಕಾಮೋತ್ತೇಜಕ ಮುಂತಾದವೆಂದು ಇವು ಹೆಸರಾಗಿವೆ.

ಕೊತ್ತಂಬರಿ ಕಷಾಯವನ್ನು ಗಂಟಲು ಕೆರೆತವನ್ನು ನಿವಾರಿಸಲೂ ಅಜೀರ್ಣಕ್ಕೂ ವಾಂತಿಯನ್ನು ನಿಲ್ಲಿಸುವುದಕ್ಕೂ ಉಪಯೋಗಿಸುತ್ತಾರೆ. ಏಲಕ್ಕಿ ಮತ್ತು ಅಜ್ವಾನದೊಂದಿಗೆ ಸೇರಿಸಿ ಸೇವಿಸಿದರೆ ಒಳ್ಳೆಯ ಜೀರ್ಣಕಾರಿ. ಸಿಡುಬು ತಗುಲಿದಾಗ ದೃಷ್ಟಿಯನ್ನು ಸುರಕ್ಷಿತವಾಗಿಡಲು ಇದರ ಕಷಾಯವನ್ನು ಬಳಸುವ ಕ್ರಮ ರೂಢಿಯಲ್ಲಿದೆ. ಬೀಜಗಳಿಂದ ನಸುಹಳದಿ ಬಣ್ಣದ ತೈಲವನ್ನು ಪಡೆಯಲಾಗುತ್ತದೆ. ಇದನ್ನು ಮಾದಕ ಪಾನೀಯಗಳಿಗಲ್ಲದೆ, ಕೋಕೋ ಮುಂತಾದ ವಸ್ತುಗಳಿಗೆ ವಾಸನೆ ಕೊಡಲೂ ಉಪಯೋಗಿಸುವುದುಂಟು.

ಕೊತ್ತಂಬರಿಯನ್ನು ನೀರಾವರಿ ಸೌಕರ್ಯವಿರುವ ಪ್ರದೇಶಗಳಲ್ಲಿ ಬೆಳೆಸಬಹುದಾದರೂ ಮಳೆ ಆಶ್ರಿತ ಸ್ಥಳಗಳಲ್ಲೆ ಇದರ ಬೇಸಾಯ ಹೆಚ್ಚು. ಶುದ್ಧ ಬೆಳೆಯಾಗಿಯೊ ಮಿಶ್ರ ಬೆಳೆಯಾಗಿಯೊ ಇದರ ಕೃಷಿ ಮಾಡಬಹುದು. ಬಿತ್ತನೆಯ ಕಾಲ ಭಾರತದ ವಿವಿಧ ಪ್ರದೇಶಗಳಲ್ಲಿ ಬೇರೆಬೇರೆಯಾಗಿದೆ. ಬಂಗಾಳ, ಉತ್ತರ

ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಬಿತ್ತನೆಯಾದರೆ ಮಹಾರಾಷ್ಟ್ರದಲ್ಲಿ ಮುಂಗಾರು ಮಳೆಯ ಕಾಲದಲ್ಲಿ, ಕರ್ನಾಟಕ ಮತ್ತು ತಮಿಳುನಾಡಿನ ಕೆಲವು ಭಾಗಗಳಲ್ಲಿ ವರ್ಷಕ್ಕೆ ಎರಡು ಬಾರಿ (ಮೇ–ಆಗಸ್ಟ್ ಮತ್ತು ಅಕ್ಟೋಬರ್–ಜನವರಿ ತಿಂಗಳುಗಳಲ್ಲಿ) ಬಿತ್ತನೆಯಾಗುತ್ತದೆ. ಕೊತ್ತಂಬರಿ ಬೇಸಾಯಕ್ಕೆ ಎಂಥ ಮಣ್ಣಾದರೂ ಆಗಬಹುದು. ಆದರೆ ಎರೆಭೂಮಿ ಉತ್ಕೃಷ್ಟವಾದುದು. ಕೊತ್ತಂಬರಿ ಬೇಸಾಯ ಮಾಡಬೇಕಾದ ಭೂಮಿಯನ್ನು 2–3 ಸಾರಿ ಉಳುಮೆ ಮಾಡಿ, ಗೊಬ್ಬರ ಹಾಕಿ, ಅನಂತರ ಬೀಜಗಳನ್ನು ಉಜ್ಜಿ ಎರಡು ಭಾಗ ಮಾಡಿ ಬಿತ್ತನೆ ಮಾಡಬೇಕು. ಬೀಜವನ್ನು ಉಜ್ಜಿದರೆ ಒಂದು ಬೀಜದಿಂದ ಹಲವು ಮೊಳಕೆ ಬೆಳೆದು ಬಹಳ ಒತ್ತಾಗುತ್ತದೆ. ಒಂದು ಎಕರೆಶುದ್ಧಬೆಳೆಗೆ ಸುಮಾರು 5–7 1/2 ಕೆಜಿ. ಬಿತ್ತನೆ ಬೇಕಾಗುತ್ತದೆ. ತೋಟಗಳಲ್ಲಿ ಕೊತ್ತಂಬರಿ ಬೇಸಾಯ ಮಾಡುವಾಗ ಸಾಲುಗಳಲ್ಲಿ ಬಿತ್ತುವುದು ರೂಢಿಯಲ್ಲಿದೆ. ಹೀಗೆ ಮಾಡುವುದರಿಂದ ನೀರಾವರಿ, ಕಳೆ ಕೀಳುವುದು ಮತ್ತು ಕುಯ್ಲು ಇತ್ಯಾದಿ ಕೆಲಸಗಳಿಗೆ ಸುಲಭವಾಗುತ್ತದೆ. ಬೀಜ ಬಿತ್ತಿದ ಸುಮಾರು 10 ದಿವಸಗಳಲ್ಲಿ ಮೊಳೆಯುತ್ತದೆ. ಸುಮಾರು 3–3 1/2 ತಿಂಗಳಲ್ಲಿ ಬೆಳೆ ಕೊಯ್ಲಿಗೆ ಸಿದ್ಧವಾಗುತ್ತದೆ. ಕೊತ್ತಂಬರಿಯ ಕುಯ್ಲು ಉದ್ದೇಶಕ್ಕೆ ತಕ್ಕಂತೆ ಎರಡು ಕಾಲಗಳಲ್ಲಿ ನಡೆಯುತ್ತದೆ. ಸೊಪ್ಪಿಗಾಗಿ ಕೊಯ್ಯುವುದಾದರೆ ಸಸ್ಯಗಳಲ್ಲಿ ಹೂ ಬರುವುದಕ್ಕೆ ಮೊದಲು ಸಸಿಗಳನ್ನು ಬೇರುಸಮೇತ ಕಿತ್ತು ಕಂತೆ ಕಟ್ಟಿ ಮಾರಾಟ ಮಾಡುತ್ತಾರೆ. ಬೀಜಕ್ಕಾಗಿ ಬೆಳೆಸುವುದಾದರೆ, ಬೀಜಗಳು ಬಲಿಯುವವರೆಗೆ ತೋಟದಲ್ಲಿ ಉಳಿಸಿ, ಅನಂತರ ಇಡೀ ಸಸ್ಯಗಳನ್ನು ಕಿತ್ತು ಒಣಗಿಸಿ ಕೊತ್ತಂಬರಿ ಬೀಜಗಳನ್ನು ಬೇರ್ಪಡಿಸುತ್ತಾರೆ. (ಎಸ್.ವಿ.ಜೆ.; ಬಿ.ಎ.ಪಿ.)

**ಕೊನ್ನಾರಿಗೆಡ್ಡೆ :** ಹೊಲಗದ್ದೆ ಮುಂತಾದೆಡೆಗಳಲ್ಲಿ ಕಳೆಯಾಗಿ ಬೆಳೆಯುವ ಒಂದು ಮೂಲಿಕೆ ಸಸ್ಯ. ಸೈಪರೇಸೀ ಕುಟುಂಬಕ್ಕೆ ಸೇರಿದೆ. ನೋಡುವುದಕ್ಕೆ ಹುಲ್ಲಿನಂತೆಯೇ ಕಾಣುತ್ತದೆ. ಸೈಪರಸ್ ರೊಟಂಡಸ್ ಇದರ ವೈಜ್ಞಾನಿಕ ಹೆಸರು. ಇಂಗ್ಲಿಷಿನಲ್ಲಿ ಸಾಮಾನ್ಯವಾಗಿ ನಟ್ ಗ್ರಾಸ್ ಅಥವಾ ಕೋಕೋ ಗ್ರಾಸ್ ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ ಇದಕ್ಕೆ ಕೊನ್ನಾರಿಹುಲ್ಲು, ತುಂಗೆಹುಲ್ಲು, ತುಂಗೆಗೆಡ್ಡೆ ಎಂಬ ಹೆಸರುಗಳೂ ಇವೆ. ಪ್ರಪಂಚಾದ್ಯಂತ ಇದರ ವ್ಯಾಪ್ತಿ ಉಂಟು. ಭಾರತದಲ್ಲಿ ಇದು ಸಮುದ್ರಮಟ್ಟದಿಂದ ಹಿಡಿದು 1828.7 ಮೀ ಎತ್ತರದ ವರೆಗಿನ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದನ್ನೆ ಹೋಲುವ ಸೈಪರಸ್ ಎಸ್ಕುಲೆಂಟಸ್, ಸೈಪರಸ್ ಬಲ್ಬೋಸಸ್, ಸೈಪರಸ್ ಸಿರ್ಪಸ್ ಎಂಬ ಪ್ರಭೇದಗಳೂ ಭಾರತದಲ್ಲಿ ಬೆಳೆಯುತ್ತಿದ್ದು ಇವನ್ನೂ ಕೊನ್ನಾರಿಗೆಡ್ಡೆಯೆಂದೇ ನಿರ್ದೇಶಿಸುದುಂಟು.

ಕೊನ್ನಾರಿಗೆಡ್ಡೆ ಬಹುವಾರ್ಷಿಕ. ತಾನು ಬೆಳೆಯುವ ಪರಿಸ್ಥಿತಿಯನ್ನು ಅನುಸರಿಸಿ ಸು. 0.1523ಮೀ – 0.6095ಮೀ ಎತ್ತರಕ್ಕೆ ಬೆಳೆಯುತ್ತದೆ. ಇದರ ಕಾಂಡ ಗೆಣ್ಣುಕಾಂಡವೆಂಬ (ಕಲ್ಮ್) ಭೂಮಿಯ ಮೇಲಿನ ಭಾಗವನ್ನೂ ಪ್ರಕಂದ (ರೈಜ಼ೋಮ್) ಎಂಬ ಭೂಗತ ಭಾಗವನ್ನೂ ಒಳಗೊಂಡಿದೆ. ಪ್ರಕಂದಭಾಗ ಭೂಮಿಯ ಒಳಗೆ ಅದಕ್ಕೆ ಸಮಾಂತರವಾಗಿ ವಿಪುಲವಾಗಿ ಹರಡಿಕೊಂಡು ಬೆಳೆಯುತ್ತದೆ. ಅಲ್ಲಲ್ಲಿ ಇದು ಉಬ್ಬಿಕೊಂಡು ಗೆಡ್ಡೆಗಳಾಗಿ (ಟ್ಯೂಬರ್ಸ್) ರೂಪುಗೊಂಡಿರುತ್ತದೆ. ಗೆಡ್ಡೆಗಳು ಎಳೆಯವಾಗಿದ್ದಾಗ ಬಿಳಿಯಾಗಿದ್ದು ರಸವತ್ತಾಗಿರುತ್ತವೆ; ಬಲಿತಾಗ ಕಪ್ಪುಬಣ್ಣಕ್ಕೆ ತಿರುಗುವುವಲ್ಲದೆ ಗಟ್ಟಿಯಾಗಿಬಿಡುತ್ತದೆ; ಆಗ ಪ್ರಕಂದಭಾಗದಿಂದ ಬೇರುಗಳೂ ಹುಟ್ಟಿಕೊಳ್ಳುತ್ತವೆ. ಗೆಣ್ಣುಕಾಂಡ ಮುಮ್ಮೂಲೆಯಾಗಿದೆ. ಅದರ ಬುಡದಿಂದ ಉದ್ದನೆಯ ಹಾಗೂ ಹುಲ್ಲಿನ ಎಸಳನ್ನು ಹೋಲುವ ಎಲೆಗಳು



ಹೊರಡುತ್ತವೆ. ಹೂಗೊಂಚಲು ಸಂಯುಕ್ತ ಛತ್ರಮಂಜರಿ (ಕಾಂಪೌಂಡ್ ಅಂಬೆಲ್) ಮಾದರಿಯದು; ಚಿಕ್ಕಗಾತ್ರದ ಅಸಂಖ್ಯ ಹೂಗಳನ್ನು ಇಲ್ಲವೆ ತೆನೆಗಳನ್ನು (ಸ್ಪೈಕ್‌ಲೆಟ್ಸ್) ಒಳಗೊಂಡಿದೆ. ತೆನೆಗಳ ಬುಡದಲ್ಲಿ ಅವನ್ನು ಸುತ್ತುವರಿದಂತೆ 2–4 ಉಪಪತ್ರಗಳಿವೆ. ಹೂಗಳು ದ್ವಿಲಿಂಗಿಗಳು; ಒಂದೊಂದರಲ್ಲೂ ಒಣಹುಲ್ಲಿನ ಇಲ್ಲವೆ ಕಂದುಬಣ್ಣದ 2 ಪುಚ್ಛಗಳೂ (ಗ್ಲೂಮ್ಸ್) 3 ಕೇಸರಗಳೂ ಒಂದೇ ಕಾರ್ಪೆಲಿನಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ಅಂಡಕೋಶದ ಒಳಗೆ ಒಂದೇ ಒಂದು ಅಂಡಕವಿದೆ. ಫಲ ನಟ್ ಮಾದರಿಯದು; ದೀರ್ಘ ಅಂಡಾಕಾರದ್ದೂ ಬಲುಗಟ್ಟಿಯಾದುದೂ ಆಗಿದೆ.

ಎಲ್ಲ ಬಗೆಯ ಹವಾಗುಣಕ್ಕೂ ಮಣ್ಣುಗಳಿಗೂ ಹೊಂದಿಕೊಂಡು ಸಮೃದ್ಧವಾಗಿ ಬೆಳೆಯಬಲ್ಲ ಸಾಮರ್ಥ್ಯ ಕೊನ್ನಾರಿಗೆಡ್ಡೆಗಿದೆ; ಹೊಲದಲ್ಲೊ ಗದ್ದೆಯಲ್ಲೋ ಒಂದು ಕಡೆ ಕಾಣಿಸಿಕೊಂಡರೆ ಸಾಕು ಬಲುಬೇಗ ಸುತ್ತಮುತ್ತಲಿನ ಪ್ರದೇಶವನ್ನೆಲ್ಲ ಆಕ್ರಮಿಸಿಬಿಡುತ್ತದೆ. ಪ್ರಕಂದದಲ್ಲಿರುವ ಗೆಡ್ಡೆಗಳೇ ಈ ಪುನರುತ್ಪತ್ತಿಗೆ ಮುಖ್ಯಕಾರಣ. ಗಿಡದಿಂದ ಗೆಡ್ಡೆಯೊಂದನ್ನು

ಬೇರ್ಪಡಿಸಿ ಬೇರೆಡೆಯಲ್ಲಿ ನೆಟ್ಟರೆ, ಸುಮಾರು 3 ವಾರಗಳ ಅನಂತರ ಅದರಿಂದ ಹೊಸಗೆಡ್ಡೆಯೊಂದು ಹುಟ್ಟಿಕೊಳ್ಳುವುದೆಂದೂ ಸುಮಾರು 3½ ತಿಂಗಳ ಅನಂತರ 146 ಗೆಡ್ಡೆಗಳು ರೂಪುಗೊಳ್ಳುವುವೆಂದೂ ಹಸಿರುಮಂದಿರಗಳಲ್ಲಿ (ಗ್ರೀನ್ ಹೌಸ್) ನಡೆಸಿರುವ ಪ್ರಯೋಗಗಳಿಂದ ಕಂಡುಬಂದಿದೆ. ಹೀಗೆ ಕೊನ್ನಾರಿಗೆಡ್ಡೆಯಲ್ಲಿ ಗೆಡ್ಡೆಗಳೇ ಸಂತಾನೋತ್ಪತ್ತಿಯ ಪ್ರಮುಖ ಸಾಧನಗಳಾಗಿವೆ. ಬೀಜಗಳಿಂದ ಪುನರುತ್ಪತ್ತಿ ಇಲ್ಲವೆಂದಲ್ಲ. ಆದರೆ ಬೀಜಗಳ ಮೂಲಕ ಸಂತಾನೋತ್ಪತ್ತಿಯಾಗುವುದು ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ. ತನ್ನ ಅಬೀಜ ಪುನರುತ್ಪತ್ತೀಯ ಸಾಮರ್ಥ್ಯದಿಂದಾಗಿ ಈ ಗಿಡ ಒಂದು ಪ್ರಮುಖ ಬಗೆಯ ಕಳೆಗಿಡವಾಗಿದೆ. ಅಲ್ಲದೆ ಇದರ ನಿರ್ಮೂಲನೆಯೂ ಕಷ್ಟಕರವಾದ ಸಮಸ್ಯೆಯಾಗಿದೆ. ಪ್ರಪಂಚದ ಹಲವಾರು ದೇಶಗಳಲ್ಲಿ ಇದರ ನಿರ್ಮೂಲನೆಯ ವಿಷಯವಾಗಿ ವಿಶದವಾಗಿ ಪರಿಶೀಲನೆಗಳು ನಡೆದಿವೆ. ಭೂಮಿಯ ಮೇಲಿನ ಇದರ ಕಾಂಡ ಭಾಗಗಳನ್ನು ಪದೇಪದೇ ಕತ್ತರಿಸುವುದರಿಂದ ಗೆಡ್ಡೆಗಳ ಶಕ್ತಿಶೋಷಣವಾಗಿ ಅವು ಸತ್ತುಹೋಗುತ್ತವೆ ಎಂದು ಹೇಳಲಾಗಿದೆ. ಆದರೆ ಈ ಕ್ರಮ ಬಹಳ ಸಮಯ ಹಿಡಿಯುವುದಲ್ಲದೆ ಶ್ರಮದಾಯಕ. ಭೂಮಿಯನ್ನು ಚೆನ್ನಾಗಿ ಮತ್ತು ಆಳವಾಗಿ ಉಳುವುದರಿಂದ ಸುಮಾರು 6" ಆಳದಲ್ಲಿ ಹುದುಗಿರುವ ಗೆಡ್ಡೆಗಳನ್ನು ನಾಶಪಡಿಸಬಹುದು. ಬೇಸಗೆಯಲ್ಲಿ ಭೂಮಿಯನ್ನು ಆಳವಾಗಿ ಉತ್ತು, ಮಣ್ಣನ್ನು ತಿರುವಿಹಾಕಿ ಗೆಡ್ಡೆಗಳನ್ನು ಸುಮಾರು 45 ದಿವಸಗಳ ಕಾಲ ಬಿಸಿಲಿಗೆ ಒಡ್ಡುವುದರಿಂದ ಅವನ್ನು ಸಂಪೂರ್ಣವಾಗಿ ನಾಶಪಡಿಸಬಹುದು. ಹಸಿರುಗೊಬ್ಬರವಾಗಿ ಬಳಕೆಯಾಗುವ ಯಾವುದಾದರೂ ಬೆಳೆಯನ್ನು ದಟ್ಟವಾಗಿ ಬೆಳೆಸಿ ಅದನ್ನು ಭೂಮಿಯೊಳಗೇ ಉತ್ತುಬಿಡುವುದರಿಂದಲೂ ಕೊನ್ನಾರಿಗೆಡ್ಡೆಯನ್ನು ನಿರ್ಮೂಲ ಮಾಡಬಹುದೆಂದು ತಿಳಿದುಬಂದಿದೆ. ಈ ವಿಧಾನಗಳಲ್ಲದೆ ಕ್ಲೋರಪಿಕ್ರಿನ್ ಎಂಬ ರಾಸಾಯನಿಕ ದ್ರಾವಣದ ಹೊಗೆಯನ್ನು ಹಾಕುವುದರಿಂದಲೂ ಇದನ್ನು ನಾಶಪಡಿಸಬಹುದೆಂದು ಗೊತ್ತಾಗಿದೆ. ಆದರೆ ಈ ವಿಧಾನ ಬಹಳ ಖರ್ಚಿನದು. ನೆಲವನ್ನು ಸುಮಾರು 5"–6" ಆಳಕ್ಕೆ ಉತ್ತು, ಮಣ್ಣನ್ನು ತಿರುವಿಹಾಕಿ, ಸೋಡಿಯಮ್ ಕ್ಲೋರೇಟ್ ಮತ್ತು ಕ್ಯಾಲ್ಸಿಯಮ್ ಥಯೋಸಯನೈಟ್ ದ್ರಾವಣಗಳನ್ನು ಪ್ರಯೋಗಿಸುವುದರಿಂದ ಕೊನ್ನಾರಿಗೆಡ್ಡೆಯನ್ನು ಸಂಪೂರ್ಣವಾಗಿ ನಾಶಪಡಿಸಬಹುದೆಂದು ಖಚಿತಪಡಿಸಲಾಗಿದೆ.

ಕೊನ್ನಾರಿಗೆಡ್ಡೆ ಕಳೆಗಿಡವೆಂದು ಹೆಸರಾಗಿದ್ದರೂ ಇದಕ್ಕೆ ಉಪಯುಕ್ತ ಗುಣಗಳೂ ಇವೆ. ಗೆಡ್ಡೆಗಳು ಸುವಾಸನಾಯುಕ್ತವಾಗಿರುವುದರಿಂದ ಇವನ್ನು ಒಣಗಿಸಿ ಔಷಧಿ ಮತ್ತು ಸುಗಂಧ ದ್ರವ್ಯಗಳ ಹಾಗೂ ಅಗರಬತ್ತಿಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಗೆಡ್ಡೆಗಳಿಗೆ ಔಷಧೀಯ ಗುಣವೂ ಉಂಟು. ಉತ್ತೇಜನಕಾರಿ, ಶಕ್ತಿವರ್ಧಕ, ಜಂತುನಾಶಕ, ಪಚನಕಾರಿ, ಸ್ವೇದಕಾರಿ, ಪ್ರತಿಬಂಧಕ, ಮೂತ್ರಸ್ರಾವ ಉತ್ತೇಜಕ, ಶಾಮಕ ಮುಂತಾದುದೆಂದು ಇದು ಹೆಸರುವಾಸಿಯಾಗಿದೆ. ಗೆಡ್ಡೆಗಳಿಂದ ತಯಾರಿಸಲಾಗುವ ಕಷಾಯವನ್ನು ಜ್ವರ, ಅತಿಸಾರ, ಆಮಶಂಕೆ, ವಾಂತಿ, ಅಜೀರ್ಣ ಮುಂತಾದ ವಿಕಾರಗಳಲ್ಲಿ ಉಪಯೋಗಿಸುತ್ತಾರೆ. ಗೆಡ್ಡೆಗಳನ್ನು ಹೆರೆದು, ಹಸಿ ಶುಂಠಿಯೊಂದಿಗೆ ಜಜ್ಜಿ, ಜೇನುತುಪ್ಪದೊಂದಿಗೆ ಮಿಶ್ರಮಾಡಿ ಆಮಶಂಕೆ ಹಾಗೂ ಕರುಳು ವಿಕಾರಗಳಿಗೆ ಶಾಮಕವಾಗಿ ಕೊಡುತ್ತಾರೆ. ಹೊಸದಾಗಿ ತೆಗೆದ ಗೆಡ್ಡೆಗಳನ್ನು ಕುಟ್ಟಿ ಲೇಪಮಾಡಿ ಮೊಲೆಗಳಿಗೆ ಹಚ್ಚುವುದರಿಂದ ಕ್ಷೀರಸ್ರಾವ ಸುಲಭವಾಗುವುದೆಂದು ಹೇಳಲಾಗಿದೆ. ಚೇಳುಕಡಿತದ ಉರಿಯನ್ನಿಳಿಸಲೂ ಕೆಲವು ಬಗೆಯ ವ್ರಣಗಳ ನಿವಾರಣೆಗೂ ಇದರ ಲೇಪವನ್ನು ಹಚ್ಚುವುದುಂಟು. ಕೊನ್ನಾರಿಗೆಡ್ಡೆಯನ್ನು ರಕ್ತಚಂದನ, ಲಾವಂಚ, ಕಲ್ಲಸಬತ್ತಸೀಗೆ, ಬಾಲರಕ್ಕಸಿಗಿಡ ಮತ್ತು ಒಣಶುಂಠಿ ಹಾಗೂ ನೀರಿನೊಂದಿಗೆ ಸೇರಿಸಿ ಕುದಿಸಿ ತಯಾರಿಸಲಾಗುವ ಕಷಾಯವನ್ನು ಜ್ವರದ ತಾಪ ಇಳಿಸುವುದಕ್ಕೂ ಬಾಯಾರಿಕೆಯನ್ನು ನಿವಾರಿಸುವುದಕ್ಕೂ ಬಳಸುತ್ತಾರೆ. (ಎಸ್.ಡಿ.ಕೆ.)

**ಕೊಪರ್ನಿಕಸ್, ನಿಕೊಲಾಸ್ :** 1473–1543. ಪೋಲೆಂಡಿನ ಖಗೋಳ ವಿಜ್ಞಾನಿ. ಪೋಲೆಂಡಿನ ಥಾರ್ನ್ ಪಟ್ಟಣದಲ್ಲಿ 19 ಫೆಬ್ರವರಿ 1473 ರಂದು ಜನಿಸಿದ. ಈತನ ಪೂರ್ವಜರು ಪೋಲೆಂಡಿನಲ್ಲಿ ನೆಲಸಿದ್ದ ಜರ್ಮನರು. ಎಳವೆಯಲ್ಲೇ ಕೊಪರ್ನಿಕಸ್ ತನ್ನ ತಂದೆಯನ್ನು ಕಳೆದುಕೊಂಡು ಬಿಷಪ್ ಆಗಿದ್ದ ಚಿಕ್ಕಪ್ಪನ ಆಸರೆಯಲ್ಲಿ ಬೆಳೆದ. ಕ್ರಾಕೋ ನಗರದಲ್ಲಿ ಗಣಿತವನ್ನು ವ್ಯಾಸಂಗ ಮಾಡಿ, ಮುಂದೆ ಇಟಲಿಯ ಬೊಲೋನಾದಲ್ಲಿ ಕ್ರಿಶ್ಚಿಯನ್ ಚರ್ಚಿನ ಕಾನೂನನ್ನೂ ಖಗೋಳವಿಜ್ಞಾನವನ್ನೂ ಬಳಿಕ ಪಾದುವಾದಲ್ಲಿ ವೈದ್ಯವಿಜ್ಞಾನವನ್ನೂ ವ್ಯಾಸಂಗಮಾಡಿದ. ರೋಮ್ ನಗರದಲ್ಲಿ ಗಣಿತ ಮತ್ತು ಖಗೋಳ ವಿಜ್ಞಾನಗಳನ್ನು ಕೆಲವು ಕಾಲ ಬೋಧಿಸಿ ಪ್ರಷ್ಯಾದ ಫ್ರೌವೆನ್‌ಬರ್ಗ್‌ಗೆ ವಾಪಸಾಗಿ ಅಲ್ಲಿಯ ಕೆಥೀಡ್ರಲಿನಲ್ಲಿ ಪಾದ್ರಿಯಾಗಿ ನೆಲಸಿದ. ಆಗ ಪ್ರಚಾರದಲ್ಲಿದ್ದ ಭೂಕೇಂದ್ರವಾದವನ್ನು ಈತ ನಿರಾಕರಿಸಿ ಎಲ್ಲ ಗ್ರಹಗಳೂ ಸೂರ್ಯನ ಸುತ್ತ ಪರಿಭ್ರಮಿಸುತ್ತವೆಂದೂ ಅವುಗಳ ಪೈಕಿ ಭೂಮಿ ಒಂದೆಂದೂ ಸಾರಿದ. ಈತ ಸೂರ್ಯಕೇಂದ್ರ ವಾದವನ್ನು ಪ್ರತಿಪಾದಿಸಿದ ಖಗೋಳಜ್ಞನೆಂದು ಖ್ಯಾತಿ ಪಡೆದಿದ್ದಾನೆ. ಜೊತೆಗೆ ಭೂಮಿ ತನ್ನ ಅಕ್ಷದ ಸುತ್ತ ಆವರ್ತಿಸುತ್ತದೆಯೆಂದು ನಕ್ಷತ್ರಗಳು ನಮ್ಮಿಂದ ಅಗಾಧ ದೂರಗಳಲ್ಲಿವೆಯೆಂದೂ ಘೋಷಿಸಿದ. ವಿಷುವದ್ಬಿಂದುಗಳ ಅಪ್ರದಕ್ಷಿಣೆ ಮತ್ತು ತತ್ಪರಿಣಾಮವಾಗಿ ಋತುಗಳು ಹೇಗೆ ಸಂಭವಿಸುವುವೆಂಬುದನ್ನು ಡಿ ಅರ್ಬಿಂಯಂ ಸೋಲೆಸ್ಟಿಯಂ ರಿವೊಲ್ಯೂಷನಿಬಸ್ ಎಂಬ ಗ್ರಂಥದಲ್ಲಿ ವಿವರಿಸಿದ್ದಾನೆ. ಇಷ್ಟಾದರೂ ಗ್ರಹಕಕ್ಷೆಗಳೆಲ್ಲ ಸಂಪೂರ್ಣವೃತ್ತಗಳೆಂದು ನಂಬಿ ಈತ ವೃತ್ತ ಮತ್ತು ಅಧಿವೃತ್ತಗಳ ವಾದವನ್ನೂ ಸಮರ್ಥಿಸಿದ್ದಾನೆ. ಈತನ ಗ್ರಂಥ 1530ರ ಹೊತ್ತಿಗೆ ಸಿದ್ಧವಾಗಿದ್ದರೂ 1540ಕ್ಕೆ ಮುಂಚೆ ಅದರ ಪ್ರಕಟಣೆಗೆ ಇವನು ಒಪ್ಪಲಿಲ್ಲ. ಕಡೆಯಲ್ಲಿ ಅದು ಪ್ರಕಟವಾದದ್ದು 1543ರಲ್ಲಿ ನಿಕೊಲಾಸ್ ಮರಣಶಯ್ಯೆಯಲ್ಲಿದ್ದಾಗ (ಮರಣ: 1543). ಕೆಥೊಲಿಕ್ ಚರ್ಚ್ ಕೂಡಲೇ ಗ್ರಂಥಕ್ಕೆ ಬಹಿಷ್ಕಾರ ಮುದ್ರೆ ಹಾಕಿತು.



(ಆರ್.ಎಲ್.ಎನ್.)

**ಕೊಪರ್ನಿಕಸ್ ವಾದ :** ಸೂರ್ಯ, ಗ್ರಹಗಳ ಸಾಪೇಕ್ಷ ಸ್ಥಾನಗಳು. ಇವುಗಳ ಚಲನೆ ಮುಂತಾದವನ್ನು ಕುರಿತು ನಿಕೋಲಾಸ್ ಕೊಪರ್ನಿಕಸ್ (1473–1543) ಮಂಡಿಸಿದ ವಾದ (ಕೊಪರ್ನಿಕಸ್ ಹೈಪಾತಿಸಿಸ್). ಪರ್ಯಾಯ ನಾಮ ಸೂರ್ಯಕೇಂದ್ರವಾದ (ಹೀಲಿಯೊಸೆಂಟ್ರಿಕ್ ಹೈಪಾತಿಸಿಸ್). ಕೊಪರ್ನಿಕಸ್ ತನಕ ಪ್ರಚಲಿತವಿದ್ದ ಭೂಕೇಂದ್ರವಾದವನ್ನು (ಜಿಯೋಸೆಂಟ್ರಿಕ್ ಹೈಪಾತಿಸಿಸ್) ಇದು ವಿಸ್ಥಾಪಿಸಿ ಖಗೋಳವಿಜ್ಞಾನದ ಸರ್ವಾಂಗೀಣ ಅಭಿವೃದ್ಧಿಗೆ ಬುನಾದಿ ಹಾಕಿತು.

ಟಾಲೆಮಿ (ಸು. 90–168 ಅವಧಿಯಲ್ಲಿ ಬಾಳಿದ್ದನೆಂದು ನಂಬಿಕೆ.) ಎಂಬಾತನ ಹೆಸರಿನಲ್ಲಿದ್ದ ಭೂವಾದದಕೇಂದ್ರ ಪ್ರಕಾರ ವಿಶ್ವದ ಕೇಂದ್ರ ಭೂಮಿ; ಇದು ನಿಶ್ಚಲವಾಗಿದೆ.; ಇದರ ಸುತ್ತಲೂ ಸೂರ್ಯನನ್ನು ಒಳಗೊಂಡಂತೆ ಎಲ್ಲ ಆಕಾಶಕಾಯಗಳೂ ಸುತ್ತುತ್ತಿವೆ. ಇದು ಮೇಲುನೋಟಕ್ಕೆ ಇಂದಿಗೂ ಭಾಸವಾಗುವಂಥ ವಿದ್ಯಮಾನದ ಕ್ರಮಬದ್ಧ ನಿರೂಪಣೆ ಮಾತ್ರ. ಆದರೆ ಗ್ರಹಗಳ ವಕ್ರಗತಿಗಳನ್ನು ವಿವರಿಸುವಲ್ಲಿ ಈ ಸರಳ ವಿವರಣೆ ಕುಂಟಿತು. ಇದಕ್ಕಾಗಿ ಟಾಲೆಮಿ ವಾದದಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿ ಅದನ್ನು ಪರಿಷ್ಕರಿಸಲಾಯಿತು. ಆಕಾಶಕಾಯಗಳ ಚಲನೆ ಕುರಿತ ಯಾವುದೇ ವಾದವೂ ಆ ವಿದ್ಯಮಾನವನ್ನು ಸಮರ್ಪಕವಾಗಿ ವಿವರಿಸಬೇಕು ಮಾತ್ರವಲ್ಲ. ಅದೇ ವಾದದ ಅನ್ವಯದಿಂದ ಕಾಯಗಳ ಭವಿಷ್ಯಸ್ಥಾನಗಳನ್ನು ಮುನ್ನುಡಿಯಲು ಸಹ ಸಮರ್ಥವಾಗಬೇಕು. ಶತಮಾನಗಳು ಉರುಳಿದಂತೆ, ಆಕಾಶಕಾಯಗಳನ್ನು ಕುರಿತ ಸಂಗೃಹೀತ ಅಂಶಗಳು ಅಗಾಧವಾಗಿ ಬೆಳೆದಂತೆ, ಟಾಲೆಮಿ ವಾದ ಆಕಾಶಕಾಯಗಳ ಭವಿಷ್ಯವನ್ನು ಮುನ್ನುಡಿಯುವುದರಲ್ಲಿ ಬಹಳವಾಗಿ ಸೋಲುತ್ತಿತ್ತು. ಅಲ್ಲದೇ ಗಣನೆಗಳಲ್ಲಿ ಎದುರಾಗುತ್ತಿದ್ದ ಸಮಸ್ಯೆಗಳನ್ನು ಪರಿಹರಿಸುವುದು ಬಲುತೊಡಕಿನ ಕೆಲಸವಾಗುತ್ತಿತ್ತು. 15–16ನೆಯ ಶತಮಾನಗಳ ಸಂಧಿಕಾಲದಲ್ಲಿ ಖಗೋಳವಿಜ್ಞಾನ ಒಂದು ಪರ್ವಬಿಂದುವನ್ನು ಮುಟ್ಟಿತೆನ್ನಬಹುದು. ಆಗ ಕೊಪರ್ನಿಕಸ್ ವಾದ ಗಣನೆಗಳನ್ನು ಬಲುಮಟ್ಟಿಗೆ ಸುಲಭಗೊಳಿಸಿತು.

ಕೊಪರ್ನಿಕಸ್ ವಾದದ ಪ್ರಕಾರ ಸೂರ್ಯ ಸ್ಥಿರವಾಗಿದೆ. ಕೇಂದ್ರದಲ್ಲಿ ಸೂರ್ಯನಿರುವಂತೆ ಅದರ ಸುತ್ತಲೂ ಬೇರೆ ಬೇರೆ ವರ್ತುಳೀಯ ಕಕ್ಷೆಗಳಲ್ಲಿ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ ಎಂಬ 6 ಗ್ರಹಗಳು ಇದೇ ಕ್ರಮದಲ್ಲಿ ಪರಿಭ್ರಮಿಸುತ್ತಿವೆ; ಚಂದ್ರ ಭೂಮಿಯ ಸುತ್ತಲೂ ಪರಿಭ್ರಮಿಸುತ್ತಿರುವುದರಿಂದ ಭೂಮಿ–ಚಂದ್ರ ವ್ಯವಸ್ಥೆ ಒಟ್ಟಾಗಿ ಸೂರ್ಯನನ್ನು ಪರಿಭ್ರಮಿಸುತ್ತಿದೆ. ಇನ್ನು ಅಸೀಮ ದೂರಗಳಲ್ಲಿರುವ ಸ್ಥಿರನಕ್ಷತ್ರಗಳನ್ನು ಒಳಗೊಂಡಿರುವ ಆಕಾಶದ ದೈನಂದಿನ ಆವರ್ತನೆ ಮುಂತಾದವು ಭೂಮ್ಯಾವರ್ತನೆ ಹಾಗೂ ಪರಿಭ್ರಮಣೆಗಳ ಪರಿಣಾಮಗಳೆರಡು ಕೊಪರ್ನಿಕಸ್ ವಾದದಿಂದ ಸ್ಫುಟವಾಯಿತು.

ಕೊಪರ್ನಿಕಸ್ ವಾದ ಅಂದು ತಿಳಿಸಿದ್ದ ದತ್ತಾಂಶಗಳನ್ನು ಪೂರ್ಣವಾಗಿ ಸಮನ್ವಯಗೊಳಿಸಿ, ಗಗನ ವಿದ್ಯಮಾನಗಳಿಗೆ ಒಂದು ಸರಳ ಸಂಗತ ಅರ್ಥನೀಡಿತೆಂದೇನೂ ಭಾವಿಸಬೇಕಾಗಿಲ್ಲ. ಟಾಲೆಮಿ ವಿಧಾನದಲ್ಲಿ ತಲೆದೋರುತ್ತಿದ್ದ ಅಸಂಖ್ಯಾತ ವಿರೋಧಾಭಾಸಗಳನ್ನು ಅದು ಸಮರ್ಥವಾಗಿ ಎದುರಿಸಿ ಸರಳ ಪರಿಹಾರಗಳನ್ನು ನೀಡಿತು, ನಿಜ ಆದರೆ ಹೀಗೆ ಮಾಡುವಾಗ ಅಧಿಚಕ್ರಗಳ (ನೋಡಿ) ತೊಡಕಿನ ಪರಿಕಲ್ಪನೆಯನ್ನು ಉಳಿಸಿಕೊಳ್ಳಬೇಕಾದದ್ದು ಅನಿವಾರ್ಯವೆನ್ನಿಸಿತು. ವಾಸ್ತವಿಕವಾಗಿ ಸೂರ್ಯನ ಸ್ಥಾನ ವೃತ್ತಕೇಂದ್ರವಲ್ಲ, ಗ್ರಹಕಕ್ಷೆಗಳು ವೃತ್ತಪರಿಧಿಗಳಲ್ಲ. ಈ ಮುಖ್ಯಾಂಶಗಳು ಅಂದು ತಿಳಿದಿರಲಿಲ್ಲ. ಆದ್ದರಿಂದ ಕೊಪರ್ನಿಕಸ್ ವಾದ ಟಾಲೆಮಿ ವಾದಕ್ಕಿಂತ ಅದೆಷ್ಟೇ ಸತ್ಯಸಮೀಪವಾಗಿದ್ದರೂ ಪ್ರಾಯೋಗಿಕವಾಗಿ ಸಂಪೂರ್ಣ ಪರಿಷ್ಕೃತವಾದದ್ದು ಎನಿಸಲಿಲ್ಲ.

ಐತಿಹಾಸಿಕವಾಗಿ ಕೊಪರ್ನಿಕಸ್ ವಾದಕ್ಕೆ ಅಧಿಕ ಮಹತ್ವವಿದೆ. ಯುಗಯುಗಾಂತರಗಳಿಂದ ವಿಜ್ಞಾನಿಗಳೂ ಧಾರ್ಮಿಕ ಮುಖಂಡರೂ ನಂಬಿ ಬಳಸಿಕೊಂಡು ಬಂದಿದ್ದ ಭೂಕೇಂದ್ರವಾದವನ್ನು ಪದಚ್ಯುತಿಮಾಡುವಲ್ಲಿ ಇದು ಯಶಸ್ವಿಯಾದದ್ದು ಖಗೋಳವಿಜ್ಞಾನದ ಮುನ್ನಡೆಯಲ್ಲಿ ಒಂದು ಪರ್ವಬಿಂದು. ವಿಕೃತರೂಪಗೊಂಡಿದ್ದ ಖಗೋಳವಿಜ್ಞಾನಕ್ಕೆ ಈ ಸ್ಪಷ್ಟ ರೂಪ ದೊರೆತೊಡನೆಯೇ ಕೊಪರ್ನಿಕಸ್ ವಾದದಲ್ಲಿ ತಲೆದೋರುತ್ತಿದ್ದ ವಿರೋಧಾಭಾಸಗಳ ಪರಿಹಾರವನ್ನು ಅರಸುವ ಸರಿಯಾದ ದಿಶೆಯಲ್ಲಿ ಮುಂದಿನ ವಿಜ್ಞಾನಿಗಳ ಲಕ್ಷ್ಯ ಹರಿಯಿತು. ಇಂಥ ಪ್ರಯತ್ನಗಳ ಸಾಫಲ್ಯ ಸಿದ್ಧಿಸಿದ್ದು ಯೋಹಾನ್ ಕೆಪ್ಲರ್ (1571–1630) ಎಂಬ ಖಗೋಳ ವಿಜ್ಞಾನಿಯ ಉದಯದಲ್ಲಿ. ಆದ್ದರಿಂದ ಖಗೋಳವಿಜ್ಞಾನವನ್ನು ಭೌತವಿಜ್ಞಾನದ ಭವ್ಯ ಅಡಿಪಾಯದ ಮೇಲೆ ನೆಲೆಗೊಳಿಸುವ ದಿಶೆಯಲ್ಲಿ ಕೊಪರ್ನಿಕಸ್ ವಾದದ ಕೊಡುಗೆ ಮಹತ್ತರವಾದದ್ದು. *

**ಕೊಪ್ಪಂ :** ದಕ್ಷಿಣ ಭಾರತದ ಮಧ್ಯಯುಗದ ಇತಿಹಾಸದಲ್ಲಿ ಪ್ರಸಿದ್ಧವಾದ ಕಲ್ಯಾಣ ಚಾಳುಕ್ಯರ ದೊರೆಯಾದ ಒಂದನೆಯ ಸೋಮೇಶ್ವರನಿಗೂ ರಾಜಾಧಿರಾಜ ಚೋಳನಿಗೂ 1053–54ರಲ್ಲಿ ಯುದ್ಧ ನಡೆದ ಸ್ಥಳ. ಈಗಿನ ರಾಯಚೂರು ಜಿಲ್ಲೆಯಲ್ಲಿದೆ. ಇತಿಹಾಸದಲ್ಲಿ ಕೊಪ್ಪಂ ಎಂದು ಹೆಸರಾಗಿದೆ. ತನ್ನ ತಮ್ಮ 2ನೆಯ ರಾಜೇಂದ್ರನೊಡಗೂಡಿ ಬಂದಿದ್ದ ರಾಜಾಧಿರಾಜ ಚೋಳ ಇಲ್ಲಿ ಚಾಳುಕ್ಯ ಸೈನ್ಯವನ್ನು ಎದುರಿಸಿದ. ಗಜಾರೂಢನಾಗಿದ್ದ ಚೋಳಚಕ್ರವರ್ತಿಯನ್ನು ಚಾಳುಕ್ಯಮಾಂಡಲಿಕ ಮಾರರಸ ಬಾಣದಿಂದ ಹೊಡೆದು ಕೊಂದ. ಆ ತನಕ ಹಿಂಬದಿಯ ಮೀಸಲು ಪಡೆಯೊಂದಿಗಿದ್ದ ರಾಜೇಂದ್ರ ಆಗ ಸೈನ್ಯದ ನಾಯಕತ್ವ ವಹಿಸಿ ಹೋರಾಡಿದ. ಚಾಳುಕ್ಯ ರಾಜಕುಮಾರ ಜಯಸಿಂಹನೂ ಕೆಲವು ದಂಡನಾಯಕರೂ ಪ್ರಾಣತೆತ್ತರು. ಚಾಳುಕ್ಯಸೈನ್ಯ ಯುದ್ಧರಂಗದಿಂದ ಹಿಮ್ಮೆಟ್ಟಿ ಕೊಲ್ಲಾಪುರದ ಕಡೆಗೆ ಹೊರಟಾಗ ಅದರ ಬೆನ್ನಟ್ಟಿ ಹೋದ ಚೋಳಸೈನ್ಯ ಕೊಲ್ಲಾಪುರದ ಬಳಿಯನ್ನು ತಲಪಿತು. ರಾಜೇಂದ್ರ ಅಲ್ಲಿ ತನ್ನ ಜಯಸ್ತಂಭ ನೆಡಿಸಿ ಹಿಂದಿರುಗಿದನೆಂದು ಚೋಳರ ಶಾಸನಗಳು ತಿಳಿಸುತ್ತವೆ. (ಎಚ್.ಜಿ.ಆರ್.)

**ಕೊಪ್ಪಳ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ. ರಾಜ್ಯದ ಈಶಾನ್ಯ ಭಾಗದಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶದಲ್ಲಿದೆ. ಹಿಂದಿನ ರಾಯಚೂರು ಜಿಲ್ಲೆಯನ್ನು ವಿಭಜಿಸಿ

ಕೊರಟಗಿರಿ ಬೆಟ್ಟ, ಕೊಪ್ಪಳ

1997ರಲ್ಲಿ ಹೊಸ ಜಿಲ್ಲೆ ಕೊಪ್ಪಳವನ್ನು ರಚಿಸಲಾಯಿತು. ಇದರಲ್ಲಿ ನಾಲ್ಕು ತಾಲ್ಲೂಕುಗಳಿವೆ-ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗ. 20 ಹೋಬಳಿಗಳು, 618 ಗ್ರಾಮಗಳಿವೆ. ಈ ಜಿಲ್ಲೆಯನ್ನು ಉತ್ತರದಲ್ಲಿ ಬಾಗಲಕೋಟೆ ಮತ್ತು ರಾಯಚೂರು, ಪೂರ್ವದಲ್ಲಿ ರಾಯಚೂರು ಮತ್ತು ಬಳ್ಳಾರಿ, ದಕ್ಷಿಣದಲ್ಲಿ ಬಳ್ಳಾರಿ ಹಾಗೂ ಪಶ್ಚಿಮದಲ್ಲಿ ಗದಗ ಜಿಲ್ಲೆಗಳು ಸುತ್ತುವರಿದಿವೆ. ವಿಸ್ತೀರ್ಣ 8,458ಚ.ಕಿಮೀ. ಜನಸಂಖ್ಯೆ 11,93,496.

**ಪರಿಸರ:** ಈ ಜಿಲ್ಲೆ ದಖನ್ನಿನ ಕಣಿವೆ ಭಾಗದಲ್ಲಿದ್ದು ಸಮುದ್ರಮಟ್ಟಕ್ಕೆ ಹೆಚ್ಚು ಎತ್ತರವಲ್ಲದ ಭೂಪ್ರದೇಶದಿಂದ ಕೂಡಿದೆ. ಇದರಿಂದಾಗಿ ಇಲ್ಲಿ ಯಾವ ಪ್ರಮುಖ ಬೆಟ್ಟಸಾಲುಗಳೂ ಕಂಡುಬರುವುದಿಲ್ಲ. ಅಲ್ಲಲ್ಲಿ ಪಶ್ಚಿಮ ಅಥವಾ ಪೂರ್ವ ಘಟ್ಟಸಾಲಿಗೆ ಸೇರದ ಹೆಚ್ಚು ಎತ್ತರವಲ್ಲದ ಗುಡ್ಡಗಳಿವೆ. ಕುಷ್ಟಗಿ ತಾಲ್ಲೂಕಿನಲ್ಲಿ ಕಂಡುಬರುವ ಬಾದಾಮಿ ಬೆಟ್ಟಗಳ ಶ್ರೇಣಿಗೆ ಸೇರಿದ ಸಾಲೊಂದು ಗಂಗಾವತಿ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ. ಕುಷ್ಟಗಿಯಿಂದ 32ಕಿಮೀ ದೂರದಲ್ಲಿರುವ ಜಗದ ಗುಡ್ಡ (736ಮೀ), ಗಂಗಾವತಿ ತಾಲ್ಲೂಕಿನ ಎಮ್ಮೆಗುಡ್ಡ (821ಮೀ), ಕನಕಗಿರಿಗೆ ಈಶಾನ್ಯದಲ್ಲಿರುವ ನಿಶಾನಿಗುಡ್ಡ (580ಮೀ), ಮಾರಿಗುಡ್ಡ (597ಮೀ), ಇವು ಈ ಜಿಲ್ಲೆಯ ಎತ್ತರದ ಬೆಟ್ಟಗಳು. ಈ ಜಿಲ್ಲೆಯಲ್ಲಿ ಮಳೆ ಕಡಿಮೆ. ಹಾಗಾಗಿ ಸಸ್ಯ ಸಂಪತ್ತೂ ಕಡಿಮೆ. ಕಡಿದಾದ ಮತ್ತು ವಿವಿಧ ಆಕಾರದ ಬಂಡೆಗಳಿಂದ ಆವೃತವಾದ ಪರಿಸರವನ್ನು, ಬಯಲು ಭೂದೃಶ್ಯಗಳನ್ನು ಕಾಣುತ್ತೇವೆ.

ಇಲ್ಲಿಯ ಬೆಟ್ಟಗಳು ಪ್ರಾಕೃತಿಕವಾಗಿ ರೂಪಾಂತರ ಹೊಂದಿದ ಪ್ರಾಚೀನ ಶಿಲಾಯುಗಕ್ಕೆ ಸೇರಿದವು. ಅಲ್ಲಲ್ಲಿ ಗ್ರಾನೈಟ್ ಕಲ್ಲಿನ ಬೆಟ್ಟಗಳು ಕಾಣುತ್ತವೆ; ಉಳಿದಂತೆ ಸಮತಟ್ಟಾದ ಬಯಲು ಪ್ರದೇಶ. ಈ ಶಿಲಾ ಪದರದಲ್ಲಿ ನೈಸ್ ಶಿಲೆಗಳು, ಪದರಗಲ್ಲು ಶಿಲೆಗಳು, ಬೆಣಚುಕಲ್ಲುಗಳು ಇವೆ. ಮುಖ್ಯವಾಗಿ ಕೇಂಬ್ರಿಯನ್ ಯುಗಪೂರ್ವದ



ಕಬ್ಬರಗಿ ಜಲಪಾತ, ಕೊಪ್ಪಳ

ರೂಪ ಪರಿವರ್ತನಾ ಪದರಗಲ್ಲುಗಳು ಮತ್ತು ಗ್ರಾನೈಟ್ ಬೆಣಚುಗಲ್ಲು ಬಹುಪಾಲು ಶಿಲೆಗಳು ಧಾರವಾಡ ಶಿಲಾವರ್ಗಕ್ಕೆ ಸೇರಿದವು. ಪರ್ಯಾಯ ದ್ವೀಪ ಸಂಬಂಧವಾದ ಡೈಕ್ ಮಾದರಿಯ ಶಿಲೆಗಳೂ ಕಂಡುಬರುತ್ತವೆ. ಕಲಾದಗಿ ಶ್ರೇಣಿಗೆ ಸೇರಿದ ಕೆಲವು ಶಿಲೆಗಳು ಕುಷ್ಟಗಿ ಸಮೀಪ ಇವೆ. ಇಲ್ಲಿ ಪೆಂಟೆ ಶಿಲೆ ಮತ್ತು ಪುರಳು ಶಿಲೆಯ ಪದರಗಳನ್ನು ಕಾಣಬಹುದು. ಕಣಶಿಲೆಯ ಗುಡ್ಡಗಳು, ಟ್ರ್ಯಾಪ್ ಶಿಲೆಯ ಉಬ್ಬುಗಳು ಗಂಗಾವತಿ ತಾಲ್ಲೂಕಿನಲ್ಲಿವೆ.

ಜಿಲ್ಲೆಯಲ್ಲಿ ಕಬ್ಬಿಣ, ತಾಮ್ರ, ಸೀಸದ ಅದಿರು, ಅಭ್ರಕ, ಸ್ಫಟಿಕ ಶಿಲೆ ಮುಂತಾದ ಖನಿಜಗಳಿವೆ. ಸಮೀಪದ ರಾಯಚೂರು ಜಿಲ್ಲೆಯಲ್ಲಿ ಚಿನ್ನದ ನಿಕ್ಷೇಪಗಳಿವೆ. ಜಂಬುಮಣ್ಣು ಮತ್ತು ಕಾವಿಮಣ್ಣಿನ ಭೂಮಿ ಉಪಯುಕ್ತವಾಗಿದೆ. ಕೊಪ್ಪಳ ತಾಲ್ಲೂಕಿನ ಬಹುಭಾಗ ಕಪ್ಪುಮೆಕ್ಕಲು ಮಣ್ಣಿನಿಂದ ಕೂಡಿದ್ದು ಫಲವತ್ತಾಗಿದೆ. ಕಪ್ಪುಮಿಶ್ರಿತ ಕೆಂಪುಮಣ್ಣು ಅಲ್ಲಲ್ಲಿ ಕಂಡುಬರುತ್ತದೆ. ಮರಳು ಮಿಶ್ರಿತ ಕಪ್ಪುಮಣ್ಣು ಅನೇಕ ಕಡೆಗಳಲ್ಲಿ ಹರಡಿದೆ.

ಈ ಜಿಲ್ಲೆಯಲ್ಲಿ ಮಳೆ ಕಡಿಮೆ ಬಿದ್ದರೂ ತುಂಗಭದ್ರಾ ಮತ್ತು ಕೃಷ್ಣಾ ನದಿಗಳು ಎರಡೂ ಪಾರ್ಶ್ವಗಳಲ್ಲಿ ಹರಿಯುವುದರಿಂದ ಜಲ ಸಂಪನ್ಮೂಲ ಉತ್ತಮವಾಗಿದೆ. ತುಂಗಭದ್ರಾ ನದಿ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಸರಹದ್ದಾಗಿ ಕ್ರಮಿಸುತ್ತದೆ. ಜಿಲ್ಲೆಯ ಸರಾಸರಿ ಮಳೆ 595ಮಿಮೀ ಜಿಲ್ಲೆಯಲ್ಲಿ ಹುಟ್ಟಿ ಹರಿಯುವ ತೊರೆಗಳಲ್ಲಿ ನೀರಿನ ಪ್ರಮಾಣ ಕಡಿಮೆ. ಯಲಬುರ್ಗ ತಾಲ್ಲೂಕಿನಲ್ಲಿ ಹುಟ್ಟುವ ಒಂದು ತೊರೆ ಕೊಪ್ಪಳದ ಸಮೀಪ ಹರಿದು ತುಂಗಭದ್ರಾ ಜಲಾಶಯದ ಹಿನ್ನೀರನ್ನು ಸೇರುತ್ತದೆ. ಕುಷ್ಟಗಿ ತಾಲ್ಲೂಕಿನ ಉಪ್ಪಲದೊಡ್ಡಿ ಬಳಿ ಹುಟ್ಟುವ ಕನಕಗಿರಿ ನಾಲಾ ಗಂಗಾವತಿ ತಾಲ್ಲೂಕನ್ನು ಪ್ರವೇಶಿಸಿ ತುಂಗಭದ್ರಾ ನದಿಯನ್ನು ಸೇರುತ್ತದೆ. ತಾವರಗೆರೆ ಬಳಿ ಹುಟ್ಟುವ ಸಿದ್ಧಾಪುರ ನಾಲೆ ಕುಂಟೋಜಿ ಬಳಿ ತುಂಗಭದ್ರಾ ನದಿಯನ್ನು ಸೇರುತ್ತದೆ. ಇನ್ನು ಅನೇಕ ಚಿಕ್ಕ ಪುಟ್ಟ ತೊರೆಗಳು ಆಗ್ನೇಯಾಭಿಮುಖವಾಗಿ ಹರಿದು ತುಂಗಭದ್ರಾ ನದಿ ಸೇರುತ್ತವೆ. ತೊರೆ ಮತ್ತು ನಾಲಾಗಳ ಮೂಲಕ ಮಳೆಗಾಲದಲ್ಲಿ ನೀರು ಹರಿದರೂ ಬೇಸಗೆಯಲ್ಲಿ ಹೆಚ್ಚಿನವು ಬತ್ತಿಹೋಗುತ್ತವೆ.

ಜಿಲ್ಲೆಯ ಅತಿ ಉಷ್ಣ ಹವಾಮಾನ ಹಾಗೂ ವಾತಾವರಣದಲ್ಲಿನ ಕಡಿಮೆ ತೇವಾಂಶ ಸಸ್ಯಗಳ ಬೆಳವಣಿಗೆಗೆ ಸಹಾಯಕವಾಗಿಲ್ಲ. ಅಲ್ಲಲ್ಲಿ ಗುಡ್ಡಗಳ ಇಳಿಜಾರಿನಲ್ಲಿ ಪೊದೆ ಕಾಡುಗಳು ಕಂಡುಬರುತ್ತವೆ. ಕುಷ್ಟಗಿ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶ ಇತರೆಡೆಗಿಂತ ಹೆಚ್ಚಿದೆ. ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತೀರ್ಣ 29451 ಹೆಕ್ಟೇರು. ಇಲ್ಲಿಯ ಕಾಡುಗಳಲ್ಲಿ ಜಾಲ, ಹುಣಿಸೆ, ಹೊಂಗೆ, ಹಾಲೆ, ಮುತ್ತುಗ, ದಿಂಡಿಗ, ಚುಜ್ಜಲು, ಹುರಗಲು, ಹೊನ್ನೆ, ಕಮ್ಮಾರ, ನಲ್ಲಮಡ್ಡಿ, ಬಿಲ್ವ, ಬಾಗೆ, ಕಕ್ಕೆ, ಸೀತಾಫಲ ಮುಂತಾದ ಗಿಡಮರಗಳಿವೆ. ಅಲ್ಲಲ್ಲಿ ಮುಳ್ಳುಗಿಡಗಳ ಕುರುಚಲು ಕಾಡುಗಳಿವೆ. ಭೂಸವಕಳಿಯನ್ನು ತಡೆಯಲು ನೆಡುತೋಪುಗಳನ್ನು ಬೆಳೆಸಲಾಗಿದೆ.


ಕೊಪ್ಪಳ ಜಿಲ್ಲೆ
ಹನುಮಸಾಗರ
ಕ್ಯಾಗುಪ್ಪೆ
ದೋಟಿಹಾಳ
ಗುಡದೂರು
ಮಂಗಳೂರು
ಕುಷ್ಟಗಿ
ತಾವರಗೇರೆ
ಯಲಬುರ್ಗ
ಉಪ್ಪಲದೊಡ್ಡಿ
ಹುಲಿಗಿ
ಕನಕಗಿರಿ
ಸಿದ್ದಾಪುರ
ಮೂಗನೂರು
ಕುಕನೂರು
ಬೆಂಕಲ್
ಇರ್ಕಲ್‌ಗಡ
ಇಟಗಿ
ಬನ್ನಿಕೊಪ್ಪ
ಕೊಪ್ಪಳ
ಹಿಟ್ನಾಳ
ಮುನಿರಾಬಾದ್
ಹೊಸೂರು
ಆನೆಗೊಂದಿ
ಗಂಗಾವತಿ
ತುಂಗಭದ್ರಾ ನದಿ
ಅಳವಂಡಿ
ತುಂಗಭದ್ರ ಜಲಾಶಯ
0 10 20
ಕಿಲೋಮೀಟರುಗಳು
ಕೊಪ್ಪಳ ಜಿಲ್ಲೆ

ಕಾಡುಗಳ ಕೊರತೆಯಿಂದ ಪ್ರಾಣಿಪಕ್ಷಿಗಳ ಸಂಖ್ಯೆಯೂ ಕಡಿಮೆ. ಚಿರತೆ, ತೋಳ, ಕತ್ತೆಕಿರುಬ, ನರಿ, ಕಪಿ ಮತ್ತು ಜಿಂಕೆಗಳು ಅಲ್ಲಲ್ಲಿ ಕಂಡುಬರುತ್ತವೆ. ಹಾವುಗಳ ಸಂತತಿ ಹೆಚ್ಚು. ಚೇಳು, ಹಲ್ಲಿ, ನೀರಹಾವು, ಮಣ್ಣುಮುಕ್ಕ, ನಾಗರಹಾವು ಎಲ್ಲೆಡೆಯೂ ಇವೆ. ಬಾತು, ನೀರಕೋಳಿ, ಕಾಗೆ, ಗೀಜಗ ಮುಖ್ಯವಾದ ಪಕ್ಷಿಗಳು. ಹಸು, ಎಮ್ಮೆ, ಕುರಿ, ಮೇಕೆ, ಕುದುರೆ ಮತ್ತು ಕೋಳಿ ಮುಖ್ಯ ಸಾಕುಪ್ರಾಣಿಗಳು.



ಜಿನಶಿಲ್ಪಗಳು, ಚಂದ್ರಾಮ

**ಹವಾಗುಣ:** ವರ್ಷದ ಬಹುಭಾಗ ಉಷ್ಣಾಂಶದಿಂದ ಕೂಡಿರುತ್ತದೆ.ಮಳೆ ಕೆಲವು ವರ್ಷಗಳಲ್ಲಿ ಕಡಿಮೆ ಇದ್ದು ಕೆಲವೊಮ್ಮೆ ಹೆಚ್ಚು ಮಳೆ ಆಗುವುದುಂಟು. 2000 ಇಸವಿಯ ಮಳೆಗಾಲದಲ್ಲಿ 701 ಮಿಮೀ ಮಳೆಯಾಗಿತ್ತು. ವರ್ಷದಲ್ಲಿ 41 ಮಳೆ ದಿನಗಳೆಂದು ಗುರುತಿಸಲಾಗಿದೆ. ಮುಂಗಾರಿನಲ್ಲಿ ವರ್ಷದ ಹೆಚ್ಚಿನ ಭಾಗ ಮಳೆಯಾದರೂ ಹಿಂಗಾರಿನಲ್ಲಿ ಚಂಡಮಾರುತದ ಮಳೆ ಬಿರುಸಿನಿಂದ ದೊಡ್ಡ ಪ್ರಮಾಣದಲ್ಲಿ ಬೀಳುತ್ತದೆ. ಉಷ್ಣಾಂಶ ಅಧಿಕವಿರುವ ಭಾಗದಲ್ಲಿರುವ ಈ ಜಿಲ್ಲೆಯ ಕೆಲವೆಡೆ ಗರಿಷ್ಠ ಉಷ್ಣಾಂಶ 41$^{\circ}$ ಸೆ. ಇರುವುದೂ ಉಂಟು. ಹಿಂದಿನ ಜಿಲ್ಲಾ ಕೇಂದ್ರ ರಾಯಚೂರಿನಲ್ಲಿ 45$^{\circ}$ ಸೆ.ವರೆಗೂ ಉಷ್ಣಾಂಶ ಏರುವುದನ್ನು ಸ್ಮರಿಸಬಹುದು. ರಾತ್ರಿವೇಳೆ ಉಷ್ಣಾಂಶ ಬೇಗ ಕಡಿಮೆ ಆಗುತ್ತದೆ. ಡಿಸೆಂಬರ್‌ನಲ್ಲಿ ಗರಿಷ್ಠ ಉಷ್ಣಾಂಶ 29.30$^{\circ}$ ಸೆ. ಇದ್ದರೆ ಕನಿಷ್ಠ ಉಷ್ಣಾಂಶ 17.70$^{\circ}$ ಸೆ.ಗೆ ಇಳಿಯುತ್ತದೆ. ನವೆಂಬರ್‌ನಿಂದ ಮೇವರೆಗೆ ಒಣ ಹವೆ ಇರುವುದು.

**ವ್ಯವಸಾಯ:** ಕೊಪ್ಪಳ ಜಿಲ್ಲೆ ವ್ಯವಸಾಯ ಪ್ರಧಾನವಾದುದು. ಜಿಲ್ಲೆಯ ಸೇ.75 ರಷ್ಟು ಜನರು ವ್ಯವಸಾಯ ಮತ್ತು ಆ ಸಂಬಂಧವಾದ ಕಸಬುಗಳನ್ನು ಅವಲಂಬಿಸಿದ್ದಾರೆ. ಮಳೆ ಕಡಿಮೆ ಪ್ರಮಾಣದಲ್ಲಿ ಬೀಳುವುದರಿಂದ ಸಾಗುವಳಿಗಾರರ ಬದುಕು ಅನಿಶ್ಚಿತ ಆದಾಯವನ್ನು ಆಧರಿಸಿದೆ. ಹಿಂದಿನ ವಿಜಯನಗರ ಕಾಲದ ನಾಲೆಗಳು ಸ್ಥಳೀಯವಾಗಿ ಸೀಮಿತ ಪ್ರದೇಶಗಳಿಗೆ ನೀರೊದಗಿಸುತ್ತಿದ್ದವು. ಈ ಜಿಲ್ಲೆಯು ರಾಜ್ಯದ ಪ್ರಮುಖ ನದಿಗಳಾದ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ದೋಆಬ್ ಪ್ರದೇಶದಲ್ಲಿ ಬರುವುದರಿಂದ ನೀರಾವರಿ ಯೋಜನೆಗಳಿಂದ ಜಿಲ್ಲೆ ಹೆಚ್ಚು ಪ್ರಯೋಜನ ಪಡೆದಿದೆ.

ಹೈದರಬಾದ್ ಸಂಸ್ಥಾನದ ಆಡಳಿತದಲ್ಲಿದ್ದಾಗ ತುಂಗಭದ್ರಾ ನದಿಯ ಅಣೆಕಟ್ಟು ಯೋಜನೆಗಳನ್ನು ಕಾರ್ಯಗತಗೊಳಿಸಲು ವಿವಿಧ ಪ್ರಯತ್ನಗಳು ನಡೆದವು. ಆಗಿನ ಮೈಸೂರು ಸಂಸ್ಥಾನ ಮತ್ತು ಮದರಾಸು ಪ್ರಾಂತಗಳು ಈ ಸರಹದ್ದಿನಲ್ಲಿ ಬರುತ್ತಿದ್ದುದರಿಂದ ಅವುಗಳೊಂದಿಗೆ ಸಮಾಲೋಚನೆ ಮತ್ತು ಒಪ್ಪಂದಗಳ ಅಂಗೀಕಾರದಲ್ಲೇ ಸಾಕಷ್ಟು ಕಾಲ ಕಳೆಯಿತು. ಸ್ವಾತಂತ್ರ್ಯ ಬಂದ ಮೇಲೆ 1950ರ ದಶಕದಲ್ಲಿ ತುಂಗಭದ್ರಾ ನದಿಗೆ ಹೊಸಪೇಟೆ ಬಳಿ ಬೃಹತ್ ಜಲಾಶಯ ನಿರ್ಮಿಸುವ ಕಾರ್ಯಯೋಜನೆ ತ್ವರಿತಗೊಂಡಿತು. ಇದು 1968ರ ಹೊತ್ತಿಗೆ ಪೂರ್ಣಗೊಂಡು ಕೊಪ್ಪಳವನ್ನು ಒಳಗೊಂಡಂತೆ ಹಿಂದಿನ ರಾಯಚೂರು ಜಿಲ್ಲೆಯ - ಈ ಜಲಾಶಯದ ಎಡದಂಡೆ ಕಾಲುವೆ ಮೂಲಕ ಹೆಚ್ಚು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರೆಯಿತು. ಈಗಿನ ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ ತಾಲ್ಲೂಕುಗಳಲ್ಲಿ ನೀರಾವರಿ ಪ್ರದೇಶ ಹೆಚ್ಚಿತು. ಇದಲ್ಲದೆ ಹಳೆಯ ನಾಲಾಗಳು, ಸಣ್ಣ ಪ್ರಮಾಣದ ಅಣೆಕಟ್ಟುಗಳು ಅಥವಾ ಬ್ಯಾರೇಜ್‌ಗಳು ನಿರ್ಮಾಣವಾಗಿದ್ದು ಇವು ಬೇಸಗೆಯ ಬೆಳೆಗಳಿಗೆ ಆಶ್ರಯವಾಗಿವೆ. ಹಾಲಿ ಜಿಲ್ಲೆಯಲ್ಲಿ ಕಾಲುವೆಗಳಿಂದ 63,411 ಹೆಕ್ಟೇರ್, ಕೆರೆಗಳಿಂದ 1763 ಹೆಕ್ಟೇರ್ ಬಾವಿಗಳಿಂದ, 20,262 ಹೆಕ್ಟೇರ್ ಮತ್ತು ಕೊಳವೆ ಬಾವಿಗಳಿಂದ 6363 ಹೆಕ್ಟೇರ್ ಜಮೀನಿಗೆ ನೀರೊದಗುತ್ತಿದೆ.

ಬತ್ತ, ಜೋಳ, ಸಜ್ಜೆ, ಹುರುಳಿ, ಹೆಸರು, ಮುಸುಕಿನ ಜೋಳ, ಕಡಲೆ, ಎಳ್ಳು, ದ್ವಿದಳ ಧಾನ್ಯಗಳು, ಸೂರ್ಯಕಾಂತಿ, ಸೋಯಾಬೀನ್, ಹತ್ತಿ, ತೊಗರಿ, ಹರಳುಬೀಜ, ನೆಲಗಡಲೆ, ಅಗಸೆ ಇವು ಮುಖ್ಯ ಬೆಳೆಗಳಾಗಿವೆ. ತೋಟಗಾರಿಕೆ ಬೆಳೆಗಳಲ್ಲಿ ಮಾವು, ಸಪೋಟ, ಸೀಬೆ, ಬಾಳೆ, ನಿಂಬೆ, ದಾಳಿಂಬೆ, ಅಂಜೂರ ಮೊದಲಾದವು ಪ್ರಮುಖವಾದವು.

ಪಶುಸಂಗೋಪನೆ ಕೃಷಿಯೊಂದಿಗೆ ಜಿಲ್ಲೆಯ ಮುಖ್ಯ ಉಪಕಸಬುಗಳಲ್ಲಿ ಒಂದಾಗಿದೆ. ಇಲ್ಲಿ ಖಿಲಾರ್ ತಳಿಯ ಜಾನುವಾರುಗಳು ಹೆಚ್ಚು. ಅಧಿಕ ಹಾಲು ಉತ್ಪಾದನೆಯ ದೃಷ್ಟಿಯಿಂದ ಮಿಶ್ರತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಜಾನುವಾರು ಮತ್ತು ಕುರಿಗಳ ತಳಿ ಅಭಿವೃದ್ಧಿಗಾಗಿ ವಿವಿಧ ಫಾರಂಗಳನ್ನು ಸ್ಥಾಪಿಸಿದೆ. 1953ರಲ್ಲಿ ಕೊಪ್ಪಳ ತಾಲ್ಲೂಕಿನ ಮುನಿರಾಬಾದಿನಲ್ಲಿ ಸ್ಥಾಪಿಸಲಾದ ಫಾರಂ ಅವುಗಳಲ್ಲಿ ಪ್ರಮುಖವಾದುದು. ಇಲ್ಲಿ ಆಂಧ್ರ ಮತ್ತು ವಿದೇಶಗಳಿಂದ ತಂದ ತಳಿಗಳೊಂದಿಗೆ ಸ್ಥಳೀಯ ತಳಿಗಳ ಸಂಕರ ಮಾಡುವ ಮೂಲಕ ಹೊಸ ತಳಿಗಳನ್ನು ಬೆಳೆಸಲಾಗುತ್ತಿದೆ. ಕೋಳಿಗಳ ತಳಿ ಅಭಿವೃದ್ಧಿಗೆ ಸಹ ಇಲ್ಲಿ ಒಂದು ಕೇಂದ್ರವಿದೆ. ಗಂಗಾವತಿಯಲ್ಲಿ ಪ್ರಾದೇಶಿಕ ಕೋಳಿ ಸಾಕಣೆ ಫಾರಂ ಇದೆ. ಆಗಾಗ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಜಾನುವಾರುಗಳ ಸಂರಕ್ಷಣೆಗಾಗಿ ಗೋಶಾಲೆಗಳಿವೆ. ಮೇವು ಬೆಳೆಸುವ ಫಾರಂಗಳಿವೆ. 1998-99ರ ಅಂಕಿಅಂಶಗಳ ಮೇರೆಗೆ 249,976 ಸ್ಥಳೀಯ ಜಾನುವಾರುಗಳು; 2,165 ವಿದೇಶಿ ತಳಿಯ ಹಸುಗಳು, 8037 ಮಿಶ್ರತಳಿ ಹಸುಗಳು, 90078, ಎಮ್ಮೆಗಳೂ 191912 ಕುರಿಗಳು, 136671 ಮೇಕೆಗಳು ಜಿಲ್ಲೆಯಲ್ಲಿದ್ದವು. ಸಾಕು ಪ್ರಾಣಿಗಳ ಕ್ಷೇಮಾಭಿವೃದ್ಧಿಗೆ ಪಶುಸಂಗೋಪನ ಇಲಾಖೆಯ ಆಸ್ಪತ್ರೆಗಳು, ಚಿಕಿತ್ಸಾಲಯಗಳು ಇವೆ. ಜಿಲ್ಲೆಯಲ್ಲಿ 9 ಪಶುವೈದ್ಯ ಆಸ್ಪತ್ರೆಗಳು, 11 ಚಿಕಿತ್ಸಾಲಯಗಳು, 59 ಪ್ರಾಥಮಿಕ ಪಶುವೈದ್ಯಕೇಂದ್ರಗಳು, 5 ಸಂಚಾರಿ ಚಿಕಿತ್ಸಾಲಯಗಳು, 12 ಕೃತಕ ಗರ್ಭಧಾರಣಾ ಕೇಂದ್ರಗಳಿವೆ.

ಕಾಡಸಿದ್ದೇಶದೇವಾಲಯ, ಮುಧೋಳ

ಸಾಕಷ್ಟು ಜಲಾಶಯಗಳು ಮತ್ತು ಕೆರೆಕಟ್ಟೆಗಳಿಂದ ಕೂಡಿರುವ ಈ ಜಿಲ್ಲೆಯಲ್ಲಿ ಮೀನುಗಾರಿಕೆ ಸಹ ಬೆಳೆದಿದೆ. 2000-01ರಲ್ಲಿ 3,324 ಮೆಟ್ರಿಕ್‌ಟನ್ ಮೀನನ್ನು ಹಿಡಿಯಲಾಗಿತ್ತು. ಮುನಿರಾಬಾದಿನಲ್ಲಿ ಮೀನುಸಾಕಣೆ ಅಭಿವೃದ್ಧಿ ಫಾರಂ ಇದೆ.

ಕೃಷಿ ಪ್ರದೇಶದ ಸರ್ವತೋಭಿಮುಖ ಅಭಿವೃದ್ಧಿಗಾಗಿ ಸರ್ಕಾರ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು ಅವನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಮುಖ್ಯವಾಗಿ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ವಹಿಸಲಾಗಿದೆ. ಗಂಗಾವತಿಯ ಗ್ರಾಮಸೇವಕರ ತರಬೇತಿ ಕೇಂದ್ರ, ಸಾಮಾನ್ಯ ಕೃಷಿ ಸಂಶೋಧನ ಕೇಂದ್ರ, ತುಂಗಭದ್ರಾ ಕೃಷಿ ಅಭಿವೃದ್ಧಿ ಕೇಂದ್ರ, ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಗಳು ಗ್ರಾಮೀಣ ಅಭಿವೃದ್ಧಿಗೆ ಪೂರಕವಾಗಿವೆ.

**ಕೈಗಾರಿಕೆ:** ಈ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದಿದೆ. ಇಲ್ಲಿಯ ಹವಾಗುಣ ಮತ್ತು ಸಾರಿಗೆ ಸಂಪರ್ಕದ ಕೊರತೆಗಳು ಇದಕ್ಕೆ ಭಾಗಶಃ ಕಾರಣವಾಗಿವೆ. ಒಟ್ಟು 179 ಕಾರ್ಖಾನೆಗಳಿದ್ದು ಅವುಗಳಲ್ಲಿ 6012 ಜನ ಉದ್ಯೋಗಿಗಳಿದ್ದಾರೆ. 2 ಕೈಗಾರಿಕಾ ಪ್ರದೇಶಗಳು, 4 ಕೈಗಾರಿಕಾ ಶೆಡ್ಡುಗಳು, 1 ಕಾರ್ಯನಿರತ ಸಕ್ಕರೆ ಕಾರ್ಖಾನೆ ಇವೆ. 199 ಸಣ್ಣ ಕೈಗಾರಿಕಾ ಘಟಕಗಳಿದ್ದು 965 ಜನ ಉದ್ಯೋಗಿಗಳಿದ್ದಾರೆ. ಒಟ್ಟಾರೆ 3,013 ಉದ್ಯೋಗ ಘಟಕಗಳಲ್ಲಿ 21,665 ಉದ್ಯೋಗಗಳು ಸೃಷ್ಟಿಯಾಗಿವೆ (2001). ಮುನಿರಾಬಾದಿನ ಸಾಲಾರಜಂಗ್ ಸಕ್ಕರೆ ಕಾರ್ಖಾನೆ, ತುಂಗಭದ್ರಾ ಪಲ್ಪ್ ಅಂಡ್

ಬೋರ್ಡ್ ಮಿಲ್ಸ್, ಚಾಮುಂಡಿ ರಾಸಾಯನಿಕ ಮತ್ತು ಗೊಬ್ಬರ ತಯಾರಿಕಾ ಕಾರ್ಖಾನೆ, ಫರೂಕ್ ಅನ್ವರ್ ಎಣ್ಣೆ ಕಾರ್ಖಾನೆ, ಸಹಕಾರಿ ನೂಲು ಕಾರ್ಖಾನೆ, ಹತ್ತಿ ಸಂಸ್ಕರಣ ಘಟಕ -ಇವು ಮುಖ್ಯ ಕೈಗಾರಿಕಾ ಸ್ಥಾವರಗಳು.

ಜಿಲ್ಲೆಯಲ್ಲಿ ವಾಣಿಜ್ಯ ಬೆಳೆಗಳು ಅಧಿಕವಾಗಿ ಬೆಳೆಯುವುದರಿಂದ ಹೊರ ಜಿಲ್ಲೆಗಳು ಮತ್ತು ಹೊರ ರಾಜ್ಯಗಳೊಂದಿಗೆ ವ್ಯಾಪಾರ ವಹಿವಾಟು ಹೆಚ್ಚು. ಎಣ್ಣೆ ಬೀಜಗಳು, ಸೇಂಗಾ ಎಣ್ಣೆ, ದ್ವಿದಳ ಧಾನ್ಯಗಳು ಮತ್ತು ಹತ್ತಿ ಹೊರ ರಾಜ್ಯಗಳಿಗೆ ರಫ್ತಾಗುತ್ತವೆ. ಮಹಾರಾಷ್ಟ್ರದ ಸೋಲಾಪುರ, ಪುಣೆ, ಮುಂಬಯಿ ಹಾಗೂ ತಮಿಳುನಾಡಿನ ಕೊಯಮತ್ತೂರುಗಳಿಗೆ ಇಲ್ಲಿಂದ ಸರಕುಗಳು ಹೋಗುತ್ತವೆ. ಹದಮಾಡಿದ ಚರ್ಮಕ್ಕೆ ಹೊಸಪೇಟೆ, ಗದಗಗಳಲ್ಲಿ ಮಾರುಕಟ್ಟೆಗಳಿವೆ. ತೆಂಗಿನಕಾಯಿ, ಬೆಲ್ಲ, ಮರ, ವನಸ್ಪತಿ, ಹೊಗೆಸೊಪ್ಪು, ಕೃತಕ ರೇಷ್ಮೆ ಮೊದಲಾದ ವಸ್ತುಗಳನ್ನು ಜಿಲ್ಲೆಗೆ ಆಮದು ಮಾಡಿಕೊಳ್ಳಲಾಗುವುದು. ಹತ್ತಿ, ಸೇಂಗಾ, ಹುಣಿಸೆಹಣ್ಣು, ಮೆಣಸಿನಕಾಯಿ ಮತ್ತು ಕೈಮಗ್ಗದ ಬಟ್ಟೆಗಳಿಗೆ ಕೊಪ್ಪಳ ದೊಡ್ಡ ವ್ಯಾಪಾರ ಕೇಂದ್ರ. ಬತ್ತ, ಜೋಳ, ಸೇಂಗಾ, ಬೆಲ್ಲ, ಹರಳು, ಸಜ್ಜೆ ಇವುಗಳಿಗೆ ಗಂಗಾವತಿ ಮುಖ್ಯ ವ್ಯಾಪಾರ ಸ್ಥಳ. ಕುಷ್ಟಗಿ, ಯಲಬುರ್ಗ, ಕುಕನೂರು ಇತರ ಮುಖ್ಯ ವ್ಯಾಪಾರ ಕೇಂದ್ರಗಳು. 93 ಕೃಷಿ ಮಾರಾಟ ಸಹಕಾರ ಸಂಘಗಳಿವೆ. 4 ನಿಯಂತ್ರಿತ ಮಾರುಕಟ್ಟೆಗಳು, 12ಉಪ ಮಾರುಕಟ್ಟೆಗಳಿವೆ.

ಸಹಕಾರಿ ರಂಗ ಆರ್ಥಿಕ ಚಟುವಟಿಕೆಗಳ ಎಲ್ಲ ಕ್ಷೇತ್ರಗಳಲ್ಲೂ ಕೈ ಹಾಕಿದೆ. ಜಿಲ್ಲಾ ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆ ಕೃಷಿ ಸಾಲಗಳನ್ನು ನೀಡುತ್ತ ಬಂದಿದೆ. 172 ಕೃಷಿ ಸಾಲ ನೀಡಿಕೆ ಸಹಕಾರ ಸಂಘಗಳು ಕಾರ್ಯನಿರತವಾಗಿವೆ. ವ್ಯವಸಾಯೇತರ ಸಾಲನೀಡಿಕೆ ಸಹಕಾರ ಸಂಘಗಳ ಸಂಖ್ಯೆ 55. ಸಾಲೇತರ ಸಹಕಾರ ಸಂಘಗಳ ಸಂಖ್ಯೆ 465 (1998). ಹಾಲು ಉತ್ಪಾದನೆ, ಕೋಳಿ ಸಾಕಣೆ, ಮೀನು ಮಾರಾಟ, ಕಂಬಳಿ ಮಾರಾಟ, ತೋಟಗಾರಿಕೆ ಉತ್ಪನ್ನಗಳ ಮಾರಾಟ ಈ ಎಲ್ಲ ವ್ಯವಹಾರಗಳಲ್ಲೂ ಸಹಕಾರಿ ಸಂಘಗಳ ಪಾತ್ರ ಪ್ರಮುಖವಾಗಿದೆ.

ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ. 55.02. ಅದರಲ್ಲಿ ಶೇ. 169.15 ಪುರುಷರು, ಶೇ. 40.76 ಮಹಿಳೆಯರು ಸಾಕ್ಷರರಾಗಿದ್ದಾರೆ. ಸಾಕ್ಷರತಾ ಆಂದೋಲನ ಯೋಜನೆ ಜಿಲ್ಲೆಯಲ್ಲಿ ಕಾರ್ಯನಿರತವಾಗಿರುವುದಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಶಾಲೆಗಳನ್ನು ತೆರೆದು ಶಿಕ್ಷಣ ಒದಗಿಸಲಾಗುತ್ತಿದೆ. ಮಕ್ಕಳನ್ನು ಶಾಲೆಗೆ ಸೇರಿಸಲು ಒಡಂಬಡಿಸಿ ವಿವಿಧ ಯೋಜನೆಗಳನ್ನು ಜಾರಿಗೆ ತಂದು ಅವರಿಗೆ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನವೂ ನಡೆದಿದೆ. ಆದರೆ ಅಜ್ಞಾನ, ಬಡತನ, ಕುಟುಂಬದಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣ ನೀಡುವ 9 ಕಾಲೇಜುಗಳು, ತಾಂತ್ರಿಕ ಶಿಕ್ಷಣ ನೀಡುವ 3 ಪಾಲಿಟೆಕ್ನಿಕ್‌ಗಳು ಇವೆ. 5 ಸರ್ಕಾರಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಭಾರತೀಯ ವೈದ್ಯಪದ್ಧತಿಯ ಚಿಕಿತ್ಸಾಲಯಗಳು ಮತ್ತು ಅನೇಕ ಸರ್ಕಾರಿ ಆರೋಗ್ಯ ಕೇಂದ್ರಗಳು ಇವೆ.

ಸಮಗ್ರ ಗ್ರಾಮ ಸ್ವಸಹಾಯ ಯೋಜನೆ, ಗ್ರಾಮೀಣ ಇಂಧನ ಕಾರ್ಯಕ್ರಮ, ಮಾನವ ದಿನಗಳ ಕೆಲಸಗಳ ಸೃಷ್ಟಿ, ನಿರ್ಮಲ ಗ್ರಾಮ ಯೋಜನೆ, ಇಂದಿರಾ ಆವಾಸ್ ಯೋಜನೆ, ಪ್ರಧಾನ ಮಂತ್ರಿಗಳ ರಸ್ತೆ ನಿರ್ಮಾಣ ಯೋಜನೆ, ಕೊಳವೆ ನೀರು ಸರಬರಾಜು ಯೋಜನೆ ಮೊದಲಾದವು ಗ್ರಾಮಗಳ ನಾಗರಿಕ ಸೌಲಭ್ಯಗಳನ್ನು ಹೆಚ್ಚಿಸಲು ಉದ್ದೇಶಿತವಾಗಿವೆ. ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಸಮಿತಿಗಳು ಗ್ರಾಮೀಣ ಪ್ರದೇಶದ ಪ್ರತಿನಿಧಿಗಳಿಂದ ಕೂಡಿದ್ದು ಈ ಪ್ರದೇಶದ ಅಭಿವೃದ್ಧಿ ಕಾರ್ಯಗಳ ಮುಖ್ಯ ಜವಾಬ್ದಾರಿ ಹೊತ್ತಿವೆ.

**ಸಾರಿಗೆಸಂಪರ್ಕ:** ಆರ್ಥಿಕವಾಗಿ ಹಿಂದುಳಿದಿದ್ದು ತುಂಗಭದ್ರಾನದಿ ಮತ್ತು ಕಣಿವೆಗಳಿಂದ ಕೂಡಿದ ಈ ಜಿಲ್ಲೆ ರಸ್ತೆ ಸಂಪರ್ಕದಲ್ಲಿ ತುಂಬಾ ಕನಿಷ್ಠ ಸೌಲಭ್ಯ ಹೊಂದಿದ್ದಿತು. ತುಂಗಭದ್ರಾ ನದಿಗೆ ಸೇತುವೆಗಳಾದ ಮೇಲೆ ಹೊರ ಪ್ರದೇಶಗಳೊಂದಿಗೆ ಹೆಚ್ಚು ಸಂಪರ್ಕವೇರ್ಪಟ್ಟಿತು. ಚೆನ್ನೈ-ಪುಣೆ ರಾಷ್ಟ್ರೀಯ ಹೆದ್ದಾರಿ ಈ ಜಿಲ್ಲೆಯ ಕೊಪ್ಪಳ-ಕುಷ್ಟಗಿ ಮೂಲಕ ಹಾದುಹೋಗಿದ್ದು ಅದರ ಉದ್ದ ಜಿಲ್ಲೆಯಲ್ಲಿ 125ಕಿಮೀ ಬಿಜಾಪುರ ಜಿಲ್ಲೆಯ ಹುನಗುಂದದಿಂದ ಕುಷ್ಟಗಿ ಇರಕಲ್‌ಗಡ ಕೊಪ್ಪಳ ಮೂಲಕ ಬಳ್ಳಾರಿ ಸೇರುವ ಮಾರ್ಗ ಪ್ರಮುಖ ರಾಜ್ಯ ಹೆದ್ದಾರಿಯಾಗಿದೆ. ಕೊಪ್ಪಳದಿಂದ ಹುಬ್ಬಳ್ಳಿ-ಧಾರವಾಡದೊಡನೆ ಸಂಪರ್ಕಿಸುವ ರಸ್ತೆ ಇನ್ನೊಂದು ಪ್ರಮುಖ ರಸ್ತೆ ಮಾರ್ಗ. ಕೊಪ್ಪಳದಿಂದ ರಾಯಚೂರು, ಗದಗ, ಶೋರಾಪುರ, ಲಿಂಗಸುಗೂರು, ಮುದ್ಗಲ್ ಮೊದಲಾದ ಜಿಲ್ಲೆಯ ಹೊರ ಸ್ಥಳಗಳಿಗೆ ಉತ್ತಮ ರಸ್ತೆ ಸಂಪರ್ಕವಿದೆ. ಜಿಲ್ಲೆಯ ಒಳಗೆ ಜಿಲ್ಲಾ ಕೇಂದ್ರದಿಂದ ಎಲ್ಲ ತಾಲ್ಲೂಕುಗಳನ್ನು ಕೂಡಿಸುವ ಜಿಲ್ಲಾ ರಸ್ತೆಗಳಿವೆ. ಗ್ರಾಮೀಣ ರಸ್ತೆಗಳು ನಿಧಾನಗತಿಯಲ್ಲಿ ಅಭಿವೃದ್ಧಿ ಕಾಣುತ್ತಿವೆ. ಜಿಲ್ಲೆಯಲ್ಲಿ 270ಕಿಮೀ ರಾಜ್ಯ ಹೆದ್ದಾರಿ; 537ಕಿಮೀ ಜಿಲ್ಲಾ ರಸ್ತೆಗಳು ಮತ್ತು 1251ಕಿಮೀ ಗ್ರಾಮ ರಸ್ತೆಗಳಿವೆ. ಭಾರಿ ಸೇತುವೆಗಳ ಸಂಖ್ಯೆ 19 (2001). ಹುಬ್ಬಳ್ಳಿ-ಬಳ್ಳಾರಿ ರೈಲು ಮಾರ್ಗ ಮುನಿರಾಬಾದ್ ಮತ್ತು ಕೊಪ್ಪಳದ ಮೂಲಕ ಹಾದುಹೋಗುತ್ತದೆ. ಅದರ ಉದ್ದ 55ಕಿಮೀ.

**ಇತಿಹಾಸ:** ಕೊಪ್ಪಳ ಜಿಲ್ಲೆ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಆಸುಪಾಸಿನಲ್ಲಿದ್ದು ಪ್ರಾಚೀನ ಕಾಲದಿಂದಲೂ ಜನವಸತಿ ಹೊಂದಿದ ಪ್ರದೇಶವಾಗಿದೆ. ಗಂಗಾವತಿ ತಾಲ್ಲೂಕಿನ ಬೆಂಕಲ್ ಮತ್ತು ಕೆರೆಹಾಳ್ ನೆರೆಯ ರಾಯಚೂರು ಜಿಲ್ಲೆಯ ಮಸ್ಕಿ, ಹಾಳಾಪುರ, ಕಲ್ಲೂರು ಮೊದಲಾದ ಕಡೆಗಳಲ್ಲಿ ಇತಿಹಾಸಪೂರ್ವ ಕಾಲದ ನಿವೇಶನಗಳಿದ್ದುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಕೊಪ್ಪಳ ಮತ್ತಿತರ ಕಡೆಗಳಲ್ಲಿ ಬೃಹತ್ ಶಿಲಾಸಮಾಧಿಗಳು ದೊರೆತಿವೆ. ಶಿಲಾಯುಗದ ಉಪಕರಣಗಳು, ಮಣ್ಣಿನ ಮಡಿಕೆಗಳು, ಟೆರಕೋಟ ಮೂರ್ತಿಗಳು ಇಲ್ಲಿ ದೊರೆತಿವೆ. ಈ ಆಧಾರಗಳ ಮೇಲೆ ಈ ಪ್ರದೇಶ ದಕ್ಷಿಣ ಭಾರತದ ಅತಿ ಪುರಾತನ ಮಾನವ ನೆಲೆಗಳನ್ನು ಹೊಂದಿದ್ದ ವಲಯಗಳಲ್ಲೊಂದೆಂದು ಹೇಳಬಹುದು.

ಕೊಪ್ಪಳದ ಬಳಿಯ ಮಲಿಮಲ್ಲಪ್ಪ ಬೆಟ್ಟದ ತುದಿಯ ಮೇಲೆ ಅನೇಕ ಹಾಸುಗಲ್ಲಿನ ಕಟ್ಟಡಗಳು ಕಂಡುಬಂದಿವೆ. ಅವನ್ನು ಸ್ಥಳೀಯವಾಗಿ 'ಮೊರಿಯರ ಅಂಗಡಿ' ಎಂದು ಕರೆಯುತ್ತಾರೆ. ಇದು ಮೌರ್ಯರ ಕಾಲದ ವಸತಿಯ ಬಗ್ಗೆ ಮತ್ತು ಆಗ ಉತ್ತರ ಭಾರತದ ಜನ ಇಲ್ಲಿ ಮಾರುಕಟ್ಟೆಗಳನ್ನು ಸ್ಥಾಪಿಸಿ ವಾಣಿಜ್ಯ ವ್ಯವಹಾರಗಳನ್ನು

ಕುಮಾರೇಶ್ವರ ದೇವಾಲಯ

ನಡೆಸುತ್ತಿದ್ದ ಬಗ್ಗೆ ಸುಳಿವು ನೀಡುತ್ತದೆ. ಪೌರಾಣಿಕ ಐತಿಹ್ಯಗಳು ಈ ಪ್ರದೇಶದಲ್ಲೂ ಇತರೆಡೆಗಳಂತೆಯೆ ಅಸ್ತಿತ್ವದಲ್ಲಿವೆ. ಪಾಲ್ಕಿಗುಂಡು ಬೆಟ್ಟ ಮತ್ತು ಮಲಿ ಮಲ್ಲಪ್ಪನ ಬೆಟ್ಟದ ನಡುವಿನ ಬಯಲನ್ನು ಪಾಂಡವರ ವಠಾರ ಎಂದು ಕರೆಯಲಾಗಿದೆ. ಇಲ್ಲೂ ಹಾಸುಗಲ್ಲು ಕಟ್ಟಡಗಳಿವೆ. ಗಂಗಾವತಿ ತಾಲ್ಲೂಕಿನ ಆನೆಗೊಂದಿ(ನೋಡಿ) ರಾಮಾಯಣ ಕಾಲದ ಕಿಷ್ಕಿಂದೆಯ ಭಾಗವಾಗಿತ್ತೆಂದು ನಂಬಿಕೆಯಿದೆ. ಗವಿಮಠ ಬೆಟ್ಟ ಮತ್ತು ಪಾಲ್ಕಿಗುಂಡು ಬೆಟ್ಟದಲ್ಲಿ ಒಂದೊಂದು ಅಶೋಕನ ಶಾಸನಗಳು ದೊರೆತಿವೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ನಡುವೆ ನಡೆಯುತ್ತಿದ್ದ ವಾಣಿಜ್ಯ ಹಾಗೂ ಆಗಿನ ವ್ಯಾಪಾರ ಸರಕುಗಳ ಬಗ್ಗೆ ಮಾಹಿತಿ ನೀಡಿದ್ದಾನೆ. ಮೌರ್ಯ ಸಾಮ್ರಾಜ್ಯದ ಹೊರಗಿನ ದಕ್ಷಿಣ ರಾಜ್ಯಗಳನ್ನು ಚೋಳ, ಪಾಂಡ್ಯ, ಸಾತಿಯಪುತ, ಕೇರಲಪುತ ಮತ್ತು ತಂಬಪನ್ನಿ (ಶ್ರೀಲಂಕಾ) ಎಂದು ಅಶೋಕನ ಶಾಸನಗಳಲ್ಲಿ ಹೆಸರಿಸಲಾಗಿದೆ. ಈ ದೃಷ್ಟಿಯಿಂದ ನೋಡಿದಾಗ ಪೂರ್ವೋಕ್ತ ದೇಶಗಳು ದಖ್ಖನ್ನಿನ ಹೊರಗಿದ್ದು ಅಂದಿನ ದಖ್ಖನ್ನಿನ ಪ್ರದೇಶ ಮೌರ್ಯ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿದ್ದದ್ದು ತಿಳಿದುಬರುತ್ತದೆ. ಮೌರ್ಯರ ಶಾಸನಗಳಲ್ಲಿ ಬರುವ ಸುವರ್ಣಗಿರಿಯನ್ನು ಕೊಪ್ಪಳ ಜಿಲ್ಲೆಯ ಕನಕಗಿರಿ ಎಂದು ಕೆಲವು ವಿದ್ವಾಂಸರು ಗುರುತಿಸಿದ್ದರೆ, ಇನ್ನು ಕೆಲವರು ಇದನ್ನು ಮಸ್ಕಿ ಇರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಅದೇನೇ ಇದ್ದರೂ ಈ ಪ್ರದೇಶ ಬಹು ಪುರಾತನ ನಾಗರಿಕತೆ ಮತ್ತು ಸಂಸ್ಕೃತಿಗಳ ನೆಲೆಬೀಡೆಂಬುದು ಸ್ಪಷ್ಟವಾಗಿದೆ.

ಮೌರ್ಯ ಸಾಮ್ರಾಜ್ಯದ ಪತನಾನಂತರ ದಖನ್‌ನಲ್ಲಿ ಸ್ಥಾಪಿತವಾದ ಪ್ರಥಮ ಸ್ವತಂತ್ರ ಸಾಮ್ರಾಜ್ಯವೆಂದರೆ ಸಾತವಾಹನರದು. ಇಂದಿನ ಮಹಾರಾಷ್ಟ್ರ ರಾಜ್ಯದ ಪ್ರತಿಷ್ಠಾನ ಅಥವಾ ಪೈಠಣ್ ಅನ್ನು ರಾಜಧಾನಿಯಾಗಿ ಹೊಂದಿದ್ದ ಈ ಸಾಮ್ರಾಜ್ಯದ ಭಾಗವಾಗಿ ಕೊಪ್ಪಳ ಉನ್ನತ ಸ್ಥಿತಿಗೆ ಬಂದಿತು. ಪ್ರ.ಶ.ಪೂ. 3ನೆಯ ಶತಮಾನದಿಂದ ಪ್ರ.ಶ.ಪೂ. 2ನೆಯ ಶತಮಾನದ ತನಕ ಆಳಿದ ಈ ವಂಶದ ಸಾಮ್ರಾಟರು ಉತ್ತರ ಭಾರತದವರೆಗೂ ತಮ್ಮ ಕೀರ್ತಿ ಪತಾಕೆಯನ್ನು ಹಾರಿಸಿದರು. ಕೊನೆಗೆ ದಕ್ಷಿಣ

ಪಥಕ್ಕೆ ಸೀಮಿತವಾದ ಇವರು ತುಂಗಭದ್ರಾ ದಕ್ಷಿಣಕ್ಕೂ ತಮ್ಮ ಆಳಿಕೆಯನ್ನು ಚಾಚಿದ್ದರು. ಸಾತವಾಹನರ ಕಾಲದಿಂದ ಕೊಪ್ಪಳ ಪ್ರಸಿದ್ಧಿ ಪಡೆದಿತ್ತು. ಇಲ್ಲಿಯ ಸುತ್ತಮುತ್ತಲ ಬೆಟ್ಟಗುಡ್ಡಗಳಿಗೆ ಕೊಪಣಾದ್ರಿ ಮತ್ತು ಕುಪಣಾಚಲ ಎಂಬ ಹೆಸರುಗಳಿವೆ. ಕೊಪ್ಪಳಕ್ಕೆ ಕೊಪಣ ಅಥವಾ ಕೋಪಣ ನಗರವೆಂಬ ಹೆಸರಿದ್ದಿತು. ಈ ಜಿಲ್ಲೆಯ ಕವಲೂರು, ಆಳವಂಡಿ, ಮಾದಿನೂರು, ಕುಕನೂರು, ಪುರ, ಆನೆಗೊಂದಿ, ಇಟಗಿ ಮತ್ತು ಮುಧುವೊಳಲು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆ.

ಸಾತವಾಹನರ ಅನಂತರ ಕರ್ನಾಟಕದ ಉತ್ತರ ಭಾಗದಲ್ಲಿ ಮತ್ತು ಕರಾವಳಿಯಲ್ಲಿ ಕದಂಬರು ಪ್ರಬಲ ರಾಜ್ಯಸ್ಥಾಪಿಸಿ ಆಳಿದರು. ಆದರೆ ದಕ್ಷಿಣದಲ್ಲಿ ತಲಕಾಡಿನ ಗಂಗರು, ಪೂರ್ವದಲ್ಲಿ ವಾಕಾಟಕರು ಕದಂಬರ ಸಮಕಾಲೀನರಾಗಿ ಆಳಿದರು. ಕದಂಬರು ಈ ಜಿಲ್ಲೆಯ ಮೇಲೆ ಎಷ್ಟು ನಿಯಂತ್ರಣ ಹೊಂದಿದ್ದರು ಎಂದು ಹೇಳಲು ಸ್ಪಷ್ಟ ಆಧಾರಗಳು ಲಭ್ಯವಿಲ್ಲ. ಆದರೆ ಚಿತ್ರದುರ್ಗದ ಬಳಿಯ ಚಂದ್ರವಳ್ಳಿಯಲ್ಲಿ ಕದಂಬರ ಶಾಸನ ದೊರೆತಿರುವುದರಿಂದ ಈ ಜಿಲ್ಲೆಯ ಮೇಲೆ ಒಂದಲ್ಲ ಒಂದು ಕಾಲದಲ್ಲಿ ಭಾಗಶಃವಾಗಿ ಅಥವಾ ಪೂರ್ಣವಾಗಿ ಅವರು ನಿಯಂತ್ರಣ ಹೊಂದಿದ್ದರು ಎಂದು ಹೇಳಬಹುದು. ಇದೇ ವೇಳೆಗೆ ಮಧ್ಯ ಭಾರತದಲ್ಲಿ ಪ್ರಬಲ ರಾಜ್ಯ ಸ್ಥಾಪಿಸಿದ ವಾಕಾಟಕರು ಕುಂತಳ ದೇಶದವರೆಗೂ ತಮ್ಮ ರಾಜ್ಯ ವಿಸ್ತರಿಸಿದ್ದರೆಂದು ತಿಳಿದುಬರುತ್ತದೆ. ಅವರು ಈ ಪ್ರದೇಶವನ್ನು ಸಾಕಷ್ಟು ಕಾಲ ಆಳಿರಬೇಕು.

ಕೊಪ್ಪಳ ಜಿಲ್ಲೆಗೆ ಸಮೀಪದಲ್ಲಿ ಈಗಿನ ಬಿಜಾಪುರ ಜಿಲ್ಲೆಯ ಬಾದಾಮಿಯಲ್ಲಿ 6ನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಚಳುಕ್ಯ ಮನೆತನ ಪರ್ಯಾಯ ದ್ವೀಪದಲ್ಲಿ ಒಂದು ಪ್ರಬಲ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಸಫಲವಾಯಿತು. ಕದಂಬ ರಾಜ್ಯ ಬಹುಮಟ್ಟಿಗೆ ಚಳುಕ್ಯ ಸಾಮ್ರಾಜ್ಯದಲ್ಲಿ ವಿಲೀನವಾಗಿ ಕೆಲವು ಶಾಖೆಗಳ ಆಳಿಕೆ ಮಾತ್ರ ಮುಂದುವರಿಯಿತು. ಬಾದಾಮಿ ಚಳುಕ್ಯರ ಶಾಸನಗಳು ಕೊಪ್ಪಳ ಜಿಲ್ಲೆಯ ಕೊಪ್ಪಳ, ಹಲಗೇರಿ, ಇಟಗಿ ಮತ್ತು ಕುಕನೂರು ಮೊದಲಾದೆಡೆಗಳಲ್ಲಿ ದೊರೆತಿವೆ. ಇವರು 757ರಲ್ಲಿ ರಾಷ್ಟ್ರಕೂಟರಿಂದ ಪರಾಜಯ ಹೊಂದುವ ತನಕ ಸಮಗ್ರವಾಗಿ ಆಳಿದರು. ಇವರ ಕಾಲದಲ್ಲಿ ಕೊಪ್ಪಳ ಒಂದು ಪಟ್ಟಣವಾಗಿ ಬೆಳೆಯಿತು. ಚೀನಿ ಪ್ರವಾಸಿ ಯುವಾನ್‌ಚಾಂಗನು ದಾಖಲಿಸಿರುವ ಕೊಂಕಿನಪುಲೋ ಎಂಬುದು ಕೊಪ್ಪಳವೆಂದು ಗುರುತಿಸಲಾಗಿದೆ.

ರಾಷ್ಟ್ರಕೂಟರು, ಬಾದಾಮಿ ಚಳುಕ್ಯರನ್ನು ಸೋಲಿಸಿ ಅವರ ಉತ್ತರಾಧಿಕಾರಿಗಳಾಗಿ ಮಾನ್ಯಖೇಟದಿಂದ ಆಳತೊಡಗಿದ್ದು ಕೊಪ್ಪಳ ಜಿಲ್ಲೆಯ ಇತಿಹಾಸಕ್ಕೆ ಹೊಸ ತಿರುವನ್ನು ನೀಡಿತು. ಆಗ ಕೋಪ್ಪಳ ಅಥವಾ ಕೋಪಣ ನಗರ ಜೈನರ ಪುಣ್ಯಸ್ಥಳವಾಗಿ ಪ್ರಸಿದ್ಧವಾಗಿತ್ತು. ದಕ್ಷಿಣ ಭಾರತದ ಜೈನ ರಾಜಮನೆತನದವರು ವಿಶೇಷವಾಗಿ ಇಲ್ಲಿಗೆ ಯಾತ್ರೆ ಬರುತ್ತಿದ್ದರು. ಕೊಪ್ಪಳ, ಇಟಗಿ, ಅರಕೇರಿ, ಸಂಕನೂರು, ಅಳವಂಡಿ, ಬೆಣಗೇರಿಗಳಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನಗಳು ದೊರೆತಿವೆ. ಕೊಪ್ಪಳದಲ್ಲಿ ರಾಷ್ಟ್ರಕೂಟರ ದಂಡನಾಯಕರಲ್ಲೊಬ್ಬನಾದ ಮಾಮರಸನೆಂಬಾತನಿದ್ದನೆಂದು ತಿಳಿದುಬರುತ್ತದೆ. ರಾಷ್ಟ್ರಕೂಟರ ಸಾಮಂತರೂ ನಿಕಟ ಬಂಧುಗಳೂ ಆಗಿದ್ದ ತಲಕಾಡಿನ ಗಂಗರು ಈ ಪ್ರದೇಶದೊಂದಿಗೆ ಹೆಚ್ಚಿನ ಸಂಪರ್ಕ ಮತ್ತು ಅಧಿಕಾರ ಹೊಂದಿದ್ದರು. ಗಂಗ ಇಮ್ಮಡಿ ಬೂತುಗನ (936-61) ಶಾಸನ ಸಮೀಪದ ಇಟಗಿಯಲ್ಲಿ ದೊರೆತಿದೆ. ಈತ ರಾಷ್ಟ್ರಕೂಟ ಮುಮ್ಮಡಿ ಅಮೋಘವರ್ಷನ ಮಗಳು ರೇವಕನಿಮ್ಮಡಿಯನ್ನು ಮದುವೆಯಾಗಿದ್ದ. ಈ ಸಂದರ್ಭದಲ್ಲಿ ಚಕ್ರವರ್ತಿಯು ಬೂತುಗನಿಗೆ ಪುರಿಗೆರೆ 300, ಬೆಳ್ವೊಲ 300, ಕಿಸುಕಾಡು 70 ಮತ್ತು ಬಾಗೆನಾಡು 70 ಇವನ್ನು ನೀಡಿದ್ದ. ಕುಕನೂರಿನ ತಾಮ್ರಶಾಸನ ಇಮ್ಮಡಿ ಮಾರಸಿಂಹನಿಗೆ ಸೇರಿದ್ದು ಅದರಲ್ಲಿ ಗಂಗರ ವಂಶಾವಳಿಯನ್ನು ನೀಡಲಾಗಿದೆ. ಗಂಗಾವತಿ ತಾಲ್ಲೂಕಿನ ಹೆಬ್ಬಾಳದ ಶಾಸನ ಈ ಭಾಗದಲ್ಲಿ ಗಂಗರು ಆಳಿದ್ದಕ್ಕೆ ಸಾಕ್ಷಿಯಾಗಿದೆ.

ಗಂಗ ಮನೆತನಕ್ಕೆ ಕೊಪ್ಪಳ ಪುಣ್ಯಕ್ಷೇತ್ರವಾಗಿದ್ದುದಲ್ಲದೆ ಅಲ್ಲಿ ರಾಜಮನೆತನದ ಅನೇಕ ಸದಸ್ಯರು ಸ್ವಯಂಪ್ರೇರಣೆಯಿಂದ ಸಲ್ಲೇಖನ ವ್ರತ ಕೈಗೊಂಡು ದೇಹತ್ಯಾಗ ಮಾಡಿದ ವಿವರಗಳು ತಿಳಿದುಬರುತ್ತವೆ. ಇವರಲ್ಲಿ ಇಮ್ಮಡಿ ಬೂತುಗನ ಪತ್ನಿ ಪದ್ಮಬ್ಬರಸಿ, ಮಾರಸಿಂಹನ ಅಕ್ಕ ಹಾಗೂ ಚಾಳುಕ್ಯ ಹರಿಗನ ಪತ್ನಿ ಬಿಜ್ಜಬ್ಬರಸಿ ಮೊದಲಾದವರು ಸೇರಿದ್ದಾರೆ. ಕೊಪ್ಪಳದಲ್ಲಿ ಹಲವರು ಜೈನ ಮುನಿಗಳು ಮೋಕ್ಷ ಪಡೆದ ವಿವರಗಳು ಅಲ್ಲಿನ ಶಾಸನಗಳಲ್ಲಿ ದೊರೆಯುತ್ತವೆ.

ರಾಷ್ಟ್ರಕೂಟರ ಆಳಿಕೆಯನ್ನು ಕೊನೆಗಾಣಿಸಿ ಚಾಳುಕ್ಯರ ಅಧಿಕಾರವನ್ನು ಮತ್ತೆ ಸ್ಥಾಪಿಸಿದ ಚಾಳುಕ್ಯ ತೈಲಪನ ಮೊದಲ ವರ್ಷದ ಆಳಿಕೆಯ (973)ಶಾಸನ ಮಾದಿನೂರಿನಲ್ಲಿದೆ. ಅದರಲ್ಲಿ ರಾಜನು ಬ್ರಹ್ಮಾಂಡಕ್ರತು ಎಂಬ ಯಾಗವನ್ನು ಮಾಡಿದನೆಂದು ಹೇಳಿದೆ. ಕಲ್ಯಾಣದ ಚಾಳುಕ್ಯರೆಂದು ಪ್ರಸಿದ್ಧರಾದ ಈ ವಂಶದವರ ಆಳಿಕೆಯು 12ನೆಯ ಶತಮಾನದ ಉತ್ತರಾರ್ಧದವರೆಗೂ ಮುಂದುವರಿಯಿತು. ಈ ಯುಗದಲ್ಲಿ ಹೇಮಾವತಿ, ಹೆಂಜೇರು ಮತ್ತು ಕಂಪಿಲಿಯಿಂದ ಆಳಿದ ನೊಳಂಬರು ಈ ಜಿಲ್ಲೆಯ ಕೆಲವು ಭಾಗಗಳನ್ನು ಆಳಿರುವ ಸಂಭವ ಹೆಚ್ಚಿದೆ. ಕಳಚುರಿಗಳು ಅಲ್ಪಾವಧಿಯ ಕಾಲ ಆಳಿದರೂ ಅವರ ಕೆಲ ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಆ ಕಾಲದಲ್ಲಿ ಕುಕನೂರು ಪ್ರಸಿದ್ಧ ಧಾರ್ಮಿಕ ಸ್ಥಳವಾಗಿತ್ತು. ಅಲ್ಲಿಯ ಜ್ಯೇಷ್ಠಾದೇವಿಗೆ ರಾಜರು ಮತ್ತು ದಂಡನಾಯಕರು ನಡೆದುಕೊಳ್ಳುತ್ತಿದ್ದರು.

ವೆಂಕಟಪ್ಪ ಬಾವಿ, ಕನಕಗಿರಿ

ಹೊಯ್ಸಳರು ಮತ್ತು ಸೇವುಣರ ಕಾಲದಲ್ಲಿ ಈ ಪ್ರಾಂತ್ಯ ಅವರಿಬ್ಬರ ನಡುವಿನ ವಿವಾದಾತ್ಮಕ ಪ್ರದೇಶವಾಗಿತ್ತು. ಈ ಎರಡು ರಾಜ್ಯಗಳ ನಡುವೆ ಮಧ್ಯಗಾಮಿ ರಾಜ್ಯದಂತಿದ್ದ ಕಂಪಿಲಿ ರಾಜ್ಯದ ಪ್ರಬಲ ನೆಲೆಗಳಲ್ಲೊಂದಾದ ಕುಮ್ಮಟದುರ್ಗ ಕೊಪ್ಪಳ ತಾಲ್ಲೂಕಿನಲ್ಲಿದೆ. ಮೊದಲು ಕಂಪಿಲಿಯಿಂದ ಬಳ್ಳಾರಿ ಜಿಲ್ಲೆ ಆಳುತ್ತಿದ್ದ ಇಲ್ಲಿಯ ಅರಸರು 1315ರಲ್ಲಿ ಕುಮ್ಮಟದುರ್ಗದಿಂದ ಆಳುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ದೇವಗಿರಿಯಲ್ಲಿ ನೆಲಸಿದ್ದ ದೆಹಲಿ ಸುಲ್ತಾನರ ಸೈನ್ಯವನ್ನು ಧೈರ್ಯದಿಂದ ಎದುರಿಸಿ ಹುತಾತ್ಮರಾದ ಕಂಪಿಲಿರಾಯ ಮತ್ತು ಕುಮಾರರಾಮ ಈ ಮನೆತನದವರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೊದಲ ಚಟುವಟಿಕೆಗಳು ಪ್ರಾರಂಭವಾದದ್ದು ಈ ಜಿಲ್ಲೆಯ ಆನೆಗೊಂದಿಯಲ್ಲಿ ಎಂದು ತಿಳಿದುಬರುತ್ತದೆ. ವಿಜಯನಗರ ಅರಸರ 1342ರ ಶಾಸನ ಆನೆಗೊಂದಿಯಲ್ಲಿ ದೊರೆತಿದೆ. ಕೊಪ್ಪಳದ 1346ರ ಶಾಸನದಲ್ಲಿ ಹರಿಹರನ ಉಲ್ಲೇಖವಿದೆ. ಆನೆಗೊಂದಿ, ಕನ್ನೇರುಮಡು, ಕೆಸರಟ್ಟಿ, ಕಲ್ಲೂರು, ಬಂಡಿಹಾಳಗಳಲ್ಲಿ ವಿಜಯನಗರದ ಅರಸರ ಮತ್ತು ಮಾಂಡಲಿಕರ ಶಾಸನಗಳು ಲಭ್ಯವಾಗಿವೆ. ವಿಜಯನಗರದ ಆಯಕಟ್ಟಿನ ಪ್ರದೇಶವಾಗಿದ್ದ ಈ ಜಿಲ್ಲೆಯ ಒಡೆತನಕ್ಕಾಗಿ ವಿಜಯನಗರ ಅರಸರು ಮತ್ತು ಬಹಮನೀ ಸುಲ್ತಾನರುಗಳ ನಡುವೆ ಆಗಾಗ ಯುದ್ಧಗಳಾಗುತ್ತಿದ್ದವು. ಕಲ್ಲೂರು ಮತ್ತು ಬಂಡಿಹಾಳದ ಶಾಸನಗಳು ಅಚ್ಯುತರಾಯನ ಕಾಲದಲ್ಲಿ ಅವನ ಮಾಂಡಲಿಕರಾಗಿದ್ದ ಗುಜ್ಜಲವಂಶದ ಅರಸರ ಬಗ್ಗೆ ತಿಳಿಸುತ್ತದೆ.

ತಾಳಿಕೋಟೆಯ ಯುದ್ಧದ ತರುವಾಯವೂ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಸ್ವಲ್ಪ ಕಾಲ ಐತಿಹಾಸಿಕ ಮಹತ್ವ ಪಡೆದಿತ್ತು. ಆನೆಗೊಂದಿಯಲ್ಲಿ ಆಶ್ರಯ ಪಡೆದ ವಿಜಯನಗರದ ಅರಸು ಮನೆತನದವರು ಅಲ್ಲಿ ತಮ್ಮ ಅಧಿಕಾರವನ್ನು ಮುಂದುವರಿಸಿದರು. ಶ್ರೀರಂಗಪಟ್ಟಣದ ಪ್ರಾಂತ್ಯಾಧಿಕಾರಿಯಾಗಿದ್ದ ಶ್ರೀರಂಗರಾಯ ಆನೆಗೊಂದಿಯ ಮೂಲದವನೆಂದು ತಿಳಿದುಬರುತ್ತದೆ. 1657ರಲ್ಲಿ ಶಿವಾಜಿಯು ಆನೆಗೊಂದಿ ಮೊದಲಾದ ಒಂಬತ್ತು ಸಮತಗಳನ್ನು ಶ್ರೀರಂಗರಾಯನ ಕುಟುಂಬದ ಪೋಷಣೆಗಾಗಿ ನೀಡಿದ್ದನೆಂದು ಹೇಳಲಾಗಿದೆ. ಈ ಕಾಲದಲ್ಲಿ ಕೊಪ್ಪಳವು ಕೊಪಣನಾಡು ಅಥವಾ ಕೋಪಣವೇಂಟೆಯ ಕೇಂದ್ರ ಸ್ಥಳವಾಗಿದ್ದಿತು.

ಕಂಪಿಲಿ ರಾಜ್ಯ ಪತನಗೊಂಡು ದಖ್ಖನ್ನಿನ ದೆಹಲಿ ಪ್ರಾಂತ್ಯಾಧಿಕಾರಿಯ ವಶಕ್ಕೆ ಬಂದ ದೋಆಬ್ ಪ್ರಾಂತ್ಯವು ಅಂದರೆ ಕೊಪ್ಪಳ ಜಿಲ್ಲೆ ಮತ್ತು ಈಗಿನ ರಾಯಚೂರು ಜಿಲ್ಲೆಗಳ ಪ್ರದೇಶವು ಮುಂದೆ ಸದಾ ವಿಜಯನಗರ ಮತ್ತು ಬಹಮನೀ ರಾಜ್ಯದ ನಡುವೆ ವಿವಾದಿತ ಪ್ರದೇಶವಾಗಿ ಪರಿಣಮಿಸಿತು. ರಾಯಚೂರಿನೊಂದಿಗೆ ಕೊಪ್ಪಳ ಜಿಲ್ಲೆಯ ಕೆಲವು ಭಾಗಗಳೂ ಆಗಾಗ ಈ ಎರಡು ರಾಜ್ಯ- ಸಾಮ್ರಾಜ್ಯಗಳ ನಡುವೆ ಕೈ ಬದಲಾಯಿಸುತ್ತಿದ್ದುದನ್ನು ಕಾಣಬಹುದು. ರಾಯಚೂರು ಮತ್ತು ಮುದುಗಲ್ಲು ದೀರ್ಘಕಾಲ ಬಿಜಾಪುರ - ಗುಲ್ಬರ್ಗ ಮತ್ತು ಬೀದರ್‌ನಿಂದ ಆಳಿದ ಬಹಮನೀ ರಾಜ್ಯದ ವಶದಲ್ಲಿರುತ್ತಿದ್ದುದರಿಂದ ಕೊಪ್ಪಳದ ಅನೇಕ ಸ್ಥಳಗಳೂ ಅದರ ಆಳ್ವಿಕೆಗೊಳಪಟ್ಟಿದ್ದವು. ಪದೇ ಪದೇ ಬಹಮನೀ ಸೈನ್ಯಗಳು ವಿಜಯನಗರದ ಪ್ರದೇಶಗಳಿಗೆ ನುಗ್ಗಿ ಕೊಲೆ,

ಲೂಟಿ ಮತ್ತು ದಬ್ಬಾಳಿಕೆಗಳಲ್ಲಿ ತೊಡಗುತ್ತಿದ್ದವು. ಎರಡನೆಯ ದೇವರಾಯ ಮತ್ತು ಕೃಷ್ಣದೇವರಾಯ ಈ ದಾಳಿಗಳನ್ನು ಯಶಸ್ವಿಯಾಗಿ ಎದುರಿಸಿ ಸುಲ್ತಾನರ ಆಳಿಕೆಯಿಂದ ಈ ಪ್ರದೇಶವನ್ನು ಮುಕ್ತಗೊಳಿಸಿದ್ದರು. 1565ರಲ್ಲಿ ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ಸೈನ್ಯ ಸೋತ ಮೇಲೆ ಈ ಜಿಲ್ಲೆ ಬಹುಮಟ್ಟಿಗೆ ಬಿಜಾಪುರದ ಸುಲ್ತಾನ್‌ಶಾಹಿಯ ಅಧೀನಕ್ಕೊಳಗಾಯಿತು. ಶಿವಾಜಿ 1677ರಲ್ಲಿ ಕೊಪ್ಪಳವನ್ನು ಮುತ್ತಿ ವಶಪಡಿಸಿಕೊಂಡ. ಸ್ವಲ್ಪ ಕಾಲದಲ್ಲೇ ಬಿಜಾಪುರ ರಾಜ್ಯ ಔರಂಗಜೇಬನ ಮಹಾ ದಕ್ಷಿಣ ದಂಡಯಾತ್ರೆಗೆ ಬಲಿಯಾದ ಮೇಲೆ ಅನೇಕ ವರ್ಷಗಳ ಅರಾಜಕತೆಯ ಅನಂತರ ಈ ಜಿಲ್ಲೆ ಹೈದರಾಬಾದಿನ ನಿಜಾಮರ ಆಡಳಿತದಡಿ ಬಂದಿತು.

ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ದಂಡಯಾತ್ರೆಗಳಿಂದಾಗಿ ಈ ಪ್ರದೇಶ ಸ್ವಲ್ಪ ಅವಧಿಗೆ ಮೈಸೂರು ರಾಜ್ಯದ ಭಾಗವಾಗಿತ್ತು. ಆದರೆ 1799ರಲ್ಲಿ ಟಿಪ್ಪು ಬ್ರಿಟಿಷರಿಗೆ ಸಂಪೂರ್ಣವಾಗಿ ಸೋತ ಅನಂತರ ಆದ ರಾಜಕೀಯ ಒಡಂಬಡಿಕೆಯ ಮೇರೆಗೆ ಕೊಪ್ಪಳ, ಅಂದಿನ ರಾಯಚೂರು ಜಿಲ್ಲೆಯ ಭಾಗವಾಗಿ ಹೈದರಾಬಾದ್ ಸಂಸ್ಥಾನಕ್ಕೆ ಸೇರಿತು. ಹೈದರಾಬಾದ್ ನಿಜಾಮರ ಸರ್ಕಾರವು ಸಂಸ್ಥಾನವನ್ನು ಜಹಗೀರಿಗಳು, ಪೈಗಗಳು ಮತ್ತು ನಿಜಾಮರ ಖಾಸಾ ಜಮೀನುಗಳೆಂದು ವಿಂಗಡಿಸಿದ್ದಿತು. ಜಹಗೀರಿಗಳನ್ನು ರಾಜ್ಯಕ್ಕೆ ಸೈನ್ಯ ಮೊದಲಾದವನ್ನು ಒದಗಿಸಿ ಉತ್ತಮ ಸೇವೆ ಸಲ್ಲಿಸಿದವರಿಗೆ ನೀಡಲಾಗುತ್ತಿತ್ತು. ಪೈಗಗಳನ್ನು ಅರಮನೆಗೆ ಬೇಕಾದ ಶ್ರೀಮಂತರು ಮತ್ತು ಕುಲೀನರಿಗೆ ಕೊಡಲಾಗುತ್ತಿತ್ತು. ಈ ನಿಜಾಮರ ಖಾಸಾ ಜಮೀನುಗಳನ್ನು ರೈತರು ಗುತ್ತಿಗೆಗೆ ಸಾಗುವಳಿ ಮಾಡುತ್ತಿದ್ದರು. ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳು ನವಾಬ್ ಸಾಲರ್‌ಜಂಗ ಎಂಬ ಜಹಗೀರುದಾರನಿಗೆ ಸೇರಿದ್ದವು. ಕುಷ್ಟಗಿ ತಾಲ್ಲೂಕು ಒಬ್ಬ ದೇಸಾಯಿಯ ಜಹಗೀರಾಗಿದ್ದಿತು. ಆನೆಗೊಂದಿಯೂ ಒಂದು ಪುಟ್ಟ ಜಹಗೀರಾಗಿತ್ತು. ಈ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಶ್ರೀಮಂತ ಮತ್ತು ಪ್ರಭಾವಿ ವರ್ಗದ ಅಲ್ಪಸಂಖ್ಯಾತರ ಕೈಯಲ್ಲಿ ರೈತರೂ ಕಾರ್ಮಿಕರು ಹೀನ ಸ್ಥಿತಿಯಲ್ಲಿ ಬದುಕಬೇಕಾಯಿತು. ಗ್ರಾಮದಲ್ಲಿ ಸರ್ಕಾರದ ಪರವಾಗಿ ಪಟೇಲ ಮತ್ತು ಗ್ರಾಮ ಮುಖ್ಯರಿರುತ್ತಿದ್ದರು. ಈ ಜಹಗೀರುದಾರರು ನಿಜಾಮನಿಗೆ ವಾರ್ಷಿಕ ಪೊಗದಿ ಕೊಡುತ್ತಿದ್ದರು. ಅವರಿಗೆ ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ಹೊಂದುವ ಅಧಿಕಾರವಿದ್ದಿತು.

ಈ ಬಗೆಯ ಆಳ್ವಿಕೆಯಲ್ಲಿ ಜನಸಾಮಾನ್ಯರ ಹಕ್ಕುಬಾಧ್ಯತೆಗಳು ಕುಂಠಿತಗೊಂಡಿದ್ದುವು. 20ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಭಾರತಾದ್ಯಂತ ಬಲಗೊಳ್ಳುತ್ತಿದ್ದ ಸ್ವಾತಂತ್ರ್ಯಚಳವಳಿಯ ಪ್ರಭಾವ ಹೈದರಾಬಾದ್ ಸಂಸ್ಥಾನವನ್ನೂ ತಟ್ಟದಿರಲಿಲ್ಲ. 1911ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನದಲ್ಲಿ ಈ ಜಿಲ್ಲೆಯ ಹಲವರು ಬಂದು ಭಾಗವಹಿಸಿದರು. ಬೆಳಗಾಂವಿಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸಮ್ಮೇಳನ (1924) ಸ್ವಾತಂತ್ರ್ಯ ಹೋರಾಟದ ಬಗ್ಗೆ ಈ

ಕೋಟೆ ಅವಶೇಷಗಳ ದೃಶ್ಯ, ಕೊಪ್ಪಳ

ಪ್ರಾಂತದ ಜನರ ಗಮನ ಸೆಳೆಯುವಲ್ಲಿ ಮುಖ್ಯ ಪಾತ್ರ ವಹಿಸಿತು. 1916-17 ರಿಂದಲೇ ಕೊಪ್ಪಳದಲ್ಲಿ ಒಂದು ಖಾದಿ ಪ್ರಚಾರ ಕೇಂದ್ರ ಪ್ರಾರಂಭಗೊಂಡಿತ್ತು. 1922ರಲ್ಲಿ ಆರ್.ಬಿ.ದೇಸಾಯಿಯವರು ಕುಕನೂರಿನಲ್ಲಿ ವಿದ್ಯಾನಂದ ಗುರುಕುಲವನ್ನು ಸ್ಥಾಪಿಸಿದರು. ಇದು ಜನರಲ್ಲಿ ರಾಷ್ಟ್ರೀಯ ಭಾವನೆ ಬೆಳೆಸಲು ಸಹಕಾರಿಯಾಯಿತು. 1920-21ರಲ್ಲಿ ರಾಯಚೂರಿನಲ್ಲಿ ಪಂಡಿತ ತಾರಾನಾಥರು ಸ್ಥಾಪಿಸಿದ ಹಮ್‌ದರ್ದ್ ರಾಷ್ಟ್ರೀಯ ಶಾಲೆಯು ಸ್ವಾತಂತ್ರ್ಯ ಚಳವಳಿಯ ಗುರಿಗಳನ್ನು ಪ್ರಚಾರಗೊಳಿಸಿತು. ರಾಯಚೂರಿನ ಅಡವಿರಾವ್ ಫಡ್ನಾವಿಸ್, ಆರ್.ಜಿ.ಜೋಷಿ, ಗಾಣದಾಳ್ ನಾರಾಯಣಪ್ಪ, ವೀರಣ್ಣಮಾಸ್ತರ ಮೊದಲಾದವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಚಳವಳಿ ಹರಡಿತು. 1928ರಲ್ಲಿ ರಾಯಚೂರಿನಲ್ಲಿ ಸ್ಥಾಪನೆಗೊಂಡ ಕರ್ನಾಟಕ ಸಂಘ ಇನ್ನೊಂದು ಮುಖ್ಯ ಘಟ್ಟವಾಯಿತು. 1930ರಲ್ಲಿ ಗಾಂಧೀಜಿಯವರು ಕೊಪ್ಪಳ ತಾಲ್ಲೂಕಿನ ಮೂಲಕ ರೈಲಿನಲ್ಲಿ ಹಾದುಹೋದಾಗ ಅವರನ್ನು ಅನೇಕರು ಭೇಟಿಯಾದರು. 1934ರಲ್ಲಿ ರಾಯಚೂರಿನಲ್ಲಿ 20ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. 1938ರಲ್ಲಿ ಹೈದರಾಬಾದ್ ಸಂಸ್ಥಾನದ ಪ್ರದೇಶ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂತು. ಈ ಭಾಗದ ಜನರು ಮೂರು ನಿಟ್ಟಿನಲ್ಲಿ ತಮ್ಮ ಹೋರಾಟವನ್ನು ಮುಂದುವರಿಸಬೇಕಾಗಿತ್ತು. ಒಂದು ಕಡೆ ಬ್ರಿಟಿಷರಿಂದ ವಿಮೋಚನೆ; ಇನ್ನೊಂದು ಕಡೆ ಜಹಗೀರ್‌ದಾರಿ ವ್ಯವಸ್ಥೆ ನಿಜಾಮ್‌ಶಾಹಿಯಿಂದ ಬಿಡುಗಡೆ; ಮೂರನೆಯದಾಗಿ ಕನ್ನಡೇತರ ರಾಜ್ಯದಿಂದ ಹೊರಬಂದು ಕನ್ನಡನಾಡಿನ ಏಕೀಕರಣ ಸಾಧಿಸುವುದು.

ಸಿರೂರು ವೀರಭದ್ರಪ್ಪ ಅಳವಂಡಿ ಶಿವಮೂರ್ತಿಸ್ವಾಮಿ, ಎಲ್.ಕೆ.ಷರಾಫ್, ಡಿ.ಜಿ.ಬಿಂದು, ಜನಾರ್ಧನರಾವ್‌ದೇಸಾಯಿ, ಬುರ್ಲಿಬಿಂದು ಮಾಧವರಾವ್, ಜಿ.ಕೆ.ಪ್ರಾಣೇಶಾಚಾರ್ಯ ಮತ್ತಿತರರು ಜನಜಾಗೃತಿ ಮತ್ತು ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದರು. ಸ್ವಾತಂತ್ರ್ಯ ಚಳವಳಿ ಮತ್ತು ಕರ್ನಾಟಕ ಏಕೀಕರಣ ಚಳವಳಿಗಳು ನಿಧಾನವಾಗಿಯಾದರೂ ದೃಢವಾಗಿ ಪ್ರಗತಿಯಲ್ಲಿದ್ದಾಗಲೇ ಇಲ್ಲಿ ಜನತೆ ಹೊಸ ಸಮಸ್ಯೆಯನ್ನು ಎದುರಿಸಬೇಕಾಯಿತು. 1945ರ ಅನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದು ನಿಚ್ಚಳವಾಗುತ್ತಿದ್ದಂತೆಲ್ಲ ಹೈದರಾಬಾದ್ ಸಂಸ್ಥಾನದ ನಿಜಾಮರು ಭಾರತ ಒಕ್ಕೂಟದಿಂದ ಪ್ರತ್ಯೇಕವಾಗುಳಿಯುವ ಪ್ರಯತ್ನದಲ್ಲಿ ತೊಡಗಿದರು. 1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾಯಿತು. ಅದೇ ತಿಂಗಳ 27ರಂದು ಹೈದರಾಬಾದ್ ರಾಜ್ಯ ಭಾರತ ಒಕ್ಕೂಟದಿಂದ ಪ್ರತ್ಯೇಕವಾಗುಳಿಯಲು ನಿರ್ಧರಿಸಿ ಸ್ವಾತಂತ್ರ್ಯ ಘೋಷಿಸಿಕೊಂಡಿತು. ಜೊತೆಗೆ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿರುವವರನ್ನು ದಮನ ಮಾಡುವುದಕ್ಕಾಗಿ ಜನರಲ್ಲಿ ಭಯ ಹುಟ್ಟಿಸಲು ರಜಾಕಾರರೆಂದು ಕರೆದುಕೊಂಡ ಮುಸ್ಲಿಮ್ ಉಗ್ರವಾದಿಗಳ ಗುಂಪು ಹಿಂಸಾಚಾರಕ್ಕಿಳಿಯಿತು. ಇದರಿಂದ ಅನೇಕಕಡೆ ಭೀಕರ ಲೂಟಿ, ದರೋಡೆ, ಕೊಲೆ, ಸುಲಿಗೆ, ಅತ್ಯಾಚಾರಗಳು ನಡೆದವು. ಆಗ ಈ ರಾಜ್ಯದ ಜನರ ರಕ್ಷಣೆಗೆ ಭಾರತ ಸರ್ಕಾರ ಮುಂದಾಗಿ 1948ರ ಸೆಪ್ಟೆಂಬರ್ 13ರಂದು ಪೊಲೀಸ್ ಕಾರ್ಯಾಚರಣೆ ಪ್ರಾರಂಭಿಸಿತು. ಅದೇ ತಿಂಗಳ 18ರಂದು ಹೈದರಾಬಾದ್ ಸಂಸ್ಥಾನವನ್ನು ವಶಪಡಿಸಿಕೊಂಡು ಭಾರತ ಒಕ್ಕೂಟದಲ್ಲಿ ಸೇರಿಸಲಾಯಿತು. 1956 ನವೆಂಬರ್ 1ರಂದು ಭಾಷಾವಾರು ರಾಜ್ಯಗಳ ರಚನೆಯಾದಾಗ ಕೊಪ್ಪಳವೂ ಸೇರಿದಂತೆ ಅಂದಿನ ರಾಯಚೂರು ಜಿಲ್ಲೆ ಮತ್ತು ಹೈದರಾಬಾದ್ ಕರ್ನಾಟಕ ಭಾಗ ವಿಶಾಲ ಮೈಸೂರು ರಾಜ್ಯದಲ್ಲಿ ಒಂದಾಯಿತು.

ಈ ಜಿಲ್ಲೆ ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಉತ್ತಮ ಪರಂಪರೆ ಹೊಂದಿದೆ. ಶೈವ ಮಠಗಳು, ಅಗ್ರಹಾರಗಳು, ಜೈನ ಕೇಂದ್ರಗಳಿಂದ ಕೂಡಿರುವುದಲ್ಲದೆ ಜನಪದ ಸಾಹಿತ್ಯ ಸಂಪತ್ತಿನಿಂದಲೂ ಕೂಡಿದೆ. ವೀರಶೈವಧರ್ಮ ಹೊಸ ಸಾಂಸ್ಕೃತಿಕ ಪರಿಸರವನ್ನು ಸೃಷ್ಟಿಸಿತು. ಯಲಬುರ್ಗಾ ತಾಲ್ಲೂಕಿನ ಕುಕನೂರಿನ ಕಲ್ಲೇಶ್ವರ ದೇವಾಲಯ ಮತ್ತು ಅದೇ ತಾಲ್ಲೂಕಿನ ಇಟಗಿಯ ಮಹಾದೇವ ದೇವಾಲಯ ಚಾಳುಕ್ಯ ಪರಂಪರೆಯ ಶಿಲ್ಪ ಮತ್ತು ವಾಸ್ತುಗಳನ್ನು ಹೊಂದಿವೆ. ಕೊಪ್ಪಳದ ಕೋಟೆ ನೆಲಮಟ್ಟದಿಂದ 400' ಎತ್ತರದ ಗುಡ್ಡದ ಮೇಲಿದ್ದು ಅದನ್ನು ವಿನ್ಯಾಸ ಮತ್ತು ಭದ್ರತೆಯ ದೃಷ್ಟಿಯಿಂದ ಐರೋಪ್ಯ ದಂಡನಾಯಕರೂ ಮೆಚ್ಚಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಕೌರೂರು, ಬಳಂಗೆರೆ, ಆಳವಂಡಿ, ತಳಕಲ್ಲು, ಆನೆಗೊಂದಿ, ಮುನಿರಾಬಾದ್ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿವೆ. ಸ್ತ್ರೀ ದೇವತೆಗಳ ಆರಾಧನೆ ಅತ್ಯಂತ ಪೂರ್ವಕಾಲದಿಂದಲೂ ಬಂದ ಬಳುವಳಿ. ಕುಕನೂರಿನ ಮಹಾಮಾಯ, ಜೇಷ್ಠಾದೇವಿ, ಸಂಕನೂರಿನ ಸಂಕಲಾದೇವಿ, ಹೊಸೂರಿನ ಮಹಾಮಾಯಾ, ಹುಲಿಗಿಯ ಹುಲಿಗೆಮ್ಮ ಇವು ಪ್ರಸಿದ್ಧ ಶಕ್ತಿ ದೇವತೆಗಳು. ಕುಷ್ಟಗಿಯ ಅಡವಿರಾಯನ ಜಾತ್ರೆ, ಕೊಪ್ಪಳದ ಗವಿಸಿದ್ಧೇಶ್ವರ ಜಾತ್ರೆ, ಕನಕಗಿರಿ ಜಾತ್ರೆ, ಯಲಬುರ್ಗಾ ತಾಲ್ಲೂಕಿನ ಮಂಗಳೂರಿನ ಮಂಗಳೇಶ್ವರ ಜಾತ್ರೆಗಳು ಭಕ್ತಾದಿಗಳನ್ನು ಆಕರ್ಷಿಸುತ್ತವೆ.

ಶಾಸ್ತ್ರೀಯ ಸಂಗೀತ ಇಲ್ಲಿ ಹೆಚ್ಚು ಜನಪ್ರಿಯ; ದಾಸ ಪರಂಪರೆಯೂ ಉಂಟು. ಪ್ರಾಚೀನ ಕಾಲದಿಂದಲೂ ಸಾಹಿತ್ಯ ರಚನೆಗೆ, ಕವಿಪಂಡಿತರಿಗೆ ಹೆಸರುವಾಸಿ. ಇತ್ತೀಚಿನ ಸಾರಸ್ವತ ಲೋಕದ ಹಲವಾರು ಸಾಧಕರು ಇಲ್ಲಿಯವರು. ಇವರಲ್ಲಿ ಸಿದ್ದಯ್ಯ ಪುರಾಣಿಕ, ಪಾಂಡುರಂಗರಾವ್ ದೇಸಾಯಿ, ಜಯತೀರ್ಥ ರಾಜಪುರೋಹಿತ, ಇಟಗಿ ರಾಘವೇಂದ್ರ, ಕುಷ್ಟಗಿ ರಾಘವೇಂದ್ರರಾವ್, ವಸಂತ ಕುಷ್ಟಗಿ, ದೇವೇಂದ್ರ ಕುಮಾರ ಹಕಾರಿ, ಎಚ್.ಎಸ್.ಪಾಟೀಲ, ಬಿ.ಆರ್.ತುಬಾಕಿ, ಗವಿಸಿದ್ಧ ಬಳ್ಳಾರಿ, ನಾ.ಭ.ಶಾಸ್ತ್ರಿಕೀರ್ತನಕೇಸರಿ ಜಯರಾಮಾಚಾರ್ಯ, ಮಾಧವರಾವ್ ಮುಧೋಳ (ಉರ್ದು ಮತ್ತು ಕನ್ನಡ ಭಾಷೆಗಳೆರಡರಲ್ಲೂ ಪರಿಣಿತಿ ಪಡೆದಿದ್ದರು. ಉರ್ದು-ಕನ್ನಡ ನಿಘಂಟಿನಲ್ಲಿ ಇವರು ಕೆಲಸಮಾಡಿದ್ದರು) ಮೊದಲಾದವರನ್ನು ಇಲ್ಲಿ ಹೆಸರಿಸಬಹುದು.

(ಡಿ.ಎಸ್.ಜಿ.)

**ತಾಲ್ಲೂಕು:** ಕೊಪ್ಪಳ ತಾಲ್ಲೂಕು ಹಾಗೂ ಅದರ ಮುಖ್ಯ ಪಟ್ಟಣ. ದಕ್ಷಿಣಕ್ಕೆ ತುಂಗಭದ್ರಾ ಜಲಾಶಯ, ಪಶ್ಚಿಮಕ್ಕೆ ಧಾರವಾಡ ಜಿಲ್ಲೆ, ಉತ್ತರಕ್ಕೆ ಯಲಬುರ್ಗ ತಾಲ್ಲೂಕು ಮತ್ತು ಪೂರ್ವಕ್ಕೆ ಗಂಗಾವತಿ ತಾಲ್ಲೂಕು ಇವೆ. ಕೊಪ್ಪಳ, ಇರಕಲ್ಲಗಡ, ಇತ್ತಿನಹಾಳ ಮತ್ತು ಅಲವಂಡಿ ಈ ನಾಲ್ಕು ಹೋಬಳಿಗಳಿವೆ. 156 ಹಳ್ಳಿಗಳಿವೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 1,378.6ಚ.ಕಿಮೀ.

ತಾಲ್ಲೂಕಿನ ಬಹುಭಾಗ ಕಪ್ಪುಮೆಕ್ಕಲು ಮಣ್ಣಿನ ಮಟ್ಟಸ ಪ್ರಸ್ಥಭೂಮಿ. ತಾಲ್ಲೂಕಿನ ಈಶಾನ್ಯ ಮತ್ತು ಕೊಪ್ಪಳ ಪಟ್ಟಣದ ಸಮೀಪದಲ್ಲಿ ಗುಡ್ಡಗಳಿವೆ. ತುಂಗಭದ್ರಾನದಿ ತಾಲ್ಲೂಕಿನ ದಕ್ಷಿಣದ ಗಡಿಯಾಗಿತ್ತು. ಈಗ ತುಂಗಭದ್ರಾ ಜಲಾಶಯದ ಹರವಿನಲ್ಲಿ ಆ ಅಂಚಿನ ಭಾಗಗಳು ಮುಳುಗಿವೆ. ತುಂಗಭದ್ರಾ ಅಣೆಕಟ್ಟಿರುವುದು ತಾಲ್ಲೂಕಿನ ಆಗ್ನೇಯದಲ್ಲಿ ಮುನಿರಾಬಾದ್ ಬಳಿ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 594.65ಮಿಮೀ. ಕೃಷಿ ತಾಲ್ಲೂಕಿನ ಮುಖ್ಯ ಜೀವನೋಪಾಯ. ಸಾಗುವಳಿಯಾಗುತ್ತಿರುವ ಒಟ್ಟು 3,40,592 ಎಕರೆಗಳಲ್ಲಿ 5,285ಕ್ಕೂ ಹೆಚ್ಚು ಎಕರೆಗಳಿಗೆ ನೀರಾವರಿ ಸೌಲಭ್ಯವಿದೆ (ಕಾಲುವೆಯಿಂದ 4,702 ಎಕರೆಗಳು, ಬಾವಿಗಳಿಂದ 285 ಎಕರೆಗಳು, ಇತರ ಮೂಲಗಳಿಂದ 150 ಎಕರೆಗಳು). ಜೋಳ (51,940), ನೆಲಗಡಲೆ (37,005), ಹತ್ತಿ (27,835), ಗೋದಿ (7,200), ತೊಗರಿ (5,562), ಬಾಜ್ರ (4,593), ಬತ್ತ (2,942), ಕಬ್ಬು (2,583), ಹುರುಳಿ (1,320), ಹರಳು (260) ಮುಖ್ಯ ಬೆಳೆಗಳು.

ಕೊಪ್ಪಳದಿಂದ 13ಕಿಮೀ ದೂರದಲ್ಲಿರುವ ಕಿನ್ನಾಳು ಗ್ರಾಮ ಮರದ ಕುಶಲ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿನ ಕೆಲವು ಚಿತ್ರಗಾರ ಮನೆತನದವರು ಉತ್ತಮವಾಗಿ ರಚಿಸಿ ಬಣ್ಣಹಾಕಿದ ದೇವವಿಗ್ರಹಗಳು, ಪ್ರಾಣಿಗಳ ಬೊಂಬೆಗಳು, ಹಣ್ಣು ತರಕಾರಿಗಳ ತದ್ರೂಪ ಬೊಂಬೆಗಳು, ನಾಟಕಗಳಲ್ಲಿ ಬಳಸುವ ಕಿರೀಟ, ಮುಖವಾಡ, ತೊಟ್ಟಿಲು, ಪೀಠಗಳನ್ನು ತಯಾರಿಸುತ್ತಾರೆ. ನೇಯ್ಗೆ, ಕೊಂಬಿನಿಂದ ಬಾಚಣಿಗೆಯ ತಯಾರಿಕೆ ಈ ಮೊದಲಾದ ಉದ್ಯಮಗಳೂ ಇಲ್ಲಿವೆ.

ತುಂಗಭದ್ರಾ ನದಿಯ ಉಪನದಿಯಾದ ಹಿರೇಹಳ್ಳದ ಎಡದಂಡೆಯ ಮೇಲಿರುವ ಕೊಪ್ಪಳ ಈ ತಾಲ್ಲೂಕಿನ ಮುಖ್ಯ ಪಟ್ಟಣ. ಜನಸಂಖ್ಯೆ 56,145. ಇದು ತಾಲ್ಲೂಕಿನ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯಾಕೇಂದ್ರ ಹಾಗೂ ಹುಬ್ಬಳ್ಳಿ ಗುಂತಕಲ್ಲು ರೈಲುಮಾರ್ಗದ ಒಂದು ನಿಲ್ದಾಣ. ಬಳ್ಳಾರಿ, ಕುಷ್ಟಗಿ, ಹುಬ್ಬಳ್ಳಿ, ಯಲಬುರ್ಗ, ಗಂಗಾವತಿಗಳಿಗೆ ರಸ್ತೆ ಸಂಪರ್ಕವಿದೆ. ಕೈಮಗ್ಗದ ಬಟ್ಟೆಗಳಿಗೆ ಇದು ಪ್ರಸಿದ್ಧ. ವಾರ್ಷಿಕವಾಗಿ ಜನವರಿಯಲ್ಲಿ ಗವಿಸಿದ್ಧೇಶ್ವರ ಜಾತ್ರೆ ನಡೆಯುತ್ತದೆ. ಈ ಪಟ್ಟಣದ ಪಶ್ಚಿಮಕ್ಕೆ ಬೆಟ್ಟಗಳ ಸಾಲು ಹಬ್ಬಿದೆ. ಇವುಗಳಲ್ಲಿ ಪಾಲ್ಕಿ ಗುಂಡು ಅತ್ಯಂತ ಎತ್ತರವಾದ್ದು (2339'). ಪೂರ್ವಕ್ಕಿರುವ ಬೆಟ್ಟಗಳ ಸಾಲಿನಲ್ಲಿ ಗವಿಮಠವಿದೆ. ದಕ್ಷಿಣಕ್ಕೆ ಮತ್ತೊಂದು ಬೆಟ್ಟದ ಸಾಲು ಇದೆ. ಅದನ್ನು ಬಹದ್ದೂರ್ ಬಂಡೆ (1980') ಎನ್ನುತ್ತಾರೆ.

ಗವಿಮಠ ಬೆಟ್ಟದಲ್ಲಿ ನಾಲ್ಕು ಗವಿಗಳಿವೆ. ಅಲ್ಲದೆ ಪುರಾತನವಾದ ವೀರಶೈವ ಮಠ ಮತ್ತು ಜೈನಸಮಾಧಿಗಳೂ ಇವೆ. ಪಾಲ್ಕಿಗುಂಡಿನ ಪಶ್ಚಿಮಕ್ಕಿರುವ ಮಲಿಮಲ್ಲಪ್ಪನ ಬೆಟ್ಟದಲ್ಲಿ ಮೋರಿಯರ ಅಂಗಡಿ ಎಂದು ಕರೆಯುವ ಬೃಹತ್ ಶಿಲಾಯುಗೀನ ಕಲ್ಮನೆ ಸಮಾಧಿಗಳಿವೆ. ಅಶೋಕನ ಎರಡು ಲಘುಪ್ರಸ್ತರ ಧರ್ಮಶಾಸನಗಳು ಸಿಕ್ಕಿದ್ದು ಗವಿಮಠ ಮತ್ತು ಪಾಲ್ಕಿಗುಂಡು ಬೆಟ್ಟಗಳಲ್ಲಿ. ಇವುಗಳಿಂದ ಕೊಪ್ಪಳ ಪ್ರ.ಶ.ಪೂ.3ನೆಯ ಶತಮಾನದಷ್ಟು ಪ್ರಾಚೀನವಾದ್ದೆಂದು ಊಹಿಸಬಹುದು. ಪ್ರ.ಶ.ಪೂ. .9ನೆಯ ಶತಮಾನದಿಂದ 13ನೆಯ ಶತಮಾನದವರೆಗಿನ ಹಲವು ಶಿಲಾಶಾಸನಗಳೂ ಅನಂತರದ ಮುಸ್ಲಿಂ ದಾಖಲೆಗಳೂ ದೊರಕಿವೆ. ಕೊಪಣಪುರವರಾಧೀಶ್ವರರಾದ ಶಿಲಾಹಾರರ ಒಂದು ಶಾಖೆಗೆ ಇದು ರಾಜಧಾನಿಯಾಗಿದ್ದಿರಬಹುದು. ಗಂಗ ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕೊಪ್ಪಳ ಮುಖ್ಯ ಕೇಂದ್ರವಾಗಿದ್ದಿರಲೂಬಹುದು. ಇದನ್ನು ಶಾಸನ ಮತ್ತು ಸಾಹಿತ್ಯಗಳಲ್ಲಿ ಕೊಪಣ, ಕುಪಣ, ಕುಪಿನ ಎಂದು ಕರೆದಿರುವುದಲ್ಲದೆ, ಆದಿತೀರ್ಥ, ಮಹಾತೀರ್ಥ,ವಿದಿತ ಮಹಾ ಕೊಪಣನಗರಮುಂತಾಗಿ ಬಣ್ಣಿಸಲಾಗಿದೆ. ಒಂದು ಕಾಲದಲ್ಲಿ ಪ್ರಸಿದ್ಧ ಜೈನಕ್ಷೇತ್ರವಾಗಿತ್ತು. ಇಲ್ಲಿ 722 ಬಸದಿಗಳೂ 24 ಜೈನಸಂಘಗಳೂ ಇದ್ದುವೆಂದು ಹೇಳಲಾಗಿದೆ. ಇಲ್ಲಿ ಅನೇಕ ಜೈನಶಾಸನಗಳೂ ದೊರೆತಿವೆ.

ಇತಿಹಾಸಪ್ರಸಿದ್ಧವಾದ ಕೊಪ್ಪಳದ ಕೋಟೆಯನ್ನು ಕಟ್ಟಿದವರು ಯಾರೆಂಬುದು ತಿಳಿದಿಲ್ಲ. ಟಿಪ್ಪುಸುಲ್ತಾನ 1786ರಲ್ಲಿ ಇದನ್ನು ವಶಪಡಿಸಿಕೊಂಡು, ಫ್ರೆಂಚ್ ಶಿಲ್ಪಿಗಳ ನೆರವಿನಿಂದ ಇನ್ನೂ ಭದ್ರ ಪಡಿಸಿದನೆಂದು ತಿಳಿದುಬರುತ್ತದೆ. ಕಡಿದಾದ ಮೆಟ್ಟಿಲುಗಳನ್ನೊಳಗೊಂಡಿದೆ. ದಕ್ಷಿಣ ಭಾರತದ ದುರ್ಗಮ ಕೋಟೆಗಳಲ್ಲಿ ಕೊಪ್ಪಳ ಕೋಟೆಯೂ ಒಂದು. ಈ ಕೋಟೆಯನ್ನು 1790ರಲ್ಲಿ ಇಂಗ್ಲಿಷ್ ಮತ್ತು ನಿಜಾಮಿ ಪಡೆಗಳು ಸತತವಾಗಿ ಮುತ್ತಿಗೆ ಹಾಕಿದ್ದುಂಟು. 1858ರಲ್ಲಿ ಈ ದುರ್ಗ ಮುಂಡರಗಿ ಭೀಮರಾಯನ ವಶದಲ್ಲಿತ್ತು. 1949ರ ತನಕ ಕೊಪ್ಪಳ ನವಾಬ್ ಸಾಲಾರ್‌ಜಂಗನ ಜಹಗೀರಿಯಾಗಿತ್ತು.

**(ಜೆ.ಆರ್.ಪಿ., ಎಚ್.ಆರ್.ಆರ್.ಬಿ.)**

ಕೊಪ್ಪಳ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಖ್ಯ ಪಾತ್ರವಹಿಸಿತ್ತು. ಸಂಗ್ರಾಮದ ಜ್ವಾಲೆ 1858ರಲ್ಲಿ ಮುಂಡರಗಿ ಭೀಮರಾಯ(ನೋಡಿ) ಹಾಗೂ ಹಮ್ಮಿಗೆ ಕೆಂಚನಗೌಡ ಇವರ ಹೋರಾಟದಿಂದಲೇ ಪ್ರಾರಂಭವಾಯಿತೆನ್ನಬಹುದು. ಹೈದರಾಬಾದು ಕರ್ನಾಟಕದಲ್ಲಿ ಕೊಪ್ಪಳ ಭಾಗದಲ್ಲಿಯೇ ಮೊದಲಿಗೆ ರಾಜಕೀಯ ಚಟುವಟಿಕೆಗಳು ಕಂಡುಬಂದವು. ಬಹಳ ಮೊದಲೇ ಕೀರ್ತನಕೇಸರಿ ಜಯರಾಮಾಚಾರ್ಯರು ಪುರಾಣದ ಕಥೆಗಳಿಗೆ ರಾಜಕೀಯ ರಂಗು ಕೊಟ್ಟು ಸ್ಫೂರ್ತಿ ಹುಟ್ಟುವಂತೆ ಸ್ವಚ್ಛಂದ ಶೈಲಿಯಲ್ಲಿ ಕೀರ್ತನಗಳನ್ನು ಹೇಳತೊಡಗಿ ಕರ್ನಾಟಕದಲ್ಲೆಲ್ಲ ಅಸಹಕಾರ, ಕಾಯಿದೆ ಭಂಗ, ಖಾದಿ ಪ್ರಚಾರ, ನಿಧಿಸಂಗ್ರಹಗಳಿಗಾಗಿ ಅದನ್ನು ಬಳಸಿಕೊಂಡರು. ಪುಟ್ಟಾಭಟ್ಟ ಜಹಗೀರದಾರ ಮತ್ತು ಹೊಸಪೇಟೆಯ ಚಕ್ರಪಾಣಿ ಆಚಾರ್ಯರು ಈ ಭಾಗದಲ್ಲಿ ಖಾದಿ ಪ್ರಚಾರ ಮಾಡಿದರು. ಇಲ್ಲಿಯವರಾದ ಬಸವಂತರಾವ್ ಕಾಟರಹಳ್ಳಿ ಮತ್ತು ಹಿರೇಮಠ ಅವರು ಹೈದರಾಬಾದಿನಲ್ಲಿ ಪೊಲೀಸರ ಕಣ್ಣುತಪ್ಪಿಸಿ ರಾಷ್ಟ್ರಧ್ವಜ ಹಾರಿಸಿದರು. 1928ರಷ್ಟು ಮುಂಚೆಯೇ ಕಾಂಗ್ರೆಸ್ಸನ್ನು ಸೇರಿದವರಲ್ಲಿ ಪ್ರಮುಖರೆಂದರೆ ಕೊಪ್ಪಳದವರಾದ ಎಚ್.ಕೊಟ್ರಪ್ಪ, ಹಂಪಿ ನರಸಿಂಗರಾವ್ ಮತ್ತು ಸಿರೂರು ವೀರಭದ್ರಪ್ಪನವರು. ನಿಜಾಮ್ ಮತ್ತು ಬ್ರಿಟಿಷ್ ಸರ್ಕಾರ ಇವರಿಗೆ ಬಹಳ ತೊಂದರೆ ಕೊಟ್ಟಿತ್ತು. 1938ರಲ್ಲಿ ಹೈದರಾಬಾದಿನಲ್ಲಿ ನಡೆದ ವಂದೇ ಮಾತರಂ ವಿದ್ಯಾರ್ಥಿ ಆಂದೋಲನದಲ್ಲಿ ಮತ್ತು 1941ರಲ್ಲಿ ನಡೆದ ವೈಯಕ್ತಿಕ ಸತ್ಯಾಗ್ರಹದಲ್ಲಿ ಕೊಪ್ಪಳದ ವಿದ್ಯಾರ್ಥಿ ಮುಖಂಡ ಇಟಗಿ ವಿರೂಪಾಕ್ಷಯ್ಯನವರ ನೇತೃತ್ವದಲ್ಲಿ ಅನೇಕರು ಸೆರೆಮನೆ ಸೇರಿದರು. ಈ ಭಾಗದಲ್ಲಿದ್ದ ಕುಕನೂರಿನ ವಿದ್ಯಾವಂತ ಗುರುಕುಲ ಅದರ ಸಂಸ್ಥಾಪಕರಾದ ರಾಘವೇಂದ್ರರಾವ್ ದೇಸಾಯಿ ಅವರ ಮುಂಧೋರಣೆಯಿಂದ ರಾಜಕೀಯ ಜಾಗೃತಿಯಲ್ಲಿ ಬಹಳ ಮಹತ್ವದ ಪಾತ್ರ ವಹಿಸಿತು. ಈ ಹೊತ್ತಿಗೆ ನಗರದ ಪ್ರಮುಖ ವಕೀಲರನೇಕರು ರಾಜಕೀಯದಲ್ಲಿ ದುಮುಕಿದರು. ಹಳ್ಳಿಹಳ್ಳಿಗಳಲ್ಲಿ ವಾಚನಾಲಯಗಳು ಸ್ಥಾಪನೆಯಾದವು. ಚಲೇಜಾವ್ ಚಳವಳಿಯಿಂದಾರಂಭಿಸಿ ಸ್ವಾತಂತ್ರ್ಯದವರೆಗೆ ಈ ಭಾಗದಲ್ಲಿ ಆದ ಹೆಚ್ಚಿನ ಜಾಗೃತಿ ಮುಖಂಡರಾದ ಜನಾರ್ದನರಾವ್ ದೇಸಾಯಿ (ವಕೀಲರು), ಪ್ರಾಣೇಶಾಚಾರ್ ಮುಂತಾದವರ ಲಕ್ಷ್ಯವನ್ನು ಸೆಳೆಯಿತು. ತಂಡತಂಡವಾಗಿ ಸತ್ಯಾಗ್ರಹಿಗಳು ಕೊಪ್ಪಳಕ್ಕೆ ಬಂದು ಸೆರೆಯಾದರು. ಭಾರತ ಸ್ವತಂತ್ರವಾದರೂ ಇನ್ನೂ ಜಾಗೀರಾಗಿ ಉಳಿದಿದ್ದ ಕೊಪ್ಪಳ ಭಾಗದಲ್ಲಿ ಅನೇಕ ಕಡೆ ಜನರು ರಾಷ್ಟ್ರಧ್ವಜವನ್ನು ಹಾರಿಸಿ ಸ್ವಾತಂತ್ರ್ಯ ಘೋಷಿಸಿ ಮತ್ತೆ ಸೆರೆಮನೆಗೆ ಹೋದರು. ಈ ಚಳವಳಿಯೇ ಪ್ರಬಲವಾಗಿ ಹೈದರಾಬಾದ್ ಸ್ವಾತಂತ್ರ್ಯಾಂದೋಳನದ ಸ್ವರೂಪ ತಳೆಯಿತು. ಚಳವಳಿ ಹೆಚ್ಚಿದಂತೆ ನಿಜಾಮರ ದಬ್ಬಾಳಿಕೆ ಹೆಚ್ಚಾದಾಗ ಕೊಪ್ಪಳ ಭಾಗದಿಂದ ಜೈಲು ಸೇರಿದ ಬೆಣಕಲ್ ಭೀಮಸೇನರಾವ್ ಎಂಬ ತರುಣ ಸತ್ಯಾಗ್ರಹಿ ಗುಲ್ಬರ್ಗ ಜೈಲಿನಲ್ಲಿ ನಡೆದ ಲಾಠಿ ಪ್ರಹಾರದಲ್ಲಿ ಮೃತನಾದ. ಜನ ರೊಚ್ಚಿಗೆದ್ದರು. ಗದಗಿನಲ್ಲಿ ಪ್ರಾದೇಶಿಕ ಸ್ಟೇಟ್ ಕಾಂಗ್ರೆಸ್ ಕೇಂದ್ರವನ್ನು ತೆರೆದರು. ನಿರಾಶ್ರಿತರಾಗಿ ಹೊರಬರುವ ಕುಟುಂಬಗಳ ವ್ಯವಸ್ಥೆ ಮಾಡಬೇಕಾಯಿತು. ಕೊಪ್ಪಳದ ಗಡಿಯ ಸುತ್ತ ಕಾಂಗ್ರೆಸಿನ ಕಾರ್ಯಕರ್ತರ ಸಶಸ್ತ್ರ ಶಿಬಿರಗಳು ಏರ್ಪಟ್ಟವು. ನಿಜಾಮರ ಪೊಲೀಸು, ಸೈನ್ಯ ಮತ್ತು ರಜಾಕಾರರ ವಿರುದ್ಧ ದಾಳಿ, ಕಚೇರಿಗಳ ನಾಶ ಮೊದಲಾದವು ನಡೆದವು. ಗಡಿಭಾಗದ ಅನೇಕ ಹಳ್ಳಿಗಳು ಸಂಪೂರ್ಣವಾಗಿ ಈ ಕಾರ್ಯಕರ್ತರ ಅಧೀನವಾದವು. ಹೀಗೆ ನಿಜಾಮರ ಸತ್ತೆಯನ್ನು ನಿಷ್ಕ್ರಿಯಗೊಳಿಸುವ ಆಂದೋಲನ ತೀವ್ರಗೊಂಡಾಗ ಭಾರತ ಸರ್ಕಾರದಿಂದ ಪೊಲೀಸ್ ಕಾರ್ಯಾಚರಣೆ ನಡೆದು ಹೈದರಾಬಾದಿನೊಂದಿಗೆ ಕೊಪ್ಪಳವೂ ಸ್ವತಂತ್ರವಾಯಿತು. **ಜೆ.ಆರ್.ಪಿ.**

**ಕೊಬ್ಬುಗಳು : ನೋಡಿ – ಎಣ್ಣೆಗಳು, ಕೊಬ್ಬುಗಳು ಮತ್ತು ಮೇಣಗಳು**

**ಕೊಮಿಷಿಯ :** ಪ್ರಾಚೀನ ರೋಮಿನ ಚುನಾಯಿತ ಶಾಸಕಾಂಗ ಸಭೆಗಳು; ಕೊಮಿಷಿಯಂ ಎಂಬ ಪದದ ಬಹುವಚನರೂಪ. ಒಂದು ನಿರ್ದಿಷ್ಟ ದಿನದಂದು ಸಾಮಾನ್ಯಜನರ ಕ್ಯೂರಿಯ, ಸೆಂಚೂರಿಯ ಅಥವಾ ಟ್ರೈಬಸ್ ಎಂಬ ಮೂರು ವಿಧಗಳಲ್ಲೊಂದು ರೀತಿಯ ಸಭೆಯನ್ನು ಸೇರಿಸಲಾಗುತ್ತಿತ್ತು. ಕ್ರಮೇಣ ಕೊಮಿಷಿಯವೆಂದರೆ ಚುನಾವಣೆಗಳೆಂಬ ಅರ್ಥ ಬಳಕೆಗೆ ಬಂತು. ಆಡಳಿತಾಧಿಕಾರಿಗಳಾದ ಮ್ಯಾಜಿಸ್ಟ್ರೇಟರ ತೀರ್ಮಾನಗಳಿಗೆ ವಿಧಾಯಕತೆಯನ್ನು ನೀಡುವ ಸಲುವಾಗಿ ಕೊಮಿಷಿಯ ಸಭೆಗಳನ್ನು ಕರೆಯಲಾಗಿತ್ತು. ಆದರೆ ಆ ತೀರ್ಮಾನಗಳ ವಿಧಿಗಳನ್ನು ಚರ್ಚಿಸುವ ಅಥವಾ ಅವಕ್ಕೆ ತಿದ್ದುಪಡಿ ಮಂಡಿಸುವ ಹಕ್ಕು ಸಭೆಗಳಿಗಿರಲಿಲ್ಲ. ಆ ಸಭೆಗಳ ಸದಸ್ಯತ್ವದಲ್ಲಿ ವ್ಯತ್ಯಾಸಗಳಿದ್ದರೂ ಶ್ರೀಮಂತವರ್ಗ ಅಂಥ ಸಭೆಗಳಲ್ಲಿ ಭಾಗವಹಿಸದಿದ್ದರೂ ಅವುಗಳ ತೀರ್ಮಾನಗಳು ಸರ್ವಗ್ರಾಹ್ಯವಾಗಿದ್ದುವು. ತಾತ್ತ್ವಿಕವಾಗಿ ಕೊಮಿಷಿಯ ಸಭೆಗಳಿಗೆ ಪರಮಾವಧಿಕಾರವಿತ್ತು. ಆದರೆ ವಸ್ತುತಃ ಮ್ಯಾಜಿಸ್ಟ್ರೇಟರು ಮಂಡಿಸಿದ ಸಲಹೆಗಳ ವಿನಾ ಬೇರಾವ ಬಗೆಯ ತೀರ್ಮಾನಗಳನ್ನೂ ಈ ಸಭೆಗಳು ಕೈಗೊಳ್ಳುವಂತಿರಲಿಲ್ಲ.

ಕೊಮಿಷಿಯ ಸಭೆಗಳಲ್ಲಿ ಮುಖ್ಯವಾದುವು ಮೂರು: ಕೊಮಿಷಿಯ ಕ್ಯೂರಿಯೇಟ, ಕೊಮಿಷಿಯ ಸೆಂಚೂರಿಯೇಟ ಮತ್ತು ಕಾನ್ಸಿಲಿಯೇ ಪ್ಲೆಬಿಸ್.

**ಕೊಮಿಷಿಯ ಕ್ಯೂರಿಯೇಟ:** ಪ್ರಾಚೀನ ರಾಜರ ಕಾಲದಿಂದಲೂ ಬಳಕೆಯಲ್ಲಿದ್ದ 30 ಕ್ಯೂರಿಯಗಳ ಸಭೆ. ಗಣರಾಜ್ಯದ ಕಾಲದಲ್ಲಿ ಅದರ ಪ್ರಾಮುಖ್ಯ ತಗ್ಗಿತು. ಆದರೂ ಯಾವುದೇ ಮಸೂದೆ ಶಾಸನವಾಗಬೇಕಾದರೆ ತಾತ್ತ್ವಿಕವಾಗಿ ಅದರ ಒಪ್ಪಿಗೆ ಬೇಕಾಗಿತ್ತು. ಕ್ಯೂರಿಯ ಕ್ಯಾಲಬ್ರ ಎಂಬ ಹೆಸರಿನಿಂದ ಈ ಸಭೆ ಸೇರಿ ಉಯಿಲು ದತ್ತು, ಮತೀಯ ತೀರ್ಮಾನ ಮತ್ತು ಧಾರ್ಮಿಕ ಗುರುಗಳ ನೇಮಕಕ್ಕೆ ಒಪ್ಪಿಗೆ ನೀಡಬೇಕಾಗಿತ್ತು.

**ಕೊಮಿಷಿಯ ಸೆಂಚೂರಿಯೇಟ:** ರೋಮಿನ ಚಕ್ರವರ್ತಿಗಳಲ್ಲಿ ಕಡೆಯವರಲ್ಲೊಬ್ಬನಾದ ಸರ್ವಿಯಸ್ ಟುಲ್ಲಿಯಸನಿಂದ ನಿರ್ಮಾಣವಾದ ಕೊಮಿಷಿಯ ಸೆಂಚೂರಿಯೇಟ ರೋಮ್ ಸರ್ಕಾರದ ಆಡಳಿತ ಘಟಕಗಳಲ್ಲಿ ಅತ್ಯಂತ ಕಿರಿದಾದ್ದು. ರಕ್ಷಣಸೇವೆಗೆ ಮೀಸಲಾದ ಸಭೆ, ರೋಮಿನ ಪ್ರಜೆಗಳೆಲ್ಲರನ್ನೂ ಅವರವರ ಅಂತಸ್ತು, ಐಶ್ವರ್ಯಗಳ ಆಧಾರದ ಮೇಲೆ ವಿವಿಧ ವರ್ಗಗಳನ್ನಾಗಿ ವಿಭಾಗಿಸಿ, ಆ ಆಧಾರದ ಮೇಲೆ ಅವರು ಒದಗಿಸಬೇಕಾಗಿದ್ದ ಸೈನ್ಯಬಲವನ್ನು ನಿರ್ಧರಿಸಲಾಗುತ್ತಿತ್ತು. ಕ್ರಿ.ಪೂ 5ನೆಯ ಶತಮಾನದಿಂದ ಕ್ರಿ.ಪೂ 3ನೆಯ ಶತಮಾನದವರೆಗೆ ಪ್ರಮುಖ ರಾಜಕೀಯ ಶಕ್ತಿಯಾಗಿದ್ದ ಕೊಮಿಷಿಯ ಸೆಂಚೂರಿಯೇಟದ ಸಭೆಯನ್ನು ಸೈನ್ಯದ ಕಹಳೆಯೂದಿ ಕರೆಯಲಾಗುತ್ತಿತ್ತು. ಉಚ್ಚಾಧಿಕಾರಿಗಳಾದ ಮ್ಯಾಜಿಸ್ಟ್ರೇಟರೇ ಅದರ ಅಧ್ಯಕ್ಷತೆ ವಹಿಸಬೇಕಾಗಿತ್ತು. ಈ ಸಭೆಯ ಸದಸ್ಯರ ಸಂಖ್ಯೆ 193; ಅದರಲ್ಲಿ 98 ಸದಸ್ಯರಿದ್ದ ಶ್ರೀಮಂತ ವರ್ಗದ್ದೇ ಬಹುಮತವಿತ್ತು. ಪ್ರ.ಶ.ಪೂ 241ರಲ್ಲಿ ಆ ಸಭೆಯ ಸದಸ್ಯತ್ವದ ವಿಚಾರದಲ್ಲಿ ತಿದ್ದುಪಡಿಯಾಗಿ, ಶ್ರೀಮಂತವರ್ಗದ ಸದಸ್ಯತ್ವವನ್ನು 70ಕ್ಕೆ ಇಳಿಸಿದರೂ ಅವರ ಪ್ರಾಬಲ್ಯವೇನೂ ಮಾಸದೆ ಉಳಿಯಿತು. ರಾಜ್ಯದ ವಿವಿಧ ಶ್ರೇಷ್ಠ ಅಧಿಕಾರಿಗಳಾದ ಕಾನ್ಸಲ್, ಪ್ರೇಟರ್, ಸೆನ್ಸಾರ್ ಮುಂತಾದವರ ಚುನಾವಣೆ, ಮರಣದಂಡನೆಯಂಥ ತೀವ್ರ ಅಪರಾಧಗಳ ಪುನರ್ವಿಮರ್ಶೆ ಮುಂತಾದ ಕಾರ್ಯಭಾರಗಳನ್ನು ಆ ಸಭೆ ನಿರ್ವಹಿಸಬೇಕಾಗಿತ್ತು. ಶತ್ರುರಾಜ್ಯಗಳ ಮೇಲೆ ಯುದ್ಧ ಸಾರಲು ಆ ಸಭೆಗೆ ಮಾತ್ರ ಹಕ್ಕಿರುತ್ತಿತ್ತು. ಪಂಗಡಗಳ ಸಮಿತಿಗಳು ಅಸ್ತಿತ್ವಕ್ಕೆ ಬಂದ ಮೇಲೆ ಕೊಮಿಷಿಯ ಸೆಂಚೂರಿಯೇಟವನ್ನು ಶಾಸಕಾಂಗ ಕಾರ್ಯಕ್ಕಾಗಿ ಸಭೆ ಸೇರಿಸುವುದು ಕಡಿಮೆಯಾಯಿತು. ಮ್ಯಾಜಿಸ್ಟ್ರೇಟರನ್ನು ಆರಿಸುವ ಹಕ್ಕು ಈ ಸಭೆಯದ್ದಾಗಿದ್ದರೂ ಅವರ ಹೆಸರುಗಳನ್ನು ಆ ಮೊದಲೇ ಸೂಚಿಸಿರುತ್ತಿದ್ದುದರಿಂದ ಕೊಮಿಷಿಯ ಸೆಂಚೂರಿಯೇಟದ ಪ್ರಾಮುಖ್ಯ ಇಲ್ಲವಾಯಿತು. ಕ್ರಿ.ಶ 3ನೆಯ ಶತಮಾನದವರೆಗೂ ಚುನಾವಣೆಗಳನ್ನು ಘೋಷಿಸಲು ಅದನ್ನು ಕರೆಯಲಾಗುತ್ತಿತ್ತು.

**ಕಾನ್ಸಿಲಿಯಂ ಪ್ಲೆಬಿಸ್:** ಜನಸಾಮಾನ್ಯರನ್ನು (ಪ್ಲೆಬಿಯನ್ಸ್) ಸದಸ್ಯರಾಗಿ ಹೊಂದಿದ್ದ ಈ ಸಭೆಯನ್ನು ಜನಸಾಮಾನ್ಯರಿಂದ ಚುನಾಯಿತರಾದ ಟ್ರಿಬ್ಯೂನರೆಂಬ ಮ್ಯಾಜಿಸ್ಟ್ರೇಟರೇ ಕರೆಯಬೇಕಾಗಿತ್ತು ಮತ್ತು ಅವರೇ ಅದರ ಅಧ್ಯಕ್ಷರಾಗಿರುತ್ತಿದ್ದರು. ಅದು ಕ್ರಮೇಣ ಪ್ರಾಬಲ್ಯ ಪಡೆದರೂ ಅದರ ತೀರ್ಮಾನಗಳನ್ನು ಶ್ರೀಮಂತ ವರ್ಗದ ಪ್ರಜೆಗಳು ಮಾನ್ಯ ಮಾಡುತ್ತಿದ್ದರೆಂಬುದಕ್ಕೆ ಆಧಾರಗಳಿಲ್ಲ. ಮಧ್ಯ ಮತ್ತು ಉತ್ತರಕಾಲೀನ ಗಣರಾಜ್ಯದ ಸಮಯದಲ್ಲಿ ಪ್ರಮುಖ ಶಾಸಕಾಂಗ ಸಭೆಯಾಗಿ ಅದು ಸ್ಥಾನ ಗಳಿಸಿತು. ಯುದ್ಧ ಶಾಂತಿಸಂಧಾನಗಳ ತೀರ್ಮಾನ, ಸಾಧಾರಣ ಅಪರಾಧಿಗಳಿಗೆ ದಂಡ ವಿಧಿಸುವುದು ಮುಂತಾದ ಹಕ್ಕುಗಳು ಈ ಸಭೆಗೆ ಸೇರಿದ್ದುವು. **ಕೊಮಿಷಿಯ ಟ್ರಿಬ್ಯೂಟ:** ರಾಜ್ಯದ ಎಲ್ಲ ವರ್ಗಗಳ ಪ್ರಜೆಗಳನ್ನೂ ಒಳಗೊಂಡಿದ್ದ ಈ ಸಭೆ ನಾಲ್ಕನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿರಬಹುದು. ಈ ಸಭೆಗೂ ಶಾಸಕಾಂಗದ ಹಕ್ಕಿತ್ತು. ಕಾನ್ಸಲರು, ಪ್ರೇಟರರು ಮತ್ತು ಇತರ ಅಧಿಕಾರಿಗಳು ಸಭೆಯ ಅಧ್ಯಕ್ಷರಾಗಿರಬಹುದಾಗಿತ್ತು. ಇದು ಜನರಿಂದ ಶಾಸನಗಳನ್ನು ತಯಾರಿಸುವ ಪ್ರಮುಖ ಸಂಸ್ಥೆಯಾಗಿತ್ತು ಮತ್ತು ಸಣ್ಣಪುಟ್ಟ ಅಧಿಕಾರಿಗಳನ್ನು ಕೊಮಿಷಿಯ ಟ್ರಿಬ್ಯೂಟ ಚುನಾಯಿಸಬಹುದಾಗಿತ್ತು. ಕ್ರಮೇಣ ಪಂಗಡಗಳ ಪ್ರಭಾವ ಹೆಚ್ಚಾಗುತ್ತಿದ್ದುದೂ ಈ ಸಭೆಯ ಸದಸ್ಯರಲ್ಲಿ ಲಂಚಗುಳಿತನ ಬೆಳೆದುದೂ ಇದರ ಪ್ರಾಮುಖ್ಯ ಅಳಿಯಲು ಕಾರಣವಾಯಿತು.

ರೋಂ ಚಕ್ರಾಧಿಪತ್ಯ ವಿಸ್ತಾರಗೊಂಡು, ಕೊಮಿಷಿಯಗಳಿಗೆ ಸದಸ್ಯರು ದೂರ ಪ್ರದೇಶಗಳಿಂದ ಬರಲಾರಂಭಿಸಿದುದರಿಂದಲೂ ನ್ಯಾಯಾಂಗ ಮತ್ತು ಶಾಸಕಾಂಗ ಹಕ್ಕುಗಳು ಹಿರಿಯ ಅಧಿಕಾರಿಗಳ ಹಸ್ತಗತವಾದುದರಿಂದಲೂ ಕೊಮಿಷಿಯ ಸಭೆಗಳ ಸ್ಥಾನಮಾನ ನಶಿಸಿಹೋಯಿತು. (ಬಿ.ಎಸ್‌ಎಚ್.)

**ಕೊಮೀನಿಅಸ್, ಜಾನ್ ಏಮಸ್ :** 1592-1670. ಚೆಕಸ್ಲೊವಾಕಿಯಾದ ಸಾಹಿತಿ, ತತ್ತ್ವಶಾಸ್ತ್ರಜ್ಞ ಮತ್ತು ಶಿಕ್ಷಣತಜ್ಞ. ಕೊಮೀನಿಅಸ್ ಜೊಹಾನಸ್ ಏಮಸ್ ಎಂಬ ಲ್ಯಾಟಿನ್ ರೂಪದಲ್ಲಿ ತನ್ನ ಹೆಸರನ್ನು ಬಳಸುತ್ತಿದ್ದ. ಹುಟ್ಟಿದ್ದು ಮೊರಾವಿಯದಲ್ಲಿ. ಬಡತನದಿಂದಾಗಿ ವಿದ್ಯಾಭ್ಯಾಸವನ್ನು ತಡವಾಗಿ ಆರಂಭಿಸಿದ. ತನ್ನ 16ನೆಯ ವಯಸ್ಸಿನಲ್ಲಿ ಲ್ಯಾಟಿನ್ ಶಾಲೆಯನ್ನು ಸೇರಿ ಅನಂತರ ಹರ್‌ಬಾರನ್ ಮತ್ತು ಹೈಡೆಲ್‌ಬರ್ಗ್‌ಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದ. ಈತನ ಜೀವನದಲ್ಲಿ ಪ್ರಮುಖವಾಗಿ ಮೂರು ಮುಖಗಳನ್ನು ಗುರುತಿಸಬಹುದು: ಚರ್ಚಿನ ನಡೆವಳಿಕೆಗಳಿಗೆ ಹೊಂದಿಕೊಂಡ ಈತನ ಜೀವನ, ಮಾನವನ ಜ್ಞಾನ ಸಂಪತ್ತಿನ ಕ್ರೋಡೀಕರಣದ ಬಗ್ಗೆ ಈತ ನಡೆಸಿದ ಸಂಶೋಧನೆ ಹಾಗೂ ಪ್ರಾಯೋಗಿಕ ಶಿಕ್ಷಣದ ಬಗ್ಗೆ ಈತ ತಳೆದಿದ್ದ ಆಸಕ್ತಿ. 1618ರಲ್ಲಿ ಫುಲಕ್‌ನಲ್ಲಿ ಧರ್ಮೋಪದೇಶಕನಾದ. ಆದರೆ 1621ರಲ್ಲಿ ನಡೆದ ಸ್ಪೇನಿನ ದಂಗೆಯಿಂದಾಗಿ ಪೋಲೆಂಡಿಗೆ ತೆರಳಿದ. ಅಲ್ಲಿ ಬೊಹಿಮಿಯನ್ ಮತ್ತು ಮೊರಾವಿಯನ್ ಚರ್ಚುಗಳ ಅಧ್ಯಕ್ಷನಾದ. ಲಿಸ್ಸದಲ್ಲಿ ಲ್ಯಾಟಿನ್ ಬೋಧಕನಾಗಿಯೂ ಕೆಲಸ ಮಾಡಿದ. 1638ರಲ್ಲಿ ಸ್ವೀಡನ್ನಿಗೂ 1641ರಲ್ಲಿ ಇಂಗ್ಲೆಂಡಿಗೂ ಶಿಕ್ಷಣ ಮಂಡಳಿಯ ಸದಸ್ಯನಾಗಿ ಭೇಟಿ ನೀಡಿದ. ಇವನದು ವಿಶ್ವಕೋಶ ಸದೃಶವಾದ ಪಾಂಡಿತ್ಯ. ಸುಮಾರು ಇನ್ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಸುಮಾರು ಇನ್ನೂರು ಇಂಗ್ಲಿಷಿಗೆ ಭಾಷಾಂತರವಾಗಿ ಪ್ರಕಟಗೊಂಡಿವೆ. ಈತನ ಜಗತ್ತಿನ ಚಕ್ರವ್ಯೂಹ ಮತ್ತು ಹೃದಯ ಸ್ವರ್ಗ ಎಂಬ ಅನ್ಯೋಕ್ತಿಕೃತಿ ಜನಪ್ರಿಯವೆನಿಸಿದೆ. 'ಕೇಂದ್ರ ಆಶ್ರಯ' ವೆಂಬುದು ಮನುಷ್ಯನ ಮತ್ತು ಪರಮಾತ್ಮನ ಸಂಬಂಧವನ್ನು ಕುರಿತ ಗಹನವಾದ ಚಿಂತನಪರ ಕೃತಿ. 'ಸಾಯುತ್ತಿರುವ ತಾಯಿಯ ಮರಣಶಾಸನ'ದಲ್ಲಿ (1648) ಚೆಕಸ್ಲೊವಾಕಿಯ ಜನರಿಗೆ ತಮ್ಮ ಹಿಂದಿನ ವೈಭವ ಮರಳುವುದೆಂಬ ಭರವಸೆಯನ್ನೂ ಸ್ಫೂರ್ತಿಯನ್ನೂ ನೀಡುವ ವೀರಭಾಷೆಯನ್ನೂ ಕಾಣಬಹುದಾಗಿದೆ. ಈತನ ಹಲವಾರು ಕೃತಿಗಳು ಯೂರೋಪಿನ ಮತ್ತು ಹೊರಗಿನ ದೇಶಗಳ ಶಿಕ್ಷಣತಜ್ಞರ ಮೇಲೆ ತೀವ್ರವಾದ ಪ್ರಭಾವವನ್ನು ಬೀರಿವೆ. 1910ರಲ್ಲಿ ಕೀಟಿಂಗ್‌ನಿಂದ ಸಂಪಾದಿಸಲ್ಪಟ್ಟು ಪ್ರಕಟವಾದ ಈತನ ಪ್ರಖ್ಯಾತ ಗ್ರಂಥ ದಿ ಗ್ರೇಟ್ ಡೈಡ್ಯಾಕ್ಟಿಕ್‌ನಲ್ಲಿ ಪ್ರಾಯೋಗಿಕ ಶಿಕ್ಷಣದ ಬಗೆಗಿನ ಈತನ ಸಿದ್ಧಾಂತ ಮತ್ತು ಧೋರಣೆಗಳನ್ನು ನೋಡಬಹುದು. ಆಮ್‌ಸ್ಟರ್‌ಡಮ್‌ನಲ್ಲಿ ಈತ ಕಾಲವಾದ. (ಎಲ್.ಎಸ್.ಎಸ್).

ಸಾರ್ವತ್ರಿಕ ಶಿಕ್ಷಣದ ತತ್ತ್ವದೃಷ್ಟಿಯನ್ನು ಪ್ರಚಾರ ಮಾಡಿದ ಚಿಂತಕರಲ್ಲಿ ಕೊಮೀನಿಅಸ್ ಅಗ್ರಗಣ್ಯ. ತನ್ನ ಗ್ರೇಟ್ ಡೈಡ್ಯಾಕ್ಟಿಕ್ ಎಂಬ ಕೃತಿಯಲ್ಲಿ ಶಿಕ್ಷಣದ ಬಗ್ಗೆ ತನ್ನ ತತ್ತ್ವದೃಷ್ಟಿಯನ್ನು ವ್ಯಕ್ತಪಡಿಸಿದ್ದಾನೆ. ಹುಡುಗರಾಗಲಿ, ಹುಡುಗಿಯರಾಗಲಿ, ಬಡವರಾಗಲಿ, ಬಲ್ಲಿದರಾಗಲಿ, ನಾಗರಿಕರಾಗಲಿ, ಗ್ರಾಮಸ್ಥರಾಗಲಿ– ಎಲ್ಲರಿಗೂ ಶಿಕ್ಷಣ ಅಗತ್ಯ. ಅಧಃಪತನ ಹೊಂದುತ್ತಿರುವ ಮಾನವ ಜನಾಂಗವನ್ನು ಉದ್ಧರಿಸಿ ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸಿ ವಿಶ್ವಭ್ರಾತೃತ್ವವನ್ನು ಸಾಧಿಸಲು ಅದೊಂದು ಮಾರ್ಗ ಎಂಬುದು ಇವನ ಅಭಿಪ್ರಾಯ. ಎಲ್ಲ ವಿಷಯಗಳಲ್ಲೂ ಸಂಯೋಜನೆಯನ್ನು ಸ್ಥಾಪಿಸುವುದು ಸಮಾಜದ ಪ್ರಗತಿಗೂ ಮಾನವ ಕಲ್ಯಾಣಕ್ಕೂ ಅಗತ್ಯವೆಂದು ಈತ ಭಾವಿಸಿದ್ದ. ಅಂಥ ಕಾರ್ಯವನ್ನು ಸಾಧಿಸಲು ಈತ ಪ್ಯಾನ್ಸೊಫಿಕ್ ಕಾಲೇಜೊಂದನ್ನು ಸ್ಥಾಪಿಸುವಂತೆ ತನ್ನ ಇಂಗ್ಲಿಷ್ ಗೆಳೆಯರನ್ನು ಪ್ರೋತ್ಸಾಹಿಸಿದ. ಸಾರ್ವತ್ರಿಕ ಶಿಕ್ಷಣ ಪ್ರಚಾರವಾಗಿ ಆ ಮೂಲಕ ಜನತೆಯಲ್ಲಿ ವಿಶ್ವಜ್ಞಾನ ಮೂಡುವುದಾದರೆ ಪ್ರಪಂಚದಲ್ಲಿ ಸಾಮರಸ್ಯವೂ ಶಾಶ್ವತ ಸುಖಶಾಂತಿಗಳೂ ನೆಲೆಸುವುವೆಂದು ಈತ ನಂಬಿದ್ದ. ಶಿಕ್ಷಣದಂತೆ ಮಾನವ ಜೀವನದಲ್ಲೂ ಈತನಿಗೆ ಆಸಕ್ತಿಯಿತ್ತು. ಕೇವಲ ವಿಶ್ವದ ರಾಜಕೀಯ ಮತ್ತು ಆಡಳಿತಗಳಿಗೆ ಮಾತ್ರವಲ್ಲದೆ ಗ್ರಂಥ, ಭಾಷೆ, ಪಾಠಶಾಲೆ, ಮಹಾವಿದ್ಯಾಲಯ ಇವೆಲ್ಲಕ್ಕೂ ವಿಶ್ವವ್ಯಾಪಕವೆನ್ನಬಹುದಾದ ವ್ಯವಸ್ಥೆ ಮಾಡಬಲ್ಲ ಲೀಗ್ ಆಫ್ ನೇಷನ್ಸ್‌ನಂಥ ಸಂಸ್ಥೆಯೊಂದು ರೂಪುಗೊಳ್ಳಬೇಕೆಂಬ ಆಸೆ ಈತನಿಗಿತ್ತು.

ಶಾಲೆಯ ವ್ಯವಸ್ಥೆಯ ಬಗ್ಗೆ ಕೊಮೀನಿಅಸ್ ಶೈಶವದ ಮೊದಲ ಶಾಲೆ ತಾಯಿಯ ಮಡಿಲು, ಎರಡನೆಯದು ಮಕ್ಕಳ ಮಾತೃಭಾಷೆಯ ಶಾಲೆ, ಮೂರನೆಯದು ಬಾಲ್ಯದ ಲ್ಯಾಟಿನ್ ಶಾಲೆ, ನಾಲ್ಕನೆಯದು ಯುವಕರ ಕಾಲೇಜು ಮತ್ತು ಪ್ರವಾಸ ಎಂದು ಸೂಚಿಸಿದ್ದಾನೆ. ಈ ವರ್ಗೀಕರಣವನ್ನೆ ಎಲ್ಲ ದೇಶಗಳಲ್ಲೂ ಈಗ ಸ್ಥೂಲವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಅನುಸರಿಸಲಾಗುತ್ತಿದೆ.

ಕೊಮೀನಿಅಸ್ ನೂತನ ರೀತಿಯ ಪಠ್ಯಪುಸ್ತಕಗಳನ್ನೂ ರಚಿಸಿದ. ಲ್ಯಾಟಿನ್ ಭಾಷಾಬೋಧನೆಗಾಗಿ ರಚಿಸಿರುವ ಈತನ ಪುಸ್ತಕಗಳಲ್ಲಿ ಪದಗಳಿಗಿಂತ ಹೆಚ್ಚಿನ ಪ್ರಾಮುಖ್ಯ ವಸ್ತುಗಳಿಗೆ ಸಿಕ್ಕಿದೆ. ಇಂದು ಪ್ರತ್ಯಕ್ಷ ವಿಧಾನವೆಂದು ಕರೆಯುವ ಅನ್ಯಭಾಷೆಯ ಬೋಧನ ಕ್ರಮದ ನಿರೂಪಣೆಗೆ ಈತನದೇ ಮೊದಲ ಯತ್ನವೆನ್ನಬಹುದು. ಚಿತ್ರದ ಮೂಲಕ ಅನ್ಯಭಾಷೆಯನ್ನು ಬೋಧಿಸುವ ಇವನ ಆರ್ಬಿಸ್‌ಪಿಕ್ಟಸ್ ಎಂಬ ಗ್ರಂಥ ಪ್ರಪಂಚದಾದ್ಯಂತ ಆಸಕ್ತಿ ಮೂಡಿಸಿತು. ದೃಶ್ಯ ಶಿಕ್ಷಣ ಕ್ರಮಕ್ಕೆ ಈ ಗ್ರಂಥ ತಳಹದಿ ಹಾಕಿತು. ಯಾವ ಶಿಕ್ಷಣವೇ ಆಗಲಿ ಸ್ವಭಾವ ಸಮ್ಮತವಾಗಿರಬೇಕೆಂದೂ ಎಲ್ಲ ಬೋಧನ ತತ್ತ್ವಗಳ ನಿರೂಪಣೆಯಲ್ಲೂ ಅದನ್ನು ಅನುಸರಿಸಬೇಕೆಂದೂ ಈತ ಸಲಹೆ ಮಾಡಿದ್ದಾನೆ. ಇದು ಮನೋವಿಜ್ಞಾನ ಸಮ್ಮತವೂ ಆಗಿದೆ.

ಕೊಮೀನಿಅಸ್ಸನ ಶಿಕ್ಷಣ ತತ್ತ್ವದೃಷ್ಟಿ ಈತನ ಅನಂತರದ ಯುಗಗಳಲ್ಲಿ ಹೆಚ್ಚು ಪ್ರಚಾರ ಪಡೆಯಿತು. ಆಧುನಿಕ ರಾಷ್ಟ್ರಗಳಲ್ಲೆಲ್ಲ ಈತನ ಸಾರ್ವತ್ರಿಕ ಶಿಕ್ಷಣ ಬಳಕೆಗೆ ಬರುತ್ತದೆ. ಆದರೆ ಅದರ ಮೂಲಕ ಈತ ಆಶಿಸಿದ್ದ ವಿಶ್ವಶಾಂತಿ, ವಿಶ್ವಭ್ರಾತೃತ್ವಗಳು ಎಷ್ಟರಮಟ್ಟಿಗೆ ಸಿದ್ಧಿಸಿವೆ ಎಂದು ಹೇಳುವುದು ಕಷ್ಟ. (ಕೆ.ಬಿ.)

**ಕೊಯಮತ್ತೂರು :** ತಮಿಳುನಾಡು ರಾಜ್ಯದ ಒಂದು ಜಿಲ್ಲೆ ಮತ್ತು ಆ ಜಿಲ್ಲೆಯ ಮುಖ್ಯಪಟ್ಟಣ, ಕೊಯಮತ್ತೂರು ನಗರ ದಕ್ಷಿಣ ಭಾರತದ ಮುಖ್ಯ ಕೈಗಾರಿಕಾ ಮತ್ತು ವ್ಯಾಪಾರ ಕೇಂದ್ರಗಳಲ್ಲೊಂದು. ಜನಸಂಖ್ಯೆ 1,965,234 (2001).

ಉತ್ತರದ ನೀಲಗಿರಿ ಮತ್ತು ದಕ್ಷಿಣದ ಅಣ್ಣಾಮಲೈಗಳ ನಡುವೆ, ಪಾಲಕ್ಕಾಡ್ ಕಣಿವೆಯ ಮುಖದ ಬಳಿಯಲ್ಲಿ, ಹತ್ತಿ ಬೆಳೆಯುವ ಪ್ರದೇಶದ ಅಂಚಿನಲ್ಲಿ ಇರುವ ಈ ನಗರ ಜವಳಿ ಕೈಗಾರಿಕೆಯ ಕೇಂದ್ರ. ಚರ್ಮ ಹದ ಮಾಡುವುದು, ಸಾಬೂನು ಮತ್ತು ವ್ಯವಸಾಯೋಪಕರಣಗಳ ತಯಾರಿಕೆ, ಕಾಫಿ ಸಂಸ್ಕರಣ ಮತ್ತು ಸಕ್ಕರೆ ಕೈಗಾರಿಕೆಗಳೂ ಇಲ್ಲಿವೆ. ಇದೊಂದು ಶಿಕ್ಷಣ ಕೇಂದ್ರ ಕೂಡ. ಇಲ್ಲಿ ಮದ್ರಾಸು ವಿಶ್ವವಿದ್ಯಾಲಯಕ್ಕೆ ಸೇರಿದ ಒಂದು ಕಾಲೇಜು, ತಾಂತ್ರಿಕ ಕಾಲೇಜುಗಳು ಕೃಷಿ ಕಾಲೇಜು ಮತ್ತು ಅರಣ್ಯಶಾಸ್ತ್ರ ಶಿಕ್ಷಣ ಶಾಲೆ ಇವೆ. ಇದು ದಕ್ಷಿಣ ರೈಲ್ವೆಯ ಒಂದು ಮುಖ್ಯ ಜಂಕ್ಷನ್. ಹಲವು ರಸ್ತೆಗಳು ಇಲ್ಲಿ ಕೂಡುತ್ತವೆ. ಕೊಯಮತ್ತೂರು ನಗರಕ್ಕೆ 5 ಕಿಮೀ ದೂರದಲ್ಲಿರುವ ಪೆರೂರಿನಲ್ಲಿ ಒಂದು ದೇವಾಲಯವಿದೆ. ಇದರ ಒಂದು ಭಾಗ ಚೋಳರ ಕಾಲದಲ್ಲಿ ನಿರ್ಮಿತವಾದ್ದು.

ಕೊಯಮತ್ತೂರು ಜಿಲ್ಲೆಯ ವಿಸ್ತೀರ್ಣ 15587 ಚ.ಕಿಮೀ. ಜನಸಂಖ್ಯೆ 4,27,856 (2001). ಇದರ ಪಶ್ಚಿಮ, ಉತ್ತರ ಮತ್ತು ದಕ್ಷಿಣದ ಭಾಗಗಳು ಬೆಟ್ಟಗಳಿಂದ ಕೂಡಿವೆ. ಪೂರ್ವಭಾಗದ ನೆಲ ಫಲವತ್ತಾದ್ದು. ಇದರ ಎತ್ತರ ಸಮುದ್ರಮಟ್ಟದಿಂದ 273 ಮೀ. ಇಲ್ಲಿ ಮಳೆ ಕಡಿಮೆ. ವಾತಾವರಣದಲ್ಲಿ ಹೆಚ್ಚು ತೇವ ಇರುವುದಿಲ್ಲ. ಸೆಕೆ ಹೆಚ್ಚು. ಬೇಸಗೆ ತೀವ್ರವಾದಾಗ ಜಿಲ್ಲೆಯ ಸಣ್ಣ ನದಿಗಳು ಬತ್ತಿ ಹೋಗುತ್ತವೆ. ಪಶ್ಚಿಮ ಮತ್ತು ಉತ್ತರದ ಬೆಟ್ಟಗಳಲ್ಲಿ ಕಾಫಿ ಮತ್ತು ಚಹ ತೋಟಗಳಿವೆ. ಮೈದಾನ ಪ್ರದೇಶದಲ್ಲಿ ಬತ್ತ ಮತ್ತು ಹತ್ತಿ ಮುಖ್ಯ ಬೆಳೆಗಳು. ಹಿಂದೆ ಈ ಜಿಲ್ಲೆ ಈಗಿನ ಸೇಲಂ ಜಿಲ್ಲೆಯ ಭಾಗಗಳೊಡನೆ ಕೂಡಿ ಕೊಂಗು ನಾಡು ಎಂದು ಪ್ರಸಿದ್ಧವಾಗಿತ್ತು. 9ನೆಯ ಶತಮಾನದಲ್ಲಿ ಈ ಜಿಲ್ಲೆಯ ಭಾಗಗಳು ಚೋಳರಿಗೆ ಸೇರಿದ್ದುವು; 11ನೆಯ ಶತಮಾನದಲ್ಲಿ ಈ ಭಾಗ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ತರುವಾಯ 14ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಅಧೀನವಾಯಿತು. ಹೈದರ್ ಆಲಿ 1761ರಲ್ಲಿ ಈ ನಾಡನ್ನು ಗೆದ್ದುಕೊಂಡ. ಅವನ ಮಗ ಟಿಪ್ಪುಸುಲ್ತಾನ 4ನೆಯ ಮೈಸೂರು ಯುದ್ಧದಲ್ಲಿ (1799) ಮಡಿದ ಮೇಲೆ ಕೊಯಮತ್ತೂರು ಬ್ರಿಟಿಷರ ವಶವಾಗಿ ಮದ್ರಾಸು ಪ್ರಾಂತ್ಯಕ್ಕೆ ಸೇರಿತು. 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದಾಗ ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಮೈಸೂರು ರಾಜ್ಯಕ್ಕೆ ವರ್ಗವಾಯಿತು. (ವಿ.ಜಿ.ಕೆ.)

**ಕೊರಕ ಜೀರುಂಡೆಗಳು :** ಸಸ್ಯಗಳ ವಿವಿಧ ಅಂಗಗಳನ್ನು ಕೊರೆದು ಒಳಗಿನ ಅಂಗಾಂಶಗಳನ್ನು ಭಕ್ಷಿಸಿ ಸಸ್ಯಗಳಿಗೆ ಹಾನಿಯುಂಟುಮಾಡುವ ಕೀಟಗಳು (ಬೋರರ್ ಬೀಟಲ್ಸ್), ಕೀಟವರ್ಗದ ಲೆಪಿಡಾಪ್ಟರ, ಕೋಲಿಯಾಪ್ಟರ, ಮತ್ತು ಡಿಪ್ಟರ ಗಣಗಳಿಗೆ ಸೇರಿದ ಹಲವಾರು ಬಗೆಯ ಕೀಟಗಳಿಗೆ ಈ ಹೆಸರಿದೆ. ಕೊರಕ (ಬೋರರ್) ಎಂಬ ಪದವನ್ನು ಸಾಮಾನ್ಯವಾಗಿ ಸಸ್ಯದ ಯಾವುದಾದರೊಂದು ಭಾಗದೊಳಕ್ಕೆ ಕೊರೆದುಕೊಂಡು ಹೋಗಿ ಒಳಗಿನ ಅಂಗಾಂಶಗಳನ್ನು ಭಕ್ಷಿಸುವ ಕೀಟಕ್ಕೆ ಅನ್ವಯಿಸುವುದು ವಾಡಿಕೆ. ಈ ದೃಷ್ಟಿಯಿಂದ ಗಿಡದ ಮೇಲ್ಮೈಯಲ್ಲಿಯ ಅಂಗಾಂಶಗಳನ್ನು ಭಕ್ಷಿಸುವ ಕೀಟಗಳಿಂದ ಕೊರಕ ಜೀರುಂಡೆಗಳು ವಿಭಿನ್ನವಾಗಿರುವುವಾದರೂ ವಾಸ್ತವವಾಗಿ ಸಸ್ಯಗಳ ಹೊರಭಾಗಕ್ಕೆ ಘಾಸಿ ಉಂಟುಮಾಡುವ ಕೀಟ ಕ್ರಮೇಣ ಕೊರಕವಾಗುವ ಸಾಧ್ಯತೆಯೂ ಉಂಟು.

ಕೊರಕ ಜೀರುಂಡೆಗಳ ಹಾವಳಿಗೆ ಸಸ್ಯಗಳ ಎಲ್ಲ ಮುಖ್ಯಾಂಗಗಳೂ–ಬೇರು, ಕಾಂಡ, ಚಿಗುರು, ಮೊಗ್ಗು, ಹೀಚು, ಹಣ್ಣು, ಎಲೆ ತುತ್ತಾಗುತ್ತವೆ. ಸಾಮಾನ್ಯವಾಗಿ ಈ ಕೀಟಗಳ ಮರಿ ಇಲ್ಲವೆ ಡಿಂಬ ಸಸ್ಯಗಳನ್ನು ಕೊರೆದು ಹಾನಿ ಮಾಡುವುದಾದರೂ ಬಲಿತ ಜೀರುಂಡೆ ಗಿಡವನ್ನು ಕೊರೆಯುವುದಿಲ್ಲ.

ಕೋಲಿಯಾಪ್ಟರ ಗಣದ ಕೊರಕಗಳು ಡೈನಾಸ್ಟಿಡೀ, ಬ್ಯೂಪ್ರೆಸ್ಟಿಡೀ, ಸೆರಾಂಬೈಸಿಡೀ, ಬ್ರೂಕಿಡೀ, ಆಂಥ್ರಿಬಿಡೀ, ಕರ್ಕ್ಯೂಲಿಯಾನಿಡೀ ಮತ್ತು ಸ್ಕೊಲೈಟಿಡೀ ಕುಟುಂಬಗಳಿಗೆ ಸೇರಿವೆ. ಬೇರೆ ಕುಟುಂಬಗಳಲ್ಲಿ ಕೊರಕ ಕೀಟದ ಲಕ್ಷಣಗಳುಳ್ಳ ಕೀಟಗಳಿಲ್ಲವೆಂದಾಗಲೀ ಇಲ್ಲಿ ಪಟ್ಟಿ ಮಾಡಲಾದ ಕುಟುಂಬಗಳ ಎಲ್ಲ ಪ್ರಭೇದಗಳೂ ಕೊರಕಗಳೆಂದಾಗಲೀ ಅಲ್ಲ.

ಮೇಲೆ ಹೇಳಿದ ಕುಟುಂಬಗಳ ಡಿಂಬಗಳನ್ನು ಎದೆಭಾಗದಲ್ಲಿ ಮೂರು ಜೊತೆ ಕಾಲುಗಳುಳ್ಳವು, ಆದರೆ ಉದರ ಭಾಗಕ್ಕೆ ಸೇರಿದಂತೆ ಉಪಪಾದಗಳಿಲ್ಲದವು ಎಂದೂ ಎದೆಭಾಗದ ಪಾದಗಳೂ ಉಪಪಾದಗಳೂ ಇಲ್ಲದವು ಎಂದೂ ಎರಡು ಸ್ಥೂಲ ವಿಭಾಗಗಳಾಗಿ ವಿಂಗಡಿಸಬಹುದು. ಕರ್ಕ್ಯೂಲಿಯಾನಿಡೀ ಕುಟುಂಬದ ಕೀಟಗಳು ಎರಡನೆಯ ಬಗೆಯವು(ಕೋಲಿಯಾಪ್ಟರ ಗಣದ ಡಿಂಬಗಳಿಗೆ ಗ್ರಬ್ ಎಂಬ ವಿಶೇಷ ಹೆಸರಿದೆಯೆಂಬುದನ್ನು ಇಲ್ಲಿ ಗಮನಿಸಬಹುದು). ಸಾಮಾನ್ಯವಾಗಿ ಹೊರವಾತಾವರಣದ ಸಂಪರ್ಕವಿಲ್ಲದುದರಿಂದ ಕೊರಕ ಗ್ರಬ್‌ಗಳ ಮೈಬಣ್ಣ ವರ್ಣಮಯವಾಗಿರದೆ ಮಾಸಲು ಬಿಳುಪಿನಿಂದ ಹಿಡಿದು ಹಳದಿ ಛಾಯಾಂತರಗಳಿಂದ ಕೂಡಿದೆ (**ನೋಡಿ– ಕಾಂಡಕೊರಕ ಜೀರುಂಡೆಗಳು**).

ಬೇರು ಕೊರೆಯುವ ಜೀರುಂಡೆಗಳು: ಬ್ಯೂಪ್ರೆಸ್ಟಿಡೀ ಕುಟುಂಬದ ಸ್ಫೀನಾಪ್ಟರ ಪೆರೋಟೆಟಿ ಎಂಬುದು ಹೊಳೆಯುವ ಕಂದುಬಣ್ಣದ್ದು; ಇದಕ್ಕೆ ಜುಯೆಲ್ ಬೀಟಲ್ ಎಂಬ ಹೆಸರಿದೆ. ಇದರ ಮಾಸಲು ಬಿಳಿ ಬಣ್ಣದ, ಚಪ್ಪಟೆ ತಲೆಯುಳ್ಳ ಡಿಂಬ ಭೂಮಟ್ಟದಲ್ಲಿ ಕಡಲೇಕಾಯಿ ಗಿಡಗಳ ಕಾಂಡ ಮತ್ತು ಬೇರು ಭಾಗಗಳನ್ನು ಕೊರೆದು ಅವು ಸಾಯಲು ಕಾರಣವಾಗುತ್ತದೆ.

ಚಿಗುರು ಕೊರೆಯುವ ಜೀರುಂಡೆಗಳು: ಕರ್ಕ್ಯೂಲಿಯಾನಿಡೀ ಕುಟುಂಬದ, ಆಲ್ಸಿಡೋಡೀಸ್ ಬ್ಯೂಬೊ ಎಂಬುದು ಅಗಸೆಗಿಡದ ಚಿಗುರನ್ನೂ ಆಲ್ಸಿಡೋಡೀಸ್ ಅಫಾಬರ್ ಎಂಬ ಪ್ರಭೇದ ಹತ್ತಿಗಿಡದ ಚಿಗುರುಗಳನ್ನೂ ಕೊರೆದು ಅವು ಬಾಡಲು ಕಾರಣವಾಗುತ್ತವೆ. ಇದೇ ಕುಟುಂಬದ ಸ್ಯೂಥೋರಿಂಕಸ್ ಆಸ್ಪರ್‍ಯುಲಸ್ ಎಂಬ ಜೀರುಂಡೆ ತೊಗರಿ ಗಿಡಗಳ ಮತ್ತು ಓಕಿರೋಮೀರ ಆರ್ಟೋಕಾರ್ಪಿ ಎಂಬ ಪ್ರಭೇದ ಹಲಸಿನ ಮೊಗ್ಗು ಮತ್ತು ಚಿಗುರುಗಳನ್ನು ಕೊರೆಯುತ್ತದೆ.

ಎಲೆ ಕೊರೆಯುವ ಜೀರುಂಡೆಗಳು: ಬ್ಯೂಪ್ರೆಸ್ಟಿಡೀ ಕುಟುಂಬದ ಟ್ರಾಕಿಸ್ ಐಪೋಮಿಯೆ ಎಂಬ ಜೀರುಂಡೆಯ ಡಿಂಬ ಗೆಣಸಿನ ಎಲೆಯನ್ನು ಕೊರೆದು ಸುರಂಗವನ್ನು ನಿರ್ಮಿಸುತ್ತದೆ. ಕರ್ಕ್ಯೂಲಿಯಾನಿಡೀ ಕುಟುಂಬದ ರಿಂಕೇಸಸ್ ಮ್ಯಾಂಜಿಫೆರೀ ಎಂಬ ಜೀರುಂಡೆ ಮಾವಿನ ಎಲೆಗಳನ್ನು ಕೊರೆಯುತ್ತದೆ.

ಹಣ್ಣುಗಳನ್ನು ಕೊರೆಯುವ ಜೀರುಂಡೆಗಳು: ಕರ್ಕ್ಯೂಲಿಯಾನಿಡೀ ಕುಟುಂಬಕ್ಕೆ ಸೇರಿದ ಕ್ರಿಪ್ಟೊರಿಂಕಸ್ ಮ್ಯಾಂಜಿಫೆರೀ (ಮಾವಿನ ಓಟೆಯ ಸೊಂಡಿಲು ಜೀರುಂಡೆ) ಎಂಬುದು ಗಿಡದ ಮೇಲೆ ಮಾಗುತ್ತಿರುವ ಮಾವಿನ ಕಾಯಿಯ ಸಿಪ್ಪೆಯ ಕೆಳಗೆ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯೊಡೆದು ಹೊರಬರುವ ಡಿಂಬ ತಿರುಳಿನ ಮೂಲಕ ಹಾದು ಬಲಿಯುತ್ತಿರುವ ಓಟೆಯನ್ನು ಹೊಕ್ಕು ಅದರೊಳಗೆ ಕೋಶಾವಸ್ಥೆಯನ್ನು ತಲಪುತ್ತದೆ.

ಆಂಥ್ರಿಬಿಡೀ ಕುಟುಂಬದ ಅರೀಸೀರಸ್ ಫ್ಯಾಸಿಕ್ಯುಲೇಟಸ್ ಎಂಬ ಜೀರುಂಡೆಯ ಡಿಂಬ ಕಾಫಿ ಮತ್ತು ಅಡಿಕೆ ಕಾಯಿಗಳನ್ನು ಕೊರೆಯುತ್ತವೆ.

ಬೀಜಗಳನ್ನು ಕೊರೆಯುವ ಜೀರುಂಡೆಗಳು: ಬ್ರೂಕಿಡೀ ಕುಟುಂಬದ ಬ್ರೂಕಸ್ ಮತ್ತಿತರ ಜಾರಿಯ ಜೀರುಂಡೆಗಳ ಡಿಂಬಗಳು ಶೇಖರಿಸಿಟ್ಟ ದ್ವಿದಳ ಧಾನ್ಯಗಳನ್ನು ಕೊರೆದು ಅವನ್ನು ಟೊಳ್ಳು ಮಾಡಿ ಹಾಳುಮಾಡುತ್ತವೆ.

ತೆಂಗಿನ ಜೀರುಂಡೆ: ಡೈನಾಸ್ಟಿಡೀ ಕುಟುಂಬದ ರೈನಾಸೆರಸ್ ಜೀರುಂಡೆಯೆಂಬುದು ಪ್ರೌಢಾವಸ್ಥೆಯಲ್ಲೇ ತೆಂಗಿನ ಸುಳಿಯನ್ನು ಕೊರೆದು ಹಾನಿಯುಂಟುಮಾಡುತ್ತದೆ. (ಡಿ.ಎಸ್.)

**ಕೊರಕಲು :** ನದಿಯ ದೀರ್ಘಕಾಲದ ಹರಿಯುವಿಕೆಯಿಂದ ಉಂಟಾದ ಆಳವಾದ ಮತ್ತು ಲಂಬ ಬದಿಗಳಿರುವ ಕಮರಿ (ಕ್ಯಾನ್ಯನ್). ನದಿ ಹರಿಯುವಾಗ ಮಣ್ಣು, ಮರಳು, ಕಲ್ಲು, ಬಂಡೆ ಎಲ್ಲವನ್ನೂ ಕೊಚ್ಚಿಕೊಂಡು ಮುಂದೆ ನುಗ್ಗುತ್ತದೆ. ಆಗ ನದೀಪಾತ್ರ ಸವೆದು ಪಕ್ಕದ ನೆಲಕ್ಕಿಂತ ಕೆಳಮಟ್ಟಕ್ಕೆ ತಗ್ಗುತ್ತದೆ. ಇದರಿಂದ ನದಿಯ ಇಕ್ಕಡೆಗಳಲ್ಲಿ ಎತ್ತರದ ಮತ್ತು ಕಡಿದಾದ ದಂಡೆಗಳು ಉಂಟಾಗುತ್ತವೆ. ಇಂಥ ದೃಶ್ಯಗಳು ಬೆಟ್ಟಗುಡ್ಡಗಳ ಮೂಲಕ ನದಿ ಹರಿಯುವಾಗ ಸಾಮಾನ್ಯ. ನದೀ ಪಾತ್ರ ಮೆದುಮಣ್ಣಿನ ಮೇಲಿದ್ದರೆ ಅಲ್ಲಿ ಸವೆತ ತೀವ್ರಗತಿಯಿಂದ ನಡೆದು ಗಟ್ಟಿ ಬಂಡೆ ಇರುವ ತಳ ಸಿಕ್ಕುವವರೆಗೂ ಅದು ತಗ್ಗುತ್ತಲೇ ಇರುವುದು. ಇದರಿಂದ ದಂಡೆಗಳಿಗೂ ಪಾತ್ರಕ್ಕೂ ಇರುವ ಅಂತರ ಏರುತ್ತದೆ. ಇದು ಯಾವುದೋ ಒಂದು ಮಿತಿಗೆ ಬಂದಾಗ ದಂಡೆಗಳು ಕುಸಿಯುತ್ತವೆ. ನದಿಯನ್ನು ಸೇರಲು ಬರುವ ಕಿರುತೊರೆಗಳು, ಕಾಲುವೆಗಳು, ಮಳೆಗಾಲದ ತೋಡುಗಳು ಮುಂತಾದವು ದಂಡೆಗಳನ್ನು ಕೊರೆದು ಅವನ್ನು ಇನ್ನಷ್ಟು ಶಿಥಿಲಗೊಳಿಸುತ್ತವೆ. ಆದ್ದರಿಂದ ಒಂದು ನದಿಯ ಪ್ರವಹನದಲ್ಲಿ ಅದರ ಪಾತ್ರ ನಿರಂತರವಾಗಿ ತಗ್ಗುವ ಒಲವನ್ನು ತೋರಿಸುತ್ತಿರುವಾಗಲೇ ದಂಡೆಗಳಿಂದ ಕುಸಿದು ಬಿದ್ದ ಮತ್ತು ಮೇಲಿನಿಂದ ಹಾಗೂ ಬದಿಗಳಿಂದ ತೊಳೆದುಕೊಂಡು ಬಂದು ಸೇರಿದ ಮಣ್ಣು ಕಲ್ಲುಕಸ ಮಡ್ಡಿ ಈ ಪಾತ್ರವನ್ನು ಮೇಲೆತ್ತಲು ಪ್ರಯತ್ನಿಸುತ್ತವೆ. ವಿರುದ್ಧಬಲಗಳ ಅಥವಾ ಒಲವುಗಳ ಈ ನಿರಂತರ ಆಟ ನದಿ ಗಟ್ಟಿ ಬಂಡೆಗಲ್ಲುಗಳಿರುವ ಮರುಭೂಮಿ ಪ್ರದೇಶವನ್ನು ಅಡ್ಡಹಾಯುವಾಗ ಗಮನಾರ್ಹವಾಗಿ ಬದಲಾಗುತ್ತದೆ. ನದಿಯ ಕೊರೆತ ಎಂದಿನಂತೆ ಪಾತ್ರವನ್ನು ತಗ್ಗುಮಟ್ಟಕ್ಕೆ ಕೊಂಡೊಯ್ದಂತೆ ಅದರ ಇಕ್ಕೆಲಗಳಲ್ಲೂ ಕುಸಿಯದ ಮತ್ತು ಕಡಿದಾದ ಗಟ್ಟಿಕಲ್ಲಿನ ದಂಡೆಗಳು ನದೀಪಾತ್ರದಿಂದ ಎತ್ತರ ಎತ್ತರವಾಗಿ ಬೆಳೆಯುತ್ತ ಹೋಗುತ್ತವೆ. ಮರುಭೂಮಿ ವಲಯದಲ್ಲಿ ಮಳೆನೀರಾಗಲೀ ಕಿರು ತೊರೆಗಳಾಗಲೀ ಬದಿಗಳಿಂದ ಹರಿದುಬಂದು ದಂಡೆಗಳನ್ನು ಕೊರೆದು ಶಿಥಿಲಗೊಳಿಸುವ ಸಂಭಾವ್ಯತೆ ಇಲ್ಲ. ಇನ್ನು ಬಿಸಿಲು, ಗಾಳಿ, ಚಳಿ ಮುಂತಾದ ಬಾಹ್ಯಬಲಗಳಿಂದ ಆಗುವ ಪರಿಣಾಮ ಗಮನಾರ್ಹವಲ್ಲ. ಹೀಗಾಗಿ ಒಮ್ಮೆ ರೂಪಗೊಳ್ಳಲು ತೊಡಗಿದ ಗಟ್ಟಿ ದಂಡೆಗಳು ಚಿತ್ರವಿಚಿತ್ರವಾಗಿ ಬೆಳೆದು ನದಿಯ ದೈನಂದಿನ ನಿರಂತರ ಚಟುವಟಿಕೆಯ ಸಮಗ್ರ ಪ್ರತೀಕವಾಗಿ ನಿಂತಿರುತ್ತವೆ. ದಂಡೆಗಳ ಮೇಲುಮಟ್ಟದಿಂದ ನೂರಾರು ಅಡಿಗಳ ಆಳದಲ್ಲಿ ನದಿ ಅಂಕುಡೊಂಕಾಗಿ ಹರಿಯುತ್ತ ತನ್ನ ಎಂದಿನ ಕಾರ್ಯವನ್ನು ಮುಂದುವರಿಸುತ್ತಿರುತ್ತದೆ. ಇಲ್ಲಿ ಎದುರಾಗುವ ದೃಶ್ಯ ಕಣಿವೆಗಳಿಗಿಂತ ಭಿನ್ನವಾದದ್ದು. ಇದರ ಕಾರಣವೂ ಅದೇ ರೀತಿ ಭಿನ್ನವಾದದ್ದು. ಆದ್ದರಿಂದ ಇದಕ್ಕೆ

ಕೊರಕಲು ಎಂಬ ಬೇರೆ ಹೆಸರನ್ನು ನೀಡಲಾಗಿದೆ. ಪ್ರಪಂಚದ ಅತ್ಯಂತ ದೊಡ್ಡ ಕೊರಕಲು ಅಮೆರಿಕದ ಸಂಯುಕ್ತರಾಷ್ಟ್ರಗಳಲ್ಲಿದೆ. ಅಲ್ಲಿ ಕೊಲರಾಡೋ ನದಿ ಅರಿಜೋನಾ ಮರುಭೂಮಿಯನ್ನು ಕೊರೆದು ಅಡ್ಡಹಾಯುವ ಪ್ರದೇಶದಲ್ಲಿ ಇದು ರೂಪುಗೊಂಡಿದೆ. ಕೇವಲ ಕೆಲವೇ ಲಕ್ಷ ವರ್ಷಗಳ ಅವಧಿಯಲ್ಲಿ ಈ ನದೀ ಪಾತ್ರ 1984.9 ಮೀ.ಗಳಷ್ಟು ಆಳಕ್ಕೆ ಇಳಿದುಹೋಗಿದೆ. 304.7 ಮೀ.ಗಳಷ್ಟು ಎತ್ತರದ ಲಂಬ ಬದಿಗಳು ಇಲ್ಲಿ ತೀರ ಸಾಮಾನ್ಯ. ಕೊಲರಾಡೋದ ಮಹಾ ಕೊರಕಲು ಎಂದೇ ಇದನ್ನು ಕರೆಯುವುದುಂಟು. ಸುಮಾರು 320 ಕಿಮೀ ಉದ್ದದ ಈ ಕೊರಕಲಿನಲ್ಲಿ ಭೂವಿಜ್ಞಾನಿಗಳು ಪೂರ್ವ ಕೇಂಬ್ರಿಯನ್ ಕಲ್ಪದಿಂದ ಇಯೋಸೀನ್ ಕಲ್ಪದವರೆಗಿನ, ಸುಮಾರು 600 ದಶಲಕ್ಷ ವರ್ಷಗಳ ಕಾಲದ, ಅಮೆರಿಕನ್ ಭೂಚರಿತ್ರೆಯನ್ನು ಓದಲು ಸಮರ್ಥರಾಗಿದ್ದಾರೆ. (ಎಂ.ವಿ.)

**ಕೊರಕೆಗಳು :** ಸಮುದ್ರ ತಳದಲ್ಲಿ ಜೀವಿಸಲು ವೈಶಿಷ್ಟ್ಯ ಹೊಂದಿದ ಮೃದಸ್ಥಿ ಮೀನುಗಳ ಸಾಮಾನ್ಯ ಹೆಸರು (ಸ್ಕೇಟ್ಸ್). ಇವುಗಳ ದೇಹ ಮೇಲಿಂದ ಕೆಳಕ್ಕೆ ಚಪ್ಪಟೆಯಾಗಿದೆ. ಭುಜದ ಈಜು ರೆಕ್ಕೆಗಳು ಅಗಲವಾಗಿದ್ದು ದೇಹದ ಎಡಬಲ ಪಕ್ಕಗಳಿಗೆ ಕೂಡಿಕೊಂಡಿವೆ. ಬಾಯಿ ತಲೆಯ ತಳಭಾಗದಲ್ಲಿದೆ. ಇದರೊಳಗೆ ಮೊನಚಾದ ಅನೇಕ ಸಾಲು ಹಲ್ಲುಗಳು ವರ್ತುಲಾಕಾರದಲ್ಲಿ ಜೋಡಣೆಗೊಂಡಿವೆ. ಬಾಯಿಯ ಮುಂಭಾಗದಲ್ಲಿ ಹೊರ ನಾಸಿಕ ರಂಧ್ರಗಳು ಹಾಗೂ ಹಿಂಭಾಗದಲ್ಲಿ ಐದು ಜೊತೆ ಕಿವಿರಿನ ರಂಧ್ರಗಳು ಇವೆ. ತಲೆಯ ಮೇಲ್ಭಾಗದಲ್ಲಿ ಎರಡು ಕಣ್ಣುಗಳಿವೆ. ಒಂದೊಂದು ಕಣ್ಣಿನ ಹಾಗೂ ಹಿಂಭಾಗದಲ್ಲಿ ಸ್ಪೈರಕಲ್ ಎಂಬ ದ್ವಾರವಿದೆ. ಈ ದ್ವಾರ ಬಾಯಿಯ ಅಂಗುಳಲ್ಲಿ ತೆರೆಯುತ್ತದೆ. ಬಾಲದ ಭಾಗ ತೆಳ್ಳಗಿದ್ದು, ಚಿಕ್ಕದಾಗಿದೆ. ಕೆಲವೊಮ್ಮೆ ಚಾಟಿಯಂತೆ ಉದ್ದವಾಗಿಯೂ ಇರುವುದು. ಕೊರಕೆಗಳು ಸಮುದ್ರ ತಳದಲ್ಲಿ ನಿಧಾನವಾಗಿ ಚಲಿಸುತ್ತವೆ. (ಪಿ.ವಿ.ಆರ್.)

**ಕೊರಚ ಮೀನು :** ಪಂಟಿಯಸ್ ಕೋಲಸ್ ಅಥವಾ ಬಾರ್ಬಸ್ ಕೋಲಸ್ ಎಂಬ ವೈಜ್ಞಾನಿಕ ಹೆಸರಿನ ಒಂದು ಎಲುಬು ಮೀನು. ಸೈಪ್ರಿನಿಫಾರ್ಮೀಸ್ ಗಣದಲ್ಲಿನ ಸೈಪ್ರಿನಾಯಿಡೀ ಉಪಗಣದ ಸೈಪ್ರಿನೀಡೆ ಕುಟುಂಬಕ್ಕೆ ಸೇರಿದೆ. ಇದೊಂದು ಸಿಹಿ ನೀರು ಮೀನು; ಭಾರತದ ಕೃಷ್ಣಾ, ತುಂಗಭದ್ರಾ, ಗೋದಾವರಿ ನದಿಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿದೆ. ಮಲಯದಲ್ಲೂ ಇದರ ವ್ಯಾಪ್ತಿ ಉಂಟು. ಕೊರಚ ಮೀನು ಸುಮಾರು ಒಂದು ಅಡಿಗೂ ಹೆಚ್ಚು ಉದ್ದ ಬೆಳೆಯುತ್ತದೆ. ಕಣ್ಣಿನ ಗೂಡಿನ ಮಧ್ಯೆ ಇರುವ ಮೆತ್ತಸವಾದ ಮೂಳೆ ದಾಡಿಗಳಂತಿರುವ ಎರಡು ಸ್ಪರ್ಶಾಂಗಗಳೂ ಹಾಗೂ ಪಾರ್ಶ್ವರೇಖೆಯಲ್ಲಿ 40–43 ಹುರುಪೆಗಳಿರುವುದೂ ಇದರ ಮುಖ್ಯ ಲಕ್ಷಣಗಳು. ದೇಹದ ಬಣ್ಣ ಹಳದಿ ಮಿಶ್ರಿತ ಬಿಳಿ. ಬೆನ್ನು, ಬಾಲ ಮತ್ತು ಗುದದ ಈಜು ರೆಕ್ಕೆಗಳ ತುದಿ ಬೂದುಬಣ್ಣಕ್ಕಿರುತ್ತದೆ. (ಬಿ.ಎಚ್.ಎಂ.)

**ಕೊರಟಗೆರೆ :** ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ತಾಲ್ಲೂಕು ಸ್ಥೂಲವಾಗಿ ಉ.ಅ.13° 15′ ಮತ್ತು–13° 45′ ಮತ್ತು ಪೂ.ರೇ 70° 0′ -77° 30′ ನಡುವೆ ಇದೆ. ಮಧುಗಿರಿ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕು ಮಧುಗಿರಿ ತಾಲ್ಲೂಕು, ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ ಮತ್ತು ತುಮಕೂರು ತಾಲ್ಲೂಕು–ಇವುಗಳ ನಡುವೆ ಇದೆ. ಇದರ ವಿಸ್ತೀರ್ಣ 631.4 ಚ.ಕಿಮೀ. ತಾಲ್ಲೂಕನ್ನು ನಾಲ್ಕು ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. 222 ಗ್ರಾಮಗಳು ಮತ್ತು ಒಂದು ಪಟ್ಟಣವನ್ನೊಳಗೊಂಡಿರುವ ತಾಲ್ಲೂಕಿನ ಜನಸಂಖ್ಯೆ 1,69,669 (2001).

ತುಮಕೂರು ಜಿಲ್ಲೆಯ ಪೂರ್ವದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಗ್ರಾನೈಟ್ ಬೆಟ್ಟ ಶ್ರೇಣಿಯೊಂದು ಕೊರಟಗೆರೆಯ ಮೂಲಕ ಹಾದುಹೋಗುತ್ತದೆ. ಚನ್ನರಾಯನದುರ್ಗ(3,734') ಮತ್ತು ಕೊರಟಗಿರಿ (2,885') ಇವು ತಾಲ್ಲೂಕಿನ ಎರಡು ಉನ್ನತ ಶಿಖರಗಳು. ಚನ್ನರಾಯನದುರ್ಗದಲ್ಲಿ ಹುಟ್ಟುವ ಸುವರ್ಣಮುಖಿ ಹೊಳೆ ಕೊರಟಗೆರೆ ತಾಲ್ಲೂಕಿನಲ್ಲಿ 24 ಕಿಮೀ ದೂರ ಹರಿಯುತ್ತದೆ. 1888–92ರಲ್ಲಿ ಅವಧಿಯಲ್ಲಿ ಇದಕ್ಕೆ ಒಂದು ಅಣೆಕಟ್ಟು ಕಟ್ಟಲಾಯಿತು. ಇದರ ನೀರು ಬರಗಾಲದಲ್ಲಿ ನೆರವಾಗಿ ಒದಗುತ್ತಿದ್ದುದರಿಂದ ಇದಕ್ಕೆ ಬರನಕಣಿವೆ ಸರೋವರವೆಂದು ಹೆಸರಾಯಿತು. ದೇವರಾಯನದುರ್ಗದಲ್ಲಿ ಹುಟ್ಟುವ ಜಯಮಂಗಲಿ ಮತ್ತು ಗರುಡಾಚಲ ಹೊಳೆಗಳು ಈ ತಾಲ್ಲೂಕಿನಲ್ಲಿ ಹರಿಯುತ್ತವೆ.

ತಾಲ್ಲೂಕಿನ ವಾಯುಗುಣ ಸಾಮಾನ್ಯವಾಗಿ ಹಿತಕರವಾಗಿಯೇ ಇರುತ್ತದೆ. ಮೇ–ನವೆಂಬರ್‌ನಲ್ಲಿ ಮಳೆಯಾಗುತ್ತದೆ. ನವೆಂಬರಿನಲ್ಲಿ ಅಧಿಕ. ವಾರ್ಷಿಕ ಸರಾಸರಿ ಮಳೆ 658.3 ಮಿಮೀ. ವರ್ಷದಲ್ಲಿ ಸುಮಾರು 40 ಮಳೆ ದಿನಗಳು.

ಕಾಲುವೆ, ಕೆರೆ ಮತ್ತು ಬಾವಿಗಳು ನೀರಾವರಿಯ ಮುಖ್ಯ ಸಾಧನಗಳು. ಜೋಳ, ನವಣೆ, ಹುರುಳಿ, ಅವರೆ, ನೆಲಗಡಲೆ, ಕಬ್ಬು, ಮತ್ತು ಬತ್ತ ಇವು ತಾಲ್ಲೂಕಿನ ಮುಖ್ಯ ಬೆಳೆಗಳು. ವಿದ್ಯುತ್ ಮತ್ತು ಡೀಸೆಲ್ ಪಂಪುಗಳನ್ನು ಉಪಯೋಗಿಸಿ ನೀರೆತ್ತುತ್ತಾರೆ.

ಕೋರಂಡಂ ಮತ್ತು ಕ್ವಾರ್ಟ್ಸ್ ಈ ತಾಲ್ಲೂಕಿನಲ್ಲಿ ದೊರಕುವ ಖನಿಜಗಳು.

ಕೊರಟಗೆರೆ ತಾಲ್ಲೂಕಿನಲ್ಲಿ ರೈಲು ಮಾರ್ಗಗಳಿಲ್ಲ. ಬೆಂಗಳೂರು–ತುಮಕೂರು ರಸ್ತೆಯಲ್ಲಿರುವ ದಾಬಸ್ ಪೇಟೆಯಿಂದ(ಬೆಂಗಳೂರು ಜಿಲ್ಲೆ) ಕೊರಟಗೆರೆಗೆ 24 ಕಿಮೀ ಉದ್ದದ ಒಂದು ರಸ್ತೆ ಇದೆ. ಇದರಿಂದ ಬೆಂಗಳೂರಿನೊಂದಿಗೆ ಕೊರಟಗೆರೆಗೆ ಸಂಪರ್ಕ ಕಲ್ಪಿತವಾಗಿದೆ. ಅಲ್ಲದೆ, ಬೆಂಗಳೂರು ಕಡೆಯಿಂದ ಮಧುಗಿರಿ, ಪಾವಗಡಗಳಿಗೆ ಹೋಗುವ ವಾಹನಗಳು ಈ ಮೂಲಕ ಸಾಗುತ್ತವೆ. ಕೊರಟಗೆರೆ–ಮಾವತ್ತೂರು ರಸ್ತೆ ಇನ್ನೊಂದು. ಇದು ತೊಂಡೆಬಾವಿಯವರೆಗೂ ಮುಂದುವರೆದು ಬೆಂಗಳೂರು–ಗುಂತಕಲ್ ರೈಲುಮಾರ್ಗದೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಕೊರಟಗೆರೆಯಿಂದ ತುಮಕೂರಿಗೂ ನೀಲಾಹಾಳಿಗೂ ರಸ್ತೆಗಳುಂಟು.

ಕೊರಟಗೆರೆ ತಾಲ್ಲೂಕಿನ ಕ್ಯಾಮೇನಹಳ್ಳಿ ಮತ್ತು ದೊಡ್ಡಸಗ್ಗೆರೆಗಳಲ್ಲಿ ವರ್ಷವರ್ಷವೂ ಜಾತ್ರೆಗಳು ನಡೆಯುತ್ತವೆ. ಕ್ಯಾಮೇನಹಳ್ಳಿಯದು ತುಮಕೂರಿನ ದೊಡ್ಡ ಜಾತ್ರೆಗಳಲ್ಲಿ ಒಂದು. ಆಂಜನೇಯಸ್ವಾಮಿ ಇಲ್ಲಿಯ ಆರಾಧ್ಯದೈವ. ಫೆಬ್ರವರಿ–ಮಾರ್ಚ್ ತಿಂಗಳುಗಳ ಸುಮಾರಿಗೆ ರಥೋತ್ಸವದ ಸಮಯದಲ್ಲಿ ನಡೆಯುವ ಈ ಜಾತ್ರೆಯಲ್ಲಿ ದನಗಳ ಪ್ರದರ್ಶನ ಮತ್ತು ಮಾರಾಟಗಳು ನಡೆಯುತ್ತವೆ. ದೊಡ್ಡಸಗ್ಗೆರೆಯ ಜಾತ್ರೆ ನಡೆಯುವುದು ಮಾರ್ಚ್ ತಿಂಗಳಲ್ಲಿ. ಇಲ್ಲಿ ಅಹೋಬಲ ನರಸಿಂಹಸ್ವಾಮಿ ದೇವಸ್ಥಾನವಿದೆ. ತೋವಿನ ಕೆರೆ(ಶುಕ್ರವಾರ), ನಾಗೇನಹಳ್ಳಿ(ಶನಿವಾರ), ಅಕ್ಕಿರಾಂಪುರ(ಶನಿವಾರ), ಮಾವತ್ತೂರು (ಭಾನುವಾರ), ಇರಕಸಂದ್ರ(ಮಂಗಳವಾರ) ಮತ್ತು ಎಲೆ ರಾಂಪುರಗಳಲ್ಲಿ(ಬುಧವಾರ) ಸಂತೆಗಳು ನಡೆಯುತ್ತವೆ.

ಕೊರಟಗೆರೆ ಪಟ್ಟಣ ಸುವರ್ಣಮುಖಿಯ ಎಡದಂಡೆಯ ಮೇಲೆ ತುಮಕೂರು–ಮಧುಗಿರಿ ರಸ್ತೆಯಲ್ಲಿ ತುಮಕೂರಿನಿಂದ 24 ಕಿಮೀ ಉತ್ತರಕ್ಕಿದೆ. ತಾಲ್ಲೂಕಿನ ಕೇಂದ್ರ. ಜನಸಂಖ್ಯೆ 13,638 (2001). ಇಲ್ಲೊಂದು ಪೌರಸಭೆ ಇದೆ. ಇಲ್ಲಿಯ ಕೋಟೆಯನ್ನೂ ಪೇಟೆಯನ್ನೂ ಹೊಳವನಹಳ್ಳಿ ಪಾಳೆಯಗಾರನೊಬ್ಬ ಸ್ಥಾಪಿಸಿದ. ಕೋಟೆ ಜೀರ್ಣಸ್ಥಿತಿಯಲ್ಲಿದೆ. ಇದನ್ನು ಟಿಪ್ಪುಸುಲ್ತಾನ ಪಾಳುಗೆಡವಿದ. ಪಟ್ಟಣದ ಜನಕ್ಕೆ ಸುವರ್ಣಮುಖಿಯ ನೀರು ವರ್ಷದ ಎಲ್ಲಾ ಕಾಲದಲ್ಲೂ ಒದಗುತ್ತದೆ. ಕೊರಟಗೆರೆ ಬೆಟ್ಟದ ನಡುವೆ ಗವಿಗಂಗಾಧರೇಶ್ವರನ ದೇವಾಲಯವೂ ಬೆಟ್ಟದ ಮೇಲೆ ಬಸವ ದೇವಾಲಯವೂ ಇವೆ. ಪಟ್ಟಣದೊಳಗೆ ಇರುವ ಆಂಜನೇಯ ದೇವಾಲಯದ ಬಳಿ ಕೆಲವು ಮಾಸ್ತಿ ಕಲ್ಲುಗಳುಂಟು. (ಸಿ.ಬಿ.ಸಿ)

**ಕೊರತೆಯ ಹಣಕಾಸು :** ಸರ್ಕಾರ ತನ್ನ ಆಯಕ್ಕಿಂತ ವ್ಯಯ ಅಧಿಕವಾಗಿರುವಂತೆ–ಆಯವ್ಯಯದಲ್ಲಿ ಕೊರತೆ ಏರ್ಪಡುವಂತೆ–ಬುದ್ಧಿಪೂರ್ವಕವಾಗಿ ಕೈಗೊಂಡ ಕ್ರಮ (ಡೆಫಿಸಿಟ್ ಫಿನಾನ್ಸಿಂಗ್). ತೆರಿಗೆ ಶುಲ್ಕ, ಸರ್ಕಾರಿ ಉದ್ಯಮಗಳಿಂದ ಸಂಪಾದನೆ ಇವು ಸಾಮಾನ್ಯವಾಗಿ ಸರ್ಕಾರದ ಚಾಲ್ತಿ ಆಯದ ಬಾಬ್ತುಗಳು. ಸರ್ಕಾರದ ಸಾಮಾನ್ಯ ಕಾರ್ಯಗಳಿಗಾಗಿ ಮಾಡತಕ್ಕ ಖರ್ಚುಗಳು–ಚಾಲ್ತಿ ವ್ಯಯದ ಬಾಬ್ತುಗಳು–ಅದರ ಆಯದ ಪರಿಮಿತಿಯೊಳಗೆ ಇದ್ದ ಪಕ್ಷದಲ್ಲಿ ಅದು ತನ್ನ ಸಂಪಾದನೆಗೆ ಮೀರದ ರೀತಿಯಲ್ಲಿ ಆಡಳಿತ ನಿರ್ವಹಿಸುತ್ತಿದೆಯೆಂದು ಅರ್ಥ. ಮೇಲೆ ಹೇಳಿದ ಆಯದ ಬಾಬ್ತುಗಳು ಸಾಲದೆ ಹೋಗಿ, ಬ್ಯಾಂಕಿನಿಂದಲೋ ಸಾರ್ವಜನಿಕರಿಂದಲೋ ಪಡೆದ ಸಾಲದಿಂದ ಹೆಚ್ಚಿನ ವ್ಯಯವನ್ನು ತೂಗಿಸಲಾಗಿದ್ದರೆ ಅದು ಕೊರತೆಯ ಹಣಕಾಸು ಎನಿಸಿಕೊಳ್ಳುತ್ತದೆ. ಸರ್ಕಾರದ ಆಯವ್ಯಯ ಎಷ್ಟರಮಟ್ಟಿಗೆ ಉಬ್ಬರಕಾರಕವಾದ್ದು, ಆರ್ಥಿಕ ಚಟುವಟಿಕೆಯ ವಿಸ್ತಾರಕ್ಕೆ ಕಾರಣವಾದ್ದು ಎಂಬ ದೃಷ್ಟಿಯಿಂದ ಸರ್ಕಾರದ ಹಣಕಾಸುಕಾರ್ಯ ಕೊರತೆಯದೆ. ಅಲ್ಲವೆ, ಎಂಬುದನ್ನು ತಿಳಿಯುವ ಪ್ರಯತ್ನ ಮಾಡಬಹುದು. ಆಗ ಸರ್ಕಾರದ ಸಾಮಾನ್ಯ ಆಯವ್ಯಯವನ್ನು ಮಾತ್ರವೇ ಅಲ್ಲದೆ ಅದರ ಹಿನ್ನಲೆಯನ್ನೂ ವೀಕ್ಷಿಸಬೇಕು. ಅದರ ಆಯವ್ಯಯಗಳ ಒಂದೊಂದು ಬಾಬ್ತನ್ನೂ ಪರಿಶೀಲಿಸಬೇಕು. ಸರ್ಕಾರದ ಆಯದ ಕೆಲವು ಬಾಬ್ತುಗಳಿಂದ ಜನರ ಕೈಯಲ್ಲಿರುವ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ತೆರಿಗೆ ಒಂದು ಉದಾಹರಣೆ. ಮತ್ತೆ ಕೆಲವು ಆಯದ ಬಾಬ್ತುಗಳಿಂದ ಅದೇ ಪ್ರಮಾಣದಲ್ಲಿ ಜನರ ಕೊಳ್ಳುವ ಶಕ್ತಿ ಕಡಿಮೆಯಾಗದಿರಬಹುದು. ಖಜಾನೆ ಹುಂಡಿಗಳ ವಿಕ್ರಯ ಸರ್ಕಾರದ ಇಂಥ ಆಯದ ಒಂದು ಬಾಬ್ತು. ಸರ್ಕಾರದ ಹಣಕಾಸಿನ ಕಾರ್ಯ ಕೊರತೆಯದೆ, ಅಲ್ಲವೆ ಎಂಬುದನ್ನು ನಿರ್ಣಯಿಸುವಾಗ, ಅದರ ಆಯವ್ಯಯದಲ್ಲಿ ಎಷ್ಟರಮಟ್ಟಿನ ಕೊರತೆ ಇದೆಯೆಂಬುದನ್ನು ನಿರ್ಧರಿಸುವಾಗ, ಯಾವಯಾವ ಬಾಬ್ತುಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂಬುದು ತೀವ್ರವಾದಗ್ರಸ್ತ. ವಿಚಾರವಾಗಿದೆ. ಒಂದು ದೇಶದ ಅರ್ಥವ್ಯವಸ್ಥೆಯ ದ್ರವತೆಗೆ ಸರ್ಕಾರದ ಚಟುವಟಿಕೆಗಳು ಎಷ್ಟರಮಟ್ಟಿಗೆ ಉತ್ತೇಜಕವಾಗಿದೆಯೆಂಬುದನ್ನು ಅಳೆಯಲು ಅದರ ಆಯವ್ಯಯ ಕೊರತೆ ಒಂದು ಸಾಧನ. ಹಣದ ಸರಬರಾಯಿಯಲ್ಲಿ ಸಂಭವಿಸುವ ವ್ಯತ್ಯಾಸಗಳಿಂದಲೂ ಹಣಕ್ಕೆ ಅತ್ಯಂತ ನಿಕಟವಾಗಿರುವಂಥ ಆಸ್ತಿಗಳ ನಿರ್ಮಾಣದಿಂದಲೂ ಆರ್ಥಿಕತೆಯಲ್ಲಿ ಉಬ್ಬರದ ಒತ್ತಡಗಳು ಸಂಭವಿಸುವುದೆಂದು ಭಾವಿಸಿ, ಆ ದೃಷ್ಟಿಯಲ್ಲಿ ಸರ್ಕಾರದ ಚಟುವಟಿಕೆಗಳನ್ನು ವೀಕ್ಷಿಸುವುದುಂಟು. ಸರ್ಕಾರ ಜನರಿಂದ ತೆರಿಗೆಗಳನ್ನು

ವಸೂಲು ಮಾಡಿದಾಗ ಅವಕ್ಕೆ ಪ್ರತಿಯಾಗಿ ಅವರ ಕೈಯಲ್ಲಿ ಯಾವ ಆಸ್ತಿಯೂ ಸೃಷ್ಟಿಯಾಗುವುದಿಲ್ಲ. ಆದರೆ ಸರ್ಕಾರ ಜನರಿಂದ ಸಾಲ ಎತ್ತಿದಾಗ ಜನರಿಂದ ಸರ್ಕಾರಕ್ಕೆ ಹೋದ ಹಣಕ್ಕೆ ಪ್ರತಿಯಾಗಿ ಅವರ ಕೈಗೆ ಸಾಲಪತ್ರಗಳು ಲಭ್ಯವಾಗುತ್ತವೆ. ಇವು ಸರ್ಕಾರದ ಸಾಲಚಟುವಟಿಕೆಗಳ ಫಲವಾಗಿ ಸೃಷ್ಟಿಯಾದ ಆಸ್ತಿಗಳು. ಇವುಗಳಿಂದ ಆರ್ಥಿಕತೆಯ ದ್ರವತೆಯ ಮೇಲೆ ಆಗುವ ಪರಿಣಾಮ ಕುತೂಹಲಕರವಾದ್ದು. ಈ ನಾನಾ ವಿಚಾರಗಳ ದೃಷ್ಟಿಯಲ್ಲಿ ಕೊರತೆಯ ಹಣಕಾಸಿನ ಅರ್ಥವನ್ನು ಸಂದರ್ಭೋಚಿತವಾಗಿ ಕಾಲದೇಶಾನುಗುಣವಾಗಿ ಹಿಗ್ಗಿಸಿ ಅಥವಾ ಕುಗ್ಗಿಸಿಕೊಳ್ಳಬೇಕಾಗುತ್ತದೆ.

ಕೊರತೆಯ ಹಣಕಾಸಿಗೆ ಭಾರತದ ಯೋಜನಾ ಆಯೋಗ ನೀಡಿರುವ ವ್ಯಾಖ್ಯೆ ಇಲ್ಲಿ ಉಲ್ಲೇಖಾರ್ಹವಾದ್ದು. ಸರ್ಕಾರದ ಆಯವ್ಯಯ ಚಟುವಟಿಕೆಗಳ ಫಲವಾಗಿ ಆರ್ಥಿಕತೆಯಲ್ಲಿ ಕೊಳ್ಳುವ ಶಕ್ತಿಯ ನಿವ್ವಳ ಆಧಿಕ್ಯ ಸಂಭವಿಸುವುದಾದರೆ ಅದನ್ನು ಯೋಜನಾ ಆಯೋಗ ಕೊರತೆಯ ಹಣಕಾಸು ಎಂದು ಕರೆಯುತ್ತದೆ. ಕೊರತೆಯ ಹಣಕಾಸಿನ ಪರಿಮಾಣ ಆ ಆಧಿಕ್ಯಕ್ಕೆ ಸಮನಾಗಿರುತ್ತದೆ. ತೆರಿಗೆ, ಶುಲ್ಕ, ಸಾರ್ವಜನಿಕರಿಂದ ಎತ್ತಿದ ಸಾಲ ಮುಂತಾದ ಆಯದ ಬಾಬ್ತುಗಳಿಗೆ ಮೀರಿ ಸರ್ಕಾರ ವ್ಯಯ ಮಾಡಿದರೆ ಅದನ್ನು ಕೊರತೆಯ ಹಣಕಾಸು ಎಂದು ಕರೆಯುವುದು ಭಾರತದಲ್ಲಿ ಬಂದಿರುವ ರೂಢಿ. ಹೀಗೆ ಆಯಕ್ಕೆ ಮೀರಿದ ವ್ಯಯವನ್ನು ತೂಗಿಸಲು ರಿಸರ್ವ್ ಬ್ಯಾಂಕಿನಲ್ಲಿ ತನ್ನ ಲೆಕ್ಕದಲ್ಲಿರುವ ನಗದು ಶಿಲ್ಕುಗಳನ್ನು ಬಳಸಿಕೊಳ್ಳುವುದು. ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು–ಇವು ಭಾರತ ಸರ್ಕಾರ ಸಾಮಾನ್ಯವಾಗಿ ಅನುಸರಿಸುವ ಕೊರತೆಯ ಹಣಕಾಸು ವಿಧಾನಗಳು. ಸರ್ಕಾರ ಖರ್ಚಿಗಾಗಿ ರಿಸರ್ವ್ ಬ್ಯಾಂಕಿನಿಂದ ಹಣ ಪಡೆದರೆ ಸರ್ಕಾರದ ಋಣದ ಆಧಾರದ ಮೇಲೆ (ಈ ಬಗ್ಗೆ ಜಾರಿಯಲ್ಲಿರುವ ನಿಬಂಧನೆಗಳಿಗೆ ಅನುಗುಣವಾಗಿ) ರಿಸರ್ವ್ ಬ್ಯಾಂಕು ನೋಟು ಸೃಷ್ಟಿಸುತ್ತದೆ. ಜನರಲ್ಲಿ ಹಣದ ಸರಬರಾಯಿಯನ್ನು ಅಧಿಕಗೊಳಿಸುವ ಈ ವಿಧಾನಗಳು ಕೊರತೆಯ ಹಣಕಾಸಿನ ವ್ಯಾಪ್ತಿಯಲ್ಲಿ ಬರುತ್ತವೆ. ಸಾರ್ವಜನಿಕರಿಂದ ಸರ್ಕಾರ ಎತ್ತುವ ಸಾಲ ಕೊರತೆಯ ಹಣಕಾಸು ಎನಿಸಿಕೊಳ್ಳುವುದಿಲ್ಲ. ಏಕೆಂದರೆ ಇದರಿಂದ ದೇಶದಲ್ಲಿಯ ಒಟ್ಟು ಖರ್ಚು ಅಧಿಕವಾಗುವುದಿಲ್ಲ.

ಈ ವಿವೇಚನೆಯಿಂದ ಒಂದು ಮುಖ್ಯ ಅಂಶ ಸ್ಪಷ್ಟವಾಗುತ್ತದೆ. ಒಂದು ಸರ್ಕಾರದ ಚಾಲ್ತಿ ಆಯವ್ಯಯದಲ್ಲಿ ಆಯಕ್ಕಿಂತ ವ್ಯಯ ಅಧಿಕವಾಗಿರುವ ಸಂದರ್ಭಗಳು ಬರುವುದುಂಟು. ಇದು ಉದ್ದೇಶಪೂರ್ವಕವಾಗಿಯೇನೂ ಇರಬೇಕಾದುದಿಲ್ಲ. ಬಂಡವಾಳ ಬಾಬ್ತುಗಳನ್ನು ಇಲ್ಲಿ ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಇದು ಆಯವ್ಯಯದಲ್ಲಿ ಸಹಜವಾಗಿ ಸಂಭವಿಸುವ ಕೊರತೆ. ಆಯವ್ಯಯ ಕೊರತೆಗೆ ಎಡೆಕೊಡಬಾರದೆಂಬುದು ಸಂಪ್ರದಾಯವಾದಿಗಳ ಅಭಿಪ್ರಾಯ. ಚಾಲ್ತಿ ಬಾಬ್ತುಗಳನ್ನೇ ಅಲ್ಲದೆ ಬಂಡವಾಳ ಬಾಬ್ತುಗಳನ್ನೂ–ಸಾರ್ವಜನಿಕರಿಂದ ಎತ್ತಿದ ಸಾಲ ಮುಂತಾದವನ್ನೂ–ತೆಗೆದುಕೊಂಡ ಮೇಲೂ ಕೊರತೆ ಉಳಿದುಕೊಂಡಿದ್ದು, ಇದನ್ನು ಭರ್ತಿಮಾಡಲು ಹಣಕಾಸಿನ ಕ್ರಮ ಕೈಗೊಂಡರೆ ಅದು ಕೊರತೆಯ ಹಣಕಾಸು ಎನಿಸಿಕೊಳ್ಳುತ್ತದೆ. ಇದು ಹೆಚ್ಚು ವ್ಯಾಪಕವಾದ್ದು, ಬುದ್ಧಿಪೂರ್ವಕವಾದ್ದು.

ಸರ್ಕಾರ ಕೊರತೆಯ ಹಣಕಾಸು ಕ್ರಮ ಕೈಗೊಳ್ಳುವ ಸಂದರ್ಭಗಳು ಮೂರು. ದೇಶ ಯುದ್ಧದಲ್ಲಿ ತೊಡಗಿದ್ದಾಗ ಅದರ ಖರ್ಚಿಗೆ ಚಾಲ್ತಿ ಹಾಗೂ ಬಂಡವಾಳ ಬಾಬ್ತುಗಳಿಂದ ಬರುವ ಆಯಗಳು ಸಾಕಾಗುವುದಿಲ್ಲ. ತೆರಿಗೆ, ಸಾಲ ಮುಂತಾದ ಎಲ್ಲ ಕ್ರಮಗಳನ್ನೂ ಅದು ಗರಿಷ್ಠ ಮಿತಿಯವರೆಗೂ ಕೈಗೊಳ್ಳುತ್ತದೆ. ಈ ಮೂಲಗಳಿಂದ ಪಡೆದ ಹಣವೂ ಸರ್ಕಾರದ ಯುದ್ಧಕಾರ್ಯಕ್ಕೆ ಸಾಲುವುದಿಲ್ಲ. ಆಗ ಅದು ಕೊರತೆಯ ಹಣಕಾಸಿನ ಕ್ರಮ ಅನುಸರಿಸುತ್ತದೆ. ಬ್ಯಾಂಕುಗಳಿಗೆ ಸರ್ಕಾರಿ ಪ್ರತಿಭೂತಿಗಳನ್ನು ಕೊಟ್ಟು ಹಣ ಪಡೆಯುತ್ತದೆ. ಖರ್ಚುಗಳ ಪಾವತಿಗೆ ಕೇಂದ್ರೀಯ ಬ್ಯಾಂಕಿನ ಮೇಲೆ ಚೆಕ್ಕುಗಳನ್ನು ನೀಡುತ್ತದೆ. ಬ್ಯಾಂಕುಗಳ ದ್ರವತೆ ಅಧಿಕವಾಗುವುದರಿಂದ ದೇಶದಲ್ಲಿ ಹಣದ ಹರಿವಿನ ಪಾತ್ರ ವಿಸ್ತಾರವಾಗುತ್ತದೆ. ಕೇಂದ್ರೀಯ ಬ್ಯಾಂಕು ತನ್ನ ವಿಸ್ತೃತ ಆಸ್ತಿಗಳ (ಸರ್ಕಾರದ ಋಣ ಮತ್ತು ಅದರಿಂದ ಪಡೆದ ಪ್ರತಿಭೂತಿಗಳು) ತಳಹದಿಯ ಮೇಲೆ ಹೆಚ್ಚು ನೋಟು ನೀಡುತ್ತದೆ. ದೇಶದಲ್ಲಿ ನಿವ್ವಳ ಹಣದ ಸರಬರಾಯಿ ಅಧಿಕವಾಗಿ ಉಬ್ಬರ ಪರಿಸ್ಥಿತಿ ಉದ್ಭವಿಸುತ್ತದೆ.

ದೇಶದಲ್ಲಿ ಆರ್ಥಿಕ ಮುಗ್ಗಟ್ಟು ಸಂಭವಿಸಿ, ಉತ್ಪಾದನೆ, ಉದ್ಯೋಗ, ವರಮಾನ, ಬೇಡಿಕೆ–ಎಲ್ಲವೂ ಕೆಳಗಿನ ಮಟ್ಟದಲ್ಲಿರುವಾಗಲೂ ಸರ್ಕಾರ ಕೊರತೆಯ ಹಣಕಾಸಿನ ವಿಧಾನವನ್ನನುಸರಿಸಿ ಆ ಸ್ಥಿತಿಯನ್ನು ನಿವಾರಿಸಲು ಪ್ರಯತ್ನಿಸುವುದುಂಟು. ಪರಿಣಾಮಕಾರಿ ಬೇಡಿಕೆಯ ಅಭಾವವೇ ಆವರ್ತಾತ್ಮಕ ನಿರುದ್ಯೋಗಕ್ಕೆ ಕಾರಣ. ಪರಿಣಾಮಕಾರಿ ಬೇಡಿಕೆಯನ್ನು ಕುದುರಿಸುವ ಕ್ರಮಗಳು ಆರ್ಥಿಕ ಮುಗ್ಗಟ್ಟಿನ ಪರಿಹಾರಕ್ಕೆ ಕೇನ್ಸ್ ಸೂಚಿಸಿದ ಮುಖ್ಯೋಪಾಯ. ಇದನ್ನು ಸರ್ಕಾರ ನಾನಾ ಬಗೆಯಾಗಿ ಆಗಮಾಡಿಸಬಹುದು. ಖಾಸಗಿ ವಲಯದಲ್ಲಿ ಸರಕಿನ ಅನುಭೋಗ ಹಾಗೂ ವಿನಿಯೋಜನೆಗಳನ್ನು (ಇನ್‌ವೆಸ್ಟ್‌ಮೆಂಟ್) ಅಧಿಕಗೊಳಿಸುವುದರಿಂದ ಅನುಭೋಗ ಹಾಗೂ ಉತ್ಪಾದನ ಸರಕುಗಳಿಗೆ ಬೇಡಿಕೆ ಹೆಚ್ಚುತ್ತದೆ. ಇದಕ್ಕಾಗಿ ಸರ್ಕಾರ ತೆರಿಗೆ ದರಗಳನ್ನು ಇಳಿಸಬಹುದು. ಇದರಿಂದ ಜನರ ವರಮಾನದಲ್ಲಿ ಹಿಂದಿಗಿಂತ ಹೆಚ್ಚು ಭಾಗ ಅವರ ಕೈಯಲ್ಲೇ ಉಳಿಯುತ್ತದೆ. ಇದರಿಂದ ಅವರು ತಮ್ಮ ಬಯಕೆಗಳನ್ನು ಪೂರೈಸಿಕೊಳ್ಳಲು ಸರಕನ್ನು ಹೆಚ್ಚಾಗಿ ಕೊಳ್ಳಬಹುದು. ಆಗ ಅರ್ಥವ್ಯವಸ್ಥೆಯಲ್ಲಿ ಪರಿಣಾಮಕಾರಿ ಬೇಡಿಕೆ ಅಧಿಕವಾಗುತ್ತದೆ. ಇದರಿಂದ ಸರಕುಗಳ ಬೆಲೆಗಳ ಕುಸಿತಕ್ಕೆ ತಡೆಯುಂಟಾಗುವುದು ಸಹಜ. ಅಧಿಕ ಪರಿಣಾಮಕಾರಿ ಬೇಡಿಕೆಯಿಂದ ಸರಕುಗಳ ವಿಕ್ರಯ ಅಧಿಕವಾಗಿ ಅವುಗಳ ದಾಸ್ತಾನು ಕಡಿಮೆಯಾಗುವುದರಿಂದ ಸರಬರಾಯಿಯನ್ನು ಅಧಿಕಗೊಳಿಸುವ ಉತ್ಪಾದಕರು ಉತ್ಪಾದನಕಾರ್ಯವನ್ನು ಚುರುಕುಗೊಳಿಸುತ್ತಾರೆ. ಇದರಿಂದ ಉದ್ಯೋಗದ ಮಟ್ಟ ಏರಿ, ಮುಗ್ಗಟ್ಟು ಪ್ರವೃತ್ತಿಗೆ ತಡೆ ಏರ್ಪಡುತ್ತದೆ. ಆದರೆ ಸರ್ಕಾರ ತೆರಿಗೆ ದರಗಳನ್ನು ಇಳಿಸಿದಾಗ ಅದೇ ಪ್ರಮಾಣದಲ್ಲಿ ತನ್ನ ವ್ಯಯಗಳನ್ನು ಇಳಿಸದಿರುವುದು ಅವಶ್ಯ. ಸರ್ಕಾರದ ವ್ಯಯ ಮಾತ್ರ ಏಕ ರೀತಿಯಾಗಿದ್ದು ಅದರ ತೆರಿಗೆಯ ಆಯ ಕಡಿಮೆಯಾದಾಗ ಉದ್ಭವಿಸುವ ಕೊರತೆಯನ್ನು ತುಂಬಲು ಸರ್ಕಾರ ಹಿಂದೆ ಹೇಳಿದ ವಿಧಾನ ಅನುಸರಿಸಬೇಕಾಗುವುದರಿಂದ ಅರ್ಥವ್ಯವಸ್ಥೆಯಲ್ಲಿ ನಿವ್ವಳ ಹಣಸರಬರಾಯಿ ಅಧಿಕವಾಗುತ್ತದೆ. ಇದು ಕೊರತೆಯ ಹಣಕಾಸು.

ತೆರಿಗೆಯ ಇಳಿತಾಯ ಮಾತ್ರದಿಂದಲೇ ಮುಗ್ಗಟ್ಟಿನ ಪ್ರವೃತ್ತಿಗೆ ತಡೆಯುಂಟಾಗದಿದ್ದರೆ ಸರ್ಕಾರ ಲೋಕೋಪಯೋಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ತನ್ನ ಖರ್ಚುಗಳನ್ನು ಅಧಿಕಗೊಳಿಸುತ್ತದೆ. ಸರ್ಕಾರದ ತೆರಿಗೆಯೇ ಮುಂತಾದ ಆಯ ಬಾಬ್ತುಗಳು ಏಕರೀತಿಯಾಗಿದ್ದು, ವ್ಯಯ ಮಾತ್ರ ಅಧಿಕವಾದಾಗ ಕೊರತೆ ಉದ್ಭವಿಸುತ್ತದೆ. ಆಯಕ್ಕಿಂತ ಹೆಚ್ಚಿನ ವ್ಯಯವನ್ನು ಅದು ಸಾಲದ ಮೂಲಕ ಪೂರೈಸುತ್ತದೆ. ಸರ್ಕಾರದ ವ್ಯಯಕಾರ್ಯದಿಂದ ರಾಷ್ಟ್ರೀಯ ವರಮಾನ ಹೆಚ್ಚುವುದರಿಂದ ಪರಿಣಾಮಕಾರಿ ಬೇಡಿಕೆಯೂ ಅಧಿಕವಾಗಿ, ಆರ್ಥಿಕ ಚಟುವಟಿಕೆಗಳಿಗೆ ಮತ್ತೊಮ್ಮೆ ಚೈತನ್ಯ ಲಭ್ಯವಾಗುತ್ತದೆ. ದೇಶದಲ್ಲಿ ನಿರುದ್ಯೋಗ ಅಧಿಕವಾಗಿದ್ದು ಬಂಡವಾಳದ ಸಾಮರ್ಥ್ಯ ಪೂರ ಉಪಯೋಗಕ್ಕೆ ಬಾರದಿದ್ದಾಗ ಸರ್ಕಾರ ಅನುಸರಿಸುವ ಕೊರತೆ ಹಣಕಾಸು ಕ್ರಮದಿಂದ ಉಬ್ಬರ ಪರಿಸ್ಥಿತಿಯುಂಟಾಗುವುದಿಲ್ಲವೆಂದು ಕೇನ್ಸ್ ಹೇಳಿದ್ದಾನೆ. ಏಕೆಂದರೆ ಈ ಕ್ರಮದಿಂದ ತತ್‌ಕ್ಷಣವೇ ಪರಿಣಾಮಕಾರಿ ಬೇಡಿಕೆ ಅಧಿಕವಾಗುವುದಲ್ಲದೆ ಉತ್ಪಾದನೆ ಮತ್ತು ಸರಬರಾಯಿಗಳೂ ಹೆಚ್ಚುತ್ತವೆ. ಉತ್ಪಾದನೆಯ ಸರಾಸರಿ ಮತ್ತು ಅಂಚಿನ ವೆಚ್ಚ ಅಧಿಕವಾಗದ್ದರಿಂದ ಅಧಿಕ ಸರಬರಾಯಿಗೆ ತಡೆಯಿರುವುದಿಲ್ಲ. ಆದ್ದರಿಂದ ಸರ್ಕಾರದ ಅಧಿಕ ವ್ಯಯವನ್ನು ತೆರಿಗೆಗಳಿಂದ ಪೂರೈಸುವ ಬದಲು ಕೊರತೆಯ ಹಣಕಾಸಿನ ಕ್ರಮದಿಂದಲೇ ಪೂರೈಸುವುದು ಯುಕ್ತ.

ಕೊರತೆಯ ಹಣಕಾಸಿನ ನೀತಿಯಿಂದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಭಿವೃದ್ಧಿ ಸಾಧಿಸಬಹುದೇ? ಎಂಬುದು ಇನ್ನೊಂದು ಪ್ರಶ್ನೆ. ಹೆಚ್ಚು ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಬಂಡವಾಳದ ನಿರ್ಮಾಣಕ್ಕಿಂತ ಹೆಚ್ಚು ವೇಗದಲ್ಲಿ ಜನಸಂಖ್ಯೆ ಅಧಿಕವಾಗುತ್ತದೆ. ಅಲ್ಲಿಯ ಕಾರ್ಮಿಕ ಜನಕ್ಕೆ ಪೂರ್ಣೋದ್ಯೋಗ ದೊರಕಿಸಿಕೊಡಬೇಕಾದರೆ ಅಗಾಧ ಬಂಡವಾಳವೇ ಬೇಕು. ಮುಂದುವರಿದ ದೇಶಗಳಲ್ಲಿ ಮುಗ್ಗಟ್ಟಿನ ಸಂದರ್ಭದಲ್ಲಿ ಬಂಡವಾಳದ ಕೊರತೆ ಇರುವುದಿಲ್ಲ. ಪರಿಣಾಮಕಾರಿ ಬೇಡಿಕೆಯನ್ನು ಹೆಚ್ಚಿಸುವುದು ಹೇಗೆಂಬುದೇ ಅಲ್ಲಿಯ ಸಮಸ್ಯೆ. ಆದರೆ ಅಭಿವೃದ್ಧಿಯಾಗುತ್ತಿರುವ ದೇಶಗಳಲ್ಲಿ ಬಂಡವಾಳದ ಕೊರತೆಯದೇ ಸಮಸ್ಯೆ. ಮುಂದುವರಿದ ದೇಶಗಳಲ್ಲಿ ಖಾಸಗಿ ಉದ್ಯಮಿಗಳು ಬಂಡವಾಳ ಪೂರೈಕೆಯ ಕಾರ್ಯ ನಿರ್ವಹಿಸುತ್ತಾರೆ. ಆದರೆ ಮುಂದುವರಿಯದ ದೇಶಗಳಲ್ಲಿ ಬಂಡವಾಳ ಹೂಡಿ ಉದ್ಯಮ ನಡೆಸಬಲ್ಲವರ ಸಂಖ್ಯೆ ತೀರ ಕಡಿಮೆ. ಆದ್ದರಿಂದ ಇಂಥ ದೇಶಗಳಲ್ಲಿ ಶೀಘ್ರ ಅಭಿವೃದ್ಧಿ ಸಾಧಿಸುವ ಹೊಣೆ ಸರ್ಕಾರದ್ದು. ಉಳಿತಾಯ ಮತ್ತು ತೆರಿಗೆಗಳಿಂದ ಬಂಡವಾಳ ಶೇಖರಣೆಯೂ ಅಭಿವೃದ್ಧಿಯೂ ಸಾಧ್ಯ. ಆದರೆ ಜನರ ವರಮಾನ ಮಟ್ಟ ಬಹಳ ಕಡಿಮೆಯಾದ್ದರಿಂದ ಇವೆರಡರಿಂದಲೂ ಹೆಚ್ಚು ಬಂಡವಾಳದ ಪೂರೈಕೆ ಆಗದು. ವಿದೇಶೀ ನೆರವು ಇನ್ನೊಂದು ಮಾರ್ಗ. ಅದು ಕೂಡ ಅಗತ್ಯ ಪರಿಮಾಣದಲ್ಲಿ ಬರುವುದೆಂಬ ಭರವಸೆ ಇರುವುದಿಲ್ಲ. ಬಂದರೂ ಅದರ ಪರಿಣಾಮಗಳು ಯಾವಾಗಲೂ ಒಳ್ಳೆಯವಲ್ಲ. ಆದ್ದರಿಂದ ಸರ್ಕಾರಕ್ಕೆ ಉಳಿದ ಮಾರ್ಗವೆಂದರೆ ಕೊರತೆಯ ಹಣಕಾಸು. ಸರ್ಕಾರದ ಆಯಕ್ಕಿಂತ ವ್ಯಯ ಅಧಿಕವಾದಾಗ, ಸರ್ಕಾರದ ವಿನಿಯೋಜನೆ ಹೆಚ್ಚಿದಾಗ, ಅದಕ್ಕೆ ಅನುಗುಣವಾಗಿ ಜನರಲ್ಲಿ ಕೊಳ್ಳುವ ಶಕ್ತಿಯ ನಿರ್ಮಾಣವಾಗುತ್ತದೆ. ಇದರಿಂದ ಬೇಡಿಕೆಯೂ ಹೆಚ್ಚುತ್ತದೆ. ಆದರೆ ಅದೇ ಪ್ರಮಾಣದಲ್ಲಿ ಅನುಭೋಗ ಸರಕುಗಳ ಸರಬರಾಯಿ ಅಧಿಕವಾಗದು. ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಅಸ್ತಿಭಾರದ ರಚನೆಗಾಗಿ ಮತ್ತು ಬಂಡವಾಳಪ್ರಧಾನವಾದ ಮೂಲಭೂತ ಕೈಗಾರಿಕೆಗಳ ಹಾಗೂ ಬಂಡವಾಳ ಸರಕುಗಳ ಉತ್ಪಾದನೆಯ ಕೈಗಾರಿಕೆಗಳ ನಿರ್ಮಾಣಕ್ಕಾಗಿ ಮೊಟ್ಟಮೊದಲು ಕ್ರಮ ಕೈಗೊಳ್ಳಬೇಕಾಗುವುದರಿಂದ ಆ ಕಾಲದಲ್ಲಿ ಜನರ ಅನುಭೋಗ ಸರಕುಗಳ ಪೂರೈಕೆಯಾಗದೆ ಸರ್ಕಾರ ನಿರ್ಮಿಸಿದ ಅಧಿಕ ಹಣದಿಂದ ಬೆಲೆಗಳ ಮೇಲೆ ಒತ್ತಡ ಬೀಳುತ್ತದೆ. ಯಾವ ಮಿತಿಯವರೆಗೆ ಇಂಥ ಉಬ್ಬರ ಪ್ರವೃತ್ತಿಗಳನ್ನು ಬೆಳೆಯಗೊಡಬಹುದು ಎಂಬುದು ಪರಿಶೀಲಿಸಬೇಕಾದ ಪ್ರಶ್ನೆ. ಕೊರತೆಯ ಹಣಕಾಸಿನ ಫಲವಾದ ಉಬ್ಬರದ ವಿಭವವನ್ನು ಯುಕ್ತ ತೆರಿಗೆ ನೀತಿ, ಹಣ ನೀತಿ, ಉದ್ದರಿಯ ಹವಣರಿತ ನಿಯಂತ್ರಣ, ಅಗತ್ಯಾನುಗುಣವಾಗಿ ಸಂಪನ್ಮೂಲಗಳ ಬಳಕೆ, ಆಯಾತಕ್ಕಿಂತ ನಿರ್ಯಾತ ಅಧಿಕವಾಗುವಂತೆ ಕ್ರಮಗಳ ಜಾರಿ, ಬೆಲೆಗಳ ಹತೋಟಿ, ಪಡಿತರ ಮುಂತಾದ ನಾನಾ ಮಾರ್ಗಗಳಿಂದ ಹಿಡಿತದಲ್ಲಿಡುವುದು ಅವಶ್ಯವಾಗುತ್ತದೆ.

ಕೊರತೆಯ ಹಣಕಾಸಿನಿಂದ ವಾಸ್ತವವಾಗಿ ಸಂಪತ್ಸಾಧನಗಳನ್ನು ಸೃಷ್ಟಿಸುವುದು ಸಾಧ್ಯವಿಲ್ಲ. ಜನರ ಕೈಯಲ್ಲಿರುವ ಹಣದ ಮೌಲ್ಯವನ್ನು ಕುಗ್ಗಿಸಿ, ಹಾಗೆ ಕುಗ್ಗಿದ ಭಾಗದ ಮೌಲ್ಯವನ್ನು ಜನಕ್ಕೆ ಅರಿವಾಗದಂತೆ ಸರ್ಕಾರ ತನ್ನ ಕೈಗೆ ತೆಗೆದುಕೊಳ್ಳುವ ವಿಧಾನವಿದು. ಬೆಳವಣಿಗೆಗೆ ಅಗತ್ಯವಾದ ವಾಸ್ತವ ಸಾಧನಗಳು ಅರ್ಥವ್ಯವಸ್ಥೆಯಲ್ಲಿ ಇಲ್ಲದೆ ಹೋದಾಗ ಕೊರತೆಯ ಹಣಕಾಸಿನಿಂದ ಅನರ್ಥವೇ ಸಂಭವಿಸಬಹುದು. ತೀವ್ರ ಅಸ್ಥಿರ ಬೆಲೆಗಳ ಪರಿಸ್ಥಿತಿಯಲ್ಲಿ ಅಭಿವೃದ್ಧಿಯ ಕಾರ್ಯಕ್ರಮಗಳು ವಿಫಲಗೊಳ್ಳುವ ಅಪಾಯವಿದೆ.

ಭಾರತದಲ್ಲಿ ಯೋಜನೆಗಳಿಗೆ ಅಗತ್ಯವಾದ ಸಾಧನಗಳನ್ನು ಪಡೆಯುವ ಸಲುವಾಗಿ ಇತರ ಮಾರ್ಗಗಳ ಜೊತೆಗೆ ಮುಖ್ಯವಾಗಿ ಕೊರತೆಯ ಹಣಕಾಸಿನ ನೀತಿ ಅನುಸರಿಸಲಾಗಿದೆ. ತೆರಿಗೆ, ಸಾಲ, ನೆರವು ಮುಂತಾದವುಗಳಿಗೂ ಮೀರಿದ ವಿನಿಯೋಜನೆಗಳಿಗೆ ಹಣನಿರ್ಮಾಣ ಅನಿವಾರ್ಯವೆನಿಸಿದೆ. ಇದು ಅಪಾಯದ ಮಟ್ಟವನ್ನು ಮೀರಿಹೋಗದಂತೆ ಸರ್ಕಾರ ತನ್ನ ಕೈಲಾದ ಪ್ರಯತ್ನಗಳನ್ನೆಲ್ಲ ಮಾಡುತ್ತಿದೆ. (ಎಸ್.ಎಂ.ವಿ.)

**ಕೊರವಂಜಿ[1] :** ಅಲೆಮಾರಿ ಜನರಲ್ಲಿ ಒಂದು ಪಂಗಡದವರನ್ನು ಈ ಹೆಸರಿನಿಂದ ಕರೆಯುತ್ತಾರೆ. ಒಂದು ಕಾಲಕ್ಕೆ ಕೊರವಂಜಿ ಎಂಬ ಹೆಸರು ದಕ್ಷಿಣ ಭಾರತದಲ್ಲೆಲ್ಲ ಚಿರಪರಿಚಿತವಾಗಿತ್ತು. ಹೊಟ್ಟೆಯ ಪಾಡಿಗಾಗಿ ಮನೆಮನೆಯ ಬಾಗಿಲಿಗೆ ಬರುವ ಕೊರವಂಜಿ ತನ್ನ ವೇಷ ಭೂಷಣಗಳಿಂದಲೂ ಭವಿಷ್ಯವನ್ನು ಹೇಳುವ ಕಾಯಕದಿಂದಲೂ ವಿಶಿಷ್ಟವಾದ ಹಾಡುಗಳ ವೈಖರಿಯಿಂದಲೂ ಎಲ್ಲರ ಮನಸ್ಸನ್ನೂ ಬಹು ಹಿಂದಿನಿಂದಲೂ ಆಕರ್ಷಿಸುತ್ತ ಬಂದಿದ್ದಾಳೆ.

ಧರ್ಮದೇವತೆ ಕೊರವಂಜಿ ವೇಷದಲ್ಲಿ ಧರಣಿದೇವಿಗೆ ಕಣಿ ಹೇಳುತ್ತಿರುವುದು

ಕೊರವಂಜಿ ಎಂಬ ಶಬ್ದ ಪ್ರಮುಖ ದ್ರಾವಿಡಭಾಷೆಗಳಲ್ಲೆಲ್ಲ ಕಂಡುಬರುತ್ತದೆ. ತಮಿಳಿನಲ್ಲಿ ಪುಲ್ಲಿಂಗರೂಪ ಕುಱವನ್ ಎಂದಾದರೆ, ಕುಱತ್ತಿ, ಕುಱವಿ, ಕುಱವಂಚಿ(ಜಿ) ಎಂಬ ಹಲವಾರು ಸ್ತ್ರೀಲಿಂಗರೂಪಗಳಿವೆ. ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಕೊಱವಂಜಿ, ಕೊಱವತಿ, ಕೊಱವಿತಿ, ತೆಲುಗಿನಲ್ಲಿ ಕೊಱವತ, ಕೊಱವಂಜಿ ಮುಂತಾದ ರೂಪಗಳು ಪ್ರಯೋಗದಲ್ಲಿವೆ. ಈ ಜನ ಗುಡ್ಡಗಾಡುಗಳಲ್ಲಿ ವಾಸಿಸುತ್ತ ಜೀವನೋಪಾಯಕ್ಕೆ ದನಕರುಗಳ ಪಾಲನೆ, ಬೆತ್ತದ ಕೆಲಸ, ಬೇಟೆ ಮೊದಲಾದುವನ್ನು ಅನುಸರಿಸುವುದಲ್ಲದೆ, ಹೆಂಗಸರು ಭವಿಷ್ಯ ಹೇಳುವ ಕಸಬನ್ನು ಅವಲಂಬಿಸಿರುವುದು ಕಂಡುಬರುತ್ತದೆ.

ಸಮಾಜವಿಜ್ಞಾನಿಗಳ ಪರಿಶೀಲನೆಯ ಪ್ರಕಾರ ಇವರು ಬಹುಮಟ್ಟಿಗೆ ಭರತಖಂಡದ ಪಶ್ಚಿಮಭಾಗದಲ್ಲಿಯೇ ವಿಶೇಷವಾಗಿ ವ್ಯಾಪಿಸಿರುವಂತಿದೆ. ಈ ಸಮುದಾಯದವರನ್ನೇ ತೆಲುಗಿನಲ್ಲಿ ಒಮ್ಮೊಮ್ಮೆ ಎರುಕಲರು ಎಂದೂ ಕರೆಯುವುದುಂಟು. ಈಗ ಉಪಲಬ್ಧವಿರುವ ಸಾಮಗ್ರಿಗಳನ್ನೆಲ್ಲ ಪರಿಶೀಲಿಸಿದರೆ ಈ ಜಾತಿವಾಚಕದ ಮೂಲರೂಪ ತಮಿಳಿನಲ್ಲಿ ಬಳಕೆಯಲ್ಲಿರುವ ಕೆಲವು ಪದಗಳಲ್ಲಿ ಹುದುಗಿರಬೇಕು ಎನ್ನಿಸುತ್ತದೆ.

ಈ ಜನ ಒಂದೆಡೆಯಲ್ಲಿ ನಿಲ್ಲದೆ ಸಂಚಾರಮಾಡುತ್ತಿರುವುದರಿಂದ ತಮಿಳು, ತೆಲುಗು ಇಲ್ಲವೇ ಕನ್ನಡಭಾಷೆಗಳನ್ನು ಬಲ್ಲವರಾಗಿರುತ್ತಾರೆ. ಇವರ ಕಸಬುಗಳಲ್ಲಿ ಭವಿಷ್ಯ ಹೇಳುವುದೂ ಒಂದು. ಅದರಲ್ಲಿಯೂ ಈ ಕೆಲಸ ಹೆಂಗಸರಿಗೆ ಮಾತ್ರ ಮೀಸಲಾಗಿರುವುದು ಇಲ್ಲಿ ಗಮನಿಸತಕ್ಕ ಸಂಗತಿ. ಇದಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವೂ ಇವರಲ್ಲಿ ಪ್ರಚಾರದಲ್ಲಿದೆ. ಒಮ್ಮೆ ಪಾರ್ವತಿ ಕೊರವಂಜಿಯ ವೇಷ ಧರಿಸಿ ಭವಿಷ್ಯ ಹೇಳಿದಳಂತೆ. ಇವರು ಆಕೆಯ ಮಕ್ಕಳಾದುದರಿಂದ ಈ ಪಂಗಡಕ್ಕೆ ಕೊರವರು ಎಂದು ಹೆಸರಾಯಿತಂತೆ. ಇನ್ನೊಂದು ಕಥೆಯಲ್ಲಿ ಪಾರ್ವತಿ ಸರ್ಪವನ್ನು ಸೀಳಿ ಅದರ ಹೊಟ್ಟೆಯಲ್ಲಿ ವಜ್ರ ವೈಡೂರ್ಯಗಳನ್ನು ತುಂಬಿ ತನ್ನ ಮಗುವಿಗೆ ಒಂದು ತೊಟ್ಟಿಲನ್ನು ಮಾಡಿಕೊಡುವಂತೆ ಮೇದರವನೊಬ್ಬನಿಗೆ ಹೇಳಿದಳಂತೆ. ಆತ ಹಾಗೆ ಮಾಡಿಕೊಡಲು ಹೆದರಿದಾಗ ಕೊರಚನೊಬ್ಬ ಎರಡೆಣಿಸದೆ ಅಂಥ ತೊಟ್ಟಿಲನ್ನು ಮಾಡಿಕೊಟ್ಟನಂತೆ. ಇದನ್ನು ಕಂಡ ಪಾರ್ವತಿ ಕೊರಚರವನಿಗೆ ತನ್ನಲ್ಲಿದ್ದ ಮಂತ್ರದಂಡವನ್ನೂ ಕೇರುವ ಮೊರವನ್ನೂ ಬಹುಮಾನವಿತ್ತು ಭವಿಷ್ಯ ಹೇಳುವ ಅಧಿಕಾರವನ್ನು ಅನುಗ್ರಹಿಸಿದಳಂತೆ. ಧರ್ಮರಾಯ ವನವಾಸದಲ್ಲಿದ್ದಾಗ ಆತನನ್ನು ಮೋಹಿಸಿದ ಹೆಣ್ಣೊಬ್ಬಳು ಭವಿಷ್ಯ ಹೇಳುವವಳಂತೆ ವೇಷ ಮರೆಸಿಕೊಂಡು ಹೋಗಿ ಆತನನ್ನು ವರಿಸಿದಳೆಂದೂ ಆಕೆಯ ಮಕ್ಕಳೇ ಈ ಕೊರವರೆಂದೂ ಮತ್ತೊಂದು ಕಲ್ಪನೆಯುಂಟು. ಈ ಹಲವಾರು ನಂಬಿಕೆಗಳ ನಿಶ್ಚಯಾಂಶವೇನೇ ಇರಲಿ, ಈ ಜನರಿಗೆ ಭವಿಷ್ಯ ಹೇಳುವ ಹಕ್ಕು ದೈವದತ್ತವಾಗಿ ಬಂದುದೆಂಬುದು ಇಲ್ಲಿಯ ಧ್ವನಿ. ಪಾರ್ವತಿ ಮತ್ತು ಅನಾಮಿಕ ಹೆಂಗಸೊಬ್ಬಳು ಈ ಐತಿಹ್ಯಗಳಲ್ಲಿ ಬರುವುದರಿಂದ ಈ ಪಂಗಡದ ಸ್ತ್ರೀಯರಿಗೆ ಭವಿಷ್ಯ ಹೇಳುವುದು ಒಂದು ಉಚ್ಚವಾದ ಉದ್ಯೋಗವಾಗಿ ಪರಿಣಮಿಸಿತೆಂದು ತೋರುತ್ತದೆ.

ಜನಪದ ಸಾಹಿತ್ಯದಲ್ಲಿಯಂತೂ ಜನಾನುರಾಗವನ್ನು ಗಳಿಸಿರುವ ಕೊರವಂಜಿಯ ಪಾತ್ರವನ್ನು ಚಿತ್ರಿಸುವ ಹಲವಾರು ರಚನೆಗಳುಂಟು. ಪಾರ್ವತಿ–ಕೊರವಂಜಿ, ಬ್ರಹ್ಮ–ಕೊರವಂಜಿ, ಪದ್ಮಾವತಿ–ಕೊರವಂಜಿ, ಅರ್ಜುನ–ಕೊರವಂಜಿ ಮತ್ತು ಮನ್ಮಥ–ಕೊರವಂಜಿ ಎಂಬ ಹಲವಾರು ಯಕ್ಷಗಾನಗಳೂ ಲಭಿಸುತ್ತವೆ. ಪ್ರೌಢಕಾವ್ಯಗಳಲ್ಲಿಯೂ (ನೇಮಿನಾಥಪುರಾಣ) ಸಂದರ್ಭೋಚಿತವಾಗಿ ಈ ಪಾತ್ರ ಪ್ರವೇಶಿಸಿರುವುದುಂಟು. (ವಿ.ಜಿ.)

**ಕೊರವಂಜಿ[2] :** ತಿಳಿನಗೆಯ ಲೇಖನಗಳಿಗೇ ಮೀಸಲಾಗಿದ್ದ ಕನ್ನಡ ಮಾಸಪತ್ರಿಕೆ. ಸ್ಥಾಪನೆ 1942ರಲ್ಲಿ. ಸಂಪಾದಕರು ರಾ.ಶಿ.(ಎಂ.ಶಿವರಾಂ). ಸಂಪಾದನಕಾರ್ಯದಲ್ಲಿ

ಪತ್ರಿಕೆಯ ಮುಖಪುಟ

ಪತ್ರಿಕೆಗೆ ನಾ.ಕಸ್ತೂರಿಯವರ ಸಹಕಾರ ಲಭ್ಯವಾಗಿತ್ತು. ಚಿತ್ರಭಾನು ಸಂವತ್ಸರದ ಉಗಾದಿಯಂದು ಮೊದಲ ಸಂಚಿಕೆ ಹೊರಬಿತ್ತು. ಲೋಕದ ಯಾವುದೇ ವಾರ್ತೆಯನ್ನಾಗಲಿ ಸಮಾಜದ ಯಾವ ಘಟನೆಯನ್ನೇ ಆಗಲಿ, ತಿಳಿಯಾದ

ನವುರಾದ ಹಾಸ್ಯದ ಹಿನ್ನೆಲೆಯಲ್ಲಿ ಕಣಿ ಹೇಳುವಂತೆ ವರದಿಮಾಡುವುದು ಕೊರವಂಜಿಯ ಗುರಿಯಾಗಿತ್ತು. ಕನ್ನಡ ಸಾಹಿತ್ಯದ ನಾನಾಪ್ರಕಾರಗಳನ್ನು ಕಣಿ ಹೇಳಲು ಬಳಸಿಕೊಳ್ಳುವುದಲ್ಲದೆ ಪ್ರಪಂಚದ ಇತರ ಭಾಷಾಸಾಹಿತ್ಯದಲ್ಲಿ ನೂತನವಾಗಿ ಬಂದ ಪ್ರಕಾರಗಳನ್ನೂ ಕನ್ನಡಕ್ಕೆ ಅಳವಡಿಸಿಕೊಂಡಿತು. ಪಂಚಪಂಕ್ತಿ (ಲಿಮರಿಕ್ಸ್) ಅಣುಕಹಾಡು, ಲಘುಪದ್ಯ, ಹರಟೆ, ಕಿರುನಾಟಕ ಇತ್ಯಾದಿ ಹಲವಾರು ಹೊಸ ಪ್ರಕಾರಗಳನ್ನು ಒದಗಿಸಿಕೊಟ್ಟಿತು.

ಯಾವುದಾದರೂ ಒಂದು ಸಣ್ಣ ಘಟನೆಯನ್ನು ಕೊಂಕುದೃಷ್ಟಿಯಿಂದ ನೋಡಿದರೆ ಹಾಸ್ಯ ಉಕ್ಕುತ್ತದೆ. ಇಡೀ ಜೀವನವನ್ನೇ ಕೊಂಕುದೃಷ್ಟಿಯಿಂದ ನೋಡಿದರೆ ವೇದಾಂತದ ತಿರುಳು ಸ್ಪಷ್ಟ ಕಾಣಿಸುತ್ತದೆ. ತಿಳಿವಿಗಾಗಲಿ, ತಿಳಿಹಾಸ್ಯಕ್ಕಾಗಲಿ ಅಗತ್ಯವಾದ ಕೊಂಕುದೃಷ್ಟಿಯನ್ನು ಕನ್ನಡಿಗರಲ್ಲಿ ಪ್ರಚಾರಮಾಡಲು ಕೊರವಂಜಿ ಪ್ರಯತ್ನಿಸಿತು. ಜನತೆಯಲ್ಲಿ ವಿಧವಿಧ ಮನೋಧರ್ಮದವರಿರುತ್ತಾರಾಗಿ, ಹಾಸ್ಯದಲ್ಲೂ ವಿವಿಧ ಹಂತಗಳಿರುತ್ತವೆ. ಈ ಎಲ್ಲ ಹಂತಗಳಲ್ಲೂ ಲೇಖನಗಳು ಕೊರವಂಜಿಯಲ್ಲಿ ಬರುತ್ತಿದ್ದುವು. ತಿಂಗಳ ಮೊದಲ ತಾರೀಖಿನ ಸರದಿ ತಪ್ಪದೆ 25 ವರ್ಷಗಳ ಕಾಲ ಹೊರಬೀಳುತ್ತಿತ್ತು.

ಈ ಅವಧಿಯಲ್ಲಿ ಅ.ರಾ.ಸೇ., ದಾಶರಥಿ ದೀಕ್ಷಿತ್, ಬೆಂಗಳೂರಿನ ಟಿ.ಸುನಂದಮ್ಮ, ರಾಮಿ, ಕೇಫ ಇವರು ಸತತವಾಗಿ ಪತ್ರಿಕೆಗೆ ನೆರವು ನೀಡಿದರು. ಹಿರಿಯ ಸಾಹಿತಿಗಳಾದ ಕಾರಂತ, ಶ್ರೀರಂಗ, ಜಿ.ಪಿ.ರಾಜರತ್ನಂ ಮುಂತಾದವರ ಲೇಖನಗಳೂ ಕೊರವಂಜಿಯ ಪುಟಗಳಲ್ಲಿ ಆಗಿಂದಾಗ್ಗೆ ಪ್ರಕಟವಾಗುತ್ತಿದ್ದುವು. ವ್ಯಂಗ್ಯರೇಖಾಚಿತ್ರಕಾರ ಆರ್.ಕೆ.ಲಕ್ಷ್ಮಣ್ ಪತ್ರಿಕೆಯ ಪ್ರಾರಂಭದ ಹಲವು ವರ್ಷಗಳ ಕಾಲ ಕೊರವಂಜಿಗಾಗಿ ವ್ಯಂಗ್ಯಚಿತ್ರ ಬರೆಯುತ್ತಿದ್ದರು. ಹೇಳಿಕೊಳ್ಳುವಂಥ ಪ್ರಗತಿಯನ್ನು ಸಾಧಿಸಿರುವ, ಪ್ರಪಂಚದ ಇತರ ಭಾಷೆಗಳ ಹಾಸ್ಯಸಾಹಿತ್ಯಕ್ಕೆ ಸಮಸಮನಾಗಿ ನಿಲ್ಲಬಲ್ಲ, ಕೆಲವು ವೇಳೆ ಅವುಗಳನ್ನೂ ಮೀರಿಸಬಲ್ಲ, ಔನ್ನತ್ಯವನ್ನು ಕೊರವಂಜಿ ಸಾಧಿಸಿತ್ತು. ಪತ್ರಿಕೆ ಅತ್ಯಂತ ಜನಪ್ರಿಯವಾಗಿದ್ದರೂ ವ್ಯಾವಹಾರಿಕವಾಗಿ ನಷ್ಟವನ್ನನುಭವಿಸುತ್ತಿದ್ದು, ಬೆಳ್ಳಿಯ ಹಬ್ಬ ಆಚರಿಸಬೇಕಾದ ಸಮಯದಲ್ಲಿ ನಿಂತುಹೋಯಿತು.

ಆದರೆ ಆ ವೇಳೆಗೆ ಕೊರವಂಜಿಯ ದೃಷ್ಟಿಯಿಂದ ಬರೆದ ಲೇಖನಗಳು ಕನ್ನಡನಾಡಿನ ಹಲವಾರು ಪತ್ರಿಕೆಗಳಲ್ಲಿ ವಿಪುಲವಾಗಿ ಪ್ರಕಟವಾಗುತ್ತಿದ್ದುವು. ಕನ್ನಡ ಸಾಹಿತ್ಯದಲ್ಲಿ ಆ ದೃಷ್ಟಿ ಪ್ರತಿಷ್ಠಿತವಾಯಿತು. ಕೊರವಂಜಿಯ ಪ್ರಕಟಣೆಗೆ ಶಿವರಾಮ್ ಅವರ ಮಕ್ಕಳೂ ಮತ್ತು ಹಾಸ್ಯ ಸಾಹಿತಿಗಳು ಮುಂದಾದರು. ಆದರೆ ಶಿವರಾಮ್, 'ಕೊರವಂಜಿ' ಬದಲು 'ಅಪರಂಜಿ' ಪ್ರಕಟಿಸಲು ಸಲಹೆ ನೀಡಿದರು. (ಎಂ.ಎಸ್‌ಎಚ್‌ಐ.)

**ಕೊರವ ಮೀನು :** ಚಾನ್ನಾ ಅಥವಾ ಓಫಿಯೊಸಿಫ್ಯಾಲಸ್ ಪಂಕ್ಟೇಟಸ್ ಎಂಬ ಶಾಸ್ತ್ರೀಯ ಹೆಸರಿನ ಸಿಹಿನೀರು ಮೀನು. ಓಫಿಯೊಸಿಫ್ಯಾಲಿಫಾರ್ಮೀಸ್ ಗಣದ ಓಫಿಯೊಸಿಫ್ಯಾಲಿಡೀ ಕುಟುಂಬಕ್ಕೆ ಸೇರಿದೆ. ಕೆರೆಗಳಲ್ಲಿ ಜಲಾಶಯಗಳಲ್ಲಿ ಇದರ ವಾಸ. ಸುಮಾರು 1 ಅಡಿ ಉದ್ದಕ್ಕೆ ಬೆಳೆಯುವ ಈ ಮೀನು ತನ್ನ ಹತ್ತಿರ ಸಂಬಂಧಿಯಾದ ಕುಚ್ಚುಮೀನನ್ನು ಬಹುವಾಗಿ ಹೋಲುತ್ತದೆ. ಇದರ ದೇಹದ ಬೆನ್ನುಭಾಗ ಕಂದು ಬಣ್ಣದ್ದಾಗಿಯೂ ಉದರಭಾಗ ತಿಳಿ ಕಂದುಬಣ್ಣದ್ದಾಗಿಯೂ ಇದೆ. ಪಾರ್ಶ್ವರೇಖೆಯ ಮೇಲೆ ಕಪ್ಪುಬಣ್ಣದ 8 ಪಟ್ಟೆಗಳಿವೆ. ಪಾರ್ಶ್ವರೇಖೆಯ ಕೆಳಭಾಗದಲ್ಲಿಯೂ ಅಷ್ಟೇ ಸಂಖ್ಯೆಯ ಪಟ್ಟೆಗಳಿದ್ದು ಇವು ಮೇಲಿನ ಪಟ್ಟೆಗಳಿಗೆ ಪರ್ಯಾಯವಾಗಿ ಜೋಡಣೆಯಾಗಿವೆ. ಸಣ್ಣ ಮೀನುಗಳು, ಜಲವಾಸಿ ಕೀಟಗಳು, ಚಿಗಟಗಳು ಮತ್ತು ಸೀಗಡಿ ಈ ಮೀನಿನ ಪ್ರಧಾನ ಆಹಾರ. ಆಗಾಗ್ಗೆ ಸಣ್ಣಗಾತ್ರದ ಕಪ್ಪೆಚಿಪ್ಪಿನ ಪ್ರಾಣಿಗಳನ್ನು ತಿನ್ನುವುದುಂಟು. ಜೂನ್–ಅಕ್ಟೋಬರ್ ತಿಂಗಳುಗಳ ನಡುವಣ ಕಾಲದಲ್ಲಿ ಸಂತಾನಾಭಿವೃದ್ಧಿಯಾಗುತ್ತದೆ. ಮರಿಗಳು ಕುಚ್ಚುಮೀನಿನ ಮರಿಗಳಂತೆಯೇ ಮೊದಲನೆಯ ವರ್ಷದಲ್ಲಿಯೇ ಲೈಂಗಿಕ ಪ್ರಬುದ್ಧಾವಸ್ಥೆಯನ್ನು ತಲಪುತ್ತವೆ. ಕೊರವಮೀನು ಅತಿರುಚಿಯಾದ ಆಹಾರವೆಂದು ಪರಿಗಣಿಸಲ್ಪಟ್ಟಿದೆ. ಸಣ್ಣಮೀನು, ಸೀಗಡಿ, ಎರೆಹುಳುಗಳನ್ನು ಉಪಯೋಗಿಸಿ ದಾವಣಿ ಬಲೆಗಳ ಸಹಾಯದಿಂದ ಈ ಮೀನನ್ನು ಹಿಡಿಯುತ್ತಾರೆ. (ಬಿ.ಎನ್.)

**ಕೊರಸಿಗನ ಮರ :** ಅಪೋಸೈನೇಸೀ ಕುಟುಂಬಕ್ಕೆ ಸೇರಿದ ಒಂದು ಪೊದೆ ಅಥವಾ ಚಿಕ್ಕಮರ. ಹೊಲೇರಿನ ಆಂಟಿಡಿಸಿಂಟ್ರಿಕ ಇದರ ವೈಜ್ಞಾನಿಕ ನಾಮ. ಇದಕ್ಕೆ ಕುಡ್ಸಾಲು, ಬೆಪ್ಪಾಲೆ, ಕೊರ್ಚಿಮರ ಎಂಬ ಇತರ ಹೆಸರುಗಳೂ ಉಂಟು. ಭಾರತದ ಮೂಲವಾಸಿಯಾದ ಇದು ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಸುಂದರವಾದ ಹಾಗೂ ಸುಗಂಧಯುಕ್ತವಾದ ಹೂಗಳನ್ನು ಬಿಡುವುದರಿಂದ ಕೊರಸಿಗನ ಮರವನ್ನು ಉದ್ಯಾನಗಳಲ್ಲೂ ದೇವಸ್ಥಾನಗಳಲ್ಲೂ ಬೆಳೆಸುವುದುಂಟು. ಕೊರಸಿಗನ ಮರ ಸು. 9.14 – 12.19 ಮೀ ಎತ್ತರಕ್ಕೆ ಬೆಳೆಯುವ ಪರ್ಣಪಾತಿ ಮರ. ಮರದ ಮುಖ್ಯ ಕಾಂಡವೇ ಸು. 3.04 – 6.09 ಮೀ ಎತ್ತರ ಇರುತ್ತದೆ. ತೊಗಟೆ ಬಿರುಸಾಗಿಯೂ ಕಂದು ಬಣ್ಣದ್ದಾಗಿಯೂ ಇದೆ; ಆಗಿಂದಾಗ್ಗೆ ಪದರಪದರವಾಗಿ ಬಿಟ್ಟುಕೊಳ್ಳುತ್ತದೆ. ಎಲೆಗಳು ಸು. 15.23 – 38.47 ಸೆಂ.ಮೀ ಉದ್ದವಾಗಿವೆ; ಅವುಗಳ ಜೋಡಣೆ ಅಭಿಮುಖ ಮಾದರಿಯದು. ಎಲೆಯ ತೊಟ್ಟು ಬಹಳ ಚಿಕ್ಕವು. ಜನವರಿ–ಫೆಬ್ರವರಿ ತಿಂಗಳಿನ ವೇಳೆಗೆ ಎಲೆಗಳೆಲ್ಲ ಉದುರಿ ಹೋಗುತ್ತವೆ. ಹೂಗಳು ರೆಂಬೆಗಳ ತುದಿಯಲ್ಲಿ ಇಲ್ಲವೆ ಎಲೆಗಳ ಕಂಕುಳಲ್ಲಿ ಹುಟ್ಟುವ ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಪ್ರತಿ ಹೂವಿನಲ್ಲೂ 5

ಕೊರಸಿಗನ ಮರದ ಒಂದು ರೆಂಬೆ

ಪುಷ್ಪಪತ್ರಗಳೂ 5 ದಳಗಳೂ 5 ಕೇಸರಗಳೂ 2 ಕಾರ್ಪೆಲ್‌ಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ದಳಗಳು ಒಂದರೊಡನೊಂದು ಕೂಡಿಕೊಂಡಿವೆ. ಕೇಸರಗಳ ಬುಡ ದಳಸಮೂಹದೊಡನೆ ಕಂಠದ ಬಳಿ ಅಂಟಿಕೊಂಡಿವೆ. ಫಲ ಎರಡು ಕೊಳವೆಯಾಕಾರದ ಮೆರಿಕಾರ್ಪ್ ಎಂಬ ಭಾಗಗಳಿಂದ ಕೂಡಿದ ಫಾಲಿಕಲ್ ಜೋಡಿ. ಬೀಜಗಳ ತುದಿಯಲ್ಲಿ ರೇಷ್ಮೆಯಂಥ ಉದ್ದವಾದ ಕೂದಲುಗಳ ಕುಚ್ಚು ಇದೆ. ಇದರಿಂದ ಬೀಜ ಪ್ರಸರಣಕ್ಕೆ ಅನುಕೂಲ.

ಕೊರಸಿಗನ ಮರದಿಂದ ಹಲವಾರು ಉಪಯೋಗಗಳಿವೆ. ಇದರ ಕಾಂಡ ಹಾಗೂ ಕೊಂಬೆಗಳನ್ನು ಸೌದೆಯಾಗಿಯೂ ಎಲೆಗಳನ್ನು ಗೊಬ್ಬರವಾಗಿಯೂ ಬಳಸುವುದಿದೆ. ಕಾಂಡ ಹಾಗೂ ಬೇರಿನ ತೊಗಟೆಗಳಿಗೆ ಔಷಧೀಯ ಮಹತ್ತ್ವ ಉಂಟು. ಕಾಂಡದ ತೊಗಟೆಯನ್ನು ಕೊನೆಸಿ ತೊಗಟೆ ಅಥವಾ ಕುರ್ಚಿ ಎಂಬ ಹೆಸರಿನಿಂದ ಮಾರುಕಟ್ಟೆಗಳಲ್ಲಿ ಮಾರುತ್ತಾರೆ. ಇದಕ್ಕೆ ಪ್ರತಿಬಂಧಕ, ಜಂತುನಾಶಕ, ಜ್ವರನಿವಾರಕ ಹಾಗೂ ಶಕ್ತಿವರ್ಧಕ ಗುಣಗಳುಂಟು. ಇದನ್ನು ಅತಿಸಾರ ಮತ್ತು ಆಮಶಂಕೆ ರೋಗಗಳ ನಿವಾರಣೆಗೆ ಬಳಸಲಾಗುತ್ತದೆ. ಮೂಲವ್ಯಾಧಿ, ಮೂತ್ರಸ್ರಾವ ತೊಂದರೆಗಳು, ಅಜೀರ್ಣ, ಚರ್ಮ ಹಾಗೂ ಗುಲ್ಮದ ರೋಗಗಳಿಗೂ ಇದು ಸಿದ್ಧೌಷಧಿ. ಈ ಎಲ್ಲ ಔಷಧೀಯ ಗುಣಗಳಿಗೆ ತೊಗಟೆಯಲ್ಲಿರುವ ಕೊನೆಸಿನ್, ಕುರ್ಚಿನ್, ಕೋನಮೈನ್, ಹೊಲೇರಿನೈನ್, ಲೆಟೋಸೈನ್, ಕುರ್ಚಿಸೈನ್, ಮುಂತಾದ ಸಸ್ಯಕ್ಷಾರಗಳೇ ಕಾರಣ. ಸಸ್ಯಕ್ಷಾರಗಳಲ್ಲದೆ ತೊಗಟೆಯಲ್ಲಿ ಒಂದು ಬಗೆಯ ಅಂಟೂ ಇದೆ. ಇದು ಕೂಡ ಆಮಶಂಕೆಯನ್ನು ನಿವಾರಿಸಬಲ್ಲದು ಎಂದು ತಿಳಿದಿದೆ, ಕೊರಸಿಗನ ಮರದ ಬೀಜಗಳಿಗೆ ಕೊಡಮುರ್ಕನ ಬೀಜ ಎಂಬ ಹೆಸರಿದೆ. ಇವಕ್ಕೂ ತೊಗಟೆಯ ಗುಣಗಳೇ ಇವೆ. ಕೊರಸಿಗನ ಮರದ ಎಲೆಗಳನ್ನು ವ್ರಣ, ಹುಣ್ಣು ಮುಂತಾದವನ್ನು ಗುಣಪಡಿಸಲೂ ಶ್ವಾಸಕೋಶ ಸಂಬಂಧ ಕಾಯಿಲೆಗಳಿಗೂ ಬಳಸುತ್ತಾರೆ. ಬರಿಯ ಔಷಧೀಯ ಮಹತ್ತ್ವವಲ್ಲದೆ ಕೊರಸಿಗನ ಮರಕ್ಕೆ ಬೇರೆ

ಉಪಯೋಗಗಳೂ ಉಂಟು. ಬಾಚಣಿಗೆ, ಚಿತ್ರಗಳ ಕಟ್ಟು, ಪೆಟ್ಟಿಗೆಗಳು, ಆಟದ ಸಾಮಾನುಗಳು, ಊರೆಗೋಲುಗಳು, ನೇಗಿಲು, ಮಣೆ, ಸ್ಲೇಟ್ ಕಟ್ಟುಗಳು ಮುಂತಾದ ವಿವಿಧ ವಸ್ತುಗಳ ತಯಾರಿಕೆಯಲ್ಲಿ ಮರವನ್ನು ಬಳಸುತ್ತಾರೆ. ಗಣಿತ ಸಲಕರಣೆಗಳು, ಕುಂಚದ ಹಿಡಿಗಳು ಇತ್ಯಾದಿ ಮಾಡಲೂ ಉಪಯೋಗಿಸುವುದಿದೆ.

(ಎಂ.ಎಸ್.ಎಸ್.ಆರ್; ಡಿ.ಎಂ.)

**ಕೊರಿನ್ನ** : ಪ್ರ.ಶ.ಪೂ. ಸು. ಆರನೆಯ ಶತಮಾನದಲ್ಲಿದ್ದಳೆಂದು ಹೇಳಲಾದ ಗ್ರೀಕ್ ಕವಯಿತ್ರಿ, ಕವಿ ಪಿಂಡರನ ಸಮಕಾಲೀನಳು. ಈಕೆ ಬೀಓಷಿಯದ ಪ್ರಾಚೀನಕಾಲದ ಮುಖ್ಯಪಟ್ಟಣವೆನಿಸಿದ ಟನಗ್ರದವಳು. ಬೀಓಷಿಯನ್ ಜಾನಪದ ಹಾಗೂ ಗ್ರೀಕ್ ಪುರಾಣಗಳಿಗೆ ಸಂಬಂಧಿಸಿದಂತೆ ಕಥಾವಸ್ತುಗಳನ್ನು ಆರಿಸಿಕೊಂಡು ಬೀಓಷಿಯನ್ ಭಾಷೆಯಲ್ಲಿ ಬರೆದವರಲ್ಲಿ ಅಗ್ರಮಾನ್ಯಳು. ಪಿಂಡರನನ್ನು ಖಂಡಿಸಿ ಆತನಿಂದ ಹೆಣ್ಣುಹಂದಿ ಎಂಬ ಅಪವಾದಕ್ಕೆ ಪಕ್ಕಾದಳು. ಈಗ ಉಳಿದಿರುವ ಆಕೆಯ ಸಾಹಿತ್ಯ ಅವಶೇಷಗಳಲ್ಲಿ ಗ್ರೀಕ್ ಪುರಾಣಕ್ಕೆ ಸಂಬಂಧಿಸಿದ ಕಥಾವಸ್ತುವನ್ನು ಕಾಣಬಹುದು. *

**ಕೊರಿಯ** : ಏಷ್ಯದ ಪೂರ್ವತೀರದ ಮಧ್ಯ ಭಾಗದಲ್ಲಿರುವ ಒಂದು ಪರ್ಯಾಯದ್ವೀಪ; ಉತ್ತರ ದಕ್ಷಿಣ ಕೊರಿಯ ದೇಶಗಳನ್ನೊಳಗೊಂಡಿದೆ. 840 ಕಿಮೀ ಉದ್ದ, 200–320 ಕಿಮೀ ಅಗಲವಾಗಿದೆ. ಮಂಚೂರಿಯ ಮತ್ತು ಸೋವಿಯೆತ್ ಒಕ್ಕೂಟಗಳಿಂದ ದಕ್ಷಿಣಕ್ಕೆ ಚಾಚಿಕೊಂಡಿರುವ ಈ ಪರ್ಯಾಯ ದ್ವೀಪಕ್ಕೆ ಉತ್ತರದಲ್ಲಿ ಯಾಲೂ, ಟೂಮನ್ ನದಿಗಳೂ ದಕ್ಷಿಣದಲ್ಲಿ ಕೊರಿಯ ಜಲಸಂಧಿಯೂ ಪಶ್ಚಿಮದಲ್ಲಿ ಹಳದಿ ಸಮುದ್ರವೂ ಪೂರ್ವದಲ್ಲಿ ಜಪಾನ್ ಸಮುದ್ರವೂ ಮೇರೆಗಳು. 8640 ಕಿಮೀ ಸಮುದ್ರ ತೀರದ ಉದ್ದಕ್ಕೂ ಒಟ್ಟು 3,500 ದ್ವೀಪಗಳಿವೆ. ಕೊರಿಯದ ವಿಸ್ತೀರ್ಣ 85,025 ಚ.ಕಿಮೀ.




ಸ್ಥಳೀಯ ಜನ ಕೊರಿಯವನ್ನು ಚೋಸಾನ್ ಎಂದು ಕರೆಯುತ್ತಾರೆ. ಪ್ರಾತಃಶಾಂತಿಯ ಪ್ರದೇಶ ಎಂದು ಇದರ ಅರ್ಥ. ಇದು ಯಿ ವಂಶದ ರಾಜರು (1392–1910) ಬಳಸುತ್ತಿದ್ದ ಹೆಸರು. 1910ರಲ್ಲಿ ಜಪಾನೀಯರು ಕೊರಿಯವನ್ನು ಆಕ್ರಮಿಸಿಕೊಂಡಾಗ ಇದನ್ನು ಚೋಸೆನ್ ಎಂದು ಕರೆದರು. ಕೊರಿಯ ಎಂಬುದು ಪಶ್ಚಿಮದವರಿಟ್ಟ ಹೆಸರು. 935–1392ರಲ್ಲಿ ಕೊರಿಯವನ್ನಾಳಿದ ಕೊರ್‍ಯೊ (ಕೊರೈ) ರಾಜವಂಶದಿಂದ ಬಂದದ್ದು. ಉತ್ತುಂಗ ಪರ್ವತಗಳ ಹೊಳೆಯುವ ಹೊಳೆಗಳ ನಾಡು ಎಂಬುದು ಕೊರ್‍ಯೊದ ಅರ್ಥ. ಎರಡನೆಯ ಮಹಾಯುದ್ಧಾನಂತರ ಕೊರಿಯದ ವಿಭಜನೆಯಾಯಿತು. 38ನೆಯ ಅಕ್ಷಾಂಶದ ಉತ್ತರ ದಕ್ಷಿಣ ಪ್ರದೇಶಗಳು ಪ್ರತ್ಯೇಕ ರಾಜ್ಯಗಳಾದುವು.

ಕೊರಿಯದ ಉತ್ತರ ಭಾಗ ಪರ್ವತಗಳಿಂದ ಕೂಡಿದೆ. ಅಲ್ಲಿ ಹರಿಯುವ ಟೂಮನ್ ಮತ್ತು ಯಾಲೂ ನದಿಗಳು ಉಗಮಿಸುವುದು ಪೆಕ್–ಸಾನ್‌ನಲ್ಲಿ. ಅಲ್ಲಿಂದ ದಕ್ಷಿಣಕ್ಕೆ ಪೂರ್ವತೀರದ ಹತ್ತಿರದಲ್ಲಿ ಹಬ್ಬಿರುವ ಒಂದು ಮುಖ್ಯ ಪರ್ವತ ಶ್ರೇಣಿಯ ಕವಲುಗಳು ಪಶ್ಚಿಮಕ್ಕೂ ದಕ್ಷಿಣಕ್ಕೂ ಹರಡಿವೆ. ಆದ್ದರಿಂದ ಇಡೀ ಕೊರಿಯ ಪರ್ವತಮಯ. ಪೂರ್ವತೀರ ಅಂಕುಡೊಂಕು. ಅದು ಹಲವಾರು ಅಳಿವೆಗಳಿಂದಲೂ ಸಮುದ್ರದ ಉಬ್ಬರ ಇಳಿತಗಳಿಂದ ಸಂಭವಿಸಿದ ಮಟ್ಟಸ ನೆಲದಿಂದಲೂ ಕೂಡಿದೆ. ಇಲ್ಲಿ ಸಮುದ್ರದ ಭರತ 6–9 ಮೀ. ಎತ್ತರಕ್ಕೆ ಏರುವುದುಂಟು. ಆದ್ದರಿಂದ ಇಲ್ಲಿ ಸಮುದ್ರಯಾನ ಕಠಿಣ. ಕೊರಿಯದ ನದಿಗಳು ಪಶ್ಚಿಮ ದಕ್ಷಿಣಾಭಿಮುಖವಾಗಿ ಹರಿಯುತ್ತವೆ. ಇವುಗಳಲ್ಲಿ ಕೆಲವು ನದಿಗಳ ಕೆಳಭಾಗಗಳಲ್ಲಿ ಸಣ್ಣ ದೋಣಿಗಳು ಸಂಚರಿಸಬಹುದು. ಆಗ್ನೇಯದಲ್ಲಿ ಹರಿಯುವ ನ್ಯಾಕ್ಟಾಂಗ್, ಮಧ್ಯಭಾಗದಲ್ಲಿ ಹರಿಯುವ ಹ್ಯಾನ್, ಉತ್ತರದಲ್ಲಿ ಹರಿಯುವ ಟೇಡಾಂಗ್ ಮತ್ತು ಯಾಲೂ ಮುಖ್ಯವಾದುವು. ಆಗ್ನೇಯ ತೀರದಲ್ಲಿ ಅಸಂಖ್ಯಾತ ದ್ವೀಪಗಳೂ ಪುಟ್ಟ ಪರ್ಯಾಯದ್ವೀಪಗಳೂ ತುಂಬಿವೆ.

ಕೊರಿಯದ್ದು ಖಂಡಾಂತರ ವಾಯುಗುಣ. ಬೇಸಿಗೆಯಲ್ಲಿ ಮಳೆ. ಚಳಿಗಾಲದಲ್ಲಿ ಶುಷ್ಕ ಹವೆ. ಕೊರಿಯದ ದಕ್ಷಿಣ ತೀರದಲ್ಲಿ 120 ಸೆಂಮೀ ಮಳೆ ; ಉತ್ತರದ ಒಳನಾಡಿನಲ್ಲಿ 50 ಸೆಂಮೀ, ಆಗಸ್ಟ್‌ನಲ್ಲಿ ಸರಾಸರಿ ಉಷ್ಣತೆ 23.8 ಸೆ.ಗಿಂತ ಅಧಿಕ. ಚಳಿಗಾಲದಲ್ಲಿ ಉತ್ತರದಲ್ಲಿ ನೀರು ಗಡ್ಡೆ ಕಟ್ಟುವ ಬಿಂದುವಿಗಿಂತ ಕಡಿಮೆ ಉಷ್ಣತೆ ಇರುತ್ತದೆ. ಪ್ಯಂಗ್‌ಯಾಂಗ್‌ನಲ್ಲಿ ಜನವರಿಯ ಸರಾಸರಿ ಉಷ್ಣತೆ 7.7° ದಕ್ಷಿಣ ತೀರದಲ್ಲಿ 0° ಸೆ.

3,400ಕ್ಕೂ ಹೆಚ್ಚು ಬಗೆಯ ಸಸ್ಯಗಳು ಇಲ್ಲಿವೆ. ಲಾರ್ಚ್, ಸ್ಪ್ರೂಸ್, ಫರ್ ಮತ್ತು ಬರ್ಚ್ ಅತ್ಯಂತ ಉತ್ತರದಲ್ಲಿವೆ. ಯಾಲೂ ಕಣಿವೆಯಲ್ಲೂ ಮಧ್ಯ ಕೊರಿಯದಲ್ಲೂ ಮೇಪಲ್, ಬಾಸ್‌ವುಡ್, ಬರ್ಚ್ ಓಕ್, ಪಾಪ್ಲರ್, ಆಷ್, ಎಲ್ಮ್ ಮುಂತಾದವು ಬೆಳೆಯುತ್ತವೆ. ದಕ್ಷಿಣದ ತೀರದಲ್ಲಿ ಸದಾ ಹಸಿರಾದ ಓಕ್ ಮತ್ತು ಲಾರೆಲ್ ಜಾತಿಯ ಮರಗಳೂ ಕ್ಯಾಮಿಲಿಯ ಮತ್ತು ಬೊಂಬುಗಳೂ ಹೇರಳವಾಗಿ ಬೆಳೆಯುತ್ತವೆ. ಕೊರಿಯ ಮತ್ತು ಯೂರೋಪಿನ ಪ್ರಾಣಿಗಳಲ್ಲಿ ಬಹಳಮಟ್ಟಿನ ಹೋಲಿಕೆಯಿದೆ. ಜೊತೆಗೆ ಇಲ್ಲಿ ಹುಲಿ, ಹಿಮಚಿರತೆ ಮತ್ತು ಜಿಂಕೆ ಇವೆ. ತೋಳ, ಮೇಕೆ, ಕಾಡುಹಂದಿಗಳೂ ಉಂಟು. ದೇಶೀಯ ಕಾಡುಕೋಳಿಗಳಿವೆ. ಉತ್ತರ ಚೀನ ಮತ್ತು ಯುರೋಪಿನಲ್ಲಿರುವಂತೆ ಇಲ್ಲೂ ನಾನಾ ಬಗೆಯ ಕಾಡುಕಪ್ಪೆಗಳೂ ಹಲ್ಲಿಗಳೂ ನಾನಾ ವಿಧದ ಹಾವುಗಳೂ ಉಂಟು. (ಬಿ.ಎಸ್.ಎಚ್.; ಎನ್.ಎ.)

**ಕೊರಿಯದ ಇತಿಹಾಸ** : ಕೊರಿಯ ಪರ್ಯಾಯದ್ವೀಪದಲ್ಲಿ ಪ್ರಸಕ್ತಶಕಾರಂಭಕ್ಕೂ ಅನೇಕ ಶತಮಾನಗಳ ಹಿಂದೆಯೇ ನಾಗರಿಕತೆ ಪ್ರಾರಂಭವಾಗಿತ್ತು. ಪ್ರಚಲಿತವಾಗಿರುವ ಐತಿಹ್ಯಗಳ ಪ್ರಕಾರ ಪ್ರ.ಶ.ಪೂ. 2333ರಲ್ಲಿ ದೈವಸಂಜಾತ ಮಾನವನೊಬ್ಬ ಅಲ್ಲಿಯ ಮೊತ್ತಮೊದಲನೆಯ ರಾಜನಾದ. ಸೃಷ್ಟಿಕರ್ತನ ಪುತ್ರನಾದ ಹ್ವಾನಂಗ್ ಅಲ್ಲಿಯ ಅರಣ್ಯವನ್ನು ಪ್ರವೇಶಿಸಿ, ಅದುವರೆಗೂ ಕರಡಿಯ ರೂಪದಲ್ಲಿದ್ದು ಆಗತಾನೇ ಸುಂದರರೂಪ ಧರಿಸಿದ್ದ ಕನ್ಯೆಯೊಡನೆ ವಿಹರಿಸಿದನೆಂದೂ ಅವಳ ಗರ್ಭಸಂಜಾತನಾದ ಟಾಂಗುನ್ ಎಂಬವನೇ ಕೊರಿಯದ ಪ್ರಪ್ರಥಮ ರಾಜನೆಂದೂ ಈ ಪುರಾಣದ ಕಥೆ ತಿಳಿಸುತ್ತದೆ. ಈ ಘಟನೆಯಿಂದ ಕೊರಿಯದ ಮೂಲನಿವಾಸಿಗಳಲ್ಲಿ ಕೆಲವರಾದರೂ ಉತ್ತರ ಏಷ್ಯ ವಿಭಾಗದಿಂದ ಬಂದರೆಂದು ತಿಳಿದುಬರುತ್ತದೆ. ಪ್ರಾಚೀನ ಚೀನದ ಸಂತರಲ್ಲೊಬ್ಬನಾದ ಕಿಜ ಪ್ರ.ಶ.ಪೂ. 1122ರಲ್ಲಿ ತನ್ನ 5,000 ಅನುಚರರೊಡನೆ ಕೊರಿಯವನ್ನು ಪ್ರವೇಶಿಸಿ ಅಲ್ಲಿ ಚೀನೀ ಸಂಸ್ಕೃತಿಯನ್ನು ಪ್ರಸಾರ ಮಾಡಿದನೆಂದು ಮತ್ತೊಂದು ಐತಿಹ್ಯ ತಿಳಿಸುತ್ತದೆ. ಕೊರಿಯದಲ್ಲಿ ಚೀನೀ ಸಂಸ್ಕೃತಿ ಕಾಲಕ್ರಮೇಣ ವ್ಯಾಪಿಸಿತೆಂಬುದು ಸತ್ಯಸಂಗತಿ. ಪ್ರಾರಂಭದಲ್ಲಿ ಕೊರಿಯದಲ್ಲಿ ಮಾತೃಪ್ರಧಾನ ಕುಟುಂಬವ್ಯವಸ್ಥೆಯಿದ್ದು ಕ್ರಮೇಣ ವ್ಯವಸಾಯ, ಕಂಚು, ಕಬ್ಬಿಣ ಮುಂತಾದವುಗಳ ಉಪಯೋಗ ಹೆಚ್ಚಾದಂತೆ, ಪಿತೃಪ್ರಧಾನ ಕುಟುಂಬವ್ಯವಸ್ಥೆ ಆಚರಣೆಗೆ ಬಂದಂತೆ ತಿಳಿದುಬರುತ್ತದೆ. ಪ್ರ.ಶ.ಪೂ. 400ರ ವೇಳೆಗೆ ಅಲ್ಲಿ ವ್ಯವಸಾಯ ಪಶುಪಾಲನೆಗಳು ಅಭಿವೃದ್ಧಿ ಹೊಂದಿದುವು. ಚೀನದ ಷಿನ್ ಮತ್ತು ಹ್ಯಾನ್ ಸಂತತಿಗಳ ಆಳ್ವಿಕೆಯ ಕಾಲದಲ್ಲಿ ಕೊರಿಯ ಮತ್ತು ಚೀನ ದೇಶಗಳ ಮಧ್ಯೆ ಸಂಪರ್ಕ ವಿಶೇಷವಾಗಿ ಬೆಳೆಯಿತು. ಪ್ರ.ಶ.ಪೂ. 2ನೆಯ ಮತ್ತು 1ನೆಯ ಶತಮಾನಗಳಲ್ಲಿ ಚೀನೀಯರು ವಾಯುವ್ಯ ಕೊರಿಯದಲ್ಲಿ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದರು. ಚೀನದ ಸಂಸ್ಕೃತಿ ಕೊರಿಯದಲ್ಲಿ ಆ ಕಾಲದಲ್ಲಿ ಪ್ರಸಾರವಾಯಿತು. ಚೀನದ ಹ್ಯಾನ್ ಸಂತತಿಯ ಆಡಳಿತ ಕೊನೆಗೊಂಡ ಅನಂತರ ಕೊರಿಯದಲ್ಲಿ ಮೂರು ರಾಜ್ಯಗಳು ತಲೆಯೆತ್ತಿದುವು.

ಕೊರಿಯದಲ್ಲಿ ಸ್ಥಾಪಿತವಾದ ಮೂರು ರಾಜ್ಯಗಳ ಆಳ್ವಿಕೆಯ ಕಾಲದಿಂದ ಅಲ್ಲಿ ಇತಿಹಾಸ ಯುಗ ಪ್ರಾರಂಭವಾಯಿತು. ಪ್ರ.ಶ.ಪೂ. 57ರಲ್ಲಿ ಆಗ್ನೇಯ ಭಾಗದಲ್ಲಿ ಸಿಲ್ಲ ಎಂಬ ರಾಜ್ಯವೂ ಪ್ರ.ಶ.ಪೂ. 37ರಲ್ಲಿ ಉತ್ತರ ಕೊರಿಯದಲ್ಲಿ ಕೊಗುರ್‍ಯೊ

ರಾಜ್ಯವೂ ಪ್ರ.ಶ.ಪೂ. 20ರ ಸುಮಾರಿನಲ್ಲಿ ವಾಯುವ್ಯ ಭಾಗದಲ್ಲಿ ಪೆಕ್ಚೆ ರಾಜ್ಯವೂ ಸ್ಥಾಪನೆಯಾದುವು. ಈ ಮೂರು ರಾಜ್ಯಗಳೂ ತಮ್ಮ ಆಳ್ವಿಕೆಯ 700 ವರ್ಷಗಳ ಉದ್ದಕ್ಕೂ ಪರಸ್ಪರ ಕಾದಾಡುತ್ತಿದ್ದುವು. ಸಿಲ್ಲ ರಾಜ್ಯದ ಮೇಲೆ ಜಪಾನ್ ಅನೇಕ ಸಾರಿ ಆಕ್ರಮಣ ನಡೆಸಿದರೂ ಆ ರಾಜ್ಯ ಚೀನದ ಟ್ಯಾಂಗ್ ಸಂತತಿಯ ಸಹಕಾರದಿಂದ ಪ್ರಬಲವಾಗಿತ್ತು. 7ನೆಯ ಶತಮಾನದ ಮಧ್ಯಭಾಗದಲ್ಲಿ ಸಿಲ್ಲ ರಾಜ್ಯ ಉಳಿದೆರಡು ರಾಜ್ಯಗಳನ್ನೂ ಸೋಲಿಸಿ ಇಡೀ ಕೊರಿಯವನ್ನು ವಶಪಡಿಸಿಕೊಂಡಿತು. ಚೀನದ ಟ್ಯಾಂಗ್ ಮನೆತನದ ಕಾಲದಲ್ಲಿ ಕೊರಿಯ ಮತ್ತು ಚೀನ ದೇಶಗಳ ಮಧ್ಯೆ ವಿಶೇಷವಾಗಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ವಾಣಿಜ್ಯ ಸಂಪರ್ಕವಿತ್ತು. ಚೀನೀ ಸಂಸ್ಕೃತಿಯ ಜೊತೆಗೆ ಬೌದ್ಧಮತವೂ ಕೊರಿಯದಲ್ಲಿ ಪ್ರಸಾರವಾಯಿತು. ಕನ್‌ಫ್ಯೂಷಸ್ ಮತ್ತು ಬೌದ್ಧಮತ ತತ್ತ್ವಗಳನ್ನು ಅಭ್ಯಸಿಸಲು ಅನೇಕ ಮಂದಿ ಕೊರಿಯನ್ನರು ಚೀನ ದೇಶಕ್ಕೆ ಹೋಗುತ್ತಿದ್ದರು. ಅವರಲ್ಲಿ ಅನೇಕರು ಚೀನದಲ್ಲಿ ಉನ್ನತ ಹುದ್ದೆಗಳನ್ನು ಪಡೆದರು. ಮಿಗಿಲಾಗಿ ಕೊರಿಯದ ಬೌದ್ಧಭಿಕ್ಷುಗಳು ಆ ಧರ್ಮದ ತವರಾದ ಭಾರತವನ್ನೂ ಆ ಕಾಲದಲ್ಲಿ ಸಂದರ್ಶಿಸಿದರು. ಚೀನ ಮತ್ತು ಜಪಾನ್ ದೇಶಗಳಂತೆ ಕೊರಿಯದಲ್ಲೂ ಕಲೆಯ ಪ್ರಗತಿಗೆ ಬೌದ್ಧಧರ್ಮದಿಂದ ಸ್ಫೂರ್ತಿ ಲಭ್ಯವಾಯಿತು. ಆ ಕಾಲದಲ್ಲಿ ಚೀನೀ ಲಿಪಿಯೂ ಬರವಣಿಗೆಯೂ ಕೊರಿಯದಲ್ಲಿ ಪ್ರಸಾರವಾದುವು. ಕೊರಿಯಕ್ಕೆ ಜಪಾನಿನೊಡನೆ ಸಂಪರ್ಕವಿದ್ದರೂ ಅಲ್ಲಿ ಚೀನೀ ಸಂಸ್ಕೃತಿ ಪ್ರಬಲವಾಗಿತ್ತು.

918ರ ವೇಳೆಗೆ ಸಿಲ್ಲ ಆಡಳಿತ ದುರ್ಬಲವಾಗಿ, ಸೈನ್ಯಾಧಿಕಾರಿ ವಾಂಗ್ ಕೊನ್ ದಂಗೆಯೆದ್ದು ಸ್ವತಂತ್ರನಾದ. 935ರಲ್ಲಿ ಸಿಲ್ಲ ಸಂತತಿಯ ಕೊನೆಯ ರಾಜ ಸಿಂಹಾಸನ ತ್ಯಾಗ ಮಾಡಿದ. ಅನಂತರ ವಾಂಗ್ ಕೊನ್ ಸ್ಥಾಪಿಸಿದ ಕೊರ್ಯೊ ಸಾಮ್ರಾಜ್ಯ 1392ರ ತನಕ ಕೊರಿಯದಲ್ಲಿ ಆಳ್ವಿಕೆ ನಡೆಸಿತು. ಕೊರಿಯ ಮತ್ತು ಚೀನ ಸಾಮ್ರಾಜ್ಯಗಳ ಮಧ್ಯೆ ಹಿತಕರವಾದ ರಾಜಕೀಯ ಸಂಬಂಧವಿತ್ತು. ಕೊರಿಯ ಚೀನದ ಆಶ್ರಿತರಾಜ್ಯಗಳಲ್ಲೊಂದೆಂದು ಪರಿಗಣಿತವಾಗಿದ್ದರೂ ಚೀನೀ ಪ್ರಭುತ್ವ ಕೊರಿಯದ ಮೇಲೆ ಬಿಗಿನೀತಿ ಅನುಸರಿಸುತ್ತಿರಲಿಲ್ಲ. ಆಗಾಗ ಚೀನಕ್ಕೆ ರಾಯಭಾರಿಗಳನ್ನು ಕಳುಹಿಸುವ ಮತ್ತು ಅಲ್ಪಸ್ವಲ್ಪ ಕಾಣಿಕೆಯನ್ನು ಚೀನದ ಸಾಮ್ರಾಟನಿಗೆ ಸಲ್ಲಿಸುವ ಪರಿಪಾಟಿಯಿತ್ತು. ಕೊರ್ಯೊ ಆಳ್ವಿಕೆಯ ಕಾಲದಲ್ಲಿ ರಾಜ್ಯವನ್ನು ಆಡಳಿತ ಸೌಕರ್ಯಕ್ಕಾಗಿ ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ರಾಜನಿಂದ ನೇಮಿತರಾದ ಪ್ರಾಂತ್ಯಾಧಿಕಾರಿಗಳು ಅಲ್ಲಿಯ ಆಡಳಿತ ನಡೆಸುತ್ತಿದ್ದರು. ಕನ್‌ಫ್ಯೂಷಸ್ ಮತ್ತು ಬೌದ್ಧಧರ್ಮಗಳು ಅಲ್ಲಿ ಪ್ರಬಲವಾಗಿದ್ದುವು. ಆ ಕಾಲದಲ್ಲಿ ವಾಯುವ್ಯ ಸರಹದ್ದಿನ ಬುಡಕಟ್ಟುಗಳ ಜನರಿಂದ ಹಾಗೂ ಜಪಾನಿನ ಕಡಲ್ಗಳ್ಳರಿಂದ ಆಗಾಗ ದರೋಡೆಗಳೂ ಉಪದ್ರವಗಳೂ ಸಂಭವಿಸುತ್ತಿದ್ದುವು.

1231ರಲ್ಲಿ ಮಂಗೋಲರು ಕೊರಿಯ ಪರ್ಯಾಯದ್ವೀಪವನ್ನು ಆಕ್ರಮಿಸಿಕೊಂಡರು. ಕೊರಿಯದ ರಾಜ ಶರಣಾಗತನಾಗಿ ತನ್ನ ಸಿಂಹಾಸನವನ್ನು ಉಳಿಸಿಕೊಂಡದ್ದಲ್ಲದೆ ಅವನ ಉತ್ತರಾಧಿಕಾರಿಗಳು ಮಂಗೋಲ್ ರಾಜಪುತ್ರಿಯನ್ನು ವರಿಸಿದರು. ಆ ಕಾಲದಲ್ಲಿ ಅಲ್ಲಿ ಮಂಗೋಲರ ಹಲವು ಪದ್ಧತಿಗಳು ಆಚರಣೆಗೆ ಬಂದುವು. 1274 ಮತ್ತು 1279ರಲ್ಲಿ ಕುಬ್ಲೈಖಾನ್ ಕೊರಿಯದ ಮೂಲಕ ಜಪಾನಿನ ಮೇಲೆ ಆಕ್ರಮಣ ಮಾಡಿದಾಗ ಕೊರಿಯನ್ನರು ಅವನಿಗೆ ವಿಶೇಷ ಕಾಣಿಕೆ ಮತ್ತು ಸೈನ್ಯ ಸಹಾಯವನ್ನು ನೀಡಬೇಕಾಯಿತು. ಕೊನೆಗೆ ಮಂಗೋಲರು ಚೀನದ ಮಿಂಗ್ ಸಂತತಿಯೊಡನೆ ಹೋರಾಟ ಮಾಡಿ ದುರ್ಬಲರಾಗಿದ್ದಾಗ ಕೊರಿಯದ ಸಾಹಸಿ ದಂಡನಾಯಕ ಯಿ–ಟೇಜೋ ಮಂಗೋಲರನ್ನು ಸೋಲಿಸಿದ. ದುರ್ಬಲವಾಗಿದ್ದ ಕೊರ್ಯೊ ಸಂತತಿಯ ಕೊನೆಯ ರಾಜ ಪದಚ್ಯುತನಾದ. 1392ರಲ್ಲಿ ಯಿ ಸಂತತಿ ಸ್ಥಾಪಿತವಾಯಿತು.

ಹನ್ಯಾಂಗ್ (ಈಗಿನ ಸಿಯೋಲ್) ಯಿ ಸಂತತಿಯ ರಾಜಧಾನಿಯಾಗಿತ್ತು. ಜಪಾನ್ 1910ರಲ್ಲಿ ಕೊರಿಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ತನಕ ಈ ಸಂತತಿ ಆಳ್ವಿಕೆ ನಡೆಸಿತು. ಆ ವೇಳೆಗೆ ಚೀನದಲ್ಲಿ ಮಂಗೋಲ್ ಸಂತತಿಯನ್ನು ಮಾನ್ಯ ಮಾಡಿದ್ದಲ್ಲದೆ, ಆ ರಾಜ್ಯವನ್ನು ಪುರಾತನ ಹೆಸರಾದ ಕೊರಿಯದ ಬದಲು ಚೊಸೊನ್ ಎಂಬ ಚೀನೀ ಹೆಸರಿನಿಂದ ಕರೆಯಲು ಒಪ್ಪಿದ. ಆ ಕಾಲದಲ್ಲಿ ಬೌದ್ಧಧರ್ಮಕ್ಕೆ ಬದಲಾಗಿ ಕನ್‌ಫ್ಯೂಷಸ್ ಮತಕ್ಕೆ ಹೆಚ್ಚು ಪ್ರೋತ್ಸಾಹ ನೀಡಲಾಯಿತು. ಚೀನದ ಪಂಚಾಂಗವನ್ನು ಅಳವಡಿಸಿಕೊಳ್ಳಲಾಯಿತು. ಯಿ ಸಂತತಿಯ ಆಳ್ವಿಕೆಯಲ್ಲಿ ಕೊರಿಯ ದೇಶ ಬೌದ್ಧಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪುನಶ್ಚೇತನಗೊಂಡಿತು. ಕೊರಿಯನ್ನರು ಚೀನದ ಸಂಸ್ಕೃತಿಯನ್ನು ಅನುಕರಿಸಿದರೂ ತಮ್ಮದೇ ಆದ ಸಂಪ್ರದಾಯಗಳನ್ನು ಮುಂದುವರಿಸಿದರು. ಚೀನೀ ಬರವಣಿಗೆಯ ಜೊತೆಗೆ ತಮ್ಮದೇ ಆದ ಬರವಣಿಗೆಯನ್ನು ಬೆಳೆಸಿಕೊಂಡರು. 1443ರಲ್ಲಿ ಒನ್‌ಮುನ್ ಲಿಪಿಯನ್ನೂ ಬರವಣಿಗೆಯನ್ನೂ ಬೆಳೆಸಿಕೊಂಡರು. ವೈದ್ಯ, ಖಗೋಳವಿಜ್ಞಾನ, ಭೂವಿಜ್ಞಾನ, ಇತಿಹಾಸ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ಪ್ರಗತಿಯುಂಟಾಯಿತು. 16ನೆಯ ಶತಮಾನದಲ್ಲಿ ಜಪಾನಿನ ಷೋಗೂನ್ ಹಿಡೆಯೊಷಿ ಕೊರಿಯದ ಮೇಲೆ ಎರಡು ಬಾರಿ ಆಕ್ರಮಣ ನಡೆಸಿದ. 1592ರ ಆಕ್ರಮಣ ಏಳು ವರ್ಷಗಳ ಕಾಲ ಮುಂದುವರಿಯಿತು. ಈ ಅವಧಿಯ ಕೊನೆಯಲ್ಲಿ ಕೊರಿಯನ್ನರು ಮೊಸಳೆಯಾಕಾರದಲ್ಲಿ ಹೊಸದಾಗಿ ಕಟ್ಟಿದ ನೌಕೆಗಳ ಸಹಾಯದಿಂದ ಜಪಾನಿನ ನೌಕಾದಳವನ್ನು ಸೋಲಿಸಿ ಹಿಂದಿರುಗಿಸಿದರು. 1644ರಲ್ಲಿ ಚೀನದಲ್ಲಿ ಸ್ಥಾಪಿತವಾದ ಮಾಂಚೂ ಸಂತತಿ ಕೊರಿಯವನ್ನು ತನ್ನ ಆಶ್ರಿತರಾಜ್ಯವಾಗಿ ಪರಿಗಣಿಸಿತು. ಆದರೂ ಕೊರಿಯಕ್ಕೆ ಒಳಾಡಳಿತದಲ್ಲಿ ಸ್ವಾತಂತ್ರ್ಯವಿತ್ತು. 17ನೆಯ ಶತಮಾನದ ಮಧ್ಯಭಾಗದಲ್ಲಿ ಕೊರಿಯದಲ್ಲಿ ಪಕ್ಷ ಪ್ರತಿಪಕ್ಷಗಳುಂಟಾಗಿ ಯಿ ಸಂತತಿಯ ಆಡಳಿತ ದುರ್ಬಲವಾಯಿತು. ಆ ವೇಳೆಗೆ ಪಾಶ್ಚಾತ್ಯರು ಕೊರಿಯದೊಡನೆ ಸಂಪರ್ಕ ಬೆಳೆಸಿದರು. ಕ್ರೈಸ್ತಧರ್ಮವೂ ಕೊರಿಯ ಪರ್ಯಾಯ ದ್ವೀಪವನ್ನು ಪ್ರವೇಶಿಸಿತು.

1880ರ ತನಕ ಕೊರಿಯ ದೇಶ ಪಾಶ್ಚಾತ್ಯರ ಸಂಪರ್ಕಕ್ಕೆ ಅವಕಾಶ ಕೊಟ್ಟಿರಲಿಲ್ಲ. ಕ್ರಮೇಣ ಫ್ರಾನ್ಸ್ ಮತ್ತು ಅಮೆರಿಕಗಳು ಸಂಪರ್ಕ ಸ್ಥಾಪಿಸಿಕೊಂಡು ವಾಣಿಜ್ಯ ಒಪ್ಪಂದಗಳನ್ನೇರ್ಪಡಿಸಿಕೊಂಡುವು. ಜಪಾನ್ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ಹವಣಿಸಿ ತನಗೆ ಅನುಕೂಲವಾಗುವ ಒಪ್ಪಂದವೊಂದಕ್ಕೆ ಕೊರಿಯವನ್ನು ಬಲಾತ್ಕರಿಸಿ ಒಪ್ಪಿಸಿತು. ಪರಕೀಯ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧ ಹಾಗೂ ಒಪ್ಪಂದಗಳ ಪರಿಣಾಮವಾಗಿ ಕೊರಿಯದಲ್ಲಿ ಜಾಗೃತಿ ಉಂಟಾಯಿತು. ಪ್ರಗತಿವಾದಿಗಳು, ಸಂಪ್ರದಾಯವಾದಿಗಳು ಎಂಬ ಎರಡು ಗುಂಪುಗಳಾದುವು. ಪಾಶ್ಚಾತ್ಯರನ್ನು ಅನುಕರಿಸಬೇಕೆಂಬ ಒತ್ತಾಯವನ್ನು ಪ್ರಗತಿವಾದಿಗಳು ರಾಜನ ಮುಂದಿಟ್ಟರು. ಇದನ್ನು ಸಂಪ್ರದಾಯವಾದಿಗಳು ವಿರೋಧಿಸಿದರು. ಪ್ರಗತಿವಾದಿ ಜನರು ರಾಜರ ವಿರುದ್ಧ 1884ರಲ್ಲಿ ದಂಗೆಯೆದ್ದರು. ಚೀನದ ಸಹಾಯದಿಂದ ದಂಗೆಯನ್ನಡಗಿಸಲಾಯಿತು. ಅದೇ ಸಮಯದಲ್ಲಿ ಸುಧಾರಣಾವಾದಿಗಳ ಸಹಾಯಕ್ಕಾಗಿ ಜಪಾನ್ ತನ್ನ ಸೈನ್ಯವನ್ನು ಕೊರಿಯಕ್ಕೆ ಕಳುಹಿಸಿತು. 1885ರಲ್ಲಿ ಚೀನ ಮತ್ತು ಜಪಾನ್ ಕೊರಿಯಕ್ಕೆ ಸಂಬಂಧಿಸಿದಂತೆ ಟೀಯೆಂಟ್ಸಿನ್ ಒಪ್ಪಂದ ಮಾಡಿಕೊಂಡುವು. ಆ ಒಪ್ಪಂದದ ಪ್ರಕಾರ ಚೀನ ಮತ್ತು ಜಪಾನ್ ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದೂ ಕೊರಿಯ ತನ್ನದೇ ಆದ ಸೈನ್ಯದೊಂದಿಗೆ ಸ್ವತಂತ್ರವಾಗಿರತಕ್ಕದ್ದೆಂದೂ ಒಂದು ವೇಳೆ ಅವಶ್ಯಕತೆಯುಂಟಾದರೆ ಜಪಾನಿನ ಅಥವಾ ಚೀನದ ಸೈನ್ಯ ಮಧ್ಯೆ ಪ್ರವೇಶಿಸಿ, ಶಾಂತಿಯೇರ್ಪಟ್ಟ ಕೂಡಲೇ ಹಿಂದಿರುಗಬೇಕೆಂದೂ ಪರಸ್ಪರ ಒಪ್ಪಿಕೊಂಡುವು. ಈ ಒಪ್ಪಂದ ಜಾರಿಯಲ್ಲಿದ್ದ 9 ವರ್ಷಗಳಕಾಲ ಜಪಾನ್ ಸಣ್ಣಪುಟ್ಟ ನೆಪ ಹೂಡಿ ಕೊರಿಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. 1894ರಲ್ಲಿ ಜಪಾನ್ ಕೊರಿಯದ ಮುಖಾಂತರ ಚೀನದ ಮೇಲೆ ಯುದ್ಧ ಹೂಡಿ ಅತ್ಯಲ್ಪ ಅವಧಿಯಲ್ಲಿ ಜಯ ಗಳಿಸಿತು. ಅನಂತರ ಅದು ಸುಧಾರಣೆಯ ನೆಪದಲ್ಲಿ ಕೊರಿಯದ ರಾಜನ ಅಧಿಕಾರವನ್ನು ಮೊಟಕು ಮಾಡಿತಲ್ಲದೆ ತನ್ನ ಪರವಾಗಿದ್ದ ಜನರನ್ನೊಳಗೊಂಡ ಮಂತ್ರಿಮಂಡಲವನ್ನು ಕೊರಿಯದಲ್ಲಿ ನೇಮಿಸಿತು. 1896ರಲ್ಲಿ ಕೊರಿಯ ರಷ್ಯದ ಸಹಾಯದಿಂದ ಜಪಾನಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿತು. ಚೀನ, ಜಪಾನ್ ಮತ್ತು ರಷ್ಯಗಳನ್ನನುಕರಿಸಿ ಕೊರಿಯದ ರಾಜನನ್ನು ಚಕ್ರವರ್ತಿ ಎಂದೂ ಕೊರಿಯವನ್ನು ಟೆ ಹ್ಯಾನ್ ಸಾಮ್ರಾಜ್ಯವೆಂದೂ ಕರೆಯಲಾಯಿತಲ್ಲದೆ, ಆ ದೇಶ ಅಲಿಪ್ತನೀತಿಯನ್ನು ಅನುಸರಿಸುವುದಾಗಿಯೂ ಘೋಷಿಸಲಾಯಿತು. ಆದರೆ ಜಪಾನ್ ಇದಕ್ಕೆ ಮನ್ನಣೆ ನೀಡಲಿಲ್ಲ.

1904ರಲ್ಲಿ ರಷ್ಯ ಜಪಾನ್‌ಗಳ ನಡುವೆ ನಡೆದ ಯುದ್ಧದಲ್ಲಿ ಜಪಾನ್ ಕೊರಿಯವನ್ನು ಆಕ್ರಮಿಸಿತು. ಮರುವರ್ಷ ರಷ್ಯ ಸೋತು ಜಪಾನಿನೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಅದು ಕೊರಿಯದ ಮೇಲೆ ಜಪಾನಿನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿತು. ಗ್ರೇಟ್ ಬ್ರಿಟನ್ ಮತ್ತು ಅಮೆರಿಕಗಳು ಅದನ್ನು ಮಾನ್ಯ ಮಾಡಿದುವು. 1906ರಲ್ಲಿ ರಾಜಕುಮಾರ ಇಟೊಹಿರೊಬುಮಿ ಕೊರಿಯದಲ್ಲಿ ಜಪಾನಿನ ಪ್ರಪ್ರಥಮ ಪ್ರತಿನಿಧಿಯಾಗಿ ಸಿಯೋಲಿಗೆ ಬಂದ. ಕೊರಿಯದ ಸೈನ್ಯ ವಿಸರ್ಜಿತವಾಯಿತು. ಪೊಲೀಸ್, ನ್ಯಾಯಾಂಗ, ಬಂದೀಖಾನೆ, ವಿದೇಶೀ ವ್ಯವಹಾರ, ಹಣಕಾಸು ಮೊದಲಾದ ಎಲ್ಲ ಮುಖ್ಯ ಅಧಿಕಾರಗಳನ್ನೂ ಜಪಾನ್ ತನ್ನ ಹತೋಟಿಗೆ ತೆಗೆದುಕೊಂಡಿತು. ಕೊರಿಯ ಜಪಾನಿನ ಭಾಗವೆಂಬ ಸೇರ್ಪಡೆಯ ಬಲಾತ್ಕಾರ ಒಪ್ಪಂದಕ್ಕೆ 1910ರಲ್ಲಿ ಯಿ ಸಂತತಿಯ ಕೊನೆಯ ರಾಜ ಸಹಿ ಹಾಕಬೇಕಾಯಿತು. ರಾಜನಿಗೆ ಜೀವನಾಂಶವನ್ನು ಕೊಡಲಾಯಿತು. ಜಪಾನ್ ಅಲ್ಲಿ ಗವರ್ನರ್ ಜನರಲ್ ಒಬ್ಬನನ್ನು ನೇಮಿಸಿ ಕೊರಿಯದ ಆಡಳಿತವನ್ನು ತನ್ನ ಹಿಡಿತದಲಿಟ್ಟುಕೊಂಡಿತು. ಜಪಾನೀ ಪೊಲೀಸರೂ ಸೈನಿಕರೂ ಹೆಚ್ಚು ಸಂಖ್ಯೆಯಲ್ಲಿ ನೇಮಕವಾದರು.

ಜಪಾನಿನ ಆಕ್ರಮಣಕ್ಕೊಳಗಾದ ಕೂಡಲೇ ಕೊರಿಯದಲ್ಲಿ ರಾಷ್ಟ್ರೀಯ ಮನೋಭಾವ ತೀವ್ರವಾಯಿತು. ಒಂದನೆಯ ಮಹಾಯುದ್ಧಕ್ಕೆ ಹಿಂದೆ ಕೊರಿಯನ್ನರು ಜಪಾನಿನ ವಿರುದ್ಧ ಅನೇಕ ಬಾರಿ ದಂಗೆಯೆದ್ದರು. ಜಪಾನ್ ಈ ದಂಗೆಗಳನ್ನೆಲ್ಲ ಅಡಗಿಸಿತು. ಯುದ್ಧಾನಂತರ ಕೊರಿಯನ್ನರು ಜಪಾನಿನ ಸಂಚು ಮತ್ತು ಅಸಹಕಾರವನ್ನು ಮುಂದುವರಿಸಿದರು. ಜಪಾನು ಬಿಗಿ ಮುಷ್ಟಿಯ ನೀತಿಯನ್ನನುಸರಿಸಿ ಕೊರಿಯನರ ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕಿತು. 1919ರಲ್ಲಿ ಜಪಾನಿನ ವಿರುದ್ಧ ಕ್ರಾಂತಿಯೆದ್ದ

ಕೊರಿಯನ್ನರು ಸ್ವಾತಂತ್ರ್ಯ ಘೋಷಿಸಿಕೊಳ್ಳಲು ಹವಣಿಸಿದರು. ಜಪಾನ್ ಉಗ್ರಕ್ರಮದಿಂದ ಕ್ರಾಂತಿಯನ್ನು ಹತ್ತಿಕ್ಕಿತು. ಸಹಸ್ರಾರು ಮಂದಿ ಬಂಧನಕ್ಕೊಳಗಾದರು. ಅನೇಕರು ದೇಶದಿಂದ ಹೊರದೂಡಲ್ಪಟ್ಟರು. ಕೊರಿಯದ ರಾಷ್ಟ್ರಭಕ್ತರು ಸೈಬೀರಿಯ, ಚೀನ ಮತ್ತು ಅಮೆರಿಕಗಳಲ್ಲಿ ಸಂಘಗಳನ್ನು ಸ್ಥಾಪಿಸಿಕೊಂಡು ಸ್ವಾತಂತ್ರ್ಯಹೋರಾಟವನ್ನು ಮುಂದುವರಿಸಿದರು. ಅನೇಕ ಮಂದಿ ಕೊರಿಯನ್ನರು ಷಾಂಘೈ ನಗರದಲ್ಲಿ ಸೇರಿ ಕೊರಿಯದ ರಾಷ್ಟ್ರೀಯ ಸರ್ಕಾರವನ್ನು ರಚಿಸಿಕೊಂಡರು. ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಮಾಡಿದ ಸಿಂಗ್‌ಮನ್ ರ್‍ಹೀ ಅವರಲ್ಲೊಬ್ಬ. ಕೊರಿಯದ ರಾಷ್ಟ್ರಭಕ್ತರು ಪ್ಯಾರಿಸ್ ಸಮ್ಮೇಳನದ ಮುಂದೆಯೂ ಅನಂತರ ಸ್ಥಾಪಿತವಾದ ಲೀಗ್ ಆಫ್ ನೇಷನ್ಸ್ ಮುಂದೆಯೂ ತಮ್ಮ ಬೇಡಿಕೆಯನ್ನು ಮಂಡಿಸಿದರು. ಕ್ರಾಂತಿಕಾರಿ ರಾಷ್ಟ್ರೀಯರು ಜಪಾನ್ ಚಕ್ರವರ್ತಿಯ ಹತ್ಯೆಗೂ ಪ್ರಯತ್ನಪಟ್ಟರು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ವಿರುದ್ಧ ಕೊರಿಯನ್ನರ ಚಳವಳಿ ಮುಂದುವರಿಯಿತು. ಕೊರಿಯಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವುದಾಗಿ 1943ರ ಕೈರೋ ಘೋಷಣೆಯಲ್ಲಿ ಬ್ರಿಟನ್, ಚೀನ ಮತ್ತು ಅಮೆರಿಕಗಳು ಅದಕ್ಕೆ ವಾಗ್ದಾನ ಮಾಡಿದುವು. 1945ರಲ್ಲಿ ಜರ್ಮನಿ ಸೋತು ಐರೋಪ್ಯ ಕ್ಷೇತ್ರದಲ್ಲಿ ಯುದ್ಧ ಮುಕ್ತಾಯವಾದ ಮೇಲೆ ಸೋವಿಯತ್ ಸೈನ್ಯ ಆಗಸ್ಟ್ 12ರಂದು ಉತ್ತರದ ಕಡೆಯಿಂದಲೂ ಅಮೆರಿಕನ್ ಸೈನ್ಯ ಸೆಪ್ಟೆಂಬರ್ 9ರಂದು ದಕ್ಷಿಣದ ಕಡೆಯಿಂದಲೂ ಕೊರಿಯವನ್ನು ಪ್ರವೇಶಿಸಿದುವು. ಜಪಾನಿನ ಶರಣಾಗತಿಯನ್ನು ನಿರ್ವಹಿಸುವ ಸೇನಾಕಾರ್ಯಾಚರಣೆಯ ಸಲುವಾಗಿ 38ನೆಯ ಅಕ್ಷಾಂಶದ ಉತ್ತರದ್ದು ಸೋವಿಯತ್ ಪ್ರದೇಶವೆಂದೂ ಅದರ ದಕ್ಷಿಣದ್ದು ಅಮೆರಿಕನ್ ಪ್ರದೇಶವೆಂದೂ ಪರಿಗಣಿಸಲಾಯಿತು. ಅನಂತರ ಉತ್ತರ ದಕ್ಷಿಣ ಭಾಗಗಳಲ್ಲಿ ಪ್ರತ್ಯೇಕ ಕೊರಿಯನ್ ಸರ್ಕಾರಗಳು ಸ್ಥಾಪಿತವಾದುವು. ಉತ್ತರ ದಕ್ಷಿಣ ಕೊರಿಯಗಳ ಚರಿತ್ರೆಗಳಿಗೆ ಆಯಾ ದೇಶಗಳನ್ನು ಕುರಿತ ಲೇಖನಗಳನ್ನು ನೋಡಿ. (ಜಿ.ಆರ್.ಆರ್.)

**ಕೊರಿಯದ ಪುರಾತತ್ತ್ವ, ಕಲೆ :** ಚೀನ ಮತ್ತು ಜಪಾನ್‌ಗಳ ನಡುವೆ ಇರುವ ಕೊರಿಯದ ಭೌಗೋಳಿಕ ನೆಲೆ ಅದರ ಪ್ರಾಗಿತಿಹಾಸದ ಮೇಲೆ ಬಹಳ ಪ್ರಭಾವ ಬೀರಿದೆ. ಪುರಾತನ ಮತ್ತು ಉನ್ನತಮಟ್ಟದ ಚೀನೀ ಸಂಸ್ಕೃತಿಗಳ ಪ್ರಭಾವಕ್ಕೀಡಾಗಿದ್ದರೂ ನೆರೆಯ ಜಪಾನಿನಂತೆ ಇಲ್ಲೂ ವೈಯಕ್ತಿಕತೆ ಕಾಣಬರುತ್ತದೆ.

ಪೂರ್ವ ಮತ್ತು ಮಧ್ಯಶಿಲಾಯುಗಗಳ ಅವಶೇಷಗಳು ಇಲ್ಲಿ ದೊರಕಿಲ್ಲ. ಪ್ರ.ಶ.ಪೂ. 3ನೆಯ ಸಹಸ್ರಮಾನದಲ್ಲಿ ಉತ್ತರ ಏಷ್ಯದ ಪ್ರಭಾವಕ್ಕೊಳಗಾದ ನವಶಿಲಾಯುಗ ಸಂಸ್ಕೃತಿಕಾಲದಲ್ಲಿ ಜನರು ಬೇಟೆ ಮತ್ತು ಮೀನುಗಾರಿಕೆಯಿಂದ ಜೀವಿಸುತ್ತಿದ್ದರು. ಮಡಕೆ ಕುಡಿಕೆಗಳೂ ದೊಡ್ಡಕಲ್ಲುಗಳಿಂದ ನಿರ್ಮಿತವಾದ ಸಮಾಧಿ ಅಥವಾ ವೇದಿಕೆಯ ರೀತಿಯ ಕಟ್ಟಡಗಳೂ ರೂಢಿಗೆ ಬಂದುವು. ಧನಿಕರಾದ ಆನುವಂಶಿಕನಾಯಕರ ಆಡಳಿತಕ್ಕೊಳಪಟ್ಟಿದ್ದ ಈ ಸಮಾಜದಲ್ಲಿ ಭೂತಪೂಜೆ ಜಾರಿಯಲ್ಲಿತ್ತು. ಮಾಂತ್ರಿಕರ ಪ್ರಭಾವ ನೆಲೆಸಿತ್ತು. ಚಾರಿತ್ರಿಕ ಯುಗದಲ್ಲಿ ಬೌದ್ಧ ಮತ್ತು ಕಾನ್‌ಫ್ಯೂಷಸ್ ಮತಗಳ ಪ್ರಭಾವ ಬೆಳೆದಾಗಲೂ ಭೂತಗಳ ಮತ್ತು ಮಾಂತ್ರಿಕರ ಪ್ರಭಾವಗಳು ಉಳಿದುಬಂದುವು.

ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಚೀನದ ಷುಂಗ್–ನು ಜನರಿಂದ ಒತ್ತರಿಸಲ್ಪಟ್ಟ ಮಂಚೂರಿಯದ ಟುಂಗ್–ಸಿಕ್ ಬುಡಕಟ್ಟಿನವರು ಕಂಚು ಮತ್ತು ಕಬ್ಬಿಣ ಲೋಹಗಳನ್ನು ತಂದು ವ್ಯವಸಾಯ–ಪೂರ್ವ ನವಶಿಲಾಯುಗ ಜೀವನರೀತಿಯನ್ನು ಕೊನೆಗಾಣಿಸಿದರು. ಪ್ರ.ಶ.ಪೂ 3ನೆಯ ಶತಮಾನದಿಂದ ವ್ಯವಸಾಯ ಅಭಿವೃದ್ಧಿ ಹೊಂದಿ ಪ್ರ.ಶ.ಪೂ. 190ರಲ್ಲಿ ಚೊಸೂನ್ ರಾಜ್ಯ ಸ್ಥಾಪಿತವಾಯಿತು. ಪ್ರ.ಶ.ಪೂ. 10ರಲ್ಲಿ ಈ ರಾಜ್ಯ ಕೊನೆಗಂಡು ಚೀನಿಯರ ಲೋ–ಲಾಂಗ್ ವಸಾಹತು ಸ್ಥಾಪಿತವಾಯಿತು. ಆ ಕಾಲದಲ್ಲಿ ಹುಟ್ಟಿದ ಕೊಗುರ್‍ಯೋ ರಾಜ್ಯದ ಕಲೆಗಳಲ್ಲಿ ಚೀನೀ ಪ್ರಭಾವಕ್ಕೊಳಗಾದ ಟುಂಗ್–ಕೌ ಎಂಬಲ್ಲಿಯ ಸಮಾಧಿಗಳ ಗೋಡೆಗಳ ಮೇಲಿನ ಪ್ರ.ಶ. 5–6ನೆಯ ಶತಮಾನಗಳ ಬೇಟೆ ಅಥವಾ ನೃತ್ಯ–ಗೀತೆ ಪಂಗಡಗಳ ವರ್ಣಚಿತ್ರಗಳು ಮುಖ್ಯವಾದುವು. 384ರಲ್ಲಿ ಬೌದ್ಧಧರ್ಮದ ಪ್ರವೇಶಾನಂತರ ಸ್ಥಾಪಿತವಾದ ಪೆಕ್ಚೆ ರಾಜ್ಯದಲ್ಲಿ 6–7ನೆಯ ಶತಮಾನದಲ್ಲಿ ಜಪಾನೀ ಪ್ರಭಾವದ ಕುಡರ–ಕನ್ನಾನ್ ಎಂಬ ವರ್ಣಲೇಪಿತ ಮರದಶಿಲ್ಪ ಕೊರಿಯ ಕಲೆಯ ಉತ್ತಮ ಪ್ರತೀಕವಾಗಿದೆ. ಸಿಲ್ಲಾ ರಾಜ್ಯದಲ್ಲಿ ಅಲೆಮಾರಿ ಜೀವನದ ಪ್ರಭಾವ ಹೆಚ್ಚು. ಅಲ್ಲಿಯ ಸಮಾಧಿಗಳಲ್ಲಿಯ ಶಿಲ್ಪಗಳು ಒರಟಾದರೂ ಹಾಸ್ಯಭರಿತವಾಗಿವೆ.

ಚೀನೀಯರ ಪ್ರಕೃತಿದೃಶ್ಯಗಳ ಚಿತ್ರಣವೂ ಪ್ರತಿಬಿಂಬವಾಗಿದೆ. ಕ್ಯೊಂಗ್ಜು ಬಳಿಯ ಪುಲ್ಲುಕ್–ಸಾ ವಿಹಾರದ ಅವಶೇಷಗಳೂ ಸೊಕ್ಕುಲ್–ಆಮ್‌ನ ಗುಹಾಂತರ್ದೇವಾಲಯಗಳ ಉಬ್ಬುಕೆತ್ತನೆಗಳೂ 751ರ ಸುಮಾರಿನ ಬುದ್ಧ, ಬೋಧಿಸತ್ತ್ವ, ಅರ್ಹಂತ ಮತ್ತು ದೇವರಾಜರ ಪ್ರತಿಮೆಗಳೂ ಅಮೋಘವಾಗಿದ್ದು, ಟ್ಯಾಂಗ್ ಕಾಲೀನ ಚೀನಿ ಪ್ರಭಾವ ಕಂಡುಬಂದರೂ ಹೆಚ್ಚು ಘನತೆಯನ್ನು ಹೊಂದಿವೆ. ರಾಜಾಶ್ರಯದಲ್ಲಿ ಕಲೆಗಾರರು ಸಹಜವಾದ ಮತ್ತು ವರ್ಣಪ್ರಧಾನವಾದ ವ್ಯಕ್ತಿಗಳ ವರ್ಣಚಿತ್ರಗಳನ್ನು ನಿರ್ಮಿಸುತ್ತಿದ್ದರು. ಅನಂತರದ ಕೊರ್‍ಯೊ ರಾಜ್ಯದ ಕಾಲದಲ್ಲಿ ಬೌದ್ಧಶಿಲ್ಪಗಳು ಅವನತಮುಖವಾಗಿ ಸಾಮಾಜಿಕ ವಸ್ತುಗಳಿಗೆ ಪ್ರಾಧಾನ್ಯ ದೊರೆತು ಪ್ರಕೃತಿದೃಶ್ಯಗಳ ಚಿತ್ರಣ ಮತ್ತು ಮಣ್ಣಿನ ಪಾತ್ರೆಗಳ (ಸೆಲಡಾನ್ ವೇರ್) ನಿರ್ಮಾಣ ಕಂಡುಬರುತ್ತವೆ. 15–16ನೆಯ ಶತಮಾನಗಳಲ್ಲಿ ರಾಜಾಶ್ರಯದಲ್ಲಿ ಚೀನೀಪ್ರಭಾವಿತ ಚಿತ್ರ ಮತ್ತು ಶಿಲ್ಪಕಲೆಗಳು ಬೆಳೆದುವಲ್ಲದೆ ಜನಸಾಮಾನ್ಯರ ಕಲೆಯಲ್ಲಿ ಸರಳತೆ ಮತ್ತು ಉಪಯುಕ್ತತೆಗಳಿಗೆ ಪ್ರಾಮುಖ್ಯ ದೊರಕಿತು. ಸೆಲಡಾನ್ ಪಾತ್ರೆಗಳ ನಿರ್ಮಾಣಕಲೆ ಅವನತಮುಖವಾಯಿತು. 17–19ನೆಯ ಶತಮಾನಗಳ ಸ್ವತಂತ್ರ ಮನೋಭಾವ ಅವರ ಕಲೆಯಲ್ಲೂ ಕಂಡುಬಂದು, ಚೀನೀಪ್ರಭಾವಗಳು ದೂರವಾಗಿ ಜನರ ನಿತ್ಯಜೀವನ ರೂಪಿಸುವ ಚಿತ್ರಗಳು ನಿರ್ಮಿತವಾದುವು. ಸೆಲಡಾನ್ ಪಾತ್ರೆಗಳ ನಿರ್ಮಾಣ ಕಲೆಯಲ್ಲಿ ತಾಂತ್ರಿಕ ಅವನತಿ ಮುಂದುವರಿದರೂ ಭಾವಪ್ರಧಾನ ಮತ್ತು ಧೀರೋದಾತ್ತ ಶೈಲಿಯ ಚಿತ್ರಣ ಕಂಡುಬರುತ್ತದೆ. 20ನೆಯ ಶತಮಾನದಲ್ಲಿ ರಾಜಕೀಯ ದುರ್ದೆಶೆಗೊಳಗಾದ ಈ ದೇಶದ ಕಲೆಯ ಸಮಗ್ರ ವಿಮರ್ಶೆ ಸಾಧ್ಯವಿಲ್ಲವಾದರೂ ಯುರೋಪಿನಲ್ಲಿ ತರಬೇತು ಪಡೆದಿರುವ ಇಲ್ಲಿಯ ಕಲೆಗಾರರ ಕೃತಿಗಳು ಪ್ರಭಾವಶಾಲಿಗಳಾಗಬಹುದು. (ಬಿ.ಕೆ.ಜಿ.)

**ಕೊರಿಯನ್ ಭಾಷೆ:** ಕೊರಿಯನ್ ಭೂಪ್ರದೇಶದ ಜನ ಬಳಸುವ ಭಾಷೆ ಇದು. ಈ ಭಾಷೆಯಲ್ಲಿ ಕೊರಿಯ ಎಂದರೆ ಪರ್ವತಶ್ರೇಣಿ ಹಾಗೂ ನದಿಗಳಿಂದ ಕೂಡಿದ ಎತ್ತರ ಪ್ರದೇಶ ಎಂದು ಅರ್ಥವಾಗುತ್ತದೆ. 935 ರಿಂದ 1392ರವರೆಗೆ ಆಳಿದ ಕೋರ್‍ಯೋ ಅಥವಾ ಕೋರ್‍ಯೆ ವಂಶದವರಿಂದ ಈ ನಾಡಿಗೆ ಕೊರಿಯ ಎಂಬ ಹೆಸರು ಬಂದಿದೆ.

ಕೊರಿಯನ್ನರು ಚೀನೀ ಮತ್ತು ಜಪಾನೀಯರಂತೆ ಮಂಗೋಲಿಯನ್ ಬುಡಕಟ್ಟಿಗೆ ಸೇರಿದವರಾಗಿದ್ದರೂ ಕೆಲವು ವಿಶಿಷ್ಟ ಲಕ್ಷಣಗಳನ್ನುಳ್ಳವರಾಗಿದ್ದಾರೆ.

ಕೊರಿಯನ್ ಭಾಷೆ ತುರ್ಕಿ, ಮಂಗೋಲ ಮತ್ತು ಜಪಾನೀ (ಚೀನೀ ಭಾಷೆಯನ್ನು ಬಿಟ್ಟು) ಭಾಷೆಗಳಂತೆಯೇ ಯೂರಲ್–ಆಲ್ಟೇಯಿಕ್ ಭಾಷಾ ವರ್ಗಕ್ಕೆ ಸೇರಿದ್ದಾಗಿದೆ. ಕೊರಿಯದ ಆಡು ಭಾಷೆ ಹಾಗೂ ದೇಶೀ ಶಬ್ದಸಂಪತ್ತು ಇದೇ ಭಾಷಾ ವರ್ಗದ ಇತರ ಭಾಷೆಗಳಿಗಿಂತ ಭಿನ್ನವಾಗಿದೆ. ಚೀನದ ಸಾಂಸ್ಕೃತಿಕ ಪ್ರಭಾವ ಇದರ ಲಿಖಿತ ಭಾಷೆಯ ಮೇಲೆ ಸಾಕಷ್ಟು ಆಗಿದೆ. ಐರೋಪ್ಯ ದೇಶಗಳಲ್ಲಿ ಗ್ರೀಕ್ ಮತ್ತು ಲ್ಯಾಟಿನ್‌ಗಳಂತೆ ಚೀನೀಭಾಷೆ ಕೂಡ ಕೊರಿಯ ದೇಶದಲ್ಲಿ ಅನೇಕ ಶತಮಾನಗಳವರೆಗೆ ಅಭಿಜಾತ ಭಾಷೆಯ ರೂಪದಲ್ಲಿ ಪ್ರಚಲಿತವಾಗಿತ್ತು. ಕೊರಿಯನ್ ಭಾಷೆಯನ್ನು ಬಳಸುವ ಜನ ಸುಮಾರಾಗಿ 30,000,000. ಈ ಭಾಷೆಯ ಒಂದು ಉಪಭಾಷೆಯಾದ ಸಿವೋಲದಲ್ಲಿ ಕೆಳಗಿನ ಸ್ವರ ಮತ್ತು ವ್ಯಂಜನಗಳನ್ನು ಕಾಣಬಹುದು. ಸಿವೋಲ ಉಪಭಾಷೆಯ ಸ್ವರಪದ್ಧತಿಯನ್ನು ಪೂರ್ವಸ್ವರ, ಮಧ್ಯಸ್ವರ, ಪಶ್ಚಸ್ವರ ಎಂದು ಮೂರಾಗಿ ವಿಭಾಗಿಸಬಹುದು.

| **ಪೂರ್ವ ಸ್ವರ** | **ಮಧ್ಯಸ್ವರ** | **ಪಶ್ಚಸ್ವರ** |
|---|---|---|
| ಈ(i) | ಈ̈ (ï) | ಊ(u) |
| ಎ(e) | ಎ̈ (ë) | ಓ(o) |
| ಅ̈ (ä) | ಅ(a) | ಓ̈ (ö) |

ಕೊರಿಯನ್ ಭಾಷೆಯ ಅಗ್ರಸ್ವರಗಳ ಉಚ್ಚಾರವನ್ನು ಕ್ರಮವಾಗಿ ಇಂಗ್ಲಿಷಿನಲ್ಲಿಯ pit, pet ಮತ್ತು pat ಎಂಬ ಶಬ್ದಗಳಲ್ಲಿ ಬರುವ ಸ್ವರಗಳಂತೆ ಮಾಡಬಹುದು. ಇದರ ಮಧ್ಯಸ್ವರಗಳ ಉಚ್ಚಾರವನ್ನು ಕ್ರಮವಾಗಿ ಇಂಗ್ಲಿಷಿನಲ್ಲಿಯ put putt ಮತ್ತು pa ಗಳಂತೆ ಮಾಡಬಹುದು. ಇದರ ಪಶ್ಚಸ್ವರಗಳ ಉಚ್ಚಾರವನ್ನು ಕ್ರಮವಾಗಿ ಇಂಗ್ಲಿಷಿನಲ್ಲಿಯ Rue ಮತ್ತು Row ಹಾಗೂ ಜರ್ಮನ್ ಭಾಷೆಯ b̈ose ಎಂಬ ಶಬ್ದಗಳಲ್ಲಿಯ ಸ್ವರಗಳಂತೆ ಮಾಡಬಹುದು. ಕೊರಿಯನ್ನಿನ ಕೆಲವು ಉಪಭಾಷೆಗಳಲ್ಲಿ ಅ̈ (ä) ಮತ್ತು ಎ (e) ಹಾಗೂ ಈ̈ (ï) ಮತ್ತು ಎ̈ (ë) ಎಂಬ ಸ್ವರಗಳು ಅರ್ಥವ್ಯತ್ಯಾಸವನ್ನುಂಟು ಮಾಡುವ ಸಾಮರ್ಥ್ಯವನ್ನು ಕಳೆದುಕೊಂಡಿವೆ.

ಕೊರಿಯನ್ ಭಾಷೆಯ (ಸಿವೋಲ ಉಪಭಾಷೆಯ) ವ್ಯಂಜನಗಳನ್ನು ಶಿಥಿಲ, ದೃಢ, ಮಹಾಪ್ರಾಣ ಎಂದು ವಿಭಾಗಿಸಬಹುದು.

**ಶಿಥಿಲ :** ಪ(p) ತ (t) ಚ(c) ಕ (k) ಹ(h)

**ದೃಡ :** ಪ್ಪ (pp) ತ್ತ (tt) ಚ್ಚ (cc) ಕ್ಕ (kk) ಸ್ಸ (ss)

**ಮಹಾಪ್ರಾಣ :** ಫ (ph) ಥ (th) ಛ (ch) ಖ (kh)

**ನಾಸಿಕ್ಯ :** ಮ (m) ನ (n) ಞ (ñ) ಙ (η)

ಅರ್ಧ ವ್ಯಂಜನ ವ(w) ಯ (y)

ಕೊರಿಯನ್ ಭಾಷೆಯಲ್ಲಿ ಶಿಥಿಲ ವ್ಯಂಜನಗಳಾದ ಪ(p), ತ(t), ಚ(c), ಕ(k)ಗಳು ಸ್ವರಮಧ್ಯದಲ್ಲಿ ಬ(b), ದ(d), ಜ(j) ಮತ್ತು ಗ(g) ಗಳಂತೆ ಉಚ್ಚಾರವಾಗುತ್ತದೆ. ಅಕ್ಷರದ ಪ್ರಾರಂಭದಲ್ಲಿ ಕೊರಿಯನ್ನಿನ ಲ (l) ಧ್ವನಿ ಜಪಾನೀ ರ(r) ಧ್ವನಿಯಂತೆ ಉಚ್ಚಾರವಾಗುತ್ತದೆ. ಇದರ ಕೆಲವು ಉಪಭಾಷೆಗಳಲ್ಲಿ ದೀರ್ಘತೆ, ಸ್ವರಾಘಾತಗಳೂ ಕಂಡುಬರುತ್ತವೆ.

ಕೊರಿಯನ್ನರು ಚೀನೀ ಭಾಷೆಯ ಆಧಾರದ ಮೇಲೆ ತಮ್ಮ ಆಡುಭಾಷೆಗೆ ಲಿಖಿತಭಾಷೆಯ ರೂಪವನ್ನು ಕೊಟ್ಟರು. ಇದಕ್ಕೆ ಅವರು ಇದು (Idu) ಎಂಬ ಹೆಸರನ್ನು ಇಟ್ಟರು. ಅನಂತರ 1443ರ ಹಾನಕಿಲ್ (Hankil) ಅಥವಾ ಎನ್ಮುನ್ (ënmun) ಎಂಬ ಸರಳವಾದ ಲಿಪಿಯನ್ನು ಶೋಧಿಸಿದರು. ಇದನ್ನು ಶೋಧಿಸಿದ ವಿಜ್ಞಾನಿಗಳಲ್ಲಿ ಛೋಂಗ್ ಇಂಛೀ ಹಾಗೂ ಸೋಂಗ್ ಸುಮ್ಮುನ್ ಮತ್ತು ಪಿನ್ ಶುಕಛೂ ಎಂಬುವರು ಕೊರಿಯದ ರಾಜನಾದ ಶೇಜಾಂಗ್‌ನ ನೇತೃತ್ವದಲ್ಲಿ ಕೆಲಸ ಮಾಡುತ್ತಿದ್ದರು. ಇದರಲ್ಲಿ 24 ಅಕ್ಷರಗಳಿವೆ. ಪ್ರಾರಂಭದಲ್ಲಿ ಜಪಾನೀ ಮತ್ತು ಚೀನೀ ಭಾಷೆಗಳಂತೆ ಕೊರಿಯನ್ ಭಾಷೆಯನ್ನು ಕೂಡಾ ಮೇಲಿನಿಂದ ಕೆಳಕ್ಕೆ ಬರೆಯುತ್ತಿದ್ದರು. ಎರಡನೆಯ ಮಹಾಯುದ್ಧದ ಅನಂತರ ಸಮಾನಾಂತರ ರೇಖೆಯಾಗಿ ಬರೆಯುವ ರೂಢಿ ಹೆಚ್ಚಿನ ಪ್ರಶಸ್ತಿ ಪಡೆಯಿತು. ಟೈಪುಯಂತ್ರಕ್ಕೆ ಅಕ್ಷರಗಳನ್ನು ಹೊಂದಿಸಿಕೊಳ್ಳುವುದೇ ಇದರ ಮುಖ್ಯ ಉದ್ದೇಶ.

ಭಾಷೆಯಂತೆಯೇ ಕೊರಿಯನ್ ಸಾಹಿತ್ಯವೂ ಪ್ರಾಚೀನವಾದದ್ದು. ಇದರ ಸಾಹಿತ್ಯದ ಮೇಲೆ ಚೀನ ಮತ್ತು ಜಪಾನ್ ಸಂಸ್ಕೃತಿಗಳ ಪ್ರಭಾವ ಸಾಕಷ್ಟಾಗಿದೆ. ಇದಕ್ಕೆ ಅವರ ನಡುವೆ ಬಹುಕಾಲದಿಂದ ಇದ್ದ ಹೆಚ್ಚಿನ ಸಂಪರ್ಕ ಕಾರಣ. ಚೀನೀ ಭಾಷೆ ಏಕಾಕ್ಷರ ತಾನ ಭಾಷೆ ಆಗಿದ್ದರೂ ಅದಕ್ಕೆ ಸಂಬಂಧಪಟ್ಟ ಕೊರಿಯನ್ ಭಾಷೆ ಬಹ್ವಕ್ಷರ ಭಾಷೆಯಾಗಿದೆ. (ಕೆ.ಪಿಎಎನ್.)

**ಕೊರೆತ :** ಕಾಯಕವಸ್ತುವಿನಲ್ಲಿ ಮೊದಲೇ ಇರುವ ರಂಧ್ರದ ಅಳತೆಯನ್ನು ಬಹುಮಟ್ಟಿಗೆ ಹೆಚ್ಚಿಸುವ ಯಂತ್ರಕ್ರಿಯೆ (ಬೋರಿಂಗ್). ಮೊದಲೇ ಇರುವ ರಂಧ್ರ ಎರಕ ಹೊಯ್ಯುವಾಗ ಮಾಡಿದ ಪೊಳ್ಳಿನಿಂದ(ಕೋರ್), ಛಿದ್ರಣದಿಂದ(ಪಂಚಿಂಗ್) ಅಥವಾ ಬೈರಿಗೆಯಿಂದ (ಡ್ರಿಲ್ಲಿಂಗ್) ಆಗಿರಬಹುದು. ಸಾಮಾನ್ಯವಾಗಿ ಬೈರಿಗೆಗೆ ಮೀರದ ವ್ಯಾಸ ಪಡೆಯಲು ಕೊರೆಯುವ ವಿಧಾನವನ್ನು ಬಳಸುತ್ತಾರೆ. ಒಳದೂಡುವುದು(ರೀಮಿಂಗ್) ಸಹ ರಂಧ್ರದ ಅಳತೆ ಹೆಚ್ಚಿಸುವ ಕ್ರಿಯೆಯಾದರೂ ಇದಕ್ಕೂ ಕೊರೆಯುವುದಕ್ಕೂ ವ್ಯತ್ಯಾಸ ಉಂಟು. ಒಳದೂಡುವ ಕ್ರಿಯೆಯನ್ನು ಸುಮಾರಾಗಿ ಅಳತೆಗಿರುವ ರಂಧ್ರವನ್ನು ಸರಿ ಅಳತೆಗೆ ತರಲು ಹಾಗೂ ಒಪ್ಪ ಕೊಡಲು(ಫಿನಿಶಿಂಗ್) ಬಳಸುತ್ತಾರೆ. ಆದರೆ ಕೊರೆಯುವುದರಿಂದ ರಂಧ್ರದ ಅಳತೆಯನ್ನು ಅನೇಕಪಟ್ಟು ಹೆಚ್ಚಿಸಬಹುದು. ಒಳದೂಡುವ ಹತಾರಕ್ಕೆ ಅನೇಕ ಕರ್ತನಧಾರಗಳಿದ್ದರೆ (ಕಟ್ಟಿಂಗ್ ಎಡ್ಜಸ್) ಕೊರೆಯುವ ಹತಾರಕ್ಕೆ ಸಾಮಾನ್ಯವಾಗಿ ಒಂದೇ ಒಂದು ಕರ್ತನಧಾರವಿರುತ್ತದೆ.

ಕೊರೆಯುವುದಕ್ಕೆ ಕಾರಣ: ಬೈರಿಗೆಯ ಹತಾರ ಆದಿಯಲ್ಲಿ ಸರಿಯಾದ ರಂಧ್ರ ಮಾಡುತ್ತದೆ. ಆದರೆ ಬೈರಿಗೆ ಮುಂದುವರಿದಂತೆ ಮಾರ್ಗಮಧ್ಯೆ ಸಿಕ್ಕುವ ಪೊಳ್ಳು (ಬ್ಲೋ ಹೋಲ್), ಗಡಸುಗಂಟು ಮುಂತಾದವು ಹತಾರವನ್ನು ತಡೆಯುವುದರಿಂದ ಅದು ನಡುಗಿ ರಂಧ್ರ ಕೆಡುತ್ತದೆ. ಈ ರಂಧ್ರಕ್ಕೆ ಒಪ್ಪ ನೀಡಲು ಒಳದೂಡುವ ಹತಾರವನ್ನು ಬಳಸಿದಾಗ ಅದು ಬೈರಿಗೆಯ ಮಾರ್ಗವನ್ನೇ ಅನುಸರಿಸುವುದರಿಂದ ಆದ ತಪ್ಪು ಸರಿಹೋಗದೆ ಉಳಿದುಕೊಳ್ಳುತ್ತದೆ. ಇದನ್ನು ತಪ್ಪಿಸಲು ಕೊರೆಯುವ ವಿಧಾನ ಬಳಸಬೇಕು. ಇದರಿಂದ ಅಳತೆ ಮತ್ತು ಇತರ ದೃಷ್ಟಿಗಳಿಂದ ಸರಿಯಾದ ರಂಧ್ರ ಪಡೆಯಬಹುದು. ಇದೇ ರೀತಿ ಮಾತೃಕೆಗಳಲ್ಲಿ (ಮೌಲ್ಡ್ಸ್) ಪೊಳ್ಪಿಂಡ(ಕೋರ್) ಸರಿಯಾಗಿ ಕೂರದಿದ್ದು ತಿಳಿಯದೆ ಎರಕಹೊಯ್ದರೆ ಅಕೇಂದ್ರಕವಾದ ರಂಧ್ರ ದೊರೆಯುತ್ತದೆ. ಕೊರೆಯುವುದರಿಂದ ಇದನ್ನು ಸರಿಪಡಿಸಬಹುದು.

**ಕೊರೆಯುವ ಹತಾರ :** ಒಂದು ದಂಡಕ್ಕೆ ಜೋಡಿಸಿರುವ ಅಥವಾ ದಂಡದ ತುದಿಯಲ್ಲಿ ಫೋರ್ಜ್ ಮಾಡಿರುವ ಕಡೆಯುವ ಹತಾರ ಇದು. ಕಡೆಯುವ ಹತಾರದಂತೆ ಇದಕ್ಕೂ ಪಾರ್ಶ್ವ ಇಳಿಜಾರು 60° – 70°ಗಳ ಕರ್ತನ ಕೋನ ಮತ್ತು ಮುಂದಿನ ಹಾಗೂ ಪಾರ್ಶ್ವದ ಶೇಷಾವರಣಗಳು (ಕ್ಲಿಯರೆನ್ಸ್) ಇವೆ. ಈ ಹತಾರದ ದುಂಡುಗೊಳಿಸಿದ ಕರ್ತನ ಬಿಂದು ಕಾಯಕಕ್ಕೆ (ಜಾಬ್) ಅತ್ಯಂತ ನುಣುಪಿನ ಒಪ್ಪವನ್ನೂ ಹತಾರಕ್ಕೆ ದೀರ್ಘ ಬಾಳಿಕೆಯನ್ನೂ ಕೊಡುತ್ತದೆ. ಕರ್ತನಧಾರ ಕಾಯಕದ ಅಕ್ಷಕ್ಕೆ ಲಂಬವಾಗಿರದೆ ಲಂಬದಿಂದ 70° ಕೋನದಲ್ಲಿರುತ್ತದೆ. ಇದರಿಂದ ಹುಡಿ ಕೊರೆದ ಭಾಗದಿಂದಾಚೆ ಬೀಳುತ್ತದೆ. ಉಜ್ಜುವುದನ್ನು ತಪ್ಪಿಸುವಷ್ಟು ಮಾತ್ರ ಶೇಷಾವರಣವಿರಬೇಕು. ಹೆಚ್ಚಿದ್ದರೆ ಕರ್ತನಧಾರಕ್ಕೆ ಆಧಾರತಪ್ಪಿ ಒಡೆದು ಮೊಂಡಾಗುತ್ತದೆ. ಅಧಿಕ ಇಂಗಾಲದ ಉಕ್ಕು, ಅಧಿಕ ಜವದ ಉಕ್ಕು, ಸ್ಟೆಲ್ಲೈಟ್ ವಜ್ರಲೇಪಿತಲೋಹ ಮುಂತಾದ ಲೋಹಗಳಿಂದ ಹತಾರವನ್ನು ತಯಾರಿಸಬಹುದು. ಸಣ್ಣ ಕಾಯಕಗಳ ಹತಾರ ಏಕಘಟಕವಾಗಿರಬಹುದು. ಇದನ್ನು ಗುಂಡಗಿರುವ ಅಥವಾ ಆಯಾಕಾರದ ದಂಡದಿಂದ ತಯಾರಿಸಬಹುದು. ದಂಡದ ಉದ್ದ ಮತ್ತು ಕರ್ತನಧಾರದ ಸ್ಥಾನವನ್ನು ಕ್ರಮಪಡಿಸಬಹುದಾದ ಕೊರೆಯುವ ಹತಾರದ ಪಿಡಿ(ಹೋಲ್ಡರ್) ಫೋರ್ಜ್ ಮಾಡಿದ ಹತಾರಕ್ಕಿಂತ ಹೆಚ್ಚು ತೃಪ್ತಿದಾಯಕವಾಗಿರುತ್ತದೆ. ಇದರಲ್ಲಿ ಪಿಡಿಯನ್ನು ಕೆಡಿಸದೆಯೇ ಹತಾರವನ್ನು ಹರಿತಮಾಡುವುದು ಮತ್ತು ಪುನಸ್ಸ್ಥಾಪಿಸುವುದು ಸಾಧ್ಯ. ಆಂತರಿಕ ದಾರಗಳನ್ನು (ಇಂಟರ್ನಲ್ ಥ್ರೆಡ್ಸ್) ಕತ್ತರಿಸಲು ಇದರಿಂದ ಬಹಳ ಅನುಕೂಲ.

**ಕೊರೆಯುವ ಯಂತ್ರಗಳು :** ಕಡೆಯುವ ಯಂತ್ರದಲ್ಲಿ ಕೊರೆಯುವುದು ಸಾಧ್ಯವಾದರೂ ಕೊರೆಯುವುದಕ್ಕೆಂದೇ ನಿರ್ಮಿಸಿದ ಕೊರೆಯುವ ಯಂತ್ರಗಳುಂಟು. ಭೂಲಂಬೀ ಮತ್ತು ಕ್ಷಿತಿಜೀಯ ಯಂತ್ರಗಳೆಂದು ಇವುಗಳಲ್ಲಿ ಎರಡು ವಿಧ. ಭೂಲಂಬೀ ಯಂತ್ರದಲ್ಲಿ ಕಾಯಕಪೀಠ ಒಂದು ಭೂಲಂಬೀ ಅಕ್ಷದಲ್ಲಿ ತಿರುಗುತ್ತದೆ. ಪೀಠದ ಮೇಲ್ಗಡೆ ಕರ್ತಕವನ್ನು ಜೋಡಿಸಿದ್ದು ಅದನ್ನು ಯಾವುದೇ ಸ್ಥಾನದಲ್ಲಿ ಕೆಳಗೆ ಮೇಲೆ ಅಥವಾ ಅಡ್ಡಲಾಗಿ ಪ್ರಭರಣ (ಫೀಡ್) ಮಾಡಬಹುದು. ಈ ಸಾಧ್ಯತೆಗಳಿಂದಾಗಿ ಕೊರೆಯುವುದರಷ್ಟೆ ಸುಲಭವಾಗಿ ಕಡೆಯುವುದು ಮತ್ತು ಮುಖನುಣುಪು ಸಹ ಸಾಧ್ಯ. ಕ್ಷಿತಿಜೀಯ ಯಂತ್ರದಲ್ಲಿ ಕರ್ತಕ ಕ್ಷಿತಿಜೀಯ ಅಕ್ಷದಲ್ಲಿ ತಿರುಗುತ್ತದೆ. ಇಲ್ಲಿ ಚಲಿಸಬಹುದಾದ ಪೀಠದ ಮೇಲೆ ಕಾಯಕವನ್ನು ನಿಶ್ಚಲವಾಗಿಡುವ ಏರ್ಪಾಡಿದೆ. ಕರ್ತಕವಿರುವ ಒಂದು ತಿರುಗುವ ದಂಡ ಭೂಲಂಬೀಯವಾಗಿ ಕ್ರಮಗೊಳಿಸಬಹುದಾದ ಶೀರ್ಷದಿಂದ ಕಾಯಕಕ್ಕೆ ಪ್ರಭರಣವನ್ನೊದಗಿಸುತ್ತದೆ.

ಈ ಯಂತ್ರಗಳಿಂದ ಆಂತರಿಕ ಸಂವಾಟಗಳನ್ನೂ(ಟೇಪರ್) ಕೊರೆಯಬಹುದು. ಇದಕ್ಕಾಗಿ ಮೊದಲೇ ಬೈರಿಗೆ ಕ್ರಿಯೆಯಿಂದ ಯುಕ್ತ ಅಳತೆಯ ಸಮಾಂತರ ರಂಧ್ರ ಮಾಡಿ ಅನಂತರ ಸಂವಾಟಕರ್ತಕದ ಸಹಾಯದಿಂದ ಸಂವಾಟವನ್ನು ಕೊರೆಯಬಹುದು. (ಕೆ.ಆರ್.ಎಂ.)

**ಭೂವಿಜ್ಞಾನದಲ್ಲಿ ಕೊರೆತ:** ಹೆಚ್ಚು ಕಠಿಣವಾದ ಭೂಮಿ ಅಥವಾ ಬಂಡೆಗಳಲ್ಲಿ ಬೈರಿಗೆ ಉಪಯೋಗಿಸಿ ರಂಧ್ರಗಳನ್ನು ತೆಗೆಯುವ ವಿಧಾನ (ಡ್ರಿಲ್ಲಿಂಗ್). ಗಣಿಕಾರ್ಯಾಚರಣೆಯಲ್ಲಿ ಇದರ ಪಾತ್ರ ಬಹು ಮುಖ್ಯ. ಕಠಿಣವಾದ ಅದುರನ್ನು ಕತ್ತರಿಸಲು ಸಣ್ಣ ಹ್ಯಾಮರ್ ಬೈರಿಗೆಯ ಸಹಾಯದಿಂದ 1.2–1.5 ಮೀ ಆಳದ ರಂಧ್ರವನ್ನು ಕೊರೆದು ಸಿಡಿಮದ್ದನ್ನು ತುಂಬಿ ಸಿಡಿಸಲಾಗುವುದು. ಅನಾವೃತಗಣಿಗಳಲ್ಲಿ ಎಂಪೈರ್ ಬೈರಿಗೆ ಅಥವಾ ವ್ಯಾಗನ್ ಬೈರಿಗೆಗಳ ಸಹಾಯದಿಂದ 200–300 ಮಿಮೀ ವ್ಯಾಸ ಮತ್ತು 3–4 ಮೀ ಆಳವುಳ್ಳ ರಂಧ್ರಗಳನ್ನು ಕೊರೆದು ಅತಿ ಹೆಚ್ಚು ಶಕ್ತಿಯುಳ್ಳ ಸಿಡಿಮದ್ದನ್ನು ತುಂಬಿ ಸಿಡಿಸಲಾಗುವುದು. ಮುಖ್ಯವಾಗಿ ಕೊರೆಯುವಿಕೆಯಿಂದ ಭೂಮಿಯಲ್ಲಿ ಅದುರು ಸಂಶೋಧನೆ ಮಾಡಲು ಮತ್ತು ರಂಧ್ರ ಬಾವಿ ತೆಗೆಯಲು ಸಹಾಯವಾಗುತ್ತದೆ. ಹೆಚ್ಚಿನ ಆಳದ ರಂಧ್ರಗಳನ್ನು ಕೊರೆಯುವಾಗ ವಜ್ರಬೈರಿಗೆಯ ಉಪಯೋಗವನ್ನು ಪಡೆಯಲಾಗುವುದು. (ಟಿ.ಟಿ.)

**ರಾಸಾಯನಿಕ ಕೊರೆತ:** ರಾಸಾಯನಿಕಗಳ ನೆರವಿನಿಂದ ವಸ್ತುಗಳನ್ನು ಕೊರೆಯುವ ವಿಧಾನ (ಎಚ್ಚಿಂಗ್). ಉದಾಹರಣೆಗೆ ಗಾಜಿನ ಮೇಲೆ ಕೊರೆಯಲು ಹೈಡ್ರೋಫ್ಲೂರಿಕಾಮ್ಲವನ್ನು(HF) ಬಳಸುತ್ತಾರೆ. ಗಾಜಿನ ಪದಾರ್ಥದ ಮೇಲೆ ಮೇಣವನ್ನು ಲೇಪಿಸಿ, ಆ ಮೇಣದಲ್ಲಿ ಬೇಕಾದ ಅಕ್ಷರಗಳನ್ನೋ ಆಕೃತಿಯನ್ನೋ ಚಿತ್ರವನ್ನೋ ಕೊರೆದು ಅದನ್ನು ಒಂದು ಸೀಸದ ಪಾತ್ರೆಯಲ್ಲಿರುವ ಹೈಡ್ರೋಫ್ಲೂರಿಕಾಮ್ಲ ದ್ರಾವಣದಲ್ಲಿ ಅದ್ದಿ ಇಡುತ್ತಾರೆ; ಅಥವಾ HF ಅನಿಲದಲ್ಲಿ ಇಡುತ್ತಾರೆ. ಮೇಣವಿಲ್ಲದಿರುವ ಜಾಗದಲ್ಲಿ ಗಾಜು ಕರಗಿ ಚಿತ್ರ ಕೊರೆಯಲ್ಪಡುತ್ತದೆ. ಅನಂತರ ಟರ್ಪೆನ್‌ಟೈನ್ ಎಣ್ಣೆಯಿಂದ ಮೇಣವನ್ನು ತೆಗೆಯುವರು. ಅನಿಲವನ್ನು ಬಳಸಿದಾಗ ಕೊರೆತ ಮಸುಕಾಗಿರುತ್ತದೆ. ದ್ರಾವಣವನ್ನು ಬಳಸಿದಾಗ ಹೊಳಪು ಬಂದಿರುತ್ತದೆ. ಅದು ಪಾರದರ್ಶಕವಾಗಿಯೂ ಇರುವುದು. (ಎನ್.ಎಸ್.ಕೆ.)

**ಕೊರೆಯಚ್ಚು ಮುದ್ರಣ :** ಬರೆದಿರುವ ವಿಷಯವನ್ನಾಗಲೀ ಚಿತ್ರಗಳನ್ನಾಗಲೀ ಸುಲಭವಾಗಿ ಪ್ರತಿ ತೆಗೆಯುವ ವಿಧಾನ (ಸ್ಟೆನ್ಸಿಲ್ ಪ್ರಿಂಟಿಂಗ್). ಇಲ್ಲಿ ಎರಡು ವಿಧದ ಮುದ್ರಣ ಫಲಕಗಳು ಇವೆ: 1.ಲೇಖನ, ಕಚೇರಿಯ ರಶೀತಿ, ನಮೂನೆ ಮುಂತಾದವುಗಳ ಪ್ರತಿಗಳನ್ನು ತೆಗೆಯಲು ಬಳಸುವ ಮಯಣಲೇಪಿತ ಅಚ್ಚಿನ ಹಾಳೆ. 2.ಭಾಗಿಗಳ ಮೇಲೆ ಗೋಡೆಗಳ ಮೇಲೆ ಇತ್ಯಾದಿ ಚಿತ್ರಗಳನ್ನೋ ವಿಳಾಸಗಳನ್ನೋ ಬರೆಯಲು ಬಳಸುವ ಲೋಹದ ತಗಡುಚ್ಚುಗಳು.



ಮೇಲಿನದು ಲೋಹದ ತಗಡಚ್ಚು : ಕೆಳಗಿನದು ಮುದ್ರಣಾಕ್ಷರಗಳು

ಮಯಣಲೇಪಿತ ಹಾಳೆಗೆ ಸ್ಟೆನ್ಸಿಲ್ ಹಾಳೆ ಎಂದು ಹೆಸರು. ಇದರ ಮೇಲೆ ಬೆರಳಚ್ಚು ಯಂತ್ರದ ನೆರವಿನಿಂದ ಅಥವಾ ಸ್ಟೈಲಸ್ ಎಂಬ ಹೆಸರಿನ ವಿಶಿಷ್ಟ ಲೇಖನಿಯ ಸಹಾಯದಿಂದ ಬರವಣಿಗೆ ಮಾಡುತ್ತಾರೆ. ಆಗ ಅಕ್ಷರಗಳಿರುವಲ್ಲಿ ರಂಧ್ರಗಳುಂಟಾಗುತ್ತವೆ. ಇಂಥ ಹಾಳೆಯ ಅಡಿಯಲ್ಲಿ ಖಾಲಿ ಕಾಗದವನ್ನಿಟ್ಟು (ಇಲ್ಲಿ ವಿಶಿಷ್ಟ ಗುಣದ ಹಾಳೆಗಳನ್ನು ಬಳಸುವುದು ವಾಡಿಕೆ) ಸ್ಟೆನ್ಸಿಲ್ ಶಾಯಿಯನ್ನು ಉಪಯೋಗಿಸಿ ಮೂಲಬರವಣಿಗೆಯ ಪ್ರತಿಯನ್ನು ಪಡೆಯಬಹುದು. ಈ ಕ್ರಿಯೆಯನ್ನು ಸ್ಟೆನ್ಸಿಲ್ ಯಂತ್ರದ ಸಹಾಯದಿಂದ ಯಾಂತ್ರಿಕವಾಗಿ ನಡೆಸಿ ಕ್ಷಿಪ್ರವಾಗಿ ಬೇಕಾದಷ್ಟು ಪ್ರತಿಗಳನ್ನು ಪಡೆಯುವ ಸೌಕರ್ಯವುಂಟು.

ಲೋಹದ ತಗಡಚ್ಚುಗಳ ಕ್ರಿಯಾವಿಧಾನ ಬೇರೆ. ತೆಳುವಾದ ತಗಡಿನ ಮೇಲೆ ಅಕ್ಷರಗಳನ್ನೋ ಚಿತ್ರಗಳನ್ನೋ ದೊಡ್ಡದಾಗಿ ಕೊರೆದಿರುತ್ತಾರೆ. ಉದಾಹರಣೆ ಇಂಗ್ಲಿಷ್ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಸಮಗಾತ್ರಗಳಲ್ಲಿ ಕೊರೆದಿರುವ ಬಿಡಿ ತಗಡುಗಳಿವೆ. ಒಂದು ರೈಲ್ವೇ ಭಾಂಗಿಯ ಮೇಲೆ 'ಕರ್ಣಾಟಕ' ಎಂದು ಬರೆಯಬೇಕೆಂಬುದು ನಮ್ಮ ಉದ್ದೇಶವಾದರೆ ಆಯಾ ಅಕ್ಷರಗಳ ತಗಡಚ್ಚುಗಳನ್ನು ಅನುಕ್ರಮವಾಗಿ ಆಯ್ದು ಒಂದೊಂದರ ಪಡಿಯಚ್ಚನ್ನು ಭಾಂಗಿಯ ಮೇಲೆ ಪಡೆದು ಇಡೀ ಶಬ್ದವನ್ನು ಮುಗಿಸಬೇಕಾಗುತ್ತದೆ. ಇಲ್ಲೆಲ್ಲ ಸುಧಾರಣೆಗಳಿಗೆ ಮತ್ತು ಯಾಂತ್ರೀಕರಣಗಳಿಗೆ ಅವಕಾಶ ಉಂಟು.

ಕೊರೆಯಚ್ಚುಯಂತ್ರ ಕಳೆದೆರಡು ದಶಕಗಳ ಹಿಂದೆ ಎಲ್ಲ ಸಂಸ್ಥೆಗಳಲ್ಲಿಯೂ ಅವಶ್ಯವಾಗಿದ್ದ ಸಾಧನಗಳಲ್ಲಿ ಒಂದು. ಒಂದು ಕಾಗದ, ಸುತ್ತೋಲೆ, ಜಾಹಿರಾತು ಇವುಗಳ ಅನೇಕ ಪ್ರತಿಗಳನ್ನು ಅತಿ ಬೇಗನೆ ಸುಲಭವಾಗಿ ಈ ಸಾಧನದಿಂದ ತಯಾರಿಸಬಹುದು. ಈಗ ಉಪಯೋಗದಲ್ಲಿರುವ ಕೊರೆಯಚ್ಚು ಯಂತ್ರದ ಉಪಜ್ಞೆಕಾರ ಎ. ಬಿ. ಡಿಕ್(1884). ಅವನು ಅದನ್ನು ಮಿಮಿಯೋಗ್ರಾಫ್ ಎಂಬ ಹೆಸರಿನಿಂದ ಕರೆದ. ಇದು ಸಮತಲ ತಟ್ಟೆಯ ಮಾದರಿಯಲ್ಲಿದೆ. ಆದರೆ ಈಗ ಬಹಳವಾಗಿ ಉಪಯೋಗದಲ್ಲಿರುವ ಮಾದರಿ ದುಂಡಾಕೃತಿಯ ಉರುಳೆ (ರೋಟರಿ) ಮಾದರಿಯಲ್ಲಿದೆ. ಇದರಲ್ಲಿ ಒಂದು ಕೊರೆಯಚ್ಚು ಹೊದಿಕೆಯ ಉರುಳೆಯೂ ಮತ್ತು ಒಂದು ಒತ್ತುವ ಉರುಳೆಯೂ ಇವೆ. ಈ ಮೊದಲನೆಯ ಉರುಳೆಯ ಮೇಲೆ ಒಂದು ಮಸಿಲೇಪಕ ಮೆತ್ತೆಯನ್ನು ಹೊಂದಿಸಿರುತ್ತಾರೆ. ಇದರ ಮೇಲೆ ಕೊರೆಯಚ್ಚು ಮಾಡಿದ ಹಾಳೆಯನ್ನು ಬಿಗಿಯಾಗಿ ಕೂಡಿಸುತ್ತಾರೆ. ಅನಂತರ ಕಾಗದದ ಹಾಳೆಗಳನ್ನು ಇದರಲ್ಲಿ ಜೋಡಿಸಿ, ಉರುಳೆಯನ್ನು ಕೈಯಿಂದಾಗಲಿ ವಿದ್ಯುಚ್ಛಕ್ತಿಯಿಂದಾಗಲಿ ತಿರುಗಿಸಿದಾಗ, ಕಾಗದದ ಹಾಳೆ ಬಿಗಿಯಾಗಿ ಹಿಡಿಯಲ್ಪಟ್ಟು ಒತ್ತುವ ಉರುಳೆಯ ಒತ್ತಡದಿಂದ ಕೊರೆಯಚ್ಚಿನ ಕೆಳಗಡೆ ಇರುವ ಮಸಿಮೆತ್ತೆಯಿಂದ ಬೇಕಾದಷ್ಟು ಮಾತ್ರ ಮಸಿ ಕೊರೆಯಚ್ಚಿನ ರಂಧ್ರಗಳ ಮೂಲಕ ಕಾಗದದ ಮೇಲೆ ಮೂಡಿಬರುತ್ತದೆ. (ಡಿ.ಎಸ್.ಜ.)

**ಕೊರೋನ ಆಸ್ಟ್ರೇಲಿಸ್ :** ಆಕಾಶದ 88 ನಕ್ಷತ್ರ ಪುಂಜಗಳಲ್ಲಿ ಒಂದು. ದಕ್ಷಿಣ ಕಿರೀಟ (ಸದರ್ನ್‌ಕ್ರೌನ್) ಎಂದೂ ಹೆಸರಿದೆ. ಇದರ ವ್ಯಾಪ್ತಿ ವಿಷುವದಂಶ 17 ಗಂ. 55 ಮಿ.–19 ಗಂ. 18 ಮಿ. ಮತ್ತು ಘಂಟಾವೃತ್ತಾಂಶ $37^0$–$46^0$ದ. ಧನೂರಾಶಿಯ ಪಕ್ಕದಲ್ಲಿದೆ. ಇದರ ನಕ್ಷತ್ರಗಳ ಅಳವಡಿಕೆ ಒಂದು ವೃತ್ತದ ಕಸವನ್ನು ರಚಿಸುವಂತೆ ಇದೆ. ಈ ಪುಂಜವನ್ನು ಬರಿಗಣ್ಣಿನಿಂದ ಗುರುತಿಸುವುದು ಕಷ್ಟ. *

**ಕೊರೋನ ಬೋರಿಯೇಲಿಸ್ :** ಆಕಾಶದ 88 ನಕ್ಷತ್ರ ಪುಂಜಗಳಲ್ಲಿ ಒಂದು. ಉತ್ತರ ಕಿರೀಟ (ನಾರ್ತರ್ನ್ ಕ್ರೌನ್) ಎಂದು ಹೆಸರಿದೆ. ಇದರ ವ್ಯಾಪ್ತಿ ವಿಷುವದಂಶ 15 ಗಂ. 15 ಮಿ– 16 ಗಂ. 25 ಮಿ ಮತ್ತು ಘಂಟಾವೃತ್ತಾಂಶ $26^\circ$ –$40^\circ$ ಉತ್ತರ. ಬೂಟ್ಯೀಸ್ ಪುಂಜದ ಸಮೀಪದಲ್ಲಿರುವ 6 ನಕ್ಷತ್ರಗಳ ಕಿರೀಟಾಕಾರದಿಂದ ಈ ಪುಂಜವನ್ನು ಸುಲಭವಾಗಿ ಗುರುತಿಸುವುದು ಸಾಧ್ಯ. *

**ಕೊರ್‌ನರ್, ಕಾರ್ಲ್ ಥಿಯೊಡರ್ :** 1791–1813. ರಾಷ್ಟ್ರಭಕ್ತಿಗೀತೆಗಳನ್ನು ರಚಿಸಿದ ಪ್ರಖ್ಯಾತ ಜರ್ಮನ್ ಕವಿ. ಹುಟ್ಟಿದ್ದು ಡ್ರೆಸ್‌ಡನ್‌ನಲ್ಲಿ. ಈತನ ತಂದೆ ಕ್ರಿಶ್ಚನ್ ಗಾಟ್‌ಫ್ರೆಡ್ ಕೊರ್‌ನರ್ ಸೆಕ್ಸಾನಿನ ನ್ಯಾಯಶಾಸ್ತ್ರ ಪಂಡಿತ. ಫ್ರೈಬರ್ಗ್, ಲೈಪ್‌ಸಿಗ್ ಮತ್ತು ಬರ್ಲಿನ್ ನಗರಗಳಲ್ಲಿ ವಿದ್ಯಾಭ್ಯಾಸ ಮುಗಿಸಿ, 1811ರಲ್ಲಿ ವಿಯೆನ್ನಕ್ಕೆ ತೆರಳಿದ. ಅಲ್ಲಿ ಫೆಡ್ರಿಕ್ ಮುಂತಾದ ಹೆಸರಾಂತ ಲೇಖಕರ ಸಂಪರ್ಕ ಬೆಳೆಸಿದ. ಈತನ ಮೊಟ್ಟಮೊದಲ ಕವನ ಸಂಕಲನ ನೊಸ್‌ಪೆನ್ 1810ರಲ್ಲಿ ಪ್ರಕಟಗೊಂಡಿತು. ವಿಯೆನ್ನದಲ್ಲೀತ ಅನೇಕ ಸುಖಾಂತ ಮತ್ತು ದುಃಖಾಂತ ನಾಟಕಗಳನ್ನು ರಚಿಸಿದ. ಅವುಗಳಲ್ಲಿ ಹಲಕೆಲವು ರಂಗಭೂಮಿಯ ಮೇಲೆ ಯಶಸ್ಸು ಗಳಿಸಿದವು. ತತ್ಫಲವಾಗಿ ಆಸ್ಥಾನ ನಾಟಕಕಾರನಾಗಿ ನೇಮಕಗೊಂಡ. ಜರ್ಮನಿಯ ಸ್ವಾತಂತ್ರ್ಯ ಹೋರಾಟಕ್ಕಾಗಿ ನಡೆಸಿದ ಲುಟ್‌ಜಿನ್‌ನ ಕ್ರಾಂತಿದಳಕ್ಕೆ ಸೇರಿದ. ಆಗ ಅನೇಕ ದೇಶಭಕ್ತಿಗೀತೆಗಳನ್ನು ರಚಿಸಿದ. ಈ ಕವನಗಳಲ್ಲಿ ಸಾಹಿತ್ಯಕ್ಕಿಂತ ಹೊನಲಾಗಿ ಹರಿಯುವ ದೇಶಭಕ್ತಿ ಮತ್ತು ಅಂದಿನ ರಾಜಕೀಯದ ವಾಸ್ತವ ಚಿತ್ರಣ ತುಂಬಿದ್ದುದರಿಂದ ಅವು ಹೆಚ್ಚು ಜನಪ್ರಿಯತೆ ಗಳಿಸಿದವು. ಮೆಕ್‌ಲೆನ್‌ಬರ್ಗ್‌ನ ಬಳಿ ನಡೆದ ಹೋರಾಟದಲ್ಲಿ ಈತ ಕೊಲೆಯಾದನಾದರೂ ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತ ಈ ಹುತಾತ್ಮ ಅಂದಿನ ಜನಮನದಲ್ಲಿ ಶಾಶ್ವತವಾಗಿ ನೆಲೆಸಿದ. ಮರಣಾನಂತರ ಈತನ ತಂದೆ ಲೈರ್ ಅಂಡ್ ಸೋರ್ಡ್ ಎಂಬ ಹೆಸರಿನಲ್ಲಿ ಈತನ ದೇಶಭಕ್ತಿ ಗೀತೆಗಳ ಸಂಕಲನವೊಂದನ್ನು ಪ್ರಕಟಿಸಿದ. ಜನಪದ ಸಾಹಿತ್ಯದಲ್ಲಿ ಅಸ್ತಿತ್ವವನ್ನು ಪಡೆದ ಇಲ್ಲಿನ ಕೆಲವು ಕವನಗಳು ಜರ್ಮನರ ಹೃದಯಗಳನ್ನು ಸೂರೆಗೊಂಡ ದೇಶಭಕ್ತಿಗೀತೆಗಳಾಗಿ ಇಂದಿಗೂ ಉಳಿದಿವೆ. *

**ಕೊರ್‍ಸ್ಲ ಮೀನು :** ಸಿಹಿನೀರಿನ ಒಂದು ಬಗೆಯ ಮಲೆಟ್ ಮೀನು. ಟೆಲಿಯೋಸ್ಟಿಯೈ ಗಣದ ಆಕ್ಯಾಂತೋ ಟೆರಿಜಿಯೈ ಉಪಗಣದ ಮ್ಯುಜಿಲಿಡೀಗಳ ಕುಟುಂಬಕ್ಕೆ ಸೇರಿದ ಮೀನು. ವೈಜ್ಞಾನಿಕ ನಾಮ ರೈನೋಮುಗಿಲ್ ಕೊರ್‍ಸ್ಲ. ನದೀಮುಖಜ ಪ್ರದೇಶಗಳಲ್ಲಿ ಉಬ್ಬರವಿಳಿತಗಳಿಗೆ ಸಿಗದ ನೀರುಗಳಲ್ಲಿರುತ್ತದೆ. ಸುಮಾರು 45 ಸೆಂಮೀ ಉದ್ದ ಬೆಳೆಯುತ್ತದೆ. ತಲೆ ಮೇಲಿನಿಂದ ಕೆಳಕ್ಕೆ ಚಪ್ಪಟೆಯಾಗಿದ್ದು ಕಣ್ಣುಗಳು ಮೇಲ್ಭಾಗಕ್ಕೆ ಉಬ್ಬಿದಂತೆ ಕಾಣಿಸುತ್ತವೆ. ಈಜುವಾಗ ಕೆಲವೊಮ್ಮೆ ನೀರಿನ ಮೇಲೆ ಕಣ್ಣುಗಳು ಕಾಣಿಸುತ್ತಿರುತ್ತವೆ. ಆದ್ದರಿಂದ ಇದನ್ನು ನೆತ್ತಿ ಕಣ್ಣಿನ ಕೊರವ ಎಂದು ಕರೆಯುತ್ತಾರೆ. ಇವು ಸಮುದ್ರ ಮತ್ತು ಅಳಿವೆಗಳಲ್ಲಿ ವಾಸಿಸುವ ಮುಗಿಲ್ (ಮಾಲಾ ಮೀನು), ವಲಾಮುಗಿಲ್ ಮತ್ತು ಲಿಜಾ (ಪಾರೆ ಮೀನು) ಪ್ರಭೇಧಗಳ ಹತ್ತಿರದ ಸಂಬಂಧಿ. ಪಾರ್ಶ್ವರೇಖೆ ಇರುವುದಿಲ್ಲ. ಹುರುಪೆಗಳು ಸಾಧಾರಣ ಗಾತ್ರದಲ್ಲಿರುತ್ತವೆ. ಎರಡು ಬೆನ್ನು ಈಜುರೆಕ್ಕೆಗಳಿದ್ದು ಮೊದಲನೆಯದಕ್ಕೆ 4 ಮುಳ್ಳುಗಳಿರುತ್ತವೆ. ಕಣ್ಣುಗಳು ಹೊಂಬಣ್ಣದವು. ಕರ್ನಾಟಕದ ಕೃಷ್ಣ, ಕಾವೇರಿ, ಮತ್ತು ಗೋದಾವರಿ ನದಿಗಳಲ್ಲಿ ಕಾಣಸಿಗುತ್ತವೆ. ಎಸ್.ವಿ.ಎ.

**ಕೊಲಂಬ :** ಖಗೋಳದ 88 ನಕ್ಷತ್ರಪುಂಜಗಳ ಪೈಕಿ ಒಂದು (ಕಪೋತ) ಇದರ ವ್ಯಾಪ್ತಿ ವಿಶುವದಂಶ 5 ಗಂ–6 ಗಂ. 40 ಮಿ. ಮತ್ತು ಘಂಟಾವೃತ್ತಾಂಶ $27^\circ$–$43^\circ$ ದ. ಮಹಾವ್ಯಾಧ (ಒರೈಯನ್) ಪುಂಜದಿಂದ ದಕ್ಷಿಣಕ್ಕೆ ಇದೆ. ಈ ಪುಂಜವನ್ನು ಗುರುತಿಸುವುದು ಕಷ್ಟ. ಇದಕ್ಕೆ ಕಪೋತ ಎಂದು ಹೆಸರಿಸಿದ್ದಾನೆ. *

**ಕೊಲಂಬಸ್, ಕ್ರಿಸ್ಟೋಫರ್ :** 1451–1506. ಅಮೆರಿಕ ಖಂಡವನ್ನು ಕಂಡುಹಿಡಿದವನೆಂದು ಪ್ರಸಿದ್ಧನಾಗಿರುವ ಪರಿಶೋಧಕ ಸಾಹಸಿ. ತಾನು ಗುರುತಿಸಿದ ನೆಲ ಅಮೆರಿಕ ಎಂಬ ಪ್ರಜ್ಞೆ ಕೊಲಂಬಸನಿಗೆ ಇರಲಿಲ್ಲ ಎಂಬುದು ಆಶ್ಚರ್ಯದ ಸಂಗತಿ. ಅಂದಿಗೆ ಯುರೋಪಿಗೂ ಏಷ್ಯಕ್ಕೂ ಸಂಪರ್ಕವಿದ್ದುದು ಪೂರ್ವದ ಭೂಮಾರ್ಗಗಳಿಂದ ಮಾತ್ರ. ಸಾಂಬಾರ ಪದಾರ್ಥಗಳು, ಶ್ರೀಗಂಧ, ಏಲಕ್ಕಿ, ಮೊದಲಾದವುಗಳ ವ್ಯಾಪಾರವೆಲ್ಲ ಬಹುಪಾಲು ಈ ಮಾರ್ಗಗಳಿಂದಲೇ ನಡೆಯುತ್ತಿದ್ದುವಲ್ಲದೆ ಇವೆಲ್ಲ ಅರಬರ ಕೈಲಿದ್ದುವು. ಆದ್ದರಿಂದ ಪೂರ್ವರಾಷ್ಟ್ರಗಳಿಗೆ ಅದರಲ್ಲೂ ಭಾರತಕ್ಕೆ ಹೊಸದೊಂದು ಮಾರ್ಗವನ್ನು ಕಂಡುಹಿಡಿಯುವುದರ ಕಡೆ ಯೂರೋಪಿನ ಸಾಹಸಿಗಳ ಗಮನ ಹರಿದಿತ್ತು. ಭೂಮಿ ಗುಂಡಾಗಿರುವುದರಿಂದ ಅಟ್ಲಾಂಟಿಕ್ ಸಾಗರದಲ್ಲಿ ನೇರವಾಗಿ ಪಶ್ಚಿಮಕ್ಕೆ ಪ್ರಯಾಣ ಮಾಡಿದಲ್ಲಿ ಏಷ್ಯದ ತೀರ ಪ್ರದೇಶವನ್ನು ಮುಟ್ಟಬಹುದೆಂಬ ನಂಬಿಕೆಯಿಂದ ಕೊಲಂಬಸ್ ಯಾನ ಮಾಡಿದ. ಆದ್ದರಿಂದಲೇ ತಾನು ಕಂಡ ದ್ವೀಪಗಳನ್ನು ಇಂಡೀಸ್ ಎಂದೂ ಅಲ್ಲಿನ ಜನರನ್ನು ಇಂಡಿಯನರೆಂದೂ ಕರೆದ. ತಾನು ನಿರ್ವಹಿಸಿದ ನಾಲ್ಕು ಯಾನಗಳಲ್ಲಿ ಈತ ವೆಸ್ಟ್ ಇಂಡೀಸ್ ಗುಂಪಿನ ಹಲವಾರು ದ್ವೀಪಗಳನ್ನು ಕಂಡುಹಿಡಿದನಲ್ಲದೆ, ಟ್ರಿನಿಡ್ಯಾಡ್ ಮತ್ತು ಮಧ್ಯ ಅಮೆರಿಕಗಳಲ್ಲಿ ಕಾಲಿಟ್ಟಿದ್ದ. ಆದರೂ ಟ್ರಿನಿಡ್ಯಾಡಿನ ಆಚೆ ದಕ್ಷಿಣ ಅಮೆರಿಕ, ಮಧ್ಯಅಮೆರಿಕದ ಉತ್ತರದಲ್ಲಿ ಉತ್ತರ ಅಮೆರಿಕ ಖಂಡಗಳು ಇವೆಯೆಂಬ ಅಂಶ ಈತನಿಗೆ ತಿಳಿಯದಾಯಿತು. ಭಾರತಕ್ಕೆ ಜಲಮಾರ್ಗವೊಂದನ್ನು ಕಂಡುಹಿಡಿಯುವ ತನ್ನ ಪ್ರಯತ್ನ ಸಫಲವಾಗಲಿಲ್ಲವಲ್ಲ ಎಂಬ ಕೊರಗು ಇವನಿಗೆ ಕೊನೆಯವರೆಗೂ ಇತ್ತು.



ಕ್ರಿಸ್ಟೋಫರ್ ಕೊಲಂಬಸ್, ಸೆಬ್ಯಾಸ್ಟಿಯನ್ ಡೆಲ್ ಪಿಯೊಂಬೊನ ಚಿತ್ರಕೃತಿ

ಕೊಲಂಬಸ್ ಸುಮಾರು 1451ರಲ್ಲಿ ಜಿನೋಅ ನಗರದಲ್ಲಿ ಜನಿಸಿದ. ತಂದೆ ವೃತ್ತಿಯಿಂದ ನೇಕಾರ. ಕೊಲಂಬಸನಿಗಾದರೋ ಎಳತನದಿಂದಲೂ ಸಮುದ್ರಯಾನದ ಕಡೆಗೆ ಒಲವು. 1476ರಲ್ಲಿ ಯಾವುದೋ ಒಂದು ವ್ಯಾಪಾರಿ ನೌಕೆಯನ್ನೇರಿ ಕೊಲಂಬಸ್ ಲಿಸ್ಬನ್ನಿಗೆ ಬಂದ. ಅಲ್ಲಿ ತನ್ನ ಸಹೋದರನೊಂದಿಗೆ ಕೂಡಿ ಭೂಪಟ, ಜಲಪಟಗಳ ರಚನೆಯಲ್ಲಿ ತಲ್ಲೀನನಾದ. ಪೋರ್ಚುಗಲ್ಲಿನ ಸ್ಯಾಗ್ರೇಸ್ ಎಂಬ ಸಣ್ಣ ಗ್ರಾಮದಲ್ಲಿ ಪ್ರಿನ್ಸ್ ಹೆನ್ರಿ ದಿ ನ್ಯಾವಿಗೇಟರ್ ಸ್ಥಾಪಿಸಿದ ನೌಕಾಶಾಲೆಯನ್ನು ನೋಡಿಬಂದ. ನಡುವೆ ಐಸ್ಲೆಂಡಿನವರೆಗೂ ಯಾನ ಮಾಡಿ ಬಂದ ಈತನಿಗೆ ಪೋರ್ಚುಗೀಸ್ ಜನರ ಯಾನೋತ್ಸಾಹ ಅಮಿತ ಸ್ಫೂರ್ತಿಯನ್ನು ಕೊಟ್ಟಿತು. ಪಶ್ಚಿಮದಿಂದ ಪ್ರಯಾಣಮಾಡಿ ಭಾರತಕ್ಕೊಂದು ಹೊಸ ಹಾದಿಯನ್ನು ಕಂಡುಹಿಡಿಯುವ ವಿಷಯವನ್ನು ಆತ ಪೋರ್ಚುಗಲ್ಲಿನ ದೊರೆ ಎರಡನೆಯ ಜಾನನ ಮುಂದಿಟ್ಟ (1484). ಒಂದು ವರ್ಷದ ಮೇಲೆ, ತನ್ನ ಬಿನ್ನಪ ಅಂಗೀಕೃತವಾಗಲಿಲ್ಲವೆಂಬ ವಿಷಯವನ್ನು ತಿಳಿದು ಮರುಗಿದ. ಇಂಗ್ಲೆಂಡ್, ಫ್ರಾನ್ಸ್ ದೇಶಗಳ ರಾಜರಿಂದಲೂ ಈತನಿಗೆ ಯಾವ ಸಹಾಯ ದೊರೆಯಲಿಲ್ಲ.

ಅನಂತರ ಸ್ಪೇನ್ ದೇಶಕ್ಕೆ ಹೋಗಿ ತನ್ನ ಯೋಜನೆಯನ್ನು ರಾಜದಂಪತಿಗಳಾದ ಫರ್ಡಿನೆಂಡ್ ಮತ್ತು ಇಸಾಬೆಲರಿಗೆ ವಿವರಿಸಿ ಅವರ ಕೃಪೆ ಬೇಡಿದ. ಅಲ್ಲೂ ಕೂಡಲೆ ನೆರವು ದೊರೆಯುವ ಸೂಚನೆ ಕಾಣಲಿಲ್ಲ. ಅಂತೂ ಕೊನೆಗೆ ಸ್ಪೇನಿನ ಶ್ರೀಮಂತನೊಬ್ಬನ ಮಧ್ಯಸ್ಥಿಕೆಯ ಫಲವಾಗಿ ರಾಜದಂಪತಿಗಳು ಕೊಲಂಬಸನಿಗೆ ಬೇಕಾದ ಸಹಾಯ ಸೌಕರ್ಯಗಳನ್ನೆಲ್ಲ ಒದಗಿಸುವುದಾಗಿ ಆಶ್ವಾಸನೆ ನೀಡಿದರು.

ಸ್ಪೇನ್ ದೇಶದ ಉದಾರ ಆಶ್ರಯದಿಂದ ಸಾಂತ ಮೆರಿಯ, ಪಿಂಟ ಮತ್ತು ನಿನಾ ಎಂಬ ಮೂರು ಹಡಗುಗಳನ್ನು ಸಜ್ಜುಗೊಳಿಸಿಕೊಂಡ ಕೊಲಂಬಸ್ ಸುಮಾರು 90 ಮಂದಿ ಸಂಗಡಿಗರೊಡನೆ 1492ನೆಯ ಇಸವಿ ಆಗಸ್ಟ್ 3 ರಂದು ಪಾಲೋಸ್ ರೇವು ಪಟ್ಟಣದಿಂದ ಹೊರಟು ಮಾರ್ಗಮಧ್ಯೆ ಕ್ಯಾನರಿ ದ್ವೀಪಗಳಲ್ಲಿ ತನ್ನ ಹಡಗು ಪರಿವಾರಕ್ಕೆ ಬೇಕಾದ ಆವಶ್ಯಕತೆಗಳನ್ನು ಪೂರೈಸಿಕೊಂಡು ನೇರವಾಗಿ ತನ್ನ ಯಾನವನ್ನು ಪಶ್ಚಿಮದತ್ತ ಮುಂದುವರಿಸಿದ. ಅಂದಿಗೆ ಅಟ್ಲಾಂಟಿಕ್ ಸಾಗರದ ಗೊತ್ತು ಗುರಿಗಳನ್ನು ಯಾರೂ ಕಂಡಿರಲಿಲ್ಲ. ಮೊತ್ತಮೊದಲ ಬಾರಿಗೆ, ಜಲಪಟದ ಸಹಾಯವಿಲ್ಲದೆ, ಹೊಸ ನೀರಿನಲ್ಲಿ ಪ್ರಯಾಣ ಮಾಡಿದ ಕೊಲಂಬಸನ ಧೈರ್ಯ, ಜಾಣ್ಮೆ ಮೆಚ್ಚತಕ್ಕವೆ. ನೆಲವನ್ನಿನ್ನು ಕಾಣಲಾರೆವು ಎಂದು ದುಃಖಿಸಿ ಕಂಗಾಲಾದ ನಾವಿಕರಿಗೆ ಕೊನೆಗೊಮ್ಮೆ ನೆಲದ ದರ್ಶನವಾಯಿತು. ಕೊಲಂಬಸ್ ಸ್ಯಾನ್ ಸಾಲ್ವಡಾಲ್ ದ್ವೀಪವನ್ನು ತಲಪಿ ಅಲ್ಲಿ ಆದಿವಾಸಿಗಳನ್ನೂ ಅವರು ಸೇದುತ್ತಿದ್ದ ಚುಟ್ಟಗಳನ್ನೂ ಕಂಡು ವಿಸ್ಮಿತನಾದ.

1493ರಲ್ಲಿ ಎರಡನೆಯ ಬಾರಿ ಪ್ರಯಾಣ ಮಾಡಿದ ಕೊಲಂಬಸ್ ಪ್ಯುರ್ಟೊರಿಕೊ, ವರ್ಜಿನ್ ದ್ವೀಪ, ಜಮೇಕಗಳನ್ನು ಗುರುತಿಸಿದ. ಮೂರನೆಯ ಪ್ರಯಾಣದಲ್ಲಿ (1498) ವೆನಿಜ್ವೇಲವನ್ನು ಮುಟ್ಟಿದ. ನಾಲ್ಕನೆಯ ಪ್ರಯಾಣದಲ್ಲಿ (1502) ಹಾಂಡುರಾಸ್ ಅನ್ನು ತಲಪಿದ. ಎರಡು ವರ್ಷಗಳ ಅನಂತರ 1504ರಲ್ಲಿ ಸ್ಪೇನಿಗೆ ಹಿಂತಿರುಗಿದ. ಅಷ್ಟುಹೊತ್ತಿಗೆ ನಿರಂತರ ಯಾನಗಳಿಂದ ಅವನ ದೇಹ ಸೋತುಹೋಗಿತ್ತು. ರಾಜಕೀಯದಿಂದ ಮನಸ್ಸು ವಿರಕ್ತವಾಗಿತ್ತು. ರಾಜದಂಪತಿಗಳಿಂದ ತನಗೆ ದೊರಕಬೇಕಾದ ಗೌರವ ಮತ್ತು ಗೌರವಧನಗಳನ್ನು ಪಡೆಯುವ ಪ್ರಯತ್ನದಲ್ಲಿ ತೊಡಗಿದ್ದು ಕೆಲಕಾಲಾನಂತರ ತನ್ನ ಇಬ್ಬರು ಮಕ್ಕಳ ಎದುರಿನಲ್ಲಿ ಕೊಲಂಬಸ್ ಅಸುನೀಗಿದ.

ಕೊಲಂಬಸ್ ವಲ್ಲಾಡೋಲಿಡ್ ಎಂಬಲ್ಲಿ 30 ಮಾರ್ಚ್ 1506ರಂದು ಮೃತನಾದ. ಅವನ ಮೂಳೆಗಳನ್ನು ಸೆವಿಲ್, ಸ್ಯಾಂಟೊಡೋಮಿಂಗೊ ಮತ್ತು ಹವಾನ ನಗರಗಳಿಗೆ ಕೊಂಡೊಯ್ದರು. ತರುವಾಯ 1902ರಲ್ಲಿ ಸೆವಿಲ್‌ನಲ್ಲಿ ಸಮಾಧಿ ಮಂದಿರವನ್ನು ನಿರ್ಮಿಸಿ ಅಲ್ಲಿ ಅವನ ಮೂಳೆಗಳನ್ನು ಹೂಳಿಟ್ಟರು.

ಕೊಲಂಬಸನಿಗೆ ಇಬ್ಬರು ಮಕ್ಕಳು. ಮೊದಲ ಹೆಂಡತಿ ಫಿಲಿಪ್ಪ ಮೋನೀಜ್ ಎಂಬಾಕೆಯ ಮಗ ಡಿಯಾಗೊ. ಮೋನಿಜ್ 1485ರಲ್ಲಿ ನಿಧನಳಾದಳು. 1486ರಲ್ಲಿ ಕೊಲಂಬಸ್ ಬೀಟ್ರಿಸ್ ಎನ್‌ರಿಕ್ ಎಂಬಾಕೆಯನ್ನು ಮದುವೆಯಾದ. ಅವಳ ಮಗ ಫರ್ಡಿನೆಂಡ್.

ಕೊಲಂಬಸನ ಪರಿಶೋಧನೆಯ ಮಹತ್ವ ಅವನ ಮರಣಾನಂತರ ಎಲ್ಲರ ತಿಳಿವಳಿಕೆಗೆ ಬರತೊಡಗಿತು. ಕ್ರಮೇಣ ಐರೋಪ್ಯ ಜನ ಯಾನ ಮಾಡಿ ಉತ್ತರ ಅಮೆರಿಕಗಳಲ್ಲಿ ಹೊಸ ಹೊಸ ವಸಾಹತುಗಳನ್ನು ರೂಢಿಸತೊಡಗಿದರು. ಇಂದಿಗೂ ಸಂಯುಕ್ತ ಸಂಸ್ಥಾನದ 40 ರಾಜ್ಯಗಳಲ್ಲಿ ಪ್ಯೂರ್ಟೊರಿಕೋನಲ್ಲಿ ಕೊಲಂಬಸ್ ಮೊದಲಬಾರಿ ಹೊಸ ನೆಲಮುಟ್ಟಿದ ದಿನವನ್ನು (12 ಅಕ್ಟೋಬರ್ 1492) ರಾಷ್ಟ್ರೀಯ ಹಬ್ಬವೆಂದು ಪರಿಗಣಿಸಲಾಗಿದೆ.

ಇಷ್ಟಿದ್ದರೂ ಕೊಲಂಬಸನ ಹೆಸರು ಅಮೆರಿಕ ಖಂಡಗಳಿಗೆ ಅಂಟದಿರುವುದು ಸೋಜಿಗದ ಸಂಗತಿಯೇ ಆಗಿದೆ. ಇದಕ್ಕೆ ಇರಬಹುದಾದ ಕಾರಣ ಒಂದೇ. ಕೊಲಂಬಸನ ಸಮಕಾಲೀನನಾದ ಇನ್ನೊಬ್ಬ ಸಾಹಸಿ ಅಮೆರಿಗೊ ವೆಸ್ಪೂಚಿ (1454–1512) ಎಂಬಾತ ನಾಲ್ಕು ಬಾರಿ ಅಟ್ಲಾಂಟಿಕ್ ಸಾಗರದಲ್ಲಿ ಯಾನ ಮಾಡಿದನಲ್ಲದೆ 1499ರಲ್ಲಿ ದಕ್ಷಿಣ ಅಮೆರಿಕದ ಅಮೆಜಾನ್ ಮುಖಭೂಮಿಯನ್ನು ತಲುಪಿದ. ಅಷ್ಟು ಹೊತ್ತಿಗಾಗಲೆ ಕೊಲಂಬಸನ ಮೂರು ಯಾನಗಳು ಮುಗಿದಿದ್ದುವು. ಆ ಕಾಲಕ್ಕೆ ಭೂಪಟಗಳನ್ನು ತಯಾರಿಸುತ್ತಿದ್ದವರು ವೆಸ್ಪೂಚಿಯ ಹೆಸರನ್ನು ಸ್ಥಿರಗೊಳಿಸಲು ಹೊಸಖಂಡಗಳಿಗೆ ಅಮೆರಿಕ ಎಂಬ ನಾಮಕರಣ ಮಾಡಿದರಾಗಿ ಅದೇ ಹೆಸರು ಉಳಿದುಹೋಯಿತು.
**(ನೋಡಿ– ವೆಸ್ಪೂಚಿ, ಅಮೆರಿಗೊ)**

ಕೊಲಂಬಸನ ನೈಜ ವ್ಯಕ್ತಿತ್ವವನ್ನು ತೋರಿಸುವ ಯಾವ ಚಿತ್ರಗಳೂ ಉಳಿದುಬಂದಿಲ್ಲ. ಆತನ ನಿಲುವು ಮಧ್ಯಮ ಎತ್ತರಕ್ಕಿಂತ ಸ್ವಲ್ಪ ಹೆಚ್ಚು ಇತ್ತು. ಮುಖಚರ್ಯೆ ನೀಳವಾಗಿದ್ದು ಮೋಹಕವಾಗಿತ್ತು. ಮೂಗು ನೀಳವಾಗಿ ಹದ್ದಿನ ಕೊಕ್ಕಿನಂತೆ ಬಾಗಿತ್ತು. ಕಣ್ಣುಗಳು ಶುಭ್ರವೂ ನೀಲವೂ ಆಗಿದ್ದುವು. ಅವುಗಳ ಸುತ್ತ ಸ್ವಲ್ಪ ಕೆಂಪುಛಾಯೆ ಇತ್ತು. ತಲೆಗೂದಲು ಮತ್ತು ಗಡ್ಡ ಯೌವನದಲ್ಲಿ ಚಿನ್ನದಂತಿದ್ದರೂ ಬಹುಬೇಗ ಬೆಳ್ಳಗಾಗಿದ್ದವು. –ಇದು ಆತನನ್ನು ಕಂಡವರು ಮಾಡಿರುವ ವರ್ಣನೆ. (ಎಂ.ಕೆ.ಬಿ)

**ಕೊಲಂಬಿಯ :** ದಕ್ಷಿಣ ಅಮೆರಿಕದ ವಾಯವ್ಯದಲ್ಲಿರುವ ಒಂದು ಗಣರಾಜ್ಯ. ಉತ್ತರದಲ್ಲಿ ಕ್ಯಾರಿಬೀಯನ್ ಸಮುದ್ರ ಮತ್ತು ವೆನಿಜ್ವೇಲ, ಪೂರ್ವದಲ್ಲಿ ವೆನಿಜ್ವೇಲ ಮತ್ತು ಬ್ರಜಿಲ್, ದಕ್ಷಿಣದಲ್ಲಿ ಬ್ರಜಿಲ್, ಪೆರು ಮತ್ತು ಎಕ್ವಡಾರ್, ಪಶ್ಚಿಮದಲ್ಲಿ ಎಕ್ವಡಾರ್, ಪೆಸಿಫಿಕ್ ಸಾಗರ, ಪನಾಮಾ ಮತ್ತು ಕ್ಯಾರಿಬೀಯನ್ ಸಮುದ್ರ ಇವೆ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ತೀರಗಳು ಇರುವಂಥ ದೇಶ ದಕ್ಷಿಣ ಅಮೆರಿಕ ಖಂಡದಲ್ಲಿ ಇದೊಂದೇ. ಇದನ್ನು ದಕ್ಷಿಣ ಅಮೆರಿಕದ ಹೆಬ್ಬಾಗಿಲು ಎಂದು ಕರೆಯಲಾಗಿದೆ. ಈ ರಾಜ್ಯದ ಗರಿಷ್ಠ ಉದ್ದ ಉತ್ತರದಿಂದ ದಕ್ಷಿಣಕ್ಕೆ 1690 ಕಿಮೀ. ಗರಿಷ್ಠ ಅಗಲ 1340 ಕಿಮೀ. ವಿಸ್ತೀರ್ಣ 11,38,330.85 ಚ.ಕಿಮೀ. ಜನಸಂಖ್ಯೆ 2,07,00,000(1968ರ ಅಂದಾಜು). ರಾಜಧಾನಿ ಬೋಗೋಟಾ.

**ಭೌತಲಕ್ಷಣಗಳು :** ಆಂಡೀಸ್ ಪರ್ವತಗಳ ಉತ್ತರಕೊನೆ ಇರುವುದು ಕೊಲಂಬಿಯದಲ್ಲಿ. ಅಲ್ಲಿ ಇವು ಮೂರು ಮುಖ್ಯ ಕವಲುಗಳಾಗಿ ಒಡೆಯುತ್ತವೆ. ಇವುಗಳಲ್ಲಿ ಮಧ್ಯದ ಕವಲು ಅತ್ಯುನ್ನತವಾದ್ದು. ಇದಕ್ಕೂ ಪಶ್ಚಿಮದ ಕವಲಿಗೂ ನಡುವೆ ಕಾಕ ನದೀ ಕಣಿವೆ ಇದೆ. ಮಧ್ಯದ ಮತ್ತು ಪೂರ್ವದ ಕವಲುಗಳ ನಡುವೆ ಮ್ಯಾಗ್ದಲೀನ ನದೀ ಕಣಿವೆಯಿದೆ. 5486.39 ಮೀ ಗೂ ಎತ್ತರವಾಗಿರುವ ಹಲವು ಶಿಖರಗಳು ಮಧ್ಯದ ಶ್ರೇಣಿಯಲ್ಲುಂಟು. ಇವುಗಳ ಪೈಕಿ ಟಾಲಿಮ (5615.93ಮೀ),



ನೆವಾಡೊ ಡೆಲ್ ಹುಯಿಯ (5700.86 ಮೀ) ಮತ್ತು ನೆವಾಡೊ ಡೆಲ್ ರೂಯಿಝ್ (5590.03ಮೀ) ಅಗ್ನಿಪರ್ವತಗಳು. ಪಶ್ಚಿಮದ ಪರ್ವತಶ್ರೇಣಿ ಪೆಸಿಫಿಕ್ ತೀರಕ್ಕೆ ಸಮಾನಾಂತರವಾಗಿ ಸಾಗಿ, ಮೂರು ತಗ್ಗಿನ ಕವಲುಗಳಾಗಿ ಒಡೆದು, ಕ್ಯಾರಿಬೀಯನ್ ಕಡಲತೀರದ ಬಯಲಿನಲ್ಲಿ ಕಣ್ಮರೆಯಾಗುತ್ತದೆ. ಈ ಶ್ರೇಣಿ ದಟ್ಟವಾದ ಕಾಡುಗಳಿಂದ ಕೂಡಿದ್ದು ಪೆಸಿಫಿಕ್ ಸಾಗರದ ಕಡೆಯ ಮಗ್ಗಲು ತುಂಬ ಕಡಿದು, ತೇವಪೂರಿತ. ಇದರ ಅತ್ಯುನ್ನತ ಶಿಖರ ನೆವಾಡೊ ಡೆ ಕಂಬಾಲ್(4889.90ಮೀ). ಪೂರ್ವದ ಶ್ರೇಣಿ ಉತ್ತರ ಮತ್ತು ಪಶ್ಚಿಮ ಕೊಲಂಬಿಯದ ಪರ್ವತ ಜಿಲ್ಲೆಯನ್ನು ಒಳನಾಡಿನ ತಗ್ಗಿನ ಬಯಲಿನಿಂದ ಬೇರ್ಪಡಿಸುತ್ತದೆ. ಈ ಮೈದಾನ ಕೊಲಂಬಿಯದ ಅರ್ಧಕ್ಕಿಂತ ಹೆಚ್ಚು ವಿಸ್ತಾರವಾದ್ದು. ಇದರ ದಕ್ಷಿಣಕ್ಕಿರುವ ಪ್ರದೇಶ ದುರ್ಗಮವಾದ ಕಾಡುಗಳಿಂದ ಆವೃತವಾಗಿದೆ. ಇದರಲ್ಲಿ ಎಷ್ಟೋ ಭಾಗವನ್ನು ಇದುವರೆಗೂ ಪರಿಶೋಧಿಸಿಲ್ಲ.

ಕೊಲಂಬಿಯವನ್ನು ಸ್ಥೂಲವಾಗಿ ನಾಲ್ಕು ಭೌಗೋಳಿಕ ಪ್ರದೇಶಗಳಾಗಿ ವಿಂಗಡಿಸಲಾಗಿದೆ. 1. ಕ್ಯಾರಿಬೀಯನ್ ಕರಾವಳಿಯ ಪ್ರದೇಶ ತಗ್ಗಿನ ಬೆಟ್ಟಗಳಿಂದಲೂ ನದೀ ಮುಖಗಳಿಂದಲೂ ಕೂಡಿ ಈಗಲೂ ಹಿಂದುಳಿದಿದೆ. ಈ ಪ್ರದೇಶದ ನದಿಗಳು ವಿಸ್ತಾರವಾಗಿ ಹರಡಿ ಸುತ್ತಣ ನೆಲವನ್ನೆಲ್ಲ ಜವುಗಾಗಿ ಪರಿವರ್ತಿಸಿವೆ. ಈ ವಿಭಾಗದ್ದು ಹೆಚ್ಚು ಉಷ್ಣತೆಯ ವಾಯುಗುಣ. ಮಳೆ ಕಡಿಮೆ. ಪೂರ್ವಕ್ಕೆ ಹೋದಂತೆಲ್ಲ ಶುಷ್ಕತೆ ಅಧಿಕವಾಗುತ್ತದೆ. ಈ ಪ್ರದೇಶದ ವಾರ್ಷಿಕ ಮಳೆಯ ಅಂತರ 114.29 – 25.39ಸೆಂ.ಮೀ ಒಳನಾಡಿಗೆ ಸಾಗಿದಂತೆ ಮಳೆ ಹೆಚ್ಚುತ್ತದೆ. 2. ಪಶ್ಚಿಮ ಪರ್ವತ ಶ್ರೇಣಿಗೂ ಪೆಸಿಫಿಕ್ ಸಾಗರಕ್ಕೂ

ನಡುವೆ ಇರುವ ಪ್ರದೇಶ ಬಲು ಕಿರಿದು. ಇಲ್ಲಿ 200" ಗೂ ಹೆಚ್ಚು ಮಳೆಯಾಗುತ್ತದೆ. ನಿತ್ಯ ಹಸುರುಕಾಡುಗಳಿಂದ ತುಂಬಿದ ಈ ಪ್ರದೇಶದ ನೆಲ ಸಾಗುವಳಿಗೆ ಹೆಚ್ಚು ಅನುಕೂಲವಾಗಿಲ್ಲ. 3. ಪೂರ್ವದ ಮೈದಾನ ಇಡೀ ಕೊಲಂಬಿಯದ ಮೂರನೆಯ ಎರಡು ಭಾಗದಷ್ಟಿದೆಯಾದರೂ ದೇಶದ ಜನಸಂಖ್ಯೆಯ ಶೇ. 2 ಜನ ಮಾತ್ರ ಇಲ್ಲಿ ವಾಸಿಸುತ್ತಾರೆ. ಇದು ಪರ್ವತಗಳಿಂದ ಪ್ರತ್ಯೇಕಗೊಂಡಿರುವುದರಿಂದ ಇದರೊಂದಿಗೆ ಜನಸಂಪರ್ಕ ಏರ್ಪಡಲಿಲ್ಲ. ಮಲೇರಿಯಾ ವ್ಯಾಪಕವಾಗಿತ್ತು. 4. ಆಂಡಿಯನ್ ಪ್ರದೇಶ ಕೊಲಂಬಿಯದಲ್ಲಿ ನಿಸರ್ಗ ಸಂಪದ್ಭರಿತವಾದ್ದು. ಇದರಲ್ಲಿ ಹಲವು ಉಪವಿಭಾಗಗಳಿವೆ.

**ನದಿಗಳು :** ಕೊಲಂಬಿಯದ ನದಿಗಳಲ್ಲಿ ಪೆಸಿಫಿಕ್ ಸಾಗರವನ್ನು ಸೇರುವವು ಒಂದು ವರ್ಗ. ಕ್ಯಾರಿಬೀಯನ್ ಸಮುದ್ರ ಸೇರುವವು ಇನ್ನೊಂದು ವರ್ಗ. ಉಳಿದವು ಒರಿನೋಕೋ ಮತ್ತು ಅಮೆಜ಼ಾನ್ ನದಿಗಳನ್ನು ಸೇರಿ ಅಟ್ಲಾಂಟಿಕ್ ಸಾಗರವನ್ನು ತಲಪುತ್ತವೆ. ಮ್ಯಾಗ್ಡಲೀನವೂ ಅದರ ಉಪನದಿಯಾದ ಕಾಕವೂ ಕೊಲಂಬಿಯಾದ ಅತ್ಯಂತ ಮುಖ್ಯ ನದಿಗಳು. ಮ್ಯಾಗ್ಡಲೀನ ನದಿ ಬಾರಾಂಕೀಯಾದ ಬಳಿ ಕ್ಯಾರಿಬೀಯಾನ್ ಸಮುದ್ರವನ್ನು ಸೇರುತ್ತದೆ. ಇದರ ಉದ್ದ 1530 ಕಿಮೀ. ಇದು ಹೆಚ್ಚು ಕಡಿಮೆ ಇಡೀ ದೇಶವನ್ನು ಹಾಯ್ದು ಹೋಗುತ್ತದೆ. ಇದರ ನೀರು ಅಲ್ಲಲ್ಲಿ ಹರಡಿ ಹೋಗುತ್ತದೆ. ನದಿಪಾತ್ರ ಸ್ಥಿರವಾಗಿಲ್ಲ. ಇದು ಸಮುದ್ರ ತಲಪಲು 320 ಕಿಮೀ ಇರುವಾಗ ಕಾಕನದಿ ಇದನ್ನು ಕೂಡಿಕೊಳ್ಳುತ್ತದೆ. ಕಾಕನದಿ ಎರಡು ಕಡೆಗಳಲ್ಲಿ ನೌಕಾಯಾನಕ್ಕೆ ಅನುಕೂಲಕರ. ಕಾಕನದಿಯ ಉಪನದಿಗಳಲ್ಲಿ ರೀಯೂನೆಚಿ ಮುಖ್ಯವಾದ್ದು. ರೀಯೂ ಅಟ್ರಾಟೊ ಮತ್ತು ರೀಯೂ ಸಿನು ಉತ್ತರ ತೀರಕ್ಕೆ ಹರಿಯುತ್ತವೆ. ಇವುಗಳ ಮೇಲೆ ಸಣ್ಣ ಜಹಜುಗಳು ಸಂಚರಿಸಬಹುದು. ಪೆಸಿಫಿಕ್ ಸಾಗರ ಸೇರುವ ನದಿಗಳು ಅಸಂಖ್ಯಾತ. ಅವು ಬಲು ಸಣ್ಣ. ಅವುಗಳಲ್ಲಿ ಜಲಪಾತಗಳು ಹೆಚ್ಚು. ಪೂರ್ವ ಮೈದಾನದ ನದಿಗಳು ಒರಿನೋಕೋ ಮತ್ತು ಅಮೆಜ಼ಾನ್ ನದಿಗಳನ್ನು ಸೇರುತ್ತವೆ. ಇವುಗಳಲ್ಲಿ ಕೆಲವು ನೌಕಾ ಸಂಚಾರಕ್ಕೆ ಅನುಕೂಲಕರ.

**ವಾಯುಗುಣ :** ಕೊಲಂಬಿಯ ದೇಶ ಬಹುತೇಕ ಉತ್ತರ ಉಷ್ಣವಲಯದಲ್ಲಿದೆ. ಆದರೆ ಇಲ್ಲಿಯ ನೆಲದ ಬಹುಭಾಗ ಸಮುದ್ರಮಟ್ಟಕ್ಕಿಂತ ಬಲು ಎತ್ತರದಲ್ಲಿರುವುದರಿಂದಲೂ ಮಾರುತಗಳ ಪ್ರಭಾವದಿಂದಲೂ ಉಷ್ಣವಲಯದ ಬಿರುಸು ಕಡಿಮೆ. ತಗ್ಗಿನ ಪ್ರದೇಶಗಳಲ್ಲಿ–ಮುಖ್ಯವಾಗಿ ಕರಾವಳಿಗಳಲ್ಲಿ ಮತ್ತು ದೊಡ್ಡ ನದಿಗಳ ಬಯಲುಗಳಲ್ಲಿ–ಉಷ್ಣತೆ ಹೆಚ್ಚು. ಈ ಪ್ರದೇಶಗಳು ತೇವತುಂಬಿದ ವಾತಾವರಣದಿಂದಲೂ ದಟ್ಟವಾದ ಕಾಡುಗಳಿಂದಲೂ ಕೂಡಿದ್ದು, ಅನಾರೋಗ್ಯಕರವಾಗಿವೆ. ಉಷ್ಣವಲಯದ ಪ್ರದೇಶದಿಂದ ಉತ್ತರಕ್ಕೆ ಪರ್ವತಗಳ ಪ್ರದೇಶದ್ದು ಕಡಿಮೆ ಉಷ್ಣತೆಯ ವಾಯುಗುಣ. ತಂಪಿನಿಂದ ಅತ್ಯಂತ ಶೀತದವರೆಗೆ ವಿವಿಧ ವಾಯುಗುಣಗಳು ಇಲ್ಲುಂಟು. 457.19 ಮೀ – 1826.79 ಮೀ ಎತ್ತರದ ಪ್ರದೇಶದ್ದು ಉಪೋಷ್ಣವಲಯದ ವಾಯುಗುಣ. ಇಲ್ಲಿಯದು ಫಲವತ್ತಾದ ನೆಲ. 1828.79 –3847.99 ಮೀ ಎತ್ತರದ ಪ್ರದೇಶದಲ್ಲಿ ಸಮಶೀತೋಷ್ಣವಾಯುಗುಣವಿದೆ. 3847.99ಮೀ–4517.99 ಮೀ ಎತ್ತರದಲ್ಲಿ ಉಷ್ಣತೆ ಇನ್ನೂ ಕಡಿಮೆ. ಇದಕ್ಕೂ ಎತ್ತರದ ನೆಲ ಹಿಮದಿಂದ ಆವೃತವಾಗಿರುತ್ತದೆ. ಕೊಲಂಬಿಯದ ಮುಖ್ಯ ನಗರಗಳು ಬಹುತೇಕ 914.39–2743.19 ಮೀ ಎತ್ತರದ ಪ್ರದೇಶದಲ್ಲಿವೆ.

ವರ್ಷವನ್ನು ಸ್ಥೂಲವಾಗಿ ತೇವದ ಕಾಲ ಅಥವಾ ಚಳಿಗಾಲ ಮತ್ತು ಶುಷ್ಕತೆಯ ಕಾಲ ಅಥವಾ ಬೇಸಗೆ ಕಾಲ ಎಂದು ವಿಂಗಡಿಸಲಾಗಿದೆ. ಕೆಲವು ಕಡೆಗಳಲ್ಲಿ ವರ್ಷಕ್ಕೆ ಎರಡು ಮಳೆಗಾಲಗಳೂ ಎರಡು ಒಣಹವೆ ಕಾಲಗಳೂ ಇರುವುದುಂಟು. ಇಡೀ ಕೊಲಂಬಿಯದಲ್ಲಿ–ಬಹುಶಃ ಇಡೀ ದಕ್ಷಿಣ ಅಮೆರಿಕದಲ್ಲಿ–ಅತ್ಯಂತ ಹೆಚ್ಚು ಮಳೆ ಬೀಳುವುದು ಪೆಸಿಫಿಕ್ ಸಾಗರ ತೀರದಲ್ಲಿ ಸ್ಯಾನ್ ವಾನ್–ಅಟ್ರಾಟೊ ಬಳಿ. ಅಲ್ಲಿ ವರ್ಷವೆಲ್ಲ ಮಳೆ ಸುರಿಯುತ್ತಿರುತ್ತದೆ. ವಾರ್ಷಿಕ ಮಳೆಯ ಪರಿಮಾಣ 400" ಗೂ ಮಿಗಿಲು. ಆಂಡಗೋಯದಲ್ಲಿ 415" ಮಳೆಯಾಗುತ್ತದೆ.

**ಸಸ್ಯಗಳು :** ಕೊಲಂಬಿಯದ ಸಸ್ಯಸಂಪತ್ತು ಸಮೃದ್ಧವೂ ವೈವಿಧ್ಯಮಯವೂ ಆಗಿದೆ. ದೇಶದ ಹೆಚ್ಚು ಭಾಗ ಅರಣ್ಯಾವೃತ. ವನಿಲ, ಕ್ವಿನೈನ್, ಇಪಿಕ್ಯಾಕ್, ಸಾರ್ಸಪರಿಲ, ಗೋಂದುಮರ, ಗುಗ್ಗುಳ, ರಬ್ಬರ್, ಚರ್ಮ ಹದ ಮಾಡಲು ಉಪಯುಕ್ತವಾದ ಮರಗಳು, ಬಣ್ಣಗಳ ಮರಗಳು, ಟಾಗ್ವ–ಮುಂತಾದ ಹಲವು ಉಪಯುಕ್ತ ಮರಗಳು ಬೆಳೆಯುತ್ತವೆ. ಅರಣ್ಯೋತ್ಪನ್ನಗಳನ್ನು ಇದುವರೆಗೂ ಹೆಚ್ಚು ಲಾಭಪ್ರದವಾಗಿ ಬಳಸಿಕೊಳ್ಳಲಾಗಿಲ್ಲ. ಸು. 3847.99 ಮೀ ಎತ್ತರದವರೆಗೂ ಬೆಳೆಯುವ ತಾಳೆ ಜಾತಿಯ ಮರಗಳು ವಿಶೇಷ. ಕ್ಯಾರಿಬೀಯನ್ ತೀರದಲ್ಲಿ ಕೋಕೊ ಮರಗಳಿವೆ. ಕಾಡುಗಳಲ್ಲಿ ಆರ್ಕಿಡ್‌ಗಳು ಧಾರಾಳವಾಗಿ ಬೆಳೆಯುತ್ತವೆ. ಅಮೆರಿಕನ್ ಬಿದಿರು–ಗ್ವಾಡ್ವ–ಇನ್ನೊಂದು ಮುಖ್ಯ ಸಸ್ಯ.

ಕೊಲಂಬಿಯದ ಸಸ್ಯಗಳು ನೆಲದ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತವೆ. ಸು. 1457.19–1371.5 ಮೀ ಎತ್ತರದಲ್ಲಿರುವವು ಉಪೋಷ್ಣವಲಯದ ಕಾಡುಗಳು. 11828.79 ಮೀ ಎತ್ತರದಿಂದ ಸಮಶೀತೋಷ್ಣವಲಯದ ಕಾಡುಗಳು ಪ್ರಾರಂಭವಾಗುತ್ತವೆ. ಈ ನೆಲ ಬೇಸಾಯಕ್ಕೆ ಅತ್ಯುತ್ತಮ. ಇಲ್ಲಿ ಧಾನ್ಯಗಳು, ತರಕಾರಿಗಳು, ಹಣ್ಣುಗಳು ಬೆಳೆಯುತ್ತವೆ. ಸು. 3847.99 ಮೀ ಮೇಲಕ್ಕೆ ಇರುವ ಎತ್ತರದ ಬೋಳುನೆಲದ ಮೇಲೆ ಕುಬ್ಜ ಸಸ್ಯಗಳುಂಟು. ಇನ್ನೂ ಎತ್ತರದ ಪ್ರದೇಶದಲ್ಲಿ ಆಲ್ಪೈನ್ ಸಸ್ಯಗಳು ಮಾತ್ರ ಕಂಡುಬರುತ್ತವೆ. ಕೊಲಂಬಿಯದ ಸಾಗುವಾನಿ ವೈವಿಧ್ಯಪೂರಿತವಾದ್ದು. ಮಹಾಗನಿ, ಲಿಗ್ನಂ ವಿಟೀ, ಬ್ರಜ಼ಿಲ್‌ವುಡ್, ವಾಲ್ನಟ್, ಸಿಡಾರ್, ಓಕ್ ಮುಂತಾದ ಹಲವು ಜಾತಿಗಳು ಇಲ್ಲುಂಟು. ಆಸ್ಟ್ರೇಲಿಯದಿಂದ ತಂದು ಬೆಳೆಸಿದ ನೀಲಗಿರಿ ತೈಲದ ಮರ ಇನ್ನೊಂದು ಉಪಯುಕ್ತ ವೃಕ್ಷ. ಕಾಫಿ ಗಿಡಗಳಿಗೆ ನೆರಳು ಒದಗಿಸುವ ಸಲುವಾಗಿ ಇಗ್ಗ, ಆಲ್ಬಿಜ್ಜ ಮುಂತಾದ ಮರಗಳನ್ನೂ ನೆಟ್ಟು ಬೆಳೆಸಲಾಗಿದೆ.

**ಪ್ರಾಣಿಗಳು :** ಕೊಲಂಬಿಯದಲ್ಲಿ ಉಷ್ಣವಲಯದ ಪ್ರಾಣಿಗಳಿಂದ ಶೀತವಲಯದವುಗಳವರೆಗೆ ನಾನಾ ತೆರನಾದ ಪ್ರಾಣಿಗಳಿವೆ. ಸ್ಲಾತ್, ಒಪೋಸಂ, ಕೋತಿಗಳು, ಟೇಪರ್, ಪೆಕರಿ, ಜಿಂಕೆ, ಮೊಲ ಮುಂತಾದವು ಉಷ್ಣವಲಯದ ಕಾಡುಗಳಲ್ಲಿವೆ. ಇವು ಸಸ್ಯಾಹಾರಿಗಳು. ಮಾಂಸಾಹಾರಿಗಳ ಪೈಕಿ ಮುಖ್ಯವಾದವು ಪ್ಯೂಮ, ಜಾಗ್ವರ್, ನರಿ ಮತ್ತು ರ್‍ಯಾಕೂನ್. ಇಲ್ಲಿ 1,500ಕ್ಕೂ ಹೆಚ್ಚಿನ ಜಾತಿ–ಉಪಜಾತಿಗಳ ಹಕ್ಕಿಗಳುಂಟು. ಉರಗಜಾತಿಯ ಪ್ರಾಣಿಗಳೂ ಹಲವಾರು ಇವೆ. ಹಲ್ಲಿ, ಹಾವು, ಮೊಸಳೆಗಳು ಹಲವು ತೆರ. ಉಭಯಜೀವಿಗಳ ಪೈಕಿ ಕೇಸಿಲಿಯನ್, ಬೆಂಕಿಮೊಸಳೆ, ಕಪ್ಪೆಗಳು ಮುಖ್ಯವಾದವು. ಹಲವು ಬಗೆಯ ಮೀನುಗಳೂ ಉಂಟು. ಇಲ್ಲಿರುವ ಬಗೆಬಗೆಯ ಕೀಟಗಳಲ್ಲಿ ಮುಖ್ಯವಾದವೆಂದರೆ ಮಲೇರಿಯ ಮತ್ತು ಹಳದಿ ಜ್ವರ ತರುವ ಸೊಳ್ಳೆಗಳು.

**ಕೃಷಿ :** ಕೊಲಂಬಿಯದ ಹೆಚ್ಚು ಜನ ಬೇಸಾಯ ಮತ್ತು ಪಶುಪಾಲನೆಗಳನ್ನೇ ಅವಲಂಬಿಸಿದ್ದಾರೆ. 914.39–3847.99 ಮೀ ಎತ್ತರದ ನೆಲ ವ್ಯವಸಾಯ ಪ್ರದೇಶ. ಸಾಗುವಳಿಯಾಗಬಹುದಾದ ನೆಲದಲ್ಲಿ ಎಷ್ಟೋ ಇನ್ನೂ ಕೃಷಿಗೆ ಒಳಪಟ್ಟಿಲ್ಲ. 3,000'–

ಕೊಲಂಬಿಯದ ಕ್ಯಾರಿಬೀಯನ್ ಸಮುದ್ರತೀರ – ಮೀನುಗಾರಿಕೆ ಇಲ್ಲಿಯ ಮುಖ್ಯ ಕಸಬು

6,000' ಎತ್ತರದ ಸಮಶೀತೋಷ್ಣ ವಾಯುಗುಣದ ನೆಲದಲ್ಲಿ ಕಾಫಿ ಬೆಳೆಯುತ್ತದೆ. ಇದೇ ಈ ದೇಶದ ಮುಖ್ಯ ಬೆಳೆ. ಕೊಲಂಬಿಯದ ಕಾಫಿ ಸೌಮ್ಯ ಗುಣವುಳ್ಳದ್ದು. ಇದನ್ನು ಬ್ರಜ಼ಿಲಿನ ಕಾಫಿಯೊಂದಿಗೂ ರೊಬಸ್ಟದೊಂದಿಗೂ ಬೆರೆಸುತ್ತಾರೆ. ಕೊಲಂಬಿಯದ ನಿರ್ಯಾತದಲ್ಲಿ ಮುಕ್ಕಾಲು ಭಾಗ ಕಾಫಿ. ರಬ್ಬರ್, ತೆಂಗು, ಹೊಗೆಸೊಪ್ಪು, ಬಾಳೆ, ಕಬ್ಬು, ಮೆಕ್ಕೆಜೋಳ, ಹತ್ತಿ, ಕೋಕೋ, ಬತ್ತ–ಇವು ಉಷ್ಣವಲಯದ ಬೆಳೆಗಳು. ಉಪೋಷ್ಣ ವಾಯುಗುಣದಲ್ಲಿ ಕಾಫಿಯಲ್ಲದೆ ಹಣ್ಣುಗಳಾದ, ಬಾಳೆ, ಪೈನಾಪಲ್, ಮಾವು, ಪರಂಗಿ, ಕಿತ್ತಳೆ ಮುಂತಾದವು ಬೆಳೆಯುತ್ತವೆ. ಸಮಶೀತೋಷ್ಣ ವಾಯುಗುಣ ಬೇಸಾಯಕ್ಕೆ ಅತ್ಯುತ್ತಮವಾದ್ದು. ಇಲ್ಲಿ ಗೋದಿ, ಬಾರ್ಲಿ, ಆಲೂಗೆಡ್ಡೆ, ಓಟ್ಸ್, ಕಾಳು, ಹಣ್ಣು, ತರಕಾರಿ ಬೆಳೆಯುತ್ತಾರೆ. ಪಶುಪಾಲನೆಯೂ ವ್ಯಾಪಕವಾಗಿದೆ.

**ಗಣಿಗಾರಿಕೆ :** ಹಿಂದೆ ಚಿನ್ನ ಕೊಲಂಬಿಯದ ಮುಖ್ಯ ಖನಿಜವೆಂದು ಪರಿಗಣಿತವಾಗಿತ್ತು. ಈಗ ಪೆಟ್ರೋಲಿಯಂ ಆದ್ಯತೆ ಗಳಿಸಿದೆ. ಬೆಳ್ಳಿ ಇಲ್ಲಿ ಸಿಗುವ ಇನ್ನೊಂದು ಖನಿಜ. ಈಗ ತಿಳಿದಿರುವ ಮಟ್ಟಿಗೆ ಕೊಲಂಬಿಯವೇ ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ಲಾಟಿನಂ ನಿಕ್ಷೇಪ ಇರುವ ದೇಶ. ಪಚ್ಚೆ ಇನ್ನೊಂದು ಮುಖ್ಯ ಖನಿಜ. ಇದರಲ್ಲಿ ಕೊಲಂಬಿಯಕ್ಕೆ ಅಗ್ರಸ್ಥಾನವಿದೆ. ಮೆಕ್ಸಿಕೋ, ಬ್ರಜ಼ಿಲ್‌ಗಳಲ್ಲಿ ಇರುವುದಕ್ಕಿಂತಲೂ ಅಧಿಕವಾಗಿ ಕಲ್ಲಿದ್ದಲ ನಿಕ್ಷೇಪ ಕೊಲಂಬಿಯದಲ್ಲಿದೆ. ಕಬ್ಬಿಣದ ಅದಿರನ್ನೂ ಅಧಿಕವಾಗಿ ತೆಗೆಯಲಾಗುತ್ತಿದೆ.

**ಕೈಗಾರಿಕೆಗಳು :** ಇಪ್ಪತ್ತನೆಯ ಶತಮಾನದಲ್ಲಿ ಕೊಲಂಬಿಯದ ಕೈಗಾರಿಕೆಗಳು ತಕ್ಕಮಟ್ಟಿಗೆ ಬೆಳೆದಿವೆ. ಜವಳಿ, ಪಾದರಕ್ಷೆ, ಸಿಮೆಂಟ್ ಮತ್ತು ಇತರ ಕಟ್ಟಡ ಸಾಮಗ್ರಿಗಳ

ವಿಚಾರದಲ್ಲಿ ಕೊಲಂಬಿಯ ಸ್ವಯಂಪೂರ್ಣವಾಗಿದೆ. ಬೋಗೊಟಾ, ಮೇದೆಯಿನ್, ಕಾಲಿ, ಬಾರಾಂಕೀಯಾ ಮುಖ್ಯ ಕೈಗಾರಿಕಾ ಕೇಂದ್ರಗಳು. ಪಾಜ್ ಡೆಲ್ ರೀಯೊದಲ್ಲಿ ಉಕ್ಕಿನ ಕಾರ್ಖಾನೆಯನ್ನು 1954ರಲ್ಲಿ ಸ್ಥಾಪಿಸಲಾಯಿತು.

**ಸಾರಿಗೆ :** ಕೊಲಂಬಿಯದ ವ್ಯಾಪಾರ ಕೈಗಾರಿಕೆಗಳ ಬೆಳವಣಿಗೆಗೆ ಮುಖ್ಯ ಅಡಚಣೆಯೆಂದರೆ ಸಾರಿಗೆಯ ಸಮಸ್ಯೆ. ಕೊಲಂಬಿಯದ ಜನನಿಬಿಡ ಪ್ರದೇಶಗಳು ಇರುವುದು ಒಳನಾಡಿನಲ್ಲಿ. ಇದು ಪರ್ವತಶ್ರೇಣಿಗಳಿಂದಾಗಿ ಸಮುದ್ರತೀರದಿಂದ ಬೇರ್ಪಟ್ಟಿದೆ. ಕೊಲಂಬಿಯದ ರಾಜಧಾನಿಗೆ ಕೂಡ ಸಮರ್ಪಕ ಸಾರಿಗೆ ಸಂಪರ್ಕವಿಲ್ಲ. ವಿಮಾನ ಮಾರ್ಗಗಳಿಂದಾಗಿ ಪರಿಸ್ಥಿತಿ ಸ್ವಲ್ಪ ಉತ್ತಮ. ಒಳನಾಡಿನಿಂದ ತೀರಪ್ರದೇಶಕ್ಕಿರುವ ಮುಖ್ಯ ರೈಲ್ವೆ ಮತ್ತು ರಸ್ತೆಗಳು ಕಾಲಿ ಮತ್ತು ಬ್ವೇನಾವಂಟೂರಾಗಳ ಮೂಲಕ ಸಾಗುತ್ತವೆ. ಬಹುತೇಕ ರೈಲು ಮಾರ್ಗಗಳು ಮ್ಯಾಗ್ಡಲೀನ ನದಿಯಿಂದ ಒಳನಾಡಿಗೆ ಸಾಗುತ್ತವೆ. ಮ್ಯಾಗ್ಡಲೀನ ನದಿ ದೊಡ್ಡ ಹಡಗುಗಳ ಸಂಚಾರಕ್ಕೆ ಅನುಕೂಲವಾಗಿಲ್ಲ. ಮ್ಯಾಗ್ಡಲೀನದ ಮುಖದ ಬಳಿ ಇರುವ ಬಾರಾಂಕೀಯಾ ಕೊಲಂಬಿಯದ ಅತ್ಯಂತ ದೊಡ್ಡ ಬಂದರು. ಕಾರ್ಟಜೀನ, ಸಾಂತ, ಮಾರ್ತ, ಬ್ವೇನಾವಂಟೂರಾ ಇತರ ಬಂದರುಗಳು. ಕೊಲಂಬಿಯದ ಸಾರಿಗೆ ವ್ಯವಸ್ಥೆಯ ಒಂದು ವೈಶಿಷ್ಟ್ಯವೆಂದರೆ ಊರ್ಧ್ವ ಕೇಬಲ್‍ಗಳು(ಏರಿಯಲ್ ಕೇಬಲ್ಸ್). ಕೆಲವು ಕಡೆ ಇವುಗಳ ಸಹಾಯದಿಂದ ಸರಕನ್ನೂ ಪ್ರಯಾಣಿಕರನ್ನೂ ಸಾಗಿಸುತ್ತಾರೆ.

**ಪಟ್ಟಣಗಳು, ನಾಣ್ಯ :** ಕೊಲಂಬಿಯದ ರಾಜಧಾನಿ ಬೋಗೊಟಾ. ಜನಸಂಖ್ಯೆ 19,84,599, ಇತರ ಪಟ್ಟಣಗಳು ಇವು: ಮೇದೆಯಿನ್ (9,12,982), ಕಾಲಿ (7,71,981), ಬಾರಾಂಕೀಯಾ (5,90,262), ಕಾರ್ಟಜೀನ (2,85,077), ಬೂಕಾರಾಮಾಂಗಾ (2,64,913) ಮತ್ತು ಮ್ಯಾನಿಝಾಲೆಸ್(2,56,331).

ಕೊಲಂಬಿಯದ ನಾಣ್ಯ ಪೇಸೋ. ಇದನ್ನು 100 ಸೆಂಟಾವೋಗಳಾಗಿ ವಿಂಗಡಿಸಲಾಗಿದೆ. *

**ಜನವರ್ಗ :** ಇಲ್ಲಿಯ ಮೂಲನಿವಾಸಿಗಳು ಶಬೆಷಾ ಇಂಡಿಯನ್ನರು. ವ್ಯವಸಾಯಗಾರರಾಗಿದ್ದ ಅವರನ್ನು ಸ್ಪೇನ್ ದೇಶದ ಆಕ್ರಮಣಕಾರರು ಸುಲಭವಾಗಿ ಸೋಲಿಸಿ ಇಲ್ಲಿ ಬಂದು ನೆಲಸಿದರು. ಈಗ ಶೇಕಡ ಸು.,58ರಷ್ಟು ಜನ ಸ್ಪ್ಯಾನಿಷ್ ಇಂಡಿಯನ್ನರು ಸೇರಿದ ಮೆಜ್‍ಟಿಜೊಗಳು. ಮಿಕ್ಕವರು ಐರೋಪ್ಯ, ನೀಗ್ರೋ, ಮ್ಯಲೆಟ್ಟೋ, ಜಾಂಬೊ ಮತ್ತು ಇಂಡಿಯನ್ ಜನ. ಶೇ. 90ರಷ್ಟು ಜನ ರೋಮನ್ ಕೆಥೊಲಿಕ್ ಪಂಥಕ್ಕೆ ಸೇರಿದವರು. ದೇಶಭಾಷೆ ಸ್ಪಾನಿಷ್.

ಕಾರ್ಟಜೀನ ನಗರದ ಒಂದು ಭಾಗ

**ಆಡಳಿತ :** 1886ರ ಸಂವಿಧಾನದ ಪ್ರಕಾರ ಕೊಲಂಬಿಯ ಗಣರಾಜ್ಯವಾಗಿ ಸ್ಥಾಪನೆಯಾಯಿತು. ಇಲ್ಲಿಯ ಸರ್ಕಾರ, ಅಮೆರಿಕ ಸಂಯುಕ್ತಸಂಸ್ಥಾನ ಸರ್ಕಾರದ ಮಾದರಿಯಲ್ಲಿ ರಚಿತವಾಗಿದೆ. ಅಧ್ಯಕ್ಷ ನಾಲ್ಕು ವರ್ಷಗಳಿಗೊಮ್ಮೆ ಆಯ್ಕೆಯಾಗುತ್ತಾನೆ. 21ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಪ್ರಜೆಗೂ ಮತ ನೀಡುವ ಹಕ್ಕುಂಟು. ಕಾಂಗ್ರೆಸ್ಸು ಸೆನೆಟ್ ಮತ್ತು ಪ್ರತಿನಿಧಿ ಸಭೆಗಳೆಂಬ ದ್ವಿಸದನಗಳನ್ನೊಳಗೊಂಡಿದೆ. 1957ರ ಸಂವಿಧಾನ ತಿದ್ದುಪಡಿಯ ಪ್ರಕಾರ ದೇಶದಲ್ಲಿ ಅಸ್ತಿತ್ವದಲ್ಲಿರುವ ಸಂಪ್ರದಾಯವಾದಿ ಪಕ್ಷ ಮತ್ತು ಉದಾರವಾದಿ ಪಕ್ಷಗಳ ಪ್ರತಿನಿಧಿಗಳು 1974ರ ತನಕ ಸರದಿಯ ಪ್ರಕಾರ ಅಧ್ಯಕ್ಷ ಸ್ಥಾನ ಪಡೆಯಬೇಕು ಮತ್ತು ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಮತ್ತು ಇತರ ಪೌರ ಸಂಸ್ಥೆಗಳಲ್ಲೂ ಸಮನಾದ ಪ್ರಾತಿನಿಧ್ಯ ಹೊಂದಿರಬೇಕು ಎಂದು ತೀರ್ಮಾನವಾಗಿತ್ತು. 1968ರಲ್ಲಿ ಸಂವಿಧಾನದಲ್ಲಿ ಅನೇಕ ಸುಧಾರಣೆಗಳನ್ನು ಮಾಡಲಾಯಿತು.

**ಶಿಕ್ಷಣ, ಕಲೆ:** ಇಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಉಚಿತ. 7 ರಿಂದ 14 ವರ್ಷಗಳೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. 15 ವರ್ಷಗಳಿಗೆ ಮೇಲ್ಪಟ್ಟ ವಿದ್ಯಾವಂತರ ಸಂಖ್ಯೆ ಶೇ. 62.3 ಈ ರಾಷ್ಟ್ರದಲ್ಲಿ 50ಕ್ಕೂ ಮೇಲ್ಪಟ್ಟು ಪ್ರೌಢ ವಿದ್ಯಾಸಂಸ್ಥೆಗಳಿವೆ. 1572ರಲ್ಲಿ ಸ್ಥಾಪಿತವಾದ ಬೋಗೊಟಾ ರಾಷ್ಟ್ರೀಯ ವಿಶ್ವವಿದ್ಯಾಲಯ ಅತ್ಯಂತ ಹಳೆಯದು. 18 ರಿಂದ 30 ವರ್ಷಗಳೊಳಗಿನ ಯುವಕರೆಲ್ಲರೂ ಒಂದು ವರ್ಷ ಕಡ್ಡಾಯ ಸೈನಿಕ ಶಿಕ್ಷಣ ಪಡೆಯಬೇಕೆಂಬ ನಿಯಮವಿದೆ.

ಕೊಲಂಬಿಯ ದೇಶ ಕೆತ್ತನೆ ಕಲೆ, ಶಿಲ್ಪಕಲೆಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿಯ ಮೂಲನಿವಾಸಿಗಳು ಈ ಕಲೆಗಳಲ್ಲಿ ಮತ್ತು ಚಿನ್ನ ಬೆಳ್ಳಿಯ ಆಭರಣಗಳನ್ನು ಮಾಡುವುದರಲ್ಲಿ ಬಹು ಕುಶಲರಾಗಿದ್ದಾರೆ. ಇಲ್ಲಿ ನೆಲಸಿದ ಸ್ಪೇನ್ ಜನ ಅವರ ಕೌಶಲದಿಂದ ಬಹುಮಟ್ಟಿಗೆ ಪ್ರಭಾವಿತರಾಗಿದ್ದಾರೆ. ಕೊಲಂಬಿಯ ದೇಶ ತನ್ನ ಕವಿಗಳು, ಗ್ರಂಥಕರ್ತರು, ಪತ್ರಿಕೋದ್ಯಮಿಗಳ ಮೂಲಕವೂ ಸಾಂಸ್ಕೃತಿಕ ಪ್ರಪಂಚಕ್ಕೆ ಕಾಣಿಕೆ ಸಲ್ಲಿಸಿದೆ. (ಐ.ಎಸ್)

**ಕೊಲಂಬಿಯದ ಇತಿಹಾಸ :** ಕೊಲಂಬಿಯ ದೇಶದ ಇತಿಹಾಸವನ್ನು ಪ್ರಾಚೀನ, ಆಧುನಿಕ ಎಂದು ಸ್ಥೂಲವಾಗಿ ಎರಡು ವಿಭಾಗಗಳಾಗಿ ಮಾಡಬಹುದು. ಐರೋಪ್ಯರು ಕೊಲಂಬಿಯಕ್ಕೆ ಬಂದು ನೆಲೆ ನಿಲ್ಲುವುದಕ್ಕೆ ಮುಂಚಿನದು ಪ್ರಾಚೀನ ಕಾಲ. ಈಚಿನದು ಆಧುನಿಕ ಕಾಲ.

ಕೊಲಂಬಿಯದ ಪ್ರಾಚೀನ ಇತಿಹಾಸವನ್ನು ತಿಳಿದುಕೊಳ್ಳಲು ಲಿಖಿತ ದಾಖಲೆಗಳು ದೊರೆತಿಲ್ಲ. ಆದರೆ ಪುರಾತತ್ತ್ವರು ಕಂಡುಹಿಡಿದಿರುವ ಪ್ರಾಚೀನ ಸಂಸ್ಕೃತಿಯ ಕೆಲವು ಕುರುಹುಗಳಿಂದ ಕೊಲಂಬಿಯದ ಇತಿಹಾಸವನ್ನು ಸ್ಥೂಲವಾಗಿ ಗುರುತಿಸಬಹುದು. ಇಲ್ಲಿಯ ಮೂಲನಿವಾಸಿಗಳು ರೆಡ್ ಇಂಡಿಯನ್ ಸಮುದಾಯಕ್ಕೆ ಸೇರಿದವರು. ಕೊಲಂಬಿಯದ ಪ್ರಾಚೀನ ಸಂಸ್ಕೃತಿಯನ್ನು ರೂಪಿಸಿದವರಲ್ಲಿ ಮುಖ್ಯವಾದವರು ಚಿಬ್‍ಛಾ ಬುಡಕಟ್ಟಿನವರು. ದಕ್ಷಿಣ ಅಮೆರಿಕದಲ್ಲಿ ಪ್ರಸಿದ್ಧವಾಗಿದ್ದ ಇಂಕ ಸಂಸ್ಕೃತಿಯ ಪ್ರಭಾವದಿಂದ ಪ್ರೇರೇಪಿತರಾದ ಈ ಜನ ತಮ್ಮದೇ ಆದ ಒಂದು ವಿಶಿಷ್ಟ ಸಂಸ್ಕೃತಿಯನ್ನು ರೂಪಿಸಿಕೊಂಡರು. ಗುಂಪಿನ ಮುಖಂಡನೇ ರಾಜಕೀಯ ಮುಖಂಡ. ಕಟ್ಟಡಕ್ಕೆ ಕಲ್ಲನ್ನು ಬಳಸುವುದು ಈ ಜನರಿಗೆ ಗೊತ್ತಿರಲಿಲ್ಲ. ಮ್ಯಾಗ್ಡಲೀನ ಪಟ್ಟಣದ ಬಳಿಯಲ್ಲಿರುವ ಸ್ಯಾನ್ ಆಗಸ್ಟಿನ್‍ನಲ್ಲಿರುವ ಐತಿಹಾಸಿಕ ಅವಶೇಷದಿಂದ ಅನೇಕ ವಿಷಯಗಳು ಬೆಳಕಿಗೆ ಬಂದಿವೆ. ಮಡಕೆ ಮಾಡುವುದರಲ್ಲೂ ಚಿನ್ನದ ಆಭರಣಗಳನ್ನು ತಯಾರಿಸುವುದರಲ್ಲೂ ಕೆತ್ತನೆ ಕೆಲಸದಲ್ಲೂ ಈ ಜನ ಬಹಳ ಮುಂದುವರಿದಿದ್ದರು. ಚಿನ್ನವನ್ನು ಸಾಮಾನ್ಯವಾಗಿ ಎಲ್ಲ ಕಾರ್ಯಗಳಲ್ಲೂ, ಮುಖ್ಯವಾಗಿ ದೇವರ ಪೂಜೆಗಳಲ್ಲಿ, ವಿಶೇಷವಾಗಿ ಉಪಯೋಗಿಸುತ್ತಿದ್ದರು. ಚಿನ್ನವನ್ನು ಹುಡಿಯಾಗಿಯೋ ಆಭರಣಗಳನ್ನು ಮಾಡಿಯೋ ದೇವರಿಗೆ ಅರ್ಪಿಸುವುದು ಚಿಬ್‍ಛಾ ಜನರ ಪದ್ಧತಿಯಾಗಿತ್ತು. ಕೆಲವು ಪೂಜಾವಿಧಾನಗಳಿಗೆ ಅನುಗುಣವಾಗಿ ಚಿನ್ನವನ್ನು ಕೆರೆಗೆ ಎಸೆಯುವ ಅಥವಾ ದಂಡೆಯ ಮೇಲೆ ಹೂಳಿಡುವ ಪದ್ಧತಿಯಿತ್ತು. ಈ ಜನ ಪ್ರಕೃತಿಯನ್ನು–ಸೂರ್ಯ, ಚಂದ್ರ, ಮಳೆ ಮತ್ತು ಕೆರೆಗಳನ್ನು–ಪೂಜಿಸುತ್ತಿದ್ದರು. ಸೃಷ್ಟಿಕಾರ್ಯ ನಡೆಸುವ ದೇವತೆಗಳ ಸಾಂಸ್ಕೃತಿಕ ಮುಖಂಡತ್ವವನ್ನು ವಹಿಸುವ ದೇವತೆಗಳ ಗುಂಪೇ ಇವರ ಧಾರ್ಮಿಕ ನಂಬಿಕೆಗಳಲ್ಲಿ ಪ್ರಧಾನವಾಗಿತ್ತು. ನರಬಲಿ ರೂಢಿಯಲ್ಲಿತ್ತು. ಒಟ್ಟಿನಲ್ಲಿ ಕೊಲಂಬಿಯದ ಪ್ರಾಚೀನ ಸಂಸ್ಕೃತಿ ಬುಡಕಟ್ಟಿನ ಸಂಸ್ಕೃತಿಯಾಗಿತ್ತೇ ಹೊರತು, ಪ್ರಾಚೀನ ಭಾರತ, ಈಜಿಪ್ಟ್, ಮೆಸಪೊಟೇಮಿಯದ ಸಂಸ್ಕೃತಿಗಳಷ್ಟು ಮುಂದುವರಿದದ್ದಾಗಿರಲಿಲ್ಲ.

ಸ್ಪೇನ್ ದೇಶದ ನಾವಿಕರು ಕೊಲಂಬಿಯವನ್ನು ಪ್ರವೇಶಿಸಿದಂದಿನಿಂದ ಆ ದೇಶದ ಇತಿಹಾಸದಲ್ಲಿ ಆಧುನಿಕ ಯುಗ ಪ್ರಾರಂಭವಾಯಿತು. 1510ರಲ್ಲಿ ಡೇರಿಯನ್‍ನಲ್ಲಿ ಮೊದಲನೆಯ ಐರೋಪ್ಯ ನೆಲೆ ಸ್ಥಾಪಿತವಾಯಿತು. 1525ರಲ್ಲಿ ರೋಡ್ರಿಗೋ ಡು ಬಸ್ಟಿಡಾಸ್ ಎಂಬ ಸ್ಪಾನಿಷ್ ಸಾಹಸಿ ಸಾಂತಮಾರ್ತ ಎಂಬ ಮತ್ತೊಂದು ವಸಾಹತನ್ನು ಸ್ಥಾಪಿಸಿದ. ಸಾಂತಮಾರ್ತ ನೆಲೆಯಿಂದಲೇ ಮುಂದೆ ನ್ಯೂ ಗ್ರನಾಡ ವಸಾಹತು ಹುಟ್ಟಿಕೊಂಡಿತು. 1861ರ ವರೆಗೆ ಕೊಲಂಬಿಯವನ್ನು ನ್ಯೂ ಗ್ರನಾಡ ಎಂದೇ ಕರೆಯುತ್ತಿದ್ದರು. ಗೊಂಜಾಲೋ ಜಿಮನೆಜ್ ಡಿ ಕ್ವೆಸಡಾ ಎಂಬ ಸ್ಪಾನಿಷ್ ಸಾಹಸಿ ಸಾಂತಮಾರ್ತ ತೀರಪ್ರದೇಶದಿಂದ ಒಳಭಾಗಕ್ಕೆ ಮುಂದುವರಿದು ಹೋಗಿ ಆಗಸ್ಟ್ 6, 1538ರಂದು ಬೋಗೊಟಾ ಪಟ್ಟಣವನ್ನು ಸ್ಥಾಪಿಸಿದ. ಅನಂತರ ಕೆಲವೇ ವರ್ಷಗಳಲ್ಲಿ ಅನೇಕ ಸಣ್ಣ ಪುಟ್ಟ ಐರೋಪ್ಯ ವಸಾಹತುಗಳು ಕೊಲಂಬಿಯದಲ್ಲೆಲ್ಲ ತಲೆಯೆತ್ತಿದುವು. ಆದರೆ ಸುಭದ್ರವಾದ ಕೋಟೆಯನ್ನು ಪಡೆದಿದ್ದ ಕಾರ್ಟಜೀನಪಟ್ಟಣ ಸ್ಪಾನಿಷರ ಕಾಲದಲ್ಲಿ ಉದ್ದಕ್ಕೂ ಪರಕೀಯರ ದಾಳಿಗೆ ನೇರ ಗುರಿಯಾಗಿತ್ತು.

ಸ್ಪೇನ್ ದೇಶಕ್ಕೆ ಸೇರಿದ ನ್ಯೂ ಗ್ರನಾಡ ಅಥವಾ ಕೊಲಂಬಿಯ ವಸಾಹತು ಪೆರುವಿನಲ್ಲಿದ್ದ ವೈಸ್‍ರಾಯನ ಆಡಳಿತಕ್ಕೆ 1740ರ ವರೆಗೆ ಒಳಪಟ್ಟಿತ್ತು. ಆ ವರ್ಷ ನ್ಯೂ ಗ್ರನಾಡಕ್ಕೆ ಪ್ರತ್ಯೇಕವಾಗಿ ಒಬ್ಬ ವೈಸ್‍ರಾಯನನ್ನು ಸ್ಪೇನ್ ಸರ್ಕಾರ ನೇಮಿಸಿತು. ಅವನ ಅಧಿಕಾರಕ್ಕೆ ನ್ಯೂ ಗ್ರನಾಡವಲ್ಲದೆ ಪನಾಮ, ಎಕ್ವಡಾರ್ ಮತ್ತು ವೆನಿಜ್ವೇಲ ಪ್ರದೇಶಗಳೂ ಒಳಪಟ್ಟಿದ್ದುವು. ಭೌಗೋಳಿಕವಾಗಿ ನ್ಯೂ ಗ್ರನಾಡಕ್ಕೆ ಹೊರಗಿನ ಸಂಪರ್ಕ

ಹೆಚ್ಚಾಗಿರಲಿಲ್ಲವಾದ ಕಾರಣ, ಸ್ಪೇನ್ ಸರ್ಕಾರ ಈ ಪ್ರದೇಶದ ಪ್ರಗತಿಗೆ ಅಷ್ಟಾಗಿ ಗಮನ ಕೊಡಲಿಲ್ಲ. 18ನೆಯ ಶತಮಾನದ ಕೊನೆಯ ಭಾಗದಲ್ಲಿ ಕೊಲಂಬಿಯದಲ್ಲಿ ಸ್ಪೇನ್ ಆಡಳಿತದ ಬಗ್ಗೆ ಅಸಮಾಧಾನ ಮೂಡಿತ್ತು.

19ನೆಯ ಶತಮಾನದ ಪೂರ್ವಭಾಗ ಕೊಲಂಬಿಯದ ಆಧುನಿಕ ಇತಿಹಾಸದಲ್ಲಿ ಒಂದು ಪರ್ವಕಾಲ. ಉತ್ತರ ಅಮೆರಿಕದಲ್ಲಿ ಈಗಿನ ಸಂಯುಕ್ತ ಸಂಸ್ಥಾನದ ಪೂರ್ವಜರು ಬ್ರಿಟಿಷ್ ವಸಾಹತು ನೀತಿಯನ್ನು ಎದುರಿಸಿ, ಹೋರಾಟ ನಡೆಸಿ 18ನೆಯ ಶತಮಾನದ ಕೊನೆಯ ವೇಳೆಗೆ ಸ್ವಾತಂತ್ರ್ಯ ಗಳಿಸಿಕೊಂಡಿದ್ದರು. ಅಮೆರಿಕನರು ನಡೆಸಿದ ಕ್ರಾಂತಿ ಕೊಲಂಬಿಯದ ಮೇಲೂ ಪ್ರಭಾವ ಬೀರಿತ್ತು. ಕೊಲಂಬಿಯದ ಜನ ಸ್ಪೇನಿನ ಶೋಷಣೆಯಿಂದ ರೊಚ್ಚಿಗೆದ್ದರು. 1811ರಲ್ಲಿ ಸ್ಪೇನಿನ ನಿರಂಕುಶ ಪ್ರಭುತ್ವದ ವಿರುದ್ಧ ದಂಗೆಯೆದ್ದರು. ಈ ದಂಗೆ ಯುದ್ಧವಾಗಿ ಮಾರ್ಪಾಡುಹೊಂದಿ 1824ರ ತನಕ ಮುಂದುವರಿಯಿತು. ಕೊಲಂಬಿಯದ ಸ್ವಾತಂತ್ರ್ಯಸಂಗ್ರಾಮದ ಮುಖಂಡ ದಕ್ಷಿಣ ಅಮೆರಿಕದ ಇತಿಹಾಸದಲ್ಲೇ ಪ್ರಸಿದ್ಧನಾದ ಸೈಮನ್ ಬೊಲಿವರ್ (1783–1830). ಆತ ಒಬ್ಬ ಸಾಹಸಿ, ಯೋಧ, ಪ್ರತಿಭಾವಂತ ಸೇನಾನಿ, ಮೇಲಾಗಿ ಸ್ವಾತಂತ್ರ್ಯಪ್ರಿಯ. ಅವನ ಜೀವನ ವೈವಿಧ್ಯಮಯವಾದ್ದು. ಆತ ಸುಮಾರು 200 ಕದನಗಳ ನಾಯಕ. ಸಾಹಸ, ವೈಭವ, ಜಯ, ಅಪಜಯಗಳನ್ನೆಲ್ಲ ಅನುಭವಿಸಿದ ಆ ಮುಖಂಡನ ನಾಯಕತ್ವದಲ್ಲಿ ಕಡೆಗೆ ಕೊಲಂಬಿಯ ಸ್ಪೇನಿನ ದಾಸ್ಯದಿಂದ ಬಿಡುಗಡೆ ಹೊಂದಿತು. 1831ರಲ್ಲಿ ಪನಾಮಾವನ್ನೂ ಒಳಗೊಂಡಂತೆ ನ್ಯೂ ಗ್ರನಾಡ ಗಣರಾಜ್ಯದ ಸ್ಥಾಪನೆಯಾಯಿತು. ಅದಕ್ಕೊಂದು ಸಂವಿಧಾನವೂ ರೂಪುಗೊಂಡಿತು. 1903ರ ತನಕ ಕೊಲಂಬಿಯದಲ್ಲಿ ಅಂತರ್ಯುದ್ಧಗಳು ನಡೆದುವು. 1861ರಲ್ಲಿ ಅಧ್ಯಕ್ಷ ಥಾಮಸ್ ಡು ಮೊಸ್ಕೇರಾನ ಸರ್ಕಾರ ಚರ್ಚಿನ ಅಧಿಕಾರವನ್ನು ಮೊಟಕುಗೊಳಿಸುವ ಕಾಯಿದೆಯನ್ನು ಜಾರಿಗೆ ತಂದು, ಚರ್ಚಿನ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು. 1861ರಲ್ಲಿ ಈ ದೇಶಕ್ಕೆ ಕೊಲಂಬಿಯ ಸಂಯುಕ್ತಸಂಸ್ಥಾನ ಎಂಬ ಹೆಸರನ್ನು ಕೊಡಲಾಯಿತು.

ಕೊಲಂಬಿಯ ಸ್ವತಂತ್ರ ರಾಷ್ಟ್ರವೇನೋ ಆಯಿತು. ಆದರೆ ದೇಶದ ಸಂಪನ್ಮೂಲಗಳನ್ನು, ಸಾರಿಗೆ ಸಂಪರ್ಕಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಸಮಗ್ರ ಪ್ರಗತಿ ಸಾಧಿಸಲು ಬೇಕಾದ ಶಾಂತ ವಾತಾವರಣ ಅದಕ್ಕೆ ಒದಗಲಿಲ್ಲ. ಆದ ಕಾರಣ ಆರ್ಥಿಕವಾಗಿ ಕೊಲಂಬಿಯ ಹಿಂದುಳಿಯಿತು. ಇದರ ಜೊತೆಗೆ ಕೊಲಂಬಿಯದ ನಗರಗಳೂ ಹಳ್ಳಿಗಳೂ ಪರಸ್ಪರ ಸಂಪರ್ಕ ಹೊಂದದೆ, ದೇಶದ ಜನಸಂಖ್ಯೆ ಚದುರಿ ಹೋಗಿದ್ದರಿಂದ, ಆರ್ಥಿಕ ಪ್ರಗತಿ ಸಾಧಿಸುವುದು ಕಷ್ಟವಾಯಿತು. ಪನಾಮಾ ಪ್ರಾಂತ್ಯ ಕೈಬಿಟ್ಟುಹೋದ್ದು (1903) ಕೊಲಂಬಿಯದ 20ನೆಯ ಶತಮಾನದ ಇತಿಹಾಸದ ಪ್ರಮುಖ ಘಟನೆ. ಪನಾಮಾ ಒಂದು ಆಯಕಟ್ಟಿನ ಪ್ರದೇಶ; ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳನ್ನು ಒಂದುಗೂಡಿಸುವ ಸಾಧ್ಯತೆಯನ್ನು ಹೊಂದಿದ್ದ ಭೂಭಾಗ, ಅಲ್ಲಿಯ ಜನ ಕೊಲಂಬಿಯದಿಂದ ಸ್ವತಂತ್ರರಾದಾಗ ಹೊಸ ರಾಷ್ಟ್ರಕ್ಕೆ ಅಮೆರಿಕ ಮನ್ನಣೆ ಕೊಟ್ಟಿತು. ಅಮೆರಿಕ ಪನಾಮಾದಲ್ಲಿ ಕಾಲುವೆಯೊಂದನ್ನು ತೋಡಿಸಿ ಎರಡು ಸಾಗರಗಳನ್ನು ಸೇರಿಸುವ ಯೋಜನೆ ಹೊಂದಿದ್ದುದೇ ಇದಕ್ಕೆ ಕಾರಣ. ಇದರಿಂದ ಕೊಲಂಬಿಯ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ ನಡುವೆ ವಿರಸಕ್ಕೆ ಎಡೆ ಕೊಟ್ಟಂತಾಯಿತು. ಪನಾಮಾದ ಬೇರ್ಪಡೆಯಿಂದಾಗಿ ಉಂಟಾದ ಈ ವಿರಸ ಥಾಮ್ಸನ್–ಉರ್ರುಟಿಯ ಒಪ್ಪಂದದೊಡನೆ ಮುಕ್ತಾಯಗೊಂಡಿತು. ಕೊಲಂಬಿಯದ ಸಂಸತ್ತು ಈ ಒಪ್ಪಂದಕ್ಕೆ ತನ್ನ ಒಪ್ಪಿಗೆಯನ್ನು 1921ರ ಡಿಸೆಂಬರಿನಲ್ಲಿ ನೀಡಿತು. ಕೊಲಂಬಿಯ ಪನಾಮಾವನ್ನು ಕಳೆದುಕೊಂಡಿದ್ದರಿಂದ ಅದಕ್ಕೆ ಅಮೆರಿಕ 2.5 ಕೋಟಿ ಡಾಲರ್‌ಗಳಷ್ಟು ಪರಿಹಾರಧನ ಕೊಡತಕ್ಕದ್ದೆಂದು ತೀರ್ಮಾನವಾಯಿತು. ಈ ಹಣವನ್ನು ಅದು ಐದು ವಾರ್ಷಿಕ ಕಂತುಗಳಲ್ಲಿ ಕೊಟ್ಟಿತು. ಇದಕ್ಕೆ ಬದಲಾಗಿ ಕೊಲಂಬಿಯ ಪನಾಮಾ ಸರ್ಕಾರಕ್ಕೆ ಮನ್ನಣೆ ನೀಡಬೇಕಾಯಿತು.

1922ರ ಆಗಸ್ಟ್‌ನಲ್ಲಿ ಜನರಲ್ ಪೆಡ್ರೊ ನೀಲ್ ಓಸ್‌ಪಿನ ಅಧ್ಯಕ್ಷನಾದ. ಇವನ ಆಡಳಿತದ ಕಾಲದಲ್ಲಿ ಕೊಲಂಬಿಯದಲ್ಲಿ ಅನೇಕ ಕ್ಷೇತ್ರಗಳಲ್ಲಿ ಪ್ರಗತಿಯುಂಟಾಯಿತು. ರೈಲು ಮತ್ತು ರಸ್ತೆ ಸಾರಿಗೆ ಸಂಪರ್ಕಗಳನ್ನು ಕಲ್ಪಿಸಲಾಯಿತು. ಸಾರ್ವಜನಿಕ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಗಳಾದುವು. 1926ರಲ್ಲಿ ಮೈಗೂಲ್ ಅಬಾದಿಯಾ ಮೆಂಡೆಜ್ ನಾಲ್ಕು ವರ್ಷಗಳ ಅವಧಿಗೆ ಅಧ್ಯಕ್ಷನಾಗಿ ಚುನಾಯಿತನಾದ. ನೂರಾರು ವರ್ಷಗಳಿಂದ ನಿಕರಾಗ್ವದೊಡನಿದ್ದ ಗಡಿ ವಿವಾದ ಮಾರ್ಚ್ 1928ರ ಒಪ್ಪಂದದೊಡನೆ ತೀರ್ಮಾನವಾಯಿತು. ಇದರ ಪ್ರಕಾರ ಮಸ್ಕಿಟೋ ಕೋಸ್ಟ್ ಮತ್ತು ಗ್ರೇಟ್ ಮತ್ತು ಲಿಟಲ್‌ಕಾರನ್ ದ್ವೀಪಗಳು ನಿಕರಾಗ್ವಕ್ಕೂ ಆಂಡ್ರೆಸ್ ಪರ್ಯಾಯದ್ವೀಪದ ಕೆಲವು ದ್ವೀಪಗಳು ಕೊಲಂಬಿಯಕ್ಕೂ ಸೇರಿದುವು.

ಹತ್ತೊಂಬತ್ತನೆಯ ಶತಮಾನದ ಕೊನೆಯ ವೇಳೆಗೆ ಕೊಲಂಬಿಯದಲ್ಲಿ ಕನ್ಸರ್ವೆಟಿವ್ ಮತ್ತು ಲಿಬರಲ್ ಎಂಬ ಎರಡು ಪ್ರಧಾನ ರಾಜಕೀಯ ಪಕ್ಷಗಳು ರೂಪುಗೊಂಡುವು. ಕನ್ಸರ್ವೆಟಿವ್ ಪಕ್ಷ 1885ರಿಂದ 1930ರ ತನಕ ಅಧಿಕಾರದಲ್ಲಿದ್ದರೆ, ಲಿಬರಲ್ ಪಕ್ಷ 1930ರಿಂದ 1946ರ ತನಕ ಅಧಿಕಾರದಲ್ಲಿತ್ತು. 1930 ರಿಂದ 1934ರ ತನಕ ಅಧ್ಯಕ್ಷನಾಗಿದ್ದ ಎನ್‌ರಿಕ್ ಓಲಯ ಹೆರ್ರೇರನ ಕಾಲದಲ್ಲಿ ದೇಶ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಯಿತು. ಆಗ ಅನೇಕ ಆರ್ಥಿಕ ನಿಯಂತ್ರಣಗಳನ್ನು ಜಾರಿಗೆ ತರಲಾಯಿತು. 1934ರಲ್ಲಿ ಅಲ್ಫಾನ್ಸೊ ಲೊಪೆಜ಼್ ಅಧ್ಯಕ್ಷನಾಗಿ ಚುನಾಯಿತನಾದ. ಆತ ಹೊಸ ಆರ್ಥಿಕ ಯೋಜನೆಯೊಂದನ್ನು ಜಾರಿಗೆ ತಂದ. ಕಾರ್ಮಿಕರಿಗೆ ಎಂಟು ಗಂಟೆಗಳ ಕೆಲಸದ ಪರಿಮಿತಿಯನ್ನೂ ಮುಷ್ಕರ ನಡೆಸುವ ಹಕ್ಕನ್ನೂ ಕಾಯಿದೆಗಳ ಮೂಲಕ ಕೊಡಲಾಯಿತು. ಲೊಪೆಜ಼್ ರೋಮನ್ ಕಥೊಲಿಕ್ ಚರ್ಚಿನ ಅಧಿಕಾರವನ್ನು ಮೊಟಕುಗೊಳಿಸುವ ಕಾಯಿದೆಗಳನ್ನು ಜಾರಿಗೆ ತಂದ. 1938ರಲ್ಲಿ ಎಡ್ವೂರ್ಡೋ ಸಾಂಟೋಸ್ ಅಧ್ಯಕ್ಷಸ್ಥಾನಕ್ಕೆ ಚುನಾಯಿತನಾದ. ಈತನ ಅಧಿಕಾರಾವಧಿಯಲ್ಲಿ ಪ್ರಗತಿಪರ ನೀತಿಗಳನ್ನು ಜಾರಿಗೆ ತರಲಾಯಿತು.

1942ರಲ್ಲಿ ಲೊಪೆಜ಼್ ಮತ್ತೆ ಅಧಿಕಾರಕ್ಕೆ ಬಂದು, ಆಗಸ್ಟ್ 1945ರಲ್ಲಿ ಆಲ್ಬರ್ಟೋ ಲೇರಾಸ್ ಕಮಾರ್ಗೋ ಪರವಾಗಿ ರಾಜೀನಾಮೆ ಕೊಟ್ಟ. 1946ರ ಚುನಾವಣೆಯಲ್ಲಿ ಕನ್ಸರ್ವೆಟಿವ್ ಪಕ್ಷದ ಮರಿಯಾನೋ ಓಸ್‌ಪಿನಾ ಪೆರೆಜ಼್ ಅಧ್ಯಕ್ಷಸ್ಥಾನಕ್ಕೆ ಚುನಾಯಿತನಾದ. ಅವನ ಸರ್ಕಾರದಲ್ಲಿ ಲಿಬರಲ್ ಪಕ್ಷದವರಿಗೆ ಸ್ಥಾನಮಾನಗಳನ್ನು ಕೊಡಲಿಲ್ಲ. 1948ರಲ್ಲಿ ಲಿಬರಲ್ ಪಕ್ಷದ ನಾಯಕ ಗೈಟಾನ್ ಕೊಲೆಯಾದ. ಈ ವಾಮಪಂಥೀಯ ನಾಯಕನ ಕೊಲೆಯಿಂದಾಗಿ ದೇಶದಲ್ಲಿ ಎರಡು ಪಕ್ಷಗಳ ನಡುವೆ ಹಿಂಸಾತ್ಮಕ ಹೋರಾಟ ಪ್ರಾರಂಭವಾಯಿತು. ಇದರ ಫಲವಾಗಿ 1957ರ ವೇಳೆಗೆ 2,60,000 ಜನ ಮಡಿದರು. ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು. 1950ರಲ್ಲಿ ಸಂಪ್ರದಾಯವಾದಿ ಲೊರೆನೋ ಗೊಮೆಜ಼್ ಅಧಿಕಾರಕ್ಕೆ ಬಂದ. ಆದರೆ ಸೇನಾ ಮುಖಂಡ ಜನರಲ್ ಗುಸ್ತಾರೊ ರೋಜಾಸ್ ಕ್ಷಿಪ್ರಾಕ್ರಮಣ ನಡೆಸಿ ಗೊಮೆಜ಼ನನ್ನು ಅಧಿಕಾರದಿಂದ ತಳ್ಳಿ ತಾನೇ ಅಧ್ಯಕ್ಷನಾದ. 1957ರಲ್ಲಿ ಸೇನಾ ಗುಂಪೊಂದು ರೋಜಾಸನನ್ನು ತಳ್ಳಿಹಾಕಿತು. ಆ ವರ್ಷವೇ ಚುನಾವಣೆ ನಡೆಸುವುದಕ್ಕೆ ವ್ಯವಸ್ಥೆ ಮಾಡಲಾಯಿತು. ಹನ್ನೆರಡು ವರ್ಷಗಳ ಕಾಲ ಕನ್ಸರ್ವೆಟಿವ್ ಮತ್ತು ಲಿಬರಲ್ ಪಕ್ಷಗಳು ಸಮಸಮವಾಗಿ ಸರ್ಕಾರದ ಮೂರು ಅಂಗಗಳಲ್ಲೂ ಪ್ರತಿನಿಧಿಗಳನ್ನು ಪಡೆದಿರತಕ್ಕದೆಂದು ಸಂವಿಧಾನದಲ್ಲಿ ತಿದ್ದುಪಡಿ ಮಾಡಲು ತೀರ್ಮಾನವಾಯಿತು. ಸಾರ್ವಜನಿಕರ ಒಪ್ಪಿಗೆ ಈ ತಿದ್ದುಪಡಿಗೆ ದೊರೆಯಿತು. ಸ್ಥಳೀಯ ಸಂಸ್ಥೆಗಳಲ್ಲೂ ಇದೇ ಕ್ರಮವನ್ನು ಜಾರಿಗೆ ತರಲಾಯಿತು. ಇದರಿಂದ ಎರಡೂ ಪಕ್ಷಗಳ ಸ್ಪರ್ಧೆಯಿಂದಾಗುವ ತೀವ್ರವಾದ ಅಶಾಂತಿ ಕೊನೆಗೊಳ್ಳುವಂತಾಯಿತು. ಕನ್ಸರ್ವೆಟಿವ್ ಪಕ್ಷದ ಲೇರಾಸ್ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತರಲು ಹಿಂದೆಗೆಯುತ್ತಿದ್ದಾನೆಂದು ಪ್ರತಿಪಕ್ಷ ಆಪಾದಿಸಿದ್ದರಿಂದ 1968ರಲ್ಲಿ ಆತನ ಸಂಪುಟ ರಾಜೀನಾಮೆ ನೀಡಿತು. 1969ರಲ್ಲಿ ಸರ್ಕಾರಕ್ಕೂ ಕಾರ್ಮಿಕರಿಗೂ ನಡುವೆ ಭಿನ್ನಾಭಿಪ್ರಾಯ ತಲೆದೋರಿ, ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಯಿತು. ಎಲ್ಲೆಲ್ಲೂ ದಂಗೆಗಳಾದುವು. ಹೀಗೆ ಕೊಲಂಬಿಯದ ಆಂತರಿಕ ರಾಜಕೀಯ ಪರಿಸ್ಥಿತಿ ಹದಗೆಟ್ಟು, ಆರ್ಥಿಕ ಪ್ರಗತಿಗೆ ಅಡ್ಡಿಆತಂಕಗಳನ್ನೊಡ್ಡಿತು. ದಕ್ಷಿಣ ಅಮೆರಿಕದ ಐದು ರಾಷ್ಟ್ರಗಳನ್ನೊಳಗೊಂಡ ಆಂಡಿಯನ್ ಸಾಮಾನ್ಯ ಮಾರುಕಟ್ಟೆಗೆ 1969ರಲ್ಲಿ ಕೊಲಂಬಿಯವೂ ಸೇರಿಕೊಂಡಿತು. ಇಂದು ಕೊಲಂಬಿಯ ಏಷ್ಯದ ಮತ್ತು ದಕ್ಷಿಣ ಅಮೆರಿಕದ ಇತರ ರಾಷ್ಟ್ರಗಳಂತೆ ಆಂತರಿಕವಾಗಿ ಶಾಂತಿ ಸ್ಥಾಪಿಸಿಕೊಂಡು ಆರ್ಥಿಕವಾಗಿ ಪ್ರಗತಿ ಹೊಂದಲು ಎಲ್ಲ ಪ್ರಯತ್ನಗಳನ್ನೂ ನಡೆಸುತ್ತಿದೆ. (ಎಸ್.ಕೆ.ಎಸ್.; ಪಿ.ಎಂ.ಯು.ಎಸ್.)

**ಕೊಲಂಬೋ :** ಶ್ರೀಲಂಕಾ ಗಣರಾಜ್ಯದ ರಾಜಧಾನಿ; ಅದರ ಮುಖ್ಯ ರೇವುಪಟ್ಟಣ; ಕೊಲಂಬೋ ಜಿಲ್ಲೆಯ ಆಡಳಿತ ಕೇಂದ್ರ. ಪಶ್ಚಿಮತೀರದಲ್ಲಿ ಕೆಳನಿ ನದೀಮುಖಕ್ಕೆ ದಕ್ಷಿಣದಲ್ಲಿದೆ. ಜನಸಂಖ್ಯೆ 642163(2001). ನಗರದ ಸುತ್ತಮುತ್ತ ತಗ್ಗುಭೂಮಿ ಇರುವುದರಿಂದ ಪ್ರವಾಹದಿಂದ ರಕ್ಷಣೆಗೆ ಕ್ರಮಕೈಗೊಳ್ಳಲಾಗಿದೆ. ಇಲ್ಲಿಯದು ಉಷ್ಣತೆಯ ವಾಯುಗುಣ. ಹವೆಯಲ್ಲಿ ತೇವದ ಅಂಶ ಹೆಚ್ಚು. ಮಧ್ಯಕ ಉಷ್ಣತೆ 31.1 ಸೆ. ಮಧ್ಯ ಸರಾಸರಿ ವಾರ್ಷಿಕ ಮಳೆ 182 ಸೆಂಮೀ. ನಗರದ ಹಳೆಯ ಭಾಗ ಪೇಟೆ, ಎರಡನೆಯ ಮಹಾಯುದ್ಧದ ತರುವಾಯ ವ್ಯಾಪಾರ ವೃದ್ಧಿಯಾಯಿತು. ಈಗಿನ ಬಂದರಿನ ದಕ್ಷಿಣ ತುದಿಯಲ್ಲಿರುವ ಪೋರ್ಚುಗೀಸರು ಕಟ್ಟಿದ ಕೋಟೆಯ ಭಾಗದಲ್ಲಿ ಆಡಳಿತ ಹಾಗೂ ವಾಣಿಜ್ಯ ಕಟ್ಟಡಗಳು ಕೇಂದ್ರೀಕೃತವಾಗಿವೆ. ನಗರದ ಆ ಭಾಗದಲ್ಲಿ ಅಧ್ಯಕ್ಷರ ಅಧಿಕೃತ ನಿವಾಸ ಮತ್ತು ಮುಖ್ಯ ಕಚೇರಿಗಳಿವೆ. ಹಿಂದೆ ಡಚ್ಚರ ನಿವಾಸವಾಗಿದ್ದ ಹಲ್ಟ್‌ಸ್‌ಡಾರ್ಫ್ ಬಡಾವಣೆಯಲ್ಲಿ ನ್ಯಾಯಾಲಗಳಿವೆ. ಡಚ್ಚರು ಕಟ್ಟಿಸಿದ ಚರ್ಚ್ ಇರುವುದು ಉಲ್ವೆನ್‌ಡಾಲ್ ಬಡಾವಣೆಯಲ್ಲಿ. ಕೊಟಹೆನದಲ್ಲಿರುವ ಬೌದ್ಧ ದೇವಾಲಯ ಪ್ರಸಿದ್ಧವಾದ್ದು. ಕೊಚ್ಚಿಕಡೈಯ ಪೊನಾಂಬಲವನೇಶ್ವರ ದೇವಾಲಯ ಹಿಂದೂಗಳದು.

ಕೊಲಂಬೋ ಶ್ರೀಲಂಕಾದ ಪ್ರಮುಖ ವಿದ್ಯಾಕೇಂದ್ರ. 1942ರಲ್ಲಿ ಇಲ್ಲಿ ಸಿಲೋನ್ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಇಲ್ಲಿಯ ವಿದ್ಯೋದಯ ಮತ್ತು ವಿದ್ಯಾಲಂಕಾರ ಬೌದ್ಧ ವಿದ್ಯಾಪೀಠಗಳು ವಿಶ್ವವಿದ್ಯಾಲಯ ಸ್ಥಾನಮಾನಗಳನ್ನು ಪಡೆದಿರುವ ಸಂಸ್ಥೆಗಳು. ವಿದ್ಯೋದಯ ವಿಶ್ವವಿದ್ಯಾಲಯ ನಗರದೊಳಗಿದೆ; ವಿದ್ಯಾಲಂಕಾರ ವಿಶ್ವವಿದ್ಯಾಲಯ ನಗರಕ್ಕೆ 6.4 ಕಿಮೀ ದೂರದಲ್ಲಿರುವ ಕೆಳನಿಯದಲ್ಲಿದೆ. ಕೆಳನಿಯ ಬೌದ್ಧ ಯಾತ್ರಾಸ್ಥಳ. ಕೊಲಂಬೋ ನಗರದಲ್ಲಿ ಪ್ಯಾಸ್ಚರ್ ಸಂಸ್ಥೆ, ವೈದ್ಯಕೀಯ ಸಂಶೋಧನ ಸಂಸ್ಥೆ ಮತ್ತು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಸಂಸ್ಥೆಗಳು ಇವೆ.

ಕೊಲಂಬೋ ನಗರದ ಸ್ವಾತಂತ್ರ್ಯ ಚೌಕದಲ್ಲಿ ನಿರ್ಮಿತವಾಗಿರುವ ಸ್ವಾತಂತ್ರ್ಯ ಭವನ ಕಾಂಡ್ಯನ್ ಶೈಲಿಯಲ್ಲಿ ನಿರ್ಮಿತವಾಗಿದೆ. ನಗರದ ದಕ್ಷಿಣದಲ್ಲಿರುವ ಆಧುನಿಕ ನಿವಾಸಭಾಗ ಸಮುದ್ರಕ್ಕೂ ಅದಕ್ಕೆ ಸಮಾಂತರದಲ್ಲಿರುವ ಇಳಿಭೂಮಿಗೂ ನಡುವೆ ಉದ್ದಕ್ಕೆ ಹಬ್ಬಿದೆ. ಕೋಟೆಯ ದಕ್ಷಿಣಕ್ಕಿರುವ ಗಾಲ್ ಫೇಸ್ ಎಸ್‍ಪ್ಲನೇಡ್ ಅಲ್ಲದೆ, ವಿಕ್ಟೋರಿಯ, ಕ್ಯಾಂಬೆಲ್, ಹ್ಯಾವಲಾಕ್ ಉದ್ಯಾನಗಳೂ ಕುದುರೆ ಪಂದ್ಯದ ಮೈದಾನವೂ ರಿಜ್‍ವೇ ಗಾಲ್ಫ್ ಆಟದ ಸರಪಳಿ ನೆಲವೂ ಕೊಲಂಬೋ ಓವಲ್ ಕ್ರಿಕೆಟ್ ಮೈದಾನವೂ ಇವೆ. ಲಾವಿನೇಯ ಶಿಖರ ಒಂದು ವಿಹಾರ ಸ್ಥಳ. ಸಮುದ್ರಸ್ನಾನಕ್ಕೆ ಪ್ರಶಸ್ತ. ಕೊಲಂಬೋ ಬಂದರಿಗೆ 8 ಕಿಮೀ ದೂರದಲ್ಲಿರುವ ಕೋಟ್ಟೆ ಉಪನಗರಭಾಗ ಹಿಂದಣ ಸಿಂಹಳ ಅರಸರ ರಾಜಧಾನಿಗಳಲ್ಲಿ ಒಂದು. ಬಂದರಿಗೆ ಉತ್ತರದಲ್ಲಿರುವ ಮುತ್ವಾಲ್ ಬಡಾವಣೆಯಲ್ಲಿ ಬೆಸ್ತರು ವಾಸಿಸುತ್ತಾರೆ. ಅವರಲ್ಲಿ ಅನೇಕರು ರೋಮನ್ ಕೆಥೊಲಿಕ್ ಧರ್ಮಕ್ಕೆ ಸೇರಿದವರು.

ಕೊಲಂಬೋ ಪುರಭವನ

ಕೊಲಂಬೋದಿಂದ ಜಾಫ್ನ, ಟ್ರಿಂಕಾಮಲಿ ಮೊದಲಾದ ನಗರಗಳಿಗೆ ರೈಲ್ವೆ ಸಂಪರ್ಕವುಂಟು. ಕೆಳನಿ ನದಿಗೆ ಅಡ್ಡಲಾಗಿರುವ ವಿಕ್ಟೋರಿಯ ಸೇತುವೆಯ ಮೂಲಕ ಉತ್ತರದಲ್ಲಿರುವ ನೆಗೊಂಬೊ ಮತ್ತು ಜಾಫ್ನಗಳಿಗೂ ವಾಯವ್ಯದಲ್ಲಿರುವ ಕ್ಯಾಂಡಿಗೂ ರಸ್ತೆಗಳಿವೆ. ದಕ್ಷಿಣದ ಮುಖ್ಯ ರಸ್ತೆಗಳು ಸಮುದ್ರದ ಕರೆಯಲ್ಲೇಸಾಗಿ ಹಂಬನ್ ತೋಟ ಮತ್ತು ಕೆಳನಿ ಕಣಿವೆಯ ಮೂಲಕ ಅವಿಸ್ಸವೆಲ್ಲಕ್ಕೆ ಹೋಗುತ್ತವೆ. ರತ್ಮಲನ ವಿಮಾನ ನಿಲ್ದಾಣದಿಂದ ರಾಜ್ಯದ ಪ್ರಾಂತೀಯ ಕೇಂದ್ರಗಳಿಗೂ ಭಾರತಕ್ಕೂ ವಿಮಾನಗಳು ಹೋಗಿಬರುತ್ತವೆ. ಕಾಟುನಾಯಕ ವಿಮಾನ ನಿಲ್ದಾಣವಿರುವುದು ಭಾರಿ ವಿಮಾನಗಳಿಗಾಗಿ ಅದು ನಗರಕ್ಕೆ 29 ಕಿಮೀ ದೂರದಲ್ಲಿದೆ.

ಕೊಲಂಬೋ ಬಂದರಿಗೆ ಪ್ರಾಮುಖ್ಯ ಪ್ರಾಪ್ತವಾದ್ದು 1874ರಿಂದೀಚೆಗೆ. ಅದಕ್ಕೆ ಮುಂಚೆ ಗ್ಯಾಲ್ ಮುಖ್ಯ ಬಂದರಾಗಿತ್ತು. ಅದು ಕೊಲಂಬೋಗೆ ದಕ್ಷಿಣದಲ್ಲಿ 112 ಕಿಮೀ ದೂರದಲ್ಲಿದೆ. ಕೊಲಂಬೋ ಬಂದರಿನ ನಿರ್ಮಾಣಕಾರ್ಯ ಆರಂಭವಾದ್ದು 1874ರಲ್ಲಿ. ಈಗ ಅದು ಪ್ರಪಂಚದ ಅತ್ಯಂತ ದೊಡ್ಡ ಕೃತಕ ಬಂದರುಗಳಲ್ಲಿ ಒಂದು. ಆದರೂ 1950ರ ತನಕ ಇಲ್ಲಿ ಅನೇಕ ಸೌಲಭ್ಯಗಳಿರಲಿಲ್ಲ. 1957ರ ಹೊತ್ತಿಗೆ ಕ್ವೀನ್ ಎಲಿಜಬೆತ್, ಪ್ರಿನ್ಸ್ ವಿಜಯ, ಡೆಲ್ಫ್ಟ್ ಮತ್ತು ಮುತ್ವಾಲ್ ಹಡಗು ಭರತಿ ಕಟ್ಟೆಗಳು ನಿರ್ಮಾಣವಾದುವು. ಜಲಮಟ್ಟಕ್ಕೆ 10.3 ಮೀ ತಳಕ್ಕೆ ಇಳಿದು ಚಲಿಸುವ ಜಹಜುಗಳು ಪಶ್ಚಿಮ ನಾಲೆಯಿಂದಲೂ, 8.8 ಮೀ ತಳಕ್ಕೆ ಇಳಿದು ಚಲಿಸುವ ಜಹಜುಗಳು ಉತ್ತರದ ನಾಲೆಯಿಂದಲೂ ರೇವಿನೊಳಕ್ಕೆ ಪ್ರವೇಶಿಸಬಹುದು. ಈಶಾನ್ಯ ಮಾರುತಗಳ ಕಾಲದಲ್ಲಿ 45 ಹಡಗುಗಳೂ, ನೈಋತ್ಯ ಮಾರುತಗಳ ಕಾಲದಲ್ಲಿ 39 ಹಡಗುಗಳೂ ಕೊಲಂಬೋ ಬಂದರಿನಲ್ಲಿ ನಿಲ್ಲಲು ಸ್ಥಳಾವಕಾಶವಿದೆ. ಬೇರ ಸರೋವರ, ಆ ಸರೋವರಕ್ಕೂ ಬಂದರಿಗೂ ಸಂಪರ್ಕ ಕಲ್ಪಿಸುವ ನಾಲೆ–ಇವೂ ಬಂದರಿಗೆ ಸೇರಿವೆ. ಈ ನಾಲೆಯಲ್ಲಿ 100 ಟನ್ ತೂಕದ ಸರಕು ದೋಣಿಗಳು ಸಂಚರಿಸಬಹುದು. ಕೊಲಂಬೋ ಸದಾ ಚಟುವಟಿಕೆಯಿಂದ ಕೂಡಿದ ರೇವು. ಚಹ, ರಬ್ಬರ್, ಕಕೇವೊ, ತೆಂಗಿನ ಹುರಿ, ಕೊಬ್ಬರಿ ಮತ್ತು ತೆಂಗು ಇಲ್ಲಿಂದ ರಫ್ತಾಗುತ್ತವೆ. ಅಕ್ಕಿ, ಹತ್ತಿ, ಜವಳಿ, ಸಕ್ಕರೆ ಮತ್ತು ಯಂತ್ರೋಪಕರಣಗಳು ಆಮದು ಸರಕುಗಳು.

ಕೊಲಂಬೋ ಜಿಲ್ಲೆ: ಕೊಲಂಬೋ ಜಿಲ್ಲೆಯಲ್ಲಿ ಕೊಲಂಬೋ, ನಿಗಂಬೋ, ಮತ್ತು ಮೌಂಟ್ ಲವಿನೀಯ ಎಂಬ ಮೂರು ಪೌರಸಭೆಗಳಿವೆ. ಜಿಲ್ಲೆಯ ವಿಸ್ತೀರ್ಣ 642 ಚ.ಕಿಮೀ. ಜನಸಂಖ್ಯೆ 2,235,000 (2001). (ವಿ.ಜಿ.ಕೆ.)

**ಕೊಲಂಬೋ ಯೋಜನೆ :** ದಕ್ಷಿಣ ಮತ್ತು ಆಗ್ನೇಯ ಏಷ್ಯದಲ್ಲಿ ಪರಸ್ಪರ ಸಹಕಾರದಿಂದ ಆರ್ಥಿಕ ಅಭಿವೃದ್ಧಿ ಸಾಧಿಸಲು ರೂಪಿತವಾದ ಯೋಜನೆ, ಸಂಸ್ಥೆ. ಸಂಸ್ಥೆಯ ಕೇಂದ್ರ ಕಚೇರಿ ಇರುವುದು ಕೊಲಂಬೋದಲ್ಲಿಯಾದ್ದರಿಂದ ಇದಕ್ಕೆ ಕೊಲಂಬೋ ಯೋಜನೆಯೆಂಬ ಹೆಸರು ಬಂದಿದೆ. ಕಾಮನ್‍ವೆಲ್ತ್ ಕೂಟದಿಂದ 1950ರಲ್ಲಿ ಸ್ಥಾಪಿತವಾಯಿತು. ಆಗ್ನೇಯ ಏಷ್ಯದ ರಾಷ್ಟ್ರಗಳೂ ಜಪಾನ್ ಅಮೆರಿಕ ಸಂಯುಕ್ತಸಂಸ್ಥಾನವೂ ಅನಂತರ ಇದಕ್ಕೆ ಸೇರಿಕೊಂಡುವು. ಆಫ್ಘಾನಿಸ್ತಾನ, ಭೂತಾನ, ಬರ್ಮ, ಕಾಂಬೋಡಿಯ, ಶ್ರೀಲಂಕಾ, ಭಾರತ, ಇಂಡೊನೇಷ್ಯ, ಇರಾನ್, ದಕ್ಷಿಣ ಕೊರಿಯ, ಲಾವೋಸ್, ಮಲೇಷ್ಯ, ಮಾಲ್ಡಿವ್ ದ್ವೀಪಗಳು, ನೇಪಾಳ, ಪಾಕಿಸ್ತಾನ, ಫಿಲಿಪೀನ್ಸ್, ಸಿಂಗಪುರ, ಥೈಲೆಂಡ್, ವಿಯೆಟ್ನಾಂ ಗಣರಾಜ್ಯ–ಇವು ಈ ಪ್ರದೇಶದ ಒಳಗಿರುವ ಸದಸ್ಯ ರಾಷ್ಟ್ರಗಳು. ಹೊರಗಿನ ಸದಸ್ಯ ರಾಷ್ಟ್ರಗಳು ಇವು; ಆಸ್ಟ್ರೇಲಿಯ, ಕೆನಡ, ಜಪಾನ್, ನ್ಯೂಜಿಲೆಂಡ್, ಬ್ರಿಟನ್, ಅಮೆರಿಕ ಸಂಯುಕ್ತಸಂಸ್ಥಾನ. ಏಷ್ಯ ಉತ್ಪಾದಕತಾ ಸಂಸ್ಥೆ, ವಿಶ್ವಬ್ಯಾಂಕು, ವಿಶ್ವಸಂಸ್ಥೆಯ ಏಷ್ಯ ಮತ್ತು ದೂರಪ್ರಾಚ್ಯ ಆರ್ಥಿಕ ಆಯೋಗ, ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ, ಕಾಮನ್‍ವೆಲ್ತ್ ಕಾರ್ಯಾಲಯ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಏಷ್ಯನ್ ಅಭಿವೃದ್ಧಿ ಬ್ಯಾಂಕು, ವ್ಯಾಪಾರ ಸುಂಕಗಳ ಸಾಮಾನ್ಯ ಒಪ್ಪಂದ ಸಂಸ್ಥೆ ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನ–ಇವು ವೀಕ್ಷಕ ಸಂಸ್ಥೆಗಳು.

ಸದಸ್ಯ ರಾಷ್ಟ್ರಗಳ ಸರ್ಕಾರಗಳ ಸಚಿವಮಟ್ಟದ ಪ್ರತಿನಿಧಿಗಳನ್ನುಳ್ಳ ಸಮಾಲೋಚನ ಸಮಿತಿ (ಕನ್ಸಲ್ಟೆಟಿವ್ ಕಮಿಟಿ) ಕೊಲಂಬೋ ಯೋಜನೆಯ ಉನ್ನತ ನಿರ್ದೇಶಕ ಅಂಗ. ಇದು ವರ್ಷಕ್ಕೊಮ್ಮೆ ಬೇರೆಬೇರೆ ದೇಶಗಳಲ್ಲಿ ಸಭೆ ಸೇರುತ್ತದೆ. ಸದಸ್ಯ ರಾಷ್ಟ್ರಗಳು ಸಲ್ಲಿಸಿದ ವರದಿಗಳನ್ನು ಇಲ್ಲಿ ಚರ್ಚಿಸಲಾಗುತ್ತದೆ. ಬಂಡವಾಳನೆರವು ಮತ್ತು ತಾಂತ್ರಿಕ ಸಹಕಾರ ಯೋಜನೆಗಳ ಕೇಂದ್ರೀಯ ಸಂಯೋಜನೆಯ ಕಾರ್ಯ ನಡೆಯುವುದು ಈ ಸಮಿತಿಯಿಂದ. ಎಲ್ಲ ಸದಸ್ಯರಿಗೂ ಸಮಾನ ಅಧಿಕಾರ, ಹೊಣೆ ಇರುತ್ತವೆ. ಕೊಲಂಬೋ ಯೋಜನೆಯ ತಾಂತ್ರಿಕ ಸಹಕಾರ ಮಂಡಲಿ ವರ್ಷದಲ್ಲಿ ಹಲವಾರು ಬಾರಿ ಸಭೆ ಸೇರುತ್ತದೆ. ಯೋಜನೆಯ ಸ್ಥೂಲ ಸೂತ್ರಗಳ ಮಿತಿಯೊಳಗೆ ರಾಷ್ಟ್ರಗಳ ತಾಂತ್ರಿಕ ಸಹಕಾರ ಸಾಧಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಮಾಲೋಚನೆ ನಡೆಸುವುದು ಇದರ ಉದ್ದೇಶ. ಈ ಬಗ್ಗೆ ಇದಕ್ಕೆ ಸೂಕ್ತ ನಿರ್ದೇಶನ ಬರುವುದು ಸಮಾಲೋಚನ ಸಮಿತಿಯಿಂದ. ಇಡೀ ಕೊಲಂಬೋ ಯೋಜನೆಯ ಪ್ರಚಾರ ಮತ್ತು ಸಮಾಚಾರ ವಿತರಣೆಯ ಕೆಲಸ ನಡೆಸುವುದೂ ತಾಂತ್ರಿಕ ಸಹಕಾರ ಮಂಡಲಿಯ ಕಾರ್ಯಭಾರ. ಕೊಲಂಬೋದಲ್ಲಿ ವಿವಿಧ ಸದಸ್ಯರಾಷ್ಟ್ರಗಳ ರಾಯಭಾರಿಗಳಾಗಿರುವವರು ಸಾಮಾನ್ಯವಾಗಿ ಇದರ ಸದಸ್ಯರಾಗಿರುತ್ತಾರೆ.

ತಾಂತ್ರಿಕ ಸಹಕಾರ ಮಂಡಲಿಯ ಕಾರ್ಯನಿರ್ವಾಹಕಾರಂಗವೇ ಕೊಲಂಬೋ ಯೋಜನಾ ಬ್ಯೂರೋ. ಬ್ಯೂರೋದ ಕಾರ್ಯಭಾರಗಳು ಇವು: 1. ಯೋಜನೆಯ ಅಡಿಯಲ್ಲಿ ತಾಂತ್ರಿಕ ಸಹಕಾರದ ಸಾಮಾನ್ಯ ನಿರ್ವಹಣೆಯ ಮೇಲ್ವಿಚಾರಣೆ ನಡೆಸುವುದರಲ್ಲಿ ಮಂಡಲಿಗೆ ನೆರವಾಗುವುದು, 2. ದ್ವಿಮುಖ ಒಪ್ಪಂದಗಳ ಪ್ರಕಾರ ನೀಡಲಾದ ಅಥವಾ ಪಡೆಯಲಾದ ತಾಂತ್ರಿಕ ನೆರವಿನ ದಾಖಲೆ ಇಡುವುದು, 3. ತರಬೇತು ಸೌಲಭ್ಯಗಳು, ಪರಿಣತರು ಮತ್ತು ಸಲಕರಣೆಗಳ ಬಗ್ಗೆ ಸದಸ್ಯ ರಾಷ್ಟ್ರ ಸರ್ಕಾರಗಳಿಗೆ ಮಾಹಿತಿ ನೀಡುವುದು. 4. ಯೋಜನೆಯ ಪ್ರದೇಶದ ಒಳಗೆ ಲಭ್ಯವಿರುವ ತರಬೇತು ಸೌಲಭ್ಯಗಳನ್ನು ಪೂರ್ಣವಾಗಿ ಬಳಸಿಕೊಳ್ಳುವಂತೆ ಏರ್ಪಾಡು ಮಾಡುವುದು. 5. ಇಡೀ ಕೊಲಂಬೋ ಯೋಜನೆಯ ಬಗ್ಗೆ ಸಮಾಚಾರ ಒದಗಿಸುವುದು, 6. ಯೋಜನೆಯ ಪ್ರಗತಿಯ ಬಗ್ಗೆ ವರದಿಗಳನ್ನೂ ಅಂಕಿಅಂಶಗಳನ್ನೂ ಪ್ರಕಟಿಸುವುದು ಮತ್ತು 7. ಬಂಡವಾಳನೆರವು ಯೋಜನೆಗಳ ದಾಖಲೆ ಇಡುವುದು.

ಅಂತಾರಾಷ್ಟ್ರೀಯ ರಾಜಕೀಯ ಚಟುವಟಿಕೆಗಳಲ್ಲಿ ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರಕ್ಕೆ ಆರ್ಥಿಕ ನೆರವು ನೀಡುವುದು ಈಗ ಒಂದು ಅತ್ಯಾವಶ್ಯಕವಾದ ಕರ್ತವ್ಯ ಎಂದು ಭಾವಿಸಲಾಗಿದೆ. ಎರಡನೆಯ ಮಹಾಯುದ್ಧವಾದ ಮೇಲೆ ಅಂತರರಾಷ್ಟ್ರೀಯಮಟ್ಟದಲ್ಲಿ ಆರ್ಥಿಕನೆರವು ನೀಡಿಕೆ ಬಹಳವಾಗಿ ಬೆಳೆದಿದೆ. ದಕ್ಷಿಣ ಮತ್ತು ಆಗ್ನೇಯ ಏಷ್ಯಗಳ ಆರ್ಥಿಕಾಭಿವೃದ್ಧಿಯ ಸಮಸ್ಯೆ ಆಗ ಎದ್ದು ಕಾಣುತ್ತಿತ್ತು. ದಕ್ಷಿಣ ಏಷ್ಯದ ಪ್ರಮುಖ ರಾಷ್ಟ್ರಗಳಾದ ಭಾರತ, ಪಾಕಿಸ್ತಾನ, ಬರ್ಮ (ಮಯನ್ಮಾರ್), ಶ್ರೀಲಂಕಾ, ಮಲಯ ಮತ್ತು ಸಿಂಗಪುರಗಳು ಹಿಂದೆ ಬ್ರಿಟಿಷ್ ಸಮ್ರಾಜ್ಯಕ್ಕೆ ಒಳಪಟ್ಟಿದ್ದುದರಿಂದ ಅವುಗಳ ಬಡತನಕ್ಕೆ ಬ್ರಿಟನ್ ಬಹುಮಟ್ಟಿಗೆ ಕಾರಣವೆಂಬುದು ಅಂತರರಾಷ್ಟ್ರೀಯ ಕ್ಷೇತ್ರಗಳಲ್ಲಿದ್ದ ಸಾಮಾನ್ಯ ಅಭಿಪ್ರಾಯ. ಆದ್ದರಿಂದ ಅವುಗಳ ಅಭಿವೃದ್ಧಿಗೆ ಬ್ರಿಟನ್ ತಕ್ಕ ಆರ್ಥಿಕ ನೆರವು ನೀಡುವುದು ಅವಶ್ಯಕ ಎಂಬ ಭಾವನೆಯಿತ್ತು. ಅದರ ಪರಿಣಾಮವಾಗಿ 1950ರಲ್ಲಿ ಬ್ರಿಟಿಷ್ ಕಾಮನ್‍ವೆಲ್ತಿಗೆ ಸೇರಿದ ರಾಷ್ಟ್ರಗಳ ವಿದೇಶಾಂಗಮಂತ್ರಿಗಳು ತಮ್ಮ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸಿ ಒಂದು ನಿರ್ಧಾರ ಕೈಗೊಳ್ಳಲು ಶ್ರೀಲಂಕಾದ (ಆಗ ಸಿಂಹಳ) ರಾಜಧಾನಿಯಾದ ಕೊಲಂಬೋ ನಗರದಲ್ಲಿ ಸಭೆ ಸೇರುವಂತೆ ಬ್ರಿಟನ್ ಏರ್ಪಾಡು ಮಾಡಿತು. ಆ ವೇಳೆಗಾಗಲೇ

ಭಾರತ, ಪಾಕಿಸ್ತಾನ, ಮತ್ತು ಶ್ರೀಲಂಕಾಗಳಲ್ಲಿ ತಮ್ಮ ದೇಶಗಳ ಅಭಿವೃದ್ಧಿಗಾಗಿ ಆರ್ಥಿಕ ಯೋಜನೆಗಳನ್ನು ರೂಪಿಸಬೇಕೆಂಬ ಅಭಿಪ್ರಾಯ ಬೆಳೆದಿತ್ತು. ಆದ್ದರಿಂದ ಅಂಥ ಆರ್ಥಿಕ ಯೋಜನೆಗಳನ್ನು ಕೈಗೊಳ್ಳುವಾಗ ಕಾಮನ್‌ವೆಲ್ತಿನ ರಾಷ್ಟ್ರಗಳ ಪೈಕಿ ಆರ್ಥಿಕ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಎಷ್ಟರಮಟ್ಟಿಗೆ ಕಾಮನ್‌ವೆಲ್ತಿನ ಹಿಂದುಳಿದ ದೇಶಗಳಿಗೆ ನೆರವು ನೀಡಬಲ್ಲವು ಎಂಬುದನ್ನು ಕುರಿತು ಚರ್ಚಿಸುವುದೇ ಕೊಲಂಬೋ ಸಮ್ಮೇಳನದ ಉದ್ದೇಶವಾಗಿತ್ತು. ಬ್ರಿಟನ್ ಈ ಸಮ್ಮೇಳನದಲ್ಲಿ ಸಾಕಷ್ಟು ಆಸಕ್ತಿ ವಹಿಸಿತ್ತು. ಆಸ್ಟ್ರೇಲಿಯಕ್ಕೂ ಆಸಕ್ತಿಯಿತ್ತು. ಏಷ್ಯನ್ ರಾಷ್ಟ್ರಗಳಿಗೆ (ಅದರಲ್ಲೂ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ) ಆರ್ಥಿಕ ನೆರವು ನೀಡುವುದು ತನ್ನ ಕರ್ತವ್ಯ ಎಂದು ಆಸ್ಟ್ರೇಲಿಯ ಭಾವಿಸಿತು. ಪ್ರಾರಂಭದಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳು ಒಟ್ಟಾಗಿ ಸೇರಿ ಒಂದು ಯೋಜನೆಯನ್ನು ತಯಾರಿಸಿದುವು. ದಕ್ಷಿಣ ಹಾಗೂ ಆಗ್ನೇಯ ಏಷ್ಯದಲ್ಲಿ ಪರಸ್ಪರ ಸಹಕಾರದ ಮೂಲಕ ಆರ್ಥಿಕಾಭಿವೃದ್ಧಿ ಸಾಧಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು. ಕ್ರಮೇಣ ಏಷ್ಯದ ಇತರ ರಾಷ್ಟ್ರಗಳೂ ಈ ಯೋಜನೆಯಲ್ಲಿ ಭಾಗವಹಿಸಲು ಮುಂದೆ ಬಂದುವು. ಪಾಶ್ಚಾತ್ಯರಾಷ್ಟ್ರಗಳೂ ಕೊಲಂಬೋ ಯೋಜನೆಗೆ ಸೇರಿಕೊಂಡವು.

ಕೊಲಂಬೋ ಯೋಜನೆ ದಕ್ಷಿಣ ಮತ್ತು ಆಗ್ನೇಯ ಏಷ್ಯದ ಪ್ರದೇಶಕ್ಕೆ ಸೇರಿದ ರಾಷ್ಟ್ರಗಳೆಲ್ಲಕ್ಕೂ ಒಟ್ಟಾಗಿ ಅನ್ವಯಿಸುವ ಒಂದು ಅಂತಾರಾಷ್ಟ್ರೀಯ ಆರ್ಥಿಕ ಯೋಜನೆಯೆಂದು ಭಾವಿಸಲಾಗದು. ಇಂಥ ಅಂತಾರಾಷ್ಟ್ರೀಯ ಯೋಜನಾ ಸಂವಿಧಾನ ಇನ್ನೂ ಬೆಳೆದಿಲ್ಲ. ಈ ಪ್ರದೇಶದಲ್ಲಿರುವ ಒಂದೊಂದು ರಾಷ್ಟ್ರವೂ ತನ್ನದೇ ಆದ ಪಂಚವಾರ್ಷಿಕ ಚತುರ್ವಾರ್ಷಿಕ ಅಥವಾ ಷಷ್ಠವಾರ್ಷಿಕ ಯೋಜನೆಯನ್ನು ರೂಪಿಸಿಕೊಂಡಿವೆ. ಇವುಗಳ ವಿವಿಧ ರಾಷ್ಟ್ರೀಯ ಆರ್ಥಿಕ ಯೋಜನೆಗಳಿಗೆ ಕೊಲಂಬೋ ಯೋಜನೆಯ ಸದಸ್ಯರಾಷ್ಟ್ರಗಳು ಸಹಾಯ ನೀಡುತ್ತವೆ. ಇದೊಂದು ಅಂತಾರಾಷ್ಟ್ರೀಯ ಸಹಕಾರಪ್ರಯೋಗ. ಈ ಪ್ರದೇಶದ ರಾಷ್ಟ್ರಗಳ ಅಭಿವೃದ್ಧಿಯ ಅವಶ್ಯಕತೆಗಳು ಅಧಿಕ. ಅವುಗಳ ಸಾಧನಸಂಪತ್ತುಗಳು ಪರಿಮಿತ. ಆದ್ದರಿಂದ ಕೊಲಂಬೋ ಯೋಜನೆಯಂಥ ಅಂತಾರಾಷ್ಟ್ರೀಯ ಸಹಕಾರ ಅವಶ್ಯಕ ಹಾಗೂ ಅತ್ಯಂತ ಉಪಯುಕ್ತ.

ಕೊಲಂಬೋ ಯೋಜನೆಯ ಮೂಲಕ ಸಹಾಯ ಎರಡು ಬಗೆಯಲ್ಲಿ ಲಭ್ಯವಾಗುತ್ತದೆ: 1. ಬಂಡವಾಳ ಸಹಾಯ ಮತ್ತು 2. ತಾಂತ್ರಿಕ ಸಹಕಾರ. ಕೊಲಂಬೋ ಯೋಜನೆಯಲ್ಲಿ ಸಹಾಯ ದೊರೆಯಬೇಕಾದರೆ, ಸಹಾಯ ಬೇಕಾದ ರಾಷ್ಟ್ರ ತನಗೆ ಯಾವ ರೀತಿಯ ಸಹಾಯ ಬೇಕೆಂಬುದನ್ನು ತಿಳಿಸಬೇಕು. ಆಗ ಕೊಲಂಬೋ ಯೋಜನಾ ಬ್ಯೂರೊ ಸಹಾಯ ಒದಗಿಸಬಲ್ಲಂಥ ರಾಷ್ಟ್ರಗಳೊಡನೆ ಚರ್ಚಿಸಿ ಸಹಾಯಕೋರುವ ರಾಷ್ಟ್ರಗಳಿಗೆ ಸಹಾಯ ಒದಗಿಸಿಕೊಡುತ್ತದೆ. ನೆರವು ನೀಡುವ, ನೆರವು ಪಡೆಯುವ ರಾಷ್ಟ್ರಗಳ ನಡುವೆ ಒಪ್ಪಂದ ಏರ್ಪಡಿಸಿ ನೆರವು ಹರಿಯುವಂತೆ ಮಾಡುವುದು ಇದರ ವಿಧಾನ. ತಾಂತ್ರಿಕ ಸಹಕಾರ ಮಂಡಲಿ ಆಗಿಂದಾಗ್ಗೆ ಸಭೆ ಸೇರಿ ತಾಂತ್ರಿಕ ಸಹಾಯದ ಬಗ್ಗೆ ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳುವುದು.

ಕೊಲಂಬೋ ಯೋಜನೆಯ ಸಮಾಲೋಚನ ಸಮಿತಿ ವರ್ಷಕ್ಕೊಮ್ಮೆ ಸಭೆ ಸೇರಿದಾಗ ಪ್ರತಿಯೊಂದು ಪ್ರದೇಶಕ್ಕೂ ಸಂಬಂಧಪಟ್ಟ ಆರ್ಥಿಕ ಸಮಸ್ಯೆಗಳನ್ನೂ ಇವುಗಳನ್ನು ಪರಿಹರಿಸುವ ಉಪಾಯಗಳನ್ನೂ ಪರಿಶೀಲಿಸಲಾಗುತ್ತದೆ. ಅಭಿವೃದ್ಧಿಹೊಂದಿದ ದೇಶಗಳು ಎಷ್ಟರಮಟ್ಟಿಗೆ ಏಷ್ಯನ್ ರಾಷ್ಟ್ರಗಳಿಗೆ ಬಂಡವಾಳ ಒದಗಿಸಬಲ್ಲವು ಎಂಬುದನ್ನು ತಿಳಿದುಕೊಂಡು ಪ್ರತಿಯೊಂದು ರಾಷ್ಟ್ರಕ್ಕೂ ಸಾಧ್ಯವಾದಷ್ಟು ಮಟ್ಟಿಗೆ ಬಂಡವಾಳ ಸಹಾಯ ದೊರಕಿಸಿಕೊಡಲಾಗುತ್ತದೆ. ಸಹಾಯ ಒದಗಿಸುವ ರಾಷ್ಟ್ರ ಸಹಾಯ ಕೋರುವ ರಾಷ್ಟ್ರದೊಡನೆ ನೇರವಾಗಿ ಮಾತುಕತೆ ನಡೆಸಿ ಸಹಾಯ ಒದಗಿಸುತ್ತದೆ. ಸದಸ್ಯರಾಷ್ಟ್ರಗಳು ಒಂದಕ್ಕೊಂದು ಸಹಾಯ ನೀಡುವುದಲ್ಲದೆ ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳು ಕೂಡ ಈ ಪ್ರದೇಶದ ರಾಷ್ಟ್ರಗಳಿಗೆ ಸಹಾಯ ಒದಗಿಸುತ್ತಿವೆ. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಸಾಲ ಅಥವಾ ದಾನ, ಆಹಾರ ಸಾಮಗ್ರಿ, ಗೊಬ್ಬರ, ಯಂತ್ರೋಪಕರಣಗಳು, ಸಾರಿಗೆ ವಾಹನಗಳು, ಪ್ರಯೋಗಾಲಯ ಸಲಕರಣೆಗಳು–ಈ ರೂಪಗಳಲ್ಲಿ ಬಂಡವಾಳ ಸಹಾಯ ದೊರೆಯುತ್ತದೆ.

ತಾಂತ್ರಿಕ ಸಹಾಯವನ್ನು ವಿವಿಧ ರೂಪಗಳಲ್ಲಿ ಒದಗಿಸಲಾಗುತ್ತದೆ. ನಿಪುಣರ ಹಾಗೂ ತಂತ್ರಜ್ಞರ ಸೇವೆ ಒದಗಿಸುವುದು, ಏಷ್ಯನ್ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಿವಿಧ ತಾಂತ್ರಿಕ ಕ್ಷೇತ್ರಗಳಲ್ಲಿ ಹೆಚ್ಚಿನ ತರಬೇತು ಸೌಕರ್ಯಗಳನ್ನು ಏರ್ಪಡಿಸುವುದು. ಹಿಂದುಳಿದಿರುವ ರಾಷ್ಟ್ರಗಳಲ್ಲಿ ತಾಂತ್ರಿಕ ಶಾಲೆಗಳನ್ನು ಸ್ಥಾಪಿಸಲು ಮತ್ತು ಸಂಶೋಧನೆಗೆ ವಿಶೇಷ ರೀತಿಯ ಸಲಕರಣೆಗಳನ್ನು ನೀಡುವುದು, ಕೈಗಾರಿಕಾ ಸಂಸ್ಥೆಗಳನ್ನು ಸ್ಥಾಪಿಸಲು ನೆರವು ನೀಡುವುದು, ಹೀಗೆ ತಾಂತ್ರಿಕ ಸಹಕಾರ ಹೆಚ್ಚಿಸುವುದೂ ಕೊಲಂಬೋ ಯೋಜನೆ ಮಾಡುತ್ತಿರುವ ಕೆಲಸವಾಗಿದೆ.

ಕೊಲಂಬೋ ಯೋಜನೆ ಖಾಯಂ ಯೋಜನೆಯಾಗಿ ಸ್ಥಾಪಿತವಾಗಿಲ್ಲ. 1950ರಲ್ಲಿ ಮೊದಲ ಬಾರಿಗೆ ಇದು ಪ್ರಾರಂಭವಾದಾಗ 1957ಕ್ಕೆ ಕೊನೆಯಾಗಬೇಕೆಂದು ನಿರೀಕ್ಷಿಸಲಾಗಿತ್ತು. ಅನಂತರ 1961ರ ವರೆಗೂ ತದನಂತರ 1967ರ ವರೆಗೂ ಮುಂದುವರಿಸಲಾಯಿತು. ಈಗ 1975ರ ವರೆಗೂ ಯೋಜನೆಯನ್ನು ಮುಂದುವರಿಸಲಾಗಿದೆ.

1950ರಿಂದ 1967ರ ಡಿಸೆಂಬರ್ ವರೆಗೆ 52,329 ವಿದ್ಯಾರ್ಥಿಗಳು ತಾಂತ್ರಿಕ ತರಬೇತು ಪಡೆದಿದ್ದರು. 10,793 ಪರಿಣತರನ್ನೂ 34.28 ಕೋಟಿ ಡಾಲರ್ ಮೌಲ್ಯದ ಉಪಕರಣಗಳನ್ನೂ ಒದಗಿಸಲಾಗಿತ್ತು. ಯೋಜನೆಯನ್ನು ಪ್ರಾರಂಭಿಸಿದಂದಿನಿಂದ 1967ರ ಡಿಸೆಂಬರ್ ವರೆಗೆ ನಡೆಸಿದ ಸಹಕಾರ ಕಲಾಪಗಳ ಒಟ್ಟು ಮೌಲ್ಯ 99 ಕೋಟಿ ಡಾಲರ್. ಇದರಲ್ಲಿ ಸೇ.19 ತರಬೇತು ಪಡೆಯುವವರಿಗೂ ಸೇ.46 ಪರಿಣತರಿಗೂ ಸಲಹೆಗಾರರಿಗೂ ಸೇ.35 ತಾಂತ್ರಿಕ ಉಪಕರಣಗಳಿಗೂ ವೆಚ್ಚವಾಯಿತು.

ಅಭಿವೃದ್ಧಿಶೀಲ ದೇಶಗಳಿಗೆ ಅಭಿವರ್ಧಿಸಿದ ದೇಶಗಳಿಂದ ನೆರವು ಬರುವುದಲ್ಲದೆ, ಅಭಿವೃದ್ಧಿಶೀಲ ದೇಶಗಳೇ ಈಗ ಪರಸ್ಪರ ಸಹಾಯ ನೀಡುತ್ತವೆ. ಅಭಿವೃದ್ಧಿಶೀಲ ದೇಶಗಳ ಪೈಕಿ ಭಾರತ, ಪಾಕಿಸ್ತಾನ, ಬರ್ಮ, ಶ್ರೀಲಂಕಾ, ಫಿಲಿಪೀನ್ಸ್ ಮತ್ತು ದಕ್ಷಿಣ ಕೊರಿಯ ಇತರ ಸದಸ್ಯ ರಾಷ್ಟ್ರಗಳಿಗೆ ಸಹಾಯ ಒದಗಿಸುತ್ತವೆ ಭಾರತ ಆರ್ಥಿಕವಾಗಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗಿ ಬಂದರೂ ಇತರ ಸದಸ್ಯರಾಷ್ಟ್ರಗಳಿಗೆ ಕೊಡುತ್ತಿರುವ ಸಹಾಯವನ್ನು ಪ್ರತಿವರ್ಷವೂ ಹೆಚ್ಚಿಸಿಕೊಂಡು ಹೋಗುತ್ತಿದೆ. 1966ರ ಕೊನೆಯ ವೇಳೆಗೆ ಭಾರತ 3,407 ವಿದ್ಯಾರ್ಥಿಗಳಿಗೆ ತಾಂತ್ರಿಕಜ್ಞಾನ ಪಡೆಯಲು ಅವಕಾಶ ಮಾಡಿಕೊಟ್ಟಿತು. ಆಫ್ಘಾನಿಸ್ತಾನ, ಬರ್ಮ, ಕಾಂಬೋಡಿಯ, ಶ್ರೀಲಂಕಾ, ಇಂಡೊನೇಷ್ಯ, ದಕ್ಷಿಣ ಕೊರಿಯ, ಲಾವೋಸ್, ಮಲಯ, ನೇಪಾಳ, ಪಾಕಿಸ್ತಾನ, ಥೈಲೆಂಡ್, ದಕ್ಷಿಣ ವಿಯೆಟ್ನಾಂ ಮತ್ತು ಅನೇಕ ಆಫ್ರಿಕನ್ ರಾಷ್ಟ್ರಗಳಿಂದ ವಿದ್ಯಾರ್ಥಿಗಳು ಭಾರತಕ್ಕೆ ಬಂದು ತಾಂತ್ರಿಕಜ್ಞಾನ ಪಡೆದಿದ್ದಾರೆ. ಭಾರತದ ವಿಜ್ಞಾನಿಗಳು ಮತ್ತು ತಜ್ಞರು ಅಕ್ಕಪಕ್ಕದ ರಾಷ್ಟ್ರಗಳಲ್ಲಿ ಸಕ್ಕರೆ, ಉಕ್ಕು ಮತ್ತು ಕಬ್ಬಿಣ ಮತ್ತು ಸಣ್ಣ ಕೈಗಾರಿಕೆಗಳ ಸ್ಥಾಪನೆಯಲ್ಲಿ, ಜಾನುವಾರು ಅಭಿವೃದ್ಧಿ ಯೋಜನೆಯಲ್ಲಿ, ವಿದ್ಯಾ ಸಂಸ್ಥೆಗಳ ಸ್ಥಾಪನೆಯಲ್ಲಿ ಮತ್ತು ಜನಗಣತಿ ಕಾರ್ಯದಲ್ಲಿ ಸಹಾಯ ಮಾಡಿದ್ದಾರೆ. ನೇಪಾಳ ಮತ್ತು ಭೂತಾನಗಳಿಗೆ ಭಾರತ ಅಧಿಕ ಸಹಾಯ ನೀಡಿದೆ. ಇದಲ್ಲದೆ ಕಾಂಬೋಡಿಯ, ಥೈಲೆಂಡ್ ಮತ್ತು ಶ್ರೀಲಂಕಾಗಳಿಗೂ ಸಹಾಯ ನೀಡಿದೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಸಹಾಯ ಮಾಡಲು ಇತರ ಅಂತರರಾಷ್ಟ್ರೀಯ ಸಂಸ್ಥೆಗಳು ಈಚೆಗೆ ಸ್ಥಾಪಿತವಾಗಿದ್ದರೂ ಕೊಲಂಬೋ ಯೋಜನೆ ಏಷ್ಯದ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಬಹಳ ಉಪಯುಕ್ತವಾದ ಮತ್ತು ಪರಿಣಾಮಕಾರಿಯಾದ ಪಾತ್ರ ವಹಿಸಿದೆ. ದಕ್ಷಿಣ ಮತ್ತು ಆಗ್ನೇಯ ಏಷ್ಯನ್ ರಾಷ್ಟ್ರಗಳಲ್ಲಿ ಕೃಷಿ ಅಭಿವೃದ್ಧಿ ಸಾಧ್ಯವಾಗಿರುವುದು ಬಹುತೇಕ ಈ ಯೋಜನೆಯ ಪರಿಣಾಮ. ಭಾರತ, ಪಾಕಿಸ್ತಾನ ಮತ್ತು ನೇಪಾಳಗಳಲ್ಲಿ ಗೋದಿ ಉತ್ಪಾದನೆಯಲ್ಲಿ ಸಾಧಿಸಿರುವ ವಿಕ್ರಮ, ಫಿಲಿಪೀನ್ಸ್ ಮತ್ತು ಶ್ರೀಲಂಕಾಗಳಲ್ಲಿ ಬತ್ತದ ಉತ್ಪಾದನೆಯಲ್ಲಿ ಸಾಧಿಸಿರುವ ಪ್ರಗತಿ, ಲಕ್ಷಾಂತರ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಸಾಗಿಸಲು ಮತ್ತು ದಾಸ್ತಾನಿಸಲು ಭಾರತ, ಪಾಕಿಸ್ತಾನ ಮತ್ತು ದಕ್ಷಿಣ ವಿಯೆಟ್‌ನಾಂಗಳಲ್ಲಿ ಕೈಗೊಂಡಿರುವ ಕ್ರಮಗಳು ಮತ್ತು ಬೃಹತ್ ನೀರಾವರಿ ಯೋಜನೆಗಳು–ಇವು ಕೊಲಂಬೋ ಯೋಜನೆಯ ಮಹತ್ಸಾಧನೆ ಎಂದು ಹೇಳಬಹುದು.

ಪ್ರಪಂಚದ ನಾಲ್ಕನೆಯ ಒಂದು ಭಾಗ ಜನಸಂಖ್ಯೆ ಪಡೆದಿರುವ ಈ ರಾಷ್ಟ್ರಗಳ ವರಮಾನ ಮತ್ತು ಉತ್ಪಾದನೆಯನ್ನು ಹೆಚ್ಚಿಸಿರುವುದರಲ್ಲಿ ಕೊಲಂಬೋ ಯೋಜನೆಯ ಪಾತ್ರ ಗಣನೀಯವಾಗಿದೆ. ದಕ್ಷಿಣ ಮತ್ತು ಆಗ್ನೇಯ ಏಷ್ಯನ್ ರಾಷ್ಟ್ರಗಳ ಜನ ತಮ್ಮ ಅಭಿವೃದ್ಧಿ ಸಾಧಿಸಲು ಈ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಅಭಿವೃದ್ಧಿಶೀಲ ರಾಷ್ಟ್ರಗಳ ಜನರ ಬಡತನದ ನಿವಾರಣೆಗೆ ಸಹಾಯ ನೀಡುವುದರಲ್ಲಿ ಮತ್ತು ಈ ಜನರ ಉತ್ಸಾಹಕ್ಕೆ ಪ್ರೋತ್ಸಾಹ ನೀಡಿ ಅವರ ಅಭ್ಯುದಯ ಸಾಧಿಸುವಂತೆ ಮಾಡುವುದರಲ್ಲಿ ಕೊಲಂಬೋ ಯೋಜನೆಯ ಪಾತ್ರ ಮುಖ್ಯವಾದ್ದು. (ಎನ್.ಪಿ.ಎಸ್.)

**ಕೊಲಾಡಿಯನ್ :** ಆಲ್ಕೊಹಾಲ್ ಮತ್ತು ಈಥರುಗಳ ಮಿಶ್ರಣದಲ್ಲಿ ಗನ್‌ಕಾಟನ್ ಮತ್ತು ಪೈರೊಕ್ಸಲಿನ್‌ಗಳ ಗುಂಪಿಗೆ ಸೇರಿದ ರಸಾಯನ ವಸ್ತುಗಳನ್ನು ಕರಗಿಸುವುದರಿಂದ ಬರುವ ವಸ್ತು. ಇದು ಬಣ್ಣವಿಲ್ಲದ ಅಂಟಾಗಿರುವ ದ್ರವ. ಇದನ್ನು ಗಾಜು ಮುಂತಾದುವುಗಳಿಗೆ ಹಚ್ಚಿದಾಗ ಅದು ಗಟ್ಟಿಯಾಗಿ ತೆಳುಪೊರೆಯಾಗುತ್ತದೆ. ಆಲ್ಕೊಹಾಲ್ ಹೆಚ್ಚಿದ್ದರೆ ಬರುವ ತೆಳುಪೊರೆಗೆ ಅಷ್ಟು ತ್ರಾಣವಿರುವುದಿಲ್ಲ; ಅದು ಸುಲಭವಾಗಿ ಹರಿದುಹೋಗುವುದು. ಈಥರ್ ಹೆಚ್ಚಾಗಿದ್ದರೆ ಬಲು ತ್ರಾಣಿಯಾದ ತೆಳುಪೊರೆ ಬರುತ್ತದೆ. ಸೂಕ್ಷ್ಮದರ್ಶಕದಲ್ಲಿ ಈ ಪೊರೆ ಪಾರದರ್ಶಕ. ಇದನ್ನು ಚರ್ಮದ ಮೇಲೆ ಬಳಿದಾಗ ಅದು ಬೇಗನೆ ಒಣಗಿ ತೆಳುವಾದ ಪೊರೆಯನ್ನು ಬಿಡುತ್ತದೆ. ಈ ಪೊರೆ ಸಂರಕ್ಷಣೆಗೂ ಒತ್ತಿಹಿಡಿಯಲೂ ಅನುಕೂಲ. ಆದ್ದರಿಂದ ಇದನ್ನು ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ. ಛಾಯಾಚಿತ್ರ ತೆಗೆಯುವುದರಲ್ಲಿಯೂ ಇದರ ಬಳಕೆ ಉಂಟು. ಅಲ್ಲಿ ಅದಕ್ಕೆ ಅಯೊಡೈಡನ್ನು ಹಾಕಲು ಅಮೋನಿಯಂ ಬ್ರೋಮೈಡ್, ಅಯೊಡೈಡ್ ಮತ್ತು ಕ್ಯಾಲ್ಸಿಯಂ, ಕ್ಯಾಡ್ಮಿಯಂ ಅಯೊಡೈಡುಗಳನ್ನು ಬಳಸುತ್ತಾರೆ. ಕೆನಡಾ ಬಾಲ್ಸಮ್ ಮತ್ತು ಹರಳೆಣ್ಣೆಯನ್ನು ಒಳಗೊಂಡ ಕೊಲಾಡಿಯನ್ ಒಣಗಿ ಮುರಿಯದೆ ಬಾಗಬಲ್ಲುದು, ಅಲ್ಲದೆ ಅದು ಸಂಕುಚಿತವಾಗುವುದಿಲ್ಲ. (ಎ.ಎಸ್.ಆರ್.)

**ಕೊಲಾಮಿ :** ಆಂಧ್ರಪ್ರದೇಶದ ಅದಿಲಾಬಾದ್ ಮತ್ತು ಮಹಾರಾಷ್ಟ್ರದ ಚಂದ ಮೊದಲಾದ ಜಿಲ್ಲೆಗಳಲ್ಲಿ ಕೊಲಾಮಿಗಳು ಬಳಸುತ್ತಿರುವ ಒಂದು ದ್ರಾವಿಡಭಾಷೆ. 1951ರ ಭಾರತ ಜನಗಣತಿಯ ಪ್ರಕಾರ ಈ ಭಾಷೆಯನ್ನಾಡುವ ಜನಸಂಖ್ಯೆ ಸು. 50,000. ಇದಕ್ಕೆ ಸಂಬಂಧಿಸಿದಂತೆ ಅನೇಕ ಉಪಭಾಷೆಗಳಿವೆ. ಆದರೆ ಎಷ್ಟು ಉಪಭಾಷೆಗಳಿವೆ, ಎಷ್ಟರಮಟ್ಟಿಗೆ ಕೊಲಾಮಿಯಿಂದ ಅವು ಭಿನ್ನವಾಗಿವೆ ಎಂಬುದನ್ನು ಇನ್ನೂ ಹೆಚ್ಚಿನ ಸಂಶೋಧನೆ ನಡೆಸಿ ನಿರ್ಧರಿಸಬೇಕಾಗಿದೆ. ದೊರೆತಿರುವ ಸಾಮಗ್ರಿಯಲ್ಲಿ ಅಧಿಕೃತ ಮತ್ತು ಅಧಿಕ ಪರಿಮಾಣದ್ದೆನ್ನಬಹುದಾದುದನ್ನು ವರ್ಧಾ ಜಿಲ್ಲೆಯಿಂದ ಸಂಗ್ರಹಿಸಲಾಗಿದೆ.

ಟಿ.ಬರೊ ಮತ್ತು ಎಂ.ಬಿ. ಎಮಿನೊ ಅವರ ಕೋಶದಲ್ಲಿ ಅದಿಲಾಬಾದಿನ ಕಿನ್ವತ್‌ನಲ್ಲಿ ಸಂಗ್ರಹಿಸಲಾದ ಕೈಕಿ (ನಾಯ್ಕಿ) ಎಂಬ ಭಾಷೆಯನ್ನು ಪ್ರತ್ಯೇಕ ಭಾಷೆಯೆಂದೇ ಹೇಳಲಾಗಿದೆ.

ಕೊಲಾಮಿ ಭಾಷೆಯನ್ನು ನಾಯ್ಕಿ, ಪರ್ಜಿ ಮತ್ತು ಗದಬ ಭಾಷೆಗಳೊಂದಿಗೆ ಸೇರಿಸಿ ದ್ರಾವಿಡಭಾಷಾ ಪರಿವಾರದಲ್ಲಿ ಕೊಲಾಮಿ–ಪರ್ಜಿ ಎಂದು ಕರೆದಿದ್ದಾರೆ. ಈ ಭಾಷೆಯಲ್ಲಿ ಕಂಡುಬರುವ ಕೆಲವು ವಿಶಿಷ್ಟ ಲಕ್ಷಣಗಳು ಇವು: (1) ಮೂಲ ದ್ರಾವಿಡಭಾಷೆಯ * ರ >ದ (*r > d) > d) ಆಗಿರುವುದು, (2) ನಾಮಪದಗಳಲ್ಲಿ ಬಹುವಚನ ಪ್ರತ್ಯಯಗಳ ಬೆಳವಣಿಗೆ ಮತ್ತು (3) 2 ರಿಂದ 4 ರ ವರೆಗಿನ ಸಂಖ್ಯಾವಾಚಿಗಳಲ್ಲಿನ ತ್ರಿಲಿಂಗ ಪದ್ಧತಿ. ಈ ಪರಿವಾರ ತೆಲುಗು ಭಾಷೆಯನ್ನೊಳಗೊಂಡ ಮಧ್ಯದ್ರಾವಿಡಭಾಷಾ ಗುಂಪಿಗೆ ಸೇರುತ್ತದೆ. ಮೂಲ ದ್ರಾವಿಡದ *ಣ > ನ (*ṇ > n) ಮತ್ತು * ಳ >ಲ (*ḷ > l)ಗಳ ಪರಿವರ್ತನೆ ಮತ್ತು * ಅವನು (ದಕ್ಷಿಣ ದ್ರಾವಿಡ ಭಾಷೆಗಳ *ಅವನ್ ರೂಪಕ್ಕೆ ವಿರುದ್ಧವಾದ) ರೂಪದ ನಿರ್ದೇಶಕ ಸರ್ವನಾಮಗಳಲ್ಲಿಯ ಪುಲ್ಲಿಂಗ ಏಕವಚನದ ಬೆಳವಣಿಗೆಗಳು ಈ ಗುಂಪಿನ ವಿಶಿಷ್ಟ ಲಕ್ಷಣಗಳು. ನಿರ್ದೇಶಕ ಸರ್ವನಾಮದ ಪುಲ್ಲಿಂಗ ಏಕವಚನದ ಈ ರೂಪಗಳೇ ಕೊಲಾಮಿಯ ವಿಶಿಷ್ಟರೂಪಗಳು. ಇದಕ್ಕೆ ಸಂವಾದಿಯಾಗಿ ನಾಯ್ಕಿ ಭಾಷೆಯ 'ಅವ್ನ್ದ್' (*avnd*) ಮತ್ತು ಇತರ ಉಪಭಾಷೆಗಳು ವ್ನ್–ಮ್ ಮತ್ತು ಅಮ್ ರೂಪಗಳನ್ನು ಹೊಂದಿವೆ.

ಕೊಲಾಮಿ ಭಾಷೆ ತೆಲುಗು ಮತ್ತು ಮರಾಠಿ ಭಾಷೆಗಳಿಂದ ಸಾಕಷ್ಟು ಶಬ್ದಗಳನ್ನು ಎರವಲು ಪಡೆದಿದೆ. ವರ್ಧಾ ಉಪಭಾಷೆಯಿಂದ ಸಂಗ್ರಹಿಸಿರುವ ಶಬ್ದಗಳಲ್ಲಿ ಶೇ. 35 ಭಾಗ ಮರಾಠಿ ಮೂಲದವು. (ಎಂ.ಬಿ.ಇ.)

**ಕೊಲಾಮಿನಿಕ್ ಆಮ್ಲ :** ಎನ್–ಅಸಿಟೈಲ್ ನ್ಯೂರಾಮಿನಿಕ್ ಆಮ್ಲದ ಬಹುಘಟಕ ಅಥವಾ ಪಾಲಿಮರ್ ಆದ ಕೊಲಾಮಿನಿಕ್ ಆಮ್ಲ ಒಂದು ಹೋಮೋಪಾಲಿಸ್ಯಾಕರೈಡ್. ಎಸ್ಚೆರಿಷಿಯ ಕೋಲಿ ಮತ್ತು ಇತರ ಹಲವು ಸೂಕ್ಷ್ಮಾಣುಜೀವಿಗಳಲ್ಲಿ ಮಾತ್ರ ಈ ಸಂಯುಕ್ತ ಇರುವುದು ಕಂಡುಬಂದಿದೆ. ಇದರ ಜೈವಿಕ ಸಂಶ್ಲೇಷಣೆ (ಬಯೋಸಿಂಥೆಸಿಸ್) ಈ ಮುಂದೆ ತೋರಿಸಿರುವಂತೆ ಆಗುತ್ತದೆಂದು ತಿಳಿದುಬಂದಿದೆ.

ಗ್ಲೂಕೋಸಮೈನ್ – 6 – ಫಾಸ್ಫೇಟ್

↓

ಅಸಿಟೈಲ್ ಗ್ಲೂಕೋಸಮೈನ್–6–ಫಾಸ್ಫೇಟ್

↓

ಅಸಿಟೈಲ್ ಮ್ಯಾನೋಸಮೈನ್–6–ಫಾಸ್ಫೇಟ್

↓

ಎನ್–ಅಸಿಟೈಲ್ ನ್ಯೂರಾಮಿನಿಕ್ ಆಮ್ಲದ–9–ಫಾಸ್ಫೇಟ್

↓

ಎನ್–ಅಸಿಟೈಲ್ ನ್ಯೂರಾಮಿನಿಕ್ ಆಮ್ಲ (NAN)

↓

ಸೈಟಿಡಿನ್–5'–ಮಾನೋ ಫಾಸ್ಫೋ–ಎನ್–ಅಸಿಟೈಲ್ ನ್ಯೂರಾಮಿ ನಿಕ್ ಆಮ್ಲ (CMP-NAN)

↓

ಕೊಲಾಮಿನಿಕ್ ಆಮ್ಲ

CMP-NAN ಸಂಯುಕ್ತ ಕೊಲಾಮಿನಿಕ್ ಆಮ್ಲಕ್ಕೆ ಮಾತ್ರವಲ್ಲದೆ ಓಲಿಗೋ ಸ್ಯಾಕರೈಡುಗಳು, ಗ್ಲೈಕೋಪ್ರೋಟೀನುಗಳು ಮತ್ತು ಗ್ಯಾಂಗ್ಲಿಯೋಸೈಡುಗಳೆಂಬ ಪಾಲಿಸ್ಯಾಕರೈಡುಗಳಿಗೂ ಪೂರ್ವಗಾಮಿ (ಪ್ರೀಕರ್ಸರ್) ಆಗಿದೆ. (ಕೆ.ಟಿ.ಎಸ್)



ಕೊಲಾಮಿನಿಕ್ ಆಮ್ಲ

**ಕೊಲೂಗೊ :** ಫಿಲಿಪೀನ್ಸ್, ಮಲಯ, ಜಾವ, ಸುಮಾತ್ರ, ಬೋರ್ನಿಯೊ ಹಾಗೂ ಮಯನ್ಮಾರ್‌ಗಳಲ್ಲಿ ಮಾತ್ರ ಕಂಡುಬರುವ ಒಂದು ವಿಚಿತ್ರ ಜಾತಿಯ ಸಸ್ಯಾಹಾರಿ ಸ್ತನಿ. ಇದರ ವೈಜ್ಞಾನಿಕ ನಾಮ ಸೈನೊಸಿಫ್ಯಾಲಸ್. ಮ್ಯಾಮೇಲಿಯ ವರ್ಗ, ಡರ್ಮಾಪ್ಟರ ಗಣ, ಸೈನೊಸಿಫ್ಯಾಲಿಡೀ ಕುಟುಂಬಕ್ಕೆ ಸೇರಿದೆ. ಇದರಲ್ಲಿ ಸೈ. ವೊಲಾನ್ಸ್ ಮತ್ತು ಸೈ.ವೇರಿಗೇಟಸ್ ಎಂಬ ಎರಡು ಪ್ರಭೇದಗಳಿವೆ. ಮೊದಲನೆಯದು ಫಿಲಿಪೀನ್ಸ್ ದ್ವೀಪಗಳಲ್ಲೂ ಎರಡನೆಯದು ಮೇಲೆ ಹೇಳಿದ ಇತರ ಪ್ರದೇಶಗಳಲ್ಲೂ ಕಂಡುಬರುತ್ತವೆ. ಇವೆರಡಕ್ಕೂ ಕೊಬೀಗೋ, ಕಾಗುವಾನ್, ಫ್ಲೈಯಿಂಗ್ ಲೀಮರ್ ಎಂಬ ಇತರ ಹೆಸರುಗಳೂ ಇವೆ. (ಎಸ್.ಎನ್‌ಕೆಯು.)

ಕೊಲೂಗೊ ವೃಕ್ಷವಾಸಿ. ವಿವಿಧ ಬಗೆಯ ಹಣ್ಣುಗಳು, ಮೊಗ್ಗುಗಳು, ಹೂಗಳು ಚಿಗುರು ಮುಂತಾದುವನ್ನು ತಿಂದು ಜೀವಿಸುತ್ತದೆ. ಮಳೆಯಲ್ಲಿ ನೆನೆದ ಎಲೆಗಳನ್ನು ನೆಕ್ಕಿ ನೀರನ್ನು ಒದಗಿಸಿಕೊಳ್ಳುತ್ತದೆ.

ಕೊಲೂಗೊ ತನ್ನ ರೂಪ, ಗಾತ್ರ ಮತ್ತು ನಡತೆಯಲ್ಲಿ ಹಾರುವ ಅಳಿಲನ್ನು


ಕೊಲೂಗೊ ತನ್ನ ಮರಿಯೊಂದಿಗೆ

ಹೋಲುತ್ತದೆ. ಮೂತಿ ಮಾತ್ರ ಲೀಮರಿನಲ್ಲಿರುವಂತಿದೆ. ಗಾತ್ರದಲ್ಲಿ ಅಳಿಲಿಗಿಂತ ಕೊಂಚ ದೊಡ್ಡದು ದೇಹ ಮತ್ತು ತಲೆ ಇವೆರಡರ ಒಟ್ಟು ಉದ್ದ ಸು.380–423 ಮಿಮೀ. ಬಾಲದ ಉದ್ದ 220–270ಮೀ. ದೇಹದ ಬಣ್ಣ ಗಂಡಿನಲ್ಲಿ ಕಂದು, ಹೆಣ್ಣಿನಲ್ಲಿ ಬೂದು, ವೇರಿಗೇಟಸ್ ಪ್ರಭೇದದಲ್ಲಿ ದೇಹದ ಮೇಲೆ ಬಿಳಿಯ ಬಣ್ಣದ ಮಚ್ಚೆಗಳಿವೆ. ಇದರಿಂದಾಗಿ ಕೊಲೂಗೊ ಮರದಲ್ಲಿರುವಾಗ ಹಿನ್ನೆಲೆಯ ಬಣ್ಣದೊಂದಿಗೆ ಬಲು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಕೊಲೂಗೊವಿನ ಅತಿ ವಿಶಿಷ್ಟವಾದ ಹಾಗೂ ಪ್ರಮುಖವಾದ ಲಕ್ಷಣ ಅದರ ಕೈಕಾಲು ಮತ್ತು ಬಾಲಗಳನ್ನೆಲ್ಲ ಒಳಗೊಂಡು, ದೇಹದ ಎರಡೂ ಪಕ್ಕಗಳಲ್ಲಿರುವ ರೆಕ್ಕೆ. ರೆಕ್ಕೆಯೆಂದರೆ ಹಕ್ಕಿಗಳಲ್ಲಾಗಲೀ ಬಾವಲಿಗಳಲ್ಲಾಗಲೀ ಇರುವಂಥದಲ್ಲ; ದೇಹದ ಪಾರ್ಶ್ವಗಳಲ್ಲಿಯ ಚರ್ಮದ ಮಡಿಕೆ ಮಾತ್ರ. ಕೈಕಾಲುಗಳನ್ನು ಹರಡಿದಾಗ ಇದೂ ಸಹ ಹರಡಿಕೊಳ್ಳುತ್ತದೆ. ಇದರ ಸಹಾಯದಿಂದ ಕೊಲೂಗೊ ಒಂದು ಮರದಿಂದ ಇನ್ನೊಂದಕ್ಕೆ ಸಾಗಬಲ್ಲುದು. ಹೀಗೆ ಸಾಗುವಾಗ ರೆಕ್ಕೆಯನ್ನು ಪ್ಯಾರಾಚೂಟಿನಂತೆ ಅಗಲವಾಗಿ ಹರಡಿಕೊಂಡು ಗಾಳಿಯಲ್ಲಿ ನಿಧಾನವಾಗಿ ತೇಲುತ್ತದೆ. ಗಾಳಿ ಬೀಸದಿರುವಾಗಲೂ ಸುಮಾರು 68 ಮೀಟರುಗಳಷ್ಟು ದೂರವನ್ನು ಕ್ರಮಿಸಬಲ್ಲುದು.

ಈ ಬಗೆಯ ಚಲನೆಗೆ ಕೊಲೂಗೊ ಎಷ್ಟು ಚೆನ್ನಾಗಿ ಹೊಂದಿಕೊಂಡಿದೆಯೆಂದರೆ ಇದು ನೆಲದ ಮೇಲೆ ಬಹಳ ಕಷ್ಟಪಟ್ಟು ನಡೆಯಬಲ್ಲುದು ಮಾತ್ರ. ಆದರೆ ಮರದ ಮೇಲಿರುವಾಗ ಆಹಾರಕ್ಕಾಗಿ ತನ್ನ ಚೂಪಾದ ಉಗುರುಗಳ ಸಹಾಯದಿಂದ ಮೆಲ್ಲಗೆ ರೆಂಬೆಗಳನ್ನು ಹತ್ತುತ್ತದೆ. ಕೊಲೂಗೊವಿನ ಕೆಳದವಡೆಯ ಮುಂದಿನ ಹಲ್ಲುಗಳೂ ವಿಚಿತ್ರವಾಗಿದೆ. ಒಂದೊಂದು ಹಲ್ಲೂ 6–11 ಭಾಗಗಳಾಗಿ ಸೀಳುಗೊಂಡು ಬಾಚಣಿಗೆಯಂತೆ ಕಾಣುತ್ತದೆ. ಬಹುಶಃ ಎಲೆಗಳನ್ನು ತಿನ್ನಲು ಇದು ಉಪಯುಕ್ತ ಎಂದು ತೋರುತ್ತದೆ.

ಕೊಲೂಗೊ ನಿಶಾಚರಿ. ರಾತ್ರಿಯ ಚಟುವಟಿಕೆಗೆ ಅನುಕೂಲವಾಗುವಂತೆ ಇದಕ್ಕೆ ಅಗಲವಾದ ಹಳದಿ ಬಣ್ಣದ ಕಣ್ಣುಗಳಿವೆ. ಹಗಲೆಲ್ಲ ಯಾವುದಾದರೂ ಸುರಕ್ಷಿತ ಸ್ಥಳದಲ್ಲಿ ಮರದ ರೆಂಬೆಯೊಂದಕ್ಕೆ ತನ್ನ ನಾಲ್ಕು ಕಾಲುಗಳಿಂದಲೂ ಜೋಲೆಯಂತೆ ನೇತುಬಿದ್ದು ನಿದ್ದೆ ಮಾಡುತ್ತದೆ. ಕೆಲವೊಮ್ಮೆ ರೆಂಬೆಗೆ ಸುತ್ತುವರಿದು ನಿದ್ದೆ ಮಾಡಬಹುದು.

ಕೊಲೂಗೊವಿನಲ್ಲಿ ಸಂತಾನೋತ್ಪತ್ತಿ ಬಲು ನಿಧಾನ. ವರ್ಷಕ್ಕೊಂದು ಮರಿ ಹುಟ್ಟುತ್ತದೆ. ಯಾವ ಬಗೆಯ ಗೂಡನ್ನಾಗಲಿ ನೆಲೆಯನ್ನಾಗಲಿ ನಿರ್ಮಿಸಿಕೊಳ್ಳದಿರುವುದರಿಂದ ತಾಯಿ ತಾನು ಹೋದಲ್ಲೆಲ್ಲ ಮರಿಯನ್ನು ಹೊತ್ತುಕೊಂಡು ತಿರುಗುತ್ತದೆ. ತಾಯಿ ರೆಂಬೆಯಿಂದ ರೆಂಬೆಗೆ ಹಾರುವಾಗಲೂ ಮರಿ ತನ್ನ ಉಗುರುಗಳಿಂದ ತಾಯ ಉದರ ಭಾಗವನ್ನೂ ಬಾಯಿಯಿಂದ ಮೊಲೆಯನ್ನೂ ಕಚ್ಚಿಕೊಂಡಿರುತ್ತದೆ.

ಕೊಲೂಗೊವಿಗೂ ಲೀಮರ್ ಪ್ರಾಣಿಗಳಿಗೂ ಮತ್ತು ಕೀಟಭಕ್ಷಕ ಪ್ರಾಣಿಗಳಿಗೂ (ಇನ್ಸೆಕ್ಟಿವೊರ) ಹೊರನೋಟದಲ್ಲಿ ಸಾದೃಶ್ಯಗಳಿರುವುದರಿಂದ ಕೊಲೂಗೊವನ್ನು ಹಿಂದೆ ಲೀಮರ್‌ಗಳ ಗುಂಪಿಗೆ ಇಲ್ಲವೆ ಇನ್ಸೆಕ್ಟಿವೊರ ಗುಂಪಿಗೆ ಸೇರಿಸಲಾಗಿತ್ತು. ಆದರೆ ವಿಶದವಾದ ಅಭ್ಯಾಸದ ಫಲವಾಗಿ ಕೊಲೂಗೊ ಇವೆರಡರಿಂದಲೂ ಭಿನ್ನವಾಗಿದೆ ಎಂದು ಕಂಡುಬಂದು ಇದನ್ನು ಪ್ರತ್ಯೇಕವಾಗಿ ಡರ್ಮಾಪ್ಟರ ಗಣಕ್ಕೆ ಸೇರಿಸಲಾಯಿತು.

ಮಲಯ, ಫಿಲಿಪೀನ್ಸ್‌ಗಳ ಮೂಲನಿವಾಸಿಗಳು ಕೊಲೂಗೊವಿನ ಮಾಂಸವನ್ನು ತಿನ್ನುತ್ತಾರೆ. ಅಲ್ಲದೆ ಇದರ ಮೃದುವಾದ ಕೂದಲಿನಿಂದ ಟೋಪಿಗಳನ್ನು ತಯಾರಿಸುವುದುಂಟು. *

**ಕೊಲೆಂಬೋಲ :** ಕೀಟವರ್ಗದ ಆಪ್ಟೆರಿಗೋಟ ಉಪವರ್ಗಕ್ಕೆ ಸೇರಿದ ಒಂದು ಪ್ರಮುಖ ಗಣ. ಇದಕ್ಕೆ ಸೇರಿದ ಕೀಟಗಳನ್ನು ಸಾಮಾನ್ಯವಾಗಿ ಸ್ಪ್ರಿಂಗ್‌ಟೈಲ್ಸ್ ಎನ್ನುತ್ತಾರೆ. ದೇಹದ ಹಿಂತುದಿಯಲ್ಲಿ ಫರ್ಕ್ಯುಲ ಎಂಬ ಕವಲೊಡೆದ ರಚನೆಯಿದೆ. ಇದರ ಸಹಾಯದಿಂದ ಇವು ಕುಪ್ಪಳಿಸಬಲ್ಲುವು. ಇದರಿಂದಲೇ ಈ ಕೀಟಗಳಿಗೆ ಸ್ಪ್ರಿಂಗ್ ಟೈಲ್ಸ್ ಎಂಬ ಹೆಸರು ಬಂದಿದೆ. ಇವು ಬಹಳ ಸೂಕ್ಷ್ಮಗಾತ್ರದ ಕೀಟಗಳು(ದೇಹದ ಉದ್ದ ಸುಮಾರು 1–5 ಮಿಮೀ). ವಿವಿಧ ಬಗೆಯ ನೆಲೆಗಳಲ್ಲಿ ವಾಸಿಸುತ್ತವೆ. ತೇವಪೂರಿತ ಸ್ಥಳಗಳಲ್ಲಿ ಹೆಚ್ಚು ಕೊಳೆಯುವ ಸಸ್ಯಭಾಗಗಳು, ಹಸಿ ಮಣ್ಣು, ಕೆರೆ, ನದಿಗಳ ದಂಡೆ, ರಸಯುಕ್ತ ಶಿಲೀಂಧ್ರಗಳ ಅಡಿಯಲ್ಲಿ ಇವು ಕಾಣಬರುತ್ತವೆ. ಕೆಲವು ಬಗೆಗಳು ನೀರಿನಲ್ಲೂ ಮಂಜುಗಡ್ಡೆಯ ಮೇಲೂ ಇರಬಹುದು.

ದೇಹದ ಬಣ್ಣ ಕಪ್ಪು, ಬೂದಿ, ಬಿಳಿ, ನೀಲಿ ಇತ್ಯಾದಿ ವೈವಿಧ್ಯಪೂರ್ಣ. ದೇಹದ ಮೇಲೆ ಹುರುಪೆ ಇಲ್ಲವೆ ಕೂದಲಿನ ಹೊದಿಕೆಯಿರಬಹುದು. ಕೆಲವೊಮ್ಮೆ ಯಾವ ಬಗೆಯ ಹೊದಿಕೆಯೂ ಇಲ್ಲದಿರಬಹುದು. ವದನಾಂಗಗಳು ಆಹಾರವನ್ನು ಕಡಿಯುವುದಕ್ಕೆ ಅನುಕೂಲವಾಗಿವೆ. ಕೆನ್ನೆಗಳು(ಜೀನೆ) ತಲೆಯ ಆಚೀಚೆ ಬೆಳೆದಿರುವುದರಿಂದ ವದನಾಂಗಗಳು ಆವರಿಸಲ್ಪಟ್ಟು ಹೊರಗೆ ಸುಲಭವಾಗಿ ಕಾಣುವುದಿಲ್ಲ. ಸ್ಪರ್ಶಾಂಗ(ಆಂಟೆನ) 4–6 ಖಂಡಗಳನ್ನು ಒಳಗೊಂಡಿದೆ. ಈ ಕೀಟಗಳಲ್ಲಿ ಕಣ್ಣುಗಳು ಇರಬಹುದು ಅಥವಾ ಇಲ್ಲದಿರಬಹುದು. ಉದರ ಭಾಗ 4–6 ಖಂಡಗಳನ್ನೊಳಗೊಂಡಿದೆ. ಇದರಲ್ಲಿ 4 ನೆಯ ಇಲ್ಲವೆ 5ನೆಯ ಖಂಡದಲ್ಲಿ ಫರ್ಕ್ಯುಲ ಇರುವುದು. ಕೀಟ ಸುಮ್ಮನೆ ಕುಳಿತಿರುವಾಗ ಫರ್ಕ್ಯುಲ ಉದರದ ಮೂರನೆಯ ಖಂಡದ ತಳಭಾಗದಲ್ಲಿರುವ ಟೆನಾಕ್ಯುಲಮ್ ಎಂಬ ರಚನೆಗೆ ಅಂಟಿಕೊಂಡಿರುತ್ತದೆ. ಕೀಟ ಕುಪ್ಪಳಿಸುವಾಗ ಫರ್ಕ್ಯುಲವನ್ನು ಹಿಂಭಾಗಕ್ಕೂ ಕೆಳಕ್ಕೂ ಚಾಚಿ ನೆಲದ ಮೇಲೆ ಒತ್ತಿ ಹಾರುತ್ತದೆ. ಸುಮಾರು 5–6 ಮಿಮೀ ಉದ್ದವಿರುವ ಕೀಟವೊಂದು ಸುಮಾರು 10–12 ಮಿಮೀ ದೂರಕ್ಕೆ ನೆಗೆಯಬಲ್ಲುದು.

ಕೊಲೆಂಬೋಲ ಗಣದ ಕೀಟಗಳ ಆಹಾರ ಪ್ರಧಾನವಾಗಿ ಸಸ್ಯಮೂಲದ್ದು. ಕೊಳೆಯುವ ಎಲೆ, ಬೂಷ್ಟು, ಕಲ್ಲುಹೂ, ಬೀಜಕಣಗಳು, ಪರಾಗ, ನೀರಿನಲ್ಲಿ ಬೆಳೆಯುವ ಪಾಚಿ ಮುಂತಾದವೇ ಇವುಗಳ ಆಹಾರ. ಕೊಳೆಯುವ ಪ್ರಾಣಿವಿಶೇಷಗಳನ್ನು ಮತ್ತು ಇತರ ಕೀಟಗಳನ್ನು ತಿನ್ನುವ ಕೀಟಗಳೂ ಇಲ್ಲದಿಲ್ಲ.

ಇವುಗಳ ಜೀವನಕ್ರಮದ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿಲ್ಲ. ಇವು ಮಣ್ಣು, ಗೊಬ್ಬರದ ಗುಂಡಿ, ತೊಗಟೆಗಳ ತಳಭಾಗ ಮುಂತಾದ ಸ್ಥಳಗಳಲ್ಲಿ ಒಂಟೊಂಟಿಯಾಗಿಯೊ ಇಲ್ಲವೆ ಗುಂಪುಗಳಲ್ಲಿಯೊ ಮೊಟ್ಟೆಯಿಡುತ್ತವೆ. ಮೊಟ್ಟೆಯೊಡೆದು ಹೊರಬರುವ ಮರಿಗಳು ಪ್ರೌಢಕೀಟಗಳಂತೆಯೆ ಕಾಣುತ್ತವೆ. ಈ ಕೀಟಗಳಲ್ಲಿ ಸಾಮಾನ್ಯವಾಗಿ ರೂಪ ಪರಿವರ್ತನೆ ಇಲ್ಲ.

ಈ ಗಣವನ್ನು ಆರ್ಥ್ರೊಪ್ಲಿಯೋನ, ಆಕ್ಟಲೆಟಾಯ್ಡಿಯ ಮತ್ತು ಸಿಂಫೈಪ್ಲಿಯೋನ ಎಂಬ ಮೂರು ಉಪಗಣಗಳಾಗಿ ವಿಂಗಡಿಸಲಾಗಿದೆ. ಇವುಗಳಿಗೆ ಸೇರಿದಂತೆ ಎಂಟಮಾಬ್ರೈಯಿಡೀ, ಪಾಡ್ಯುರಿಡೀ, ಸ್ಮಿಂತುರಿಡೀ, ಆಕ್ಟಾಲೆಟಿಡೀ ಮತ್ತು ನೀಲಿಡೀ ಎಂಬ ಐದು ಕುಟುಂಬಗಳಿವೆ. *

**ಕೊಲೆಸ್ಟಿರಾಲ್ :** ಬಹುಮಟ್ಟಿಗೆ ಎಲ್ಲ ಉಚ್ಚದರ್ಜೆಯ ಜೀವಿಗಳಲ್ಲೂ ಅಧಿಕ ಮೊತ್ತದಲ್ಲಿ ಇರುವ ಸ್ಟಿರಾಲ್ ಅಥವಾ ಸ್ಟಿರಾಯ್ಡ್ ಆಲ್ಕೊಹಾಲ್. ಇದರ ರಾಸಾಯನಿಕ ಸೂತ್ರ $C_{27}H_{45}OH$. ಇದು ಬಿಳುಪಾದ ಮೇಣದಂಥ ಆಲ್ಕೊಹಾಲಿನ ಘನವಸ್ತು. ಕೊಬ್ಬಿನೊಡನೆ ಸೇರಿರುತ್ತದೆ. ಆದರೆ ರಾಸಾಯನಿಕವಾಗಿ ಕೊಬ್ಬಿಗಿಂತ ಭಿನ್ನವಾದದ್ದು. ರೋಗಕ್ಕೊಳಗಾದ ಪಿತ್ತಜನಕಾಂಗಗಳಲ್ಲಿ ದೊರೆಯುವ ಹರಳುಗಳಲ್ಲಿಯ ಮುಖ್ಯ ಸಂಯುಕ್ತ ಕೊಲೆಸ್ಟಿರಾಲ್. ಈ ಸಂಯುಕ್ತದ ರಚನಾರಹಸ್ಯವನ್ನು ವಿಂಡಾಸ್ ಮತ್ತು ವೀಲೆಂಡರೂ ಜೈವಿಕಸಂಯೋಜನೆಯ ರಹಸ್ಯವನ್ನು ಬ್ಲಾಕ್, ಕಾರ್ನ್‌ಫೋರ್ತ್ ಮತ್ತು ಪೋಪ್ ಜಾಕ್‌ರೂ ಬಿಡಿಸಿರುತ್ತಾರೆ.

ವಿದ್ಯುತ್ ಘಾತಗಳ (ಎಲೆಕ್ಟ್ರಿಕ್ ಇಂಪಲ್ಸಸ್) ಮೂಲಕ ಸಂದೇಶಗಳನ್ನು ಸ್ವೀಕರಿಸುವ, ಸಾಗಿಸುವ ಮತ್ತು ನೀಡುವ ಮಿದುಳು, ಮಿದುಳುಬಳ್ಳಿ ಮತ್ತು ನರಮಂಡಲಗಳಲ್ಲಿ ಕೊಲೆಸ್ಟಿರಾಲ್ ಸಾಂದ್ರೀಕೃತವಾಗಿದ್ದು ಅವುಗಳಲ್ಲಿಯ ವಿವಿಧ ವಿದ್ಯುದ್ವಾಹಕ, ಕೋಶಗಳ ನಡುವಣ ವಿದ್ಯುತ್ಪ್ರತಿಬಂಧಕವಾಗಿ ಇದು ಕೆಲಸ ಮಾಡುವುದೆಂದು ಭಾವಿಸಲಾಗಿದೆ. ದೇಹದಲ್ಲಿರುವ ಹಲವು ಹಾರ್ಮೋನುಗಳು ಮತ್ತು ಪಿತ್ತರಸದ ಆಮ್ಲಗಳಿಗೆ ಕೊಲೆಸ್ಟಿರಾಲ್ ಪೂರ್ವಗಾಮೀ (ಪ್ರೀಕರ್ಸರ್) ಆಗಿದೆ. ವಾಣಿಜ್ಯೋದ್ದೇಶಕ್ಕಾಗಿ ಕೊಲೆಸ್ಟಿರಾಲ್‌ನ್ನು ಹಸು, ಎಮ್ಮೆಗಳ ಮಿದುಳು ಬಳ್ಳಿಗಳಿಂದ ಪಡೆಯಬಹುದು. ಈ ಸಂಯುಕ್ತವನ್ನು ಹಲವು ಔಷಧಗಳಲ್ಲೂ ಔಷಧೀಯ ಮಧ್ಯವರ್ತಿಯಾಗಿಯೂ ಹಲವು ಅಂಗರಾಗಗಳ ತಯಾರಿಕೆಯಲ್ಲಿಯೂ ಉಪಯೋಗಿಸಲಾಗುತ್ತಿದೆ.

**ವಿತರಣೆ :** ಕೊಲೆಸ್ಟಿರಾಲ್ ಶರೀರದ ಎಲ್ಲ ಅಂಗಾಂಶಗಳಲ್ಲಿಯೂ ದ್ರವವಸ್ತುಗಳಲ್ಲಿಯೂ ಇರುತ್ತದೆ. ಮಿದುಳಿನಲ್ಲಿ, ಮೂತ್ರಜನಕಾಂಗಗಳ ಮೇಲಿರುವ ಸುಪ್ರರೀನಲ್‌ಗಳೆಂಬ ನಿರ್ನಾಳಗ್ರಂಥಿಗಳಲ್ಲಿ ಮತ್ತು ಬೆನ್ನುಹುರಿಯಲ್ಲಿ ಇದರ ವಿತರಣೆ ಗರಿಷ್ಠ. 70 ಕೆಜಿ. ತೂಕದ ಮನುಷ್ಯನ ಅಂಗಾಂಗಗಳಲ್ಲಿ ಇರುವ ಒಟ್ಟು ಕೊಲೆಸ್ಟಿರಾಲ್ 100 ಗ್ರಾಂಗಳಿಗಿಂತ ಸ್ವಲ್ಪ ಹೆಚ್ಚು. ಇದರಲ್ಲಿ 30 ಗ್ರಾಂ ಮೇದಸ್ಸಿನಿಂದ ಕೂಡಿದ ಅಂಗಾಂಗಗಳಲ್ಲಿಯೂ 25 ಗ್ರಾಂ ಮಿದುಳಿನಲ್ಲಿಯೂ 20 ಗ್ರಾಂ ಮಾಂಸಖಂಡಗಳಲ್ಲಿಯೂ 5 ಗ್ರಾಂಗಿಂತಲೂ ಸ್ವಲ್ಪ ಹೆಚ್ಚು ರಕ್ತದಲ್ಲಿಯೂ 5 ಗ್ರಾಂ ಪಿತ್ತಜನಕಾಂಗದಲ್ಲಿಯೂ 0.5 ಗ್ರಾಂ ಸುಪ್ರರೀನಲ್ ನಿರ್ನಾಳಗ್ರಂಥಿಯಲ್ಲಿಯೂ ಇರುತ್ತದೆ. ಪಿತ್ತಜನಕಾಂಗ ಕೊಲೆಸ್ಟಿರಾಲನ್ನು ಬಿಡಿಯಾಗಿ ಸ್ರವಿಸುತ್ತದೆ. ಇಲ್ಲಿಂದ ಪಿತ್ತರಸದ ಸಂಗಡ ಮುಂಗರುಳನ್ನು ಸೇರುತ್ತದೆ. ದಿನ ಒಂದಕ್ಕೆ ಸುಮಾರು 1–2 ಗ್ರಾಂ ಕೊಲೆಸ್ಟಿರಾಲ್ ಪಿತ್ತರಸದ ಸಂಗಡ ಸ್ರವಿಸುತ್ತದೆ. ಇದು ಸಾಮಾನ್ಯವಾಗಿ ಊಟದಲ್ಲಿ ತೆಗೆದುಕೊಳ್ಳುವ ಅಂಶಕ್ಕಿಂತ ಹೆಚ್ಚು. ಕರುಳಿನ ಒಳಪೊರೆಯಿಂದಲೂ ಸ್ವಲ್ಪ ಕೊಲೆಸ್ಟಿರಾಲ್ ಕರುಳಿನಲ್ಲಿರುವ ಆಹಾರದ ಜೊತೆ ಸೇರುತ್ತದೆ. ಗಮನಾರ್ಹವಾದಷ್ಟು ಕೊಲೆಸ್ಟಿರಾಲ್ ಕರುಳಿನಿಂದ ಹಿಂದಕ್ಕೆ ಹೀರಿಕೊಳ್ಳಲ್ಪಡುತ್ತದೆ. ಕೊಲೆಸ್ಟಿರಾಲ್‌ನ ಸ್ವಲ್ಪ ಭಾಗ ಕರುಳಿನಲ್ಲಿರುವ ಕಿಣ್ವಕಾರಕ ಜೀವಾಣುಗಳಿಂದ ಸ್ಟಿರಾಲ್‌ಗಳಾಗಿ ಪರಿವರ್ತನೆ ಹೊಂದುತ್ತದೆ. ಮಲವಿಸರ್ಜನೆಯಲ್ಲಿ ದಿನವಹಿ 0.3–1 ಗ್ರಾಂ ವರೆಗೂ ಸ್ಟಿರಾಲ್‌ಗಳು, ಕೊಲೆಸ್ಟಿರಾಲ್ ಕೊಪ್ರೊಸ್ಟಿರಾಲ್ ಮತ್ತು ಕೊಲೆಸ್ಟಿರಾಲ್ ರೀತಿ ಹೊರಹಾಕಲ್ಪಡುತ್ತವೆ.

**ಸಂಶ್ಲೇಷಣೆ :** ಕೊಲೆಸ್ಟಿರಾಲಿನ ಇಂಗಾಲದ ಅಸ್ಥಿಪಂಜರ ಅಸಿಟೇಟಿನಿಂದ ಸಂಶ್ಲೇಷಿಸಲ್ಪಟ್ಟಿದೆ. ಪಿತ್ತಜನಕಾಂಗ ಬಹಳವಾಗಿ ಕೊಲೆಸ್ಟಿರಾಲನ್ನು ಸಂಯೋಜಿಸುತ್ತದೆ. ಪಿತ್ತಜನಕಾಂಗವನ್ನು ತೆಗೆದ ಸಂದರ್ಭದಲ್ಲಿ ಸಣ್ಣಕರುಳು, ಮೂತ್ರ ಜನಕಾಂಗಗಳು, ವೃಷಣಗಳು, ಮತ್ತು ಚರ್ಮ ಕೊಲೆಸ್ಟಿರಾಲನ್ನು ಸಂಯೋಜಿಸುತ್ತವೆ. ಅಡ್ರಿನಲ್ ಎಂಬ ನಿರ್ನಾಳಗ್ರಂಥಿಗಳಲ್ಲಿ ಕೊಲೆಸ್ಟಿರಾಲ್ ಹಾರ್ಮೋನುಗಳಾಗಿ ಪರಿವರ್ತನೆಯಾಗುತ್ತದೆ. ಕೊಲೆಸ್ಟಿರಾಲನ್ನು ಅಂಡಕೋಶಗಳೂ ಗರ್ಭವೇಷ್ಟನಗಳೂ ಹಾರ್ಮೋನುಗಳ ಉತ್ಪತ್ತಿಗೆ ಉಪಯೋಗಿಸುತ್ತವೆ. ಕೊಲೆಸ್ಟೇನ್ ಎಂಬ ಮೂಲ ರಾಸಾಯನಿಕದಿಂದ ಕೊಲೆಸ್ಟಿರಾಲ್ ಉತ್ಪನ್ನವಾಗಿರುತ್ತದೆ. ಇದರ ಪೂರ್ಣ ರಾಸಾಯನಿಕ ವಿನ್ಯಾಸವನ್ನು ಕೆಳಗೆ ತೋರಿಸಿದೆ.



ಕೊಲೆಸ್ಟಿರಾಲಿನ ಶರೀರವಿಜ್ಞಾನದ ಕಾರ್ಯಶಕ್ತಿಯನ್ನು ಸ್ಪಷ್ಟವಾಗಿ ನಿರ್ಣಯಿಸಲಾಗಿಲ್ಲ. ಆದರೂ ಇದು ಜೀವಚಲನೆಗೆ ಅತ್ಯಾವಶ್ಯಕವಾದ ವಸ್ತುವಾಗಿ ಕಂಡುಬರುತ್ತದೆ. ಶರೀರದಲ್ಲಿ ಅತಿ ಹೆಚ್ಚಾಗಿ ಕೊಲೆಸ್ಟಿರಾಲ್ ಶೇಖರಿಸಿಕೊಂಡರೆ ಕೆಲವು ರೋಗಗಳಿಗೆ ಕಾರಣಕಾರಿಯಾಗುತ್ತದೆ. ಶರೀರದಲ್ಲಿ ಹೆಚ್ಚಿಗೆ ಕೊಲೆಸ್ಟಿರಾಲ್ ಶೇಖರಿಸಿರುವುದಕ್ಕೂ ಅಥಿರೋಸ್ಕ್ಲಿರೋಸಿಸ್ ಎನ್ನುವ ರಕ್ತನಾಳಗಳ ರೋಗಕ್ಕೂ ಸಂಬಂಧವಿರುವಂತೆ

ತೋರುತ್ತದೆ. ಇದೇ ಸಂದರ್ಭಗಳಲ್ಲಿ ಪಿತ್ತಾಶ್ಮರಿಗಳೂ(ಗಾಲ್ ಸ್ಟೋನ್ಸ್) ಉತ್ಪತ್ತಿಯಾಗುವ ಸೂಚನೆ ಇರುತ್ತದೆ. ಅಥಿರೋಸ್ಕ್ಲಿರೋಸಿಸ್ ಎನ್ನುವ ರೋಗದಲ್ಲಿ ಶುದ್ಧರಕ್ತನಾಳಗಳ ಒಳ ಮೈಮೇಲೆ ಕ್ರಮವಾಗಿ ಕೊಲೆಸ್ಟಿರಾಲ್‌ನಿಂದ ಕೂಡಿದ ಕೊಬ್ಬಿನ ವಸ್ತು ಶೇಖರಿಸಲ್ಪಡುತ್ತದೆ. ಊಟದಲ್ಲಿ ತೆಗೆದುಕೊಳ್ಳುವ ಕೊಲೆಸ್ಟಿರಾಲಿನ ಪರಿಮಾಣಕ್ಕೂ ಅಥಿರೊಸ್ಕ್ಲಿರೋಸಿಸ್ ಬರುವುದಕ್ಕೂ ಸಂಬಂಧವಿರುವುದಿಲ್ಲ. ಊಟದಲ್ಲಿ ತೆಗೆದುಕೊಳ್ಳುವ ಎರಡರಷ್ಟು ಮೊತ್ತದಲ್ಲಿ ಪಿತ್ತಜನಕಾಂಗ ಕೊಲೆಸ್ಟಿರಾಲನ್ನು ಉತ್ಪತ್ತಿಮಾಡುತ್ತದೆ. ಪ್ರಾಣಿಗಳ ಕೊಬ್ಬಿನಲ್ಲಿ ಮಾತ್ರ ಕೊಲೆಸ್ಟಿರಾಲ್ ಇರುತ್ತದೆ. ಸಸ್ಯಾಧಾರದ ಕೊಬ್ಬಿನಲ್ಲಿ ಇದು ಇರುವುದಿಲ್ಲ. ಊಟದಲ್ಲಿ ಹೆಚ್ಚಿಗೆ ತೆಗೆದುಕೊಳ್ಳುವಿಕೆಗೂ ಪಿತ್ತಜನಕಾಂಗದಲ್ಲಿ ಉತ್ಪತ್ತಿಯಾಗುವ ಕೊಲೆಸ್ಟಿರಾಲಿಗೂ ಸರಿದೂಗಿಸುವಂತೆ ಒಂದು ನಿಯಂತ್ರಿಸುವ ಕಟ್ಟುಪಾಡು ಉಂಟು. ಊಟದಲ್ಲಿ ತೆಗೆದುಕೊಳ್ಳುವ ಪರಿಮಾಣ ಕಡಿಮೆಯಾದಾಗ ಪಿತ್ತಜನಕಾಂಗ ಹೆಚ್ಚಿಗೆ ಕೊಲೆಸ್ಟಿರಾಲನ್ನು ಉತ್ಪತ್ತಿಮಾಡುತ್ತದೆ. ಊಟದಲ್ಲಿ ತೆಗದುಕೊಳ್ಳುವ ಪರಿಮಾಣ ಹೆಚ್ಚಿಗೆಯಾದಲ್ಲಿ ಪಿತ್ತಜನಕಾಂಗದಲ್ಲಿ ಕೊಲೆಸ್ಟಿರಾಲಿನ ಉತ್ಪತ್ತಿ ಕಡಿಮೆಯಾಗುತ್ತದೆ.

ಅಥಿರೊಸ್ಕ್ಲಿರೋಸಿಸ್ ಎಂಬ ರೋಗಕ್ಕೆ ಈಡಾಗುವವನು ಪ್ರಾಣಿ ಮನುಷ್ಯ ಮಾತ್ರ. ರಕ್ತದಲ್ಲಿಯ ಕೊಲೆಸ್ಟಿರಾಲಿನ ಮಟ್ಟಕ್ಕೂ ಅಥಿರೊಸ್ಲಿಕ್ರೋಸಿಸ್‌ಗೂ ಸಂಬಂಧ ಉಂಟು ಎನ್ನುವುದಕ್ಕೆ ಸಕಾರಣಗಳಿವೆ. ಮಾನವನ ರಕ್ತದಲ್ಲಿನ ಕೊಲೆಸ್ಟಿರಾಲಿನ ಮಟ್ಟ ಇತರ ಪ್ರಾಣಿಗಳಲ್ಲಿಯ ಮತ್ತು ಪ್ರಯೋಗಶಾಲೆಯಲ್ಲಿಯ ಪ್ರಾಣಿಗಳಲ್ಲಿರುವುದಕ್ಕಿಂತ ಹೆಚ್ಚು. ರಕ್ತದಲ್ಲಿ ಕೆಳಮಟ್ಟದ ಪರಿಮಾಣವಿರತಕ್ಕ ಜನಗಳ ಗುಂಪಿನಲ್ಲಿ ಅಥಿರೊಸ್ಲಿಕ್ರೋಸಿಸ್ ಕೂಡ ಕೆಳಮಟ್ಟದಲ್ಲಿರುವುದು. ಪ್ರಯೋಗಶಾಲೆಯ ಪ್ರಾಣಿಗಳಲ್ಲಿ ರಕ್ತದ ಕೊಲೆಸ್ಟಿರಾಲ್ ಪರಿಮಾಣವನ್ನು ಹೆಚ್ಚಿಸಿ ಅವುಗಳಲ್ಲಿ ಅಥಿರೋಸ್ಲಿಕ್ರೋಸಿಸ್ ಎಂಬ ರೋಗವನ್ನು ಬರುವಂತೆ ಮಾಡಿ ತೋರಿಸಿರುತ್ತಾರೆ. ಇಷ್ಟಾದರೂ ಸಹ ರಕ್ತದಲ್ಲಿಯ ಕೊಲೆಸ್ಟಿರಾಲಿನ ಮಟ್ಟದ ಪರಿಮಾಣವೇ ಅಥಿರೊಸ್ಲಿಕ್ರೋಸಿಸ್ ಬರುವುದಕ್ಕೂ ಅಥವಾ ಬರದೆ ಇರುವುದಕ್ಕೂ ಕಾರಣಕಾರಿ ಎನ್ನುವುದನ್ನು ಯಾರೂ ಇಲ್ಲಿಯವರೆಗೂ ನಿರ್ದಿಷ್ಟವಾಗಿ ದೃಢಪಡಿಸಿಲ್ಲ. ಇತರ ಕಾರಕಗಳು ಇದಕ್ಕೆ ಕಾರಣ ಎನ್ನುವ ಭಾವನೆ ಉಂಟು. ಇಂಥ ಕಾರಕಗಳು ಊಟ, ವಯಸ್ಸು, ಲಿಂಗ ಮತ್ತು ಹಲವು ಬಗೆಯ ಹಾರ್ಮೋನುಗಳು ಎಂದು ತಿಳಿದುಬಂದಿದೆ. ಅತಿಕಡಿಮೆ ಕೊಬ್ಬು ಇರುವ ಊಟ ಮತ್ತು ಅತಿಕಡಿಮೆ ಪರಿಮಾಣದಷ್ಟು ಕೆಲೊರಿಗಳಿರುವ ವಸ್ತುಗಳನ್ನು ತಿನ್ನುವುದರಿಂದಲೂ ರಕ್ತದಲ್ಲಿಯ ಕೊಲೆಸ್ಟಿರಾಲಿನ ಮಟ್ಟದ ಪರಿಮಾಣ ಕಡಿಮೆ ಮಾಡುವುದರಿಂದಲೂ ಅಥಿರೋಸ್ಲಿಕ್ರೋಸಿಸ್ ಎನ್ನುವ ರೋಗ ಬರುವುದನ್ನು ತಡೆಹಿಡಿಯಬಹುದೆಂದು ಕೆಲವು ವಿಜ್ಞಾನ ಸಂಶೋಧಕರ ಅಭಿಪ್ರಾಯ. ಯಾವ ತರಹ ಕೊಬ್ಬು ಮತ್ತು ಸಾರಜನಕಗಳು ಊಟದಲ್ಲಿ ಎಷ್ಟೆಷ್ಟು ಪರಿಮಾಣದಲ್ಲಿವೆ ಎನ್ನುವುದಕ್ಕೂ ಅಥಿರೋಸ್ಕ್ಲಿರೋಸಿಸ್ ಎನ್ನುವ ರೋಗ ಬರುವುದಕ್ಕೂ ಸಂಬಂಧವುಂಟು. ಈ ವಿಷಯದಲ್ಲಿ ಸಂಶೋಧನೆ ಮುಂದುವರಿದಿದೆ. **(ಡಿ.ಇ. ; ಕೆ.ಟಿ.ಎಸ್)**

**ಕೊಲೊನ್ನ, ಫ್ರಾ ಫ್ರಾನ್ಸೆಸ್ಕೊ :** 1432–1527. ಇಟಲಿಯ ಸಾಹಿತಿ, ಡಾಮಿನಿಕನ್ ಪಂಥಕ್ಕೆ ಸೇರಿದ ಭಿಕ್ಷು. ಹುಟ್ಟಿದ್ದು ವೆನಿಸ್‌ನಲ್ಲಿ. ಹೈಪನೆರ್ೋಟೊ ಮ್ಯಾಚಿಯ ಪಾಲಿಫಿಲಿ ಎಂಬ ಅದ್ಭುತರಮ್ಯ ಕಥೆಯನ್ನು ಬರೆದ. ಅಷ್ಟಾಗಿ ಒಳ್ಳೆಯ ಸಾಹಿತ್ಯವಲ್ಲದಿದ್ದರೂ ಜೋವನಿ ಬಿಲ್ಲಿನಿ ಮತ್ತು ಪಾಲ್ ಡಿ ಸೇಂಟ್ ವಿಕ್ಟರ್–ಇವರ ವಿಶಿಷ್ಟ ಚಿತ್ರಗಳಿಂದಾಗಿ ಈ ಗ್ರಂಥ ಉಳಿದು ಬಂದಿದೆ. 1592ರಲ್ಲಿ ದಿ ಸ್ಟ್ರೈಫ್ ಆಫ್ ಲವ್ ಇನ್ ಎ ಡ್ರೀಮ್ ಎಂಬ ಅಭಿದಾನದಿಂದ ಈ ರಮ್ಯ ಕಥೆಯ ಸಂಗ್ರಹ ಆವೃತ್ತಿಯನ್ನು ಸರ್ ರಿಚರ್ಡ್ ಡ್ಯಾಲಿಂಗ್‌ಟನ್ ಪ್ರಕಟಿಸಿದ್ದಾನೆ. **(ಎಚ್.ಕೆ.ಆರ್.)**

**ಕೊಲೊನ್ನ, ವಿಟ್ಟೋರಿಯ :** 1490–1547. ಇಟಲಿಯ ಶ್ರೀಮಂತ ಮನೆತನವೊಂದರಲ್ಲಿ ಹುಟ್ಟಿದ ಕವಯಿತ್ರಿ. ಎಳೆಯ ವಯಸ್ಸಿನಲ್ಲೆ ಕವನ ರಚನೆ ಮಾಡತೊಡಗಿದಳು. ಕೆಲಕಾಲ ಪತಿಯಿಂದ ದೂರ ಇದ್ದಳಲ್ಲದೆ ಪತಿ ಗತಿಸಿದ ಮೇಲೆ ಜೀವನದ ಬಹುಭಾಗವನ್ನು ಕಾನ್ವೆಂಟುಗಳಲ್ಲಿ ಏಕಾಂತದಲ್ಲೂ ದೀನದಲಿತರ ಸೇವೆಯಲ್ಲೂ ಕಳೆದಳು. ಪ್ರಸಿದ್ಧ ಚಿತ್ರಕಾರ ಮೈಕೆಲೆಂಜಲೊವಿನೊಡನೆ ಈಕೆಗಿದ್ದ ಸ್ನೇಹ ಪ್ರಸಿದ್ಧವಿದೆ. ದಿ ರೈಮ್ ಸ್ಪಿರಿಚುಯ್ಯಾಲಿ ಎಂಬ ಕವನ ಸಂಕಲನದಲ್ಲಿ ಈಕೆ ತನ್ನ ಪತಿಯ ಗುಣಗಾನ ಮಾಡಿದ್ದಾಳೆ. **(ಎಚ್.ಕೆ.ಆರ್.)**

**ಕೊಲೋನ್[1] :** ಹಾಂಡುರಾಸ್ ರಾಜ್ಯದ ಪೂರ್ವದಲ್ಲಿ ಕ್ಯಾರಿಬಿಯನ್ ಸಮುದ್ರ ತೀರದಲ್ಲಿರುವ ಒಂದು ವಿಭಾಗ. ವಿಸ್ತೀರ್ಣ 8875 ಚಕಿಮೀ. ಜನಸಂಖ್ಯೆ 266,755 (2005). ಅದರ ನೆಲ ಬಹುತೇಕ ತಗ್ಗಾಗಿದೆ. ವಾರ್ಷಿಕ ಮಳೆ 200ಸೆಂಮೀಗಿಂತ ಅಧಿಕ. ಫಲವತ್ತಾದ ಹಾಗೂ ಮಳೆ ಕಡಿಮೆ ಇರುವ ಕಣಿವೆಯಲ್ಲೂ ವಾಯುವ್ಯದ ಕಡೆಯ ಸಮುದ್ರದಂಚಿನ ಬಯಲುಗಳಲ್ಲೂ ಜನವಸತಿ ಹೆಚ್ಚು. ಈ ವಿಭಾಗದ ವಾಯುವ್ಯದಲ್ಲಿ ಬತ್ತ, ಕೆಸವಿನ ಗೆಡ್ಡೆ, ಗೆಣಸು ಮತ್ತು ಬಾಳೆ ಹೆಚ್ಚಾಗಿ ಬೆಳೆಯುತ್ತವೆ. ಅವನ್ನೂ ಚೌಬೀನೆಯನ್ನೂ ಟ್ರೂಹೀವೋ ಈ ಮೂಲಕವೂ ಪ್ವೆರ್ಟೊ ಕಸ್ಟೀಲ್ಯಾದಿಂದಲೂ ರಫ್ತು ಮಾಡುತ್ತಾರೆ. ಟ್ರೂಹೀವೋ ಈ ವಿಭಾಗದ ಮುಖ್ಯ ಪಟ್ಟಣ. **(ವಿ.ಜಿ.ಕೆ.)**

**ಕೊಲೋನ್[2] :** ಪನಾಮಾ ರಾಜ್ಯದ ಉತ್ತರ ತೀರದ ಒಂದು ಪ್ರಾಂತ್ಯ. ಪನಾಮಾ ಕಾಲುವೆಯ ಪೂರ್ವ ಪಶ್ಚಿಮಗಳ ಕಡೆ ಹರಡಿದೆ. ವಿಸ್ತೀರ್ಣ 7410 ಚ.ಕಿಮೀ. ಜನಸಂಖ್ಯೆ 2,04,000 (2000). ಈ ಪ್ರಾಂತ್ಯದ ಜನಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಪನಾಮಾ ಕಾಲುವೆ ಪ್ರದೇಶದ ನಗರಗಳಲ್ಲಿ ವಾಸಿಸುತ್ತಾರೆ. ಈ ಪ್ರಾಂತ್ಯಕ್ಕೆ ಹಲವು ಕೃಷಿ ಜಿಲ್ಲೆಗಳು ಮತ್ತು ಕೆಲವು ಕೈಗಾರಿಕಾ ಕೇಂದ್ರಗಳು ಸೇರಿವೆ. ಕೊಲೋನ್ ನಗರ ಕೊಲೋನ್ ಪ್ರಾಂತ್ಯದ ರಾಜಧಾನಿ. ಇದಕ್ಕೆ 32 ಕಿಮೀ ದೂರದಲ್ಲಿ ಪೋರ್ಟೊ ಬೆಲೋ ರೇವುಪಟ್ಟಣವಿದೆ. **(ವಿ.ಜಿ.ಕೆ.)**

**ಕೊಲೋನ್[3] :** ಇದು ಮಧ್ಯ ಅಮೆರಿಕದ ಪನಾಮಾ ರಾಜ್ಯದ ಪ್ರಮುಖ ನಗರಗಳಲ್ಲಿ ಎರಡನೆಯದು; ಪನಾಮಾ ಕಾಲುವೆಯ ಉತ್ತರದ್ವಾರ. ನಾಲೆಯ ಸರಹದ್ದಿನಲ್ಲಿರುವ ಕ್ರಿಸ್ಟೋಬಲ್ ರೇವು ವಾಸ್ತವಿಕವಾಗಿ ಕೊಲೋನ್ ನಗರದ ಬಡಾವಣೆ. ಅಮೆರಿಕ ಸಂಯುಕ್ತ ಸಂಸ್ಥಾನ ಸರ್ಕಾರ ಕ್ರಿಸ್ಟೋಬಲ್ ರೇವನ್ನು ಹಾಗೂ ಹಡಗುಕಟ್ಟೆಯನ್ನು ಅಭಿವೃದ್ಧಿಗೊಳಿಸಿದೆ. ಇದು ಕ್ಯಾರಿಬಿಯನ್ ಸಮುದ್ರದ ಬಹು ಮುಖ್ಯ ಬಂದರು. ಮಧ್ಯ ಮತ್ತು ದಕ್ಷಿಣ ಅಮೆರಿಕದ ಉತ್ತರದ ಬಂದರುಗಳಿಗೆ ರಫ್ತಾಗುವ ಸರಕುಗಳು ಇದರ ಮೂಲಕ ಸಾಗುತ್ತವೆ.

ಕೊಲೋನ್ ನಗರದ ಜನಸಂಖ್ಯೆ 204,000 (2000). ಇದು ಪನಾಮಾ ನಗರಕ್ಕೆ 77 ಕಿಮೀ ದೂರದಲ್ಲಿರುವ ಪನಾಮಾ ರೈಲು ರಸ್ತೆಯ ಉತ್ತರದ ಕೊನೆದಾಣ; ಪನಾಮಾ ರಾಜ್ಯದ ಕೊಲೋನ್ ಪ್ರಾಂತ್ಯಕ್ಕೆ ರಾಜಧಾನಿ; ವಿವಿಧ ದೇಶಗಳ ರಾಯಭಾರಿಗಳಿರುವ ಸ್ಥಳ, ಪ್ರವಾಸಿ ಕೇಂದ್ರ. ಇಲ್ಲಿಯ ಜನ ಬಹುಮಟ್ಟಿಗೆ ನೀಗ್ರೋಗಳು; ಪನಾಮಾ ಕಾಲುವೆ ರಚನೆಯ ವಿವಿಧ ಕಾಲಗಳಲ್ಲಿ ಬ್ರಿಟಿಷ್ ವೆಸ್ಟ್ ಇಂಡೀಸ್ ದ್ವೀಪಗಳಿಂದ ಕೆಲಸಕ್ಕಾಗಿ ಇಲ್ಲಿಗೆ ಬಂದವರ ವಂಶಜರು. ಅನೇಕ ಜನಾಂಗಗಳ ಸಮ್ಮಿಶ್ರಣ ಈ ನಗರದಲ್ಲಿ ಕಾಣಬರುತ್ತದೆ. ಮೂರು ಖಂಡಗಳಿಗೆ ಸೇರಿದ ಜನರ ಭಾಷೆಗಳು ಇಲ್ಲಿ ಪ್ರಧಾನವಾಗಿವೆ.

ಕೊಲೋನ್ ನಗರವನ್ನು ಪನಾಮಾ ರೈಲು ಮಾರ್ಗದ ಕೊನೆಯ ನಿಲ್ದಾಣ ನಗರವಾಗಿ 1850ರಲ್ಲಿ ಸ್ಥಾಪಿಸಲಾಯಿತು. ಪ್ರಾರಂಭದಲ್ಲಿ ಅದಕ್ಕೆ ಪನಾಮಾ ರೈಲುಮಾರ್ಗ ನಿರ್ಮಾಪಕರಲ್ಲಿ ಒಬ್ಬನಾದ ವಿಲಿಯಂ ಎಚ್. ಆಸ್ಪಿನ್‌ವಾಲನ ಹೆಸರಿನಲ್ಲಿ ಆಸ್ಪಿನ್‌ವಾಲ್ ನಗರ ಎಂದು ಕರೆಯಲಾಗುತ್ತಿತ್ತು. ಸ್ಪ್ಯಾನಿಷ್ ಭಾಷೆಯಲ್ಲಿ ಕೊಲೋನ್ ಎಂದರೆ ಕೊಲಂಬಸ್ ಎಂದಾಗುತ್ತದೆ. ಅದರ ಯಮಳ ನಗರದ ಹೆಸರು ಕ್ರಿಸ್ಟೋಬಲ್, ರೈಲುಮಾರ್ಗ ಹಾಕಿದ ಮೇಲೆ ಕೊಲೋನ್ ನಗರ ಪ್ರಸಿದ್ಧಿಗೆ ಬಂತು; ಪನಾಮಾ ಕಾಲುವೆಯ ನಿರ್ಮಾಣದಿಂದ ಅದಕ್ಕೆ ಮತ್ತಷ್ಟು ಖ್ಯಾತಿ ದೊರೆಯಿತು. ಮೊದಮೊದಲು ಅನಾರೋಗ್ಯ ಸ್ಥಳವಾಗಿದ್ದ ಈ ನಗರಕ್ಕೆ ಪನಾಮಾ ನಾಲೆಯ ರಚನೆಗೆ ಸೇರಿದ ಅಧಿಕಾರಿ ಕರ್ನಲ್ ವಿಲಿಯಂ ಸಿ.ಜಾರ್ಜ್ ಅತ್ಯುತ್ತಮ ಚರಂಡಿ ವ್ಯವಸ್ಥೆಯನ್ನು ಹಾಗೂ ಕಶ್ಮಲ ಸಾಗಣೆಯ ಏರ್ಪಾಟುಗಳನ್ನು ಮಾಡಿದ. ಕೊಲೋನ್ ಈಗ ಪ್ರಪಂಚದ ಉಷ್ಣವಲಯದ ಆಧುನಿಕ ಹಾಗೂ ಆರೋಗ್ಯಕರವಾದ ನಗರಗಳಲ್ಲಿ ಒಂದು. ಬೀದಿಗಳಿಗೆ ಹಾಸುಗಲ್ಲುಗಳನ್ನು ಹಾಕಿ ನಗರವನ್ನು ಚೊಕ್ಕಟವಾಗಿಟ್ಟಿದ್ದಾರೆ. **(ವಿ.ಜಿ.ಕೆ.)**

**ಕೊಲ್ಯಾಕ್ಸ್ :** ಬ್ರಜ಼ಿಲ್ ದೇಶದ ಮೂಲವಾಸಿಯಾದ ಒಂದು ಆರ್ಕಿಡ್ ಜಾತಿ. ಆರ್ಕಿಡೇಸೀ ಕುಟುಂಬಕ್ಕೆ ಸೇರಿದೆ. ಸುಂದರವಾದ ಹೂಬಿಡುವ ಹಾಗೂ ಅಪ್ಪುಸಸ್ಯವಾದ ಇದನ್ನು ತೂಗು ಕುಂಡಗಳಲ್ಲಿ ಅಲಂಕಾರ ಸಸ್ಯವಾಗಿ ಬೆಳೆಸುತ್ತಾರೆ. ಇದರಲ್ಲಿ ಜ್ಯೂಗೋಸಸ್ ಮತ್ತು ಟ್ರೈಟೀರಸ್ ಎಂಬ ಎರಡು ಮುಖ್ಯ ಪ್ರಭೇದಗಳಿವೆ. ಜ್ಯೂಗೋಸಸ್ ಪ್ರಭೇದ ಹೆಚ್ಚು ಜನಪ್ರಿಯವಾದುದು.

ಕೊಲ್ಯಾಕ್ಸ್ ಜ್ಯೂಗೋಸಸ್ ಪ್ರಭೇದದ ಮಿಥ್ಯಾಲಶುನಗಳು 2" ಳಿಂದ 3" ಉದ್ದವಾಗಿದ್ದು ಗಾಜಿನಂತೆ ಹೊಳೆಯುತ್ತವೆ. ಒಂದೊಂದು ಲಶುನದಿಂದ ಸುಮಾರು 9" ಉದ್ದವಾಗಿರುವ ಹೊಳೆಯುವ ಹಸುರು ಬಣ್ಣದ ಎರಡು ಎಲೆಗಳು ಹೊರಡುತ್ತವೆ; ಇವುಗಳ ಆಕಾರ ಭರ್ಜಿಮೊನೆಯಂತೆ, ಮೇಲ್ಮೈ ಒರಟು. ಹೂಗೊಂಚಲು ರೆಸೀಮ್ ಮಾದರಿಯದು. ಇದರಲ್ಲಿ 2–4 ಹೂಗಳು ಇವೆ. ಹೂಗಳಿಗೆ ನವುರಾದ ವಾಸನೆಯೂ ಕೆನೆಬಣ್ಣವೂ ಇವೆ. ಹೂಗಳು ಗಿಡಗಳ ಮೇಲೆ ಬಹಳ ಕಾಲ ಇರುತ್ತವೆ. ದಳದ ಮೇಲೆ ಕಂದುಬಣ್ಣದ ಮಚ್ಚೆಗಳು ಮತ್ತು ಚುಕ್ಕೆಗಳು ಇವೆ. ದಳದ ಪಾರ್ಶ್ವಗಳು ಚಾಕಲೇಟ್ ಕಂದು ಬಣ್ಣಕ್ಕಿವೆ. ಅಲ್ಲಲ್ಲಿ ಊದಾಬಣ್ಣದ ಗೆರೆಗಳೂ ಇವೆ. ಇದರಿಂದಾಗಿ ಹೂ ಚೆಲುವಾಗಿ ಕಾಣುತ್ತದೆ.

ಕೊಲ್ಯಾಕ್ಸ್ ಗಿಡವನ್ನು ಜ಼ೈಗೊಪೆಟಲಮ್ ಎಂಬ ಇನ್ನೊಂದು ಜಾತಿಯ ಆರ್ಕಿಡ್ ಸಸ್ಯವೆಂದು ತಪ್ಪಾಗಿ ತಿಳಿಯುವುದುಂಟು. ಆದರೆ ಕೊಲ್ಯಾಕ್ಸ್ ಗಿಡದ ಪರಾಗ ಚೀಲಗಳಿಗೆ ಅನುಬಂಧಿಕೆಗಳಿವೆ(ಪೊಲಿನಿಯ). ಜ಼ೈಗೊಪೆಟಲಮ್‌ನಲ್ಲಿ ಇವು ಇಲ್ಲ. ಇವೆರಡು ಗಿಡಗಳನ್ನು ಅಡ್ಡಹಾಯಿಸಿ ಜ಼ೈಗೊಕೊಲ್ಯಾಕ್ಸ್ ಎಂಬ ಅಡ್ಡತಳಿಯನ್ನು ಪಡೆಯಲಾಗಿದೆ. **(ಡಿ.ಎಂ.)**

**ಕೊಲ್ಲಂ :** ಕೇರಳ ರಾಜ್ಯದ ಮಲಬಾರ್ ತೀರದ ಒಂದು ಹಳೆಯ ರೇವು ಪಟ್ಟಣ; ಅದೇ ಹೆಸರಿನ ಜಿಲ್ಲೆ. ಕೊಲ್ಲಂ ನಗರ ತಿರುವಾಂಕೂರಿಗೆ 72 ಕಿಮೀ ಉತ್ತರದಲ್ಲಿ ಅಷ್ಟಮುಡಿ ಸರೋವರದ ಮೇಲಿದೆ. ಕೇರಳದ ವಿಸ್ತೃತ ಹಿನ್ನೀರಿನ ನೌಕಾವ್ಯವಸ್ಥೆಯ ಮುಖ್ಯ ಕೇಂದ್ರಗಳಲ್ಲೊಂದಾಗಿರುವುದರಿಂದ ಇದು ವಾಣಿಜ್ಯ ಪ್ರಾಮುಖ್ಯವುಳ್ಳದ್ದಾಗಿದೆ. ಅಲಪ್ಪುಳ–ಕೊಚ್ಚಿಗಳಿಗೂ ಕೊಲ್ಲಂಗೂ ಕಾಲುವೆಗಳ ಮೂಲಕ ಸಂಬಂಧ ಏರ್ಪಟ್ಟಿದೆ. ಇಲ್ಲಿಂದ ಎರ್ನಾಕುಲಂ, ತಿರವಾಂಕೂರು ಮತ್ತು ಷೆನ್‌ಕೊಟ್ಟಗಳಿಗೆ ರೈಲುಮಾರ್ಗಗಳುಂಟು. ಇಲ್ಲಿಯ ರೇವು ಬಹು ಹಿಂದಿನ ಕಾಲದಿಂದ ಚೀನೀ ಮತ್ತು ಅರಬ್ ವರ್ತಕರಿಗೆ ಪರಿಚಯವಿತ್ತೆಂದು ತಿಳಿದು ಬರುತ್ತದೆ. ಮಾರ್ಕೋ ಪೋಲೊ ಇದನ್ನು ಕೊಯಿಲುಂ ಎಂದು ಕರೆದಿದ್ದ. 1503ರಲ್ಲಿ ಪೋರ್ಚುಗೀಸರು ಇಲ್ಲಿ ಒಂದು ಕೋಟೆ ಕಟ್ಟಿದರು. 1662ರಲ್ಲಿ ಇದನ್ನು ಡಚ್ಚರು ವಶಪಡಿಸಿಕೊಂಡರು. ಅನಂತರ ಇದು ಇಂಗ್ಲಿಷರ ವಶವಾಯಿತು. ಹಿಂದಿನ ತಿರುವಾಂಕೂರು ಸಂಸ್ಥಾನದ ರಾಜರ ಅರಮನೆಯೊಂದು ಕೊಲ್ಲಂನಲ್ಲಿದೆ. ಹತ್ತಿ ಜವಳಿ ಮತ್ತು ಹೆಂಚು ತಯಾರಿಕೆ ಇಲ್ಲಿಯ ಮುಖ್ಯ ಕೈಗಾರಿಕೆಗಳು. ಇಲ್ಲಿಂದ ತೆಂಗು, ಮರದ ದಿಮ್ಮಿ, ಗೋಡಂಬಿ, ಬಟ್ಟೆ, ಅಲ್ಯೂಮಿನಿಯಂ ಮುಂತಾದ ಪದಾರ್ಥಗಳು ರಫ್ತಾಗುತ್ತವೆ. ಕೊಲ್ಲಂ ಒಂದು ಮುಖ್ಯ ಶಿಕ್ಷಣ ಕೇಂದ್ರ. ಕೇರಳ ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಮೂರು ಕಾಲೇಜುಗಳು ಇಲ್ಲಿವೆ. ನಗರದ ಜನಸಂಖ್ಯೆ 361,441 (2001). ಸು. 2,492 ಚ.ಕಿಮೀ ವಿಸ್ತೀರ್ಣ ಇರುವ ಜಿಲ್ಲೆಯ ಜನಸಂಖ್ಯೆ 2585,208 (2001). (ಎಸ್.ಎನ್.ಎಆರ್.)

**ಕೊಲ್ಲಿಕರ್, ರೂಡಾಲ್ಫ್ ಆಲ್ಬರ್ಟ್ ಫಾನ್ :** 1817–1905. ಸ್ವಿಟ್ಸರ್ಲೆಂಡಿನ ಭ್ರೂಣ ವಿಜ್ಞಾನಿ ಮತ್ತು ಕೋಶರಚನ ವಿಜ್ಞಾನ ಪರಿಣತ. 1817ನೆಯ ಜುಲೈ 6 ರಂದು ಜ್ಯೂರಿಕ್‌ನಲ್ಲಿ ಜನಿಸಿದ. ಲೊವೆನ್ಸ್ಟ್ಯೋಕನ್ ಹೆನ್ಲೆ ಮತ್ತು ಮುಲ್ಲರ್ ಅವರಲ್ಲಿ ವಿದ್ಯಾಭ್ಯಾಸ ಮಾಡಿ 1844ರಲ್ಲಿ ಜ್ಯೂರಿಕ್‌ನಲ್ಲಿ ಶರೀರಕ್ರಿಯಾವಿಜ್ಞಾನ ಮತ್ತು ಅಂಗರಚನಾವಿಜ್ಞಾನದ ಮುಖ್ಯ ಪ್ರಾಧ್ಯಾಪಕನಾದ. ಈತನ ಮುಂದಾಳುತನದಲ್ಲಿ ಲೇಡಿಗ್, ವಿರ್ಚೌ ಮತ್ತು ಗೆಗನ್‌ಬಾರ್ ಅವರೊಂದಿಗೆ ವರ್ಜಬರ್ಗ್ ಜರ್ಮನಿಯಲ್ಲೇ ಅತ್ಯಂತ ಮುಖ್ಯವಾದ ವೈದ್ಯವಿದ್ಯಾ ಸಂಸ್ಥೆಯಾಯಿತು. ಶಿರೋಪಾದಿಗಳ (ಸೆಫಲಾಪೊಡ) ಬೆಳವಣಿಗೆ, ಸ್ನಾಯುವಿನ ರಚನೆ, ಕೆಂಪು ರಕ್ತಕಣಗಳ ಹುಟ್ಟು ಮತ್ತು ಬೆಳವಣಿಗೆ ಮತ್ತು ಬೆಳವಣಿಗೆಯಲ್ಲಿ ಜೀವಾಂಕುರ ಸಂಸ್ತರದ ಮುಖ್ಯಸ್ಥಾನ–ಇವು ಕೊಲ್ಲಿಕರ್‌ನ ಸಂಶೋಧನೆಗಳಲ್ಲಿ ಮುಖ್ಯವಾದುವು. ವೀರ್ಯಾಣು ಕೋಶಗಳಿಂದಲೇ ಉತ್ಪತ್ತಿಯಾಗುತ್ತದೆ ಎಂಬುದನ್ನು ವಿವರಿಸಿದವರಲ್ಲಿ ಇವನೇ ಮೊದಲಿನವ. ನರಕೋಶಸಿದ್ಧಾಂತವನ್ನು ಪ್ರತಿಪಾದಿಸುವುದಕ್ಕೆ ಮುಖ್ಯ ನಿದರ್ಶನಗಳನ್ನೂ ಒದಗಿಸಿಕೊಟ್ಟ.

ಡಾರ್ವಿನ್ನನ ವಿಕಾಸ ಸಿದ್ಧಾಂತವನ್ನು ಕೊಲ್ಲಿಕರ್ ಕೇವಲ ಮೂಲಸಂಕಲ್ಪ ವಾದ (ಟೆಲಿಯೋಲಾಜಿಕಲ್) ಎಂದು ಭಾವಿಸಿದ. ಪ್ರಾಣಿಗಳು ಕಾಲಕ್ರಮೇಣ ಪರಿವರ್ತನೆಗೊಳ್ಳುತ್ತವೆ ಎನ್ನುವ ವಿಕಾಸವಾದದ ತತ್ತ್ವಕ್ಕೆ ವಿರುದ್ಧವಾಗಿ ಅವು ತ್ವರಿತವಾದ ಬದಲಾವಣೆಯನ್ನು ಹೊಂದುತ್ತವೆ ಎಂದು ಸೂಚಿಸಿದ. 1852ರಲ್ಲಿ ಭ್ರೂಣವಿಜ್ಞಾನದ ಬಗ್ಗೆಯೂ 1861ರಲ್ಲಿ ಕೋಶರಚನಾವಿಜ್ಞಾನದ ಬಗ್ಗೆಯೂ ಎರಡು ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿದ. ನವೆಂಬರ್ 2, 1905ರಲ್ಲಿ ಈತ ನಿಧನ ಹೊಂದಿದ. (ಎಚ್.ಆರ್.ಡಿ.ಎಚ್)

**ಕೊಲ್ಲಿಪಾಕಿ :** ಆಂಧ್ರಪ್ರದೇಶದ ನಲಗೊಂಡ ಜಿಲ್ಲೆಗೆ ಸೇರಿದ ಒಂದು ಸ್ಥಳ. ಭೊನಗಿರ್ (ಭುವನಗಿರಿ) ರೈಲ್ವೆ ನಿಲ್ದಾಣಕ್ಕೆ ಸಮೀಪದಲ್ಲಿದೆ. ಇದಕ್ಕೆ ಕೊಲನುಪಾಕ ಎಂಬ ಇನ್ನೊಂದು ಹೆಸರೂ ಇದೆ. ಇದು ಜೈನ ಹಾಗೂ ವೀರಶೈವರ ಪವಿತ್ರ ಸ್ಥಳ ಎನಿಸಿದೆ. ಇಲ್ಲಿ ವೃಷಭನಾಥನ (ಮಾಣಿಕ್ಯದೇವ) ಬಸದಿ ಹಾಗೂ ಈಶ್ವರನ ದೇವಾಲಯಗಳಿವೆ. ವರ್ಷಕ್ಕೊಮ್ಮೆ ವೃಷಭನಾಥನ ಜಾತ್ರೆ ನಡೆಯುತ್ತದೆ. ಇಲ್ಲಿ ಕಾಕತೀಯರ ಶಾಸನಗಳು ದೊರೆತಿವೆ. ಕಲ್ಯಾಣ ಚಾಳುಕ್ಯರ ಒಂದನೆಯ ಸೋಮೇಶ್ವರ ಕೆಲಕಾಲ ಇಲ್ಲಿದ್ದನೆಂದು ತಿಳಿದುಬರುತ್ತದೆ.

ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರಾದ ರೇಣುಕಾಚಾರ್ಯರು ಕೊಲ್ಲಿಪಾಕಿ ಸೋಮೇಶ್ವರ ಲಿಂಗದಿಂದ ಅವತರಿಸಿದರೆಂದು ವೀರಶೈವ ಪುರಾಣಗಳಲ್ಲಿ ಹೇಳಿದೆ. ಓರಂಗಲ್ಲಿನ ಪ್ರತಾಪರುದ್ರದೇವನ ಸಮಾಧಿ ಇರುವುದು ಇಲ್ಲೆ. ಇಲ್ಲಿ ವೀರಶೈವರ ಅಷ್ಟಾದಶ ಮಠಗಳಿವೆ. ಈ ಎಲ್ಲ ಮಠಗಳಿಗೂ ಜಂಗಮರು ಗುರುಗಳಾಗಿದ್ದಾರೆ. ಕಲ್ಯಾಣಕ್ಕೆ ಮೊದಲೂ ಕಲ್ಯಾಣದ ಅನಂತರವೂ ಕೊಲ್ಲಿಪಾಕಿ ವೀರಶೈವ ಧರ್ಮದ ಕೇಂದ್ರವೆನಿಸಿದಂತೆ ತೋರುತ್ತದೆ. ಶ್ರೀಶೈಲ, ದ್ರಾಕ್ಷಾರಾಮ ಮತ್ತು ಕೊಲ್ಲಿಪಾಕಿ ಕ್ಷೇತ್ರಗಳ ಪ್ರಸಿದ್ಧ ಈಶ್ವರ ಲಿಂಗಗಳಿಂದಲೇ ತೆಲುಗು ದೇಶಕ್ಕೆ ತ್ರಿಲಿಂಗ ದೇಶ ಎಂಬ ಹೆಸರು ಬರಲು ಕಾರಣವೆನ್ನಲಾಗಿದೆ. ಕೊಲ್ಲಿಪಾಕಿ ಕ್ಷೇತ್ರದ ಮಹಿಮೆಯನ್ನು ಹೇಳುವ ಕೆಲವು ಗ್ರಂಥಗಳೂ ಇವೆ. (ಬಿ.ಎಸ್.)

**ಕೊಲ್ಹಟ್‌ಕರ್ ಅಚ್ಯುತ ಬಳವಂತ :** 1879–1931. ಮರಾಠಿ ಪತ್ರಿಕೋದ್ಯಮಿ ಮತ್ತು ನಾಟಕಕಾರ. ಇವನು 1879ರ ಆಗಸ್ಟ್ 1ರಂದು ವಾಯಿಯಲ್ಲಿ ಜನಿಸಿದ. ತಂದೆಯ ಹೆಸರು ವಾಮನರಾವ್ ಎಂದಿದ್ದರೂ ಕೊಲ್ಹಟ್‌ಕರ್ ಬಾಲ್ಯದಲ್ಲಿ ದೊಡ್ಡಪ್ಪನ ಪೋಷಣೆಯಲ್ಲಿದ್ದದ್ದರಿಂದ ಶಾಲೆಯಲ್ಲಿ ದೊಡ್ಡಪ್ಪನ ಹೆಸರೇ (ಬಳವಂತ) ತಂದೆಯ ಹೆಸರೆಂದು ದಾಖಲಾಯಿತು. ಹಾಗೆಂದೇ ಮುಂದೆಯೂ ಬಳಕೆಗೆ ಬಂತು. ಚಿಕ್ಕಂದಿನಿಂದಲೂ ವ್ಯಾಸಂಗದಲ್ಲಿ ಆಸಕ್ತಿ ತಳೆದಿದ್ದ ಕೊಲ್ಹಟ್‌ಕರ್ ಬಿ.ಎ., ಎಲ್‌ಎಲ್.ಬಿ. ಪದವೀಧರ(1904). ಸಾತಾರದಲ್ಲಿ ಎರಡು ವರ್ಷ ಉಪಾಧ್ಯಾಯನಾಗಿದ್ದ ಮೇಲೆ ಮನೆಯವರ ಆಗ್ರಹದ ಮೇರೆಗೆ ನಾಗಪುರದಲ್ಲಿ ವಕೀಲಿ ಪ್ರಾರಂಭಿಸಿದ. ಆದರೆ ಆ ವೃತ್ತಿಯಲ್ಲಿ ಆತನಿಗೆ ಆಸಕ್ತಿ ಇರಲಿಲ್ಲ. ಟಿಳಕರ ರಾಜಕಾರಣದಲ್ಲಿ ಶ್ರದ್ಧೆ ಬೆಳೆದಿತ್ತು. ನಾಗಪುರದ ದೇಶಸೇವಕ ಪತ್ರಿಕೆಯ ಲೇಖಕನಾಗಿ ಮುಂದೆ ಅದರ ಸಂಪಾದಕನೂ ಆದ. ರಾಜಕೀಯದಲ್ಲಿ ತಂದೆ ವಾಮನರಾವ್‌ದು ಮವಾಳ ಪಕ್ಷವಾದರೆ ಮಗ ಅಚ್ಚುತರಾವ್‌ದು ಜಹಾಲ ಪಕ್ಷ. ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಂಡದ್ದಕ್ಕಾಗಿ 1908ರ ಮಧ್ಯದಲ್ಲಿ ಸರ್ಕಾರ ಈತನಿಗೆ ಒಂದೂ ಮುಕ್ಕಾಲು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿತು. ಕಾರಾಗೃಹದಿಂದ ಹೊರಬಂದ ಮೇಲೆ (1912) ಕೆಲವು ವರ್ಷ ಈತ ಮದ್ರಾಸಿನಲ್ಲಿ ನೆಲಸಿದ್ದು, ಅನಂತರ ಮುಂಬಯಿಗೆ ಬಂದು ಸಂದೇಶ್ ಎನ್ನುವ ದಿನಪತ್ರಿಕೆ ಪ್ರಾರಂಭಿಸಿದ. ಇದು ಬಹುಬೇಗ ಜನಪ್ರಿಯವಾಯಿತು. ಜನರ ಮನಸ್ಸನ್ನು ನಾಟುವ, ಅವರನ್ನು ಉತ್ತೇಜಿಸುವ, ಗುಣಗಳಿಂದ ಕೂಡಿದ ಲೇಖನಗಳನ್ನು ಬರೆಯುವುದರಲ್ಲಿ ಕೊಲ್ಹಟ್‌ಕರ್ ಕೈ ಪಳಗಿತ್ತು. ಪ್ರಚಲಿತ ವಿಷಯಗಳ ಜೊತೆಗೆ ರಂಜನೆಯ ಅನೇಕ ವಿಷಯಗಳೂ ಈತನ ದಿನಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು. ಈ ಪತ್ರಿಕೆ ಸರ್ಕಾರದ ಆಗ್ರಹಕ್ಕೆ ಪದೇಪದೇ ಈಡಾಗುತ್ತಿತ್ತು. ಐದು ಸಲ ಅದನ್ನು ನಿಲ್ಲಿಸಲಾಗಿತ್ತು. ಸಂದೇಶದ ಜೊತೆಗೆ ಮೆಸೇಜ್ ಎನ್ನುವ ಇಂಗ್ಲಿಷ್ ದಿನಪತ್ರಿಕೆಯನ್ನೂ ಈತ ಹೊರಡಿಸಿದ. ಈತ ಪ್ರಕಟಿಸಿದ ಇನ್ನೊಂದು ಪತ್ರಿಕೆ ಶ್ರುತಿಬೋಧ. ಇದು ಇಂಗ್ಲಿಷ್, ಗುಜರಾತಿ, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಏಕಕಾಲಕ್ಕೆ ಪ್ರಕಟವಾಗುತ್ತಿದ್ದ ಒಂದು ಮಾಸಪತ್ರಿಕೆ. ದೇಶಸೇವಕ(ವಾರ ಪತ್ರಿಕೆ), ಉಷಾ(ಮಾಸಪತ್ರಿಕೆ), ಯುಗಾಂತರ(ವಾರಪತ್ರಿಕೆ), ಚಾಬೂಕ್‌ಸ್ವಾರ (ವಾರಪತ್ರಿಕೆ) ಇತ್ಯಾದಿ ಅನೇಕ ನಿಯತಕಾಲಿಕೆಗಳನ್ನು ಆತ ನಡೆಸುತ್ತಿದ್ದ. ಒಂದು ಪತ್ರಿಕೆ ನಿಂತರೆ ಇನ್ನೊಂದು ಪತ್ರಿಕೆಯನ್ನು ಹೊರಡಿಸುವ ಮಟ್ಟಿಗೆ ಆತನಿಗೆ ಉತ್ಸಾಹವಿತ್ತು. ಲೇಖಕನಾಗಿ ಕೊಲ್ಹಟ್‌ಕರನ ಕಲ್ಪನಾಸಾಮರ್ಥ್ಯ ಅಸಾಧಾರಣವಾದ್ದು. ಶಿಶುಸಾಹಿತ್ಯದಲ್ಲೂ ಈತ ಪರಿಣತನೆನಿಸಿದ್ದ. ಪತ್ರಿಕೆಗಳಿಗೆ ಬರೆಯುವುದು ಈತನಿಗೊಂದು ಹವ್ಯಾಸ.

ಮುಂದೆ ಕೇಸರಿ ಪತ್ರಿಕೆಗೂ ಕೊಲ್ಹಟ್‌ಕರನಿಗೂ ಮತಭೇದ ಉಂಟಾಯಿತು, ಟಿಳಕರೊಂದಿಗೂ ಈತನ ವಿರಸ ಬೆಳೆಯಿತು. ಕೊಲ್ಹಟ್‌ಕರನಿಗೆ ಗಾಂಧೀವಾದದಲ್ಲಿ ಕ್ರಮೇಣ ಹೆಚ್ಚುಹೆಚ್ಚಾಗಿ ಶ್ರದ್ಧೆ ಮೂಡಿತು. ತಾತ್ಯಾಸಾಹೇಬ್ ಕೇಳಕರನಿಂದಲೂ ಬೇರೆಯಾದ. 1930ರ ಕಾನೂನುಭಂಗ ಚಳವಳಿಯಲ್ಲಿ ಭಾಗವಹಿಸಿ ಶಿಕ್ಷೆ ಅನುಭವಿಸಿದ. ಅನಂತರ ಕೊಲ್ಹಟ್‌ಕರ್ ಹೆಚ್ಚು ಕಾಲ ಬದುಕಲಿಲ್ಲ; 1931ರ ಜೂನ್ 15ರಂದು ನಿಧನ ಹೊಂದಿದ.

ಕೊಲ್ಹಟ್‌ಕರ್ ಉತ್ತಮ ವಾಗ್ಮಿಯೂ ನಟನೂ ಆಗಿದ್ದ. ನಾರಿಂಗೀ ನಿಶಾಣ ಮಂಡಳಿ ಎಂಬ ಹೆಸರಿನ ನಾಟಕ ಸಂಸ್ಥೆಯೊಂದನ್ನು ಸ್ಥಾಪಿಸಿ, ಅದರಲ್ಲಿ ಪತ್ನಿಯೊಂದಿಗೆ ಅಭಿನಯಿಸುತ್ತಿದ್ದ. ನಾರಿಂಗೀ ನಿಶಾಣ, ತಾಯೀ ತೇಲೀಣ, ಬಟ್ಟ್ಯಾಬೋಳ ಮುಂತಾದ ಹನ್ನೊಂದು ನಾಟಕಗಳನ್ನೂ ಐದು ಕಾದಂಬರಿಗಳನ್ನೂ ಈತ ಬರೆದಿದ್ದಾನೆ. (ಎನ್.ಕೆ.)

**ಕೊಲ್ಹಾಪುರ :** ಮಹಾರಾಷ್ಟ್ರದ ದಕ್ಷಿಣದ ಕೊನೆಗಿರುವ ಜಿಲ್ಲೆ; ಅದೇ ಹೆಸರಿನ ಮುಖ್ಯ ಪಟ್ಟಣ. ಉ.ಅ.14°30′–17°14′ ಮತ್ತು ಪೂ.ರೇ. 73°43′–74°44′ ನಡುವೆ ಇರುವ ಈ ಜಿಲ್ಲೆಗೆ ಪಶ್ಚಿಮದಲ್ಲಿ ಮಹಾರಾಷ್ಟ್ರದ ರತ್ನಾಗಿರಿ ಮತ್ತು ಉತ್ತರದಲ್ಲಿ ಸಾಂಗಲಿ ಜಿಲ್ಲೆಗಳೂ ದಕ್ಷಿಣ ಹಾಗೂ ಪೂರ್ವಗಳಲ್ಲಿ ಕರ್ನಾಟಕ ರಾಜ್ಯದ ಬೆಳಗಾಂವಿ ಜಿಲ್ಲೆಯೂ ಗಡಿಗಳು. ವಿಸ್ತೀರ್ಣ 8135 ಚ.ಕಿಮೀ. ಜಿಲ್ಲೆಯ ಜನಸಂಖ್ಯೆ 419000(2001). ಜಿಲ್ಲೆಯಲ್ಲಿ ಹನ್ನೊಂದು ತಾಲ್ಲೂಕುಗಳಿವೆ.

ಸಹ್ಯಾದ್ರಿ ಪರ್ವತಗಳ ಪೂರ್ವಕ್ಕಿರುವ ಈ ಜಿಲ್ಲೆಯಲ್ಲಿ ಚಿಕ್ಕ ದೊಡ್ಡ ಪರ್ವತಗಳಿವೆ. ಅಂಬಾ, ಫೋಂಡಾ ಮತ್ತು ಅಂಬೋಲಿ ಘಟ್ಟದ ರಸ್ತೆಗಳು ಈ ಜಿಲ್ಲೆಯನ್ನು ರತ್ನಾಗಿರಿ ಜಿಲ್ಲೆಯೊಂದಿಗೆ ಸೇರಿಸುತ್ತವೆ. ಸಹ್ಯಾದ್ರಿ ಇರುವ ಪಶ್ಚಿಮಭಾಗ ಬಿಟ್ಟರೆ ಜಿಲ್ಲೆಯ ಉಳಿದ ಭಾಗದ ಸರಾಸರಿ ಎತ್ತರ 364–606 ಮೀ. ಜಿಲ್ಲೆಯಲ್ಲಿ ಅನೇಕ ನದಿಗಳು ಹುಟ್ಟಿ ಹರಿಯುತ್ತವೆ. ಭೋಗಾವತಿ, ಸರಸ್ವತಿ, ವೇದಗಂಗಾ, ಘಟಪ್ರಭಾ, ಮಲಪ್ರಭಾ, ಹಿರಣ್ಯಕೇಶೀ–ಇವು ಮುಖ್ಯ ನದಿಗಳು. ಇವುಗಳಲ್ಲಿ ಕೆಲವು ಮುಂದೆ ಕೃಷ್ಣಾನದಿಯನ್ನು ಸೇರುತ್ತವೆ.

ಜಿಲ್ಲೆಯಲ್ಲಿ ಸಾಮಾನ್ಯವಾಗಿ ಸಮ ಹವೆ ಇದೆ. ಜಿಲ್ಲೆಯ ಪಶ್ಚಿಮ ಭಾಗದ ಸಹ್ಯಾದ್ರಿ ಪ್ರದೇಶದಲ್ಲಿ ವಾರ್ಷಿಕ ಮಳೆ ಸು. 500–600 ಸೆಂಮೀ. ಆದರೆ ಪೂರ್ವದ ಬಯಲುಗಳಲ್ಲಿ 60–80 ಸೆಮೀ. ಮಾತ್ರ. ಜಿಲ್ಲೆಯ ಪಶ್ಚಿಮಾರ್ಧದ ತಾಲ್ಲೂಕುಗಳಾದ ಶಾಹೂವಾಡಿ, ಬಾವಡಾ, ರಾಧಾನಗರಿ ಹಾಗೂ ಚಂದಗಡಗಳಲ್ಲಿ ಕುರಂದದ ಕಲ್ಲು ಇರುವ ಭೂಮಿ ಹೆಚ್ಚಾಗಿದೆ. ಈ ತಾಲ್ಲೂಕುಗಳಲ್ಲಿ ಚಿಕ್ಕಮಟ್ಟ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಜಿಲ್ಲೆಯ ಅರಣ್ಯಗಳಲ್ಲಿಯ ಸಸ್ಯಸಂಪತ್ತು ವೈವಿಧ್ಯಮಯ. ಹುಲಿ, ಚಿರತೆ ಮುಂತಾದ ಮೃಗಗಳು ಕಾಣಸಿಗುವ ಕೆಲವೇ ಕಾಡುಗಳಲ್ಲಿ ಇದೂ ಒಂದು.

ಜಿಲ್ಲೆ ಕೃಷಿಪ್ರಧಾನ. ನೀರಾವರಿ ಸೌಲಭ್ಯ ತಕ್ಕಮಟ್ಟಿಗೆ ಉಂಟು. ಕಬ್ಬು, ಬತ್ತ, ತಂಬಾಕು, ಶೇಂಗ, ಹತ್ತಿ–ಇವು ಮುಖ್ಯ ಬೆಳೆಗಳು. ಕೆಲವು ಕಡೆ ದ್ರಾಕ್ಷಿ, ನಿಂಬೆ ತೋಟಗಳಿವೆ. ಜಿಲ್ಲೆಯಲ್ಲಿ ಒಂದು ಬಟ್ಟೆಯ ಗಿರಣಿ, 10ಕ್ಕಿಂತ ಹೆಚ್ಚು ಎಣ್ಣೆಗಿರಣಿಗಳು ಮತ್ತು 6 ಸಕ್ಕರೆ ಕಾರ್ಖಾನೆಗಳು ಇವೆ. ಚಲನಚಿತ್ರ ಕೈಗಾರಿಕೆಗೂ ಜಿಲ್ಲೆ ಪ್ರಸಿದ್ಧ.

ಜಿಲ್ಲೆಯಲ್ಲಿ ಸಂಪರ್ಕಮಾರ್ಗಗಳ ವ್ಯವಸ್ಥೆ ಚೆನ್ನಾಗಿದೆ. ಸು.1600 ಕಿಮೀ ಉದ್ದದ ರಸ್ತೆಗಳಿರುವ ಈ ಜಿಲ್ಲೆಯಲ್ಲಿ ಬೆಂಗಳೂರು–ಪುಣೆ, ಕೊಲ್ಹಾಪುರ–ಮಿರಜ್ ಹೆದ್ದಾರಿಗಳು ಮುಖ್ಯ. ರತ್ನಾಗಿರಿ ಜಿಲ್ಲೆಗೆ ಹೋಗುವ ಅನೇಕ ಮಾರ್ಗಗಳು ಈ ಜಿಲ್ಲೆಯ ಮೂಲಕ ಹಾದು ಹೋಗುತ್ತವೆ.

ಶ್ರೀ ಮಹಾಲಕ್ಷ್ಮಿ ದೇವಾಲಯ, ಕೊಲ್ಹಾಪುರ

ಈ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು ಅನೇಕ. ಐತಿಹಾಸಿಕ ಸ್ಮಾರಕಗಳಿಗೆ ಲೆಕ್ಕವಿಲ್ಲ. ಜಿಲ್ಲೆಯಲ್ಲಿ 35 ಕೋಟೆಗಳಿವೆ. ಶಿವಾಳಗಡ, ಪನ್ಹಾಳಗಡ, ಗಗನಗಡ, ರಾಂಗಣಾ ಕೋಟೆ, ಖಿದ್ರಾಪುರದ ದೇವಸ್ಥಾನ, ಬಹಿರೇಶ್ವರ ದೇವಾಲಯ, ಸಾಂಗವಡದ ನೃಸಿಂಹ ದೇವಾಲಯ, ಬಾಹುಬಲಿಯ ಬಾಹುಬಲಿಮೂರ್ತಿ, ಕೊಲ್ಹಾಪುರದ ಮಹಾಲಕ್ಷ್ಮೀದೇವಾಲಯ–ಇವು ಪ್ರೇಕ್ಷಣೀಯವಾಗಿವೆ. *

ಕೊಲ್ಹಾಪುರ ಪಟ್ಟಣದ ಜನಸಂಖ್ಯೆ 54373 (1991). ಈ ಪಟ್ಟಣದ ಉದಯವಾದ್ದು ಧಾರ್ಮಿಕ ಕೇಂದ್ರವಾಗಿ. ಟಾಲೆಮಿ ಇದನ್ನು ವ್ಯಾಪಾರ ಕೇಂದ್ರವೆಂದು ಉಲ್ಲೇಖಿಸಿದ್ದಾನೆ. ಅಕ್ಕಡಿಕಾಳು, ಮೆಣಸಿನಕಾಯಿ, ನೆಲಗಡಲೆ, ಅಕ್ಕಿ, ಗೋದಿ, ಕಬ್ಬು–ಇವು ಇಲ್ಲಿ ಮಾರಾಟವಾಗುತ್ತವೆ. ಇದು ಮಹಾರಾಷ್ಟ್ರದಲ್ಲಿಯೇ ದೊಡ್ಡದಾದ ಬೆಲ್ಲದ ಪೇಟೆ. ಇಲ್ಲಿ ಎಣ್ಣೆಯ ಗಿರಣಿಗಳಿವೆ. ಶ್ರೀ ಶಾಹು ಛತ್ರಪತಿಮಿಲ್ಸ್, ಕೊಲ್ಹಾಪುರ ಸಕ್ಕರೆ ಕಾರ್ಖಾನೆ, ಪಾತೊ ಎಂಜಿನಿಯರಿಂಗ್ ವರ್ಕ್ಸ್–ಇವು ಇಲ್ಲಿಯ ಮುಖ್ಯ ಕಾರ್ಖಾನೆಗಳು. ಎಂಜಿನಿಯರಿಂಗ್ ಉದ್ಯಮ ಭರದಿಂದ ಬೆಳೆಯುತ್ತಿದೆ. ಮರಾಠಿ ಚಲನಚಿತ್ರಗಳ ತಯಾರಿಕೆ ಆರಂಭವಾದ್ದು ಕೊಲ್ಹಾಪುರದಲ್ಲಿ.

1854ರಲ್ಲಿ ಅಕ್ಟೋಬರ್ 12ರಂದು ಜಾರ್ಜ್ ಮಾಲ್ಕಂ ಇಲ್ಲಿ ನಗರಸಭೆಯನ್ನು ಸ್ಥಾಪಿಸಿದ. ಅಂದಿನಿಂದ ಇದರ ವ್ಯಾಪ್ತಿ ಬೆಳೆಯುತ್ತಿದೆ. ಪುಣೆ–ಬೆಂಗಳೂರು, ರತ್ನಗಿರಿ–ವಿಜಯಪುರ ರಾಷ್ಟ್ರೀಯ ಹೆದ್ದಾರಿಗಳು ಈ ನಗರದ ಮೂಲಕ ಹಾದು ಹೋಗುತ್ತವೆ. ಪುಣೆಯಿಂದ 288 ಕಿಮೀ ಮತ್ತು ಮಿರಜದಿಂದ 48 ಕಿಮೀ ದೂರದಲ್ಲಿರುವ ಇದು ದಕ್ಷಿಣ ರೈಲ್ವೆಯ ಕೊನೆಯ ನಿಲ್ದಾಣ.

ನಗರದಲ್ಲಿ ಮತ್ತು ಅದರ ಸುತ್ತಮುತ್ತ ಅನೇಕ ಪ್ರೇಕ್ಷಣೀಯ ಸ್ಥಳಗಳೂ ನಿಸರ್ಗ ರಮ್ಯ ಸ್ಥಳಗಳೂ ಇವೆ. ಕೊಲ್ಹಾಪುರ ಮಹತ್ತ್ವದ ವಿದ್ಯಾಕೇಂದ್ರ. ನಾಲ್ಕು ಕಲಾ ಮತ್ತು ವಿಜ್ಞಾನ ಕಾಲೇಜುಗಳೂ ಒಂದು ವಾಣಿಜ್ಯ ಕಾಲೇಜೂ ಒಂದು ನ್ಯಾಯಶಾಸ್ತ್ರ ಕಾಲೇಜೂ ಒಂದು ಕೃಷಿ ಕಾಲೇಜೂ ಒಂದು ಶಿಕ್ಷಣ ಕಾಲೇಜೂ ಇಲ್ಲಿವೆ. ಅನೇಕ ಪ್ರಾಥಮಿಕ ಮಾಧ್ಯಮಿಕ ಶಾಲೆಗಳುಂಟು. ದಕ್ಷಿಣ ಮಹಾರಾಷ್ಟ್ರದ ಐದು ಜಿಲ್ಲೆಗಳಿಗಾಗಿ ಸ್ಥಾಪಿಸಲಾದ ಶಿವಾಜಿ ವಿಶ್ವವಿದ್ಯಾಲಯದ ಕೇಂದ್ರವಿದು. (ಎಂ.ಜಿ.ಬಿ.; ಜಿ.ಎಚ್.)

**ಇತಿಹಾಸ** : 10ನೆಯ ಶತಮಾನದ ಆದಿಕಾಲದಿಂದ 13ನೆಯ ಶತಮಾನದ ಆದಿಕಾಲದ ತನಕ ಕೊಲ್ಹಾಪುರ ಶಿಲಾಹಾರ ವಂಶಕ್ಕೆ ಸೇರಿದ ರಾಜರ ಆಡಳಿತಕ್ಕೆ ಒಳಪಟ್ಟಿತ್ತು. ಸು. 1212ರಲ್ಲಿ ಕೊಲ್ಹಾಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳು ದೇವಗಿರಿಯ ಯಾದವರ ಕೈಸೇರಿತು. ಈ ಹಿಂದೂ ರಾಜವಂಶೀಯರ ತರುವಾಯ ಬಹಮನಿಯ ಮುಸ್ಲಿಂ ದೊರೆಗಳು ಕೊಲ್ಹಾಪುರವನ್ನು ಗೆದ್ದು ಆಳತೊಡಗಿದರು. ಬಹಮನಿ ರಾಜ್ಯ ಒಡೆದುಹೋದಾಗ ಇದು ಬಿಜಾಪುರದ ಸುಲ್ತಾನರ ಕೈವಶವಾಯಿತು. 1659ರಲ್ಲಿ ಕೊಲ್ಹಾಪುರದ ಕೋಟೆ ಶಿವಾಜಿಯ ವಶಕ್ಕೆ ಬಂದಿತ್ತು ಅನಂತರ ಅದು ಮೊಗಲರ ವಶವಾಗಿ ಮತ್ತೆ ಮರಾಠರ ಅಧೀನಕ್ಕೆ ಬಂತು.

ಕೊಲ್ಹಾಪುರದಲ್ಲಿ ಹೀಗೆ ತಮ್ಮ ಆಡಳಿತ ಪ್ರಾರಂಭಿಸಿದ ಮರಾಠಿ ರಾಜರು ಶಿವಾಜಿಯ ಕಿರಿಯ ಮಗನಾದ ರಾಜಾರಾಮನ ವಂಶಸ್ಥರಾಗಿದ್ದರು. 1700ರಲ್ಲಿ ರಾಜಾರಾಂ ಮರಣ ಹೊಂದಿದ ತರುವಾಯ, ಆತನ ಹೆಂಡತಿ ತಾರಾಬಾಯಿ ತನ್ನ ಮಗನಾದ 2ನೆಯ ಶಿವಾಜಿಯನ್ನು ಕೊಲ್ಹಾಪುರದ ಸಿಂಹಾಸನಕ್ಕೆ ತಂದಳು. ಇವನಿಗೂ ಸಾಂಬಾಜಿಯ ಮಗನಾದ ಸಾಹುವಿಗೂ ಸಿಂಹಾಸನದ ಹಕ್ಕಿಗೆ ಹೋರಾಟವಾಗಿ, ಕಡೆಗೆ ರಾಜ್ಯ ಎರಡು ಪಾಲಾಗಿ, ಸಾಹು ಸಾತಾರದಿಂದ ಆಳುವುದೆಂದು ಒಪ್ಪಂದವಾಯಿತು. ಆದರೂ ಕೊಲ್ಹಾಪುರ ಮತ್ತು ಸಾತಾರಗಳ ನಡುವೆ ಅನೇಕ ವರ್ಷಗಳ ತನಕ ತಿಕ್ಕಾಟ ನಡೆದು, 1739ರಲ್ಲಿ ಕೊಲ್ಹಾಪುರ ಒಂದು ಸ್ವತಂತ್ರ ರಾಜ್ಯವೆಂದು ಸಾಹುವಿನಿಂದ ಘೋಷಿತವಾಯಿತು. 1760ರಲ್ಲಿ ರಾಜಾರಾಮನ ಚಿಕ್ಕಮಗ ಮರಣಹೊಂದಿದಾಗ ಶಿವಾಜಿಯ ವಂಶದವರ ಆಡಳಿತ ಕೊನೆಗೊಂಡು, ಭೋಂಸ್ಲೆ ಮನೆತನದವನಾದ 3ನೆಯ ಶಿವಾಜಿ ಆಡಳಿತ ನಡೆಸತೊಡಗಿದ. 1765 ಮತ್ತು 1792ರಲ್ಲಿ ಬ್ರಿಟಿಷರು ಕೊಲ್ಹಾಪುರದಲ್ಲಿದ್ದ ದರೋಡೆಕೋರರನ್ನು ನಿರ್ಮೂಲ ಮಾಡಬೇಕೆಂದು ಸೈನ್ಯ ಕಳುಹಿಸಿದರು. ಕೊಲ್ಹಾಪುರದ ರಾಜ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡು ಬ್ರಿಟಿಷ್ ವರ್ತಕರಿಗೆ ಪರಿಹಾರ ಕೊಟ್ಟನಲ್ಲದೆ ಮಾಲ್ವಾನ್ ಮತ್ತು ಕೊಲ್ಹಾಪುರಗಳಲ್ಲಿ ಕೋಟೆಗಳನ್ನು ತೆರೆಯಲು ಅಪ್ಪಣೆ ಕೊಟ್ಟ. ಒಳಜಗಳಗಳಿಂದಲೂ ದುರಾಡಳಿತಗಳಿಂದಲೂ ತುಂಬಿದ್ದ ಕೊಲ್ಹಾಪುರ ರಾಜ್ಯ 1862ರಲ್ಲಿ 4ನೆಯ ಶಿವಾಜಿಯ ಕಾಲದಲ್ಲಿ ಸಂಪೂರ್ಣವಾಗಿ ಬ್ರಿಟಿಷರ ನಿಯಂತ್ರಣಕ್ಕೊಳಪಟ್ಟಿತು. ಆದರೂ ದೇಶೀಯ ರಾಜರು ನೆಪಮಾತ್ರಕ್ಕೆ ಆಡಳಿತ ನಡೆಸುತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ, ಕೊಲ್ಹಾಪುರ ಮುಂಬಯಿಯಲ್ಲಿ ವಿಲೀನವಾಯಿತು. ಈಗ ಇದು ಮಹಾರಾಷ್ಟ್ರ ರಾಜ್ಯದ ಒಂದು ಭಾಗ. (ಎಸ್.ಕೆ.ಎಸ್.)

**ಕೊವಲ್, ಎಡ್‌ವರ್ಡ್ ಬೈಲ್ಸ್** : 1826–1903. ಪ್ರಸಿದ್ಧ ಸಂಸ್ಕೃತ ವಿದ್ವಾಂಸ. ಹುಟ್ಟಿನಿಂದ ಆಂಗ್ಲೇಯ. ಜನನ ಇಪ್ಸ್‌ವಿಚ್‌ನಲ್ಲಿ. ಆಕ್ಸ್‌ಫರ್ಡಿನ ಮ್ಯಾಗ್ಡಲೀನ್ ಕಾಲೇಜಿನಲ್ಲಿ ಓದಿ ಪದವೀಧರನಾದ (1854). ವಿದ್ಯಾರ್ಥಿ ದೆಶೆಯಲ್ಲೇ ಪುರಾತನ ಭಾಷೆಗಳಲ್ಲಿ ಆಸ್ಥೆ ತಳೆದಿದ್ದ ಈತ ಕಾಳಿದಾಸನ ವಿಕ್ರಮೋರ್ವಶೀಯದ ಇಂಗ್ಲಿಷ್ ಅನುವಾದವನ್ನು ಪ್ರಕಟಿಸಿದ್ದಲ್ಲದೆ (1851), ಅನೇಕ ವಿದ್ವತ್ಪೂರ್ಣ ಲೇಖನಗಳನ್ನೂ ಬೊಡೆಲಿಯನ್ ಗ್ರಂಥಾಲಯದ ಹಸ್ತಪ್ರತಿ ಗ್ರಂಥಗಳ ಸೂಚಿಯನ್ನೂ ತಯಾರಿಸಿದ. 1854ರಲ್ಲಿ ವರರುಚಿಯ ಪ್ರಾಕೃತ ಪ್ರಕಾಶವನ್ನೂ ಸಂಪಾದಿಸಿದ. ಟೆನಿಸನ್, ಥ್ಯಾಕರೆ, ಜೊವೆಟ್, ಮ್ಯಾಕ್ಸ್ ಮುಲ್ಲರ್ ಮತ್ತು ಎಚ್.ಎಚ್.ವಿಲ್ಸನ್ನರಂಥ ಪ್ರಸಿದ್ಧ ವಿದ್ವಾಂಸರ ಮನ್ನಣೆಗೆ ಈತ ಪಾತ್ರನಾಗಿದ್ದ.

1856ರಲ್ಲಿ ಕೊವಲ್ ಭಾರತಕ್ಕೆ ಬಂದು ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕನಾದ. 1858ರಲ್ಲಿ ಅಲ್ಲಿಯ ಸಂಸ್ಕೃತ ಕಾಲೇಜಿನ ಪ್ರಾಚಾರ್ಯನಾದ. ಅಲ್ಲಿದ್ದ ಉಮರನ ಒಸಗೆಯ ಪಾರಸಿ ಮೂಲದ ಹಸ್ತಪ್ರತಿಯನ್ನು ಶೋಧಿಸಿ ಎಡ್‌ವರ್ಡ್ ಫಿಟ್ಸ್‌ಜೆರಾಲ್ಡ್ ಅವರಿಗೆ ಕೊಟ್ಟು ಸಹಾಯ ಮಾಡಿದ. ಬಂಗಾಳದ ಏಷ್ಯಾಟಿಕ್ ಸೊಸೈಟಿಯ ಆಶ್ರಯದಲ್ಲಿ ಹೊರಡುತ್ತಿದ್ದ ಬಿಬ್ಲಿಯೋಥೆಕ ಇಂಡಿಕ ಗ್ರಂಥಮಾಲೆಗೆ ಅನೇಕ ಗ್ರಂಥಗಳನ್ನು ಸಂಪಾದಿಸಿಕೊಟ್ಟ. ಉದಯನನ ನ್ಯಾಯಕುಸುಮಾಂಜಲಿ, ಕೃಷ್ಣಯಜುರ್ವೇದಸಂಹಿತ ಮುಂತಾದುವು ಇವನ ಕಾಲದಲ್ಲಿ ಪ್ರಕಟಗೊಂಡುವು. 1864ರಲ್ಲಿ ಈತ ಬರೆದ ಪ್ರಾಕೃತ ವ್ಯಾಕರಣ ಇಂಗ್ಲೆಂಡ್, ಜರ್ಮನಿ ಮತ್ತು ಫ್ರಾನ್ಸ್ ದೇಶಗಳಲ್ಲಿ ಅಪಾರ ಮನ್ನಣೆ ಗಳಿಸಿತು. ನಿಶಿತಮತಿಯೂ ಸದಾ ಅಭ್ಯಾಸನಿರತನೂ ಆದ ಈತ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಆಳವಾದ ಪಾಂಡಿತ್ಯ ಪಡೆದಿದ್ದ. ಜೊತೆಗೆ ಬಂಗಾಳಿ, ಉರ್ದು, ಹಿಂದೂಸ್ಥಾನಿ, ಮರಾಠಿ ಮೊದಲಾದವುಗಳ ಪರಿಚಯವೂ ಇತ್ತು. ಬೌದ್ಧಗಾಥೆಗಳ ಮತ್ತು ಅಶೋಕನ ಶಿಲಾಶಾಸನಗಳ ಭಾಷಾವಿಶೇಷವಲ್ಲದೆ ಪಾರಸಿ, ಅರಬ್ಬೀ, ಗ್ರೀಕ್, ಲ್ಯಾಟಿನ್ ಮತ್ತು ಸ್ಪ್ಯಾನಿಷ್ ಭಾಷೆಗಳೂ ಈತನಿಗೆ ತಿಳಿದಿದ್ದುವು. ಪ್ರಾಕ್ತನ ಸಂಶೋಧನೆ, ವಾಸ್ತುಶಿಲ್ಪ, ಸಸ್ಯವಿಜ್ಞಾನ, ಭೂವಿಜ್ಞಾನಗಳಲ್ಲೂ ಈತ ಪಂಡಿತನಾಗಿದ್ದ.

1864ರಲ್ಲಿ ಇಂಗ್ಲೆಂಡಿಗೆ ತೆರಳಿದ ಈತ 1867ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪ್ರಪ್ರಥಮ ಸಂಸ್ಕೃತ ಪ್ರಾಧ್ಯಾಪಕನಾಗಿ ತನ್ನ ಕೊನೆಯ ದಿನಗಳವರೆಗೂ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ಸೇವೆಯಲ್ಲಿ ನಿರತನಾದ. ಅಲ್ಲಿ ಭಾಷಾವಿಜ್ಞಾನ ಸಂಘವೊಂದನ್ನು ಸ್ಥಾಪಿಸಿದ್ದಲ್ಲದೆ ತನ್ನ ವಿದ್ಯಾರ್ಥಿಮಿತ್ರರೊಡಗೂಡಿ ಅನೇಕ ಸಂಸ್ಕೃತ ಗ್ರಂಥಗಳನ್ನು ಸಂಪಾದಿಸಿ ಭಾಷಾಂತರಿಸಿ ಪ್ರಕಟಿಸಿದ. ಅವುಗಳಲ್ಲಿ ಸರ್ವದರ್ಶನ ಸಂಗ್ರಹ(1882), ಬಾಣನ ಹರ್ಷಚರಿತ(1897) ಮತ್ತು ಅಶ್ವಘೋಷನ ಬುದ್ಧಚರಿತೆ ಮುಂತಾದ ಕೃತಿಗಳು ಮುಖ್ಯವಾದವು.

ಕೊವಲ್‌ಗೆ 1875ರಲ್ಲಿ ಎಡಿನ್‌ಬರೊ ವಿಶ್ವವಿದ್ಯಾಲಯ ಎಲ್ಎಲ್.ಡಿ ಪ್ರಶಸ್ತಿಯನ್ನೂ 1866ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಡಿ.ಸಿ.ಎಲ್. ಪ್ರಶಸ್ತಿಯನ್ನೂ 1898ರಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿ ಸುವರ್ಣಪದಕವನ್ನೂ, 1902ರಲ್ಲಿ ಬ್ರಿಟಿಷ್ ಅಕಡೆಮಿ ಮೂಲ ಸದಸ್ಯತ್ವವನ್ನೂ ಇತ್ತು ಗೌರವಿಸಿದುವು. (ಸಿ.ಜಿ.ಪಿ.; ವಿ.ಎಸ್.ಬಿ.)

**ಕೊಸಿಗಿನ್, ಅಲೆಕ್ಸಿ ನಿಕೊಲಾಯೆವಿಚ್ :** 1904–1980. ಸೋವಿಯತ್ ರಾಜಕಾರಣಿ. ಸೋವಿಯೆತ್ ಸಮಾಜವಾದಿ ಗಣರಾಜ್ಯ ಒಕ್ಕೂಟದ ಮಂತ್ರಿಮಂಡಳದ ಸಭಾಧ್ಯಕ್ಷ (ಪ್ರಧಾನಮಂತ್ರಿ) (1964). ಲೆನಿನ್‌ಗ್ರಾಡ್‌ನಲ್ಲಿ (ಆಗ ಸೇಂಟ್ ಪೀಟರ್ಸ್ ಬರ್ಗ್) 1904ರ ಫೆಬ್ರವರಿ 20 ರಂದು ಲೋಹ ಕೆಲಸಗಾರನ ವಂಶದಲ್ಲಿ ಜನಿಸಿದ.

ಕೊಸಿಗಿನ್ ತನ್ನ 15ನೆಯ ವಯಸ್ಸಿನಲ್ಲೇ ಕೆಂಪು ಸೈನ್ಯಕ್ಕೆ ಸ್ವಯಂಸೇವಕನಾಗಿ ಸೇರಿದ. ಮಿಲಿಟರಿ ಖಾತೆಯಲ್ಲಿ ಮೂರು ವರ್ಷ ಸೇವೆ ಸಲ್ಲಿಸಿದ ಮೇಲೆ ಲೆನಿನ್‌ಗ್ರಾಡಿನ ಒಂದು ಸಹಕಾರಿ ಶಾಲೆಯನ್ನು ಸೇರಿ ಅಲ್ಲಿಂದ ಪದವೀಧರನಾದ. (1924). ಈತ ಲೆನಿನ್‌ಗ್ರಾಡಿನ ಟೆಕ್ಸ್‌ಟೈಲ್ ಇನ್‌ಸ್ಟಿಟ್ಯೂಟಿನಲ್ಲಿ ಉನ್ನತ ವಿದ್ಯಾಭ್ಯಾಸ ಪಡೆದು ಆ ಕ್ಷೇತ್ರದಲ್ಲಿ 1935ರಲ್ಲಿ ಪದವಿ ಗಳಿಸಿದ್ದ. ಅನಂತರ ಕೊಸಿಗಿನ್‌ಗೆ ಸೋವಿಯೆತ್ ಸರ್ಕಾರದ ಸದಸ್ಯತ್ವ ಲಭ್ಯವಾಯಿತು. ಸೋವಿಯೆತ್ ಒಕ್ಕೂಟದ ಜವಳಿ ಕೈಗಾರಿಕೆಯ ಪೀಪಲ್ಸ್ ಕಾಮಿಸಾರ್ ಆಗಿ ಕೊಸಿಗಿನ್ ನೇಮಕಗೊಂಡ.

ಆ ಕಾಲಕ್ಕೆ ಆಗಲೇ ಕೊಸಿಗಿನ್‌ಗೆ ಉದ್ಯಮ ನಿರ್ವಹಣೆಯಲ್ಲಿ ಆಳವಾದ ಅನುಭವ ಪ್ರಾಪ್ತವಾಗಿತ್ತು. ಸೈಬೀರಿಯದ ಗ್ರಾಹಕರ ಸಹಕಾರ ಸಂಸ್ಥೆಗಳ ಒಕ್ಕೂಟದಲ್ಲಿ ಸುಮಾರು 6 ವರ್ಷಗಳ ಕಾಲ ಆತ ಕೆಲಸ ಮಾಡಿದ್ದಾಗಿತ್ತು. ಕೊಸಿಗಿನ್ ಪದವೀಧರನಾಗುವುದಕ್ಕೂ ಮುಂಚೆ ಕಾರ್ಖಾನೆಯೊಂದರಲ್ಲಿ ಮೇಲ್ವಿಚಾರಕನಾಗಿ ಕೆಲಸಮಾಡಿದ್ದ. ಈ ಕೆಲಸದಲ್ಲಿ ಮುಂದುವರಿದು 1935ರಲ್ಲಿ ಲೆನಿನ್‌ಗ್ರಾಡಿನ ಜವಳಿ ಗಿರಣಿಯ ನಿರ್ದೇಶಕನ ಹುದ್ದೆ ಪಡೆದ. 1938ರ ಅಕ್ಟೋಬರ್‌ನಲ್ಲಿ ಕೊಸಿಗಿನ್‌ಗೆ ಲೆನಿನ್‌ಗ್ರಾಡ್‌ನ ಮೇಯರ್ ಪದವಿ ಪ್ರಾಪ್ತವಾಯಿತು. ಕೊಸಿಗಿನ್‌ನ ಜೀವನದ ಮೊದಲ 35 ವರ್ಷಗಳು ಲೆನಿನ್‌ಗ್ರಾಡ್ ನಗರದೊಡನೆ ಗಣನೀಯವಾಗಿ ಹಾಸುಹೊಕ್ಕಾಗಿ ಬೆರೆತುಕೊಂಡಿವೆ.

ಅಲೆಕ್ಸಿ ಕೊಸಿಗಿನ್ ಪೀಪಲ್ಸ್ ಕಾಮಿಸಾರ್ ಆಗಿ ಎರಡು ವರ್ಷಗಳ ಕಾಲ ಕೆಲಸ ಮಾಡಿದ ಅನಂತರ ಸೋವಿಯೆತ್ ಒಕ್ಕೂಟದ ಪೀಪಲ್ಸ್ ಕಾಮಿಸಾರ್ಸ್‌ನ ಉಪಸಭಾಧ್ಯಕ್ಷನ (ವೈಸ್ ಚೇರ್‌ಮನ್ ಆಫ್ ದಿ ಕೌನ್ಸಿಲ್ ಆಫ್ ಪೀಪಲ್ಸ್ ಕಾಮಿಸಾರ್ಸ್) ಪದವಿಗೆ ಏರಿದ. 1953ರ ಮಾರ್ಚ್ ತಿಂಗಳಲ್ಲಿ ಆತ ಸೋವಿಯೆತ್ ಒಕ್ಕೂಟದ ಮಂತ್ರಿಮಂಡಳದ ಉಪಸಭಾಧ್ಯಕ್ಷನಾದ (ವೈಸ್ ಚೇರ್‌ಮನ್ ಆಫ್ ದಿ ಕೌನ್ಸಿಲ್ ಆಫ್ ಮಿನಿಸ್ಟರ್ಸ್). ಈ ಅವಧಿಯಲ್ಲಿ ಆತ ಲಘು ಎಂಜಿನಿಯರಿಂಗ್ ಮತ್ತು ಆಹಾರ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯವನ್ನು ನೋಡಿಕೊಳ್ಳುತ್ತಿದ್ದ. ಅನೇಕ ವೇಳೆ ಆತನನ್ನು ಕೇಂದ್ರ ಆಯೋಜನಾ ಮಂಡಲಿಗೆ ಪ್ರಮುಖನನ್ನಾಗಿ ನೇಮಿಸಲಾಗಿತ್ತು. ಅಲೆಕ್ಸಿ ಕೊಸಿಗಿನ್ ಸೋವಿಯೆತ್ ಒಕ್ಕೂಟದ ಮಂತ್ರಿಮಂಡಲದ ಮೊದಲನೆಯ ಉಪಾಧ್ಯಕ್ಷನಾಗಿ ನೇಮಕವಾದ್ದು 1960ರಲ್ಲಿ. ಕೊಸಿಗಿನನ ಚಟುವಟಿಕೆಗಳಲ್ಲಿ ವಿದೇಶಗಳೊಡನೆ ಆರ್ಥಿಕ ಸಂಬಂಧದ ಪ್ರಶ್ನೆಗಳು ಪ್ರಮುಖ ಪಾತ್ರವಹಿಸಿದ್ದುವು. ಕ್ರೆಮ್ಲಿನಿನ ಕಛೇರಿಯಲ್ಲಿ ಆತ ಆಗಾಗ್ಗೆ ಅನೇಕ ಅಧಿಕಾರಿಗಳಿಗೆ, ಉದ್ಯಮಿಗಳಿಗೆ ಮತ್ತು ಹಲವಾರು ದೇಶಗಳಿಂದ ಬಂದ ವ್ಯಾವಹಾರಿಕ ಮತ್ತು ಆರ್ಥಿಕ ನಿಯೋಗಗಳಿಗೆ ಭೇಟಿ ನೀಡುತ್ತಿದ್ದ. ಕೊಸಿಗಿನ್ ಸೋವಿಯೆತ್ ಒಕ್ಕೂಟದ ಅಧಿಕೃತ ನಿಯೋಗದ ಮುಂದಾಳಾಗಿ ಅನೇಕ ಐರೋಪ್ಯ ದೇಶಗಳಿಗೆ ಭೇಟಿಯಿತ್ತಿದ್ದ. ಫೆಬ್ರುವರಿ 1964ರಲ್ಲಿ ಕೊಸಿಗಿನ್‌ಗೆ ಹಿರೋ ಆಫ್ ಸೋಷಿಯಾಲಿಸ್ಟ್ ಲೇಬರ್ ಪ್ರಶಸ್ತಿಯನ್ನು ಕೊಡಲಾಯಿತು. ಇದು ಸೋವಿಯೆತ್ ಒಕ್ಕೂಟದ ಅತ್ಯಂತ ಉನ್ನತ ಪ್ರಶಸ್ತಿ. ಕೊಸಿಗಿನ್ ಭಾರತಕ್ಕೆ ಭೇಟಿ ನೀಡಿದ್ದು 4 ಬಾರಿ. ಸೋವಿಯೆತ್ ಒಕ್ಕೂಟದ ಮಂತ್ರಿಮಂಡಲದ ಸಭಾಧ್ಯಕ್ಷ ಸ್ಥಾನ ಗಳಿಸಿದ ಮೇಲೂ ಎರಡು ಬಾರಿ ಭಾರತಕ್ಕೆ ಭೇಟಿ ನೀಡಿದ್ದುಂಟು. (ಜಿ.ಎಚ್.ಆರ್.)

**ಕೊಸೂತ್, ಲಾಜಸ್ :** 1802–94. ಹಂಗರಿಯ ದೇಶಭಕ್ತ. 1848–49ರಲ್ಲಿ ಆ ದೇಶದಲ್ಲಿ ನಡೆದ ಕ್ರಾಂತಿಯ ಅಗ್ರನಾಯಕ. ಇವನು 1802ರ ಸೆಪ್ಟೆಂಬರ್ 19ರಂದು ಈಗಿನ ಸ್ಲೊವಾಕಿಯದ ಮೊನಾಕ್‌ನಲ್ಲಿ ಲೂಥರಾನ್ ಕ್ರೈಸ್ತಕುಟುಂಬವೊಂದರಲ್ಲಿ ಜನಿಸಿದ. ಸರಾಸ್ ಪಾಟಕ್‌ನ ಪ್ರಾಟೆಸ್ಟಂಟ್ ಶಾಲೆಯಲ್ಲಿ ವ್ಯಾಸಂಗ ಮಾಡಿ ತನ್ನ ಜನ್ಮಸ್ಥಳಕ್ಕೆ ಹಿಂದಿರುಗಿ ಅಲ್ಲಿ ಶ್ರೀಮಂತ ವಿಧವೆಯೊಬ್ಬಳ ಪ್ರತಿನಿಧಿಯಾದ. 1825–27 ಮತ್ತು 1832–36 ರ ಕಾಲದಲ್ಲಿ ರಾಷ್ಟ್ರೀಯ ಸಂಸತ್ತಿನಲ್ಲಿ ಕೆಲವು ಶ್ರೀಮಂತರ ಪರವಾಗಿ ಮತನೀಡುವ ಹಕ್ಕಿಲ್ಲದೆ ಭಾಗವಹಿಸುವ ಅವಕಾಶ ಇವನಿಗೆ ಒದಗಿತ್ತು. ಆ ಸಂದರ್ಭದಲ್ಲಿ ಇವನು ತನ್ನ ಸಾಮಾಜಿಕ, ರಾಜಕೀಯ ತತ್ತ್ವಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ತೀಕ್ಷ್ಣರಾಷ್ಟ್ರೀಯತೆ ಮತ್ತು ತೀವ್ರಗಾಮಿತ್ವ ಧೋರಣೆ ತಳೆದ ಇವನು ಶ್ರೀಮಂತರ ಮೇಲೆ ಹೆಚ್ಚಿಗೆ ತೆರಿಗೆ ವಿಧಿಸಬೇಕೆಂದೂ ರೈತರಿಗೆ ಪೂರ್ಣ ಸ್ವಾತಂತ್ರ್ಯ ದೊರಕಿಸಬೇಕೆಂದೂ ಹೋರಾಡಿದ. ದೇಶದ ಸಾಮಾಜಿಕ ಸಮಸ್ಯೆಗಳ ಪರಿಹಾರವಾಗಬೇಕಾದರೆ ಆ ದೇಶ ವಿಯೆನ್ನಾ ಸರ್ಕಾರದಿಂದ ಬಿಡುಗಡೆ ಹೊಂದಿ ಸ್ವತಂತ್ರ ರಾಷ್ಟ್ರವಾಗಬೇಕೆಂದು ಸಾರಿದ. ಬಹುಬೇಗ ಇವನ ಕೀರ್ತಿ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಬೆಳೆಯಿತು. ಇವನು ತನ್ನ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸುವ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಿಸುವ ಉದ್ದೇಶದಿಂದ ರಾಷ್ಟ್ರೀಯ ಸಭೆಯ ಚರ್ಚೆಗಳನ್ನು ಬರೆದು ದೇಶಾದ್ಯಂತ ಪ್ರಸಾರ ಮಾಡಲಾರಂಭಿಸಿದ. 1837ರಲ್ಲಿ ರಾಷ್ಟ್ರೀಯ ಸಭೆಯಲ್ಲಿ ನಡೆದ ಚರ್ಚೆಗಳನ್ನು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಸುಮಾರು 3 ವರ್ಷಗಳ ಕಾಲ ಕಾರಾಗೃಹ ಶಿಕ್ಷೆ ಅನುಭವಿಸಬೇಕಾಯಿತು.

ಸೆರೆಯಿಂದ ಬಿಡುಗಡೆಯಾದ ಮೇಲೆ 1840ರಲ್ಲಿ ಈತ ಪೆಸ್ಟಿ ಹಿರ್‌ಲ್ಯಾಪ್ ಎಂಬ ಪಾಕ್ಷಿಕ ಪತ್ರಿಕೆಯೊಂದರ ಸಂಪಾದಕನಾಗಿ ಅದನ್ನು ಕೆಲವು ಕಾಲ ನಡೆಸಿದ. ಇವನ ಲೇಖನಗಳಿಂದ ಇವನಿಗೆ ಜನಪ್ರಿಯತೆ ದೊರಕಿದರೂ ಈತ ಮಂದಗಾಮಿ ಸುಧಾರಕರ ಅಸಮಾಧಾನಕ್ಕೆ ತುತ್ತಾದ. 1844ರಲ್ಲಿ ಆ ಪತ್ರಿಕೆಯ ಸಂಪಾದಕ ಹುದ್ದೆಯನ್ನು ಕಳೆದುಕೊಂಡ. ಮತ್ತೆ ತನ್ನದೇ ಆದ ಬೇರೆ ಪತ್ರಿಕೆ ನಡೆಸಲು ಇವನಿಗೆ ಅನುಮತಿ ದೊರಕಲಿಲ್ಲ. ಕೈಗಾರಿಕೆಗಳನ್ನು ಬೆಳೆಸಲು ಒಂದು ಸಂಸ್ಥೆಯನ್ನು ಹುಟ್ಟು ಹಾಕಿದರೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಅನಂತರ ರಾಜಕೀಯ ಚಳವಳಿಯಲ್ಲಿ ದುಮುಕಿ 1847ರಲ್ಲಿ ಪೆಸ್ಟ್ ಕೌಂಟಿಯಿಂದ ರಾಷ್ಟ್ರೀಯ ಸಮಿತಿ ಸದಸ್ಯನಾಗಿ ಆಯ್ಕೆಯಾದ. 1848ರಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿಯಾದಾಗ ಹಂಗಸರಿಗೂ ಸ್ವಾತಂತ್ರ್ಯಬೇಕೆಂದು ಉದಾರವಾದಿ ಪಕ್ಷದ ಮುಖಂಡನಾಗಿ ಹೋರಾಡಿದ; ವಿಯೆನ್ನ ಸರ್ಕಾರದ ನೊಗದಿಂದ ಹಂಗರಿಯ ವಿಮೋಚನೆಯಾಗಬೇಕೆಂದು ವಾದಿಸುತ್ತಿದ್ದಾಗ ವಿಯೆನ್ನ ಕ್ರಾಂತಿಯ ಸುದ್ದಿ ತಲುಪಿ, ಅದೇ ಸಮಯದಲ್ಲಿ ಹಂಗರಿಗೂ ಜವಾಬ್ದಾರಿ ಸರ್ಕಾರ ರಚಿಸಬೇಕೆಂದು ಪ್ರತಿಪಾದಿಸಿ ಕೊನೆಗೆ ಅದಕ್ಕೆ ವಿಯೆನ್ನದ ಒಪ್ಪಿಗೆ ದೊರಕಿಸಿಕೊಂಡ. ಮುಂದೆ ಇವನಿಗೆ ಹಂಗರಿಯ ಸರ್ಕಾರದಲ್ಲಿ ಹಣಕಾಸಿನ ಮಂತ್ರಿಯ ಪದವಿ ದೊರಕಿತು. ಹಣಕಾಸು, ರಕ್ಷಣೆ ಇವೆರಡೂ ವಿಚಾರಗಳಲ್ಲಿ ಆಸ್ಟ್ರಿಯಕ್ಕೂ ಹಂಗರಿಗೂ ಇನ್ನೂ ಒಪ್ಪಂದವಾಗಿರಲಿಲ್ಲ. ಹಂಗರಿಯಲ್ಲಿ ವಸೂಲಾದ ಕಂದಾಯದ ಹಣವನ್ನು ವಿಯೆನ್ನಕ್ಕೆ ಸಾಗಿಸದಂತೆ ಕೊಸೂತ್ ತಡೆ ಹಾಕಿದ. ತೀವ್ರವಾದಿ ಗುಂಪಿನ ನೇತಾರನಾಗಿ ಕೊಸೂತ್ ಆಗ ಅತ್ಯಂತ ಪ್ರಮುಖ ಪಾತ್ರ ವಹಿಸಿದ. ಹಂಗರಿಯಿಂದ ಇಟಲಿಗೆ ಸೈನ್ಯವನ್ನು ಕಳಿಸದಂತೆ ಅಲ್ಲಿಯ ಶಾಸನ ಸಭೆ ನಿರ್ಣಯಿಸುವಂತೆ ಮಾಡಿ, ವಿಯೆನ್ನದೊಂದಿಗೆ ಸಂಬಂಧ ಕಡಿದುಕೊಳ್ಳಲು ಕಾರಣನಾದ. ಕ್ರೋಟರು ಮತ್ತು ಸರ್ಬರ ಆಕ್ರಮಣವನ್ನೆದುರಿಸಲು ಹಣವನ್ನೂ ಸೈನಿಕರನ್ನೂ ಮೀಸಲಾಗಿಡಬೇಕೆಂಬುದು ಇವನ ಕರೆಯಾಗಿತ್ತು. ಇದಕ್ಕೆ ಹಣವಿರಲಿಲ್ಲ. ಕ್ರೋಷಿಯನ್ ಸೇನಾನಿ ಮತ್ತು ಗರ್ವರ್ ಯೆಲಾಚಿಚನ ಸೇನೆ ಹಂಗರಿಯ ಆಕ್ರಮಣ ನಡೆಸಿದಾಗ ಮಂತ್ರಿಮಂಡಲ ರಾಜೀನಾಮೆ ನೀಡಿತು. ಕೊಸೂತ್ ವಸ್ತುತಃ ಸರ್ವಾಧಿಕಾರಿಯಾದ. ಮುಂದಿನ ತಿಂಗಳುಗಳಲ್ಲಿ ಇವನ ಹಿರಿಮೆಯೂ ದೌರ್ಬಲ್ಯವೂ ವ್ಯಕ್ತವಾದುವು. ಇವನ ಧೈರ್ಯಸ್ಥೈರ್ಯಗಳು ಅಸಾಧಾರಣವಾಗಿದ್ದುವು. ಆ ಕಷ್ಟದ ದಿವಸಗಳಲ್ಲಿ ಇವನು ಹಂಗರಿಯ ಜನರನ್ನು ಹುರಿದುಂಬಿಸಿದ. ಆದರೆ ತನ್ನ ಸ್ವಂತ ಸೇನಾನಿಯ ಬಗ್ಗೆಯೇ ಅಸೂಯೆಪಟ್ಟ; ಸಂಶಯಗ್ರಸ್ತನಾದ. ಮೊದಲೇ ತೀವ್ರವಾಗಿದ್ದ ತೊಂದರೆಗಳು ಇದರಿಂದ ಇನ್ನೂ ಅಧಿಕವಾದುವು. ಹಂಗರಿಯ ಶಾಸನ ಸಭೆ ಇವನನ್ನು ರಾಜ್ಯಪಾಲನನ್ನಾಗಿ ಆಯ್ಕೆಮಾಡಿತು. ರಷ್ಯನ್ ಸೇನೆ ಹಂಗರಿಗೆ ನುಗ್ಗಿದಾಗ ಪರಿಸ್ಥಿತಿ ತೀರಾ ಉತ್ಕಟವಾಗಿದೆಯೆಂಬುದು ಇವನಿಗೆ ಗೋಚರವಾಯಿತು. ಇವನು ತನ್ನ ಅಧಿಕಾರಕ್ಕೆ ರಾಜೀನಾಮೆ ನೀಡಿ ತುರ್ಕಿಗೆ ಓಡಿಹೋದ.

ತುರ್ಕಿಯಲ್ಲಿ ಎರಡು ವರ್ಷಗಳ ಕಾಲ ನಿರ್ಬಂಧದಲ್ಲಿ ವಾಸಮಾಡಿದ ಮೇಲೆ ಇವನಿಗೆ ಅಮೆರಿಕಕ್ಕೆ ಹೋಗಲು ಅವಕಾಶ ದೊರಕಿತು. ನಡುವೆ ಈತ ಮೂರು ವಾರಕಾಲ ಇಂಗ್ಲೆಂಡಿನಲ್ಲಿ ತಂಗಿದ್ದ. ಅಲ್ಲಿ ಇವನಿಗೆ ಒಳ್ಳೆಯ ಸ್ವಾಗತ ದೊರಕಿತು. ಅಮೆರಿಕನರು ಇವನನ್ನು ಉತ್ಸಾಹದಿಂದ ಸ್ವಾಗತಿಸಿದರು. ಆದರೆ ಎರಡು ದೇಶಗಳ ಸರ್ಕಾರಗಳೂ ಹಂಗರಿಗೆ ಬೆಂಬಲ ನೀಡಲಿಲ್ಲ. ಹಂಗರಿಗೆ ಪ್ರಪಂಚದ ಸಹಾನುಭೂತಿ ಮತ್ತು ಬೆಂಬಲ ದೊರಕಿಸಿಕೊಳ್ಳಲು ಇವನು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದುವು. ಡಾನ್ಯೂಬ್ ರಾಷ್ಟ್ರಗಳ ಒಕ್ಕೂಟವೊಂದನ್ನು ರಚಿಸಬೇಕೆಂಬ ಇವನ ಯೋಜನೆ ಸಫಲವಾಗಲಿಲ್ಲ. ಹಂಗರಿಯ ರಾಷ್ಟ್ರೀಯ ಚಳವಳಿಯೊಂದಿಗೆ ತನ್ನ ಸಂಪರ್ಕವನ್ನಂತೂ ಮುಂದುವರಿಸಿದ. ತನ್ನ ಜೀವಮಾನದ ಕೊನೆಗಾಲವನ್ನು ಟೂರಿನ್‌ನಲ್ಲಿ ಕಳೆದ. ಇವನು 1894ರ ಮಾರ್ಚ್ 20 ರಂದು ನಿಧನ ಹೊಂದಿದ. ಇವನ ದೇಹವನ್ನು ಹಂಗರಿಗೆ ತಂದು ಪೆಸ್ಟ್‌ನಲ್ಲಿ ಒಪ್ಪ ಮಾಡಲು ಸರ್ಕಾರ ಅವಕಾಶ ನೀಡಿತು.

ಕೊಸೂತನ ಮಗ ಫೆರೆಂಕ್ ಕೊಸೂತ್ ಸ್ವಲ್ಪ ಕಾಲ ಹಂಗರಿಯ ಸ್ವಾತಂತ್ರ್ಯ ಪಕ್ಷದ ಅಧ್ಯಕ್ಷನಾಗಿದ್ದ. ಕೊಸೂತನ ಕೃತಿಗಳ ಮೂರು ಸಂಪುಟಗಳು 1948–51ರ ಅವಧಿಯಲ್ಲಿ ಪ್ರಕಟವಾದುವು. ನನ್ನ ಜೀವನದ ನೆನಪುಗಳು ಎಂಬ ಅವನ ಗ್ರಂಥ ಇಂಗ್ಲಿಷಿನಲ್ಲಿ 1880ರಲ್ಲಿ ಪ್ರಕಟವಾಯಿತು. (ಕೆ.ಎಸ್.ಆರ್.ಎ.)

**ಕೊಹಿಮ :** ನಾಗಾಲ್ಯಾಂಡಿನ ಆಡಳಿತಕೇಂದ್ರ, ಕೊಹಿಮ ಜಿಲ್ಲೆಯ ಮುಖ್ಯಪಟ್ಟಣ. ದೀಮಾಪುರ–ಇಂಫಾಲ್ ರಾಷ್ಟ್ರೀಯ ಹೆದ್ದಾರಿಯ ಮೇಲಿದೆ. 10.ಚ.ಕಿಮೀ ವಿಸ್ತೀರ್ಣವಿರುವ ಇದರ ಜನಸಂಖ್ಯೆ 78548 (2001). ತಕ್ಕಮಟ್ಟಿಗೆ ಸುಯೋಜಿತವಾದ ಈ ಪಟ್ಟಣದ ನಡುಭಾಗದಲ್ಲಿ ಪೇಟೆಯೂ ಸುತ್ತಣ ಬೆಟ್ಟಗಳ ಮೇಲೆ ಜನವಸತಿಯೂ ಸೈನಿಕ ಬಿಡಾರಗಳೂ ಹಬ್ಬಿವೆ. ಕೊಹಿಮಕ್ಕೆ ಅತ್ಯಂತ ಹತ್ತಿರದ ವಿಮಾನ ನಿಲ್ದಾಣ ಇರುವುದು



ಕೊಹಿಮ ಪಟ್ಟಣದ ಒಂದು ನೋಟ

ದೀಮಾಪುರದಲ್ಲಿ, ದೀಮಾಪುರವೇ ಕೊಹಿಮಕ್ಕೆ ಅತ್ಯಂತ ಹತ್ತಿರದ ರೈಲು ನಿಲ್ದಾಣ ಕೂಡ. ಕೊಹಿಮದಿಂದ ಇದು 74 ಕಿಮೀ ದೂರದಲ್ಲಿದೆ.

ಎರಡನೆಯ ಮಹಾಯುದ್ಧದ ಕಾಲದಲ್ಲಿ 1944ರ ಏಪ್ರಿಲ್ ತಿಂಗಳಲ್ಲಿ ಜಪಾನೀಯರು ಕೊಹಿಮ ನಗರವನ್ನು ಆಕ್ರಮಿಸಲು ಯತ್ನಿಸಿದಾಗ ಇಲ್ಲಿ ಉಗ್ರಕಾಳಗ ನಡೆಯಿತು. ಅದರ ಕುರುಹಾಗಿ ಜಪಾನೀ ಟ್ಯಾಂಕ್ ಒಂದು ಪಟ್ಟಣದ ನಡುವೆ ಮುರಿದುಬಿದ್ದಿದೆ. ಯುದ್ಧದಲ್ಲಿ ಮಡಿದವರ ಸ್ಮಾರಕವೊಂದು ಸ್ಥಾಪಿತವಾಗಿದೆ.

ಕೊಹಿಮ ಜಿಲ್ಲೆಯ ವಿಸ್ತೀರ್ಣ ಸು. 1041 ಚ.ಕಿಮೀ ಜನಸಂಖ್ಯೆ 314,366 (2001).

ಕೊಹಿಮ ಜಿಲ್ಲೆ ಪರ್ವತಮಯ ಪ್ರದೇಶ. ಇಲ್ಲಿ ದೊಡ್ಡ ನದಿಗಳು ಯಾವುವೂ ಇಲ್ಲ. ಇಲ್ಲಿರುವ ನಾಲ್ಕು ಮುಖ್ಯ ಶಿಖರಗಳು ಇವು; ಜಾಪ್‍ವೊ(2997 ಮೀ), ಕಾಪು(2824 ಮೀ), ಪವಾನ (2774 ಮೀ) ಮತ್ತು ಕಪಾಮೇಸು (2415 ಮೀ). ಇಲ್ಲಿಯ ವಾರ್ಷಿಕ ಸರಾಸರಿ ಮಳೆ 2.00 ಸೆಂಮೀ. ಚಳಿಗಾಲದಲ್ಲಿ ನೀರು ಹೆಪ್ಪುಗಟ್ಟುವಷ್ಟು ಶೀತವಿರುತ್ತದೆ. ಡಿಸೆಂಬರ್ ಮತ್ತು ಜನವರಿ ತಿಂಗಳು ಬಲು ಚಳಿ. ಬೇಸಗೆಯ ವಾಯುಗುಣ ಹಿತಕರ. ಇದರಿಂದಾಗಿ ಕೊಹಿಮ ನಗರ ಒಂದು ಆರೋಗ್ಯಧಾಮ.

ಕೊಹಿಮ ಜಿಲ್ಲೆ ಬಹುತೇಕ ಅರಣ್ಯಪ್ರದೇಶ. ಶೇ. 18ರಷ್ಟು ಅರಣ್ಯ ಸರ್ಕಾರದ ಸ್ವಾಮ್ಯದಲ್ಲಿದೆ. ಕೃಷಿ ಇಲ್ಲಿಯ ಪ್ರಧಾನ ಉದ್ಯೋಗ. ಮೈದಾನ ಪ್ರದೇಶಗಳಲ್ಲಿ ಉಪಯೋಗಿಸುವ ಕೃಷಿ ಉಪಕರಣಗಳು ಇಲ್ಲಿ ಬಳಕೆಯಲ್ಲಿಲ್ಲ. ಜನರೇ ನೆಲವನ್ನು ಅಗೆದು ಹದಗೊಳಿಸುತ್ತಾರೆ. ಇಲ್ಲಿಯ ಪುರಾತನ ಕೃಷಿ ಪದ್ಧತಿಗೆ ಝೂಂ ಎಂದು ಹೆಸರು. ಮರಗಿಡಗಳನ್ನು ಕಡಿದು ಕೃಷಿಗೆ ಯೋಗ್ಯವನ್ನಾಗಿ ಮಾಡಿದ ಮೇಲೆ ಆ ಪ್ರದೇಶದಲ್ಲಿ 6–8 ವರ್ಷಗಳ ಕಾಲ ಬೆಳೆಯನ್ನು ತೆಗೆಯುತ್ತಾರೆ. ಅನಂತರ ಅದನ್ನು ಬಿಟ್ಟು ಮುಂದಿನ ಅರಣ್ಯಪ್ರದೇಶಕ್ಕೆ ಬೆಳೆಯೊಡ್ಡಲು ತೆರಳುತ್ತಾರೆ. ಈಚೆಗೆ ಸುಧಾರಿತ ಕೃಷಿ ಪದ್ಧತಿಗಳು ಜಾರಿಗೆ ಬರುತ್ತಿವೆ. ಇಳಿಜಾರು ನೆಲವನ್ನು ಮೆಟ್ಟಲು ಮೆಟ್ಟಲಾಗಿ ಕಡಿದು ಕೃಷಿ ಮಾಡುವ ವಿಧಾನ ಅನುಸರಿಸಲಾಗುತ್ತಿದೆ. ಬತ್ತ ಮುಖ್ಯ ಬೆಳೆ. ಗೋದಿ ಮತ್ತು ಕಬ್ಬಿನ ಬೆಳೆಗಳೂ ವ್ಯಾಪಕವಾಗುತ್ತಿವೆ. ಪ್ರತಿ ಸಂಸಾರವೂ ಸಾಧಾರಣವಾಗಿ ತನಗೆ ಬೇಕಾಗುವಷ್ಟು ಬತ್ತವನ್ನು ಬೆಳೆದುಕೊಳ್ಳುತ್ತದೆ.

ಇಲ್ಲಿ ಕೃಷಿ ಮತ್ತು ಹಾಲಿಗಾಗಿ ದನಕರುಗಳನ್ನು ಸಾಕುವುದು ಬಲು ವಿರಳ. ಅವನ್ನು ಸಾಮಾನ್ಯವಾಗಿ ಮಾಂಸಕ್ಕಾಗಿ ಸಾಕುತ್ತಾರೆ. ಹಂದಿ ಮತ್ತು ಕೋಳಿಸಾಕುವುದು ಜನರ ಉಪಕಸುಬು.

ದೊಡ್ಡ ಕೈಗಾರಿಕೆ ಯಾವುದೂ ಇಲ್ಲಿ ಸ್ಥಾಪಿತವಾಗಿಲ್ಲ. ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರವಾದ ದೀಮಾಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಿದೆ. ಮನೆಗಳಲ್ಲಿ ನಾಗಾಮಹಿಳೆಯರು ಕುಶಲ ಕೆಲಸಗಳಲ್ಲಿ ತೊಡಗಿರುತ್ತಾರೆ. ಮಹಿಳೆಯರು ಸಣ್ಣ ಮಗ್ಗಗಳಿಂದ ಶಾಲುಗಳನ್ನು ನೇಯುತ್ತಾರೆ.

ಇಲ್ಲಿಯ ಮಣ್ಣು ಬಹಳ ಮೆತು. ಮಳೆಗಾಲದಲ್ಲಿ ರಸ್ತೆಗಳು ಕುಸಿದು ಸಂಚಾರಕ್ಕೆ ಅಡ್ಡಿಯನ್ನೊಡ್ಡುತ್ತವೆ. ನಾಗಾರಾಜ್ಯ ಸ್ಥಾಪನೆಯಾದ ಮೇಲೆ ಒಳ್ಳೆಯ ರಸ್ತೆಗಳ ನಿರ್ಮಾಣವಾಗಿದೆ

ಮೆಟ್ಟಲು ಬೇಸಾಯ

ಈಗ ನೂರಕ್ಕಿಂತ ಹೆಚ್ಚು ಬಸ್ಸುಗಳು ಕೊಹಿಮದಿಂದ ರಾಜ್ಯದ ಅನೇಕ ಕಡೆಗಳಿಗೆ ಕ್ರಮವಾಗಿ ಸಂಚರಿಸುತ್ತವೆ.

ಜಿಲ್ಲೆಯಲ್ಲಿ ನಾಲ್ಕು ಉಪವಿಭಾಗಗಳಿವೆ. ಒಂದೊಂದು ಉಪವಿಭಾಗವನ್ನೂ ಹಲವು ವೃತ್ತಗಳಾಗಿ ವಿಂಗಡಿಸಲಾಗಿದೆ. ಕೊಹಿಮ ಪಟ್ಟಣದ ಆಡಳಿತಕ್ಕಾಗಿ ನಗರ ಸಮಿತಿಯುಂಟು. ಈ ಸಮಿತಿಯಲ್ಲಿ ಎಂಟು ಚುನಾಯಿತ ಸದಸ್ಯರೂ 4 ನಾಮಕರಣ ಸದಸ್ಯರೂ ಇದ್ದಾರೆ. ಜಿಲ್ಲಾಧಿಕಾರಿ ಇದರ ಅಧ್ಯಕ್ಷ. ಚುನಾಯಿತ ಉಪಾಧ್ಯಕ್ಷ ನಗರಸಮಿತಿಯ ದೈನಂದಿನ ಕಾರ್ಯಗಳನ್ನು ನೋಡಿಕೊಳ್ಳುತ್ತಾನೆ. ಸಮಿತಿ ಅಧಿಕಾರಾವಧಿ ಮೂರು ವರ್ಷಗಳು. (ಎಂ.ಆರ್.ಜಿ.)

**ಕೊಹೆನ್, ಸೇಮೂರ್ ಸ್ಟಾನ್ಲೆ :** 1917–. ಅಮೆರಿಕದ ಜೀವರಸಾಯನ ವಿಜ್ಞಾನಿ. 1917ರ ಏಪ್ರಿಲ್ 30ರಂದು ನ್ಯೂಯಾರ್ಕಿನಲ್ಲಿ ಜನಿಸಿದ. ಅಲ್ಲಿಯ ಸ್ಟೇಟ್ ಕಾಲೇಜಿನಿಂದ ಬಿ.ಎಸ್. ಪದವಿಯನ್ನು ಪಡೆದು (1936) ಮುಂದೆ ಕೊಲಂಬಿಯ ವಿಶ್ವವಿದ್ಯಾಲಯದಿಂದ ಸುಪ್ರಸಿದ್ಧ ವಿಜ್ಞಾನಿ ಚಾರ್‌ಗಾಫ್ ಎಂಬಾತನ ನೇತೃತ್ವದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದ (1941). ಈತ ಸಂಶೋಧನೆಗೆ ಆರಿಸಿಕೊಂಡ ಕ್ಷೇತ್ರ ನಂಜುಗಳನ್ನು (ವೈರಸ್) ಕುರಿತದ್ದು. ಬ್ಯಾಕ್ಟೀರಿಯಗಳಿಗೆ ಮಾರಕಗಳಾದ ನಂಜುಗಳ ಬಗ್ಗೆ ಕ್ರಮಬದ್ಧವಾದ ಸಂಶೋಧನೆ ಕೈಗೊಂಡ ಮೊದಲನೆಯ ವಿಜ್ಞಾನಿ ಈತ. ಅತಿ ತೀಕ್ಷ್ಣ (ವಿರುಲೆಂಟ್) ನಂಜುಗಳು ಬ್ಯಾಕ್ಟೀರಿಯಗಳನ್ನು ಸೋಂಕಿದಾಗ ಬ್ಯಾಕ್ಟೀರಿಯಗಳ ಕೋಶದಲ್ಲಿ ನ್ಯೂಕ್ಲಿಯಿಕ್ ಆಮ್ಲಗಳ ಚಯಾಪಚಯ ಕ್ರಿಯೆಯಲ್ಲಿ ತೀವ್ರವಾದ ಮಾರ್ಪಾಡುಗಳಾಗುತ್ತವೆ. ಇದರ ಫಲವಾಗಿ ಆತಿಥೇಯ (ಹೋಸ್ಟ್) ಬ್ಯಾಕ್ಟೀರಿಯಗಳಿಗೆ ವಿಶಿಷ್ಟವಾದ ಬಹ್ವಂಶಿಗಳು ಸಂಶ್ಲೇಷಣೆಯಾಗದೆ ನಂಜಿಗೆ ವಿಶಿಷ್ಟವಾದ ನ್ಯೂಕ್ಲಿಯಿಕ್ ಆಮ್ಲ ಮತ್ತು ಪ್ರೋಟೀನುಗಳು ಸಂಶ್ಲೇಷಣೆಯಾಗುತ್ತವೆ ಎಂದು ಕೊಹೆನ್ ತೋರಿಸಿದ. ಈ ಸಂಶೋಧನೆಗಳಲ್ಲಿ ಪ್ರಥಮಬಾರಿಗೆ ವಿಕಿರಣಪಟು ಸಮಸ್ಥಾನಿಗಳನ್ನು (ರೇಡಿಯೋ ಆಕ್ಟಿವ್ ಐಸೊಟೋಪ್ಸ್) ಈತ ಬಳಸಿದ.

ವಯಾಟ್ ಎಂಬಾತನ ಜೊತೆಯಲ್ಲಿ ನಡೆಸಿದ ಸಂಶೋಧನೆಗಳ ಫಲವಾಗಿ ನಂಜಿನ ನ್ಯೂಕ್ಲಿಯಿಕ್ ಆಮ್ಲದಲ್ಲಿ, ಅದುವರೆಗೆ ಅಜ್ಞಾತವಾಗಿದ್ದ, 5–ಹೈಡ್ರಾಕ್ಸಿ ಮೀಥೈಲ್ ಸೈಟೋಸಿನ್ ಎಂಬ ಅಸಾಧಾರಣ ಪಿರಮಿಡ್‌ನ ವಸ್ತುವಿದೆ ಎಂದು ತಿಳಿದು ಬಂದಿತ್ತು (1952). ಇದು ಬ್ಯಾಕ್ಟೀರಿಯಗಳ ನ್ಯೂಕ್ಲಿಯಿಕ್ ಆಮ್ಲದಲ್ಲಿ ಇರುವುದಿಲ್ಲ. ಎಂದರೆ ಸೋಂಕಿನ ಫಲವಾಗಿ ಬ್ಯಾಕ್ಟೀರಿಯಕೋಶದಲ್ಲಿ ಈ ವಸ್ತುವನ್ನು ಉತ್ಪಾದಿಸುವ ಕಿಣ್ವಗಳು ಹೊಸದಾಗಿ ಉತ್ಪತ್ತಿಯಾಗುತ್ತವೆ ಎಂದಾಯಿತು. ಇಷ್ಟೇ ಅಲ್ಲದೆ ವ್ಯತ್ಯಯದ(ಮ್ಯುಟೇಷನ್) ಫಲವಾಗಿ ಸಹಜ ಪಿರಮಿಡೀನ್ ಥಯಾಮೀನನ್ನು ಸಂಶ್ಲೇಷಿಸುವ ಸಾಮರ್ಥ್ಯವನ್ನು ಕಳೆದುಕೊಂಡಿರುವ ಬ್ಯಾಕ್ಟೀರಿಯಗಳು ನಂಜು ಸೋಕಿದ ಅನಂತರ ಇದನ್ನು ಸಂಶ್ಲೇಷಿಸುವ ಸಾಮರ್ಥ್ಯವನ್ನು ಮರಳಿ ಪಡೆದುಕೊಳ್ಳುತ್ತವೆ. ನಂಜುಸೋಕಿದ ಬ್ಯಾಕ್ಟೀರಿಯಗಳು ಥಯಾಮಿನ್ ಮತ್ತು 5–ಮೀಥೈಲ್ ಸೈಟೋಸಿನ್‌ಗಳೆರಡನ್ನು

ಸಂಶ್ಲೇಷಿಸುವ ಸಾಮರ್ಥ್ಯವುಳ್ಳ ಕಿಣ್ವಗಳನ್ನು ಉತ್ಪಾದಿಸುತ್ತವೆ ಎಂದು 1957ರಲ್ಲಿ ಕೊಹೆನ್ ತೋರಿಸಿದ. ಇಂಥ ಕಿಣ್ವಗಳ ಸಂಶ್ಲೇಷಣೆ ನಂಜಿನ ನ್ಯೂಕ್ಲಿಯಿಕ್ ಆಮ್ಲದ ನೇತೃತ್ವದಲ್ಲಿ ನಡೆಯುತ್ತದೆ. ಎಂದರೆ ನಂಜು ತನ್ನ ಆಶ್ರಯದಾತ ಬ್ಯಾಕ್ಟೀರಿಯದ ಕಿಣ್ವಗಳು ನಂಜಿನ ನ್ಯೂಕ್ಲಿಯಿಕ್ ಆಮ್ಲಗಳನ್ನು ಸೃಷ್ಟಿಸುವಂತೆ ಮಾಡುವುದಲ್ಲದೆ ಬ್ಯಾಕ್ಟೀರಿಯ ನೂತನ ಕಿಣ್ವಗಳನ್ನು ತಯಾರಿಸುವಂತೆ ಒತ್ತಾಯ ಪಡಿಸುತ್ತದೆ. ಪ್ರಾರಂಭದಲ್ಲಿ ಕಂಡುಬರುವ ಕಿಣ್ವಗಳ ಸಂಶ್ಲೇಷಣೆಗೆ ಹೊಸ ಮಾದರಿಯ ನ್ಯೂಕ್ಲಿಯಿಕ್ ಆಮ್ಲಗಳ ಉತ್ಪನ್ನ ಅಗತ್ಯ. ಈ ಕಿಣ್ವಗಳ ಸಂಶ್ಲೇಷಣೆಯಿಂದ ನಂಜಿನ ಡಿಎನ್ಎ ತಯಾರಿಕೆ ಅನುಕೂಲವಾಗುತ್ತದೆ. ಅನಂತರ ಕಿಣ್ವಗಳ ಸಂಶ್ಲೇಷಣೆ ನಿಂತುಹೋಗಿ ನಂಜಿನ ರಚನಕಾಲ ಪ್ರೋಟೀನುಗಳ ಸಂಶ್ಲೇಷಣೆ ಪ್ರಾರಂಭವಾಗುತ್ತದೆ. ಈ ಮಾದರಿ (ಮಾಡೆಲ್) ಬಹುಶಃ ಎಲ್ಲ ನಂಜುಗಳಿಗೂ ಅನ್ವಯಿಸುತ್ತದೆ. ಕೊಹೆನ್ ನಂಜಿನ ಕ್ಷೇತ್ರದಲ್ಲಿ ಮಾಡಿದ ಮಾರ್ಗದರ್ಶನದಿಂದ ಈ ಕ್ಷೇತ್ರದಲ್ಲಿ ನಡೆದಿರುವ ಆಧುನಿಕ ಸಂಶೋಧನೆಗಳಿಗೆ ಬಹುಮಟ್ಟಿಗೆ ಅನುಕೂಲವಾಯಿತು.

ಈತ ನಂಜಿನ ಕ್ಷೇತ್ರಕ್ಕೆ ಸಂಬಂಧಪಟ್ಟ ಇತರ ಕ್ಷೇತ್ರಗಳಲ್ಲೂ ದುಡಿದಿದ್ದಾನೆ. ಸ್ಟ್ರೆಪ್ಟೋಮೈಸಿನ್ ಎಂಬ ಜೀವವಿರೋಧಿ (ಆಂಟಿಬಯಾಟಿಕ್) ಬ್ಯಾಕ್ಟೀರಿಯಗಳ ನ್ಯೂಕ್ಲಿಯಿಕ್ ಆಮ್ಲಗಳ ಚಯಾಪಚಯ ಮತ್ತು ರಚನೆಗಳಲ್ಲಿ ಗಾಢವಾದ ಮಾರ್ಪಾಡುಗಳನ್ನು ಮಾಡುತ್ತವೆ ಎಂದು ತೋರಿಸಿದ್ದಾನೆ.

ಈತ 1963ರಲ್ಲಿ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಪಕನಾಗಿಯೂ ಥೆರಾಪ್ಯೂಟಿಕ್ ರೀಸರ್ಚ್ ಭಾಗದ ಮುಖ್ಯಸ್ಥನಾಗಿಯೂ ನೇಮಕಗೊಂಡ. ಕೊಹೆನ್ ನಡೆಸಿರುವ ಸಂಶೋಧನೆಗಳ ಮಹತ್ತ್ವವನ್ನು ಅರಿತು ಅಮೆರಿಕನ್ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ ಸಂಸ್ಥೆ ತನ್ನ ಪದಕವನಿತ್ತು ಗೌರವಿಸಿತು. ಕೊಹೆನ್ 1967ರಲ್ಲಿ ನ್ಯಾಷನಲ್ ಅಕಾಡಮಿ ಆಫ್ ಸೈನ್ಸಸ್ ಸಂಸ್ಥೆಯ ಸದಸ್ಯನಾಗಿ ಚುನಾಯಿತನಾದ. (ಎಚ್.ಎಸ್.ಎಸ್.)

**ಕೊಳಕಟ್ಟಿ ಹುಲ್ಲು** : ಪೋಯೇಸೀ ಕುಟುಂಬಕ್ಕೆ ಸೇರಿದ ಹುಲ್ಲು. ಸೆಂಕ್ರಸ್ ಸಿಲಿಯೇರಿಸ್ ಇದರ ವೈಜ್ಞಾನಿಕ ನಾಮ. ದನಗಳಿಗೆ ಅತ್ಯುತ್ಕೃಷ್ಟವಾದ ಮೇವೆಂದು ಪ್ರಸಿದ್ಧವಾಗಿದೆ. ಉಷ್ಣ ಮತ್ತು ಉಪೋಷ್ಣವಲಯಗಳ ನಿವಾಸಿ ಇದು. ಭಾರತ ಮತ್ತು ಮೆಡಿಟರೇನಿಯನ್ ಆಫ್ರಿಕದಲ್ಲಿ ಪ್ರಮುಖವಾಗಿ ಬೆಳೆಯುತ್ತದೆ. ಇತ್ತೀಚೆಗೆ ಮ್ಯಾನ್ಮಾರ್ ಮತ್ತು ಆಸ್ಟ್ರೇಲಿಯ ದೇಶಗಳಲ್ಲೂ ಇದನ್ನು ಬೆಳೆಸಲಾಗುತ್ತಿದೆ. ಭಾರತದಲ್ಲಿ ಇದನ್ನು ಹೋಲುವ ಇತರ 7 ಪ್ರಭೇದಗಳಿವೆ. ಎಲ್ಲವನ್ನೂ ಹೆಚ್ಚಾಗಿ ಹುಲ್ಲುಗಾವಲುಗಳಲ್ಲಿ ಬೆಳೆಸುತ್ತಾರೆ.

ಇದು ಕುಚ್ಚಾಗಿ ಮತ್ತು ಉದ್ದವಾಗಿ ಸು. 15.23–45.71 ಸೆಂ.ಮೀ ಎತ್ತರಕ್ಕೆ ಬೆಳೆಯುವ ಬಹುವಾರ್ಷಿಕ ಹುಲ್ಲು. ಒಂದೊಂದು ಗಿಡದಲ್ಲೂ ಹಲವಾರು ಕವಲುಗಳಿದ್ದು ಒಂದೊಂದರಲ್ಲೂ ದಪ್ಪ ಹಾಗೂ ಉದ್ದನೆಯ ತೆನೆ ಹುಟ್ಟುತ್ತದೆ. ಇದೇ ಹೂಗೊಂಚಲು. ಪ್ರತಿ ಹೂ ಗೊಂಚಲಿನಲ್ಲಿ ಸಾವಿರಾರು ಹೂಗಳು ಒತ್ತೊತ್ತಾಗಿ ಜೋಡಣೆಗೊಂಡು ಅರಳುತ್ತವೆ. ಹೂವಿನ ಸುತ್ತ ಒಂದು ಬಟ್ಟಲಿನಾಕಾರದ ಕವಚವಿದೆ. ಇದರಲ್ಲಿ ಸೂಕ್ಷ್ಮವಾದ ಹಾಗೂ ಚೂಪು ಮತ್ತು ಸ್ವಲ್ಪ ಒರಟಾದ ಮುಳ್ಳುಕೂದಲುಗಳು ಹಿಂದುಮುಂದಾಗಿ ಹೆಣೆದುಕೊಂಡಿರುತ್ತವೆ. ಸಾಮಾನ್ಯವಾಗಿ ಈ ಹುಲ್ಲನ್ನು ಮೇಯಲಿಕ್ಕೆ ಬರುವ ದನಕರುಗಳ ಕಾಲಿಗೆ ಮತ್ತು ಬರೀ ಕಾಲಿನಿಂದ ನಡೆಯುವ ಜನರಿಗೆ ಈ ಸೂಕ್ಷ್ಮ ಮುಳ್ಳುಗಳು ಚುಚ್ಚುವುದರಿಂದ ಕಾಲುಹುಣ್ಣು ಬರುವುದೆಂದು ಹೇಳಲಾಗಿದೆ. ಉಣ್ಣೆ ಅಥವಾ ರೋಮಗಳುಳ್ಳ ಪ್ರಾಣಿ ಶರೀರಗಳಿಗೆ ಕಾಳುಗಳು ಅಂಟಿಕೊಂಡು ಉಪದ್ರವ ಕೊಡುತ್ತವೆ. ಈ ಹುಲ್ಲಿನಿಂದ ಉತ್ಪತ್ತಿಯಾದ ಮುಳ್ಳು–ಕಾಳುಗಳ ಬಗ್ಗೆ ಒಂದು ಕಥೆಯೂ ಇದೆ. ದಂಡೆತ್ತಿ ಬಂದ ಒಬ್ಬ ದೊರೆಗೆ ಕೊಳಕಟ್ಟಿಹುಲ್ಲು ದಟ್ಟವಾಗಿ ಬೆಳೆದಿದ್ದ ಪ್ರದೇಶವೊಂದು ಎದುರಾಯ್ತು. ಈ ಹುಲ್ಲಿನಿಂದ ಉಂಟಾಗುವ ಉಪದ್ರವವನ್ನು ಕಂಡುಕೇಳಿದ್ದ ಅವನು, ಆ ಪ್ರದೇಶವನ್ನು ಗೆಲ್ಲದೇ ಬಿಟ್ಟು ಓಡಿದನಂತೆ. ಈ ಹುಲ್ಲು ಮೈದಾನ ಪ್ರದೇಶಗಳಲ್ಲಿ ಬೆಳೆಯುವುದಾದರೂ ಶೈತ್ಯಾಂಶ ಕಡಿಮೆ ಇರುವ ಮತ್ತು ಮರಳು ಮಿಶ್ರಿತ ಮಣ್ಣಿರುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮಳೆ ಕಡಿಮೆ ಇದ್ದರೂ ಇದು ಹುಲುಸಾಗಿ ಬೆಳೆಯುತ್ತದೆ. ಆದರೆ ನೀರಿನ ಸೌಕರ್ಯ ಚೆನ್ನಾಗಿದ್ದರೆ ಇದರ ಇಳುವರಿ ಹೆಚ್ಚು. ಕೊಳಕಟ್ಟಿ ಹುಲ್ಲು ಅನುಕ್ರಮ ಕುಯ್ಲಿಗೆ ಹೊಂದಿಕೊಂಡಿದೆ.

ಇದನ್ನು ಬೆಳೆಸುವಾಗ ಬೀಜಗಳನ್ನು ಒಂದು ಎಕರೆಗೆ ಸು. 7.25–9.07 ಕೆಜಿ.ಯಂತೆ ಮುಂಗಾರು ಮಳೆಗಾಲದಲ್ಲಿ ಬಿತ್ತಬೇಕು ಮತ್ತು ಗೊಬ್ಬರವನ್ನು ಒದಗಿಸಬೇಕು. ಚೆನ್ನಾಗಿ ಬೆಳೆದಾಗ ವರ್ಷಕ್ಕೆ 13,607–22,679.50 ಕೆಜಿ.ಗಿಂತ ಹೆಚ್ಚಾದ ಇಳುವರಿಯನ್ನು ಇದು ಕೊಡಬಲ್ಲುದು. ಕೊಳಕಟ್ಟಿಹುಲ್ಲನ್ನೆ ಹೋಲುವ ಸೆಂಕ್ರಸ್ ಪೆನಿಸಿಟಿಫಾರ್ಮಿಸ್ ಎಂಬ ಮತ್ತೊಂದು ಪ್ರಭೇದ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಪಡೆದಿದ್ದು, ನೀರು ಹಾಯಿಸಿ ಬೆಳೆಸಿದಾಗ ಎಕರೆಗೆ ಸು. 5170.92 ಕೆಜಿ. ಹಸುರುಮೇವನ್ನು ಕೊಡಬಲ್ಲುದೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ದಕ್ಷಿಣ ಭಾರತದಲ್ಲಿ ಈ ಹುಲ್ಲುಗಾವಲು ಪ್ರದೇಶಗಳನ್ನು 5–40 ವರ್ಷಗಳ ತನಕ ಕಾಪಾಡಿಕೊಳ್ಳಬಹುದುದಾಗಿದೆ. ಆಗಾಗ್ಗೆ ಕ್ರಮವಾಗಿ ದನಕರುಗಳನ್ನು ಹುಲ್ಲುಗಾವಲಿಗೆ ಬಿಟ್ಟು ಮೇಯಿಸುವ ಪದ್ಧತಿ ಇದೆ.

ಕೊಳಕಟ್ಟಿಹುಲ್ಲನ್ನು ಹಸಿಯಾಗಿ ಅಥವಾ ಒಣಗಿಸಿ ಅಥವಾ ಕಾದಿಟ್ಟ ಹಗೇವು ಮೇವುಮಾಡಿ (ಸೈಲೇಜ್) ಉಪಯೋಗಿಸಬಹುದು. ಇದು ಮೇವಾಗಿ ಉಪಯೋಗವಾಗುವ ಇತರ ಹುಲ್ಲು ಜಾತಿಗಳಿಗಿಂತ ಹೆಚ್ಚಾದ ಆಹಾರಾಂಶವನ್ನೊಳಗೊಂಡಿದೆ. ಪ್ರತಿ 45.35 ಕೆಜಿ. ಒಣಹುಲ್ಲಿನಲ್ಲಿ ಸು. 0.771–5.86 ಕೆಜಿ.ಯಷ್ಟು ಕಚ್ಚಾ ಪ್ರೋಟೀನುಗಳು, ಸು. 21.56–22.43 ಕೆಜಿ.ಯಷ್ಟು ಕಾರ್ಬೊಹೈಡ್ರೇಟುಗಳು, ಸು. 0.0725–0.1958ಕೆಜಿ.ಯಷ್ಟು ಈಥರ್ ಸಂಬಂಧವಸ್ತುಗಳು ಇರುವುದು ಕಂಡುಬಂದಿದೆ. ಕೊಳಕಟ್ಟಿಹುಲ್ಲನ್ನು ತಿಂದ ಹಸುಗಳು ಹಾಲನ್ನು ಹೆಚ್ಚಾಗಿ ಕೊಡುವುವಲ್ಲದೆ ಅವುಗಳ ದೇಹ ನುಣುಪಾಗಿ ಹೊಳೆಯುವಂತಾಗುತ್ತದೆ.

ಈ ಹುಲ್ಲಿನ ಕಾಳುಗಳನ್ನು ಕ್ಷಾಮಕಾಲದಲ್ಲಿ ಜನ ತಿನ್ನುತ್ತಾರೆ. (ಕೆ.ಎಸ್.ಜಿ.)

**ಕೊಳವಳಿಕೆ** : ಹೈಗ್ರೊಫಿಲ ಸ್ಪೈನೋಸ (ಪರ್ಯಾಯನಾಮ ಆಸ್ಟರ‍್ಯಾಂತ ಲಾಂಜಿಫೋಲಿಯ) ಎಂಬ ವೈಜ್ಞಾನಿಕ ಹೆಸರಿನ ಒಂದು ಸಾಮಾನ್ಯ ಮೂಲಿಕೆ ಸಸ್ಯ. ಅಕ್ಯಾಂತೇಸೀ ಕುಟುಂಬಕ್ಕೆ ಸೇರಿದೆ. ಕನ್ನಡದಲ್ಲಿ ಕೊಳವಂಕ, ಗೋಕಂಟಕ ಮುಂತಾದ



ಹೆಸರುಗಳೂ ಇವೆ. ಭಾರತ ಮತ್ತು ಶ್ರೀಲಂಕಾಗಳ ಮೂಲನಿವಾಸಿ, ಬತ್ತದ ಗದ್ದೆಯ ಬದು, ಕೆರೆ, ನದಿಗಳ ದಂಡೆಗಳು ಮುಂತಾದ ನೀರಿರುವ ಸ್ಥಳಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ.

ಇದು ಸು. 0.60–0.914 ಎತ್ತರಕ್ಕೆ ಬೆಳೆಯುವ ಮುಳ್ಳುಗಿಡ. ಗೆಣ್ಣುಗಳಲ್ಲಿ ಸುತ್ತು ಜೋಡಣೆಯನ್ನು ಪ್ರದರ್ಶಿಸುವ 6 ಎಲೆಗಳೂ 6 ಉದ್ದನೆಯ ಮುಳ್ಳುಗಳೂ ಇವೆ. ಮುಳ್ಳುಗಳು ಹಿಂದಕ್ಕೆ ನಸುಬಾಗಿವೆ. ಎಲೆಗಳಿಗೆ ತೊಟ್ಟಿಲ್ಲ. ಎಲೆಗಳ ಕಂಕುಳಲ್ಲಿ ಗೆಣ್ಣನ್ನು ಸುತ್ತುವರಿದಂತೆ ಹೂಗಳು ಹುಟ್ಟುತ್ತವೆ. ಹೂಗಳಿಗೂ ತೊಟ್ಟಿಲ್ಲ. ಆದರೆ ಎಲೆಯನ್ನು ಹೋಲುವ ಉಪಪತ್ರಗಳಿವೆ. ಹೂಗಳು ದ್ವಿಲಿಂಗಿಗಳು ; ಅವುಗಳ ಬಣ್ಣ ನೀಲಿಮಿಶ್ರಿತ ಊದಾ. ಪ್ರತಿಹೂವಿನಲ್ಲೂ 4 ಭಾಗವುಳ್ಳ ಸಂಯುಕ್ತ ಪುಷ್ಪಪತ್ರಾವರಣವೂ ಎರಡು ತುಟಿಗಳಾಗಿ ಭಾಗವಾಗಿರುವ ದಳಸಮೂಹವೂ 4 ಕೇಸರಗಳೂ ಎರಡು ಕಾರ್ಪೆಲುಗಳಿಂದ ಕೂಡಿದ ಅಂಡಾಶಯವೂ ಇವೆ. ದಳಸಮೂಹದ ಕೆಳದುಟಿಯ ಅಂಗಳದ ಮೇಲೆ ಉಬ್ಬಿಕೊಂಡಿರುವ ಎರಡು ಮಡಿಕೆಗಳಿವೆ. ಇರುವ 4 ಕೇಸರಗಳಲ್ಲಿ ಎರಡು ಮಿಕ್ಕವಕ್ಕಿಂತ ಗಾತ್ರದಲ್ಲಿ ದೊಡ್ಡವು. ಅಂಡಾಶಯದಲ್ಲಿ 2 ಕೋಣೆಗಳಿದ್ದು ಒಂದೊಂದು ಕೋಣೆಯಲ್ಲಿ 4 ಅಂಡಕಗಳಿವೆ. ಫಲ ಸಂಪುಟ ಮಾದರಿಯದು; ಉದ್ದುದ್ದವಾಗಿದೆ.

ಕೊಳವಳಿಕೆ ಗಿಡಕ್ಕೆ ಔಷಧೀಯ ಮಹತ್ತ್ವವಿದೆ. ಇದರ ಬೇರು, ಎಲೆ, ಬೀಜಗಳನ್ನು ಆಯುರ್ವೇದ ಔಷಧ ಪದ್ಧತಿಯಲ್ಲಿ ಬಳಸುತ್ತಾರೆ. ಬೇರು ಶಕ್ತಿವರ್ಧಕ, ಮೂತ್ರಸ್ರಾವ ಉತ್ತೇಜಕ, ಶಾಮಕ ಹಾಗೂ ತಂಪುಕಾರಕವೆನ್ನಲಾಗುತ್ತದೆ. ಬೀಜವೂ ಮೂತ್ರಸ್ರಾವ ಉತ್ತೇಜಕ. ಯುನಾನಿ ಔಷಧ ಪದ್ಧತಿಯಲ್ಲಿ ಇದನ್ನು ವಾಜೀಕರವೆಂದು ಪರಿಗಣಿಸಲಾಗಿದೆ. ಎಲೆಗಳು ಶಾಮಕ ಮತ್ತು ಮೂತ್ರಸ್ರಾವ ಉತ್ತೇಜಕಗಳು. ಬೇರಿನಿಂದ ತಯಾರಿಸಲಾಗುವ ಕಷಾಯವನ್ನು ಸಂಧಿವಾತ, ಗಾನರೀಯ ಮತ್ತು ಜನನಾಂಗ ಸಂಬಂಧಿ ಕಾಯಿಲೆಗಳ ನಿವಾರಣೆಗೆ ಬಳಸುವುದಿದೆ. ಎಲೆ ಮತ್ತು ಬೀಜಗಳನ್ನು ಕಾಮಾಲೆ ರೋಗನಿವಾರಣೆಗೆ ಉಪಯೋಗಿಸುತ್ತಾರೆ. ನೆಗ್ಗಿಲು ಮುಳ್ಳಿನಗಿಡ ಮತ್ತು ಶತಾವರಿಯೊಂದಿಗೆ ಕೊಳವಳಿಕೆಯ ಬೀಜಗಳನ್ನು ಸೇರಿಸಿ ತಯಾರಿಸಿದ ಪುಡಿಯನ್ನು ಹಸುವಿನ ಹಾಲು ಮತ್ತು ಸಕ್ಕರೆಯೊಂದಿಗೆ ಬೆರೆಸಿ ಶಕ್ತಿವರ್ಧಕವಾಗಿ ಉಪಯೋಗಿಸಬಹುದು. ಅಲ್ಲದೆ ಬೀಜಗಳ ಪುಡಿಯನ್ನು ಜೇನುತುಪ್ಪ ಹಾಗೂ ತುಪ್ಪದೊಂದಿಗೆ ಮಿಶ್ರಮಾಡಿ ಉಬ್ಬಸವನ್ನು ತಡೆಯಲು ಬಳಸುತ್ತಾರೆ. ಬೀಜಗಳನ್ನು ಅರೆದು ಮಜ್ಜಿಗೆಯೊಂದಿಗೆ ಸೇರಿಸಿ ಅತಿಸಾರ ನಿವಾರಕವಾಗಿ ಬಳಸುವುದುಂಟು. (ಎಚ್.ಕೆ.ಎಂ.; ಎಚ್.ಎಸ್.ಎಸ್.ಕೆ.)

**ಕೊಳವೆ ಬಾವಿ :** ಭೂಮಿಯ ಮೇಲ್ಮೈಯಿಂದ ಕೆಳಗೆ ಹಲವಾರು ಪದರಗಳಲ್ಲಿ ಹುದುಗಿರುವ ಜಲವನ್ನು ಮೇಲಕ್ಕೆತ್ತುವ ಉದ್ದೇಶದಿಂದ ತೋಡುವ ಕೊಳವೆ ಆಕಾರದ ಬಾವಿ (ಬೋರ್ ವೆಲ್). ಮಳೆಯ ನೀರು ನೆಲದ ಮೇಲೆ ಬಿದ್ದು ಅದರ ಒಂದು ಭಾಗ ನೆಲದೊಳಗೆ ಸೋಸಿ ನೆಲಮಟ್ಟದಿಂದ ಕೆಳಗಿರುವ ಹಲವಾರು ಮರಳು ಪದರಗಳಲ್ಲಿ ಬಹುಮಂದವಾಗಿ ಹರಿಯುತ್ತಿರುತ್ತದೆ. ಇಂಥ ಪದರಗಳು ನೆಲಮಟ್ಟದಿಂದ ಬಹು ಆಳವಾಗಿದ್ದ ಪಕ್ಷದಲ್ಲಿ ಆ ಜಲವನ್ನು ಎಟುಕಿಸಿಕೊಳ್ಳಬೇಕಾದರೆ ಸಾಮಾನ್ಯವಾದ ತೆರೆದ ಬಾವಿಗಳನ್ನು ತೋಡಲು ದುಸ್ಸಾಧ್ಯವೂ ಅತಿ ವೆಚ್ಚವೂ ಆಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ಕೊಳವೆ ಬಾವಿಗಳ ಬಳಕೆಯಿಂದ ಕಾರ್ಯಸಾಧನೆಯಾಗುತ್ತದೆ. ಯಂತ್ರೋಪಕರಣಗಳಿಂದ ಭೂಮಿಯ ಮೇಲ್ಪದರಗಳನ್ನು ಕೊರೆದು ಕೆಳಗಿನ ಜಲಮಯ ಪದರಗಳನ್ನು ಮುಟ್ಟಬಹುದು. ನೀಳವಾದ ಮತ್ತು ಭಾರದಿಂದ ಕೂಡಿದ ಸಲಾಕೆಯ ಕೊನೆಯಲ್ಲಿ ಉಕ್ಕಿನ ಅಲಗನ್ನು ಸಿಕ್ಕಿಸಿ ಯಂತ್ರಗಳ ಜೋಡಣೆಯಿಂದ ಆ ಸಲಾಕೆಯನ್ನು ತೂಕವಾಗಿ ನಿಲ್ಲಿಸಿ ತಿರುಗಿಸಿದರೆ ಅಲಗು ಭೂಮಿಯನ್ನು ಕೊರೆದುಕೊಂಡು ಇಳಿಯುತ್ತದೆ. ಈ ರೀತಿಯಾಗಿ ಇಳಿದ ಸಲಾಕೆಯ ಮೇಲ್ಭಾಗಕ್ಕೆ ಮತ್ತೊಂದು ಸಲಾಕೆಯನ್ನು ಪೋಣಿಸಿ ಇಳಿಸುತ್ತ ಹೋದರೆ ಹೆಚ್ಚು ಆಳದಲ್ಲಿರುವ ಜಲಪದರವನ್ನು ಅಥವಾ ಪದರಗಳನ್ನು ಮುಟ್ಟಬಹುದು. ಮೇಲೆ ತಿಳಿಸಿದ ಸಲಾಕೆ ಘನ (ಸಾಲಿಡ್) ಆಗಿರಬಹುದು. ಅದು ಕೊಳವೆ ರೂಪದಲ್ಲಿದ್ದರೆ ಕೊರೆತ ಮುಂದುವರಿಯುತ್ತಿರುವಾಗ ನೆಲದಿಂದ ಬಂದ ಮಣ್ಣು ಅಥವಾ ನೀರಿನಿಂದ ಮಿಶ್ರವಾದ ಮಣ್ಣನ್ನು ಮೇಲಕ್ಕೆ ತರಲು ಸುಲಭವಾಗುವುದು. ಹೀಗಿಲ್ಲದೆ ಘನರೂಪ ಸಲಾಕೆಯನ್ನು ಉಪಯೋಗಿಸಿದರೆ ಪದೇಪದೇ ಸಲಾಕೆಯನ್ನು ಮೇಲಕ್ಕೆ ಎತ್ತಿ ಪುಡಿಯಾದ ಮಣ್ಣನ್ನು ದ್ರವರೂಪದಲ್ಲಿ ರೇಚಕಯಂತ್ರದ ಮೂಲಕ ಹೊರತೆಗೆಯಬೇಕಾಗುತ್ತದೆ. ಬಹು ಮೆತುವಾದ ಮಣ್ಣಿನಲ್ಲಿ ಕೊಳವೆ ಬಾವಿಯನ್ನು ತೋಡಬೇಕಾದರೆ ಬಾವಿಯ ಸುತ್ತಲಿನ ಮಣ್ಣು ಜಾರಿ ಬರದಂತೆ ಒಂದು ಕಬ್ಬಿಣದ ಕೊಳವೆಯನ್ನು ಅಲಗಿನ ಮಟ್ಟದಲ್ಲಿ ಇಳಿಸಿಕೊಂಡು ಹೋಗಬೇಕಾಗುತ್ತದೆ. ಈ ಕೊಳವೆ ಬಾವಿ ತೋಡಿಯಾದ ಮೇಲೆಯೂ ಭೂಮಿಯಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಸಾಧಾರಣವಾದ ಕೊಳವೆ ಬಾವಿಗಳಿಂದ ನೀರನ್ನು ಹೊರತೆಗೆಯಬೇಕಾದರೆ ರೇಚಕ ಸಲಕರಣೆಗಳನ್ನು ಉಪಯೋಗಿಸಬೇಕಾಗುತ್ತದೆ. ಆದರೆ ಊಟೆಗಳಿರುವ ಕಡೆ ತೋಡಿದ ಕೊಳವೆ ಬಾವಿಗಳಲ್ಲಿ ಈ ಸಲಕರಣೆಗಳು ಬೇಕಾಗುವುದಿಲ್ಲ. ನದಿ ಕಾಲುವೆಗಳಿಂದ ದೂರವಾಗಿರುವ ಪ್ರದೇಶ, ಅಥವಾ ಪಟ್ಟಣಗಳಿಗೆ ನೀರಾವರಿ, ಅಥವಾ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾದಲ್ಲಿ ಕೊಳವೆ ಬಾವಿಗಳು ಸುಲಭಸಾಧ್ಯವೂ ಉಪಯುಕ್ತವೂ ಆಗುತ್ತವೆ. ಕುಡಿಯುವ ನೀರಿಗಾಗಿ ಹಾಗೂ ವ್ಯವಸಾಯಕ್ಕಾಗಿ ಕೊಳವೆಬಾವಿಗಳನ್ನು ಅವೈಜ್ಞಾನಿಕವಾಗಿ ತೋರೆಯುತ್ತಿರುವುದರಿಂದ ಅಂತರ್ಜಲ ಮಟ್ಟ ಕುಸಿದು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದ ಕೆಲವು ಕೊಳವೆಬಾವಿಗಳು ಸ್ಥಗಿತಗೊಳ್ಳಬಹುದು. ಇದನ್ನು ತಡೆಗಟ್ಟಬೇಕಾದಲ್ಲಿ ಅವೈಜ್ಞಾನಿಕವಾಗಿ ಕೊರೆಯುತ್ತಿರುವ ಕೊಳವೆ ಬಾವಿಗಳ ನಿಯಂತ್ರಣ ಅಗತ್ಯ. ಇದರಿಂದ ಅಪಾಯವೂ ಉಂಟು. (ಕೆ.ಎಸ್.ಕೆ.)

**ಕೊಳವೆ ಮಾರ್ಗಗಳು :** ದ್ರವ ಅಥವಾ ಅನಿಲವನ್ನು ಸಾಗಿಸಲು ನಿರ್ಮಿತವಾದ ವಿಶಿಷ್ಟ ಮತ್ತು ಅತ್ಯಂತ ಅಗ್ಗದ ಸಾಧನ, ಕೊಳವೆ ಸಾಲು (ಪೈಪ್‌ಲೈನ್ಸ್). ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಾಗಣೆಗೆ ವಿಶೇಷವಾಗಿ ಇವನ್ನು ಬಳಸಲಾಗುತ್ತಿದೆ. ಬಾವಿಗಳಿಂದ ಹೊರಬರುವ ಉತ್ಪನ್ನವನ್ನು ಕೊಳವೆಗಳ ಮೂಲಕ ಸಂಗ್ರಹಿಸಿ ಅದನ್ನು ಪರಿಷ್ಕರಣ ಕೇಂದ್ರಗಳಿಗೋ ಸಂಧಿಬಿಂದುಗಳಿಗೋ ಸಾಗಿಸಲಾಗುತ್ತದೆ. ಪರಿಷ್ಕರಣವಾದ ಉತ್ಪನ್ನವನ್ನು ವಿತರಣೆ ಮಾಡುವುದಕ್ಕೂ ಕೊಳವೆಗಳನ್ನು ಹಾಕಲಾಗುತ್ತದೆ. ಆದ್ದರಿಂದ ಕೊಳವೆ ಮಾರ್ಗಗಳನ್ನು ಸ್ಥೂಲವಾಗಿ ಸಂಗ್ರಹಣ ಮತ್ತು ವಿತರಣ ಮಾರ್ಗಗಳೆಂದೂ ಪ್ರಧಾನ ಮಾರ್ಗಗಳೆಂದೂ ವಿಂಗಡಿಸಬಹುದು. ಉತ್ಪನ್ನ ಮಾರ್ಗ ಮತ್ತು ಕಚ್ಚಾ ಸಾಮಗ್ರಿ ಮಾರ್ಗ ಎಂದು ಕೂಡ ಇವನ್ನು ವಿಭಾಗಿಸುವುದುಂಟು. ಬಾವಿಯಿಂದ ಸಂಗ್ರಹಣ ಕೇಂದ್ರಕ್ಕೂ ಪರಿಷ್ಕರಣ ಕೇಂದ್ರಗಳಿಗೂ ಸಾಮಗ್ರಿಯನ್ನು ಪಂಪ್ ಮಾಡಬೇಕಾಗಬಹುದು. ಇದಕ್ಕಾಗಿ ಪಿಂಗ್ ಕೇಂದ್ರಗಳು ಅಗತ್ಯವಾಗುತ್ತವೆ. ಸಂಗ್ರಹಣೆಯ ತೊಟ್ಟಿಗಳೂ ನಿಯಂತ್ರಣಾಲಯಗಳೂ ಈ ವ್ಯವಸ್ಥೆಯ ಅಂಗಗಳು. ಕೊಳವೆ ಮಾರ್ಗಗಳ ನಿರ್ಮಾಣದಲ್ಲಿ ಈಚೆಗೆ ತೀವ್ರ ಬದಲಾವಣೆಗಳಾಗಿವೆ. ಮೊದಲು ಇವನ್ನು ಮರ ಮತ್ತು ಸಿಮೆಂಟಿನಿಂದ ನಿರ್ಮಿಸಲಾಗುತ್ತಿತ್ತು. ಸೋರುವುದು, ಜಂಗು ಹಿಡಿಯುವುದು, ಕೊಳವೆಗಳ ಘರ್ಷಣೆ, ಕುಗ್ಗುವಿಕೆ–ಇವು ಇಂಥ ಕೊಳವೆಗಳಿಗೆ ಸಂಬಂಧಿಸಿದ ಕೆಲವು ಸಮಸ್ಯೆಗಳು. ಅಲ್ಲದೆ ಸಾಮಗ್ರಿಯನ್ನು ದೂರಕ್ಕೆ ಒಯ್ಯಲು ಇವು ಅನುಕೂಲವಾಗಿರಲಿಲ್ಲ. ಈಚೆಗೆ ವಿದ್ಯುತ್ತಿನಿಂದ ಬೆಸೆದ ಉಕ್ಕು ಕೊಳವೆಗಳನ್ನು ಬಳಸುತ್ತಾರೆ. ಇವುಗಳ ವ್ಯಾಸ 80 ಸೆಂ.ಮೀ.ವರೆಗೂ ಇರುವುದುಂಟು. ರಾಸಾಯನಿಕ ಲೇಪ ಬಳಿದ ಕೊಳವೆಗಳೂ ಬಳಕೆಗೆ ಬಂದಿವೆ. ತೈಲ ಸಾಗಣೆಗೆ ಪ್ಲಾಸ್ಟಿಕ್ ಕೊಳವೆಗಳನ್ನು ಬಳಸುತ್ತಿರುವುದು ಈಚಿನ ಬೆಳವಣಿಗೆ.

ಕೊಳವೆ ಮಾರ್ಗ ಅತ್ಯಂತ ಅಗ್ಗದ ಸಾಗಣೆಯ ಸಾಧನವಾದರೂ ಇದರ ನಿರ್ಮಾಣ ಬಹಳ ದುಬಾರಿ. ಈ ವಿಚಾರದಲ್ಲಿ ಇದು ರೈಲ್ವೆಯನ್ನು ಹೋಲುತ್ತದೆ. ಆದರೆ ರೈಲ್ವೆ ವ್ಯವಸ್ಥೆಯ ನಿರ್ವಹಣೆ ಮತ್ತು ಚಾಲನೆಗೂ ಬಹಳ ಖರ್ಚು ತಗಲುತ್ತದೆ. ಕೊಳವೆ ಮಾರ್ಗಕ್ಕೆ ಅಷ್ಟು ಖರ್ಚು ತಗಲುವುದಿಲ್ಲ. ಆದರೂ ಅದರ ನಿರ್ಮಾಣದ ಅಗಾಧ ವೆಚ್ಚ ಸಾರ್ಥಕವಾಗಬೇಕಾದರೆ ಕೊಳವೆ ಮಾರ್ಗದಲ್ಲಿ ತೈಲ ಅಥವಾ ಅನಿಲ ಒಂದು ಕನಿಷ್ಠ ಮಿತಿಗಿಂತ ಕಡಿಮೆಯಿಲ್ಲದ ಪರಿಮಾಣದಲ್ಲಿ ಧಾರಾಕಾರವಾಗಿ ಹರಿಯುತ್ತಿರುವುದು ಅವಶ್ಯ. ಕೊಳವೆಗಳ ವೆಚ್ಚ, ಹಳ್ಳ ತೋಡಿ ಅವನ್ನು ಹುಗಿಯುವ ವೆಚ್ಚ, ಪಂಪು ಮನೆಗಳ ಮತ್ತು ಪಿಂಗ್ ಯಂತ್ರಗಳ ವೆಚ್ಚ–ಇವೆಲ್ಲ ಗಮನಾರ್ಹ. ಕೊಳವೆಯ ವ್ಯಾಸ ದೊಡ್ಡದಿದ್ದಷ್ಟೂ ಸಾಮಗ್ರಿಸಾಗಣೆಯ ಸರಾಸರಿ ವೆಚ್ಚ ಕಡಿಮೆ. ಆದರೆ ಆ ಕೊಳವೆಯ ತುಂಬ ಹರಿಯವಷ್ಟು ಸಾಮಗ್ರಿ ಇರಬೇಕಷ್ಟೆ.

ಪಾಶ್ಚಾತ್ಯ ದೇಶಗಳಲ್ಲಿ ಕೊಳವೆ ಮಾರ್ಗಗಳು ಸಾಮಾನ್ಯ. ಸ್ವಿಟ್ಜರ್ಲೆಂಡಿನಲ್ಲಿ ಗೋ ಕೇಂದ್ರಗಳಿಂದ ಹೈನುಮನೆಗಳಿಗೆ ಹಾಲನ್ನು ಸಾಗಿಸಲು 12.7 ಮಿ.ಮೀ. ಪ್ಲಾಸ್ಟಿಕ್ ಕೊಳವೆಗಳನ್ನು ಹಾಕಲಾಗಿದೆ. ಅಮೆರಿಕದ ಒಟ್ಟು ಸಾಗಣೆಯಲ್ಲಿ ಶೇ.15 ಭಾಗ ಕೊಳವೆ ಮಾರ್ಗಗಳದು. ಪೂರ್ವ ಯೂರೋಪಿನಲ್ಲಿ ಯೂರಲ್ ಪರ್ವತಗಳ ಕಚ್ಚಾ ತೈಲ 4,500 ಕಿಮೀ. ಗಳ ದೂರ–ಪೋಲೆಂಡ್, ಜರ್ಮನಿಗಳ ಮೂಲಕ–ಹಂಗರಿ ಚೆಕ್ ಮತ್ತು ಸ್ಲವಾಕಿಯಗಳಿಗೆ ಸಾಗುತ್ತದೆ. ಕಲ್ಲಿದ್ದಲು ಮತ್ತು ಧಾನ್ಯಗಳು ಕೂಡ (ಪುಡಿ ಅಥವಾ ಹಿಟ್ಟಿನ ರೂಪದಲ್ಲಿ) ಹೀಗೆ ಸಾಗುವುದುಂಟು. ಕೊಳವೆಯ ಮನೆಗಳಿಂದ ಉಕ್ಕಿನ ಕಾರ್ಖಾನೆಗಳಿಗೆ ಮತ್ತು ವಿದ್ಯುತ್ ಕೇಂದ್ರಗಳಿಗೆ ಕಲ್ಲಿದ್ದಲನ್ನು ಸರಬರಾಯಿ ಮಾಡಲು ಕೊಳವೆ ಮಾರ್ಗಗಳನ್ನು ಬಳಸಬೇಕೆಂಬುದಾಗಿ ಭಾರತದಲ್ಲಿ ಕಲ್ಲಿದ್ದಲು ಸಾಗಣೆಯ ಬಗ್ಗೆ ಅಧ್ಯಯನ ನಡೆಸಿದ ವಿಶ್ವ ಬ್ಯಾಂಕ್ ತಂಡ ಸಲಹೆ ಮಾಡಿದೆ.

ಇತ್ತೀಚೆಗೆ ಭಾರತದಲ್ಲಿ ಕೊಳವೆ ಮಾರ್ಗಗಳು ಹೆಚ್ಚು ಬಳಕೆಗೆ ಬರುತ್ತಿವೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಭಾರತದ ಅಸ್ಸಾಮಿನ ಡಿಗ್‌ಬೋಯಿಯಲ್ಲಿ ಒಂದೇ ಒಂದು ತೈಲ ಗಣಿಯಿತ್ತು. ಆದರೆ 1956ರಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಸಮಿತಿಯ ಮತ್ತು ಆಯಿಲ್ ಇಂಡಿಯ ಲಿಮಿಟೆಡ್ ಸಂಸ್ಥೆಯ ಪ್ರಯತ್ನಗಳಿಂದಾಗಿ ಉತ್ತರ ಅಸ್ಸಾಂ ಮತ್ತು ಗುಜರಾತ್ ಪ್ರದೇಶಗಳಲ್ಲಿ ಹೆಚ್ಚು ತೈಲ ಮತ್ತು ಅನಿಲಗಳನ್ನು ಉತ್ಪಾದಿಸಲು ಸಾಧ್ಯವಾಗಿದೆ. ಪೆಟ್ರೋಲಿಯಂ ಹಾಗೂ ಇತರ ತೈಲ ವಸ್ತುಗಳು ದೇಶದಲ್ಲಿ ಹಲವೆಡೆ ಉತ್ಪಾದನೆಯಾಗುತ್ತಿವೆ.

ಭಾರತದಲ್ಲಿ ಈವರೆಗೆ ಜಾರಿಗೆ ಬಂದಿರುವ ಕೊಳವೆ ಮಾರ್ಗ ಕಾಮಗಾರಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು : 1. ನಹರ್‌ಕಟಿಯಾ–ನುನ್ಮತಿ–ಬರೌನಿ ಕಚ್ಚಾ ತೈಲ ಕೊಳವೆ ಮಾರ್ಗ, 2. ಸಿಲಿಗುರಿ ಉತ್ಪನ್ನ ಕೊಳವೆ ಮಾರ್ಗ, 3. ಹಾಲ್ದಿಯಾ–ಬರೌನಿ–ಕಾನ್ಪುರ ಕೊಳವೆಮಾರ್ಗ 4. ಗುಜರಾತ್ ಕೊಳವೆ ವ್ಯವಸ್ಥೆ.

ಟ್ರಾಂಬೆ ಮತ್ತು ವಿಶಾಖಪಟ್ಟಣಗಳಲ್ಲಿ ಖಾಸಗಿ ವಲಯಕ್ಕೆ ಸೇರಿದ ಮೂರು ತೈಲ ಪರಿಷ್ಕರಣ ಕೇಂದ್ರಗಳಿವೆ. ಭಾರತ ಸರ್ಕಾರ ಗೌಹಾತಿ, ಬರೌನಿ, ಕಾಯಲಿ ಮತ್ತು ಕೊಚ್ಚಿ, ಚೆನ್ನೈ ಹಾಗೂ ಹಾಲ್ದಿಯಾಗಳಲ್ಲಿ ತೈಲ ಪರಿಷ್ಕರಣ ಕೇಂದ್ರಗಳಿವೆ.

ಕೊಳವೆ ಮಾರ್ಗಗಳನ್ನು ಸರಿಯಾಗಿ ನಿಯಂತ್ರಿಸುವುದು ಅತಿಮುಖ್ಯ ವಿಷಯ. ಇಲ್ಲದಿದ್ದರೆ ಸ್ವತ್ತಿಗೆ ಅಪಾರ ಹಾನಿಯುಂಟಾಗುವುದಲ್ಲದೆ ಅದರಿಂದ ಅನೇಕ ಕೈಗಾರಿಕೆಗಳ ಉತ್ಪಾದನಕಾರ್ಯಕ್ಕೆ ತಡೆಯುಂಟಾಗುತ್ತದೆ. ಆಸ್ಫೋಟನೆಯ ಅಪಾಯ ಅಧಿಕ. (ಸಿ.ಸಿ.ಪಿ.)

**ಕೊಳವೆ ಹುಳು :** ಪ್ರಾಣಿಸಾಮ್ರಾಜ್ಯದ ಫೊರೋನಿಡ ಎಂಬ ವಿಭಾಗಕ್ಕೆ ಸೇರಿದ ಒಂದು ಕಡಲಜೀವಿ (ಟ್ಯೂಬ್ ವರ್ಮ್). ಸಣ್ಣ ಜಂತುಗಳನ್ನು ಹೋಲುತ್ತದೆ. ತಾನೇ ನಿರ್ಮಿಸಿಕೊಂಡ ಕೊಳವೆಯಲ್ಲಿ ಈ ಹುಳ ವಾಸಿಸುತ್ತದೆ. ಈ ಕೊಳವೆ ಸಮುದ್ರದ ತಳವನ್ನೋ ಇತರ ವಸ್ತುಗಳನ್ನೂ ಕಚ್ಚಿಕೊಂಡಿರುತದೆ. ಇದರ ವಾಸ ಉಷ್ಣ ಮತ್ತು ಸಮಶೀತೋಷ್ಣವಲಯಗಳ ಆಳವಿಲ್ಲದ ಸಮುದ್ರಗಳಲ್ಲಿ. ಪ್ರಾಣಿ ರಾಜ್ಯದಲ್ಲಿ ಇದರ ಸ್ಥಾನಮಾನದ ಬಗ್ಗೆ ಬಹಳ ದಿನಗಳವರೆಗೂ ಸರಿಯಾದ ಅರಿವು ಇರಲಿಲ್ಲ. ಹಿಂದೆ ಇದನ್ನು ವಲಯವಂತ, ಮೃದ್ವಂಗಿ, ಕಾರ್ಡೇಟ ಮುಂತಾದ ವಿಭಾಗಗಳಲ್ಲಿ ಸೇರಿಸಲಾಗಿತ್ತು. ಆದರೆ ತನ್ನ ಕೆಲವು ವಿಶಿಷ್ಟ ರಚನೆಗಳಿಂದಾಗಿ ಮೇಲೆ ಹೇಳಿದ ಯಾವ ವಿಭಾಗದೊಂದಿಗೂ ಇದು ಸಮರ್ಪಕವಾಗಿ ಹೊಂದಿಕೊಳ್ಳುತ್ತಿರಲಿಲ್ಲ. ಇದರಿಂದಾಗಿ ಈಚೆಗೆ ಇದನ್ನೇ ಪ್ರತ್ಯೇಕ ವಿಭಾಗವೊಂದರಲ್ಲಿ ಸೇರಿಸಲಾಗಿದೆ.

**ಹೊರರಚನೆ :** ದೇಹ ನೀಳವಾಗಿ ಹಲವು ಸೆಂಟಿಮೀಟರ್ ಉದ್ದವಾಗಿದೆ. ಇದು ಖಂಡಗಳಾಗಿ ವಿಭಾಗವಾಗಿಲ್ಲ. ಇದರ ಒಂದು ತುದಿಯಲ್ಲಿ ಎರಡು ಸುತ್ತುಗಳಲ್ಲಿರುವ ಸಂವೇದಿತಂತುಗಳಿವೆ (ಟೆಂಟಕಲ್ಸ್). ಇವುಗಳ ನಡುವೆ ಅರ್ಧಚಂದ್ರಾಕೃತಿಯ ಬಾಯಿ ಉಂಟು. ಎಪಿಸ್ಟೋಮ್ ಎಂಬ ಮಾಂಸದ ಮುಚ್ಚಳ ಬಾಯಿಯನ್ನು ಭಾಗಶಃ ಮುಚ್ಚಿಕೊಂಡಿದೆ. ಮಲದ್ವಾರವೂ ದೇಹದ ಇದೇ ತುದಿಯಲ್ಲಿ ಆದರೆ ಬಾಯಿಯ ಎದುರು ಪಾರ್ಶ್ವದಲ್ಲಿ ತಂತುಗಳ ಹೊರಗಡೆಯಿರುವ ಒಂದು ತೊಟ್ಟಿನ ತುದಿಯಲ್ಲಿದೆ. ಇದರಿಂದಾಗಿ ಜೀರ್ಣನಾಳಕ್ಕೆ 'U'ಆಕಾರ ಬಂದಿದೆ. ತಂತುಗಳ ಮೇಲೆ ಸೂಕ್ಷ್ಮಗ್ರಾಹಿ ರೋಮಗಳಿವೆ. ತಂತುಗಳ ಬುಡದಲ್ಲಿ ಸಂಬಂಧಕ ಸ್ನಾಯುಗಳಿಂದಾದ ಲೊಫೋಫೋರ್

ಎಂಬ ಅಂಗವಿದೆ. ತಂತುಗಳ ಮೇಲಿನ ಕೂದಲುಗಳ ಚಲನೆಯಿಂದ ಉದ್ಭವಿಸುವ ಜಲಪ್ರವಾಹ ಬಾಯಿಗೆ ಆಹಾರ ವಸ್ತುಗಳನ್ನು (ತೇಲುವ ಏಕಾಣುಜೀವಿ) ಸೆಳೆದು ಕೊಡುವುದರಲ್ಲಿ ಸಹಾಯಕವಾಗಿದೆ.

ಜೀರ್ಣಾಂಗ ಮತ್ತು ರಕ್ತಚಲನಾಂಗ : ಆಹಾರನಾಳ, ಜಠರ, ಕರುಳು, ಗುದನಾಳ–ಇವು ಜೀರ್ಣಾಂಗದ ಮುಖ್ಯ ಭಾಗಗಳು. ಇವಕ್ಕೆ ಸಂಬಂಧಿಸಿದ ಯಾವ ಬಗೆಯ ಗ್ರಂಥಿಗಳೂ ಇಲ್ಲ. ಅಫೆರೆಂಟ್ ಮತ್ತು ಎಫಿರೆಂಟ್ ಎಂಬ ಎರಡು ರಕ್ತನಾಳಗಳೇ ರಕ್ತಚಲನಾಂಗದ ಪ್ರಮುಖ ಭಾಗಗಳು. ಇವುಗಳಲ್ಲಿ ಒಂದು ಜೀರ್ಣಾಂಗಕೊಳವೆಗಳ ಮಧ್ಯದಲ್ಲೂ ಇನ್ನೊಂದು ಜೀರ್ಣಾಂಗ ಕೊಳವೆ ಮತ್ತು ದೇಹದ ಹೊರಹೊದಿಕೆಯ ನಡುವೆಯೂ ಇವೆ. ಇವೆರಡು ರಕ್ತನಾಳಗಳೂ ಲೋಫೋಫೋರಿನ ಬಳಿ ಕೂಡಿಕೊಂಡಿವೆ. ಇವೆರಡು ರಕ್ತನಾಳಗಳನ್ನು ಆವರಿಸಿಕೊಂಡು ಒಂದು ರಕ್ತ ಕುಹರವೂ, ಹಲವು ಕುರುಡು (ಮೂಗು) ನಾಳಗಳೂ ಇವೆಯಲ್ಲದೆ ರಕ್ತನಾಳಗಳಿಗೆ ಸೇರಿದಂತೆ ವ್ಯಾಸೊಪೆರಿಟೋನಿಯಲ್ ಮಾಂಸಖಂಡಗಳಿವೆ.

ಇವನ್ನು ಮೇದೋರಚನೆ (ಫ್ಯಾಟ್‌ಬಾಡಿ) ಎಂದೂ ಕರೆಯುವರು. ಇವುಗಳನ್ನು ಕೆಲವು ವಿಸರ್ಜಿತ ವಸ್ತುಗಳಿಂದಲೂ ಇನ್ನು ಕೆಲವು ಸಿಡಿದ ಹೀಮೋಗ್ಲಾಬಿನ್‌ನಿಂದಲೂ ಆಗಿರುವಂತೆ ತೋರುತ್ತದೆ. ರಕ್ತನಾಳಗಳಲ್ಲಿ ದೀರ್ಘವೃತ್ತಾಕಾರದ ರಕ್ತಕಣಗಳಿವೆ. ಕಣಬೀಜ ಮತ್ತು ಮಾನವ ರಕ್ತದಲ್ಲಿನ ಹೀಮೋಗ್ಲಾಬಿನ್ ಅನ್ನು ಹೋಲುವ ಕೆಂಪು ಬಣ್ಣದ ಹೀಮೋಗ್ಲಾಬಿನ್ ಇರುವುದು ಕೊಳವೆಹುಳುವಿನ ರಕ್ತಕಣಗಳ ವಿಶೇಷ ಲಕ್ಷಣ.

ದೇಹದ ಕುಹರ: ಸೀಲೋಮ್ ಎಂದು ಕರೆಯಲಾಗುವ ದೇಹದ ಪೊಳ್ಳಿನ ಭಾಗ ನಾಲ್ಕು ಮೀಸೆಂಟರಿಗಳಿಂದ ನಾಲ್ಕು ವಿಭಾಗವಾಗಿದೆ. ಮೀಸೆಂಟರಿಗಳು ಜೀರ್ಣಾಂಗಗಳಿಂದ ಆರಂಭವಾಗಿ ದೇಹದ ಹೊದಿಕೆಗೆ ಅಂಟಿಕೊಂಡಿವೆ. ತಂತುಗಳ ತುದಿಯ ದೇಹದ ಟೊಳ್ಳಿನಲ್ಲಿ ಒಂದು ಸಮತಲ ಮೀಸೆಂಟರಿ ಲೋಫೋಫೋರ್ ಕುಹರವನ್ನು ದೇಹದ ಇತರ ನಾಲ್ಕು ಕುಹರಗಳಿಂದ ಪ್ರತ್ಯೇಕಿಸುತ್ತದೆ. ದೇಹದ ಈ ಟೊಳ್ಳುಗಳಲ್ಲಿ ಒಂದು ದ್ರವ ತುಂಬಿದ್ದು ದೇಹ ಉಬ್ಬಿಕೊಂಡಿರುವಂತೆ ಮಾಡುತ್ತದೆ.

ವಿಸರ್ಜನಾಂಗ: ಮಲದ್ವಾರದ ಇಕ್ಕೆಡೆಗಳಲ್ಲಿ ನೆಫ್ರಿಡಿಯ ಎಂಬ ವಿಸರ್ಜನಾಂಗಗಳಿವೆ. ಇವು ನುಲಿನಾಳಗಳ ಮೂಲಕ ದೇಹದ ಎರಡು ದೊಡ್ಡ ಟೊಳ್ಳುಭಾಗಗಳೊಡನೆ ಸಂಬಂಧಿಸಿದ್ದು ಇವುಗಳಿಂದ ವಿಸರ್ಜಿತವಾದ ವಸ್ತುವನ್ನು ಹೊರಹಾಕಲು ಸಹಾಯ ಮಾಡುತ್ತವೆ.

ದೇಹದ ಗೋಡೆಯಲ್ಲಿ ಎಪಿತೀಲಿಯಲ್ ಕಣಗಳ ಒಂದು ಪದರ ಮತ್ತು ಸ್ನಾಯು ತಂತುಗಳ ಎರಡು ಒಳಸಾಲುಗಳೂ ಇವೆ. ಇದರಲ್ಲಿ ಹೊರಗಿನದು ವೃತ್ತಸ್ನಾಯು ಮತ್ತು ಒಳಗಿನದು ಲಂಬಸ್ನಾಯು. ಎಪಿತೀಲಿಯಲ್ ಕಣಗಳು ಸ್ರವಿಸುವ ಒಂದು ದ್ರವದ ಸಹಾಯದಿಂದ ಹುಳು ತಾನು ವಾಸಿಸುವ ಕೊಳವೆ ಗೂಡನ್ನು ನಿರ್ಮಿಸಿಕೊಳ್ಳುತ್ತದೆ. ಸ್ರವಿಸಿದಾಗ ಪಾರದರ್ಶಕವಾಗಿ ಅಂಟುಅಂಟಾಗಿರುವ ಈ ದ್ರವ ನೀರಿನಸಂಪರ್ಕದಿಂದ ಗಟ್ಟಿಯಾಗುತ್ತದೆ. ಕೆಲವು ವೇಳೆ ಹಾಗೆ ನಿರ್ಮಿಸಿದ ಕೊಳವೆಗೆ ಮರಳು, ಚಿಪ್ಪು ಮುಂತಾದ ವಸ್ತುಗಳು ಅಂಟಿಕೊಳ್ಳುವುದುಂಟು. ಈ ಕೊಳವೆ ಮುಂಭಾಗದಲ್ಲಿ ಮುಚ್ಚಿದ್ದು, ಹಿಂಭಾಗದಲ್ಲಿ ತೆರೆದಿರುತ್ತದೆ. ಹಿಂಭಾಗದ ದ್ವಾರದಿಂದ ದೇಹವನ್ನು ಹುಳು ನೀಳವಾಗಿ ಚಾಚಬಲ್ಲದು.

ನರಮಂಡಲ: ಎಪಿತೀಲಿಯಲ್ ಕಣದ ಸಾಲಿನ ಕೆಳಗೆ ನರಗಳ ಜಾಲದಂತೆ ನರಮಂಡಲ ಹರಡಿದೆ. ಲೋಫೋಫೋರ್ ಟೊಳ್ಳಿನೊಳಗಿರುವ ಮೀಸೆಂಟರಿಯೊಳಕ್ಕೆ ಈ ನರಜಾಲ ಮುಂದುವರಿದು, ಸಾಂದ್ರವಾಗಿ ಕೇಂದ್ರೀಕರಿಸಿದೆ. ಈ ಕೇಂದ್ರದಿಂದ ಹೊರಟು ದೇಹದ ಹೊದಿಕೆಯ ಮೇಲ್ತೊಕ್ಕಿನಲ್ಲಿ ಒಂದು ಅಥವಾ ಎರಡು ನೀಳವಾದ ದೊಡ್ಡ ನರಗಳು ದೇಹದ ಹಿಂತುದಿಯವರೆಗೂ ಮುಂದುವರೆಯುತ್ತವೆ. ಇವುಗಳ ಸಹಾಯದಿಂದ ಹುಳು ದೇಹವನ್ನು ಕೊಳವೆಯೊಳಕ್ಕೆ ಸೆಳೆದುಕೊಳ್ಳಲು ಸಾಧ್ಯವಾಗುತ್ತದೆ.

ವಂಶಾಭಿವೃದ್ಧಿ: ಕೊಳವೆಹುಳು ದ್ವಿಲಿಂಗಿ. ದೇಹದ ಮುಂಭಾಗದಲ್ಲಿರುವ ಲಘು ಮೂಗು(ಬ್ಲೈಂಡ್) ರಕ್ತನಾಳಗಳ ಗೋಡೆಯಲ್ಲಿರುವ ಕಣಗಳಿಂದ ಜನನ ಕಣಗಳು ಉತ್ಪತ್ತಿಯಾಗುತ್ತವೆ. ಬಲಿತ ಅಂಡ ಮತ್ತು ವೀರ್ಯಾಣುಗಳು ದೇಹದ ಕುಹರಕ್ಕೆ ಬಿದ್ದು ನೆಫ್ರಿಡಿಯ ಕೊಳವೆಯ ಮೂಲಕ ಸಾಗಿ ಹೊರಬರುತ್ತವೆ. ನಿಶೇಚನ ಸಂವೇದಿ ತಂತುಗಳ ನಡುವೆ ನಡೆಯುತ್ತದೆ. ಫಲೀಕೃತಗೊಂಡು ಅಂಡಗಳು ಸಂವೇದಿತಂತುಗಳಲ್ಲೊ ಇಲ್ಲವೆ ಹೊರಗೆ ನೀರಿನಲ್ಲೋ ವೃದ್ಧಿಯಾಗುತ್ತವೆ. ಅನಂತರ ಅವುಗಳಿಂದ ನೀರಿನಲ್ಲಿ ಈಜಿಕೊಂಡು ಚಲಿಸುವ ಡಿಂಬ ಹೊರಬರುತ್ತದೆ. ಡಿಂಬಕ್ಕೆ ಆಕ್ಟಿನೊಟ್ರೋಕ ಎಂದು ಹೆಸರು. ಇದಕ್ಕೆ ರೋಮಗಳಿಂದ ಕೂಡಿದ ಸಂವೇದಿತಂತುಗಳ ಉಂಗುರವೂ ಬಾಯಿಯ ಮೇಲೆ ಮಾಂಸಖಂಡದ ಮುಚ್ಚಳವೂ ಇವೆ. ಡಿಂಬ ನೀರಿನಲ್ಲಿರುವ ಸೂಕ್ಷ್ಮ ತೇಲುಜೀವಿಗಳನ್ನು ಭಕ್ಷಿಸುತ್ತ ಇದ್ದು ಒಂದು ತಿಂಗಳ ಅನಂತರ ನೀರಿನ ತಳವನ್ನು ಸೇರಿ ರೂಪಪರಿವರ್ತನೆ ಹೊಂದಿ ಪ್ರೌಢಾವಸ್ಥೆ ತಲುಪುತ್ತದೆ. ಕೊಳವೆ ಹುಳುಗಳಲ್ಲಿ ಸಾಮಾನ್ಯವಾಗಿ ಮೇಲೆ ಹೇಳಿದಂತೆ ಲಿಂಗರೀತಿ ವಂಶಾಭಿವೃದ್ಧಿ ಯಾಗುವುದು. ಕೆಲವು ವೇಳೆ ದೇಹದ ಒಂದು ಭಾಗ ಹೊರಬಂದು ಪ್ರತ್ಯೇಕ ಪ್ರಾಣಿಯಾಗಿ ಅಲಿಂಗ ರೀತಿಯಲ್ಲೂ ವಂಶಾಭಿವೃದ್ಧಿ ಮಾಡಬಹುದು. (ಬಿ.ಎಚ್.ಎಂ.)

**ಕೊಳ, ಹೊಯ್ದಾಟದ :** ಒಂದು ನೀರ್ಗಾಲಿಗೆ (ಟರ್ಬೈನ್) ನೀರನ್ನು ಒಯ್ಯುವ ನಳಿಗೆಗೆ ಅಕಸ್ಮಾತ್ ಋಣ ಸಂಮರ್ದದಿಂದ ಆಗುವ ಹಾನಿಯನ್ನು ತಪ್ಪಿಸಲು ಇರುವ ಏರ್ಪಾಡು (ಸರ್ಜ್ ಟ್ಯಾಂಕ್). ಋಣ ಸಂಮರ್ದ ಎರಡು ಸಂದರ್ಭಗಳಲ್ಲಿ ತಲೆದೋರುತ್ತದೆ: ಏಕರೀತಿಯಾಗಿ ಪ್ರವಹಿಸುತ್ತಿರುವ ನೀರಿನ ಧಾರೆಯ ಹಠಾತ್ ನಿಲುಗಡೆಯಾದಾಗ; ಮತ್ತು ನೀರ್ಗಾಲಿ ಹಠಾತ್ತಾಗಿ ಪೂರ್ಣಕಾರ್ಯ ಸಾಮರ್ಥ್ಯದಿಂದ ಕಾರ್ಯೋದ್ಯುಕ್ತವಾದಾಗ, ಈ ಎರಡು ಬಗೆಯ ಒತ್ತಡಗಳಿಂದಲೂ ನಳಿಗೆಗೆ ಅಪಾಯವಿದೆ. ಇದನ್ನು ತಪ್ಪಿಸಲು ಎಲ್ಲ ಉದ್ದವಾದ ನಳಿಗೆಗಳ ಕೊನೆಗಳಲ್ಲಿಯೂ ಹೊಯ್ದಾಟದ ಕೊಳಗಳನ್ನು ಒದಗಿಸಿರುತ್ತಾರೆ. ನೀರ್ಗಾಲಿ ಮುಚ್ಚಿದಾಗ ಹೊರಗೆ ಬಂದ ನೀರೆಲ್ಲವೂ ಹೊಯ್ದಾಟದ ಕೊಳಕ್ಕೆ ಬೀಳುತ್ತದೆ; ನೀರ್ಗಾಲಿಗೆ ನೀರನ್ನು ಒಯ್ಯುವ ನಳಿಗೆಯೊಳಕ್ಕೆ ಬರುವುದಿಲ್ಲ. ನೀರ್ಗಾಲಿಯನ್ನು ತೆರೆದಾಗ ಹೊಯ್ದಾಟದ ಕೊಳವಿಯ ನೀರು ನಳಿಗೆಯೊಳಕ್ಕೆ ಬರುತ್ತದೆ. ಇದರಿಂದ ಋಣ ಒತ್ತಡ ಉತ್ಪತ್ತಿಯಾಗುವುದಿಲ್ಲ. (ಎನ್.ಎಸ್.ಜಿ.)

**ಕೊಳಾಯಿ ಕೆಲಸ :** ಒಂದು ಕಟ್ಟಡದ ಕುಡಿಯುವ ನೀರಿನ ಸರಬರಾಜು ಮತ್ತು ಉಪಯೋಗಾನಂತರದ ನೀರಿನ ಹೊರಸಾಗಾಣಿಕೆ–ಇವುಗಳ ಏರ್ಪಾಡು (ಪ್ಲಂಬಿಂಗ್). ಆರೋಗ್ಯ ಹಾಗೂ ರಕ್ಷಣೆಯ ದೃಷ್ಟಿಯಿಂದ ಈ ಎರಡೂ ಕಾರ್ಯಗಳು ಸಮರ್ಪಕವಾಗಿರಬೇಕಾದರೆ: 1. ಬೇಕಾದ ಒಂದೊಂದು ಎಡೆಗೂ ಸಾಕಷ್ಟು ನೀರು ಹರಿಯುವಂತಿರಬೇಕು; 2. ಯಾವ ಕಾರಣದಿಂದಲೂ(ಕಡೆಯಿಂದಲೂ) ಬಳಸಿದ ನೀರು ಮತ್ತೆ ಸರಬರಾಜು ಕೊಳವೆಗೆ ಸೇರದಂತಿರಬೇಕು; 3. ಗೃಹಸಾರ ಹಾಗೂ ಜಲಮಿಶ್ರಿತ ತ್ಯಾಜ್ಯಗಳು ತತ್‌ಕ್ಷಣ ಹೊರಹೋಗುವಂತಿರಬೇಕು; ಎಲ್ಲೂ ಕಟ್ಟಿಕೊಂಡು ತಡೆಯಾಗಬಾರದು; 4. ಈ ರೊಚ್ಚು ಸಾಗುವ ಕೊಳಾಯಿಯಿಂದ ಇಲಿಗಳಾಗಲೀ, ಕ್ರಿಮಿಕೀಟಗಳಾಗಲಿ, ದುರ್ವಾಸನೆಯ ಅನಿಲಗಳಾಗಲೀ ಮನೆಯೊಳಕ್ಕೆ ಬಾರದಂತಿರಬೇಕು.

ಜನರ ನಿತ್ಯಜೀವನದಲ್ಲಿ ಕೊಳಾಯಿ ಕೆಲಸದ ಸಂಬಂಧ ಅತಿ ನಿಕಟ. ಆದ್ದರಿಂದ ಈ ಕೆಲಸದ ಮೇಲೆ ಸರಕಾರದ  ಹತೋಟಿ ಇದೆ. ನೀರು ಸರಬರಾಜಿನ ಮತ್ತು




ಚಿತ್ರ 1 ಕೊಳಾಯಿ ನೀರಿನ ತಿರುಪುಬಿರಡೆಗಳ ಮೂರು ಭಿನ್ನ ಮಾದರಿಗಳು: 1 ಮತ್ತು 2ರಲ್ಲಿ ಮೇಲೆ ಇರುವ ಹಿಡಿಯನ್ನು ತಿರುಗಿಸಿ ನೀರಿನ ಹರಿವನ್ನು ನಿಯಂತ್ರಿಸಬಹುದು. 3ರಲ್ಲಿ ಹಿಡಿಯನ್ನು ಒತ್ತಿಹಿಡಿದಿರುವಾಗ ಮಾತ್ರ ನೀರು ಹರಿಯುವುದು.

ಗ್ರಾಮಸಾರ ಸಾಗಾಣಿಕೆಯ ಪ್ರಧಾನ ಕೊಳಾಯಿಗಳು ಸಾರ್ವಜನಿಕ ರಸ್ತೆಯ ಬದಿಗಳಲ್ಲಿ, ಭೂಗತವಾಗಿ ಹಾಕಲ್ಪಟ್ಟಿದ್ದು ಅವುಗಳಿಂದ ಪ್ರತಿಮನೆಗೂ ಸಂಪರ್ಕವೇರ್ಪಡಿಸಲು ಸರ್ಕಾರ ಒಂದು ಶುಲ್ಕವನ್ನು ವಿಧಿಸುತ್ತದೆ. ಮನೆಯಲ್ಲಿಯ ಕೊಳಾಯಿ ಕೆಲಸ ಸಮರ್ಪಕವಾಗಿದೆಯೆಂದು ಖಾತ್ರಿಮಾಡಿಕೊಂಡು ಬಳಿಕ ಸಾರ್ವಜನಿಕ ವ್ಯವಸ್ಥೆಗೆ ಸಂಪರ್ಕವನ್ನು ಒದಗಿಸಲಾಗುವುದು. ಸರ್ಕಾರ ಅಥವಾ ಖಾಸಗಿ ಸಂಸ್ಥೆ ಒದಗಿಸುವ ಪ್ರಧಾನ ನೀರು ಸರಬರಾಜು ಕೊಳಾಯಿಯಲ್ಲಿ ನೀರಿನ ಒತ್ತಡ ಸಾಮಾನ್ಯವಾಗಿ ಮನೆಯ ಎಲ್ಲ ಕಡೆಗಳಿಗೂ ನೀರು ಮುಟ್ಟಲು ಸಾಕಾಗುವಷ್ಟು ಇರುತ್ತದೆ. ತುಂಬ ಎತ್ತರದಲ್ಲಿರುವ ಅಥವಾ ಅಂತಸ್ತುಗಳುಳ್ಳ ಕಟ್ಟಡಕ್ಕೆ ಅಥವಾ ಬಹಳ ಉದ್ದದ ಕೊಳಾಯಿ ಪಂಕ್ತಿಯಲ್ಲಿ ಅಥವಾ ಇತರ ಯಾವುದೇ ವಿಶಿಷ್ಟ ಉದ್ದೇಶಗಳಿಗಾಗಿ ಹೆಚ್ಚು ಪರಿಮಾಣದಲ್ಲಿ ನೀರನ್ನು ಉಪಯೋಗಿಸುವಾಗ ನೀರಿನ ಒತ್ತಡ ಸಾಲದಾದಾಗ ಪಂಪನ್ನು

ಉಪಯೋಗಿಸುವುದರಿಂದ ಸ್ಥಳೀಯವಾಗಿ ಬೇಕಾದ ಒತ್ತಡವನ್ನು ಉಂಟುಮಾಡಿಕೊಳ್ಳಬಹುದು. ನೀರಿನ ಸರಬರಾಜು ಇಲ್ಲದಿರುವ ಕಡೆ ತೋಡು ಅಥವಾ ಕೊಳವೆ ಬಾವಿಯಿಂದ ಪಂಪಿನ ಮೂಲಕ ನೀರನ್ನು ತೆಗೆದುಕೊಳ್ಳುವುದುಂಟು.



ಚಿತ್ರ 2 ನೀರಿನ ಹರಿವನ್ನು ನಿಯಂತ್ರಿಸುವ ಮೂರು ಭಿನ್ನ ಮಾದರಿಯ ಕವಾಟಗಳು

ಮನೆಯಲ್ಲಿಯ ನೀರು ಸಾಗಣೆ ಕೊಳವೆಗಳ ವ್ಯಾಸ ಸಾಮಾನ್ಯವಾಗಿ 20 ಮಿಮೀಗೆ ಕಡಿಮೆಯಾಗಿರದೆ ಸಾಕಷ್ಟು ಉದ್ದವಾಗಿರುತ್ತದೆ. ಮೂತ್ರಿಗಳಿಗೆ, ಕಕ್ಕಸುಗಳಿಗೆ ಕೊಚ್ಚುನೀರನ್ನು ಅವುಗಳ ಏಣಿಗಿಂತ ಕೆಳಮಟ್ಟದಲ್ಲಿ ಬಿಡುವ ಸಂದರ್ಭಗಳಲ್ಲಿ ಕೊಳಾಯಿಯಿಂದ ನೀರನ್ನು ಸೀದಾ ಅಲ್ಲಿ ಬಿಡುವಂತಿರದೆ ಅವನ್ನು ಪ್ರತ್ಯೇಕಿಸಿರುವ ವ್ಯವಸ್ಥೆಯಿರಬೇಕು.

ಹಾಗೆಯೇ ಕೊಳಾಯಿಗಳಿರುವ ವಾಷ್ ಬೇಸಿನ್‌ಗಳಿಂದ, ರೆಫ್ರಿಜಿರೇಟರುಗಳಿಂದ ಬಿಡಲ್ಪಟ್ಟ ನೀರನ್ನು ವಿಸರ್ಜ್ಯಸಾಗಣೆ ಕೊಳಾಯಿಗೆ ಸೀದಾ ಸೇರಿಸಿರದೆ, ಕೊಂಚ ಅಂತರವುಳ್ಳ ಲಾಳಿಕೆಯಿಂದ ಅಡಚು ತಡೆಯ ಮೂಲಕವೇ ಸೇರಿಸಬೇಕು.

ಕೊಳಕು ನೀರನ್ನು, ಕಕ್ಕಸಿನ ಮಲಮೂತ್ರಾದಿಗಳನ್ನು ಒಂದು ಸಾಗಣೆ ಕೊಳಾಯಿಗೆ ಹರಿಯುವಂತೆ ಮಾಡಿ ಇದನ್ನು ರಸ್ತೆಯಂಚಿನ ಭೂಗತ ಗ್ರಾಮಸಾರ ಕೊಳಾಯಿಗೆ ಸೇರಿಸ ಲಾಗುತ್ತದೆ. ಈ ಗೃಹಸಾಗಣೆ ಕೊಳಾಯಿಗೆ ಮನೆ ಚರಂಡಿಗಳ ಒಂದೊಂದು ಸಂಪರ್ಕವನ್ನು ಕೊಡು ವಾಗಲೂ ಕೊಳಾಯಿಯ ದುರ್ವಾಸನೆ, ಕ್ರಿಮಿಕೀಟಾದಿ ಗಳು ಇತ್ತ ಬರದಂತೆ ಒಂದು ತಡೆ ಸಾಧನ ಅತ್ಯಗತ್ಯ. ಸಂಪರ್ಕ ಕೊಳಾಯಿಯಲ್ಲಿ S ಅಥವಾ P ಆಕಾರದಲ್ಲಿ ಒಂದು ಕೆಳತಿರುವನ್ನು ಉಪಯೋಗಿಸುವುದರಿಂದ ಇದು ಸಾಧ್ಯವಾಗುತ್ತದೆ. ಸಂಪರ್ಕ ಕೊಳಾಯಿ ಯಿಂದ ನೀರು ಆಚೆಗೆ ಹರಿದಾಗಲೆಲ್ಲ ಅದರ ಈ ಕೆಳತಿರುವಿನಲ್ಲಿ ಕೊಂಚ ಭಾಗ ನೀರು ಉಳಿದು ಸಾಗಣೆ ಕೊಳಾಯಿಗೆ ಸೀದಾ ಸಂಪರ್ಕವನ್ನು ತಡೆಯುತ್ತದೆ. ಯಾವ ಕಾರಣದಿಂದಲೂ (ಉದಾ: ನೀರು ರಭಸದಿಂದ ಹರಿಯುವುದರಿಂದ ಅಥವಾ ಸಾಗಣೆ ಕೊಳಾಯಿಯೊಳಗೆ ನಿರ್ವಾತ ಅಥವಾ ಅಲ್ಪವಾತ ಸ್ಥಿತಿಯಲ್ಲಿ ಕಡಿಮೆ ಒತ್ತಡವುಂಟಾಗಿ ಇಳಿಗೊಳವೆ–ಸೈಫನ್–ಕ್ರಿಯೆಯಿಂದ) ಈ ನೀರು ಕೊಚ್ಚಿಹೋಗಿ ಅಡಚು ತಡೆ ಒಡೆಯದಂತೆ ಅದರ ರಚನೆಯಲ್ಲಿ ಎಚ್ಚರಿಕೆ ವಹಿಸಬೇಕು. ಈ ಉದ್ದೇಶವನ್ನಿಟ್ಟುಕೊಂಡೇ ಸಾಗಣೆ ಕೊಳಾಯಿಯೊಳಗಿನ ಒತ್ತಡ ಹೊರಗಿನ ವಾತಾವರಣದ ಒತ್ತಡಕ್ಕೆ ಸಮವಾಗಿರುವಂತೆ ಮಾಡಿರುತ್ತಾರೆ. ಮನೆಯ ತಾರಸಿಯ ಮೇಲುಮಟ್ಟದಲ್ಲಿ ಬಿಡುಗಂಡಿಯುಳ್ಳ ಕೊಳಾಯಿ ಸ್ತಂಭಗಳನ್ನು ನಿಲ್ಲಿಸುವುದು (ಹಲವು ಅಂತಸ್ತಿನ ಮನೆಗಳಲ್ಲಿ) ಇದರ ಒಂದು ಕ್ರಮ. ವಿಸರ್ಜ್ಯಗಳೊಡನೆ ಬೆರೆತ ನೀರು ಸುಲಭವಾಗಿ ಕೊಚ್ಚಿಕೊಂಡು ಹೋಗುವಂತೆ ಕೊಳಾಯಿ ಪಂಕ್ತಿಗಳಲ್ಲಿ ಯುಕ್ತವಾದ ಇಳಿಜಾರಿರಬೇಕು. ತಾರಸಿಯಿಂದ ಬೀಳುವ ಅಥವಾ ನೆಲದ ಮೇಲೆ ಹರಿಯುವ ಮಳೆಯ ನೀರು ಗೃಹಸಾರ ವಿಸರ್ಜನ ವ್ಯವಸ್ಥೆಗೆ ಸೇರಿಕೊಳ್ಳುವಂತಿರದೆ ಅದಕ್ಕೆ ಪ್ರತ್ಯೇಕವಾದ ಚರಂಡಿ ವ್ಯವಸ್ಥೆಯಿರಬೇಕು. ಈ ವಿಭಾಗದ ಕೊಳಾಯಿ ಕೆಲಸದಲ್ಲಿ ಗಾಜುಮೈಯುಳ್ಳ ಪಿಂಗಾಣಿ ವಸ್ತುಗಳ ಬಳಕೆಯೇ ಹೆಚ್ಚು. ಸುಲಭವಾಗಿ ಶುಭ್ರವಾಗುವಿಕೆ, ನೀರನ್ನು ಹೀರಿಕೊಳ್ಳದಿರುವುದು, ದುರಸ್ತಿಗೆ ಅಳವಡುವಿಕೆ ಇದರ ಮುಖ್ಯ ಲಕ್ಷಣಗಳು. ಅಲ್ಲದೆ ತಾಂಡವಾಳದ ಕೊಳಾಯಿಗಳೂ ಬಳಕೆಯಲ್ಲಿವೆ.



ಚಿತ್ರ 3 ನೀರಿನ ಹರಿವನ್ನು ನಿಯಂತ್ರಿಸುವ ಇತರ ಭಿನ್ನ ಮಾದರಿಯ ಮೂರು ಕವಾಟಗಳು

ಶೀತ ಪ್ರದೇಶಗಳಲ್ಲಿ ಮನೆಗಳನ್ನು ಬಿಸಿನೀರು, ನೀರಿನ ಆವಿ ಇವುಗಳ ಉಪಯೋಗದಿಂದ ಬೆಚ್ಚಗಿರಿಸುವ ವ್ಯವಸ್ಥೆಯಿರುವಾಗ ಇದಕ್ಕೆ ಸಂಬಂಧಪಟ್ಟಂತೆಯೂ ಕೊಳಾಯಿಕೆಲಸದ ವ್ಯಾಪ್ತಿ ಉಂಟು. (ಕೆ.ವಿ.ಎಸ್)

**ಕೊಳ್ಳಿ ಎಸೆಯುವ ಯಂತ್ರ :** ಪ್ರಾಚೀನ ಕಾಲದಲ್ಲಿ ದುರ್ಗರಕ್ಷಕರು ಉರಿಯುತ್ತಿರುವ ರಾಳದ ಪೀಪಾಯಿಗಳನ್ನೂ ಪಂಜುಗಳಿರುವ 6'–12' ಉದ್ದದ ಬರ್ಜಿಗಳನ್ನೂ ಬಹುದೂರಕ್ಕೆ ಶತ್ರುಸೈನ್ಯದ ಮೇಲೆ ಎಸೆಯಲು ಬಳಸುತ್ತಿದ್ದ ಯಂತ್ರ. ಬೈಜಾಂಟೀನ್ ದೇಶದ ಗ್ರೀಕರು ಕಾನ್‌ಸ್ಟಾಂಟಿನೋಪಲ್ ಪಟ್ಟಣದ ಮುತ್ತಿಗೆಯಲ್ಲಿ ರಾಸಾಯನಿಕ ವಸ್ತುಗಳಿಂದುಂಟಾದ ಅಗ್ನಿಜ್ವಾಲೆಗಳನ್ನು ಹಡಗು ಮತ್ತು ಪಟ್ಟಣಗಳ ಮೇಲೆಸೆದು ಕಿಚ್ಚಿಡುತ್ತಿದ್ದರು. ಅಸ್ಸಿರಿಯನ್ನರು ದ್ರವರೂಪದ ಬೆಂಕಿಯನ್ನು ಎಸೆಯುತ್ತಿದ್ದರು. ರೋಮನರು ಸೈರಕ್ಯೂಸ್ ಕೋಟೆಯನ್ನು ಮುತ್ತಿದ್ದಾಗ ವಿಜ್ಞಾನಿ ಆರ್ಕಿಮಿಡೀಸ್ ಸೂರ್ಯಕಿರಣಗಳನ್ನು ಪ್ರತಿಫಲನಕಾರಿಯಿಂದ ಕೇಂದ್ರೀಕರಿಸಿ ಶತ್ರುಗಳ ಹಡಗಿಗೆ ಬೆಂಕಿ ಹೊತ್ತಿಸಿದ. 6" × 8" ಗಾತ್ರದ 160 ಕನ್ನಡಿಗಳ ಜೋಡಣೆಯ ಪ್ರತಿಫಲನಕಾರಿಯಿಂದ 140' ದೂರದಲ್ಲಿಟ್ಟ ಸೀಸ ಕರಗುತ್ತದೆ. 160' ದೂರದಲ್ಲಿಟ್ಟ ಮರ ಸುಟ್ಟುಹೋಗುತ್ತದೆ. ಅನೇಕ ಶತಮಾನಗಳ ಕಾಲ ನೂರಾರು ಯುದ್ಧಗಳಲ್ಲಿ ಗಂಧಕ, ರಾಳ, ಇದ್ದಲು ಧೂಪ, ಸಣಬಿನ ನಾರು, ಕಲ್ಲೆಣ್ಣೆ (ನ್ಯಾಫ್ತಾ), ಪೆಟ್ರೋಲಿಯಮ್‌ಗಳ ವಿವಿಧ ಮಿಶ್ರಣಗಳಿಂದುಂಟಾದ ಅಗ್ನಿಜ್ವಾಲೆಗಳನ್ನು ಯಂತ್ರಗಳಿಂದ ಎಸೆಯಲಾಗುತ್ತಿತ್ತು. ಆಮೇಲೆ ಪೆಟ್ಲುಪ್ಪು, ಕರ್ಪೂರತೈಲಗಳನ್ನೂ (ಟರ್ಪನ್‌ಟೈನ್) ಸೇರಿಸಲಾಯಿತು. ಗಂಧಕ, ಚರಬ, ಪೆಟ್ಲುಪ್ಪು, ಟರ್ಪನ್‌ಟೈನ್ ಮತ್ತು ಆಂಟಿಮೊನಿಗಳಿದ್ದ ಕಾರ್ಕಸ್ ಎಂಬ ಮಿಶ್ರಣ ಘೋರ ಬೆಂಕಿಯನ್ನು ಉಂಟುಮಾಡುತ್ತಿತ್ತು. ಅದಕ್ಕೆ ಕಾಡು ಬೆಂಕಿ ಎಂಬ ಹೆಸರಿತ್ತು.

7ನೆಯ ಶತಮಾನದಲ್ಲಿ ಕ್ಯಾಲಿಕಸ್ ಎಂಬ ಕಾನ್‌ಸ್ಟಾಂಟಿನೋಪಲ್‌ನ ಶಿಲ್ಪಿ ಗ್ರೀಕ್ ಫೈರ್ ಎಂಬ ದ್ರವ ರೂಪದ ಬೆಂಕಿ ಮಿಶ್ರಣವನ್ನು ತಯಾರಿಸಿದ. ಅದನ್ನು ಸೈಫನ್ ಎಂಬ ಯಂತ್ರದಿಂದ ಹಡಗು ಪಡೆಗಳ ಮೇಲೆ ಎಸೆಯಲಾಗುತ್ತಿತ್ತು. ಅದರ ವಿಶೇಷ ಗುಣವೇನೆಂದರೆ ಅದರಲ್ಲಿ ಬಿಸಿಸುಣ್ಣವೂ (ಕ್ವಿಕ್ ಲೈಮ್) ಇದ್ದದ್ದರಿಂದ ಅದು ಸ್ವಲ್ಪ ನೀರು ತಗುಲಿದರೂ ವಿಪರೀತ ಕಾವನ್ನು ಉಂಟುಮಾಡಿ ಮಿಶ್ರಣ ತಂತಾನೇ ಬೆಂಕಿ ಹೊತ್ತಿಕೊಂಡು ಉರಿಯುವಂತೆ ಮಾಡುತ್ತಿತ್ತು. ಈ ಜ್ವಾಲೆಗೆ ತೇವದ ಕಿಡಿ ಮತ್ತು ಸಮುದ್ರದ ಕಿಡಿ ಎಂಬ ಹೆಸರುಗಳಿದ್ದುವು.

ಈ ಮೂಲತತ್ತ್ವಗಳಿಗೆ ರಾಸಾಯನಿಕ ಸೂತ್ರಗಳನ್ನು ಪ್ರಯೋಗಿಸಿ ಆಧುನಿಕ ಕೊಳ್ಳಿ ಎಸೆಯುವ ಯಂತ್ರಗಳು ಆವಿಷ್ಕೃತವಾದುವು. ಅವನ್ನು ಮೊದಲನೆಯ ಮತ್ತು ಎರಡನೆಯ ಮಹಾಯುದ್ಧಗಳಲ್ಲಿ ಉಪಯೋಗಿಸಲಾಯಿತು. ಮೊತ್ತಮೊದಲು ಅವನ್ನು ಜರ್ಮನರು (1914–15) ವರ್ಡಂ ಯುದ್ಧದಲ್ಲಿ ಬಹು ಯಶಸ್ವಿಯಾಗಿ ಉಪಯೋಗಿಸಿದರು. ಫ್ರೆಂಚರು ಅವನ್ನು ಆಮೇಲೆ ಉಪಯೋಗಿಸಿದರು. ಅನಂತರ ಬ್ರಿಟಿಷರು ಅವನ್ನು ಸೊಮ್ಮೆ ಮತ್ತು ಜೆಬ್ರುಗ್ಗೆ ಕದನಗಳಲ್ಲಿ ಬಳಸಿದರು. ಅಮೆರಿಕನ್ನರು ಕೆಲವು ಮಾದರಿಗಳನ್ನು ವೃದ್ಧಿಪಡಿಸಿದರು.

ಫ್ಲೇಂ ಪ್ರೊಜೆಕ್ಟರ್ ಅಥವಾ ಫ್ಲೇಂ ಥ್ರೋಅರ್ ಎಂಬ ಈ ಯಂತ್ರದ ರಚನೆಯಲ್ಲಿ ಮೂರು ಘಟಕಗಳಿವೆ: 1. ಭಾರವಾದ ಮತ್ತು ಹಗುರವಾದ ಎಣ್ಣೆಗಳ ಮಿಶ್ರಣವನ್ನು ಒಳಗೊಂಡಿರುವ ಪಾತ್ರೆ; 2. ಒತ್ತಡದ ಗಾಳಿ, ಯವಕ್ಷಾರಜನಕ ವಾಯು, ಇಂಗಾಲಾಮ್ಲ– ಮುಂತಾದ ಅನಿಲಗಳಿಂದ ತುಂಬಿದ ಬಲವಾದ ಪಾತ್ರೆ; 3. ಮುಸುಡಿಯಿರುವ ಕೊಳವಿ ಮತ್ತು ಬೆಂಕಿ ಹಚ್ಚಲು ಸಲಕರಣೆ. (1) ಮತ್ತು (2)ರ ಮಧ್ಯೆ ದ್ರವ ಮತ್ತು ಅನಿಲದ ಹರಿವನ್ನು ತನಗೆ ತಾನೇ ನಿಯಂತ್ರಿಸುವ ಕವಾಟವಿದೆ. (2) ಮತ್ತು (3)ರ ಮಧ್ಯೆ ಬೆಂಕಿಹಚ್ಚುವ ಚಾಪುಕೀಲು ಇದೆ. ಇದನ್ನು ಒತ್ತಿದ ಕೂಡಲೇ ಕೊಳ್ಳಿಗಳು ಬಂದೂಕಿನ ಗುಂಡುಗಳಂತೆ ವೇಗವಾಗಿ ಹಾರಿಹೋಗುತ್ತವೆ. ಈ ಯಂತ್ರಗಳಲ್ಲಿ ಭಾರವಾದದ್ದು ಮತ್ತು ಕೈಯಲ್ಲಿ ಒಯ್ಯುವಂಥದ್ದು ಎಂದು ಎರಡು ನಮೂನೆಗಳಿವೆ.

ಭಾರಯಂತ್ರಗಳಿಂದ ಕೊಳ್ಳಿಗಳನ್ನು 134 ಗಜ ದೂರಕ್ಕೂ ಹಗುರಯಂತ್ರಗಳಿಂದ 45 ಗಜದವರೆಗೂ ಹಾರಿಸಬಹುದು. ಒಂದು ಸಾರಿ ಮೂರು ಗ್ಯಾಲನ್ ತೈಲ ತುಂಬಿದರೆ 15–16 ಸಾರಿ ಹಾರಿಸಬಹುದು. ಮುಂದಕ್ಕೆ ನೂಕಲು ಅತ್ಯುತ್ತಮವಾದದ್ದು ಯವಕ್ಷಾರಕಜನಕ ವಾಯು. ಅದನ್ನು ಶುದ್ಧವಾಗಿಯಾಗಲೀ ವಾಯುವಿನ ಆಮ್ಲಜನಕದಿಂದ ಯಾಂತ್ರಿಕವಾಗಿ ಪ್ರತ್ಯೇಕಗೊಳಿಸಿಯಾಗಲೀ ಬಳಸಬಹುದು. ಮಾನೊಟೋವ್ ಕಾಕ್‌ಟೇಲ್ ಎಂಬ ಯಂತ್ರ ಎಸೆಯುವ ಕೊಳ್ಳಿಗಳು ಟ್ಯಾಂಕ್ ಮತ್ತು ಪೆಟ್ರೋಲ್‌ಗಳಲ್ಲಿ ಉರಿಯನ್ನು ಎಬ್ಬಿಸುತ್ತದೆ. (ಎಂ.ಜಿ.ಕೆ.ಎಂ.)

**ಕೊಳ್ಳೇಗಾಲ :** ಚಾಮರಾಜನಗರ ಜಿಲ್ಲೆಯಲ್ಲಿ ಪೂರ್ವದ ಕೊನೆಯಲ್ಲಿರುವ ತಾಲ್ಲೂಕು ಮತ್ತು ಅದರ ಮುಖ್ಯಸ್ಥಳ. ಪಶ್ಚಿಮದಲ್ಲಿ ಚಾಮರಾಜನಗರ ತಾಲ್ಲೂಕು, ಯಳಂದೂರು ಮತ್ತು ತಿರುಮಕೂಡಲು ನರಸೀಪುರ ತಾಲ್ಲೂಕುಗಳು, ಉತ್ತರದಲ್ಲಿ ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳು, ಪೂರ್ವ ಮತ್ತು ದಕ್ಷಿಣದಲ್ಲಿ ತಮಿಳುನಾಡು ಇವೆ. ತಾಲ್ಲೂಕಿನ ವಿಸ್ತೀರ್ಣ 2,787.5ಚ.ಕಿಮೀ, ಜನಸಂಖ್ಯೆ 336520. ತಾಲ್ಲೂಕಿನಲ್ಲಿ ಒಟ್ಟು 125 ಗ್ರಾಮಗಳಿವೆ. ಕೊಳ್ಳೇಗಾಲ ತಾಲ್ಲೂಕು 1956ರ ತನಕ ಮದರಾಸು ರಾಜ್ಯದ ಕೊಯಮತ್ತೂರು ಜಿಲ್ಲೆಗೆ ಸೇರಿತ್ತು, ಆ ವರ್ಷ ರಾಜ್ಯಗಳ ಪುನರ್ವಿಂಗಡನೆಯಾದಾಗ ಮೈಸೂರು ಜಿಲ್ಲೆಗೆ ಸೇರಿತು.

ಪ್ರಾಕೃತಿಕವಾಗಿ ಕೊಳ್ಳೇಗಾಲ ತಾಲ್ಲೂಕು ಪ್ರಸ್ಥಭೂಮಿಯ ಒಂದು ಭಾಗ. ಅದರ ಆಗ್ನೇಯ ಅಂಚಿನಲ್ಲಿದೆ. ತಾಲ್ಲೂಕಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಪೂರ್ವಘಟ್ಟಗಳ ದಕ್ಷಿಣದ ಕವಲುಗಳು ಹರಡಿವೆ. ಪೂರ್ವದಲ್ಲಿರುವ ಬೆಟ್ಟಗಳಲ್ಲಿ ಮಹದೇಶ್ವರ ಬೆಟ್ಟಶ್ರೇಣಿ ಪ್ರಸಿದ್ಧವಾದುದು. ಪಶ್ಚಿಮದಲ್ಲಿ ಬಿಳಿಗಿರಿರಂಗನ ಬೆಟ್ಟಶ್ರೇಣಿ ಇದೆ. ತಾಲ್ಲೂಕಿನ ವಾಯವ್ಯ, ಉತ್ತರ ಮತ್ತು ಪೂರ್ವದ ಅಂಚುಗಳಲ್ಲಿ ಕಾವೇರಿ ನದಿ ಹರಿಯುತ್ತದೆ. ಇದೇ ಆ ಭಾಗದ ಗಡಿರೇಖೆ ಸಹ. ಕಾವೇರಿ ನದಿಯ ಗಗನಚುಕ್ಕಿ ಭರಚುಕ್ಕಿ ಜಲಪಾತಗಳು ಈ ತಾಲ್ಲೂಕಿನ ವಾಯವ್ಯ ಭಾಗದಲ್ಲಿವೆ. ಆಗ್ನೇಯದ ಗಡಿಯಲ್ಲಿ ಪಾಲಾರ್ ಎಂಬ ಚಿಕ್ಕ ನದಿ ಇದೆ. ಚಾಮರಾಜನಗರ, ಯಳಂದೂರು ತಾಲ್ಲೂಕುಗಳಿಂದ ಬರುವ ಸುವರ್ಣಾವತಿ, ಕೊಳ್ಳೇಗಾಲದಿಂದ ಸ್ವಲ್ಪದೂರ ಪೂರ್ವದಲ್ಲಿ ಬಿಳಿಗಿರಿರಂಗನ ಬೆಟ್ಟದಿಂದ ಬರುವ ಗುಂಡ್ಲುಹೊಳೆ ಇದೆ. ಬಿಳಿಗಿರಿರಂಗನ ಬೆಟ್ಟ ಮತ್ತು ಮಹದೇಶ್ವರ ಬೆಟ್ಟಗಳ ನಡುವೆ ತಗ್ಗುಪ್ರದೇಶವಿದೆ. ಇಲ್ಲಿ ಹರಿಯುವ ಉಲಿಕೊಪ್ಪಹಳ್ಳ, ತಟಹಳ್ಳ, ಉಡುತೊರೆ ಹಳ್ಳವನ್ನು ಕೂಡಿ ಈಶಾನ್ಯಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುತ್ತವೆ. ಮಹದೇಶ್ವರ ಬೆಟ್ಟದಿಂದ ಗಿರ್ರಿಗುಳಿ ಹಳ್ಳ, ಗುಳಿನಾಲಾಗಳು ಉತ್ತರಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುತ್ತವೆ. ಮಹದೇಶ್ವರ ಬೆಟ್ಟದ ಪೂರ್ವಭಾಗದಲ್ಲಿ ಪೂರ್ವಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುವ ಗುಳಿಯಾತನೂರು ಹಳ್ಳ ಮತ್ತು ಯೇಲಕ್ಕಿಯಾತು ಹಳ್ಳಗಳಿವೆ. ಆಗ್ನೇಯದಲ್ಲಿ ಮೆದುಗನಾಳ ಹಳ್ಳ ಪಾಲಾರ್ ನದಿಯನ್ನು ಸೇರುತ್ತದೆ.

ಇಲ್ಲಿಯ ವಾಯುಗುಣ ಜಿಲ್ಲೆಯ ಇತರ ಭಾಗಗಳಲ್ಲಿರುವಂತೆಯೇ. ಮಳೆಯ ವಾರ್ಷಿಕ ಸರಾಸರಿ 791.03ಮಿಮೀ. ತಾಲ್ಲೂಕಿನ ಸುಮಾರು ಅರ್ಧಭಾಗ ಕಾಡುಗಳಿಂದ ಕೂಡಿದೆ. ಬೆಟ್ಟದ ಪ್ರದೇಶಗಳಲ್ಲಿ ದಟ್ಟವಾದ ಕಾಡುಗಳಿವೆ.

ಜನರ ಮುಖ್ಯ ಕಸಬು ಕೃಷಿ. ಅಲ್ಲಲ್ಲಿ ನಿರ್ಮಿಸಿರುವ ಕೆರೆಗಳು ಅಲ್ಪ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುತ್ತವೆ. ಬತ್ತ, ರಾಗಿ ಮುಖ್ಯ ಬೆಳೆಗಳು. ಸ್ವಲ್ಪ ಮಟ್ಟಿಗೆ ತೋಟದ ಬೆಳೆ ಸಹ ಉಂಟು. ರೇಷ್ಮೆ ವ್ಯವಸಾಯ ಮತ್ತು ಕೈಗಾರಿಕೆ ಕೆಲವು ಭಾಗಗಳಲ್ಲಿವೆ. ಕೊಳ್ಳೇಗಾಲ ಬಿಟ್ಟರೆ ತಾಲ್ಲೂಕಿನ ಹೆಚ್ಚಿನ ಪ್ರದೇಶಗಳಿಗೆ ರಸ್ತೆಸಂಪರ್ಕ ಸಹ ಉತ್ತಮವಾಗಿಲ್ಲ. ಕೊಳ್ಳೇಗಾಲದಿಂದ ಲೊಕ್ಕನಹಳ್ಳಿ, ಬಲ್ಲೂರು ಮೂಲಕ ಸಾಗುವ ಸತ್ಯಮಂಗಲ ರಸ್ತೆ; ಹನೂರು, ಅಜ್ಜಿಪುರ ಮೂಲಕ ಹೋಗುವ ಭವಾನಿ ರಸ್ತೆ ಮುಖ್ಯವಾದುವು. ಕೊಳ್ಳೇಗಾಲದಿಂದ ಮಹದೇಶ್ವರ ಬೆಟ್ಟಕ್ಕೆ ಉತ್ತಮ ರಸ್ತೆಯಿದೆ.

ಮುಳ್ಳೂರು, ಸತ್ತೇಗಾಲ, ಸಿಂಗಾನಲ್ಲೂರು, ಹನೂರು, ಅಜ್ಜಿಪುರ, ಬಂಡಹಳ್ಳಿ, ಬಲ್ಲೂರು, ಲೊಕ್ಕನಹಳ್ಳಿ, ಕಾಡಳ್ಳಿ, ಸೆಟ್ಟಳ್ಳಿ, ತೆಲ್ಲನೂರು ಕೆಲವು ಮುಖ್ಯ ಸ್ಥಳಗಳು. ಸಿಂಗಾನಲ್ಲೂರು ಮತ್ತು ಹನೂರುಗಳಲ್ಲಿ ಸಂತೆ ನಡೆಯುತ್ತದೆ. ಸತ್ತೇಗಾಲದಲ್ಲಿ ಪ್ರಾಚೀನ ದೇವಾಲಯಗಳಿವೆ. ಬಸ್ತಿಪುರ ಐತಿಹಾಸಿಕ ಸ್ಥಳ. ಸು.480ರಲ್ಲಿ ಪೂಜ್ಯಪಾದನೆಂಬ ಜೈನಯತಿ ಇಲ್ಲಿ ಇದ್ದನೆಂದು ಪ್ರತೀತಿ. ಇಲ್ಲಿ ದೊರಕಿದ ಪ್ರಾಚೀನ ಜೈನವಿಗ್ರಹಗಳು ಈಗ ಮದರಾಸು ವಸ್ತುಸಂಗ್ರಹಾಲಯದಲ್ಲಿವೆ. ನಿಜಗುಣ ಶಿವಯೋಗಿ ಈ ತಾಲ್ಲೂಕಿನವನೆಂದು ಪ್ರತೀತಿ. ಈತ ಶಂಭುಲಿಂಗನ ಬೆಟ್ಟದ ಸುತ್ತಣ ಪ್ರದೇಶದ ಅರಸನಾಗಿದ್ದು ವಿರಕ್ತನಾದಂತೆ ಹೇಳಿಕೆಯಿದೆ. ಮಹದೇಶ್ವರ ಬೆಟ್ಟ(ನೋಡಿ) ಪ್ರಸಿದ್ಧ ಪವಿತ್ರ ಕ್ಷೇತ್ರ. ಈಗ ಪ್ರವಾಸಿಕೇಂದ್ರವಾಗಿಯೂ ಬೆಳೆಯುತ್ತಿದೆ.

ತಾಲ್ಲೂಕಿನ ಆಡಳಿತ ಕೇಂದ್ರ ಕೊಳ್ಳೇಗಾಲ ಪಟ್ಟಣ ಮೈಸೂರಿಗೆ ಸು. 64ಕಿಮೀ ಆಗ್ನೇಯದಲ್ಲಿದೆ. ಜನಸಂಖ್ಯೆ 52450. ಇದು ರೇಷ್ಮೆಕೈಗಾರಿಕೆಯ ಕೇಂದ್ರ. ಇಲ್ಲಿಯ ಜರತಾರಿ ಬಟ್ಟೆಗಳು ಪ್ರಸಿದ್ಧವಾಗಿವೆ.

1972ರ ಆಗಸ್ಟ್ ತಿಂಗಳಲ್ಲಿ ಕೊಳ್ಳೇಗಾಲದಲ್ಲಿ ಮೈಸೂರು ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. (ಪಿ.ಎಚ್.)

**ಕೋಆರ್ಡಿನೇಷನ್ ಸಂಯುಕ್ತ :** ಹಲವು ಅಣುಗಳು ಅಥವಾ ಅಯಾನುಗಳು ಒಂದು ಲೋಹದ ಪರಮಾಣು ಅಥವಾ ಅಯಾನಿನ ಸುತ್ತಲೂ ಬಂಧಿತವಾದುದರ ಫಲವಾಗಿ ಉಂಟಾಗುವ ಒಂದು ಬಗೆಯ ಸಂಕೀರ್ಣ ವಸ್ತು. ಉದಾಹರಣೆಗೆ $[Co(NH_3)_6]Cl_3$. ಇದರಲ್ಲಿ $[Co(NH_3)_6]^{3+}$ ಒಂದು ಸಂಕೀರ್ಣ ಧನ ಅಯಾನು. ಹೀಗೆಯೇ ಸಂಕೀರ್ಣ ಋಣ ಅಯಾನು ಮತ್ತು ವಿದ್ಯುದ್ರಹಿತ ಸಂಕೀರ್ಣಗಳೂ ಉಂಟು. ಸಂಕೀರ್ಣದ ವಿದ್ಯುಚ್ಚಿಹ್ನೆ ಆ ಸಂಕೀರ್ಣದಲ್ಲಿರುವ ಎಲ್ಲ ಗುಂಪುಗಳ ಒಟ್ಟು ವಿದ್ಯುದಾವೇಶವನ್ನವಲಂಬಿಸುತ್ತದೆ. ಉದಾಹರಣೆಗೆ, $[Co(NH_3)_6]^{3+}$ $[Co(NH_3)_5Cl]^2$ + $[Co(NH_3)_4Cl_2]^+$ ಸಂಕೀರ್ಣ ಧನ ಅಯಾನುಗಳು. $[Co(NH_3)_2Cl_4]^-$ ಇತ್ಯಾದಿ ಸಂಕೀರ್ಣ ಋಣ ಅಯಾನುಗಳು. $[Co(NH_3)_3Cl_3]$ ಒಂದು ವಿದ್ಯುದ್ರಹಿತ ಸಂಕೀರ್ಣ. ಇಂಥ ಸಂಕೀರ್ಣ ಅಯಾನುಗಳು ಬೇರೆಬೇರೆ ಅಯನುಗಳ ಸಂಗಡ ಸೇರಿ ವಿಧವಿಧವಾದ ಕೋಆರ್ಡಿನೇಷನ್ ಸಂಯುಕ್ತಗಳಾಗುತ್ತವೆ. ಉದಾಹರಣೆಗೆ $H^2Pt\ c/6$, $K_4[Fe(CN)_6]$, $[Cu(NH_3)_4]SO_4$, $[Cr(NH_3)_6][Co(CN)_6]$ ಇತ್ಯಾದಿ. ಈ ತರಹದ ಕೋಆರ್ಡಿನೇಷನ್ ಸಂಯುಕ್ತಗಳಿಗೆ ಸಂಕೀರ್ಣಗಳು ಅಥವಾ ವರ್ನರ್ ಸಂಕೀರ್ಣಗಳು ಎಂದು ಹೆಸರುಂಟು. ಇಂಥ ಕೆಲವು ಸಂಯುಕ್ತಗಳನ್ನು 18ನೆಯ ಶತಮಾನದ ಕೊನೆಯಲ್ಲಿಯೆ ಗುರುತಿಸಲಾಗಿತ್ತು. ಆದರೆ ಆಗ ಪ್ರಚಲಿತವಾಗಿದ್ದ ರಾಸಾಯನಿಕ ಬಂಧನಗಳ (ಕೆಮಿಕಲ್ ಬೈಂಡಿಂಗ್) ನಿಯಮದ ಪ್ರಕಾರ ಈ ವಸ್ತುಗಳನ್ನು ವರ್ಣಿಸಲಾಗುತ್ತಿರಲಿಲ್ಲ. ಆಗ ಇಂಥ ಸಂಯುಕ್ತದ ಜನಕವಸ್ತುಗಳನ್ನು ಪಕ್ಕಪಕ್ಕದಲ್ಲಿ ಬರೆದು ಇವನ್ನು ಗುರುತಿಸುತ್ತಿದ್ದರು. ಉದಾಹರಣೆಗೆ $2KCl.H_gCl_2$ ಮತ್ತು $2KCl.MgCl_2$. ಆದರೆ ಇವೆರಡೂ ಒಂದೇ ಬಗೆಯ ಸಂಯುಕ್ತಗಳಲ್ಲ. $2KCl.MgCl_2$ ಎಂಬುದು ಒಂದು ದ್ವಿಲವಣ (ಡಬಲ್ ಸಾಲ್ಟ್). ನೀರಿನ ದ್ರಾವಣದಲ್ಲಿ ಇದರ ಒಂದು ಅಣು 7 ಅಯಾನುಗಳನ್ನು ಕೊಡುವುದು. $2KCl.HgCl_2$ ಎಂಬುದು ನಿಜವಾದ ಕೋಆರ್ಡಿನೇಷನ್ ಸಂಯುಕ್ತ. ಇದರಲ್ಲಿ ನಾಲ್ಕೂ ಕ್ಲೋರೈಡ್ ಅಯಾನುಗಳು ಪಾದರಸದ ಪರಮಾಣುವಿಗೆ ಬಲವಾಗಿ ಬಂಧಿತವಾಗಿದ್ದು $[HgCl_4]^{2-}$ ಎಂಬ ಸಂಕೀರ್ಣ ಅಯಾನು (ಕಾಂಪ್ಲೆಕ್ಸ್ ಅಯಾನ್) ಆಗಿರುತ್ತವೆ. ಆದ್ದರಿಂದ ಈ ಸಂಯುಕ್ತದ ಒಂದು ಅಣು ನೀರಿನಲ್ಲಿ 3 ಅಯಾನುಗಳನ್ನು ಕೊಡುತ್ತದೆ. ರಾಸಾಯನಿಕ ಪರೀಕ್ಷೆಗಳಲ್ಲಿ ಇದರ ಕ್ಲೋರೈಡ್ ಅಯಾನು ಸುಲಭವಾಗಿ ಪತ್ತೆಯಾಗುವುದಿಲ್ಲ.

ಈ ಸಂಕೀರ್ಣ ವಸ್ತುಗಳಲ್ಲಿಯ ರಾಸಾಯನಿಕ ಬಂಧವನ್ನು ವರ್ಣಿಸಲು ಆಲ್‌ಫ್ರೆಡ್ ವರ್ನರ್ ಹೊಸದೊಂದು ಕೋಆರ್ಡಿನೇಷನ್ ವಾದವನ್ನು ಮುಂದಿಟ್ಟ(1893). ಇದರ ಪ್ರಕಾರ ಧಾತುಗಳಿಗೆ ಸಾಮಾನ್ಯ ಅಥವಾ ಪ್ರಾಥಮಿಕ ವೇಲೆನ್ಸಿಯಲ್ಲದೆ ಉಳಿಕೆಯ ಅಥವಾ ದ್ವಿತೀಯಕ ಇರುತ್ತದೆ. ಮೇಲಿನ ಉದಾಹರಣೆಯಲ್ಲಿ ಪಾದರಸದ ಪ್ರಾಥಮಿಕ ಮತ್ತು ದ್ವಿತೀಯಕ ವೇಲೆನ್ಸಿ ಅನುಕ್ರಮವಾಗಿ 2 ಮತ್ತು 4.

ವೇಲೆನ್ಸಿಯನ್ನು ಕುರಿತ ಎಲೆಕ್ಟ್ರಾನ್‌ವಾದವನ್ನು ಉಪಯೋಗಿಸಿಕೊಂಡು ಜಿ.ಎನ್.ಲೂಯಿಸ್ ಮತ್ತು ಎನ್.ವಿ.ಸಿಡ್ಜ್ ವಿಕ್ ಎಂಬುವರು 20ನೆಯ ಶತಮಾನದ ಎರಡನೆಯ ದಶಕದಲ್ಲಿ ಕೋಆರ್ಡಿನೇಷನ್ ಸಂಯುಕ್ತಗಳಲ್ಲಿಯ ಬಂಧಗಳನ್ನು ಮುಂದೆ ಬರೆದಿರುವಂತೆ ವರ್ಣಿಸಿದರು. ಮಧ್ಯದ ಪರಮಾಣುವಿನ ಹೊರಚಿಪ್ಪಿನಲ್ಲಿ (ಔಟರ್‌ಶೆಲ್) ಎಲೆಕ್ಟ್ರಾನುಗಳು ಪೂರ್ತಿಯಾಗಿ ತುಂಬಿರುವುದಿಲ್ಲ. ಬಿಡಿ ಎಲೆಕ್ಟ್ರಾನ್ ಜೋಡಿ ಇರುವಂಥ ಅಯಾನ್ ಮತ್ತು ಅಣುಗಳು ತಮ್ಮ ಎಲೆಕ್ಟ್ರಾನ್ ಜೋಡಿಯನ್ನು ಎಲೆಕ್ಟ್ರಾನ್ ಅಭಾವ ಇರುವ ಪರಮಾಣುವಿನೊಂದಿಗೆ ಹಂಚಿಕೊಳ್ಳಬಲ್ಲವು. ಆಗ ಉಂಟಾಗುವ ರಾಸಾಯನಿಕ ಬಂಧಕ್ಕೆ ಕೋಆರ್ಡಿನೇಟ್ ಅಥವಾ ಡೇಟಿವ್ ಬಂಧನ ಎಂದು ಹೆಸರು. ಬಿಡಿ ಎಲೆಕ್ಟ್ರಾನ್ ಜೋಡಿ ಇರುವ ಪರಮಾಣುವಿಗೆ ದಾನಿಪರಮಾಣು (ಡೋನರ್ ಆಟಂ) ಎಂದೂ ಮಧ್ಯದ ಪರಮಾಣುವಿಗೆ ಪರಿಗ್ರಾಹಿ ಪರಮಾಣು (ಅಕ್ಸೆಪ್ಟರ್ ಆಟಂ) ಎಂದೂ ಹೆಸರು. ಮೇಲ್ಕಂಡ $[HgCl_4]$= ಸಂಕೀರ್ಣ ಅಯಾನಿನಲ್ಲಿ ನಾಲ್ಕು ಕ್ಲೋರೈಡುಗಳು ದಾನಿ ಪರಮಾಣುಗಳು. ಪಾದರಸ ಪರಿಗ್ರಾಹಿ ಪರಮಾಣು. ಹೀಗೆ ತನ್ನ ಬಿಡಿ ಎಲೆಕ್ಟ್ರಾನ್ ಜೋಡಿಯನ್ನು ದಾನಕೊಡಬಲ್ಲ ಅಣು ಅಥವಾ ಅಯಾನುಗಳಿಗೆ ಲಿಗ್ಯಾಂಡ್ ಎಂದು ಹೆಸರು.

ಅಣು ರಚನೆಯ ಹೆಚ್ಚು ವಿವರಗಳು ತಿಳಿದುಬಂದಂತೆ ಈ ಸಂಕೀರ್ಣಗಳಲ್ಲಿಯ ಬಂಧನಗಳನ್ನು ವರ್ಣಿಸಲು ಹೊಸ ವಾದಗಳು ಮಂಡಿಸಲ್ಪಟ್ಟಿವೆ. ಇವನ್ನು ಸ್ಥೂಲವಾಗಿ ಮೂರು ಭಾಗ ಮಾಡಬಹುದು: 1. ವೇಲೆನ್ಸ್ ಬಂಧವಾದ, 2. ಸ್ಫಟಿಕಕ್ಷೇತ್ರ (ಕ್ರಿಸ್ಟಲ್ ಫೀಲ್ಡ್) ವಾದ, 3. ಅಣುಕಕ್ಷಕ (ಮಾಲಿಕ್ಯೂಲರ್ ಆರ್ಬಿಟಲ್) ವಾದ.

1. ವೇಲೆನ್ಸ್ ಬಂಧ (ಬಾಂಡ್) ವಾದ: ಪರಿಗ್ರಾಹಿ ಪರಮಾಣುವಿನ ಸುತ್ತಲೂ ಇರುವ ಪರಮಾಣು ಕಕ್ಷಕಗಳಲ್ಲಿ ಕೆಲವು ಒಂದಕ್ಕೊಂದು ಸೇರಿ ಅಷ್ಟೇ ಸಂಖ್ಯೆಯ ಸಂಕರ(ಹೈಬ್ರಿಡ್) ಕಕ್ಷಕಗಳಾಗುತ್ತವೆ. ಇವು ಶಕ್ತಿಯಲ್ಲಿಯೂ ಆಕಾಶದಲ್ಲಿ ಪಡೆಯುವ ದಿಕ್ಕುಗಳಲ್ಲಿಯೂ ಪರಮಾಣು ಕಕ್ಷಕಗಳಿಗಿಂತ ಭಿನ್ನವಾಗಿರುತ್ತವೆ. ಕೋಆರ್ಡಿನೇಟ್ ಬಂಧವನ್ನುಂಟು ಮಾಡುವ ಎಲೆಕ್ಟ್ರಾನ್‌ಗಳು ಈ ಸಂಕರ ಕಕ್ಷಕಗಳನ್ನು ಆಕ್ರಮಿಸಿಕೊಳ್ಳುತ್ತವೆ.

2. ಸ್ಫಟಿಕಕ್ಷೇತ್ರವಾದ : ಲಿಗ್ಯಾಂಡ್‌ಗಳು ವಿದ್ಯುದಾವಿಷ್ಟವಿರುವ ಬಿಂದುಗಳು ಅಥವಾ ದ್ವಿಧ್ರುವಗಳೆಂದು (ಡೈಪೋಲ್) ಎಣಿಸುವುದರಿಂದ ಇಲ್ಲಿ ಮಧ್ಯದ ಪರಮಾಣು ಒಂದು ವಿದ್ಯುತ್ ಕ್ಷೇತ್ರದಲ್ಲಿ ಇರಿಸಲ್ಪಟ್ಟಿದೆ ಎಂದು ತಿಳಿಯುತ್ತಾರೆ. ಇದರಿಂದ ಮಧ್ಯ ಪರಮಾಣುವಿನ ಗಾತ್ರ, ವಿದ್ಯುದಾವಿಷ್ಟ, ಲಿಗ್ಯಾಂಡ್‌ಗಳ ಗಾತ್ರ ಅವುಗಳ ವಿದ್ಯುದಾವಿಷ್ಟ, ದ್ವಿಧ್ರುವ ಭ್ರಮಣಾಂಕ, ಧ್ರುವೀಕರಣ ಆಗುವ ಶಕ್ತಿ, ಆಕಾಶದಲ್ಲಿ ಲಿಗ್ಯಾಂಡ್‌ಗಳು ತೆಗೆದುಕೊಳ್ಳುವ ಸ್ಥಾನ–ಇವೇ ಸಂಕೀರ್ಣದ ಗುಣಗಳನ್ನು ನಿರ್ಧರಿಸುವ ಅಂಶಗಳು ಎಂಬುದು ಈ ವಾದದ ತಿರುಳು.

3. ಅಣುಕಕ್ಷಕವಾದ : ದಾನಿ ಪರಮಾಣು ಪರಿಗ್ರಾಹಿ ಪರಮಾಣುವನ್ನು ಸಮೀಪಿಸುತ್ತಿದ್ದಂತೆಯೇ ಮೊದಲು ಇದ್ದ ಎರಡೂ ಪರಮಾಣುಗಳ ಪರಮಾಣು ಕಕ್ಷಗಳು ಹೊಸ ಅಣುಕಕ್ಷಕಗಳಾಗಿ ಎರಡೂ ಪರಮಾಣುಗಳಿಗೆ ಉಭಯಸಾಮಾನ್ಯವಾಗುತ್ತವೆ. ಬಂಧಕಾರಕಗಳಾದ ಎಲೆಕ್ಟ್ರಾನ್‌ಗಳು ಈ ಅಣುಕಕ್ಷಕಗಳಲ್ಲಿ ಸ್ಥಾನ ಪಡೆದುಕೊಳ್ಳುತ್ತವೆ. ವೇಲೆನ್ಸ್ ಬಂಧ ಮತ್ತು ಸ್ಫಟಿಕಕ್ಷೇತ್ರ ಇವೆರಡರ ಅಂಶಗಳನ್ನು ಒಳಗೊಂಡಿರುವ ಈ ವಾದ ನಿಜಸ್ಥಿತಿಗೆ ಹೆಚ್ಚು ಹತ್ತಿರವಾಗಿದೆ.

ಸಾಮಾನ್ಯವಾಗಿ ಲಿಗ್ಯಾಂಡ್‌ಗಳಲ್ಲಿರುವ ದಾನಿ ಪರಮಾಣುಗಳು ಹ್ಯಾಲೋಜೆನ್‌ಗಳು ಆಮ್ಲಜನಕ, ಸಾರಜನಕ, ಗಂಧಕ, ರಂಜಕ ಇತ್ಯಾದಿ ಮುಖ್ಯವಾದ ಲಿಗ್ಯಾಂಡ್‌ಗಳು

$$[:\ddot{\underset{..}{Cl}}:]^-,\ H:\ddot{\underset{..}{O}}:H,\ H:\ddot{\underset{..}{N}}:H,$$

$$[:\ddot{\underset{..}{O}}:H]^-,\ R:\ddot{\underset{H}{N}}:H,$$

$R:\ddot{\underset{..}{S}}:R$ $[:C:::N:]$ ಇತ್ಯಾದಿ. ಇದಲ್ಲದೆ $\pi$– ಎಲೆಕ್ಟ್ರಾನ್ ಸಾಂದ್ರತೆ ಹೆಚ್ಚಿರುವ ಓಲಿಫೈನ್ ಮತ್ತು ಆರೋಮ್ಯಾಟಿಕ್ ಸಂಯುಕ್ತಗಳೂ ಲಿಗ್ಯಾಂಡ್‌ಗಳಾಗಿರುವುದುಂಟು. ಒಂದೇ ಕೋಆರ್ಡಿನೇಷನ್ ಸಂಯುಕ್ತದಲ್ಲಿ ಬೇರೆ ಬೇರೆ ಲಿಗ್ಯಾಂಡ್‌ಗಳೂ ಇರಬಹುದು. ಉದಾಹರಣೆಗೆ

$$[Co(NH_3)_5Cl]^{2+}\ [Co(NH_3)_4(H_2O)Cl]^{2+}$$

ಇಂಥ ಸಂಯುಕ್ತಗಳಿಗೆ ಮಿಶ್ರಸಂಕೀರ್ಣಗಳು (ಮಿಕ್ಸೆಡ್ ಕಾಂಪ್ಲೆಕ್ಸಸ್) ಎಂದು ಹೆಸರು. ಒಂದು ಪರಿಗ್ರಾಹಿ ಪರಮಾಣುವಿನೊಡನೆ ಬಂಧಿತವಾಗಬಹುದಾದ ಲಿಗ್ಯಾಂಡ್‌ಗಳ ಪರಮೋಚ್ಚಸಂಖ್ಯೆಗೆ ಈ ಪರಿಗ್ರಾಹಿ ಪರಮಾಣುವಿನ ಕೋಆರ್ಡಿನೇಷನ್ ಸಂಖ್ಯೆ ಎಂದು ಹೆಸರು. ಸಿಡ್ಜ್‌ವಿಕ್‌ನ ಪ್ರಕಾರ ಇದು ಆ ಪರಿಗ್ರಾಹಿ ಪರಮಾಣುವಿನ ಅಣು ಸಂಖ್ಯೆಯನ್ನು ಅವಲಂಬಿಸಿದೆ. ಜಲಜನಕಕ್ಕೆ 2, 2–9 ವರೆಗಿನ ಅಣುಸಂಖ್ಯೆಯ ಮೂಲವಸ್ತುಗಳಿಗೆ 4,11–35 ವರೆಗಿನ ಅಣುಸಂಖ್ಯೆಯ ಮೂಲ ವಸ್ತುಗಳಿಗೆ 6, ಅದಕ್ಕಿಂತ ಭಾರವಾದ ಧಾತುಗಳಿಗೆ 8. ಆದರೆ ಈ ಭಾರವಾದ ಧಾತುಗಳು ತಮ್ಮ ಅತಿ ಹೆಚ್ಚಿನ ಕೋಆರ್ಡಿನೇಷನ್ ಸಂಖ್ಯೆಯನ್ನು ಅನೇಕ ವೇಳೆ ಮುಟ್ಟುವುದೇ ಇಲ್ಲ. ಉದಾಹರಣೆಗೆ: $[Pt(NH_3)_6]Cl_4$ ಸಂಯುಕ್ತದಲ್ಲಿ ಪ್ಲಾಟಿನಂನ ಕೋಆರ್ಡಿನೇಷನ್ ಸಂಖ್ಯೆ 6 ಮಾತ್ರ. ಅಪೂರ್ವವಾಗಿ ಒಂದು ಸಂಯುಕ್ತ ವಸ್ತುವಿನಲ್ಲಿ ತನ್ನ ಕೋಆರ್ಡಿನೇಷನ್ ಸಂಖ್ಯೆಯನ್ನು ಮೀರಿದ ಲಿಗ್ಯಾಂಡ್‌ಗಳು ಬಂಧಿತವಾಗಿರುವುದೂ ಉಂಟು. ಉದಾಹರಣೆಗೆ $CaCl_28NH_3$ ರಲ್ಲಿ ಕ್ಯಾಲ್ಸಿಯಂನ ಕೋಆರ್ಡಿನೇಷನ್ ಸಂಖ್ಯೆ 8.

ದಾನಿ ಪರಮಾಣು ತನ್ನ ಬಿಡಿ ಎಲೆಕ್ಟ್ರಾನ್ ಜೋಡಿಯನ್ನು ಪರಿಗ್ರಾಹಿ ಪರಮಾಣುವಿನೊಂದಿಗೆ ಹಂಚಿಕೊಂಡಾಗ ಪರಿಗ್ರಹಿ ಪರಮಾಣುವಿನ ಹೊರಚಿಪ್ಪಿನಲ್ಲಿ ಎಲೆಕ್ಟ್ರಾನ್‌ಗಳ ಸಂಖ್ಯೆ ಹೆಚ್ಚಾಗುತ್ತದೆ. ಪರಿಗ್ರಾಹಿ ಪರಮಾಣು ತನ್ನ ಮುಂದಿನ ಜಡಅನಿಲದ ಪರಮಾಣುರಚನೆಯನ್ನು ಪಡೆಯುವಷ್ಟು ಎಲೆಕ್ಟ್ರಾನ್‌ಗಳನ್ನು ಸ್ವೀಕರಿಸಿದಾಗ ರೂಪಿತವಾದ ಕೋಆರ್ಡಿನೇಷನ್ ಸಂಯುಕ್ತ ಬಹಳ ಸ್ಥಿರವಾಗಿರುತ್ತದೆ ಎಂಬ ಅಭಿಪ್ರಾಯ ಒಂದುಂಟು. ಉದಾಹರಣೆಗೆ

| | |
|---|---|
| $Co^{3+}$ನ ಸುತ್ತಲೂ ಇರುವ ಎಲೆಕ್ಟ್ರಾನ್‌ಗಳ ಸಂಖ್ಯೆ ........ | 24 |
| $6NH_3$ ಗಳು ಕೊಡುವ ಎಲೆಕ್ಟ್ರಾನ್‌ಗಳ ಸಂಖ್ಯೆ ........ | 12 |
| $[Co(NH_3)_6]^{3+}$ ನಲ್ಲಿ $Co^{3+}$ನ ಸುತ್ತಲೂ ಇರುವ ಎಲೆಕ್ಟ್ರಾನ್‌ಗಳ ಸಂಖ್ಯೆ ...... | 36 |

ಇದು ಕ್ರಿಪ್ಟಾನಿನ ಸುತ್ತಲೂ ಇರುವ ಎಲೆಕ್ಟ್ರಾನ್‌ಗಳ ಸಂಖ್ಯೆಗೆ ಸಮ. $[Co(NH_3)6]^{3+}$ ಒಂದು ಸ್ಥಿರವಾದ ಸಂಕೀರ್ಣ ಅಯಾನು. ಆದರೆ ಈ ನಿಯಮ ಸದಾ ಮಾನ್ಯವಲ್ಲ. ಅನೇಕ ಸ್ಥಿರಸಂಕೀರ್ಣಗಳು ಈ ನಿಯಮಕ್ಕೆ ಅಪವಾದವಾಗಿವೆ. ಸಾಮಾನ್ಯವಾಗಿ ಹಗುರವಾದ ಲೋಹಗಳೆಲ್ಲ ಆಮ್ಲಜನಕವನ್ನು ದಾನಿ ಪರಮಾಣುವಾಗಿ ಸ್ವೀಕರಿಸುತ್ತವೆ. ಇದು $H_2O$, $OH^-$, $O^=$, ROH , ROR, $\underset{\underset{O}{\|}}{R{-}C{-}R}$ ಅಥವಾ ಮತ್ತೇನಾದರೂ ಸಂಯುಕ್ತ ರೂಪದಲ್ಲಿರಬಹುದು. ಆವರ್ತ

ಕೋಷ್ಟಕದಲ್ಲಿ 5ನೆಯ ಗುಂಪಿನಲ್ಲಿರುವ (ಗ್ರೂಪ್) ವೆನೇಡಿಯಂ ಆಮ್ಲಜನಕ ಉಳ್ಳ ಲಿಗ್ಯಾಂಡ್‌ಗಳೊಡನೆ ಬಂಧಿತವಾಗುತ್ತದೆ. ಆದರೆ ಇದು ಅಮೋನಿಯ ಮತ್ತು ಸಯನೈಡುಗಳೊಡನೆಯೂ ಬಂಧಿತವಾಗುತ್ತದೆ. ಆವರ್ತಕೋಷ್ಟಕದಲ್ಲಿ ವೆನೇಡಿಯಂನ ಬಲಕ್ಕಿರುವುದು ಸಾರಜನಕದೊಡನೆ ಸುಲಭವಾಗಿ ಬಂಧಿತವಾಗುವುದು. 5ನೆಯ ಮತ್ತು 6ನೆಯ ಗುಂಪುಗಳಲ್ಲಿಯ ಧಾತುಗಳು ಹ್ಯಾಲೈಡ್‌ಗಳ ಜೊತೆಯಲ್ಲಿ ಬಲವಾದ ಸಂಯುಕ್ತಗಳಾಗುತ್ತವೆ.

ಕೆಲವು ಲಿಗ್ಯಾಂಡ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ದಾನಿ ಪರಮಾಣುಗಳಿರುತ್ತವೆ. ಉದಾಹರಣೆಗೆ $CN^-$, $NH_2–CH_2–CH_2–NH_2$. ಈ ದಾನಿ ಪರಮಾಣುಗಳು ಪಕ್ಕಪಕ್ಕದಲ್ಲಿಯೇ ಇದ್ದು (ಅಥವಾ ಒಂದೇ ಪರಮಾಣು ಎರಡು ಬಿಡಿ ಎಲೆಕ್ಟ್ರಾನ್ ಜೋಡಿಯನ್ನು ಹೊಂದಿದ್ದರೆ) ಈ ಎರಡು ದಾನಿ ಪರಮಾಣುಗಳೂ ಒಂದೇ ಪರಿಗ್ರಾಹಿ ಪರಮಾಣುವಿನೊಂದಿಗೆ ಒಟ್ಟಿಗೇ ಬಂಧಿತವಾಗಿರಲು ಸಾಧ್ಯವಿಲ್ಲ. ಆದರೆ ಇವು ಎರಡು ಬೇರೆ ಬೇರೆ ಪರಿಗ್ರಾಹಿ ಪರಮಾಣುಗಳೊಂದಿಗೆ ಒಂದೇ ಸಲ ಬಂಧಿತವಾಗಬಲ್ಲವು. ಆಗ ಲಿಗ್ಯಾಂಡ್ ಈ ಎರಡು ಪರಿಗ್ರಾಹಿ ಪರಮಾಣುಗಳ ಮಧ್ಯೆ ಸೇತುವೆಯಾಗುತ್ತದೆ. ಹೀಗೆ ರೂಪಿತವಾಗುವುದು ದ್ವಿಬೀಜ ಸಂಕೀರ್ಣ(ಡೈ ನ್ಯೂಕ್ಲಿಯರ್ ಕಾಂಪ್ಲೆಕ್ಸ್).

ಉದಾಹರಣೆಗೆ :

$$(NH_3)_4Co:\ddot{O}:Co-(NH_3)_4$$
$$:\ddot{\underset{H}{O}}:$$

ಇವು ಹೀಗೆಯೇ ಬೆಳೆದು ಬಹು ಬೀಜ ಸಂಕೀರ್ಣ (ಪಾಲಿನ್ಯೂಕ್ಲಿಯರ್ ಕಾಂಪ್ಲೆಕ್ಸ್) ಆಗುವುದೂ ಉಂಟು. ಪ್ರಷ್ಯನ್ ಬ್ಲೂ $\{F\{Fe[Fe(CN)_6]\}\}$ ಮತ್ತು ಫೆರಿಕ್ ಹೈಡ್ರಾಕ್ಸೈಡ್ $\{Fe_n(NH)_{3n}(H_2N)_x$ ಇದಕ್ಕೆ ಒಳ್ಳೆಯ ಉದಾಹರಣೆ. ಫೆರಿಕ್ ಹೈಡ್ರಾಕ್ಸೈಡಿನಲ್ಲಿ ಆಮ್ಲಜನಕದ ಪರಮಾಣು ಸೇತುವೆಯಾಗಿ ಸಂಕೀರ್ಣದ ಅಣು ಮೂರು ಆಯಾಮಗಳಲ್ಲಿಯೂ (ಡೈಮೆನ್ಷನ್ಸ್) ವಿಸ್ತರಿಸುತ್ತದೆ. ಪ್ಲಾಟಿನಂ ಕ್ಲೋರೈಡಿನಲ್ಲಿ ಎರಡೆರಡು ಕ್ಲೋರೈಡುಗಳು ಸೇತುವೆಯಾಗಿ ಈ ಸಂಕೀರ್ಣ ಸರಪಳಿಯಂತೆ ಬೆಳೆಯುತ್ತದೆ.




ಒಂದು ಲಿಗ್ಯಾಂಡ್‌ನಲ್ಲಿ ಎರಡು ದಾನಿಪರಮಾಣುಗಳು 1,2 ಅಥವಾ 3 ಪರಮಾಣುಗಳಿಂದ ಬೇರ್ಪಟ್ಟಿದ್ದರೆ ಈ ಎರಡೂ ಪರಮಾಣುಗಳು ಒಂದೇ ಪರಿಗ್ರಾಹಿ ಪರಮಾಣುವಿಗೆ ಒಟ್ಟಿಗೇ ಬಂಧಿತವಾಗಿ 4,5 ಅಥವಾ 6 ಪರಮಾಣುಗಳ ಉಂಗುರರಚನೆ (ರಿಂಗ್ ಸ್ಟ್ರಕ್ಚರ್) ಸಾಧ್ಯವಾಗುತ್ತದೆ. ಉಂಗುರದಲ್ಲಿರುವ ಪರಮಾಣುಗಳ ಸಂಖ್ಯೆ ಇದರಲ್ಲಿ ಮುಖ್ಯ. $\alpha$–ಅಮೈನೋ ಆಮ್ಲಗಳು $Cu^{2+}$ನೊಂದಿಗೆ ಸಂಯುಕ್ತವಾಗುತ್ತದೆ. ಇಲ್ಲಿ ಉಂಗುರದಲ್ಲಿರುವ ಪರಮಾಣುಗಳ ಸಂಖ್ಯೆ 5. $\beta$–ಅಮೈನೋ ಆಮ್ಲಗಳು $Cu^{2+}$ನೊಂದಿಗೆ 6 ಪರಮಾಣುಗಳ ಉಂಗುರವಿರುವ ಸಂಯುಕ್ತವಾಗುತ್ತದೆ. ಇದು ಮೊದಲನೆಯದಕ್ಕಿಂತ ಕಡಿಮೆ ಸ್ಥಿರತೆಯನ್ನು ಪಡೆದಿರುತ್ತದೆ $\gamma$–ಮತ್ತು $\delta$–ಅಮೈನೋ ಆಮ್ಲಗಳು $Cu^{2+}$ ನೊಂದಿಗೆ ಹೀಗೆ ಉಂಗುರರಚನೆಯನ್ನು ಕೊಡುವುದೇ ಇಲ್ಲ. ಹೀಗೆ ಒಮ್ಮೆಗೇ ಎರಡು ದಾನಿಪರಮಾಣುಗಳ ಮೂಲಕ ಒಂದು ಪರಿಗ್ರಾಹಿ ಪರಮಾಣುವಿನೊಂದಿಗೆ ಬಂಧಿತವಾಗಬಲ್ಲ ಲಿಗ್ಯಾಂಡ್‌ಗಳಿಗೆ ದ್ವಿದಂತಿಗಳು (ಬೈಡೆಂಟೇಟ್ಸ್) ಎಂದೂ ಇಂಥ ಕೋಆರ್ಡಿನೇಷನ್ ಸಂಯುಕ್ತಗಳಿಗೆ ಕೀಲೇಟುಗಳು ಎಂದೂ ಹೆಸರು. $NH_2–(CH_2)_2–NH–(CH_2)_2–NH_2$ ಒಂದು ತ್ರಿದಂತಿ.(ಟ್ರೈಡೆಂಟೇಟ್). ಹೀಗೆಯೇ ಚತುರ್ದಂತಿ ಇತ್ಯಾದಿ.

ಎಥಿಲೀನ್ ಡೈ ಅಮೀನ್ ಟೆಟ್ರ ಅಸಟಿಕ್ ಆಮ್ಲದ ಋಣ ಅಯಾನು ಒಂದು ಷಡ್ದಂತಿ. ಪಾಲಿಫಾಸ್ಫೇಟು ಒಂದು ಬಹುದಂತಿ.



ಕೀಲೇಟುಗಳಲ್ಲಿಯ ಉಂಗುರ ರಚನೆಗಳು ಕೋಆರ್ಡಿನೇಷನ್ ಸಂಯುಕ್ತದ ಸ್ಥಿರತೆಯನ್ನು ಹೆಚ್ಚು ಮಾಡುತ್ತವೆ. $CH_3$-$NH_2$ ಸುಲಭವಾಗಿ ಸಂಕೀರ್ಣವಾಗುವುದಿಲ್ಲ. ಆದರೆ $NH_2$-$CH_2$–$CH_2$–$NH_2$ ಬಹಳ ಸುಲಭವಾಗಿ ಸಂಕೀರ್ಣವನ್ನು ಕೊಡುತ್ತದೆ.




$[Co(NH_2–CH_2–CH_2–NH_2)_3]^3$ ವನ್ನು ಸಾರ ಹೈಡ್ರೊಕ್ಲೋರಿಕ್ ಆಮ್ಲದೊಡನೆ ಕಾಯಿಸಿದಾಗಲೂ ವಿಭಜಿತವಾಗುವುದಿಲ್ಲ. ಸಾಧಾರಣವಾಗಿ ದ್ವಿತೀಯಕ ಅಮೀನುಗಳು ಸಂಕೀರ್ಣವಾಗದಿದ್ದರೂ $NH_2–(CH_2)–NH–(CH_2)_2–NH_2$ ರಲ್ಲಿಯ ಮೂರು ಸಾರಜನಕಗಳೂ ಭಾರವಾದ ಲೋಹಗಳೊಡನೆ ಬಂಧಿತವಾಗಿ ಜೋಡಿ ಕೀಲೇಟ್ ಉಂಗುರ ರಚನೆಗಳು ರೂಪಿತವಾಗುತ್ತವೆ.

ಮುಖ್ಯವಾದ ದ್ವಿದಂತಿಗಳೆಂದರೆ ಎಥಿಲೀನ್ ಡೈಅಮೀನ್, 1:3 ಡೈ ಕೀಟೋನ್‌ಗಳು, $\alpha$–ಅಮೈನೋ ಆಮ್ಲಗಳ ಋಣ ಅಯಾನುಗಳು ಇತ್ಯಾದಿ. ಎಥಿಲೀನ್ ಅಮೀನ್ ಒಂದು ವಿದ್ಯುದ್ರಹಿತ ಅಣು. ಇದು ಪರಿಗ್ರಾಹಿ ಪರಮಾಣುವಿನ ಧನ ಅಯಾನಿನೊಡನೆ ಬಂಧಿತವಾದಾಗ ಸಂಕೀರ್ಣ ಧನ ಅಯಾನು ರೂಪಿತವಾಗಿ ಸಂಯುಕ್ತಲವಣವಾಗಿರುತ್ತದೆ. ಡೈ ಕೀಟೋನ್‌ಗಳಾಗಲೀ ಅಮೈನೋ ಆಮ್ಲವಾಗಲೀ ಸಂಕೀರ್ಣವಾಗುವಾಗ ಒಂದು ಪ್ರೋಟಾನನ್ನು ಕಳೆದುಕೊಳ್ಳುವುದರಿಂದ ಲಿಗ್ಯಾಂಡ್ ಋಣ ಅಯಾನಿನ ರೂಪದಲ್ಲಿರುತ್ತದೆ. ಇದರಿಂದ ಪರಿಗ್ರಾಹಿ ಪರಮಾಣುವಿನ ಮೇಲಿನ ವಿದ್ಯುದಾವಿಷ್ಟ ಅದರ ಕೋಆರ್ಡಿನೇಷನ್ ಸಂಖ್ಯೆಯ ಅರ್ಧದಷ್ಟಿದ್ದರೆ ಬರುವ ಸಂಕೀರ್ಣ ವಿದ್ಯುದ್ರಹಿತವಾಗಿರುತ್ತದೆ.










**ನಾಮಕರಣ (ನಾಮೆನ್‌ಕ್ಲೇಚರ್)** : ಸಂಕೀರ್ಣ ಅಯಾನಿಗೆ ಹೆಸರಿಡುವಲ್ಲಿ ಮೊದಲು ಲಿಗ್ಯಾಂಡ್‌ಗಳ ಹೆಸರನ್ನು ಅನುಕ್ರಮವಾಗಿ ಋಣ ಅಯಾನು, ವಿದ್ಯುದ್ರಹಿತ ಅಣು, ಅನಂತರ ಧನ ಅಯಾನುಗಳ ಕ್ರಮದಲ್ಲಿ ಬರೆದು ತರುವಾಯ ಪರಿಗ್ರಾಹಿ ಪರಮಾಣುವನ್ನು ಬರೆದು ಅದರ ಉತ್ಕರ್ಷಣ ಸಂಖ್ಯೆಯನ್ನು ರೋಮನ್ ಸಂಖ್ಯೆಯಲ್ಲಿ ಗುರುತಿಸಬೇಕು. ಉದಾಹರಣೆಗೆ ಡೈಕ್ಲೋರೋ ಡೈ ಅಮೈನೋ ಪ್ಲಾಟಿನಂ (II) ಎಂದರೆ $[Pt(NH_3)_2Cl_2]$.

ಒಂದು ಕೋಆರ್ಡಿನೇಷನ್ ಸಂಯುಕ್ತದ ಸ್ಥಿರತೆ ಅದರಲ್ಲಿರುವ ಲೋಹದ ಪರಮಾಣು, ಅದರ ಮೇಲಿನ ವಿದ್ಯುದಾವೇಶ, ಅದರ ಗಾತ್ರ, ಅದಕ್ಕಿರುವ ಎಲೆಕ್ಟ್ರಾನ್ ಆಕರ್ಷಣೆ, ಲಿಗ್ಯಾಂಡಿನಲ್ಲಿರುವ ದಾನಿ ಪರಮಾಣು ಅದಕ್ಕಿರುವ, ಎಲೆಕ್ಟ್ರಾನ್ ದಾತೃ ಶಕ್ತಿ, ಕೀಲೇಟ್ ಆಗುವ ಶಕ್ತಿ, ಕೀಲೇಟ್ ಉಂಗುರದಲ್ಲಿರುವ ಪರಮಾಣುಗಳ ಸಂಖ್ಯೆ, ಅವುಗಳಲ್ಲಿರುವ ದ್ವಿಬಂಧಗಳು, ಸ್ಟೆರಿಕ್ ಮತ್ತು ರೆಸೊನೆನ್ಸ್ ಪರಿಣಾಮ– ಇವನ್ನು ಅವಲಂಬಿಸಿರುತ್ತದೆ. ಸಣ್ಣ ಗಾತ್ರದ ಹೆಚ್ಚು ಧ್ರುವೀಕರಣ ಹೊಂದಬಲ್ಲ ಸಂಕ್ರಮಣಲೋಹಗಳು ಸುಲಭವಾಗಿ ಕೋಆರ್ಡಿನೇಷನ್ ಸಂಯುಕ್ತಗಳನ್ನು ಕೊಡುತ್ತವೆ. ಆದರೆ ದೊಡ್ಡ ಗಾತ್ರದ ಗೋಳೀಯ ಸಮಾಂಗತ್ವವಿರುವ (ಸ್ಫೆರಿಕಲಿ ಸಿಮೆಟ್ರಿಕ್) ಒಂದು ಧನವಿದ್ಯುದಾವೇಶವಿರುವ ಕ್ಷಾರಲೋಹಗಳು ಸುಲಭವಾಗಿ ಈ ಸಂಯುಕ್ತಗಳನ್ನು ಕೊಡುವುದಿಲ್ಲ. ಈ ಸಂಯುಕ್ತಗಳ ಸ್ಥಿರತೆಯನ್ನು ಸ್ಥಿರತೆಯ ನಿಯತಾಂಕದಿಂದ (ಸ್ಟೆಬಿಲಿಟಿ ಕಾನ್ಸ್‌ಟೆಂಟ್) ಅಥವಾ ರೂಪಣ ನಿಯತಾಂಕದಿಂದ (ಫಾರ್ಮೇಷನ್ ಕಾನ್ಸ್‌ಟೆಂಟ್) ಅಳೆಯುವರು.

$ML_n$ ಎಂಬುದು ಸಂಕೀರ್ಣವಾದರೆ ಅದು ಒಂದು ಪರಿಗ್ರಾಹಿ ಪರಮಾಣು, M, ಮತ್ತು n ಸಂಖ್ಯೆಯ ಲಿಗ್ಯಾಂಡ್ L ಗಳಿಂದ ರೂಪಿತವಾಗಿದೆ ಎಂದು ಬರೆಯಬಹುದು.

$$M + nL \leftrightarrows ML_n$$

ಈಗ ಸ್ಥಿರತೆಯ ನಿಯತಾಂಕ k ಯನ್ನು

$$K = \frac{[ML_n]}{[M][L]^n}$$

ಎಂದು ಬರೆಯಬಹುದು.

ಅಸ್ಥಿರತೆಯ ನಿಯತಾಂಕ k ಅಸ್ಥಿರ ಅಥವಾ ವಿಯೋಜನ ನಿಯತಾಂಕ (ಡಿಸೋಸಿಯೇಷನ್ ಕಾನ್ಸ್‌ಟೆಂಟ್) ಸ್ಥಿರತೆಯ ನಿಯತಾಂಕದ ವಿಲೋಮ ಎಂದರೆ

$$k \text{ ಅಸ್ಥಿರ} = 1/k$$

ಸಂಕೀರ್ಣ ಸೂತ್ರ ಮತ್ತು ಸ್ಥಿರತೆಯ ನಿಯತಾಂಕವನ್ನು ಅನೇಕ ವಿಧಾನಗಳಿಂದ ಕಂಡುಹಿಡಿಯಬಹುದು. ಅವುಗಳಲ್ಲಿ ಕೆಲವು (a) pH ಅಳೆಯುವುದರಿಂದ, (b) ರಾಸಾಯನಿಕ ವಿಶ್ಲೇಷಣೆಯಿಂದ, (c) ಪೋಲೊರೋಗ್ರಫಿಯ ಅರ್ಧತರಂಗ ವಿಭವದಿಂದ (ಪೊಟೆನ್ಷಿಯಲ್), (d) ಎಲೆಕ್ಟ್ರೋಡ್ ವಿಭವದಿಂದ, (e) ಸ್ಪೆಕ್ಟ್ರೊಫೋಟೋ ಮೆಟ್ರಿಯಿಂದ, (f) ಅಯಾನ್ ವಿನಿಮಯದಿಂದ (g) ರೇಡಿಯೋ ಸಮಸ್ಥಾನಿ ವಿನಿಮಯದಿಂದ,( h) ಎನ್.ಎಂ.ಆರ್ ಅಳತೆಯಿಂದ ಇತ್ಯಾದಿ.

**ಅಣುರಚನೆ ಮತ್ತು ಐಸೊಮೆರಿಸಂ:** 1.ಸ್ಟಿರಿಯೋ ಐಸೊಮೆರಿಸಂ: ಸಂಕೀರ್ಣದ ವಿನ್ಯಾಸ ಪರಿಗ್ರಾಹಿ ಪರಮಾಣುವಿನ ಕೋಆರ್ಡಿನೇಷನ್ ಸಂಖ್ಯೆಯನ್ನು ಅವಲಂಬಿಸುತ್ತದೆ. ಸಂಕೀರ್ಣಗಳಲ್ಲಿ ಸಾಧಾರಣವಾಗಿ ಕಂಡುಬರುವ ಕೋಆರ್ಡಿನೇಷನ್ ಸಂಖ್ಯೆಗಳು 4 ಮತ್ತು 6. ಆದರೆ ಅಪೂರ್ವವಾಗಿ 2, 3, 5, 7, 8 ಮತ್ತು ಹೆಚ್ಚಿನ ಕೋಆರ್ಡಿನೇಷನ್ ಸಂಖ್ಯೆಗಳೂ ಇರುವುದುಂಟು. ಕೋಆರ್ಡಿನೇಷನ್ ಬಂಧಗಳು ನಿರ್ದಿಷ್ಟ ದಿಕ್ಕುಗಳಲ್ಲಿ ಮಾತ್ರ ಇರುವುದರಿಂದ ಲಿಗ್ಯಾಂಡ್‌ಗಳು ಪರಿಗ್ರಾಹಿ ಪರಮಾಣುವಿಗೆ ಗೊತ್ತಾದ ದಿಕ್ಕಿನಲ್ಲಿ ಮಾತ್ರ ಇರುವುದು ಸಾಧ್ಯ. ಕೋಆರ್ಡಿನೇಷನ್ ಸಂಖ್ಯೆ 4 ಆದಾಗ ಪರಿಗ್ರಾಹಿ ಪರಮಾಣು ಒಂದು ಚತುಷ್ಫಲಕದ (ಟೆಟ್ರಹಿಡ್ರನ್) ಮಧ್ಯದಲ್ಲಿದ್ದು ನಾಲ್ಕೂ ಲಿಗ್ಯಾಂಡ್‌ಗಳು ಚತುಷ್ಫಲಕದ ನಾಲ್ಕು ಮೂಲೆಗಳಲ್ಲಿರಬಹುದು. ಉದಾಹರಣೆಗೆ ಕಲ್ ಕಾರ್ಬೊನಿಲ್ $Ni(Co)_4$ ಅಥವಾ ಪರಿಗ್ರಾಹಿ ಪರಮಾಣು ಸಮತಲದಲ್ಲಿ ಒಂದು ಚಚ್ಚೌಕದ ಮಧ್ಯದಲ್ಲಿದ್ದು ನಾಲ್ಕು ಲಿಗ್ಯಾಂಡ್‌ಗಳೂ ಚಚ್ಚೌಕದ ಮೂಲೆಯಲ್ಲಿರಬಹುದು. ಚತುಷ್ಫಲಕದ ನಾಲ್ಕು ಮೂಲೆಗಳೂ ಎಲ್ಲ ರೀತಿಯಲ್ಲಿಯೂ ಸಮವಾಗಿರುವುದರಿಂದ ಸಂಕೀರ್ಣದ ಸಂಯೋಜನೆ ಏನೇ ಆಗಲಿ ಲಿಗ್ಯಾಂಡುಗಳ ಸ್ಥಾನಪಲ್ಲಟ ಮಾಡುವುದರಿಂದ ಜ್ಯಾಮಿತೀಯ ಐಸೋಮರುಗಳನ್ನು ರೂಪಿಸಲಾಗುವುದಿಲ್ಲ. ಆದರೆ ನಾಲ್ಕು ಲಿಗ್ಯಾಂಡುಗಳೂ ಬೇರೆ ಬೇರೆಯಾಗಿದ್ದರೆ ಆಗ ದ್ಯುತಿ (ಆಪ್ಟಿಕಲ್) ಐಸೊಮರುಗಳು ರೂಪಿತವಾಗಲು ಸಾಧ್ಯ. ಆದರೆ ಇಂಥ ಐಸೊಮರುಗಳನ್ನು ಇನ್ನೂ ತಯಾರು ಮಾಡಲಾಗಿಲ್ಲ.

ಸಮತಲ ಚಚ್ಚೌಕದ ರಚನೆಯಲ್ಲಿ ಸಂಕೀರ್ಣ $Ma_4$, $Ma_3b$ ರೀತಿಯವುಗಳಾದರೆ ಜ್ಯಾಮಿತೀಯ ಐಸೊಮರ್‌ಗಳು ಇರುವುದಿಲ್ಲ. ಆದರೆ $Ma_2b_2$ ರೀತಿಯ ಸಂಕೀರ್ಣ– ಸಿಸ್ ಮತ್ತು ಟ್ರಾನ್ಸ್–ಎರಡು ರೂಪದಲ್ಲಿರಬಹುದು.



ಎರಡು ಸಂಯುಕ್ತಗಳೂ ಭಿನ್ನವಾಗಿದ್ದು ಕೆಲವು ರಾಸಾಯನಿಕ ಗುಣಗಳಲ್ಲಿ ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ. Mabed ಸಂಕೀರ್ಣ ಮೂರು ಬಗೆಯ ಸಮತಲ ವಿನ್ಯಾಸವನ್ನು ಪಡೆದಿರಬಹುದು.




ಸಮತಲ ಚಚ್ಚೌಕದ ಸಂಕೀರ್ಣಗಳಲ್ಲಿ ದ್ವಿದಂತಿ ಲಿಗ್ಯಾಂಡುಗಳಿದ್ದರೆ ಇವು ಸದಾ ಪಕ್ಕಪಕ್ಕದ ಸ್ಥಾನವನ್ನಾಕ್ರಮಿಸ ಬೇಕಾದ್ದರಿಂದ ಇಲ್ಲಿ ಜ್ಯಾಮಿತೀಯ ಐಸೊಮರ್ ಸಾಧ್ಯವಿಲ್ಲ. ಆದರೆ ದ್ಯುತಿ ಐಸೊಮರುಗಳು ಸಾಧ್ಯವಾಗಬಹುದು.

ಕೋಆರ್ಡಿನೇಷನ್ ಸಂಖ್ಯೆ 6 ಆದಾಗ ಲಿಗ್ಯಾಂಡುಗಳು ಒಂದು ಅಷ್ಟಫಲಕದ 6 ಮೂಲೆಗಳಲ್ಲಿ ಇರುತ್ತವೆ. ಆದ್ದರಿಂದ $Ma_6$ $Ma_5b$, ರೀತಿಯ ಸಂಕೀರ್ಣಗಳು ಒಂದೇ ರೂಪದಲ್ಲಿರುವುದು ಸಾಧ್ಯ. ಆದರೆ $Ma_4b_2$, $Ma_3b_3$ ರೀತಿಯ ಸಂಕೀರ್ಣಗಳು ಎರಡು ಸ್ಟೀರಿಯೋ ಐಸೊಮರುಗಳಾಗಿ ಇರಲು ಸಾಧ್ಯ.

ಇಂಥ ಸಂಕೀರ್ಣಗಳಲ್ಲಿ ಒಂದು ದ್ವಿದಂತಿ ಇದ್ದರೆ $[M(AA)a_4$ ರೀತಿಯ ಸಂಕೀರ್ಣ ಒಂದೇ ರೂಪದಲ್ಲಿರಲು ಸಾಧ್ಯ. ಎರಡು ದ್ವಿದಂತಿಗಳಿರುವ $[M(AA)_2a_2]$ ರೀತಿಯ ಸಂಕೀರ್ಣ ಎರಡು ರೂಪದಲ್ಲಿರಬಹುದು.

ಟ್ರಾನ್ಸ್ ವಿನ್ಯಾಸದಲ್ಲಿ aMa ಒಂದು ಸಮಾಂಗತ್ವದ ಸಮತಲವಾದ್ದರಿಂದ ಟ್ರಾನ್ಸ್ $[M(AA)_2a_2$ ಸಂಕೀರ್ಣದ ಬಿಂಬ ರಚನೆಗಳು ಭಿನ್ನವಾಗಿರುವುದಿಲ್ಲ. ಆದ್ದರಿಂದ ಸಂಕೀರ್ಣದಲ್ಲಿ ದ್ಯುತಿ ಐಸೊಮರ್‌ಗಳು ಇರುವುದಿಲ್ಲ. ಸಿಸ್ ವಿನ್ಯಾಸದಲ್ಲಿ ಈ ಸಮಾಂಗತ್ವ ಇಲ್ಲದಿರುವುದರಿಂದ $[M(AA)_2a_2]$ ಮತ್ತು $[M(AA)_3]$ ರೀತಿಯ ಸಂಕೀರ್ಣಗಳು ದ್ಯುತಿ ಐಸೊಮರುಗಳನ್ನು ಹೊಂದಿರುತ್ತವೆ.

ಈ ಸಂಯುಕ್ತಗಳ ಜಟಿಲತೆ ಹೆಚ್ಚಾದ ಹಾಗೆ ಐಸೊಮರ್‌ಗಳ ಸಾಧ್ಯತೆ ಹೆಚ್ಚಾಗುತ್ತದೆ. Mabcdef ರೀತಿಯ ಸಂಕೀರ್ಣ 15 ಜೊತೆ ದ್ಯುತಿ ಐಸೊಮರ್ ರೂಪದಲ್ಲಿರಬಹುದು. 2, 3, 5, 7 ಮತ್ತು 8 ಕೋಆರ್ಡಿನೇಟ್ ಸಂಕೀರ್ಣಗಳಲ್ಲಿ ಇರಬಹುದಾದ ಸ್ಟೀರಿಯೋ ರಾಸಾಯನಿಕ ರಚನೆಗಳ ಸಂಖ್ಯೆಗಳನ್ನೆಲ್ಲ ಲೆಕ್ಕ ಹಾಕಿಲ್ಲ. ಈ ಅಪೂರ್ವದ ಕೋಆರ್ಡಿನೇಷನ್ ಸಂಖ್ಯೆಯ ಸಂಕೀರ್ಣಗಳಲ್ಲಿಯೂ ಕೆಲವು ಸ್ಟೀರಿಯೋ ಐಸೊಮರ್‌ಗಳು ಪತ್ತೆಯಾಗಿವೆ.

2. ರಚನಾತ್ಮಕ ಐಸೊಮರ್‌ಗಳು: $NO_2$ ಗುಂಪಿನಲ್ಲಿ O ಮತ್ತು N ಎರಡು ದಾನಿಪರಮಾಣುಗಳಿವೆ. ಆದ್ದರಿಂದ ಇದು ಪರಿಗ್ರಾಹಿ ಪರಮಾಣುವಿಗೆ ಎರಡು ರೀತಿಯಲ್ಲಿ ಬಂಧಿತವಾಗಬಹುದು. $[Co^{3}+(NH_3)_5(NO_2)-]$ ಕಂದುಬಣ್ಣದ ನೈಟ್ರೋ ಅಮೀನ್, $[CO^{2}+(NH_3)_5(ONO)]$ ಕೆಂಪುಬಣ್ಣದ ನೈಟ್ರಿಟೋ ಅಮೀನಿಗಿಂತ ಹೆಚ್ಚು ಸ್ಥಿರವಾಗಿರುವುದು ಕಂಡುಬಂದಿದೆ. ಅಮೀನಿಗಿಂತ ಹೆಚ್ಚು ಸ್ಥಿರವಾಗಿರುವುದು ಕಂಡುಬಂದಿದೆ. ಇದೇ ರೀತಿ $[Co(NH_3)_5NO_3]^{2+}$ ಮತ್ತು $[Co(NH_3)_4(NH_2OH)(NO_2)]^{2+}$ ಗಳೆರಡನ್ನೂ ಗುರುತಿಸಲಾಗಿದೆ.



ಸಿಸ್ ಟ್ರಾನ್ಸ್



ಧನ ಅಯಾನು, ಋಣ ಅಯಾನು ಎರಡೂ ಸಂಕೀರ್ಣ ಅಯಾನುಗಳಾಗಿ ಅವುಗಳಲ್ಲಿ ಎರಡು ಬಗೆಯ ಲಿಗ್ಯಾಂಡುಗಳಿದ್ದರೆ ಇವು ಎರಡೂ ಅಯಾನುಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹಂಚಿಹೋಗಬಹುದು.



ಸಿಸ್ ಟ್ರಾನ್ಸ್

ಇದರಿಂದ ಹೊಸ ಐಸೊಮರುಗಳು ಸಾಧ್ಯ. $[Co(NH_3)_6]^{3}+[Co(NO_2)_6]^{3}–$ ಮತ್ತು $[Co(NH_3)_4(NO_2)_2]+[Co(NH_3)_2(NO_2)_4]^{-}$ ಇವೆರಡೂ ಐಸೊಮರುಗಳು. ಅದೇ ರೀತಿಯಲ್ಲಿ $[Co(NH_3)_6]^{3}+[Cr(CN)_6]^{3}-$ ಮತ್ತು $[Cr(NH_3)_6]^{3}+[Co(CN)_6]^{3}–$.

ಒಂದು ಧನ ಸಂಕೀರ್ಣ ಅಯಾನಿನಲ್ಲಿರುವ ಲಿಗ್ಯಾಂಡ್ ಋಣ ಅಯಾನ್ ಆಗಿದ್ದರೆ ಇದು ಲವಣದ ಋಣ ಅಯಾನಿನೊಡನೆ ಸ್ಥಾನವಿನಿಮಯ ಮಾಡಿಕೊಂಡಾಗ ಹೊಸ ಐಸೊಮರ್ ಸಾಧ್ಯವಾಗುತ್ತದೆ.

$[Co^{3}+(NH_3)_5SO_4=]Br^{-}$ ಮತ್ತು $[Co^{3}+(NH_3)_5Br^{-}]SO_4=$ ಮೊದಲನೆಯ ಐಸೊಮರ್‌ನಲ್ಲಿ Br□ನ್ನು ಪತ್ತೆ ಮಾಡುವುದು ಸುಲಭ. ಎರಡನೆಯದರಲ್ಲಿ $SO_4=$ ಸುಲಭವಾಗಿ ಪತ್ತೆಯಾಗುತ್ತದೆ. $[Cr(H_2O)_6Cl_3$, $[Cr(H_2O)Cl]Cl_2.H_2O$ ಮತ್ತು $[Cr(H_2O)_4Cl_2]Cl. 2H_2O$ ಈ ಮೂರು ಸಂಯುಕ್ತಗಳನ್ನೂ ಗುರುತಿಸಲಾಗಿದೆ.

ಕೆಲವು ಮುಖ್ಯವಾದ ಕೋಆರ್ಡಿನೇಷನ್ ಸಂಯುಕ್ತಗಳು: ರಕ್ತದಲ್ಲಿರುವ ಹೀಮೊಗ್ಲಾಬಿನ್ ಮತ್ತು ಎಲೆಗಳಲ್ಲಿರುವ ಪತ್ರಹರಿತ್ತು. ವಿಟಮಿನ್ ಬಿ$_{12}$ ಇವು ಮುಖ್ಯವಾದ ಪ್ರಕೃತಿಸಿದ್ಧ ಕೋಆರ್ಡಿನೇಷನ್ ಸಂಯುಕ್ತಗಳು. ಥಾಲೋಸಯನಿನ್ ಇದೇ ಬಗೆಯ ಕೃತಕ ಕೋಆರ್ಡಿನೇಷನ್ ಸಂಯುಕ್ತ. ಲೋಹದ ಕಾರ್ಬೊನಿಲ್‌ಗಳಲ್ಲಿ ವಿಶೇಷ ರೀತಿಯ ರಾಸಾಯನಿಕ ಬಂಧಗಳಿರುವುದರಿಂದ ಇವು ತಾತ್ವಿಕವಾಗಿ ಮಹತ್ವದ್ದೆನಿಸಿವೆ. ಇವುಗಳಲ್ಲಿ ಅನೇಕವು ಸುಲಭವಾಗಿ ಬಾಷ್ಪೀಕೃತವಾಗುವುದರಿಂದ ಇವನ್ನು ಕೆಲವು ಲೋಹಗಳ ಶುದ್ಧೀಕರಣದಲ್ಲಿಯೂ ಉಪಯೋಗಿಸುವರು. ಅಸಂತೃಪ್ತ ಮತ್ತು ಆರೋಮ್ಯಾಟಿಕ್ ಸಂಯುಕ್ತಗಳು ಅನೇಕ ಲೋಹಗಳೊಡನೆ ಕೋಆರ್ಡಿನೇಟ್ ಸಂಯುಕ್ತಗಳಾಗುತ್ತವೆ. ಇವು ಈಚೆಗೆ ಹೆಚ್ಚು ಹೆಚ್ಚಾಗಿ ಬೆಳಕಿಗೆ ಬರುತ್ತಿವೆ. ಫೆರೊಸೀನ್ ಈ ಬಗೆಯ ಸಂಯುಕ್ತಗಳಲ್ಲಿ ಒಂದು ಮುಖ್ಯವಾದ ವಸ್ತು. ಚರ್ಮಹದಮಾಡುವಾಗ, ಪೆಟ್ರೋಲಿಯಂ, ರಬ್ಬರ್, ಪೆಯಿಂಟ್ ಮುಂತಾದ ಕೈಗಾರಿಕೆಗಳಲ್ಲಿ ಕೋಆರ್ಡಿನೇಷನ್ ಸಂಯುಕ್ತಗಳ ಪಾತ್ರ ಮುಖ್ಯವಾದದ್ದು. (ಎಸ್.ಕೆ.ವಿ.ಎಲ್.)

**ಕೋಎನ್‌ಜೈಮು :** ಎನ್‌ಜೈಮುಗಳು ಪ್ರಧಾನವಾಗಿ ಪ್ರೋಟೀನುಗಳಾದರೂ ಅವು ಕ್ರಿಯಾಯುತವಾಗಲು ಅನೇಕ ವೇಳೆ ಕಡಿಮೆ ಅಣುತೂಕದ, ಉಷ್ಣ ಸ್ಥಿರವಾದ (ಥರ್ಮೋಸ್ಟೇಬಲ್) ಕೆಲವು ಕಾರ್ಬನಿಕ ಸಂಯುಕ್ತಗಳು ಪ್ರೋಟೀನಿನೊಂದಿಗೆ ಸಂಯೋಗಗೊಂಡಿರಬೇಕಾಗುತ್ತದೆ. ಅಂಥ ಸಂಯುಕ್ತಗಳೇ ಕೋಎನ್‌ಜೈಮುಗಳು. ಕೋಎನ್‌ಜೈಮನ್ನುಳಿದ ಪ್ರೋಟೀನು ಭಾಗಕ್ಕೆ ಅಪೋಎನ್‌ಜೈಮ ಎಂದು ಹೆಸರು. ಹೀಮೊಗ್ಲಾಬಿನ್ನಿನಲ್ಲಿ ಪ್ರೋಟೀನಿನೊಂದಿಗೆ ಸೇರಿಕೊಂಡಿರುವ ಹೀಮಟಿನ್ ಇಂಥದೇ ಸಂಯುಕ್ತವಾದರೂ ಅದನ್ನು ಕೋಎನ್‌ಜೈಮು ಎಂದು ಪರಿಗಣಿಸುವುದಿಲ್ಲ. ಪ್ರೋಟೀನಿನೊಂದಿಗೆ ಭದ್ರವಾಗಿ ಸಂಯೋಗಗೊಂಡಿರುವ ಹೀಮಟಿನ್ನಿನಂಥ ಸಂಯುಕ್ತಗಳನ್ನು ಪೂರಕ ಗುಂಪುಗಳು (ಪ್ರಾಸ್ಥೆಟಿಕ್ ಗ್ರೂಪ್ಸ್) ಎಂದು ಕರೆಯುತ್ತಾರೆ. ಪ್ರೋಟೀನಿನೊಂದಿಗೆ ಹೆಚ್ಚು ಕಡಿಮೆ ಸಡಿಲವಾಗಿ ಸಂಯೋಗಗೊಂಡಿದ್ದು ಅವುಗಳ ಕ್ರಿಯಾಪಟುತ್ವಕ್ಕೆ ಕಾರಣವಾದ ಸಂಯುಕ್ತಗಳಿಗೆ ಮಾತ್ರ ಕೋಎನ್‌ಜೈಮು ಎಂಬ ಹೆಸರು ಸಲ್ಲುತ್ತದೆ.

ಅಂಥ ಕೋಎನ್‌ಜೈಮುಗಳಲ್ಲಿ ಪ್ರಸಿದ್ಧವಾದ ಕೆಲವನ್ನು ಇಲ್ಲಿ ಹೆಸರಿಸಬಹುದು. ಆಲ್ಕೊಹಾಲಿಕ್ ಕಿಣ್ವದಲ್ಲಿ (ಆಲ್ಕೊಹಾಲಿಕ್ ಫರ್ಮೆಂಟೇಷನ್) ಅತ್ಯಂತ ಪ್ರಮುಖ ಪಾತ್ರವಹಿಸುವ ಕೋಎನ್‌ಜೈಮ್ I ಅನೇಕ ಡಿಹೈಡ್ರಾಜಿನೇಸ್ ಎನ್‌ಜೈಮುಗಳಿಗೆ ಕೋಎನ್‌ಜೈಮಾಗಿ ವರ್ತಿಸುತ್ತದೆ. ಡೈಫಾಸ್ಫೊ ಪಿರಿಡೀನ್ ನ್ಯೂಕ್ಲಿಯೊಟೈಡ್ ಎಂದೂ

ಹೆಸರು ಪಡೆದಿರುವ ಈ ಕೋಎನ್‌ಜೈಮಿನಲ್ಲಿ ಅಡೆನೀನ್, ನಿಕೊಟಿನೇಮೈಡ್, ಎರಡು ಡಿ–ರೈಬೋಸ್ ಅಣುಗಳು ಮತ್ತು ಎರಡು ಫಾಸ್ಫಾರಿಕ್ ಆಮ್ಲದ ಅಣುಗಳು ಸೇರಿಕೊಂಡಿವೆ. ಕೋಎನ್‌ಜೈಮ್ Iರ ವಿಷಯವಾಗಿ ಎಚ್. ಫಾನ್ ಯೂಲರ್ ಎಂಬಾತ ವಿಶೇಷ



ಚಿತ್ರ 1 ಕೋಎನ್‌ಜೈಮ್ 1

ಸಂಶೋಧನೆ ನಡೆಸಿದ್ದಾನೆ. ವಾರ್‌ಬರ್ಗ್ ಎಂಬಾತ ಸ್ತನಿಗಳ ಎಂಥ್ರೋಸೇಟಿಸಿನಿಂದ ಅಪೋಹನಕರಿಸಬಲ್ಲ (ಡಯಾಲಿಸಿಸ್) ಮತ್ತು ಉಷ್ಣಸ್ಥಿರವಾದ ಒಂದು ಪದಾರ್ಥವನ್ನು ತಯಾರಿಸಿದ.

ಕೋಎನ್‌ಜೈಮು II: ಇನ್ನು ಕೆಲವು ಡಿಹೈಡ್ರಾಜಿನೇಸುಗಳಿಗೆ ಅಗತ್ಯವಾಗಿರುವ ಕೋಎನ್‌ಜೈಮು II ಅಥವಾ ಟ್ರೈಫಾಸ್ಫೊ ಪಿರಿಡೀನ್ ನ್ಯೂಕ್ಲಿಯೊಟೈಡಿನಲ್ಲಿ ಇನ್ನೊಂದು ಫಾಸ್ಫಾರಿಕ್ ಆಮ್ಲ ಹೆಚ್ಚಾಗಿರುತ್ತದೆ. ಕಾರ್ಬಾಕ್ಸಿಲೇಸ್ ಎನ್‌ಜೈಮಿಗೆ ಅಗತ್ಯವಾದ ಕೊಕಾರ್ಬಾಕ್ಸಿಲೇಸ್‌ನಲ್ಲಿ ಥಯಮೀನ್ (ವಿಟಮಿನ್ ಬಿ$_1$) ಎರಡು ಫಾಸ್ಫಾರಿಕ್ ಆಮ್ಲದ ಅಣುಗಳೊಡನೆ ಸಂಯೋಗಗೊಂಡಿರುತ್ತದೆ.



ಚಿತ್ರ 2 ಕೊಕಾರ್ಬಾಕ್ಸಿಲೇಸ್

ಅಸಿಟೈಲ್ ಕೋಲೀನ್ ತಯಾರಿಕೆಗೆ ಅಗತ್ಯವಾದ ಕೋಎನ್‌ಜೈಮ್ ಎ ಯಲ್ಲಿ ಬಿ ಗುಂಪಿನ ಇನ್ನೊಂದು ವಿಟಮಿನ್ ಪ್ಯಾಂಟೊತೆನಿಕ್ ಆಮ್ಲವಿದೆ.

ನಮ್ಮ ದೇಹದಲ್ಲಿ ವಿಟಮಿನ್‌ಗಳ ಪಾತ್ರ ಬಹುಮಟ್ಟಿಗೆ ಕೋಎನ್‌ಜೈಮುಗಳ ರೂಪದಲ್ಲಿ ಎಂದು ನಂಬಲಾಗಿದೆ. (ಜಿ.ಆರ್.ಎಲ್.; ಬಿ.ಎಸ್‌ಯು.)

**ಕೋಕಿಯ :** ಕೀನೋಪೋಡಿಯೇಸೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಅಲಂಕಾರ ಸಸ್ಯ. ವಯಸ್ಸಾದ ಅನಂತರ ಇದರ ಎಲೆಗಳು ಬೆಂಕಿಯ ಬಣ್ಣಕ್ಕೆ ತಿರುಗುವುದರಿಂದ ಇದನ್ನು ಫೈರ್‌ಬುಷ್ ಎಂದೂ ಇಡೀ ಸಸ್ಯ ಕತ್ತರಿಸಿದ ಸೈಪ್ರಸ್ ಸಸ್ಯವನ್ನು ಹೋಲುವುದರಿಂದ ಮಾಕ್‌ಸೈಪ್ರಸ್ ಎಂದೂ ಕರೆಯಲಾಗುತ್ತದೆ. ಇದನ್ನು ಕುಂಡಗಳಲ್ಲಿ ಮತ್ತು ಮಡಿಗಳಲ್ಲಿ ಬೆಳೆಸುತ್ತಾರೆ. ಕೋಕಿಯ ಜಾತಿಯಲ್ಲಿ ಸುಮಾರು 30ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಸ್ಕೊಪೇರಿಯ ಪ್ರಭೇದವೇ ಬಲು ಮುಖ್ಯವಾದುದು. ಇದು ಸುಮಾರು 3'–5' ಎತ್ತರಕ್ಕೆ ಬೆಳೆಯುವ ಏಕವಾರ್ಷಿಕ ಮೂಲಿಕೆ ಸಸ್ಯ. ಕಾಂಡ ಸಿಂಪೋಡಿಯಲ್ ಮಾದರಿಯಲ್ಲಿ ಕವಲೊಡೆಯುವುದರಿಂದ ಇಡೀ ಸಸ್ಯ ಗೋಳಾಕಾರ ಅಥವಾ ಆಯತಾಕಾರವನ್ನು ತಾಳುತ್ತದೆ. ಎಲೆಗಳ ಗಾತ್ರದಲ್ಲಿ ಬಹಳ ಚಿಕ್ಕವಾಗಿದೆ. ಹೂಗಳು ಎಲೆಗಳ ಕಂಕುಳಲ್ಲಿ ಒಂಟೊಂಟೊಯಾಗಿಯೊ ಗುಂಪಾಗಿಯೊ ಹುಟ್ಟುತ್ತವೆ. ಒಂದೊಂದು ಹೂವಿನಲ್ಲೂ 5 ಪೆರಿಯಾಂತ್ ಹಾಲೆಗಳೂ 5 ಕೇಸರಗಳೂ 2 ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ಫಲ ಯುಟ್ರಿಕಲ್ ಎಂಬ ಬಗೆಯದು. ಕೋಕಿಯನ್ನು ಬೀಜಗಳಿಂದ ವೃದ್ಧಿಮಾಡಬಹುದು. ಬೀಜಗಳನ್ನು ನೇರವಾಗಿ ಕುಂಡ ಅಥವಾ ಮಡಿಗಳಲ್ಲಿ ಬಿತ್ತುವುದೇ ವಾಡಿಕೆ. ಬಿತ್ತಿದ ಒಂದು ವಾರದಲ್ಲಿ ಬೀಜಗಳು ಮೊಳೆತು ಸಸಿಗಳಾಗುತ್ತವೆ. 3 ತಿಂಗಳಿಗೆ ಸಸ್ಯ ತನ್ನ ಗಾತ್ರದ ಪರಮಾವಧಿಯನ್ನು ಮುಟ್ಟುತ್ತದೆ. (ಎನ್.ಆರ್.ಆರ್.)

**ಕೋಕೇನ್ :** ಎರಿತ್ರೋಜೈಲಮ್ ಕೋಕ ಎಂಬ ಗಿಡದ ಮತ್ತು ಅದಕ್ಕೆ ಸಂಬಂಧಿಸಿದ ಜಾತಿಯ ಗಿಡಗಳ ಎಲೆಗಳಿಂದ ಪಡೆಯಲಾಗುವ ಸಸ್ಯಕ್ಷಾರ (ಆಲ್ಕಲಾಯ್ಡ್). ದಕ್ಷಿಣ ಅಮೆರಿಕದ ಮೂಲವಾಸಿಗಳು ಕೋಕೇನ್‌ಗಿಡದ ಎಲೆಗಳಲ್ಲಿ ವೇದನಾ ಸಹಿಷ್ಣುತೆಯನ್ನು ಹೆಚ್ಚಿಸುವ ಶಕ್ತಿ ಇದೆ ಎಂಬುದನ್ನು ಅರಿತಿದ್ದರು ಎಂದು ದಕ್ಷಿಣ ಅಮೆರಿಕದ ಅನ್ವೇಷಕರು 1532ರಲ್ಲಿ ವರದಿ ಮಾಡಿದರು. ಇದರಿಂದ ಆಗಿನ ಕಾಲದ ವೈದ್ಯರಿಗೆ ಈ ಗಿಡದ ಬಗ್ಗೆ ಕುತೂಹಲ ಹುಟ್ಟಿ ಅವರು ಅಧ್ಯಯನವನ್ನು ಪ್ರಾರಂಭಿಸಿದರು. ಎಫ್.ವೋಹ್ಲರ್ ಎಂಬಾತ 1860ರಲ್ಲಿ ಮೊಟ್ಟ ಮೊದಲ ಬಾರಿಗೆ ಕೋಕೇನಿನ ವೇದನ ಪ್ರತಿಬಂಧಕ ಗುಣಗಳನ್ನು ಪ್ರಾಯೋಗಿಕವಾಗಿ ಖಚಿತಪಡಿಸಿದ. ಅನಂತರ 1884ರಲ್ಲಿ ಸಿ.ಕೋಲರ್ ಎಂಬ ವಿಜ್ಞಾನಿ ಇಂದ್ರಿಯ ಸುಪ್ತಿಯನ್ನುಂಟುಮಾಡುವ ಪದಾರ್ಥವನ್ನಾಗಿ ಕೋಕೇನನ್ನು ಬಳಸಬಹುದೆಂದು ತೋರಿಸಿಕೊಟ್ಟ. ಜರ್ಮನ್ ವಿಜ್ಞಾನಿ ರಿಚರ್ಡ್ ವಿಲ್‌ಸ್ಟಾಟರ್ 1902ರಲ್ಲಿ ಕೋಕೇನನ್ನು ಕೃತಕವಾಗಿ ಸಂಶ್ಲೇಷಿಸಿದ. ಕೋಕೇನಿನ ರಚನೆ:



ಕೋಕೇನ್ ಒಂದು ವೇದನಾಜಡತೆ ಬರಿಸುವ ವಸ್ತು. ಇದು ನರಗಳನ್ನು ಮುಖ್ಯವಾಗಿ ಸಂವೇದನಾ ನರಗಳನ್ನು (ಸೆನ್ಸರಿ ನರ್ವ್ಸ್) ನಿಸ್ಸತ್ತ್ವಗೊಳಿಸುತ್ತದಲ್ಲದೆ ಅದರ ಪ್ರಭಾವಕ್ಕೆ ಒಳಪಟ್ಟ ಭಾಗಗಳಲ್ಲಿ ವೇದನಾಸುಪ್ತಿಯುಂಟುಮಾಡುತ್ತದೆ. ರಕ್ತ ಪರಿಚಲನೆಯ ಮೂಲಕ ಅಲ್ಪ ಮೊತ್ತದಲ್ಲಿ ಮಿದುಳನ್ನು ಸೇರಿದರೆ ಕೋಕೇನ್ ಸಂತೋಷ, ಉತ್ತೇಜನಗಳ ಭಾವನೆಯನ್ನು ಮೂಡಿಸುತ್ತದೆ. ಈ ಭಾವನೆಯೇ ಕೆಲವರನ್ನು ಕೋಕೇನಿನ ಚಟಕ್ಕೊಳಗಾಗುವಂತೆ ಪ್ರೇರೇಪಿಸುತ್ತದೆ. ಅಡ್ರಿನಲಿನ್ (ಎಪಿನೆಫ್ರಿನ್) ಉಂಟುಮಾಡುವ ರಕ್ತನಾಳಗಳ ಸಂಕುಚನೆಯನ್ನು ಕೋಕೇನ್ ಹೆಚ್ಚಿಸುವುದರಿಂದ, ಕೋಕೇನನ್ನು ಲೇಪಿಸಿದ ಭಾಗಗಳು ಬಿಳುಪೇರುತ್ತದೆ. ಜೀವಕೋಶಗಳಿಗೆ ಕೋಕೇನ್ ವಿಷವಾಗಬಲ್ಲುದು. ಇದು ಯಾವುದೇ ಅಂಗಾಂಶದಲ್ಲಿ ಹೆಚ್ಚು ಸಮಯ ಉಳಿದರೆ ಅಥವಾ ಅತಿ ಹೆಚ್ಚು ಮೊತ್ತದಲ್ಲಿದ್ದರೆ ಅಲ್ಲಿನ ಜೀವಕೋಶಗಳನ್ನು ಕೊಲ್ಲುತ್ತದೆ.

ಕೋಕೇನ್ ನೇತ್ರ ಶಸ್ತ್ರಚಿಕಿತ್ಸೆಯಲ್ಲಿ ವೇದನಾ ಪ್ರತಿಬಂಧಿಯಾಗಿ ಬಳಕೆಯಲ್ಲಿತ್ತು. ಆದರೆ ಇದು ಕಣ್ಣುಗುಡ್ಡೆಯ ಪಾರದರ್ಶಕ ಪಟಲಕ್ಕೆ ಅಪಾಯವನ್ನುಂಟು ಮಾಡುವುದರಿಂದ, ಅದರ ಬಳಕೆ ಈಗ ನಿಂತುಹೋಗಿದೆ. ಮೂಗು ಮತ್ತು ಗಂಟಲ ಚಿಕಿತ್ಸೆಯಲ್ಲಿ ಕೋಕೇನನ್ನು ವೇದನಾಪ್ರತಿಬಂಧಿಯಾಗಿ ಬಳಸುವುದು ಮಾತ್ರ ರೂಢಿಯಲ್ಲಿದೆ. (ಎಸ್.ಎಂ.ಎಸ್.)

**ಕೋಕೇನ್ ಗಿಡ :** ಕೋಕೇನ್ ಎಂಬ ಆಲ್ಕಲಾಯಿಡನ್ನು ಕೊಡುವ ಒಂದು ಸಸ್ಯ ಪ್ರಭೇದ. ಎರಿತ್ರೋಜೈಲೇಸೀ ಕುಟುಂಬಕ್ಕೆ ಸೇರಿದೆ. ಎರಿತ್ರೋಜೈಲಮ್ ಕೋಕ ಇದರ ಶಾಸ್ತ್ರೀಯ ಹೆಸರು. ದಕ್ಷಿಣ ಅಮೆರಿಕದ ಪೆರು ಮತ್ತು ಬೊಲೀವಿಯಗಳ ಮೂಲವಾಸಿಯಾದ ಇದು ಅಮೆರಿಕದ ಉಷ್ಣವಲಯಗಳಲ್ಲೆಲ್ಲ ಬಹಳ ಸಾಮಾನ್ಯವಾಗಿ ಬೆಳೆಯುತ್ತದೆ. ಜಾವ ಮತ್ತು ಇಂಡೊನೇಷ್ಯಗಳಲ್ಲೂ ದಕ್ಷಿಣ ಅಮೆರಿಕದ ಆಂಡೀಸ್ ಪರ್ವತ ಪ್ರದೇಶಗಳಲ್ಲೂ ಇದನ್ನು ಬೆಳೆಸಲಾಗುತ್ತಿದೆ. ಕಳೆದ ಶತಮಾನದ ಕೊನೆಯಲ್ಲಿ ಭಾರತದ ತಮಿಳುನಾಡು, ಮಹಾರಾಷ್ಟ್ರ, ಮೈಸೂರು, ಬಂಗಾಳ, ಅಸ್ಸಾಂ ಮುಂತಾದೆಡೆಗಳಲ್ಲಿ ಇದನ್ನು ಬೆಳೆಸಲು ಪ್ರಯತ್ನಿಸಲಾಯಿತು. ಆದರೆ ಭಾರತದ ಹವೆಗೆ ಇದು ಒಗ್ಗಿಕೊಳ್ಳಲಿಲ್ಲವಾಗಿ ಬೆಳೆಸುವ ಪ್ರಯತ್ನ ವಿಫಲವಾಯಿತು. ಈಗ ಅಪರೂಪವಾಗಿ ತೋಟಗಳಲ್ಲಿ ಅಲಂಕಾರ ಸಸ್ಯವಾಗಿ ಬೆಳೆಸಲಾಗುತ್ತದೆ.

ಕೋಕೇನ್ ಗಿಡದ ಒಂದು ರೆಂಬೆ

ಕೋಕೇನ್ ಗಿಡ ಸು. 5.48 ಮೀ ಎತ್ತರಕ್ಕೆ ಬೆಳೆಯುತ್ತದೆ. ಆದರೆ ಸಾಮಾನ್ಯವಾಗಿ ಎಲೆಗಳನ್ನು ಕೀಳಲು ಅನುಕೂಲವಾಗಲೆಂದು 2.74 ಮೀ ಎತ್ತರಕ್ಕೆ ಮೀರಿ ಬೆಳೆಯಗೊಡುವುದಿಲ್ಲ. ಎಲೆಗಳ ಬಣ್ಣ ಹಚ್ಚಹಸುರು; ಆಕಾರ ಅಂಡದಂತೆ. ಎಲೆಗಳಲ್ಲಿ ಕೋಕೇನ್ ಆಲ್ಕಲಾಯಿಡ್ ಇರುವುದರಿಂದ ಇವು ಕಹಿಯಾಗಿರುತ್ತವೆ. ಹೂಗಳು ಗಾತ್ರದಲ್ಲಿ ಚಿಕ್ಕವು; ಬಣ್ಣ ಹಳದಿ, ಪುಷ್ಪಪತ್ರಗಳು 5; ದಳಗಳು 5, ಕೇಸರಗಳು 10, ಅಂಡಾಶಯ ಉಚ್ಚಸ್ಥಾನದ್ದು, 3 ಕಾರ್ಪೆಲ್‌ಗಳಿವೆ. ಫಲ ಒಂದೇ ಬೀಜವುಳ್ಳ ಅಷ್ಟಿಫಲ ಮಾದರಿಯದು.

ಕೋಕೇನ್ ಗಿಡದ ಬೇಸಾಯಕ್ಕೆ ಸು. 177.7–203 ಸೆಂ.ಮೀ ಮಳೆ ಬೀಳುವ ಮತ್ತು 55°–70° ಫ್ಯಾ. ಉಷ್ಣತೆ ಇರುವ ಪ್ರದೇಶ ಅತ್ಯಾವಶ್ಯಕ. ಕೋಕೇನ್‌ಗಿಡ

ಸಮುದ್ರ ಮಟ್ಟದ ಪ್ರದೇಶಗಳಲ್ಲಿ ಬೆಳೆಯಬಲ್ಲುದಾದರೂ ಕೋಕೇನ್ ಆಲ್ಕಲಾಯಿಡಿನ ಪರಿಮಾಣದ ದೃಷ್ಟಿಯಿಂದ ಬೆಟ್ಟದ ಇಳಿಜಾರು ಪ್ರದೇಶಗಳಲ್ಲಿ ಬೆಳೆಸುವುದೇ ಉತ್ತಮ. ಗಿಡವನ್ನು ಬೆಳೆಸಿದ ಎರಡು ಅಥವಾ ಮೂರು ವರ್ಷಗಳ ಅನಂತರ ಹದವಾಗಿ ಬಲಿತ ಎಲೆಗಳನ್ನು ಕಿತ್ತು ಬಿಸಿಲಿನಲ್ಲಿ ಒಣಗಿಸಿ ಅವುಗಳಿಂದ ಕೋಕೇನನ್ನು ಹೊರ ತೆಗೆಯಲಾಗುತ್ತದೆ. ಎಲೆಗಳಲ್ಲಿ ಟ್ರೋಪಕೋಕೇನ್, ಸಿನಮೈಲ್, ಕೋಕೇನ್, ಟ್ರಕ್ಸಿಲಿನ್ ಮುಂತಾದ ಆಲ್ಕಲಾಯಿಡು ಇವೆಯಾದರೂ ಇವುಗಳಲ್ಲಿ ಕೋಕೇನ್ ಪರಿಮಾಣವೇ ಹೆಚ್ಚು. ಇದರ ಪರಿಮಾಣ ಶೇ. 0.5–1.5 ಎಂದು ಅಂದಾಜು ಮಾಡಲಾಗಿದೆ. ಕೋಕೇನ್ ಗಿಡದ ತೊಗಟೆ ಮತ್ತು ಬೀಜಗಳಲ್ಲೂ ಕೋಕೇನ್ ಇದೆ. ವರ್ಷಕ್ಕೆ 3–4 ಸಲ ಎಲೆಗಳನ್ನು ಕೊಯ್ಯಬಹುದು. ವಾರ್ಷಿಕ ಇಳುವರಿ ಎಕರೆಗೆ 750–1000 ಕೆಜಿಯಷ್ಟು.

ಕೋಕೇನ್‌ಗಿಡ ಕೋಕೇನ್‌ಗಾಗಿ ಮಾತ್ರ ಹೆಚ್ಚು ಪ್ರಸಿದ್ಧವಾಗಿದ್ದರೂ ಇದಕ್ಕೆ ಬೇರೆ ಔಷಧೀಯ ಗುಣಗಳೂ ಇಲ್ಲದಿಲ್ಲ. ಕಜ್ಜಿ, ದದ್ದು, ತಲೆನೋವು, ವಾತಶೂಲ ಮುಂತಾದವನ್ನು ನಿವಾರಿಸಲು ಕೋಕೇನ್ ಮುಲಾಮನ್ನು ಬಳಸುವುದಿದೆ.

(ಎಚ್.ಎಸ್.ಎಸ್.ಕೆ.)

**ಕೋಕೋ :** ಕಕಾವೊ (ತಿಯೋಬ್ರೋಮ ಕಕಾವೊ) ಗಿಡದ ಬೀಜದಿಂದ ಪಡೆಯಲಾಗುವ ಒಂದು ಸುಪ್ರಸಿದ್ಧ ಪಾನೀಯ. ಕಕಾವೊ ಸ್ಟರ್‌ಕ್ಯುಲಿಯೇಸೀ ಕುಟುಂಬಕ್ಕೆ

ಕೋಕೋ ಗಿಡ

ಸೇರಿದೆ; ಮಧ್ಯ ಮತ್ತು ದಕ್ಷಿಣ ಅಮೆರಿಕ ದೇಶಗಳ ಮೂಲವಾಸಿ. ಗಿಡ ಸ್ವಾಭಾವಿಕವಾಗಿ ಸು. 12.19 ಮೀ ಎತ್ತರಕ್ಕೆ ಬೆಳೆಯುತ್ತದೆ. ಆದರೆ ಹಣ್ಣು ಕೀಳಲು ಅನುಕೂಲವಾಗಲು ಸು. 4.57–6.89 ಮೀ ಎತ್ತರಕ್ಕೆ ಈ ಮರಗಳನ್ನು ಕತ್ತರಿಸುವುದು ವಾಡಿಕೆಯಲ್ಲಿರುವ ಕ್ರಮ. ಕಕಾವೊ ಸ್ವಾಭಾವಿಕವಾಗಿ ಅತಿಯಾಗಿ ರೆಂಬೆಗಳಿರುವ ಹರಡಿಕೊಳ್ಳುವ ಮರ. ಎಲೆಗಳು ಅಂಡಾಕಾರವಾಗಿ ಚರ್ಮದ ಪಟ್ಟಿಯ ಹಾಗಿದ್ದು ಸುಮಾರು ಒಂದು ಅಡಿ ಉದ್ದವಿರುತ್ತವೆ. ಚಿಕ್ಕದಾದ ಗುಲಾಬಿ ಬಣ್ಣದ ಹೂಗಳು ವಯಸ್ಸಾದ ಕಾಂಡಗಳ ಮೇಲೆ ಬೆಳೆದಿರುತ್ತವೆ. ಕಾಯಿಗಳ ಬಣ್ಣ ಹಸಿರು; ಚೆನ್ನಾಗಿ ಹಣ್ಣಾದ ಮೇಲೆ ಬಣ್ಣ ಹಳದಿಕಿತ್ತಳೆಯಿಂದ ಕೆಂಪು ಮಿಶ್ರಿತ ನೇರಿಳೆವರೆವಿಗೂ ವ್ಯತ್ಯಾಸವಾಗುತ್ತದೆ. ಮಾಗಿದ ಹಣ್ಣುಗಳು ದಪ್ಪವಾದ ಸೌತೆಕಾಯಿ ರೀತಿ 15.23–35.55 ಸೆಂ.ಮೀ ಉದ್ದ ಮತ್ತು 5.07–12.6 ಮೀ ದಪ್ಪ ಇದ್ದು ಬಿಳಿಯ ಬಣ್ಣದಿಂದ ಕೂಡಿ ಐದು ದಿಂಡುಗಳುಳ್ಳ ಸಂಪುಟ ಮಾದರಿಯದಾಗಿವೆ. ಒಂದೊಂದು ಹಣ್ಣಿನಲ್ಲಿ ಬಿಳಿಯ ಇಲ್ಲವೆ ಗುಲಾಬಿ ಬಣ್ಣದ ತಿರುಳಿದ್ದು ಈ ತಿರುಳಿನಲ್ಲಿ 20–50 ಬೀಜಗಳು ಹುದುಗಿರುತ್ತವೆ. ಬೀಜಗಳ ಆಕಾರ ಬಾದಾಮಿಯಂತೆ; ಬಣ್ಣ ನೇರಿಳೆ.

ಕೋಕೋ ಬೀಜಗಳ ಉಪಯೋಗ ಬಲುಹಿಂದಿನಿಂದಲೂ ಸುಪರಿಚಿತ. ಮಧ್ಯ ಅಮೆರಿಕದಲ್ಲಿ ವಾಸಿಸುತ್ತಿದ್ದ ಮಾಯ ಮತ್ತು ಆಜ್‌ಟೆಕ್ ಜನಾಂಗದವರಿಗೆ ಇದರ ಬಳಕೆ ಗೊತ್ತಿತ್ತು. ಇವರು ಕೋಕೋ ಬೀಜವನ್ನು ವ್ಯಾಪಾರ ವಿನಿಮಯಕ್ಕಾಗಿ ಉಪಯೋಗಿಸುತ್ತಿದ್ದರು. ಆಜ್‌ಟೆಕ್ ಜನ ಕೋಕೋ ಬೀಜವನ್ನು ಹುರಿದು ಬಿಸಿ ನೀರಿನಲ್ಲಿ ಗೊಟಾಯಿಸಿ ವೆನಿಲ್ಲ ಮುಂತಾದ ಸಾಂಬಾರ ಪದಾರ್ಥಗಳಿಂದ ಸುವಾಸನೆ ಬರುವಂತೆ ಮಾಡಿ ಕುಡಿಯುತ್ತಿದ್ದರು. ಕೊಲಂಬಸ್ ತನ್ನ ನಾಲ್ಕನೆಯ ಪ್ರಪಂಚ ಪರ್ಯಟನದಲ್ಲಿ (1502) ಈ ಗಿಡದ ಕೆಲವು ಬೀಜಗಳನ್ನು ಸ್ಪೇನ್ ದೇಶಕ್ಕೆ ತೆಗೆದುಕೊಂಡು ಹೋದ. ಅಲ್ಲಿ ಇದು ಬಲುಬೇಗ ಜನಪ್ರಿಯವಾಯಿತು; ಕೋಕೋವಿನ ಜೊತೆ ಸಕ್ಕರೆ ಹಾಕಿ ರುಚಿಯನ್ನು ಹೆಚ್ಚಿಸಬಹುದೆಂದು ಈ ಜನ ಕಂಡುಕೊಂಡರು. ಸುಮಾರು ಒಂದು ನೂರು ವರ್ಷ ಈ ಗುಟ್ಟನ್ನು ಸ್ಪೇನ್ ದೇಶದವರು ಯಾರಿಗೂ ಹೇಳಿರಲಿಲ್ಲ. ಆಮೇಲೆ ಇದು ಯುರೋಪಿನ ಅನೇಕ ಭಾಗಗಳಿಗೆ ಹರಡಿತು. ಅಮೆರಿಕ ಸಂಯುಕ್ತ ಸಂಸ್ಥಾನದ ಮ್ಯಾಸಚೂಸೆಟ್ಸಿನ ಡಾರ್‌ಚೆಸ್ಟರ್‌ನಲ್ಲಿ ನ್ಯೂ ಇಂಗ್ಲೆಂಡಿನ ಪ್ರಯಾಣಿಕರು ವೆಸ್ಟ್ ಇಂಡೀಸ್‌ನಿಂದ ತಂದ ಬೀಜಗಳಿಂದ 1765ರಲ್ಲಿ ಚಾಕೊಲೇಟ್ ತಯಾರು ಮಾಡಿದರು. ಕೋಕೋಪುಡಿ ಮತ್ತು ಚಾಕೊಲೇಟ್‌ಗಳನ್ನು ತಯಾರು ಮಾಡುವ ವಿಧಾನ 18ನೆಯ ಶತಮಾನದಲ್ಲೇ ಗೊತ್ತಿದ್ದರೂ 19ನೆಯ ಶತಮಾನದ ಉತ್ತರಾರ್ಧದ ವರೆಗೂ ಇದು ಕೇವಲ ಸಣ್ಣ ಗಾತ್ರದ ಕೈಗಾರಿಕೆಯಾಗಿತ್ತು. ಅನಂತರ ಪ್ರಪಂಚದ ಬೇರೆಡೆಗಳಲ್ಲೂ ಕೋಕೋ ಬೆಳೆಯ ಪ್ರವೇಶವಾಗಿ ಕೋಕೋ ಬೆಣ್ಣೆ ಸಾಕಷ್ಟು ಪ್ರಮಾಣದಲ್ಲಿ ಸಿಗುವಂತಾಯಿತು. ಇದರಿಂದ ಕೋಕೋ ಮತ್ತು ಚಾಕೊಲೇಟ್ ತಯಾರಿಕೆ ಸುಪ್ರಸಿದ್ಧ ಉದ್ಯಮವಾಯಿತು. ಸ್ವಿಟ್ಜರ್‌ಲೆಂಡಿನಲ್ಲಿ 1878ರಲ್ಲಿ ಹಾಲು ಚಾಕೊಲೆಟನ್ನು ತಯಾರು ಮಾಡಿದರು. ಶೀಘ್ರವಾಗಿ ಇದು ಪ್ರಪಂಚದಲ್ಲೆಲ್ಲ ಪ್ರಸಿದ್ಧಿಯಾಯಿತು.

ಕಕಾವೊ ಮುಖ್ಯವಾಗಿ ಉಷ್ಣವಲಯಗಳ ಬೆಳೆ. ಇದನ್ನು ಸಮಭಾಜಕವೃತ್ತದ 20° ಉತ್ತರ ಮತ್ತು ದಕ್ಷಿಣಗಳಲ್ಲಿ ಮಾತ್ರ ಬೆಳೆಯುತ್ತಾರೆ. ಹೆಚ್ಚು ಕಡಿಮೆ 27° ಸೆಂ. ಸರಾಸರಿ ಉಷ್ಣತೆ ಇದರ ಬೆಳೆಗೆ ಅತ್ಯಾವಶ್ಯಕ. ಹೆಚ್ಚು ಆರ್ದ್ರತೆಯಿದ್ದು ಗರಿಷ್ಠ 38° ಸೆಂಮೀರಿದರೂ ಗಿಡಗಳಿಗೆ ಹಾನಿಯುಂಟಾಗುವುದಿಲ್ಲ. ಆದರೆ ಉಷ್ಣತೆ 18° ಸೆಂ.ಗಿಂತ ಕಡಿಮೆಯಿರಬಾರದು. ಕಕಾವೊ ಬೆಳೆಗೆ ವರ್ಷ ಪೂರ್ತಿ ವ್ಯಾಪಿಸಿದಂತೆ ಕನಿಷ್ಠಪಕ್ಷ 126.9 ಸೆಂ.ಮೀ ಮಳೆ ಬೀಳಬೇಕು. ನೀರು ಸರಾಗವಾಗಿ ಇಳಿಯಬಲ್ಲ ಹಾಗೂ ಸಸ್ಯಜನ್ಯ ಗೊಬ್ಬರ ಯಥೇಚ್ಛವಾಗಿರುವ ಮಣ್ಣು ಅಗತ್ಯ. ಬಲವಾಗಿ ಬೀಸುವ ಗಾಳಿಯಿಂದ ರಕ್ಷಣೆಯಿರಬೇಕಲ್ಲದೆ ನೆರಳೂ ಅತ್ಯಗತ್ಯ.

**ಬೇಸಾಯದ ಕ್ರಮ:** ಕೋಕೋ ಬೆಳೆಯುವ ಜಾಗದಲ್ಲಿ ನೆಳಿಗೆ ಅವಶ್ಯಕವಾದ ಮರಗಳನ್ನು ಬಿಟ್ಟು ಉಳಿದ ಮರಗಿಡಗಳನ್ನು ಇರಗೊಡಬಾರದು. ಒಟ್ಲುಪಾತಿಗಳಲ್ಲಿ ಬೀಜ ಬಿತ್ತಿ ಸಸಿಗಳನ್ನು ಪಡೆದು ಅನಂತರ ಸಸಿಗಳು 0.6095 ಮೀ ಎತ್ತರಕ್ಕೆ ಬೆಳೆದಾಗ ಪಾತಿಯಿಂದ ತೆಗೆದು ಶಾಶ್ವತ ಸ್ಥಳಗಳಲ್ಲಿ 3.047 ಮೀ ಅಂತರಕ್ಕೊಂದರಂತೆ ನಾಟಿ ಹಾಕಬೇಕು. ತೋಟ ವಿರಳವಾಗಿದ್ದಾಗ ಬಾಳೆಗಿಡಗಳನ್ನು ನೆರಳಿಗಾಗಿ ಉಪಯೋಗಿಸುತ್ತಾರೆ. ಈ ಮರಗಳು ಫಲ ಕೊಡುವಂತಾಗುವುದಕ್ಕೆ ಸುಮಾರು 3–4 ವರ್ಷ ಬೇಕು; ಸುಮಾರು ಎಂಟು ವರ್ಷಗಳ ಅನಂತರ ತಮ್ಮ ಗರಿಷ್ಠ ಉತ್ಪಾದನಾ ಸಾಮರ್ಥ್ಯವನ್ನು ಮುಟ್ಟುತ್ತವೆ. ಒಂದು ಮರ ಎಷ್ಟು ಫಸಲು ಕೊಡುತ್ತದೆ ಎಂಬ ವಿಚಾರದಲ್ಲಿ ಅನೇಕ ಅಭಿಪ್ರಾಯಗಳಿವೆ. ಸಾಮಾನ್ಯವಾಗಿ 30–40 ವರ್ಷಗಳ ಕಾಲ ಫಲ ಕೊಡುತ್ತದೆ. ಆದರೆ 100 ವರ್ಷ ಫಸಲು ಕೊಡುತ್ತದೆ ಎಂದು ಹೇಳಿಕೆಯಿದೆ. ರೋಗವನ್ನು ತಡೆಗಟ್ಟುವ ದೃಷ್ಟಿಯಿಂದಲೂ ಉತ್ಪತ್ತಿ ದೃಷ್ಟಿಯಿಂದಲೂ 15–20 ವರ್ಷಗಳಾದ ಮೇಲೆ ಕೋಕೋ ಮರವನ್ನು ತೆಗೆದು ಹಾಕುವುದು ಉತ್ತಮ.

ಕೋಕೋ ಮರಗಳಿಗೆ ಅನೇಕ ಬಗೆಯ ರೋಗಗಳು ತಗಲುತ್ತವೆ. ಇವುಗಳಲ್ಲಿ ಬಹಳ ಮುಖ್ಯವಾದುದು ಫೈಟಾಫ್ತರ ಎಂಬ ಶಿಲೀಂಧ್ರದಿಂದ ಉಂಟಾಗುವ ರೋಗ. ಕಾಯಿಲೆಗಳಿಗೆ ತಗಲುವ ಈ ರೋಗದಿಂದ ಕಾಯಿಗಳೆಲ್ಲ ಕಪ್ಪುಬಣ್ಣಕ್ಕೆ ತಿರುಗಿ ಹಾಳಾಗಿ ಬಿಡುತ್ತವೆ. ಈ ರೋಗದಿಂದ ಶೇ. 40ರಷ್ಟು ಬೆಳೆ ಹಾಳಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಬೋರ್ಡೊ ದ್ರಾವಣದ ಸಿಂಪಡಿಕೆಯಿಂದ ಇದನ್ನು ತಡೆಗಟ್ಟಬಹುದು. ಟ್ರಿನಿಡ್ಯಾಡ್, ಎಕ್ವಡಾರ್ ಮತ್ತು ಪೂರ್ವ ವೆನಿಜ್ವೇಲಗಳಲ್ಲಿನ ಕೋಕೋ ಮರಗಳಿಗೆ ಮರಾಸ್ಮಿಯಸ್ ಪೆರಿನೀಸಿಯೋಸಸ್ ಎಂಬ ಶಿಲೀಂಧ್ರದಿಂದ ಉಂಟಾಗುವ ವಿಚಸ್‌ಬ್ರೂಮ್ ಎಂಬ ರೋಗ ಬರುತ್ತದೆ. ಕೋಕೋ ಮರಕ್ಕೆ ಕೆಲವು ವೈರಸ್ ರೋಗಗಳು ಕೂಡ ಬರುವುದುಂಟು.

**ಕಟಾವು ಮತ್ತು ಸಂಸ್ಕರಣ:** ಚೆನ್ನಾಗಿ ಬೆಳೆದಿರುವ ಒಂದು ಕೋಕೋ ಮರ ಸುಮಾರು 600 ಸಣ್ಣ ಹೂಗಳನ್ನು ಬಿಡುವುದಾದರೂ ಎಲ್ಲವೂ ಹಣ್ಣಾಗುವುದಿಲ್ಲ. ಕೇವಲ 20–40 ಹೂಗಳು ಮಾತ್ರ ಹಣ್ಣಾಗುತ್ತವೆ. ಇವುಗಳಲ್ಲಿ ಬಹುಪಾಲು ಹಣ್ಣುಗಳು

ವರ್ಷದ ಕೆಲವು ನಿರ್ದಿಷ್ಟ ಅವಧಿಗಳಲ್ಲಿ ಪಕ್ವವಾಗಿ ಕುಯ್ಲಿಗೆ ಸಿದ್ಧವಾಗುತ್ತವೆ. ಕೊಯ್ಲಿನ ಕಾಲ ಸಾಮಾನ್ಯವಾಗಿ ಸೆಪ್ಟೆಂಬರ್–ಮಾರ್ಚ್ ತಿಂಗಳು. ಹಣ್ಣನ್ನು ಮರದಿಂದ ಕೊಯ್ದು ಮಚೆಟ್ ಎಂಬ ವಿಶೇಷ ಕತ್ತಿಯಿಂದ ಹಣ್ಣಿನಲ್ಲಿರುವ ನಾರನ್ನು ತೆಗೆದು ಬೀಜಗಳು ಮತ್ತು ಬೀಜಗಳಿಗೆ ಅಂಟಿಕೊಂಡಿರುವ ತಿರುಳನ್ನು ಬೇರ್ಪಡಿಸಿ ಹುದುಗಿಗೆ ಇಡುತ್ತಾರೆ. ಹುದುಗುವಿಕೆ 3–10 ದಿವಸಗಳಲ್ಲಿ ಪೂರ್ಣಗೊಳ್ಳುತ್ತದೆ. ಅನಂತರ ಬೀಜಗಳನ್ನು ಹೊರತೆಗೆದು ಹುರಿದಾಗ ಚಾಕೊಲೆಟ್ ವಾಸನೆ ಕೊಡುವ ಪೂರ್ವಗಾಮಿ ವಸ್ತುಗಳು ಉತ್ಪತ್ತಿಯಾಗುತ್ತವೆ. ಬೀಜಗಳು ತೇವಾಂಶದಿಂದ ಕೂಡಿ ದಪ್ಪ ಆಗುತ್ತವೆ. ಬೀಜದ ಒಳಭಾಗ ಕಂದು ಬಣ್ಣಕ್ಕೆ ತಿರುಗುವುದಲ್ಲದೆ ಬೀಜಕ್ಕೆ ಒಂದು ಬಗೆಯ ಕಟುವಾಸನೆಯೂ ಬರುತ್ತದೆ. ಬೀಜದೊಳಗಿನ ತಿರುಳನ್ನು ಈಗ ಸುಲಭವಾಗಿ ತೆಗೆಯಬಹುದು. ಆಮೇಲೆ ಬೀಜಗಳನ್ನು ಬಿಸಿಲಿನಲ್ಲಿ ಇಲ್ಲವೆ ಕೃತಕ ಶಾಖ ಕೊಟ್ಟು ಬೀಜದಲ್ಲಿ 6 ರಿಂದ 8 ಭಾಗದಷ್ಟು ಮಾತ್ರ ನೀರಿನ ಅಂಶ ಉಳಿಯುವಂತೆ ಒಣಗಿಸಲಾಗುತ್ತದೆ. ಅನಂತರ ಸಾಗಣೆಗೆ ಇಲ್ಲವೆ ಶೇಖರಣೆಗೆ ಅನುಕೂಲವಾಗುವಂತೆ ಚೀಲಗಳಲ್ಲಿ ತುಂಬಿಡಲಾಗುತ್ತದೆ. ವರ್ಷಕ್ಕೆ ಒಂದು ಮರದಿಂದ 0.0453–0.987 ಗ್ರಾಂ ಮತ್ತು ಒಂದು ಎಕರೆಯಿಂದ 158.75 ಕೆಜಿ. ಸಂಸ್ಕರಿಸಿದ ಬೀಜಗಳನ್ನು ಪಡೆಯಬಹುದು.

ಕೋಕೋವನ್ನು ಅದರ ಸ್ವಾದದ ಆಧಾರದ ಮೇಲೆ ಸಾಮಾನ್ಯ ಮತ್ತು ಉತ್ತಮ ಎಂಬ ಎರಡು ದರ್ಜೆಗಳಾಗಿ ವಿಂಗಡಿಸಲಾಗುತ್ತದೆ. ವರ್ಗೀಕರಣ ಕೋಕೋಪಿನ ಮುಖ್ಯ ಬಗೆಗಳಿಗೆ ಸಂಬಂಧಪಟ್ಟುದಾಗಿದೆ. ಕೋಕೋವಿನ ಬಗೆಗಳಾದ ಕ್ರಿಯಲೊ ಮತ್ತು ಟ್ರೈನಿಟೇರಿಯೊ ಎಂಬುವು ಉತ್ತಮ ದರ್ಜೆಯ ಕೋಕೋವನ್ನು ಕೊಡುತ್ತವೆ. ಕೋಕೋ ಉತ್ಪನ್ನದ ಸುಮಾರು ಶೇ.10 ಭಾಗ ಈ ದರ್ಜೆಗೆ ಸೇರಿದುದು. ಉಳಿದ ಶೇ.90 ಭಾಗ ಫೊರ್ಯಾಸ್ಟಿರೊ ಎಂಬ ಬಗೆಯಿಂದ ಬರುವ ಸಾಮಾನ್ಯ ಕೋಕೋ. ಉತ್ತಮ ದರ್ಜೆಯ ಕೋಕೋವನ್ನು ಅರ್ರಿಬ, ಮಾರಕೈಬೊ, ಕ್ಯಾರಕಾಸ್ ಮತ್ತು ಟ್ರೆನಿಡಾಡ್ ಎಸ್ಟೇಟ್ ಎಂಬ ವಾಣಿಜ್ಯನಾಮಗಳಿಂದ ಮಾರಲಾಗುತ್ತದೆ. ಈ ವಿವಿಧ ಪ್ರಭೇದಗಳನುಷ್ನ ವೆನಜ್ವೇಲ, ಎಕ್ವಡಾರ್, ಶ್ರೀ ಲಂಕಾ ಮತ್ತು ಜಾವಗಳಲ್ಲಿ ಬೆಳೆಯುತ್ತಾರೆ. ಸಾಮಾನ್ಯ ದರ್ಜೆಯ ಕೆಜಾಕೋವಿಗೆ ಅತ್ರ ಎಂಬ ವಾಣಿಜ್ಯ ನಾಮ ಇದೆ. ಈ ಬಗೆಯನ್ನು ಘಾನ, ಬ್ರಜಿಲ್, ನೈಜೀರಿಯ, ಮತ್ತು ಡೊಮಿನಿಕ ರಿಪಬ್ಲಿಕ್‌ಗಳಲ್ಲಿ ಬೆಳೆಯುತ್ತಾರೆ. ಕೋಕೋ ಬಹಳ ಪುಷ್ಟಿದಾಯಕ ಆಹಾರವೆಂದು ಹೆಸರಾಗಿದೆ. ಜೊತೆ ಉತ್ತೇಜಕವೂ ಹೌದು. ಇದರಲ್ಲಿ ಶೇ.40.3 ಕಾರ್ಬೊಹೈಡ್ರೇಟ್, ಶೇ.22 ಕೊಬ್ಬು ಶೇ.18.1 ಪ್ರೋಟೀನು, ಶೇ.6.3 ಲವಣಾಂಶ, ಕೊಂಚ ಭಾಗ ನೀರು ಮತ್ತು ನಾರಿನ ಆಂಶ ಇವೆ. ಉತ್ತೇಜನ ಗುಣಕ್ಕೆ ತಿಯೋಬ್ರೋಮಿನ್ (ಶೇ.2.2) ಮತ್ತು ಕೆಫೀನ್ (ಶೇ.0.1)ಗಳೇ ಕಾರಣ.

ಕೋಕೋವಿನ ಉಪಯೋಗ ಎಲ್ಲರಿಗೂ ತಿಳಿದದ್ದೇ. ಇದನ್ನು ನೇರವಾಗಿ ಇಲ್ಲವೆ ಚಾಕೊಲೇಟ್ ರೂಪದಲ್ಲಿ ಸಿಹಿತಿಂಡಿ ಐಸ್ ಕ್ರೀಮ್, ಮಾದಕವಲ್ಲದ ಪಾನೀಯ–ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕ್ಯಾಂಡಿಗಳಿಗೆ ಉಪಯೋಗಿಸಲಾಗುವ ಎಲ್ಲ ಬಗೆಯ ಸ್ವಾದ ವಸ್ತುಗಳಿಗಿಂತ ಚಾಕೊಲೆಟ್ ಸ್ವಾದವೇ ಅತಿಹೆಚ್ಚು ಜನಪ್ರಿಯವಾದುದು.

ಕೋಕೋವಿನಿಂದ ಚಾಕೊಲೆಟ್ ಅಲ್ಲದೆ ಕೋಕೋಬೆಣ್ಣೆ, ಕೋಕೋಪುಡಿ ಮುಂತಾದವನ್ನೂ ತಯಾರಿಸಲಾಗುತ್ತದೆ. ಈ ಉತ್ಪನ್ನಗಳನ್ನು ಪಡೆಯುವ ಮುನ್ನ ಕೋಕೋ ಬೀಜಗಳನ್ನು ವಿಶೇಷ ರೀತಿಯಲ್ಲಿ ಹದಗೊಳಿಸಲಾಗುತ್ತದೆ. ಹದಮಾಡುವ ರೀತಿ ಹೀಗಿದೆ: ಬೀಜಗಳನ್ನು ಶುದ್ಧೀಕರಿಸಿ, ತೊಳೆದು 113°–117° ಸೆಂ. ಉಷ್ಣತೆಯಲ್ಲಿ ಹುರಿದು ಬೇಕಾದ ಬಣ್ಣ ಮತ್ತು ವಾಸನೆ ಬರುವಂತೆ ಮಾಡುತ್ತಾರೆ. ಅನಂತರ ಅವುಗಳಿಂದ ಸಿಪ್ಪೆ ತೆಗೆದು. ಚೂರು ಮಾಡಲಾಗುತ್ತದೆ. ಚೂರುಗಳಿಗೆ ನಿಬ್ಸ್ ಎಂಬ ಹೆಸರಿದೆ. ಸಿಪ್ಪೆಗಳಿಂದ ಒಂದು ಬಗೆಯ ಟೀ ಮಾಡಬಹುದು; ಆದರೆ ಇವನ್ನು ಗೊಬ್ಬರವಾಗಿ ಬಳಸುವುದೇ ವಾಡಿಕೆ. ಅನಂತರ ನಿಬ್‌ಗಳನ್ನು ಅವುಗಳ ರುಚಿ, ವಾಸನೆ, ಮತ್ತು ದರ್ಜೆಗಳಿಗೆ ಅನುಸಾರವಾಗಿ ಬೇರ್ಪಡಿಸಿ ಕೋಕೋ ಮುದ್ದೆ ಇಲ್ಲವೆ ಚಾಕೊಲೆಡ್ ದ್ರವವನ್ನಾಗಿ ಅರೆಯಲಾಗುತ್ತದೆ. ಚಾಕೊಲೆಟ್ ದ್ರವವನ್ನು ತಂಪುಗೊಳಿಸಿ ಕಂದುಬಣ್ಣದ ಚಾಕೊಲೆಟ್ ಬ್ಲಾಕನ್ನು ತಯಾರಿಸಬಹುದು. ಆ ಮೇಲೆ ಹೈಡ್ರಾಲಿಕ್ ಒತ್ತಡದಿಂದ ಇವುಗಳಲ್ಲಿರುವ ಕೊಬ್ಬಿನ ಸ್ವಲ್ಪ ಅಂಶವನ್ನು ಹೊರತೆಗೆಯಲಾಗುತ್ತದೆ. ಅನಂತರ ಉಳಿಯುವ ಮುದ್ದೆಯೇ ಚಾಕೊಲೆಟ್. ಇದಕ್ಕೆ ಸಕ್ಕರೆಯನ್ನು ಸೇರಿಸಿ ಸಿಹಿ ಚಾಕೊಲೆಟ್ ತಯಾರಿಸಬಹುದು. ಸಿಹಿ ಚಾಕೊಲೆಟ್ ತಯಾರಿಸುವಾಗ ಕೊಂಚ ಕೋಕೋ ಬೆಣ್ಣೆಯನ್ನು ಮತ್ತೆ ಸೇರಿಸುವುದುಂಟು. ಇದನ್ನು ನೇರವಾಗಿಯೇ ಸೇವಿಸಬಹುದು ಇಲ್ಲವೆ ಕ್ಯಾಂಡಿಗಳ ತಯಾರಿಕೆಯಲ್ಲಿ ಬಳಸಬಹುದು. ಸಿಹಿ ಚಾಕೊಲೆಟ್‌ಗೆ ನಿರ್ದಿಷ್ಟ ಪ್ರಮಾಣದಲ್ಲಿ ಹಾಲನ್ನು ಸೇರಿಸಿ ಹಾಲುಚಾಕೊಲೆಟ್ ತಯಾರಿಸಲಾಗುತ್ತದೆ. ಸಾಧಾರಣವಾಗಿ ಒಳ್ಳೆಯ ದರ್ಜೆಯ ಹಾಲು ಚಾಕೊಲೆಟ್‌ನಲ್ಲಿ ಸುಮಾರು ಶೇ.20–22 ಹಾಲಿನ ಅಂಶ ಇರುತ್ತದೆ.

ಕೋಕೋವನ್ನು ಹದಗೊಳಿಸಿ ಪಡೆಯುವ ಕೋಕೋ ಮುದ್ದೆಯನ್ನು ಕ್ಷಾರೀಯ ಲವಣದೊಂದಿಗೆ ಸಂಸ್ಕರಿಸದರೆ ಕೋಕೋಪುಡಿ ದೊರೆಯುತ್ತದೆ. ಹೈಡ್ರಾಲಿಕ್ ಒತ್ತಡ ಪ್ರಯೋಗದಿಂದ ಕೋಕೋಬೆಣ್ಣೆಯನ್ನು ತೆಗೆಯಬಹುದೆಂದು ಮೇಲೆ ಹೇಳಿದೆ. ಈ ಬೆಣ್ಣೆಯನ್ನು ಸಿಹಿತಿಂಡಿಗಳ ತಯಾರಿಕೆಯಲ್ಲಿಯೂ ಅಲಂಕರಣ ವಸ್ತುಗಳ ಉತ್ಪಾದನೆಯಲ್ಲಿಯೂ ಬಳಸಲಾಗುತ್ತದೆ. ಕೆಲವು ಬಗೆಯ ಧರ್ಮ ತುರಿಗಳಿಗೂ ಇದು ಶುದ್ಧರೂಪದಲ್ಲಿ ಔಷಧಿಯಾಗಿ ಬಳಕೆಯಾಗುತ್ತದೆ. (ಜೆ.ಬಿ.)

**ಕೋಕೋ ಉತ್ಪಾದನೆ ಮತ್ತು ವ್ಯಾಪಾರ :** ಕೋಕೋ ಬೆಳೆಗೆ ಸಮಭಾಜಕವೃತ್ತ ಪ್ರದೇಶ ಅತ್ಯಂತ ಪ್ರಶಸ್ತವಾದದ್ದು. ಸಮಭಾಜಕವೃತ್ತಕ್ಕೆ ಉತ್ತರ ದಕ್ಷಿಣಗಳಲ್ಲಿ 20°ಗೆ ಇದರ ಉತ್ಪಾದನೆ ಸೀಮಿತವಾಗಿದೆ.

ಕೋಕೋ ಉತ್ಪಾದನೆ ವಾರ್ಷಿಕವಾಗಿ ತೀವ್ರವಾದ ಏರಿಳಿತಗಳಿಗೆ ಒಳಗಾಗಿದೆ. 1950ರಲ್ಲಿ ಆಫ್ರಿಕಖಂಡದ ದೇಶಗಳಲ್ಲಿ ಹಲವಾರು ಕೋಕೋ ಗಿಡಗಳನ್ನು ನೆಟ್ಟುದರಿಂದ ಈಗ ಆ ದೇಶಗಳ ಕೋಕೋ ಉತ್ಪನ್ನ ಗಮನಾರ್ಹವಾಗಿ ಅಧಿಕವಾಗಿದೆ. ಕೋಕೋ ಬೀಜಗಳನ್ನು ಉತ್ಪಾದಿಸುತ್ತಿರುವ ಮುಖ್ಯ ದೇಶಗಳು ಘಾನ, ನೈಜೀರಿಯ, ಬ್ರಜ಼ಿಲ್ ಮತ್ತು ಕ್ಯಾಮರೂನ್ಸ್. ಇವು 1968ರಲ್ಲಿ ಅನುಕ್ರಮವಾಗಿ 4,21,000, 2,35,000, 1,94,000 ಮತ್ತು 87,000 ಮೆಟ್ರಿಕ್ ಟನ್ ಬೀಜಗಳನ್ನು ಉತ್ಪಾದಿಸಿದುವು. ಕೋಕೋ ಉತ್ಪಾದಿಸುವ ಇತರ ದೇಶಗಳು ಐವರಿ ಕೋಸ್ಟ್, ಟೋಗೊ, ಗಯಾನ ಮತ್ತು ಶ್ರೀಲಂಕಾ. ವಿಶ್ವದ ಒಟ್ಟು ಉತ್ಪನ್ನ 1968ರಲ್ಲಿ 13,39,000 ಮೆಟ್ರಿಕ್ ಟನ್ನುಗಳು. ಏಷ್ಯದಲ್ಲಿ ಕೋಕೋ ಬೆಳೆಗೆ ಯುಕ್ತವಾದ ವಾಯುಗುಣ ಇಲ್ಲವಾದ್ದರಿಂದ ಅಲ್ಲಿ ಇದನ್ನು ಹೆಚ್ಚಾಗಿ ಉತ್ಪಾದಿಸುವುದಿಲ್ಲ. ಫಿಲಿಪೀನ್ಸ್, ಶ್ರೀಲಂಕಾ ಮತ್ತು ಇಂಡೊನೇಷ್ಯಗಳು ಮಾತ್ರ ಇದನ್ನು ಅಲ್ಪ ಪರಿಮಾಣಗಳಲ್ಲಿ ಉತ್ಪಾದಿಸುತ್ತವೆ. ನ್ಯೂ ಗಿನಿ, ಪಪೂವ ಮತ್ತು ನ್ಯೂ ಹೆಬ್ರಿಡೀಸ್‌ಗಳಲ್ಲಿ ಕೋಕೋ ಉತ್ಪಾದನೆಗೆ ತಕ್ಕ ವಾಯುಗುಣ ಇದೆಯಾದರೂ ಕಾರ್ಮಿಕರ ಅಭಾವದಿಂದಾಗಿ ಅಲ್ಲಿ ಇದನ್ನು ಹೆಚ್ಚಾಗಿ ಉತ್ಪಾದಿಸುತ್ತಿಲ್ಲ.

ಪ್ರಪಂಚದ ಕೋಕೋ ಸರಬರಾಯಿಯಲ್ಲಿ ಶೇ.40ರಷ್ಟು ಬರುವುದು ಘಾನದಿಂದ. ಅಲ್ಲಿ ಕೋಕೋ ಬೆಳೆಗೆ ತಕ್ಕ ವಾಯುಗುಣವೂ ಫಲವತ್ತಾದ ನೆಲವೂ ಇವೆ. ಜೊತೆಗೆ ಅಲ್ಲಿ ಕೋಕೋ ತೋಟಗಾರಿಕೆಯನ್ನು ವ್ಯವಸ್ಥಿತವಾಗಿ ಬೆಳೆಸಲಾಗಿದೆ. ಘಾನ ಹಳೆಯ ವ್ಯಾಪಾರಮಾರ್ಗದ ಮಧ್ಯೆ ಇರುವುದೂ ಅದರ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿ ಅಭಿವೃದ್ಧಿ ಹೊಂದಿರುವುದೂ ಇತರ ಅನುಕೂಲಗಳು. 1850ರಿಂದ 1910ರ ತನಕ ಎಕ್ವಡಾರ್ ಪ್ರಮುಖ ಕೋಕೋ ಉತ್ಪಾದಕ ದೇಶವಾಗಿತ್ತು. ಅನಂತರ ಅದರ ಪ್ರಾಮುಖ್ಯ ಬ್ರಜಿಲ್‌ಗೆ ವರ್ಗವಾಯಿತು. ಆಮೇಲೆ ಪಶ್ಚಿಮ ಆಫ್ರಿಕದ ಕೋಕೋ ಬೆಳೆಯುವ ಪ್ರದೇಶ ಅಭಿವೃದ್ಧಿಯಾಗಿ ಅದಕ್ಕೆ ಅಗ್ರಪಟ್ಟ ಪ್ರಾಪ್ತವಾಯಿತು. ಎಕ್ವಡಾರಿನ ವಾಯುಗೂಣ ಮತ್ತು ನೆಲ ಕೋಕೋ ಬೆಳೆಗೆ ಅತ್ಯಂತ ಪ್ರಶಸ್ತವಾದ್ದು. ಆದರೆ ಅನಾರೋಗ್ಯಕರ ಪರಿಸ್ಥಿತಿಯಿಂದಾಗಿ ಅಲ್ಲಿ ಕೋಕೋ ಉತ್ಪಾದನೆ ಕ್ಷೀಣಿಸಿತು.

ಕೋಕೋ ಉತ್ಪಾದಿಸುವ ಮುಖ್ಯ ದೇಶಗಳು ತಮ್ಮ ಬೆಳೆಯಲ್ಲಿ ಶೇ.90ಕ್ಕಿಂತ ಹೆಚ್ಚು ಭಾಗವನ್ನು ರಫ್ತು ಮಾಡುತ್ತವೆ. ಕೋಕೋ ಬಳಸುವ ದೇಶಗಳಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಪ್ರಥಮ ಸ್ಥಾನ. ಪ್ರಪಂಚದ ಒಟ್ಟು ಕೋಕೋ ಬೆಳೆಯಲ್ಲಿ ಸುಮಾರು 1/3 ಭಾಗ ಆ ದೇಶಕ್ಕೆ ರಫ್ತಾಗುತ್ತದೆ. ಪಶ್ಚಿಮ ಜರ್ಮನಿ, ನೆದರ್ಲೆಂಡ್ಸ್, ಸ್ಪೇನ್ ಮತ್ತು ಫ್ರಾನ್ಸ್ ಇತರ ಮುಖ್ಯ ಗ್ರಾಹಕ ರಾಷ್ಟ್ರಗಳು, ಸ್ಪೇನಿನಲ್ಲಿ ಕೋಕೋ ಒಂದು ಅವಶ್ಯ ವಸ್ತುವೆಂದು ಪರಿಗಣಿತವಾಗಿದೆ. ಸ್ವಿಟ್ಜರ್ಲೆಂಡ್ ಮತ್ತು ನೆದರ್ಲೆಂಡ್ಸ್ ಇದನ್ನು ಮುಖ್ಯವಾಗಿ ಚಾಕೊಲೆಟ್ ತಯಾರಿಕೆಗಾಗಿ ಆಮದು ಮಾಡಿಕೊಳ್ಳುತ್ತವೆ.

ಪ್ರಪಂಚ ಕೋಕೋ ವ್ಯಾಪಾರವನ್ನು ಅವಲೋಕಿಸಿದಲ್ಲಿ ಕಾಣುವ ಪ್ರಮುಖ ಅಂಶವೆಂದರೆ ಬೆಲೆಯ ಅಸ್ಥಿರತೆ. ಅನೇಕ ಸಾರಿ ಬೆಲೆಯ ತೀವ್ರ ಇಳಿತಾಯದಿಂದಾಗಿ, ರಫ್ತಿಗಾಗಿ ಮೀಸಲಿಟ್ಟ ಕೋಕೋವನ್ನು ರಫ್ತು ಮಾಡದೆ ಕೊರತೆಯನ್ನು ಸೃಷ್ಟಿಸಿ, ಬೆಲೆಯ ಕುಸಿತವನ್ನು ತಡೆಯಬೇಕಾಗಿ ಬರುವುದುಂಟು. ಕೋಕೋ ವ್ಯಾಪಾರದಲ್ಲಿ ಕಾಣಬರುವ ಸಟ್ಟಾ ವ್ಯಾಪಾರದಿಂದಾಗಿ ಬೆಲೆಗೂ ಉತ್ಪತ್ತಿಗೂ ಯಾವ ಸಂಬಂಧವನ್ನೂ ಕಾಣಲಾಗುವುದಿಲ್ಲ. ಈ ಎಲ್ಲ ತೊಂದರೆಗಳನ್ನು ನಿವಾರಿಸಲು ಪ್ರಥಮ ಪ್ರಯತ್ನವಾಗಿ, ವಿಶ್ವಸಂಸ್ಥೆ 1966ರಲ್ಲಿ ಒಂದೇ ಸಮ್ಮೇಳನವನ್ನು ಕರೆದು ಅಂತಾರಾಷ್ಟ್ರೀಯ ಕೋಕೋ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಸಲಹೆ ಮಾಡಿತು. 1963ರಲ್ಲಿ ಬ್ರಜ಼ಿಲ್, ಕ್ಯಾಮರೂನ್ಸ್, ಘಾನ, ಐವರಿ ಕೋಸ್ಟ್, ನೈಜೀರಿಯ ಮತ್ತು ಟೋಗೋ ದೇಶಗಳು ಸೇರಿ ಕೋಕೋ ಉತ್ಪಾದಕರ ಸಂಘವನ್ನು ಸ್ಥಾಪಿಸಿಕೊಂಡುವು. ಬೆಲೆಯ ಸ್ಥಾಯಿಕರಣವೇ ಈ ಸಂಘದ ಮುಖ್ಯ ಉದ್ದೇಶ. (ಕೆ.ಜಿ.ಆರ್.)

**ಕೋಗಿಲೆ :** ಯೂಡಿನಾಮಿಸ್ ಸ್ಕೋಲಪೇಸಿಯ ಎಂಬ ವೈಜ್ಞಾನಿಕ ಹೆಸರಿನ ಹಕ್ಕಿ. (ವರ್ಗ: ಏವಿಸ್, ಗಣ: ಕಕೂಲಫಾರ್ಮೀಸ್, ಕುಟುಂಬ: ಕಕೂಲಡೀ) ಭಾರತ, ಶ್ರೀಲಂಕಾ, ಮಯನ್ಮಾರ್ ಮುಂತಾದ ಉಷ್ಣವಲಯಗಳ ಮೂಲವಾಸಿ ಇದು.

ಊರುಗಳ ಬಳಿಯಿರುವ ತೋಟಗಳು, ನಂದನವನಗಳು, ಮಾವಿನ ತೋಪುಗಳು ಮತ್ತಿತರ ಹಣ್ಣಿನ ಮರಗಳ ಮೇಲೆ ಸಾಧಾರಣವಾಗಿ ಕಂಡು ಬರುತ್ತದೆ. ಮರದ ಎಲೆಗಳಲ್ಲಿ ರೆಂಬೆಗಳಲ್ಲಿ ಅವಿತುಕೊಂಡೇ ಇರುವ ಇದನ್ನು ಕೂಗುವಾಗಲೊ ಇಲ್ಲವೆ ಒಂದು ಮರದಿಂದ ಮತ್ತೊಂದು ಮರಕ್ಕೆ ಹಾರುವಾಗಲೊ ಸುಲಭವಾಗಿ ಗುರುತಿಸಬಹುದು. ಕೋಗಿಲೆ ಗಾತ್ರದಲ್ಲಿ ಕಾಗೆಯಷ್ಟಿದೆ. ಬಾಲ ಸ್ವಲ್ಪ ಉದ್ದ. ಗಂಡು ಹಕ್ಕಿಯ ಬಣ್ಣ ಮಿರಮಿರನೆ ಮಿಂಚುವ ಕಪ್ಪು. ಕೊಕ್ಕು ಹಳದಿ ಮಿಶ್ರಿತ ಹಸುರು. ಕಣ್ಣು ಕೆಂಪು. ಹೆಣ್ಣು ಹಕ್ಕಿಯ ಬಣ್ಣ ಕಂದು. ಅದರ ರೆಕ್ಕೆಗಳ ಮೇಲೆ ಬಿಳಿ ಚುಕ್ಕೆಗಳು ಮತ್ತು ಸಣ್ಣ ಸಣ್ಣ ಪಟ್ಟೆಗಳು ಇವೆ. ಉದರ ಭಾಗ ಸ್ವಲ್ಪ ಬಿಳುಪು ಮತ್ತು ಸಣ್ಣ ಸಣ್ಣ ಪಟ್ಟೆಗಳಿಂದ ಕೂಡಿದೆ. ಆಲ, ಅರಳಿ, ಎಲಚಿ, ಹಿಪ್ಪುನೇರಳೆ, ಗಂಧದಮರ–ಇವುಗಳಲ್ಲಿಯ ಹಣ್ಣುಗಳೇ ಇದರ ಪ್ರಧಾನ ಆಹಾರ. ಕೆಲವು ವೇಳೆ ಕೀಟಗಳು, ಕಂಬಳಿಹುಳುಗಳು, ಸಣ್ಣಪಕ್ಷಿಗಳ ಮೊಟ್ಟೆಗಳು, ಕೆಲವು ಬಗೆಯ ಹೂಗಳ ಮಕರಂದ ಇವನ್ನೂ ಸೇವಿಸುವುದುಂಟು. ಕೋಗಿಲೆ ವಿಶಿಷ್ಟವಾದ ಹಾಗೂ ಇಂಪಾದ ಕುವೂ ಕುವೂ ಎಂಬ ಕೂಗಿನಿಂದಾಗಿ ಹೆಸರಾಗಿದೆ. ಸಾಮಾನ್ಯವಾಗಿ ಗಂಡು ಕೋಗಿಲೆಯೇ ಕೂಗುವುದು. ಇಂಪಾದ ಹಾಡು ಪ್ರಜನನ ಕಾಲದಲ್ಲಿ ಮಾತ್ರ. ಹೆಣ್ಣು ಮರದಿಂದ ಮರಕ್ಕೆ ಹಾರುವಾಗ ಕಿಕ್–ಕಿಕ್–ಕಿಕ್ ಎಂದು ಸದ್ದು ಮಾಡುತ್ತದೆ.

ಕೋಗಿಲೆ ಮೊಟ್ಟೆಯಿಡುವ ಕಾಲ ಮಾರ್ಚ್‌ನಿಂದ ಆಗಸ್ಟ್ ಅವಧಿಯಲ್ಲಿ. ಊರು ಕಾಗೆ ಮತ್ತು ಕಾಡು ಕಾಗೆಗಳ ಗೂಡುಗಳಲ್ಲಿ ಮೊಟ್ಟೆಗಳನ್ನಿಡುವುದು ಇದರ ವೈಶಿಷ್ಟ್ಯ. ಆದ್ದರಿಂದಲೇ ಕವಿಗಳು ಇದನ್ನು ಪರಪುಟ್ಟನೆಂದು ಕರೆದಿದ್ದಾರೆ. ಮೊಟ್ಟೆಗಳು ಕಾಗೆಗಳ ಮೊಟ್ಟೆಗಳಂತೆಯೇ ಇವೆ. ಆದರೆ ಗಾತ್ರದಲ್ಲಿ ಸ್ವಲ್ಪ ಚಿಕ್ಕವು. ಬಣ್ಣ ಹಸುರು ಮಿಶ್ರಿತ ಬೂದು. ಅಲ್ಲಲ್ಲಿ ಕಂದು ಚುಕ್ಕೆಗಳಿವೆ. ತನ್ನ ಮೊಟ್ಟೆಗಳಿಗೂ ಕೋಗಿಲೆಯ ಮೊಟ್ಟೆಗಳಿಗೂ ಇರುವ ವ್ಯತ್ಯಾಸವನ್ನು ಕಂಡುಹಿಡಿಯಲಾಗದ ಕಾಗೆ ಅವಕ್ಕೆ ಕಾವು ಕೊಟ್ಟು ಮರಿಮಾಡುವುದೇ ಅಲ್ಲದೇ ಮರಿಗಳಿಗೂ ಗುಟುಕು ಕೊಟ್ಟು ಸಲಹುತ್ತದೆ. ಇತರೆ ಕೆಲವು ಹಕ್ಕಿಗಳಲ್ಲೂ

ಕರಿಯ ಬಣ್ಣದ ಗಂಡು; ಮಚ್ಚೆಯದು ಹೆಣ್ಣು

ಮೊದಲು ಮರಿಯಾದ ಹಕ್ಕಿ ತನ್ನ ನಂತರ ಮರಿಯಾದವನ್ನು ಕುಕ್ಕಿ ಸಾಯಿಸುವುದೊ ಇಲ್ಲವೆ ಗೂಡಿನಿಂದ ಹೊರಕ್ಕೆ ನೂಕುವುದನ್ನೊ ಮಾಡುತ್ತವೆ. ಇದು ಜೀವವಿಕಾಸದ 'ಬಲಶಾಲಿಗಳಷ್ಟೆ ಉಳಿಯುತ್ತದೆ ಎಂಬುದನ್ನು ತೋರಿಸುತ್ತದೆ. ಕೋಗಿಲೆ ಮರಿಯ ಇನ್ನೊಂದು ಗಮನಾರ್ಹ ಅಂಶವೆಂದರೆ ಮೊಟ್ಟೆಯೊಡೆದು ಹೊರಬರುವ ಮೊದಲನೆಯ ಮರಿ ಗೂಡಿನಲ್ಲಿರುವ ಇತರ ಮೊಟ್ಟೆಗಳನ್ನು ಇಲ್ಲವೇ ಬೇರೆ ಮರಿಗಳನ್ನು ಹೊರಕ್ಕೆ ನೂಕಿ ತನ್ನ ರಕ್ಷಣೆಯ ಕಡೆಗೆ ಗಮನ ಕೊಡುವುದು. ಇತ್ತೀಚಿನ ಸಂಶೋಧನೆಗಳ ಪ್ರಕಾರ ಕಾಗೆ ತಾನು ಸಾಕುತ್ತಿರುವುದು ಕೋಗಿಲೆ ಮರಿ ಎಂಬುದನ್ನು ತಿಳಿದ ಮೇಲೂ ಅದಕ್ಕೆ ಗುಟುಕು ಕೊಟ್ಟು ಸಾಕುತ್ತದೆ. ಕೆಲವು ವೇಳೆ ಒಂದೇ ಗೂಡಿನಲ್ಲಿ ಒಂದಕ್ಕಿಂತ ಹೆಚ್ಚು ಕೋಗಿಲೆ ಮರಿಗಳು ಇದ್ದರೆ ಎಲ್ಲಕ್ಕಿಂತ ಬಲಿಷ್ಠವಾದ ಮರಿ ಮಾತ್ರ ಉಳಿದುಕೊಳ್ಳುತ್ತದೆ. ಹೀಗೆ ಕೋಗಿಲೆ ತನ್ನ ಪ್ರಾರಂಭದಲ್ಲೇ ಬಾಳುವುದಕ್ಕೆ ಹೋರಾಟ ನಡೆಸುತ್ತದೆ. (ಎನ್.ಎಂ.)

**ಕೋಟ್‌ದಿಜಿ :** ಪಾಕಿಸ್ತಾನದಲ್ಲಿ ಖೈರ್‌ಪುರದಿಂದ 24 ಕಿಮೀ ದಕ್ಷಿಣಕ್ಕೂ ಮೊಹೆಂಜೋದಾರೋದಿಂದ 40 ಕಿಮೀ ಪಶ್ಚಿಮಕ್ಕೂ ಇರುವ ಒಂದು ಪ್ರಾಕ್ತನ ನೆಲೆ. ಇಲ್ಲಿ 1955 ಮತ್ತು 1957ರಲ್ಲಿ ನಡೆಸಿದ ಭೂಶೋಧನೆಗಳಲ್ಲಿ ಹರಪ್ಪ ಸಂಸ್ಕೃತಿಯ ಅವಶೇಷಗಳು ದೊರಕಿದುವಲ್ಲದೆ ಅದಕ್ಕೂ ಹಿಂದಿನ ಮತ್ತು ಅದರ ಮೂಲವೆಂದು ಪರಿಗಣಿಸಲಾದ ಕೋಟ್‌ದಿಜಿಯನ್ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಇಲ್ಲಿ ಕಂಡುಬಂದ ಆರು ಸ್ತರಗಳಲ್ಲಿ ಕಡೆಯ ಮೂರು ಹರಪ್ಪ ಸಂಸ್ಕೃತಿಗೂ ಮೇಲಿನಿಂದ ನಾಲ್ಕನೆಯ ಸ್ತರ ಹರಪ್ಪ ಮತ್ತು ಹರಪ್ಪ–ಪೂರ್ವ ಮಿಶ್ರಸಂಸ್ಕೃತಿಗೂ ಕೆಳಗಿನ ಎರಡು ಸ್ತರಗಳು ಹರಪ್ಪ–ಪೂರ್ವ ಅಥವಾ ಕೋಟ್‌ದಿಜಿಯನ್ ಸಂಸ್ಕೃತಿಗೂ ಸೇರುತ್ತವೆ. ಕೋಟ್‌ದಿಜಿಯನ್ ಸಂಸ್ಕೃತಿಕಾಲದಲ್ಲಿ ಕೋಟೆ ಕೊತ್ತಲಗಳಿಂದ ರಕ್ಷಿತವಾದ ವಸಾಹತುಗಳಲ್ಲಿ ಕಲ್ಲಿನ ತಳಹದಿಯ ಮೇಲೆ ಹಸಿ ಇಟ್ಟಿಗೆಗಳಿಂದ ಕಟ್ಟಿದ ಮನೆಗಳಿದ್ದುವು. ವ್ಯವಸಾಯ ಜನರ ಮುಖ್ಯ ಕಸಬಾಗಿತ್ತು. ತಾಮ್ರವಾಗಲಿ ಬೇರೆ ಯಾವ ಲೋಹವಾಗಲಿ ಬಳಕೆಯಲ್ಲಿರಲಿಲ್ಲ. ಚಾಕುಗಳು, ಬಾಣದ ಮೊನೆಗಳು ಮುಂತಾದ, ಸಿಂಧೂನದಿಯ ಬಯಲಿನಲ್ಲಿ ಹೆಚ್ಚು ಬಳಕೆಯಲ್ಲಿಲ್ಲದಿದ್ದ, ಕಲ್ಲಿನಾಯುಧಗಳು ಇಲ್ಲಿ ಉಪಯೋಗದಲ್ಲಿದ್ದುವು. ಮಣ್ಣಿನ ಪಾತ್ರೆಗಳು ಕುಂಬಾರಚಕ್ರದ ಮೇಲೆ ಮಾಡಿದಂಥವು. ಇವು ಮೇಲ್ಭಾಗದಲ್ಲಿ ಕಪ್ಪು ಬಣ್ಣದ ಪಟ್ಟಿ ಮತ್ತು ನೇರ ಅಥವಾ ಡೊಂಕು ಗೆರೆಗಳಿಂದ ಅಲಂಕೃತವಾಗಿರುತ್ತಿದ್ದುವು. ಕೊನೆಗಾಲದಲ್ಲಿ ಹರಪ್ಪ ಸಂಸ್ಕೃತಿಯ ಮಡಕೆಗಳ ಅಲಂಕಾರಕ್ಕೆ ಬೇಕಾದ ಮಾದರಿಗಳೂ ಸುಟ್ಟ ಮಣ್ಣಿನ ತ್ರಿಕೋಣಾಕಾರದ ಫಲಕಗಳೂ ಬಳಕೆಗೆ ಬಂದು ಆ ಎರಡು ಸಂಸ್ಕೃತಿಗಳ ಪರಸ್ಪರ ಸಂಬಂಧವನ್ನು ಸೂಚಿಸುತ್ತವೆ. ಇಂಗಾಲ–14 ಕಾಲಗಣನೆ ಪದ್ಧತಿಯ ರೀತ್ಯ ಕೋಟ್‌ದಿಜಿಯನ್ ಸಂಸ್ಕೃತಿಗೆ ಪ್ರ.ಶ.ಪೂ.2750ರಿಂದ ಪ್ರ.ಶ.ಪೂ.1960ರ ತನಕ ಕಾಲ ನಿರ್ದೇಶ ಮಾಡಲಾಗಿದೆ. ಅನಂತರದ ಹರಪ್ಪ ಸಂಸ್ಕೃತಿ ಇತರ ಪ್ರದೇಶಗಳಲ್ಲಿಯ ಆ ಸಂಸ್ಕೃತಿಯಂತಿದ್ದರೂ ಹಲವಾರು ಪ್ರಾದೇಶಿಕ ವೈಪರೀತ್ಯಗಳನ್ನು ಒಳಗೊಂಡಿದೆ. (ಬಿ.ಕೆ.ಜ.)

**ಕೋಟಿತೀರ್ಥ :** ಭಾರತದಲ್ಲಿ ಈ ಹೆಸರಿನ ಅನೇಕ ತೀರ್ಥಗಳಿವೆ. ಬ್ರಹ್ಮ, ಮತ್ಸ್ಯ, ವರಾಹ, ವಾಮನ ಪುರಾಣಗಳಲ್ಲಿ ಇವುಗಳ ಉಲ್ಲೇಖವಿದೆ. ಉತ್ತರ ಪ್ರದೇಶದ ಬಾಂದಾ ಜಿಲ್ಲೆಯಲ್ಲಿರುವ ಕಾಲಿಂಜರ ಗ್ರಾಮದಲ್ಲೂ ಗೋಕರ್ಣ, ಮಧುರೆ, ರಾಮೇಶ್ವರಗಳಲ್ಲೂ ಕೋಟಿತೀರ್ಥ ಎಂಬ ಹೆಸರಿನ ಪುಣ್ಯತೀರ್ಥಗಳಿವೆ. ಗೋಕರ್ಣದ ಕೋಟಿತೀರ್ಥ ಕರ್ನಾಟಕ ರಾಜ್ಯದಲ್ಲಿ ಏಕಮೇವಾದ್ವಿತೀಯವೆನಿಸಿದೆ. ಶಿವರಾತ್ರಿಯ ವೇಳೆಯಲ್ಲಿ ದೇಶದ ನಾನಾ ಭಾಗಗಳ ಜನ ಗೋಕರ್ಣಕ್ಕೆ ಬಂದು ಈ ತೀರ್ಥದಲ್ಲಿ ಮೀಯುತ್ತಾರೆ. ತೀರ್ಥದ ನಾಲ್ಕು ಗೋಡೆಗಳೊಳಗೇ ಗುಡಿಗಳಿವೆ; ಹತ್ತಿರದಲ್ಲಿ ಮನೆಮಠಗಳಿವೆ. ಸಮೀಪದಲ್ಲೇ ಮಹಾಬಲೇಶ್ವರ ದೇವಸ್ಥಾನವಿದೆ.

ಮತ್ಸ್ಯಾದಿ ಪುರಾಣಗಳ ಪ್ರಕಾರ ಮುಖ್ಯವಾದ ಕೋಟಿತೀರ್ಥ ಇರುವುದು ನರ್ಮದಾ ನದಿಯ ದಡದಲ್ಲಿ. ಇಲ್ಲಿಯ ಈಶ್ವರನಿಗೆ ಕೋಟೀಶ್ವರ ಎಂದು ಹೆಸರು. ಶಂಕರ ಇಲ್ಲಿ ಒಂದು ಕೋಟಿ ಅಸುರರನ್ನು ಕೊಂದನೆಂದು ಹೇಳಿಕೆ. ನರ್ಮದಾ ನದಿಯ ಉಗಮಸ್ಥಾನದಲ್ಲಿ ಹನ್ನೊಂದು ಕೋನಗಳ ಒಂದು ಸರೋವರವಿದೆ. ಇದನ್ನೂ ಕೋಟಿತೀರ್ಥವೆಂದೇ ಕರೆಯುತ್ತಾರೆ. ಇದರ ಸಮೀಪದಲ್ಲಿ ನರ್ಮದೇಶ್ವರ, ಅಮರಕಂಟಕೇಶ್ವರ ದೇವಸ್ಥಾನಗಳಿವೆ.

ಆಂಧ್ರ ಪ್ರದೇಶದ ಗೋದಾವರಿ ಜಿಲ್ಲೆಯಲ್ಲಿ ಗೋದಾವರಿ ನದಿಯ ದಡದಲ್ಲೂ ಕೋಟಿತೀರ್ಥವೆಂಬ ಕ್ಷೇತ್ರವಿದೆ. ಇಲ್ಲಿ ಗೋದಾವರಿ ನದಿಯಲ್ಲಿ ಸ್ನಾನ ಮಾಡುವುದರಿಂದ ಕುಷ್ಠರೋಗ ಪರಿಹಾರವಾಗುತ್ತದೆಂಬ ನಂಬಿಕೆ ಇದೆ. (ಬಿ.ಎಚ್.ಎಸ್.)

**ಕೋಟೆ :** ರಕ್ಷಣಾವರಣವಿರುವ ಪ್ರದೇಶ. ದಿಬ್ಬ, ಗುಡ್ಡಗಳ ಅಗ್ರಭಾಗಗಳಲ್ಲಿ ಕಟ್ಟುವುದು ವಾಡಿಕೆ. ಯುದ್ಧಸನ್ನಿವೇಶಗಳಲ್ಲಿ ಇಂಥ ಆಯಕಟ್ಟಿನ ರಚನೆ ಒದಗಿಸುವ ಸೌಕರ್ಯಗಳು ಎರಡು: ಎತ್ತರ ಸ್ಥಳದಲ್ಲಿ ಇರುವುದರಿಂದ ಶತ್ರುವಿನ ವಿರುದ್ಧ ಸಹಜವಾಗಿ ಒದಗುವ ರಕ್ಷಣೆ, ಸುತ್ತಲೂ ವ್ಯಾಪಿಸಿರುವ ವಿಸ್ತಾರ ತಗ್ಗುಪ್ರದೇಶದ ಮೇಲೆ ಲಭಿಸುವ ಪ್ರಭುತ್ವ. ಆಧುನಿಕ ನೆಲ ಕಾದಾಟದಲ್ಲಿ ಸಹ ಕೋಟೆಯ ಮಹತ್ತ್ವ ಕಡಿಮೆ ಆಗಿಲ್ಲ. ಮುಖ್ಯವಾಗಿ ಕೋಟೆ ಯುದ್ಧಗತಿಯ ನಿಯಂತ್ರಣ ಕೇಂದ್ರವಾಗಿ ಯುದ್ಧವ್ಯವಸ್ಥೆಯ ನರಕೇಂದ್ರವಾಗಿ ಪ್ರಾಮುಖ್ಯ ಪಡೆದಿದೆ.

ಕೋಟೆಯ ರಚನಾಕ್ರಮ ನಿವೇಶನದ ಏರುತಗ್ಗುಗಳು, ಸಮಭೂಮಿ, ಪರ್ವತ ಪ್ರದೇಶ ಮುಂತಾದ ಗುಣಲಕ್ಷಣಗಳನ್ನು ಅನುಸರಿಸುತ್ತದೆ. ಕೋಟೆ ಕೊತ್ತಲಗಳಲ್ಲಿ ಶಾಶ್ವತ ಮತ್ತು ಹಂಗಾಮಿ ರಚನೆಗಳೆಂದು ಎರಡು ವಿಧಾನಗಳಿವೆ. ದೇಶದ ಗಡಿನಾಡು, ಪುರದುರ್ಗ, ರೈಲುಸಂಧಿ, ಅಸ್ತ್ರಶಾಲೆ, ಪರ್ವತಕಣಿವೆ, ಸಮುದ್ರತೀರ, ವಾಣಿಜ್ಯಕ್ಷೇತ್ರ ಮುಂತಾದವುಗಳ ರಕ್ಷಣೆಗೆ ಅಣಿಮಾಡಿದ ಕೋಟೆಕೊತ್ತಲಗಳು ಸ್ಥಿರರಚನೆ. ಈ ಕಟ್ಟಡಗಳಿಗೆ ಯಥೇಚ್ಛ ಕಾಲಾವಧಿಯೂ ಕಟ್ಟಡ ಸಾಮಗ್ರಿಗಳೂ ಅಗತ್ಯ. ಹೀಗಾಗಿ ಅವನ್ನು ಶಾಂತಿಕಾಲದಲ್ಲಿ ನಿರ್ಮಿಸುತ್ತಾರೆ. ಯುದ್ಧರಂಗದಲ್ಲಿ ಆತ್ಮರಕ್ಷಣೆಗಾಗಿಯೂ ಶತ್ರುಗಳ ಆಕ್ರಮಣದ ನಿವಾರಣೆಗಳಿಗಾಗಿಯೂ ಸೈನಿಕರು ತಮ್ಮ ಬಳಿ ಇರುವ ಕೊಡಲಿ, ಗುದ್ದಲಿ ಮುಂತಾದ ಆಯುಧಗಳಿಂದಲೂ ಸುತ್ತಮುತ್ತಣ ಪ್ರದೇಶಗಳಲ್ಲಿ ಸಿಕ್ಕುವ ಸಾಮಗ್ರಿಗಳಿಂದಲೂ ತರಾತುರಿಯಲ್ಲಿ ವ್ಯವಸ್ಥಾಪಿಸುವ ರಚನೆಗಳು ತಾತ್ಕಾಲಿಕ ಸಾಧನಗಳು.

ಪಟ್ಟಣಗಳನ್ನೂ ವ್ಯಾಪಾರಕ್ಷೇತ್ರಗಳ ಸಂಪತ್ತನ್ನೂ ರಕ್ಷಿಸುವ ಎತ್ತರದ ಕೋಟೆ ಗೋಡೆಗಳು ಬಹು ಪ್ರಾಚೀನಕಾಲದಿಂದಲೂ ಬಳಕೆಯಲ್ಲಿ ಬಂದಿವೆ. ನಿನೆವ ಮತ್ತು ಬ್ಯಾಬಿಲೋನಿಯಗಳ ರಕ್ಷಣೆಗೋಡೆಗಳು ಯುದ್ಧಸಮಯದಲ್ಲಿ ಇಡೀ ದೇಶದ ನಿವಾಸಿಗಳು, ಅವರ ಕುರಿಹಿಂಡುಗಳು ದನಕರುಗಳು, ಮನೆಸಾಮಾನುಗಳಿಗೆ ಆಶ್ರಯ ನೀಡುತ್ತಿದ್ದುವು.

ಪ್ರ.ಶ.ಪೂ.2,000ಕ್ಕಿಂತಲೂ ಹೆಚ್ಚು ವರ್ಷಗಳ ಹಿಂದೆಯೇ ಕಟ್ಟಿದ್ದ ನಿನೆವದ ಕೋಟೆಗೋಡೆಗಳ ಎತ್ತರ 45.71 ಮೀ ದಪ್ಪ 9.14 ಮೀ ಸುತ್ತಳತೆ 80 ಕಿ.ಮೀ. ಅದರ ಮೇಲೆ 1,500 ರಕ್ಷಣ ಗೋಪುರಗಳಿದ್ದವು. ಪ್ರ.ಶ.ಪೂ. 600ರಲ್ಲಿ ಪೂರ್ವ ಭೂಮಧ್ಯ ಸಮುದ್ರದ ಜನಾಂಗದವರು ಬಿಸಿಲಿನಲ್ಲಿ ಒಣಗಿಸಿದ ಮಣ್ಣು ಇಟ್ಟಿಗೆ ಗೋಡೆಗಳಿಂದ ತಮ್ಮ ಪಟ್ಟಣಗಳನ್ನು ರಕ್ಷಿಸಿದ್ದರು. ಮಂಗೋಲಿಯದ ದಾಳಿಕಾರರನ್ನು ತಡೆಗಟ್ಟಲು ಚೀನೀಯರು ಕಟ್ಟಿದ ಬೃಹದಾಕಾರದ ಗೋಡೆ ಪ್ರ.ಶ.ಪೂ. 221ರಲ್ಲಿ ಆರಂಭಿಸಿ ಮುಗಿಯಲು ಹತ್ತು ವರ್ಷಕಾಲ ಹಿಡಿಯಿತು. ಅದು ಪರ್ವತಶ್ರೇಣಿ ಶಿಖರಗಳ ಸಾಲುಗಳನ್ನು ಅನುಸರಿಸಿ ಆಳವಾದ ಕಣಿವೆಗಳನ್ನು ಹಾಯ್ದು 3200 ಕಿ.ಮೀ.ಗಿಂತಲೂ ಹೆಚ್ಚು ಉದ್ದಕ್ಕೆ ಚಾಚಿದೆ. ಅದರ ಎತ್ತರ ಸು. 4.57–6.09 ಮೀ ಅಗಲ ಬುಡದಲ್ಲಿ ಸು. 7.61 ಮೀ ಮೇಲೆ ಸು. 4.57–6.09 ಮೀ. ಆರುಮಂದಿ ಅಶ್ವಾರೋಹಿಗಳು ಜೋಡಿಯಲ್ಲಿ ಸವಾರಿ ಮಾಡಲು ಸಾಧ್ಯವಾಗುವಷ್ಟು ಅಗಲವಾದ ದಾರಿ ಕಟ್ಟೆಯ ಮೇಲಿದೆ. ದಿಡ್ಡಿ ಗೋಡೆಗಳ ರಕ್ಷಣೆ ಉಂಟು. ಗೋಡೆಯ ಮೇಲೆ ಮುಂದಕ್ಕೆ ಚಾಚಿಕೊಂಡಿದ್ದ ಸು. 12.19 ಮೀ ಎತ್ತರ, 12.91 ಮೀ ಚಚ್ಚೌಕದ 25,000 ಸ್ತೂಪಗಳೂ ಪ್ರತಿಯೊಂದರಲ್ಲೂ ದಾಳಿಕಾರರ ಮೇಲೆ ಬಿಲ್ಲಿನಿಂದ ಅಸ್ತ್ರಗಳನ್ನು ಹಾರಿಸಲು ತಕ್ಕ ಕಿಂಡಿಗಳೂ ಇದ್ದವು. ಸಾವಿರಾರು ಸ್ತೂಪಗಳು ಇಂದಿಗೂ ಉಳಿದುಕೊಂಡಿವೆ.

ಮಧ್ಯಯುಗೀನ ಯುರೋಪಿನ ಒಂದು ಕೋಟೆಮನೆ

ಗೋಡೆಯ ಹೊರಗೂ ಬೆಟ್ಟಗಳ ಮೇಲ್ಭಾಗದಲ್ಲೂ ಕಣಿವೆಗಳ ಮೇಲೂ ಅನೇಕ ಪಹರೆಗೋಪುರಗಳಿವೆ. ಇವನ್ನೂ ದೊಡ್ಡ ಸ್ತೂಪಗಳನ್ನೂ ಹಗಲು ಹೊಗೆ, ಬಾವುಟಗಳಿಂದಲೂ ರಾತ್ರಿ ಬೆಂಕಿಜ್ವಾಲೆ, ದೀಪಗಳಿಂದಲೂ ಅಪಾಯಗಳನ್ನು ಸಂಕೇತಮಾಡಿ ಸೂಚಿಸಲು ಉಪಯೋಗಿಸುತ್ತಿದ್ದರು. ದಾಳಿಕಾರರು ಬರುವುದನ್ನು ಕೂಡಲೆ ಸೂಚನೆಕೊಟ್ಟು ಗಡಿನಾಡಿನ ಯಾವ ಭಾಗದಲ್ಲೂ ಬೇಕಾದ ಹೆಚ್ಚು ಸೇನಾಬಲವನ್ನು ತರಿಸಲು ಅವಕಾಶವಿತ್ತು.

ರೋಮ್ ಚಕ್ರಾಧಿಪತ್ಯದ ರಕ್ಷಣೆಗೆ ರೈನ್ ಮತ್ತು ಡಾನ್ಯೂಬ್ ನದಿಗಳ ಸಾಲಿನಲ್ಲಿ ಇಡೀ ಗಡಿನಾಡನ್ನು ಆವರಿಸಿದ್ದ ರಾಕ್ಷಸ ಗೋಡೆ ಇತಿಹಾಸ ಪ್ರಸಿದ್ಧವಾಗಿತ್ತು. ಮರುಭೂಮಿಗಳಲ್ಲೂ ವಿಂಗಡವಾದ ಕೋಟೆಗಳಿದ್ದುವು. ಮುಖ್ಯ ಸ್ಥಳಗಳಲ್ಲಿ ಬಲಪಡಿಸಿದ್ದ ಸೈನಿಕಪಾಳ್ಯಗಳು ಕಾಲಾಂತರದಲ್ಲಿ ಕೋಲೋನ್, ಸ್ಟ್ರಾಸ್‌ಬರ್ಗ್ ಮುಂತಾದ ಭಾರಿ ಪಟ್ಟಣಗಳಾಗಿ ಬೆಳೆದು ರಕ್ಷಣಾ ಗೋಡೆಗಳಿಂದ ಆವೃತವಾಗಿದ್ದುವು. ಬಿಜ್ಞಾಂಟಿನ್ ದೇಶದ ಸೈನಿಕರು ರೋಮಕರಂತೆ ಡಾನ್ಯೂಬ್ ನದಿಯ ಗಡಿಗಳಲ್ಲಿ ರಕ್ಷಣೆ ಕೋಟೆಗಳ ಶ್ರೇಣಿಗಳನ್ನು ಕಟ್ಟಿ ತಮ್ಮ ಪಾಳ್ಯಗಳನ್ನು ಸ್ಥಾಪಿಸಿದ್ದರು. ಈ ಠಾಣೆಗಳು ಬಾಲ್ಕನ್ ಪ್ರಾಂತ್ಯದ ಗೋಡೆಯಿಂದ ಆವೃತವಾಗಿದ್ದ ಊರುಗಳು, ಕೋಟೆ ಮನೆಗಳೊಡನೆ ರಕ್ಷಣಾ ವ್ಯವಸ್ಥೆಯಲ್ಲಿದ್ದುವು. ರೋಮಕರು ಕೋಟೆ ನಿರ್ಮಾಣ ತಂತ್ರದಲ್ಲಿ ಪ್ರವೀಣರಾಗಿದ್ದರು. ಇಟ್ಟಿಗೆ ಕಲ್ಲುಗಳಿಂದ ಕಟ್ಟಿದ ಎತ್ತರ, ದಪ್ಪವಾದ ಗೋಡೆಗಳು, ಅವುಗಳ ಮೇಲೆ ರಕ್ಷಣ ಸೈನ್ಯಗಳು ಧಾರಾಳವಾಗಿ ಓಡಾಡುತ್ತ ತಮ್ಮ ಆಯುಧಗಳನ್ನು ಉಪಯೋಗಿಸಲು ತಕ್ಕಷ್ಟು ವಿಶಾಲವಾದ ಕಟ್ಟೆ, ಗೋಡೆಯ ಉದ್ದಕ್ಕೂ ಅಲ್ಲಲ್ಲಿ ಗೋಪುರಗಳು, ಗೋಡೆಯ ಸುತ್ತಲೂ ಅಗಲ, ಆಳದ ನೀರು ತುಂಬಿದ ಕಂದಕಗಳು, ಅವನ್ನು ಬಲಪಡಿಸಲು ಸುತ್ತುಗಟ್ಟಿದ್ದ ಚೂಪಾದ ಗೂಟಗಳ ದಸಿಬೇಲಿಗಳು, ಗೋಪುರಗಳ ಪಕ್ಕದಿಂದ ಕೆಳಗಿನ ಶತ್ರುಸೈನ್ಯದ ಮೇಲೆ ಬೆಂಕಿ ಉರಿಯುವ ವಸ್ತುಗಳನ್ನು ಎಸೆಯಲು ಸೌಕರ್ಯ, ಶತ್ರುಗಳು ಹಲ್ಲೆಮಾಡಿದರೆ ದುರ್ಗರಕ್ಷಕರಿಗೆ ಆಶ್ರಯ, ಪಟ್ಟಣವನ್ನೆಲ್ಲ ದೃಷ್ಟಿಪಥದಲ್ಲಿರುವಂತೆ ಎತ್ತರವಾಗಿ ಕಟ್ಟಿದ ಸಿಟಡೆಲ್ ಎಂಬ ಪಹರೆದುರ್ಗ, ನದಿಯ ಮೇಲಿನ ಸೇತುವೆಯ ರಕ್ಷಣೆಗೆ ಆಚೆ ಕಡೆ ಸೇತುದುರ್ಗ–ಇವೆಲ್ಲ ರಚಿತವಾಗಿದ್ದವು. ಅಷ್ಟು ದಪ್ಪ ಮತ್ತು ಎತ್ತರದ ಗೋಡೆಗಳನ್ನು ಸಂಪೂರ್ಣವಾಗಿ ಕಲ್ಲಿನಿಂದಲೇ ಕಟ್ಟಿದರೆ ವಿಪರೀತ ಖರ್ಚಾಗುವುದರಿಂದ ಎರಡು ಸಮಾಂತರ ಗೋಡೆಗಳನ್ನು ಬೇರೆಬೇರೆಯಾಗಿ

ಇಂಗ್ಲೆಂಡಿನ ಕೆಂಟ್ ಜಿಲ್ಲೆಯ ಅಲ್ಲಿಂಗ್‌ಟನ್ನಿನಲ್ಲಿರುವ ಕೋಟೆಮನೆ

ಸು. 4.57–6.09 ಮೀ ದೂರದಲ್ಲಿ ಕಟ್ಟಿ ಮಧ್ಯೆ ಮಣ್ಣು, ಕಲ್ಲು, ಇಟ್ಟಿಗೆಗಳ ಒಡ್ಡೊಡ್ಡ ಹೆಂಟೆ, ಗುಂಡುಗಳನ್ನು ಭರ್ತಿಗಾಗಿ ತುಂಬುತ್ತಿದ್ದರು. ಶತ್ರುಗಳ ಅಂಬು, ಬಾಣಗಳಿಂದ ರಕ್ಷಣೆ ಪಡೆಯಲು ಹೊರ ಗೋಡೆಯ ಮುಖವನ್ನು ಕಟ್ಟೆಗಿಂತ ಹೆಚ್ಚು ಎತ್ತರಕ್ಕೆ ಕಟ್ಟುತ್ತಿದ್ದರು. ಶತ್ರುಗಳು ಮೇಲೆ ಹತ್ತಿದರೆ ಕಾವಲುಗಾರರು ಕಟ್ಟೆಗಳನ್ನು ಒಡೆದು ಅವರನ್ನು ಕೆಡವುತ್ತಿದ್ದರು. ಶತ್ರುಗಳು ಏಣಿಗಳಿಂದಲೂ ರಾಶಿಹಾಕಿದ ಕಟ್ಟಿಗೆ ಹೊರೆಗಳ ಕುಪ್ಪೆಗಳ ಮೇಲಿನಿಂದಲೂ ಕೋಟೆಯನ್ನು ಹಲ್ಲೆ ಮಾಡಲು ಆರಂಭಿಸಿದಾಗ ಗೋಡೆಯ ಎತ್ತರವನ್ನು ಹೆಚ್ಚಿಸಲಾಯಿತು.

ಅನೇಕ ಶತಮಾನಗಳ ಕಾಲ ಕೋಟೆಗೋಡೆಗಳು ಶತ್ರುಗಳ ಆಕ್ರಮಣವನ್ನು ತಡೆದುವು. ಅನಂತರ ಕೋಟೆ ಮುತ್ತಿಗೆಯಲ್ಲಿ ನಾನಾಬಗೆಯ ತಂತ್ರಗಳು ಆಗಾಧವಾಗಿ ಬೆಳೆದು ಪ್ರಚಂಡ ರೂಪವನ್ನು ತಾಳಿ ಮುತ್ತಿಗೆಕಲೆ ಒಂದು ವಿಶಿಷ್ಟ ವಿದ್ಯೆಯಾಯಿತು. ಅವುಗಳಿಗೆ ತಕ್ಕಂತೆ ಕೋಟೆ ರಕ್ಷಣೆ ಕ್ರಮಗಳಲ್ಲೂ ವ್ಯೂಹಯುಕ್ತಿಯ ವ್ಯವಸ್ಥೆಗಳಾದುವು. ಮುತ್ತಿಗೆಯವರು ಗೋಡೆಗಳ ಕೆಳಗೆ ಸುರಂಗ ಕೊರೆದು ಒಳನುಗ್ಗುತ್ತಿದ್ದರು. ತಳಭಾಗದಲ್ಲಿ ಸುರಂಗ ತೋಡಿ ಅಡಿಪಾಯವನ್ನು ಶಿಥಿಲಗೊಳಿಸಿ ಗೋಡೆಗಳನ್ನು ಕೆಡವುತ್ತಿದ್ದರು. ಇದನ್ನು ಪ್ರತೀಕರಿಸಲು ರಕ್ಷಕರು ಪ್ರತಿ ಸುರಂಗಗಳನ್ನು ತೋಡಿ, ಸ್ಫೋಟಿಸಿ ಅಥವಾ ಶತ್ರು ಸುರಂಗಗಳಿಗೆ ಹೊಗೆ ತುಂಬಿ ಅವರನ್ನು ಓಡಿಸುತ್ತಿದ್ದರು. ಶತ್ರುಗಳ ಅಸ್ತ್ರ, ಬಾಣಗಳನ್ನು ತಡೆಯಲು ಶಕ್ಯವಾಗುವಂತೆ ವರ್ತುಲಾಕಾರದ ಸ್ತೂಪಗಳು ರಚಿತವಾದುವು. ಶತ್ರುಗಳು 39.81–45.71 ಮೀ ಉದ್ದದ ಟಗರಿನ ಮುಖದ ತೂಗುದಿಮ್ಮಿಗಳಿಂದ ಗೋಡೆಗಳನ್ನು ಒಡೆಯುತ್ತಿದ್ದರು. ಒಮ್ಮೆ ಒಂದು ತೂಗು ದಿಮ್ಮಿಯನ್ನು ಚಲಿಸಲು 200ಎತ್ತುಗಳು ಬೇಕಾದುವೆಂದೂ 1,500 ಜನರು ಒಟ್ಟಾಗಿ ಅದನ್ನು ಗೋಡೆಗೆ ದೂಡಬೇಕಾಯಿತೆಂದೂ ದಾಖಲೆಯಿದೆ.

ರೋಮನರ ಅವನತಿಯ ತರುವಾಯ ಕೋಟೆಕಲೆ ಮತ್ತು ಮುತ್ತಿಗೆ ತಂತ್ರಗಳು ಕ್ಷಯಿಸಿ ದುರ್ಗರಚನೆಯಲ್ಲಿ ಅನೇಕ ಶತಮಾನಗಳ ಕಾಲ ಪ್ರಗತಿಯಾಗಲಿಲ್ಲ. ಮಧ್ಯ ಯುಗದ ಪಾಳೆಗಾರಿಕೆಯ ಅವ್ಯವಸ್ಥೆಯಲ್ಲಿ ಫ್ರಾನ್ಸ್, ಇಂಗ್ಲೆಂಡಿನಲ್ಲಿ ಅರಾಜಕತೆ, ಹಿಂಸೆ, ಲೂಟಿ, ದರೋಡೆಗಳೂ ಸ್ಥಳಿಕ ಸರದಾರರಲ್ಲಿ ಪರಸ್ಪರ ದ್ವೇಷ, ಪೈಪೋಟಿಯ ಕಾದಾಟಗಳೂ ಬಂದು ಬಲಿಷ್ಠರು ಜನರ ರಕ್ಷಕರೂ ದಣಿಗಳೂ ಆಗಿ ಅವರಿಂದ ತೆರಿಗೆ ಸೆಳೆಯುತ್ತಿದ್ದರು. ಈ ಪಾಳೆಗಾರರು ತಮ್ಮ ಶತ್ರುಗಳ ಕಾಟವನ್ನು ತಪ್ಪಿಸಿಕೊಳ್ಳಲೂ ತಮ್ಮ ಪ್ರಜೆ, ಸೀಮೆಗಳನ್ನು ಕಾಪಾಡಲೂ ತಮ್ಮ ಮತ್ತು ಅನುಯಾಯಿ ಘಟಿಂಗರ ನಿವಾಸಕ್ಕೂ ಕ್ಯಾಸಲ್ ಎಂಬ ಕೋಟೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಈ ದುರ್ಗಗಳ ಕ್ರಮ ಹೀಗಿತ್ತು. ಸುತ್ತಲೂ ಕಡಿದಾದ ಇರಕಲು ಪಕ್ಕಗಳಿರುವ ಎತ್ತರದ ದಂಡೆ ಅಥವಾ ಗುಡ್ಡದ ಮೇಲೆ ಎತ್ತರದ ವರ್ತುಲಾಕಾರದ ಮಣ್ಣುಕಟ್ಟೆ, ಅದರ ಸುತ್ತಲೂ ನೀರಿನ ಕಂದಕ, ತುದಿಯ ಶಿಖರದ ಸುತ್ತಲೂ ಚೂಪಾದ ಉದ್ದನೆಯ ಗೂಟಗಳ ದಸಿಬೇಲಿ ಅಥವಾ ಕಲ್ಲುಕಿಲ್ಲೆ, ಅದರೊಳಗೆ ಎತ್ತರವಾದ ಗಿರಿದುರ್ಗದ ಬುರುಜು ಸ್ತೂಪ, ಸುತ್ತಮುತ್ತಲ ಪ್ರಾಂತ್ಯವನ್ನು ವೀಕ್ಷಿಸಲು ಪಹರೆಗೋಪುರ, ಕೋಟೆ ಪ್ರವೇಶಕ್ಕೆ ಕಂದಕವನ್ನು ದಾಟಲು ಚಲಿಸುವ ಕೀಲು ಸೇತುವೆ, ಶತ್ರುಗಳ ಅಸ್ತ್ರ, ಉರಿಯುವ ಕೊಳ್ಳಿಗಳನ್ನು ತಡೆಯಲು ಗೋಡೆಗೆ ರಂಧ್ರಗಳು, ಹೊರಗಿನವರು ಪ್ರವೇಶಿಸಲಾಗದಂತೆ ಕೀಲುಸೇತುವೆಯನ್ನು ಮೇಲೆತ್ತಿ ಗೋಡೆಯ ತೂತನ್ನು ಮುಚ್ಚಲು ಮೇಲಿನಿಂದ ಇಳಿಸುವ ಭಾರವಾದ ಹೆಬ್ಬಾಗಿಲು, ವಾಸ್ತುಶಿಲ್ಪಿಗಳ ಚಾತುರ್ಯದಿಂದ ಕ್ರಮೇಣ

ಭಾರಿ ಕೋಟೆಮನೆಗಳೂ ಬಾಗಿಲಿನಲ್ಲಿ ಬೋನುಗಳೂ ಅನೇಕ ಸುಧಾರಣೆಗಳೂ ಬಂದುವು. 12ನೆಯ ಶತಮಾನದಲ್ಲಿ ಕಟ್ಟಿದ ಲಂಡನ್ ದುರ್ಗವೆಂಬ ಪ್ರಖ್ಯಾತ ಸಮಚತುಷ್ಕೋನ ಗೋಪುರ ಇಂಗ್ಲೆಂಡ್ ರಾಜನ ಅರಮನೆಯಾಗಿಯೂ ತರುವಾಯ ರಾಜಕೀಯ ಕೈದಿಗಳಿಗೆ ಸರ್ಕಾರದ ಸೆರೆಮನೆಯಾಗಿಯೂ ಇದ್ದು ಈಗ ಯುದ್ಧಾಯುಧ

ಗುಲ್ಬರ್ಗದ ಕೋಟೆ

ಸಂಗ್ರಹ ಶಾಲೆಯಾಗಿದೆ. ಈ ಕಾಲದಲ್ಲಿ ಈ ದುರ್ಗಮ ಕೋಟೆಗಳನ್ನು ನಿಗ್ರಹಿಸುವುದು ಬಹುಮಟ್ಟಿಗೆ ಅಸಾಧ್ಯವಾಗಿತ್ತು. ಒಳಗಿನವರಿಗೆ ಆಹಾರ ಸಂಚಯಗಳು ಹೋಗದಂತೆ ಹಾದಿ ಕಟ್ಟುವುದೊಂದೇ ಮಾರ್ಗ. ಹದಿನಾಲ್ಕನೆಯ ಶತಮಾನದಲ್ಲಿ ಫಿರಂಗಿ ಗುಂಡುಗಳು ಬಂದು ಈ ಗಿರಿದುರ್ಗಗಳನ್ನು ಸುಲಭವಾಗಿ ಒಡೆಯಲು ಸಾಧ್ಯವಾಯಿತು. 1450ರಲ್ಲಿ ಫ್ರಾನ್ಸಿನ ಏಳನೆಯ ಚಾರ್ಲ್ಸ್ ನಾರ್ಮಂಡಿಯ ಎಲ್ಲ ಕೋಟೆಗೃಹಗಳನ್ನೂ ಒಂದೇ ವರ್ಷದಲ್ಲಿ ಇಂಗ್ಲಿಷರಿಂದ ಕಿತ್ತುಕೊಂಡ. ಇಟಲಿಯಲ್ಲಿ ಕೋಟೆ ಕೊತ್ತಳಗಳಿಂದ ಬಲಪಡಿಸಲ್ಪಟ್ಟಿದ್ದ ಅನೇಕ ಕೋಟೆಗೃಹಗಳನ್ನು ಎಂಟನೆಯ ಚಾರ್ಲ್ಸ್ 1494ರಲ್ಲಿ ಬಹು ಶೀಘ್ರವಾಗಿ ಜಯಿಸಿದ. ಕೋಟೆಗಳ ಭದ್ರತೆಗೆ ಹೊಸ ರಚನಾಕ್ರಮಗಳು ಅಗತ್ಯವಾದುವು. ಹದಿನೈದನೆಯ ಶತಮಾನದ ಕೊನೆಯಲ್ಲಿ ಬಂದೂಕು, ಫಿರಂಗಿಗಳು ಪ್ರಬಲವಾಗಿ ಎತ್ತರದ ಕಲ್ಲು ಗೋಡೆಗಳು ಗುಂಡಿನೇಟಿಗೆ ಗುರಿಯಾದುವು. ಆದ್ದರಿಂದ ಕೋಟೆ ನಿರ್ಮಾಣದಲ್ಲಿ ಅನೇಕ ಪರಿಷ್ಕರಣಗಳಾದವು. ಸೈನಿಕ ಶಿಲ್ಪಿಗಳು ಕೋಟೆಗಳ ರಕ್ಷಣಶಕ್ತಿಯನ್ನು ಹೆಚ್ಚಿಸಲು ರೇಖಾಗಣಿತದ ತತ್ತ್ವಗಳನ್ನು ಪ್ರಯೋಗಿಸಿ ನಾನಾ ಮಾದರಿಗಳನ್ನು ಶಾಸ್ತ್ರೋಕ್ತವಾಗಿ ಸ್ಥಾಪಿಸಿ ಬುರುಜು (ಬ್ಯಾಸ್ಟಿಯನ್) ಕೋಟೆಯನ್ನು ಸೃಷ್ಟಿಸಿದರು. ಕೋಟೆಯ ಚಿತ್ರರೇಖೆಯನ್ನು ಬದಲಿಸಿ. ಹಿಂದಿನ ನೇರವಾದ ಕೋಟೆಗಳನ್ನು ಮಾರ್ಪಡಿಸಿ, ಇಸ್ಪೀಟಿನ ಎಕ್ಕದ ಆಕಾರದಲ್ಲಿ ಮುಂದಕ್ಕೆ ಚಾಚಿ ಕೊಂಡಿರುವ ಬುರುಜುಗಳನ್ನು ಕೋಟೆಗೆ ಅಂತರಗಳಲ್ಲಿ ಕಟ್ಟಲಾಯಿತು. ಕೋಟೆ ರಕ್ಷಕರು ಅಡ್ಡಲಾಗಿ ಬಂದೂಕನ್ನು ಹೊಡೆದು ಮುತ್ತಿಗೆ ಸೈನ್ಯವನ್ನು ನಿವಾರಿಸಲು ಸಾಧ್ಯವಾಗುವಂತೆ ಬುರುಜುಗಳನ್ನು ಅಳವಡಿಸಲಾಯಿತು. ಸಾಮಾನ್ಯ ಕೋಟೆಗಳಲ್ಲಿ ಐದಾರು ಬುರುಜುಗಳಿದ್ದವು. ಅವುಗಳಿಗೆ ನಕ್ಷತ್ರ ಕೋಟೆಗಳೆಂದು ಹೆಸರಾಯಿತು. ಪ್ರಪಂಚದ ಅತಿ ಶ್ರೇಷ್ಠ ಎಂಜಿನಿಯರುಗಳ ದರ್ಜೆಯವನಾಗಿದ್ದ ವಾಬನ್ (ಫ್ರೆಂಚ್) ಎಂಬಾತ 17ನೆಯ ಶತಮಾನದಲ್ಲಿ ಬುರುಜುಕೋಟೆಯ ಕ್ರಮವನ್ನು ಪೂರ್ಣಗೊಳಿಸಿದ. ಈತ ಸಮಾಂತರ ಕಂದಕಗಳನ್ನು ತೋಡಿ ಬುರುಜುಕೋಟೆಯನ್ನು ಸಮೀಪಿಸಿ ಅದನ್ನು ಫಿರಂಗಿಯಿಂದ ಒಡೆಯುವ ಕ್ರಮವನ್ನು ಸಹ ಕಂಡುಹಿಡಿದ. ಐದು ಬುರುಜುಗಳುಳ್ಳ ನಕ್ಷತ್ರ ಚಿತ್ರರೇಖೆ ಬದಲಾಗಿ ಟೆನೇಲ್ ಎಂಬ ಚಿತ್ರರೇಖೆ ಬಂದಿತು. ಅದರಲ್ಲೂ ಕೆಲವು ನ್ಯೂನತೆಗಳಿದ್ದರಿಂದ ಬುರುಜು ಚಿತ್ರರೇಖೆ ಕಲ್ಪಿತವಾಯಿತು. ಈ ಹೊಸ ನಮೂನೆಗಳು ಹೆಬ್ಬಾಗಿಲು, ದಾಳಿಗಾರರನ್ನು ಆಕ್ರಮಿಸಲು ಸ್ತಂಭ, ಮುಚ್ಚಳ ಮುಂತಾದ ಅನೇಕ ಅಂಗಗಳೊಡನೆ ರಚಿತವಾದುವು. ದೊಡ್ಡಕೋಟೆಯ ಪ್ರತಿಭಾಗವೂ ಉಳಿದ ಭಾಗಗಳಿಂದ ಬೇರೆಯಾಗಿ, ಪ್ರತ್ಯೇಕ ಸೇನೆಯನ್ನು ಪಡೆದು ಪ್ರತ್ಯೇಕ ಕೋಟೆಯಂತಾಗಿ ರಕ್ಷಣೆಗೆ ಉಳಿದ ಭಾಗಗಳೊಡನೆ ಸಹಕರಿಸುತ್ತಿತ್ತು. ಇನ್ನೊಬ್ಬ ನಿಪುಣ ಫ್ರೆಂಚ್ ಎಂಜಿನಿಯರ್ ಮೋಂಟಾಲೆಂಬರ್ಟ್ ಎಂಬಾತ ಬಹುಭುಜ ಕೋನಗಳ ಆಕೃತಿಯ ಕೋಟೆಯನ್ನು ಕಲ್ಪಿಸಿದ. ಜರ್ಮನರೂ ಪ್ರಷ್ಯನರೂ ಈ ಕ್ರಮವನ್ನು ಅನುಸರಿಸಿದರು. ಚತುರ ಡಚ್ ಎಂಜಿನಿಯರುಗಳೂ ಅನೇಕ ಪ್ರಖ್ಯಾತ ಕೋಟೆಗಳನ್ನು ರಚಿಸಿದರು. ಅವರ ಆಸ್ಟನಡ್ ಕೋಟೆ ಮುತ್ತಿಗೆಯನ್ನು ಮೂರು ವರ್ಷ ಕಾಲ ಎದುರಿಸಿತು.

ಹಿಂದಿನ ಕಾಲದ ಎತ್ತರದ ಕಲ್ಲುಗೋಡೆಗಳ ಬದಲು ತಗ್ಗಾದ ದಪ್ಪ ಮಣ್ಣು ಗೋಡೆಗಳು ಕಲ್ಲಿನ ಮೇಲ್ಮೈಗೆ ಬಂದು ಕೋಟೆಗೋಡೆಯನ್ನು ಮುಚ್ಚಿ ಮರೆ ಮಾಡಿದುವು. ಕಂದಕವನ್ನು ತೋಡಿ ಅದರ ತಳಕ್ಕೆ ಕೋಟೆಗೋಡೆಯನ್ನು ಸೇರಿಸುವ ಹೊಸ ವಿಧಾನ ಬಂದಿತು. ಕಲ್ಲಿನ ಪಾಗಾರವಿರುವ ರಕ್ಷಣೆಯ ಮಣ್ಣುದಿಬ್ಬಗಳ ಆಳುವೇರಿಗಳು (ರ್‍ಯಾಂಪರ್ಟ್ಸ್); ಅವು ಹಾರಿಬರದಂತೆ ಗೋಡೆಯಿಂದ ಆಳುವೇರಿಯ ಕೆಳಗೆ ಕಮಾನಿನ ಸುರಂಗಮಾರ್ಗಗಳ ಕಟ್ಟಣೆ, ಬುರುಜುಗಳ ಸುತ್ತಲೂ ನೀರಿನ ಕಂದಕ, ಕಂದಕದ ಎದುರಿಗೆ ಕೋಟೆಯ ಸುತ್ತಲೂ ದಿಡ್ಡಿ ಗೋಡೆಯ ಎತ್ತರಕ್ಕಿಂತಲೂ ಹೆಚ್ಚು ಎತ್ತರವಾದ ಗ್ಲೇಸಿಸ್ ಎಂಬ ಕಡಿದಾದ, ಇರುಕಲು ಮಣ್ಣು ದಿಬ್ಬಗಳು ; ಅವುಗಳ ಹಿಂದೆ ರಕ್ಷಣಾ ಸೈನ್ಯ ಸೇರಲು ಮುಚ್ಚಿಗೆಯ ಆಶ್ರಯ–ಇವು ಕೋಟೆಯ ಅಂಗಗಳು. ಶತ್ರುಸೈನ್ಯ ಕೋಟೆಗೋಡೆಗೆ ಹಾರಿಸಿದ ಫಿರಂಗಿ ಗುಂಡುಗಳು ಮೆದುಮಣ್ಣಿನಲ್ಲಿ ಹೂತುಹೋಗಿ ಗೋಡೆಗಳಿಗೆ ಅಪಾಯವಾಗುವುದಿಲ್ಲ. ಪಟ್ಟಣಗಳಿಗೆ ಹಿಂದೆಯೇ ಕಟ್ಟಿದ್ದ ಕೋಟೆಗೋಡೆಗಳಲ್ಲಿ ಮಣ್ಣುದಿಬ್ಬ, ಕೊತ್ತಲಗಳನ್ನು ಕಟ್ಟಿ ಗೋಡೆಗಳನ್ನು ಬುರುಜುಗಳಿಂದ ಭದ್ರಪಡಿಸಲಾಯಿತು. ನಾನಾದೇಶಗಳ ಗಡಿನಾಡುಗಳಲ್ಲಿ ವ್ಯೂಹ ಯುಕ್ತಿಯ ಸ್ಥಳಗಳಲ್ಲೂ ಸಮುದ್ರತೀರಗಳಲ್ಲೂ ಬುರುಜು ಕೋಟೆಗಳು ರಚಿತವಾದುವು. ಉತ್ತರ ಅಮೆರಿಕದಲ್ಲಿ ವಸಾಹತು ಮಾಡಿದವರು ರೆಡ್ ಇಂಡಿಯನ್ನರ ದಾಳಿಯನ್ನು ತಡೆಯಲು ಮತ್ತು ರೇವು, ನದಿಗಳನ್ನು ರಕ್ಷಿಸಲು ಬುರುಜುಕೋಟೆಗಳನ್ನೂ ಕಟ್ಟಿಗೆ ಬೇಲಿಯ ಮುಂಡಿಗೆ ಕೋಟೆಗಲಿಗೆ ಮರದ ಚದರ ದಿಮ್ಮಿಗಳಿಂದ ಎರಡು ಅಂತಸ್ತಿನ ಮನೆಗಳನ್ನೂ (ಬ್ಲಾಕ್ ಹೌಸಸ್) ಕಟ್ಟಿದರು. ಫ್ರೆಂಚ್ ವಲಸೆಗಾರರು ಬ್ರಿಟಿಷ್ ವಲಸೆಗಾರರನ್ನು ತಡೆಗಟ್ಟಲು ಸೇಂಟ್ ಲಾರೆನ್ಸ್ ಮತ್ತು ಒಹಾಯೋ ನದಿಗಳ ದಡಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿದರು.

**ಇಂಕ ಸಾಮ್ರಾಜ್ಯದ ಕೋಟೆ:** ಅಳಿದುಹೋದ ಇಂಕ ಸಾಮ್ರಾಜ್ಯದ ಸ್ವಚ್‌ಸುಹ್ಯಮಾನ್ ಎಂಬ ಕೋಟೆ ಪೃಥ್ವಿಯ ಅತ್ಯಂತ ಮಹತ್ತರ ಕೋಟೆಗಳಲ್ಲೊಂದು. ಅದರ ಪ್ರತಿಯೊಂದು ಕಲ್ಲೂ 20' ಎತ್ತರ. ಕೆಲವು ಕಲ್ಲುಗಳು 100 ಟನ್‌ಗಿಂತಲೂ ಹೆಚ್ಚು ಭಾರ. ಅವುಗಳಿಗೆ ಗಾರೆಯನ್ನೇ ಉಪಯೋಗಿಸಿಲ್ಲ. ಆದರೂ ಅನೇಕ ಶತಮಾನಗಳ ಅನಂತರವೂ ಎಷ್ಟು ಹೊಂದಿಕೆಯಿಂದ ಸರಿಗೂಡಿವೆಯೆಂದರೆ ಅವುಗಳ ಮಧ್ಯೆ ಚಾಕುವಿನ ಅಲಗನ್ನು ಕೂಡ ತೂರಿಸಲು ಸಾಧ್ಯವಿಲ್ಲ! 12–16ನೆಯ ಶತಮಾನಗಳ ಯಾವ ಆಯುಧಗಳೂ ಆ ಕೋಟೆಯನ್ನು ಜಗ್ಗಿಸಲಾಗಲಿಲ್ಲ. ಹನ್ನೆರಡು ಕೋನಗಳುಳ್ಳ ಕಲ್ಲುಗಳು ಜಿಗ್‌ಸಾ ಒಗಟಿನಂತೆ ಸಮಂಜಸವಾಗಿ ಸೇರಿಸಲ್ಪಟ್ಟಿವೆ. ಕಾಮಾಟಿಗರು ಕಲ್ಲುದಿಮ್ಮಿಗಳಿಗೆ ಸಮಚತುಷ್ಕೋನಾಕೃತಿಯನ್ನು ಕೊಟ್ಟು ಕಚ್ಚು ಮತ್ತು ಸರಿಗಳನ್ನು ಕೊರೆದು ಗಾರೆಯಿಲ್ಲದೆ ಒಂದಕ್ಕೊಂದು ಅಚ್ಚುಕಟ್ಟಾಗಿ ಹೊಂದಿಕೆಯಾಗುವಂತೆ ಜೋಡಿಸಿ ಭೂಕಂಪನಗಳು ಕೂಡ ಅಲುಗಾಡಿಸದಂತೆ ಕೀಲುಗಳನ್ನು ಮಾಡಿ ರೇಸರ್‌ಬ್ಲೇಡ್ ಕೂಡ ತೂರಲಾರದಷ್ಟು ನಾಜೂಕಾಗಿ ಹೊಂದಿಸಿ ಕೂಡಿಸಿರುವುದು ಬಲು ವಿಸ್ಮಯದ ಸಂಗತಿ. ಗಣಿತದ ನಿಯಮಗಳನ್ನು ಅನುಸರಿಸಿ ಕೆತ್ತಲ್ಪಟ್ಟಂತೆ ಭಾರಿ ಕಲ್ಲುದಿಮ್ಮಿಗಳು ಸುಂದರವಾಗಿ ಹೊಂದಿಕೆಯಿಂದ ಕೂಡಿಸಲ್ಪಟ್ಟಿವೆ. ಗಟ್ಟಿ ಬಂಡೆ ಮಧ್ಯದಲ್ಲಿ ಬಿರುಕುಬಿಟ್ಟಿದ್ದರೂ ಆ ಸೀಳಿನಿಂದ ಒಂದಂಗುಲ ದೂರದಲ್ಲಿರುವ ಕೀಲು ಅಲುಗಾಡಿಲ್ಲ. ಉಕ್ಕು, ಚಕ್ರಗಳನ್ನರಿಯದೆ ಗಟ್ಟಿಯಾದ ಕಲ್ಲುಗಳನ್ನು ಹೇಗೆ ಕತ್ತರಿಸಿ ಸಮ ಮಾಡಿದರು. 100 ಟನ್ ಭಾರದ ಕಲ್ಲಿನ ದಿಮ್ಮಿಗಳನ್ನು ಒಂದರ ಮೇಲೊಂದಿಡಲು 15' ಎತ್ತರ ಹೇಗೆ ಏರಿಸಿದರು; ಬಂಡೆದೂಳು, ಒದ್ದೆಯಾದ ಮರದ ತುಂಡುಗಳು, ಸಸ್ಯದ ಆಮ್ಲ ಹೊರತು ಬೇರೆ ಉಪಕರಣಗಳಿಲ್ಲದೆ ಬಲಿಷ್ಠ ಕೋಟೆಯನ್ನು ಹೇಗೆ ನಿರ್ಮಿಸಿದರು ಇವೇ ಮುಂತಾದವು ಈಗಿನ ಕಾಲದ ಎಂಜಿನಿಯರುಗಳಿಂದಲೂ ಬಿಡಿಸಲಾಗದ ಒಗಟುಗಳು. ಸ್ಪೇನಿನವರು ಇಂಕ ಗೋಡೆಗಳ ಮೇಲೆ ಕಟ್ಟಡಗಳನ್ನು ಗಾರೆಯಿಂದ ಕಟ್ಟಿದ್ದರೂ 1950ರ ಭೂಕಂಪನದಲ್ಲಿ ಹೊಸ ಕಟ್ಟಡಗಳೆಲ್ಲ ಕುಸಿದರೂ ಇಂಕ ಗೋಡೆಗಳು ಮಾತ್ರ ಅಲುಗಾಡಲಿಲ್ಲ.

**ಭಾರತದ ಕೋಟೆಗಳು:** 15 ಉಪನಗರಗಳಿಂದ ಕೂಡಿದ್ದ ಪುರಾತನ ದೆಹಲಿಯ ಸುತ್ತಲೂ ಬೃಹತ್ ಶಿಲಾಭಿತ್ತಿಗಳಿದ್ದುವು. ಇಂದ್ರಪ್ರಸ್ಥದಲ್ಲಿದ್ದ ಪಾಂಡವರ ಕೋಟೆಯ ಜಾಗದಲ್ಲಿ ಹುಮಾಯೂನ್ ಕಟ್ಟಿದ ಹಳೇ ಕೋಟೆಯಿದೆ. ಷಾಜಹಾನ್ 1628ರಲ್ಲಿ ಕಟ್ಟಲಾರಂಭಿಸಿದ ಕೆಂಪುಕೋಟೆ ಮುಗಿಯಲು 30 ವರ್ಷಗಳು ಹಿಡಿದುವು. ಆಗ್ರದ ಕೋಟೆಗೆ ಅಕ್ಬರ್ ಡೆಲ್ಲಿ ದ್ವಾರವನ್ನೂ ಷಾಜಹಾನ್ ಅಮರಸಿಂಗ್ ದ್ವಾರವನ್ನೂ ಕಟ್ಟಿಸಿದರು. ಫತೇಪುರ್ ಸಿಕ್ರಿಯ ಕೋಟೆಗೆ ಅಕ್ಬರ್ ಕಟ್ಟಿಸಿದ ದ್ವಾರ ಇಡೀ ಭಾರತದಲ್ಲಿ ಅತ್ಯಂತ ಎತ್ತರದ್ದು. ಗ್ವಾಲಿಯರ್, ಭಟಿಂಡ, ಬಯಾನ್, ತುಲಂಬಾ, ಮಾಂಡ್ರೇಯಲ್, ಚುನಾರ್ ಕಾಂಗ್ರಾ, ಹೂಗ್ಲಿ, ಮ್ಯಾಲಟ್, ಬಹ್ರಾಂಪುರ್, ಅಜ್ಮೀರ್, ಭಿಲ್ಸಾ, ಝಾನ್ಸಿ ಮುಂತಾದ ಅನೇಕ ಕೋಟೆಗಳಲ್ಲಿ ಮುತ್ತಿಗೆಗಳಾದುವು. ಭರತ್‌ಪುರ್, ತಂಜೋರಿನ, ಮೇವಾರ, ಇತಿಹಾಸಪ್ರಸಿದ್ಧ ರಾಣಿಪದ್ಮಿನಿಯ ಚಿತ್ತೂರುಗಳು ರಜಪೂತರ ಕೋಟೆಗಳು. ಹಿಂದೂ ಆಳ್ವಿಕೆಯ ಉಚ್ಛ್ರಾಯಸ್ಥಿತಿಯ ಕಾಲದಲ್ಲಿ ಕಾಬೂಲಿನಿಂದ ಪೆಷಾವರ್ ವರೆಗೂ ರಾವಲ್‌ಪಿಂಡಿಯಿಂದ ಲಾಹೋರ್ ವರೆಗೂ ಕೋಟೆಗಳ ಮಾಲಿಕೆಯಿತ್ತು. ಲಾಹೋರ್ ಕೋಟೆ ರಚನ ವಿನ್ಯಾಸ, ಕೆಲಸಗಾರಿಕೆಗಳಲ್ಲಿ ದೆಹಲಿ, ಆಗ್ರಾಗಳ ಕೆಂಪು ಕೋಟೆಗಳಿಗೆ ಅನುರೂಪವಾಗಿದೆ. ಶಿವಾಜಿಯ ಸಿಂಹಗಡ ರಾಜಗಡ ದುರ್ಗಗಳು ಪ್ರಖ್ಯಾತವಾದವು. ಕಡಲ್ಗಳ್ಳರನ್ನು ತಡೆಯಲು ಗುಜರಾತ್ ಸುಲ್ತಾನ 1532ರಲ್ಲಿ ಬೇಸೆನ್ ಕೋಟೆಯನ್ನು ಕಟ್ಟಿದ. ಈಸ್ಟ್ ಇಂಡಿಯ ಕಂಪನಿ ಸಾಮಾನು ಗಡಂಗುಗಳ ಭದ್ರತೆಗೆ ಮದರಾಸು ಮುಂಬಯಿ ಕಲ್ಕತ್ತಾಗಳಲ್ಲಿ ಕಟ್ಟಿದ ಗೋಡೆಗಳು ಕೋಟೆಗಳಾದವು.

ಡೆಕ್ಕನಿನಲ್ಲಿ ದೇವಗಿರಿ, ಓರಂಗಲ್, ಬೀದರ್, ಬಿಜಾಪುರ, ಗೋಲ್ಕೊಂಡ, ಹೈದರಾಬಾದ್, ಧಾರೂರು ಮುಂತಾದ ಅನೇಕ ಕೋಟೆಗಳಾದುವು. ಮೈಸೂರು ಸಂಸ್ಥಾನದ ಚಿತ್ರದುರ್ಗ



ರಾಯಚೂರಿನ ಕೋಟೆ

ಬೆಟ್ಟದ ಮೇಲೆ ವಿಜಯ ನಗರದ ಅರಸರು ಕಟ್ಟಿದ ಕೋಟೆಗಳು ಪಾಳೆಯಗಾರರಿಂದಲೂ ಮುಂದೆ ಹೈದರ್ ಟಿಪ್ಪುಗಳ ಫ್ರೆಂಚ್ ಎಂಜಿನಿಯರುಗಳಿಂದಲೂ ವಿಸ್ತರಿಸಲ್ಪಟತವು. ಸು. 7.61 ಮೀ ಎತ್ತರದ ಏಳು ಸುತ್ತಿನ ಬಲವಾದ ಕಲ್ಲುಗೋಡೆಗಳ ಆ ಕೋಟೆಯಲ್ಲಿ ಬತೇರಿ, ಕೈಪಿಡಿ ಗೋಡೆ, ಕಲ್ಲುಗೋಡೆ, ಜೀರುಗಂಡಿ, ಬುರುಜು, ಶಸ್ತ್ರಶಾಲೆ, ಫಿರಂಗಿ ಗೃಹ, ದಿಡ್ಡಿಬಾಗಿಲುಗಳು, ಪುರದುರ್ಗ, ಬಂದೂಕು ಮದ್ದು ತಯಾರಿಕೆಯ ಕಾರ್ಖಾನೆ, ಹಲ್ಲಿನ ಚಕ್ರಗಳಿಗೆ ಸೇರಿದ ಸು. 1.52 ಮೀ ವ್ಯಾಸದ ನಾಲ್ಕು ರುಬ್ಬುಗುಂಡುಗಳು, ಧಾನ್ಯಗಳ ಕಣಜ, ಎಣ್ಣೆ ತುಪ್ಪಗಳ ತೊಟ್ಟಿಗಳಿದ್ದುವು. ಡಣಾಯಕ ತಿಮ್ಮಣ್ಣ ಹೆಬ್ಬಾರ್ 1454ರಲ್ಲಿ ಶ್ರೀರಂಗಪಟ್ಟಣದಲ್ಲಿ ಕಟ್ಟಿಸಿದ ಕೋಟೆಯನ್ನು ಟಿಪ್ಪುವಿನ ಫ್ರೆಂಚ್ ಎಂಜಿನಿಯರುಗಳು

ಬೆಳಗಾವಿಯ ಕೋಟೆ

ಬಲಪಡಿಸಿದರು. ಇದರಲ್ಲಿ ಗುಡುತರದ ಎರಡು ಸುತ್ತಿನ ಕಲ್ಲುಗೋಡೆಗಳೂ ಕಲ್ಲಿನಲ್ಲಿ ಕೊರೆದ ಆಳವಾದ ಎರಡು ಕಂದಕಗಳೂ ಇದ್ದುವು. ಕೋಟೆಯನ್ನು ಹಿಡಿಯಲು 1799ರಲ್ಲಿ ಜನರಲ್ ಹ್ಯಾರಿಸ್ ಹಾರಿಸಿದ ಫಿರಂಗಿ ಗುಂಡಿನ ಹೊಡೆತ ಈಗಲೂ ಕೋಡೆಗೋಡೆಯ ಮೇಲೆ ಕಾಣಿಸುತ್ತದೆ. ಪಾವಗಡದಲ್ಲಿ ಏಳು ಸುತ್ತಿನ ಕೋಟೆ, ಮಧುಗಿರಿ ಬೆಟ್ಟದ ಎರಡು ಪಾಗಾರ ಮತ್ತು ಎರಡು ಕಂದಕಗಳ ಕೋಟೆ, ಮಡಿಕೇರಿಯ ಸುತ್ತು ಸುತ್ತು ಮಾರ್ಗಗಳಿರುವ ಷಟ್ಕೋಣದ ಕಲ್ಲು ಕೋಟೆ, ಮಿಡಿಗೇಸಿ, ನಿಡುಗಲ್, ದೇವರಾಯನದುರ್ಗ, ಸಾವನ ದುರ್ಗ, ನಂದಿಬೆಟ್ಟ ಕೋಟೆಗಳು, ಧಾರವಾಡ ಜಿಲ್ಲೆಯ ನರಗುಂದ ಕೋಟೆ ಮುಂತಾದವು ಒಳ್ಳೆಯ ಉದಾಹರಣೆಗಳು. ಬೆಂಗಳೂರಿನಲ್ಲಿ ಕೆಂಪೇಗೌಡ 1537ರಲ್ಲಿ ಕಟ್ಟಿಸಿದ ಮಣ್ಣುಗೋಡೆಯನ್ನು ಹೈದರ್ ದೊಡ್ಡದು ಮಾಡಿ ಕಲ್ಲಿನಿಂದ ಕಟ್ಟಿಸಿದ.

**ಆಧುನಿಕ ಕೋಟೆಗಳು:** 1850ರ ಫ್ರೆಂಚ್–ಜರ್ಮನ್ ಯುದ್ಧವೂ 1904ರ ರಷ್ಯ ಜಪಾನ್ ಯುದ್ಧವೂ ಆ ಕಾಲದ ಕೋಟೆಗಳು ಹಳೇ ತರಹದವೆಂದೂ ಅವುಗಳಲ್ಲಿ ಅನೇಕ ಪರಿಷ್ಕರಣೆಗಳಾಗಬೇಕೆಂದೂ ಪ್ರಮಾಣಪಡಿಸಿದುವು. 19ನೆಯ ಶತಮಾನದಲ್ಲಿ ಬಂದೂಕು, ಫಿರಂಗಿಗಳ ಶಕ್ತಿ ಅಗಾಧವಾಗಿ ಬೆಳೆದು ಒಂಟಿ ಕೋಟೆಗಳಿಗೆ ಸುರಕ್ಷಣೆಯಿರಲಿಲ್ಲ. ದಾಳಿಮಾಡುವ ಫಿರಂಗಿದಳವನ್ನು ದೂರದಲ್ಲಿಡಲು ಪ್ರತ್ಯೇಕವಾದ ಕೋಟೆಗಳನ್ನು ಮಧ್ಯದ ದುರ್ಗದ ಸುತ್ತಲೂ ಸು. 1.60–6.43 ಕಿಮೀ. ಮೈಲು ದೂರದಲ್ಲಿ ಕಟ್ಟುವ ಕ್ರಮ ಬಂದಿತು. 1840–50ರಲ್ಲಿ ಇಡೀ ಪ್ಯಾರಿಸಿನ ಸುತ್ತಲೂ ಇಂಥ ಪ್ರತ್ಯೇಕ ಬುರುಜುಕೋಟೆಗಳು ಸ್ಥಾಪಿತವಾದುವು. ಫಿರಂಗಿಯ ಬಲ ಇನ್ನೂ ಹೆಚ್ಚಾಗಿ ಜರ್ಮನರು ಸ್ಟ್ರಾಸ್‌ಬರ್ಗ್ ಕೋಟೆಯನ್ನು 1 1/2 ಕಿಮೀ.ಗಿಂತಲೂ ಹೆಚ್ಚು ದೂರದಲ್ಲಿ ಗುಂಡಿನಿಂದ ಒಡೆದರು. ಅವರ ಸಿಡಿಗುಂಡುಗಳನ್ನು ಪ್ಯಾರಿಸ್ ನಗರದ ಗೋಡೆಯ ಮೇಲೆ 6 1/2 ಕಿಮೀ. ದೂರದಿಂದ ಹಾರಿಸಿದರು. ಆದ್ದರಿಂದ ಅವುಗಳ ನಿವಾರಣೆಗೆ ದೂರ ದೂರದ ಉಂಗುರ ಕೋಟೆಗಳು ನಿರ್ಮಿತವಾದುವು. 1910ರಿಂದ ಪ್ರತ್ಯೇಕವಾದ ಕೋಟೆಗಳನ್ನು ಪ್ರಧಾನ ದುರ್ಗದಿಂದ 9 1/2 ಕಿಮೀ. ದೂರದಲ್ಲಿ ಕಟ್ಟಬೇಕಾಯಿತೆಂದರೆ ಅವುಗಳೇ ಸ್ವತಂತ್ರ ಕೋಟೆಗಳಂತಾದುವು. ಪಟ್ಟಣಗಳು ಬೆಳೆಯುತ್ತ ಎಷ್ಟು ಅಗಾಧವಾದುವೆಂದರೆ ಅವುಗಳ ರಕ್ಷಣೆಗೆ ಕೋಟೆಗಳನ್ನು ಕಟ್ಟುವುದು ವಿಪರೀತ ಖರ್ಚಾದ್ದರಿಂದ ಆ ಕ್ರಮ ಹೋಗಿ ಬೇರೆ ವಿಧಾನಗಳೇ ಬಂದುವು. ಪ್ರತ್ಯೇಕವಾದ ಕೋಟೆಗಳು ಪ್ರಧಾನದುರ್ಗದ ರಕ್ಷಣ ಶಕ್ತಿಯನ್ನು ಬಹಳ ಹೆಚ್ಚಿಸಿದರೂ ಅವು ಬಹುಬಲವಾದ ಫಿರಂಗಿ ಏಟಿಗೆ ನಿಲ್ಲುವಂತೆ ಕೋಟೆ ನಿರ್ಮಾಣ ಕ್ರಮವನ್ನು

ಚಿತ್ರದುರ್ಗದ ಕೋಟೆ

ಬದಲಾಯಿಸಬೇಕಾಯಿತು. ಕಲ್ಲುಗೋಡೆಗಳ ಬದಲು ಮಣ್ಣಿನ ದಿಡ್ಡಿಗೋಡೆಗಳಿಂದ ಮುಚ್ಚಿದ ಕಾಂಕ್ರೀಟ್ ಬಂದಿತು. 2.5–3.5 ಮೀ ದಪ್ಪದ ಸಿಮೆಂಟ್ ಕಾಂಕ್ರೀಟಿನ ಚಾವಣಿಗಳನ್ನು ಕಟ್ಟಲಾಯಿತು. ಬಂದೂಕುಗಳ ಆಶ್ರಯಕ್ಕೆ ಗಚ್ಚಿನಿಂದ ಕಟ್ಟಿದ ಪಿಲ್‌ಬಾಕ್ಸ್ ಎಂಬ ಪ್ರತ್ಯೇಕವಾದ ಸಣ್ಣ ಕೋಣೆಗಳು ಬಂದುವು. ಹೊಸ ಹಂಚಿಕೆಗಳ ಆಧುನಿಕ ಕೋಟೆಗಳು ನಿರ್ಮಾಣವಾದುವು. ಆ ಕಾಲದಲ್ಲಿ ಇಡೀ ಯೂರೋಪಿನಲ್ಲಿ ಅತ್ಯಂತ ನಿಪುಣ ಬೆಲ್ಜಿಯಂ ಎಂಜಿನಿಯರ್ ಜನರಲ್ ಬ್ರಿಯಾಲ್‌ಮೆಂಟ್ ಎಂಬಾತ ಲೀಜ್, ನಾಮರ್ ಪಟ್ಟಣಗಳಲ್ಲಿ ಬಹುಭುಜಾಕೃತಿಯ ಪ್ರತ್ಯೇಕವಾದ ಕೋಟೆಗಳನ್ನೂ ಉಂಗುರ ಕೋಟೆಗಳನ್ನೂ ಆಯುಧಗಳಿಂದ ಬಲಪಡಿಸಿದ ಕೋಟೆಗಳನ್ನೂ ನಿರ್ಮಿಸಿದ. ಬಂದೂಕನ್ನು ರಕ್ಷಿಸುವ ತಂತ್ರಗಳನ್ನೂ ಬಂದೂಕುಗಳು ಶತ್ರುಗಳಿಗೆ ಕಾಣಿಸದಂತೆ ಭೂಮಿಯೊಳಗೆ ಹೋಗಿ ಮರೆಯಿಂದ ಹೊಡೆಯಲು ಸಾಧ್ಯವಾಗುವಂತೆ ಉಕ್ಕಿನ ಗುಮ್ಮಟ ಸಣ್ಣಗೋಪುರಗಳನ್ನೂ (ಟರ್ರೆಟ್ಸ್) ರಚಿಸಿದ. ಮಿಕ್ಕ ಭಾಗದ ಉಂಗುರ ಕೋಟೆ ಕಾಂಕ್ರೀಟಿನಿಂದ ನಿರ್ಮಿತವಾಯಿತು. ಕೆಲವು ಕೋಟೆಗಳಿಗೆ ಐದು ಪಕ್ಕಗಳಿದ್ದವು. ಕೆಲವು ತ್ರಿಕೋಣಾಕೃತಿಯಲ್ಲಿದ್ದುವು. ಅವುಗಳ ಗಾತ್ರವೆಲ್ಲ ಬಹುಮಟ್ಟಿಗೆ ಭೂಮಿಯೊಳಗೆ ಕಟ್ಟಲ್ಪಟ್ಟವು. ಕೋಟೆ ವಿದ್ಯೆಯಲ್ಲಿ ಹೊಸಯುಗ ಬಂತು. ಆಂಟ್ವರ್ಪ್ ಕೋಟೆ ಬೆಲ್ಜಿಯಂ ದೇಶದ ರಕ್ಷಣೆಗೆ ವ್ಯೂಹಸ್ಥಳವಾಗಿ ಒಂದು ಲಕ್ಷ ಜನರ ಪಾಳ್ಯವಾಗಿ ಯೋಜಿಸಲ್ಪಟ್ಟಿತು. ಮೊದಲನೆಯ ಮಹಾಯುದ್ಧದಲ್ಲಿ ಫ್ರಾನ್ಸ್ ಮತ್ತು ಇತರ ಕೆಲವು ಐರೋಪ್ಯ ರಾಷ್ಟ್ರಗಳು ಉಂಗುರ ಕೋಟೆಗಳ ಮಧ್ಯೆ ಗಡಿದುರ್ಗಗಳನ್ನು ಕಟ್ಟಿದುವು. ಫ್ರಾನ್ಸ್–ಜರ್ಮನಿ ಸರಹದ್ದಿನಲ್ಲಿ ವರ್ಡನ್, ಟೂಲ್ ಮುಂತಾದ ಅನೇಕ ಸ್ಥಳಗಳ ಉಂಗುರ ಕೋಟೆಗಳನ್ನು ಸೇರಿಸಲು 107.5 ಕಿಮೀ ಉದ್ದದ ಗಡಿದುರ್ಗಗಳು ನಿರ್ಮಾಣವಾದುವು.

ಒಂದನೆಯ ಮಹಾಯುದ್ಧ ಬಹುಮಟ್ಟಿಗೆ ಯುದ್ಧ ಭೂಮಿಯಲ್ಲಿ ಕಟ್ಟಿದ ಹಂಗಾಮಿ ಕೋಟೆ ಕೊತ್ತಲಗಳಿಂದ ನಡೆಯಿತು. ಎರಡು ಡೊಂಕು ಡೊಂಕಾದ ಕಂದಕ ಸಮುದಾಯಗಳನ್ನು ಫ್ರಾನ್ಸಿನ ಸರಹದ್ದಿನ ಉದ್ದಕ್ಕೂ ಸ್ವಿಟ್ಜರ್ಲೆಂಡಿನಿಂದ ಇಂಗ್ಲಿಷ್ ಕಡಲ್ಗಾಲುವೆಯವರೆಗೂ ತೋಡಿ ಅವುಗಳ ಮಧ್ಯದ ಪ್ರಾಂತವನ್ನು ಮುಳ್ಳು

ಕೊಕ್ಕೆ ತಂತಿಗಳಿಂದ ಮುಚ್ಚಿದ್ದರು. ಈ ಭೂಮಿಯ ಮೇಲೆ 26 ತಿಂಗಳುಗಳ ಕಾಲ ಯಾವ ಪಕ್ಷದ ಸೈನ್ಯಗಳೂ ಮುಂದುವರಿಯಲಾಗಲಿಲ್ಲ. ಜರ್ಮನರು ರಣರಂಗದಲ್ಲಿ ಪಿಲ್‌ಬಾಕ್ಸ್‌ಗಳನ್ನೂ ಹಿಂಡನ್‌ಬರ್ಗ್ ಎಂಬ ಅದ್ವಿತೀಯ ತಂತ್ರದ ಸುರಂಗ ಮಾರ್ಗಗಳನ್ನೂ ನಿರ್ಮಿಸಿ ಆಶ್ರಯ ಪಡೆದು ಶತ್ರುಗಳ ಅನೇಕ ಕೋಟೆಗಳನ್ನು ಮುರಿದರು. ಶಾಶ್ವತ ಕೋಟೆ ಕೊತ್ತಲುಗಳಿಗೆ ವಿಪರೀತ ಖರ್ಚಾಗುವುದೆಂದೂ ತಾತ್ಕಾಲಿಕ ಕೋಟೆಸಾಧನಗಳು ಅಷ್ಟೇ ಫಲಕಾರಿಯಾಗಿದ್ದುವೆಂದೂ ಇದರಿಂದ ಖರೆಯಾಯಿತು. ಮೆಸ್ಸಿನೆ ಗುಡ್ಡದ ಕೆಳಗಿನ ಜರ್ಮನ್ ಕೋಟೆಯ ಕೆಳಗೆ ಇಪ್ಪತ್ತು ಸುರಂಗಗಳಲ್ಲಿ ಹತ್ತು ಲಕ್ಷ ಪೌಂಡ್ ಸಿಡಿಮದ್ದನ್ನು ಸ್ಫೋಟಿಸಲಾಯಿತು. ಟ್ಯಾಂಕುಗಳು ಬಂದ ಮೇಲೆ ಶಾಶ್ವತ ಕೋಟೆಗಳ ಉಪಯೋಗ ಕಡಿಮೆಯಾಯಿತು.

**ಅದ್ಭುತ ಕೋಟೆಗಳು:** ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ಮಧ್ಯೆ ಭಾರಿ ಆಧುನಿಕ ಕೋಟೆಗಳು ನಿರ್ಮಿತವಾದುವು. ಅವುಗಳಲ್ಲಿ ಅತ್ಯಂತ ದೊಡ್ಡದು ಫ್ರೆಂಚರು ಜರ್ಮನಿಯ ಸರಹದ್ದಿನಲ್ಲಿ ಪ್ರಪಂಚ ತಮ್ಮ ಗಡಿನಾಡಿನ ರಕ್ಷಣೆಗಾಗಿ ಕಟ್ಟಿದ್ದ ಮ್ಯಾಗಿನೋ ಲೈನ್ ಎಂಬ ಬೃಹತ್ ಕೋಟೆ. ಅದು ಪೂರ್ತಿ ಭೂಮಿಯೊಳಗೆ 960 ಕಿಮೀ ಉದ್ದ ಯುದ್ಧದ ಹಡಗಿನಂತೆ ಚಾಚಿತ್ತು. ಅದು ಪ್ರಪಂಚದಲ್ಲಿ ಹಿಂದಿದ್ದ ಎಲ್ಲ ಕೋಟೆಗಳಿಗಿಂತಲೂ ಪ್ರಚಂಡವಾಗಿ ಮುಂದುವರಿದಿತ್ತು. ಅದಕ್ಕೆ ಉಪಯೋಗಿಸಿದ್ದ ಕಾಂಕ್ರೀಟ್ ಪೃಥ್ವಿಯಲ್ಲಿ ಮತ್ತಾವುದಕ್ಕೂ ಇಲ್ಲದಷ್ಟು ದಪ್ಪವಾಗಿತ್ತು. ಅದರ ಬಂದೂಕುಗಳು ಅತಿಭಾರವಾಗಿದ್ದುವು. ಫಿರಂಗಿ ತಂಡಗಳ ಬತೇರಿ, ಸ್ವಯಂಚಲಿ ಯುದ್ಧಾಯುಧಗಳನ್ನಿಡಲು ಪಿಲ್‌ಬಾಕ್ಸ್‌ಗಳು, ಟ್ಯಾಂಕುಗಳನ್ನು ಪ್ರತಿಬಂಧಿಸಲು ಡ್ರಾಗನ್ ಸರ್ಪಗಳೆಂಬ ಹಲ್ಲುಗಳು ಇದ್ದುವು. ಸೈನ್ಯಗಳಿಗೆ ಸಿಡಿಗುಂಡಿನಿಂದ ಮುರಿಯದ ಚಾವಣಿಗಳಿದ್ದುವು. ಇವು ಆಧುನಿಕ ಪಟ್ಟಣಗಳಿಗಿಂತ ಹೆಚ್ಚು ಅರಾಮಕರವಾಗಿದ್ದುವು. ವಿಶ್ರಾಮ ಕ್ಷೇತ್ರಗಳು, ವಾಸಸ್ಥಾನಗಳು, ಮಂಡಿಗಳು, ಉಗ್ರಾಣಗಳು, ನಾನಾಭಾಗಗಳನ್ನು ಸಂಬಂಧಿಸುವ ರೈಲುಮಾರ್ಗಗಳು ಸ್ಥಾಪಿತವಾದುವು. ರೈಲಿನಲ್ಲಿ ಸಾಗುತ್ತಿದ್ದ ದಳಗಳು ಇವಕ್ಕೆ ರಕ್ಷಣೆಯನ್ನು ಒದಗಿಸುತ್ತಿದ್ದುವು. ಜರ್ಮನಿ ಕೂಡ 1936ರಲ್ಲಿ ರೈನ್ ನದಿಯ ದಂಡೆಗಳ ಪ್ರಾಂತ್ಯದಲ್ಲಿ ಪಿಲ್‌ಬಾಕ್ಸ್ ಪರಂಪರೆಗಳಿಂದಲೂ ಬಹುತೊಡಕಾದ ವ್ಯವಸ್ಥೆಗಳಿಂದಲೂ ತುಂಬಿದ ಸೀಗ್‌ಫ್ರೆಡ್ ಲೈನ್ ಎಂಬ ದೈತ್ಯ ಕೋಟೆಯನ್ನು ಕಟ್ಟಿತು. ಜರ್ಮನಿಯ ಇಡೀ ಸರಹದ್ದಿನ ಉದ್ದಕ್ಕೂ ಕಾಂಕ್ರೀಟ್ ಮತ್ತು ಉಕ್ಕಿನ ಪ್ರತಿಬಂಧಕಗಳ ಹಿಂದೆ ಉಕ್ಕು ಮತ್ತು ಕಾಂಕ್ರೀಟಿನ ರಕ್ಷಣ ಕೋಟೆ ಕೊತ್ತಲಗಳ ನಿರ್ಮಾಣವಾಯಿತು. ರಷ್ಯವೂ ರಷ್ಯ–ಪೋಲೆಂಡ್ ಸರಹದ್ದಿನಲ್ಲಿ ಮ್ಯಾಗಿನೋ ಲೈನ್ ಕೋಟೆಯ ಮಾದರಿಯಲ್ಲಿ ಸ್ಟಾಲಿನ್ ಲೈನ್ ಎಂಬ ಕೋಟೆಯನ್ನು ಕಟ್ಟಿತು. 1944ರ ಹೊತ್ತಿಗೆ ಜರ್ಮನಿಯ ಯೂರೋಪಿನ ಕೋಟೆ ಎಂಬ ರಕ್ಷಣಾವರಣವನ್ನು ಬಲಪಡಿಸಲು ಕಾಂಕ್ರೀಟ್ ಮತ್ತು ಉಕ್ಕನ್ನು ಯಥೇಚ್ಛವಾಗಿ ಬಳಸಲಾಯಿತು. ಅಪಾರ ವಿಸ್ತೀರ್ಣಗಳಲ್ಲಿ ಕಾಂಕ್ರೀಟನ್ನು ಸುರಿದು ರೈಲು, ರಸ್ತೆ, ಪರ್ವತ ರೈಲುಗಳನ್ನು ನಿರ್ಮಿಸಿದರು. ಬಂದೂಕುಗಳನ್ನು ಕಾಣಿಸದಂತೆ ಮಾಡುವ ಬುರುಜುಗಳನ್ನು ಸ್ಥಾಪಿಸಿದರು. ಪಕ್ಕಗಳೊಳಗೆಲ್ಲ ಕೋಟೆ ಕಟ್ಟಡಗಳಾದುವು. ಹಿಂದೆ ಯಾವ ಕೋಟೆಯೂ ಇಲ್ಲದಷ್ಟು ದುರ್ಗಮವಾಗಿ ಈ ಕೋಟೆ ಕಾಣಿಸಿತು.

ಇಷ್ಟು ಶ್ರಮಸಾಧಿತ ಶಾಶ್ವತ ಕೋಟೆಗಳಿದ್ದರೂ ಎರಡನೆಯ ಮಹಾಯುದ್ಧ ಬಹುಮಟ್ಟಿಗೆ ರಣರಂಗದ ಹಂಗಾಮಿ ಕೋಟೆ ಕೊತ್ತಲಗಳಿಂದ ನಡೆಯಿತು. ಸುಳಿವು ಗೊತ್ತಾಗದಂತೆ ಬಚ್ಚಿಟ್ಟುಕೊಳ್ಳಲು ಕಂದಕ, ಸುರಂಗಗಳ ರಚನೆ, ಭೂಮಿಯ ನೈಸರ್ಗಿಕ ಸ್ವರೂಪಗಳನ್ನು ರಕ್ಷಣೆಕೊಡಲು ತಕ್ಕಂತೆ ರೂಪಿಸಿಕೊಳ್ಳುವುದು, ನರಿಯ ಬಿಲದಂಥ ಹಳ್ಳಗಳನ್ನು ತೋಡಿ ವ್ಯಕ್ತಿಯು ಬಂದೂಕಿನೊಡನೆ ಅವಿತುಕೊಂಡು ಎಲೆಗಳಿಂದ ಮುಚ್ಚಿಕೊಳ್ಳುವುದು, ಸಿಡಿಮದ್ದು ತುಂಬಿದ ಸುರಂಗ ನಿರ್ಮಾಣ, ಮುಳ್ಳು ಕೊಕ್ಕೆಗಳ ತಂತಿ ಆವರಣ, ಮೆಷಿನ್‌ಗನ್ ಕಟ್ಟಡಗಳು, ಕಾಂಕ್ರೀಟ್ ಪಿಲ್‌ಬಾಕ್ಸ್‌ಗಳು ಮುಂತಾದ ಸಾಧನಗಳಿಂದ ನಡೆಯಿತು. ವಿಮಾನದಿಂದ ಕೆಡೆದ ಬಾಂಬ್‌ಗಳಿಗೂ ಇವು ಅತ್ಯುತ್ತಮ ರಕ್ಷಣೆಯನ್ನು ನೀಡುತ್ತವೆ. (ಎಂ.ಜಿ.ಕೆ.ಎಂ.; ವಿ.ಎಸ್.ಬಿ.)

**ಕೋಟ್ಸ್, ರೋಜರ್ :** 1682–1716. ಇಂಗ್ಲೆಂಡಿನ ಗಣಿತವಿಜ್ಞಾನಿ. 1682ರಲ್ಲಿ ಲೆಸ್ಟರ್‌ಷೈರಿನಲ್ಲಿ ಜನಿಸಿದ. ಶಾಲೆಯಲ್ಲಿದ್ದಾಗಲೇ ಗಣಿತವಿಜ್ಞಾನದ ಬಗ್ಗೆ ವಿಶೇಷಾಭಿರುಚಿಯನ್ನು ವ್ಯಕ್ತಪಡಿಸಿದ್ದರಿಂದ ಇವನ ಸೋದರಮಾವ ಜಾನ್ ಸ್ಮಿತ್ ಈತನನ್ನು ತನ್ನ ಮನೆಗೆ ಕರೆದೊಯ್ದು ಅಲ್ಲಿ ಈತನ ಅಧ್ಯಯನ ಮುಂತಾದವುಗಳ ಮೇಲ್ವಿಚಾರಣೆಯನ್ನು ತಾನೇ ನೋಡಿಕೊಂಡ. ಲಂಡನ್ನಿನ ಸೇಂಟ್ ಪಾಲನ ಶಾಲೆಗೆ ಕೋಟ್ಸನನ್ನು ಸೇರಿಸಲಾಯಿತು. ಅಲ್ಲಿದ್ದ ಸಮಯದಲ್ಲಿ ಇವನು ಶ್ರೇಷ್ಠ ಗ್ರಂಥಗಳ ಅಧ್ಯಯನದಲ್ಲಿ ತೊಡಗಿ ಪತ್ರವ್ಯವಹಾರದ ಮೂಲಕ ತನ್ನ ಸೋದರಮಾವನೊಡನೆ ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದ, ಅನಂತರ ಟ್ರಿನಿಟಿ ಕಾಲೇಜಿನಲ್ಲಿ ಅಧ್ಯಯನ ಮಾಡಿ ಬಿ.ಎ. (1702) ಮತ್ತು ಎಂ.ಎ. (1706) ಪದವಿಗಳನ್ನು ಗಳಿಸಿದ. ಇವನಿಗೆ ಆ ಕಾಲೇಜಿನ ಫೆಲೋ ಗೌರವವೂ (1705) ರಾಯಲ್ ಸೊಸೈಟಿಯ ಫೆಲೋ ಗೌರವವೂ (1711) ಲಭಿಸಿದುವು. ಟ್ರಿನಿಟಿ ಕಾಲೇಜಿನ ಅಧ್ಯಾಪಕನಾಗಿದ್ದ ರಿಚರ್ಡ್ ಬೆಂಟ್ಲಿಯ ಶಿಫಾರಸಿನ ಮೇಲೆ ಕೇಂಬ್ರಿಜ್ ಕಾಲೇಜಿನಲ್ಲಿ ಖಗೋಳವಿಜ್ಞಾನ ಮತ್ತು ನ್ಯಾಚುರಲ್ ಫಿಲಾಸಫಿಗಳ ಪ್ರಥಮ ಪ್ರಾಧ್ಯಾಪಕನ ಹುದ್ದೆ ಇವನಿಗೆ ದೊರಕಿತು. ಟ್ರಿನಿಟಿ ಕಾಲೇಜಿನಲ್ಲಿ ಒಂದು ಖಗೋಳ ವೀಕ್ಷಣಾಲಯವನ್ನು ಸ್ಥಾಪಿಸುವ ಉದ್ದೇಶ ಈತನಿಗಿತ್ತು. ಇದರ ಸಲುವಾಗಿ ಬಹುಮಂದಿಯಿಂದ ಚಂದಾಹಣವನ್ನು ಸಂಗ್ರಹಮಾಡಿದ. ಇವನ ಜೀವಿತಕಾಲದಲ್ಲಿ ವೀಕ್ಷಣಾಲಯವನ್ನು ಸ್ಥಾಪಿಸುವ ಉದ್ದೇಶ ಈತನಿಗಿತ್ತು. ಇದರ ಸಲುವಾಗಿ ಬಹುಮಂದಿಯಿಂದ ಚಂದಾಹಣವನ್ನು ಸಂಗ್ರಹ ಮಾಡಿದ. ಇವನ ಜೀವಿತಕಾಲದಲ್ಲಿ ವೀಕ್ಷಣಾಲಯದ ನಿರ್ಮಾಣ ಪೂರ್ಣವಾಗಲಿಲ್ಲ. ಕೋಟ್ಸ್ ತನ್ನ ಜೀವನದ ಬಹುಪಾಲು ಸಮಯವನ್ನು ಈ ವೀಕ್ಷಣಾಲಯದಲ್ಲೇ ತನ್ನ ಜೀವನದ ಬಹು ಪಾಲು ಸಮಯವನ್ನು ಈ ವೀಕ್ಷಣಾಲಯದಲ್ಲೇ ತನ್ನ ಸೋದರ ಮಾವನ ಮಗ ರಾಬರ್ಟ್ ಸ್ಮಿತನ ಜೊತೆಯಲ್ಲೇ ಕಳೆದ. 1797ರಲ್ಲಿ ಈ ಇದನ್ನು ಕೆಡವಲಾಯಿತು.

ನ್ಯೂಟನ್ನನೊಡಗೂಡಿ ಕೋಟ್ಸ್ ಸೂರ್ಯನ ವೀಕ್ಷಣೆಯ ಸಂಬಂಧದಲ್ಲಿ ಗಡಿಯಾರದ ವಿಧಾನವನ್ನು ಅನುಸರಿಸಿ ಪರಿಭ್ರಮಣ ಕನ್ನಡಿಯಿರುವ ದೂರದರ್ಶಕದ (ಹೀಲಿಯೊ ಸ್ಟ್ಯಾಟ್ ಟೆಲಿಸ್ಕೋಪ್) ರೂಪರೇಖೆಗಳನ್ನು ಒದಗಿಸಿದ. ಫ್ಲೆಂಸ್ಟೀಡ್ ಮತ್ತು ಕಾಸೀನಿ ತಯಾರಿಸಿದ್ದ ಸೂತ್ರ ಮತ್ತು ಗ್ರಹಚಲನೆಯನ್ನು ಕುರಿತಂಥ ಕೋಷ್ಟಕವನ್ನು ಪರಿಷ್ಕರಿಸಿದ. ನ್ಯೂಟನ್ನನ ತತ್ತ್ವಗಳನ್ನು ಆಧರಿಸಿದಂತೆ ಚಂದರನ ಚಲನೆಯನ್ನು ಕುರಿತಂಥ ಒಂದು ಕೋಷ್ಟಕವನ್ನು ನಿರ್ಮಿಸಬೇಕೆಂಬ ಬಯಕೆ ಈತನಿಗಿತ್ತು. 1715ರ ಏಪ್ರಿಲ್ 22ರಂದು ಸಂಭವಿಸಿದ ಪೂರ್ಣ ಸೂರ್ಯಗ್ರಹಣ ಸಂಕ್ರಾಮವನ್ನು (ಆಕ್ಲ್ಟೇಶನ್) ನೋಡಿದ. ವಿಲಿಯಂ ವ್ಹಿಸ್ಟನನ ಒಡಗೂಡಿ ಭೌತ ವಿಜ್ಞಾನಗಳ ಶಾಲೆಯೊಂದನ್ನು ಈತ ಟ್ರಿನಿಟಿಯಲ್ಲಿ ಸ್ಥಾಪಿಸಿದ. ಅಲ್ಲಿ ವಿಜ್ಞಾನ ವಿಷಯಗಳ ಮೇಲೆ ಅತ್ಯಾಸಕ್ತಿ ಇರುವ ವಿದ್ಯಾರ್ಥಿಗಳಿಗೆ ಅಧ್ಯಯನ ನೆಡೆಸಲು ಅವಕಾಶವಿತ್ತು. ವ್ಹಿಸ್ಟನ್ ಮತ್ತು ಕೋಟ್ಸ್ ಈ ಶಾಲೆಯಲ್ಲಿ ನಡೆಸಿದಂಥ ಪ್ರಯೋಗಗಳ ವಿವರಗಳು ಕೋಟ್ಸನ ಮರಣಾನಂತರ ಪ್ರಕಟಗೊಂಡ (1738) ಗ್ರಂಥದಲ್ಲಿ (ಹೈಡ್ರೋಸ್ಟ್ಯಾಟಿಕಲ್ ಅಂಡ್ ನ್ಯುಮ್ಯಾಟಿಕಲ್ ಲೆಕ್ಚರ್ಸ್ ಬೈ ರೋಜರ್ ಕೋಟ್ಸ್) ಕಾಣಸಿಗುತ್ತವೆ. ಆ ಕಾಲದಲ್ಲಿ ವಿದ್ಯಾರ್ಥಿಗಳಿಂದ ನೇರವಾಗಿ ಪ್ರಯೋಗಗಳನ್ನು ಮಾಡಿಸುವ ಪದ್ಧತಿ ಇರಲಿಲ್ಲವಾಗಿ ಇವರೇ ನಡೆಸುತ್ತಿದ್ದ ಪ್ರಯೋಗ ತರಗತಿಗಳು ಬಹು ಸರಳವಾಗಿಯೂ ನೇರವಿಧಾನವನ್ನನುಸರಿಸುವಂಥವೂ ಪ್ರಚೋದನೀಯವೂ ಪರಿಪೂರ್ಣವೂ ಆಗಿರುತ್ತಿದ್ದುವು.

ಐಸಾಕ್ ನ್ಯೂಟನ್ ರಚಿಸಿದ ಪ್ರಿನ್ಸಿಪಿಯ ಗ್ರಂಥವನ್ನು ಹೊರತರುವಲ್ಲಿ ಕೋಟ್ಸ್ ಬಹುವಾಗಿ ಶ್ರಮಿಸಿದ್ದಾನೆ. ಪ್ರಿನ್ಸಿಪಿಯದ ಮೊದಲ ಆವೃತ್ತಿ 1687ರಲ್ಲಿ ಹೊರ ಬಂದಿದ್ದು ಆಗ ಕೇವಲ ಕೆಲವೇ ಪ್ರತಿಗಳು ಮಾತ್ರ ಅಚ್ಚಾಗಿದ್ದುವು. ಅದರ ಎರಡನೆಯ ಆವೃತ್ತಿಯನ್ನು ಇಬ್ಬರೂ ಸೇರಿ 3½ವರ್ಷಗಳ ಅವಧಿಯಲ್ಲಿ ಹೊರ ತಂದರು. ಎರಡನೆಯ ಮುದ್ರಣಕ್ಕೆ ನ್ಯೂಟನ್ ಬರೆದ ಮುನ್ನುಡಿಯಲ್ಲಿ ಕೋಟ್ಸ ತನಗೆ ಮಾಡಿರುವ ಸಹಾಯವನ್ನು ಮನಸಾರ ಕೃತಜ್ಞತೆಯಿಂದ ಸ್ಮರಿಸಿದ್ದಾನೆ.

ಕೋಟ್ಸನ ಬಹುಪಾಲಿನ ಕೆಲಸವೆಲ್ಲ ಗಣಿತಶಾಸ್ತ್ರದ ಬಗ್ಗೆಯೇ ಆಗಿದೆ. ಇವನ ಅಕಾಲ ಮರಣದಿಂದಾಗಿ (1716, ವಯಸ್ಸು ಕೇವಲ 34) ಬ್ರಿಟನ್ನಿನಲ್ಲಿ ಗಣಿತಶಾಸ್ತ್ರದ ಬೆಳೆವಣಿಗೆಗೆ ಪೆಟ್ಟು ಬಿತ್ತು. ಈ ಶಾಸ್ತ್ರದ ಮೇಲೆ ನ್ಯೂಟನ್ನನ ಅಧ್ಯಯನ ಸಂಶೋಧನಾವಿಧಾನಗಳನ್ನು ಅನುಸರಿಸಿದ ಕೆಲವೇ ಮಂದಿ ಗಣಿತಶಾಸ್ತ್ರ ಮೇಧಾವಿಗಳಲ್ಲಿ ಇವನೊಬ್ಬನೆಂದು ಹೊಗಳಲಾಗಿದೆ. *

**ಕೋಠಿ :** ನೇರ ವಿಕ್ರಯದ ಉದ್ದೇಶದಿಂದ ವ್ಯಾಪಾರಸ್ಥಳದಲ್ಲಿ ಸರಕು ಶೇಖರಿಸಿಡಲು ಮಾಡಿದ ವ್ಯವಸ್ಥೆ; ಮಂಡಿ; ಭಂಡಾರ. ಕಾರ್ಖಾನೆಯವರು ಕೊಂಡ ಸರಕನ್ನು ಉಗ್ರಾಣಕ್ಕೆ ಸೇರಿಸುವ ಮುನ್ನ ಸ್ವೀಕರಿಸಿಡುವ ಸ್ಥಳವನ್ನೂ ಕೋಠಿಯೆಂದು ಕರೆಯುವುದುಂಟು. ಕೋಠಿಯ ಇಂಗ್ಲಿಷ್ ಸಮಾನಪದವಾದ ಡಿಪೋ ಎಂಬುದನ್ನು ಸರಕಿನ ಅಥವಾ ಪ್ರಯಾಣಿಕರ ರೈಲ್ವೆ ಅಥವಾ ಬಸ್ ನಿಲ್ದಾಣ ಎಂಬ ಅರ್ಥದಲ್ಲೂ ಬಳಸಲಾಗುತ್ತದೆ. ಬ್ರಿಟನಿನಲ್ಲೂ ಈ ಪದವನ್ನು ಈ ಅರ್ಥದಲ್ಲಿ ಬಳಸುವುದುಂಟು. ಆದರೆ ಅಲ್ಲಿ ಸರಕಿನ ಸಾಗಿಗೆ ನಿಲ್ದಾಣಕ್ಕೆ ಮಾತ್ರ ಇದು ಸೀಮಿತವಾಗಿರುತ್ತದೆ. ಸೈನ್ಯಕ್ಕೆ ಅಗತ್ಯವಾದ ಸರಬರಾಯಿಯನ್ನು ಸಂಗ್ರಹಿಸಿಡುವ ಕೇಂದ್ರವನ್ನು ಈ ಹೆಸರಿನಿಂದ ಕರೆಯುವ ವಾಡಿಕೆಯುಂಟು. ದೊಡ್ಡ ದೊಡ್ಡ ಕೋಠಿಗಳು ಸರಬರಾಯಿಯನ್ನು ಶೇಖರಿಸಿಡುವುದರ ಜೊತೆಗೆ ಅದನ್ನು ವರ್ಗೀಕರಿಸುವ, ದುರಸ್ತಿನಲ್ಲಿಡುವ, ಹಾನಿಗೊಳಗಾದ ಸಾಮಗ್ರಿಯನ್ನು ರಕ್ಷಿಸುವ, ಸೈನಿಕರಿಗೆ ಅವಶ್ಯವಾದ ವಸ್ತುಗಳನ್ನೊದಗಿಸುವ ಕಾರ್ಯವನ್ನು ಕೂಡ ನಿರ್ವಹಿಸುತ್ತವೆ. ಸೈನ್ಯದ ನೂತನ ಪ್ರವೇಶಿಗಳಿಗೆ ಪೂರ್ವಭಾವಿ ತರಬೇತು ನೀಡುವ ಕೇಂದ್ರಕ್ಕೂ ಡಿಪೋ ಎಂದು ಕರೆಯುತ್ತಾರೆ, ಭಾರತಕ್ಕೆ ಬಂದ ಈಸ್ಟ್ ಇಂಡಿಯ ಕಂಪನಿಯೇ ಮುಂತಾದ ಪಾಶ್ಚಾತ್ಯ ವ್ಯಾಪಾರ ಸಂಸ್ಥೆಗಳು ದೇಶದ ಹಲವು ಸ್ಥಳಗಳಲ್ಲಿ ಕೋಠಿಗಳನ್ನು ಸ್ಥಾಪಿಸಿಕೊಂಡಿದ್ದುವು. *

**ಕೋಡಂಗಿ :** ಬಯಲು ನಾಟಕಗಳಲ್ಲಿನ ಮುಖ್ಯ ಪಾತ್ರಗಳಲ್ಲೊಂದು. ಈ ಪಾತ್ರಕ್ಕೆ ಹನುಮನಾಯಕ, ಹಾಸ್ಯಗಾರ, ಚಾರಕ, ಸಾರಥಿ ಮುಂತಾದ ಇತರ ಹೆಸರುಗಳೂ ಇವೆ. ಸಂಸ್ಕೃತ ನಾಟಕದ ವಿದೂಷಕನ ಪಾತ್ರಕ್ಕೆ ಹೋಲಿಸಬಹುದಾದರೂ ಬಯಲಾಟದ ಕೋಡಂಗಿಯ ವ್ಯಾಪ್ತಿ ವಿದೂಷಕನಿಗಿಂತಲೂ ಜನಪ್ರಿಯವಾದುದು. ತನ್ನ ವೇಷಭೂಷಣದ, ಮಾತಿನ, ಆಚರಣೆಯ ವಕ್ರತೆಯಿಂದಾಗಿ ಈತ ಪ್ರೇಕ್ಷಕರಲ್ಲಿ ನಗೆಯ ಹೊಳೆ ಹರಿಸುತ್ತಾನೆ.

ಕೋಡಂಗಿ ನಾಟಕದ ಪ್ರಾರಂಭದಿಂದ ಹಿಡಿದು ಕೊನೆಯತನಕ ರಂಗದ ಮೇಲೆ ಕಾಣಿಸಿಕೊಳ್ಳುತ್ತಾನೆ. ಯಾವ ರೀತಿಯ ಅಡ್ಡಿ ಆತಂಕ ಅಡೆತಡೆಗಳಿಲ್ಲದ ಪಾತ್ರ ಇವನದು. ಗಣಪನ ಪೂಜೆಯಿಂದ ಹಿಡಿದು ಕೊನೆಯ ಅಂಕದವರೆಗೂ ಬರುವ ಎಲ್ಲ ಪಾತ್ರಗಳನ್ನೂ ಇವನೇ ಮಾತಾಡಿಸಿ ಅವರವರ ಪರಿಚಯವನ್ನು ಸಭಿಕರಿಗೆ ಮಾಡಿ ಕೊಡುತ್ತಾನೆ. ಯಾರನ್ನು ಬೇಕಾದರೂ ನಗೆಪಾಡು ಮಾಡುವ ಪೂರ್ಣ ಸ್ವಾತಂತ್ರ್ಯ ಇವನಿಗಿದೆ. ರಂಗದ ಮೇಲೆ ಒಂದು ರೀತಿಯಲ್ಲಿ ಸರ್ವಾಧಿಕಾರಿಯಂತೆ ಈತ ಮೆರೆಯುತ್ತಾನೆ. ಕೆಲವು ವೇಳೆ ಭಾಗವತನನ್ನೇ ಹೀಯಾಳಿಸುವುದರ ಮೂಲಕ ಹಾಸ್ಯವನ್ನೊದಗಿಸುತ್ತಾನೆ. ಅನೇಕ ವೇಳೆ ಔಚಿತ್ಯ, ಸಭ್ಯತೆಗಳನ್ನು ಮೀರಿದ ತನ್ನ ಮಾತುಗಾರಿಕೆಯಿಂದ ಈತ ಪ್ರೇಕ್ಷಕರನ್ನು ನಗಿಸುವುದೂ ಉಂಟು.

ಕೋಡಂಗಿಯ ಒಂದು ರೂಪ

ವೇಷಭೂಷಣ ಧರಿಸುವುದರಲ್ಲಿ ಕೋಡಂಗಿ ತನ್ನದೇ ಆದ ಸ್ವಾತಂತ್ರ್ಯ ಪಡೆದಿರುತ್ತಾನೆ. ಒಮ್ಮೊಮ್ಮೆ ನಾಯಕನಂತೆ ವೇಷವನ್ನು ಧರಿಸಿಕೊಂಡು ರಂಗದ ಮೇಲೆ ಸುಳಿಯುತ್ತಾನೆ. ಆದರೆ ಆ ವೇಷವನ್ನು ಅಸ್ತವ್ಯಸ್ತವಾಗಿ ವಿಚಿತ್ರವಾಗಿ ಧರಿಸಿ ಅದರ ಮೂಲಕವೂ ತನ್ನ ಹಾಸ್ಯ ಪ್ರವೃತ್ತಿಯನ್ನೀತ ಪ್ರದರ್ಶಿಸುತ್ತಾನೆ. ರಂಗದ ಮೇಲೆ ಮೊದಲ ಸಾರಿಗೆ ಬರುವ ಪ್ರತಿಯೊಂದು ಪಾತ್ರವನ್ನೂ ವಿಚಾರಿಸುವ ಈತ ತಾನೇ ಭಾಗವತನನ್ನು ಕುರಿತು 'ನನ್ನನ್ನು ವಿಚಾರಿಸುವವರು ಯಾರೂ ಇಲ್ಲವಲ್ಲ ಕಾರಣವೇನು?' ಎನ್ನುತ್ತಾನೆ. ಆಗ ಭಾಗವತನೇ 'ನೀನು ಯಾರು' ಎಂದು ಪ್ರಶ್ನೆ ಹಾಕುತ್ತಾನೆ. 'ನಾನು ಪಾತಾಳ ಲೋಕದ ಮರಕುಟುಕ ರಾಜನೆಂದು ತಿಳಿ' ಎಂದು ಕೋಡಂಗಿ ಉತ್ತರಿಸುತ್ತಾನೆ. ಆಗ ಭಾಗವತ 'ಬಂದ ಕಾರಣವೇನು' ಎನ್ನಲು 'ಇಲ್ಲಿ ಯಾರಾದರೂ ಮುದುಕರು ಕಂಡರೆ ಅವರನ್ನು ಕೊಂದು ಅವರ ರಕ್ತ ಕುಡಿಯೋಣವೆಂದು ಬಂದೆ' ಎಂದು ಹೇಳುತ್ತ ಕೋಡಂಗಿ ರಂಗದ ಮುಂದೆ ಕುಳಿತಿರುವ ಯಾರಾದರೂ ಮುದುಕರನ್ನು ದೃಷ್ಟಿಸಿ ನೋಡುತ್ತಾನೆ. ಇದು ಇವನ ಹಾಸ್ಯಕ್ಕೊಂದು ಉದಾಹರಣೆ.

ಕೋಡಂಗಿಯದು ನಾಟಕದ ಜೀವಂತ ಪಾತ್ರ. ಉಳಿದ ಪಾತ್ರಗಳು ಆಗಾಗ ಕೋಡಂಗಿಯನ್ನು 'ಭಲೇ ಸಾರಥಿ' ಎಂದೇ ಹೇಳುತ್ತ ತಾವು ಬಂದು ಮಾಡಲಿರುವ ಕಾರ್ಯವನ್ನು ಪ್ರೇಕ್ಷಕರ ಗಮನಕ್ಕೆ ತರುತ್ತವೆ. ಇಲ್ಲಿ ಕೋಡಂಗಿ ನಾಟಕಕ್ಕೂ ಪ್ರೇಕ್ಷಕರಿಗೂ ಒಂದು ರೀತಿಯಲ್ಲಿ ಮಧ್ಯಸ್ಥನಂತಿರುತ್ತಾನೆ. ನಾಟಕ ನಡೆಯುತ್ತಿರುವಾಗ ಪಾತ್ರಗಳು ಕುಣಿದು ಕುಪ್ಪಳಿಸುವ ಭರದಲ್ಲಿ ವಸ್ತ್ರ ಆಭರಣ ಕೆಳಕ್ಕೆ ಬಿದ್ದಾಗ ಅಥವಾ ಅಸ್ತವ್ಯಸ್ತವಾದಾಗ ಅವನ್ನು ಸರಿಪಡಿಸುವ ಕೆಲಸ ಕೋಡಂಗಿಯದೇ ಆಗಿರುತ್ತದೆ. ಕೆಲವು ಸಾರಿ ಪರದೆಯನ್ನು ತಾನೇ ಬಿಡುತ್ತಾನೆ, ಎಳೆಯುತ್ತಾನೆ. ಇವನದು ಇಲ್ಲಿ ಇಂಥದೇ ಕೆಲಸವೆಂದೇನೂ ಇಲ್ಲ.

ರಾಕ್ಷಸ ಮುಂತಾದ ದೈತ್ಯ ಪಾತ್ರಗಳ ಪ್ರವೇಶವಾದಾಗ ಕೋಡಂಗಿ ಅವರನ್ನು ಮಾತಾಡಿಸಲು ಹೆದರಿದಂತೆ ನಟಿಸಿ ಭಾಗವತನ ಸಹಾಯವನ್ನು ಯಾಚಿಸುತ್ತಾನೆ. ಆದರೆ ಉಪಾಯವಾಗಿ ಅವರ ದುಷ್ಟಸ್ವಭಾವಗಳನ್ನೀತ ಬಹಿರಂಗಪಡಿಸುತ್ತಾನೆ. ನಾಟಕದ ಎಲ್ಲ ಪಾತ್ರಗಳ ಸಾರಥಿಯೂ ಇವನೇ ಆದ್ದರಿಂದ ಎಲ್ಲರ ರಥವನ್ನೂ ಇವನೇ ನಡೆಯಿಸಬೇಕು. ಒಂದು ಮರದ ಕೋಲನ್ನೇ ಈತ ರಥವನ್ನಾಗಿ ಮಾಡಿಕೊಂಡಿರುತ್ತಾನೆ.

'ರಥ ಎಲ್ಲಿಗೆ ಸಾಗಿತು' ಎಂದು ಭಾಗವತರು ಕೇಳಿದರೆ ಕೋಡಂಗಿ ಬಾಯಿಗೆ ಬಂದಂತೆ 'ಗೌಡರ ಮನೆಯ ಬಾಗಿಲಿಗೆ ಬಂದು ನಿಂತಿದೆ' ಎಂದು ಉತ್ತರಿಸುತ್ತಾನೆ. ನಡುನಡುವೆ ಈತ ಕುಣಿಯುತ್ತ ಹಾಸ್ಯದ ಹಾಡುಗಳನ್ನು ಹೇಳುವುದೂ ಉಂಟು. ಸ್ತ್ರೀಪಾತ್ರಗಳು ಕಾಣಿಸಿಕೊಂಡಾಗಲಂತೂ ಅವರ ಸೌಂದರ್ಯವನ್ನು ವಕ್ರವಾಗಿ ಬಣ್ಣಿಸುವುದರ ಮೂಲಕ ನಗೆಯ ಬುಗ್ಗೆಯನ್ನೇ ಈತ ಹರಿಸುತ್ತಾನೆ.

ಕೆಲವು ಸಾರಿ ಪ್ರಮುಖಪಾತ್ರಗಳು ರಂಗದ ಮೇಲೆ ಪ್ರವೇಶವಾಗುವ ಮುನ್ನ ಪ್ರೇಕ್ಷಕರ ಕುತೂಹಲವನ್ನು ಕೆರಳಿಸಲು ಅಂಕಪರದೆಯ ಹಿಂದೆ ತಾನು ನಿಂತು ಪರದೆಯನ್ನು ಅಲುಗಾಡಿಸುತ್ತ ಜೋರಾಗಿ ಕಿರುಚುತ್ತ ಕುಣಿಯುತ್ತಾನೆ. ಕೊನೆಗೆ ಪರದೆ ಸಂದಿನಲ್ಲಿ ತನ್ನ ಮುಖ ತೋರಿ 'ನಾನು' ಎಂದು ಅವರನ್ನು ನಿರಾಶೆಗೊಳಿಸುವುದರ ಮೂಲಕವೂ ನಗೆಯನ್ನುಂಟು ಮಾಡುತ್ತಾನೆ.

ಕೋಡಂಗಿಯ ವೇಷವೂ ಅಷ್ಟೇ ವಿಚಿತ್ರವಾದುದು. ಮುಖಕ್ಕೆ ನಾನಾರೀತಿಯ ಬಣ್ಣಗಳನ್ನು ಬಳಿದುಕೊಳ್ಳುವುದರ ಜೊತೆಗೆ ಈತ ಕಪ್ಪುಬಿಳುಪು ಮೀಸೆಗಳನ್ನು ಕಟ್ಟಿಕೊಂಡಿರುತ್ತಾನೆ. ವಿಚಿತ್ರವಾದ ಟೋಪಿ ತಲೆಯಲ್ಲಿರುತ್ತದೆ. ಇವನ ನಿಲುವಂಗಿಯೂ ಅಷ್ಟೇ ವಿಚಿತ್ರವಾದುದು. ಇವನ ನಡಿಗೆಯೂ ಅಷ್ಟೇ ವೈವಿಧ್ಯಮಯವಾದುದು. ಕೆಲವು ವೇಳೆ ಈತ ವಿಚಿತ್ರವಾದ ಮುಖವಾಡವನ್ನು ಧರಿಸಿ ಕೈಯಲ್ಲಿ ಮರದ ಜರ್ಕು ಹಿಡಿದು ತಿರುಗಿಸುತ್ತ ಕಿರುಚುತ್ತ ಕುಣಿದು, ನಿದ್ದೆಯಲ್ಲಿದ್ದ ಪ್ರೇಕ್ಷಕರನ್ನು ಎಚ್ಚರಿಸುವುದೂ ಉಂಟು.

ನಾಟಕಗಳಲ್ಲಿ ಹಾಸ್ಯರಸವನ್ನು ಪೋಷಿಸಿಕೊಂಡು ಬರುವುದು ಕೋಡಂಗಿಯ ಮುಖ್ಯ ಕೆಲಸ. ಪ್ರತಿಯೊಂದು ಪಾತ್ರವೂ ಕುಣಿದು ಸಾಕಾಗಿ ತನ್ನ ಸ್ಥಾನದಲ್ಲಿ ವಿಶ್ರಮಿಸುತ್ತಿರುವಾಗ ಕೋಡಂಗಿ ಪ್ರವೇಶಮಾಡಿ ಆ ಪಾತ್ರಗಳ ವೇಷಭೂಷಣದ ಬಗ್ಗೆ ವ್ಯಂಗ್ಯವಾಗಿ ಮಾತನಾಡಿ ಪ್ರೇಕ್ಷಕರನ್ನು ನಗಿಸುವುದರ ಮೂಲಕ ಆ ಪಾತ್ರಗಳಿಗೆ ವಿಶ್ರಾಂತಿ ಕೊಡುತ್ತಾನೆ.

ಬಯಲುನಾಟಕಗಳ ಕಥೆಗಳಲ್ಲಿ ಕೋಡಂಗಿಯಲ್ಲದೆ ಬೇರೆ ಯಾವ ಹಾಸ್ಯ ಪಾತ್ರವೂ ಬರುವುದಿಲ್ಲ. ಪ್ರೇಕ್ಷಕರ ಗಮನವಂತೂ ಕೋಡಂಗಿಯ ಮೇಲೇ ಇರುತ್ತದೆ. ಮಕ್ಕಳುಗಳಾದಿಯಾಗಿ ಎಲ್ಲರೂ ತಮ್ಮ ನಿದ್ದೆಬಿಟ್ಟು ಬಾಯಿಬಿಟ್ಟು ಕಣ್ಣಿಟ್ಟು ಕೋಡಂಗಿಯ ಆಗಮನವನ್ನು ಕಾತರದಿಂದ ನಿರೀಕ್ಷಿಸುತ್ತಾರೆ.

ಚತುರನಾದ ನಟನಿಗೆ ಈ ಪಾತ್ರದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಉಂಟು. ತನ್ನೆಲ್ಲ ಜಾಣತನವನ್ನೂ ಇಲ್ಲಿ ಆತ ಪ್ರದರ್ಶಿಸಬಲ್ಲ. (ಪಿ.ಆರ್.ಟಿ.)

**ಕೋಡಾನ್ :** ಜೀವಕೋಶದಲ್ಲಿ ಪ್ರೋಟೀನಿನ ಅಣು ತಯಾರಾಗುವಾಗ ಅದರಲ್ಲಿನ ಅಮೈನೋ ಆಮ್ಲಗಳ ಅನುಕ್ರಮತೆಯನ್ನು (ಅಂದರೆ ಅವು ಪ್ರೋಟೀನಿನ ಅಣುವಿನಲ್ಲಿ ಯಾವ ಯಾವ ಸ್ಥಾನದಲ್ಲಿ ಇರಬೇಕು ಎಂಬುದನ್ನು) ನಿರ್ದೇಶಿಸಿ ತೀರ್ಮಾನಿಸುವ ಸಂಕೇತವಾಹಕ ಆರ್‌ಎನ್‌ಎಯ (ರಿಬೊ ನ್ಯೂಕ್ಲೆಯಿಕ್ ಆಮ್ಲ) ಮೂರು ನ್ಯೂಕ್ಲಿಯೊಟೈಡುಗಳನ್ನೊಳಗೊಂಡ ಭಾಗ. ಒಂದು ಪ್ರೋಟೀನಿನ ತಯಾರಿಕೆಗೆ ಒಂದು ಆರ್‌ಎನ್‌ಎ ಇದ್ದು ಅದು ಡಿಎನ್‌ಎ ಎಂಬ ಕ್ರೋಮೊಸೋಮಿನಲ್ಲಿರುವ ರಸಾಯನಿಕ ವಸ್ತುವಿನ ಆಧಾರದ ಮೇಲೆ ಕಣಕೇಂದ್ರದಲ್ಲಿ ತಯಾರಾಗುತ್ತದೆ. ಆದರೆ ಅಣುವಿನಲ್ಲಿ ಸಾವಿರದಷ್ಟು ನ್ಯೂಕ್ಲಿಯೊಟೈಡುಗಳು ಸರಪಳಿಯಂತೆ ಒಂದಕ್ಕೊಂದು ಸೇರಿಕೊಂಡಿರುತ್ತವೆ. ಒಂದೊಂದು ನ್ಯೂಕ್ಲಿಯೋಟೈಡಿನಲ್ಲಿಯೂ ಒಂದು ರಿಬೋಸ್ (ಇಂಗಾಲದ 5 ಪರಮಾಣುಗಳನ್ನು ಹೊಂದಿದ ಸಕ್ಕರೆ) ಅಣು, ಒಂದು ಫಾಸ್ಫೇಟ್ ಮತ್ತೆ ಮೂರನೆಯದು ಒಂದು ಕ್ಷಾರವಸ್ತು ಯುರಾಸಿಲ್, ಸೈಟೋಸೀನ್, ಅಡೆನೀನ್ ಅಥವಾ ಗ್ವಾನೀನ್ ಇರುತ್ತವೆ. ಈ ಕ್ಷಾರಗಳು ನಾಲ್ಕು ಇರುವ್ಯದರಿಂದ ನಾಲ್ಕು ನ್ಯೂಕ್ಲಿಯೋಟೈಡುಗಳು ಸಾಧ್ಯ. ಅವನ್ನು ಕ್ಷಾರಗಳ ಹೆಸರುಗಳನ್ನು ಅನುಸರಿಸಿ ಕ್ರಮವಾಗಿ U,C,A,G ಎಂಬ ಅಕ್ಷರಗಳಿಂದ ಗುರುತಿಸುತ್ತಾರೆ. ಪ್ರೋಟೀನಿನ ಸಂಶ್ಲೇಷಣೆಯಲ್ಲಿ ಒಂದು ಅಮೈನೋ ಆಮ್ಲದ ನಿದರ್ಶನ ಕ್ರಿಯೆಗೆ ಒಂದು ನ್ಯೂಕ್ಲಿಯೊಟೈಡು ಇರಲು ಸಾಧ್ಯವಿಲ್ಲ. ಏಕೆಂದರೆ ಅಂಥವು ಇರುವುದು ನಾಲ್ಕು ಮಾತ್ರ. ಹಾಗೆಯೇ ಎರಡಿರುವ ದ್ವಿವಳಿಗಳು ಸಾಧ್ಯವಿಲ್ಲ. ಅಂಥವು 16 ಮಾತ್ರ ಇವೆ. ಪ್ರೋಟೀನಿನ ಅಣುವಿನಲ್ಲಾದರೊ 20ಕ್ಕಿಂತ ಹೆಚ್ಚು ಅಮೈನೋ ಆಮ್ಲಗಳಿವೆ. ಆದ್ದರಿಂದಲೇ ಒಂದು ಅಮೀನೋ ಆಮ್ಲದ ಈ ನಿದರ್ಶನ ಸಂಕೇತವಾದ ಕೋಡಾನಿನಲ್ಲಿ ಮೂರು ನ್ಯೂಕ್ಲಿಯೋಟೈಡ್‌ಗಳ ತ್ರಿವಳಿ (ಟ್ರಿಪ್ಲೆಟ್) ಇರಬೇಕೆಂದಾಯಿತು.

ಪ್ರತಿಯೊಂದು ಅಮೈನೋ ಆಮ್ಲದ ಕೋಡಾನುಗಳು ಯಾವುವು ಎಂಬುದನ್ನು ಕಂಡುಹಿಡಿಯುವ ಕೆಲಸಕ್ಕೆ ನಿರೆನ್‌ಬರ್ಗ್ ಮತ್ತು ಮಥಾಯ್ ಎಂಬ ಅಮೆರಿಕದ ವಿಜ್ಞಾನಿಗಳು ನಡೆಸಿದ ಪ್ರಯೋಗ ನಾಂದಿಯಾಯಿತು. ಅವರು ಪ್ರೋಟೀನಿನ ಸಂಶ್ಲೇಷಣೆಗೆ ಬೇಕಾಗುವ ಇ. ಕೊಲಿ ಎಂಬ ಸೂಕ್ಷ್ಮಾಣುಜೀವಿಯಿಂದ ಬಂದ ಎಲ್ಲ ಎನ್‌ಜೈಮು ಮುಂತಾದವುಗಳಿಗೆ ಬರಿಯ ಯುರಾಸಿಲ್ ಹೊಂದಿದ, ಪಾಲಿಯುರಿಡಿಲಿಕ್ ಆಮ್ಲ ಎಂಬುದು ಆರ್‌ಎನ್‌ಎಯನ್ನು, ಕೇವಲ 10μ ಗ್ರಾಮ್‌ನಷ್ಟು ಹಾಕಿ ರಸಾಯನಿಕಕ್ರಿಯೆಗೆ ಒಳಪಡಿಸಿದಾಗ ಅವರಿಗೆ ದೊರೆತ ಪ್ರೋಟೀನಿನಲ್ಲಿ ಬರಿಯ ಫೀನೈಲ್ ಅಲನೀನ್ ಅಮೈನೋ ಆಮ್ಲ ಇದ್ದುದು ಕಂಡುಬಂದಿತು. ಈ ಪ್ರಯೋಗ ಫಲಿತಾಂಶದ

ಆಧಾರದ ಮೇಲೆ ಫಿನೈಲ್ ಅಲನೀನಿನ ಕೋಡಾನು ಮೂರು ಯುರಿಡಿಲಿಕ್ ಆಮ್ಲಗಳನ್ನೊಳಗೊಂಡ U-U-U ಎಂಬ ತ್ರಿವಳಿ ಎಂದು ಅವರು ತೀರ್ಮಾನಿಸಿದರು. ಗೊತ್ತಾದ ನ್ಯೂಕ್ಲಿಯೊಟೈಡುಗಳು ಗೊತ್ತಾದ ಕ್ರಮದಲ್ಲಿರುವ ಆರ್‌ಎನ್‌ಎಗಳನ್ನು ತಯಾರಿಸಿ ಅವನ್ನು ಇದೇ ರೀತಿಯ ಪ್ರಯೋಗಕ್ಕೆ ಒಳಪಡಿಸಿ ಉಳಿದ ಅಮೈನೋ ಆಮ್ಲಗಳ ಕೋಡಾನುಗಳನ್ನು ಕಂಡುಹಿಡಿಯಲಾಗಿದೆ. ಉದಾಹರಣೆಗೆ-G-U-U-G-U-U ಎಂಬ ಅನುಕ್ರಮ ಇರುವ ಆರ್‌ಎನ್‌ಎಯಿಂದ ಬರಿಯ ವ್ಯಾಲೀನ್ ಇರುವ ಪ್ರೋಟೀನೂ-UGU-UG-U-ಅರ್‌ಎನ್‌ಎಯಿಂದ ಬರಿಯ ಸಿಸ್ಟೀನ್ ಇರುವ ಪ್ರೋಟೀನೂ ತಯಾರಾದುವು. ಆದ್ದರಿಂದ ವ್ಯಾಲೀನ್‌ನ ಕೋಡಾನ್ GUU ಎಂದೂ ಸಿಸ್ಟೀನಿನ ಕೋಡಾನ್ UGU ಎಂದೂ ಗೊತ್ತಾಯಿತು.

ಹೆಚ್ಚು ಕಾಲ ಬೇಕಿಲ್ಲದ ನಿರೆನ್‌ಬರ್ಗನ ಈ ಹೊಸಮಾರ್ಗ, ಪರಿಶೋಧನೆಯಲ್ಲಿ ಬಲು ಫಲಕಾರಿಯಾಗಿದೆ. ಅದು ಹೀಗಿದೆ. ಗೊತ್ತಿರುವ ಮತ್ತು ವಿಕಿರಣ ಪಟು ಅಮೈನೋ ಆಮ್ಲ–ಕ್ರಿಯಾಶಕ್ತಿಯುತ ರೂಪದಲ್ಲಿ–ಅದರೊಂದಿಗೆ ವಾಹಕ ಆರ್‌ಎನ್‌ಎ ಮತ್ತು ತಯಾರಿಸಿದ ನ್ಯೂಕ್ಲಿಯೋಟೈಡ್ ತ್ರಿವಳಿ ಇವನ್ನು ಬೆರೆಸಿ ಕೊಂಚ ಹೊತ್ತಿನ ಮೇಲೆ ವಿಶೇಷ ರೀತಿಯ ಸೋಸು ವ್ಯವಸ್ಥೆಗೆ ಒಳಪಡಿಸಿದಾಗ ಆ ಅಮೈನೋ ಆಮ್ಲ ತನ್ನ ಕೋಡಾನ್ ಆಗಿದ್ದರೆ ಮಾತ್ರ ಅದರೊಂದಿಗೆ ಸೇರಿಕೊಂಡು ಮೇಲೆಯೇ ನಿಲ್ಲುತ್ತದೆ. ಇಲ್ಲದಿದ್ದರೆ ಶೋಧಿಸಿದ ನೀರಿನಲ್ಲಿ ಹೊರಟು ಹೋಗುತ್ತದೆ. ಅದು ಎಲ್ಲಿದೆ ಎಂಬುದನ್ನು ಅದರ ವಿಕಿರಣ ಪಟುತ್ವದಿಂದ ಸುಲಭವಾಗಿ ಕಂಡುಹಿಡಿಯಬಹುದು. ಈ ಪ್ರಯೋಗದಿಂದ ಸಿದ್ಧವಾದ ಕೋಡಾನುಗಳೆಲ್ಲವನ್ನೂ ಪರೀಕ್ಷಿಸಲು ಸಾಧ್ಯವಾಯಿತು. ಇವೆಲ್ಲ ಪ್ರಯೋಗಗಳಿಂದ ಬಂದ ಫಲಿತಾಂಶವನ್ನು–ಅಮೈನೋ ಆಮ್ಲ ಮತ್ತು ಅವುಗಳ ಕೋಡಾನುಗಳು–ಇಲ್ಲಿ ಕೊಟ್ಟಿದೆ.

ಅಮೈನೋ ಆಮ್ಲ ಮತ್ತು ಅವುಗಳ ಕೋಡಾನುಗಳು

| ಅಮೈನೋ ಆಮ್ಲ | ಕೋಡಾನು | ಅಮೈನೋ ಆಮ್ಲ | ಕೋಡಾನು |
|---|---|---|---|
| 1 | 2 | 3 | 4 |
| ಫೀನೈಲ್ ಅಲನೀನ್ | UUU | ಟೈರೋಸೀನ್ | UAU |
| " | UUC | " | UAC |
| ಲ್ಯೂಸೀನ್ | UUA | ಅಂತ್ಯಮಾಡುವ | UAA |
| " | UUG | " | UAG |
| " | CUU | ಹಿಸ್ಟಡೀನ್ | CAU |
| " | CUC | " | CAC |
| " | CUA | ಗ್ಲೂಟಮೀನ್ | CAA |
| | CUG | | CAG |
| ಐಸೋ ಲ್ಯೂಸೀನ್ | AUU | ಅಸ್ಪಾರ್‌ಜೀನ್ | AUU |
| | AUC | " | AAC |
| ಮೆಥಯೋನೀನ್(?) | AUA | ಲೈಸೀನ್ | AAA |
| ಮೆಥಿಯೊನೀನ್ | AUG | ಲೈಸೀನ್ | AAG |
| ವೇಲೀನ್ | GUU | ಅಸ್ಪಾರ್ಟಿಕ್ ಆಮ್ಲ | GAU |
| " | GUC | | GAC |
| " | GUA | ಗ್ಲುಟಾಮಿಕ್ ಆಮ್ಲ | GAA |
| " | GUG | " | GAG |
| ಸೆರೀನ್ | UCU | ಸಿಸ್ಟೈನ್ | UGU |
| " | UCC | | UGC |
| " | UCA | ಟ್ರಿಪ್ಟೊಫೇನ್ (?) | UGA |
| " | UCG | ಟ್ರಿಪ್ಟೊಫೇನ್ | UGG |
| ಪ್ರೋಲೀನ್ | CCU | ಆರ್ಜಿನೀನ್ | CGU |
| " | CCC | " | CGC |
| " | CCA | " | CGA |
| " | CCG | " | CGG |
| ಥ್ರಿಯೊನೀನ್ | ACU | ಸೆರೀನ್ | AGU |
| " | ACC | " | AGC |
| " | ACA | ಆರ್ಜಿನೀನ್ | AGA |
| " | ACG | ಆರ್ಜಿನೀನ್ (?) | AGG |
| ಅಲನೀನ್ | GCU | ಗ್ಲೈಸೀನ್ | GGU |
| " | GCC | " | GGC |
| " | GCA | " | GGA |
| " | GCG | " | GGG |

?–ಈ ಗುರುತಿನವನ್ನು ಕುರಿತು ಪ್ರಯೋಗಸಾಕ್ಷ್ಯ ಸಾಕಷ್ಟಿಲ್ಲ

ಕೋಡಾನುಗಳ ಗಮನಾರ್ಹವಾದ ವಿಷಯಗಳು: ಇವುಗಳ ನಿರ್ದೇಶನ ಶಕ್ತಿಯ ಮೂಲ ಮೊದಲ ಎರಡು ನ್ಯೂಕ್ಲಿಯೋಟೈಡುಗಳಲ್ಲಿ ಇದೆ. ಮೂರನೆಯದರ ಪಾತ್ರ ಅಷ್ಟು ಹಿರಿದಲ್ಲ. ಒಂದೇ ರೀತಿಯ ಅಮೈನೋ ಆಮ್ಲಗಳಿಗೆ ಒಂದೇ ತೆರನ ಕೋಡಾನ್ (ಉದಾಹರಣೆಗೆ, ಗ್ಲುಟಾಮಿಕ್ ಮತ್ತು ಅಸ್ಪಾರ್ಟಿಕ್ ಆಮ್ಲಗಳ ಕೋಡಾನುಗಳು) ಇರುತ್ತದೆಂದು ಕಾಣುತ್ತದೆ. ಹೈಡ್ರಾಕ್ಸಿಪ್ರೋಲೀನ್, ಹೈಡ್ರಾಕ್ಸಿಲೈಸೀನ್‌ಗಳಿಗೆ ಸ್ವಂತ ಕೋಡಾನುಗಳಿಲ್ಲ. ಅಂದರೆ ಪ್ರೋಲೀನ್ ಮತ್ತು ಲೈಸೀನ್ ಪ್ರೋಟೀನಿನಲ್ಲಿ ಸೇರಿದ ತರುವಾಯ ಹೈಡ್ರಾಕ್ಸಿ ಗುಂಪು ಸೇರುತ್ತದೆ ಎಂದಾಯಿತು. ಗ್ಲುಟಮೀನ್ ಮತ್ತು ಅಸ್ಪಾರ್ಜೀನ್‌ಗಳಿಗೆ (ಅನುಕ್ರಮವಾಗಿ ಗ್ಲುಟಾಮಿಕ್ ಆಮ್ಲ, ಅಸ್ಪಾರಿಕ್ ಆಮ್ಲಗಳಿಂದ ಬಂದವು) ಸ್ವಂತ ಕೋಡಾನ್ ಇರುವುದನ್ನು ನೋಡಿದರೆ ಪ್ರೋಟೀನಿನಲ್ಲಿ ಸೇರುವುದಕ್ಕಿಂತ ಮುಂಚೆಯೇ ಅವುಗಳ ತಯಾರಿಕೆ ಆಗಿರಬೇಕು. ಪ್ರೋಟೀನಿನ ತಯಾರಿಕೆ ಅಂತ್ಯಮಾಡುವ ಕೋಡಾನುಗಳೂ ಉಂಟು. ಈ ಸಂಕೇತಭಾಷೆ ಎಲ್ಲ ಜೀವಿಗಳಲ್ಲಿಯೂ ಒಂದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಹೇಳುವಷ್ಟರಮಟ್ಟಿಗೆ ಸಾಕಷ್ಟು ಪ್ರಯೋಗ ಸಾಕ್ಷ್ಯಗಳು ಬಂದಿವೆ. ಏಕೆಂದರೆ ಬೇರೆ ಬೇರೆ ಕೋಡಾನುಗಳನ್ನು ಬೇರೆ ಬೇರೆ ಜೀವಿಗಳಿಂದ ಪ್ರಾಣಿ, ಸಸ್ಯ ಮತ್ತು ವೈರಸುಗಳಿಂದ ಬಂದ ಜೀವರಸದೊಂದಿಗೆ ಪ್ರಯೋಗಿಸಿದಾಗ ಬಂದ ಉತ್ತರ ಒಂದೇ. ಕೋಡಾನುಗಳ ಇರವು, ಅವುಗಳ ಕೆಲಸ ಪರಿಚಯ ಈಗ ಗೊತ್ತಾಗಿರುವುದರಿಂದ ಅನುವಂಶಿಕ ಗುಣ ವ್ಯತ್ಯಾಸ ಅಂದರೆ ವ್ಯತ್ಯಯವನ್ನು (ಮ್ಯುಟೇಷನ್) ಹೀಗೆ ವಿವರಿಸಬಹುದು. ಕ್ರೋಮೊಸೋಮಿನ ಡಿಎನ್‌ಎ ಬದಲಾವಣೆ, ಅದರ ಆಧಾರದ ಮೇಲೆ ತಯಾರಾದ ಆರ್‌ಎನ್‌ಎಯಲ್ಲಿನ ಕೋಡಾನಿನಲ್ಲಿ ಒಂದು ನ್ಯೂಕ್ಲಿಯೋಟೈಡು ಹೋಗಿ ಬೇರೊಂದು ಆಗಬಹುದು. ಅರಿವು ತಪ್ಪಿದ (ಮಿಸ್–ಸೆನ್ಸ್) ಅಥವಾ ಜ್ಞಾನರಹಿತ (ನಾನ್–ಸೆನ್ಸ್) ಕೋಡಾನ್ ಆಗಬಹುದು. ಆದ್ದರಿಂದ ಅದು ನಿರ್ದೇಶಿಸಿದ ಪ್ರೋಟೀನಿನ ಅಮೈನೋ ಆಮ್ಲಗಳ ಸರಪಳಿ ಸರಿಯಾಗಿರದೆ ಅದಕ್ಕೆ ಇರಬೇಕಾದ ಗುಣ, ಶಕ್ತಿ ಇರುವುದಿಲ್ಲ ಅಥವಾ ಬೇರೆ ಗುಣ ಬರುತ್ತದೆ. ಅಂದರೆ ಜೀವಕೋಶಕ್ಕೆ ಹಳೆಯ ಒಂದು ಗುಣ ಹೋಗಿ ಹೊಸದು ಬರುತ್ತದೆ. ಇದೇ ವ್ಯತ್ಯಯ ಕ್ರಿಯೆ. ಹೀಗೆಯೇ ಅನುವಂಶಿಕ ದೋಷಗಳಿಗೂ ಇದೇ ರೀತಿಯ ವಿವರಣೆ ಕೊಡಬಹುದು.

ಕೋಡಾನುಗಳ ರೂಪ ಪ್ರೋಟೀನಿನ ತಯಾರಿಕೆಯಲ್ಲಿ ಅವುಗಳ ಪಾತ್ರ ಮುಂತಾದವನ್ನು ವಿಶೇಷವಾಗಿ ಪರಿಶೋಧನೆ ನಡೆಸಿದವರು ಮುಖ್ಯವಾಗಿ ನಿರೆನ್ ಬರ್ಗ್, ಖೊರಾನಾ, ಹಾಲಿ (ಇವರೆಲ್ಲರಿಗೂ ಒಟ್ಟಿಗೆ ನೊಬೆಲ್ ಪಾರಿತೋಷಕ ಬಂತು) ಮತ್ತು ಒಚಾವಾ ಪ್ರೋಟೀನಿನ ತಯಾರಿಕೆಗೆ ಬೇಕಾಗುವ ವಾಹಕ ಆರ್‌ಎನ್‌ಎಗಳ ಅಣುರಚನೆಯ ಪರಿಶೋಧನೆ ನಡೆಸಿದವ ಹಾಲಿ. ಈ ವಾಹಕ ಆರ್‌ಎನ್‌ಎ ಒಂದು ಅಮೈನೊ ಆಮ್ಲಕ್ಕೆ ಒಂದು ಇದೆ. ಅದು ತನ್ನ ಅಮೈನೋ ಆಮ್ಲವನ್ನು ಹಿಡಿದುಕೊಂಡು ಅದರ ಕೋಡಾನಿನ ಬಳಿ ತೆಗೆದುಕೊಂಡು ಹೋಗುತ್ತದೆ. ಆ ಕೋಡಾನನ್ನು ಹುಡುಕುವುದು ಕಷ್ಟವೇನಿಲ್ಲ. ಈ ವಾಹಕ ಆರ್‌ಎನ್‌ಎ ತನ್ನ ಅಣುವಿನ ಒಂದು ಭಾಗದಲ್ಲಿ ಪ್ರತಿಕೋಡಾನ್ (ಆಂಟಿ ಕೋಡಾನ್) ಅಥವಾ ರಸಾಯನ ಗುಣಗಳಲ್ಲಿ ವಿರುದ್ಧದ ತ್ರಿವಳಿ ಹೊಂದಿದೆ. ಕೋಡಾನ್ ಪ್ರತಿಕೋಡಾನನ್ನು ಆಕರ್ಷಿಸಿ ತನ್ನೆಡೆಗೆ ತನ್ನ ಅಮೈನೊ ಆಮ್ಲ ಬರುವಂತೆ ಮಾಡುತ್ತದೆ. ಈ ಪ್ರತಿಕೋಡಾನುಗಳು ಯಾವುವು ಎಂಬ ವಿವರ ಸ್ವಲ್ಪಮಟ್ಟಿಗೆ ತಿಳಿದಿದೆ. ಉದಾಹರಣೆಗೆ ಅಲನೀನಿನ ಕೋಡಾನ್ GCU ಆದರೆ ಪ್ರತಿಕೋಡಾನ್ CGI (I ಎಂಬುದು ಹೈಪೊಕ್ಸಾನ್‌ಥೀನ್ ಇರುವ ನ್ಯೂಕ್ಲಿಯೋಟೈಡ್); ಟೈರೋಸೀನ್‌ಗೆ UAC ಕೋಡಾನ್; ಅದರ ಪ್ರತಿಕೋಡಾನ್ AΨG (Ψ ಎಂಬುದು ಸೂಡೊಯುರಿಡಿಲಿಕ್ ಆಮ್ಲ). (ಎ.ಎಸ್.ಆರ್.)

**ಕೋಡಿ : ನೋಡಿ – ಕಟ್ಟೆ**

**ಕೋಡೀನ್ :** ಅಫೀಮಿನಲ್ಲಿರುವ ಒಂದು ಆಲ್ಕಲಾಯಿಡ್. ಅಫೀಮಿನ ಪ್ರಧಾನ ಆಲ್ಕಲಾಯಿಡ್ ಆದ ಮಾರ್ಫೀನಿಗೂ ಇದಕ್ಕೂ ಬಹಳ ಹತ್ತಿರದ ಸಂಬಂಧ. ಮಾರ್ಫೀನ್ ರಚನೆಯಲ್ಲಿರುವ ಒಂದು ಫೀನಾಲ್ ಗುಂಪಿನ (–OH) H ಬದಲು $-CH_3$ ಇದೆ. ಇದನ್ನು ಅಫೀಮಿನಿಂದ ಬೇರ್ಪಡಿಸಿ ತಯಾರಿಸುತ್ತಾರೆ. ಮಾರ್ಫೀನಿನ ಮೆಥಿಲೀಕರಣದಿಂದಲೂ ತಯಾರಿಸುತ್ತಾರೆ. ಅದಕ್ಕೆ ಮಾರ್ಫೀನಿನ ಪೊಟ್ಯಾಸಿಯಂ ಲವಣವನ್ನು ಮೀಥೈಲ್ ಅಯೊಡೈಡಿನೊಂದಿಗೆ ಬೆರೆಸಿ ಕಾಸುತ್ತಾರೆ. ಕೋಡೀನ್ ಬಿಳಿ ಬಣ್ಣದ ಸ್ಫಟಿಕೀಯ ಪುಡಿ. ನೀರಿನಲ್ಲಿ ಸಾಮಾನ್ಯವಾಗಿಯೂ ಆಲ್ಕೊಹಾಲಿನಲ್ಲಿ ವಿಶೇಷವಾಗಿಯೂ ಲೀನವಾಗುತ್ತದೆ. ದ್ರವನ ಬಿಂದು 154.9°. ಇದನ್ನು ವೈದ್ಯರು ಉಪಶಾಮಕವಾಗಿಯೂ (ಸೆಡೇಟಿವ್) ವೇದನಾಹಾರಿಯಾಗಿಯೂ (ಅನಾಲ್‌ಜೆಸಿಕ್) ಬಳಸುತ್ತಾರೆ. ಕೆಮ್ಮಿಗೆ ಮದ್ದಾಗಿಯೂ ಬಳಸುವುದುಂಟು. ಇದರ ಸೇವನೆಯಿಂದ ಚಟ ಬೆಳೆಯುವುದಿಲ್ಲ. (ಬಿ. ಎಸ್‌ಯು.)

**ಕೋಡುರೈಟ್ :** ವಿಶಾಖಪಟ್ಟಣದ ಬಳಿ ಇರುವ ಕೋಡೂರು ಮ್ಯಾಂಗನೀಸ್ ಗಣಿಗಳಲ್ಲಿ ಕಂಡುಬರುವ ಮ್ಯಾಂಗನೀಸ್ ಅದುರಿನ ಶಿಲೆ. ಇದರಲ್ಲಿ ಬಲುಮಟ್ಟಿಗೆ ಫೆಲ್ಡ್‌ಸ್ಪಾರ್, ಮ್ಯಾಂಗನೀಸ್ ಗಾರ್ನೆಟ್ ಮತ್ತು ಅಪಟೈಟ್ ಖನಿಜಗಳಿವೆ. ಹಲವು ಬಾರಿ ಕ್ವಾರ್ಟ್ಸ್ ಮತ್ತು ಮ್ಯಾಂಗನೀಸ್ ಪೈರಾಕ್ಸೀನ್‌ಗಳು ಸಹ ಕಂಡುಬಂದಿವೆ. ಫೆಲ್ಡ್‌ಸ್ಪಾರ್ ಸಾಮಾನ್ಯವಾಗಿ ಹೆಚ್ಚು ಶಿಥಿಲಗೊಂಡು ಒಂದು ತೆರನಾದ ಸುದ್ದೆಮಣ್ಣಿನಂತಿರುತ್ತದೆ. ಗಾರ್ನೆಟ್ ಹರಳಿನೋಪಾದಿಯಲ್ಲಿದ್ದು ಗುಂಪಾಗಿ ಅಥವಾ ಹರಡಿದಂತಿರುತ್ತದೆ. ಮತ್ತೊಂದು ಮುಖ್ಯ ಖನಿಜವಾದ ಅಪಟೈಟ್ ನೀಲಿ ಮಿಶ್ರಿತ ಹಸುರು ಬಣ್ಣದ ಗುಂಡನೆಯ ಹರಳುಗಳಾಗಿ ತೋರಿಬರುತ್ತದೆ. ಒಟ್ಟಿನಲ್ಲಿ ಈ ವರ್ಗದ ಶಿಲೆಗಳು ಹೆಚ್ಚಿನ ಶಿಥಿಲೀಕರಣಕ್ಕೊಳಗಾಗಿರುತ್ತವೆ. ಹಾಗಿಲ್ಲದಿದ್ದಲ್ಲಿ ಶಿಲೆಯ ಕಣರಚನೆಯನ್ನು ಕಷ್ಟವಿಲ್ಲದೆ ಗುರುತಿಸಬಹುದು. ಹಲವು ವೇಳೆ ಕಣಗಳು ಗಾತ್ರದಲ್ಲಿ ಬಲು ದಪ್ಪವಾಗಿಯೂ ಇರುವುದುಂಟು. ಈ ಗುಂಪಿನ ಶಿಲೆಗಳ ರಾಸಾಯನಿಕ ಸಂಯೋಜನೆ ಒಂದೇ ತೆರನಾಗಿರದೆ ಆಮ್ಲೀಯ ವರ್ಗದಿಂದ ಪ್ರತ್ಯಾಮ್ಲೀಯ ವರ್ಗದವರೆಗೆ ಹರಡಿರುತ್ತದೆ. ಖನಿಜ ಸಂಯೋಜನೆಯಲ್ಲೂ ಹೀಗೆಯೇ. ಸಾಮಾನ್ಯವಾಗಿ ಶಿಲೆಯಲ್ಲಿರುವ ಮುಖ್ಯ ಖನಿಜವನ್ನನುಸರಿಸಿ ಕ್ವಾರ್ಟ್ಸ್ ಕೋಡುರೈಟ್, ಪೈರಾಕ್ಸೀನ್ ಕೋಡುರೈಟ್ ಮತ್ತು ಬಯೋಟೈಟ್ ಕೋಡುರೈಟ್ ಎಂದು ಹಲವಾರು ಬಗೆಗಳನ್ನು ಗುರುತಿಸಲಾಗಿದೆ.

ಈ ವರ್ಗದ ಶಿಲೆಗಳು ಬಲುಮಟ್ಟಿಗೆ ಕ್ಯಾಲ್ಕೇರಿಯಸ್ ಅಥವಾ ಸ್ಕ್ಯಾಪೊಲಿಟಿಕ್ ನೈಸ್ ಶಿಲೆಗಳೊಡನೆ ಹರಡಿಕೊಂಡಿರುತ್ತವೆ. ಅಲ್ಲದೆ ಗ್ರಾನೈಟ್ ಮತ್ತು ಖಾಂಡಲೈಟ್ ಶಿಲೆಗಳೊಡನೆಯೂ ಆಗಾಗ ಹರಡಿರಬಹುದು. ಆದರೂ ಈ ಯಾವ ಶಿಲೆಗಳನ್ನೂ ಛೇದಿಸುವುದಿಲ್ಲ. ಈ ಶಿಲೆ ಮ್ಯಾಂಗನೀಸ್ ಅದುರಿಗೆ ಮುಖ್ಯ ಆಗರ. ಇದರಲ್ಲಿ ಅತ್ಯಂತ ಹೆಚ್ಚಿನ ಮೊತ್ತದಲ್ಲಿ ಮ್ಯಾಂಗನೀಸ್ ಇದೆ.

ಕೋಡುರೈಟ್ ಉಂಟಾದ ರೀತಿಯನ್ನು ಹಲವಾರು ಭೂವಿಜ್ಞಾನಿಗಳು ವಿವೇಚಿಸಿದ್ದಾರೆ. ಇವರಲ್ಲಿ ಒಬ್ಬನಾದ ಲೂಯಿ ಫರ್ಮರ್‌ರ ಅಭಿಪ್ರಾಯ ಹೀಗಿದೆ: ಬೃಹದಾಕಾರದ ಅಗ್ನಿಶಿಲೆಯೊಂದು ಅಂತರಾಳದಿಂದ ಮೇಲ್ಭಾಗಕ್ಕೆ ದಾರಿ ಮಾಡಿಕೊಂಡು ಬರುವಾಗ, ಮಾರ್ಗಮಧ್ಯದಲ್ಲಿ ಮ್ಯಾಂಗನೀಸ್ ಅದುರಿನ ಶಿಲೆಯನ್ನು ಹೊಕ್ಕು ಕ್ರಮೇಣ ವ್ಯಾಪಿಸಿ ಅದನ್ನು ನಾನಾಬಗೆಯಲ್ಲಿ ಮಾರ್ಪಡಿಸಿದ ಕಾರಣ ಕೋಡುರೈಟ್ ಗುಂಪಿನ ಶಿಲೆಗಳುಂಟಾಗಿವೆ. (ಬಿ.ವಿ.ಜಿ.)

**ಕೋಣಾರ್ಕ :** ಭಾರತದ ಒಡಿಶ ರಾಜ್ಯದ ಪುರಿ ಜಿಲ್ಲೆಯಲ್ಲಿರುವ ಒಂದು ಸ್ಥಳ. ಪುರಿಯಿಂದ ಈಶಾನ್ಯಕ್ಕೆ 32 ಕಿಮೀ ದೂರದಲ್ಲಿ ಸಮುದ್ರತೀರದಲ್ಲಿದೆ. ಇಲ್ಲಿರುವ ಸೂರ್ಯ ದೇವಾಲಯ ಒಂದು ಅದ್ಭುತ ಕಲಾಕೃತಿ. ವಿಶ್ವದ ಅನೇಕ ಕಲಾವಿಮರ್ಶಕರ ಹೊಗಳಿಕೆಗೆ ಪಾತ್ರವಾಗಿರುವ ಈ ದೇವಾಲಯವನ್ನು ಗಂಗವಂಶದ 1 ನೆಯ ನರಸಿಂಹ ಸು.1238–1284ರ ಕಾಲದಲ್ಲಿ ಕಟ್ಟಿಸಿದ. ವಿಷ್ಣು ಮಹಾರಾಣ ಎಂಬ ಶಿಲ್ಪಿ ಈ

ಕೋಣಾರ್ಕದ ಸೂರ್ಯದೇವಾಲಯದ ಜಗಮೋಹನ (ದಕ್ಷಿಣ)

ದೇವಾಲಯದ ಸ್ವರೂಪವನ್ನು ಮನಸ್ಸಿನಲ್ಲಿ ಚಿತ್ರಿಸಿಕೊಂಡು ಕಟ್ಟಿದನೆಂದು ಒಂದು ದಂತಕಥೆಯಿದೆ. ಇದರದು ಕಳಿಂಗ ರೇಖಾ ನಾಗರ ಪ್ರಾಸಾದಶೈಲಿ. 24 ಚಕ್ರಗಳಿಂದ ಕೂಡಿದ ಭವ್ಯ ರಥವನ್ನು 7 ಮಹಾ ಬಲಶಾಲಿ ಕುದುರೆಗಳು ಎಳೆಯುತ್ತಿರುವ ಹಾಗೆ ಪೂರ್ವಾಭಿಮುಖವಾಗಿ ಈ ದೇವಾಲಯವನ್ನು ರಚಿಸಲಾಗಿದೆ. ಚುಕ್ಕೆ ಚುಕ್ಕೆಯ, ವಿವಿಧ ಬಣ್ಣಗಳ ಛಾಯೆಗಳುಳ್ಳ, ಬಿಳಿ ಮರಳುಕಲ್ಲು ಮತ್ತು ಕಪ್ಪು ಹಸಿರಿನ ಕ್ಲೋರೈಟ್ ಶಿಷ್ಟ್ ಕಲ್ಲಿನಲ್ಲಿ ದೇವಾಲಯವನ್ನು ಕಟ್ಟಲಾಗಿದೆ. ಸೇವಕರು ಮತ್ತು ಉಷಾ ಪ್ರತ್ಯೂಷರೊಡನೆ ಮಂದಹಾಸದಿಂದ ಕಂಗೊಳಿಸುವ ಸಮಭಂಗದಲ್ಲಿರುವ ದಿವ್ಯ ಸೂರ್ಯನ ಮೂರ್ತಿ ಇದರಲ್ಲಿ ಪ್ರತಿಷ್ಠಿತವಾಗಿದೆ.



ಕೋಣಾರ್ಕದ ಸೂರ್ಯದೇವಾಲಯದ ಮುಮ್ಮಂಟಪದ
ಅಡಿಪಾಯದ ಮೇಲಿರುವ ಶಿಲ್ಪಕೃತಿಗಳು

ಈ ದೇವಾಲಯ ಮುಖ್ಯವಾಗಿ 19.70 ಮೀ ಚದರ ಮತ್ತು ಸು.67.4 ಮೀ ಎತ್ತರದ ವಿಮಾನದಿಂದಲೂ ಅದಕ್ಕೆ ಹೊಂದಿಕೊಂಡಂತೆ ಮುಂಭಾಗದಲ್ಲಿರುವ 28.20 ಮೀ ಚದರ ಮತ್ತು 38 ಮೀ ಎತ್ತರದ ಜಗಮೋಹನದಿಂದಲೂ ಕೂಡಿದೆ ಮುಂದೆ ಪ್ರತ್ಯೇಕವಾಗಿ ನಟಮಂದಿರವಿದೆ. ಇವೆರಡರ ಮಧ್ಯೆ ಅರುಣಸ್ತಂಭವೂ ಸುತ್ತಲೂ 257 ಮೀ x 162 ಮೀ ಪ್ರದೇಶವನ್ನೊಳಗೊಂಡ ಪೌಳಿಗೋಡೆಯೂ ಇವೆ. ಆದರೆ ವಿಮಾನದ ಮೇಲ್ಭಾಗವೂ ನಟಮಂದಿರದ ಮೇಲ್ಚಾವಣಿಯೂ ಬಿದ್ದು ಹೋಗಿವೆ. ಈ ದೇವಸ್ಥಾನ ಪೂರ್ಣಸ್ಥಿತಿಯಲ್ಲಿದ್ದಾಗ ಹೇಗಿದ್ದಿರಬಹುದೆಂಬುದನ್ನು ಇದರ ಭಗ್ನಾವಶೇಷಗಳ ಆಧಾರದ ಮೇಲೆ ಪರ್ಸಿ ಬ್ರೌನ್ ಊಹಿಸಿಕೊಂಡು ಅದನ್ನು ಪುನಾರಚಿಸಿದ್ದಾನೆ.

ದೇವಸ್ಥಾನದ ಹೆಚ್ಚು ಕಡಿಮೆ ಎಲ್ಲ ಭಾಗಗಳಲ್ಲೂ ಬಗೆಬಗೆಯ ರೇಖಾಚಿತ್ರಗಳಿವೆ. ವಿವಿಧ ಭಾವಭಂಗಿಗಳಲ್ಲಿರುವ, ನಾನಾ ಕಾರ್ಯಮಗ್ನರಾಗಿರುವ ಜನರು; ಅರಮನೆಯ, ಜನಸಾಮಾನ್ಯರ ನಿತ್ಯಜೀವನದ ದೃಶ್ಯಗಳು; ನಾಟ್ಯಗಾರರು, ಸಂಗೀತಗಾರರು, ನಾಗ–ನಾಗಿನಿಯರು, ದೇವತೆಯರು; ಆನೆ, ಕುದುರೆ, ಸಿಂಹ, ಜಿರಾಫೆ ಮೊದಲಾದ ಪ್ರಾಣಿಗಳು; ಬೇಟೆ, ಆನೆ ಹಿಡಿಯುವುದು, ವರ್ತಕರ ಬಿಡಾರ, ಅವರು ಅಡಿಗೆ ಮಾಡಿಕೊಳ್ಳುತ್ತಿರುವುದು, ತಾಯಿ–ಮಗು ಪಲ್ಲಕ್ಕಿಯಲ್ಲಿ ಹೋಗುತ್ತಿರುವುದು, ಹಗ್ಗ ಎಳೆಯುವ ಆಟ–ಹೀಗೆ ಅನೇಕ ದೃಶ್ಯಗಳಿವೆ. ಮಿತಾಲಂಕೃತ ಮಾನವರ, ಮುಖ್ಯವಾಗಿ ಸ್ತ್ರೀಯರ, ಹಾವಭಾವಗಳು, ಅಂಗಸೌಷ್ಠವ–ಇವನ್ನೆಲ್ಲ ಎತ್ತಿ ತೋರಿಸುವ ಅತಿಸೂಕ್ಷ್ಮ ಕುಸುರಿ ಕೆತ್ತನೆಯನ್ನಿಲ್ಲಿ ಕಾಣಬಹುದು. (ಎ.ಎಸ್‌ಯು.)

**ಕೋಣೆ ಮತ್ತು ಆಸರೆ ಕಂಬ ಪದ್ಧತಿ :** ಗಣಿಗಳಿಂದ ಕಲ್ಲಿದ್ದಲನ್ನು ಹೊರ ತೆಗೆಯಲು ಅನುಸರಿಸುವ ವಿವಿಧ ಪದ್ಧತಿಗಳಲ್ಲಿ ಮುಖ್ಯವಾದದ್ದು. ಕಲ್ಲಿದ್ದಲಿನ ಸ್ತರ ದಪ್ಪವಾಗಿದ್ದು ಭೂಮೇಲ್ಮೈಗೆ ಅತಿಹೆಚ್ಚಿನ ಆಳದಲ್ಲಿರದಿದ್ದಾಗ, ಈ ಪದ್ಧತಿಯನ್ನು ಅನುಸರಿಸಲಾಗುವುದು. ಕಿರಿದಾದ ಮತ್ತು ಸಮಾಂತರ ಸುರಂಗಮಾರ್ಗಗಳನ್ನು ಕಲ್ಲಿದ್ದಲು ಸ್ತರದಲ್ಲಿ ತೋಡುವ ಮುಖಾಂತರ ಪೂರ್ಣ ಕಲ್ಲಿದ್ದಲನ್ನು ಚದರ ಅಥವಾ ಆಯ ಉಳ್ಳ ಆಸರೆ ಕಂಬಗಳನ್ನಾಗಿ ವಿಭಾಗಿಸಲಾಗುವುದು. ಅನಂತರ ಅವನ್ನು ಕಲ್ಲಿದ್ದಲು ಕತ್ತರಿಸುವ ಯಂತ್ರದ ಸಹಾಯದಿಂದ ಸ್ವಲ್ಪ ಕತ್ತರಿಸಿ ಆಸರೆ ಕಂಬಗಳನ್ನು ತೆಗೆದು ಇವುಗಳ ಬದಲು ಬೇರೆ ರೀತಿ ಆಧಾರಗಳನ್ನು ಒದಗಿಸಲಾಗುವುದು. ಮರದ ದಿಮ್ಮಿ, ಕ್ರಿಬ್ ಜೋಡಣೆ ಮತ್ತು ಗ್ರಾನೈಟ್ ಪ್ಯಾಕ್‌ವಾಲ್‌ಗಳನ್ನು ಆಧಾರಗಳಾಗಿ ಉಪಯೋಗಿಸಲಾಗುವುದು. ಈಚೆಗೆ ಈ ಪದ್ಧತಿಯನ್ನು ಅನುಸರಿಸುವ ಕೆಲವು ಕಲ್ಲಿದ್ದಲು ಗಣಿಗಳಲ್ಲಿ ಸ್ಯಾಂಡ್ ಸ್ಟವಿಂಗನ್ನು ಸಹ ಮುಖ್ಯ ಆಧಾರವಾಗಿ ಉಪಯೋಗಿಸುವರು. (ಟಿ.ಟಿ.)

**ಕೋನ್, ಫರ್ಡಿನ್ಯಾಂಡ್ ಜೂಲಿಯಸ್ :** 1828–98. ಗಿಡಮರ ಜೀವಿಗಳ ಸೂಕ್ಷ್ಮದರ್ಶಕ ರೂಪಗಳನ್ನು ಆಳವಾಗಿ ಅಭ್ಯಾಸ ಮಾಡಿ ಏಕಾಣುಜೀವಿವಿಜ್ಞಾನದ ಮೂಲಪುರುಷರಲ್ಲಿ ಒಬ್ಬನಾಗಿದ್ದ ಜರ್ಮನಿಯ ಸಸ್ಯ ವಿಜ್ಞಾನಿ. ಬ್ರೆಸ್ಲೊದಲ್ಲಿ ಹುಟ್ಟಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪದವೀಧರನಾಗಿ ತನ್ನ ಹುಟ್ಟೂರಿಗೆ ಮರಳಿ, ಕೊನೆಗೆ ಬ್ರೆಸ್ಲೊ ವಿಶ್ವವಿದ್ಯಾಲಯದ ಸಸ್ಯ ಅಂಗರಚನವಿಜ್ಞಾನದ ಸಂಸ್ಥೆಯಲ್ಲೇ ಪ್ರಾಧ್ಯಾಪಕ–

ನಿರ್ದೇಶಕನಾದ. ಇವನು ಕಡಲ್ಕಾಳೆಗಳ ಮತ್ತು ಬೂಷ್ಟುಗಳ ಶೋಧನೆಗಳಲ್ಲಿ ಕೈಹಾಕಿದ ಮೊದಲಿಗ. 1860ರಿಂದೀಚೆಗೆ ಏಕಾಣುಜೀವಿವಿಜ್ಞಾನದಲ್ಲಿ ತಲ್ಲೀನನಾದ. ಸೂಕ್ಷ್ಮಜೀವಾಣುಗಳ ವಿಂಗಡಣ ಪದ್ಧತಿ (1872), ಏಕಾಣುಜೀವಿಗಳ ಬೀಜಕಣಗಳ (ಸ್ಪೋರ್ಸ್) ಶೋಧನೆ, ತಾವೇ ತಾವಾಗಿ ವಿಕಾಸವಾಗುವುದರಲ್ಲಿ ಏಕಾಣು ಜೀವಿಗಳ ಬೀಜಕಣಗಳ ಪಾತ್ರ–ಇವು ಅವನ ವೈಜ್ಞಾನಿಕ ಕೊಡುಗೆಗಳಲ್ಲಿ ಮುಖ್ಯವಾದವು. ತನ್ನ ಖಚಿತವಾದ ರೂಪಶಾಸ್ತ್ರಕ ಶೋಧನೆಗಳಿಂದ ಏಕಾಣುಜೀವಿಗಳನ್ನೆಲ್ಲ ಜಾತಿ (ಜೆನೆರ), ಪ್ರಭೇದಗಳಾಗಿ (ಸ್ಪೀಶೀಸ್) ನಾಲ್ಕು ಗುಂಪುಗಳಲ್ಲಿ ವಿಂಗಡಿಸಲು ಸಾಧ್ಯವೆಂದು ಆಗಲೇ ಹೇಳಿದ್ದ. ಹಾಗೆಂದರೂ ಕೇವಲ ರೂಪದಿಂದ ಮಾತ್ರವೇ ಹಾಗೆ ವಿಂಗಡಿಸಲಾಗದೆಂದೂ ಮನಗಂಡಿದ್ದ. ಏಕಾಣುಜೀವಿಗಳನ್ನು ತಳಿಯೆಬ್ಬಿಸಿ ಹುಲುಸಾಗಿ ಬೆಳೆಸುವ ಕೋನದ ದ್ರವ ಈಗಲೂ ಚಾಲ್ತಿಯಲ್ಲಿದೆ. ಒಂದೇ ತೆರನಾಗಿ ತೋರುವ ಜೀವಾಣುಗಳ ಕೆಲಸ, ಜೈವಿಕ ಗುಣಗಳೂ ಬೇರೆಬೇರೆ ಆಗಿರಬಹುದೆಂದೂ ಮೊದಲಾಗಿ ಕಂಡುಕೊಂಡಿದ್ದ. ಆಗಿನ ಕಾಲಕ್ಕೆ ಏಕಾಣುಜೀವಿಗಳ ವಿಚಾರವಾಗಿ ಎಲ್ಲವನ್ನೂ ಅರಿತ ಒಬ್ಬನೇ ಒಬ್ಬ ಪರಿಣತ ಕೋನ್. ನೆರಡಿ (ಅಂತ್ರಾಕ್ಸ್) ಇಲ್ಲವೇ ತೊರಳೆ ಜ್ವರದ ಕಾರಕ ಒಂದು ದಂಡಾಣುಜೀವಿ (ಬೆಸಿಲಸ್) ಎಂದು ಆಗಿನ್ನೂ ಹೆಸರಾಗಿರದಿದ್ದ ರಾಬರ್ಟ್ ಕಾಕ್ ಪುರಾವೆಗಳನ್ನು ತೋರಿಸಿ ಕೊಟ್ಟದ್ದು (1876) ಕೋನನ ಪ್ರಯೋಗಾಲಯದಲ್ಲೇ. ಕೋನ್, ನೆರಡಿ (ಆಂತ್ರಾಕ್ಸ್) ಇಲ್ಲವೇ ತೊರಳೆ ಜ್ವರದ ಕಾರಕ ಒಂದು ದಂಡಾಣುಜೀವಿ(ಬೆಸಿಲಸ್) ಎಂದು ಆಗಿನ್ನೂ ಹೆಸರಾಗಿರದಿದ್ದ ರಾಬರ್ಟ್‌ಕಾಕ್ ಪುರಾವೆಗಳನ್ನು ತೋರಿಸಿ ಕೊಟ್ಟದ್ದು (1876) ಕೋನನ ಪ್ರಯೋಗಾಲಯದಲ್ಲೇ. ಕೋನ್ ಉತ್ತಮ ಉಪಾಧ್ಯಾಯ ಮತ್ತು ವಿಜ್ಞಾನ ಪ್ರಚಾರಿ. ಇವನು ಲಂಡನ್ನಿನ ರಾಯಲ್ ಸೊಸೈಟಿಯ ಸದಸ್ಯನೂ ಆಗಿದ್ದ. (ಡಿ.ಎಸ್.ಎಸ್.)

**ಕೋನಮಾಪಕ :** ಕೋನಗಳನ್ನು ಅಳೆಯಲು ಬಳಸುವ ಸಾಧನ. ಹರಳುಗಳ ಕೋನಗಳನ್ನು ಅಳೆಯಲು ಗೋನಿಯೋಮೀಟರ್ ಎಂಬ ಹೆಸರಿನ ಕೋನಮಾಪಕವನ್ನು ಜ್ಯಾಮಿತಿಯಲ್ಲಿ ಕೋನಗಳನ್ನು ಅಳೆಯಲು ಪ್ರೊಟ್ರ್ಯಾಕ್ಟರ್ ಎಂಬ ಹೆಸರಿನ ಕೋನಮಾಪಕವನ್ನೂ ಬಳಸುತ್ತಾರೆ. ಪ್ರಸ್ತುತ ಲೇಖನ ಗೋನಿಯೋ ಮೀಟರನ್ನು ಕುರಿತದ್ದು. ಹರಳಿನ ಅಕ್ಕಪಕ್ಕದ ಮುಖಗಳ ನಡುವೆ ಇರುವ ಕೋನವೇ ಅಂತರ್ಮುಖ ಕೋನ. ಒಂದು ಖನಿಜದ ಹರಳುಗಳು ಗಾತ್ರದಲ್ಲಿ ಹೆಚ್ಚಿನ ವ್ಯತ್ಯಾಸಗಳನ್ನು ತೋರಿಸಿದರೂ ಅವುಗಳ ಅಂತರ್ಮುಖ ಕೋನಗಳ ಮೌಲ್ಯ ಏಕರೂಪವಾಗಿರುತ್ತದೆ. ಇದನ್ನು ಅಳೆಯುವ ಸಾಧನವೇ ಕೋನಮಾಪಕ. ಇದರಲ್ಲಿ ಎರಡು ವಿಧ: 1 ಸಂಸ್ಪರ್ಶ ಕೋನಮಾಪಕ, 2 ಪ್ರತಿಫಲನ ಕೋನಮಾಪಕ.



ಸಂಸ್ಪರ್ಶ ಕೋನಮಾಪಕ

ಸಂಸ್ಪರ್ಶ ಕೋನಮಾಪಕವನ್ನು ರಚಿಸಿದವ ಪೆನ್‌ಫೀಲ್ಡ್. ಇದಕ್ಕೂ ಖನಿಜದ ಮುಖಗಳಿಗೂ ನಿಕಟವಾದ ಸ್ಪರ್ಶವಿರುತ್ತದೆ ದಪ್ಪವಾದ ರಟ್ಟಿನ ಅರ್ಧವೃತ್ತಾಕಾರದ ಕೋನಮಾಪಕವನ್ನು ಗುರುತಿಸಲಾಗಿದೆ. ಅದನ್ನು 0°–180° ವರೆಗೆ ವಿಭಜಿಸಲಾಗಿದೆ. ತಳದ ಮಧ್ಯಭಾಗದಲ್ಲಿ ಸುಲಭವಾಗಿ ಅತ್ತಿಂದಿತ್ತ ಚಲಿಸುವ ನೀಳಪಟ್ಟಿಯೊಂದನ್ನು ಲಗತ್ತಿಸಲಾಗಿದೆ. ಹರಳಿನ ಅಕ್ಕಪಕ್ಕದ ಮುಖಗಳನ್ನು ಕೋನಮಾಪಕದ ತಳ ಮತ್ತು ನೀಳಪಟ್ಟಿಯ ನಡುವೆ ಇಟ್ಟಲ್ಲಿ ಅವುಗಳ ನಡುವಿನ ಕೋನದ ಮೌಲ್ಯವನ್ನು ಸುಲಭವಾಗಿ ಅಳೆಯಬಹುದು. ಮೌಲ್ಯವನ್ನು ಅನುಸರಿಸಿ ನೀಳಪಟ್ಟಿ ಉಪಕರಣದಲ್ಲಿ ಗುರುತಿಸಿರುವ ಡಿಗ್ರಿಯನ್ನು ಸೂಚಿಸುತ್ತದೆ. ಹರಳು ಗಾತ್ರದಲ್ಲಿ ದೊಡ್ಡದಾಗಿದ್ದಲ್ಲಿ ಈ ಉಪಕರಣವನ್ನು ಸುಲಭವಾಗಿ ಬಳಸಬಹುದು. ಆದರೆ ಸೂಕ್ಷ್ಮ ಹರಳುಗಳ ಅಂತರ್ಮುಖ ಕೋನಗಳನ್ನು ಅಳೆಯಲು ಇದು ಅಷ್ಟಾಗಿ ಉಪಯೋಗಕ್ಕೆಬಾರದು. ಆಗ ಪ್ರತಿಫಲನ ಕೋನಮಾಪಕ ಬಹು ಉಪಯುಕ್ತವಾದುದು. ಇದನ್ನು ವೊಲಾಸ್ಟನ್ ಎಂಬಾತ ನಿರ್ಮಿಸಿದ (1909). ಖನಿಜದ ಹರಳಿನ ಮುಖಗಳು ನಯವಾಗಿದ್ದು ಉತ್ತಮ ಹೊಳಪಿನಿಂದಲೂ ಕೂಡಿದ್ದಲ್ಲಿ ಬಹಳ ಒಳ್ಳೆಯದು. ಅಕ್ಕಪಕ್ಕದ ಮುಖಗಳಿಂದ ಹೊರಹೊಮ್ಮುವ ಬೆಳಕಿನ ಪ್ರತಿಫಲನವನ್ನು ಉಪಯೋಗಿಸಿಕೊಂಡು ಅಂತರ್ಮುಖ ಕೋನವನ್ನು ನಿರ್ಧರಿಸಲಾಗುವುದು. ಹರಳುಗಳಿಂದ ಎಕ್ಸ್‌ಕಿರಣ ಪ್ರತಿಫಲಗಳನ್ನು ಅಳೆಯುವ ವೈಸೆನ್‌ಬರ್ಗ್ ಎಕ್ಸ್‌ಕಿರಣ ಕೋನಮಾಪಕ ಎಂಬ ಒಂದು ಸಾಧನವೂ ಬಳಕೆಯಲ್ಲಿ ಉಂಟು. (ಎಂ.ಎಸ್.ಎಸ್.)

**ಕೋನಯ್ಯ :** ಸು.1750. ಕೃಷ್ಣಾರ್ಜುನರ ಸಂಗರವೆಂಬ ಷಟ್ಪದೀ ಗ್ರಂಥದ ಕರ್ತೃ. ಈತ ಬ್ರಾಹ್ಮಣ. ಕಾಶ್ಯಪ ಗೋತ್ರದವ. ಹೋತೂರ ಬೆಟ್ಟರಸನ ಮಗ. ಸರಸಭಾರತಿ ಕೋನಯಾಖ್ಯನು–ಎಂದು ಹೇಳಿಕೊಂಡಿರುವುದರಿಂದ ಇವನಿಗೆ ಸರಸ ಭಾರತಿ ಎಂಬ ಬಿರುದಿದ್ದಂತೆ ತೋರುತ್ತದೆ. ಪೂರ್ವಕವಿಗಳಲ್ಲಿ ವ್ಯಾಸ, ವಾಲ್ಮೀಕಿ, ಶುಕ, ಕಾಳಿದಾಸಾದಿಗಳನ್ನು ಸ್ಮರಿಸಿದ್ದಾನೆ.

ಜೈಮಿನಿಭಾರತವನ್ನು ಬರೆದ ಲಕ್ಷ್ಮೀಶನನ್ನು (ಸು.1700) ಸ್ತುತಿಸುವುದರಿಂದ ಕವಿ ಅವನ ಕಾಲಕ್ಕಿಂತ ಈಚೆಯವನೆಂಬುದು ಸುಸ್ಪಷ್ಟ. ಇವನ ಗ್ರಂಥ ಕೃಷ್ಣಾರ್ಜುನರ ನಡುವೆ ನಡೆದ ಯುದ್ಧವನ್ನು ವರ್ಣಿಸುತ್ತದೆ. ಇಡೀ ಗ್ರಂಥ ಭಾಮಿನಿಷಟ್ಪದಿಯಲ್ಲಿದೆ. ಸಂಧಿ 27, ಪದ್ಯ 1721. ಇದಕ್ಕೆ ಗಯಚರಿತ್ರೆ ಎಂಬ ಹೆಸರೂ ಉಂಟು. ಗಯನೆಂಬ ಗಂಧರ್ವಶಿರೋಮಣಿ ಕೃಷ್ಣರಾಯಂಗೆ ದ್ರೋಹವನೆಸಗಿ ಫಲುಗುಣನಮಱೆವೊಗಲು ಹರಿ ಕೊಡಹೇಟಿಲವನನು ಕೊಡೆನೆನೆ ಕಾದಿದರು ಹರಿನರರು ದ್ವೈತಕಾನನದಿ; ಪರಮೇಶನೀರ್ವರ ತಿಳುಹಿ ಸಾಮದಲೊಂದು ಮಾಡಿದನು–ಎಂಬುದೇ ಇದರ ಕಥಾಗರ್ಭ.

ಈ ಕಥೆ ಮಹಾಭಾರತದ ವನಪರ್ವದಲ್ಲಿದೆ ಎಂದೂ ಕೃತಿನಾಯಕ ತಿರುಪತಿವೆಂಕಟರಮಣನೆಂದೂ ಕೃತಿಯನ್ನು ಆತನಿಗೆ ಅರ್ಪಿಸಿರುವೆನೆಂದೂ ಕವಿ ಹೇಳುತ್ತಾನೆ. ಬಂಧ ಸರಳವೂ ಸುಲಭವೂ ಸರಸವೂ ಆಗಿರುವುದರಿಂದ ಈ ಕಾವ್ಯ ಜನಪ್ರಿಯವೆನಿಸಿದೆ.

ಕರ್ಣಾಟಕ ಕಾವ್ಯ ಕಲಾನಿಧಿ ಸರಣಿಯಲ್ಲಿ ಈ ಗ್ರಂಥ ಅಚ್ಚಾಗಿದೆ. (ಎಂ.ಎಸ್.ಬಿ.ಆರ್.)

**ಕೋನಿ : ಲ್ಯಾಗೊಮಾರ್ಫ** ಗಣದ (ಮೊಲ ಮುಂತಾದುವುಗಳನ್ನೊಳಗೊಂಡ) **ಅಕೊಟೋನಿಡೀ** ಕುಟುಂಬಕ್ಕೆ ಸೇರಿದ ಸಸ್ತನಿ. **ಅಕೊಟೋನ ಪ್ರಿನ್ಸೆಪ್ಸ್** ಇದರ ವೈಜ್ಞಾನಿಕ ನಾಮ. ರಷ್ಯ, ಕೊರಿಯ, ಟಿಬೆಟ್, ಇರಾನ್, ಅಫ್ಘಾನಿಸ್ತಾನ್, ಉತ್ತರ ಅಮೆರಿಕದ ರಾಕಿ ಪರ್ವತಗಳಲ್ಲಿ ಇದು ಕಂಡುಬರುತ್ತದೆ. ಬೆಟ್ಟಗುಡ್ಡಗಳಲ್ಲೆ ಇದರ ವಾಸ. (ಎಸ್.ಎನ್.ಕೆ.ಯು.)

ಗಿನಿ ಹಂದಿಗಿಂತ ಚಿಕ್ಕ ಗಾತ್ರದ ಈ ಪ್ರಾಣಿಯ ಉದ್ದ ಸುಮಾರು 6", ತೂಕ ಸು.130 ಗ್ರಾಂ. ನೋಡಲು ಪುಟ್ಟ ಮೊಲದಂತೆಯೇ ಕಂಡರೂ ಇದಕ್ಕೆ ಮೊಲಕ್ಕಿರುವಂಥ ದೊಡ್ಡ ಕಿವಿಗಳಿಲ್ಲ, ಬಾಲವೂ ಇಲ್ಲ. ಮೈಮೇಲೆಲ್ಲ ಮೃದುವಾದ ದಟ್ಟವಾದ ತುಪ್ಪಳವಿದೆ. ಬಣ್ಣ ಬೂದುಮಿಶ್ರಿತ ಕಂದು. ಕೈಕಾಲುಗಳು ಚಿಕ್ಕವು. ಅಂಗಾಲಿನ ಮೇಲೆ ದಟ್ಟವಾದ



ತುಪ್ಪಳವಿದೆ. ಗಂಡುಕೋನಿಯ ವೃಷಣಗಳು ಬೆದೆಗಾಲವನ್ನು ಬಿಟ್ಟು ಉಳಿದ ಕಾಲದಲ್ಲಿ ಉದರಭಾಗದಲ್ಲಿ ಹುದುಗಿರುತ್ತವೆ. ಕೋನಿ ಸಿಳ್ಳು ಹಾಕಿದಂತೆ ಕೂಗುತ್ತದೆ. ಬೆಟ್ಟಪ್ರದೇಶಗಳಲ್ಲಿ ವಾಸಿಸುವ ಕೋನಿ ಕಲ್ಲುಗಳ ಪೊಟರೆಗಳಲ್ಲೂ ಬಯಲು ಇಲ್ಲವೆ ಮರುಭೂಮಿಗಳಲ್ಲೂ ವಾಸಿಸುವಂಥದು. ನೆಲವನ್ನು ತೋಡಿ ಮಾಡಿಕೊಂಡ ಬಿಲಗಳಲ್ಲೂ ವಾಸಿಸುತ್ತದೆ. ಸಸ್ಯಾಹಾರಿಯಾದ ಕೋನಿ ಹುಲ್ಲು, ಜೊಂಡು, ಚಿಗುರು ಮುಂತಾದವನ್ನು ತಿನ್ನುತ್ತದೆ. ಇದರ ಒಂದು ವಿಶಿಷ್ಟ ಲಕ್ಷಣವೆಂದರೆ ಚಳಿಗಾಲಕ್ಕೆಂದು ಆಹಾರವನ್ನು ಶೇಖರಿಸಿಡುವುದು. ಬೇಸಗೆಯ ಕೊನೆಯ ಹೊತ್ತಿಗೆ ಹುಲ್ಲು ಮುಂತಾದ ವಸ್ತುಗಳನ್ನು ಆಯ್ದು ಕಲ್ಲುಗಳ ಮೇಲಕ್ಕೆ ಕೊಂಡೊಯ್ದು ಬಿಸಿಲಿನಲ್ಲಿ ಒಣಗಿಸಿ ಒಣಮೇವು ಮಾಡಿಕೊಳ್ಳುತ್ತದೆ. ಚಳಿಗಾಲದಲ್ಲಿ ಆಹಾರದ ಅಭಾವವಿದ್ದಾಗ ಇದನ್ನೇ ತಿನ್ನುತ್ತ ಕಾಲಕಳೆಯುತ್ತದೆ. ಹುಲ್ಲನ್ನು ಒಣಗಿಸುತ್ತಿರುವಾಗ

ಮಳೆಬರುವ ಸೂಚನೆ ಕಂಡುಬಂದರೆ ಒಂದು ಸ್ಥಳದಲ್ಲಿ ವಾಸಿಸುವ ಎಲ್ಲ ಕೋನಿಗಳೂ ಒಟ್ಟುಗೂಡಿ ಹುಲ್ಲನ್ನೆಲ್ಲ ತಮ್ಮ ಗೂಡಿನ ಸುರಕ್ಷಿತ ಸ್ಥಳಗಳಿಗೆ ಕೊಂಡೊಯ್ದು ಹುಲ್ಲು ನೆನೆಯದಂತೆ ಕಾಪಾಡುತ್ತವೆ.

ಕೋನಿಗಳಲ್ಲಿ ಇನ್ನೊಂದು ಸೋಜಿಗವನ್ನು ಕಾಣಬಹುದು. ರಾತ್ರಿವೇಳೆ ಇವು ಕಪ್ಪು ಬಣ್ಣದ ಸ್ನಿಗ್ಧವಾದ ಹಿಕ್ಕೆಗಳನ್ನು ವಿಸರ್ಜಿಸುತ್ತವೆ. ಹಿಕ್ಕೆಗಳ ಸುತ್ತ ಲೋಳೆಯಂಥ ವಸ್ತುವಿನ ಆವರಣವೂ ಇರುತ್ತದೆ. ಕೆಲಕಾಲಾನಂತರ ಕೋನಿಗಳು ಈ ಹಿಕ್ಕೆಗಳನ್ನು ತಿಂದುಬಿಡುತ್ತವೆ. ಬಹುಶಃ ಹಿಕ್ಕೆಗಳ ಮೂಲಕ ದೇಹದಿಂದ ಹೊರಬೀಳುವ ಕೆಲವು ಅತ್ಯಾವಶ್ಯಕ ವಿಟಮಿನ್‍ಗಳನ್ನು ಮರಳಿ ಪಡೆಯುವುದೇ ಇದರ ಉದ್ದೇಶವಿರಬೇಕು. ಕೋನಿಗಳ ಸಂತಾನೋತ್ಪತ್ತಿಯ ಕಾಲ ಮೇ–ಸೆಪ್ಟೆಂಬರ್ ತಿಂಗಳುಗಳು. ಸೂಲಿಗೆ 3–4 ಮರಿಗಳು ಹುಟ್ಟುತ್ತವೆ. ಒಂದು ಹೆಣ್ಣು ವರ್ಷಕ್ಕೆ 2–3 ಸಲ ಈಯಬಲ್ಲುದು. ಹುಟ್ಟಿದಾಗ ಮರಿಗಳಿಗೆ ತುಪ್ಪಳ ಇರುವುದಿಲ್ಲ. ಮರಿಗಳು ಸುಮಾರು 6–7 ವಾರಗಳ ಅನಂತರ ಸ್ವತಂತ್ರ ಜೀವನ ಆರಂಭಿಸುತ್ತವೆ. *

**ಕೋನಿಗ್, ಕಾರ್ಲ್ ರುಡಾಲ್ಫ್ :** 1832–1901. ಶಬ್ದವಿಜ್ಞಾನದ ಸಂಶೋಧಕ ಮತ್ತು ಉಪಜ್ಞೆಕಾರ (ಇನ್ವೆಂಟರ್). ಈತನ ಜನನ ಜರ್ಮನಿ ದೇಶದ ಪ್ರಷ್ಯದ ಕೊನಿಗ್ಸ್‍ಬರ್ಗ್‍ನಲ್ಲಿ (ನವೆಂಬರ್ 26, 1832). ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಯನಮಾಡಿ 1852ರ ಸುಮಾರಿನಲ್ಲಿ ಪ್ಯಾರಿಸ್‍ಗೆ ಹೋದ. ಈತನ ಹೆಸರು ಪ್ರಸಿದ್ಧಿಗೆ ಬಂದಿರುವುದು ನಾದಶೃಂಗ ಉಪಕರಣಗಳ ತಯಾರಿಕೆಯಿಂದ. ಕರಾರುವಾಕ್ಕು ಮತ್ತು ಉತ್ಕೃಷ್ಟತೆಗಳಿಗೆ ಈ ಉಪಕರಣಗಳು ಹೆಸರುವಾಸಿಯಾಗಿದ್ದುವು. ಸಂಗೀತಪ್ರಿಯರಾದ ಪ್ಯಾರಿಸ್ ಜನತೆಯಿಂದ ನಾದಶೃಂಗಗಳಿಗೆ ವಿಪರೀತ ಬೇಡಿಕೆ ಬಂದದ್ದರಿಂದ ಇವುಗಳ ವ್ಯಾಪಾರದಿಂದಲೇ ಕೋನಿಗ್‍ನಿಗೆ ಜೀವನ ನಡೆಸಲು ಸುಲಭವಾಗಿ ಸಾಧ್ಯವಾಯಿತು. ಈತನ ಆಸಕ್ತಿ ಇದ್ದುದು ಶಬ್ದವಿಜ್ಞಾನದ ಸಂಶೋಧನೆಗಳಲ್ಲಿ. ಇದರಲ್ಲಿನ ಸಮಸ್ಯೆಗಳನ್ನು ಪರಿಶೀಲಿಸಲು ಅನೇಕ ಸುಂದರವಾದ ಉಪಕರಣಗಳನ್ನು ನಿಯೋಜಿಸಿದನಲ್ಲದೆ ಅವುಗಳ ನಿರ್ಮಾಣವನ್ನು ಕೂಡ ತಾನೇ ಮಾಡಿದ. ಇವುಗಳಲ್ಲಿ ಉದಾಹರಿಸಬಹುದಾದವು: 1. ತರಂಗ ಮೋಹಕಾರಕಗಳು. ಇವನ್ನು ಪ್ರಥಮವಾಗಿ ಫಿಲಡೆಲ್ಫಿಯದಲ್ಲಿ 1876ರಲ್ಲಿ ಪ್ರದರ್ಶಿಸಲಾಯಿತು. 2. ಅತಿ ಹೆಚ್ಚು ಸಂಖ್ಯೆಯಲ್ಲಿ ಕರಾರುವಾಕ್ಕಾದ ನಾದಶೃಂಗಗಳನ್ನೊಳಗೊಂಡ ಸ್ವರಮಾಪಕ. ಕೋನಿಗ್‍ನ ಮೂಲಕೃತಿಗಳಲ್ಲಿ ಇತರ ವಿಷಯಗಳ ಜೊತೆಗೆ ವ್ಹೀಟ್‍ಸ್ಟನ್‍ನ ಶಬ್ದಾಕೃತಿಗಳು, ವಿವಿಧ ಸ್ವರಾಕ್ಷರಗಳ ವೈಶಿಷ್ಟ್ಯನಾದ ಇವೂ ಸೇರಿದ್ದುವು. ಈತ 2 ಅಕ್ಟೋಬರ್ 1901 ರಂದು ಪ್ಯಾರಿಸ್‍ನಲ್ಲಿ ನಿಧನನಾದ. (ಎ.ಪಿ.)

**ಕೋನಿಫೆರೇಲಿಸ್ :** ಜಿಮ್ನೋಸ್ಪರ್ಮೀ ವರ್ಗದ (ನಗ್ನಬೀಜಿ ಸಸ್ಯವರ್ಗ) ಎರಡು ಪ್ರಮುಖ ಗಣಗಳಲ್ಲೊಂದು (ಇನ್ನೊಂದು ಸೈಕಡೇಲಿಸ್). ಇಂದು ಬದುಕಿರುವ ನಗ್ನಬೀಜಿ ಸಸ್ಯಗಳ ಸಂಖ್ಯೆಯನ್ನು ಗಮನಿಸಿದರೆ ಈ ಗಣವೇ ಅತಿದೊಡ್ಡದೆಂದು ಹೇಳಬಹುದು; ಇದರಲ್ಲಿ 7 ಕುಟುಂಬಗಳೂ ಅವಕ್ಕೆ ಸೇರಿದಂತೆ 52 ಜಾತಿ ಹಾಗೂ 570 ಪ್ರಭೇದಗಳೂ ಇವೆ. ಜಿಮ್ನೋಸ್ಪರ್ಮ್ ಗುಂಪಿನಲ್ಲಿ ಈ ಗಣದ ಸಸ್ಯಗಳೇ ಬಹಳ ಮುಖ್ಯವಾದವು. ಪ್ರಾಚೀನ ಹಾಗೂ ಮಧ್ಯಯುಗಗಳಲ್ಲಿ ಇವು ಅತಿಯಾಗಿ ಬೆಳೆಯುತ್ತಿದ್ದುವು. ಈಗಿನ ಯುಗದಲ್ಲಿ ಇವುಗಳ ಸಂಖ್ಯೆ ಬಹಳ ಕಡಿಮೆ. ಈ ಸಸ್ಯಗಳ ಬೆಳವಣಿಗೆ ಎಷ್ಟು ವಿಸ್ಮಯಕಾರಿಯೊ ಈಗ ಉಳಿದಿರುವ ಸಸ್ಯಗಳ ವ್ಯಾಪ್ತಿಯೂ ಅಷ್ಟೇ ಕುತೂಹಲಕಾರಿ. ಇವು ಸಾಮಾನ್ಯವಾಗಿ ಸಮಶೀತೋಷ್ಣವಲಯಗಳಲ್ಲೂ ಉಷ್ಣವಲಯಗಳ ಪರ್ವತಪ್ರದೇಶಗಳಲ್ಲೂ ಹೆಚ್ಚಾಗಿ ಬೆಳೆಯುತ್ತವೆ. ಹಿಮಾಲಯ ಪರ್ವತದಲ್ಲಿ ಬಲುಸಾಮಾನ್ಯ. ಸದಾ ಹಸುರಾಗಿದ್ದು ಪೊದೆಗಳ ರೂಪದಲ್ಲೊ ಮರಗಳ ರೂಪದಲ್ಲೊ ಬೆಳೆದುಕೊಳ್ಳುತ್ತವೆ. ಈ ಮರಗಳು ಸಸ್ಯಪ್ರಪಂಚದಲ್ಲೆ ಅತಿ ಎತ್ತರವಾದವು ಎಂದು ಹೇಳಬಹುದು. (ಉದಾಹರಣೆಗೆ ಉತ್ತರ ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ಬೆಳೆಯುವ ಸಕೋಯಿದು ಎಂಬುದು 400'ಗಳಿಗೂ ಮೀರಿ ಬೆಳೆಯುತ್ತದೆ). ಇವುಗಳ ಬೆಳವಣಿಗೆಯಲ್ಲಿ ಒಂದು ನಿರ್ದಿಷ್ಟರೂಪವನ್ನು ಕಾಣುತ್ತೇವೆ; ರೆಂಬೆಗಳು ಪ್ರತಿವರ್ಷ ಹೊಸದಾಗಿ ಹುಟ್ಟುವಾಗ ಕಾಂಡದ ಗೆಣ್ಣಿನ ಸುತ್ತಲೂ ಹೊರಡುತ್ತವೆ. ಹಳೆಯ ರೆಂಬೆಗಳು ಉದ್ದವಾಗಿದ್ದು ಮರದ ತುದಿ ಕಡೆ ಹೋದಂತೆಲ್ಲ ರೆಂಬೆಗಳ ಉದ್ದ ಕ್ರಮೇಣ ಕಡಿಮೆಯಾಗುತ್ತ ಬರುತ್ತದೆ. ಇದರಿಂದಾಗಿ ಮರ ಶಂಕುವಿನಾಕಾರದಲ್ಲಿರುತ್ತದೆ. ಆದ್ದರಿಂದಲೆ ಇವಕ್ಕೆ ಕೋನಿಫರ್ಸ್ ಎಂದು ಹೆಸರು. ಸಸ್ಯದ ವಯಸ್ಸನ್ನು ರೆಂಬೆಯ ಸುತ್ತುಗಳು ಎಷ್ಟಿವೆ ಎಂಬುದನ್ನು ನೋಡಿ ಹೇಳಬಹುದು. ವಯಸ್ಸಾದ ಅನಂತರ ಕೊಂಬೆಗಳು ಬಿದ್ದುಹೋಗುತ್ತವೆ. ಉದ್ದನೆಯ ರೆಂಬೆಗಳ ಮೇಲೆ ಹೆಚ್ಚು ಬೆಳವಣಿಗೆ ಇಲ್ಲದ ಇನ್ನೊಂದು ರೀತಿಯ ಕುಬ್ಜ ರೆಂಬೆಗಳು ಬೆಳೆದುಕೊಳ್ಳುತ್ತವೆ. ಒಂದು ರೀತಿಯ ನೀಳವಾದ ಸೂಜಿಯಾಕಾರದ ಎಲೆಗಳು ಹುಟ್ಟುವುದು ಇವುಗಳ ಮೇಲೆಯೇ. ಅಲ್ಲದೆ ಎರಡು ರೀತಿಯ ರೆಂಬೆಗಳ ಮೇಲೂ ಇನ್ನೊಂದು ರೀತಿಯ ಎಲೆಗಳನ್ನು ನೋಡಬಹುದು. ಇವೇ ಕಂದು ಬಣ್ಣದ ಹುರುಪೆ ಎಲೆಗಳು. ಸೂಜಿಯ ಆಕಾರದ ಎಲೆಗಳು ಮಾತ್ರ ಆಹಾರ ತಯಾರಿಕೆಯ ಕ್ರಿಯೆಯನ್ನು ನಿರ್ವಹಿಸುತ್ತವೆ. ಕೋನಿಫೆರೇಲಿಸ್ ಗುಂಪಿನ ಸಸ್ಯಗಳ ಒಳಭಾಗಗಳನ್ನು ಪರೀಕ್ಷಿಸಿದರೆ ಜೀರೋಫೈಟ್ ಸಸ್ಯಗಳ ಗುಣಗಳನ್ನು ಕಾಣಬಹುದು.

ಈ ಸಸ್ಯಗಳ ಹೂಗಳು ಶಂಕುವಿನಾಕಾರದ ರಚನೆಗಳಲ್ಲಿ ಜೋಡಣೆಯಾಗಿರುತ್ತವೆ. ಆ ರಚನೆಗಳಿಗೆ ಶಂಕುಗಳು (ಕೋನ್ಸ್) ಅಥವಾ ಸ್ಟ್ರೊಬೈಲಿ ಎಂದು ಹೆಸರು. ಒಂದು ಶಂಕುವಿನಲ್ಲಿ ಗಂಡು ಅಥವಾ ಹೆಣ್ಣು ಹೂಗಳು ಮಾತ್ರ ಇರುತ್ತವೆ. ಅಪವಾದವಾಗಿ ಗಂಡುಹೆಣ್ಣುಹೂಗಳೆರಡೂ ಒಂದರಲ್ಲೇ ಇರಬಹುದು (ಉದಾಹರಣೆಗೆ ಏಬಿಸ್, ಲಾರಿಕ್ಸ್, ಪೈಸಿಯ). ಗಂಡುಶಂಕು ಹೆಣ್ಣಿಗಿಂತ ಗಾತ್ರದಲ್ಲಿ ಚಿಕ್ಕದು. ಗಂಡುಹೂವಿನಲ್ಲಿ ಉತ್ಪಾದನೆಯಾಗುವ ಪರಾಗ ದೂಳಿನಕಣದ ರೂಪದಲ್ಲಿದ್ದು ಗಾಳಿಯ ಮೂಲಕ ಪ್ರಸಾರವಾಗುತ್ತವೆ. ಈ ಬಗೆಯ ಪ್ರಸರಣಕ್ಕೆ ಸಹಾಯಕವಾಗುವಂತೆ ಪರಾಗದಲ್ಲಿ ರೆಕ್ಕೆಯ ರೂಪದ ಬೆಳವಣಿಗೆಯನ್ನು ಸಹ ನೋಡಬಹುದು. ಪರಾಗ ಕಣಗಳು ಗಾಳಿಯ ಮೂಲಕ ಪ್ರಸಾರವಾಗುವುದರಿಂದ ಅವುಗಳಲ್ಲಿ ಬಹುಪಾಲು ನಷ್ಟವಾಗುವ ಸಂಭವವಿದೆ. ಈ ರೀತಿಯ ನಷ್ಟವನ್ನು ಸರಿದೂಗಿಸಲು ಪರಾಗ ಹೆಚ್ಚು ಮೊತ್ತದಲ್ಲಿ ಉತ್ಪತ್ತಿಯಾಗುತ್ತದೆ. ಗಾಳಿಯಲ್ಲಿ ಪರಾಗ ಪ್ರಸಾರವಾಗುವ ಸಮಯಕ್ಕೆ ಸರಿಯಾಗಿ ಹೆಣ್ಣುಹೂಗಳಿರುವ ಶಂಕುಗಳು ಅರಳುತ್ತವೆ. ಒಂದೊಂದು ಹೆಣ್ಣು ಹೂವಿನಲ್ಲೂ ಒಂದೊಂದು ಅಂಡಕಧರ ಪಟ್ಟಿಯಿದ್ದು ಅದರ ಕಂಕುಳಲ್ಲಿ ಒಂದು ಅಂಡಕವಿದೆ. ಅಂಡಕದ ತುದಿಯಲ್ಲಿ ಒಂದು ಬಗೆಯ ಅಂಟುದ್ರವ ಒಸರುತ್ತದೆ. ಪರಾಗ ಅಂಡಕಕ್ಕೆ ಅಂಟಿಕೊಳ್ಳಲು ಇದು ಸಹಾಯಕ. ಈ ಗುಂಪಿನ ಸಸ್ಯಗಳಲ್ಲಿ ಗರ್ಭಧಾರಣೆ ಕ್ರಿಯೆ ಬಲು ನಿಧಾನವಾಗಿ ಆಗುತ್ತದೆ.

ಕೋನಿಫೆರೇಲಿಸ್ ಗುಂಪಿನಸಸ್ಯಗಳಿಗೆ ಆರ್ಥಿಕ ಪ್ರಾಮುಖ್ಯ ಉಂಟು. ಇವುಗಳಿಂದ ದಿಮ್ಮಿಗಳು, ರೆಸಿನ್, ಎಣ್ಣೆ ಟರ್ಪಂಟೈನ್, ಗೋಂದು ಮುಂತಾದವುಗಳನ್ನು ಪಡೆಯಬಹುದು. ಕೆಲವು ಬಗೆಗಳು ಔಷಧ ರೂಪದಲ್ಲೂ ಉಪಯೋಗಕ್ಕೆ ಬರುತ್ತವೆ. (ಬಿ.ಪಿ.)

**ಕೋನೋ, ಸ್ಟೆನ್ :** 1867–1948. ಭಾರತದ ಭಾಷೆಗಳ ಬಗ್ಗೆ ಕೆಲಸ ಮಾಡಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ಅಗ್ರಪಂಕ್ತಿಗೆ ಸೇರಿದ ಈತ ಹುಟ್ಟಿನಿಂದ ನಾರ್ವೆಯವ. ತಂದೆ ಅಲ್ಲಿಯ ಧರ್ಮೋಪದೇಶಕನಾಗಿದ್ದ. ಪುರಾತನ ಗ್ರೀಕ್ ಮತ್ತು ರೋಮನ್ ಸಾಹಿತ್ಯಗಳೊಂದಿಗೆ ಜರ್ಮನ್ ಭಾಷಾವಿಜ್ಞಾನವನ್ನೂ ಅಭ್ಯಾಸ ಮಾಡಿ 1891ರಲ್ಲಿ ಡಿಗ್ರಿ ಪಡೆದ ಕೋನೋ ಆಗಿನ ಕಾಲಕ್ಕೆ ಪ್ರಾಕೃತ ಭಾಷೆಗಳ ಬಗ್ಗೆ ವಿಶೇಷ ಜ್ಞಾನ ಪಡೆದಿದ್ದ ಪಿಶೆಲನ ಬಳಿ ಸ್ವಲ್ಪ ಕಾಲ ಶಿಷ್ಯನಾಗಿದ್ದು 1893ರಲ್ಲಿ ಡಾಕ್ಟರೇಟ್ ಪದವೀಧರನಾದ. ಕೆಲವೇ ಕಾಲದೊಳಗೆ ಇಂಡೋ ಯುರೋಪಿಯನ್ ಭಾಷೆಗಳ ತೌಲನಿಕ ಅಧ್ಯಯನದಲ್ಲೂ ಪುರಾತತ್ತ್ವಶಾಸ್ತ್ರದಲ್ಲೂ ನಿಷ್ಣಾತನೆನಿಸಿಕೊಂಡ. 1894 ರಿಂದ 1896ರ ವರೆಗೆ ಬರ್ಲಿನ್ ನಗರದ ರಾಜಗ್ರಂಥಾಲಯದ ಉಪಗ್ರಂಥಪಾಲಕನಾಗಿ ಕೆಲಸ ಮಾಡಿ ಅನಂತರ ಮುಂದಿನ ಮೂರು ವರ್ಷಗಳ ಕಾಲ (1896–1899) ಕ್ರಿಸ್ಟಿಯಾನಿಯ ಎಂಬಲ್ಲಿ ಮೊದಲು ಅಧ್ಯಾಪಕನಾಗಿಯೂ ಕಡೆಯಲ್ಲಿ ಉಪಪ್ರಾಧ್ಯಾಪಕನಾಗಿಯೂ ಇದ್ದ. 1900ರ ಸುಮಾರಿಗೆ ಭಾರತಕ್ಕೆ ಬಂದು ಏಳು ವರ್ಷಗಳ ಕಾಲ ಕೆಲಸ ಮಾಡಿದ. ಸರ್ ಜಾರ್ಜ್ ಗ್ರಿಯರ್‍ಸನ್ ಪ್ರಾರಂಭಿಸಿದ್ದ 19 ಸಂಪುಟಗಳ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯ ಕಾರ್ಯದಲ್ಲಿ 1900ರಿಂದ ಮೂರು ವರ್ಷಗಳ ಕಾಲ ಸಹಾಯಕನಾಗಿದ್ದು, ದ್ರಾವಿಡ, ಮುಂಡ ಮತ್ತು ಚೀನೀ ಭಾಷಾಪರಿವಾರಗಳಿಗೆ ಸಂಬಂಧಿಸಿದಂತೆ 5 ಸಂಪುಟಗಳನ್ನು ಸಿದ್ಧಗೊಳಿಸಿದ. 1904ರಲ್ಲಿ ಸರ್ಕಾರದ ಶಾಸನ ಇಲಾಖೆಯ ಮುಖ್ಯಾಧಿಕಾರಿಯಾಗಿ ನೇಮಕಗೊಂಡ. ಈ ಸ್ಥಾನದಲ್ಲಿದ್ದಾಗ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ದೊರೆತ ಅನೇಕ ಶಾಸನಗಳ ಸಂಪಾದನ ಕಾರ್ಯವನ್ನು ನಿರ್ವಹಿಸಿದುದಲ್ಲದೆ, 1906–7ರಲ್ಲಿ ಸರ್ ಜಾನ್ ಮಾರ್ಷಲನ ನೇತೃತ್ವದಲ್ಲಿ, ಕಾಶಿಗೆ ಸಮೀಪದಲ್ಲಿರುವ ಸಾರಾನಾಥದ ಬಳಿ ನಡೆದ ಉತ್ಖನನ ಕೆಲಸದಲ್ಲಿ ಕೂಡ ಭಾಗವಹಿಸಿದ. ಭಾರತದಲ್ಲಿದ್ದಷ್ಟು ಕಾಲವೂ ಇಲ್ಲಿಯ ಭಾಷೆಗಳ ಅಧ್ಯಯನದಲ್ಲಿ ನಿರತನಾಗಿದ್ದ. ಎಪಿಗ್ರಾಫಿಯ ಇಂಡಿಕದ ಸಂಪಾದಕನಾಗಿ 12ನೆಯ ಸಂಪುಟದ ಎಲ್ಲ ಸಂಚಿಕೆಗಳನ್ನೂ 10, 11, 13ನೆಯ ಸಂಪುಟಗಳ ಕೆಲವು ಸಂಚಿಕೆಗಳನ್ನೂ ಪ್ರಕಟಿಸಿದ. 1907ರಲ್ಲಿ ಸರ್ಕಾರದ ಸೇವೆಯಿಂದ ನಿವೃತ್ತನಾಗಿ, ಸ್ವದೇಶಕ್ಕೆ ಹಿಂದಿರುಗಿ ಆಸ್ಲೋ ನಗರದ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಮತ್ತಿತರ ಭಾರತೀಯ ಭಾಷೆಗಳ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ. ಈತನ ಅನೇಕ ಪ್ರೌಢ ಲೇಖನಗಳು ಎಪಿಗ್ರಾಫಿಯ ಇಂಡಿಕದಲ್ಲಿ ಪ್ರಚುರಗೊಂಡಿವೆ. ಜರ್ಮನಿಯ ಹ್ಯಾಂಬರ್ಗ್ ನಗರದಲ್ಲಿ 5 ವರ್ಷಗಳ ಕಾಲ (1914–19) ಮತ್ತು ರವೀಂದ್ರನಾಥ ಠಾಕೂರರು ಸ್ಥಾಪಿಸಿದ ಶಾಂತಿನಿಕೇತನದಲ್ಲಿ ಒಂದು ವರ್ಷಕಾಲ (1924–25) ಪ್ರಾಧ್ಯಾಪಕನಾಗಿದ್ದ ಸಮಯವನ್ನು ಬಿಟ್ಟರೆ, 1948ರ ಜೂನ್ 29ರಂದು ಅಸುನೀಗುವವರೆಗೂ ಸ್ಟೆನ್ ಕೋನೋ ಆಸ್ಲೋ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದ. 1929ರಲ್ಲಿ ಕಾರ್ಪಸ್ ಇನ್‍ಸ್ಕ್ರಿಪ್ಷನಮ್ ಇಂಡಿಕ್ಯಾರಮ್‍ನ ಎರಡನೆಯ ಸಂಪುಟದ ಮೊದಲನೆಯ ಭಾಗವಾಗಿ ಪ್ರಕಾಶಿತವಾದ ಖರೋಷ್ಠೀ ಶಾಸನಗಳು ಕೋನೋನ ಅತಿ ಮುಖ್ಯ ಗ್ರಂಥ. ಇದಲ್ಲದೆ ಸಕ ಭಾಷೆಯಲ್ಲಿ ವಿಶೇಷ ಜ್ಞಾನ

ಪಡೆದಿದ್ದ ಕೋನೋ 1932ರಲ್ಲಿಯೇ ಈ ಭಾಷೆಯನ್ನು ಕುರಿತಾದ ಸಕ ಸ್ಟಡೀಸ್ ಎಂಬ ಒಂದು ಗ್ರಂಥವನ್ನು ಪ್ರಕಾಶಗೊಳಿಸಿದ. ಈತನ ಅಮೋಘವಾದ ಸಾರಸ್ವತ ಸೇವೆಯನ್ನು ಗಮನಿಸಿದ ಜರ್ಮನ್ ಓರಿಯಂಟಲ್ ಸೊಸೈಟಿ, ಬರ್ಲಿನ್ ಅಕೆಡಮಿ, ಮತ್ತು ಐರ್ಲೆಂಡಿನ ರಾಯಲ್ ಏಷ್ಯಾಟಿಕ್ ಸೊಸೈಟಿ ಮತ್ತು ಪ್ಯಾರಿಸಿನ ಏಷ್ಯಾಟಿಕ್ ಸೊಸೈಟಿಗಳು ತಮ್ಮ ಗೌರವ ಸದಸ್ಯತ್ವವನ್ನು ಕೊಟ್ಟು ಈತನನ್ನು ಗೌರವಿಸಿದುವು. ಖೊಟನೀಸ್ ಸಕ ಭಾಷೆಯ ರೀಡರೊಂದನ್ನು ಸಿದ್ಧಗೊಳಿಸಿದನಾದರೂ ಅದರ ಪ್ರಕಟಣೆಯನ್ನೀತ ನೋಡಲಿಲ್ಲ. ನಾರ್ವೇ ದೇಶದವನೇ ಆದ ಜಾರ್ಜ್ ಮೋರ್ಗನ್ ಸ್ಟಿಯರ್ನ್ ಈ ಗ್ರಂಥವನ್ನು ಕೋನೋನ ನಿಧನಾನಂತರ ಪ್ರಕಟಿಸಿದ. ಆಕ್ಟ ಓರಿಯಂಟ್ಯಾಲಿಯ ಪತ್ರಿಕೆಯ ಸಂಪಾದಕನಾಗಿದ್ದು ತನ್ಮೂಲಕ ಭಿನ್ನ ರಾಷ್ಟ್ರೀಯರಾದ ಪ್ರಾಚ್ಯವಿದ್ಯಾತಜ್ಞರ ನಡುವೆ ಸೌಹಾರ್ದ ಮೈತ್ರಿ ಬೆಳೆಯಲು ಕೋನೋ ಬಹಳವಾಗಿ ಶ್ರಮಿಸಿದನೆಂಬ ವಿಷಯ ಗಮನಾರ್ಹವಾದುದು. (ಎಂ.ಎನ್.ಕೆ.; ಎಚ್.ಎಸ್.ಎ.)

**ಕೋನ್ಯಾಕ್ :** ಪಶ್ಚಿಮ ಫ್ರಾನ್ಸಿನ ಷಾರಾಂಟ್ ಜಿಲ್ಲೆಯ ಒಂದು ಊರು. ಷಾರಾಂಟ್ ನದಿಯ ದಡದಲ್ಲಿದೆ. ದವಸಧಾನ್ಯ ಮತ್ತು ಜಾನುವಾರು ವ್ಯಾಪಾರ ಇಲ್ಲಿ ಸಾಕಷ್ಟಿದೆ. ಇಲ್ಲಿ ಬಿಳಿದ್ರಾಕ್ಷಿಯಿಂದ ಬಹು ಪ್ರಸಿದ್ಧವಾದ ಫ್ರೆಂಚ್ ಬ್ರಾಂದಿಯನ್ನು ತಯಾರಿಸಿ ರಫ್ತು ಮಾಡುತ್ತಾರೆ. ಈ ಬ್ರಾಂದಿ ಕೋನ್ಯಾಕ್ ಎಂದೇ ಪ್ರಸಿದ್ಧವಾಗಿದೆ. ಬ್ರಾಂದಿಯನ್ನು ತುಂಬಲು ಬೇಕಾಗುವ ಸೀಸೆಗಳನ್ನೂ ಮರದ ಪೀಪಾಯಿಗಳನ್ನೂ ಇಲ್ಲೇ ತಯಾರಿಸುತ್ತಾರೆ. (ಬಿ.ಎಸ್‌ಯು.)

**ಕೋಪರ್‌ನಿಶಿಯ :** ಅರಿಕೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯಜಾತಿ. ಇದರಲ್ಲಿ ಕೋ.ಅಸ್ಟ್ರಾಲಿಸ್ ಮತ್ತು ಕೋ.ಸೆರಿಫೆರ ಎಂಬ ಎರಡು ಮುಖ್ಯ ಪ್ರಭೇದಗಳಿವೆ. ಮೊದಲನೆಯದು ಸುಮಾರು 70' ಎತ್ತರಕ್ಕೂ ಎರಡನೆಯದು ಸುಮಾರು 40' ಎತ್ತರಕ್ಕೂ ಬೆಳೆಯುತ್ತವೆ. ಎರಡು ಬಗೆಯ ಮರಗಳಲ್ಲೂ ಕಾಂಡದ ತುದಿಯಲ್ಲಿ ಕಿರೀಟದಾಕಾರದಲ್ಲಿ ಜೋಡಣೆಗೊಂಡ ಎಲೆಗಳಿವೆ. ಒಂದೊಂದು ಎಲೆಯೂ ಹಸ್ತಾಕಾರದಲ್ಲಿದೆ. ಅದಕ್ಕೆ ಸುಮಾರು 3' ಉದ್ದದ ತೊಟ್ಟು ಮತ್ತು ಗರಿಭಾಗ ಇವೆ. ತೊಟ್ಟಿನ ಎರಡೂ ಅಂಚುಗಳ ಮೇಲೂ ಬಲವಾದ ಮುಳ್ಳುಗಳಿವೆ. ಗರಿಭಾಗ ಬೀಸಣಿಗೆಯಂತೆ ಅಗಲವಾಗಿ ಹರಡಿಕೊಂಡಿದ್ದು ನಸುಹಸುರು ಬಣ್ಣದ 50 ಬಿಡಿ ಗರಿಗಳನ್ನು ಒಳಗೊಂಡಿದೆ. ಹೂಗೊಂಚಲು ತಾಳಗುಚ್ಛ ಮಾದರಿಯದು. ಒಂದೊಂದು ಮರದಿಂದಲೂ ಹಲವಾರು ಹೂಗೊಂಚಲುಗಳು ಹುಟ್ಟುತ್ತವೆ. ಹಣ್ಣುಗಳು ಒಂದೇ ಬೀಜವುಳ್ಳ ಬೆರಿ ಮಾದರಿಯವು. ಇವುಗಳ ಆಕಾರ ಗುಂಡು; ಬಣ್ಣ ಕಂದು.

ಅಮೆರಿಕದ ಉಷ್ಣಪ್ರದೇಶವಾಸಿಯಾದ ಕೋಪರ್‌ನಿಶಿಯ ಬ್ರೆಜಿಲ್ ದೇಶದಲ್ಲಿ ವಾಣಿಜ್ಯ ಪ್ರಾಮುಖ್ಯವನ್ನು ಪಡೆದಿದೆ. ಇದರ ಎಲೆಗಳ ಮೇಲಿರುವ ಮೇಣವನ್ನು ನೆಲ, ಮೇಜು ಮತ್ತು ಇತರ ಮರಮಟ್ಟುಗಳಿಗೆ ಹೊಳಪಾದ ಬಣ್ಣ ಕೊಡಬಹುದಾದ ಪಾಲಿಷ್ ತಯಾರುಮಾಡಲು ಉಪಯೋಗಿಸುತ್ತಾರೆ. ಇದರಿಂದ ಕಾರ್ಬನ್ ಕಾಗದ, ಮೇಣದ ಬತ್ತಿ, ಲಿಪ್‌ಸ್ಟಿಕ್ ಮುಂತಾದುವನ್ನೂ ಮಾಡುತ್ತಾರೆ. ಉತ್ತರಬ್ರೆಜಿಲ್ ದೇಶದ ಕಾರ್‌ನುಬೆರಿಯ ಎಂಬ ಬುಡಕಟ್ಟಿನ ಜನ ಈ ಮರದಿಂದ ಮೇಣವನ್ನು ತೆಗೆಯುವ ಕೆಲಸವನ್ನು ಮುಖ್ಯ ಕಸಬಾಗಿ ಅವಲಂಬಿಸಿದ್ದಾರೆ. ಎಲೆಗಳಿಂದ ಟೋಪಿ ಮಾಡುವುದುಂಟು. ಕಾಂಡವನ್ನು ಮನೆ ಕಟ್ಟುವ ಸಾಧನವನ್ನಾಗಿ ಬಳಸುತ್ತಾರೆ.

ಕೋಪರ್‌ನಿಶಿಯ ಸಸ್ಯಗಳನ್ನು ಬೀಜಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಬೀಜಗಳು ಬಿತ್ತಿದ ಸುಮಾರು ಎರಡು ತಿಂಗಳಿಗೆ ಮೊಳೆಯುತ್ತವೆ. ಸಸಿಗಳು ಬಹಳ ನಿಧಾನವಾಗಿ ಬೆಳೆಯುವ ಗುಣದವು. (ಡಿ.ಎಂ.)

**ಕೋಪಿಪೋಡ :** ಸಂಧಿಪದಿ ವಂಶದ ಕ್ರಸ್ಟೇಸಿಯ ವರ್ಗಕ್ಕೆ ಸೇರಿದ ಒಂದು ಉಪವರ್ಗ. ಇದರಲ್ಲಿ ಸುಮಾರು 6,000 ಪ್ರಭೇದಗಳಿವೆ. ಎಲ್ಲವೂ ಜಲವಾಸಿಗಳು. ಬಹುಪಾಲು ಪ್ರಭೇದಗಳು ಸೂಕ್ಷ್ಮಜೀವಿಗಳು; ಸಾಮಾನ್ಯವಾಗಿ ಅರ್ಧಮಿಲಿಮೀಟರ್ ಉದ್ದದ ಮಿತಿಯನ್ನು ಮೀರುವುದಿಲ್ಲ. ಕೆಲವು ಬಗೆಗಳು ಸ್ವತಂತ್ರಜೀವನ ನಡೆಸಿದರೆ ಇನ್ನು ಕೆಲವು ಪರತಂತ್ರಜೀವಿಗಳು. ಈ ಗುಂಪಿನ ಪ್ರಾಣಿಗಳಿಗೆ ಸಂಕೀರ್ಣಾಕ್ಷಿಗಳಾಗಲಿ, ಕ್ಯಾರಪೇಸ್ ಆಗಲಿ ಇಲ್ಲ; ಸಾಧಾರಣವಾಗಿ ಎದೆಯ ಭಾಗದಲ್ಲಿ ಆರು ಜೊತೆ ಉಪಾಂಗಗಳು ಇವೆ. ಇವುಗಳಲ್ಲಿ ಮೊದಲನೆಯದು ಮತ್ತು ಸಾಮಾನ್ಯವಾಗಿ ಆರನೆಯದು ಇಜ್ಜೋಡು ಉಪಾಂಗಗಳು. ಮಿಕ್ಕವೆಲ್ಲ ಜೇಡಿ ಉಪಾಂಗಗಳು. ಸ್ವತಂತ್ರಜೀವನ ನಡೆಸುವ ಪ್ರಾಣಿಗಳಲ್ಲಿ ದೇಹ ಬುಗುರಿಯಾಕಾರ ಅಥವಾ ಗದೆಯಾಕಾರದ್ದಾಗಿದ್ದು ಖಂಡವಿಂಗಡಣೆಯನ್ನು ಪ್ರದರ್ಶಿಸುತ್ತದೆ. ಪರತಂತ್ರ ಜೀವಿಗಳಲ್ಲಿ ಖಂಡವಿಂಗಡಣೆ ಇಲ್ಲ. ಅಲ್ಲದೆ ಕಾಲುಗಳೂ ಇಲ್ಲ. ಖಂಡವಿಂಗಡಣೆ ಇದರಲ್ಲಿ ನಿರ್ದಿಷ್ಟವಾಗಿ ಹದಿನಾರು ಖಂಡಗಳು ಇರುತ್ತವೆ. ಆದರೆ ಈ ಖಂಡಗಳಲ್ಲಿ ತಲೆ, ಎದೆ ಮತ್ತು ಉದರ ಭಾಗಗಳನ್ನು ನಿಖರವಾಗಿ ಗುರುತಿಸುವುದು ಕಷ್ಟ.

ಈ ಪ್ರಾಣಿಗಳ ಬೆಳವಣಿಗೆಯಲ್ಲಿ ನಾಪ್ಲಿಯಸ್ ಡಿಂಬಾವಸ್ಥೆ ಇದೆ. ಉದಾಹರಣೆಗೆ, ಸೈಕ್ಲೋಪ್‌ಗಳು–ಸಿಹಿನೀರಿನಲ್ಲಿ ವಾಸಿಸುವ ಇವು ಬುಗುರಿಯಾಕಾರದ್ದಾಗಿವೆ. ನಾರುಹುಣ್ಣಿನ ಹುಳುವಿನ ಡಿಂಬಗಳನ್ನು ಒಬ್ಬರಿಂದ ಒಬ್ಬರಿಗೆ ಹರಡುವಲ್ಲಿ ಇವು ಮಧ್ಯವರ್ತಿಗಳಾಗಿವೆ.

**ಡಯಾಪ್ಟೊಮಸ್** ಎಂಬ ಪ್ರಭೇದ ಸಿಹಿನೀರಿನ ವಾಸಿ. ಇದು ಮತ್ತು ಸೈಕ್ಲೋಪ್ ಪ್ರಾಣಿಗಳು ಲಾಡಿಹುಳುವಿನ (ಲಿಗ್ಯುಲ) ಪ್ರಸರಣದಲ್ಲಿ ಅಂತರವರ್ತಿ ಆತಿಥೇಯಗಳಾಗಿ ವರ್ತಿಸುತ್ತವೆ. **ಆರ್ಗುಲಸ್, ಲರ್ನಿಯ, ಕ್ಯಾಂಡ್ರೊಕ್ಯಾಂತಸ್**‌ಗಳು ಮೀನುಗಳಲ್ಲಿ ಪರತಂತ್ರಜೀವಿಗಳಾಗಿ ಜೀವಿಸುತ್ತವೆ. **ಕಲಾನಸ್** ಎಂಬುದು ಕಡಲಿನಲ್ಲಿ ಹೇರಳವಾಗಿ ದೊರೆಯುತ್ತದೆ. ಇದು ಮೀನುಗಳ ಮುಖ್ಯ ಆಹಾರ.

ಕೋಪಿಪೋಡ ಗುಂಪಿನ ಪ್ರಾಣಿಗಳು ಸಾಮಾನ್ಯವಾಗಿ ಮೀನುಗಾರಿಕೆ ದೃಷ್ಟಿಯಿಂದ ಬಹಳ ಮುಖ್ಯವಾದವು. ಅನೇಕ ಮೀನುಗಳ ಪ್ರಧಾನ ಆಹಾರವಾದ ಪ್ಲಾಂಕ್ಟಾನ್‌ನ (ತೇಲುಜೀವಿ ಸಮುದಾಯ) ಬಹುಭಾಗ ಈ ಪ್ರಾಣಿಗಳನ್ನೊಳಗೊಂಡಿದೆ. (ಎನ್.ವಿ.ಎ.)

**ಕೋಪೆನ್‌ಹೇಗೆನ್ :** ಡೆನ್ಮಾರ್ಕಿನ ರಾಜಧಾನಿ ಮತ್ತು ಸ್ಕಾಂಡಿನೇವಿಯದ ದೊಡ್ಡ ಪಟ್ಟಣ. ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರ. ಹಡಗು ನಿಲ್ದಾಣ. ಅಂತಾರಾಷ್ಟ್ರೀಯ ರಫ್ತು ವ್ಯಾಪಾರಕ್ಕೆ ಹೆಸರಾಗಿದೆ. ಪ್ರಾಚೀನವಾದ ಅನೇಕ ದೊಡ್ಡ ಕಟ್ಟಡಗಳು ಇಲ್ಲಿವೆ. ಇದು ಐತಿಹಾಸಿಕವಾಗಿಯೂ ಮಹತ್ತ್ವ ಪಡೆದಿದೆ. ಡೆನ್ಮಾರ್ಕಿಗೆ ಪೂರ್ವತೀರದಲ್ಲಿರುವ ಈ ನಗರದ ಜನಸಂಖ್ಯೆ 1084885 (2006).

ಕೋಪೆನ್‌ಹೇಗೆನಿನ ನಡುವಿನ ಭಾಗದಲ್ಲಿ 6,000 ವರ್ಷಗಳಿಂದಲೂ ಜನವಸತಿಯಿತ್ತೆಂಬುದು ಉತ್ಖನನಗಳಿಂದ ಗೊತ್ತಾಗುತ್ತದೆ. ಪ್ರ.ಶ.1000ದ ವೇಳೆಗೆ ಇಲ್ಲಿದ್ದ ಹ್ಯಾವ್ನ್ ಎಂಬ ಹಳ್ಳಿ ವಾಣಿಜ್ಯ ಮತ್ತು ಆಯಕಟ್ಟು ದೃಷ್ಟಿಯಿಂದ ಪ್ರಾಮುಖ್ಯ ಗಳಿಸಿತ್ತು 1167ರಲ್ಲಿ ರಸ್ಕಿಲೆಯ ಬಿಷಪ್ ಆಪ್ಸಲಾನ್ ಎಂಬ ಪ್ರಸಿದ್ಧ ರಾಜಕಾರಣಿ ಇಲ್ಲಿಯ ಜನರ ರಕ್ಷಣೆಗಾಗಿ ಒಂದು ಭದ್ರವಾದ ಕೋಟೆಯನ್ನು ಕಟ್ಟಿಸಿದ. 1445ರಲ್ಲಿ ಡೇನಿಷ್ ದೊರೆಗಳ ರಾಜಧಾನಿ ಇಲ್ಲಿಗೆ ವರ್ಗವಾದ ಮೇಲೆ ನಗರ ಶೀಘ್ರವಾಗಿ ಬೆಳೆಯತೊಡಗಿತು. ಕೋಪೆನ್‌ಹೇಗೆನ್ ವಿಶ್ವವಿದ್ಯಾಲಯ ಸ್ಥಾಪನೆಯಾದ್ದು 1479ರಲ್ಲಿ. 17ನೆಯ ಶತಮಾನದಲ್ಲಿ ಈ ನಗರ ಮತ್ತಷ್ಟು ವಿಶಾಲವಾಗಿ ಬೆಳೆಯಿತು. ಇದಕ್ಕೆ ಕಾರಣನಾದವನು 4ನೆಯ ಕ್ರಿಶ್ಚನ್ ದೊರೆ. ಶಿಲ್ಪಕೆಲಸಗಳ ಬಗ್ಗೆ ತುಂಬ ಅಭಿಮಾನವಿಟ್ಟುಕೊಂಡಿದ್ದ ಈತ ನಗರದಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿದ; ವಿಶಾಲವಾದ ರಾಜಬೀದಿಗಳನ್ನು ನಿರ್ಮಿಸಿದ. ಕೋಪೆನ್‌ಹೇಗೆನಿನ ಹಳೆಯ ಭಾಗ ನಿರ್ಮಾಣವಾದ್ದು ಹೀಗೆ. ಸುಂದರವಾದ

ಕೋಪೆನ್‌ಹೇಗೆನ್ ನಗರದ ಒಂದು ದೃಶ್ಯ

ಅನೇಕ ದೊಡ್ಡ ಕಟ್ಟಡಗಳು ಇರುವುದು ಈ ಭಾಗದಲ್ಲಿಯೇ. ರೌಂಡ್ ಟವರ್ ಎಂಬ ಚರ್ಚ್‌ಗೋಪುರ ವಿನಿಮಯ ಕೇಂದ್ರದ ಕಟ್ಟಡ ಮೊದಲಾದವನ್ನು ಹೆಸರಿಸಬಹುದು. ರೌಂಡ್ ಟವರಿಗೆ ಸಮೀಪದಲ್ಲಿರುವ ಅಮಾಲಿಯೆನ್‌ಬರ್ಗ್ ಅರಮನೆಯನ್ನು ಕಟ್ಟಿದ್ದು 18ನೆಯ ಶತಮಾನದಲ್ಲಿ. 1900ರಿಂದೀಚೆಗೆ ಆಧುನಿಕ ರೀತಿಯಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಶೇ.75 ರಷ್ಟು ಜನ ಇವುಗಳಲ್ಲಿ ವಾಸಿಸುತ್ತಾರೆ.

ನಗರದ ಜನಸಂಖ್ಯೆಯಲ್ಲಿ ಸುಮಾರು ಅರ್ಧಭಾಗದಷ್ಟು ಜನ ಕೈಗಾರಿಕೆ ಮತ್ತು ಕುಶಲ ಕೈಗಾರಿಕೆಗಳಲ್ಲಿ ನಿರತರಾಗಿದ್ದಾರೆ. ನೌಕಾ ನಿರ್ಮಾಣ ಮೊದಲಾದ ಕೆಲಸಗಳಲ್ಲಿ ಇವರು ಹೆಸರಾಗಿದ್ದಾರೆ.

ಕೋಪೆನ್‌ಹೇಗೆನ್ ಡೆನ್ಮಾರ್ಕಿನಲ್ಲಿಯೇ ಅತ್ಯಂತ ಪ್ರಮುಖ ವಾಣಿಜ್ಯ ಕೇಂದ್ರ. ಹೊರದೇಶಗಳ ವ್ಯಾಪಾರ ಈ ನಗರದ ಮೂಲಕವೇ ನಡೆಯುತ್ತದೆ. ಡೆನ್ಮಾರ್ಕಿನ ಬಹುತೇಕ ಎಲ್ಲ ಹಡಗು ಕಂಪನಿಗಳ ಮುಖ್ಯ ಕಚೇರಿಗಳೂ ಇಲ್ಲಿವೆ. ನಗರಕ್ಕೆ ಉತ್ತರ ಭಾಗದಲ್ಲಿ ಬಂದರಿದೆ. ಇದು ಬಾಲ್ಟಿಕ್ ಪ್ರದೇಶದ ಮುಖ್ಯ ಬಂದರುಗಳಲ್ಲೊಂದು. ಇದನ್ನು ಕಟ್ಟಿದ್ದು 1894ರಲ್ಲಿ. ನಗರದಿಂದ ಬೇರೆಬೇರೆ ಸ್ಥಳಗಳಿಗೆ ಸಮುದ್ರಯಾನ ಸೌಕರ್ಯ ಇದೆ. ದಕ್ಷಿಣ ಭಾಗದ ಪ್ರಮುಖನಗರಗಳಿಗೆ ರೈಲುಸಂಪರ್ಕವಿದೆ. ಉತ್ತರ ಯುರೋಪಿನ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಕೋಪೆನ್ ಹೇಗೆನಿನಲ್ಲಿರುವುದೂ ಒಂದು.

ಬೇರೆ ಬೇರೆ ದೇಶಗಳಿಂದ ಕಚ್ಚಾಸಾಮಗ್ರಿ ಮತ್ತು ಕೆಲಬಗೆಯ ಯಂತ್ರೋಪಕರಣಗಳು ಈ ನಗರದ ಮೂಲಕ ಆಮದಾಗುತ್ತವೆ. ಆಮದಿಗಿಂತ ರಫ್ತು ಹೆಚ್ಚು. ವ್ಯವಸಾಯೋತ್ಪನ್ನಗಳು, ಯಂತ್ರಗಳು, ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳು ಹಾಗೂ ರಾಸಾಯನಿಕ ವಸ್ತುಗಳು ರಫ್ತಾಗುತ್ತವೆ.

ಕೋಪೆನ್ ಹೇಗೆನ್ ನಗರ ಭವನ, 1892–1905ರಲ್ಲಿ ಇದನ್ನು ನಿರ್ಮಿಸಲಾಯಿತು

ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಈ ನಗರ ಹೆಸರಾಗಿರುವಂತೆಯೇ ಸಾಂಸ್ಕೃತಿಕ ಸಂಸ್ಥೆಗಳಿಗೂ ಹೆಸರಾಗಿದೆ. ಈ ನಗರದಲ್ಲಿ ವಿವಿಧ ಬಗೆಯ ಸಾಂಸ್ಕೃತಿಕ ಸಂಘ ಸಂಸ್ಥೆಗಳುಂಟು. ರಾಯಲ್ ಡೇನಿಷ್ ಅಕ್ಯಾಡೆಮಿ ಆಫ್ ಸೈನ್ಸ್; ರಾಯಲ್ ಅಕ್ಯಾಡೆಮಿ ಆಫ್ ಫೈನ್ ಆರ್ಟ್ಸ್ ಮೊದಲಾದ ಸಾಂಸ್ಕೃತಿಕ ಸಂಸ್ಥೆಗಳನ್ನು ಹೆಸರಿಸಬಹುದು.


ಕೋಪೆನ್‌ಹೇಗೆನಿನ ಪುಟ್ಟ ಮತ್ಸ್ಯಕನ್ಯೆ–ಹ್ಯಾನ್ಸ್ ಆಂಡರ್‌ಸನ್ನನ ಕಥೆಗಳ ಪಾತ್ರವೊಂದರ ಶಿಲ್ಪೀಕರಣ

ಹಾಗೆಯೇ ಡೆನ್ಮಾರ್ಕಿನ ತಾಂತ್ರಿಕ ಕಾಲೇಜು, ಕೃಷಿ ಕಾಲೇಜು, ಸೀರಂ ಇನ್‌ಸ್ಟಿಟ್ಯೂಟ್– ಇವು ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳು. ಇಲ್ಲೊಂದು ರಾಯಲ್ ಲೈಬ್ರರಿ ಇದೆ. ಅಂತಾರಾಷ್ಟ್ರೀಯ ಖ್ಯಾತಿಯ ವಸ್ತುಸಂಗ್ರಹಾಲಯವೂ ಇಲ್ಲಿದೆ. ಪ್ರಾಚೀನಕಾಲದ ಅನೇಕ ಬಗೆಯ ವಸ್ತುಗಳು, ಶಾಸನಗಳು ಮೊದಲಾದವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿಯ ವಿಶಾಲವಾದ ಉದ್ಯಾನಗಳು ನಗರದ ಸೌಂದರ್ಯವನ್ನು ಹೆಚ್ಚಿಸಿವೆ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಕೋಪೆನ್‌ಹೇಗೆನ್ ನಗರ ಪ್ರಮುಖ ಹಡಗು ನಿರ್ಮಾಣ ಕೇಂದ್ರವೆಂದು ಹೆಸರಾಗಿತ್ತು. ಈ ನಗರವನ್ನು 1940–45ರಲ್ಲಿ ಜರ್ಮನರು ತಮ್ಮ ವಶದಲ್ಲಿಟ್ಟುಕೊಂಡಿದ್ದರು.

ಖ್ಯಾತ ಲೇಖಕರನೇಕರು ಈ ನಗರದಲ್ಲಿ ವಾಸವಾಗಿದ್ದರು ಎಂಬುದೂ ಗಮನಾರ್ಹ. 17ನೆಯ ಶತಮಾನದ ಪ್ರಖ್ಯಾತ ನಾಟಕಕಾರ ಲಾಡ್‌ವಿಜ್ ಹಾಲ್‌ಬಾರ್ಗ್, ಕಿನ್ನರ ಕತೆಗಳ ಸೃಷ್ಟಿಕರ್ತ ಕ್ರಿಶ್ಚನ್ ಅಂಡರ್‌ಸನ್, ತತ್ತ್ವಜ್ಞಾನಿ ಮತ್ತು ಲೇಖಕ ಸೋರೆನ್ ಕಿರ್ಕೆಗಾರ್ ಇವರು ಕೆಲವರು. *

**ಕೋಫಿ ಅನ್ನನ್:** 1938–. ನೊಬೆಲ್ ಪುರಸ್ಕೃತ, ಘಾನ ದೇಶದ ಅರ್ಥಶಾಸ್ತ್ರಜ್ಞ. ಇಂದಿನ ಘಾನದ ಗೋಲ್ಡ್‌ಕೋಸ್ಟ್‌ನಲ್ಲಿ 1938 ಏಪ್ರಿಲ್ 8ರಂದು ಶ್ರೀಮಂತ ಮನೆತನವೊಂದರಲ್ಲಿ ಜನಿಸಿದ. ಕೋಫಿ ಅಜ್ಜ, ಮಾವಂದಿರು ಬುಡಕಟ್ಟಿನ ಮುಖ್ಯಸ್ಥರಾಗಿದ್ದರು.



ಅಕಾನ್ ಭಾಷೆಯಲ್ಲಿ ಕೋಫಿ ಎಂದರೆ ಶುಕ್ರವಾರ. ಕೋಫಿ, ಫಾಂಟ್ಸಿಪಿಂ ಶಾಲೆ ಹಾಗೂ ಮೆಥಾಡಿಸ್ಟ್ ಬೋರ್ಡಿಂಗ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ. 1958ರಲ್ಲಿ ಕುಮಾಸಿ ವಿಜ್ಞಾನ ಮತ್ತು ತಾಂತ್ರಿಕ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಯನ ಪ್ರಾರಂಭಿಸಿ ಫೋರ್ಡ್ ಫೌಂಡೇಶನ್ ಅನುದಾನ ಪಡೆದ. ಸೇಂಟ್ ಪೌಲ್‌ನ ಮಕಾಲೆಸ್ಟರ್ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದು ಎಂ.ಐ.ಟಿ. ಸ್ಲೋನ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟಿನಲ್ಲಿ ಅಭ್ಯಸಿಸಿ ಎಂ.ಎಸ್. ಪದವಿ ಗಳಿಸಿದ.

ಅನ್ನನ್ ಬಹುಭಾಷಾ ಪಂಡಿತ. ಇವನಿಗೆ ಇಂಗ್ಲಿಷ್, ಫ್ರೆಂಚ್, ಅಕಾನ್, ಕ್ರು ಹಾಗೂ ಇನ್ನಿತರ ಆಫ್ರಿಕನ್ ಭಾಷೆಗಳು ತಿಳಿದಿವೆ. 1962ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಬಜೆಟ್ ಆಫೀಸರ್ ಆಗಿ ತನ್ನ ವೃತ್ತಿಜೀವನ ಪ್ರಾರಂಭಿಸಿದ. ಇವನು ಘಾನದ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕನಾಗಿಯೂ ಕಾರ್ಯನಿರ್ವಹಿಸಿದ. ಅನಂತರ ವಿಶ್ವಸಂಸ್ಥೆಗೆ ಬಂದು ಮಹಾಕಾರ್ಯದರ್ಶಿಯವರ ಅಧೀನದಲ್ಲಿ ಕೆಲಸ ಮಾಡಿದ. ಯುಗೋಸ್ಲಾವಿಯಾದಲ್ಲಿ ಮಹಾಕಾರ್ಯದರ್ಶಿಯ ವಿಶೇಷ ಪ್ರತಿನಿಧಿಯಾಗಿ ಕೆಲಸ ಮಾಡಿದ ಇವನು 1997ರಿಂದ 2006ರವರೆಗೆ ವಿಶ್ವಸಂಸ್ಥೆಯ 7ನೆಯ ಮಹಾಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದಾನೆ.

ವಿಶ್ವವ್ಯಾಪಿ ವ್ಯಾಧಿಯಾದ ಎಚ್.ಐ.ವಿ. / ಏಡ್ಸ್ ಕುರಿತ 'ಕಾಲ್ ಆಫ್ ಆ್ಯಕ್ಷನ್' ಎಂಬ ಐದು ಪ್ರಮುಖಾಂಶಗಳನ್ನು ಹೊರತಂದ. 2001ರಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳು ಏಡ್ಸ್ ಪೀಡಿತರಿಗೆ ಸಹಾಯ ಮಾಡುವ ಕಾರ್ಯವನ್ನು ಉತ್ತೇಜಿಸುವ ಸಲುವಾಗಿ ಆರ್ಥಿಕ ಬೆಂಬಲ ನೀಡಲು ಗ್ಲೋಬಲ್ ಏಡ್ಸ್ ಆ್ಯಂಡ್ ಹೆಲ್ತ್ ಫಂಡ್ ಸ್ಥಾಪಿಸಿದ. ಇವನ ಈ ಕಾರ್ಯಕ್ಕೆ ಇವನಿಗೆ 2001ರ ನೊಬೆಲ್ ಶಾಂತಿ ಪುರಸ್ಕಾರ ಲಭಿಸಿತು.

ಅನ್ನನ್ ವಿಶ್ವಸಂಸ್ಥೆಯ ಶಾಂತಿಪಾಲನಾ ತಂಡವನ್ನು ಸೂಡಾನ್‌ಗೆ ಕಳುಹಿಸಿದ. ಮಹಿಳೆಯರ ಹಕ್ಕುಗಳ ವಿಷಯವಾಗಿ ಹಲವು ಮುಸ್ಲಿಂ ದೇಶಗಳಲ್ಲಿ ಕೂಡ ಕೆಲಸ ನಿರ್ವಹಿಸಿದ್ದಾನೆ. ವರ್ಲ್ಡ್ ಡಯಾಬಿಟಿಕ್ ಡೇ (ವಿಶ್ವ ಮಧುಮೇಹ ದಿನ) ಜಾರಿಗೆ ಬರುವಂತೆ ಮಾಡಿದ. ವಿಶ್ವಸಂಸ್ಥೆಯ ಸಾರ್ವತ್ರಿಕ ಸಭೆಯ ನಿರ್ಣಯಕ್ಕೆ ಇವನೇ ಸಾಕ್ಷಿ.

1997ರಲ್ಲಿ ವಿಶ್ವಸಂಸ್ಥೆಯ ಅಧಿಕಾರ ನಿರ್ವಹಿಸಿಕೊಂಡ ಕೂಡಲೇ 'ಮ್ಯಾನೇಜ್‌ಮೆಂಟ್ ಮತ್ತು ಆರ್ಗನೈಸೇಷನಲ್ ಮೆಷರ್' (ನಿರ್ವಹಣೆ ಮತ್ತು ಸಂಘಟನಾ ಪರಿಮಾಣ)ವನ್ನು ಪರಿಚಯಿಸಿದ. ವಿಶ್ವಸಂಸ್ಥೆಯ ನಿರ್ವಹಣಾ ವಿಭಾಗವನ್ನು ಬಲಪಡಿಸಲು 'ರಿನ್ಯೂವಿಂಗ್ ದ ಯುನೈಟೆಡ್ ನೇಷನ್ಸ್: ಎ ಪ್ರೋಗ್ರಾಂ ಫಾರ್ ರಿಫಾರ್ಮ್'ನ್ನು ಜಾರಿಗೆ ತಂದ.

ಪ್ರಪಂಚಾದ್ಯಂತ ಆಫ್ರಿಕದ ಏಳಿಗೆಗಾಗಿ ಸಕ್ರಿಯವಾಗಿ ಪಾಲ್ಗೊಂಡಿದ್ದಾನೆ. ಅಲ್ಲದೇ ಮೊ ಇಬ್ರಾಹಿಂ ಬಹುಮಾನ ನೀಡುವ ಸಮಿತಿಯ ಅಧ್ಯಕ್ಷನಾಗಿ ಆಯ್ಕೆಯಾಗಿದ್ದ. ಗ್ಲೋಬಲ್ ಎಲ್ಡರ್ಸ್‌ನ ಸದಸ್ಯನಾದ ಇವನು ಗ್ಲೋಬಲ್ ಹ್ಯುಮೆನಿಟೇರಿಯನ್ ಫೋರಂನ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದಾನೆ. ಈ ಫೋರಂ ಅಂತಾರಾಷ್ಟ್ರೀಯ ನ್ಯಾಯಕ್ಕಾಗಿ ನೀಡಲಾಗುವ 'ಮ್ಯಾಕ್ ಆರ್ಥರ್ ಫೌಂಡೇಶನ್' ಪ್ರಶಸ್ತಿಗೆ ಭಾಜನವಾಗಿದೆ. 2008ರ ಮೊದಲಲ್ಲಿ ಕೀನ್ಯಾದ ನಾಗರಿಕ ಯುದ್ಧ ಕೊನೆಗೊಳ್ಳಲು ಒಪ್ಪಂದದ ಸಮಿತಿಯಲ್ಲಿ ಪ್ರಧಾನಪಾತ್ರ ವಹಿಸಿದ್ದ.

ಕ್ಲಬ್ ಆಫ್ ಮ್ಯಾಡ್ರಿಡ್‌ನ ಸದಸ್ಯನಾಗಿರುವ ಈತ ಯುನೈಟೆಡ್ ನೇಷನ್ಸ್ ಫೌಂಡೇಶನ್‌ನ ನಿರ್ದೇಶಕ ಮಂಡಲಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾನೆ. ಆಫ್ರಿಕ ಪ್ರೋಗ್ರೆಸ್ ಪ್ಯಾನೆಲ್‌ನ ಸದಸ್ಯನಾಗಿದ್ದಾನೆ.

ನಾರ್ಡರ್ ಮೌಸವಿಜ಼ದೆಹ್‌ನೊಂದಿಗೆ ಸೇರಿ ಇಂಟರ್‌ವೆನ್ಸನ್ಸ್: ಎ ಲೈಫ್ ಇನ್ ವಾರ್ ಅಂಡ್ ಪೀಸ್ ಪುಸ್ತಕವನ್ನು ಪ್ರಕಟಿಸಿದ (2012). ಇದು ಇವನ ಆತ್ಮಕಥೆ ಎಂದೂ ಹೇಳಲಾಗುತ್ತದೆ. ಇವನಿಗೆ ಸಂದಿರುವ ಗೌರವಗಳು ಅಪಾರ. ಆರ್ಡರ್ ಆಫ್ ದಿ ಸ್ಟಾರ್ ಆಫ್ ಘಾನಾ (2000) ಗೌರವ, ಆರ್ಡರ್ ಆಫ್ ಮೆರಿಟ್ ಆಫ್ ದಿ ರಿಪಬ್ಲಿಕ್ ಆಫ್ ಪೋಲೆಂಡ್ ಗೌರವ (2000), ಆರ್ಡರ್ ಆಫ್ ಲಿಬರ್ಟಿ: ಎ ಗ್ರಾಂಡ್ ಕಾಲರ್ (2005), ಗ್ರಾಂಡ್ ಡೆಕೋರೇಷನ್ ಆಫ್ ಆನರ್ ಇನ್ ಗೋಲ್ಡ್ ವಿತ್ ಸರ್ ಫಾರ್ ಸರ್ವೀಸಸ್ ಟು ದಿ ರಿಪಬ್ಲಿಕ್ ಆಫ್ ಆಸ್ಟ್ರಿಯ ಗೌರವ (2007), ಕ್ವೀನ್ ಎಲಿಜ಼ಬೆತ್‌ರಿಂದ ಆರ್ಡರ್ ಆಫ್ ಸೆಂಟ್ ಮಿ ಬೆಲ್ ಅಂಡ್ ಸೈಂಟ್ ಜಾರ್ಜ್‌ನ ನೈಟ್ ಗ್ರಾಂಡ್ ಗೌರವ (2007), ಜರ್ಮನಿಯಿಂದ ಆರ್ಡರ್ ಆಫ್ ಮೆಂಟ್ ಆಫ್ ದಿ ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ ಗೌರವಕ್ಕೆ ಭಾಜನನಾಗಿದ್ದಾನೆ.

ಇವನಿಗೆ ಅನೇಕ ಪ್ರಶಸ್ತಿಗಳೂ ಸಂದಿವೆ. ಜೀವಮಾನ ಸಾಧನೆಗಾಗಿ ಕೋರ್ ಆಲ್ ಆಫ್ರಿಕ ಮ್ಯೂಸಿಕ್ ಅವಾರ್ಡ್ (2000) ಬಂದಿದೆ. ನೊಬೆಲ್ ಶಾಂತಿ ಪ್ರಶಸ್ತಿ (2001); 2002ರಲ್ಲಿ ಪ್ರೊಫೈಲ್ಸ್ ಇನ್ ಕರೇಜ್ ಅವಾರ್ಡ್ (2002); ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಆ್ಯಂಡ್ ಸೈನ್ಸ್‌ನ ವಿದೇಶಿ ಗೌರವಾನ್ವಿತ ಸದಸ್ಯ ಪ್ರಶಸ್ತಿ (2003); ಓಲೊಫ್ ಪಾಮ್ ಬಹುಮಾನ (2006); ಸ್ವಿಸ್ ವರ್ಲ್ಡ್ ಎಕನಾಮಿಕ್ ಫೋರಂನ ವಿಶೇಷ ಪ್ರಶಸ್ತಿ (2007); ಪೀಸ್ ಆಫ್ ವೆಸ್ಟ್ ಫೇಲಿಯ ಬಹುಮಾನ (2008); ಮತ್ತು ಗೊಥೆನ್‌ಬರ್ಗ್ ಪ್ರಶಸ್ತಿಗಳನ್ನು (2011) ಪಡೆದಿದ್ದಾನೆ. (ಸಿ.ಎಸ್.ಪಿ.)

**ಕೋಬಾಲ್ಟ್ :** ಒಂದು ಲೋಹ ರಾಸಾಯನಿಕ ಧಾತು. ಸಂಕೇತ Co. ಪರಮಾಣು ಸಂಖ್ಯೆ 27 ಮತ್ತು ಪರಮಾಣುತೂಕ 58.93. ಆವರ್ತಕೋಷ್ಟಕದಲ್ಲಿ 8ನೆಯ ಗುಂಪಿನ (ಗ್ರೂಪ್) ಸಂಕ್ರಾಂತಿ ಲೋಹ. ಎಲೆಕ್ಟ್ರಾನಿಕ್ ವಿನ್ಯಾಸ $1s^2 2s^2 2p^6 3s^2 3p^6 3d^7 4s^2$. ದ್ರವನ ಬಿಂದು 1,493° ಸೆಂ. ಕುದಿಬಿಂದು 3,520° ಸೆಂ. ಘನದ ಸಾಂದ್ರತೆ ($g/cm^3$ ಗಳಲ್ಲಿ) 21° ಸೆಂ. ನಲ್ಲಿ 8.71; ಘನರೂಪದ ಹರಳಿಗೆ ಇದು 8.67. ಕೋಬಾಲ್ಟ್ ಪದದ ವ್ಯುತ್ಪತ್ತಿ ಜರ್ಮನ್ ಪದ ಕೋಬಾಲ್ಡ್‌ದಿಂದ ಆಗಿದೆ. ಕೋಬಾಲ್ಡ್ ಎಂದರೆ ಹಾನಿಕಾರಕಭೂತ ಎಂದರ್ಥ. ಈ ಪದವನ್ನು ಮೊದಲಿಗೆ, ಗಣಿಗಳನ್ನು ಸುತ್ತಾಡಿ ಗಣಿಕೂಲಿಕಾರರನ್ನು ತೊಂದರೆಗೊಳಿಸುವ ಕುಬ್ಜಭೂತಗಳನ್ನು ಸೂಚಿಸಲಿಕ್ಕೂ ಅನಂತರ ಹುಸಿ ಅದಿರುಗಳನ್ನು ಮತ್ತು ವಿಷಯುಕ್ತವಾದ ಅದಿರುಗಳನ್ನು ಸೂಚಿಸಲಿಕ್ಕೂ ಉಪಯೋಗಿಸಲಾಗುತ್ತಿತ್ತು. 1735ರಲ್ಲಿ ಬ್ರ್ಯಾಂಟ್ ಎಂಬ ವಿಜ್ಞಾನಿ ಕೋಬಾಲ್ಟ್ ಲೋಹವನ್ನು ಅದರ ಅದಿರಿನಿಂದ ಬೇರ್ಪಡಿಸಿ ಅದನ್ನು ಕೋಬಾಲ್ಟರೆಕ್ಸ್ ಎಂದು ಕರೆದ. ಆಗಿನ ಕೋಬಾಲ್ಟರೆಕ್ಸೇ ಈಗಿನ ಕೋಬಾಲ್ಟ್ ಎಂದು ಹೇಳಬಹುದು. ಬರ್ಗ್‌ಮನ್ನನೆಂಬ ವಿಜ್ಞಾನಿ ಅದರ ಗುಣಲಕ್ಷಣಗಳನ್ನು 1780ರಲ್ಲಿ ಅಭ್ಯಾಸಮಾಡಿದ.

**ಲಭ್ಯ:** ಉಲ್ಕಾಪಿಂಡಗಳಲ್ಲಿ ಲೋಹರೂಪದ ಕೋಬಾಲ್ಟ್ ಅಲ್ಪಪರಿಮಾಣದಲ್ಲಿ ಸಿಕ್ಕುತ್ತದೆ. ಕೋಬಾಲ್ಟ್ ಮುಖ್ಯವಾಗಿ ದೊರೆಯುವುದು ಆರ್ಸೆನಾಯಿಡ್ ಸಂಯುಕ್ತರೂಪದಲ್ಲಿ–ಸ್ಮಾಲ್‌ಟೈಟ್ [$(Co\,Ni\,Fe)AS_2$], ಕೋಬಾಲ್ಟ್‌ಗ್ಲಾನ್ಸ್ [$(Co\text{-}Fe)AsS$], ಲಿನ್ನೆಯಾಟ್ [$(Co\,Ni\,Fe)_3S_4$], ಎರಿಥ್ರಾಯ್ಟ್ [$Co_3(AsO_4)_2$] ಎಂಬವುಗಳಲ್ಲಿ. ಕೋಬಾಲ್ಟ್ ಅದಿರುಗಳು ಭಾರತದ ರಾಜಸ್ತಾನ ಮತ್ತು ನೇಪಾಳದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಿಕ್ಕುತ್ತವೆ. ಕೆನಡದ ಆಂಟೇರಿಯೋದ ಹತ್ತಿರ ನಿಕಲ್ ಮತ್ತು ಬೆಳ್ಳಿಮಿಶ್ರಿತವಾದ ಕೋಬಾಲ್ಟಿನ ಅದಿರುಗಳಲ್ಲಿ ಹೆಚ್ಚಿನ ಮೊತ್ತದಲ್ಲಿ ಕೋಬಾಲ್ಟ್ ಸಿಕ್ಕುತ್ತದೆ.

**ತಯಾರಿಕೆ :** ಅದುರನ್ನು ಪುಡಿಪುಡಿಮಾಡಿ ಚೆನ್ನಾಗಿ ಅರೆದು ಆ ಮೇಲೆ ನೊರೆ ತೇಲುವ ವಿಧಾನದಿಂದ (ಫ್ರಾತ್ ಫ್ಲೊಟೇಶನ್ ಮೆಥಡ್) ಕೇಂದ್ರೀಕರಿಸುತ್ತಾರೆ. ಅನಂತರ ಅದನ್ನು ದೊಡ್ಡ ರಾಶಿಮಾಡಿ ಹುರಿಯುವುದರಿಂದ ಅದರಲ್ಲಿರುವ ಗಂಧಕ ಮತ್ತು ಆರ್ಸೆನಿಕ್‌ಗಳು ಆಕ್ಸೈಡ್ ಆಗಿ ಪರಿವರ್ತನೆಗೊಳ್ಳುತ್ತವೆ. ಕಾಯಿಸಿದ ಅದಿರನ್ನು ಸುಣ್ಣ ಮತ್ತು ಮರಳಿನೊಡನೆ ಮಿಶ್ರಮಾಡಿ ಸಣ್ಣ ಊದು ಕುಲುಮೆಯಲ್ಲಿ (ಬ್ಲಾಸ್ಟ್ ಫರ್ನೇಸ್) ಕರಗುವ ವರೆಗೆ ಕಾಯಿಸುತ್ತಾರೆ. ಹೀಗೆ ಕಾಯಿಸುವುದರಿಂದ ಕಬ್ಬಿಣದ ಹೆಚ್ಚು ಮೊತ್ತ ಕಬ್ಬಿಣದ ಸಿಲಿಕೇಟ್ ($FeSiO_3$) ರೂಪದಲ್ಲಿಯೂ ಉಳಿದ ಅದಿರು ಎರಡು ಪದರಗಳಲ್ಲಿಯೂ ಬೇರ್ಪಡುತ್ತವೆ. ಮೇಲಿನ ಪದರದ ಅಶುದ್ಧ ಕೋಬಾಲ್ಟ್, ನಿಕಲ್, ಕಬ್ಬಿಣ ಮತ್ತು ತಾಮ್ರದ ಆರ್ಸೆನಾಯಿಡ್ ಇರುತ್ತವೆ. ಇದಕ್ಕೆ ಸ್ಪೀಸ್ ಎಂದು ಹೆಸರು. ಕೆಳಗಿನ ಪದರದಲ್ಲಿ ಅಶುದ್ಧ ಬೆಳ್ಳಿ ಇರುತ್ತದೆ. ಮೇಲಿನ ಸ್ಪೀಸನ್ನು ಬೇರ್ಪಡಿಸಿ, ಆರಿಸಿ, ಚೆನ್ನಾಗಿ ಪುಡಿಪುಡಿಮಾಡಿ ಉಪ್ಪಿನೊಂದಿಗೆ ಮಿಶ್ರಮಾಡಿ ಪರಾವರ್ತಿನಿ (ರೆವರ್ಬರೇಟರಿ) ಕುಲುಮೆಯಲ್ಲಿ ಕಾಯಿಸುತ್ತಾರೆ. ಈ ಪ್ರಯೋಗದಿಂದ ಆರ್ಸೆನಿಕ್ ಆಕ್ಸೈಡ್ ರೂಪದಿಂದ ಆರ್ಸೆನಿಕ್ ಹೊರಗೆ ಹೋಗುತ್ತದೆ. ಉಳಿದ ಲೋಹಗಳಾದ ನಿಕಲ್, ಕೋಬಾಲ್ಟ್ ಮತ್ತು ತಾಮ್ರಗಳು ಕ್ಲೋರೈಡ್ ಆಗಿ ಮಾರ್ಪಡುತ್ತವೆ. ಈ ಕ್ಲೋರೈಡುಗಳನ್ನು ನೀರಿನಲ್ಲಿ ಕರಗಿಸಿ ಸಾರವನ್ನು ತೆಗೆಯುತ್ತಾರೆ. ಸಾರದಲ್ಲಿರುವ ತಾಮ್ರವನ್ನು ಕಬ್ಬಿಣ ತುಣುಕುಗಳನ್ನು ಹಾಕಿಯೂ ಕಬ್ಬಿಣವನ್ನು ಖಡುವನ್ನು ಹಾಕಿಯೂ ತೆಗೆಯುತ್ತಾರೆ. ಅನಂತರ ಇದನ್ನು ಸೋಸಿ, ಅದಕ್ಕೆ ಕಾಸ್ಟಿಕ್ ಸೋಡ ($NaOH$) ಹಾಕುತ್ತಾರೆ. ಇದರಿಂದ ಕೋಬಾಲ್ಟ್ ಮತ್ತು ನಿಕಲ್ಲುಗಳು ಹೈಡ್ರಾಕ್ಸೈಡ್ ರೂಪದಲ್ಲಿ ಒತ್ತರಿಸುತ್ತವೆ. ಈ ಒತ್ತರಗಳನ್ನು (ಪ್ರೆಸಿಪಿಟೇಟ್ಸ್) ಒಣಗಿಸಿ ದಹನ ಮಾಡುವುದರಿಂದ ಅವು ಕೋಬಾಲ್ಟ್ ಮತ್ತು ನಿಕಲ್ ಆಕ್ಸೈಡಾಗಿ ಪರಿವರ್ತನೆಗೊಳ್ಳುತ್ತವೆ. ಕೋಬಾಲ್ಟನ್ನು ನಿಕಲ್‌ನಿಂದ ಬೇರ್ಪಡಿಸಲಿಕ್ಕೆ ಹಲವಾರು ವಿಧಾನಗಳಿವೆ. ಅವುಗಳಲ್ಲಿ ಮೋಂಡ್ ಎಂಬಾತನ ವಿಧಾನ ಹೆಚ್ಚು ಬಳಕೆಯಲ್ಲಿದೆ. ಇದರಲ್ಲಿ ಇಂಗಾಲದ ಮಾನಾಕ್ಸೈಡನ್ನು 50° ಸೆಂ.ಉಷ್ಣತೆಯಲ್ಲಿ ಬಿಡಲಾಗುತ್ತದೆ. ಇದರಿಂದ ನಿಕಲ್ ಅನಿಲರೂಪ ನಿಕಲ್ ಕಾರ್ಬೊನಿಲ್ [$Ni(Co)_4$] ಆಗುತ್ತದೆ. ಆದರೆ ಕೋಬಾಲ್ಟ್, ತಾಮ್ರ ಮತ್ತು ಕಬ್ಬಿಣ ಈ ಪರಿಸ್ಥಿತಿಯಲ್ಲಿ ಅನಿಲರೂಪದ ಕಾರ್ಬೊನಿಲ್ ಆಗುವುದಿಲ್ಲ. ಕೋಬಾಲ್ಟ್ ಮತ್ತು ನಿಕಲ್ ಆಕ್ಸೈಡುಗಳನ್ನು ಹೈಡ್ರೊಕ್ಲೋರಿಕ್ ಆಮ್ಲದಲ್ಲಿ ಕರಗಿಸಿ ಆ ದ್ರಾವಣವನ್ನು ಖಡುವಿನಿಂದ ತಟಸ್ಥೀಕರಿಸುವುದು ಇನ್ನೊಂದು ವಿಧಾನ. ಇದಕ್ಕೆ ಚಲುವೆ ಪುಡಿ (ಬ್ಲೀಚಿಂಗ್ ಪೌಡರ್) ಹಾಕುವುದರಿಂದ ಕೋಬಾಲ್ಟ್ ಹೈಡ್ರಾಕ್ಸೈಡ್ ರೂಪದಿಂದ ಒತ್ತರಿಸಲ್ಪಡುತ್ತದೆ. ಆದರೆ ನಿಕಲ್ ಈ ಪರಿಸ್ಥಿತಿಯಲ್ಲಿ ಒತ್ತರಿಸುವುದಿಲ್ಲ. $2CoCl_2 + 2Ca(OH)_2 + CaOCl_2 + H_2O \rightarrow 2Co(OH)_3\downarrow + 3CaCl_2$ ಕೋಬಾಲ್ಟ್ ಹೈಡ್ರಾಕ್ಸೈಡನ್ನು ತೊಳೆದು ಒಣಗಿಸಿ, ದಹಿಸುವುದರಿಂದ ಅದು ಕೋಬಾಲ್ಟೊ ಕೋಬಾಲ್ಟಿಕ್ ಆಕ್ಸೈಡ್ ಆಗುತ್ತದೆ.

$$12Co(OH)_3 \rightarrow 4Co_3O_4 + 18H_2O + O_2$$

ಹೀಗೆ ಪಡೆದ ಆಕ್ಸೈಡನ್ನು ಲೋಹಕ್ಕೆ ಅಪಕರ್ಷಿಸಲು ಅದನ್ನು ಇಂಗಾಲ ಮತ್ತು ಸುಣ್ಣದ ಹರಳುಗಳೊಂದಿಗೆ ವಿದ್ಯುತ್ ಕುಲುಮೆಯಲ್ಲಿ ಕಾಯಿಸಬೇಕು. ಈ ಅಪಕರ್ಷಣೆಯನ್ನು ಜಲಜನಕ ಅನಿಲದಿಂದಾಗಲಿ ಇಂಗಾಲದ ಮಾನಾಕ್ಸೈಡಿನಿಂದಾಗಲಿ ಇಲ್ಲವೇ ಅಲ್ಯೂಮಿನಿಯಂನಿಂದಾಗಲಿ ಮಾಡಬಹುದು.

$$Co_3O_4 + 4C \rightarrow 3Co + 4CO$$

$$3\,Co_3O_4 + 8Al \rightarrow 9Co + 4Al_2O_3$$

ಈ ಅಪಕರ್ಷಣೆಯನ್ನು ಅಲ್ಯೂಮಿನಿಯಂನಿಂದ ಮಾಡುವುದು ಅತಿ ಸುಲಭ. ಇದಕ್ಕೆ ಗೋಲ್ಡ್‌ಶ್ಮಿಟ್ ವಿಧಾನ ಎಂದು ಹೆಸರು. ಇದರಿಂದ ನಿಕಟವಾದ (ಕಾಂಪ್ಯಾಕ್ಟ್) ಲೋಹ ಸಿಕ್ಕುತ್ತದೆ. ಕೋಬಾಲ್ಟ್ ಸಲ್ಫೇಟ್, ಸ್ವಲ್ಪ ಅಮೋನಿಯ ಮತ್ತು ಅಮೋನಿಯಂ ಸಲ್ಫೇಟ್ ಇವುಗಳ ದ್ರಾವಣವನ್ನು ವಿದ್ಯುದ್ವಿಶ್ಲೇಷಿಸಿ ಅತಿಶುದ್ಧವಾದ ಧಾತುವನ್ನು ಪಡೆಯಬಹುದು. ಕೋಬಾಲ್ಟ್ ಆಕ್ಸೈಡನ್ನು ಫಾರ್ಮಿಕ್ ಆಮ್ಲದಲ್ಲಿ ಕರಗಿಸಿ ದ್ರಾವಣವನ್ನು ವಿದ್ಯುದ್ವಿಶ್ಲೇಷಿಸಿದರೆ ಶೇ. 99.9 ಶುದ್ಧತೆಯುಳ್ಳ ಲೋಹವನ್ನು ಪಡೆಯಬಹುದೆಂದು ಹೇಳಲಾಗುತ್ತದೆ.

**ಭೌತಗುಣಗಳು:** ಕೋಬಾಲ್ಟ್ ಬೆಳ್ಳಿಯ ಹಾಗೆ ಬೆಳ್ಳಗೆ ಹಾಗೂ ಹೊಳಪುಳ್ಳ ಬಿರುಸು ಲೋಹ. ಅದನ್ನು ತಗಡಾಗಿ ತಟ್ಟಬಹುದು ಮತ್ತು ತಂತಿಯಾಗಿ ಎಳೆಯಬಹುದು. ಇದರ ಲೋಹಚುಂಬಕ ಗುಣ 1,150° ಸೆಂ. ಉಷ್ಣತೆಯ ವರೆಗೂ ಉಳಿದಿರುತ್ತದೆ.

ಸಾಮಾನ್ಯ ಉಷ್ಣತೆಗಳಲ್ಲಿ ಒಣಗಾಳಿ ಈ ಲೋಹದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಆದರೆ ಮೇಲ್ಮಟ್ಟದ ಉಷ್ಣತೆಯಲ್ಲಿ ಅದು ಉರಿಯುವುದು. ಹುಡಿಹಿಟ್ಟು ಕೋಬಾಲ್ಟ್‌ಗೆ ಅಗ್ನಿಗ್ರಾಹಕ ಗುಣವಿದೆ. ನೀರು ಕೋಬಾಲ್ಟಿನ ಮೇಲೆ ವರ್ತಿಸುವುದಿಲ್ಲ. ಆದರೆ ತಪ್ತವಾದ ಲೋಹ ಉಗಿಯನ್ನು ವಿಘಟಿಸುತ್ತದೆ.

$$3Co + 4\,H_2O \longleftrightarrow Co_3O_4 + 4\,H_2$$

ಹೈಡ್ರೊಕ್ಲೋರಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಸಂಗಡಕೋಬಾಲ್ಟ್ ವರ್ತಿಸಿ ಕೋಬಾಲ್ಟಸ್ ಲವಣಗಳನ್ನೂ ಜಲಜನಕ ಅನಿಲವನ್ನೂ ಉತ್ಪಾದಿಸುತ್ತದೆ.

$$Co + 2HCl \rightarrow CoCl_2 + H_2$$

$$Co + H_2SO_4 \rightarrow CoSO_4 + H_2$$

ಶೇ. 50 ಇರುವ ನೈಟ್ರಿಕ್ ಆಮ್ಲದಲ್ಲಿ ಕೋಬಾಲ್ಟ್ ಸುಲಭವಾಗಿ ಕರಗುತ್ತದೆ. ಆದರೆ ಹೊಗೆಬೀರುವ ತಣ್ಣಗಿನ ಸಾರ ನೈಟ್ರಿಕ್ ಆಮ್ಲದಲ್ಲಿ ಅದು ನಿಷ್ಕ್ರಿಯ. ಜಲಜಲನಕ, ಗಂಧಕ, ರಂಜಕ ಮತ್ತು ಬೊರಾನುಗಳು ಕೋಬಾಲ್ಟಿನ ಮೇಲೆ ವರ್ತಿಸುತ್ತವೆ. ಆದರೆ ನೈಟ್ರೊಜನ್ ವರ್ತಿಸುವುದಿಲ್ಲ.

**ಉಪಯೋಗಗಳು:** ಮಿಶ್ರಲೋಹಗಳ ಉತ್ಪಾದನೆಯಲ್ಲಿ ಕೋಬಾಲ್ಟಿನ ಉಪಯೋಗ ಉಂಟು. ಸ್ಥಿರಲೋಹಚುಂಬಕಗಳ ರಚನೆಗೆ ಶೇ. 35 ಕೋಬಾಲ್ಟ್ ಇರುವ ಕೋಬಾಲ್ಟ್ ಉಕ್ಕು ಬೇಕಾಗುತ್ತದೆ. ಕೋಬಾಲ್ಟ್, ಕ್ರೋಮಿಯಂ ಮತ್ತು ಅಲ್ಪಾಂಶ ಟಂಗ್‌ಸ್ಟನ್ ಇರುವ ಸ್ಟೆಲ್ಲೈಟನ್ನು ಶಸ್ತ್ರಚಿಕಿತ್ಸೆಯ ಉಪಕರಣಗಳ ಮತ್ತು ಕರ್ತನೋಪಕರಣಗಳ ನಿರ್ಮಾಣದಲ್ಲಿ ಉಪಯೋಗಿಸುತ್ತಾರೆ. ಕೋಬಾಲ್ಟ್, ಕಬ್ಬಿಣ ಮತ್ತು ಕ್ರೋಮಿಯಂ ಇರುವ ಮಿಶ್ರಲೋಹ ಕೋಕ್ರೋಮ್ ಎಂಬುದು ವಿದ್ಯುತ್ ಕೈಗಾರಿಕೆಯಲ್ಲೂ ಕರ್ತನೋಪಕರಣಗಳ ತಯಾರಿಕೆಯಲ್ಲಿಯೂ ಅವಶ್ಯ. ಗಾಜಿನ ಮತ್ತು ಪಿಂಗಾಣಿ ಪಾತ್ರೆಗಳಿಗೆ ಬಣ್ಣ ಕೊಡುವ ಕಾರ್ಯದಲ್ಲಿ ಕೋಬಾಲ್ಟನ್ನು ತಳಹದಿಯನ್ನಾಗಿ ಉಪಯೋಗಿಸುತ್ತಾರೆ. ವೈದ್ಯದಲ್ಲಿ, ಮುಖ್ಯವಾಗಿ ಏಡಿಗಂತಿ ಸಂಬಂಧಿ ವ್ರಣಗಳ ನಿರ್ಮೂಲನ ಚಿಕಿತ್ಸೆಯಲ್ಲಿ ಕೋಬಾಲ್ಟಿನ ಉಪಯೋಗ ಉಂಟು.

**ಸಂಯುಕ್ತಗಳು:** ಕೋಬಾಲ್ಟಸ್ ಸಂಯುಕ್ತಗಳು ಕೋಬಾಲ್ಟಿನ ಅತಿಸಾಮಾನ್ಯ ಸಂಯುಕ್ತಗಳು. ಈ ಸಂಯುಕ್ತಗಳಲ್ಲಿ ಕೋಬಾಲ್ಟಿನ ವೇಲೆನ್ಸಿ 2. ಇವು ಸ್ಥಿರ ಸಂಯುಕ್ತಗಳು. ಇವು ಸಜಲವಾಗಿದ್ದರೆ ನೀಲವಾಗಿಯೂ ನಿರ್ಜಲವಾಗಿದ್ದರೆ ಗುಲಾಬಿ ಅಥವಾ ಕೆಂಪು ಆಗಿಯೂ ಇರುತ್ತವೆ. ನೀರಿನಲ್ಲಿ ಮಿಶ್ರಿತವಾಗಿದ್ದರೆ ಗಡುಸಾದ

ಕೆಂಪು ಬಣ್ಣ ಇರುತ್ತದೆ. ಸರಳ ಕೋಬಾಲ್ಟಿಕ್ ಸಂಯುಕ್ತಗಳಲ್ಲಿ ಕೋಬಾಲ್ಟಿನ ವೇಲೆನ್ಸಿ 3. ಸಂಕೀರ್ಣ ಸಂಯುಕ್ತಗಳಲ್ಲಿ ಇದು 3 ಮತ್ತು 4. ಕೋಬಾಲ್ಟಿನ ವೇಲೆನ್ಸಿ 4 ಇರುವ ಸಂಕೀರ್ಣ ಸಂಯುಕ್ತಗಳು ವಿಪುಲವಾಗಿವೆ. (ಬಿ. ಕೆ.ವಿ.)

**ಕೋಬಾಲ್ಟೈಟ್ :** ಕೋಬಾಲ್ಟ್ ಸಲ್ಫಾರ್ಸೆನೈಡನ್ನು ಒಳಗೊಂಡಿರುವ ಒಂದು ಖನಿಜ. ರಾಸಾಯನಿಕ ಸೂತ್ರ $(Co_2Fe)AsS$. ಕೋಬಾಲ್ಟ್ ಲೋಹದ ಪ್ರಮುಖ ಅದುರುಗಳಲ್ಲಿ ಕೋಬಾಲ್ಟೈಟ್ ಒಂದು. ಬಿಳಿ, ಕೆಂಪು, ಊದಾ, ನೀಲಿ ಮುಂತಾದ ಬಣ್ಣಗಳುಳ್ಳ ಅಪಾರಕ ಖನಿಜವಿದು. ಕೋಬಾಲ್ಟ್ ಅದಿರುಗಳನ್ನು ಅತಿ ಪುರಾತನ ಕಾಲದಿಂದ ವರ್ಣಕಾರಕಗಳಾಗಿ ಬಳಸುತ್ತಿದ್ದರೂ ಇದರ ಬಣ್ಣಕ್ಕೆ ಕಾರಣ ಮಾತ್ರ ಗೊತ್ತಿರಲಿಲ್ಲ. ಚೀನದಲ್ಲಿ ಮಿಂಗ್ ಸಂತತಿಯ ರಾಜರ ಕಾಲದಲ್ಲಿ ಪಿಂಗಾಣಿ ಪಾತ್ರೆಗಳಿಗೆ ನೀಲಿಬಣ್ಣ ಲೇಪಿಸಲು ಈ ಅದಿರುಗಳನ್ನು ಉಪಯೋಗಿಸಲಾಗುತ್ತಿತ್ತು. 16ನೆಯ ಶತಮಾನದಲ್ಲಿ ಮಧ್ಯ ಯುರೋಪಿನ ಹಾರ್ಟ್ಸ ಪರ್ವತಗಳಲ್ಲಿಯ ಗಣಿಕೆಲಸಗಾರರು ಅಲ್ಲಿ ದೊರೆಯುವ ಅದಿರುಗಳನ್ನು ತಾಮ್ರದ ಅದಿರುಗಳೆಂದು ಭಾವಿಸಿ ಅವುಗಳಲ್ಲಿದ್ದ ತಾಮ್ರದ ಅಂಶವನ್ನು ಪ್ರತ್ಯೇಕಿಸಲು ಅವನ್ನು ಕುಲುಮೆಗಳಲ್ಲಿ ಕರಗಿಸಿದಾಗ ತಾಮ್ರ ಉತ್ಪತ್ತಿಯಾಗುವ ಬದಲು ಕೆಲವು ಹಾನಿಕಾರಕ ಅನಿಲಗಳು ಉದ್ಭವಿಸಿದುವು. ಇದರಿಂದಾಗಿ ಅವರು ಆ ಅದಿರುಗಳನ್ನು ಕೋಬಾಲ್ಡ್ ಎಂದು ಕರೆದರು. ಜರ್ಮನ್ ಭಾಷೆಯಲ್ಲಿ ಕೋಬಾಲ್ಡ್ ಎಂಬ ಶಬ್ದಕ್ಕೆ ಹಾನಿಕಾರಕ ಭೂತ ಎಂದರ್ಥ. ಆ ಅದಿರುಗಳನ್ನು ಕರಗಿಸಿ ಅವುಗಳಲ್ಲಿಯ ಆರ್ಸೆನಿಕ್ ಮತ್ತು ಗಂಧಕದ ಅಂಶವನ್ನು ಪ್ರತ್ಯೇಕಿಸಿ ಉಳಿದ ಭಾಗವನ್ನು ಮರಳಿನ ಜೊತೆ ಸಮ್ಮಿಳಿಸಿದಾಗ ಒಂದು ಬಗೆಯ ನೀಲಿ ಬಣ್ಣದ ಗಾಜು ನಿರ್ಮಾಣವಾಯಿತು. ಅದುವರೆಗೂ ನೀಲಿ ಬಣ್ಣಕ್ಕೆ ಕಾರಣ ತಿಳಿಯದಿದ್ದು ಕೋಬಾಲ್ಟ್ ಲೋಹದ ಇರುವಿಕೆಯೇ ಈ ನೀಲಿಬಣ್ಣಕ್ಕೆ ಕಾರಣವೆಂದು ಸ್ವೀಡನಿನ ರಸಾಯನವಿಜ್ಞಾನಿ ಬ್ರಾಂಟ್ ತೋರಿಸಿದ (1742).

ಕೋಬಾಲ್ಟೈಟ್ ಖನಿಜ ಸಾಮಾನ್ಯವಾಗಿ ಕಣರಚನೆಯ ರೂಪದಲ್ಲೊ(ಗ್ರ್ಯಾನ್ಯುಲಾರ್) ಅಥವಾ ದಟ್ಟರಾಶಿಗಳಲ್ಲೋ (ಕಾಂಪ್ಯಾಕ್ಟ್ ಮ್ಯಾಸಿವ್) ದೊರೆಯುತ್ತದೆ. ಸಂಪೂರ್ಣವಾಗಿ ರೂಪಗೊಂಡ ಕೋಬಾಲ್ಟೈಟ್ ಸ್ಫಟಿಕಗಳು ಅತಿ ವಿರಳ. ಇವು ಐಸೋಮೆಟ್ರಿಕ್ ವರ್ಗಕ್ಕೆ ಸೇರಿದ್ದು ಚತುರ್ಮುಖಿ, ಷಣ್ಮುಖಿ, ದ್ವಾದಶಮುಖಿಗಳ ರೂಪದಲ್ಲಿ ದೊರೆಯುತ್ತವೆ. ಈ ಸ್ಫಟಿಕಗಳು ಕೆಲವು ಸಲ ಪೈರೈಟ್ ಖನಿಜದ ಸ್ಫಟಿಕಗಳನ್ನು ಹೋಲುವುದುಂಟು.

ಕೋಬಾಲ್ಟೈಟಿನ ಬಣ್ಣ ಬಿಳಿ, ಇದರ ಗಡಸುತನ ಪೈರೈಟ್ ಖನಿಜಕ್ಕಿಂತ ಕಡಿಮೆ. ಗಡಸುತನ 5.5 (ಮೋಹ್ಸ್ ಕಾಠಿನ್ಯಮಾನ). ಸಾಪೇಕ್ಷಸಾಂದ್ರತೆ 6.33. ಇದಕ್ಕೆ ನಿರ್ದಿಷ್ಟವಾದ ಘನಸೀಳುಗಳಿವೆ (ಕ್ಯೂಬಿಕ್ ಕ್ಲೀವೆಜ್). ಕೋಬಾಲ್ಟೈಟ್ ಖನಿಜವನ್ನು ಒತ್ತಡಕ್ಕೀಡುಮಾಡಿ ಸುಲಭವಾಗಿ ಪುಡಿಮಾಡಬಹುದು. ಈ ಖನಿಜ ಸಾಮಾನ್ಯವಾಗಿ ಅಧಿಕ ಉಷ್ಣತೆಯ ಪರಿಸರದಲ್ಲಿ ರಚಿತವಾದ ರೂಪಾಂತರಿತ ಶಿಲೆಗಳಲ್ಲಿ ನೆಲೆಸಿರುತ್ತದೆ. ವಿರಳವಾಗಿ ಇದು ಇತರ ಕೋಬಾಲ್ಟ್ ಮತ್ತು ನಿಕಲ್ ಸಲ್ಫೈಡುಗಳ ಜೊತೆಯಲ್ಲಿ ಸಿರ (ವೀನ್ಸ್) ರೂಪದಲ್ಲಿ ದೊರಕುತ್ತದೆ.

ಬೆಳ್ಳಿಯಂತೆ ಹೊಳಪುಳ್ಳ ಕೋಬಾಲ್ಟೈಟ್ ಹರಳುಗಳು ಸ್ವೀಡನ್ನಿನ ಲುನಾಬರ್ಗ್, ನಾರ್ವೆಯ ಸ್ಕುಟರುಡ್ ಮುಂತಾದ ಸ್ಥಳಗಳಲ್ಲಿ ದೊರೆಯುತ್ತವೆ. ಸೊಗಸಾದ ಘನ ಮತ್ತು ಷಣ್ಮುಖಾಕೃತಿಯ ಹರಳುಗಳು ಆಂಟೇರಿಯೋದ ಕೋಬಾಲ್ಟ್ ಹತ್ತಿರವಿರುವ ಕೊಲಂಬಸ್ ಗಣಿಗಳಲ್ಲಿ ಸಿಕ್ಕುತ್ತವೆ. ಕೋಬಾಲ್ಟೈಟ್ ಖನಿಜ ಅದೇ ಬಗೆಯ ಇನ್ನೊಂದು ಖನಿಜ ಡೆನೈಟ್‌ನ ಜೊತೆ ಸೇರಿ ಭಾರತದ ರಾಜಸ್ಥಾನದ ಖೇತ್ರಿ ಪ್ರದೇಶದ ತಾಮ್ರದ ಗಣಿಗಳಲ್ಲಿ ಕಪ್ಪು ಬಳಪದ ಶಿಲೆಗಳಲ್ಲಿ ಮಿಶ್ರರೂಪದಲ್ಲಿ ದೊರೆಯುತ್ತದೆ. ಈ ಮಿಶ್ರಖನಿಜಕ್ಕೆ ಆ ಪ್ರದೇಶದಲ್ಲಿ ಸೇಹ್ತ ಎಂಬ ಹೆಸರಿದೆ. ಇದನ್ನು ಪುಡಿಮಾಡಿ, ಸಂಗ್ರಹಿಸಿ ಸುಮಾರು 1908ರ ತನಕ ಜೈಪುರದ ರತ್ನಾಭರಣ ವ್ಯಾಪಾರಿಗಳಿಗೆ ವಿಕ್ರಯಿಸಲಾಗುತ್ತಿತ್ತು. ಚಿನ್ನ ಮತ್ತು ಬೆಳ್ಳಿಯ ಆಭರಣಗಳ ಮೇಲೆ ನೀಲಿ ಎನಾಮಲ್ಲನ್ನು ತರಿಸಲು ಇದರ ಬಳಕೆ ಇತ್ತು. (ಜಿ.ಟಿ.)

**ಕೋಬೀಯ :** ಪಾಲಮೋನಿಯೇಸೀ ಕುಟುಂಬಕ್ಕೆ ಸೇರಿದ ಒಂದು ಏಕವಾರ್ಷಿಕ ಬಳ್ಳಿ. ಬಲು ಸುಂದರವಾದ ಹೂಬಿಡುವುದರಿಂದ ಇದನ್ನು ಅಲಂಕಾರ ಸಸ್ಯವಾಗಿ ಕುಂಡಗಳಲ್ಲಿ, ಮಡಿಗಳಲ್ಲಿ ಬೆಳಸುತ್ತಾರೆ. ಇದು ಅಮೆರಿಕದ ಉಷ್ಣಪ್ರದೇಶಗಳ ಮೂಲವಾಸಿ. 17ನೆಯ ಶತಮಾನದಲ್ಲಿ ಜೀವಿಸಿದ್ದ ಸ್ಪೇನ್ ದೇಶದ ಸಸ್ಯವಿಜ್ಞಾನಿ ಹಾಗೂ ಪಾದ್ರಿಯಾಗಿದ್ದ ಫಾ.ಕೋಬೊ ಎಂಬವನ ಗೌರವಾರ್ಥವಾಗಿ ಈ ಗಿಡಕ್ಕೆ ಈ ಹೆಸರು ಕೊಡಲಾಯಿತು. ಕೋಬೀಯ ಜಾತಿಯಲ್ಲಿ ಸ್ಕಾಂಡೆನ್ಸ್, ಸ್ಟಿಪ್ಯುಲಾರಿಸ್ ಮತ್ತು ಮ್ಯಾಕ್ರೊಸ್ಟೋಮ ಎಂಬ ಮೂರು ಪ್ರಭೇದಗಳಿವೆ. ಸ್ಕಾಂಡೆನ್ಸ್ ಪ್ರಭೇದವೇ ಬಲು ಮುಖ್ಯವಾದುದು. ಇದು ಸು.15'–20' ಎತ್ತರಕ್ಕೆ ಬೆಳೆಯುವ ದುರ್ಬಲಕಾಂಡದ ಬಳ್ಳಿ, ಸಂಯುಕ್ತಮಾದರಿಯ ಎಲೆಗಳ ತುದಿಯಲ್ಲಿರುವ ಕುಡಿಬಳ್ಳಿಗಳ (ಟೆಂಡ್ರಿಲ್ಸ್) ಸಹಾಯದಿಂದ ಆಸರೆಗಳನ್ನು ತಬ್ಬಿ ಬೆಳೆಯುತ್ತದೆ. ಕೋಬೀಯ ಹೂ ಬಿಡುವ ಕಾಲ ಮೇ–ನವೆಂಬರ್ ತಿಂಗಳುಗಳು. ಹೂಗಳು ಒಂಟೊಂಟಿಯಾಗಿ ಅರಳುತ್ತವೆ. ಇವು ಪ್ರಾರಂಭದಲ್ಲಿ ನಸುಹಸಿರು ಬಣ್ಣಕ್ಕಿದ್ದು ಕ್ರಮೇಣ ಊದಾಬಣ್ಣಕ್ಕೆ ತಿರುಗುತ್ತದೆ. ಒಂದೊಂದು ಹೂವಿನಲ್ಲೂ ಉದ್ದನೆಯ ತೊಟ್ಟೂ 5 ಪುಷ್ಪಪತ್ರಗಳೂ 5 ದಳಗಳೂ 5 ಕೇಸರಗಳೂ ಮೂರು ಕಾರ್ಪೆಲ್‌ಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ದಳಗಳು ಒಂದರೊಡನೊಂದು ಕೂಡಿಕೊಂಡಿದ್ದು ಗಂಟೆಯಾಕಾರದಲ್ಲಿವೆ. ಕೇಸರಗಳ ಬುಡದಳಗಳ ಗಂಟಲಿಗೆ ಅಂಟಿಕೊಂಡಿವೆ. ಫಲ ಬಹುಬೀಜವುಳ್ಳ ಸಂಪುಟ ಮಾದರಿಯದು. ಬೀಜಗಳು ಚಪ್ಪಟೆಯಾಗಿವೆ.

ಕೋಬೀಯ ಸಸ್ಯವನ್ನು ಬೀಜಗಳಿಂದ ಸುಲಭವಾಗಿ ವೃದ್ಧಿಮಾಡಬಹುದು. ಮೈದಾನ ಪ್ರದೇಶಗಳಲ್ಲಿ ಇದನ್ನು ಚೆನ್ನಾಗಿ ಬೆಳೆಸಬಹುದು. ಇದರ ಬೇಸಾಯಕ್ಕೆ ಚೌಗಿಲ್ಲದ ಮತ್ತು ಫಲವತ್ತಾದ ಮಣ್ಣು ಅಗತ್ಯ. ಬೀಜ ಬಿತ್ತುವುದಕ್ಕೆ ಮೊದಲು ಮಣ್ಣಿಗೆ ಸುಣ್ಣ ಮತ್ತು ಇಟ್ಟಿಗೆ ಪುಡಿ ಹಾಕುವುದರಿಂದ ಈ ಸಸ್ಯ ಹೊಳಪಾದ ಮತ್ತು ಆಕರ್ಷಕವಾದ ಹೂಗಳನ್ನು ಬಿಡುತ್ತದೆ. (ಎನ್.ಆರ್.ಆರ್.)

**ಕೋಮ ಬೆರಿನೈಸೀಸ್ :** ಖಗೋಳದಲ್ಲಿಯ 88 ನಕ್ಷತ್ರಪುಂಜಗಳ ಪೈಕಿ ಒಂದು (ಕೃಷ್ಣವೇಣಿ). ಇದರ ವ್ಯಾಪ್ತಿ ವಿಷುವದಂಶ 11 ಗಂ.55 ಮಿ.–13 ಗಂ. 35 ಮಿ. ಘಂಟಾವೃತ್ತಾಂಶ 14°-34° ಉ. ಬ್ರಹ್ಮಾಂಡದ ಉತ್ತರ ಧ್ರುವವನ್ನು (ನಾರ್ತ್ ಗ್ಯಾಲಾಕ್ಟಿಕ್ ಪೋಲ್) ಇದು ಒಳಗೊಂಡಿದೆ. (**ನೋಡಿ : ಬ್ರಹ್ಮಾಂಡ**) ಈ ಪುಂಜದ ಹಲವಾರು ವಲಯದಲ್ಲಿ ಬ್ರಹ್ಮಾಂಡಾತೀತ ನಿಹಾರಿಕೆಗಳನ್ನು ನೋಡಬಹುದು. ಇವೇ ಗೆಲಾಕ್ಸಿಗಳು. (**ನೋಡಿ : ನೆಬ್ಯುಲಗಳು; ಬ್ರಹ್ಮಾಂಡಾತೀತ ನೆಬ್ಯುಲಗಳು**) ಕೋಮ ಬೆರಿನೈಸೀಸ್ ಪುಂಜ ಕನ್ಯಾರಾಶಿ, ಸಿಂಹರಾಶಿ, ಸಪ್ತರ್ಷಿಮಂಡಲ ಮತ್ತು ಸಹದೇವ (ಬೂಟ್‌ಯೀಸ್) ಪುಂಜಗಳು ಆವೃತಿಸುವ ವಲಯದಲ್ಲಿದೆ. ಇದನ್ನು ಬರಿಗಣ್ಣಿನಿಂದ ಗುರುತಿಸಬಹುದು. ಕಾಳವೈಭವ(ಕೆನಿಸ್ ವೆನಾಟಿಸಿ) ಇದರ ಸಮೀಪವಿರುವ ಇನ್ನೊಂದು ನಕ್ಷತ್ರಪುಂಜ. ಗ್ರೀಕ್ ಪುರಾಣದ ಪ್ರಕಾರ ಮಹಾರಾಣಿಯೊಬ್ಬಳ ತಲೆಗೂದಲು ಈ ಪುಂಜ ಎಂದೇ ಕೃಷ್ಣವೇಣಿ ಎಂಬ ಹೆಸರು. *

**ಕೋಯಿತ್ತಂಬುರಾನ್, ಕೇರಳವರ್ಮ ವಲಿಯ :** 1845–1915. ಆಧುನಿಕ ಕಾಲದಲ್ಲಿ ಮಲಯಾಳಿ ಸಾಹಿತ್ಯದ ಅಭಿವೃದ್ಧಿಗೆ ಕಾರಣರಾದ ಮಹನೀಯರು. ಇಂಗ್ಲಿಷ್ ಭಾಷೆಯ ಪ್ರಭಾವ ಕೇರಳದ ಜನಜೀವನವನ್ನು ವಿವಿಧ ಶಾಖೆಗಳಲ್ಲಿ ಸಾರವತ್ತಾಗಿ ಸ್ಪರ್ಶಿಸತೊಡಗಿದ ಕಾಲದಲ್ಲಿ, ದಿನದಿಂದ ದಿನಕ್ಕೆ ಹೆಚ್ಚಿಕೊಳ್ಳುತ್ತಿದ್ದ ಪಾಠಶಾಲೆಗಳಲ್ಲಿದ್ದ ಇಂಗ್ಲಿಷಿನೊಂದಿಗೆ ಮಲಯಾಳಂ ಭಾಷೆಯನ್ನೂ ಕಲಿಸಬೇಕಾದ ತುರ್ತು ಅಗತ್ಯ ಉಂಟಾದುದರ ಪ್ರಯುಕ್ತ ಮಲಯಾಳಿ ಪಠ್ಯಪುಸ್ತಕಗಳು ಬೇಕೇ ಬೇಕಾದವು. ಮಲಬಾರ್ ವಿಭಾಗದಲ್ಲಿ ಗುಂಡರ್ಟ್, ತಿರುವಾಂಕೂರಿನಲ್ಲಿ ಸಿ.ಎಂ.ಎಸ್.ಪಾದ್ರಿ ಈ ಕೊರತೆಯನ್ನು ಪೂರೈಸಲು ಶ್ರಮಿಸತೊಡಗಿದರು. ಇಷ್ಟರಿಂದಲೇ ಸಾಕಷ್ಟು ಪುಸ್ತಕಗಳು ಲಭ್ಯವಾಗಲಿಲ್ಲ. ಹೀಗಾಗಿ ಇದರ ಪರಿಹಾರಕ್ಕೋಸ್ಕರ ತಿರುವಾಂಕೂರಿನ ಆಯಿಲ್ಯಂ ತಿರುನಾಳ್ ಮಹಾರಾಜರು (1861–75) ಮತ್ತು ದಿವಾನ್ ಮಾಧವರಾಯರು ಒಟ್ಟುಗೂಡಿ ಒಂದು ಪಠ್ಯಪುಸ್ತಕ ಸಮಿತಿಯನ್ನು ರಚಿಸಿದರು. ಈ ಸಮಿತಿ ಕೇರಳವರ್ಮ ವಲಿಯ ಕೋಯಿತ್ತಂಬುರಾನರ ಅಧ್ಯಕ್ಷತೆಯ ತನ್ನ ಕಾರ್ಯಕಲಾಪವನ್ನು ಪ್ರಾರಂಭಿಸಿತು (1869). ಆಧುನಿಕ ರೀತಿಯ ಮಲಯಾಳ ಗದ್ಯ ರಚನೆಯ ತಳಹದಿಗೆ ಈ ಸಮಿತಿಯ ಕೆಲಸವೇ ಮೂಲಾಕಾರಣವಾಗಿ ಪರಿಣಮಿಸಿತೆನ್ನುವುದು ಗಮನಾರ್ಹವಾದ ಅಂಶ.

ಮಲಯಾಳದಲ್ಲಿ ಮೊದಲನೆಯ, ಎರಡನೆಯ ಮತ್ತು ಮೂರನೆಯ ಪುಸ್ತಕಗಳನ್ನೂ ವಿಜ್ಞಾನಮಂಜರಿ, ತಿರುವಾಂಕೂರು ಚರಿತ್ರೆ, ಭಾರತದ ಚರಿತ್ರೆ, ಭೂವಿವರಣೆ, ಧನತತ್ತ್ವ ನಿರೂಪಣೆ ಮೊದಲಾದ ಗ್ರಂಥಗಳನ್ನೂ ಕೋಯಿತ್ತಂಬುರಾನ್ ಪ್ರಕಟಿಸಿದರು. ಇವುಗಳ ರಚನೆಗೆ ಇಂಗ್ಲಿಷ್ ಗ್ರಂಥಕರ್ತರ ಮಾದರಿಗಳನ್ನೇ ಇವರು ಅನುಸರಿಸಿದ್ದರು. 1880ರಲ್ಲಿ ವಿಶಾಖಂ ತಿರುನಾಳರ ನಿರ್ದೇಶನದಂತೆ ಕೋಯಿತ್ತಂಬುರಾನರು ಅಕ್ಬರ್ ಎಂಬ ಡಚ್ ಕಾದಂಬರಿಯನ್ನು ಇಂಗ್ಲಿಷಿನಿಂದ ಮಲಯಾಳಕ್ಕೆ ಅನುವಾದ ಮಾಡಿದರು. ಇದೆಲ್ಲದರ ಪರಿಣಾಮವಾಗಿ ಮಲಯಾಳ ಗದ್ಯಸಾಹಿತ್ಯದಲ್ಲಿ ಆಧುನಿಕ ಆವಿಷ್ಕಾರಗಳು ತ್ವರಿತವಾಗಿ ಬರತೊಡಗಿದವು.

1882ರಲ್ಲಿ ಕೋಯಿತ್ತಂಬುರಾನ್ ಕಾಳಿದಾಸನ ಅಭಿಜ್ಞಾನ ಶಾಕುಂತಲವನ್ನು ಮಣಿಪ್ರವಾಳ ಶಾಕುಂತಳಂ ಎಂಬ ಹೆಸರಿನಲ್ಲಿ ಮಲಯಾಳಂಗೆ ತರ್ಜುಮೆ ಮಾಡಿದರು. ಈ ಅನುವಾದ ಶೈಲಿಯನ್ನು ಮುಂದಿನ ಪೀಳಿಗೆಯವರನೇಕರು ಅನುಕರಿಸಿದ್ದಾರೆ. ದ್ವಿತೀಯಾಕ್ಷರ ಪ್ರಾಸದ ವಿಷಯದಲ್ಲಿ ವಾದವಿವಾದಗಳು ಜರುಗುತ್ತಿದ್ದ ಸಂದರ್ಭವೊಂದರಲ್ಲಿ, ಕೋಯಿತ್ತಂಬುರಾನ್ ಬರೆದ ಮಯೂರ ಸಂದೇಶ ಹೊರಬಂತು. ದ್ವಿತೀಯಾಕ್ಷರ ಪ್ರಾಸದ ಸೌಷ್ಠವಕ್ಕೂ ಪ್ರಭಾವಕ್ಕೂ ಈ ಗ್ರಂಥ ಅತ್ಯುತ್ತಮ ಉದಾಹರಣೆಯಾಗಿದೆ. ಕೋಯಿತ್ತಂಬುರಾನರ ಕಾವ್ಯಶಕ್ತಿ ತನ್ನ ಪರಾಕಾಷ್ಠೆಯನ್ನು ಮುಟ್ಟಿರುವುದು ಮಯೂರಸಂದೇಶದಲ್ಲಿ. ಆದರೆ ಸ್ವತಂತ್ರ ಕವಿತೆಯೆಂಬ ಅರ್ಥದಲ್ಲಿ, ಕಾವ್ಯದ ಭಾವುಕತೆಯ ದೃಷ್ಟಿಯಲ್ಲಿ, ಉತ್ಕೃಷ್ಟತೆಯ ದೃಷ್ಟಿಯಲ್ಲಿ ಮಯೂರಸಂದೇಶ ಶ್ರೇಷ್ಠಕೃತಿಯೆಂದು ಹೇಳುವಂತಿಲ್ಲ. ಶಬ್ದಾಲಂಕಾರ, ಅರ್ಥಾಲಂಕಾರಗಳ ದೃಷ್ಟಿಯಿಂದ ನೋಡಿದಾಗ, ವಾಚಕರನ್ನು ಬೆರಗುಗೊಳಿಸುವ ಶಕ್ತಿ ಅದಕ್ಕಿದೆಯೆಂದು ಹೇಳಬೇಕು. ಯಾವುದೋ

ಕಾರಣದಿಂದ ರಾಜನ ಶಿಕ್ಷೆಗೆ ಗುರಿಯಾಗಿ ಕಾರಾಗೃಹವಾಸ ಅನುಭವಿಸಬೇಕಾಗಿ ಬಂದ ಕೋಯಿತ್ತಂಬುರಾನ್ ಹರಿಪ್ಪಾಡ್ ಎಂಬಲ್ಲಿಂದ ಒಂದು ನವಿಲಿನ ಮೂಲಕ ತಿರುವನಂತಪುರದಲ್ಲಿರುವ ತಮ್ಮ ಪ್ರೇಯಸಿಗೆ ಕಳುಹಿಸಿರುವ ಸಂದೇಶವೇ ಆ ಕಾವ್ಯದ ವಸ್ತು. ಕಾಳಿದಾಸನ ಮೇಘಸಂದೇಶಕ್ಕಿಂತ ಉತ್ತಮವೆಂದೇನೂ ಇದರ ಬಗೆಗೆ ಹೇಳುವಂತಿಲ್ಲ. ಆದರೂ ಈ ಕೃತಿ ಮುಂದೆ ಬರಲಿದ್ದ ಮಲಯಾಳ ಕಾವ್ಯಶೈಲಿಯ ಮೇಲೆ ತನ್ನದೇ ಆದ ಪ್ರಭಾವ ಮುದ್ರೆಯೊತ್ತಿತೆಂಬ ಅಂಶವನ್ನು ಕಡೆಗಣಿಸುವಂತಿಲ್ಲ.

ಕೋಯಿತ್ತಂಬುರಾನರ ಇತರ ಪ್ರಮುಖ ಕೃತಿಗಳೆಂದರೆ–ಅನ್ಯಾಪದೇಶ ಶತಕಂ ಮತ್ತು ಅಮರುಕ ಶತಕಂ. (ಕೆ. ಕೆ. ಎಸ್.)

**ಕೋಯ್ಲರ್, ವುಲ್ಫ್‌ಗ್ಯಾಂಗ್ :** 1887–. ಪ್ರಸಿದ್ಧ ಜರ್ಮನ್ ಮನೋವಿಜ್ಞಾನಿ. ಕಾರ್ಲ್ ಸ್ಟುಂಫ಼ನ ಬಳಿ ಉಚ್ಚಶಿಕ್ಷಣಕ್ಕೆಂದು ಸೇರುವ ಮುನ್ನ ಭೌತವಿಜ್ಞಾನದ ವಿದ್ಯಾರ್ಥಿಯಾಗಿದ್ದ ಕೋಯ್ಲರ್ ಸ್ಟುಂಫ಼ನ ಅನಂತರ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ನಿಯಮಿತನಾದ (1920). ಈ ನಡುವೆ 1913ರಿಂದ 1917ರ ತನಕ ಕೆಸರಿ ದ್ವೀಪದಲ್ಲಿ ಬಂಧಿಸಲ್ಪಟ್ಟಿದ್ದಾಗ ನರವಾನರಗಳ ಮೇಲೆ ಅಧ್ಯಯನ ನಡೆಸಿ, ಗ್ರಂಥವೊಂದನ್ನು ರಚಿಸಿದ. ಸಮಷ್ಟಿ ಮನೋವಿಜ್ಞಾನ (ಗೆಸ್ಟಾಲ್ಟ್ ಸೈಕಾಲಜಿ) ಪ್ರೌಢಾವಸ್ಥೆಯನ್ನು ಮುಟ್ಟಲು ಈತ 1920ರಲ್ಲಿ ಬರೆದ ಜರ್ಮನ್ ಗ್ರಂಥ ತುಂಬ ನೆರವಾಯಿತು. ಭೌತವಿಜ್ಞಾನದ ಸಂವಿಧಾನಗಳನ್ನೂ ದೃಷ್ಟಿಕೋನವನ್ನೂ ಮಾನಸವಿವರಗಳ ಕಡೆ ಹರಿಸಿ ತನ್ನ ಸಿದ್ಧಾಂತವನ್ನು ಈತ ದೃಢಪಡಿಸಿದ್ದಾನೆ. ಕಾಫ್ಕಾನ ಸಹೋದ್ಯೋಗಿಯಾಗಿ ಹಲವಾರು ವರ್ಷಗಳು ಕೆಲಸಮಾಡಿ. ಆತ ಆರಂಭಿಸಿದ್ದ 'ಸೈಕಾಲಜಿಷ್ ಫಾರ್‌ಸಂಗ್' ಪತ್ರಿಕೆಗೆ ಈತ ಸಂಪಾದಕನಾಗಿದ್ದ. ಇಂಗ್ಲೆಂಡ್, ಅಮೆರಿಕ ದೇಶಗಳಲ್ಲಿ ಸಮಷ್ಟಿ ಸಿದ್ಧಾಂತ ಬೇರೂರಲು ಕೋಯ್ಲರ್ ಮಾಡಿದ ಕೃಷಿಯೇ ಮುಖ್ಯಕಾರಣ. ಸ್ಥಾಯಿ ಭೌತಿಕ ಸಮಷ್ಟಿಗಳ (ಸ್ಟ್ಯಾಟಿಕ್ ಫಿಸಿಕಲ್ ಗೆಸ್ಟಾಲ್ಟೆನ್) ಮೇಲೆ ಈತ 1920ರಲ್ಲಿ ಬರೆದ ಗ್ರಂಥ ಪ್ರಸಿದ್ಧವಾದುದು.

ಈತ ನರವಾನರಗಳ ಮೇಲೆ ನಡೆಸಿದ ಪ್ರಯೋಗಗಳು ಸಮಷ್ಟಿ ಮನೋವಿಜ್ಞಾನದ ಬೆಳವಣಿಗೆಗೆ ಮಹತ್ತರ ಕಾಣಿಕೆಯನ್ನು ನೀಡಿದುವು. ಆ ಪ್ರಯೋಗಗಳ ವಿವರಗಳು, 1925 ರಲ್ಲಿ ಪ್ರಕಟವಾಗಿರುವ 'ದಿ ಮೆಂಟಾಲಿಟಿ ಆಫ್ ಏಪ್ಸ್' ಎಂಬ ಗ್ರಂಥದಲ್ಲಿವೆ. ಈತನ ಸಂಶೋಧನೆಯ ಮುಖ್ಯ ಫಲವೆಂದರೆ ಕಲಿಕೆ ಯಾವಾಗಲೂ ಪ್ರಯತ್ನ ಮತ್ತು ತಪ್ಪು ತಿದ್ದುಗೊಳ್ಳುವಿಕೆ (ಟ್ರಯಲ್ ಮತ್ತು ಎರರ್) ಕ್ರಮದಲ್ಲೇ ಆಗಬೇಕಿಲ್ಲ ಎಂಬುದು. ಆತ ಅಧ್ಯಯನ ಮಾಡಿದ ಹೆಚ್ಚು ಬುದ್ಧಿಶಕ್ತಿಯುಳ್ಳ ಸುಲ್ತಾನ್ ಎಂಬ ನರವಾನರ ಸಮಸ್ಯೆಯನ್ನು ಬಿಡಿಸುವುದರಲ್ಲಿ ಸೂಕ್ಷ್ಮ ಪರಿಜ್ಞಾನ ಅಥವಾ ಒಳನೋಟವನ್ನೂ ಉಪಯೋಗಿಸುವುದನ್ನು ಗಮನಿಸಿದ. ಇದರಿಂದ ವಿವೇಚನಾಕಲಿಕೆ (ಡಿಸ್ಕ್ರಿಮಿನೇಷನ್ ಲರ್ನಿಂಗ್) ಮತ್ತು ಸಮಸ್ಯಾವಿಶ್ಲೇಷಣೆಯಲ್ಲಿ (ಪ್ರಾಬ್ಲಮ್ ಸಾಲ್ವಿಂಗ್) ಸೂಕ್ಷ್ಮಪರಿಜ್ಞಾನದ ಪಾತ್ರವನ್ನು ಸಮರ್ಥಿಸಲು ಸಾಧ್ಯವಾಯಿತು. ಕೋಯ್ಲರ್‌ನ ಸಂಶೋಧನೆ ಒಳನೋಟ ಕಲಿಕೆ (ಇನ್‌ಸೈಟ್‌ಫುಲ್ ಲರ್ನಿಂಗ್) ಮತ್ತು ಪ್ರಯತ್ನ ಮತ್ತು ತಪ್ಪುಕಲಿಕೆ ಎಂಬ ಎರಡು ವಿಧವಾದ ತಂತ್ರಗಳಿವೆ ಎಂಬುದನ್ನು ತೋರಿಸಿಕೊಟ್ಟಿತು. (ಎಸ್.ಕೆ.ಆರ್.; ಎನ್.ಕೆ.ಕೆ.)

**ಕೋರಂ :** ಒಂದು ಸಭೆ ಕಾನೂನು ಸಮ್ಮತವಾಗಿ ಕಾರ್ಯನಿರ್ವಹಿಸುವ ಮುನ್ನ ಹಾಜರಿರಬೇಕಾದ ಕನಿಷ್ಠ ಸದಸ್ಯರ ಸಂಖ್ಯೆ. ಕೋರಂ ಎಷ್ಟೆಂಬುದನ್ನು ಅಥವಾ ಒಟ್ಟು ಸದಸ್ಯ ಸಂಖ್ಯೆಯ ಯಾವ ಪ್ರಮಾಣ ಇರತಕ್ಕದ್ದೆಂಬುದನ್ನು ಆ ಸಂಘದ ರಚನೆಗೆ ಆಧಾರವಾದ ಕಾನೂನು, ಪ್ರಣಾಳಿಕೆ, ಸಂವಿಧಾನ, ನಿಬಂಧನೆಗಳು ಅಥವಾ ವಿಧಿಗಳಲ್ಲಿ ನಿರ್ಧರಿಸಲಾಗಿರುತ್ತದೆ. ಹಾಗಿಲ್ಲದ ಪಕ್ಷದಲ್ಲಿ ಬಹುಮತವೇ ಕೋರಂ ಎಂಬುದಾಗಿ ಪರಿಗಣಿಸಬೇಕು. ಕೋರಂ ಎಣಿಸುವಾಗ ಸಭೆಯಲ್ಲಿ ಹಾಜರಿರುವ ಸದಸ್ಯರನ್ನೆಲ್ಲ ಪರಿಗಣಿಸಬೇಕೇ ವಿನಾ, ಮತ ನೀಡುವವರನ್ನು ಮಾತ್ರವೇ ಅಲ್ಲ. ಸಭೆಯಲ್ಲಿ ಕೋರಂ ಇದೆಯೇ ಇಲ್ಲವೇ ಎಂಬುದನ್ನು ತೀರ್ಮಾನಿಸುವವನು ಸಭಾಪತಿ. ಕಣ್ಣಿಗೆ ಕಾಣುವ ಎಲ್ಲ ಸದಸ್ಯರನ್ನೂ–ಅವರು ಮತ ಕೊಡಲಿ ಬಿಡಲಿ–ಅವನು ಎಣಿಸುತ್ತಾನೆ. ಎಣಿಕೆಗೆ ಬಂದವರ ಹೆಸರುಗಳನ್ನು ಅವನು ಪ್ರಕಟಿಸಬೇಕಾದ್ದಿಲ್ಲ.

ಸಭೆಯಲ್ಲಿ ನಡೆಯುವ ಎಲ್ಲ ಕಲಾಪಗಳಿಗೂ ಕೋರಂ ಇರಬೇಕಾದ್ದು ಅವಶ್ಯ. ಕೋರಂ ಇಲ್ಲವಾದಾಗ ಸಭಾಕಲಾಪವನ್ನು ಅಷ್ಟಕ್ಕೇ ನಿಲ್ಲಿಸಲಾಗುತ್ತದೆ. ಕೋರಂ ಇಲ್ಲದಿದ್ದರೂ ಬೇಡವೆಂದು ಸರ್ವಾನುಮತದ ತೀರ್ಮಾನ ಮಾಡಿದರೂ ಕಲಾಪ ಮುಂದುವರಿಯತಕ್ಕದ್ದಲ್ಲ. ಒಂದು ವಿಷಯದ ಚರ್ಚೆ ನಡೆಯುತ್ತಿರುವಾಗಲೂ ಕೋರಂ ಇರುವುದು ಅವಶ್ಯ. ಒಬ್ಬ ಸದಸ್ಯ ಮಾತಾಡುತ್ತಿದ್ದರೂ ನಡುವೆ ಎದ್ದು ಕೋರಂ ಇಲ್ಲವೆಂದು ಪ್ರಶ್ನೆ ಎತ್ತಬಹುದು. ಅದನ್ನು ಸಭಾಪತಿ ಗಮನಿಸಲೇ ಬೇಕು. ಯಾವ ನಡೆವಳಿಕೆಯ ನಡುವೆ ಕೋರಂ ಇಲ್ಲವೆಂಬ ಪ್ರಶ್ನೆ ಎತ್ತಲಾಯಿತೋ ಆ ನಡೆವಳಿಕೆ ಕೋರಂ ಇಲ್ಲವಾದರೆ ಅನೂರ್ಜಿತವಾಗುತ್ತದೆ. ಆ ಸಮಯದಲ್ಲಿ ಯಾವಯಾವ ವ್ಯವಹಾರ ಯಾವಯಾವ ಸ್ಥಿತಿಯಲ್ಲಿತ್ತೋ ಅದದೇ ಸ್ಥಿತಿಯಲ್ಲಿ ಉಳಿಯುತ್ತದೆ. ಆದರೆ ನಡೆವಳಿಕೆಯೆಲ್ಲ ಮುಗಿದುಹೋದ ಮೇಲೆ ಕೋರಂ ಇರಲಿಲ್ಲವೆಂದು ಕ್ರಿಯಾಲೋಪವನ್ನೆತ್ತಲಾಗುವುದಿಲ್ಲ.

ಕೋರಂ ಇಲ್ಲದಾಗ ಸಭೆಯನ್ನು ತಳ್ಳಿಡಬೇಕು; ಇಲ್ಲವೇ ಕೋರಂ ಪಡೆಯಬೇಕು. ಕೋರಂ ಇಲ್ಲವೆಂಬ ಕ್ರಿಯಾಲೋಪವನ್ನೆತ್ತಲು ಕೋರಂ ಬೇಕಿಲ್ಲ; ಸಭೆಯನ್ನು ತಳ್ಳಿಡುವುದಕ್ಕೂ ಬೇಕಿಲ್ಲ. ಸಭೆಯಲ್ಲಿ ಕೋರಂ ಇದೆಯೆಂಬುದು ಸ್ವತಸ್ಸಿದ್ಧವಾಗಿದ್ದಾಗ ಕೋರಂ ಇಲ್ಲವೆಂಬ ಪ್ರಶ್ನೆಯನ್ನು ಸಭಾಪತಿ ಪುರಸ್ಕರಿಸದೆ ಹೋಗಬಹುದು. ಕೋರಂ ಇಲ್ಲವೆಂಬ ಕ್ರಿಯಾಲೋಪವನ್ನೆತ್ತಿದ ಮೇಲೆ ಅದನ್ನು ಪರಿಶೀಲಿಸಿ ಪ್ರಕಟಪಡಿಸುವ ಮುನ್ನ ಯಾವಾಗ ಬೇಕಾದರೂ ಆ ಕ್ರಿಯಾಲೋಪವನ್ನು ಹಿಂತೆಗೆದುಕೊಳ್ಳಬಹುದು. ಆದರೆ ಆ ಪ್ರಶ್ನೆಯನ್ನು ನಿರ್ಣಯಿಸಿ ಪ್ರಕಟಿಸಿದ ಮೇಲೆ ಹಾಗೆ ಮಾಡುವುದು ಸಾಧ್ಯವಿಲ್ಲ. ಕೋರಂ ಇಲ್ಲದಿದ್ದರೂ ಇದ್ದು ಮತದಾನ ಮಾಡಿದೆಯೆಂದು ತಪ್ಪಾಗಿ ಪ್ರಕಟಿಸಿದ್ದು, ಸಭೆಯ ಹಾಜರಿ ಪಟ್ಟಿಯ ಪ್ರಕಾರ ಕೋರಂ ಇಲ್ಲವೆಂಬುದು ವ್ಯಕ್ತಪಟ್ಟಾಗ ಅನಂತರದ ನಡೆವಳಿಕೆಗಳು ಶೂನ್ಯವೆಂದು ಸಭಾಪತಿ ಘೋಷಿಸಬೇಕು. (ಬಿ.ಎಸ್.ಎಚ್.)

**ಕೋರಮಂಗಲ :** ಹಾಸನ ಜಿಲ್ಲೆ ಹಾಸನ ತಾಲ್ಲೂಕಿನಲ್ಲಿ ಹಾಸನದಿಂದ ಈಶಾನ್ಯಕ್ಕೆ 11ಕಿಮೀ ದೂರದಲ್ಲಿರುವ ಹಳ್ಳಿ. ಇತಿಹಾಸಪ್ರಸಿದ್ಧ ಸ್ಥಳ. ಇಲ್ಲಿ ಮೂರು ಹೊಯ್ಸಳ ದೇವಾಲಯಗಳಿವೆ. ಇಲ್ಲಿರುವ ಬೂಚೇಶ್ವರ ದೇವಾಲಯ ಹೊಯ್ಸಳ ವಾಸ್ತುಶೈಲಿಯ ಉತ್ತಮ ಕೊಡುಗೆಯಾಗಿದೆ. ಈ ಗುಡಿಯನ್ನು ಬೂಚಿರಾಜ ಎಂಬ ಅಧಿಕಾರಿ 2ನೆಯ ಬಲ್ಲಾಳನ ಸಿಂಹಾಸನಾರೋಹಣದ ನೆನಪಿಗಾಗಿ 1173ರಲ್ಲಿ ಕಟ್ಟಿಸಿದ್ದ. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಅದರ ಮುಂದೆ 18 ಕಂಬಗಳಿಂದೆತ್ತಿದ್ದ ಮಹಾಮಂಟಪ ಇವೆ. ಪೂರ್ವಭಾಗದಲ್ಲಿ ಗರ್ಭಗುಡಿಯ ಲಿಂಗದ ನೇರ ಎದುರಾಗಿ ಸೂರ್ಯದೇವರ ಗುಡಿ ಇದೆ. ಪ್ರವೇಶ ದ್ವಾರಗಳು ಮಹಾಮಂಟಪದ ಇಕ್ಕೆಲಗಳಲ್ಲಿವೆ. ಇಡೀ ಘಟಕ ಎತ್ತರದ ಜಾಗದಲ್ಲಿದೆ. ಇದು ಪ್ರಾಯಶಃ ಜಗತಿಯ ಮೇಲಿರಬೇಕು.

ಬೂಚೇಶ್ವರ ದೇವಾಲಯದ ಭಿತ್ತಿಶಿಲ್ಪಗಳು : ಹೊರಮೈಯಲ್ಲಿ ಹೊಯ್ಸಳ ಶೈಲಿಗೆ ಸಾಮಾನ್ಯವಾದ ಶಿಲ್ಪಿತ ಅಧಿಷ್ಠಾನಪಟ್ಟಿಕೆಗಳು, ಭಿತ್ತಿಯ ಮೇಲೆ ದೇವಶಿಲ್ಪಗಳು ಇತ್ಯಾದಿ ಇವೆ. ಹೊರಭಾಗದಲ್ಲಿ ಹಾಗೂ ಶಿಖರದಲ್ಲಿ ಶಿಲ್ಪಗಳಿವೆ. ಶಿಖರದ ಪೂರ್ವಭಾಗದಲ್ಲಿ ಬಿಡಿಸಿರುವ ಇಂದ್ರ ಮತ್ತು ಭಿತ್ತಿಯ ಮೇಲಿನ ಅನೇಕ ಶಿಲ್ಪಗಳು ಸೊಬಗಿನವು. ತಿರುಗಣೆಯಲ್ಲಿ ಮಾಡಿದ ದುಂಡುಕಂಬಗಳು, ದ್ವಾರಬಂಧ ಮತ್ತು ಭುವನೇಶ್ವರಿ ಸುಂದರ ರಚನೆಗಳು. ಗರ್ಭಗುಡಿಯ ನೇರ ಎದುರಿಗೆ ಸೂರ್ಯಗುಡಿ ಇದೆ. ಮಹಾಮಂಟಪ ತೆರೆದಿದ್ದು ಸುತ್ತಲೂ ಕಕ್ಷಾಸನ ಇರುವುದು, ಪಾರ್ಶ್ವದಲ್ಲಿ ದ್ವಾರಗಳಿರುವುದೂ ಈ ದೇವಾಲಯದ ವೈಶಿಷ್ಟ್ಯ. ಈ ಗುಡಿಯ ಈಶಾನ್ಯದಲ್ಲಿ ಇದೇ ಕಾಲದ ಭೈರವನ ಗುಡಿ ಇದೆ. ನಾಗೇಶ್ವರ, ಗೋವಿಂದೇಶ್ವರ ದೇವಾಲಯಗಳು ಬಹು ಶಿಥಿಲವಾಗಿವೆ. ಇವು ಬೂಚೇಶ್ವರ ಗುಡಿಗಿಂತ ಸ್ವಲ್ಪ ಹಳೆಯವು. ಗರ್ಭಗೃಹ, ಸುಕನಾಸಿ, ನವರಂಗಗಳಿರುವ ಈ ದೇವಾಲಯಗಳಲ್ಲಿ ಸುಕನಾಸಿ ತೆರೆದಂತಿರುವುದು ವಿಶೇಷ. ಇತರ ಹೊಯ್ಸಳ ಶೈಲಿಯ ಅಂಶಗಳೆಲ್ಲ ಇವುಗಳಲ್ಲಿ ಇವೆ. (ಕೆ.ಎಸ್.ಎಸ್.)

**ಕೋರಿ, ಕಾರ್ಲ್ ಫರ್ಡಿನಾಂಡ್ :** 1896.– ಚೆಕ್–ಅಮೆರಿಕನ್ ಜೀವರಸಾಯನ ವಿಜ್ಞಾನಿ. ಜನನ 1896ರ ಡಿಸೆಂಬರ್ 5 ರಂದು, ಪ್ರಾಗ್‌ನಲ್ಲಿ. 1920ರಲ್ಲಿ ಜರ್ಮನ್ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಪದವಿಯನ್ನು ಪಡೆದು ವಿಜ್ಞಾನ ವಿಷಯದಲ್ಲಿ ಹೆಚ್ಚಿನ ತರಬೇತಿಯನ್ನು ಯುರೋಪು ದೇಶದಲ್ಲಿ ಪಡೆದುಕೊಂಡ. ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ವಲಸೆ ಹೋಗಿ 1928ರಲ್ಲಿ ಆ ರಾಷ್ಟ್ರದ ಪೌರನಾದ. ಹಾನಿಕಾರಕ ರೋಗಗಳ ಬಗ್ಗೆ ನ್ಯೂಯಾರ್ಕಿನ ಬಫೆಲೋದಲ್ಲಿ ಅಧ್ಯಯನ ನಡೆಸುವ ಶಾಲೆಯಲ್ಲಿ ಜೀವರಸಾಯನವಿಜ್ಞಾನದ ಪ್ರಾಧ್ಯಾಪಕನಾಗಿ 9 ವರ್ಷ ಸೇವೆ ಸಲ್ಲಿಸಿದ. 1931ರಲ್ಲಿ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ವೈದ್ಯವಿದ್ಯಾಲಯದ ಸೇಂಟ್ ಲೂಯಿಸ್‌ನಲ್ಲಿ ಔಷಧವಿಜ್ಞಾನ ಮತ್ತು ಜೀವರಸಾಯನವಿಜ್ಞಾನದ ಪ್ರಾಧ್ಯಾಪಕನಾಗಿಯೂ 1947ರಲ್ಲಿ ಅದೇ ಸಂಸ್ಥೆಯ ಜೀವರಸಾಯನವಿಜ್ಞಾನ ವಿಭಾಗಕ್ಕೆ ಅಧ್ಯಕ್ಷನಾಗಿಯೂ ನೇಮಿಸಲ್ಪಟ್ಟ.. ಜೀವರಸಾಯನವಿಜ್ಞಾನ ಮತ್ತು ವೈದ್ಯಕೀಯ ವಿಭಾಗದಲ್ಲಿ ಈತನೂ ಇವನ ಪತ್ನಿ ಗರ್ಟಿಕೋರಿಯೂ ನಡೆಸಿದ ಸಂಶೋಧನೆಗಳು ಅತ್ಯಂತ ಉಪಯುಕ್ತವಾದವು. (ಎಚ್.ಆರ್.ಡಿ.ಎಚ್.)

**ಕೋರಿ ದಂಪತಿಗಳು :** ಕಾರ್ಲ್ ಫರ್ಡಿನಾಂಡ್ ಕೋರಿ ಮತ್ತು ಆತನ ಪತ್ನಿ ಗರ್ಟಿ ತೆರೇಸ ರ್‍ಯಾಡ್ನಿಟ್ಸ್ ಕೋರಿ ಜೀವರಸಾಯನ ವಿಜ್ಞಾನ ಪರಿಣತರು. ಇವರಿಗೆ 1947ರಲ್ಲಿ ಶರೀರವಿಜ್ಞಾನ ಮತ್ತು ವೈದ್ಯವಿಜ್ಞಾನಗಳ ನೊಬೆಲ್ ಪಾರಿತೋಷಿಕ ದೊರೆಯಿತು. ಇವರಿಬ್ಬರೂ ಪ್ರಾಗ್ ನಗರದಲ್ಲಿ(ಈಗಿನ ಚೆಕೊಸ್ಲೊವಾಕಿಯ) 1896ರಲ್ಲಿ ಜನಿಸಿದರು. 1920ರಲ್ಲಿ ಅಲ್ಲಿಯ ಜರ್ಮನ್ ವಿಶ್ವವಿದ್ಯಾಲಯದ ಎಂ.ಡಿ. ಪದವಿ ಗಳಿಸಿದರು. ಕೆಲವು ವರ್ಷಗಳು ವಿಯೆನ್ನದ ವೈದ್ಯ ಮಂದಿರದಲ್ಲಿ ಕೆಲಸ ಮಾಡಿ ಅನಂತರ 1922ರಲ್ಲಿ ಅಮೆರಿಕೆಗೆ ಹೋಗಿ ನೆಲಸಿದರು. ಸೇಂಟ್ ಲೂಯಿಸ್ ಪಟ್ಟಣದ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ವೈದ್ಯಶಾಲೆಯಲ್ಲಿ 1931–67ರ ತನಕ ಕಾರ್ಲ್ ಕೋರಿ ಜೀವರಸಾಯನ ವಿಜ್ಞಾನ ಮತ್ತು ಔಷಧ ವಿಜ್ಞಾನದ ಪ್ರಾಧ್ಯಾಪಕನಾಗಿದ್ದ. ಗರ್ಟಿ ಕೋರಿ 1947ರಿಂದ ಅಲ್ಲಿಯೇ ಪ್ರೊಫೆಸರ್ ಆಗಿದ್ದು 1957ರಲ್ಲಿ ಗತಿಸಿದಳು. ಈ ದಂಪತಿಗಳು ಪ್ರಖ್ಯಾತರಾದದ್ದು ಶರ್ಕರಪಿಷ್ಟಗಳ ಚಯಾಪಚಯಕ್ರಿಯೆ ಮತ್ತು

ಹಾರ್ಮೋನುಗಳ ಪ್ರಭಾವ ಇವನ್ನು ಕುರಿತ ಕ್ಷೇತ್ರಗಳಲ್ಲಿ ನಡೆಸಿದ ಸಂಶೋಧನೆಗಳಿಂದ. ಪ್ರಾಣಿಗಳ ಶರೀರದಲ್ಲಿ ಗ್ಲೂಕೋಸ್ ಏನೇನು ಪರಿವರ್ತನೆ ಹೊಂದುತ್ತದೆಂದು ಅಧ್ಯಯನ ಮಾಡಿ ಮಾಂಸಖಂಡಗಳ ಗ್ಲೈಕೊಜೆನ್ ಹೇಗೆ ವಿಭಜನೆ ಹೊಂದುತ್ತದೆ ಎನ್ನುವುದನ್ನು ಕಂಡುಹಿಡಿದರು. ಈ ಕ್ರಿಯೆಯ ಮಧ್ಯವರ್ತಿ ಸಂಯುಕ್ತವಾದ ಗ್ಲೂಕೋಸ್–1–ಫಾಸ್ಫೇಟನ್ನು ಗ್ಲೈಕೊಜೆನ್ನಿನ ಫಾಸ್ಫಾರಿಲೈಸಿಸ್ ಕ್ರಿಯೆಯ ಮೂಲಕ ಪ್ರತ್ಯೇಕಿಸಿದರು (1930). ಈ ಸಂಯುಕ್ತಕ್ಕೆ ಕೋರಿ ಎಸ್ಟರ್ ಎಂದೇ ಹೆಸರು. ಮಾಂಸಖಂಡಗಳು ಕೆಲಸ ಮಾಡಿದಾಗ ಅವುಗಳ ಗ್ಲೈಕೊಜೆನ್ ಲ್ಯಾಕ್ಟಿಕ್ ಆಮ್ಲವಾಗುತ್ತದೆ. ಇದು ಆಮ್ಲಜನಕದ ಪ್ರಭಾವಕ್ಕೊಳಗಾಗಿ ಪಿತ್ತಜನಕಾಂಗದಲ್ಲಿ ಗ್ಲೈಕೊಜೆನ್ ರೂಪದಲ್ಲಿ ಸಂಗ್ರಹವಾಗುತ್ತದೆ. ಅಲ್ಲಿ ಗ್ಲೈಕೊಜೆನ್ ಗ್ಲೂಕೋಸ್ ರೂಪದಲ್ಲಿ ರಕ್ತವನ್ನು ಸೇರಿ ಅಲ್ಲಿಂದ ಮಾಂಸಖಂಡಗಳಲ್ಲಿ ಗ್ಲೈಕೊಜೆನ್ ಆಗಿ ಬದಲಾವಣೆಯಾಗಿ ಕೆಲಸ ಮಾಡುವಾಗ ತಿರುಗಿ ಲ್ಯಾಕ್ಟಿಕ್ ಆಮ್ಲವಾಗುತ್ತದೆ. ಈ ಚಕ್ರಕ್ಕೆ ಕೋರಿ ಚಕ್ರ ಎಂದು ಹೆಸರು. ಈ ಕ್ರಿಯೆಗಳಲ್ಲಿ ಭಾಗವಹಿಸುವ ಕೆಲವು ಎನ್‌ಜೈಮುಗಳನ್ನು ಕೋರಿಗಳು ಸ್ಫಟಿಕೀಕರಿಸಿ ಪ್ರತ್ಯೇಕಿಸಿದರು. ಶರ್ಕರಪಿಷ್ಟಗಳ ಚಯಾಪಚಯಕ್ರಿಯೆಗಳಲ್ಲಿ ಇನ್ಸುಲಿನ್ ಮತ್ತು ಎಪಿನೆಫ್ರಿನ್‌ಗಳ ಪಾತ್ರವನ್ನು ಅಧ್ಯಯನ ಮಾಡಿದರು. ಸೇಂಟ್ ಲೂಯಿಸ್ಸಿನ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ಅತ್ಯುತ್ತಮವಾದ ಜೀವರಸಾಯನವಿಜ್ಞಾನದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದ ಹಿರಿಮೆ ಕೋರಿ ದಂಪತಿಗಳದು. ಶರ್ಕರಪಿಷ್ಟ ಚಯಾಪಚಯಕ್ರಿಯೆಗಳ ಕ್ಷೇತ್ರದಲ್ಲಿರುವ ಪ್ರಮುಖ ಸಂಶೋಧಕರಲ್ಲಿ ಅನೇಕರು ಇವರ ವಿದ್ಯಾರ್ಥಿಗಳೋ ಸಂಗಡಿಗರೋ ಆಗಿದ್ದಾರೆ. (ಎಂ.ಆರ್.ಆರ್.)

**ಕೋರಿಯಾಪ್ಸಿಸ್ :** ಆಸ್ಟರೇಸೀ (ಕಂಪಾಸಿಟೇ) ಕುಟುಂಬಕ್ಕೆ ಸೇರಿದ ಒಂದು ಸುಂದರವಾದ ಅಲಂಕಾರ ಸಸ್ಯ. ಇದಕ್ಕೆ ಕ್ಯಾಲಿಯಾಪ್ಸಿಸ್ ಎಂಬ ಹೆಸರೂ ಇದೆ. ಏಕವಾರ್ಷಿಕ ಇಲ್ಲವೆ ಬಹುವಾರ್ಷಿಕ ಸಸ್ಯಜಾತಿಯಾದ ಇದರಲ್ಲಿ ಸು.50ಕ್ಕೂ ಹೆಚ್ಚು ಪ್ರಭೇದಗಳಿವೆ. ಎಲ್ಲವೂ 3'ಗಿಂತ ಹೆಚ್ಚು ಎತ್ತರಕ್ಕೆ ಬೆಳೆಯದ ಮೂಲಿಕೆ ಸಸ್ಯಗಳು. ಹಲವಾರು ಸಣ್ಣ ಹಾಗೂ ಉದ್ದನೆಯ ವಿಭಾಗಗಳಾಗಿ ಕತ್ತರಿಸಿದ ಅಂದವಾದ ಎಲೆಗಳೂ ಒಂಟಿಹೂಗಳಂತೆ ಕಾಣುವ ಚಂಡುಮಂಜರಿ ಮಾದರಿಯ ಹೂ

ಗೊಂಚಲುಗಳೂ ಕೋರಿಯಾಪ್ಸಿಸ್ ಗಿಡದ ವಿಶೇಷ ಲಕ್ಷಣಗಳು. ಹೂಗೊಂಚಲಿನ ಅಂಚಿನಲ್ಲಿ ಉದ್ದಕ್ಕೆ ಚಾಚಿರುವ ಹಲವಾರು ರೇ ಹೂಗಳೂ ಮಧ್ಯಭಾಗದಲ್ಲಿ ಸಣ್ಣಗಾತ್ರದ ಅನೇಕ ಡಿಸ್ಕ್ ಹೂಗಳೂ ಇವೆ. ರೇ ಹೂಗಳ ಬಣ್ಣ ಈ ಗಿಡದ ವಿವಿಧ ಪ್ರಭೇದಗಳಲ್ಲಿ ಹಳದಿ, ಕಿತ್ತಳೆ, ಕಡುಗೆಂಪು ಇತ್ಯಾದಿಯಾಗಿ ವೈವಿಧ್ಯಮಯವಾಗಿದ್ದು ಗಿಡಗಳ ಸೌಂದರ್ಯಕ್ಕೆ ಮುಖ್ಯ ಕಾರಣವೆನಿಸಿದೆ.

ಉದ್ಯಾನ ಪ್ರಾಮುಖ್ಯದ ದೃಷ್ಟಿಯಿಂದ ಹೆಚ್ಚು ಪ್ರಸಿದ್ಧವಾಗಿರುವ ಕೋರಿಯಾಪ್ಸಿಸ್ ಪ್ರಭೇದಗಳು ಇವು: 1 ಕೋ.ಡ್ರಮಾಂಡಿಯೈ. 8"–10" ಎತ್ತರಕ್ಕೆ ಬೆಳೆಯುವ ಕುಳ್ಳುಪ್ರಭೇದ; ಪುಷ್ಪಸಮೃದ್ಧಿಗೆ ಹೆಸರಾಗಿದೆ. ಹೂಗಳ ಬಣ್ಣ ಹಳದಿ. 2 ಕೋ.ಗ್ರಾಂಡಿಫ್ಲೋರ. 3' ಎತ್ತರಕ್ಕೆ ಬೆಳೆಯುತ್ತದೆ. ಹೂಗಳ ಬಣ್ಣ ಕಿತ್ತಳೆ ಮಿಶ್ರಿತ ಹಳದಿ. 3 ಕೋ. ಟಿಂಕ್ಟೋರಿಯ. 1'–3' ಎತ್ತರಕ್ಕೆ ಬೆಳೆಯುತ್ತದೆ; ಕಡುಗೆಂಪು ಬಣ್ಣದ ಹೂಗಳಿಂದಾಗಿ ಪ್ರಸಿದ್ಧವಾಗಿದೆ. 4 ಕೋ.ಕರೂನೇರಿಯ. ಉಳಿದೆಲ್ಲ ಬಗೆಗಳಿಗಿಂತ ತಡವಾಗಿ ಹೂ ಬಿಡುತ್ತದೆ.

ಕೋರಿಯಾಪ್ಸಿಸ್ ಗಿಡವನ್ನು ಮಡಿಗಳಲ್ಲೂ ಕುಂಡಗಳಲ್ಲೂ ಬೆಳೆಸಬಹುದು. ಇದರ ಬೇರುಗಳು ಹರಡಲು ಹೆಚ್ಚು ಸ್ಥಳ ಬೇಕಾಗುವುದರಿಂದ ಕುಂಡಗಳಿಗಿಂತ ನೇರವಾಗಿ ನೆಲದಲ್ಲಿ ಬೆಳೆಸುವುದೇ ಉತ್ತಮ. ಇದರಿಂದ ಗಿಡ ಚೆನ್ನಾಗಿ ಬೆಳೆಯುತ್ತದೆ. ವರ್ಷದ ಯಾವ ಕಾಲದಲ್ಲಾದರೂ ಇದನ್ನು ಬೆಳೆಸಬಹುದು. ಮೊದಲು ಒಟ್ಲು ಪಾತಿಗಳಲ್ಲಿ ಬೀಜ ಬಿತ್ತಿ ಸಸಿಗಳನ್ನು ಪಡೆದು ಸಸಿಗಳಲ್ಲಿ 6ನೆಯ ಎಲೆ ಹೊರಟಾಗ ಬೇರೆ ಮಡಿಗಳಿಗೆ ವರ್ಗಾಯಿಸಬೇಕು. ಒಂದು ಸಸಿಯಿಂದ ಇನ್ನೊಂದಕ್ಕೆ 1'–1 ½' ಅಂತರ ಇರಬೇಕು. ಕಾಲಕಾಲಕ್ಕೆ ಕೊಟ್ಟಿಗೆ ಗೊಬ್ಬರ ಮತ್ತು ಹಿಂಡಿಗೊಬ್ಬರದ ದ್ರಾವಣ ಹಾಕುತ್ತ ಇದ್ದು ಗಿಡಗಳು 75 ದಿವಸ ವಯಸ್ಸಿನವಾದಾಗ ಅವುಗಳ ತುದಿಯನ್ನು ಚಿವುಟಿಹಾಕಬೇಕು. ಹೀಗೆ ಮಾಡಿದರೆ ಮುಂದೆ 15 ದಿವಸಗಳಲ್ಲಿ ಗಿಡಗಳು ಹೂಬಿಡಲು ಪ್ರಾರಂಭಿಸುತ್ತವೆ. (ಕೆ.)

**ಕೋರಿಯೋಲಿಸ್, ಗ್ಯಾಸ್ಪರ್ಡ್ ಡ :** 1792–1843. ಫ್ರೆಂಚ್ ಭೌತವಿಜ್ಞಾನಿ. ಕೋರಿಯೋಲಿಸ್ ಪರಿಣಾಮಗಳ (**ನೋಡಿ– ಕೋರಿಯೋಲಿಸ್ ಪರಿಣಾಮಗಳು**) ಆವಿಷ್ಕರ್ತ. ಚಲನಶಕ್ತಿ (ಕೈನೆಟಿಕ್ ಎನರ್ಜಿ) ಮತ್ತು ಕಾರ್ಯ ಎಂಬ ಭೌತ ಪರಿಕಲ್ಪನೆಗಳಿಗೆ ಆಧುನಿಕ ವ್ಯಾಖ್ಯೆಗಳನ್ನು ಪ್ರಥಮವಾಗಿ ನೀಡಿದಾತ. ಚಲನಶಕ್ತಿ= ½ $mv^2$ ($m$ ವಸ್ತುವಿನ ದ್ರವ್ಯರಾಶಿ, $v$ ಅದರ ವೇಗ) ಕಾರ್ಯ=$Fl$ ($F$ ಬಲ, $l$ ಬಲದ ದಿಶೆಯಲ್ಲಿ ವಸ್ತು ಚಲಿಸಿದ ದೂರ)–ಇವೇ ಆ ವ್ಯಾಖ್ಯೆಗಳು. ಆವರ್ತಿಸುತ್ತಿರುವ ಒಂದು ಮೈಯ ಮೇಲಿನ ಚಲನೆಯ ಗತಿವಿಜ್ಞಾನ ಕೋರಿಯೋಲಿಸ್‌ನ ವಿಶೇಷಾಸಕ್ತಿ (1835). ಇದನ್ನು ಪ್ರಾಯೋಗಿಕವಾಗಿಯೂ ಗಣಿತೀಯವಾಗಿಯೂ ವಿಶ್ಲೇಷಿಸಿ ಇಂಥ ಒಂದು ಕಣದ (ಉದಾಹರಣೆಗೆ ಭೂಮಿಯ ಮೈಮೇಲೆ ಅಥವಾ ಭೂಮಿಯ ಗುರುತ್ವಾಕರ್ಷಣ ಕ್ಷೇತ್ರದೊಳಗೆ ಚಲಿಸುತ್ತಿರುವ ವಸ್ತುಗಳು) ಚಲನೆಯ ಗಣಿತಾಭ್ಯಾಸವನ್ನು ನ್ಯೂಟೋನಿಯನ್ ಚೌಕಟ್ಟಿನ ವ್ಯಾಪ್ತಿಯೊಳಗೆ ಅಡಕವಾಗಿಸಲು ಎರಡು ಕಾಲ್ಪನಿಕ ಬಲಗಳ ಅನಿವಾರ್ಯತೆಯನ್ನು ಕಂಡುಕೊಂಡ. ಇವೇ ಕೋರಿಯೋಲಿಸ್ ಬಲ ಮತ್ತು ಕೇಂದ್ರಾಪಗಮನ ಬಲ.

ಕೋರಿಯೋಲಿಸ್ ಹುಟ್ಟಿದ್ದು ಪ್ಯಾರಿಸಿನಲ್ಲಿ 1792, ಫೆಬ್ರುವರಿ 21 ರಂದು ಮತ್ತು ನಿಧನನಾದದ್ದು ಅಲ್ಲೇ, 1843, ಸೆಪ್ಟೆಂಬರ್ 17 ರಂದು. *

**ಕೋರಿಯೋಲಿಸ್ ಪರಿಣಾಮಗಳು :** ಭೂಮಿಯಿಂದ ಎತ್ತರದಲ್ಲಿ ಸ್ಥಿರ ಆಕಾಶವೇಗದಿಂದ ಚಲಿಸುತ್ತಿರುವ ಯಾವುದೇ ಆಕಾಶಕಾಯ ಆವರ್ತಿಸುತ್ತಿರುವ ಭೂಮಿಯ ಮೈಯನ್ನು ಕುರಿತು ವಿಚಲಿತವಾಗುತ್ತದೆ. ಈ ವಿಚಲನೆಯನ್ನು ಮೊದಲಿಗೆ ಅಭ್ಯಾಸ ಮಾಡಿದವ ಫ್ರೆಂಚ್ ವಿಜ್ಞಾನಿ ಗ್ಯಾಸ್ಪರ್ಡ್‌ಡ ಕೋರಿಯೋಲಿಸ್ ಆದ್ದರಿಂದ ಇದರ ಪರಿಣಾಮಗಳಿಗೆ ಆತನ ಹೆಸರನ್ನೇ ನೀಡಲಾಗಿದೆ ವೃತ್ತ ಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ ಕಣದ ಗತಿ ವಿಜ್ಞಾನವನ್ನು ಅಧ್ಯಯಿಸುವಾಗ $mv^2/r$ ಎಂಬ ಕೇಂದ್ರಾಪಗಮನ ಬಲವನ್ನು ಅದರ ಮೇಲೆ ಪ್ರಯುಕ್ತಿಸುವುದು ಸರಿಯಷ್ಟೆ. ($m$ ಆ ಕಣದ ದ್ರವ್ಯರಾಶಿ, $v$ ಅದರ ವೇಗ, $r$ ಕಕ್ಷೆಯ ತ್ರಿಜ್ಯ). ಇದು ಒಂದು ಕಾಲ್ಪನಿಕ ಬಲ. ಕೋರಿಯೋಲಿಸ್ ಬಲ ಸಹ ಇಂಥ ಒಂದು ಕಾಲ್ಪನಿಕ ಬಲ; ಗತಿ ವಿಜ್ಞಾನದ ಸಮೀಕರಣಗಳ ಸಮತೋಲನದಲ್ಲಿ ಎದುರಾಗುವ ಒಂದು ಪರಿಕಲ್ಪನೆ.

ಭೂಮಿಯ ದೈನಂದಿನ ಆವರ್ತನೆ ಭೂಮಿಯ ಮೇಲೆ ಅಥವಾ ಆಕಾಶದಲ್ಲಿ ಚಲಿಸುತ್ತಿರುವ ವಸ್ತುಗಳ ಪಥದ ಮೇಲೂ ಪರಿಣಾಮವನ್ನುಂಟುಮಾಡುತ್ತದೆ. ಉದಾಹರಣೆಗೆ ಉತ್ತರ ಮೇರುವಿನಿಂದ ಒಂದು ರಾಕೆಟನ್ನು ಮೈಸೂರಿನತ್ತ ಉಡಾಯಿಸಲಾಗಿದೆ ಎಂದು ಭಾವಿಸೋಣ. ಅದರ ಚಲನ ದರ ಸೆಕೆಂಡಿಗೆ 1.60934 ಕಿಮೀ ಆಗಿದ್ದರೆ ಅದು ಮೈಸೂರಿನ ಅಕ್ಷಾಂಶವನ್ನು (12.5°) ತಲಪುವುದರಲ್ಲಿ ಭೂಮಿ ತನ್ನ ಅಕ್ಷದ ಸುತ್ತಲೂ ಸುಮಾರು 22.5° ಯಷ್ಟು ಆವರ್ತಿಸಿರುವುದರಿಂದ ರಾಕೆಟ್ ಮೈಸೂರಿಗೆ ಬದಲು ಅದರ ಪಶ್ಚಿಮಕ್ಕೆ ಸು. 2414.016 ಕಿಮೀ ದೂರದಲ್ಲಿ ಎಂದರೆ ಅರೇಬಿಯ ಸಮುದ್ರದಲ್ಲಿರುವ ಸೋಕೋತ್ರ ಎಂಬ ದ್ವೀಪವನ್ನು ತಲಪುತ್ತದೆ. ನೆಲದಿಂದ ನೋಡಿದವರಿಗೆ ರಾಕೆಟ್‌ನ ಪಥ ಒಂದು ಸರಳರೇಖೆಯಾಗಿರದೆ ತನ್ನ ಪಥದಲ್ಲಿ ಅದು ಬಲಭಾಗಕ್ಕೆ ತಳ್ಳಲ್ಪಡುತ್ತಿದೆಯೋ ಎಂದು ಭಾಸವಾಗುವ ವಕ್ರರೇಖೆಯಾಗಿರುತ್ತದೆ. ಭೌತವಿಜ್ಞಾನದ ನಿಯಮಗಳಿಗೆ ಅನುಸಾರವಾಗಿ ವಕ್ರಪಥದಲ್ಲಿ ಚಲಿಸುತ್ತಿರುವ ವಸ್ತುವಿಗೆ ವೇಗೋತ್ಕರ್ಷ ಇರಲೇಬೇಕು. ಈ ವೇಗೋತ್ಕರ್ಷವನ್ನು a ಎಂದು ಕರೆದರೆ

$a=4\pi v \sin L/T$ (v ವಸ್ತುವಿನ ವೇಗ, *T* ಭೂಮಿಯ ಆವರ್ತನಾವಧಿ ಮತ್ತು *L* ಸ್ಥಳದ ಅಕ್ಷಾಂಶ). ಈ ಸೂತ್ರದಂತೆ ಮೇರುಗಳ ಮೇಲೆ ಅತ್ಯಧಿಕ ಮೌಲ್ಯವುಳ್ಳ ವೇಗೋತ್ಕರ್ಷ ಸಮಭಾಜಕ ವೃತ್ತದ ಬಳಿ ತೀರ ಕಡಿಮೆಯಾಗಿರುತ್ತದೆ. ರಾಕೆಟ್ ಉತ್ತರ ಮೇರುವಿನಿಂದ ಮೈಸೂರಿಗೆ ಸರಳರೇಖೆಯಲ್ಲಿ ಬರುವಂತಾಗಬೇಕಾದರೆ ಈ ವೇಗೋತ್ಕರ್ಷಕ್ಕೆ ವಿರುದ್ಧ ದಿಕ್ಕಿನಲ್ಲಿ ಬಲವನ್ನೊದಗಿಸಬೇಕು. ಇದೇ ಕೋರಿಯೋಲಿಸ್ ಬಲ. ಭೂಮಿಯ ಆವರ್ತನೆಯಿಂದ ಆಗುವ ಕೋರಿಯೋಲಿಸ್ ಪರಿಣಾಮಗಳನ್ನು ಅನೇಕ ಸಂದರ್ಭಗಳಲ್ಲಿ ಕಾಣಬಹುದು. ಉದಾಹರಣೆಗೆ ಉತ್ತರ ಗೋಲಾರ್ಧದಲ್ಲಿ ಹರಿಯುವ ನದಿಗಳು ತಮ್ಮ ಎಡದಂಡೆಗಿಂತ ಬಲದಂಡೆಯ ಮೇಲೆ ಹೆಚ್ಚು ಒತ್ತಡವನ್ನು ಉಂಟುಮಾಡುತ್ತವೆ. ವಾಯುಮಂಡಲದ ಚಲನದ ಮೇಲೆ ಉಂಟಾಗುವ ಕೋರಿಯೋಲಿಸ್ ಪರಿಣಾಮ ತುಫಾನುಗಳಿಗೆ ಮತ್ತು ವಾಣಿಜ್ಯ ಮಾರುತಗಳಿಗೆ ಕಾರಣವಾಗುತ್ತದೆ. ಅತಿ ವೇಗದಿಂದ ಚಲಿಸುವ ಆಕಾಶ ನೌಕೆಗಳ ಕಕ್ಷೆಯನ್ನು ನಿರ್ಧರಿಸುವಾಗಲಂತೂ ಈ ಪರಿಣಾಮವನ್ನು ಬಹಳ ಎಚ್ಚರಿಕೆಯಿಂದ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ನೌಕೆಗಳನ್ನು ಕೂಡ ತಮ್ಮ ಅಕ್ಷಗಳ ಸುತ್ತಲೂ ಆವರ್ತಿಸುತ್ತಿರುವುದರಿಂದ ಅಲ್ಲಿ ಉಂಟಾಗುವ ಕೋರಿಯೋಲಿಸ್ ಪರಿಣಾಮವನ್ನೂ ನಿರ್ಧರಿಸಬೇಕಾಗುತ್ತದೆ.

(ಎನ್.ವಿ.ಎಂ.)

**ಗಣಿತ ಜಿಜ್ಞಾಸೆ:** *S* ಎಂಬುದು ಒಂದು ನ್ಯೂಟೋನಿಯನ್ ನಿರ್ದೇಶಕ ಚೌಕಟ್ಟಾಗಿರಲಿ. ಇದರಲ್ಲಿರುವ ಒಂದು ಬಿಂದು *O*. *S'* ಎಂಬುದು *O* ವನ್ನು ಕುರಿತು ಸ್ಥಿರ ಕೋನವೇಗ ω ದಿಂದ ಆವರ್ತಿಸುತ್ತಿರುವ ಒಂದು ನಿರ್ದೇಶಕ ಚೌಕಟ್ಟಾಗಿರಲಿ. i, j ಗಳು *S'* ನಲ್ಲಿ ಸ್ಥಿರಗೊಳಿಸಲ್ಪಟ್ಟಿರುವ ಲಂಬ ಏಕಮಾನ ಸದಿಶಗಳಾಗಿರಲಿ. *A* ಒಂದು ಚರ ಕಣ. S'ನಲ್ಲಿ i ಮತ್ತು j ಗಳ ದಿಶೆಗಳಲ್ಲಿ Oxy ಅಕ್ಷಗಳನ್ನು ತೆಗೆದುಕೊಂಡರೆ A ಯ ಸ್ಥಾನಸದಿಶ

$$\mathbf{r = xi + yj}$$

$$\frac{di}{dt} = \omega j, \qquad \frac{dj}{dt} = -\omega i$$

ಆದ್ದರಿಂದ *S* ಗೆ ಸಾಪೇಕ್ಷವಾಗಿ *A* ಯ ವೇಗ

$$v = \dot{r} = (\dot{x} - \omega y)\, i + (\dot{y} + \omega x)\, j$$

ಮತ್ತು ವೇಗೋತ್ಕರ್ಷ




ಚಿತ್ರ–1

$$a = \dot{v} = (\ddot{x} - 2\omega\dot{y} - \omega^2 x)\, i$$

$$+ (\dot{y} + 2\omega\dot{x} - \omega^2 y)\, j$$

ಈಗ I, j ದಿಶೆಗಳಲ್ಲಿ ನಿಜಬಲದ ಘಟಕಗಳು ಅನುಕ್ರಮವಾಗಿ *x,y* ಆಗಿದ್ದರೆ ಚಲನ ಸಮೀಕರಣಗಳು

$$m(\ddot{x} - 2\omega\dot{y} - \omega^2 x) = X$$

$$\mathbf{m}(\ddot{y} + 2\omega\dot{x} - \omega^2 y) = \mathbf{Y}$$

ಆಗುತ್ತದೆ. ಇವನ್ನು ಮನರಪಿ

$$m\ddot{x} = X + X' + X'' \quad \}$$

$$m\ddot{y} = Y + Y' + Y'' \}$$

ಎಂಬುದಾಗಿ ನಿರೂಪಿಸಬಹುದು. ಇಲ್ಲಿ

$$X' = 2m\omega\dot{y}, \quad Y' = -2m\omega x,$$

$$X'' = m\omega^2 x, \quad Y'' = m\omega^2 y.$$

ಸಮೀಕರಣಗಳು (1)ನ್ನು ಈಗ ಈ ಪ್ರಕಾರ ಅರ್ಥ ಮಾಡಬಹುದು; ಆವರ್ತಿಸುತ್ತಿರುವ ಒಂದು ಚೌಕಟ್ಟಿಗೆ ಸಾಪೇಕ್ಷವಾಗಿ ಚಲಿಸುತ್ತಿರುವ ಒಂದು ಕಣದ ಮೇಲೆ ವರ್ತಿಸುತ್ತಿರುವ ನಿಜಬಲಕ್ಕೆ ಘಟಕಗಳು (X,Y), (X′,Y′) ಮತ್ತು (X″,Y″)




ಚಿತ್ರ–2

ಎಂಬ ಎರಡು ಕಾಲ್ಪನಿಕ ಬಲಗಳನ್ನು ಸೇರಿಸಿದರೆ ಆ ಕಣ ನ್ಯೂಟನ್ನನ ಚಲನ ನಿಯಮಾನುಸಾರ ಚಲಿಸುತ್ತದೆ. ಈ ಕಾಲ್ಪನಿಕ ಬಲಗಳಲ್ಲಿ ಮೊದಲನೆಯದು ಎಂದರೆ (X′,Y′) ಕೋರಿಯೋಲಿಸ್ ಬಲದ ಘಟಕಗಳು. ಈ ಬಲದ ಪರಿಮಾಣ S′ ನ ಕೋನವೇಗ ಮತ್ತು S′ಗೆ ಸಾಪೇಕ್ಷವಾಗಿ ಕಣದ ಚಲನದರ v′ ಇವುಗಳ ಅನುಪಾತದಲ್ಲಿದೆ. ಅದರ ದಿಶೆ S′ ಗೆ ಸಾಪೇಕ್ಷವಾದ ವೇಗ v′ ಗೆ ಲಂಬವಾಗಿದೆ. ಇದನ್ನು v′ ನ ದಿಶೆಯಿಂದ, ಕೋನವೇಗದ ದಿಶೆಗೆ ವಿರುದ್ಧ ದಿಶೆಯಲ್ಲಿ ಒಂದು ಲಂಬಕೋನದಷ್ಟು ಆವರ್ತಿಸುವುದರ ಮೂಲಕ ಪಡೆಯುತ್ತೇವೆ. ಮೇಲೆ ಬರೆದಿರುವ ಕಾಲ್ಪನಿಕ ಬಲಗಳಲ್ಲಿ ಎರಡನೆಯದು ಎಂದರೆ (X″,Y″) ಕೇಂದ್ರಾಪಗಮನ ಬಲದ ಘಟಕಗಳು. ಈ ಬಲದ ಪರಿಮಾಣ *S′* ಕೋನವೇಗದ ವರ್ಗ ಮತ್ತು ಆವರ್ತನ ಕೇಂದ್ರದಿಂದ ಕಣದ ದೂರ ಇವುಗಳ ಅನುಪಾತದಲ್ಲಿದೆ. ಇದು ಆವರ್ತನ ಕೇಂದ್ರದಿಂದ ಆರೀಯವಾಗಿ ಹೊರಭಾಗಕ್ಕೆ ನಿರ್ದೇಶಿತವಾಗಿದೆ. *

**ಕೋರಿ, ವಿಲಿಯಮ್ ಜಾನ್ಸನ್ :** 1823–92. ಕವಿ ಚಾರ್ಲ್ಸ್ ಜಾನ್ಸನ್ನನ ಮಗ. ಹುಟ್ಟಿದ್ದು ಟೊರಿಂಗ್‌ಟನ್‌ನಲ್ಲಿ. ಕೇಂಬ್ರಿಜ್‌ನ ಈಟನ್ ಮತ್ತು ಕಿಂಗ್ಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಹಲವು ಕಾಲ ಅಲ್ಲಿಯೇ ಸಹಾಧ್ಯಾಪಕನಾಗಿ ಕೆಲಸ ಮಾಡಿದ. ಈತನ ಐಯೋನಿಕ ಎಂಬ ಕವನ ಸಂಕಲನ 1858ರಲ್ಲಿ ಅನಾಮಧೇಯವಾಗಿ ಪ್ರಕಟಗೊಂಡಿತು. ಈತ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಅತ್ಯಂತ ಚತುರ ಕವಿ ಎನಿಸಿದ್ದ. ಹೆರಾಕ್ಲಿಟಸ್ ಈತನ ಶ್ರೇಷ್ಠ ಕವನ. ಇದು ಕ್ಯಾಲಿಮಾಕಸ್ ಎಂಬ ಅಲೆಕ್ಸಾಂಡ್ರಿಯನ್ ಕವಿಯ ಕವನದ ಸಂಗ್ರಹಾನುವಾದ. (ಎನ್.ಎಸ್.ಎಲ್.)

**ಕೋರ್ವಸ್ :** ಖಗೋಳದಲ್ಲಿಯ 88 ನಕ್ಷತ್ರಪುಂಜಗಳ ಪೈಕಿ ಒಂದು (ಹಸ್ತಾ). ವಿಷುವದಂಶ 11 ಗಂ. 55 ಮಿ.–12 ಗಂ.55 ಮಿ. ಮತ್ತು ಘಂಟಾವೃತ್ತಾಂಶ 11°-25° ದ. ಕನ್ಯಾರಾಶಿಯ ಪಕ್ಕದಲ್ಲಿದೆ. ಸಿಂಹರಾಶಿಗೂ ತ್ರಿಶಂಕು ಪುಂಜಕ್ಕೂ ನಡುವೆ ಇರುವ ನಾಲ್ಕೂ ನಕ್ಷತ್ರಗಳು ರಚಿಸುವ ಚತುರ್ಭುಜಾಕೃತಿಯೇ ಕೋರ್ವಸ್ ಪುಂಜ. ಸುಲಭವಾಗಿ ಗುರುತಿಸಬಹುದು. ತೆರೆದಿಟ್ಟ ಅಂಗೈನಂತೆ ಕಾಣುವುದರಿಂದ ಹಸ್ತಾ ಎಂಬ ಹೆಸರಿದೆ. *

**ಕೋಲ್, ಜಾರ್ಜ್ ಡಗ್ಲಸ್ ಹೌವರ್ಡ್ :** 1889–1959. ಇಂಗ್ಲಿಷ್ ಇತಿಹಾಸಕಾರ, ಅರ್ಥಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ, ಕಾದಂಬರಿಕಾರ. ಪಶ್ಚಿಮ ಲಂಡನಿನ ಈಲಿಂಗಿನಲ್ಲಿ ಹುಟ್ಟಿದ. ಸೇಂಟ್ ಪಾಲ್ಸ್ ಶಾಲೆ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ ಶಿಕ್ಷಣ ಪಡೆದ. ಇವನ ವಿದ್ಯಾರ್ಥಿಜೀವನ ಪ್ರತಿಭಾನ್ವಿತವಾದ್ದು. ಆಕ್ಸ್‌ಫರ್ಡಿನಲ್ಲಿ ಈತ ಅಭಿಜಾತಸಾಹಿತ್ಯದ ಅಭ್ಯಾಸಿಯೆಂದೂ ಕವಿಯೆಂದೂ ಸಮಾಜ ವಿಚಾರಗಳನ್ನು ಕುರಿತು ಆಳವಾಗಿ ಆಲೋಚನೆ ಹರಿಸಿರುವವನೆಂದೂ ಹೆಸರು ಗಳಿಸಿದ್ದ. ಕೋಲ್ ಆಕ್ಸ್‌ಫರ್ಡಿನ ಮ್ಯಾಗ್ಡಲೀನ್ ಕಾಲೇಜಿನ ಫೆಲೊ ಆದದ್ದು 1912ರಲ್ಲಿ. ಅನಂತರ ಅನುಕ್ರಮವಾಗಿ ಯೂನಿವರ್ಸಿಟಿ ಕಾಲೇಜ್, ಆಲ್ ಸೋಲ್ಸ್ ಮತ್ತು ನಫೀಲ್ಡ್‌ಗಳಲ್ಲಿ ಫೆಲೊ ಆದನಲ್ಲದೆ ಅರ್ಥಶಾಸ್ತ್ರದ ಪ್ರವಾಚಕನಾದ. ತದನಂತರ ಇವನಿಗೆ ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತದ ಪ್ರಾಧ್ಯಾಪಕ ಹುದ್ದೆ ಲಭ್ಯವಾಯಿತು. ಇವನ ವಿದ್ವತ್ ಜೀವನವೆಲ್ಲ ಆಕ್ಸ್‌ಫರ್ಡ್ ಲಂಡನ್‌ಗಳಲ್ಲೇ

ಕಳೆಯಿತು. ಅನುಕ್ರಮವಾಗಿ ಬಂದ ಅನೇಕ ತಲೆಮಾರುಗಳ ವಿದ್ಯಾರ್ಥಿಗಳ ಮೇಲೆ ಕೋಲ್ ಬೀರಿದ ಪ್ರಭಾವ ಅಗಾಧ. ಅನೇಕ ಉದಿತೋದಿತ ರಾಷ್ಟ್ರಗಳ ಬಹಳ ಮಂದಿ ನಾಯಕರು ಕೋಲ್ ಅಥವಾ ಹೆರಾಲ್ಡ್ ಜೆ. ಲಾಸ್ಕಿಯ ಸಿದ್ಧಾಂತಗಳಿಂದ ತಲೆ ಕೆಡಿಸಿಕೊಂಡಿದ್ದಾರೆಂದು ಇಂಗ್ಲೆಂಡಿನ ಪತ್ರಿಕೆಯೊಂದು ಒಮ್ಮೆ ಆತನ ಬಗ್ಗೆ ಕೋಪದಿಂದ ಉತ್ಪ್ರೇಕ್ಷೆ ಮಾಡಿ ಬರೆದಿತ್ತು. (ಎಂ.ಕೆ.ಆರ್.; ಎಚ್.ವಿ.ಎಸ್.)

ಕೋಲ್ ಅತ್ಯಂತ ಕ್ರಿಯಾಶೀಲ ಸಮಾಜವಾದಿಯಾಗಿದ್ದ. ಫೇಬಿಯನ್ ಸಂಘದ ಅಧ್ಯಕ್ಷನೂ ಆಗಿದ್ದ. ಇವನು ವಿವಾಹವಾದ್ದು 1918ರಲ್ಲಿ. ಇವನ ಪತ್ನಿ ಮಾರ್ಗರೆಟ್ ಇಸಬೆಲ್. ಆಕೆ ಪ್ರಾಧ್ಯಾಪಕನೊಬ್ಬನ ಮಗಳು. ಆಕೆಯೂ ಸ್ವಲ್ಪ ಕಾಲ ಉಪಾಧ್ಯಾಯಿನಿಯಾಗಿದ್ದಳು. ಕೋಲನ ಬರೆವಣಿಗೆಯಲ್ಲಿ ಇವನೊಂದಿಗೆ ಸಹವರ್ತಿಸಿದಳು.

ಕೋಲನ ಪ್ರಥಮ ಕೃತಿಯ ಹೆಸರು ದಿ ವರ್ಲ್ಡ್ ಆಫ್ ಲೇಬರ್ (1913). ಹೊಸ ಬಗೆಯ ಸಮಾಜವಾದದ ಮುನ್ಸೂಚನೆ ಈ ಗ್ರಂಥದಲ್ಲಿ ಕಾಣಬರುತ್ತದೆ. ವಿಶ್ವವ್ಯಾಪಿ ಕಾರ್ಮಿಕ ಆಂದೋಲನದ ಸಮಗ್ರ ಅಧ್ಯಯನ ಇಲ್ಲಿದೆ. ಆ ಕಾಲದಲ್ಲಿ ಪ್ರಚಲಿತವಾಗಿದ್ದ ಎರಡು ಕ್ರಾಂತಿಕಾರಿ ಸಿದ್ಧಾಂತಗಳಾದ ಕೈಗಾರಿಕಾ ಸಂಘವಾದ (ಸಿಂಡಿಕಲಿಸಂ) ಮತ್ತು ಸಂಸದೀಯ ಅಥವಾ ರಾಜ್ಯ ಸಮಾಜವಾದ–ಇವೆರಡರ ಸಮನ್ವಯ ಸೂತ್ರಗಳನ್ನು ಕೋಲ್ ಈ ಪುಸ್ತಕದಲ್ಲಿ ನೀಡಿದ್ದಾನೆ. ಮುಖ್ಯ ಕೈಗಾರಿಕೆಗಳು ರಾಷ್ಟ್ರದ ಒಡೆತನಕ್ಕೆ ಬರಬೇಕು, ಅವು ಕಾರ್ಮಿಕ ಸಂಘಗಳ ಪ್ರಜಾಸತ್ತಾತ್ಮಕ ನಿಯಂತ್ರಣಕ್ಕೆ ಒಳಪಡಬೇಕು–ಎಂಬ ತತ್ತ್ವವನ್ನು ಈತ ಇತರರೊಂದಿಗೆ ಸೇರಿ ಪ್ರತಿಪಾದಿಸಿದ. ಇದಕ್ಕೆ ಗಿಲ್ಡ್ ಸಮಾಜವಾದವೆಂದು ಹೆಸರು. ಮಧ್ಯಯುಗದ ಗಿಲ್ಡ್‌ಗಳ ನೆನಪು ತರುವಂತೆ ಉದ್ದೇಶಪೂರ್ವಕವಾಗಿ ಇದಕ್ಕೆ ಈ ಹೆಸರು ನೀಡಲಾಯಿತು. ಇದಕ್ಕೆ ಸ್ಫೂರ್ತಿ ಬಂದದ್ದು ಕಾರ್ಲ್ ಮಾರ್ಕ್ಸನಿಗಿಂತ ಅಧಿಕವಾಗಿ ವಿಲಿಯಂ ಮಾರಿಸನಿಂದ. ರಷ್ಯದ ಕ್ರಾಂತಿಯಿಂದಾಗಿ ಗಿಲ್ಡ್ ಸಮಾಜವಾದದ ಚಳವಳಿಗೆ ಬಲವಾದ ಆಘಾತ ಬಿತ್ತು. ಆದರೂ ಅದರ ಪ್ರಭಾವ ಪರಿಣಾಮಕಾರಿಯಾದ್ದಾಗಿತ್ತು. ಅದು ಜೀವಂತ ವಿಚಾರವಾಗಿ ಉಳಿಯಲು ಕೋಲ್ ಮುಖ್ಯ ಕಾರಣ. ಅದನ್ನು ಪ್ರತಿಪಾದಿಸಿ ಈತ ಅನೇಕ ಗ್ರಂಥಗಳನ್ನು ಬರೆದ. **ಸೆಲ್ಫ್ ಗವರ್ನ್‌ಮೆಂಟ್ ಇನ್ ಇಂಡಸ್ಟ್ರಿ (1917)** ಎಂಬುದು ಈ ವಿಚಾರವನ್ನು ಕುರಿತ ಮೊದಲ ಹಾಗೂ ಅತ್ಯಂತ ಪ್ರಭಾವಪೂರ್ಣ ಗ್ರಂಥ.

ಒಂದನೆಯ ಮಹಾಯುದ್ಧದ ಅನಂತರ ಕೋಲ್ ಪ್ರಭಾವಶಾಲಿ ಅಧ್ಯಾಪಕನೆಂದೂ ರಾಜಕೀಯ ತತ್ತ್ವಜ್ಞನೆಂದೂ ಬಹುಶ್ರುತನೆಂದೂ ಹೆಸರು ಗಳಿಸಿದ. ಕಾರ್ಮಿಕರೂ ಕ್ರಾಂತಿವಾದಿಗಳೂ ಇವನ ಸಲಹೆ ಪಡೆಯುತ್ತಿದ್ದರು. ಆದರೆ ನೇರ ರಾಜಕೀಯದಲ್ಲಿ ಅವನು ಅಷ್ಟೇನೂ ಯಶಸ್ಸು ಗಳಿಸಲಿಲ್ಲ. ಅನೇಕ ಸಮಿತಿ, ಶಾಲೆ, ಸಂಘ, ಪತ್ರಿಕೆ ಮುಂತಾದುವುಗಳನ್ನು ಸ್ಥಾಪಿಸುವುದರಲ್ಲಿ ಇವನು ಸರ್ವದಾ ಆಸಕ್ತನಾಗಿದ್ದ. ಆದರೆ ಯಾವುದಕ್ಕೂ ಇವನು ದೀರ್ಘಕಾಲ ಅಂಟಿಕೊಳ್ಳುತ್ತಿರಲಿಲ್ಲ. ಜಗಳ ಮಾಡಿಕೊಂಡು ಬಿಟ್ಟು ಹೊರಡುತ್ತಿದ್ದ.

ಕೋಲ್ ಬರೆದ ಲೇಖನಗಳ, ಹೊತ್ತಗೆಗಳ ಮತ್ತು ಗ್ರಂಥಗಳ ರಾಶಿ ಅಗಾಧ. ಅವುಗಳ ಸಮಗ್ರ ಪಟ್ಟಿ ಮಾಡುವುದು ಅಸಾಧ್ಯ. ದಿನಕ್ಕೆ ಮೂರು ಸಾವಿರ ಶಬ್ದಗಳಷ್ಟು ಸಾಹಿತ್ಯವನ್ನು ಲೀಲಾಜಾಲವಾಗಿ ಸೃಷ್ಟಿ ಮಾಡಬಲ್ಲೆನೆಂದು ಒಮ್ಮೆ ಇವನು ಹೇಳಿಕೊಂಡಿದ್ದ. ಇವನ ಕೃತಿರಾಶಿಯನ್ನೆಲ್ಲ ಸ್ಥೂಲವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಆರ್ಥಿಕ ರಾಜಕೀಯ ವಿಚಾರಗಳನ್ನು ಕುರಿತ ವಸ್ತುನಿಷ್ಠ ಸಮೀಕ್ಷೆಗಳನ್ನೊಳಗೊಂಡ ಪುಸ್ತಕಗಳು ಒಂದು ಬಗೆ. ಅವು ಸುದೀರ್ಘವಾಗಿಯೂ ಸ್ಪಷ್ಟವಾಗಿಯೂ ಸರಳವಾಗಿಯೂ ಇವೆ. ಅವನ್ನು ಬರೆದ ಕಾಲದಲ್ಲಿ ಅವು ಬಹಳ ಉಪಯುಕ್ತ ಪರಾಮರ್ಶನ ಗ್ರಂಥಗಳಾಗಿದ್ದುವು. ಆದರೆ ಕಾಲಕ್ರಮದಲ್ಲಿ ಅವು ಹಳತಾದುವು. ದಿ ಇಂಟೆಲಿಜೆಂಟ್ ಮ್ಯಾನ್ಸ್ ಗೈಡ್ ಥ್ರೂ ವರ್ಲ್ಡ್ ಕೇಯಾಸ್ (1932), ದಿ ಇಂಟಲಿಜೆಂಟ್ ಮ್ಯಾನ್ಸ್ ರಿವ್ಯೂ ಆಫ್ ಯೂರೋಪ್ ಟುಡೇ (1933), ದಿ ಇಂಟೆಲಿಜೆಂಟ್ ಮ್ಯಾನ್ಸ್ ಗೈಡ್ ಟು ದಿ ಪೋಸ್ಟ್–ವಾರ್ ವರ್ಲ್ಡ್ (1947)– ಇವು ತತ್ಕಾಲೀನ ವಿದ್ಯಮಾನಗಳನ್ನು ಕುರಿತ ವಿಶ್ವಕೋಶಸದೃಶವಾದ ಗ್ರಂಥಗಳು. ದಿ ಕಂಡಿಷನ್ ಆಫ್ ಬ್ರಿಟನ್ (1937) ಮತ್ತು ಲೋಕಲ್ ಅಂಡ್ ರೀಜನಲ್ ಗವರ್ನ್‌ಮೆಂಟ್ (1947)– ಇವೂ ಉಲ್ಲೇಖಾರ್ಹವಾದ ಗ್ರಂಥಗಳು. ಈ ಗ್ರಂಥಗಳ ರಚನೆಯಲ್ಲಿ ಕೋಲನ ಹೆಂಡತಿಯೂ ಬಹಳ ಮಟ್ಟಿಗೆ ಸಹಕಾರ ನೀಡಿದಳು. ಕೋಲ್ ಬರೆದ ಗಿಲ್ಡ್ ಸಮಾಜವಾದಿ ಪುಸ್ತಕಗಳೂ ಇತರ ಆರ್ಥಿಕ ಸಿದ್ಧಾಂತಗಳನ್ನು ಕುರಿತ ಪುಸ್ತಕಗಳೂ ಎರಡನೆಯ ಗುಂಪಿಗೆ ಸೇರುತ್ತವೆ. ಇವುಗಳಲ್ಲಿ ಗೋಲ್ಡ್ ಕ್ರೆಡಿಟ್ ಅಂಡ್ ಎಂಪ್ಲಾಯ್‌ಮೆಂಟ್ (1930), ಹ್ವಾಟ್ ಮಾರ್ಕ್ಸ್ ರಿಯಲಿಮೆಂಟ್ (1934), ಪ್ರಿನ್ಸಿಪಲ್ಸ್ ಆಫ್ ಎಕನಾಮಿಕ್ ಪ್ಲಾನಿಂಗ್ (1935), ಮನಿ; ಇಟ್ಸ್ ಪ್ರೆಸೆಂಟ್ ಅಂಡ್ ಫ್ಯೂಚರ್ (1944)– ಇವು ಮುಖ್ಯವಾದವು. ಇತಿಹಾಸ ವಿಚಾರಗಳನ್ನು ಕುರಿತು ಕೋಲ್ ಬರೆದ ಪುಸ್ತಕಗಳದು ಮೂರನೆಯ ಗುಂಪು. ಕಾಲದಿಂದ ಹಳತಾಗಿಲ್ಲದ ಪುಸ್ತಕಗಳಿವು. ಲೈಫ್ ಆಫ್ ವಿಲಿಯಂ ಕಾಬೆಟ್ (1924) (ನೋಡಿ– ಕಾಬೆಟ್,–ವಿಲಿಯಂ). ಲೈಫ್ ಆಫ್ ರಾಬರ್ಟ್ ಓವೆನ್ (1925) (ನೋಡಿ– ಓವೆನ್,–ರಾಬರ್ಟ್), ಇವು ಬಹಳ ಪ್ರಸಿದ್ಧವಾಗಿವೆ ಲೈಫ್ ಆಫ್ ಸ್ಯಾಮ್ಯುಯೆಲ್ ಬಟ್ಲರ್ (1947) (ನೋಡಿ– ಯೇಟ್ಸ್,–ವಿಲಿಯಮ್–ಬಟ್ಲರ್) ಈ ಬಗೆಯ ಇನ್ನೊಂದು ಪುಸ್ತಕ. ಎ ಷಾರ್ಟ್ ಹಿಸ್ಟೊರಿ ಆಫ್ ದಿ ಬ್ರಿಟಿಷ್ ವರ್ಕಿಂಗ್–ಕ್ಲಾಸ್ ಮೂವ್‌ಮೆಂಟ್ (1925–1927) ಮತ್ತು ಎ ಸೆಂಚುರಿ ಆಫ್ ಕೋ–ಆಪರೇಷನ್ (1945). ಇವು ಆಯಾ ಕ್ಷೇತ್ರಗಳಲ್ಲಿ ಅಭಿಜಾತ ಕೃತಿಗಳಾಗಿವೆ. ಈ ಗುಂಪಿನ ಅತ್ಯಂತ ಜನಪ್ರಿಯ ಪುಸ್ತಕವೆಂದರೆ ದಿ ಕಾಮನ್ ಪೀಪಲ್. ಕೋಲ್ ಇದನ್ನು ರೇಮಂಡ್ ಪೋಸ್ಟ್‌ಗೇಟನೊಂದಿಗೆ ಸೇರಿ ಬರೆದ. ಕೋಲನ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿರುವ ಗ್ರಂಥವೆಂದರೆ ಹಿಸ್ಟೊರಿ ಆಫ್ ಸೋಷಿಯಲಿಸ್ಟ್ ಥಾಟ್ (1953–1960). ಐದು ಸಂಪುಟಗಳ ಈ ಗ್ರಂಥದಲ್ಲಿ ಕೋಲ್ ಸಮಾಜವಾದ ಚಿಂತನೆಯ ಸಮಗ್ರ ಇತಿಹಾಸವನ್ನು ಶಾಸ್ತ್ರೀಯವಾಗಿ ಬಿತ್ತರಿಸಿದ್ದಾನೆ. ಆಧುನಿಕ ಸಮಾಜ ದರ್ಶನವನ್ನಾಗಲಿ ಜನತಾ ಚಳವಳಿಗಳನ್ನಾಗಲಿ ಅಭ್ಯಾಸ ಮಾಡಬಯಸುವ ಯಾರೂ ಈ ಗ್ರಂಥವನ್ನು ಬಿಡುವಂತಿಲ್ಲ. ಈ ವಿಚಾರವನ್ನು ಕುರಿತು ಇಷ್ಟೊಂದು ಅಧಿಕಾರಯುತವಾದ ಗ್ರಂಥ ಅದುವರೆಗೂ ಬಂದಿರಲಿಲ್ಲ. ಈ ಗ್ರಂಥದ ನಾಲ್ಕು ಸಂಪುಟಗಳು ಕೋಲ್ ತೀರಿಕೊಂಡಾಗ (1959) ಪ್ರಕಟವಾದುವು. ಐದನೆಯ ಸಂಪುಟವನ್ನು ಇವನ ಪತ್ನಿ ಪೂರೈಸಿದಳು.

1923 ರಿಂದ 1945ರ ತನಕ ಕೋಲ್ ತನ್ನ ಪತ್ನಿಯೊಡಗೂಡಿ ಸುಮಾರು ಇಪ್ಪತ್ತು ಪತ್ತೆದಾರಿ ಕಾದಂಬರಿಗಳನ್ನು ಬರೆದ. ಬ್ರೂಕ್‌ಲಿನ್ ಮರ್ಡರ್ಸ್ (1923) ದಿ ಡೆತ್ ಆಫ್ ಎ ಮಿಲಿಯನೇರ್ (1925), ಪಾಯಿಸನ್ ಇನ್ ದಿ ಗಾರ್ಡನ್ ಸಬರ್ಬ್ (1929), ಬರ್ಗ್ಲರ್ಸ್ ಇನ್ ಬಕ್ಸ್ (1930), ಡೆಡ್ ಮ್ಯಾನ್ಸ್ ವಾಚ್ (1932), ಡೆತ್ ಇನ್ ದಿ ಕ್ವಾರಿ (1934), ನೈಫ್ ಇನ್ ದಿ ಡಾರ್ಕ್ (1942), ಟಾಯ್ಸ್ ಆಫ್ ಡೆತ್ (1948)–ಇವು ಮುಖ್ಯವಾದವು. *

**ಕೋಲ್ ಟಾರ್ :** ಮೃದು ಕಲ್ಲಿದ್ದಲನ್ನು ಗಾಳಿಯ ಅಭಾವದಲ್ಲಿ 1,000°-1,300° ಸೆಂ.ನಲ್ಲಿ ಕಾಸಿದಾಗ ದೊರಕುವ ಶ್ಯಾನಶೀಲ ಕಪ್ಪುದ್ರವ. ಕಲ್ಲಿದ್ದಲಿನಿಂದ ಅನಿಲೇಂಧನಗಳನ್ನೇ ಪ್ರಧಾನವಾಗಿ ಪಡೆಯುತ್ತಿದ್ದ ಕಾಲದಲ್ಲಿ ಈ ವಸ್ತುವನ್ನು ಅನಿವಾರ್ಯವಾದ ಒಂದು ಪಿಡುಗು ಎಂದು ಭಾವಿಸಲಾಗಿತ್ತು. ಕೊಂಚಕಾಲದ ಮೇಲೆ ಇದನ್ನು ರಸ್ತೆಗಳಿಗೆ ಬಳಿಯಲು ಉಪಯೋಗಿಸಲಾಯಿತು. ಔದ್ಯೋಗಿಕವಾಗಿ ಅತಿಮುಖ್ಯವಾದ ಅನೇಕ ವಸ್ತುಗಳ ಆಕರವಾದ ಕಪ್ಪುಬಣ್ಣದ ಅಸಹ್ಯವಾಸನೆಯ ಈ ಅನಾಕರ್ಷಕ ವಸ್ತು ಈಗ ಆರ್ಗ್ಯಾನಿಕ್ ರಸಾಯನ ವಿಜ್ಞಾನಿಗೆ ಕಲ್ಪತರುವಾಗಿ ಪರಿಣಮಿಸಿದೆ.

ನೂರು ಟನ್ ಕಲ್ಲಿದ್ದಲನ್ನು ಆಸವಿಸಿದರೆ ಮೂರು ಟನ್ ಟಾರು ದೊರೆಯುತ್ತದೆ. ಇದನ್ನು ಅನೇಕ ಹಂತಗಳಲ್ಲಿ ಒಂದಾದ ತರುವಾಯ ಇನ್ನೊಂದರಂತೆ ಶುದ್ಧೀಕರಿಸಲಾಗುವುದು. ಪ್ರಾರಂಭದಲ್ಲಿ ಟಾರನ್ನು ಆಸವಿಸಿ ದೊರೆತ ಪ್ರತಿ ಅಂಶವನ್ನೂ ಪ್ರತ್ಯಾಮ್ಲದಿಂದ ಸಾರೀಕರಿಸುತ್ತಾರೆ (ಎಕ್ಸ್‌ಟ್ರೇಕ್ಟ್). ಇದರಿಂದ ಸಾರರಿಕ್ತ ಆಮ್ಲಗಳಾದ ಫೀನಾಲುಗಳಂಥ ಆರೋಮ್ಯಾಟಿಕ್ ಹೈಡ್ರಾಕ್ಸಿ ಸಂಯುಕ್ತಗಳನ್ನು ಪ್ರತ್ಯೇಕಿಸಬಹುದು. ಮುಂದಿನ ಹಂತದಲ್ಲಿ ಅಂಶಗಳನ್ನು ಆಮ್ಲದಿಂದ ಸಾರೀಕರಿಸಿ ಸಾರಜನಕಯುತ ಪ್ರತ್ಯಾಮ್ಲಗಳನ್ನು ಹೊರತೆಗೆದ ಬಳಿಕ ಪುನಃ ಆಸವಿಸಿ ಶುದ್ಧಿಗೊಳಿಸಲಾಗುವುದು.

ಟಾರನ್ನು ಆಸವಿಸಿದಾಗ ಮುಖ್ಯವಾಗಿ ಐದು ಅಂಶಗಳನ್ನು ಪಡೆಯಬಹುದು. ಇವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ. ಇವನ್ನು ಅಂಶಿಕವಾಗಿ ಆಸವಿಸಿ ಮುಂದೆ ಕಾಣಿಸಿರುವ ಅನೇಕ ವಸ್ತುಗಳನ್ನು ಪಡೆಯಬಹುದು.

| ಅಂಶ | ಹೆಸರು | ಉಷ್ಣತೆ | ಇಳುವರಿ (ಒಂದು ಟನ್ ಟಾರಿಗೆ) |
|---|---|---|---|
| I | ಲಘುತೈಲ ಅಥವಾ ಕಚ್ಚಾನ್ಯಾಫ್ತ | 170° ಸೆಂ.ವರೆಗೆ | 12 ಗ್ಯಾಲನ್‌ಗಳು |
| II | ಮಧ್ಯತೈಲ ಅಥವಾ ಕಾರ್ಬಾಲಿಕ್ ಎಣ್ಣೆ | 170°–230° ಸೆಂ. | 20 " |
| III | ಭಾರತೈಲ ಅಥವಾ ಕ್ರಿಯೋಸೋಟ್ ಎಣ್ಣೆ | 230-270 ಸೆಂ. | 17 " |
| IV | ಆಂಥ್ರಸೀನ್ ಎಣ್ಣೆ ಅಥವಾ ಹಸಿರು ಎಣ್ಣೆ | 270° ಸೆಂ.ಮೇಲೆ | 38 " |
| V | ಪಿಚ್ | ಅವಶೇಷ | 11 ಹಂಡ್ರಡ್ ವೆಯಿಟ್ |

ಟಾರಿನಿಂದ ದೊರಕುವ ಮುಖ್ಯವಾದ ಹೈಡ್ರೊಕಾರ್ಬನ್ನುಗಳು ಇವು: ಬೆಂಝೀನ್ (ಕುದಿಬಿಂದು 80° ಸೆಂ.); ಟಾಲೀನ್ (ಕು.ಬಿಂ.110° ಸೆಂ.), ಮೆಟಾಅರ್ಥೋ ಮತ್ತು ಪ್ಯಾರಾ ಕ್ಸೈಲೀನುಗಳ ಮಿಶ್ರಣ (ಕು.ಬಿಂ.144° ಸೆಂ,139° ಸೆಂ. 138° ಸೆಂ.), ಇಂಡೀನ್ (ಕು.ಬಿಂ.181° ಸೆಂ.), ನ್ಯಾಫ್ತಲೀನ್ (ಕು.ಬಿಂ. 218° ಸೆಂ. ದ್ರವಿಸುವ ಬಿಂದು 80° ಸೆಂ.), ಆಲ್ಫ ಮೀಥೈಲ್ ನ್ಯಾಫ್ತಲೀನ್ (ಕು.ಬಿಂ. 245° ಸೆಂ.), ಬೀಟ ಮೀಥೈಲ್ ನ್ಯಾಫ್ತಲೀನ್ (ಕು.ಬಿಂ. 241° ಸೆಂ. ದ್ರ..ಬಿಂ. 32° ಸೆಂ.), ಡೈಫೀನೈಲ್ (ಕು.ಬಿಂ. 254° ಸೆಂ.ದ್ರ.ಬಿಂ. 69° ಸೆಂ.), ಅಸಿನ್ಯಾಫ್ತಲೀನ್ (ದ್ರ.ಬಿಂ.95° ಸೆಂ.), ಫ್ಲೂರಿನ್ (ದ್ರ.ಬಿಂ.114° ಸೆಂ.), ಫೆನಾಂಥ್ರೀನ್ (ದ್ರ.ಬಿಂ.101° ಸೆಂ.), ಆಂಥ್ರಸೀನ್ (ದ್ರ.ಬಿಂ.216°

ಸೆಂ.), ಪ್ಲುರಾಂಥೀನ್ (ದ್ರ..ಬಿಂ.110° ಸೆಂ.), ಪೈರೀನ್ (ದ್ರ.ಬಿಂ.150° ಸೆಂ.) ಮತ್ತು ಕ್ರೈಸೀನ್ (ದ್ರ.ಬಿಂ.255° ಸೆಂ.) ಇವೆಲ್ಲ ಆರೋಮ್ಯಾಟಿಕ್ ಅಥವಾ ಆವರ್ತಸಂಯುಕ್ತಗಳು. ಇವಲ್ಲದೆ ಟಾರಿನಿಂದ ಸೈಕ್ಲೋಪೆಂಟಾಡಯೀನನ್ನು (ದ್ರ.ಬಿಂ.41° ಸೆಂ.) ಔದ್ಯೋಗಿಕ ಪರಿಮಾಣದಲ್ಲಿ ಪಡೆಯಬಹುದು. ಈ ವಸ್ತು ಮತ್ತು ಬೆಂಜೀನ್ ಮತ್ತು ಟಾಲೀನುಗಳು ಲಘು ತೈಲಾಂಶದಲ್ಲಿ ದೊರೆಯುತ್ತದೆ. ಆಂಶಿಕ ಆಸವನದಿಂದ ಬೆಂಜೀನ್ ಮತ್ತು ಟಾಲೀನುಗಳನ್ನು ಪ್ರತ್ಯೇಕಿಸಬಹುದು. ಮೂರು ಬಗೆಯ ಕ್ಸೈಲೀನುಗಳ ಕುದಿಬಿಂದುಗಳಲ್ಲಿ ಅಷ್ಟೇನೂ ಅಂತರವಿಲ್ಲದ್ದರಿಂದ ಅವನ್ನು ಪರಸ್ಪರವಾಗಿ ಆಂಶಿಕ ಆಸವನದಿಂದ ಪ್ರತ್ಯೇಕಿಸುವುದು ಸುಲಭವಲ್ಲ. ಟಾರಿನಲ್ಲಿ ದೊರಕುವ ವಸ್ತುಗಳಲ್ಲೆಲ್ಲ ಅತ್ಯಧಿಕ ಮೊತ್ತದಲ್ಲಿರುವ ಸಂಯುಕ್ತ ನ್ಯಾಫ್ಥಲೀನ್ ಟಾರಿನಲ್ಲಿ (ಪ್ರತಿಶತ 11 ಭಾಗ), ಕೋಲ್ ಟಾರಿನ ಉದ್ಯಮದ ಪ್ರಾರಂಭದಲ್ಲಿ ಆಂಥ್ರಸೀನಿನ ತಯಾರಿಕೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಯಿತು. ಈ ಸಂಯುಕ್ತದಿಂದ ಪ್ರಥಮಬಾರಿಗೆ ಅಲಿಸರೀನ ಎಂಬ ನೈಸರ್ಗಿಕವಾಗಿ ದೊರೆಯುವ ವರ್ಣ ವಸ್ತುವನ್ನು ಸಂಶ್ಲೇಷಿಸಲಾಯಿತು. ಇಂಡಾಂಥ್ರೋನ್ ವರ್ಣವಸ್ತುಗಳ ಸಂಶೋಧನೆಯ ಫಲವಾಗಿ ಆಂಥ್ರಾಸೀನಿನ ಉಪಯೋಗ ಮತ್ತಷ್ಟು ಹೆಚ್ಚಿತು. ವಾಸ್ತವವಾಗಿ ಅಧಿಕ ಉಷ್ಣತೆಯಲ್ಲಿ ಬಾಷ್ಪಶೀಲವಾಗುವ ಅಂಶಗಳನ್ನು ಆಂಥ್ರಾಸೀನಿನ ಸಲುವಾಗಿಯೇ ಬಳಸಲಾಗುತ್ತಿತ್ತು. ಪಟ್ಟಿಮಾಡಲಾಗಿರುವ ಉಳಿದ ಹೈಡ್ರೊಕಾರ್ಬನುಗಳನ್ನು ಪ್ರತ್ಯೇಕಿಸುವುದು ಸುಲಭವಲ್ಲ. ಇವು ಇತ್ತೀಚೆಗೆ ಮಾತ್ರ ಮಾರುಕಟ್ಟೆಯಲ್ಲಿ ದೊರೆಯುತ್ತಿವೆ.

ಟಾರಿನಿಂದ ದೊರೆಯುವ ಸಾರಜನಕಯುತ ಪ್ರತ್ಯಾಮ್ಲಗಳಲ್ಲಿ ಪಿರಿಡಿನ್ (ಕು.ಬಿಂ.115° ಸೆಂ.), ಆಲ್ಫ ಪಿಕೋಲಿನ್ (ಕು.ಬಿಂ.129° ಸೆಂ.), ಬೀಟ ಪಿಕೋಲಿನ್ (ಕು.ಬಿಂ.143° ಸೆಂ.), ಗಾಮ ಪಿಕೋಲಿನ್ (ಕು.ಬಿಂ.143° ಸೆಂ.), ಕ್ವಿನೋಲಿನ್ (ಕು.ಬಿಂ. 238° ಸೆಂ.), ಐಸೋಕ್ವಿನೋಲಿನ್ (ಕು.ಬಿಂ. 242° ಸೆಂ),ಕ್ವಿನಾಲ್ಡೀನ್ (ಕು.ಬಿಂ.247° ಸೆಂ.), ಇಂಡೋಲ್ (ದ್ರ.ಬಿಂ. 52° ಸೆಂ.), ಅಕ್ರಿಡಿನ್ (ದ್ರವನ ಬಿಂದು 111°ಸೆಂ.) ಮತ್ತು ಕಾರ್ಬಸೋಲ್ (ದ್ರ.ಬಿಂ.238° ಸೆಂ.) ಮುಖ್ಯವಾದವು. ಇಂಡೋಲ್ ಮತ್ತು ಕಾರ್ಬಸೋಲುಗಳ ವಿನಾ ಮಿಕ್ಕೆಲ್ಲವೂ ಸಾರರಿಕ್ತ ಪ್ರತ್ಯಾಮ್ಲಗಳಂತೆ ವರ್ತಿಸುತ್ತವೆ. ಆಕ್ಸಿಜನ್ನನ್ನು ಒಳಗೊಂಡಿರುವ ಅನೇಕ ವಸ್ತುಗಳನ್ನು ಸಹ ಟಾರಿನಿಂದ ಪಡೆಯಬಹುದು. ಇವುಗಳ ಪೈಕಿ ಫೀನಾಲ್ (ಕು.ಬಿಂ.181° ಸೆಂ.), ಆರ್ಥೋಕ್ರೆಸಾಲ್ (ಕು.ಬಿಂ.191° ಸೆಂ.), ಮೆಟಕ್ರೆಸಾಲ್ (ಕು.ಬಿಂ.201° ಸೆಂ.) ಮತ್ತು ಪ್ಯಾರಾಕ್ರೆಸಾಲ್ (ಕು.ಬಿಂ.201° ಸೆಂ). ನಾಲ್ಕು ಬಗೆಯ ಕ್ಸೈಲಿನಾಲುಗಳು. ಆಲ್ಫ ನ್ಯಾಫಾಲ್ (ದ್ರ. ಬಿಂ. 94° ಸೆಂ.) ಬೀಟ ನ್ಯಾಫ್ತಾಲ್ (ದ್ರ.ಬಿಂ.122° ಸೆಂ.) ಮತ್ತು ಡೈಫೆನೀಲೀನ್ ಆಕ್ಸೈಡ್ (ದ್ರ.ಬಿಂ.80° ಸೆಂ.) ಮುಖ್ಯವಾದವು. ಇವು ಸಾರರಿಕ್ತ ಆಮ್ಲಗಳಾದ್ದರಿಂದ ಟಾರನ್ನು ಅಥವಾ ಅದರ ಅಂಶಗಳನ್ನು ಸಾರರಿಕ್ತ ಪಾರೀಕರಿಸಿ ಇವನ್ನು ತಟಸ್ಥ ಮತ್ತು ಪ್ರತ್ಯಾಮ್ಲಗಳಿಂದ ಪ್ರತ್ಯೇಕಿಸಬಹುದು. ಹೀಗೆ ದೊರೆತ ಮಿಶ್ರಣವನ್ನು ಔದ್ಯೋಗಿಕ ಗಾತ್ರದಲ್ಲಿ ಪುನಃ ಆಸವಿಸಿ ಫೀನಾಲ್ ಅರ್ಥೋಕ್ರೇಸಾಲ್, ಮೆಟಾಕ್ರೇಸಾಲ್ ಮತ್ತು ಪ್ಯಾರಾಕ್ರೇಸಾಲುಗಳ ಮಿಶ್ರಣವನ್ನು ಪಡೆಯಬಹುದು. ಕ್ರೇಸಾಲ್ ಮತ್ತು ಕ್ಸೈಲಿನಾಲುಗಳನ್ನು ಪ್ರತ್ಯೇಕಿಸಲು ಎಚ್ಚರಿಕೆಯಿಂದ ಆಯ್ದು ತೆರದಲ್ಲಿ ಒತ್ತರಿಸಿ ಬಳಿಕ ಸಲ್ಫೋನೀಕರಣ ಮಾಡಬೇಕು.

ಟಾರಿನಿಂದ ಮೇಲೆ ತಿಳಿಸಿರುವ ನಲವತ್ತು ವಸ್ತುಗಳಲ್ಲದೆ ನೂರಕ್ಕೂ ಮಿಗಿಲಾಗಿ ಇತರ ಸಂಯುಕ್ತಗಳು ದೊರೆತಿವೆ. ಇವನ್ನು ಪ್ರತ್ಯೇಕಿಸುವುದು ಶ್ರಮಸಾಧ್ಯವಾದ ಕೆಲಸ. ಹೀಗಾಗಿ ಇವು ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ದೊರೆಯುವುದಿಲ್ಲ. ಬೆಂಜನಾಯ್ಡ್ ಸಂಯುಕ್ತಗಳು ಸ್ವಯಂ ಟಾರಿನಲ್ಲಿರುವುದಿಲ್ಲ. ಹೆಚ್ಚಿನ ಉಷ್ಣತೆಗೆ ಟಾರನ್ನು ಕಾಸಿದಾಗ ಇವು ಉತ್ಪತ್ತಿಯಾಗುತ್ತವೆ. ಟಾರನ್ನು ಪಡೆಯುವ ವಿಧಾನದಲ್ಲಿ ಕಲ್ಲಿದ್ದಲನ್ನು 1,000°-1,300° ಸೆಂ. ವರೆಗೆ ಕಾಸಿದಾಗ ಕಲ್ಲಿದ್ದಲಿನಲ್ಲಿರುವ ಅನೇಕ ಬೃಹದಣುಗಳು ಒಡೆದು ಅವುಗಳ ತುಣುಕುಗಳು ಹಂತಶ್ರೇಣಿಗಳಲ್ಲಿ ಪುನಃ ಸಂಯೋಜಿತವಾಗಿ ನಾನಾಬಗೆಯ ಸಂಯುಕ್ತಗಳು ಉತ್ಪತ್ತಿಯಾಗುತ್ತವೆ ಎಂದು ಭಾವಿಸಲಾಗಿದೆ. ಕಲ್ಲಿದ್ದಲನ್ನು ನಿರ್ವಾತ ಸ್ಥಿತಿಯಲ್ಲಿ ಅಲ್ಪತರ ಉಷ್ಣತೆಯಲ್ಲಿ ಆಸವಿಸಿ ಟಾರನ್ನು ಪಡೆಯುವ ಪ್ರಯತ್ನಗಳು ನಡೆದಿವೆ. ಹೀಗೆ ಪಡೆದ ಟಾರಿನಲ್ಲಿ ಪ್ಯಾರಾಫಿನ್ ಶ್ರೇಣಿಗೆ ಸೇರಿದ ಸಂಯುಕ್ತಗಳು ಮತ್ತು ಹೈಡ್ರೊ ಆರೋಮ್ಯಾಟಿಕ್ ಸಂಯುಕ್ತಗಳು ಅಧಿಕ ಮೊತ್ತದಲ್ಲಿರುತ್ತವೆ.

ಟಾರಿನಿಂದ ಪಡೆದ ಸಂಯುಕ್ತಗಳಿಂದ ಅನೇಕ ಬಗೆಯ ವರ್ಣವಸ್ತುಗಳು, ಔಷಧಿಗಳು ಮತ್ತು ನಾನಾ ಬಗೆಯ ಆರ್ಗ್ಯಾನಿಕ್ ವಸ್ತುಗಳನ್ನು ತಯಾರಿಸಲಾಗುತ್ತಿದೆ. ಟಾರನ್ನು ಅಥವಾ ಅದರ ಅಂಶಗಳನ್ನು ಜಲರೋಧೀ (ವಾಟರ್ ಪ್ರೂಫ್) ಸಾಮಗ್ರಿಗಳನ್ನು ಮತ್ತು ರಂಗುಗಳನ್ನು (ಪೆಯಿಂಟ್) ತಯಾರಿಸಲು, ರಸ್ತೆಗಳಿಗೆ ಮತ್ತು ಕೊಳವೆಗಳಿಗೆ ಬಳಿಯುಲು, ಮೇಲ್ಚಾವಣಿಗೆ ರಕ್ಷಣೆ ನೀಡಲು ಉಪಯೋಗಿಸುತ್ತಾರೆ. ವಿದ್ಯುನ್ನಿರೋಧಕವಾಗಿಯೂ ಕ್ರಿಮಿನಾಶಕಗಳ ತಯಾರಿಕೆಯಲ್ಲೂ ಇದನ್ನು ಬಳಸಲಾಗಿದೆ.

ಕೋಲ್ ಟಾರನ್ನು ಆಸವಿಸಿ ಆವಿಯಾಗುವ ಅಂಶಗಳನ್ನು ಪ್ರತ್ಯೇಕಿಸಿದ ತರುವಾಯ ಕಂದುಬಣ್ಣದ ಇಲ್ಲವೆ ಕಪ್ಪುಬಣ್ಣದ ಹುಡಿಯಂಥ ಪದಾರ್ಥ ಹಿಂದುಳಿಯುತ್ತದೆ. ಸಾಮಾನ್ಯವಾಗಿ ದೊರೆಯುವ ಟಾರಿನಲ್ಲಿ ಶೇ. 40-50 ಭಾಗದಷ್ಟಿರುವ ಈ ವಸ್ತುವಿನಲ್ಲಿ ಪಾಲಿನ್ಯೂಕ್ಲಿಯರ್ ಸಂಯುಕ್ತಗಳ ಪ್ರಮಾಣವೇ ಹೆಚ್ಚು. ಇದಕ್ಕೆ ಅಪೇಕ್ಷಣೀಯವಾದ ಕೆಲವು ಗುಣಗಳಿವೆ. ಇದರ ಶ್ಯಾನತೆ ಕಾಸಿದಾಗ ಕೂಡ ತಗ್ಗುವುದಿಲ್ಲ. ನೀರನ್ನು ನಿರೋಧಿಸುತ್ತದೆ. ಕಾಸಿದಾಗ ವಿಭಜನೆಯಾಗದೆ ಸ್ಥಿರವಾಗಿರುತ್ತದೆ ಮತ್ತು ಸೂಕ್ಷ್ಮಜೀವಿಗಳಿಂದ ಜೀರ್ಣವಾಗುವುದಿಲ್ಲ. ಇವೆಲ್ಲ ಗುಣಗಳಿಂದಾಗಿ ಇದು ಬಹಳ ಉಪಯುಕ್ತ ವಸ್ತುವೆನಿಸಿದೆ. ಇಂಗಾಲದ ಎಲೆಕ್ಟ್ರೋಡುಗಳನ್ನು ಬಂಧಿಸಲು; ರಂಗುಗಳು ಮತ್ತು ಲೇಪನಗಳ ಅಡಿಪಾಯದಂತೆ; ವಿದ್ಯುತ್ ವಾಹಕಗಳನ್ನು ಒಯ್ಯುವ ಮತ್ತು ಒಳಚರಂಡಿ ವ್ಯವಸ್ಥೆಯಲ್ಲಿ ಬಳಸುವ ಕೊಳವೆಗಳ ರಕ್ಷಣೆಗಾಗಿ; ಎರಕಹೊಯ್ಯುವ ಉದ್ಯಮದಲ್ಲಿ; ಕುಲುಮೆಗಳನ್ನು ಕಟ್ಟುವಾಗ ಬಳಸುವ ಉಷ್ಣನಿರೋಧಿ ಇಟ್ಟಿಗೆಗಳನ್ನು ಕೂಡಿಸಲು–ಇವೇ ಮುಂತಾದ ಕೆಲಸಗಳಲ್ಲಿ ಇದನ್ನು ಉಪಯೋಗಿಸುತ್ತಾರೆ. (ಎಚ್.ಎಸ್.ಎಸ್.)

**ಕೋಲ್‍ಬ್ರೂಕ್, ಹೆನ್ರಿ ಥಾಮಸ್** : 1765–1837. ಆಂಗ್ಲ ವಿದ್ವಾಂಸ, ಪ್ರಥಮವರ್ಗದ ಪ್ರಾಚ್ಯಶಾಸ್ತ್ರಜ್ಞ, ಸಂಸ್ಕೃತವನ್ನು ಹಸ್ತಗತಮಾಡಿಕೊಂಡು ತನ್ಮೂಲಕ ಭಾರತೀಯ ನ್ಯಾಯಶಾಸ್ತ್ರಾದಿಗಳನ್ನು ವ್ಯಾಸಂಗಮಾಡ ಹೊರಟ ಐರೋಪ್ಯ ವಿದ್ವಾಂಸರಲ್ಲಿ ಮೊದಲಿಗ. ಈತ ಜಾರ್ಜ್ ಕೋಲ್‍ಬ್ರೂಕನ ಮಗ. ಹುಟ್ಟಿದ್ದು ಲಂಡನ್ನಿನಲ್ಲಿ. ಚಿಕ್ಕಂದಿನಿಂದಲೂ ವಿದ್ಯೆಯಲ್ಲಿ ಆಸಕ್ತಿಯುಳ್ಳ ಈತ ತನ್ನ ಹದಿನೇಳನೆಯ ವಯಸ್ಸಿನಲ್ಲೇ ವಿಶ್ವವಿದ್ಯಾಲಯದ ಪದವೀಧರನಿಗಿರಬೇಕಾದಷ್ಟು ಜ್ಞಾನವನ್ನು ಸಂಪಾದಿಸಿಕೊಂಡಿದ್ದ.

ಈತ 1782ರಲ್ಲಿ ಭಾರತಕ್ಕೆ ಬಂದು ಬಂಗಾಳದ ಸಿವಿಲ್ ಸರ್ವಿಸ್ಸಿನಲ್ಲಿ ಕೆಲಸಕ್ಕೆ ಸೇರಿ ಕೆಲ ಕಾಲದಲ್ಲಿಯೇ ರೆವಿನ್ಯೂ ಅಧಿಕಾರಿಯಾದ. ಆ ಸಮಯದಲ್ಲಿ ರಿಮಾರ್ಕ್ಸ್ ಆನ್ ದಿ ಹಸ್ಬೆಂಡ್ರಿ ಅಂಡ್ ಕಾಮರ್ಸ್ ಆಫ್ ಬೆಂಗಾಲ್ ಎಂಬ ಗ್ರಂಥವನ್ನು ಬರೆದ. ಈಸ್ಟ್ ಇಂಡಿಯ ಕಂಪನಿಯ ಸೇವಾವೃತ್ತಿಯಲ್ಲಿದ್ದರೂ ತನ್ನ ಲೇಖನದಲ್ಲಿ ಸರ್ಕಾರದ ವಾಣಿಜ್ಯನೀತಿಯನ್ನು ಕುರಿತು ಕಟುವಾಗಿ ಟೀಕಿಸಿರುವುದು ಈತನ ನಿಷ್ಪಕ್ಷಪಾತಬುದ್ಧಿಗೆ ನಿದರ್ಶನವಾಗಿದೆ. ಈ ಗ್ರಂಥ ಇಂಗ್ಲೆಂಡಿನಲ್ಲಿ ಪ್ರಕಟವಾಗಲಿಲ್ಲ. ಇದನ್ನು ಕೋಲ್‍ಬ್ರೂಕನೇ ಖಾಸಗಿಯಾಗಿ ಭಾರತದಲ್ಲಿ ಪ್ರಕಟಿಸಿದ (1795).

ಭಾರತದಲ್ಲಿ ಸಮರ್ಥಶಾಲಿ ಅಧಿಕಾರಿ ಎನ್ನಿಸಿಕೊಳ್ಳಬೇಕಾದರೆ ಭಾರತೀಯ ಸಂಸ್ಕೃತಿಯ ಪರಿಚಯ ಸಂಸ್ಕೃತ ಭಾಷೆಯ ಜ್ಞಾನ ಅತ್ಯಂತ ಆವಶ್ಯಕವೆಂದು ಮನಗಂಡ ಈತ ಸಂಸ್ಕೃತಭಾಷಾಧ್ಯಯನವನ್ನು ಆರಂಭಿಸಿ ಅಲ್ಪಕಾಲದಲ್ಲಿಯೆ ಸಂಸ್ಕೃತಭಾಷೆಯ ಮೇಲೆ ಹತೋಟಿ ಪಡೆದ. ಅದೇ ಸಮಯದಲ್ಲಿ ಸರ್ ವಿಲಿಯಂ ಜೋನ್ಸ್ ಸಿದ್ಧಪಡಿಸಿದ್ದ ಭಾರತೀಯ ನ್ಯಾಯಶಾಸ್ತ್ರ ಗ್ರಂಥವನ್ನು ಎ ಡೈಜೆಸ್ಟ್ ಆಫ್ ಹಿಂದೂ ಲಾ ಆನ್ ಕಾನ್ಟ್ರ್ಯಾಕ್ಟ್ಸ್ ಅಂಡ್ ಸಕ್ಸೆಷನ್ಸ್ (1798) ಎಂಬ ಶೀರ್ಷಿಕೆಯಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿದ. ಇದರಿಂದ ಈತನ ಕೀರ್ತಿ ಎಲ್ಲೆಲ್ಲಿಯೂ ಹರಡಿತು. ಆಗ ಈತ ಬರೆದ ಅನೇಕ ಲೇಖನಗಳು ಏಷ್ಯಾಟಿಕ್ ರಿಸರ್ಚ್ ಪತ್ರಿಕೆಯಲ್ಲಿ ಪ್ರಕಟವಾಗಿವೆ.

1801ರಲ್ಲಿ ಕೋಲ್‍ಬ್ರೂಕ್ ಕೊಲ್ಕತ್ತೆಯ ಹೊಸ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಂಡ. ಅದೇ ಸಮಯದಲ್ಲಿ (1805) ಈತ ತನ್ನ ವಿರಾಮ ಕಾಲದಲ್ಲಿ ಕೊಲ್ಕತ್ತೆಯ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ವೇತನರಹಿತ ಸಂಸ್ಕೃತ ಪ್ರಾಧ್ಯಾಪಕನಾಗಿ ಕೆಲಸ ಮಾಡತೊಡಗಿದ್ದನ್ನು ನೋಡಿದರೆ ಈತನಿಗೆ ಸಂಸ್ಕೃತದ ಬಗ್ಗೆ ಇದ್ದ ಅಪಾರ ಆಸಕ್ತಿ ವ್ಯಕ್ತವಾಗುತ್ತದೆ. ಆ ಕಾಲದಲ್ಲೀತ ಸಂಸ್ಕೃತ ವ್ಯಾಕರಣವನ್ನು ಬರೆದನಲ್ಲದೆ ಪಾಣಿನಿಯ ವ್ಯಾಕರಣ, ಅಮರಕೋಶ ಮತ್ತಿತರ ಕೆಲವು ಸಂಸ್ಕೃತ ಕೋಶಗಳು, ಹಿತೋಪದೇಶ ಮತ್ತು ಕಿರಾತಾರ್ಜುನೀಯಗಳನ್ನು ಪರಿಷ್ಕರಿಸಿದ. ಜೊತೆಗೆ ಅನೇಕ ಶಾಸನಗಳನ್ನು ಪರಿಷ್ಕರಿಸಿ ಇಂಗ್ಲಿಷಿಗೆ ಭಾಷಾಂತರಿಸಿದ.

1807ರಲ್ಲಿ ಕೋಲ್‍ಬ್ರೂಕ್ ಸುಪ್ರೀಂ ಕೌನ್ಸಿಲ್ಲಿನ ಸದಸ್ಯನಾಗಿ ನೇಮಕಗೊಂಡ. ಈತ ಬರೆದ ಎಸ್ಸೆ ಆನ್ ದಿ ವೇದಾಸ್ ಎಂಬ ಲೇಖನ ಮೊದಲ ಬಾರಿಗೆ ಯುರೋಪಿಯನ್ನರಿಗೆ ಭಾರತೀಯ ಪ್ರಾಚೀನ ಸಾಹಿತ್ಯ ಮತ್ತು ಸಂಸ್ಕೃತಿಗಳ ಪರಿಚಯವನ್ನು ಮಾಡಿಕೊಟ್ಟಿತು. ಐದು ವರ್ಷಗಳಾದ ಮೇಲೆ ಈತ ಸುಪ್ರೀಂ ಕೌನ್ಸಿಲ್ ಸದಸ್ಯತ್ವವನ್ನು ತ್ಯಜಿಸಿ ಪುನಃ ತನ್ನ ಸಾಹಿತ್ಯ ಸೇವೆಯನ್ನು ಪ್ರಾರಂಭಿಸಿದ. 1810ರಲ್ಲಿ ಜೀಮೂತವಾಹನನ ದಾಯಭಾಗವನ್ನೂ ಅದೇ ವಿಷಯವನ್ನು ಕುರಿತ ಮಿತಾಕ್ಷರದ ಕೆಲವು ಭಾಗಗಳನ್ನೂ ಇಂಗ್ಲಿಷಿಗೆ ಭಾಷಾಂತರಿಸಿದ.

ಕೋಲ್‍ಬ್ರೂಕನಿಗಿದ್ದ ಜ್ಞಾನದಾಹ ಅಪರಿಮಿತವಾದುದು. ಭಾಷಾವಿಜ್ಞಾನ, ಖಗೋಳವಿಜ್ಞಾನ, ಧರ್ಮಶಾಸ್ತ್ರ, ಗಣಿತವಿಜ್ಞಾನಗಳಲ್ಲದೆ ಸಾಂಖ್ಯ, ನ್ಯಾಯ, ವೈಶೇಷಿಕ, ಮೀಮಾಂಸಾ ಮತ್ತು ವೇದಾಂತಶಾಸ್ತ್ರಗಳೆಲ್ಲವುಗಳಲ್ಲೂ ಈತ ಸಾಕಷ್ಟು ಪರಿಶ್ರಮ ಪಡೆದಿದ್ದ.

1814ರಲ್ಲಿ ಇಂಗ್ಲೆಂಡಿಗೆ ಹಿಂತಿರುಗುವಾಗ ತಾನು ಹತ್ತು ಸಾವಿರ ಪೌಂಡ್ ವೆಚ್ಚಮಾಡಿ ಸಂಗ್ರಹಿಸಿದ್ದ ಭಾರತದ ಅನೇಕ ಪ್ರಾಚೀನ ತಾಲಪತ್ರ ಗ್ರಂಥ, ಲೇಖನಗಳನ್ನು ಈಸ್ಟ್

ಇಂಡಿಯ ಕಂಪನಿಗೆ ಕೊಟ್ಟ ಈ ಗ್ರಂಥರಾಶಿ ಲಂಡನ್ನಿನ ಇಂಡಿಯ ಆಫೀಸ್ ಗ್ರಂಥಾಲಯದಲ್ಲಿ ಇಂದಿಗೂ ಅತ್ಯಮೂಲ್ಯ ನಿಧಿಯಾಗಿ ಇದೆ. (ಸಿ.ಆರ್.ಎ.)

**ಕೋಲ್‌ಮನ್, ಜಾರ್ಜ್ (ಹಿರಿಯ) :** 1732–94. ಆಂಗ್ಲ ನಾಟಕಕಾರ. ಹುಟ್ಟಿದ್ದು ಫ್ಲಾರೆನ್ಸಿನಲ್ಲಿ. ವಿದ್ಯಾಭ್ಯಾಸ ವೆಸ್ಟ್‌ಮಿನ್‌ಸ್ಟರ್ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ. ವೃತ್ತಿಯಿಂದ ಈತ ವಕೀಲ. ಗ್ಯಾರಿಕ್‌ನ ಗೆಳೆಯನಾದ ಈತ ಹಲವು ರಂಗಮಂದಿರಗಳ ಸ್ವಾಮ್ಯದಲ್ಲಿ ಪಾಲು ಪಡೆದಿದ್ದ. ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಈತ ರಚಿಸಿದ್ದಾನೆ. ಹಾಸ್ಯನಾಟಕಗಳಲ್ಲಿ ಭಾವಾವೇಶ ಮತ್ತು ಉಪದೇಶ ಮನೋವೃತ್ತಿ ಪ್ರಬಲವಾಗಿದ್ದಾಗ ನಿಜವಾದ ಹಾಸ್ಯವನ್ನು ಉಳಿಸಿಕೊಂಡವ ಕೋಲ್‌ಮನ್. ಫೀಲ್‌ಡಿಂಗ್‌ನ ಟಾಮ್ ಜೋನ್ಸ್‌ನ ಆಧಾರದ ಮೇಲೆ ದಿ ಜಲಸ್ ವೈಫ್ (1761) ಎಂಬ ಹಾಸ್ಯನಾಟಕವನ್ನು ರಚಿಸಿದ. ದಿ ಕ್ಲ್ಯಾನ್‌ಡೆಸ್ಟೈನ್ ಮ್ಯಾರೇಜ್‌ನಲ್ಲಿ (1766) ಸಹಜವಾದ ಹಾಸ್ಯ ತುಂಬಿತುಳುಕುತ್ತಿದೆ. ಜೀವಕಳೆ ಇರುವ ಪಾತ್ರಗಳನ್ನು ಅಲ್ಲಿ ಕಾಣುತ್ತೇವೆ. ಅಶ್ಲೀಲತೆಗೆ ಎಡೆಗೊಡದಂತೆ ತನ್ನ ನಾಟಕಗಳಲ್ಲಿ ಈತ ಲವಲವಿಕೆಯನ್ನು ತಂದಿದ್ದಾನೆ. ಲಿಟರರಿ ಕ್ಲಬ್ಬಿನ ಸದಸ್ಯನಾಗಿದ್ದ ಕೋಲ್‌ಮನ್ ಟೆರೆನ್ಸ್ ಮತ್ತು ಹಾರೆಸರ ಕೃತಿಗಳನ್ನು ಭಾಷಾಂತರಿಸಿದ್ದಾನೆ. ಬೊಮಾಂಟ್, ಫ್ಲೆಚರ್ ಮತ್ತು ಬೆನ್‌ಜಾನ್‌ಸನ್‌ರ ನಾಟಕಗಳನ್ನು ಸಂಪಾದಿಸಿದ್ದಾನೆ. ಅತಿಭಾವುಕತೆ ಇನ್ನೂ ಪ್ರಬಲಗೊಳ್ಳುತ್ತಿದ್ದ ಕಾಲದಲ್ಲಿ ಅದನ್ನು ಹಾಸ್ಯ ಮಾಡಿದ ಈತನ ಕೃತಿಗಳಲ್ಲಿ ಷೆರಿಡನ್ ಮತ್ತು ಗೋಲ್ಡ್‌ಸ್ಮಿತ್‌ರ ಕೃತಿಗಳ ಮುನ್ಸೂಚನೆಯನ್ನು ಕಾಣಬಹುದಾಗಿದೆ. (ಎಲ್.ಎಸ್.ಎಸ್.)

**ಕೋಲ್‌ಮನ್, ಲೆಸ್ಲಿ ಸಿ :** 1878–1954. ಮೈಸೂರು ಸಂಸ್ಥಾನದಲ್ಲಿ ಆಧುನಿಕ ಕೃಷಿಯ ಪ್ರವರ್ತಕರೆಂದು ಪ್ರಸಿದ್ಧರು. ಜನನ ಕೆನಡ ದೇಶದ ಟೊರಾಂಟೋ ರಾಜ್ಯದ ಆಂಟೇರಿಯೋ ಪಟ್ಟಣದಲ್ಲಿ. ಆಂಟೇರಿಯೋ ವಿಶ್ವವಿದ್ಯಾಲಯದ ಎಂ.ಎ. ಪದವೀಧರರು. ಮೈಸೂರು ಸರ್ಕಾರದ ನೆರವಿನಿಂದ ಜರ್ಮನಿಯ ಗಟಿಂಗೆನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸಿ ಡಾಕ್ಟರೇಟ್ ಪದವಿ ಪಡೆದರು. ಮೊದಲು ಸಂಸ್ಥಾನ ಸರ್ಕಾರದ ಕೀಟ ಮತ್ತು ಶಿಲೀಂಧ್ರವಿಜ್ಞಾನಿಯಾಗಿಯೂ (1908) ತರುವಾಯ ವ್ಯವಸಾಯ ಇಲಾಖೆಯ ನಿರ್ದೇಶಕರಾಗಿಯೂ (1913) ದುಡಿದು 1934ರಲ್ಲಿ ನಿವೃತ್ತರಾದರು. ಈ ಕಾಲು ಶತಮಾನದ ನಿಷ್ಠಾವಂತ ಮತ್ತು ದಕ್ಷ ಸೇವೆಯ ಮೂಲಕ ಕೋಲ್ಮನ್ ಮೈಸೂರಿನಲ್ಲಿ ಕೃಷಿರಂಗದ ಸರ್ವತೋಮುಖ ಪ್ರಗತಿಗೆ ಕಾರಣರಾದರು. ಅಮೆರಿಕ, ಜರ್ಮನಿ ಮುಂತಾದ ಮುಂದುವರಿದ ದೇಶಗಳಲ್ಲಿ ಅನುಷ್ಠಾನಕ್ಕೆ ತಂದಿದ್ದ ಸುಧಾರಣೆಗಳನ್ನು ಮೈಸೂರಿನ ಸ್ಥಿತಿಗತಿಗಳಿಗೆ ತಕ್ಕಂತೆ ಮಾರ್ಪಾಡು ಮಾಡಿ ಅನ್ವಯಿಸುವ ಮೂಲಕ ಇಲ್ಲಿನ ಕೃಷಿಪದ್ಧತಿಯನ್ನು ವೈಜ್ಞಾನಿಕ ಬುನಾದಿಯ ಮೇಲೆ ಸ್ಥಾಪಿಸಿ ಆಧುನೀಕರಿಸುವ ಪ್ರಯತ್ನ ಬಹಳ ಮಟ್ಟಿಗೆ ಸಫಲಗೊಂಡಿತು. ಅಂದಿನ ಮೈಸೂರು ಕೃಷಿರಂಗದಲ್ಲಿ ಕೋಲ್ಮನ್ ತಂದ ವಿವಿಧ ಸುಧಾರಣೆಗಳನ್ನು ಪಟ್ಟಿಮಾಡುವುದು ಕಷ್ಟ; ಆದರೂ ಕೆಲವು ಹೆಗ್ಗುರುತುಗಳನ್ನು ಸ್ಮರಿಸಬಹುದು.

ಮಲೆನಾಡಿನ ಮುಖ್ಯ ಬೆಳೆ ಅಡಕೆಗೆ ಹತ್ತುವ ಶಿಲೀಂಧ್ರಜನ್ಯ ಕೊಳೆರೋಗದಿಂದ ಬೆಳೆಗಾರರು ಕಂಗಾಲಾಗಿದ್ದರು. ಆಳವಾದ ಮತ್ತು ವ್ಯಾಪಕ ಸಂಶೋಧನೆಗಳನ್ನು ನಡೆಸಿದ ಕೋಲ್ಮನ್ ಫೈಟಾಫ್ಥೊರ ಅರಕೀ ಎಂಬ ವೈಜ್ಞಾನಿಕ ಹೆಸರಿನ ಆ ಶಿಲೀಂಧ್ರದ ರೂಪರೇಖೆಗಳನ್ನು ವಿವರಿಸಿ ಅದರ ಹಾವಳಿಯನ್ನು ತಡೆಗಟ್ಟಲು ಬೋರ್ಡೋ (ಮೈಲುತುತ್ತ ಮತ್ತು ಸುಣ್ಣದ ತಿಳಿ) ಮಿಶ್ರಣದ ಸಿಂಪಡಿಕೆಯನ್ನು ಅಳವಡಿಸಿಕೊಟ್ಟರು. ಮುಂಗಾರು–ಹಿಂಗಾರು ಮಳೆಗಳ ಅವಧಿಯಲ್ಲಿ ಸಮರೋಪಾದಿಯಾಗಿ ವ್ಯವಸ್ಥೆಗೊಳಿಸಿದ್ದ ಕಾರ್ಯಕ್ರಮ ಈಗಲೂ ಸೂಕ್ತ ಮಾರ್ಪಾಡುಗಳೊಂದಿಗೆ ಅಸ್ತಿತ್ವದಲ್ಲಿದೆ. ಹಾಗೆಯೇ ಕಾಫಿ ಬೆಳೆಗೆ ಹತ್ತುವ ಎಲೆರೋಗ, ಕೊಳೆರೋಗಗಳ ದೀರ್ಘ ಅಧ್ಯಯನ ನಡೆಸಿ ಅವುಗಳ ಹತೋಟಿಗೆ ಬೋರ್ಡೋ ಮಿಶ್ರಣ ಸಿಂಪಡಿಕೆಯನ್ನು ಅನುಷ್ಠಾನಕ್ಕೆ ತಂದರು. ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಖುಷ್ಕಿ ಬೆಳೆಗಳಿಗೆ ಕಂಟಕವಾದ ಆರುಕಾಲು ಚಿಟ್ಟೆ ಅಥವಾ ಕುದುರೆ ಮೂತಿ ಚಿಟ್ಟೆಯ ಸಮಗ್ರ ಅಧ್ಯಯನ ಮಾಡಿ ಸರಳರೀತಿಯ ನಿವಾರಣೋಪಾಯ ಸೂಚಿಸಿದರು. ಇವರ ಜ್ಞಾಪಕಾರ್ಥವಾಗಿ ಆ ಮಿಡಿತೆಗೆ ಕೋಲ್ಮೇನಿಯಾ ಸ್ಫೆನೆರಿಯಾಯ್ಡೀಸ್ ಎಂಬ ವೈಜ್ಞಾನಿಕ ಹೆಸರಿದೆ. ಕೋಲಾರ ಜಿಲ್ಲೆಯ ಹೊಲಗಳಲ್ಲಿ ಮುಂಗಾರಿನಲ್ಲಿ ತಲೆದೋರುವ ಕಂಬಳಿಹುಳುವಿನ ಹತೋಟಿ, ಚಿಟ್ಟೆಗಳನ್ನು ಸಾಮೂಹಿಕವಾಗಿ ಕೈಯಿಂದ ಆರಿಸಿಹಾಕುವ ಸರಳ ರೀತಿಯಲ್ಲಿ ಸಾಧ್ಯವಾಯಿತು. ಕೋಲ್ಮನ್ನರ ಸಂಚಾಲಕತ್ವದಲ್ಲಿ ರಾಗಿ, ಬತ್ತ, ಹತ್ತಿ, ಕಬ್ಬು, ಹರಳು ಮುಂತಾದ ಬೆಳೆಗಳ ಶ್ರೇಷ್ಠ ತಳಿಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ರಮ ಅವ್ಯಾಹತವಾಗಿ ಜರುಗಿತು. ಹಲವಾರು ಕೃಷಿ ಸಂಶೋಧನ ಕೇಂದ್ರಗಳು ಸ್ಥಾಪನೆಯಾದವು, ಅನೇಕ ಹೊಸ ತಳಿಗಳು ರೈತರಿಗೆ ದೊರೆತವು. ಮಂಡ್ಯ ಜಿಲ್ಲೆಯ ಇಂದಿನ ಏಳಿಗೆಯಲ್ಲಿ ಕೋಲ್ಮನ್ನರ ರಚನಾತ್ಮಕ ಪಾತ್ರ ಉಲ್ಲೇಖಾರ್ಹ. ವಿಶ್ವೇಶ್ವರಯ್ಯ ನಾಲೆ ಪ್ರದೇಶದ ಪ್ರಗತಿ ಬಗ್ಗೆ ಅವರು ವಹಿಸಿದ ವಿಶೇಷ ಆಸಕ್ತಿಯ ಫಲವಾಗಿ ಮಂಡ್ಯ ಸಕ್ಕರೆ ನಗರವಾಯಿತು. ಕೋಲ್ಮನ್ನರ ಸಲಹೆಯಂತೆ ಉಪನಾಲೆಗಳ ಕೆಳಗಿನ ಜಮೀನುಗಳನ್ನು ತಾಕುಗಳಾಗಿ ವಿಂಗಡಿಸಿ ಅವುಗಳಲ್ಲಿ ಕಡ್ಡಾಯವಾಗಿ ಸರದಿ ಮೇಲೆ ನಿರ್ದಿಷ್ಟ ಬೆಳೆಗಳನ್ನಿಡುವ ಪದ್ಧತಿ ಅನುಷ್ಠಾನಕ್ಕೆ ಬಂತು.

ಬೆಂಗಳೂರು ನಗರದ ಸಮೀಪದ ಹೆಬ್ಬಾಳಿನಲ್ಲಿ ಕೋಲ್ಮನ್ 1913ರಲ್ಲಿ ಸ್ಥಾಪಿಸಿದ ವ್ಯವಸಾಯ ಶಾಲೆ ಈಗ ಕೃಷಿ ವಿಶ್ವವಿದ್ಯಾಲಯವಾಗಿದೆ. ರೈತಮಕ್ಕಳ ಮತ್ತು ಕ್ಷೇತ್ರನೌಕರರ ಶಿಕ್ಷಣಕ್ಕಾಗಿ ಚಿಕ್ಕನಹಳ್ಳಿ, ರಾಮಕೃಷ್ಣಾಪುರ ಮತ್ತಿತರ ರೈತ ಬಾಂಧವರ ನಡುವೆ ವಿಚಾರವಿನಿಮಯ ಕೇಂದ್ರವಾಗಿ ಮೈಸೂರು ರೈತಸಂಘ 1920ರಲ್ಲಿ ಅಸ್ತಿತ್ವಕ್ಕೆ ಬಂದು ಇಂದಿಗೂ ರೈತಜನರ ಏಳಿಗೆಗಾಗಿ ಅವಿಶ್ರಾಂತವಾಗಿ ದುಡಿಯುತ್ತಿದೆ. ಕೋಲಾರ ನೇಗಿಲು ಮುಂತಾದ ಸರಳರಚನೆಯ ಸುಧಾರಿಸಿದ ಕೃಷಿಪರಿಕರಗಳು ಟ್ರಾಕ್ಟರ್‌ನಿಂದ ಉಳುಮೆ, ರಾಸಾಯನಿಕ ಗೊಬ್ಬರಗಳ ಬಳಕೆ, ಜಾನುವಾರು ಮತ್ತು ರೇಷ್ಮೆ ಉದ್ಯಮಗಳ ಅಭಿವೃದ್ಧಿ, ಪಶುವೈದ್ಯಕೀಯ ಪ್ರಗತಿ, ಇತ್ಯಾದಿಗಳಲ್ಲಿ ಕೋಲ್ಮನ್ನರ ಕೊಡುಗೆ ಗಣನೀಯ.

ಮೃದುಸ್ವಭಾವದ ಕೋಲ್ಮನ್ನರು ರೈತಬಾಂಧವರನ್ನು ವಿಶೇಷ ಅನುಕಂಪ, ಪ್ರೀತಿ, ವಾತ್ಸಲ್ಯಗಳಿಂದ ಕಾಣುತ್ತ ಅವರ ಅಭಿಮಾನ, ಪ್ರೀತಿಗಳಿಗೆ ಪಾತ್ರರಾಗಿದ್ದರು.

ಅಂದಿನ ಮೈಸೂರು ಸರ್ಕಾರದ ಸೇವಾವಧಿ 1934ರಲ್ಲಿ ಮುಗಿದು ಸ್ವದೇಶಕ್ಕೆ ಹಿಂತಿರುಗಿದ ಮೇಲೆ ಕೋಲ್ಮನ್ ಏಡಿಗಂತಿ ರೋಗದ ಸಂಶೋಧನೆಯಲ್ಲಿ ನಿರತರಾಗಿದ್ದು ಆ ಕ್ಷೇತ್ರದಲ್ಲಿ ಸಹ ಶ್ರೇಷ್ಠ ಸಂಶೋಧಕರೆಂದು ಹೆಸರು ಪಡೆದರು. 1954ರ ಪ್ರಾರಂಭದಲ್ಲಿ ಮೈಸೂರು ಸರ್ಕಾರದ ಆಹ್ವಾನದ ಮೇಲೆ ಸಂಸ್ಥಾನದಲ್ಲಿ ಒಂದೆರಡು ತಿಂಗಳು ತಿರುಗಾಡಿ ಕೃಷಿರಂಗದ ಪ್ರಗತಿಯ ಬಗ್ಗೆ ಅಧ್ಯಯನ ನಡೆಸಿ, ಅದರ ಮುಂದಿನ ಬೆಳವಣಿಗೆಯ ರೂಪರೇಖೆಗಳನ್ನೊಳಗೊಂಡ ಸಮಗ್ರ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರು. ತರುವಾಯ ಕೆನಡ ದೇಶಕ್ಕೆ ಹಿಂತಿರುಗಿ ಪುನಃ ಏಡಿಗಂತಿ ಸಂಶೋಧನೆಯಲ್ಲಿ ತೊಡಗಿ ತತ್ಸಂಬಂಧದಲ್ಲಿ ಒಂದು ಪ್ರವಾಸ ಮಾಡುತ್ತಿದ್ದಾಗ ಮೋಟಾರು ಅಪಘಾತದಲ್ಲಿ 14 ಸೆಪ್ಟೆಂಬರ್ 1954ರಂದು ನಿಧನರಾದರು. (ಡಿ.ಎಸ್.)

**ಕೋಲ್‌ರಾಷ್, ಫ್ರೀಡರಿಚ್ ವಿಲ್‌ಹೆಲ್ಮ್ :** 1840–1910. ಜರ್ಮನಿಯ ಭೌತವಿಜ್ಞಾನಿ. ಜನನ ವೀಸರ್ ನದಿಯ ದಡದ ಮೇಲಿರುವ ರಿಂಟೆಲ್ನ್‌ನಲ್ಲಿ 1840 ಅಕ್ಟೋಬರ್ 14ರಂದು. ಈತನ ತಂದೆ ರುಡಾಲ್ಫ್ ಕೋಲ್‌ರಾಷ್ ಕೂಡ ಭೌತವಿಜ್ಞಾನದಲ್ಲಿ ಅನೇಕ ಉನ್ನತಮಟ್ಟದ ಪ್ರಯೋಗಗಳನ್ನು ನಡೆಸಿದ್ದ. ಕೋಲ್‌ರಾಷನ ವಿದ್ಯಾಭ್ಯಾಸ ಗಟಿಂಗೆನ್ ಮತ್ತು ಎರ್‌ಲಾಂಗೆನ್ ಪಟ್ಟಣಗಳಲ್ಲಿ ಆಯಿತು. ಅತ್ಯಂತ ಮೇಧಾವಿಯೆಂದು ಪರಿಗಣಿಸಲ್ಪಟ್ಟಿದ್ದರಿಂದ ಇವನಿಗೆ ತತ್‌ಕ್ಷಣವೇ ಗಟಿಂಗೆನ್‌ನಲ್ಲಿ ಪ್ರಾಧ್ಯಾಪಕನಾಗಲು ಅವಕಾಶ ದೊರಕಿತು. ಅನಂತರ ಫ್ರ್ಯಾಂಕ್‌ಫರ್ಟ್, ಡಾರ್ಮ್‌ಸ್ಟಾಟ್, ವುರ್ಸ್‌ಬರ್ಗ್, ಸ್ಟ್ರಾಸ್‌ಬರ್ಗ್ ಇಲ್ಲಿನ ಕಾಲೇಜುಗಳಲ್ಲಿ ಕೆಲಸ ಮಾಡಿ ಮುಂದೆ ಚಾರ್ಲ್‌ಟನ್‌ಬರ್ಗ್‌ನಲ್ಲಿಯ ರೀಕನ್‌ಸ್ಟಾಲ್ಟ್‌ನ ಅಧ್ಯಕ್ಷನಾಗಿ ಹೆಲ್ಮ್‌ಹೋಲ್ಟ್ಸ್‌ನ ಉತ್ತರಾಧಿಕಾರಿಯಾದ. ಈತನನ್ನು 1900ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದ ಗೌರವಪ್ರಾಧ್ಯಾಪಕನನ್ನಾಗಿ ನೇಮಿಸಿದರು. ಲಂಡನ್ನಿನ ರಾಯಲ್ ಸೊಸೈಟಿ ಮತ್ತು ಫಿಸಿಕಲ್ ಸೊಸೈಟಿ, ಯುರೋಪಿನ ಅನೇಕ ವೈಜ್ಞಾನಿಕ ಸಂಘಗಳು ಈತನನ್ನು ತಮ್ಮ ಗೌರವ ಸದಸ್ಯನನ್ನಾಗಿ ಚುನಾಯಿಸಿದ್ದುವು.

ಕೋಲ್‌ರಾಷನ ಸಂಶೋಧನೆಗಳು ಮುಖ್ಯವಾಗಿ ವಿದ್ಯುತ್ ಮತ್ತು ಕಾಂತ ಕ್ಷೇತ್ರಗಳಲ್ಲಿ ಇದ್ದವು. ಭೂಮಿಯ ಕಾಂತದ ಕ್ಷಿತಿಜೀಯ ಘಟಕವನ್ನೂ ವಿದ್ಯುತ್ ಪ್ರವಾಹವನ್ನೂ ಏಕಕಾಲದಲ್ಲಿ ಅಳೆಯಲು ಒಂದು ವಿಧಾನವನ್ನು ರೂಪಿಸಿದ. ಎಲೆಕ್ಟ್ರೊಲೈಟಿನ ಧ್ರುವೀಕರಣವನ್ನು ಕಡಿಮೆ ಮಾಡಲು ಸೇತುವೆಯಲ್ಲಿ ಪರ್ಯಾಯ ವಿದ್ಯುತ್ತನ್ನು ಬಳಸಲು ಸಲಹೆ ಕೊಟ್ಟವನು ಈತನೇ. ಇದಕ್ಕೆ ಕೋಲ್‌ರಾಷ್ ಸೇತುವೆ ಎಂದೇ ಹೆಸರು. ಇಂದಿಗೂ ಈ ವಿಧಾನವನ್ನು ಬಳಸುತ್ತಾರೆ. ದ್ರಾವಣದ ಸಾರರಿಕ್ತತೆಗೂ ಅದರ ವಿದ್ಯುದ್ವಹನತೆಗೂ ಇರುವ ಸಂಬಂಧವನ್ನು ಪರಿಶೀಲಿಸಿ ಇದರಿಂದ ಅಯಾನುಗಳ ನಿರಪೇಕ್ಷವೇಗವನ್ನು ಕಂಡುಹಿಡಿದ. 1910ರ ಜನವರಿ 17ರಂದು ನಿಧನನಾದ.

(ಡಿ.ಎಸ್.ಎಂ.; ಎ.ಸಿ.)

**ಕೋಲ್‌ರಿಜ್, ಮೇರಿ ಎಲಿಜಬೆತ್ :** 1861–1907. ಕಾದಂಬರಿಗಾರ್ತಿ ಮತ್ತು ಕವಯಿತ್ರಿ. ಸ್ಯಾಮ್ಯುಯಲ್ ಕೋಲ್‌ರಿಜ್ ಟೇಲರನ ಸಹೋದರನ ಮೊಮ್ಮಗಳು. ಹುಟ್ಟಿದ್ದು ಲಂಡನ್ನಿನಲ್ಲಿ. ವಿದ್ಯಾಭ್ಯಾಸ ಮನೆಯಲ್ಲಿಯೇ. ಚಿಕ್ಕ ವಯಸ್ಸಿನಲ್ಲೇ ಪದ್ಯಗಳನ್ನು ಬರೆಯತೊಡಗಿದ್ದಳು. ಮೊದಲ ಪ್ರಕಟಿತ ಗ್ರಂಥ ಫ್ಯಾನ್ಸೀಸ್ ಫಾಲೊಯಿಂಗ್ (1836). ಮೊದಲ ಕಾದಂಬರಿ ದಿ ಸೆವೆನ್ ಸ್ಲೀಪರ್ಸ್ ಆಫ್ ಎಫೆಸಸ್ (1893). ಈ ಕೃತಿಯನ್ನು ಸ್ಟೀವನ್‌ಸನ್ ಮನಸಾರೆ ಹೊಗಳಿದ್ದಾನೆ. ಈಕೆ ಉತ್ತಮ ಲೇಖಕಿಯೆಂದು ಪ್ರಸಿದ್ಧಿ ಪಡೆದುದು ದಿ ಕಿಂಗ್ ವಿತ್ ಟೂ ಫೇಸಸ್ (1897) ಎಂಬ ಚಾರಿತ್ರಿಕ ರಮ್ಯಕಥೆಯಿಂದ. ದಿ ಫೈರಿ ಡಾನ್ (1901), ದಿ ಷಾಡೊ ಆನ್ ದಿ ವಾಲ್ (1904), ದಿ ಲೇಡಿ ಆನ್ ದಿ ಡ್ರಾಯಿಂಗ್ ರೂಮ್ ಫ್ಲೋರ್ (1906)–ಇವು ಈಕೆಯ ಇತರ ಕಾದಂಬರಿಗಳು. ನಾನ್ ಸೆಕ್ವಿಟರ್ ಎಂಬುದು ಪ್ರಬಂಧ ಸಂಕಲನ. ಪೊಯೆಮ್ಸ್ ಓಲ್ಡ್ ಅಂಡ್ ನ್ಯೂ ಎಂಬ ಕವನಸಂಕಲನ 1907ರಲ್ಲಿ ಈಕೆಯ ನಿಧನಾನಂತರ ಪ್ರಕಟವಾಯಿತು. (ಎನ್.ಎಸ್.ಎಲ್.)

**ಕೋಲ್‌ರಿಜ್, ಸ್ಯಾಮ್ಯುಯಲ್ ಟೇಲರ್ :** 1772–1834. ಇಂಗ್ಲಿಷ್ ಕವಿ, ವಿಮರ್ಶಕ ಹಾಗೂ ತಾತ್ತ್ವಿಕ. ಡೆವನ್‌ಷೈರಿನ ಆಟರಿ–ಸೇಂಟ್ ಮೇರಿ ಎಂಬ ಗ್ರಾಮದಲ್ಲಿ ಜನಿಸಿದ. ಇವನ ತಂದೆ ಅಲ್ಲಿಯ ಪಾದ್ರಿಯೂ ಶಾಲೆಯ ಉಪಾಧ್ಯಾಯನೂ ಆಗಿದ್ದ. ಗುಣಶೀಲದಲ್ಲಿ ಆತ ಪ್ರಾಮಾಣಿಕ ಶ್ರದ್ಧೆಯ ಸತ್ಪುರುಷನಾದರೂ ನಡೆ



ನುಡಿಯಲ್ಲಿ ಸ್ವಲ್ಪ ವಿಚಿತ್ರ ವ್ಯಕ್ತಿಯಾಗಿದ್ದ. ಆತನ ಹದಿಮೂರು ಮಕ್ಕಳಲ್ಲಿ ಸ್ಯಾಮ್ಯುಯಲ್ ಕೊನೆಯವ. ಕಿನ್ನರ ಕಥೆ ಕೇಳುವುದು, ಹಗಲುಗನಸು ಕಾಣುವುದು ಎಂದರೆ ಇವನಿಗೆ ತುಂಬ ಪ್ರೀತಿ; ಜೊತೆಗೆ ತನ್ನ ಪಂಡಿತ ಪಿತನೊಂದಿಗೆ ಸುದೀರ್ಘವಾಗಿ ಸಂಭಾಷಿಸುವುದರಲ್ಲೂ ಅಷ್ಟೇ ಆಸಕ್ತಿ. ಆದರೆ ಒಂಬತ್ತು ತುಂಬುವುದರೊಳಗೆ ತಂದೆಯನ್ನು ಕಳೆದುಕೊಂಡ. 1782ರಲ್ಲಿ ಇವನನ್ನು ಲಂಡನ್ನಿನಲ್ಲಿದ್ದ ಕ್ರೈಸ್ಟ್ಸ್ ಹಾಸ್ಪಿಟಲ್ ಎಂಬ ಪಾಠಶಾಲೆಗೆ ವಿದ್ಯಾರ್ಥಿಯಾಗಿ ಸೇರಿಸಲಾಯಿತು. ಮೊದಮೊದಲು ಅಲ್ಲಿಯ ಬಾಳು ಸ್ಯಾಮ್ಯುಯಲನಿಗೆ ಕಷ್ಟಕರವಾಗಿಯೂ ಉಲ್ಲಾಸರಹಿತವಾಗಿಯೂ ತೋರಿ ಬಂತು. ಹುಡುಗ ಕಂಬನಿ ಸುರಿಸುವುದನ್ನು ನೋಡಿ ಉಪಾಧ್ಯಾಯ ಬೋಯರ್ 'ಮಗು, ಸ್ಕೂಲೇ ನಿನ್ನ ತಂದೆ, ತಾಯಿ, ಸಹೋದರ, ಸಹೋದರಿ, ಸಕಲ ಬಂಧು ಬಳಗ; ಅಳು ನಿಲ್ಲಿಸು' ಎಂದನಂತೆ. ಕೋಲ್‌ರಿಜ್‌ನ ಪ್ರಚಂಡ ಬುದ್ಧಿಶಕ್ತಿ ವಾಗ್ವೈಭವ ಬೇಗ ಬೇಗ ಪ್ರಕಟವಾಗುತ್ತ ಬಂತು. ತತ್ತ್ವಜ್ಞರ ಗಹನ ಸಿದ್ಧಾಂತಗಳನ್ನು ಕುರಿತು ಈತ ಮಾಡುತ್ತಿದ್ದ ಭಾಷಣಗಳು ಸಹಪಾಠಿಗಳಲ್ಲೇ ಅಲ್ಲದೆ ಅಧ್ಯಾಪಕರಲ್ಲೂ ಅತಿಥಿಗಳಲ್ಲೂ ವಿಸ್ಮಯವನ್ನೂ ಗೌರವವನ್ನೂ ಹುಟ್ಟಿಸುತ್ತಿದ್ದುವು. ಹದಿನೇಳನೆಯ ವಯಸ್ಸಿನಲ್ಲಿ ಒಂದು ರಜಾ ದಿವಸ ಈತ ಅತಿಶೀತಗೊಂಡಿದ್ದ ನದಿಯಲ್ಲಿ ಉಡುಪು ಸಹಿತ ಈಜಾಡಿದನಾಗಿ ಸಂಧಿವಾತಕ್ಕೆ ಪಕ್ಕಾಗಿ ಹಲವು ಮಾಸ ಚಿಕಿತ್ಸಾಲಯದಲ್ಲಿ ಇರಬೇಕಾಗಿ ಬಂತು. ಸಂಗಾತಿಯೊಬ್ಬನ ತಂಗಿಯ ಮೇಲೆ ಇವನಿಗೆ ಉಂಟಾದ ಮೋಹ ಫಲಿಸದೆ ಆ ಹುಡುಗಿ ಬೇರೊಬ್ಬನನ್ನು ವರಿಸಿದಳು.

1791 ಕೋಲ್‌ರಿಜ್ ಕೇಂಬ್ರಿಜ್ ವಿಶ್ವವಿದ್ಯಾಲಯವನ್ನು ಹೊಕ್ಕ. ತನ್ನ ಬಳಿ ಇದ್ದ ಹಣ ಎಷ್ಟೆಂಬುದನ್ನು ಲೆಕ್ಕಿಸದೆ ಸಾಮಾನು ಸರಂಜಾಮನ್ನು ತರಿಸಿಕೊಂಡು ವಾಸದ ಕೋಣೆಯನ್ನು ಅಲಂಕರಿಸಿದ. ಮೈಕೈಯೆಲ್ಲ ಸಾಲವಾದರೂ ವಿವೇಕ ಉದಿಸಲಿಲ್ಲ. ಸಾಲಗಾರರ ತಗಾದೆ ವಿಪರೀತವಾಗಲು ಹೇಳದೆ ಕೇಳದೆ ಲಂಡನ್ನಿಗೆ ಪಲಾಯನಗೈದು ಕೂಮರ್ ಬ್ಯಾಕ್ ಎಂಬ ಸುಳ್ಳು ಹೆಸರಿನಿಂದ ಅಶ್ವಪಡೆಯೊಂದಕ್ಕೆ ಸೇರಿಕೊಂಡ. ಕೆಲವು ತಿಂಗಳ ಅನಂತರ ಅಣ್ಣನಾದ ಕ್ಯಾಪ್ಟನ್ ಜೇಮ್ಸ್ ಕೋಲ್‌ರಿಜ್ ಅದನ್ನು ಪತ್ತೆ ಹಚ್ಚಿ ಇವನನ್ನು ಸೈನ್ಯದಿಂದ ಬಿಡಿಸಿ, ಪುನಃ ವಿಶ್ವವಿದ್ಯಾಲಯಕ್ಕೆ ಹೋಗುವಂತೆ ಮಾಡಿದ. ಕಟ್ಟುನಿಟ್ಟಿನ ಕ್ರಮಬದ್ಧ ವ್ಯಾಸಂಗ ತನ್ನ ಜಾಯಮಾನಕ್ಕೆ ಹಿಡಿಸಲಿಲ್ಲವಾಗಿ ಕೋಲ್‌ರಿಜ್ ಯಾವ ಪದವಿಯನ್ನೂ ಪಡೆಯದೆ ವಿದ್ಯಾಸಂಸ್ಥೆಯಿಂದ ಹೊರಬಿದ್ದ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಹೋದಾಗ ಅಲ್ಲಿದ್ದ ರಾಬರ್ಟ್ ಸದೇ ಎಂಬ ತರುಣಕವಿಯ ಸ್ನೇಹ ಈತನಿಗೆ ಲಭಿಸಿತು. ಇಬ್ಬರೂ ಉತ್ಸಾಹಾವೇಶದವರು, ಆದರ್ಶವಾದಿಗಳು, ಹಗಲುಗನಸಿಗರು. ಫ್ರಾನ್ಸಿನ ಮಹಾಕ್ರಾಂತಿಯ ಪ್ರಭಾವವೂ ಇವರ ಮೇಲೆ ಸಾಕಷ್ಟು ಇತ್ತು. ಅಮೆರಿಕದ ಅರಣ್ಯಪ್ರದೇಶಕ್ಕೆ ತೆರಳಿ ಒಂದು ನದೀತೀರದಲ್ಲಿ ಸರ್ವಸಮಾನಾಧಿಕಾರದ ನೂತನ ಸಮಾಜವೊಂದನ್ನು ಸ್ಥಾಪಿಸುವ ಹೆಬ್ಬಯಕೆ ಉಲ್ಬಣವಾಯಿತು, ಇಬ್ಬರ ಹೃದಯದಲ್ಲೂ. ಸಾಹಿತ್ಯ ಮತ್ತು ಬೇಸಾಯ ಎರಡೇ ಆ ಸಮಾಜದವರ ಕೆಲಸವಾಗಿರತಕ್ಕದ್ದು, ಪತಿಗಿರುವಷ್ಟೇ ಸ್ವಾತಂತ್ರ್ಯ ಪತ್ನಿಗೂ ಇರತಕ್ಕದ್ದು–ಇದು ಅವರ ಕನಸಿನ ಆದರ್ಶರಾಜ್ಯದ ಮುಖ್ಯ ಉದ್ದೇಶ. ಆದರೆ ದ್ರವ್ಯಾಭಾವದಿಂದಾಗಿ ಈ ಯೋಜನೆ ಕಾರ್ಯಗತವಾಗಲಿಲ್ಲ. ಗೆಳೆಯರಿಬ್ಬರೂ ಸೋದರಿಯರಿಬ್ಬರನ್ನೂ ವರಿಸಿದರು. ಸ್ಯಾರ ಫ್ರಿಕ್ಕರ್ ಕೋಲ್‌ರಿಜ್‌ನ ಹೆಂಡತಿ. ಈಡಿತ್ ಫ್ರಿಕ್ಕರ್ ಸೌದಿಯ ಹೆಂಡತಿ.

ಕವಿತೆ ಭಾಷಣ ಲೇಖನಗಳ ಮೂಲಕ ಹಣ ಸಂಪಾದಿಸಿ ಸಂಸಾರ ಹೊರೆಯಲು ಕೋಲ್‌ರಿಜ್ ಬಲು ಹೆಣಗಾಡಿದ. 1797ರಲ್ಲಿ ಇಂಗ್ಲೆಂಡಿನ ಉತ್ತರ ಭಾಗದ ಕ್ವಾಂಟಕ್ ಗುಡ್ಡಗಳ ತಪ್ಪಲಿನಲ್ಲಿ ಗುಡಿಸಿಲು ಕಟ್ಟಿಕೊಂಡು ಹೆಂಡತಿ ಮಕ್ಕಳೊಂದಿಗೆ ವಾಸಿಸತೊಡಗಿದ. ಮುಂದಣ ಮೂವತ್ತು ಮಾಸಗಳಲ್ಲಿ ಇವರ ಮುಖ್ಯ ಕವನಗಳೆಲ್ಲ ರಚಿತವಾದುವು. ವಿಲಿಯಂ ವರ್ಡ್ಸ್‌ವರ್ತ್ ಮತ್ತು ಅವನ ಸಹೋದರಿ ಡಾರೋತಿ–ಇವರ ಅಮೂಲ್ಯ ಮೈತ್ರಿಯೂ ಕೋಲ್‌ರಿಜ್‌ಗೆ ಅಲ್ಲಿ ಲಭಿಸಿತು. ಸಾಹಿತ್ಯವನ್ನು ಕುರಿತ ಚರ್ಚೆಯಲ್ಲೂ ಕಾವ್ಯನಿರ್ಮಾಣದಲ್ಲೂ ಅವರ ದಿನಗಳು ಆಮೋದದಲ್ಲಿ ಕಳೆದುಹೋದುವು. ವರ್ಡ್ಸ್‌ವರ್ತ್ ಕೋಲ್‌ರಿಜ್‌ರ ಒಟ್ಟು ಪ್ರಯತ್ನದ ಫಲವಾಗಿ ಲಿರಿಕಲ್ ಬ್ಯಾಲಡ್ಸ್ ಎಂಬ ಕವನಸಂಗ್ರಹ 1798ರಲ್ಲಿ ಪ್ರಕಟಗೊಂಡಿತು. ಇಂಗ್ಲಿಷ್ ಸಾಹಿತ್ಯಚರಿತ್ರೆಯಲ್ಲಿ ಅದೊಂದು ಗಮನಾರ್ಹವಾದ ಮೈಲುಗಲ್ಲು. ಅದೇ ವರ್ಷ ಮೂವರೂ ಜರ್ಮನಿಗೆ ಪ್ರವಾಸ ಬೆಳೆಸಿದರು. ಅಲ್ಲಿಂದ ಮುಂದೆ ಕವಿಗಳಿಬ್ಬರ ದಾರಿಯೂ ಬೇರೆ ಬೇರೆ ಆಯಿತು.

ಜರ್ಮನಿಯಲ್ಲಿ ಆಗ್ಗೆ ತತ್ತ್ವಶಾಸ್ತ್ರ ವಿಶೇಷ ಹುರುಪಿನಿಂದ ವರ್ಧಿಸುತ್ತಿತ್ತು. ಕಾಂಟ್, ಷೆಲ್ಲಿಂಗ್, ಫಿಕ್ಟೆ ಮುಂತಾದವರ ತರ್ಕಜಾಲಕ್ಕೂ ಅಭಿಪ್ರಾಯಗಳಿಗೂ ಕೋಲ್‌ರಿಜ್ ಮನಸೋತ. ತತ್ತ್ವಶಾಸ್ತ್ರ, ದೇವತಾಶಾಸ್ತ್ರಗಳೆಂದರೆ ಇವನಿಗೆ ಬಾಲ್ಯದಿಂದಲೂ ಅತ್ಯಧಿಕ ವಾಂಛಲ್ಯ. 1800ರಲ್ಲಿ ಸ್ವದೇಶಕ್ಕೆ ಹಿಂದಿರುಗಿ ಉತ್ತರದ ಕಂಬರ್‌ಲೆಂಡ್ ಪ್ರಾಂತ್ಯದಲ್ಲಿ ಮನೆ ಹೂಡಿಕೊಂಡ. ಸಂಧಿವಾತವೂ ಅದಕ್ಕೆ ಸಂಬಂಧಿಸಿದ ಇತರ ವ್ಯಾಧಿಗಳೂ ಇದ್ದುದರಿಂದ ವಿಪರೀತ ಹಿಂಸೆ ಅನುಭವಿಸಿದ. ಉದರಂಭರಣದ ಹಂಗಿನಿಂದಲೂ ಬಹಳ ಚಿಂತೆಪಟ್ಟ. ಯಾವುದೋ ಒಂದು ಕೆಟ್ಟ ಘಳಿಗೆಯಲ್ಲಿ ಆಫೀಮು ಸೇವಿಸಲಾರಂಭಿಸಿದ. ಅದಕ್ಕೆ ಗುಲಾಮನಾಗಿ ಬದುಕು ಸಾಗಿಸಿದ. 16 ವರ್ಷ ಅವನಿಂದ ಯಾವ ಉತ್ತಮ ಗ್ರಂಥರಚನೆಯೂ ಆಗಲಿಲ್ಲ. ಯಂತ್ರೋದ್ಯಮ ಪ್ರವೀಣರಾದ ವೆಜ್‌ವುಡ್ ಸಹೋದರರ ವಾರ್ಷಿಕ ಕೊಡುಗೆಯಾದ 150 ಪೌಂಡು ಇವನ ಬಾಳಿಗೆ ಆಧಾರವಾಯಿತು. ಹೆಂಡತಿ ಮಕ್ಕಳನ್ನು ನೋಡಿಕೊಳ್ಳುವ ಭಾರ ಸದೇಯ ಮೇಲೆ ಬಿತ್ತು. ಆಮೇಲೆ ಲಂಡನ್ನಿಗೆ ಬಂದ ಕೋಲ್‌ರಿಜ್‌ಗೆ ಗಿಲ್ಮನ್ ಎಂಬೊಬ್ಬ ಸದ್ಗೃಹಸ್ಥನ ಆಶ್ರಯ ದೊರಕಿತು; ಸಾಹಿತಿಗಳ ಸಹವಾಸವೂ ಒಳ್ಳೆಯ ಪ್ರಮಾಣದಲ್ಲಿ ಸಿಕ್ಕಿತು. ಪರಿಣಾಮವಾಗಿ ಕೋಲ್‌ರಿಜ್ ಹೊಸ ಚೈತನ್ಯ ತುಂಬಿಕೊಂಡವನಾದ. ಆಫೀಮಿನ ಹಿಡಿತದಿಂದ ಬಹುಮಟ್ಟಿಗೆ ಬಿಡಿಸಿಕೊಂಡ. ಹಲವು ಉಪನ್ಯಾಸಗಳನ್ನು ಮಾಡಿದ. ಹಲವು ಪ್ರಬಂಧಗಳನ್ನು ಬರೆದ. ಅತ್ಯುತ್ತಮ ವಾಗ್ಮಿಯೆಂಬ ಕೀರ್ತಿ ಗಳಿಸಿದ. 1817ರಲ್ಲಿ ಹೊರಬಂದ ಇವನ ಕಾವ್ಯಮೀಮಾಂಸಾ ಗ್ರಂಥ ಗಾಢಾರ್ಥಗರ್ಭಿತವಾದದ್ದು, ಸ್ಫೂರ್ತಿದಾಯಕವಾದದ್ದು, ಮಾರ್ಗದರ್ಶನ ಮಾಡುವಂಥಾದ್ದು. ಕಾವ್ಯವಿಮರ್ಶೆಯಲ್ಲಿ ಅದೊಂದು ಪ್ರಸ್ಥಾನಕೃತಿ. 1825ರಲ್ಲಿ ಹೊರಬಂದ ಆಲೋಚನೆಗೆ ನೆರವುಗಳು ಎಂಬ ದಾರ್ಶನಿಕಗ್ರಂಥವೂ ಉನ್ನತ ಮಟ್ಟದ್ದು.

ಒಟ್ಟಿನಲ್ಲಿ ಇವನ ಜೀವನ ಅತೀವವಾದ ಅತೃಪ್ತಿ, ಹತಾಶೆ, ಯಾತನೆಗಳಿಂದ ಕೂಡಿದ್ದಿತಾಗಿ ಆಗಬಹುದಾದಷ್ಟು ಕೃತಿರಚನೆ ಇವನಿಂದ ಆಗಲಿಲ್ಲ. ಆದರೂ ಇವನು ಬರೆದುದೆಲ್ಲ ಬಂಗಾರದಷ್ಟು ಅಮೂಲ್ಯವಾಗಿದೆ ಎಂಬ ಮಾತನ್ನು ನಾವು ಮರೆಯುವಂತಿಲ್ಲ.

ಕೃತಿಗಳು : ಲೇಖಕನಾಗಿ ಕೋಲ್‌ರಿಜ್ ಮೊದಲು ಪದ್ಯರಚನೆ, ಆಮೇಲೆ ಸಾಹಿತ್ಯವಿಮರ್ಶೆ, ಕೊನೆಯಲ್ಲಿ ತತ್ತ್ವಜಿಜ್ಞಾಸೆಗಳಲ್ಲಿ ಆಸಕ್ತನಾದನೆಂಬ ಹೇಳಿಕೆ ವಾಡಿಕೆಗೆ ಬಂದಿತ್ತು, ಹೆಚ್ಚು ಕಡಿಮೆ ಅಂಗೀಕೃತವಾಗಿತ್ತು. ಆದರೆ ಆ ಬಗೆಯ ವಿಂಗಡನೆ ನಿಜಾಂಶಕ್ಕೆ ಒಪ್ಪಾಗದು. ತತ್ತ್ವಚಿಂತನೆ ಇವನ ಅಂತರ್ಯದಲ್ಲಿ ರೂಢಮೂಲವಾಗಿತ್ತು. ಹಾಗೆಯೇ ಪದ್ಯರಚನೆಯನ್ನು ಈತ ಎಂದೂ ಕೈಬಿಡಲಿಲ್ಲ. ಕಾವ್ಯರಚನೆ ಮಾಡದಿರುವ ಸಮಯದಲ್ಲಿ ಈತ ಕಾವ್ಯದ ವಿಚಾರವಾಗಿ ಆಲೋಚಿಸುತ್ತಿದ್ದ, ಚರ್ಚೆಗೈಯ್ಯುತ್ತಿದ್ದ, ಭಾಷಣ ಮಾಡುತ್ತಿದ್ದ. ಇವನ ಕವನಗಳ ಪುಸ್ತಕ 588 ಪುಟದಷ್ಟಿದೆ. ಆದರೆ ಇದು ಅಸಮಗ್ರ ಕೃತಿ; ಚೂರುಪಾರು, ಸಾಧಾರಣ ವಾಕ್ಯಪುಂಜಗಳಿಂದ ತುಂಬಿಕೊಂಡಿದೆ. 1797ರಿಂದ ಮೂರು ನಾಲ್ಕು ವರ್ಷ ಈತ ಕಾವ್ಯದೇವಿಯ ನೈಜಕುವರನಂತೆ ಆವೇಶಗೊಂಡಿದ್ದ. ಸುವರ್ಣಾಕ್ಷರದಲ್ಲಿ ಮುದ್ರಿಸತಕ್ಕ ಕಾವ್ಯಗಳನ್ನು ಕಟ್ಟಿದ. ಅದಕ್ಕೆ ಮುಂಚೆ, ಅದಾದ ತರುವಾಯ ಈತ ಬರೆದ ಕಾವ್ಯಗಳಲ್ಲೂ ಕಾವ್ಯ ತುಣುಕುಗಳಲ್ಲೂ ಹುಡುಕಿ ತೆಗೆದರೆ ಒಂದೊಂದು ಅತ್ಯುತ್ತಮವಾದದ್ದು, ಕೋಲ್‌ರಿಜ್ ಕವಿಯದೆನ್ನಬಹುದಾದದ್ದು ಸಿಕ್ಕೀತು. ಬರೆದು ಹೊಡೆದು ಮತ್ತೆ ಬರೆಯುವ ಅಭ್ಯಾಸ ಕೋಲ್‌ರಿಜ್‌ನನ್ನು ಯಾವಾಗಲೂ ಬಾಧಿಸುತ್ತಿತ್ತು; ಅದನ್ನು ಕೊಡವಿಕೊಳ್ಳುವ ಅಭಿಲಾಷೆ ಇವನಲ್ಲಿ ಎಂದಿಗೂ ಕಾಣಿಸಲಿಲ್ಲ. ಆದರೆ ಪ್ರಬಲ ಕಾವ್ಯ ಸ್ಫೂರ್ತಿ ಆಕ್ರಮಿಸಿಕೊಂಡಾಗ ಈತನ ಬಾಯಿಂದ ರಸವದ್ವಾಕ್ಯ ತಾವಾಗಿ ಉದುರುತ್ತಿದ್ದುವು; ಅವಕ್ಕೆ ಮಂತ್ರ ಸಹಜವಾದ ಮರುಳ್ಗೊಳಿಸುವ ತ್ರಾಣ ಬರುತ್ತಿತ್ತು.

ಕೋಲ್‌ರಿಜ್‌ನ ಪ್ರಥಮ ಕವಿತೆಗಳಲ್ಲಿ ಗ್ರೇ ಮತ್ತು ಬ್ಲೇಕ್ ಕವಿಗಳ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಗ್ರೇ ಗಿಂತಲೂ ಹೆಚ್ಚಾಗಿ ಬ್ಲೇಕನೇ ಇವನಿಗೆ ಮೇಲ್ಪಂಕ್ತಿ. ಒಂದು ಹಗಲುಗನಸು, ಕೇನನ ಅಲೆದಾಟ, ಆತ್ಮಹಂತಕನ ವಾದ, ಸೈತಾನನ ಚಿಂತನೆಗಳು–ಮೊದಲಾದ ಕವಿತೆಗಳಲ್ಲಿ ಬ್ಲೇಕನ ಮಬ್ಬು ಮಸಕುಗಳ ಜೊತೆಗೆ ಅವನಲ್ಲಿಲ್ಲದ ಪಾಂಡಿತ್ಯ ಗಂಭೀರತೆಗಳ ಛಾಯೆಯೂ ಇದೆ. ಬೇಗ ಬೇಗ ಕೋಲ್‌ರಿಜ್‌ನಲ್ಲಿ ಸ್ವಂತಿಕೆ ಬೆಳೆದು ಬಂತು. ಯೌವನ, ವೃದ್ಧಾಪ್ಯ, ಪ್ರೇಮಗೀತೆಗಳು, ಒಬ್ಬನೇ ಇರುವಾಗ ಅಡಸುವ ಅಂಜಿಕೆಗಳು ಇತ್ಯಾದಿ ರಚನೆಗಳಲ್ಲಿ ಕವಿಯ ಆತಂಕಮಯವಾದ ಬದುಕೂ ಅತ್ಯುತ್ತಮವೂ ಗಂಭೀರವೂ ರಾಗಯುಕ್ತವೂ ಆದ ವಿಭಾವನಾ ಪ್ರಸಾರವೂ ಕಾವ್ಯಮಯ ಭಾಷೆಯೂ ಚೆನ್ನಾಗಿ ಎದ್ದು ಕಾಣುತ್ತವೆ. ವೈವಿಧ್ಯ ಸಾಕಷ್ಟು ಇರುವುದರಿಂದ ಓದುಗರು ತಮ್ಮ ತಮ್ಮ ಮನಸ್ಸಿಗೂ ಅಭಿರುಚಿಗೂ ಮೆಚ್ಚಾದುವನ್ನು ಆರಿಸಿಕೊಳ್ಳಬಹುದು. ಮೂರು ಸಮಾಧಿಗಳು. ಅಜ್ಞಾತ ಮಹಿಳೆ ಇತ್ಯಾದಿ ಲಾವಣಿಗಳು ಅಪೂರ್ಣವಾಗಿದ್ದರೂ ಕವಿಯ ಕಥನಸಾಮರ್ಥ್ಯ ಕುರುಹುಗಳಾಗಿವೆ. ಕೋಲ್‌ರಿಜ್‌ನ ಹೆಸರನ್ನು ಅಮರವಾಗಿಸಿರುವ ಕಾವ್ಯಗಳು ಮೂರು; ಅವುಗಳಲ್ಲಿ ಎರಡು ಅಪೂರ್ಣ. ಅವನ್ನು ಪೂರ್ತಿ ಮಾಡುವ ಕೆಲಸವನ್ನು ನಾಳೆ ಮಾಡೋಣವೆಂದು ಕೋಲ್‌ರಿಜ್ ಹೇಳುತ್ತಲೇ ಇದ್ದನಾದರೂ ಆ ನಾಳೆ ಮಾತ್ರ ಬರಲೇ ಇಲ್ಲ.

ರೈಮ್ ಆಫ್ ದಿ ಏನ್‌ಷೆಂಟ್ ಮ್ಯಾರಿನರ್ (ಹಳೆಗಾಲದ ನಾವಿಕನ ಪದ)ವೆಂಬುದನ್ನು ಎಷ್ಟು ಹೊಗಳಿದರೂ ತೀರದು. ಕಥೆಯಲ್ಲಿ ಜರಗುವ ಕಾರ್ಯಭಾರ ಬಲು ಕಿರಿದು. ಇನ್ನೂರು ಮಂದಿ ನಾವಿಕರ ಯಾನ; ನೌಕೆ ಬಿರುಗಾಳಿಗೆ ಸಿಕ್ಕಿ ದಕ್ಷಿಣ ದಿಕ್ಕಿಗೆ ಉರುಳುವುದು; ಆಲ್ಬೆಟ್ರಾಸ್ ಎಂಬ ಕಡಲಪಕ್ಷಿ ಬಂದು ಅವರ ಜೊತೆ ಇರುವುದು; ನಾವಿಕನೊಬ್ಬ ದುಷ್ಟಚಾಪಲ್ಯಕ್ರೀಡಾಗಿ ಅದನ್ನು ಗುಂಡಿಕ್ಕಿ ಕೊಲ್ಲುವುದು; ಮಂಜು ಮೋಡಗಳ ಹಾವಳಿ; ಆಮೇಲೆ ನೌಕೆಯ ಸುಗಮಯಾನ; ಪಕ್ಷಿಯನ್ನು ನಾವಿಕ ಕೊಂದದ್ದು ಸರಿಯೆಂದು ಉಳಿದೆಲ್ಲರ ಸಮರ್ಥನೆ; ದಕ್ಷಿಣ ಧ್ರುವದತ್ತ ನೌಕೆಯ ಓಟ; ಇದ್ದಕ್ಕಿದ್ದಂತೆ ಏನೇನೂ ಗಾಳಿ ಬೀಸದೆ ನೌಕೆ ನಿಂತಲ್ಲೇ ನಿಲ್ಲುವುದು; ಉರಿ ಬಿಸಿಲು, ಪ್ರಚಂಡ ಧಗೆ, ಕುಡಿಯಲು ಒಂದು ತೊಟ್ಟು ನೀರಿಲ್ಲದಿರುವುದು; ಅನ್ಯಾಯಕಾರಿ ನಾವಿಕನೊಬ್ಬನನ್ನು ಬಿಟ್ಟು ಮಿಕ್ಕೆಲ್ಲರ ಮರಣ; ಅವನ ಭಾರಿ ಸಂಕಟ; ತೀವ್ರ ಪಶ್ಚಾತ್ತಾಪ; ಕೊನೆಗೆ ತನ್ನ ಊರಿನ ಬಳಿಗೆ ಅವನ ಆಗಮನ; ಜೋಗಿಯೊಬ್ಬನಿಂದ ಅವನಿಗೆ ಪಾಪ ವಿಮೋಚನೆ; ತನ್ನ ಕಥೆಯನ್ನು ಹೇಳುತ್ತ ಅಲ್ಲಿ ಇಲ್ಲಿ ಅವನು ಸುತ್ತಾಡಬೇಕೆಂದ ವಿಧಿ–ಇದು ಆ ಕಥೆಯ ಮುಖ್ಯ ಘಟ್ಟಗಳು. ಕಥೆಗೆ ನಾನಾ ಮಾನವಾತೀತ ವಸ್ತು, ವ್ಯಕ್ತಿಗಳಿಂದ ಕವಿ ಪುಷ್ಟಿಕೊಟ್ಟಿದ್ದಾನೆ. ಅಸ್ಥಿಪಂಜರದಂಥ ಹಡಗು, ಅದನ್ನು ನಡೆಸುವ ಮೃತ್ಯು ಮತ್ತು ಪಿಶಾಚಿ ಜೀವನ್ಮೃತ್ಯು, ಅವರಿಬ್ಬರ ಪಗಡೆಯಾಟ, ದೇವದೂತರ ತಂಡ, ಹೆಣಗಳು ಎದ್ದು ಸದ್ದು ಮಾಡದೆ ನೌಕಾಕಾರ್ಯಗಳಲ್ಲಿ ತೊಡಗುವುದು, ಮಳೆಗಾಳಿಗಳ ಅಲೌಕಿಕ ಅಬ್ಬರ, ದಕ್ಷಿಣ ಧ್ರುವದ ಭೂತ–ಮುಂತಾದವು ಬಂದರೂ ಕೋಲ್‌ರಿಜ್‌ನ ಮಾಂತ್ರಿಕಶೈಲಿಯಿಂದ ಅವೆಲ್ಲ ನಂಬಿಕೆಯನ್ನು ಹುಟ್ಟಿಸುವಂತಿವೆ. ಯಥಾರ್ಥವೋ ಎಂಬಂತೆ ಪದ ಪ್ರಾಸ ಛಂದಸ್ಸು ನಾದಮಾಧುರ್ಯ ಎಲ್ಲವೂ ಅತ್ಯುತ್ಕೃಷ್ಟವಾಗಿಲ್ಲಿ ಮೂಡಿಬಂದಿವೆ. ಕೆಲವೇ ಕೆಲವು ಚಿಕ್ಕ ಮಾತುಗಳಲ್ಲಿ ಚೆಲುವಾದ ಚಿತ್ರ ರೂಪಗೊಳ್ಳುತ್ತದೆ. ದೆವ್ವಭೂತಾದಿ ಪ್ರಪಂಚದ ಘೋರ ಭಯಾನಕಗಳ ವಿರೂಪವನ್ನು ಸೌಮ್ಯಗೊಳಿಸಿ ಸಾರವತ್ತಾಗಿಸುವ ಲಲಿತಕೃಷಿ ಕೋಲ್‌ರಿಜ್‌ಗೆ ಪರಿಪಾಠವಾಗಿತ್ತು.

ಕ್ರಿಸ್ಟಬೆಲ್ ಕಥೆಯಲ್ಲಿ ಮಹಾ ಮಾಟಗಾತಿ ಜೆರಲ್ಡೈನಳ ಪಾತ್ರ ರುದ್ರರಮಣೀಯವಾಗಿ ರೂಪುಗೊಂಡಿದೆ. ಸರ್ ಲಿಯೊಲೈನನ ಕುವರಿ ಕ್ರಿಸ್ಟಬೆಲ್ ದೂರದೇಶದಲ್ಲಿರುವ ತನ್ನ ಪ್ರಿಯನ ಕ್ಷೇಮಕ್ಕಾಗಿ ಪ್ರಾರ್ಥನೆ ಸಲ್ಲಿಸಲು ನಡುರಾತ್ರಿ ದುರ್ಗದ ಹೊರಗಣ ಕಾನನಕ್ಕೆ ಹೋಗುತ್ತಾಳೆ. ಅಲ್ಲಿ ಮರದ ಅಡಿಯಲ್ಲಿ ನರಳುತ್ತ ಬಿದ್ದಿರುವ ಬಿಳಿಬಟ್ಟೆಯ ಅಪೂರ್ವ ಲಾವಣ್ಯವತಿಯೊಬ್ಬಳನ್ನು ಈಕ್ಷಿಸುತ್ತಾಳೆ. ಧೂರ್ತರು ತನ್ನನ್ನು ಎಳೆದು ತಂದು ಅಡವಿ ಪಾಲು ಮಾಡಿ ಹೋದರೆಂದು ಅವಳು ಶೋಕಿಸುತ್ತಾಳೆ. ಅವಳನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತಾಳೆ, ಸರಳ ಮನಸ್ಸಿನ ಕ್ರಿಸ್ಟಬೆಲ್. ಮನೆಯ ಹೊಸ್ತಿಲ ಬಳಿ ಜೆರಲ್ಡೈನ್ ಕುಸಿದು ಬೀಳುತ್ತಾಳೆ. ಆಯಾಸದಿಂದಲೊ ಎಂಬಂತೆ. ಕ್ರಿಸ್ಟಬೆಲ್ ಅವಳನ್ನು ಎತ್ತಿಕೊಂಡು ಹೊಸ್ತಿಲು ದಾಟಿಸುತ್ತಾಳೆ. ಶಯನಕ್ಕೆ ಮುನ್ನ ಅವಳು ಲಂಗವನ್ನು ಕಳಚಿ ಎಸೆದಾಗ ಅವಳ ವಿಕಾರವಾದ ವಕ್ಷಸ್ಥಳ ಮತ್ತು ದೇಹದ ಒಂದು ಪಕ್ಕ ಕ್ರಿಸ್ಟಬೆಲ್ಲಳ ಕಣ್ಣಿಗೆ ಬಿದ್ದು ನಡುಕ ಹುಟ್ಟಿಸುತ್ತವೆ. ಆದರೆ ಯತ್ನವಿಲ್ಲ. ಜೆರಲ್ಡೈನ್ ಅವಳನ್ನು ತಬ್ಬಿಕೊಂಡು ಮಲಗಿ 'ಈ ಆಲಿಂಗನದಿಂದ ನೀನಿನ್ನು ನನ್ನ ಅಧೀನೆ; ನಾನು ಹೇಳಿದಂತೆಯೇ ಹೇಳದೆ ಮತ್ತೇನನ್ನು ಹೇಳಲಾಗದ ಬಂಧನ ನಿನ್ನ ನಾಲಗೆಯನ್ನು ಒತ್ತುತ್ತಿದೆ' ಎಂದು ಹೇಳುತ್ತಾಳೆ. ಮಾರನೆಯ ದಿವಸ ತಂದೆ ಸರ್ ಲಿಯೊಲೈನಿಗೆ ಅಭ್ಯಾಗತೆಯನ್ನು ಪರಿಚಯಿಸುತ್ತಾಳೆ. ಆಕೆ ತನ್ನ ಹಳೆಯ ಗೆಳೆಯ ಸರ್ ರೋಲಂಡನ ಮಗಳು–ಅದು ಜೆರಲ್ಡೈನಳ ಸುಳ್ಳು–ಎಂಬುದನ್ನು ಕೇಳಿ ಲಿಯಲೈನಿಗೆ ಒಂದು ಕಡೆ ಹರ್ಷ, ಇನ್ನೊಂದು ಕಡೆ ದುಃಖ. ತನ್ನ ಆಸ್ಥಾನದ ಚಾರಣ ಬ್ರೇಸಿಯನ್ನು ಸುದ್ದಿ ಕೊಡಲು ಕಳಿಸುತ್ತಾನೆ: ಆ ಧೂರ್ತರನ್ನು ಶಿಕ್ಷಿಸಲು ಡಂಗುರ ಹಾಕಿಸುತ್ತಾನೆ. ಈ ಮಧ್ಯೆ ಕ್ರಿಸ್ಟಬೆಲ್ ಮೂಕಳಂತೆ ಬರಿ ಸನ್ನೆಯಿಂದ ಜೆರಲ್ಡೈನಳ ನಿಜತ್ವವನ್ನು ತಿಳಿಸಲು ಪ್ರಯತ್ನಿಸುತ್ತಾಳೆ, ವ್ಯರ್ಥವಾಗಿ. ಇಲ್ಲಿಗೆ ಎರಡನೆಯ ಭಾಗ ಮುಗಿಯುತ್ತದೆ. ಕೋಲ್‌ರಿಜ್ ಕಾವ್ಯವನ್ನು ಇಲ್ಲಿಗೇ ಮೊಟಕಿಸಿಬಿಟ್ಟಿದ್ದಾನೆ. ವಿಚಿತ್ರ ಮೋಹಕತೆಯ ವಾಕ್ಯಗಳೂ ಕಾವ್ಯಭಾಗಗಳೂ ಅಸಮಗ್ರ ಕೃತಿಗೆ ಬೆಡಗು ಕೊಟ್ಟಿವೆ. ಬಣ್ಣಿಸಲಾಗದ ಯಾವುದೋ ದೊಡ್ಡ ಭೀತಿ ಕಾವ್ಯದ ಸುಂದರ ಹೊಂದಾಣಿಕೆಯ ಪರಿವೇಷಣವನ್ನೊದಗಿಸಿದೆ.

ಕುಬ್ಲಖಾನ್ ಎಂಬ 56 ಸಾಲುಗಳ ಕಿರುಕವನ ಕಣ್ಣು ಕೋರೈಸುವ ಒಂದು ಕಾವ್ಯ ವಜ್ರ. ಕೋಲ್‌ರಿಜ್ ಒಂದು ಬೆಳಗ್ಗೆ ಪರ್ಚಾಸ್ ಎಂಬಾತನ ಪ್ರವಾಸ ಚರಿತ್ರೆಯನ್ನು ಓದುತ್ತ ಹಾಗೆಯೇ ಅರ್ಧನಿದ್ರೆಗೆ ಬಿದ್ದ. ಕನಸಿನಲ್ಲಿ ಪದ್ಯ ಕಟ್ಟುತ್ತ ಹೋದ; ಸುಮಾರು ಮುನ್ನೂರು ಪಂಕ್ತಿಗಳಷ್ಟನ್ನು ಕಟ್ಟಿದಂತೆ ಅವನ ಆ ಮೇಲಣ ನೆನಪು. ಜಾಗೃತನಾದೊಡನೆ ಬರೆಯಲಾರಂಭಿಸಿದ. 54 ಸಾಲನ್ನು ಬರೆಯುವ ಹೊತ್ತಿಗೆ ಯಾರೋ ಬಂದು ಕೆಲಸದ ಮೇಲೆ ಅವನನ್ನು ಕರೆದೊಯ್ದರಂತೆ. ಹಿಂದುರುಗಿ, ಬರೆಯಲು ಅಪೇಕ್ಷಿಸಿದಾಗ ಕನಸು ಎಲ್ಲಿಯೋ ಮಾಯವಾಗಿತ್ತು; ಎಷ್ಟು ತಿಣಿಕಿದರೂ ಯುಕ್ತವಾಕ್ಯವೊಂದೂ ಕೋಲ್‌ರಿಜ್‌ಗೆ ದೊರಕಲಿಲ್ಲ. ಕ್ಸಾನಡುವಿನ ಅರಸ ಕುಬ್ಲಖಾನ್ ಸಮ್ಮೋದ ಸೌಧವೊಂದನ್ನು ಪವಿತ್ರನದಿ ಆಲ್ಫ್‌ದ ತೀರದಲ್ಲಿ ನಿರ್ಮಿಸಲು ಆಶಿಸುವುದು, ಆ ಸೌಧದ ಪರಮವೈಭವದ ವರ್ಣನೆ, ಕೇವಲ ಸ್ವಪ್ನಲಭ್ಯೆಯಾದ ಅಬಿಸೀನಿಯ ಕನ್ಯೆಯ ಗಾಯನದ ದಂದುಗ–ಇತ್ಯಾದಿ ಕೌತುಕಗಳಿಂದಲೇ ನಾವು ತೃಪ್ತರಾಗಬೇಕಾಗಿದೆ. ಏಕೆಂದರೆ ಕಾವ್ಯ ಅಸಮಗ್ರ.

**ಗದ್ಯಗ್ರಂಥಗಳು :** ಮತಧರ್ಮ ತತ್ತ್ವಶಾಸ್ತ್ರಗಳನ್ನು ಅವಲಂಬಿಸಿದ ಹಲವು ಲೇಖನಗಳಿಗೆ ಕೋಲ್‌ರಿಜ್ ತನ್ನ ಕಾಲವನ್ನೂ ಆಸಕ್ತಿಯನ್ನೂ ಸ್ವಲ್ಪ ಹೆಚ್ಚಾಗಿಯೇ ವಿನಿಯೋಗಿಸಿದ. ಜರ್ಮನ್ ದಾರ್ಶನಿಕರು ಪ್ರಚುರಗೊಳಿಸಿದ್ದ ಆದರ್ಶವಾದ ಇಂಗ್ಲೆಂಡಿನಲ್ಲೂ ಪ್ರಸಾರವಾಗುವುದಕ್ಕೆ ಇವನೇ ಮುಖ್ಯ ಕಾರ್ಯಕರ್ತನಾದ ಎಂಬುದು ಸತ್ಯ. ಸಾಹಿತ್ಯವಿಮರ್ಶೆಗೆ ಸಂಬಂಧಿಸಿದಂತೆ ಇವನ ಪುಸ್ತಕಗಳು ಪ್ರಮುಖವಾಗಿ ಮೂರು. ಷೇಕ್ಸ್‌ಪಿಯರನ ಮೇಲಿನ ಉಪನ್ಯಾಸಗಳು ಎಂಬುದು ಆ ಮಹಾಕವಿಯನ್ನು ಕುರಿತು ಪಡೆಮಾತಾಗಿದ್ದ ಹೇಳಿಕೆಗಳನ್ನು ಕಸದಂತೆ ಗುಡಿಸಿ ಹಾಕಿತು. ನಿಯಮ ಸಂಪ್ರದಾಯ ಪ್ರಾಚೀನರ ಪದ್ಧತಿ ಮುಂತಾದ ಅಳತೆಗೋಲು ಷೇಕ್ಸ್‌ಪಿಯರಿಗೆ ಅನ್ವಯಿಸಲಾರದು; ಅವನ ನಾಟಕಗಳಿಂದಲೇ ಅವನ ಸ್ವಕೀಯ ಕಾವ್ಯವಿಧಾನವನ್ನು ಗುರ್ತಿಸತಕ್ಕದ್ದು; ಯಾವುದನ್ನು 17, 18ನೆಯ ಶತಮಾನಗಳು ಅವನಲ್ಲಿ ದೋಷಗಳೆಂದು ಕರೆದುವೊ ಅವು ದಿಟವಾಗಿ ಅವನ ಗುಣಗಳು; ಅವನ ವರ್ಣನೆಯೆಲ್ಲ ಮಾನವತೆಗೆ ಸಂಪೂರ್ಣವಾಗಿ ಹೊಂದಿಕೊಂಡದ್ದು; ಭಾಷೆಯ ಮೇಲಣ ಆಧಿಪತ್ಯ ಅವನಿಗಿದ್ದಷ್ಟು ಬೇರಾರಿಗೂ ಇಲ್ಲ; ಕಾವ್ಯತ್ವದ ಸಹಜ ಘನತೆಗೆ ಅವನೇ ಮಹೋತ್ತಮ ನಿದರ್ಶನ. ಹೀಗೆ ಸಾಧಾರಣವಾಗಿ ಸಮರ್ಥನಗೈದು ಷೇಕ್ಸ್‌ಪಿಯರ್ ಆರಾಧನೆಗೆ ಹಿರಿಯ ಅರ್ಚಕನಾದ, ಕೋಲ್‌ರಿಜ್.

ಇವನ ಸಂಭಾಷಣೆ ಕುಶಲಪತ್ರ ಇತ್ಯಾದಿಯಲ್ಲಿ ಅನೇಕ ಉಪಯುಕ್ತ ನಿರ್ಧಾರಗಳ ಸಲಹೆಗಳೂ ಇವೆ. ಸಾಹಿತ್ಯಾಭ್ಯಾಸಿಗಳಿಗೆ ಅವು ಅತ್ಯಾವಶ್ಯಕ.

ಕೋಲ್‌ರಿಜ್‌ಗೆ ಇಂಗ್ಲಿಷ್ ವಿಮರ್ಶಕರಲ್ಲಿ ಅಗ್ರಪೀಠವನ್ನೂ ಪಾಶ್ಚಾತ್ಯ ವಿಮರ್ಶಕ ಶ್ರೇಷ್ಠರ ಪಂಕ್ತಿಯಲ್ಲಿ ಗಣ್ಯಪೀಠವನ್ನೂ ತಂದುಕೊಟ್ಟಿರುವ ಗ್ರಂಥಕ್ಕೆ ಬಯೊಗ್ರಾಫಿಯ ಲಿಟರರಿಯ ಎಂದು ಹೆಸರು. ಸಾಹಿತಿಯಾಗಿ ಇವನ ಬಾಳನ್ನು, ಸಾಹಿತ್ಯದ ವಿಚಾರವಾಗಿ ಇವನ ಅಭಿಪ್ರಾಯಗಳನ್ನು ಅದು ಪ್ರಾಸಂಗಿಕವಾದರೂ ಸರಣಿಗೆಡದಂತೆ, ಕ್ಲಿಷ್ಟವಾದರೂ ಸ್ಪಷ್ಟವಾಗಿ ವಿವರಿಸುತ್ತದೆ. ಎರಡು ಮುಖ್ಯ ವಿಚಾರಗಳನ್ನು ತೆಗೆದುಕೊಳ್ಳೋಣ: ಕಾವ್ಯದ ನುಡಿನಡೆ (ಪೊಯಟಿಕ್ ಡಿಕ್ಷನ್), ಕವಿ ವಿಭಾವನೆ (ಪೊಯಟಿಕ್ ಇಮ್ಯಾಜಿನೇಷನ್). 1798 ರಲ್ಲಿ ಹೊರಬಂದ ಗೀತಾತ್ಮಕ ಲಾವಣಿಗಳು ಎಂಬುದಕ್ಕೆ ಮುನ್ನುಡಿ ಬರೆಯುತ್ತ ವರ್ಡ್ಸ್‌ವರ್ತ್ ಪದ್ಯದ ಭಾಷೆಗೂ ಗದ್ಯದ ಭಾಷೆಗೂ ಯಾವ ವ್ಯತ್ಯಾಸವೂ ಇಲ್ಲ, ರೈತರೂ ಅವರಂಥ ಇತರ ಸಾಮಾನ್ಯರೂ ಆಡುವ ಮಾತಿನಲ್ಲಿ ಕಾವ್ಯತನವಿದೆ ಎಂದು ಹೇಳಿದ. ಕೋಲ್‌ರಿಜ್ ಆ ವಚನಗಳನ್ನು ಅಕ್ಷರಶಃ ತೆಗೆದುಕೊಂಡು ಅವನ್ನು ಒಪ್ಪಲಾಗದು ಎಂದು ಟೀಕೆ ಮಾಡಿದ. ಬರಿ ಪದಗಳ ವಿಚಾರದಲ್ಲಿ ಗದ್ಯವಾಗಲಿ ಪದ್ಯವಾಗಲಿ ಅವಕ್ಕೆ ಒಂದೇ ನಿಘಂಟಿನಿಂದ ಸಾಮಗ್ರಿ ಬರುತ್ತದೆ ಎಂಬುದೇನೊ ದಿಟ; ಆದರೆ ಪದ್ಯಕವಿ ಶಬ್ದಗಳನ್ನು ಆರಿಸಿಕೊಳ್ಳುತ್ತಾನೆ; ಅಲ್ಲದೆ ಅವನ್ನು ವಿಶಿಷ್ಟ ರೀತಿಯಲ್ಲಿ ಜೋಡಿಸುತ್ತಾನೆ; ಹೀಗಾಗಿ ಪದ್ಯದ ನುಡಿನಡೆ ಬೇರೆ–ಇದು ಕೋಲ್‌ರಿಜ್‌ನ ಅಭಿಮತ. ವರ್ಡ್ಸ್‌ವರ್ತ್ ಯಾವ ಬಗೆಯ ನುಡಿನಡೆಯನ್ನು ಕೃತಕ, ಚರ್ವಿತ ಚರ್ವಣ, ನೀರಸವೆಂದು ಹಳಿದಿದ್ದನೊ ಅದನ್ನು ಕೋಲ್‌ರಿಜ್‌ನೂ ಖಂಡಿಸಿದ.

ವಿಭಾವನೆಯದು ಕಾವ್ಯೋತ್ಪತ್ತಿಗೆ ಸಂಬಂಧಿಸಿದ ಗೂಢಗಹನ ವಿಚಾರ. ಅದರ ಜಿಜ್ಞಾಸೆಗೆ ಅಗತ್ಯವಾದ ಜ್ಞಾನ ಅನುಭವ ಪರ್ಯಾಲೋಚನೆ ಶಬ್ದಕೋಶ ಎಲ್ಲವೂ ಕೋಲ್‌ರಿಜ್‌ನಲ್ಲಿ ತುಂಬಿಕೊಂಡಿತ್ತು. ಜರ್ಮನ್ ತತ್ತ್ವಜ್ಞರ ಮೇಲ್ಪಂಕ್ತಿಯ ಸಹಾಯವೂ ಇವನಿಗೆ ಕೂಡಿಬಂದು ಇವನ ವಿವರಣೆ ಸೂತ್ರಪ್ರಾಯವಾಯಿತು. ಇಲ್ಲೂ ವಿಭಾವನೆ (ಇಮ್ಯಾಜಿನೇಶನ್) ಮತ್ತು ಕಲ್ಪನೆ (ಫ್ಯಾನ್ಸಿ) ಎಂಬ ಪದಗಳನ್ನು ವರ್ಡ್ಸ್‌ವರ್ತ್ ಬಳಸಿಕೊಂಡ ರೀತಿಯನ್ನು ಹೆಕ್ಕಿನೋಡುವ ಉದ್ದೇಶದಿಂದ ಕೋಲ್‌ರಿಜ್ ತನ್ನ ಪ್ರಬಂಧವನ್ನು ಪ್ರಾರಂಭಿಸಿದ. ಕಡೆಗೆ ಇಬ್ಬರ ಅಭಿಪ್ರಾಯವೂ ಸರಿಸುಮಾರಾಗಿ ಒಂದೇ ಆದರೂ ವರ್ಡ್ಸ್‌ವರ್ತನದು ಸಾಧಾರಣ ಪ್ರಜ್ಞೆಯ ರಸಾಸ್ವಾದಿಯದು, ಕೋಲ್‌ರಿಜ್‌ನದು ತಾತ್ತ್ವಿಕ ಪ್ರಜ್ಞೆಯ ರಸಾಸ್ವಾದಿಯದು. ಕೋಲ್‌ರಿಜ್‌ನ ಹೇಳಿಕೆಯ ರೀತಿ ಇದು: ವಿಭಾವನೆಗೆ ಎರಡು ಮುಖ, ಎರಡು ವಿಧದಲ್ಲಿ ಅದರ ಕೆಲಸ ನಡೆಯುತ್ತದೆ. ಒಂದು ಮೂಲ ವಿಭಾವನೆ, ಇನ್ನೊಂದು ಉಪವಿಭಾವನೆ. ಜ್ಞಾನೇಂದ್ರಿಯಗಳ ಅನುಭವದ ಮೂಲಕ ಪದಾರ್ಥಗಳ ಅರಿವು ಮನಸ್ಸಿಗೆ ಉಂಟಾಗುತ್ತದೆ; ಆ ಅರಿವನ್ನು ವಿಶ್ಲೇಷಿಸಿ ಪುನಃ ಜೋಡಿಸಿ ಆಲೋಚನೆ, ಅಭಿಪ್ರಾಯ ಇತ್ಯಾದಿ ಭಾವನೆಗಳನ್ನು ಉತ್ಪತ್ತಿ ಮಾಡುವ ಕೆಲಸ ಬುದ್ಧಿ, ವಿವೇಕಕ್ಕೆ ಸೇರಿದ್ದು. ಹಾಗೆಯೇ ಮೂಲವಿಭಾವನೆಯಿಂದ ಬಂದದ್ದನ್ನು ವಿಭಜಿಸಿ ಪುನಃ ಜೋಡಿಸಿ ಆಕೃತಿಗಳನ್ನಾಗಿಸುವ ಕಾರ್ಯ ಉಪವಿಭಾವನೆಗೆ ಸೇರಿದ್ದು. ಆದ್ದರಿಂದ ಕವಿಯೊ ಕಲಾವಿದನೊ ಎಸಗುವುದು ನಿಸರ್ಗ ದ್ರವ್ಯಗಳ ಬರಿ ಅನುಕರಣೆಯಲ್ಲ; ನಕಲಲ್ಲ, ಹೊಸ ಬಗೆಯ ದ್ರವ್ಯಗಳ ನಿರ್ಮಾಣ ಅಥವಾ ಸೃಷ್ಟಿ. ಅರಿಸ್ಟಾಟಲನ ಕಾಲದಿಂದಲೂ ಕಲಾವಿಮರ್ಶೆಯಲ್ಲಿ ಅಂಗೀಕೃತ ತತ್ತ್ವವಾಗಿದ್ದ ಅನುಕರಣೆ ಎಂಬುದರ ಬದಲು ಸೃಷ್ಟಿ ಎಂಬುದು ಬಳಕೆಗೆ ಬರುವಂತೆ ಮಾಡಿದ್ದು ಕೋಲ್‌ರಿಜ್‌ನ ಹಿರಿಮೆ. ಕಲೆಗೂ ನಿಸರ್ಗಕ್ಕೂ ವಿರೋಧ ಬಗೆಯಲಿಲ್ಲ ಕೋಲ್‌ರಿಜ್; ಹೊಂದಾಣಿಕೆಯನ್ನೇ ಸಾಧಿಸಿದ. ನಿಸರ್ಗದ ಬಾಹ್ಯಲಕ್ಷಣಗಳನ್ನು ಪ್ರತಿಬಿಂಬಿಸುವ ಕೆಲಸವೇ ಕಲಾವಿದನದ್ದೂ ಆದರೆ ಅದೆಂಥ ನಿಷ್ಪ್ರಯೋಜಕ ಹುರುಡು? ನಿಸರ್ಗದ ಆಂತರ್ಯಸತ್ವವನ್ನು ಭಾವಿಸಿಕೊಂಡು ಅದರ ಪೂರ್ಣರೂಪವನ್ನು ಯುಕ್ತಮಾಧ್ಯಮದ ಮೂಲಕ ಬಿಂಬಿಸುವುದೇ ಅವನ

ಜವಾಬ್ದಾರಿ. ಹಲವು ಬಗೆಯ ದ್ವಂದ್ವತತ್ತ್ವಗಳನ್ನು ವಿಭಾವನೆ ಅನುರೂಪವಾಗಿ ಸಮನ್ವಯಿಸುತ್ತದೆ. ಒಂದಾಗಿಸುತ್ತದೆ: ನವೀನ; ಜಡತೆ–ಚಲನೆ; ವಿವೇಕ–ಉತ್ಸಾಹ; ಅಭಿಪ್ರಾಯ–ಪ್ರತಿಮೆ; ಚಿಂತನೆ–ಭಾವಾವೇಶ; ಪ್ರಾತಿನಿಧಿಕ–ವೈಯಕ್ತಿಕ; ಏಕರೂಪ–ವ್ಯತ್ಯಾಸ; ಕೃತಕ–ಸಹಜ; ಮಾನವಿಕ–ಮಾನವಾತೀತ ಕವಿ–ಅವನ ಕಾವ್ಯ; ಕಲೆ–ಜೀವನ; ಇತ್ಯಾದಿ. ರೋಮ್ಯಾಂಟಿಕ್ ಕಾವ್ಯದ ಸ್ವರೂಪವನ್ನು ಮಾತ್ರ ಕೋಲ್‌ರಿಜ್ ವರ್ಣಿಸಿದ ಎಂಬೊಂದು ಆಕ್ಷೇಪ ಕೆಲಕಾಲ ತಲೆಯುತ್ತಿತ್ತು; ಆದರೆ ಅದು ಮಿಥ್ಯಾರೋಪ. ಯಾವುದನ್ನು ಕಾವ್ಯ ಅಥವಾ ಕಲೆ ಎನ್ನುತ್ತೇವೆಯೊ ಅದರ ಬೇರಿಗೆ ಸಂಬಂಧಪಟ್ಟ ಸರ್ವವ್ಯಾಪಿಯೂ ಶಾಶ್ವತವೂ ಆದ ಸಿದ್ಧಾಂತಗಳ ಭಂಡಾರ–ಬಯೋಗ್ರಾಫಿಯ ಲಿಟರರಿಯ.

ಕೋಲ್‌ರಿಜ್‌ನ ಪ್ರಾಯೋಗಿಕ ವಿಮರ್ಶೆ ಅವನ ಇತರ ಲೇಖನಗಳಲ್ಲಿ ಬಿಡಿಹೇಳಿಕೆಯಾಗಿಯೂ ಹಲಕೆಲವು ಪುಟದ ಕಿರುನಿಬಂಧವಾಗಿಯೂ ಹೊರಬಂದಿದೆ. ಆ ಹೊತ್ತಗೆಗಳಲ್ಲಿ ಮುಖ್ಯವಾದದ್ದು 'ಕಾವ್ಯದ ಜೀವಾತ್ಮ'. ಈತ ದಿನಚರಿಯ ರೀತಿಯಲ್ಲಿ ಗುರುತು ಹಾಕಿಡುತ್ತಿದ್ದ ಟಿಪ್ಪಣಿಗಳ ಸಂಕಲನ ಅದು; ಅಲ್ಲಿ ಅತ್ಯುತ್ತಮ ಗದ್ಯವಿದೆ. ಮಾದರಿಗಾಗಿ ಕೆಲವು ವಾಕ್ಯಗಳನ್ನು ಇಲ್ಲಿ ಕೊಡಬಹುದು; ಡಾಂಟೆಯನ್ನು ನಿಧಾನವಾಗಿ ಮೆಲುಕು ಹಾಕಿ ಅರ್ಥ ಮಾಡಿಕೊಳ್ಳಬೇಕು; ಬೈರನ್ನನ ಬರೆಹ ಎಲ್ಲೆಲ್ಲೂ ವೈಭವಯುಕ್ತ. ಆದರೆ ಎಲ್ಲೂ ಕಾವ್ಯವಲ್ಲ; ಕೆಲವರಿಗೆ ತಮ್ಮ ಬರೆವಣಿಗೆ ಎಷ್ಟು ದೂರ ಹೋಗಬಹುದೊ ಅಷ್ಟೇ ಸಾಲದು, ಅದಕ್ಕೂ ಮುಂದೆ ಹೋಗಬೇಕೆಂಬ ದುರಾಶೆ; ವಿಭಾವನೆ ಅನೇಕವನ್ನು ಒಂದಾಗಿ ಮಾಡುವ ಶಕ್ತಿ (ಎಸೆನೊ ಪ್ಲಾಸ್ಟಿಕ್ ಪವರ್). ಈ ಪ್ರಸಂಗದಲ್ಲಿ ಕೋಲ್‌ರಿಜ್ ಉಪಯೋಗಿಸಿರುವ ಎಸೆನೊಪ್ಲಾಸ್ಟಿಕ್ ಪದ ಬಯೋಗ್ರಾಫಿಯದಲ್ಲಿ ಅವನು ಬಳಸಿಕೊಂಡ ಎಸೆಮ್‌ಪ್ಲಾಸ್ಟಿಕ್ ಪದಕ್ಕಿಂತ ಉತ್ತಮವೆಂದು ಹೇಳಲಾಗಿದೆ.

ಹಾಗೆಯೇ ಇವನ ಟೇಬಲ್ ಟಾಕ್ ಎಂಬ ಪುಸ್ತಕವೂ ಮನನಾರ್ಹ. ಅದಕ್ಕೆ ಕೆಲವು ನಿದರ್ಶನ: ಸ್ಕಿಲ್ಲರ್ ಬಲು ವಿಷಯ ಸಾಮಗ್ರಿಯ ದಣಿ, ಷೇಕ್ಸ್‌ಪಿಯರಾದರೊ ಮಿತವ್ಯಯ; ಸ್ಪೆನ್ಸರನದು ಹಂಸದ ನಡಿಗೆ; ವರ್ಜಿಲನಿಂದ ಅವನ ಪದಪುಂಜ, ಛಂದಸ್ಸುಗಳನ್ನು ಕಸಿದುಕೊಂಡರೆ ಅವನಲ್ಲಿ ಉಳಿಯುವುದೇನು? ಪ್ರತಿಭೆ ಸ್ಥಾಣುವಲ್ಲ. ವಿಕಾಸಯುಕ್ತ; ಮೇಧಾವಿಗಳು ತಪ್ಪು ಮಾಡುವುದಿಲ್ಲ. ಕೆಲವು ವೇಳೆ ಅಪೂರ್ಣವಾಗಿ ಸರಿ ಹೇಳುತ್ತಾರೆ. ಹೀಗೆ ಇಲ್ಲಿ ಅನೇಕ ಇತರ ಸಾಹಿತಿಗಳ ಮೇಲೆ ಪ್ರಚೋದಕವಾದ ನುಡಿಗಳೂ ವಿವರಗಳೂ ಇವೆ.

ಕೋಲ್‌ರಿಜ್‌ನ ವಿಮರ್ಶೆಯನ್ನು ಒಕ್ಕಣಿಸುವಾಗ ಅವನ ಕುಶಲಪತ್ರಗಳನ್ನು ಮರೆಯುವಂತಿಲ್ಲ. ಯೌವನದಲ್ಲಿ ಅವನ ದೃಷ್ಟಿ ಹೇಗೆ ಕೆಲವು ಕವಿಗಳಿಗೆ ವಕ್ರವಾಗಿತ್ತೆಂಬುದು ತಿಳಿಯಬರುತ್ತದೆ. ಅವನೂ ಒಬ್ಬ ಮನುಷ್ಯ ಮಾತ್ರನಾಗಿದ್ದನೆಂಬುದನ್ನು ಸ್ಥಾಪಿಸುತ್ತದೆ; ಮಿಲ್ಟನ್ನಿಗಿಂತ ಸ್ಕಿಲ್ಲರ್ ಹೆಚ್ಚು ಭವ್ಯ; ಬೌಲ್ಸ್ ದೇವಸದೃಶ, ಬರ್ಕ್ ಅಸಮರ್ಪಕ, ಬೇಸರದ ಕಂತೆ. ಆದರೆ ಇಂಥ ಮುಗ್ಗರಿಸಿಕೆ ಕೆಲವೇ ಕೆಲವು. ಒಳ್ಳೆಯ ಸೂಕ್ತಿ ಹೇರಳ; ಏಕತೆರನಾಗಿರಬೇಕೆಂಬ ವಿಧಾಯಕವನ್ನು ಕವಿಗಳ ಮೇಲೆ ಹೊರಿಸುವುದೇತಕ್ಕೆ? ನಾನು ತುಂಬ ಯೋಚಿಸುತ್ತೇನೆ, ಆದ್ದರಿಂದ ನಾನು ಕವಿಯಲ್ಲ; ಸದೇ ಬಲು ಕಡಿಮೆ ಯೋಚಿಸುತ್ತಾನೆ, ಆದ್ದರಿಂದ ಅವನೆಂದೂ ದೊಡ್ಡ ಕವಿ ಆಗಲಾರ; ಛಂದಸ್ಸಿನಲ್ಲೇ ಕೊಂಚ ರಾಗೋದ್ರೇಕವಿದೆ; ಎಲ್ಲ ಸಂದರ್ಭಕ್ಕೂ ಒಂದೇ ಬಗೆಯ ಶೈಲಿ ಸಲ್ಲುವುದಿಲ್ಲ; ನಾಟಕರಂಗ ಮಾಯೆಯ ತವರು. ಸಾಹಿತ್ಯಾಭಿಮಾನಿಗಳಿಗೆ ಕೋಲ್‌ರಿಜ್ ದಿಟವಾಗಿ ದಾರಿತೋರುಗ. (ಎಸ್.ವಿ.ಆರ್.)

**ಸಾಹಿತ್ಯ ಮೀಮಾಂಸೆ :** ಸಾಹಿತ್ಯ ಮತ್ತು ಸೌಂದರ್ಯಮೀಮಾಂಸಾ ಕ್ಷೇತ್ರದಲ್ಲಿ ಕೋಲ್‌ರಿಜ್‌ನದು ಹಿರಿಯಸ್ಥಾನ. ಇವನ ಬಗ್ಗೆ ಪ್ರಸಿದ್ಧ ವಿಮರ್ಶಕರು ತೋರಿರುವ ಅಭಿಪ್ರಾಯಗಳಲ್ಲಿ ಕೆಲವನ್ನು ನೋಡಬಹುದು. ಅರಿಸ್ಟಾಟಲ್, ಲಾಂಜೈನಸ್ ಮತ್ತು ಕೋಲ್‌ರಿಜ್–ಈ ಮೂವರು ಸಾಹಿತ್ಯ ಮೀಮಾಂಸೆಯಲ್ಲಿ ಅತ್ಯಂತ ದೊಡ್ಡವರು (ಜಾರ್ಜ್ ಸೇಂಟ್ಸ್‌ಬರಿ). ಬಯಗ್ರಾಫಿಯ ಲಿಟರರಿಯ ಇಂಗ್ಲಿಷ್ ಭಾಷೆಯಲ್ಲಿಯ ಅತ್ಯಂತ ಉತ್ತಮ ವಿಮರ್ಶ ಗ್ರಂಥ (ಆರ್ಥರ್ ಸೈಮನ್ಸ್). ಈತ ಆಧುನಿಕ ಅರ್ಥಮೀಮಾಂಸೆಯ ಅಗ್ರಗಾಮಿ (ಐ.ಎ.ರಿಚರ್ಡ್ಸ್). ಇಂಗ್ಲಿಷಿನ ಯಾವನೇ ಸಾಹಿತ್ಯ ವಿಮರ್ಶಕನಿಗಿಂತ ಈತ ಅತ್ಯಂತ ದೊಡ್ಡವನು. ಇವನಲ್ಲಿ ಅಸ್ತಿತ್ವವಾದವೂ ಫ್ರಾಯ್ಡ್‌ನ ಮುನ್‌ಸೂಚನೆಗಳೂ ಕಾಣುತ್ತವೆ (ಹರ್ಬರ್ಟ್ ರೀಡ್). ಈತ ಮುಟ್ಟದ ವಿಷಯವಿಲ್ಲ, ನಿಜ. ಆದರೆ ಈತ ಯಾವ ಒಂದು ವಿಷಯಕ್ಕೂ ಪೂರ್ಣ ಗಮನವಿತ್ತವನಲ್ಲ (ಹ್ಯಾಜ್ಲಿಟ್). ವಿಶಾಲ ವ್ಯಾಪ್ತಿಯ ತತ್ತ್ವಗಳನ್ನು ವಿಕಸಿಸಬಲ್ಲ ಮಹತ್ತ್ವದ ಮೂಲಸತ್ಯಗಳನ್ನು ಯಥೇಚ್ಛವಾಗಿ ಹೊರಚೆಲ್ಲುವ ಅದ್ಭುತ ಶಕ್ತಿ ಈತನಿಗಿತ್ತು (ವಿಲಿಯಂ ವರ್ಡ್ಸ್‌ವರ್ತ್ಸ್). ಗುಹ್ಯಗಳ ಮತ್ತು ಸಂದೇಹಗಳ ನಡುವೆ ವಿವೇಚನಾಶಕ್ತಿಯನ್ನು ತಡೆಹಿಡಿಯುವ ಅಳವಿನ ಅಭಾವವನ್ನು ಇವನಲ್ಲಿ ಕಾಣುತ್ತೇವೆ (ಜಾನ್ ಕೀಟ್ಸ್). ಈತನೊಬ್ಬ ಗೊತ್ತುಗುರಿಯಿಲ್ಲದ ಸಾರಸಂಗ್ರಹಕಾರ (ರೆನ್‌ವೆಲಿಕ್). ಹಳೆಯ ವಿಮರ್ಶಕರ ಪೈಕಿ ಅಮೆರಿಕದ ಸಾಹಿತಿಗಳು ಸತತವಾಗಿ ಹೆಸರಿಸುವ ಇಬ್ಬರೆಂದರೆ ಅರಿಸ್ಟಾಟಲ್ ಮತ್ತು ಕೋಲ್‌ರಿಜ್. ಕಾವ್ಯಾಭಿವ್ಯಕ್ತಿಯ ವಿಚಾರವಾಗಿ ಕೊಲ್‌ರಿಜ್‌ನದು ಖಂಡಿತವಾಗಿ ಕೊನೆಯ ಮಾತು (ಟ್ರೆಯಲ್).

ಕೋಲ್‌ರಿಜ್ ತನ್ನ ಸಾಹಿತ್ಯ ಮೀಮಾಂಸೆಯನ್ನು ಮಂಡಿಸುವಲ್ಲಿ ಜರ್ಮನ್ ಪ್ರಾಜ್ಞರಾದ ಲೆಸಿಂಗ್, ಕಾಂಟ್, ಷಿಲರ್, ಶ್ಲೇಗಲ್, ಜೀನ್‌ಪಾಲ್–ಮೊದಲಾದವರಿಂದ ವಿಪುಲವಾಗಿ ಅಭಿಪ್ರಾಯಗಳನ್ನು ಬಳಸಿಕೊಂಡಿದ್ದಾನೆ. ಆದರೆ ಅವೆಲ್ಲವನ್ನೂ ಸಾಕಷ್ಟು ಚೆನ್ನಾಗಿ ಅರ್ಥಮಾಡಿಕೊಂಡು ತನ್ನವನ್ನಾಗಿ ಮಾಡಿಕೊಂಡಿದ್ದಾನೆ. ಸಕಲ ಜ್ಞಾನವೂ ಇವನ ಆಸಕ್ತಿಯ ಕ್ಷೇತ್ರವಾಗಿತ್ತು. ಇವನ ಓದು ಅತಿ ವಿಶಾಲವಾಗಿತ್ತು. ಅದರಲ್ಲಿಯೂ ಸೌಂದರ್ಯತತ್ತ್ವ ಜಿಜ್ಞಾಸೆಗೆ ಸಂಬಂಧಪಟ್ಟ ಮತ್ತು ಶುದ್ಧ ಸಾಹಿತ್ಯಿಕ ಕೃತಿಗಳಲ್ಲಿ ಇವನ ವ್ಯಾಸಂಗ ಆಳ ಮತ್ತು ವೈಶಾಲ್ಯತೆಯಿಂದ ಕೂಡಿತ್ತು. ಇವನ ಬುದ್ಧಿಶಕ್ತಿ ಬಹು ನವುರಾಗಿದ್ದು ಮೆತುತ್ವ ಮತ್ತು ಸೂಕ್ಷ್ಮತೆಗಳಿಂದ ಕೂಡಿತ್ತು. ಇತರರ ನಿಲವನ್ನು ಅರ್ಥಮಾಡಿಕೊಳ್ಳುವ ಮತ್ತು ಮೆಚ್ಚಿಕೊಳ್ಳುವ ಶಕ್ತಿ ಇವನಲ್ಲಿ ಸಾಕಷ್ಟು ಇತ್ತು. ಇವನ ನಿಲವು ಯಾವಾಗಲೂ ತರ್ಕಶುದ್ಧವಾಗಿತ್ತು. ಛಂದಸ್ಸು ಇವನಿಗೆ ಕರತಲಾಮಲಕವಾಗಿತ್ತು–ಹಲವು ಭಾಷೆಗಳ ಪರಿಚಯ ಇವನಿಗಿತ್ತು. ಇಂಗ್ಲಿಷ್ ಭಾಷೆ ಇವನಿಗೆ ಕರಗತವಾಗಿತ್ತು.–ಇವನದು ಬಹುಮುಖ ಸಾಧನೆ. ಈತ ಕವಿ, ತತ್ತ್ವಜ್ಞಾನಿ, ಪತ್ರಿಕೋದ್ಯಮಿ, ಧರ್ಮೋಪದೇಶಕ, ಭಾಷಣಕಾರ ಮತ್ತು ನಾಟಕಕರ್ತೃ.

ಸೌಂದರ್ಯಶಾಸ್ತ್ರ ಮತ್ತು ಕಾವ್ಯಮೀಮಾಂಸೆಗಳನ್ನು ಕುರಿತು ಕೋಲ್‌ರಿಜ್‌ನ ಅಭಿಪ್ರಾಯಗಳನ್ನು ಅವನ ಅನೇಕ ಕೃತಿಗಳಿಂದ ಆರಿಸಿ ತೆಗೆಯಬೇಕು. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು: ಷೇಕ್ಸ್‌ಪಿಯರನನ್ನು ಕುರಿತ ಭಾಷಣಗಳು–ಮೂರು ಗ್ರಂಥಗಳು (1808–14); ಆನ್ ದಿ ಪ್ರಿನ್ಸಿಪಲ್ಸ್ ಆಫ್ ಜೆನಿಯಲ್ ಕ್ರಿಟಿಸಿಸಂ (1814); ಬಯೊಗ್ರಾಫಿಯ ಲಿಟರರಿಯ (1817); ಲೆಕ್ಚರ್ಸ್ ಆನ್ ಪೊಯೆಟ್ರಿ (1818); ಪ್ರಿಲಿಮಿನರಿ ಟ್ರೀಟೀಸ್ ಆನ್ ಮೆಥೆಡ್ (1818); ಫಿಲಸಾಫಿಕಲ್ ಲೆಕ್ಚರ್ಸ್ (1818–19); ಲಿಟರರಿ ರಿಮೇನ್ಸ್ (1837–39); ಲೆಟರ್ಸ್–ಎರಡು ಸಂಪುಟಗಳು (1895).

ಹದಿನೆಂಟನೆಯ ಶತಮಾನದ ಜೈವಯಾಂತ್ರಿಕವಾದದ ಮನೋವಿಜ್ಞಾನವನ್ನು ಬದಲಾಯಿಸುವುದು ಕೋಲ್‌ರಿಜ್‌ನ ಮುಖ್ಯ ಕೆಲಸವಾಗಿತ್ತು. ಪ್ಲೇಟೋನ ತತ್ತ್ವಗಳ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿದುದಲ್ಲದೆ, ಇಂಗ್ಲೆಂಡಿನಲ್ಲಿ ಗ್ರೀಸಿನ ಹೊಸ ಆದರ್ಶವನ್ನು ಈತ ಪ್ರಚಾರಕ್ಕೆ ತಂದ. ಕಾವ್ಯಸೃಷ್ಟಿಗೆ ಕಾರಣವಾದ ಮತ್ತು ಪ್ರಜ್ಞೆಗೆ ಹೊರತಾದ ಮಾನಸಿಕ ಕ್ರಿಯೆಗಳನ್ನು ವಿವರಿಸಲು ಯತ್ನಿಸಿದ. ಷೇಕ್ಸ್‌ಪಿಯರನ ನಾಟಕಗಳ ವಿಚಾರದಲ್ಲಿ ಜನರಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಉಂಟುಮಾಡಿ, ಅವನನ್ನು ಅಸಾಧಾರಣ ಪ್ರತಿಭಾಶಾಲಿಯ ಪಟ್ಟಕ್ಕೆ ಏರಿಸಿದ. ಸಾಹಿತ್ಯ ಸೃಷ್ಟಿ ಮತ್ತು ಸಾಹಿತ್ಯದ ಬಗ್ಗೆ ವಿವೇಚನೆಯಲ್ಲಿ ಪ್ರತಿಮಾಶಕ್ತಿ ಸರ್ವೋತ್ಕೃಷ್ಟವಾದುದು ಮತ್ತು ಚಿತ್ತಾಕರ್ಷಕವಾದುದು ಎಂಬುದನ್ನು ಸಾರಿಹೇಳಿದ. ತತ್ತ್ವಶಾಸ್ತ್ರದ ವಿಚಾರದಲ್ಲಿ ತಾನು ಮಾಡಿದ ಚಿಂತನೆಗಳಿಂದ ಸೌಂದರ್ಯತತ್ತ್ವದ ಅನೇಕ ಅಭಿಪ್ರಾಯಗಳನ್ನು ನಿಯಂತ್ರಿಸಿದ. ವಿಮರ್ಶೆ ವಿಶೇಷ ಅರ್ಥದಲ್ಲಿ ಪ್ರತಿಮಾಶಕ್ತಿಯಿಂದ ನಿಯೋಜಿಸಲ್ಪಡುತ್ತದೆ ಎಂಬುದನ್ನು ಮೊದಲಬಾರಿಗೆ ತೋರಿಸಿ ಕೊಟ್ಟವ ಕೋಲ್‌ರಿಜ್. ಇವನ ಪ್ರಕಾರ ವಿಮರ್ಶೆ ಎಂದರೆ ಒಂದು ಕೃತಿಯಲ್ಲಿ ತಪ್ಪನ್ನು ಕಂಡುಹಿಡಿಯುವುದಲ್ಲ. ಕೃತಿಯ ಅನೇಕ ಮುಖಗಳನ್ನು ವಿವರಿಸುವುದು ಮತ್ತು ಅದರಲ್ಲಿರುವ ಸೊಗಸುಗಳನ್ನು ಎತ್ತಿತೋರಿಸುವುದು. ಇವನ ಸೌಂದರ್ಯಶಾಸ್ತ್ರ ಸಾಹಿತ್ಯಸೂತ್ರ ಮತ್ತು ವಿಮರ್ಶೆಯ ಮೂಲತತ್ತ್ವಗಳು ಮುಖ್ಯವಾಗಿ ಜ್ಞಾನಮೀಮಾಂಸೆ (ಎಪಿಸ್ಟಮಾಲಜಿ) ಮತ್ತು ಅಧ್ಯಾತ್ಮವಿದ್ಯೆಯಿಂದ (ಮೆಟಫಿಸಿಕ್ಸ್) ಹುಟ್ಟಿದವು. ಮಾನವನ ಸಹಜಗುಣವನ್ನು ಆಧರಿಸಿ ಹಿಂದೆ ನಿರೂಪಿತವಾಗಿದ್ದ ವಿಮರ್ಶೆಯನ್ನು, ಸಾಹಿತ್ಯ ಕೃತಿಗಳನ್ನು ತರ್ಕಬದ್ಧವಾಗಿ ಪರಿಶೀಲಿಸುವ ಸ್ಥಿರವಾದ ನಿಯಮಗಳನ್ನೊಳಗೊಂಡ ಒಂದು ವಿಜ್ಞಾನವನ್ನಾಗಿ ಮಾಡಬೇಕೆಂಬುದು ಇವನ ಆಶಯವಾಗಿತ್ತು.

ಜರ್ಮನ್ ಪ್ರಾಜ್ಞರ ಹಾಗೆ, ಕೋಲ್‌ರಿಜ್‌ನಲ್ಲೂ ಕಾವ್ಯವನ್ನು ತತ್ತ್ವಶಾಸ್ತ್ರಕ್ಕೆ ಸಮೀಕರಿಸುವ ಒಂದು ಪ್ರಬಲ ಚಪಲವಿತ್ತು. ಶ್ರೇಷ್ಠ ತತ್ತ್ವಜ್ಞಾನಿಯಲ್ಲದ ಯಾವನೂ ದೊಡ್ಡ ಕವಿಯಾಗಿಲ್ಲ ಎಂಬುದು ನಂಬಿಕೆ. ಆನಂದವನ್ನು–ಯಾಥಾರ್ಥ್ಯವನ್ನಲ್ಲ–ನೇರಗುರಿಯಾಗುಳ್ಳ ರಚನೆ ಕಾವ್ಯ ಎಂದು ಇವನ ಅಭಿಪ್ರಾಯ.

ಕೋಲ್‌ರಿಜ್ ತನ್ನ ಕಾವ್ಯಮೀಮಾಂಸೆಯಲ್ಲಿ ಕವಿಯ ವರ್ಣನೆ, ಅವನ ಸಜ್ಜು, ಅವನ ಸ್ವಾಭಾವಿಕ ಶಕ್ತಿಗಳು, ಕಲೆಯ ವರ್ಣನೆ ಮತ್ತು ಓದುಗನ ಮೇಲೆ ಅದರ ಪ್ರಭಾವ–ಇವಿಷ್ಟನ್ನೂ ಒಂದುಗೂಡಿಸಲು ಯತ್ನಿಸುತ್ತಾನೆ. ಇವನ ಪ್ರಕಾರ ಕವಿಯಾದವನಲ್ಲಿ ಇರಬೇಕಾದ ಅರ್ಹತೆಗಳು ಇವು: ಸಂವೇದನ ಶಕ್ತಿ, ಭಾವೋದ್ರಕ್ತತೆ. ಸಂಕಲ್ಪ, ವಿವೇಕ, ವಿಮರ್ಶನಶಕ್ತಿ, ಲಘುಕಲ್ಪನೆ, ವಿಭಾವನೆ ಇತ್ಯಾದಿ. ಕವಿ ಗುಣಶೀಲನಾಗಿರಬೇಕು. ಅಧ್ಯಾತ್ಮವಿದ್ಯೆಯಲ್ಲಿ ಆಳವಾದ ಪಾಂಡಿತ್ಯವುಳ್ಳವನಾಗಿರಬೇಕು. ದೊಡ್ಡ ತತ್ತ್ವಜ್ಞಾನಿಯಾಗಿರಬೇಕು. ಇತಿಹಾಸಕಾರನಾಗಿರಬೇಕು, ಪ್ರಕೃತಿಶಾಸ್ತ್ರಜ್ಞನಾಗಿರಬೇಕು. ಮತ್ತು ಮತಶ್ರದ್ಧೆಯುಳ್ಳವನಾಗಿರಬೇಕು. ಧರ್ಮನಿಷ್ಠನಲ್ಲದ ಕವಿ ಹುಚ್ಚ, ಅಂಥವನು ಕವಿಯಾಗುವುದು ಸಾಧ್ಯವೇ ಇಲ್ಲ. ಅವನಿಗೆ ಸಕಲಜ್ಞಾನದ ಪರಿಚಯವಿರಬೇಕು. ಕವಿ ಒಂದು ಅಸಾಮಾನ್ಯ ಉದ್ರಿಕ್ತಸ್ಥಿತಿಯಲ್ಲಿ, ಮನಸ್ಸಿನ ಒಂದು ಸ್ಥಿರವಾದ ತೀವ್ರತೆಯಲ್ಲಿ

ಕಾವ್ಯಸೃಷ್ಟಿ ಮಾಡುತ್ತಾನೆ. ಕವಿ ಎಲ್ಲವೂ ಆಗಿರುತ್ತಾನೆ–ಜಾಗೃತ ಮತ್ತು ಅಜಾಗೃತ; ತತ್ತ್ವಜ್ಞಾನಿ ಮತ್ತು ಶಿಶು; ಬುದ್ಧಿಶಾಲಿ ಮತ್ತು ಸಂವೇದನಾಪರ; ರಚನಚತುರ ಮತ್ತು ಉದ್ವೇಗಪರ. ಕೋಲ್‍ರಿಜ್‍ನ ಪ್ರಕಾರ ಈ ಅರ್ಥದಲ್ಲಿ ಷೇಕ್ಸ್‍ಪಿಯರ್ ಒಬ್ಬ ಪ್ರತಿಭಾಶಾಲಿ.

ಕಾವ್ಯದ ಉದ್ದೇಶ ಆನಂದ ಎಂಬುದನ್ನೂ ಕಾವ್ಯದಲ್ಲೊಂದು ಆದರ್ಶ ಮೂಡಿಬರಬೇಕು ಎಂಬುದನ್ನೂ ಕೋಲ್‍ರಿಜ್ ಒತ್ತಿ ಹೇಳಿದ್ದಾನೆ. ಕಲಾಕೃತಿಯಲ್ಲಿ ಐಕ್ಯತೆ ಇರಬೇಕು ಎಂಬುದು ಕೋಲ್‍ರಿಜ್‍ನ ಅಭಿಪ್ರಾಯ. ಹಿಂದಿನ ಕಾಲೈಕ್ಯ, ಸ್ಥಳೈಕ್ಯ ಮತ್ತು ಕ್ರಿಯೈಕ್ಯಗಳಿಗೆ ಬದಲಾಗಿ ಕೋಲ್‍ರಿಜ್ ಕೃತಿಯಲ್ಲಿ ಅಗತ್ಯವಾಗಿ ಇರಬೇಕಾದ ಔಚಿತ್ಯಕ್ಕೆ ಪ್ರಾಧಾನ್ಯವೀಯುತ್ತಾನೆ.

ಹದಿನೇಳನೆಯ ಶತಮಾನದಲ್ಲಿ ವಿಭಾವ (ಇಮ್ಯಾಜಿನೇಷನ್) ಮತ್ತು ಲಘುಕಲ್ಪನೆ (ಫ್ಯಾನ್ಸಿ) ಎರಡೂ ಸಮಾನಾರ್ಥದಲ್ಲಿ ಉಪಯೋಗಿಸಲ್ಪಡುತ್ತಿದ್ದುವು. ಅವೆರಡೂ ಭಿನ್ನವಾದುವುಗಳೆಂದು ಕೋಲ್‍ರಿಜ್ ತೋರಿಸಿಕೊಟ್ಟ..

ಕಾವ್ಯಸೃಷ್ಟಿಯಲ್ಲಿ ವಿಭಾವನೆಯ ಪಾತ್ರದ ಮಹತ್ತ್ವವನ್ನು ಕೋಲ್‍ರಿಜ್‍ನ ಈ ಮಾತುಗಳು ಸ್ಪಷ್ಟಪಡಿಸುತ್ತವೆ; ಒಳ್ಳೆಯ ಪ್ರಜ್ಞೆ ಕಾವ್ಯಪ್ರತಿಭೆಯ ಕಾಯ; ಲಘುಕಲ್ಪನೆ ಅದರ ಉಡುಗೆ, ಚಲನೆ ಅದರ ಜೀವ; ಎಲ್ಲೆಡೆಯಲ್ಲೂ ಮತ್ತು ಪ್ರತಿಯೊಂದರಲ್ಲೂ ಇರುವ ವಿಭಾವನೆ ಅದರ ಆತ್ಮ; ಅದು ಎಲ್ಲವನ್ನೂ ರಮ್ಯವಾದ ಮತ್ತು ಪ್ರಜ್ಞೆಯುಳ್ಳ ಅಖಂಡವಾದುದನ್ನಾಗಿ ರೂಪಿಸುತ್ತದೆ.

ಸೌಂದರ್ಯದ ಬಗ್ಗೆ ಕೋಲ್‍ರಿಜ್‍ನ ಅಭಿಪ್ರಾಯ ಹೀಗಿದೆ: ಸೌಂದರ್ಯವೆಂದರೆ ಸಾಮರಸ್ಯ, ಅನೇಕತೆಯಲ್ಲಿ ಕಾಣುವ ಏಕತೆ. ಸೌಂದರ್ಯ ನೇರ ಆನಂದವನ್ನು ಕೊಡಬೇಕು. ಸುಂದರವಾದುದು ಉಪಯುಕ್ತವಾದುದು ಮತ್ತು ಹಿತವಾದುದು–ಇವುಗಳ ನಡುವಣ ಭಿನ್ನತೆಯನ್ನು ಕೋಲ್‍ರಿಜ್ ಗುರುತಿಸುತ್ತಾನೆ. ಸದ್ಗುಣ ಮತ್ತು ಪವಿತ್ರತೆಗಳ ಸೌಂದರ್ಯವನ್ನು ಇಂದ್ರಿಯಾತೀತ ಲಾವಣ್ಯ ಎಂದು ಈತ ಒಂದು ಕಡೆ ಹೆಸರಿಸುತ್ತಾನೆ.

ಕಾವ್ಯದಲ್ಲಿನ ಛಪ್ಪತೆ, ಕವಿಕೃತಿಗೆ ಕಾರಣವಾದ ಪ್ರತಿಭೆಯ ವಿಶ್ಲೇಷಣೆ, ಪದ್ಯಗದ್ಯಗಳಿಗಿರುವ ಮುಖ್ಯ ಭೇದ, ಅವು ಬಳಸುವ ಭಾಷೆಯ ವಿಚಾರ, ಛಂದಸ್ಸಿನ ಅಗತ್ಯ ಮತ್ತು ಸ್ಥಾನಮಾನ–ಈ ವಿಚಾರಗಳ ಬಗ್ಗೆ ಕೋಲ್‍ರಿಜ್ ಹೆಚ್ಚಿನ ವಿವರಣೆ ನೀಡಿದ್ದಾನೆ.

ಕೋಲ್‍ರಿಜ್‍ನ ಕಾವ್ಯ ಮೀಮಾಂಸೆಯ ಮುಖ್ಯ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು: ಇವನದು ಮೂಲತಃ ತರ್ಕಶಾಸ್ತ್ರಜ್ಞನ ದೃಷ್ಟಿಯಲ್ಲ, ಮನಶಾಸ್ತ್ರಜ್ಞನದು. ಕವಿಪ್ರತಿಭೆಯನ್ನುಳ್ಳ ಈತ ಅದೇ ಶಕ್ತಿಯಿಂದ ವಿಮರ್ಶನ ಕ್ಷೇತ್ರವನ್ನೂ ಅವಲೋಕನ ಮಾಡಿದ್ದಾನೆ. ಆದರ್ಶೀಕರಣದ ಕಡೆ ಇವನಿಗೆ ಹೆಚ್ಚಿನ ಒಲವು. ಇವನ ಬೌದ್ಧಿಕ ಆಸಕ್ತಿಗಳು ಬಹುಮುಖವಾದುವು. ಆ ಕಾರಣದಿಂದ ಇವನದು ವಿಶಾಲಹರವು. ಆದ್ದರಿಂದ ಆ ಕಾಲದಲ್ಲಿದ್ದ ಎಲ್ಲ ಸಾಹಿತ್ಯವೂ ಇವನ ವಿಮರ್ಶೆಯ ಕ್ಷೇತ್ರವಾದುದರಲ್ಲಿ ಆಶ್ಚರ್ಯವೇನಿಲ್ಲ.

ಇವನ ಕಾವ್ಯ ಮೀಮಾಂಸೆಯಲ್ಲಿ ದೋಷಗಳಿಲ್ಲದಿಲ್ಲ. ಕವಿಗಳ ಬಗ್ಗೆ ಇವನ ಅಭಿಪ್ರಾಯಗಳು ಅನಿಶ್ಚಿತವಾದುವು. ಗೊತ್ತುಗುರಿ ಇಲ್ಲದುವು. ಇವನ ಅತಿಶಿಷ್ಟತನ, ಅಂಧಾಭಿಮಾನ ಮತ್ತು ಅತಿರೇಕದ ಸ್ವದೇಶ ಪ್ರೇಮ ಅನೇಕ ಸಂದರ್ಭಗಳಲ್ಲಿ ಇವನ ಸಾಹಿತ್ಯ ವಿಮರ್ಶೆಯನ್ನು ಕೆಡಿಸಿವೆ–ಎಂದು ಕೆಲವರ ಅಭಿಪ್ರಾಯ. ನೆಪೋಲಿಯನ್ ಮತ್ತು ಫ್ರಾನ್ಸಿನ ಬಗ್ಗೆ ಇವನಿಗಿದ್ದ ದ್ವೇಷ ಮನೋಭಾವ, ಫ್ರೆಂಚ್ ಸಾಹಿತ್ಯದಲ್ಲಿಯ ಒಳ್ಳೆಯ ಗುಣಗಳನ್ನು ಗುರುತಿಸದಂತೆ ಮಾಡಿವೆ. ಇವನಲ್ಲಿ ಸೂಕ್ಷ್ಮ ಗ್ರಹಣಶಕ್ತಿ ಹೇರಳವಾಗಿತ್ತಾದರೂ ಇವನು ಒಬ್ಬ ಗುರಿಯಿಲ್ಲದ, ಹೊಣೆಗಾರಿಕೆಯರಿಯದ ಕನಸಿಗ. ತನ್ನ ಮಾನಸಿಕ ಕಲ್ಪನೆಯನ್ನು ಕಾರ್ಯಗತಮಾಡುವ ಸಂಕಲ್ಪಶಕ್ತಿ ಇವನಲ್ಲಿರಲಿಲ್ಲ. ಪ್ರಸಕ್ತ ವಿಷಯವನ್ನು ಬಿಟ್ಟು ಎತ್ತಲೋ ಹೋಗಿಬಿಡುವುದು ಇವನ ಸ್ವಭಾವಜನ್ಯ ಪ್ರವೃತ್ತಿಯಾಗಿತ್ತು. ಆದುದರಿಂದ ಇವನ ವಿಮರ್ಶೆಯಲ್ಲಿ ಬಳಸಾಟ ಅತಿಯಾಗಿದೆ. ಅದೇ ಕಾರಣದಿಂದ 'ಇವನ ಭಾಷಣ ಮತ್ತು ಬರೆಹಗಳಲ್ಲಿ, ಸಾಹಿತ್ಯ, ಸೌಂದರ್ಯ ಅಥವಾ ಭವ್ಯತೆಯ ಬಗ್ಗೆ ಸುಸಂಗತ, ವ್ಯವಸ್ಥಿತ ಮತ್ತು ಸಮನ್ವಿತ ವಿಚಾರಸರಣಿ ಇಲ್ಲ'–ಎಂದು ಕೆಲವರ ಅಭಿಪ್ರಾಯ.

ಇಷ್ಟು ನಿಜ. ಸಕಲಜ್ಞಾನವೂ ಕೋಲ್‍ರಿಜ್‍ನ ವ್ಯವಸಾಯ ಕ್ಷೇತ್ರವಾಗಿತ್ತು. ಯಾವ ವಿಷಯದ ಬಗ್ಗೆಯಾಗಲಿ ಅರೆಜ್ಞಾನದಿಂದ ಇವನಿಗೆ ತೃಪ್ತಿಯಾಗುತ್ತಿರಲಿಲ್ಲ. ಅರಿವನ್ನು ಹೆಚ್ಚಿಸುವುದು ಇವನ ಪ್ರಧಾನ ಗುರಿಯಾಗಿತ್ತು. ಅನೇಕ ವಿಷಯಗಳ ಬಗ್ಗೆ ಈತ ಹೊಸ ಆಲೋಚನಾಮಾರ್ಗಗಳನ್ನು ತೆರೆದ. ಸೃಷ್ಟಿಕಾರ್ಯಕ್ಕೆ ಒಂದು ದಾರ್ಶನಿಕ ಹಿನ್ನೆಲೆಯನ್ನು ಕೊಟ್ಟ, ಬುದ್ಧಿಯ ಕಾರ್ಯವಿಧಾನಗಳಿಗೆ ರಸಜ್ಞತೆಯ ಮೌಲ್ಯವನ್ನು ಕೊಟ್ಟ. ತನ್ನ ಅಲೆದಾಟದಲ್ಲಿ ವಿಮರ್ಶೆಗೆ ಸಂಬಂಧಿಸಿದ ಅನೇಕ ಸತ್ತ್ವಗಳನ್ನು ಹುಡುಕಿದ. ಸಾಹಿತ್ಯದ ಅವಿಚ್ಛಿನ್ನತೆಗೆ ಕಾರಣವಾದ ಜೀವಂತ ತತ್ತ್ವಗಳ ಅನ್ವೇಷಣೆ ಇವನಿಗೆ ಅತಿಪ್ರಿಯವಾಗಿತ್ತು. ಅಪೂರ್ವಸಾಹಿತ್ಯಾಭಿರುಚಿ, ಸೂಕ್ಷ್ಮಪರಿಶೀಲನಾಶಕ್ತಿ, ಬಹುಮುಖಪ್ರತಿಭೆ, ತತ್ತ್ವಾನ್ವೇಷಣೆಯ ಬಗ್ಗೆ ಒಲವು ಇವೆಲ್ಲ ಇವನದಾಗಿದ್ದುವು. ಈತ ದೊಡ್ಡ ವಿಮರ್ಶಕರ ಯುಗದ ಶ್ರೇಷ್ಠ ವಿಮರ್ಶಕ. (ಎಸ್.ಎನ್.ಎಸ್.ವಿ.)

**ಕೋಲ್‍ರಿಜ್, ಸ್ಯಾರ :** 1802–52. ಸ್ಯಾಮ್ಯುಯಲ್ ಟೇಲರ್ ಕೋಲ್‍ರಿಜ್‍ನ ಏಕೈಕ ಪುತ್ರಿ. ಕೆಸ್‍ವಿಕ್‍ನ ಗ್ರೆಟಹಾಲ್‍ನಲ್ಲಿ ಹುಟ್ಟಿದಳು. ತನ್ನ ಬಾಲ್ಯವನ್ನು ಸೌದೀ ಮತ್ತು ವರ್ಡ್ಸ್‍ವರ್ತರ ಬಳಿ ಕಳೆದಳು. 1829ರಲ್ಲಿ ತನ್ನ ಸೋದರಿಕೆ ಸಂಬಂಧದಲ್ಲಿ ಹೆನ್ರಿ ನೆಲ್ಸನ್ ಕೋಲ್‍ರಿಜ್‍ನನ್ನು ಮದುವೆಯಾಗಿ ಹ್ಯಾಂಪ್‍ಸ್ಟೆಡ್‍ನಲ್ಲಿ ವಾಸಿಸತೊಡಗಿದಳು. ಈಕೆ ದೊಬ್ರಿಜ್‍ಹಾಫರ್‌ನ ಅಕೌಂಟ್ ಆಫ್ ದಿ ಅಬಿಪೋನ್ಸ್ (1822), ಮೆಮಾಯಿರ್ಸ್ ಆಫ್ ದಿ ಷೆವಲಿಯರ್ ಬೆಯಾರ್ಡ್ (1825) ಎಂಬ ಗ್ರಂಥಗಳನ್ನು ಭಾಷಾಂತರಿಸಿದಳು. ಈಕೆಯ ಸ್ವಂತ ರಚನೆಯೆಂದರೆ ಪ್ರೆಟಿ ಲೆಸನ್ಸ್ ಇನ್ ವರ್ಸ್ ಫಾರ್ ಗುಡ್ ಚಿಲ್ಡ್ರನ್ (1834) ಮತ್ತು ಫಾಂಟಾಸ್‍ಮಿಯಾನ್ (1837) ಎಂಬ ಯಕ್ಷಿಣಿ ಕಥೆ. ಈ ಎರಡೂ ಈಕೆಗೆ ಖ್ಯಾತಿಯನ್ನು ತಂದ ಗ್ರಂಥಗಳು. ಅಲ್ಲದೆ ತನ್ನ ತಂದೆಯ ಅನೇಕ ಕೃತಿಗಳನ್ನು ಈಕೆ ಸಂಪಾದಿಸಿ ಪ್ರಕಟಿಸಿದಳು. *

**ಕೋಲ್‍ರಿಜ್, ಹಾರ್ಟ್ಲಿ :** 1796–1849. ಕವಿ. ಪ್ರಸಿದ್ಧ ಆಂಗ್ಲಲೇಖಕ ಸ್ಯಾಮ್ಯುಯಲ್ ಟೇಲರ್ ಕೋಲ್‍ರಿಜ್‍ನ ಹಿರಿಯ ಮಗ. ಹುಟ್ಟಿದ್ದು ಕ್ಲೀವ್‍ಡನ್‍ನಲ್ಲಿ. ಚಿಕ್ಕವನಾಗಿದ್ದಾಗಲೇ ಪ್ರತಿಭಾವಂತನೆನಿಸಿಕೊಂಡಿದ್ದ. ವಿದ್ಯಾಭ್ಯಾಸ ಆಕ್ಸ್‍ಫರ್ಡಿನಲ್ಲಿ. ಓರಿಯಲ್ ಫೆಲೋ ಪದವಿಗೆ ಆಯ್ಕೆಯಾಗಿದ್ದ ಈತ ತನ್ನ ದುಡುಕಿನಿಂದ ಅದನ್ನು ಕಳೆದುಕೊಂಡ. ಇದರಿಂದ ನೊಂದು ಲಂಡನ್ನಿಗೆ ತೆರಳಿ ಅಲ್ಲಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯತೊಡಗಿದ. 1823ರಿಂದ 1828ರ ವರೆಗೆ ಅಂಬ್ಲೆ ಸೈಡ್‍ನಲ್ಲಿ ಒಂದು ಶಾಲೆಯನ್ನು ತೆರೆಯಲು ಯೋಚಿಸಿ ಅದು ಕೈಗೂಡದೆ ನಿರಾಶನಾಗಿ ತನ್ನ ಜೀವನ ಪರ್ಯಂತ ಗ್ರಾಸ್‍ಮಿಯರ್‌ನಲ್ಲಿ ಏಕಾಂಗಿಯಾಗಿದ್ದ. ಅಲ್ಲಿಯೇ ಯಾರ್ಕ್‍ಷೈರ್ ಮತ್ತು ಲ್ಯಾಂಕಷೈರಿನ ಗಣ್ಯವ್ಯಕ್ತಿಗಳನ್ನು ಕುರಿತಂಥ ಬಯೋಗ್ರಾಫಿಯ ಬೊರಿಯಾಲಿಸ್ (1832), ಮತ್ತು ಲೈಫ್ ಆಫ್ ಮ್ಯಾಸಿಂಜರ್ (1839) ಎಂಬ ಗ್ರಂಥಗಳನ್ನು ರಚಿಸಿದ. ಈತ ಆಂಗ್ಲ ಸಾಹಿತ್ಯದಲ್ಲಿ ತನ್ನ ಕೆಲವು ಸುನೀತಗಳಿಗಾಗಿ ಪ್ರಖ್ಯಾತನಾಗಿದ್ದಾನೆ. ಈತನ ಕವನಗಳಲ್ಲಿ ಒಂದು ಬಗೆಯ ಖೇದ, ಮಾಧುರ್ಯಗಳಿವೆ. ಈತನ ನಿಧನಾನಂತರ ಈತನ ಕೆಲವು ಪದ್ಯಗಳನ್ನು, ಅಪೂರ್ಣಗೊಂಡ ಪ್ರೊಮಿಥಿಯಸ್ ಎಂಬ ನಾಟಕವನ್ನು ಈತನ ಸಹೋದರ ಡರ್‌ವೆಂಟ್ ಪ್ರಕಟಿಸಿದ. (ಎಸ್.ಎಸ್.ಎಲ್.)

**ಕೋಲ :** ಉಷ್ಣವಲಯದ ಒಂದು ಮರ. ಭಾರತ, ಬ್ರೆಜಿಲ್, ಸೂಡಾನ್, ಪಶ್ಚಿಮ ಆಫ್ರಿಕಗಳಲ್ಲಿ ವಿಶೇಷ. ಸ್ಟರ್‌ಕ್ಯೂಲಿಯೇಸೀ ಕುಟುಂಬಕ್ಕೆ ಸೇರಿದೆ. ಇದರ ಶಾಸ್ತ್ರೀಯ ಹೆಸರು ಕೋಲ ಅಕ್ಯುಮಿನೇಟ. ಇದರ ಬೀಜಗಳನ್ನು ಕೋಲ ಹಣ್ಣು ಎನ್ನುತ್ತಾರೆ. ವಾಸ್ತವವಾಗಿ ಹಣ್ಣು ಒಂದು ಬಿರಿಸುಕಾಯಿ. ಹಣ್ಣು ನಕ್ಷತ್ರದಾಕೃತಿಯಾಗಿದ್ದು ಅದರಲ್ಲಿ ಎಂಟು ಬೀಜಗಳಿವೆ. ಬೀಜಗಳು ರಸಭರಿತವಾಗಿದ್ದು ಕೆಂಪಾಗಿ ಗುಲಾಬಿ ವಾಸನೆ ಬೀರುತ್ತವೆ. ನಮ್ಮಲ್ಲಿ ಅಡಕೆಯನ್ನು ಮಾರುವಂತೆ ಕೋಲ ಹಣ್ಣುಗಳನ್ನು ಇಡಿ ಇಡಿಯಾಗಿಯೂ ಪುಡಿಮಾಡಿಯೂ ಮಾರಾಟ ಮಾಡುವುದುಂಟು. ತಿನ್ನಲು ಯೋಗ್ಯವಾದ ಇವಕ್ಕೆ ಸಿಹಿ ರುಚಿಯಿದೆ. ಬೀಜದಲ್ಲಿ ಕೆಫೀನ್, ಕೋಲನಿನ್ ಎಂಬ ಸಸ್ಯಕ್ಷಾರ ಮತ್ತು ಒಂದು ಬಗೆಯ ಗ್ಲೂಕೋಸೈಡ್–ಕೋಲಾನಿನ್ ಚಂಚಲತೈಲ ಇವೆ. ಕೆಫೀನ್ ಇರುವುದರಿಂದ ಹೃದಯಕ್ರಿಯೆಯನ್ನು ಚುರುಕುಗೊಳಿಸುವ ಮತ್ತು ಆಯಾಸವನ್ನು ಪರಿಹರಿಸುವ ಗುಣ ಕೋಲ ಹಣ್ಣಿಗಿದೆ. (ಎಚ್.ಕೆ.ಎಂ.)

**ಕೋಲರು : ನೋಡಿ – ಆದಿವಾಸಿಗಳು**

**ಕೋಲ ಶಾಂತಯ್ಯ :** ಸು. 1160. ವೀರಶೈವ ಅಮರ ಗಣಾಧೀಶ್ವರರ ಪಂಕ್ತಿಯಲ್ಲಿ ಒಬ್ಬನಾಗಿರುವ ಈತ ಹಿರಿಯ ಶರಣ ಹಾಗೂ ವಚನಕಾರ. ಬಸವಣ್ಣ, ಬಿಜ್ಜಳರ ಸಮಕಾಲೀನ. ಬಿಜ್ಜಳನಲ್ಲಿ ಕಟ್ಟಿಗೆ ಅಥವಾ ಕೋಲನ್ನು ಹಿಡಿವ ಕಾಯಕವನ್ನು ನಡೆಸುತ್ತಿದ್ದುದರಿಂದ ಈತನ ಹೆಸರಿನ ಹಿಂದೆ ಕೋಲು ವಿಶೇಷಣವಾಗಿ ಬಂದಿರಬಹುದೆಂದು ಹೇಳಬಹುದಾಗಿದೆ. ವಿವಿಧ ಸಾಹಿತ್ಯ ಮೂಲಗಳಿಂದ ತಿಳಿದು ಬರುವಂತೆ ಈತ 'ಚಿತ್ರದ ಜಂಗಮವನಿಜಿದವನಿಜಿದ' ಪವಾಡದ ವ್ಯಕ್ತಿಯಾಗಿ ತನ್ನ ಮಹಿಮೆಯನ್ನು ಮೆರೆದಿದ್ದಾನೆ. ವಚನ ರಚನೆಯಿಂದ ಸಾಹಿತ್ಯದಲ್ಲಿಯೂ ಹಿರಿಯ ಸ್ಥಾನವನ್ನು ಸಂಪಾದಿಸಿಕೊಂಡಿದ್ದಾನೆ. ಈಗ ದೊರೆತಿರುವಂತೆ ಈತನ ವಚನಗಳ ಸಂಖ್ಯೆ 100. ಇವುಗಳಲ್ಲಿ 64 ಸಾಮಾನ್ಯ ವಚನಗಳು, 36 ಬೆಡಗಿನ ವಚನಗಳು. ಪುಣ್ಯಾರಣ್ಯ ದಹನ ಭೀಮೇಶ್ವರಲಿಂಗ ನಿರಂಗಸಂಗ ಎಂಬುದು ಈತನ ವಚನಾಂಕಿತ. ಎಲ್ಲ ವಚನಕಾರರಂತೆ ಈತನೂ ಷಟ್‍ಸ್ಥಲ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಭಕ್ತನಾದವನ ಜಡೆಮುಡಿಗಳು ಎಂತೇ ಇರಲಿ ಆತನ ನಡೆನುಡಿ ಸಿದ್ಧಾಂತವಾದರೆ ಸಾಕು. ಅವನಿಗೆ ಆವಸೋಂಕು ಬಂದರೂ ಭಾವ ಶುದ್ಧವಾಗಿರಬೇಕು–ಎಂಬಿವೇ ಮೊದಲಾದ ವಿವಿಧ ನೀತಿಗಳನ್ನು ಹಲವಾರು ಉತ್ತಮ ಉಪಮೆಗಳ ಮೂಲಕ ನಿರೂಪಿಸಿದ್ದಾನೆ. ವೇಸಿಯ ಸಂಗ ದ್ರವ್ಯದ ಕೇಡು, ದಾಸಿಯ ಸಂಗ ಮಾನಹಾನಿಗೆ ಮೊದಲು; ಆಂದಣಗಿತ್ತಿಯ ಮಾತು ಬಂದಿಕಾಱರ ಜಗಳದಂತೆ, ಕಂಡವರಲ್ಲಿ ತಂದು ಮಾಡುವವನ ಮಾಟ ಸಾಕಿ ಕೊಂದಿಹನ ದಯದಂತೆ; ಮಾಡಿ ಆಡಲೇತಕ್ಕೆ, ಸಲಹಿಕೊಲಲೇತಕ್ಕೆ, ಬಿತ್ತಿ ಕೀಳಲೇತಕ್ಕೆ, ಕಟ್ಟಿ ಒಡೆಯಲೇಕೆ?

ಮಾಡಿ ಮಾಡಿ ಮನಗುಂದುವ ನೀಡಿ ನೀಡಿ ನಿಜಗುಂದುವಣ ಬೇಡ-ಎಂದು ಹೇಳುವ ಈತನ ನೀತಿ ನಿರೂಪಣೆಯ ಶೈಲಿ ಉತ್ತಮ ಮಟ್ಟದ್ದಾಗಿದೆ.

(ಎಸ್.ಬಿ.ಎಸ್.)

**ಕೋಲಾಟ :** ಹಳ್ಳಿಗರಿಗೆ ಸುಲಭಸಾಧ್ಯವೂ ವೈವಿಧ್ಯಮಯವೂ ಆದ ಒಂದು ಮನೋರಂಜನೆಯ ಆಟ; ಅವರ ಬದುಕಿನೊಂದಿಗೆ ಸಹಜವಾಗಿ ಸೇರಿಹೋದ ಒಂದು ಮುಖ್ಯವಾದ ಜನಪದ ಕಲೆ. ಸಾಮಾನ್ಯವಾಗಿ ಕರ್ನಾಟಕದ ಪ್ರತಿ ಹಳ್ಳಿಯಲ್ಲಿ ನೂರಕ್ಕೆ ಎಂಬತ್ತು ಮಂದಿಯಾದರೂ ಕೋಲಾಟವನ್ನು ಬಲ್ಲವರೇ ಆಗಿರುತ್ತಾರೆ. ಹಬ್ಬಹರಿದಿನಗಳಲ್ಲಿ, ಮದುವೆ ಉತ್ಸವಗಳಲ್ಲಿ, ವಿಶೇಷ ಸಮಾರಂಭಗಳಲ್ಲಿ ಅವರು ತಪ್ಪದೆ ಕೋಲು ಹುಯ್ಯುವುದು ಅಭ್ಯಾಸವಾಗಿದೆ. ಸುಗ್ಗಿಯ ಸಮಯದ ತಿಂಗಳು ಬೆಳಕಿನ ರಾತ್ರಿಗಳಲ್ಲಿ ಕೋಲಾಟವಾಡುವುದೂ ಅದನ್ನು ನೋಡುತ್ತ ಹಳ್ಳಿಗರು ತಮ್ಮ ತಾಪತ್ರಯಗಳನ್ನೂ ಮುಂಜಾನೆಯಿಂದ ಸಂಜೆಯವರೆಗೆ ದುಡಿದ ದೇಹಾಲಸ್ಯವನ್ನೂ ಕಡಿಮೆ ಮಾಡಿಕೊಳ್ಳುವುದೂ ವಾಡಿಕೆಯಾಗಿದೆ. ಯಾವ ಖರ್ಚೂ ಇಲ್ಲದೆ ಒಳ್ಳೆಯ ಮನರಂಜನೆ ಒದಗಿಸುವುದು ಇದರ ಮತ್ತೊಂದು ವೈಶಿಷ್ಟ್ಯ.

ಕೋಲಾಟಕ್ಕೆ ಈ ಸಾಧನಗಳು ಬೇಕಾಗುತ್ತವೆ: 1 ಆಳುಗಳು 2 ಕೋಲುಗೂಟಗಳು 3 ಗೆಜ್ಜೆ 4 ದಮ್ಮಡಿ 5 ತಾಳ 6 ಮರಗಾಲುಗಳು.

**1**. ಕೋಲಾಟದಲ್ಲಿ ಭಾಗವಹಿಸುವವರನ್ನು ಆಳುಗಳು ಎಂದು ಕರೆಯುತ್ತಾರೆ. ಈ ಆಳುಗಳು ಯಾವುದೇ ಬಗೆಯ ಕೋಲು ಹುಯ್ಯಬೇಕಾದರೂ ಕನಿಷ್ಠಪಕ್ಷ ಎಂಟು ಮಂದಿ ಬೇಕಾಗುತ್ತಾರೆ. ಅತಿ ಹೆಚ್ಚು ಎಂದರೆ ಇಪ್ಪತ್ತನಾಲ್ಕು ಮಂದಿ ಆಗಬಹುದು. 2. ಕೋಲುಗೂಟಗಳು ಕೋಲಾಟದ ಆಧಾರಸ್ತಂಭಗಳಿದ್ದ ಹಾಗೆ. ಉಳಿದೆಲ್ಲ ಸಾಧನಗಳಿಗಿಂತ ಇವುಗಳ ಪಾತ್ರ ಪ್ರಧಾನವಾದುದು. ಕೋಲಾಟ ಎಂಬ ಶೀರ್ಷಿಕೆಯೇ ಇದನ್ನು ಸಮರ್ಥಿಸುತ್ತದೆ. ಸುಮಾರು ½ ಮೀ ಯ ಮರದ ಗೂಟಗಳನ್ನು ಕೋಲುಗೂಟಗಳು ಎಂಬುದಾಗಿ ಕರೆಯುತ್ತಾರೆ. ಇವನ್ನು ಸಾಮಾನ್ಯವಾಗಿ, ಬೈನೆ, ಕಾರೆಯಂಥ ಒಳ್ಳೆಯ ನಾದ ಬರುವ ಮರದಿಂದ ಕತ್ತರಿಸಿ ಮಾಡುತ್ತಾರೆ. ಇಂಥ ಕೋಲುಗಳಿಗೆ ರಂಜಕವಾದ ಬಣ್ಣ ಹಾಕಿರುವುದೂ ಉಂಟು. 3. ಕೋಲಿಗೆ ತಕ್ಕಂತೆ ಕಾಲು ಹಾಕು; ಕಾಲಿಗೆ ತಕ್ಕಂತೆ ಗೆಜ್ಜೆ ಕಟ್ಟು ಎಂಬುದು ಪ್ರಸಿದ್ಧ ಗಾದೆ. ಕೋಲಾಟಕ್ಕೆ ಮುಂಚೆ ಆಳುಗಳು ತಮ್ಮೆರಡು ಕಾಲುಗಳಿಗೂ ಒಂದೊಂದು ಸರ ಗೆಜ್ಜೆ ಕಟ್ಟುತ್ತಾರೆ. ಇವು ಕುಣಿತಕ್ಕೆ ಹೆಚ್ಚು ರೂಪು ಕೊಡುತ್ತವೆ; ಒಳ್ಳೆಯ ನಾದ ಕೊಡುತ್ತವೆ. 4. 26ಸೆಂ.ಮೀ ಗಳ ಸುತ್ತಳತೆಯ ಮರದ ಸಾಧನವೊಂದಕ್ಕೆ ಉಡುವಿನ ಚರ್ಮವನ್ನು ಬಲವಾಗಿ ಬಿಗಿದು ಮಾಡಿದ ಒಂದು ಉಪಕರಣವೇ ದಮ್ಮಡಿ. ಪರಿಣತಿಯನ್ನು ಪಡೆದ ಒಬ್ಬ ವ್ಯಕ್ತಿ ಕೋಲಾಟಗಾರರ ಮಧ್ಯೆ ನಿಂತು ಇದನ್ನು ಬಾರಿಸುತ್ತಿರುತ್ತಾನೆ. 5. ಕಂಚು ಲೋಹದಿಂದ ಮಾಡಿದ ತಾಳಗಳನ್ನು ಕೋಲಾಟಗಾರರ ಮಧ್ಯದಲ್ಲಿ ಯಾರಾದರೊಬ್ಬ ನಿಂತು ಬಾರಿಸುತ್ತಿರುತ್ತಾನೆ. 6. 1 ಮೀ ಎತ್ತರದ ಹಾಲುವಾಣಮರದಿಂದ ಮಾಡಿದ ಮರದ ಸಾಧನಗಳು ಮರಗಾಲುಗಳು. ಇವನ್ನು ಒಬ್ಬ ವ್ಯಕ್ತಿ ಕಾಲಿಗೆ ಕಟ್ಟಿಕೊಂಡು ಕುಣಿಯುತ್ತಾನೆ. ಅವನು ಇತರ ವ್ಯಕ್ತಿಗಳಿಗಿಂತ 1 ಮೀ ಎತ್ತರವಾಗಿ ಕಾಣುವುದರಿಂದ ನೋಡುವವರಿಗೆ ವಿಚಿತ್ರವಾಗಿ ಕಂಡು ನಗುಬರುತ್ತದೆ. ಈ ರೀತಿ ಹಾಸ್ಯರಸೋತ್ಪತ್ತಿ ಮಾಡುವುದೇ ಇದರ ಉದ್ದೇಶ.

**ಕೋಲು ಪದಗಳು:** ಕೋಲಾಟಕ್ಕೆ ಹಿರಿಮೆಯನ್ನೂ ಮಹತ್ತ್ವವನ್ನೂ ತಂದು ಕೊಟ್ಟ ಮುಖ್ಯ ಸಾಧನಗಳೆಂದರೆ ಕೋಲು ಪದಗಳು. ಕೋಲುಪದಗಳನ್ನುಳಿದು ಕೋಲಾಟ ರಂಜಿಸಲು ಸಾಧ್ಯವೇ ಇಲ್ಲ. ಕೋಲಾಟವನ್ನು ಕುರಿತು ವಿವೇಚಿಸುವಾಗ ಅದರಲ್ಲಿ ಕೋಲುಪದಗಳು ಸೇರಿಕೊಂಡೇ ಇರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಕೋಲು ಕೊಡುವುದರಲ್ಲಿ ಕಂಡುಬರುವ ವೈವಿಧ್ಯಕ್ಕಿಂತ ಹೆಚ್ಚಾಗಿ ಕೋಲುಪದಗಳಲ್ಲಿ ವೈವಿಧ್ಯ ಕಂಡುಬರುತ್ತದೆ. ಹಾಡಿದಾಗ ಇದು ನಮಗೆ ವೇದ್ಯವಾಗುತ್ತದೆ. ಹೀಗೆ ಕೋಲಾಟದಲ್ಲಿ ಗಾನ ನೃತ್ಯಗಳು ಮೇಳವಿಸಿರುವುದರಿಂದ ಇದು ಪ್ರೇಕ್ಷಕರಿಗೆ ಹೆಚ್ಚು ಆಕರ್ಷಣೀಯವೂ ಪ್ರಿಯವೂ ಆಗಿದೆ. ನೃತ್ಯ ಕಣ್ಣಿಗೆ ಹಬ್ಬವನ್ನುಂಟು ಮಾಡಿದರ ಗಾನ ಕಿವಿಗೆ ಮಾಧುರ್ಯವನ್ನೊದಗಿಸುತ್ತದೆ.

ಕೋಲು ಪದಗಳು ಪ್ರಾಸಬದ್ಧ ರಚನೆಗಳು; ಪ್ರಾಸಾನುಪ್ರಾಸಗಳ ಪುನರಾವರ್ತನೆಯನ್ನು ಪಲ್ಲವಿ ಅನುಪಲ್ಲವಿಗಳನ್ನು ಇಲ್ಲಿ ನಿಚ್ಚಳವಾಗಿ ಗುರುತಿಸಬಹುದು. ಕೋಲು ಪದಗಳ ಆರಂಭದಲ್ಲಿ ಹೇಳುವ ಒಂದೆರಡು ಚರಣಗಳು ಕರ್ಣಮನೋಹರವಾಗಿರುತ್ತವೆ. ಕೋಲುಪದಗಳ ಹಾಗೆಯೇ ಕೋಲಾಟದ ವೈಶಿಷ್ಟ್ಯ, ಹೆಗ್ಗಳಿಕೆಗಳಿಗೆ ಈ ಆರಂಭದ ಚರಣಗಳು ಬಹಳ ಮಟ್ಟಿಗೆ ಕಾರಣ. ಕೋಲಾಟ ಆಡುವವರು ಜನಪದ ಗೀತೆಗಳನ್ನು ಪ್ರಾರಂಭಿಸಿದ ತಕ್ಷಣ ಹಾವು ಪುಂಗಿಯ ನಾದಕ್ಕೆ ತಲೆದೂಗುವಂತೆ ಜನ ಇವುಗಳ ಅನುಕರಣನಾದವೈಖರಿಗೆ ಮಾರು ಹೋಗುತ್ತಾರೆ. ಉದಾಹರಣೆಗಾಗಿ ಒಂದೆರಡನ್ನಿಲ್ಲಿ ನೋಡಬಹುದು. 1 ತಂದನಾನು ತಾನಂದೆನಾನ; ತಂದೆನಾನು ತಾನಂದೆನಾನ; ದಿಮ್ಮಿದಿಮ್ಮಿ ದಿಮ್ಮಯ ಲೋಲಿ, ತಯ್ಯೋ ತಮ್ಮಯ್ಯ ಜಿಗ್ಗಿ-ತಾರು ಲಲ್ಲಲ್ಲೆ 2 ಪಾವಕ್ಕಿ ರನ್ನದ ಜೀವಾಳ ಸರಸತಿ ರಾಣಿ ಬಾಕಲ ತೆಗಿತೆಗಿಯೇ. ಆರಂಭದ ಪ್ರಾರ್ಥನೆಯ ಕೋಲಿಗೂ ಮುಕ್ತಾಯದ ಕೋಲಿಗೂ ಯಾವಾಗಲೂ ಗೊತ್ತಾದ ಗೀತೆಗಳನ್ನೇ ಹಾಡುತ್ತಾರೆ. ಬಹಳ ಮೋಹಕವಾದ ಈ ಕೋಲುಪದಗಳಲ್ಲಿ ಶೃಂಗಾರದ ಸೋನೆಯಂತೂ ನಿರಂತರವಾಗಿ ಹರಿಯುತ್ತಿರುತ್ತದೆ. ವಿನೋದಕ್ಕೂ ಇಲ್ಲಿ ಸಾಕಷ್ಟು ಅವಕಾಶ ಉಂಟು.

ಕೈಗೆ ಕೋಲು, ಕಾಲಿಗೆ ಗೆಜ್ಜೆ

ಭಕ್ತಿಯ ಭಾವಾವೇಶಕ್ಕೇನೂ ಕಡಿಮೆ ಇಲ್ಲ. ವೀರರಸವೂ ಅಲ್ಲಲ್ಲೆ ಇಣಕು ಹಾಕುತ್ತದೆ. ಕೋಲಾಟದಲ್ಲಿ ಬಳಸಲಾಗುವ ಭಕ್ತಿಗೀತೆಗಳಲ್ಲಿ ಹೆಚ್ಚು ಸಂಖ್ಯೆಯವು ಗ್ರಾಮದೇವತೆಗಳನ್ನು ಕುರಿತವಾಗಿರುತ್ತವೆ. ನಿಲ್ಪದಗಳಲ್ಲಿ ಸಾಮಾನ್ಯವಾಗಿ ಹಾಸ್ಯ ಮತ್ತು ಸಂಭಾಷಣೆ ಹೆಚ್ಚಾಗಿ ಕಂಡುಬರುತ್ತದೆ.

ಕೋಲಾಟದ ಗೀತೆಗಳಲ್ಲೂ ವೈವಿಧ್ಯ ಉಂಟು; ಆಟಗಳಲ್ಲೂ ವೈವಿಧ್ಯವುಂಟು. ಕೋಲಾಟದಲ್ಲಿ ಒಂದರಂತೆ ಮತ್ತೊಂದು ಇರುವುದಿಲ್ಲ. ಒಂದು ಬಗೆಯ ಕೋಲನ್ನು ಪುನಃ ಹುಯ್ಯುವ ಸಂಭವ ಉಂಟಾದರೂ ಅದಕ್ಕೆ ಬಳಸಿಕೊಳ್ಳುವ ಹಾಡುಗಳು ಮಾತ್ರ ಬೇರೆ ಬೇರೆಯಾಗುತ್ತವೆ. ಅಂದರೆ ಕೋಲಾಟದ ರೀತಿ ಯಥಾವತ್ತಾಗಿ ಒಂದೇ ಆಗಿ ಅದಕ್ಕೆ ಬಳಸಿರುವ ಹಾಡುಗಳು ಬೇರೆಯಾಗಿರುತ್ತವೆ. ಒಂದು ಗೊತ್ತಾದ ಗೀತೆಯನ್ನು ಬೇರೆ ಬೇರೆ ಬಗೆಯ ಕೋಲುಗಳಿಗೆ ಬಳಸಿಕೊಂಡು ಹುಯ್ಯುವುದು ಅತಿ ಪ್ರಯಾಸದ ಕೆಲಸ. ಏಕೆಂದರೆ ಸಾಮಾನ್ಯವಾಗಿ ಇಂಥ ಕೋಲಿಗೆ ಇಂಥದೇ ಹಾಡೆಂದು ನಿಗದಿಯಾಗಿರುತ್ತದೆ. ಒಂದೊಂದು ಕೋಲನ್ನು ಅದರ ಜಾಯಮಾನಕ್ಕನುಗುಣವಾಗಿ ಒಂದೊಂದು ಹೆಸರಿನಿಂದ ಕರೆಯುವುದು ರೂಢಿ: ಬಾಗಿ ಹುಯ್ಯುವ ಕೋಲು ಬಾಗ್ಗೋಲು. ಮುಂದು ಮುಂದಕ್ಕೆ ಹರಿಯುತ್ತ ಹುಯ್ಯುವ ಕೋಲು ಹರಿಗೋಲು ಇತ್ಯಾದಿ. ಕೆಲವು ಸಾರಿ ಹಾಡಿನ ಹೆಸರನ್ನೇ ಕೋಲಿಗೂ ಇಟ್ಟುಬಿಡುತ್ತಾರೆ. ಬಾರು ಗೀಜುಗನ ಮುದ್ದಿನ ತೇರು ಗೀಜುಗನೆ ಎಂಬ ಹಾಡಿನಿಂದ ಪ್ರಾರಂಭವಾಗುವ ಕೋಲನ್ನು ಗೀಜುಗನ ಕೋಲು ಎಂಬುದಾಗಿಯೇ ಕರೆಯುತ್ತಾರೆ.

**ಕೋಲಾಟದ ಬಗೆಗಳು:** ಕೋಲಾಟದಲ್ಲಿ ಮುಖ್ಯವಾಗಿ ಎರಡು ವಿಭಾಗಗಳು ಕಂಡುಬರುತ್ತವೆ-ನಾಡಕೋಲು ಮತ್ತು ಕೊರಮರ ಕೋಲು ಎಂಬುದಾಗಿ. ಬಹಳ ಪುರಾತನ ಕಾಲದಿಂದ ಈ ತನಕ ನೆಡದುಕೊಂಡು ಬಂದಿರುವುದು ನಾಡಕೋಲು. ತೀರ ಇತ್ತೀಚೆಗೆ ತಿಪರಿ ಜಾಯಮಾನದಿಂದ ಕೂಡಿರುವ ಕೋಲೇ ಕೊರಮರ ಕೋಲು. ನಾಡಕೋಲಿಗಿಂತ ಕೊರಮರ ಕೋಲು ಹುಯ್ಯಲು ಬಹಳ ಸುಲಭ. ಕೊರಮರ ಕೋಲುಗಳಲ್ಲಿ ಯಾವುದಾದರೂ ಒಂದು ಬಗೆಯನ್ನು ಕಲಿತರೂ ಆ ಕೋಲಿನ ಉಳಿದೆಲ್ಲ ಬಗೆಗಳನ್ನೂ ಸರಾಗವಾಗಿ ಹುಯ್ಯಬಹುದು. ಆದರೆ ನಾಡಕೋಲಿನಲ್ಲಿ ಈ ಸೌಲಭ್ಯವಿಲ್ಲ. ಇಲ್ಲಿ ಪ್ರತಿಯೊಂದು ಕೋಲೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವುದರಿಂದ ಒಂದು ಮತ್ತೊಂದರ ಅನುಕರಣೆ ಅಲ್ಲ. ನಾಡಕೋಲಿನಲ್ಲಿ ವೈವಿಧ್ಯ ಹೆಚ್ಚು ಸೊಗಸು ಹೆಚ್ಚು, ಬನಿ ದಟ್ಟ. ನಾಡಕೋಲಿನಲ್ಲಿ ಅನೇಕ ವಿಧಗಳನ್ನು ಕಾಣಬಹುದು: 1 ಗೀಜುಗನ ಕೋಲು, 2 ಎಳೆಗೋಲು, 3 ಉಯ್ಯಾಲೆ ಕೋಲು, 4 ಬಾಗ್ಗೋಲು, 5 ತೇರುಗೋಲು, 6 ದಂಡೆಕೋಲು, 7 ಕರೆಭಂಟನ ಕೋಲು, 8 ಸೋಬಾನದ ಕೋಲು, 9 ಚಿತ್ತಾರ್ ಗೊಂಬೆ ಕೋಲು, 10 ಜಡೆಕೋಲು 11 ಕೊರವಂಜಿ ಕೋಲು, 12 ಆಲವಣೆಕೋಲು, 13 ಸುತ್ಕೋಲು, 14 ನೀಲ್‌ಕೋಲು, 15 ಹರಿಗೋಲು, 16 ಕೊರವಂಜಿ ಕೋಲು-ಇತ್ಯಾದಿ. ಮೇಲಿನ ಒಂದೊಂದು ಬಗೆಯ ಕೋಲಾಟಕ್ಕೂ ಒಂದೊಂದು ತೆರನಾಗಿ ಕೋಲು ಕೊಡಬೇಕಾಗುತ್ತದೆ. ಅವನ್ನು ಇಷ್ಟಿಷ್ಟು ಗಟಕು ಅಥವಾ ಇಷ್ಟಿಷ್ಟು ಚಟುಕುಗಳು ಎಂಬುದಾಗಿ ಕರೆಯುತ್ತಾರೆ. ಇದೇ ರೀತಿ ಕೋಲು ಕೊಡುವ ವಿಧಾನಕ್ಕೂ ಒಂದೊಂದು ಹೆಸರಿದೆ: ಹಾರ್‌ಗಟಕು,

ಗೀರ್‌ಗಟುಕ, ಒಡ್ಗೋಲು, ಒಂಟಿಕೋಲು, ಜೋಡ್ಗೋಲು–ಇತ್ಯಾದಿ. ಎಂ.ಸಿ.ವಸಂತಕುಮಾರರ ಕೋಲುಪದಗಳು ಎಂಬ ಪುಸ್ತಕದಲ್ಲಿ ಕೋಲಾಟದ ಅನೇಕ ವಿವರಗಳಿವೆ. ಇಲ್ಲಿ ಮುಖ್ಯವಾದ ಕೆಲವು ಕೋಲಾಟಗಳಿಗೆ ಮಾತ್ರ ವಿವರಣೆ ನೀಡಿದೆ.

**1. ಸುತ್ತುಕೋಲು:** ಇದನ್ನು ವಿಶ್ರಾಂತಿಯ ಆಟವೆಂದು ಕರೆಯಬಹುದು. 6 ಜನರಿಂದ ಹಿಡಿದು 20 ಜನಕ್ಕೂ ಮೇಲ್ಪಟ್ಟು ಇರಬಹುದು. ಆಟಗಾರರು ವೃತ್ತಾಕಾರದಲ್ಲಿ ಸುತ್ತುತ್ತ, ತಮ್ಮೆರಡು ಕೈಗಳಲ್ಲಿನ ಕೋಲುಗಳಿಂದ ಒಂದಕ್ಕೊಂದಕ್ಕೆ ಹೊಡೆಯುತ್ತಾರೆ. ಆದರೆ ಬೇರೆಯವರ ಕೋಲುಗಳಿಗೆ ಕೋಲನ್ನು ತಗುಲಿಸುವುದಿಲ್ಲ. ಎಲ್ಲರ ಕಾಲುಗಳು ಒಂದೇ ರೀತಿಯ ಒಂದು ಬಗೆಯ ಲಯಗತಿಯಿಂದ ಕುಣಿಯುತ್ತಿರುತ್ತವೆ. ಹೀಗೆ ಸುತ್ತುತ್ತ ತಮ್ಮ ತಮ್ಮಲ್ಲೆ ಕೋಲು ಹುಯತ್ತ ಕುಣಿಯುವ ಆಟವಿದು.

**2. ಹಾರ್‌ಗಟಕು:** ಕೋಲುಗಳು ಇತರರ ಕೋಲುಗಳಿಗೆ ಹೊಡೆದರೂ ಹೊಡೆಯುವ ಹಾಗೆ ಬಹುಬೇಗ ಹಾರುವುದರಿಂದ ಇದನ್ನು ಹಾರ್‌ಗಟಕು ಎಂದು ಕರೆದಿರಬಹುದು. ಕೋಲಾಟಗಾರರು ಕೋಲುಗಳನ್ನು ಸಾಮಾನ್ಯವಾಗಿ ತಲೆಯ ಮೇಲೆ ಎತ್ತಿ ಮತ್ತೊಬ್ಬರ ಕೋಲುಗಳಗೆ ಹೊಡೆಯುತ್ತಾರೆ. ಈ ಕೋಲನ್ನು ಹುಯ್ಯುವಾಗ ವೇಗಕ್ಕೆ ಮತ್ತು ಬಿರುಸಿಗೆ ಪ್ರಾಧಾನ್ಯ ಹೆಚ್ಚು. ಈ ಆಟದಲ್ಲಿ ಹಾಡಿಗಿಂತ ಕುಣಿತಕ್ಕೆ ಹೆಚ್ಚು ಒಲವು, ಮೆಚ್ಚು. ಇದರಲ್ಲಿ ಮೊದಲು ಎಡಗೈ ಕೋಲಿನಿಂದ ಮತ್ತೊಬ್ಬರ ಬಲಗೈ ಕೋಲಿಗೊ ಕೋಲು ಹುಯ್ಯುವುದೇ ಇದರ ರೀತಿ. ಎರಡು ಕೈನ ಕೋಲುಗಳನ್ನೂ ಒಂದೇ ಕೈಲಿ ಒಟ್ಟಿಗೆ ಹಿಡಿದು ಇತರರ ಕೋಲಗಳಿಗೆ ಬಡಿಯುವುದೇ ಎರಡನೆಯದು.

**3. ಗೀಜುಗನ ಕೋಲು:** ಎರಡು ಕೋಲುಗಳನ್ನು ಜೋಡಿಸಿಕೊಂಡು ಹೊಡೆಯುವುದೇ ಇದರ ವೈಶಿಷ್ಟ್ಯ. ಎಂಟು ಜನರು ಆಡುತ್ತಿದ್ದರೆ ಎರಡು ಕೈಗಳಲ್ಲೂ ಜೋಡಿಸಿಟ್ಟುಕೊಂಡಿರುವ ಕೋಲುಗಳನ್ನು ಎಡಕ್ಕೊಂದು ಬಾರಿ, ಬಲಕ್ಕೊಂದು ಬಾರಿ ಕೊಟ್ಟು ಮೂರನೆ ಏಟಿಗೆ ಎರಡು ಕೈಗಳನ್ನು ಮೇಲೆತ್ತಿ ಹೊಡೆದು, ಬಲದಲ್ಲಿದ್ದವನು ಎಡಕ್ಕೆ, ಎಡದಲ್ಲಿದ್ದವನ ಬಲಕ್ಕೆ ವೃತ್ತಾಕಾರದಲ್ಲಿ ಸುತ್ತುತ್ತಿರುತ್ತಾನೆ. ಹೀಗೆ ಕೋಲನ್ನು ಹುಯ್ಯುವಾಗ ಬಾರೋ ಗೀಜುಗ, ಬಾರೊ ಗೀಜುಗ, ಹಾರೊ ಮುತ್ತಿನರಗಿಣಿ, ಬಾರೊ ಗೀಜುಗ, ಬಾಳೆವನಕ್ಕೆ, ಸೈ, ಹೋದೇನ್ ಗೀಜುಗ, ಅಲ್ಲಿ ಬಾಲೇರಿಬ್ರುದ ಕಾದು ಕೂತವ್ರೆ, ಬಾರೋ ಗೀಜುಗ, ಎಂದು ಹಾಡುವುದು ಸಾಮಾನ್ಯ ವಾಡಿಕೆ.

**4. ತೇರು ಕೋಲು:** ಈ ಕೋಲನ್ನು ಹುಯ್ಯುವಾಗ ಅರ್ಧ ಜನ ಹಿಂದಕ್ಕೆ ಬಾಗುತ್ತಾರೆ. ಉಳಿದರ್ಧ ಜನ ಅವರ ಮೇಲೆ ಬಾಗಿದಂತೆ ಮಾಡಿ, ಹಾಗೆಯೆ ಹಿಂದು ಹಿಂದಕ್ಕೆ ಸಾಗುತ್ತ ಹೋಗುತ್ತಾರೆ. ಕೋಲಾಟವಾಡುತ್ತ ಊರ ಬೀದಿಯನ್ನೆಲ್ಲ ಬಳಸುವರು. ಇದಕ್ಕೆ ತೇರುಕೋಲು ಎಂಬ ಹೆಸರೂ ಇದೆ. ಬಳಸುವ ಹಾಡು ಸಾಮಾನ್ಯವಾಗಿ ತೇರಿಗ್ಹೋಗನ ಬನ್ನೀರೆ ಸ್ವಾಮಿ, ರಥಾಕ್ಹೋಗನ ಬನ್ನೀರೆ ಎಂದಿರುತ್ತದೆ.

**5. ಮನೆ ಕೋಲು:** ಇದರಲ್ಲಿ ಒಂದು ಮನೆಕೋಲು ಮತ್ತು ಎರಡು ಮನೆ ಕೋಲು ಎಂದು ಎರಡು ವಿಧಗಳಿವೆ. ಒಬ್ಬೊಬ್ಬರನ್ನೆ ದಾಟುವ (ಬಳಸುವ) ವಿಧಾನಕ್ಕೆ ಒಂದು ಮನೆಕೋಲೆಂದೂ ಪ್ರತಿಯೊಬ್ಬ ಆಟಗಾರನ್ನು ದಾಟಿ ಕೋಲು ಕೊಡುವ ವಿಧಾನಕ್ಕೆ ಎರಡು ಮನೆಕೋಲೆಂದೂ ಕರೆಯುತ್ತಾರೆ.

**6. ಚಟುಕಿನ ಕೋಲು:** ಇದರಲ್ಲಿ ಒಂದು ಚಟುಕಿನ ಕೋಲು ಮತ್ತು ಎರಡು ಚಟುಕಿನ ಕೋಲು ಎಂದು ಎರಡು ವಿಭಾಗಗಳಿವೆ. ಕೋಲು ಹುಯ್ಯುವಾಗ ಒಬ್ಬ ಮತ್ತೊಬ್ಬನ ಕೋಲಿಗೆ ಒಂದು ಸಾರಿ ಮಾತ್ರ ಬಡಿದು ಮುಂದೆ ಸಾಗುವುದೇ ಒಂದು ಚಟುಕಿನ ಕೋಲು. ಒಬ್ಬ ಮತ್ತೊಬ್ಬನ ಕೋಲಿಗೆ ಒಂದೊಂದು ಕೋಲಿನಿಂದಲೂ ಎರಡು ಬಾರಿ ಬಡಿದು ಮುಂದೆ ಸಾಗುವುದೇ ಎರಡು ಚಟುಕಿನದು.

**7. ವಾದದ ಕೋಲು:** ಇದು ಸ್ಪರ್ಧೆಯ ಕೋಲು. ಕೋಲಾಟದ ಮಂದಿಯನ್ನು ಸಮವಾಗಿ ಇಬ್ಭಾಗ ಮಾಡಿ ಎದರುಬದರು ನಿಲ್ಲಿಸುತ್ತಾರೆ. ಒಂದು ಕಡೆಯವರು ಪ್ರಶ್ನಾರ್ಥಕವಾದ ಹಾಡುಗಳನ್ನು ಹಾಡುತ್ತ ತಮ್ಮದೇ ಅದ ಗತ್ತು ಗಮ್ಮತ್ತುಗಳಿಂದ ಹೆಜ್ಜೆಹಾಕುತ್ತ ಮತ್ತೊಂದು ಕಡೆಯ ಗುಂಪಿನ ಕಡೆಗೆ ಆಕರ್ಷಕವಾದ ಭಂಗಿಯಲ್ಲಿ ಸಾಗುವರು. ಆಗ ಮತ್ತೊಂದು ಕಡೆಯ ಆಟಗಾರರು ಮೌನವಾಗಿ ಹಿಂದುಹಿಂದಕ್ಕೆ ಅವರದೇ ಆದ ಶೀವಿಯಿಂದ ಹೋಗುವರು. ಹಾಡು ಮುಗಿದ ಮೇಲೆ, ಹಿಂಬದಿಗೆ ನಡೆದ ಮಂದಿ ಮೊದಲಿನವರು ಹೋದ ಗತ್ತುಗಮ್ಮತ್ತುಗಳನ್ನೇ ಅನುಸರಿಸಿ ಶೀವಿಯಿಂದ ಇವರ ಪ್ರಶ್ನೆಗಳನ್ನು ಹಾಕಿ ಹಿಂದಕ್ಕೆ ಸಾಗುತ್ತಾರೆ. ಅವರು ಪ್ರಶ್ನೆಗಳನ್ನು ಹಾಕಿದ ಕೂಡಲೆ ಇವರು ಚಂಗನೆ ನೆಗೆಯುತ್ತ ಅದೇ ರೀತಿ ಹೋಗುತ್ತಾರೆ. ಇಲ್ಲಿ ಇಲ್ಲರ ಕೈಗಳ ಕೋಲುಗಳೂ ಮೌನವಾಗಿಯೇ ಇರುತ್ತವೆಯೇ ಹೊರತು ಶಬ್ದ ಮಾಡುವುದಿಲ್ಲ. ಇಲ್ಲಿ ಹಾಡು, ಆದರೆ ಅರ್ಥ ಮತ್ತು ಅವರ ನಡಿಗೆ ಪ್ರಧಾನ. ಆಟ ಒಟ್ಟಾರೆ ರಮ್ಯ.

**8. ಕಾಲುಸಂದಿನ ಕೋಲು:** ಇದೊಂದು ರೀತಿಯ ವಿಚಿತ್ರದ ಕೋಲಾಟ. ಆಟಗಾರರಲ್ಲಿ ಇಬ್ಬಿಬ್ಬರು ಎದುರುಬದುರು ನಿಂತುಕೊಳ್ಳುವರು. ಪ್ರತಿಯೊಬ್ಬನೂ ಮೊದಲು ತನ್ನ ಎಡಗಾಲನ್ನು ಎತ್ತಿ ಎರಡು ಕೈಗಳ ಕೋಲುಗಳನ್ನು ಅಲ್ಲಿ ಒಂದಕ್ಕೊಂದಕ್ಕೆ ಬಡಿಯುತ್ತಾನೆ. ಅನಂತರ ಬಲಗಾಲನ್ನು ಎತ್ತಿ ಮತ್ತೆ ಹಾಗೆಯೇ ಮಾಡುತ್ತಾನೆ. ಇದೇ ಸಮಯದಲ್ಲಿ ಎಲ್ಲರೂ ಹೀಗೆಯೇ ಮಾಡುವುದರಿಂದ ಸಪ್ಪಳ ಒಂದೇ ರೀತಿ ಕೋಲು ಹುಯ್ಯಿದ ಮೇಲೆ ಮುಂದಕ್ಕೆ ನೆಗೆದು ಮತ್ತೊಬ್ಬನಿಗೆ ಕೋಲು ಕೊಟ್ಟು, ಮತ್ತೆ ಮೊದಲಿನಂತೆಯೇ ಕಾಲೆತ್ತಿ ಹುಯ್ಯಲು ಪ್ರಾರಂಭಿಸುತ್ತಾರೆ. ಇದೇ ರೀತಿ ಏಕಪ್ರಕಾರವಾಗಿ ಪುನರಾವರ್ತಿಸುತ್ತ ಇರುತ್ತದೆ. ಇದೇ ಕಾಲುಸಂದಿನ ಕೋಲು.

**9. ಉಯ್ಯಾಲೆಯಾಟ:** ಇದಕ್ಕೆ ಅವಶ್ಯವಾಗಿ ಎಂಟೇ ಜನರಿರಬೇಕು. ಪ್ರಾರಂಭದಲ್ಲಿ ಆ ಎಂಟು ಜನರೂ ವೃತ್ತಾಕಾರದಲ್ಲಿ ನಿಂತು ಕೋಲು ಹುಯ್ಯುತ್ತಿರುತ್ತಾರೆ. ಎಡಕ್ಕೊಮ್ಮೆ ಬಲಕ್ಕೊಮ್ಮೆ ಕೋಲನ್ನು ಕೊಡುತ್ತಿದ್ದ ಸಮಯದಲ್ಲಿ ಉಯ್ಯಾಲೆ ಬಣ್ಣದುಯ್ಯಾಲೆ, ಸಿರಿಗಂದಕಾಳವ್ವನ ಉಯ್ಯಾಲೆ ಎಂದು ನಾಯಕ ಹಾಡನ್ನು ಪ್ರಾರಂಭಿಸುತ್ತಾನೆ. ಈ ಚರಣಗಳನ್ನು ಪ್ರತಿ ಪದದ ಕೊನೆಯಲ್ಲೂ ಪುನರುಕ್ತಿಗೊಳಿಸುತ್ತಾರೆ ಉಳಿದವರು. ಉಯ್ಯಾಲೆನಾಡೊಳೆ, ಉಯ್ಯಾಲೆ ಸಣ್ಣ ದನಿಯೋಳೆ ಎಂಬ ಮುಂದಿನ ಮತ್ತೆರಡು ಸಾಲುಗಳನ್ನು ಹಾಡುವಾಗ ಆಟಗಾರರು ಮಧ್ಯದಲ್ಲಿ ನಾಲ್ವರು ಎದುರೆದುರಾಗಿ, ಉಳಿದ ನಾಲ್ವರು ಅಕ್ಕಪಕ್ಕದಲ್ಲಿ ನಿಂತು ಕೋಲು ಹುಯ್ಯುತ್ತಾರೆ. ಮುಂದಿನ ಮತ್ತೆರಡು ಸಾಲುಗಳನ್ನು ಉಯ್ಯಾಲೆ ಸಣ್ಣ ದನಿಯೋಳೆ ಕಾಳವ್ವ, ಉಯ್ಯಾಲೆನಾಡೊ ದೊರೆ ಬಂದ– ಹೇಳುವಾಗ ಅಕ್ಕ ಪಕ್ಕದಲ್ಲಿದ್ದವರು ಮಧ್ಯಕ್ಕೆ ಬಂದಿರುತ್ತಾರೆ. ಮಧ್ಯದಲ್ಲಿದ್ದವರು ಅಕ್ಕಪಕ್ಕಕ್ಕೆ ಸಂದಿರುತ್ತಾರೆ. ಒಂದೇ ಸಮನೆ ರಭಸದಿಂದಾಗುವ ಈ ಚಲನೆಯಿಂದಾಗಿ ಉಯ್ಯಾಲೆ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಉಯ್ಯಲೆಯಲ್ಲಿ ಕುಳಿತು, ತೂಗಿಸಿಕೊಂಡುದಕ್ಕಿಂತಲೂ ಹೆಚ್ಚಾದ ರಸಾನಂದ ಇದರಲ್ಲುಂಟಾಗುತ್ತದೆ.



ಕೋಲಾಟದ ಕೋಲುಗಳು

**10. ಜಡೆಕೋಲು:** ಕೋಲಾಟವಾಡುವ ಸ್ಥಳದಲ್ಲಿ ಒಂದು ನಿಶ್ಚಿತವಾದ ಅಂತರದಲ್ಲಿ ಎರಡು ಕೊಂಬೆಗಳನ್ನು ನೆಟ್ಟು ಅವುಗಳ ಮೇಲೆ ಅಡ್ಡಲಾಗಿ ಒಂದು ಗಳುವನ್ನು ಹಾಕುತ್ತಾರೆ. ಆ ಗಳು ಸಾಮಾನ್ಯವಾಗಿ ಭೂಮಿಯಿಂದ 2½ ಮೀ ಎತ್ತರದಲ್ಲಿರುತ್ತದೆ. ಗಳುವಿನ ಮಧ್ಯಭಾಗಕ್ಕೆ ಎಂಟು ಹಗ್ಗಗಳನ್ನು ಒಟ್ಟಿಗೆ ಸೇರಿಸಿ ಕಟ್ಟಲಾಗಿರುತ್ತದೆ. ಹಗ್ಗಗಳ ಉಳಿದ ತುದಿಯನ್ನು ಕೋಲು ಹುಯ್ಯುವ ಮಂದಿ ತಮ್ಮ ಸೊಂಟಗಳಿಗೆ ಕಟ್ಟಿಕೊಂಡು ಕೋಲು ಹುಯ್ಯಲು ಪ್ರಾರಂಭಿಸುತ್ತಾರೆ. ಇಲ್ಲಿನ ವೈಶಿಷ್ಟ್ಯವೆಂದರೆ, ಆಳುಗಳು ಒಂದು ವರಸೆಯಲ್ಲಿ ತಿರುಗುವಾಗ ಹಗ್ಗ ಮೇಲ್ಭಾಗದಿಂದ ಹೆಣೆದು ಕೊಳ್ಳುತ್ತ ಬಂದು ಜಡೆಯ ಆಕೃತಿ ತಾಳುತ್ತದೆ; ಅನಂತರ ಆಳುಗಳು ವರಸೆ ಬದಲಿಸಿದಾಗ ಕ್ರಮೇಣ ಹೆಣಿಗೆ ಬಿಚ್ಚಿ ಹಗ್ಗ ಮೊದಲಿನಂತೆಯೇ ಆಗುತ್ತದೆ. ಇಲ್ಲಿ ಆಳುಗಳು ಮನೆಗಳಿಗೆ ದಾಟುವಾಗ ಈ ಲೆಕ್ಕಾಚಾರವನ್ನು ಇಟ್ಟುಕೊಂಡಿರುವುದು ಕೋಲಿನ ನಿಯಮ. ಹೀಗೆ ಹಗ್ಗ ಜಡೆಯಂತೆ ಹೆಣೆದುಕೊಳ್ಳುವುದರಿಂದ ಇದನ್ನು ಜಡೆಕೋಲು ಎಂಬುದಾಗಿಯೇ ಕರೆಯುತ್ತಾರೆ. ತಮಿಳುನಾಡಿನ ಪಿನ್ನಲ್ ಕೋಲಾಟಕ್ಕೂ ಈ ಜಡೆಕೋಲಿಗೂ ಸಾಮ್ಯ ಇದೆ.

**11. ಕೊರವಂಜಿ ಕೋಲು:** ಇದೊಂದು ಬಹಳ ವೈವಿಧ್ಯದಿಂದ ಕೂಡಿದ ಆಕರ್ಷಣೀಯವಾದ ಕೋಲು. ನಾಲ್ಕು ಜನ ಒಂದು ಸಾಲಿನಲ್ಲಿ ನಿಂತಿರುತ್ತಾರೆ. ಅವರಿಗೆ ಅಭಿಮುಖವಾಗಿ ಎದುರು ಸಾಲಿನಲ್ಲಿ ಮತ್ತೆ ನಾಲ್ಕು ಮಂದಿ ನಿಂತುಕೊಳ್ಳುತ್ತಾರೆ. ಈ ಮಧ್ಯೆ ಓಣಿಯೋಪದಿಯಲ್ಲಿ ಸ್ವಲ್ಪ ಸ್ಥಳವಿರುತ್ತದೆ. ಎರಡು ಸಾಲಿನವರು ನಿಂತಲ್ಲಿಯೇ ನಿಂತು ತಾಳ ಗಟಕು ಹಾಕುತ್ತಿರುತ್ತಾರೆ. ಈ ಎಂಟು ಮಂದಿಯಲ್ಲದೆ ಬೇರೆ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ಕೊರವಂಜಿ ವೇಷ ಹಾಕುತ್ತಾನೆ. ಮತ್ತೊಬ್ಬ ರುಕ್ಮಿಣಿ ವೇಷ ಹಾಕುತ್ತಾನೆ. ಕೊರವಂಜಿ ಓಣಿಯ ಒಂದು ತುದಿಯಲ್ಲಿದ್ದರೆ ರುಕ್ಮಿಣಿ ಮತ್ತೊಂದು ತುದಿಯಲ್ಲಿರುತ್ತಾಳೆ. 'ಕೈ ತಾರೆ ಕೈ ತಾರೆ ಕೈ ತಾರೆ ದುಂಡಿ' ಎಂದು ಹೇಳುತ್ತ ಕೊರವಂಜಿ ರುಕ್ಮಿಣಿಯನ್ನು ಅಟ್ಟಿಸಿಕೊಂಡು ಹೋಗುತ್ತಾಳೆ. ಇಬ್ಬರೂ ಹಾಡಿಗನುಗುಣವಾಗಿ ಬಾಗುತ್ತ ಬಳಕುತ್ತ ಅಭಿನಯಿಸುತ್ತ ಓಡಿಯಾಡುತ್ತಾರೆ. ಕೊನೆಗೆ ಕೊರವಂಜಿ ರುಕ್ಮಿಣಿಯನ್ನು ಹಿಡಿದುಬಿಡುತ್ತಾಳೆ. ಕೊರವಂಜಿ ವೇಷದಲ್ಲಿ ಬಂದವನು ಕೃಷ್ಣ ಎಂಬುದು ಹಾಡಿನಿಂದ ವ್ಯಕ್ತವಾಗುತ್ತದೆ. ಇಲ್ಲಿ ಕೊರವಂಜಿಯದೇ ಪ್ರಧಾನ ಪಾತ್ರವಾಗಿರುವುದರಿಂದಲೂ ಹಾಡು ಸಹ ಕೊರವಂಜಿಯನ್ನೇ ಕುರಿತಾಗಿರುವುದರಿಂದಲೂ ಇದನ್ನು ಕೊರವಂಜಿ ಕೋಲು ಎಂಬುದಾಗಿಯೇ ಕರೆದುದರಲ್ಲಿ

ಔಚಿತ್ಯವಿದೆ. ಈ ಕೊರವಂಜಿ ನೃತ್ಯ ಭರತನಾಟ್ಯದಂಥ ಭಾರತೀಯ ಮಹಾನೃತ್ಯ ಒಂದಕ್ಕೆ ಆಧಾರವಾಗಿದೆ ಎಂಬುದಾಗಿ ಪ್ರೊಜೇಶ್ ಬ್ಯಾನರ್ಜಿಯವರ ಅಭಿಪ್ರಾಯ. ಕೊರವಂಜಿ ಕೋಲು ಜನಪದ ಕಲೆಗೆ ಸಂಬಂಧಿಸಿದರೆ ಕೊರವಂಜಿ ಪಾತ್ರ ಜನಪದ ಸಾಹಿತ್ಯದಲ್ಲೂ ಉಜ್ವಲ ಸ್ಥಾನವನ್ನು ಪಡೆದುಕೊಂಡಿದೆ.

ಕೋಲಾಟದಲ್ಲಿ ಇನ್ನೂ ಅನೇಕ ಬಗೆಯ ಕೋಲುಗಳು ಕಂಡುಬರುತ್ತವೆ. ಕೆಲವು ಕೋಲುಗಳಲ್ಲಿ ಹುಯ್ಯುವ ವಿಧಾನ ಗೊತ್ತಿದ್ದರೂ ಅವಕ್ಕೆ ಇರುವ ಶಿರೋನಾಮೆಗಳು ಆಗಲೇ ಮಾಯವಾಗುತ್ತಿವೆ. ಕೆಲವು ಜಾತಿಯ ಕೋಲುಗಳನ್ನು ಈಗ ಹುಯ್ಯುವುದೂ ಸಾಧ್ಯವಾಗುತ್ತಿಲ್ಲ. ಆಲವಣೆ ಕೋಲು ಎಂಬುದು ಅತ್ಯಾಕರ್ಷವಾದ ಕೋಲು. ಆದರೆ ಅದು ಉಳಿದೆಲ್ಲ ಕೋಲುಗಳಿಗಿಂತ ಹೆಚ್ಚು ಕಷ್ಟತರವಾಗಿರುವುದರಿಂದಲೂ ಜನರಲ್ಲಿ ಕೋಲಾಟದ ಬಗ್ಗೆ ಮೊದಲಿದ್ದ ಗೀಳು ಕಡಿಮೆಯಾಗುತ್ತ ಬಂದಿರುವುದರಿಂದಲೂ ಈಗ ಅದನ್ನು ಹುಯ್ಯಲು ಸಾಧ್ಯವಾಗುತ್ತಿಲ್ಲ.

ಇತ್ತೀಚೆಗೆ ಕೆಲವು ಬೆರಕೆ ಕೋಲುಗಳು ರೂಢಿಗೆ ಬಂದಿವೆ. ಅಂದರೆ ಇಂದಿನ ಕೊರಮರ ಕೋಲಿನ ಕೆಲವು ವಿಧಾನಗಳನ್ನು ಹಿಂದಿನ ನಾಡಕೋಲಿನ ಕೆಲವು ವಿಧಾನಗಳೊಂದಿಗೆ ಸೇರಿಸಿ ಹೊಂದಿಕೆಯಾಗುವಂತೆ ಸ್ವಲ್ಪ ಮಾರ್ಪಡಿಸಿಕೊಂಡು ಹುಯ್ಯುವ ಕೋಲೇ ಬೆರಕೆ ಕೋಲು.

ಕೋಲಾಟ ಸಾಮಾನ್ಯವಾಗಿ ಭಾರತದ ಎಲ್ಲೆಡೆಯೂ ಕಂಡುಬರುತ್ತದಾದರೂ ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹೆಚ್ಚು. ಕರ್ನಾಟಕದಲ್ಲಿ ಇದು ಗಂಡಸರಿಗೆ ಮಾತ್ರ ಮೀಸಲಾದ ಆಟ. ಶಿಶುವಿಹಾರ ಶಾಲೆ ಮುಂತಾದ ವಿದ್ಯಾಸಂಸ್ಥೆಗಳಲ್ಲಿ ಮಾತ್ರ ಮಾದರಿಗಾಗಿ ಸುಲಭದ ಕೋಲಾಟವನ್ನು ಹೇಳಿ ಕೊಡುವುದು ಇತ್ತೀಚೆಗೆ ರೂಢಿಯಲ್ಲಿದೆ. ತಮಿಳುನಾಡಿನ ಇತರ ನೃತ್ಯಗಳೀಗ ನಾಗರಿಕವೆನಿಸಿ ಸಾಮಾಜಿಕ ರೂಪ ತಳೆದಿವೆ. ಕೋಲಾಟ ಮತ್ತು ಕುಮ್ಮಿಗಳು ಮಹಿಳೆಯರ ನೃತ್ಯ ವಿಧಾನಗಳು ಇದ್ದು ಅವು ತಮಿಳುನಾಡು ಮತ್ತು ಕೇರಳಗಳಲ್ಲಿ ಜನಪ್ರಿಯವಾಗಿವೆ. ಆದರೂ ಎಲ್ಲ ರೀತಿಯ ನೃತ್ಯಗಳಲ್ಲೂ ಕೋಲು ಹಿಡಿದು ಗೋಲಾಕಾರವಾಗಿ ನಿಂತುಕೊಳ್ಳುವ ಪದ್ಧತಿ ಇದೆ. ಈ ಕೋಲಾಟದ ತಾಳವೂ ಭಿನ್ನ ಭಿನ್ನವಾಗಿರುತ್ತದೆ. ದಕ್ಷಿಣ ಭಾರತದ ಈ ಕೋಲಾಟ ಸಾಮಾನ್ಯವಾಗಿ ಗುಜರಾತಿನ ಗಾರ್ಭ ಮತ್ತು ಸೌರಾಷ್ಟ್ರದ ಡಂಡಿಯಾ ರಾಸುಗಳನ್ನು ಹೋಲುತ್ತದೆ. ಕೋಲಾಟದಲ್ಲಿಯ ಮಹಿಳೆಯರ ಚಲನೆ, ಅಂಗಾಭಿನಯಗಳು ಸಾಮಾನ್ಯವಾಗಿ ಭರತನಾಟ್ಯವನ್ನು ಹೋಲುವಂತಿದ್ದು ಗಾರ್ಭದ ಅಂಗಾಭಿನಯ, ನಡುವನ್ನು ಪ್ರತ್ಯೇಕವಾಗಿ ಬಳುಕಿಸುವ ಅಭಿನಯ ಇಲ್ಲಿಲ್ಲ.

ಕೋಲಾಟ ಆಡುವವರಿಗೆ ಒಳ್ಳೆಯ ಮನೋರಂಜನೆ ದೊರೆಯುತ್ತದೆ. ದೇಹ ಮತ್ತು ಮನಸ್ಸುಗಳು ದೃಢವೂ ಉಲ್ಲಾಸಭರಿತವೂ ಆಗುತ್ತವೆ. ಕೂಟನೃತ್ಯಗಳಾದ ಇಂಥ ಕಲೆಗಳಿಂದ ಜನತೆಯಲ್ಲಿ ಸ್ನೇಹ, ಸಹಕಾರ, ಸೌಹಾರ್ದಗಳು ವೃದ್ಧಿಯಾಗುವುದರಲ್ಲಿ ಅನುಮಾನವಿಲ್ಲ. **(ನೋಡಿ: ಆಟಗಳು; ಕರ್ನಾಟಕ ಜನಪದ ಸಂಗೀತ)** (ಎಂ.ಸಿ.ವಿ.)

**ಕೋಲಾರ:** ಕರ್ನಾಟಕ ರಾಜ್ಯದ ಪೂರ್ವದ ಅಂಚಿನಲ್ಲಿರುವ ಒಂದು ಜಿಲ್ಲೆ. ಇದೇ ಹೆಸರಿನ ತಾಲ್ಲೂಕು ಮತ್ತು ಪಟ್ಟಣ. 2007ರಲ್ಲಿ ಈ ಜಿಲ್ಲೆಗೆ ಸೇರಿದ್ದ ಚಿಕ್ಕಬಳ್ಳಾಪುರ, ಗುಡಿಬಂಡೆ, ಶಿಡ್ಲಘಟ್ಟ, ಗೌರಿಬಿದನೂರು, ಚಿಂತಾಮಣಿ ಮತ್ತು ಬಾಗೇಪಲ್ಲಿ ತಾಲ್ಲೂಕುಗಳನ್ನು ಒಳಗೊಂಡ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ನಿರ್ಮಿಸಲಾಯಿತು. ಇದರಿಂದ ಇದರ ಎಲ್ಲೆ, ವಿಸ್ತೀರ್ಣ ಜನಸಂಖ್ಯೆಯಲ್ಲಿ ಬದಲಾವಣೆಯನ್ನು ಗುರುತಿಸಲಾಗಿದೆ.

ಪಶ್ಚಿಮದಲ್ಲಿ ಬೆಂಗಳೂರು ಜಿಲ್ಲೆ, ಉತ್ತರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಪೂರ್ವದಲ್ಲಿ ಅನುಕ್ರಮವಾಗಿ ಆಂಧ್ರ ಪ್ರದೇಶ, ದಕ್ಷಿಣದಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಧರ್ಮಪುರಿ ಜಿಲ್ಲೆಗಳು - ಇವು ಕೋಲಾರ ಜಿಲ್ಲೆಯ ಮೇರೆಗಳು. ಕೋಲಾರ, ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳು ಇದರಲ್ಲಿನ ಜಿಲ್ಲೆಯ ವಿಸ್ತೀರ್ಣ 3968 ಚ.ಕಿಮೀ ಜನಸಂಖ್ಯೆ ಸು. 1404391 (2001).

ಕೋಲಾರ ಜಿಲ್ಲೆ ಕರ್ನಾಟಕ ಪ್ರಸ್ಥಭೂಮಿಯ ಅಂಚಿನ ಭಾಗವಾಗಿದ್ದು, ಅದರ ಎಲ್ಲೆಗಳು ವಾಯವ್ಯ ಮತ್ತು ದಕ್ಷಿಣ ಭಾಗದಲ್ಲಿ ಪೂರ್ವಘಟ್ಟಗಳ ಬೆಟ್ಟಶ್ರೇಣಿಯನ್ನು ಮುಟ್ಟುತ್ತವೆ. ಜಿಲ್ಲೆಯಲ್ಲೂ ಹಲವು ಬೆಟ್ಟಶ್ರೇಣಿಗಳಿವೆ. ಆಂಧ್ರಪ್ರದೇಶದ ಕಡೆಯಿಂದ ಹಬ್ಬಿರುವ ಒಂದು ಬೆಟ್ಟ ಶ್ರೇಣಿ ಈ ಜಿಲ್ಲೆಯಲ್ಲಿ ಗುಮ್ಮನಾಯಕನ ಪಾಳ್ಯದ ಉತ್ತರದಲ್ಲಿ ದೊಂಗಲಕೊಂಡ ಅಥವಾ ದೊಕ್ಕಲದುರ್ಗದ ಬಳಿ ಆರಂಭವಾಗಿ ದಕ್ಷಿಣಾಭಿಮುಖವಾಗಿ ಸಾಗುತ್ತದೆ. ಮುಂದೆ ಸ್ವಲ್ಪ ದೂರ ತಗ್ಗಾಗಿದ್ದು ಮತ್ತೆ ಮುರುಗಮಲೆ, ಅಂಬಾಜಿದುರ್ಗ (1341ಮೀ), ರಹಮಾನ್‌ದುರ್ಗ (1304ಮೀ) ಈ ರೀತಿಯ ಒಂಟಿ ಬೆಟ್ಟಗಳಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲಿಂದಾಚೆಗೆ ಕೋಲಾರ ನಗರದ ಪಶ್ಚಿಮದಿಂದ ಮತ್ತೆ ಅವಿರತವಾಗಿ ದಕ್ಷಿಣದಲ್ಲಿ ವಕ್ಕಲೇರಿ ಮತ್ತು ಟೇಕಲ್ ಬೆಟ್ಟಗಳವರೆಗೂ ಮುಂದುವರಿಯುತ್ತದೆ. ಇವೆರಡರ ಜೊತೆಗೆ ಅಲ್ಲಲ್ಲಿ ಕುಳ್ಳುಗುಡ್ಡಗಳಂತೆ ಕಾಣಿಸಿಕೊಳ್ಳುವ ಇನ್ನೊಂದು ಶ್ರೇಣಿ ಇದೆ. ಇದು ಶ್ರೀನಿವಾಸಪುರದ ಬಳಿ ಆರಂಭವಾಗಿ ಕೋಲಾರ ಪಟ್ಟಣದ ಪೂರ್ವದಲ್ಲಿ ಸಾಗಿ, ಬಂಗಾರಪೇಟೆಯ ದಕ್ಷಿಣಾಗ್ರವನ್ನು ಹಾದು ಕುಪ್ಪಂ ಕಡೆಯ ಘಟ್ಟದವರೆಗೂ ಮುಂದುವರಿಯುತ್ತದೆ. ಇನ್ನೂ ಪೂರ್ವಕ್ಕೆ ವೃತ್ತಾಕಾರವಾಗಿ ಬಾಗಿರುವ ಕೆಲವು ಬೆಟ್ಟಗಳಿವೆ. ಇವುಗಳ ನಡುವೆ ಗ್ರಾಮವಸತಿಗಳಿಗೆ ಅನುಕೂಲವಾಗಿರುವ ಎತ್ತರದ ಕಣಿವೆಗಳು ಇರುವುದು ವಿಶೇಷ.

ಕೋಲಾರ ಜಿಲ್ಲೆ ಬಹುಮಟ್ಟಿಗೆ ನೈಸ್ ಕಣಶಿಲೆಯ ಪ್ರದೇಶ. ಶ್ರೀನಿವಾಸಪುರದಿಂದ ದಕ್ಷಿಣಾಭಿಮುಖವಾಗಿ ಜಿಲ್ಲೆಯ ಅಂಚಿನವರೆಗೆ ಸುಮಾರು 6ಕಿಮೀ ಅಗಲದ ಶಿಸ್ಟ್ ಕಲ್ಲಿನ ಪಟ್ಟೆಯೊಂದು ಹಬ್ಬಿದೆ. ಜಿಲ್ಲೆಯ ಹೆಚ್ಚಿನ ಭಾಗದಲ್ಲಿ ನೆಲ ಅಲ್ಪಸ್ವಲ್ಪ ಏರುತಗ್ಗುಗಳೊಡನೆ ಹರಡಿದ್ದು ಕಣಶಿಲೆಯ ಗುಡ್ಡಬೆಟ್ಟಗಳು ಅಲ್ಲಲ್ಲಿ ಎದ್ದು ನಿಂತಂತಿರುತ್ತವೆ. ದೊಡ್ಡ ದೊಡ್ಡ ಬಂಡೆಗಳನ್ನು ಒಂದರ ಮೇಲೊಂದು ವಿಚಿತ್ರಾಕಾರದಲ್ಲಿ ಪೇರಿಸಿದಂತಿರುವ ಈ ಬೆಟ್ಟಗಳು ಕೋಲಾರ ಜಿಲ್ಲೆಯ ವೈಶಿಷ್ಟ್ಯ. ಶಿಸ್ಟ್ ಕಲ್ಲಿನ ಪಟ್ಟೆಯ ಪ್ರದೇಶ ಆರ್ಥಿಕವಾಗಿ ಮುಖ್ಯವಾದುದು. ಇದಕ್ಕೆ ಹೊಂದಿಕೊಂಡಂತೆ ಕ್ವಾರ್ಟೈಟ್, ಬೆಣಚುಕಲ್ಲು ಮುಂತಾದ ವಿವಿಧ ಬಗೆಯ ಶಿಲೆಗಳ ಸಮುದಾಯವಿದೆ. ಪ್ರಸಿದ್ಧವಾದ ಚಿನ್ನದ ಭೂನಿಕ್ಷೇಪಗಳು ಹಬ್ಬಿರುವುದೂ ಇದರ ಜೊತೆಯಲ್ಲೇ. ಇದಲ್ಲದೆ ಜಿಲ್ಲೆಯ ಹಲವು ಭಾಗಗಳಲ್ಲಿ ಉತ್ತರ ದಕ್ಷಿಣ ಅಥವಾ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಡಾಲರೈಟ್‌ನ ಹೊಡೆಸಾಲುಗಳೂ ಇವೆ. ಸ್ವಲ್ಪಮಟ್ಟಿಗೆ ಶ್ರೀನಿವಾಸಪುರದ ಬಳಿ ಜಂಬುಮಣ್ಣು ಸಹ ಇದೆ. ಕೋಲಾರದ ಚಿನ್ನದ ಗಣಿಗಳು ಜಗತ್ಪ್ರಸಿದ್ಧ. ಇಲ್ಲಿ ಅಲ್ಪಾಂಶ ಬೆಳ್ಳಿಯೂ ದೊರಕುತ್ತದೆ. ಬಂಗಾರಪೇಟೆ ತಾಲ್ಲೂಕಿನ ರಾಮಸಮುದ್ರದ ಬಳಿ ಕೊರಂಡಂ, ಮಾಲೂರು ತಾಲ್ಲೂಕಿನ ಕರಡಿಬಂಡೆ ಬಳಿ ಸುದ್ದೆಮಣ್ಣು ದೊರಕುತ್ತವೆ.

ಜಿಲ್ಲೆಯ ಎತ್ತರದ ಭಾಗಗಳಲ್ಲಿ ಕೆಂಪುಕಲ್ಲು ಮಿಶ್ರಿತ ಮಣ್ಣೂ ನದಿಕಣಿವೆ ಪ್ರದೇಶಗಳಲ್ಲಿ ಎರೆಮಣ್ಣೂ ಸಾಮಾನ್ಯ. ಪೂರ್ವದಂಚಿನ ಶಿಸ್ಟ್ ಪಟ್ಟೆ ಪ್ರದೇಶದಲ್ಲಿ ಕಬ್ಬಿಣದ ಅಂಶ ಹೆಚ್ಚಾಗಿರುವ ಕಪ್ಪು ಮತ್ತು ಕೆಂಪು ಮಣ್ಣು, ಸ್ವಲ್ಪ ಎರೆಭೂಮಿ ಇದೆ.

ನಂದಿದುರ್ಗದ ಭಾಗ ಜಿಲ್ಲೆಯ ಎತ್ತರದ ಪ್ರದೇಶ. ಇದೇ ಜಿಲ್ಲೆಯಲ್ಲಿನ ಮುಖ್ಯ ನೀರ್ಬೇರ್ಪಡೆಯ ಬೆನ್ನಿನ ಪ್ರದೇಶ, ವಿವಿಧ ದಿಕ್ಕುಗಳಿಗೆ ಹರಿಯುವ ಹಲವು ನದಿಗಳ ಉಗಮಸ್ಥಾನ. ಜಿಲ್ಲೆಯನ್ನು ಮುಖ್ಯವಾಗಿ ಉತ್ತರದಲ್ಲಿ ಉತ್ತರ ಪಿನಾಕಿನಿ ದಕ್ಷಿಣದಲ್ಲಿ ಪಾಲಾರ್ ಈ ಎರಡು ನದಿಗಳ ಕಣಿವೆಗಳಾಗಿ ಚಿಕ್ಕಬಳ್ಳಾಪುರ -ಶ್ರೀನಿವಾಸಪುರ ಗೆರೆಯಿಂದ ಬೇರ್ಪಡಿಸಬಹುದು. ಈ ಗೆರೆಯಿಂದ ಉತ್ತರ ಮತ್ತು ದಕ್ಷಿಣಕ್ಕೆ ಭೂಮಿಯ ಸಾಮಾನ್ಯ ಇಳಿವು ಕಾಣಿಸುತ್ತದೆ.

ಜಿಲ್ಲೆಯ ಮಧ್ಯ ಮತ್ತು ಪೂರ್ವಭಾಗಗಳು ಪಾಲಾರ್ ನದೀಕಣಿವೆ ಪ್ರದೇಶ. ಇದು ಅಲೆಅಲೆಯಾಗಿ ಹಬ್ಬಿದೆ. ಕೋಲಾರ ಪಟ್ಟಣದ ಬಳಿ ಇದರ ಎತ್ತರ 800ಮೀ. ಮಾಲೂರಿನಲ್ಲಿ 854ಮೀ. ಅಂಬಾಜಿದುರ್ಗದ ತಪ್ಪಲಿನ ಪ್ರದೇಶ 859ಮೀ. ಎತ್ತರವಿದೆ. ಉತ್ತರಪಿನಾಕಿನಿ ನದೀಕಣಿವೆಯಲ್ಲಿ ಗೌರಿಬಿದನೂರಿನ ಕಡೆಗೆ ಹೋದಂತೆ ನೆಲ ತಗ್ಗುತ್ತದೆ. ಪೂರ್ವದಲ್ಲಿ ಮೂಗ್ಲಿ ಮತ್ತು ನಾಯಕನೇರಿ ಕಣಿವೆಮಾರ್ಗಗಳು ಜಿಲ್ಲೆಯ ಎಲ್ಲೆಯಿಂದ ಸ್ವಲ್ಪ ದೂರದಲ್ಲಿವೆ.

ಕೋಲಾರ ಜಿಲ್ಲೆಯಲ್ಲಿ ಸರ್ವಋತು ನದಿಗಳು ಯಾವುವೂ ಇಲ್ಲ. ಬಹುತೇಕ ನದಿಗಳು ಸಣ್ಣವು. ಮಳೆಗಾಲದಲ್ಲಿ ಮಾತ್ರ ಇವುಗಳಲ್ಲಿ ಪ್ರವಾಹ. ಪಾಲಾರ್ ಮತ್ತು ಉತ್ತರಪಿನಾಕಿನಿ (ಉತ್ತರ ಪೆನ್ನಾರ್) ಇವು ಮುಖ್ಯನದಿಗಳು. ಇವೂ ಹಲವು ಸಣ್ಣ ನದಿಗಳೂ ಜಿಲ್ಲೆಯಲ್ಲಿ ಹುಟ್ಟಿ ವಿವಿಧ ದಿಕ್ಕುಗಳಲ್ಲಿ ಹರಿಯುತ್ತವೆ. ಪಾಲಾರ್ ನದಿ ಮೊದಲು ಕಾಣಿಸಿಕೊಳ್ಳುವುದು ಕೈವಾರದ ದಕ್ಷಿಣಕ್ಕಿರುವ ಗೌತಮ ಗುಡ್ಡದಲ್ಲಿ. ಅಲ್ಲಿಂದ ಜಂಗಮಕೋಟೆಯವರೆಗೆ ಪೂರ್ವಾಭಿಮುಖವಾಗಿ, ಮುಂದೆ ದಕ್ಷಿಣ ಮತ್ತು ಆಗ್ನೇಯಾಭಿಮುಖವಾಗಿ ಹರಿದು, ಬಂಗಾರಪೇಟೆಯನ್ನು ಹಾದು, ಜಿಲ್ಲೆಯನ್ನು ಬಿಡುತ್ತದೆ. ಉಗಮಸ್ಥಳದಿಂದ ಜಿಲ್ಲೆಯನ್ನು ಬಿಡುವಲ್ಲಿಯವರೆಗೆ ಇದರ ಉದ್ದ 108ಕಿಮೀ. ನಂಗ್ಲಿಹೊಳೆ ಮುಳಬಾಗಿಲಬಳಿಯ ಕುರುಡುಮಲೆಯಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಕೋಲಾರ ಜಿಲ್ಲೆಯನ್ನು ದಾಟಿ ಹೋಗುತ್ತದೆ. ಇದು ಕೌಂಡಿನ್ಯ ನದಿಯ ಉಪನದಿ. ಕೋಲಾರ ತಾಲ್ಲೂಕಿನ ವಕ್ಕಲೇರಿ ಬೆಟ್ಟಗಳ ಮೇಲೆ ಮತ್ತು ಮಾಲೂರು ತಾಲ್ಲೂಕಿನ ಟೇಕಲ್ ಬೆಟ್ಟಗಳ ಮೇಲೆ ಹುಟ್ಟುವ ಎರಡು ತೊರೆಗಳು ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಎಂಬಲ್ಲಿ ಸೇರಿ ಮಾರ್ಕಂಡೇಯ ನದಿಯಾಗಿ ದಕ್ಷಿಣದತ್ತ ಹರಿದು ವೃಷಭಾವತಿಯನ್ನು ಸೇರಿಕೊಳ್ಳುವುದು. ಜಿಲ್ಲೆಯಲ್ಲಿ 50ಕಿಮೀ ದೂರ ಈ ನದಿ ಹರಿಯುವುದು. ಇದರ ಜಲಾನಯನ ಪ್ರದೇಶದಲ್ಲಿ 274 ಕೆರೆಗಳಿವೆ. ದಕ್ಷಿಣಪಿನಾಕಿನಿ ನದಿ ಹುಟ್ಟುವುದು ಚೆನ್ನರಾಯನ ಬೆಟ್ಟದಲ್ಲಿ. ಶಿಡ್ಲಘಟ್ಟದವರೆಗೆ ಪೂರ್ವಾಭಿಮುಖವಾಗಿ ಹರಿದು, ದಕ್ಷಿಣಕ್ಕೆ ತಿರುಗಿ, ಬೆಂಗಳೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕೋಲಾರ ಜಿಲ್ಲೆಯಲ್ಲಿ ಇದರ ಉದ್ದ 39ಕಿಮೀ. ಜಲಾನಯನ ಪ್ರದೇಶ 580ಚ.ಕಿಮೀ. ವೃಷಭಾವತಿ ನದಿ ವಕ್ಕಲೇರಿ ಬೆಟ್ಟದಲ್ಲಿ ಹುಟ್ಟುತ್ತದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ ಹಾಯ್ದು, ಕೊಪ್ಪ -ದೊಡ್ಡ ಕೆರೆಗೆ ನೀರು ಒದಗಿಸಿ, ಕಾಮಸಂದ್ರದ ಬಳಿ ದಕ್ಷಿಣಕ್ಕೆ ಹರಿದು ತಮಿಳುನಾಡು


ಕೋಲಾರ ಜಿಲ್ಲೆ
ಆಂ
ಧ್ರ
ಪ್ರ
ದೇ
ಶ
ಬೆಂ
ಗ
ಳೂ
ರು
ತ
ಮಿ
ಳು
ನಾ
ಡು
ಚಿಕ್ಕಬಳ್ಳಾಪುರ
ಶಿಡ್ಲಘಟ್ಟ
ಚಿಂತಾಮಣಿ
ಶ್ರೀನಿವಾಸಪುರ
ಮುಳಬಾಗಿಲು
ಕೋಲಾರ
ಬಂಗಾರಪೇಟೆ
ಮಾಲೂರು
ನಂದಿ
ಕೋಲಾರ ಜಿಲ್ಲೆ
0 10 20 30
ಕಿಲೋಮೀಟರುಗಳು

ರಾಜ್ಯದ ಧರ್ಮಪುರಿ ಜಿಲ್ಲೆಯ ಹೊಸೂರು ತಾಲ್ಲೂಕನ್ನು ಪ್ರವೇಶಿಸುತ್ತದೆ. ಕಾಮಸಂದ್ರದ ಬಳಿ ಇದಕ್ಕೆ ಕಟ್ಟೆ ಕಟ್ಟಲಾಗಿದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ 58ಕಿಮೀ. ಜಲಾನಯನ ಪ್ರದೇಶ 347ಚ.ಕಿಮೀ. ಈ ಪ್ರದೇಶದಲ್ಲಿ 264 ಕೆರೆಗಳಿವೆ.

ಜಿಲ್ಲೆಯ ವಾಯುಗುಣ ಹಿತಕರ, ವರ್ಷದಲ್ಲಿ ಸ್ಥೂಲವಾಗಿ ನಾಲ್ಕು ಋತುಗಳಿವೆ ಡಿಸೆಂಬರ್-ಫೆಬ್ರವರಿ ಶುಷ್ಕ ಹವೆ. ಮಾರ್ಚ್-ಮೇ ಬೇಸಗೆ. ಜೂನ್-ಅಕ್ಟೋಬರ್ ಮಳೆಗಾಲ. ನವೆಂಬರಿನಲ್ಲಿ ಮುಂಗಾರು ಹಿಂದೆ ಸರಿಯುತ್ತದೆ. ಕೋಲಾರ ಚಿನ್ನದ ಗಣಿಯ ಉಷ್ಣತೆ ಸ್ಥೂಲವಾಗಿ ಇಡೀ ಜಿಲ್ಲೆಗೆ ಪ್ರಾತಿನಿಧಿಕವಾದ್ದು. ವರ್ಷದ ಅತ್ಯಂತ ಉಷ್ಣತೆಯ ತಿಂಗಳು ಮೇ. ಆಗ ಕೋಲಾರ ಚಿನ್ನದ ಗಣಿಯಲ್ಲಿನ ದೈನಿಕ ಗರಿಷ್ಠ ಉಷ್ಣತೆ 35.3° ಸೆಂ. (ಮಧ್ಯಕ-ದೈನಿಕ ಗರಿಷ್ಠ 31.6° ಸೆಂ.) ಡಿಸೆಂಬರ್ ಅತ್ಯಂತ ತಣ್ಣನೆಯ ತಿಂಗಳು.ಆಗ ಕೋಲಾರ ಚಿನ್ನದ ಗಣಿ ಪ್ರದೇಶದ ದೈನಿಕ ಕನಿಷ್ಠ ಉಷ್ಣತೆ 22.7° ಸೆಂ. ಸರಾಸರಿಯಲ್ಲಿ ಜಿಲ್ಲೆಯಲ್ಲಿಯ ಮಳೆದಿನಗಳು 47. ಜಿಲ್ಲೆಯ ಸರಾಸರಿ 730.5ಮಿಮೀ.

ಸ್ವಲ್ಪ ಹೆಚ್ಚು ಮಳೆಯಾಗುವ ಬೆಟ್ಟಗುಡ್ಡಗಳಲ್ಲಿ ಚಿಕ್ಕ ಮರ ಮತ್ತು ಕುರುಚಲು ಕಾಡುಗಳಿವೆ. ಈ ಕಾಡುಗಳಲ್ಲಿ ಬೇವು, ಹುಣಿಸೆ, ಗಂಧ, ಹೊಂಗೆ, ಕರಿಜಾಲಿ, ಬಿಳಿಜಾಲಿ, ಕಗ್ಗಲಿ, ಬನ್ನಿ, ಗುಜ್ಜಲು, ಬಿಲ್ವಾರ, ಚುಜ್ಜಲು, ದಿಂಡಿಗ, ನೇರಳೆ, ಚೆನ್ನಂಗಿ, ಪಚರಿ, ನವಿಲಾದಿ, ದೇವದಾರು, ಆಲ, ಬೇಲ, ಮುತ್ತುಗ ಬೆಳೆಯುತ್ತವೆ. ಸೌದೆ, ಶ್ರೀಗಂಧ ಮುಖ್ಯ ಉತ್ಪನ್ನಗಳು.

ದೊಡ್ಡ ನದಿಗಳಿಲ್ಲದಿರುವುದರಿಂದಲೂ ಮಳೆ ಕಡಿಮೆಯಾದ್ದರಿಂದಲೂ ಈ ಜಿಲ್ಲೆಯ ವ್ಯವಸಾಯಕ್ಕೆ ಕೆರೆಗಳು ಮುಖ್ಯ ಆಧಾರ. ಜಿಲ್ಲೆಯಲ್ಲಿ ಉತ್ತಮ ವಿದ್ಯುತ್ ಸಂಪರ್ಕಗಳಿರುವುದರಿಂದ, ನೀರಾವರಿ ಪಂಪ್‌ಗಳೂ ಹೆಚ್ಚು ಸಂಖ್ಯೆಯಲ್ಲಿವೆ. ರಾಗಿ, ಬತ್ತ, ಜೋಳ, ಸಜ್ಜೆ, ಕಾಳುಗಳು, ನೆಲಗಡಲೆ, ಕಬ್ಬು, ಆಲೂಗೆಡ್ಡೆ, ಈರುಳ್ಳಿ ಮತ್ತು ಹೊಗೆಸೊಪ್ಪು ಇಲ್ಲಿಯ ಮುಖ್ಯ ಬೆಳೆಗಳು.

ಚಿನ್ನದ ಗಣಿಗಾರಿಕೆ ಜಿಲ್ಲೆಯ ಒಂದು ದೊಡ್ಡ ಉದ್ಯಮ. ಭಾರತದ ಒಟ್ಟು ಚಿನ್ನದ ಉತ್ಪಾದನೆಯಲ್ಲಿ ಶೇ.99ನ್ನು ಕೋಲಾರ ಚಿನ್ನದ ಗಣಿಗಳಲ್ಲಿ ತೆಗೆಯಲಾಗುತ್ತಿತ್ತು. ಈಗ ಚಿನ್ನದ ಗಣಿಗಾರಿಕೆ ಸ್ಥಗಿತಗೊಂಡಿದೆ. ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಆಡಳಿತ ನಿಯಂತ್ರಣಕ್ಕೊಳಪಟ್ಟ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಸಂಸ್ಥೆ ಭಾರಿ ಯಂತ್ರೋಪಕರಣಗಳನ್ನು ತಯಾರಿಸುತ್ತಿದೆ. ಗೌರಿಬಿದನೂರಿನಲ್ಲಿ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿದೆ. ಹಲವು ಸಣ್ಣ ಕೈಗಾರಿಕೆಗಳು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿವೆ. ಉಕ್ಕಿನ ಸಾಮಾನುಗಳು, ವ್ಯವಸಾಯೋಪಕರಣಗಳು, ಅಲ್ಯುಮಿನಿಯಂ ಪಾತ್ರೆಗಳು, ಹೆಂಚು, ಇಟ್ಟಿಗೆ, ಸ್ಲೇಟ್, ಸೀಸದಕಡ್ಡಿ, ಸಾಬೂನು, ಅಂಟು, ಸುಗಂಧದ್ರವ್ಯಗಳು, ಔಷಧಿಗಳು, ಕಡ್ಡಿಪೆಟ್ಟಿಗೆ, ಪ್ಲಾಸ್ಟಿಕ್ ಸಾಮಾನುಗಳು ಕೂಡ ಕೋಲಾರ ಜಿಲ್ಲೆಯಲ್ಲಿ ತಯಾರಾಗುತ್ತವೆ. ಕಲ್ಲಿಗೆ ಹೊಳಪು ಕೊಡುವುದು, ಬೀಡಿ ಕಟ್ಟುವುದು, ಊದುಬತ್ತಿ ತಯಾರಿಕೆ, ಕೈಮಗ್ಗ, ಕಂಬಳಿ ತಯಾರಿಕೆ, ಗಾಣದಿಂದ ಮತ್ತು ಯಂತ್ರಗಳಿಂದ ಎಣ್ಣೆ ಉತ್ಪಾದನೆ, ಬೆಲ್ಲ ತಯಾರಿಕೆ ಇವೂ ಇವಕ್ಕೆ ಸಂಬಂಧಪಟ್ಟ ಸಣ್ಣಪುಟ್ಟ ಉತ್ಪಾದನೆ ಮತ್ತು ಕೈಕೆಲಸಗಳೂ ಹಲವು ಜನರಿಗೆ ಉದ್ಯೋಗ ದೊರಕಿಸಿವೆ. ಜಿಲ್ಲೆಯಲ್ಲಿ ರೇಷ್ಮೆಉದ್ಯಮವಿದೆ. ಚರಕದಿಂದ ನೂಲು ತೆಗೆಯುವುದು. ಮಣ್ಣಿನ ಸಾಮಾನುಗಳನ್ನು ತಯಾರಿಸುವುದು. ಚರ್ಮ ಹದ ಮಾಡುವುದು, ಜೇನುಸಾಕಣೆ, ಕೊಟ್ಟಣದ ಅಕ್ಕಿ ತಯಾರಿಕೆ -ಇವು ಇತರ ಕೆಲವು ಸಣ್ಣ ಕೈಗಾರಿಕೆಗಳು. ಆಲೂಗೆಡ್ಡೆ, ಮೆಣಸಿನಕಾಯಿ ಮತ್ತು ಈರುಳ್ಳಿ ಇವನ್ನು ಆಂಧ್ರಪ್ರದೇಶಕ್ಕೂ ಶ್ರೀಲಂಕಾಗೂ ಕಳುಹಿಸುತ್ತಾರೆ. ಉಣ್ಣೆಕಂಬಳಿಗಳೂ ರೇಷ್ಮೆ ಬಟ್ಟೆಗಳೂ ಚರ್ಮದ ವಸ್ತುಗಳೂ ನೆರೆ ರಾಜ್ಯಗಳಿಗೆ ಹೋಗುತ್ತವೆ. ಆಂಧ್ರಪ್ರದೇಶದಿಂದ ಜಿಲ್ಲೆಗೆ ಅಕ್ಕಿಪೂರೈಕೆಯಿದೆ.

ಕೋಲಾರ ಜಿಲ್ಲೆಯಲ್ಲಿ ರಸ್ತೆ ಸಂಪರ್ಕ ಚೆನ್ನಾಗಿ ಬೆಳೆದಿದೆ. ರಾಷ್ಟ್ರೀಯ ಹೆದ್ದಾರಿ ನಂ. 4 ಮತ್ತು 7 ಮತ್ತು ರಾಜ್ಯ ಹೆದ್ದಾರಿಗಳು ಇಲ್ಲಿ ಹಾದು ನೆರೆರಾಜ್ಯಗಳಿಗೆ ಸಂಪರ್ಕ ಕಲ್ಪಿಸಿವೆ. ಪ್ರತಿ ಹಳ್ಳಿಗೂ ತಾಲ್ಲೂಕಿಗೂ ಜಾಲದಂತೆ ರಸ್ತೆ ಮಾರ್ಗಗಳು ಹೆಣೆದುಕೊಂಡಿವೆ. ಸರ್ಕಾರಿ ಮತ್ತು ಖಾಸಗಿ ಬಸ್ಸುಗಳೂ ಕಾರುಗಳೂ ಬಂಡಿಗಳೂ ಜನರನ್ನೂ ಸರಕುಗಳನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುತ್ತವೆ. ಚೆನ್ನೈ -ಬೆಂಗಳೂರು ರೈಲುಮಾರ್ಗ ಬಂಗಾರಪೇಟೆಯ ಮೂಲಕ ಸಾಗುತ್ತವೆ. ಇನ್ನೊಂದು ರೈಲುಮಾರ್ಗ ಬೆಂಗಳೂರಿನಿಂದ ನಂದಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಕೋಲಾರಗಳ ಮೂಲಕ ಬಂಗಾರ ಪೇಟೆಗೆ ಸಾಗುತ್ತದೆ. ಬಂಗಾರಪೇಟೆಯಿಂದ ಚಿನ್ನದ ಗಣಿ ಪ್ರದೇಶಕ್ಕೆ ರೈಲ್ವೆ ಸಂಪರ್ಕವುಂಟು.

ಕೋಲಾರ ಜಿಲ್ಲೆಯಲ್ಲಿ ಹಲವಾರು ಪ್ರಾಚೀನ ಅವಶೇಷಗಳು ಬೆಳಕಿಗೆ ಬಂದಿವೆ. ಹಳೆಯ ಶಿಲಾಯುಗಕ್ಕೆ ಸಂಬಂಧಿಸಿದ ಯಾವ ಅವಶೇಷಗಳೂ ಇದುವರೆಗೆ ಕಂಡುಬಂದಿಲ್ಲ. ನವಶಿಲಾಯುಗಕ್ಕೆ ಸಂಬಂಧಿಸಿದ ನೆಲೆಗಳು ಬಂಗಾರಪೇಟೆ ತಾಲ್ಲೂಕಿನ ಹುನಗುಂದ, ಬೂದಿಕೋಟೆ ಮತ್ತು ಸೂಲಿಕುಂಟೆ ಗ್ರಾಮಗಳಲ್ಲಿಯೂ ಮಾಲೂರು ತಾಲ್ಲೂಕಿನ ಬನಹಳ್ಳಿ ಗ್ರಾಮದಲ್ಲಿಯೂ ಬೆಳಕಿಗೆ ಬಂದಿವೆ. ಅಲ್ಲದೆ ಮಾಲೂರು ತಾಲ್ಲೂಕಿನ ಕೆಂದನಹಳ್ಳಿ ಮತ್ತು ಗಂಗಸಂದ್ರ ಹಳ್ಳಿಗಳ ಸುತ್ತಮುತ್ತಲಿನಲ್ಲಿ ಹೊಸ ಶಿಲಾಯುಗದ ಕಲ್ಲಿನ ಆಯುಧಗಳು ದೊರಕಿವೆ. ಇವು ತಯಾರಿಕೆಯ ಹಲವು ಹಂತಗಳಲ್ಲಿರುವುದರಿಂದ ಈ ಪ್ರದೇಶ ಶಿಲಾಯುಧಗಳನ್ನು ತಯಾರಿಸುವ ಕೇಂದ್ರವಾಗಿದ್ದಿತೆಂದು ಹೇಳಬಹುದು. ಬಂಗಾರಪೇಟೆ ತಾಲ್ಲೂಕಿನಲ್ಲಿ ಚಿನ್ನದ ಗಣಿ ಪ್ರದೇಶದ ನೈಋತ್ಯಕ್ಕೆ ಸು.21ಕಿಮೀ ದೂರದಲ್ಲಿರುವ ಹುನಗುಂದದಲ್ಲಿ ನವಶಿಲಾಯುಗದ ಕಾಲದಲ್ಲಿ ಚಿನ್ನದ ಗಣಿಗಳಿದ್ದವೆಂದೂ ಅಲ್ಲಿ ಚಿನ್ನವನ್ನು ತೆಗೆಯುತ್ತಿದ್ದರೆಂದೂ ಊಹಿಸಲಾಗಿದೆ. ಅಲ್ಲಿರುವ 9ನೆಯ ಶತಮಾನದ ತಮಿಳು ಶಾಸನವೊಂದು ಇದನ್ನು ಪೊನ್‌ಕುನ್ರಂ-ಪೊನ್-ಚಿನ್ನ, ಕುನ್ರಂ-ಬೆಟ್ಟ ಎಂದು ಕರೆದಿದೆ. ಈ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳ ನೆಲೆಗಳು ಅಸಂಖ್ಯಾತವಾಗಿವೆ. ಆದರೆ ಆಗಿನ ಕಾಲಕ್ಕೆ ಸಂಬಂಧಿಸಿದ ವಸತಿ ನೆಲೆಗಳು ಬಹಳ ಕಡಿಮೆ.

ಜಿಲ್ಲೆಯ ಪ್ರಾಚೀನತೆಯನ್ನು ಸಾರುವ ಹಲವು ಐತಿಹ್ಯಗಳು ಪ್ರಚಾರದಲ್ಲಿವೆ. ಮುಳಬಾಗಿಲು ತಾಲ್ಲೂಕಿನ ಆವನಿ ಪ್ರದೇಶದಲ್ಲಿ ವಾಲ್ಮೀಕಿ ವಾಸಿಸುತ್ತಿದ್ದನೆಂದು ಪ್ರತೀತಿ. ಕೋಲಾರಕ್ಕೆ ಪಶ್ಚಿಮದಲ್ಲಿರುವ ಶತಶೃಂಗಪರ್ವತ ರೇಣುಕ ಮತ್ತು ಪರಶುರಾಮನಿಗೆ ಸಂಬಂಧಿಸಿದಂತೆ ಪ್ರಸಿದ್ಧವಾಗಿದೆ. ಈ ಎರಡು ಸ್ಥಳಗಳಲ್ಲಿಯೂ ಪಾಂಡವರು ತಮ್ಮ ಅರಣ್ಯವಾಸದಲ್ಲಿ ಸುತ್ತಾಡಿದ್ದರೆಂದೂ ನಂಬಿಕೆ. ಮುಳಬಾಗಿಲು ತಾಲ್ಲೂಕಿನ ಕುರುಡುಮಲೆಯಲ್ಲಿ ತ್ರಿಪುರಾಂತಕನ ಮೇಲೆ ಯುದ್ಧಕ್ಕೆ ಹೊರಡುವುದಕ್ಕೆ ಮುಂಚೆ ದೇವತೆಗಳೆಲ್ಲರೂ ಒಂದುಗೂಡಿದ್ದರಂತೆ.

ಸುಮಾರು 4ನೆಯ ಶತಮಾನದಲ್ಲಿ ಗಂಗರಸರು ಇಲ್ಲಿ ತಮ್ಮ ರಾಜ್ಯವನ್ನು ಕಟ್ಟಿ ರಾಜ್ಯಭಾರ ಮಾಡಲಾರಂಭಿಸಿದರು. 7-8ನೆಯ ಶತಮಾನಗಳಲ್ಲಿ ಮಹಾವಲಿ ಬಾಣರಸರು ಪಾಲಾರ್ ನದಿಯ ಪೂರ್ವಪ್ರದೇಶದಲ್ಲಿ ರಾಜ್ಯಭಾರ ಮಾಡುತ್ತಿದ್ದರು. 8, 9 ಮತ್ತು 10ನೆಯ ಶತಮಾನಗಳಲ್ಲಿ ಜಿಲ್ಲೆಯ ಬಹುಭಾಗ ನೊಳಂಬರ ವಶದಲ್ಲಿತ್ತು. 10ನೆಯ ಶತಮಾನದ ಅಂತ್ಯದಲ್ಲಿ ಜಿಲ್ಲೆಯ ಪ್ರದೇಶ ಚೋಳರ ವಶವಾಯಿತು. 12ನೆಯ ಶತಮಾನದ ಹೊತ್ತಿಗೆ ಹೊಯ್ಸಳರ ಆಳಿಕೆಗೆ ಬಂತು. ಆದರೂ ಮಧ್ಯೆ ಮಧ್ಯೆ ಸ್ವಲ್ಪಕಾಲ ತಮಿಳು ಗಂಗರು ಬ್ರಹ್ಮಾಧಿರಾಜರು ಮೊದಲಾದ ವಂಶಗಳವರು ಕೆಲವು ಪ್ರದೇಶಗಳಲ್ಲಿ ಸ್ವತಂತ್ರವಾಗಿಯೂ ಆಳುತ್ತಿದ್ದರು. ಅನಂತರ ವಿಜಯನಗರದರಸರು ಮತ್ತು ಕೆಲವು ಪಾಳೆಯಗಾರರು ಈ ಜಿಲ್ಲೆಯ ರಾಜ್ಯಭಾರ ಮಾಡಿದರು. ಮುಂದೆ ಇದು ಮೈಸೂರು ಸಂಸ್ಥಾನದ ಕಕ್ಷೆಯಲ್ಲಿತ್ತು.

ಇದುವರೆಗೆ ಈ ಜಿಲ್ಲೆಯಲ್ಲಿ ಸಿಕ್ಕಿರುವ ಅತ್ಯಂತ ಪ್ರಾಚೀನ ಶಾಸನ ಸು.370ರದು. ಇದು ಗಂಗಕುಲದ ಕೊಂಗುಣಿವರ್ಮ ಧರ್ಮಮಹಾರಾಜನಿಗೆ ಸಂಬಂಧಿಸಿದ್ದು; ಮಾಲೂರು ತಾಲ್ಲೂಕಿನ ನೊಣಮಂಗಲದಲ್ಲಿರುವ ಪಾಳು ಜೈನಬಸ್ತಿಯಲ್ಲಿದೆ. ಅಂದಿನಿಂದ ಹಿಡಿದು ಇತ್ತೀಚಿನವರೆಗಿನ ಕನ್ನಡ, ಸಂಸ್ಕೃತ, ತಮಿಳು ಮತ್ತು ತೆಲುಗು ಶಾಸನಗಳು ಜಿಲ್ಲೆಯ ಹಲವು ಸ್ಥಳಗಳಲ್ಲಿ ದೊರಕಿವೆ.

ಆವನಿಯ ರಾಮಲಿಂಗೇಶ್ವರ ದೇವಾಲಯ ಮತ್ತು ಇತರ ದೇವಾಲಯಗಳು ನೊಳಂಬರ ಕಾಲದ ಕಟ್ಟಡಗಳು. ಕೋಲಾರ ತಾಲ್ಲೂಕಿನ ಸೀತಿ ಬೆಟ್ಟದ ಮೇಲಿರುವ ದೇವಾಲಯ ಸಹ ಬಹುಶಃ ನೊಳಂಬರ ಕಾಲಕ್ಕೆ ಸಂಬಂಧಿಸಿದ್ದು. ಕುರುಡುಮಲೆಯ ಚೋಳರ ಕಾಲದ ಸೋಮೇಶ್ವರ ದೇವಾಲಯ ಮತ್ತು ಬೃಹದಾಕಾರದ ಗಣಪತಿ ದೇವಾಲಯಗಳು ಬಹಳ ಪ್ರಸಿದ್ಧವಾಗಿವೆ. ಕೋಲಾರದಲ್ಲಿರುವ ಕೋಲಾರಮ್ಮನ ದೇವಾಲಯ ಚೋಳ ಮತ್ತು ಗಂಗರಸರಿಂದ ನಿರ್ಮಿತವಾದುದೆಂದು ಹೇಳಬಹುದು.

ವಿಜಯನಗರ ಮತ್ತು ಪಾಳೆಯಗಾರರ ಕಾಲಕ್ಕೆ ಸಂಬಂಧಿಸಿದ ದೇವಾಲಯಗಳಲ್ಲಿ ಮುಳಬಾಗಿಲು ಹತ್ತಿರವಿರುವ ವಿರೂಪಾಕ್ಷಪುರದಲ್ಲಿರುವ ವಿರೂಪಾಕ್ಷ ದೇವಾಲಯ ಕೋಲಾರದ ಸೋಮೇಶ್ವರ ದೇವಾಲಯ, ಮುಳಬಾಗಲ ಆಂಜನೇಯ ದೇವಾಲಯಗಳನ್ನು ಹೆಸರಿಸಬಹುದು. ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿ ಮತ್ತು ಮುಳಬಾಗಲಿನ ಶ್ರೀಪಾದರಾಯರ ಮಠ, ತಂಬಿಹಳ್ಳಿಯಲ್ಲಿಯ ಮಾಧ್ವಮಠಗಳು ಪ್ರಾಚೀನವಾದವು.

ಮಹಮ್ಮದೀಯರ ಕಾಲದ ಕಟ್ಟಡಗಳಲ್ಲಿ ಕೋಲಾರದಲ್ಲಿರುವ ಹೈದರ್ ಅಲಿಯ ತಂದೆಯ ಸಮಾಧಿಗಳು ಉಲ್ಲೇಖಾರ್ಹ. ಈ ಜಿಲ್ಲೆಯಲ್ಲಿ ಅನೇಕ ಕೋಟೆಗಳಿವೆ. (ಜಿಲ್ಲೆಯ ಅನೇಕ ಮುಖ್ಯಸ್ಥಳಗಳಿಗೆ ಆಯಾ ಶೀರ್ಷಿಕೆಯಲ್ಲಿ ಪ್ರತ್ಯೇಕ ಲೇಖನಗಳಿವೆ). **(ಸಿ.ಕೆ.)**

**ತಾಲ್ಲೂಕು:** ಜಿಲ್ಲೆಯ ಮಧ್ಯಭಾಗದಲ್ಲಿ ಸ್ವಲ್ಪಮಟ್ಟಿಗೆ ದಕ್ಷಿಣಕ್ಕಿದ್ದು, ಉತ್ತರದಲ್ಲಿ ಚಿಂತಾಮಣಿ, ಶ್ರೀನಿವಾಸಪುರ ತಾಲ್ಲೂಕುಗಳು, ಪೂರ್ವದಲ್ಲಿ ಮುಳಬಾಗಲು ತಾಲ್ಲೂಕು, ದಕ್ಷಿಣದಲ್ಲಿ ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳು ಮತ್ತು ಪಶ್ಚಿಮದಲ್ಲಿ

ಬೆಂಗಳೂರು ಜಿಲ್ಲೆಯ ಎಲ್ಲೆಗಳು ಸುತ್ತುವರಿದಿವೆ. ವಿಸ್ತೀರ್ಣ 791.1ಚ.ಕಿಮೀ. ಜನಸಂಖ್ಯೆ 3,41,784. ಕಸಬೆ, ವಕ್ಕಲೇರಿ, ವೇಮಗಲ್ಲು, ನರಸಾಪುರ, ಸುಗಟೂರು, ಹೋಳೂರು, ಹುತ್ತೂರು ಈ ಏಳು ಹೋಬಳಿಗಳು. ಒಟ್ಟು ಗ್ರಾಮಗಳ ಸಂಖ್ಯೆ 361.

ತಾಲ್ಲೂಕು ಕಣಶಿಲೆಯ ಪ್ರದೇಶ, ಅಲೆಯಲೆಯಾಗಿ ಸುಮಾರು ಮಟ್ಟಸವಾದ ಭೂಪ್ರದೇಶದಲ್ಲಿ ಅಲ್ಲಲ್ಲಿ ಕಣಶಿಲೆಯ ಬೆಟ್ಟಗುಡ್ಡಗಳಿವೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಕೋಲಾರ ಮತ್ತು ವೇಮಗಲ್ಲು ಬೆಟ್ಟಗಳ ಸಾಲುಗಳು ಇವೆ. ತಾಲ್ಲೂಕಿನ ಉತ್ತರ ಮತ್ತು ಪೂರ್ವಭಾಗ ಪಾಲಾರ್ ನದಿಯ ಹರಿವಿನ ಪ್ರದೇಶ. ತಾಲ್ಲೂಕಿನ ಹೆಚ್ಚುಭಾಗ ಮರಳುಮಿಶ್ರಿತ ಕೆಂಪು ಮಣ್ಣಿನದು. ಹೋಳೂರು ಹೋಬಳಿ ಮತ್ತು ದಲಸನೂರಿನ ಸುತ್ತಮುತ್ತ ಉತ್ಕೃಷ್ಟ ಭೂಮಿ ಇದೆ. ಈ ಭಾಗದಲ್ಲಿ ಕೆಲವೆಡೆ ಕಪ್ಪು ಎರೆ ಮಣ್ಣು ಸಹ ಇದೆ. ವಾರ್ಷಿಕ ಸರಾಸರಿ ಮಳೆ 693.93ಮಿಮೀ. ಪಾಲಾರ್ ನದಿಗೆ ಕಟ್ಟಲಾಗಿರುವ ಸೋಮಾಂಬುಧಿ ಅಗ್ರಹಾರಕೆರೆ ಮತ್ತು ಇತರ ಅನೇಕ ಕೆರೆಗಳು ಮತ್ತು ಬಾವಿಗಳೂ ನೀರಾವರಿ ಸೌಲಭ್ಯವನ್ನು ಒದಗಿಸಿವೆ. ತಾಲ್ಲೂಕಿನ ಮುಖ್ಯ ಬೆಳೆಗಳು ರಾಗಿ ಮತ್ತು ಬತ್ತ. ಸ್ವಲ್ಪಮಟ್ಟಿಗೆ ಕಬ್ಬು, ಕಡಲೆಕಾಯಿ, ಆಲೂಗೆಡ್ಡೆ, ಮೆಣಸಿನಕಾಯಿ, ಈರುಳ್ಳಿ, ದ್ವಿದಳಧಾನ್ಯಗಳು ಮತ್ತು ತರಕಾರಿ ಬೆಳೆ ಸಹ ಇದೆ. ರೇಷ್ಮೆ ವ್ಯವಸಾಯ ವ್ಯಾಪಕವಾಗಿದೆ. ಕೋಲಾರ ತಾಲ್ಲೂಕಿನ ಕಂಬಳಿಗಳು ಪ್ರಸಿದ್ಧ. ಕೋಲಾರ, ಜೋಡಿ ಬ್ಯಾಲಹಳ್ಳಿ, ರಾಜಕಲ್ಲಹಳ್ಳಿ ಮತ್ತು ಪಡಿಗನಹಳ್ಳಿಗಳಲ್ಲಿ ಕೈಮಗ್ಗದ ಕೈಗಾರಿಕೆಯಿದೆ. ರೈಲುಮಾರ್ಗವಲ್ಲದೆ ಉತ್ತಮ ರಸ್ತೆಸಂಪರ್ಕವಿದೆ.

ಹೋಬಳಿ ಗ್ರಾಮಗಳಲ್ಲದೆ ಬೆಳ್ಳೂರು, ಗರುಡನಪಾಳ್ಯ, ಪಾಪರಾಜನ ಹಳ್ಳಿ, ಸೀತಿ, ಸುಗಟೂರು ತೇರುಹಳ್ಳಿ, ವಾಣರಾಸಿ, ವಕ್ಕಲೇರಿ, ವೇಮಗಲ್ಲು ಮೊದಲಾದವು ಈ ತಾಲ್ಲೂಕಿನಲ್ಲಿನ ಮುಖ್ಯ ಸ್ಥಳಗಳು. ಗರುಡನಪಾಳ್ಯದ ಬಳಿಯ ಚಿಕ್ಕಗುಡ್ಡದಲ್ಲಿ ಸ್ಥಳೀಯವಾಗಿ ಪಾಂಡವರ ಗುಡಿಗಳೆಂದು ಕರೆಯುವ ಬೃಹತ್ ಶಿಲಾಸಮಾಧಿಗಳಿವೆ. ಕೋಲಾರದ ಬಳಿಯ ಬೆಟ್ಟವೊಂದರ ಮೇಲಿರುವ ಪಾಪರಾಜನ ಹಳ್ಳಿಯಲ್ಲಿ ಒಂದು ಶಿವ ದೇವಾಲಯ ಮತ್ತು ಉಸ್ಮಾನ್ ಅಲಿಯ ದರ್ಗ ಅಲ್ಲದೆ ಭೂತಗೌಡನ ಗವಿ, ಮುಗಲ್ ಸುಬೇದಾರನ ಕೋಟೆ ಮೊದಲಾದವು ಇವೆ. ಮತ್ತೊಂದು ಬೆಟ್ಟದ ಮೇಲೆ ತೇರುಹಳ್ಳಿ ಗ್ರಾಮದಲ್ಲಿ ಸು.12-13ನೆಯ ಶತಮಾನದ ಗಂಗಾಧರೇಶ್ವರನ ಬೃಹತ್ ದೇವಾಲಯ ಮತ್ತು ಕೆಲವು ಪ್ರಾಗೈತಿಹಾಸಿಕ ಅವಶೇಷಗಳು ಇವೆ. ಬೆಳ್ಳೂರು ಗಂಗರ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಹೊಯ್ಸಳರ ಕಾಲದಲ್ಲಿ ವಿಷ್ಣುವರ್ಧನ ಚತುರ್ವೇದಿ ಮಂಗಲಂ ಎಂದು ಪ್ರಸಿದ್ಧವಾಗಿದ್ದ ಶ್ರೀವೈಷ್ಣವ ಅಗ್ರಹಾರವಾಗಿತ್ತು. ಮಣವಾಲ ಮಹಾಮುನಿಯ ಶಿಷ್ಯರಾದ ಪ್ರತಿವಾದಿ ಭಯಂಕರರ ಅಣ್ಣ ಇಲ್ಲಿಯವರೆಂದು ಪ್ರತೀತಿ. ಇಲ್ಲಿ ರಾಮದೇವಾಲಯವಿದೆ. ವೆಂಕಟಾಪುರದಲ್ಲಿ ವೆಂಕಟರಮಣ ದೇವಾಲಯವಿದೆ. ವಕ್ಕಲೇರಿಯ ಬೆಟ್ಟದ ಮೇಲೆ ಪ್ರಾಚೀನ ಮಾರ್ಕಂಡೇಶ್ವರ ದೇವಾಲಯವಿದೆ. ಪ್ರತಿ ಮಾಘ ಮಾಸದಲ್ಲಿ ಸು.20 ದಿನಗಳ ಕಾಲ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ವಾಣರಾಸಿಯಲ್ಲಿ ಸ್ಥಳೀಯ ವೀರ ಇರಳಪ್ಪನ ದೇವಾಲಯವಿದೆ. ಪ್ರತಿ ಚೈತ್ರಮಾಸದಲ್ಲಿ ಇಲ್ಲೂ ದೊಡ್ಡ ಜಾತ್ರೆ ನಡೆಯುತ್ತವೆ. ಹೋಳೂರಿನಲ್ಲಿ ಲಕ್ಷ್ಮೀನಾರಾಯಣ ದೇವಾಲಯವಿದೆ. ಮಾಘ ಶುದ್ಧ ಪಾಡ್ಯಮಿಯಂದು ಜಾತ್ರೆ ನಡೆಯುತ್ತದೆ. ವೇಮಗಲ್ಲಿನಲ್ಲಿರುವ ದರ್ಗಾ ಪ್ರಸಿದ್ಧವಾದುದು.

**ಪಟ್ಟಣ:** ಕೋಲಾರ, ದೊಡ್ಡ ಊರು; ಜಿಲ್ಲೆ ಹಾಗೂ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರಿನಿಂದ 72ಕಿಮೀ ಪೂರ್ವ ಈಶಾನ್ಯಕ್ಕೆ ಹಳೆಯ ಬೆಂಗಳೂರು - ಚೆನ್ನೈ ಹೆದ್ದಾರಿಯ ಮೇಲಿದೆ. ಬೆಂಗಳೂರು - ಬಂಗಾರಪೇಟೆ ರೈಲುಮಾರ್ಗ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. ಜನಸಂಖ್ಯೆ 1,13,299.

ಈ ಊರು ರೈಲುಮಾರ್ಗದ ಉತ್ತರಕ್ಕೆ ಬೆಳೆದಿದೆ. ಪೂರ್ವದಲ್ಲಿ ಅಮಾನಿಕೆರೆ ಇದೆ. ಕೈಗಾರಿಕಾ ತರಬೇತಿ ಕೇಂದ್ರ, ರೇಷ್ಮೆ ತಯಾರಿಕಾ ತರಬೇತಿ ಕೇಂದ್ರ ಇವೆ. ಸುತ್ತಲ ಪ್ರದೇಶದಲ್ಲಿ ಉತ್ಪನ್ನವಾಗುವ ರೇಷ್ಮೆಯ ವ್ಯಾಪಾರ ಈ ನಗರದ ಮೂಲಕ ಸಾಗುತ್ತದೆ. ರೇಷ್ಮೆಮೊಟ್ಟೆ ಕೇಂದ್ರಗಳಿವೆ. ಇಲ್ಲಿನ ಕಂಬಳಿಗಳು ಹೆಸರುವಾಸಿ. ಸರ್ಕಾರದ ಒಂದು ಉಣ್ಣೆನೇಯ್ಗೆ ಕಾರ್ಖಾನೆ ಇದೆ. ಒಂದು ಕೈಗಾರಿಕಾ ಎಸ್ಟೇಟ್, ಅಲ್ಯುಮಿನಿಯಂ ಪಾತ್ರೆಗಳ ಕಾರ್ಖಾನೆ, ಗೋಂದು ಮತ್ತು ಪರಿಮಳ ದ್ರವ್ಯಗಳ ಕಾರ್ಖಾನೆ ಇವೆ. ಅಗರಬತ್ತಿ ತಯಾರಿಕೆಯೂ ಊರಿನ ಮುಖ್ಯ ಉದ್ಯಮಗಳಲ್ಲೊಂದು. ಉತ್ತಮ ತಳಿಯ ಕೋಳಿಗಳನ್ನು ಸಾಕಿ, ಬೆಂಗಳೂರು, ಬಳ್ಳಾರಿ ಮೊದಲಾದೆಡೆಗೆ ರಫ್ತು ಮಾಡುವುದು ಇಲ್ಲಿಯ ಮತ್ತೊಂದು ಉದ್ಯಮ. ಕೋಲಾರದಿಂದ ಸುತ್ತಲ ಎಲ್ಲ ಮುಖ್ಯ ಊರುಗಳಿಗೂ ಉತ್ತಮ ರಸ್ತೆ ಸೌಲಭ್ಯವಿದೆ. ಇದು ವ್ಯಾಪಾರಕೇಂದ್ರವೂ ಆಗಿದೆ. ಪ್ರತಿ ಗುರುವಾರ ದೊಡ್ಡ ಸಂತೆ ಜರುಗುತ್ತದೆ.

ಕೋಲಾರ ಬಹು ಪ್ರಾಚೀನ ಊರು. ಕೋಲಾಹಲಪುರ, ಕುವಲಾಲ, ಕೋಳಾರ, ಕೋಲಾಲ - ಇವು ಇದರ ಪ್ರಾಚೀನ ಹೆಸರುಗಳು, ಕಾರ್ತವೀರ್ಯಾರ್ಜುನ ಹಿಂದೆ ಈ ಪ್ರದೇಶದಲ್ಲಿ ದೊರೆಯಾಗಿದ್ದಾಗ ಒಮ್ಮೆ ಜಮದಗ್ನಿ ಮಹರ್ಷಿ ಅವನನ್ನು ಸುರಭಿ ಎಂಬ ಗೋವಿನ ಸಹಾಯದಿಂದ ಸತ್ಕರಿಸಿದ. ಕಾರ್ತವೀರ್ಯ ಆ ಗೋವನ್ನು ತನಗೆ ಕೊಡಬೇಕೆಂದು ಜಮದಗ್ನಿಯನ್ನು ಪೀಡಿಸಿದ. ಜಮದಗ್ನಿ ಗೋವನ್ನು ಕೊಡಲು ನಿರಾಕರಿಸಲು ಅದನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಲು ಪ್ರಯತ್ನಿಸಿದ. ಆಗ ಜಮದಗ್ನಿಯ ಮಗ ಪರಶುರಾಮನಿಂದ ಕಾರ್ತವೀರ್ಯಾರ್ಜುನ ಹತನಾದ. ಅನಂತರ ಕಾರ್ತವೀರ್ಯಾರ್ಜುನನ ಮಕ್ಕಳಿಂದ ಜಮದಗ್ನಿಯ ಹತ್ಯೆ ನಡೆಯಿತು. ಜಮದಗ್ನಿಯ ಪತ್ನಿ ರೇಣುಕೆ ಪತಿಯ ದೇಹದೊಡನೆ ಚಿತೆಯೇರಿದಳು. ಇದರಿಂದ ಕುಪಿತನಾದ ಪರಶುರಾಮ ಎಲ್ಲ ಕ್ಷತ್ರಿಯರನ್ನೂ ನಾಶಮಾಡುವುದಾಗಿ ಪಣ ತೊಟ್ಟು ಕಾರ್ತವೀರ್ಯಾರ್ಜುನನ ಎಲ್ಲ ಮಕ್ಕಳನ್ನೂ ಯುದ್ಧದಲ್ಲಿ ಕೊಂದುಹಾಕಿದ. ಆ ಯುದ್ಧಗಳಿಂದ ಉಂಟಾದ ಕೋಲಾಹಲ ಸುತ್ತಲ ಬೆಟ್ಟಗಳಿಂದ ಮಾರ್ದನಿ ಕೊಟ್ಟು ಆ ಪ್ರದೇಶಕ್ಕೆ ಕೋಲಾಹಲವೆಂಬ ಹೆಸರು ಬಂತು. ಅದೇ ಇಂದಿನ ಕೋಲಾರವೆಂದು ಪ್ರತೀತಿ. ರೇಣುಕೆಯ ನೆನಪಿಗಾಗಿ ಇಲ್ಲಿನ ಕೋಲಾರಮ್ಮನ ದೇವಾಲಯವನ್ನು ಕಟ್ಟಲಾಯಿತು. ಇದು ಇಲ್ಲಿಯ ಐತಿಹ್ಯ. ಈಗ ಕೋಲಾರ ಪಟ್ಟಣವಿರುವ ಜಾಗದಲ್ಲಿ ಕೋಲ ಎಂಬ ಗೊಲ್ಲ ನೇಗಿಲಿನಿಂದ ಭೂಮಿಯನ್ನು ಉಳುತ್ತಿರುವಾಗ ಬಚ್ಚಿಟ್ಟ ಹಣ ದೊರಕಿತೆಂದೂ ಚೋಳ ದೊರೆ ಉತ್ತಮಚೋಳ ಆ ಗೊಲ್ಲನನ್ನು ಕಂಚಿಗೆ ಬರುವಂತೆ ಹೇಳಿಕಳುಹಿಸಿದನೆಂದೂ ಆಗ ರೇಣುಕಾದೇವಿ ಕೋಲಾಹಲಮ್ಮನ ರೂಪದಲ್ಲಿ ಕಾಣಿಸಿಕೊಂಡು ಅವನಿಗೆ ಎಚ್ಚರಿಕೆ ಕೊಟ್ಟಿದ್ದರಿಂದ ದೊರೆ ಕೋಲಾರಮ್ಮನ ಹೆಸರಿನಲ್ಲಿ ದೇವಾಲಯವನ್ನೂ ಊರನ್ನೂ ಕಟ್ಟಿಸಿದನೆಂದೂ ಇನ್ನೊಂದು ಕಥೆ ಇದೆ. ಕೋಲನ ನೇಗಿಲು ಹಲ ಎಂಬುದರಿಂದ ಕೋಲಾಹಲ (ಕೋಲಾರ) ಹೆಸರು ಬಂದಿರಬೇಕೆಂಬ ಊಹೆಯೂ ಇದೆ.

ಸು.4ನೆಯ ಶತಮಾನದಿಂದಲೂ ಈ ಊರು ಅಸ್ತಿತ್ವದಲ್ಲಿದ್ದಿರಬೇಕು. ತಲಕಾಡಿನ ಗಂಗವಂಶದ ಅರಸರು ಮೂಲತಃ ಕೋಲಾರದವರಾಗಿದ್ದು ತಮ್ಮನ್ನು ಕೋಳಾಲಪುರವರೇಶ್ವರರೆಂದು ಕರೆದುಕೊಂಡಿದ್ದಾರೆ. ತಲಕಾಡು ರಾಜಧಾನಿಯಾಗುವುದಕ್ಕೆ ಮುಂಚೆ ಕೋಲಾರ ಅವರ ರಾಜಧಾನಿಯಾಗಿದ್ದಿರಬೇಕು. ಇಲ್ಲಿ ಚೋಳ, ಹೊಯ್ಸಳ, ವಿಜಯನಗರ ಮತ್ತು ಪಾಳೆಯಗಾರರ ಕಾಲದ ಶಾಸನಗಳು ದೊರಕಿವೆ. ಆ ಕಾಲಗಳಲ್ಲೂ ಇದೊಂದು ಮುಖ್ಯ ಪಟ್ಟಣವಾಗಿ ಮೆರೆದಿತ್ತು. 15ನೆಯ ಶತಮಾನದಲ್ಲಿ ಇದು ತಿಮ್ಮೇಗೌಡನೆಂಬ ಪಾಳೆಯಗಾರನ ವಶದಲ್ಲಿತ್ತು. ಆತ ಇಲ್ಲಿನ ಕೋಟೆಯನ್ನು ದುರಸ್ತಿ ಮಾಡಿಸಿದ. 1639ರಲ್ಲಿ ಬಿಜಾಪುರದ ಸರದಾರ ಷಾಜಿಯ ವಶಕ್ಕೆ ಬಂತು. ಇಪ್ಪತ್ತು ವರ್ಷಗಳ ಅನಂತರ ಈ ಊರು ಮುಗಲರ ವಶವಾಯಿತು. 1720ರಲ್ಲಿ ಹೈದರನ ತಂದೆ ಫತೆ ಮಹಮ್ಮದ್ ಶಿರಾ ಸುಬೇದಾರರ ಅಧೀನದಲ್ಲಿ ಇದರ ಫೌಜುದಾರನಾದ. 1761ರಲ್ಲಿ ಪಟ್ಟಣ ಹೈದರನ ಅಧೀನಕ್ಕೆ ಬಂತು. 1768ರಲ್ಲಿ ಬ್ರಿಟಿಷ್ ಸೇನಾನಿ ಕ್ಯಾಂಪ್‌ಬೆಲ್ ವಶಪಡಿಸಿಕೊಂಡಿದ್ದ. 1770ರಲ್ಲಿ ಮಾಧವರಾವ್‌ನ ಕೈಸೇರಿತು. 1791ರಲ್ಲಿ ಇದನ್ನು ಕಾರ್ನವಾಲಿಸ್ ಗೆದ್ದ. 1792ರ ಸಂಧಿಯ ಪ್ರಕಾರ ಇದು ಮೈಸೂರು ಸಂಸ್ಥಾನಕ್ಕೆ ಸೇರಿತು. ಮೆಕೆಂಜಿ ಎಂಬ ಬ್ರಿಟಿಷ್ ಅಧಿಕಾರಿ 1801ರಲ್ಲಿ ಇದನ್ನು ನೋಡಿದಾಗ ಇಲ್ಲಿ ಮಣ್ಣಿನ ಕೋಟೆಯೂ ಸುತ್ತಣ ಕಂದಕ ಸುಸ್ಥಿತಿಯಲ್ಲಿತ್ತೆಂದೂ ವರ್ಣಿಸಿದ್ದಾನೆ. 19ನೆಯ ಶತಮಾನದ ಉತ್ತರ ಭಾಗದಲ್ಲಿ ಕೋಟೆಯನ್ನು ನೆಲಸಮ ಮಾಡಿ ಕಂದಕವನ್ನು ಮುಚ್ಚಲಾಯಿತು.

ಈ ಊರಿನಲ್ಲಿ ಕೋಲಾರಮ್ಮ, ಸೋಮೇಶ್ವರ, ಆಂಜನೇಯ, ವೆಂಕಟರಮಣ ಮತ್ತು ಕೋದಂಡರಾಮ ದೇವಾಲಯಗಳಿವೆ. ಕೋಲಾರಮ್ಮನ ದೇವಾಲಯ ಊರಿನ ಮುಖ್ಯ ಗುಡಿ. ಮುಂದುಗಡೆ ಒಂದು ಮಹಾದ್ವಾರವಿದೆ. ಇಲ್ಲಿನ ಚೌಕ ಕಂಬಗಳ ಮೇಲೆ ಅನೇಕ ಶಿಲ್ಪಗಳಿವೆ. ಈ ಭಾಗ ವಿಜಯನಗರ ಕಾಲದ್ದು. ಈ ಮಹಾದ್ವಾರದ ಮೇಲೆ ಗೋಪುರವಾಗಲಿ ಇದಕ್ಕೆ ಹೊಂದಿಕೊಂಡಂತೆ ಪ್ರಾಕಾರವಾಗಲಿ ಇಲ್ಲ. ಮುಂದೆ 14 ಕಂಬಗಳ ಮೇಲೆ ಎತ್ತಿದ ಮತ್ತೊಂದು ಮಹಾದ್ವಾರವಿದೆ. ಅದಕ್ಕೆ ಹೊಂದಿಕೊಂಡಂತೆ ಪ್ರಾಕಾರವಿದೆ. ಒಳಭಾಗದಲ್ಲಿ ಕೈಸಾಲೆಯಿದೆ. ಇದು ಪ್ರಾಯಶಃ ದಿಂಪಣ್ಣ ಒಡೆಯರ್ ಎಂಬ ಇಮ್ಮಡಿ ಹರಿಹರನ ಅಧಿಕಾರಿಯೊಬ್ಬ ಕಟ್ಟಿಸಿದ್ದು. ಪ್ರಾಕಾರದ ಒಳಗೆ ಮಧ್ಯದಲ್ಲಿ ಮುಖ್ಯ ಗುಡಿ ಇದೆ. ಗರ್ಭಗುಡಿಯಲ್ಲಿ ಸು. 69.95 ಸೆಂಮೀ. ಎತ್ತರದ ಸಪ್ತಮಾತೃಕಾ ವಿಗ್ರಹಗಳಿವೆ. ಎರಡೂ ಪಕ್ಕಗಳಲ್ಲಿ ದಕ್ಷಿಣಾಮೂರ್ತಿ ಮತ್ತು ವಿನಾಯಕನ ಮೂರ್ತಿಗಳಿವೆ. ಇವುಗಳಲ್ಲಿ ಚಾಮುಂಡಾ ವಿಗ್ರಹ ದೊಡ್ಡದು ಇದರ ಎದುರು ಶ್ರೀಯಂತ್ರವನ್ನು ಸ್ಥಾಪಿಸಲಾಗಿದೆ. ಮಧ್ಯದ ಅಂಕಣದಲ್ಲಿ 1.52 ಮೀ. ಎತ್ತರದ ಕಪಾಲಭೈರವಿಯ ಮೂರ್ತಿ ಇದೆ. ಈ ದೇವಿ

ಚೇಳುಕಡಿತವನ್ನು ನಿವಾರಿಸುವಳೆಂಬ ನಂಬಿಕೆ ಇದೆ. ದಕ್ಷಿಣದ ಕಡೆಗೆ ನಾಲ್ಕು ಕುಬ್ಜ ಕಂಬಗಳಿರುವ ಇನ್ನೊಂದು ಗುಡಿ ಇದೆ. ಇದರಲ್ಲಿ ಸಪ್ತಮಾತೃಕೆಯರ ಸುದ್ದೆಮಣ್ಣಿನ ದೊಡ್ಡ ವಿಗ್ರಹಗಳೂ ಕೋಲಾರಮ್ಮನ ಉತ್ಸವಮೂರ್ತಿಯೂ ಇವೆ. ಉತ್ತರಕ್ಕಿರುವ ನವರಂಗದಲ್ಲಿ ಚಂಡಿಕೇಶ್ವರ ಮತ್ತು ಚೋಳರಾಜನ ವಿಗ್ರಹಗಳಿವೆ. ಈ ಭಾಗಗಳೆಲ್ಲವೂ ಬಹುಶಃ ಗಂಗರ ಕಾಲದಲ್ಲಿದ್ದಂತೆ ತೋರುತ್ತದೆ. ಇದರಿಂದ ದಕ್ಷಿಣಕ್ಕಿರುವ ಕಟ್ಟಡಗಳು ಚೋಳರ ಕಾಲದ ಸೇರ್ಪಡೆಗಳು. ದೇವಾಲಯದಲ್ಲಿ ರಾಜೇಂದ್ರ ಚೋಳ ಮೊದಲಾದ ಹಲವು ಚೋಳರಾಜರ ತಮಿಳು ಶಾಸನಗಳಿವೆ.

ಸೋಮೇಶ್ವರ ದೇವಾಲಯ ದ್ರಾವಿಡ ಶೈಲಿಯ ದೊಡ್ಡ ಕಟ್ಟಡ. ದೊಡ್ಡ ಪ್ರಾಕಾರದ ಮುಂದೆ ಮಹಾದ್ವಾರ ಮತ್ತು ಮೇಲೆ ಇಟ್ಟಿಗೆಯ ಗೋಪುರ ಇದೆ. ಒಳಭಾಗದ ಮುಖ್ಯ ಗುಡಿಯಲ್ಲಿ ಒಂದು ಗರ್ಭಗೃಹ, ದೊಡ್ಡ ಸುಕನಾಸಿ ಮತ್ತು ನಾಲ್ಕು ಕಂಬಗಳ ನವರಂಗ ಇವೆ. ಮುಂದೆ ಅನೇಕ ಕಂಬಗಳನ್ನುಳ್ಳ ಒಂದು ಮುಖಮಂಟಪವಿದೆ. ಗರ್ಭಗುಡಿಯ ಮೇಲೆ ಇಟ್ಟಿಗೆಯ ವಿಮಾನವಿದೆ. ಪ್ರಾಕಾರದ ಒಳಗೆ ಕೆಲವು ಸಣ್ಣ ಗುಡಿಗಳೂ ನೈಋತ್ಯದಲ್ಲಿ ದೊಡ್ಡ ಕಲ್ಯಾಣಮಂಟಪವೂ ಇವೆ. ಗರ್ಭಗುಡಿಯಲ್ಲಿ ಸೋಮೇಶ್ವರ ಲಿಂಗವಿದೆ. ಮುಖ್ಯ ದೇವಾಲಯದ ಹೊರಗೋಡೆಗಳು ಶಿಲ್ಪಗಳಿಂದ ಅಲಂಕೃತವಾಗಿವೆ. ಉತ್ತಮವಾದ ಶಿಲ್ಪಾಲಂಕರಣವಿರುವ ಈ ಭಾಗ ಮತ್ತು ಕಲ್ಯಾಣಮಂಟಪದ ಸುಂದರ ಕರಿಯ ಕಲ್ಲಿನ ಕಂಬಗಳು ಬಹುಶಃ 13ನೆಯ ಶತಮಾನದ ಉತ್ತರಾರ್ಧ ಅಥವಾ 14ನೆಯ ಶತಮಾನದ ಆದಿಭಾಗದಲ್ಲಿ ಕಟ್ಟಲ್ಪಟ್ಟಂತಹವು. ಮಹಾದ್ವಾರವೇ ಮೊದಲಾದ ಉಳಿದ ಭಾಗಗಳು ವಿಜಯನಗರ ಅಥವಾ ಅದಕ್ಕೂ ಅನಂತರದ ಕಾಲದವು. ದೇವಾಲಯದ ನವರಂಗ, ಕಲ್ಯಾಣಮಂಟಪ ಮುಂತಾದವುಗಳ ವಿನ್ಯಾಸ ಮತ್ತು ಶಿಲ್ಪಗಳ ಸೌಂದರ್ಯ ಆಕರ್ಷಕವಾಗಿವೆ. ಗುಡಿಯ ಬಳಿಯಲ್ಲಿ ಒಂದು ದೊಡ್ಡ ಕೊಳವಿದೆ.

ಕೋಲಾರದ ಮಕ್ಬರಾ ಇಲ್ಲಿನ ಇಸ್ಲಾಮೀ ಕಟ್ಟಡಗಳಲ್ಲಿ ಮುಖ್ಯವಾದುದು. ಇದು ಒಂದು ಮಂಟಪ. ಇದರಲ್ಲಿ ಹೈದರ್ ಅಲಿಯ 12 ಜನ ಸಂಬಂಧಿಕರ ಗೋರಿಗಳಿವೆ. ಇಲ್ಲಿ ಹೈದರ್ ಅಲಿಯ ತಂದೆ ಫತೆ ಮಹಮ್ಮದ್, ತಾಯಿ ರಜಿಯಾ ಬೇಗಂ ಮತ್ತು ಹಿರಿಯ ಮಲತಾಯಿ ಖೂಲ್ಸಿನ್ ಬೀಬಿ ಇವರ ಗೌರವಾರ್ಥ ವಾರ್ಷಿಕವಾಗಿ ಉರುಸ್ ನಡೆಯುತ್ತದೆ. ಮಕ್ಬರಾದ ಪ್ರಾಂಗಣದಲ್ಲಿ ಒಂದು ದರ್ಗಾ ಮತ್ತು ಮಸೀದಿ ಇವೆ.

*

**ಕೋಲಾರ ಚಿನ್ನದಗಣಿ** (ಪ್ರದೇಶ)**:** ಕೋಲಾರ ಜಿಲ್ಲೆಯ ಬಂಗಾರ ಪೇಟೆ ತಾಲ್ಲೂಕಿನ ದಕ್ಷಿಣದಲ್ಲಿ ಬೇಟರಾಯನ ಬೆಟ್ಟಸಾಲಿನ ಪೂರ್ವಕ್ಕೆ ಇರುವ ಸ್ಥಳ. ಇದೇ ಹೆಸರಿನ ಪಟ್ಟಣ, ಕೆ.ಜಿ.ಎಫ್. (ಕೋಲಾರ ಗೋಲ್ಡ್ ಫೀಲ್ಡ್) ಎಂದೂ ಪ್ರಸಿದ್ಧ. ಬೆಂಗಳೂರಿನಿಂದ ಸು.90ಕಿಮೀ ಪೂರ್ವಕ್ಕಿದೆ. ಚಿನ್ನದ ಗಣಿ ಪ್ರದೇಶಕ್ಕೂ ಬೆಂಗಳೂರು - ಚೆನ್ನೈ ರೈಲು ಮಾರ್ಗದಲ್ಲಿರುವ ಬಂಗಾರಪೇಟೆ ನಿಲ್ದಾಣಕ್ಕೂ ಚಿನ್ನದ ಗಣಿ ರೈಲ್ವೆ ಸಂಪರ್ಕವಿದೆ.

ಕೋಲಾರ ಚಿನ್ನದ ಗಣಿ ನಗರ. ಇಲ್ಲಿ ಆರಂಭವಾದ ಚಿನ್ನದ ಗಣಿ ಕೈಗಾರಿಕೆಯ ಫಲ. ಇದು ಕಾರ್ಮಿಕರ ನಗರ. 1899ರಲ್ಲಿ ಈ ಪ್ರದೇಶದ ಪೌರಾಡಳಿತಕ್ಕಾಗಿ ಒಂದು ಸ್ಯಾನಿಟರಿ ಬೋರ್ಡ್ ಸ್ಥಾಪಿತವಾಯಿತು. 1964ರ ತನಕ ಇದರ ನಗರ ಪ್ರದೇಶಕ್ಕೆ ರಾಬರ್ಟ್‌ಸನ್ ಪೇಟೆ ಮತ್ತು ಆ್ಯಂಡರ್ಸನ್ ಪೇಟೆ, ಸೊಣ್ಣಕೊಪ್ಪ, ನಾಚಕಪಲ್ಲಿ, ಉರಿಗಾಂ ಮುಂತಾದ ಸ್ಥಳಗಳು ಮತ್ತು ಕಾರ್ಮಿಕ ವಸತಿಗಳು ಸೇರಿದ್ದುವು. 1964ರಲ್ಲಿ ರಾಬರ್ಟ್‌ಸನ್ ಪೇಟೆ ಪೌರಸಭೆ ಬೇರೆಯಾಯಿತು. 1991ರ ಜನಗಣತಿಯ ಅನಂತರ ಕೋಲಾರ ಚಿನ್ನದ ಗಣಿ ಸ್ಯಾನಿಟರಿ ಬೋರ್ಡ್ ಮತ್ತು ಬೆಮೆಲ್ ನಗರ ಇವೆರಡನ್ನೂ ರಾಬರ್ಟ್‌ಸನ್ ಪೇಟೆಗೆ ಸೇರ್ಪಡೆ ಮಾಡಲಾಗಿದೆ.

ಕೋಲಾರದ ಚಿನ್ನದ ಗಣಿಗಾರಿಕೆಯ ಪ್ರಾಚೀನ ಇತಿಹಾಸ ನಿಖರವಾಗಿ ಗೊತ್ತಿಲ್ಲ. ಈಗ ನಂದಿದುರ್ಗ ಗಣಿಯ ಭಾಗವಾಗಿರುವ ಕೋರಮಂಡಲ ಗಣಿಯಲ್ಲಿ ಸು. 61 ಮೀ ಆಳದಲ್ಲಿ ನೀರಿನ ಪಾತ್ರೆಗಳೂ ಹಳ್ಳದ ಬದಿಯಲ್ಲಿ ಜನರು ಹೆಜ್ಜೆಯಿಟ್ಟು ಇಳಿದು ಹತ್ತಲು ಅನುವಾಗಿ ಮಾಡಲಾಗಿದ್ದ ಗೂಡುಗಳೂ ಇದ್ದುವು. ಇತಿಹಾಸದ ಉದ್ದಕ್ಕೂ ಇಲ್ಲಿ ಅವ್ಯವಸ್ಥಿತವಾಗಿ ಗಣಿ ಕೆಲಸ ನಡೆಯುತ್ತಿದ್ದಿರಬೇಕು. ಟಿಪ್ಪುಸುಲ್ತಾನ ಇಲ್ಲಿ ಗಣಿಗಾರಿಕೆ ನಡೆಯಿಸಲು ಪ್ರಯತ್ನಿಸಿ ವಿಫಲನಾದನೆಂದು ತಿಳಿದುಬರುತ್ತದೆ. ಸ್ಥಳೀಯರು ಪುರಾತನ ಗಣಿಗಳಿಂದ ಅಷ್ಟಿಷ್ಟು ಚಿನ್ನ ತೆಗೆಯುತ್ತಿದ್ದುದುಂಟು. ಹಿಂದಿನ ಗಣಿಗಾರರು ಸು. 92 ಮೀ ಆಳದವರೆಗೂ ನೆಲವನ್ನು ತೋಡಿ ಚಿನ್ನ ತೆಗೆದಿದ್ದರೆಂದು ಗೊತ್ತಾಗುತ್ತದೆ. ಹಿಂದಿನ ಗಣಿಗಾರಿಕೆಗೆ ಉಕ್ಕಿನ ಉಪಕರಣಗಳಾಗಲಿ, ಸ್ಫೋಟಕಗಳಾಗಲಿ ಇರಲಿಲ್ಲ. ಬಂಡೆಗೆ ಬೆಂಕಿ ಒಟ್ಟಿ ಅದು ಕಾದಾಗ ನೀರು ಸುರಿದು ಬಂಡೆ ಒಡೆಯಿಸಿ ಚಿನ್ನ ತೆಗೆಯುತ್ತಿದ್ದರೆಂದು ಗೊತ್ತಾಗುತ್ತದೆ. ಆದರೆ ಇದು ಅಪಾಯಕಾರಿಯಾಗಿತ್ತು. ಆದ್ದರಿಂದ 1859ರಲ್ಲಿ ಕಾನೂನಿನ ಮೂಲಕ ಇದನ್ನು ನಿಷೇಧಿಸಲಾಗಿತ್ತು.

ಈಗಿನ ಕೋಲಾರ ಚಿನ್ನದ ಗಣಿಯ ಮೂಲಕರ್ತ ನಿಸ್ಸಂದೇಹವಾಗಿ ಮೈಕಲ್ ಎಫ್. ಲಾವೆಲ್. ಈ ಸ್ಥಳದಲ್ಲಿ ಚಿನ್ನ ತೆಗೆಯುವ ಹಕ್ಕನ್ನು ಈತ 1875ರಲ್ಲಿ ಮೈಸೂರು ಸರ್ಕಾರದಿಂದ ಪಡೆದುಕೊಂಡ. ಆದರೆ 1877ರಲ್ಲಿ ಆ ಹಕ್ಕನ್ನು ಮೇಜರ್ ಜನರಲ್ ಡಿಲ ಪಿಯರನಿಗೆ ವಹಿಸಿಕೊಟ್ಟ. 1880ರಲ್ಲಿ ಲಂಡನ್‌ನ ಮೆಸರ್ಸ್ ಜಾನ್ ಟೇಲರ್ ಅಂಡ್ ಸನ್ಸ್ ಈ ಗಣಿ ಪ್ರದೇಶದ ಹಕ್ಕುದಾರರಾದರು. ಈಗಿನ ಛಾಂಪಿಯನ್ ಲೋಡನ್ನು ಕಂಡುಹಿಡಿದವನು ಜಾನ್ ಟೇಲರ್‌ರೊಡನೆ ಕೆಲಸಮಾಡುತ್ತಿದ್ದ ಕ್ಯಾಪ್ಟನ್ ಪ್ಲಾಮಾರ್. 1885ರ ಹೊತ್ತಿಗೆ ಕೋಲಾರ ಚಿನ್ನದ ಗಣಿ ಪ್ರವರ್ಧಮಾನಕ್ಕೆ ಬಂತು.



ಛಾಂಪಿಯನ್ ಈಫ್ಸ್, ಕೋಲಾರ ಚಿನ್ನದ ಗಣಿ

1956ರಲ್ಲಿ ಮೈಸೂರು ಸರ್ಕಾರ ಗಣಿಗಳನ್ನು ವಹಿಸಿಕೊಂಡು ಅವುಗಳನ್ನು ರಾಷ್ಟ್ರೋದ್ಯಮವೆಂದು ತೀರ್ಮಾನಿಸಿ ಮೇಲ್ವಿಚಾರಣೆಗೆ ಕರ್ನಾಟಕ ಗೋಲ್ಡ್ ಮೈನಿಂಗ್ ಅಂಡರ್ ಟ್ರಕಿಂಗ್ (ಕೆ.ಜಿ.ಎಂ.ಯು.) ಸಂಸ್ಥೆಯನ್ನು ಸ್ಥಾಪಿಸಿತು. 1958ರ ನವೆಂಬರ್‌ನಲ್ಲಿ ಗಣಿಗಳನ್ನೆಲ್ಲ ರಾಷ್ಟ್ರೀಕರಣ ಮಾಡಲಾಯಿತು. 1962ರಲ್ಲಿ ಕೇಂದ್ರ ಸರ್ಕಾರ ಕರ್ನಾಟಕ ಸರ್ಕಾರದಿಂದ ಗಣಿಗಳನ್ನು ತನ್ನ ಹತೋಟಿಗೆ ತೆಗೆದುಕೊಂಡು ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರ ವಿಭಾಗಕ್ಕೆ ಸೇರಿಸಿತು. 1971ರ ಏಪ್ರಿಲ್ ಒಂದರಿಂದ 1972ರ ಮಾರ್ಚ್ 31ರ ತನಕ ಗಣಿಗಳಿಂದ ಉತ್ಪನ್ನವಾದ ಚಿನ್ನ 72,226 ಔನ್ಸ್‌ಗಳೆಂದು ತಿಳಿದುಬಂದಿದೆ. 1972ರ ಏಪ್ರಿಲ್ ಒಂದರಂದು ಕೆ.ಜಿ.ಎಂ.ಯು. ಸಂಸ್ಥೆಯನ್ನು ಉತ್ತಮ ಭವಿಷ್ಯದ ದೃಷ್ಟಿಯಿಂದ ಭಾರತ ಗೋಲ್ಡ್ ಮೈನ್ಸ್ ಪ್ರೈವೇಟ್ ಲಿಮಿಟೆಡ್ ಆಗಿ ಮಾರ್ಪಾಟು ಮಾಡಲಾಯಿತು.

ಈ ಗಣಿ ಪ್ರದೇಶದಲ್ಲಿ ಧಾರವಾಡ ಪದರುಶಿಲಾವರ್ಗವನ್ನು ಛೇದಿಸಿರುವ ಬೆಣಚು ಸಿರಗಳಲ್ಲಿ ಅತಿಸೂಕ್ಷ್ಮ ಕಣಗಳ ರೂಪದಲ್ಲಿ ಚಿನ್ನ ದೊರಕುತ್ತಿತ್ತು. ಈ ಶಿಲಾವರ್ಗ ಸು. 80 ಕಿಮೀ ಉದ್ದ ಮತ್ತು 5 ಕಿಮೀ ಅಗಲವಿದ್ದು, ಉತ್ತರ ದಕ್ಷಿಣವಾಗಿ ಹರಡಿದೆ. ಇದರ ಪೂರ್ವಕ್ಕೆ ಪೆಂಟೆ ಶಿಲೆಯೂ ಮಧ್ಯದಲ್ಲಿ ಶಿಸ್ಟ್ ಪದರು ಶಿಲೆಯೂ ಮತ್ತು ಪಶ್ಚಿಮಕ್ಕೆ ಫೆರುಜಿನಸ್ ಕ್ವಾರ್ಟ್ಜೈಟ್ ಶಿಲೆಯೂ ಇವೆ. ಇವುಗಳಲ್ಲಿಯೂ ಚಿನ್ನ ದೊರಕುವುದೆಂದು ಪತ್ತೆಯಾಯಿತು. ಚಿನ್ನವಿರುವ ಹಲವಾರು ಶಿಲೆಯ ಸಿರಗಳಲ್ಲಿ ಛಾಂಪಿಯನ್ ಲೋಡ್ ಸಿರವೇ ಮುಖ್ಯವೆನಿಸಿತ್ತು.

ಕೆ.ಜಿ.ಎಫ್.ನಲ್ಲಿ ಮೈಸೂರು, ಛಾಂಪಿಯನ್ ರೀಫ್, ನಂದಿದುರ್ಗ ಮತ್ತು ಗೋಲ್‌ಕೊಂಡ ಗಣಿಗಳಲ್ಲಿ ಕೆಲಸ ನಡೆಯುತ್ತಿತ್ತು. ಮಿತವ್ಯಯ ಮತ್ತು ದಕ್ಷ ಆಡಳಿತ ದೃಷ್ಟಿಯಿಂದ ಮೈಸೂರು ಮತ್ತು ಛಾಂಪಿಯನ್ ರೀಫ್ ಗಣಿಗಳನ್ನೂ ನಂದಿದುರ್ಗ ಮತ್ತು ಗೋಲ್‌ಕೊಂಡ ಗಣಿಗಳನ್ನೂ ಪ್ರತ್ಯೇಕ ಘಟಕಗಳೆಂದು ಪರಿಗಣಿಸಲಾಯಿತು. ಹಲವು ವರ್ಷ ಕೆಲಸಮಾಡಿದ ಉರಿಗಾಂ ಗಣಿಯನ್ನು ಸಂಪೂರ್ಣವಾಗಿ ಮುಚ್ಚಲಾಯಿತು. ಈ ಗಣಿಗಳಲ್ಲೆಲ್ಲ ಛಾಂಪಿಯನ್ ರೀಫ್‌ನ ಗೀಫರ್ಡ್ ಸುರಂಗ ಪ್ರಪಂಚದಲ್ಲೇ ಆಳವಾದುದೆಂದು ತಿಳಿದುಬಂದಿದೆ. ಇದರ ಆಳ 4268 ಮೀ ಮೈಸೂರು ಗಣಿಯ ಎಡ್ಗರ್ ಸುರಂಗ, ಛಾಂಪಿಯನ್‌ನ ಬುಲನ್ಸ್ ಸುರಂಗ ಮತ್ತು ನಂದಿದುರ್ಗದ ಹೆನ್ರಿ ಸುರಂಗ - ಇವು ಕೆ.ಜಿ.ಎಫ್.ನಲ್ಲಿರುವ ಇನ್ನಿತರ ಸುರಂಗಗಳು. ಸುರಂಗದ್ವಾರ ಅಡ್ಡಕೊಯ್ತದಲ್ಲಿ ವೃತ್ತಾಕಾರವಾಗಿ ಅಡ್ಡಳತೆ 18' ಗಳಿರುತ್ತವೆ. ವಿದ್ಯುಚ್ಛಕ್ತಿಯಿಂದ ಚಲಿಸುವ ಡುರಾಲ್ಯೂಮಿನ್ ಬೋನು ಪ್ರತಿ ಸುರಂಗದ್ವಾರದಲ್ಲಿ ಎರಡು ಇದ್ದು ಜನರನ್ನು ಮತ್ತು ಸಾಮಗ್ರಿಗಳನ್ನು ಗಂಟೆಗೆ 48ಕಿಮೀ ವೇಗದಲ್ಲಿ ಸಾಗಿಸುವ ಸಾಮರ್ಥ್ಯ ಉಳ್ಳವುಗಳಿವು. ಸುರಂಗದ್ವಾರದ ಮಧ್ಯದ ಒಂದೊಂದು ಗೊತ್ತಾದ ಮಟ್ಟದಲ್ಲಿ ಸಮತಲವಾಗಿ ಸುರಂಗಗಳನ್ನು ತೋಡಿ ಅಲ್ಲಿಂದ ಮೇಲಿರುವಂತೆ ಷಾಫ್ಟನ್ನು ಸ್ಥಾಪಿಸಿ ಲಂಬವಾಗಿ ಸುರಂಗಗಳನ್ನು ತೋಡಲಾಗಿತ್ತು. ಸ್ಥೂಲಾಕಾರದ ಉಕ್ಕಿನ ಉಂಗುರಗಳನ್ನು

ಸುರಂಗಗಳಿಗೆ ಆಧಾರಸ್ತಂಭವಾಗಿ 8ಸೆಂಮೀಗಳ ಅಂತರದಲ್ಲಿ ನಿರಂತರವಾಗಿ ಜೋಡಿಸಲಾಗಿತ್ತು. ಭೂಕುಸಿತದ ತೊಂದರೆಯನ್ನು ತಪ್ಪಿಸಲು ಈ ಕಾರ್ಯವನ್ನು ಕೈಗೊಳ್ಳಲಾಗಿತ್ತು.

ಗಣಿ ತೋಡಿದಾಗ ಬರುವ ಭೂಜಲವನ್ನು ಆ ಮಟ್ಟದಲ್ಲಿ ಪಾಳುಬಿದ್ದ ಸುರಂಗಗಳಲ್ಲಿ ಕಟ್ಟೆಗಳನ್ನು ಕಟ್ಟಿ ವಿವಿಧ ಗಾತ್ರದ ಪೈಪ್‌ಗಳ ಮೂಲಕ ಹಾಯಿಸಿ ತುಂಬುವ ವ್ಯವಸ್ಥೆಯಿತ್ತು. ತಳದಿಂದ ಮೇಲಕ್ಕೆ ಇಂಥ ಹಲವಾರು ಕಟ್ಟೆಗಳನ್ನು ಕಟ್ಟಿ ಪೈಪ್‌ಗಳ ಮೂಲಕ ಒಂದಕ್ಕೊಂದು ಸಂಬಂಧ ಏರ್ಪಡಿಸಿ ಭೂಜಲವನ್ನು ಮೇಲಕ್ಕೆ ಸಾಗಿಸಲಾಗುತ್ತಿತ್ತು. ಈ ಭೂಜಲವನ್ನು ಕಂಡಿ ಕೊರೆಯುವುದಕ್ಕೂ ಅದುರನ್ನು ತೊಳೆಯುವುದಕ್ಕೂ ಇನ್ನಿತರ ಉದ್ದೇಶಗಳಿಗೂ ಉಪಯೋಗಿಸಲಾಗುತ್ತಿತ್ತು.

ಸುರಂಗಗಳ ತಳದಲ್ಲಿ ಕಂಡುಬರುವ ಅಧಿಕ ಉಷ್ಣಾಂಶವನ್ನು ಮೇಲಿನ ಶೈತ್ಯಮಾಪಕ ಯಂತ್ರಗಳಿಂದ ತಯಾರಿಸಿದ ತಂಪಾದ ಗಾಳಿಯನ್ನು ಬಿಟ್ಟು ಉಪಶಮನ ಮಾಡುವ ವ್ಯವಸ್ಥೆಯುಂಟು. ಛಾಂಪಿಯನ್‌ನ ಗೀಫರ್ಡ್ ಷಾಫ್ಟ್‌ನಲ್ಲಿ ದಾಖಲೆ ಆಗಿರುವ ಉಷ್ಣಾಂಶ 56.6 ಸೆಂಟಿಗ್ರೇಡ್. ಆಕಸ್ಮಿಕವಾಗಿ ಸಂಭವಿಸುವ ಬೆಂಕಿಯ ಅನಾಹುತದಿಂದ ಜನರನ್ನು ಪಾರುಮಾಡಲು ಸಂಕುಚಿತ ವಾಯುವಿಗೆ ನೀಲಗಿರಿ ತೈಲವನ್ನು ಬೆರಸಿ ಸುರಂಗದ ಎಲ್ಲ ಕಡೆಗೂ ವ್ಯಾಪಿಸುವಂತೆ ಪಂಪ್ ಮಾಡುವ ವ್ಯವಸ್ಥೆಯಿತ್ತು. ತೈಲದ ವಾಸನೆ ಬಂದೊಡನೆ ಜಾಗರೂಕರಾದ ಜನರು ನಿರ್ದಿಷ್ಟ ಬೋನುಗಳ ನಿಲ್ದಾಣಕ್ಕೆ ಬಂದುಬಿಡಬಹುದಿತ್ತು. ಇತ್ತೀಚೆಗೆ ನಾಲ್ಕೂ ಗಣಿಗಳಲ್ಲಿಯೂ ಬೆಂಕಿವಲಯಗಳನ್ನು ಏರ್ಪಡಿಸಲಾಗಿತ್ತು. ಒಂದು ವಲಯದಿಂದ ಇನ್ನೊಂದಕ್ಕೆ ಬೆಂಕಿ ಹರಡದಂತೆ ಉಕ್ಕಿನ ಬಾಗಿಲುಗಳನ್ನು ಜೋಡಿಸಲಾಯಿತು. ಸಣ್ಣ ಭೂಕಂಪಗಳಂತೆ ಒತ್ತಡದ ವ್ಯತ್ಯಾಸದಿಂದ ಸಂಭವಿಸುವ ಶಿಲೆಸಿಡಿತ ಬಹಳ ಅಪಾಯಕರವಾದುದು. ಇದು ಪ್ರಾಣಹಾನಿ ಉಂಟುಮಾಡುವುದಲ್ಲದೆ ಮೇಲಿನ ಕಟ್ಟಡಗಳಿಗೆ ನಷ್ಟವನ್ನುಂಟು ಮಾಡುವಂಥದು. ಇಲ್ಲಿಯ ಸೀಸ್‌ಮಾಲಜಿ ಭೂಕಂಪನ ಪ್ರಯೋಗ ಶಾಲೆ ಈ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನು ನಡೆಸಿದೆ.

ಇಲ್ಲಿಗೆ 135ಕಿಮೀ ದೂರವಿರುವ ಶಿವಸಮುದ್ರ ವಿದ್ಯುತ್ ಕೇಂದ್ರದಿಂದ ಗಣಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿದೆ. ಅನೇಕ ವರ್ಷಗಳ ಕಾಲ ಈ ಚಿನ್ನದ ಗಣಿ ಉದ್ಯಮವನ್ನು ಕೊನೆಗೊಳಿಸಲಾಗಿತ್ತು. ನಷ್ಟದಲ್ಲಿ ನಡೆಯುವಂತಾದುದು ಈ ಗಣಿ ಉದ್ಯಮದ ಸ್ಥಗಿತತೆಗೆ ಮುಖ್ಯ ಕಾರಣವಾಗಿತ್ತು. ಇದರ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಮತ್ತು ಖಾಸಗಿ ಮಟ್ಟದಲ್ಲಿ ಪ್ರಯತ್ನಗಳು ನಡೆಯುತ್ತಿದ್ದು ಈಗ ಫಲಪ್ರದವಾಗಿದೆ. ಮತ್ತೆ ಗಣಿಗಾರಿಕೆ ಸದ್ಯದಲ್ಲಿಯೇ ಆರಂಭವಾಗಲಿದೆ.

ಕೋಲಾರ ಚಿನ್ನದ ಗಣಿ ನಗರದಲ್ಲಿ ಸರ್ಕಾರದ ಒಡೆತನದಲ್ಲಿ ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್ ಎಂಬ ಸಂಸ್ಥೆಯೊಂದು ಸ್ಥಾಪಿತವಾಗಿದೆ. ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ರಕ್ಷಣೋತ್ಪಾದನ ಇಲಾಖೆಯ ಆಡಳಿತ ನಿಯಂತ್ರಣಕ್ಕೊಳಪಟ್ಟಿರುವ ಈ ಸಂಸ್ಥೆ ಮಣ್ಣನ್ನು ಅಗೆದು ತಳ್ಳುವ, ಸಾಗಿಸುವ, ಹರಗುವ ಬೃಹತ್ ಯಂತ್ರಗಳ ತಯಾರಿಕೆಯಲ್ಲಿ ತೊಡಗಿದೆ. (ಎಂ.ಎನ್.ಕೆ.)

ಕೋಲಾರದ ಚಿನ್ನದ ಗಣಿಭೂವಿಜ್ಞಾನದ ಪ್ರಕಾರ ಈ ಗಣಿಗಳು ಧಾರವಾಡದ ಶ್ರೇಣಿಯ ಹಾರನ್‌ಬ್ಲೆಂಡ್ ಶಿಸ್ಟಿನಲ್ಲಿ ಸ್ಥಾಪಿತವಾಗಿದೆ. ಈ ಶ್ರೇಣಿಯಲ್ಲಿ ಬೆಣಚುಕಲ್ಲಿನ ಶೈಲಭಿತ್ತಿಗಳು ರೀಫ್ಸ್) ಕುಡಿಗಳೋಪಾದಿಯಲ್ಲಿ ಚಿಗುರಿ ಹರಡಿವೆ. ಖನಿಜ ರಚನೆ ಉತ್ತರ–ದಕ್ಷಿಣ ಮುಖವಾಗಿ ಹಬ್ಬಿ ಪಶ್ಚಿಮದ ಕಡೆಗೆ ಕೆಳಗಿಳಿಯುತ್ತದೆ. ಶಿಸ್ಟಿನ ವಲಯದ ಉದ್ದ 81 ಕಿಮೀ. ಇದರ ಅಗಲ ತುಂಬ ಅಗಲವಾಗಿರುವ ಕಡೆಯಲ್ಲಿ 7 ಕಿಮೀಗಳಷ್ಟಿದ್ದು ಕೆಲವು ಕಡೆಗಳಲ್ಲಿ 1 ಕಿಮೀಯಷ್ಟು ಕಿರಿದಾಗುತ್ತದೆ. ಈ ರಚನೆಯ ಪಶ್ಚಿಮದ ಅಂಚಿಗೆ ಪಟ್ಟೆಗಟ್ಟಿರುವ ಅಯಸ್ಸಂಯುಕ್ತ ಮತ್ತು ಜಾಸ್ಪರ್ ಜಾತಿಯ ಬೆಣಚುಕಲ್ಲಿನ ಶಿಲೆಗಳಿವೆ. ಬೆಣಚುಕಲ್ಲಿನ ಶಿಲೆಗಳಲ್ಲಿ (ಇವನ್ನು ಖನಿಜಪ್ರರೋಹಗಳೆಂದು ಕರೆಯುತ್ತಾರೆ) ಚಿನ್ನ ಹೆಚ್ಚು ಕಡಿಮೆ ಅಗಲವುಳ್ಳ ಅಸಮ ಫಲಕಗಳು ರೂಪದಲ್ಲಿವೆ.

ಪೂರ್ವಿಕರು ಈ ಪ್ರದೇಶದಲ್ಲಿ ಚಿನ್ನವನ್ನು ಪಡೆಯುವ ಕೆಲಸದಲ್ಲಿ ತೊಡಗಿದ್ದರು. 400 ವರ್ಷಗಳಷ್ಟು ಹಿಂದಿನಿಂದಲೂ ಇಂಥ ಕೆಲಸ ನಡೆಯುತ್ತಿದ್ದ ಕುರುಹುಗಳು ಈ ಪ್ರದೇಶದಲ್ಲಿ ಗೋಚರಿಸುತ್ತವೆ. ಇಲ್ಲಿನ ಗಣಿಗಳಲ್ಲಿ ಕೆಲವು 2,000 ವರ್ಷಗಳಷ್ಟು ಹಿಂದಿನವೆಂದು ಭಾವಿಸಲಾಗಿದೆ. ಮಣ್ಣಿನ ಮಡಿಕೆಗಳೂ ನೆಲದ ತಳದಲ್ಲಿ ಚಿನ್ನವನ್ನು ಕರಗಿಸುವುದಕ್ಕೆ ಬಳಸುತ್ತಿದ್ದ ಸೌದೆ ಮುಂತಾದವೂ ಹಿಂದಿನ ಕಾಲದ ಜನರು ನೆಲವನ್ನು 200'ಗಳಷ್ಟು ಆಳಕ್ಕೆ ಅಗೆದು ತೋಡಿರುವ ಜಾಗಗಳಲ್ಲಿ ಸಿಕ್ಕಿವೆ. ಇತ್ತೀಚಿನ ಗಣಿ ಕೆಲಸ ಇಲ್ಲಿ ಪ್ರಾರಂಭವಾದದ್ದು 1880ರಲ್ಲಿ ಈಗ ಮೂರು ಗಣಿಗಳಲ್ಲಿ ಮಾತ್ರ ಚಿನ್ನದದುರಿನ ಉತ್ಪನ್ನ ನಡೆಯುತ್ತಿದೆ. ಅವುಗಳ ಹೆಸರು ಮೈಸೂರು, ಛಾಂಪಿಯನ್ ಮತ್ತು ನಂದಿದುರ್ಗ. ಈಗಿನ ಗಣಿಯ ಆಡಳಿತಕ್ಕೆ ಕೋಲಾರ್ ಗೋಲ್ಡ್ ಮೈನಿಂಗ್ ಅಂಡರ್‌ಟೇಕಿಂಗ್ಸ್ ಎಂದು ಹೆಸರು. ಇದು ಭಾರತ ಸರ್ಕಾರದ ಹಣಕಾಸಿನ ಸಚಿವಾಲಯದ ಆರ್ಥಿಕ ಆಶ್ರಯದಲ್ಲಿ ನಡೆಯುತ್ತಿದೆ. ಪ್ರಪಂಚದ ಅಳತೆಯಿಂದ ನೋಡಿದರೆ ಕೋಲಾರದ ಚಿನ್ನದ ಗಣಿಯ ಪ್ರದೇಶದಲ್ಲಿ ದೊರೆಯುವ ಚಿನ್ನ ಅಲ್ಪಪರಿಮಾಣದ್ದು. ಆದರೆ ಬೇರೆ ಅನೇಕ ಕಾರಣಗಳಿಂದ ಇದಕ್ಕೆ ಪ್ರಾಧಾನ್ಯ ದೊರೆತಿದೆಯಲ್ಲದೆ ಖ್ಯಾತಿಯೂ ಬಂದಿದೆ. ಈ ದೊಡ್ಡ ಉಪಖಂಡದಲ್ಲಿ ಒಂದೊಂದರಲ್ಲೇ ಚಿನ್ನ ನಿರಂತರವಾಗಿ ದೊರೆಯುತ್ತಿರುವುದು. ಇದರಷ್ಟು ಆಳಕ್ಕೆ ಪ್ರಪಂಚದಲ್ಲಿ ಮತ್ತಾವ ಗಣಿಯೂ ಇಳಿದಿಲ್ಲ; ನೆಲಮಟ್ಟದಿಂದ ಇದು 10,500'ಗಳಷ್ಟು ಕೆಳಕ್ಕೆ ಹೋಗಿದೆ. ವಾಯುನಿಯಂತ್ರಣ ಮತ್ತು ರಾಟೆಯ ಯಂತ್ರಗಳು ಮುಂತಾದ ಅತ್ಯಾಧುನಿಕ ಗಣಿ ಕೆಲಸದ ಕೆಲ ಪದ್ಧತಿಗಳನ್ನು ಇದು ಬೆಳೆಸಿಕೊಂಡಿದೆ. 1964ರ ಅಂತ್ಯದವರೆಗೆ ಇಲ್ಲಿ ಅಗೆದು ತೆಗೆದ ಒಟ್ಟು ಚಿನ್ನದ ಮೊತ್ತ 23.5 ದಶಲಕ್ಷ ಔನ್ಸ್‌ಗಳು; ಇದರ ಬೆಲೆ 250 ಕೋಟಿ ರೂಪಾಯಿಗಳು. ಗಣಿಗಳು ಆಳವಾಗಿರುವುದರಿಂದಲೂ ನೆಲದ ಒತ್ತಡ ಬಹಳ ಹೆಚ್ಚಾಗಿರುವುದರಿಂದಲೂ ಪದೇ ಪದೇ ಸಂಭವಿಸುವ ಬಂಡೆಗಳ ಸಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು ಅವುಗಳ ದುಷ್ಪರಿಣಾಮಗಳನ್ನು ಮಿತಗೊಳಿಸಲು ಕೆಳನೆಲದ ಗಣಿ ಕೆಲಸಗಳಿಗೆ ಈಡುಗಳನ್ನು ಕಟ್ಟುವ ಒಂದು ಸುವ್ಯವಸ್ಥೆಯನ್ನು ಗಣಿಗಳು ಏರ್ಪಡಿಸಿಕೊಂಡಿವೆ. ಇಲ್ಲಿ ನಡೆಸಿರುವ ಸಿಡಿತಗಳು ಶೋಧನೆ ಪ್ರಪಂಚದ ಎಲ್ಲ ಭಾಗಗಳಲ್ಲೂ ಇರುವ ಗಣ್ಯ ಗಣಿ ಎಂಜಿನಿಯರುಗಳ ಗಮನವನ್ನು ಸೆಳೆದಿವೆ. ಈ ಶತಮಾನದ ಮಧ್ಯಕಾಲದವರೆಗೂ ಉತ್ಪಾದಕ ಗಣಿಗಳ ಕೆಲಸದ ಅಧಿಕ ಭಾಗ ಛಾಂಪಿಯನ್ ಸಿರವೆಂಬ ಹೆಸರಿನ ಒಂದು ಪ್ರಧಾನವಾದ ಸಿರದ ಜಾಡನ್ನು ತೋಡಿ ಚಿನ್ನ ತೆಗೆಯುವುದರಲ್ಲಿ ನಿರತವಾಗಿತ್ತು. ಈ ಸಿರದ ಅದುರಿನ ನಾಲೆಯ ನಿಕ್ಷೇಪಗಳು ಕಡಿಮೆಯಾಗುತ್ತ ಬರಲು ಮೇಲು ಮೈಯಲ್ಲಿ ಹಳಬರು ತೋಡಿರುವ ಜಾಡುಗಳನ್ನು ಗಮನಿಸಿ ಚಿನ್ನವಿರಬಹುದಾದ ಎಡೆಗಳನ್ನು ಹುಡುಕಿ ಗಣಿಯ ಸ್ವಾಮ್ಯದ ನೆಲದ ಉತ್ತರ ಮತ್ತು ಪಶ್ಚಿಮದ ಕಡೆಗಳಲ್ಲಿ ಓರಿಯಂಟಲ್ ಸಿರ ಎಂಬ ಮತ್ತೊಂದು ಲಾಭಕರವಾದ ಸಿರದ ನಾಲೆಯಿರುವುದನ್ನು ಕಂಡುಹಿಡಿಯಲಾಯಿತು. ಸದ್ಯದಲ್ಲಿ ಈ ಓರಿಯಂಟಲ್ ಸಿರವನ್ನೇ ಬಹುವಿಸ್ತಾರವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ; ಮತ್ತು ಅದುರನ್ನು ಕೊಡುವ ನಿಕ್ಷೇಪವಾಗಿದೆ.

ಆಳದ ಗಣಿಕೆಲಸ : ನೆಲವನ್ನು ತುಂಬ ಆಳವಾಗಿ ತೋಡಿದಾಗ ಅಲ್ಲಿ ವಾತಾವರಣ ಸ್ಪರ್ಶವೇ ಇಲ್ಲದ ಬಂಡೆಗಳ ಸುತ್ತ $150^{\circ}$ ಫ್ಯಾ. ಉಷ್ಣತೆ ಇದ್ದುದು ಕಂಡು ಬಂದಿತು. ಅದರ ಪರಿಣಾಮವಾಗಿ ಅಲ್ಲಿ ಕೆಲಸಮಾಡಲು ಸಹಜವಾಗಿಯೇ ಬಲು ಕಷ್ಟವೆನಿಸಿತು. ಇದಕ್ಕಾಗಿ ಅಮೋನಿಯ ಕೂಲರ್ ನಮೂನೆಯ ವಾಯು ಸಂಸ್ಕರಣ (ಏರ್‌ಕಂಡಿಷನಿಂಗ್) ಯಂತ್ರಗಳನ್ನು ಮೇಲು ನೆಲದಲ್ಲಿ ಸ್ಥಾಪಿಸಿ ಸುತ್ತಣ ಗಾಳಿಯನ್ನು $40^{\circ}$ ಫ್ಯಾ.ಗೆ ಇಳಿಸಿ ಅದನ್ನು ಗಣಿಯ ತೋಡು ದಾರಿಗಳ ಮೂಲಕ ಕೆಳಕ್ಕೆ ಒತ್ತಿ ತನ್ಮೂಲಕ ಗಣಿಯೊಳಗಿನ ಗಾಳಿಯ ಉಷ್ಣತೆಗಳನ್ನು ತಡೆದುಕೊಳ್ಳುವಷ್ಟು ಮಟ್ಟಕ್ಕೆ ತರಲಾಯಿತು. ಕೆಲಸಮಾಡುವ ಜಾಗಗಳಿಗೆ ಬಿಡುವುದಕ್ಕೆ ಮುಂಚೆ ಗಾಳಿಯನ್ನು ಇನ್ನೂ ತಂಪಿಸುವುದಕ್ಕಾಗಿ ಒಂದು ಗಣಿಯಲ್ಲಿ ಫ್ರಿಯಾನ್ ಎಂಬುದನ್ನು ಉಷ್ಣತಾಶಾಮಕ ಮಾಧ್ಯಮವಾಗಿ ಬಳಸಿಕೊಂಡು ಎರಡನೆಯ ದರ್ಜೆಯ ಮತ್ತೊಂದು ತಂಪಿಸುವ ಯಂತ್ರವನ್ನು ನೆಲದ ಮಟ್ಟಕ್ಕೆ 8,000'ಗಳಷ್ಟು ಆಳಕ್ಕೆ ಇಳಿಸಲಾಯಿತು. ಇಷ್ಟು ಏರ್ಪಾಡುಗಳನ್ನು ಮಾಡಿದರೂ ಕೂಡ ಕೆಲವು ಕೆಲಸದ ಜಾಗಗಳಲ್ಲಿ ಪರಿಸರದ ಪರಿಸ್ಥಿತಿಗಳು ಬಹಳ ತೀವ್ರವಾಗಿರುವುದು ಕಂಡುಬಂದಿತು. ಶುಷ್ಕ ಮತ್ತು ಆರ್ದ್ರ ಬಲ್ಬ್ ಉಷ್ಣತೆಗಳನ್ನು (ಡ್ರೈ ಅಂಡ್ ವೆಟ್ ಬಲ್ಬ್ ಟೆಂಪರೇಚರ್ಸ್) ಪರಿಣಾಮಕಾರಿಯಾಗಿ ಕೆಳಕ್ಕಿಳಿಸಲು ಸಣ್ಣ ಜಾಗಗಳನ್ನು ತಂಪಿಸುವ ಪ್ರತ್ಯೇಕ ಯಂತ್ರಗಳನ್ನು ಸ್ಥಾಪಿಸಬೇಕಾದ ಘಟ್ಟವನ್ನು ಈಗ ನಾವು ಮುಟ್ಟಿದ್ದೇವೆ.

ಆಳದ ಗಣಿ ಕೆಲಸ ತೋಡಿದ ಪ್ರದೇಶಕ್ಕೆ ಊರೆಕಟ್ಟುವ ಸಮಸ್ಯೆಯನ್ನು ಸಹ ತಂದೊಡ್ಡಿದೆ. ಆಳವಿಲ್ಲದೆ ಹಿಂದಿನ ಗಣಿಗಳಿಂದ ಪ್ರಾರಂಭಿಸಿ ಇಂದಿನ ಹೇರಾಳದ ಗಣಿ ಕೆಲಸದ ಪರಿಸ್ಥಿತಿಯವರೆಗೆ ಬಗೆಬಗೆಯಾದ ಊರೆಕಟ್ಟುವ ವಿಧಾನಗಳು ವಿಕಾಸಹೊಂದಿವೆ. ಮೊದಲು ಊರೆಗಳೇ ಇರಲಿಲ್ಲ. ಬಳಿಕ ಅಲ್ಲಲ್ಲಿ ಮರದ ದಿಮ್ಮಿಗಳನ್ನು ಊರೆಗೋಲಾಗಿ ನೆಡುತ್ತಿದ್ದರು. ಬಳಿಕ ಕ್ರಿಬ್‌ಸೆಟ್ಟುಗಳಿಂದ ಹಿಡಿದು, ಕ್ರಿಬ್‌ಸೆಟ್ಟುಗಳಿಗೆ ಶುಷ್ಕ ಕಲ್ಲುಚೂರುಗಳಿಂದ ತುಂಬಿರುವ ಅರೆಗಟ್ಟ ಊರೆಗಳೇ ಇರಲಿಲ್ಲ. ಬಳಿಕ ಅಲ್ಲಲ್ಲಿ ಮರದ ದಿಮ್ಮಿಗಳನ್ನು ಊರೆಗೋಲಾಗಿ ನೆಡುತ್ತಿದ್ದರು. ಬಳಿಕ ಕ್ರಿಬ್‌ಸೆಟ್ಟುಗಳಿಂದ ಹಿಡಿದು ಕ್ರಿಬ್‌ಸೆಟ್ಟುಗಳಿಗೆ ಶುಷ್ಕ ಕಲ್ಲುಚೂರುಗಳಿಂದ ತುಂಬಿರುವ ಅರೆಗಟ್ಟ ಊರೆಗಳು ಮತ್ತು ಪಿಗ್‌ಸ್ಟೈಗಳು, ಕೊನೆಗೆ ಸಂಪೂರ್ಣವಾಗಿ ಬೆಣಚುಕಲ್ಲು ಕಟ್ಟಡದ ಗೋಡೆಗಳು – ಈ ರೀತಿಯಲ್ಲಿ ನಡೆದಿದೆ ಊರೆಗಳ ವಿಕಾಸ. ಈಚಿನ ವರ್ಷಗಳಲ್ಲಿ ಅರೆಯುವಾಗ ತೆಗೆದುಹಾಕಿದ ಕಳಸೆಯ ದೂಳನ್ನು ಅಂಟು ತೆಗೆದು ನೀರು ಬೆರೆಸಿ ಮರಳು ತುಂಬುವ ವಿಧಾನವೊಂದನ್ನು ಅಷ್ಟು ಆಳವಿಲ್ಲದ ಗಣಿಕೆಲಸದ ಕಡೆಗಳಲ್ಲಿ ಜಯಪ್ರದವಾಗಿ ಬಳಸಲಾಗಿದೆ. ಮರದ ದಿಮ್ಮಿಯ ಕ್ರಿಬ್‌ಸೆಟ್ಟುಗಳನ್ನೂ 90 ಪೌಂಡುಗಳ ಅಂಡಾಕಾರದ ರೈಲ್ ಕಮಾನುಗಳನ್ನೂ ಅದಿರು ಮತ್ತು ಇತರ ಸಾಮಾನುಗಳನ್ನು ಮೇಲಕ್ಕೆಳೆದು ಇಳಿಸುವುದಕ್ಕೂ ಪ್ರಯಾಣದ ಹಾದಿಗಳಿಗೂ ಉಪಯೋಗಿಸಲಾಗಿದೆ.

ಈ ಉದ್ಯಮಕ್ಕೆ ಬೇಕಾದ ಜಲವಿದ್ಯುಚ್ಛಕ್ತಿ ಕಾವೇರಿ ನದಿಯ ಮೇಲಿರುವ ಶಿವಸಮುದ್ರದಿಂದ 145 ಕಿಮೀಗಳನ್ನು ಹಾಯ್ದುಬರುತ್ತದೆ. ಈ ಶಕ್ತಿ ಉತ್ಪಾದಕ ಯಂತ್ರಾಗಾರವನ್ನು ಕೋಲಾರದ ಗಣಿಯ ಉದ್ಯಮಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿಯೇ ಸ್ಥಾಪಿಸಲಾಯಿತು. ಭಾರತದಲ್ಲಿ ಮೊದಮೊದಲು ಸ್ಥಾಪಿತವಾದ ಯಂತ್ರಾಗಾರಗಳ ಪೈಕಿ ಇದೊಂದು. ಪಾಲಾರ್ ನದಿಗೆ 12 ಕಿಮೀ ದೂರದಲ್ಲಿರುವ ಬೇತಮಂಗಲದಲ್ಲಿನ ಕಟ್ಟೆಯಿಂದ ಈ ಉದ್ಯಮಕ್ಷೇತ್ರಕ್ಕೆ ಶುದ್ಧ ನೀರನ್ನು ಒದಗಿಸಲಾಗಿದೆ. ಕಂಪೆನಿಗಳು ಸುಸಜ್ಜಿತವಾದ ಆಸ್ಪತ್ರೆಯನ್ನು ನಡೆಸುತ್ತಿವೆ. ಇದರಲ್ಲಿ 250 ಹಾಸಿಗೆಗಳಿದ್ದು ಎಲ್ಲ ನಮೂನೆಯ ವೈದ್ಯ ಸೌಕರ್ಯಗಳನ್ನೂ ಏರ್ಪಡಿಸಿದೆ. ಇದಕ್ಕಾಗಿ ಸಾಕಷ್ಟು ಸಿಬ್ಬಂದಿಯೂ ಉಂಟು. ಸ್ಥಳೀಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಈ ಊರಿನಲ್ಲಿ ಅನೇಕ ಶಾಲೆಗಳೂ ಕಾಲೇಜುಗಳೂ ಪಾಲಿಟೆಕ್ನಿಕ್ಕುಗಳೂ ಇವೆ. ಜೀವನದ ಇತರ ಸೌಕರ್ಯಗಳನ್ನೂ ಅವಶ್ಯಕತೆಗಳನ್ನೂ ಗಣಿಪ್ರದೇಶದಲ್ಲಿ ಒದಗಿಸಲಾಗಿದೆ. (ಎಂ.ಎಸ್‌ಯು.)

**ಕೋಲಿಕ್ ಆಮ್ಲ :** ಪಿತ್ತರಸದಲ್ಲಿ ಟಾರೀನ್ ಮತ್ತು ಗ್ಲೈಸಿನ್‌ಗಳೊಡನೆ ಸಂಯೋಜಿತವಾಗಿ ಲವಣ ರೂಪದಲ್ಲಿರುವ, ಸ್ಟೆರಾಯ್ಡ್‌ಗಳ ಗುಂಪಿಗೆ ಸೇರಿದ ಒಂದು ಮುಖ್ಯ ಆಮ್ಲ.

ಟಾರೋ ಕೋಲಿಕ್ ಆಮ್ಲ ಮತ್ತು ಗ್ಲೈಕೋ ಕೋಲಿಕ್ ಆಮ್ಲ ಲವಣಗಳು ಎಣ್ಣೆ, ಕೊಬ್ಬುಗಳನ್ನು ಸಣ್ಣ ಕಣಗಳಾಗಿ ಒಡೆದು ನೀರಿನಲ್ಲಿ ವಿರಳವಾಗಿ ಹರಡುವಂತೆ ಮಾಡುವುದರಿಂದ ಎನ್‌ಜೈಮುಗಳ ವರ್ತನೆಗೆ ಅನುಕೂಲವಾಗಿ ಜೀರ್ಣಕಾರ್ಯ ಸುಲಭವಾಗುತ್ತದೆ. ಪ್ರಾಣಿಗಳ




ಕೋಲಿಕ್ ಆಮ್ಲ

ಪಿತ್ತರಸದಿಂದ ಕೋಲಿಕ್ ಆಮ್ಲವನ್ನು ಮುಕ್ತಸ್ಥಿತಿಯಲ್ಲಿ ತಯಾರಿಸಬಹುದು. ಕೆಲವು ಔಷಧಿಗಳಲ್ಲಿ ಇದರ ಉಪಯೋಗ ಉಂಟು. ಹಲವಾರು ಔಷಧೀಯ ರಾಸಾಯನಿಕಗಳ ತಯಾರಿಕೆಯಲ್ಲಿ ಮಧ್ಯವರ್ತಿಯಾಗಿ ಇದನ್ನು ಬಳಸುತ್ತಾರೆ. (ಕೆ.ಟಿ.ಎಸ್.)

**ಕೋಲಿಯಸ್ :** ಇದೊಂದು ಸುಪ್ರಸಿದ್ಧ ಅಲಂಕಾರ ಎಲೆಸಸ್ಯ. ಹಚ್ಚನೆ ಹಸಿರಾಗಿರುವ ಎಲೆಗಳ ಮೇಲೆ ಬಿಳಿ, ನೀಲಿ, ಕೆಂಪು ಮುಂತಾದ ಹಲವು ಬಣ್ಣದ ಚುಕ್ಕೆಗಳಿರುವುದರಿಂದ ಈ ಸಸ್ಯ ಬಲು ಸುಂದರವಾಗಿ ಕಾಣುತ್ತದೆ. ಜೊತೆಗೆ ಎಲೆಯ ಅಂಚು ತಳಿಗಳಿಗೆ ಅನುಸಾರವಾಗಿ ವಿವಿಧ ಆಕಾರಗಳಲ್ಲಿ ಸೊಗಸಾಗಿ ಭಾಗವಾಗಿರುವುದರಿಂದ ಇದರ ಅಂದ ದ್ವಿಗುಣಗೊಂಡಿದೆ. ಇದನ್ನು ಕುಂಡಸಸ್ಯ, ಅಂಚುಸಸ್ಯ, ಕಲ್ಲೇರಿ ಸಸ್ಯ ಮುಂತಾಗಿ ಹಲವು ರೀತಿಗಳಲ್ಲಿ ಬೆಳೆಸುತ್ತಾರೆ. ಗ್ರೀಕ್ ಭಾಷೆಯಲ್ಲಿ ಕೋಲಿಯಸ್ ಎಂದರೆ ಪೊರೆ ಎಂದು ಅರ್ಥ. ಈ ಸಸ್ಯದ ಕೇಸರಗಳಿಗೆ ಪೊರೆ ಇರುವುದರಿಂದ ಈ ಹೆಸರು ಬಂದಿದೆ.

ಕೋಲಿಯಸ್ ಲೇಬಿಯೇಟೀ ಕುಟುಂಬಕ್ಕೆ ಸೇರಿದೆ. ಇದರಲ್ಲಿ 90ಕ್ಕೂ ಹೆಚ್ಚು ಬಹುವಾರ್ಷಿಕ ಪ್ರಭೇದಗಳಿವೆ. ಕೆಲವನ್ನು ಏಕವಾರ್ಷಿಕ ಗಿಡಗಳಾಗಿ ಬೆಳೆಸುವುದುಂಟು. ಬಹುಪಾಲು ಪ್ರಭೇದಗಳು 4' ಎತ್ತರ ಮೀರಿ ಬೆಳೆಯುವುದಿಲ್ಲ. ಕಾಂಡ ನಾಲ್ಕು ಮೂಲೆಗಳುಳ್ಳದ್ದು, ಎಲೆಗಳು ಸರಳ ಮಾದರಿಯವು. ಅವುಗಳ ಜೋಡಣೆ ಅಭಿಮುಖ ರೀತಿಯದು. ಅವಕ್ಕೆ ತೊಟ್ಟಿರಬಹುದು. ಅಂಚು ಗರಗಸದಂತೆ ಇಲ್ಲವೆ ಹಲ್ಲುಗಳಂತೆ ಇದೆ. ಹೂಗೊಂಚಲು ಮಧ್ಯಾರಂಭಿ ಮಾದರಿಯದು; ರೆಂಬೆಗಳ ತುದಿಯಲ್ಲಿ ಇಲ್ಲವೆ ಎಲೆಗಳ ಕಂಕುಳಲ್ಲಿ ಹುಟ್ಟುತ್ತದೆ. ಹೂಗಳು ದ್ವಿಲಿಂಗಿಗಳು. ಒಂದೊಂದು ಹೂವಿನಲ್ಲೂ 5 ಪುಷ್ಪಪತ್ರಗಳು, 5 ದಳಗಳು, 4 ಕೇಸರಗಳು, ಉಚ್ಚಸ್ಥಾನದ ಅಂಡಾಶಯ ಇವೆ. ಕಳಗಳ ಕೂಡುವಿಕೆಯಿಂದ ಉಂಟಾಗುವ ದಳ ಸಮೂಹ ಎರಡು ತುಟಿಗಳಾಗಿ ಭಾಗವಾಗಿದೆ.

ಉದ್ಯಾನ ಪ್ರಾಮುಖ್ಯ ಪಡೆದಿರುವ ಹಲವಾರು ಕೋಲಿಯಸ್ ಪ್ರಭೇದಗಳಲ್ಲಿ ಬಹಳ ಮುಖ್ಯವಾದವು ಕೋ.ಬ್ಲೂಮಿಯೈ. ಕೋ.ತೈರ್ಸಾಯ್ಡಿಯಸ್, ಕೋ.ಶಿರನ್ಸಿಸ್ ಎಂಬುವು. ಕೋ.ಬ್ಲೂಮಿಯೈ ಎಂಬುದು ಬಹುಶಃ ಕೋ.ಲ್ಯಾಸಿನಿಯೇಟಸ್, ಕೋ.ಬೈಕಲರ್ ಮತ್ತು ಇತರ ಬಗೆಗಳಿಂದ ಪಡೆಯಲಾದ ಅಡ್ಡತಳಿ ಇರಬೇಕೆಂದು ಅಭಿಪ್ರಾಯ ಪಡಲಾಗಿದೆ. ಹಳದಿ, ಮಾಸಲು ಹಾಗೂ ಕಡುಗೆಂಪು ಬಣ್ಣಗಳ ಮಿಶ್ರಣವನ್ನು ಪ್ರದರ್ಶಿಸುವ ಎಲೆಗಳಿಂದಾಗಿ ಈ ಪ್ರಭೇದ ಬಲು ಆಕರ್ಷಕವೆನಿಸಿದೆ.

ಕೋಲಿಯಸ್ ಸಸ್ಯವನ್ನು ಬೀಜ ಮತ್ತು ಕಾಂಡದ ತುಂಡುಗಳಿಂದ ವೃದ್ಧಿ

ಮಾಡುತ್ತಾರೆ. ಬೀಜಗಳಿಂದ ವೃದ್ಧಿ ಮಾಡುವುದು ಹೆಚ್ಚು ಸಮಯ ಹಿಡಿಯುತ್ತದೆ. ಕಾಂಡ ತುಂಡುಗಳಿಂದ ಬೆಳೆಸುವುದೇ ಸುಲಭವಾದ ಮತ್ತು ವಾಡಿಕೆಯಲ್ಲಿರುವ ಕ್ರಮ. ಕಾಂಡ ತುಂಡುಗಳನ್ನು ಮರಳು ನೆಲದಲ್ಲಿ ನಾಟಿಮಾಡಿದಾಗ ಯಶಸ್ವಿಯಾಗಿ ಬೇರು ಬಿಡುತ್ತವೆ. ಗಿಡಗಳು ಚಿಕ್ಕವಾಗಿರುವಾಗ ನೆರಳು ಅಗತ್ಯ. ಹತ್ತು ದಿನಗಳಿಗೊಮ್ಮೆ ಕುದುರೆ ಗೊಬ್ಬರ ಹಾಕಬೇಕು. ಹೂಗೊಂಚಲುಗಳು ಹುಟ್ಟಿದಂತೆ ಅವನ್ನು ಕಿತ್ತು ಹಾಕುತ್ತಿರಬೇಕು. ಇದರಿಂದ ಎಲೆಗಳು ದೊಡ್ಡವಾಗಿ ಗಿಡದ ಅಂದ ಹೆಚ್ಚುತ್ತದೆ. (ಬಿ.ಎ.ಪಿ.)

**ಕೋಲಿಯಾಪ್ಟರ :** ಜೀರುಂಡೆ ಮತ್ತು ಸೊಂಡಿಲು ಕೀಟಗಳನ್ನೊಳಗೊಂಡ ಒಂದು ಗಣ. ಸುಮಾರು 2,50,000ಕ್ಕೂ ಹೆಚ್ಚು ಪ್ರಭೇದಗಳನ್ನೊಳಗೊಂಡ ಇದು ಕೀಟವರ್ಗದ ಇನ್ನಾವುದೇ ಗಣಕ್ಕಿಂತ ದೊಡ್ಡದು. ಅಷ್ಟು ಮಾತ್ರವಲ್ಲ ಪ್ರಾಣಿಸಾಮ್ರಾಜ್ಯದಲ್ಲೇ ಇದು ಅತ್ಯಂತ ದೊಡ್ಡದು. ಈ ತನಕ ವಿವರಿಸಲಾಗಿರುವ ಕೀಟಗಳ ಒಟ್ಟು ಸಂಖ್ಯೆಯ ಶೇ.40ರಷ್ಟು ಇದಕ್ಕೆ ಸೇರಿವೆ. ಇವುಗಳ ಸಂಖ್ಯೆ ಎಷ್ಟು ಅಗಾಧವೊ ಇವುಗಳ ವ್ಯಾಪ್ತಿಯೂ ಅಷ್ಟೇ ವಿಸ್ತಾರ. ಪ್ರಪಂಚದ ಯಾವ ಮೂಲೆಯಲ್ಲಾದರೂ ಈ ಕೀಟಗಳನ್ನು ಕಾಣಬಹುದು. ಸಮುದ್ರವೊಂದನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳಲ್ಲೂ ಇವುಗಳ ವ್ಯಾಪ್ತಿಯಿದೆ. ಬಹುಪಾಲು ಪ್ರಭೇದಗಳು ನೆಲವಾಸಿಗಳು. ಕೆಲವು ಬಗೆಗಳು $50^\circ$ ಸೆಂ. ಉಷ್ಣತೆ ಇರುವ ಬಿಸಿ ನೀರಿನ ಚಿಲುಮೆಗಳಲ್ಲೂ ವಾಸಿಸುತ್ತವೆ. ಹಲವು ರೀತಿಯವು ಬೇರೆ ಬಗೆಯ ಕೀಟಗಳ ಗೂಡುಗಳಲ್ಲಿ ಅತಿಥಿಗಳಾಗಿ ಜೀವಿಸಿದರೆ ಇನ್ನು ಕೆಲವು ಬೇರೆ ಬೇರೆ ಕೀಟಗಳ ಇಲ್ಲವೆ ಸ್ತನಿಗಳ ದೇಹದೊಳಗೊ ಚರ್ಮದ ಮೇಲೊ ಪರಾವಲಂಬಿ ಜೀವನ ನಡೆಸುತ್ತವೆ. ಬಹುಪಾಲು ಬಗೆಗಳು ದವಸಧಾನ್ಯಗಳ ಮತ್ತು ದಿನಬಳಕೆಯ ವಸ್ತುಗಳ ಪಿಡುಗುಗಳೆಂದು ಹೆಸರಾಗಿವೆ.

**ದೇಹರಚನೆ:** ಕೋಲಿಯಾಪ್ಟರ ಗಣದ ಕೀಟಗಳ ಸ್ವಭಾವ ಮತ್ತು ಇವು ವಾಸಿಸುವ ನೆಲೆಯನ್ನವಲಂಬಿಸಿ ದೇಹರಚನೆ ವ್ಯತ್ಯಾಸವಾಗುತ್ತದೆ. ಗಾತ್ರದಲ್ಲಿ ಅತಿದೊಡ್ಡವೂ ಅತಿಚಿಕ್ಕವೂ ಇವೆ. ಡೈನಾಸ್ಟಸ್ ಹರ್ಕ್ಯೂಲಿಸ್ (ಖಡ್ಗಮೃಗ ಜೀರುಂಡೆ) ಎಂಬುದು 7" ಉದ್ದವಿದೆ. ಇನ್ನು ಕೆಲವು ಬರಿಗಣ್ಣಿಗೆ ಕಾಣದಿರುವಷ್ಟು ಚಿಕ್ಕವಾಗಿವೆ. ಪ್ರೌಢಕೀಟಗಳ ದೇಹವನ್ನು ತಲೆ, ಎದೆ ಮತ್ತು ಉದರ ಎಂಬ ಮೂರು ಭಾಗಗಳಾಗಿ ವಿಂಗಡಿಸಬಹುದು. ಎದೆಭಾಗದಲ್ಲಿ ಮೂರು ಖಂಡಗಳಿವೆ. ಇವುಗಳಲ್ಲಿ ಹಿಂದಿನವೆರಡು ಉದರಭಾಗಕ್ಕೆ ಅಂಟಿಕೊಂಡಿವೆ. ಮುಂದಿನ ಖಂಡ (ಪ್ರೋತೋರ್‍ಯಾಕ್ಸ್) ಮಾತ್ರ ಬೇರೆಯಾಗಿದ್ದು ಪ್ರೋನೋಟಮ್ ಎಂಬ ಫಲಕದಿಂದ ಆವೃತವಾಗಿದೆ. ದೇಹವನ್ನೆಲ್ಲ ಆವರಿಸಿರುವ ಕೊಂಬಿನ ಕವಚ (ಎಕ್ಸೊಸ್ಕೆಲಿಟನ್) ಗಡುಸಾಗಿರಬಹುದು. ಇಲ್ಲವೆ ಮೃದುವಾದುದಾಗಿಯೂ ಸುಲಭವಾಗಿ ಬಾಗುವಂಥದೂ ಆಗಿರಬಹುದು. ಕುಡಿಮೀಸೆಗಳು (ಆಂಟೆನೆ) ತಲಾ ಹನ್ನೊಂದು ಖಂಡಗಳಿಂದ ಕೂಡಿವೆ. ದವಡೆಗಳು ತ್ರಿಕೋಣಾಕಾರದವು. ಆಹಾರವನ್ನು ಕಡಿಯಲು ಇಲ್ಲವೆ ಮೆಲುಕು ಹಾಕಲು ಇವು ಅನುಕೂಲವಾಗಿವೆ. ಕೆಲವು ಜಾತಿಯ ಕೀಟಗಳ ದವಡೆಗಳು ಬಲುದೊಡ್ಡವಾಗಿದ್ದು ದೇಹದಷ್ಟೇ ಉದ್ದವಿರುವುವಾದರೂ ಇನ್ನು ಕೆಲವು ಬಗೆಗಳಲ್ಲಿ ಬಲು ಚಿಕ್ಕವಾಗಿರುತ್ತವೆ. ಸ್ಪರ್ಶಾಂಗಗಳು (ಪ್ಯಾಲ್ಪಿ) ಸಾಮಾನ್ಯವಾಗಿ ಚಿಕ್ಕ ಗಾತ್ರದವು. ಆಹಾರವನ್ನು ಹಿಡಿಯಲು, ಸ್ಪರ್ಶಿಸಲು ಮಾತ್ರ ಉಪಯೋಗವಾಗುತ್ತವೆ.

ಕಣ್ಣುಗಳು ಸಂಯುಕ್ತ ಮಾದರಿಯವು. ಅಪರೂಪವಾಗಿ ಸರಳ ನೇತ್ರಗಳೂ ಇರುತ್ತವೆ. ಪ್ರೋನೋಟಮ್ ಫಲಕ ಕೆಲವೊಮ್ಮೆ ಹಲವಾರು ಬಗೆಯ ಮುಳ್ಳು, ಕುಳಿ, ತೋಡು ಮುಂತಾದವುಗಳಿಂದ ಅಲಂಕೃತವಾಗಿರುತ್ತದೆ. ಪ್ರೋತೋರ್‍ಯಾಕ್ಸಿನ ತಳಭಾಗದಿಂದ ಮುಂದಿನ ಜೊತೆ ಕಾಲುಗಳು ಹುಟ್ಟುತ್ತವೆ. ಎದೆಯ ಮಧ್ಯದ ಖಂಡದಿಂದ (ಮೀಸೊತೋರ್‍ಯಾಕ್ಸ್) ಎಲಿಟ್ರ ಎಂಬ ಮೇಲಿನ ರೆಕ್ಕೆಗಳು ಮತ್ತು ಎರಡನೆಯ ಜೊತೆ ಕಾಲುಗಳು ಹುಟ್ಟುತ್ತವೆ. ಎದೆಯ ಹಿಂಬದಿಯ ಖಂಡದಿಂದ (ಮೆಟತೋರ್‍ಯಾಕ್ಸ್) ಕೆಳಗಿನ ಜೊತೆರೆಕ್ಕೆಗಳೂ ಮೂರನೆಯ ಜೊತೆ ಕಾಲುಗಳೂ ಉದ್ಭವಿಸುತ್ತವೆ. ಕೆಳಗಿನ ಜೊತೆ ರೆಕ್ಕೆಗಳು ತೆಳುವಾಗಿಯೂ ಪಾರಕವಾಗಿಯೂ ಇದ್ದು ಇವು ಮಾತ್ರ ಹಾರುವಿಕೆಯಲ್ಲಿ ಬಳಕೆಯಾಗುತ್ತವೆ. ಎಲಿಟ್ರಗಳು ಬಹಳ ಗಡುಸು. ಕೀಟ ಹಾರದಿದ್ದಾಗ ಕೆಳಗಿನ ಜೊತೆ ರೆಕ್ಕೆಗಳನ್ನು ಇವು ಆವರಿಸಿಕೊಂಡು ಅವನ್ನು ರಕ್ಷಿಸುತ್ತವೆ. ಎಲಿಟ್ರಗಳಿರುವುದು ಕೋಲಿಯಾಪ್ಟರ ಗಣದ ಪ್ರಮುಖ ಹಾಗೂ ವಿಶೇಷ ಲಕ್ಷಣ. ಆದರೆ ಇದಕ್ಕೂ ಅಪವಾದಗಳಿಲ್ಲದೇ ಇಲ್ಲ. ಕೆಲವು ಬಗೆಯ ಜೀರುಂಡೆಗಳಲ್ಲಿ ಎಲಿಟ್ರಗಳಿಲ್ಲ. ಇನ್ನು ಕೆಲವು ಜಾತಿಗಳಲ್ಲಿ ರೆಕ್ಕೆಗಳೇ ಇಲ್ಲ. ಕಾಲುಗಳು ಓಡಲು, ಈಜಲು, ನೆಗೆಯಲು, ನೆಲವನ್ನು ತೋಡಲು ಮತ್ತು ಆಸರೆಗಳನ್ನೊ ಆಹಾರವನ್ನೊ ತಬ್ಬಿ ಹಿಡಿಯಲು ಹೀಗೆ ಅನೇಕ ಬಗೆಯ ಕಾರ್ಯಗಳಿಗೆ ಅನುಕೂಲವಾಗುವಂತೆ ಹೊಂದಾಣಿಕೆ ತೋರುತ್ತವೆ. ಉದರಭಾಗದಲ್ಲಿ 10 ಖಂಡಗಳಿವೆ. ಸಾಮಾನ್ಯವಾಗಿ 5–8 ಖಂಡಗಳಷ್ಟೆ ಚೆನ್ನಾಗಿ ರೂಪುಗೊಂಡಿವೆ. ಉಳಿದವು ಬರಿಯ ಮೋಟುಗಳಂತೆ ಕಾಣುತ್ತವೆ. ಪ್ರತಿಯೊಂದು ಖಂಡದಲ್ಲೂ ಒಂದು ಜೊತೆ ಸ್ಪೈರಕಲ್ಲುಗಳಿವೆ. ಇವೇ ಉಸಿರಾಟದ ಅಂಗವ್ಯವಸ್ಥೆಯ ಬಾಹ್ಯ ರಂಧ್ರಗಳು. ಜನನಾಂಗಗಳು ದೇಹದ ಹಿಂತುದಿಯಲ್ಲಿ ಅನುಬಂಧಗಳಂತೆ ಕಾಣುತ್ತವೆ. ಗಂಡಿನ ಜನನಾಂಗದಲ್ಲಿ ಶಿಶ್ನ ಮತ್ತು ಟಗ್ಮೆನ್ ಎಂಬ ಎರಡು ಭಾಗಗಳಿವೆ. ಹೆಣ್ಣಿನ ಜನನಾಂಗದಲ್ಲಿ ಪ್ಯಾರಪ್ರಾಕ್ಟ್ಸ್, ಪ್ರಾಕ್ಟಿಜರ್, ಪಾಲ್ಪಿಫರ್, ಕಾಕ್ಸೈಟ್ ಮತ್ತು ಸ್ಟೈಲೈ ಎಂಬ 5 ಭಾಗಗಳಿವೆ.

**ದೇಹದ ಒಳರಚನೆ:** ಆಹಾರಕ್ರಮವನ್ನು ಅನುಸರಿಸಿ ಆಹಾರನಾಳದ ಉದ್ದ ವ್ಯತ್ಯಾಸವಾಗುತ್ತದೆ. ಇದನ್ನು ಸ್ಟೋಮೋಡಿಯಂ, ಮೀಸೆಂಟರಾನ್ ಅಥವಾ ಜಠರ, ಮತ್ತು ಪ್ರೋಕ್ಟೋಡಿಯಮ್ ಅಥವಾ ಕರುಳು ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಸ್ಟೋಮೋಡಿಯಮಿನಲ್ಲಿ ಬಾಯಿ ಗಂಟಲ ಕುಹರ ಅನ್ನನಾಳವೂ ಇವೆ. ಇದಕ್ಕೆ ಮುಂದೆ ಪ್ರೊವೆಂಟ್ರಿಕ್ಯುಲಸ್ ಎಂಬ ಭಾಗವಿದೆ. ಆಹಾರವನ್ನು ಅರೆಯಲು ಅನುಕೂಲವಾಗುವಂಥ ಹಲ್ಲುಗಳು ಇದರ ಭಿತ್ತಿಯ ಮೇಲೆ ಜೋಡಣೆಗೊಂಡಿವೆ. ಜಠರ ಭಾಗದಲ್ಲಿ ಒಂದು ತುದಿಮುಚ್ಚಿದ ಹಲವಾರು ಕೊಳವೆಗಳು (ಸೀಕೆ) ಅಂಟಿಕೊಂಡಿವೆ. ಪ್ರೋಕ್ಟೋಡಿಯಮ್ ಭಾಗ ಹಲವಾರು ಮಾಲ್ಪೀಘಿಯನ್ ಕೊಳವೆಗಳನ್ನೂ ಗುದನಾಳವನ್ನೂ ಒಳಗೊಂಡಿದೆ. ಆಹಾರವನ್ನು ಜೀರ್ಣಿಸಲು ನೆರವಾಗುವಂಥ ಅನೇಕ ಬಗೆಯ ಗ್ರಂಥಿಗಳೂ ರಚನೆಗಳೂ ಆಹಾರನಾಳದೊಂದಿಗೆ ಸೇರಿಕೊಂಡಿವೆ.

**ಉಸಿರಾಟ:** ಬೇರೆ ಕೀಟಗಳಲ್ಲಿರುವಂತೆ ಜೀರುಂಡೆಗಳಲ್ಲೂ ಉಸಿರಾಟ ದೇಹದಾದ್ಯಂತ ಹರಡಿರುವ ಶ್ವಾಸನಾಳ ವ್ಯವಸ್ಥೆಯ ನೆರವಿನಿಂದ ನಡೆಯುತ್ತದೆ. ಸ್ಪೈರಕಲ್ಲುಗಳೆಂಬ ಬಾಹ್ಯರಂಧ್ರಗಳ ಮುಚ್ಚುವಿಕೆ ತೆರೆಯುವಿಕೆಗಳಿಂದ ದೇಹದಿಂದ ಹೊರಕ್ಕೆ ಮತ್ತು ದೇಹದೊಳಕ್ಕೆ ಗಾಳಿಯ ವಿನಿಮಯ ನಡೆಯುತ್ತದೆ. ಅತ್ಯಂತ ಚಟುವಟಿಕೆಯನ್ನು ಪ್ರದರ್ಶಿಸುವ ಕೆಲವು ಬಗೆಯ ಜೀರುಂಡೆಗಳಲ್ಲಿ ದೇಹದೊಳಗೆ ಅಲ್ಲಲ್ಲಿ ಗಾಳಿಚೀಲಗಳೂ ಇದ್ದು ಇವು ಗಾಳಿಯ ಸಂಗ್ರಹಣೆಯಲ್ಲಿ ನೆರವಾಗುತ್ತವೆ. ಜಲವಾಸಿ ಜೀರುಂಡೆಗಳಲ್ಲೂ ಅನೇಕ ಬಗೆಯ ಆನುಷಂಗಿಕ ರಚನೆಗಳನ್ನು ಕಾಣಬಹುದು. ಇವುಗಳ ಸಹಾಯದಿಂದ ಕೀಟಗಳು ನೀರಿನೊಳಗೆ ಮುಳುಗಿದ್ದರೂ ಉಸಿರಾಡಬಹುದು. ಸ್ಪೈರಕಲ್ಲುಗಳ ಚಲನೆ ರಕ್ತದಲ್ಲಿಯ ಲ್ಯಾಕ್ಟಿಕ್ ಆಮ್ಲದ ಮೊತ್ತದಿಂದ ಪ್ರಭಾವಿತವಾಗಿದೆಯೆಂದು ಕಂಡುಬಂದಿದೆ. ಆಮ್ಲಜನಕದ ಮಟ್ಟ ಇಳಿದಾಗ ಲ್ಯಾಕ್ಟಿಕ್ ಆಮ್ಲದ ಮಟ್ಟ ಹೆಚ್ಚಾಗಿ ಉದರಭಾಗದ ನರಗ್ರಂಥಿಗಳಲ್ಲಿರುವ ಕೆಲವು ನರಕೇಂದ್ರಗಳು ಪ್ರಚೋದಿತವಾಗುತ್ತವೆ. ಇವು ಸ್ಪೈರಕಲ್ಲುಗಳ ಮೇಲೆ ಪ್ರಭಾವ ಬೀರಿ ಅವು ತೆರೆಯುವಂತೆ ಮಾಡುತ್ತವೆ. ಆಗ ಗಾಳಿಯಲ್ಲಿಯ ಆಮ್ಲಜನಕ ಸುಲಭವಾಗಿ ಒಳಹೋಗುತ್ತದೆ. ಲ್ಯಾಂಪೈರಿಡೀ, ಇಲ್ಯಾಟೆರಿಡೀ ಮತ್ತು ಫೆಂಗೋಡಿಡೀ ಕುಟುಂಬಗಳ ಜೀರುಂಡೆಗಳಲ್ಲಿ ಬೆಳಕನ್ನು ಉತ್ಪಾದಿಸುವ ಅಂಗಗಳಿವೆ. ಈ ಅಂಗಗಳಿಗೂ ಉಸಿರಾಟದ ವ್ಯವಸ್ಥೆಗೂ ನಿಕಟಸಂಬಂಧವಿದೆ. ಮಿಣುಕುಹುಳಗಳಿಂದ ಉತ್ಪತ್ತಿಯಾಗುವ ಬೆಳಕು ಈ ಅಂಗಗಳ ಚಟುವಟಿಕೆಯಿಂದ ಉಂಟಾಗುವ ಕ್ರಿಯಾವಿಶೇಷ.

**ರಕ್ತ ಪರಿಚಲನೆ:** ಚೆನ್ನಾಗಿ ರೂಪುಗೊಂಡ ರಕ್ತಪರಿಚಲನಾ ವ್ಯವಸ್ಥೆಯನ್ನು ಜೀರುಂಡೆಗಳಲ್ಲಿ ಕಾಣಬಹುದು. ದೇಹದ ವಿವಿಧ ಅಂಗಾಂಶಗಳಿಗೆ ಆಹಾರವನ್ನು ಸಾಗಿಸುವುದೇ ಇದರ ಮುಖ್ಯ ಕಾರ್ಯ. ಉಳಿದೆಲ್ಲ ಸಂಧಿಪದಿಗಳಲ್ಲಿರುವಂತೆ ಜೀರುಂಡೆಗಳಲ್ಲೂ ಇದೊಂದು ತೆರೆದ ವ್ಯವಸ್ಥೆ; ಅಂದರೆ ರಕ್ತ ರಕ್ತನಾಳಗಳಲ್ಲಿ ಮಾತ್ರವೆ ಪ್ರವಹಿಸದೆ ವಿವಿಧ ಬಗೆಯ ಪೊಳ್ಳು ಇಲ್ಲವೆ ತೆರಪುಗಳಲ್ಲೂ ಸಾಗುತ್ತದೆ. ರಕ್ತಪರಿಚಲನಾವ್ಯವಸ್ಥೆಗೆ ಕೇಂದ್ರವಾಗಿ ಹೃದಯವೊಂದಿದೆ. ಇದರ ನಿಯಮಿತ ತುಡಿತದಿಂದ ಒತ್ತಲ್ಪಟ್ಟ ರಕ್ತ ಒಂದು ದೊಡ್ಡ ಕೊಳವೆಯ ಮೂಲಕ ಮಿದುಳಿನ ಭಾಗದೆಡೆಗೆ ಹರಿಯುತ್ತದೆ. ಅಲ್ಲಿಂದ ದೇಹದ ಉಳಿದೆಲ್ಲ ಭಾಗಕ್ಕೂ ರಕ್ತದ ಪೂರೈಕೆಯಾಗುತ್ತದೆ. ರಕ್ತದಲ್ಲಿ ಹೀಮೊಸೈಟ್‌ಗಳೆಂಬ ಜೀವಕೋಶಗಳನ್ನೊಳಗೊಂಡ ದುಗ್ಧರಸವೂ ಹಳದಿ ಇಲ್ಲವೆ ಹಸಿರು ಅಥವಾ ಕೆಂಪುಬಣ್ಣದ ವರ್ಣಕಗಳೂ ಇವೆ.

ಕೋಲಿಯಾಪ್ಟರದ ಕೀಟಗಳ ನರವ್ಯೂಹ ದೇಹದ ತಳಭಾಗದಲ್ಲಿಯ ಹಲವಾರು ನರಗ್ರಂಥಿಗಳಿಂದ ಕೂಡಿದೆ. ಇವುಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ನರಸಂಬಂಧಗಳೂ ಇವೆ.

ಜೀರುಂಡೆಗಳಲ್ಲಿ ಲಿಂಗಭೇದವನ್ನು ಕಾಣಬಹುದು. ಗಂಡಿನ ಜನನಾಂಗದ ಪ್ರಮುಖ ಭಾಗಗಳು–ಒಂದು ಜೊತೆ ವೃಷಣಗಳು, ಒಂದು ಜೊತೆ ಪಾರ್ಶ್ವ ಕೊಳವೆಗಳು, ಒಂದು ವೀರ್ಯಕೋಶ ಮತ್ತು ವೀರ್ಯವನ್ನು ಹೊರಚೆಲ್ಲುವ ಒಂದು ಕಾಲುವೆ. ಹೆಣ್ಣಿನಲ್ಲಿ ಒಂದು ಜೊತೆ ಅಂಡಾಶಯಗಳು, ಇವುಗಳಿಂದ ಹೊರಡುವ ಒಂದೊಂದು ಅಂಡನಾಳ ಇವೆರಡೂ ಕೂಡಿ ಉಂಟಾಗಿರುವ ಸಾಮಾನ್ಯ ಕೊಳವೆ ಮತ್ತು ಯೋನಿ. ಎಲ್ಲ ಜೀರುಂಡೆಗಳಲ್ಲೂ ಸಂಪೂರ್ಣ ಬಗೆಯ ರೂಪಪರಿವರ್ತನೆಯನ್ನು ಕಾಣಬಹುದು. ಮೊಟ್ಟೆಗಳನ್ನು ಗುಂಪುಗಳಲ್ಲಿಯೊ ಒಂಟೊಂಟಿಯಾಗಿಯೊ ಮರೆಯಾದ ಸ್ಥಳಗಳಲ್ಲಿ ಇಡುತ್ತವೆ. ಕೆಲವು ದಿನಗಳಿಂದ ಹಿಡಿದು ಕೆಲವು ತಿಂಗಳುಗಳ ಅನಂತರ ಮೊಟ್ಟೆಯೊಡೆದು ಡಿಂಬಗಳು ಹೊರಬರುತ್ತವೆ. ಡಿಂಬಗಳು ಪ್ರೌಢಕೀಟಗಳಂತೆಯೇ ಸಸ್ಯಾಹಾರಿಗಳಾಗಬಹುದು ಇಲ್ಲವೆ ಮಾಂಸಾಹಾರಿಗಳಾಗಿರಬಹುದು. ಕೆಲವು ಬಗೆಯವು ಪರಾವಲಂಬಿ ಜೀವನ ನಡೆಸುತ್ತವೆ. ನಿರ್ದಿಷ್ಟವಾದ ತಲೆ, 3 ಖಂಡಗಳುಳ್ಳ ಎದೆ ಮತ್ತು 9 ಭಾಗಗಳುಳ್ಳ ಉದರ ಭಾಗಗಳನ್ನು ಇವುಗಳ ದೇಹದಲ್ಲಿ ಗುರುತಿಸಬಹುದು. ರೆಕ್ಕೆಗಳಿಲ್ಲ. ಈ ಹಂತದಲ್ಲಿ ಡಿಂಬದ ಬೆಳೆವಣಿಗೆಯ ಗತಿ ತೀವ್ರವಾಗಿದ್ದು ಅದು ಗಾತ್ರದಲ್ಲೂ ತೂಕದಲ್ಲೂ ಹಲವಾರು ಪಟ್ಟು ಹೆಚ್ಚುತ್ತದೆ. ಗಾತ್ರ ಬೆಳೆದಂತೆ ಮೈಮೇಲಿನ ಚರ್ಮವನ್ನು ಆಗಿಂದಾಗ್ಗೆ ಕಳಚಿ ಹೊಸ ಚರ್ಮವನ್ನು ಬೆಳಸಿಕೊಳ್ಳುವುದುಂಟು. ಈ ಪೊರೆಕಳಚುವಕ್ರಿಯೆ ಸಾಮಾನ್ಯವಾಗಿ ಮೂರು ಬಾರಿಯಾಗುವುದಾದರೂ ಕೆಲವು ಬಗೆಗಳಲ್ಲಿ 10–15 ಬಾರಿ ನಡೆಯುವುದೂ ಉಂಟು. ತನ್ನ ಗಾತ್ರದ ಗರಿಷ್ಠ ಮಿತಿಯನ್ನು ತಲಪಿದ ಮೇಲೆ ಡಿಂಬ ಕೋಶಾವಸ್ಥೆಯನ್ನು ಸೇರುತ್ತದೆ. ಈ ಹಂತವನ್ನು ಸೇರುವ ಮುನ್ನ ತನ್ನ ಚಟುವಟಿಕೆಗಳನ್ನು ಸ್ಥಗಿತಗೊಳ್ಳುವುದಲ್ಲದೆ ಕೊಂಚ ಉಬ್ಬಿಕೊಳ್ಳುತ್ತದೆ. ಕೋಶಾವಸ್ಥೆಯಲ್ಲಿ ಜನನಾಂಗಗಳ ರೂಪುಗೊಳ್ಳುವಿಕೆ, ಕುಡಿಮೀಸೆ ಹಾಗೂ ಸಂಯುಕ್ತಾಕ್ಷುಗಳು ಮೂಡುವುದು ಮುಂತಾದ ಮುಖ್ಯ ಬದಲಾವಣೆಗಳು ನಡೆಯುತ್ತವೆ. ಈ ಬದಲಾವಣೆಗಳಿಗೆ ಬೇಕಾಗುವ ಅವಧಿ ಕೆಲವು ಗಂಟೆಗಳಿಂದ ಹಿಡಿದು ಹಲವಾರು ದಿವಸಗಳು. ಕ್ರಮೇಣ ಕೋಶಾವಸ್ಥೆ ಕೊನೆಗೊಂಡು ಪ್ರೌಢಕೀಟ ಹೊರಬರುತ್ತದೆ. ಬಲುಪಾಲು ಜೀರುಂಡೆಗಳಲ್ಲಿ ಮೇಲೆ ವಿವರಿಸಿದ ರೂಪ ಪರಿವರ್ತನೆ ನಡೆಯುವುದಾದರೂ ಕೆಲವು ಬಗೆಗಳಲ್ಲಿ ತಾಯಿ ಕೀಟದಿಂದ ನೇರವಾಗಿ ಸಣ್ಣ ಮರಿಯೇ ಹೊರಬರಬಹುದು. ಇನ್ನೂ ಕೆಲವು ಬಗೆಗಳಲ್ಲಿ ಡಿಂಬವೇ ಲೈಂಗಿಕ ಪ್ರಬುದ್ಧತೆಯನ್ನು ಪಡೆದು ಮೊಟ್ಟೆಯಿಡಬಹುದು (ಉದಾ: ಮೈಕ್ರೊಮ್ಯಾಲ್ಥಸ್). ಡೈಟಿಸ್ಕಿಡೀ ಮತ್ತು ಬ್ರೂಕಿಡೀ ಕುಟುಂಬದ ಜೀರುಂಡೆಗಳಲ್ಲಿ ಡಿಂಬಾವಸ್ಥೆಗೂ ಪ್ರೌಢಾವಸ್ಥೆಗೂ ನಡುವೆ ಹಲವಾರು ಮಧ್ಯವರ್ತಿ ಹಂತಗಳಿರುತ್ತವೆ.

ಕೋಲಿಯಾಪ್ಟರ ಗಣವನ್ನು ಸ್ಟ್ರೆಪ್ಸಿಪ್ಟರ (ಅರ್ಕೋಸ್ಟಮ್ಯಾಟ), ಏಡಿಫ್ಯಾಗ ಮತ್ತು ಪಾಲಿಫ್ಯಾಗ ಎಂಬ ಮೂರು ಉಪಗಣಗಳಾಗಿ ವಿಂಗಡಿಸಲಾಗಿದೆ. ಮೊದಲ ಉಪಗಣದಲ್ಲಿ ಕ್ಯೂಪಿನಾಯ್ಡಿಯ, ಕ್ಯಾರಬೀಯಾಯ್ಡಿಯ ಮತ್ತು ಗೈರಿನಾಯ್ಡಿಯ ಎಂಬ ಅಧಿ ಕುಟುಂಬಗಳೂ ಪಾಲಿಫ್ಯಾಗ ಉಪಗಣದಲ್ಲಿ ಲೈಮೆಕ್ಸಿಲಾನಾಯ್ಡಿಯ ಎಂಬ ಅಧಿಕುಟುಂಬಗಳೂ ಪಾಲಿಫ್ಯಾಗ ಉಪಗಣದಲ್ಲಿ ಲೈಮೆಕ್ಸಿಲಾನಾಯ್ಡಿಯ, ಹೈಡ್ರೊಫಿಲಾಯ್ಡಿಯ, ಸ್ಟಾಫಿಲಿನಾಯ್ಡಿಯ, ಕ್ಯಾಂತರಾಯ್ಡಿಯ, ಕ್ಲೀರಾಯ್ಡಿಯ, ಇಲ್ಯಾಟರಾಯ್ಡಿಯ, ಡ್ಯಾಸ್ಕಿಲಾಯ್ಡಿಯ, ಬಿರಾಯ್ಡಿಯ, ಡ್ರಯೋಪಾಯ್ಡಿಯ, ಕ್ಯುಕ್ಯುಜಾಯ್ಡಿಯ, ಮೆಲಾಯ್ಡಿಯ, ಟೆನಿಬ್ರಯಾನಾಯ್ಡಿಯ, ಬಾಸ್ಟ್ರಿಕಾಯ್ಡಿಯ, ಸ್ಕ್ಯಾರಬಿಯಾಯ್ಡಿಯ, ಸೆರ್‍ಯಾಮ್‌ಬೈಕಾಯ್ಡಿಯ, ಕ್ರೈಸೊಮೆಲಾಯ್ಡಿಯ ಮತ್ತು ಕರ್ಕ್ಯೂಲಿಯೊನಾಯ್ಡಿಯ ಎಂಬ ಅಧಿಕುಟುಂಬಗಳಿವೆ.

**ಆರ್ಥಿಕ ಪ್ರಮುಖ್ಯ:** ಜೀರುಂಡೆಗಳಲ್ಲಿ ಮರಿಗಳೂ ಪ್ರೌಢ ಕೀಟಗಳೂ ಉಪದ್ರವಕಾರಿಗಳು, ಉದಾಹರಣೆಗೆ ತಂತಿಹುಳು, ಫ್ಲೀಬೀಟ್ಸ್, ಕಾಲರಾಡೊ ಆಲೂಗೆಡ್ಡೆ ಹುಳು, ಜಪಾನೀಸ್ ಜೀರುಂಡೆ, ಕಾಕ್‌ಷೇಫರ್ ಜೀರುಂಡೆಗಳು; ಕುಟ್ಟೆಹುಳುಗಳು ಇತ್ಯಾದಿ. ಆದರೆ ಉಪಕಾರಿಗಳೂ ಇಲ್ಲದಿಲ್ಲ. ಉದಾಹರಣೆಗೆ ಗುಲಗಂಜಿ ಹುಳುಗಳು, ಕ್ಯಾರಾಬಿಡಿ. ಆಸ್ಟ್ರೇಲಿಯದ ರೊಡೋಲಿಯ ಕಾರ್ಡಿನಾಲಿಸ್ ಎಂಬ ಗುಲಗಂಜಿ ಹುಳದ ಸಹಾಯದಿಂದ ಕ್ಯಾಲಿಫೋರ್ನಿಯದಲ್ಲಿ ಕಿತ್ತಳೆ ಹಣ್ಣಿನ ಪಿಡುಗಾದ ಐಸಿರಿಯ ಪರ್ಚೇಸ್ ಎಂಬ ಕೀಟಗಳನ್ನು ಹತೋಟಿಗೆ ತರಲಾಯಿತು. ಇಂಥದೇ ಇನ್ನೊಂದು ಉಪಕಾರಿ ಕ್ರಿಪ್ಟೋಲೀಮಸ್ ಮಾಂಟ್ರೋಜಿಯರಿ ಮತ್ತು ಕ್ಯಾಲೊಸೋಮ ಸೈಕೋಫಾಂಟ. ಕೆಲವು ಜೀರುಂಡೆಗಳು ವೈದ್ಯಕೀಯ ಪ್ರಾಮುಖ್ಯವನ್ನು ಪಡೆದಿವೆ. ***ಪೀಡೆರೆಸ್*** ಎಂಬ

ರೋಚ್ ಜೀರುಂಡೆ ಮತ್ತು ಬ್ಲಿಷ್ಟರ್ ಜೀರುಂಡೆ ಚರ್ಮದ ಮೇಲೆ ಬೊಬ್ಬೆಗಳನ್ನು ಮಾಡುತ್ತವೆ. ಕೆಲವು ದೇಶಗಳಲ್ಲಿ ಇಂಥ ಜೀರುಂಡೆಗಳು ಹೆಚ್ಚಿದಾಗ, ಚರ್ಮದ ಬೊಬ್ಬೆರೋಗ ಸಾಂಕ್ರಾಮಿಕವಾಗುತ್ತದೆ. ಲಿಟ್ಟವೆಸಿಕ ಟೋರಿಯ ಎಂಬ ಜೀರುಂಡೆಯಿಂದ ಕ್ಯಾಂಥಾರಿಡಿನ್ ಎಂಬ ಗುಳ್ಳೆಗಳೆಬ್ಬಿಸುವ ರಾಸಾಯನಿಕವನ್ನು ಮಾಡುತ್ತಾರೆ. ಇನ್ನೂ ಕೆಲವು ಜೀರುಂಡೆಗಳು ಮಕ್ಕಳಲ್ಲಿ ಮತ್ತು ಸಸ್ಯಗಳಲ್ಲಿ ರೋಗಗಳನ್ನು ಹರಡುತ್ತವೆ. (ಪಿ.ಎಂ.)

ಆರ್ಥೋಪ್ಟೆರ ಗಣ ಜೀವ ವಿಕಾಸದಲ್ಲೇ ಅತ್ಯಂತ ಹಿಂದಿನ ವಿಶ್ವದಾದ್ಯಂತ ಕಂಡುಬರುವ ಕೀಟಗಳನ್ನೊಳಗೊಂಡ ಗಣಗಲ್ಲೊಂದು. ಈ ಗಣವನ್ನು ಎನ್ಸಿಫೆರಾ (ಜೀರುಂಡೆಗಳು–ಕ್ರಿಕೆಟ್ಸ್) ಮತ್ತು ಸೇಲಿಫೆರಾ (ಮಿಡತೆಗಳು) ಎಂಬ ಎರಡು ಉಪ ಗುಂಪುಗಳಾಗಿ ವಿಭಾಗಿಸಬಹುದಾಗಿದೆ. ಜೀರುಂಡೆಗಳು ಶಬ್ದಾತ್ಮಕವಾದ ಸಂವಹನವನ್ನು ಪ್ರದರ್ಶಿಸುತ್ತದೆ. ಈ ಸಂವಹನ ಹೆಣ್ಣಿನ ಗಮನಸೆಳೆಯಲು ಗಂಡು ಹೊರಡಿಸುವ ಶಬ್ದ. ಪ್ರತಿಯೊಂದು ಜೀರುಂಡೆ ಪ್ರಭೇದವೂ ತನಗೇ ವಿಶಿಷ್ಟವಾದ ಶಬ್ದವನ್ನು ಹೊರಡಿಸುತ್ತದೆ. ಆದರೆ, ಇದೇ ಗಣದ ಸೀಲಿಫೆರಾ ಉಪ ಗುಂಪಿಗೆ ಸೇರಿದ ಮಿಡತೆಗಳು ಯಾವುದೇ ರೀತಿಯ ಶಬ್ದ ಹೊರಡಿಸದಿರುವುದು ಗಮನಾರ್ಹ.

ಈ ಜೀರುಂಡೆಗಳನ್ನೊಳಗೊಂಡ ಎನ್ಸಿಫೆರಾ ಗಣವನ್ನು ಗ್ರಿಲ್ಲಿಡೇ (ನಿಜ ಜೀರುಂಡೆಗಳು – ಟ್ರೂ ಕ್ರಿಕೆಟ್ಸ್) ಮತ್ತು ಟೆಟ್ಟಿಗೋನಿಡೇ (ಪೊದೆ ಜೀರುಂಡೆಗಳು – ಬುಶ್ ಕ್ರಿಕೆಟ್ಸ್) ಎಂಬ ಎರಡು ಕುಟುಂಬಗಳನ್ನಾಗಿ ವಿಭಾಗಿಸಬಹುದು. ಇವು ತಮ್ಮ ಮುಂದಿನ ರೆಕ್ಕೆಗಳನ್ನು ಪರಸ್ಪರ ಉಜ್ಜುವುದರ ಮೂಲಕ ಧ್ವನಿಯನ್ನು ಹೊರಡಿಸುತ್ತವೆ. ಇವಕ್ಕೆ ಕಿವಿಗಳು ಮುಂಗಾಲುಗಳ ಮೇಲಿರುತ್ತದೆ.

**ಹೊಲದ ಜೀರುಂಡೆಗಳು:** ಇವು ಗ್ರಿಲ್ಲಿನೇ ಉಪ ಕುಟುಂಬಕ್ಕೆ ಸೇರಿದ ಜೀರುಂಡೆಗಳು. ಕಾಡುಗಳು, ತೋಟಗಳಿಂದ ತೊಡಗಿ ಬಯಲು ಪ್ರದೇಶ ಹಾಗೂ ರಸ್ತೆ ಬದಿಯಲ್ಲಿನ ಹಸುರು ಕಸದಲ್ಲಿ, ನೆಲದ ಬಿರುಕುಗಳಲ್ಲಿ ಸಹ ಕಂಡುಬರುತ್ತವೆ. ಸಾಮಾನ್ಯವಾಗಿ ಇವು 0.5 – 2.00 ಸೆಂ.ಮೀವರೆಗೆ ಬೆಳೆಯುವ ಇವು ಕಡು ಕಂದು ಬಣ್ಣದಿಂದ ಕಪ್ಪು ಬಣ್ಣದವರೆಗಿನ ಛಾಯೆಯ ಬಣ್ಣವನ್ನು ಹೊಂದಿರುತ್ತವೆ. ನಿಶಾಚರಿಗಳಾದ ಇವು ಸಂಜೆಯವೇಳೆಗೆ ಹೊರಬಂದು ಸುಶ್ರಾವ್ಯವಾದ ಕರೆಯನ್ನು ಉಲಿಯುತ್ತವೆ. ಪ್ರತಿ ಪ್ರಭೇದಕ್ಕೂ ತನ್ನದೇ ಆದ ಆವೃತ್ತಿ ಹಾಗೂ ಹಾಡಿನ ಸ್ವರೂಪವಿರುತ್ತದೆ. ಇವು ಪ್ರಾರ್ಥಿಸುವ ಕೀಟ, ಕಪ್ಪೆ, ಹಲ್ಲಿ ಹಾಗೂ ಸಣ್ಣಗಾತ್ರದ ಸ್ತನಿಗಳಿಗೆ ಆಹಾರವಾಗುವುದೂ ಉಂಟು.

**ಮರ ಜೀರುಂಡೆಗಳು:** ಇವು ಒಕಾನ್‌ಥಿನೇ ಉಪ ಕುಟುಂಬಕ್ಕೆ ಸೇರಿದ ಜೀರುಂಡೆಗಳು. ಹುಲ್ಲುಗಾವಲುಗಳು, ಗುಂಡಿಗಳು, ಪೊದೆ, ಮರಗಳಲ್ಲಿ ಕಂಡುಬರುವ ಇವುಗಳು ತೆಳುವಾದ, ಸೂಕ್ಷ್ಮ ಶರೀರ ಹೊಂದಿರುವ ಇವುಗಳ ಮೈ ಬಣ್ಣ ಹಸುರು ಅಥವಾ ತಿಳಿ ಕಂದು. ಇವುಗಳ ನಾಡಿ ಮಿಡಿತ ಮತ್ತು ಹಾಡು ಪರಿಸರದ ತಾಪಮಾನದೊಂದಿಗೆ ನಿರೀಕ್ಷಿಸಬಹುದಾದಷ್ಟು ಬದಲಾಗುವುದರಿಂದ ಇವನ್ನು ತಾಪ ಮಾಪಕ ಜೀರುಂಡೆಗಳು ಎನ್ನುತ್ತಾರೆ (ಥರ್ಮಾಮೀಟರ್ ಕ್ರಿಕೆಟ್ಸ್) ಸಂಭೋಗ ಸಮಯದಲ್ಲಿ ಹೆಣ್ಣು ಗಂಡಿನ ದೇಹದ ಬೆನ್ನುಭಾಗದಲ್ಲಿನ ಗ್ರಂಥಿಯಿಂದ ಒಸರುವ ದ್ರವವನ್ನು ಸೇವಿಸುತ್ತದೆ.

**ಪೊದೆಜೀರುಂಡೆಗಳು:** ಹಸುರು ಅಥವಾ ಕಂದು ಬಣ್ಣದ ಇವುಗಳನ್ನು ಸಹುರು ಕಸದಿಂದ ಹಿಡಿದು ಮರಗಳ ಮೇಲ್ತುದಿಯವರೆಗೆ ಎಲ್ಲೆಂದರಲ್ಲಿ ಕಾಣಬಹುದು. ನಗರ ಹಾಗೂ ವನ್ಯ ಆವಾಸಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ನಿಜ ಜೀರುಂಡೆಗಳಿಗೆ ಹೋಲಿಸಿದರೆ ಕರ್ಕಶವಾದ ಧ್ವನಿಯನ್ನು ಹೊರಡಿಸುತ್ತವೆ. ಈ ಕುಟುಂಬದ ಜೀರುಂಡೆಗಳು ಎಲೆಗಳಂತೆಯೇ ಕಾಣುತ್ತವೆ. ಇದನ್ನು ಚೆನ್ನಾಗಿಯೇ ಬಳಸಿಕೊಳ್ಳುವ ಇವು ದಿನವಿಡೀ ವಿಶ್ರಾಂತಿಪಡೆಯುತ್ತವೆ. ಅದಾಗ್ಯೂ, ಬಾವಲಿ ಮತ್ತು ಮಂಗಗಳು ಸೇರಿದಂತೆ ಹಲವಾರು ಪ್ರಾಣಿಗಳಿಗೆ ಇವು ಆಹಾರವಾಗುತ್ತವೆ. (ಆರ್.ಬಿ.)

**ಕೋಲೀನ್ :** ಜೀವಕಣಗಳ ಒಂದು ಘಟಕ. ಕೊಬ್ಬಿನ ಚಯಾಪಚಯದಲ್ಲಿ ಇದರ ಪಾತ್ರ ಹಿರಿದು. ಆದ್ದರಿಂದ ಇದಕ್ಕೆ ಲೈಪೊಟ್ರಾಪಿಕ್ ಕಾರಕ ಎಂದೂ ಹೆಸರಿದೆ. ಇದು ಅಸಿಟೈಲ್ ಕೋಲೀನಿನ ಒಂದು ಘಟಕ ಮತ್ತು ಪೂರ್ವಗಾಮಿ. ಇದರ ಉತ್ಪನ್ನ ಬೀಟೈನ್ ಎನ್ನುವ ಸಸ್ಯ ವಸ್ತುವಿನಿಂದ ಆಗುತ್ತದೆ. ಇವೆಲ್ಲವೂ ಲೈಪೊಟ್ರಾಪಿಕ್ ಕಾರಕಗಳೇ. ದೇಹಕ್ಕೆ ಕೋಲೀನಿನ ಆವಶ್ಯಕತೆಯ ತಿಳಿವಳಿಕೆ ಬಂದದ್ದು 1932ರಲ್ಲಿ. ಸಾಧಾರಣವಾಗಿ ತೆಗೆದುಕೊಳ್ಳುವ ಆಹಾರದಲ್ಲಿ ಕೋಲೀನ್, ಬೀಟೈನ್ ಮತ್ತು ಮಿಥಿಯೋನೀನ್ ಎನ್ನುವ ಪದಾರ್ಥಗಳು ಇದ್ದೇ ಇರುತ್ತವೆ. ಕೋಲೀನ್, ಬೀಟೈನ್ ಮತ್ತು ಮಿಥಿಯೋನೀನುಗಳ ರಾಸಾಯನಿಕ ರಚನೆಗಳು ಈ ರೀತಿ ಇವೆ:

ಆಹಾರದಲ್ಲಿ ಕೋಲೀನ್ ಅಭಾವ ದೀರ್ಘಕಾಲ ಇದ್ದರೆ ಪಿತ್ತಜನಕಾಂಗದಲ್ಲಿ ಕೊಬ್ಬು ಶೇಖರಿಸುತ್ತದೆ. ಇದು ದೇಹಕ್ಕೆ ಅಹಿತಕಾರಿ. ಇದರ ಪರಿಣಾಮವಾಗಿ ಸಿರ್ರೋಸಿಸ್ ಎನ್ನುವ ಯಕೃತ್ತಿನ ರೋಗ ಬರುತ್ತದೆ. ಅಲ್ಲದೇ ಹೃದಯದ ಬಡಿತದ ಎಣಿಕೆ ಕಡಿಮೆಯಾಗುತ್ತದೆ ಮತ್ತು ಮಾಂಸಖಂಡಗಳಲ್ಲಿಯ ಶಕ್ತಿ ಕಡಿಮೆಯಾಗುತ್ತದೆ. ಹಂದಿ ಮತ್ತು ಇಲಿಗಳ ಮೇಲೆ ಮಾಡಿದ ಪ್ರಯೋಗಗಳಲ್ಲಿ ಈ ತೀರ್ಮಾನಗಳು ಸ್ಥಿರೀಕೃತವಾಗಿವೆ. ಕೋಲೀನಿಗಿರುವ ಗುಣಪಡಿಸುವ ಒಂದೇ ಉಪಯೋಗವನ್ನು ಲೆನೆಕ್ ಎನ್ನುವ ಯಕೃತ್ತಿನ ಸಿರ್ರೋಸಿಸ್ ರೋಗದಲ್ಲಿ ಕಾಣಬಹುದು. ಲೆನೆಕ್ ಸಿರ್ರೋಸಿಸ್ ಎಂಬ ರೋಗ ಅತಿಮದ್ಯಸೇವನೆಯಿಂದಲೂ ಜೊತೆಗೆ ಕಡಿಮೆ ಊಟದ ಮಾಡುವುದರಿಂದಲೂ ಕಾಣಿಸಿಕೊಳ್ಳುವುದುಂಟು. ಸಾಂಕ್ರಾಮಿಕ ಹೆಪಟೈಟಿಸ್ ಎನ್ನುವ ಯಕೃತ್ತಿನ ರೋಗದಲ್ಲಿ ಕೋಲೀನನ್ನು ಉಪಯೋಗಿಸಿದಾಗ ಅದು ಗುಣಮುಖವಾಗಿದೆ. ಕೋಲೀನ್ ಕರುಳುಗಳಿಂದ ಶರೀರಕ್ಕೆ ಸೇರುತ್ತದೆ. ಬಾಯಿಯ ಮೂಲಕ ತೆಗೆದುಕೊಂಡ ಕೋಲೀನಿನ ಶೇ. 1 ಭಾಗ ಮೂತ್ರಜನಕಾಂಗದ ಮೂಲಕ ವಿಸರ್ಜಿಸಲ್ಪಡುತ್ತದೆ.

ಕೋಲೀನಿನ ರಾಸಾಯನಿಕ ರಚನೆಯಲ್ಲಿ ಸ್ವಲ್ಪ ಬದಲಾವಣೆ ಮಾಡುವುದರಿಂದ ಅತಿ ವಿಷವುಳ್ಳ ವಸ್ತುಗಳು ಉತ್ಪತ್ತಿಯಾಗುತ್ತವೆ. ಕೋಲೀನಿನಲ್ಲಿರುವ ನೀರಿನ ಭಾಗವನ್ನು ತೆಗೆದರೆ ಹೆಚ್ಚಿನ ವಿಷವುಳ್ಳ ನ್ಯೂರೀನ್ ಎನ್ನುವ ವಸ್ತು ಉತ್ಪತ್ತಿಯಾಗುತ್ತದೆ. ಕೋಲೀನಿಗೂ ಅಸಿಟೈಲ್ ಕೋಲೀನಿಗೂ ನಿಕಟಸಂಬಂಧ ಉಂಟು. ನರಗಳಲ್ಲಿ ಸ್ಪಂದನಗಳ ಸಾಗಣೆಗೆ ಬೇಕಾಗುವ ವಸ್ತು ಅಸಿಟೈಲ್ ಕೋಲೀನ್. ಇದು ಕೋಲಿನೆರ್ಜಿಕ್ ಎನ್ನುವ ನರಗಳ ಕೊನೆಗಳ ತುದಿಯಲ್ಲಿ ಬಿಡುಗಡೆ ಆಗುತ್ತದೆ. ಆಗ ಇದು ಜಡತೆಯ ಸ್ಥಿತಿಯಲ್ಲಿರುತ್ತದೆ. ಕೂಡಲೇ ಇದು ಕೋಲೀನ್ ಎಸ್ಟರೇಸ್ ಎಂಬ ಎನ್‌ಜೈಮಿನ ಸಹಾಯದಿಂದ ಕೋಲೀನ್ ಮತ್ತು ಅಸಿಟೇಟ್ ಎನ್ನುವ ವಸ್ತುಗಳಾಗಿ ಪರಿವರ್ತನೆಯಾಗುತ್ತದೆ. ಈ ರೀತಿಯ ರಾಸಾಯನಿಕ ಪ್ರತಿಕ್ರಿಯೆ ನರಗಳನ್ನು ಪ್ರಚೋದಿಸಿದಾಗ ಕಾಣುತ್ತದೆ. ಆದರೆ ನರಗಳು ಚೇತರಿಸಿಕೊಳ್ಳುವ ಸಮಯದಲ್ಲಿ ಮತ್ತೆ ಕೋಲೀನ್ ಮತ್ತು ಅಸಿಟೇಟ್‌ಗಳು




ಒಂದುಗೂಡುತ್ತವೆ. ಹೀಗೆ ಒಂದುಗೂಡಿಕೆಯಿಂದ ಉಂಟಾದ ಅಸಿಟೈಲ್ ಕೋಲೀನ್ ನರಗಳಲ್ಲಿ ಸೇರಿಕೊಳ್ಳುತ್ತದೆ. ಇದು ಮತ್ತೊಂದು ನರದ ಸ್ಪಂದನಗಳ ಸಾಗಣೆಗೆ ಸಿದ್ಧವಾಗಿ ನಿಂತಿರುತ್ತದೆ. ಕೋಲೀನ್ ಎಸ್ಟರೇಸನ್ನು ತಡೆಯುವ ವಸ್ತುಗಳು ಅಸಿಟೈಲ್ ಕೋಲೀನಿಗೆ ಹೆಚ್ಚು ಕಾಲ ಬಾಳಲು ಅವಕಾಶ ಕೊಡುತ್ತವೆ. ಎಸ್ಟರೀನ್ ಮತ್ತು ನಿಯೋಸ್ಟಿಗ್ಮಿನುಗಳು ಕೋಲೀನ್ ಎಸ್ಟರೇಸಿನ ಚಟುವಟಿಕೆಯನ್ನು ತಡೆಹಿಡಿಯುತ್ತವೆ. (ಡಿ.ಇ.)

**ಕೋಲೀನ್ ಎಸ್ಟರೇಸ್ :** ಅಸಿಟೈಲ್ ಕೋಲೀನಿನ ಜಲವಿಶ್ಲೇಷಣೆಯಲ್ಲಿ ವೇಗವರ್ಧಕವಾಗಿ ಕಾರ್ಯನಿರ್ವಹಿಸುವ ಎನ್‌ಜೈಮ್. ಇದರಲ್ಲಿ ಮಿಥ್ಯ ಕೋಲೀನ್ ಎಸ್ಟರೇಸ್ ಮತ್ತು ನೈಜ ಕೋಲೀನ್ ಎಸ್ಟರೇಸ್ ಎಂಬ ಎರಡು ಬಗೆಗಳಿವೆ. ಮಿಥ್ಯಕೋಲೀನ್ ಎಸ್ಟರೇಸ್ ಅಸಿಟೈಲ್ ಕೋಲೀನ್ ಅಲ್ಲದೆ ಬ್ಯುಟರಿಲ್, ಸಕ್ಸಿನಿಲ್, ಮತ್ತು ಬೆಂಜೈಲ್ ಕೋಲೀನುಗಳನ್ನೂ ಟ್ರೈಬ್ಯುಟರಿಲ್ ಮತ್ತು ಅದರಂಥ ಇತರ ಕೆಲವು ಎಸ್ಟರ್‌ಗಳನ್ನೂ ಜಲವಿಶ್ಲೇಷಣೆಗೆ ಒಳಪಡಿಸುತ್ತದೆ. ನೈಜ ಕೋಲೀನ್ ಎಸ್ಟರೇಸ್ ಮಾತ್ರ ನಿರ್ದಿಷ್ಟವಾಗಿ ಅಸಿಟೈಲ್ ಕೋಲೀನಿನ ಜಲವಿಶ್ಲೇಷಣೆಯಲ್ಲಿ ವೇಗವರ್ಧಕವಾಗಿದ್ದು ಕೋಲೀನ್ ಮತ್ತು ಅಸಿಟೇಟುಗಳನ್ನು ಉತ್ಪತ್ತಿಮಾಡುತ್ತದೆ. ನರಗಳ ಚೋದನೆಗಳ ಚಾಲನೆಯಲ್ಲಿ ಇದರ ಪಾತ್ರ ಬಹು ಮುಖ್ಯವಾದುದು. ಸಂದೇಶವಾಹಕ ನರಗಳಲ್ಲಿ ಈ ಎನ್‌ಜೈಮ್ ಮತ್ತು ಅಸಿಟೈಲ್ ಕೋಲೀನುಗಳು ಇವೆ. ಮಿದುಳು, ನರಕೋಶಗಳು ಮಾಂಸಖಂಡಗಳು ಕೆಂಪು ರಕ್ತಕಣಗಳು, ಮಾನವನ ಸೀರಂ ಮತ್ತು ಥೆಮಸ್‌ಗಳಲ್ಲೂ ಎನ್‌ಜೈಮ್ ಇರುವುದೆಂದು ತಿಳಿದುಬಂದಿದೆ. ಒಂದು ಮೋಲ್ ಅಸಿಟೈಲ್ ಕೋಲೀನ್ ಎಸ್ಟರೇಸು $2 \times 10^9$ ಮೋಲ್ ಅಸಿಟೈಲ್ ಕೋಲೀನನ್ನು ಒಂದು ಮಿನಿಟಿನಲ್ಲಿ ಜಲವಿಶ್ಲೇಷಣೆಗೊಳಪಡಿಸುತ್ತದೆ. ಟಾರ್ಪಿಡೋಮೀನು ಮತ್ತು ಎಲೆಕ್ಟ್ರೋಫೋರಸ್ ಎಲೆಕ್ಟ್ರಿಕಸ್ ಎಂಬ ಮೀನುಗಳ ವಿದ್ಯುದುತ್ಪಾದಕ ಅಂಗಗಳ ಫಲಕಗಳಲ್ಲಿ ಇದು ಕೇಂದ್ರೀಕೃತವಾಗಿರುತ್ತದೆ. ಎಲೆಕ್ಟ್ರೋಫೋರಸ್ ಎಲೆಕ್ಟ್ರಿಕಸ್ಸಿನಿಂದ ಇದನ್ನು ತೆಗೆದು ಸ್ಫಟೀಕರಿಸಿದ್ದಾರೆ. ಇದರ ಅಣುತೂಕ 25,000. ಇದರಲ್ಲಿ ಕಾರ್ಬೋಹೈಡ್ರೇಟ್ ಸಹ ಇರುತ್ತದೆ. ಈ ಅಣುವಿನಲ್ಲಿ ಹತ್ತಿರಹತ್ತಿರದವಾಗಿ

ಎರಡು ಬಂಧನ ಸ್ಥಳಗಳಿವೆ (ಬೈಂಡಿಂಗ್ ಸೈಟ್ಸ್). ಇವುಗಳಲ್ಲಿ ಒಂದು ಅನ್ ಅಯಾನಿಕ್ ಆಗಿದ್ದು ಅಸಿಟೈಲ್‌ಕೋಲೀನಿನ $N^+$ ಕ್ಯಾಟ್‌ಅಯಾನನ್ನು ಬಂಧಿಸುತ್ತದೆ. ಮತ್ತೊಂದು ಎಸ್ಟರೇಟಿಕ್ ಸ್ಥಳವಾಗಿದ್ದು ಅಲ್ಲಿ ಸೆರೀನ್ ಅವಶೇಷ ಮತ್ತು ನ್ಯೂಕ್ಲಿಯೋಫೈಲಿಕ್ ಹಿಸ್ಟಿಡೀನ್ ಗುಂಪುಗಳಿರುತ್ತವೆ. ಈ ಎನ್‌ಜೈಮಿನ ಪ್ರತಿಬಂಧಕಗಳಾದ ಫೈಸೊಸ್ಟಿಗ್ಮಿನ್ ಮತ್ತು ಪ್ರಾಸ್ಟಿಗ್ಮಿನ್ನುಗಳು ಆನ್‌ಅಯಾನಿಕ್ ಮತ್ತು ಎಸ್ಟರೇಟಿಕ್ ಸ್ಥಳಗಳೆರಡರ ಜೊತೆಗೂ ಸೇರಿಕೊಳ್ಳುತ್ತವೆ. ಈ ಎನ್‌ಜೈಮಿನೊಡನೆ ಎಸ್ಟರೇಟಿಕ್ ಪ್ರದೇಶದಲ್ಲಿ ವಿವಿಧ ಆಲ್ಕೈಲ್ ಫಾಸ್ಫೇಟುಗಳೂ ಡೈಐಸೊಪ್ರೊಪೈಲ್ ಫಾಸ್ಫೊಫ್ಲೋರಿಡೇಟೂ ಸೇರಿ ಅದನ್ನು ನಿಷ್ಕ್ರಿಯಗೊಳಿಸುತ್ತವೆ. ಇವನ್ನು ಕೀಟನಾಶಕಗಳನ್ನಾಗಿಯೂ ನರವಾಯು (ನರ್ವ್‌ಗ್ಯಾಸ್) ಆಗಿಯೂ ಉಪಯೋಗಿಸಿದ್ದಾರೆ. ಸೀರಂನಲ್ಲಿರುವ ಎನ್‌ಜೈಮಿನ ಕ್ರಿಯೆಯ ಮಾಪನ ರೋಗನಿದಾನದಲ್ಲಿ ಉಪಯೋಗವಾಗುತ್ತದೆ. (ಎಂ.ಆರ್.ಆರ್.)

**ಕೋಲುಕಳ್ಳಿ :** ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ. ಯೂಫೋರ್ಬಿಯ ತಿರುಕಳ್ಳಿ ಎಂಬುದು ಇದರ ವೈಜ್ಞಾನಿಕ ನಾಮ. ಆಫ್ರಿಕದ ಮೂಲವಾಸಿಯಾದ ಇದು ಭಾರತದಲ್ಲೂ ಬಲು ಸಾಮಾನ್ಯ; ಬಂಜರು ಭೂಮಿಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಬೇಲಿಗಿಡವಾಗಿ ಬೆಳೆಸುವುದೂ ಉಂಟು. ಇದೊಂದು ಚಿಕ್ಕ ಪೊದೆ ಸಸ್ಯ. ಕಾಂಡ ದಂಡಾಕಾರವಾಗಿದೆ. ರೆಂಬೆಗಳು ನುಣುಪಾಗಿವೆ. ಮುಖ್ಯಕಾಂಡದ ಮೇಲೆ ರೆಂಬೆಗಳು ಸುತ್ತುಮಾದರಿಯಲ್ಲಿ ಜೋಡಣೆಯಾಗಿವೆ. ಎಲೆಗಳು ಹುಟ್ಟಿದರೂ ಅವು ಬಲುಬೇಗ ಉದುರಿಹೋಗುತ್ತವೆಯಾದ್ದರಿಂದ ಕಾಂಡವೇ ದ್ಯುತಿಸಂಶ್ಲೇಷಣ ಕಾರ್ಯವನ್ನು ನಿರ್ವಹಿಸುತ್ತದೆ. ಈ ಕಾರ್ಯದ ಅನುಕೂಲತೆಗೆಂದು ಕಾಂಡದಲ್ಲಿ ಕ್ಲೋರೊಫಿಲ್ ಇದೆ. ಕೋಲುಕಳ್ಳಿಯ ಇನ್ನೊಂದು ವಿಶೇಷ ಲಕ್ಷಣ ಇದರ ಕಾಂಡದಲ್ಲಿ ಬಿಳಿಯ ಬಣ್ಣದ ಹಾಲ್ನೊರೆಯಿರುವುದು. (ಈ ಲಕ್ಷಣದಲ್ಲಿ ಕೋಲುಕಳ್ಳಿ ಯೂಫೋರ್ಬಿಯೇಸೀ ಕುಟುಂಬದ ಇತರ ಸಸ್ಯಜಾತಿಗಳನ್ನು ಹೋಲುತ್ತದೆ.)

ಹಾಲ್ನೊರೆಯನ್ನು ಗಾಯಗಳಿಗೂ ಸಂಧಿವಾತಕ್ಕೂ ಹಲ್ಲುನೋವಿಗೂ ಔಷಧಿಯಾಗಿ ಬಳಸುತ್ತಾರೆ. ಕಿವಿನೋವಿಗೂ ಉಪಯೋಗಿಸುವುದುಂಟು. ಮೀನು ಮತ್ತು ಇಲಿಗಳಿಗೆ ಇದು ವಿಷವೆಂದು ಹೇಳಲಾಗಿದೆ. ಕೋಲುಕಳ್ಳಿ ಗಿಡದ ಇದ್ದಲನ್ನು ಬಂದೂಕಿನ ಸಿಡಿಮದ್ದಿನ ಜೊತೆಗೆ ಉಪಯೋಗಿಸುತ್ತಾರೆ. (ಎಂ.ಸಿ.ಆರ್.)

**ಕೋಲುವರಸೆ :** ಒಂದನೆಯ ಮಹಾಯುದ್ಧದವರೆಗೂ ಯುರೋಪ್ ಮತ್ತು ಅಮೆರಿಕದ ಅದ್ಯಂತ ವಾಡಿಕೆಯಲ್ಲಿದ್ದ ಒಂದು ಆಟ. ಇದು 400 ವರ್ಷಗಳ ಹಿಂದೆ ಇಂಗ್ಲೆಂಡಿನ ಸಾಮರ್‌ಸೆಟ್ ಮತ್ತು ಬರ್ಕ್‌ಷೈರ್ ಪ್ರಾಂತ್ಯಗಳಲ್ಲಿ ಪ್ರಾರಂಭವಾಯಿತು. ಇಂಗ್ಲೆಂಡಿನ ಮೊದಲನೆಯ ಮತ್ತು ಎರಡನೆಯ ಜಾರ್ಜ್ ದೊರೆಗಳ ಕಾಲದಲ್ಲಿ ಈ ಆಟ ಬಹು ಜನಪ್ರಿಯವಾಗಿತ್ತು. ಇದರಲ್ಲಿ ಮೂರು ಮಾದರಿಗಳಿವೆ–ಬೊಂಬಿನಿಂದ ಮಾಡಿದ ಬೆತ್ತದ ವರಸೆ; ಒಂಟಿಕೋಲು ವರಸೆ; ಎರಡು ಕೈಗಳಿಂದಲೂ ಹಿಡಿದುಕೊಂಡ ಕೋಲಿನ ವರಸೆ. ಅವುಗಳಲ್ಲಿ ಒಂಟಿಕೋಲು ವರಸೆಯೇ ಮುಖ್ಯವಾದದ್ದು. ಒಂಟಿಕೋಲು ತೆಳು ಮತ್ತು ಗುಂಡಗಿರುತ್ತದೆ. ಇದನ್ನು ಸುಮಾರು ಆಷ್ ಎಂಬ 34" ಉದ್ದದ ಒಂದು ತೇಗದ ಮರದಿಂದ ತಯಾರಿಸುತ್ತಾರೆ. ಇದಕ್ಕೆ ಬುಟ್ಟಿ ಹೆಣಿಗೆಯ ಕೈಕಾಪು ಹಿಡಿ ಉಂಟು. ಒಂಟಿಕೋಲಿನ ಒಂದು ಕೊನೆ ಇನ್ನೊಂದು ಕೊನೆಗಿಂತ ಹೆಚ್ಚು ದಪ್ಪ. ದಪ್ಪ ಕೊನೆ ಕೈಯನ್ನು ರಕ್ಷಿಸಲು ಬಟ್ಟಲು ಆಕಾರದ ಹಿಡಿಯಲ್ಲಿ ತೂರಿದೆ. ಈ ಕೋಲು ಎದುರಾಳಿಯ ಮೇಲೆ ಹಾಯುವುದಕ್ಕೂ ಅವನ ಆಕ್ರಮಣವನ್ನು ನಿವಾರಿಸುವುದಕ್ಕೂ ಉಪಯೋಗಿಸುವ ಒಂದು ಆಯುಧ. ಮೊಟ್ಟಮೊದಲು 16ನೆಯ ಶತಮಾನದಲ್ಲಿ ಈ ಆಯುಧ ಬ್ಯಾಕ್‌ಸ್ವೋರ್ಡ್ ಎಂಬ ಕತ್ತಿಯ ಆಕಾರದಲ್ಲಿ ಮರದ ಕತ್ತಿಯಾಗಿತ್ತು. ಮತ್ತು ಅದರ ಕೆಲವು ಕ್ರಮಗಳನ್ನೂ ಅನುಸರಿಸಿತ್ತು. ಆದ್ದರಿಂದ ಬ್ಯಾಕ್‌ಸ್ವೋರ್ಡ್ ವರಸೆಯನ್ನು ಕಲಿಯಲು ಈ ಮರದ ಕತ್ತಿಯಿಂದ ಅಭ್ಯಾಸ ಮಾಡುತ್ತಿದ್ದರು. 17ನೆಯ ಶತಮಾನದಲ್ಲಿ ಕತ್ತಿಯ ಆಕಾರ ಹೋಗಿ ಕೋಲಿನಂತಾಗಿ ಬುಟ್ಟಿ ಹೆಣಿಗೆಯ ಕೈಕಾಪು ಸೇರಿಸಲ್ಪಟ್ಟಿತು.

ಕೋಲುವರಸೆಯಲ್ಲಿ ತಿವಿಯುವುದು ನಿಷೇಧಿಸಲ್ಪಟ್ಟಿತ್ತು. ನಡುಕಟ್ಟಿನ ಕೆಳಗೆ ಹೊಡೆಯಕೂಡದೆಂಬ ಕಟ್ಟಲೆ 16ನೆಯ ಶತಮಾನದಲ್ಲಿ ಇತ್ತು. 18ನೆಯ ಶತಮಾನದಲ್ಲಿ ಅದು ಹೋಗಿ ಎದುರಾಳಿಯ ಮೈಯ ಯಾವ ಭಾಗವನ್ನಾದರೂ ಮುಟ್ಟಿ ಆಕ್ರಮಣ ಮಾಡಬಹುದೆಂಬ ನಿಯಮ ಬಂದಿತು. ಕೋಲುವರಸೆ ಕಾಳಗದಲ್ಲಿ ಇಬ್ಬರು ಸ್ಪರ್ಧಿಗಳೂ ಎದುರೆದುರಿಗೆ ನಿಂತು ಪರಸ್ಪರ ಕೋಲಿನಿಂದ ಹೊಡೆಯಲು ಗುರಿ ಇಡುತ್ತಾರೆ. ಕತ್ತಿವರಸೆಯಲ್ಲಿ ಕಾಲುಗಳ ಚಲನಗಳಿಂದ ಪ್ರದರ್ಶಿಸುವ ಭಾವಭಂಗಿಗಳು ಒಂಟಿಕೋಲು ವರಸೆಯಲ್ಲಿಲ್ಲ. ಇಡೀ ಕಾಳಗದ ಅವಧಿಯಲ್ಲಿ ಇಬ್ಬರೂ ಕಾಲುಗಳ ಚಲನೆಗಳಿಲ್ಲದೆ ಒಂದೇ ನೆಲೆಯಲ್ಲಿ ನಿಂತಿರಬೇಕು. ಕೋಲನ್ನು ಹಿಡಿದಿರುವ ಬಲಗೈಯನ್ನು ತಲೆಯ ಮೇಲೆ ಎತ್ತರಕ್ಕೆ ಚಾಚಿ ಕೈಹರಡನ್ನು ಚಾವಟಿಯಂತೆ ಬಲವಾಗಿ ತಿರುಗಿಸುತ್ತ ಕೋಲಿನಿಂದ ಹೊಡೆತಗಳನ್ನು ಕೊಡುತ್ತಾರೆ. ಎದುರಾಳಿಯ ನಡುವಿನ ಮೇಲೆ ಶರೀರದ ಯಾವ ಭಾಗವನ್ನಾದರೂ ಹೊಡೆಯಬಹುದಾದರೂ ನಿಜವಾದ ಗುರಿ ತಲೆ. ತಲೆ ವಿನಾ ಬೇರೆ ಭಾಗಗಳಲ್ಲಿನ ಹೊಡೆತಗಳಿಗೆ ಎಣಿಕೆಯಿಲ್ಲ. ಅವು ಎದುರಾಳಿಯ ಲಕ್ಷ್ಯವನ್ನು ಬೇರೆ ಕಡೆ ತಿರುಗಿಸಿ ಎಚ್ಚರಿಕೆಯನ್ನು ಅಡರಿಸುವ ತಂತ್ರದ ಹೊಡೆತಗಳು. ರಕ್ತ ಬರುವಂತೆ ತಲೆಗೆ ಹೊಡೆದರೇ ಅದಕ್ಕೆ ಎಣಿಕೆ. ಅದಕ್ಕೆ ತಲೆ ಒಡೆಯುವುದು ಎಂದು ಹೆಸರಿತ್ತು. ಇಬ್ಬರು ಸ್ಪರ್ಧಿಗಳಲ್ಲಿ ಯಾರು ಎದುರಾಳಿಯ ತಲೆಯನ್ನು ಮೊದಲು ಒಡೆಯುತ್ತಾನೋ ಅವನೇ ಗೆದ್ದವನೆಂದು ನಿರ್ಣಯ.

ಕೋಲುವರಸೆ ಕ್ರೀಡೆಯು 19ನೆಯ ಶತಮಾನದ ಕೊನೆಯಲ್ಲಿ ನಿಂತುಹೋಯಿತು. ಇಟಲಿಯಿಂದ ಹೊಸದಾಗಿ ಬಂದ ಕೊಂಕು ಕತ್ತಿವರಸೆ ಕೋಲುವರಸೆಯ ಸದೃಶವಾಗಿತ್ತು. ಆದ್ದರಿಂದ ಕೊಂಕುಕತ್ತಿವರಸೆಯನ್ನು ಕೋಲುವರಿಸೆಯ ಅಭ್ಯಾಸದಿಂದ ಕಲಿಸಲು ಶಿಕ್ಷಣಕೇಂದ್ರಗಳು ಸ್ಥಾಪಿತವಾಗಿ, ಕೋಲುವರಸೆ ಪುನರುಜ್ಜೀವನವಾಯಿತು. ಕೋಲಿಗೆ ಮೊನೆಯನ್ನು ಕೊಡಲಾಯಿತು. ಕೋಲಿನಿಂದ ಕಾಲಿಗೂ ಹೊಡೆಯಲು ಅನುಮತಿ ಬಂದಿತು. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಕೋಲುವರಸೆ ಬಹಳ ಅಲಕ್ಷ್ಯಕ್ಕೆ ಗುರಿಯಾಯಿತು. ಇಟಲಿಯ ಹಗುರಾದ ಕುಡುಗತ್ತಿ ಪ್ರಾಬಲ್ಯಕ್ಕೆ ಬಂದು ಕೋಲುವರಸೆಯ ಅಗತ್ಯವನ್ನು ಕುಂದಿಸಿತು. ಫ್ರೆಂಚರ ಬೆತ್ತದ ವರಿಸೆ ಕೋಲುವರಸೆಯಂತಿದೆ; ಆದರೆ ಅದನ್ನು ಕೊಂಕುಕತ್ತಿವರಸೆಯ ಶಿಕ್ಷಣಕ್ಕೆ ಅಳವಡಿಸಿಕೊಳ್ಳಲಿಲ್ಲ. (ಎಂ.ಜಿ.ಕೆ.ಎಂ.)

**ಕೋಲೆಬಸವ :** ಜಾನಪದ ವೃತ್ತಿಜೀವನದಲ್ಲಿ ಒಂದು ಕಲೆಯಾಗಿ ಪರಿಣಮಿಸಿರುವ ಮನೋರಂಜಕ ಆಟ. ಸಾಮಾನ್ಯವಾಗಿ ಕೆಲವು ಗ್ರಾಮಗಳಲ್ಲಿ, ತೀರಿಕೊಂಡವರ ಹೆಸರಿನಲ್ಲಿ ಒಂದು ಹೆಣ್ಣುಕರುವನ್ನೋ ಅಥವಾ ಹೋರಿಕರುವನ್ನೋ ಮುದ್ರೆಯೊತ್ತಿ ಬಿಟ್ಟುಬಿಡುವ ಸಂಪ್ರದಾಯ ಈಗಲೂ ಉಂಟಷ್ಟೆ. ಸ್ವೇಚ್ಛೆಯಾಗಿ ತಿರುಗಾಡುವ ಅಂಥ ಬೀದಿಕರುಗಳನ್ನು ಹಿಡಿದುಕೊಂಡು ಈ ಆಟಕ್ಕೆ ಬಳಸಲಾಗುತ್ತದೆ.

ಕೋಲುಬಸವ ಎಂಬುದು ಕಪಿಲೆಬಸವ ಎಂಬುದರ ಅಪಭ್ರಂಶವಿರಬಹುದು. ಕಪಿಲೆಬಸವ ಎಂಬುವುದೇ ಕವಲೆಬಸವ, ಕೌಲೆಬಸವ, ಕೋಲೆಬಸವ–ಎಂದು ರೂಪಾಂತರ ಹೊಂದಿದೆ. ಕೆಲವು ಕಡೆಗಳಲ್ಲಿ ಕೌಲೆತ್ತು ಇಲ್ಲವೆ ಗಂಗೆತ್ತು ಎಂತಲೂ ಇದನ್ನು ಕರೆಯಲಾಗುತ್ತದೆ.

ಇಲ್ಲಿ ಕಪಿಲೆ ಎಂದರೆ ಹಸು. ಈ ಹಸುವಿನ ಜೊತೆ ಬಸವನ್ನು ಜೋಡಿಸಿಕೊಂಡು ಕೋಲೆಬಸವನ ಆಟ ಏರ್ಪಟ್ಟಿದೆ. ಬಸವನನ್ನು ರಾಮನೆಂತಲೂ ಹಸುವನ್ನು ಸೀತೆಯೆಂತಲೂ ಕರೆಯುವುದು ವಾಡಿಕೆ. ಜೊತೆಗೆ ಒಂದು ಚಿಕ್ಕ ಇಳಗರುವನ್ನೂ ಲಗತ್ತಿಸಿಕೊಂಡು ಅದನ್ನು ಲಕ್ಷ್ಮಣನಾಗಿ ಬಳಿಸಿಕೊಳ್ಳುವುದೂ ಉಂಟು.

ಭಿಕ್ಷಾಟನೆಯೇ ಈ ವೃತ್ತಿಯವರ ಮುಖ್ಯ ಗುರಿ. ಸಿಂಗರಿಸಿದ ಜೋಡಿ ದನಗಳನ್ನು ಓಲಗದೊಡನೆ ಮನೆಮನೆಯ ಬಾಗಿಲ ಮುಂದೆ ತಂದು ನಿಲ್ಲಿಸಿ ಆಟವಾಡಿಸಿ ಈ ಜನ ದವಸಧಾನ್ಯ, ಬಟ್ಟೆಬರೆ ಸಂಗ್ರಹಿಸುತ್ತಾರೆ. ಇವರಲ್ಲಿ ಒಬ್ಬ ಓಲಗದವ. ಈತ ಶಾಸ್ತ್ರ ಹೇಳುವ ಅಭ್ಯಾಸ ಮಾಡಿಕೊಂಡಿರುತ್ತಾನೆ, ಒಳ್ಳೆಯದನ್ನು ನುಡಿಯುತ್ತಾನೆ. 'ಶ್ರೀರಾಮನಿಗೆ ಪಂಚೆ ಕೊಡಿ', 'ಸೀತಮ್ಮನಿಗೆ ಸೀರೆ ಕೊಡಿ', 'ಅವರ ಲಗ್ನಕ್ಕೆ ಕಾಸು ಕೊಡಿ'–ಎಂದು ಅಂಗಲಾಚಿ ಜನರನ್ನು ಬೇಡುತ್ತಾನೆ. ಜೊತೆಗೆ ಅವುಗಳಿಗೆ ಮೇವನ್ನೂ

ಸಂಪಾದನೆ ಮಾಡಿಕೊಳ್ಳುತ್ತಾನೆ. ಸುಗ್ಗಿಯ ದಿವಸಗಳಲ್ಲಿ ಈ ತಂಡದವರು ಕೋಲೆಬಸವ ಜೊತೆ ಕಣಗಳಿಗೆ ಹೋಗಿ ಅಲ್ಲಿ ದವಸವನ್ನು ಸಂಗ್ರಹಿಸುತ್ತಾರೆ. ಮಕ್ಕಳಿಗೆ ಭೀ ಬಾಲಗ್ರಹ (ಹಲ್ಲು ಕಚ್ಚುವಿಕೆ, ಇಲ್ಲವೆ ಕಿರಚಾಟ) ಮುಂತಾದವುಗಳ ನಿವಾರಣೆಗೆ ಮಕ್ಕಳು ಬಸವನ ದೇಹದ ಅಡಿಯಿಂದ ನುಸುಳುವಂತೆ ಮಾಡುತ್ತಾರೆ. ಪ್ರಸಾದವಾಗಿ ಕುಂಕುಮವನ್ನು ಕೊಡುತ್ತಾರೆ.

ಕೋಲೆಬಸವನ ಜೋಡಿ ನೋಡಲು ಬಹಳ ಸುಂದರವಾಗಿ ಕಾಣುತ್ತದೆ. ಅವುಗಳ ದೇಹ ಮತ್ತು ಭುಜಗಳನ್ನು ಎತ್ತರವಾಗಿ ಕಾಣುವಂತೆ ವರ್ಣವರ್ಣದ ಜೂಲುಗಳಿಂದ ಅಲಂಕರಿಸಿರುತ್ತಾರೆ. ಕೋಡುಗಳು ಪುಟ್ಟದಾಗಿದ್ದರೂ ಉದ್ದನಾಗಿ

ತೋರುವಂತೆ ಬಟ್ಟೆ ಸುತ್ತಿ ಸಿಂಗರಿಸಿರುತ್ತಾರೆ. ಕೋಡಿನ ತುದಿಗಳಲ್ಲಿ ಬಣ್ಣ ಬಣ್ಣದ ಕುಚ್ಚುಗಳನ್ನು ಜೋಡಿಸಿರುತ್ತಾರೆ. ಕಾಲುಗಳಿಗೆ ಗಗ್ಗರ ಕಟ್ಟಿರುತ್ತಾರೆ. ಹಣೆಯ ಮೇಲೆ ಲೋಹದಿಂದ ಮಾಡಿದ ಶ್ರೀರಾಮನ ಇಲ್ಲವೆ ಆಂಜನೇಯನ ಲಾಂಛನವನ್ನು ಅಳವಡಿಸಿರುತ್ತಾರೆ; ಇಲ್ಲವೆ ಕವಡೆಸರದಲ್ಲಿ ಶೃಂಗರಿಸುತ್ತಾರೆ. ಕೋಲೆಬಸವನನ್ನು ಆಡಿಸುವ ಜನರಲ್ಲಿ ಇಬ್ಬರು ವಾದ್ಯದವರು. ಅವರಲ್ಲಿ ಒಬ್ಬಾತ ಮುಖವೀಣೆ ಬಾರಿಸುತ್ತಾನೆ. ಮತ್ತೊಬ್ಬ ಡೋಲು ಬಾರಿಸುತ್ತಾನೆ. ಉಳಿದಿಬ್ಬರು ಬಸವನನ್ನು ಆಡಿಸುತ್ತಾರೆ.

ಗ್ರಾಮದಿಂದ ಗ್ರಾಮಕ್ಕೆ ಸಾಗುವ ಈ ಜನರ ಆಟ ಬಹಳ ವಿಚಿತ್ರವಾಗಿ ಕಾಣುತ್ತದೆ. ಕೋಲೆಬಸವಗಳು ಪ್ರಯಾಣ ಕಾಲದಲ್ಲಿ ಮಾಲೀಕರ ಗಂಟುಮೂಟೆ ಹೊರುತ್ತವೆ. ಯಾವುದಾದರೂ ಹಳ್ಳಿಗೆ ಬಂದರೆ ಊರ ಹೊರಗಿನ ಚಾವಡಿಯಲ್ಲಿ ಇಲ್ಲವೇ ಆಲದ ಮರದ ನೆರಳಡಿಯೇ ಇವರ ಬಿಡಾರ.

ಕೋಲೆಬಸವನ ಆಟದಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಅವುಗಳ ಸಿಂಗಾರ, ನಟನೆ, ಆಟಗಾರರ ಮಾತುಗಾರಿಕೆ–ಇವು. ಆಟದ ಮುಖ್ಯ ಕಥೆ ಸೀತಾರಾಮರ ಲಗ್ನ. ಸೀತೆ ಹಾಗೂ ರಾಮರ ಕಡೆ ಒಬ್ಬೊಬ್ಬರು ನಿಂತು ಲಗ್ನ ಮಾಡಿಸುವಾಗ ಅವರಲ್ಲಿ ನಡೆಯುವ ಸಂಭಾಷಣೆ, ಏರ್ಪಡುವ ಸನ್ನಿವೇಶಗಳು ತುಂಬ ವಿನೋದವಾಗಿರುತ್ತದೆ.

ಆಟಗಾರರಲ್ಲಿ ಒಬ್ಬಾತ ರಾಮನನ್ನು (ಬಸವ) ಕರೆದು 'ಗೌಡರ ಹೆಸರನ್ನು ಕೇಳಿ, ಗೌಡರು ದಾನಧರ್ಮ ತೂಗುವುದು ಬಲಗೈ......... ಗೊತ್ತಾಯ್ತಾ' ಎಂದು ಅವರ ಬಲಗೈ ತೋರಿಸಿದರೆ ಬಸವ ತನ್ನ ಬಲಗಾಲನ್ನು ಹಿಂದಕ್ಕೆ ಕೊಂಚ ಎತ್ತಿ ತೋರಿಸುತ್ತದೆ; ಗೌಡರಿಗೆ ನಮಸ್ಕಾರ ಮಾಡೆಂದರೆ ಬಾಗಿ ಮುಂದಿನ ಕಾಲನ್ನು ಹಿಂಭಾಗಕ್ಕೆ ಬಾಗಿಸಿ ತಲೆಬಾಗಿ ನಮಸ್ಕರಿಸುತ್ತದೆ.

ಅನಂತರ ಲಕ್ಷ್ಮಣನನ್ನು (ಪುಟ್ಟ ಕರು) ಆತ ಕರೆಯುತ್ತಾನೆ. ಕರೆದು 'ಕುಸ್ತಿ ಮಾಡು ಬಾರೋ' ಎನ್ನುತ್ತಾನೆ. ಆಗ ಲಕ್ಷ್ಮಣ ಬಂದು ಸುತ್ತು ಹಾಕುತ್ತದೆ. 'ಹೋಗಪ್ಪ' ಎಂದು ಹೇಳಿದ ಕೂಡಲೆ ಸ್ವಲ್ಪ ದೂರ ಹೋಗಿ ನಿಲ್ಲುತ್ತದೆ. ಸೀತೆಯೊಡನೆ ರಾಮನ ಲಗ್ನ ಮಾಡಿಸುವ ರೀತಿಯಂತೂ ತುಂಬ ಆಕರ್ಷಕವಾದುದು.

ರಾಮನ ಕಡೆ ವ್ಯಕ್ತಿ 'ನಮ್ಮ ರಾಮಣ್ಣನಿಗೆ ಹೆಣ್ಣು ಕೊಡುವವರು ಯಾರು?' ಎಂದು ಕೇಳುತ್ತಾನೆ.

'ನಾವು' ಎಂದು ಉತ್ತರಿಸುತ್ತಾನೆ, ಸೀತೆ ಕಡೆಯವ. ಮದುವೆ ಬೇಕೋ ಬೇಡವೋ ಎಂದು ತಿಳಿಯಲು 'ಏನಪ್ಪ, ಮದ್ವಿ ಬೇಕಾ?' ಎಂದು ಕೇಳುತ್ತಾನೆ ಗಂಡಿನವ. ಹೆಣ್ಣಿನವ 'ಧಾರೆ ಅಕ್ಕಿ ತಕ್ಕೊಂಡು ಬಂದಿದಿಯಾ?' ಎಂದು ರಾಮನನ್ನು ಕೇಳಿದರೆ ಬಸವ ತಂದಿದೀನಿ ಅನ್ನುವಂತೆ ತಲೆ ಹಾಕುತ್ತದೆ.

ಸೀತಮ್ಮನೂ (ಹಸು) ತಲೆ ಹಾಕಿ ಮದುವೆಗೆ ತನ್ನ ಸಮ್ಮತಿ ನೀಡುತ್ತದೆ.

ಮುಂದಿನ ಆಟದಲ್ಲಿ ಮದುವೆಗೆ ಮೊದಲಿನ ಗಂಡು ಹೆಣ್ಣುಗಳ ಮುನಿಸು, ಅವುಗಳ ಬೇಡಿಕೆಗಳು, ಮಧ್ಯಸ್ಥಗಾರರ ಸಮಾಧಾನ–ಈ ಪ್ರಸಂಗಗಳು ಬರುತ್ತವೆ. ಕೊನೆಗೆ ಬಾಜಾಬಜಂತ್ರಿಯೊಡನೆ ರಾಮಸೀತೆಯರ ವಿವಾಹ ಜರಗುತ್ತದೆ. ಲಗ್ನವಾದ ಮೇಲೆ ರಾಮಚಂದ್ರ ತಾನು ಕಲಿತ ಕೆಲವು ಚಮತ್ಕಾರಗಳನ್ನು ಪ್ರದರ್ಶಿಸುತ್ತಾನೆ. ರಾಮಚಂದ್ರ ಎದೆಯ ಮೇಲೆ ನಿಂತುಕೊಳ್ಳುವ ದೃಶ್ಯ ಅಪರೂಪವಾಗಿರುತ್ತದೆ. ಮೂರು ಕಾಲನ್ನು ತೊಡೆಯ ಮೇಲೆ ಇರಿಸಿ ಒಂದು ಕಾಲನ್ನು ಮಲಗಿರುವವನ ಎದೆಯ ಮೇಲೆ ಇರಿಸುತ್ತಾನೆ. 'ಸ್ವಲ್ಪ ನಾಟ್ಯ ಕುಣಿಯಪ್ಪ' ಅಂತ ಹೇಳಿದರೆ ತಕದಿಂ ತಕದಿಂ ಎಂದು ಕುಣಿಯುತ್ತಾನೆ. 'ಕೆಳಕ್ಕೆ ಹೋಗಪ್ಪ' ಅಂತ ಹೇಳಿದರೆ ಕೆಳಕ್ಕೆ ಹೋಗಿ ನಿಲ್ಲುತ್ತದೆ.

ಸಾಮಾನ್ಯವಾಗಿ ಕೋಲೆಬಸವ ಆಡಿಸುವವರು ಕಡುಬಡವರು. ವಂಶಪಾರಂಪರ್ಯವಾಗಿ ತಮ್ಮ ಈ ಕಸಬನ್ನು ಅವರು ಮುಂದುವರಿಸಿಕೊಂಡು ಬಂದವರಾಗಿರುತ್ತಾರೆ. ಮನೆಮಠ ಇದ್ದರೂ ಅವರಿಗೆ ಅದರ ಕಡೆ ಗಮನವಿರುವುದಿಲ್ಲ. ವರ್ಷವೆಲ್ಲ ಊರಿಂದ ಊರಿಗೆ ವಲಸೆ ಹೋಗಿ ಬಸವನನ್ನು ಆಡಿಸಿ ಭಿಕ್ಷೆ ಬೇಡಿ ಜೀವನ ಸಾಗಿಸುವುದೇ ಇವರಿಗೆ ಪ್ರಿಯ. ಈ ಜನಾಂಗದವರಲ್ಲಿ ಕೆಲವರಿಗೆ ಈಗೀಗ ಅಲ್ಪ ಸ್ವಲ್ಪ ಜಮೀನು ಲಭ್ಯವಾಗಿದ್ದು ಅಂಥವರು ಬೇಸಾಯಕ್ಕೆ ಇಳಿದಿದ್ದಾರೆ. ಅಷ್ಟಾಗಿ ವಿದ್ಯಾವಂತರಲ್ಲದಿದ್ದರೂ ಕಸಬಿಗೆ ತಕ್ಕ ಮಾತಿನ ಚಮತ್ಕಾರ ಇವರಲ್ಲಿ ಬೆಳೆದುಬಂದಿದೆ. ಅದರಿಂದಾಗಿ ಇವರ ಜೀವನ ಇಂದಿಗೂ ಸುಗಮವಾಗಿ ಸಾಗುತ್ತಿದೆ. ಮೂಕಪ್ರಾಣಿಗಳನ್ನು ಜೊತೆ ಹಾಕಿಕೊಂಡು ರಾಮಸೀತೆಯರ ಹೆಸರಿಟ್ಟು ಆಡಿಸಿ ಜನರಲ್ಲಿ ಒಂದು ಕಡೆ ಪೌರಾಣಿಕ ಪ್ರಜ್ಞೆಯನ್ನು ಇವರು ಎಚ್ಚರಿಸುತ್ತಾರಲ್ಲದೆ ಸಾಮಾನ್ಯ ಜನರ ಮದುವೆ ಕಲಾಪವನ್ನು ಪ್ರಹಸನ ರೂಪದಲ್ಲಿ ಅಡಿ ತೋರಿಸಿ ಅವರನ್ನು ಸಂತೋಷಗೊಳಿಸುವ ಕೆಲಸವನ್ನೂ ಮಾಡುತ್ತಾರೆ.

**(ಪಿ.ಆರ್.ಟಿ.)**

**ಕೋಲೆಸ್ಕಿ ವಿಧಾನ :** ರೇಖೀಯ ಏಕಕಾಲಿಕ ಸಮೀಕರಣಗಳಲ್ಲಿ ಎಡಪಾರ್ಶ್ವದ ಗುಣಾಂಕಗಳ ಮಾತೃಕೆ (ಮ್ಯಾಟ್ರಿಕ್ಸ್) ಸಮಾಂಗವಾಗಿರುವಾಗ ಆ ಸಮೀಕರಣಗಳನ್ನು ಬಿಡಿಸಲು ಬಳಸುವ ಒಂದು ಉಪಯುಕ್ತ ವಿಧಾನ. ವರ್ಗಮೂಲವಿಧಾನವೆಂದೂ ಇದಕ್ಕೆ ಹೆಸರುಂಟು. ಉದಾಹರಣೆಗೆ ಈ ಕೆಳಗಿನ ಸಮೀಕರಣಗಳನ್ನು ಪರಿಶೀಲಿಸಿ:

$$a_{11}x_1 + a_{12}x_2 + a_{13}x_3 = y_1$$
$$a_{12}x_1 + a_{22}x_2 + a_{23}x_3 = y_2$$
$$a_{13}x_1 + a_{23}x_2 + a_{33}x_3 = y_3$$

ಗುಣಾಂಕಗಳನ್ನು ಮುಂದೆ ತೋರಿಸಿದಂತೆ ಎರಡು ವ್ಯೂಹಗಳಲ್ಲಿ ಬರೆಯುತ್ತೇವೆ.

| | | | | | |
|---|---|---|---|---|---|
| $a_{11}$ | $a_{12}$ | $a_{13}$ | $y_1$ | $S_2$ | |
| $a_{12}$ | $a_{22}$ | $a_{23}$ | $y_2$ | $S_2$ | I |
| $a_{13}$ | $a_{23}$ | $a_{33}$ | $y_3$ | $S_3$ | |
| $u_{11}$ | $u_{12}$ | $u_{13}$ | $v_1$ | $S_4$ | |
| 0 | $u_{22}$ | $u_{23}$ | $v_2$ | $S_5$ | II |
| 0 | 0 | $u_{33}$ | $u_3$ | $S_6$ | |

ಮೇಲಿನ (ಎಂದರೆ Iನೆಯ) ವ್ಯೂಹದಲ್ಲಿ ದತ್ತ ಸಮೀಕರಣಗಳ ಗುಣಾಂಕಗಳನ್ನೂ ಸಮೀಕರಣಗಳ ಬಲಭಾಗಗಳನ್ನೂ ನಿರೂಪಿಸಿದ್ದೇವೆ. ಅಲ್ಲಿ ಬಂದಿರುವ Sಗಳ ಬೆಲೆಗಳು ಹೀಗಿವೆ:

| | | | | | |
|---|---|---|---|---|---|
| $a_{11}$ | $a_{12}$ | $a_{13}$ | $y_1$ | $S_2$ | |
| $S_1=$ | $a_{11}$ | $a_{12}$ | $a_{13}$ | $y_1$ | III |
| $S_2=$ | $a_{12}$ | $a_{22}$ | $a_{23}$ | $y_2$ | |
| $S_3=$ | $a_{13}$ | $a_{23}$ | $a_{33}$ | $y_3$ | |

ಎಂದರೆ ಒಂದೊಂದು Sನ ಬೆಲೆಯೂ ಆಯಾ ಅಡ್ಡಸಾಲಿನ ಇತರ ಧಾತುಗಳ ಮೊತ್ತ. ಕೆಳಗಿನ (ಎಂದರೆ IIನೆಯ) ವ್ಯೂಹದ ಧಾತುಗಳನ್ನು ನಿರ್ಧರಿಸುವ ವಿಧಿಯನ್ನು ಮುಂದೆ ಬರೆದಿದೆ.

ಕೆಳಗಿನ ವ್ಯೂಹದ sನೆಯ ನೀಟ ಸಾಲಿನೊಡನೆ rನೆಯ ನೀಟಸಾಲಿನ ಗುಣಲಬ್ಧಗಳ ಮೊತ್ತ = ಮೇಲಿನ ವ್ಯೂಹದ rನೆಯ ಅಡ್ಡಸಾಲಿನ ಮತ್ತು sನೆಯ ನೀಟ ಸಾಲಿನ ಧಾತು.

ಎಂದರೆ, $r=1, s=1$ ಆದಾಗ ಕೆಳಗಿನ ವ್ಯೂಹದ 1ನೆಯ ನೀಟ ಸಾಲಿನೊಡನೆ (ಧಾತು $u_{11}$) 1ನೆಯ ನೀಟಸಾಲಿನ (ಧಾತು $u_{11}$) ಗುಣಲಬ್ಧಗಳ ಮೊತ್ತ $u_{11}^2$ ಮಾತ್ರ. ಇದು ಮೇಲಿನ ವ್ಯೂಹದ 1ನೆಯ ಅಡ್ಡ ಸಾಲಿನ ಮತ್ತು 1ನೆಯ ನೀಟಸಾಲಿನ ಧಾತು $a_{11}$ಕ್ಕೆ ಸಮ. ಆದ್ದರಿಂದ $u_{11}^2 = a_{11}$. $r = 1, s = 2$ ಆದಾಗ ಮೇಲಿನಂತೆಯೇ ಮುಂದುವರಿದು $u_{11}u_{12}=a_{12}$ ಎಂದು ನೋಡಬಹುದು.

ಈಗ ಹೀಗೆ ದೊರೆಯುವ ಸಮಸ್ತ ಫಲಿತಾಂಶಗಳನ್ನು ಮುಂದೆ ಯಾದಿ ಮಾಡಿದೆ.

| | | |
|---|---|---|
| r=1 | s=1 | $u_{11}^2 = a_{11}$ |
| r=1 | s=2 | $u_{11}u_{12} = a_{12}$ |
| r=1 | s=3 | $u_{11}u_{13} = a_{13}$ |
| r=1 | s=4 | $v_{11}v_1 = y_1$ |
| r=1 | s=5 | $u_{11}S_4=S_1$ |
| r=2 | s=1 | $u_{11}u_{12} =a_{12}$ |
| r=2 | s=2 | $u_{12}^2+u_{22}^2 = a_{22}$ |
| r=2 | s=3 | $u_{12}u_{13}+u_{22}u_{23} = a_{23}$ |
| r=2 | s=4 | $u_{12}v_1+u_{22}v_2=y_2$ |
| r=2 | s=5 | $u_{12}S_4+u_{22}S_5=S_2$ |
| r=3 | s=1 | $u_{11}u_{13}=a_{13}$ |
| r=3 | s=2 | $u_{12}u_{13}+u_{22}u_{23}=a_{23}$ |
| r=3 | s=3 | $u_{13}^2+u_{23}^2+u_{33}^2=a_{33}$ |
| r=3 | s=4 | $u_{13}v_1+u_{23}v_2+u_{33}v_3=y_3$ |
| r=3 | s=5 | $u_{13}S_4+u_{23}S_5+u_{33}S_6=S_3$ |

ಆದ್ದರಿಂದ

$$u_{11}= \sqrt{a_{11}}, u_{12} = a_{12}/u_{11}, u_{13}=a_{13}/u_{11}$$

$$u_{22}=\sqrt{a_{22}-u_{12}^2}, u_{23}=(a_{23}-u_{12}u_{13})/u_{22}$$

$$u_{33}=\sqrt{a_{33}-u_{13}^2-u_{23}^2}, v_1 = y_1/u_{11},$$

$$u_2 = (y_2 - u_{12}v_1)/u_{22},$$

$$u_3=(y_3-u_{13}v_1-u_{23}v_2)/u_{13}$$

ಈ ಗಣನೆಗಳು ಸರಿಯೇ ಎಂದು ಈ ರೀತಿ ತಾಳೆ ನೋಡಬಹುದು : ಕೆಳಗಿನ ವ್ಯೂಹದ ಯಾವುದೇ ಅಡ್ಡಸಾಲಿನ ಮೊದಲಿನ ನಾಲ್ಕು ಧಾತುಗಳ ಮೊತ್ತ ಅನುರೂಪ Sಗೆ ಸಮವಾಗಬೇಕು. ಉದಾಹರಣೆಗೆ, $u_{11} + u_{12} + u_{13} + v_1 = S_4$ ಆಗಬೇಕು.

$\therefore \sqrt{a_{11}} + \frac{a_{12}}{\sqrt{a_{11}}} + \frac{a_{13}}{\sqrt{a_{11}}} + \frac{y_1}{\sqrt{a_{11}}} = \frac{s_1}{\sqrt{a_{11}}}$ ಆಗಬೇಕು.

ಎಂದರೆ, $4_{11}+4_{12}+4_{13}+v_1=s_4$ ಆಗಬೇಕು.

ಇದು III ರ ಮೊದಲನೆಯ ಸಮೀಕರಣವಾದ್ದರಿಂದ ನಿಜವಾಗಿದೆ.

ಆದ್ದರಿಂದ ಇಲ್ಲಿ ನಡೆದಿರುವ ಕ್ರಿಯೆ ಇಷ್ಟು : ದತ್ತ ಸಮೀಕರಣಗಳನ್ನು ತತ್ಸಮಾನ ಸಮೀಕರಣಗಳ ಒಂದು ಗಣದಿಂದ ಪ್ರತಿಸ್ಥಾಪಿಸಿದ್ದೇವೆ; ಆ ಗಣವನ್ನು ಕೆಳಗಿನ ವ್ಯೂಹ II ಸಾಂಕೇತೀಕರಿಸುತ್ತದೆ ಎಂದು ಈಗ ಹೇಳಬಹುದು. ಅಂದರೆ ಮೂಲ ಸಮೀಕರಣಗಳ ಬದಲು ಈಗ ನಮಗೆ ದೊರೆಯುವ ಸಮೀಕರಣಗಳು ಹೀಗಿವೆ:

$$u_{11}x_1 + u_{12}x_2 + u_{13}x_3 = v_1$$
$$u_{22}x_2 + u_{23}x_3 = v_2$$
$$u_{33}x_3 = v_3$$

ಈ ಸಮೀಕರಣಗಳನ್ನು ಬಿಡಿಸುವುದು ಸುಲಭ. ಮೂರನೆಯ ಸಮೀಕರಣದಿಂದ ಆರಂಭಿಸಿ ಮೇಲಕ್ಕೆ ಸಾಗಬೇಕು. ಆಗ

$$x_3=v_3/u_{33}$$
$$x_2=(v_2-u_{23}x_3)/u_{22}$$
$$x_1=(v_1=u_{12}x_2-u_{13}x_3)/u_{11}$$

ಎಲ್ಲ u ಗಳ ಮತ್ತು vಗಳ ಬೆಲೆಗಳು a ಮತ್ತು yಗಳಲ್ಲಿ ತಿಳಿದಿರುವುದರಿಂದ ದತ್ತ ಸಮೀಕರಣಗಳ ಬಿಡಿಸಿಕೆ ಪೂರ್ಣವಾಯಿತು.

ಎಡಪಾರ್ಶ್ವಗಳು ಒಂದೇ ಆಗಿರುವಂಥ ಸಮೀಕರಣಗಳ ಹಲವಾರು ಗಣಗಳು ಇದ್ದಾಗ ಬಲಪಾರ್ಶ್ವಗಳ ಭಿನ್ನ ನೀಟಸಾಲುಗಳೆಲ್ಲವನ್ನೂ ವ್ಯೂಹಗಳಲ್ಲಿ ಒಳಗೂಡಿಸಿಕೊಂಡು ಏಕಕಾಲದಲ್ಲಿ ಮುಂದುವರಿಯಬಹುದು. ನಿರ್ದಿಷ್ಟವಾಗಿ ಹೇಳುವುದಾದರೆ $(y_1,y_2,y_3)$ರನ್ನು ಏಕಮಾನ ಮಾತೃಕೆಯ ನೀಟಸಾಲುಗಳಾವ (1,0,0), (0,1,0) ಮತ್ತು (0,0,1) ಇವುಗಳಿಗೆ ಅನುಕ್ರಮವಾಗಿ ಸಮೀಕರಿಸುವುದರ ಮೂಲಕ (aij)ಯ ವ್ಯಸ್ತ ಮಾತೃಕೆಯನ್ನು (ಇನ್ವರ್ಸ್ ಮ್ಯಾಟ್ರಿಕ್ಸ್) ಪಡೆಯಬಹುದು. ಈ ಸಂದರ್ಭದಲ್ಲಿ ವ್ಯಸ್ತದ ಧಾತುಗಳನ್ನು vಗಳ ನೀಟ ಸಾಲುಗಳಿಂದ ಸೀದಾ ಪಡೆಯಬಹುದು. ಈ ಕ್ರಿಯೆಯ ಸೂತ್ರವಿಧಿ ಹೀಗಿದೆ:

vಗಳ qನೆಯ ನೀಟಸಾಲಿನೊಡನೆ pನೆಯ ನೀಟಸಾಲಿನ ಗುಣಲಬ್ಧಗಳ ಮೊತ್ತ = ವ್ಯಸ್ತದ pನೆಯ ಅಡ್ಡಸಾಲಿನ ಮತ್ತು ನೆಯ ನೀಟಸಾಲಿನ ಧಾತು.

ಕೋಲೆಸ್ಕಿ ವಿಧಾನ ರೇಖೀಯ ಸಮೀಕರಣಗಳನ್ನು ಬಿಡಿಸುವಲ್ಲಿ ಡೂಲಿಟಲ್ ವಿಧಾನಕ್ಕೆ (**ನೋಡಿ– ಡೂಲಿಟಲ್ಸ್ ವಿಧಾನ**) ಒಂದು ಪರ್ಯಾಯ ವಿಧಾನವನ್ನು ಒದಗಿಸುತ್ತದೆ. ಅನಾವಶ್ಯಕ ಮಧ್ಯವರ್ತಿ ಹಂತಗಳು ಕೋಲೆಸ್ಕಿ ವಿಧಾನದಲ್ಲಿ ನಿವಾರಣೆಗೊಂಡಿರುವುದೊಂದು ಸೌಕರ್ಯ. *

**ಕೋಲ್ಡ್, ಕ್ರಿಶ್ಚನ್ :** 1816–70. ಡೆನ್ಮಾರ್ಕಿನಲ್ಲಿ ಗ್ರುಂಟ್ವಿಗ್ಗನ ಜನತಾಶಾಲೆಗಳ ಕಲ್ಪನೆಗೆ ರೂಪುಕೊಟ್ಟವರಲ್ಲಿ ಒಬ್ಬ. ಮದುವೆಯಾಗದೆ ಏಕಾಂಗಿಯಾಗಿದ್ದುಕೊಂಡು ತನ್ನ ಸರ್ವಸ್ವವನ್ನೂ ಜನತಾ ಶಿಕ್ಷಣಶಾಲೆಗಳ ಪುರೋಭಿವೃದ್ಧಿಗಾಗಿ ಮುಡುಪಾಗಿಟ್ಟ ಕೀರ್ತಿ ಈತನದು. ಹುಟ್ಟಿನಿಂದ ಕೋಲ್ಡ್ ಒಬ್ಬ ಚಮ್ಮಾರನ ಮಗ; ಬಡಕುಟುಂಬದಲ್ಲಿ ಹುಟ್ಟಿದವ. ಚಿಕ್ಕಂದಿನಲ್ಲಿ ತಾಯಿಯಿಂದ ಒಳ್ಳೆಯ ಕಥೆಗಳನ್ನು ಕೇಳಿದನಲ್ಲದೆ ಶಾಲೆಯಲ್ಲಿದ್ದಾಗ ನೆರೆಹೊರೆಯವರನ್ನು ಮತ್ತು ದೇವರನ್ನು ಹೇಗೆ ಪ್ರೀತಿಸುವುದು ಎಂಬುದನ್ನು ತಿಳಿದುಕೊಂಡ.

ವಯಸ್ಕನಾದ ಮೇಲೆ ಕೋಲ್ಡ್ ಶ್ರೀಮಂತರ ಮಕ್ಕಳಿಗೆ ಪಾಠ ಹೇಳುತ್ತಿದ್ದು ರ್ಯೋಡಿಂಗ್ ಜನತಾ ಶಾಲೆಯ ನಿರ್ಮಾಣದಲ್ಲಿ ಸಹಕಾರ ನೀಡಿದ. ಡೇನಿಷ್ ಅಸೋಸಿಯೇಷನ್ನಿನ ಮುಖಂಡನಾಗಿ ಉಪನ್ಯಾಸಗಳನ್ನು ಮಾಡಿದ. ಧಾರ್ಮಿಕ ವಿಷಯಗಳನ್ನು ತನಗೆ ಇಷ್ಟ ಬಂದ ರೀತಿ ಬೋಧಿಸಲು ಸ್ವಾತಂತ್ರ್ಯ ವಿರಲಿಲ್ಲವಾಗಿ ಜುಗುಪ್ಸೆಗೊಂಡು ಏಷ್ಯ ಮೈನರ್‌ಗೆ ಹೋಗಿ ಅಲ್ಲಿ ಒಂದು ಕ್ರೈಸ್ತಸಂಸ್ಥೆಯಲ್ಲಿ ಸೇವಕನಾದ. ಅನಂತರ ತುರ್ಕಿಯ ಪಟ್ಟಣ ಒಂದರಲ್ಲಿ ಪುಸ್ತಕಕ್ಕೆ ರಟ್ಟು ಕಟ್ಟುವ ಕೆಲಸ ಮಾಡಿದ. ಅಲ್ಲಿಯ ಏಕಾಂತವಾಸದಲ್ಲಿ ಶಿಕ್ಷಣದ ಬಗ್ಗೆ ಇವನ ಭಾವನೆಗಳು ಪರಿಪಕ್ವಗೊಂಡವು.

ರಟ್ಟು ಕಟ್ಟಿ ಸಂಪಾದಿಸಿದ 55 ಪೌಂಡುಗಳೊಡನೆ ಕೋಲ್ಡ್ ಡೆನ್ಮಾರ್ಕಿಗೆ ಹಿಂತಿರುಗಿ ಗ್ರುಂಟ್ವಿಗ್ಗನನ್ನು ಕಂಡು ಅವನ ಮುಂದೆ ತನ್ನ ಯೋಜನೆಯನ್ನು ಇಟ್ಟ. ಜನತಾ ಶಾಲೆಗಳಿಗೆ ಸೇರುವ ವಿದ್ಯಾರ್ಥಿಗಳ ವಯಸ್ಸು 18 ಇರಬೇಕೆ 15 ಇರಬೇಕೇ ಎಂಬ ಬಗ್ಗೆ ಇಬ್ಬರಲ್ಲಿ ವಿವಾದ ನಡೆಯಿತಾದರೂ ಕೊನೆಗೆ 18 ಸರಿಯಾದ ವಯಸ್ಸು ಎಂಬ ಗ್ರುಂಟ್ವಿಗ್ಗನ ಅಭಿಪ್ರಾಯವನ್ನು ಕೋಲ್ಡ್ ಒಪ್ಪಿದ. ಗ್ರುಂಟ್ವಿಗ್ 70 ಪೌಂಡುಗಳನ್ನು ಕೂಡಿಸಿಕೊಟ್ಟ.. ಕೇವಲ 125 ಪೌಂಡುಗಳಿಂದ ಜನತಾಶಾಲೆಯನ್ನು ತೆಗೆಯುವುದು ಸಾಧ್ಯವಿರಲಿಲ್ಲ. ರಿಸ್ಲಿಂಗ್ ಎಂಬಲ್ಲಿ ಕೋಲ್ಡ್ ಸ್ವಲ್ಪ ಜಮೀನನ್ನು ಕೊಂಡು ಒಂದು ಹುಲ್ಲು ಜೋಪಡಿಯನ್ನು ನಿರ್ಮಿಸಿಕೊಂಡ. ಶಾಲೆಗೆ ಸೇರಲು 25 ವಿದ್ಯಾರ್ಥಿಗಳು ಮುಂದೆ ಬಂದರು. ಈತನ ಅವಿವಾಹಿತ ತಂಗಿ ಅಡಿಗೆಮನೆಯ ವ್ಯವಸ್ಥೆ ವಹಿಸಿಕೊಂಡಳು. ಕೋಲ್ಡ್ ಅಂಥ ಪಂಡಿತನಲ್ಲ. ಆದರೆ ಒಳ್ಳೆಯ ಉಪಾಧ್ಯಾಯ. ವಿದ್ಯಾರ್ಥಿಗಳನ್ನು ಹುರಿದುಂಬಿಸುವ ವ್ಯಕ್ತಿತ್ವ ಅವನಲ್ಲಿತ್ತು; ದೇಶದ ಚರಿತ್ರೆಯನ್ನು ಮತ್ತು ಬೈಬಲ್ಲಿನ ಕಥೆಗಳನ್ನು ಈತ ಸ್ವಾರಸ್ಯವಾಗಿ ಹೇಳುತ್ತಿದ್ದ. ನಾನು ಹೇಳುವುದನ್ನು ಗಮನವಿಟ್ಟು ಕೇಳಿದವರು ಈ

ಪ್ರಪಂಚವನ್ನು ಬಿಟ್ಟ ಅನಂತರವೂ ಅದನ್ನು ಮರೆಯಲಾರರು ಎಂದು ಈತ ಆಗಾಗ ತನ್ನ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದ. ಕೋಲ್ಡ್ ವಿದ್ಯಾರ್ಥಿಗಳ ಜೊತೆಯಲ್ಲೇ ವಾಸಿಸುತ್ತಿದ್ದ. ಅವರೊಡನೆ ಕುಳಿತು ಊಟ ಮಾಡುತ್ತಿದ್ದ. ಅವರೊಡನೆ ಜೀವನದ ಸಮಸ್ಯೆಗಳನ್ನು ಚರ್ಚಿಸುತ್ತಿದ್ದ. ವಿದ್ಯಾರ್ಥಿಗಳು ಏವೆಯಿಕ್ಕದೆ, ತುಟಿಪಿಟಕ್ಕೆನ್ನದೆ ಕುಳಿತು ಇವನ ಮಾತುಗಳನ್ನು ಕೇಳುತ್ತಿದ್ದರು. ವಿದ್ಯಾರ್ಥಿಗಳು ಟಿಪ್ಪಣಿಗಳನ್ನು ಬರೆದುಕೊಳ್ಳುವುದು ಕೋಲ್ಡನಿಗೆ ಇಷ್ಟವಿರಲಿಲ್ಲ. ಎಲ್ಲ ವಿಷಯಗಳನ್ನು ವಿದ್ಯಾರ್ಥಿಗಳು ತಲೆಯಲ್ಲಿ ತುಂಬಿಕೊಳ್ಳಬೇಕೆಂಬುದು ಇವನ ಆಸೆ. ಒಮ್ಮೆ ಸರ್ಕಾರದ ಅಧಿಕಾರಿಯೊಬ್ಬ ಶಾಲೆಯನ್ನು ತನಿಖೆಮಾಡಲು ಬಂದವನು ಶಾಲೆಯ ಪ್ರಗತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದನಂತೆ. ಇಂದು ಹಾಕಿದ ಬೀಜ ಇಂದೇ ಮೊಳೆಯುವುದೇ–ಎಂದು ಕೋಲ್ಡ್ ಕೊಟ್ಟ ಉತ್ತರ ತನಿಖಾಧಿಕಾರಿಯ ಕಣ್ಣನ್ನು ತೆರೆಯಿಸಿತಾಗಿ ಆತ ತೃಪ್ತಿಗೊಂಡು ಸರ್ಕಾರಕ್ಕೆ ಶಿಫಾರಸು ಮಾಡಿ ಶಾಲೆಗೆ ಬರಬೇಕಾಗಿದ್ದ ಸಹಾಯಧನವನ್ನು ಕೊಡಿಸಿದನಂತೆ. ಜನತಾಶಾಲೆಗಳ ಆಡಳಿತದಲ್ಲಿ ಸರ್ಕಾರ ಕೈಹಾಕದೆ ನೆರವು ನೀಡುವಂತೆ ಮಾಡಲು ಶ್ರಮಿಸಿದ ಕೀರ್ತಿ ಕೋಲ್ಡನಿಗೆ ಸಲ್ಲುತ್ತದೆ. (ಟಿ.ಆರ್.ಎನ್.)

**ಕೋಲ್ಬೆ, ಅಡಾಲ್ಫ್‌ವಿಲ್‌ಹೆಲ್ಮ್ ಹರ್ಮನ್ :** 1818–84. ಜರ್ಮನಿಯ ರಸಾಯನ ವಿಜ್ಞಾನಿ. ನಿರವಯವ ವಸ್ತುಗಳಿಂದ ಸಾವಯವ ಸಂಯುಕ್ತವನ್ನು ಸರ್ವಸಮ್ಮತವಾದ ರೀತಿಯಲ್ಲಿ ಸಂಶ್ಲೇಷಿಸಿದ ಮೊದಲಿಗ. 1818ರ ಸೆಪ್ಟೆಂಬರ್ 27ರಂದು ಗಟಿಂಗೆನ್ ಬಳಿಯ ಯೆಲ್ಲಹಾಸೆನ್‌ನಲ್ಲಿ ಜನಿಸಿದ. ಫ್ರಿಡೆರಿಕ್ ಹೋಲರ್ ಕೈಕೆಳಗೆ ರಸಾಯನಶಾಸ್ತ್ರದ ಅಧ್ಯಯನವನ್ನು ಪ್ರಾರಂಭಿಸಿದ (1838). ಮಾರ್‌ಬರ್ಗ್‌ನಲ್ಲಿ ರಾಬರ್ಟ್ ವಿಲ್‌ಹೆಲ್ಮ್ ಬುನ್‌ಸೆನ್‌ಗೆ ಸಹಾಯಕನಾಗಿ ಸೇರಿ (1842) ಅನಿಲಗಳ ವಿಶ್ಲೇಷಣೆಯನ್ನು ಕಲಿತ. ಮುಂದೆ 1847 ರಿಂದ 1851ರ ವರೆಗೆ ಬ್ರನ್ಸ್‌ವಿಕ್‌ನಲ್ಲಿ ಲೈಬಿಗ್ ಮತ್ತು ಹೇಲರ್‌ರವರ ಕೃತಿಗಳನ್ನು ಸಂಪಾದಿಸುವುದರಲ್ಲಿ ನಿರತನಾದ. ಬಳಿಕ ಬುನ್‌ಸೆನನ ಉತ್ತರಾಧಿಕಾರಿಯಾಗಿ ಮಾರ್‌ಬರ್ಗ್‌ಗೆ ಹಿಂತಿರುಗಿದ. 1865ರಲ್ಲಿ ಲೀಪ್‌ಜಿಗ್‌ಗೆ ಆಹ್ವಾನಿಸಲ್ಪಟ್ಟು ಅಲ್ಲೇ 1884 ನವೆಂಬರ್ 5ರಂದು ನಿಧನನಾದ.

ಪ್ರತ್ಯಕ್ಷ ಅಥವಾ ಪರೋಕ್ಷ ಸರಳ ಬದಲಿಕೆ ವಿಧಾನಗಳ ಮೂಲಕ ನಿರವಯವ ಸಂಯುಕ್ತಗಳಿಂದ ಸಾವಯವ ಸಂಯುಕ್ತಗಳ ತಯಾರಿಕೆ ಸಾಧ್ಯ ಎಂಬುದು ಕೋಲ್ಬೆ ವಾದ. ಮೂಲವಸ್ತುಗಳಿಂದ ತಯಾರಿಸಿದ ಕಾರ್ಬನ್ ಡೈಸಲ್ಫೈಡನ್ನು ಕ್ಲೋರಿನ್ ವರ್ತನೆಯಿಂದ ಅಸಿಟಿಕ್ ಆಮ್ಲವಾಗಿ ಪರಿವರ್ತಿಸಿದಾಗ ಈ ವಾದಕ್ಕೆ ಪುಷ್ಟಿ ದೊರೆಯಿತು. ಈತ ಮಂಡಿಸಿದ ರಚನಾಗುಚ್ಛಗಳ (ಸ್ಟ್ರಕ್ಚರಲ್ ರ್‍ಯಾಡಿಕಲ್ಸ್) ವಿಚಾರ ಮುಂದೆ ರಚನಾಸಿದ್ಧಾಂತದ ಸ್ಥಾಪನೆಗೆ ಮುಖ್ಯ ಕೊಡುಗೆಯಾಯಿತು. ಕೊಬ್ಬಿನ ಆಮ್ಲ ಮತ್ತು ಬೇರೆ ಆಮ್ಲಲವಣಗಳ ಮೇಲೆ ಈತ ನಡೆಸಿದ ವಿದ್ಯುದ್ವಿಶ್ಲೇಷಣೆಯಿಂದ, ಫೀನಾಲ್‌ನಿಂದ, ಸ್ಯಾಲಿಸಿಕ್ ಆಮ್ಲದ ತಯಾರಿಕೆಯಿಂದ ಮತ್ತು ನೈಟ್ರೋಮೀಥೇನನ್ನು ಕಂಡುಹಿಡಿಯುವುದರ ಮೂಲಕ ಕೋಲ್ಬೆ ಚಿರಪರಿಚಿತನಾಗಿದ್ದಾನೆ. ಜಲವಿಶ್ಲೇಷಣೆಯಿಂದ ನೈಟ್ರೈಲುಗಳು ಆಮ್ಲಗಳಾಗಿ ಮಾರ್ಪಡುತ್ತವೆನ್ನುವುದನ್ನು ಈತನೇ ಪರಿಶೋಧಿಸಿದ್ದು. (ಎಲ್.ಎ.ಆರ್.)

**ಕೋಲ್ವಿಲಿಯ :** ಸುಂದರವಾದ ಹೂಬಿಡುವ ಅಲಂಕಾರದ ಮರ. ಲೆಗ್ಯೂಮಿನೋಸೀ ಕುಟುಂಬಕ್ಕೆ ಸೇರಿದೆ. ಇದನ್ನು ಉದ್ಯಾನಗಳಲ್ಲಿ ರಸ್ತೆಯ ಪಕ್ಕಗಳಲ್ಲಿ ಮತ್ತು ವಿಶಾಲವಾದ ಮನೆಗಳ ಪಕ್ಕದಲ್ಲಿ ಬೆಳೆಸುತ್ತಾರೆ. ಹೆಸರಾಂತ ಪ್ರವಾಸಿ ಬೋಜರ್ ಎಂಬಾತ ಮಡಗಾಸ್ಕರಿನ ಪಶ್ಚಿಮ ತೀರಪ್ರದೇಶದಲ್ಲಿ ಇದನ್ನು ಮೊಟ್ಟಮೊದಲಬಾರಿಗೆ ಕಂಡ (1824). ಇದರಲ್ಲಿ ರೇಸಿಮೋಸ ಎಂಬ ಒಂದೇ ಪ್ರಭೇದವಿದೆ. ಮಡಗಾಸ್ಕರ್ ದ್ವೀಪದ ಮೂಲವಾಸಿಯಾದ ಇದು ಸುಮಾರು 20'–50' ಎತ್ತರ ಬೆಳೆಯುತ್ತದೆ. ಇದರ ಕಾಂಡದ ಬಣ್ಣ ಬೂದು. ತೊಗಟೆ ಅವ್ಯವಸ್ಥಿತ ಬಿಲ್ಲೆಗಳಾಗಿ ಉದುರುತ್ತವೆ. ಹೂ ಅರಳಿಲ್ಲದಾಗ ಕೋಲ್ವಿಲಿಯ ಕತ್ತಿಕಾಯಿ ಮರವನ್ನು ಹೋಲುತ್ತದೆ. ಈ ಮರ ಆಗಸ್ಟ್–ನವೆಂಬರ್ ತಿಂಗಳುಗಳಲ್ಲಿ ಆಕರ್ಷಕವಾದ ಹೂಗೊಂಚಲನ್ನು ಬಿಡುತ್ತದೆ.

ಹೂಗೊಂಚಲು ಅಂತ್ಯಾರಂಭಿ ಮಾದರಿಯದು; ಸುಮಾರು 1½' ಉದ್ದವಾಗಿದೆ. ಒಂದೊಂದು ಹೂಗೊಂಚಲಿನಲ್ಲಿ ಸುಮಾರು 200 ಹೂಗಳು ನಿಬಿಡವಾಗಿ ಜೋಡಿಸಲ್ಪಟ್ಟಿರುತ್ತವೆ. ಹೂ ಕೇಸರಿ ಬಣ್ಣಕ್ಕಿದ್ದು ನೋಡಲು ಬಲು ಅಂದವಾಗಿವೆ. ಈ ಮರ ಕಾಯಿಬಿಡುವುದು ಅಪೂರ್ವ. (ಎಸ್.ಕೆ.ಟಿ.)

**ಕೋಶಗಳು (ತತ್ತ್ವಶಾಸ್ತ್ರದಲ್ಲಿ) :** ಕೋಶ ಎಂದರೆ ಒರೆ, ಕವಚ, ಹೊದಿಕೆ ಎಂದು ಅರ್ಥ. ಇಲ್ಲಿ ನಮಗೆ ಪ್ರಸಕ್ತವಾಗಿರುವ ಕೋಶಗಳು ಆತ್ಮನನ್ನು ಆಚ್ಛಾದಿಸಿರುವ ಕೋಶಗಳು ಮತ್ತು ಅವಕ್ಕೆ ಸಮಾಂತರವಾದ, ವಿಶ್ವವನ್ನು ಆಚ್ಛಾದಿಸಿರುವ ಕೋಶಗಳು. ಮನುಷ್ಯನ ಆತ್ಮದ ಹೊದಿಕೆಗಳು ಐದು: ಅನ್ನ, ಕೋಶ, ಪ್ರಾಣಕೋಶ, ಮನೋಕೋಶ, ಬುದ್ಧಿಕೋಶ, ಪ್ರೀತಿ ಅಥವಾ ಆನಂದಕೋಶ. ಮಾನವನ ಜೀವ ಈ ಕೋಶಗಳನ್ನು ಪಡೆದಿರುವುದಕ್ಕೆ ಪರಮಾತ್ಮನ ಅನ್ನಮಯ, ಪ್ರಾಣಮಯ ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳು ಆಧಾರ. ಇವುಗಳಲ್ಲಿ ಪ್ರಾಣಕ್ಕೆ ಅನ್ನ, ಮನಸ್ಸಿಗೆ ಪ್ರಾಣ, ಬುದ್ಧಿಗೆ ಮನಸ್ಸು, ಆನಂದಕ್ಕೆ ಬುದ್ಧಿ ಆಧಾರ. ಒಂದರ ಮೂಲಕ ಒಂದು, ಒಂದರ ಮೇಲೆ ಒಂದು ಏರಿ ಎಲ್ಲ ಕೋಶಗಳೂ ಆನಂದಮಯ ಕೋಶದಲ್ಲಿ ಮುಕ್ತಾಯವಾಗುತ್ತವೆ. ಎಲ್ಲವೂ ಆನಂದದಿಂದ ಹುಟ್ಟಿ, ಆನಂದದಿಂದ ಸೃಷ್ಟಿಗೊಂಡು ಆನಂದದಲ್ಲಿ ಪರಿಸಮಾಪ್ತಿಗೊಳ್ಳುತ್ತವೆ. ಬ್ರಹ್ಮಮಯವಾದ ಈ ವಿಶ್ವವನ್ನು ಈ ಎಲ್ಲ ಕೋಶಗಳೂ ಆವರಿಸಿವೆ. ಕೋಶತತ್ತ್ವದ ವಿಚಾರವಾಗಿ ಹೆಚ್ಚಿನ ವಿವರಗಳು ತೈತ್ತಿರೀಯ ಉಪನಿಷತ್ತಿನಲ್ಲಿವೆ. (ಜಿ.ಎಚ್.)

**ಕೋಶವಿಜ್ಞಾನ :** ಕೋಶವೆಂದರೆ ನಿಘಂಟು. ಶಬ್ದಗಳನ್ನು ಅಕಾರಾದಿಯಾಗಿ ವಿಂಗಡಿಸಿ ಅವುಗಳ ಅರ್ಥವನ್ನು ಹೇಳಿದಲ್ಲಿ ಅದು ಕೋಶವೆನಿಸುತ್ತದೆ. ಇಂಥ ಕೋಶಗಳನ್ನು ಸಿದ್ಧಪಡಿಸುವ ಶಾಸ್ತ್ರವನ್ನು ಕೋಶವಿಜ್ಞಾನವೆನ್ನುತ್ತೇವೆ(ಲೆಕ್ಸಿಕಾಗ್ರಫಿ). ಈ ಲೇಖನದಲ್ಲಿ ಕೋಶವಿಜ್ಞಾನದ ಉಗಮ, ವಿಕಾಸ, ಕೋಶಗಳಲ್ಲಿಯ ವೈವಿಧ್ಯ, ಪ್ರಸಿದ್ಧ ಕೋಶಗಳು–ಈ ಬಗ್ಗೆ ವಿಷಯ ಸಂಗ್ರಹಣೆ ಮಾಡಲಾಗಿದೆ.

ಭಾಷೆ ಮೊದಲು, ಅನಂತರ ವ್ಯಾಕರಣ. ಹಾಗೆಯೇ ಭಾಷೆ ಮೊದಲು, ಅನಂತರ ಕೋಶ. ಭಾಷೆ ಇನ್ನೂ ಶೈಶವಾವಸ್ಥೆಯಲ್ಲಿದ್ದು ಲಿಪಿ ಬಳಕೆಗೆ ಬಾರದಿದ್ದಾಗ ವ್ಯಾಕರಣ ಹಾಗೂ ಕೋಶಗಳ ಅಗತ್ಯ ಅಷ್ಟಾಗಿ ಇರಲಿಲ್ಲವೆಂದು ತೋರುತ್ತದೆ. ಭಾಷೆ ಬೆಳೆದಂತೆಲ್ಲ ಕಾಲ ಮತ್ತು ದೇಶಗಳ ವ್ಯತ್ಯಾಸದಿಂದಾಗಿ ಉಚ್ಚಾರಣೆ ಮತ್ತು ಪ್ರಯೋಗಗಳಲ್ಲಿ ಹಾಗೂ ಶಬ್ದಾರ್ಥ ವಿಚಾರದಲ್ಲಿ ಏಕರೂಪತೆ ಕಡಿಮೆಯಾಯಿತಾಗಿ ಭಾಷೆಗೊಂದು ವ್ಯಾಕರಣ, ಒಂದು ಕೋಶ ಅಗತ್ಯವೆನಿಸುತ್ತ ಬಂದಿರಬೇಕು. ಆಡಿದ ಮಾತು, ಬರೆದ ವಿಷಯ ಸ್ಪಷ್ಟವಾಗಬೇಕಾದರೆ ನಮ್ಮ ಭಾಷೆ ಶುದ್ಧವಾಗಿ, ವ್ಯಾಕರಣಬದ್ಧವಾಗಿರಬೇಕಲ್ಲದೆ ಮಾತಿನಲ್ಲಿಯ ಪ್ರತಿಯೊಂದು ಶಬ್ದಕ್ಕೂ ಖಚಿತವಾದ ಅರ್ಥವಿರಬೇಕು. ಒಂದೇ ಶಬ್ದವನ್ನು ನಾಲ್ಕು ಜನ ನಾಲ್ಕು ಅರ್ಥದಲ್ಲಿ ಬಳಸಿದಾಗ, ಒಂದೇ ಪದವನ್ನು ಒಬ್ಬನೇ ಒಂದು ಬರೆಹದಲ್ಲಿ ನಾಲ್ಕು ಅರ್ಥಗಳಲ್ಲಿ ಬಳಸಿದಾಗ ಅಭಿಪ್ರಾಯ ಸಂದಿಗ್ಧವಾಗುತ್ತದೆ. ಜೊತೆಗೆ ಶಬ್ದದ ಕಾಗುಣಿತ ಕೂಡ. ಯಾವ ಖಚಿತ ಆಧಾರಗಳೂ ಇಲ್ಲದಾಗ, ವ್ಯಕ್ತಿಯಿಂದ ವ್ಯಕ್ತಿಗೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ಬದಲಾಗುವ ಸಾಧ್ಯತೆ ಉಂಟು. ಹೀಗಾಗಿ ಒಂದು ಭಾಷೆಯಲ್ಲಿ ಕ್ರಮೇಣ ಶಿಷ್ಟರೂಪಗಳು, ವ್ಯಾವಹಾರಿಕ ರೂಪಗಳು ಮತ್ತು ಗ್ರಾಮ್ಯರೂಪಗಳು–ಎಂದು ಶಬ್ದಗಳಿಗೆ ಮೂರು ರೂಪಗಳು ಏರ್ಪಡುತ್ತವೆ. ಇಂಥ ಕಷ್ಟಗಳನ್ನು ನಿವಾರಿಸಲು ಪ್ರತಿಯೊಂದು ಭಾಷೆಗೂ ಸರಿಯಾದ ಒಂದು ವ್ಯಾಕರಣ ಮತ್ತು ಒಂದು ಕೋಶ ಅಗತ್ಯವೆನಿಸುತ್ತದೆ. ಈ ಎರಡೂ ಭಾಷಾವಿಜ್ಞಾನದ ಪ್ರಮುಖ ಅಂಗಗಳಾಗಿವೆ.

ಭಾಷಾವಿಜ್ಞಾನ ಕ್ಷೇತ್ರದಲ್ಲಿ ಕೋಶನಿರ್ಮಾಣ ಕಾರ್ಯ ಬಹು ಹಿಂದಿನ ಕಾಲದಿಂದಲೂ ನಡೆದು ಬಂದಿದೆ. ಪ್ರಪ್ರಥಮ ಕೋಶ ಕಾಣಿಸಿಕೊಂಡಿದ್ದು ಭರತಖಂಡದಲ್ಲಿ. ಸುಮಾರು ಪ್ರ.ಶ.ಪೂ.1000ಕ್ಕಿಂತ ಹಿಂದೆಯೇ ಭಾರತದಲ್ಲಿ ನಿಘಂಟುಗಳು ರಚನೆಯಾಗಿರಬಹುದೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಪಾಣಿನಿಗಿಂತಲೂ ಬಹು ಹಿಂದೆ ಯಾಸ್ಕಮಹಾಮುನಿ ಮುಂತಾದ ಭಾರತೀಯ ಪಂಡಿತರು ಅನೇಕ ನಿಘಂಟುಗಳನ್ನು ತಯಾರಿಸಿದ್ದರೆಂದು ತಿಳಿಯಬಂದಿದೆ. ಅವುಗಳಲ್ಲಿ ಉಪಲಬ್ಧವಿರುವ ನಿಘಂಟುಗಳು ಕಡಿಮೆ. ಪಾಣಿನಿಯ ವ್ಯಾಕರಣಗ್ರಂಥ ಹೊರಬರುವ ಹೊತ್ತಿಗಾಗಲೇ ಹಲವಾರು ನಿಘಂಟುಗಳು ಇದ್ದುವೆಂದು ಊಹಿಸಲಾಗಿದೆ. ಆಮೇಲೆ ಗ್ರೀಕ್, ಲ್ಯಾಟಿನ್ ಮುಂತಾದ ಭಾಷೆಗಳಲ್ಲಿ ಅಂದರೆ ಪ್ರ.ಶ. 8, 9, 10ನೆಯ ಶತಮಾನಗಳಲ್ಲಿ ವ್ಯಾಕರಣ ಮತ್ತು ನಿಘಂಟುಗಳ ರಚನಾಕಾರ್ಯ ಪಾಣಿನಿ ಮತ್ತು ಯಾಸ್ಕ ಮಹಾಮುನಿಗಳ ವ್ಯಾಕರಣ ಮತ್ತು ನಿಘಂಟುಗಳ ಮಾದರಿಯಲ್ಲಿಯೇ ನಡೆದಿರುವುದು ಕಂಡುಬರುತ್ತದೆ. ಅಂತು ಯುರೋಪಿನಲ್ಲಿ ಯಾವ ಭಾಷೆಯಲ್ಲಿಯೂ ಪ್ರ.ಶ.ಪೂ.ಸು.1000ಕ್ಕಿಂತ ಹಿಂದೆ ಯಾವ ವ್ಯಾಕರಣ ಹಾಗೂ ನಿಘಂಟು ರಚಿತವಾಗಿಲ್ಲವೆನ್ನುವುದು ಖಚಿತ. ಇಂಗ್ಲಿಷ್ ಭಾಷೆಯಲ್ಲಿ ಕೋಶ ನಿರ್ಮಾಣಕಾರ್ಯ ಸುಮಾರು 15 ಮತ್ತು 16ನೆಯ ಶತಮಾನಗಳಿಂದೀಚೆಗೆ ಪ್ರಾರಂಭವಾಯಿತು. ಆದರೆ ಇಪ್ಪತ್ತನೆಯ ಶತಮಾನದ ಮೊದಲು ಐವತ್ತು ಆರುವತ್ತು ವರ್ಷಗಳಲ್ಲಿ ಪಾಶ್ಚಾತ್ಯರು ಕೋಶ ನಿರ್ಮಾಣಕಾರ್ಯದಲ್ಲಿ ಅಗ್ರಗಣ್ಯರೆನಿಸಿಕೊಂಡಿದ್ದಾರೆ.

ಕೋಶಗಳನ್ನು ಪುಸ್ತಕಕೋಶ, ವ್ಯಕ್ತಿಕೋಶ ಮತ್ತು ಭಾಷಾಕೋಶ ಎಂದು ಮೂರು ವರ್ಗಗಳಲ್ಲಿ ವಿಂಗಡಿಸಬಹುದು. ವೇದ, ಪುರಾಣ, ಮಹಾಭಾರತ, ರಾಮಾಯಣ ಮುಂತಾದ ಬೇರೆ ಬೇರೆ ಪೌರಾಣಿಕ ಗ್ರಂಥಗಳನ್ನು ಆಧಾರವಾಗಿರಿಸಿಕೊಂಡು ಅವುಗಳಲ್ಲಿಯ ಕ್ಲಿಷ್ಟ ಪದಗಳನ್ನು ಸಂಗ್ರಹಿಸಿ ಅರ್ಥೈಸಿದಲ್ಲಿ ಪುಸ್ತಕಕೋಶ ಅಥವಾ ಗ್ರಂಥಸ್ಥಕೋಶವಾಗುತ್ತದೆ. ಒಬ್ಬ ವ್ಯಕ್ತಿಯಿಂದಲೇ ನಿರ್ಮಿತವಾದ ಎಲ್ಲ ಸಾಹಿತ್ಯಿಕ ಗ್ರಂಥಗಳನ್ನು ಆಧಾರವಾಗಿರಿಸಿಕೊಂಡು ಅವುಗಳಲ್ಲಿಯ ಕ್ಲಿಷ್ಟಪದಗಳನ್ನು ಸಂಗ್ರಹಿಸಿ ಅರ್ಥೈಸಿದಲ್ಲಿ ವ್ಯಕ್ತಿಕೋಶವಾಗುತ್ತದೆ. ಪಂಪ, ರನ್ನ, ಶೆಲ್ಲಿ, ಷೇಕ್ಸ್‌ಪಿಯರ್, ಮಿಲ್ಟನ್, ಕಾಳಿದಾಸ ಮುಂತಾದ ವ್ಯಕ್ತಿಗಳ ಸಾಹಿತ್ಯಸಂಬಂಧಿ ಕೋಶ ಈ ವರ್ಗಕ್ಕೆ ಸೇರುತ್ತದೆ. ಭಾಷಾಕೋಶಗಳಲ್ಲಿ ವಿವಿಧ ರೀತಿಯ ಕೋಶಗಳು ಉಂಟು. ಒಂದೇ ಭಾಷೆಗೆ ಸಂಬಂಧಿಸಿದ ಪದಗಳನ್ನು ಸಂಗ್ರಹಿಸಿ ಅವುಗಳಿಗೆ ಅದೇ ಭಾಷೆಯ ಸರಳ ಅರ್ಥ ನೀಡಿ ಕೋಶವನ್ನು ತಯಾರಿಸಬಹುದು. ಉದಾಹರಣೆ ಕನ್ನಡ–ಕನ್ನಡ ಕೋಶ. ಒಂದು ಭಾಷೆಯ ಶಬ್ದಗಳಿಗೆ ಬೇರೆ ಭಾಷೆಯಲ್ಲಿ ಅರ್ಥನೀಡಿದಲ್ಲಿ ಅದೊಂದು ಬಗೆಯ ಕೋಶವಾಗುತ್ತದೆ. ಕನ್ನಡ–ಇಂಗ್ಲಿಷ್, ಕನ್ನಡ–ಹಿಂದೀ, ಕನ್ನಡ–ಮರಾಠಿ, ಇಂಗ್ಲಿಷ್–ತೆಲುಗು ಕೋಶಗಳು ಇದಕ್ಕೆ ನಿದರ್ಶನಗಳು. ಕೆಲವು ಭಾಷಾಕೋಶಗಳು ಇದೇ ರೀತಿ ಎರಡು ಮತ್ತು ಎರಡಕ್ಕಿಂತಲೂ ಹೆಚ್ಚು ಭಾಷೆಗಳಲ್ಲಿ ಅರ್ಥನೀಡುತ್ತವೆ. ಇವನ್ನೇ ಕ್ರಮವಾಗಿ ಏಕಭಾಷಿಕಕೋಶ, ದ್ವಿಭಾಷಿಕ ಕೋಶ ಮತ್ತು ಬಹುಭಾಷಿಕ ಕೋಶ ಎಂತಲೂ ಕರೆಯುವುದಿದೆ.

ಕೋಶವನ್ನು ಶಾಸ್ತ್ರೀಯವಾಗಿ ಇನ್ನೂ ಮೂರು ವರ್ಗಗಳಲ್ಲಿ ವಿಂಗಡಿಸಬಹುದು. ಅವೇ ವಿವರಣಾತ್ಮಕ ಕೋಶ, ಐತಿಹಾಸಿಕಕೋಶ ಮತ್ತು ತುಲನಾತ್ಮಕ ಕೋಶಗಳು. ಇಲ್ಲಿ ಕೆಲವು ರೀತಿಯ ಕೋಶಗಳು ಏಕಭಾಷಿಕವಾಗಿಯೂ ದ್ವಿಭಾಷಿಕ ಮತ್ತು ಬಹುಭಾಷಿಕವಾಗಿಯೂ ದೊರೆಯುತ್ತವೆ.

ಯಾವ ಒಂದು ಭಾಷೆಯಲ್ಲಿ ದೊರೆಯಬಹುದಾದ ಸಾಹಿತ್ಯಿಕ ಗ್ರಂಥಗಳನ್ನು ಆಧಾರವಾಗಿರಿಸಿಕೊಂಡು ಅಲ್ಲಿ ಸಿಗುವ ಎಲ್ಲ ಶಬ್ದಗಳನ್ನೂ ಅವುಗಳ ಪರಿಸರದೊಂದಿಗೇ ಎತ್ತಿಕೊಂಡು ಸಂಗ್ರಹಿಸಿ ಅವುಗಳ ಅರ್ಥ ಮತ್ತು ವ್ಯಾಕರಣ ವಿಶೇಷಗಳನ್ನು ಗಮನಿಸಿ, ವಿವರಿಸಿ ತಯಾರಿಸಿದ ಕೋಶವೇ ವಿವರಣಾತ್ಮಕ ಕೋಶ. ಕನ್ನಡ–ಕನ್ನಡ ಕೋಶ ಮತ್ತು ಬೃಹದ್ ಹಿಂದೀಕೋಶ ಈ ವರ್ಗಕ್ಕೆ ಸೇರುತ್ತವೆ. ಕೇವಲ ಆಡುಮಾತಿಗೂ ಇಂಥ ಒಂದು ಕೋಶವನ್ನು ಸಿದ್ಧಪಡಿಸಬಹುದು.

ಐತಿಹಾಸಿಕ ಕೋಶದಲ್ಲಿ ಪದದ ಉಗಮ ಮತ್ತು ವಿಕಾಸದ ಎಲ್ಲ ಹಂತಗಳ ಪೂರ್ಣ ವಿವರಗಳನ್ನು ಕಾಣಬಹುದು. ಪದದ ರೂಪದಲ್ಲೂ ಅರ್ಥದಲ್ಲೂ ಆಗಿರುವ ವ್ಯತ್ಯಾಸಗಳ ಕ್ರಮಶಃ ವಿವರ ಇಲ್ಲಿ ಸಿಗುತ್ತದೆ. ಇಂಥ ಕೋಶಗಳು ಭಾರತೀಯ ಭಾಷೆಗಳಲ್ಲಿ ತೀರ ಕಡಿಮೆ. ಇಂಗ್ಲಿಷ್ ಭಾಷೆಯಲ್ಲಿ ಈ ಪ್ರಯತ್ನ ನಡೆದು ಆಕ್ಸ್‌ಫರ್ಡ್ ಇಂಗ್ಲಿಷ್ ಕೋಶ ತಯಾರಾಯಿತು. ಕನ್ನಡದಲ್ಲಿ ಇಂಥ ಒಂದು ಕೋಶ ಸಿದ್ಧವಾಗುತ್ತಿದೆ. ಈ ಎರಡು ನಿಘಂಟುಗಳ ಬಗ್ಗೆಯೂ ಈ ಲೇಖನದ ಕೊನೆಯಲ್ಲಿ ಹೆಚ್ಚಿನ ವಿವರಗಳನ್ನು ಕೊಟ್ಟಿದೆ. ಈಚೆಗೆ ಒಟ್ಟೊ ಯಸ್‌ಪರಸನ್ ಎಂಬಾತ ಇಂಗ್ಲಿಷ್ ಭಾಷೆಯಲ್ಲಿ ಹೊಸದೊಂದು ಐತಿಹಾಸಿಕ ಕೋಶವನ್ನು ತಯಾರಿಸುವ ಯತ್ನ ನಡೆಸಿದ್ದಾನೆ. ತುಲನಾತ್ಮಕ ಕೋಶ ಬಹುಭಾಷಾವರ್ಗಕ್ಕೆ ಸೇರಿದ್ದು. ಒಂದೇ ಭಾಷೆಗೆ ಸಂಬಂಧಿಸಿದ ಎಲ್ಲ ಜ್ಞಾತಿಭಾಷೆಗಳನ್ನೂ ಆಧಾರವಾಗಿರಿಸಿಕೊಂಡು ಅವುಗಳಿಂದ ಸಾಮಗ್ರಿಯನ್ನು ಸಂಗ್ರಹಿಸಿ ತಯಾರಿಸಬೇಕಾದ ಕೋಶವಿದು. ದ್ರಾವಿಡಭಾಷೆಗಳ ವ್ಯುತ್ಪತ್ತಿಕೋಶ ಈ ವರ್ಗಕ್ಕೆ ಸೇರುತ್ತದೆ.

ವಿಶ್ವಕೋಶ, ಪಾರಿಭಾಷಿಕ ಪದಕೋಶ, ವೃತ್ತಿಪದಕೋಶ, ಪರ್ಯಾಯ ಪದ ಕೋಶ, ಗಾದೆಗಳಕೋಶ, ಭಾಷೆಗಳ ಕೋಶ, ಜಾನಪದ ಕೋಶ, ಜಾನಪದ ವಸ್ತು ಕೋಶ, ಕಥಾಕೋಶ, ಸಾಹಿತ್ಯಕೋಶ, ಉದ್ಧರಣಕೋಶ, ವಸ್ತುಕೋಶ, ವ್ಯಕ್ತಿನಾಮಗಳ ಕೋಶ ಮತ್ತು ಸ್ಥಾನಗಳ ಕೋಶ, ವಿವಿಧ ವಿಷಯಗಳ ವಿಶ್ವಕೋಶ–ಹೀಗೆ ಇನ್ನೂ ಅನೇಕ ಬಗೆಬಗೆಯ ಕೋಶಗಳೂ ಉಂಟು. ವಿಶ್ವಕೋಶಗಳು ಕೇವಲ ಪದಕೋಶಗಳಲ್ಲ. ಅವು ಅಭಿಪ್ರಾಯಕೋಶಗಳು. ಪದಕೋಶಕ್ಕಿಂತ ಹೆಚ್ಚಿನ ವಿವರಗಳು ಅಲ್ಲಿ ಸಿಗುತ್ತವೆ **(ನೋಡಿ– ವಿಶ್ವಕೋಶ)**. ಈ ಸರಣಿಯಲ್ಲಿ ಬಂದಿರುವ ಇತರ ಕೋಶಗಳು ಆಯಾ ವಿಷಯಕ್ಕೆ ಸೀಮಿತವಾದವೇ ಆಗಿವೆ. ಆದರೆ ಪದಕೋಶದಲ್ಲಿ ಹೆಚ್ಚಿನ ವಿವರಗಳು ಇರಬೇಕಾಗಿಲ್ಲವಾದರೂ ಪದ, ಪದಾರ್ಥಗಳ ವಿಷಯ ಬಂದಾಗ ಸಾಧ್ಯವಾದ ಕಡೆಗಳಲ್ಲೆಲ್ಲ ಅವುಗಳ ಗುಣಲಕ್ಷಣಗಳನ್ನು ಕಡ್ಡಾಯವಾಗಿ ಹೇಳಿದರೆ ಒಳ್ಳೆಯದು. ಈ ಕೆಲಸವನ್ನು ವೆಬ್‌ಸ್ಟರ್ಸ್ ನ್ಯೂ ಇಂಟರ್‌ನ್ಯಾಷನಲ್ ಡಿಕ್ಷನರಿ ಆಫ್ ದಿ ಇಂಗ್ಲಿಷ್ ಲ್ಯಾಂಗ್ವೇಜ್ ಎಂಬ ಇಂಗ್ಲಿಷ್ ಕೋಶ ಸಮರ್ಪಕವಾಗಿ ನಿರ್ವಹಿಸಿದೆ. ಈ ನಿಘಂಟಿನ ಬಗೆಗೂ ಹೆಚ್ಚಿನ ವಿವರಗಳು ಈ ಲೇಖನದ ಉತ್ತರಾರ್ಧದಲ್ಲಿವೆ. ಕೋಶ ನಿರ್ಮಾಣ ಕಾರ್ಯ ಕಷ್ಟಸಾಧ್ಯವಾದುದು. ಸಾಮಾನ್ಯವಾಗಿ ಅದು ಯಾವ ಒಬ್ಬ ವ್ಯಕ್ತಿಯಿಂದಲೂ ಆಗಲಾರದಂಥ ದೊಡ್ಡ

ಕೆಲಸ. ಸ್ಯಾಮ್ಯುಯಲ್ ಜಾನ್‌ಸನ್ನನಂಥ ಒಬ್ಬ ಏಕಾಂಗಿಯಾಗಿ ಬೃಹತ್ ಪ್ರಮಾಣದ ನಿಘಂಟೊಂದನ್ನು ಸಿದ್ಧಪಡಿಸಿರಬಹುದು. ಆದರೆ ಪ್ರತಿಯೊಂದು ದೊಡ್ಡ ಕೋಶ ನಿರ್ಮಾಣವಾಗುವಾಗಲೂ ನೂರಾರು ವಿದ್ವಾಂಸರ ನೆರವು ಅಗತ್ಯವಾಗುತ್ತದೆ. ಒಂದು ಪದದ ಅರ್ಥ ನಿರ್ಣೈಸುವಲ್ಲಿ ಉಪಲಬ್ಧವಿರುವ ಎಲ್ಲ ಪ್ರಮುಖ ಗ್ರಂಥಗಳಿಂದಲೂ ಆ ಪದ ಬಳಕೆಯಾಗಿರುವ ವಾಕ್ಯಗಳನ್ನು ಎತ್ತಿ ಪಟ್ಟಿಮಾಡಬೇಕಾಗುತ್ತದೆ. ಹಳೆಯ ಹೊಸ ಗ್ರಂಥಗಳೆಲ್ಲದರಿಂದಲೂ ಇಂಥ ಉದ್ಧರಣ ಕಾರ್ಯ ನಡೆಯಬೇಕಾಗುತ್ತದೆ. ಅಲ್ಲದೆ ಬಳಕೆಯಲ್ಲಿ ಆ ಪದ ಇದ್ದಲ್ಲಿ ಈಗ ಅದರ ಉಚ್ಚಾರಣೆ ಏನು, ಅರ್ಥ ಹೇಗೆ, ಪ್ರಾಂತ್ಯ ಪ್ರಾಂತ್ಯಕ್ಕೂ ಏನಾದರೂ ವ್ಯತ್ಯಾಸಗಳು ಕಂಡುಬರುತ್ತವೆಯೇ–ಎಂಬ ಅಂಶಗಳನ್ನು ಪರಿಶೀಲಿಸಿ, ಒಂದು ಪದದ ಅರ್ಥವನ್ನು ನಿರ್ಣಯಿಸಬೇಕಾಗುತ್ತದೆ. ಬರೆವಣಿಗೆಗೂ ಉಚ್ಚಾರಣೆಗೂ ವ್ಯತ್ಯಾಸವಿಲ್ಲದ ಭಾರತೀಯ ಭಾಷೆಗಳಲ್ಲಿ ಉಚ್ಚಾರಣ ಚಿಹ್ನೆಗಳ ಅಗತ್ಯ ಕಾಣದು. ಬರೆವಣಿಗೆ ಒಂದು ರೀತಿ ಇದ್ದು ಉಚ್ಚಾರಣೆ ಬೇರೆಯಾಗಿರುವ ಇಂಗ್ಲಿಷ್‌ನಂಥ ಭಾಷೆಯ ನಿಘಂಟನ್ನು ತಯಾರಿಸುವಾಗ ಶಬ್ದರೂಪವನ್ನು ಕೊಡುವುದರೊಂದಿಗೆ ಉಚ್ಚಾರಣಾ ರೂಪವನ್ನೂ ತಿಳಿಸಬೇಕಾಗುತ್ತದೆ. ವೆಬ್‌ಸ್ಟರ್, ರ‍್ಯಾಂಡಮ್ ಹೌಸ್ ಕೋಶಗಳು ಈ ಕೆಲಸವನ್ನು ಮಾಡಿವೆ. ಡೇನಿಯಲ್ ಜೋನ್ಸ್ ಎಂಬ ವಿದ್ವಾಂಸ ಉಚ್ಚಾರಣಾ ವ್ಯವಸ್ಥೆಯನ್ನು ತಿಳಿಸುವುದಕ್ಕಾಗಿಯೇ ಎವ್ವೆರಿಮ್ಯಾನ್ಸ್ ಇಂಗ್ಲಿಷ್ ಪ್ರನೌನ್ಸಿಂಗ್ ಡಿಕ್ಷನರಿ ಎಂಬ ಕೋಶ ಒಂದನ್ನು ತಯಾರಿಸಿದ್ದಾನೆ. ಅದರಲ್ಲಿ 58,000 ಪದಗಳಿಗೆ ಅಂತಾರಾಷ್ಟ್ರೀಯ ಉಚ್ಚಾರಣಾ ಚಿಹ್ನೆಗಳನ್ನು ಬಳಸಿ ಉಚ್ಚಾರಣೆಗಳನ್ನು ಕೊಡಲಾಗಿದೆ.

(ಕೆ. ಕೆ. ಜಿ.)

**ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು:** ಇಂಗ್ಲಿಷ್ ಶಬ್ದಸಾಗರಕ್ಕೆ ಈಗಿರುವ ಕೆಲವೇ ಪರಮಪ್ರಮಾಣ ಅರ್ಥಕೋಶಗಳಲ್ಲೊಂದು. ಫಿಲಲಾಜಿಕಲ್ ಸೊಸೈಟಿಯವರು 1857ರಲ್ಲೇ ಪ್ರಾರಂಭಿಸಿ ದಿ ನ್ಯೂ ಇಂಗ್ಲಿಷ್ ಡಿಕ್ಷನರಿ ಎಂಬ ಹೆಸರಿನಲ್ಲಿ ಹತ್ತು ಸಂಪುಟಗಳಲ್ಲಿ ಪ್ರಕಟಿಸಿದ (1928) ನಿಘಂಟೇ 1895ರಿಂದ ಈಚೆಗೆ ಆಕ್ಸ್‌ಫಡ್ ಇಂಗ್ಲಿಷ್ ಡಿಕ್ಷನರಿ ಎಂಬ ಹೆಸರಿನಿಂದ ಪ್ರಚಲಿತವಾಯಿತು. ಮೊದಲು ಇದು ಹತ್ತು ಸಂಪುಟಗಳಲ್ಲಿ ವಿಸ್ತರಣೆಗೊಂಡು ಪ್ರಕಟವಾಯಿತಲ್ಲದೆ ಹದಿಮೂರನೆಯ ಸಂಪುಟ ಮೊದಲ ಹನ್ನೆರಡು ಸಂಪುಟಗಳಿಗೆ ಪರಿಶಿಷ್ಟವಾಗಿ ಹೊರಬಂತು. ಜೆ.ಎ.ಎಚ್. ಮರೀ, ಹೆನ್ರಿ ಬ್ರ್ಯಾಡ್ಲೀ, ವಿಲಿಯಂ ಅಲೆಕ್ಸಾಂಡರ್ ಕ್ರೇಗೀ ಮತ್ತು ಚಾರ್ಲ್‌ಸ್ ಟಾಲ್‌ಬಾಟ್ ಅನ್ಯನ್ಸ್–ಇವರು ಇದರ ಪ್ರಧಾನ ಸಂಪಾದಕರು. ಈ ನಿಘಂಟಿನ ನಿರ್ಮಾಣಕಾರ್ಯ, ವ್ಯಾಪ್ತಿ ಇತ್ಯಾದಿಗಳ ಬಗ್ಗೆ ಇಲ್ಲಿ ಕೆಲವು ವಿಷಯಗಳನ್ನು ಸಂಗ್ರಹಿಸಲಾಗಿದೆ.

ಸಮಗ್ರ ಕೋಶದ ಒಟ್ಟು ಪುಟಗಳು ಹದಿನೈದುಸಾವಿರಕ್ಕೂ ಹೆಚ್ಚು. ಒಂದೊಂದು ಪುಟದಲ್ಲೂ ಸರಾಸರಿ 112 ಪಂಕ್ತಿಗಳ ಮೂರು ಅಂಕಣಗಳಿವೆ. ಇವುಗಳಲ್ಲಿ ಒಟ್ಟು ಐದು ಕೋಟಿ ಪದಗಳು ಅಡಕವಾಗಿವೆ. ಮುಖ್ಯ ಕೃತಿಯಲ್ಲಿ ಪ್ರತಿಪಾದಿಸಿರುವ ಶಬ್ದಗಳ ಮತ್ತು ಸಮಾಸಗಳ ಒಟ್ಟು ಸಂಖ್ಯೆ 4,14,825. ಇವುಗಳ ಪ್ರಯೋಗವನ್ನು ತೋರಿಸುವ ಕೊಟ್ಟಿರುವ ಉದಾಹರಣೆಗಳು 18,27,306. ಪುಟದ ಅಂದ ಕೆಡದಂತೆ, ಒಂದೊಂದು ಅಂಶಕ್ಕೂ ಉಚಿತವಾದ ಪ್ರಾಮುಖ್ಯ ಬರುವಂತೆ, ಆದಷ್ಟು ಕಡಿಮೆ ಜಾಗದಲ್ಲಿ ಅಡಕವಾಗುವಂತೆ, ಸಂಯೋಜಿಸಿ ಅಚ್ಚುಹಾಕಬೇಕಾದರೆ ಮುದ್ರಣಾಲಯದವರು ಮೂವತ್ತು ಬಗೆಯ ಅಕ್ಷರದ ಅಚ್ಚುಗಳನ್ನು ಉಪಯೋಗಿಸಿದ್ದಾರೆ. ಇಲ್ಲಿ ಅಚ್ಚಾಗಿರುವ ಅಕ್ಷರದ ಮೊಳೆಗಳನ್ನು ಒಂದರ ಮಗ್ಗುಲಲ್ಲಿ ಒಂದರಂತೆ ಜೋಡಿಸುತ್ತಾ ಹೋದರೆ 287 ಕಿಮೀ ಉದ್ದವಾಗುತ್ತದಂತೆ. 1933ರಲ್ಲಿ ಪ್ರಕಟವಾದಾಗ ಇದರ ಬೆಲೆ 315 ರೂ. ಒಟ್ಟು ಗ್ರಂಥದ ನಿರ್ಮಾಣದ ವೆಚ್ಚ 40 ಲಕ್ಷ ರೂ. ಆರನೆಯ ಸಂಪುಟದ ಮುದ್ರಣಕ್ಕಾಗಿ ಬಂದ ಐದುಸಾವಿರ ಪೌಂಡುಗಳ ದತ್ತಿಯೊಂದನ್ನು ಬಿಟ್ಟರೆ ಸಮಗ್ರ ವೆಚ್ಚವನ್ನು ಭರಿಸಿದ ಭಗೀರಥರು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನವರು. ಈ ಕೋಶದ ಮುದ್ರಣ ಹಾಗೂ ಪ್ರಕಾಶನ ಅವರದೇ.

ಕೋಶದ ರಚನೆಯನ್ನು ಕುರಿತು ಅವತರಣಿಕೆಯಲ್ಲಿ ಹೀಗೆ ಹೇಳಿದೆ: ಈ ನಿಘಂಟಿನ ಉದ್ದೇಶವೇನೆಂದರೆ–ಈಗ ಬಳಕೆಯಲ್ಲಿರುವ ಮತ್ತು ಕಳೆದ ಏಳುನೂರು ವರ್ಷಗಳಲ್ಲಿ ಎಂದಾದರೂ ಬಳಕೆಯಲ್ಲಿತ್ತೆಂದು ತಿಳಿದುಬಂದಿರುವ ಇಂಗ್ಲಿಷ್ ಶಬ್ದಗಳ ಅರ್ಥ, ಮೂಲ, ಚರಿತ್ರೆಗಳನ್ನು ಪರ್ಯಾಪ್ತವಾಗುವಂತೆ ನಿರೂಪಿಸುವುದು. ಇಲ್ಲಿಯ ಪ್ರಯತ್ನವೆಂದರೆ–1 ಪ್ರತಿಯೊಂದು ಶಬ್ದದ ವಿಷಯದಲ್ಲೂ ಅದು ಎಂದು, ಹೇಗೆ, ಯಾವ ರೂಪದಲ್ಲಿ ಯಾವ ಅರ್ಥದೊಂದಿಗೆ ಇಂಗ್ಲಿಷ್ ಶಬ್ದವಾಯಿತು; ಅಲ್ಲಿಂದೀಚೆಗೆ ರೂಪದಲ್ಲೂ ಅರ್ಥದಲ್ಲೂ ಅದು ಯಾವ ಬೆಳವಣಿಗೆಗಳನ್ನು ಪಡೆದಿದೆ; ಅದರ ಪ್ರಯೋಗಗಳಲ್ಲಿ ಯಾವುವು ಕಾಲಕ್ರಮದಲ್ಲಿ ಲೋಪವಾಗಿವೆ; ಯಾವುವು ಇನ್ನೂ ನಿಂತಿವೆ; ಈಚೆಗೆ ಯಾವ ಹೊಸ ಪ್ರಯೋಗಗಳು ಯಾವ ವಿಧಾನಗಳಲ್ಲಿ ಎಂದಿನಿಂದ ತಲೆ ಎತ್ತಿವೆ ಎಂಬುದನ್ನು ತೋರಿಸುವುದು. 2 ಈ ಅಂಶಗಳಿಗೆಲ್ಲ ಉದಾಹರಣೆಯಾಗಿ, ನಮಗೆ ಗೊತ್ತಾಗಿರುವ ಮಟ್ಟಿಗೆ ಶಬ್ದ ಮೊತ್ತಮೊದಲು ಕಾಣಿಸಿಕೊಂಡಂದಿನಿಂದ ಪ್ರಾರಂಭಿಸಿ ಕೊನೆಯ ಸಲಕ್ಕೆ ಅಥವಾ ಇಂದಿನ ವರೆಗೆ ಮುಟ್ಟುವಂತೆ ಪ್ರಯೋಗ ಪರಂಪರೆಯನ್ನು ಕೊಡುವುದು. ಹೀಗೆ ಶಬ್ದ ತನ್ನ ಚರಿತ್ರೆಯನ್ನೂ ಅರ್ಥವನ್ನೂ ತಾನೇ ಪ್ರದರ್ಶಿಸುವಂತೆ ಮಾಡುವುದು. 3 ಪ್ರತಿಯೊಂದು ಶಬ್ದದ ರೂಪನಿಷ್ಪತ್ತಿಯನ್ನೂ ಕೇವಲ ಐತಿಹಾಸಿಕಾಂಶದ ಆಧಾರದ ಮೇಲೆಯೇ ಆಧುನಿಕ ಭಾಷಾವಿಜ್ಞಾನದ ಪದ್ಧತಿಗಳನ್ನೂ ಸಿದ್ಧಾಂತಗಳನ್ನೂ ಅನುಸರಿಸಿಯೇ ಪ್ರತಿಪಾದಿಸುವುದು.

ಎ ಅಕ್ಷರದಿಂದ ಜ಼ಡ್ ಅಕ್ಷರದ ವರೆಗೆ ಒಂದೇ ರೀತಿಯಲ್ಲಿ–ಮೊದಮೊದಲು ಯಾವ ಭಾಗವನ್ನೂ ಅತಿ ಹಿಗ್ಗಲಿಸದೆ, ಕೊನೆಕೊನೆಯಲ್ಲಿ ದೌಡಾಯಿಸದೆ–ಉದ್ದಕ್ಕೂ ವಿಹಿತವಾದ ಕ್ರಮದಲ್ಲಿ ಈ ಗುರಿಯನ್ನು ಇಲ್ಲಿ ಸಾಧಿಸಲಾಗಿದೆ.

ನಿಘಂಟಿನ ಕಟ್ಟಡ ಇದರಲ್ಲಿ ಬಳಸಿರುವ ಅನುಪಮವಾದ ಪ್ರಯೋಗಸಂಪತ್ತಿನ ಇಟ್ಟಿಗೆಗಳ ಮೇಲೆ ನಿಂತಿದೆ. 18 ಲಕ್ಷಕ್ಕೂ ಮೀರಿದ ಪ್ರಯೋಗಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಈ ನಿಘಂಟಿನ ರಚನೆಗಾಗಿ ಸಮಗ್ರ ಇಂಗ್ಲಿಷ್ ಸಾಹಿತ್ಯವನ್ನು ಮೊದಲಿಂದ ಕೊನೆಯವರೆಗೂ ಓದಿ ಅಲ್ಲಿಂದ ಶಬ್ದಶಬ್ದಕ್ಕೂ ಆವಶ್ಯಕವಾದ ಪ್ರಯೋಗಗಳನ್ನು ಉದ್ಧರಿಸಲಾಗಿದೆ. ಇಲ್ಲಿ ಉದಾಹರಿಸಿರುವ ಮುಖ್ಯ ಗ್ರಂಥಗಳ ಪಟ್ಟಿಯೇ 88 ದೊಡ್ಡ ಪುಟಗಳನ್ನು ಆಕ್ರಮಿಸಿದೆ. ಪುಟಪುಟಕ್ಕೂ ಸುಮಾರು 270 ಆಕರ ಗ್ರಂಥಗಳ ಹೆಸರುಗಳಿವೆ.

1857ರಲ್ಲಿ ಅಂದಿಗೆ ಪ್ರಕಟವಾಗಿದ್ದ ಇಂಗ್ಲಿಷ್ ಕೋಶಗಳಲ್ಲಿ ಕಂಡುಬಂದ ಕೊರತೆಯನ್ನು ಗಮನಿಸಿದ ಆರ್.ಸಿ.ಟ್ರೆಂಚ್, ಆ ಕೋಶಗಳಲ್ಲಿ ಬಿಟ್ಟುಹೋಗಿರುವ ಶಬ್ದಗಳಿಗಾಗಿ ಪರಿಶಿಷ್ಟಕೋಶವೊಂದನ್ನು ಯೋಜಿಸುವಂತೆ ಫಿಲಲಾಜಿಕಲ್ ಸೊಸೈಟಿಯವರಿಗೆ ಕರೆಕೊಟ್ಟ. 1859ರಲ್ಲಿ ಈ ಯೋಜನೆಗೆ ಖಚಿತ ರೂಪರೇಖೆ ಕೊಡಲು ಹರ್‌ಬರ್ಟ್ ಕೋಲ್‌ರಿಜ್, ಫರ್ನಿವಾಲ್ ಮತ್ತು ಗ್ರೀನ್ ಟ್ರೆಂಚ್ ಈ ಮೂವರ ಸಮಿತಿಯೊಂದನ್ನು ನೇಮಿಸಲಾಯಿತು. ಸೊಸೈಟಿಯವರು ಹೊರತರಬಯಸಿದ ದಿ ನ್ಯೂ ಇಂಗ್ಲಿಷ್ ಡಿಕ್ಷನರಿಗೆ ಎಚ್.ಕೋಲ್‌ರಿಜ್‌ನನ್ನು ಮುಖ್ಯ ಸಂಪಾದಕನನ್ನಾಗಿ ಮಾಡಲಾಯಿತು. ಯೋಜನೆಯಂತೆ ದೇಶವಿದೇಶಗಳ ಇಂಗ್ಲಿಷ್ ಓದುಗರಿಂದ ಶಬ್ದಗಳನ್ನೂ ಪ್ರಯೋಗಗಳನ್ನೂ ಪಡೆಯುವ ಕೆಲಸ ಆರಂಭವಾಯಿತು. ಈ ಕೆಲಸದ ನಡುವೆಯೇ 1860 ರಲ್ಲಿ ಮೂವತ್ತೊಂದು ವರ್ಷ ವಯಸ್ಸಿನ ಕೋಲ್‌ರಿಜ್ ಮರಣವನ್ನಪ್ಪಿದ. ಅವನ ಅನಂತರ ಮೂವತ್ತಾರು ವರ್ಷ ವಯಸ್ಸಿನ ಫರ್ನಿವಾಲ್ ಪ್ರಧಾನ ಸಂಪಾದಕನಾದ. ಶಬ್ದಸಂಗ್ರಹಣಕಾರ್ಯ ಯಶಸ್ವಿಯಾಗಿ ನಡೆದರೂ ಹಲವಾರು ಅಡಚಣೆಗಳಿಂದ ಸೊಸೈಟಿಯವರ ಕೋಶದ ಪ್ರಕಟಣೆ ಸಾಧ್ಯವಾಗಲಿಲ್ಲ.

ಕ್ಲ್ಯಾರೆಂಡನ್ ಪ್ರೆಸ್ಸಿನವರು ಒಂದು ಪ್ರಕಟಣೆ ಹೊರಡಿಸಿ, ಅವರು ಪ್ರಕಟಿಸಲಿರುವ ನಿಘಂಟಿನ ರೂಪರೇಖೆಗಳನ್ನು ವಿವರಿಸಿ ಇಂಗ್ಲಿಷ್ ಓದುಗರಿಂದ ಶಬ್ದಗಳನ್ನೂ ಪ್ರಯೋಗಗಳನ್ನೂ ಆಹ್ವಾನಿಸಿದರು. ಭಾಷಾಭಿಮಾನಿಗಳಾದ ಸಹಸ್ರಾರು ಜನ ಆ ಕೆಲಸಕ್ಕಾಗಿ ಮುಂದೆ ಬಂದರು. 1858ರಲ್ಲಿ ಕೆಲಸ ಆರಂಭವಾಯಿತು. 1884ರ ಹೊತ್ತಿಗೆ ಒಬ್ಬೊಬ್ಬ ಖಾಸಗಿ ವಿದ್ವಾಂಸರೇ ಒಂದೂವರೆ ಲಕ್ಷ ಚೀಟಿಗಳನ್ನು ಕಳುಹಿಸಿ ಕೊಟ್ಟಿದ್ದರಂತೆ. ಗ್ರಂಥ ಪೂರ್ಣವಾಗುವವರೆಗೂ ಖಾಸಗಿ ಪಂಡಿತರುಗಳ ಕೆಲಸ ಅವಿಚ್ಛಿನ್ನವಾಗಿ ನಡೆದು ಬಂತು. ಸಂಬಳ ಕೊಟ್ಟೇ ಈ ಕೆಲಸವನ್ನು ಮಾಡಿಸುವುದಾಗಿದ್ದರೆ ನಿಘಂಟು ಕನಸಾಗಿಯೇ ಉಳಿಯುತ್ತಿತ್ತೆಂದು ಅಭಿಪ್ರಾಯಪಡಲಾಗಿದೆ.

1877ರಲ್ಲಿ ಕ್ಲ್ಯಾರೆಂಡನ್ ಪ್ರೆಸ್ಸಿನ ಮುಖಂಡ ಪ್ರೈಸ್‌ರವರ ಸಂಧಾನದ ಫಲವಾಗಿ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನವರು ನಿಘಂಟಿನ ಪ್ರಕಟಣೆಯ ಹೊರೆ ಹೊತ್ತರು. ಫಿಲಲಾಜಿಕಲ್ ಸೊಸೈಟಿಯವರಿಗೂ ಯೂನಿವರ್ಸಿಟಿ ಪ್ರೆಸ್ಸಿನವರಿಗೂ ಒಂದು ಒಪ್ಪಂದವಾಯಿತು. ಫಿಲಲಾಜಿಕಲ್ ಸೊಸೈಟಿಯವರು ಇದುವರೆಗೂ ಸಂಗ್ರಹಿಸಿದ್ದ ಸಮಸ್ತ ಸಾಮಗ್ರಿಗಳನ್ನೆಲ್ಲ ಯೂನಿವರ್ಸಿಟಿ ಪ್ರೆಸ್ಸಿನವರಿಗೆ ಕೊಡಬೇಕೆಂದೂ ನಿಘಂಟನ್ನು ಫಿಲಲಾಜಿಕಲ್ ಸೊಸೈಟಿಯವರ ದಿ ನ್ಯೂ ಇಂಗ್ಲಿಷ್ ಡಿಕ್ಷನರಿ ಎಂದು ಕರೆಯಬೇಕೆಂದೂ ನಿಘಂಟು ಹತ್ತು ವರ್ಷಗಳಲ್ಲಿ ಪ್ರಕಟವಾಗಬೇಕೆಂದೂ ಇದಕ್ಕೆ ಜೆ.ಎ.ಎಚ್.ಮರೀಯವರೇ ಪ್ರಧಾನ ಸಂಪಾದಕರಾಗಿರಬೇಕೆಂದೂ ಇದಕ್ಕೆ ಹತ್ತು ಸಂಪುಟಗಳ ನಿಘಂಟು ಗರಿಷ್ಠ 8,400 ಪುಟಗಳಾಗಿರತಕ್ಕದ್ದೆಂದೂ ಒಪ್ಪಂದವಾಯಿತು.

ಫಿಲಲಾಜಿಕಲ್ ಸೊಸೈಟಿಯವರು ಸಂಪಾದಕ ಮರೀಯವರಿಗೆ ಕೊಟ್ಟ ಸಾಹಿತ್ಯ ಸಾಮಗ್ರಿಯ ತೂಕ 1¾ ಟನ್ ಇತ್ತಂತೆ. ಬೆಟ್ಟದಂತೆ ರಾಶಿರಾಶಿಯಾಗಿ ಬಂದು ಬೀಳುತ್ತಿದ್ದ ಈ ಪ್ರಯೋಗಗಳನ್ನು ಓದಿ, ವಿಂಗಡಿಸಿ, ವಿಭಜಿಸಿ, ಕ್ರಮವಾಗಿ ಜೋಡಿಸಿ, ಅನವಶ್ಯಕವಾದವನ್ನು ತೆಗೆದುಹಾಕಿ, ಬೇಕಾದವನ್ನು ಹೊಸದಾಗಿ ಸೇರಿಸಿ ಅದರಿಂದ ಶಬ್ದದ ಚರಿತ್ರೆಯನ್ನು ಪಡೆಯುವ ಕೆಲಸದ ಹೊರೆ ಹೆಚ್ಚಿತು. ಪ್ರಧಾನ ಸಂಪಾದಕ ಮರೀಯವರ ಜೊತೆಗೆ ಹೆನ್ರಿ ಬ್ರ್ಯಾಡ್ಲೀಯವರೂ ಸೇರಿದರು. 1897ರಲ್ಲಿ ವಿಲಿಯಂ ಅಲೆಕ್ಸಾಂಡರ್ ಕ್ರೇಗೀಯವರೂ 1914ರಲ್ಲಿ ಸಿ.ಎ.ಅನ್ಯಯನ್ಸ್‌ರವರೂ ಸಂಪಾದಕ ಮಂಡಲಿ ಸೇರಿದರು. ಇವರ ಜೊತೆಗೆ 84 ಜನ ಉಪಸಂಪಾದಕರೂ 65 ಜನ ಸಹಾಯಕರೂ 24 ಜನ ಕರಡು ತಿದ್ದುವವರೂ 1,227 ಖಾಸಗೀ ವಿದ್ವಾಂಸರೂ

ಈ ಬೃಹದ್ ಯೋಜನೆಯನ್ನು ಆಗಮಾಡಲು ಅಹರ್ನಿಶಿ ದುಡಿದರು. ಕೋಶದ ಕೆಲಸ ಅರ್ಧಮುಕ್ಕಾಲು ಮುಗಿದಿದ್ದಾಗ, ಅಷ್ಟು ಹೊತ್ತಿಗಾಗಲೇ ತನ್ನ ಅಸಾಧಾರಣ ಪಾಂಡಿತ್ಯಕ್ಕಾಗಿ ಸರ್ ಪದವಿ ಪಡೆದಿದ್ದ ಮರೀ 26 ಜುಲೈ 1915ರಲ್ಲಿ ನಿಧನ ಹೊಂದಿದ. ಕೋಶದೊಂದಿಗೆ 3 ವರ್ಷಗಳಿಗೂ ಹೆಚ್ಚಿನ ಸಂಬಂಧ ಹೊಂದಿ, ಆಗ ಬೇಕಾಗಿದ್ದ 15,487 ಪುಟಗಳಲ್ಲಿ 7,207 ಪುಟಗಳ ಕಾರ್ಯವನ್ನು ಮರೀಯೊಬ್ಬನೇ ಮಾಡಿ ಮುಗಿಸಿದ್ದನಲ್ಲದೆ ಉಳಿದ ಬಹುಪಾಲು ಕೆಲಸದ ಮೇಲ್ವಿಚಾರಣೆಯನ್ನೂ ನಿರ್ವಹಿಸಿದ್ದ. ಈತನ ಉಪಮಾತೀತ ಕಾರ್ಯನಿರ್ವಹಣೆಯ ಸ್ಮರಣೆಯಾಗಿ ಆಕ್ಸ್‌ಫರ್ಡ್ ನಿಘಂಟನ್ನು ಮರೀ ನಿಘಂಟು ಎಂದೇ ಕರೆಯುತ್ತಿದ್ದರು. ಮುಂದೆ ಇದರೊಡನೆ ಸುಮಾರು ಮೂವತ್ತೈದು ವರ್ಷಗಳ ಸಂಬಂಧ ಹೊಂದಿದ್ದ ಬ್ರ್ಯಾಡ್ಲೀ 1923 ಮೇ 23ರಂದು ನಿಧನ ಹೊಂದಿದ. ಕೋಶದ ಕೆಲಸ 1928ರಲ್ಲಿ ಮುಗಿದಾಗ ಆ ಕಾರ್ಯವನ್ನು ನಿರ್ವಹಿಸಿ ಬದುಕಿದ್ದವರೆಂದರೆ ಕ್ರೇಗೀ ಹಾಗೂ ಅನ್ಯಯನ್ಸ್.

ಆಕ್ಸ್‌ಫರ್ಡ್ ನಿಘಂಟನ್ನು ಹೊಸ (ದಿ ನ್ಯೂ) ಇಂಗ್ಲಿಷ್ ನಿಘಂಟು ಎಂದು ಹೆಸರಿಸಿದ್ದರು. ಇದರಲ್ಲಿ ಹೊಸ ಎಂಬ ಮಾತು ಬಹುಕಾಲ ಉಳಿಯಲಿಲ್ಲ. ಎರಡು ತಲೆಮಾರುಗಳಲ್ಲಿ ಭಾಗಭಾಗವಾಗಿ ಹೊರಬಂದ ಈ ಕೋಶದಲ್ಲಿ ಕಾಲಕಾಲಕ್ಕೆ ಮೂಡಿಬಂದ ಹಲವಾರು ಶಬ್ದಗಳು ಸೇರಿರಲಿಲ್ಲ. ಪ್ರಪಂಚಾದ್ಯಂತ ಪ್ರಚಲಿತವಿರುವ ಸಿನಿಮ ಶಬ್ದವೇ ಮೂಲ ಕೋಶದಲ್ಲಿ ಇರಲಿಲ್ಲ. ಇಂಥ ಕೊರತೆಯನ್ನು ನೀಗಿಸಿ ದಿನದಿನಕ್ಕೂ ಮೂಡಿಬರುತ್ತಿದ್ದ ಹೊಸ ಶಬ್ದಗಳನ್ನು ಶೇಖರಿಸಿ ನಿಘಂಟಿಗೆ ಸಮಗ್ರತೆಯನ್ನು ಕೊಡಲು ಪರಿಶಿಷ್ಟವೊಂದು ಅಗತ್ಯವೆಂಬುದನ್ನು ಮರೀ ಅರಿತಿದ್ದರು. ಮುಖ್ಯ ನಿಘಂಟಿನ ಜೊತೆಜೊತೆಗೇ ಪರಿಶಿಷ್ಟದ ಕೆಲಸವೂ ನಡೆದು ಅದು ಹದಿಮೂರನೆಯ ಸಂಪುಟವಾಗಿ ಪ್ರಕಟವಾಯಿತು. 866 ಪುಟಗಳ ಈ ಕೋಶದಲ್ಲಿ ವೈಜ್ಞಾನಿಕ ಸಂಶೋಧನೆ, ಯಂತ್ರನಿರ್ಮಾಣ, ಕ್ರೀಡಾ ಪ್ರಪಂಚ, ಬೆಡಗು, ಭೋಗ ಸಾಮಗ್ರಿ, ಚಿತ್ತಕ್ಷೋಭೆ ಇವನ್ನು ಗುರುತಿಸುವ ಹಲವು ಮಾತುಗಳು ಮೊದಲ ಬಾರಿಗೆ ಬಂದಿವೆ. ಉದ್ಧರಿಸಿರುವ ಮುಖ್ಯ ಗ್ರಂಥಗಳ ಪರಿವಿಡಿಯನ್ನೂ ಈ ಪರಿಶಿಷ್ಟದಲ್ಲಿ ಕೊಡಲಾಗಿದೆ. ಈ ಪರಿವಿಡಿಯೇ 91 ಪುಟಗಳ ವ್ಯಾಪ್ತಿಯನ್ನು ಹೊಂದಿದೆ.

ಮೂಲ ನಿಘಂಟಿನ ವ್ಯಾಪ್ತಿ ಎಷ್ಟೆಂಬುದನ್ನು ತಿಳಿಯಲು, ಇಂಗ್ಲಿಷ್ ವರ್ಣಮಾಲೆಯ ಒಂದೊಂದು ಅಕ್ಷರವೂ ಇಲ್ಲಿ ಎಷ್ಟು ಪುಟಗಳ ವ್ಯಾಪ್ತಿ ಹೊಂದಿದೆ ಎಂಬುದನ್ನು ನೋಡಬಹುದು.

ಎ ಬಿ–1,240 ಸಿ–1308; ಡಿ–740; ಇ–438; ಎಫ್–628; ಜಿ–532; ಎಚ್–516; ಐ ಜೆ ಕೆ–758; ಎಲ್–528; ಎಂ–820; ಎನ್–277; ಓ ಪಿ–1676; ಕ್ಯೂ ಆರ್–936; ಎಸ್–2407; ಟಿ–565, ಯು–493, ವಿ–332, ಡಬ್ಲ್ಯು–734; ಎಕ್ಸ್–7; ವೈ ಜ಼ಡ್–105; ಪರಿಶಿಷ್ಟ–875.

ಈ ನಿಘಂಟಿನ ಬೆಲೆ ಸುಮಾರು 2 ಸಾವಿರ ರೂ. ಇದರ ಗಾತ್ರವೂ ಬೆಲೆಯೂ ಬಹು ಹೆಚ್ಚಾಯಿತೆಂದು ತಿಳಿದ ಸಂಪಾದಕ ವರ್ಗ ಹೆಚ್ಚು ಜನರಿಗೆ ಅನುಕೂಲವಾಗುವಂತೆ ಷಾರ್ಟರ್ ಆಕ್ಸ್‌ಫರ್ಡ್ ಡಿಕ್ಷನರಿ ಎಂಬ ಹೆಸರಿನಲ್ಲಿ ಚಿಕ್ಕ ನಿಘಂಟೊಂದನ್ನು ಪ್ರಕಟಿಸಿತು. 2,515 ಪುಟಗಳ ಒಂದೇ ಸಂಪುಟವೂ ಲಭ್ಯವಿದೆ. ಇದು ಮೂರು ಬಾರಿ ಪರಿಷ್ಕರಣವಾಗಿ ಹದಿನಾರು ಬಾರಿ ಪುನರ್ಮುದ್ರಣಗೊಂಡಿದೆ. ಇದರ ಬೆಲೆಯೂ ಸಾಮಾನ್ಯನಿಗೆ ಭಾರವಾದ್ದರಿಂದ ಫೌಲರ್ ಸಹೋದರರು ಕನ್‌ಸೈಸ್ ಆಕ್ಸ್‌ಫರ್ಡ್ ಡಿಕ್ಷನರಿಯನ್ನು 1911ರಲ್ಲಿ ಸಂಪಾದಿಸಿ ಹೊರತಂದರು. 1,558 ಪುಟಗಳ ಈ ಕೋಶ ಈಗಾಗಲೇ 19 ಬಾರಿ ಮುದ್ರಣಗೊಂಡಿದೆ. ಇದರ ಇಂದಿನ ಬೆಲೆ ಹದಿನಾರು ರೂ. ಇದು ಹೊರೆ ಎನ್ನುವವರಿಗೆ ಇದೇ ಸಂಪಾದಕರ ಪಾಕೆಟ್ ಆಕ್ಸ್‌ಫರ್ಡ್ ಡಿಕ್ಷನರಿ ಹೊರಬಂತು. ಇದರ ಬೆಲೆ ಹದಿನಾಲ್ಕು ರೂ. ಬೆಲೆ ಕಡಿಮೆಯಾದರೂ ನಿಜವಾಗಿಯೂ ಇದು ಜೇಬಿಗೆ ಹಿಡಿಸುವುದಿಲ್ಲ. ಇದನ್ನು ಗಮನಿಸಿದ ಅನುಭವಸ್ಥನಾದ ಮುದ್ರಣಕಾರನೊಬ್ಬ ಹೆಚ್ಚು ವಿಷಯ ಬಿಟ್ಟು ಹೋಗದಂತೆ ದಿ ಲಿಟಲ್ ಆಕ್ಸ್‌ಫರ್ಡ್ ಡಿಕ್ಷನರಿಯನ್ನು ಪ್ರಕಟಿಸಿದ. ಇದರ ಬೆಲೆ ಏಳು ರೂ.

ಇವುಗಳ ಜೊತೆಗೆ ಮೂಲ ಹದಿಮೂರು ಸಂಪುಟಗಳ ನಿಘಂಟನ್ನು ಒಂದು ಶಬ್ದವೂ ಬಿಟ್ಟುಹೋಗದಂತೆ ಮೈಕ್ರೋ ಫೋಟೋ ಪ್ರತಿಮಾಡಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಇದನ್ನು ಮಸೂರದ ಸಹಾಯದಿಂದ ಮಾತ್ರ ನೋಡಲು ಸಾಧ್ಯ. ಗ್ರಂಥದೊಂದಿಗೆ ಮಸೂರವನ್ನೂ ಕೊಡುತ್ತಾರೆ. ಇದರ ಬೆಲೆ ಸುಮಾರು ಆರು ನೂರು ರೂಪಾಯಿಗಳು.

ಆಕ್ಸ್‌ಫರ್ಡ್ ನಿಘಂಟು, ನಿಘಂಟುಗಳ ನಾಯಾಧೀಶ್ವರ, ಪರಿಪೂರ್ಣತೆಯಲ್ಲಿ ಅದ್ವಿತೀಯ. ಪ್ರಾಮಾಣ್ಯದಲ್ಲಿ ಅನುಪಗಮ್ಯ, ಪ್ರಪಂಚದ ಬೇರೆ ಯಾವ ಭಾಷೆಯಲ್ಲೂ ಇಷ್ಟು ಸಮಗ್ರವಾದ ಉತ್ಕೃಷ್ಟವಾದ ನಿಘಂಟಲ್ಲ–ಎಂಬುದು ಬಹು ಮಂದಿ ವಿದ್ವಾಂಸರ ಅಭಿಪ್ರಾಯ. **(ಜಿ. ಎಸ್. ಪಿ. ಎಂ.)**

ವೆಬ್‌ಸ್ಟರ್ ಕೋಶ: ಆಕ್ಸ್‌ಫರ್ಡ್ ಇಂಗ್ಲಿಷ್ ಕೋಶದಂತೆ ಈ ಕೋಶವೂ ಒಂದು ಕೋಶ ಕುಟುಂಬವೇ ಆಗಿ ಬೆಳೆದಿದೆ, ಬೆಳೆಯುತ್ತಿದೆ. ಈ ಕೋಶದ ಇತಿಹಾಸ ಸ್ವಾರಸ್ಯಮಯವಾದದ್ದು, ಅಷ್ಟೇ ಅಲ್ಲ ಸ್ಫೂರ್ತಿದಾಯಕವಾದದ್ದು. ಅದರ ಮಹತ್ತ್ವವನ್ನರಿಯಬೇಕಾದರೆ ವೆಬ್‌ಸ್ಟರನ ಜೀವನದ ಹಿನ್ನೆಲೆ ಹಾಗೂ ಜೀವಿತ ಕಾಲದ ವ್ಯಾಪ್ತಿ–ವಿಸ್ತಾರಗಳನ್ನೂ ಅವನಿಗೆ ಲಭಿಸಿದ ಬಹುಮುಖವಾದ ವೈವಿಧ್ಯಪೂರ್ಣವಾದ ಅನುಭವಗಳನ್ನೂ ಗಮನಿಸಬೇಕು. ಈ ಕೋಶವನ್ನು ರಚಿಸಿದ ನೋವ ವೆಬ್‌ಸ್ಟರ್ (1758–1843) ಕನೆಕ್ಟಿಕಟ್‌ನ ಒಂದು ವ್ಯವಸಾಯ ಕ್ಷೇತ್ರದಲ್ಲಿ–ಏಳು ವರ್ಷಗಳ ಯುದ್ಧ (1757–63) ಬಿರುಸಾಗುತ್ತಿದ್ದಾಗ–ಜನಿಸಿದ. ಅಮೆರಿಕದ ಬ್ರಿಟಿಷ್ ವಸಾಹತುಗಳು ಬ್ರಿಟಿಷ್ ಸರ್ಕಾರದೊಡನೆ ತಮ್ಮ ಬಿಡುಗಡೆಗಾಗಿ ಮಾಡಿದ ಹೋರಾಟ ಬಾಲಕ ವೆಬ್‌ಸ್ಟರನ ಸ್ವಂತ ಅನುಭವವಾಯಿತು. ಈತ ತನ್ನ ತಂದೆಯೊಡಗೂಡಿ ಅಮೆರಿಕದ ಸ್ವಾತಂತ್ರ್ಯಸಮರದಲ್ಲೂ ಪಾಲುಗೊಳ್ಳುವ ಸುಯೋಗ ಒದಗಿತು. 1783ರಲ್ಲಿ ಬ್ರಿಟಿಷ್ ವಸಾಹತುಗಳು ವಿಜಯ ಸಾಧಿಸಿದುದರಿಂದ ಅಮೆರಿಕದ ಸಂಯುಕ್ತ ಸಂಸ್ಥಾನದ ಉದಯವಾಯಿತು.

ಈ ರೋಮಾಂಚಕಾರಿ ಘಟನಾವಳಿಗಳಿಂದ ಉಜ್ಜ್ವಲಗೊಂಡ ರಾಷ್ಟ್ರೀಯ ಮನೋವೃತ್ತಿಯಿಂದ ವೆಬ್‌ಸ್ಟರನ ಮನಸ್ಸಿನಲ್ಲಿ ಹೊಸದಾಗಿ ಹುಟ್ಟಿದ ಅಮೆರಿಕ ರಾಷ್ಟ್ರಕ್ಕೆ ಸ್ವಂತ ಶಾಲಾಕಾಲೇಜು ಪುಸ್ತಕಗಳು, ಏಕರೂಪದ ಭಾಷೆ ಹಾಗೂ ಸ್ವತಂತ್ರವಾದ ಬೌದ್ಧಿಕ ಬೆಳವಣಿಗೆ ಅತ್ಯಾವಶ್ಯಕವೆಂಬ ದೃಢವಿಶ್ವಾಸ ಮೂಡಿತು. ಈ ಮಹೋದ್ದೇಶಗಳನ್ನು ಸಾಧಿಸುವ ಪ್ರಥಮ ಪ್ರಯತ್ನವಾಗಿ ಆತ 1806 ರಲ್ಲಿ ಕಾಂಪೆಂಡಿಯಸ್ ಡಿಕ್ಷನರಿಯನ್ನು ಬರೆದು ಅಮೆರಿಕದ ಬಗ್ಗೆ ಹೆಚ್ಚಿನ ಶಬ್ದಗಳನ್ನದರಲ್ಲಿ ಸೇರಿಸಿದ. ಆಗಲೇ ಆತ ತನ್ನ ಸಮಗ್ರವಾದ ಲೋಕಪ್ರಸಿದ್ಧ ಕೋಶವನ್ನು ರಚಿಸಲು ತೊಡಗಿದ. 1807ರಲ್ಲಿ ಮಿತ್ರನೊಬ್ಬನಿಗೆ ಆತ ಬರೆದ ಕಾಗದದಲ್ಲಿ ಆ ಕೋಶವನ್ನು ಬರೆದು ಮುಗಿಸಲು ಸುಮಾರು ಮೂರು ವರ್ಷಗಳಿಂದ ಹಿಡಿದು ಐದು ವರ್ಷಗಳಷ್ಟು ಕಾಲ ನಿರಂತರವಾಗಿ ಶ್ರಮಿಸಬೇಕಾಗುವುದೆಂದು ಹೇಳಿದ್ದಾನೆ. ಆದರೆ ಆತ ನಿಯೋಜಿಸಿದ ಸಂಪೂರ್ಣ ಕೋಶ ಪ್ರಕಟವಾದದ್ದು 1828ರಷ್ಟು ವಿಳಂಬವಾಗಿ; ಅಂದರೆ 22 ವರ್ಷಗಳ ಅವಿರತ ಪರಿಶ್ರಮದ ಫಲವಾಗಿ ಅಮೆರಿಕನ್ ಡಿಕ್ಷನರಿ ಆಫ್ ದಿ ಇಂಗ್ಲಿಷ್ ಲ್ಯಾಂಗ್‌ವೇಜ್ ಎಂಬ ಎರಡು ದೊಡ್ಡ ಸಂಪುಟಗಳ ಕೋಶ ಪ್ರಕಟವಾಯಿತು.

ಈ ಕೋಶದ ಮೊದಲ ಪರಿಷ್ಕೃತ ಆವೃತ್ತಿಯನ್ನು ವೆಬ್‌ಸ್ಟರ್ ತನ್ನ ನಿಧನಕ್ಕೆ ಕೇವಲ ಎರಡು ವರ್ಷಗಳಷ್ಟು ಮುಂಚೆ (1841) ಪ್ರಕಟಿಸಿದ. ಆತನ ನಿಧನದ ತರುವಾಯ ಜಾರ್ಜ್ ಮತ್ತು ಚಾರಲ್ಸ್ ಮೆರಿಯಮ್ ಎಂಬುವರು ತಮ್ಮ ಜಿ ಅಂಡ್ ಸಿ ಮೆರಿಯಮ್ ಸಂಸ್ಥೆಗಾಗಿ ವೆಬ್‌ಸ್ಟರ್ ಕೋಶದ ಮುದ್ರಣದ ಹಕ್ಕನ್ನು ಕೊಂಡುಕೊಂಡರು.

ಸರಿಯಾದ, ಸಮಗ್ರವಾದ ಭಾಷಾಜ್ಞಾನಕ್ಕೆ ಆಕರವಾದ ಕೋಶಗ್ರಂಥವೊಂದನ್ನು ರಚಿಸುವುದು ಸಾಹಸದ ಪ್ರಯತ್ನ. ಇಂಥ ಕೃತಿಯನ್ನು ರಚಿಸಲು ಬೇಕಾಗುವಷ್ಟು ಅರ್ಹತೆ, ಪಾಂಡಿತ್ಯ, ಅಧಿಕಾರ ವೆಬ್ಸ್ಟರನಿಗೆ ಸಾಕಷ್ಟು ಇತ್ತು. ವ್ಯವಸಾಯ ತೋಟಗಾರಿಕೆಗಳಷ್ಟೇ ಆತನಿಗೆ ಶಿಕ್ಷಣವೂ ಪರಿಚಿತವಾಗಿತ್ತು. ಆತ ಸ್ವಯಂ ಉತ್ತಮ ವಕೀಲ, ನ್ಯಾಯಶಾಸ್ತ್ರ ಪಂಡಿತ. ಸಾಹಿತ್ಯ, ಅರ್ಥಶಾಸ್ತ್ರ, ರಾಜನೀತಿ, ಭಾಷಾವಿಜ್ಞಾನ, ವಿಜ್ಞಾನ–ಎಲ್ಲವನ್ನೂ ಕುರಿತು ಆತ ಅನೇಕಾನೇಕ ಲೇಖನಗಳನ್ನು ಬರೆದಿದ್ದ. ಬ್ಯಾಂಕುಗಳು, ಸೋಂಕುರೋಗಗಳು, ಫ್ರಾನ್ಸಿನ ಮಹಾಕ್ರಾಂತಿ, ವೈಟ್‌ಲೆಡ್ ಎಂಬ ಬಳಿಯುವ ಬಣ್ಣದ ವಿಯೋಜ ವಿಧಾನ, ಯುದ್ಧಕಾಲದಲ್ಲಿ ತಟಸ್ಥ ರಾಷ್ಟ್ರಗಳ ಹಕ್ಕುಗಳು–ಹೀಗೆ ಅವನ ಲೇಖನಿಗೆ ಒಳಪಡದ ವಿಷಯವೇ ಇರಲಿಲ್ಲ. ಜೊತೆಗೆ ಆತ ಒಂದು ನಿಯತಕಾಲಿಕ ಪತ್ರಿಕೆಯ ಸಂಪಾದಕನೂ ಆಗಿದ್ದನಲ್ಲದೆ ಬೈಬಲ್ ಗ್ರಂಥವನ್ನು ಪರಿಷ್ಕರಿಸಿ ಪ್ರಕಟಿಸಿದ್ದ. ಹೀಗೆ ಸರ್ವತೋಮುಖವಾದ ಪಾಂಡಿತ್ಯವುಳ್ಳವರಲ್ಲದೆ ಮತ್ತಾರು ತಾನೆ ಕೋಶ ನಿರ್ಮಾಣ ಮಾಡಬಲ್ಲರು?

1812ರಿಂದ ಸುಮಾರು 10 ವರ್ಷ ಕಾಲ ವೆಬ್‌ಸ್ಟರ್ ಮ್ಯಾಸಚೂಸೆಟ್ಸ್‌ನ ಆಮರ್ಸ್ಟ್‌ನಲ್ಲಿ ಒಂದು ದೊಡ್ಡ ದುಂಡು ಮೇಜಿನ ಸುತ್ತಲೂ ಸ್ಥಳದಿಂದ ಸ್ಥಳಕ್ಕೆ ಚಲಿಸುತ್ತ ಎಡೆಬಿಡದೆ ಗ್ರಂಥಾವಲೋಕನ ಮಾಡುತ್ತ ತನ್ನ ಕೋಶ ಸಂಪಾದನ ಕಾರ್ಯವನ್ನು ಮುಂದುವರಿಸಿದ. ಆತನ ಮೇಜಿನ ಮೇಲೆ ಇಪ್ಪತ್ತು ಬೇರೆ ಬೇರೆ ಭಾಷೆಗಳ ಕೋಶಗಳೂ ವ್ಯಾಕರಣ ಗ್ರಂಥಗಳೂ ಹರಡಿರುತ್ತಿದ್ದುವು. 1824ರಲ್ಲಿ ಆತ ಪ್ಯಾರಿಸ್, ಲಂಡನ್ ಮತ್ತು ಕೇಂಬ್ರಿಜ್‌ಗಳಲ್ಲಿ ಒಂದು ವರ್ಷ ಕಾಲ ಇದ್ದು ಅಲ್ಲಿಯ ಪುಸ್ತಕ ಭಂಡಾರಗಳನ್ನು ಹುಡುಕಿ ವಿಷಯ ಸಂಗ್ರಹಣ ಮಾಡಿದ. ಇಂಥ 22 ವರ್ಷಗಳ ಉಗ್ರತಪಸ್ಸಿನ ಫಲವೆಲ್ಲ ಅವನ ಕೋಶದಲ್ಲಿ ಮೂಡಿದೆ.

ಅತಿದೊಡ್ಡ ವೆಬ್‌ಸ್ಟರ್ ಕೋಶ ಷಾರ್ಟರ್ ಆಕ್ಸ್‌ಫರ್ಡ್ ಕೋಶದಷ್ಟು ಗಾತ್ರವುಳ್ಳದ್ದು. ಆದರೂ ಅದು ಸಂಪೂರ್ಣ ಆಕ್ಸ್‌ಫರ್ಡ್ ಕೋಶದಲ್ಲಿರುವಷ್ಟು ಪದಗಳನ್ನೂ ಒಳಗೊಂಡಿದೆ. ಆದುದರಿಂದ ಅದರಲ್ಲಿ ಪ್ರತಿಯೊಂದು ಪದಕ್ಕೂ ಕೊಟ್ಟಿರುವ ವ್ಯಾಖ್ಯೆ, ವಿವರಣೆಗಳು

ಸಂಕ್ಷಿಪ್ತವಾಗಿರುವುದು ಸಹಜವೇ ಆಗಿದೆ. ವಸ್ತುತಃ ಈ ಸಂಕ್ಷಿಪ್ತತೆ ಈ ಕೋಶದ ಒಂದು ಗುಣವೇ ಆಗಿದೆ. ಏಕೆಂದರೆ ಇದರಲ್ಲಿಯ ವ್ಯಾಖ್ಯೆಗಳೂ ವಿವರಣೆಗಳೂ ಎಷ್ಟು ಎಷ್ಟು ಸಂಕ್ಷೇಪವಾಗಿದೆಯೋ ಅಷ್ಟೇ ಸ್ಪಷ್ಟವೂ ನಿಷ್ಕೃಷ್ಟವೂ ಆಗಿವೆ. ಅಮೆರಿಕದ ಕಾಗುಣಿತಕ್ಕೂ ಬ್ರಿಟಿಷ್ ಕಾಗುಣಿತಕ್ಕೂ ಭೇದವಿದ್ದಲ್ಲಿ ಈ ಕೋಶದಲ್ಲಿ ಎರಡನ್ನೂ ಕೊಟ್ಟಿರುವುದರಿಂದ ಇದನ್ನು ಎಲ್ಲ ದೇಶಗಳವರೂ ಬಳಸಲು ಉಪಯುಕ್ತವಾಗಿದೆ. ಹಲವೆಡೆಗಳಲ್ಲಿ ಚಿತ್ರಗಳನ್ನೂ ಕೊಟ್ಟಿರುವುದರಿಂದ ವೆಬ್‌ಸ್ಟರ್ ಕೋಶದ ಉಪಯುಕ್ತತೆ ಹೆಚ್ಚಿದೆ.

ಮೆರಿಯಮ್ ಪ್ರಕಟಣ ಸಂಸ್ಥೆಯವರು ವೆಬ್‌ಸ್ಟರ್ ಕೋಶದ ಅಸಂಕ್ಷಿಪ್ತ ಆವೃತ್ತಿಯನ್ನು ಮೊದಲ ಬಾರಿಗೆ 1847ರಲ್ಲಿ ಪ್ರಕಟಿಸಿದರು. ಮುಂದೆ ಈ ಕೋಶ ವೆಬ್‌ಸ್ಟರ್ಸ್ ಇಂಟರ್‌ನ್ಯಾಷನಲ್ ಡಿಕ್ಷನರಿ ಎಂಬ ಹೆಸರಿನಲ್ಲಿ 1890ರಲ್ಲಿ ಅಚ್ಚಾಯಿತು. 1909, 1934 ಮತ್ತು 1962ರಲ್ಲಿ ವೆಬ್‌ಸ್ಟರ್ಸ್ ಫಸ್ಟ್, ಸೆಕೆಂಡ್ ಮತ್ತು ಥರ್ಡ್ ನ್ಯೂ ಇಂಟರ್‌ನ್ಯಾಷನಲ್ ಡಿಕ್ಷನರಿಗಳು ಅನುಕ್ರಮವಾಗಿ ಅಚ್ಚಾದುವು.

ವೆಬ್‌ಸ್ಟರ್ಸ್ ಥರ್ಡ್ ನ್ಯೂ ಇಂಟರ್‌ನ್ಯಾಷನಲ್ ಡಿಕ್ಷನರಿಯಲ್ಲಿ 4½ ಲಕ್ಷಕ್ಕೂ ಮೀರಿ ಪದಗಳ ವ್ಯಾಖ್ಯೆ ವಿವರಣೆಗಳಿವೆ. ಈ ವ್ಯಾಖ್ಯೆ ವಿವರಣೆಗಳನ್ನು ಸ್ಪಷ್ಟಪಡಿಸಲು ಹಾಗೂ ಸಮರ್ಥಿಸಲು ಪ್ರಸಿದ್ಧ ಲೇಖಕರ ಗ್ರಂಥಗಳು, ಲೇಖನಗಳು, ಅಸಂಖ್ಯಾತ ಪತ್ರಿಕೆಗಳು, ನಿಯತಕಾಲಿಕಗಳು ಇವೆಲ್ಲವುಗಳಿಂದ ಸಂಗ್ರಹಿಸಿದ 60 ಲಕ್ಷಕ್ಕೂ ಮೀರಿದ ಉಲ್ಲೇಖಗಳನ್ನು ಒದಗಿಸಲಾಗಿದೆ.

ಆಕ್ಸ್‌ಫರ್ಡ್ ಇಂಗ್ಲಿಷ್ ಕೋಶದಂತೆ ವೆಬ್‌ಸ್ಟರ್ ಕೋಶವೂ ಮುಖ್ಯವಾಗಿ ಸಾಮಾನ್ಯೋಪಯೋಗಿಯಾದ ಕೋಶ. ಆದರೂ ವಿಜ್ಞಾನ ಮತ್ತು ಶಾಸ್ತ್ರಗಳಿಗೆ ಸಂಬಂಧಿಸಿದ ಸಾವಿರಾರು ಪದಗಳನ್ನೂ ಇಲ್ಲಿ ಸೇರಿಸಲಾಗಿದೆ. ಇವುಗಳ ವ್ಯಾಖ್ಯೆಯಲ್ಲಿಯೂ ಸಾಮಾನ್ಯ ವಾಚಕರಿಗೆ ಸ್ಪಷ್ಟವಾಗಿರಬೇಕೆಂಬ ಕಾರಣದಿಂದ ಶಾಸ್ತ್ರೀಯ ನಿಷ್ಕೃಷ್ಟತೆಯನ್ನು ಬಲಿಗೊಟ್ಟಿಲ್ಲ. ನಿರ್ದುಷ್ಟತೆ, ಸ್ಪಷ್ಟತೆ, ಸಮಗ್ರತೆ ಈ ಮೂರು ಲಕ್ಷಣಗಳೂ ಈ ಕೋಶಗಳ ಮುಖ್ಯ ಆದರ್ಶಗಳೆಂದು ಸಂಪಾದಕರು ಹೇಳಿಕೊಂಡಿದ್ದಾರೆ. ಇದು ಅತಿಶಯೋಕ್ತಿಯಲ್ಲವೆಂಬ ವಿಷಯ ಯಾವ ಓದುಗರಿಗೂ ಸ್ಪಷ್ಟವೇ ಆಗಿದೆ.

ವೆಬ್‌ಸ್ಟರ್ ಕೋಶಕುಟುಂಬದಲ್ಲಿ ವಿವಿಧ ಕೋಶಗಳು ಹುಟ್ಟಿವೆ. ಅವುಗಳಲ್ಲಿ ವೆಬ್‌ಸ್ಟರ್ಸ್ ಡಿಕ್ಷನರಿ ಆಫ್ ಸಿನೊನಿಮ್ಸ್ ಎಂಬುದು ಪರ್ಯಾಯ ಪದಗಳ ಅಥವಾ ಸಮಾನಾರ್ಥಕಗಳ ಕೋಶ. ನ್ಯೂ ಇಂಟರ್‌ನ್ಯಾಷನಲ್‌ಗೂ ಇದಕ್ಕೂ ನೇರವಾದ ಸಂಬಂಧ ಇಲ್ಲ. ಇದರಲ್ಲಿ ಪದಗಳನ್ನು ಅಕ್ಷರ ಕ್ರಮದಲ್ಲೇ ಜೋಡಿಸಿದೆ. ಪದಗಳ ಹಲವು ಸಮಾನಾರ್ಥಕಗಳನ್ನು ಕೊಟ್ಟಿರುವುದಲ್ಲದೆ ಇವುಗಳಲ್ಲೂ ಒಂದಕ್ಕೊಂದಕ್ಕಿರುವ ಅರ್ಥಭೇದಗಳನ್ನೂ ಛಾಯಾಭೇದಗಳನ್ನೂ ಸೂಕ್ಷ್ಮವಾಗಿ ವಿವರಿಸಿ, ನಿದರ್ಶನಗಳ ಸಮೇತ ಸಮರ್ಥಿಸಿರುವುದು ಈ ಕೋಶದ ವೈಶಿಷ್ಟ್ಯ. ಇದರಿಂದ ಈ ಕೋಶ ಪ್ರಪಂಚಕ್ಕೆಲ್ಲ ಉಪಯುಕ್ತವಾದದು. ಪ್ರತಿಪದದ ಕೆಳಗೂ ಪರ್ಯಾಯ ಪದಗಳನ್ನು ಕೊಟ್ಟಮೇಲೆ, ಸದೃಶ ಪದಗಳ ಮತ್ತು ವಿರುದ್ಧ ಪದಗಳ ಪಟ್ಟಿಯನ್ನೂ ಕೊಟ್ಟಿದೆ. ಇದರಿಂದ ಈ ಕೋಶದ ಉಪಯುಕ್ತತೆ ಇನ್ನೂ ಹೆಚ್ಚಿದೆ.

ವೆಬ್‌ಸ್ಟರ್ಸ್ ಸೆವೆನ್ತ್ ನ್ಯೂ ಕಾಲೀಜಿಯೆಟ್ ಡಿಕ್ಷನರಿ, ಮೆರಿಯಮ್–ಬೆಲ್ ಮುದ್ರಣ(1963)– ಈ ಕೋಶ ವೆಬ್‌ಸ್ಟರ್ಸ್ ಇಂಟರ್‌ನ್ಯಾಷನಲ್‌ನಿಂದಲೇ ಹುಟ್ಟಿದ ಸಂಕ್ಷಿಪ್ತ ಕೋಶ. ಸಾಮಾನ್ಯ ವಾಚಕರಿಗೂ ವಿದ್ವಾಂಸರಿಗೂ ಉಪಯುಕ್ತವಾಗಿದ್ದರೂ ಈ ಕೋಶ ವಿಶೇಷವಾಗಿ, ಅದರ ಹೆಸರೇ ಹೇಳುವಂತೆ, ವಿದ್ಯಾರ್ಥಿಗಳನ್ನು ಕುರಿತದ್ದು. ಇದರ 1200 ಪುಟಗಳಲ್ಲಿ 130,000 ಪದಗಳಿವೆ. ಪದಗಳ ವ್ಯಾಖ್ಯೆ ವಿವರಣೆಗಳಲ್ಲದೆ ಇದರಲ್ಲೂ ವಿವಿಧ ಉಪಯುಕ್ತ ವಿಷಯಗಳಿವೆ. ಈ ಗಾತ್ರದ ಕೋಶಗಳಲ್ಲೆಲ್ಲ ಇದು ಅತ್ಯುತ್ಕೃಷ್ಟವಾದುದು.

ವೆಬ್‌ಸ್ಟರ್ ಕೋಶಗಳ ವೈಶಿಷ್ಟ್ಯ ಇದು: ಒಂದು ಪದಕ್ಕೆ ವ್ಯಾಖ್ಯೆ ಕೊಡುವಾಗ ಐತಿಹಾಸಿಕವಾಗಿ ಅದರ ಅರ್ಥ ಕಾಲಕಾಲಕ್ಕೆ ಹೇಗೆ ಬದಲಾಯಿಸುತ್ತ ಹೋಯಿತೋ ಅದೇ ಕ್ರಮದಲ್ಲಿ ವ್ಯಾಖ್ಯೆಗಳನ್ನು ಜೋಡಿಸಿರುವುದರಿಂದ ಪದಗಳ ಅರ್ಥಭೇದಗಳಲ್ಲಿ ಛಾಯಾಭೇದಗಳನ್ನೂ ಸುಲಭವಾಗಿ ಗುರುತಿಸಬಹುದಾಗಿದೆ. ಪದಗಳ ವ್ಯಾಖ್ಯೆಪ್ರಯೋಗಗಳಿಗೆ ಅಧಿಕೃತ ಮೂಲಗಳಿಂದ ನಿದರ್ಶನಗಳನ್ನು ಉಲ್ಲೇಖಿಸಿರುವುದರಿಂದ ಪದಗಳ ಅರ್ಥ ಹಾಗೂ ಪ್ರಯೋಗಗಳನ್ನು ಸರಿಯಾಗಿ ಗ್ರಹಿಸಬಹುದು. ಮೇಲಾಗಿ, ಸಂಕ್ಷೇಪ ರೂಪಗಳು, ರಸಾಯನಧಾತುಗಳ ಸಂಕೇತಾಕ್ಷರಗಳು, ಸಂಗೀತ ಮೊದಲಾದ ಶಾಸ್ತ್ರಗಳಲ್ಲಿ ಬಳಸುವ ಸಂಕೇತಗಳು, ಮುದ್ರಣದ ಕರಡುಗಳನ್ನು ತಿದ್ದುವ ಸಂಕೇತಗಳು, ವಿವಿಧ ಹೆಸರುಗಳು ಹಾಗೂ ಅವುಗಳ ಉಚ್ಚಾರಣೆಗಳು, ಪ್ರಸಿದ್ಧ ಪುರುಷರ ಸಂಕ್ಷಿಪ್ತ ಪರಿಚಯ, ಭೂವಿವರ ಕೋಶ ಸಂಗ್ರಹ, ಸಂಬೋಧನಾ ಸಂಪ್ರದಾಯಗಳು, ಇಂಥ ಹಲವು ಬಗೆಯ ವಿವಿಧೋಪಯೋಗಿಯಾದ ವಿಷಯಗಳನ್ನೊಳಗೊಂಡಿರುವುದರಿಂದ ವೆಬ್‌ಸ್ಟರ್ ನ್ಯೂ ಇಂಟರ್‌ನ್ಯಾಷನಲ್ ಹಾಗೂ ನ್ಯೂ ಕಾಲೀಜಿಯೆಟ್ ಕೋಶಗಳು ಸಾಮಾನ್ಯ ಕೋಶಗಳಲ್ಲದೆ ವಿಶ್ವಕೋಶಗಳೂ ಆಗಿವೆ.

ವೆಬ್‌ಸ್ಟರ್ಸ್ ಥರ್ಡ್ ಇಂಟರ್‌ನ್ಯಾಷನಲ್ ಡಿಕ್ಷನರಿಯೊಂದರ ಉತ್ಪಾದನೆಗಾಗಿ ಮಾತ್ರ ಮೆರಿಯಮ್ ಕಂಪನಿಗೆ ಆದ ವೆಚ್ಚ 35 ಲಕ್ಷ ಡಾಲರ್.

ಮೆರಿಯಮ್–ವೆಬ್‌ಸ್ಟರ್ ಸಂಪಾದಕ ವರ್ಗದಲ್ಲಿ ಒಬ್ಬ ಪ್ರಧಾನ ಸಂಪಾದಕ, 13 ಜನ ಸಹಸಂಪಾದಕರು, 58 ಜನ ಸಹಾಯಕ ಸಂಪಾದಕರು, 65 ಜನ ಉಪ ಸಂಪಾದಕರು, 31 ಜನ ಆಡಳಿತವರ್ಗ ಹಾಗೂ ಗುಮಾಸ್ತೆವರ್ಗ–ಇವರೆಲ್ಲ ಇದ್ದಾರೆ. ಸ್ಥಳೀಯ ಸಂಪಾದಕರಲ್ಲಿ ಭೌತ, ಗಣಿತ, ರಸಾಯನ, ಸಸ್ಯ, ಪ್ರಾಣಿ, ತತ್ತ್ವಶಾಸ್ತ್ರ, ರಾಜನೀತಿ, ಪುರಾತತ್ತ್ವ, ಇತಿಹಾಸ ಈ ಒಂದೊಂದು ಶಾಸ್ತ್ರಕ್ಕೆ ಒಬ್ಬೊಬ್ಬರು ಇದ್ದಾರೆ. ಇದಲ್ಲದೆ ಭಾಷಾತಜ್ಞರು, ಬಹುಭಾಷಾವಿದರು, ನಿರುಕ್ತಿಕಾರರು, ಧ್ವನಿ ಶಾಸ್ತ್ರಜ್ಞರು ಇವರೆಲ್ಲ ಇದ್ದಾರೆ. ವಿವಿಧ ಶಾಸ್ತ್ರಪಟುಗಳಾದ ಬೇರೆ ವಿದ್ವಾಂಸರುಗಳನ್ನೂ ಸಮಾಲೋಚಕರನ್ನಾಗಿ ನೇಮಿಸಿಕೊಂಡು ಕೋಶಗಳ ನಿರ್ಮಾಣದಲ್ಲಿ ಅವರ ಸಹಾಯವನ್ನು ಪಡೆಯಲಾಗಿದೆ. ಇಂಥ ಹೊರಗಿನ ಸಮಾಲೋಚಕರ ಸಂಖ್ಯೆ 196.

ಈಚೆಗೆ 40,000 ವ್ಯಕ್ತಿಗಳ ಸಂಕ್ಷಿಪ್ತ ಜೀವನ ವಿಚಾರಗಳನ್ನೊಳಗೊಂಡು 1,700 ಪುಟಗಳಷ್ಟು ವ್ಯಾಪಕವಾಗಿರುವ ವೆಬ್‌ಸ್ಟರ್ಸ್ ಬಯೊಗ್ರಾಫಿಕಲ್ ಡಿಕ್ಷನರಿ ಮತ್ತು 40,000 ಭೌಗೋಳಿಕ ಪ್ರದೇಶಗಳ ಸಂಕ್ಷಿಪ್ತ ವಿವರಗಳನ್ನೊಳಗೊಂಡು 1,326 ಪುಟಗಳಷ್ಟು ವ್ಯಾಪಕವಾಗಿರುವ ವೆಬ್‌ಸ್ಟರ್ಸ್ ಜಿಯೊಗ್ರಾಫಿಕಲ್ ಡಿಕ್ಷನರಿ– ಎಂಬೆರಡು ಉಪಯುಕ್ತ ಕೋಶಗಳು ಬಂದಿವೆ. **(ಕೆ.ವಿ.ಎಸ್.ಟಿ.)**

**ಕನ್ನಡ–ಕನ್ನಡ ನಿಘಂಟು:** ಭಾಷಾವಿಜ್ಞಾನ ನಿಯಮಗಳಿಗೆ ಅನುಸಾರವಾಗಿದ್ದು, ಚಾರಿತ್ರಿಕ ವಿವರಣೆಯಿಂದ ಕೂಡಿ ಪ್ರಮಾಣಭೂತವಾಗಿಯೂ ಸಮಗ್ರಸ್ವರೂಪದ್ದಾಗಿಯೂ ಇರುವ ಕನ್ನಡ–ಕನ್ನಡ ನಿಘಂಟಿನ ನಿರ್ಮಾಣಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಂಥದು. ಕನ್ನಡ ಭಾಷೆಗೆ ಈ ಬಗೆಯ ಶಾಸ್ತ್ರೀಯವಾದ ನಿಘಂಟು ಸಿದ್ಧವಾಗಿರುವುದು ಇದೇ ಮೊದಲು.

ಕನ್ನಡ ಸಾಹಿತ್ಯ ಪರಿಷತ್ತಿನ ಈ ಕನ್ನಡ–ಕನ್ನಡ ನಿಘಂಟು ಡೆಮ್ಮಿ ಚತುಷ್ಪತ್ರ. ಆಕಾರದಲ್ಲಿ ಸುಮಾರು 9020 ಪುಟಗಳು. 1,321 ಪುಟಗಳ ನಿಘಂಟಿನ ಪ್ರಥಮ ಸಂಪುಟ 1971ರ ಡಿಸೆಂಬರಿನಲ್ಲಿ ಪ್ರಕಟವಾಯಿತು. ಎಂಟನೆಯ ಹಾಗೂ ಕಡೆಯ ಸಂಪುಟ 1995ರಲ್ಲಿ ಪ್ರಕಟವಾಯಿತು. ಇಪ್ಪತ್ತೈದು ವರ್ಷಗಳ ಸುದೀರ್ಘ ಅವಧಿಯಲ್ಲಿ ಎಂಟು ಸಂಪುಟಗಳು ಹೊರಬಂದುವು. ಈ ನಿಘಂಟಿನ ಪ್ರತಿಯೊಂದು ಪುಟದಲ್ಲೂ ಎರಡೆರಡು ಅಂಕಣಗಳಿದ್ದು ಒಂದೊಂದು ಅಂಕಣದಲ್ಲಿ ನಲವತ್ತಾರು ಪಂಕ್ತಿಗಳಿವೆ. ಸುಮಾರು ಒಂದೂವರೆ ಲಕ್ಷ ಶಬ್ದಗಳು ಈ ನಿಘಂಟಿನಲ್ಲಿ ಮುಖ್ಯ ಉಲ್ಲೇಖಗಳಾಗಿ ಬಂದಿವೆ.

ಕನ್ನಡ ಭಾಷೆಯಲ್ಲಿಯ ಎಲ್ಲ ತೆರನ ಸಾಹಿತ್ಯವನ್ನೂ ಈ ನಿಘಂಟಿನ ಸಂಪಾದನೆಯಲ್ಲಿ ಬಳಸಿಕೊಳ್ಳಲಾಗಿದೆ. ಕನ್ನಡದ ಪ್ರಥಮಶಾಸನವೆಂದು ಪರಿಗಣಿತವಾಗಿರುವ ಸುಮಾರು 430ರ ಹಲ್ಮಿಡಿ ಶಾಸನದಿಂದ ಹಿಡಿದು 1800ರ ಅವಧಿಯ ಪ್ರಕಟಿತ ಅಪ್ರಕಟಿತ ಶಾಸನಗಳನ್ನೆಲ್ಲ ಅವಲೋಕಿಸಲಾಗಿದೆ. ಕನ್ನಡದಲ್ಲಿ ಉಪಲಬ್ಧವಾಗಿರುವ ಪ್ರಥಮಗ್ರಂಥವಾದ ನೃಪತುಂಗನ ಕವಿರಾಜಮಾರ್ಗದಿಂದ ಹಿಡಿದು ಕುವೆಂಪು ಅವರ ಶ್ರೀರಾಮಾಯಣ ದರ್ಶನದ ವರೆಗಿನ, ಇನ್ನೂ ಈಚಿನ ಕಾಲಪರಿಮಿತಿಯಲ್ಲಿ ಬರುವ ಹಳಗನ್ನಡ, ನಡುಗನ್ನಡ, ಹೊಸಗನ್ನಡಗಳ ಅನೇಕಾನೇಕ ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳನ್ನು ಪರಿಶೀಲಿಸಲಾಗಿದೆ. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಪ್ರಾತಿನಿಧಿಕವಾದ ಹಲವು ಆಧುನಿಕ ಗದ್ಯಪದ್ಯಗ್ರಂಥಗಳನ್ನೂ ಉಪಯೋಗಿಸಿಕೊಳ್ಳಲಾಗಿದೆ. ಜೊತೆಗೆ ಅಲಂಕಾರಶಾಸ್ತ್ರ, ಅಶ್ವಶಾಸ್ತ್ರ, ಶಿಲ್ಪಶಾಸ್ತ್ರ, ಕಾಮಶಾಸ್ತ್ರ, ಗಜಶಾಸ್ತ್ರ, ಛಂದಶ್ಶಾಸ್ತ್ರ, ಜ್ಯೋತಿಶ್ಶಾಸ್ತ್ರ, ತತ್ತ್ವಶಾಸ್ತ್ರ, ವೈದ್ಯಶಾಸ್ತ್ರ, ಶಿಲ್ಪಶಾಸ್ತ್ರ, ಸಂಗೀತಶಾಸ್ತ್ರ, ಸೂಪಶಾಸ್ತ್ರ–ಮುಂತಾದುವುಗಳಿಗೆ ಸಂಬಂಧಿಸಿದ ಶಾಸ್ತ್ರೀಯ ಗ್ರಂಥಗಳಿಂದಲೂ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಜೈನ, ವೀರಶೈವ, ವೈಷ್ಣವಧರ್ಮಗಳಿಗೆ ಸಂಬಂಧಿಸಿದ ವಿಶೇಷ ಪಾರಿಭಾಷಿಕ ಶಬ್ದಗಳಲ್ಲಿ ಹಲವನ್ನು ಆರಿಸಿಕೊಳ್ಳಲಾಗಿದೆ. ಹೀಗೆ ಅನೇಕ ಆಕರಗಳಲ್ಲಿ ದೊರೆಯುವ ಶಬ್ದರೂಪಗಳನ್ನು ಅವುಗಳ ಸಂದರ್ಭಗಳೊಡನೆ ಪಟ್ಟಿಮಾಡಿ ಅವುಗಳ ಆಧಾರದ ಮೇಲೆ ಶಬ್ದರೂಪ ಮತ್ತು ಅರ್ಥಗಳನ್ನು ನಿರ್ಣಯಿಸಲಾಗಿದೆ.

ಕನ್ನಡದಲ್ಲಿ ಈ ತನಕ ಉಪಲಬ್ಧವಾಗಿರುವ ಅನೇಕ ಪ್ರಾಚೀನ ಅರ್ವಾಚೀನ ನಿಘಂಟುಗಳನ್ನೂ ಇನ್ನೂ ಹಸ್ತಪ್ರತಿ ರೂಪದಲ್ಲೇ ಇರುವ ನಿಘಂಟುಗಳನ್ನೂ ಬಳಸಿಕೊಳ್ಳಲಾಗಿದೆ. ಇದು ಪ್ರಧಾನವಾಗಿ ಕನ್ನಡ ನಿಘಂಟಾದರೂ ಕನ್ನಡಭಾಷೆಯಲ್ಲಿ ಸೇರಿಹೋಗಿರುವ ತದ್ಭವ, ತತ್ಸಮ, ಅನ್ಯದೇಶ್ಯ ಮುಂತಾದ ಶಬ್ದಗಳೂ ಧಾರ್ಮಿಕ, ಲೌಕಿಕ, ವ್ಯಾವಹಾರಿಕ, ಪಾರಿಭಾಷಿಕ ಮುಂತಾದ ಶಬ್ದಗಳೂ ಈ ನಿಘಂಟಿನಲ್ಲಿ ಸೇರಿವೆ. ಕನ್ನಡ ಭಾಷೆಯಲ್ಲಿಯ ಶಬ್ದ ಸಮಾಸಗಳು ಮಾತ್ರವಲ್ಲದೆ ಕೃತ್, ತದ್ಧಿತಪ್ರತ್ಯಯಗಳನ್ನೂ

ಪ್ರಶ್ನೆ, ಅವಧಾರಣ, ಸಂಶಯ ಮುಂತಾದ ಭಾವಸೂಚಕ ಪ್ರತ್ಯಯಗಳನ್ನೂ ಈ ನಿಘಂಟಿನಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿದೆ.

ಸಂಸ್ಕೃತ ಶಬ್ದಗಳಿಗೆ ಈ ನಿಘಂಟಿನಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಕನ್ನಡ ಕಾವ್ಯಗಳಲ್ಲಿ ಬಂದಿರುವ ಸಂಸ್ಕೃತ ಶಬ್ದಗಳು ಕಿಟ್ಟೆಲ್ ಅವರು ತಮ್ಮ ನಿಘಂಟಿನಲ್ಲಿ ಕೊಟ್ಟಿರುವ ಸಂಸ್ಕೃತ ಶಬ್ದಗಳು–ಇವನ್ನೆಲ್ಲ ಈ ನಿಘಂಟಿನಲ್ಲಿ ಸೇರಿಸಿಕೊಳ್ಳಲಾಗಿದೆ. ಸಂಸ್ಕೃತ ಶಬ್ದಗಳಿಗೆ ಸಾಮಾನ್ಯವಾಗಿ ಪ್ರಯೋಗಗಳನ್ನು ಕೊಡುವುದಿಲ್ಲ. ಆದರೆ ಸಂಸ್ಕೃತದಲ್ಲಿಲ್ಲದ ಅರ್ಥ ಕನ್ನಡದಲ್ಲಿ ಬೆಳೆದುಬಂದಿದ್ದರೆ ಅಂಥ ಸಂದರ್ಭದಲ್ಲಿ ಪ್ರಯೋಗಗಳನ್ನು ಕೊಡಲಾಗುವುದು. ಯಾವುದಾದರೂ ಒಂದು ಶಬ್ದ ಅಪೂರ್ವವಾಗಿದ್ದರೆ, ವಿಶೇಷಾರ್ಥವುಳ್ಳದ್ದಾಗಿದ್ದರೆ ಅಥವಾ ಶಾಸ್ತ್ರಪರಿಭಾಷೆಯದಾಗಿದ್ದರೆ ಅದರ ಅರ್ಥವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಉಚಿತವರಿತು ಪ್ರಯೋಗಗಳನ್ನು ಕೊಡಲಾಗುವುದು.

ಅಂಕಿತನಾಮಗಳನ್ನು ಸಾಮಾನ್ಯವಾಗಿ ಈ ನಿಘಂಟಿನಲ್ಲಿ ಸೇರಿಸಿಲ್ಲ. ಆದರೆ ಸುಮಾರು 1000ಕ್ಕೆ ಹಿಂದಿನ ಶಾಸನಗಳಲ್ಲಿ ದೊರೆಯುವ, ಭಾಷಾಶಾಸ್ತ್ರ ದೃಷ್ಟಿಯಿಂದ ವೈಶಿಷ್ಟ್ಯ ಕಂಡುಬರುವಂಥ ಅಂಕಿತನಾಮಗಳನ್ನು ಮಾತ್ರ ಸೇರಿಸಲಾಗುವುದು. ತರುವಾಯದ ಅಂಕಿತನಾಮಗಳಲ್ಲಿ ಉಚಿತವಾದವನ್ನು ಮಾತ್ರ ಉಳಿಸಿಕೊಳ್ಳಲಾಗುವುದು.

ಗ್ರಾಮ್ಯಶಬ್ದಗಳಿಗೂ ಪ್ರಾದೇಶಿಕ ಶಬ್ದರೂಪಗಳಿಗೂ ಈ ನಿಘಂಟಿನಲ್ಲಿ ಎಡೆಯಿಲ್ಲವಾದರೂ ದಿನನಿತ್ಯದ ಬಳಕೆಯಲ್ಲಿರುವ ಅನೇಕ ರೂಢಿಯ ಶಬ್ದಗಳನ್ನು ಸೇರಿಸಿಕೊಳ್ಳಲಾಗುವುದು. ಜೊತೆಗೆ ಭಾಷೆಯಲ್ಲಿ ಉಳಿದುಕೊಂಡು ಬಂದಿರುವ ನುಡಿಗಟ್ಟುಗಳನ್ನು ಆಯಾ ಮುಖ್ಯ ಶಬ್ದದ ಅಡಿಯಲ್ಲೇ ವಿವರಿಸಲಾಗುವುದು.

ಈ ನಿಘಂಟಿನಲ್ಲಿ ಮುಖ್ಯ ಉಲ್ಲೇಖನಗಳಾಗಿ ಬರುವ ಶಬ್ದಗಳನ್ನು ಕ್ರಿಯಾಪದ, ನಾಮವಾಚಕ, ಗುಣವಾಚಕ, ಅವ್ಯಯ, ಪ್ರತ್ಯಯ ಎಂದು ವಿಂಗಡಿಸಿದೆ. ಮುಖ್ಯ ಶಬ್ದಗಳನ್ನು ಕೊಟ್ಟಕೂಡಲೇ ಅದರ ಪಕ್ಕದಲ್ಲಿ ದುಂಡುಕಂಸದೊಳಗೆ ಆ ಶಬ್ದದ ಜಾತಿಯನ್ನು (ಕ್ರಿ), (ನಾ), (ಗು), (ಅ), (ಪ್ರ) ಮುಂತಾದ ಸಂಕೇತಗಳಿಂದ ಸೂಚಿಸಲಾಗುವುದು. ತರುವಾಯ ಅರ್ಥಗಳನ್ನು ವಿವರಿಸಲಾಗುವುದು. ಪ್ರತಿಯೊಂದು ಶಬ್ದದ ಅರ್ಥ ನಿರ್ಣಯಕ್ಕೂ ಪ್ರಯೋಗಗಳೇ ಮುಖ್ಯ ಆಧಾರ. ಶಬ್ದಗಳಿಗೆ ಅರ್ಥಗಳನ್ನು ಕೊಡುವಾಗ ಮೊದಲು ವಾಚ್ಯಾರ್ಥವನ್ನೂ ಆಮೇಲೆ ಲಕ್ಷ್ಯಾರ್ಥವನ್ನೂ ಕೊಡಲಾಗುವುದು. ಎಲ್ಲ ಅರ್ಥಗಳಿಗೂ ಪ್ರಯೋಗಗಳನ್ನು ಕಾಲಾನುಕ್ರಮದಲ್ಲಿ ತೋರಿಸಲಾಗುವುದು. ಒಂದು ಶಬ್ದಕ್ಕೆ ಹಲವು ರೂಪಗಳಿದ್ದಾಗ ಅತಿಪ್ರಾಚೀನ ರೂಪದಿಂದ ಆರಂಭಿಸಿ ಕಾಲಾನುಕ್ರಮದಲ್ಲಿ ಅರ್ಥಗಳನ್ನೂ ಪ್ರಯೋಗಗಳನ್ನೂ ಕೊಡಲಾಗುವುದು. ಹೀಗೆಯೇ ಒಂದು ಶಬ್ದಕ್ಕೆ ಹಲವು ಅರ್ಥಗಳಿದ್ದಾಗ ಈ ಅರ್ಥಗಳನ್ನು ಚಾರಿತ್ರಿಕ ದೃಷ್ಟಿಯಿಂದ ಬೇರ್ಪಡಿಸಿ ಪ್ರತಿಯೊಂದು ಅರ್ಥಕ್ಕೂ ಸಂಬಂಧಿಸಿದ ಪ್ರಯೋಗಗಳನ್ನು ಕಾಲಾನುಕ್ರಮದಲ್ಲಿ ವಿವರಿಸಲಾಗುವುದು. ಶಬ್ದದ ಅರ್ಥವಿವರಣೆಗಾಗಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಈ ಮೂರರಿಂದಲೂ ಪ್ರಯೋಗಗಳನ್ನು ಉದಾಹರಿಸಲಾಗುವುದು.

ಪ್ರತಿಯೊಂದು ಮುಖ್ಯಶಬ್ದಕ್ಕೂ ನಿಷ್ಪತ್ತಿಯನ್ನು ಆ ಶಬ್ದದ ಕೆಳಗೇ ಚೌಕಕಂಸದಲ್ಲಿ ಸೂಚಿಸಲಾಗುವುದು. ಸಮಾಸ ಶಬ್ದಗಳನ್ನು ಬಿಡಿಸಿ ತೋರಿಸಲಾಗುವುದು. ಒಂದು ಶಬ್ದ ಸಂಸ್ಕೃತ ಭಾಷೆಯದಾಗಿದ್ದಲ್ಲಿ, ನಿಷ್ಪತ್ತಿವಿಭಾಗದಲ್ಲಿ ಚೌಕಕಂಸದಲ್ಲಿ [ಸಂ] ಎಂದೂ ದೇಶ್ಯಶಬ್ದವಾಗಿದ್ದಲ್ಲಿ [ದೇ] ಎಂದೂ ಸೂಚಿಸಿ ಇತರ ದ್ರಾವಿಡಭಾಷೆಗಳಲ್ಲಿ ಕಂಡುಬರುವ ಜ್ಞಾತಿಶಬ್ದಗಳನ್ನು ಉಲ್ಲೇಖಿಸಲಾಗುವುದು. ಹಾಗೆಯೇ ಒಂದು ಶಬ್ದ ಅನ್ಯದೇಶ್ಯವಾಗಿದ್ದಲ್ಲಿ ಆ ಶಬ್ದ ಯಾವ ಭಾಷೆಯಿಂದ ಬಂದದ್ದು ಎಂಬುದನ್ನು > ಈ ಚಿಹ್ನೆ ಮುಂದೆ ಸೂಚಿಸಿ ತರುವಾಯ ಆಧಾರಶಬ್ದವನ್ನು ಕೊಡಲಾಗುವುದು. ಶಬ್ದದ ನಿಷ್ಪತ್ತಿ ತಿಳಿಯದ ಕಡೆ ಪ್ರಶ್ನಾರ್ಥಕ ಚಿಹ್ನೆ [?] ಇರುತ್ತದೆ.

ಉದಾಹರಣೆ:

**ಅಂಗನೆ** (ನಾ) 1 ಸುಂದರವಾದ ಅಂಗಗಳುಳ್ಳವಳು; ಹೆಂಗಸು.
2 ಉತ್ತರದಿಕ್ಕಿನ ದಿಗ್ಗಜದ ಪತ್ನಿಯ ಹೆಸರು.
3 ಕನ್ಯಾರಾಶಿ (ಜಾತತಿ, ಪರಿ 359) [ಸಂ.ಅಂಗನಾ]
**ಅಗಲ್ಕೆ,** ಅಗಲಿಕೆ (ನಾ) ಅಗಲುವಿಕೆ; ಬಿಟ್ಟುಹೋಗುವಿಕೆ, ವಿಯೋಗ;
ಉಮ್ಮಳಿಸುವಳಟ್ಟಿ ಪತ್ತುವಳಗಲ್ಕೆಗೆ ಕಾಯ್ವಳೆ (ಕಾವ್ಯಸಾ.
ಶೂದ್ರಕ 993) ನಿನ್ನನಗಲ್ಕೆಯು ಪ್ರಾಣದಗಲ್ಕೆಯುಂ
ಸಮಂ: (ಆದಿಪು.12–36)
**ಅಗಲಿಕೆ:** "ವಿಪ್ರಲಂಭ, ವಿಪ್ರಯೋಗ ಅಗಲಿಕೆ" (ನಾಚಿರಾ);
"ಅಪಜಯದೊಳತ್ಯಗಲಿಕೆಯೊಳಂ ಪ್ರತ್ಯವಾಯಮೆಂಬುದು"
(ಮಂಗರಾ.142–19); ಇಂತೆಮಗೆ ಭಕ್ತರಿಗೆ ಹೃದಯ
ದೊಳಗಗಲಿಕೆಯದುಂಟೇ (ಬಸಪು. 26–63)
[ಅಗಲ್$_1$ + –ಕೆ]

1944ರ ಜನವರಿ 27ರಂದು ನಿಘಂಟು ಕಚೇರಿ ಪ್ರಾರಂಭವಾಯಿತು; ಅಂದಿನಿಂದ ಸುಮಾರು ಹತ್ತುವರ್ಷಗಳ ಕಾಲ ಎಂಬತ್ತು ವಿದ್ವಾಂಸರು ವಿವಿಧ ಆಕರಗಳಿಂದ ಪದಗಳನ್ನೂ ಪ್ರಯೋಗಗಳನ್ನೂ ಸಂಗ್ರಹ ಮಾಡುವ ಕೆಲಸವನ್ನು ನಿರ್ವಹಿಸುತ್ತ ಬಂದರು. 1954ರ ಅಕ್ಟೋಬರ್ 18 ರಂದು ಡಿ.ಎಲ್. ನರಸಿಂಹಾಚಾರ್ಯರು ಸಂಪಾದಕತ್ವವನ್ನು ವಹಿಸಿಕೊಂಡಮೇಲೆ ನಿಘಂಟಿನ ಸಂಪಾದನ ಕೆಲಸ ಪ್ರಾರಂಭವಾಯಿತು.

1943 ರಿಂದ 1995ರ ಅವಧಿಯಲ್ಲಿ ಎಂಟು ಜನ ಅಧ್ಯಕ್ಷರು, ಆರು ಜನ ಉಪಾಧ್ಯಕ್ಷರೂ ಐವರು ಪ್ರಧಾನ ಸಂಪಾದಕರೂ ಮೂವರು ಸಂಪಾದಕರು, ಇಪ್ಪತ್ತೈದು ಮಂದಿ ಸಮಿತಿ ಸದಸ್ಯರು, ನಾಲ್ವರು ಸರ್ಕಾರದ ಪ್ರತಿನಿಧಿಗಳು, ಹತ್ತು ಮಂದಿ ಉಪಸಂಪಾದಕರೂ ಮೂವತ್ತೆರಡು ಮಂದಿ ಸಹಾಯಕ ಸಂಪಾದಕರೂ ಮೂವರು ಪ್ರತಿಕಾರರೂ ಒಂಬತ್ತು ಮಂದಿ ಬೆರಳಚ್ಚುಗಾರರೂ ಹತ್ತುಮಂದಿ ಸಹಾಯಕರೂ ಈ ಬೃಹತ್ ಯೋಜನೆಗಾಗಿ ಶ್ರಮವಹಿಸಿ ದುಡಿದಿದ್ದಾರೆ. ಇವರೆಲ್ಲರ ಪರಿಶ್ರಮದ ಫಲ ಇಂದು ಕನ್ನಡ ಸಾರಸ್ವತ ಲೋಕದ ಮುಂದಿರುವ ಬೃಹತ್ ಸಂಪುಟಗಳ ನಿಘಂಟು.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಜೀವಂತಪ್ರತೀಕದಂತಿರುವ ಚಾರಿತ್ರಿಕ ಕ್ರಮದ ಈ ನಿಘಂಟು ಇಷ್ಟು ದೊಡ್ಡಪ್ರಮಾಣದಲ್ಲಿ ಈ ವಿಧದಲ್ಲಿ ರಚಿತವಾಗುತ್ತಿರುವುದು ಇದೇ ಪ್ರಥಮ. ನಿಘಂಟು ಕೇವಲ ನೀರಸವಾದ ಗಂಟಲ್ಲ ಎಂಬುದನ್ನು ತೋರಿಸಲು ಈ ನಿಘಂಟಿನಲ್ಲಿ ಕೊಟ್ಟಿರುವ ರಸವತ್ತಾದ ಪ್ರಯೋಗಗಳೇ ಸಾಕ್ಷಿಯಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಕಿಟ್ಟೆಲ್ ಅವರ ಕನ್ನಡ–ಇಂಗ್ಲಿಷ್ ನಿಘಂಟಿನಿಂದ ಅತಿಶಯವಾಗಿ ಸಹಾಯ ಪಡೆದಿದ್ದರೂ ಇದು ಅದರ ಪ್ರತಿಕೃತಿಯಲ್ಲ; ಕಿಟ್ಟೆಲ್ ಅವರಿಗೆ ದೊರೆಯದಿದ್ದ ಶಾಸನಗಳನ್ನೂ ಗ್ರಂಥಗಳನ್ನೂ ಲೇಖನಗಳನ್ನೂ ಇಲ್ಲಿ ಹೇರಳವಾಗಿ ಉಪಯೋಗಿಸಿಕೊಂಡಿದೆ; ಭಾಷಾವಿಜ್ಞಾನದ ಕಡೆ ವಿಶೇಷ ಗಮನವನ್ನು ಹರಿಸಲಾಗಿದೆ. ಕನ್ನಡ ಜನತೆಯ ಇಂದಿನ ಆವಶ್ಯಕತೆಗಳಿಗೆ ತಕ್ಕಂತೆ, ಇಂದಿನ ವಿದ್ವತ್ತನ್ನು ಪ್ರತಿಬಿಂಬಿಸುವಂತೆ ಸಿದ್ಧವಾಗಿರುವ ಈ ನಿಘಂಟು ಕನ್ನಡಿಗರಿಗೆ ಅತ್ಯಂತ ಉಪಯುಕ್ತವಾಗುವುದೆಂದು ನಂಬಬಹುದಾಗಿದೆ. (ಎನ್.ಬಿ.)

**ಕೋಶ, ವಿದ್ಯುತ್ :** ರಾಸಾಯನಿಕಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುವ ಒಂದು ಸಾಧನ (ಸೆಲ್, ಎಲೆಕ್ಟ್ರಿಕ್) ಒಂದಕ್ಕಿಂತ ಹೆಚ್ಚು ಕೋಶಗಳ ಗುಂಪಿಗೆ ವಿದ್ಯುತ್ ಕೋಶಾವಳಿ (ಎಲೆಕ್ಟ್ರಿಕ್ ಬ್ಯಾಟರಿ) ಎಂದು ಹೆಸರು. ಇಂಗ್ಲಿಷ್ ಭಾಷೆಯಲ್ಲಿ ಸೆಲ್ ಮತ್ತು ಬ್ಯಾಟರಿ ಎಂಬ ಪದಗಳನ್ನು ಅನೇಕ ವೇಳೆ ಪರ್ಯಾಯ ಪದಗಳಾಗಿ ಬಳಸುವ ರೂಢಿ ಉಂಟು. ಕೋಶದಲ್ಲಿ ವಿದ್ಯುದುತ್ಪಾದನೆಯಾಗುವಾಗಿನ ರಾಸಾಯನಿಕ ಕ್ರಿಯೆಯಿಂದಾಗಿ ಅದರಲ್ಲಿ ಉಪಯೋಗಿಸಿದ ವಸ್ತುಗಳ ಭೌತ ಮತ್ತು ರಾಸಾಯನಿಕ ಗುಣಗಳಲ್ಲಿ ಬದಲಾವಣೆಗಳಾಗುತ್ತವೆ. ಅಂತ್ಯದಲ್ಲಿ ರಾಸಾಯನಿಕ ವಸ್ತುಗಳು ಪೂರ್ತಿಯಾಗಿ ಬದಲಾವಣೆ ಹೊಂದುವುದರಿಂದ ವಿದ್ಯುತ್ ಪೂರೈಕೆ ನಿಲ್ಲುತ್ತದೆ. ವಿದ್ಯುದ್ರಾಸಾಯನಿಕ ಕ್ರಿಯೆಗಳು ವಿಪರ್ಯಯ ಕ್ರಿಯೆಗಳು(ರಿವರ್ಸ್ ರಿಯಾಕ್ಷನ್ಸ್). ಹೀಗಾಗಿ ಕೆಲವು ಸಂದರ್ಭಗಳಲ್ಲಿ ಕೋಶದಲ್ಲಿ ವಿದ್ಯುತ್ತನ್ನು ವಿಪರ್ಯಯ ರೀತಿಯಲ್ಲಿ ಪ್ರವಹಿಸುವುದರ ಮೂಲಕ ಕೋಶದ ರಾಸಾಯನಿಕ ಪದಾರ್ಥಗಳನ್ನು ಮೊದಲಿನ ಸ್ಥಿತಿಗೆ ತರಬಹುದು. ಎಂದರೆ ಒಂದು ಸಲ ನಿರುಪಯೋಗಿಯಾದ ಕೋಶ ಪುನಃ ವಿದ್ಯುತ್ತನ್ನು ಉತ್ಪಾದಿಸಲು ಸಿದ್ಧವಾಗುತ್ತದೆ. ಆದ್ದರಿಂದ ಅಂಥ ಕೋಶಗಳನ್ನು ವಿದ್ಯುತ್ ಸಂಚಯನಕ್ಕಾಗಿ ಉಪಯೋಗಿಸಬಹುದು.

ಇಂಥವುಗಳಿಗೆ ವಿದ್ಯುತ್ ಸಂಚಯನ ಕೋಶಗಳು(ಸ್ಟೋರೇಜ್ ಬ್ಯಾಟರೀಸ್) ಅಥವಾ ದ್ವಿತೀಯಕ ವಿದ್ಯುತ್ ಕೋಶಗಳು (ಸೆಕೆಂಡರಿ ಬ್ಯಾಟರೀಸ್) ಎಂದು ಹೆಸರು. ಇನ್ನು ಕೆಲವು ಸಂದರ್ಭಗಳಲ್ಲಿ ಕೋಶದಲ್ಲಿಯ ರಾಸಾಯನಿಕ ಕ್ರಿಯೆಗಳು ಅಂತ್ಯದಲ್ಲಿ ಬರುವ ರಾಸಾಯನಿಕ ಪದಾರ್ಥಗಳ ಭೌತಸ್ಥಿತಿಯಿಂದಾಗಿ ಅದರಲ್ಲಿ ವಿಪರ್ಯಯಕ್ರಿಯೆ ಅಸಾಧ್ಯವಾಗುತ್ತದೆ. ಇಂಥ ಕೋಶವನ್ನು ವಿದ್ಯುದುತ್ಪಾದನೆಗೆ ಮಾತ್ರ ಬಳಸಬಹುದೇ ವಿನಾ ವಿದ್ಯುತ್ ಸಂಚಯನಕ್ಕೆ ಬಳಸಲಾಗುವುದಿಲ್ಲ. ವಿದ್ಯುತ್ ಪೂರೈಕೆ ಮುಗಿದ ಅನಂತರ ಇಂಥ ಕೋಶ ನಿರುಪಯುಕ್ತವಾಗುತ್ತದೆ. ಈ ಗುಂಪಿಗೆ ಸೇರಿದವುಗಳಿಗೆ ಪ್ರಧಾನ ವಿದ್ಯುತ್ ಕೋಶಗಳು (ಪ್ರೈಮರಿ ಬ್ಯಾಟರೀಸ್) ಎಂದು ಹೆಸರು. ರಾಸಾಯನಿಕ ಕ್ರಿಯೆಯಿಂದಾಗಿ ವಿದ್ಯುದುತ್ಪತ್ತಿಮಾಡುವ ಕೋಶಗಳಿಗೆ ವೋಲ್ಟಾಮಾದರಿಯ ಕೋಶಗಳೆಂಬ ಹೆಸರು ಸಹ ಉಂಟು.

ವಿದ್ಯುದ್ವಾಹಕಗಳಲ್ಲಿಯ ವಿದ್ಯುತ್ಪ್ರವಾಹ ಏಕಮುಖ ಪ್ರವಾಹವಾಗಿರಬಹುದು, ಇಲ್ಲವೆ ಪರ್ಯಾಯ ಪ್ರವಾಹವಾಗಿರಬಹುದು. ವಿದ್ಯುತ್ಕೋಶಗಳು ಏಕಮುಖ ವಿದ್ಯುತ್ ಪ್ರವಾಹವನ್ನು ಪೂರೈಸುತ್ತವೆ. ವಿದ್ಯುನ್ಮಂಡಲದಲ್ಲಿ(ಎಲೆಕ್ಟ್ರಿಕ್ ಸರ್ಕ್ಯೂಟ್) ವಿದ್ಯುತ್ ಕೋಶವನ್ನು ಅಳವಡಿಸಿದಾಗ ರಾಸಾಯನಿಕ ಕ್ರಿಯೆಗಳಿಂದಾಗಿ ಎಲೆಕ್ಟ್ರಾನುಗಳು ಕೋಶದ ಒಂದು ಭಾಗದಲ್ಲಿ (ಋಣ ಧ್ರುವ ಅಥವಾ ಋಣ ಎಲೆಕ್ಟ್ರೋಡ್) ಬಿಡುಗಡೆಯಾಗಿ ಬಾಹ್ಯ ವಿದ್ಯುನ್ಮಂಡಲದಲ್ಲಿ ಪ್ರವಹಿಸಿ ಕೋಶದ ಮತ್ತೊಂದು ಭಾಗಕ್ಕೆ (ಧನ ಧ್ರುವ ಅಥವಾ ಧನ ಎಲೆಕ್ಟ್ರೋಡ್) ಸೇರುತ್ತವೆ. ಅಂದರೆ ಬಾಹ್ಯ ವಿದ್ಯುನ್ಮಂಡಲದಲ್ಲಿ

ವಿದ್ಯುತ್ಪ್ರವಾಹ ಉಂಟಾಗುತ್ತದೆ. ವಿದ್ಯುತ್‌ಕೋಶಕ್ಕಿರುವ ಈ ಶಕ್ತಿಗೆ ವಿದ್ಯುದ್ವಾಹಕಶಕ್ತಿ (ಎಲೆಕ್ಟ್ರೋಮೋಟಿವ್ ಫೋರ್ಸ್) ಎಂದು ಹೆಸರು. ಇದನ್ನು ಸಹ ವೋಲ್ಟುಗಳಲ್ಲಿ




ಚಿತ್ರ 1 (i) ವಿದ್ಯುತ್‌ಕೋಶ : 1 ಆನೋಡ್ (ಸತು), 2 ಕ್ಯಾಥೋಡ್ (ತಾಮ್ರ), 3 ಬಾಹ್ಯ ವಿದ್ಯುತ್ ಪರಿಧಿ, 4 ವಿದ್ಯುದ್ವಿಶ್ಲೇಷ್ಯ (ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ)
(ii) ಎಲೆಕ್ಟ್ರಾನ್ ಟ್ಯೂಬ್ (ವಿದ್ಯುತ್ತಿನಿಂದ ಕೆಲಸ ಮಾಡುವ ಸಾಧನ) : 1 ಅನೋಡ್, 2 ಕ್ಯಾಥೋಡ್, 3. ವಿದ್ಯುತ್ ಪೂರೈಕೆ

ಅಳೆಯುತ್ತಾರೆ. ವಿದ್ಯುತ್‌ಕೋಶಗಳ ರಚನೆಯಲ್ಲಿ ಎಲೆಕ್ಟ್ರೋಡುಗಳ ಮತ್ತು ರಾಸಾಯನಿಕ ಪದಾರ್ಥಗಳ ಯೋಗ್ಯರೀತಿಯ ಅಳವಡಿಕೆ ಮುಖ್ಯ.

**ಕೋಶದ ವಿಭವ ಮತ್ತು ವಿದ್ಯುದ್ವಾಹಕಶಕ್ತಿ:** ಯಾವುದೇ ಮಂಡಲದಲ್ಲಿಯ ವಿದ್ಯುತ್ಪ್ರವಾಹ ಅದರಲ್ಲಿರುವ ವಿಭವವನ್ನು (ಪೊಟೆನ್ಶಿಯಲ್) ಅವಲಂಬಿಸಿರುವುದರ ಜೊತೆಗೆ ಅದರ ವಿದ್ಯುತ್‌ಗುಣವನ್ನು ಸಹ ಅವಲಂಬಿಸಿರುತ್ತದೆ. ಮಂಡಲದ ವಿದ್ಯುತ್‌ಗುಣವನ್ನು ವಿದ್ಯುತ್ಪ್ರವಾಹಕ್ಕೆ ಒಡ್ಡುವ ಅಡಚಣೆಯಿಂದಾಗಲಿ ಅಥವಾ ವಿದ್ಯುತ್ಪ್ರವಾಹವನ್ನು ಸುಲಲಿತವಾಗಿ ನಡೆಸುವ ಗುಣವೆಂದಾಗಲಿ ಪರಿಗಣಿಸಬಹುದು. ವಿದ್ಯುನ್ಮಂಡಲ ವಿದ್ಯುತ್ಪ್ರವಾಹಕ್ಕೆ ಒಡ್ಡುವ ಅಡಚಣೆಗೆ ವಿದ್ಯುದ್ರೋಧತ್ವ ಎಂದು ಹೆಸರು. ವಿದ್ಯುದ್ವಾಹಕಗಳ ವಿದ್ಯುದ್ರೋಧತ್ವ ಅತ್ಯಲ್ಪ. ವಿದ್ಯುತ್ಪ್ರವಾಹವನ್ನು ಆಂಪಿಯರುಗಳಲ್ಲೂ ವಿದ್ಯುನ್ನಿರೋಧವನ್ನು ಓಮ್‌ಗಳಲ್ಲೂ ಅಳೆಯುತ್ತಾರೆ. ಯಾವುದಾದರೊಂದು ವಿದ್ಯುನ್ಮಂಡಲದಲ್ಲಿನ ವಿಭವ $V$ ವೋಲ್ಟುಗಳು, ಪ್ರವಾಹ $I$ ಆಂಪಿಯರುಗಳು ಮತ್ತು ರೋಧತ್ವ $R$ ಓಮುಗಳು ಆಗಿದ್ದರೆ ಆಗ ಓಮನ ನಿಯಮಾನುಸಾರ $V=IR$ ಸಂಬಂಧ ಉಂಟು. ಕೋಶದ ವಿಭವವನ್ನು ವೋಲ್ಟ್‌ಮಾಪಕದಿಂದ ನೇರವಾಗಿ ಅಳೆಯಬಹುದು. ಕೋಶದ ವಿದ್ಯುದ್ವಾಹಕ ಶಕ್ತಿ ಕೋಶದ ರಚನೆಯಿಂದಾಗಿ (ಎಲೆಕ್ಟ್ರೋಡುಗಳು, ವಿದ್ಯುದ್ವಿಶ್ಲೇಷ್ಯ ಇತ್ಯಾದಿ) ತಿಳಿದಿರುವುದು. ಕೋಶವನ್ನು ಅಳವಡಿಸಿರುವ ವಿದ್ಯುನ್ಮಂಡಲದಲ್ಲಿ ವಿದ್ಯುತ್ ಪ್ರವಾಹ ಇಲ್ಲದಿರುವಾಗ ಅದರ ವಿದ್ಯುದ್ವಾಹಕಶಕ್ತಿಯೂ ವಿಭವವೂ ಒಂದೇ ಆಗಿರುತ್ತವೆ. ಆದರೆ ಮಂಡಲದಲ್ಲಿ ವಿದ್ಯುತ್ಪ್ರವಾಹವಿರುವಾಗ ವಿದ್ಯುನ್ಮಂಡಲದಲ್ಲಿ ವಿಭವ ವಿದ್ಯುದ್ವಾಹಕಶಕ್ತಿಗಿಂತ ಕಡಿಮೆ ಇರುತ್ತದೆ. ಇದಕ್ಕೆ ಕಾರಣ ವಿದ್ಯುತ್‌ಕೋಶದ ಆಂತರಿಕ ರೋಧತ್ವ. ವಿದ್ಯುತ್ ಪ್ರವಾಹದ ದೃಷ್ಟಿಯಿಂದ ಎಲ್ಲ ವಸ್ತುಗಳಿಗೂ ಇರುವಂತೆಯೇ ಕೋಶಕ್ಕೆ ಸಹ ವಿದ್ಯುದ್ರೋಧತ್ವ ಇದೆ. ಇದಕ್ಕೆ ಕೋಶದ ಆಂತರಿಕ ರೋಧತ್ವ ಎಂದು ಹೆಸರು. ಇದನ್ನು ದಾಟಲು ಕೋಶದ ವಿದ್ಯುದ್ವಾಹಕಶಕ್ತಿಯಲ್ಲಿ ಸ್ವಲ್ಪ ಭಾಗ ವ್ಯಯವಾಗುವುದರಿಂದ ಕೋಶದ ಎಲೆಕ್ಟ್ರೋಡುಗಳ ನಡುವಿನ ವಿಭವ ಕಡಿಮೆ ಆಗಿರುತ್ತದೆ. ವಿದ್ಯುತ್ ಪ್ರವಾಹವಿಲ್ಲದಿರುವಾಗ ಈ ರೀತಿಯ ಆಂತರಿಕ ವ್ಯಯ ಇಲ್ಲದಿರುವುದರಿಂದ ಕೋಶದ ವಿದ್ಯುದ್ವಾಹಕಶಕ್ತಿ ಮತ್ತು ವಿಭವ ಒಂದೇ ಆಗಿರುತ್ತವೆ. ಇನ್ನು ಮುಂದೆ ಕೋಶವನ್ನು ವಿವರಿಸುವಾಗ ಕೋಶದ ವಿಭವ ಎಂದರೆ ಕೋಶ ವಿದ್ಯುನ್ಮಂಡಲದಲ್ಲಿಲ್ಲದಾಗಿನ ಎಲೆಕ್ಟ್ರೋಡುಗಳ ನಡುವಿನ ವಿಭವ ಎಂದರ್ಥ; ಅಂದರೆ ವಿವೃತಮಂಡಲ ವಿಭವ (ಓಪನ್ ಸರ್ಕ್ಯೂಟ್ ಪೊಟೆನ್ಶಿಯಲ್).

ವಿದ್ಯುನ್ಮಂಡಲದಲ್ಲಿ ಕೋಶ ಮತ್ತು ವಿದ್ಯುದ್ರೋಧತ್ವದ ಸ್ಥಳಗಳನ್ನು ವಿಶೇಷ ಗುರುತುಗಳಿಂದಲೂ ವೋಲ್ಟ್ ಮಾಪಕವನ್ನು V ಗುರುತಿನಿಂದಲೂ ಆಂಪಿಯರ್ ಮಾಪಕವನ್ನು A ಗುರುತಿನಿಂದಲೂ ಸೂಚಿಸಿದೆ (ಚಿತ್ರ 2). ಕೋಶದ ಗುರುತಿನಲ್ಲಿ + ಜಾಗ ಧನ ಧ್ರುವವನ್ನೂ – ಜಾಗ ಋಣ ಧ್ರುವವನ್ನೂ ಸೂಚಿಸುತ್ತವೆ. ಮಂಡಲದಲ್ಲಿ ಬಾಣದ ಗುರುತು ವಿದ್ಯುತ್‌ಪ್ರವಾಹದ ದಿಕ್ಕನ್ನು ಸೂಚಿಸುತ್ತದೆ. ವಿದ್ಯುತ್ ಪ್ರಯೋಗಗಳಲ್ಲಿ ಧನವಿದ್ಯುತ್ ವಿಭವ ಒಂದನ್ನೇ ಆಗಲಿ ಅಥವಾ ಋಣವಿದ್ಯುತ್ ವಿಭವ ಒಂದನ್ನೇ ಆಗಲಿ ಉಪಯೋಗಿಸಿಕೊಳ್ಳುವ ಸನ್ನಿವೇಶಗಳು ಇರುತ್ತವೆ. ಅಂಥ ಸಂದರ್ಭಗಳಲ್ಲಿ ವಿದ್ಯುನ್ಮಂಡಲದಲ್ಲಿ ಸ್ವಲ್ಪ ಮಾರ್ಪಾಡು ಮಾಡಿ ಕೋಶದ ಧನ ಮತ್ತು ಋಣ ಧ್ರುವಗಳಿಂದ ಧನ ಮತ್ತು ಋಣವಿದ್ಯುತ್ ವಿಭವಗಳನ್ನು ಕ್ರಮವಾಗಿ ಪಡೆಯಬಹುದು. ಚಿತ್ರ (3)ರಲ್ಲಿ ಇಂಥ ಒಂದು ಉದಾಹರಣೆಯನ್ನು ತೋರಿಸಿದೆ. Kಗೆ ಸಂಬಂಧಿಸಿದಂತೆ (ಶೂನ್ಯ ವಿದ್ಯುತ್ ವಿಭವ) Gಗೆ ಋಣವಿದ್ಯುತ್ ವಿಭವವನ್ನು C ಕೋಶಾವಳಿಯೂ Pಗೆ ಧನ ವಿದ್ಯುತ್ ವಿಭವವನ್ನು B ಕೋಶಾವಳಿಯೂ ಒದಗಿಸುತ್ತವೆ.




ಚಿತ್ರ 2 R – ಮಂಡಲದ ರೋಧತ್ವ, ಕೋಶದ ಆಂತರಿಕ ರೋಧತ್ವ

**ವಿದ್ಯುತ್‌ಕೋಶದ ಕ್ಷಮತೆ(ಕೆಪಾಸಿಟಿ ಆಫ್ ಬ್ಯಾಟರಿ):** ಮಂಡಲದಲ್ಲಿನ ವಿದ್ಯುತ್ ಪ್ರವಾಹದ ವಿವರಣೆಯನ್ನು ಮತ್ತೊಂದು ರೀತಿಯಲ್ಲೂ ಕೊಡಬಹುದು. ಎಲೆಕ್ಟ್ರಾನುಗಳು ಋಣವಿದ್ಯುತ್ತನ್ನು ಹೊಂದಿವೆ ಮತ್ತು ಎಲೆಕ್ಟ್ರಾನುಗಳ ಪ್ರವಾಹ ವಿದ್ಯುತ್ ಪ್ರವಾಹಕ್ಕೆ ಕಾರಣ. ವಿದ್ಯುತ್ ಪ್ರವಾಹವನ್ನು ಆ್ಯಂಪಿಯರುಗಳಲ್ಲಿಯೇ ಅಲ್ಲದೆ ಬೇರೆ ಏಕಮಾನದಿಂದಲೂ ಅಳೆಯುವುದು ರೂಢಿಯಲ್ಲಿದೆ. ವಿದ್ಯುತ್ ಕೋಶದ ಆ್ಯನೋಡಿನಿಂದ ಕ್ಯಾಥೋಡಿಗೆ ಒಟ್ಟು $6.02 \times 10^{23}$ ಎಲೆಕ್ಟ್ರಾನುಗಳು ಪ್ರವಹಿಸಿದರೆ ಕೋಶದಿಂದ ಒಂದು ಫ್ಯಾರಡೆ ವಿದ್ಯುತ್ತು ಪ್ರವಹಿಸಿದೆ ಎಂದಾಗುತ್ತದೆ. 1/96,000 ಭಾಗದ ಫ್ಯಾರಡೆಯನ್ನು ಪ್ರವಹಿಸುವ




ಚಿತ್ರ 3 T – ಟ್ರಿಯೋಡ್ ವಾಲ್ವ್, F – ಪ್ಲೇಟ್ (ಆನೋಡ್), K – ಕ್ಯಾಥೋಡ್, f –ತಂತು, G –ಗ್ರೀಡ್, E –ಭೂಮಿ (ಶೂನ್ಯ ವಿಭವ); A,B,C –

ಕ್ಷಮತೆ ಇರುವ ಕೋಶಕ್ಕೆ ಒಂದು ಕೂಲಂಬ್ ವಿದ್ಯುತ್ತನ್ನು ಪ್ರವಹಿಸುವ ಶಕ್ತಿ ಇರುವುದು. ಸೆಕೆಂಡಿಗೆ ಒಂದು ಕೂಲಂಬಿನಂತೆ ವಿದ್ಯುತ್ಪ್ರವಾಹ ಮಂಡಲದಲ್ಲಿದ್ದರೆ ಆಗ 1 ಆಂಪಿಯರ್ ವಿದ್ಯುತ್ ಇದೆ ಎಂದಾಗುತ್ತದೆ. ಈ ಲೆಕ್ಕದ ಮೇರೆಗೆ ಎಲೆಕ್ಟ್ರಾನುಗಳ ಋಣವಿದ್ಯುತ್ ಪ್ರಮಾಣ $1.602 \times 10^{-19}$ ಕೂಲಂಬುಗಳು.

ವಿದ್ಯುತ್‌ಕೋಶ ಕೆಲಸಮಾಡಲು ಪ್ರಾರಂಭಿಸಿದ ತರುವಾಯ ಅದರಲ್ಲಿನ ರಾಸಾಯನಿಕಕ್ರಿಯೆ ನಿಲ್ಲುವ ತನಕ ಅದು ವಿದ್ಯುತ್ತನ್ನು ಉತ್ಪಾದಿಸುತ್ತಿರುತ್ತದೆ. ಕೋಶದ ಈ ಉಪಯುಕ್ತ ಜೀವಿತದ (ಯೂಸ್‌ಫುಲ್ ಲೈಫ್) ಕ್ಷಮತೆಯನ್ನು ಅಂದರೆ ಕೋಶ ಉತ್ಪಾದಿಸುವ ಒಟ್ಟು ವಿದ್ಯುತ್ತಿನ ಮೊತ್ತವನ್ನು ಆಂಪಿಯರ್–ಗಂಟೆಗಳಲ್ಲಿ ಸೂಚಿಸುತ್ತಾರೆ. ಉದಾಹರಣೆಗೆ 100 ಆಂ.–ಗಂ. ಕ್ಷಮತೆ ಇರುವ ಕೋಶಮಂಡಲದ ಗುಣಕ್ಕೆ ತಕ್ಕಂತೆ 100 ಗಂಟೆಗಳ ಕಾಲ ಸತತವಾಗಿ 1 ಆ್ಯಂಪಿಯರ್ ವಿದ್ಯುತ್ತನ್ನು ಪ್ರವಹಿಸಬಲ್ಲುದು. ಅಥವಾ 20 ಗಂಟೆಗಳ ಕಾಲ ಸತತವಾಗಿ 5 ಆಂಪಿಯರ್ ವಿದ್ಯುತ್ತನ್ನು ಪ್ರವಹಿಸಬಲ್ಲುದು; ಅಥವಾ 10 ಗಂಟೆಗಳ ಕಾಲ 10 ಆಂಪಿಯರ್ ವಿದ್ಯುತ್ತನ್ನು ಪ್ರವಹಿಸಬಲ್ಲುದು.

**ಕೋಶಗಳ ಬಗೆಗಳು:** ವಿದ್ಯುತ್‌ಕೋಶಗಳನ್ನು ಮುಖ್ಯವಾಗಿ ಎರಡು ಪಂಗಡಗಳಾಗಿ ವಿಂಗಡಿಸಬಹುದು–1 ವೋಲ್ಟಾ ಮಾದರಿಯ ಕೋಶಗಳು, 2 ವೋಲ್ಟಾ ಮಾದರಿಯಲ್ಲದ

ಇತರ ಬಗೆಯ ಕೋಶಗಳು. ವೋಲ್ಟಾಮಾದರಿಯ ಕೋಶಗಳಲ್ಲಿ ವಿದ್ಯುದ್ವಿಶ್ಲೇಷ್ಯದಲ್ಲಿಟ್ಟಿರುವ ಎರಡು ಎಲೆಕ್ಟ್ರೋಡುಗಳ ನಡುವೆ ರಾಸಾಯನಿಕ ಕ್ರಿಯೆಯಿಂದಾಗಿ ವಿಭವ ಏರ್ಪಡುತ್ತದೆ. ಎಲೆಕ್ಟ್ರೋಡುಗಳು ಒಂದೇ ವಿದ್ಯುದ್ವಿಶ್ಲೇಷ್ಯದಲ್ಲಿರಬಹುದು ಅಥವಾ ಬೇರೆ ಬೇರೆ ವಿಶ್ಲೇಷಗಳಲ್ಲಿರಬಹುದು. ವಿಶ್ಲೇಷ್ಯಗಳು ಬೇರೆ ಇದ್ದಾಗ ಅವುಗಳ ನಡುವೆ ವಿದ್ಯುದ್ವಾಹಕ ಕಣಗಳ ಚಲನೆಗೆ ಅಡಚಣೆಯಾಗದಂತಿರಬೇಕು. ಸಚ್ಛಿದ್ರ ತೆರೆಯಿಂದ ವಿಶ್ಲೇಷ್ಯಗಳನ್ನು ಬೇರ್ಪಡಿಸುವುದರ ಮೂಲಕ ಇದನ್ನು ಸಾಧಿಸಬಹುದು.

ವೋಲ್ಟಾ ಕೋಶಗಳನ್ನು ಮುಖ್ಯವಾಗಿ ಈ ಕೆಳಗೆ ತೋರಿಸಿರುವಂತೆ ವಿಭಾಗಿಸಬಹುದು: 1. ಪ್ರಧಾನ ವಿದ್ಯುತ್ ಕೋಶಗಳು. 2. ದ್ವಿತೀಯಕ ವಿದ್ಯುತ್ ಕೋಶಗಳು ಅಥವಾ ವಿದ್ಯುತ್ ಸಂಚಯನ ಕೋಶಗಳು. 3. ಶಿಷ್ಟ ವಿದ್ಯುತ್ ಕೋಶಗಳು ಅಥವಾ ವೈಜ್ಞಾನಿಕ ಅಳತೆಗಾಗಿ ಉಪಯೋಗಿಸುವ ಕೋಶಗಳು.

**1. ಪ್ರಧಾನ ವಿದ್ಯುತ್‌ಕೋಶಗಳು:** ಈ ಪಂಗಡದಲ್ಲಿ ಮೊಟ್ಟಮೊದಲಿಗೆ ಬಳಕೆಗೆ ಬಂದ ಕೋಶವೆಂದರೆ ಅಲೆಸ್ಸಾಂಡ್ರೋ ವೋಲ್ಟಾ ರಚಿಸಿದ (1800) ವೋಲ್ಟಾ ಶ್ರೇಣಿ. ಇದು ಹಲವಾರು ಪ್ರತ್ಯೇಕ ವಿದ್ಯುತ್ ಕೋಶಗಳ ಜೋಡಣೆಯಿಂದಾದ ಕೋಶಾವಳಿ. ಕೋಶಗಳ ರಚನೆಯಲ್ಲಿ ಬೆಳ್ಳಿಯ ಕ್ಯಾಥೋಡನ್ನು (ಋಣಧ್ರುವ) ಮತ್ತು ಸತುವಿನ ಆ್ಯನೋಡನ್ನು(ಧನಧ್ರುವ) ಎಲೆಕ್ಟ್ರೋಡುಗಳಾಗಿಯೂ ಸಾಮಾನ್ಯ ಅಡುಗೆ ಉಪ್ಪಿನ(NaCl) ದ್ರಾವಣವನ್ನು ವಿದ್ಯುದ್ವಿಶ್ಲೇಷ್ಯವಾಗಿಯೂ ಉಪಯೋಗಿಸಲಾಗಿತ್ತು. ಆ್ಯನೋಡು ಮತ್ತು ಕ್ಯಾಥೋಡುಗಳು ಒಂದೇ ಆಕಾರದ ಬಿಲ್ಲೆಗಳಾಗಿದ್ದು ಅವುಗಳ ನಡುವೆ ಇವುಗಳಿಗಿಂತ ಆಕಾರದಲ್ಲಿ ಸ್ವಲ್ಪ ಚಿಕ್ಕದಾದ ಉಪ್ಪಿನ ದ್ರಾವಣದಲ್ಲಿ ಅದ್ದಿದ ಕಾಗದ ಅಥವಾ ಬಟ್ಟೆಯ ಬಿಲ್ಲೆಯನ್ನು ಇಡಲಾಗಿತ್ತು. ಇಂಥ ಒಂದು ಕೋಶದಿಂದ ದೊರೆತ ವಿಭವ ಅತ್ಯಲ್ಪವಾದುದರಿಂದ ಹಲವು ಕೋಶಗಳ ಜೋಡಣೆಯನ್ನು (ಶ್ರೇಣಿಯನ್ನು) ರಚಿಸಿ ಹೆಚ್ಚಿನ ವಿಭವವನ್ನು ಪಡೆಯುವಂತೆ ಏರ್ಪಡಿಸಲಾಗಿತ್ತು. ಕೋಶಗಳಲ್ಲಿ ಬೆಳ್ಳಿಗೆ ಬದಲಾಗಿ ತಾಮ್ರದ ಕ್ಯಾಥೋಡನ್ನೂ ಉಪಯೋಗಿಸಬಹುದು. ವೋಲ್ಟಾಶ್ರೇಣಿಯ ಧನ ಮತ್ತು ಋಣ ಎಲೆಕ್ಟ್ರೋಡುಗಳನ್ನು ಬಾಹ್ಯ ವಿದ್ಯುನ್ಮಂಡಲಕ್ಕೆ ಜೋಡಿಸಿದಾಗ ಸತು ಮತ್ತು ವಿದ್ಯುದ್ವಿಶ್ಲೇಷ್ಯದ ನಡುವಣ ರಾಸಾಯನಿಕ ಕ್ರಿಯೆಯಿಂದಾಗಿ ಕ್ಯಾಥೋಡಿನಿಂದ ಎಲೆಕ್ಟ್ರಾನುಗಳು ಬಿಡುಗಡೆಯಾಗುತ್ತವೆ. ಎಲೆಕ್ಟ್ರಾನುಗಳು ಬಾಹ್ಯ ವಿದ್ಯುನ್ಮಂಡಲದಲ್ಲಿ ಚಲಿಸಿ ಆನೋಡ್ ಮೂಲಕವಾಗಿ ಕೋಶವನ್ನು ಸೇರುತ್ತವೆ. ಕೋಶದಲ್ಲಿಯ ರಾಸಾಯನಿಕ ಕ್ರಿಯೆಯಿಂದಾಗಿ ಆನೋಡ್ ಬಳಿ ಜಲಜನಕದ ಅನಿಲ ಉತ್ಪತ್ತಿಯಾಗುತ್ತದೆ. ಕೋಶದಲ್ಲಿಯ ರಾಸಾಯನಿಕ ಕ್ರಿಯೆ ಈ ರೀತಿ ಇದೆ:

ಕ್ಯಾಥೋಡ್ ಬಳಿ: $Zn \rightarrow Zn^{++} + 2e^-$

ಆ್ಯನೋಡ್ ಬಳಿ : $2H^+ + 2e^- \rightarrow H_2\uparrow$ (ಅನಿಲ)

ಕೋಶದ ಒಟ್ಟು ರಾಸಾಯನಿಕ ಕ್ರಿಯೆಯಲ್ಲಿ ಸತು ಸತುವಿನ ಲವಣವಾಗಿ ಪರಿವರ್ತನೆಗೊಳ್ಳುವುದರಿಂದ ಸತುವಿನ ಎಲೆಕ್ಟ್ರೋಡುಗಳು ನಶಿಸುತ್ತಿರುತ್ತವೆ. ಆನೋಡ್ ಲೋಹ ಯಾವ ರೀತಿಯ ರಾಸಾಯನಿಕ ಕ್ರಿಯೆಗೂ ಒಳಗಾಗದಿರುವುದರಿಂದ ನಶಿಸುವುದಿಲ್ಲ. ಕೋಶದೊಳಗಿನ ಒಟ್ಟು ರಾಸಾಯನಿಕ ಕ್ರಿಯೆ ಈ ರೀತಿ ಇರುತ್ತದೆ:

$$Zn + 2NaCl + 2H_2O \rightarrow 2NaOH = ZnCl_2 + H_2\uparrow$$

ವೋಲ್ಟಾ ಶ್ರೇಣಿಯಲ್ಲಿನ ಮುಖ್ಯವಾದ ತೊಂದರೆ ಎಂದರೆ ಬಿಡುಗಡೆಯಾದ ಜಲಜನಕ ಅನಿಲ ಆ್ಯನೋಡಿನ ಸುತ್ತಲೂ ಗುಳ್ಳೆಗಳಾಗಿ ಶೇಖರವಾಗುವುದರಿಂದ ಕೋಶದ ವಿದ್ಯುದುತ್ಪತ್ತಿ ಸ್ವಲ್ಪ ಕಾಲಾನಂತರ ನಿಲ್ಲುವುದು. ಇದಕ್ಕೆ ಧ್ರುವೀಕರಣವೆಂದು ಹೆಸರು. ಡೇನಿಯಲ್ ಎಂಬ ವಿಜ್ಞಾನಿ 1836ರಲ್ಲಿ ತಯಾರಿಸಿದ ವೋಲ್ಟಾ ಮಾದರಿಯ ಕೋಶದಲ್ಲಿ ಧ್ರುವೀಕರಣದ ತೊಂದರೆಯನ್ನು ನಿಲ್ಲಿಸಲಾಗಿತ್ತು. ಈ ಕೋಶದಲ್ಲಿ ಸತುವಿನ ಆ್ಯನೋಡ್ ಮತ್ತು ತಾಮ್ರದ ಕ್ಯಾಥೋಡುಗಳನ್ನು ಉಪಯೋಗಿಸಲಾಗಿತ್ತು. ಸತುವಿನ ಆನೋಡನ್ನು ಸತುವಿನ ಸಲ್ಫೇಟು ದ್ರಾವಣದಲ್ಲಾಗಲಿ ಮೆಗ್ನೀಸಿಯಂ ಸಲ್ಫೇಟು ದ್ರಾವಣದಲ್ಲಾಗಲಿ ಅಥವಾ ಸಾರರಿಕ್ತ ಸಲ್ಫ್ಯೂರಿಕ್ ತಾಮ್ರದ ($H_2SO_4$) ದ್ರಾವಣದಲ್ಲಾಗಲಿ ಇರಿಸಿರುತ್ತಾರೆ. ಇದಕ್ಕೆ ಆ್ಯನೋಡ್ ದ್ರಾವಣ ಎಂದು ಹೆಸರು. ತಾಮ್ರದ ಕ್ಯಾಥೋಡನ್ನು ತಾಮ್ರದ ಸಲ್ಫೇಟಿನ ಸಂತೃಪ್ತದ್ರಾವಣದಲ್ಲಿ ಇರಿಸಿರುತ್ತಾರೆ. ಇದಕ್ಕೆ ಕ್ಯಾಥೋಡ್ ದ್ರಾವಣ ಎಂದು ಹೆಸರು. ಕೋಶದಲ್ಲಿನ ಆ್ಯನೋಡ್ ಮತ್ತು ಕ್ಯಾಥೋಡ್ ದ್ರಾವಣಗಳು ಬೆರೆಯದಂತೆ ಮಾಡಲು ಎರಡು ಬೇರೆ ಬೇರೆ ವಿಧಾನಗಳನ್ನು ಅನುಸರಿಸಬಹುದು. ಈ ಎರಡೂ ದ್ರಾವಣಗಳನ್ನು ಕೋಶದ ಒಂದೇ ಪಾತ್ರೆಯಲ್ಲಿಟ್ಟಾಗ ಸಂತೃಪ್ತ ತಾಮ್ರದ ಸಲ್ಫೇಟ್ ದ್ರಾವಣ ಹೆಚ್ಚು ಭಾರವಾಗಿರುವುದರಿಂದ ಅದು ಕೋಶದ ಕೆಳಭಾಗದಲ್ಲಿರುತ್ತದೆ. ಆಗ ಕ್ಯಾಥೋಡನ್ನು ಕ್ಯಾಥೋಡ್ ದ್ರಾವಣದಲ್ಲಿ ಅಂದರೆ ಕೋಶದ ಕೆಳಭಾಗದಲ್ಲಿಡಬೇಕಾಗುತ್ತದೆ.

ಈ ರೀತಿ ನಿರ್ಮಿಸಿದ ಕೋಶಕ್ಕೆ ಗುರುತ್ವರೀತಿಯ ಡೇನಿಯಲ್ ಕೋಶ ಎಂದು ಹೆಸರು. ಮತ್ತೊಂದು ವಿಧಾನದಲ್ಲಿ ತಾಮ್ರದ ಸಲ್ಫೇಟ್ ದ್ರಾವಣವನ್ನು ಸಛಿದ್ರ ಪಾತ್ರೆಯಲ್ಲಿಟ್ಟು ಈ ಪಾತ್ರೆಯನ್ನು ಆ್ಯನೋಡ್ ದ್ರಾವಣದಲ್ಲಿಟ್ಟಿರುತ್ತಾರೆ. ಈ ರೀತಿಯ ಕೋಶಕ್ಕೆ ಸಾಮಾನ್ಯ ಡೇನಿಯಲ್ ಕೋಶ ಎಂದು ಹೆಸರು. ಎರಡು ರೀತಿಯ ಕೋಶದ ರಚನೆಯಲ್ಲೂ ವಿದ್ಯುದ್ವಾಹಿ ಕಣಗಳು ಎಲೆಕ್ಟ್ರೋಡುಗಳ ನಡುವೆ ಸ್ವಚ್ಛಂದವಾಗಿ ಚಲಿಸಲು ಅವಕಾಶವಿದೆ. ಕೋಶಗಳಲ್ಲಿ ನಡೆಯುವ ವಿದ್ಯುದ್ರಾಸಾಯನಿಕ ಕ್ರಿಯೆ ಸಹ ಒಂದೇ ಆಗಿರುವುದು. ಆ್ಯನೋಡ್‌ವಸ್ತು ವೋಲ್ಟಾಶ್ರೇಣಿಯಲ್ಲಿ ಜರಗುವಂತೆ ಸತುವಿನ ಲವಣವಾಗಿ ಪರಿವರ್ತನೆಗೊಳ್ಳುತ್ತದೆ; ಮತ್ತು ಇದರಿಂದಾಗಿ ಆ್ಯನೋಡ್ ಪದಾರ್ಥ ಕ್ರಮೇಣ ನಶಿಸುತ್ತದೆ. ಕ್ಯಾಥೋಡ್ ಬಳಿಯಲ್ಲಿ ಕ್ಯಾಥೋಡ್ ದ್ರಾವಣದಲ್ಲಿನ ತಾಮ್ರದ ವಿದ್ಯುದ್ವಾಹಿ ಕಣಗಳು ($Cu^{++}$) ಎಲೆಕ್ಟ್ರಾನುಗಳೊಂದಿಗೆ ಸಂಯೋಗಗೊಂಡು ತಾಮ್ರ ಉತ್ಪತ್ತಿಯಾಗುತ್ತದೆ. ಅಂದರೆ ತಾಮ್ರದ ಸಲ್ಫೇಟ್ ದ್ರಾವಣದಿಂದ ತಾಮ್ರ ಬೇರೆಯಾಗುತ್ತದೆ. ಕೋಶದ ವಿದ್ಯುದ್ರಾಸಾಯನಿಕ ಕ್ರಿಯೆಗಳು ಈ ರೀತಿ ಇವೆ:




ಚಿತ್ರ 4 ಗುರುತ್ವ ರೀತಿಯ ಡೇನಿಯಲ್ ಕೋಶ. 1 ಆನೋಡ್ [ಸತು] 2. ಸಂತೃಪ್ತ ತಾಮ್ರದ ಸಲ್ಫೇಟ್ ದ್ರಾವಣ, 3 ಕೋಶದ ತಳಭಾಗದಲ್ಲಿ ಸೇರಿಸಲಾಗುವ ಘನತಾಮ್ರದ ಸಲ್ಫೇಟ್, 4. ಮೆಗ್ನೀಷಿಯಂ ಸಲ್ಫೇಟ್ ಅಥವಾ ಜಿಂಕ್ ಸಲ್ಫೇಟ್ ದ್ರಾವಣ, 5 ಕ್ಯಾಥೋಡ್ [ತಾಮ್ರ]

$$Zn \rightarrow Zn^{++} + 2e^-$$

$$CuSO_4 \rightarrow Cu^{++} + SO_4^{--}$$

$$Zn^{++} + SO_4^{-} \rightarrow Zn\,SO_4$$

$$Cu^{++} + 2e^- \rightarrow Cu\downarrow$$

$$Zn + H_2SO_4 \rightarrow Zn\,SO_4 + H_2\uparrow$$

ಈ ಕ್ರಿಯೆಗಳಿಂದಾಗಿ ತಾಮ್ರದ ಸಲ್ಫೇಟ್ ದ್ರಾವಣ ಸತತವಾಗಿ ಸಾರರಿಕ್ತವಾಗುತ್ತಿರುತ್ತದೆ. ಇದರಿಂದಾಗಿ ಕೋಶದ ವಿದ್ಯುತ್ ಪೂರೈಕೆ ಕ್ರಮೇಣ ಅಸಮರ್ಪಕವಾಗುವುದು. ಇದನ್ನು ತಡೆಗಟ್ಟಲು ತಾಮ್ರದ ಸಲ್ಫೇಟ್ ಹರಳುಗಳನ್ನು ಕ್ಯಾಥೋಡ್ ದ್ರಾವಣದಲ್ಲಿ ಇಟ್ಟಿರುತ್ತಾರೆ. ದ್ರಾವಣದ ಸಾರ ಕಡಿಮೆಯಾದಂತೆ ಸಲ್ಫೇಟ್ ಹರಳುಗಳು ದ್ರಾವಣದಲ್ಲಿ ಲೀನವಾಗುವುದರಿಂದ ಕ್ಯಾಥೋಡ್ ದ್ರಾವಣದ ಸಾರ ಒಂದೇ ರೀತಿ ಇರಲು ಸಾಧ್ಯವಾಗುತ್ತದೆ.

ಪಾದರಸ ಲೇಪಿತ (ಅಮಾಲ್ಗಮೇಟೆಡ್) ಆ್ಯನೋಡನ್ನು ಉಪಯೋಗಿಸುವುದರಿಂದ ಕೋಶ ಕೆಲಸ ಮಾಡದಿದ್ದಾಗಿನ ಆ್ಯನೋಡಿನ ನಶಿಸುವಿಕೆಯನ್ನು ತಡೆಗಟ್ಟಬಹುದೆಂಬ ವಿಷಯ 1801ರ ವೇಳೆಗೆ ತಿಳಿದಿದ್ದಿತು. ಅಲ್ಲದೆ ಉತ್ಕರ್ಷಣಕಾರಕ ವಸ್ತುಗಳನ್ನು ಕೋಶದಲ್ಲಿ ಉಪಯೋಗಿಸಿದಾಗ ಈ ವಸ್ತುಗಳು ಧ್ರುವೀಕಾರಕಗಳಾಗಿ (ಡೀಪೋಲರೈಸರ್ಸ್) ಕೆಲಸ ಮಾಡುವುದರಿಂದ ಕೋಶದ ವಿದ್ಯುತ್ಪ್ರವಾಹ ಹೆಚ್ಚಾಗಿದ್ದಾಗಲೂ ಕೋಶ ಸಮರ್ಪಕವಾಗಿ ಕೆಲಸ ಮಾಡಲು ಸಾಧ್ಯವೆಂಬ ವಿಷಯವೂ ತಿಳಿದಿದ್ದಿತು. ಈ ತತ್ತ್ವಗಳನ್ನು ಅನುಸರಿಸಿ 1839 ರಲ್ಲಿ ಡಬ್ಲ್ಯುಆರ್.ಗ್ರೌಸ್ ಎಂಬ ವಿಜ್ಞಾನಿ ಡೇನಿಯಲ್ ಕೋಶಕ್ಕಿಂತಲೂ ಸಮರ್ಪಕವಾಗಿರುವ ವಿದ್ಯುತ್ ಕೋಶವನ್ನು ರಚಿಸಿದ. ಡೇನಿಯಲ್ ಕೋಶದಲ್ಲಿ ಇದ್ದಂತೆಯೇ ಗ್ರೌಸ್‌ನ ಕೋಶದಲ್ಲೂ ಎರಡು ವಿದ್ಯುದ್ವಿಶ್ಲೇಷ್ಯಗಳನ್ನು ಉಪಯೋಗಿಸಲಾಗಿತ್ತು. ಕೋಶದ ಪಾತ್ರೆಯಲ್ಲಿ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲವನ್ನು ಇಟ್ಟು ಈ ದ್ರಾವಣದಲ್ಲಿ ಸತುವಿನ ಆನೋಡನ್ನು ಇಡಲಾಗಿತ್ತು. ಸಚ್ಛಿದ್ರ ಪಾತ್ರೆಯೊಂದರಲ್ಲಿ ಸಾರ ನೈಟ್ರಿಕ್ ಆಮ್ಲವನ್ನೂ (ಉತ್ಕರ್ಷಣಕಾರಿ) ಈ ದ್ರಾವಣದಲ್ಲಿ ಪ್ಲಾಟಿನಂ ಲೋಹದ ಕ್ಯಾಥೋಡನ್ನೂ ಇರಿಸಿ ಈ ಸಛಿದ್ರ ಪಾತ್ರೆಯನ್ನು ಸಲ್ಫ್ಯೂರಿಕ್ ಆಮ್ಲದಲ್ಲಿ ಇಡಲಾಗಿತ್ತು. ಗ್ರೌಸನ ಕೋಶದಲ್ಲಿ ಉಪಯೋಗಿಸಿದ ಅತಿ ದುಬಾರಿಯಾದ ಪ್ಲಾಟಿನಂ ಲೋಹಕ್ಕೆ ಬದಲಾಗಿ ಶುದ್ಧ ಇಂಗಾಲದ ಕಡ್ಡಿಗಳನ್ನು ಕ್ಯಾಥೋಡ್ ಆಗಿ ಉಪಯೋಗಿಸುವುದನ್ನು ಆರ್.ಡಬ್ಲ್ಯು. ಬುನ್‌ಸೆನ್ ಎಂಬಾತ ಬಳಕೆಗೆ ತಂದ. ಈ ಕಾರಣಕ್ಕಾಗಿ ಈ ಬಗೆಯ ಕೋಶವನ್ನು ಗ್ರೌಸ್–ಬುನ್‌ಸೆನ್ ವಿದ್ಯುತ್ ಕೋಶವೆಂದು ಕರೆಯುತ್ತಾರೆ.




ಚಿತ್ರ 5 ಸಾಮಾನ್ಯ ಡೇನಿಯಲ್ ಕೋಶ, 1 ಸಲ್ಫ್ಯೂರಿಕ್ ಆಮ್ಲದ ದ್ರಾವಣ, 2 ಸಚ್ಛಿದ್ರ ಪಾತ್ರೆ, 3 ತಾಮ್ರದ ಸಲ್ಫೇಟ್ ದ್ರಾವಣ

ಕೋಶದಲ್ಲಿನ ರಾಸಾಯನಿಕ ಕ್ರಿಯೆ ಈ ರೀತಿ ಇರುತ್ತದೆ:

$$Zn + 2HNO_3 + H_2SO_4 \rightarrow Zn\,SO_4 + 2NO_2 + 2H_2O$$

ಇದರ ಪ್ರಕಾರ ನೈಟ್ರಿಕ್ ಆಮ್ಲ ಅಪಕರ್ಷಣೆಗೊಳ್ಳುತ್ತದೆ. ಆ್ಯನೋಡಿನ ಸತುವಿನ ಸಲ್ಫೇಟ್ ರೂಪದಲ್ಲಿ ಕೋಶವನ್ನು ಸೇರುವುದು. ಕೋಶದಲ್ಲಿನ ಸಲ್ಫ್ಯೂರಿಕ್ ಆಮ್ಲದ ಮೊತ್ತ ಕ್ರಮೇಣ ಕುಗ್ಗುತ್ತದೆ. ಕ್ಯಾಥೋಡ್ ಯಾವ ರೀತಿಯಲ್ಲೂ ಬದಲಾವಣೆಗೊಳ್ಳುವುದಿಲ್ಲ. ಕೋಶದಲ್ಲಿನ ಸಲ್ಫ್ಯೂರಿಕ್ ಆಮ್ಲದ ಸಾರಕ್ಕೆ ಅನುಗುಣವಾಗಿ ಕೋಶದ ವಿಭವ 1.8-1.95 ವೋಲ್ಟುಗಳಿರುತ್ತದೆ. ಈ ಕೋಶ ಹೆಚ್ಚಿನ ಗಾತ್ರದ ವಿದ್ಯುತ್ಪ್ರವಾಹವನ್ನು ಕೋಶದ ವಿಭವದಲ್ಲಿ ಹೆಚ್ಚು ವ್ಯತ್ಯಾಸ ಆಗದಂತೆ ಒದಗಿಸಲು ಸಮರ್ಥವಾಗಿರುತ್ತದೆ.

ವಿದ್ಯುತ್‌ಕೋಶಗಳ ಬೆಳವಣಿಗೆಯಲ್ಲಿ ಮುಂದೆ ಬಲಕಿಗೆ ಬಂದ ಕೋಶ ಡೈಕ್ರೊಮೇಟ್ ವಿದ್ಯುತ್ ಕೋಶ. ಹೆಚ್ಚು ಸಮರ್ಪಕವಾಗಿ ಕೆಲಸ ಮಾಡುವಂತೆ ಸುಧಾರಿಸಲ್ಪಟ್ಟ ಗ್ರೌಸ್–ಬುನ್‌ಸೆನ್ ಕೋಶವಿದು. ಪ್ರಾರಂಭದಲ್ಲಿ ಗ್ರೌಸ್–ಬುನ್‌ಸೆನ್ ಕೋಶದಲ್ಲಿನ ಕ್ಯಾಥೋಡ್ ದ್ರಾವಣದ (ನೈಟ್ರಿಕ್ ಆಮ್ಲ) ಬದಲಾಗಿ ಕ್ರೋಮಿಕ್ ಆಮ್ಲವನ್ನು ಉಪಯೋಗಿಸಲಾಯಿತು. ಅನಂತರ ಕೋಶದಲ್ಲಿನ ಎರಡು ದ್ರಾವಣಗಳಿಗೆ (ಸಲ್ಫ್ಯೂರಿಕ್ ಆಮ್ಲ ಮತ್ತು ಕ್ರೋಮಿಕ್ ಆಮ್ಲ) ಬದಲಾಗಿ ಒಂದೇ ದ್ರಾವಣ ಸಲ್ಫ್ಯೂರಿಕ್ ಆಮ್ಲವನ್ನು ಉಪಯೋಗಿಸಿ ಕ್ರೋಮೇಟ್ ಲವಣಗಳನ್ನು ಉಪಯೋಗಿಸಲಾಯಿತು. ಇದರಿಂದಾಗಿ ಸಛಿದ್ರ ಪಾತ್ರೆಯ ಅವಶ್ಯಕತೆ ಇಲ್ಲವಾಗಿ ಕೋಶದ ರಚನೆ ಸರಳವಾಗಿತ್ತು. ಕೋಶದ ವಿದ್ಯುದ್ವಿಶ್ಲೇಷ್ಯದಲ್ಲಿ ಸಲ್ಫ್ಯೂರಿಕ್ ಆಮ್ಲ ಪೊಟ್ಯಾಸಿಯಂ ಡೈಕ್ರೊಮೇಟ್ ಅಥವಾ ಇದಕ್ಕಿಂತಲೂ ಅಗ್ಗವಾದ ಸೋಡಿಯಂ ಡೈಕ್ರೊಮೇಟ್ ಹರಳುಗಳನ್ನು ಉತ್ಕರ್ಷಕ ವಸ್ತುವಾಗಿ ಉಪಯೋಗಿಸಲಾಗಿತ್ತು. ಕೋಶದಿಂದ ವಿದ್ಯುತ್ ಪೂರೈಕೆಯಾಗುವಾಗ ಆ್ಯನೋಡ್ ವಸ್ತು (ಸತು) ದ್ರಾವಣದಲ್ಲಿ ಕರಗಿ ಸತುವಿನ ಸಲ್ಫೇಟ್ ಆಗಿ ಪರಿವರ್ತನೆಗೊಳ್ಳುತ್ತದೆ. ಕೋಶದಲ್ಲಿನ ರಾಸಾಯನಿಕ ಕ್ರಿಯೆ ಹೀಗಿದೆ:

$$3Zn + 7H_2SO_4 + Na_2Cr_2O_7 \rightarrow 3ZnSO_4 + Na_2SO_4 + Cr_2(SO_4)_3 + 7H_2O$$

ಈ ಕೋಶದ ವಿಭವ 2 ವೋಲ್ಟುಗಳಿದ್ದು ಕೋಶ ಹೆಚ್ಚಿನ ವಿದ್ಯುತ್‌ಪ್ರವಾಹವನ್ನು (ಅಲ್ಪಕಾಲದವರೆಗೆ) ಧ್ರುವೀಕರಣದ ತೊಂದರೆ ಇಲ್ಲದೆ ಒದಗಿಸಬಲ್ಲುದು. ಆದರೆ ಈ ಕೋಶದಿಂದ ಹೆಚ್ಚಿನ ವಿದ್ಯುತ್ ಪ್ರವಾಹವನ್ನು ಪಡೆಯುವಾಗ ವೋಲ್ಟತೆ ಸ್ಥಿರವಾಗಿರುವುದಿಲ್ಲ. ಈ ವಿಷಯದಲ್ಲಿ ಡೈಕ್ರೊಮೇಟ್ ಕೋಶ ಗ್ರೌಸ್–ಬುನ್‌ಸೆನ್ ಕೋಶದೊಡನೆ ಹೋಲಿಸಿದಾಗ ಅಸಮರ್ಪಕ.

ರೌವ್ ಎಂಬ ವಿಜ್ಞಾನಿ ಕೋಶದ ಕ್ಯಾಥೋಡ್ ಬಳಿಯಲ್ಲಿ ಉತ್ಕರ್ಷಕ ವಸ್ತುಗಳಾಗಿ ಮೆಗ್ನೀಷಿಯಂ ಡೈ ಆಕ್ಸೈಡ್ ($MgO_2$) ಅಥವಾ ಸೀಸದ ಆಕ್ಸೈಡ್ ($PbO_2$) ಘನಪದಾರ್ಥಗಳನ್ನು ಉಪಯೋಗಿಸುವ ವಿಧಾನವನ್ನು ಬಳಕೆಗೆ ತಂದದ್ದು (1856) ಪ್ರಧಾನ ವಿದ್ಯುತ್ ಕೋಶಗಳ ಬೆಳವಣಿಗೆಯಲ್ಲಿ ಪ್ರಮುಖ ಹಂತ. ಆ ತನಕ ಬಳಕೆಯಲ್ಲಿದ್ದ ವಿದ್ಯುತ್ ಕೋಶಗಳಲ್ಲಿ ಉಪಯೋಗಿಸುತ್ತಿದ್ದ ಕ್ಯಾಥೋಡ್ ದ್ರಾವಣ (ಉದಾಹರಣೆಗೆ ಗ್ರೌಸ್–ಬುನ್‌ಸೆನ್ ಕೋಶದಲ್ಲಿನ ನೈಟ್ರಿಕ್ ಆಮ್ಲ) ಆ್ಯನೋಡ್ ಕಡೆಗೆ ಪ್ರವಹಿಸಿ ಆ್ಯನೋಡಿನ ನಶಿಸುವಿಕೆಯಿಂದಾಗಿ ಕೋಶ ಬೇಗನೆ ನಿರುಪಯೋಗ ಸ್ಥಿತಿಗೆ ಬರುತ್ತಿತ್ತು. ಹೊಸ ವಿಧಾನದ ಕೋಶಗಳಲ್ಲಿ ಉಪಯೋಗಿಸಿದ $MgO_2$, $PbO_2$ ಗಳು ಕೋಶದಲ್ಲಿಯ ವಿದ್ಯುದ್ವಿಶ್ಲೇಷ್ಯದಲ್ಲಿ ಕರಗದಿರುವುದರಿಂದ (ಅಥವಾ ಸ್ವಲ್ಪ ಮಾತ್ರವೇ ಕರಗುತ್ತವೆ) ಕ್ಯಾಥೋಡ್ ದ್ರಾವಣದಿಂದಾಗಿ ಆ್ಯನೋಡ್ ವಸ್ತುವಿನ ನಶಿಸುವಿಕೆ ನಿವಾರಣೆಯಾಯಿತು. ಅಲ್ಲದೆ ಘನಪದಾರ್ಥಗಳನ್ನು ಕ್ಯಾಥೋಡ್ ವಸ್ತುಗಳಾಗಿ ಬಳಸುವುದರಿಂದ ಕೋಶದ ರಚನೆ ಸರಳವೂ ಸುಲಭವೂ ಆಯಿತು. ಈಗ ಬಳಕೆಯಲ್ಲಿರುವ ಪ್ರಧಾನ ವಿದ್ಯುತ್‌ಕೋಶಗಳಲ್ಲಿ ಈ ವಿಧಾನವನ್ನೇ ಅನುಸರಿಸುತ್ತಾರೆ.

ದಿನನಿತ್ಯದ ಬಳಕೆಯ ಪ್ರಧಾನ ವಿದ್ಯುತ್‌ಕೋಶಗಳನ್ನು ರಚಿಸುವುದರಲ್ಲಿ ಅನೇಕ ಬಗೆಯ ಎಲೆಕ್ಟ್ರೋಡುಗಳ ಮತ್ತು ವಿದ್ಯುದ್ವಿಶ್ಲೇಷ್ಯಗಳ ಸಂಯೋಜನೆಯನ್ನು ಪ್ರಯತ್ನಿಸಲಾಯಿತು. ಪ್ರಾಯೋಗಿಕವಾಗಿ ಹಲವಾರು ವಿದ್ಯುತ್‌ಕೋಶಗಳು ಸಮರ್ಪಕವಾಗಿ ಕಂಡುಬರುತ್ತವೆಯಾದರೂ ಸತತವಾದ ಬಳಕೆಗೆ ಕೆಲವು ವಿದ್ಯುತ್‌ಕೋಶಗಳು ಮಾತ್ರವೇ ಸಮರ್ಪಕವಾಗಿವೆ. ಈ ಕೋಶಗಳ ಆಯ್ಕೆಯಲ್ಲಿ ಗಮನಿಸಬೇಕಾದ ಮುಖ್ಯಾಂಶಗಳು: 1 ಕೋಶದ ರಚನೆಗೆ ತಗಲುವ ವೆಚ್ಚ; 2 ಕೋಶದ ಭಾಗಗಳ, ಮುಖ್ಯವಾಗಿ ಎಲೆಕ್ಟ್ರೋಡುಗಳ, ನಶಿಸುವಿಕೆ 3 ಕ್ಯಾಥೋಡುಗಳ ಬಳಿ ಅನಿಲಗಳ ಬಿಡುಗಡೆ; 4 ಕೋಶವನ್ನು ಬಳಸುವುದರಲ್ಲಿ ವಹಿಸಬೇಕಾದ ಎಚ್ಚರಿಕೆ.

ಬಳಕೆಯಲ್ಲಿರುವ ಪ್ರಧಾನ ವಿದ್ಯುತ್‌ಕೋಶಗಳನ್ನು ಮುಖ್ಯವಾಗಿ ಹೀಗೆ ವಿಂಗಡಿಸಬಹುದು: (i) ಆರ್ದ್ರಕೋಶಗಳು (ವೆಟ್ ಸೆಲ್ಸ್); (ii) ಶುಷ್ಕಕೋಶಗಳು (ಡ್ರೈ ಸೆಲ್ಸ್) (iii) ಕಾಯ್ದಿರಿಸುವ ರೀತಿಯ ಕೋಶಗಳು (ರಿಸರ್ವ್ ಟೈಪ್ ಆಫ್ ಸೆಲ್ಸ್); (iv) ಘನ ವಿದ್ಯುದ್ವಿಶ್ಲೇಷ್ಯಕೋಶಗಳು (ಸಾಲಿಡ್ ಎಲೆಕ್ಟ್ರೋಲೈಟ್ ಸೆಲ್ಸ್).

(i)**ಆರ್ದ್ರಕೋಶಗಳು:** ಇವುಗಳಲ್ಲಿ ಮುಖ್ಯವಾದವು ಲೆಕ್ಲಾಂಚೆ ಕೋಶ; ಲೆಲಾಂಡೆ ಕೋಶ ಅಥವಾ ತಾಮ್ರದ ಡೈ ಆಕ್ಸೈಡ್–ಸತುವಿನ ಕೋಶ; ವಾಯುವಿಧ್ರುವೀಕೃತ ಕೋಶ (ಏರ್ ಡೀಪೋಲರೈಸ್ಡ್ ಸೆಲ್).

**ಲೆಕ್ಲಾಂಚೆ ಕೋಶ:** ಕೋಶದ ರಚನೆಯಲ್ಲಿ ಸತುವಿನ ಕ್ಯಾಥೋಡ್, ಘನ ಇಂಗಾಲದ ಆ್ಯನೋಡುಗಳನ್ನೂ ವಿದ್ಯುದ್ವಿಶ್ಲೇಷ್ಯವಾಗಿ ಅಮೋನಿಯಂ ಕ್ಲೋರೈಡ್ ದ್ರಾವಣವನ್ನೂ ವಿಧ್ರುವೀಕಾರಕವಾಗಿ ಮ್ಯಾಂಗನೀಸ್ ಡೈಆಕ್ಸೈಡನ್ನೂ ಉಪಯೋಗಿಸುತ್ತಾರೆ. ಲೆಕ್ಲಾಂಚೆ ಕೋಶದ ವಿದ್ಯುದ್ವಾಹಕ ಶಕ್ತಿ 1.5 ವೋಲ್ಟುಗಳು. ಕೋಶದಿಂದ ಪಡೆಯುವ ವಿದ್ಯುತ್ಪ್ರವಾಹ ಹೆಚ್ಚಿದಂತೆ ಎಲೆಕ್ಟ್ರೋಡುಗಳ ನಡುವಿನ ವಿಭವ ತೀವ್ರವಾಗಿ ಕಡಿಮೆಯಾಗುತ್ತದೆ. ಹೆಚ್ಚಿನ ವಿದ್ಯುತ್ಪ್ರವಾಹವಿರುವಾಗ ಕೋಶದಲ್ಲಿನ ಧ್ರುವೀಕರಣವನ್ನು ಪೂರ್ಣವಾಗಿ ತಡೆಗಟ್ಟಲಾಗದಿರುವುದೇ ಇದಕ್ಕೆ ಕಾರಣ.




ಚಿತ್ರ 6 ಲೆಕ್ಲಾಂಚೆ ಕೋಶ, C–ಆನೋಡ್ (ಘನ ಇಂಗಾಲ), P–ಸಛಿದ್ರ ಪಾತ್ರೆ, E–ವಿದ್ಯುದ್ವಿಶ್ಲೇಷ್ಯ, Z–ಕ್ಯಾಥೋಡ್ (ಘನ ಸತು)

ಕೋಶದಿಂದ ಸತತವಾಗಿ ವಿದ್ಯುತ್ತನ್ನು ಪಡೆಯುವ ಸಂದರ್ಭಗಳಲ್ಲಿ ವಿದ್ಯುತ್ಪ್ರವಾಹದ ಪರಿಮಾಣ ಕಡಿಮೆ ಇರುವಂತೆ (1/1000 ಆಂಪಿಯರು) ನೋಡಿಕೊಳ್ಳುವುದು ಆವಶ್ಯಕ. ಕೋಶ ಸ್ತಬ್ಧವಾಗಿರುವಾಗ (ಅಂದರೆ ಕೋಶದಿಂದ ವಿದ್ಯುತ್‌ಪೂರೈಕೆ ಇಲ್ಲದಿರುವಾಗ) ಈ ಕೋಶದ ಎಲೆಕ್ಟ್ರೋಡುಗಳ ರಚನೆಯಿಂದಾಗಿ ಆ್ಯನೋಡ್ ಮತ್ತು ಕ್ಯಾಥೋಡುಗಳ ನಶಿಸುವಿಕೆ ಇರುವುದಿಲ್ಲ. ಈ ಕಾರಣಗಳಿಂದಾಗಿ ಅಲ್ಪ ವಿದ್ಯುತ್ಪ್ರವಾಹದಿಂದ ಕೆಲಸಮಾಡುವ ಮತ್ತು ನಿರಂತರವಾಗಿ ಉಪಯೋಗದಲ್ಲಿಲ್ಲದ ವಿದ್ಯುದುಪಕರಣಗಳಲ್ಲಿನ ಬಳಕೆಗೆ ಲೆಕ್ಲಾಂಚೆ ಕೋಶ ಉಪಯುಕ್ತವಾಗಿದೆ. ಉದಾಹರಣೆಗೆ ವಿದ್ಯುತ್ ಗಂಟೆಯಂಥ ಸಾಧನಗಳಲ್ಲಿ ಉಪಯೋಗಿಸಿದಾಗ ಲೆಕ್ಲಾಂಚೆ ಕೋಶ ಒಂದು ವರ್ಷಕ್ಕಿಂತಲೂ ಹೆಚ್ಚಾಗಿ ತೊಂದರೆ ಇಲ್ಲದೆ ಕೆಲಸಮಾಡುತ್ತದೆ. ಸುಮಾರು 15–20 ವರ್ಷಗಳಿಂದೀಚೆಗೆ ಬಳಕೆಗೆ ಬಂದಿರುವ ಶುಷ್ಕ ವಿದ್ಯುತ್ ಕೋಶಗಳು ಲೆಕ್ಲಾಂಚೆ ಕೋಶದ ಬಳಕೆಯನ್ನು ಬಹಳಮಟ್ಟಿಗೆ ಇಲ್ಲವಾಗಿಸಿವೆ. ಶುಷ್ಕ ಕೋಶ ಭೌತಿಕವಾಗಿ ಮಾರ್ಪಾಡು ಹೊಂದಿದ ಲೆಕ್ಲಾಂಚೆ ಕೋಶವೇ ಆಗಿದೆ.

**ಲೆಲಾಂಡೆ ಕೋಶ:** ಕೆಲವು ವಿದ್ಯುದುಪಕರಣಗಳ ಬಳಕೆಯಲ್ಲಿ ಅಧಿಕ ಮೊತ್ತದ ವಿದ್ಯುತ್ಪ್ರವಾಹವನ್ನು ದೀರ್ಘಕಾಲ ಒದಗಿಸುವ ಕೋಶಗಳು ಬೇಕಾಗುತ್ತವೆ. (ಉದಾಹರಣೆಗೆ ದೂರವಾಣಿ ಕೇಂದ್ರದಲ್ಲಿ, ರೈಲ್ವೆ, ಗಣಿ, ನೌಕೆ ಇತ್ಯಾದಿಗಳಲ್ಲಿ ಉಪಯೋಗಿಸುವ ಸಂಕೇತಸೂಚಕ ವಿದ್ಯುದ್ದೀಪಗಳಲ್ಲಿ). ಇಂಥ ಸಂದರ್ಭಗಳಲ್ಲಿ ಲೆಲಾಂಡೆ ವಿದ್ಯುತ್‌ಕೋಶ ಅಧಿಕವಾಗಿ ಬಳಕೆಯಲ್ಲಿದೆ. ಈ ಬಗೆಯ ಪ್ರಧಾನ ವಿದ್ಯುತ್‌ಕೋಶವನ್ನು ನಿರ್ಮಿಸಿದವ ಫೆಲಿಕ್ಸ್ ಲೆಲಾಂಡೆ ಎಂಬ ವಿಜ್ಞಾನಿ. ಈ ಕೋಶದ ಸಂಚಯನ ಶಕ್ತಿ 500–1000 ಆ್ಯಂಪಿಯರ್ ಗಂಟೆಗಳಷ್ಟು. ಇದು 0.5–0.7 V ವಿಭವದಲ್ಲಿ 15 Aಗಳಷ್ಟು ವಿದ್ಯುತ್ಪ್ರವಾಹವನ್ನು ಒದಗಿಸಬಲ್ಲುದು. ಕೋಶದ ಆಂತರಿಕ ನಿರೋಧವೂ ಕಡಿಮೆಯಿದ್ದು ಎಲೆಕ್ಟ್ರೋಡ್ ಬಳಿ ನಶಿಸುವಿಕೆಯೇ ಮೊದಲಾದ ಸ್ಥಳೀಯ ಕ್ರಿಯೆಗಳು ಇಲ್ಲದಿರುವುದರಿಂದ ದೀರ್ಘ ಕಾಲದ ಬಳಕೆಗೆ ಈ ಕೋಶ ಉಪಯುಕ್ತ. ಕೋಶದ ರಚನೆಯಲ್ಲಿ ಕಾಸ್ಟಿಕ್ ಸೋಡಾ (ಸೋಡಿಯಂ ಹೈಡ್ರಾಕ್ಸೈಡನ್ನು) ವಿದ್ಯುದ್ವಿಶ್ಲೇಷ್ಯವಾಗಿಯೂ ತಾಮ್ರದ ಆಕ್ಸೈಡನ್ನು ವಿಧ್ರುವೀಕಾರಕವಾಗಿಯೂ ಉಪಯೋಗಿಸುವುದರಿಂದ ಈ ಕೋಶವನ್ನು ಕಾಸ್ಟಿಕ್ ಸೋಡಾ–ತಾಮ್ರದ ಆಕ್ಸೈಡ್ ಕೋಶವೆಂದೂ ಕರೆಯುತ್ತಾರೆ.

**ವಾಯು ವಿಧ್ರುವೀಕೃತ ಕೋಶ:** ಇದು ಎಲ್ಲ ವಿಧದಲ್ಲೂ ಲೆಲಾಂಡೆ ಕೋಶದಂತೆಯೇ ಇದ್ದು ಕ್ಯಾಥೋಡಿನ ರಚನೆಯಲ್ಲಿ ಮಾತ್ರ ಬೇರೆಯಾಗಿದೆ. ಲೆಲಾಂಡೆ ಕೋಶದಲ್ಲಿ ಸತು ತಾಮ್ರದ ಎಲೆಕ್ಟ್ರೋಡುಗಳಿದ್ದರೆ ವಾಯುವಿಧ್ರುವೀಕೃತ ಕೋಶದಲ್ಲಿ ಸತು–ಇಂಗಾಲದ ಎಲೆಕ್ಟ್ರೋಡ್‌ಗಳಿವೆ. ಸತುವಿನ ಅನೋಡನ್ನೂ ಇಂಗಾಲದ ಕ್ಯಾಥೋಡನ್ನೂ ಉಪಯೋಗಿಸಿದಾಗ ಕ್ಯಾಥೋಡಿನ ಬಳಿಯಲ್ಲಿ ಉದ್ಭವಿಸುವ ಧ್ರುವೀಕರಣದ ತೊಂದರೆಯನ್ನು ತಪ್ಪಿಸಲು ವಿಧ್ರುವೀಕಾರಕದ ಬಳಕೆ ಆವಶ್ಯಕ. ವಾಯುವಿಧ್ರುವೀಕೃತ ಕೋಶದಲ್ಲಿ ಹೆಸರೇ ಸೂಚಿಸುವಂತೆ ವಾಯು (ವಾತಾವರಣದಲ್ಲಿನ) ವಿಧ್ರುವೀಕಾರಕವಾಗಿ

ವರ್ತಿಸುತ್ತದೆ. ಈ ಕೋಶದಲ್ಲಿಯೂ ಕಾಸ್ಟಿಕ್ ಸೋಡಾವನ್ನು ವಿದ್ಯುದ್ವಿಶ್ಲೇಷ್ಯವಾಗಿ ಉಪಯೋಗಿಸಿದೆ. ಅನಿಲವನ್ನು ಹೀರುವುದರಲ್ಲಿ ಹೆಚ್ಚು ಕ್ರಿಯಾಶಾಲಿಯಾದ ಪರಿಶುದ್ಧ ಇಂಗಾಲದ ಎಲೆಕ್ಟ್ರೋಡುಗಳನ್ನು ಇಲ್ಲಿ ಉಪಯೋಗಿಸುತ್ತಾರೆ. ಇಂಗಾಲದ ಎಲೆಕ್ಟ್ರೋಡನ್ನು ವಿದ್ಯುದ್ವಿಶ್ಲೇಷ್ಯದೊಳಗೇ ಅಲ್ಲದೆ ದ್ರಾವಣದ ಮೇಲ್ಭಾಗದಲ್ಲೂ ಚಾಚಿದ್ದು ಗಾಳಿಯೊಡನೆ ಸಂಪರ್ಕಗೊಂಡಿರುವಂತೆ ಇರಿಸಿರುತ್ತಾರೆ. ವಿದ್ಯುದ್ವಿಶ್ಲೇಷ್ಯ ಇಂಗಾಲವನ್ನು ನೆನೆಸುವುದಿಲ್ಲವಾದ್ದರಿಂದ ಆ ದ್ರಾವಣ ಇಂಗಾಲದ ಎಲೆಕ್ಟ್ರೋಡ್ ಒಳಗೆ ಪಸರಿಸುವುದಿಲ್ಲ. ಆದರೆ ಹೊರಗಿನ ಗಾಳಿಯಲ್ಲಿರುವ ಆಮ್ಲಜನಕ ಎಲೆಕ್ಟ್ರೋಡ್ ಒಳಗೆ ವ್ಯಾಪಿಸಿರುತ್ತದೆ. ಕೋಶದಲ್ಲಿ ರಾಸಾಯನಿಕಕ್ರಿಯೆ ನಡೆದಾಗ ಇಂಗಾಲದ ಎಲೆಕ್ಟ್ರೋಡಿನ ಹೊರ ಮೈಮೇಲೆ ಶೇಖರವಾಗುವ ಜಲಜನಕದೊಂದಿಗೆ ಆಮ್ಲಜನಕ ಸಂಯೋಗವಾಗುವುದರಿಂದ ನೀರು ಉತ್ಪತ್ತಿಯಾಗಿ ಧ್ರುವೀಕರಣದ ತೊಂದರೆ ತಪ್ಪುತ್ತದೆ. ಕೋಶದಿಂದ 1.1–1.2 ವೋಲ್ಟುಗಳಷ್ಟು ವಿಭವದಲ್ಲಿ ಆ್ಯಂಪಿಯರುಗಳ ವಿದ್ಯುತ್ಪ್ರವಾಹವನ್ನು ತೊಂದರೆಯಿಲ್ಲದೆ ಪಡೆಯಬಹುದು. ಗಾಳಿಯಲ್ಲಿರುವ ಆಮ್ಲಜನಕವನ್ನು ಇಂಗಾಲದ ಎಲೆಕ್ಟ್ರೋಡುಗಳು ಹೀರಿಕೊಳ್ಳಲು ಕಾಲಾವಕಾಶ ಬೇಕಾಗುವುದರಿಂದ ಕೋಶದಿಂದ ವಿದ್ಯುತ್ಪ್ರವಾಹವನ್ನು ಅವಿಚ್ಛಿನ್ನವಾಗಿ ಪಡೆಯಲು ಸಾಧ್ಯವಾಗುವುದಿಲ್ಲ. ಕೋಶ ಸಮರ್ಪಕವಾಗಿ ಕೆಲಸಮಾಡಲು ಇಂಗಾಲದ ಎಲೆಕ್ಟ್ರೋಡುಗಳಿಗೆ ಹೊರಗಿನ ಗಾಳಿಯೊಡನೆ ಅನಿರ್ಬಂಧ ಸಂಪರ್ಕ ಇರಬೇಕು. ಇದಕ್ಕಾಗಿ ಕೋಶದ ಮುಚ್ಚಳದಲ್ಲಿ ಉಸಿರಾಡುವ ರಂಧ್ರಗಳನ್ನು ಇರಿಸಿರುತ್ತಾರೆ. ಕೋಶ ನಿರುಪಯೋಗಸ್ಥಿತಿಗೆ ಬಂದಿರುವುದನ್ನು ಲೆಲಾಂಡೆ ಕೋಶದಲ್ಲಿದ್ದಂತೆ ಆ್ಯನೋಡಿನ ನಶಿಸುವಿಕೆಯಿಂದಾಗಿ ತಿಳಿಯಬಹುದು. ವಾಯುವಿಧ್ರುವೀಕೃತ ಕೋಶವನ್ನು ಮುಖ್ಯವಾಗಿ ರೈಲ್ವೆಯಲ್ಲಿ ಸಂಕೇತದೀಪಗಳನ್ನು ಉರಿಸಲು ಉಪಯೋಗಿಸುತ್ತಾರೆ.



ಚಿತ್ರ 7 ಲೆಲಾಂಡೆ ಕೋಶ, 1. ತೈಲದ ಪೊರೆ, 2 ವಿದ್ಯುದ್ವಿಶ್ಲೇಷ್ಯದ ಮಟ್ಟ, 3 ನಿಷ್ಕಾಸ ಸೂಚಕಗಳು

(ii) **ಶುಷ್ಕಕೋಶಗಳು :** ಹೆಸರು ಸೂಚಿಸುವ ಅರ್ಥದಲ್ಲಿ ಈ ಕೋಶಗಳು ನಿಜವಾದ ಶುಷ್ಕಕೋಶಗಳಲ್ಲ. (ಘನ ವಿದ್ಯುದ್ವಿಶ್ಲೇಷ್ಯ ಕೋಶಗಳ ವಿನಾ ಯಾವ ಕೋಶಗಳೂ ಶುಷ್ಕವಾಗಿ ರುವುದಿಲ್ಲ). ಉಪಯೋಗದ ದೃಷ್ಟಿಯಿಂದ ಆರ್ದ್ರಕೋಶದೊಡನೆ ಹೋಲಿಸಿದಾಗ ಈ ಬಗೆಯ ಕೋಶದಲ್ಲಿನ ರಾಸಾಯನಿಕ ಪದಾರ್ಥಗಳು ಹೊರಚೆಲ್ಲುವುದಿಲ್ಲ; ಮತ್ತು ಕೋಶವನ್ನು ಯಾವ ನಿಲುವಿನಲ್ಲಾದರೂ ಉಪಯೋಗಿಸಬಹುದು. ಆರ್ದ್ರಕೋಶಗಳಲ್ಲಿ ವಿದ್ಯುದ್ವಿಶ್ಲೇಷ್ಯ ದ್ರವರೂಪದಲ್ಲಿದ್ದು ಕೋಶವನ್ನು ಸ್ಥಳಾಂತರಿಸಿದಾಗ ಅಥವಾ ಚಲಿಸಿದಾಗ ದ್ರಾವಣ ಕೋಶದ ಪಾತ್ರೆಯೊಳಗಿನಿಂದ ಹೊರಚೆಲ್ಲುವ ಸಂಭವವಿರುತ್ತದೆ. ಇದನ್ನು ತಪ್ಪಿಸಲು ಆರ್ದ್ರಕೋಶದ ಮುಚ್ಚಳವನ್ನು ಸಾಧ್ಯವಿರುವಂಥ ಕಡೆಗಳಲ್ಲಿ ಶಾಶ್ವತವಾಗಿ ಭದ್ರವಾಗಿ ಮುಚ್ಚುವಂತೆ ಏರ್ಪಾಡು ಮಾಡಿರುತ್ತದೆ. ಆದಾಗ್ಯೂ ಆರ್ದ್ರ ಕೋಶಗಳನ್ನು ಒಂದು ಗೊತ್ತಾದ ನಿಲುವಿನಲ್ಲಿ ಮಾತ್ರವೇ ಉಪಯೋಗಿಸಬೇಕು. ಇಲ್ಲವಾದರೆ ದ್ರಾವಣ ಸ್ಥಳಾಂತರಗೊಂಡು ಕೋಶದ ಸಮರ್ಪಕ ಕೆಲಸಕ್ಕೆ ಅಡ್ಡಿಯುಂಟಾಗುತ್ತದೆ. ಈ ತೊಂದರೆಯನ್ನು ನಿವಾರಿಸಲು ಶುಷ್ಕಕೋಶಗಳಲ್ಲಿ ಉಪಯೋಗಿಸುವ ವಿದ್ಯುದ್ವಿಶ್ಲೇಷ್ಯ ಸ್ಥಳಾಂತರಗೊಳ್ಳಲಾರದಂಥ ಸ್ತಬ್ಧ ಸ್ಥಿತಿಯಲ್ಲಿ ಇರುತ್ತದೆ.



ಚಿತ್ರ 8 ವಾಯುವಿಧ್ರುವೀಕೃತ ಕೋಶ, 1 ಸಚ್ಛಿದ್ರ ಇಂಗಾಲ, 2 ಇಂಗಾಲದ ಎಲೆಕ್ಟ್ರೋಡುಗಳಿರುವ ಪ್ಲಾಸ್ಟಿಕ್ ಭಾಗ, 3 ಸತುವಿನ ತಟ್ಟೆಗಳು, 4 ತೆಗೆಯಬಹುದಾದಂಥ ತೂಗು ತಿರುಪು, 5 ಗಾಳಿಯಾಡಲು ಅವಕಾಶವಾಗುವಂಥ ರಂಧ್ರಗಳು, 6 ತೈಲದ ಪೊರೆ, 7 ವಿದ್ಯುದ್ವಿಶ್ಲೇಷ್ಯದ ಮಟ್ಟ, 8 ರಂಧ್ರಮಾದರಿಯ ನಿಷ್ಕಾಸ ಸೂಚಕಗಳು

ಹಿಂದೆ ವಿವರಿಸಿದ ಲೆಕ್ಲಾಂಚೆ (ಆರ್ದ್ರ) ಕೋಶದ ರಚನೆಯಲ್ಲಿ ಮಾರ್ಪಾಡು ಮಾಡಿದ ಶುಷ್ಕಕೋಶವೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಬಳಕೆಯಲ್ಲಿರುವುದು. ಇದರಲ್ಲಿ ವಿದ್ಯುದ್ವಿಶ್ಲೇಷ್ಯವನ್ನು(ಅಮೋನಿಯಂ ಕ್ಲೋರೈಡ್) ಆ್ಯನೋಡ್ ಮತ್ತು ಕ್ಯಾಥೋಡುಗಳ ನಡುವೆ ಇರಿಸಿದ ದ್ರಾವಣವನ್ನು ಹೀರುವಂಥ ಸಛಿದ್ರ ಪದಾರ್ಥವೊಂದರಲ್ಲಿ ಅಡಗಿಸಿರುತ್ತದೆ. ಈ ವ್ಯವಸ್ಥೆಯಿಂದಾಗಿ ದ್ರಾವಣ ಚೆಲ್ಲಿಹೋಗುವ ಸಂಭವವಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಉದಾಹರಣೆಗೆ, ವಾತಾವರಣದ ಉಷ್ಣತೆ ಅಧಿಕವಾಗಿದ್ದಾಗ ಅಥವಾ ಕೋಶ ನಿರುಪಯೋಗ ಸ್ಥಿತಿಗೆ ಬಂದಾಗ ಕೋಶದಲ್ಲಿನ ರಾಸಾಯನಿಕ ವಸ್ತುಗಳು ವಿಕಾಸಗೊಂಡು ಕೋಶದ ಹೊರಪದರವನ್ನು ಭೇದಿಸಿಕೊಂಡು ಹೊರಕ್ಕೆ ಜಿನುಗಿ ಬರುವ ಸಂಭವವಿರುತ್ತದೆ. ಇದನ್ನು ನಿವಾರಿಸಲು ಕೋಶಗಳನ್ನು ವಿಶೇಷ ಕವಚದಿಂದ ಸುತ್ತಿರುವ ಸೋರದ ರಹಿತ (ಲೀಕ್ ಪ್ರೂಫ್) ಕೋಶಗಳು ಇತ್ತೀಚೆಗೆ ಬಳಕೆಗೆ ಬಂದಿವೆ. ಬಳಕೆಯಲ್ಲಿರುವ ಕೆಲವು ಮುಖ್ಯವಾದ ಶುಷ್ಕಕೋಶಗಳನ್ನು ಇಲ್ಲಿ ವಿವರಿಸಿದೆ.



ಚಿತ್ರ 9 ಶುಷ್ಕಕೋಶದ ವಿವಿಧ ಭಾಗಗಳು : 1 ಉಕ್ಕಿನ ಮೇಲು ಹೊದಿಕೆ, 2 ಉಕ್ಕಿನ ಮೇಲ್ಪಟ್ಟಿ, 3 ಕಾಗದ ಹೊದಿಕೆ, 4 ಪಿಚ್ ಅರಗು, 5 ವಾಯು ಜಾಗ, 6 ಸತುವಿನ ಆನೋಡ್ ಕೊಳವೆ, 7 ಸ್ಟಾರ್ಚ್‌ಫ್ಲೋರ್ ವಿದ್ಯುದ್ವಿಶ್ಲೇಷ್ಯದ ಜೆಲ್ ವಿಂಗಡಕಾರಿ, 8 ಮ್ಯಾಂಗನೀಸ್ ಡೈ ಆಕ್ಸೈಡ್ ಇಂಗಾಲದ ವಿದ್ಯುದ್ವಿಶ್ಲೇಷ್ಯ ಕ್ಯಾಥೋಡ್ ಮಿಶ್ರಣ, 9 ಇಂಗಾಲದ ಸರಳು, 10 ಕಾಗದದ ಕೆಳಗಿನ ತಟ್ಟೆ, 11 ಉಕ್ಕಿನ ಕೆಳತಟ್ಟೆ

**ಲೆಕ್ಲಾಂಚೆ ಮಾದರಿಯ ಕೋಶ** : ಜನರ ನಿತ್ಯಜೀವನದಲ್ಲಿ ಅಧಿಕ ಸಂಖ್ಯೆಯಲ್ಲಿ ಉಪಯೋಗದಲ್ಲಿರುವ ಪ್ರಧಾನ ಕೋಶಗಳಲ್ಲಿ ಈ ಬಗೆಯ ಶುಷ್ಕಕೋಶಗಳಿಗೆ ಪ್ರಮುಖ ಸ್ಥಾನ ಉಂಟು. ಟಾರ್ಚ್ ದೀಪಗಳಲ್ಲಿ ಟ್ರಾನ್ಸಿಸ್ಟರ್ ರೇಡಿಯೋಗಳಲ್ಲಿ, ಮಕ್ಕಳ ಆಟಿಕೆಗಳಲ್ಲಿ ಇನ್ನೂ ಅನೇಕ ವಿಧದಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಲೆಕ್ಲಾಂಚೆ ಶುಷ್ಕಕೋಶವನ್ನು ಪ್ರತಿನಿತ್ಯ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಈ ಕೋಶಗಳು ವರ್ತುಲ ಸ್ತಂಭಾಕೃತಿಯಲ್ಲಿರುತ್ತವೆ. ಇವಲ್ಲದೆ ಚಪ್ಪಟೆಯಾಕಾರದ ಕೋಶಗಳೂ ಬಳಕೆಯಲ್ಲಿವೆ.

ಟ್ರಾನ್ಸಿಸ್ಟರ್ ರೇಡಿಯೋಗಳು ಬಳಕೆಗೆ ಬರುವುದಕ್ಕಿಂತ ಮುಂಚಿತವಾಗಿ ವಿದ್ಯುತ್ ಸರಬರಾಜು ಇಲ್ಲದ ಕಡೆಗಳಲ್ಲಿ ಉಪಯೋಗದಲ್ಲಿದ್ದ ರೇಡಿಯೋ ಸೆಟ್ಟುಗಳು ಕೆಲಸಮಾಡಲು ಬೇಕಾಗಿದ್ದ ಮತ್ತು ಈಗಲೂ ಪ್ರಯೋಗಶಾಲೆಗಳಲ್ಲಿನ ಉಪಯೋಗಕ್ಕಾಗಿ 45–90 ವೋಲ್ಟುಗಳಷ್ಟು ವಿಭವವಿರುವ ಶುಷ್ಕಕೋಶಗಳು ಬೇಕಾಗುತ್ತವೆ. ಈ ಸಂದರ್ಭಗಳಲ್ಲಿ ಕಡಿಮೆ ವಿಭವದ ಹಲವು ಕೋಶಗಳನ್ನು ಜೊತೆಯಾಗಿಟ್ಟು ಒಂದು ಕೋಶದ ಆ್ಯನೋಡನ್ನು ಮುಂದಿನ ಕೋಶದ ಕ್ಯಾಥೋಡಿಗೆ ಜೋಡಿಸಿ(ವೋಲ್ಟಾ ಶ್ರೇಣಿಯಲ್ಲಿ ಇದ್ದಂತೆ) ನಿರ್ಮಿಸಿದ ಕೋಶಾವಳಿಯನ್ನು ಉಪಯೋಗಿಸಬಹುದು. ಸುರಕ್ಷಣೆಗಾಗಿ ಕೋಶಗಳ ಜೋಡಣೆಯನ್ನು ಪೆಟ್ಟಿಗೆಯಲ್ಲಿ ಇಡಬಹುದು. ಇಲ್ಲವೆ ಅವಾಹಕ ವಸ್ತುವಿನಿಂದ(ಉದಾಹರಣೆಗೆ ಮೇಣ, ಬಿಟುಮೆನ್ ಇತ್ಯಾದಿ) ಪೂರ್ತಿಯಾಗಿ ಮುಚ್ಚಿದ ಆವರಣದಲ್ಲಿ ಇಡಬಹುದು. ಇದರಿಂದ ಕೋಶವನ್ನು ಬಾಹ್ಯ ವಾತಾವರಣದ ನೀರಿನ ಆವಿ ಇತ್ಯಾದಿಗಳಿಂದ ರಕ್ಷಿಸಬಹುದು.

(iii) **ಕಾಯ್ದಿರಿಸುವ ರೀತಿಯ ಕೋಶಗಳು :** ಶುಷ್ಕಕೋಶಗಳನ್ನು ತಯಾರಿಸಿದ ಅನಂತರ ಅಗತ್ಯವಿದ್ದಂತೆ ಉಪಯೋಗಿಸುವ ಸೌಕರ್ಯ ಉಂಟು. ಆದರೆ ತಯಾರಿಸಿದ ಮೇಲೆ ಒಂದು ಪರಿಮಿತ ಕಾಲದೊಳಗೆ ಇವನ್ನು ಉಪಯೋಗಿಸಬೇಕು. ಕೋಶ ವಿದ್ಯುತ್ತನ್ನು ಪೂರೈಸದೆ ಸ್ತಬ್ಧವಾಗಿರುವಾಗಲೂ ಅದರ ಆ್ಯನೋಡಿನ ಬಳಿ ನಡೆಯುವ ಸ್ಥಳೀಯ ರಾಸಾಯನಿಕ ಕ್ರಿಯೆಯಿಂದಾಗಿ ಆ್ಯನೋಡ್ ನಶಿಸುತ್ತಿರುತ್ತದೆ. ಅಲ್ಲದೆ ಕೋಶದಲ್ಲಿ ಉಪಯೋಗಿಸಿದ ವಿದ್ಯುದ್ವಿಶ್ಲೇಷ್ಯದ ನೀರಿನ ಭಾಗ ನಿಧಾನವಾಗಿ ಆವಿಯಾಗಿ ಹೊರಬೀಳುವುದರಿಂದ ವಿದ್ಯುದ್ವಿಶ್ಲೇಷ್ಯ ಒಣಗುತ್ತಿರುತ್ತದೆ. ಇದರಿಂದಾಗಿ ಕೋಶವನ್ನು ತಯಾರಿಸಿದ ಕೆಲಕಾಲದ ಅನಂತರ ಅದನ್ನು ಉಪಯೋಗಿಸದೆ ದಾಸ್ತಾನು ಮಾಡಿದ್ದಾಗಲೂ ಅದು ನಿರುಪಯೋಗಿಯಾಗುತ್ತದೆ. ಆದ್ದರಿಂದ ತಯಾರಿಸಿದ ಅನಂತರ ಶುಷ್ಕಕೋಶಗಳಿಗೆ ಗೊತ್ತಾದ ದಾಸ್ತಾನು ಕಾಲದ ಮಿತಿ ಇರುತ್ತದೆ. ಈ ಕಾಲದೊಳಗೆ ಉಪಯೋಗಿಸದೆ ಇಟ್ಟಿದ್ದ ಕೋಶಗಳನ್ನು ಸಹ ನಿರುಪಯೋಗವೆಂದು ಪರಿಗಣಿಸಬೇಕು. ಈ ಕಾರಣದಿಂದಾಗಿ ಅಗತ್ಯವಿರುವೆಡೆಗಳಲ್ಲಿ (ಉದಾಹರಣೆಗೆ ಮಿಲಿಟರಿ ಉಪಯೋಗಕ್ಕೆ ತಯಾರಿಸಿದ ಕೋಶಗಳು) ಕೋಶಗಳ ದಾಸ್ತಾನು ಕಾಲವನ್ನು ಗಮನದಲ್ಲಿಟ್ಟುಕೊಳ್ಳುತ್ತಾರೆ. ಟಾರ್ಚ್ ದೀಪಗಳಲ್ಲಿ

ಉಪಯೋಗಿಸುವ ಕೋಶಗಳನ್ನು ಸುಮಾರು ಒಂದು ವರ್ಷಕಾಲ ದಾಸ್ತಾನು ಮಾಡಬಹುದು. ಆಗಲೂ ಹೆಚ್ಚು ಉಷ್ಣತೆ ಇಲ್ಲದೆಡೆಗಳಲ್ಲಿ ಮಾತ್ರ ಅವನ್ನು ಇಟ್ಟಿರಬೇಕು. ಚಿಕ್ಕ ಗಾತ್ರದ ಕೋಶಗಳ ದಾಸ್ತಾನು ಕಾಲದ ಇಮಿತಿ ಕೆಲವು ತಿಂಗಳು ಮಾತ್ರ. ಶುಷ್ಕ ಕೋಶಗಳನ್ನು ಉಪಯೋಗಿಸುವುದರಲ್ಲಿರುವ ಈ ತೊಂದರೆಯನ್ನು ನಿವಾರಿಸಲು ಕೋಶದ ರಚನೆಯಲ್ಲಿ ಸ್ವಲ್ಪ ಮಾರ್ಪಾಡು ಮಾಡಿದ ಕಾಯ್ದಿರಿಸುವ ಕೋಶಗಳು ಬಳಕೆಗೆ ಬಂದಿವೆ. ಮುಖ್ಯವಾಗಿ ಕೋಶದಲ್ಲಿ ಉಪಯೋಗಿಸುವ ವಿದ್ಯುದ್ವಿಶ್ಲೇಷ್ಯವನ್ನು ಉಪಯೋಗಿಸದೆ ಕೋಶಗಳನ್ನು ತಯಾರಿಸಿ ಕೋಶವನ್ನು ಉಪಯೋಗಿಸುವ ಸಂದರ್ಭ ಒದಗಿದಾಗ ಸ್ವಲ್ಪ ಮುಂಚಿತವಾಗಿ ವಿದ್ಯುದ್ವಿಶ್ಲೇಷ ಶುಷ್ಕಕೋಶದ ದಾಸ್ತಾನುಕಾಲದ ಮಿತಿಗೆ ಕಾರಣವಾಗಿವೆ. ವಿದ್ಯುದ್ವಿಶ್ಲೇಷ್ಯಯುವನ್ನು ಕೋಶಕ್ಕೆ ಸೇರಿಸುವಂಥ ವ್ಯವಸ್ಥೆ ಇರುವುದಾದರೆ ಶುಷ್ಕಕೋಶವನ್ನು ಎಷ್ಟು ಕಾಲದವರೆಗೆ ಬೇಕಾದರೂ ತೊಂದರೆ ಇಲ್ಲದೆ ದಾಸ್ತಾನು ಮಾಡಬಹುದು. ಕಾಯ್ದಿರಿಸುವ ಕೋಶಗಳನ್ನು ಈ ಆಧಾರದ ಮೇರೆಗೆ ರಚಿಸಲಾಗಿದೆ. ಈ ಬಗೆಯ ಕೋಶಗಳನ್ನು ಒಮ್ಮೆ ಕೆಲಸ ಮಾಡುವ (ಒನ್ ಷಾಟ್) ಕೋಶಗಳು ಮತ್ತು ಸಾವಕಾಶ ಪ್ರವೃತ್ತಿಯ (ಡಿಲೇಡ್ ಆ್ಯಕ್ಷನ್) ಕೋಶಗಳು ಎಂದು ಕರೆಯುತ್ತಾರೆ. ಕೋಶವನ್ನು ತಯಾರಿಸಿದಾಗ ಅದು ಜಡವಾಗಿದ್ದು ಅದನ್ನು ಉಪಯೋಗಿಸುವ ಮುಂಚೆ ಕೋಶವನ್ನು ಚೇತನಗೊಳಿಸಲು ವಿದ್ಯುದ್ವಿಶ್ಲೇಷ್ಯವನ್ನು ಸೇರಿಸಬೇಕು. ಈ ಬಗೆಯ ಕೋಶಗಳಲ್ಲಿ ಮೆಗ್ನೀಸಿಯಂ ಸಿಲ್ವರ್ ಕ್ಲೋರೈಡ್ ಕೋಶ ಮತ್ತು ಮೆಗ್ನೀಸಿಯಂ ಕಾಪರ್ ಕ್ಲೋರೈಡ್ ಕೋಶಗಳನ್ನು ಚೇತನಗೊಳಿಸಲು ನೀರನ್ನು ಉಪಯೋಗಿಸುತ್ತಾರೆ. ಈ ಕಾರಣದಿಂದಾಗಿ ಇವೆರಡು ಕೋಶಗಳನ್ನು ನೀರಿನಿಂದ ಚೇತನವಾಗುವ ಕೋಶಗಳೆಂದು ಕರೆಯುತ್ತಾರೆ. ತುರ್ತು ಪರಿಸ್ಥಿತಿಯ ಉಪಯೋಗಕ್ಕಾಗಿ ಇವನ್ನು ಕಾಯ್ದಿರಿಸುತ್ತಾರೆ. ಉದಾಹರಣೆಗೆ ಸಮುದ್ರದ ಮೇಲೆ ಅಪಘಾತಕ್ಕೀಡಾಗಬಹುದಾದ ವೈಮಾನಿಕರು ಮತ್ತು ನಾವಿಕರು ಉಪಯೋಗಿಸುವ ಜೀವರಕ್ಷಣೆಯ ಸಲಕರಣೆಗಳಲ್ಲಿ ರೇಡಿಯೋ ಪ್ರಸಾರಕವೂ ಇರುತ್ತದೆ. ಈ ರೇಡಿಯೊ ಸಲಕರಣೆಯ ಉಪಯೋಗಕ್ಕೆ ಮೇಲಿನ ಕೋಶಗಳನ್ನು ಬಳಸುತ್ತಾರೆ. ಕೋಶ ಕೆಲಸ ಮಾಡುವಷ್ಟು ಕಾಲವೂ ಸ್ಥಿರ ವೋಲ್ಟತೆ ದೊರೆಯುತ್ತದೆ.

(iv) **ಘನ ವಿದ್ಯುದ್ವಿಶ್ಲೇಷ್ಯ ಕೋಶಗಳು :** ಸಾಮಾನ್ಯವಾಗಿ ಲವಣಗಳು ದ್ರಾವಣದಲ್ಲಿ ಕರಗಿ ವಿದ್ಯುದ್ವಿಶ್ಲೇಷ್ಯವಾಗಿ (ಧನ ಮತ್ತು ಋಣ ವಿದ್ಯುದ್ವಾಹಿ ಕಣಗಳಾಗಿ ಬೇರ್ಪಡುವುದು) ವರ್ತಿಸುತ್ತವೆ. ಕೆಲವು ಲವಣಗಳು ಘನರೂಪದಲ್ಲಿರುವಾಗಲೇ ವಿದ್ಯುದ್ವಿಶ್ಲೇಷ್ಯವಾಗಿರುತ್ತವೆ. ಇಂಥ ಘನ ವಿದ್ಯುದ್ವಿಶ್ಲೇಷ್ಯಗಳನ್ನು ಉಪಯೋಗಿಸಿಕೊಂಡು ಕೆಲಸಮಾಡುವ ಕೋಶಗಳಿಗೆ ಘನ ವಿದ್ಯುದ್ವಿಶ್ಲೇಷ್ಯ ಕೋಶಗಳೆಂದು ಹೆಸರು. ಸಿಲ್ವರ್ ಅಯೋಡೈಡ್ ಮತ್ತು ಸಿಲ್ವರ್ ಬ್ರೋಮೈಡ್ ಲವಣಗಳನ್ನು ಘನ ವಿದ್ಯುದ್ವಿಶ್ಲೇಷ್ಯಗಳಾಗಿ ಉಪಯೋಗಿಸುತ್ತಾರೆ. ಲವಣಗಳು ಘನರೂಪದಲ್ಲಿರುವಾಗ ಅವುಗಳಲ್ಲಿನ ವಿದ್ಯುದ್ವಾಹಿ ಕಣಗಳ ಸಂಖ್ಯೆ ಅತ್ಯಲ್ಪವಾದುದರಿಂದ (ದ್ರಾವಣದಲ್ಲಿನ ವಿದ್ಯುದ್ವಾಹಿ ಕಣಗಳ ಸಂಖ್ಯೆಯೊಡನೆ ಹೋಲಿಸಿದಾಗ) ಈ ರೀತಿಯ ಕೋಶಗಳಿಂದ ದೊರೆಯುವ ವಿದ್ಯುತ್ಪ್ರವಾಹ ಕಡಿಮೆ ಇರುತ್ತದೆ. ಈ ಕೋಶಗಳಲ್ಲಿ ಸ್ಥಳೀಯ ಕ್ರಿಯೆಗಳಿಗೆ ಅವಕಾಶ ಇರುವುದಿಲ್ಲ. ಮತ್ತು ವಿದ್ಯುದ್ವಿಶ್ಲೇಷ್ಯ ಒಣಗಿ ಕೋಶ ನಿರುಪಯುಕ್ತವಾಗುವ ತೊಂದರೆ ಇರುವುದಿಲ್ಲ. ಈ ಕೋಶಗಳು ನಿಜವಾದ ಅರ್ಥದಲ್ಲಿ ಶುಷ್ಕಕೋಶಗಳಾಗಿವೆ. ಇವುಗಳ ದಾಸ್ತಾನು ಕಾಲಮಿತಿ ಸಾಮಾನ್ಯವಾಗಿ 10–20 ವರ್ಷಗಳು. ಈ ಬಗೆಯ ಕೋಶಗಳನ್ನು ದೀರ್ಘಕಾಲ ಬಳಕೆಯಲ್ಲಿರುವ ಆದರೆ ಕಡಿಮೆ ವಿದ್ಯುತ್ಪ್ರವಾಹದಿಂದ ಕೆಲಸಮಾಡುವ ಉಪಕರಣಗಳಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಅತ್ಯಗತ್ಯದ ಉಪಕರಣಗಳಲ್ಲಿ ಉಪಯೋಗಿಸುವ ಇತರ ಬಗೆಯ ಕೋಶಗಳು ನಿರುಪಯುಕ್ತವಾದಾಗ ಇವನ್ನು ಬದಲಿಸುವವರೆಗೆ ಕೈಗಾವಲಾಗಿ ಘನ ವಿದ್ಯುದ್ವಿಶ್ಲೇಷ್ಯದ ಕೋಶಗಳನ್ನು ಉಪಯೋಗಿಸುತ್ತಾರೆ.

ಸಿಲ್ವರ್–ಸಿಲ್ವರ್ ಅಯೋಡೈಡ್–ಅಯೊಡಿನ್ ಕೋಶದ ವಿಭವ 0.69 ವೋಲ್ಟ್ ಮತ್ತು ಅದರ ಗರಿಷ್ಠ ವಿದ್ಯುತ್ಪ್ರವಾಹ $20 \times 10^{-6}$ ಆ್ಯಂಪಿಯರ್ (20 ಮೈಕ್ರೊ ಆ್ಯಂಪಿಯರ್).ಬಳಕೆಯಲ್ಲಿರುವ ಮತ್ತೊಂದು ಕೋಶ ಸಿಲ್ವರ್–ಸಿಲ್ವರ್ ಬ್ರೋಮೈಡ್–ಕಾಪರ್ ಬ್ರೋಮೈಡ್ ಕೋಶ. ಇದರ ಗಾತ್ರ 1" X 1", ತೂಕ 0.15 ಔನ್ಸ್, ವಿಭವ 0.95 ವೋಲ್ಟ್. ಇದು 1 ಕೂಲಂಬ್ ವಿದ್ಯುತ್ತನ್ನು ಒದಗಿಸಬಲ್ಲುದು. 8 ಮೈಕ್ರೊ ಆ್ಯಂಪಿಯರುಗಳ ಕ್ಷಣಿಕ ವಿದ್ಯತ್ಪ್ರವಾಹವನ್ನು ಇದು ಕೊಡುತ್ತದೆ.

2. **ದ್ವಿತೀಯಕ ವಿದ್ಯುತ್‌ಕೋಶಗಳು ಅಥವಾ ವಿದ್ಯುತ್ ಸಂಚಯನ ಕೋಶಗಳು:** ಹೆಚ್ಚಿನ ವಿದ್ಯುತ್ಪ್ರವಾಹದ ಆವಶ್ಯಕತೆ ಇರುವೆಡೆಗಳಲ್ಲಿ ಇಂಥ ಕೋಶಗಳನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ಕೆಲವು ಆ್ಯಂಪಿಯರ್–ಗಂಟೆಗಳಿಂದ 1,000 ಆ್ಯಂಪಿಯರ್–ಗಂಟೆಗಳಷ್ಟು ವಿದ್ಯುತ್ ಪ್ರವಾಹವನ್ನು ಕೊಡಬಲ್ಲ ಕೋಶಗಳು ಈ ಬಗೆಯ ಕೋಶಗಳಲ್ಲಿ ಬಳಕೆಯಲ್ಲಿವೆ. ದ್ವಿತೀಯಕ ಕೋಶಗಳಲ್ಲಿ ಉಪಯೋಗಿಸುವ ವಿದ್ಯುದ್ವಿಶ್ಲೇಷದ ಪ್ರಕಾರ ಇದನ್ನು ಎರಡು ಮುಖ್ಯ ಪಂಗಡಗಳನ್ನಾಗಿ ವಿಂಗಡಿಸಬಹುದು: (1) ಆಮ್ಲ ಸಂಚಯನ ಕೋಶಗಳು : (2) ಕ್ಷಾರ ಸಂಚಯನ ಕೋಶಗಳು.

(1) **ಆಮ್ಲ ಸಂಚಯನ ಕೋಶಗಳು :** ಇವನ್ನು ಸೀಸ–ಆಮ್ಲ ಸಂಚಯನ ಕೋಶಗಳೆಂದೂ ಕರೆಯುವುದುಂಟು. ಕೋಶಗಳ ಉಪಯೋಗದ ದೃಷ್ಟಿಯಿಂದಾಗಿ ಇವುಗಳಲ್ಲಿ ಮೂರು ಮುಖ್ಯ ಬಗೆಗಳಿವೆ. ಸ್ವಯಂಚಾಲಿತ ವಾಹನಗಳಲ್ಲಿ ಆರಂಭದ ಚಲನೆಯನ್ನು ಉಂಟುಮಾಡುವುದಕ್ಕೆ ಉಪಯೋಗಿಸುವ ಕೋಶಗಳು; 2. ಚಾಲಕಶಕ್ತಿಗಾಗಿ ಉಪಯೋಗಿಸುವ ಕೋಶಗಳು; 3. ಸ್ಥಿರ ಉಪಯೋಗಕ್ಕಾಗಿ ತಯಾರಿಸಿದ ಕೋಶಗಳು. ಈ ಮೂರು ಬಗೆಯ ಕೋಶಗಳಲ್ಲೂ ಉಪಯೋಗಿಸುವ ರಾಸಾಯನಿಕ ಪದಾರ್ಥಗಳು ಮತ್ತು ಕೋಶದಲ್ಲಿ ನಡೆಯುವ ರಾಸಾಯನಿಕ ಕ್ರಿಯೆ ಒಂದೇ ಆಗಿದ್ದು ಕೋಶದ ರಚನೆಯಲ್ಲಿ ಮತ್ತು ಉಪಯೋಗಿಸಿದ ರಾಸಾಯನಿಕ ಪದಾರ್ಥಗಳ ಮೊತ್ತದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. ಕೋಶದ ವಿಭವ 1.95–2.05 ವೋಲ್ಟುಗಳು.

**ಕೋಶದ ರಚನೆ :** ಪ್ರಧಾನ ವಿದ್ಯುತ್‌ಕೋಶಗಳೊಡನೆ ಹೋಲಿಸಿದಾಗ ಸಂಚಯನ ಕೋಶ ಹೆಚ್ಚಿನ ಮೊತ್ತದ ವಿದ್ಯುತ್ಪ್ರವಾಹವನ್ನು ಒದಗಿಸುವುದರ ಕಾರಣ ಇವುಗಳಲ್ಲಿ ವಿಶೇಷ ರೀತಿಯಲ್ಲಿ ರಚಿಸಿದ ಎಲೆಕ್ಟ್ರೋಡುಗಳ ಉಪಯೋಗ ಉಂಟು. ಸಂಚಯನ ಕೋಶದ ಎಲೆಕ್ಟ್ರೋಡುಗಳಿಗೆ ತಟ್ಟೆಗಳೆಂದು ಹೆಸರು. ಎಲೆಕ್ಟ್ರೋಡಿನ ಪದಾರ್ಥಗಳಾದ Pb ಮತ್ತು $PbO_2$ ಗಳನ್ನು ಹೆಚ್ಚಿನ ಮೊತ್ತದಲ್ಲಿ ಉಪಯೋಗಿಸುವುದರಿಂದ ಕೋಶದ ವಿದ್ಯುತ್ಪ್ರವಾಹವನ್ನು ಹೆಚ್ಚಿಸಬಹುದು. ಇದಕ್ಕಾಗಿ ಕ್ರಿಯಾಶಾಲಿ ಪದಾರ್ಥಗಳನ್ನು ತಟ್ಟೆಯ ರೀತಿಯಲ್ಲಿ ರಚಿಸುವುದರಿಂದ ಆಮ್ಲ ಮತ್ತು ಕ್ರಿಯಾಶಾಲಿ ಪದಾರ್ಥಗಳ ಸಂಪರ್ಕ ಹೆಚ್ಚಾಗುತ್ತದೆ. ತಟ್ಟೆಗಳ ವಿಸ್ತೀರ್ಣ ಮತ್ತು ಗಾತ್ರ ಜಾಸ್ತಿ ಇದ್ದಷ್ಟೂ ಕೋಶದ ವಿದ್ಯುತ್ ಸಂಚಯನ ಶಕ್ತಿ ಹೆಚ್ಚು ಇರುತ್ತದೆ. ಕ್ರಿಯಾಶಾಲಿ ಪದಾರ್ಥಗಳಾದ Pb ಮತ್ತು $PbO_2$ಗಳನ್ನೇ(ಇವುಗಳ ಭೌತಗುಣಗಳಿಂದಾಗಿ) ತಟ್ಟೆಯ ರೀತಿಯಲ್ಲಿ ರಚಿಸಲು ಸಾಧ್ಯವಿಲ್ಲವಾದ್ದರಿಂದ ಆಧಾರಕ್ಕಾಗಿ ಲೋಹದ ಚೌಕ ಜಾಲರಿಗಳನ್ನು ಉಪಯೋಗಿಸುತ್ತಾರೆ. ಜಾಲರಿಯ ಚೌಕ ಸಂದುಗಳಲ್ಲಿ Pb ಮತ್ತು $PbO_2$ ಗಳನ್ನು ಅಳವಡಿಸುತ್ತಾರೆ. ಈ ಜಾಲರಿಯ ಮೂಲಕವೇ ಧನ ಮತ್ತು ಋಣ ಎಲೆಕ್ಟ್ರೋಡುಗಳು ಬಾಹ್ಯಮಂಡಲದೊಂದಿಗೆ ವಿದ್ಯುತ್ ಸಂಪರ್ಕವನ್ನು ಪಡೆದಿರುವುದು. ಅನೇಕ ಜಾಲರಿಗಳ ಒಟ್ಟು ಜೋಡಣೆಯ ಸಂಘಟಿತ ಎಲೆಕ್ಟ್ರೋಡುಗಳು ಕೋಶದ ಧನ ಮತ್ತು ಋಣ ಎಲೆಕ್ಟ್ರೋಡುಗಳಾಗಿರುತ್ತವೆ. ಜಾಲರಿಗಳನ್ನು ಪರಿಶುದ್ಧವಾದ ಸೀಸದೊಂದಿಗೆ 5%–12% ಆಂಟಿಮೊನಿ ಮತ್ತು 0.5% ತವರವನ್ನು ಬೆರೆಸಿದ ಮಿಶ್ರಲೋಹದಿಂದ ಎರಕ ಹೊಯ್ದು ತಯಾರಿಸುತ್ತಾರೆ. ಅತಿ ಮೃದುವಾಗಿರುವ ಸೀಸ ಆಂಟಿಮೊನಿಯ ಮಿಶ್ರಣದಿಂದಾಗಿ ಗಡುಸಾಗಿರುತ್ತದೆ. ಸೀಸದಿಂದ ಜಾಲರಿಗಳನ್ನು ತಯಾರಿಸುವುದರಿಂದ ಎಲೆಕ್ಟ್ರೋಡುಗಳು ಸಲ್ಫ್ಯೂರಿಕ್ ಆಮ್ಲದಲ್ಲಿ ಹೆಚ್ಚುಕಾಲ ನಶಿಸದೆ ಇರಬಲ್ಲವು. ತವರ ತುಕ್ಕುಹಿಡಿಯುವಿಕೆಯನ್ನು ತಡೆಯುತ್ತದೆ.

ಜಾಲರಿಗಳಿಂದ ಎಲೆಕ್ಟ್ರೋಡುಗಳನ್ನು ರಚಿಸುವುದರಲ್ಲಿ ಎರಡು ಮುಖ್ಯ ವಿಧಾನಗಳನ್ನು ಅನುಸರಿಸುತ್ತಾರೆ. 1. ಪ್ಲಾಂಟೆ ವಿಧಾನ 2. ಫಾರೆ ವಿಧಾನ.

ಫಾರೆ ವಿಧಾನದ ತಟ್ಟೆಗಳು ಪ್ಲಾಂಟೆ ವಿಧಾನದ ತಟ್ಟೆಗಳಿಗಿಂತ ಹಗುರ ಮತ್ತು ಕೋಶದ ವಿದ್ಯುತ್ ಸಂಚಯನವನ್ನು ಹೆಚ್ಚಿಸುತ್ತವೆ. ಆದರೆ ಫಾರೆ ತಟ್ಟೆಗಳಲ್ಲಿ ಕ್ರಿಯಾಶಾಲಿ ಪದಾರ್ಥಗಳು ಜಾಲರಿಯಿಂದ ಕಳಚಿ ಬೀಳುವ ಸಂಭವವಿದ್ದು ಕೋಶ ಈ ಕಾರಣದಿಂದಾಗಿಯೂ ನಿರುಪಯೋಗವಾಗುತ್ತದೆ. ಪ್ಲಾಂಟೆ ವಿಧಾನದಲ್ಲಿ ಸೀಸದ ಜಾಲರಿಯ ಮೇಲ್ಮೈ ಮೇಲೆ ವಿದ್ಯುದ್ರಾಸಾಯನಿಕಕ್ರಿಯೆಗಳಿಂದ ಕ್ರಿಯಾಕಾರಿ ಪದಾರ್ಥಗಳನ್ನು ತೆಳುವಾದ ಪದರದ ರೀತಿಯಲ್ಲಿ ಉಂಟುಮಾಡುತ್ತಾರೆ. ಈ ಕ್ರಿಯೆಯಲ್ಲಿ ಬೇಕಾಗುವ ಸೀಸವನ್ನು ಜಾಲರಿಯೇ ಒದಗಿಸುತ್ತದೆ. ಜಾಲರಿಯ ಮೇಲೆ ಉಂಟಾಗುವ ಕ್ರಿಯಾಕಾರಿ ಪದಾರ್ಥಗಳ ಮೊತ್ತ ಜಾಲರಿಯ ಮೇಲ್ಮೈ ಮೇಲೆ ಸಿಕ್ಕುವ ಒಟ್ಟು ಸ್ಥಳದ ವಿಸ್ತೀರ್ಣವನ್ನು ಅವಲಂಬಿಸಿರುವುದರಿಂದ ವಿಶೇಷ ರೀತಿಯಲ್ಲಿ ಜಾಲರಿಗಳನ್ನು ತಯಾರಿಸಿರುತ್ತಾರೆ.

ಜಾಲರಿಯಲ್ಲಿ ಕಿವಿರುಗಳಿರುವಂತೆ ರಚಿಸುವುದರಿಂದ ವಿದ್ಯುದ್ರಾಸಾಯನಿಕಕ್ರಿಯೆಯಲ್ಲಿ ಹೆಚ್ಚಿನ ಮೊತ್ತದಲ್ಲಿ ಕ್ರಿಯಾಶಾಲಿ ಪದಾರ್ಥಗಳು ಉಂಟಾಗುತ್ತವೆ. ಪ್ಲಾಂಟೆ ತಟ್ಟೆಗಳನ್ನು ರಾಸಾಯನಿಕಕ್ರಿಯೆಗೆ ಒಳಪಡಿಸಿದಾಗ ತಟ್ಟೆಗಳಲ್ಲಿನ ಶುದ್ಧ ಸೀಸ ಸೀಸದ ಪೆರಾಕ್ಸೈಡ್ ಆಗಿ ಪರಿವರ್ತಿತವಾಗಿ ಕೋಶದ ಧನಧ್ರುವದ ತಟ್ಟೆಗಳು ತಯಾರಾಗುತ್ತವೆ. ಈ ತಟ್ಟೆಗಳನ್ನು ಪುನಃ ರಾಸಾಯನಿಕಕ್ರಿಯೆಗೆ (ವಿಪರ್ಯಯ) ಒಳಪಡಿಸಿ ತಟ್ಟೆಯಲ್ಲಿನ ಸೀಸದ ಪೆರಾಕ್ಸೈಡನ್ನು ಪರಿಶುದ್ಧ ಸೀಸವನ್ನಾಗಿ ಪರಿವರ್ತಿಸಿ ಕೋಶದ ಋಣ ಧ್ರುವದ ತಟ್ಟೆಗಳನ್ನು ತಯಾರಿಸುತ್ತಾರೆ.

ಪ್ಲಾಂಟೆ ಧನದ್ರುವದ ತಟ್ಟೆಯಲ್ಲಿ ಸೀಸವೆಲ್ಲವೂ ಸೀಸದ ಪೆರಾಕ್ಸೈಡ್ ಆಗಿರದೆ ತಟ್ಟೆಯು ಸೀಸದ ಮೇಲೆ ಕಚ್ಚಿ ನಿಂತಿರುವ ಸೀಸದ ಪೆರಾಕ್ಸೈಡ್ ಪದರವಿರುತ್ತದೆ. ಕೋಶವನ್ನು ಅನೇಕಾವರ್ತಿ ವಿದ್ಯುತ್ ಪೂರೈಕೆ, ಸಂಚಯನಗಳಲ್ಲಿನ ರಾಸಾಯನಿಕ ಕ್ರಿಯೆಗೆ ಒಳಪಡಿಸಿದಾಗ ಸೀಸದ ಪೆರಾಕ್ಸೈಡ್ ವಸ್ತು ಘನಗಾತ್ರದಲ್ಲಿ ವ್ಯತ್ಯಾಸಹೊಂದುತ್ತದೆ.

ಇದರಿಂದಾಗಿ ಪೆರಾಕ್ಸೈಡ್ ಪದರದ ಕೆಳಭಾಗದ ಸೀಸ ಗಾತ್ರದಲ್ಲಿ ಹೆಚ್ಚಾಗುವುದರಿಂದ ಕ್ರಮೇಣವಾಗಿ ಪ್ಲಾಂಟೆ ತಟ್ಟೆಗಳ ವಿಸ್ತೀರ್ಣ ಏರುತ್ತದೆ. ಪ್ಲಾಂಟೆ ತಟ್ಟೆಗಳನ್ನು ಅಳವಡಿಸಿ



ಚಿತ್ರ 10ಎ ಫಾರೆ ವಿಧಾನದ ಅಂಟಿಸಿದ ತಟ್ಟೆಗಳ ಮೂರು ಮಾದರಿಗಳು

ಕೋಶವನ್ನು ರಚಿಸಿದ ಅನಂತರ ತಟ್ಟೆಗಳ ಗಾತ್ರ ವಿಕಾಸವನ್ನು ತಕ್ಕರೀತಿಯಲ್ಲಿ ಸರಿದೂಗಿಸದಿದ್ದರೆ ತಟ್ಟೆಗಳ ಉದ್ದ ಅಗಲಗಳು ವ್ಯತ್ಯಾಸವಾಗಿ ತಟ್ಟೆಗಳು ಡೊಂಕಾಗುವುದರಿಂದ ತೊಂದರೆ ಉಂಟಾಗುತ್ತದೆ. ಸೀಸದ ಗಾತ್ರ ವಿಕಾಸವಾಗುವುದು ಕ್ರಿಯಾಕಾರಿ ಪದಾರ್ಥಗಳಿರುವ ಕಿವಿರುಗಳ ಮೇಲೆ. ಈ ಕಿವಿರುಗಳನ್ನು ತಟ್ಟೆಯ ಉದ್ದ ಅಗಲಗಳಿಗೆ



ಚಿತ್ರ 10ಬಿ ಪ್ಲಾಂಟೆ ವಿಧಾನದ ತಟ್ಟೆಗಳ ಭಿನ್ನ ಮಾದರಿಗಳು

ಲಂಬವಾಗಿರುವಂತೆ (ತಟ್ಟೆಯ ದಪ್ಪದ ದಿಕ್ಕಿನಲ್ಲಿ) ನಿಲ್ಲಿಸುವುದರಿಂದ ತಟ್ಟೆಯ ಗಾತ್ರ ವಿಕಾಸವಾದಾಗ ತಟ್ಟೆ ಹೆಚ್ಚು ದಪ್ಪವಾಗುತ್ತದೆ. ಇದರಿಂದಾಗಿ ತಟ್ಟೆಯ ಉದ್ದ ಅಗಲ ಸ್ಥಿರವಾಗಿರುತ್ತದೆ.

ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದ ತೊಟ್ಟಿಯಲ್ಲಿ ತಟ್ಟೆಗಳನ್ನು ಮುಳುಗಿಸಿ ಇವುಗಳ ಮೂಲಕ ವಿದ್ಯುತ್ತನ್ನು ಒಂದು ದಿಕ್ಕಿನಲ್ಲಿ ಪ್ರವಹಿಸಿದಾಗ ತಟ್ಟೆಯ ಮೇಲೆ ಸೀಸದ ಪೆರಾಕ್ಸೈಡ್ ($PbO_2$)ಉಂಟಾಗಿ ಧನಧ್ರುವದ ತಟ್ಟೆಗಳು ತಯಾರಾಗುತ್ತವೆ. ತಟ್ಟೆಗಳ ಮೂಲಕ ವಿದ್ಯುತ್ತನ್ನು ವಿರುದ್ಧ ದಿಕ್ಕಿನಲ್ಲಿ ಪ್ರವಹಿಸಿದಾಗ ಪರಿಶುದ್ಧ ಸೀಸ (ಸ್ಪಾಂಜ್ ಸೀಸ) ಉಂಟಾಗಿ ಋಣಧ್ರುವದ ತಟ್ಟೆಗಳು ತಯಾರಾಗುತ್ತವೆ. ಸಾಮಾನ್ಯವಾಗಿ ಏಕಕಾಲದಲ್ಲಿ ವಿದ್ಯುತ್ತನ್ನು ಸೂಕ್ತ ದಿಕ್ಕಿನಲ್ಲಿ ಪ್ರವಹಿಸುವುದರ ಮೂಲಕ ಧನ ಮತ್ತು ಋಣ ಧ್ರುವದ ತಟ್ಟೆಗಳನ್ನು ತಯಾರಿಸುತ್ತಾರೆ. ಋಣಧ್ರುವದ ತಟ್ಟೆಗಳಲ್ಲಿನ ಸ್ಪಾಂಜ್‌ಸೀಸ ಬಳಕೆಯಲ್ಲಿರುವಾಗ ಕ್ರಮೇಣವಾಗಿ ಕುಗ್ಗುತ್ತದೆ. ಇದನ್ನು ತಡೆಗಟ್ಟಲು ಋಣ ಎಲೆಕ್ಟ್ರೋಡ್ ತಟ್ಟೆಗಳ ಕಣಿಕದ ಮಿಶ್ರಣಕ್ಕೆ ರಾಸಾಯನಿಕವಾಗಿ ಜಡವಾಗಿರುವ ವಸ್ತುವನ್ನು ಬೆರೆಸುತ್ತಾರೆ. ಸಾಮಾನ್ಯವಾಗಿ ಈ ವಸ್ತು ದೀಪದ ಕಪ್ಪು(ಇಂಗಾಲ) ಮತ್ತು ಬೇರಿಯಂ ಸಲ್ಫೇಟ್ ಮಿಶ್ರಣ. ಈ ಮಿಶ್ರಣ ಸ್ಪಾಂಜ್ ಸೀಸದಂತೆ ಕುಗ್ಗುವುದಿಲ್ಲವಾದ್ದರಿಂದ ಕಣಿಕ ಜಾಲರಿಯಲ್ಲಿ ಭದ್ರವಾಗಿ ನಿಂತಿರುತ್ತದೆ.

ಕಬ್ಬಿಣದ ಹೊದಿಕೆಯ ತಟ್ಟೆಗಳಲ್ಲಿ ಸಮಾಂತರವಾಗಿ ಇರಿಸಿದ ಎರಡು ಸರಳುಗಳ ನಡುವೆ (ಎರಡು ಸರಳುಗಳೂ ಮಿಶ್ರಲೋಹದ್ದಿರಬಹುದು ಇಲ್ಲವೆ ಮೇಲಿನದು ಮಿಶ್ರಲೋಹದ್ದಾಗಿದ್ದು ಕೆಳಗಿನದು ಪ್ಲಾಸ್ಟಿಕ್‌ನಿಂದ ಮಾಡಿರಬಹುದು) ಹಿಡಿದು ನಿಂತಿರುವಂತೆ ಮಿಶ್ರಲೋಹದ ಕಡ್ಡಿಗಳನ್ನು ಲಂಬವಾಗಿ ಒಂದಕ್ಕೊಂದು ಸಮಾಂತರವಾಗಿರುವಂತೆ ಜೋಡಿಸುತ್ತಾರೆ. ಲಂಬದ ಕಡ್ಡಿಗಳನ್ನು ಸುತ್ತಿರುವಂತೆ ಸ್ತಂಭಾಕೃತಿಯ ಟೊಳ್ಳಾದ ಪಾಲಿಸ್ಟೈರಿನ್ ಕೊಳವೆಯನ್ನಿರಿಸಿ ಕಡ್ಡಿಗಳ ಮತ್ತು ಕೊಳವೆಯ ನಡುವಿನ ಜಾಗವನ್ನು ಕ್ರಿಯಾಶಾಲಿಪದಾರ್ಥದ ಕಣಿಕದಿಂದ ತುಂಬಿಸುತ್ತಾರೆ. ಪಾಲಿಸ್ಟೈರಿನ್ ಕೊಳವೆಯ ಉದ್ದಕ್ಕೂ ಸಮಾಂತರ ದೂರದಲ್ಲಿ ರಂಧ್ರಗಳಿದ್ದು ಈ ರಂಧ್ರಗಳ ಮೂಲಕವಾಗಿ ಕೋಶದ ವಿದ್ಯುದ್ವಿಶ್ಲೇಷ್ಯ ಕ್ರಿಯಾಶಾಲಿ ಪದಾರ್ಥಗಳೊಂದಿಗೆ ಸಂಪರ್ಕ ಪಡೆದಿರುತ್ತದೆ.

ಈ ಹಲವು ವಿಧಾನಗಳಲ್ಲಿ ಯಾವುದೇ ವಿಧಾನದಿಂದ ತಟ್ಟೆಗಳನ್ನು ತಯಾರಿಸಿದರೂ ತಟ್ಟೆಗಳ ಒಂದು ತುದಿಯಲ್ಲಿ ಲೋಹದ ಚಾಚಿದ ಭಾಗವಿರುವಂತೆ ಜಾಲರಿಯನ್ನು ತಯಾರಿಸಿರುತ್ತಾರೆ. ಕೋಶದೊಳಗೆ ಎಲೆಕ್ಟ್ರೋಡ್ ತಟ್ಟೆಗಳನ್ನು ಸಮಾಂತರವಾಗಿಟ್ಟು ತಟ್ಟೆಗಳ ಚಾಚಿದ ಭಾಗವನ್ನು ಸೇರಿಸಿ ಹಿಡಿಯುವಂತೆ ಲೋಹದ ಪಟ್ಟಿಯೊಂದನ್ನು ಕೂಡಿಸುತ್ತಾರೆ. ಇದಕ್ಕೆ ಸೇರಿದಂತಿರುವ ಲೋಹದ ಸಂಬಂಧಕ (ತಿರುಪು) ವಿದ್ಯುತ್‌ಕೋಶವನ್ನು ಬಾಹ್ಯ ಪರಿಧಿಗೆ ಸೇರಿಸುವ ಎಲೆಕ್ಟ್ರೋಡ್ ಆಗಿ ಉಪಯೋಗವಾಗುತ್ತದೆ. ಕೋಶದಲ್ಲಿ ಎಲೆಕ್ಟ್ರೋಡುಗಳನ್ನು ಜೋಡಿಸಿದಾಗ ಧನ ಮತ್ತು ಋಣ ಎಲೆಕ್ಟ್ರೋಡ್ ತಟ್ಟೆಗಳು ಸಮಾಂತರವಾಗಿ ಒಂದರ ತರುವಾಯ ಮತ್ತೊಂದು ಆದರೆ ಒಂದಕ್ಕೊಂದು ತಗಲದಂತೆ ಇರುತ್ತವೆ. ತಟ್ಟೆಗಳ ಮಧ್ಯದ ಜಾಗದಲ್ಲಿ ವಿದ್ಯುದವಾಹಕದ ಸಚ್ಛಿದ್ರ ತೆರೆಗಳನ್ನಿಡುವುದರಿಂದ ಧನ ಮತ್ತು ಋಣ ಎಲೆಕ್ಟ್ರೋಡುಗಳು ಆಕಸ್ಮಿಕವಾಗಿ ತಗಲುವ ಸಂಭವವಿರುವುದಿಲ್ಲ. ಈ ಸಛಿದ್ರ ತೆರೆಗಳ ಮೂಲಕ ವಿದ್ಯುದ್ವಿಶ್ಲೇಷ್ಯ ಸರಾಗವಾಗಿ ಎಲೆಕ್ಟ್ರೋಡುಗಳೊಡನೆ ಸಂಪರ್ಕಗೊಂಡಿರುತ್ತದೆ. ತೆರೆಗಳನ್ನು ಮರ, ರಬ್ಬರ್, ಪ್ಲಾಸ್ಟಿಕ್‌ನಿಂದಾಗಲಿ ಇಲ್ಲವೆ ಗಾಜಿನ ಎಳೆಗಳಿಂದಾಗಲಿ ತಯಾರಿಸುತ್ತಾರೆ.

ಸ್ಟೇಷನರಿ ಕೋಶ

ಕೋಶದ ಪಾತ್ರೆಯನ್ನು ಸಾಮಾನ್ಯವಾಗಿ ಗಾಜು, ಗಡಸು ರಬ್ಬರ್, ಕಪ್ಪುರಾಳ ಅಥವಾ ಪ್ಲಾಸ್ಟಿಕ್‌ನಿಂದ ತಯಾರಿಸುತ್ತಾರೆ. ಸಾಮಾನ್ಯವಾಗಿ ಇವು ಚೌಕಾಕಾರದಲ್ಲಿರುತ್ತವೆ. ಕೋಶಗಳನ್ನು ಸ್ಥಳಾಂತರಿಸದೆ ಒಂದೇ ಕಡೆ ಉಪಯೋಗಿಸುವಂಥ ಕೋಶಗಳನ್ನು ಗಾಜಿನಿಂದ ತಯಾರಿಸುತ್ತಾರೆ. ಗಾಜಿನ ಪಾರದರ್ಶಕತೆ, ಬಾಳಿಕೆ ಮತ್ತು ಕಡಿಮೆ ಬೆಲೆ ಇವುಗಳ ಉಪಯುಕ್ತತೆಗೆ ಕಾರಣವಾಗಿದೆ. ವಾಹನಗಳಲ್ಲಿ ಉಪಯೋಗಿಸುವ ಕೋಶದ ಪಾತ್ರೆಗಳನ್ನು ಸಾಧಾರಣವಾಗಿ ಗಡಸು ರಬ್ಬರಿನಿಂದ ತಯಾರಿಸುತ್ತಾರೆ. ಇತ್ತೀಚೆಗೆ ಪ್ಲಾಸ್ಟಿಕ್‌ನಿಂದ ತಯಾರಾದ ಕೋಶದ ಪಾತ್ರೆಗಳು ಉಪಯೋಗಕ್ಕೆ ಬರುತ್ತಿವೆ. ಕೋಶವನ್ನು ಸ್ಥಳಾಂತರಿಸುವಾಗ ವಿದ್ಯುದ್ವಿಶ್ಲೇಷ್ಯ ತುಳುಕಾಟದಲ್ಲಿ ಚೆಲ್ಲಿ ಹೋಗದಂತಿರಲು ಕೋಶದ ಬಾಯಿಯನ್ನು ಪ್ಲಾಸ್ಟಿಕ್‌ನಂಥ ಬಿಟುಮಿನ್ ಪದಾರ್ಥದಿಂದ ಭದ್ರವಾಗಿ ಮುಚ್ಚಿರುತ್ತಾರೆ. ಈ ಮುಚ್ಚಳದಲ್ಲಿ ಎಲೆಕ್ಟ್ರೋಡುಗಳಿಗೆ ಸಂಬಂಧಿಸಿರುವ ತಿರುಪುಗಳನ್ನು ಅಳವಡಿಸಿರುತ್ತಾರೆ. ಕೋಶದಲ್ಲಿ ನೀರು ಅಥವಾ ವಿದ್ಯುದ್ವಿಶ್ಲೇಷ್ಯವನ್ನು ತುಂಬಲು ಅನುಕೂಲವಾಗುವಂತೆ ತಿರುಪಿನಿಂದ ಬಂಧಿಸಲು ಸಾಧ್ಯವಿರುವ ರಂಧ್ರವನ್ನೂ ಮುಚ್ಚಳದಲ್ಲಿ ಇಟ್ಟಿರುತ್ತದೆ.

ಈ ರಂಧ್ರಮೂಲಕವಾಗಿಯೇ ದ್ರಾವಣದ ಸಾಪೇಕ್ಷ ಸಾಂದ್ರತೆಯನ್ನು ಅಳೆಯುವ ಗುರುತ್ವಮಾಪಿಯ ರಬ್ಬರ್ ಕೊಳವೆಯನ್ನು ಕೋಶದೊಳಕ್ಕೆ ಇಳಿಬಿಡುವುದು. ಕೋಶದಲ್ಲಿ ಬಿಡುಗಡೆಯಾಗಬಹುದಾದ ಅನಿಲಗಳು ಹೊರಗೆ ಹೋಗಲು ಯುಕ್ತವಾದ ಕಂಡಿಯನ್ನೂ ಕೋಶದ ಮುಚ್ಚಳದಲ್ಲಿ ಅಳವಡಿಸಿರುತ್ತಾರೆ.

ಕೆಲವು ಸಂದರ್ಭಗಳಲ್ಲಿ ಪೂರ್ಣ ವಿದ್ಯುತ್ ಸಂಗ್ರಹವಿರುವ (ಅಂದರೆ ಎಲೆಕ್ಟ್ರೋಡುಗಳ ಕ್ರಿಯಾಕಾರಿ ಪದಾರ್ಥಗಳಿಂದ ಆವರಿತವಾಗಿರುತ್ತವೆ) ಕೋಶದಿಂದ ವಿದ್ಯುದ್ವಿಶ್ಲೇಷ್ಯವನ್ನು ಹೊರತೆಗೆದು ಕೋಶದೊಳಗೆ ಗಾಳಿ ಹೋಗದಂತೆ ಭದ್ರವಾಗಿ ಮುಚ್ಚುತ್ತಾರೆ.

ಈ ಕೋಶವನ್ನು ಎಷ್ಟು ಕಾಲದವರೆಗೆ ಬೇಕಾದರೂ ದಾಸ್ತಾನು ಮಾಡಿಟ್ಟಿದ್ದು ಉಪಯೋಗಿಸಬೇಕಾದಾಗ ಕೋಶದೊಳಕ್ಕೆ ವಿದ್ಯುದ್ವಿಶ್ಲೇಷ್ಯವನ್ನು ಸೇರಿಸುವುದರಿಂದ ಕೋಶವನ್ನು ಉತ್ತೇಜನಗೊಳಿಸಬಹುದು. ಇಂಥ ಕೋಶಗಳನ್ನು ಶುಷ್ಕವಿದ್ಯುತ್ ಸಂಚಯನ ಕೋಶಗಳೆಂದು ಕರೆಯಬಹುದು. ಇವು ಪ್ರಧಾನ ವಿದ್ಯುತ್ ಕೋಶಗಳಲ್ಲಿಯ ಶುಷ್ಕಕೋಶಗಳಷ್ಟು ಅನುಕೂಲತೆಗಳನ್ನು ಒದಗಿಸಿಕೊಡುವುದಿಲ್ಲವಾದರೂ ದಾಸ್ತಾನು




ಚಿತ್ರ 11 ಆಮ್ಲ ಸಂಚಯನದ ಕೋಶ (ಸರಳ ಚಿತ್ರ), 1 ಕೋಶಪಾತ್ರೆ, 2 ಮರದ ಸಚ್ಛಿದ್ರ ತೆರೆಗಳು

ಮಾಡುವ ದೃಷ್ಟಿಯಿಂದ ಮತ್ತು ಕೋಶದ ಬಾಳಿಕೆಯ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿಗಳಾಗಿವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಇಂಥ ಕೋಶಗಳನ್ನು ಕಾಯ್ದಿರಿಸುವ ಕೋಶಗಳೆಂದೂ ಪರಿಗಣಿಸುತ್ತಾರೆ.

ದ್ವಿತೀಯಕ ಕೋಶಗಳ ತಯಾರಿಕೆಯಲ್ಲಿ ಉಪಯೋಗಿಸುವ ಸೀಸ ಮತ್ತು ಸಲ್ಫ್ಯೂರಿಕ್ ಆಮ್ಲಗಳು ಅತ್ಯಂತ ಪರಿಶುದ್ಧವಾಗಿರಬೇಕು. ಬಳಕೆಯಲ್ಲಿರುವ ಕೋಶಗಳಲ್ಲಿ ಉಪಯೋಗಿಸುವ ಶುದ್ಧ ಸೀಸದಲ್ಲಿ 99.95% ಸೀಸವಿದ್ದು ಅತಿ ಸ್ವಲ್ಪ ಭಾಗ ಬೆಳ್ಳಿ, ತಾಮ್ರ ಮತ್ತು ನಿಕಲ್‌ಗಳ ಮಿಶ್ರಣ ವಿರುತ್ತದೆ. ಸಲ್ಫ್ಯೂರಿಕ್ ಆಮ್ಲದಲ್ಲಿ ಶತಾಂಶಕ್ಕಿಂತ ಹೆಚ್ಚು ಅಶುದ್ಧತೆ ಇರದಂತೆ ಅಗತ್ಯ. ಸಾಮಾನ್ಯವಾಗಿ ಸಲ್ಫ್ಯೂರಿಕ್ ಆಮ್ಲದಲ್ಲಿ ಕಬ್ಬಿಣದ ಅಶುದ್ಧತೆ ಇರುತ್ತದೆ. ಕೆಲವು ವೇಳೆ ವಿದ್ಯುನ್ಮಂಡಲದಲ್ಲಿ ಸಂಪರ್ಕಕ್ಕಾಗಿ ಉಪಯೋಗಿಸುವ ತಾಮ್ರದ ತಂತಿಯಿಂದಾಗಿ ತಾಮ್ರ ಕೋಶದೊಳಗೆ ಸೇರಿ ಋಣಧ್ರುವದ ಮೇಲೆ ಶೇಖರವಾಗುವುದರಿಂದ ಕೋಶದಲ್ಲಿ ಜಲಜನಕದ ಬಿಡುಗಡೆಗೆ ಕಾರಣವಾಗಬಹುದು. ಈ ರೀತಿ ಬೆರೆಯುವ ತಾಮ್ರದ ಮೊತ್ತ 0.01% ಕ್ಕಿಂತಲೂ ಕಡಿಮೆ ಇರಬೇಕು.




ಚಿತ್ರ 12 ಆಮ್ಲ ಸಂಚಯನ ಕೋಶದ ಭಾಗಗಳು : 1 ರಂಧ್ರಬಿರಡೆ, 2 ಕೋಶ ಸಂಪರ್ಕ, 3 ಪೋಸ್ಟ್‌ಸ್ಟ್ರಾಪ್, 4 ಧನವಿದ್ಯುತ್ ತಟ್ಟೆ, 5 ಆಧಾರ ಭಾಗಗಳು, 6 ವಿದ್ಯುತ್ ಸಂಪರ್ಕ ಭಾಗ, 7 ಮುಚ್ಚಳಗಳು, 8 ಅರಗಿನ ಭಾಗ, 9 ಋಣವಿದ್ಯುತ್ ತಟ್ಟೆ, 10 ಹೊರಕೋಶ, 11 ವಿಭಾಜಕಗಳು 12 ತಳಭಾಗ

**ಕೋಶದಲ್ಲಿ ವಿದ್ಯುತ್ ಸಂಗ್ರಹಣೆ :** ಕೋಶದ ಎಲೆಕ್ಟ್ರೋಡುಗಳ ಮೂಲಕ ಏಕಮುಖ ವಿದ್ಯುತ್ತನ್ನು ಕೋಶದ ವಿದ್ಯುತ್ ಪೂರೈಕೆಯ ವಿರುದ್ಧ ದಿಕ್ಕಿನಲ್ಲಿ ಪ್ರವಹಿಸುವುದರಿಂದ ವಿದ್ಯುತ್ ಪೂರೈಕೆ ನಿಂತು ಕೋಶದಲ್ಲಿ ಪುನಃ ವಿದ್ಯುತ್ ಸಂಗ್ರಹಣೆಯಾಗುತ್ತದೆ. ಏಕಮುಖ ಪ್ರವಾಹದ ವಿದ್ಯುತ್ತನ್ನು ಬಳಕೆಯಲ್ಲಿರುವ ಪರ್ಯಾಯ ವಿದ್ಯುತ್ತಿನಿಂದ ವಿದ್ಯುತ್ ಸಮಕಾರಕಗಳನ್ನು (ರೆಕ್ಟಿಫೈಯರ್ಸ್) ಉಪಯೋಗಿಸಿಕೊಂಡು ಪಡೆಯಬಹುದು. ವಾಹನಗಳಲ್ಲಿ ಉಪಯೋಗಿಸುವ (ಉದಾಹರಣೆಗೆ ಕಾರು, ಬಸ್ಸು, ಟ್ರೇನು, ವಿಮಾನ ಇತ್ಯಾದಿ) ವಿದ್ಯುತ್ ಕೋಶಗಳಲ್ಲಿ ವಿದ್ಯುತ್ ಸಂಗ್ರಹಣೆ ಸ್ವಲ್ಪಮಟ್ಟಿಗೆ ವಾಹನಗಳಲ್ಲೇ ಅಳವಡಿಸಿದ

ಆಟೊಮೊಬೈಲ್ ಕೋಶ

ಸಣ್ಣ ಗಾತ್ರ ವಿದ್ಯುಜ್ಜನಕ ಯಂತ್ರಗಳಿಂದ ಉತ್ಪಾದಿತವಾಗುವ ವಿದ್ಯುತ್ತಿನಿಂದ ನಡೆಯುತ್ತದೆ. ವಿದ್ಯುತ್ ಸಂಗ್ರಹಣೆಯಲ್ಲಿ ಕೋಶದಲ್ಲಿನ ವಿದ್ಯುತ್ ಸಂಚಯನ ಪೂರ್ತಿಯಾದ ಮೇಲೆಯೂ ಕೋಶಕ್ಕೆ ಸಂಗ್ರಹ ವಿದ್ಯುತ್ತನ್ನು ಒದಗಿಸಿದರೆ ಈ ಹೆಚ್ಚಿನ ವಿದ್ಯುತ್ತಿನಿಂದ ಕೋಶದಲ್ಲಿನ ನೀರು ವಿದ್ಯುದ್ವಿಶ್ಲೇಷಣೆಗೊಂಡು ಜಲಜನಕ, ಆಮ್ಲಜನಕ ಅನಿಲಗಳು ಬಿಡುಗಡೆಯಾಗುವುವಲ್ಲದೆ ಕೋಶದ ಉಷ್ಣತೆಯೂ ಅಧಿಕವಾಗುತ್ತದೆ. ಈ ಸ್ಥಿತಿಗೆ ಕೋಶ ಮರಳಿಕೆ (ಗ್ಯಾಸ್ಸಿಂಗ್) ಎಂದು ಹೆಸರು. ಇದರಲ್ಲಿ ಕೋಶದ ಇತರ ಭಾಗಗಳು ನಾಶವಾಗುವ ಸಂಭವವಿರುವುದರಿಂದ ವಿದ್ಯುತ್ ಸಂಗ್ರಹಣಕಾಲದಲ್ಲಿ ಕೋಶದ ಉಷ್ಣತೆ 50° ಸೆಂನ್ನು ಮೀರದಂತೆ ನೋಡಿಕೊಳ್ಳುವುದು ಅಗತ್ಯ. ಕೋಶದ ವಿದ್ಯುತ್ ಪೂರೈಕೆ ಪೂರ್ಣವಾದಾಗ ಎಲೆಕ್ಟ್ರೋಡುಗಳ ಮೇಲೆ ಉಂಟಾಗುವ ಸೀಸದ ಸಲ್ಫೇಟ್ ವಿದ್ಯುತ್ ಸಂಗ್ರಹಣೆಯಾಗುವಾಗ ಪರಿಶುದ್ಧ ಸೀಸ ಮತ್ತು ಸೀಸದ ಪೆರಾಕ್ಸೈಡ್ ಆಗಿ ಪರಿವರ್ತಿತವಾಗುವುದಲ್ಲದೆ ಕೋಶದಲ್ಲಿಯ ಸಲ್ಫ್ಯೂರಿಕ್ ಆಮ್ಲದ ಸಾರತೆ ಸಹ ಹೆಚ್ಚುತ್ತಿರುತ್ತದೆ. ಇದರೊಂದಿಗೆ ಜಲಜನಕ, ಆಮ್ಲಜನಕ ಅನಿಲಗಳೂ ಸ್ವಲ್ಪ ಮೊತ್ತದಲ್ಲಿ ಇತರ ಹಾನಿಕರ ವಿಷಾನಿಲಗಳೂ ಬಿಡುಗಡೆಯಾಗುತ್ತವೆ. ಜಲಜನಕ, ಆಮ್ಲಜನಕ, ಅನಿಲಗಳು ಸ್ಫೋಟನೆಯನ್ನುಂಟುಮಾಡಬಹುದಾದ್ದರಿಂದ ವಿದ್ಯುತ್ ಸಂಗ್ರಹಣೆಯಾಗುವಾಗ ಹೆಚ್ಚಿನ ಎಚ್ಚರಿಕೆ ವಹಿಸುವುದು ಅಗತ್ಯ.

ದ್ವಿತೀಯಕ ಕೋಶಗಳಲ್ಲಿಯ ವಿದ್ಯುತ್ ಸಂಗ್ರಹಣೆಯಲ್ಲಿ ಎರಡು ವಿಧಾನಗಳನ್ನು ಅನುಸರಿಸುತ್ತಾರೆ. ಒಂದು ವಿಧಾನದಲ್ಲಿ ಕೋಶವನ್ನು ವಿದ್ಯುತ್ ಪೂರೈಕೆ ಮಂಡಲದಿಂದ (ಲೋಡ್ ಸರ್ಕಿಟ್) ಪ್ರತ್ಯೇಕಿಸಿ ವಿದ್ಯುತ್ ಸಂಗ್ರಹಣೆ ಮಂಡಲಕ್ಕೆ (ಚಾರ್ಜಿಂಗ್ ಸರ್ಕಿಟ್) ಜೋಡಿಸಿ ವಿದ್ಯುತ್ ಸಂಗ್ರಹಣೆ ಮಾಡುತ್ತಾರೆ. ಎರಡನೆಯ ವಿಧಾನದಲ್ಲಿ ಕೋಶವನ್ನು ಪೂರೈಕೆಯ ಮಂಡಲದಿಂದ ಪ್ರತ್ಯೇಕಿಸದೆ ಇದ್ದರೂ ಕೋಶದಲ್ಲಿ ವಿದ್ಯುತ್ ಸಂಗ್ರಹಣೆ ನಡೆಯುತ್ತಿರುತ್ತದೆ. ಉದಾಹರಣೆಗೆ ಕಾರು, ಬಸ್ಸು, ರೈಲು, ವಿಮಾನಗಳಲ್ಲಿ ದೀಪ, ಪಂಖ, ಹವಾನಿಯಂತ್ರಣ ಯಂತ್ರ ಇತ್ಯಾದಿ ವಿದ್ಯುತ್ ಸಲಕರಣೆಗಳು ಕೋಶದಿಂದ ವಿದ್ಯುತ್ತನ್ನು ಪಡೆದು ಕೆಲಸ ಮಾಡುತ್ತವೆ. ಇದೇ ಕಾಲದಲ್ಲಿ ವಾಹನಗಳಲ್ಲಿ ಅಳವಡಿಸಿದ ವಿದ್ಯುಜ್ಜನಕ ಯಂತ್ರ ವಾಹನದ ಚಲನೆಯ ಶಕ್ತಿಯನ್ನು ಉಪಯೋಗಿಸಿಕೊಂಡು ವಿದ್ಯುತ್ತನ್ನು ಉತ್ಪಾದಿಸುತ್ತದೆ. ಈ ವಿದ್ಯುತ್ತಿನಿಂದ ಕೋಶದಲ್ಲಿ ವಿದ್ಯುತ್ ಸಂಗ್ರಹಣೆ ನಡೆಯುತ್ತದೆ. ಇವುಗಳಲ್ಲಿ ಕೋಶದ ವಿಭವ ನಿಗದಿಯಾದ ಮೊತ್ತವನ್ನು ಮುಟ್ಟಿದ ಕೂಡಲೆ ಕೋಶದಲ್ಲಿ ಇನ್ನೂ ಹೆಚ್ಚಿನ ವಿದ್ಯುತ್ ಸಂಗ್ರಹಣೆಯಾಗದಂತೆ ಕೋಶವನ್ನು ಸಂಗ್ರಹಣೆ ಮಂಡಲದಿಂದ ಬೇರ್ಪಡಿಸುವ ಸ್ವಯಂಚಲಿ(ಆಟೋಮ್ಯಾಟಿಕ್) ಸಲಕರಣೆಗಳನ್ನು ಅಳವಡಿಸಿರುತ್ತಾರೆ. ಕೋಶದಲ್ಲಿ ವಿದ್ಯುತ್ ಸಂಗ್ರಹಣೆಯಾಗುವಾಗ ಸ್ಥಿರ ವೋಲ್ಟತೆ ಮಂಡಲವನ್ನಾಗಲಿ (ಕಾನ್‌ಸ್ಟೆಂಟ್ ವೋಲ್ಟೇಜ್ ಚಾರ್ಜಿಂಗ್) ಇಲ್ಲವೆ ಸ್ಥಿರ ವಿದ್ಯುತ್ ಪ್ರವಾಹದ ಮಂಡಲವನ್ನಾಗಲಿ (ಕಾನ್‌ಸ್ಟೆಂಟ್ ಕರೆಂಟ್ ಚಾರ್ಜಿಂಗ್) ಉಪಯೋಗಿಸಬಹುದು. ಈ ಎರಡು ರೀತಿಯಲ್ಲೂ

ಕೋಶ ಸತತವಾಗಿ ಪರಿಧಿಯಲ್ಲಿದ್ದು ವಿದ್ಯುತ್ ಸಂಗ್ರಹಣೆ ನಿಗದಿಯಾದ ಕಾಲದಲ್ಲಿ ಪೂರ್ಣವಾಗುತ್ತದೆ. ಚಲನಶಕ್ತಿಗಾಗಿ ವಾಹನಗಳಲ್ಲಿ ಉಪಯೋಗಿಸುವ ಕೋಶಗಳಲ್ಲಿ ಆಗಾಗ್ಗೆ ಅಲ್ಪ ವಿದ್ಯುತ್ ಸಂಗ್ರಹಣೆಯನ್ನು ವಾಹನದ ವಿರಾಮ ವೇಳೆಯಲ್ಲಿ (ಒಂದೆರಡು ಗಂಟೆಗಳ ಕಾಲದಲ್ಲಿ) ಹೆಚ್ಚಿನ ಮೊತ್ತದ ವಿದ್ಯುತ್ಪ್ರವಾಹವನ್ನು ಉಪಯೋಗಿಸಿಕೊಂಡು ನಡೆಸಬಹುದು. ಈ ವಿಧಾನಕ್ಕೆ ಏರಿಕೆಯ ವಿದ್ಯುತ್ ಸಂಗ್ರಹಣೆ (ಬೂಸ್ಟಿಂಗ್ ಚಾರ್ಜ್) ಎಂದು ಹೆಸರು. ಸ್ಥಳಾಂತರಗೊಳ್ಳದೆ ಒಂದೇ ಜಾಗದಲ್ಲಿದ್ದು ವಿದ್ಯುತ್ ಪೂರೈಕೆಯ ಮಂಡಲದೊಂದಿಗೆ ಶಾಶ್ವತವಾಗಿ ಸಂಪರ್ಕಗೊಂಡಿರುವ ಕೋಶಗಳಲ್ಲಿ ತೇಲುಭರಣ(ಫ್ಲೋಟ್ ಚಾರ್ಜಿಂಗ್) ಮತ್ತು ಅಲ್ಪಭರಣ (ಟ್ರಿಕಲ್ ಚಾರ್ಜಿಂಗ್) ವಿಧಾನಗಳಿಂದ ವಿದ್ಯುತ್ ಸಂಗ್ರಹಣೆ ಮಾಡುತ್ತಾರೆ. ತೇಲುಭರಣದಲ್ಲಿ ಕೋಶದ ವಿದ್ಯುತ್ ಸಂಗ್ರಹಣೆಗೆ ಸ್ಥಿರ ವೋಲ್ಟೇಜನ್ನು ಒದಗಿಸಿದರೆ ಅಲ್ಪಭರಣ ವಿಧಾನದಲ್ಲಿ ಸ್ಥಿರವಿದ್ಯುತ್ ಪ್ರವಾಹದಿಂದಾಗಿ ಕೋಶದಲ್ಲಿ ವಿದ್ಯುತ್ ಸಂಗ್ರಹಣೆ ನಡೆಯುತ್ತದೆ. ತೇಲುಭರಣದಲ್ಲಿ ಕೋಶ ವಿದ್ಯುತ್ ಸಂಗ್ರಹಣೆಯ ಮತ್ತು ವಿದ್ಯುತ್ ಪೂರೈಕೆಯ ಮಂಡಲಗಳೊಂದಿಗೆ ಸದಾಕಾಲ ಸಂಪರ್ಕ ಪಡೆದಿರುತ್ತದೆ. ವಿದ್ಯುತ್ ಸಂಗ್ರಹಣೆಯ ಮಂಡಲದ ವಿಭವಕೋಶದ ವಿಭವಕ್ಕಿಂತ ಸ್ವಲ್ಪವೇ ಹೆಚ್ಚು ಇದ್ದು ಕೋಶದ ವಿಭವ ನಿಗದಿಯಾದ ಮೊತ್ತಕ್ಕಿಂತ ಕಡಿಮೆಯಿದ್ದಾಗಲೆಲ್ಲ ಕೋಶದಲ್ಲಿ ವಿದ್ಯುತ್ ಸಂಗ್ರಹಣೆ ನಡೆಯುತ್ತಿರುತ್ತದೆ. ವಿದ್ಯುತ್ ಪೂರೈಕೆಯಲ್ಲಿ ಕೋಶ ಅಥವಾ ವಿದ್ಯುತ್ ಸಂಗ್ರಹಣ ಮಂಡಲದಲ್ಲಿನ ವಿಭವ ಇಲ್ಲವೆ ಇವೆರಡೂ ಭಾಗವಹಿಸಬಹುದು. ವಿದ್ಯುತ್ ಪೂರೈಕೆಗೆ ಬೇಕಾಗುವ ವಿಭವ (ಅಥವಾ ವಿದ್ಯುತ್ಪ್ರವಾಹ) ಸಂಗ್ರಹಣ ಮಂಡಲ ಒದಗಿಸಬಹುದಾದುದಕ್ಕಿಂತ ಹೆಚ್ಚಿದ್ದಾಗ ಮಾತ್ರ ಕೋಶದಿಂದಲೂ ವಿದ್ಯುತ್ ಪೂರೈಕೆಯಾಗುತ್ತದೆ. ಆಗ ಸಹ ಕೋಶ ಸತತವಾಗಿ ವಿದ್ಯುತ್ತನ್ನು ಪೂರೈಸದೆ ಆಗೊಮ್ಮೆ ಈಗೊಮ್ಮೆ ಪೂರೈಸುತ್ತಿರುತ್ತದೆ. ವಿದ್ಯುತ್ ಪೂರೈಕೆ ಇಲ್ಲದಿರುವಾಗ ಸಂಗ್ರಹಣ ಮಂಡಲದಿಂದ ಕೋಶ ವಿದ್ಯುತ್ತನ್ನು ಪಡೆಯುವುದರಿಂದ ವಿದ್ಯುತ್ ಸಂಗ್ರಹಣೆ ನಡೆದು ಕೋಶದ ವಿಭವ ಸದಾಕಾಲ ಸ್ಥಿರವಾಗಿರುತ್ತದೆ. ಅಲ್ಪಭರಣ ವಿಧಾನದ ವಿದ್ಯುತ್ ಸಂಗ್ರಹಣೆಯಲ್ಲಿ ಸಹ ಮೇಲಿನ ರೀತಿಯಲ್ಲೇ ಕೋಶದಲ್ಲಿ ವಿದ್ಯುತ್ ಸಂಗ್ರಹಣೆ ನಡೆಯುತ್ತಿರುತ್ತದೆ. ಈ ವಿಧಾನದಲ್ಲಿ ಕೋಶಕ್ಕೆ ವಿದ್ಯುತ್ ಸಂಗ್ರಹಣ ಮಂಡಲದಿಂದ ದೊರೆಯುವ ವಿದ್ಯುತ್ ಪ್ರವಾಹ ಸ್ವಲ್ಪವೇ ಇದ್ದು ಸ್ಥಿರವಾಗಿರುತ್ತದೆ. ಕೋಶವನ್ನು ವಿದ್ಯುತ್ ಸಂಗ್ರಹಣ ಮಂಡಲದೊಂದಿಗೆ ಸದಾಕಾಲ ಜೋಡಿಸಿರಬಹುದು. ಇಲ್ಲವೆ ಆಗಾಗ್ಗೆ ಸಂಪರ್ಕ ಪಡೆಯುವಂತೆ ಏರ್ಪಡಿಸಬಹುದು. ಕೆಲವು ಸಂದರ್ಭಗಳಲ್ಲಿ ಕೋಶ ವಿದ್ಯುತ್ತನ್ನು ಪೂರೈಸದಿರುವಾಗ ತಾನೇತಾನಾಗಿ ಸಂಗ್ರಹಣ ಮಂಡಲದೊಂದಿಗೆ ಸಂಪರ್ಕ ಪಡೆದು ವಿದ್ಯುತ್ ಸಂಗ್ರಹಣೆಯಾಗುವಂತೆ ಮಂಡಲಗಳನ್ನು ರಚಿಸಿರುತ್ತಾರೆ. ಕೋಶವನ್ನು ಉಪಯೋಗಿಸದೆ ದಾಸ್ತಾನು ಮಾಡಿದಾಗ ಸಹ ಕೋಶದ ಆಂತರಿಕನಿರೋಧದಿಂದಾಗಿ ಕೋಶದ ವಿದ್ಯುತ್ ವ್ಯಯವಾಗುತ್ತಿರುವುದಾದ್ದರಿಂದ ನಿಗದಿಯಾದ ವಿದ್ಯುತ್ತನ್ನು ಬೇಕಾದಾಗ ಒದಗಿಸಲು ಕೋಶಕ್ಕೆ ಸಾಧ್ಯವಾಗುವುದಿಲ್ಲ. ಮೇಲಿನ ಎರಡು ವಿಧಾನಗಳಿಂದ ಹೆಚ್ಚಾಗಿ ಅಲ್ಪಭರಣ ವಿಧಾನದಿಂದ ಕೋಶ ಸದಾಕಾಲ ಪೂರ್ಣಾವಿಷ್ಟ (ಫುಲ್ಲಿ ಚಾರ್ಜ್ಡ್) ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬಹುದು.

(ii) **ಕ್ಷಾರ ಸಂಚಯನ ಕೋಶಗಳು :** ಈ ಬಗೆಯ ದ್ವಿತೀಯಕ ಕೋಶಗಳಲ್ಲಿ ಕ್ಷಾರ ದ್ರಾವಣವನ್ನು ವಿದ್ಯುದ್ವಿಶ್ಲೇಷ್ಯವಾಗಿ ಉಪಯೋಗಿಸುವುದರಿಂದ ಇವುಗಳಿಗೆ ಈ ಹೆಸರು ರೂಢಿಯಲ್ಲಿದೆ. ಇವುಗಳಲ್ಲಿ ಉಪಯೋಗಿಸುವ ಎಲೆಕ್ಟ್ರೋಡುಗಳಿಂದಾಗಿ ಮೂರು ಮುಖ್ಯ ಬಗೆಗಳಿವೆ. 1.ನಿಕಲ್–ಕಬ್ಬಿಣ ಕೋಶ ಅಥವಾ ಎಡಿಸನ್ ಕೋಶ ; 2.ನಿಕಲ್–ಕ್ಯಾಡ್ಮಿಯಂ ಕೋಶ ಅಥವಾ ಜುಂಗನರ್ ಕೋಶ; 3.ಸತು ಬೆಳ್ಳಿ ಅಥವಾ ಸತು–ಬೆಳ್ಳಿಯ ಪೆರಾಕ್ಸೈಡ್ ಕೋಶ.

ನಿಕಲ್–ಕಬ್ಬಿಣ ಮತ್ತು ನಿಕಲ್–ಕ್ಯಾಡ್ಮಿಯಂ ವಿದ್ಯುದ್ರಾಸಾಯನಿಕ ಜೋಡಿಗಳು ಹೆಚ್ಚುಕಡಿಮೆ ಒಂದೇ ವಿಭವವನ್ನು ಉಂಟುಮಾಡುತ್ತವೆ. ಆದ್ದರಿಂದ ಎಡಿಸನ್ ಮತ್ತು ಜುಂಗನರ್ ಕೋಶಗಳು ಸರಾಸರಿ 1.2 ವೋಲ್ಟುಗಳಷ್ಟು ವಿಭವವನ್ನು ಉಂಟುಮಾಡುತ್ತವೆ. ಸತು–ಬೆಳ್ಳಿಯ ಕೋಶ 1.45–1.50 ವೋಲ್ಟುಗಳಷ್ಟು ವಿಭವವನ್ನು ಕೊಡುತ್ತದೆ.

**ಎಡಿಸನ್ ಕೋಶ :** ಎಡಿಸನ್ನನ 10 ವರ್ಷಗಳ ಸಂಶೋಧನೆಯ ಫಲವಾಗಿ ಈ ಕೋಶ ಬಳಕೆಗೆ ಬಂದಿತು (1898). ಕೋಶದಲ್ಲಿ ಕಬ್ಬಿಣವನ್ನು ಅಥವಾ ಕಬ್ಬಿಣದ ಆಕ್ಸೈಡನ್ನು ಋಣಧ್ರುವದಲ್ಲೂ ನಿಕಲ್ ಆಕ್ಸೈಡನ್ನು ಅಥವಾ ನಿಕಲ್ ಹೈಡ್ರಾಕ್ಸೈಡನ್ನು ಧನ ಧ್ರುವದಲ್ಲೂ ಉಪಯೋಗಿಸುತ್ತಾರೆ. ವಿದ್ಯುದ್ವಿಶ್ಲೇಷ್ಯವಾಗಿ ಸ್ವಲ್ಪ ಲಿಥಿಯಂ ಹೈಡ್ರಾಕ್ಸೈಡ್ ಬೆರೆತ ಪೊಟ್ಯಾಷಿಯಂ ಹೈಡ್ರಾಕ್ಸೈಡ್ (20%) ದ್ರಾವಣವನ್ನು ಉಪಯೋಗಿಸುತ್ತಾರೆ. ವಿದ್ಯುದ್ವಿಶ್ಲೇಷ್ಯದ ಸಾಪೇಕ್ಷ ಸಾಂದ್ರತೆ $15^\circ$ ಸೆಂ ಉಷ್ಣತೆಯಲ್ಲೂ 1.2 ಇರುತ್ತದೆ. ವಿದ್ಯುತ್ ಪೂರೈಕೆಯಾಗುವಾಗ ಧನಧ್ರುವದಲ್ಲಿ ಅಪಕರ್ಷಣೆಯೂ ಋಣಧ್ರೂವದಲ್ಲಿ ಉತ್ಕರ್ಷಣೆಯೂ ನಡೆಯುತ್ತವೆ. ವಿದ್ಯುತ್ ಸಂಚಯನದಲ್ಲಿ ಇದಕ್ಕೆ ವ್ಯತಿರಿಕ್ತಕ್ರಿಯೆಗಳು ನಡೆಯುತ್ತವೆ. ಒಟ್ಟು ರಾಸಾಯನಿಕ ಕ್ರಿಯೆಯಲ್ಲಿ ಆಮ್ಲಜನಕ ಅಥವಾ ಹೈಡ್ರಾಕ್ಸಿಲ್ ಅಯಾನುಗಳು ($O^-$ ಅಥವಾ OH) ಎಲೆಕ್ಟ್ರೋಡುಗಳ ನಡುವೆ ವಿನಿಮಯಗೊಳ್ಳುತ್ತವೆ.

$$Fe + Ni_2O_3 \quad FeO + 2NiO$$
$$(FeO) \qquad (FeO_2)$$

ಅಥವಾ

$$Fe + 2Ni(OH)_3 \quad Fe(OH)_2 + 2Ni(OH)_2$$

ಕೋಶದಲ್ಲಿಯ ವಿದ್ಯುದ್ವಿಶ್ಲೇಷ್ಯ ಗಮನಾರ್ಹವಾದ ರೀತಿಯಲ್ಲಿ ಬದಲಾಗುವುದಿಲ್ಲವಾದ್ದರಿಂದ ದ್ರಾವಣದ ಸಾಪೇಕ್ಷ ಸಾಂದ್ರತೆ, ವಿದ್ಯುದ್ವಾಹಕತೆ (ಕಂಡಕ್ಟಿವಿಟಿ) ಎಲ್ಲ ಕಾಲದಲ್ಲೂ (ವಿದ್ಯುತ್ ಪೂರೈಕೆ ಅಥವಾ ಸಂಗ್ರಹಣೆ) ಒಂದೇ ಸಮನೆ ಇರುತ್ತವೆ. ಕೋಶದ ವಿದ್ಯುತ್‌ಸ್ಥಿತಿಯನ್ನು ಎಲೆಕ್ಟ್ರೋಡುಗಳ ನಡುವಿನ ವಿಭವವನ್ನು ಅಳೆಯುವುದರಿಂದ ಮಾತ್ರವೇ ತಿಳಿಯಬಹುದು. ವಿದ್ಯುದ್ವಿಶ್ಲೇಷ್ಯದೊಂದಿಗೆ ಅಲ್ಪ ಮೊತ್ತದಲ್ಲಿ ಬೆರೆಸಿರುವ ಲಿಥಿಯಂ ಹೈಡ್ರಾಕ್ಸೈಡ್ ವಸ್ತು ಕೋಶದ ವಿದ್ಯುತ್ ಸಂಚಯನ ಮತ್ತು ಬಾಳಿಕೆಯನ್ನು ಹೆಚ್ಚಿಸುವುದಾದರೂ, ಯಾವ ರೀತಿಯಲ್ಲಿ ಇದು ಕೆಲಸಮಾಡುತ್ತದೆ ಎನ್ನುವುದು ಇದುವರೆಗೆ ಸರಿಯಾಗಿ ತಿಳಿದಿಲ್ಲ. ಪೊಟ್ಯಾಸಿಯಂ ಹೈಡ್ರಾಕ್ಸೈಡ್ ದ್ರಾವಣ ಕಬ್ಬಿಣವನ್ನು ತುಕ್ಕುಹಿಡಿಯದಂತೆ ರಕ್ಷಿಸುತ್ತದೆ. ಕೋಶದ ಸಂಚಯನ ಶಕ್ತಿ ಎಲೆಕ್ಟ್ರೋಡುಗಳಲ್ಲಿರುವ ಕ್ರಿಯಾಕಾರಿಪದಾರ್ಥಗಳ ಮೊತ್ತವನ್ನು ಅವಲಂಬಿಸಿದೆ. ಎಲೆಕ್ಟ್ರೋಡುಗಳ ತಯಾರಿಕೆಯಲ್ಲಿ ಕ್ರಿಯಾಕಾರಿಪದಾರ್ಥಗಳ ಮೊತ್ತವನ್ನು ಹತೋಟಿಯಲ್ಲಿಡುವುದರಿಂದ ಬೇಕಾದ ಸಂಚಯನ ಶಕ್ತಿಯ ಕೋಶಗಳನ್ನು ತಯಾರಿಸಬಹುದು. ಕೋಶದ ಎಲೆಕ್ಟ್ರೋಡುಗಳನ್ನು ಆಮ್ಲಸಂಚಯನ ಕೋಶಗಳಲ್ಲಿರುವಂತೆ ತಟ್ಟೆಯ ರೀತಿಯಲ್ಲಿ ರಚಿಸುವುದರಿಂದ ಕೋಶದ ಸಂಚಯನಶಕ್ತಿಯನ್ನು ಹೆಚ್ಚಿಸಬಹುದು. ಎಲೆಕ್ಟ್ರೋಡುಗಳ ರಚನೆಯಲ್ಲಿ ನಿಕಲ್ ಲೇಪನವಿರುವ ಉಕ್ಕಿನ ಚೌಕಟ್ಟುಗಳನ್ನು ಮತ್ತು ಜಾಲರಿಗಳನ್ನು ಉಪಯೋಗಿಸುತ್ತಾರೆ. ನಿಕಲ್ ಹೈಡ್ರಾಕ್ಸೈಡ್ ಮತ್ತು ಶುದ್ಧ ನಿಕೆಲಿನ ತೆಳುವಾದ ಬಿಲ್ಲೆಗಳನ್ನು ಒಂದರ ಅನಂತರ ಮತ್ತೊಂದು ಇರುವಂತೆ ತುಂಬಿದ ರಂಧ್ರವಿರುವ ಉಕ್ಕಿನ ಕೊಳವೆಗಳನ್ನು ಧನಧ್ರುವದ ಜಾಲರಿಯಲ್ಲಿ ಅಳವಡಿಸಿರುತ್ತಾರೆ. ಈ ಕೊಳವೆಗಳ ಒಳವ್ಯಾಸ ಸಾಮಾನ್ಯವಾಗಿ 1/4". ಎಲೆಕ್ಟ್ರೋಡುಗಳ ಜಾಲರಿಯಲ್ಲಿ ಈ ಕೊಳವೆಗಳ ಸಂಖ್ಯೆಯನ್ನು ಹೆಚ್ಚು ಕಡಿಮೆ ಇರಿಸುವುದರಿಂದ ಕೋಶದ ಸಂಚಯನಶಕ್ತಿಯನ್ನು ಹೆಚ್ಚು ಕಡಿಮೆ ಮಾಡಬಹುದು. ಋಣ ಎಲೆಕ್ಟ್ರೋಡಿನ ಉಕ್ಕಿನ ಜಾಲರಿಯಲ್ಲಿ ಸಣ್ಣ ಕುಳಿಗಳಿರುವಂತೆ ಏರ್ಪಡಿಸಿ ಈ ಕುಳಿಗಳಲ್ಲಿ ಕಬ್ಬಿಣದ ಆಕ್ಸೈಡನ್ನು ತುಂಬಿಸಿರುತ್ತಾರೆ.



ಚಿತ್ರ 13 ಎಡಿಸನ್ ಕೋಶ

**ಜುಂಗನರ್ ಕೋಶ :** ನಿಕಲ್–ಕಬ್ಬಿಣದ ಕೋಶವನ್ನು ಎಡಿಸನ್ ರಚಿಸುವ ಸಮಯದಲ್ಲೇ ಸ್ವೀಡನ್ನಿನ ವಿಜ್ಞಾನಿಗಳಾದ ಜುಂಗನರ್ ಮತ್ತು ಬರ್ಗರು ಮತ್ತೊಂದು ಬಗೆಯ ಕ್ಷಾರಸಂಚಯನ ಕೋಶವನ್ನು ಬಳಕೆಗೆ ತಂದರು. ಇದಕ್ಕೆ ಜುಂಗನರ್ ಕೋಶವೆಂದು ಹೆಸರು. ಈ ಕೋಶ ಎಡಿಸನ್ನಿನ ಕೋಶದಂತೆಯೇ ಇದೆ. ಆದರೆ ಇದರಲ್ಲಿ ಋಣ ಧ್ರುವವಾಗಿ ಕಬ್ಬಿಣಕ್ಕೆ ಬದಲಾಗಿ ಕ್ಯಾಡ್ಮಿಯಂ ಉಪಯೋಗಿಸುತ್ತಾರೆ. ವಿದ್ಯುದ್ವಿಶ್ಲೇಷ್ಯದ (ಸ್ವಲ್ಪ ಲಿಥಿಯಂ ಹೈಡ್ರಾಕ್ಸೈಡ್ ಸೇರಿಸಿದ ಪೊಟ್ಯಾಸಿಯಂ ಹೈಡ್ರಾಕ್ಸೈಡ್) ಸಾಪೇಕ್ಷ ಸಾಂದ್ರತೆ 1.19–1.12. ಧನಧ್ರುವದಲ್ಲಿ ಶುದ್ಧ ಗ್ರಾಫೈಟಿನೊಂದಿಗೆ ಬೆರೆತ ನಿಕಲ್ ಆಕ್ಸೈಡ್ (ಅಥವಾ ನಿಕಲ್ ಹೈಡ್ರಾಕ್ಸೈಡ್) ಮಿಶ್ರಣವನ್ನೂ ಋಣಧ್ರುವದಲ್ಲಿ 10–15% ಕಬ್ಬಿಣ ಬೆರೆತ ಕ್ಯಾಡ್ಮಿಯಂ ಲೋಹದ ಪುಡಿಯನ್ನೂ ಉಪಯೋಗಿಸುತ್ತಾರೆ. ಕೋಶದ ಧನ ಮತ್ತು ಋಣ ಧ್ರುವದ ಎಲೆಕ್ಟ್ರೋಡ್ ತಟ್ಟೆಗಳನ್ನು ಒಂದೇ ರೀತಿಯಲ್ಲಿ ತಯಾರಿಸುತ್ತಾರೆ. ಎಲೆಕ್ಟ್ರೋಡ್ ಪದಾರ್ಥಗಳನ್ನು ಜಾಲರಿಯಲ್ಲಿರುವ ರಂಧ್ರಗಳಿರುವ ಕುಳಿಗಳಲ್ಲಿ ಅಡಕಿ ತುಂಬಿರುತ್ತಾರೆ. ಉಳಿದ ರೀತಿಗಳಲ್ಲಿ ಕೋಶದ ರಚನೆ ಎಡಿಸನ್ ಕೋಶದಂತೆಯೇ ಇದೆ. ವಿದ್ಯುತ್ ಸಂಗ್ರಹಣೆ ಮತ್ತು ವಿದ್ಯುತ್ ವಿಸರ್ಜನೆಯಲ್ಲಿ ಧನ–ಋಣ ಧ್ರುವಗಳ ನಡುವೆ ಆಮ್ಲಜನಕ ಅಥವಾ ಹೈಡ್ರಾಕ್ಸಿಲ್ ಅಯಾನುಗಳು

ವಿನಿಮಯಗೊಳ್ಳುತ್ತವೆ. ಕೋಶದ ವಿದ್ಯುದ್ವಿಶ್ಲೇಷ್ಯ ಯಾವ ರೀತಿಯಲ್ಲೂ ರಾಸಾಯನಿಕವಾಗಿ ಪರಿವರ್ತನೆಗೊಳ್ಳುವುದಿಲ್ಲ.

ಈ ಬಗೆಯ ಕೋಶಗಳ ಮುಖ್ಯ ಸೌಲಭ್ಯಗಳೆಂದರೆ : 1.ಆಂತರಿಕ ನಿರೋಧ ಕಡಿಮೆ ಇರುವುದು. 2.ಶೈತ್ಯ ವಾತಾವರಣದಲ್ಲೂ ಸಮರ್ಪಕವಾಗಿ ಕೆಲಸ ಮಾಡುವುದು. 3. ಅಲ್ಪಭರಣದ ವಿಧಾನದಿಂದ ಸುಲಭವಾಗಿ ವಿದ್ಯುತ್ ಸಂಗ್ರಹಣೆ ಮಾಡುವುದರಲ್ಲಿನ ಸೌಲಭ್ಯ. ಜುಂಗನರ್ ಕೋಶಗಳನ್ನು ಮುಖ್ಯವಾಗಿ ಡೀಸೆಲ್ ಎಂಜಿನ್ನುಗಳ ಪ್ರಾರಂಭ ಚಲನೆಗೆ, ತುರ್ತು ಸಂದರ್ಭಗಳಲ್ಲಿ ವಿದ್ಯುದ್ದೀಪಗಳನ್ನು ಉರಿಸಲು ಮತ್ತು ರೈಲುಗಳಲ್ಲಿನ ದೀಪ, ಫ್ಯಾನು ಇತ್ಯಾದಿಗಳಲ್ಲಿ ಉಪಯೋಗಿಸುತ್ತಾರೆ. ರಚನೆಯಲ್ಲಿ ಜುಂಗನರ್ ಕೋಶಕ್ಕಿಂತ ಸ್ವಲ್ಪ ಬೇರೆಯಾಗಿದ್ದು ಆದರೆ ಕೋಶದಲ್ಲಿ ಉಪಯೋಗಿಸುವ ಪದಾರ್ಥದಿಂದಲೇ ತಯಾರಾದ ಇನ್ನೊಂದು ಬಗೆಯ ಕೋಶ ನಿಕೆಲ್ ಕ್ಯಾಡ್ಮಿಯಂ ಸಿಂಟರ್ಡ್ ಕೋಶ.

**ಬೆಳ್ಳಿ-ಸತು ವಿದ್ಯುತ್ ಸಂಚಯನ ಕೋಶ :** ಈ ಬಗೆಯ ಕೋಶಗಳನ್ನು ಪ್ರಧಾನ ವಿದ್ಯುತ್‌ಕೋಶಗಳ ಪಂಗಡಕ್ಕೆ ಸೇರಿದ ಕಾಯ್ದಿರಿಸುವ ಕೋಶಗಳೆಂದೂ ಕರೆಯುವುದುಂಟು. ಇವುಗಳಲ್ಲಿ ವಿದ್ಯುದ್ವಿಶ್ಲೇಷ್ಯವಾಗಿ ಪೊಟ್ಯಾಸಿಯಂ ಹೈಡ್ರಾಕ್ಸೈಡನ್ನು ಉಪಯೋಗಿಸುವುದರಿಂದ ಕ್ಷಾರ ಸಂಚಯನ ಕೋಶಗಳ ಗುಂಪಿಗೆ ಸೇರಿಸಬಹುದು. ವಿದ್ಯುತ್ ಪೂರ್ಣ ಸ್ಥಿತಿಯಲ್ಲಿರುವ ಕೋಶದ ಧನ ಎಲೆಕ್ಟ್ರೋಡಿನಲ್ಲಿ ಬೆಳ್ಳಿಯ ಪೆರಾಕ್ಸೈಡ್ ಇದ್ದು ವಿದ್ಯುತ್ ಪೂರೈಕೆಯಲ್ಲಿ ಈ ಪದಾರ್ಥ ಆಕರ್ಷಣಗೊಂಡು ಬೆಳ್ಳಿ ಮತ್ತು ಬೆಳ್ಳಿಯ ಆಕ್ಸೈಡ್ ಆಗಿ ಪರಿವರ್ತನೆಗೊಳ್ಳುತ್ತದೆ.

ರೈಲುಗಾಡಿಗಳಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಬಳಸುವ ಕೋಶ

ಋಣ ಎಲೆಕ್ಟ್ರೋಡ್ ಆಗಿ ಸಚ್ಛಿದ್ರ ಸತುವನ್ನು ಉಪಯೋಗಿಸುತ್ತಾರೆ. ಕೋಶ ದಿಂದ ವಿದ್ಯುತ್ ಪೂರೈಕೆಯಾಗುವಾಗ ವಿದ್ಯುದ್ವಿಶ್ಲೇಷ್ಯದೊಂದಿಗೆ ಸಂಪರ್ಕಗೊಂಡಿರುವ ಸತು ಸತುವಿನ ಆಕ್ಸೈಡ್ ಆಗಿ ಪರಿವರ್ತನೆಗೊಳ್ಳುತ್ತದೆ. ಆದ್ದರಿಂದ ಇತರ ಕ್ಷಾರಸಂಚಯನ ಕೋಶಗಳಲ್ಲಿರುವಂತೆ ಇಲ್ಲಿ ಸಹ ವಿದ್ಯುತ್ ಪೂರೈಕೆ ಮತ್ತು ವಿದ್ಯುತ್ ಸಂಗ್ರಹಣೆಯಲ್ಲಿ ಆಮ್ಲಜನಕದ ಅಯಾನುಗಳು ಧನ ಋಣ ಧ್ರುವಗಳ ನಡುವೆ ಸ್ಥಳಾಂತರಗೊಳ್ಳುತ್ತವೆ. ವಿದ್ಯುದ್ವಿಶ್ಲೇಷ್ಯವಾದ ಪೊಟ್ಯಾಸಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿಯೇ ಸತುವಿನ ಆಕ್ಸೈಡನ್ನು ಕರಗಿಸಿ ದ್ರಾವಣವನ್ನು ಸಂತೃಪ್ತ ಸ್ಥಿತಿಯಲ್ಲಿರಿಸುವುದರಿಂದ ಪ್ರತ್ಯೇಕ ಋಣ ಎಲೆಕ್ಟ್ರೋಡಿನ ಉಪಯೋಗವಿರುವುದಿಲ್ಲ.

ಕೋಶದ ರಚನೆಯಲ್ಲಿ ಧನ ಧ್ರುವದ ತಟ್ಟೆಗಳನ್ನು ಸೆಲೊಫೇನ್ ಚೀಲಗಳಲ್ಲಿ ಇಟ್ಟಿರಬಹುದು. ಅಥವಾ ಮತ್ತಾವುದೇ ರೀತಿಯ ತೆರೆಗಳನ್ನು ತಟ್ಟೆಗಳ ನಡುವೆ ಇಟ್ಟಿರಬಹುದು. ಇಂಥ ಅನೇಕ ತಟ್ಟೆಗಳನ್ನು ಪ್ಲಾಸ್ಟಿಕ್ ಕೋಶದ ಪಾತ್ರೆಯಲ್ಲಿ ಅಳವಡಿಸಿರುತ್ತಾರೆ. ಎಲೆಕ್ಟ್ರೋಡುಗಳನ್ನು ಪರಿಧಿಯೊಂದಿಗೆ ಸಂಪರ್ಕಗೊಳಿಸಲು ವಿದ್ಯುದ್ವಾಹಿತಂತಿಗಳನ್ನು ಎಲೆಕ್ಟ್ರೋಡುಗಳಿಗೆ ಜೋಡಿಸಿರುತ್ತಾರೆ. ಹಲವಾರು ಕೋಶಗಳನ್ನು ಲೋಹದ ಪೆಟ್ಟಿಗೆಯಲ್ಲಿಟ್ಟಿರುವಂಥ ವಿದ್ಯುತ್‌ಕೋಶಗಳು ಬಳಕೆಯಲ್ಲಿವೆ. ವಿದ್ಯುತ್ ಸಂಗ್ರಹಣೆಯಲ್ಲಿ ಸ್ಥಿರ ವಿಭವವನ್ನಾಗಲೀ ಸ್ಥಿರ ವಿದ್ಯುತ್ಪ್ರವಾಹವನ್ನಾಗಲೀ ಉಪಯೋಗಿಸಬಹುದು. ಈ ಬಗೆಯ ಕೋಶಗಳಲ್ಲಿ ವಿವಿಧ ಸಂಚಯನಶಕ್ತಿಯ ಕೋಶಗಳು ಬಳಕೆಯಲ್ಲಿವೆ. ಮುಖ್ಯವಾಗಿ ಸ್ಥಳದಿಂದ ಸ್ಥಳಕ್ಕೆ ಒಯ್ಯುವ ಚಿತ್ರಗ್ರಹಣ ಹಾಗೂ ಧ್ವನಿಯಂತ್ರಗಳಲ್ಲಿ ಮತ್ತು ರಕ್ಷಣಾ ಇಲಾಖೆಯಲ್ಲಿ ಈ ಕೋಶಗಳನ್ನು ಬಳಸುತ್ತಾರೆ.

**3 ಶಿಷ್ಟ ವಿದ್ಯುತ್‌ಕೋಶಗಳು :** ವೈಜ್ಞಾನಿಕ ಸಂಶೋಧನೆಯಲ್ಲಿ ಮತ್ತು ಪ್ರಯೋಗಶಾಲೆಗಳಲ್ಲಿ ಅನೇಕ ವೇಳೆ ನಿರ್ದಿಷ್ಟವಾದ ವಿಭವವನ್ನು ಕೊಡುವ ವಿದ್ಯುತ್ ಕೋಶಗಳ ಆವಶ್ಯಕತೆ ಇರುತ್ತದೆ. ಇಂಥ ವಿದ್ಯುತ್‌ಕೋಶಗಳಲ್ಲಿ ಮುಖ್ಯವಾದುದು ಮತ್ತು ಸಾಮಾನ್ಯವಾಗಿ ಬಳಕೆಯಲ್ಲಿರುವುದು ವೆಸ್ಟ್ ಸ್ಟ್ಯಾಂಡರ್ಡ್ ಕೋಶ. ಇದರಲ್ಲಿ ಪಾದರಸ ಮಿಶ್ರಿತ ಕ್ಯಾಡ್ಮಿಯಂ ಲೋಹವನ್ನು ಋಣಧ್ರುವವಾಗಿ ಉಪಯೋಗಿಸಿ ಋಣಧ್ರುವದ ಸುತ್ತಲೂ ಕ್ಯಾಡ್ಮಿಯಂ ಸಲ್ಫೇಟ್ ಹರಳುಗಳನ್ನು ಇಟ್ಟಿದೆ. ಧನಧ್ರುವವಾಗಿ ಪಾದರಸವನ್ನು ಉಪಯೋಗಿಸಿ ಇದನ್ನು ಪಾದರಸದ ಸಲ್ಫೇಟು ಮತ್ತು ಕ್ಯಾಡ್ಮಿಯಂನ ಸಲ್ಫೇಟು ಮಿಶ್ರಣದ ಕಣದಿಂದ ಆವರಿಸಿ ಈ ಮಿಶ್ರಣವನ್ನು ಪುನಃ ಕ್ಯಾಡ್ಮಿಯಂ ಸಲ್ಫೇಟು ಆವರಿಸುವಂತೆ ಅಳವಡಿಸಲಾಗಿದೆ. ವಿದ್ಯುದ್ವಿಶ್ಲೇಷ್ಯವಾಗಿ ಸಂತೃಪ್ತ ಕ್ಯಾಡ್ಮಿಯಂ ಸಲ್ಫೇಟ್ ದ್ರಾವಣವನ್ನು ಉಪಯೋಗಿಸಿದೆ. ಕೋಶದ ಪಾತ್ರೆಯನ್ನು ಗಾಳಿ ಹೋಗದಂತೆ ಪೂರ್ತಿಯಾಗಿ ಮುಚ್ಚಿರುವುದರಿಂದ ಕೋಶಸುತ್ತಲಿನ ವಾತಾವರಣದ ಏರಿಳಿತಗಳಿಂದ ಸುರಕ್ಷಿತವಾಗಿರುತ್ತದೆ. ಕೋಶದ ಆಂತರಿಕ ನಿರೋಧ ತೀರ ಕಡಿಮೆಯಿದ್ದು ಅದರಿಂದ ಪಡೆಯುವ ವಿದ್ಯುತ್ಪ್ರವಾಹ ಕಡಿಮೆಯಿರುವಾಗ ಧ್ರುವೀಕರಣದ ತೊಂದರೆ ಇರುವುದಿಲ್ಲ. ಕೋಶವನ್ನು ವಿದ್ಯುನ್ಮಾಪನಗಳಲ್ಲಿ ಉಪಯೋಗಿಸುವಾಗ ಅದರಿಂದ ಪಡೆಯುವ ವಿದ್ಯುತ್ಪ್ರವಾಹ ಅತಿ ಕಡಿಮೆ ಇರುವಂತೆ ನೋಡಿಕೊಳ್ಳುವುದು ಅಗತ್ಯ. ಇನ್ನು ಕೆಲವು ಅಳತೆಗಳಲ್ಲಿ ಕೋಶದಲ್ಲಿನ ಧನ ಅಥವಾ ಋಣ ಎಲೆಕ್ಟ್ರೋಡುಗಳು ಪ್ರತ್ಯೇಕವಾಗಿ ಒದಗಿಸುವ ವಿಭವವನ್ನು ಅಳೆಯಬೇಕಾಗುತ್ತದೆ.



ಚಿತ್ರ 14 ಶಿಷ್ಟಕೋಶ (ವೆಸ್ಟ್ ಸ್ಟ್ಯಾಂಡರ್ಡ್ ಕೋಶ): 1 ಸಂತೃಪ್ತಕ್ಯಾಡ್ಮಿಯಂ ಸಲ್ಫೇಟ್ ದ್ರಾವಣ, 2 ಕ್ಯಾಡ್ಮಿಯಂ ಸಲ್ಫೇಟ್ ಹರಳುಗಳು, 3 ಪಾದರಸದ ಸಲ್ಫೇಟ್ 4 ಪಾದರಸ, 5 ಪಾದರಸ ಮತ್ತು ಕ್ಯಾಡ್ಮಿಯಂ ಮಿಶ್ರಣ

ಅಂಥ ಸಂದರ್ಭಗಳಲ್ಲಿ ಎರಡು ಎಲೆಕ್ಟ್ರೋಡುಗಳ ವಿದ್ಯುದ್ರಾಸಾಯನಿಕ ಜೋಡಣೆಯಲ್ಲಿ ಒಂದು ಎಲೆಕ್ಟ್ರೋಡನ್ನು ಶಿಷ್ಟ ಎಲೆಕ್ಟ್ರೋಡ್ ಆಗಿ ಉಪಯೋಗಿಸಿ ಮತ್ತೊಂದು ಎಲೆಕ್ಟ್ರೋಡ್ ಒದಗಿಸುವ ವಿಭವವನ್ನು ಅಳೆಯಬಹುದು. ಇದರಲ್ಲಿ ಶಿಷ್ಟ ಎಲೆಕ್ಟ್ರೋಡಿನ ಅರ್ಧಕ್ರಿಯೆಯಲ್ಲಿ (ಹಾಫ್ ರಿಯಾಕ್ಷನ್) ಉಂಟಾಗುವ ವಿಭವ ನಿರ್ದಿಷ್ಟವಾಗಿ ತಿಳಿದಿರುತ್ತದೆ. ಆದ್ದರಿಂದ ಉಳಿದ ಎಲೆಕ್ಟ್ರೋಡಿನ ಅರ್ಧ ಕ್ರಿಯೆಯ ವಿಭವವನ್ನು ಎಲೆಕ್ಟ್ರೋಡುಗಳ ನಡುವಿನ ವಿಭವವನ್ನು ಅಳೆಯುವುದರಿಂದ ನಿರ್ಧರಿಸಬಹುದು. ಇದಕ್ಕಾಗಿ ಉಪಯೋಗಿಸುವ ಶಿಷ್ಟ ಎಲೆಕ್ಟ್ರೋಡುಗಳಲ್ಲಿ ಜಲಜನಕದ ಎಲೆಕ್ಟ್ರೋಡ್ ಮತ್ತು ಕ್ಯಾಲೊಮೆಲ್ ಎಲೆಕ್ಟ್ರೋಡುಗಳು ಮುಖ್ಯವಾಗಿವೆ. ಜಲಜನಕದ ಎಲೆಕ್ಟ್ರೋಡಿನಲ್ಲಿ ಜಲಜನಕದ ಅನಿಲ ಪ್ಲಾಟಿನಂ ಲೋಹದಲ್ಲಿ ಶೇಖರವಾಗಿರುವುದರಿಂದ ಪ್ಲಾಟಿನಂ ಲೋಹ ಜಡ ಎಲೆಕ್ಟ್ರೋಡ್ ಆಗಿಯೂ ಜಲಜನಕ ಕ್ರಿಯಾಶಾಲಿ ಪದಾರ್ಥವಾಗಿಯೂ ವರ್ತಿಸುತ್ತದೆ. ಎಲೆಕ್ಟ್ರೋಡ್ ಕ್ರಿಯೆ ಈ ರೀತಿ ಇರುತ್ತದೆ :

$$H_2 \quad 2H + 2e^-$$

ವಿಭವದ ಅಳತೆಗಳಲ್ಲಿ ಮೇಲಿನ ಕ್ರಿಯೆಯಲ್ಲಿ ವಿಭವ ಶೂನ್ಯವೆಂದು ಭಾವಿಸುತ್ತಾರೆ. ಮತ್ತೊಂದು ಎಲೆಕ್ಟ್ರೋಡಿನೊಂದಿಗೆ ಜಲಜನಕದ ಎಲೆಕ್ಟ್ರೋಡನ್ನು ಉಪಯೋಗಿಸಿದಾಗ ಎಲೆಕ್ಟ್ರೋಡುಗಳ ನಡುವಿನ ವಿಭವ ಜೋಡಣೆಯಲ್ಲಿಯ ಅಜ್ಞಾತ ಎಲೆಕ್ಟ್ರೋಡಿನ ವಿಭವವನ್ನು ಕೊಡುತ್ತದೆ.



ಚಿತ್ರ 15 ಜಲಜನಕದ ಎಲೆಕ್ಟ್ರೋಡ್ 1 ಜಲಜನಕ, 2 ಪ್ಲಾಟಿನಂ ಎಲೆಕ್ಟ್ರೋಡ್

ಕ್ಯಾಲೊಮೆಲ್ ಎಲೆಕ್ಟ್ರೋಡಿನಲ್ಲಿನ ರಾಸಾಯನಿಕ ಕ್ರಿಯೆ ಈ ಕೆಳಗಿನ ರೀತಿ ಇರುತ್ತದೆ.

$$Hg_2Cl_2 + 2e^- \quad 2Hg + 2Cl^-$$

ಎಲೆಕ್ಟ್ರೋಡ್ ವಿಭವ ಪಾದರಸ ಕ್ಲೋರೈಡ್ ದ್ರಾವಣದ ಸಾರತೆಗೆ ಅನುಗುಣವಾಗಿರುತ್ತದೆ. ಎಲೆಕ್ಟ್ರೋಡ್ ವಿಭವ ದ್ರಾವಣದ ಉಷ್ಣತೆಯನ್ನೂ ಅವಲಂಬಿಸಿರುವುದರಿಂದ ನಿಷ್ಕೃಷ್ಟ ಅಳತೆಗಳಲ್ಲಿ ಉಷ್ಣತೆಯನ್ನೂ ಗಣನೆಗೆ ತೆಗೆದುಕೊಳ್ಳಬೇಕು.

**ಇತರ ಬಗೆಯ (ವೋಲ್ಟಾ ಮಾದರಿಯಲ್ಲದ) ಕೋಶಗಳು :** ಈ ಕೋಶಗಳಲ್ಲಿ ರಾಸಾಯನಿಕ ಮೂಲವಲ್ಲದ ಇತರ ಬಗೆಯ ಶಕ್ತಿಗಳ ರೂಪಾಂತರತೆಯಿಂದ ವಿದ್ಯುದುತ್ಪಾದನೆಯಾಗುತ್ತದೆ. ಈ ಪಂಗಡಕ್ಕೆ ಸೇರಿದ ಕೋಶಗಳು:1.ಸೌರವಿದ್ಯುತ್

ಕೋಶ. 2.ಇಂಧನ ವಿದ್ಯುತ್ ಕೋಶ. 3.ನ್ಯೂಕ್ಲಿಯರ್ ವಿದ್ಯುತ್ ಕೋಶ. ಈ ಕೋಶಗಳ ಬಗ್ಗೆ ಸಂಶೋಧನೆ ಬಹಳ ಹಿಂದಿನಿಂದ ನಡೆದಿದೆಯಾದರೂ ಇತ್ತೀಚಿನ ವರ್ಷಗಳಲ್ಲಿ ಪ್ರಾಮುಖ್ಯವಾಗಿರುವ ಸಂಶೋಧನೆಯಲ್ಲಿ ಉಪಯೋಗಿಸುವ ರಾಕೆಟ್, ಕೃತಕ ಉಪಗ್ರಹ, ಗಗನನೌಕೆ ಇತ್ಯಾದಿಗಳಲ್ಲಿ ಇವು ಹೆಚ್ಚಿನ ಸಂಖ್ಯೆಯಲ್ಲಿ ಬಳಕೆಗೆ ಬರುತ್ತಿವೆ. ವೋಲ್ಟಾ ಮಾದರಿಯ ಕೋಶಗಳೊಂದಿಗೆ ಹೋಲಿಸಿದಾಗ ನಿತ್ಯಜೀವನದಲ್ಲಿ ಈ ಬಗೆಯ ಕೋಶಗಳು ಇಲ್ಲವೇ ಇಲ್ಲ ಎನ್ನುವಷ್ಟುಮಟ್ಟಿಗೆ ಕಡಿಮೆ ಬಳಕೆಯಲ್ಲಿವೆ.

ಇದಕ್ಕೆ ಕಾರಣ ಈ ಕೋಶಗಳಿಂದ ದೊರೆಯುವ ವಿದ್ಯುಚ್ಛಕ್ತಿ ಬಲು ಕಡಿಮೆ ಇರುವುದು ಮತ್ತು ಕೆಲವು ಸಂದರ್ಭಗಳಲ್ಲಿ ಈ ಬಗೆಯ ಕೋಶಗಳನ್ನು ಉಪಯೋಗಿಸುವುದಕ್ಕೆ ತಗಲುವ ಅಧಿಕವೆಚ್ಚ. ಆಕಾಶ ಸಂಶೋಧನೆಯಲ್ಲಿ ಈ ಕೋಶಗಳ ಹೆಚ್ಚಿನ ಉಪಯುಕ್ತತೆಗೆ ಕಾರಣಗಳಿವು :1 ಕೋಶಗಳು ಪರಿಸರದಿಂದ ಶಕ್ತಿಯನ್ನು ಪಡೆದುಕೊಳ್ಳುವ ಅನುಕೂಲತೆ (ಉದಾಹರಣೆಗೆ ಸೌರಕೋಶ). 2 ಕೋಶಗಳ ಅತಿದೀರ್ಘ ಬಾಳಿಕೆ (ಉದಾಹರಣೆಗೆ, ನ್ಯೂಕ್ಲಿಯರ್ ಕೋಶ).3 ಕೋಶ ಕೆಲಸಮಾಡಲು ಬೇಕಾಗುವ ಇಂಧನ ಪದಾರ್ಥಗಳನ್ನು ಕ್ಷಿಪಣಿಗಳಲ್ಲಿ ಒಯ್ಯಲು ಇರುವ ಸೌಲಭ್ಯ (ಉದಾಹರಣೆಗೆ, ಇಂಧನಕೋಶಕ್ಕೆ ಬೇಕಾಗುವ ಜಲಜನಕ ಆಮ್ಲಜನಕಗಳು ರಾಕೆಟಿನ ಇಂಧನವೂ ಆಗಿವೆ). 4 ಕಡಿಮೆ ವಿದ್ಯುತ್ತಿನಿಂದ ಕೆಲಸಮಾಡುವ ವಿದ್ಯುದುಪಕರಣಗಳಿಗೆ ವಿದ್ಯುತ್ತನ್ನು ಅತಿ ಕಡಿಮೆಗಾತ್ರ ಮತ್ತು ತೂಕದ ಈ ಕೋಶಗಳು ಒದಗಿಸುವ ಸಾಮರ್ಥ್ಯ ಪಡೆದಿರುವಿಕೆ.



ಚಿತ್ರ 6 ಕ್ಯಾಲೊಮಲ್ ಎಲೆಕ್ಟ್ರೋಡ್: 1 ಪೊಟ್ಯಾಸಿಯಂ ಕ್ಲೋರೈಡ್ ದ್ರಾವಣ, 2 ಪ್ಲಾಟಿನಂ ತಂತಿ

ಆಕಾಶ ಸಂಶೋಧನೆಯ ಉಪಕರಣಗಳಲ್ಲಿ ಸಹ ಹೆಚ್ಚಿನ ವಿದ್ಯುತ್ತಿನ ಆವಶ್ಯಕತೆಯ ಸಂದರ್ಭಗಳಲ್ಲಿ (ಉದಾಹರಣೆಗೆ, ದೀಪ, ಹವಾನಿಯಂತ್ರಣ ಯಂತ್ರ ಇತ್ಯಾದಿ) ವಿಶೇಷ ರೀತಿಯಲ್ಲಿ ರಚಿಸಿದ ವೋಲ್ಟಾಮಾದರಿಯ ಕೋಶಗಳೇ ಬಳಕೆಯಲ್ಲಿವೆ.

**ಸೌರವಿದ್ಯುತ್‌ಕೋಶ :** ಈ ಬಗೆಯ ಕೋಶಗಳು ಸೂರ್ಯನ ಬೆಳಕಿನ ಶಕ್ತಿಯನ್ನು ವಿದ್ಯುತ್ತಾಗಿ ಪರಿವರ್ತಿಸುತ್ತವೆ. ಕೋಶದ ಕ್ರಿಯೆಯನ್ನು ದ್ಯುತಿ ವಿದ್ಯುದುತ್ಪಾದನ ಪರಿಣಾಮದಿಂದ (ಫೋಟೋವೋಲ್ಟೇಯಿಕ್ ಎಫೆಕ್ಟ್) ವಿವರಿಸಬಹುದು. ಈ ಬಗೆಯ ಕೋಶಗಳನ್ನು ಸಾಮಾನ್ಯವಾಗಿ ಸಿಲಿಕಾನ್ ವಸ್ತುವಿನಿಂದ ತಯಾರಿಸಿರುತ್ತಾರೆ. ಪರಿಶುದ್ಧ ಸಿಲಿಕಾನ್ n– ವಿಧದ ಅರೆವಿದ್ಯುದ್ವಾಹಕವಾಗಿದ್ದು ಇದರಲ್ಲಿ ಸ್ವತಂತ್ರ ಎಲೆಕ್ಟ್ರಾನುಗಳ ಚಲನೆಯಿಂದಾಗಿ ವಿದ್ಯುತ್ಪ್ರವಾಹ ಉಂಟಾಗುತ್ತದೆ. ಇವುಗಳಲ್ಲಿರುವ ಸ್ವತಂತ್ರ ಎಲೆಕ್ಟ್ರಾನುಗಳ ಸಂಖ್ಯೆ ವಿದ್ಯುದ್ವಾಹಕ ಲೋಹಗಳಲ್ಲಿರುವುದಕ್ಕಿಂತ ಬಲು ಕಡಿಮೆ. n– ವಿಧದ ಅರೆವಿದ್ಯುದ್ವಾಹಕಗಳಿರುವಂತೆ p– ವಿಧದ ಅರೆವಿದ್ಯುದ್ವಾಹಕಗಳೂ ಇವೆ. ಇವುಗಳಲ್ಲಿ ಸ್ವತಂತ್ರವಾಗಿ ಚಲಿಸುವ ಧನವಿದ್ಯುತ್ತಿನ ರಂಧ್ರಗಳಿದ್ದು ಈ ರಂಧ್ರಗಳ ಚಲನೆಯಿಂದಾಗಿ ವಿದ್ಯುತ್ಪ್ರವಾಹ ಉಂಟಾಗುತ್ತದೆ. ಪರಮಾಣುವಿನಲ್ಲಿ ಎಲೆಕ್ಟ್ರಾನು ಇರಬೇಕಾದ ಸ್ಥಳದಲ್ಲಿ ಎಲೆಕ್ಟ್ರಾನು ಇಲ್ಲದಿರುವಿಕೆಯನ್ನು ರಂಧ್ರದಿಂದ ನಿರ್ದೇಶಿಸುತ್ತಾರೆ. p– ವಸ್ತುವಿನಲ್ಲಿ ಅಧಿಕಸಂಖ್ಯೆಯ ರಂಧ್ರಗಳ ಚಲನೆಯೊಂದಿಗೆ ಅಲ್ಪಸಂಖ್ಯೆಯ ಸ್ವತಂತ್ರ ಎಲೆಕ್ಟ್ರಾನುಗಳ ಚಲನೆಯೂ n– ವಸ್ತುವಿನಲ್ಲಿ ಅಧಿಕಸಂಖ್ಯೆಯ ಎಲೆಕ್ಟ್ರಾನುಗಳ ಚಲನೆಯೊಂದಿಗೆ ಅಲ್ಪಸಂಖ್ಯೆಯ ರಂಧ್ರಗಳ ಚಲನೆಯೂ ಇರಬಹುದು. ಎಲೆಕ್ಟ್ರಾನು ಮತ್ತು ರಂಧ್ರಗಳು ವ್ಯತಿರಿಕ್ತ ವಿದ್ಯುತ್ತನ್ನು ಪಡೆದಿದ್ದು ವಿಭವ ಇರುವಾಗ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತವೆ. ಸಾಮಾನ್ಯ ಸ್ಥಿತಿಯಲ್ಲಿ n– ಮತ್ತು p– ವಸ್ತುಗಳಲ್ಲಿ ವಿದ್ಯುತ್ ಕಣಗಳ ಅವ್ಯವಸ್ಥಿತ ಚಲನೆ ಇರುವುದಾದರೂ ವಿದ್ಯುತ್ ಸ್ಥಿತಿಯನ್ನು ಗಮನಿಸಿದಾಗ ಈ ವಸ್ತುಗಳು ವಿದ್ಯುದ್ರಹಿತವಾಗಿರುತ್ತವೆ. ಶುದ್ಧ ಸಿಲಿಕಾನ್ ವಸ್ತುವನ್ನು ಬೋರಾನಿನ ಆವಿಯ ವಾತಾವರಣದಲ್ಲಿಟ್ಟಾಗ n– ವಿಧದ ಸಿಲಿಕಾನಿನ ಹೊರಮೈಮೇಲೆ p – ವಿಧದ ವಸ್ತುವಿನ ಅತಿ ತೆಳುವಾದ ಪದರ ಉಂಟಾಗುತ್ತದೆ. ಇಂಥ ರಚನೆ p– ಮತ್ತು n– ವಿಧದ ವಸ್ತುಗಳು ಅತಿ ನಿಕಟವಾಗಿ ಸಂಪರ್ಕಗೊಂಡಿರುವ ಸಂಘಟಿತ $p^{n}$ ಅರೆವಿದ್ಯುದ್ವಾಹಕ ವಸ್ತುವಾಗಿರುತ್ತದೆ.

ಈ ರಚನೆಯನ್ನು $p^{n}$ ಸಂಧಿ ಎಂದೂ p ಮತ್ತು n ವಸ್ತುಗಳು ಸೇರುವ ಜಾಗವನ್ನು ಪ್ರತಿಬಂಧಕ (ಬ್ಯಾರಿಯರ್) ಎಂದೂ ಕರೆಯುತ್ತಾರೆ. $p^{n}$ ಸಂಧಿಯಲ್ಲಿಯ p– ಮತ್ತು n –ವಸ್ತುಗಳಲ್ಲಿರುವ ರಂಧ್ರ ಮತ್ತು ಎಲೆಕ್ಟ್ರಾನುಗಳು ಒಂದನ್ನೊಂದು ಆಕರ್ಷಿಸುವುದರಿಂದ p– ಮತ್ತು n – ವಸ್ತುಗಳ ಕಡೆಗೆ ಈ ವಿದ್ಯುದ್ವಾಹಿ ಕಣಗಳ ಚಲನೆ ಪ್ರತಿಬಂಧಕದ ಮೂಲಕವಾಗಿ ನಡೆಯುತ್ತದೆ. ಆದರೆ ಈ ರೀತಿಯ ಎಲೆಕ್ಟ್ರಾನು ಮತ್ತು ರಂಧ್ರಗಳ ಚಲನೆ ಪ್ರತಿಬಂಧಕದ ಮೂಲಕವಾಗಿ ಅವಿಚ್ಛಿನ್ನವಾಗಿ ನಡೆಯಲು ಸಾಧ್ಯವಿರುವುದಿಲ್ಲ. p– ವಸ್ತುವಿನಲ್ಲಿಯ ರಂಧ್ರಗಳು ಪ್ರತಿಬಂಧಕವನ್ನು ದಾಟಿ n– ವಸ್ತುವಿನಲ್ಲಿಯ ಎಲೆಕ್ಟ್ರಾನುಗಳೊಡನೆ ಸೇರಿ ವಿದ್ಯುದ್ರಹಿತವಾಗುತ್ತವೆ. ಇದರಿಂದಾಗಿ ವಿದ್ಯುದ್ರಹಿತ n– ವಸ್ತುವಿನಲ್ಲಿ ಎಲೆಕ್ಟ್ರಾನುಗಳ ಅಭಾವ ಉಂಟಾಗಿ n- ವಸ್ತು ಧನ ವಿದ್ಯುತ್ ಸ್ಥಿತಿಯನ್ನು ಪಡೆಯುತ್ತದೆ. ಈ ಧನ ವಿದ್ಯುತ್ ಸ್ಥಿತಿ ಪ್ರತಿಬಂಧಕದ ಬದಿಯಲ್ಲಿ ಹೆಚ್ಚಾಗಿರುವುದರಿಂದ ಇನ್ನೂ ಹೆಚ್ಚಿನ ರಂಧ್ರಗಳು p–ವಸ್ತುವಿನಿಂದ n–



ಚಿತ್ರ 17 ಸೌರವಿದ್ಯುತ್ ಕೋಶ : (a) *p-n* ಸಂಧಿಯಲ್ಲಿ ಎಲೆಕ್ಟ್ರಾನ್ ಮತ್ತು ರಂಧ್ರಗಳ ಚಲನೆಯಿಂದ ಸಂಧಿ ವಿದ್ಯುತ್ ವಿಭವ (Vz) ಉಂಟಾಗುತ್ತದೆ. ಚಿತ್ರದಲ್ಲಿ 1 ರಂಧ್ರ, 2 ಎಲ್ಲೆ, 3 ಋಣ ವಿದ್ಯುತ್ ಸ್ಥಿತಿ, 4 ಎಲೆಕ್ಟ್ರಾನ್, 5 ಧನ ವಿದ್ಯುತ್ ಸ್ಥಿತಿ, (a) *p-n* ಸಂಧಿಗೆ ಮುನ್ನೆಡೆಯ ವಿಭವ, ಚಿತ್ರದಲ್ಲಿ 6 ಬಾಹ್ ವಿದ್ಯುತ್ ವಿಭವ. (c) *p-n* ಸಂಧಿಗೆ ಹಿಮ್ಮೊಗದ ವಿಭವ. ಚಿತ್ರದಲ್ಲಿ 7 ಬಾಹ್ಯ ವಿದ್ಯುತ್ ವಿಭವ.

ವಸ್ತುವಿಗೆ ಬರುವುದನ್ನು ತಡೆಯುತ್ತದೆ. ಇದೇ ರೀತಿಯಾಗಿ ಪ್ರತಿಬಂಧಕದ ಇನ್ನೊಂದು ಬದಿಯಲ್ಲಿ (p– ವಸ್ತುವಿನಲ್ಲಿ) ಋಣ ವಿದ್ಯುತ್ ಸ್ಥಿತಿ ಉಂಟಾಗಿ n– ವಸ್ತುವಿನಿಂದ ಎಲೆಕ್ಟ್ರಾನುಗಳು p –ವಸ್ತುವಿಗೆ ಚಲಿಸುವಲ್ಲಿ ತಡೆ ಉಂಟಾಗುತ್ತದೆ. ಪ್ರತಿಬಂಧಕದ ಎರಡು ಬದಿಗಳಲ್ಲಿ ಉಂಟಾಗುವ ಈ ವ್ಯತಿರಿಕ್ತ ವಿದ್ಯುತ್ ಸ್ಥಿತಿಗಳನ್ನು ಸಂಧಿವಿಭವದಿಂದ (ಜಂಕ್ಷನ್ ಪೊಟೆನ್ಷಿಯಲ್) ನಿರ್ದೇಶಿಸುತ್ತಾರೆ. $p^{n}$ ಸಂಧಿಯಲ್ಲಿನ ಪ್ರತಿಬಂಧಕದ ಬದಿಗಳಲ್ಲಿ ಅತಿ ತೆಳುವಾದ ಪದರದಲ್ಲಿ (ಸುಮಾರು $10^{-4}$ ಸೆಂ.ಮೀ ದಪ್ಪ) ಈ ವಿದ್ಯುತ್ ಸ್ಥಿತಿಯುಂಟಾಗುತ್ತದೆ. ಈ ಪದರಕ್ಕೆ ಶೋಷಕಪದರ ಎಂದು ಹೆಸರು. ಈಗ p-n ಸಂಧಿಯನ್ನು ಸಾಕಷ್ಟು ಮೊತ್ತದ ಬಾಹ್ಯವಿಭವದೊಂದಿಗೆ ಸಂಪರ್ಕಗೊಳಿಸಿ p ಯನ್ನು ಧನ ವಿಭವಕ್ಕೂ n– ವಸ್ತುವನ್ನು ಋಣ ವಿಭವಕ್ಕೂ ಒಳಪಡಿಸಿದರೆ p– ಮತ್ತು n- ವಸ್ತುಗಳಲ್ಲಿನ ವಿದ್ಯುದ್ವಾಹಿಕಣಗಳು ಬಾಹ್ಯವಿಭವದಿಂದ ವಿಕರ್ಷಿತವಾಗಿ ಸಂಧಿ ವಿದ್ಯುದ್ವಿಭವವನ್ನು ದಾಟಿ p-n ವಸ್ತುಗಳಲ್ಲಿ ಚಲಿಸಿ ಬಾಹ್ಯಮಂಡಲದಲ್ಲಿ ಹರಿಯುವುದರಿಂದ ಉಪಯುಕ್ತ ವಿದ್ಯುತ್ಪ್ರವಾಹ ಉಂಟಾಗುತ್ತದೆ. ಬಾಹ್ಯ ವಿದ್ಯುದ್ವಿಭವದ ಧ್ರುವಗಳನ್ನು ಅದಲು ಬದಲು ಮಾಡಿ p ಗೆ ಋಣ ವಿಭವವನ್ನೂ n ಗೆ ಧನ ವಿಭವವನ್ನೂ ಒದಗಿಸಿದಾಗ ಬಾಹ್ಯವೋಲ್ಟೇಜ್ ವಿಭವದಂತೆಯೇ ವರ್ತಿಸಿ ಎಲೆಕ್ಟ್ರಾನ್ ಮತ್ತು ರಂಧ್ರಗಳ ಚಲನೆಗೆ ಇನ್ನೂ ಹೆಚ್ಚಿನ ಅಡಚಣೆಯನ್ನುಂಟುಮಾಡುತ್ತದೆ.

p-n ಸಂಧಿಯಲ್ಲಿನ ಈ ರೀತಿಯ ವಿದ್ಯುತ್ ಗುಣ p-n ಸಂಧಿಯನ್ನು ವಿದ್ಯುತ್ ಪರಿಶೋಧಕವನ್ನಾಗಿ (ಎಲೆಕ್ಟ್ರಿಕ್ ರೆಕ್ಟಿಫೈಯರ್) ಉಪಯೋಗಿಸಲು ಅನುಕೂಲವಾಗಿದೆ. ಈಗ ಸಿಲಿಕಾನ್–ಬೋರಾನ್ p-n ಸಂಧಿಯ p- ಭಾಗವನ್ನು ಸೂರ್ಯನ ಬೆಳಕಿಗೆ ತೆರೆದಿಟ್ಟಾಗ ಬೆಳಕಿನ ಕಣಗಳು (ಫೋಟಾನುಗಳು) p – ವಸ್ತುವಿನ ಅತಿ ತೆಳುವಾದ ಪದರದಲ್ಲಿ (0.00001 ಸೆಂಮೀ) ಹೀರಲ್ಪಡುತ್ತವೆ. ಬೆಳಕಿನ ಕಣಗಳ ಶಕ್ತಿ p –ವಸ್ತುವಿನ ಪರಮಾಣುಗಳಿಂದ ಎಲೆಕ್ಟ್ರಾನುಗಳನ್ನು ಬಿಡುಗಡೆ ಮಾಡುತ್ತದೆ. p – ವಸ್ತು ಹೀರುವ ಒಂದೊಂದು ಫೋಟಾನ್ ಕಣವೂ ಒಂದೊಂದು ಎಲೆಕ್ಟ್ರಾನನ್ನು ಬಿಡುಗಡೆ ಮಾಡುತ್ತದೆ. ಪರಮಾಣುವಿನಲ್ಲಿ ಎಲೆಕ್ಟ್ರಾನುಗಳು ಬಿಡುಗಡೆಯಾದ ಸ್ಥಳದಲ್ಲಿ ರಂಧ್ರಗಳೂ ಸೃಷ್ಟಿಯಾಗುತ್ತವೆ. ಹೀಗೆ ಹೊಸದಾಗಿ ಸೃಷ್ಟಿಯಾದ ಎಲೆಕ್ಟ್ರಾನ್ ಮತ್ತು ರಂಧ್ರಗಳು p– ವಸ್ತುವಿನಲ್ಲಿ ಸ್ವತಂತ್ರವಾಗಿ ಚಲಿಸಬಲ್ಲುವು. ಸಾಮಾನ್ಯ ಸ್ಥಿತಿಯ p – ವಸ್ತುವಿನಲ್ಲಿನ ಸ್ವತಂತ್ರ ವಿದ್ಯುತ್‌ಕಣಗಳ ಸಾಂದ್ರತೆಯನ್ನು ಗಮನಿಸಿದಾಗ ಬೆಳಕಿನ ಕಣಗಳು ಹೀರಲ್ಪಡುವುದರಿಂದ p- ವಸ್ತುವಿನಲ್ಲಿನ ಎಲೆಕ್ಟ್ರಾನುಗಳ ಸಾಂದ್ರತೆ ಒಮ್ಮೆಗೇ ಜಾಸ್ತಿಯಾಗುತ್ತದೆ. ಆದರೆ ರಂಧ್ರಗಳ ಸಾಂದ್ರತೆ ಅಷ್ಟೇ ಮೊತ್ತದಲ್ಲಿ ಜಾಸ್ತಿಯಾಗುವುದಿಲ್ಲ. p – ವಸ್ತುವಿನಲ್ಲಿನ ಹೆಚ್ಚಳದ ಎಲೆಕ್ಟ್ರಾನುಗಳಲ್ಲಿ ಸಾಕಷ್ಟು ಚಲನಶಕ್ತಿ ಇದ್ದಾಗ ಇವು ಸಂಧಿವಿಭವವನ್ನು ದಾಟಿ n– ವಸ್ತುವನ್ನು ಸೇರುತ್ತದೆ. n- ವಸ್ತುವಿನಲ್ಲಿ ಎಲೆಕ್ಟ್ರಾನುಗಳು ಸ್ವತಂತ್ರವಾಗಿ ಚಲಿಸಬಲ್ಲವಾದ್ದರಿಂದ p ಯಿಂದ ಬಂದ ಎಲೆಕ್ಟ್ರಾನುಗಳು ಬಾಹ್ಯಪರಿಧಿಯನ್ನು ಸೇರಿ ಉಪಯುಕ್ತವಾದ ವಿದ್ಯುತ್ಪ್ರವಾಹವನ್ನು ಉಂಟುಮಾಡುತ್ತವೆ. n– ವಿಧದ ಸಿಲಿಕಾನ್ ವಸ್ತುವಿನ ಮೇಲೆ ಬೋರಾನ್ ವಸ್ತುವನ್ನು ವ್ಯಾಪಿಸಿ (ಡಿಫ್ಯೂಸ್ಡ್ ಬೋರಾನ್) p-n ಸಂಧಿಯನ್ನು ರಚಿಸುವಂತೆಯೇ p– ವಿಧದ ಸಿಲಿಕಾನ್ ವಸ್ತುವಿನ ಮೇಲೆ ರಂಜಕದ ಕಣಗಳನ್ನು ವ್ಯಾಪಿಸುವುದರಿಂದ n-p ಸಂಧಿಯನ್ನೂ ತಯಾರಿಸಬಹುದು. ಈಗ n – ವಸ್ತುವನ್ನು ಬೆಳಕಿಗೆ ತೆರೆದಿಟ್ಟಾಗ ಸಹ n –ವಸ್ತುವಿನಲ್ಲಿ ಬೆಳಕಿನ ಕಣಗಳು ಹೀರಲ್ಪಟ್ಟು ಎಲೆಕ್ಟ್ರಾನ್ ರಂಧ್ರಗಳು ಸೃಷ್ಟಿಯಾಗಿ ಇವು ಬಾಹ್ಯ ಮಂಡಲದಲ್ಲಿ ಚಲಿಸುವುದರಿಂದ ವಿದ್ಯುತ್ಪ್ರವಾಹ ಉಂಟಾಗುತ್ತದೆ. ವೋಲ್ಟಾ ಮಾದರಿಯ ಕೋಶಗಳನ್ನು ಸ್ಥಿರ ವೋಲ್ಟೇಜ್ ಉತ್ಪಾದಕ ಎನ್ನುವಂತೆ ಸೌರಶಕ್ತಿ ಕೋಶಗಳನ್ನು ಸ್ಥಿರವಿದ್ಯುತ್‌ಪ್ರವಾಹ ಉತ್ಪಾದಕಗಳು ಎಂದು ಕರೆಯುತ್ತಾರೆ.

ಪರಿಸರದ ಉಷ್ಣತೆ ಸೌರಶಕ್ತಿಕೋಶದ ಕ್ರಿಯೆಯನ್ನು ಗಮನಾರ್ಹವಾಗಿ ಬದಲಾಯಿಸುತ್ತದೆ. ಉಷ್ಣತೆ ಕಡಿಮೆ ಇರುವಾಗ ಕೋಶದ ವಿದ್ಯುದುತ್ಪಾದನೆ ಹೆಚ್ಚಾಗುತ್ತದೆ. ಸೌರಶಕ್ತಿ ವಿದ್ಯುತ್ ಕೋಶಗಳನ್ನು ಅತಿ ಎತ್ತರಕ್ಕೆ ಹಾರುವ ಕ್ಷಿಪಣಿಗಳಲ್ಲಿ ಮತ್ತು ಕೃತಕ ಉಪಗ್ರಹಗಳಲ್ಲಿ ಉಪಯೋಗಿಸಿದಾಗ ಸಮರ್ಪಕವಾಗಿ ಕೆಲಸ ಮಾಡುವುದು ಕಂಡುಬಂದಿದೆ. ಉಪಗ್ರಹ ಭೂಮಿಯ ಸನಿಹದಲ್ಲಿ ಸಂಚರಿಸುವಾಗ ಕೋಶ ವಿದ್ಯುತ್ತನ್ನು ಉತ್ಪಾದಿಸುವುದಿಲ್ಲವಾದ್ದರಿಂದ ಆ ಸಮಯದಲ್ಲಿ ವಿದ್ಯುತ್ ಪೂರೈಕೆಗೆ ವೋಲ್ಟಾ ಮಾದರಿಯ ಕೋಶಗಳನ್ನು ಉಪಯೋಗಿಸಬೇಕಾಗುತ್ತದೆ. ಅಂತರಗ್ರಹಯಾನ ನೌಕೆಗಳಲ್ಲಿ ಸೌರಶಕ್ತಿಕೋಶಗಳನ್ನು ಉಪಯೋಗಿಸಿದಾಗ ಕೋಶಗಳಿರುವ ಭಾಗ ಯಾವಾಗಲೂ ತಾನೇ ತಾನಾಗಿ ಸೂರ್ಯನ ಕಡೆಗೆ ತಿರುಗಿ ನಿಂತಿರುವಂಥ ಏರ್ಪಾಡು ಇರುತ್ತದೆ. ಕೋಶಗಳು ಸಮರ್ಪಕವಾಗಿ ಕೆಲಸಮಾಡಲು ಸೂರ್ಯನ ಬೆಳಕನ್ನು ಯಥೇಚ್ಛವಾಗಿ ಪಡೆಯಬೇಕಾದ್ದರಿಂದ ಕೋಶಗಳನ್ನು ಆಕಾಶನೌಕೆಯ ಹೊರಗೇ ಇಡಬೇಕಾಗುತ್ತದೆ. ಇದರಿಂದಾಗಿ ಕೋಶಗಳು ಆಕಾಶದಲ್ಲಿ ಸದಾಕಾಲ ಇರುವ ಅನೇಕ ರೀತಿಯ ವಿಕಿರಣಪಟು ಕಣಗಳನ್ನು (ಉದಾಹರಣೆಗೆ ಅಧಿಕಶಕ್ತಿಯ ಎಲೆಕ್ಟ್ರಾನ್, ಪ್ರೋಟಾನ್, ಎಕ್ಸ್‌ಕಿರಣ, ಗಾಮಾಕಿರಣ ಇತ್ಯಾದಿ) ಎದುರಿಸಬೇಕಾಗುತ್ತದೆ. ಸಾಮಾನ್ಯವಾಗಿ ಅರೆವಿದ್ಯುದ್ವಾಹಕಗಳು ವಿಕಿರಣಪಟುತ್ವಕ್ಕೆ ಒಳಗಾದಾಗ ಅವುಗಳಲ್ಲಿ ಉಂಟಾಗುವ ಭೌತ ಮತ್ತು ರಾಸಾಯನಿಕ ಬದಲಾವಣೆಗಳಿಂದಾಗಿ ಸಮರ್ಪಕವಾಗಿ ಕೆಲಸಮಾಡುವುದಿಲ್ಲ. ಇತ್ತೀಚಿನ ಸಂಶೋಧನೆಗಳ ಪ್ರಕಾರ ಸಿಲಿಕಾನಿಗೆ ಅತ್ಯಲ್ಪಮೊತ್ತದ ಲೀಥಿಯಂನ್ನು ಸೇರಿಸುವುದರಿಂದ ಕೋಶಗಳಿಗೆ ವಿಕಿರಣಪಟು ಕಣಗಳಿಂದುಂಟಾಗುವ ಹಾನಿ ತಪ್ಪುತ್ತದೆಂದು ತಿಳಿದುಬಂದಿದೆ.

**ಇಂಧನ ವಿದ್ಯುತ್ ಕೋಶ :** ಇದನ್ನು ಒಂದು ಬಗೆಯ ಪ್ರಧಾನ ವಿದ್ಯುತ್ ಕೋಶವೆಂದು ಸಹ ಪರಿಗಣಿಸಬಹುದು. ಆದರೆ ಇದರಲ್ಲಿನ ರಾಸಾಯನಿಕ ಪದಾರ್ಥಗಳು ಕೋಶದಲ್ಲಿನ ಎಲೆಕ್ಟ್ರೋಡ್ ರೂಪದಲ್ಲಾಗಲಿ ಇಲ್ಲವೆ ದ್ರಾವಣದ ರೂಪದಲ್ಲಾಗಲಿ ಇರದೆ ಕೋಶದ ಮೂಲಕ ಪ್ರವಹಿಸುವ ಇಂಧನ ಅನಿಲಗಳಾಗಿವೆ. ಸರಳ ರೀತಿಯ ಇಂಧನ ಕೋಶವನ್ನು ಚಿತ್ರ 18ರಲ್ಲಿ ತೋರಿಸಿದೆ. ಈ ಕೋಶದಲ್ಲಿ ಜಲಜನಕ ಮತ್ತು ಆಮ್ಲಜನಕ ಅನಿಲಗಳು ಬೇರೆ ಬೇರೆಯಾಗಿ ಸೂಕ್ಷ್ಮ ರಂಧ್ರಗಳಿರುವ ನಾಳಗಳಲ್ಲಿ ಪ್ರವಹಿಸುತ್ತವೆ. ಅನಿಲಗಳು ರಂಧ್ರಗಳ ಮೂಲಕ ಕೋಶದಲ್ಲಿರುವ ಪೊಟ್ಯಾಸಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿ ಪ್ರಸರಿಸುತ್ತವೆ.

ಆದರೆ ದ್ರಾವಣದಿಂದ ಅನಿಲಗಳು ಪುನಃ ನಾಳಗಳ ಒಳಕ್ಕೆ ಪ್ರವೇಶಿಸದಂತೆ ನಾಳಗಳಲ್ಲಿನ ಅನಿಲದ ಒತ್ತಡ ತಡೆಯುತ್ತದೆ. ಅನಿಲನಾಳಗಳನ್ನು ದ್ರಾವಣವೇ ಆಗಲಿ ಅನಿಲಗಳೇ ಆಗಲಿ ನಾಶಪಡಿಸದಂಥ ಅಂದರೆ (ತುಕ್ಕು ಹಿಡಿಯದಂಥ) ಲೋಹದಿಂದ ತಯಾರಿಸಿರುತ್ತಾರೆ. ವಿದ್ಯುದುತ್ಪಾದನೆಯಲ್ಲಿ ಕೋಶದಲ್ಲಿನ ಕ್ರಿಯೆ ಈ ರೀತಿ ಇದೆ :




ಚಿತ್ರ 18 ಇಂಧನ ವಿದ್ಯುತ್ ಕೋಶ: ಪೊಟ್ಯಾಸಿಯಂ ಹೈಡ್ರಾಕ್ಸೈಡ್ ದ್ರಾವಣ, 2 ಕೋಶ

ಕ್ರಿಯೆ 1, ಎಡನಾಳದ ಬಳಿ : $H_2 + 2OH \quad 2H_2O + 2e^-$

ಕ್ರಿಯೆ 2. ಬಲನಾಶದ ಬಳಿ : $\frac{1}{2}O_2 + H_2O \quad 2OH^- - 2e^-$

ಆದ್ದರಿಂದ ಕೋಶದಲ್ಲಿ ಜಲಜನಕ ಆಮ್ಲಜನಕಗಳನ್ನು 2:1 ರ ನಿಷ್ಪತ್ತಿಯಲ್ಲಿಟ್ಟಾಗ 2ನೆಯ ಕ್ರಿಯೆಯಲ್ಲಿ ಬಿಡುಗಡೆಯಾದ ಹೈಡ್ರಾಕ್ಸಿಲ್ ಅಯಾನುಗಳು ($OH^-$) 1ನೆಯ ಕ್ರಿಯೆಯಲ್ಲಿ ವ್ಯಯವಾಗಿ ಕೋಶದ ಆದ್ಯಂತಕ್ರಿಯೆಯಲ್ಲಿ ನೀರು ($H_2O$) ಉಂಟಾಗುತ್ತದೆ. ಇದರ ಜೊತೆಗೆ ಎಡನಾಳದ ಬಳಿ ಬಿಡುಗಡೆಯಾದ ಎಲೆಕ್ಟ್ರಾನುಗಳು ಬಲನಾಳದ ಬಳಿ ವ್ಯಯವಾಗುತ್ತವೆ. ಎಡ ಮತ್ತು ಬಲನಾಳಗಳಿಗೆ ಬಾಹ್ಯ ವಿದ್ಯುನ್ಮಂಡಲದ ಮೂಲಕ ಸಂಪರ್ಕ ಕಲ್ಪಿಸಿದಾಗ ಮೇಲಿನ ಕ್ರಿಯೆಯಲ್ಲಿನ ಎಲೆಕ್ಟ್ರಾನುಗಳು ಎಡನಾಳದಿಂದ ಹೊರಟು ಮಂಡಲದಲ್ಲಿ ಪ್ರವಹಿಸಿ ಬಲನಾಳದ ಮೂಲಕ ದ್ರಾವಣವನ್ನು ಸೇರುತ್ತವೆ. ಇದರಿಂದಾಗಿ ಬಾಹ್ಯಮಂಡಲದಲ್ಲಿ ಉಪಯುಕ್ತ ವಿದ್ಯುತ್‌ಪ್ರವಾಹ ಉಂಟಾಗುತ್ತದೆ. ಕೋಶದಲ್ಲಿನ ರಾಸಾಯನಿಕ ಪದಾರ್ಥಗಳು ಅವುಗಳ ಶಿಷ್ಟಸ್ಥಿತಿಯಲ್ಲಿ (ಸ್ಟ್ಯಾಂಡರ್ಡ್ ಸ್ಟೇಟ್) ಇದ್ದಾಗ ಕೋಶ 1.17 ವೋಲ್ಟುಗಳಷ್ಟು ವಿಭವವನ್ನು 1–2 ಆ್ಯಂಪಿಯರ್/ಚದರ ಮೀಟರ್ ವಿದ್ಯುತ್ಪ್ರವಾಹ ಸಾಂದ್ರತೆಯಲ್ಲಿ ಕೊಡಬಲ್ಲುದು.

ಎಲೆಕ್ಟ್ರೋಡುಗಳು (ಅನಿಲನಾಳಗಳು) ಬಲು ಬೇಗನೆ ಅನಿಲಗಳ ಅಶುದ್ಧತೆಯಿಂದಾಗಿ, ಮುಖ್ಯವಾಗಿ ಜಲಜನಕದ ಅಶುದ್ಧತೆಯಿಂದಾಗಿ, ನಶಿಸಿಹೋಗುವುದರಿಂದ ಇಂಧನ ಕೋಶಗಳಲ್ಲಿನ ಮುಖ್ಯ ತೊಂದರೆ ಉಂಟಾಗುವುದು. ಕೋಶಕ್ಕೆ ಬೇಕಾಗುವ ಪರಿಶುದ್ಧ ಜಲಜನಕ ಅನಿಲವನ್ನು ತಯಾರಿಸುವುದಕ್ಕೆ ತಗಲುವ ವೆಚ್ಚ ಅಪಾರ. ಇಂಧನಶಕ್ತಿಕೋಶದಷ್ಟೇ ವಿದ್ಯುಚ್ಛಕ್ತಿಯನ್ನು ಉಷ್ಣ–ವಿದ್ಯುಜ್ಜನಕ–ಯಂತ್ರಗಳಿಂದ (ಥರ್ಮೋ ಎಲೆಕ್ಟ್ರಿಕ್ ಜನರೇಟರ್ಸ್) ಪಡೆಯುವ ವೆಚ್ಚಕ್ಕೆ ಹೋಲಿಸಿದಾಗ ಇಂಧನಕೋಶದ ವೆಚ್ಚ ಹಲವು ಪಾಲು ಹೆಚ್ಚು ಇರುತ್ತದೆ. ಆದರೆ ಬಾಹ್ಯಾಕಾಶ ನೌಕೆಗಳಲ್ಲಿ ಇಂಧನಶಕ್ತಿಗಾಗಿ ಘನೀಕರಿಸಿದ ಪರಿಶುದ್ಧ ಜಲಜನಕ ಮತ್ತು ಆಮ್ಲಜನಕಗಳನ್ನು ಸಮರ್ಪಕವಾಗಿ ಕೊಂಡೊಯ್ಯುವ ಸಲಕರಣೆಗಳಿರುವುದರಿಂದ ಈ ಸಂದರ್ಭದಲ್ಲಿ ಸಮರ್ಪಕವಾಗಿ ಕೆಲಸಮಾಡುವ ಅತಿ ದುಬಾರಿಯಲ್ಲದ ಇಂಧನ ಶಕ್ತಿವಿದ್ಯುತ್ ಕೋಶಗಳನ್ನು ಉಪಯೋಗಿಸಬಹುದು. ಪ್ರಾಯೋಗಿಕವಾಗಿ ಇಂಧನ ಶಕ್ತಿ ವಿದ್ಯುತ್ ಕೋಶಗಳನ್ನು ಸಣ್ಣ ಮಾದರಿಯ ವಾಹನಗಳ ಚಾಲಕ ಶಕ್ತಿಗಾಗಿ ಉಪಯೋಗಿಸಿದಾಗ ಇವು ಸಮರ್ಪಕವಾಗಿ ಕೆಲಸಮಾಡುವುದು ಕಂಡುಬಂದಿದೆ. ದೊಡ್ಡ ಗಾತ್ರದ ವಾಹನಗಳಲ್ಲಿ ಚಾಲಕಶಕ್ತಿಗೆ ಈ ಕೋಶಗಳನ್ನು ಬಳಸುವ ಸಾಧ್ಯತೆ ಉಂಟಾದಾಗ ಸ್ವಯಂಚಾಲಿತ ವಾಹನಗಳಲ್ಲಿ ಪೆಟ್ರೋಲನ್ನು ಇಂಧನವಾಗಿ ಉಪಯೋಗಿಸುವುದನ್ನು ತಪ್ಪಿಸಬಹುದು. ಪೆಟ್ರೋಲನ್ನು ಉಪಯೋಗಿಸಿಕೊಂಡು ಚಲಿಸುವ ವಾಹನಗಳು ಹೊರದೂಡುವ ಹಾನಿಕರ ಅನಿಲಗಳು ಸುತ್ತಲಿನ ವಾತಾವರಣವನ್ನು ಕಲುಷಿತಗೊಳಿಸುವುದನ್ನು ಇಂಧನಶಕ್ತಿ ವಿದ್ಯುತ್ ಕೋಶಗಳ ಬಳಕೆಯಿಂದ ತಪ್ಪಿಸುವ ಸಾಧ್ಯತೆ ಇದೆ. ದೊಡ್ಡ ದೊಡ್ಡ ಕಾರ್ಖಾನೆಗಳ ಕುಲುಮೆಗಳೊಳಕ್ಕೆ ಹೋಗುವ ಗಾಳಿಯ ಮೊತ್ತವನ್ನು ಕರಾರುವಕ್ಕಾಗಿ ನಿಯಂತ್ರಿಸಲು ಇಂಧನಕೋಶಗಳನ್ನು ಪ್ರಾಯೋಗಿಕವಾಗಿ ಉಪಯೋಗಿಸಿದಾಗ ಇವು ಅತ್ಯಂತ ಸಮರ್ಪಕವಾಗಿ ಕೆಲಸಮಾಡುವುದು ಕಂಡುಬಂದಿದೆ. ಕುಲುಮೆಯಿಂದ ಹೊರಬರುವ ಅನಿಲಗಳ ಮಾರ್ಗದಲ್ಲಿ ಇಂಧನಕೋಶವನ್ನು (ಜಿರ್‌ಕೋನಿಯಂ ಆಕ್ಸೈಡಿನ ಘನ ವಿದ್ಯುದ್ವಿಶ್ಲೇಷ್ಯವನ್ನು ಉಪಯೋಗಿಸಿ ತಯಾರಿಸಿದ ಕೋಶ) ಸೂಕ್ತ ರೀತಿಯಲ್ಲಿ ಅಳವಡಿಸಿದಾಗ ಈ ಅನಿಲಗಳಲ್ಲಿರುವ ಆಮ್ಲಜನಕದ ಮೊತ್ತಕ್ಕೆ ಅನುಸಾರವಾಗಿ ಕೋಶ ವಿದ್ಯುತ್ಪ್ರವಾಹವನ್ನು ಉಂಟುಮಾಡುತ್ತದೆ. ಕುಲುಮೆಯಲಿನ ಬೆಂಕಿ ಉರಿಯಲು ಹೊರಗಿನ ಗಾಳಿಯನ್ನು (ಆಮ್ಲಜನಕವನ್ನು) ಒದಗಿಸಿದಾಗ ಗಾಳಿಯ ಮೊತ್ತ ಸಾಕಷ್ಟಿದೆಯೆ ಇಲ್ಲವೆ ಎಂಬುದನ್ನು ಇದರಿಂದಾಗಿ ತಿಳಿಯಬಹುದು. ಕುಲುಮೆಯಿಂದ ಹೊರಬರುವ ಅನಿಲದಲ್ಲಿ ತೀರ ಕಡಿಮೆ ಆಮ್ಲಜನಕದ ಪ್ರಮಾಣ ಕುಲುಮೆಯ ಉರಿಗೆ ಸಾಕಷ್ಟು ಹೊರಗಿನ ಗಾಳಿ ಬರುತ್ತಿಲ್ಲವೆಂಬುದನ್ನು ಸೂಚಿಸುತ್ತದೆ. ಅದೇ ರೀತಿ ಕುಲುಮೆಯೊಳಕ್ಕೆ ಅತಿ ಹೆಚ್ಚಿನ ಮೊತ್ತದಲ್ಲಿ ಗಾಳಿಯನ್ನು ಒದಗಿಸಿದಾಗಲೂ ಅದರಲ್ಲಿ ಬೆಂಕಿ ಉರಿಯುವುದು ಪೂರ್ಣವಾಗದೆ (ಹೆಚ್ಚಿನ ಗಾಳಿ ಬೆಂಕಿಯನ್ನು ನಂದಿಸಲೂಬಹುದು) ಕುಲುಮೆಯಿಂದ ಹೊರಬರುವ ಅನಿಲದಲ್ಲಿ ಆಮ್ಲಜನಕದ

ಮೊತ್ತ ಹೆಚ್ಚು ಇರುತ್ತದೆ. ವಿದ್ಯುತ್‌ಕೋಶ ಉತ್ಪಾದಿಸುವ ವಿದ್ಯುತ್ತನ್ನು ಕಾರ್ಯನಿಯಂತ್ರಣ (ಸರ್ವೋ ಮೆಕ್ಯಾನಿಸಂ) ಸಾಧನಗಳೊಂದಿಗೆ ಉಪಯೋಗಿಸಿಕೊಂಡು ಕುಲುಮೆಯ ಗಾಳಿ ಸರಬರಾಜನ್ನು ವ್ಯವಸ್ಥಿತಗೊಳಿಸಬಹುದು.

**ಪರಮಾಣುಶಕ್ತಿ ವಿದ್ಯುತ್‌ಕೋಶಗಳು :** ವಿಕಿರಣಪಟುತ್ವದಲ್ಲಿ ಹೊರಬರುವ ಬೀಟ ಕಣದ ಅಥವಾ ವಿಕಿರಣಪಟುವಸ್ತುವಿನಲ್ಲಿ ಉಂಟಾಗುವ ಹೆಚ್ಚಿನ ಉಷ್ಣಶಕ್ತಿಯನ್ನು ಉಪಯೋಗಿಸಿಕೊಂಡು ಈ ಕೋಶಗಳು ವಿದ್ಯುತ್ತನ್ನು ಉತ್ಪಾದಿಸುತ್ತವೆ. ಈ ಬಗೆಯ ಕೋಶಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ : 1. ಹೆಚ್ಚು ವಿಭವದ ನ್ಯೂಕ್ಲಿಯರ್ ಕೋಶಗಳು. ಇವು ಸಾವಿರಾರು ವೋಲ್ಟ್ ವಿಭವವನ್ನು ಅತ್ಯಂತ ಕಡಿಮೆ ವಿದ್ಯುತ್ಪ್ರವಾಹದೊಂದಿಗೆ (10–12 ಆ್ಯಂಪಿಯರ್) ಒದಗಿಸುತ್ತವೆ. ಈ ಕೋಶಗಳು ವಿಕಿರಣಪಟುತ್ವದಲ್ಲಿನ ಬೀಟ ಕಣಗಳ ಶಕ್ತಿಯನ್ನು ಉಪಯೋಗಿಸಿಕೊಂಡು ಕೆಲಸಮಾಡುತ್ತವೆ. 2. ಕಡಿಮೆ ವಿಭವದ ನ್ಯೂಕ್ಲಿಯರ್ ಕೋಶಗಳು. ಇವು ಒಂದೆರಡು ವೋಲ್ಟುಗಳಷ್ಟು ವಿಭವವನ್ನು $10^{-6}$ ಆಂಪಿಯರ್ ವಿದ್ಯುತ್ಪ್ರವಾಹದೊಂದಿಗೆ ಉಂಟುಮಾಡುತ್ತವೆ. ಈ ಕೋಶಗಳು ಕೆಲಸಮಾಡುವ ವಿಧಾನದಿಂದಾಗಿ ಮೂರು ರೀತಿಯ ಕೋಶಗಳನ್ನು ಗಮನಿಸಬಹುದು : (ಎ)ಉಷ್ಣ ವಿದ್ಯುದುತ್ಪಾದಕ ಕೋಶ ; (ಬಿ) ಅನಿಲ ಅಯಾನೀಕರಣ ನ್ಯೂಕ್ಲಿಯರ್ ಕೋಶ ; (ಸಿ) ಎರಡು ಹಂತದಲ್ಲಿ ಕೆಲಸಮಾಡುವ ಮಿಣುಕು ದ್ಯುತಿ ವಿದ್ಯುದುತ್ಪಾದಕ ಕೋಶ.

ಮೇಲಿನ ಕೋಶಗಳೆಲ್ಲವೂ ವಿಕಿರಣಪಟುವಸ್ತುವನ್ನು ಉಪಯೋಗಿಸಿಕೊಂಡು ವಿದ್ಯುತ್ತನ್ನು ಉತ್ಪತ್ತಿಮಾಡುವುದರಿಂದ ಮತ್ತು ವಿಕಿರಣಪಟುತ್ವ ಸ್ವಯಂಚಲಿಯಾಗಿ ನಡೆಯುತ್ತಿರುವುದರಿಂದ ಈ ಕೋಶಗಳ ವಿದ್ಯುಚ್ಛಕ್ತಿಯನ್ನು ಬಾಹ್ಯಮಂಡಲದಲ್ಲಿ ಉಪಯೋಗಿಸಲಿ ಉಪಯೋಗಿಸದಿರಲಿ ಕೋಶದ ವಿದ್ಯುದುತ್ಪಾದನೆ ಮಾತ್ರ ಸತತವಾಗಿ ನಡೆಯುತ್ತಿರುತ್ತದೆ. ಈ ಗುಣದಲ್ಲಿ ನ್ಯೂಕ್ಲಿಯರ್ ಕೋಶಗಳು ಇತರ ಕೋಶಗಳಿಗಿಂತ ಭಿನ್ನವಾಗಿವೆ. ಇವುಗಳ ಮತ್ತೊಂದು ಗುಣವೆಂದರೆ ಇತರ ರಾಸಾಯನಿಕ ವಸ್ತುಗಳಂತೆ ವಿಕಿರಣಪಟುವಸ್ತು ಯಾವ ಸಮಯದಲ್ಲೇ ಆಗಲಿ ಪೂರ್ಣವಾಗಿ ವ್ಯಯವಾಗಿರುವುದಿಲ್ಲ. ಅಂದರೆ ಒಮ್ಮೆ ರಚಿಸಿದ ಅನಂತರ ಕೋಶದ ವಿದ್ಯುತ್‌ಪೂರೈಕೆ ಸದಾಕಾಲ ಇರುತ್ತದೆ. ಆದರೆ ವಿಕಿರಣಪಟುವಸ್ತುವಿನ ಅರ್ಧಾಯುವಿನೊಳಗೆ ಕೋಶದ ವಿದ್ಯುತ್ ಪೂರೈಕೆ ಗಮನಾರ್ಹವಾಗಿ ಕಡಿಮೆಯಾಗುತ್ತದೆ.

**ಅಧಿಕ ವೋಲ್ಟತೆಯ ನ್ಯೂಕ್ಲಿಯರ್ ಕೋಶ :** ಕೋಶದ ರಚನೆಯಲ್ಲಿ ಬೀಟ ಕಣಗಳನ್ನು ಮಾತ್ರವೇ ಹೊರಸೂಸುವ ವಿಕಿರಣ ಸಮಸ್ಥಾನಿಯನ್ನು (ಐಸೊಟೋಪ್) ಕೋಶದ ಒಂದು ಎಲೆಕ್ಟ್ರೋಡ್ ಮೇಲೆ ಇಡುತ್ತಾರೆ. ಸಾಮಾನ್ಯವಾಗಿ ಸ್ಟ್ರಾನ್‌ಷಿಯಂ–90 ಅಥವಾ ಕ್ರಿಪ್ಟಾನ್–85 ಅಥವಾ ಟ್ರಿಟಿಯಂ (ಜಲಜನಕ–3) ವಿಕಿರಣಪಟು ಸಮಸ್ಥಾನಿಯನ್ನು ಉಪಯೋಗಿಸಬಹುದು. ವಿಕಿರಣಪಟುತ್ವದಲ್ಲಿ ಹೊರಬರುವ ಬೀಟಕಣಗಳು ಕೋಶದ ಮತ್ತೊಂದು ಎಲೆಕ್ಟ್ರೋಡಿನ ಮೇಲೆ ಬೀಳುವಂತೆ ಇಟ್ಟು ಎಲೆಕ್ಟ್ರೋಡುಗಳ ನಡುವೆ ವಿದ್ಯುದವಾಹಕ ಘನವಸ್ತುಗಳನ್ನು ಇಟ್ಟಿರುತ್ತಾರೆ. ಕೆಲವು ವೇಳೆ ಎಲೆಕ್ಟ್ರೋಡುಗಳನ್ನು ನಿರ್ವಾತಕೋಶದಲ್ಲಿಟ್ಟಂಥ ಕೋಶವನ್ನು ರಚಿಸಬಹುದು. ಬೀಟ ಕಣಗಳು ಒಂದು ಎಲೆಕ್ಟ್ರೋಡಿನಿಂದ ಮತ್ತೊಂದು ಎಲೆಕ್ಟ್ರೋಡಿಗೆ (ಕೋಶದಲ್ಲಿ) ಚಲಿಸಿ ಅನಂತರ ಬಾಹ್ಯಮಂಡಲದಲ್ಲಿ ಹರಿಯುವುದರಿಂದ ಬಾಹ್ಯ ವಿದ್ಯುನ್ಮಂಡಲದಲ್ಲಿ ಉಪಯುಕ್ತ ವಿದ್ಯುತ್ಪ್ರವಾಹ ಉಂಟಾಗುತ್ತದೆ. ಬೀಟಕಣಗಳು ಅಧಿಕಶಕ್ತಿಯ ಎಲೆಕ್ಟ್ರಾನುಗಳಾದ್ದರಿಂದ ಇವನ್ನು ಗ್ರಹಿಸುವ ಎರಡನೆಯ ಎಲೆಕ್ಟ್ರೋಡಿನಿಂದ ದ್ವಿತೀಯಕ ಎಲೆಕ್ಟ್ರಾನುಗಳ ಬಿಡುಗಡೆಯಾಗದಂಥ ವಸ್ತುವನ್ನು ಎಲೆಕ್ಟ್ರೋಡ್ ರಚನೆಯಲ್ಲಿ ಉಪಯೋಗಿಸಬೇಕು.




ಚಿತ್ರ 19 ಅಧಿಕ ವಿದ್ಯುತ್ ವಿಭವದ ನ್ಯೂಕ್ಲಿಯರ್ ಕೋಶ : ಕೋಶಪಾತ್ರೆಯನ್ನು ಬಂಧಿಸುವ ಗಾಜಿನ ಮುಚ್ಚಳ, 2 ನಿರ್ವಾತಗೊಳಿಸಿದ ಅನಂತರ ಬಂಧಿಸುವ ಗಾಜಿನ ಕೊಳವೆ, 3 ಟ್ರಿಟಿಯಂ (ಜಿರ್‌ಕೋನಿಯಂ ಹಾಳೆಯನ್ನು ಸುತ್ತಿರುವ ಗಾಜಿನ ಕೊಳವೆ), 4 ಇಂಗಾಲದ ಎಲೆಕ್ಟ್ರೋಡ್ (ಬೀಟ ಕಣ ಸಂಗ್ರಾಹಕ)

ಈ ಬಗೆಯ ಕೋಶಗಳನ್ನು ಸ್ಥಿರ ವಿದ್ಯುತ್ಪ್ರವಾಹದ ಉತ್ಪಾದನ ಕೋಶಗಳೆಂದು ಪರಿಗಣಿಸಬಹುದು. ಬೀಟ ಕಣಗ್ರಾಹಕ ಎಲೆಕ್ಟ್ರೋಡನ್ನು ಒಂದು ಸೆಕೆಂಡಿನಲ್ಲಿ ಬಂದು ಸೇರುವ ಕಣಗಳ ಒಟ್ಟು ಸಂಖ್ಯೆ ಕೋಶದ ವಿದ್ಯುತ್ಪ್ರವಾಹವನ್ನು ನಿರ್ಧರಿಸುತ್ತದೆ. ಕೋಶದಿಂದ ದೊರೆಯುವ ವಿದ್ಯುತ್ಪ್ರವಾಹ ಕೋಶದ ಸುತ್ತಲಿನ ವಾತಾವರಣದಿಂದಾಗಲಿ ಅಥವಾ ವಿದ್ಯುತ್ ಪೂರೈಕೆಯ ಮಂಡಲದ ಗುಣದಿಂದಾಗಲಿ ವ್ಯತ್ಯಾಸಗೊಳ್ಳುವುದಿಲ್ಲ. ಈ ದೃಷ್ಟಿಯಲ್ಲಿ ಈ ಬಗೆಯ ಕೋಶಗಳು ವೋಲ್ಟಾ ಮಾದರಿಯ ಕೋಶಗಳಿಗಿಂತ ಹೆಚ್ಚು ಸಮರ್ಪಕವಾಗಿವೆ. ವಿಕಿರಣಪಟು ಸಮಸ್ಥಾನಿ ಹಳೆಯದಾದಂತೆ ಕೋಶದಿಂದ ದೊರೆಯುವ ವಿದ್ಯುತ್ಪ್ರವಾಹ ಕಡಿಮೆಯಾಗುತ್ತದೆ. ಟ್ರಿಟಿಯಂ ಉಪಯೋಗಿಸಿದ ಕೋಶದ ವಿದ್ಯುತ್ಪ್ರವಾಹ ಶೇ.50 ಕಡಿಮೆ ಆಗುತ್ತದೆ. ಸ್ಟ್ರಾನ್‌ಷಿಯಂ–90ನ್ನು ಉಪಯೋಗಿಸಿದ ಕೋಶದ ವಿದ್ಯುತ್ಪ್ರವಾಹ 20 ವರ್ಷಗಳಲ್ಲಿ ಶೇ.50 ಕಡಿಮೆಯಾಗುತ್ತದೆ.

**ಉಷ್ಣವಿದ್ಯುದುತ್ಪಾದಕ ಕೋಶ :** ಕಡಿಮೆ ವಿಭವವನ್ನು ಉಂಟುಮಾಡುವ ಈ ಕೋಶ ವಿಕಿರಣಪಟುವಸ್ತುವಿನಲ್ಲಿನ ಅಧಿಕ ಉಷ್ಣತೆಯನ್ನು ಉಪಯೋಗಿಸಿಕೊಂಡು ವಿದ್ಯುತ್ತನ್ನು ಉತ್ಪಾದಿಸುತ್ತದೆ. ವಿಭಿನ್ನ ಲೋಹಗಳಿಂದ ತಯಾರಿಸಿದ ಉಷ್ಣಯುಗ್ಮದ (ಥರ್ಮೋಕಪಲ್) ಎರಡು ತುದಿಗಳಲ್ಲಿ ಉಷ್ಣದ ಅಂತರ ಇರುವಂತೆ ಏರ್ಪಡಿಸಿದಾಗ ಉಷ್ಣಯುಗ್ಮದಲ್ಲಿ ವಿದ್ಯುತ್ಪ್ರವಾಹ ಉಂಟಾಗುತ್ತದೆ. ಹೆಚ್ಚಿನ ಉಷ್ಣತೆಯನ್ನು ಪಡೆದಿರುವ ವಿಕಿರಣಪಟು ಸಮಸ್ಥಾನಿ ಮೇಲ್ಮೈ ಮತ್ತು ಕಡಿಮೆ ಉಷ್ಣತೆಯ ಪರಿಸರದ ನಡುವೆ ಉಷ್ಣತೆಯ ಅಂತರವಿರುತ್ತದೆ. ಸಮಸ್ಥಾನಿಯ ಮೇಲ್ಮೈಯಲ್ಲಿ ಉಷ್ಣಯುಗ್ಮಶ್ರೇಣಿಗಳನ್ನು (ಥರ್ಮೋಪೈಲ್) ಸೂಕ್ಷ್ಮವಾಗಿ ಅಳವಡಿಸಿದ ರಚನೆ ಉಪಯುಕ್ತ ವಿದ್ಯುತ್ಪ್ರವಾಹವನ್ನು ಉಂಟುಮಾಡಬಲ್ಲದು. ವಿಕಿರಣಪಟುತ್ವದ ತತ್ತ್ವಗಳ ಲೆಕ್ಕದಂತೆ 0.1" ವ್ಯಾಸದ ಗೋಳಾಕೃತಿಯಲ್ಲಿಟ್ಟ ವಿಕಿರಣಪಟು ಸಮಸ್ಥಾನಿ ಪಲೋನಿಯಂ 210ರ ಮೇಲ್ಮೈಯ ಉಷ್ಣತೆ ಸುಮಾರು 2200° ಸೆಂ. ಇರುತ್ತದೆ (ಗೋಳದ ಮೇಲ್ಮೈಯ ಉಷ್ಣವಿಸರಣ ಸಾಮರ್ಥ್ಯ 0.25 ಎಂದು ಭಾವಿಸಿದೆ). ಕೋಶದ ರಚನೆಯಲ್ಲಿ ಸಮಸ್ಥಾನಿಯನ್ನು ಗಾಳಿಹೋಗದಂಥ ಪಾತ್ರೆಯಲ್ಲಿಟ್ಟಾಗ ಅದರ ಉಷ್ಣತೆ 2,200° ಸೆಂ.ಗಳಿಗಿಂತ ಕಡಿಮೆ ಇರುತ್ತದೆ. ಕೋಶದೊಳಗಿರಿಸಿದ ವಿಕಿರಣಪಟು ಸಮಸ್ಥಾನಿಯೊಂದಿಗೆ ಮತ್ತು ಹೊರ ವಾತಾವರಣದೊಂದಿಗೆ ಉಷ್ಣಸಂಪರ್ಕ ಪಡೆದಿರದಂತೆ, ಆದರೆ ವಿದ್ಯುತ್ ಸಂಪರ್ಕ ಪಡೆದಿರುವಂತೆ ಉಷ್ಣಯುಗ್ಮ ಶ್ರೇಣಿಗಳನ್ನಿರಿಸಿರುತ್ತಾರೆ. ಕೋಶದೊಳಗಿನ ಮತ್ತು ಕೋಶದ ಹೊರಗಿರುವ ಉಷ್ಣಯುಗ್ಮಗಳ ಸಂಧಿಗಳಲ್ಲಿ ಸಮತೋಲಸ್ಥಿತಿ ಉಷ್ಣತೆ (ಈಕ್ವಿಲಿಬ್ರಿಯಂ ಟೆಂಪರೇಚರ್ ಡಿಫರೆನ್ಸ್) ಏರ್ಪಟ್ಟಾಗ ಮಂಡಲದಲ್ಲಿ ವಿದ್ಯುತ್ಪ್ರವಾಹ ಉಂಟಾಗುತ್ತದೆ. ಕೋಶದಿಂದ ದೊರೆಯುವ ವಿಭವ ಉಷ್ಣಯುಗ್ಮದ ತುದಿಗಳಲ್ಲಿನ ಉಷ್ಣತೆಯ ಅಂತರಕ್ಕೆ ಅನುಗುಣವಾಗಿರುತ್ತದೆ. ಕೋಶದೊಳಗಿನ ಉಷ್ಣಜನಕ ವಿಕಿರಣಪಟು ಸಮಸ್ಥಾನಿ ಹಳೆಯದಾದಂತೆ ಕೋಶದಿಂದ ದೊರೆಯುವ ವಿಭವ ಕಡಿಮೆ ಆಗುತ್ತದೆ. ಪಲೋನಿಯಂ–210ರ ಅರ್ಧಾಯು 138 ದಿವಸಗಳು. ಈ ವಸ್ತುವನ್ನು ಉಪಯೋಗಿಸಿದ ಕೋಶದ ವಿಭವ ಪ್ರತಿದಿನವೂ ಶೇ. 0.5 ರಷ್ಟು ಕಡಿಮೆಯಾಗುತ್ತದೆ. ಸ್ಟ್ರಾನ್‌ಷಿಯಂ–90ನ್ನು (ಅರ್ಧಾಯು 20 ವರ್ಷಗಳು) ಉಪಯೋಗಿಸಿದ ಕೋಶದ ವಿದ್ಯುತ್ ಪ್ರತಿದಿನ ಶೇ. 0.01ನಷ್ಟು ಕಡಿಮೆಯಾಗುತ್ತದೆ.

ಅನಿಲ ಅಯಾನೀಕರಣ ನ್ಯೂಕ್ಲಿಯರ್ ಕೋಶ : ಈ ಬಗೆಯ ಕೋಶದಲ್ಲಿ ವಿಕಿರಣಪಟು ಸಮಸ್ಥಾನಿಯಿಂದ ಹೊರಬರುವ ಬೀಟಕಣಗಳು ವಿದ್ಯುತ್ ಕ್ಷೇತ್ರದಲ್ಲಿ ಇಟ್ಟಿರುವ ಅನಿಲದಲ್ಲಿ ಅಯಾನೀಕರಣವನ್ನು (ವಿದ್ಯುದ್ವಿಭಜನೆ) ಉಂಟುಮಾಡುತ್ತವೆ. ಅಯಾನೀಕರಣದಲ್ಲಿ ಸೃಷ್ಟಿಯಾಗುವ ವಿದ್ಯುದ್ವಾಹಿ ಕಣಗಳು, ಮುಖ್ಯವಾಗಿ ಎಲೆಕ್ಟ್ರಾನುಗಳು, ವಿದ್ಯುತ್ ಕ್ಷೇತ್ರದಲ್ಲಿ ಚಲಿಸಿ ಎಲೆಕ್ಟ್ರೋಡುಗಳನ್ನು ಸೇರಿ ಬಾಹ್ಯಮಂಡಲದಲ್ಲಿ ಹರಿಯುವುದರಿಂದ ಉಪಯುಕ್ತ ವಿದ್ಯುತ್ಪ್ರವಾಹ ಉಂಟಗುತ್ತದೆ. ವಿದ್ಯುದ್ವಿಭಜನಕ್ರಿಯೆಯಲ್ಲಿ ಪ್ರತಿಯೊಂದು ಬೀಟಕಣದಿಂದಲೂ ಸುಮಾರು 200 ವಿದ್ಯುದ್ವಾಹಿ ಕಣಗಳು ಸೃಷ್ಟಿಯಾಗಿ ವಿದ್ಯುತ್ಪ್ರವಾಹಕ್ಕೆ ಒದಗುತ್ತವೆ. ಈ ರೀತಿಯ ಎಲೆಕ್ಟ್ರಾನ್ ಸಂಖ್ಯಾವರ್ಧನೆಯಿಂದಾಗಿ ಕೋಶ ಬೀಟಕಣಗಳಿಂದ ಮಾತ್ರವೇ ಉಂಟಾಗುವ ವಿದ್ಯುತ್ಪ್ರವಾಹಕ್ಕಿಂತ ಹೆಚ್ಚಿನ ವಿದ್ಯುತ್ಪ್ರವಾಹವನ್ನು ಉಂಟುಮಾಡುತ್ತದೆ. ಭಿನ್ನ ಕಾರ್ಯೋತ್ಪನ್ನಗಳಿರುವ (ವರ್ಕ್ ಫಂಕ್ಷನ್ಸ್) ಎರಡು ಎಲೆಕ್ಟ್ರೋಡುಗಳನ್ನು ಜೋಡಿಸುವುದರಿಂದ ಉಂಟಾಗುವ ಸಂಪರ್ಕವಿಭವಾಂತರ (ಕಾಂಟ್ಯಾಕ್ಟ್ ಪೊಟೆನ್ಷಿಯಲ್ ಡಿಫರೆನ್ಸ್) ಕೋಶದಲ್ಲಿ ಉಪಯೋಗಿಸುವ ವಿದ್ಯುತ್ ಕ್ಷೇತ್ರವನ್ನು ಒದಗಿಸುತ್ತದೆ. ಪ್ರಾಯೋಗಿಕವಾಗಿ ರಚಿಸಿದ ಕೋಶವೊಂದರಲ್ಲಿ ಹೆಚ್ಚಿನ ಕಾರ್ಯಪರಿಮಾಣದ ಸೀಸದ ಆಕ್ಸೈಡ್ ಮತ್ತು ಕಡಿಮೆ ಕಾರ್ಯಪರಿಮಾಣದ ಮೆಗ್ನೀಸಿಯಂ ಎಲೆಕ್ಟ್ರೋಡುಗಳ ಜೋಡಣೆಯಿಂದುಂಟಾದ ವಿದ್ಯುತ್ ಕ್ಷೇತ್ರದಲ್ಲಿ ಎರಡು ವಾಯುಭಾರದ ಒತ್ತಡದಲ್ಲಿರುವ ಆರ್ಗಾನ್ ಅನಿಲವನ್ನು ಇಡಲಾಗಿತ್ತು. ಕೋಶದ ಗಾತ್ರ 15 ಘನ ಸೆಂಮೀ ಇಂಚಿದ್ದು 1.5 $\times 10^{-3}$ ಕ್ಯೂರಿ ಪ್ರಮಾಣದ ಟ್ರಿಟಿಯಂ ಸಮಸ್ಥಾನಿಯನ್ನು 0.2 ಚದರ ಇಂಚು ವಿಸ್ತೀರ್ಣದ ತಟ್ಟೆಯ ಮೇಲೆ ಹರಡಿದಂತೆ ಇಡಲಾಗಿತ್ತು. ಈ ಕೋಶ 1.6 $\times 10^{-9}$ ಆ್ಯಂಪಿಯರ್ ವಿದ್ಯುತ್ಪ್ರವಾಹವನ್ನು ಉಂಟುಮಾಡಿದೆ. ಕೋಶದ ವಿಭವ ಅದಕ್ಕೆ ಒದಗಿಸುವ ವಿದ್ಯುತ್ ಕ್ಷೇತ್ರದ ಬಲವನ್ನು ಅವಲಂಬಿಸಿದೆ. ಈ ಕೋಶ ಸಾಧಾರಣವಾಗಿ 1.5 ವೋಲ್ಟ್ ವಿಭವವನ್ನು ಒದಗಿಸಬಲ್ಲದು. ಹೆಚ್ಚಿನ ವಿಭವವನ್ನು ಹಲವಾರು ಕೋಶಗಳ ಜೋಡಣೆಯಿಂದ ಪಡೆಯಬಹುದು.

**ಮಿಣುಕು ದ್ಯುತಿ ವಿದ್ಯುದುತ್ಪಾದಕ ನ್ಯೂಕ್ಲಿಯರ್ ಕೋಶ :** ಈ ಕೋಶ ಎರಡು ಹಂತದಲ್ಲಿ ಕೆಲಸಮಾಡುತ್ತದೆ. ಮೊದಲನೆಯದಾಗಿ ವಿಕಿರಣಪಟು ಸಮಸ್ಥಾನಿಯಿಂದ

ಹೊರಬರುವ ಬೀಟ ಕಣಗಳ ಶಕ್ತಿ ಬೆಳಕಿನ ಶಕ್ತಿಯಾಗಿ ಪರಿವರ್ತನೆಗೊಳ್ಳುತ್ತದೆ. ಅನಂತರ ಬೆಳಕಿನ ಈ ಶಕ್ತಿಯನ್ನು ಉಪಯೋಗಿಸಿಕೊಂಡು, ಹಿಂದೆ ವಿವರಿಸಿದ ಸೌರಶಕ್ತಿ ಮಾದರಿಯ ಕೋಶ ವಿದ್ಯುತ್ತನ್ನು ಉತ್ಪಾದಿಸುತ್ತದೆ. ಆದ್ದರಿಂದ ಕೋಶದ ರಚನೆಯಲ್ಲಿ ಎರಡು ಮುಖ್ಯ ಭಾಗಗಳಿವೆ. 1.ಬೀಟಕಣಗಳ ಶಕ್ತಿಯ ಪರಿವರ್ತನೆಯಿಂದ ಬೆಳಕನ್ನು ಉತ್ಪಾದಿಸುವ ವಸ್ತು–ಮಿಣುಕುವಸ್ತು (ಫಾಸ್ಫರ್). 2.ಬೆಳಕಿನ ವಿದ್ಯುತ್ತನ್ನು ಉತ್ಪಾದಿಸುವ ದ್ಯುತಿ ವಿದ್ಯುದುತ್ಪಾದಕಕೋಶ (ಫೋಟೋವೋಲ್ಟೇಯಿಕ್ ಸೆಲ್). ಕೆಲವು ವಸ್ತುಗಳ ಮೇಲೆ ಬೀಟ ಕಣಗಳು–(ಅಥವಾ ಹೆಚ್ಚು ಚಲನಶಕ್ತಿಯ ಎಲೆಕ್ಟ್ರಾನುಗಳು) ಬಿದ್ದಾಗ ವಸ್ತುವಿನ ಪರಮಾಣುಗಳ ಆಂತರಿಕಶಕ್ತಿ ಪರಿವರ್ತನೆಯಿಂದ ಪರಮಾಣುಗಳು ಉದ್ರಿಕ್ತಸ್ಥಿತಿಗೆ (ಎಕ್ಸೈಟೆಡ್ ಸ್ಟೇಟ್) ಬಂದು ಅನಂತರ ಭೂಹಂತಸ್ಥಿತಿಗೆ (ಗ್ರೌಂಡ್ ಸ್ಟೇಟ್) ಬರುವುದರಿಂದ ಬೆಳಕು ಉತ್ಪತ್ತಿಯಾಗುತ್ತದೆ. ಈ ವಸ್ತುಗಳಿಗೆ ಮಿಣುಕು ವಸ್ತುಗಳು (ಸಿಂಟಿಲೇಟರ್ಸ್) ಅಥವಾ ಫಾಸ್ಫರ್ಸ್ ಎಂದು ಹೆಸರು. (ಬಿ.ಎಸ್.ಎನ್.ಪಿ.)

**ಕೋಷಿ, ಅಗಸ್ಟಿನ್ ಲೂಯಿ :** 1789–1857. ಫ್ರಾನ್ಸಿನ ಪ್ರಥಮ ಶ್ರೇಣಿಯ ಗಣಿತ ಹಾಗೂ ಭೌತವಿಜ್ಞಾನಿ, ಜನನ ಪ್ಯಾರಿಸಿನಲ್ಲಿ 1789ರ ಆಗಸ್ಟ್ 21ರಂದು. ಅಲ್ಲಿನ ಪ್ರಸಿದ್ಧ ವಿದ್ಯಾಸಂಸ್ಥೆಗಳಾದ ಇಕೋಲೆ ಪಾಲಿಟೆಕ್ನಿಕ್ ಮತ್ತು ಇಕೊಲೆಡ್ ಪಾಂಟ್ಸ್ಎಟ್ ಚೂಸಿಗಳಲ್ಲಿ ವಿದ್ಯಾಭ್ಯಾಸ ಪಡೆದು ಅನಂತರ ಸ್ವಲ್ಪಕಾಲ ಎಂಜಿನಿಯರಾಗಿ ಕೆಲಸಮಾಡಿದ. ಆದರೆ ತೀವ್ರ ಅಸ್ವಸ್ಥತೆಯ ಕಾರಣ 1813ರಲ್ಲಿ ಈ ಕೆಲಸವನ್ನು ಬಿಟ್ಟು ಮುಂದೆ ಪ್ರಸಿದ್ಧ ಗಣಿತಜ್ಞರಾದ ಲಾಪ್ಲಾಸ್ ಮತ್ತು ಲಾಗ್ರಾಂಜ್ ಇವರ ಸಲಹೆಯ ಪ್ರಕಾರ ಗಣಿತದ ಅಧ್ಯಯನವನ್ನು ಮುಂದುವರಿಸಿ ಅದರಲ್ಲಿಯೇ ಮಗ್ನನಾದ. 1816ರಲ್ಲಿ ತನ್ನ ಹಳೆಯ ವಿದ್ಯಾಸಂಸ್ಥೆಯಾದ ಇಕೊಲೆ ಪಾಲಿಟೆಕ್ನಿಕ್ ಪ್ರಾಧ್ಯಾಪಕನಾಗಿ ನೇಮಿಸಲ್ಪಟ್ಟ. ಆದರೆ ದೇಶದ ದೊರೆಯಾದ ಲೂಯಿ ಫಿಲಿಪನಿಗೆ ನಿಷ್ಠೆ ವ್ಯಕ್ತಪಡಿಸಲು ತಯಾರಿಲ್ಲದ ಕಾರಣ ಕೋಷಿ ಈ ಹುದ್ದೆಯನ್ನು ತ್ಯಜಿಸಬೇಕಾಯಿತು. ಒಂದೆರಡು ವರ್ಷಗಳ ಕಾಲ ಇಟಲಿ ದೇಶದ ಟ್ಯೂರಿನ್ ನಗರದಲ್ಲಿ ಪ್ರಾಧ್ಯಾಪಕ ನಾಗಿದ್ದ. 1832ರಲ್ಲಿ ಮರಳಿ ಇಕೊಲೆ ಪಾಲಿಟೆಕ್ನಿಕ್ನಲ್ಲಿಯೇ ಪ್ರಾಧ್ಯಾಪಕನಾಗಿ ನೇಮಕಗೊಂಡ. ಈ ಹಿಂದೆ ಇಕೊಲೆಯಲ್ಲಿ ಪ್ರಾಧ್ಯಾಪಕನಾಗಿದ್ದಾಗಲೇ ಕೋಷಿ ಫ್ರೆಂಚ್ ವಿಜ್ಞಾನ ಅಕಾಡಮಿಗೆ ಸದಸ್ಯನಾಗಿ ಚುನಾಯಿತನಾಗಿದ್ದ. ಗಣಿತ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಕೋಷಿಯ ಸಾಧನೆಗಳನ್ನು ಗಮನಿಸಿ 1832ರಲ್ಲಿ ಇಂಗ್ಲೆಂಡಿನ ಉಚ್ಚ ವಿಜ್ಞಾನಸಂಸ್ಥೆಯಾದ ರಾಯಲ್ ಸೊಸೈಟಿ ಇವನನ್ನು ವಿದೇಶಿ ಸದಸ್ಯನನ್ನಾಗಿ ಚುನಾಯಿಸಿ ಗೌರವಿಸಿತು.

ಗಣಿತ ಹಾಗೂ ಭೌತವಿಜ್ಞಾನ ಕ್ಷೇತ್ರಗಳಲ್ಲಿ ಕೋಷಿ ಅನೇಕ ಮೂಲಭೂತ ಸಂಶೋಧನೆಗಳನ್ನು ಕೈಗೊಂಡು ಕೆಲವು ಹೊಸ ಸಿದ್ಧಾಂತಗಳನ್ನು ನಿರೂಪಿಸಿದ್ದಾನೆ. ಮೂರು ದತ್ತವೃತ್ತಗಳನ್ನು ಸ್ಪರ್ಶಿಸುವ ವೃತ್ತದ ರಚನೆಗೆ ಸಂಬಂಧಿಸಿದ ಅಪಲೋನಿಯಸ್ ಸಮಸ್ಯೆಗೆ ಕೋಷಿ ಸರಿಯಾದ ಪರಿಹಾರವನ್ನು ಕಂಡುಹಿಡಿದ(1805). ಗಣಿತದ ಅವಕಲನ ಭಾಗದಲ್ಲಿ ಬರುವ ಟೇಲರ್ ಪ್ರಮೇಯವನ್ನು ಮೊಟ್ಟ ಮೊದಲಿಗೆ ಅತಿ ನಿಷ್ಕೃಷ್ಟವಾಗಿ ಸಾಧಿಸಿದ ಕೀರ್ತಿ ಈತನದು. ಆನ್ವಯಿಕ ಗಣಿತ ಹಾಗೂ ಸೈದ್ಧಾಂತಿಕ ಭೌತವಿಜ್ಞಾನದಲ್ಲಿ ಅತ್ಯವಶ್ಯವಾಗಿ ಉಪಯೋಗಿಸುವ ಸಂಕೀರ್ಣ ಚರ ಪ್ರಮಾಣಗಳ ಉತ್ಪನ್ನಕ್ಕೆ ಸಂಬಂಧಿಸಿದ ಗಣಿತಭಾಗವನ್ನು ನಿರ್ಮಿಸಿದವ ಕೋಷಿಯೇ. ಅದೇ ರೀತಿ ಉತ್ಪನ್ನಗಳ ಸಿದ್ಧಾಂತ (ಥಿಯೊರಿ ಆಫ್ ಫಂಕ್ಷನ್), ಪರ್ಮ್ಯುಟೇಷನ್ ಗ್ರೂಪಿಗೆ ಸಂಬಂಧಿಸಿದ ಸಿದ್ಧಾಂತ ಇವನ್ನು ಕೂಡ ಕೋಷಿಯೇ ನಿರ್ಮಿಸಿದ ಎನ್ನಬಹುದು. ಇದಲ್ಲದೆ ಸಂಭಾವ್ಯತೆ (ಪ್ರಾಬಬಿಲಿಟಿ) ಮತ್ತು ವ್ಯತ್ಯಸ್ತಿಕೆಗೆ (ಎರರ್) ಸಂಬಂಧಿಸಿದ ಅವಕಲನಶಾಸ್ತ್ರಭಾಗಗಳ ಕ್ಷೇತ್ರಗಳಲ್ಲಿಯೂ ಕೋಷಿಯ ಸಂಶೋಧನೆ ಗಮನಾರ್ಹ ಗಾತ್ರದಲ್ಲಿದೆ.

ಪರಿಮಿತಿ ಮತ್ತು ಅವಿಚ್ಛಿನ್ನತೆ ಪರಿಕಲ್ಪನೆಗಳ ಆಧಾರದ ಮೇಲೆ ಸರಿಯಾದ ರೀತಿಯಲ್ಲಿ ಅವಕಲನಶಾಸ್ತ್ರದ ಮೂಲತತ್ತ್ವಗಳನ್ನು ನಿರೂಪಿಸಿ ಅವುಗಳ ವ್ಯಾಖ್ಯೆಯನ್ನು ಬಹುಮಟ್ಟಿಗೆ ಸ್ಪಷ್ಟೀಕರಿಸಿದ್ದು ಗಣಿತವಿಜ್ಞಾನದಲ್ಲಿ ಕೋಷಿಯ ಮುಖ್ಯ ಸಾಧನೆ. ಗಣಿತವಿಜ್ಞಾನದಲ್ಲಿ ವಾದ ಸರಣಿಯನ್ನು ಬೆಳೆಸುವಾಗ, ಅದು ಅತಿ ಸ್ಪಷ್ಟವಾಗಿಯೂ ಅತಿ ನಿಷ್ಕೃಷ್ಟವಾಗಿಯೂ ಇರಬೇಕೆಂಬುದೇ ಇವನ ಅಭಿಪ್ರಾಯವಾಗಿತ್ತು. ಈ ರೀತಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇ ಅಲ್ಲದೆ ಅದನ್ನು ಕಾರ್ಯತಃ ಸಾಧಿಸಿಯೂ ತೋರಿಸಿದ. ಅವನ ಉತ್ಕೃಷ್ಟ ಗ್ರಂಥಗಳಾದ ಕೋರ್ಸ್ ಡಿ ಅನಾಲಿಸಿಸ್, ಲೆ ಕ್ಯಾಲ್ಕ್ಯೂಲ್ ಇನ್ಫಿನಿಟೆಸಿಮಲ್ ಇತ್ಯಾದಿಗಳಲ್ಲಿ ಈ ಸಾಧನೆಯನ್ನು ಕಾಣಬಹುದು.

ಭೌತವಿಜ್ಞಾನ ಕ್ಷೇತ್ರದಲ್ಲಿ ಸಹ ಇವನ ಸಂಶೋಧನೆಗಳು ವ್ಯಾಪಕ ಮತ್ತು ಉತ್ಕೃಷ್ಟ ಮಟ್ಟದವು. ಅಲೆ ಪ್ರಸಾರಕ್ಕೆ ಸಂಬಂಧಿಸಿದಂತೆ ಒಂದು ಪ್ರೌಢ ಪ್ರಬಂಧವನ್ನು 1816ರಲ್ಲಿಯೇ ಪ್ರಕಟಿಸಿದ್ದ. ಇದಕ್ಕಾಗಿ ಇವನಿಗೆ ಇನ್ಸ್ಟಿಟ್ಯೂಟ್ ಡೆ ಫ್ರಾನ್ಸ್ ಸಂಸ್ಥೆಯಿಂದ ವಿಶೇಷ ರೀತಿಯ ಮನ್ನಣೆ ದೊರಕಿತು. ಈಥರಿನ ಗುಣಲಕ್ಷಣಗಳ ಬಗ್ಗೆ ಗಣಿತೀಯ ರೀತಿಯಲ್ಲಿ ಸರಿಯಾದ ಆಧಾರವನ್ನು ಒದಗಿಸಿದ. ಪಾರಮಾಧ್ಯಮದಿಂದ ಆಗುವ ಸಂಕೀರ್ಣ ಬೆಳಕಿನ ಕಿರಣಗಳ ವಿಂಗಡಣೆಗೆ ಸಂಬಂಧಿಸಿದಂತೆ ಕೋಷಿ $\mu = A + \frac{B}{\lambda^2} + \frac{C}{\lambda^4}$ ಎಂಬ ಸೂತ್ರವನ್ನು ನಿರೂಪಿಸಿದ.

ಇದನ್ನು ರೋಹಿತದ ಕೆಲವು ಮಿತಭಾಗಗಳಿಗೆ ಅನ್ವಯಿಸಿದಾಗ, ಅನೇಕ ಪದಾರ್ಥಗಳಿಂದ ಆಗುವ ಕಿರಣ ವಿಂಗಡಣೆಯ ಫಲಿತಾಂಶಗಳನ್ನು ಸಮರ್ಪಕವಾದ ರೀತಿಯಲ್ಲಿ ಇದು ವಿವರಿಸುತ್ತದೆ. ಪುಟಿತತೆಗೆ (ಇಲ್ಯಾಸ್ಟಿಸಿಟಿ) ಸಂಬಂಧಿಸಿದ ಭೌತವಿಜ್ಞಾನ ಭಾಗದಲ್ಲಿ ಅನೇಕ ರೀತಿಯ ಸಂಶೋಧನೆಗಳನ್ನು ಕೈಗೊಂಡು ಕೋಷಿ ಅನೇಕ ಮುಖ್ಯ ತೀರ್ಮಾನಗಳನ್ನು ಪಡೆದ. ಈ ಕ್ಷೇತ್ರದಲ್ಲಿ ಒತ್ತಡಕ್ಕೆ(ಸ್ಟ್ರೆಸ್) ಸಂಬಂಧಿಸಿದ ವಾದವನ್ನು ನಿರ್ಮಿಸಿ ಪುಟಿತ ಘನಪದಾರ್ಥಗಳ ಬಗ್ಗೆ ನೇಪಿಯರ್ ಪ್ರತಿಪಾದಿಸಿದ್ದ ಸಿದ್ಧಾಂತವನ್ನು ಮುಂದುವರಿಸಿ ಹೂಕ್‌ನ ನಿಯಮವನ್ನು ಸಾರ್ವತ್ರೀಕರಿಸಿದ. 15 ಪುಟಿತ ನಿಯತಾಂಕಕಗಳನ್ನೊಳಗೊಂಡ ಈ ಸಿದ್ಧಾಂತ ಎಲ್ಲ ವಿಧವಾದ ಸ್ಫಟಿಕೀಯ ಪದಾರ್ಥಗಳಿಗೂ ಅನ್ವಯಯೋಗ್ಯ ಎಂದು ಕೋಷಿ ಭಾವಿಸಿದ್ದ. ಕೋಷಿ ನಿಧನನಾದದ್ದು ಸಿಯೇನಿನಲ್ಲಿ 1857 ಮೇ 23ರಂದು. (ಕೆ.ಎಸ್ಆರ್ಐ)

**ಕೋಷಿ ಫಲಿತಾಂಶಗಳು :** ಕೋಷಿ (**ನೋಡಿ– ಕೋಷಿ,–ಅಗಸ್ಟಿನ್–ಲೂಯಿ**) ಆವಿಷ್ಕರಿಸಿದ ಮತ್ತು ಆತನ ಹೆಸರಿನಿಂದಲೇ ಪ್ರಸಿದ್ಧವಾಗಿರುವ ಕೆಲವು ಮುಖ್ಯ ಫಲಿತಾಂಶಗಳನ್ನು ಇಲ್ಲಿ ನಿರೂಪಿಸಿದೆ.

**ಕೋಷಿಯ ಅಭಿಸರಣ ಪರೀಕ್ಷೆ:** $\lim_{n \to \infty} |s|^{\frac{1}{n}} < 1$ ಆಗಿದ್ದರೆ ಆಗ $\sum_{n=1}^{\infty} s_n$ ಅನಂತ ಶ್ರೇಣಿ ಶುದ್ಧವಾಗಿ ಅಭಿಸರಿಸುತ್ತದೆ (ಆಬ್ಸೊಲ್ಯೂಟ್ಲಿ ಕನ್ವರ್ಜಸ್). ಪರಿಮಿತಿ 1ಕ್ಕಿಂತ ಹೆಚ್ಚಾದಾಗ ಶ್ರೇಣಿ ಅಪಸರಿಸುತ್ತದೆ (ಡೈವರ್ಜಸ್).

**ಕೋಷಿಯ ಪ್ರಸರಣ (ಡಿಸ್ಪರ್ಶನ್) ಸಮೀಕರಣ :** ಮಾಧ್ಯಮದ ರಿಫ್ರೇಕ್ಷಣಾಂಕ n ಮತ್ತು ಬೆಳಕಿನ ಅಲೆಯುದ್ದ λ ಆಗಿರುವಾಗ

$$n = a + \frac{b}{\lambda^2} + \frac{c}{\lambda^4} + \frac{d}{\lambda^6} + \cdots$$

ಇಲ್ಲಿ a, b, c, d ಎಂಬೀ ಸ್ಥಿರಾಂಕಗಳನು ಪ್ರಯೋಗಲಭ್ಯ ದತ್ತಾಂಶಗಳಿಂದ ನಿರ್ಧರಿಸಬೇಕು.

**ಕೋಷಿ ವಿತರಣೆ (ಡಿಸ್ಟ್ರಿಬ್ಯೂಷನ್) :** ಇದು

$$f(x) = \frac{1}{\pi(1+x^2)}, -\infty \leq x \leq \infty$$

ರೂಪದ ಒಂದು ಆವರ್ತಾಂಕ ವಿತರಣೆ (ಫ್ರೀಕ್ವೆನ್ಸಿ ಡಿಸ್ಟ್ರಿಬ್ಯೂಷನ್) (**ನೋಡಿ–ಕೋಷಿ–ವಿತರಣೆ**)

ಕೋಷಿ–ರೀಮಾನ್ ಸಮೀಕರಣ: $\frac{\partial u}{\partial x} = \frac{\partial v}{\partial y}$ ಮತ್ತು $\frac{\partial u}{\partial y} = -\frac{\partial v}{\partial x}$

ಆಗಿರುವಾಗ ( ಇಲ್ಲಿ u ಮತ್ತು v ಎರಡೂ x ಮತ್ತು y ಗಳ ಉತ್ಪನ್ನಗಳು) ಈ ಸಮೀಕರಣಗಳ ಸಂಕೀರ್ಣ ಚರ z=x+iy ಯ ಒಂದು ವಿಶ್ಲೇಷಕ ಉತ್ಪನ್ನ (ಅನಾಲಿಟಿಕ್ ಫಂಕ್ಷನ್) u+iv ಗೆ ತೃಪ್ತವಾಗುತ್ತದೆ. ಇಂಥ ಒಂದು ಉತ್ಪನ್ನ ವಿಶ್ಲೇಷಕ ಎಂದು ತೋರಿಸಲು ಅವನ್ನು ಬಹುತೇಕವಾಗಿ ಬಳಸುವುದುಂಟು.

**ಕೋಷಿ ಪ್ರಮೇಯ:** ಅವಶೇಷ ಕಲನಶಾಸ್ತ್ರದ (ಕ್ಯಾಲ್ಕುಲಸ್ ಆಫ್ ರೆಸಿಡ್ಯೂಸ್) ಒಂದು ಮೂಲಭೂತ ಸೂತ್ರ. f(z) ಒಂದು ಸಂಕೀರ್ಣಚರ z ನ ಒಂದು ವಿಶ್ಲೇಷಕ ಉತ್ಪನ್ನವಾಗಿದ್ದು ಅದಕ್ಕೆ ಒಂದು ಸಂವೃತ ವಕ್ರರೇಖೆ C ಯ ಒಳಗೆ ಅಥವಾ ಮೇಲೆ ವಿಚಿತ್ರ ಬಿಂದು (ಸಿಂಗ್ಯುಲರ್ ಪಾಯಿಂಟ್) ಇಲ್ಲದಿದ್ದರೆ ಆಗ $\int_C f(z)dz = 0$ ಇಲ್ಲಿ ಅನುಕಲನಾಂಕವನ್ನು (ಇಂಟೆಗ್ರಲ್) C ಯ ಪೂರ್ಣ ಗಡಿಗೆ ವಿಸ್ತರಿಸಿದೆ.

*

**ಕೋಷಿ ವಿತರಣೆ** : ಯಾದೃಚ್ಛಿಕ ಚರ (ರ್‍ಯಾಂಡಂ ವೇರಿಯಬಲ್) x ನ ಸಂಭಾವ್ಯತಾ ಸಾಂದ್ರತೆ (ಪ್ರಾಬೆಬಿಲಿಟಿ ಡೆನ್ಸಿಟಿ)

$f(x)=\frac{\delta}{\pi}.\frac{1}{\delta^2+(x-\mu)^2}, -\infty<x<\infty, \delta>0$ ಇದ್ದರೆ x ನ ವಿತರಣೆಗೆ ಈ ಹೆಸರಿದೆ. ವಿಕಿರಣಪಟುತ್ವದ (ರೇಡಿಯೋ ಆಕ್ಟಿವಿಟಿ) ಉಗಮಸ್ಥಾನವೊಂದರಿಂದ á-ಕಣಗಳು ಹೊರಚಿಮ್ಮುತ್ತಿವೆಯೆಂದು ಭಾವಿಸೋಣ. ಉಗಮ ಬಿಂದುವಿನಿಂದ ä ದೂರದಲ್ಲಿರುವ ಒಂದು ಸರಳ ರೇಖೆಯ ಮೇಲೆ ತಾಕುವ á-ಕಣಗಳು ವಿತರಣೆಯನ್ನು ಕಂಡುಹಿಡಿಯೋಣ. á-ಕಣಗಳು ಚಿಮ್ಮುವ ದಿಶೆ ಯಾದೃಚ್ಛಿಕ ಎಂದು ಭಾವಿಸುತ್ತೇವೆ. ಅಂದರೆ ಉಗಮಸ್ಥಾನವನ್ನು ಕೇಂದ್ರವನ್ನಾಗಿಟ್ಟು ವೃತ್ತದ ಸಮಾನ ಉದ್ದದ ಚಾಪಗಳ ಮೇಲೆ á-ಕಣಗಳು ತಾಕುವುದರ ಸಂಭಾವ್ಯತೆ ಸಮಾನವಾಗಿದೆ ಎಂದರ್ಥ. èದ ವಿತರಣೆ ಏಕರೀತಿ (ಯೂನಿಫಾರಂ) ಆಗಿದೆ ಮತ್ತು ಅದರ ಸಂಭಾವ್ಯತಾ ಸಾಂದ್ರತೆ 1/ð ಉಗಮಸ್ಥಾನದಿಂದ ದತ್ತರೇಖೆಗೆ ಎಳೆದ ಲಂಬದ ಪಾದ P ದತ್ತರೇಖೆಯ ಮೇಲಿನ ಅಳತೆಯ ಮೂಲಬಿಂದುವಾದ A ಯಿಂದ ì ದೂರದಲ್ಲಿರಲಿ, Q ಎಂಬುದು ದತ್ತರೇಖೆಯ ಮೇಲಿನ ಯಾವುದಾದರೂ ಒಂದು ಬಿಂದುವಾಗಿರಲಿ; ಮತ್ತು Q' ಇದರ ಸನ್ನಿಕಟ ಬಿಂದುವಾಗಿರಲಿ, AQ=x, AQ' = x + dx,POQ=è ಮತ್ತು $\angle POQ'=\theta+d\theta$ ಇರಲಿ. ಈಗ è ಮತ್ತು è+dè ಇವುಗಳ ಅಂತರದಲ್ಲಿ èದ ಬೆಲೆ ಇರಬಹುದಾದ ಸಂಭಾವ್ಯತೆ $\frac{d\theta}{\pi}$ ಆಗಿದೆ.




$(-\pi/2)<\theta<(\pi/2)$ ಹಾಗೂ $x-\mu=\delta\tan\theta$ ಆಗಿರುವುದರಿಂದ $dx=\delta\sec^2\theta d\theta$ ಇದರಿಂದ x ನ ವಿತರಣೆಯನ್ನು $\frac{\delta}{\pi}\frac{dx}{\delta^2+(x-\mu)^2}-\infty<x<\infty$ ಎಂಬ ರೂಪಕ್ಕೆ ತಂದಿಳಿಸಬಹುದು. ಇದನ್ನು (–,) ಅಂತರದಲ್ಲಿ ಅನುಕಲಿಸಿದರೆ (ಇಂಟಿಗ್ರೇಟ್) 1 ಬರುವುದೆಂಬುದನ್ನು ತಾಳೆನೋಡಬಹುದು.

ಈ ವಿತರಣೆಯಲ್ಲಿ μ ಮತ್ತು δ ಎಂಬ ಎರಡು ಪ್ರಾಚಲಗಳಿವೆ. ಮೊದಲನೆಯದಕ್ಕೆ ಸ್ಥಳಮಾನ ಪ್ರಾಚಲ (ಲೊಕೇಶನ್ ಪ್ಯರಾಮೀಟರ್) ಎಂದು ಹೆಸರು; ಎರಡನೆಯದಕ್ಕೆ ಮಾನಕ ಪ್ರಾಚಲ (ಸ್ಕೇಲ್ ಪ್ಯರಾಮೀಟರ್) ಎಂದು ಹೆಸರು. ತಕ್ಕ ರೂಪಾಂತರದಿಂದ ಕೋಷಿವಿತರಣೆಯನ್ನು $\frac{1}{\pi},\frac{dx}{1+x^2}$ ಎಂಬ ಶಿಷ್ಟರೂಪಕ್ಕೆ ತಂದಿಳಿಸಬಹುದು.

ಕೋಷಿ ವಿತರಣೆ ಸಮಾಂಗವಾಗಿದೆ (ಸಿಮೆಟ್ರಿಕಲ್) ಮತ್ತು ಇದರ ಬಹುಳಕ ಬೆಲೆ(ಮಾಡೆಲ್ ವ್ಯಾಲ್ಯೂ) μ/δ . ಈ ವಿತರಣೆಯಲ್ಲಿ x ನ ನಿರೀಕ್ಷಿತ ಬೆಲೆ ಅಥವಾ ಮಧ್ಯಮಾನ

$$E(x)=\frac{\delta}{\pi}\int_{-\infty}^{\infty}\frac{xdx}{\delta^2+(x-\mu)^2}$$

ಈ ಅನುಕೂಲನಾಂಕದ ಅಸ್ತಿತ್ವವೇ ಇರುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಆದಾಗ್ಯೂ ಇದರ ಪ್ರಧಾನ ಬೆಲೆ

$$=\lim_{m\to\infty}\int_{-m}^{m}\frac{xdx}{\delta^2+(x-\mu)^2}=\frac{\mu}{\delta}$$

ಹಾಗೂ ಕೋಷಿ ವಿತರಣೆಯ ಎರಡನೆಯ ಪ್ರಘಾತ ಅನಂತವಾಗಿರುವುದು. ಮಧ್ಯಮಾನ ಮತ್ತು ವಿಚಲನೆಯಗಳು ಇಲ್ಲದಿರುವ ಅವಿಚ್ಛಿನ್ನ ವಿತರಣೆಗೆ ಕೋಷಿ ವಿತರಣೆ ಒಂದು ಸರಳ ದೃಷ್ಟಾಂತ.

ಕೋಷಿವಿತರಣೆಯಿಂದ ಪ್ರತಿಚಯನ (ಸ್ಯಾಂಪ್ಲಿಂಗ್) : ಎರಡು ಸ್ವತಂತ್ರ ಕೋಷಿ ವಿಚಾರಗಳ (ಕೋಷಿ ವೇರಿಯೇಟ್ಸ್) ಮೊತ್ತದ ವಿತರಣೆಯನ್ನು ಕಂಡುಹಿಡಿಯಲು ಮುಂದಿನ ಪ್ರಮೇಯವನ್ನು ಬಳಸಬಹುದು.

ಸ್ವತಂತ್ರ ವಿಚರಗಳು $x_1, x_2$ ಗಳ ವಿತರಣ ಉತ್ಪನ್ನಗಳು (ಡಿಸ್ಟ್ರಿಬ್ಯೂಷನ್ ಫಂಕ್ಷನ್ಸ್) $F_1(x_1)$, $F_2(x_2)$ ಆಗಿದ್ದರೆ $z=x_1+x_2$ ಎಂಬ ವಿಚರದ ವಿತರಣ ಉತ್ಪನ್ನವನ್ನು $F=\int_{-\infty}^{\infty}\int_{-\infty}^{z-x_2}dF_1dF_2$ ಎಂದು ನಿರೂಪಿಸಬಹುದು.

ಅನುಕಲನದ ಪ್ರಾಂತ (ಡೊಮೇನ್ ಆಫ್ ಇಂಟಿಗ್ರೇಶನ್) $x_1+x_2\leq z$ ಇರುವುದು ಸರಳೀಕರಿಸಲು $F=\int_{-\infty}^{\infty}F_1(z-x2)dF_2$ ಎಂದಾಗುವುದು ಹಾಗೂ F ಅವಕಲನೀಯವಾದರೆ ಮತ್ತು $f_1, f_2$ ಅನುಕ್ರಮವಾಗಿ $x_1, x_2$ ರ ಆವರ್ತಾಂಕ ಉತ್ಪನ್ನಗಳಾದರೆ (ಫ್ರೀಕ್ವೆನ್ಸಿ ಫಂಕ್ಷನ್) z ನ ಆವರ್ತಾಂಕ ಉತ್ಪನ್ನವನ್ನು $f(z)=\int_{-\infty}^{\infty}f_1(z-x_2)f_2(x_2)dx_2$ ಎಂದು ನಿರೂಪಿಸಬಹುದು. ಈಗ $x_1, x_2$ ರ ಆವರ್ತಾಂಕ ಉತ್ಪನ್ನಗಳು $\frac{1}{\pi(1+x^2)}$ ಆಗಿದ್ದರೆ ಆಗ z ನ ಸಭಾವ್ಯತಾ ಸಾಂದ್ರತೆ

$$f(z)=\int_{-\infty}^{\infty}\frac{1}{\pi^2}.\frac{1}{1+(z-x)^2}.\frac{dx}{1+x^2}=\frac{2}{\pi(z^2+2^2)}$$

ಈ ಪ್ರರೂಪವನ್ನು ಗಮನವಿಟ್ಟು ನೋಡಿದರೆ ಸಮಾನ ವಿತರಣೆಯುಳ್ಳ n ಸ್ವತಂತ್ರ ಕೋಷಿ ವಿಚರಗಳ ಮೊತ್ತ z ನ ವಿತರಣೆಯ ಆವರ್ತಾಂಕ ಉತ್ಪನ್ನ $\frac{n}{\pi(z^2+n^2)}$ ಇರುವುದೆಂದು ಊಹಿಸಬಹುದು. ಇದು ಸಾಧುವೆಂಬುದನ್ನು ಗಣಿತಾನುಗಮನದಿಂದ (ಮ್ಯಾಥ್‌ಮ್ಯಾಟಿಕಲ್ ಇಂಡಕ್ಷನ್) ಸ್ಥಾಪಿಸಬಹುದು. π

ಕೋಷಿ ಸಮಷ್ಟಿಯಿಂದ (ಪಾಪ್ಯುಲೇಷನ್) ಪ್ರತಿಚಯಿಸಿದ n ಗಾತ್ರದ ನಿದರ್ಶನದ ಮಧ್ಯಕ $\bar{x}$ ಆಗಿದ್ದರೆ, $z=n\bar{x}$ ಆಗುವುದು. ಆದ್ದರಿಂದ $\bar{x}$ ನ ವಿತರಣೆಯನ್ನು ಹೀಗೆ ನಿರೂಪಿಸಬಹುದು : $\frac{nd\bar{x}}{\pi\{(n\bar{x})^2+n^2\}}$ ಮತ್ತು ಇದನ್ನು $\frac{d\bar{x}}{\pi(1+\bar{x}^2)}$ ಎಂಬ ಸರಳರೂಪಕ್ಕೆ ಇಳಿಸಬಹುದು. ಇದು ಜನಕ ಸಮಷ್ಟಿಯ (ಪೇರೆಂಟ್ ಪಾಪ್ಯುಲೇಷನ್) ವಿತರಣೆಯೇ ಆಗಿರುವುದರಿಂದ ನಿದರ್ಶನ ಮಧ್ಯಮಾನದ ವಿತರಣೆ ಸಮಷ್ಟಿಯಿಂದ ಯಾದೃಚ್ಛಿಕವಾಗಿ ಆಯ್ದ ಒಂಟಿ ಅವೇಕ್ಷಣೆಯ ವಿತರಣೆಗೆ ತತ್ಸಮವಾಗಿರುವುದು. ಇದರ ಅರ್ಥವೇನೆಂದರೆ ಕೋಷಿ ಸಮಷ್ಟಿಯಿಂದ ಆಯ್ದ ನಿದರ್ಶನದ ಗಾತ್ರ ಹೆಚ್ಚಿದಂತೆಲ್ಲ ಹೆಚ್ಚೇನೂ ಮಾಹಿತಿ ದೊರೆಯುವುದಿಲ್ಲ. ಒಂಟಿ ಅವೇಕ್ಷಣೆಯಿಂದ ಸಿಗುವ ಮಾಹಿತಿಯಷ್ಟೇ ದೊರೆಯುವುದು.

ಮತ್ತೊಂದು ದೃಷ್ಟಿಯಿಂದ ನೋಡಿದರೆ ಇದು ಕೇಂದ್ರ ಪರಿಮಿತಿ ಪ್ರಮೇಯದ (ಸೆಂಟ್ರಲ್ ಲಿಮಿಟ್ ಥಿಯೊರಂ) ವಿಫಲತೆಗೆ ಒಳ್ಳೆಯ ಉದಾಹರಣೆ. ಕೇಂದ್ರ ಪರಿಮಿತಿ ಪ್ರಮೇಯದ ಮೇರೆಗೆ ನಿದರ್ಶನದ ಗಾತ್ರ n ನ ಬೆಲೆ ಹೆಚ್ಚಿದಂತೆಲ್ಲ ನಿದರ್ಶನ ಮಧ್ಯಮಾನದ ವಿತರಣೆ ಪ್ರಸಾಮಾನ್ಯ (ನಾರ್ಮಲ್) ವಿತರಣೆಗೆ ಉಪಸರಿಸುವುದು. ಆದರೆ ಕೋಷಿ ವಿತರಣೆಗೆ ಎರಡನೆಯ ಪ್ರಘಾತ (ಮೊಮೆಂಟ್) ಇಲ್ಲದಿರುವುದರಿಂದ ಈ ಫಲ ಅನ್ವಯಿಸುವುದಿಲ್ಲ.

ಕೋಷಿ ವಿಚರದ ಲಕ್ಷಣ ಉತ್ಪನ್ನ (ಕ್ಯಾರೆಕ್ಟರಿಸ್ಟಿಕ್ ಫಂಕ್ಷನ್) : ಒಂದು ವಿತರಣೆಯ ಸಾರ್‍ರತಾ ಉತ್ಪನ್ನ $f(x)$ ಇದ್ದರೆ, $\phi(x)=E(e^{itx})$ ಎಂಬ ಉತ್ಪನ್ನವನ್ನು x ವಿಚರದ ಲಕ್ಷಣ ಉತ್ಪನ್ನ ಅಥವಾ ಲಕ್ಷಣೀ ಎಂದು ಹೇಳುವುದುಂಟು.

ಇದನ್ನು ಉಕ್ತವಿತರಣೆಯ ಲಕ್ಷಣೀ ಎಂದು ಸಹ ಹೇಳುವುದುಂಟು. ಬಿಡಿಸಿ ಬರೆದರೆ $\phi(t)=\int_{-\infty}^{\infty}e\,itxf(x)dx$ ಎಂದಾಗುವುದು. ಇದರ ಪ್ರಕಾರ ಕೋಷಿ ವಿತರಣೆಯ

ಲಕ್ಷಣ ಉತ್ಪನ್ನವನ್ನು $\int_{-\infty}^{\infty}\frac{\delta}{\pi}\cdot\frac{\cos tx + i\sin tx}{\delta^2+(x-\mu)^2}dx$ ಎಂದು ನಿರೂಪಿಸಬಹುದು. sin tx ವಿಷಮ ಉತ್ಪನ್ನ (ಆಡ್ ಫಂಕ್ಷನ್) ಆಗಿರುವುದರಿಂದ ಈ ಅನುಕಲನಾಂಕ $\int_{-\infty}^{\infty}\frac{\delta}{\pi}\cdot\frac{\cos tx\ dx}{\delta^2+(x-\mu)^2}$ ಎಂಬ ಸರಳರೂಪಕ್ಕೆ ಇಳಿಯುವುದು. ಪರಿರೇಖಾನುಕಲನ (ಕಾಂಟೂರ್ ಇಟೆಗ್ರೇಷನ್) ರೀತ್ಯಾ ಇದರ ಬೆಲೆಯನ್ನು eitì/äe - Itäl ಎಂದು ನಿರ್ಧರಿಸಬಹುದು. ಸ್ಥಳಮಾನ ಪ್ರಾಚಲಗಳು ì1, ì2…………….,ìn ಇರುವ ಮತ್ತು ಒಂದೇ ಮಾನಕ ಪ್ರಾಚಲ ä ಇರುವ n ಕೋಷಿ ವಿತರಣೆಗಳಿಂದ ಹೊರಪಟ್ಟ ಟಿ ಸ್ವತಂತ್ರ್ಯ ಅವೇಕ್ಷಣೆಗಳ ಮಧ್ಯಕರ ಲಕ್ಷಣ ಉತ್ಪನ್ನ eitì/äe – Itäl ಇರುವುದು; ಇಲ್ಲಿ ì=(ì1+ì2+….+ìn)/n.. ಆದ್ದರಿಂದ n ಸ್ವತಂತ್ರ್ಯ ಅವೇಕ್ಷಣೆಗಳ ಮಧ್ಯಮಾನದ ವಿತರಣೆ ವವಿಕ್ತಸ್ಥಳ ಮಾನಗಳ ಸರಾಸರಿಯನ್ನು ಸ್ಥಳಮಾನವಾಗುಳ್ಳ ಮತ್ತೊಂದು ಕೋಷಿ ವಿತರಣೆಯಾಗಿರುವುದು. ಒಂದೇ ಕೋಷಿ ವಿತರಣೆಯಿಂದ ಹೊರಪಟ್ಟ ಸ್ವತಂತ್ರ ಅವೇಕ್ಷಣೆಗಳು ಎಷ್ಟೇ ಆದರೂ ಇವುಗಳ ಮಧ್ಯಮಾನದ ವಿತರಣೆ ಒಂಟಿ ಅವೇಕ್ಷಣೆಯ ವಿತರಣೆಯಾಗಿಯೇ ಉಳಿಯುವುದು. ಇಲ್ಲಿ ಲಕ್ಷಣ ಉತ್ಪನ್ನದ ಸಹಾಯದಿಂದ ಸಿದ್ಧಿಸಿದ ಈ ಫಲವನ್ನು ಮಾರ್ಗಾಂತರದಿಂದ ಮೇಲೆ ಸಾಧಿಸಿದ್ದೇವೆ.

ಈಗ ìi=0,I=1,2,…….,n ಮತ್ತು ä=1 ಎಂದು ತೆಗೆದುಕೊಂಡರೆ, ಲಕ್ಷಣ e-ItI ಉತ್ಪನ್ನ ಇರುವುದು.

ವ್ಯಸ್ತೀಕರಣ ಪ್ರಮೇಯ (ಇನ್ವರ್ಶನ್ ಥಿಯೊರಂ) : ಈಗ ಒಂದು ಸ್ವಾರಸ್ಯವಾದ ಪ್ರಶ್ನೆಯನ್ನು ಎತ್ತಬಹುದು. ಲಕ್ಷಣ ಉತ್ಪನ್ನ e-ItI ಇರುವಂಥ ವಿತರಣೆ ಯಾವುದಾದರೂ ಇರುವುದೇ; ಇರುವುದಾದರೆ ಅದು ಯಾವ ವಿತರಣೆ ಎಂಬುದನ್ನು ಪರಿಶೀಲಿಸೋಣ. ಗಣಿತ ವಿಶ್ಲೇಷಣದಲ್ಲಿ ಒಂದು ಪ್ರಮೇಯವಿದೆ:

$\phi(t)=\int_{-\infty}^{\infty}{}_e\, itxf(x)dx$ ಆಗಿದ್ದರೆ ಆಗ $f(x)=\frac{1}{2\pi}\int_{-\infty}^{\infty}-itx\phi(t)dt.$

ಈ ಫಲಕ್ಕೆ ವ್ಯಸ್ತೀಕರಣ ಪ್ರಮೇಯ ಎಂದು ಹೆಸರು. ಇದರಲ್ಲಿ $\phi(t)={}_e-ItI$ ಎಂಬ ಬೆಲೆಯನ್ನು ಆದೇಶಿಸಿ ಸರಳೀಕರಿಸಿದರೆ

π

$f(x)=\frac{1}{\pi}\int_0^{\infty}{}_e -t\left(\begin{matrix}itx-itx\\ e+e\end{matrix}\right)dt$ ಎಂದಾಗುವುದು. ಕಂಸದೊಳಗಿನ ಪದಾವಳಿಯನ್ನು 2cos x ಎಂದು ಬರೆದು, ಭಾಗಶಃ (ಬೈಪಾರ್ಟ್ಸ್) ಅನುಕಲಿಸಲು $\frac{1}{\pi}\cdot\frac{1}{1+x^2}$ ದೊರೆಯುವುದು, (- ∞ < x < ∞). ಅಂದರೆ, ಒಂದು ವಿತರಣೆಯ ಲಕ್ಷಣ e-ItI ಇದ್ದರೆ ಅದು ಕೋಷಿ ವಿತರಣೆಯಾಗಿರಬೇಕು.

**ಗಾಮವಿತರಣೆಯೊಡನೆ ಸಂಬಂಧ :** ಎರಡು ಸ್ವತಂತ್ರ ಗಾಮ ವಿಚರಗಳ ಭಾಗಲಬ್ಧದ ವಿತರಣೆ ಎರಡನೆಯ ಪ್ರಕಾರದ ಬೀಟ ($\beta_2$)ವಿತರಣೆಯಾಗಿರುವುದು. ಇದರ ಸಹಾಯದಿಂದ ಎರಡು ಸ್ವತಂತ್ರ ಶಿಷ್ಟ ಪ್ರಸಾಮಾನ್ಯ ವಿಚರಗಳ (ಸ್ಟ್ಯಾಂಡರ್ಡ್ ನಾರ್ಮಲ್ ವೇರಿಯೇಟ್ಸ್) ಭಾಗಲಬ್ಧ ಕೋಷಿ ವಿತರಣೆಯನ್ನು ಅನುಸರಿಸುವುದೆಂದು ತೋರಿಸಬಹುದು.

ಶಿಷ್ಟ ಪ್ರಸಾಮಾನ್ಯ ವಿಚರದ ವರ್ಗ ಗಾಮವಿಚರ ಮತ್ತು ಅದರ ಪ್ರಾಚಲ ½. ಎರಡು ಸ್ವತಂತ್ರ ಶಿಷ್ಟ ಪ್ರಸಾಮಾನ್ಯ ವಿಚರಗಳ ಭಾಗಲಬ್ಧ z ಆಗಿದ್ದರೆ $z^2$ ವಿಚರ ಪ್ರತಿಯೊಂದರ ಪ್ರಾಚಲ ½. ಇರುವ ಎರಡು ಸ್ವತಂತ್ರ್ಯ ಗಾಮ ಚರಗಳ ಭಾಗಫಲದ ವಿತರಣೆ. ಆದ್ದರಿಂದ ಇದು (½ , ½) ಪ್ರಾಚಲಗಳ $\beta_2$ ವಿಚರ, ಇದರ ಸಂಭಾವ್ಯತಾ ಅವಕಲಜ (ಪ್ರಾಬೆಬಿಲಿಟಿ ಡಿಫರೆನ್ಶಿಯಲ್) $(z^2)^{\frac{1}{2}-1}d(z^2)/B(\frac{1}{2},\frac{1}{2})(1+z^2)$. ಇದನ್ನು ಸರಳೀಕರಿಸಲು $\frac{dz}{\pi(1+z^2)}, -\infty \le x < \infty$ ಎಂಬ ವಿತರಣೆ ದೊರೆಯುವುದು.

ಇದರಿಂದ ಮತ್ತೊಂದು ಸ್ವಾರಸ್ಯವಾದ ಫಲವನ್ನು ಸಾಧಿಸಬಹುದು. x, y ಗಳು ಸ್ವತಂತ್ರ ಶಿಷ್ಟ ಪ್ರಸಾಮಾನ್ಯ ವಿಚರಗಳಾಗಿರಲಿ. x, y ಸಮಷ್ಟಿಗಳಿಂದ ಪ್ರತಿಚಯಿಸಿದ n ಗಾತ್ರದ ಯಾದೃಚ್ಛಿಕನಿದರ್ಶನಗಳ ಮಾಧ್ಯಮಾನಗಳು ಅನುಕ್ರಮವಾಗಿ $\overline{x}, \overline{y}$ ಇದ್ದರೆ $\overline{xy}$ ಇದರ ವಿತರಣೆಯೂ x / y ಇದರ ವಿತರಣೆಯೂ ಒಂದೇ ಇರುವುದು.

**ನಿದರ್ಶನ ಅಂದಾಜು (ಸ್ಯಾಂಪಲ್ ಎಸ್ಟಿಮೇಟ್) :** ಮಾನಕ $\delta$ = 1 ಇರುವ ಕೋಷಿ ವಿತರಣೆಯನ್ನು ತೆಗೆದುಕೊಂಡರೆ, ಅದರ ಸಾಂದ್ರತಾ ಉತ್ಪನ್ನ $f(x)=\frac{1}{\pi}\cdot\frac{1}{a+(x-\mu)^2}$ ಇರುವುದು, (- ∞ < x < ∞).ಸ್ಥಳಮಾನ ಪ್ರಾಚಲ μ ವಿನ ಒಳ ವಿನ ವಿನಾಜನ್ನಾಗಿ ನಿದರ್ಶನದ ಮಧ್ಯಕವನ್ನು ಬಳಸುವಂತಿಲ್ಲ. ಏಕೆಂದರೆ ಕೋಷಿ ವಿತರಣೆಯ ಒಂಟಿ ಅವೇಕ್ಷಣೆಗಿಂತ ಆ ನಿದರ್ಶನ ಉತ್ತಮವೇನೂ ಅಲ್ಲ. ಈ ಕಾರಣದಿಂದ ನಿದರ್ಶನದ ಮಾಧ್ಯಕವನ್ನು (ಮೀಡಿಯನ್) ಅಂದಾಜನ್ನಾಗಿ ಬಳಸಬಹುದು. ಗಾತ್ರ n ಇರುವ ಹಿರಿಯ ನಿದರ್ಶನಗಳಲ್ಲಿ ಇದರ ವಿಚ ವಿರ ವಿರ ಮಿನ್ಸ್) $\pi^2/4n$ ಇರುವುದು. ಗಾತ್ರ n ಇರುವ ನಿದರ್ಶನದಿಂದ ಗರಿಷ್ಠತಮ ಪಾಯಿಕ ಅಂದಾಜನ್ನು (ಮ್ಯಾಕ್ಸಿಮಂ ಲೈಕ್ಲಿಹುಡ್ ಎಸ್ಟಿಮೇಟ್) ಈ ಕೆಳಗಿನ ಸಮೀಕರಣದಿಂದ ಪಡೆಯಬಹುದು.

$$\log L = -\Sigma_i \log[1+(x_i-\mu)2] - n\log\pi$$

$$\frac{\partial(\log)L}{\partial\mu} = 2\sum_i \frac{(x_i-\mu)}{1+(x_i-\mu)^2} = 0$$

ಎರಡನೆಯ ಸಮೀಕರಣವನ್ನು ಬಿಡಿಸಿ υ ವಿನ ಬೆಲೆಯನ್ನು ಪಡೆಯಬಹುದು. ಇದನ್ನು ಸರಳೀಕರಿಸಿದರೆ (2 n -1) ಘಾತದ ಬಹುಪದಿ ದೊರೆಯುವುದು. n ನ ಬೆಲೆ ಸಣ್ಣದಿದ್ದಾಗ್ಯೂ ಈ ಸಮೀಕರಣವನ್ನು ಬಿಡಿಸುವುದು ಕಷ್ಟತರವಾಗುವುದು. ಗರಿಷ್ಠತಮ ಪ್ರಾಯಿಕ ಅಂದಾಜನ್ನು T ಎಂದು ಸೂಚಿಸಿದರೆ ಅದರ ವಿಚಲನೆ V(T) ಯನ್ನು ಹೀಗೆ ನಿರೂಪಿಸಬಹುದು.

$$[V(T)]^{-1} = -nE\left(\frac{\partial^2 \log f}{\partial\mu^2}\right)\mu = \mu_0$$

ಇಲ್ಲಿ $\mu_0$ ಎಂಬುದು μ ವಿನ ವಾಸ್ತವ ಬೆಲೆ. ಬಲಗಡೆಯಲ್ಲಿ ಮೊದಲು ಅವಕಲನಾಂಕವನ್ನು ಕಂಡುಹಿಡಿದು, ಅದರ ಗಣಿತ ನಿರೀಕ್ಷೆಯನ್ನು ಗಣನೆ ಮಾಡಿ ಅದರಲ್ಲಿನ μ ವಿಗೆ $\mu_0$ ಎಂಬ ಬೆಲೆಯನ್ನು ಆದೇಶಿಸಬೇಕು. ಮೇಲೆ ಕಾಣಿಸಿದ ಕೋಷಿ ವಿತರಣೆಗೆ ಅನ್ವಯಿಸುವ f(x) ನ ಬೆಲೆಯನ್ನು ಈ ಸಮೀಕರಣದಲ್ಲಿ ಆದೇಶಿಸಲು

$$-[V(T)]-1 = \frac{2n}{\pi}\int_{-\infty}^{\infty}\frac{(x-\mu)^2-1}{[1+(x-\mu)^2]^3}dx = \frac{4n}{n}\int_0^{\infty}\frac{(u^2-1)}{(1+u^2)^3}du = -n/2$$

ಅಂದರೆ, V(T)=2/ n . ಆದರಿಂದ ಅಂದಾಜಿನ ಕನಿಷ್ಠತಮ ವಿಚಲನ 2/ n ಎಂದು ಸ್ಥಿರಪಟ್ಟಿದೆ. ಹಿರಿಯ ನಿದರ್ಶನಗಳಲ್ಲಿ ಮಧ್ಯಕರ ವಿಚಲನೆ $\pi^2/4n$ ಎಂದು ಮೇಲೆ ಹೇಳಿದ್ದೇವೆ. ಆದ್ದರಿಂದ ಮಧ್ಯಕದ ದಕ್ಷತೆ = $\frac{2}{n}\div\frac{\pi^2}{4n}=\frac{8}{\pi^2}$. ಅಂದರೆ ಸುಮಾರು 0.8 ಎಂದು ಗೊತ್ತಾಗುತ್ತದೆ. ಇದು ತಕ್ಕಮಟ್ಟಿಗೆ ಸಮರ್ಪಕವಾಗಿದೆ ಎನ್ನ ಬಹುದಾದರೂ ಇದನ್ನು ಮತ್ತಷ್ಟು ಉತ್ತಮಗೊಳಿಸುವುದು ಸಾಧ್ಯವಾದರೆ ಮತ್ತಷ್ಟು ಒಳ್ಳೆಯದು. ತಿದ್ದುಪಡಿ ಪದ (ಕರೆಕ್ಷನ್ ಟರ್ಮ್) ಒಂದನ್ನು ಸೇರಿಸಿ ಈ ಅಂದಾಜನ್ನು ಇನ್ನಷ್ಟು ಕೂರು ಅಥವಾ ನಿಶಿತ ಮಾಡಬಹುದು. ತಿದ್ದುಪಡಿ ಪದವನ್ನು ಹೀಗೆ ನಿರ್ಧರಿಸಬಹುದು. ಗರಿಷ್ಠತಮ ಅಂದಾಜು T ಮತ್ತು ಅನ್ಯಯಾವುದಾದರೂ ಅಂದಾಜು U ಇವುಗಳ ಪರಸ್ಪರ ಸಂಬಂಧವನ್ನು ಪರಿಶೀಲಿಸೋಣ $\left(\frac{\partial \log L}{\partial\mu}\right)T = 0, E\left(\frac{\partial^2 \log L}{\partial\mu^2}\right)T = [V(T)]^{-1}$ ಹಿರಿದಾದ n ಗೆ. ಟೇಲರ್ ಪ್ರಮೇಯದಿಂದ

$\left(\frac{\partial \log L}{\partial\mu}\right)U = \left(\frac{\partial \log L}{\partial\mu}\right)T + (U-T)\times\left(\frac{\partial^2 \log L}{\partial\mu^2}\right)T +$ ಉಚ್ಚತರ ಕ್ರಮಪದಗಳು (ಹೈಯರ್ ಆರ್ಡರ್ ಟರ್ಮ್ಸ್) ಇದರಲ್ಲಿನ (U-T) ಯ ಬೆಲೆ ಕಿರಿದಾಗಿರುವುದರಿಂದ $\left(\frac{\partial^2 \log L}{\partial\mu^2}\right)T$ ಗೆ ಬದಲು ಇದರ ನಿರೀಕ್ಷಿತ ಬೆಲೆಯನ್ನು ಆದೇಶಿಸಬಹುದು. ಕಡೆಯಲ್ಲಿರುವ ಉಚ್ಚತರ ಕ್ರಮದ ಪದಗಳನ್ನು ತೊರೆದರೆ

$\left(\frac{\partial \log L}{\partial\mu}\right)_U \approx \left(\frac{\partial \log L}{\partial\mu}\right)_T - \frac{(U-T)}{V(T)}$ ಎಂಬ ಸನ್ನಿಕಟ ಸಾಮ್ಯ ದೊರೆಯುವುದು. ಈಗ T ಯನ್ನು ಪೃಥಕ್ಕರಿಸಲು

$$U \approx T + V(T)\left(\frac{\partial \log L}{\partial\mu}\right)_u$$

ಎಂದಾಗುವುದು. ಬಲಗಡೆಯ ಎರಡನೆಯ ಪದವೇ U ಯನ್ನು T ಗೆ ಹತ್ತಿರ ಒಯ್ಯುವ ತಿದ್ದುಪಡಿ ಪದ. ನಿದರ್ಶನದ ಮಧ್ಯಕವನ್ನು U ಎಂದು ತೆಗೆದುಕೊಂಡು

$\left(\frac{\partial \log L}{\partial \mu}\right)_U$ ವಿನ ಬೆಲೆಯನ್ನೂ ಮೇಲೆ ನಿರೂಪಿಸಿರುವ V(T) ಯ ಬೆಲೆಯನ್ನೂ T ಯ ಸನ್ನಿಕಟ ಬೆಲೆಯ ಪದಾವಳಿಯನ್ನು ಆದೇಶಿಸಿ ಅರ್ಧಕಕ್ಕಿಂತ ಹೆಚ್ಚು ದಕ್ಷವಾದ ಅಂದಾಜನ್ನು ಪಡೆಯಬಹುದು. ಸಂಸ್ಕರಿಸಿದ ಅಂದಾಜನ್ನು ಹೀಗೆ ನಿರೂಪಿಸಬಹುದು

$$U + \frac{4}{n}\sum_{i=1}^{n}\frac{x_i - U}{1+(x_i - U)^2}$$

**ಕೋಷಿ ವಿತರಣೆಯ ಸಾರ್ವತ್ರೀಕರಣ :** ವಿಕಿರಣಪಟುತ್ವದ ಉಗಮಸ್ಥಾನದಿಂದ ಹೊರ ಚಿಮ್ಮುವ $\alpha$ ಕಿರಣಗಳು $\delta$ ಲಂಬದೂರದಲ್ಲಿರುವ ಒಂದು ಸಮತಲ ತಡಿಕೆಯ ಮೇಲೆ ತಟ್ಟುತ್ತವೆ. ಅವುಗಳ ವಿತರಣೆ ಏನಿರುವುದೆಂದು ನೋಡೋಣ. ತಡಿಕೆಯ ಸಮತಳದ ಮೇಲೆ ಎರಡು ಪರಸ್ಪರ ಲಂಬಾಕ್ಷರಗಳನ್ನು ತೆಗೆದುಕೊಳ್ಳಬೇಕು. á ಕಣ ತಡಿಕೆಯನ್ನು ಬಡಿಯುವ ಚರ ಬಿಂದುವಿನ ನಿರ್ದೇಶಕಗಳು ( x, y) ಇರಲಿ. ಉಗಮ ಬಿಂದುವಿನಿಂದ ತಡಿಕೆಗೆ ಲಂಬವನ್ನೆಳೆಯಬೇಕು. ಈ ಲಂಬದ ಉದ್ದ δ. ಲಂಬಪಾದದ ನಿರ್ದೇಶಕಗಳು $(\mu_1, \mu_2)$ ಆಗಿರಲಿ. ಉಗಮಸ್ಥಾನದಿಂದ ತಡಿಕೆಗೆ ಬಡಿಯುವ á ಕಣ ಹಾರುವ ದಿಶೆಯನ್ನು ಕೆಳಗೆ ಕಾಣಿಸಿದ ಎರಡು ನಿರ್ದೇಶಕಗಳಿಂದ ನಿಗದಿಸಬಹುದು : ತಡಿಕೆಯ ಲಂಬದೊಡನೆ ಮಾಡುವ $\theta$ ಕೋನ; ಮತ್ತು ತಡಿಕೆಯ ಮೇಲೆ ಈ ದಿಶೆಯಿಂದಾದ ವಿಕ್ಷೇಪಕ್ಕೂ x– ಅಕ್ಷಕ್ಕೂ ನಡುವೆ ಇರುವ è ಕೋನ. ಉಗಮಸ್ಥಾನದಿಂದ a ಕಣಗಳು ಹಾರುವದಿಕ್ಕು ಯಾದೃಚ್ಛಿಕ. ಅಂದರೆ ಉಗಮ ಬಿಂದುವನ್ನು ಕೇಂದ್ರವಾಗುಳ್ಳ ಗೋಳದ ಮೇಲ್ಮೈಯಲ್ಲಿ ಸಮಾನಸಲೆಗಳ ಮೇಲೆ ತಾಕುವ ಸಂಭಾವ್ಯತೆಗಳು ಸಮಾನ. $(\theta, \theta + d\theta)$, $(\phi, \phi + d\phi)$ ಎಂಬ ಬೆಲೆಗಳಿಂದ ನಿರ್ದೇಶಿಸಲಾಗುವ ಗೋಳದ ಮೇಲ್ಮೈಯನ್ನು $\theta$ ಕಣ ತಾಕುವ ಸಂಭಾವ್ಯತೆ $c \sin\phi \, d\theta \, d\phi$ ಇರುವುದು (c ಒಂದು ನಿಶ್ಚಿತಸಂಖ್ಯೆ). ತಡಿಕೆಯ ಮೇಲೆ $\alpha$ ಕಣ ಬಡಿಯುವ ಬಿಂದುವಿನ ಸ್ಥಾನನಿರ್ದೇಶಕಗಳು (x,y) ಇದ್ದರೆ, (x, y) ಗಳ ಜಂಟಿವಿತರಣೆಯನ್ನು ನಾವು ಅರಸುತ್ತೇವೆ. x, y ಮತ್ತು $\theta, \delta$ ಇವುಗಳಿಗಿರುವ ಪರಸ್ಪರ ಸಂಬಂಧವನ್ನು ಹೀಗೆ ನಿರೂಪಿಸಬಹುದು.

$x=\mu_1 + \delta \tan\phi \cos\theta$

$y=\mu_2 + \delta \tan\phi \sin\theta$

$dxdy = \delta^2 \sin\phi \sec^3\phi \, d\theta \, d\phi$

ಈ ಬೆಲೆಗಳನ್ನು $c \sin\phi \, d\theta \, d\phi$ ಎಂಬುದರಲ್ಲಿ ಆದೇಶಿಸಿದರೆ

$c[\delta^2+(x-\mu_1)^2+(y-\mu_2)^2]^{-3/2}dxdy$

ದೊರೆಯುವುದು. ಇದೇ (x, y) ಗಳ ಅಭೀಷ್ಟ ಜಂಟಿವಿತರಣೆ. ಇದನ್ನು ಎರಡು ಆಯಾಮಗಳ ಕೋಷಿ ವಿತರಣೆ ಎನ್ನುತ್ತೇವೆ. ಇದೇ ಪ್ರಕಾರವಾಗಿ ಈ ವಿತರಣೆಯನ್ನು 3,4, . . . . ಮಡಿ ಆಯಾಮಗಳಿಗೂ ಸಾರ್ವತ್ರೀಕರಿಸಬಹುದು.

ಮೇಲೆ ಕೊಟ್ಟಿರುವ ವಿತರಣೆಯ ಅವಕಲಿಯನ್ನು y ಬಗ್ಗೆ ಅನುಕಲಿಸಿದರೆ xನ * ಸೀಮಾವರ್ತಿ ವಿತರಣೆ ಲಿಸಿದರೆ (ಮಾರ್ಜಿನಲ್ ಡಿಸ್ಟ್ರಿಬ್ಯೂಷನ್) ದೊರೆಯುವುದು. x ನ ವ್ಯಾಪ್ತಿ $(-\infty, \infty)$ ಇರುವುದು. ಹೀಗೆ ಲಭಿಸಿದ ವಿತರಣೆ

$$\text{ಕೋಷಿ } (x/\mu, \delta) = \frac{cdx}{\delta^2 + (x-\mu)^2}, c = \frac{\delta}{\pi}$$

ಇಲ್ಲಿ $\mu_1$ ಕ್ಕೆ $\mu$ ಎಂದು ಬರೆದಿದೆ. ಇದು ನಮಗೆ ಪೂರ್ವಪರಿಚಿತವಾದ ಕೋಷಿ ವಿತರಣೆಯಾಗುವುದು. ಇದಕ್ಕೆ ಒಂದು ಆಯಾಮದ ಕೋಷಿ ವಿತರಣೆ ಎಂದು ಹೆಸರು. ಮೇಲೆ ತೋರಿಸಿದಂತೆ r ಆಯಾಮಗಳಿಗೆ ಸಾರ್ವತ್ರೀಕರಿಸಿದ ಕೋಷಿ ವಿತರಣೆಯ ರೂಪ

$$\frac{Cdx_2 \, dx_2 \cdots\cdots dx_n}{\left\{\delta^2 + (x_1-\mu_1)^2 + \cdots + (x_r - \mu_r)^2\right\}}$$, (C ಸ್ಥಿರಾಂಕ) ಎಂದಾಗುವುದು.

ಕೋಷಿ ವಿತರಣೆಯನ್ನು ಮತ್ತೊಂದು ರೀತಿಯಲ್ಲಿ ಸಾರ್ವತ್ರೀಕರಿಸಬಹುದು. ಕೋಷಿ ವಿಚರವನ್ನು ಒಂದು ಆಯಾಮದ ವಿಚರವನ್ನಾಗಿಯೇ ಉಳಿಸಿಕೊಂಡು ಛೇದದ ಘಾತವನ್ನು ಹೆಚ್ಚಿಸಬಹುದು. ಆಗ ವಿತರಣೆ $\frac{kdx}{[\delta^2 + (x-\mu^2)]m}, m \ge 1,\ \ k$ ಸ್ಥಿರಾಂಕ ಎಂಬ ರೂಪವನ್ನು ತಾಳುವುದು. ಇದು ಏಕಬಹುಲಕ (ಯೂನಿಮೋಡಲ್) ವಿತರಣೆ ಮತ್ತು $x=\mu$ ರೇಖೆಯ ಸಮಸಂಗತವಾಗಿರುವುದು. ಅಸ್ತಿತ್ವವಿರುವ ವಿಷಮ ಪ್ರಘಾತಗಳು (ಆಡ್‌ಮೊಮೆಂಟ್ಸ್) ಸೊನ್ನೆಯಾಗುತ್ತವೆ. k ಸ್ಥಿರಾಂಕದ ಬೆಲೆ $\delta^{2m-1}$ /B (½, m-1/2) ಇರುವುದು. ಇಲ್ಲಿ ¨B ಎಂಬುದು ಬೀಟ ಉತ್ಪನ್ನ m = 1 ಆದಾಗ $k=\delta\pi$ ಆಗುವುದು ಮತ್ತು ಹಿಂದೆ ಸಾಧಿಸಿದ ಫಲಗಳೊಂದಿಗೆ ತಾಳೆ ಬೀಳುವುದು. ಯುಗ್ಮಪ್ರಘಾತಗಳನ್ನು ಹೀಗೆ ಸಾಧಿಸಬಹುದು. ಮಧ್ಯಮಾನದ (ಮೀನ್) ಸುತ್ತ ತೆಗೆದ 2 r ಕ್ರಮದ ಪ್ರಘಾತ (ವ್ಯಾಖ್ಯೆಯಿಂದ)

$$M_{2r} = k\int_{-\infty}^{\infty} \frac{(x-\mu)^{2r}dx}{\left\{\delta^2 + (x-\mu)^2\right\}^m}$$

ಈಗ 2 m > 2r + 1 ಇದ್ದಾಗ ಮಾತ್ರ ಈ ಅವಕಲನಾಂಕ ಅಭಿಸರಿಸುವುದು (ಕನ್ವರ್ಜಸ್). ಆದ್ದರಿಂದ (2 m -1) ಗಿಂತ ಕಡಿಮೆ ಕ್ರಮದ ಯುಗ್ಮ ಪ್ರಘಾತಗಳ ಅಸ್ತಿತ್ವ ಇರುವುದು; ಹೆಚ್ಚಿನ ಕ್ರಮದ ಪ್ರಘಾತಗಳು ಅಲಭ್ಯವಾಗುವುವು. ವಿತರಣೆಯ ರೂಪವನ್ನು ಪರಿವರ್ತಿಸಿ $cdy\,(1+y^2)^m$ ಎಂಬ ರೂಪಕ್ಕಿಳಿಸಬಹುದು. 2r<(2 m -1) ಇದ್ದಾಗ 2r ಕ್ರಮದ ಪ್ರಘಾತ

$$M2r = \frac{B\left(r+\frac{1}{2}, m-r-\frac{1}{2}\right)}{B\left(\frac{1}{2}, m-\frac{1}{2}\right)}$$

ಇರುವುದು. m >1 ಆದಾಗ ವಿತರಣೆಯ ಮಧ್ಯ ಮಾನಕ್ಕೆ ಅಸ್ತಿತ್ವ ಉಂಟು. ಮತ್ತು ಅದರ ಬೆಲೆ ಸೊನ್ನೆ. (ಎಂ.ವಿ.ಜೆ.)

**ಕೋಪೆನೋವ್‌ಸ್ಕಿ, ಜೋಸೆಫ್ :** 1797–1863. ಪೋಲಿಷ್ ಕವಿ, ನಾಟಕಕಾರ ಮತ್ತು ಕಾದಂಬರಿಕಾರ. ವೃತ್ತಿಯಿಂದ ಉಪಾಧ್ಯಾಯ. ಜೀವನದಲ್ಲೂ ಬರವಣಿಗೆಯಲ್ಲೂ ಆದರ್ಶವನ್ನು ಸಾಧಿಸಲು ಯತ್ನಿಸಿದವ. ಜನಪದ ಕಥೆಗಳನ್ನು ನಾಟಕರೂಪದಲ್ಲಿ ಚಿತ್ರಿಸಿರುವುದೇ ಈತನ ವೈಶಿಷ್ಟ್ಯ. ಸಾಮಾಜಿಕ ಹಾಗೂ ಸುಖಾಂತ ನಾಟಕಗಳನ್ನೂ ಬರೆದಿದ್ದಾನೆ. ಷೇಕ್ಸ್‌ಪಿಯರ್ ಮತ್ತು ಷಿಲರ್‌ರಂತೆ ಈತನೂ ತನ್ನ ನಾಟಕಗಳಲ್ಲಿ ಶಿಷ್ಟಸಾಹಿತ್ಯಕ್ಕಿಂತ ಭಿನ್ನವಾದ ದಾರಿ ಹಿಡಿದಿದ್ದಾನಲ್ಲದೆ ತನ್ನ ಸುಖಾಂತ ನಾಟಕಗಳಲ್ಲಿ ಪಾತ್ರಗಳನ್ನು ಸೃಷ್ಟಿಸುವಲ್ಲಿ ಮಾದರಿಗಳಿಗಿಂತ (ಟೈಪ್ಸ್) ವ್ಯಕ್ತಿವೈಲಕ್ಷಣಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟಿದ್ದಾನೆ. ದಿ ಜ್ಯೂಸ್ (1843), ಮ್ಯಾರೀಡ್ ವುಮನ್ ಅಂಡ್ ವಿಡೊ (1844) ಎಂಬ ನಾಟಕಗಳು ಪ್ರಸಿದ್ಧವಾಗಿವೆ. ಈತನ ಸ್ಪೆಕ್ಯುಲಾಂಟ್(1846) ಮತ್ತು ಕಲೋಕಾಸ್ಟ(1847) ಕಾದಂಬರಿಗಳಲ್ಲಿ ಪೋಲಿಷ್ ಜನರ ವಾಸ್ತವ ಜೀವನ ಚಿತ್ರಣವನ್ನು ಕಾಣಬಹುದು. (ಟಿ.ವಿ.ಎಸ್.)

**ಕೋಸಿ ನದಿ :** ನೇಪಾಳದಲ್ಲಿ ಹುಟ್ಟಿ, ಬಿಹಾರದ ಪೂರ್ಣಿಯ ಜಿಲ್ಲೆಯಲ್ಲಿ ಗಂಗಾನದಿಯನ್ನು ಸೇರುವ ಒಂದು ನದಿ. ಪೂರ್ವ ನೇಪಾಳದಲ್ಲಿ ಹಿಮಾಲಯದ ಸಪ್ತಕೋಸಿ ಪ್ರದೇಶದಲ್ಲಿ ಉ.ಅ. 27° 27′ ಮತ್ತು ಪೂ.ರೇ. 87° 6′ ನಲ್ಲಿ ಜನಿಸುತ್ತದೆ. ಸಪ್ತಕೋಸಿಗಳಲ್ಲಿ ಅತ್ಯಂತ ಮುಖ್ಯವಾದಂಥವು ಸಾನ್‌ಕೋಸಿ ಮತ್ತು ಅರುಣ್. ಗಾಧಿರಾಜ್ಯದ ಕುಶಿಕ ರಾಜನ ಮಗಳು ಕೌಶಿಕಿಯೇ ಕೋಸಿನದಿಯಾದಳೆಂದು ಒಂದು ಐತಿಹ್ಯವುಂಟು. ಕ್ಷತ್ರಿಯ ಕುಮಾರಿಯಾದ ಕೌಶಿಕಿ ಬ್ರಾಹ್ಮಣನೊಬ್ಬನ ಪತ್ನಿಯಾದಳೆಂದೂ ಅವಳಿಗೆ ಹುಟ್ಟಿದ ಮಗ ಕ್ಷತ್ರಿಯ ಸಹಜವಾದ ಗುಣಗಳನ್ನೇ ಹೆಚ್ಚಾಗಿ ಪ್ರಕಟಿಸಿದನೆಂದೂ ಕೌಶಿಕಿ ನದಿಯಾಗಿ ಪರಿವರ್ತನೆಯಾದಳೆಂದೂ ಕಥೆಯಿದೆ. ಕೋಸಿ ನದಿ ಉಗಮಸ್ಥಾನದಿಂದ ಮುಂದುವರಿದು ನೈರುತ್ಯಾಭಿಮುಖವಾಗಿ 96 ಕಿಮೀ. ದೂರ ಹರಿದು ಅನಂತರ ದಕ್ಷಿಣ ಹಾಗೂ ಆಗ್ನೇಯಾಭಿಮುಖವಾಗಿ ತಿರುಗಿ 256 ಕಿಮೀ ದೂರ ಸಾಗಿ ತಾಂಬರ್ ಮತ್ತು ಅರುಣ್ ಉಪನದಿಗಳೊಂದಿಗೆ ಕೂಡಿಕೊಳ್ಳುತ್ತದೆ. ಭಾತ್ರದ ಬಳಿ ಹಲವಾರು ಬಾರಿ ರಭಸದಿಂದ ದುಮುಕಿ ಹರಿದು ಬಿಹಾರದ ಭಾಗಲ್ಪುರ ಜಿಲ್ಲೆಯನ್ನು ಪ್ರವೇಶಿಸಿ 1.5 ಕಿಮೀ ಅಗಲವಾಗಿ, ಮುಖಜ ಭೂಮಿಯ ಪ್ರವಾಹದಂತೆ ನಿಧಾನವಾಗಿ ಸಾಗುತ್ತದೆ. ಹಲವಾರು ಕವಲಾಗಿ ಜಾಲದ ಮಾದರಿಯಲ್ಲಿ ಹರಿದು, ಎಡಗಡೆಯಲ್ಲಿ ಇನ್ನೊಂದು ದೊಡ್ಡ ಉಪನದಿಯಾದ ಗೌರಿಯೊಂದಿಗೆ ಸೇರಿ ಕೊನೆಗೆ ಪೂರ್ಣಿಯ ಜಿಲ್ಲೆಯಲ್ಲಿ ಗಂಗಾನದಿಯನ್ನು ಸೇರುತ್ತದೆ. ಕೋಸಿ ಅತ್ಯಂತ ಚಂಚಲವಾದ ನದಿ. ಅದರ ಪ್ರವಾಹದ ರಭಸ ಅಧಿಕ. ಅದು ಸತತವಾಗಿ ತನ್ನ ಪಾತ್ರದಿಂದ ಹೊರಳುತ್ತಲೇ ಇರುತ್ತದೆ. ಪ್ರವಾಹದೊಂದಿಗೆ ಬಂದ ಮಣ್ಣೂ ಮರಳೂ ತುಂಬಿಕೊಂಡ ಎಡೆಯೆಲ್ಲ ಬಂಜರಾಗಿ ಪರಿಣಮಿಸುತ್ತದೆ. ಭಾಗಲ್ಪುರ ಜಿಲ್ಲೆಯ ಮಾಧಿಪುರ ತಹಸೀಲಿನಲ್ಲಿ ಅರ್ಧವೆಲ್ಲ ಹೀಗಾಗಿದೆ.

18ನೆಯ ಶತಮಾನದಲ್ಲಿ ಪೂರ್ಣಿಯ ನದಿಯ ಕೆಳಗಡೆಯಲ್ಲಿ ಈ ನದಿ ಹರಿಯುತ್ತಿತ್ತು. ಅಲ್ಲಿಂದೀಚೆಗೆ 80 ಕಿಮೀಗಳಷ್ಟು ಪಶ್ಚಿಮಕ್ಕೆ ಇದರ ಪಾತ್ರ ಬದಲಾಯಿಸಿದೆ. ನದಿಯ ಹಳೆಯ ಪಾತ್ರಗಳನ್ನು ಗುರುತಿಸಬಹುದು. ಮೈದಾನದಲ್ಲಿ ನದಿಯ ಗತಿ ಮಂದವಾಗಿದ್ದರೂ ಮಳೆಗಾಲದಲ್ಲಿ ಪ್ರವಾಹದೊಂದಿಗೆ ಮರಗಳು ತೇಲಿಬರುವುದರಿಂದಲೂ ಅಲ್ಲಲ್ಲಿ ಹೂತುಕೊಂಡಿರುವ ಮರದ ಮೋಟುಗಳಿಂದಲೂ ದೋಣಿ ಸಂಚಾರ ಅಸಾಧ್ಯ. ಉಳಿದ ಕಾಲಗಳಲ್ಲಿ ಸಣ್ಣ ದೋಣಿಗಳು ಸಂಚರಿಸುತ್ತವೆ. ಕಟೀಹಾರ್ ಬಳಿ ಈ ನದಿಗೆ ಒಂದು ರೈಲ್ವೆ ಸೇತುವೆ ನಿರ್ಮಿಸಲಾಗಿದೆ. ಆಂಚರ್ ಘಾಟ್‌ನಿಂದ ಖಾನ್ವಾಘಾಟಿಗೆ ಒಂದು ಹಾಯ್ಗುಡವುಂಟು.

ದುಃಖನದಿಯಾದ ಕೋಸಿಯನ್ನು ಪಳಗಿಸಿ ಅದರಿಂದ ಪ್ರಯೋಜನ ಪಡೆಯಲು ವಿವಿಧೋದ್ದೇಶ ಯೋಜನೆಯೊಂದು ಕಾರ್ಯಗತವಾಗಿದೆ. ನೀರಾವರಿ, ವಿದ್ಯುದುತ್ಪಾದನೆ,

ನೌಕಾಯಾನ, ಪ್ರವಾಹನಿಯಂತ್ರಣ, ಮರಳಿನ ತಡೆ, ಭೂಸಾರ ರಕ್ಷಣೆ, ಜಲೋತ್ಸಾರಣ, ಜಲಭರಿತ ನೆಲದ ಕೃಷಿಯೋಗ್ಯ ಪರಿವರ್ತನೆ, ಮಲೇರಿಯ ಹತೋಟಿ, ಮತ್ಸ್ಯಾಭಿವೃದ್ಧಿ, ವಿಹಾರ ಸೌಲಭ್ಯ ಕಲ್ಪನೆ ಇವನ್ನೆಲ್ಲ ಉದ್ದೇಶಿಸಲಾಗಿದೆ. ನೇಪಾಳದ ಛಾತ್ರ ಕಮರಿಯಲ್ಲಿ 250 ಮೀ ಎತ್ತರದ ಕಟ್ಟೆಯ ಮೇಲ್ಗಡೆಯಲ್ಲಿ 4½ ಲಕ್ಷ ಹೆಕ್ಟೇರ್ – ಅಡಿ ನೀರು ಸಂಗ್ರಹವಾಗುತ್ತದೆ. ಕೋಸಿ ನದಿಗೆ ಕಟ್ಟಿರುವ ಅಣೆಗಳು ಎರಡು. ಇವುಗಳಲ್ಲಿ ಒಂದು ಇರುವುದು ನೇಪಾಳದಲ್ಲಿ, ನದಿಯ ಹರಿವನ್ನು ನಿಯಂತ್ರಿಸಿ, ಸ್ಥಾಯಿಕರಿಸುವುದು ಇದರ ಉದ್ದೇಶ. ಅಣೆಯ ಆಚೀಚೆಯ ಎರಡು ಕಾಲುವೆಗಳಿಂದ ನೇಪಾಳದಲ್ಲಿ ಸುಮಾರು 81 ಲಕ್ಷ ಹೆಕ್ಟೇರ್‌ಗಳ ನೆಲ ನೀರಾವರಿಗೆ ಒದಗುತ್ತದೆ. ಎರಡನೆಯ ಅಣೆ ನೇಪಾಳ–ಬಿಹಾರ ಗಡಿಯ ಮೇಲಿರುತ್ತದೆ. ಇದರ ಎಡಗಡೆಯಲ್ಲಿ ಎರಡು ಕಾಲುವೆಗಳೂ ಬಲಗಡೆಯಲ್ಲಿ ಒಂದು ಕಾಲುವೆಯೂ ನಿರ್ಮಾಣವಾಗಿ ಬಿಹಾರದ ಪೂರ್ಣಿಯ, ದರ್ಭಾಂಗ ಮತ್ತು ಮುಜಾಫರ್‌ಪುರ ಜಿಲ್ಲೆಗಳಲ್ಲಿ 20 ಲಕ್ಷ ಎಕರೆಗಳಿಗಿಂತ ಹೆಚ್ಚು ನೆಲಕ್ಕೆ ನೀರಾವರಿ ಸೌಲಭ್ಯ ಒದಗುತ್ತದೆ. ಕಟ್ಟೆಯ ಬಳಿ ಸ್ಥಾಪಿತವಾಗುವ ವಿದ್ಯುದುತ್ಪಾದನ ಕೇಂದ್ರದ ಉತ್ಪಾದನ ಸಾಮರ್ಥ್ಯ 13 ಲಕ್ಷ ಕಿವಾ. (ಬಿ.ಜಿ.ಟಿ.ಎ.)

**ಕೋಸು :** ಕ್ರೂಸಿಫೇರೀ ಕುಟುಂಬಕ್ಕೆ ಸೇರಿದ ಒಂದು ಸುಪ್ರಸಿದ್ಧ ತರಕಾರಿ ಸಸ್ಯ. ಬ್ರಾಸಿಕ ಓಲರೇಸಿಯ ಇದರ ವೈಜ್ಞಾನಿಕ ನಾಮ. ಇದರಲ್ಲಿ 3 ಮುಖ್ಯ ಬಗೆಗಳಿದ್ದು ರೂಢಿಯಲ್ಲಿ ಎಲೆಕೋಸು, ಗೆಡ್ಡೆಕೋಸು, ಹೂಕೋಸು ಎಂದು ಪ್ರಸಿದ್ಧವಾಗಿವೆ. ವಿವರಗಳಿಗೆ ಆಯಾ ಲೇಖನಗಳನ್ನು ನೋಡಿ. *

**ಕೋಹಿನೂರ್ :** ಪ್ರಪಂಚ ಪ್ರಸಿದ್ಧವಾದ ವಜ್ರ. 1849ರಲ್ಲಿ ಬ್ರಿಟಿಷ್ ರಾಜಮನೆತನದ ವಶವಾಗಿ ಈಗಲೂ ಅದರ ಸ್ವತ್ತಾಗಿ ವಿಂಡ್ಸರ್ ಅರಮನೆಯಲ್ಲಿದೆ. ಕೋಹಿನೂರ್ ಎಂದರೆ ಬೆಳಕಿನ ಗುಡ್ಡ ಎಂದು ಅರ್ಥ. ಇದರ ಪ್ರಾರಂಭದ ಇತಿಹಾಸ ಸ್ಪಷ್ಟವಾಗಿಲ್ಲ. 1526ರ ಪಾಣಿಪಟ್ ಕದನಾನಂತರ ಹುಮಾಯೂನನಿಗೆ ಗ್ವಾಲಿಯರ್ ದೊರೆ ಕೊಟ್ಟ ವಜ್ರವೇ ಇದು ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಇದು ಕರ್ನಾಟಕದಲ್ಲಿ ಕೃಷ್ಣಾ ನದಿಯ ದಂಡೆಯ ಮೇಲಿನ ಕೊಲ್ಲೂರು ಗಣಿಯಲ್ಲಿ ದೊರಕಿದ್ದೆಂದೂ ಮೀರ್ ಜುಮ್ಲಾ ಇದನ್ನು 1656ರಲ್ಲಿ ಷಹಜಹಾನನಿಗೆ ಕಾಣಿಕೆಯಾಗಿ ಕೊಟ್ಟನೆಂದೂ ಮತ್ತೆ ಕೆಲವರು ವಾದಿಸುತ್ತಾರೆ. ಅಂತೂ 1739ರ ವೇಳೆಗೆ ಇದು ಮೊಗಲ್ ಚಕ್ರವರ್ತಿಗಳ ವಶದಲ್ಲಿತ್ತೆಂದೂ ಆ ವರ್ಷ ಪರ್ಷಿಯದ ದೊರೆ ನಾದಿರ್ ಷಾ ಮೊಗಲ್ ಚಕ್ರವರ್ತಿ ಮಹಮದ್ ಷಾನನ್ನು ಸೋಲಿಸಿ, ಇತರ ಬೆಲೆಬಾಳುವ ರತ್ನಗಳೊಡನೆ ಇದನ್ನೂ ಒಯ್ದನೆಂದೂ ಕಾಣುತ್ತದೆ. ನಾದಿರ್ ಷಾನ ಮರಣಾನಂತರ ಇದು ಕಾಬೂಲಿನ ದೊರೆಯ ಕೈಗೆ ಹೋಯಿತು. ಪಂಜಾಬಿನ ರಣಜಿತ್‌ಸಿಂಗ್ 1813ರಲ್ಲಿ ಆ ದೊರೆಯನ್ನು ಸೋಲಿಸಿ, ಅವನಿಂದ ಕೋಹಿನೂರನ್ನು ಪಡೆದು, ತನ್ನ ತೋಳಿನಲ್ಲಿ ಧರಿಸಿಕೊಂಡ. ರಣಜಿತ್ ಸಿಂಗ್ ತೀರಿಹೋದಮೇಲೆ ಪಂಜಾಬು ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ವಶವಾಯಿತು. ಆ ಕಂಪನಿ ಇದನ್ನು 1849ರಲ್ಲಿ ಇಂಗ್ಲೆಂಡಿನ ವಿಕ್ಟೋರಿಯ ರಾಣಿಗೆ ನಜರುಗಾಣಿಕೆಯಾಗಿ ಒಪ್ಪಿಸಿತು. ಮೊದಲು ಇದರ ತೂಕ 191 ಕ್ಯಾರಟ್‌ಗಳಷ್ಟಿತ್ತು. 1852ರಲ್ಲಿ ಇದನ್ನು ಕಂಡರಿಸಿದಾಗ ಇದು 108 ಕ್ಯಾರಟ್ ಗಳಿಗೆ ಇಳಿಯಿತು. ಈ ವಜ್ರದ ಕಮಲ ಬಿಡಿಸಲು ಆಗ ಸು.ರೂ 1,20,000 ಖರ್ಚಾದುವು. ಇದಕ್ಕಾಗಿ ವಜ್ರಶಿಲ್ಪಿ ದಿನಕ್ಕೆ 12 ಗಂಟೆಗಳಂತೆ 38 ದಿನಗಳ ಕಾಲ ಕೆಲಸ ಮಾಡಬೇಕಾಯಿತು. (ಬಿ.ಎಚ್.ಎಸ್)

**ಕೋಳಿ :** ಏವಿಸ್ ವರ್ಗ, ಗ್ಯಾಲಿಫಾರ್ಮೀಸ್ ಗಣ, ಫೇಸಿಯಾನಿಡೀ ಕುಟುಂಬಕ್ಕೆ ಸೇರಿದ ಹಕ್ಕಿ. ಮಾನವ ಸಾಕಿರುವ ವಿವಿಧ ಬಗೆಯ ಕೋಳಿಗಳೆಲ್ಲ ಗ್ಯಾಲಸ್ ಎಂಬ ಶಾಸ್ತ್ರೀಯ ಹೆಸರಿನ ಕಾಡುಕೋಳಿಯಿಂದ ಪಡೆದವಾಗಿವೆ. ಕೋಳಿ ನೆಲದ ಮೇಲೆ ಮಾತ್ರ ವಾಸಿಸಬಲ್ಲುದು. ಹಾರುವ ಸಾಮರ್ಥ್ಯ ಹೆಚ್ಚಾಗಿಲ್ಲ. ರೆಕ್ಕೆಗಳನ್ನು ವೇಗವಾಗಿ ಬಡಿಯುತ್ತ ಒಂದು ರೀತಿಯಲ್ಲಿ ಕುಪ್ಪಳಿಸುತ್ತ ಸಾಗಬಲ್ಲುದು. ಬೇರೆ ಹಕ್ಕಿಗಳಿಗೆ ಹೋಲಿಸಿದರೆ ಇದರ ದೇಹರಚನೆ ಮತ್ತು ಗುಣಗಳು ಬಹಳ ಹಿಂದುಳಿದ ರೀತಿಯವು. ಮೂಗಿನ ಹೊಳ್ಳೆಯ ಮೇಲೆ ಪುಕ್ಕಗಳಿಲ್ಲದಿರುವುದು.

ನಸುಬಾಗಿದ ಚಿಕ್ಕ ಮತ್ತು ದೃಢವಾದ ಕೊಕ್ಕು, 4 ಬೆರಳುಗಳುಳ್ಳ ಪಾದಗಳು (ಇವುಗಳಲ್ಲಿ 3 ಬೆರಳುಗಳು ಮುಂಭಾಗದೆಡೆಗೂ ಒಂದು ಹಿಂದಕ್ಕೂ ಚಾಚಿವೆ). ಪಾದಗಳ ಮೇಲೆ ಪುಕ್ಕಗಳಿಲ್ಲದಿರುವುದು, ಕತ್ತಿನೊಳಗೆ ಗಾಳಿಚೀಲಗಳಿಲ್ಲದಿರುವುದು ಚಿಕ್ಕ ರೆಕ್ಕೆಗಳು–ಇವು ಕೋಳಿಯ ಮುಖ್ಯ ಲಕ್ಷಣಗಳು. ಕಾಳುಗಳೇ ಇದರ ಪ್ರಧಾನ ಆಹಾರ. ಕಾಡುಕೋಳಿ ಒಂದು ಸಲಕ್ಕೆ 8–12 ಮೊಟ್ಟೆಯಿಡುವುದಾದರೂ ಸಾಕಿದ ಕೋಳಿಗಳಲ್ಲಿ ನಾಡುಕೋಳಿಗಳು ದಿನಕ್ಕೊಂದರಂತೆ ಸುಮಾರು 20 ದಿನ ಇಡುತ್ತವೆ. ಅನಂತರ ಸುಮಾರು 3–4 ತಿಂಗಳು ಕಳೆದ ಮೇಲೆ ಮತ್ತೆ ಮೊಟ್ಟೆಯಿಡಲು ಆರಂಭಿಸುತ್ತವೆ. ಫಾರಮ್ ಕೋಳಿಗಳು ದಿನಕ್ಕೆ ಒಂದು ಮೊಟ್ಟೆಯಂತೆ ವರ್ಷಕ್ಕೆ ಸುಮಾರು 240–250 ದಿನಗಳ ಕಾಲ ಮೊಟ್ಟೆಯಿಡುತ್ತವೆ.

ಕೋಳಿಗಳನ್ನು ಬಹು ಹಿಂದಿನಿಂದಲೂ ಮಾಂಸಕ್ಕಾಗಿ ಮತ್ತು ಮೊಟ್ಟೆಗಾಗಿ ಮಾನವ ಸಾಕುತ್ತಿದ್ದಾನೆ. ಅವನು ಸಾಕಿರುವ ಪಕ್ಷಿಗಳಲ್ಲೆಲ್ಲ ಕೋಳಿಯೇ ಬಹು ಪ್ರಮುಖವಾದುದು. ನೂರಾರು ವರ್ಷಗಳಿಂದ ಹಲವಾರು ಬಗೆಯ ಕೋಳಿಗಳನ್ನು




ಕೋಳಿಯ ದೇಹ ಭಾಗಗಳು : 1 ತೋಕೆ, 2 ಕೂಡುಗರಿ, 3 ತಡಿ 4 ಬೆನ್ನು, 5 ಕೊರಳ ಬಿಡಿಗರಿ, 6 ಕಿವಿಯ ಅಲೆ, 7 ಕಿವಿ, 8 ಅಲಗು , 9 ಮೊನೆಗಳು, 10 ಜುಟ್ಟು, 11. ಬುಡ, 12 ಕಣ್ಣು, 13 ಕೊಕ್ಕು, 14 ಜೋಲು ಮಾಂಸಲ ಭಾಗ್ಯ, 15 ಗರಿ ಹೊದಿಕೆ, 16 ರೆಕ್ಕೆಕಮಾನು, 17 ಎದೆ, 18 ರೆಕ್ಕೆ ಪಟ್ಟಿ, 19 ಕೀಲು, 20 ಪಂಜ, 21 ಹಿಮ್ಮಡಿ ಮುಳ್ಳು, 22 ಕಣಕಾಲು, 23 ತುಪ್ಪುಳು, 24 ತಡಗರಿಗಳು, 25 ತೋಕೆಯ ಹೊದಿಕೆಗಳು 26 ಗೌಣ ಕೂಡುಗರಿಗಳು

ಅಡ್ಡತಳಿಯೆಬ್ಬಿಕೆಗಳಿಂದ ಪಡೆಯಲಾಗಿದ್ದು ಎಲ್ಲ ಬಗೆಗಳೂ ಕಾಡುಕೋಳಿಯಿಂದ ಭಿನ್ನವಾಗಿವೆ. ಇವುಗಳ ಸಾಕಣೆಯೂ ಒಂದು ಪ್ರಮುಖ ಉದ್ಯಮವಾಗಿ ಬೆಳೆದಿದೆ. ಕೋಳಿ ಸಾಕಣೆ ಯಾವಾಗ ಆರಂಭವಾಯಿತೆಂದು ಹೇಳುವುದು ಕಷ್ಟ. ಪ್ರ.ಶ.ಪೂ. 3,200ಕ್ಕೂ ಹಿಂದೆ ಭಾರತದಲ್ಲಿ ಕೋಳಿ ಸಾಕಣೆ ಆರಂಭವಾಯಿತೆಂದು ಅಭಿಪ್ರಾಯಪಡಲಾಗಿದೆ **(ನೋಡಿ– ಕೋಳಿಸಾಕಣೆ)**. *

**ಕೋಳಿ ಅಂಕ :** ಆರಿಸಿ, ಸಾಕಿ, ಕಾಳಗಕ್ಕೆಂದೇ ತಯಾರಿ ಕೊಟ್ಟ ಎರಡು ಹುಂಜಗಳ ನಡುವೆ ಸ್ಪರ್ಧೆಯನ್ನು ಏರ್ಪಡಿಸಿ ಅವುಗಳ ಸೆಣಸಾಟವನ್ನೂ ಸೋಲು ಗೆಲುವುಗಳನ್ನೂ ನೋಡಿ ನಲಿಯುವ ಒಂದು ಜನಪದ ಮನರಂಜನ ಕಾರ್ಯಕ್ರಮ. ಇದನ್ನು ಕೋಳಿ ಕಾಳಗ, ಕೋಳಿ ಕಟ್ಟ ಎಂದೂ ಕರೆಯುವುದಿದೆ. ಒಂದು ಕಾಲದಲ್ಲಿ ಕನ್ನಡ ದೇಶದ ಅನೇಕ ಕಡೆ ಇದು ಪ್ರಚಲಿತವಿತ್ತಾದರೂ ಸದ್ಯಕ್ಕೆ ಇದು ತುಳುನಾಡಿನಲ್ಲಿ ಮಾತ್ರ ಜನಪ್ರಿಯವಾಗಿ ಉಳಿದುಬಂದಿದೆ. ಈ ಹವ್ಯಾಸಕ್ಕೆ ಸಾಕಷ್ಟು ಪ್ರಾಚೀನವಾದ ಪರಂಪರೆ ಇರುವಂತೆ ತೋರುತ್ತದೆ. ಕೋಳಿ ಸಾಕಣೆಯ ಪ್ರಚಾರ ಕಾರ್ಯ ಪ್ರಾರಂಭವಾಗುವುದಕ್ಕೆ ಸಾವಿರಾರು ವರ್ಷಗಳ ಮೊದಲೇ ಅದರ ಮಹತ್ತ್ವವನ್ನು ಸಮಾಜದ ಮುಖಂಡರು ಅರಿತಿದ್ದರು ಎನ್ನುವುದು ನಿರ್ವಿವಾದವಾದ ವಿಚಾರ. ಸುಮಾರು ಪ್ರಸ್ತಕಶಕದ ಆರಂಭದಲ್ಲಿ ರಚಿಸಲ್ಪಟ್ಟ ವಾತ್ಸ್ಯಾಯನನ ಕಾಮಸೂತ್ರದಲ್ಲಿ ಕಲೆಗಳ ವಿಚಾರ ಹೇಳುವಾಗ ಕುಕ್ಕುಟ ಕಾಳಗದ ಪ್ರಸ್ತಾಪ ಮಾಡಲಾಗಿದೆಯಲ್ಲದೆ ಸಾಮಾನ್ಯ ಜನ ಅವುಗಳ ಮೇಲೆ ಪಣ ಕಟ್ಟುತ್ತಿದ್ದರು ಎಂಬ ವಿಷಯವೂ ಉಕ್ತವಾಗಿದೆ. ವರಾಹಮಿಹಿರನ ಬೃಹತ್ ಸಂಹಿತೆಯ 53ನೆಯ ಅಧ್ಯಾಯದಲ್ಲಿ ಕುಕ್ಕುಟ ಲಕ್ಷಣದ ವಿಚಾರವಲ್ಲದೆ ಹುಂಜಗಳ ಕಾಳಗ ಆಗಿನ ಒಂದು ಮನೋರಂಜನೆಯ ಆಟವಾಗಿತ್ತೆಂಬ ವಿಷಯವೂ ಇದೆ.

ಕೋಳಿ ಅಂಕಗಳನ್ನು ಜನ ಯಾವ ಉದ್ದೇಶದಿಂದ ಪ್ರಾರಂಭಿಸಿದರು ಎಂಬುದು ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ. ಪ್ರಾಣಿ ಪ್ರಾಣಿಗಳ ನಡುವೆ, ಮನುಷ್ಯ ಪ್ರಾಣಿಗಳ ನಡುವೆ ಕಾಳಗವನ್ನೇರ್ಪಡಿಸಿ ನೋಡುವ ಹವ್ಯಾಸ ಸಾಕಷ್ಟು ಹಳೆಯದು. ರಾಜ ಮಹಾರಾಜರೂ ಜನರೂ ಹಿಂದಿನಿಂದ ಈ ಬಗ್ಗೆ ಆಸಕ್ತಿ ತೋರಿಸುತ್ತ ಬಂದಿದ್ದಾರೆ. ಒಳ್ಳೆಯ ತಳಿಯ ಪ್ರಾಣಿಗಳನ್ನು ಸಾಕಲು ಇಂಥ ಕಾಳಗಗಳಿಂದ ಉತ್ಸಾಹ, ಪ್ರೋತ್ಸಾಹ ಸಾಕಷ್ಟು ಸಿಗುತ್ತಿತ್ತೆಂದೂ ಊಹಿಸಬಹುದು.

ಕುದುರೆಯ ಓಟದ ಪಂದ್ಯಾಟ ಕ್ರಮೇಣ ಕುದುರೆಯ ಜೂಜು ಆದಂತೆ ಕೋಳಿಯ ಅಂಕ ಕ್ರಮೇಣ ಕೋಳಿಯ ಜೂಜು ಆಯಿತೆನ್ನಬಹುದು. ಪಂದ್ಯದ ಹಕ್ಕಿಗಳ ಮೇಲೆ ಪಣ ಕಟ್ಟುವ ವಿಷಯ ವಾತ್ಸಾಯನನ ಕಾಮಸೂತ್ರದಲ್ಲೇ ಬಂದಿದೆ.

ಕೋಳಿ ಅಂಕ ಹೆಚ್ಚಾಗಿ ಹಬ್ಬ, ಜಾತ್ರೆ, ನೇಮ, ಕಂಬಳ ಇತ್ಯಾದಿಗಳು ಕಳೆದ ಕೂಡಲೇ ಜರುಗುವುದು ಸಂಪ್ರದಾಯ. ವಾಡಿಕೆಯಂತೆ ಇದು ಮೂರು ಅಥವಾ ಐದು ದಿನ ನಡೆಯುತ್ತದೆ. ಸರಿಸುಮಾರು ಮಧ್ಯಾಹ್ನದಿಂದ ಮಧ್ಯರಾತ್ರಿಯ ತನಕ

ನಡೆಯುವ ಕೋಳಿ ಅಂಕದ ಸ್ಥಳ ಸಾಮಾನ್ಯವಾಗಿ ವಿಶಾಲವಾದ ಬಯಲು ಇಲ್ಲವೆ ಬೆಳೆ ಕೊಯ್ದು ಗದ್ದೆ. ಈ ಕಾರ್ಯಕ್ರಮಕ್ಕೆ ಹೆಚ್ಚಾಗಿ ಆಹ್ವಾನ ಅಥವಾ ಪ್ರಚಾರದ ಅವಶ್ಯಕತೆ ಇಲ್ಲವಾದರೂ ವಿಶೇಷ ಸಂದರ್ಭಗಳಲ್ಲಿ ಕರಪತ್ರಗಳ ಹಂಚಿಕೆ ಕೂಡ ಜರುಗುತ್ತದೆ.

ಕೋಳಿ ಅಂಕ : ದಕ್ಷಿಣ ಕನ್ನಡ ಜಿಲ್ಲೆಯ ಒಂದು ಜನಪ್ರಿಯ ಜನಪದ ಕ್ರೀಡೆ

ಕಾಳಗದ ಹಕ್ಕಿಯ ಜಾತಿಗಳು : ಹುಂಜಗಳ ವರ್ಗೀಕರಣದಲ್ಲಿ ಅವುಗಳ ಬಣ್ಣಕ್ಕೇ ಪ್ರಾಧಾನ್ಯ. ಬೊಳ್ಳೆ, ಕರ್ಬೊಳ್ಳೆ, ಕೆಂಪೆ, ಮಂಜಲೆ, ಪಂಚಣೆ, ಕಕ್ಕೆ, ನೀಲೆ, ಕುಪ್ಪುಳ, ಗರುಡುಬೂದಿ, ಕರಿನೀಲ, ಕೆಮ್ಮೈರ, ಗಿಡಿಯ(ಕಪ್ಪು, ಕೆಂಪು, ಬಿಳಿ, ಕೆಮ್ಮೈರ ಬೂದಿ), ಮೈಪ್ಪ(ಬಿಳಿ, ಕಪ್ಪು ಹಳದಿ), ಉರಿಯ(ಕಪ್ಪು ಕೆಂಪು), ಬೂದಿ, ಕಾವೆ(ಗರುಡ, ಕೆಂಪು, ಕಪ್ಪು) ಪಂಬದ(ಕಾಲಿನಲ್ಲಿ ಗರಿ ಇರುವುದು), ಗಡ್ಡಮೆ(ಗಡ್ಡದಲ್ಲಿ ಗರಿ ಇರುವುದು), ಕೊಟ್ಟುಚಾಲೆ(ಜುಟ್ಟಿನ ಬುಡದಲ್ಲಿ ಕೆಲವು ಗರಿಗಳು ಎತ್ತರಕ್ಕಿರುವುದು)– ಮೊದಲಾದ ನಾನಾ ಪ್ರಭೇದಗಳಿವೆ. ದೊಡ್ಡ ಜಾತಿಯ ಹುಂಜಗಳನ್ನು ಪೈಕಾ ಎಂದೂ ಸಣ್ಣ ಜಾತಿಯವನ್ನು ಜೀಕಾ ಎಂದು ಕರೆಯುತ್ತಾರೆ. ಹುಂಜಗಳ ಗರಿಗಳ ಆಕಾರಕ್ಕನುಗುಣವಾಗಿ ಮುಖ್ಯವಾಗಿ ಜಳ್ಳಿ ಮತ್ತು ಪೆರಡಿಂಗ ಎಂಬ ಎರಡು ವರ್ಗಗಳಿವೆ. ಜಳ್ಳಿಯ ಗರಿಗಳು ಉದ್ದವಾಗಿ ಮೊನಚಾಗಿರುತ್ತವೆ. ಪೆರಡಿಂಗದ ಗರಿಗಳು ಹೇಂಟೆಯ ಗರಿಗಳಂತೆ ಉರುಟಾಗಿರುತ್ತದೆ.

**ಹುಂಜಗಳ ಜುಟ್ಟು** : ಆಕಾರಕ್ಕನುಸಾರವಾಗಿ ಹುಂಜಗಳ ಜುಟ್ಟುಗಳಿಗೆ ಬೇರೆ ಬೇರೆ ಹೆಸರುಗಳಿವೆ. ಹಾಗಲಕಾಯಿ ಜುಟ್ಟು, ಎಲೆಜುಟ್ಟು, ಸಹಸ್ರಜುಟ್ಟು ಸುತ್ತಿಗೆ (ಮುಂಡಾಸು) ಜುಟ್ಟು, ರೂಪಾಯಿಜುಟ್ಟು ಮೊದಲಾದ ಕೆಲವನ್ನು ಇಲ್ಲಿ ಹೆಸರಿಸಬಹುದು.

ಹುಂಜದ ಒಡೆಯ ತನ್ನ ಹಕ್ಕಿಯನ್ನು ಅಂಕಕ್ಕೆ ಹಿಡಿದುಕೊಂಡು ಬರುವಾಗ, ಮನೆ ಮಕ್ಕಳು ಅಗತ್ಯದ ಸಾಮಗ್ರಿ ಸಮೇತರಾಗಿ ಅವನನ್ನು ಹಿಂಬಾಲಿಸುತ್ತಾರೆ. ಒಂದು ಕಾಲಕ್ಕೆ ಹಕ್ಕಿಗಳ ಸಂಖ್ಯೆ ಜಾಸ್ತಿ ಇದ್ದಾಗ ಶ್ರೀಮಂತರು ಕಾವಡಿ (ಬೆತ್ತದ ದೊಡ್ಡ ಕುಕ್ಕೆ) ಅಥವಾ ಗಾಡಿಗಳಲ್ಲಿ ಅವನ್ನು ಸಾಗಿಸುತ್ತಿದ್ದರು. ಊರಿನ ಮುಖಂಡರು ಅಂಕಕ್ಕೆ ಬಂದ ಹುಂಜಗಳನ್ನು ಅವಲೋಕಿಸಿ, ಜಾತಿ ಮತ್ತು ಬಣ್ಣಕ್ಕನುಸಾರವಾಗಿ, ವೃತ್ತಾಕಾರವಾಗಿ, ಬಯಲಲ್ಲಿ ಅವನ್ನು ಕಟ್ಟುವ ಪದ್ಧತಿ ಇತ್ತು.

ಕಾಳಗಕ್ಕೆ ಸಿದ್ಧವಾಗುವಂತೆ ಸಮಗಾತ್ರದ ಎರಡು ಹುಂಜಗಳನ್ನು ಅವುಗಳ ಒಡೆಯರು ಕೆರಳಿಸಿ, ಒಂದರ ಮೇಲೊಂದನ್ನು ಛೂ ಬಿಡುತ್ತಾರೆ. ಈ ರೀತಿ ಎರಡೂ ಜಗಳವಾಡುವಾಗ ಅವುಗಳಲ್ಲೊಂದು ಎದುರಾಳಿಯನ್ನು ಹಿಂಗಾಲಿನ ಹೊಡೆತದಿಂದ ತತ್ತರಿಸುವಂತೆ ಮಾಡುತ್ತದೆ. ಜಗಳವಾಡುತ್ತ ಕೆಲವು ಅಂಕದ ಸ್ಥಳದಿಂದ ಓಡುತ್ತವೆ. ಅವುಗಳಲ್ಲಿ ಕೆಲವು ತಿರುಗಿ ಬಂದು ಪುನಃ ಕಾಳಗವಾಡುತ್ತವೆ. ಅಖೈರಾಗಿ ಓಡಿಹೋದ ಹಕ್ಕಿ ಸೋತಂತೆಯೆ.

ಈಗ ಹುಂಜದ ಕಾಲಿಗೆ ಬಾಳು(ಮೊನಚಾದ ಉಕ್ಕಿನ ಕತ್ತಿ) ಕಟ್ಟಿಯೇ ಕಾಳಗವಾಡಿಸುತ್ತಾರೆ. ದಕ್ಷಿಣ ಕನ್ನಡದಲ್ಲಿ ಈ ರೀತಿ ಹಿಂಸಾರೂಪವಾದ ಕಾಳಗ ಜೈನರ ಆಳ್ವಿಕೆ ಅಂತ್ಯವಾದ ಬಳಿಕ ಪ್ರಾರಂಭವಾಯಿತು ಎಂದು ಹೇಳುತ್ತಾರೆ. ಏನಿದ್ದರೂ ಈಗ ಬಾಳು ಇಲ್ಲದ ಕೋಳಿ ಅಂಕವಿಲ್ಲ. ಹಕ್ಕಿಗಳ ಗಾತ್ರಕ್ಕನುಸಾರವಾಗಿ ಅವುಗಳ ಬಾಳಿನ ಗಾತ್ರವೂ ವ್ಯತ್ಯಾಸವಾಗುತ್ತದೆ, ಆಕಾರವೂ ಭಿನ್ನವಾಗುತ್ತದೆ. ಬಾಳಿನಲ್ಲಿ ಮುಖ್ಯವಾಗಿ ಬಡಕ್ಕಾಯಿ ಬಾಳ್ (ಉತ್ತರದ ಬಾಳು) ಮತ್ತು ತೆನ್ಕಾಯಿ ಬಾಳ್ ಅಥವಾ ಊರಬಾಳ್(ದಕ್ಷಿಣದ ಬಾಳು) ಎಂದು ಎರಡು ಬಗೆ. ಅಂಕುಡೊಂಕಾಗಿರುವ ನಾಗರಕರ್ಸಿ ಮತ್ತು ತುದಿ ಸ್ವಲ್ಪ ಕೊಕ್ಕೆಯಾಗಿರುವ ಇಟ್ಟಿಮುಳ್ಳು ಇವು ಇತರ ಎರಡು ಬಾಳುಗಳು. ಹಕ್ಕಿಯ ಕಾಲಿಗೆ ಬಾಳು ಕಟ್ಟುವುದರಲ್ಲಿಯೂ ಕೆಲವರು ಪರಿಣಿತರಾದವರು ಇರುತ್ತಾರೆ. ಅದಕ್ಕೆ ಉಪಯೋಗಿಸುವ ದೋರೆಯು (ದಾರ) ವಿಶೇಷ ರೀತಿಯದು. ಬಲಗಾಲಿನ ಹೆಬ್ಬೆರಳಿನ ಬಳಿ ಯಾವಾಗಲೂ ಹಿಮ್ಮುಖವಾಗಿ ಬಾಳನ್ನು ಕಟ್ಟುತ್ತಾರೆ. ಬಡೆಕ್ಕಾಯಿ ಬಾಳಿಗೆ ಅರಿವೆ ಸುತ್ತಿ, ದೋರೆ ಕಟ್ಟುತ್ತಾರೆ. ಊರಬಾಳಿಗೆ ಅರಿವೆ ಅಗತ್ಯವಿಲ್ಲ. ಬಾಳುಗಳನ್ನು ಇಡುವ ಚೀಲಕ್ಕೆ ಬಾಳಸೂಡಿ ಎನ್ನುತ್ತಾರೆ.

ಯಾವಾಗಲೂ ಸಮಜೋಡಿಗಳನ್ನೇ ಕಾಳಗಕ್ಕೆ ಬಿಡುತ್ತಾರೆ. ಅವು ಗರಿಕೆದರಿಸಿ, ಬಾಲ ಹಾರಿಸಿ, ಬಹಳ ಹುಮ್ಮಸ್ಸಿನಿಂದ ಕಾದಾಡುತ್ತವೆ. ತಮ್ಮ ಕಾಲಕತ್ತಿಯಿಂದ ಎದುರಾಳಿಯನ್ನು ಸದೆಬಡಿಯಲು ಸೆಣಸುತ್ತವೆ. ಎರಡರಲ್ಲಿ ಯಾವುದೂ ಸಣ್ಣಪುಟ್ಟ ಗಾಯ ನೋವುಗಳಿಂದ ಹಿಂಜರಿಯುವುದಿಲ್ಲ.

ತೀವ್ರ ಪೆಟ್ಟಾದಾಗ ಅಂಕದಲ್ಲಿರುವ ಪರಿಣಿತ ಚಿಕಿತ್ಸಕರು ಗಾಯಗಳನ್ನು ಹೊಲಿದು, ಔಷಧಿ ಹಾಕುತ್ತಾರೆ. ನಾನಾ ವಿಧದ ಶುಶ್ರೂಷೆಗಳು ಜರುಗುತ್ತವೆ. ಇದರಿಂದ ಚೇತರಿಸಿಕೊಂಡ ಹಕ್ಕಿ ಪುನಃ ಎದುರಾಳಿಯ ಮೇಲೆ ಎರಗುವುದೂ ಉಂಟು.

ಕುಕ್ಕುಟ ಪಂಚಾಂಗ: ಅಂಕದ ಹಕ್ಕಿಗಳ ಹುಟ್ಟು, ಬಾಲ್ಯ, ಯೌವನ, ವೃದ್ಧಾಪ್ಯ, ಮರಣ ಮೊದಲಾದ ಲಕ್ಷಣಗಳನ್ನೊಳಗೊಂಡ ಪುಸ್ತಕವಿದು. ಇದು ಕೋಳಿಕಟ್ಟುವವರಿಗೆ ಉಪಯುಕ್ತವಾದ ಒಂದು ಕೈಪಿಡಿ. ಯಾವ ಬಣ್ಣದ ಕೋಳಿ ಮತ್ತಾವ ನಿರ್ದಿಷ್ಟ ಬಣ್ಣದ ಕೋಳಿಯನ್ನು ಯಾವ ವಾರ ಅಥವಾ ತಿಥಿಯಲ್ಲಿ ಗೆಲ್ಲುತ್ತದೆಂದು ಇದರಲ್ಲಿ ಬರೆದಿರುತ್ತದೆ. ಈಗಲೂ ಇಂಥ ಪಂಚಾಂಗಗಳ ಬಳಕೆ ಉಂಟಾದರೂ ಇದರ ಸತ್ಯಾಸತ್ಯತೆಗಳ ವಿಷಯ ಮಾತ್ರ ಚರ್ಚಾಸ್ಪದವಾಗಿದೆ.

ಕೋಳಿ ಪಂದ್ಯದಲ್ಲಿ ಸಮ ಮತ್ತು ಓಡಿ ಎಂದು ಎರಡು ಬಗೆ. ಸಮಕಾಳಗದಲ್ಲಿ ಬಿಟ್ಟ ಎರಡು ಹಕ್ಕಿಗಳಲ್ಲಿ ಯಾವುದಾದರೊಂದು ಸತ್ತರೆ ಅಥವಾ ಸೋತು ಓಡಿಹೋದರೆ, ಅದು ಗೆದ್ದ ಹಕ್ಕಿಯ ಯಜಮಾನನಿಗೆ ದಕ್ಕುತ್ತದೆ. ಕಾಳಗದಲ್ಲಿ ಸತ್ತರೆ ಮಾತ್ರ ಅದು ಗೆದ್ದ ಹಕ್ಕಿಯವನಿಗೆ ದೊರೆಯುತ್ತದೆಯೇ ಹೊರತು, ಕೇವಲ ಓಡಿಹೋದರೆ ಅಲ್ಲ. ಓಡಿ ಹೋದ ಅಥವಾ ಸತ್ತ ಕೋಳಿಯನ್ನು ಒಟ್ಟೆ ಎಂದೂ ಗೆದ್ದುದನ್ನು ಬಂಟ ಎಂದೂ ಕರೆಯುತ್ತಾರೆ. ಸೋಡ್ತಿ ಅಂಕದಲ್ಲಿ ನಿರ್ದಿಷ್ಟ ಸಂಖ್ಯೆಯ ಹಕ್ಕಿಗಳನ್ನು ಕಾಳಗಕ್ಕೆ ಬಿಟ್ಟು ಗೆದ್ದವುಗಳಿಗೆ ಬಹುಮಾನ ಕೊಡುತ್ತಾರೆ. (ಬಿ.ಎ.ವಿ.ಆರ್.)

**ಕೋಳಿಕ್ಕೋಡ್** : ಕೇರಳ ರಾಜ್ಯದ ಒಂದು ಜಿಲ್ಲೆ, ಮುಖ್ಯ ಪಟ್ಟಣ. ಕೋಳಿಕ್ಕೋಡ್ ನಗರ ಮಲಬಾರ್ ಕರಾವಳಿಯಲ್ಲಿದೆ. ಇದೊಂದು ಸಣ್ಣ ಕೈಗಾರಿಕಾ ಕೇಂದ್ರ. ಮರ ಕೊಯ್ಯುವುದು, ಹೆಂಚು ತಯಾರಿಕೆ, ಕಾಫಿ ಪರಿಷ್ಕರಣೆ, ಹೆಣಿಕೆ, ಉಡುಪು ತಯಾರಿಕೆ–ಇವು ಇಲ್ಲಿಯ ಮುಖ್ಯ ಕೈಗಾರಿಕೆಗಳು. ಹಿಂದೆ ಇದು ಹತ್ತಿ ಬಟ್ಟೆಗಳಿಗೆ ಬಹಳ ಪ್ರಸಿದ್ಧವಾಗಿತ್ತೆಂದು ವಿದೇಶಿಯರು ಈ ಸ್ಥಳವನ್ನು ಕ್ಯಾಲಿಕಟ್ ಎಂದು ಕರೆಯುತ್ತಿದ್ದುದರಿಂದ ಇಲ್ಲಿಯ ಬಟ್ಟೆ ಕ್ಯಾಲಿಕೋ ಎಂದು ಪ್ರಸಿದ್ಧವಾಯಿತೆಂದು ಹೇಳಲಾಗಿದೆ. ಕೋಳಿಕ್ಕೋಡ್ ವಿಶ್ವವಿದ್ಯಾಲಯ ಕೇಂದ್ರ. ಕಲೆ, ವಿಜ್ಞಾನ, ವೈದ್ಯಕ ಮತ್ತು ಶಿಕ್ಷಕರ ಕಾಲೇಜುಗಳು, ಸಾಗರೀಕ ಜೀವಿವಿಜ್ಞಾನ ಸಂಶೋಧನಾ ಸಂಸ್ಥೆಯೂ ಇವೆ.

ಕೋಳಿಕ್ಕೋಡ್ ಬಂದರು ಶ್ರೇಷ್ಠವಾದದ್ದೇನು ಅಲ್ಲ. ಮಳೆಗಾಲದಲ್ಲಿ ಇದು ಉಪಯೋಗಕ್ಕೆ ಬರುವುದಿಲ್ಲ. ಉಳಿದ ಕಾಲದಲ್ಲೂ ಹಡಗುಗಳು ತೀರದಿಂದ ಸು. 5 ಕಿಮೀ ಆಚೆಗೆ ನಿಲ್ಲುತ್ತವೆ. ಕೋಳಿಕ್ಕೋಡ್ ನಗರದ ದಕ್ಷಿಣದಲ್ಲಿರುವ ಕಲ್ಲಾಯಿ ನದೀ ಮುಖದ ಬಳಿ ಇರುವ ಚೌಬೀನೆ ಕೋಠಿ ಇಡೀ ಭಾರತದಲ್ಲೇ ದೊಡ್ಡದು. ತೆಂಗಿನ ಉತ್ಪನ್ನಗಳು, ಮೆಣಸು, ಶುಂಠಿ, ಕಾಫಿ ಚಹಾ ಇವು ಕೋಳಿಕ್ಕೋಡ್ ಬಂದರಿನ ಮೂಲಕ ರಫ್ತಾಗುತ್ತವೆ. ಬಡಗರ, ಎರ್ನಾಡು, ಕೋಳಿಕ್ಕೋಡ್, ಕ್ವಿಲಾಂಡಿ, ದಕ್ಷಿಣ ವೈನಾಡು ಮತ್ತು ತಿರೂರು ಇಲ್ಲಿಯ ತಾಲ್ಲೂಕುಗಳು. ಬತ್ತ ಮುಖ್ಯ ಬೆಳೆ. ಬೇಸಾಯದ ಜೊತೆಗೆ ತೆಂಗಿನ ಉತ್ಪನ್ನಗಳು ಮತ್ತು ಅರಣ್ಯೋತ್ಪನ್ನಗಳನ್ನು ಸಿದ್ಧಪಡಿಸುವುದು ಒಂದು ಮುಖ್ಯ ಕಸುಬು. (ಎಸ್.ಎನ್.ಎಆರ್.)

ಕೋಳಿಕ್ಕೋಡ್ ಬಹಳ ಹಿಂದಿನಿಂದಲೂ ವಿದೇಶಿಯರ ಗಮನ ಸೆಳೆದಿದೆ. ಅರಬ್ಬೀ ವ್ಯಾಪಾರಿಗಳು 7ನೆಯ ಶತಮಾನದಲ್ಲಿ ಇಲ್ಲಿ ನೆಲೆಸಿದ್ದರು. ಅವರು ಸ್ಥಳೀಯರೊಂದಿಗೆ ವಿವಾಹ ಸಂಬಂಧ ಬೆಳೆಸಿದರು. ಇಲ್ಲಿಯ ಅನೇಕರು ಇಸ್ಲಾಂ ಮತಕ್ಕೆ ಪರಿವರ್ತನೆ ಹೊಂದಿದರು. ಇವರೇ ಮಾಪಿಳ್ಳೆಗಳು. ಪೆಡ್ರೋಕೋವಿಲ್‌ಹಾಂ ಎಂಬ ಪೋರ್ಚುಗೀಸ್ ಪ್ರವಾಸಿ 1487ರಲ್ಲಿ ಈ ಸ್ಥಳವನ್ನು ನೋಡಿ ಯುರೋಪಿನ ಜನಾಂಗದವರ ವ್ಯಾಪಾರೋದ್ಯಮಗಳಿಗೆ ಇದರ ಪ್ರಾಶಸ್ತ್ಯವನ್ನು ಕುರಿತು ಬರೆದ. 1498ರಲ್ಲಿ ವಾಸ್ಕೋಡಗ್ಯಾಮ ಇಲ್ಲಿಗೆ ಭೇಟಿಯಿತ್ತಿದ್ದ. ಕವ್ರಾಲ್ ಇದನ್ನು ಕಂಡದ್ದು 1500ರಲ್ಲಿ. 1509ರಲ್ಲಿ ಫರ್ನಾಂಡೋ ಕೌಟಿನ್ ಹೋ ಇಲ್ಲಿ ಒಂದು ಕೋಟೆಯನ್ನು ಕಟ್ಟಲು ಉದ್ದೇಶಿಸಿ ಇದಕ್ಕೆ ಮುತ್ತಿಗೆ ಹಾಕಿ ಸೋತ. 1515ರಲ್ಲಿ ಪೋರ್ಚುಗೀಸರಿಗೂ ಜಾಮೋರಿನ್‌ಗೂ ಒಪ್ಪಂದವಾಯಿತು. ಇಲ್ಲಿ ಒಂದು ಕೋಠಿ ಕಟ್ಟಲು ಅವರಿಗೆ ಅವಕಾಶ ದೊರೆಯಿತು; ಆದರೆ ಈ ಕೋಠಿಯನ್ನು 1525ರಲ್ಲಿ ತ್ಯಜಿಸಲಾಯಿತು. 1615ರಲ್ಲಿ ಬ್ರಿಟಿಷ್ ಸೇನಾಧಿಕಾರಿ ಕ್ಯಾಪ್ಟನ್

ಕೀಲಿಂಗ್ ಇಲ್ಲಿ ಒಂದು ವ್ಯಾಪಾರ ಸಂಸ್ಥೆಯನ್ನು ಸ್ಥಾಪಿಸಿದ. ಕೋಳಿಕ್ಕೋಡ್ ಪಟ್ಟಣ 1765ರಲ್ಲಿ ಹೈದರನ ಆಕ್ರಮಣಕ್ಕೆ ಒಳಪಟ್ಟು ನಾಶವಾಯಿತು. ಆದರೆ 1782ರಲ್ಲಿ ಅವನ ಪಡೆಗಳು ಹಿನ್ನಡೆಯಬೇಕಾಯಿತು. ಆದರೆ 1788ರಲ್ಲಿ ಟಿಪ್ಪುಸುಲ್ತಾನ ಅದಕ್ಕೆ ಮತ್ತೆ ಮುತ್ತಿಗೆಹಾಕಿದ. ಅವನು ಅಲ್ಲಿಯ ನಿವಾಸಿಗಳನ್ನೆಲ್ಲ ಸು.10 ಕಿಮೀ ದಕ್ಷಿಣದಲ್ಲಿರುವ ಬೇಪೋರೆಗೆ ಕಳುಹಿಸಿಕೊಟ್ಟ. 1790ರಲ್ಲಿ ಕೋಳಿಕ್ಕೋಡನ್ನು ಬ್ರಿಟೀಷರು ಆಕ್ರಮಿಸಿಕೊಂಡರು. 1792ರ ಕೌಲಿನ ಪ್ರಕಾರ ಅದರ ಒಡೆತನ ಬ್ರಿಟಿಷರಿಗೆ ವರ್ಗವಾಯಿತು. ಹೊರಗೆ ಹೋಗಿದ್ದ ನಿವಾಸಿಗಳು ಅಲ್ಲಿಗೆ ಹಿಂದಿರುಗಿ, ನಾಶವಾಗಿದ್ದ ಪಟ್ಟಣವನ್ನು ಮತ್ತೆ ನಿರ್ಮಿಸಿದರು. (ಎಸ್.ಎಸ್‌ಐ.)

**ಕೋಳಿಸಾಕಣೆ :** ಮೊಟ್ಟೆ, ಮಾಂಸ ಪಡೆಯುವ ಉದ್ದೇಶದಿಂದ ಕೋಳಿ ವರ್ಗದ ಪಕ್ಷಿಗಳ ವೈಜ್ಞಾನಿಕ ಪಾಲನೆ ಮತ್ತು ಪೋಷಣೆ (ಪೌಲ್ಟ್ರಿ ಫಾರ್ಮಿಂಗ್). ವಿಶಾಲಾರ್ಥದಲ್ಲಿ ಕೋಳಿಗಳು, ಬಾತುಕೋಳಿಗಳು, ಟರ್ಕಿ ಕೋಳಿ ಮೊದಲಾದ ಉಪಯುಕ್ತ ಸಾಕುಪ್ರಾಣಿಗಳನ್ನೆಲ್ಲ ಕೋಳಿವರ್ಗದ ಪಕ್ಷಿಗಳೆಂದು ಕರೆಯುವ ಪದ್ಧತಿ ಉಂಟು.

ಭಾರತದಲ್ಲಿ ಕೋಳಿಸಾಕಣೆ ಒಂದು ಉಪಕಸಬು. ಹಳ್ಳಿಗಳಲ್ಲಿ ರೈತಾಪಿ ಸಂಸಾರ ಸರಾಸರಿ 10–12 ಕೋಳಿಗಳನ್ನು ಸಾಕುವುದುಂಟು. ಆದರೆ ಇಲ್ಲಿ ಶಾಸ್ತ್ರೀಯ ವಿಧಾನವನ್ನು ಆಚರಣೆಯಲ್ಲಿ ತಂದಿಲ್ಲ. ಬಹುತೇಕವಾಗಿ ಬೇಕಾಬಿಟ್ಟಿ ಅಲೆದು ಆಹಾರ ಸಂಪಾದಿಸಿ ರಾತ್ರಿವೇಳೆ ಗೂಡುಸೇರುವ ಈ ಸಾಕುಕೋಳಿಗಳಿಂದ ರೈತರಿಗೆ ಒದಗುವ ಆರ್ಥಿಕ ಲಾಭ ತೀರ ಅಂಚಿನದಷ್ಟೆ. ಇಂಥ ಕೋಳಿಗಳಿಂದ ದೊರೆಯುವ ಉತ್ಪನ್ನ ಕಡಿಮೆ. ಅಲ್ಲದೆ ಇವು ಸ್ವತಃ ರೋಗರುಜಿನಗಳಿಗೆ ಮತ್ತು ಅವಘಡಗಳಿಗೆ ತುತ್ತಾಗಿ ಸಾಯುವುದರ ಜೊತೆಗೆ ಅಂಟುಜಾಡ್ಯಗಳ ವಾಹಕಗಳಾಗುವುದೂ ಉಂಟು.

ಕೋಳಿಸಾಕಣೆಯನ್ನು ಒಂದು ವ್ಯವಸ್ಥಿತ ಕೈಗಾರಿಕೆ ಎಂದು ಪರಿಗಣಿಸಿ ಆ ರೀತಿ ನಡೆಸದಿದ್ದರೆ ಅದರಿಂದ ನಿರೀಕ್ಷಿಸಿದ ಪ್ರತಿಫಲ ದೊರೆಯಲಾರದು. ಈಚೆಗೆ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳ ಸಹಾಯದಿಂದ ಕೋಳಿ ಸಾಕಣೆಯಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಲಾಗಿದೆ. ವೈಜ್ಞಾನಿಕ ರೀತಿಯಲ್ಲಿ ಸಾಕಿ ಹೆಚ್ಚು ಲಾಭವನ್ನು ಪಡೆಯಬೇಕಾದರೆ ಸುಧಾರಿಸಿದ ಒಳ್ಳೆ ತಳಿಯ ಕೋಳಿಗಳು, ಅವಕ್ಕೆ ಸಾಕಷ್ಟು

ಮೊಟ್ಟೆಯ ಕಾವು ಪೆಟ್ಟಿಗೆ

ಸ್ಥಳಾವಕಾಶವುಳ್ಳ ಹಿತಕರವಾದ ಗೂಡು, ಯೋಗ್ಯವಾದ ಸಲಕರಣೆಗಳು ಸಮತೂಕವಾದ ಆಹಾರ ಸರಬರಾಜು ಮತ್ತು ರೋಗ ಪ್ರತಿಬಂಧಕ ಯೋಜನೆಗಳನ್ನು ಅನುಸರಿಸಬೇಕಾಗುತ್ತದೆ.

**ಉತ್ತಮ ತಳಿಯ ಕೋಳಿಗಳು :** ಕೋಳಿಗಳು ಹೆಚ್ಚು ಮೊಟ್ಟೆಗಳನ್ನು ಕೊಡಬೇಕೆಂದು ತಜ್ಞರು ತಳಿ ಅಭಿವೃದ್ಧಿ ಮಾಡಿದ್ದಾರೆ. ಇಂಥ ತಳಿಗಳಿಗೆ ಲೆಗ್ ಹಾರ್ನ್, ಮಿನಾರ್ಕಾ, ರೋಡ್ ಐಲೆಂಡ್ ರೆಡ್ ಎಂದು ಹೆಸರು. ಹೀಗೆ ಹಲವಾರು ತಳಿಯ ಕೋಳಿಗಳಿವೆ. ಮಾಂಸಕ್ಕಾಗಿಯೇ ಕೋಳಿಗಳ ತಳಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಕೋಳಿಗಳ ಬೆಳವಣಿಗೆಯ ಗತಿ ತೀವ್ರ, ಇವುಗಳ ಮೈ ಮಾಂಸ ಬೇಗನೆ ಬೆಳೆದು ತುಂಬಿಕೊಳ್ಳುತ್ತದೆ. ರಾಕ್, ವೈಯಾನ್ಸ್, ಕಾರ್ನಿಕ್ ಎಂಬ ಕೋಳಿಗಳು ಈ ಜಾತಿಗೆ ಸೇರಿದವು. ಇತ್ತಿತ್ತಲಾಗಿ ತಳಿಸುಧಾರಕರು ಅನುಕೂಲವಾದ ತಳಿಗಳಿಂದ ಅತಿ ಹೆಚ್ಚು ಲಾಭ ಕೊಡುವ ಮಿಶ್ರ ಜಾತಿಯ ಕೋಳಿಗಳನ್ನು ಒದಗಿಸುತ್ತಿದ್ದಾರೆ. ಹೈಟ್ ಲೆಗ್‌ಹಾರ್ನ್ ಮತ್ತು ರೋಡ್ ಐಲೆಂಡ್ ರೆಡ್ ಜಾತಿಯ ಕೋಳಿಗಳಿಂದ ಮಿಶ್ರ ಜಾತಿಯ ಕೋಳಿಗಳನ್ನು ಪಡೆಯುತ್ತಾರೆ. ಆಸ್ಟ್ರೇಲಿಯದಲ್ಲಿ ಆಸ್ಟ್ರೋಲಾರ್ಪ್ ಮತ್ತು ಹೈಟ್ ಲೆಗ್‌ಹಾರ್ನ್ ಜಾತಿಗಳ ಮಿಶ್ರ ತಳಿಗಳನ್ನು ಉತ್ಪಾದಿಸುವುದು ವಾಡಿಕೆಯಲ್ಲಿದೆ. ಮಿಶ್ರ ತಳಿ ಕೋಳಿಗಳು ಬಲು ಶೀಘ್ರವಾಗಿ ಬೆಳೆಯುತ್ತವೆ. ಇವು ಮಿಶ್ರತಳಿಯ ಸಾಮರ್ಥ್ಯ (ಹೈಬ್ರಿಡ್ ವಿಗರ್) ಪಡೆದಿರುವುದರಿಂದ ದೃಢವಾಗಿರುತ್ತವೆ. ಹಳ್ಳಿಗಳಲ್ಲಿಯ ಮನೆ, ತಿಂಡಿ ಮುಂತಾದ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತವೆ. ಮಿಶ್ರ ತಳಿಯ ಗಂಡು ಮರಿಗಳು ಬೇಗನೆ ಮೈ ತುಂಬಿಕೊಂಡು ಬೆಳೆಯುವುದರಿಂದ ಅವನ್ನು ಕೂಡಲೆ ಮಾಂಸಕ್ಕಾಗಿ ಉಪಯೋಗಿಸಬಹುದು. ಇದೇ ಜಾತಿಯ ಹೆಣ್ಣು ಕೋಳಿಗಳು ಅಂದರೆ( ಹೇಂಟೆಗಳು) ಬೇಗನೆ ಮೊಟ್ಟೆ ಇಡುವ ಸ್ಥಿತಿಗೆ ಬರುತ್ತವೆ. ಇಡೀ ವರ್ಷ ಇವು ಅಧಿಕ ಸಂಖ್ಯೆಯಲ್ಲಿ ಮೊಟ್ಟೆಗಳನ್ನು ಕೊಡುತ್ತವೆ.

**ಕೋಳಿ ಮನೆಗಳು :** ಚಳಿ, ಮಳೆ, ಗಾಳಿ, ಕಾವಿನ ಬಾಧೆಗಳನ್ನು ತಡೆಗಟ್ಟಿ ಹಿತಕರವಾದ ವಾತಾವರಣವನ್ನು ಕಲ್ಪಿಸಲು ಯೋಗ್ಯವಾದ ಮನೆಗಳು ಬೇಕು. ಒಳ್ಳೆಯ ತಳಿಯ ಕೋಳಿಗಳನ್ನು ಆಯ್ದು ಅವುಗಳಿಗೆ ಸಮತೂಕದ ಆಹಾರವನ್ನು ಒದಗಿಸಬೇಕು. ಅವಕ್ಕೆ ಹಿತಕರವಾದ ಪರಿಸರವಿರುವ ನೆಲೆಗಳನ್ನೂ ಒದಗಿಸಿದರೆ ಮೊಟ್ಟೆಗಳ ಉತ್ಪತ್ತಿ ಹೆಚ್ಚುತ್ತದೆ. ತೇವ ಮತ್ತು ನೀರು ನಿಲ್ಲುವಂಥ ತಗ್ಗುಪ್ರದೇಶಗಳನ್ನು ಬಿಟ್ಟು ಎತ್ತರವಾದ ಜಾಗದಲ್ಲಿ ಕೋಳಿ ಮನೆಗಳನ್ನು ಕಟ್ಟಬೇಕು. ತಳಪಾಯವನ್ನು ಇಲಿ, ಹೆಗ್ಗಣ ಮುಂತಾದವು ಕೊರೆಯದಂತೆ ಸುಮಾರು 2'–3' ಆಳವಾಗಿ ಹಾಕುವುದು ಒಳ್ಳೆಯದು. ನೆಲಮಟ್ಟ ಹೊರಮಟ್ಟಕ್ಕಿಂತ ಒಂದು ಅಡಿ ಎತ್ತರವಾಗಿರಬೇಕು. ಹೊರಗಿನಿಂದ ತೇವ ಮತ್ತು ನೀರು ಒಳಗೆ ಬರದಂತೆ ಇದು ಸಹಕಾರಿ. ನೆಲದಮೇಲೆ ಒಣಗಿದ ಎಲೆಯ ಚೂರು, ಕಬ್ಬಿನ ಸಿಪ್ಪೆ, ರಾಗಿ ಉಬ್ಬಲು, ಮರದ ಹೊಟ್ಟು, ನೆಲಗಡಲೆಕಾಯಿ ಅಥವಾ ಬತ್ತದ ಹೊಟ್ಟನ್ನು ದಪ್ಪವಾಗಿ ಹಾಕಬಹುದು. ನೆಲಮಟ್ಟದಿಂದ 2.5'–3' ಎತ್ತರದ ಮತ್ತು 4.5"–9' ದಪ್ಪದ ಇಟ್ಟಿಗೆ ಅಥವಾ ಕಲ್ಲಿನ ಗೋಡೆಯನ್ನು ಕಟ್ಟಬೇಕು. ಈ ಗೋಡೆಯ ಮೇಲೆ 3' ಅಗಲದ 0.5" ಬಲೆ ಕಣ್ಣಿನ ತಂತಿಯ ಜಾಳಿಗೆಯನ್ನು ಚಾವಣಿ ವರೆಗೆ ಸಾಧ್ಯವಿದ್ದಷ್ಟು ಒಳಗಿನ ಜಾಗದಿಂದ ಗಟ್ಟಿಯಾಗಿ ಪೋಣಿಸಬೇಕು. ಮೇಲ್ಚಾವಣಿಗಾಗಿ ಹೆಂಚು ಅಥವಾ ಕಲ್ನಾರು ತಗಡುಗಳನ್ನು ಉಪಯೋಗಿಸಬಹುದು. ಹುಲ್ಲು, ತೆಂಗಿನ ಗರಿಗಳ ಅಥವಾ ಈಚಲ ಎಲೆಗಳ ಚಾಪೆಗಳನ್ನು ಸಹ ಉಪಯೋಗಿಸಬಹುದು. ಸತುವಿನ ತಗಡುಗಳನ್ನು ಉಪಯೋಗಿಸಿದರೆ ಬೇಸಗೆಯಲ್ಲಿ ಬಲು ಸೆಕೆಯಾಗಿಯೂ ಚಳಿಗಾಲದ ರಾತ್ರಿಯಲ್ಲಿ ಬಲು ಚಳಿಯಾಗಿಯೂ ಕೋಳಿಗಳ ಆರೋಗ್ಯಕ್ಕೆ ಅಪಾಯವಾಗಬಹುದು. ಮನೆ ನಡುವಿನ ಎತ್ತರ 10'ಗಳಿಗಿಂತ ಹೆಚ್ಚು ಇರಬಾರದು. ಬಿಸಿಲು ಮತ್ತು ಮಳೆಯ ನೀರು ಒಳಗಡೆ ಬರದಂತೆ ತಡೆಯಲು ಮನೆಯ ಮೇಲ್ಚಾವಣಿಯ ಸೂರನ್ನು ಎರಡು ಬದಿಗಳಲ್ಲಿಯೂ 2.5'–3' ಮುಂದಕ್ಕೆ ಚಾಚಿರಬೇಕು.

**ಕೋಳಿಗಳಿಗೆ ಸ್ಥಳಾವಕಾಶ :** ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ 2.5–3 ಚದರಡಿಗಳಷ್ಟು ಮತ್ತು ಹೆಚ್ಚು ಮಳೆ ಬೀಳುವ ಮಲೆನಾಡು ಪ್ರದೇಶದ 3–5 ಚದರಡಿಗಳಷ್ಟು ಜಾಗ ಪ್ರತಿಯೊಂದು ಕೋಳಿಗೂ ಬೇಕು. ಉದಾಹರಣೆಗೆ 15'x20' ಇರುವ ಮನೆಯಲ್ಲಿ 75–120 ಕೋಳಿಗಳನ್ನು ಸಾಕಬಹುದು.

**ಕೋಳಿಗಳನ್ನು ಬೆಳೆಸಲು ಉಪಯೋಗಿಸುವ ಉಪಕರಣಗಳು :** ಇವುಗಳಿಗೆ ಒಟ್ಟಾಗಿ ಬ್ರೂಡರ್ ಎಂದು ಹೆಸರು. ಇದೊಂದು ವಿಶಿಷ್ಟವಾದ ರಚನೆಯ ಪೆಟ್ಟಿಗೆ. ಇದರಲ್ಲಿ ಎರಡು ವಿಧ–ತಂತಿ ಜಾಳಿಗೆಯ ಮೇಲೆ ಮರಿಗಳ ಬೆಳವಣಿಗೆಗೆ ಅವಕಾಶವುಳ್ಳ ಬ್ರೂಡರುಗಳು (ಬ್ಯಾಟರಿ ಬ್ರೂಡರ್ಸ್) ಮತ್ತು ನೆಲಮಟ್ಟದ ಮರಿಗಳ ಬೆಳವಣಿಗೆಗೆ ಅವಕಾಶ ಸಲ್ಲಿಸುವ ಬ್ರೂಡರುಗಳು (ಫ್ಲೋರ್ ಬ್ರೂಡರ್ಸ್) ಬ್ರೂಡರುಗಳನ್ನು ಕಡಿಮೆ ಖರ್ಚಿನಲ್ಲಿ ಯಶಸ್ವಿಯಾಗಿ ಮನೆಯಲ್ಲಿಯೇ ತಯಾರಿಸಬಹುದು. 10"–12" ಎತ್ತರವಿರುವ ಬಹಳ ವಿಶಾಲವಾದ ಬುಟ್ಟಿಯನ್ನು ತೆಗೆದುಕೊಳ್ಳಬೇಕು. ಇದನ್ನು ಡಬ್ಬುಮಾಡಿ ಮೇಲ್ಚಾವಣಿಯಿಂದ ತೂಗುಹಾಕಬಹುದು. ಒಳಭಾಗದಲ್ಲಿ ಬುಟ್ಟಿಯ ಮಧ್ಯದಲ್ಲಿ ಒಂದೆರಡು ವಿದ್ಯುಚ್ಛಕ್ತಿ ಬಲ್ಬುಗಳನ್ನು ಹಾಕಲು ಬರುವಂತೆ ಯೋಜಿಸಬೇಕು. ಬುಟ್ಟಿಯ ಸುತ್ತಲೂ ನೆಲದ ಮೇಲೆ 10"–12" ಎತ್ತರ ಮತ್ತು 12'–15' ಉದ್ದವಿರುವ ಚಾಪೆಯನ್ನು ಅಥವಾ ಕಾರ್ಡ್‌ಬೋರ್ಡ್‌ಗಳನ್ನು ವರ್ತುಲಾಕಾರವಾಗಿ ನಿಲ್ಲಿಸಬೇಕು. ಈ ವರ್ತುಲದ ಆಕಾರವನ್ನು ದಿನವೂ ಹೆಚ್ಚಿಸುತ್ತ ಮರಿ ಸಾಕುವುದನ್ನು ಆರಂಭಿಸಿದ ದಿನದಿಂದ 4–6 ದಿವಸಗಳವರೆಗೆ ಇದನ್ನು ಇಟ್ಟು ಆಮೇಲೆ ತೆಗೆಯಬಹುದು. ವರ್ತುಲಾಕಾರದ ಉಪಕರಣಕ್ಕೆ ಮರಿಗಳ ಮಾರ್ಗದರ್ಶಿ (ಚಿಕ್ ಗಾರ್ಡ್) ಎಂದು ಹೆಸರು. ನೆಲದ ಮೇಲೆ ಹೊಟ್ಟಿನ ಹಾಸನ್ನು ಹರಡಬೇಕು ಮತ್ತು ಚಿಕ್ಕ ಚಿಕ್ಕ ತಿಂಡಿ ಮತ್ತು ನೀರಿನ ಪಾತ್ರೆಗಳನ್ನು ಯೋಗ್ಯಸ್ಥಳಗಳಲ್ಲಿ ಸಮಾಂತರವಾಗಿ ಇಡಬೇಕು. ವಿದ್ಯುತ್ತಿನ ಸೌಕರ್ಯವಿಲ್ಲದವರು ಇದೇ ಬುಟ್ಟಿಯ ಮಧ್ಯದಲ್ಲಿ ಒಂದು ತೂತನ್ನು ಮಾಡಿ ಅಲ್ಲಿ ಒಂದು ಲಾಂದ್ರವನ್ನು ಉಪಯೋಗಿಸಬಹುದು. ಲಾಂದ್ರದ ಹೊಗೆ ಸುಸೂತ್ರವಾಗಿ ಹೊರಗೆ ಹೋಗುವಂತೆ ವ್ಯವಸ್ಥೆ ಮಾಡಿರಬೇಕು. ಪಾಶ್ಚಾತ್ಯ ದೇಶಗಳಲ್ಲಿ

ಉಷ್ಣತೆಯನ್ನು ನಿಯಂತ್ರಿಸುವ ಸೌಕರ್ಯವಿರುವ ದೊಡ್ಡ ದೊಡ್ಡ ಬ್ರೂಡರುಗಳಿವೆ. ಇಂಥ ಬ್ರೂಡರುಗಳಲ್ಲಿ ಸಾವಿರಾರು ಮರಿಗಳನ್ನು ಏಕಕಾಲದಲ್ಲಿ ಬೆಳೆಸಬಹುದು. ಇವುಗಳಲ್ಲಿ ಹೆಚ್ಚಾಗಿ ಮಾಂಸದ ತಳಿಯ ಕೋಳಿಮರಿಗಳನ್ನೇ ಬೆಳೆಸುತ್ತಾರೆ.

**ಹೇಂಟೆಗಳ ಮನೆಗಳಲ್ಲಿಯ ಉಪಕರಣಗಳು, ತಿಂಡಿಯ ಪಾತ್ರೆಗಳು :** ಕಾಲುಗಳಿಂದ ಮೊದಲು ಕೆದರಿ ಆ ಮೇಲೆ ಆರಿಸಿ ತಿನ್ನುವ ಸ್ವಭಾವ ಕೋಳಿಗಳದು. ಇದರಿಂದ ತಿಂಡಿಯಲ್ಲಿ ಹೆಚ್ಚಿನ ಅಪವ್ಯಯವಾಗುವುದು. ಕೋಳಿ ಸಾಕಣೆಯಲ್ಲಿ ತಿಂಡಿಯ ಬಾಬತ್ತೇ ಶೇ.60 ಖರ್ಚು ಬರುವುದರಿಂದ ಅದು ಸದುಪಯೋಗವಾಗುವಂತೆ ನೋಡಿಕೊಳ್ಳಬೇಕು. ತಿಂಡಿಪಾತ್ರೆಗಳನ್ನು ಬಿದಿರಿನಿಂದಾಗಲೀ ಮರದ ಹಲಗೆಗಳಿಂದಾಗಲೀ ಸತುವಿನ ತಗಡುಗಳಿಂದಾಗಲೀ ತಯಾರಿಸಬಹುದು. ಕೋಳಿಗಳು ಈ ಪಾತ್ರೆಗಳಲ್ಲಿ ಕಾಲಿಡಲು ಅವಕಾಶವಾಗದಂತೆ ಮರದ ತುಂಡುಗಳಿಂದಾಗಲೀ ಅಥವಾ 1/8" ಗಾತ್ರದ ಮೆತ್ತನೆಯ ತಂತಿಯಿಂದಾಗಲೀ ಅವಕ್ಕೆ ಕವಚವನ್ನು ಹೊದಿಸಿರಬೇಕು. ಕೋಳಿಗಳು ತಿಂಡಿ ತಿನ್ನುವಾಗ ಹೊರಬೀಳುವ ಆಹಾರವನ್ನು ತಡೆಗಟ್ಟಲು ತಿಂಡಿ ಪಾತ್ರೆಯ ಎರಡು ಬದಿಗೆ ಒಳಭಾಗದಲ್ಲಿ ಒಂದು ಇಂಚಿನ ತಡೆಪಟ್ಟಿ ಇರಬೇಕು.

**ನೀರಿನ ಪಾತ್ರೆಗಳು :** ಇವುಗಳಲ್ಲಿ ಕೋಳಿಗಳು ಕಾಲಿಡಲು ಸಾಧ್ಯವಾಗದಂತೆ ಏರ್ಪಡಿಸಿರಬೇಕು. ಸ್ವಚ್ಛವಾದ ನೀರು ಯಾವಾಗಲೂ ಕೋಳಿಗಳಿಗೆ ದೊರೆಯಬೇಕು. ಅವು ನೀರು ಕುಡಿಯುವಾಗ ನೆಲದ ಮೇಲೆ ನೀರು ಬೀಳಕೂಡದು. ನೀರಿನ ಪಾತ್ರೆಗಳ ಬದಲಾಗಿ ಮೆಲ್ಲನೆ ನೀರು ಹರಿಯುವ ಎರಡು ಅಗಲವಾದ ನಾಲೆಗಳನ್ನು ಕೋಳಿಮನೆಯಲ್ಲಿ ಒಂದು ಬದಿಗೆ ಕಟ್ಟಿಸುವುದು ಉತ್ತಮ.

**ಮೊಟ್ಟೆ ಇಕ್ಕುವ ಗೂಡುಗಳು :** ಐದು ಹೇಂಟೆಗಳಿಗೆ ಒಂದು ಗೂಡಿನ ಪ್ರಮಾಣದಂತೆ ಇವು ಇರಬೇಕು. ಗೂಡುಗಳನ್ನು ಸ್ವಚ್ಛವಾಗಿ ತೊಳೆದಿಡಲು ಮತ್ತು ಕೋಳಿಗಳು ಅವುಗಳಲ್ಲಿ ಸುಲಭವಾಗಿ ಹೋಗಿಬರಲು ಅನುಕೂಲವಾಗುವಂತೆ ಅವುಗಳನ್ನು ರಚಿಸಬೇಕು. ಖಾಲಿ ಎಣ್ಣೆ ಪೀಪಾಯಿಯಿಂದ ಇಂಥ ಗೂಡನ್ನು ತಯಾರಿಸಬಹುದು.

**ಕೋಳಿಯ ತಿಂಡಿಯಲ್ಲಿ ಆಹಾರ ಘಟಕಗಳು :** ಸಾಮಾನ್ಯವಾಗಿ ಕೋಳಿಯ ಆಹಾರದಲ್ಲಿನ ಸತ್ತ್ವ ಅದರ ಘಟಕಗಳಾದ ನೀರು, ಸಸಾರಜನಕ, ಪಿಷ್ಟ, ಮೇದಸ್ಸು, ಲವಣಗಳು ಮತ್ತು ವಿಟಮಿನ್ನುಗಳನ್ನವಲಂಬಿಸಿದೆ. ಕೋಳಿಗಳಿಗೆ ಆಹಾರಕ್ಕೆಂದು ಉಪಯೋಗಿಸುವ ಖಾದ್ಯಪದಾರ್ಥಗಳಲ್ಲಿ ಸಾಮಾನ್ಯವಾಗಿ ಶೇ.10 ರಂತೆ ನೀರಿನ ಅಂಶವುಂಟು. ಇದಕ್ಕಿಂತ ನೀರಿನ ಅಂಶ ಹೆಚ್ಚಾಗಿದ್ದರೆ ಆ ಆಹಾರಕ್ಕೆ ಬೂಷ್ಟು ಬರುವುದುಂಟು. ಕೋಳಿ ಮಾಂಸ ಮತ್ತು ಮೊಟ್ಟೆಗಳಲ್ಲಿರುವ ಸಸಾರಜನಕ ಕೋಳಿತಿನ್ನುವ ಆಹಾರ ಪದಾರ್ಥಗಳಿಂದಲೇ ದೊರೆಯುವುದು. ಕೋಳಿ ತಿಂಡಿಯಲ್ಲು ಸಸಾರಜನಕ ಭಾಗ ಸರಿಯಾದ ಪ್ರಮಾಣದಲ್ಲಿಲ್ಲದಿದ್ದಲ್ಲಿ ಅಧಿಕ ಉತ್ಪಾದನೆ ಸಿಕ್ಕಲಾರದು. ಕೋಳಿಗಳಿಗೆ ಮುಖ್ಯವಾದ ಆರ್ಜಿನಿನ್, ಸಿಸ್ಟಿನ್, ಲ್ಯೂಸಿನ್, ಮೀಥಿಯೋನಿನ್, ಟ್ರಿಪ್ಟೋಫೆನ್, ಲೈಸೀನ್ ಎಂಬ ಅಮೈನೋ ಆಮ್ಲಗಳು ಹೆಚ್ಚು ಆವಶ್ಯಕ. ಈ ಎಲ್ಲ ಅಮೈನೋ ಆಮ್ಲಗಳೂ ಒಂದೇ ತರದ ಸಸಾರಜನಕ ಖಾದ್ಯದಲ್ಲಿಸಾಕಷ್ಟು ಸಿಕ್ಕುವುದಿಲ್ಲ. ಇವು ಸಾಕಷ್ಟು ಮೊತ್ತದಲ್ಲಿ ಸಿಕ್ಕಬೇಕಾದರೆ ಅನೇಕ ತರದ ಸಸಾರಜನಕ ಖಾದ್ಯಗಳನ್ನು ಉಪಯೋಗಿಸಬೇಕು. ಉದಾಹರಣೆಗೆ ಕಡಲೇಕಾಯಿ ಹಿಂಡಿ, ಮೀನಿನ ಪುಡಿ, ರೇಷ್ಮೆ ಹುಳುವಿನ ಗೂಡು, ಒಣಗಿದ ಮಾಂಸದ ಪುಡಿ ಇತ್ಯಾದಿ ಪದಾರ್ಥಗಳನ್ನು ಕೂಡಿಸಿಕೊಂಡು ಆಹಾರದಲ್ಲಿ ಬೆರೆಸಬೇಕಾಗುತ್ತದೆ. ಕೋಳಿಗಳಿಗೆ ಕ್ಯಾಲ್ಸಿಯಂ, ಮೆಗ್ನೀಸಿಯಂ, ಪೊಟ್ಯಾಸಿಯಂ, ಸೋಡಿಯಂ, ಕಬ್ಬಿಣ, ಮ್ಯಾಂಗನೀಸ್, ಸತು, ತಾಮ್ರ, ಕ್ಲೋರಿನ್, ಅಯೋಡೀನ್, ಗಂಧಕ, ಕೋಬಾಲ್ಟ್ ಮೊದಲಾದ ಲವಣಗಳು ಅವಶ್ಯ. ಕೋಳಿಗಳಿಗಾಗಿ ಉಪಯೋಗಿಸುವ ಆಹಾರ ಪದಾರ್ಥಗಳಲ್ಲಿ ಸಾಮಾನ್ಯವಾಗಿ ಕ್ಯಾಲ್ಸಿಯಂ, ಫಾಸ್ಫರಸ್, ಸೋಡಿಯಂ, ಕ್ಲೋರೀನ್, ಮ್ಯಾಂಗನೀಸ್ ಲವಣಗಳು ಸಾಕಷ್ಟು ಮೊತ್ತದಲ್ಲಿ ಇರುವುದಿಲ್ಲ. ಉಳಿದ ಎಲ್ಲ ಲವಣಗಳು ಸಾಕಾಗುವಷ್ಟು ಇರುವುದು. ಕೋಳಿಯ ತಿಂಡಿಯಲ್ಲಿ ಡೈಕ್ಯಾಲ್ಸಿಯಂ, ಫಾಸ್ಫೇಟ್, ಮೂಳೆಯ ಮತ್ತು ಕಪ್ಪೆಚಿಪ್ಪಿನ ಪುಡಿಯನ್ನು ಉಪಯೋಗಿಸಿ ಕ್ಯಾಲ್ಸಿಯಂ, ಫಾಸ್ಫರಸ್‌ಗಳ ಅಭಾವವನ್ನು ದೂರಮಾಡುತ್ತಾರೆ. ಕ್ಲೋರೀನ್ ಮತ್ತು ಸೋಡಿಯಂ ಲವಣಗಳಿಗಾಗಿ ಅಡುಗೆಯ ಉಪ್ಪನ್ನು ಶೇ. 0.5 ಪ್ರಮಾಣದಲ್ಲಿ ಕೋಳಿಯ ತಿಂಡಿಯಲ್ಲಿ ಉಪಯೋಗಿಸುತ್ತಾರೆ. ಮೀನಿನ ಪುಡಿಯಲ್ಲಿ ಉಪ್ಪಿನ ಅಂಶ ಹೆಚ್ಚಾಗಿದ್ದರೆ ಅಡುಗೆಯ ಉಪ್ಪಿನ ಪರಿಮಾಣವನ್ನು ಇನ್ನೂ ಕಡಿಮೆಯಾಗಿ ಉಪಯೋಗಿಸಬಹುದು. ಕೋಳಿಗಳ ಆಹಾರದಲ್ಲಿ ಮ್ಯಾಂಗನೀಸ್ ಸಲ್ಫೇಟ್ ಅಥವಾ ಮ್ಯಾಂಗನೀಸ್ ಆಕ್ಸೈಡುಗಳನ್ನು ಉಪಯೋಗಿಸಿದರೆ ಈ ಲವಣದ ಅಭಾವವನ್ನು ನೀಗಿಸಿದಂತಾಗುವುದು. ಈ ಲವಣಗಳು ಆಹಾರವನ್ನು ಶರೀರದಲ್ಲಿ ಇಂಗಿಸಿಕೊಳ್ಳಲು ಸಹಾಯ ಮಾಡುತ್ತವೆ. ಕೋಳಿಗಳಿಗೆ ಅನೇಕ ವಿಟಮಿನ್ನುಗಳು ಆವಶ್ಯಕ. ಹಸಿರು ಹುಲ್ಲು, ಕುದುರೆ ಮಸಾಲೆ, ಗೋವಿನ ಜೋಳ(ಮುಸುಕಿನ ಜೋಳ) ಮೀನಿನ ಎಣ್ಣೆಯಲ್ಲಿರುವ ವಿಟಮಿನ್ ಎ ಕೋಳಿಗಳ ಅಭಿವೃದ್ಧಿಗೆ ಬಲು ಉಪಯುಕ್ತ.

**ಕೋಳಿಗಳಿಗಾಗಿ ತಿಂಡಿಗಳು :** ಮನುಷ್ಯನಿಗೆ ನಿರುಪಯುಕ್ತವಾದ ಆಹಾರ ಪದಾರ್ಥಗಳನ್ನು ತಿಂದು ಅತಿ ಉಪಯುಕ್ತವಾದ ಮೊಟ್ಟೆ ಮತ್ತು ಮಾಂಸ ಕೊಡುವ ಒಂದು ಜೀವಯಂತ್ರ ಕೋಳಿ. ಎಲ್ಲ ಕುಕ್ಕುಟ ಕೇಂದ್ರಗಳಲ್ಲೂ ಕೋಳಿ ತಿಂಡಿ ತಯಾರಿಸುವವರು ಮುಖ್ಯವಾಗಿ ಅಕ್ಕಿತೌಡು, ಬೂಸ, ಕಡಲೆಕಾಯಿ, ಹಿಂಡಿಪುಡಿ, ಮೀನಿನ ಪುಡಿ, ಗೋವಿನ ಜೋಳ, ಉಗ್ರಾಣ ಮತ್ತು ಹಿಟ್ಟಿನ ಗಿರಣಿಗಳ ಕಸ, ಲವಣಸತ್ತ್ವ ಮತ್ತು ವಿಟಮಿನ್ನುಗಳನ್ನು ಬೆರಕೆಮಾಡಿ ಕೋಳಿತಿಂಡಿಯನ್ನು ತಯಾರಿಸುವರು. ಇವನ್ನು ಬೆರಕೆ ಮಾಡುವಾಗ ಆಹಾರದ ಘಟಕಗಳಾದ ಸಸಾರಜನಕ, ಕೊಬ್ಬುಪದಾರ್ಥಗಳು, ಲವಣಗಳು, ವಿಟಮಿನ್ನುಗಳು, ರೋಗನಿವಾರಕ ಔಷಧಗಳು ಸರಿಯಾದ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳುತ್ತಾರೆ. ಈ ಪ್ರಕಾರ ತಯಾರಿಸಿದ ಆಹಾರಕ್ಕೆ ಸಮತೂಕ ಆಹಾರವೆಂದು ಹೆಸರು. ಇಂಡಿಯನ್ ಸ್ಟ್ಯಾಂಡರ್ಡ್ ಇನ್‌ಸ್ಟಿಟ್ಯೂಟಿನ ಅಧಿಕಾರಿಗಳು ಕೋಳಿಗಳ ತಿಂಡಿಯಲ್ಲಿ ಕಣಗಳ ಗಾತ್ರ ಮತ್ತು ಅದರಲ್ಲಿರುವ ಘಟಕಗಳ ಪ್ರಮಾಣದ ನಿಯಂತ್ರಣಗಳನ್ನು ಹೇಳಿದ್ದಾರೆ. ಈ ಪ್ರಕಾರ ಕೋಳಿಗಳ ತಿಂಡಿಯನ್ನು ತಯಾರಿಸಿದರೆ ಕೋಳಿಸಾಕಣೆ ಉದ್ಯಮಗಾರನ ಕೆಲಸ ಎಷ್ಟೋ ಕಡಿಮೆ ಆಗುವುದಲ್ಲದೆ ಕೋಳಿಗಳ ಮೇಲ್ವಿಚಾರಣೆ ಮತ್ತು ಪಾಲನೆ ವಿಧಾನಗಳಲ್ಲಿ ಹೆಚ್ಚು ಗಮನ ಕೊಟ್ಟು ಅಧಿಕ ಉತ್ಪಾದನೆ ಪಡೆಯಲು ಸಾಧ್ಯವಾಗುವುದು.

**ತಿಂಡಿಯ ಶಿಷ್ಟಪ್ರಮಾಣಗಳನ್ನು ಇಲ್ಲಿ ಕೊಟ್ಟಿದೆ**

| ವಿವರಗಳು | ಕೋಳಿ ಮರಿಗಳ ಆಹಾರ ಶೇಕಡಾ | ಬೆಳೆಯುವ ಕೋಳಿಗಳ ತಿಂಡಿ ಶೇಕಡಾ | ಮೊಟ್ಟೆಯಿಡುವ ಕೋಳಿಗಳ ತಿಂಡಿ ಶೇಕಡಾ |
|---|---|---|---|
| ಆರ್ದ್ರತೆ | 10 | 10 | 10 |
| ಸಸಾರಜನಕ | 20–25 | 18–23 | 15–20 |
| ಕೊಬ್ಬು(ಅತಿಕಡಿಮೆ) | 3 | 3 | 3 |
| ನಾರು | 7 | 8 | 10 |
| ಬೂದಿ | 10 | 10.5 | 11 |
| ಕ್ಯಾಲ್ಸಿಯಂ ಲವಣಗಳು | 1–1.3 | 1–1.3 | 2–2.3 |
| ಫಾಸ್ಫರಸ್ | 0.8–1 | 0.8–1 | 0.8–1 |

ಭಾರತದ ಆಹಾರ ಪೂರೈಕೆಯ ದೃಷ್ಟಿಯಿಂದ ಹೇಳುವುದಾದರೆ ಕೋಳಿ ಸಾಕಣೆ ಅದರ ತೀರ ಹೊರ ಸರಹದ್ದನ್ನು ಮಾತ್ರ ಸ್ಪರ್ಶಿಸಿವೆಯಷ್ಟೆ. ವೈಜ್ಞಾನಿಕ ಕೃಷಿಯನ್ನು ಕ್ರಮಬದ್ಧವಾಗಿ ಅನುಷ್ಠಾನಿಸುವುದರಿಂದ ವೈಯಕ್ತಿಕ ಲಾಭದ ಜೊತೆಗೆ ರಾಷ್ಟ್ರೀಯ ವರಮಾನವೂ ಪೌಷ್ಟಿಕಾಹಾರಗಳ ಸರಬರಾಜೂ ಏರುವುದರಲ್ಲಿ ಸಂದೇಹವಿಲ್ಲ.

(ಕೆ.ವಿ.ಜಿ.ಬಿ.)

**ಕೋಳಿ ರೋಗಗಳು :** ಇವನ್ನು ಗಾಯಗಳು, ಭೇದಿ, ಸಾಂಸರ್ಗಿಕ ರೋಗಗಳು ಎಂದು ಮೂರು ಸ್ಥೂಲವರ್ಗಗಳಾಗಿ ವಿಭಾಗಿಸಬಹುದು.

**ಗಾಯಗಳು:** ಕೋಳಿ ಹಾರಿ ಜಿಗಿದು ಬಿರುಸಾದ ಜಾಗದಲ್ಲಿ ಕುಳಿತರೆ ಅಂಗಾಲುಗಳಿಗೆ ಪೆಟ್ಟು ತಗಲಿ ಮೊದಲು ಚಿಕ್ಕ ಗಾಯವಾಗಿ ಮುಂದೆ ಕೀವು ತುಂಬಿ ಹೆಚ್ಚು ನೋವಾಗಬಹುದು. ಇದರಿಂದ ಅದು ತಿಂಡಿ ತಿನ್ನುವುದನ್ನೂ ನೀರು ಕುಡಿಯುವುದನ್ನೂ ತೊರೆಯುತ್ತದೆ ಮತ್ತು ನೋವಿನಿಂದ ಸೊರಗುತ್ತದೆ. ಇದಕ್ಕೆ ಯೋಗ್ಯ ಚಿಕಿತ್ಸೆ ಅಗತ್ಯ. ಇಂಥ ಗಾಯಗಳು ಆಗದಂತೆ ನಿವಾರಣೋಪಾಯಗಳು ಪರಿಣಾಮಕಾರಿ ಆಗುತ್ತವೆ. ಕೋಳಿಯ ಎದೆಯ ಮೇಲೆ ಗಾಯ ಆಗದಂತೆ ವಿಶೇಷ ಎಚ್ಚರಿಕೆವಹಿಸಬೇಕು. ಎದೆಯ ಮೂಳೆಯನ್ನು ಕೊರೆಯದಂಥ ತಿಂಡಿಯ ಮತ್ತು ನೀರಿನ ಪಾತ್ರೆಗಳನ್ನು ಉಪಯೋಗಿಸುವುದು ಒಳ್ಳೆಯದು. ಕಾಲುಗಳು ನಿಶ್ಶಕ್ತವಾದಾಗ ಕೋಳಿ ತನ್ನ ಎದೆಯ ಮೇಲೆ ಕೂತುಕೊಳ್ಳುವುದುಂಟು. ಇದು ಸಂಭವಿಸದಂತೆ ನೋಡಿಕೊಳ್ಳಬೇಕು. ಕೋಳಿಯ ಆಹಾರ ಸಮತೂಕವಾಗಿರುವಂತೆ ನೋಡಿಕೊಂಡಾಗ ಕಾಲುಗಳು ಬಲಿಷ್ಠವಾಗಿದ್ದು ಎದೆಯ ಮೇಲೆ ಕೂರುವ ಸಂದರ್ಭ ಒದಗುವುದಿಲ್ಲ.

**ಭೇದಿ ರೋಗ:** ಇದು ಆರಂಭವಾಗಲು ಕೆಲವು ಮುಖ್ಯ ಕಾರಣಗಳು ಹೀಗಿವೆ: 1. ಕೋಳಿಗಳು ಕುಡಿಯುವ ನೀರಿನಲ್ಲಿ ಲವಣಾಂಶ ಹೆಚ್ಚಾಗಿರುವುದು. 2. ತಿಂಡಿಯಲ್ಲಿ ಕಾಕಂಬಿಯ ಭಾಗ ಹೆಚ್ಚಾಗಿರುವುದು. 3. ಉಪಯೋಗಿಸುವ ಮೀನಿನ ಪುಡಿಯಲ್ಲಿ ಉಪ್ಪಿನ ಅಂಶ ಹೆಚ್ಚಾಗಿರುವುದು. 4. ನೀರಿನ ಪಾತ್ರೆಯನ್ನು ಚೆನ್ನಾಗಿ ಉಜ್ಜದಿದ್ದಾಗ ಅದರೊಳಗೆ ಬೆಳೆದ ಹಾವಸೆ ಮಿಶ್ರಿತ ನೀರನ್ನು ಕುಡಿಯುವುದು. 5. ಅನ್ನನಾಳದ ರೋಗ. 6. ಜಂತುಹುಳುಗಳ ಏರಿಕೆ.

**ರಕ್ತಭೇದಿ:** ಇದು ಚಿಕ್ಕ ಮರಿಗಳಲ್ಲಿ ಹೆಚ್ಚಾಗಿರುವುದು. ಎರಡು ವಾರದ ವಯಸ್ಸಿನಿಂದ 12 ವಾರದ ವಯಸ್ಸಿನವರೆಗೆ ಇರುವ ಕೋಳಿಗಳ ಗುಂಪುಗಳಲ್ಲಿ ಈ ರೋಗ ಹೆಚ್ಚಾಗಿ ಕಂಡುಬರುತ್ತದೆ. ಇದರಿಂದ ಬಳಲುವ ಕೋಳಿಮರಿಗಳು ಮುದುಡಿಕೊಂಡು

ರೆಕ್ಕೆಗಳನ್ನು ಜೋತುಬಿಟ್ಟಿರುತ್ತವೆ. ಕುತ್ತಿಗೆಯನ್ನು ಒಳಗೆ ಬಗ್ಗಿಸಿಕೊಂಡು ತೂಕಡಿಸುತ್ತಿರುತ್ತವೆ. ಆಹಾರಸೇವನೆಯನ್ನು ನಿಲ್ಲಿಸಿಯೇ ಬಿಡುತ್ತವೆ. ಈ ರೋಗವನ್ನು ಯುಕ್ತ ಔಷಧಿಗಳ ಅನುಪಾನದಿಂದ ಗುಣಪಡಿಸಬೇಕು.

**ಸಾಂಸರ್ಗಿಕ ರೋಗಗಳು:** 1. ರಾಣಿಕೇತ ಅಥವಾ ಕೊಕ್ಕರೆರೋಗ: ಇದು ಎಲ್ಲ ವಯಸ್ಸಿನ ಕೋಳಿಗಳಿಗೂ ತಗಲುವುದುಂಟು. ಒಮ್ಮೆ ಬಂದರೆ ಪಿಡುಗಿನಂತೆ ಹಬ್ಬಿ ಎಲ್ಲ ಕೋಳಿಗಳನ್ನೂ ಧ್ವಂಸಮಾಡುತ್ತದೆ. ತೂಕಡಿಕೆ, ತುರಾಯಿ ಮತ್ತು ಪದರಗಳು ಕಳೆಗುಂದಿರುವಿಕೆ ಮತ್ತು ಉಸಿರಾಟದಲ್ಲಿ ಆಗುವ ತೊಂದರೆ ಮತ್ತು ಸದ್ದು ಈ ವ್ಯಾಧಿಯ ಲಕ್ಷಣಗಳು. ಹಸಿರಾದ ಮತ್ತು ಕೆಟ್ಟ ವಾಸನೆಯ ಭೇದಿಯಿಂದ ಕೋಳಿ ಸಂಕಟಪಡುತ್ತಿರುತ್ತದೆ.

**2. ಪಾರ್ಶ್ವವಾಯು:** ಈ ಕಾಯಿಲೆಯಿಂದ ಕೋಳಿಯ ಕುತ್ತಿಗೆ ಒಂದು ಕಡೆ ತಿರುಗಬಹುದು ಅಥವಾ ಒಂದು ಕಡೆ ಮುದುಡಿಕೊಳ್ಳಬಹುದು. ಒಂದು ಕಾಲು ಅಥವಾ ಎರಡು ಕಾಲುಗಳು ಪಾರ್ಶ್ವನೋವಿನಿಂದ ಬಳಲುತ್ತಿರಬಹುದು. ಕಾಲಿಗೆ ಪಾರ್ಶ್ವವಾಯು ಬಂದಾಗ ಕೋಳಿ ನಿಲ್ಲಲು ಸಾಧ್ಯವಾಗದ್ದರಿಂದ ಅದು ಒಂದೇ ಕಡೆ ಬೀಳುವುದು. ರೋಗಬಂದಮೇಲೆ ಚಿಕಿತ್ಸೆ ಅಪ್ರಯೋಜಕ. ಆದ್ದರಿಂದ ಮುನ್ನೆಚ್ಚರಿಕೆ ಅವಶ್ಯ.

**3. ಮೈಲಿಬೇನೆ:** ಬೇಸಗೆ ಕಾಲದಲ್ಲಿ ಈ ಬೇನೆ ಕೋಳಿಗಳಿಗೆ ತಗಲುವ ಸಂಭವವುಂಟು. ವಯೋಪರಿಮಿತಿ ಇಲ್ಲ. ಈ ರೋಗದಿಂದ ಕೋಳಿಗಳು ಅಶಕ್ತವಾಗಿ ಉತ್ಪನ್ನ ಕಡಿಮೆಯಾಗುವುದು. ಕೋಳಿಗಳ ತುರಾಯಿ ಅಥವಾ ಜುಟ್ಟುಗಳಲ್ಲಿ ಮತ್ತು ಪದರಗಳಲ್ಲಿ ಗುಳ್ಳೆಗಳು ಕಾಣಿಸಿಕೊಳ್ಳುವುದು ಮೈಲಿಬೇನೆಯ ಲಕ್ಷಣ. ಬಾಯಿಯ ಸಂದಿನಲ್ಲಿ ಮತ್ತು ಕಾಲುಬೆರಳುಗಳ ಸಂದಿನಲ್ಲಿ ಸಹ ಈ ಗುಳ್ಳೆಗಳು ಕಾಣಿಸಿಕೊಳ್ಳಬಹುದು. ಇವು ಕಣ್ಣುಗಳ ಮೇಲೆ ಆದರೆ ಕಣ್ಣುನೋವಿನಿಂದ ಕುರುಡು ಸಂಭವಿಸುವುದು. ಮುಂದೆ ಈ ಗುಳ್ಳೆಗಳು ಕೀವು ತುಂಬಿಕೊಂಡು ಅನಂತರ ಒಣಗಿ ಕರ್ರಗೆ ಆಗುವುವು.

**4. ನೆಗಡಿ:** ಹವಾಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆ ತಲೆದೋರಿದರೆ, ಸ್ವಲ್ಪವೇ ಜಾಗದಲ್ಲಿ ಕೋಳಿಗಳು ಹೆಚ್ಚು ಸಂಖ್ಯೆಯಲ್ಲಿದ್ದರೆ, ಲಿಟ್ಟರ್ ತೇವವಾಗಿದ್ದರೆ ಗಾಳಿಸಂಚಾರ ಚೆನ್ನಾಗಿಲ್ಲದಿದ್ದರೆ, ಲಿಟ್ಟರಿನಲ್ಲಿ ಮಲ ತುಂಬಿ ಅಮೋನಿಯ ವಾಸನೆ ಹೆಚ್ಚುತ್ತಿದ್ದರೆ ಆಗೆಲ್ಲ ಕೋಳಿಗಳಿಗೆ ನೆಗಡಿರೋಗ ಆಗುವ ಸಂಭವವುಂಟು. ಆಹಾರದಲ್ಲಿ ವಿಟಮಿನ್ನುಗಳ ಅಂಶ ಕಡಿಮೆ ಇದ್ದಾಗ ಸಹ ಈ ರೋಗ ತಲೆದೋರುವುದುಂಟು. ಕಣ್ಣು ಮೂಗುಗಳಿಂದ ನೀರು ಸೋರುತ್ತದೆ. ಕಣ್ಣುಗಳು ಮತ್ತು ತಲೆ ಊದಿಕೊಳ್ಳುತ್ತವೆ. ಆಗ ಕೋಳಿಗಳು ತಿಂಡಿ ತಿನ್ನುವುದು ಕಡಿಮೆ ಮಾಡುತ್ತವೆ.

**5. ಸ್ಪೈರೋಕೀಟ ಗ್ಯಾಲಿನೇರಮ್:** (ಬೊರಿಲ್ಲಾ ಗ್ಯಾಲಿನೇರಮ್ ಎಂದು ಕರೆಯಲಾಗಿದೆ) ಸ್ಪೈರೊರೇಟ ಗ್ಯಾಲಿನೇರಮ್ ಎಂಬ ಜೀವಿಯಿಂದ ಕೋಳಿಗಳಲ್ಲಿ ಸ್ಪೈರೋಕೀಟ ರೋಗ ಉತ್ಪತ್ತಿಯಾಗುತ್ತದೆ. ಈ ಜೀವಿಯ ಅನೇಕ ಸಮೀಪ ಸಂಬಂಧಿಗಳು ಮನುಷ್ಯ ಮತ್ತು ಪ್ರಾಣಿಗಳಲ್ಲಿ ರೋಗ ಉತ್ಪತ್ತಿ ಮಾಡುತ್ತವೆ. ಅವುಗಳಲ್ಲಿ ಮನುಷ್ಯನ ಪರಂಗಿ (ಸಿಫಿಲಿಸ್) ರೋಗಕ್ಕೆ ಕಾರಣವಾದ ಟ್ರಪೊನಿಮ ಪಲ್ಲಿಡ ಕೂಡ ಒಂದು. ಏಕಕೋಶ ಜೀವಿಗಳ ವಂಶದಲ್ಲಿ ಹಿಂದೆ ಸೇರಿಸಲಾಗಿದ್ದ ಸ್ಪೈರೋಕೀಟ ಜೀವಿ ಈಗ ಬ್ಯಾಕ್ಟೀರಿಯ ಎಂದು ಸ್ಪಷ್ಟಪಡಿಸಲಾಗಿದೆ. ಪಕ್ಷಿಗಳ ದೇಹಗಳನ್ನು ಸ್ಪೈರೋಕೀಟ ಆಕ್ರಮಿಸಿದಾಗ ಅವುಗಳಲ್ಲಿ ಭೇದಿ ಕಂಡುಬಂದು, ಕ್ರಮೇಣ ಹಸಿವು ಅಡಗಿ, ತಲೆಯ ಶಕ್ತಿ ಕುಗ್ಗುತ್ತ ಅಂತ್ಯದಲ್ಲಿ ವಾಯುರೋಗದಿಂದ ಸಾಯುತ್ತವೆ. ಕೆಲವು ವೇಳೆ ದೀರ್ಘಾವಧಿ ನರಳುವುದೂ ಉಂಟು. ಅಂಥ ಸಂದರ್ಭಗಳಲ್ಲಿ ಪಕ್ಷಿಗಳು ಪಾರ್ಶ್ವವಾಯು ರೋಗಕ್ಕೆ ತುತ್ತಾಗಿ ಕ್ರಮೇಣ ಕೃಶವಾಗಿ ಹದಿನೈದು ದಿವಸಗಳಲ್ಲಿ ಸಾವಿಗೀಡಾಗುತ್ತವೆ. ಕೋಳಿಗಳ ಮೇಲೆ ಜೀವಿಸುವ ಆರ್ಗಸ್ ಪರ್ಸಿಕಸ್ ಎಂಬ ಜಾತಿಯ ಉಣ್ಣಿಗಳಿಂದ ಈ ರೋಗ ಹರಡುತ್ತದೆ. ರೋಗಾಣುಜೀವಿಗಳನ್ನುಳ್ಳ ಉಣ್ಣಿ ತನ್ನ ಮೊಟ್ಟೆಗಳ ಮೂಲಕ ರೋಗಾಣು ಜೀವಿಯನ್ನು ತನ್ನ ಮರಿಗಳಿಗೆ ಸಾಗಿಸಿ ಅವುಗಳಿಂದ ಪುನಃ ಇತರ ಪಕ್ಷಿಗಳಿಗೆ ಹರಡಿಸಬಹುದು. (ಎಸ್.ಎಂ.ಒ.)

**ಕೋಳೂರು ಕೊಡಗೂಸು :** ಮುಗ್ಧ ಬಾಲಕಿಯೊಬ್ಬಳ ಭಕ್ತಿಯ ಮಹಿಮೆಯನ್ನು ನಿರೂಪಿಸುವ ಒಂದು ಕಥೆ. ಈ ವಸ್ತುವನ್ನು ಆಧರಿಸಿ ಹರಿಹರ ಒಂದು ರಗಳೆ ಬರೆದಿದ್ದಾನೆ. ಭೀಮಕವಿಯ ಬಸವಪುರಾಣ, ಷಡಕ್ಷರಿಯ ವೃಷಭೇಂದ್ರ ವಿಜಯ ಮೊದಲಾದ ವೀರಶೈವ ಪುರಾಣಗಳಲ್ಲಿ ಈ ಕಥಾಪ್ರಸಂಗವನ್ನು ಕಾಣಬಹುದು.

ಗಣಸಹಸ್ರದಲ್ಲಿ ಕೊಡಗೂಸಿನ ಹೆಸರು ಬಂದಿದೆ. ಮೇಲಿನ ಕವಿಗಳಲ್ಲದೆ ಅನೇಕರು ಈಕೆಯ ಭಕ್ತಿಯನ್ನು ಹಾಡಿ ಹೊಗಳಿದ್ದಾರೆ. ಭಕ್ತಿಸಾಧನೆಯಲ್ಲಿ ಪರಿಶುದ್ಧವಾದ ಮನಸ್ಸು ಮತ್ತು ಏಕೈಕ ನಿಷ್ಠೆಗಳನ್ನು ಎತ್ತಿಹಿಡಿಯುವ ಉಜ್ವಲ ಸಂಕೇತವಾದ ಈ ಕಥೆ ಚಿರಂತನವಾಗಿದ್ದು ನಿತ್ಯನೂತನವಾಗಿದೆ.

ಕಥೆ ಸಂಗ್ರಹವಾಗಿ ಹೀಗಿದೆ : ಗುಲ್ಬರ್ಗ ಜಿಲ್ಲೆಯ ಕೋಳೂರಿನಲ್ಲಿ ಶಿವದೇವನೆಂಬ ಭಕ್ತನಿದ್ದ. ಕನ್ನೆಕೋಳೂರು ಎಂದೂ ಇದನ್ನು ಕರೆಯುತ್ತಾರೆ. ಶಿವದೇವ ಮತ್ತು ಆತನ ಹೆಂಡತಿ ಉತ್ಕಟ ಶಿವಭಕ್ತರಾಗಿದ್ದರು. ಆ ಊರಿನ ಕಲ್ಲೇಶ್ವರಲಿಂಗ ಇವರ ಆರಾಧ್ಯ ದೈವವಾಗಿತ್ತು. ಪ್ರತಿನಿತ್ಯವೂ ಅತ್ಯಂತ ಭಕ್ತಿಯಿಂದ ಅದನ್ನು ಪೂಜಿಸಿ ಕಪಿಲವರ್ಣದ ಗೋವಿನ ಹಾಲನ್ನು ನೈವೇದ್ಯ ಮಾಡುವ ನೇಮವನ್ನು ಇವರು ಇಟ್ಟುಕೊಂಡಿದ್ದರು.

ಈ ದಂಪತಿಗಳಿಗೆ ಒಬ್ಬಳೇ ಮಗಳು. ಹೆಸರು ಚೆನ್ನಕ್ಕ. ಭಕ್ತಿಯ ವಾತಾವರಣದಲ್ಲಿಯೇ ಬೆಳೆದ ಈಕೆಯಲ್ಲಿ ಭಕ್ತಿ ಸಹಜವಾಗಿಯೇ ಅಳವಟ್ಟಿತ್ತು. ಏಳು ವರ್ಷಗಳೂ ತುಂಬದ ಈ ಕೂಸು ಅವರ ಸಂಸಾರದ ಸಾರಸರ್ವಸ್ವವಾಗಿತ್ತು.

ಒಮ್ಮೆ ಚೆನ್ನಕ್ಕನ ತಂದೆತಾಯಿಗಳು ಕಾರ್ಯನಿಮಿತ್ತರಾಗಿ ಪರವೂರಿಗೆ ಹೋಗಬೇಕಾಗಿ ಬಂತು. ಆಗ ಅವರು ಕಲ್ಲೇಶ್ವರನ ಪೂಜೆ ಮತ್ತು ನೈವೇದ್ಯದ ಹೊಣೆಯನ್ನು ಚೆನ್ನಕ್ಕನಿಗೆ ವಹಿಸಿದರಲ್ಲದೆ ಪೂಜೆಯ ಅನಂತರ ಹಾಲನ್ನು ಶಿವನಿಗೆ ತಪ್ಪದೆ ಅರ್ಪಿಸುವಂತೆ ಹೇಳಿಹೋದರು. ಈ ಸುಯೋಗ ಲಭಿಸಿದುದಕ್ಕಾಗಿ ಚೆನ್ನಕ್ಕ ಸಂತೋಷದಿಂದ ಹಿಗ್ಗಿದಳು. ಸ್ನಾನ ಮಾಡಿ, ಮಡಿಯುಟ್ಟು, ದೇವಾಲಯಕ್ಕೆ ಬಂದಳು. ಶಿವಲಿಂಗವನ್ನು ಭಕ್ತಿಯ ತನ್ಮಯತೆಯಿಂದ ಪೂಜಿಸಿದಳು. ಅನಂತರ ಬಟ್ಟಲಲ್ಲಿ ತಾನು ತಂದಿದ್ದ ಹಾಲನ್ನು ಶಿವನ ಮುಂದಿಟ್ಟು ಅದನ್ನು ಕುಡಿಯುವಂತೆ ಪ್ರಾರ್ಥಿಸಿದಳು. ಆದರೆ ಇವಳ ಪ್ರಾರ್ಥನೆ ವ್ಯರ್ಥವಾಯಿತು. ಶಿವ ಬಂದು ಹಾಲನ್ನು ಕುಡಿಯಲಿಲ್ಲ. ಭಕ್ತೆಯ ಮುಗ್ಧಸಂಭ್ರಮ ಮರೆಯಾಯಿತು. ಆತಂಕದಿಂದ ಶಿವನನ್ನು ಮತ್ತೆ ಮತ್ತೆ ಬೇಡಿಕೊಳ್ಳತೊಡಗಿದಳು. ಬಹುಶಃ ತಾನು ಎದುರಿಗಿರುವುದರಿಂದ ಶಿವ ಹಾಲನ್ನು ಕುಡಿಯಲಾರನೆಂದು ಮರೆಗೆ ಹೋಗಿ ನಿಂತಳು. ಪುನಃ ಬಂದು ನೋಡಿದಳು; ಪ್ರಾರ್ಥಿಸಿದಳು. ಎಲ್ಲವೂ ವ್ಯರ್ಥವಾದಾಗ ಅವಳ ಸಂಕಟ ಮಿತಿಮೀರಿತು. ತನ್ನ ಭಕ್ತಿಯಲ್ಲೇನೋ ಕುಂದಿರಬೇಕೆಂದು ಅನಿಸಿತು. ಕ್ಷಮಿಸಿ ಹಾಲನ್ನು ಕುಡಿಯಬೇಕೆಂದು ಶಿವನನ್ನು ಪ್ರಾರ್ಥಿಸಿದಳು. ಆದರೆ ಎಲ್ಲವೂ ವಿಫಲವಾದಾಗ ಆ ನಿರಾಶೆಯನ್ನು ತಾಳಲಾರದೆ ಅಲ್ಲಿದ್ದ ಕಲ್ಲಿಗೆ ತನ್ನ ತಲೆಯನ್ನು ಹೊಡೆದುಕೊಳ್ಳುತ್ತ ತನ್ನನ್ನೇ ಅರ್ಪಿಸಿಕೊಳ್ಳಲು ಸಿದ್ಧಳಾದಳು. ಶಿವಗತ್ಯಂತರವಿಲ್ಲದೆ ಕೂಡಲೇ ಪ್ರತ್ಯಕ್ಷನಾಗಿ ನೈವೇದ್ಯದ ಹಾಲನ್ನು ಕುಡಿದು ಅವಳನ್ನು ಸಂತೈಸಿದ. ಅಂದಿನಿಂದ ದಿನದಿನವೂ ಇವಳ ಪೂಜೆಯ ಕ್ರಮ ಅದೇ ರೀತಿಯಲ್ಲಿ ಮುಂದುವರಿಯಿತು. ನಿತ್ಯವೂ ಶಿವ ಬಂದು ಹಾಲನ್ನು ಕುಡಿಯುತ್ತಿದ್ದ. ಅನಂತರ ಬರಿಯ ಬಟ್ಟಲನ್ನು ಚೆನ್ನಕ್ಕ ಮನೆಗೆ ತರುತ್ತಿದ್ದಳು.

ಹೀಗೆ ಕೆಲವು ದಿನಗಳು ಕಳೆದಮೇಲೆ ಚೆನ್ನಕ್ಕನ ತಂದೆತಾಯಿಗಳು ಊರಿಗೆ ಹಿಂದಿರುಗಿದರು. ದೇವಾಲಯಕ್ಕೆ ಹೋಗಿ ಬರುತ್ತಿದ್ದ ಮಗಳನ್ನು ಎದುರಿನಲ್ಲಿಯೇ ಸಂಧಿಸಿದರು. ಆಕೆಯ ಕೈಯಲ್ಲಿದ್ದ ಹಾಲಿನ ಪಾತ್ರೆ ಬರಿದಾಗಿದ್ದುದನ್ನು ಗಮನಿಸಿ ಅಚ್ಚರಿಗೊಂಡರು. ಶಿವ ನಿಜವಾಗಿ ಹಾಲು ಕುಡಿಯುವನೇ ಎಂಬುದನ್ನು ಪರೀಕ್ಷಿಸಿ ನೋಡುವ ಮನಸ್ಸಾಯಿತು, ಅವರಿಗೆ.

ಮರುದಿನ ಪೂಜೆಯ ಸಮಯ ಬಂತು. ಚೆನ್ನಕ್ಕ ಎಂದಿನಂತೆ ಪೂಜೆಮಾಡಿ ಹಾಲನ್ನು ಮುಂದಿಟ್ಟಾಗ ಶಿವ ಅದನ್ನು ಕುಡಿಯಲಿಲ್ಲ. ಮಗಳು ಸುಳ್ಳು ಹೇಳಿದಳೆಂದು ತಂದೆಗೆ ಕೋಪ ಬಂತು. ಅವಳನ್ನು ದಂಡಿಸುವುದಕ್ಕಾಗಿ ಮುಂದೆ ಬಂದ. ಮುಗ್ಧೆ ಚೆನ್ನಕ್ಕ ಏನೂ ಮಾಡಲಾರದೆ ಶಿವನೇ ಗತಿಯೆಂದು ಓಡಿಹೋಗಿ ಲಿಂಗವನ್ನು ತಬ್ಬಿಕೊಂಡಳು. ಶಿವ ಪ್ರತ್ಯಕ್ಷನಾಗಿ ಅವಳನ್ನು ತನ್ನಲ್ಲಿ ಅಡಗಿಸಿಕೊಂಡ. ಇದನ್ನು ಕಂಡ ತಂದೆಗೆ ಪಶ್ಚಾತ್ತಾಪವಾಯಿತು. ಮಗಳನ್ನು ಕಳೆದುಕೊಳ್ಳಲಾರದೆ ಓಡಿಬಂದು ಶಿವನಲ್ಲಿ ಐಕ್ಯವಾಗುತ್ತಿದ್ದ ಆಕೆಯ ತಲೆಗೂದಲನ್ನು ಹಿಡಿದೆಳೆದ. ಆಗ ಕೂದಲು ಮಾತ್ರ ಹೊರಗುಳಿದು ಆಕೆ ಲಿಂಗದಲ್ಲಿ ಐಕ್ಯವಾದಳು. ಕೋಳೂರಿನಲ್ಲಿರುವ ಕಲ್ಲಿನಾಥನ ಲಿಂಗದಲ್ಲಿ ಈಗಲೂ ಕೂದಲ ಗುರುತುಗಳಿವೆ ಎನ್ನುತ್ತಾರೆ.

ಅಂದಿನಿಂದ ಭಕ್ತೆ ಚೆನ್ನಕ್ಕ ಕೋಳೂರು ಕೊಡಗೂಸು (ಕೊಡದ ಕೂಸು ಅಥವಾ ಕೊಡುವ ಕೂಸು–ಕನ್ಯೆ) ಎಂದೇ ಪ್ರಸಿದ್ಧಳಾದಳು. (ಎಚ್.ಟಿ.)

**ಕೌಂಡ, ಕೆನೆತ್ :** 1924–ಜ಼ಾಂಬಿಯದ ಅಧ್ಯಕ್ಷ. ಮಾನವತಾವಾದಿ. ಅಹಿಂಸಾತತ್ತ್ವಪ್ರತಿಪಾದಕ. ಭಾರತದ ಅತ್ಯುಚ್ಚ ಪ್ರಶಸ್ತಿಗಳಲೊಂದಾದ ನೆಹರೂ ಶಾಂತಿ ಪ್ರಶಸ್ತಿ (1970) ಪುರಸ್ಕೃತ. ಭಾರತಕ್ಕೂ ಭೇಟಿ ನೀಡಿದ್ದ ಈ ವ್ಯಕ್ತಿ ಮಹಾತ್ಮಗಾಂಧಿಯವರಿಂದ ಪ್ರಭಾವಿತನಾದುದಾಗಿ ಹೇಳಿಕೊಂಡಿದ್ದಾನೆ. ಪರತಂತ್ರವಾಗಿದ್ದ ಜ಼ಾಂಬಿಯಕ್ಕೆ ಅಹಿಂಸಾತ್ಮಕ ವಿಧಾನದ ಮೂಲಕ ಸ್ವಾತಂತ್ರ್ಯ ದೊರಕಿಸಿಕೊಳ್ಳಲು ಶ್ರಮಿಸಿ ಸಫಲನಾದ ಈತ ಜ಼ಾಂಬಿಯದಲ್ಲಿ ಮಾತ್ರವಲ್ಲದೆ ಇಡೀ ಆಫ್ರಿಕದಲ್ಲಿ ಜನಪ್ರಿಯತೆ ಗಳಿಸಿರುವ ಕೆಲವೇ ವ್ಯಕ್ತಿಗಳಲ್ಲಿ ಒಬ್ಬ.

ಕೌಂಡ ಜನಿಸಿದ್ದು 1924ರ ಏಪ್ರಿಲ್ 28ರಂದು. ತಂದೆ ಡೇವಿಡ್ ಕೌಂಡ, ತಾಯಿ ಹೆಲೆನ್. ತಂದೆ, ತಾಯಿ ಇಬ್ಬರೂ ನಿಯಾಸಲ್ಯಾಂಡಿನಲ್ಲಿ ಹುಟ್ಟಿದವರು. ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಚರ್ಚ್ ಆಫ್ ಸ್ಕಾಟ್ಲೆಂಡಿನಿಂದ ನಿಯೋಜಿತರಾಗಿ ಜ಼ಾಂಬಿಯ (ಆಗಿನ ಉತ್ತರ ರೊಡೀಷಿಯ) ಮತ್ತು ಟಾಂಗನ್ಯೀಕಗಳ ನಡುವಿನ ಗಡಿಯ ಬಳಿ ಇರುವ ಚಿನ್ಸಾಲಿಗೆ ಬಂದಿದ್ದರು. ಕೌಂಡ ತನ್ನ ತಂದೆತಾಯಿಯರ ಇಳಿವಯಸ್ಸಿನಲ್ಲಿ,

ಅವರ ಎಂಟನೆಯ ಮಗುವಾಗಿ ಹುಟ್ಟಿದ. ಈತನ ಜನನವನ್ನು ಅವರು ನಿರೀಕ್ಷಿಸಿರಲಿಲ್ಲವಾದ್ದರಿಂದ ಅವರು ಮಗುವಿಗೆ ಬುಚಿಜ್ಯ (ಅನಿರೀಕ್ಷಿತ) ಎಂದು ಹೆಸರಿಟ್ಟರು. ತನ್ನ ಕಿರಿಯ ಮಗನೂ ತನ್ನಂತೆಯೇ ಧರ್ಮಪ್ರಚಾರಕನಾಗಬೇಕೆಂಬುದು ತಂದೆಯ ಆಸೆಯಾಗಿತ್ತು. ಕೆನೆತ್‌ಗೆ 8 ವರ್ಷ ವಯಸ್ಸಾಗಿದ್ದಾಗ ತಂದೆ ತೀರಿಕೊಂಡ. ಕೆನೆತನ ತಾಯಿ ತನ್ನ ನೆರೆಯವರೊಬ್ಬರಿಂದ ಸಾಲ ಪಡೆದು ತನ್ನ ಮಗನನ್ನು ಶಾಲೆಗೆ ಸೇರಿಸಿದಳು. ಶಿಕ್ಷಣಶುಲ್ಕದ ಹಣವನ್ನು ಸಂಪಾದಿಸುವುದಕ್ಕಾಗಿ ಈ ಹುಡುಗ ಅಡುಗೆಮನೆಯ ಕೆಲಸಮಾಡುತ್ತಿದ್ದ. ಎರಡನೆಯ ಮಹಾಯುದ್ಧ ಆರಂಭವಾದಾಗ ಕೆನೆತ್ ಕೌಂಡ ಲುಬ್ವದಲ್ಲಿ ಅಧ್ಯಾಪಕ ಶಿಕ್ಷಣ ಪಡೆಯುತ್ತಿದ್ದ. ಅದನ್ನು ಮುಗಿಸಿದ ಕೂಡಲೆ ಮುನಾಲಿಯಲ್ಲಿ ಹೊಸದಾಗಿ ಆರಂಭವಾದ ಶಾಲೆಯಲ್ಲಿ ಶಿಕ್ಷಣ ಮುಂದುವರಿಸಿದ. ಕೌಂಡ ಅಲ್ಲಿದ್ದಾಗ ಈತನ ಮೇಲೆ ಪ್ರಭಾವ ಬೀರಿದ ವ್ಯಕ್ತಿ ಡೇನಿಯೆಲ್ ಸೋಂಕ್ವಿಷ್. ಆ ವೇಳೆಗೆ ತೀವ್ರವಾಗಿದ್ದ ವರ್ಣವಿದ್ವೇಷ ಮತ್ತು ಜನಾಂಗ ಪ್ರತ್ಯೇಕತೆಯ ಭೀಕರ ಚಿತ್ರವನ್ನು ಆತ ಕೌಂಡನಿಗೆ ವಿವರಿಸಿದ. ಆದರೆ ಆಗ ಕೌಂಡನ ಮನಸ್ಸಿಗೆ ಇದು ಅಷ್ಟಾಗಿ ತಾಕಲಿಲ್ಲ. 1943ರಲ್ಲಿ ಈತ ಮುನಾಲಿಯನ್ನು ಬಿಟ್ಟು ಲುಬ್ವಕ್ಕೆ ಹಿಂದಿರುಗಿ ಅಧ್ಯಾಪಕನಾದ. ಮೂರು ವರ್ಷಕಾಲ ಈತ ಅಧ್ಯಾಪಕವೃತ್ತಿಗೇ ಅಂಟಿಕೊಂಡಿದ್ದರೂ ಆ ಜೀವನ ಇವನಿಗೆ ಬೇಸರ ಬರಿಸುತ್ತಿತ್ತು. 1947ರಲ್ಲಿ ಈತ ಅಧ್ಯಾಪಕ ಹುದ್ದೆಯನ್ನು ಬಿಟ್ಟ. ತನಗೆ ಪ್ರಿಯವಾದ ಕೆಲಸದ ಅನ್ವೇಷಣೆಯಲ್ಲಿ ಟಾಂಗನ್ಯೀಕ ಮತ್ತು ದಕ್ಷಿಣ ರೊಡೀಷಿಯಗಳಿಗೆ ಹೋಗಿ ಬಂದ. ಕೊನೆಗೆ ಮುಫುಲಿರದಲ್ಲಿ ಮತ್ತೆ ಶಿಕ್ಷಕನಾದ. ಈ ವೇಳೆಗೆ ಬೆಟಿ ಬಂಡಳೊಂದಿಗೆ ಇವನ ವಿವಾಹವಾಗಿತ್ತು. ಅವಳೂ ಶಿಕ್ಷಕಿಯಾದಳು. ತಾಮ್ರಗಣಿ ಪ್ರದೇಶದ ಆ ಸ್ಥಳದಲ್ಲಿ ಕೌಂಡ ಬಹುಕಾಲ ಇರಲಿಲ್ಲ. 1949ರಲ್ಲಿ ಈತ ಲುಬ್ವಕ್ಕೆ ಹಿಂದಿರುಗಿ ಬೇಸಾಯ ಕೈಕೊಂಡ. ಇವನ ತಲೆಯಲ್ಲಿ ರಾಜಕೀಯ ವಿಚಾರಗಳೇ ತುಂಬಿಕೊಂಡಿದ್ದುವು. ಆಫ್ರಿಕದ ರಾಷ್ಟ್ರೀಯ ಕಾಂಗ್ರೆಸಿನ ಕೇಂದ್ರಾಲಯದ ಅನುಮತಿ ಪಡೆದು ಚಿನ್ಸಾಲಿ ಜಿಲ್ಲೆಯಲ್ಲಿ ಈತ ಅದರ ಶಾಖೆಯೊಂದನ್ನು ತೆರೆದ. 1950ರಲ್ಲಿ ಕಾಂಗ್ರೆಸಿನ ಚಿನ್ಸಾಲಿ ಶಾಖೆಯ ಕಾರ್ಯದರ್ಶಿಯನ್ನಾಗಿ ಈತನನ್ನು ಆಯ್ಕೆ ಮಾಡಲಾಯಿತು. ಈತ ಸೈಕಲ್ ಮೇಲೆ ಊರಿಂದೂರಿಗೆ ಸಂಚರಿಸಿ ಜನರಲ್ಲಿ ಜಾಗೃತಿ ಮೂಡಿಸಿದ. ಚಿನ್ಸಾಲಿ ಮುಂದೆ ಬಿರುಸಿನ ರಾಜಕೀಯ ಚಟುವಟಿಕೆಯ ಕೇಂದ್ರವಾಗಿ ಪರಿಣಮಿಸಿತು.



ಕಾಂಗ್ರೆಸಿನೊಡನೆ ಸಂಪರ್ಕ ಏರ್ಪಡಿಸಿಕೊಂಡಂದಿನಿಂದಲೇ ಕೌಂಡನ ರಾಜಕೀಯ ಜೀವನ ಆರಂಭವಾಯಿತು. ಪಕ್ಷದ ಅಧ್ಯಕ್ಷನಾಗಿದ್ದ ಹ್ಯಾರಿ ಎನ್‌ಕುಂಬಲ ಮತ್ತು ಈತ ಪಕ್ಷಕ್ಕಾಗಿ ಅವಿಶ್ರಾಂತವಾಗಿ ದುಡಿದರು. ವಿದ್ಯಾವಂತರಾದ ಯುವಕರು ಈ ಸಂಸ್ಥೆಯನ್ನು ಬೆಂಬಲಿಸತೊಡಗಿದರು. ಇದರ ನೇತೃತ್ವದಲ್ಲಿ 1953ರಲ್ಲಿ ಸಂತಾಪ ದಿನವನ್ನು ಆಚರಿಸಲಾಯಿತು. ಸರ್ಕಾರಿ ಕಾರ್ಯಾಲಯಗಳಲ್ಲಿ ಗುಮಾಸ್ತರಾಗಿದ್ದ ಅನೇಕರು ಅಂದು ಕೆಲಸವನ್ನು ನಿಲ್ಲಿಸಿ ಅದಕ್ಕಾಗಿ ಶಿಕ್ಷೆಗೆ ಗುರಿಯಾದರು. ರಾಷ್ಟ್ರವಿಮೋಚನೆಯ ಚಳವಳಿ ಬಿರುಸಾಯಿತು. ಕಾಂಗ್ರೆಸಿನ ಸದಸ್ಯರ ಸಂಖ್ಯೆ ಏರತೊಡಗಿತು. ಈ ಎಲ್ಲ ಚಟುವಟಿಕೆಗಳ ಹಿಂದೆ ಕೌಂಡನ ಪ್ರೇರಣೆ ಇದ್ದೇ ಇತ್ತು.

1954 ಮತ್ತು 1955ರ ಅವಧಿಯಲ್ಲಿ ತನ್ನ ಅನುಯಾಯಿಗಳ ಉತ್ಸಾಹವನ್ನು ಕಾಪಾಡಿಕೊಂಡು ಬರುವಲ್ಲಿ ಇವನಿಗೆ ಅನೇಕ ಕಷ್ಟಗಳು ಎದುರಾದುವು. ಆಗ ವರ್ಣಭೇದದಂಥ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವತ್ತ ಜನ ಗಮನ ಕೊಡುವಂತೆ ಕೌಂಡ ಪ್ರಯತ್ನಿಸಿದ. ಕೌಂಡನಿಗೆ ಸ್ವತಃ ಈ ದುಃಸ್ಥಿತಿಯ ಅರಿವಾಗಿತ್ತು. ಪುಸ್ತಕವೊಂದನ್ನು ಕೊಳ್ಳಲು ಅಂಗಡಿಗೆ ಹೋದಾಗ ಮತ್ತು ಸ್ಯಾಂಡ್‌ವಿಚ್‌ಗಳನ್ನು ಕೊಳ್ಳಲು ಕೆಫೆಯೊಂದಕ್ಕೆ ಹೋದಾಗ ಬಿಳಿಯರಿಗಾಗಿ ಮೀಸಲಾಗಿದ್ದ ಬಾಗಿಲಿನ ಮೂಲಕ ಪ್ರವೇಶಿಸಿದನೆಂಬ ಕಾರಣಕ್ಕಾಗಿ ಇವನನ್ನು ಹೊಡೆದು ಹೊರದೂಡಲಾಗಿತ್ತು. ಹೀಗಾಗಿ ಅನೇಕ ಕಡೆಗಳಲ್ಲಿ ಈತ ಬಹಿಷ್ಕಾರ ಕಾರ್ಯಕ್ರಮಗಳನ್ನು ಏರ್ಪಡಿಸಿದ. ಈ ಕಾರ್ಯಕ್ರಮಗಳು ಗಮನಾರ್ಹ ಯಶಸ್ಸನ್ನು ಗಳಿಸಿದ್ದು ಐರೋಪ್ಯರ ಕಣ್ಣುಗಳನ್ನು ಕೆಂಪಗಾಗಿಸಿತು. ನಿಷೇಧಾತ್ಮಕ ಸಾಹಿತ್ಯವನ್ನು ಹೊಂದಿದ್ದರೆಂಬ ಆರೋಪವನ್ನು ಹೊರಿಸಿ ಕೌಂಡನನ್ನೂ ಎನ್ಕುಂಬುಲನನ್ನೂ ಸರ್ಕಾರ ಸೆರೆಮನೆಗೆ ದೂಡಿತು. ಎರಡು ತಿಂಗಳ ಸೆರೆಮನೆಯ ಶಿಕ್ಷೆ ಕೌಂಡನ ನಿರ್ಧಾರವನ್ನು ಮತ್ತಷ್ಟು ದೃಢಪಡಿಸಿತು. ಬಂಧನದ ಜೀವನ ಇವನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತ್ತು. ಕೌಂಡನ ಜೀವನ ಸರಳವಾಯಿತು. ಕುಡಿತ, ಧೂಮಪಾನಗಳನ್ನು ಸಂಪೂರ್ಣ ವರ್ಜಿಸಿದ್ದ ಕೌಂಡ ಆಗ ಮಾಂಸಾಹಾರವನ್ನೂ ತ್ಯಜಿಸಿದ.

ಪಕ್ಷದಲ್ಲಿ ತೀವ್ರಗಾಮಿಗಳು ಮತ್ತು ಮಂದಗಾಮಿಗಳ ಗುಂಪುಗಳು ಹುಟ್ಟಿಕೊಂಡುವು. ಕೌಂಡನ ನೇತೃತ್ವದಲ್ಲಿ ಕ್ರಾಂತಿಕಾರಿಗಳೆಲ್ಲ ಒಂದುಗೂಡಿ 1958ರಲ್ಲಿ ಜಾಂಬಿಯ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದರು. ಕೌಂಡ ಇದರ ಪ್ರಥಮ ಅಧ್ಯಕ್ಷನಾದ.

ಸರ್ಕಾರ ಜಾಂಬಿಯ ಕಾಂಗ್ರೆಸನ್ನು ಬಹಿಷ್ಕರಿಸಿತು. ಅದರ ನಾಯಕರನ್ನು ದೂರದ ಸೆರೆಮನೆಗಳಿಗೆ ದೂಡಿತು. ಎರಡನೆಯ ಬಾರಿ ಕೌಂಡ ಜೈಲುವಾಸವನ್ನು ಅನುಭವಿಸಿದ. ಅಲ್ಲಿ ಇವನ ಆರೋಗ್ಯ ಕೆಟ್ಟಿತು. ಕಾಂಗ್ರೆಸಿನೊಂದಿಗೆ ಕೌಂಡನ ಹೆಸರೂ ಇಲ್ಲವಾಗುತ್ತದೆ ಎಂದು ಸರ್ಕಾರ ಭಾವಿಸಿತ್ತು. ಆದರೆ, ಸರ್ಕಾರದ ಕಣ್ಣು ತಪ್ಪಿಸಿದ್ದ ನಾಯಕರು ಒಂದೆಡೆ ಸೇರಿ, 6 ತಿಂಗಳೊಳಗೆ ಆಫ್ರಿಕನ್ ರಾಷ್ಟ್ರೀಯ ಸ್ವಾತಂತ್ರ್ಯಪಕ್ಷವನ್ನು ಸ್ಥಾಪಿಸಿದರು. 1959ರ ಕೊನೆಯ ಹೊತ್ತಿಗೆ ಸಣ್ಣ ಪಕ್ಷಗಳೆಲ್ಲ ಇದರಲ್ಲಿ ಒಂದಾದುವು. ಪಕ್ಷದ ಹೆಸರನ್ನು ಸಂಯುಕ್ತ ರಾಷ್ಟ್ರೀಯ ಸ್ವಾತಂತ್ರ್ಯ ಪಕ್ಷ ಎಂದು ಬದಲಿಸಲಾಯಿತು. 9 ತಿಂಗಳ ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾದ ಮೇಲೆ ಕೌಂಡ ಈ ಹೊಸ ಪಕ್ಷದ ಅಧ್ಯಕ್ಷನಾಗಿ ಆಯ್ಕೆಹೊಂದಿದ (1960).

ಆ ವರ್ಷದ ಅಕ್ಟೋಬರ್ ಒಳಗಾಗಿ ಸ್ವಾತಂತ್ರ್ಯವನ್ನು ಸಾಧಿಸಬೇಕೆಂಬ ಘೋಷಣೆ ನಾಡಿನಾದ್ಯಂತ ಮೊಳಗಿತ್ತು. ಇಷ್ಟು ಅಲ್ಪ ಅವಧಿಯಲ್ಲಿ ಸ್ವಾತಂತ್ರ್ಯವನ್ನು ಸಾಧಿಸಲಾದೀತೆಂಬ ನಂಬಿಕೆ ನಾಯಕರಿಗೆ ಇರಲಿಲ್ಲ. ನಾಯಕತ್ವಕ್ಕೆ ಅದು ಅಗ್ನಿಪರೀಕ್ಷೆಯ ಕಾಲವಾಗಿತ್ತು.

ಈ ಮಧ್ಯೆ ಏಪ್ರಿಲ್ 13ರಂದು ನ್ಯೂಯಾರ್ಕ್‌ನಲ್ಲಿ ನಡೆಯಲಿದ್ದ ಆಫ್ರಿಕ ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭದಲ್ಲಿ ಭಾಗವಹಿಸುವಂತೆ ಕೌಂಡನಿಗೆ ಆಹ್ವಾನ ಬಂತು. ಹಿಂದಿನ ದಿನವೇ ದಕ್ಷಿಣ ಆಫ್ರಿಕದ ಬಿಳಿಯ ನಾಯಕ ವೆರ್‌ವೋರ್ಡನನ್ನು ಕೊಲ್ಲುವ ಯತ್ನ ನಡೆದಿತ್ತು. ರಾಜಕೀಯ ಬದಲಾವಣೆಯನ್ನುಂಟು ಮಾಡಲು ಕೊಲೆಯ ಮಾರ್ಗ ಸರಿಯಲ್ಲ; ಅಹಿಂಸಾತ್ಮಕ ಮಾರ್ಗವೊಂದೇ ಅನುಸರಣೀಯವಾದ ಮಾರ್ಗ ಎಂದು ಕೌಂಡ ಆ ಸಭೆಯಲ್ಲಿ ಘೋಷಿಸಿದ.

ಲಂಡನಿನಲ್ಲಿ ವಸಾಹತು ಸಚಿವಾಲಯದ ಮುಖ್ಯರೊಡನೆ ಮಾತುಕತೆ ನಡೆಸಿ ಅನಂತರ ಮೇ 27ರಂದು ಕೌಂಡ ಜಾಂಬಿಯಕ್ಕೆ ಹಿಂದಿರುಗಬೇಕಾಗಿತ್ತು. ಈ ಮಧ್ಯೆ ದುರದೃಷ್ಟವಶಾತ್ ಜನರ ಗುಂಪೊಂದು ಲಿಲಿಯನ್ ಬರ್ಟನ್ ಎಂಬುವಳನ್ನು ಹಿಂಸಿಸಿ, ಪೆಟ್ರೋಲ್ ಸುರಿದು ಬೆಂಕಿಯಿಟ್ಟಿತು. ಆಕೆ ಆಸ್ಪತ್ರೆಯಲ್ಲಿ ತೀರಿಕೊಂಡಳು. ಈ ಕಾರಣದಿಂದಾಗಿ ಸರ್ಕಾರ ಕೌಂಡನ ಪಕ್ಷವನ್ನು ಬಹಿಷ್ಕರಿಸಿತು. ಮಾರ್ಗಮಧ್ಯದಲ್ಲಿಯೇ ಕೌಂಡನನ್ನು ಬಂಧಿಸಿ ಗಡಿಪಾರು ಮಾಡಲಾಯಿತು. ಜೂನ್ 16ರಂದು ಇದ್ದಕ್ಕಿದ್ದಂತೆಯೇ ಈತ ಜಾಂಬಿಯದಲ್ಲಿ ಕಾಣಿಸಿಕೊಂಡ.

ಜನತೆ ಅಕ್ಟೋಬರ್ ಒಳಗಾಗಿ ಸ್ವಾತಂತ್ರ್ಯ ಬೇಕೆಂದು ಖಾತರಿಸುತ್ತಿದ್ದರೆ ಸರ್ಕಾರ ಮಿಲಿಟರಿ ಬಲವನ್ನು ಹೆಚ್ಚಿಸಿಕೊಳ್ಳತೊಡಗಿತ್ತು. ಸಂಧಾನಗಳು ಫಲಿಸಲಿಲ್ಲ. ನಾಡಿನಲ್ಲೆಲ್ಲ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿತ್ತು. ಕೌಂಡ ನಾಡಿನಾದ್ಯಂತ ಸಂಚರಿಸಿ ಶಾಂತಿ ಮತ್ತು ಅಹಿಂಸೆಯಿಂದಿರಬೇಕೆಂದು ಜನಕ್ಕೆ ಮನವಿ ಮಾಡಿಕೊಂಡ.

ಮುಂದೆ ಅಸಹಕಾರ ಸತ್ಯಾಗ್ರಹ ಪ್ರಾರಂಭವಾಯಿತು. ಕೌಂಡನ ಪಕ್ಷದ ಸಾವಿರಾರು ಮಂದಿ ಸದಸ್ಯರು ಬಿಳಿಯರ ಸರ್ಕಾರ ನೀಡಿದ್ದ ಗುರುತು ಚೀಟಿಗಳನ್ನು ಸುಟ್ಟುಹಾಕಿದರು. ಇದಕ್ಕಾಗಿ ಅವರಿಗೆ ಸೆರೆಮನೆಯ ಶಿಕ್ಷೆಯನ್ನೂ ದಂಡವನ್ನೂ ವಿಧಿಸಲಾಯಿತು. ಕೌಂಡ ಲಂಡನ್ನಿನಲ್ಲಿ ಪತ್ರಕರ್ತರ ಎದುರಿನಲ್ಲೇ ತನ್ನ ಗುರುತು ಚೀಟಿಯನ್ನು ಸುಟ್ಟುಹಾಕಿದ. ಆದರೆ ಬ್ರಿಟಿಷ್ ಸರ್ಕಾರಕ್ಕೆ ಅವನನ್ನು ಬಂಧಿಸಲು ಧೈರ್ಯವಾಗಲಿಲ್ಲ. ಸೈನಿಕ ಕಾರ್ಯಾಚರಣೆಯ ಬಗ್ಗೆ ವಿಚಾರಣೆ ನಡೆಸುವಂತೆ ಕೌಂಡ ಒತ್ತಾಯಪಡಿಸಿದ. ಆದರೆ ಸರ್ಕಾರ ಈ ಸೂಚನೆಯನ್ನು ತಿರಸ್ಕರಿಸಿತು. ಕೌಂಡನ ಪಕ್ಷ ತನ್ನದೇ ಆದ ವರದಿಯನ್ನು ಹೊರಡಿಸಿ, ರಕ್ಷಣಾಪಡೆಗಳು ನಡೆಸಿದ್ದ ಲೂಟಿ ಮತ್ತು ಅತ್ಯಾಚಾರಗಳ ವಿವರಗಳನ್ನು ಬಯಲಿಗೆಳೆಯಿತು. ಸರ್ಕಾರವೂ ತನ್ನ ದಾಖಲೆಗಳನ್ನು ಬಿಡುಗಡೆ ಮಾಡಿತು. ಬ್ರಿಟಿಷ್ ಸರ್ಕಾರ ಸಂವಿಧಾನದಲ್ಲಿ ಬದಲಾವಣೆಗಳನ್ನು ಮಾಡುವ ನಿರ್ಧಾರವನ್ನು ಪ್ರಕಟಿಸಿತು. ಇದೊಂದು ಮಹತ್ತ್ವಪೂರ್ಣ ಸಾಧನೆಯೇ ಆಗಿತ್ತು. ಏಕೆಂದರೆ ಕೆಲವೇ ವಾರಗಳ ಹಿಂದೆ ಇದ್ದ ಸರ್ಕಾರ ಇದೇ ಸಂವಿಧಾನವನ್ನು ಅಂತಿಮ ಪರಿಹಾರವೆಂದು ಘೋಷಿಸಿತ್ತು. ದೀರ್ಘ ಸಂಧಾನಗಳು ನಡೆದುವು. ಆದರೆ ಯಾವುದೂ ಫಲಿಸಲಿಲ್ಲ.

1962ರಲ್ಲಿ ವಿಶ್ವಸಂಸ್ಥೆಯ ವಸಾಹತು ಸಮಿತಿಯಲ್ಲಿ ಮತ್ತು ಅಮೆರಿಕದ ವಿವಿಧ ಸಭೆಗಳಲ್ಲಿ ಭಾಗವಹಿಸಿ, ಜಾಂಬಿಯದ ಸಮಸ್ಯೆಗೆ ಸ್ವಾತಂತ್ರ್ಯವೊಂದೇ ಪರಿಹಾರವೆಂಬುದನ್ನು ಕೌಂಡ ಸ್ಪಷ್ಟಪಡಿಸಿದ. ಕೊನೆಗೆ ಬ್ರಿಟಿಷ್ ಸರ್ಕಾರ ಜಾಂಬಿಯಕ್ಕೆ ಸ್ವಯಮಾಡಳಿತ ಕೊಡಲೊಪ್ಪಿ 1964ರ ಜನವರಿಯಲ್ಲಿ ನಡೆಸಿದ ಚುನಾವಣೆಗಳಲ್ಲಿ

ಕೌಂಡನ ಪಕ್ಷಕ್ಕೆ ಬಹುಮತ ಲಭ್ಯವಾಗಿ ಈತ ಅದರ ಪ್ರಧಾನಿಯಾದ. 1964ರ ಅಕ್ಟೋಬರಿನಲ್ಲಿ ಅದು ಸ್ವತಂತ್ರ ಗಣರಾಜ್ಯವಾಗಿ ಜ಼ಾಂಬಿಯ ಎಂಬ ಹೆಸರು ತಳೆಯಿತು. ಕೌಂಡ ಅದರ ಪ್ರಥಮ ಅಧ್ಯಕ್ಷನಾದ. (ಪಿ.ಜಿ.ಡಿ.)

**ಕೌಂಡಿನ್ಯಪುರ :** ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯಲ್ಲಿನ ವರ್ಧಾನದಿಯ ದಡದಲ್ಲಿರುವ ಒಂದು ಪುಣ್ಯಕ್ಷೇತ್ರ. ಇದಕ್ಕೆ ಕುಂಡಿನಪುರವೆಂಬ ಹೆಸರೂ ಇತ್ತು. ಇದು ರುಕ್ಮಿಣಿ, ದಮಯಂತಿಯರ ತವರುಮನೆಯಾಗಿದ್ದು ಇಬ್ಬರ ಸ್ವಯಂವರವೂ ಇಲ್ಲಿಯೇ ನಡೆಯಿತೆನ್ನಲಾಗಿದೆ. ವರ್ಧಾ ನದಿಯ ಪಾತ್ರದಲ್ಲಿರುವ ಪುಂಡಲೀಕ ಕುಂಡದ ಹತ್ತಿರ ಶ್ರೀ ಸದಾರಾಮ ಮಹಾರಾಜ, ಬೈರಾಗೀ ಮಹಾರಾಜ ಮೊದಲಾದ ಸಂತಶ್ರೇಷ್ಠರ ಸಮಾಧಿಗಳಿವೆ.

ಪಾಂಡುರಂಗನ ಆದೇಶದಂತೆ ಇಲ್ಲಿಗೆ ಬಂದ ಸದಾರಾಮರು ಆತನೇ ಕೊಟ್ಟ ವಿಠ್ಠಲಮೂರ್ತಿಯನ್ನಿಲ್ಲಿ ಪ್ರತಿಷ್ಠಾಪಿಸಿ ಒಂದು ದೇವಾಲಯವನ್ನು ಕಟ್ಟಿಸಿದರು. ಇದರಿಂದಾಗಿ ಇಲ್ಲೊಂದು ವಿಟ್ಠಲಕ್ಷೇತ್ರ ನಿರ್ಮಾಣವಾಯಿತು. ಕೌಂಡಿನ್ಯಪುರಕ್ಕೆ ವಿದರ್ಭದ ಪಂಢರೀ ಎಂದು ಹೆಸರು ಬಂದುದು ಹೀಗೆ.

ವಿಟ್ಠಲಮಂದಿರದ ಹತ್ತಿರದಲ್ಲೆ ಚೌರಂಗೀನಾಥರ ಸಮಾಧಿ ಇದೆ. ಪಕ್ಕದಲ್ಲೆ ಶ್ರೀದತ್ತ, ಶ್ರೀಮಹಾದೇವ ಮತ್ತು ಶ್ರೀಲಕ್ಷ್ಮೀನಾರಾಯಣರ ದೇವಸ್ಥಾನಗಳೂ ಒಂದು ಜೈನಬಸದಿಯೂ ಇವೆ. ಜ್ಯೇಷ್ಠ ಶುದ್ಧ ಪ್ರಥಮೆಯ ದಿವಸ ಇಲ್ಲಿಂದ ರುಕ್ಮಿಣಿಯ ಪಲ್ಲಕ್ಕಿ ಹೊರಟು ಆಷಾಢಶುದ್ಧ ದಶಮಿಯ ದಿವಸ ಪಂಢರಪುರವನ್ನು ಸೇರಿ ಗೋಕುಲಾಷ್ಟಮಿಯ ದಿವಸ ಕೌಂಡಿನ್ಯಪುರಕ್ಕೆ ಹಿಂತಿರುಗುತ್ತದೆ.

ಊರ ಹೊರಗಡೆ ಗಿರಿಜೆಯ ಒಂದು ಮಂದಿರವಿದೆ. ರುಕ್ಮಿಣಿ ತನ್ನ ಲಗ್ನದ ಹಿಂದಿನ ದಿವಸ ಗಿರಿಜಾದೇವಿಯ ದರ್ಶನ ತೆಗೆದುಕೊಂಡಳೆಂದು ಪ್ರತೀತಿ. ಇಲ್ಲಿಯೇ ಹತ್ತಿರದಲ್ಲಿ ಭೀಷ್ಮಕರಾಜನ ಉದ್ಯಾನವಿತ್ತು ಎಂದು ಹೇಳುತ್ತಾರೆ. ಈಚಿನ ಉತ್ಖನನಗಳಿಂದ ಪ್ರಾಚೀನ ನಗರದ ಅವಶೇಷಗಳು ಬೆಳಕಿಗೆ ಬಂದಿವೆ. *

**ಕೌಟಿಲ್ಯ :** ಭಾರತದ ಪ್ರಸಿದ್ಧ ರಾಜನೀತಿಜ್ಞ, ವಿಷ್ಣುಗುಪ್ತ, ಚಾಣಕ್ಯ ಎಂಬ ಅಭಿಧಾನಗಳೂ ಇವನಿಗುಂಟು. ಈತ ಕುಟಲನೆಂಬ ಗೋತ್ರಪ್ರವರ್ತಕನ ವಂಶದಲ್ಲಿ ಹುಟ್ಟಿದ್ದರಿಂದ ಇವನ ಹೆಸರು ಕೌಟಿಲ್ಯನೆಂದೂ ಚಣಕ ದೇಶದಲ್ಲಿ ಜನಿಸಿದವನಾದ್ದರಿಂದ ಚಾಣಕ್ಯನೆಂದೂ ಇವನಿಗೆ ತಂದೆತಾಯಿಗಳಿಟ್ಟ ಹೆಸರು ವಿಷ್ಣುಗುಪ್ತನೆಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ತಕ್ಷಶಿಲೆಯ ಬ್ರಾಹ್ಮಣ ಮನೆತನಕ್ಕೆ ಸೇರಿದ ಈತ ನಂದವಂಶದ ಕೊನೆಯ ರಾಜನನ್ನು ಸಿಂಹಾಸನದಿಂದ ಉರುಳಿಸಿ, ಚಂದ್ರಗುಪ್ತ ಮೌರ್ಯನಿಂದ ರಾಜ್ಯಸ್ಥಾಪನೆ ಮಾಡಿಸಿದನೆಂದು ಪ್ರತೀತಿ ಇದೆ. ಸಾಮ್ರಾಜ್ಯಸ್ಥಾಪನೆಯ ಅನಂತರ ಇವನು ಚಂದ್ರಗುಪ್ತ ಮೌರ್ಯನ ಪ್ರಧಾನಮಂತ್ರಿಯಾಗಿದ್ದು ರಾಜ್ಯಭಾರವನ್ನು ವ್ಯವಸ್ಥಿತಗೊಳಿಸಲು ಬಹುಮಟ್ಟಿಗೆ ಕಾರಣನಾದ. ಚಂದ್ರಗುಪ್ತನ ತರುವಾಯ ಸಿಂಹಾಸನವನ್ನೇರಿದ ಬಿಂದುಸಾರನ ಕಾಲದಲ್ಲೂ ಸ್ವಲ್ಪಕಾಲ ಪ್ರಧಾನಿಯಾಗಿದ್ದನೆಂದು ಕಾಣುತ್ತದೆ. ಇವನ ಅರ್ಥಶಾಸ್ತ್ರವೆಂಬ ರಾಜನೀತಿಗ್ರಂಥ ಪ್ರ.ಶ.ಪೂ. 325–296 ಸುಮಾರಿನಲ್ಲಿ ರಚಿತವಾದ್ದೆಂದು ಹೇಳಲಾಗಿದೆ. ಪ್ರ.ಶ. 3ನೆಯ ಶತಮಾನದಲ್ಲಿ ಈ ಗ್ರಂಥ ರಚಿತವಾಗಿರಬಹುದೆಂಬ ಅಭಿಪ್ರಾಯವೂ ಉಂಟು. ಮೈಸೂರಿನ ಪ್ರಾಚ್ಯ ಸಂಶೋಧನಾಲಯದಲ್ಲಿ ಗ್ರಂಥಪಾಲಕರಾಗಿದ್ದ ಆರ್.ಶಾಮಶಾಸ್ತ್ರಿಗಳು 1909ರಲ್ಲಿ ಈ ಗ್ರಂಥವನ್ನು ಪ್ರಕಟಿಸಿದರು. ಅನಂತರ ತಿರುವನಂತಪುರದ ಟಿ.ಗಣಪತಿಶಾಸ್ತ್ರಿಯವರೂ ಈ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದರು. ಈ ಗ್ರಂಥದ ಮೇಲೆ ಅನೇಕ ಟೀಕೆ ಟಿಪ್ಪಣಿಗಳು ಬಂದಿವೆ. ಇದು ಇಂಗ್ಲಿಷ್, ಫ್ರೆಂಚ್, ಜರ್ಮನ್ ಮುಂತಾದ ಅನೇಕ ಭಾಷೆಗಳಿಗೆ ಭಾಷಾಂತರವಾಗಿದೆ. ಪ್ರಾಚೀನ ಭಾರತದ ರಾಜನೀತಿ, ಧರ್ಮ ಮತ್ತು ಸಾಮಾಜಿಕ ಜೀವನಗಳನ್ನು ರೂಪಿಸುವ ಕಾರ್ಯದಲ್ಲೂ ಈ ಸಂಬಂಧವಾಗಿ ಅನಂತರಕಾಲದಲ್ಲಿ ರಚಿತವಾದ ಗ್ರಂಥಗಳ ಮೇಲೂ ಕೌಟಿಲ್ಯನ ಅರ್ಥಶಾಸ್ತ್ರ ತುಂಬ ಪ್ರಭಾವ ಬೀರಿತು. ಕೆಲವು ಆಧುನಿಕ ವಿದ್ವಾಂಸರು ಈ ಗ್ರಂಥವನ್ನು ಇಟಲಿಯ ಮಧ್ಯಕಾಲೀನ ರಾಜನೀತಿಜ್ಞ ಮ್ಯಾಕಿಯವೆಲಿಯ ಇಲ್ ಪ್ರಿನ್ಸಿಪೆ (ದಿ ಪ್ರಿನ್ಸ್) ಎಂಬ ಗ್ರಂಥದೊಂದಿಗೆ ಹೋಲಿಸಿ ಕೌಟಿಲ್ಯನನ್ನು ಭಾರತದ ಮ್ಯಾಕಿಯವೆಲಿ ಎಂದು ಕರೆದಿರುವುದು ಅಷ್ಟು ಸಮಂಜಸವಲ್ಲ. ಕೌಟಿಲ್ಯನನ್ನು ಗ್ರೀಸಿನ ಅರಿಸ್ಟಾಟಲಿಗೆ ಹೋಲಿಸಬಹುದೆಂದು ಮತ್ತೆ ಕೆಲವರು ವಾದಿಸಿರುವುದೇ ಯುಕ್ತವೆಂದು ಕಾಣುತ್ತದೆ.

ಈ ಗ್ರಂಥದಲ್ಲಿ ಸರ್ಕಾರದ ಆಡಳಿತ ರೀತಿನೀತಿ, ರಾಜಧರ್ಮ, ಮಂತ್ರಿಗಳೇ ಮುಂತಾದ ಆಡಳಿತಾಧಿಕಾರಿಗಳ ನಡೆವಳಿಕೆ, ಅಂತಾರಾಷ್ಟ್ರೀಯ ವ್ಯವಹಾರ ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಭಾರತೀಯ ದೃಷ್ಟಿಕೋನವನ್ನು ಕೌಟಿಲ್ಯ ಹೊರಗೆಡಹಿದ್ದಾನೆ. ತನ್ನ ಗ್ರಂಥದಲ್ಲಿ ರಾಜ್ಯಾಡಳಿತ, ನ್ಯಾಯಾಂಗ ವಿಧಿನಿಯಮಗಳು, ಯುದ್ಧನೀತಿ ಮತ್ತು ತಂತ್ರಗಳು, ಆಸ್ತಿಯ ವಿನಿಮಯದ ಬಗ್ಗೆ ಅನುಸರಿಸಬೇಕಾದ ನಿಯಮಗಳು, ಸಾಮಾಜಿಕ ಜೀವನದ ಕಟ್ಟುಪಾಡುಗಳು–ಇವೆಲ್ಲವನ್ನೂ ಪರಿಶೀಲಿಸಿದ್ದಾನೆ. ಧಾರ್ಮಿಕ ದೃಷ್ಟಿ ಪ್ರಧಾನವಾಗಿದ್ದರೂ ತನ್ನ ಗ್ರಂಥದಲ್ಲಿ ಲೌಕಿಕ ಉಪಯುಕ್ತತೆಗೆ ಪ್ರಾಧಾನ್ಯ ನೀಡಿದ್ದಾನೆ. ಒಟ್ಟಿನಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಕೇವಲ ಆದರ್ಶನೀತಿನಿಯಮಗಳ ಸಂಗ್ರಹಗ್ರಂಥವಾಗಿರದೆ ಪ್ರಜಾಹಿತೈಷಿಯಾದ ರಾಜ ನಿತ್ಯವೂ ಅನುಸರಿಸಬೇಕಾದ ಮಾರ್ಗಗಳನ್ನು ತಿಳಿಸುವ ಉತ್ತಮ ಮಾರ್ಗದರ್ಶಿ ಗ್ರಂಥವಾಗಿದೆ.

ಶಾಸ್ತ್ರಗಳನ್ನು ತ್ರಯೀ, ಆನ್ವೀಕ್ಷಿಕೀ, ವಾರ್ತಾ ಮತ್ತು ದಂಡನೀತಿ ಎಂದು ನಾಲ್ಕಾಗಿ ವಿಭಾಗ ಮಾಡುವ ಪ್ರಾಚೀನ ಸಂಪ್ರದಾಯವನ್ನೇ ಕೌಟಿಲ್ಯನೂ ಅನುಸರಿಸಿದ್ದಾನೆ. ವೇದ ಮತ್ತು ಅದಕ್ಕೆ ಸಂಬಂಧಿಸಿದ ಶಾಸ್ತ್ರಗಳು ತ್ರಯೀ, ಅದು ಧರ್ಮಾಧರ್ಮಗಳ ತಿಳಿವಳಿಕೆಯನ್ನುಂಟುಮಾಡಿ, ವರ್ಣಾಶ್ರಮಧರ್ಮಗಳಿಗನುಗುಣವಾಗಿ ನಡೆಯುವುದರಿಂದ ಉಂಟಾಗುವ ಪ್ರಯೋಜನ, ಅವನ್ನು ಮೀರಿದರೆ ಒದಗುವ ಆಪತ್ತು, ಇವನ್ನು ತಿಳಿಸಿದೆ. ಅನ್ವೀಕ್ಷಿಕೀ ತತ್ತ್ವಶಾಸ್ತ್ರ ಕಾರ್ಯಕಾರಣಗಳ ತಿಳಿವನ್ನು ಬಲಪಡಿಸಿ, ಮನಸ್ಸನ್ನು ಕ್ಲೇಶಗಳಿಗೀಡಾಗದಂತೆ ಹದಗೊಳಿಸುತ್ತದೆ. ಕೃಷಿ, ಪಶುಪಾಲನೆ, ಕೈಗಾರಿಕೆಗಳನ್ನು ತಿಳಿಸುವುದು ವಾರ್ತಾ, ಆಡಳಿತದ ರೀತಿನೀತಿಗಳನ್ನು ತಿಳಿಸುವುದು ದಂಡನೀತಿ ಅಥವಾ ಅರ್ಥಶಾಸ್ತ್ರ.

ಕೌಟಿಲ್ಯನ ಅರ್ಥಶಾಸ್ತ್ರವನ್ನು 15 ಅಧಿಕರಣಗಳಾಗಿ ವಿಭಾಗಿಸಿದೆ. ಒಂದನೆಯ ಅಧಿಕರಣದಲ್ಲಿ ರಾಜಕುಮಾರನ ಪೋಷಣೆ ಮತ್ತು ವಿದ್ಯಾಭ್ಯಾಸಗಳಿಗೆ ಸಂಬಂಧಪಟ್ಟ ವಿಚಾರ ತಿಳಿಸಲಾಗಿದೆ. ರಾಜಕುಮಾರ ವೇದವೇದಾಂಗಗಳಿಂದ ಕೂಡಿದ ಧರ್ಮವನ್ನೂ ಅರ್ಥಶಾಸ್ತ್ರ, ಕೃಷಿ, ಪಶುಪಾಲನೆ, ವಾಣಿಜ್ಯ, ಕೈಗಾರಿಕೆ, ರಾಜನೀತಿ ಮತ್ತು ದಂಡನೀತಿಗಳನ್ನೂ ಅಭ್ಯಸಿಸಬೇಕು. ಅವನ ಮಂತ್ರಿಗಳ ಮತ್ತು ಆಸ್ಥಾನಿಕರ ಬಗ್ಗೆಯೂ ವಿವರಗಳನ್ನು ಕೊಟ್ಟಿದೆ. ಇವುಗಳಲ್ಲದೆ, ಅವನನ್ನು ಕೊಲ್ಲಲೆಳಸುವ, ಅವನ ವಂಶದ ರಾಜಕುಮಾರರಿಂದ ಆರಂಭಿಸಿ ಸಾಮಾನ್ಯ ಪ್ರಜೆಯವರೆಗೆ ಅವನ ರಾಜ್ಯದ ಎಲ್ಲ ಉಚ್ಚ ನೀಚ ವರ್ಗಗಳ ಜನರ ಮೇಲೆ ಭದ್ರವಾದ ಹಿಡಿತವನ್ನಿರಿಸಲು ಸಹಕರಿಸುವ ಗೂಢಚಾರರ ಬಗ್ಗೆಯೂ ತಿಳಿಸಲಾಗಿದೆ.

ಪರರಾಷ್ಟ್ರಗಳಲ್ಲಿರುವ ರಾಯಭಾರಿಗಳು ಅವನ ಪ್ರತಿನಿಧಿಗಳಾಗಿಯೂ ಗೂಢಚಾರರಾಗಿಯೂ ಇರಬೇಕು. ಗೂಢಚಾರರು ದೇಶದಲ್ಲಿ ಏನೆಲ್ಲ ಆಗುತ್ತದೋ ಅದನ್ನೆಲ್ಲ ರಾಜನಿಗೆ ತಿಳಿಸುತ್ತಿರಬೇಕು. ರಾಜನ ಅಂತಃಪುರಕ್ಕೆ ವಿಶೇಷ ಗಮನವೀಯಲಾಗಿದೆ. ಅಲ್ಲಿ ಇವನಿಗೆ ಒದಗಬಹುದಾದ ಅಪಾಯಗಳನ್ನು ಕುರಿತ ಹೆಚ್ಚಿನ ವಿವೇಚನೆಯಿದೆ. ಅಂತಃಪುರದಲ್ಲಿ ಕೊಲೆ ಮಾಡಲ್ಪಟ್ಟ ಪ್ರಸಿದ್ಧ ಅರಸರನ್ನು ಉದಾಹರಣೆಗಾಗಿ ಹೇಳಿದೆ. ಅರಮನೆಯಲ್ಲಿ ಮಾತ್ರವಲ್ಲದೆ, ಬೀದಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿಯೂ ರಾಜ ಕೊಲೆಗೆ ಗುರಿಯಾಗದಂತೆ ಕೈಗೊಳ್ಳಬೇಕಾದ ರಕ್ಷಣೆಯ ಅಗತ್ಯವನ್ನು ವಿವರಿಸಿದೆ. ರಾಜ್ಯದಲ್ಲಿ ಆಡಳಿತದ ಮೇಲೆ ಸಂಪೂರ್ಣ ಹಿಡಿತವನ್ನು ಪರಿಣಾಮಗೊಳಿಸುವ ದೊಡ್ಡ ಪರಿವೀಕ್ಷಕ ದಳದ ಕರ್ತವ್ಯವನ್ನು ಎರಡನೆಯ ಅಧಿಕರಣದಲ್ಲಿ ತಿಳಿಸಿದೆ. ಮೂರನೆಯ ಅಧಿಕರಣದಲ್ಲಿ ಕಾನೂನಿನ ವಿವರಣೆಯುಂಟು. ಪೊಲೀಸ್ ಕಾರ್ಯ ಮತ್ತು ಕಠಿಣಶಿಕ್ಷೆಗಳಿಂದ ದುಷ್ಟರನ್ನು ಅಡಗಿಸುವ ವಿಧಾನ, ವಂಚಕ ವ್ಯಾಪಾರಿಗಳ ಮೋಸದ ತೂಕ ಅಳತೆಗಳ ಮತ್ತು ಕೃತಕವಾಗಿ ವಸ್ತುಗಳ ಬೆಲೆಯನ್ನು ಏರಿಸುವುದರ ವಿರುದ್ಧವಾಗಿ ತೆಗೆದುಕೊಳ್ಳಬೇಕಾದ ಜಾಗ್ರತಾ ಕ್ರಮಗಳು–ಇವನ್ನು ನಾಲ್ಕನೆಯ ಅಧಿಕರಣದಲ್ಲಿ ವಿವರಿಸಿದೆ. ರಾಜ ಮೋಸಗಾರನಾದ ಮಂತ್ರಿಯನ್ನು ನಾಶಮಾಡುವ ಕ್ರಮ, ತೆರಿಗೆಗಳನ್ನು ವಸೂಲು ಮಾಡುವ ಕ್ರಮ, ಕೃಷಿಕರಿಂದ ಮತ್ತು ಕೈಕಸಬುದಾರರಿಂದ ಸಾಮಗ್ರಿಗಳನ್ನು ವಸೂಲು ಮಾಡಿ ಸಂಗ್ರಹಿಸುವುದು, ಗೂಢಚಾರರು ಶ್ರೀಮಂತರನ್ನು ದಾನ ಮಾಡುವಂತೆ ಪ್ರಚೋದಿಸುವುದು ಮತ್ತು ಕೆಟ್ಟ ಶ್ರೀಮಂತರ ಸ್ವತ್ತನ್ನು ರಾಜ್ಯಭಂಡಾರಕ್ಕೆ ಸೇರಿಸುವುದು, ರಾಜಸೇವಕರ ವಾರ್ಷಿಕ ವೇತನಕ್ರಮ–ಮುಂತಾದವನ್ನು ಐದನೆಯ ಅಧಿಕರಣದಲ್ಲಿ ವಿವರಿಸಿದೆ. ಆರನೆಯ ಅಧಿಕರಣದಲ್ಲಿ ರಾಜ, ಮಂತ್ರಿ, ಭೂಮಿ, ಕೋಟೆ, ಕೋಶ, ಸೇನೆ ಮತ್ತು ಮಿತ್ರರ ಬಗ್ಗೆ ವಿವರಗಳೂ ರಾಷ್ಟ್ರಾಂತರ ಸಂಬಂಧದ ವಿವರಣೆಯೂ ಇವೆ. ಶಾಂತಿ, ಯುದ್ಧ ತಾಟಸ್ಥ್ಯ ವಿಜಯಯಾತ್ರೆಗೆ ಸನ್ನಾಹ, ಒಪ್ಪಂದ, ಅನಿಶ್ಚಿತ ವರ್ತನೆಗಳು ಎಂಬ ಆರು ರಾಜಕಾರ್ಯಗಳ ವಿವೇಚನೆಗೆ ಏಳನೆಯ ಅಧಿಕರಣ ಮೀಸಲು. ಜೂಜು, ಬೇಟೆ, ಸ್ತ್ರೀ ಮತ್ತು ಮದ್ಯಗಳಿಗೆ ರಾಜ ಬಲಿ ಬೀಳುವುದರಿಂದ ಉಂಟಾಗಬಹುದಾದ ಅಪಾಯಗಳನ್ನು ಮತ್ತು ಬೆಂಕಿ, ನೀರು ಮತ್ತು ಇತರ ವಿಷಯಗಳು ತರಬಹುದಾದ ತೊಂದರೆಗಳನ್ನು ಎಂಟನೆಯ ಅಧಿಕರಣದಲ್ಲಿ ಕೌಟಿಲ್ಯ ವಿವರಿಸಿದ್ದಾನೆ. ಒಂಬತ್ತು ಮತ್ತು ಹತ್ತನೆಯ ಅಧಿಕರಣಗಳಲ್ಲಿ ಯುದ್ಧದ ವಿಚಾರವಿದೆ. ನೇರವಾದ ಯುದ್ಧವನ್ನು ತಪ್ಪಿಸಲು ಬೇಕಾದಷ್ಟು ಸಂದರ್ಭವನ್ನು ರಾಜನಿಗೊದಗಿಸಲಾಗಿದೆ. ನೇರ ಹೋರಾಟ ನಡೆಯಬೇಕಾದ ಸಂದರ್ಭದಲ್ಲಿ ಸೈನಿಕರನ್ನು ಹುರಿದುಂಬಿಸುವ ರೀತಿಯನ್ನು ಹೇಳಲಾಗಿದೆ. ಜ್ಯೋತಿಷ್ಕರು, ಪುರೋಹಿತರು ಮತ್ತು ಇತರ ರಾಜನಿಷ್ಠರು ಈ ಕೆಲಸದಲ್ಲಿ ರಾಜನಿಗೆ ಸಹಾಯ ಮಾಡಬೇಕು. ಯುದ್ಧದಲ್ಲಿ ಕುಹಕೋಪಾಯವೇ

ಮುಖ್ಯ ಎಂದು ವಿವರಿಸಿದೆ. ಹನ್ನೊಂದನೆಯ ಅಧಿಕರಣದಲ್ಲಿ ಶತ್ರುಸೈನ್ಯದ ಅಧಿಕಾರವರ್ಗದಲ್ಲಿರುವ ಒಗ್ಗಟ್ಟನ್ನು ನಾಶಪಡಿಸಲು ಕಲಹದ ಬೀಜವನ್ನು ರಾಜ ಬಿತ್ತಬೇಕಾದ ವಿಧಾನ ಮತ್ತು ಈ ಕಾರ್ಯಕ್ಕೆ ಸ್ತ್ರೀಯರ ನೆರವು-ಇವನ್ನು ವಿವರಿಸಿದೆ. ಹನ್ನೆರಡನೆಯ ಅಧಿಕರಣದಲ್ಲಿ ಗೂಢಚಾರ, ಗುಪ್ತಸಹಾಯಕ, ಕೊಲೆಗಡುಕ, ಸೆರೆಯಾಳು ಮತ್ತು ಸ್ತ್ರೀಯರ ನೆರವಿನಿಂದ ಒಬ್ಬ ದುರ್ಬಲರಾಜ ತನ್ನ ಬಲವನ್ನು ಹೆಚ್ಚಿಸಿಕೊಳ್ಳಬಹುದಾದ ರೀತಿಯನ್ನೂ ಶತ್ರುರಾಜನನ್ನು ಮೋಸದಿಂದ ಕೊಲ್ಲುವ ವಿಧಾನಗಳನ್ನೂ ವಿವರಿಸಿದೆ. ಹದಿಮೂರನೆಯ ಅಧಿಕರಣದಲ್ಲಿ ರಾಜನ ಪಾಂಡಿತ್ಯ ಮತ್ತು ಅವನ ಗುಣಾತಿಶಯಗಳನ್ನು ಮತ್ತು ದೈವದೊಲುಮೆಯನ್ನು ಪ್ರಚಾರ ಮಾಡಿ, ಶತ್ರುಗಳನ್ನು ಹೆದರಿಸಿಡುವ ಕ್ರಮವನ್ನೂ ಇದಕ್ಕೆ ಗೂಢಚಾರರಿಂದ ಮತ್ತು ಇತರರಿಂದ ಸಹಾಯ ಪಡೆದು ತಮ್ಮ ನೆರವಿಗೆ ಉಪಯೋಗಿಸಿಕೊಳ್ಳುವುದನ್ನೂ ಜನರ ಮೂಢ ನಂಬಿಕೆಗಳು ಮತ್ತು ವಿಶ್ವಾಸವನ್ನು ಬಳಸಿಕೊಳ್ಳುವ ಬಗೆಯನ್ನೂ ವಿವರಿಸಿದೆ. ಒಬ್ಬನನ್ನು ಕೊಲ್ಲಲು, ಕುರುಡು ಮಾಡಲು, ಇಲ್ಲವೆ ಬುದ್ಧಿಭ್ರಮಣೆಗೊಳಿಸಲು ಔಷಧ ಮತ್ತು ಮಂತ್ರಗಳ ಬಳಕೆ, ಬಣ್ಣ ಬದಲಾಯಿಸುವುದು, ಮನುಷ್ಯರು ಮತ್ತು ಪ್ರಾಣಿಗಳು ನಿದ್ದೆಮಾಡುವಂತೆ ಮಾಡುವ ಕ್ರಮ, ಕತ್ತಲೆಯಲ್ಲಿ ನೋಡುವುದು, ಬೆಂಕಿಯಲ್ಲಿ ಅಪಾಯವಾಗದಂತೆ ರಕ್ಷಣೆ-ಇವು ಹದಿನಾಲ್ಕನೆಯ ಅಧಿಕರಣದ ವಿಷಯಗಳು. ಕೊನೆಯದಾದ ಹದಿನೈದನೆಯ ಅಧಿಕರಣದಲ್ಲಿ ಗ್ರಂಥದ ಯೋಜನೆಯನ್ನೂ ವಾದದಲ್ಲಿ ಅನುಸರಿಸಬೇಕಾದ ಮೂವತ್ತೆರಡು ಸೂತ್ರಗಳನ್ನೂ ಉದಾಹರಣೆಗಳೊಡನೆ ವಿವರಿಸಲಾಗಿದೆ.

(ಬಿ.ಎಸ್.ಎಚ್.; ಎ.ವಿ.ವಿ.; ಕೆ.ಕೆ.; ಜಿ.ಎಸ್.ಎಚ್.)

**ಕೌಟ್ಸ್ಕಿ, ಕಾರ್ಲ್ ಯೋಹಾನ್** : 1854-1938. ಸಮಾಜವಾದ ಸಿದ್ಧಾಂತಿ, ಸಮಾಜವಿಜ್ಞಾನಿ, 1854ರ ಅಕ್ಟೋಬರ್ 16ರಂದು ಪ್ರಾಗಿನಲ್ಲಿ ಜನಿಸಿದ. ತಂದೆ ಜೆಕ್; ಚಿತ್ರಕಲಾವಿದ. ತಾಯಿ ಆಸ್ಟ್ರಿಯನ್; ನಟಿ, ಕಾದಂಬರಿಕಾರ್ತಿ. ಕೌಟ್ಸ್ಕಿ ಜೀವಮಾನಪರ್ಯಂತ ಸಮಾಜವಿಜ್ಞಾನಿಯಾಗಿದ್ದ. ಸಮಾಜವಿಜ್ಞಾನ ಅವನಿಗೆ ಸ್ವಭಾವಜನ್ಯವಾಗಿತ್ತಷ್ಟೇ ಅಲ್ಲ, ಅದರಲ್ಲಿ ಆತ ಆಸಕ್ತಿಯನ್ನೂ ಬೆಳೆಸಿಕೊಂಡಿದ್ದ. ಸಮಾಜವಿಜ್ಞಾನವನ್ನು ಅವನು ರಾಜಕೀಯ ಅಧಿಕಾರಕ್ಕಾಗಿ ಬಳಸಿಕೊಳ್ಳಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಆತ ತನ್ನ ಬರೆಹಗಳಿಂದಲೂ ವಿಚಾರಗಳಿಂದಲೂ ತಕ್ಕಮಟ್ಟಿನ ಪ್ರಭಾವ ಗಳಿಸಿದ್ದ. ಕೌಟ್ಸ್ಕಿ ವಿಯನ್ನ ವಿಶ್ವವಿದ್ಯಾಲಯದಲ್ಲಿದ್ದಾಗಲೂ ಪತ್ರಿಕೋದ್ಯಮಿಯಾಗಿದ್ದಾಗಲೂ ಜೆ.ಎಸ್.ಮಿಲ್, ಎಚ್.ಟಿ.ಬಕಲ್ ಮುಂತಾದವರಿಂದ ಪ್ರಭಾವಿತನಾಗಿದ್ದ. ಡಾರ್ವಿನನ ಗ್ರಂಥವಂತೂ ಇವನ ದೃಷ್ಟಿಕೋನವನ್ನೇ ಬದಲಾಯಿಸಿತು. ಪ್ರಕೃತಿವಿಜ್ಞಾನ ಕ್ಷೇತ್ರದಲ್ಲಿ ಹರಿದಿರುವ ಚಿಂತನಮಾರ್ಗದಲ್ಲೇ ಇತಿಹಾಸದ ವಿಕಾಸವನ್ನು ಕುರಿತ ಸಿದ್ಧಾಂತವೊಂದನ್ನು ರೂಪಿಸಲು ಕೌಟ್ಸ್ಕಿ ಶ್ರಮಿಸಿದ. ಜ಼ೂರಿಕಿನಿಂದ ಉಚ್ಚಾಟನೆಗೊಂಡು ಬಂದಿದ್ದ ಕೆಲವು ಜರ್ಮನ್ ಸಮಾಜವಾದಿಗಳೊಂದಿಗೆ ಇವನ ಸಂಪರ್ಕ ಬೆಳೆಯಿತು (1881). ಬ್ಯಾಕೊಫೆನ್, ಮಾರ್ಗನ್ ಮುಂತಾದ ಮಾನವಶಾಸ್ತ್ರಜ್ಞರ ಕೃತಿಗಳನ್ನು ಈತ ಅಭ್ಯಾಸ ಮಾಡಿದ. ಎಡ್ವರ್ಡ್ ಬರ್ನ್‌ಸ್ಟೀನನ ಮಾರ್ಗದರ್ಶನ ಕೌಟ್ಸ್ಕಿಗೆ ಲಭ್ಯವಾಗಿ ಈತ ಮಾರ್ಕ್ಸಿಸ್ಟ್ ಆಗಿ ಪರಿವರ್ತನೆ ಹೊಂದಿದ. 1881ರಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರನ್ನೂ ಕಂಡ. ಮಾರ್ಕ್ಸಿಸಂ ಒಂದು ವಿಚಾರಪಂಥವಾಗಿ ಅಭ್ಯಾಸಯೋಗ್ಯ ವಿಷಯವಾಗುವಂತೆ ತೊಡಗಿಸಿದವನು ಕೌಟ್ಸ್ಕಿ. 1883ರಲ್ಲಿ ಈತ ಆರಂಭಿಸಿದ ಮಾಸಪತ್ರಿಕೆ ಇದಕ್ಕೆ ಸಾಧನವಾಯಿತು. ಈ ಪತ್ರಿಕೆ 1883ರಲ್ಲಿ ವಾರಪತ್ರಿಕೆಯಾಗಿ ಪರಿವರ್ತನೆಗೊಂಡಿತು. 1917ರ ವರೆಗೂ ಕೌಟ್ಸ್ಕಿಯ ಸಂಪಾದಕತ್ವದಲ್ಲಿ ಮುಂದುವರಿದ ಈ ಪತ್ರಿಕೆಯಲ್ಲಿ ವಿಶ್ವದ ಅನೇಕ ಭಾಗಗಳಿದ್ದ ಸಮಾಜವಾದಿ ಚಿಂತಕರ ಮತ್ತು ಇವನವೇ ಆದ ಲೇಖನಗಳು ಪ್ರಕಟವಾದುವು. 1885ರಿಂದ 1890ರ ತನಕ ಈತ ಲಂಡನಿನಲ್ಲಿ ಎಂಗೆಲ್ಸನ ಸಹಯೋಗದಲ್ಲಿ ಕೆಲಸ ಮಾಡಿದ. ಮಾರ್ಕ್ಸ್‌ವಾದದ ಆರಂಭಕಾಲದ ಪ್ರಚಾರಕ್ಕೆ ಕೌಟ್ಸ್ಕಿ ಬರೆದ (1887) ಒಂದು ಗ್ರಂಥ (ಎಕನಾಮಿಕ್ಸ್ ಡಾಕ್ಟ್ರಿನ್ಸ್ ಆಫ್ ಕಾರ್ಲ್ ಮಾರ್ಕ್ಸ್) ಬಹುಮಟ್ಟಿಗೆ ಕಾರಣ. ಈ ಗ್ರಂಥದ ಜರ್ಮನ್ ಮತ್ತು ವಿದೇಶೀ ಆವೃತ್ತಿಗಳು ಹಲವು ಪ್ರಕಟವಾದುವು. ಇತಿಹಾಸವನ್ನು ಕುರಿತ ಕೆಲವು ಸ್ವೋಪಜ್ಞ ಅಧ್ಯಯನಗಳಿಗೆ ಈತ ಮಾರ್ಕ್ಸಿಯನ್ ವಿಧಾನವನ್ನೇ ಪ್ರಯೋಗ ಮಾಡಿದ. ಆಧುನಿಕ ಸಮಾಜವಾದದ ಪ್ರಾಚೀನ ಆಚಾರ್ಯರ ವಿಚಾರವಾಗಿಯೂ ಫ್ರೆಂಚ್ ಕ್ರಾಂತಿಯ ಕಾಲದಲ್ಲಿಯ ಸಂಕೀರ್ಣ ವರ್ಗಘರ್ಷಣೆಗಳನ್ನು ಕುರಿತೂ ಕೌಟ್ಸ್ಕಿ ಬರೆದ ಗ್ರಂಥಗಳು ಈ ದೃಷ್ಟಿಯವು. ಜರ್ಮನ್ ಸಮಾಜವಾದಿ ಪ್ರಜಾತಾಂತ್ರಿಕ ಪಕ್ಷದ ಕಾರ್ಯಕ್ರಮದ ಸೈದ್ಧಾಂತಿಕ ಭಾಗವನ್ನು ಬರೆದವನು ಕೌಟ್ಸ್ಕಿ. ಇದೇ ಮಾರ್ಕ್ಸಿಸ್ಟ್ ಪಕ್ಷದ ಪ್ರಪ್ರಥಮ ಕಾರ್ಯಕ್ರಮ. ಈ ಕೆಲಸದಿಂದಾಗಿ ಸಮಾಜವಾದಿ ಅಂತಾರಾಷ್ಟ್ರೀಯದಲ್ಲಿ ಎಂಗೆಲ್ಸನ ಅನಂತರ ಈತನೇ ದೊಡ್ಡ ಮಾರ್ಕ್ಸಿಸ್ಟ್ ಸಿದ್ಧಾಂತಿಯೆಂಬುದು ಸ್ಥಿರವಾಯಿತು.

1897ರಲ್ಲಿ ಬರ್ಲಿನಿನಲ್ಲಿ ನೆಲೆಸಿದ ಕೌಟ್ಸ್ಕಿ ಅಲ್ಲಿಯೂ ತನ್ನ ಕಾರ್ಯಕ್ರಮವನ್ನು ಮುಂದುವರಿಸಿದ. ಸಾಮ್ರಾಜ್ಯವಾದದ ಸಿದ್ಧಾಂತಗಳನ್ನು ರೂಪಿಸಿದ ಪ್ರಥಮ ಮಾರ್ಕ್ಸಿಸ್ಟರಲ್ಲಿ ಕೌಟ್ಸ್ಕಿಯೂ ಒಬ್ಬ. ಆದರೆ ಸಾಮ್ರಾಜ್ಯವಾದಿ ವ್ಯವಸ್ಥೆ ಕೈಗಾರಿಕಾ ಬಂಡವಾಳವಾದದ ಪರಿಣಾಮವೆಂಬುದಕ್ಕಿಂತ, ಅದಕ್ಕೂ ಪೂರ್ವಕಾಲದಲ್ಲಿದ್ದು ಆಧುನಿಕ ಸಮಾಜದಲ್ಲೂ ಪ್ರಬಲವಾಗಿ ಉಳಿದುಕೊಂಡಿರುವ ವರ್ಗಗಳ ಮುಖ್ಯವಾಗಿ ಶ್ರೀಮಂತ ವರ್ಗದ ಫಲವೆಂದೇ ಈತ ವಾದಿಸಿದ.

ಇವನಿಗೆ ಮಾರ್ಕ್ಸ್‌ವಾದದ ಗುರುವಾಗಿದ್ದ ಬರ್ನ್‌ಸ್ಟೀನನೇ ಜರ್ಮನ್ ಸಮಾಜವಾದಿ ಪ್ರಜಾತಂತ್ರಾತ್ಮಕ ಪಕ್ಷದ ಕಾರ್ಯಕ್ರಮವನ್ನು ಟೀಕಿಸಿದಾಗ ಕೌಟ್ಸ್ಕಿ ಅದನ್ನು ಸಮರ್ಥಿಸಿದ. ಹೀಗೆ ಈತ ಸಂಪ್ರದಾಯನಿಷ್ಠ ಮಾರ್ಕ್ಸ್‌ವಾದದ ಪ್ರತಿಪಾದಕನಾದ. ಕ್ರಾಂತಿಕಾರಿ ಗುರಿ, ಸುಧಾರಣವಾದಿ ವಿಧಾನ-ಇವು ಕೌಟ್ಸ್ಕಿಯ ಸೂತ್ರ. ಯುರೋಪಿನ ವಿವಿಧ ರಾಜ್ಯಗಳಲ್ಲಿ ಪ್ರಬಲವಾಗಿದ್ದ ನಿರಂಕುಶವಾದಿ ಸೈನಿಕ ಪ್ರಭುತ್ವಗಳ ವಿರುದ್ಧ ತೀವ್ರ ಸೆಣಸಾಟದಲ್ಲಿ ನಿರತವಾಗಿದ್ದ ಸಮಾಜವಾದಿ ಪಕ್ಷಗಳನ್ನೆಲ್ಲ ಒಂದುಗೂಡಿಸಲು ಈ ಬಗೆಯ ಕಾರ್ಯಕ್ರಮ ಸಾಧಕವಾಗುವುದೆಂಬುದು ಕೌಟ್ಸ್ಕಿಯ ನಂಬಿಕೆಯಾಗಿತ್ತು. ಪರಿಷ್ಕರಣವಾದಿಗಳಂತೆ ಕೌಟ್ಸ್ಕಿಯೂ ಸಂಸದೀಯ ಪ್ರಜಾತಂತ್ರದಿಂದ ಮಾತ್ರವೇ ಸಮಾಜವಾದದ ಸ್ಥಾಪನೆ ಸಾಧ್ಯವೆಂದು ನಂಬಿದ್ದ. ಆದರೆ ಜರ್ಮನ್ ಸಾಮ್ರಾಜ್ಯದಲ್ಲಿ ಶಾಂತಿಯುತವಾಗಿ ಪ್ರಜಾಪ್ರಭುತ್ವ ವಿಕಾಸಗೊಳ್ಳಲಾರದೆಂದೇ ಇವನು ಬಗೆದಿದ್ದ. ಆದ್ದರಿಂದ ಅಲ್ಲಿ ಪ್ರತಿಭಟನಾ ಮಾರ್ಗದಿಂದ ಅದನ್ನು ಸ್ಥಾಪಿಸಬೇಕೆಂಬುದು ಇವನ ವಾದ.

ಕೌಟ್ಸ್ಕಿ ರಾಜಕೀಯವಾಗಿ ಈ ವಾದ-ಪ್ರತಿವಾದಗಳಲ್ಲಿ ನಿರತನಾಗಿದ್ದಾಗಲೇ ಕಾರ್ಲ್ ಮಾರ್ಕ್ಸ್‌ನ ಕೈಬರೆಹದ ಟಿಪ್ಪಣಿಗಳನ್ನು ಸಂಪಾದಿಸಿ ಕ್ಯಾಪಿಟಲ್ ಗ್ರಂಥದ ನಾಲ್ಕನೆಯ ಸಂಪುಟವನ್ನು ಪ್ರಕಟಿಸಿದ. ರೋಸ ಲಕ್ಸೆಂಬರ್ಗ್ ನೇತೃತ್ವದಲ್ಲಿ ಕ್ರಾಂತಿಕಾರಿ ಸಾಮೂಹಿಕ ಮುಷ್ಕರಗಳನ್ನು ಸಮರ್ಥಿಸುತ್ತಿದ್ದವರ ಧೋರಣೆ ಅನರ್ಥಕಾರಕವೆಂಬುದು ಕೌಟ್ಸ್ಕಿಯ ಅಭಿಮತವಾಗಿತ್ತು. ಸಮಾಜವಾದಿ ಪ್ರಜಾತಂತ್ರಾತ್ಮಕ ಪಕ್ಷಕ್ಕೂ ಕಮ್ಯೂನಿಸ್ಟರಿಗೂ ಘರ್ಷಣೆಗೆ ಈ ಧೋರಣೆಯೇ ಕಾರಣವಾಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಸಮಾಜವಾದಿ ಪ್ರಜಾತಂತ್ರಾತ್ಮಕ ಪಕ್ಷ ಜರ್ಮನ್ ಸರ್ಕಾರಕ್ಕೆ ಬಹುಮತದ ಬೆಂಬಲ ನೀಡಿದ್ದನ್ನು ಕೌಟ್ಸ್ಕಿ ವಿರೋಧಿಸಿದ. ಆ ಪಕ್ಷ ಒಡೆಯದಂತೆ ಸಾಧ್ಯವಾದಷ್ಟೂ ಪ್ರಯತ್ನಿಸಿದ. ಇವನು ಸ್ವತಂತ್ರ ಸಮಾಜವಾದಿ ಪ್ರಜಾತಂತ್ರಾತ್ಮಕ ಪಕ್ಷವನ್ನು ಸೇರಿದ. ಯುದ್ಧದ ಕೊನೆಯಲ್ಲಿ ಸಂಭವಿಸಿದ ಜರ್ಮನ್ ಕ್ರಾಂತಿಯ ಅನಂತರ ಸ್ಥಾಪಿತವಾದ ಸರ್ಕಾರದಲ್ಲಿ ಇವನು ಸ್ವಲ್ಪಕಾಲ ವಿದೇಶಾಂಗ ಖಾತೆಯ ಕಾರ್ಯದರ್ಶಿಯಾಗಿದ್ದ.

ರಷ್ಯಾದಲ್ಲಿ ಬಾಲ್ಷೆವಿಕ್ ಕ್ರಾಂತಿ ಸಂಭವಿಸಿತು. ಹಿಂದುಳಿದ ಸಮಾಜದಲ್ಲಿ, ಅಲ್ಪಸಂಖ್ಯಾತ ಪಕ್ಷವೊಂದು ಹಿಂಸಾತ್ಮಕ ಮಾರ್ಗದಿಂದ ಸಮಾಜವಾದದ ಸ್ಥಾಪನೆ ಮಾಡುವ ಪ್ರಯತ್ನಕ್ಕೆ ಕೌಟ್ಸ್ಕಿಯ ವಿರೋಧವಿತ್ತು. ಇದು ಮಾರ್ಕ್ಸಿಸಂಗೆ, ಪ್ರಜಾಪ್ರಭುತ್ವಕ್ಕೆ ಮಾಡಿದ ದ್ರೋಹ-ಎಂದು ಈತ ವಾದಿಸಿದ. ಇದು ಸರ್ವಾಧಿಕಾರಕ್ಕೆ ಎಡೆಮಾಡಿಕೊಟ್ಟು ಅಂತಿಮವಾಗಿ ಕುಸಿದುಬೀಳುವುದೆಂಬುದು ಇವನ ಭಾವನೆ. ಕೌಟ್ಸ್ಕಿಯನ್ನು ತತ್ತ್ವಭ್ರಷ್ಟನೆಂದು ಲೆನಿನ್, ಟ್ರಾಟ್ಸ್ಕಿ ಕರೆದರು. ಅದಕ್ಕೆ ಇವನು ಟೆರರಿಸಂ ಅಂಡ್ ಕಮ್ಯೂನಿಸಂ ಎಂಬ ಪುಸ್ತಕದಲ್ಲಿ (1919) ಉತ್ತರ ನೀಡಿದ.

ತನ್ನ 70ನೆಯ ವಯಸ್ಸಿನಲ್ಲಿ ಕೌಟ್ಸ್ಕಿ ವಿಯನ್ನಾಕ್ಕೆ ಹಿಂದಿರುಗಿ ಸಂಶೋಧನೆಯಲ್ಲಿ ನಿರತನಾದ. ಸಮಾಜವಿಜ್ಞಾನ ಮತ್ತು ಪ್ರಕೃತಿವಿಜ್ಞಾನಗಳ ನಡುವಣ ಅಡ್ಡಗೋಡೆಯ ಮೇಲಣ ವಿಷಯಗಳಾದ ಮಾನವಶಾಸ್ತ್ರ, ಜೀವಪರಿಸ್ಥಿತಿಶಾಸ್ತ್ರ, ಜನಾಂಗ ವಿವರಣಶಾಸ್ತ್ರ-ಇವು ಬಲು ಹಿಂದಿನಿಂದಲೂ ಕೌಟ್ಸ್ಕಿಯನ್ನು ಆಕರ್ಷಿಸಿದ್ದುವು. ಆ ಎರಡೂ ಬಗೆಯ ಕ್ಷೇತ್ರಗಳಿಗೆ ಸಮಾನವಾಗಿ ಅನ್ವಯವಾಗುವ ಪರಿಕಲ್ಪನೆಗಳನ್ನು ರೂಪಿಸಲು ಕೌಟ್ಸ್ಕಿ ಯತ್ನಿಸಿದ. 1927ರಲ್ಲಿ ಇತಿಹಾಸದ ದ್ರವ್ಯವಾಸ್ತವತಾವಾದಿ ಪರಿಕಲ್ಪನೆಯನ್ನು ಕುರಿತು ಬರೆದ ಗ್ರಂಥದಲ್ಲಿ ಸಮಾಜ ವಿಜ್ಞಾನ ಮತ್ತು ಪ್ರಕೃತಿ ವಿಜ್ಞಾನ ಕುರಿತ ತನ್ನ ಭಾವನೆಗಳನ್ನು ಈತ ಸ್ಪಷ್ಟೀಕರಿಸಿದ್ದಾನೆ. ಈತ ಹೆಗೆಲನ ಮೂಲ ಸಂಕಲ್ಪವಾದಿ ತರ್ಕಮಾರ್ಗವನ್ನು ತಳ್ಳಿಹಾಕಿ ಡಾರ್ವಿನನ ತರ್ಕಮಾರ್ಗದಲ್ಲೇ ಇತಿಹಾಸದ ಬೆಳವಣಿಗೆಯನ್ನು ಗುರುತಿಸಿದ. ಜೈವಿಕ ಪ್ರಕೃತಿಯಲ್ಲಿ ನಿಧಾನವಾಗಿ ವ್ಯತ್ಯಾಸಗೊಳ್ಳುವ ಪರಿಸರಕ್ಕೆ ತಕ್ಕಂತೆ ಜೀವಿಗಳು ಹೊಂದಿಕೊಳ್ಳುತ್ತವೆ. ಸಮಾಜದಲ್ಲಿ ಮಾನವ ತನ್ನ ಪರಿಸರವನ್ನು ತಾನೆ ಬದಲಾಯಿಸಿ ಹೊಂದಿಸುತ್ತಾನೆ. ಇದರಿಂದ ಮತ್ತೆ ಬದಲಾವಣೆ, ಮತ್ತೆ ಹೊಂದಾವಣೆ. ಹೀಗೆ ಸಂಭವಿಸುವ ತಾಂತ್ರಿಕ ಸಾಮಾಜಿಕ ಬದಲಾವಣೆ-ಹೊಂದಾವಣೆಗಳ ಕೊನೆಯಿಲ್ಲದ ಪ್ರಕ್ರಿಯೆಯೇ ಇತಿಹಾಸವೆನಿಸುತ್ತದೆ ಎಂಬುದು ಇವನ ಸೂತ್ರ.

ಜರ್ಮನಿ ಆಸ್ಟ್ರಿಯಾಗಳಲ್ಲಿ ಫ್ಯಾಸಿಸಂ ತಲೆಯೆತ್ತಿದಾಗ ಆ ಬಗ್ಗೆ ಇವನು ಸಾಕಷ್ಟು ಬರೆದ. ಇನ್ನೂ ಕೆಲವು ಕೃತಿಗಳು ಇವನ ಲೇಖನಿಯಿಂದ ಹೊರಬಿದ್ದುವು. ದೀರ್ಘವಾದ ಆತ್ಮಚರಿತ್ರೆ ಬರೆಯುವ ಕಾರ್ಯದಲ್ಲೂ ಇವನು ತೊಡಗಿದ್ದ. ಅದರ ಆರಂಭದ ಭಾಗವನ್ನು ಮುಗಿಸುವ ವೇಳೆಗೆ ನಾಟ್ಸಿ ಆಕ್ರಮಣದಿಂದಾಗಿ ಕೌಟ್ಸ್ಕಿ ಆಮ್‌ಸ್ಟರ್‌ಡ್ಯಾಂಗೆ ಓಡಿಹೋದ (ಮಾರ್ಚ್ 1938). ಅಲ್ಲೇ 1938ರ ಅಕ್ಟೋಬರ್ 17ರಲ್ಲಿ ನಿಧನನಾದ.

(ಎಸ್.ಎನ್.ಎಲ್.; ವಿ.ಆರ್.ಎಚ್.)

**ಕೌತ್ಸ :** ವಿಶ್ವಾಮಿತ್ರನ ಶಿಷ್ಯ. ದುರ್ವಾಸಮುನಿಯನ್ನು ಸತ್ಕರಿಸುವ ಸಮಯದಲ್ಲಿ ತನಗೆ ನೆರವಾದ ಕೌತ್ಸನ ನಿಷ್ಠೆಯನ್ನು ಮೆಚ್ಚಿದ ವಿಶ್ವಾಮಿತ್ರ ಸಕಲ ವಿದ್ಯೆಗಳೂ ಲಭಿಸಲಿ ಎಂದು ಅನುಗ್ರಹಿಸಿದ. ತಾನು ಕಲಿತ 14 ವಿದ್ಯೆಗಳಿಗೆ ಪ್ರತಿಯಾಗಿ ಗುರುದಕ್ಷಿಣೆ ಏನನ್ನು ಕೊಡಲಿ ಎಂದು ಕೌತ್ಸ ಮತ್ತೆ ಮತ್ತೆ ಕೇಳಿದಾಗ ಕುಪಿತನಾದ ವಿಶ್ವಾಮಿತ್ರ ಒಂದೊಂದು ವಿದ್ಯೆಗೆ ಒಂದೊಂದು ಕೋಟಿಯಂತೆ 14 ಕೋಟಿ ಹೊನ್ನನ್ನು ಕೊಡುವಂತೆ ಆಜ್ಞಾಪಿಸಿದ. ಕೌತ್ಸನಾದರೋ ಸೂರ್ಯವಂಶದ ರಘುಮಹಾರಾಜನಿಂದ ಅಷ್ಟೂ ಹಣವನ್ನು ಪಡೆದು ಗುರುವಿಗೆ ಸಮರ್ಪಿಸಿದ. ಈ ವಿಷಯ ಸ್ಕಂದಪುರಾಣದಲ್ಲಿದೆ. ಕಾಳಿದಾಸನ ರಘುವಂಶದಲ್ಲಿ ಈ ಕಥೆ ಬರುತ್ತದಾದರೂ ಅಲ್ಲಿ ಕೌತ್ಸ ವರತಂತುವಿನ ಶಿಷ್ಯನೆನ್ನಲಾಗಿದೆ. (ಕೆ.ಎಸ್.ವಿ.)

**ಕೌಪರ್, ವಿಲಿಯಂ :** 1731–1800. ಆಂಗ್ಲ ಕವಿ. ಪಾದ್ರಿಯ ಮಗ. ಹರ್ಟ್‌ಫರ್ಡ್ ಷೈರ್‌ನ ಬರ್ಕ್‌ಹ್ಯಾಂಸ್ಟೆಡ್‌ನಲ್ಲಿ ಹುಟ್ಟಿದ. ತಂದೆ ಎರಡನೆಯ ಜಾರ್ಜ್‌ನ ಗುರು. ಈತನ ತಾತ ನ್ಯಾಯಾಧೀಶ. ಆರನೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಈತ ತನ್ನ ಸಹಪಾಠಿಗಳ ಕುಚೋದ್ಯ ಹಾಗೂ ದುಂಡಾವರ್ತನೆಗೆ ತುತ್ತಾಗಿ ಧೈರ್ಯಗುಂದಿದ ಧೃತಿಗೆಟ್ಟು ಒಮ್ಮೆ ಆತ್ಮಹತ್ಯೆಗೂ ತೊಡಗಿದ್ದ. ಅನಂತರ ಈತನನ್ನು ವೆಸ್ಟ್‌ಮಿನ್‌ಸ್ಟರ್ ಶಾಲೆಗೆ ಕಳುಹಿಸಲಾಯಿತು. ಅಲ್ಲಿ ವಾರನ್ ಹೇಸ್ಟಿಂಗ್ಸ್ ಮತ್ತು ಪ್ರಸಿದ್ಧ ಕವಿ ಚಾರ್ಲ್ಸ್ ಚರ್ಚಿಲ್ ಈತನ ಸಹಪಾಠಿಗಳಾದರು. ಮನೆತನಕ್ಕೆ ಬಂದ ನ್ಯಾಯಶಾಸ್ತ್ರದ ಅಭ್ಯಾಸದ ಕಡೆ ಈತನ ಒಲವು ಹರಿಯಿತು. ಹದಿನೆಂಟನೆಯ ವಯಸ್ಸಿನಲ್ಲಿ ಸಲಹೆ ವಕೀಲನೊಬ್ಬನಲ್ಲಿ ಕೆಲಸಮಾಡಿ 1754ರಲ್ಲಿ ಬಾರ್ ಸೇರಿದ. ಈ ಅವಧಿ ಈತನ ಜೀವಮಾನದಲ್ಲಿ ಅತ್ಯಂತ ಸುಖದ ದಿನಗಳು ಎನ್ನಬಹುದು. ಅದೇ ಸಮಯದಲ್ಲಿ ತನ್ನ ಸೋದರಮಾವನ ಮಗಳೊಂದಿಗೆ ಪ್ರೇಮ ಬೆಳೆಸಿ ಮದುವೆಯಾಗಲು ಸಿದ್ಧನಾದ. ಕೌಪರ್‌ನಲ್ಲಿ ವಾಸಿಯಾಗಲಾರದಂಥ ರೋಗವಿರುವುದನ್ನು ಗಮನಿಸಿದ ಇವನ ತಂದೆ ಈ ಮದುವೆಗೆ ಸಮ್ಮತಿಸಲಿಲ್ಲ. ಅನಂತರ ಒಂದೆರಡು ಕಡೆ ನೌಕರಿ ಹಿಡಿದನಾದರೂ ಬುದ್ಧಿಸ್ವಾಸ್ಥ್ಯ ತಪ್ಪಿ ಹುಚ್ಚಾಸ್ಪತ್ರೆಗೆ ದಾಖಲಾದ. ಅಲ್ಲಿ ಒಂದು ವರ್ಷವಿದ್ದ. ಆಸ್ಪತ್ರೆಯಿಂದ ಹೊರಬಂದ ಮೇಲೆ ಕೆಲಸವಿಲ್ಲದೆ ಓಡಾಡಿ ತಂದೆಯ ಆಸ್ತಿಯಿಂದ ಬರುತ್ತಿದ್ದ ಅಲ್ಪಸ್ವಲ್ಪ ಹಣ, ಸಾಲದ್ದಕ್ಕೆ ಸ್ನೇಹಿತರಿಂದ ಒದಗುತ್ತಿದ್ದ ಸಹಾಯಗಳಿಂದ ಜೀವನವನ್ನು ಮುಂದುವರಿಸಿದ. ಅನಂತರ ಹಂಟಿಂಗ್‌ಡನ್ನಿಗೆ ತೆರಳಿ ಅನ್‌ವಿನ್ನನ ಸ್ನೇಹ ಬೆಳೆಸಿ ಆತನ ಮನೆಯಲ್ಲಿ ಊಟಮಾಡಿಕೊಂಡಿದ್ದ. ಅಪಘಾತದಲ್ಲಿ ಅನ್‌ವಿನ್ ಸತ್ತಮೇಲೆ ಆತನ ಪತ್ನಿಯೊಡನೆ ಅಲ್ಲಿಗೆ ಬಂದ. ಅಲ್ಲಿ ರೆವರೆಂಡ್ ಜಾನ್ ನ್ಯೂಟನ್ನನ ಸ್ನೇಹ ಬೆಳೆಸಿದ. ಇವರಿಬ್ಬರೂ ಸೇರಿ ಆಲ್ನೆ ಹಿಮ್ಸ್ ಪ್ರಕಟಿಸಿದರು. ಅದರಲ್ಲಿ 67 ಗೀತೆಗಳನ್ನು ಕೌಪರ್ ರಚಿಸಿದ್ದ. ಅನಂತರ ಮೇರಿ ಅನ್‌ವಿನ್ನಳೊಂದಿಗೆ ವಿವಾಹವಾಗಲು ನಿಶ್ಚಯಿಸಿದ. ಆದರೆ ಮತ್ತೊಮ್ಮೆ ಬುದ್ಧಿಸ್ವಾಸ್ಥ್ಯ ಕೆಟ್ಟಿದ್ದರಿಂದ ಮದುವೆ ಪ್ರಸ್ತಾಪ ಬಿಟ್ಟು ಆಸ್ಪತ್ರೆಗೆ ಸೇರಿದ. ಅನ್‌ವಿನ್ನಳ ಸಲಹೆಯಂತೆ ದಿ ಪ್ರೋಗ್ರೆಸ್ ಆಫ್ ಎರರ್, ಟ್ರೂತ್, ಟೇಬಲ್ ಟಾಕ್, ಎಕ್ಸ್‌ಪಾಸ್ಟುಲೇಷನ್, ಹೋಪ್, ಚಾರಿಟಿ, ಕಾನ್ವರ್ಸೇಷನ್, ರಿಟೈರ್‌ಮೆಂಟ್ ಎಂಬ ಎಂಟು ವಿಬಂಡನೆಗಳನ್ನು ಒಂದೇ ಸಂಪುಟದಲ್ಲಿ ಸೇರಿಸಿ ಪ್ರಕಟಿಸಲಾಯಿತು (1782). ಈ ಪುಸ್ತಕ ಕೌಪರ್‌ಗೆ ಹೆಚ್ಚಿನ ಖ್ಯಾತಿ ತಂದಿತು. ಇದರಲ್ಲಿನ ಭಾಷೆ ಮತ್ತು ವಸ್ತುವಿನ ಹೊಸತನವನ್ನು ಜನತೆ ಸ್ವಾಗತಿಸಿತು. ಕೌಪರನ ಆರೋಗ್ಯವೂ ಸುಧಾರಿಸತೊಡಗಿತು. ದಿ ಟಾಸ್ಕ್ (1785) ಅದು ಪುಸ್ತಕಗಳಲ್ಲಿ ಹೊರಬಂದಿತು. 1784ರಲ್ಲಿಯೇ ಆರಂಭಿಸಿದ ಹೋಮರನ ಅನುವಾದ 1791ರಲ್ಲಿ ಹೊರಬಂದಿತಾದರೂ ಜನತೆ ಅದನ್ನು ಅಷ್ಟಾಗಿ ಸ್ವಾಗತಿಸಲಿಲ್ಲ. ಶ್ರೀಮತಿ ಅನ್‌ವಿನ್ನಳು 1796ರಲ್ಲಿ ನಿಧನಳಾದಳು. ಈಕೆ ಕಾಲವಾದ ಮೇಲೆ ದಿಕ್ಕುಗೆಟ್ಟಂತಾದ ಕೌಪರ್ 1800ರಲ್ಲಿ ನಿಧನನಾದ.

ಈತನ ಕವನಗಳಲ್ಲಿ ಸರಳವಾದ, ನೇರವಾದ, ಭಾವ ಮತ್ತು ಭಾಷೆ, ಅತಿರೇಕವಿಲ್ಲದ ಬರೆಹ, ವೈಚಾರಿಕತೆ, ವಿಡಂಬನೆ ಪ್ರಧಾನವಾಗಿವೆ. ಈತನಿಗೆ ಪ್ರಕೃತಿಯನ್ನು ಕುರಿತು ನವೀನವೂ ನಿಷ್ಕಪಟವೂ ಆದ ದೃಷ್ಟಿಯಿತ್ತು. ಆ ಕಾಲಕ್ಕೆ ಅಭಿಜಾತ ಯುಗದ ವಿರುದ್ಧ ಹೋರಾಟ ಆರಂಭವಾಗಿ ರಮ್ಯಯುಗ ಆರಂಭವಾಗಿತ್ತು. ಈತನ ಪದ್ಯಗಳಲ್ಲಿ ಹೊಸಯುಗದ ಸ್ಪಷ್ಟ ಸೂಚನೆಯಿದೆ. ಈತನ ಪದ್ಯಗಳು ಅಭಿಜಾತ ಪಂಥದ ಪೋಪನ ಸಾಹಿತ್ಯಕ್ಕೂ ಪ್ರಕೃತಿಯನ್ನು ಪ್ರೀತಿಸಿದ ಬರ್ನ್ಸ್, ಕ್ರ್ಯಾಬ್, ವರ್ಡ್ಸ್‌ವರ್ತ್ ಇವರ ಸಾಹಿತ್ಯಕ್ಕೂ ಕೊಂಡಿ ಹಾಕಿದಂತಿದೆ.

ಈತನ ಅನೇಕ ಪತ್ರಗಳ ಬಗ್ಗೆ ವಿಮರ್ಶಕರ ಹಾಗೂ ಸಹೃದಯರ ಪ್ರಶಂಸೆ ಇದೆ. (ಎಸ್.ಎಸ್.ಎಲ್.)

**ಕೌಮಾರ್ಯದ ಶಿಕ್ಷಣ :** ಬಾಲ್ಯಾವಸ್ಥೆಯ ಅನಂತರ ಆರಂಭವಾಗಿ ಪ್ರೌಢವಯಸ್ಸು ತಲಪುವ ತನಕ ಅವನ ದೈಹಿಕ, ಮಾನಸಿಕ, ನೈತಿಕ ಮತ್ತು ಸಾಮಾಜಿಕ ಬೆಳೆವಣಿಗೆಗೆ ನೆರವಾಗುವಂತೆ ರೂಪಿಸಿರುವ ಶೈಕ್ಷಣಿಕ ಕಾರ್ಯಕ್ರಮ. ಇದು ಮಕ್ಕಳ ಶಿಕ್ಷಣಕ್ಕೂ ವಯಸ್ಕರ ಶಿಕ್ಷಣಕ್ಕೂ ಮಧ್ಯದ ಅಂತಸ್ತಿನದಾಗಿದ್ದು, ಪ್ರೌಢಶಾಲೆ ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಣಗಳನ್ನು ಒಳಗೊಂಡಿದೆ.

ಕೌಮಾರ್ಯ 13–14ನೆಯ ವಯಸ್ಸಿನಲ್ಲಿ ಆರಂಭವಾಗಿ 21ನೆಯ ವಯಸ್ಸಿನವರೆಗೆ ಮುಂದುವರಿಯುತ್ತದೆ. ಹರೆಯದ ಲಕ್ಷಣಗಳಿಂದ ಆರಂಭವಾಗುವ ಜೀವನದ ಈ ಹಂತದಲ್ಲಿ ಬಾಲಕ–ಬಾಲಕಿಯರಲ್ಲಿ ಗೌಣವಾಗಿ ಲೈಂಗಿಕ ಲಕ್ಷಣಗಳು ಉದ್ಭವಿಸುವುದರ ಜೊತೆಗೆ ಸಂತಾನ ಶಕ್ತಿಯೂ ಮೂಡುತ್ತಿರುತ್ತದೆ. ಬಾಲ್ಯ ಮತ್ತು ವಯಸ್ಕ ಜೀವನದಲ್ಲಿ ಮಾನಸಿಕ, ಸಾಮಾಜಿಕ ಮತ್ತು ನೈತಿಕ ಲಕ್ಷಣಗಳು ಅವರಲ್ಲಾಗ ಕಂಡುಬರುತ್ತದೆ. ಹರೆಯದ ಈ ಅರುಣೋದಯದಲ್ಲಿ ಸಮಾಜ ಅವರಿಗೆ ವಯಸ್ಕರ ಪೂರ್ಣ ಹೊಣೆಗಾರಿಕೆಯನ್ನಾಗಲಿ, ಪಾತ್ರವನ್ನಾಗಲಿ ವಹಿಸಿಕೊಡುವುದಿಲ್ಲ. ಆದರೆ ಮಕ್ಕಳಾದರೋ ಸಮಾಜದ ಆದರ್ಶ ಮೌಲ್ಯಾದಿಗಳನ್ನು ಅರಿತು ಅವುಗಳಿಗೊಪ್ಪುವಂತೆ ನಡೆದುಕೊಂಡು ಸಮಾಜದ ಮೆಚ್ಚುಗೆ ಪುರಸ್ಕಾರಗಳನ್ನು ಗಳಿಸಿ ತಾವು ಸಮಾಜದ ಪೂರ್ಣ ವ್ಯಕ್ತಿಗಳಾಗಿ ಬಾಳುವ ಉತ್ಕಟಾಕಾಂಕ್ಷೆಯನ್ನು ಪ್ರದರ್ಶಿಸುತ್ತಿರುತ್ತಾರೆ. ಕೆಲವರು ಕೌಮಾರ್ಯದಿಂದ ವಯಸ್ಕಜೀವನದ ಕಡೆಗೆ ಸುಗಮವಾಗಿ ಮುಂದುವರಿಯುತ್ತಾರೆ; ಮತ್ತೆ ಕೆಲವರು ಆ ಕಾರ್ಯದಲ್ಲಿ ಭಾವಾತ್ಮಕವಾದ ತೊಡಕುಗಳನ್ನು ಅನುಭವಿಸುತ್ತಾರೆ. ಮೇಲಿನ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅವರ ಶೈಕ್ಷಣಿಕ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ. ಹಾಗೂ ಪ್ರೌಢಶಾಲೆಯ ಮೊದಲ ತರಗತಿಯಿಂದ ಆರಂಭವಾಗುವ ಅವರ ಶಿಕ್ಷಣದಲ್ಲಿ ಆದರ್ಶಗಳ ಮೇಲ್ಪಂಕ್ತಿ, ವೈಯಕ್ತಿಕ ಗಮನ ಮತ್ತು ಮಾರ್ಗದರ್ಶನ ಮುಖ್ಯ ಅಂಶಗಳಾಗಿರುತ್ತವೆ.

ಕೌಮಾರ್ಯದ ಆರಂಭಕಾಲ ಬೇರೆಬೇರೆ ಮಕ್ಕಳಲ್ಲಿ ಹವಾಮಾನವನ್ನು ಅನುವಂಶೀಯತೆಗಳನ್ನು ಅವಲಂಬಿಸಿ ವ್ಯತ್ಯಾಸಗೊಳ್ಳುತ್ತದೆ. ಶೀತಪ್ರದೇಶಗಳವರಲ್ಲಿ ಹಾಗೂ ದೈಹಿಕ ದುಡಿಮೆ ಮಾಡುವವರಲ್ಲಿ ಅದು ತಡವಾಗಿ ಆರಂಭವಾದರೆ ಉಷ್ಣ ಪ್ರದೇಶಗಳವರಲ್ಲೂ ಸುಖಜೀವನ ಸಾಗಿಸುವವರಲ್ಲೂ ಮುಂಚಿತವಾಗಿ ಆರಂಭವಾಗುತ್ತದೆ. ಬಾಲಕಿಯರಲ್ಲಿ ಹರೆಯ ಬಾಲಕರಿಗಿಂತ ಒಂದೆರಡು ವರ್ಷ ಮುಂಚಿತವಾಗಿ ಕಂಡುಬರುತ್ತದೆ. ಆಗ ಅವರ ದೈಹಿಕ ಬೆಳೆವಣಿಗೆ ತೀವ್ರ ಗತಿಯಲ್ಲಿರುತ್ತದೆ. ಆಗ ಅವರಲ್ಲಾಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಗಳು ಅವರ ನಿರೀಕ್ಷೆಗೆ ಮೀರಿದವಾಗಿರುವುದರಿಂದ ಅವರ ಚಲನವಲನಗಳ ಮೇಲಿನ ಹತೋಟಿ ತಪ್ಪುತ್ತದಲ್ಲದೆ, ಅವರು ನಾಚಿಕೆ ವ್ಯಕ್ತಪಡಿಸುತ್ತಾರೆ. ಇದರಿಂದಾಗಿ ಸಮಾಜದಲ್ಲಿ ಹಾಗೂ ಗೆಳೆಯರೊಂದಿಗೆ ಹೊಂದಿಕೊಂಡು ನಡೆಯಲು ಕೆಲ ಸಮಯದವರೆಗೆ ತೊಂದರೆಯಾಗುತ್ತದೆ. ಈ ಅವಧಿಯಲ್ಲಿ ಉಪಾಧ್ಯಾಯರೂ ಪಾಲಕರೂ ಅವರ ಕಡೆಗೆ ಹೆಚ್ಚು ಸಹಾನುಭೂತಿಯಿಂದ ವರ್ತಿಸಬೇಕು. ಬಾಲ್ಯದಲ್ಲಿ ಮಕ್ಕಳು ಭೌತಪ್ರಪಂಚಕ್ಕೆ ಹೊಂದಿಕೊಳ್ಳಲು ಕಲಿತರೆ ಕೌಮಾರ್ಯದಲ್ಲಿ ತಮ್ಮ ನೆರೆಹೊರೆಯ ಸಮಾಜಜೀವನಕ್ಕೂ ಅಧ್ಯಾತ್ಮ ಪ್ರಪಂಚಕ್ಕೂ ಹೊಂದಿಕೊಳ್ಳುವುದನ್ನೂ ಕಲಿಯಬೇಕು. ಈ ಅವಧಿಯಲ್ಲಿ ಸರಿಯಾದ ಶಿಕ್ಷಣ ಪಡೆದ ಬಾಲಕರು ಉತ್ತಮ ನಾಗರಿಕರಾಗಬಹುದು. ಇಲ್ಲದಿದ್ದಲ್ಲಿ ಅವರು ಬಾಲಾಪರಾಧಿಗಳಾಗಿ ಸಮಾಜದ ಕ್ಷೇಮಕ್ಕೆ ಕಂಟಕರಾಗಬಹುದು. ಆದ್ದರಿಂದ ಕೌಮಾರ್ಯದ ಶಿಕ್ಷಣವನ್ನು ಕಡೆಗಣಿಸುವುದೆಂದರೆ ಉತ್ತಮ ಜಾತಿಯ ಗಿಡವನ್ನು ಸಾಕಿ–ಸಲಹಿ ಅದು ಹೂ ಹಣ್ಣು ಬಿಡುವಾಗ ನಿರ್ಲಕ್ಷಿಸಿದಂತಾಗುವುದು. ಆದ್ದರಿಂದಲೇ ಮುಂದುವರಿದ ದೇಶಗಳು ಈಚೆಗೆ ಈ ಅವಧಿಯ ಶಿಕ್ಷಣದ ಕಡೆಗೆ ವಿಶೇಷ ಲಕ್ಷ್ಯ ಕೊಡುತ್ತಿವೆ. ತನ್ಮೂಲಕ ಕಿಶೋರಪರಾಧಿಗಳ ಸಂಖ್ಯೆಯನ್ನು ತಡೆಗಟ್ಟುವುದು, ಅವರು ಮುಂದೆ ವಯಸ್ಕಜೀವನದಲ್ಲಿ ಯಶಸ್ವಿ ಪ್ರಜೆಗಳಾಗಿ ಬೆಳೆಯಲು ನೆರವು ನೀಡುವುದು ಸಾಧ್ಯವಾಗುತ್ತಿದೆ. (ಎಂ.ಎಚ್.ಎಸ್)

ಕೌಮಾರ್ಯಕ್ಕೆ ತಕ್ಕ ಶಿಕ್ಷಣ ಕೊಡುವವರು ಈ ಕೆಲವು ಅಂಶಗಳನ್ನು ಗಮನಿಸಿದರೊಳ್ಳೆಯದು.

1. ತೀವ್ರವಾಗಿ ಬೆಳೆಯಲನುವಾಗಿರುವ ಮಕ್ಕಳ ಶಕ್ತಿ ಸಾಮರ್ಥ್ಯಗಳಿಗೆ ನಿಲುಕುವಷ್ಟು ಯೋಗ್ಯ ಕೆಲಸಗಳನ್ನು ದಂಡಿಯಾಗಿ ಅವರಿಗೆ ನೀಡಬೇಕು.

2. ಅವರ ಕಾಲ್ಪನಿಕ ವಿಜೃಂಭಣೆಗೆ ಸಾಕಷ್ಟು ಆಹಾರವನ್ನೊದಗಿಸುವ ರಮ್ಯ ಕಥೆ ಕಾದಂಬರಿಗಳನ್ನು ಸಾಹಸ ಕಥೆಗಳನ್ನು ಅವರ ಕೈಗೆ ಕೊಡುವುದರ ಜೊತೆಗೆ ಅಂಥ ಸಾಹಿತ್ಯವನ್ನು ನಿರ್ಮಿಸಲು ಪ್ರೋತ್ಸಾಹ ಕೊಡಬೇಕು.

3. ಲೈಂಗಿಕ ಜೀವನದ ಬಗ್ಗೆ ಸಹಜವಾಗಿ ಅವರಲ್ಲಿ ಕಾಣಿಸಿಕೊಳ್ಳುವ ಕುತೂಹಲಗಳನ್ನು, ಪ್ರಶ್ನೆಗಳನ್ನು ದೂರೀಕರಿಸದೆ ಅವಕ್ಕೆ ಉಚಿತ ಸಮಜಾಯಿಷಿ ಕೊಡಬೇಕು.

4. ಬಾಲಕ ಬಾಲಕಿಯರು ನಿಸ್ಸಂಕೋಚವಾಗಿ ಒಟ್ಟಿಗೆ ವಿದ್ಯಾಭ್ಯಾಸ ಮಾಡಲು ಉತ್ತರ ಕೌಮಾರ್ಯದಲ್ಲಾದರೂ ಅವಕಾಶವಿದ್ದರೊಳ್ಳೆಯದೆಂದು ಇಂದಿನ ತಜ್ಞರ ಅಭಿಪ್ರಾಯ.

5. ವಾದದಲ್ಲಿ, ಆಟಪಾಠಗಳಲ್ಲಿ ಸ್ಪರ್ಧಿಸಿ ಗೆಲ್ಲುವ ಹಂಬಲ ಹೆಚ್ಚಿರುತ್ತದಾಗಿ ಶಾಲೆಯ ಒಳಗೆ ಮತ್ತು ಹೊರಗೆ ಮಕ್ಕಳಿಗೆ ಅಂಥ ಸಂದರ್ಭಗಳನ್ನು ವಿಪುಲವಾಗಿ ಕಲ್ಪಿಸಿಕೊಡಬೇಕು.

6. ತಾನೇ ಎಲ್ಲವನ್ನೂ ಮಾಡಬಲ್ಲೆ ಎಂಬ ಅಹಂ ಪ್ರತಿಯೊಬ್ಬ ಬಾಲಕನಲ್ಲೂ ಇರುತ್ತದಾಗಿ ಪ್ರಯೋಗಶಾಲೆಯಲ್ಲಿ, ಶಿಬಿರಗಳಲ್ಲಿ, ಪ್ರವಾಸಗಳಲ್ಲಿ ಮಕ್ಕಳಿಗೆ ಮುಖ್ಯ ಕೆಲಸಗಳನ್ನೆಲ್ಲ ನಿರ್ವಹಿಸಲು ಬಿಡಬೇಕು.

7. ನಾಯಕನಾಗಬೇಕೆಂಬ ಹಿರಿಯಾಸೆ ಕೌಮಾರ್ಯದಲ್ಲಿ ಸಹಜವಾದ್ದರಿಂದ ಅದಕ್ಕೆ ತಕ್ಕ ಶಿಕ್ಷಣ ಹಾಗೂ ವಾತಾವರಣವನ್ನು ಏರ್ಪಡಿಸುವುದು ಅಗತ್ಯ.

8. ಇರುವ ಹತ್ತಾರು ಪಠ್ಯಗಳಲ್ಲಿ ಯಾವುದನ್ನು ಆರಿಸಬೇಕು ಎಂಬುದರ ಬಗ್ಗೆ ಬಾಲಕರಲ್ಲಿ ಖಚಿತವಾದ ಅಭಿಪ್ರಾಯ ಇನ್ನೂ ಇರುವುದಿಲ್ಲವಾಗಿ ಅವರು ತಮಗೆ ತಕ್ಕ ದಾರಿಯನ್ನು ಸ್ವಪ್ರಯತ್ನದಿಂದ ಅರಿತುಕೊಳ್ಳಲು ಅವಕಾಶ ಕಲ್ಪಿಸುವುದು ಒಳ್ಳೆಯದು.

9. ಬಹುಮಾನ ಗಿಟ್ಟಿಸುವ ಗೀಳು ಈ ವಯಸ್ಸಿನವರಲ್ಲಿ ತೀರ ತೀವ್ರವಾಗಿರುವುದರಿಂದ ವರ್ಷಾಂತ್ಯದಲ್ಲಿ ಉತ್ತಮರಿಗೆಲ್ಲ ಬಹುಮಾನ ಕೊಡುವ ಏರ್ಪಾಡು ಇದ್ದರೆ ಒಳ್ಳೆಯದು.

10. ಬಾಲಕರ ಸ್ವಪ್ರತಿಷ್ಠೆ, ಆತ್ಮ ಪ್ರಯತ್ನಗಳಿಗೆ ಹೆಚ್ಚು ಊನವಾಗದಂತೆ ನೋಡಿಕೊಳ್ಳುವುದು ಪೋಷಕರ ಹಾಗೂ ಬೋಧಕರ ಆದ್ಯ ಕರ್ತವ್ಯ.

11. ಪರಂಪರೆಯ ಆಧ್ಯಾತ್ಮಿಕ ಧಾರ್ಮಿಕ ವಿಚಾರಗಳನ್ನು ಮತ್ತು ಆದರ್ಶಗಳನ್ನು ತಿಳಿಸುವ ಕತೆ ಕಾವ್ಯ ಪುರಾಣಗಳ ಅರಿವು ಮೂಡಿಸಬೇಕು.

12. ನೈತಿಕತೆಯೇ ಜೀವನ ಮೌಲ್ಯದ ಮಾನದಂಡವೆಂಬ ಪ್ರಜ್ಞಾವಂತಿಕೆಯನ್ನು ಬೆಳೆಸಬೇಕು. *

**ಕೌಮುದಿ :** ತಿರುವನಂತಪುರದಿಂದ ಪ್ರಕಟವಾಗುವ ಮಲಯಾಳಂ ದಿನಪತ್ರಿಕೆ, ವಾರಪತ್ರಿಕೆ. ದಿನಪತ್ರಿಕೆ 1957ರಲ್ಲಿ ಪ್ರಾರಂಭವಾಯಿತು. ಕೆ.ಎಂ.ಪದ್ಮನಾಭ ಪಿಳ್ಳೆ ಸಂಪಾದಕ. ಸುಲಭ ಬೆಲೆಯ, ಜನಪ್ರಿಯವಾದ ಪತ್ರಿಕೆ. ವಾರಪತ್ರಿಕೆ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಿಷಯಗಳಿಗೆ ಮೀಸಲಾದ್ದು. ಆ ಪತ್ರಿಕೆಯ ಪ್ರಕಾಶಕ, ಮುದ್ರಕ, ಮಾಲೀಕ ಮತ್ತು ಸಂಪಾದಕ ಬಾಲಕೃಷ್ಣನ್. (ಎನ್.ಕೆ.)

**ಕೌಮುದೀ ಮಹೋತ್ಸವ :** ಐದು ಅಂಕಗಳ ಒಂದು ಸಂಸ್ಕೃತನಾಟಕ. ಮಲಯಾಳದಲ್ಲಿ ದೊರಕಿದ ಇದರ ಒಂದೇ ಹಸ್ತಪ್ರತಿಯನ್ನು ಮದ್ರಾಸಿನ ರಾಮಕೃಷ್ಣ ಕವಿ ಮತ್ತು ರಾಮನಾಥಶಾಸ್ತ್ರೀ ಎಂಬ ಸಂಪಾದಕರು 1929ರಲ್ಲಿ ಮೊದಲಿಗೆ ಮುದ್ರಿಸಿದರು. ಸಂಸ್ಕೃತ ಸಾಹಿತ್ಯದಲ್ಲಿ ಅನೇಕ ದೃಷ್ಟಿಗಳಿಂದ ಇದಕ್ಕೆ ಹೆಚ್ಚಿನ ಮಹತ್ತ್ವವಿದೆ. ಮೊದಲನೆಯದಾಗಿ, ಇದರ ಕರ್ತೃ ಒಬ್ಬ ಕವಯಿತ್ರಿ, ನಾಟಕದಲ್ಲಿ '. . .ಯಾ ನಿಬದ್ಧಂ' ಎಂಬ ಸ್ಖಲಿತವಾಗಿರುವ ಪಾಠವನ್ನು ಸಂಪಾದಕರು ವಿಜ್ಜಿಕಯಾ ಎಂದು ಊಹಿಸಿದ್ದಾರೆ. ಪ್ರಶ.7ನೆಯ ಶತಮಾನದ ಚಾಳುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ಸೊಸೆಯೂ ಚಂದ್ರಾದಿತ್ಯನ ರಾಣಿಯೂ ಆದ ವಿಜ್ಜಿಕೆಯೆಂಬಾಕೆ ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧಳಾಗಿದ್ದಾಳೆ. ದಂಡಿಯನ್ನು ಹಾಸ್ಯಮಾಡುವ ಕವಯಿತ್ರಿ ಈಕೆಯೇ ಇರಬಹುದು. ಮತ್ತೆ ಕೆಲವರು ವಿದ್ವಾಂಸರು ಮೋರಿಕಾ, ಕಿಶೋರಿಕಾ ಇತ್ಯಾದಿ ಬೇರೊಬ್ಬಳೇ ಇರಬೇಕೆನ್ನುತ್ತಾರೆ. ಹೇಗಾದರೂ ನಾಟಕವನ್ನು ಬರೆದವಳು ಹೆಂಗಸೆಂಬುದು ನಿರ್ವಿವಾದ. ಶ್ರೀಮತಿ ಶಕುಂತಲಾರಾವ್ ಶಾಸ್ತ್ರೀ ಅವರ ಪ್ರಕಾರ ವಿಜ್ಜಿಕೆ ಬಂಗಾಳಿ ಸ್ತ್ರೀ.

ಎರಡನೆಯದಾಗಿ ಈ ನಾಟಕ ಸಂಸ್ಕೃತದ ಕೆಲವೇ ಐತಿಹಾಸಿಕ ನಾಟಕಗಳಲ್ಲಿ ಒಂದಾಗಿದೆ. ಪಾಟಲೀಪುತ್ರದ ರಾಜ ಸುಂದರವರ್ಮನ ಸಾಕುಮಗನೇ ಚಂಡಸೇನ. ಇವನು ತಂದೆಗೆ ತಿರುಗಿಬಿದ್ದು ಲಿಚ್ಛವಿಗಳ ಸೈನ್ಯಸಹಾಯದಿಂದ ಪಾಟಲೀಪುತ್ರವನ್ನು ಮುತ್ತುತ್ತಾನೆ. ಯುದ್ಧದಲ್ಲಿ ಸುಂದರವರ್ಮ ಸಾಯಲು, ರಾಣಿಯರು ಸತಿಯಾಗುತ್ತಾರೆ. ಅವನ ಮಗ ಕಲ್ಯಾಣವರ್ಮ ಕಾಡಿಗೆ ಓಡುತ್ತಾನೆ, ಮಂತ್ರಿ ಮಂತ್ರಗುಪ್ತನೊಂದಿಗೆ. ಈ ಮಂತ್ರಿ ಉಪಾಯದಿಂದ ಅಲ್ಲಿಯ ಶಬರಪುಲಿಂದರನ್ನು ಒಲಿಸಿಕೊಂಡು ಅವರು ದಂಗೆಯೇಳುವಂತೆಯೂ ಅವರನ್ನಡಗಿಸಲೆಂದು ಚಂಡಸೇನ ಹೋದಾಗ ಪಾಟಲೀಪುತ್ರದ ಜನ ದಂಗೆಯೇಳುವಂತೆಯೂ ಏರ್ಪಡಿಸುತ್ತಾನೆ. ಕದನದಲ್ಲಿ ಚಂಡಸೇನ ಸತ್ತು ಅವನ ವಂಶ ನಿರ್ಮೂಲವಾಗುತ್ತದೆ. ಕಲ್ಯಾಣವರ್ಮ ರಾಜನಾಗುತ್ತಾನೆ; ಮಥುರೆಯ ರಾಜಕುಮಾರಿಯಾದ ಕೀರ್ತಿಸೇನೆಯನ್ನು ಮದುವೆಯಾಗುತ್ತಾನೆ. ಇದು ಸಂಕ್ಷೇಪವಾಗಿ ಈ ನಾಟಕದ ಕಥಾವಸ್ತು.

ಇವೆಲ್ಲ ವಾಸ್ತವವಾದ ಐತಿಹಾಸಿಕ ಘಟನೆಗಳೆಂದೇ ಜಯಸ್ವಾಲ್ ಮುಂತಾದ ಇತಿಹಾಸಜ್ಞರು ಭಾವಿಸುತ್ತಾರೆ. ಚಂಡಸೇನನೆಂದರೆ ಗುಪ್ತರಾಜನಾದ ಮೊದಲನೆಯ ಚಂದ್ರಗುಪ್ತನೆಂದೇ ಅವರು ತಿಳಿದು ಅವನ ಮಗಧ ವಿಜಯವನ್ನು ನಾಟಕ ಚಿತ್ರಿಸುತ್ತದೆಂದು ಹೇಳುತ್ತಾರೆ. ಎಡ್‌ವರ್ಡ್ ಪೈರ್ಸ್ ಎಂಬ ವಿದ್ವಾಂಸ ಸುಂದರವರ್ಮ ಹಾಗೂ ಕಲ್ಯಾಣವರ್ಮರನ್ನು ಮೌಖರಿವಂಶದ ರಾಜರೆಂದು ನಿರೂಪಿಸಿದ್ದಾನೆ. ಆದರೆ ವಿಂಟರ್‌ನಿಟ್ಸ್ ಈ ಸಮನ್ವಯಗಳನ್ನು ಸ್ವೀಕರಿಸದೆ ನಾಟಕಕಥೆ ಅಜ್ಞಾತ ಐತಿಹಾಸಿಕ ವೃತ್ತಾಂತವೆಂದೇ ಪರಿಗಣಿಸುತ್ತಾನೆ. (ಕೆ.ಕೆ.)

**ಕೌರವ್ಯ :** ಸರ್ಪರಾಜ. ಐರಾವತನೆಂಬ ನಾಗರಾಜನ ವಂಶದವ. ಅರ್ಜುನನ ಹೆಂಡತಿಯರಲ್ಲಿ ಒಬ್ಬಳಾದ ಉಲೂಪಿ ಈತನ ಮಗಳು. ಒಮ್ಮೆ ಗಂಗಾನದಿಯ ಬಳಿ ಸೇರಿದ್ದ ವಸುಗಳು ತಮ್ಮ ಹಿರಿಯನಾದ ಭೀಷ್ಮನನ್ನು ಅರ್ಜುನ ಶಿಖಂಡಿಯ ಮೂಲಕ ಶರಶಯ್ಯೆಯಲ್ಲಿ ಮಲಗುವಂತೆ ಮಾಡಿ ಆತನ ಮರಣಕ್ಕೆ ಕಾರಣನಾದುದಕ್ಕೆ ಕೋಪಾವಿಷ್ಟರಾಗಿ ಅರ್ಜುನನಿಗೆ ನರಕಪ್ರಾಪ್ತಿಯಾಗಲೆಂದು ಶಾಪವಿತ್ತದ್ದನ್ನು ಅಲ್ಲಿಯೇ ಸ್ನಾನ ಮಾಡುತ್ತಿದ್ದ ಉಲೂಪಿ ಕೇಳಿಸಿಕೊಂಡಳು. ಒಡನೆಯೇ ಆ ವೃತ್ತಾಂತವನ್ನು ತನ್ನ ತಂದೆ ಕೌರವ್ಯನಿಗೆ ತಿಳಿಸಿದಳು. ಕೂಡಲೇ ಕೌರವ್ಯ ವಸುಗಳ ಬಳಿಗೆ ಹೋಗಿ ತನ್ನ ಅಳಿಯನಿಗೆ ನರಕ ಪ್ರಾಪ್ತಿಯಾಗದಿರಲೆಂದು ಪ್ರಾರ್ಥಿಸಿದಾಗ ಅರ್ಜುನ ತನ್ನ ಮಗನೊಂದಿಗೆ ಯುದ್ಧ ಮಾಡಿ ಸೋತರೆ ಶಾಪ ವಿಮೋಚನೆಯಾಗುವುದೆಂದು ವಸುಗಳು ಪರಿಹಾರ ಹೇಳಿದರು.

ಉಲೂಪಿ ಅಂಥ ಒಂದು ಸಂದರ್ಭಕ್ಕಾಗಿ ಕಾಯುತ್ತಿದ್ದಳು. ಅಶ್ವಮೇಧಯಾಗದ ಸಮಯದಲ್ಲಿ ದಿಗ್ವಿಜಯಕ್ಕಾಗಿ ಬಿಟ್ಟ ಯಜ್ಞಾಶ್ವದ ಬೆಂಗಾವಲಿಗಾಗಿ ಯುಧಿಷ್ಠಿರ ಅರ್ಜುನನನ್ನು ಕಳುಹಿಸಿದಾಗ ಅವನ ಮಗನಾದ ಬಭ್ರುವಾಹನ ಅರಿಯದೆ ಯಜ್ಞಾಶ್ವವನ್ನು ಕಟ್ಟಿಹಾಕಿದ. ಇದರಿಂದ ಕುಪಿತನಾದ ಅರ್ಜುನ ಬಭ್ರುವಾಹನನ ಮೇಲೆ ಯುದ್ಧಹೂಡಿ ಮರಣಹೊಂದಿದ. ಅರ್ಜುನ ಮಗನಿಂದ ಸೋಲನ್ನೊಪ್ಪಿ ಶಾಪ ವಿಮುಕ್ತನಾಗುತ್ತಾನೆಂದು ಸಮಾಧಾನ ಪಡುತ್ತಿದ್ದ ಉಲೂಪಿ ಅರ್ಜುನನ ಸಾವನ್ನು ಕಂಡು ದುಃಖಾರ್ತಳಾಗಿ ತನ್ನ ತಂದೆ ಕೌರವ್ಯನನ್ನು ಮೊರೆಹೊಕ್ಕು ನಾಗಲೋಕದಲ್ಲಿದ್ದ ಸಂಜೀವಕರತ್ನವನ್ನು ತರಿಸಿ ಅರ್ಜುನನನ್ನು ಬದುಕಿಸಿದಳು. ಈ ವೃತ್ತಾಂತ ಜೈಮಿನಿ ಭಾರತದಲ್ಲಿ ಬಂದಿದೆ.

ಕುರುವಂಶದವರಿಗೂ ಕೌರವ್ಯರೆಂದೇ ಹೆಸರು. ಈ ವಂಶದ ಧೃತರಾಷ್ಟ್ರನ ನೂರು ಜನ ಮಕ್ಕಳನ್ನು ಕೌರವ್ಯರೆಂದು ಕರೆಯುವ ವಾಡಿಕೆಯಿದೆ. (ಸಿ.ಜಿ.ಪಿ.)

**ಕೌರಿ :** ಹೆಲಿಕ್ಟೀರಸ್ ಐಸೋರ ಎಂಬ ಶಾಸ್ತ್ರೀಯ ಹೆಸರಿನ ಮರ. ಸ್ಟರ್ಕ್ಯೂಲಿಯೇಸೀ ಕುಟುಂಬಕ್ಕೆ ಸೇರಿದೆ. ಎಡಮುರಿ, ಕವರ್ಗಿ ಇದರ ಪರ್ಯಾಯ ನಾಮಗಳು. ಭಾರತದ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ.

ಇದು ಸುಮಾರು 10'–15' ಎತ್ತರಕ್ಕೆ ಬೆಳೆಯುವ ಸಣ್ಣ ಗಾತ್ರದ ಮರ. ತೊಗಟೆ ಬೂದಿಬಣ್ಣದ್ದು, ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡಿವೆ. ಕಾಯಿಗಳು ಸುರುಳಿಯಂತೆ ಸುತ್ತಿಕೊಂಡಿರುತ್ತವೆ. ಇದರಿಂದಲೇ ಈ ಮರಕ್ಕೆ ಎಡಮುರಿ ಎಂಬ ಹೆಸರು ಬಂದಿದೆ.

ಕೌರಿಮರದ ಒಳತೊಗಟೆಯಿಂದ ಒಂದು ಬಗೆಯ ನಾರನ್ನು ಪಡೆಯಬಹುದು. ನಯವಾದುದೂ ರೇಶ್ಮೆಯಂತೆ ಹೊಳಪುಳ್ಳದ್ದೂ ಆದ ಈ ವಸ್ತು ಸೆಣಬಿನ ನಾರನ್ನು ಹೋಲುತ್ತದೆ. ಸೆಣಬು ನಾರಿಗಿಂತ ಕಡಿಮೆ ದರ್ಜೆಯದಾದರೂ ಇದನ್ನು ಹಗ್ಗ, ಚೀಲ ಮುಂತಾದವನ್ನು ಮಾಡಲು ಬಳಸುತ್ತಾರೆ. ಕೌರಿ ಮರದಿಂದ ಕಾಗದವನ್ನೂ ತಯಾರು ಮಾಡಲಾಗುತ್ತದೆ. ಇದರ ಎಲೆ ಮತ್ತು ಎಳೆಚಿಗುರುಗಳು ದನಗಳಿಗೆ

ಉತ್ತಮ ಮೇವೂ ಹೌದು. ಇದರ ಒಣಕಾಯಿಗಳನ್ನು ಅತಿಸಾರ, ಹೊಟ್ಟೆನುಲಿತ ಮುಂತಾದ ವಿಕಾರಗಳಲ್ಲಿ ಔಷಧಿಯಾಗಿ ಬಳಸುವುದಿದೆ. *

**ಕೌಲಿ, ಏಬ್ರಹಾಂ :** 1618-1667. ಆಂಗ್ಲಕವಿ, ಪ್ರಬಂಧಕಾರ, ಆಧ್ಯಾತ್ಮಿಕ ಕವಿಗಳಲ್ಲಿ ಅತಿಚತುರನೆನಿಸಿದವ. ಲೇಖನ ಸಾಮಗ್ರಿಗಳನ್ನು ಮಾರಾಟ ಮಾಡುವವನ ಮಗನಾದ ಈತ ಹುಟ್ಟಿದ್ದು ಲಂಡನ್ನಿನಲ್ಲಿ. ಸ್ಪೆನ್ಸರನ ಕೃತಿಗಳಿಂದ ಪ್ರಭಾವಿತವಾಗಿ ಹತ್ತನೆಯ ವಯಸ್ಸಿನಲ್ಲೇ ಪದ್ಯರಚನೆಗೆ ತೊಡಗಿದ. ಹದಿನೈದನೆಯ ವಯಸ್ಸಿನವನಿದ್ದಾಗ ಪೊಯೆಟಿಕ್ ಬ್ಲಾಸಮ್ಸ್ (1633) ಎಂಬ ಕವನಸಂಕಲನವನ್ನು ಪ್ರಕಟಿಸಿದ. 20ನೆಯ ವಯಸ್ಸಿನಲ್ಲಿ ಲವ್ಸ್ ರಿಡ್ಲ್ ಎಂಬ ಗ್ರಾಮೀಣ ನಾಟಕವೊಂದನ್ನು ಹೊರತಂದ. ವೆಸ್ಟ್‌ಮಿನಿಸ್ಟರ್ ಶಾಲೆಯನ್ನು ಪೂರೈಸಿ ಕೇಂಬ್ರಿಜ್ ಸೇರಿದ. ತನ್ನ ಭಾಷಾಂತರ ನೈಪುಣ್ಯದಿಂದ ಅಲ್ಲಿಯ ಫೆಲೋ ಆಗಿ ನೇಮಕಗೊಂಡ. ಆಗ ನಡೆದ ದೇಶದ ಅಂತರ್ಯುದ್ಧದಲ್ಲಿ ರಾಜಪಕ್ಷ ಸೇರಿದನೆಂದು ಕೌಲಿಯನ್ನು ಕಾಲೇಜಿನಿಂದ ಹೊರಹಾಕಲಾಯಿತು. 1646ರಲ್ಲಿ ರಾಣಿಯ ಜೊತೆಯಲ್ಲಿ ಪ್ಯಾರಿಸ್ಸಿಗೆ ಹೋಗಿ ಅಲ್ಲಿ 10-12 ವರ್ಷಗಳಿದ್ದು ರಾಜಮನೆತನಕ್ಕೆ ನಿಷ್ಠೆಯಿಂದ ಸೇವೆಸಲ್ಲಿಸಿದ. ದೇಶದಲ್ಲಿ ಶಾಂತಿ ನೆಲಸಿದ ಮೇಲೆ ರಾಜನಿಷ್ಠೆಯನ್ನು ವ್ಯಕ್ತಪಡಿಸಿದ ಕೆಲವು ಪದ್ಯಗಳನ್ನು ಬರೆದ. ಅನಂತರ ಲಂಡನ್ನಿಗೆ ಹಿಂತಿರುಗಿ ರಾಜಮನೆತನಕ್ಕೆ ಸೇರಿದ ಭೂಮಿಯನ್ನು ಗುತ್ತಿಗೆ ಪಡೆದ. ಆದರೆ ಲಂಡನಿನಲ್ಲಿ ಬಯಸಿದ ಸೌಖ್ಯ ದೊರಕದೆ ದುಃಖಿತನಾದ. ಈತ ತನ್ನ ಸಮಕಾಲೀನ ಕವಿಗಳೆಲ್ಲರಿಗಿಂತ ಹೆಚ್ಚಿನ ಖ್ಯಾತಿಯನ್ನು ಗಳಿಸಿದ್ದ. ಈತನ ಬಹುತೇಕ ಕವನಗಳಲ್ಲಿ ವಾಕ್ಚಾತುರ್ಯವೇ ಪ್ರಧಾನವಾಗಿ ಕಂಡರೂ ಕೆಲವು ಕವನಗಳಲ್ಲಿ ಪ್ರಕೃತಿವರ್ಣನೆಗಳು ಸುಂದರವಾಗಿ ಬಂದಿವೆ. ದಿ ಮಿಸ್ಟ್ರೆಸ್ (1646), ಪಿಂಡಾರಿಕ್ ಓಡ್ಸ್ (1656) ಈ ಕವನಸಂಕಲನಗಳಲ್ಲಿ ಅನೇಕ ಉತ್ತಮ ಕವನಗಳಿವೆ. ಜಾನ್‌ಸನ್ನನ ಲೈವ್ಸ್ ಆಫ್ ದಿ ಪೊಯೆಟ್ಸ್ ಗ್ರಂಥದಲ್ಲಿ ಈತನದೇ ಮೊದಲ ಹೆಸರು. ಈತನ ಗದ್ಯಪ್ರಬಂಧಗಳು ಸರಳವಾಗಿದ್ದು ಹೆಚ್ಚಿನ ಹೊಗಳಿಕೆಗೆ ಪಾತ್ರವಾಗಿವೆ. ವೆಸ್ಟ್‌ಮಿನಿಸ್ಟರ್ ಆಬೆಯಲ್ಲಿ ಸ್ಪೆನ್ಸರನ ಬಳಿಯೇ ಈತನನ್ನು ಸಮಾಧಿ ಮಾಡಲಾಗಿದೆ. ಇವನು 'ಮೆಟಫಿಸಿಕಲ್' ಕವಿಗಳ ಪೈಕಿ ಒಬ್ಬ. ಇವನ ಕವನಗಳಲ್ಲಿ ಉತ್ಪ್ರೇಕ್ಷೆ ಹೆಚ್ಚು. ಇವನು ಕೆಲವು ಒಳ್ಳೆಯ ಪ್ರಬಂಧಗಳನ್ನು ಬರೆದಿದ್ದಾನೆ. (ಎನ್.ಎಸ್.ಎಲ್)

**ಕೌಲೀ, ಹನ್ನಾ :** 1743-1809. ನಾಟಕಕಾರ್ತಿ ಮತ್ತು ಕವಯಿತ್ರಿ. ಹುಟ್ಟಿದ್ದು ಡೆವನ್‌ಭಾಗದ ಟೈವರ್ಟನ್‌ನಲ್ಲಿ, ಪುಸ್ತಕ ವ್ಯಾಪಾರಿ ಫಿಲಿಪ್ ಪಾರ್ಕ್ ಹೌಸನ ಮಗಳು. 1768ರಲ್ಲಿ ಕ್ಯಾಪ್ಟನ್ ಕೌಲೀಯನ್ನು ಮದುವೆಯಾದಳು. ಈಕೆಯ ರನ್‌ಅವೇ (1776) ಎಂಬ ನಾಟಕ ಕೇವಲ 15 ದಿನಗಳಲ್ಲಿ ಬರೆದುದಾದರೂ ಈಕೆಗೆ ತುಂಬ ಯಶಸ್ಸನ್ನು ತಂದಿತು. ಹೂಸ್ ದಿ ಡ್ಯೂಪ್ (1779), ದಿ ಬೆಲ್ಸ್ ಸ್ಟ್ರ್ಯಾಟಜಮ್ (1782), ಅ ಬೋಲ್ಡ್ ಸ್ಟ್ರೋಕ್ ಫಾರ್ ಅ ಹಸ್ಬೆಂಡ್(1783), ಅ ಸ್ಕೂಲ್ ಫಾರ್ ಗ್ರೇಬಿಯರ್ಡ್ಸ್ (1786)-ಇವು ಈಕೆ ಅನಂತರ ಬರೆದ ನಾಟಕಗಳು. ದಿ ಮೆಯ್ಡ್ ಆಫ್ ಅರಾಗನ್ (1780), ದಿ ಸ್ಕಾಟಿಷ್ ವಿಲೇಜ್ (1787), ಎಡ್ವಿನ್ (1784), ದಿ ಸೀಜ್ ಆಫ್ ಆಕ್ರ್ (1799)- ಇವು ಈಕೆ ಬರೆದ ಕೆಲವು ಕವನ ಸಂಕಲನಗಳು. ಈಕೆಯ ಕೃತಿಗಳು 1813ರಲ್ಲಿ ಪ್ರಕಟವಾದುವು. *

**ಕೌಶಾಂಬಿ :** ಅಲಹಾಬಾದಿನ ಬಳಿ, ಗಂಗಾ-ಯಮುನಾ ಸಂಗಮಸ್ಥಾನದಲ್ಲಿ, ಯಮುನಾನದಿಯ ಎಡದಂಡೆಯ ಮೇಲಿದ್ದ ಇತಿಹಾಸಪ್ರಸಿದ್ಧ ನಗರ, ಪ್ರಾಕ್ತನ ನೆಲೆ. ಈ ಸ್ಥಳದ ಈಗಿನ ಹೆಸರು ಕೋಸಂ. ಪುರಾಣಪ್ರಸಿದ್ಧ ಪುರೂರವನ ವಂಶೀಯರಲ್ಲಿ ಹತ್ತನೆಯವನಾದ ಕುಶಾಂಬ ಇದರ ಸಂಸ್ಥಾಪಕನೆಂದೂ ಗಂಗಾನದಿಯ ಪ್ರವಾಹದಿಂದಾಗಿ ಪಾಂಡವರ ರಾಜಧಾನಿ ಹಸ್ತಿನಾಪುರ ಕೊಚ್ಚಿಹೋದಾಗ, ಪರೀಕ್ಷಿತನಿಂದ ಈಚೆಗೆ ಐದನೆಯ ತಲೆಮಾರಿನವನೂ ಇಕ್ಷ್ವಾಕು ವಂಶದವನೂ ಆದ ನಿಚಕ್ಷು ಕೌಶಾಂಬಿಯನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನೆಂದೂ ಐತಿಹ್ಯಗಳುಂಟು. ಶತಪಥಬ್ರಾಹ್ಮಣದಲ್ಲಿ ಕೌಶಾಂಬೀಯ ಎಂಬ ಶಬ್ದ ಬರುವುದರಿಂದ ಈ ನಗರದ ಪ್ರಾಚೀನತೆಯನ್ನು ಪ್ರ.ಶ.ಪೂ. 1000ಕ್ಕೂ ಹಿಂದಕ್ಕೆ ಕೊಂಡೊಯ್ಯಬಹುದಾಗಿದೆ. ರಾಮಾಯಣ ಮಹಾಭಾರತಗಳಲ್ಲಿ ಇದರ ಬಗ್ಗೆ ಉಲ್ಲೇಖಗಳುಂಟು.

ಬುದ್ಧನ ಕಾಲದ ಕೆಲವು ಪ್ರಖ್ಯಾತ ಪಟ್ಟಣಗಳಲ್ಲಿ ಕೌಶಾಂಬಿಯೂ ಒಂದು. ಇಲ್ಲಿಯ ಗಣ್ಯ ನಾಗರಿಕರು ಬುದ್ಧಾನುಯಾಯಿಗಳಾಗಿ, ಬೌದ್ಧಸಂನ್ಯಾಸಿಗಳ ಉಪಯೋಗಕ್ಕಾಗಿ ಘೋಷಿತರಾಮ, ಕುಕ್ಕುಟಾರಾಮ, ಬದರಿಕಾರಾಮ, ಪವರಿಕಂಬಬನ ಎಂಬ ನಾಲ್ಕು ಮಠಗಳನ್ನು ಕಟ್ಟಿಸಿಕೊಟ್ಟರು. ಬುದ್ಧ ಸ್ವಲ್ಪ ಕಾಲ ಇಲ್ಲಿ ವಾಸಿಸುತ್ತಿದ್ದು, ಒಂಬತ್ತನೆಯ ವರ್ಷಾಕಾಲದ ಧರ್ಮೋಪದೇಶ ನಡೆಯಿಸಿದ. ಇಲ್ಲಿ ಆಳಿದ ಉದಯನ ರಾಜ ಬುದ್ಧನ ಸಮಕಾಲೀನ, ಅವನ ಭಕ್ತ. ಅವನು ವತ್ಸರಾಜ್ಯದ ಒಡೆಯ. ಆತ ಮಾಡಿಸಿದ್ದ ರಕ್ತಚಂದನದ ಬುದ್ಧಪ್ರತಿಮೆಯನ್ನೂ ಪಾಳುಬಿದ್ದಿದ್ದ ಬೌದ್ಧಮಠಗಳನ್ನೂ ತಾನು ಕಂಡದ್ದಾಗಿ 7ನೆಯ ಶತಮಾನದ ಚೀನೀ ಪ್ರವಾಸಿ ಯುವಾನ್‌ಚಾಂಗ್ ಬರೆದಿದ್ದಾನೆ. ಇಲ್ಲಿ ಜೈನತೀರ್ಥಂಕರ ಪದ್ಮಪ್ರಭನ ದೇವಾಲಯವಿದೆ. ಕೌಶಾಂಬಿ ಆತನ ಜನ್ಮಸ್ಥಳವೆಂದೂ ಖ್ಯಾತ ಪ್ರಾಕೃತವ್ಯಾಕರಣಕಾರ ವರರುಚಿಯೂ ಇದೇ ಸ್ಥಳದವನೆಂದೂ ಹೇಳಲಾಗಿದೆ.

ಮಗಧದಲ್ಲಿ ಸಾಮ್ರಾಜ್ಯೋದಯವಾಗಿ ನಂದ ಮೌರ್ಯರ ಪ್ರಭುತ್ವ ಊರ್ಜಿತವಾದಾಗ ಕೌಶಾಂಬಿಯ ಪ್ರಾಮುಖ್ಯ ಕುಗ್ಗಿತು. ಆದರೂ ಆ ಕಾಲದಲ್ಲೂ ಅನಂತರ ಆಳಿದ ಶುಂಗ, ಕುಷಾಣ ಮತ್ತು ಗುಪ್ತರ ಕಾಲದಲ್ಲೂ ಕೌಶಾಂಬಿ ಒಂದು ಪ್ರಮುಖ ನಗರವಾಗಿ ಉಳಿದುಕೊಂಡಿತ್ತು. (ಪಿ.ಬಿ.ಡಿ.)

ಪುರಾತತ್ತ್ವಜ್ಞರು ನಡೆಸಿರುವ ಭೂಶೋಧನೆಗಳಿಂದ ಕೌಶಾಂಬಿಯ ವಿಚಾರವಾಗಿ



ಕೌಶಾಂಬಿಯ ಕೋಟೆಗೋಡೆ (ಪ್ರಸಕ್ತಶಕದ ಪ್ರಾರಂಭಕಾಲ)

ಅನೇಕ ಚಾರಿತ್ರಿಕ ಮತ್ತು ಪ್ರಾಗ್ ಚಾರಿತ್ರಿಕ ಸಂಗತಿಗಳು ಹೊರಬಿದ್ದಿವೆ. ಈಗಿನ ಕೋಸಂ ಗ್ರಾಮವೇ ಪ್ರಾಚೀನ ಕೌಶಾಂಬಿ ಇದ್ದ ಸ್ಥಳವೆಂದು ಕಳೆದ ಶತಕದಲ್ಲಿ ನಿರ್ಧರಿಸಿದವನು ಅಲೆಕ್ಸಾಂಡರ್ ಕನಿಂಗ್‌ಹ್ಯಾಂ. ಇದರ ಬಳಿಯಲ್ಲೇ ಅಶೋಕನ ಮತ್ತು ಸಮುದ್ರಗುಪ್ತನ ಶಾಸನಗಳಿದ್ದ ಸ್ತಂಭವೊಂದಿತ್ತು. ಅದೀಗ ಅಲಹಾಬಾದ್ ಕೋಟೆಯಲ್ಲಿದೆ. 1937-38ರಲ್ಲಿ ಭಾರತ ಸರ್ಕಾರದ ಪ್ರಾಕ್ತನ ಇಲಾಖೆಯೂ ಅನಂತರ 1949ರಿಂದ ಅಲಹಾಬಾದ್ ವಿಶ್ವವಿದ್ಯಾಲಯವೂ ಇಲ್ಲಿ ಭೂಶೋಧನೆ ನಡೆಸಿವೆ.

ಇಲ್ಲಿ ಜನವಸತಿ ಆರಂಭವಾದ್ದು ಪ್ರ.ಶ.ಪೂ. 1200ರ ಸುಮಾರಿನಲ್ಲಿ-ಕೆಂಪು-ಕಪ್ಪು ಮಡಕೆಗಳನ್ನುಪಯೋಗಿಸುತ್ತಿದ್ದ ಜನರಿಂದ. ಅನಂತರ ಇಲ್ಲಿ ಬೂದುಬಣ್ಣದ ವರ್ಣ ಚಿತ್ರದ ಮಡಕೆಗಳ (ಪೆಯಿಂಟೆಡ್ ಗ್ರೇವೇರ್) ಸಂಸ್ಕೃತಿಯೂ ತರುವಾಯ ಉತ್ತರ ಭಾರತದ ಕಪ್ಪು ಹೊಳಪಿನ ಮಡಕೆಗಳ ಸಂಸ್ಕೃತಿಯೂ ತಲೆದೋರಿದುವು. ಈ ಕೊನೆಯ ಸಂಸ್ಕೃತಿಯ ಕಾಲದಲ್ಲಿ, ಪ್ರ.ಶ.ಪೂ. 700ಕ್ಕೂ ಮೊದಲು, ಇಲ್ಲಿ ಮಹತ್ತರವಾದ ಮಣ್ಣಿನ ಕೋಟೆಯೊಂದನ್ನು ಕಟ್ಟಿದ್ದರು. ಹೊರಮುಖವನ್ನು ಸುಟ್ಟ ಇಟ್ಟಿಗೆಗಳಿಂದ ಇಳಿಜಾರಾಗಿ ಕಟ್ಟಲಾಗಿತ್ತು. ಈ ಗೋಡೆಗಳು ಹರಪ್ಪದ ಕೋಟೆಗಳನ್ನು ಹೋಲುತ್ತವೆ. ಅನಂತರ ಕಾಲದಲ್ಲಿ ಕೋಟೆಯ ಬುರುಜುಗಳ ಮೇಲೆ ಆಯಾಕಾರದ ಗೋಪುರಗಳನ್ನು ನಿರ್ಮಿಸಲಾಗಿತ್ತು. ಅನೇಕ ಸಲ ರಿಪೇರಿಯಾದ ಈ ಕೋಟೆಯ ಒಳಭಾಗದಲ್ಲಿ ಕಲ್ಲಿನ ಅರಮನೆ, ಗೌತಮಬುದ್ಧ ಉಪದೇಶ ನೀಡಿದ ಸ್ಥಳವಾದ ಘೋಷಿತರಾಮ ಕಟ್ಟಡ. ಉದಯನ ಚಕ್ರವರ್ತಿಯ ಅರಮನೆ ಮತ್ತು ವಾಸಗೃಹಗಳ

ಅವಶೇಷಗಳು ಪತ್ತೆಯಾಗಿವೆ. ಆ ನಗರದ ಸಂಪದ್ಯುಕ್ತ ಜನಜೀವನದ ಪರಿಚಯ ಮಾಡಿಕೊಡುವ ಅನೇಕ ಅವಶೇಷಗಳು–ಶ್ಯೇನಚಿತಿ ಮತ್ತು ಪುರುಷಮೇಧ ಯಜ್ಞಗಳ ಅವಶೇಷಗಳು ಕೂಡ ದೊರಕಿವೆ. ಅರಮನೆ ಸುಮಾರು 1,024'X 490' ವಿಸ್ತಾರವಾಗಿ 8' ಎತ್ತರದ ಜಗತಿಯ ಮೇಲೆ ನಿರ್ಮಿತವಾಗಿತ್ತು. ಗೋಡೆಯ ದ್ವಿಮುಖಗಳಿಗೂ ಸುಣ್ಣದ ಮೆತುಗಾರೆ ಲೇಪಿಸಲಾಗಿತ್ತು. ಅರಮನೆ ಗೋಡೆಗಳ ಮೂಲೆಗಳಲ್ಲಿ ಸುಮಾರು 25' ವ್ಯಾಸದ ಚಕ್ರಾಕಾರದ ಗೋಪುರಗಳನ್ನು ಕಟ್ಟಲಾಗಿತ್ತು. ಒಳಭಾಗ ಬಹಳ ಸುವ್ಯವಸ್ಥಿತವಾಗಿತ್ತು. ಕೋಟೆಯ ಹೊರಭಾಗದಲ್ಲಿದ್ದ ಕಂದಕದ ಚಾವಣಿ ಮುನ್‌ಚಾಚಿದ ಕಟ್ಟಡದ ರೀತಿಯ ಕಮಾನಿನಾಕಾರದಲ್ಲಿತ್ತು (ಕಾರ್ಬೆಲ್ಡ್ ಆರ್ಚ್). ಒಟ್ಟಿನಲ್ಲಿ ಪ್ರ.ಶ.ಪೂ 700ರಿಂದ ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಇದು ಉಚ್ಛ್ರಾಯಸ್ಥಿತಿಯಲ್ಲಿತ್ತೆಂದು ಭೂಶೋಧನೆಗಳಿಂದ ತಿಳಿದುಬಂದಿದೆ. ವಿವಿಧ ಕಾಲಗಳಿಗೆ ಸೇರಿದ ನಾಣ್ಯಗಳು, ಸುಟ್ಟಮಣ್ಣಿನ ಗೊಂಬೆಗಳು ಮತ್ತಿತರ ಕಲಾವಸ್ತುಗಳು ಸಹ ಉತ್ಖನನದಲ್ಲಿ ಸಿಕ್ಕಿವೆ. (ಬಿ.ಕೆ.ಜಿ.; ಎಸ್.ಎನ್.)

**ಕೌಶಿಕ :** ವೇದಶಾಸ್ತ್ರಾಧ್ಯಯನ ನಿರತನಾದ ಬ್ರಾಹ್ಮಣ. ಒಮ್ಮೆ ಅರಣ್ಯದಲ್ಲಿ ಒಂದು ವೃಕ್ಷದ ಕೆಳಗೆ ಧ್ಯಾನಾಸಕ್ತನಾಗಿದ್ದಾಗ ಮರದ ಮೇಲಿದ್ದ ಕೊಕ್ಕರೆಯೊಂದು ಈತನ ತಲೆಯ ಮೇಲೆ ಹೇಸಿಗೆ ಮಾಡಿತು. ಬಹಿರ್ಮುಖನಾದ ಬ್ರಾಹ್ಮಣ ತಲೆಯೆತ್ತಿ ನೋಡಲಾಗಿ ಕೊಕ್ಕರೆ ಸುಟ್ಟು ಭಸ್ಮವಾಯಿತು. ಅಂದಿಗೆ ತನ್ನ ತಪಸ್ಸು ಸಿದ್ಧಿಯಾಯಿತೆಂಬ ಸಂತೋಷದಿಂದ ಕೌಶಿಕ ಭಿಕ್ಷಾರ್ಥಿಯಾಗಿ ಒಂದು ಗ್ರಾಮವನ್ನು ಸೇರಿ, ಒಬ್ಬ ಬ್ರಾಹ್ಮಣನ ಮನೆಯ ಮುಂದೆ ನಿಂತು ಭಿಕ್ಷೆ ಬೇಡಿದ. ಆದರೆ ಆ ಗೃಹಿಣಿ ಅದೇ ಸಮಯದಲ್ಲಿ ತನ್ನ ಗಂಡನಿಗೆ ಬಡಿಸುತ್ತಿದ್ದ ಕಾರಣ ಭಿಕ್ಷೆಯನ್ನು ತಡವಾಗಿ ತಂದಳು. ಭಿಕ್ಷೆ ತಂದ ಆಕೆಯನ್ನು ಕೌಶಿಕ ದುರುಗುಟ್ಟಿ ನೋಡಿದ. ಕೂಡಲೆ ಆ ಗೃಹಿಣಿ 'ಅಯ್ಯಾ! ನಿನ್ನ ಸಿಟ್ಟಿಗೆ ಬಲಿಯಾಗಲಿಕ್ಕೆ ನಾನೇನು ಕೊಕ್ಕರೆಯಲ್ಲ' ಎಂದಳು. ಈ ಮಾತು ಕೇಳಿ ಕೌಶಿಕ ಲಜ್ಜೆ ಮತ್ತು ಆಶ್ಚರ್ಯದಿಂದ ಆಕೆಗೆ ಅಡ್ಡ ಬಿದ್ದು ಈಗ ತಾನೆ ಅರಣ್ಯದಲ್ಲಿ ನಡೆದ ಈ ಸಂಗತಿ ತಮಗೆ ತಿಳಿದದ್ದು ಹೇಗೆಂಬುದನ್ನು ತಿಳಿಸಿ ಅನುಗ್ರಹಿಸಿ–ಎಂದು ಬೇಡಿದ. ಆಕೆ ಕೌಶಿಕನಿಗೆ ಕೆಲವು ಧರ್ಮರಹಸ್ಯವನ್ನು ಉಪದೇಶಿಸಿ ಇನ್ನೂ ಹೆಚ್ಚು ತಿಳಿಯುವುದಾದರೆ ಮಿಥಿಲಾನಗರವಾಸಿ ಧರ್ಮವ್ಯಾಧನಲ್ಲಿಗೆ (**ನೋಡಿ– ಧರ್ಮವ್ಯಾಧ**) ಹೋಗು ಎಂದಳು. ಕೌಶಿಕ ಅಲ್ಲಿಗೂ ಹೋಗಿ ಅನೇಕ ಧರ್ಮತತ್ತ್ವಗಳನ್ನು ತಿಳಿದ. *

**ಕೌಷೀತಕೀ ಉಪನಿಷತ್ತು :** ಋಗ್ವೇದದ ಕೌಷೀತಕೀ ಬ್ರಾಹ್ಮಣಕ್ಕೆ ಸೇರಿದ ಉಪನಿಷತ್ತು. ಕೌಷೀತಕೀ ಬ್ರಾಹ್ಮಣೋಪನಿಷತ್ತು ಎಂದೂ ಹೆಸರಾಗಿದೆ.

ಬೃಹದಾರಣ್ಯಕ ಮತ್ತು ಛಾಂದೋಗ್ಯಗಳಂತೆ ಇದೂ ವೈದಿಕಗದ್ಯ ರೂಪದಲ್ಲಿದೆ. ಇದರಲ್ಲಿ ಬರುವ ಕೆಲವು ಸಂಶಯಾತ್ಮಕ ವಾಕ್ಯಗಳ ಅರ್ಥವನ್ನು ನಿರ್ಣಯಿಸುವುದಕ್ಕಾಗಿಯೇ ವೇದಾಂತಸೂತ್ರಗಳ ಕೆಲವು ಅಧಿಕರಣಗಳು ಬಂದಿವೆ ಎಂದು ಶಂಕರ ಮತ್ತು ರಾಮಾನುಜರು ಅಭಿಪ್ರಾಯ ಪಡುತ್ತಾರೆ. ಈ ಕಾರಣಗಳಿಂದ ಇದು ಪ್ರಾಚೀನ ಉಪನಿಷತ್ತುಗಳ ವರ್ಗಕ್ಕೆ ಸೇರಿದ್ದೆಂದು ಹೇಳಲಾಗಿದೆ.

ಇದರ ಮೇಲೆ ಶಂಕರಾಚಾರ್ಯರದೆನ್ನಲಾದ ಒಂದು ಭಾಷ್ಯವಿದೆ. ರಂಗರಾಮಾನುಜರ ಒಂದು ಸಂಕ್ಷಿಪ್ತವಾದ ಭಾಷ್ಯವೂ ಇದೆ. ಆಚಾರ್ಯರುಗಳ ದೃಷ್ಟಿಯಲ್ಲಿ ಇದು ಮುಖ್ಯವಾದ ಉಪನಿಷತ್ತು. ವೇದಾಂತಸೂತ್ರಕಾರರೂ ಇದಕ್ಕೆ ಮಹತ್ತ್ವ ಕೊಟ್ಟಿದ್ದಾರೆಂದು ಅವರ ಅಭಿಪ್ರಾಯ. ಪದೇ ಪದೇ ಇದರಿಂದ ಆಧಾರ ವಾಕ್ಯಗಳನ್ನು ಭಾಷ್ಯಕಾರರು ಪ್ರಮಾಣತ್ವೇನ ಸ್ವೀಕರಿಸಿದ್ದಾರೆ.

ಗಾತ್ರದಲ್ಲಿ ಈಶ ಮತ್ತು ಕೇನಗಳಷ್ಟು ಈ ಉಪನಿಷತ್ತು ಅತಿ ಹ್ರಸ್ವವೂ ಅಲ್ಲ, ಬೃಹದಾರಣ್ಯಕ, ಛಾಂದೋಗ್ಯಗಳಷ್ಟು ಅತಿ ದೀರ್ಘವೂ ಅಲ್ಲ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಮೊದಲ ಅಧ್ಯಾಯ ಪರ್ಯಂಕ ವಿದ್ಯೆ ಎಂದು ಪ್ರಸಿದ್ಧ. ಇದರಲ್ಲಿ ಜೀವನ ಸಂಸಾರಗತಿಯನ್ನು ಹೇಳಿ, ಬ್ರಹ್ಮನಿಷ್ಠನಾದವ ಹೇಗೆ ಪರಬ್ರಹ್ಮನನ್ನು ಹೊಂದುತ್ತಾನೆಂಬುದನ್ನು ವಿಲಕ್ಷಣರೀತಿಯಲ್ಲಿ ಚಿತ್ರಿಸಿದೆ. ಮೂರನೆಯ ಅಧ್ಯಾಯದಲ್ಲಿ ಅತ್ಯಂತ ಪ್ರಸಿದ್ಧವಾದ ಪ್ರತರ್ದನವಿದ್ಯೆ ಬಂದಿದೆ. ದಿವೋದಾಸನ ಮಗನಾದ ಪ್ರತರ್ದನನಲ್ಲಿ ಪ್ರೀತನಾದ ಇಂದ್ರ ಯಾವುದಾದರೂ ವರವನ್ನು ಕೇಳೆಂದು ಹೇಳುತ್ತಾನೆ. ಪ್ರವರ್ದನ ಮನುಷ್ಯನಿಗೆ ಹಿತತಮವೆಂದು ನೀನು ಏನನ್ನು ಭಾವಿಸುತ್ತೀಯೋ ಅದನ್ನು ಕೊಡೆಂದು ಕೇಳುತ್ತಾನೆ. ಆಗ ಇಂದ್ರ ತನ್ನನ್ನು ಕುರಿತು ಉಪಾಸನೆ ಮಾಡೆಂದು ಹೇಳಿ, ತಾನೇ ಪ್ರಾಣ, ತಾನೇ ಪ್ರಜ್ಞಾತ್ಮ, ತಾನೇ ಪರಬ್ರಹ್ಮದಲ್ಲಿ ಉಪದೇಶಿಸುತ್ತಾನೆ. ಇಂದ್ರ ತನ್ನ ವಿಷಯವನ್ನು ಹೇಳುತ್ತ ಪರಬ್ರಹ್ಮದಲ್ಲಿ ತಾದಾತ್ಮ್ಯವನ್ನು ಅನುಸಂಧಾನ ಮಾಡುತ್ತ ಆ ಪರತತ್ತ್ವದ ಸ್ವರೂಪವನ್ನು ಹೇಳುತ್ತಾನೆ. ಪ್ರತರ್ದನ ಮನುಷ್ಯನಿಗೆ ಹಿತತಮವೆಂದು ನೀನು ಏನನ್ನು ಭಾವಿಸುವೆಯೊ ಅದನ್ನು ಕೊಡೆಂದು ಕೇಳುತ್ತಾನೆ. ಆಗ ಇಂದ್ರ ತನ್ನನ್ನು ಕುರಿತು ಉಪಾಸನೆ ಮಾಡೆಂದು ಹೇಳಿ, ತಾನೇ ಪ್ರಾಣ, ತಾನೇ ಪ್ರಜ್ಞಾತ್ಮ, ತಾನೇ ಪರಬ್ರಹ್ಮನೆಂದು ಉಪದೇಶಿಸುತ್ತಾನೆ. ಇಂದ್ರ ತನ್ನ ವಿಷಯವನ್ನು ಹೇಳುತ್ತಾ ಪರಬ್ರಹ್ಮದಲ್ಲಿ ತಾದಾತ್ಮ್ಯವನ್ನು ಅನುಸಂಧಾನ ಮಾಡುತ್ತಾ ಆ ಪರತತ್ತ್ವದ ಸ್ವರೂಪವನ್ನು ಹೇಳುತ್ತಾನೆ. ಪ್ರಾಣ ಮತ್ತು ಇಂದ್ರ ಮೊದಲಾದ ಅವರ ತತ್ತ್ವಗಳೆಲ್ಲ ಬ್ರಹ್ಮತತ್ತ್ವದಲ್ಲಿ ಪರ್ಯವಸಾನ ಹೊಂದುತ್ತವೆಂಬುದು ಅವನ ಮಾತಿನ ಅಭಿಪ್ರಾಯ. ಈ ಕಾರಣದಿಂದ ಬ್ರಹ್ಮನನ್ನು ಪ್ರಾಣದ ಮೂಲಕ, ಇಂದ್ರಾದಿ ಜೀವದ ಮೂಲಕ, ಅಥವಾ ಸಾಕ್ಷಾತ್ತಾಗಿ ಉಪಾಸನೆ ಮಾಡಬಹುದು. ಒಟ್ಟಿನಲ್ಲಿ ನಾನಾತ್ವ ಅನೇಕತತ್ತ್ವಗಳ ಕಲ್ಪನೆ ಸರಿಯಲ್ಲ. ನೋ ಏತನ್ನಾನಾ, ರಥದ ನೇಮಿ ಅರಗಳನ್ನು ಆಶ್ರಯಿಸಿರುವಂತೆ, ಅರಗಳು ನಾಭಿಯನ್ನು ಆಶ್ರಯಿಸುವಂತೆ, ಅಚೇತನ ವಸ್ತುಗಳೆಲ್ಲ ಚೇತನತತ್ತ್ವವನ್ನು ಆಶ್ರಯಿಸಿವೆ. ಚೇತನಗಳೆಲ್ಲ ಪ್ರಾಣನೆನಿಸಿಕೊಳ್ಳುವ ಪರಮಾತ್ಮನಲ್ಲಿ ಅರ್ಪಿತ–ಎಂಬುದು ಕೊನೆಯ ಸಿದ್ಧಾಂತ. ಹೀಗೆ ಕೌಷೀತಕೀ ಉಪನಿಷತ್ತು ವೇದಾಂತದ ಪ್ರಧಾನ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ (**ನೋಡಿ– ಉಪನಿಷತ್ತುಗಳು**). (ಎಸ್.ಎಸ್.ಆರ್)

**ಕ್ಯಾಂಕರ್ ಹುಳು :** ಜಿಯೋಮಿಟ್ರಿಡೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಪತಂಗ, ಸರ್ವವ್ಯಾಪಿ. *ಪೇಲಿಯೋಕ್ರಿಟ ವರ್ನೇಟ* (ವಸಂತದ ಕ್ಯಾಂಕರ್ ಹುಳು) ಮತ್ತು *ಆಲ್ಸೊಫಿಲ ಪೊಮೆಟೇರಿಯ* (ಮಾಗಿ ಕ್ಯಾಂಕರ್ ಹುಳು) ಎಂಬ ಎರಡು ಪ್ರಭೇದಗಳು ಮುಖ್ಯವಾದ ಕ್ಯಾಂಕರ್ ಹುಳುಗಳು. ಇವು ನಿಶಾಚರಿಗಳು. ಗಂಡು ಪತಂಗಗಳ ಅಗಲವಾದ ರೆಕ್ಕೆಯ ಮೇಲೆ ಅಲೆಅಲೆಯಾದ ಮಚ್ಚೆಗಳನ್ನು ಕಾಣಬಹುದು. ಪ್ರೌಢ ಹೆಣ್ಣುಗಳಿಗೆ ರೆಕ್ಕೆಗಳಿಲ್ಲ. ಗಂಡು ಹೆಣ್ಣುಗಳ ಬಣ್ಣದಲ್ಲಿ ವ್ಯತ್ಯಾಸ ಉಂಟು. ಎಲ್ಲ ಪತಂಗಗಳಂತೆ ಇವು ಸಹ ಬೆಳಕಿನಿಂದ ಆಕರ್ಷಿತವಾಗುತ್ತವೆ.

ಕ್ಯಾಂಕರ್ ಹುಳುವಿನ ಡಿಂಬ ವಿಶಿಷ್ಟ ರೀತಿಯದು. ಸಾಮಾನ್ಯವಾಗಿ ಇದರ ದೇಹದ ಹಿಂದಿನ ತುದಿಯಲ್ಲಿ 2–3 ಜೊತೆ ಮಿಥ್ಯಾಪಾದಗಳಿರುತ್ತವೆ; ಮಧ್ಯ ಭಾಗದಲ್ಲಿ ಕಾಲುಗಳಿಲ್ಲ. ಏನಾದರೂ ತೊಂದರೆಯಾದಾಗ ಇದು ಹಿಂದಿನ ಕಾಲಿನ ಮೇಲೆ ನಿಂತು ದೇಹವನ್ನು ನೆಟ್ಟಗೆ ನಿಲ್ಲಿಸುತ್ತದೆ. ಆಗ ಇದು ಕಡ್ಡಿಯಂತೆ ಕಾಣುವುದರಿಂದ ಶತ್ರುಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಅನುಕೂಲವಾಗುವುದು. ಆ ಸ್ಥಿತಿಯಲ್ಲಿ ಡಿಂಬ ನೆಲವನ್ನು ಅಳೆಯುತ್ತಿರುವ ಟೇಪಿನಂತೆ ಕಾಣುತ್ತದೆ. ಆದ್ದರಿಂದ ಇದನ್ನು ಅಳತೆಯ ಹುಳು (ಮೆಶರಿಂಗ್ ವರ್ಮ್) ಎಂದು ಕರೆಯುವುದುಂಟು. ಚಲನೆಯಲ್ಲಿ ಇದು ಕುಣಿಕೆ ಹುಳುಗಳನ್ನು ಹೋಲುತ್ತದೆ. ಡಿಂಬಗಳು ಗಿಡಮರಗಳ ಎಲೆಗಳನ್ನು ತಿಂದು ಬೆಳೆಯುತ್ತವೆ.

ವಸಂತ ಕ್ಯಾಂಕರ್ ಹುಳುವಿನ ಡಿಂಬ ಚಳಿಗಾಲದಲ್ಲಿ ಕೋಶಾವಸ್ಥೆಯನ್ನು ಸೇರುತ್ತದೆ. ಹೊರಬರುವ ಹೆಣ್ಣುಚಿಟ್ಟೆ ವಸಂತಕಾಲದಲ್ಲಿ ಮೊಟ್ಟೆಯಿಡುತ್ತದೆ. ಮಾಗಿ ಕ್ಯಾಂಕರ್ ಹುಳು ಚಳಿಗಾಲವನ್ನು ಮೊಟ್ಟೆಯ ಅವಸ್ಥೆಯಲ್ಲಿ ಕಳೆಯುತ್ತದೆ; ಚಳಿಗಾಲ ಕಳೆದ ಅನಂತರ ಹೊರಬರುವ ಹೆಣ್ಣುಪತಂಗ ಮೊಟ್ಟೆಯಿಡುತ್ತದೆ. ವಸಂತ ಕ್ಯಾಂಕರ್ ಹುಳುವಿಗೆ ಉದರಭಾಗದಲ್ಲಿ ಎರಡು ಜೊತೆ ಮಿಥ್ಯಾಪಾದಗಳಿದ್ದರೆ ಮಾಗಿ ಕ್ಯಾಂಕರ್ ಹುಳುವಿನ ಡಿಂಬಕ್ಕೆ ಮೂರು ಜೊತೆ ಮಿಥ್ಯಾಪಾದಗಳು ಇರುತ್ತವೆ.

ಕ್ಯಾಂಕರ್ ಹುಳುಗಳು ಫಲವೃಕ್ಷಗಳಿಗೂ ಇತರ ಬೆಲೆಬಾಳುವ ಮರಗಳಿಗೂ ದೊಡ್ಡ ಪಿಡುಗಾಗಿ ಪರಿಣಮಿಸುವುದುಂಟು. ಇವುಗಳ ಡಿಂಬಗಳು ಎಲೆಗಳನ್ನೆಲ್ಲ ತಿಂದುಹಾಕಿ ಮರವನ್ನು ಬೋಳು ಮಾಡುತ್ತವೆ. ಇದರಿಂದ ಹಣ್ಣಿನ ಫಸಲು ಗಣನೀಯವಾಗಿ ಕಡಿಮೆಯಾಗುತ್ತದೆ. (ಬಿ.ಎಚ್.ಎಂ.)

**ಕ್ಯಾಂಟರ್, ಜಾರ್ಜ್ :** 1845–1918. ಜರ್ಮನಿಯ ಯುಗಪ್ರವರ್ತಕ ಗಣಿತ ವಿಜ್ಞಾನಿ. ಹುಟ್ಟಿದ್ದು ರಷ್ಯ ದೇಶದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ. ತಂದೆ ಜಾರ್ಜ್ ವಾಲ್ಡೆಮರ್ ಕ್ಯಾಂಟರ್, ತಾಯಿ ಮೇರಿಯ ಬೋಮ್. ಡೆನ್ಮಾರ್ಕಿನವನಾದ



ವಾಲ್ಡೆಮರ್ ಕ್ಯಾಂಟರ್ ತನ್ನ ಯೌವನದಲ್ಲೇ ರಷ್ಯಕ್ಕೆ ಹೋಗಿ ನೆಲೆಸಿದ್ದ. ಜಾರ್ಜ್ ಕ್ಯಾಂಟರ್ ಮಾರ್ಚ್ 3, 1845ರಲ್ಲಿ ಹುಟ್ಟಿದ. ಈತ ಕ್ಯಾಂಟರ್ ದಂಪತಿಗಳ ಮೊದಲನೆಯ ಮಗ. 1856ರ ವೇಳೆಗೆ ಜಾರ್ಜ್ ತನ್ನ ತಂದೆಯ ಜೊತೆಯಲ್ಲಿ ಜರ್ಮನಿಗೆ ಹೋಗಿ ನೆಲೆಸಿದ. ಇನ್ನೂ ಹದಿನೈದು ವರ್ಷದವನಾಗಿರುವಾಗಲೇ ಗಣಿತಶಾಸ್ತ್ರದಲ್ಲಿ ಈತನಿಗಿದ್ದ ವಿಶೇಷ ಪ್ರತಿಭೆಯನ್ನು ಅವನ ತಂದೆ ಗುರುತಿಸಿದ್ದ. ತನ್ನ ಮಗ ಎಂಜಿನಿಯರಿಂಗ್ ಓದಿದರೆ ಲೌಕಿಕದೃಷ್ಟಿಯಿಂದ ಸಮಾಜದಲ್ಲಿ ಉನ್ನತಿಯನ್ನು ಪಡೆಯಬಹುದೆಂಬ ದೃಷ್ಟಿಯನ್ನಿಟ್ಟುಕೊಂಡು ಆ ವೃತ್ತಿಯನ್ನು ಅಭ್ಯಸಿಸಬೇಕೆಂದು ಮಗನಿಗೆ ಆದೇಶ ನೀಡಿದ. ತಂದೆಯ ಇಚ್ಛೆಗೆ ವಿರುದ್ಧವಾಗಿ ಹೋಗಲಾಗದೆ ಎಂಜಿನಿಯರಿಂಗನ್ನೇ ಮಗ ಓದಿದ. ಮಗನಿಗೆ ವಯಸ್ಸು ಹದಿನೇಳು ತುಂಬಿ ವಿಶ್ವವಿದ್ಯಾಲಯವನ್ನು ಸೇರಿ ಆತನ ಭವಿಷ್ಯ ನಿರ್ಧಾರವಾಗುವಷ್ಟರಲ್ಲಿ ಅವನ

ಒಲವು ಗಣಿತ ವಿಜ್ಞಾನದ ಕಡೆಗೇ ಎಂಬುದು ತಂದೆಗೆ ಖಚಿತವಾಯಿತು. ಅಂತೆಯೇ ಇಷ್ಟ ಬಂದ ದಿಕ್ಕಿನಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಲು ಮಗನಿಗೆ ಅನುಮತಿ ನೀಡಿದ. ಈ ಸಂದರ್ಭದಲ್ಲಿ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿ ಜಾರ್ಜ್ ತಂದೆಗೆ ಬರೆದ ಪತ್ರ ಗಣಿತವಿಜ್ಞಾನದ ಕಡೆಗೆ ಅವನಿಗಿದ್ದ ತೀವ್ರ ಒಲವಿಗೆ ಒಂದು ನಿದರ್ಶನ. ವಿಶ್ವವಿದ್ಯಾಲಯದ ಮಟ್ಟದಲ್ಲಿ ಜೂರಿಕ್, ಗಟಿಂಗೆನ್ ಮತ್ತು ಬರ್ಲಿನ್ ವಿಶ್ವವಿದ್ಯಾಲಯಗಳಲ್ಲಿ ಕ್ಯಾಂಟರನ ವ್ಯಾಸಂಗ ತತ್ತ್ವಶಾಸ್ತ್ರ, ಭೌತವಿಜ್ಞಾನ ಮತ್ತು ಗಣಿತವಿಜ್ಞಾನಗಳಲ್ಲಿ ನಡೆಯಿತು. ಬರ್ಲಿನಿನಲ್ಲಿ ಈತ ವಿದ್ಯಾರ್ಥಿಯಾಗಿದ್ದಾಗ ಕುಮ್ಮರ್ ಮತ್ತು ಕ್ರೋನೆಕರ್ (**ನೋಡಿ– ಕ್ರೋನೆಕರ್, ಲಿಯೋಪಾಲ್ಡ್**) ಎಂಬ ಗಣಿತವಿಜ್ಞಾನಿಗಳು ಪ್ರಭಾವಶಾಲೀ ವ್ಯಕ್ತಿಗಳಾಗಿದ್ದರು. ಸಂಖ್ಯಾ ಸಿದ್ಧಾಂತ (ನಂಬರ್ ಥಿಯರಿ) ಅವರ ಪಾಂಡಿತ್ಯದ ವೈಶಿಷ್ಟ್ಯ. ಅವರ ಪ್ರಭಾವಕ್ಕೆ ಸಿಕ್ಕಿದ ಕ್ಯಾಂಟರ್ ಸಹ ತನ್ನ ಡಾಕ್ಟರೇಟ್ ಪ್ರಬಂಧಕ್ಕೆ ಇದೇ ಸಿದ್ಧಾಂತದಲ್ಲಿನ ಒಂದು ಸಮಸ್ಯೆಯನ್ನು ಆರಿಸಿಕೊಂಡ. ಈ ಪ್ರಬಂಧಕ್ಕೆ 1867 ರಲ್ಲಿ ಆತನಿಗೆ ಡಾಕ್ಟರೇಟ್ ಪದವಿ ದೊರೆಯಿತು. ಕ್ಯಾಂಟರನ ನಿಜ ಒಲವು ಗಣಿತದ ಒಂದು ಭಾಗವಾದ ವಿಶ್ಲೇಷಣ ಗಣಿತದಲ್ಲಿ ತೀವ್ರವಾಗಿತ್ತು. ವಿಶ್ಲೇಷಣ ಗಣಿತದಲ್ಲಿ ಪ್ರಚಂಡನಾಗಿದ್ದ ವೈಯರ್‌ಸ್ಟ್ರಾಸನ ಶಿಷ್ಯವೃತ್ತಿಯಲ್ಲಿ ಕ್ಯಾಂಟರ್ ಪ್ರಭಾವಿತನಾದ. ಫೂರಿಯರ್ ಶ್ರೇಣಿ ಎಂಬ ವಿಭಾಗ ಇವನ ಗಮನವನ್ನು ಬಲುವಾಗಿ ಸೆಳೆಯಿತು.

ವಿಶ್ಲೇಷಣ ಗಣಿತದಲ್ಲಿ ಉದ್ಭವವಾಗಿದ್ದ ಅಂದಿನ ಪ್ರಮುಖ ಸಮಸ್ಯೆಗಳೆಲ್ಲವುಗಳ ಪರಿಹಾರವನ್ನು ಹುಡುಕಲು ಹೊರಟ ಕ್ಯಾಂಟರನ ಮೇಧಾಶಕ್ತಿ ಅದರ ಮೂಲಭೂತ ಸಮಸ್ಯೆಗಳನ್ನೇ ಎದುರಿಸಬೇಕಾಗಿ ಬಂದಿತು. ಅಂದಿನ ಅನೇಕ ಸಮಸ್ಯೆಗಳ ಪರಿಹಾರಕ್ಕೆ ವಾಸ್ತವ ಸಂಖ್ಯೆಗಳನ್ನು (ರಿಯಲ್ ನಂಬರ್ಸ್) ಕುರಿತ ಒಂದು ತೃಪ್ತಿಕರವಾದ ಸಿದ್ಧಾಂತದ ಅವಶ್ಯಕತೆ ಇತ್ತು. ಇದರ ಪೂರೈಕೆಗೆ ಕ್ಯಾಂಟರ್ ಸಹ ಕಾರಣನಾದ. ಆದರೆ ಇವೆಲ್ಲಕ್ಕಿಂತ ಹೆಚ್ಚಾಗಿ ವಿಶ್ಲೇಷಣ ಗಣಿತಕ್ಕೆ ಕ್ಯಾಂಟರನ ಕ್ರಾಂತಿಕಾರೀ ಕೊಡುಗೆ ಎಂದರೆ ತತ್ತ್ವಶಾಸ್ತ್ರಜ್ಞರಿಗೂ ಗಣಿತವಿಜ್ಞಾನಿಗಳಿಗೂ ಗ್ರೀಕರ ಕಾಲದಿಂದಲೂ ವಿಶ್ಲೇಷನೆಗೆ ಸಿಕ್ಕದೆ ನುಣುಚಿಕೊಳ್ಳುತ್ತಿದ್ದ ಅನಂತದ ವಿಶ್ಲೇಷಣೆಯೇ ಆಗಿದೆ. (**ನೋಡಿ– ಅನಂತ ಮತ್ತು ಅನಂತಸೂಕ್ಷ್ಮ**)

1872ರ ವರೆಗೆ ಗಣಿತಶಾಸ್ತ್ರಜ್ಞರು ಅನಂತದ ಉಪಯೋಗವನ್ನು ಮಾಡುತ್ತಿದ್ದರೂ ಅದರ ಸ್ಪಷ್ಟ ಪರಿಕಲ್ಪನೆ ಯಾರಿಗೂ ಇದ್ದಂತಿರಲಿಲ್ಲ. ಹಾಗೂ ಪರಿಮಿತ ಪರಿಮಾಣಗಳನ್ನೊಳಗೊಂಡ ಗಣಿತಪರಿಕರ್ಮಗಳಲ್ಲಿ ಸಾಕ್ಷಾತ್ಕರಿಸಲ್ಪಟ್ಟ ಅನಂತಕ್ಕೆ ಯಾವ ಸ್ಥಾನವೂ ದೊರೆತಿರಲಿಲ್ಲ. ಅನಂತದ ಪರಿಕಲ್ಪನೆಗೆ ವಿಶ್ಲೇಷಣ ಗಣಿತದಲ್ಲಿ ವಹಿಸುತ್ತಿದ್ದ ಪಾತ್ರದ ಮಿತಿಯನ್ನು ಮುಂದಿನ ಉದಾಹರಣೆ ಸ್ಪಷ್ಟಪಡಿಸುತ್ತದೆ; $x$ ಒಂದು ಚರವಾಗಿರಲಿ, 1ನ್ನು $x$ ನಿಂದ ಭಾಗಿಸಿದಾಗ ಬರುವ ಉತ್ತನ್ನ $1/x$, $x = 0$ ಆದಾಗ ಇದಕ್ಕೆ ಅರ್ಥವಿರುವುದಿಲ್ಲ. ಏಕೆಂದರೆ 0 ಯಿಂದ ಭಾಗಿಸುವುದು ನಿಷಿದ್ಧ. ಆದರೆ $x$ ನ್ನು 0ಗೆ ಸಾಕಷ್ಟು ಹತ್ತಿರ ಕೊಂಡೊಯ್ಯುವುದರಿಂದ $1/x$ ನ ಬೆಲೆಯನ್ನು ಕೊಟ್ಟಿರುವ ಯಾವುದೇ ವಾಸ್ತವಿಕ ಸಂಖ್ಯೆ $k$ ಗಿಂತ ಹೆಚ್ಚಿರುವಂತೆ ಮಾಡಬಹುದು. ಆದ್ದರಿಂದ $k$ ಯನ್ನು ಸಾಕಷ್ಟು ದೊಡ್ಡ ಸಂಖ್ಯೆಯಾಗಿರುವಂತೆ ತೆಗೆದುಕೊಳ್ಳುವುದರ ಮೂಲಕ $1/x$ ನ ಬೆಲೆಯನ್ನು ಯಾವುದೇ ಮಿತಿಯಿಲ್ಲದಂತೆ ಹೆಚ್ಚು ಮಾಡಬಹುದು. ಈ ಸಂದರ್ಭವನ್ನು, $x$ ಶೂನ್ಯಗಾಮಿಯಾದಂತೆ $1/x$ ಅನಂತಗಾಮಿಯಾಗುತ್ತದೆ ಎಂದು ಸಂಕ್ಷೇಪವಾಗಿ ಸ್ಪಷ್ಟಪಡಿಸುತ್ತೇವೆ. ಅಂದರೆ ಪರಿಮಿತಪರಿಮಾಣಗಣಿತದ ಗಡಿಯ ಒಳಗೇ ನಡೆಯುವ ಒಂದು ವಿಶೇಷ ಸಂದರ್ಭವನ್ನು ವಿವರಿಸುವುದಕ್ಕಾಗಿ ಅನಂತದ ಅವತರಣಿಕೆ ಆಗಿದೆಯೇ ವಿನಾ ಪರಿಮಿತ ಪರಿಮಾಣಗಳೆಲ್ಲವನ್ನೂ ಮೀರಿದ ಅಪರಿಮಿತ ಪರಿಮಾಣವೊಂದರ ಮೂರ್ತ ಸ್ವರೂಪವಾಗಿ ಅನಂತ ಇಲ್ಲಿ ರೂಪುಗೊಂಡಿಲ್ಲ. ಆದರೂ ಅಂಥ ಒಂದು ಅಪರಿಮಿತ ಪರಿಮಾಣದ ಕಲ್ಪನೆಯ ಅಸ್ಪಷ್ಟ ಸ್ವರೂಪ ಈ ಸಂದರ್ಭದಲ್ಲಿ ಗೋಚರವಾಗುತ್ತದೆ. ಈ ಅಸ್ಪಷ್ಟ ಸ್ವರೂಪವನ್ನು ಗಣಿತ ವಿಜ್ಞಾನಿಗಳು ಗ್ರಹಿಸಿದ್ದರೂ ಕೂಡ ಅದರ ಅಸ್ಪಷ್ಟತೆಯಿಂದಾಗಿ ಅದನ್ನು ಗಣಿತಶಾಸ್ತ್ರ ಪರಿಕರ್ಮಗಳಿಂದ ಗಡೀಪಾರು ಮಾಡುವ ಅವಶ್ಯಕತೆ ಇತ್ತು. ಅಂತೆಯೇ ಅನಂತದ ಪರಿಕಲ್ಪನೆ ವಿಶ್ಲೇಷಣೆಗಣಿತದ ಮಿತಿಯನ್ನು ನಿರ್ಧರಿಸುವ ಸೀಮಾರೇಖೆಯಾಗಿತ್ತು. ಕ್ಯಾಂಟರ್ ರಂಗಪ್ರವೇಶ ಮಾಡಿದ್ದು ಈ ಸಂದರ್ಭದಲ್ಲಿ. 1874–1895ರ ಅವಧಿಯಲ್ಲಿ ಕ್ಯಾಂಟರ್ ಸೃಷ್ಟಿಸಿದ ಅನಂತದ ಸಿದ್ಧಾಂತಗಳು ಗಣಸಿದ್ಧಾಂತ ಅದರಲ್ಲೂ ಅನಂತ ಗಣಸಿದ್ಧಾಂತ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿವೆ. ಕ್ಯಾಂಟರನ ಈ ಗಣಸಿದ್ಧಾಂತದ ಸೂಕ್ಷ್ಮಪರಿಚಯವನ್ನು ಮುಂದೆ ಮಾಡಲಾಗಿದೆ. (**ನೋಡಿ– ಗಣ ಸಿದ್ಧಾಂತ**)

**ವ್ಯಾಖ್ಯೆ :** A ಮತ್ತು B ಎರಡು ಗಣಗಳಾಗಿರಲಿ. A ಮತ್ತು B ಗಳ ನಡುವೆ ಒಂದು ದ್ವೈಚಿತ್ರಣವಿದ್ದರೆ A ಮತ್ತು B ಗಣಗಳು ಪರಸ್ಪರ ಸಮಾನವಾಗಿವೆ (ಈಕ್ವಿವಲೆಂಟ್) ಎನ್ನುತ್ತೇವೆ.

ಉದಾಹರಣೆ 1. ಗಣ {1,2,3} ಮತ್ತು {x,y,z} ಪರಸ್ಪರ ಸಮಾನವಾಗಿವೆ. ಈ ಸಂದರ್ಭದಲ್ಲಿಯ ದ್ವೈಚಿತ್ರಣವನ್ನು ಚಿತ್ರ 1 ಅಥವಾ 2 ಸ್ಪಷ್ಟಪಡಿಸುತ್ತದೆ.

ಉದಾಹರಣೆ 2. AB ರೇಖೆಯ ಮೇಲಿರುವ ಬಿಂದುಗಳನ್ನೊಳಗೊಂಡ ಗಣವೂ CD ರೇಖೆಯ ಮೇಲಿರುವ ಬಿಂದುಗಳನ್ನೊಳಗೊಂಡ ಗಣವೂ ಪರಸ್ಪರ




ಸಮಾನವಾಗಿವೆ (ಚಿತ್ರ 3). ಈ ಸಂದರ್ಭದಲ್ಲಿ ದ್ವೈಚಿತ್ರಣ ಈ ರೀತಿ ಇದೆ. P ಯು AB ಮೇಲಿನ ಒಂದು ಬಿಂದುವಾಗಿರಲಿ. OP ಯನ್ನು ಜೋಡಿಸಿ ವೃದ್ಧಿಸಿದಾಗ ಅದು CD ಯನ್ನು Q ನಲ್ಲಿ ಛೇದಿಸಲಿ. ಪ್ರಸ್ತುತ ದ್ವೈಚಿತ್ರಣದಲ್ಲಿ P ಯ ಬಿಂಬ Q ಆಗಿರುತ್ತದೆ. ಹೀಗೆ A ಯ ಬಿಂಬ C, B ಯ ಬಿಂಬ D . ಅಲ್ಲದೇ A ಮತ್ತು B ಗಳ ನಡುವಣ ಬಿಂದುಗಳ ಬಿಂಬಗಳು C ಮತ್ತು D ಗಳ ನಡುವಣ ಬಿಂದುಗಳಾಗಿರುತ್ತವೆ.



ಚಿತ್ರ 2

ಪರಸ್ಪರ ಸಮಾನವಾಗಿರುವ ಗಣಗಳೆಲ್ಲ ಒಂದೇ ಕಾರ್ಡಿನಾಲಿಟಿ ಪಡೆದಿವೆಯೆಂದು ಹೇಳುತ್ತೇವೆ. ಅಂತೆಯೇ ಮೇಲೆ ಹೇಳಿದ ಉದಾಹರಣೆಗಳಲ್ಲಿ ಗಣ {1,2,3} ಮತ್ತು ಗಣ {x,y,z} ಇವೆರಡರ ಕಾರ್ಡಿನಾಲಿಟಿ ಒಂದೇ. ಹಾಗೆಯೇ AB ಮೇಲಿರುವ ಬಿಂದುಗಳನ್ನೊಳಗೊಂಡ ಗಣವೂ CD ಮೇಲಿರುವ ಬಿಂದುಗಳನ್ನೊಳಗೊಂಡ ಗಣವೂ ಒಂದೇ ಕಾರ್ಡಿನಾಲಿಟಿಯನ್ನು ಪಡೆದಿವೆ.

ಪ್ರತಿಭಾನದಿಂದ (ಇಂಟ್ಯೂಷನ್) ಹೇಳುವುದಾದರೆ ಒಂದೇ ಕಾರ್ಡಿನಾಲಿಟಿ ಇರುವ ಎರಡು ಗಣಗಳಲ್ಲಿರುವ ಧಾತುಗಳ ಸಂಖ್ಯೆ ಸಮವಾಗಿರುವುದು. ಆದರೆ ಒಂದು ಗಣದ ಧಾತುಗಳ ಸಂಖ್ಯೆ ಎಂದರೇನು?

ಗಣ {1,2,3} ಮತ್ತು ಗಣಗಳ {x,y,z} ಕಾರ್ಡಿನಾಲಿಟಿ ಸಮವಾಗಿರುವ ಸಂದರ್ಭ ಈ ಎರಡೂ ಗಣಗಳಲ್ಲಿ ಮೂರು ಧಾತುಗಳಿರುವುದರಿಂದ ಒದಗಿದೆ. ಆದರೆ AB ಸರಳರೇಖೆಯ ಮೇಲಿರುವ ಬಿಂದುಗಳ ಸಂಖ್ಯೆ (ಅಂದರೆ AB ಮೇಲಿರುವ ಬಿಂದುಗಳನ್ನು ಧಾತುಗಳಾಗಿ ಉಳ್ಳ ಗಣದ ಧಾತುಗಳ ಸಂಖ್ಯೆ) CD ಮೇಲಿರುವ ಬಿಂದುಗಳ ಸಂಖ್ಯೆಗೆ ಸಮ ಎನ್ನುವುದು ವಿಚಿತ್ರವೆನಿಸುತ್ತದೆ. ಏಕೆಂದರೆ CD ಸರಳ ರೇಖೆ AB ಗಿಂತ ಹೆಚ್ಚು ಉದ್ದವಾಗಿರುವುದರಿಂದ ಅದರಲ್ಲಿನ ಬಿಂದುಗಳ ಸಂಖ್ಯೆ ಅಧಿಕ ಎನ್ನಿಸುತ್ತದೆ.

ಇನ್ನೊಂದು ಉದಾಹರಣೆಯನ್ನು ಗಮನಿಸೋಣ.




ಮೇಲಿನ ಚಿತ್ರ ಧನಪೂರ್ಣಾಂಕಗಳನ್ನೊಳಗೊಂಡ ಗಣ N ಮತ್ತು ಧನಸರಿಪೂರ್ಣಾಂಕಗಳನ್ನೊಳಗೊಂಡ ಗಣಗಳ ನಡುವೆ ಒಂದು ದ್ವೈಚಿತ್ರಣವನ್ನು ಸೃಷ್ಟೀಕರಿಸುತ್ತದೆ. ಹೀಗಾಗಿ ಧನ ಸರಿ ಪೂರ್ಣಾಂಕಗಳ ಗಣದ ಮತ್ತು ಈ ಗಣವನ್ನು ಸಹ ಒಳಗೊಂಡಿರುವ ಧನ ಪೂರ್ಣಾಂಕಗಳ ಗಣದ ಕಾರ್ಡಿನಾಲಿಟಿ ಒಂದೇ. ಅಂದರೆ ಎಷ್ಟು ಧನ ಪೂರ್ಣಾಂಕಗಳಿವೆಯೋ ಅಷ್ಟೇ ಧನ ಸಂಪೂರ್ಣಾಂಕಗಳಿವೆ ಎಂದು ವ್ಯಾಖ್ಯಾನಿಸಬಹುದು. ಇದು ಕೂಡ ಒಂದು ವೈಚಿತ್ರ್ಯ. ಈ ವೈಚಿತ್ರ್ಯಗಳಿಗೆ ಕಾರಣ ಧಾತುಗಳ ಸಂಖ್ಯೆ ಎಂಬ ಪದ ಸಾಂತ ಗಣಗಳ ದೃಷ್ಟಿಯಿಂದ ನೋಡಿದಾಗ ಅರ್ಥಪೂರ್ಣವಾಗಿದ್ದು ಅನಂತ ಗಣಗಳ ದೃಷ್ಟಿಯಿಂದ ನೋಡಿದಾಗ ಅರ್ಥಹೀನವಾಗುತ್ತದೆ.

ಅಲ್ಲದೆ ಕಾರ್ಡಿನಾಲಿಟಿಯನ್ನು ಧಾತುಗಳ ಸಂಖ್ಯೆ ಎಂದು ವ್ಯಾಖ್ಯಾನಿಸಿದರೆ ಸಾಂತ ಗಣಗಳ ದೃಷ್ಟಿಯಿಂದ ಹೊಂದಾಣಿಕೆ ಇರುತ್ತದೆ. ಈ ಪ್ರಕಾರವಾಗಿ ಕಾರ್ಡಿನಾಲಿಟಿ ಧಾತುಗಳ ಸಂಖ್ಯೆ ಎಂಬ ಅರ್ಥವನ್ನೊಳಗೊಂಡಿರುವುದರ ಜೊತೆಗೆ ಅದಕ್ಕಿಂತ ಹೆಚ್ಚು ವ್ಯಾಪಕವಾದ ಅರ್ಥವನ್ನು ಸಹ ಪಡೆದಿದೆ. ಕಾರ್ಡಿನಾಲಿಟಿ ಎಂಬ ಈ ಒಂದು ಪರಿಕಲ್ಪನೆ ಕ್ಯಾಂಟರನ ಅನಂತರದ ಜಿಜ್ಞಾಸೆಯ ಅಡಿಗಲ್ಲು. ಈ ಅಡಿಗಲ್ಲು ಸಾಂತ ಪರಿಮಾಣಗಳ ಗಣಿತದಿಂದ ಅನಂತ ಪರಿಮಾಣಗಳ ಗಣಿತದೆಡೆಗೆ ಸಾಗಲು ಬೇಕಾದ ಸೇತುವೆ. ಸಾಂತಸಂಖ್ಯೆಯ ಧಾತುಗಳಿರುವ ಗಣಗಳ ಪ್ರಕೃತಿಯ ಅಧ್ಯಯನದಿಂದ ಅನಂತ ಸಂಖ್ಯೆಯ ಧಾತುಗಳಿಂದ ಗಣಗಳ ಪ್ರಕೃತಿಯ ಅಧ್ಯಯನದೆಡೆಗೆ ಸಾಗುವ ಮುನ್ನ ಬೇಕಾಗುವ ಅಸ್ತ್ರ ಕಾರ್ಡಿನಾಲಿಟಿ.

A ಒಂದು ಗಣವಾಗಿದ್ದು, ಅದರ ಕಾರ್ಡಿನಾಲಿಟಿ ಧನಪೂರ್ಣಾಂಕಗಣ {1,2,. . . n }ನ ಯೋಗ್ಯವಾದ ಒಂದು ಧನಪೂರ್ಣಾಂಕ n ಗೆ ಸಮವಾಗಿದ್ದರೆ A ಒಂದು ಸಾಂತ ಗಣವೆಂದೂ ಹಾಗಲ್ಲದಿದ್ದರೆ ಅದು ಒಂದು ಅನಂತ ಗಣವೆಂದೂ ಹೇಳುತ್ತೇವೆ. ಈ ನಿರೂಪಣೆಯಿಂದಾಗಿ, ಒಂದು ದತ್ತಗಣ A ಅನಂತ ಗಣವಾಗಬೇಕಾದರೆ ಅದರ ಒಂದು ಸಮುಚಿತ ಉಪಗಣದ ಕಾರ್ಡಿನಾಲಿಟಿ ಧನಪೂರ್ಣಾಂಕ ಗಣ N ನ ಕಾರ್ಡಿನಾಲಿಟಿಗೆ ಸಮವಾಗಿರಬೇಕೆಂದು ಸ್ಪಷ್ಟವಾಗುತ್ತದೆ. N ಒಂದು ಅನಂತ ಗಣವಾದ್ದರಿಂದ ಪ್ರತಿಯೊಂದು ಅನಂತ ಗಣವೂ ಕಡೇ ಪಕ್ಷ ಅನಂತ ಗಣ N ನಷ್ಟಾದರೂ ಧಾತುಗಳನ್ನು ಪಡೆದಿರಬೇಕೆಂದು ವಿದಿತವಾಗುತ್ತದೆ. ಅಂದರೆ ಅನಂತ ಗಣಗಳಲ್ಲೆಲ್ಲ N ಅತ್ಯಂತ ಚಿಕ್ಕ ಗಣ ಎಂದು ವ್ಯಾಖ್ಯಾನಿಸಬಹುದು. ಸರಿಧನ ಪೂರ್ಣಾಂಕಗಳ ಸಂಖ್ಯೆ ಅದನ್ನು ಒಳಗೊಂಡ N ನಲ್ಲಿರುವ ಧಾತುಗಳ ಸಂಖ್ಯೆಗಿಂತ ಹೆಚ್ಚಾಗಿರುವ ಒಂದು ವೈಚಿತ್ರ್ಯ ತನ್ನ ವೈಚಿತ್ರ್ಯವನ್ನು ಕಳೆದುಕೊಂಡು ಅನಂತ ಗಣಗಳ ಸ್ವಾಭಾವಿಕವಾದ ಪ್ರಕೃತಿಯನ್ನು ವಿಶದಪಡಿಸುವ ಒಂದು ಉದಾಹರಣೆಯಾಗುತ್ತದೆ. ಇಲ್ಲಿ ವಿಶದೀಕರಿಸಲ್ಪಟ್ಟ ಅನಂತ ಗಣಗಳ ಸ್ವಭಾವ ಈ ರೀತಿ ಇದೆ. A ಗಣ ಅನಂತವಾಗಬೇಕಾದರೆ ಅದರ ಕಾರ್ಡಿನಾಲಿಟಿ ಅದರದೇ ಒಂದು ಸಮುಚಿತ ಉಪಗಣದ ಕಾರ್ಡಿನಾಲಿಟಿಗೆ ಸಮವಾಗಿರಬೇಕು.

ಈ ಅನಂತ ಗಣಗಳ ನಿರೂಪಣೆಯನ್ನು ಡೆಡೆಕಿಂಟ್ ಎಂಬ ಗಣಿತವಿಜ್ಞಾನಿ ಕೊಟ್ಟ (1872). ಡೆಡೆಕಿಂಟ್ ಮತ್ತು ಕ್ಯಾಂಟರ್ ಸ್ನೇಹಿತರು ಮತ್ತು ಸಮಕಾಲೀನರು, ಇಬ್ಬರೂ ವೈಯರ್‌ಸ್ಟ್ರಾಸನ ಶಿಷ್ಯರು. 1874ರಲ್ಲಿ ಕ್ರೆಲ್ಲೆಯ ಜರ್ನಲಿನಲ್ಲಿ ಪ್ರಕಟವಾದ ಕ್ಯಾಂಟರನ ಲೇಖನ ಆತನನ್ನು ಅತ್ಯುನ್ನತ ಶಿಖರಕ್ಕೆ ಕೊಂಡೊಯ್ದುದು ಮಾತ್ರವಲ್ಲ, ಗಣಿತವಿಜ್ಞಾನದಲ್ಲಿ ಮಹಾಕ್ರಾಂತಿಯನ್ನೇ ಉಂಟುಮಾಡಿತು. ಈ ಹಿಂದೆಯೇ ಗಮನಿಸಿದಂತೆ ಪ್ರತಿಯೊಂದು ಅನಂತ ಗಣಕ್ಕೂ ಧನಪೂರ್ಣಾಂಕ ಗಣದ ಕಾರ್ಡಿನಾಲಿಟಿಗೆ ಸಮವಾದ ಕಾರ್ಡಿನಾಲಿಟಿಯುಳ್ಳ ಉಪಗಣವಿರುತ್ತದೆ. ಒಂದು ವೇಳೆ ಈ ಅನಂತ ಗಣದ ಕಾರ್ಡಿನಾಲಿಟಿ ಧನಪೂರ್ಣಾಂಕ ಗಣದ ಕಾರ್ಡಿನಾಲಿಟಿಗೆ ಸಮವಾದರೆ ಅಂಥ ಅನಂತ ಗಣಗಳನ್ನು ಗಣನೀಯ (ಡೆನ್ಯೂಮರೆಬಲ್ ಅಥವಾ ಕೌಂಟೆಬಲ್) ಎಂದು ಹೇಳುತ್ತೇವೆ. ಪ್ರತಿಭಾನದ ದೃಷ್ಟಿಗೆ ಒಂದು ಗಣ A ಗಣನೀಯ ಆಗಿದ್ದರೆ ಅದರ ಧಾತುಗಳನ್ನು ಎಡೆಬಿಡದೆ ಎಣಿಸಬಹುದು. ಮತ್ತು ಈ ಎಣಿಕೆಯಲ್ಲಿ ಪ್ರತಿ ಧಾತುವನ್ನೂ ಒಂದು ಸಲ ಹಾಗೂ ಒಂದೇ ಸಲ ಮಾತ್ರ ಏಣಿಕೆಗೆ ತೆಗೆದುಕೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿ ಗಣನೀಯ ಗಣ ಅನಂತ ಗಣಗಳಲ್ಲೆಲ್ಲ ಅತ್ಯಂತ ಚಿಕ್ಕದು ಎಂಬುದನ್ನು ಗಮನಿಸಬೇಕು.

ಈಗ ಒಂದು ಪ್ರಶ್ನೆ ಸಮಂಜಸವಾಗಿದೆ : ಗಣನೀಯವಲ್ಲದ ಅನಂತ ಗಣಗಳಿವೆಯೇ? E ={0,1}, 0 ಮತ್ತು 1 ರ ನಡುವಿನ ಎಲ್ಲ ವಾಸ್ತವ ಸಂಖ್ಯೆಗಳನ್ನೊಳಗೊಂಡ ಗಣವಾಗಿರಲಿ. E ಗಣನೀಯವಲ್ಲದ ಒಂದು ಅನಂತ ಗಣಕ್ಕೆ ಉದಾಹರಣೆ. ಇದನ್ನು ತೋರಿಸಲು ಹೀಗೆ ಮುಂದುವರಿಯುತ್ತೇವೆ: E ಗಣನೀಯವಲ್ಲದ ಗಣವಾಗಿದ್ದರೆ ಅದು ಗಣನೀಯ ಆಗಿರಲಿ. ಅಂದರೆ E ಮತ್ತು ಧನಪೂರ್ಣಾಂಕ ಗಣದ ನಡುವೆ ಒಂದು ದ್ವೈಚಿತ್ರಣ ಇದೆ. n ಒಂದು ಧನಪೂರ್ಣಾಂಕವಾಗಿದ್ದು E ಯಲ್ಲಿರುವ ಇದರ ಬಿಂದುವನ್ನು $a_n$ ಎಂದು ಕರೆಯೋಣ. ಮೇಲೆ ಹೇಳಿದ ದ್ವೈಚಿತ್ರಣದ ಅಸ್ತಿತ್ವದ ಅರ್ಥ ಈ ರೀತಿಯಾಗುತ್ತದೆ. E ಯಲ್ಲಿರುವ ಪ್ರತಿಯೊಂದು ಧಾತು ಸೂಕ್ತವಾದ n ಒಂದರ ಬಿಂಬ. ಅಂತೆಯೇ E ಯ ಧಾತುಗಳನ್ನು ಕೆಳಗೆ ಬರೆದಿರುವಂತೆ ಸಾಲಾಗಿ ಜೋಡಿಸಬಹುದು:

$$a_1, a_2, a_3, \ldots \ldots a_n$$

ಕೊನೆಗೊಳ್ಳದ ಈ ಸಾಲಿನಲ್ಲಿ E ಯಲ್ಲಿರುವ ಪ್ರತಿ ಧಾತುವೂ ಒಂದು ಸಲ ಹಾಗೂ ಒಂದೇ ಒಂದು ಸಲ ಕಾಣಿಸಿಕೊಳ್ಳುತ್ತದೆ. $a_n$ ಎಂಬುದು 0 ಮತ್ತು 1 ರ ನಡುವಿನ ಸಂಖ್ಯೆಯಾದ್ದರಿಂದ ಅದನ್ನು ಕೆಳಗೆ ತೋರಿಸುವಂತೆ ಬರೆಯಬಹುದು.

$a_n = 0. a_{n1} a_{n2} a_{n3} \ldots \ldots$ ಇಲ್ಲಿ $a_{nk}$ [ k = 1,2,3, ಇ., n=1,2,3 ಇ ] 0 ಮತ್ತು 9 ರ ನಡುವೆ (0 ಮತ್ತು 9ನ್ನೂ ಸೇರಿಸಿ) ಯಾವ ಬೆಲೆಯನ್ನಾದರೂ ತೆಗೆದುಕೊಳ್ಳಬಹುದು. [ಉದಾಹರಣೆ : 1/3 = 0.3333. . . . ½=0.4999. . . . ಗಮನಿಸಿ : ½= 0.5000 ಎಂದು ಬರೆಯುವುದಿಲ್ಲ] ಮುಂದೆ ಬರೆದಿರುವ ನೈಜ ಸಂಖ್ಯೆಯನ್ನು ಗಮನಿಸೋಣ.

$b = 0, b_1 b_2 b_3 \ldots \ldots$

ಇಲ್ಲಿ $a_{kk} = 1$ ಆದರೆ $b_k = 9$

$akk \neq 1$ ಆದರೆ $b_k = 1$

b ಯು E ಯ ಒಂದು ಧಾತು. ಆದರೆ b ಮೇಲೆ ಹೇಳಿದ, ಕೊನೆಗೊಳ್ಳದ ಸಾಲಿನಲ್ಲಿ, ಯಾವ ಸ್ಥಾನದಲ್ಲೂ ಇರಲು ಸಾಧ್ಯವಿಲ್ಲ. ಏಕೆಂದರೆ b ಯು $a_k$ ಯ ಸ್ಥಾನದಲ್ಲಿ ಬರುತ್ತದೆನ್ನೋಣ. ಅಂದರೆ $b = a_k$ ಆಗಿರಲಿ. ಆದರೆ ಇದು ಸಾಧ್ಯವಿಲ್ಲ. ಏಕೆಂದರೆ b ಮತ್ತು $a_k$ ಗಳ ಸ್ವರೂಪಗಳನ್ನು ಹೋಲಿಸಿದರೆ ದಶಮಾಂಶ ಚಿಹ್ನೆಯ ಅನಂತರ ಬರುವ k ಸ್ಥಾನದಲ್ಲಿ ಹೊಂದಾಣಿಕೆ ಇರುವುದಿಲ್ಲ. b ಯಾವ ಸ್ಥಾನದಲ್ಲೂ ಇರಲು ಸಾಧ್ಯವಿಲ್ಲ ಎನ್ನುವುದು ನಮ್ಮ ಮೊದಲಿನ ಹೇಳಿಕೆಗೆ ವ್ಯತಿರಿಕ್ತವಾಗಿದೆ. 0 ಮತ್ತು 1 ರ ನಡುವೆ ಇರುವ ನೈಜ ಸಂಖ್ಯೆಗಳ ಗಣನೀಯ ಆಗಿಲ್ಲದಿರುವ ಈ ಸಂದರ್ಭವನ್ನು ಈ ರೀತಿ ವ್ಯಾಖ್ಯಾನಿಸಬಹುದು. E ಯಲ್ಲಿರುವ ಪ್ರತಿಯೊಂದು ಸಂಖ್ಯೆಗೂ ಒಂದೇ ಒಂದು ಧನಪೂರ್ಣಾಂಕದಂತೆ E ಯ ಎಲ್ಲ ಸಂಖ್ಯೆಗಳಿಗೂ ಈ ಹೊಂದಾಣಿಕೆಯನ್ನು ಪೂರೈಸುವುದರೊಳಗಾಗಿ ಧನಪೂರ್ಣಾಂಕಗಳು ಮುಗಿದು ಹೋಗಿರುತ್ತವೆ. ಈ ಸಂದರ್ಭವನ್ನು E ಯ ಕಾರ್ಡಿನಾಲಿಟಿ ಧನಪೂರ್ಣಾಂಕ ಗಣದ ಕಾರ್ಡಿನಾಲಿಟಿಗಿಂತ ದೊಡ್ಡದು ಎಂದು ವಿವರಿಸುತ್ತೇವೆ.

ಅನಂತ ಗಣ E ಯ ಕಾರ್ಡಿನಾಲಿಟಿಯನ್ನು C ಎಂದು ನಮೂದಿಸುವುದು ವಾಡಿಕೆ. ಹಾಗೆಯೇ No(ಅಲೆಫ್ ಸೊನ್ನೆ) ಅನಂತಗಣ N ನ ಕಾರ್ಡಿನಾಲಿಟಿಯನ್ನು ಸೂಚಿಸುತ್ತದೆ. E ಯ ಕಾರ್ಡಿನಾಲಿಟಿ N ನ ಕಾರ್ಡಿನಾಲಿಟಿಗಿಂತ ಹೆಚ್ಚು ಎಂಬ ಅಂಶವನ್ನು No<C ಎಂದು ಬರೆಯುವುದರ ಮೂಲಕ ಸೂಚಿಸುತ್ತೇವೆ. ಮೇಲೆ ಬರೆದಿರುವ ಕಾರ್ಡಿನಾಲಿಟಿಗಾರ್ಡಿನವ ಕಾರ್ಡಿನವ ಕಾರ್ಡಿನ ಇನ್ನೂ ಸಾರ್ವತ್ರಿಕ ಸಂದರ್ಭಗಳಲ್ಲಿಯೂ ಮಾಡಬಹುದು. A ಮತ್ತು B ಎರಡು ಗಣಗಳಾಗಿರಲಿ. A ಯ ಕಾರ್ಡಿನಾಲಿಟಿಯನ್ನು card A ಎಂದೂ B ಯ ಕಾರ್ಡಿನಾಲಿಟಿಯನ್ನು card B ಎಂದೂ ಸೂಚಿಸಿದರೆ ಇವುಗಳ ಹೋಲಿಕೆಯನ್ನು ಈ ರೀತಿ ಮಾಡಬಹುದು. A ಹಾಗೂ B ಯ ಸಮುಚಿತ ಉಪಗಣ ಒಂದಕ್ಕೂ ನಡುವೆ ಒಂದು ದ್ವೈಚಿತ್ರಣವಿದ್ದರೆ ಆಗ card A < card B ಇದಕ್ಕೆ ವಿರುದ್ಧವಾಗಿದ್ದರೆ card B < card A ಎಂದೂ ಬರೆಯುತ್ತೇವೆ. A ಮತ್ತು B ಗಳು ಸಮಾನವಲ್ಲದಿದ್ದರೆ ಅಂದರೆ card A card B ಆಗ card A < card B ಅಥವಾ card B < card A ಆಗಿರುತ್ತದೆ.

A ಮತ್ತು B ಗಳು ಸಾಂತ ಗಣಗಳಾಗಿರುವಾಗ ಮೇಲೆ ಹೇಳಿದ ಕಾರ್ಡಿನಾಲಿಟಿಯ ಹೋಲಿಕೆ A ಮತ್ತು B ಗಳಲ್ಲಿರುವ ಧಾತುಗಳ ಸಂಖ್ಯೆಯ ಹೋಲಿಕೆಯಾಗಿರುತ್ತದೆ. A ಮತ್ತು B ಅನಂತಗಣಗಳಾಗಿರುವಾಗ ಅವುಗಳ ಕಾರ್ಡಿನಾಲಿಟಿಯ ಹೋಲಿಕೆಯ ಮೂಲದಲ್ಲಿರುವ ದ್ವೈಚಿತ್ರಣದ ಇರುವಿಕೆ ಅಥವಾ ಇಲ್ಲದಿರುವಿಕೆ ಸಾಂತಗಣಗಳ ಧಾತುಸಂಖ್ಯೆಯ ಹೋಲಿಕೆಯ ಅರ್ಥವನ್ನು ಅನಂತ ಗಣಗಳಿಗೂ ವ್ಯಾಪಕವಾಗುವಂತೆ ಮಾಡುತ್ತದೆ. ಈಗ 1,2,3. . . n ಇತ್ಯಾದಿ ಸಂಖ್ಯೆಗಳು ಒಂದು, ಎರಡು, ಮೂರು ಇತ್ಯಾದಿ n ಧಾತುಗಳನ್ನುಳ್ಳ ಗಣಗಳ ಕಾರ್ಡಿನಾಲಿಟಿಯನ್ನು ಸೂಚಿಸುತ್ತವೆ ಎಂದು ಕೊಳ್ಳಬಹುದು. ಮತ್ತೆ ಕಾರ್ಡಿನಾಲಿಟಿಗಳ ಹೋಲಿಕೆಯ ಅರ್ಥದಲ್ಲಿ ಈ ಕೆಳಗಿನ ಸಂಬಂಧ ಉಂಟು.

$$1 < 2 < 3 < \ldots < n < n + 1 < \ldots$$

ಈ ಒಂದು ಸಂಬಂಧದ ಸರಪಳಿಯಲ್ಲಿ ಗಣನೀಯ ಗಣದ ಕಾರ್ಡಿನಾಲಿಟಿ ಯಾವುದೇ ಸಾಂತ ಗಣದ ಕಾರ್ಡಿನಾಲಿಟಿಗಿಂತ ಹೆಚ್ಚಾಗಿರುವುದು. ಈಗಾಗಲೇ ಕಾರ್ಡಿನಾಲಿಟಿ C ಇರುವ E ಯ ಕಾರ್ಡಿನಾಲಿಟಿ ಗಣನೀಯ ಗಣದ ಕಾರ್ಡಿನಾಲಿಟಿಗಿಂತ ಹೆಚ್ಚೆಂದು ಗಮನಿಸಿದ್ದೇವೆ. ಆದ್ದರಿಂದ ಮೇಲಿನ ಸರಪಳಿಯನ್ನು ಈ ಕೆಳಗಿನಂತೆ ಬರೆಯಬಹುದು.

$$1 < 2 < 3 < \ldots < n < \ldots < No < C$$

ಗಣನೀಯ ಗಣಕ್ಕಿಂತ ಹೆಚ್ಚಿನ ಕಾರ್ಡಿನಾಲಿಟಿಯೂ C ಗಿಂತ ಕಡಿಮೆ ಕಾರ್ಡಿನಾಲಿಟಿಯೂ ಇರುವ ಗಣದ ಇರುವಿಕೆ ಅಥವಾ ಇಲ್ಲದಿರುವಿಕೆ ಇಂದಿಗೂ ತೀರ್ಮಾನವಾಗಿಲ್ಲ. ಮೇಲೆ ಬರೆದ ಕಾರ್ಡಿನಾಲಿಟಿಗಳ ಸಂಬಂಧದ ಸರಪಳಿಯನ್ನು ಅನಿರ್ದಿಷ್ಟವಾಗಿ ಮುಂದುವರಿಸಬಹುದು. ಇದನ್ನು ಮುಂದುವರಿಸಲು ಘಾತೋತ್ಪನ್ನ ಗನ ಎಂಬ ಪರಿಕಲ್ಪನೆ ಉಪಯುಕ್ತವಾಗುತ್ತದೆ.

A ಒಂದು ಗಣವಾಗಿರಲಿ. B ಯ ಧಾತುಗಳು ಯ ಉಪಗಣಗಳಾಗಿರಲಿ. ಆಗ ಯನ್ನು ಯ ಘಾತೋತ್ಪನ್ನ ಗಣ ಎನ್ನುತ್ತೇವೆ. ಉದಾಹರಣೆಗೆ ನಾಲ್ಕು ಧಾತುಗಳಿರುವ ಗಣ {Φ {1}, {2}, {1,2}} ಎರಡು ಧಾತುಗಳಿರುವ ಗಣ {1,2} ರ ಘಾತೋತ್ಪನ್ನ ಗಣ. n ಧಾತುಗಳಿರುವ ಗಣದ ಘಾತೋತ್ಪನ್ನ ಗಣದಲ್ಲಿ $2^n$ ಧಾತುಗಳಿರುತ್ತದೆ. a ಕಾರ್ಡಿನಾಲಿಟಿ ಇರುವ ಗಣದ ಘಾತೋತ್ಪನ್ನ ಗಣದ ಕಾರ್ಡಿನಾಲಿಟಿಯನ್ನು ಎಂದು

2a ಸೂಚಿಸುತ್ತೇವೆ. ಘಾತೋತ್ಪನ್ನ ಗಣದ ಕಾರ್ಡಿನಾಲಿಟಿ ಮೂಲಗಣಕ್ಕಿಂತ ಹೆಚ್ಚೆಂದು ತೋರಿಸಬಹುದು. ಅಲ್ಲದೆ ಗಣನೀಯ ಕಾರ್ಡಿನಾಲಿಟಿ ಇರುವ ಗಣದ ಘಾತೋತ್ಪನ್ನ ಗಣದ ಕಾರ್ಡಿನಾಲಿಟಿ C ಎಂದು ತೋರಿಸಬಹುದು. ಅಂದರೆ 2No=C ಈ ಹಿಂದೆ ಹೇಳಿದ ಕಾರ್ಡಿನಾಲಿಟಿಗಳ ಸಂಬಂಧದ ಸರಪಳಿಯನ್ನು ಮುಂದುವರಿಸುತ್ತ ಹೀಗೆ ಬರೆಯಬಹುದು.

$$No < C\ 1 < 2\ \ldots <,\ No < C < 2C < 2^{2^C}$$

$2^C$ ಮತ್ತು $2^{2C}$ಗಳ ಮಧ್ಯೆ ಇರುವ ಕಾರ್ಡಿನಾಲಿಟಿಯನ್ನು ಪಡೆದಿರುವ ಗಣಗಳಿರಬಹುದೆಂಬುದನ್ನು ಗಮನಿಸಬೇಕು. ಅನಂತ ಗಣಗಳ ಕಾರ್ಡಿನಾಲಿಟಿಯನ್ನು ಸೂಚಿಸುವ ಚಿಹ್ನೆಗಳಾದ No, C, $2^C$ ಇತ್ಯಾದಿಗಳನ್ನು ಸಾಂತಾತೀತ (ಟ್ರಾನ್ಸ್‌ಫೈನೇಟ್) ಸಂಖ್ಯೆಗಳೆಂದು ಕ್ಯಾಂಟರ್ ಕರೆ. ಸಾಂತ ಗಣಗಳ ಕಾರ್ಡಿನಾಲಿಟಿಯನ್ನು ಸೂಚಿಸುವ 1,2,3. . . .ಗಳಿಗೂ ಸಾಂತಾತೀತ ಸಂಖ್ಯೆಗಳಿಗೂ ಇರುವ ಸಂಬಂಧ ಈಗಾಗಲೇ ವ್ಯಕ್ತವಾಗಿದೆ. ಇದುವರೆಗೆ ಮಾಡಿದ ವಿವರಣೆಗಳು ಸಾಂತಾತೀತ ಸಂಖ್ಯೆಗಳ ಗಣಿತವೊಂದರ ನಿರ್ಮಾಣದ ದಿಕ್ಕಿನಲ್ಲಿ ಕ್ಯಾಂಟರನನ್ನು ಅನುಸರಿಸಿ ಇಟ್ಟ ಕೆಲವು ಹೆಜ್ಜೆಗಳು.

ಕ್ಯಾಂಟರ್ ನಿರ್ಮಿಸಿದ ಸಾಂತಾತೀತ ಸಂಖ್ಯೆಗಳ ಗಣಿತಕ್ಕೆ ಸಾಮಾನ್ಯ ಗಣಿತದೊಡನೆ ಅನೇಕ ಹೋಲಿಕೆಗಳಿವೆ. ಪರಿಮಿತ ಪರಿಮಾಣ ಗಣಿತವನ್ನು ಇದು ಶ್ರೀಮಂತಗೊಳಿಸಿದೆ. ಆದರೆ ಕ್ಯಾಂಟರನ ಕ್ರಾಂತಿಕಾರಕ ವಿಚಾರಗಳನ್ನು, ಅನಂತವೆಂಬ ಗುಮ್ಮದಿಂದ ಹೆದರಿಸಲ್ಪಟ್ಟಿದ್ದ, ಅವನ ಸಮಕಾಲೀನರನೇಕರು ಸ್ವಾಗತಿಸಲು ಸಿದ್ಧರಿರಲಿಲ್ಲ. ಕ್ಯಾಂಟರನ ವಿಚಾರಗಳನ್ನು ಅತ್ಯಂತ ವಿರೋಧಿಸಿದವರಲ್ಲಿ ಅವನ ಗುರುವಾಗಿದ್ದ ಕ್ರೋನೆಕರ್ ಮೊದಲಿಗ. ಸಾಕ್ಷಾತ್ಕರಿಸಲ್ಪಟ್ಟ ಅನಂತವನ್ನೇನಾದರೂ ಗಣಿತ ಪ್ರಪಂಚದೊಳಕ್ಕೆ ತಂದುದಾದರೆ ಗಣಿತವಿಜ್ಞಾನದ ಅವನತಿ ಸಿದ್ಧವಾದಂತೆಯೆ ಎಂದು ತಿಳಿದಿದ್ದಂಥ ಒಬ್ಬ ಗಣಿತಜ್ಞ ಕ್ರೋನೆಕರ್ ಕ್ಯಾಂಟರನ ವಿಚಾರಗಳು ಕೀರ್ತಿಪಡೆಯದಂತೆ ಸರ್ವವಿಧದಿಂದಲೂ ನೋಡಿಕೊಳ್ಳುವ ತೀರ್ಮಾನವನ್ನು ಕ್ರೋನೆಕರ್ ಕೈಗೊಂಡ. ಗಣಿತವಿಜ್ಞಾನಪ್ರಪಂಚದಲ್ಲಿ ಸಾಕಷ್ಟು ಪ್ರಭಾವಶಾಲಿಯಾಗಿದ್ದ ಕ್ರೋನೆಕರನ ಪ್ರಯತ್ನಗಳು ಬೌದ್ಧಿಕ ಮಟ್ಟದಲ್ಲಿಯೇ ಕ್ಯಾಂಟರನನೊಡನೆ ನಡೆದುವಾದರೂ ಸ್ವಭಾವತಃ ಮೃದುವೂ ವಿರೋಧದ ಮುಂದೆ ಅತಿ ಸುಲಭವಾಗಿ ಮುದುಡಿ ಹೋಗುವಂಥದೂ ಆಗಿದ್ದ ಕ್ಯಾಂಟರನ ಮನಸ್ಸಿನ ಮೇಲೆ ಕ್ರೋನೆಕರನ ವಿರೋಧ ತೀವ್ರ ಪರಿಣಾಮಗಳನ್ನುಂಟುಮಾಡಿತು. ಅಲ್ಲದೆ ಬರ್ಲಿನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕನಾಗುವಂಥ ಗೌರವಯುತ ಅವಕಾಶವನ್ನು ಆಸೆಪಟ್ಟ ಕ್ಯಾಂಟರನಿಗೆ ಆ ಪದವಿ ಎಂದೂ ದೊರೆಯಲಿಲ್ಲ. ಇದಕ್ಕೆ ಕಾರಣ ಕ್ರೋನೆಕರ್ ಎಂದು ಕ್ಯಾಂಟರ್ ಹೇಳಿಕೊಂಡಿದ್ದಾನೆ. ಅನಂತದ ವಿಶ್ಲೇಷಣೆಯ ಕಡೆ ಮೊದಲನೆಯ ಮತ್ತು ಕೊನೆಯ ಹೆಜ್ಜೆಯನ್ನು ಇಡುವಂಥ ಕ್ರಾಂತಿಕಾರಕ ಕೆಲಸವನ್ನು ಮಾಡಿಯೂ ತನಗೆ ಲಭಿಸಬೇಕಾಗಿದ್ದ ಕೀರ್ತಿ ದೊರೆಯಲಿಲ್ಲವೆಂದು ದುಃಖಿತನಾದ ಕ್ಯಾಂಟರ್ ಮನೋರೋಗಕ್ಕೆ ತುತ್ತಾದ. 1884ರಲ್ಲಿ ಕಾಣಿಸಿಕೊಂಡ ಈ ರೋಗದ ಚಿಹ್ನೆ 1918ರಲ್ಲಿ ಮನೋರೋಗ ಚಿಕಿತ್ಸಾಲಯವೊಂದರಲ್ಲಿ ಅವನು ನಿಧನ ಹೊಂದುವವರೆಗೂ ಪದೇಪದೇ ಮರುಕಳಿಸುತ್ತಿತ್ತು. ಮಧ್ಯೆ ಮನಸ್ಸು ಸ್ವಾಸ್ಥ್ಯಗೊಂಡಾಗಲೆಲ್ಲ ಕ್ಯಾಂಟರ್ ಗಣಿತನಿರ್ಮಾಣ ಕ್ರಿಯೆಯಲ್ಲಿ ಭಾಗಿಯಾಗುತ್ತಿದ್ದ. ಅವನ ಸೃಷ್ಟಿ ಶೀಲ ಮನಸ್ಸು ಸಾಂತಾತೀತ ಗಣಿತಪ್ರಪಂಚದಲ್ಲಿ ವಿಹರಿಸಿ ಇಲ್ಲಿನ ದುಃಖದುಮ್ಮಾನಗಳಿಂದ ವಿಮೋಚನೆ ಪಡೆಯಲು ಹವಣಿಸುತ್ತಿತ್ತು.

ಅಂದು ಗಣಿತಪ್ರಪಂಚಕ್ಕೆ ಕೊಟ್ಟ ಕ್ಯಾಂಟರನ ಕ್ರಾಂತಿಕಾರಕ ಕೊಡುಗೆಗಳು ಇಂದು ಗಣಿತವಿಜ್ಞಾನದ ಎಲ್ಲ ಕೊಂಬೆಗಳಲ್ಲೂ ಮಹತ್ತ್ವಪೂರ್ಣವಾದ ಪ್ರಭಾವವನ್ನು ಬೀರುತ್ತಿವೆ. ಗಣ ಎಂಬುದರ ಪರಿಕಲ್ಪನೆಯನ್ನು ಲಂಗುಲಗಾಮಿಲ್ಲದೆ ಉಪಯೋಗಿಸುವುದರಿಂದ ಉಂಟಾಗುವ ಅನೇಕ ವಿರೋಧಾಭಾಸಗಳು ಕ್ಯಾಂಟರನ ವಿಚಾರಗಳ ಮಿತಿಯನ್ನು ತೋರಿಸುತ್ತವೆಂಬುದೇನೋ ನಿಜ. ಎಷ್ಟೋ ವಿಧದಲ್ಲಿ ಕ್ಯಾಂಟರನ ಕ್ರಾಂತಿಕಾರಕ ವಿಚಾರಗಳು ಕೊರತೆಯುಳ್ಳದ್ದಾಗಿವೆ.ಆದರೆ ಎಲ್ಲ ಕ್ರಾಂತಿಕಾರಕ ವಿಚಾರಗಳಲ್ಲಿಯೂ ಇಂಥ ದೌರ್ಬಲ್ಯಗಳು ಕಾಣಿಸಿಕೊಳ್ಳುವುದು ಅಪರಿಹಾರ್ಯ.

ಗಣಿತವಿಜ್ಞಾನ ಪರಮೋಚ್ಚ ಮಿತಿಯನ್ನು ತಲುಪಿ ಅದರಲ್ಲಿ ಸಂಶೋಧಿಸಬಲ್ಲ ಅಂಶಗಳು ಇನ್ನಿಲ್ಲ ಎಂಬಂಥ ವಿಕಾಸರಹಿತ ಸ್ಥಿತಿಯನ್ನು ಅದು ಮುಟ್ಟಿದ್ದಾಗ, ಬೆಳವಣಿಗೆ ಇಲ್ಲದಂಥ ಯಾವುದೇ ಶಾಸ್ತ್ರವೂ ಪಳೆಯುಳಿಕೆಯಾಗಿ ಮಾತ್ರ ಉಳಿಯುವುದರಿಂದ ಗಣಿತ ಪಳೆಯುಳಿಕೆತನವನ್ನು ತಲಪಿತೇ ಎಂದು ಗಣಿತಜ್ಞರು ಚಿಂತಿಸುತ್ತಿದ್ದಾಗ, ಯೂಕ್ಲಿಡನ ಜ್ಯಾಮಿತಿ, ರೀಮಾನನ ಅನುಕಲನ, ನ್ಯೂಟನನ ಬಲವಿಜ್ಞಾನ ಎಂದು ಮುಂತಾಗಿ ಮಹಾನ್ವೇಷಣಕಾರರ ಹೆಸರುಗಳಿಂದಲೇ ವಿಶೇಷಿತವಾಗುವ ವಿಜ್ಞಾನ ವಿಭಾಗಗಳು ಇನ್ನಿಲ್ಲವಾಗಿ ಟಾಪಾಲಜಿ, ಮಾತೃಕೆ ಸಿದ್ಧಾಂತ ಮುಂತಾದ ಸಿದ್ಧಾಂತನಾಮಗಳೇ ಪ್ರಧಾನವಾಗಿ ಬಳಕೆಗೆ ಬಂದಿದ್ದಾಗ ಗಣಿತಸಿದ್ಧಾಂತ ಎಂಬ ನವಸ್ವರ್ಗವನ್ನು ಆವಿಷ್ಕರಿಸಿ ಪ್ರದರ್ಶಿಸಿದ ಯುಗಪುರುಷ ಕ್ಯಾಂಟರ್, ಕ್ಯಾಂಟರನ ಗಣ ಸಿದ್ಧಾಂತ ಅಥವಾ ಕ್ಯಾಂಟರನ ಸಿದ್ಧಾಂತ ಎಂದೇ ಇದರ ಹೆಸರು. ಈ ಶತಮಾನದ ಸುವಿಖ್ಯಾತ ಗಣಿತಜ್ಞ ಡೇವಿಡ್ ಹಿಲ್‌ಬರ್ಟ್‌ನ ಮಾತಿನಲ್ಲಿ ಹೀಗಿದೆ " ಒಂದು ಗಣಿತ ಮನಸ್ಸಿನ ಅತ್ಯಂತ ಪ್ರಶಂಸನೀಯ ಫಲ ಕ್ಯಾಂಟರನ ಈ ಸಿದ್ಧಾಂತ ಎಂದು ನನಗನ್ನಿಸಿದೆ. ಇಷ್ಟು ಮಾತ್ರವಲ್ಲ, ಮನುಷ್ಯನ ಅತ್ಯುನ್ನತ ಬೌದ್ಧಿಕ ವಿಜಯಗಳಲ್ಲಿ ಇದು ಒಂದು . . . .. ಕ್ಯಾಂಟರ್ ನಮಗಾಗಿ ಸೃಷ್ಟಿಸಿರುವ ಈ ಸ್ವರ್ಗದಿಂದ ಯಾರೂ ನಮ್ಮನ್ನು ಉಚ್ಚಾಟಿಸಲಾರರು." (ಎಸ್.ಕೆ.ಯು.)

**ಕ್ಯಾಂಟರ್‌ಬೆರಿ :** ಇಂಗ್ಲೆಂಡಿನ ಕೆಂಟ್ ಕೌಂಟಿಯ ಒಂದು ನಗರ. ಕೆಂಟ್‌ನ ಪೌರಸಂಸ್ಥೆ ಇರುವ ಊರು(ಬರೊ) ಎಂಬುದರಿಂದಾಗಿ ಇದಕ್ಕೆ ಕ್ಯಾಂಟರ್‌ಬೆರಿ ಎಂಬ ಹೆಸರು ಬಂತು. ಇದು ಒಂದು ಕ್ರೈಸ್ತ ಕ್ಷೇತ್ರ. ಲಂಡನ್ನಿನ ಆಗ್ನೇಯಕ್ಕೆ ಸು. 90 ಕಿ.ಮೀ. ಮತ್ತು ಡೋವರ್‌ನಿಂದ 25 ಕಿಮೀ ದೂರದಲ್ಲಿದೆ. ಪ್ರ.ಶ.ಪೂ. 200ರ ವೇಳೆಗಾಗಲೆ ಇಲ್ಲಿ ಜನವಸತಿ ಇತ್ತು. ಕಿರಿ ಕಣಿವೆಯಲ್ಲಿ ಹರಿಯುವ ಸ್ಟಾರ್ ನದಿ ಈ ಎಡೆಯಲ್ಲಿ ಮೈದಾನ ಪ್ರವೇಶ ಮಾಡುತ್ತದೆ. ಪ್ರ.ಶ. 43ರಲ್ಲಿ ರೋಮನರು ಇದನ್ನು ಆಕ್ರಮಿಸಿಕೊಂಡ ಮೇಲೆ ಇದೊಂದು ಸೇನಾ ನೆಲೆಯಾಯಿತು; ಇಲ್ಲಿ ಕೋಟೆಯ ನಿರ್ಮಾಣವೂ ಆಯಿತು. ರೋಮನರು ಇಲ್ಲೊಂದು ನಾಟ್ಯಮಂದಿರವನ್ನು ನಿರ್ಮಿಸಿದರು. ಬ್ರಿಟನಿನ ರೋಮನ್

ಕ್ಯಾಂಟರ್‌ಬೆರಿ ಕತೀಡ್ರಲ್

ನಾಟ್ಯಮಂದಿರಗಳಲ್ಲೆಲ್ಲ ಇದು ಅತ್ಯಂತ ದೊಡ್ಡದು. ಈ ಕಟ್ಟಡದ ಮತ್ತು ಪ್ರ.ಶ. 200ರಲ್ಲಿ ರೋಮನರು ಕಟ್ಟಿದ ಕೋಟೆಯ ಗೋಡೆಗಳ ಕುರುಹುಗಳು ಈಗಲೂ ಉಳಿದಿವೆ.

6ನೆಯ ಶತಮಾನದ ಕೊನೆಯ ವೇಳೆಗೆ ಇದು ಕೆಂಟಿನ ದೊರೆ ಎತೆಲ್‌ಬರ್ಟನ ರಾಜಧಾನಿಯಾಗಿತ್ತು. ಎತೆಲ್ ಬರ್ಟನ ರಾಣಿ ಬರ್ತಾ ಕ್ರೈಸ್ತಳಾಗಿದ್ದುದರಿಂದ ಕ್ರೈಸ್ತ ಸಂನ್ಯಾಸಿಗಳಿಗೆ ಈಕೆ ವಿಶೇಷ ಪ್ರೋತ್ಸಾಹ ನೀಡಿದಳು. ಇಂಗ್ಲಿಷರನ್ನು ಕ್ರೈಸ್ತಮತಕ್ಕೆ ಪರಿವರ್ತಿಸುವ ಉದ್ದೇಶದಿಂದ 597ರಲ್ಲಿ ರೋಮಿನಿಂದ ಸೇಂಟ್ ಆಗಸ್ಟೀನ್ ಇಲ್ಲಿಗೆ ಬಂದ. ಆಗ ಅಥವಾ ಸ್ವಲ್ಪ ಕಾಲಾನಂತರ, ಆಗಸ್ಟೀನ್ ಅಬೆಯ ನಿರ್ಮಾಣವಾಯಿತು. ಆಮೇಲೆ ಕಟ್ಟಲಾದ ಕ್ರೈಸ್ತಚರ್ಚು ಮುಂದೆ ಕ್ಯಾಂಟರ್‌ಬೆರಿಯ ಆರ್ಚ್‌ಬಿಷಪರ ಆರಾಧನಮಂದಿರವಾಯಿತು.

ಕ್ಯಾಂಟರ್‌ಬೆರಿಯ ಅನಂತರದ ಚರಿತ್ರೆಯೆಲ್ಲ ಚರ್ಚಿನ ಇತಿಹಾಸದೊಂದಿಗೆ ಕೂಡಿಕೊಂಡಿದೆ. ಕ್ಯಾಂಟರ್‌ಬೆರಿಯ ಆರ್ಚ್‌ಬಿಷಪ್ ಆಗಿದ್ದ ಥಾಮಸ್ ಬೆಕೆಟ್ (1118–70) ಇಲ್ಲಿಯೇ ಕೊಲೆಯಾದ. ಅವನ ಮಂದಿರವೇ ಇಂಗ್ಲೆಂಡಿನ ಪ್ರಸಿದ್ಧ ಪುಣ್ಯ ಕ್ಷೇತ್ರವಾಯಿತು. ಇಂಗ್ಲೆಂಡು ಮೇರಿಯ ಆಳ್ವಿಕೆಗೆ ಒಳಪಟ್ಟಿದ್ದ ಕಾಲದಲ್ಲಿ ಕ್ಯಾಂಟರ್‌ಬೆರಿಯಲ್ಲಿ ಅನೇಕ ಮಂದಿ ಪ್ರಾಟೆಸ್ಟಂಟರನ್ನು ಸಜೀವವಾಗಿ ಸುಡಲಾಯಿತು.

ಕ್ಯಾಂಟರ್‌ಬೆರಿಯಲ್ಲಿ ಅನೇಕ ಶಾಲಾಕಾಲೇಜುಗಳಿವೆ. ಅವುಗಳಲ್ಲಿ ಪ್ರಸಿದ್ಧವಾದ್ದು ಕಿಂಗ್ಸ್ ಸ್ಕೂಲ್. 1970ರಲ್ಲಿ ಇಲ್ಲಿ ಕೆಂಟ್ ವಿಶ್ವವಿದ್ಯಾಲಯ ಸ್ಥಾಪಿತವಾಯಿತು.

ಲ್ಯಾನ್‌ಫ್ರಾಂಕ್ 1070ರಲ್ಲಿ ಕ್ಯಾಂಟರ್‌ಬೆರಿಯ ಆರ್ಚ್‌ಬಿಷಪ್ ಆದಮೇಲೆ ಇಲ್ಲಿಯ ಹಳೆಯ ಸ್ಯಾಕ್ಸನ್ ಆರಾಧನಮಂದಿರವನ್ನು ಸಂಪೂರ್ಣವಾಗಿ ಪುನರ್ನಿರ್ಮಿಸಲಾಯಿತು. 1170–1184ರಲ್ಲಿ ಅವಧಿಯಲ್ಲಿ ಕಟ್ಟಲಾದ ಪ್ರವಚನ ಮಂಟಪ (ಕ್ವೈರ್) ಇಂಗ್ಲೆಂಡಿನ ಗಾಥಿಕ್ ವಾಸ್ತುಶಿಲ್ಪದ ಅತ್ಯಂತ ಹಳೆಯ ಮಾದರಿ. ಮಠೀಯ ಆರಾಧನಮಂದಿರವನ್ನು ಭವ್ಯವಾದ ರೀತಿಯಲ್ಲಿ ಪುನರ್ನಿರ್ಮಿಸಿದ್ದು 14ನೆಯ ಶತಮಾನದಲ್ಲಿ. ಬೆಕೆಟನ ಗೋರಿ 1538ರಲ್ಲಿ ರೆಫರ್ಮೇಷನ್ ಕಾಲದಲ್ಲಿ ನಾಶವಾಯಿತು. ಉಳಿದಿರುವ ಗೋರಿಗಳಲ್ಲಿ ಬ್ಲ್ಯಾಕ್ ಪ್ರಿನ್ಸನದು ಒಳ್ಳೆಯ ಸ್ಥಿತಿಯಲ್ಲಿದೆ. ನಗರದ ಉತ್ತರ ಭಾಗದಲ್ಲಿ ಅನೇಕ ಕ್ರೈಸ್ತಮಠಗಳ ಅವಶೇಷಗಳುಂಟು. (ಜಿ.ಜಿ.ಎಂ.)

**ಕ್ಯಾಂಟೆಮಿರ್, ಆಂಟಿಯೋಕ್:** 1708–44. ರಷ್ಯನ್ ವಿಡಂಬನಕಾರ. ಶ್ರೀಮಂತ ಮನೆತನದಲ್ಲಿ ಹುಟ್ಟಿದ ಈತ ರಾಜಕೀಯವನ್ನು ಪ್ರವೇಶಿಸಿ, ಮಂತ್ರಿಪದವಿಯನ್ನು ಪಡೆದ. ಪ್ರಗತಿ ವಿರೋಧಿಗಳಾದ ಹಳೆಯ ಕಾಲದ ಮನೋಭಾವದ ಜನರನ್ನೂ ಯುರೋಪಿನ ಫ್ಯಾಷನ್‌ಗಳ ಅನುಕರಣೆಯಲ್ಲಿ ತೊಡಗಿದ ಅಲಂಕಾರಪ್ರಿಯ ಯುವಕರನ್ನೂ

ಈತ ಹಾಸ್ಯಮಾಡಿದ್ದಾನೆ. ಇವನ ವಿಡಂಬನೆಗಳು ಪ್ರಕಟವಾದುದು 1762ರಲ್ಲಿ. ಕುತೂಹಲವನ್ನು ಕೆರಳಿಸುವಂಥ ಸಮಕಾಲೀನ ಜೀವನದ ಚಿತ್ರಗಳು ಇಲ್ಲಿ ದೊರಕುತ್ತವೆ. ಸೋದ್ದೇಶ ಕಲೆಯನ್ನು ರಷ್ಯನ್ ಸಾಹಿತ್ಯದಲ್ಲಿ ಮೊತ್ತ ಮೊದಲ ಬಾರಿಗೆ ಕಾಣುವುದು ಈ ವಿಡಂಬನೆಗಳಲ್ಲಿ. ಕ್ಯಾಂಟೆಮಿರ್ ಹಳೆಯ ಸಿಲಬಿಕ್ ಛಂದಸ್ಸನ್ನು ಬಳಸಿಕೊಂಡಿದ್ದಾನೆ. ವಿಡಂಬನಕಾರನಾಗಿ ಈತ ಹಾರೆಸನನ್ನು ಹೋಲುತ್ತಾನೆ ಎನ್ನಲಾಗಿದೆ. (ಎಲ್.ಎಸ್.ಎಸ್.)

**ಕ್ಯಾಂಡಿ :** ಶ್ರೀಲಂಕಾ ಗಣರಾಜ್ಯದ ಒಂದು ಪಟ್ಟಣ. ಮಧ್ಯ ಪ್ರಾಂತ್ಯ ಮತ್ತು ಕ್ಯಾಂಡಿ ಜಿಲ್ಲೆ–ಇವುಗಳ ಆಡಳಿತಕೇಂದ್ರ. ಶ್ರೀಲಂಕಾ ದ್ವೀಪದ ಮಧ್ಯ ಬಿಂದುವಿನ ಬಳಿ, ಕ್ಯಾಂಡಿ ಪ್ರಸ್ಥಭೂಮಿಯ ಮೇಲಿದೆ. ಇದರ ಎತ್ತರ ಸಮುದ್ರಮಟ್ಟದಿಂದ 485 ಮೀ ಕೊಲಂಬೋದ ಈಶಾನ್ಯಕ್ಕೆ ರೈಲುಮಾರ್ಗದಲ್ಲಿ 120 ಕಿಮೀ ದೂರದಲ್ಲಿದೆ.

ಸುಂದರವಾದ ಗಿರಿವನಗಳ ನಡುವೆ ನೆಲೆಸಿರುವ ಕ್ಯಾಂಡಿ ಪಟ್ಟಣದ ನಡುವೆ ರಮ್ಯವಾದ ಸರೋವರವೊಂದಿದೆ. ಕ್ಯಾಂಡಿಯಲ್ಲಿ ಆಳುತ್ತಿದ್ದ ಕೊನೆಯ ದೊರೆ ಶ್ರೀವಿಕ್ರಮ ರಾಜಸಿಂಘೆ ಇದನ್ನು 1806ರಲ್ಲಿ ಕಟ್ಟಿಸಿದ. ಕ್ಯಾಂಡಿ ಸು.1480ರಿಂದಲೂ ಈ ಹೆಸರಿನ ರಾಜ್ಯದ ರಾಜಧಾನಿಯಾಗಿತ್ತು. 16ನೆಯ ಶತಮಾನದಲ್ಲಿ ಪೋರ್ಚುಗೀಸರೂ 1763ರಲ್ಲಿ ಡಚ್ಚರೂ ಇದನ್ನು ಸ್ವಲ್ಪಕಾಲ ಆಕ್ರಮಿಸಿಕೊಂಡಿದ್ದರಾದರೂ 1815ರಲ್ಲಿ ಇದು ಬ್ರಿಟಿಷರ ವಶವಾಗುವವರೆಗೂ ಇಲ್ಲಿಯ ದೊರೆಗಳು ಸಾಮಾನ್ಯವಾಗಿ ತಮ್ಮ ಸ್ವಾತಂತ್ರ್ಯವನ್ನುಳಿಸಿಕೊಂಡಿದ್ದರು.



ಕ್ಯಾಂಡಿ ಪಟ್ಟಣದ ಒಂದು ನೋಟ

ಕ್ಯಾಂಡಿಯಲ್ಲಿ ಅನೇಕ ದೇವಸ್ಥಾನಗಳಿವೆ. ಇವುಗಳ ಪೈಕಿ ಬುದ್ಧನ ಪವಿತ್ರ ಹಲ್ಲನ್ನಿಟ್ಟಿರುವ ದೇವಸ್ಥಾನ ಹಳೆಯದು. ಇಲ್ಲಿ ವರ್ಷಕ್ಕೊಮ್ಮೆ ಒಂದು ಉತ್ಸವ ನಡೆಯುತ್ತದೆ. ಕ್ಯಾಂಡಿಗೆ 5 ಕಿಮೀ ದೂರದಲ್ಲಿರುವ ಪೆರಡೆನಿಯದಲ್ಲಿ ಸಸ್ಯೋದ್ಯಾನವೂ ಸಿಲೋನ್ ವಿಶ್ವವಿದ್ಯಾಲಯದ ಒಂದು ಭಾಗವೂ ಇದೆ. ಅದಕ್ಕೆ ಹತ್ತಿರದಲ್ಲೆ ಎರಡು ಬೌದ್ಧ ದೇವಾಲಯಗಳುಂಟು.

ಕ್ಯಾಂಡಿ ಜಿಲ್ಲೆಯ ವಿಸ್ತೀರ್ಣ 2367 ಚಕಿಮೀ ಈ ಜಿಲ್ಲೆಯಲ್ಲಿ ಚಹ ತೋಟಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕ್ಯಾಂಡಿ ನಗರಕ್ಕೆ ಕೆಲವು ಕಿಲೋಮೀಟರ್ ದೂರದಲ್ಲಿ ಹರಿಯುವ ಮಹಾವೇಲಿ ಗಂಗಾನದಿಯ ದಡದಲ್ಲಿ ಕಕಾವೊ ತೋಟಗಳುಂಟು. (ಕೆ.ಕೆ.ಆರ್.)

**ಕ್ಯಾಂಡಿಟಫ್ಟ್ :** ಕ್ರೂಸಿಫೆರೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ ಜಾತಿ. ಐಬೆರಿಸ್ ಇದರ ವೈಜ್ಞಾನಿಕ ನಾಮ. ಬಲುಸುಂದರವಾದ ಮತ್ತು ಗೊಂಚಲು ಗೊಂಚಲಾದ ಹೂಗಳನ್ನು ಬಿಡುವುದರಿಂದ ಇದನ್ನು ಮಡಿಗಳಲ್ಲಿಯೂ ಕುಂಡಗಳಲ್ಲಿಯೂ ಬೆಳೆಸಲಾಗುತ್ತದೆ. ಅಲ್ಲದೆ ಹೂದಾನಿಗಳಲ್ಲಿಡುವುದಕ್ಕೂ ಹೂಗಳು ಸೊಗಸಾಗಿವೆ.

ಕ್ಯಾಂಡಿಟಫ್ಟ್ ಸುಮಾರು 6"–12" ಎತ್ತರಕ್ಕೆ ಬೆಳೆಯುವ ಏಕವಾರ್ಷಿಕ ಇಲ್ಲವೆ ಬಹುವಾರ್ಷಿಕ ಮೂಲಿಕೆ ಸಸ್ಯ. ನಯವಾದ, ಕೂದಲುಗಳಿಲ್ಲದ ಕಾಂಡ. ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿರುವ ಸರಳ ಎಲೆಗಳು, ಚೆಲುವಾದ ಕುಚ್ಚುಗಳಂತೆ ಕಾಣುವ ಛತ್ರಮಂಜರಿ ರೀತಿಯ ಹೂಗೊಂಚಲುಗಳು–ಇವು ಇದರ ಮುಖ್ಯ ಲಕ್ಷಣಗಳು. ಈ ಜಾತಿಯಲ್ಲಿ ಸುಮಾರು 30–40 ಪ್ರಭೇದಗಳಿವೆ. ದಕ್ಷಿಣ ಯುರೋಪ್, ಪಶ್ಚಿಮ ಏಷ್ಯ ಮತ್ತು ಉತ್ತರ ಆಫ್ರಿಕಗಳ ಮೂಲವಾಸಿಗಳಾದ ಇವನ್ನು ಸುಂದರವಾದ ಹೂಗಳಿಗಾಗಿ ಬೇರೆ ದೇಶಗಳಲ್ಲೂ ಬೆಳೆಸಲಾಗುತ್ತದೆ. ಅಲಂಕಾರದ ದೃಷ್ಟಿಯಿಂದ ಅತಿ ಹೆಚ್ಚು ಪ್ರಾಮುಖ್ಯತೆ ಪಡೆದಿರುವ ಪ್ರಭೇದಗಳನ್ನು ಮಾತ್ರ ಮುಂದೆ ಹೆಸರಿಸಲಾಗಿದೆ: 1.ಐ.ಅಮಾರ–ಬಿಳಿ ಹೂವಿನ ಬಗೆ. 2.ಐ.ಅಂಬೆಲೇಟ–ಊದಾ ಬಣ್ಣದ ಹೂ ಬಿಡುವಂಥದು. 3.ಐ.ಓಡೊರೇಟ–ಬಿಳಿ ಹೂ ಬಿಡುವಂಥದು. ಅಲ್ಲದೆ ಹೂಗಳಿಗೆ ನವುರಾದ ಸುವಾಸನೆಯಿದೆ.

ಕ್ಯಾಂಡಿಟಫ್ಟಿನ ಎಲ್ಲ ಪ್ರಭೇದಗಳೂ ಎಂಥ ಬಗೆಯ ತೋಟದ ಮಣ್ಣಿನಲ್ಲಾದರೂ ಬೆಳೆಯಬಲ್ಲವು. ಗಾಳಿ, ಬೆಳಕು ಚೆನ್ನಾಗಿರಬೇಕು ಅಷ್ಟೆ. ಹೆಚ್ಚು ಆರೈಕೆ ಮಾಡಬೇಕಿಲ್ಲ.

ಆದ್ದರಿಂದ ಇವುಗಳ ವೃದ್ಧಿ ಬಹಳ ಸುಲಭ ಎನಿಸಿದೆ. ವೃದ್ಧಿ ಬೀಜದ ಮೂಲಕವೇ. ಬೀಜಗಳನ್ನು ನೇರವಾಗಿ ಮಡಿಗಳಲ್ಲಿ ಇಲ್ಲವೆ ಕುಂಡಗಳಲ್ಲಿ ಬಿತ್ತಿ ಸಸಿಗಳನ್ನು ಪಡೆದು, ಅವು ಸಾಕಷ್ಟು ದೊಡ್ಡದಾದ ಮೇಲೆ 6"–9" ಅಂತರಕ್ಕೊಂದರಂತೆ ಸಸಿಗಳನ್ನು ಬಿಟ್ಟು ಉಳಿದವನ್ನು ಕಿತ್ತುಹಾಕಬೇಕು. ಇದರಿಂದ ಗಿಡಗಳು ಸಾಕಷ್ಟು ಹರಡಿಕೊಂಡು ಹೂಬಿಡಲು ಅನುಕೂಲವಾಗುತ್ತದೆ. 25, 30 ಮತ್ತು 35ನೆಯ ದಿವಸಗಳಲ್ಲಿ ಹಿಂಡಿಗೊಬ್ಬರದ ದ್ರಾವಣ ಹಾಕಬೇಕು. ಬೀಜ ಬಿತ್ತಿದ ಸುಮಾರು 3 ತಿಂಗಳ ಅನಂತರ ಗಿಡಗಳು ಹೂ ಬಿಡಲು ಆರಂಭಿಸುತ್ತವೆ. (ಕೆ.)

**ಕ್ಯಾಂಥರಿಡೀ :** ಕೀಟವರ್ಗದ ಕೋಲಿಯಾಪ್ಟರ ಗಣ ಏಡಿಫ್ಯಾಗ ಉಪಗಣಕ್ಕೆ ಸೇರಿದ ಒಂದು ಕುಟುಂಬ. ಟೆಲಿಫೋರಿಡೀ ಎಂಬುದು ಇದರ ಪರ್ಯಾಯ ನಾಮ. ಇದಕ್ಕೆ ಸೇರಿದ ಕೀಟಗಳನ್ನು ಸೈನಿಕ ಜೀರುಂಡೆಗಳು (ಸೋಲ್ಜರ್ ಬೀಟಲ್ಸ್) ಎನ್ನಲಾಗುತ್ತದೆ. ಇವುಗಳ ದೇಹ ಮಧ್ಯಮಗಾತ್ರದ್ದು (ಸುಮಾರು ½"); ನೀಳವಾಗಿ ಕೊಳವೆಯಂತಿದೆ. ದೇಹದ ಮೇಲೆಲ್ಲ ಮೃದುಚರ್ಮ ಇದೆ. ಎಲಿಟ್ರಗಳು ಚಕ್ಕಳದಂತಿವೆ. ಕೆಲವು ಬಗೆಗಳಲ್ಲಿ ವೆಲ್ವೆಟಿನಂತಿರಬಹುದು. ಕತ್ತು ಬಹಳ ಕಿರಿದು. ಆಂಟೆನಗಳು ಎರಡು; ನೀಳವಾಗಿ ತಂತಿಯಂತೆಯೊ ಗರಗಸದಂತೆಯೊ ಇವೆ. ಒಂದೊಂದು ಆಂಟೆನದಲ್ಲೂ ಹನ್ನೊಂದು ಖಂಡಗಳಿವೆ. ಎದೆಯ ಮುಂಭಾಗ (ಪ್ರೋಥೊರ್ಯಾಕ್ಸ್) ಮಧ್ಯಭಾಗಕ್ಕಿಂತ ಹೆಚ್ಚು ಸ್ಪಷ್ಟ ಹಾಗೂ ಕಿರಿದು. ಮುಂಗಾಲುಗಳು ಬಲವಾಗಿವೆ. ಕಾಲಿನ ಟಾರ್ಸಸ್‍ನಲ್ಲಿ 5 ಖಂಡಗಳಿಂದ ಕೂಡಿದೆ. ಈ ಕೀಟಗಳ ಡಿಂಬ ಬಲು ಉದ್ದ. ಡಿಂಬ ಹಾಗೂ ಪ್ರೌಢಜೀವಿಗಳೆರಡೂ ಹಗಲಿನಲ್ಲೇ ಹೆಚ್ಚು ಚಟುವಟಿಕೆಯಿಂದಿರುತ್ತವೆ. ಪರಾಗವೇ ಇವುಗಳ ಪ್ರಧಾನ ಆಹಾರ. ಕೆಲವು ಬಗೆಗಳು ಮಾತ್ರ ಬೇರೆ ಕೀಟಗಳನ್ನು ತಿನ್ನುವುದುಂಟು.

ಕ್ಯಾಂಥರಿಡೀ ಕುಟುಂಬದಲ್ಲಿ ಸುಮಾರು 1,300 ಪ್ರಭೇದಗಳಿವೆ. ಇವುಗಳಲ್ಲಿ ಮುಖ್ಯವಾದವು–ಕ್ಯಾಂಥರಿಸ್, ಚೌಲಿಯಾನ್ಯಾತಸ್, ಡಾಸಿಟಿಸ್, ಮಾಲ್ತಿನಸ್, ಮಾಲ್ತೋಡಸ್, ಪೋಡೊಬ್ರಸ್, ಪೋಲೇಮಿಯಸ್ ಮತ್ತು ರ್ಯಾಗೋನೈಕ. (ಜಿ.ವಿ.ಎನ್.)

**ಕ್ಯಾಂಪಿಯನ್, ಥಾಮಸ್ :** 1567–1619. ಆಂಗ್ಲಕವಿ ಮತ್ತು ಸಂಗೀತಗಾರ. ಎಸೆಕ್ಸಿನ ವಿಥಾಮ್‍ನಲ್ಲಿ ಹುಟ್ಟಿದ. ವ್ಯಾಸಂಗ ಕೇಂಬ್ರಿಜ್‍ನಲ್ಲಿ ನಡೆಯಿತು. ನ್ಯಾಯಶಾಸ್ತ್ರ ಮತ್ತು ವೈದ್ಯವಿಜ್ಞಾನಗಳನ್ನು ಅಭ್ಯಾಸಮಾಡಿದ ಈತ ಲಂಡನ್ನಿನಲ್ಲಿ ವೈದ್ಯನಾದ. ಸಂಗೀತದಲ್ಲಿ ಅಭಿರುಚಿ ಪರಿಶ್ರಮಗಳೆರಡೂ ಇದ್ದುದರಿಂದ ವಾದ್ಯಮೇಳಗಳೊಡನೆ ಹಾಡುವ ಲಘುಗೀತೆಗಳನ್ನು ರಚಿಸಿದುದಲ್ಲದೆ ಶ್ರೇಷ್ಠಮಟ್ಟದ ಮೊಗವಾಡ ನಾಟಕಗಳನ್ನು (ಮಾಸ್ಕ್) ರಚಿಸಿದ. ಈತನ ಕವನಗಳು ವಿವಿಧ ಛಂದೋವಿನ್ಯಾಸಗಳಿಂದ ಕೂಡಿದವಾಗಿ ಮೋಹಕತೆ ಸೂಕ್ಷ್ಮತೆಗಳಿಗೆ ಹೆಸರಾಗಿವೆ. 1595ರಲ್ಲಿ ನಾಟುನುಡಿ, ಶೋಕಗೀತೆ ಮತ್ತು ಇತರ ಕವನಗಳಿಂದ ಕೂಡಿದ ಲ್ಯಾಟಿನ್ ಕವನ ಸಂಕಲನವೊಂದನ್ನು ಪ್ರಕಟಿಸಿದ್ದಲ್ಲದೆ ರಾಜಸಭೆಯಲ್ಲಿ ಪ್ರದರ್ಶಿಸಲು ಕೆಲವು ಮೊಗವಾಡ ನಾಟಕಗಳನ್ನು ಬರೆದ. 1601 ರಿಂದ 1617ರ ತನಕ ಬರೆದ ಎ ಬುಕ್ ಆಫ್ ಏರ್ಸ್ ಎಂಬ ರಾಗರಚನೆ ಪಡೆದ ಗೀತೆಗಳು ನಾಲ್ಕು ಸಂಗ್ರಹಗಳಲ್ಲಿ ಪ್ರಕಟವಾಗಿವೆ. ಪ್ರಾಸಬದ್ಧವಾದ ರಚನೆಗಳನ್ನು ಖಂಡಿಸಿ, ಅಬ್ಸರ್ವೇಷನ್ಸ್ ಆನ್ ದಿ ಆರ್ಟ್ ಆಫ್ ಇಂಗ್ಲಿಷ್ ಪೊಯಸಿ (1602) ಎಂಬ ಗ್ರಂಥದಲ್ಲಿ ಇಂಗ್ಲಿಷ್ ಕಾವ್ಯಕಲೆಯನ್ನು ಕುರಿತ ತನ್ನ ಅಭಿಪ್ರಾಯಗಳನ್ನು ತಿಳಿಸಿದ್ದಾನೆ. ಅಲ್ಲದೆ ಪ್ರಾಚೀನ ಛಂದೋರೀತಿಗಳನ್ನು ಆಧರಿಸಿ ಅಂತ್ಯಪ್ರಾಸವಿಲ್ಲದ ಕೆಲವು ಕವನಗಳನ್ನು ಕಟ್ಟಿದ್ದಾನೆ. ತನ್ನ ಅನೇಕ ಹಾಡುಗಳಿಗೆ ರಾಗರಚನೆ ಮಾಡಿ ರಾಗಕ್ಕೂ ಶಬ್ದಕ್ಕೂ ನಡುವೆ ಸಾಮರಸ್ಯ ತರಲು ಯತ್ನಿಸಿರುವುದಾಗಿ ಹೇಳಿಕೊಂಡಿದ್ದಾನೆ. ಈತನ ಗೀತೆಗಳು ಎಷ್ಟು ಸರಳವೋ ಅಷ್ಟೂ ಭಾವಪೂರ್ಣವಾಗಿದ್ದು ಬೆರಗುಗೊಳಿಸುವಂಥವು. ಅವುಗಳಲ್ಲಿ ದೇರ್ ಈಸ್ ಎ ಗಾರ್ಡನ್ ಇನ್ ಹರ್ ಫೇಸ್ ಎಂಬ ಗೀತೆ ಪ್ರಖ್ಯಾತವಾದುದು. ಈತನ ನಾಟಕಗಳಲ್ಲಿ ಶ್ರೇಷ್ಠವಾದ ಅನೇಕ ಗೀತೆಗಳಿವೆ. (ಎನ್.ಎಸ್.ಎಲ್.)

**ಕ್ಯಾಂಬೆಲ್, ಥಾಮಸ್ :** 1777–1844. ಆಂಗ್ಲಕವಿ. ವರ್ತಕನ ಮಗನಾದ ಈತ ಹುಟ್ಟಿದ್ದು ಗ್ಲಾಸ್ಗೊ ನಗರದಲ್ಲಿ, ಅಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ. ಎಡಿನ್ ಬರೋನಲ್ಲಿ ನ್ಯಾಯಶಾಸ್ತ್ರ ಪದವಿ ಪಡೆದ. ಆದರೂ ಸಾಹಿತ್ಯದಲ್ಲಿದ್ದ ಅಭಿರುಚಿಯಿಂದಾಗಿ ಲೇಖಕನಾದ. ಈತನ ಪ್ರಥಮ ಕೃತಿ ಪ್ಲೆಷರ್ಸ್ ಆಫ್ ಹೋಪ್

(1799) ಎಂಬ ಕವನ ಸಂಕಲನ. ಪ್ರಕಟವಾದ ಒಂದು ವರ್ಷದೊಳಗೇ ಇದು ನಾಲ್ಕು ಮುದ್ರಣ ಕಂಡಿತು. 1800ರಲ್ಲಿ ಕ್ಯಾಂಬೆಲ್ ಯುರೋಪಿನ ಪ್ರವಾಸ ಕೈಗೊಂಡು ಹ್ಯಾಂಬರ್ಗ್‌ನಲ್ಲಿ ತಂಗಿದ್ದಾಗ ಹೊಹೆನ್‌ಲಿಂಡನ್ ಕಾಳಗವನ್ನು ಕಣ್ಣಾರೆ ನೋಡಿ ಬಂದ. 1820 ರಿಂದ 1830ರ ತನಕ ನ್ಯೂ ಮಂತ್ಲಿ ಮ್ಯಾಗಜೀನಿನ ಸಂಪಾದಕನಾಗಿ ದುಡಿದ. ಈತ ಗರ್‌ಟ್ರೂಡ್ ಆಫ್ ವೈಯೋಮಿಂಗ್ (1809), ಓಕನಾರ್ಸ್ ಚೈಲ್ಡ್ (1809), ಥಿಯೋಡೊರಿಕ್ (1824) ಎಂಬ ನೀಳ್ಗವನಗಳನ್ನೂ ಬರೆದಿದ್ದಾನೆ. ಆದರೆ ಇವೆಲ್ಲಕ್ಕಿಂತ ಈತ ಪ್ರಸಿದ್ಧನಾಗಿರುವುದು ತನ್ನ ರಣಗೀತೆಗಳಿಂದಾಗಿ. ಯೀ ಮ್ಯಾರಿನರ್ಸ್ ಆಫ್ ಇಂಗ್ಲೆಂಡ್, ಹೊಹೆನ್‌ಲಿಂಡನ್, ಬ್ಯಾಟಲ್ ಆಫ್ ದಿ ಬಾಲ್ಟಿಕ್, ದಿ ಸೋಲ್ಜರ್ಸ್ ಡ್ರೀಂ–ಈ ಕವನಗಳು ಓದುಗರಲ್ಲಿ ಕೆಚ್ಚು, ರಣೋತ್ಸಾಹ, ದೇಶಪ್ರೇಮಗಳನ್ನು ಇಂದಿಗೂ ಉಕ್ಕಿಸುವಷ್ಟು ಸತ್ವಪೂರ್ಣವಾಗಿವೆ. ಆಂಗ್ಲಸಾಹಿತ್ಯದಲ್ಲಿ ಇವುಗಳಿಗೆ ಸದೃಶವಾದ ರಣಗೀತೆಗಳು ಅಪೂರ್ವ.

ಈತ ಒಳ್ಳೆಯ ವಿಮರ್ಶಕನೆಂದೂ ಖ್ಯಾತನಾಗಿದ್ದಾನೆ. ಈತನ ಸ್ಪೆಸಿಮೆನ್ಸ್ ಆಫ್ ದಿ ಬ್ರಿಟಿಷ್ ಪೊಯೆಟ್ಸ್ (1819) ಕೃತಿ ವಿಮರ್ಶನ ಸಾಹಿತ್ಯಕ್ಕೆ ಒಂದು ಉತ್ತಮ ಕೊಡುಗೆಯಾಗಿದೆ. ಇವುಗಳಲ್ಲದೆ ಈತ ಇನ್ನೂ ಅನೇಕ ಪುಸ್ತಕಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾನೆ. ಅವುಗಳಲ್ಲಿ ಮೂರನೆಯ ಜಾರ್ಜ್‌ನ ಆಳ್ವಿಕೆಗೆ ಸಂಬಂಧಪಟ್ಟ ಆನಲ್ಸ್ ಆಫ್ ಗ್ರೇಟ್ ಬ್ರಿಟನ್ ಕೃತಿಯೂ ಒಂದು. 1805ರಲ್ಲಿ ಈತ ಸರ್ಕಾರದಿಂದ ನಿವೃತ್ತಿವೇತನ ಪಡೆದ. ಗ್ಲಾಸ್ಗೊ ವಿಶ್ವವಿದ್ಯಾಲಯದ ರೆಕ್ಟಾರ್ ಆಗಿ ಮೂರು ಬಾರಿ ಚುನಾಯಿತನಾದ. ಈ ಚುನಾವಣೆಗಳಲ್ಲೊಮ್ಮೆ ಈತ ಪ್ರಸಿದ್ಧ ಕಾದಂಬರಿಕಾರನಾದ ಸರ್ ವಾಲ್ಟರ್ ಸ್ಕಾಟನನ್ನು ಸೋಲಿಸಿದನೆನ್ನಲಾಗಿದೆ. ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಈತನ ಸಮಾಧಿಯಿದೆ. ಈತನಿಗೆ ಸಂಬಂಧಿಸಿದಂತೆ 1849ರಲ್ಲಿ ಡಬ್ಲ್ಯೂ.ಬಿಯಟ್ಟಿ ಎಂಬಾತ ಲೈಫ್ ಅಂಡ್ ಲೆಟರ್ಸ್ ಎಂಬ ಗ್ರಂಥವನ್ನು ಪ್ರಕಟಿಸಿದ್ದಾನೆ. (ಎನ್.ಎಸ್.ಎಲ್.)

**ಕ್ಯಾಂಬೇ :** ಭಾರತದ ಪಶ್ಚಿಮ ರಾಜ್ಯವಾದ ಗುಜರಾತಿನ ತೀರದ ಒಂದು ಖಾರಿ; ಅದೇ ಹೆಸರಿನ ಒಂದು ಪಟ್ಟಣ. ಕ್ಯಾಂಬೇ ಖಾರಿಯಲ್ಲಿ ಅರಬ್ಬೀಸಮುದ್ರ ಕೊಂಬಿನ ಆಕಾರದಲ್ಲಿ ಭೂಮಿಯೊಳಕ್ಕೆ ಚಾಚಿಕೊಂಡಿದೆ. ನೈಋತ್ಯ ಮಾನ್ಸೂನ್ ಗಾಳಿಯಿಂದಾಗಿ ಈ ಎಡೆಯಲ್ಲಿ ಸಮುದ್ರದ ಭರತ ವಿಪರೀತ. ಸುಮಾರು 12 ಮೀ ಎತ್ತರಕ್ಕೆ ಸಮುದ್ರದ ಉಬ್ಬರ ಸಂಭವಿಸುವುದಲ್ಲದೆ ಅದರ ವೇಗವೂ ಹೆಚ್ಚಾಗಿರುತ್ತದೆ. ಇದರ ಫಲವಾಗಿ ಖಾರಿಯ ತೀರದಲ್ಲಿರುವ ಬಂದರುಗಳನ್ನೆಲ್ಲ ಗೋಡು ಮುಚ್ಚಿಕೊಂಡಿದೆ. ಕಡಲಕರೆಯ ಬದಿ ಅತ್ಯಂತ ಅಪಾಯಕರ. *

ಕ್ಯಾಂಬೇ ಪಟ್ಟಣ ಅದೇ ಹೆಸರಿನ ಖಾರಿಯ ಮೇಲಿದೆ. ಖಂಬಾತ್ ಅಥವಾ ಖಂಬಾಯತ್ ಎಂದೂ ಹೆಸರಾದ ಈ ಪಟ್ಟಣ ಗುಜರಾತಿನ ಕೈರಾ ಜಿಲ್ಲೆಯ ಕ್ಯಾಂಬೇ ತಾಲ್ಲೂಕಿನ ಕೇಂದ್ರ ಕೂಡ. ಕೈರಾ ರೈಲ್ವೆ ನಿಲ್ದಾಣದ ದಕ್ಷಿಣಕ್ಕೆ 50 ಕಿಮೀ ದೂರದಲ್ಲಿ ಕೋಹಿ ನದಿಯ ಮೇಲಿರುವ ಈ ಪಟ್ಟಣ ಹಿಂದೆ ಇದೇ ಹೆಸರಿನ ಸಂಸ್ಥಾನದ ರಾಜಧಾನಿಯಾಗಿತ್ತು. ಇದು ಭಾರತದ ಮುಖ್ಯ ಬಂದರಾಗಿತ್ತೆಂದು ಮರಿನೋ ಸಸುದೋ, ಮಾರ್ಕೊ ಪೋಲೋ ಮುಂತಾದ ವಿದೇಶಿ ಪ್ರವಾಸಿಗಳು ತಿಳಿಸಿದ್ದಾರೆ. 15ನೆಯ ಶತಮಾನದಲ್ಲಿ ಗುಜರಾತಿನ ಮುಸ್ಲಿಂ ದೊರೆಗಳ ಅಧೀನದಲ್ಲಿ ಇಲ್ಲಿಯ ಬಂದರು ಉಚ್ಛ್ರಾಯಸ್ಥಿತಿಯಲ್ಲಿತ್ತು. ಕ್ಯಾಂಬೇ ಖಾರಿಯಲ್ಲಿ ಸಮುದ್ರದ ಗೋಡು ತುಂಬಿ ಬಂದು ಇದರ ಪ್ರಾಮುಖ್ಯ ಕ್ರಮೇಣ ಕುಗ್ಗಿತು. ಈಗ ಇದು ಒಂದು ವ್ಯಾಪಾರಕೇಂದ್ರ. ಜನಸಂಖ್ಯೆ 80,439 (2001). ಹತ್ತಿ, ಧಾನ್ಯ, ಹೊಗೆಸೊಪ್ಪು ಇವು ಇಲ್ಲಿಯ ವ್ಯಾಪಾರ ಸರಕುಗಳು. ಉಪ್ಪು, ಜಮಖಾನ, ಕೈಮಗ್ಗದ ಬಟ್ಟೆ, ಕಸೂತಿ ಮತ್ತು ಬೆಂಕಿಪೆಟ್ಟಿಗೆ ಕೈಗಾರಿಕೆ; ಅಗೆಟ್, ಕಾರ್ನೀಲಿಯನ್ ಮುಂತಾದ ಕಲ್ಲುಗಳನ್ನಿಟ್ಟು ಒಡವೆಗಳ ತಯಾರಿಕೆ–ಇವಕ್ಕೆ ಕ್ಯಾಂಬೇ ಪ್ರಸಿದ್ಧವಾಗಿದೆ.

ಖಂಬಾತ್ ಎಂಬ ಹೆಸರು ಕಂಭ ಅಥವಾ ಸ್ತಂಭ ಎಂಬುದರಿಂದ ಬಂತೆಂದು ಹೇಳಲಾಗಿದೆ. ಈ ಪಟ್ಟಣದ ಸುತ್ತ ಇರುವ ಒಂದು ಇಟ್ಟಿಗೆಯ ಕೋಟೆ ಮತ್ತು ಕೋಟೆಯ ಒಳಭಾಗದಲ್ಲಿರುವ ಜಾಮೀ ಮಸೀದಿ ಇಲ್ಲಿಯ ಮುಖ್ಯ ಪ್ರಾಚೀನ ಸ್ಮಾರಕಗಳು. ಜಾಮೀ ಮಸೀದಿಯನ್ನು 1325ರಲ್ಲಿ ಕಟ್ಟಲಾಯಿತು. ಇದು ಗುಜರಾತಿನ ಅತಿಪ್ರಾಚೀನ ಇಸ್ಲಾಮೀ ವಾಸ್ತುಕೃತಿಗಳಲ್ಲೊಂದು. ಇದರಲ್ಲಿ ಹಿಂದೂ ವಾಸ್ತುಶೈಲಿಯ ಅಂಶಗಳೂ ಕಂಡುಬರುತ್ತವೆ. ಈ ಕಟ್ಟಡದಲ್ಲಿ ಮೊದಲಾದ ಈ ಸಮ್ಮಿಶ್ರಶೈಲಿ ಮುಂದೆ ಗುಜರಾತಿನ ಇಸ್ಲಾಮೀ ವಾಸ್ತುಶೈಲಿಗೆ ಮಾದರಿಯಾಯಿತು. ಅಗೆಟ್, ಕಾರ್ನೀಲಿಯನ್ ಮುಂತಾದ ಶಿಲೆಗಳಿಂದ ವಿವಿಧ ರೀತಿಯ ಮಣಿಗಳನ್ನು ತಯಾರಿಸುವ ಕೈಗಾರಿಕೆ ಇಲ್ಲಿ 3ನೆಯ ಸಹಸ್ರಮಾನಕ್ಕೆ ಸೇರಿದ ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಪ್ರಚಲಿತವಾಗಿದೆಯೆಂಬುದು ಉತ್ಖನನಗಳಿಂದ ತಿಳಿದು ಬರುತ್ತದೆ.

(ಬಿ.ಎನ್.ಸಿ.ಎಚ್.; ಎಸ್.ಎನ್.)

ತೈಲ ಮತ್ತು ನೈಸರ್ಗಿಕ ಅನಿಲಗಳಿಂದಾಗಿ ಕ್ಯಾಂಬೇ ಈಚೆಗೆ ಪ್ರಸಿದ್ಧವಾಗಿದೆ. ಕ್ಯಾಂಬೇಗೆ 12 ಕಿಮೀ ಪಶ್ಚಿಮದಲ್ಲಿರುವ ಲೂನೆಜ್ ಎಂಬ ಹಳ್ಳಿಯ ಬಳಿ 1958ರಲ್ಲಿ ಪ್ರಥಮವಾಗಿ ಎಣ್ಣೆಯ ಸೆಲೆ ಹೊಡೆಯಲಾಯಿತು. 1968–69ರ ಕೊನೆಯ ವೇಳೆಗೆ ಈ ಪ್ರದೇಶದಲ್ಲಿ ತೋಡಲಾದ ಬಾವಿಗಳ ಸಂಖ್ಯೆ 62. ಕ್ಯಾಂಬೇ ಪ್ರದೇಶದಲ್ಲಿಯ ಅನಿಲೋತ್ಪಾದನ ಸಾಮರ್ಥ್ಯ ದಿನಕ್ಕೆ ಸುಮಾರು 5 ಕೋಟಿ ಘನ ಅಡಿ. ಮುಖ್ಯ ಅನಿಲೋತ್ಪಾದನ ಕ್ಷೇತ್ರವಾದ ಕ್ಯಾಂಬೇಯಲ್ಲಿ ತೈಲೋತ್ಪಾದನೆಯನ್ನು ಹೆಚ್ಚಿಸಲಾಗುತ್ತಿದೆ. *

**ಕ್ಯಾಕ್ಸ್‌ಟನ್, ವಿಲಿಯಂ :** 1422–91. ಇಂಗ್ಲೆಂಡ್ ದೇಶದ ಮೊದಲನೆಯ ಮುದ್ರಣಕಾರ. ಕೆಂಟ್ ಪ್ರಾಂತ್ಯದಲ್ಲಿ ಜನನ. ರಾಬರ್ಟ್ ಲಾರ್ಜ್ ಎಂಬ ವರ್ತಕನಲ್ಲಿ ಕೆಲಸಕ್ಕೆ ಸೇರಿ (1438) ಆತನ ನಿಧನಾನಂತರ(1444) ಯುರೋಪ್ ದೇಶದ ಉಣ್ಣೆ ವ್ಯಾಪಾರ ಕೇಂದ್ರವಾದ ಬ್ರೂಜಸ್ ಪಟ್ಟಣವನ್ನು ಸೇರಿದ. ಅಲ್ಲಿ 30 ವರ್ಷಕಾಲ ಇಂಗ್ಲಿಷ್ ವಾಣಿಜ್ಯೋದ್ಯಮಿಗಳ ಅಭಿವೃದ್ಧಿಗೋಸ್ಕರ ಶ್ರಮಿಸಿ ಅವರ ಸಂಘಕ್ಕೆ ಗವರ್ನರ್ ಆಗಿ ಚುನಾಯಿಸಲ್ಪಟ್ಟ (1463). ಬರ್ಗಂಡಿ ಪ್ರಾಂತದ ಡಚೆಸ್ ಆಗಿದ್ದ ಮಾರ್ಗರೇಟಳಿಗೆ ಆರ್ಥಿಕ ಸಲಹೆಗಾರನಾಗಿ ನೇಮಕನಾದ (1470). ಸಾಹಿತ್ಯದಲ್ಲಿಯೂ ಈತನಿಗೆ ಒಲವು ಇತ್ತು. ಮುದ್ರಣಕಲೆಯನ್ನು ಕ್ಯಾಕ್ಸ್‌ಟನ್ ಕಲಿತದ್ದು ಕೋಲೋನ್ ಪಟ್ಟಣದಲ್ಲಿ. ತರುವಾಯ ಒಂದು ಅಚ್ಚುಕೂಟವನ್ನು ಬ್ರೂಜ್ ಪಟ್ಟಣದಲ್ಲಿ ಕೊಲಾರ್ಡ್ ಮಾನ್‌ಷನ್ನನ ಸಹಾಯದಿಂದ ಸ್ಥಾಪಿಸಿದ (1474). ತಾನೇ ಭಾಷಾಂತರಿಸಿದ್ದ ಒಂದು ಪುಸ್ತಕದ ಇಂಗ್ಲಿಷ್ ಮುದ್ರಣವನ್ನು

ಈ ಅಚ್ಚುಕೂಟದಲ್ಲಿ ಪ್ರಥಮವಾಗಿ ಮುದ್ರಿಸಿದ (1475). ಮರುವರ್ಷ (1476) ಇನ್ನೊಂದು ಸ್ವಂತ ಭಾಷಾಂತರ ಗ್ರಂಥವನ್ನು ಮುದ್ರಿಸಿದ. ಇವಲ್ಲದೆ ಇನ್ನೂ ಎರಡು ಮೂರು ಪುಸ್ತಕಗಳನ್ನು ಫ್ರೆಂಚ್ ಭಾಷೆಯಲ್ಲಿ ಸಹ ಮುದ್ರಿಸಿದ ಖ್ಯಾತಿ ಈತನದು. 1476ರ ವರ್ಷಾಂತ್ಯದಲ್ಲಿ ಕ್ಯಾಕ್ಸ್‌ಟನ್ ಇಂಗ್ಲೆಂಡ್ ದೇಶಕ್ಕೆ ಹಿಂತಿರುಗಿ ವೆಸ್ಟ್ ಮಿನಿಸ್ಟರ್ ಪಟ್ಟಣದಲ್ಲಿ ಮೊದಲ ಬಾರಿಗೆ ಒಂದು ಅಚ್ಚುಕೂಟವನ್ನು ಸ್ಥಾಪಿಸಿದ. ಕ್ಯಾಕ್ಸ್‌ಟನ್ ತನ್ನ ಜೀವಿತ ಕಾಲದಲ್ಲಿ ಸುಮಾರು 100 ಪುಸ್ತಕಗಳನ್ನು ಮುದ್ರಿಸಿ ಪ್ರಕಟಣೆ ಮಾಡಿದ್ದ. ಇಂಗ್ಲೆಂಡಿನ ಮೊದಲನೆಯ ಸಚಿತ್ರ ಪುಸ್ತಕವನ್ನು ಈತ 1481ರಲ್ಲಿ ಮುದ್ರಿಸಿದ. ಕ್ಯಾಕ್ಸ್‌ಟನ್ನನ ಪುಸ್ತಕಗಳಲ್ಲಿ ಮುಖಪತ್ರಗಳಿರಲಿಲ್ಲ. ಬದಲಾಗಿ ಪೀಠಿಕೆ ಮತ್ತು ಸಮಾಪ್ತಿ ವಿವರಣೆಗಳು ಅಲ್ಲಲ್ಲಿ ಇವೆ. ಇವನು ಹಳೆಕಾಲದ ಬರೆವಣಿಗೆಯನ್ನು ಅನುಕರಿಸುವ ಅಚ್ಚುಮೊಳೆಗಳನ್ನು 4–6 ಗಾತ್ರದಲ್ಲಿ

ವಿಲಿಯಂ ಕ್ಯಾಕ್ಸ್‌ಟನ್ ತನ್ನ ಅಚ್ಚುಕೂಟವೊಂದರಲ್ಲಿ

ಮುದ್ರಣಕ್ಕೆ ಉಪಯೋಗಿಸಿದ್ದಾನೆ. ಅವನು ತನ್ನ ಪುಸ್ತಕಗಳಲ್ಲೆಲ್ಲ ತನ್ನ ಹೆಸರಿನ ಮೊದಲನೆಯ ಅಕ್ಷರಗಳಿಂದ W.C ಗಳ ಮಧ್ಯೆ 1474 ಇಸವಿಯನ್ನೂ ಮೇಲೆ ಕೆಳಗೆ ಅಂದವಾದ ಅಂಚುಗಳನ್ನುಳ್ಳ ಒಂದು ಆಕೃತಿಯನ್ನೂ ತನ್ನ ಉದ್ಯೋಗ ಸಂಜ್ಞೆಯಾಗಿ ಉಪಯೋಗಿಸಿದ್ದಾನೆ. ಇಂಗ್ಲೆಂಡಿನಲ್ಲಿ ಮುದ್ರಣ ಕಲೆಯುಲ್ಲಿ ಕ್ಯಾಕ್ಸ್‌ಟನ್ ಮೊತ್ತಮೊದಲಿಗನಾದರೂ ಮುದ್ರಣಕಲೆಯ ಅಭಿವೃದ್ಧಿಗಾಗಲಿ ಸುಂದರ ಕೃತಿಗಳನ್ನು ಮುದ್ರಿಸುವ ಕಾರ್ಯಕ್ಕಾಗಲಿ ಆತ ವಿಶೇಷ ಆಸಕ್ತಿ ತೋರಲಿಲ್ಲ. ಮುದ್ರಣಕಾರ್ಯವನ್ನು ಒಂದು ಕಲೆಯೆಂದು ಅವನು ಭಾವಿಸಿದಂತಿಲ್ಲ. ಆದರೂ ಸಾಹಿತ್ಯಕ್ಕಾಗಿ ಹಸಿದ ಜನರಿಗೆ ಇವನ ಮುದ್ರಣಗಳು ಪ್ರಯೋಜನಕಾರಿಯಾದುವು.

1485ರಲ್ಲಿ ಕ್ಯಾಕ್ಸ್‌ಟನ್ ಸೊಸೈಟಿ ಎಂಬ ಸಂಘ ಸ್ಥಾಪಿತವಾಯಿತು. ಇದರ ಕೆಲಸ ಲ್ಯಾಟಿನ್ ಮತ್ತು ಆಂಗ್ಲೋ ನಾರ್ಮನ್ನರ ಕಾಲದಲ್ಲಿ ನಡೆದ ಘಟನೆಗಳನ್ನು ಕಾಲಾನುಕ್ರಮವಾಗಿ ಬರೆದು ಪ್ರಕಟಿಸುವ ಮತ್ತು ಜೀವನಚರಿತ್ರೆಗಳನ್ನು ಪ್ರಕಟಿಸುವುದೇ ಆಗಿತ್ತು. 1854ರಲ್ಲಿ ಇದು ಮುಚ್ಚಿಹೋಯಿತು. (ಎಸ್.ಎನ್.ಎಲ್.; ಡಿ.ಎಸ್.ಜಿ.)

ಕ್ಯಾಕ್ಸ್‌ಟನ್ ಮುದ್ರಣವನ್ನು ಇಂಗ್ಲೆಂಡಿಗೆ ತಂದದ್ದರ ಪರಿಣಾಮ ವ್ಯಾಪಕವಾದದ್ದು ಬಹುಮುಖವಾದದ್ದು, ಇದುವರೆಗೆ ಒಬ್ಬರು ಓದಿ ಹಲವರು ಕೇಳುವುದು ರೂಢಿಯಾಗಿತ್ತು. ಈಗ ಒಬ್ಬೊಬ್ಬರು ಒಂದು ಪ್ರತಿಯನ್ನಿಟ್ಟುಕೊಂಡು ತಮ್ಮದೇ ವೇಗದಲ್ಲಿ, ರೀತಿಯಲ್ಲಿ ಓದುವುದು ಪ್ರಾರಂಭವಾಯಿತು. ಇದರಿಂದ ಓದುಗ ವರ್ಗದ ಸ್ವರೂಪವೇ ಬದಲಾಯಿಸಿತು. ಪದಗಳ ಕಾಗುಣಿತ, ಪದಗಳ ಬಳಕೆ ಇವೆಲ್ಲ ಏಕರೂಪಗೊಂಡು ಒಂದು 'ಸ್ಟ್ಯಾಂಡರ್ಡ್' ಭಾಷೆ ರೂಪುಗೊಳ್ಳುವ ಪ್ರಕ್ರಿಯೆಗೆ ಚಾಲನೆ ದೊರೆಯಿತು. ಒಂದು ಗದ್ಯ ಶೈಲಿ ರೂಪುಗೊಳ್ಳುವುದಕ್ಕೂ ಮುದ್ರಣ ಕಲೆಯ ಕೊಡುಗೆ ಗಣನೀಯವಾದದ್ದು. (ಎಚ್.ಎಸ್.ಎಸ್.)

**ಕ್ಯಾಟಬ್ಯಾಟಿಕ್ ಮಾರುತ :** ಪರ್ವತ ಪ್ರದೇಶಗಳಲ್ಲಿ ಕಂಡುಬರುವ ವಿಶೇಷ ರೀತಿಯ ಮಾರುತ. ಪರ್ವತದ ಶಿಖರದ ಕಡೆಯಿಂದ ಕಣಿವೆಯ ಕಡೆಗೆ ಬೀಸುತ್ತದೆ. ವಿಕಿರಣದಿಂದ ಪರ್ವತದ ಶಿಖರಗಳು ತಂಪಾಗಿ ಅಲ್ಲಿಯ ಗಾಳಿಯೂ ತಂಪಾಗುತ್ತದೆ. ಗಾಳಿಯ ಸಾಂದ್ರತೆ ಹೆಚ್ಚಾಗಿ ಅದು ಕೆಳಪ್ರದೇಶಕ್ಕೆ ಹರಿಯತೊಡಗುತ್ತದೆ. ಕ್ಯಾಟಬ್ಯಾಟಿಕ್ ಮಾರುತ ಉಂಟಾಗುವುದು ಹೀಗೆ. ಈ ಮಾರುತ ಬೀಸುವುದು ಸಾಮಾನ್ಯವಾಗಿ ರಾತ್ರಿಯ ಹೊತ್ತು. ಇದು ಕಣಿವೆಯ ತಳವನ್ನು ಸೇರಿ, ನೀರ್ಗಲ್ಲ ಸರೋವರದೋಪಾದಿಯಲ್ಲಿ ಆ ಪ್ರದೇಶದಲ್ಲೆಲ್ಲ ಪದರಪದರವಾಗಿ ಹರಡಿ, ಮಂಜುಮುಸುಕಿದಂತೆ ಕಾಣುವ ಹಾಗೆ ಮಾಡುತ್ತದೆ. ಇದನ್ನು ಪರ್ವತ ಮಾರುತ (ಮೌಂಟನ್ ವಿಂಡ್) ಎಂದೂ ಕರೆಯುವುದಿದೆ. ಅನೇಕ ಪ್ರದೇಶಗಳಲ್ಲಿ ಈ ಮಾರುತಕ್ಕೆ ಸ್ಥಳೀಯ ಹೆಸರುಗಳುಂಟು. ಉತ್ತರ ಅಮೆರಿಕದ ರಾಕೀ ಪರ್ವತ ಪ್ರದೇಶಗಳಲ್ಲಿ ಚಿನೂಕ್ ಎಂದೂ ಯುರೋಪಿನ ಆಲ್ಪ್ಸ್ ಪರ್ವತ ಪ್ರದೇಶದಲ್ಲಿ ಫೇನ್ ಎಂದೂ ಇವನ್ನು ಕರೆಯುತ್ತಾರೆ. ಕ್ಯಾಟಬ್ಯಾಟಿಕ್ ಮಾರುತ ಉಂಟಾಗುವುದು ಪರ್ವತದ ಬೆನ್ನುಪ್ರದೇಶದಲ್ಲಿ, ಅಂದರೆ ಒಂದು ದಿಕ್ಕಿನಿಂದ ಬೀಸಿದ ಗಾಳಿ ಪರ್ವತದ ಒಂದು ಪಾರ್ಶ್ವಕ್ಕೆ ಬಡಿದು ಆ ಕಡೆಯಲ್ಲೇ ಮಳೆಗರೆದು ಮುಂದೆ ಸಾಗಿ ಪರ್ವತಶಿಖರವನ್ನೂ ದಾಟಿ ಇನ್ನೊಂದು ಪಾರ್ಶ್ವದಲ್ಲಿ ಕೆಳಕ್ಕಿಳಿಯುತ್ತದೆ. ಇದೇ ಪರ್ವತದ ಬೆನ್ನು ಪಾರ್ಶ್ವ (ಮಳೆಯ ನೆರಳಿನ ಭಾಗ). ಈ ಪಾರ್ಶ್ವದಲ್ಲಿ ಗಾಳಿ ಬೀಸುವಾಗ ಅದರಲ್ಲಿ ಆರ್ದ್ರತೆ ಇರುವುದಿಲ್ಲ. ಈ ಒಣಗಾಳಿಯೇ ಕ್ಯಾಟಬ್ಯಾಟಿಕ್ ಮಾರುತವಾಗಿ ಪರಿಣಮಿಸುತ್ತದೆ. ಚಳಿಗಾಲದಲ್ಲಿ ಈ ಮಾರುತದಿಂದ ಕಣಿವೆ ಪ್ರದೇಶದಲ್ಲಿ ವಿಪರೀತ ಮಂಜು ಮುಸುಕುತ್ತದೆ. ಹಿಮಸುರಿಯುತ್ತದೆ. ಆದರೆ ಇತರ ಕಾಲಗಳಲ್ಲಿ ಈ ಒಣಗಾಳಿಯಿಂದ ಅರಣ್ಯಗಳಲ್ಲಿ ಬೆಂಕಿ ಸಂಭವಿಸುವುದುಂಟು.

ಕ್ಯಾಟಬ್ಯಾಟಿಕ್ ಮಾರುತ ಅಂಟಾರ್ಕ್‌ಟಿಕ ಮತ್ತು ಗ್ರೀನ್‌ಲೆಂಡ್‌ಗಳಲ್ಲಿ ಹೆಚ್ಚು. ಇತರ ಕಡೆಗಳಲ್ಲೂ ಇದು ಬೀಸುವುದಾದರೂ ಅಲ್ಲಿಯಷ್ಟು ಶೀತವಾಗಿರುವುದಿಲ್ಲ. ವಿಕಿರಣದಿಂದ ಅದರಲ್ಲಿಯ ಉಷ್ಣ ಅತಿ ವೇಗವಾಗಿ ಕಳೆದುಹೋಗುವುದರಿಂದ ಪರ್ವತ ಹಾಗೂ ನೀರ್ಗಲ್ಲ ಹಾಳೆಗಳು ಬಹಳ ಬೇಗ ತಣ್ಣಗಾಗುತ್ತವೆ. ಇದರಿಂದ ಅದರ ಮೇಲಿರುವ ಗಾಳಿ ತಣ್ಣಗಾಗಿ ಇಳಿಜಾರಿನ ಕಡೆಗೆ ಬೀಸುತ್ತದೆ.

ಕ್ಯಾಟಬ್ಯಾಟಿಕ್ ಮಾರುತಕ್ಕೆ ಸಂವಾದಿಯಾದಂಥದು ಆನಬ್ಯಾಟಿಕ್ ಮಾರುತ. ಇದು ಹಗಲು ಹೊತ್ತಿನಲ್ಲಿ ಉತ್ಪತ್ತಿಯಾಗುತ್ತದೆ. ಆಗ ಪರ್ವತಕಣಿವೆಗಳ ಇಳಿಜಾರುಗಳಲ್ಲಿ ಗಾಳಿ ಕಾದು ಬೆಚ್ಚಗಾಗುತ್ತದೆ. ಇದರಿಂದಾಗಿ ಮೇಲ್ಪದರಗಳ ಗಾಳಿಯೂ ಬೆಚ್ಚಗಾಗುತ್ತದೆ. ಈ ಗಾಳಿ ಹಗುರವಾಗಿ ಪರ್ವತಗಳ ಮೇಲ್ಭಾಗವನ್ನು ತಲಪಿ, ಅಲ್ಲಿರುವ ತಣ್ಣಗಿನ ಗಾಳಿಯನ್ನು ದೂರ ತಳ್ಳುತ್ತದೆ. ಈ ಕ್ರಿಯೆಯಿಂದ ಆನಬ್ಯಾಟಿಕ್ ಅಥವಾ ಕಣಿವೆ ಮಾರುತ ಉಂಟಾಗುತ್ತದೆ. (ಕೆ.ಆರ್.ಆರ್.)

**ಕ್ಯಾಟರೈನಿ :** *ಪ್ರೈಮೇಟ್* ಗಣದ *ಆಂಥ್ರೋಪಾಯ್ಡಿಯ* ಉಪಗಣಕ್ಕೆ ಸೇರಿದ ಒಂದು ಅಧಿಕುಟುಂಬ(ಸೂಪರ್ ಫ್ಯಾಮಿಲಿ). *ಸರ್ಕೋಪಿತಿಕಾಯ್ಡಿಯ* ಎಂಬುದು ಇದರ ಇತ್ತೀಚಿನ ಹೆಸರು. ಒಂದಕ್ಕೊಂದು ಬಹು ಹತ್ತಿರದಲ್ಲಿರುವ ಎರಡು ನಾಸಿಕರಂಧ್ರಗಳು, ದವಡೆಸಂಚಿಗಳು, ಬಾಲ ಇಲ್ಲದಿರುವಿಕೆ ಇವುಗಳ ಮುಖ್ಯ ಲಕ್ಷಣಗಳು. ರಜಸ್ಸಿನ ಚಕ್ರದಲ್ಲಿ ರಕ್ತಸ್ರಾವವಾಗುವುದು ಈ ಗುಂಪಿನ ಕೋತಿಗಳ ಇನ್ನೊಂದು ವಿಶೇಷಗುಣ.

ಮಾನವನನ್ನೂ ಏಷ್ಯ ಮತ್ತು ಆಫ್ರಿಕಗಳಲ್ಲಿ ಕಾಣಬರುವ ಹಲವಾರು ಬಗೆಯ ವಾನರಗಳನ್ನೂ ಒಳಗೊಂಡಿರುವ ಸುಮಾರು 17 ಜಾತಿಯ ಕಪಿಗಳು ಈ ಗುಂಪಿಗೆ ಸೇರಿವೆ.(**ನೋಡಿ : ಪ್ರೈಮೇಟುಗಳು**) (ಎಚ್.ಬಿ.ಡಿ.)

**ಕ್ಯಾಟಲೇಸುಗಳು :** ಕಬ್ಬಿಣ–ಪಾರ್ಫಿರನ್ ಎನ್‌ಜೈಮುಗಳಲ್ಲಿ ಒಂದು ಸಮೂಹಕ್ಕೆ ಸೇರಿದವು. ಇವು ಆಮ್ಲಜನಕ ಬೇಕಾದ ಜೀವಿಗಳಲ್ಲೆಲ್ಲ ಇವೆ. ಕೆಲವು ಕ್ಯಾಟಲೇಸುಗಳನ್ನು ಸ್ಫಟಿಕೀಕರಿಸಲಾಗಿದೆ. ಇವುಗಳ ಬಣ್ಣ ಕೆಂಪು ಛಾಯೆಯ ಕಂದು. ಅಣುತೂಕ 2,25,000–2,50,000. ಒಂದು ಅಣುವಿನಲ್ಲಿ ನಾಲ್ಕು ಹೀಮ್ ಗುಂಪುಗಳಿವೆ. ಇದರಲ್ಲಿ ಕಬ್ಬಿಣ ಫೆರಿಕ್ ಸ್ಥಿತಿಯಲ್ಲಿರುವುದು. ಈ ಎನ್‌ಜೈಮು ಹೈಡ್ರೋಜನ್ ಪೆರಾಕ್ಸೈಡಿನ ಮತ್ತು ಕಾರ್ಬನಿಕ್ ಹೈಡ್ರಾಪೆರಾಕ್ಸೈಡುಗಳ ವಿಭಜನೆಯಲ್ಲಿ ಪಾತ್ರವಹಿಸುತ್ತದೆ. ಇದರ ಒಂದು ಅಣು $0^{\circ}$ ಸೆಂ. ನಲ್ಲಿ ಒಂದು ಮಿನಿಟಿಗೆ 44,000 ಪೆರಾಕ್ಸೈಡ್ ಅಣುಗಳನ್ನು ವಿಭಜಿಸಬಲ್ಲುದು. (ಎಂ.ಆರ್.ಆರ್.)

**ಕ್ಯಾಟಲೋನಿಯ :** ಸ್ಪೇನಿನ ಈಶಾನ್ಯ ಭಾಗದಲ್ಲಿರುವ ಒಂದು ಪ್ರಾಂತ್ಯ. ಪಿರನೀಸ್ ಪರ್ವತದ ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರದ ತೀರದಲ್ಲಿದೆ. ಬೆಟ್ಟಗುಡ್ಡಗಳಿಂದ ಕೂಡಿದ್ದರೂ ಅಲ್ಲಲ್ಲಿ ಫಲವತ್ತಾದ ಮೈದಾನಗಳಿವೆ. ದ್ರಾಕ್ಷಾರಸ ಮತ್ತು ಆಲೀವ್ ಎಣ್ಣೆ ಇಲ್ಲಿಯ ಮುಖ್ಯ ವ್ಯವಸಾಯೋತ್ಪನ್ನಗಳು. ಬಟ್ಟೆ ಮತ್ತು ಯಂತ್ರಗಳ ತಯಾರಿಕೆ ಮುಖ್ಯ ಕೈಗಾರಿಕೆಗಳು.

ಕಾಸ್ಟಬ್ರಾವಾ–ಕ್ಯಾಟಲೋನಿಯದ ಒಂದು ತೀರಪ್ರದೇಶ

ಕ್ಯಾಟಲನ್ ಕಲೆ ಮುಖ್ಯವಾಗಿ ಮಧ್ಯಯುಗೀನ ಮತ್ತು ಬೌದ್ಧಿಕ ಪುನರುತ್ಥಾನ ಯುಗದ ಮತೀಯ ಕಲೆಗೆ ಸಂಬಂಧಿಸಿದ್ದು. ಈ ಕಲೆ ಸು. 15ನೆಯ ಶತಮಾನದ ವೇಳೆಗೆ ಕೊನೆಗೊಂಡಿತೆಂದು ಹೇಳಬಹುದಾದರೂ ಈಗಲೂ ಇಲ್ಲಿಯ ಕಲಾವಿದರು ಪ್ರಸಿದ್ಧರಾಗಿದ್ದಾರೆ. ಚರ್ಚುಗಳಲ್ಲಿ ಭಿತ್ತಿಚಿತ್ರಣ, ಕಟ್ಟಡಗಳ ಅಲಂಕರಣಕ್ಕಾಗಿ ತಯಾರಿಸಿದ ಮೂರ್ತಿಶಿಲ್ಪಗಳು ಮತ್ತು ಮತೀಯ ಗ್ರಂಥಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳ ಚಿತ್ರಣ, ಈ ಚಿತ್ರಕಲೆಯ ಪ್ರಮುಖ ಕೊಡುಗೆಗಳು. *

ಕ್ಯಾಟಲನ್‌ಕಲೆ : ಟರ್ರಗೋವಾದಲ್ಲಿನ ಒಂದು ಕತೀಡ್ರಲ್, 12ನೆಯ ಶತಮಾನದಲ್ಲಿ ರೋಮನೆಸ್ಕ್ ಮಾದರಿಯಲ್ಲಿ ಪ್ರಾರಂಭವಾದ ಈ ಕಟ್ಟಡ ರಚನೆ 13, 14ನೆಯ ಶತಮಾನಗಳಲ್ಲಿ ಗಾಥಿಕ್ ಶೈಲಿಯಿಂದ ಪೂರ್ಣಗೊಂಡಿತು.

**ಕ್ಯಾಟಲನ್ ಭಾಷೆ, ಸಾಹಿತ್ಯ:** ಕ್ಯಾಟಿಲನ್ ಭಾಷೆ ಇಂಡೋಯುರೋಪಿಯನ್ ಭಾಷಾಪರಿವಾರದ ಇಟ್ಯಾಲಿಕ್ ಉಪಕುಟುಂಬಕ್ಕೆ ಸೇರಿದ ರೊಮ್ಯಾನಿಕ್ ಭಾಷೆಯಾಗಿದೆ. ಸ್ಪೇನಿನ ಕ್ಯಾಟಲೋನಿಯ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು ಯುಗದ ಸಾಹಿತ್ಯದಲ್ಲಿ ಮಜೋರ್ಕನ್ ರಮೋನ್ ಲೂಲ್ (1233–1315) ಅಥವಾ ಲೂಲಿಯ ಗದ್ಯಗ್ರಂಥಗಳು ಮುಖ್ಯವಾದುವು. 15ನೆಯ ಶತಮಾನದಲ್ಲಿ ಉದಿಸಿದ ಕಾವ್ಯ ಝರಿಯಲ್ಲಿ ಔಜಿಯಾಸ್ ಮಾರ್ಚನ (1397–1459) ಕಾವ್ಯ ಪ್ರಮುಖವಾದುದು. ಇದೇ ಕಾಲದ

ಇತರ ಕವಿಗಳು ಜೋಮೆ ರೋಯಿಂಗ್ ಮತ್ತು ಜೋರ್ಡಿ ಡ ಸಂತ್ ಜೋರ್ಡಿ. ಸ್ತ್ರೀಯರನ್ನು ಕುರಿತ ಪುಸ್ತಕ–ರೋಯಿಂಗ್ ಬರೆದ ಆತ್ಮಕಥಾ ರೂಪವಾದ ಸ್ತ್ರೀವಿಡಂಬನ ಇದರ ವಸ್ತು ಕಾಲ್ಪನಿಕವಾದುದು. ಜೋರ್ಡಿ ಪೆಟ್ರಾರ್ಕ್ ಕವಿಯ ಅನುಕರಣೆ ಮಾಡಿದ್ದಾನೆ. ಅನಂತರ ಕಾಸ್ಟೀಲ್ ಮತ್ತು ಅರಗೋನ್ ರಾಜ್ಯಗಳು ಐಕ್ಯಗೊಂಡುದರಿಂದ ಕ್ಯಾಟಲನ್ ನುಡಿಯ ಪ್ರಾಶಸ್ತ್ಯ ಕಡಮೆಯಾಗಿ. ಇಲ್ಲಿಯ ಲೇಖಕರು (ಉದಾಹರಣೆಗೆ: ಜುಆನ್ ಬೊಸ್ಕಾನ್ ಇತ್ಯಾದಿ) ಕಾಸ್ಟೀಲಿಯನ್ ನುಡಿಯಲ್ಲಿಯೇ ಬರೆಯತೊಡಗಿದರು.

ಆರಿಭೌ ಕವಿಯ ದೇಶಪ್ರೇಮಪೂರ್ಣಪ್ರಗಾಥವೊಂದರ ರಚನೆಯಿಂದ (1833) ಮೊದಲಾಗಿ ಆಧುನಿಕ ಕ್ಯಾಟಲನ್ ಸಾಹಿತ್ಯ ಪುನರುಜ್ಜೀವಿತವಾಯಿತು. ವಾಸ್ಕೋ ಡ ಗಾಮನ ಮಹಾಯಾನದ ಮೇಲೆ ಕಾಮೋಯೆಸ್ ಕವಿ ಬರೆದ ಲೂಸಿಯಡ್ ಕೃತಿಯಂತೆ, ಕೊಲಂಬಸ್‌ನ ಅಮೆರಿಕ ಯಾನವನ್ನು ಕುರಿತು ಜಾಸಿಂತೊ ವರ್ದಾಗರ್ (1845–1902) ಬರೆದ ಲಾ ಅಟ್ಲಾಂಟೀಡ ಎಂಬ ಭವ್ಯ ಕಾವ್ಯ ಉತ್ಕೃಷ್ಟ ಕಲಾಕೃತಿ. ಇತರ ಪ್ರಮುಖ ಕವಿಗಳು : ಜೋನ್ ಮಾರಗಲ್ (1860–1911), ಜೋಸೆಫ್ ಕಾರ್ನರ್ (1884–). ಜೆ.ಎಂ. ಲೋಪೆಝ್ ಪೀಕೊ (1886), ಮತ್ತು ಜೆ.ಎಂ. ಸಾಗಾರ (1894–).

ಆಧುನಿಕ ಕ್ಯಾಟಲನ್ ಗದ್ಯದಲ್ಲಿ ವೀಚನ ಆರ್ಚ್‌ಬಿಷಪ್ ಬರೆದ ಲಾ ಟ್ರಡೀಷಿಯೊ ಕ್ಯಾಟಲಾನ್ (1892) ಕಾದಂಬರಿಯಲ್ಲಿ ನಾರ್ಸಿಸೋ ಓಲ್ಲೇರ್‌ನ ಪಾಪಲ್ಲೋನಾ (1880), ತಾತ್ವಿಕ ಕಥಾ ವಿಶೇಷದಲ್ಲಿ ಯೂಗಿನಿ ಡ, ಓರ್ಸ್‌ನ ಲಾ ಬೇನ್ ಪ್ಲಾಂಟಾಡ, ನಾಟಕದಲ್ಲಿ ಆಂಗೇಲ್ ಗಿಮೇರನ ಟೆರ್ರ ಬಾಯ್ಸ (1896), ಮತ್ತು ಇಗ್ನಾಸಿಯೊ ಇಗ್ಲೇಸಿಯಸ್‌ನ (1928) ಸಾಮಾಜಿಕ ನಾಟಕ ಎಲ್ಸ್ ವೇಲ್ಯೋ ಮುಖ್ಯ ಕೃತಿಗಳು.

ಇಂದು ಕ್ಯಾಟಲನ್ ನುಡಿಯನ್ನು ವಿಜ್ಞಾನ, ಉಚ್ಚ ವಿದ್ಯಾಭ್ಯಾಸ, ಸಂಶೋಧನೆ ಇತ್ಯಾದಿ ಸಮಸ್ತ ಕ್ಷೇತ್ರಗಳಲ್ಲೂ ಬಳಸುತ್ತಿದ್ದಾರೆ. ಇದರಲ್ಲಿ ಉತ್ತಮ ಪುಸ್ತಕ ಭಂಡಾರ ಸೃಷ್ಟಿಯಾಗಿದೆ. ಪ್ರಕಟಣೆಗಳು ವರ್ಧಿಸುತ್ತಿವೆ. (ಕೆ.ಆರ್.ಜೆ.; ಎಂ.ಕೆ.ಕೆ.)

**ಕ್ಯಾಟಿಕಾಲ್ :** ಕೆಲವು ಸಸ್ಯಗಳಲ್ಲಿ ಸಂಯುಕ್ತ ರೂಪದಲ್ಲಿರುವ ಒಂದು ರಾಸಾಯನಿಕ (ಆರ್ತೊ ಡೈಹೈಡ್ರಾಕ್ಸಿ ಬೆಂಜೀನ್). ಇದರ ಅಣು ರಚನೆ ಹೀಗಿದೆ :




$c \frac{dy}{dx}$

ಪ್ರಥಮಬಾರಿಗೆ ಕಾಚನ್ನು (ಕ್ಯಾಟಿಚೂ) ಬಟ್ಟಿ ಇಳಿಸಿ ಇದನ್ನು ತಯಾರಿಸಲಾಯಿತು. ಆದ್ದರಿಂದಲೇ ಈ ಹೆಸರು. ಇದು ಬೀಚ್‌ಡಾಂಬರಿನಲ್ಲಿ ಸ್ವತಂತ್ರ್ಯರೂಪದಲ್ಲಿ ದೊರೆಯುತ್ತದೆ. ಪೈರೊಕ್ಯಾಟಿಕಾಲ್ ಅಥವಾ ಪೈರೊಕ್ಯಾಟೆಚುಯಿಕ್ ಆಮ್ಲ– ಇದರ ಬೇರೆ ಹೆಸರುಗಳು. ಆರ್ತೊಫೀನಾಲ್ ಸಲ್ಫೋನಿಕ್ ಆಮ್ಲವನ್ನು ಕ್ಷಾರಗಳೊಡನೆ ಕರಗಿಸಿ ಇದನ್ನು ತಯಾರಿಸಬಹುದು. ಸ್ಯಾಲಿಸಿಲ್ ಆಲ್ಡಿಹೈಡ್ ಮೇಲೆ ಕ್ಷಾರೀಯ ಹೈಡ್ರೋಜನ್ ಪೆರಾಕ್ಸೈಡ್ ವರ್ತನೆಯಿಂದಲೂ ಇದರ ತಯಾರಿಕೆ ಸಾಧ್ಯ. ಉದ್ಯಮ ಮಟ್ಟದಲ್ಲಿ ಆರ್ತೊಕ್ಲೋರೊಫೀನಾಲ್ ಅಥವ ಆರ್ತೊಡೈಕ್ಲೋರೊಬೆಂಜೀನನ್ನು ಕಾಸ್ಟಿಕ್‌ಸೋಡ ದ್ರಾವಣದೊಡನೆ ಒತ್ತಡದಲ್ಲಿ ಕಾಯಿಸಿ ತಯಾರಿಸಲಾಗುವುದು. ಈ ಕ್ರಿಯೆಗೆ ವೇಗವರ್ಧಕ ತಾಮ್ರದ ಸಲ್ಫೇಟ್. ಕ್ಯಾಟಿಕಾಲ್ ಬಣ್ಣವಿಲ್ಲದ ಘನವಸ್ತು. ಇದರ ಕರಗುವ ಬಿಂದು $105^0$ ಸೆಂ. ನೀರು, ಆಲ್ಕೊಹಾಲ್ ಮತ್ತು ಈಥರುಗಳಲ್ಲಿ ಇದು ಕರಗುತ್ತದೆ. ಫೆರಿಕ್ ಕ್ಲೋರೈಡ್ ಜೊತೆ ಹಸುರು ಬಣ್ಣವನ್ನು ಕೊಡುತ್ತದೆ. ಕ್ಷಾರಗಳೊಡನೆ ಈ ಬಣ್ಣ ಕೆಂಪಾಗುತ್ತದೆ. ಇದು ಒಳ್ಳೆಯ ಅಪಕರ್ಷಣಕಾರಿ.




ಬೆಳ್ಳಿಯ ನೈಟ್ರೇಟ್ ಮತ್ತು ಬಿಸಿ ಫ್ಲೇಲಿಂಗ್ ದ್ರಾವಣಗಳನ್ನು ಅಪಕರ್ಷಿಸುತ್ತದೆ. ಥ್ಯಾಲಿಕ್ ಅನ್ಹೈಡ್ರೈಡಿನೊಡನೆ ಸಲ್ಫ್ಯೂರಿಕ್‌ಆಮ್ಲದ ಸಮ್ಮುಖದಲ್ಲಿ ಸಂಗ್ರಹಗೊಂಡ ಅಲಿಜರಿನನ್ನು ಕೊಡುತ್ತದೆ. ಅಡ್ರೆನಲೀನ್ ಹಾರ್ಮೋನ್ ಇದರ ಒಂದು ಮುಖ್ಯ ವ್ಯುತ್ಪನ್ನ. ಇದರ ಅಣುರಚನೆ ಹೀಗಿದೆ:

ಛಾಯಾಚಿತ್ರಗಳನ್ನು ಸ್ಪಷ್ಟಗೊಳಿಸಲು ಕ್ಯಾಟಿಕಾಲಿನ ಉಪಯೋಗ ಉಂಟು.

(ಎಲ್.ಎ.ಆರ್.)

**ಕ್ಯಾಟಿಗೊರಿಗಳು ಮತ್ತು ಫಂಕ್ಟರುಗಳು :** ಕ್ಯಾಟಿಗೊರಿ ಎಂಬ ಹೆಸರಿನ ಗಣಿತೀಯ ವ್ಯವಸ್ಥೆ(ಗಳ ಅಧಿವ್ಯವಸ್ಥೆ)ಗಳನ್ನೂ ಅಂಥ ಎರಡು (ಅಧಿ) ವ್ಯವಸ್ಥೆಗಳ ನಡುವೆ ಇರಬಹುದಾದ ಫಂಕ್ಟರುಗಳು ಎಂಬ ಹೆಸರಿನ ಸಂಬಂಧಗಳನ್ನೂ ಎರಡು ಫಂಕ್ಟರುಗಳ ನಡುವೆ ಇರಬಹುದಾದ ಸ್ವಾಭಾವಿಕ ಪರಿವರ್ತನೆಗಳನ್ನೂ (ನ್ಯಾಚುರಲ್ ಟ್ರಾನ್ಸ್ ಫಾರ್ಮೇಷನ್ಸ್) ಅಮೆರಿಕನ್ ಗಣಿತಜ್ಞರಾದ ಸ್ಯಾಮ್ಯುಯೆಲ್ ಐಲೆನ್ ಬರ್ಗ್ ಮತ್ತು ಸೌಂಡರ್ಸ್ 1945ರಲ್ಲಿ ವ್ಯಾಖ್ಯಿಸಿದರು. ಅಲ್ಲಿಂದೀಚೆಗೆ ಕ್ಯಾಟಿಗೊರಿ ಮತ್ತು ಫಂಕ್ಟರು ಪರಿಕಲ್ಪನೆಗಳು ಬೀಜಗಣಿತೀಯ ಟೊಪಾಲೊಜಿ, ಬೀಜಗಣಿತೀಯ ಜ್ಯಾಮಿತಿ ಮೊದಲಾದ ಗಣಿತಶಾಖೆಗಳಲ್ಲಿ ಅತಿ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತಲಿವೆ.

ಗಣಿತೀಯ ಧಾತುಗಳ ಅನೇಕ ವ್ಯವಸ್ಥೆಗಳಲ್ಲಿ ಎರಡು ಧಾತುಗಳನ್ನು ಯಾವುದಾದರೊಂದು ನಿಯಮದ ಮೇರೆಗೆ ಸಂಯೋಜಿಸಿ ಮೂರನೆಯ ಧಾತುವೊಂದನ್ನು ರಚಿಸುವ ಸಾಧ್ಯತೆ ಇರುತ್ತದೆಂಬುದು ಎಲ್ಲರಿಗೂ ತಿಳಿದ ಸಂಗತಿ. ಉದಾಹರಣೆಗೆ ಧನಪೂರ್ಣಾಂಕಗಳ ವ್ಯವಸ್ಥೆಯಲ್ಲಿ ಯಾವುದೇ ಎರಡು ಧಾತುಗಳನ್ನು ಕೂಡಿ (ಅಥವಾ ಗುಣಿಸಿ) ಮತ್ತೆ ಒಂದು ಧನಪೂರ್ಣಾಂಕವನ್ನು ಪಡೆಯಬಹುದು; ಧನ ಭಿನ್ನರಾಶಿಗಳ ವ್ಯವಸ್ಥೆಯಲ್ಲಿ ಯಾವುದೇ ಧಾತುವನ್ನು ಮತ್ತೊಂದು ಧಾತುವಿನಿಂದ ಭಾಗಿಸಿ ಪುನಃ ಒಂದು ಧನ ಭಿನ್ನರಾಶಿಯನ್ನು ಪಡೆಯಬಹುದು. ಈ ಬಗೆಯ ಸಂಯೋಜನಾ ಸಾಧ್ಯತೆ ಸಾರ್ವತ್ರಿಕವಾಗಿರಬೇಕಾಗುದೇನಿಲ್ಲ; ಉದಾಹರಣೆಗೆ, ಧನಪೂರ್ಣಾಂಕಗಳ ವ್ಯವಸ್ಥೆಯಲ್ಲಿ 3ನ್ನು 5 ರಿಂದ ಕಳೆಯಬಹುದೇ ವಿನಾ 5ನ್ನು 3 ರಿಂದ ಕಳೆಯಲು ಸಾಧ್ಯವಿಲ್ಲ: ಆದಕಾರಣ ಧನ ಪೂರ್ಣಾಂಕಗಳ ವ್ಯವಸ್ಥೆಯಲ್ಲಿ(5–3) ಎಂಬ ಸಂಯೋಜನೆ ವ್ಯಾಖ್ಯಿತ (ಡಿಫೈನ್ಡ್), ಆದರೆ (3–5) ಎಂಬ ಸಂಯೋಜನೆ ಅವ್ಯಾಖ್ಯಿತ ಎಂದು ಹೇಳುತ್ತೇವೆ. ಮೊತ್ತ, ಶೇಷ, ಗುಣಲಬ್ಧ, ಭಾಗಲಬ್ಧ–ಇವು ಸಂಯೋಜನೆಗಳಿಗೆ (ಕಾಂಪೋಸಿಷನ್ಸ್) ನಾಲ್ಕು ನಿದರ್ಶನಗಳು ಮಾತ್ರ; ಇವಲ್ಲದೆ ಪರಿಶೀಲಿತ ವ್ಯವಸ್ಥೆಗೆ ಅನುಗುಣವಾಗಿ ಇನ್ನೂ ಅನೇಕ ರೀತಿಯ ಸಂಯೋಜನೆಗಳನ್ನು ನಿಯೋಜಿಸಲು ಶಕ್ಯವಿರಬಹುದಷ್ಟೆ. ಈಗ ಗಣಿತೀಯ ಧಾತುಗಳ C ಎಂಬ ವ್ಯವಸ್ಥೆಯೊಂದರಲ್ಲಿ ನಿಯೋಜಿತವಾಗಿರಬಹುದಾದ ಯಾವುದಾದರೂ ಒಂದು ನಿರ್ದಿಷ್ಟ ಸಂಯೋಜನೆಯನ್ನು ಮಾತ್ರ ಕುರಿತು ವಿವೇಚಿಸೋಣ. x ಎಂಬುದು C ಗೆ ಸೇರಿದ ಧಾತು ಎಂಬ ಅಭಿಪ್ರಾಯವನ್ನು ನಾವು ಎಂದಿನಂತೆ $x \in C$ ಎಂದು ಬರೆದು ವ್ಯಕ್ತಪಡಿಸುತ್ತೇವೆ. $x \in C, y \in C$ ಆದಾಗ ಇವೆರಡು ಧಾತುಗಳ (ಉಕ್ತನಿರ್ದಿಷ್ಟ) ಸಂಯೋಜನೆಯನ್ನು xy ಎಂಬ ಸಂಕೇತದಿಂದ ಸೂಚಿಸೋಣ. (x,y ಸಂಖ್ಯೆಗಳೇ ಆಗಬೇಕೆಂದಾಗಲಿ xy ಅವುಗಳ ವಾಡಿಕೆಯ ಗುಣಲಬ್ಧವೇ ಆಗಬೇಕೆಂದಾಗಲಿ ತಿಳಿಯಬಾರದು.) xy ಸಂಯೋಜನೆ ವ್ಯಾಖ್ಯಿತವಿರಬಹುದು ಅಥವಾ ಅವ್ಯಾಖ್ಯಿತವಿರಬಹುದು. yx ಸಂಯೋಜನೆಯೂ ಅಂತೆಯೇ. ಒಂದು ವೇಳೆ yx ಮತ್ತು xy ಎರಡೂ ವ್ಯಾಖ್ಯಿತವಾಗಿದ್ದರೂ ಅವು ಒಂದಕ್ಕೊಂದು ಸಮವಾಗಿಲ್ಲದಿರಬಹುದು (ಸಮಸ್ತ ಪೂರ್ಣಾಂಕಗಳ ವ್ಯವಸ್ಥೆಯಲ್ಲಿ (ನಮ್ಮ ಸಂಯೋಜನೆ ವ್ಯವಕಲನ ಸಂಯೋಜನೆಯಾದರೆ) 5–3 ಮತ್ತು 3–5 ಎರಡೂ ವ್ಯಾಖ್ಯಿತ, ಆದರೆ 5-3 3-5). ix ವ್ಯಾಖ್ಯಿತವಾದಾಗಲೆಲ್ಲ ix=x ಹಾಗೂ xi ವ್ಯಾಖ್ಯಿತವಾದಾಗಲೆಲ್ಲ xi = x ಆಗುವಂತೆ ($x \in$ Ci, $\in$ C) ಇರಬಹುದಾದ ಪ್ರತಿಯೊಂದು ಸ್ಥಿರ ಧಾತು i ಯನ್ನೂ C ಯ ಒಂದು ಸಾಮ್ಯಕ (ಐಡೆಂಟಿಟಿ) ಎಂದು ಕರೆಯುತ್ತೇವೆ. C ವ್ಯವಸ್ಥೆಯಲ್ಲಿನ ಪರಿಶೀಲಿತ ಸಂಯೋಜನೆ ಕೆಲವು ಸಂದರ್ಭಗಳಲ್ಲಿ ಕೆಳಗಿನ ನಾಲ್ಕು ನಿಯಮಗಳಿಗೆ ಬದ್ಧವಾಗಿರುವುದುಂಟು; ಆಗ ಅದು ಒಂದು ಕ್ಯಾಟಿಗೊರೀಯ ಸಂಯೋಜನೆ ಎಂದೆನಿಸಿಕೊಳ್ಳುವುದು.

**ಕ್ಯಾಟಿಗೊರೀಯತೆಯ ನಿಯಮಗಳು :** [C1] $x \in C$ ಆದಾಗಲೆಲ್ಲ $i_x x$ ಮತ್ತು $x j_x$ ಸಂಯೋಜನೆಗಳು ವ್ಯಾಖ್ಯಿತವಾಗುವಂತೆ ನಿರ್ದಿಷ್ಟವಾದ ಎರಡು ಸಾಮ್ಯಕ $i_x$ ಮತ್ತು $j_x$ ಗಳನ್ನು ಕಂಡುಹಿಡಿಯಲು ಶಕ್ಯವಾಗಬೇಕು.

[C2] xy ಮತ್ತು z(xy) ಗಳೆರಡೂ ವ್ಯಾಖ್ಯಿತವಾಗಿದ್ದರೆ zx ಕೂಡ ವ್ಯಾಖ್ಯಿತವಾಗಿರಬೇಕು.

[C3] xy ಮತ್ತು (xy)z ಗಳೆರಡೂ ವ್ಯಾಖ್ಯಿತವಾಗಿದ್ದರೆ yz ಕೂಡ ವ್ಯಾಖ್ಯಿತವಾಗಿರಬೇಕು.

[C4]xy ಮತ್ತು yz ಗಳೆರಡೂ ವ್ಯಾಖ್ಯಿತವಾಗಿದ್ದರೆ (xy)z ಮತ್ತು x(yz) ಗಳು ಸಹ ವ್ಯಾಖ್ಯಿತವಾಗಿಬೇಕು. ಹಾಗೂ (xy)z=x(yz) ಆಗಬೇಕು. [ಇವುಗಳಲ್ಲಿ $x,y,z,I_x,j_x$ ಹಾಗೂ (ವ್ಯಾಖ್ಯಿತವಾಗಿರುವಾಗ) zx, xy, yz, z(xy), (zy)z, x(yz) ಎಲ್ಲವೂ $\in$ C] ಇಂಥ ಕ್ಯಾಟಿಗೊರೀಯ ಸಂಯೋಜನೆಯನ್ನೊಳಗೊಂಡ ಯಾವುದೇ ವ್ಯವಸ್ಥೆ C ಗೆ ಕ್ಯಾಟಿಗೊರಿಯೊಂದರ ಬಿಂಬನ ಘಟಕ (ಕಂಪೋನೆಂಟ್ ಆಫ್ ಮಾರ್ಫಿಸಮ್ಸ್/ಮ್ಯಾಪ್ಸ್) ಎಂಬುದಾಗಿ ನಾಮಕರಿಸುತ್ತೇವೆ. ಯಾವುದಾದರೂ ಒಂದು ಧಾತುಸಮುದಾಯ (ಕ್ಲಾಸ್ ಆಫ್ ಎಲಿಮೆಂಟ್ಸ್) C* ಕ್ಕೂ C ವ್ಯವಸ್ಥೆಯ ಸಾಮ್ಯಕಗಳ ಸಮುದಾಯಕ್ಕೂ ಒಂದು ಒಂದು–ಒಂದು ಸಂವಾದಿತ್ವವನ್ನು (ಒನ್–ಟು–ಒನ್ ಕರೆಸ್ಪಾಂಡೆನ್ಸ್) ರೂಪಿಸಲು ಸಾಧ್ಯವಾಗುವುದಾದರೆ C* ವನ್ನು ಒಂದು C– ಸಾಪೇಕ್ಷ ವಿಧಾತುಘಟಕ (ಕಂಪೋನೆಂಟ್ ಆಫ್ ಆಬ್ಜೆಕ್ಟ್ಸ್) ಎಂದು ಕರೆಯಲಾಗುವುದು. ಈ ಬಗೆಯ ಬಿಂಬನ ಘಟಕ–ವಿಧಾತುಘಟಕಗಳ ಜೋಡಿಗಳೇ ಕ್ಯಾಟಿಗೊರಿಗಳು.

(C. C*) ಒಂದು ಕಾಟಿಗೊರಿಯಾಗಿರಲಿ. ಇದರ ಬಿಂಬನಘಟಕ C, ವಿಧಾತುಘಟಕ C*. C* ದ ಧಾತುಗಳು ವಿಶಿಷ್ಟವಾಗಿ ಈ ಕ್ಯಾಟಿಗೊರಿಯ ವಿಧಾತುಗಳು (ಆಬ್ಜೆಕ್ಟ್ಸ್)

ಎಂದೂ C ಯ ವನ್ನು ಬಿಂಬನಗಳು (ಮಾರ್ಫಿಸಮ್ಸ್/ಮ್ಯಾಪ್ಸ್) ಎಂದೂ ಕರೆಯುತ್ತೇವೆ. i ಎಂಬುದು C ಯ ಯಾವುದೇ ಸಾಮ್ಯಕವಾದಲ್ಲಿ ಅದಕ್ಕೆ ಅನುರೂಪವಾದ ಏಕೈಕ ವಿಧಾತುವನ್ನು I* ಎಂದು ಬರೆಯೋಣ ($i \in C, i^* \in C^*$). ಯಾವುದೇ ಬಿಂಬನ x($\in C$)ಗೆ ಅನುಗುಣವಾದ $i_x$ ಮತ್ತು $j_x$ ಸಾಮ್ಯಕಗಳು ಈಗಾಗಲೇ ಮೇಲಿನ (C1) ನಿಯಮದಿಂದ ಅಸ್ತಿತ್ವಕ್ಕೆ ಬಂದಿವೆಯಷ್ಟೇ; ಕ್ಯಾಟಿಗೊರೀಯತೆಯ ಉಳಿದ ಮೂರು ನಿಯಮಗಳ ಫಲವಾಗಿ x=y ಆದಾಗ $i_x=i_y$ ಮತ್ತು $j_x=j_y$ ಆಗಲೇಬೇಕೆಂದು ತೋರಿಸಬಹುದು. (ಇದರ ವಿಲೋಮ ಸತ್ಯವಾಗ ಬೇಕಾಗುದುದೇನಿಲ್ಲ) ವಿಧಾತು $I_x^*$ ಕ್ಕೆ x ಬಿಂಬನದ ವ್ಯಾಪ್ತಿ (ರೇಂಜ್) ಎಂದೂ $j_x^*$ ಕ್ಕೆ x ನ ಪ್ರಾಂತ (ಡೊಮೇನ್) ಎಂದೂ ಹೆಸರು. $p \in C^*, q \in C^*$ ಆಗಿರಲಿ. ಪ್ರಾಂತ $j_x^*=p$ ಮತ್ತು ವ್ಯಾಪ್ತಿ $i_x^*=q$ ಎಂಬ ಅಭಿಪ್ರಾಯವನ್ನು ಇನ್ನು ಮುಂದೆ ಸಾಂಕೇತಿಕವಾಗಿ $p \xrightarrow{x} q$ (ಅಥವಾ ಕೆಲವು ವೇಳೆ $x: p \to q$) ಎಂದು ಬರೆದು ವ್ಯಕ್ತಪಡಿಸಲಾಗುವುದು $p \xrightarrow{x} x$ ಆಗುವಂಥ ಬಿಂಬನ xಗಳನ್ನು $p \to q$ ಬಿಂಬನಗಳು ಎಂಬುದಾಗಿ ಕರೆಯಬಹುದು. $p \xrightarrow{x} q \xrightarrow{y} r$ ಎಂಬ ಸಂಯುಕ್ತ ಸಂಕೇತದ ಅರ್ಥ $p \xrightarrow{x} q$ ಮತ್ತು $q \xrightarrow{y} r$ ಎಂದು. $p \xrightarrow{x} q \xrightarrow{y} r$ ಆದಾಗ yx ಸಂಯೋಜನೆ ವ್ಯಾಖ್ಯಿತವಾಗಿರುತ್ತದೆಂದೂ $p \xrightarrow{yx} r$ ಆಗುತ್ತದೆಂದೂ ತೋರಿಸಬಹುದು. ವಿಲೋಮವಾಗಿ, $p \xrightarrow{yx} r$ ಆದಲ್ಲಿ $j_{yx} = j_x, i_{yx} = i_y, p = j_x^*, r = i_y^*$ ಎಂದೂ $p \xrightarrow{x} i_x^* = j_y^* \xrightarrow{y} r$ ಎಂದೂ ಸಾಧಿಸುವುದು ಕಷ್ಟವೇನಲ್ಲ.




ಚಿತ್ರ 1 ಚಿತ್ರ 2

ಈ ಕಾರಣದಿಂದ $p \xrightarrow{u} s \xrightarrow{v} r$ ಎಂಬುದನ್ನು yxಸಂಯೋಜನೆಯನ್ನೇ ಸೂಚಿಸುವ ಕೇವಲ ಒಂದು ಪರ್ಯಾಯ ಸಂಕೇತವನ್ನಾಗಿಯೂ ಬಳಸಿಕೊಳ್ಳುವ ಉಪಯುಕ್ತಪದ್ಧತಿ ಪ್ರಚಲಿತವಾಗಿದೆ. $p \xrightarrow{x} q \xrightarrow{y} r$ ಮತ್ತು $p \xrightarrow{w} r$ ಎಂಬೆರಡು ಅಭಿಪ್ರಾಯಗಳನ್ನು ಚಿತ್ರ 1 ರಿಂದಲೂ $p \xrightarrow{x} q \xrightarrow{y} r$ ಮತ್ತು $p \xrightarrow{u} s \xrightarrow{v} r$ ಎಂಬ ಅಭಿಪ್ರಾಯಗಳನ್ನು ಚಿತ್ರ 2 ರಿಂದಲೂ ಸೂಚಿಸಬಹುದಷ್ಟೆ.

ಮೊದಲನೆಯ ಪ್ರಸಂಗದಲ್ಲಿ $p \xrightarrow{w} r$ ನೊಂದಿಗೆ $p \xrightarrow{yx} r$ ಸಹ ಆಗಬೇಕು, ಎರಡನೆಯ ಪ್ರಸಂಗದಲ್ಲಿ $p \xrightarrow{yx} r$ ನೊಂದಿಗೆ $p \xrightarrow{vu} r$ ಸಹ ಆಗಬೇಕು. ಆದಾಗ್ಯೂ w = yx ಆಗಬೇಕೆಂದಾಗಲಿ yx = vx ಆಗಬೇಕೆಂದಾಗಲಿ ನಿಯಮವೇನಿಲ್ಲ. w= yx ಆಗುವ ವಿಶೇಷ ಸಂದರ್ಭದಲ್ಲಿ ಮಾತ್ರ ಚಿತ್ರ 1 ವ್ಯತ್ಯಯಿಸುತ್ತದೆ. (ಡಯಾಗ್ರಮ್ ಕಮ್ಯೂಟ್) ಎಂದು ಹೇಳುತ್ತೇವೆ.

ಅಂತೆಯೇ ಚಿತ್ರ 2 ವ್ಯತ್ಯಯಿಸುತ್ತದೆ ಎಂದಾಗ yx=vx ಎಂದು ಗ್ರಹಿಸಬೇಕು. ಚಿತ್ರ 1, 2 ಗಳಿಗಿಂತ ಹೆಚ್ಚು ಸಂಕೀರ್ಣಚಿತ್ರಗಳಲ್ಲಿ ನಾಲ್ಕಕ್ಕಿಂತ ಹೆಚ್ಚು ಮೂಲೆಗಳಿರಬಹುದು. ಅಂಥವುಗಳ ವ್ಯತ್ಯಯಶೀಲತೆಯನ್ನು ಸಹ ಸದೃಶರೀತಿಯಲ್ಲಿ ಅರ್ಥವಿರಬಹುದು. ಚಿತ್ರಗಳಲ್ಲಿ ಕಾಣಿಸಿಕೊಳ್ಳುವ x,y,u,v ಮೊದಲಾದ ಬಿಂಬನಗಳನ್ನು ಸಂಯೋಜಿಸುವಾಗ ಬಾಣಗಳ ಪ್ರಸರಣೆಯ ವಿರುದ್ಧ ಕ್ರಮದಲ್ಲಿ ಅವನ್ನು ಬರೆಯಬೇಕೆಂಬುದು ಗಮನಿಸಬೇಕಾದ ಅಂಶ.

ಕ್ಯಾಟಿಗೊರಿ ಪರಿಕಲ್ಪನೆಯ ಮೂಲಸ್ಫೂರ್ತಿ ಒದಗಿಬಂದದ್ದು ಸಂಬಂಧಕಗಳ ಹಾಗೂ ಉತ್ಪನ್ನಗಳ (ರಿಲೇಷನ್ಸ್ ಅಂಡ್ ಫಂಕ್ಷನ್ಸ್) i* ಮತ್ತು j* ಯಾವುದಾದರೂ ಎರಡು ಅಶೂನ್ಯ ಗಣಗಳಾಗಿರಲಿ (ನಾನ್‌ಎಮ್ಟಿ ಸೆಟ್ಸ್). i*ಕ್ಕೆ ಸೇರಿದ ಯಾವುದೇ ಧಾತು αಕ್ಕೆ ಅನುಗುಣವಾಗಿ j*ಕ್ಕೆ ಸೇರಿದ x(α) ಎಂಬ ಒಂದು ಧಾತುವನ್ನು ಗೊತ್ತು ಮಾಡುವ ಯಾವುದಾದರೂ ಒಂದು ವಿಧಿ x ಗೆ $i^* \to j^*$ ಸಂಬಂಧಕ ಎಂಬ ಹೆಸರು ಸಲ್ಲುತ್ತದೆ. [i*ದಲ್ಲಿ $\alpha = \beta$ ಆದಾಗಲೆಲ್ಲ j* ದಲ್ಲಿ $x(\alpha)= x(\to\beta)$ ಆಗುವುದಾದರೆ ಸಂಬಂಧಕ x ಒಂದು ಉತ್ಪನ್ನವೆಂದೆನಿಸಿಕೊಳ್ಳುತ್ತದೆ. ಈಗ ಸಮಸ್ತ ಸಂಬಂಧಕಗಳ ಸಮುದಾಯವನ್ನು ಕ್ಯಾಟಿಗೊರಿಯೊಂದರ ಬಿಂಬನ ಫಟಕವನ್ನಾಗಿ ಆಯ್ಕೆ ಮಾಡಬಹುದು. ಅಂದರೆ ಸಂಬಂಧಕಗಳೇ ನಮ್ಮ ಪ್ರಸಕ್ತ ಕ್ಯಾಟಿಗೊರಿ ನಿದರ್ಶನದ ಬಿಂಬನಗಳು. x ಒಂದು $i^* \to j^*$ ಸಂಬಂಧಕವೂ y ಒಂದು $j^* \to k^*$, ಸಂಬಂಧಕವೂ ಆದಲ್ಲಿ (i*, j*, k* ಯಾವುದಾದರೂ ಮೂರು ಅಶೂನ್ಯ ಗಣಗಳು) i* ದ ಪ್ರತಿಯೊಂದು ಧಾತು αಕ್ಕೂ k*ದ ಧಾತು y(x(α)) ವನ್ನು ಗೊತ್ತುಮಾಡುವ $i^* \to j^*$ ಸಂಬಂಧಕವನ್ನು yx ಸಂಯೋಜನೆ ಎಂದು ವ್ಯಾಖ್ಯಿಸಿ. (ಒಂದು $i^* \to j^*$ ಸಂಬಂಧಕ w ಒಂದು $l^* \to k^*$, ಸಂಬಂಧಕ $j^* \neq l^*$ ಆದಲ್ಲಿ ಸಾಧಾರಣವಾಗಿ wx ಸಂಯೋಜನೆ ಅವ್ಯಾಖ್ಯಿತವಾಗುವುದು.) ಯಾವುದೇ ಅಶೂನ್ಯ ಗಣ i* ದಲ್ಲಿ ಪ್ರತಿಯೊಂದು αಕ್ಕೂ αವನ್ನೇ ಸಂವಾದಿಯನ್ನಾಗಿ ಗೊತ್ತುಮಾಡುವ $i^* \to i^*$ ಸಂಬಂಧಕವನ್ನು i ಎಂದು ಸೂಚಿಸಿ ; $a \in i^*$ ಆದಾಗ $I(\alpha) \equiv \alpha$ ಸಂಬಂಧಕಗಳ ಸಂಯೋಜನೆಯನ್ನು ಕುರಿತಂತೆ ಇಂಥ i ಗಳು ಸಾಮ್ಯಕಗಳಾಗುತ್ತವೆಂದೂ ಆ ಸಂಯೋಜನೆ [C1]-[C4] ನಿಯಮಗಳನ್ನು ಪರಿಪಾಲಿಸುವ ಒಂದು ಕ್ಯಾಟಿಗೊರೀಯ ಸಂಯೋಜನೆಯಾಗುತ್ತದೆಂದೂ ತಾಳೆನೋಡುವುದು ಸುಲಭ. ಅಲ್ಲಿಗೆ ಸಮಸ್ತ ಸಂಬಂಧಕಗಳ ಸಮುದಾಯ ಕ್ಯಾಟಿಗೊರಿಯೊಂದರ ಬಿಂಬನಫಟಕವಾಗಲು ನಿಜಕ್ಕೂ ಯೋಗ್ಯವಾದ ವ್ಯವಸ್ಥೆ ಎಂದಾಯಿತು. ಇನ್ನು ಈ ಬಿಂಬನ ಫಟಕಕ್ಕೆ ಅನುರೂಪವಾದ ವಿಧಾತುಗಳನ್ನಾಗಿ ನಾವು ಎಲ್ಲ ಅಶೂನ್ಯಗಣಗಳನ್ನೂ ಆರಿಸಿಕೊಳ್ಳಬಹುದು; ಇದಕ್ಕಾಗಿ $i^* \to i^*$ ಸಾಮ್ಯಕ ಸಂಬಂಧಕಕ್ಕೆ ಗಣ i* ವೇ ಸಂವಾದಿಯಾದ ವಿಧಾತು ಎಂಬ ವಿಧಿಯನ್ನು ಅಂಗೀಕರಿಸಿದರಾಯಿತಷ್ಟೆ. ಅಂದ ಮೇಲೆ ಎಲ್ಲ ಸಂಬಂಧಕಗಳ ವ್ಯವಸ್ಥೆ ಮತ್ತು ಎಲ್ಲ ಅಶೂನ್ಯಗಣಗಳ ಸಮುದಾಯ ಇವೆರಡರ ಜೋಡಿ ಒಂದು ಕ್ಯಾಟಿಗೊರಿಯಾಗುತ್ತದೆ. ಅದನ್ನು ಸಂಬಂಧಕಗಳ ಕ್ಯಾಟಿಗೊರಿ ಎಂಬುದಾಗಿ ಕರೆಯೋಣ. ಆದ್ಯುಕ್ತೀಕೃತ (ಆಕ್ಸಿಯಮ್ಯಟೈಸ್ಡ್) ಫಾನ್‌ನಾಯ್ಮನ್–ಬರ್ನೇಯ್ಸ್–ಗೊಯ್ಡಲ್ ಗಣಸಿದ್ಧಾಂತದಲ್ಲಿ ಸಮುದಾಯಗಳನ್ನು ಕುರಿತಂತೆ ಗಣಗಳು (ಸೆಟ್ಸ್) ಮತ್ತು ಗಣೇತರ ಸಮುದಾಯಗಳು (ಕ್ಲಾಸಸ್ ವಿಚ್ ಆರ್ ನಾಟ್ ಸೆಟ್ಸ್) ಎಂಬೆರಡು ಭಿನ್ನವರ್ಗಗಳನ್ನು ಕಲ್ಪಿಸಲಾಗಿದೆ. ಕೆಲವು ತೀರ ಬೃಹತ್ಸಮುದಾಯಗಳನ್ನು (ಎಲ್ಲ ಸಂಬಂಧಕಗಳ ಸಮುದಾಯ, ಎಲ್ಲ ಅಶೂನ್ಯಗಣಗಳು ಸಮುದಾಯ ಇಂಥವು) ಗಣಗಳು ಎಂದು ಪರಿಗಣಿಸಿದ ಪಕ್ಷದಲ್ಲಿ ಅಭ್ಯಾಸ–ಅಸಾಂಗತ್ಯಗಳು ಉದ್ಭವಿಸುವುದೇ ಈ ಕ್ರಮಕ್ಕೆ ಕಾರಣ. ಸಂಬಂಧಕಗಳ ಕ್ಯಾಟಿಗೊರಿಯ ಬಿಂಬನಫಟಕ ಸಮಸ್ತ ಸಂಬಂಧಕಗಳನ್ನೂ ಒಳಗೊಳ್ಳುವುದರಿಂದ ಆದ್ಯುಕ್ತೀಕೃತ ಗೋಯ್ಡಲ್ ಗಣಸಿದ್ಧಾಂತದಂತೆ ಆ ಬಿಂಬನಫಟಕ ಒಂದು ಗಣೇತರ ಸಮುದಾಯವಾಗುವುದೇ ವಿನಾ ಗಣವಲ್ಲ. ಇಂಥ ಕ್ಯಾಟಿಗೊರಿಗಳಿಗೆ ದೀರ್ಘ ಕ್ಯಾಟಿಗೊರಿಗಳು (ಲಾರ್ಜ್ ಕ್ಯಾಟಿಗೊರಿಸ್) ಎಂದು ಹೆಸರು. ಬಿಂಬನಫಟಕಗಳು ಗಣಗಳಾಗುವಂಥ ಕ್ಯಾಟಿಗೊರಿಗಳಾದರೋ ಹ್ರಸ್ವ ಕ್ಯಾಟಿಗೊರಿಗಳು(ಸ್ಮಾಲ್ ಕ್ಯಾಟಿಗೊರಿಸ್) ಎಂದೆನಿಸಿಕೊಳ್ಳುತ್ತವೆ. [ಈ ವಿವರಣೆಗಳು ಅಭಿಜಾತ (ಕ್ಲಾಸಿಕಲ್) ಗಣಿತವಿಜ್ಞಾನದ ಆಯಕಟ್ಟಿನಲ್ಲಿ ಮಾತ್ರ ಮಾನ್ಯವಾಗುವಂಥವು. ರಚನಾತ್ಮಕ (ಕನ್‌ಸ್ಟ್ರಕ್ಟಿವ್)ಗಣಿತದಲ್ಲಿ ಮುಗ್ಧ ಗಣ ಸಿದ್ಧಾಂತವಾಗಲಿ (ನೇವ್ ಸೆಟ್ ಥಿಯರಿ). ಅದ್ಯುಕ್ತೀಕೃತ ಗಣಸಿದ್ಧಾಂತಗಳಾಗಲಿ ಗ್ರಾಹ್ಯವಲ್ಲ.]

(C, C*) ಎಂಬುದು ಒಂದು ಕ್ಯಾಟಿಗೊರಿಯಾದರೆ C ಯಲ್ಲಿರುವ ಸಾಮ್ಯಕ ಬಿಂಬನಗಳಿಗೂ C* ದ (ವಿ) ಧಾತುಗಳಿಗೂ ಒಂದು–ಒಂದು ಸಂವಾದಿತ್ವವಿರಬೇಕಷ್ಟೆ..C ಯ ಸಾಮ್ಯಕಗಳ ಸಮುದಾಯವನ್ನೇ C* ವನ್ನಾಗಿ ಆಯ್ಕೆ ಮಾಡಿದಲ್ಲಿ ಈ ನಿಬಂಧನೆ ಅತಿ ಸರಾಗವಾಗಿ ಪರಿಪಾಲಿತವಾಗುತ್ತದೆ. ಸಾಮ್ಯಕಗಳನ್ನೇ ವಿಧಾತುಗಳನ್ನಾಗಿ ಪರಿಗಣಿಸುವ ಈ ಕ್ರಮದಿಂದ ಇಚ್ಛೆಪಟ್ಟಲ್ಲಿ ಕೇವಲ ಬಿಂಬನಫಟಕಗಳನ್ನೇ ಇಡೀ ಕ್ಯಾಟಿಗೊರಿಗಳೆಂದು ಪ್ರದರ್ಶಿಸುವ ಸೌಲಭ್ಯ ನಮಗೆ ದೊರಕುವುದು. $x \in C, y \in C$ ಆದಲ್ಲಿ C ಒಂದು [ಕ್ಯಾಟಿಗೊರಿ(ಯ ಬಿಂಬನಫಟಕ) $yx=j_x$ ಆದಾಗ $yx=i_y$ ಆಗುವುದು ಮತ್ತು $yx = i_y$ ಆದಾಗ $yx = j_x$ ಆಗುವುದು. ಈ ಸಂದರ್ಭದಲ್ಲಿ y ಯನ್ನು x ನ ಒಂದು ಎಡ ವ್ಯಸ್ತ (ಲೆಫ್ಟ್ ಇನ್ವರ್ಸ್) ಎಂದೂ x ನ್ನು y ಯ ಒಂದು ಬಲ ವ್ಯಸ್ತ (ರೈಟ್ ಇನ್ವರ್ಸ್) ಎಂದೂ ಕರೆಯುತ್ತೇವೆ. ಯಾವುದಾದರೂ ಕ್ಷೇಪನ u ಗೆ ಒಂದು ಎಡ ಹಾಗೂ ಒಂದು ಬಲ ವ್ಯಸ್ತಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದಾದರೆ ಆ u ಒಂದು ಪ್ರತಿಬಿಂಬನ (ಐಸೋಮಾರ್ಫಿಸಮ್) ಎಂದೆನಿಸಿಕೊಳ್ಳುವುದು. vx=vy ಆದಾಗಲೆಲ್ಲ x = y ಆಗಬೇಕೆಂಬ ನಿಯಮವನ್ನು ಪಾಲಿಸುವಂಥ ಬಿಂಬನ v ಗಳಿಗೆ ಏಕಬಿಂಬನಗಳೆಂದೂ (ಮಾನೋಮಾರ್ಫಿಸಮ್ಸ್) xw = yw ಆದಾಗಲೆಲ್ಲ x = y ಆಗಬೇಕೆಂಬ ನಿಯಮವನ್ನು ಪಾಲಿಸುವ w ಗಳಿಗೆ ಅಧಿಬಿಂಬನಗಳೆಂದೂ (ಎಪಿಮಾರ್ಫಿಸಮ್ಸ್) ಹೆಸರು. ಎಲ್ಲ ಬಿಂಬನಗಳೂ ಸಾಮ್ಯಕಗಳೇ ಆಗಿರುವಂಥ ಕ್ಯಾಟಿಗೊರಿಗಳಿಗೆ ವಿಚ್ಛಿನ್ನ (ಡಿಸ್ಕ್ರೀಟ್) ಕ್ಯಾಟಿಗೊರಿಗಳು ಎಂಬ ನಾಮಕರಣ ಸಲ್ಲುತ್ತದೆ. ಕ್ಯಾಟಿಗೊರಿಯೊಂದರ ಸಾಮ್ಯಕಗಳೆಲ್ಲವೂ ಪರಸ್ಪರ ಸಮವಾಗಿದ್ದರೆ ಆ ಕ್ಯಾಟಿಗೊರಿ ಮಾನಾಯ್ಡು ಎಂದೆನಿಸಿಕೊಳ್ಳುತ್ತದೆ. ಪ್ರತಿಯೊಂದು ಬಿಂಬನಕ್ಕೂ ಒಂದು ಎಡವ್ಯಸ್ತವನ್ನು ಗೊತ್ತುಮಾಡಲು ಶಕ್ಯವಾಗುವಂಥ ಮಾನಾಯ್ಡುಗಳೇ ಗ್ರೂಪುಗಳು. (ಈ ಗ್ರೂಪುಗಳಲ್ಲಿ ಯಾವುದೇ ಬಿಂಬನದ ಎಲ್ಲ ಎಡ ಮತ್ತು ಎಲ್ಲ ಬಲವ್ಯಸ್ತಗಳೂ ಪರಸ್ಪರ ಸಮವಾಗಿರುತವೆ.) ಯಾವುದೇ ಕ್ಯಾಟಿಗೊರಿಯಲ್ಲಿ xy ಎಂಬುದಾಗಿ ಸೂಚಿಸುತ್ತಲಿದ್ದ ಸಂಯೋಜನೆಯನ್ನೇ yx ಎಂದು ಮಾರ್ಪಡಿಸಿ ಸೂಚಿಸತೊಡಗಿದಾಗ ಲಭಿಸುವ ನವಕ್ಯಾಟಿಗೊರಿಗೆ ಆ ಮೊದಲಿನ ಕ್ಯಾಟಿಗೊರಿಯ ದ್ವೈತಿ (ಡ್ಯೂಅಲ್) ಎಂದು ಹೆಸರು.

(B.B*) ಮತ್ತು (C.C*) ಎರಡು ಕ್ಯಾಟಿಗೊರಿಗಳೆಂದು ಭಾವಿಸಿ. f ಎಂಬುದು ಒಂದು $C \rightarrow B$ ಉತ್ಪನ್ನವೂ f* ಎಂಬುದು ಒಂದು $C^* \rightarrow B^*$ ಉತ್ಪನ್ನವೂ ಆಗಿರಲಿ. (ಅರ್ಥಾತ್, f ಮತ್ತು f* ಎರಡು ವಿಧಿಗಳು: $x \in C, y \in C$, x=y ಎಂಬುವು




ಚಿತ್ರ 1




ಚಿತ್ರ 3

ದತ್ತವಾದಲ್ಲಿ ಈ x,y ಗಳ ಮೇಲೆ f ವಿಧಿಯನ್ನು ಪ್ರಯೋಗಿಸಲು ಶಕ್ಯ ಮತ್ತು ಹಾಗೆ ಮಾಡಿದಾಗ ಫಲಿಸುವ f(x), f(y) ಧಾತುಗಳು $f(x) \in B$, $f(y) \in B$, f(x)= f(y) ಎಂಬ ನಿಬಂಧನೆಗಳಿಗೆ ಸರಿಹೊಂದುತ್ತವೆ: f* ವಿಧಿಯ ವಿಚಾರವೂ ಸದೃಶ.) ಮೇಲಿನ ಚಿತ್ರಗಳನ್ನು ಪರಿಶೀಲಿಸಿ (ಇಲ್ಲಿ $p,q,r \in C^*$; $x,y,w \in C$). ಚಿತ್ರ 1ರ ಮಾಹಿತಿ (C,C*) ದಲ್ಲಿ ಸತ್ಯವಾಗಿರುವಾಗಲೆಲ್ಲ ಚಿತ್ರ 3ರ ಮಾಹಿತಿ (B,B*) ದಲ್ಲಿ ಸತ್ಯವಾಗುವುದಾದರೆ, ಹಾಗೂ ಚಿತ್ರ 1 ವ್ಯತ್ಯಯಿಸಿದಾಗೆಲ್ಲ ಚಿತ್ರ 3 ಸಹ ವ್ಯತ್ಯಯಿಸುವುದಾದರೆ ಉತ್ಪನ್ನಗಳ ಜೋಡಿ (f,f*)ಿನ್ನು ಒಂದು (C.C*) (B.B*) ಫಂಕ್ಟರು ಎಂದು ಕರೆಯುತ್ತೇವೆ. ಫಂಕ್ಟರುಗಳು ಕೇವಲ ಚಿತ್ರ 1ನ್ನೆ ಅಲ್ಲದೆ (C,C*ಕ್ಕೆ ಸಂಬಂಧಿಸಿದ ಎಷ್ಟು ಮೂಲೆಗಳು ಬೇಕಾದರೂ ಇರಬಹುದಾದ ಎಲ್ಲ ವ್ಯತ್ಯಯಶೀಲ ಸತ್ಯಚಿತ್ರಗಳನ್ನೂ, (B,B*)ಕ್ಕೆ ಸಂಬಂಧಿಸಿದ ಅನುರೂಪ ವ್ಯತ್ಯಯಶೀಲ ಸತ್ಯ ಚಿತ್ರಗಳನ್ನಾಗಿ ಪರಿವರ್ತಿಸುತ್ತವೆ. ಕೆಳಗಿನ ಲಕ್ಷಣಗಳಿರುವ ಪ್ರತಿಯೊಂದು ಉತ್ಪನ್ನಗಳ ಜೋಡಿ (f,f*)ವೂ ಒಂದು $(C,C^*) \rightarrow (B.B^*)$ ಫಂಕ್ಟರಾಗುವುದು; ಮತ್ತು ಪ್ರತಿಯೊಂದು $(C.C^*) \rightarrow (B.B^*)$ ಫಂಕ್ಟರು (f.f*) ಕ್ಕೂ ಕೆಳಗಿನ ಲಕ್ಷಣಗಳಿರುತ್ತವೆ.

ವಿಶಿಷ್ಟ ಫಂಕ್ಟರು ಲಕ್ಷಣಗಳು [F1]i ಬಿಂಬನ Cಯ ಒಂದು ಸಾಮ್ಯಕವಾದಲ್ಲಿ f(i)ಬಿಂಬನ B ಯ ಒಂದು ಸಾಮ್ಯಕವಾಗುತ್ತದೆ ಮತ್ತು f*(i*) = (f(i))* ಆಗುತ್ತದೆ.

[F2] C ಯಲ್ಲಿ ಎರಡು ಬಿಂಬನ x ಮತ್ತು y ಗಳ ಸಂಯೋಜನೆ xy ವ್ಯಾಖ್ಯಿತವಾಗಿರುವಾಗಲೆಲ್ಲ B ಯಲ್ಲಿ f(x)f(y) ಸಂಯೋಜನೆ ವ್ಯಾಖ್ಯಿತವಾಗಿರುತ್ತದೆ; ಮತ್ತು f(x) f(y)= f(xy) ಆಗುತ್ತದೆ. ಈಗ (f.f*) ಮತ್ತು g.g*)ಗಳು ಎರಡು (C.C*) $\rightarrow$ (B.B*) ಫಂಕ್ಟರುಗಳಾಗಿರಲಿ. T ಎಂಬುದು ಒಂದು $C^* \rightarrow B$ ಉತ್ಪನ್ನವೆಂದು ಭಾವಿಸೋಣ. ಈ ಕೆಳಗಿನ ನಿಯಮಗಳನ್ನು ಈ T ಪರಿಪಾಲಿಸುವುದಾದರೆ ಅದನ್ನು (f.f*) ಮತ್ತು (g.g*) ಗಳ ನಡುವಿನ ಒಂದು ಸ್ವಾಭಾವಿಕ ಪರಿವರ್ತನೆ (ನ್ಯಾಚುರಲ್ ಟ್ರ್ಯಾನ್ಸ್ಫರ್ಮೆಷನ್) ಎಂಬುದಾಗಿ ವರ್ಣಿಸುತ್ತೇವೆ.

ಸ್ವಾಭಾವಿಕ ಪರಿವರ್ತನ ನಿಯಮಗಳು

$[T1] p \in C^*$ ಆದಾಗಲೆಲ್ಲ $f^*(p) \xrightarrow{T(p)} g^*(p)$ ಆಗಬೇಕು




ಚಿತ್ರ 4

[T2] $p \in C^*, q \in C^*, x \in C$ ಮತ್ತು $p \xrightarrow{x} q$ ಆದಾಗಲೆಲ್ಲ ಕೆಳಗಿನ ಚಿತ್ರ ವ್ಯತ್ಯಯಿಸಬೇಕು. ಕೊನೆಯದಾಗಿ ಎರಡು ಫಂಕ್ಟರುಗಳ ನಡುವೆ ಉಭಯ ದಿಸೆಗಳಲ್ಲೂ ಒಂದೊಂದು ಸ್ವಾಭಾವಿಕ ಪರಿವರ್ತನೆಯನ್ನು ನಿಯೋಜಿಸಲು ಶಕ್ಯವಾಗುತ್ತದಾದರೆ ಅಂಥ ಫಂಕ್ಟರುಗಳು ಸ್ವಭಾವತಃ ಸಮಾನವಾದುವು(ನ್ಯಾಚುರಲ್ ಈಕ್ವಿವಲೆಂಟ್) ಎಂದೆನಿಸಿಕೊಳ್ಳುತ್ತವೆ. (ಎಸ್.ಆರ್.ಎಂ.)

**ಕ್ಯಾಟೆನರಿ :** ಏಕರೀತಿ ಸಾಂದ್ರತಾ ವಿತರಣೆ ಇರುವ ಒಂದು ತಂತಿಯ ಎರಡು ಕೊನೆಗಳನ್ನು ಸ್ಥಿರಗೊಳಿಸಿ ಸ್ವಂತತೂಕದಿಂದಲೇ (ಗುರುತ್ವಕ್ಷೇತ್ರದಲ್ಲಿ) ತೂಗುವಂತೆ ವಿಧಿಸಿದಾಗ ಆ ತಂತಿ ತಳೆಯುವ ಆಕಾರ. ಇದೊಂದು ಗಣಿತವಕ್ರರೇಖೆ. ಇದರ ಸಮೀಕರಣ (ಸೂಕ್ತ ನಿರ್ದೇಶಕಾಕ್ಷಗಳ ಆಯ್ಕೆಯಿಂದ)

$$y = c \cos h \ \frac{x}{c}$$

ಇಲ್ಲಿ c ಒಂದು ಪ್ರಾಚಲ. AOB ಮೇಲೆ ಹೇಳಿದ ರೀತಿಯಲ್ಲಿ ತೂಗುತ್ತಿರುವ ಒಂದು ಏಕರೀತಿಯ ತಂತಿ ಆಗಿರಲಿ. A,B ಸ್ಥಿರಬಿಂದುಗಳು. O ಈ ತಂತಿಯ ಅತ್ಯಂತ ಕೆಳಗಿನ ಬಿಂದು. ಇದನ್ನು ಮೂಲಬಿಂದುವನ್ನಾಗಿಯೂ ಅಲ್ಲಿ ತಂತಿಗೆ ಎಳೆದ ಸ್ಪರ್ಶರೇಖೆಯನ್ನು (ಇದು ಕ್ಷಿತಿಜೀಯವಾಗಿರುವುದು) x– ಅಕ್ಷರವನ್ನಾಗಿಯೂ ಆಯುತ್ತೇವೆ.




ಚಿತ್ರ 1

P ತಂತಿಯ ಮೇಲಿನ ಯಾವುದೇ ಬಿಂದು ಆಗಿರಲಿ. OP ತುಣುಕಿನ ಉದ್ದ s ಆಗಿರಲಿ, OP ತುಣುಕಿನ ಸಮತೋಲ P ಯಲ್ಲಿ ವರ್ತಿಸುವ ಕರ್ಷಣ T, OP ಯ ತೂಕ sw ಮತ್ತು Oನಲ್ಲಿ ವರ್ತಿಸುವ ಕರ್ಷಣ $T_0$ ಗಳಿಂದ ನಿರ್ಧರಿತವಾಗಿದೆ. ಇಲ್ಲಿ w ತಂತಿಯ ಏಕಮಾನ ಉದ್ದದ ತೂಕ. ಆದ್ದರಿಂದ ಸ್ಥಿತಿವಿಜ್ಞಾನದ ನಿಯಮಾನುಸಾರವಾಗಿ

$T \cos \psi = T_0 \equiv wc$ ಆಗಿರಲಿ, c ಒಂದು ಸ್ಥಿರಾಂಕ

$T \sin \psi = sw$

ಸಮೀಕರಣಗಳು ದೊರೆಯುತ್ತವೆ.

$\therefore s = c \tan \psi$

ಇದು ತಂತಿ ತಳೆದಿರುವ ಆಕಾರದ, ಅಂದರೆ ಕ್ಯಾಟೆನರಿಯ, ನಿಜಸಮೀಕರಣ (ಇನ್‌ಟ್ರಿನ್ಸಿಕ್ ಇಕ್ವೇಷನ್). ಕಲನಶಾಸ್ತ್ರದ ನಿಯಮಗಳಿಂದ $s = c\frac{dy}{dx}$

ಎಂದು ಮೇಲಿನ ಸಮೀಕರಣವನ್ನು ಬರೆಯಬಹುದು ಇದನ್ನು ಅವಕಲಿಸಿ

$$\frac{ds}{dx} = \sec^2 \Psi = \sqrt{1 + \tan^2 \Psi} = \sqrt{1 + \left(\frac{dt}{dx}\right)^2}$$

ದೊರೆಯುವ ಸಮೀಕರಣ

$$= c\frac{d^2y}{dx^2}$$




ಚಿತ್ರ 2

ಇದನ್ನು ಅನುಕಲಿಸಿದಾಗ

$$\frac{dy}{dx} = \sinh \frac{x}{c}$$

ದೊರೆಯುತ್ತದೆ. ಇದನ್ನು ಪುನಃ ಅನುಕಲಿಸಿದಾಗ

$$y = c \cosh \frac{x}{c} + k$$

ದೊರೆಯುತ್ತದೆ. ಈಗ, ಮೂಲಬಿಂದುವನ್ನು Oy ಅಕ್ಷದ ಮೇಲೆ ಋಣದಿಶೆಯಲ್ಲಿ c ದೂರದಲ್ಲಿ O' ಎಂಬಲ್ಲಿ ಆಯ್ದು O'y ಯನ್ನು y– ಅಕ್ಷವಾಗಿಯೂ O' ಮೂಲಕ ಇದಕ್ಕೆ ಎಳೆದ ಲಂಬವನ್ನು

y– ಅಕ್ಷವಾಗಿಯೂ (ಇದು ಮೊದಲಿನ x– ಅಕ್ಷಕ್ಕೆ ಸಮಾಂತರವಾಗಿರುತ್ತದೆ).

ಆಯ್ದರೆ ಕ್ಯಾಟೆನರಿಯ ಸಮೀಕರಣ

$y = c \cos h \frac{x}{c}$ ಆಗುತ್ತದೆ.

ಎಂಜಿನಿಯರಿಂಗ್ ವಿನ್ಯಾಸಗಳ ರಚನೆಯಲ್ಲಿ ಈ ವಕ್ರರೇಖೆಯ ಹಾಗೂ ಇದರ ಹಲವಾರು ರೂಪಾಂತರಗಳ ವಿಶ್ಲೇಷಣೆ ಪ್ರಮುಖಪಾತ್ರ ವಹಿಸುತ್ತದೆ. *

**ಕ್ಯಾಟೆಲ್, ಜೇಮ್ಸ್ ಮೆಕ್‌ಕೀನ್ :** 1860–1944. ಅಮೆರಿಕನ್ ಮನೋವಿಜ್ಞಾನಿ. ವಸ್ತುನಿಷ್ಠ ಕ್ರಮಗಳು, ವೈಯಕ್ತಿಕ ಭಿನ್ನತೆಗಳ ಅಧ್ಯಯನ, ಮಾನಸಿಕ ಮಟ್ಟಗಳನ್ನಳೆವ ವಿಧಾನಗಳು, ವ್ಯಾವಹಾರಿಕ ವಿಷಯಗಳಿಗೆ ಮನೋವಿಜ್ಞಾನದ ಅನ್ವಯ–ಈ ವಿಷಯಗಳಲ್ಲಿ ಈತ ತೋರಿದ ಆಸಕ್ತಿ ಮತ್ತು ಬೀರಿದ ಪ್ರಭಾವದಿಂದಾಗಿ ಅಮೆರಿಕದ ಮನೋವಿಜ್ಞಾನ ಹೊಸ ದಾರಿಯಲ್ಲಿ ಬೆಳೆಯಲನುಕೂಲವಾಯಿತು. ಲಾಫಯೆಟ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿ 1880ರಲ್ಲಿ ಯುರೋಪಿಗೆ ತೆರಳಿ ಗೊಯಟ್ಟಿಂಗೆನ್ನಿನ ಲೋಟ್ಸೆ ಮತ್ತು ಲೀಪ್‌ಝಿಗ್‌ನಲ್ಲಿ ವಿದ್ವಾಂಸ ವೂಂಟ್‌ನ ಬಳಿ ಶಿಷ್ಯವೃತ್ತಿ ಮಾಡಿದ. 1882ರಲ್ಲಿ ಅಮೆರಿಕದಿಂದ ಹಿಂದಿರುಗಿ ಸ್ಟ್ಯಾನ್ಲಿಹಾಲ್‌ನ ಶಿಷ್ಯನಾಗಿ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದಲ್ಲಿದ್ದ. ಮರುವರ್ಷ ಲೀಪ್‌ಝಿಗ್‌ಗೆ ಮರಳಿ ವೂಂಟ್‌ನ ಸಹೋದ್ಯೋಗಿಯಾಗಿ ಮೂರು ವರ್ಷ ಕೆಲಸ ಮಾಡಿದ. ಪ್ರತಿಕೃತಿಯ ಕಾಲ (ಆರ್.ಟಿ.) ಮತ್ತು ವೈಯಕ್ತಿಕ ವೈವಿಧ್ಯಗಳ ಮೇಲೆ ಸಂಶೋಧನೆಗಳನ್ನು ನಡೆಸಿದ. ಅಮೆರಿಕಕ್ಕೆ ಮರಳಿ ಪೆನ್ಸಿಲ್‌ವೇನಿಯ, ಕೊಲಂಬಿಯ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡಿದ. 1891ರಲ್ಲಿ ಕೊಲಂಬಿಯದಲ್ಲಿ ಪ್ರಾಯೋಗಿಕ ಮನೋವಿಜ್ಞಾನ ಶಾಲೆಯೊಂದನ್ನು ವ್ಯವಸ್ಥೆ ಮಾಡಿ ಇಪ್ಪತ್ತಾರು ವರ್ಷಗಳು ಅದರ ಅಧಿಕಾರಿಯಾಗಿದ್ದ. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಫ್ರಾನ್ಸಿಸ್ ಗಾಲ್ಟನ್ನನ ಜೊತೆಗೂ ಕೊಲಂಬಿಯದಲ್ಲಿ ಬಾಲ್ಡ್‌ವಿನ್ನನ ಜೊತೆಗೂ ಕೆಲಸ ಮಾಡಿದ. ಅಮೆರಿಕದಲ್ಲಿ ಮನೋವಿಜ್ಞಾನ ವೈಜ್ಞಾನಿಕ ಸ್ಥಾನವನ್ನು ಒದಗಿಸಿಕೊಟ್ಟವನೀತನೇ. 1929ರಲ್ಲಿ ಒಂಬತ್ತನೆಯ ಅಂತಾರಾಷ್ಟ್ರೀಯ ಮನೋವಿಜ್ಞಾನ ಸಮ್ಮೇಳನ ನಡೆದಾಗ ಇವನೇ ಅದರ ಅಧ್ಯಕ್ಷನಾಗಿದ್ದ. ನಿಯಂತ್ರಿತ ಸಂಯೋಜನೆ, ಸ್ವಚ್ಛಂದ ಸಂಯೋಜನೆ, ಪ್ರತಿಕ್ರಿಯೆಯ ವೇಗ, ಅವಧಾನದ ಪರಿಮಿತಿ ಮುಂತಾದ ಕ್ಷೇತ್ರಗಳಲ್ಲಿ ಈತ ಕೆಲಸ ಮಾಡಿದ್ದಾನೆ. ಇ.ಎಲ್.ಕಾರ್ನ್‌ಡೈಕ್, ಆರ್.ಎಸ್.ಉಡ್‌ವರ್ತ್, ಡಬ್ಲ್ಯೂಎಫ್. ಡಿಯರ್‌ಬಾರ್ನ್, ಇ.ಕೆ. ಸ್ಟ್ರಾಂಗ್, ಎ.ಟಿ. ಪಾಫೆನ್‌ಬರ್ಗರ್, ಎ.ಐ.ಗೇಟ್ಸ್ ಮುಂತಾದ ಪ್ರಸಿದ್ಧ ಮನೋವಿಜ್ಞಾನಿಗಳು ಈತನ ಶಿಷ್ಯರು. (ಎಸ್.ಕೆ.ಆರ್.)

**ಕ್ಯಾಟ್ಲೀಯ :** ಆರ್ಕಿಡೇಸೀ ಕುಟುಂಬದ ಲೀಲ್ಯೇನೀ ಉಪಪಂಗಡಕ್ಕೆ ಸೇರಿದ ಒಂದು ಸುಪ್ರಸಿದ್ಧ ಅಲಂಕಾರ ಸಸ್ಯಜಾತಿ. ತನ್ನ ಹೂಗಳ ಗಾತ್ರಕ್ಕೂ ವರ್ಣ ವೈವಿಧ್ಯಕ್ಕೂ ಬಲುಹೆಸರಾಗಿದ್ದು ಬೇರಾವುದೇ ಆರ್ಕಿಡ್ಡಿಗಿಂತ ಹೆಚ್ಚು ಜನಪ್ರಿಯವಾಗಿದೆ.

ಇದು ಅಮೆರಿಕದ ಉಷ್ಣವಲಯಗಳ ಮೂಲವಾಸಿ. ದಕ್ಷಿಣ ಅಮೆರಿಕದ ಉತ್ತರ ಹಾಗೂ ಪಶ್ಚಿಮ ಪ್ರದೇಶಗಳು ಮತ್ತು ಬ್ರಜಿಲ್ ದೇಶದ ತೀರಪ್ರದೇಶಗಳು ಇದರ ಮುಖ್ಯ ನೆಲೆಗಳು. ಅಲ್ಲದೆ ಮೆಕ್ಸಿಕೋ, ಮಧ್ಯ ಅಮೆರಿಕ, ಪನಾಮ ಮತ್ತು ಟ್ರಿನಿಡಾಡ್‌ಗಳಲ್ಲೂ ಇದರ ಹಲವಾರು ಪ್ರಭೇದಗಳು ಕಾಣಸಿಗುತ್ತವೆ. ಕ್ಯಾಟ್ಲೀಯ ಜಾತಿಯಲ್ಲಿ ಸುಮಾರು 65 ಪ್ರಭೇದಗಳೂ ಅಸಂಖ್ಯಾತ ಬಗೆಗಳೂ ಸಾವಿರಾರು ಅಡ್ಡತಳಿಗಳೂ ಇವೆ(ಬೇರೆ ಯಾವುದೇ ಆರ್ಕಿಡ್ಡಿಗಿಂತ ಕ್ಯಾಟ್ಲೀಯದಲ್ಲೇ ಹೆಚ್ಚು ಅಡ್ಡತಳಿಗಳಿವೆ ಎಂದು ಹೇಳಲಾಗಿದೆ). ಲೀಲ್ಯೇನೀ ಉಪಪಂಗಡದ ಇತರ ಜಾತಿಯ ಆರ್ಕಿಡ್‌ಗಳೊಂದಿಗೆ ಅಡ್ಡಹಾಯಿಸಿ ಪಡೆದಿರುವ ಸಮ್ಮಿಶ್ರ ತಳಿಗಳೂ ಇವೆ.

ಕ್ಯಾ. ಟ್ರಿಯೋನೀ ಪ್ರಭೇದ

ಎಲ್ಲ ಬಗೆಗಳೂ ಸುಮಾರು 1–2 ಎತ್ತರಕ್ಕೆ ಬೆಳೆಯುವ ಮೂಲಿಕೆ ಸಸ್ಯಗಳು. ಸ್ವಾಭಾವಿಕವಾಗಿ ಅಪ್ಪುಸಸ್ಯಗಳಾದರೂ ಕೆಲವು ಬಗೆಗಳನ್ನು ಕುಂಡಗಳಲ್ಲಿ ಮೇಲ್ಮುಖವಾಗಿರುವಂತೆ ಬೆಳೆಸಬಹುದು. ಕೊಳವೆಯಾಕಾರದ ಇಲ್ಲವೆ ಕದಿರಿನಾಕಾರದ ಹಲವಾರು ಮಿಥ್ಯಾಲಶುನಗಳು, ನೆಲದೊಳಗೇ ಹುದುಗಿರುವ ಪ್ರಕಂದ, ಬಿಳಿಯ ಬಣ್ಣದ ಹೀರುಬೇರುಗಳು, ಒಂದು ಅಥವಾ ಎರಡು ಎಲೆಗಳು ಈ ಜಾತಿಯ ಸಸ್ಯಗಳ ಪ್ರಮುಖ ಲಕ್ಷಣಗಳು. ಹೂಗಳು ಒಂಟೊಂಟಿಯಾಗಿ ಇಲ್ಲವೆ ಹೂಗೊಂಚಲುಗಳಲ್ಲಿ ಅರಳುತ್ತವೆ. ಒಂದೊಂದು ಹೂವಿನಲ್ಲಿ ಅಗಲವಾಗಿ ಹರಡಿಕೊಂಡಿರುವ 3 ಪುಷ್ಪಪತ್ರಗಳು, 3 ದಳಗಳು ಇವೆ. ದಳಗಳು ಅಗಲ. ಅವುಗಳ ಅಂಚು ನೆರಿಗೆ ನೆರಿಗೆಯಾಗಿ ಮಡಿಚಿವೆ. ಎರಡು ದಳಗಳು ಒಂದು ಬಗೆಯಾಗಿದ್ದು ಮೂರನೆಯದು ಆರ್ಕಿಡ್ಡುಗಳಲ್ಲೆಲ್ಲ ಕಾಣಬರುವ ವಿಶೇಷ ರೀತಿಯ ತುಟಿಯಾಗಿ (ಲೇಬಿಯ) ಮಾರ್ಪಟ್ಟಿದೆ. ತುಟಿಯ ಬುಡ ಕೊಳವೆಯಾಕಾರದ್ದು, ಬಣ್ಣ ಉಳಿದ ದಳಗಳಿಗಿಂತ ಭಿನ್ನ ರೀತಿಯದು.

ಕ್ಯಾಟ್ಲೀಯದ ಪ್ರಭೇದಗಳನ್ನು ಬೈಫೋಲಿಯೇಟ್ ಮತ್ತು ಯೂನಿಫೋಲಿಯೇಟ್ ಎಂಬ 2 ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಗುಂಪಿನ ಸಸ್ಯಗಳಲ್ಲಿ ಕೊಳವೆಯಾಕಾರದ ಮಿಥ್ಯಾಲಶುನಗಳು ಮತ್ತು ಹೆಚ್ಚು ಸಂಖ್ಯೆಯಲ್ಲಿ ಚಿಕ್ಕಗಾತ್ರದ ಹೂಗಳು ಇವೆ. ಒಂದೊಂದು ಮಿಥ್ಯಾಲಶುನದಲ್ಲೂ 2 ಎಲೆಗಳಿವೆ. ಒಂಟಿ ಎಲೆಗಳು, ಕದಿರು ಇಲ್ಲವೆ ಗದೆಯಾಕಾರದ ಮಿಥ್ಯಾಲಶುನಗಳು ಮತ್ತು ದೊಡ್ಡ ಗಾತ್ರದ ಹೂಗಳು ಎರಡನೆಯ ಗುಂಪಿನ ಸಸ್ಯಗಳ ಲಕ್ಷಣ (ಹೂಗಳ ಸಂಖ್ಯೆಯೂ ಬಲು ಕಡಿಮೆ). ತೋಟಗಾರಿಕೆಯಲ್ಲಿ ಪ್ರಮುಖವಾಗಿರುವ ಪ್ರಭೇದಗಳೆಲ್ಲ ಎರಡನೆಯ ಗುಂಪಿಗೆ ಸೇರಿದವು. ಇವೆರಡು ಗುಂಪುಗಳಿಗೂ ಖಚಿತವಾಗಿ ಸೇರಿಸಲಾಗದ ಕೆಲವು ಬಗೆಗಳೂ ಉಂಟು. ಉದಾ: ಕ್ಯಾಸಿಟ್ರಿನ ಪ್ರಭೇದ.

ಕ್ಯಾಟ್ಲೀಯ ಗಿಡಗಳ ಕೃಷಿ ಬಲು ಸುಲಭ. ಆರೈಕೆ ಹೆಚ್ಚು ಬೇಕಿಲ್ಲ. ಸಾಕಷ್ಟು ಪೌಷ್ಟಿಕಾಂಶವಿರುವ ಯಾವ ಬಗೆಯ ಮಣ್ಣಿನಲ್ಲಾದರೂ ಇವು ಬೆಳೆಯಬಲ್ಲವು. ಮಣ್ಣಿನಲ್ಲಿ ಸರಾಗವಾಗಿ ಗಾಳಿಯಾಡುವಂತಿರಬೇಕು. ಅಲ್ಲದೆ ನೀರೂ ನಿಲ್ಲಬಾರದು. ಈ ರೀತಿಯ ಸೌಲಭ್ಯವಿರುವಂತೆ ಮಣ್ಣಿನೊಡನೆ ಆಸ್ಮಂಡ, ತೊಗಟೆ ಮುಂತಾದ ಕೆಲವು ವಸ್ತುಗಳನ್ನು ಸೇರಿಸುವುದು ವಾಡಿಕೆಯಲ್ಲಿದೆ. ಕ್ಯಾಟ್ಲೀಯಗಳಿಗೆ ಬೆಳಕೂ ಚೆನ್ನಾಗಿ ಬೀಳಬೇಕು. ಕ್ಯಾಲೇಬಿಯೇಟ, ಕ್ಯಾಗಟೇಟ ಮುಂತಾದ ಪ್ರಭೇದಗಳಿಗಂತೂ ಸೂರ್ಯಕಿರಣ ನೇರವಾಗಿ ಬೀಳಬೇಕು. ಗೊಬ್ಬರವೂ ಚೆನ್ನಾಗಿ ಬೇಕು; ಗೊಬ್ಬರವನ್ನು ಹಾಕಿದಷ್ಟೂ ಗಿಡಗಳ ಬೆಳವಣಿಗೆ ಹೆಚ್ಚು ಹುಲುಸು. ಕುಂಡದ ಇಲ್ಲವೆ ತೂಗುಬುಟ್ಟಿಯ ಗಾತ್ರಕ್ಕಿಂತ ಗಿಡಗಳು ಹೆಚ್ಚು ಅಗಲವಾಗಿ ಬೆಳೆದರೆ, ನೀರು ಸರಾಗವಾಗಿ ಇಳಿಯದಿದ್ದರೆ ಗಿಡಗಳನ್ನು ಬೇರೆ ಕುಂಡಗಳಿಗೆ ವರ್ಗಾಯಿಸಬೇಕು.

ಉದ್ಯಾನ ಪ್ರಾಮುಖ್ಯವಿರುವ ವಿವಿಧ ಕ್ಯಾಟ್ಲೀಯ ಪ್ರಭೇದಗಳನ್ನು ಮುಂದೆ ಹೆಸರಿಸಲಾಗಿದೆ. ಕ್ಯಾಗ್ರಾನ್ಯುಲೋಸ, ಕ್ಯಾಬೈಕಲರ್, ಕ್ಯಾಸಿಟ್ರಿನ, ಕ್ಯಾ.ಅಕ್ಲಾಂಡಿಯೈ, ಕ್ಯಾ.ಬೌರಿಂಗಿಯಾನ, ಕ್ಯಾಟ್ರಿಯೇನೀ, ಕ್ಯಾವಾರ್ಸೆವಿಸಿಯೈ ಇತ್ಯಾದಿ. (ಡಿ.ಎಂ.)

**ಕ್ಯಾಡಾವೆರೀನ್ :** ಲೈಸೀನನ್ನು ಡಿಕಾರ್ಬಾಕ್ಸಿಲೇಟ್ ಮಾಡಿದಾಗ ಬರುವ ಡೈಅಮೀನ್. ರೈಬೋಸೋಮುಗಳಲ್ಲಿ ಇದು ಇದೆಯೆಂದು ತಿಳಿದುಬಂದಿದೆ. ಹಿಸ್ಟಾಮಿನೇಸ್ ಅಥವಾ ಡೈಅಮೀನ್ ಆಕ್ಸಿಡೇಸ್ ಎಂಬ ಎನ್‌ಜೈಮಿನಿಂದ ಇದು ಉತ್ಕರ್ಷಿತವಾಗುತ್ತದೆ. ಸಿಸ್ಟಿನ್ ಯೂರಿಯಾ ಎಂಬ ಕಾಯಿಲೆಯಲ್ಲಿ ಇದು ಮೂತ್ರದಲ್ಲಿ ವಿಸರ್ಜಿತವಾಗಬಹುದು. (ಎಂ.ಆರ್.ಆರ್.)

**ಕ್ಯಾಡಿಸ್ ನೊಣಗಳು :** ಕೀಟವರ್ಗದ ಟ್ರೈಕಾಪ್ಟರ ಗಣಕ್ಕೆ ಸೇರಿದ ಕೀಟಗಳು. ನೋಡಲು ಪತಂಗಗಳಂತಿವೆ (ಮಾತ್ಸ್). ದೇಹ ಮತ್ತು ರೆಕ್ಕೆಗಳ ಮೇಲೆ ಕೂದಲಿನ ಹೊದಿಕೆ ಇದೆ. ಇವಕ್ಕೆ ತೆಳುವಾದ ಪೊರೆಯಂಥ ಎರಡು ಜೊತೆ ರೆಕ್ಕೆಗಳಿವೆ. ಆಹಾರವನ್ನು ಕಡಿದು ನುಂಗಲು ಅನುಕೂಲವಾಗುವಂಥ ವದನಾಂಗಗಳಿವೆ. ಇವುಗಳ ಬೆಳವಣಿಗೆಯಲ್ಲಿ ಪೂರ್ಣ ರೂಪಪರಿವರ್ತನೆಯನ್ನು ಕಾಣಬಹುದು. ಡಿಂಬಗಳು ಜಲವಾಸಿಗಳು. ನಿಂತ ಇಲ್ಲವೆ ಹರಿವ ನೀರಿನಲ್ಲಿ ವಾಸಿಸುತ್ತವೆ. ಡಿಂಬಗಳು ಮರಳು, ಚಿಕ್ಕಪುಟ್ಟ ಚಿಪ್ಪುಗಳು ಮತ್ತು ಇತರ ಸಸ್ಯವಸ್ತುಗಳಿಂದ ಗೂಡುಗಳನ್ನು ರಚಿಸಿ ಅವುಗಳಲ್ಲಿ ಜೀವಿಸುವುವು. ಒಂದೊಂದು ಪ್ರಭೇದದ ಡಿಂಬವೂ ವಿಶಿಷ್ಟವಾದ ಗೂಡನ್ನು ಕಟ್ಟಿಕೊಳ್ಳುತ್ತದೆ. ಕೆಲವು ಬಗೆಗಳು ಒಂದು ವಿಧದ ರೇಷ್ಮೆಯ ಬಲೆಯನ್ನು ನೇಯ್ದು ಸಣ್ಣಜೀವಿಗಳನ್ನು ಆಹಾರಕ್ಕಾಗಿ ಹಿಡಿಯುತ್ತವೆ. ಕ್ಯಾಡಿಸ್ ನೊಣಗಳ ಡಿಂಬಗಳು ಮೀನು ಮತ್ತಿತರ ಜಲವಾಸಿ ಪ್ರಾಣಿಗಳ ಪ್ರಮುಖ ಆಹಾರವೆನಿಸಿವೆ. (ಎನ್.ವಿ.ಎ.)

**ಕ್ಯಾಡ್ಮನ್ :** ಮರಣ ಪ್ರ.ಶ ಸು.680? ಇಂಗ್ಲೆಂಡಿನ ಪ್ರಾಚೀನ ಕ್ರೈಸ್ತ ಕವಿಗಳಲ್ಲಿ ಮೊದಲಿಗ. ಇಂಗ್ಲಿಷ್ ಕವಿಗಳಲ್ಲೂ ಈತನೇ ಮೊದಲಿಗನೆನ್ನಲಾಗಿದೆ. ಬೀಡ್ ಬರೆದಿರುವ ಕ್ರೈಸ್ತ ಧರ್ಮದ ಚರಿತ್ರೆಯಲ್ಲಿ ಈತನ ಬಗ್ಗೆ ಮಾಹಿತಿ ದೊರೆಯುತ್ತದೆ. ವಿಟ್ಬಿಯ ಕ್ರೈಸ್ತಮಠದಲ್ಲಿದ್ದ ಈತ ಮಧ್ಯವಯಸ್ಕನಾಗುವವರೆಗೂ ಕಾವ್ಯರಚನೆಯಲ್ಲಿ ಆಸಕ್ತಿ ತೋರಲಿಲ್ಲ. ಒಮ್ಮೆ ಈತನ ಕನಸಿನಲ್ಲಿ ದೇವರು ಕಾಣಿಸಿಕೊಂಡು ತನ್ನ ಸಲುವಾಗಿ ಹಾಡಲು ಆಜ್ಞಾಪಿಸಿದನಂತೆ. ಅನಂತರ ಕ್ಯಾಡ್ಮನ್ ಜಗತ್ತಿನ ಸೃಷ್ಟಿ, ಮಾನವಕುಲದ ಆರಂಭ, ಸ್ವರ್ಗದ ದಿವ್ಯತೆ, ನರಕಶಿಕ್ಷೆಯ ದಾರುಣತೆಗಳನ್ನು ಕುರಿತು ಹಾಡಿದನಂತೆ. ಈ ಕವನಗಳಲ್ಲಿ ಉತ್ತಮ ಕಾವ್ಯಗುಣಗಳೇನೂ ಇಲ್ಲ; ವಿಷಯಕ್ಕಿಂತ ಹೆಚ್ಚು ಉದ್ಗಾರಗಳು, ಪುನರಾವೃತ್ತಿಗಳು, ಬಳಸು ಮಾತುಗಳು ಹೆಚ್ಚು ತುಂಬಿವೆ. ಅಲ್ಲದೆ ಅವೆಲ್ಲವೂ ಕ್ಯಾಡ್ಮನ್ನನ ಕೃತಿಗಳಲ್ಲವೆಂದೂ ಕಾಲಾನುಕಾಲಕ್ಕೆ ಅವು ಇತರರಿಂದ ಬಹುಮಟ್ಟಿಗೆ ತಿದ್ದಲ್ಪಟ್ಟಿವೆಯೆಂದೂ ವಿದ್ವಾಂಸರ ಅಭಿಪ್ರಾಯ. (ಎನ್.ಎಸ್.ಎಲ್.)

**ಕ್ಯಾಡ್ಮಿಯಂ :** ಆವರ್ತಕೋಷ್ಟಕದಲ್ಲಿ ಎರಡನೆಯ ಗುಂಪಿನ ಐದನೆಯ ಆವರ್ತದ (ಪೀರಿಯಡ್) ಸಂಕ್ರಾಂತಿ ಲೋಹಧಾತು. ರಾಸಾಯನಿಕ ಸಂಕೇತ Cd. ಪರಮಾಣು ತೂಕ 112.40. ಪರಮಾಣು ಸಂಖ್ಯೆ 48. ಇದರ ಎಲೆಕ್ಟ್ರಾನಿಕ್ ವಿನ್ಯಾಸ

$1s^2 2s^2 2p^6 3s^2 3p^6 3d^7 4s^2$ ಸತುವನ್ನು ಕರಗಿಸುವ ಮೂಸೆಯಲ್ಲಿ ಕ್ಯಾಡ್ಮಿಯಮನ್ನು ಮೊದಲಬಾರಿಗೆ ಗುರುತಿಸಲಾಯಿತು. ಈ ಲೋಹ ಅದರ ಸಲ್ಫೈಡ್ ಮತ್ತು ಕಾರ್ಬೋನೇಟ್ ರೂಪದಲ್ಲಿ ದೊರೆಯುತ್ತದೆ. ಗ್ರೀನೋಕೈಟ್ ಎಂಬ ವಿರಳವಾದ ಅದುರು ಕ್ಯಾಡ್ಮಿಯಂ ಸಲ್ಫೈಡನ್ನು ಮುಖ್ಯಾಂಶವನ್ನಾಗಿ ಒಳಗೊಂಡಿದೆ. ಇದು ಗ್ರೀನ್‌ಲೆಂಡ್, ಸ್ಕಾಟ್‌ಲೆಂಡ್ ಮತ್ತು ಪೆನ್ಸಿಲ್ವೇನಿಯ ದೇಶಗಳಲ್ಲಿ ದೊರೆಯುತ್ತದೆ. ಔದ್ಯೋಗಿಕ ದೃಷ್ಟಿಯಿಂದ ಸತುವಿನ ಅದುರುಗಳೊಂದಿಗೆ ಶೇ.1ರ ಪ್ರಮಾಣದಲ್ಲಿ ಸಲ್ಫೈಡ್ ಮತ್ತು ಕಾರ್ಬೋನೇಟ್ ರೂಪಗಳಲ್ಲಿ ದೊರೆಯುವ ಅದುರುಗಳು ಮುಖ್ಯವಾದುವು.

ಕ್ಯಾಡ್ಮಿಯಂ ಲೋಹವನ್ನು ಸಾಮಾನ್ಯವಾಗಿ ಸತುವಿನ ಲೋಹವನ್ನು ಪಡೆಯುವಾಗಲೇ ತೆಗೆಯುತ್ತಾರೆ. ಅದುರುಗಳನ್ನು ಕಾಯಿಸಿದಾಗ ಇವೆರಡು ಲೋಹಗಳೂ ಆವಿಯ ರೂಪದಲ್ಲಿ ಹೊರಬೀಳುತ್ತವೆ. ಕ್ಯಾಡ್ಮಿಯಮಿನ ಬಾಷ್ಪಶೀಲತೆ (ವೋಲಟೈಲಿಟಿ) ಸತುವಿಗಿಂತ ಅಧಿಕವಾಗಿರುವುದರಿಂದ ಲೋಹವನ್ನು ಆಂಶಿಕಾಸವನದ ಮೂಲಕ (ಫ್ರಾಕ್ಷನಲ್ ಡಿಸ್ಟಿಲೇಷನ್) ಸತುವಿನಿಂದ ಬೇರ್ಪಡಿಸಬಹುದು. ಅಶುದ್ಧವಾದ ಈ ಆವಿಯಲ್ಲಿ ಲೋಹ ಮತ್ತು ಲೋಹದ ಆಕ್ಸೈಡ್ ಸೇರಿರುತ್ತವೆ. ಈ ಮಿಶ್ರಣವನ್ನು ಹೈಡ್ರೋಕ್ಲೋರಿಕ್ ಆಮ್ಲದಲ್ಲಿ ವಿಲೀನಮಾಡಿ ಕ್ಯಾಡ್ಮಿಯಮನ್ನು ಕಾರ್ಬೋನೇಟ್ ರೂಪಕ್ಕೆ ಪರಿವರ್ತಿಸುತ್ತಾರೆ. ಕಾರ್ಬೋನೇಟನ್ನು ಕಾಯಿಸಿದಾಗ ದೊರೆಯುವ ಆಕ್ಸೈಡನ್ನು ಇಂಗಾಲದಿಂದ $800^0$ ಸೆಂ.ನಲ್ಲಿ ಅಪಕರ್ಷಿಸಿ ಶುದ್ಧವಾದ ಲೋಹವನ್ನು ಪಡೆಯಬಹುದು. ಇನ್ನೊಂದು ವಿಧಾನದಲ್ಲಿ ವಿದ್ಯುಚ್ಛಕ್ತಿಯನ್ನು ಸತು ಮತ್ತು ಕ್ಯಾಡ್ಮಿಯಂ ಮಿಶ್ರಿತ ಲವಣಗಳ ದ್ರಾವಣದ ಮೂಲಕ ಹಾಯಿಸಿ ಕ್ಯಾಡ್ಮಿಯಮನ್ನು ಬೇರ್ಪಡಿಸುತ್ತಾರೆ. ಮಾರುಕಟ್ಟೆಯಲ್ಲಿ ಈ ಲೋಹ ಪುಡಿ, ಶುದ್ಧವಾದ ಕಡ್ಡಿಗಳು, ಗಟ್ಟಿಗಳು, ಹಲಗೆಗಳು ಮತ್ತು ಶುದ್ಧವಾದ ಹರಳುಗಳ ರೂಪದಲ್ಲಿ ಮಾರಾಟವಾಗುತ್ತದೆ.

**ಗುಣಗಳು:** ಕ್ಯಾಡ್ಮಿಯಂ ಬೆಳ್ಳಿಯಂತೆ ಬೆಳ್ಳಗಿರುವ, ಸತುವಿಗಿಂತ ಮೃದುವಾದ ಆದರೆ ತವರಕ್ಕಿಂತ ಕಠಿಣವಾದ ಲೋಹ. ಇದನ್ನು ತೆಳುವಾಗಿ ಎಳೆಯಬಹುದು ಮತ್ತು ತಟ್ಟಬಹುದು. ಜಲಮಿಶ್ರಿತ ಗಾಳಿಯಲ್ಲಿ ಇದು ಮಸಕಾಗುವುದು. ಕ್ಯಾಡ್ಮಿಯಮಿನ ಅನೇಕ ಲವಣಗಳನ್ನು ತಯಾರಿಸಲಾಗಿದೆ. ಬಹುತೇಕ ಲವಣಗಳಲ್ಲಿ, ಕ್ಯಾಡ್ಮಿಯಂ ದ್ವಿವೇಲೆನ್ಸಿ ಉಳ್ಳದ್ದು. ಕ್ಯಾಡ್ಮಿಯಂ ಸಯನೈಡ್ (CN) ಮತ್ತು ಅಮೋನಿಯಂ ($NH_4$ +) ಅಯಾನುಗಳೊಂದಿಗೆ ಸಂಕೀರ್ಣ ಅಣುವನ್ನು ಉಂಟುಮಾಡುತ್ತದೆ. ಕ್ಯಾಡ್ಮಿಯಂ ಕ್ಲೋರೈಡಿನ ಜಲೀಯ ದ್ರಾವಣ ವಿದ್ಯುತ್ತನ್ನು ಅಲ್ಪಪರಿಮಾಣದಲ್ಲಿ ವಹನಿಸುತ್ತದೆ. ಇದರ ಹರಳಿನ ರಚನೆ, ಕ್ಲೋರೈಡ್, ನಿಜವಾದ ಅಯಾನಿಕ್ ಸಂಯುಕ್ತ ಅಲ್ಲವೆಂದು ತೋರಿಸುತ್ತದೆ. ಈ ಗುಣದಿಂದ ಮತ್ತು ಸ್ವಯಂಸಂಕೀರ್ಣ ಹೊಂದುವ ಗುಣದಿಂದಾಗಿ ಈ ಲವಣ ಅಲ್ಪಪರಿಮಾಣದಲ್ಲಿ ಅಯಾನೀಕರಿಸುತ್ತದೆ. ದ್ರಾವಣದಲ್ಲಿ ಕ್ಯಾಡ್ಮಿಯಂ ಕ್ಲೋರೈಡ್ ಮುಂದೆ ಬರೆದಿರುವಂತೆ ವರ್ತಿಸುವುದೆಂದು ಭಾವಿಸಲಾಗಿದೆ.

$Cd\ cl_2 \leftrightarrow cd^{++} + cl^-$

$Cd\ cl_2 \leftrightarrow cd^{++} + [cd\ cl_4 =]$ ಸ್ವಯಂ ಸಂಕೀರ್ಣ

**ಉಪಯೋಗಗಳು:** ಕ್ಯಾಡ್ಮಿಯಮನ್ನು ಅಧಿಕ ಮೊತ್ತದಲ್ಲಿ ಕಬ್ಬಿಣ ಮತ್ತು ಉಕ್ಕಿನ ವಸ್ತುಗಳಿಗೆ ರಕ್ಷಾಲೇಪನದಂತೆ ಉಪಯೋಗಿಸುತ್ತಾರೆ. ಈ ಲೋಹವನ್ನೊಳಗೊಂಡಿರುವ ಮಿಶ್ರಲೋಹಗಳಿಗೆ ಅಲ್ಯೂಮಿನಿಯಂ ಬೆಸುಗೆ, ಬಾಲ್‌ಬೇರಿಂಗ್, ಫ್ಯೂಸ್ ತಂತಿಗಳು, ಟ್ರಾಲಿತಂತಿಗಳು ಇತ್ಯಾದಿ ಕ್ಷೇತ್ರಗಳಲ್ಲಿ ಉಪಯೋಗ ಉಂಟು. ಹೊಗೆಬಾಂಬುಗಳು, ಸಿಡಿಮದ್ದುಗಳು, ದೀಪಗಳು, ವಿದ್ಯುತ್ ಸಲಕರಣೆಗಳು, ತಾಪದೀಪ್ತ ದೀಪಗಳ ತಂತುಗಳು (ಇನ್‌ಕ್ಯಾಂಡೆಸೆಂಟ್ ಲ್ಯಾಂಪ್ ಫಿಲಮೆಂಟ್ಸ್) ಮುಂತಾದವುಗಳ ತಯಾರಿಕೆಯಲ್ಲಿಯೂ ದಂತಚಿಕಿತ್ಸೆ, ಪಿಂಗಾಣಿ ಕೈಗಾರಿಕೆ, ಗಾಜಿನ ತಯಾರಿಕೆ, ಮುದ್ರಣಕಾರ್ಯ, ನಿಕ್ಕಲ್ ಪ್ಲೇಟಿಂಗ್, ಲಿಥೋಗ್ರಫಿ, ವಿದ್ಯುತ್‌ಕೋಶಗಳು. ನಿಕ್ಕಲ್–ಕ್ಯಾಡ್ಮಿಯಂ ಸ್ಟೋರೇಜ್ ಬ್ಯಾಟರಿಗಳಲ್ಲಿಯೂ ಕ್ಯಾಡ್ಮಿಯಮನ್ನು ಬಳಸುತ್ತಾರೆ. ಇತ್ತೀಚೆಗೆ ಇದನ್ನು ಪರಮಾಣು ರಿಯಾಕ್ಟರಿನಲ್ಲಿ ಪರಮಾಣುವಿದಳನವನ್ನು ನಿಧಾನಗೊಳಿಸುವ(ಮಾಡರೇಟರ್) ವಸ್ತುವಾಗಿ ಉಪಯೋಗಿಸುತ್ತಿದ್ದಾರೆ. ಕ್ಯಾಡ್ಮಿಯಂ ಟಂಗ್‌ಸ್ಟೇಟನ್ನು ಫ್ಲೂರಸೆಂಟ್ ಬಣ್ಣವಾಗಿ ಉಪಯೋಗಿಸುತ್ತಾರೆ.

**ಕ್ಯಾಡ್ಮಿಯಂ ಮಿಶ್ರಲೋಹಗಳು**

| ಬೆಸುಗೆ ಹಾಕಬಲ್ಲ (ಫ್ಯೂಸಿಬಲ್) ಮಿಶ್ರ ಲೋಹಗಳು ದ್ರವೀಕರಣ ಉಷ್ಣತೆ | | ಲೋಹಗಳ ಪ್ರಮಾಣ |
|---|---|---|
| 70°ಸೆಂ (ವುಡ್ಸ್‌ನ ಲೋಹ) | ..... | ಶೇ. 18 ಕ್ಯಾಡ್ಮಿಯಂ, ಶೇ. 50 ತವರ, ಶೇ. 32ಸೀಸ |
| 70° ಸೆಂ.(ಲಿಪೋವಿಡ್ಸ್‌ನ ಲೋಹ) | ..... | ಶೇ. 12.5 ಕ್ಯಾಡ್ಮಿಯಂ, ಶೇ. 50 ಬಿಸ್ಮತ್, ಶೇ. 25 ಸೀಸ, ಶೇ. 12.5 ತವರ |
| 91.5° ಸೆಂ | ..... | ಶೇ. 8 ಕ್ಯಾಡ್ಮಿಯಂ, ಶೇ. 52 ಬಿಸ್ಮತ್, ಶೇ. 40 ಸೀಸ |
| 145° ಸೆಂ | ..... | ಶೇ. 18 ಕ್ಯಾಡ್ಮಿಯಂ, ಶೇ. 50 ತವರ, ಶೇ. 32 ಸೀಸ |

**ಇತರ ಮಿಶ್ರ ಲೋಹಗಳು**

| | | | |
|---|---|---|---|
| 420° ಸೆಂ. | .... | ಶೇ. 90 ಕ್ಯಾಡ್ಮಿಯಂ | ಶೇ. 10 ಬೆಳ್ಳಿ |
| 610° ಸೆಂ. | .... | ಶೇ. 70 " | ಶೇ. 30 " |
| 760° ಸೆಂ. | .... | ಶೇ. 50 " | ಶೇ. 50 " |
| 280° ಸೆಂ | .... | ಶೇ. 90 " | ಶೇ. 10 ಸತು |
| 295° ಸೆಂ | .... | ಶೇ. 70 " | ಶೇ. 30 ಸತು |
| 327° ಸೆಂ | .... | ಶೇ. 50 " | ಶೇ. 50 " |

(ಎಚ್.ಎಸ್.ಎಸ್.)

**ಕ್ಯಾಥರಿನ್ :** ಯುರೋಪಿನ ಇತಿಹಾಸದಲ್ಲಿ ಈ ಹೆಸರಿನವರು ಅನೇಕರುಂಟು. ಅವರಲ್ಲಿ ಮುಖ್ಯರಾದವರನ್ನು ಮುಂದೆ ಕೊಟ್ಟಿದೆ.

**ಕ್ಯಾಥರಿನ್ I:** 1684–1727. ರಷ್ಯದ ಚಕ್ರವರ್ತಿನಿ; ಬಡ ತಂದೆತಾಯಿಯರ ಮಗಳು. ಮೂರು ವರ್ಷಗಳಾಗಿದ್ದಾಗ ಇವಳು ತಬ್ಬಲಿಯಾದಳು. 1701ರಲ್ಲಿ ಮೆರೀನ್‌ಬರ್ಗ್‌ನ ಸೈನಿಕನೊಬ್ಬನನ್ನು ವಿವಾಹವಾದಳು. 1702ರಲ್ಲಿ ರಷ್ಯನರು ಈ ಪಟ್ಟಣವನ್ನು ವಶಪಡಿಸಿಕೊಂಡಾಗ ಇವಳನ್ನು ಮಾಸ್ಕೋಗೆ ಸಾಗಿಸಲಾಯಿತು. ಅಲ್ಲಿ ಇವಳು ಮೊದಲ ಬಾರಿಗೆ ಪೀಟರ್ ಮಹಾಶಯನನ್ನು ಸಂಧಿಸಿ ಅವನ ಪ್ರೇಯಸಿಯಾದಳು. 1712ರಲ್ಲಿ ಪೀಟರ್ ಇವಳನ್ನು ವಿವಾಹವಾದ. 1725ರಲ್ಲಿ ಪೀಟರನ ನಿಧನಾನಂತರ ಇವಳೇ ಚಕ್ರವರ್ತಿನಿಯಾದಳು. ಇವಳ ಆಳ್ವಿಕೆಯ ಕಾಲದಲ್ಲಿ ಅಕ್ಯಾಡೆಮಿ ಆಫ್ ಸೈನ್ಸಸ್ ಎಂಬ ಸಂಸ್ಥೆ ಸ್ಥಾಪಿತವಾಯಿತು (1725). 1726ರಲ್ಲಿ ಪ್ರಿವಿ ಕೌನ್ಸಿಲ್ ಸ್ಥಾಪಿತವಾಗಿ, ವಿಧಾನಸಭೆಗಳ ಹಕ್ಕುಗಳು ಮೊಟಕುಗೊಂಡುದರಿಂದ ಅಧಿಕಾರ ಕೆಲವರ ಹಸ್ತಗತವಾಗುವಂತಾಯಿತು. ಇವಳ ಕಾಲದಲ್ಲಿ ರಷ್ಯಕ್ಕೂ ಬ್ರಿಟನ್ನಿಗೂ ವಿರಸ ಉಂಟಾಗಿ ಬ್ರಿಟಿಷರ ವಿರುದ್ಧ ಕೂಟವನ್ನು ರಷ್ಯಾ ಸೇರಿತು. 1727ರಲ್ಲಿ ಈಕೆ ನಿಧನಳಾದಳು.

**ಕ್ಯಾಥರಿನ್ II:** 1729–96. ರಷ್ಯದ ಚಕ್ರವರ್ತಿನಿ. ಕ್ಯಾಥರಿನ್ ದ ಗ್ರೇಟ್ ಎಂದು ಪ್ರಸಿದ್ಧಳಾಗಿದ್ದಾಳೆ. ಇವಳ ಮೊದಲ ಹೆಸರು ಸೋಫಿಯಾ ಅಗಸ್ಟಾ ಫ್ರೆಡೆರಿಕಾ. ಜರ್ಮನ್ ರಾಜಮನೆತನವೊಂದರಲ್ಲಿ ಹುಟ್ಟಿದಳು. ರಷ್ಯದ ಚಕ್ರವರ್ತಿನಿ ಎಲಿಜಬೆತಳ ಸಮೀಪಬಂಧುವಾಗಿದ್ದ ಪೀಟರನೊಡನೆ 1745ರಲ್ಲಿ ಇವಳ ವಿವಾಹವಾಯಿತು. ಪತಿ ಕುರೂಪಿಯಾಗಿದ್ದುದರಿಂದ ಇವಳು ಅನೈತಿಕ ಜೀವನ ನಡೆಸಿದರೂ ಅಧಿಕಾರದಾಹದಿಂದ ಅವನನ್ನು ತ್ಯಜಿಸದೆ ಸಮಯ ಕಾಯುತ್ತಿದ್ದಳು. ಎಲಿಜಬೆತ್ 1762ರಲ್ಲಿ ತೀರಿಕೊಂಡಾಗ ಪೀಟರ್ ಸಿಂಹಾಸನವನ್ನೇರಿದ. ಆದರೆ ಅವನು ಚಕ್ರವರ್ತಿಯಾಗಿದ್ದದ್ದು ಕೇವಲ ಕೆಲವು ತಿಂಗಳುಗಳು ಮಾತ್ರ. ಕ್ಯಾಥರಿನ್ ತನ್ನ ಪ್ರೇಮಿ ಗ್ರಿಗೊರಿ ಆರ್ಲಾಫ್ ಮತ್ತು ಇತರರ ಸಂಚಿನೊಡನೆ ಪೀಟರನನ್ನು ಸಿಂಹಾಸನದಿಂದ ಕೆಳಕ್ಕಿಳಿಸಿ ಕಾರಾಗೃಹದಲ್ಲಿರಿಸಿ, ತರುವಾಯ ಕೊಲ್ಲಿಸಿದಳು. ತಾನೇ ಚಕ್ರವರ್ತಿಯಾಗಿ ಸಿಂಹಾಸನವನ್ನೇರಿ 34 ವರ್ಷಗಳ ಕಾಲ ಆಳಿದಳು.

ಪೋಲೆಂಡಿನ ದೊರೆ 3ನೆಯ ಆಗಸ್ಟಸ್ ತೀರಿಕೊಂಡಾಗ ಕ್ಯಾಥರಿನ್ ತನಗೆ ಬೇಕಾದವನೊಬ್ಬನನ್ನು ಅಲ್ಲಿಯ ಸಿಂಹಾಸನವನ್ನೇರುವಂತೆ ಮಾಡಿದಳು. ಇದರಿಂದ ಆ ದೇಶದ ವಿಭಜನೆಯಾಗಿ ಅವಳಿಗೆ ಅನುಕೂಲವಾಯಿತು. ತುರ್ಕರೊಡನೆ ಯುದ್ಧ ನಡೆಸಿ ಕ್ರಿಮಿಯವನ್ನು ವಶಪಡಿಸಿಕೊಂಡು, ರಷ್ಯದ ನೌಕಾಪಡೆ ಕಪ್ಪು ಸಮುದ್ರವನ್ನು ಪ್ರವೇಶಿಸಲು ಅವಕಾಶ ಕಲ್ಪಿಸಿದಳು. ಆ ಯುದ್ಧ ಅವಳ ಆಳ್ವಿಕೆಯ ಬಹುಕಾಲವನ್ನು ತೆಗೆದುಕೊಂಡಿತು. ಆದರೆ ಯುರೋಪಿನಿಂದ ತುರ್ಕರನ್ನು ಬಡಿದಟ್ಟುವ ಹಾಗೂ ಬಿಜಾಂಟೈನ್ ಚಕ್ರಾಧಿಪತ್ಯವನ್ನು ಪುನಃ ಸ್ಥಾಪಿಸುವ ಅವಳ ಕನಸು ಸಾರ್ಥಕವಾಗಲಿಲ್ಲ. ಅವಳು ರಾಜ್ಯಾಡಳಿತದಲ್ಲಿ ಸುಧಾರಣೆಗಳನ್ನು ತಂದಳು. ನ್ಯಾಯಾಡಳಿತವನ್ನು ತಿದ್ದಿದಳು. ಅವಳ ಕಾಲದಲ್ಲಿ ನಾಲೆಗಳ ನಿರ್ಮಾಣವಾಯಿತು. ಒಟ್ಟಿನಲ್ಲಿ ನಾನಾ ಬಗೆಗಳಿಂದ ದೇಶದ ಜಾಗೃತಿ ಮತ್ತು ಅಭ್ಯುದಯಕ್ಕೆ ಕಾರಣವಾದಳು. ಅವಳು ಶ್ರೀಮಂತರಿಗೆ ನೀಡಿದ ಸನ್ನದಿನಿಂದ ಜೀತಗಾರರ ದಾಸ್ಯ ಸಂಪೂರ್ಣವಾದಂತಾಯಿತು. ಅವಳದು ಸಾಮ್ರಾಜ್ಯವಾದಿ ವಿದೇಶಾಂಗ ನೀತಿ. ಫ್ರಾನ್ಸಿನ ಕ್ರಾಂತಿಗೆ ಅವಳು ತೀವ್ರ ಪ್ರತಿಕ್ರಿಯೆ ಸೂಚಿಸಿದಳು. ಅಲಾಸ್ಕದಲ್ಲಿ ವಸಾಹತು ನಿರ್ಮಿಸುವ ಕಾರ್ಯದಲ್ಲೂ ತೊಡಗಿದ್ದಳು.

ಕ್ಯಾಥರಿನ್ II

ಕ್ಯಾಥರಿನ್ ಬಹುಮುಖ ಪ್ರತಿಭಾವಂತೆ. ನಾಟಕ, ಕಥೆ ಮುಂತಾದವನ್ನು ಫ್ರೆಂಚ್ ಮತ್ತು ರಷ್ಯನ್ ಭಾಷೆಗಳಲ್ಲಿ ಬರೆದಿದ್ದಾಳೆ. ಆಧುನಿಕ ರಷ್ಯನ್ ಸಾಹಿತ್ಯ ಜನ್ಮತಳೆಯಲು ಅವಳ ಪ್ರೋತ್ಸಾಹವೂ ಕಾರಣ. ಅವಳ ಪ್ರೇಮಿಗಳು ಹಲವಾರು ಮಂದಿ. ಅವರ ಪೈಕಿ ಆರ್ಲಾಫ್ ಮತ್ತು ಪೊಟೆಮ್ಕಿನ್ ಮುಖ್ಯರಾದವರು. 1796ರ ನವೆಂಬರ್ 17ರಂದು ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಕ್ಯಾಥರಿನ್ ತೀರಿಕೊಂಡಳು.

**ಕ್ಯಾಥರಿನ್ ಡಿ ಮೆಡಿಚಿ:** 1519–89. ಫ್ರಾನ್ಸಿನ 2 ನೆಯ ಹೆನ್ರಿಯ ಹೆಂಡತಿ; 9ನೆಯ ಚಾರ್ಲ್ಸ್‌ನ ಬಾಲ್ಯದಲ್ಲಿ ಅವನ ಪೋಷಕಿ. ಲೊರೆಂಜೊ ಡಿ ಮೆಡಿಚಿಯ ಮಗಳು. ಮೊದಲು ಆರ್ಲಿಯನ್ಸಿನ ಡ್ಯೂಕ್ ಆಗಿದ್ದು ಆಮೇಲೆ ಫ್ರಾನ್ಸಿನ ರಾಜನಾದ 2ನೆಯ ಹೆನ್ರಿಯನ್ನು ವಿವಾಹವಾದಳು. ಇವಳ ಐವರು ಪುತ್ರರಲ್ಲಿ ಮೂವರು ಫ್ರಾನ್ಸಿನ ದೊರೆಗಳಾದರು. ಇವಳಿಗೆ ಪುತ್ರಿಯರೂ ಐವರು. 1559ರಲ್ಲಿ ಹೆನ್ರಿಯ ಅನಂತರ ಹಿರಿಯ ಮಗ ಫ್ರಾನ್ಸಿಸನ ಆಳ್ವಿಕೆಯಲ್ಲಿ ಕ್ಯಾಥರಿನ್ ದೇಶದ ವಿಚಾರಗಳಲ್ಲಿ ವಿಶೇಷ ಆಸಕ್ತಿ ತೋರುತ್ತಿದ್ದಳು. 1560ರಲ್ಲಿ ಅವನ ನಿಧನಾನಂತರ 9ನೆಯ ಚಾರಲ್ಸನ ಪರವಾಗಿ ಆಡಳಿತ ವಹಿಸಿಕೊಂಡು ಉದ್ದಕ್ಕೂ ಅಧಿಕಾರ ನಡೆಸಿದಳು. ಕಥೊಲಿಕ್ ಮತ್ತು ಪ್ರಾಟೆಸ್ಟಂಟರ ಕಾದಾಟದಲ್ಲಿ ಪ್ರಾಟೆಸ್ಟಂಟರು ಸಂಧಾನಮಾರ್ಗ ಅನುಸರಿಸುವಂತೆ ಪ್ರಯತ್ನಿಸಿ ಕೊನೆಗೆ ಕ್ಯಾಥೊಲಿಕರಿಗೆ ಬೆಂಬಲ ನೀಡಲಾರಂಭಿಸಿದಳು. 1672ರಲ್ಲಿ ಸೇಂಟ್ ಬಾರ್ತಲೋಮಿಯೋದಿನದ ಪ್ರಾಟೆಸ್ಟೆಂಟ್ ಕೊಲೆಗೆ ಸಂಚು ಮಾಡಿದವಳು ಇವಳೇ. 1574ರಲ್ಲಿ ಚಾರಲ್ಸನ ನಿಧನಾನಂತರ 3ನೆಯ ಹೆನ್ರಿ ಚಕ್ರವರ್ತಿಯಾಗಿ ತಾಯಿಯ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ಶತ್ರುಗಳು ತಾಯಿಮಕ್ಕಳಿಬ್ಬರನ್ನೂ ಒತ್ತರಿಸಿದರು. 1589ರ ಜನವರಿ 5 ರಂದು ಬ್ಲಾಯಿಸಿನಲ್ಲಿ ಕ್ಯಾಥರಿನ್ ಮರಣ ಹೊಂದಿದಳು.

ಕ್ಯಾಥರಿನ್ ಡಿ ಮೆಡಿಚಿ

**ಕ್ಯಾಥರಿನ್ ಆಫ್ ಆರಗಾನ್:**1485–1536. ಇಂಗ್ಲೆಂಡಿನ 8ನೆಯ ಹೆನ್ರಿದೊರೆಯ ಹೆಂಡತಿ. ಆರಗಾನಿನ ಫರ್ಡಿನ್ಯಾಂಡನ ಕಿರಿಯ ಮಗಳು. 1501ರಲ್ಲಿ 7ನೆಯ ಹೆನ್ರಿಯ ಪುತ್ರ ಯುವರಾಜ ಆರ್ಥರನ ಸಂಗಡ ಇವಳ ವಿವಾಹವಾಗಿತ್ತು. ವಿವಾಹದ ಅನಂತರ ಐದು ತಿಂಗಳಲ್ಲೇ ಆರ್ಥರ್ ನಿಧನನಾದ. ಆಗ್ಗೆ 7ನೆಯ ಹೆನ್ರಿ ತನ್ನ ಇನ್ನೊಬ್ಬ ಮಗ 8ನೆಯ ಹೆನ್ರಿಯೊಡನೆ ಇವಳ ವಿವಾಹ ಮಾಡಿದ. ಅವನು 1509ರಲ್ಲಿ ದೊರೆಯಾದಾಗ ಕ್ಯಾಥರಿನ್ ರಾಣಿಯಾದಳು. ವಯಸ್ಸಿನಲ್ಲಿ ಇವರಿಬ್ಬರ ನಡುವೆ ತುಂಬ ಅಂತರವಿದ್ದರೂ, ಇಪ್ಪತ್ತು ವರ್ಷಗಳ ಕಾಲ ದೊರೆಯ ಮೇಲೆ ಇವಳ ಪ್ರಭಾವ ಅಧಿಕವಾಗಿತ್ತು. ಈ ಮಧ್ಯೆ ಹೆನ್ರಿಯ ಅನುರಾಗ ಆನಿಬೋಲೀನಳ ಕಡೆಗೆ ತಿರುಗಿ ಕ್ಯಾಥರಿನಳ ವಿವಾಹವಿಚ್ಛೇದನಕ್ಕೆ ಕಾರಣವಾಯಿತು. ರಾಜಕೀಯ ಪ್ರಾಮುಖ್ಯ ಪಡೆದ ಈ ಘಟನೆಯಿಂದ ಇಂಗ್ಲೆಂಡಿನ ಚರ್ಚು ಪೋಪನ ಅಧಿಕಾರದಿಂದ ಹೊರಕ್ಕೆ ಬರಬೇಕಾಯಿತು. ಹೆನ್ರಿ ಮತ್ತು ಕ್ಯಾಥರಿನ್ ದಂಪತಿಗಳಿಗೆ ಒಬ್ಬಳೇ ಮಗಳಾದ ಮೇರಿ ಮುಂದೆ ಇಂಗ್ಲೆಂಡಿನ ರಾಣಿಯಾದಳು.

ಕ್ಯಾಥರಿನ್ ಆಫ್ ಅರಗಾನ್

(ಎಂ.ವಿ.ಕೆ.)

**ಕ್ಯಾಥರೀನ, ಡ ಸೀಯೆನ :** 1347–80. ಇಟಲಿಯ ಕ್ರೈಸ್ತ ಸನ್ಯಾಸಿನಿ. ಹುಟ್ಟಿದ್ದು ಸೀಯೆನದಲ್ಲಿ. ಜಾಕೊಮೊ ಬೆನಿನ್‌ಕಾಸ ಎಂಬ ಬಣ್ಣಗಾರನ ಮಗಳು. ಚಿಕ್ಕಂದಿನಲ್ಲೇ ದಿವ್ಯದರ್ಶನ ಪಡೆದು 1363ರಲ್ಲಿ ಡೊಮಿನಿಕನ್ ಪಂಥದ ಸಂನ್ಯಾಸಿನಿಯಾದಳು. ಈಕೆ ತನ್ನ ಡಯಲಾಗ್ ಅಂಡ್ ಎ ಟ್ರೀಟೈಸ್ ಆಫ್ ಡಿವೈನ್ ಪ್ರಾವಿಡೆನ್ಸ್, ಕೃತಿಯಿಂದ ಹಿರಿಯ ಅನುಭಾವಿ ಎನಿಸಿಕೊಂಡಳು. ಮಾನವತೆಯ ಪ್ರೇಮವೇ ದೇವರನ್ನು ಒಲಿಸಿಕೊಳ್ಳುವ ದಾರಿಯೆಂದು ನಂಬಿದ ಈಕೆ ಧರ್ಮಪ್ರಚಾರಕ್ಕಾಗಿ ನಿರಂತರವಾಗಿ ದುಡಿದಳು. ಪಂಡಿತರು, ಪಾಮರರು, ಧರ್ಮಾಧಿಕಾರಿಗಳು ಮೊದಲಾದವರಿಗೆ ಈಕೆ ಬರೆದ ನಾಲ್ಕು ನೂರು ಪತ್ರಗಳು ಇವಳ ಧರ್ಮದೃಷ್ಟಿ ಮತ್ತು ಮಾನವತಾ ಪ್ರೇಮಗಳಿಗೆ ಪ್ರತೀಕಗಳಾಗಿವೆ. 14ನೆಯ ಶತಮಾನದ ಇಟಲಿಯ ಗದ್ಯಶೈಲಿಯ ಲಯ, ಗತಿಗಳ ಮಿಂಚನ್ನು ಈ ಪತ್ರಗಳಲ್ಲಿ ಕಾಣಬಹುದು. ರೋಮಿನಲ್ಲಿ ಈಕೆ ನಿಧನಳಾದಳು. (ಎಚ್.ಕೆ.ಆರ್.)

**ಕ್ಯಾಥೋಡ್ :** ಸಾಮಾನ್ಯವಾಗಿ, ಒಂದು ವಿದ್ಯುದುಪಕರಣದಲ್ಲಿ ಧನವಿದ್ಯುತ್ ಪ್ರವಾಹ ಹೊರಬೀಳುವ ಎಲೆಕ್ಟ್ರೋಡ್. ವಿದ್ಯುತ್ಕೋಶದಲ್ಲಿ ಇದು ಧನವಿದ್ಯುಚ್ಛಕ್ತಿಯ ಕೊನೆ. ಎಲೆಕ್ಟ್ರಾನ್ ನಳಿಕೆಗಳಲ್ಲಿದ್ದಾಗ ಈ ಎಲೆಕ್ಟ್ರೋಡ್ ಮೂಲಕವೇ ಪ್ರಾಥಮಿಕವಾಗಿ ಉದ್ಭವವಾದ ಎಲೆಕ್ಟ್ರಾನುಗಳು ಹೊರಬರುತ್ತವೆ. ಎಲೆಕ್ಟ್ರೋಪ್ಲೇಟಿಂಗ್ ಕೋಶದಲ್ಲಿ ಕ್ಯಾಥೋಡ್ ಮೂಲಕ ಎಲೆಕ್ಟ್ರಾನುಗಳು ಕೋಶದ ಒಳಗಡೆ ಬರುತ್ತವೆ ಮತ್ತು ಧನವಿದ್ಯುದಾವಿಷ್ಟ ಅಯಾನುಗಳು ಇದರ ಬಳಿ ವಿಸರ್ಜನೆಯಾಗುತ್ತವೆ. ನಿರ್ವಾತ ನಳಿಕೆಗಳಲ್ಲಿ ಹಲವಾರು ವಿಧವಾದ ಕ್ಯಾಥೋಡುಗಳನ್ನು ಎಲೆಕ್ಟ್ರಾನುಗಳ ಉತ್ಪತ್ತಿಗೆ ಉಪಯೋಗಿಸುತ್ತಾರೆ. ಮಾಸ್ ಸ್ಪೆಕ್ಟ್ರೋಮೀಟರಿನಲ್ಲಿ ಎಲೆಕ್ಟ್ರಾನುಗಳನ್ನು ಒದಗಿಸಲು ಉಪಯೋಗಿಸುವ ಕ್ಯಾಥೋಡಿಗೆ ಉಷ್ಣದ ಆವಶ್ಯಕತೆಯಿಲ್ಲವಾದ್ದರಿಂದ ಅದನ್ನು ತಣ್ಣನೆಯ ಕ್ಯಾಥೋಡ್ ಎಂದು ಕರೆಯಬಹುದು. ಎಲೆಕ್ಟ್ರಾನ್ ನಳಿಕೆಗಳಲ್ಲಿ ಉಪಯೋಗಿಸುವ ಉಷ್ಣ ಅಯಾನಿಕ ಕ್ಯಾಥೋಡುಗಳನ್ನು ನೇರವಾಗಿಯೋ ಪರೋಕ್ಷವಾಗಿಯೋ ಕಾಯಿಸಿ ಎಲೆಕ್ಟ್ರಾನುಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ಈ ಕಾರ್ಯಕ್ಕೆ ವಿದ್ಯುತ್ತನ್ನು ಕ್ಯಾಥೋಡಿನಲ್ಲಿ ಹರಿಸಿದರೆ ಅದನ್ನು ಆಗ ಫಿಲಮೆಂಟ್ ಎಂದು ಕರೆಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಎಲೆಕ್ಟ್ರಾನುಗಳು ಸುಲಭವಾಗಿ ಬಿಡುಗಡೆ ಮಾಡುವಂಥ ವಸ್ತುಗಳನ್ನು ಕ್ಯಾಥೋಡಿಗೆ ಲೇಪಿಸಿದ್ದರೆ ಅದನ್ನು ಲೇಪಿಸಿದ ಕ್ಯಾಥೋಡ್ ಎಂದು ಕರೆಯಬಹುದು. ಆಗ ಅತಿನೇರಿಳೆ ಅಥವಾ ದೃಗ್ಗೋಚರ ಕಿರಣಗಳಿಂದ ಎಲೆಕ್ಟ್ರಾನುಗಳನ್ನು ಬಿಡುಗಡೆ ಮಾಡಿದರೆ ಅದು ಬೆಳಕು ಕ್ಯಾಥೋಡ್ (ಫೋಟೋಕ್ಯಾಥೋಡ್) ಆಗುತ್ತದೆ. (ಡಿ.ಎಸ್.ಎಂ.)

**ಕ್ಯಾದರ್, ವಿಲ ಸೈಬರ್ಟ್ :** 1876–1947. ಅಮೆರಿಕದ ಕಾದಂಬರಿಗಾರ್ತಿ ಮತ್ತು ಕಥೆಗಾರ್ತಿ. ಹುಟ್ಟಿದ್ದು ವರ್ಜೀನಿಯದ ವರ್ಷವಿಂಚೆಸ್ಟರ್‌ನಲ್ಲಿ. ಎಂಟು ವಯಸ್ಸಿನವಳಿದ್ದಾಗ ಇಡೀ ಕುಟುಂಬವೇ ನೆಬ್ರಾಸ್ಕದ ಬಳಿ ಪಶುಪಾಲನಾ ಕ್ಷೇತ್ರವೊಂದಕ್ಕೆ ಸಾಗಬೇಕಾಯಿತು. ಆದರೆ ಈಕೆ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳಲಾರದೆ ಪಶ್ಚಿಮದವಳಾಗಿಯೇ ಉಳಿದಳು. ಪತ್ರಿಕೆಯ ಸುದ್ದಿಗಾರಳಾಗಿದ್ದುಕೊಂಡೇ ನೆಬ್ರಾಸ್ಕ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದಳು. ಅನಂತರ ಪಿಟ್ಸ್‌ಬರ್ಗ್‌ನ ಡೆಯ್ಲಿ ಲೀಡರ್ ಪತ್ರಿಕೆಯ ನಾಟಕ ವಿಮರ್ಶಕಳಾಗಿ ಕೆಲಸ ಮಾಡಿದಳು. 1903ರಲ್ಲಿ ಏಪ್ರಿಲ್ ಟ್ವಿಲೈಟ್ ಎಂಬ ಕವನ ಸಂಕಲನವೊಂದನ್ನೂ 1905ರಲ್ಲಿ ದಿ ಟ್ರಾಲ್ ಗಾರ್ಡನ್ ಎಂಬ ಕಥಾಸಂಕಲವನ್ನೂ ಪ್ರಕಟಿಸಿದಳು. 1906 ರಿಂದ 1912ರ ತನಕ ಮ್ಯಾಕ್‌ಕ್ಲರ್ಸ್ ಮ್ಯಾಗಜೀನಿನ ಆಡಳಿತ ನಿರ್ವಾಹಕ ಸಂಪಾದಕಳಾಗಿ ಕೆಲಸ ಮಾಡಿದಳು. ಓ ಪಯೋನೀರ್ಸ್ (1913) ಎಂಬ ಈಕೆಯ ಕಾದಂಬರಿ ಪಶ್ಚಿಮದಿಂದ ವಲಸೆ ಬಂದವರ ಚಿತ್ರಣವಾಗಿದೆ. ಈ ಕಾದಂಬರಿ ಈಕೆಗೆ ಹೆಚ್ಚಿನ ಖ್ಯಾತಿ ತಂದಿತು. ಅನಂತರ ಮೈ ಅಂಟೋನಿಯ (1918) ಮತ್ತು ಎ ಲಾಸ್ಟ್ ಲೇಡಿ (1923) ಕಾದಂಬರಿಗಳು ಬಂದವು. ಆಮೇಲೆ ಬಂದ ಕಾದಂಬರಿಗಳಲ್ಲಿ ಈಕೆಯ ಮೇಲೆ ಆದ ರೋಮನ್ ಕ್ಯಾಥೊಲಿಕ್ ಧರ್ಮದ ಪ್ರಭಾವವನ್ನು ಗುರುತಿಸಬಹುದು. 1933ರಲ್ಲಿ ಪ್ರಿಕ್ಸ್ ಫೆಮಿನ ಅಮೆರಿಕೈನೆ ಪ್ರಶಸ್ತಿಯನ್ನು ಗಳಿಸಿದಳು. ಐದು ವಿಶ್ವವಿದ್ಯಾಲಯಗಳು ಈಕೆಗೆ ಗೌರವ ಪದವಿಯನ್ನು ನೀಡಿದವು. ಈಕೆಯ ಕೃತಿಗಳಲ್ಲಿ ಶಿಷ್ಟಸಾಹಿತ್ಯದ ಮೇಲಿನ ಹಿಡಿತ ಮತ್ತು ಸಮತೋಲವನ್ನು ಗುರುತಿಸಬಹುದು. ಈಕೆಯ ಕೃತಿಗಳಲ್ಲಿ ಪ್ರಾಚೀನತಾ ಪ್ರೇಮ, ಅರ್ಥಗರ್ಭಿತ ಸಂಕೇತಗಳಿದ್ದರೂ ವಾಸ್ತವತೆಯ ಕೊರತೆ ಕಾಣದೆ ಇರದು.

ಪ್ರೊಫೆಸರ್ಸ್ ಹೌಸ್ (1925), ಡೆತ್ ಕಮ್ಸ್ ಫಾರ್ ದಿ ಆರ್ಚ್‌ಬಿಷಪ್ (1927), ಷ್ಯಾಡೋಸ್ ಆನ್ ದಿ ರಾಕ್ (1931), ಸಫೀರಾ ಅಂಡ್ ದಿ ಸ್ಲೇವ್ ಗರ್ಲ್ (1940), ಯೂತ್ ಅಂಡ್ ದಿ ಬ್ರೈಟ್ ಮೆಡ್ಯೂಸ (1920), ಅಬ್ಸ್‌ಕ್ಯೂರ್ ಡೆಸ್ಟಿನೀಸ್ (1932)– ಇವು ಈಕೆಯ ಇತರ ಕೆಲವು ಕಾದಂಬರಿಗಳು.

ಒನ್ ಆಫ್ ಅವರ್ಸ್ ಎಂಬ ಕಾದಂಬರಿ ಪುಲಿಟ್‌ಜರ್ಸ್ ಬಹುಮಾನ ಗಳಿಸಿತು. ದಿ ಓಲ್ಡ್ ಬ್ಯೂಟಿ ಅಂಡ್ ಅದರ್ಸ್ (1948) ಎಂಬ ಸಂಕಲನದಲ್ಲಿ ಈಕೆಯ ವಿಶಿಷ್ಟ ಕಥೆಗಳಿವೆ. ನಾಟ್ ಅಂಡರ್ ಫಾರ್ಟಿ (1936) ಎಂಬ ಕೃತಿಯಲ್ಲಿ ಸಾಹಿತ್ಯ ಮತ್ತು ವ್ಯಕ್ತಿಗಳಿಗೆ ಸಂಬಂಧಿಸಿದಂಥ ಪ್ರಬಂಧಗಳಿವೆ. 1937–41ರ ಅವಧಿಯಲ್ಲಿ ಈಕೆಯ ಸಾಹಿತ್ಯಸೃಷ್ಟಿಯನ್ನೆಲ್ಲ 13 ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. (ಎಸ್.ಎಸ್.ಎಲ್.)

**ಕ್ಯಾನನ್, ಗಿಲ್ಬರ್ಟ್ :** 1884–1955. ಆಂಗ್ಲ ಕಾದಂಬರಿಕಾರ ಮತ್ತು ನಾಟಕಕಾರ. ಮ್ಯಾಂಚೆಸ್ಟರ್‌ನಲ್ಲಿ ಹುಟ್ಟಿದ ಈತ ಅಲ್ಲಿ ಮತ್ತು ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಲ್ಲಿ ತನ್ನ ವ್ಯಾಸಂಗ ಪೂರೈಸಿದ. ನ್ಯಾಯಶಾಸ್ತ್ರವನ್ನು ಓದಿ 1908ರಲ್ಲಿ ಬಾರಿಗೆ ಸೇರಿದನಾದರೂ

ಹೆಚ್ಚು ಕಾಲ ಆ ವೃತ್ತಿಯಲ್ಲಿರಲಿಲ್ಲ. ವೇಷ ಹಾಕಿಕೊಂಡು ರಂಗಭೂಮಿಗಿಳಿದ. 1909ರಿಂದ ಒಂದು ವರ್ಷ ಸ್ಟಾರ್ ಪತ್ರಿಕೆಯ ನಾಟಕ ವಿಮರ್ಶಕನಾಗಿ ದುಡಿದ. ಅನಂತರ ಜಾನ್ ಡ್ರಿಂಕ್ ವಾಟರ್ ಮತ್ತು ಇನ್ನಿತರ ಸ್ನೇಹಿತರೊಡಗೂಡಿ ಮ್ಯಾಂಚೆಸ್ಟರ್ ರೆಪರ್ಟರಿ ಥಿಯೇಟರನ್ನು ಸ್ಥಾಪಿಸಿ ಕಾಂಗ್ರೀವ್‌ನ ವೇ ಆಫ್ ದಿ ವರ್ಲ್ಡ್ ನಾಟಕದಲ್ಲಿ ಅಭಿನಯಿಸತೊಡಗಿದ. ಪೀಟರ್ ಹೋಮುಂಕ್ಯುಲಸ್ (1909) ಈತನ ಮೊದಲ ಕಾದಂಬರಿ. ರೌಂಡ್ ದಿ ಕಾರ್ನರ್ (1913) ಎಂಬ ಕಾದಂಬರಿಯಿಂದ ಈತ ಹೆಚ್ಚಿನ ಖ್ಯಾತಿ ಪಡೆದ. ಈತನ ಕೃತಿಗಳಲ್ಲಿ ರೊಮ್ಯಾನ್ ರೊಲಾನನ ಪ್ರಭಾವವಿದೆ. ರೊಲಾನನ ಜೀನ್ ಕ್ರಿಸ್ಟೋಫೆ ಎಂಬ ಹತ್ತು ಸಂಪುಟಗಳ ಕಾದಂಬರಿಯನ್ನು ಈತ ಭಾಷಾಂತರಿಸಿದ. ಜೆ.ಎಂ.ಬ್ಯಾರಿಯ ಹೆಂಡತಿ ಮೇರಿ ಆನ್ಸೆಲ್‌ಳನ್ನು ಈತ (1910) ಮದುವೆಯಾದ.

ಯಂಗ್ ಅರ್ನೆಸ್ಟ್ (1905), ತ್ರಿ ಪ್ರೆಟಿ ಮೆನ್ (1916), ದಿ ಸ್ಟಕೋ ಹೌಸ್ (1917), ಮಮ್ಮರಿ (1918), ಪಿಂಕ್ ರೋಸಸ್ (1919), ಸೆಂಬಲ್ (1922), ದಿ ಹೌಸ್ ಆಫ್ ಪ್ರಾಫೆಸಿ (1924)–ಇವು ಈತನ ಇತರ ಕಾದಂಬರಿಗಳು.

ಮೈಲ್ಸ್ ಡಿಕ್ಸನ್ (1910), ಜೇಮ್ಸ್ ಅಂಡ್ ಜಾನ್ (1911), ಮೇರೀಸ್ ವೆಡ್ಡಿಂಗ್ (1912), ಎವ್ವೆರಿಬಡಿಸ್ ಹಸ್ಬೆಂಡ್ (1917), ದಿ ರಿಲೀಸ್ ಆಫ್ ದಿ ಸೋಲ್ (1920)–ಇವು ಈತನ ಕೆಲವು ನಾಟಕಗಳು. (ಎಚ್.ವಿ.ಎಸ್.)

**ಕ್ಯಾನನ್, ವಾಲ್ಟರ್ ಬ್ರಾಡ್‌ಫರ್ಡ್ :** 1871–1945 ದೇಹವಿಜ್ಞಾನಶಾಸ್ತ್ರಜ್ಞ. ಪಚನಕ್ರಿಯೆ ಮತ್ತು ಹಾರ್ಮೋನುಗಳ ಬಗ್ಗೆ ನಿಷ್ಣಾತನಾಗಿದ್ದನೆನ್ನಲಾಗಿದೆ. ಮನೋವಿಜ್ಞಾನ ಕ್ಷೇತ್ರದಲ್ಲಿ ಜೇಮ್ಸ್–ಲಾಂಗ್ ಅವರ ಭಾವನಿಷ್ಪತ್ತಿ ಸಿದ್ಧಾಂತವನ್ನು ನಿರಾಕರಿಸಿ ವಿಖ್ಯಾತನಾದ. 1890, 1894ರಲ್ಲಿ ನಿರೂಪಣೆಗೊಂಡ ಜೇಮ್ಸ್–ಲಾಂಗ್ ಸಿದ್ಧಾಂತ ದೈಹಿಕ ವಿಪರ್ಯಾಸಗಳ ಪ್ರಾಮುಖ್ಯವನ್ನು ಒತ್ತಿಹೇಳಿತು. ಇದನ್ನು ಪ್ರಯೋಗದಿಂದ ಸಿದ್ಧಪಡಿಸಲು ಯತ್ನಿಸಿದ ಕೀರ್ತಿ ಕ್ಯಾನನದು. ಮೂವತ್ತು ವರ್ಷಗಳ ಅನಂತರ ಈತ ತನ್ನ ಪ್ರಯೋಗಗಳನ್ನು ನಾಯಿ, ಬೆಕ್ಕುಗಳ ಮೇಲೆ ನಡೆಸಿದ. ಈ ಪ್ರಯೋಗಗಳ ಫಲವಾಗಿ ಸಹಾನುಕಂಪ ನರಮಂಡಲದ ಉತ್ತೇಜನ ಮತ್ತು ರಕ್ತದಲ್ಲಿ ಅಡ್ರೆನಿನ್ ದ್ರವದ ಸ್ರಾವ, ಇವು ಭಾವೋತ್ಪಾದನೆಗೆ ಕಾರಣವೆಂದು ತಿಳಿದುಬಂತು. ಈತನ ಗ್ರಂಥಗಳಲ್ಲಿ ಬಾಡಿಲಿ ಚೇಂಜಸ್ ಇನ್ ಪೇನ್, ಹಂಗರ್, ಫಿಯರ್ ಅಂಡ್ ರೇಜ್(1915), ಫೀಲಿಂಗ್ಸ್ ಅಂಡ್ ಎಮೋಷನ್ಸ್ (1928) – ಇವು ಮುಖ್ಯವಾದುವು. (ಎಸ್.ಕೆ.ಆರ್.)

**ಕ್ಯಾನರಿ ಹುಲ್ಲು :** ಪೋಯೇಸೀ ಕುಟುಂಬಕ್ಕೆ ಸೇರಿದ ಒಂದು ಪ್ರಮುಖ ಬಗೆಯ ಹುಲ್ಲು. ಫಲಾರಿಸ್ ಅರುಂಡಿನೇಸಿಯ ಎಂಬುದು ಇದರ ವೈಜ್ಞಾನಿಕ ಹೆಸರು. ಯುರೋಪ್ ಖಂಡದ ಸಮಶೀತೋಷ್ಣವಲಯ, ಏಷ್ಯ ಮತ್ತು ಉತ್ತರ ಅಮೆರಿಕಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಒಳ್ಳೆಯ ಮೇವು ಎಂದು ಕಂಡುಕೊಂಡ ಮೇಲೆ ಮೊಟ್ಟಮೊದಲ ಬಾರಿಗೆ ಇದನ್ನು ಸ್ವೀಡನ್ನಿನಲ್ಲಿ ಬೆಳೆಸಲಾಯಿತು. ಇತ್ತೀಚೆಗೆ ಬೇರೆ ದೇಶಗಳಲ್ಲಿಯೂ ಇದನ್ನು ಹುಲ್ಲುಗಾವಲುಗಳಲ್ಲಿ ಬೆಳೆಸಲಾಗುತ್ತಿದೆ.

ಕ್ಯಾನರಿ ಹುಲ್ಲು ಸುಮಾರು 4'–8' ಎತ್ತರಕ್ಕೆ ಬೆಳೆಯುವ ಸದೃಢವಾದ ಬಹುವಾರ್ಷಿಕ ಸಸ್ಯ. ದನಕರುಗಳ ತುಳಿತಕ್ಕೆ ಸಿಕ್ಕಿದರೂ ಇದರ ಪ್ರಕಂದಗಳು ಹಾಳಾಗುವುದಿಲ್ಲ. ಗಿಡದಿಂದ ನೇರವಾಗಿ ಮೇಲಕ್ಕೆ ಬೆಳೆಯುವ ಹಲವಾರು ಗೆಣ್ಣು ಕಾಂಡಗಳು ಹೊರಡುತ್ತವೆ. ಒಂದೊಂದರಲ್ಲೂ 5–8 ಅಗಲವಾದ ಎಲೆಗಳಿವೆ. ಹೂಗಳು ಉರುಳೆಯಾಕಾರದ ಸಂಕೀರ್ಣ ಬಗೆಯ ಹೂಗೊಂಚಲಿನಲ್ಲಿ ಸಮಾವೇಶಗೊಂಡಿವೆ.

ಫಲವತ್ತಾದ ಮತ್ತು ಬಹಳ ತೇವಪೂರಿತವಾದ ಮಣ್ಣಿನಲ್ಲಿ ಈ ಹುಲ್ಲು ಚೆನ್ನಾಗಿ ಬೆಳೆಯುತ್ತದೆ. ಚೌಳು ಭೂಮಿಯಲ್ಲಿ ಬೆಳೆಯಲಾರದು. ಚೆನ್ನಾಗಿ ಹದಮಾಡಿದ ಭೂಮಿಯಲ್ಲಿ ಹೆಕ್ಟೇರ್‌ಗೆ 4–8 ಪೌ.ಬೀಜದಂತೆ ಬಿತ್ತಿ ಬೆಳೆಸಬಹುದು. ಕ್ಯಾನರಿ ಹುಲ್ಲು ಒಂದು ಉತ್ತಮ ದರ್ಜೆಯ ಮೇವು. ಇದರ ದಂಟು ರಸಭರಿತವಾಗೂ ರುಚಿಯಾಗೂ ಇರುವುದರಿಂದ ದನಗಳಿಗೆ ಅಚ್ಚುಮೆಚ್ಚು. ತೆನೆಗಳು ಅದೇ ತಾನೇ ಹೊರಡುತ್ತಿರುವ ಹಂತದಲ್ಲಿ ಇದನ್ನು ಕಟಾಯಿಸಬೇಕು. ಇಳುವರಿ ಹೆಕ್ಟೇರ್‌ಗೆ 2-3½ ಟನ್‌ವರೆಗೆ ಇದೆ. ಬರಿ ಮೇವಾಗಿ ಮಾತ್ರವಲ್ಲದೆ ಕಾಲುವೆ, ಹಳ್ಳದ ದಂಡೆಗಳಲ್ಲಿ ಉಂಟಾಗುವ ಭೂಸವೆತವನ್ನು ನಿಲ್ಲಿಸುವುದಕ್ಕೂ ಕ್ಯಾನರಿಹುಲ್ಲನ್ನು ಬೆಳೆಯಬಹುದು. (ಎಂ.)

**ಕ್ಯಾನಿಂಗ್ :** ಆಹಾರ ಪದಾರ್ಥಗಳನ್ನು ಡಬ್ಬಗಳಲ್ಲಾಗಲಿ ಸೀಸೆಗಳಲ್ಲಾಗಲಿ ಇಟ್ಟು ಗಾಳಿಗೆ ಅಪಾರಕವಾಗುವಂತೆ ಅವನ್ನು ಮುಚ್ಚಿ ಕುದಿಯುವ ನೀರಿನಿಂದ ಅಥವಾ ಆವಿಯಿಂದ ಸಂಸ್ಕರಿಸಿ ಸೂಕ್ಷ್ಮಕ್ರಿಮಿಗಳು ನಾಶವಾಗುವಂತೆ ಮಾಡಿ ಆ ಪದಾರ್ಥಗಳು ಬಹಳ ದಿವಸಗಳ ವರೆಗೆ ಕೆಟ್ಟುಹೋಗದಂತೆ ಮಾಡುವ ವಿಧಾನ. ಇದನ್ನು ಮೊದಲು ಕಂಡುಹಿಡಿದಿದ್ದು ಫ್ರಾನ್ಸ್ ದೇಶದಲ್ಲಿ (1807). ಆ ದೇಶದ ಚಕ್ರವರ್ತಿ ನೆಪೋಲಿಯನ್ ರಷ್ಯಾ ದೇಶದೊಡನೆ ಯುದ್ಧಕ್ಕೆ ಸನ್ನದ್ಧನಾಗಿದ್ದಾಗ ಆತನ ಸೇನೆಗಳು ಹಿಮದಲ್ಲಿ ಆಹಾರದ ಕೊರತೆಯಿಂದ ಬಹಳವಾಗಿ ಕಷ್ಟಪಡುತ್ತಿದ್ದುವು. ಈ ತೊಂದರೆಯನ್ನು ನಿವಾರಿಸಲು ಆಹಾರ ಪದಾರ್ಥಗಳನ್ನು ಹೆಚ್ಚು ಕಾಲ ಕೆಡದಂತೆ ರಕ್ಷಿಸಿಡುವ ವಿಧಾನವನ್ನು ಕಂಡುಹಿಡಿದವರಿಗೆ 12,000 ಫ್ರಾಂಕ್ (ನಾಣ್ಯ) ಬಹುಮಾನವನ್ನು ಕೊಡುವುದಾಗಿ ಆತ ಸಾರಿದ. ನಿಕೋಲಸ್ ಆಪರ್ಟ್ ಎಂಬಾತ ಈ ಪ್ರಯೋಗದಲ್ಲಿ ಯಶಸ್ವಿಯಾಗಿ ಬಹುಮಾನವನ್ನು ಪಡೆದು ಪ್ರಪಂಚ ಪ್ರಸಿದ್ಧನಾದ. ಆವಿಷ್ಕರಿಸಿದ ವಿಧಾನವನ್ನು ಅವನ ಹೆಸರನ್ನು ಅನುಸರಿಸಿ ಅಪರ್ಟೈಸಿಂಗ್ ಎಂದು ಸಹ ಕರೆಯುವುದುಂಟು. ಈ ವಿಧಾನದ ಮೂಲಭೂತ ಕಾರಣವನ್ನು ವೈಜ್ಞಾನಿಕ ರೀತಿಯಲ್ಲಿ ವಿವರಿಸಿದವ ಫ್ರಾನ್ಸಿನ ಪ್ರಖ್ಯಾತ ವಿಜ್ಞಾನಿ ಲೂಯಿ ಪಾಶ್ಚರ್; ಆಹಾರ ಪದಾರ್ಥವನ್ನು ಕಾಸಿದಾಗ ಅದರಲ್ಲಿಯ ಸೂಕ್ಷ್ಮ ಜೀವಿಗಳು ನಾಶವಾಗುವುದರಿಂದಲೂ ಭದ್ರಪಡಿಸಿದ ಸೀಸೆಯೊಳಕ್ಕೆ ಅವುಗಳಿಗೆ ಪ್ರವೇಶಿಸಲು ಅವಕಾಶವೇ ಇಲ್ಲದಂತೆ ಮಾಡಿರುವುದರಿಂದಲೂ ಸೀಸೆಯೊಳಗಿನ ಆಹಾರಪದಾರ್ಥ ಬಹಳ ಕಾಲದವರೆಗೂ ಕೆಡದೆ ಇರುವುದು ಸಾಧ್ಯ. ಇತ್ತೀಚೆಗಂತೂ ಈ ವಿಧಾನದಿಂದ ಪ್ರಪಂಚದ ನಾನಾ ದೇಶಗಳಲ್ಲಿ ಹಣ್ಣು, ಕಾಯಿಪಲ್ಯಗಳು, ಹಾಲು, ಮಾಂಸ, ಮೀನು ಇವೇ ಮೊದಲಾದ ಅತಿಶೀಘ್ರವಾಗಿ ಕೆಟ್ಟುಹೋಗುವ ಪದಾರ್ಥಗಳನ್ನು ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಅತಿವಿಶೇಷವಾಗಿ ಪರಿವರ್ತಿಸಿ ಕ್ಯಾನ್ ಮಾಡುತ್ತಾರೆ. ಇದರಿಂದ ಈ ಆಹಾರಪದಾರ್ಥಗಳು ಸದಾಕಾಲದಲ್ಲೂ ಅವು ಸಹಜವಾಗಿ ಉತ್ಪನ್ನವಾಗದ ದೇಶದ ಭಾಗಗಳಲ್ಲೂ ಜನರಿಗೆ ಸುಲಭವಾಗಿ ದೊರೆಯಲು ಅನುಕೂಲವಾಗಿದೆ.

ಆಹಾರಪದಾರ್ಥಗಳನ್ನು ಮುಖ್ಯವಾಗಿ ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಇವನ್ನು ಕ್ಯಾನ್ ಮಾಡುವ ರೀತಿಯೂ ಬೇರೆಯಾಗಿರುವುದು. ಆಹಾರ ಪದಾರ್ಥಗಳಲ್ಲಿ ಸಾಧಾರಣವಾಗಿ ಯೀಸ್ಟ್, ಬೂಸ್ಟ್ ಮತ್ತು ಬ್ಯಾಕ್ಟೀರಿಯ ಎಂಬ ಸೂಕ್ಷ್ಮಕ್ರಿಮಿಗಳು ಹೇರಳವಾಗಿರುತ್ತವೆ. ಕಾಲಕ್ರಮೇಣ ಆ ಪದಾರ್ಥಗಳು ಕೆಡುವುದಕ್ಕೆ ಇವೇ ಕಾರಣ. ಇವನ್ನು ಉಷ್ಣಸಂಸ್ಕರಣದಿಂದ ನಾಶಮಾಡಬಹುದು. ಸಾಧಾರಣವಾಗಿ ಬಿಸಿನೀರಿನಲ್ಲಿ(100 ಡಿಗ್ರಿ ಸೆಂ.) ಇವು ಬೇಗನೆ ನಾಶವಾಗುವುವು. ಆದರೆ ಕೆಲವು ಬ್ಯಾಕ್ಟೀರಿಯಾಗಳನ್ನು ನಾಶಮಾಡಲು 115 ಡಿಗ್ರಿ–120 ಡಿಗ್ರಿ ಸೆಂ. ಉಷ್ಣತೆ ಬೇಕಾಗುವುದು. ಪದಾರ್ಥದ ಆಮ್ಲತೆಯೂ (pH) ಇದರಲ್ಲಿ ಅತಿ ಮುಖ್ಯ. ನೀರಿನ pH ಅಂಕವಾದ 7ಕ್ಕಿಂತ ಕಮ್ಮಿ pH ಇರುವ ಪದಾರ್ಥಗಳನ್ನು ಆಮ್ಲೀಯ(ಅಸಿಡಿಕ್) ಪದಾರ್ಥಗಳೆಂದೂ 7ರಿಂದ ಮೇಲೆ 14ರ ವರೆಗೆ pH ಇರುವ ಪದಾರ್ಥಗಳನ್ನು ಪ್ರತ್ಯಾಮ್ಲೀಯ (ಅಲ್ಕಲೈನ್) ಪದಾರ್ಥಗಳೆಂದೂ ವಿಂಗಡಿಸಿದೆ. pH 4.5 ಕ್ಕಿಂತ ಕಡಿಮೆ ಇರುವ ಪದಾರ್ಥಗಳನ್ನು ಹುಳಿಯಾದ ಹಣ್ಣುಗಳ ಪಂಗಡಕ್ಕೂ pH 4.5ಕ್ಕಿಂತ ಹೆಚ್ಚಿರುವ ಪದಾರ್ಥಗಳನ್ನು ಕಾಯಿಪಲ್ಯಗಳ ಪಂಗಡಕ್ಕೂ ಸೇರಿಸಬಹುದು. ಹಣ್ಣುಗಳನ್ನು ಕುದಿಯುವ ನೀರಿನಲ್ಲಿ ಸುಲಭವಾಗಿ ಜೀವಿಮಡಿಮಾಡಿ(ಸ್ಟರಿಲೈಸ್) ಕ್ಯಾನ್ ಮಾಡುತ್ತಾರೆ. ಆದರೆ ತರಕಾರಿಗಳನ್ನೂ ಅವುಗಳಂತೆಯೇ ಹೆಚ್ಚಿನ pH ಇರುವ ಮೀನು, ಮಾಂಸ, ಹಾಲು ಇವೇ ಮೊದಲಾದವನ್ನೂ ಕ್ಯಾನ್ ಮಾಡಲು ಹೆಚ್ಚಿನ ಉಷ್ಣತೆ ಬೇಕಾಗುವುದು. ಈ ಪದಾರ್ಥಗಳನ್ನು ಒಳಗೊಂಡಿರುವ ವಾಯುಬಂಧನಗೊಳಿಸಿದ ಡಬ್ಬಿಗಳನ್ನೂ ಸೀಸೆಗಳನ್ನೂ ಆವಿಯ ಉಷ್ಣತೆಯ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗಿರುವ ರೆಟಾರ್ಟ್ ಅಥವಾ ಸಂಮರ್ದ ಪಾತ್ರೆ (ಪ್ರೆಶರ್ ಕುಕರ್) ಎಂಬ ಉಪಕರಣಗಳಲ್ಲಿಟ್ಟು ಜೀವಿಮಡಿ ಮಾಡಬೇಕು. ಈ ಎರಡು ರೀತಿಯ ಪರಿವರ್ತನ ಕ್ರಮಗಳಿಂದ ಸಾಧಾರಣವಾಗಿ ಎಲ್ಲ ವಿಧವಾದ ಆಹಾರಪದಾರ್ಥಗಳನ್ನೂ ಕ್ಯಾನ್ ಮಾಡಬಹುದು.

ಡಬ್ಬಿಗಳು ಮತ್ತು ಗಾಜಿನ ಸೀಸೆಗಳು : ಆಹಾರಪದಾರ್ಥಗಳನ್ನು ಕ್ಯಾನ್‌ಮಾಡಲು ತವರದ ತಗಡಿನಿಂದ ಡಬ್ಬಿಗಳನ್ನೂ ಗಾಜಿನಿಂದ ಮಾಡಿದ ಸೀಸೆಗಳನ್ನೂ ಉಪಯೋಗಿಸುತ್ತಾರೆ. ಡಬ್ಬಿಗಳಿಗೆ ಓಪನ್ ಟಾಪ್ ಸ್ಯಾನಿಟರಿ ಕ್ಯಾನ್ಸ್ ಎಂದು ಹೆಸರು. ಇವನ್ನು ದೊಡ್ಡ ಕಾರ್ಖಾನೆಗಳಲ್ಲಿ ಲಕ್ಷಗಟ್ಟಲೆ ತಯಾರಿಸುವರು. ಇವುಗಳ ಮೇಲ್ಭಾಗದ ಮುಚ್ಚಳವನ್ನು ಸರಿಯಾದ ರೀತಿಯಲ್ಲಿ ಅತಿ ವೇಗದಲ್ಲಿ ಮುಚ್ಚಲು ಅನುಕೂಲವಾಗುವಂತೆ ಎರಡಂಚಿನ (ಡಬ್ಬಲ್ ಸೀಮರ್) ಯಂತ್ರಗಳಿವೆ. ಈ ಡಬ್ಬಿಗಳನ್ನು ಬೆಸುಗೆ ಇಲ್ಲದೆಯೇ ಗಾಳಿಯಾಗಲಿ ಸೂಕ್ಷ್ಮಕ್ರಿಮಿಗಳಾಗಲಿ ಪ್ರವೇಶಿಸಲಾಗದಂತೆ ವಾಯುಬಂಧನಗೊಳಿಸಬಹುದು (ಹರ್ಮೆಟಿಕಲಿ ಸೀಲ್ಡ್). ನೀರಿನಲ್ಲಿ ಕರಗುವ ಕೆಂಪು ಅಥವಾ ಊದಾ ಬಣ್ಣವಿರುವ ಹಣ್ಣುಗಳನ್ನೂ (ಸ್ಟ್ರಾಬೆರ್ರಿ, ಕೆಂಪುಬಣ್ಣದ ಪ್ಲಂ ಹಣ್ಣು, ನೀಲಿ ದ್ರಾಕ್ಷಿ ಹಣ್ಣು ಇತ್ಯಾದಿ) ಗಂಧಕವನ್ನು ಹೆಚ್ಚಾಗಿ ಒಳಗೊಂಡಿರುವ ಕೆಲವು ಕಾಯಿಪಲ್ಯಗಳನ್ನೂ ಮಾಂಸ ಮೀನು ಇವೇ ಮೊದಲಾದವನ್ನೂ ಕ್ಯಾನ್ ಮಾಡುವುದಕ್ಕೆ ಡಬ್ಬಿಗಳ ಒಳಭಾಗವನ್ನು ಒಂದು ವಿಧವಾದ ರಂಗಿನಿಂದ ಲೇಪನ ಮಾಡಿರಬೇಕು. ಹಾಗಿಲ್ಲದಿದ್ದರೆ ಕ್ಯಾನ್ ಮಾಡಲ್ಪಟ್ಟ ಪದಾರ್ಥ ಕಾಲಕ್ರಮೇಣ ನೀಲಿ ಅಥವಾ ಕಪ್ಪು ಬಣ್ಣ ತಳೆದು ಅನಾಕರ್ಷಣೀಯವಾಗುವುದು. ಆದ್ದರಿಂದ ಡಬ್ಬಿಗಳು ಸಾಧಾರಣ ಮತ್ತು ಲ್ಯಾಕರ್ಡ್ ಎಂದು ಎರಡು ಮುಖ್ಯ ರೀತಿಯವಾಗಿರುವುವು. ಹೆಚ್ಚು ಉಷ್ಣತೆಯಲ್ಲಿ ಕಾಸಿದಾಗ ಒಡೆಯದ ಗಾಜಿನ ಸೀಸೆಗಳನ್ನೂ ಕ್ಯಾನ್ ಮಾಡಲು ಉಪಯೋಗಿಸುವರು.

ಹಣ್ಣುಗಳನ್ನು ಕ್ಯಾನ್ ಮಾಡುವ ವಿಧಾನ : ಸೇಬು, ಸಕ್ಕರೆ ಬಾದಾಮಿ (ಏಪ್ರಿಕಾಟ್), ಬಾಳೆ, ಕಿತ್ತಳೆ, ಮಾವು, ಸೀಬೆ, ದ್ರಾಕ್ಷಿ, ಪರಂಗಿ, ಪೀಚ್, ಪ್ಲಂ, ಬಟಾಣಿ ಇವೇ ಮೊದಲಾದ ಹಣ್ಣುಗಳನ್ನು ಡಬ್ಬಿಗಳಲ್ಲಾಗಲಿ ಗಾಜಿನ ಸೀಸೆಗಳಲ್ಲಾಗಲಿ ಕ್ಯಾನ್ ಮಾಡಬಹುದು. ಡಬ್ಬಿಗಳಲ್ಲಿ ತುಂಬುವುದಕ್ಕೆ ಮೊದಲು ಸರಿಯಾಗಿ ಮಾಗಿದ

ಹಣ್ಣನ್ನು ಆಯ್ದು ತೊಳೆದು, ಸಿಪ್ಪೆ, ಬೀಜಗಳನ್ನು ತೆಗೆದು, ಹಣ್ಣಿನ ಭಾಗವನ್ನು ಸಣ್ಣ ಚೂರುಗಳನ್ನಾಗಿ ಕತ್ತರಿಸಬೇಕು. ಹೀಗೆ ತಯಾರಿಸುವ ಕ್ರಮ ಹಣ್ಣನ್ನು ಅನುಸರಿಸಿರುವುದು. ಕಿತ್ತಳೆ ಹಣ್ಣಿನ ಸೋಳೆಗಳ ಮೇಲ್ಭಾಗದ ಪದರವನ್ನು ಕುದಿಯುವ ಸೋಡಾಕ್ಷಾರ ದ್ರವದ ಸಹಾಯದಿಂದ ನಿವಾರಿಸಬೇಕು. ಮಾವು, ಸೇಬು, ಸೀಬೆ ಇವೇ ಮೊದಲಾದವುಗಳ ಸಿಪ್ಪೆಯನ್ನು ತೆಳುವಾಗಿ ತೆಗೆಯಬೇಕು. ಅನಂತರ ಹಣ್ಣಿನ ಚೂರುಗಳನ್ನು ಡಬ್ಬಿಗೆ ತುಂಬಿ ಬಿಸಿಯಾಗಿರುವ (85° ಸೆಂ.) ಸಕ್ಕರೆಯ ಪಾಕವನ್ನು ಅದರೊಳಗೆ ಹುಯ್ಯಬೇಕು. ಪಾಕದಲ್ಲಿ ಸಾಧಾರಣವಾಗಿ ಶೇ. 40–55 ರಷ್ಟು ಸಕ್ಕರೆ ಇರಬೇಕು. ಡಬ್ಬಿಯಲ್ಲಿ ಮೇಲಿನಿಂದ 1 ಸೆಂಮೀ ಖಾಲಿ ಬಿಟ್ಟು ತುಂಬಬೇಕು. ಅನಂತರ ಅದನ್ನು ಬಿಸಿನೀರಿನಲ್ಲಿ ಇಲ್ಲವೆ ಆವಿಯಲ್ಲಿ (82° –85° ಸೆಂ) ಸುಮಾರು ಹತ್ತು ಮಿನಿಟುಗಳ ಕಾಲ ಇಡಬೇಕು. ಹೀಗೆ ಮಾಡುವುದರಿಂದ ಡಬ್ಬಿಯಲ್ಲಿಯ ಗಾಳಿ ಆವಿಯಿಂದ ಹೊರದೂಡಲ್ಪಡುವುದು. ಈ ವಿಧಾನಕ್ಕೆ ನಿಷ್ಕಾಸ (ಸಗ್ಸಾಸ್ಟ್) ಎಂದು ಹೆಸರು. ಡಬ್ಬಿಯ ಮಧ್ಯಭಾಗದ ಉಷ್ಣತೆ 74° –77° ಸೆಂ ಇರಬೇಕು. ನಿಷ್ಕಾಸಾನಂತರ ಡಬ್ಬಿಯನ್ನು ಎರಡಂಚಿನ ಯಂತ್ರದಲ್ಲಿ ಮುಚ್ಚಬೇಕು. ಬಳಿಕ ಡಬ್ಬಿಯನ್ನು ಕುದಿಯುವ ನೀರಿನಲ್ಲಿ 25–30 ಮಿನಿಟುಗಳ ಕಾಲ ಇಟ್ಟು ಅನಂತರ ಅದನ್ನು ಹೊರಕ್ಕೆ ತೆಗೆದು ತಣ್ಣೀರಿನಲ್ಲಿ ಆರಿಸಬೇಕು. ಈ ವಿಧಾನಕ್ಕೆ ಸಂಸ್ಕರಣ(ಪ್ರೋಸೆಸ್ಸಿಂಗ್) ಎಂದು ಹೆಸರು. ಹೀಗೆ ಸಂಸ್ಕಾರ ಪಡೆದ ಹಣ್ಣು ಡಬ್ಬಿಯಲ್ಲಿ ಕನಿಷ್ಠಪಕ್ಷ ಒಂದೆರಡು ವರ್ಷಗಳ ವರೆಗಾದರೂ ಚೆನ್ನಾಗಿಯೇ ಇರುವುದು. ಬಾಳೆ, ಹಲಸು ಇವೇ ಮೊದಲಾದ ಹಣ್ಣುಗಳ pH 4.5ಕ್ಕಿಂತ ಹೆಚ್ಚಾಗಿರುವುದರಿಂದ ಸಕ್ಕರೆಯ ಪಾಕಕ್ಕೆ ಸ್ವಲ್ಪ ಸಿಟ್ರಿಕ್ ಆಮ್ಲವನ್ನು ಸೇರಿಸಬೇಕು (ಶೇ. 0.25–0.50) ಮತ್ತು ಸಂಸ್ಕರಣ ಕಾಲವನ್ನು ಸ್ವಲ್ಪ ಹೆಚ್ಚಿಸಬೇಕು(45–50ಮಿ). ಸಮುದ್ರ ಮಟ್ಟಕ್ಕಿಂತ ಎತ್ತರವಾದ ಪ್ರದೇಶಗಳಲ್ಲಿ ಹಣ್ಣುಗಳನ್ನು ಕ್ಯಾನ್ ಮಾಡುವಾಗ ಪ್ರತಿಸಾವಿರ ಮೀ ಹೆಚ್ಚು ಎತ್ತರಕ್ಕೂ ಸಂಸ್ಕರಣ ಕಾಲವನ್ನು ಸಾಧಾರಣವಾಗಿ ನಾಲ್ಕು ಮಿನಿಟುಗಳಷ್ಟು ಹೆಚ್ಚಿಸಬೇಕು.

ಕಾಯಿಪಲ್ಯಗಳನ್ನು ಕ್ಯಾನ್ ಮಾಡುವ ಕ್ರಮ : ತತ್ತ್ವಶಃ ಇದು ಹಣ್ಣಿನ ಕ್ರಮದಂತೆಯೇ ಇದ್ದರೂ ಹಲವಾರು ಮುಖ್ಯ ವ್ಯತ್ಯಾಸಗಳಿವೆ. ತರಕಾರಿಯನ್ನು ನೀರಿನಲ್ಲಿ ತೊಳೆದ ಬಳಿಕ ಸಿಪ್ಪೆಯನ್ನು ತೆಗೆದು ಕುದಿಯುವ ನೀರಿನಲ್ಲಿ 4–5 ಮಿನಿಟು ಕಾಲ ಕಾಸಬೇಕು. ಇದಕ್ಕೆ ಬ್ಲ್ಯಾಂಚಿಂಗ್ ಎಂದು ಹೆಸರು. ಹೀಗೆ ಮಾಡುವುದರಿಂದ ಕಾಯಿಪಲ್ಯದಲ್ಲಿರುವ ಎನ್‌ಜೈಮ್‌ಗಳು ನಾಶವಾಗಿ ಬಣ್ಣ ಕೆಡದಂತೆ ಉಳಿಯುವುದು. ಡಬ್ಬಿಗೆ ಕಾಯಿಪಲ್ಯವನ್ನು ತುಂಬಿ ಸಕ್ಕರೆಯ ಪಾಕಕ್ಕೆ ಬದಲಾಗಿ ಬಿಸಿ ಉಪ್ಪಿನ ನೀರನ್ನು (ಶೇ. 2 ದ್ರಾವಣ) ತುಂಬಬೇಕು. ಡಬ್ಬಿಯ ಮೇಲಿನಿಂದ 1 ಸೆಂಮೀ ಖಾಲಿ ಬಿಡಬೇಕು. ಅನಂತರ ಅದನ್ನು ನಿಷ್ಕಾಸಗೊಳಿಸಿ ಮುಚ್ಚಳದಿಂದ ಮೊಹರುಮಾಡಿ 115° –120° ಸೆಂ. ಉಷ್ಣತೆಯಲ್ಲಿ (10–15 ಪೌಂ. ಆವಿ ಸಂಮರ್ದ/0.25 ಇಂಚ್) 45–60 ಮಿನಿಟುಗಳ ವರೆಗೆ ಸಂಸ್ಕರಿಸಬೇಕು. ತರುವಾಯ ಡಬ್ಬಿಯನ್ನು ರೆಟಾರ್ಟಿನಿಂದ ಹೊರಕ್ಕೆ ತೆಗೆದು ತಣ್ಣೀರಿನಲ್ಲಿ ಆರಿಸಬೇಕು. ಹೀಗೆ ಕ್ಯಾನ್ ಮಾಡಿದ ಪದಾರ್ಥ ಅನೇಕ ತಿಂಗಳುಗಳ ಕಾಲ ಕೆಡದೆ ಬಹಳ ಚೆನ್ನಾಗಿರುವುದು. ಪ್ರಪಂಚದ ನಾನಾ ಭಾಗಗಳಲ್ಲಿ ಬಟಾಣಿ, ಕ್ಯಾರಟ್, ಕೋಸು, ಹೂಕೋಸು, ಬೀನ್ಸ್, ಆಲೂಗೆಡ್ಡೆ, ಬೀಟ್‌ರೂಟ್, ಟೊಮಾಟೊ ಇವೇ ಮೊದಲಾದ ಕಾಯಿಪಲ್ಯಗಳನ್ನು ಅವು ಹೇರಳವಾಗಿ ದೊರೆಯುವ ಕಾಲಗಳಲ್ಲಿ ಕ್ಯಾನ್ ಮಾಡಿಡುತ್ತಾರೆ.

ಕ್ಯಾನ್ ಮಾಡಿದ ಪದಾರ್ಥಗಳಲ್ಲಿ ಉಂಟಾಗಬಹುದಾದ ಕೆಲವು ನ್ಯೂನತೆಗಳು ಕೆಲವು ಸಮಯಗಳಲ್ಲಿ ಕ್ಯಾನ್ ಮಾಡಿದ ಹಣ್ಣುಗಳಲ್ಲಿ ಹಣ್ಣಿನ ಆಮ್ಲಡಬ್ಬಿಯ ಒಳಭಾಗದಲ್ಲಿಯ ತವರ ಮತ್ತು ಕಬ್ಬಿಣಗಳನ್ನು ಸ್ವಲ್ಪ ಕರಗಿಸಿ ಜಲಜನಕವನ್ನು ಉತ್ಪನ್ನ ಮಾಡುವುದು. ಇದರಿಂದ ಡಬ್ಬಿಯ ಮೇಲ್ಭಾಗವೂ ಕೆಳಭಾಗವೂ ಉಬ್ಬುತ್ತವೆ. ಉಬ್ಬು ಅತಿ ಹೆಚ್ಚಾದಾಗ ಡಬ್ಬಿ ಒಡೆಯುವುದೂ ಉಂಟು. ಹಲವು ವೇಳೆ ಡಬ್ಬಿಯಲ್ಲಿಟ್ಟ ಹಣ್ಣಿನ ಮತ್ತು ಕಾಯಿಪಲ್ಯದ ಬಣ್ಣ ಮಾರ್ಪಾಡಾಗುವುದೂ ಇದೆ. ಸರಿಯಾದ ಮೊತ್ತದಲ್ಲಿ ಸಂಸ್ಕಾರ ಮಾಡದೆ ಹೋದ ಡಬ್ಬಿಗಳಲ್ಲಿ ಸೂಕ್ಷ್ಮಕ್ರಿಮಿಗಳು ಅಭಿವೃದ್ಧಿಯಾಗಿ ಪದಾರ್ಥವನ್ನು ಕೆಡಿಸಿ ಹಾಳು ಮಾಡುವುದೂ ಉಂಟು. ಹೀಗಾಗುವ ಕೆಲವು ಸಂದರ್ಭಗಳಲ್ಲಿ ಕ್ರಿಮಿಗಳು ಪದಾರ್ಥದಲ್ಲಿ ಒಂದು ವಿಧವಾದ ವಿಷದ ಪದಾರ್ಥವನ್ನು ಉತ್ಪತ್ತಿ ಮಾಡುತ್ತವೆ. ಆದರೆ ಇದು ಅತಿವಿರಳ. ಈಗಿನ ಕಾಲದಲ್ಲಿ ಇಲ್ಲವೆಂದೇ ಹೇಳಬಹುದು. ಇವೆಲ್ಲ ವಿಧದ ನ್ಯೂನತೆಗಳನ್ನೂ ನವೀನ ವೈಜ್ಞಾನಿಕ ಕ್ರಮಗಳಿಂದ ತಪ್ಪಿಸಬಹುದಾಗಿದೆ. ಡಬ್ಬಿಯಲ್ಲಿಟ್ಟು ಹಲವಾರು ಆಹಾರಪದಾರ್ಥಗಳನ್ನು ಬಹಳ ಕಾಲದವರೆಗೂ ಕೆಡದಂತೆ ಕ್ಯಾನ್ ಮಾಡುವ ವಿಧಾನ ನವೀನ ಪರಿವರ್ತನಾ ಕ್ರಮಗಳಲ್ಲಿ ಅಗ್ರ ಸ್ಥಾನವನ್ನು ಪಡೆದಿದೆ.

(ಜಿ.ಎಸ್.ಎಸ್.ಐ.)

**ಕ್ಯಾನಿಂಗ್, ಚಾರ್ಲ್ಸ್ ಜಾನ್ :** 1812–62. ಬ್ರಿಟಿಷ್ ರಾಜಕಾರಣಿ. ಭಾರತದ ಗವರ್ನರ್–ಜನರಲ್ (1856–58); ಪ್ರಥಮ ಗವರ್ನರ್–ಜನರಲ್ ಮತ್ತು ವೈಸ್‌ರಾಯ್ (1858–62). 1812ರ ಡಿಸೆಂಬರ್ 14ರಂದು ಲಂಡನಿನಲ್ಲಿ ಜನಿಸಿದ. ತಂದೆ ಜಾರ್ಜ್ ಕ್ಯಾನಿಂಗ್. ವಿಸ್ಕೌಂಟ್ ಪದವಿಗೆ ಉತ್ತರಾಧಿಕಾರ ಇವನಿಗೆ 1837ರಲ್ಲಿ ಪ್ರಾಪ್ತವಾಯಿತು. ಕನ್ಸರ್ವೆಟಿವ್ ಪಕ್ಷದ ಅಭ್ಯರ್ಥಿಯಾಗಿ ಪಾರ್ಲಿಮೆಂಟಿಗೆ ಆಯ್ಕೆಯಾಗಿ, ರಾಬರ್ಟ್ ಪೀಲನ ಸರ್ಕಾರದಲ್ಲಿ ವಿದೇಶ ವ್ಯವಹಾರ ಖಾತೆಯ ಅಧೀನ ಕಾರ್ಯದರ್ಶಿಯಾಗಿಯೂ ಅರಣ್ಯ ಆಯುಕ್ತನಾಗಿಯೂ ಕೆಲಸ ಮಾಡಿದ. ಅನಂತರ ಲಾರ್ಡ್ ಆಬರ್ಡೀನನ ಸರ್ಕಾರದಲ್ಲಿ ಪೋಸ್ಟ್‌ಮಾಸ್ಟರ್ ಜನರಲ್ ಆಗಿ ಅಧಿಕಾರ



ನಿರ್ವಹಿಸಿದ. ಲಾರ್ಡ್ ಪಾಮರ್ಸ್ಟನ್ ಬ್ರಿಟನಿನ ಪ್ರಧಾನಿಯಾಗಿದ್ದಾಗ ಕ್ಯಾನಿಂಗನಿಗೆ ಭಾರತದ ಗವರ್ನರ್–ಜನರಲ್ ಹುದ್ದೆ ಪ್ರಾಪ್ತವಾಯಿತು. ಈ ಅಧಿಕಾರವನ್ನು ಕ್ಯಾನಿಂಗ್ 1856ರ ಫೆಬ್ರವರಿಯಲ್ಲಿ ವಹಿಸಿಕೊಂಡ. ಈಸ್ಟ್ ಇಂಡಿಯ ಕಂಪನಿಯ ಆಡಳಿತಕ್ಕೊಳಪಟ್ಟಿದ್ದ ಭಾರತದಲ್ಲಿ ತೀವ್ರ ಅಶಾಂತಿ ಹಬ್ಬಿತ್ತು. ಕಂಪನಿ ಗಳಿಸಿದ್ದ ಸಾಮ್ರಾಜ್ಯ ಉಳಿಯಲಾರದೆಂಬ ಶಂಕೆ ಉದ್ಭವವಾಗಿತ್ತು. 1857ರ ಬಂಡಾಯ ಸಂಭವಿಸಿದ್ದು ಈತನ ಅಧಿಕಾರದ ಕಾಲದಲ್ಲೇ.

ಕ್ಯಾನಿಂಗನಲ್ಲಿ ಆಗ ನಾಯಕತ್ವದ ಲಕ್ಷಣಗಳೇನೂ ಪ್ರಕಾಶಕ್ಕೆ ಬಂದಿರಲಿಲ್ಲ. ಆದರೆ ತೀವ್ರ ಆಸಕ್ತಿಯಿಂದಲೂ ಪ್ರಾಮಾಣಿಕತೆಯಿಂದಲೂ ದುಡಿಯುವ ಗುಣ ಇವನಿಗಿದ್ದದ್ದರಿಂದ ಬೇಗ ಪರಿಸ್ಥಿತಿಯನ್ನೆದುರಿಸಲು ಸಮರ್ಥನಾದ. ಈತ ಗವರ್ನರ್–ಜನರಲ್ ಆಗಿ ಬಂದಾಗ ಪರ್ಷಿಯ ದೇಶ ಆಫ್ಘಾನಿಸ್ತಾನದ ಹೆರಾತನ್ನು ಆಕ್ರಮಿಸಿಕೊಂಡಿತ್ತು. ಕ್ಯಾನಿಂಗ್ ಪರ್ಷಿಯನ್ ಖಾರಿ ಪ್ರದೇಶಕ್ಕೆ ಸೈನ್ಯವನ್ನು ಕಳಿಸಿ ಪರ್ಷಿಯನ್ ಆಕ್ರಮಣವನ್ನು ತೆರವು ಮಾಡಿಸಿದ. ಇದರಿಂದ ಆಫ್ಘಾನಿಸ್ತಾನದ ಸ್ನೇಹ ಲಭ್ಯವಾಯಿತು. ಗಡಿಯೆಡೆಯಲ್ಲಿ ಸ್ವಲ್ಪ ನೆಮ್ಮದಿ ನೆಲೆಸಿತು. 1857ರಲ್ಲಿ ಮೀರತ್ತಿನಲ್ಲಿ ಬಂಡಾಯ ಆರಂಭವಾದಾಗ ಆಫ್ಘಾನಿಸ್ತಾನದ ಸ್ನೇಹಧೋರಣೆಯಿಂದ ಇವನಿಗೆ ಎಷ್ಟೋ ಪ್ರಯೋಜನವಾಯಿತು. ಚೀನದ ಮೇಲೆ ಏರಿಹೋಗಲು ಕಳಿಸಿದ್ದ ಸೇನೆಯನ್ನೂ ಈತ ಬಂಡಾಯವನ್ನೆದುರಿಸುವ ಸಲುವಾಗಿ ಹಿಂದಕ್ಕೆ ಕರೆಸಿಕೊಂಡ. ಕಳೆದುಹೋಗಿದ್ದ ದೆಹಲಿ–ಲಖನೌಗಳನ್ನು ಮತ್ತೆ ವಶಪಡಿಸಿಕೊಳ್ಳಬೇಕೆಂದೂ ಪೆಷಾವರವನ್ನು ಏನೇ ಆಗಲಿ ಬಿಟ್ಟುಕೊಡಬಾರದೆಂದೂ ಈತ ತೀರ್ಮಾನ ಮಾಡಿದ. ಬಂಡಾಯವನ್ನು ಹತ್ತಿಕ್ಕಿದ ಮೇಲೆ, ಕಂಪನಿಯಿಂದ ಬ್ರಿಟಿಷ್ ದೊರೆತನದ ವಶಕ್ಕೆ ಭಾರತದ ಆಡಳಿತ ಬಂತು. ಕ್ಯಾನಿಂಗ್ ಭಾರತದ ಗವರ್ನರ್–ಜನರಲ್ ಮತ್ತು ವೈಸರಾಯ್ ಆದ(1858). ದಂಗೆಯನ್ನು ಹತ್ತಿಕ್ಕುವುದರಲ್ಲಿ ಕ್ಯಾನಿಂಗ್ ಸ್ಥೈರ್ಯನೈಪುಣ್ಯಗಳನ್ನು ತೋರಿಸಿದ. ದೇಶೀಯ ಸಂಸ್ಥಾನಿಕರಲ್ಲೇ ಒಡಕು ಹುಟ್ಟಿಸಿ, ಅವರವರು ಬಡಿದಾಡುವ ಹಾಗೆ ಮಾಡಿದ. ಬಂಡಾಯವನ್ನು ಹತ್ತಿಕ್ಕಲು ಅವನ ಈ ನೀತಿ ಸಹಾಯಕವಾಯಿತು. ಪರ್ಷಿಯ, ಆಫ್ಘಾನಿಸ್ತಾನ ಮತ್ತು ಗುಡ್ಡಗಾಡುಗಳ ಮುಖಂಡರಲ್ಲೂ ಅವನು ಇದೇ ರೀತಿ ಕಲಹಬೀಜ ಬಿತ್ತಿ ಸಾಮ್ರಾಜ್ಯದ ಹಿಡಿತವನ್ನು ಬಲಪಡಿಸಿಕೊಂಡ.

ಆದರೆ ಅದೇ ಕಾಲದಲ್ಲಿ ಕ್ಯಾನಿಂಗ್ ಸ್ವಲ್ಪಮಟ್ಟಿಗೆ ಔದಾರ್ಯದಿಂದಲೂ ವರ್ತಿಸಿ, ಪ್ರಜೆಗಳ ಯೋಗಕ್ಷೇಮಕ್ಕೆ ಗಮನ ನೀಡಿ, ಅವರ ಪ್ರೀತಿ ನಂಬಿಕೆ ಗಳಿಸಲು ಪ್ರಯತ್ನಪಟ್ಟ. ಭಾರತದಲ್ಲಿದ್ದ ವಿಜಯೋನ್ಮತ್ತ ಬ್ರಿಟಿಷ್ ಜನಾಂಗದವರು ಭಾರತೀಯರ ಮೇಲೆ ಸೇಡು ತೀರಿಸಿಕೊಳ್ಳುವ ಮನೋಭಾವಕ್ಕೆ ತಡೆಹಾಕಿದ್ದು ಬಂಡಾಯದ ಅನಂತರ ಈತ ಮಾಡಿದ ಮೊದಲ ಕೆಲಸ, ಬ್ರಿಟಿಷ್ ನಿವಾಸಿಗಳು ಇವನ ಕ್ಷಮಾನೀತಿಯನ್ನು ಪ್ರತಿಭಟಿಸಿದರು. ಕ್ಯಾನಿಂಗನನ್ನು ವಜಾ ಮಾಡಬೇಕೆಂದು ಕೊಲ್ಕತ್ತದಲ್ಲಿದ್ದ ಬ್ರಿಟಿಷ್ ಜನಾಂಗದಿಂದ ರಾಣಿಗೆ ಮನವಿ ಹೋಯಿತು. ಬ್ರಿಟಿಷ್ ಸರ್ಕಾರ ಅದನ್ನು ತಳ್ಳಿಹಾಕಿತು. ಔಧ್‌ನಲ್ಲಿ ಎಲ್ಲ ಜಮೀನನ್ನೂ 1858ರಲ್ಲಿ ಈತ ಮುಟ್ಟುಗೋಲು ಹಾಕಿಕೊಂಡು, ಜಮೀನುದಾರರ ಹಿತಗಳಿಗೆ ಅನುಕೂಲವಾಗಿರುವಂತೆ ಕಂದಾಯ ವ್ಯವಸ್ಥೆ ಏರ್ಪಡಿಸಿದ್ದಾದರೂ ಸಾಮ್ರಾಜ್ಯದ ಸ್ಥಿರೀಕರಣಕ್ಕಾಗಿಯೇ, ಜಮೀನ್ದಾರರ ಒಲವು ಗಳಿಸಿ, ಅವರು ಸಾಮ್ರಾಜ್ಯದ ರಕ್ಷಕರಾಗಿರುವಂತೆ ಮಾಡುವುದೇ ಇವನ ಉದ್ದೇಶವಾಗಿತ್ತು. ಕ್ಯಾನಿಂಗನ ಕ್ರಮಗಳಿಗೆ ಬ್ರಿಟನಿನಲ್ಲಿ ಕೂಡ ಕೆಲವರ ವಿರೋಧವಿತ್ತು. ಭಾರತ ಕಾರ್ಯದರ್ಶಿ ಲಾರ್ಡ್ ಎಲೆನ್‌ಬರೋ ಇವನ ನೀತಿಯನ್ನು ಪ್ರತಿಭಟಿಸಿದ. ಸರ್ಕಾರ ಅವನ ಪ್ರತಿಭಟನೆಗೆ ಬೆಂಬಲ ನೀಡಲಿಲ್ಲವಾಗಿ ಇವನು ರಾಜೀನಾಮೆ ನೀಡಿದ. ಸಾಮ್ರಾಜ್ಯದ ಉಳಿವಿಗಾಗಿ ಕ್ಯಾನಿಂಗ್ ಅನುಸರಿಸುತ್ತಿದ್ದ ನೀತಿಯನ್ನು ಬ್ರಿಟಿಷ್ ಸರ್ಕಾರ ಒಪ್ಪಿ ಇವನಿಗೆ ಗ್ರ್ಯಾಂಡ್‌ಕ್ರಾಸ್ ನೀಡಿ ಸನ್ಮಾನಿಸಿತು.

ದೇಶದಲ್ಲಿ ಶಾಂತಿ ನೆಲಸಿದ ಮೇಲೆ ಆಡಳಿತ ಸುಧಾರಣೆಗೆ ಈತ ಗಮನ ನೀಡಿದ. 1861ರ ಕಾಯಿದೆಯ ಪ್ರಕಾರ ವೈಸ್‌ರಾಯಿಯ ಕಾರ್ಯನಿರ್ವಾಹಕ ಮಂಡಲಿಯ

ಪುನಾರಚನೆಯಾಯಿತು. ಇಲಾಖಾನುಗುಣವಾಗಿ ಹೊಣೆಯ ಹಂಚಿಕೆಯಾಯಿತು. ಪ್ರಾಂತ್ಯಗಳಲ್ಲಿ ವಿಧಾನ ಪರಿಷತ್ತುಗಳ ಪುನರ್ ಸ್ಥಾಪನೆಯಾಯಿತಾದರೂ ಇಡೀ ಭಾರತಕ್ಕೆ ಅನ್ವಯಿಸುವಂತೆ ಕಾನೂನು ರಚನೆಯ ಅಧಿಕಾರ ಕೇಂದ್ರದಲ್ಲೇ ಉಳಿಯಿತು. ಭಾರತೀಯ ದಂಡಸಂಹಿತೆ ಮತ್ತು ದಂಡಪ್ರಕ್ರಿಯಾ ಸಂಹಿತೆಗಳು ಅನುಕ್ರಮವಾಗಿ 1860 ಮತ್ತು 1861ರಲ್ಲಿ ಜಾರಿಗೆ ಬಂದುವು. ಹಳೆಯ ಪರಮೋಚ್ಚ ನ್ಯಾಯಾಲಯಗಳ ಮತ್ತು ಕಂಪನಿಯ ಅದಾಲತ್‌ಗಳ ಬದಲು ಕೊಲ್ಕತ್ತ, ಮದ್ರಾಸು ಮತ್ತು ಮುಂಬೈಗಳಲ್ಲಿ ಉಚ್ಚ ನ್ಯಾಯಾಲಗಳ ಸ್ಥಾಪನೆ ಆದದ್ದು 1862ರಲ್ಲಿ ಭಾರತದ ಸೇನೆ ಐರೋಪ್ಯ ಅಧಿಕಾರಿಗಳ ನೇತೃತ್ವದಲ್ಲಿ ಪುನರ್ವ್ಯವಸ್ಥೆಗೊಂಡಿತು. ವರಮಾನ ತೆರಿಗೆಯನ್ನು ಜಾರಿಗೆ ತಂದದ್ದರಿಂದ ಸರ್ಕಾರದ ಹಣಕಾಸಿಗೆ ಸ್ಥಿರತೆ ಲಭ್ಯವಾಯಿತು. ಬಂಗಾಳ ಬಿಹಾರಗಳ ನೀಲಿ(ಇಂಡಿಗೊ) ತೋಟಗಳಲ್ಲಿಯ ದಬ್ಬಾಳಿಕೆಯಿಂದ ನರಳುತ್ತಿದ್ದ ರೈತರ ಕಷ್ಟಗಳನ್ನು ವಿಚಾರಿಸಿ ವರದಿ ಮಾಡಲು ಒಂದು ಆಯೋಗವನ್ನು ನೇಮಿಸಿದ. ಅದರ ಸಲಹೆಗಳನ್ನು ಜಾರಿಗೆ ತಂದದ್ದರಿಂದ ರೈತರ ಮೇಲಣ ದಬ್ಬಾಳಿಕೆ ಎಷ್ಟೋ ಕಡಿಮೆಯಾಯಿತು. 1861ರಲ್ಲಿ ಕ್ಷಾಮಪರಿಹಾರಕ್ಕಾಗಿ ಕೈಗೊಂಡ ಕ್ರಮಗಳೂ ಮುಖ್ಯವಾದುವು. ಈತ ಶಿಕ್ಷಣಕ್ಕೂ ಹೆಚ್ಚಿನ ಪ್ರೋತ್ಸಾಹ ನೀಡಿದ. 1857ರಲ್ಲಿ ಕೊಲ್ಕತ್ತ, ಮುಂಬೈ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳು ಸ್ಥಾಪಿತವಾದುವು. ಖಾಸಗಿ ಕಾಲೇಜುಗಳಿಗೆ ಅನುದಾನ ನೀಡುವ ಪದ್ಧತಿ ಜಾರಿಗೆ ಬಂತು.

ಕ್ಯಾನಿಂಗನ ಪತ್ನಿ 1861ರಲ್ಲಿ ನಿಧನಳಾದಳು. ಆಕೆಯ ನಿಧನ ಕ್ಯಾನಿಂಗನ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತು. 1862ರ ಮಾರ್ಚ್‌ನಲ್ಲಿ ಆತ ಭಾರತದಿಂದ ಸ್ವದೇಶಕ್ಕೆ ಮರಳಿದ. ದುಃಖದಿಂದಲೂ ಅತಿಯಾದ ದುಡಿಮೆಯಿಂದಲೂ ಜರ್ಝರಿತನಾಗಿದ್ದ ಕ್ಯಾನಿಂಗ್ 1862ರ ಜೂನ್ 17ರಂದು ನಿಧನನಾದ. (ಟಿ.ಆರ್.ಪಿ.)

**ಕ್ಯಾನೀತ್ಸಾರೊ ಕ್ರಿಯೆ :** ಇಟಾಲಿಯನ್ ರಸಾಯನ ವಿಜ್ಞಾನಿ ಕ್ಯಾನೀತ್ಸಾರೊ ಕಂಡುಹಿಡಿದ ಒಂದು ಕಾರ್ಬನಿಕ ರಾಸಾಯನಿಕ ಕ್ರಿಯೆ. ಯಾವುದೇ ಆಲ್ಡಿಹೈಡಿನ ಅಣುವಿನಲ್ಲಿ ಕಾರ್ಬನ್ ಪರಮಾಣುವಿಗೆ (ಆಲ್ಡಿಹೈಡ್ ಗುಂಪಿನ ಪಕ್ಕದ ಪರಮಾಣುವಿಗೆ) ಹೈಡ್ರೊಜನ್ ಪರಮಾಣು ಬಂಧಿತವಾಗಿಲ್ಲದಿದ್ದರೆ ಅಂಥ ಆಲ್ಡಿಹೈಡ್ ಸಾರ ಕ್ಷಾರದ ಸಾನ್ನಿಧ್ಯದಲ್ಲಿ ಈ ಕ್ರಿಯೆಗೆ ಒಳಗಾಗುತ್ತದೆ. ಅದರ ಪರಿಣಾಮವಾಗಿ ಆಲ್ಡಿಹೈಡ್ ಅಣುಗಳಲ್ಲಿ ಅರ್ಧ ಭಾಗ ಉತ್ಕರ್ಷಣ ಹೊಂದಿ ಕಾರ್ಬಾಕ್ಸಿಲಾಮ್ಲವಾಗುತ್ತದೆ. ಉಳಿದ ಅರ್ಧ ಭಾಗ ಅಪಕರ್ಷಣ ಹೊಂದಿ ಆಲ್ಕೊಹಾಲಾಗುತ್ತದೆ.

$$2R-CHO \rightarrow R.CH_2OH + R-COOH$$

ಅಸಿಟಿಕ್‌ಆಮ್ಲ ಬ್ಯಾಕ್ಟೀರಿಯ ಮತ್ತು ಅನೇಕ ಸಜೀವ ಅಂಗಾಂಶಗಳು ಈ ಕ್ರಿಯೆಯನ್ನು ಪ್ರಚೋದಿಸುತ್ತವೆ. ಅಲ್ಯೂಮಿನಿಯಂ ಈಥಾಕ್ಸೈಡು ಅಥವಾ ಪ್ರೊಪಾಕ್ಸೈಡು ಸಹ ಈ ಕ್ರಿಯೆಗೆ ಉತ್ತೇಜನ ನೀಡುತ್ತದೆ. ಇಲ್ಲಿ ಕ್ರಿಯೆ ಇನ್ನೂ ಮುಂದೆ ಹೋಗಿ ಆಲ್ಕೊಹಾಲ್ ಮತ್ತು ಆಮ್ಲಗಳ ಸಂಯೋಗದಿಂದ ಎಸ್ಟರು ಉತ್ಪತ್ತಿಯಾಗುತ್ತದೆ. (ಬಿ.ಎಸ್‌ಯು.)

**ಕ್ಯಾನ್‌ಬರ :** ಆಸ್ಟ್ರೇಲಿಯ ಕಾಮನ್‌ವೆಲ್ತಿನ ರಾಜಧಾನಿ. ಸಿಡ್ನಿಯಿಂದ ನೈರುತ್ಯಕ್ಕೆ 304 ಕಿಮೀ ಮೆಲ್‌ಬರ್ನಿನಿಂದ ಆಗ್ನೇಯಕ್ಕೆ 669 ಕಿಮೀ ಅಡಿಲೇಡ್‌ನಿಂದ ಪೂರ್ವಕ್ಕೆ 1216 ಕಿಮೀ ಮತ್ತು ಪೆಸಿಫಿಕ್ ಕರಾವಳಿಯಿಂದ ಸು. 112 ಕಿಮೀ ದೂರದಲ್ಲಿದೆ. ಜನಸಂಖ್ಯೆ 323056 (2006).

ವಾಷಿಂಗ್ಟನ್ ಡಿ.ಸಿ. ಮುಂತಾದ ಕೆಲವು ರಾಷ್ಟ್ರರಾಜಧಾನಿಗಳಂತೆ ಕ್ಯಾನ್‌ಬರವನ್ನು ರಾಜಧಾನಿಯಾಗಲು ಆರಿಸಿ ಯೋಜಿಸಿದಾಗ ಅಲ್ಲಿ ಹೆಚ್ಚು ಜನವಸತಿ ಇರಲಿಲ್ಲ. ಉದ್ದೇಶಪೂರ್ವಕವಾಗಿಯೇ ಅದನ್ನು ಆರಿಸಲಾಯಿತು. ಬಿಳಿಯರು ಈ ಪ್ರದೇಶವನ್ನು ಮೊಟ್ಟಮೊದಲು ಪ್ರವೇಶಿಸಿದ್ದು 1820ರಲ್ಲಿ. ಈ ಪ್ರದೇಶದಲ್ಲಿ ಸಾಕಷ್ಟು ನೀರಿನ ಸೌಲಭ್ಯವೂ ಫಲವತ್ತಾದ ಮೈದಾನವೂ ಸಮೃದ್ಧವಾಗಿ ಕಟ್ಟಡ ಸಾಮಗ್ರಿಯೂ ಇರುವುವೆಂಬುದು ಅವರು ನೀಡಿದ ವರದಿ. 1824ರ ಸುಮಾರಿಗೆ ಸಣ್ಣ ಗುಂಪೊಂದು ಇಲ್ಲಿಗೆ ಬಂದು ಖಾಯಂ ಆಗಿ ನೆಲಸಿತು. ಅಂದಿನಿಂದ ಈ ಪ್ರದೇಶ ಅಭಿವೃದ್ಧಿಯಾಗತೊಡಗಿತು. ಸೇಂಟ್ ಜಾನ್ ಚರ್ಚ್ ಭಾಗಶಃ ನಿರ್ಮಾಣವಾದ್ದು 1845ರಲ್ಲಿ. ಅಂಚೆ ಕಛೇರಿ ಸ್ಥಾಪಿತವಾದದ್ದು 1863ರಲ್ಲಿ. 19ನೆಯ ಶತಮಾನದ ಕೊನೆಯ ವೇಳೆಗೆ ಇದು ಸಂಪ್ರದಾಯವಂತ ಕಷ್ಟಸಹಿಷ್ಣು ತೃಪ್ತಜೀವಿಗಳ ನೆಲೆಯಾಗಿತ್ತು.

ಆಸ್ಟ್ರೇಲಿಯ ಸಂಯುಕ್ತರಾಷ್ಟ್ರ ಸ್ಥಾಪನೆಯಾಗಬೇಕೆಂಬ ಬೇಡಿಕೆ ಹೆಚ್ಚಿದೊಡನೆಯೇ ರಾಷ್ಟ್ರದ ರಾಜಧಾನಿ ಯಾವುದಿರಬೇಕೆಂಬ ಬಗ್ಗೆ ಜನಾಭಿಪ್ರಾಯವನ್ನು ಆಹ್ವಾನಿಸಲಾಯಿತು. ಆಸ್ಟ್ರೇಲಿಯ ಕಾಮನ್‌ವೆಲ್ತ್ ಉದ್ಘಾಟನೆಯಾದ್ದು 1901ರಲ್ಲಿ. 1900 ರಲ್ಲಿ ಅನುಮೋದಿತವಾದ ಕಾಮನ್‌ವೆಲ್ತ್ ಸಂವಿಧಾನ ಕಾನೂನಿನ ಪ್ರಕಾರ ನ್ಯೂ ಸೌತ್ ವೇಲ್ಸಿನಲ್ಲಿ ರಾಜಧಾನಿಯೊಂದನ್ನು ಸ್ಥಾಪಿಸುವುದಕ್ಕೆ ಅವಕಾಶವಿತ್ತಾದರೂ ಅದನ್ನು ಸಿಡ್ನಿಯಿಂದ 160 ಕಿಮೀ ಒಳಗೆ ನಿರ್ಮಿಸುವಂತಿರಲಿಲ್ಲ. ಎರಡು ರಾಯಲ್ ಆಯೋಗಗಳು ರಾಜಧಾನಿಯ ವಿಷಯವನ್ನು ಪರಿಶೀಲಿಸಿ ವರದಿ ಮಾಡಿದುವು. ಈ ಬಗ್ಗೆ ವಿಪುಲವಾಗಿ ಸಾರ್ವಜನಿಕ ಚರ್ಚೆ ನಡೆಯಿತು. ಕೊನೆಗೆ ಕಾಮನ್‌ವೆಲ್ತ್ ಪಾರ್ಲಿಮೆಂಟು ಕ್ಯಾನ್‌ಬರ ಜಿಲ್ಲೆಯನ್ನು ಇದಕ್ಕಾಗಿ ಆರಿಸಿತು. ಅನಂತರ ನಗರದ ನಿವೇಶನದ ಆಯ್ಕೆ ನಡೆಯಿತಲ್ಲದೆ ಸುಮಾರು 2331 ಚಕಿಮೀ ಪ್ರದೇಶವನ್ನು ನ್ಯೂ ಸೌತ್ ವೇಲ್ಸಿನಿಂದ ಕಾಮನ್‌ವೆಲ್ತಿಗೆ ವರ್ಗಾಯಿಸಲಾಯಿತು. ರಾಜಧಾನಿಯ ಆಲೇಖ್ಯಕ್ಕಾಗಿ ವಿಶ್ವಾದ್ಯಂತ ಸ್ಪರ್ಧೆಯೊಂದನ್ನು ಏರ್ಪಡಿಸಲಾಯಿತು. ಈ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದಾತ ಷಿಕಾಗೋವಿನ

ಕ್ಯಾನ್‌ಬರದಲ್ಲಿರುವ ಪಾರ್ಲಿಮೆಂಟ್ ಭವನ

ವಾಲ್ಟರ್ ಬಿ.ಗ್ರಿಫಿನ್ (1876–1937). ರಾಜಧಾನಿಯ ನಿರ್ಮಾಣ 1913ರಲ್ಲಿ ಪ್ರಾರಂಭವಾಯಿತಾದರೂ ಒಂದನೆಯ ಮಹಾಯುದ್ಧದಿಂದಾಗಿ ಅದು ನಿಧಾನವಾಯಿತು. ನಗರ ನಿರ್ಮಾಣದ ಮೇಲ್ವಿಚಾರಣೆಯನ್ನು 1915ರಿಂದ 1920ರ ತನಕ ಗ್ರಿಫಿನನೇ ವಹಿಸಿಕೊಂಡಿದ್ದ.

ಯುದ್ಧದ ಅನಂತರ ರಾಜಧಾನಿಯ ನಿರ್ಮಾಣದ ಕೆಲಸವನ್ನು ಫೆಡರಲ್ ಕ್ಯಾಪಿಟಲ್ ಕೌನ್ಸಿಲ್ ತ್ವರೆಗೊಳಿಸಿತು. ಈ ಪ್ರದೇಶದ ನಿರ್ಮಾಣ ಮತ್ತು ಆಡಳಿತ ಕಲಾಪಗಳೆಲ್ಲ ಅದರ ವಶಕ್ಕೆ ಬಂದದ್ದು 1925ರಲ್ಲಿ. ಯಾರ್ಕಿನ ಡ್ಯೂಕ್ (ಅನಂತರ 6ನೆಯ ಜಾರ್ಜ್) ನೂತನ ಪಾರ್ಲಿಮೆಂಟಿನ ಭವನವನ್ನು ಉದ್ಘಾಟಿಸಿದ (1927). ಅನಂತರ ಮೆಲ್‌ಬರ್ನಿನಿಂದ ಕೇಂದ್ರ ನೌಕರರ ವರ್ಗಾವಣೆ ಪ್ರಾರಂಭವಾಯಿತು.

ಯುದ್ಧ ಸ್ಮಾರಕ ವಸ್ತುಸಂಗ್ರಹಾಲಯ, ಕ್ಯಾನ್‌ಬರ

ಆಕರ್ಷಕವಾದ ಮನೆಗಳು, ಶಾಲೆಗಳು ಮತ್ತು ಇತರ ಮುಖ್ಯ ಕಟ್ಟಡಗಳು ಕ್ಯಾನ್‌ಬರದ ಉಪನಗರಗಳಲ್ಲಿ ತಲೆಯೆತ್ತಿದುವು. ಕ್ಯಾನ್‌ಬರ ವಿಶ್ವವಿದ್ಯಾಲಯ ಕಾಲೇಜು ಸ್ಥಾಪಿತವಾದ್ದು 1930ರಲ್ಲಿ. ರಾಷ್ಟ್ರೀಯ ಗ್ರಂಥಾಲಯದ ಶಾಖೆಯೊಂದು ಪ್ರಾರಂಭವಾದ್ದು 1936ರಲ್ಲಿ. ಪ್ರಪಂಚದ ಆರ್ಥಿಕ ಮುಗ್ಗಟ್ಟು ಮತ್ತು ಎರಡನೆಯ ಮಹಾಯುದ್ಧದಿಂದಾಗಿ ನಗರದ ಪ್ರಗತಿ ನಿಧಾನವಾಯಿತು. ಆದರೂ ಆಸ್ಟ್ರೇಲಿಯ ಯುದ್ಧಸ್ಮಾರಕ ಮತ್ತು ಏಕಸ್ವ ಕಾರ್ಯಾಲಯಗಳು ಅಲ್ಲಿ 1941ರಲ್ಲಿ ಪ್ರಾರಂಭವಾದುವು. ವಿಶಾಲವಾದ ಆಸ್ಪತ್ರೆ

1943ರಲ್ಲಿ ಪ್ರಾರಂಭವಾಯಿತು. ನಗರದ ಬೆಳವಣಿಗೆಯ ವೇಗ ಹೆಚ್ಚಿದ್ದು ಎರಡನೆಯ ಮಹಾಯುದ್ಧದ ಅನಂತರವೇ. 8,000ಕ್ಕೂ ಹೆಚ್ಚು ಮನೆಗಳೂ ಆಡಳಿತ ಕಚೇರಿಗಳ ಭವನಗಳೂ 1946ರಲ್ಲಿ ಸ್ಥಾಪಿತವಾದ ಆಸ್ಟ್ರೇಲಿಯ ರಾಷ್ಟ್ರೀಯ ವಿಶ್ವವಿದ್ಯಾಲಯದ ವಿಶಾಲಕಟ್ಟಡಗಳೂ ನಿರ್ಮಾಣವಾದುವು. ಅನೇಕ ಶಾಲೆಗಳೂ ಅಂಗಡಿಗಳೂ ತಲೆ ಎತ್ತಿದುವು. ರಕ್ಷಣ ವಿಭಾಗಕ್ಕೆ ಸೇರಿದ ನೂರಾರು ಅಧಿಕಾರಿಗಳು ಮೆಲ್‍ಬರ್ನಿನಿಂದ ಕ್ಯಾನ್‍ಬರಕ್ಕೆ ವರ್ಗವಾಗಿ ಬಂದರು. ಕಾಮನ್‍ವೆಲ್ತಿನ ಸೇವೆಗಾಗಿ ಇನ್ನೂ ಕೆಲವು ನೌಕರರನ್ನು ವರ್ಗಾಯಿಸಲು ಯೋಜಿಸಲಾಯಿತು. ರಾಜಧಾನಿ ಅಭಿವೃದ್ಧಿ ಆಯೋಗವನ್ನು ಸ್ಥಾಪಿಸಿದ್ದು 1958ರಲ್ಲಿ. ನಗರಾಭಿವೃದ್ಧಿಗಾಗಿ ಈ ಆಯೋಗ ನೀಡಿದ ಪಂಚವಾರ್ಷಿಕ ಯೋಜನೆಯನ್ನು ಸರ್ಕಾರ ತತ್ತ್ವಶಃ ಅಂಗೀಕರಿಸಿತು. ರಕ್ಷಣ ವಿಭಾಗಕ್ಕಾಗಿ ಕಟ್ಟಡಗಳನ್ನೂ ನಗರದ ಸೌಂದರ್ಯಾಭಿವರ್ಧನಕ್ಕಾಗಿ ಅದರ ಹೃದಯಪ್ರದೇಶದಲ್ಲಿ ಅಲಂಕರಣ ತಟಾಕಗಳನ್ನೂ ನಿರ್ಮಿಸಬೇಕೆಂಬುದು ಈ ಆಯೋಗದ ಮುಖ್ಯ ಸಲಹೆಗಳು.

ಕ್ಯಾನ್‍ಬರವನ್ನು ಅಧ್ಯಯನ ಮತ್ತು ಸಂಶೋಧನ ಕೇಂದ್ರವಾಗಿಯೂ ಅಭಿವೃದ್ಧಿಪಡಿಸಲಾಗಿದೆ. ಕ್ಯಾನ್‍ಬರ ವಿಶ್ವವಿದ್ಯಾಲಯದಲ್ಲಿ ಸ್ನಾತಕಪೂರ್ವ ಶಿಕ್ಷಣವನ್ನೇ ಅಲ್ಲದೆ ವೈದ್ಯವಿಜ್ಞಾನ, ಪೆಸಿಫಿಕ್ ಅಧ್ಯಯನ, ಶರೀರವಿಜ್ಞಾನ, ಸಮಾಜ ವಿಜ್ಞಾನ–ಇವುಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನೂ ಏರ್ಪಡಿಸಲಾಗಿದೆ. ಅರಣ್ಯವಿಜ್ಞಾನ ಮತ್ತು ಚೌಬೀನೆ ವಿಭಾಗ, ಆಸ್ಟ್ರೇಲಿಯನ್ ಅಂಗರಚನವಿಜ್ಞಾನ ಸಂಸ್ಥೆ, ಮೌಂಟ್‍ಸ್ಟ್ರಾಮ್ಲೊ ಖಗೋಳವೀಕ್ಷಣಾಲಯ, ಕೃಷಿ ಅರ್ಥಶಾಸ್ತ್ರ ವಿಭಾಗ, ರಾಷ್ಟ್ರೀಯ ಗ್ರಂಥಾಲಯ ಮೊದಲಾದ ಸಂಸ್ಥೆಗಳು ಇಲ್ಲಿವೆ. ಇಲ್ಲಿಂದ ಒಳನಾಡಿಗೆ ರಸ್ತೆಗಳುಂಟು. ನ್ಯೂ ಸೌತ್ ವೇಲ್ಸಿನೊಂದಿಗೆ ರೈಲ್ವೆ ಸಂಪರ್ಕವಿದೆ. ಕ್ಯಾನ್‍ಬರದಿಂದ ಸಿಡ್ನಿ ಮತ್ತು ಮೆಲ್‍ಬರ್ನ್‍ಗಳಿಗೂ ಅಲ್ಲಿಂದ ಆಸ್ಟ್ರೇಲಿಯದ ಇತರ ರಾಜ್ಯಗಳ ರಾಜಧಾನಿಗಳಿಗೂ ಹೋಗಿ ಬರಲು ವಿಮಾನ ಸೌಲಭ್ಯವುಂಟು. *

**ಕ್ಯಾನ್ಸರ್[1] : ನೋಡಿ – ಏಡಿಗಂತಿ**

**ಕ್ಯಾನ್ಸರ್[2] : ನೋಡಿ – ಕರ್ಕಾಟಕ ರಾಶಿ**

**ಕ್ಯಾನ್ಸಸ್ :** ಅಮೆರಿಕ ಸಂಯುಕ್ತಸಂಸ್ಥಾನದ ಮಧ್ಯಭಾಗದಲ್ಲಿರುವ ರಾಜ್ಯ. ಉ.ಅ.37°–40° ಮತ್ತು ಪ.ರೇ. 94°37'–102° 3' ನಡುವೆ ಇರುವ ಈ ರಾಜ್ಯ ಸ್ಥೂಲವಾಗಿ ಸಮಚತುಷ್ಕೋನಾಕಾರವಾಗಿದೆ. ಇದರ ಉದ್ದ ಉತ್ತರದಿಂದ ದಕ್ಷಿಣಕ್ಕೆ 331 ಕಿಮೀ; ಅಗಲ ಪೂರ್ವದಿಂದ ಪಶ್ಚಿಮಕ್ಕೆ 645 ಕಿಮೀ ಒಟ್ಟು ವಿಸ್ತೀರ್ಣ 213064 ಚಕಿಮೀ ಜನಸಂಖ್ಯೆ 2688418 (2000). ಇದು ಅಮೆರಿಕ ಸಂಯುಕ್ತ ಸಂಸ್ಥಾನದ ರಾಜ್ಯಗಳಲ್ಲಿ 14ನೆಯದು. ಉತ್ತರಕ್ಕೆ ನೆಬ್ರ್ಯಾಸ್ಕ ರಾಜ್ಯ, ಪೂರ್ವಕ್ಕೆ ಮಿಸೂರಿ ರಾಜ್ಯ, ದಕ್ಷಿಣಕ್ಕೆ ಓಕ್ಲಹೋಮ ರಾಜ್ಯ, ಪಶ್ಚಿಮಕ್ಕೆ ಕಾಲರಾಡೋ ರಾಜ್ಯ ಇವು ಮೇರೆಗಳು. ರಾಜಧಾನಿ ಟೊಪೀಕ. ಜನಸಂಖ್ಯೆ : 122377 (2000)

**ಭೌತಲಕ್ಷಣ :** ಈ ರಾಜ್ಯವನ್ನು ಸಾಮಾನ್ಯವಾಗಿ ಚಪ್ಪಟೆಯ ಭೂಪ್ರದೇಶವೆಂದು ವರ್ಣಿಸಲಾಗಿದ್ದರೂ ಇಲ್ಲಿ ಸಾವಿರಾರು ಬೆಟ್ಟಗುಡ್ಡಗಳೂ ಕಣಿವೆಗಳೂ ಇವೆ. ಭೌತಲಕ್ಷಣಗಳಿಗೆ ಅನುಗುಣವಾಗಿ ರಾಜ್ಯವನ್ನು ಎಂಟು ವಿಭಾಗಗಳಾಗಿ ವಿಂಗಡಿಸಬಹುದು: 1. ಆಗ್ನೇಯ ಭಾಗದಲ್ಲಿರುವುದು ಚೆರೊಕೀ ಬಯಲು. ಅದು ಓಜ಼ಾರ್ಕ್ಸ್ ಪರ್ವತಶ್ರೇಣಿಯ ಮುಂದುವರಿದ ಭಾಗ. ಅಲ್ಲಿ ಖನಿಜ ನಿಕ್ಷೇಪಗಳುಂಟು. 2. ಉತ್ತರಕ್ಕೆ ಇಳಿಬಂಡೆಗಳಿಂದ ಕೂಡಿದ ಒಸೇಜ್ ನದಿಯ ಇಳುಕಲು ಪ್ರದೇಶವಿದೆ. ಈ ಭಾಗದ ಭೂಮಿ ಫಲವತ್ತಾದ್ದು. 3. ನೀರ್ಗಲ್ಲ ಯುಗದ ನಿಕ್ಷೇಪಗಳಿದ್ದ ಸೂಚನೆಗಳು ಕಂಡುಬರುವ ನುಣುಪುಗಲ್ಲಿನ ಪ್ರದೇಶ ಈಶಾನ್ಯದಲ್ಲಿದೆ. 4. ಈ ಮೂರು ವಿಭಾಗಗಳ ಪಶ್ಚಿಮಕ್ಕೆ ಫ್ಲಿಂಟ್ ಹಿಲ್ಸ್ ಸಾಲುಗಳಿವೆ. ಇದು ಹುಲ್ಲುಗಾವಲುಗಳಿಂದ ಕೂಡಿದ ಪ್ರದೇಶ. ಇಲ್ಲಿ ಸುಣ್ಣಕಲ್ಲು ನಿಕ್ಷೇಪಗಳುಂಟು. 5. ಫ್ಲಿಂಟ್‍ಹಿಲ್ಸ್ ಪಶ್ಚಿಮಕ್ಕೆ ಫಲವತ್ತಾದ ಮೇಲುಭೂಮಿಗಳುಂಟು. 6. ಸ್ಮೋಕಿ ಹಿಲ್ಸ್ ನದಿಯ ಉತ್ತರದಲ್ಲಿರುವ ಭೂಮಿ ಮರಳುಗಲ್ಲುಗಳಿಂದ ಕೂಡಿದ್ದು. 7. ಈ ನದಿಯ ದಕ್ಷಿಣಕ್ಕೆ, ಆರ್ಕನ್ಸಾ ನದಿಯ ಆಪ್ಪುಗೆಗೆ ಒಳಗಾದಂತೆ, ಗ್ರೇಟ್ ಬೆಂಡ್ ಹುಲ್ಲುಗಾವಲುಗಳಿವೆ. 8. ಇದರ ದಕ್ಷಿಣಕ್ಕೆ ಸಿಮರಾನ್ ಬ್ರೇಕ್ಸ್ ಕಣಿವೆಯುಂಟು. ಈ ರಾಜ್ಯದ ನೆಲಪೂರ್ವಕ್ಕೆ ಇಳಿಜಾರಾಗಿದೆ. ಪಶ್ಚಿಮದಲ್ಲಿ ಕಾಲರಾಡೋ ಎಲ್ಲೆಯ ಬಳಿ ಇದರ ಎತ್ತರ ಸಮುದ್ರಮಟ್ಟದಿಂದ 1253 ಮೀ ಪಶ್ಚಿಮದಲ್ಲಿ 212 ಮೀ

ಕ್ಯಾನ್ಸಸ್ ರಾಜ್ಯದ ಮುಖ್ಯ ನದೀವ್ಯವಸ್ಥೆಗಳು ಮೂರು: ಕ್ಯಾನ್ಸಸ್ ಮತ್ತು ಅದರ ಉಪನದಿಗಳಾದ ಸ್ಮೋಕಿಹಿಲ್ಸ್, ಬ್ಲೂ ಮತ್ತು ರಿಪಬ್ಲಿಕನ್‍ಗಳು ರಾಜ್ಯದ ಉತ್ತರಾರ್ಧದಲ್ಲಿ ಹರಿಯುತ್ತವೆ. ಆರ್ಕನ್ಸಾ ಮತ್ತು ಅದರ ಉಪನದಿಗಳು ಹರಿಯುವುದು ರಾಜ್ಯದ ನೈಋತ್ಯ ಭಾಗದಲ್ಲಿ. ಮೆರೇಸ್ ಡೆಸ್ ಸಿಗ್ನೆಸ್, ನಿಯೋಷೋ ಮತ್ತು ವಡಿಗ್ರೀಸ್ ನದಿ ವ್ಯವಸ್ಥೆ ಮೂರನೆಯದು. ಈ ನದಿಗಳು ಆಗ್ನೇಯದಲ್ಲಿ ಹರಿಯುತ್ತವೆ. ಕ್ಯಾನ್ಸಸ್‍ನ ಅನೇಕ ನದಿಗಳ ಅತಿ ಪ್ರವಾಹದಿಂದ ಆಗಾಗ್ಗೆ ಅನಾಹುತ ಆಗುವುದುಂಟು. ನದಿಗಳಿಗೆ ಅನೇಕ ಕಟ್ಟೆಗಳನ್ನು ಕಟ್ಟಿ ಅವುಗಳ ನೀರನ್ನು ಕೃಷಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಪ್ರವಾಹನಿಯಂತ್ರಣವೂ ಸಾಧ್ಯವಾಗಿದೆ. ರಾಜ್ಯದಲ್ಲಿ 100ಕ್ಕೂ ಹೆಚ್ಚು ಕೃತಕ ಸರೋವರಗಳುಂಟು.

**ವಾಯುಗುಣ :** ಖಂಡಾಂತರ ವಾಯುಗುಣದ ಲಕ್ಷಣಗಳು ಇಲ್ಲಿ ಕಂಡುಬರುತ್ತವೆ. ಉಷ್ಣತೆಯಲ್ಲಿ ಅಂತರ ಹೆಚ್ಚು. ಆದರೂ ಚಳಿಗಾಲ ಹೆಚ್ಚು ತೀವ್ರವಾಗಿರುವುದಿಲ್ಲ. ಬೇಸಗೆಯಲ್ಲಿ ಪ್ರೇರಿ ಹುಲ್ಲುಗಾವಲಿನ ಗಾಳಿ ಬೀಸುವುದರಿಂದ ತಂಪಾಗಿರುತ್ತದೆ. ಗರಿಷ್ಠ ಕನಿಷ್ಠ ಉಷ್ಣತೆಗಳು 48.8° ಸೆ. ಮತ್ತು 4.4° ಸೆ. ಸರಾಸರಿ ಮಳೆ 54 ಸೆಂಮೀ.

**ಸಸ್ಯಗಳು, ಪ್ರಾಣಿಗಳು :** ಕ್ಯಾನ್ಸಸ್ ರಾಜ್ಯದ ಬಹುಭಾಗ ಹುಲ್ಲುನೆಲ. ಪೂರ್ವ ಪಶ್ಚಿಮಗಳಲ್ಲಿ ಅನುಕ್ರಮವಾಗಿ ನೀಲಿ ಹುಲ್ಲು ಮತ್ತು ಎಮ್ಮೆ ಹುಲ್ಲು ಬೆಳೆಯುತ್ತಿದ್ದುವು. ಮಧ್ಯದ ನೆಲದಲ್ಲಿ ಈ ಎರಡೂ ಬಗೆಯ ಹುಲ್ಲುಗಳಿದ್ದುವು. ಓಕ್, ಕಾಟನ್‍ವುಡ್,



ಹಿಕರಿ ಮತ್ತು ವಾಲ್ನಟ್ ಮರಗಳು ರಾಜ್ಯದ ಪೂರ್ವಾರ್ಧದಲ್ಲಿ ನದಿಗಳ ದಂಡೆಗಳ ಮೇಲೆ ಬೆಳೆಯುತ್ತಿದ್ದುವು. ವಲಸೆಗಾರರು ಅವನ್ನೆಲ್ಲ ಬಹುತೇಕ ಕಡಿದಿದ್ದಾರೆ. ಈಚೆಗೆ ಅಲ್ಲಿ ಅನೇಕ ಕಾಡುಗಳನ್ನು ಬೆಳೆಸಲಾಗಿದೆ.

ಕ್ಯಾನ್ಸಸಿನಲ್ಲಿ ಕಾಡೆಮ್ಮೆ, ಜಿಂಕೆ, ಹುಲ್ಲೆ, ಎಲ್ಕ್, ಕೂಯೋಟ್ ಮುಂತಾದ ಪ್ರಾಣಿಗಳು ಹೇರಳವಾಗಿದ್ದುವು. 19ನೆಯ ಶತಮಾನದ ಕೊನೆಯಲ್ಲಿ ಕಾಡೆಮ್ಮೆಗಳ ಬೇಟೆಗೆ ಇದು ಪ್ರಸಿದ್ಧವಾಗಿ. ವನ್ಯಮೃಗಗಳ ಸಂಖ್ಯೆ ಈಗ ಕಡಿಮೆಯಾಗಿದೆ. ಟರ್ಕಿಕೋಳಿ, ಮೆಡೊ ಲಾರ್ಕ್, ಕವುಜುಗ ಮೊದಲಾದ ಪಕ್ಷಿಗಳು ಈ ರಾಜ್ಯದಲ್ಲಿವೆ. ಬೇಟೆಯಿಂದ ಅರಣ್ಯದ ಪ್ರಾಣಿಗಳು ನಾಶವಾಗದಂತೆ ಅವುಗಳಿಗಾಗಿ ಈಚೆಗೆ ಮೀಸಲು ಅರಣ್ಯಗಳನ್ನು ಏರ್ಪಡಿಸಲಾಗಿದೆ.

**ಆರ್ಥಿಕತೆ :** ಕ್ಯಾನ್ಸಸ್ ರಾಜ್ಯದಲ್ಲಿ ಶೇ. 1/3ರಷ್ಟು ಜನ ಕೃಷಿ ಮತ್ತು ಪಶುಪಾಲನೆ ಅವಲಂಬಿಸಿದ್ದಾರೆ. ಗೋದಿ ಹೆಚ್ಚಾಗಿ ಬೆಳೆಯುವುದರಿಂದ ರಾಜ್ಯವನ್ನು 'ಪ್ರಪಂಚದ ರೊಟ್ಟಿಯ ಬುಟ್ಟಿ' ಎಂದು ಕರೆಯುತ್ತಾರೆ. ಇಡೀ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಬೆಳೆಯುವ ಗೋದಿಯಲ್ಲಿ ಶೇ. 1/5 ಭಾಗ ಇಲ್ಲಿ ಬೆಳೆಯುತ್ತದೆ. ಫ್ಲಾಕ್ಸ್, ಸೋಯಬೀನ್ಸ್, ಓಟ್ಸ್, ಬಾರ್ಲಿ ಕುದುರೆಮಸಾಲೆ ಸೊಪ್ಪು, ಆಲೂಗೆಡ್ಡೆ, ಸಕ್ಕರೆ ಬೀಟ್, ಸೇಬು ಮುಂತಾದವು ಬೆಳೆಯುತ್ತದೆ. ಕೋಳಿ ಮತ್ತು ಜಾನುವಾರುಗಳ ಸಾಕಣೆ ಹಾಗೂ ಹೈನುಗಾರಿಕೆ ಹೆಚ್ಚಾಗಿ ನಡೆಯುತ್ತದೆ.



ಪಶುಪಾಲನೆ ಕ್ಯಾನ್ಸಸಿನಲ್ಲಿ ಒಂದು ಮುಖ್ಯ ಉದ್ಯಮ

ಕ್ಯಾನ್ಸಸ್ ರಾಜ್ಯದ ಹುಲ್ಲುಗಾವಲುಗಳಲ್ಲಿ ಪಶುಪಾಲನೆಗೆ ಯಥೇಚ್ಛವಾದ ಅವಕಾಶವುಂಟು. ಫ್ಲಿಂಟ್ ಹಿಲ್ಸ್ ಮೊದಲಾದ ಪ್ರದೇಶಗಳಲ್ಲಿ ಪಶುಪಾಲನೆಯ ಉದ್ಯಮ ಪ್ರಾರಂಭವಾಯಿತು. ರೈಲುಮಾರ್ಗಗಳನ್ನು ಹಾಕಿದ ಮೇಲೆ ಈ ಉದ್ಯಮಕ್ಕೆ ಮತ್ತಷ್ಟು ಅನುಕೂಲವಾಯಿತು. ರೈಲುಮಾರ್ಗಗಳ ಅಂಚಿನಲ್ಲಿ ಅನೇಕ ಪಶುಸಂಗೋಪನ ನಗರಗಳು ಸ್ಥಾಪಿತವಾದುವು. ಬ್ಯಾಕ್‌ಸ್ವರ್, ಸ್ಪ್ರಿಂಗ್ಸ್, ಚೆಟೋಪ, ಅಬಿಲೀನ್, ಎಲಿಸ್‌ವರ್ತ್, ವಿಚಿಟಾ, ನ್ಯೂಟನ್, ಡಾಜ್ ಮೊದಲಾದವು ಪಶುಸಂಗೋಪನ ಕೇಂದ್ರಗಳು. ಕ್ಯಾನ್ಸಸ್ ರಾಜ್ಯಕ್ಕೆ ಗೋದಿ ಬೆಳೆಯಷ್ಟೇ ಪಶುಪಾಲನೆಯಿಂದಲೂ ಲಾಭವಿದೆ.

1940ರಿಂದ ಕೈಗಾರಿಕೆಯಲ್ಲಿ ಈ ರಾಜ್ಯ ತ್ವರಿತ ಪ್ರಗತಿ ಸಾಧಿಸಿದೆ. ಕೃತಕ ದಾರದ ತಯಾರಿಕೆಯಿಂದ ಹಿಡಿದು ವಿಮಾನ ತಯಾರಿಕೆಯವರೆಗೆ ಎಲ್ಲ ಬಗೆಯ ಕೈಗಾರಿಕೆಗಳೂ ಉಂಟು. ಯಂತ್ರ, ರಾಸಾಯನಿಕ ಗೊಬ್ಬರ ಮತ್ತು ಮೋಟಾರು ವಾಹನಗಳ ತಯಾರಿಕೆಯ ಕಾರ್ಖಾನೆಗಳು ದೊಡ್ಡ ಕೈಗಾರಿಕೆಗಳು. ಮಾಂಸವನ್ನು ಡಬ್ಬಗಳಲ್ಲಿ ತುಂಬಿ ಇಲ್ಲಿಂದ ರಫ್ತು ಮಾಡುತ್ತಾರೆ. ಹಿಟ್ಟಿನ ಗಿರಣಿಗಳೂ ಹೆಚ್ಚಾಗಿವೆ.

ಈ ರಾಜ್ಯದ ಪ್ರಮುಖ ಖನಿಜ ಪೆಟ್ರೋಲಿಯಂ. ಇಪ್ಪತ್ತನೆಯ ಶತಮಾನದ ಪ್ರಥಮಾರ್ಧದಲ್ಲಿ ಇಲ್ಲಿಯ ಪೆಟ್ರೋಲಿಯಂ ಉತ್ಪನ್ನ 12,40,00,000 ಬ್ಯಾರೆಲ್‌ಗಳು. ಈ ರಾಜ್ಯದಲ್ಲಿ ಅನೇಕ ತೈಲಪರಿಷ್ಕರಣ ಕೇಂದ್ರಗಳಿವೆ. ಪೆಟ್ರೋಲ್ ಮತ್ತು ಅನಿಲವನ್ನು ಸಾಗಿಸಲು 38625 ಕಿಮೀಗಳಷ್ಟು ಉದ್ದದ ಕೊಳವೆಗಳನ್ನು ಹಾಕಿದ್ದಾರೆ. ಲವಣ, ಶಿಲೆ, ಕಲ್ಲಿದ್ದಲು-ಇವು ಈ ರಾಜ್ಯದ ಇತರ ಖನಿಜಗಳು.

ಕ್ಯಾನ್ಸಸ್ ರಾಜ್ಯದಲ್ಲಿ 200000 ಕಿಮೀಗಳ ಫೆಡರಲ್, ರಾಜ್ಯ ಹಾಗೂ 'ಕೌಂಟಿ' ರಸ್ತೆಗಳುಂಟು. 12800 ಕಿಮೀ ದೂರದ ರೈಲುಮಾರ್ಗಗಳಿವೆ. ವಾಣಿಜ್ಯ ವಿಮಾನ ಸಂಚಾರ ಬಹುಮಟ್ಟಿಗೆ ಖಾಸಗಿ ಮಾಲೀಕತ್ವದಲ್ಲಿದೆ. ಕ್ಯಾನ್ಸಸ್ ನಗರ, ಲೆವೆನ್‌ವರ್ತ್ ಮತ್ತು ಆಚಿಸನ್ ನಗರಗಳಿಗೆ ಮಿಸೂರಿ ನದಿಯ ಮೂಲಕ ಹಡಗು ಸಂಚಾರವಿದೆ.

ರಾಜ್ಯದ ಅತ್ಯಂತ ದೊಡ್ಡ ನಗರ ವಿಚಿಟಾ. ಇದರ ಜನಸಂಖ್ಯೆ 354865 (2005). ಕ್ಯಾನ್ಸಸ್ ನಗರ 1967405 (2005) ಮತ್ತೊಂದು ದೊಡ್ಡ ನಗರ.

**ಆಡಳಿತ :** ಜನವರಿ 29, 1861ರಲ್ಲಿ ಜಾರಿಗೆ ಬಂದ ಮೂಲ ರಾಜ್ಯಸಂವಿಧಾನ ಕ್ಯಾನ್ಸಸ್ ರಾಜ್ಯಕ್ಕೆ ಅನ್ವಯವಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಇತರ ರಾಜ್ಯಗಳಲ್ಲಿರುವಂಥದೇ ಇಲ್ಲಿಯ ಆಡಳಿತ ವ್ಯವಸ್ಥೆ ಕೂಡ. 7 ಮಂದಿ ನ್ಯಾಯಾಧೀಶರಿಂದ ಕೂಡಿದ ಪರಮೋಚ್ಚ ನ್ಯಾಯಾಲಯವೂ 51 ಮಂದಿ ನ್ಯಾಯಾಧೀಶರಿಂದ ಕೂಡಿದ 38 ಜಿಲ್ಲಾ ನ್ಯಾಯಾಲಯಗಳೂ ಇವೆ.



ಟೋಪೀಕದಲ್ಲಿರುವ ರಾಜ್ಯ ಕಾಂಗ್ರೆಸ್ ಸಭಾ ಭವನ

**ಶಿಕ್ಷಣ :** ರಾಜ್ಯದ ಶಿಕ್ಷಣ ಉನ್ನತಮಟ್ಟದ್ದು, ಅನಕ್ಷರಸ್ಥರು ಕಡಿಮೆ. ಸರ್ಕಾರಿ ಉಚಿತ ಶಾಲೆಗಳು ಬಹುಸಂಖ್ಯೆಯಲ್ಲಿ ಏರ್ಪಟ್ಟಿವೆ. ಅನೇಕ ಖಾಸಗಿ ಶಾಲೆಗಳೂ ಇವೆ. ಉಚ್ಚ ಶಿಕ್ಷಣಕ್ಕೆ ರಾಜ್ಯದ ನೆರವುಂಟು. ಕ್ಯಾನ್ಸಸ್ ವಿಶ್ವವಿದ್ಯಾಲಯ (1865) ಇರುವುದು ಲಾರೆನ್ಸ್‌ನಲ್ಲಿ. ಕ್ಯಾನ್ಸಸ್ ರಾಜ್ಯದ ಈಶಾನ್ಯದಲ್ಲಿರುವ ಮ್ಯಾನ್‌ಹಟನ್ ನಗರದಲ್ಲಿ ಕ್ಯಾನ್ಸಸ್ ರಾಜ್ಯ ಕೃಷಿ ವಿಶ್ವವಿದ್ಯಾಲಯವಿದೆ.

**ಸಮಾಜಕಲ್ಯಾಣ :** ರಾಜ್ಯದ ಸಮಾಜಕಲ್ಯಾಣ ಮಂಡಲಿ ರಾಜ್ಯದ ಧರ್ಮ ಸಂಸ್ಥೆಗಳ ಮೇಲ್ವಿಚಾರಣೆ ನಡೆಸುತ್ತದೆ. ರಾಜಧಾನಿ ಟೋಪೀಕದಲ್ಲಿ ಮಾನಸಿಕ ರೋಗಗಳಿಗೆ ಸಂಬಂಧಪಟ್ಟ ಆಸ್ಪತ್ರೆಯುಂಟು. ವಿನ್‌ಫೀಲ್ಡ್ ನಗರದಲ್ಲಿ ಮಾನಸಿಕ ಅಸ್ವಸ್ಥರಿಗೆ ಧರ್ಮಾರ್ಥ ವೈದ್ಯಶಾಲೆಯೂ ನಾರ್ಟನ್ ನಗರದಲ್ಲಿ ಕ್ಷಯರೋಗದ ಆಸ್ಪತ್ರೆಯೂ ಆಚಿಸನ್ ನಗರದಲ್ಲಿ ಅನಾಥಾಲಯವೂ ಫೋರ್ಟ್ ಡಾಜ್ ಪಟ್ಟಣದಲ್ಲಿ ಸೈನಿಕರ ರಕ್ಷಣಾಗೃಹವೂ ಒಲೆತಿ ನಗರದಲ್ಲಿ. ಕಿವುಡರ ಶಾಲೆಯೂ ಇವೆ. ಬೆಲೋಯಿಟ್ ನಗರದಲ್ಲಿ ಬಾಲಕಿಯರಿಗೂ ಟೋಪೀಕದಲ್ಲಿ ಬಾಲಕರಿಗೂ ವೃತ್ತಿ ಶಿಕ್ಷಣ ಶಾಲೆಗಳುಂಟು. ರಾಜ್ಯದ ಬಂದೀಖಾನೆ ಇರುವುದು ಲಾನ್ ಸಿಂಗ್ ನಗರದಲ್ಲಿ. ತಪ್ಪಿತಸ್ಥರ ಸುಧಾರಣಾ ಗೃಹ ಹಚಿನ್‌ಸನ್ ನಗರದಲ್ಲಿದೆ. ವೃದ್ಧರು, ಅಂಧರು, ಅಂಗವಿಕಲರು ಮತ್ತು ಅನಾಥ ಮಕ್ಕಳ ರಕ್ಷಣೆಗೆ ಕೇಂದ್ರ ಸರ್ಕಾರ ನೆರವು ನೀಡುತ್ತದೆ. ಇಡೀ ರಾಜ್ಯದಲ್ಲಿ ಸು.300 ವಾರಪತ್ರಿಕೆಗಳೂ 50 ದಿನಪತ್ರಿಕೆಗಳೂ ಪ್ರಕಟವಾಗುತ್ತವೆ. ದಿನಪತ್ರಿಕೆಗಳ ಪೈಕಿ 'ಎಂಪೋರಿಯ ಗೆಜೆಟ್' ಪ್ರಸಿದ್ಧವಾದ್ದು. (ವಿ.ಜಿ.ಕೆ; ಸಿ.ಎಂ.)

**ಕ್ಯಾನ್ಸಸ್‌ನ ಇತಿಹಾಸ :** 'ಕಾ' ಇಂಡಿಯನರು ಕ್ಯಾನ್ಸಸ್ ಭಾಗದ ಆದಿವಾಸಿಗಳು. ಅವರ ಜೀವನವನ್ನು ಕುರಿತ ವಿಷಯವನ್ನು ಬಿಟ್ಟರೆ ಕ್ಯಾನ್ಸಸ್ ರಾಜ್ಯದ ಬಗ್ಗೆ ಐತಿಹಾಸಿಕ ಮಾಹಿತಿಗಳು ನಮಗೆ ದೊರಕುವುದು ಪ್ರ.ಶ.1541ರಲ್ಲಿ-ಸ್ಪೇನಿನ ದಳಪತಿ ಫ್ರಾನ್ಸಿಸ್ಕೊ ಡ ಕೊರೊನಾಡೊ ಎಂಬುವನು ಕ್ವಿವಿರಾ ಎಂಬ ಕಾಲ್ಪನಿಕ ರಾಜ್ಯದ ಸಿರಿಯನ್ನು ಕಂಡುಹಿಡಿಯುವ ಉದ್ದೇಶದಿಂದ ತನ್ನ ಸೈನ್ಯವನ್ನು ಮೆಕ್ಸಿಕೋ ದೇಶದ ಮುಖಾಂತರ ಕೊಂಡೊಯ್ದಾಗ. ತರುವಾಯ ಫ್ರೆಂಚರು 1719-25ರ ನಡುವೆ ಈ ಪ್ರದೇಶವನ್ನು ಪ್ರವೇಶಿಸಿದರೂ 1803ರ ತನಕ ಅದು ಇಂಡಿಯನರ ವಶದಲ್ಲಿತ್ತು. ಆ ವರ್ಷ ಅಮೆರಿಕ

ಸಂಯುಕ್ತಸಂಸ್ಥಾನ ಸರ್ಕಾರ ಪ.ರೇ.100° ಗಳ ಪಶ್ಚಿಮಕ್ಕೆ ಹಾಗೂ ಆರ್ಕನ್ಸಾ ನದಿಯ ದಕ್ಷಿಣಕ್ಕೆ ಇರುವ ಪ್ರದೇಶಗಳನ್ನು ಬಿಟ್ಟು, ಉಳಿದ ಭಾಗಗಳನ್ನು ಲೂಸಿಯಾನ ಪರ್ಚೇಸ್ ವಹಿವಾಟಿಗೆ ಸೇರಿದಂತೆ ಕೊಂಡುಕೊಂಡಿತು. 1803ರಿಂದ 1820ರ ನಡುವಣ ಅವಧಿಯಲ್ಲಿ ಕ್ಯಾನ್ಸಸ್ ಪ್ರದೇಶವನ್ನು ಭೌಗೋಳಿಕವಾಗಿ ಶೋಧಿಸಲಾಯಿತು. 1804ರಲ್ಲಿ ಲೂಯಿಸ್ ಮತ್ತು ಕ್ಲಾರ್ಕ್ ಎಂಬ ಇಬ್ಬರು ಪರಿಶೋಧಕರು ಪೆಸಿಫಿಕ್ ತೀರಕ್ಕೆ ಪ್ರಯಾಣ ಮಾಡುವಾಗ ಕ್ಯಾನ್ಸಸ್ ರಾಜ್ಯದ ಈಶಾನ್ಯ ಭಾಗವನ್ನು ಮುಟ್ಟಿದರು. 1806ರಲ್ಲಿ ಜ಼ೆಬುಲಾನ್ ಎಂ.ಪೈಕ್ ನೈರುತ್ಯಾಭಿಮುಖವಾಗಿ ಪ್ರಯಾಣ ಮಾಡುತ್ತಿದ್ದಾಗ ಈ ರಾಜ್ಯದ ಮೂಲಕ ಸಂಚರಿಸಿದ. 1819ರಲ್ಲಿ ಮೇಜರ್ ಸ್ಟೀಫನ್ ಎಚ್.ಲಾಂಗ್ ಈ ಪ್ರದೇಶದಲ್ಲಿ ತನ್ನ ವೈಜ್ಞಾನಿಕ ತಂಡದೊಡನೆ ಸಂಚರಿಸಿ ಅದು ಮರಳ್ಗಾಡು ಪ್ರದೇಶವೆಂದು ವರದಿಮಾಡಿದ. ಆದರೆ, ಪಶ್ಚಿಮಕ್ಕೆ ಹೋಗುವ ಮುಖ್ಯಮಾರ್ಗ ಕ್ಯಾನ್ಸಸ್ ಮೂಲಕ ಹೋಗುವುದಾಗಿತ್ತು; 1821ರಲ್ಲಿ ವಿಲಿಯಂ ಬೆಕ್ನೆಲ್ ಕ್ಯಾನ್ಸಸ್ ಪ್ರಾಂತ್ಯದ ಮೂಲಕ ಫ್ರಾಂಕ್ಲಿನ್ ಮತ್ತು ಸಾಂಟ ಫಿ ನಗರಗಳ ನಡುವಣ ಲಾಭದಾಯಕ ವ್ಯಾಪಾರ ನಡೆಸುತ್ತಿದ್ದ. ಚಿನ್ನ ಹುಡುಕಲು ಹೊರಟವರು ಮತ್ತು ತುಪ್ಪಳು ವ್ಯಾಪಾರಿಗಳು ಹೊಸ ಮಾರ್ಗಗಳನ್ನು ಕಂಡುಹಿಡಿದರು. ಕ್ಯಾನ್ಸಸ್ ಪ್ರದೇಶ ಮರುಭೂಮಿ ಎಂಬ ಕಲ್ಪನೆಯನ್ನು ದೂರಮಾಡಲು ಈ ಎಲ್ಲ ಘಟನೆಗಳೂ ಕಾರಣವಾದುವು.

1854ರಲ್ಲಿ ಪ್ರಾದೇಶಿಕ ಸ್ಥಾನಮಾನಗಳು ದೊರಕುವ ತನಕ ಈ ಪ್ರದೇಶ ಇಂಡಿಯನರ ವಶದಲ್ಲೇ ಇತ್ತು. ಪುರಾತತ್ತ್ವಜ್ಞರು ಈ ಭಾಗದ ಪ್ರಾಚೀನ ಇಂಡಿಯನ್ ಸಂಸ್ಕೃತಿಯನ್ನು ಕಂಡುಹಿಡಿದಿದ್ದಾರೆ. ರಿಪಬ್ಲಿಕನ್ ನದಿಯ ಉತ್ತರ ಭಾಗ ಹಾಗೂ ಬ್ಲೂ ನದಿಯ ಬಯಲಿನಲ್ಲಿ ವ್ಯವಸಾಯಪ್ರಧಾನವಾದ ನಾಗರಿಕತೆ ಇತ್ತು. ಬಿಳಿಯರು ಅಲ್ಲಿಗೆ ಕಾಲಿಟ್ಟಾಗ ಕ್ಯಾನ್ಸಸ್, ಒಸೇಜ್, ವಿಚಿಟಾ, ಪಾನೀ ಮತ್ತು ಪ್ಯೂಬ್ಲೊ ಬುಡಕಟ್ಟು ಜನ ಅಲ್ಲಿ ವಾಸಿಸುತ್ತಿದ್ದರು. ಕಿಯೊವ, ಕೊಮಾಂಚೆ, ಅರಪೊ, ಷೈಯೆನ್ ಮತ್ತು ಅಪಾಚೆ ಬೇಟೆಯ ಬಣಗಳು ಕ್ಯಾನ್ಸಸ್ ರಾಜ್ಯದಲ್ಲಿ ಅಲೆದಾಡುತ್ತಿದ್ದುವು. 1830ರಲ್ಲಿ ಇಂಡಿಯನ್ ಬಣಗಳ ಬೇರ್ಪಡಿಕೆಯ ಅಧಿನಿಯಮ ಜಾರಿಗೆ ಬಂದ ಮೇಲೆ ಫೆಡರಲ್ ಸರ್ಕಾರ ಅನೇಕ ಆದಿವಾಸಿ ಇಂಡಿಯನ್ ಬಣಗಳಿಗಾಗಿ ಕ್ಯಾನ್ಸಸ್ ರಾಜ್ಯದ ಕಾಲಭಾಗದಷ್ಟು ಭೂಮಿಯನ್ನು ಮೀಸಲಿಟ್ಟಿತ್ತು. ಹೋಲ್ಟನ್ ಬಳಿಯ ಪೊಟವಾಟೊಮಿ ಎಂಬುದು ಇಂಡಿಯನರು ವಾಸಮಾಡುವ ಅತಿ ದೊಡ್ಡ ಮೀಸಲು ಸ್ಥಳ. ಈಗ ಕ್ಯಾನ್ಸಸ್ ರಾಜ್ಯದಲ್ಲಿ ಬಹು ಮಂದಿ ಇಂಡಿಯನರು ವಾಸವಾಗಿಲ್ಲದಿದ್ದರೂ ಅನೇಕ ಸ್ಥಳಗಳಿಗೆ ಅವರ ಭಾಷೆಯ ಹೆಸರುಗಳೇ ಇವೆ. ಕ್ಯಾನ್ಸಸ್ ಪ್ರದೇಶಕ್ಕೆ ಬಂದು ನೆಲಸಿದ ಬಿಳಿಯರು 1827ರಲ್ಲಿ ಲೆವೆನ್‌ವರ್ತ್ ಕೋಟೆಯನ್ನೂ, 1842ರಲ್ಲಿ ಸ್ಕಾಟ್ ಕೋಟೆಯನ್ನೂ, 1853ರಲ್ಲಿ ರಿಲೆ ಕೋಟೆಯನ್ನೂ, 1845 ಮತ್ತು 1854ರ ನಡುವೆ ಮಾನ್, ಮೆಕೋಯ್ ಮತ್ತು ಆಟ್ಕಿನ್‌ಸನ್ ಕೋಟೆಗಳನ್ನೂ ಕಟ್ಟಿಕೊಂಡರು. ಕ್ರೈಸ್ತಪಂಥಗಳ ಅನೇಕ ಮತಪ್ರಚಾರಕರು 1837ರ ಹೊತ್ತಿಗೆ ಮತಪ್ರಚಾರ ಮಾಡುತ್ತಿದ್ದರು.

**ಗುಲಾಮ ಪದ್ಧತಿಯ ವಿರುದ್ಧ ಹೋರಾಟ :** 1852ರ ಹೊತ್ತಿಗೆ ವ್ಯವಸ್ಥಿತ ರಾಜ್ಯದ ನಿರ್ಮಾಣಕ್ಕಾಗಿ ಚಳವಳಿ ಪ್ರಾರಂಭವಾಯಿತು. ಕ್ಯಾನ್ಸಸ್–ನೆಬ್ರಾಸ್ಕ ವಿಧೇಯಕದ ಮೇರೆಗೆ ಕ್ಯಾನ್ಸಸ್ ದಾಸ್ಯಪದ್ಧತಿಯಿಂದ ಕೂಡಿದ ರಾಜ್ಯವಾಗಿರಬೇಕೇ ಎಂಬುದನ್ನು ನಿರ್ಧರಿಸಬೇಕಾಯಿತು. ಈ ವಿಧೇಯಕ 1857ರಲ್ಲಿ ಅಧಿನಿಯಮವಾಗಿ ಜಾರಿಗೆ ಬಂದಿತು. ಕ್ಯಾನ್ಸಸ್ ಮತ್ತು ನೆಬ್ರಾಸ್ಕಗಳಲ್ಲಿ ದಾಸ್ಯರಾಜ್ಯವನ್ನು ಸ್ಥಾಪಿಸಲು ನಾಲ್ಕು ವರ್ಷಗಳ ಕಾಲ ಘರ್ಷಣೆಗಳು ನಡೆದು ರಕ್ತಪಾತವಾಯಿತು. ಬಿಳಿಯ ಜನ ಪಶ್ಚಿಮ ಮತ್ತು ದಕ್ಷಿಣ ಕ್ಯಾನ್ಸಸ್ ಭಾಗಗಳನ್ನು ಆಕ್ರಮಿಸಿಕೊಂಡು ಇಂಡಿಯನರ ಮೀಸಲು ಸ್ಥಳಗಳನ್ನು ನಾಶಮಾಡಿದಾಗ ಇಂಡಿಯನರು ಚದರಿಹೋದರು. 1855ರ ಚುನಾವಣೆಗಳಲ್ಲಿ ಮಿಸೂರಿಯ ದಾಸ್ಯವಾದಿಗಳು ಮತದಾನ ಮಾಡಲು ಕ್ಯಾನ್ಸಸ್ ರಾಜ್ಯವನ್ನು ಪ್ರವೇಶಿಸಿದರು. ಫೆಡರಲ್ ಸರ್ಕಾರ ಕೂಡ ದಾಸ್ಯಪದ್ಧತಿಗೆ ಉತ್ತೇಜನ ಕೊಡುವಂತೆ ತೋರಿತು. ಕೊನೆಗೆ ಸ್ವಾತಂತ್ರ್ಯ ವಾದಿಯಾದ ರಾಬಿನ್‌ಸನ್ ದಾಸ್ಯರಹಿತ ರಾಜ್ಯವನ್ನು ಸ್ಥಾಪಿಸಲು ಲಾರೆನ್ಸ್ ನಗರವಾಸಿಗಳೊಡನೆ ಮುಂದೆ ಬಂದ. ಸ್ವಾತಂತ್ರ್ಯವಾದಿಗಳ ನೆರವಿಗಾಗಿ ಜೇಮ್ಸ್ ಎಚ್ ಲೇನ್ ಸೈನ್ಯವನ್ನು ಜಮಾಯಿಸಿದ. ದಾಸ್ಯವಾದಿಗಳ ಸೈನ್ಯ ಸಾಮ್ಯುಯೆಲ್ ಜೆ.ಜೋನ್ಸ್‌ನ ನಾಯಕತ್ವದಲ್ಲಿ ಲಾರೆನ್ಸ್ ನಗರದ ಮೇಲೆ ಧಾಳಿಮಾಡಿ ಭೀಕರ ಹೋರಾಟ ನಡೆಸಿತು. ಈ ಯುದ್ಧ ವಿಷಮಘಟ್ಟವನ್ನು ಮುಟ್ಟಿದರೂ ವಾಷಿಂಗ್‌ಟನ್ ಅಧಿಕಾರಿಗಳು ಸಮಸ್ಯೆಯ ಬಗ್ಗೆ ಆಸಕ್ತಿ ವಹಿಸಲಿಲ್ಲ. ಕೊನೆಗೆ ಪೊಟವಾಟೊಮಿ ಇಂಡಿಯನ್ ಬಣದ ಹತ್ಯಾಕಾಂಡದ ತರುವಾಯ, 1856ರಲ್ಲಿ ಕ್ಯಾನ್ಸಸ್ ಪ್ರಾಂತ್ಯದ ಗವರ್ನರ್ ಜಾನ್ ಗಿಯರಿ ಕೇಂದ್ರದ ಈ ಸೈನ್ಯದ ನೆರವನ್ನು ಪಡೆದು ಪರಿಸ್ಥಿತಿಯನ್ನು ಹದಕ್ಕೆ ತಂದ. ದಾಸ್ಯವಾದಿಗಳು ತಮ್ಮ ಅಕ್ರಮಗಳಿಂದಲೇ ಸೋತರು. ಇಷ್ಟಾದರೂ ಲಿಕಾಂಪ್ಟನ್ ನಗರದಲ್ಲಿ 1857ರಲ್ಲಿ ರಚಿತವಾದ ಸಂವಿಧಾನವನ್ನು ಕ್ಯಾನ್ಸಸ್ ಸ್ವತಂತ್ರ ವಿಧಾನಮಂಡಲ ರದ್ದುಗೊಳಿಸಲಾಗಲಿಲ್ಲ. ಕ್ಯಾನ್ಸಸ್ ಪ್ರಾಂತ್ಯಕ್ಕೆ ರಾಜ್ಯದ ಸ್ಥಾನಮಾನಗಳನ್ನು ಕೊಡಲು ಕಾಂಗ್ರೆಸ್ ನಿಧಾನಿಸಿತು. ವಿಲಿಯಂ ಹೇಡನ್ ಇಂಗ್ಲಿಷ್ ಎಂಬಾತ ಮಂಡಿಸಿದ ವಿಧೇಯಕದ ಮೇರೆಗೆ ದಾಸ್ಯವಾದಿಗಳ ಲಿಕಾಂಪ್ಟನ್ ಸಂವಿಧಾನವನ್ನು ಸ್ವೀಕರಿಸಿ ಹೊಸರಾಜ್ಯ ಸ್ಥಾಪನೆ ಮಾಡಬೇಕಾಗಿತ್ತು. ಆದರೆ ಈ ವಿಧೇಯಕವನ್ನು ಆಗಸ್ಟ್ 21, 1858ರಲ್ಲಿ ಕ್ಯಾನ್ಸಸ್ ಶಾಸನಸಭೆ ಬಹುಮತದಿಂದ ತಿರಸ್ಕರಿಸಿತು. ದಾಸ್ಯವಾದಿಗಳು ತಮಗುಂಟಾದ ಸೋಲಿನಿಂದಾಗಿ ಕ್ಯಾನ್ಸಸ್ ರಾಜ್ಯವನ್ನು ಕ್ರಮಕ್ರಮವಾಗಿ ಬಿಟ್ಟುಹೋದರು. ದಾಸ್ಯ ಸಮಸ್ಯೆ ಕ್ಯಾನ್ಸಸ್ ರಾಜ್ಯದಿಂದ ದೇಶದ ಇತರ ಭಾಗಗಳಿಗೂ ಹರಡಿತು. ಅದೇ ರಾಷ್ಟ್ರದ ಬಹು ಮುಖ್ಯ ಸಮಸ್ಯೆಯಾಯಿತು. ವಿಯಾನ್ ಡಾಟ್ ಸಂವಿಧಾನದಲ್ಲಿ ಕ್ಯಾನ್ಸಸ್ ರಾಜ್ಯಕ್ಕೆ ಜನವರಿ 29, 1861ರಲ್ಲಿ ರಾಜ್ಯದ ಸ್ಥಾನಮಾನಗಳನ್ನು ಕೊಡಲಾಯಿತು.

**ಅಮೆರಿಕ ಅಂತರ್ಯುದ್ಧ :** 1860ರಲ್ಲಿ ಕ್ಯಾನ್ಸಸ್ ಕ್ಷಾಮಕ್ಕೆ ಒಳಗಾಯಿತು. 1861ರಲ್ಲಿ ಅದಕ್ಕೆ ಸ್ವತಂತ್ರ ರಾಜ್ಯದ ಸ್ಥಾನಮಾನಗಳು ದೊರೆತ ಮೇಲೆ, ಅಮೆರಿಕದ ಅಂತರ್ಯುದ್ಧ ಕಾಲದಲ್ಲಿ(1861–65) ಫೆಡರಲ್ ಸರ್ಕಾರದ ನೆರವಿಗೆ 30,000 ಸೈನಿಕರನ್ನು ಕಳುಹಿಸಬೇಕಾಯಿತು. ಇಂಡಿಯನ್ ಜನರ ಮತ್ತು ಸಂಚುಗಾರರ ದಾಳಿಗಳಿಂದ ಗಡಿಗಳನ್ನು ರಕ್ಷಿಸುವ ಉದ್ದೇಶದಿಂದ ಅಲ್ಲಿ ಸೈನ್ಯದ ಒಂದು ಭಾಗವನ್ನು ಇಡಲಾಯಿತು. ಸೈನ್ಯದ ಬಹುಭಾಗ ರಾಜ್ಯದ ಹೊರಗೆ ಸೇವೆ ಸಲ್ಲಿಸಿತು. ಯುದ್ಧದಲ್ಲಿ ವಿಲಿಯಂ ಸಿ.ಕ್ವಾಂಟ್ರಿಲ್ ಎಂಬಾತ ಲಾರೆನ್ಸ್ ನಗರದ ಮೇಲೆ ನಡೆಸಿದ ಧಾಳಿಯಿಂದ ಕ್ಯಾನ್ಸಸ್ ರಾಜ್ಯಕ್ಕೆ ಭಾರಿ ನಷ್ಟ ಉಂಟಾಯಿತು. ಈ ಯುದ್ಧಕಾಲದಲ್ಲಿ ಕ್ಯಾನ್ಸಸ್ ರಾಜ್ಯದಲ್ಲಿ ನಡೆದ ಭಾರಿ ಕದನ ಮೇನ್ ಕ್ರೀಕ್ ಕದನ (1864). ಯುದ್ಧದಲ್ಲಿ ಸಂಚುಕೂಟದ ಜನರಲ್ ಸ್ಟರ್ಲಿಂಗ್ ಪ್ರೈಸ್ ಪರಾಜಿತನಾಗಿ, ಪಶ್ಚಿಮದಲ್ಲಿ ಸಂಚುಗಾರರ ನಿಯಂತ್ರಣ ಕೊನೆಗೊಂಡಿತು. ಅಂತರ್ಯುದ್ಧದ ತರುವಾಯ 1868ರಲ್ಲಿ ಕ್ಯಾನ್ಸಸ್ ಆದಿವಾಸಿ ಬಣಗಳನ್ನು ಇಂಡಿಯನ್ ಜನರಿಗೆ ಮೀಸಲಾದ ಪ್ರಾಂತ್ಯಕ್ಕೆ ತ್ವರಿತವಾಗಿ ಸಾಗಿಸಿದರೂ 1870ರ ತನಕ ಈ ರಾಜ್ಯಕ್ಕೆ ಇಂಡಿಯನರಿಂದ ದಾಳಿಗಳು ತಪ್ಪಲಿಲ್ಲ.

**ರಾಜಕೀಯ ಇತಿಹಾಸ :** ರಾಜ್ಯ ಮತ್ತು ರಾಷ್ಟ್ರ ಹಂತಗಳೆರಡರಲ್ಲೂ ಕ್ಯಾನ್ಸಸ್ ಇತಿಹಾಸ ಮೂಲತಃ ಗಣರಾಜ್ಯದ ಇತಿಹಾಸವಾಗಿದೆ. ದಾಸ್ಯವನ್ನು ತೊಡೆದುಹಾಕಿ ಕ್ಯಾನ್ಸಸ್ ರಾಜ್ಯವನ್ನು ಸ್ವತಂತ್ರ ನಾಗರಿಕ ರಾಜ್ಯವನ್ನಾಗಿ ಮಾಡಲು ಬಹುಮಂದಿ ಏಬ್ರಹಾಂ ಲಿಂಕನ್ ಪಕ್ಷವನ್ನು ಸೇರಿದರು. ಅಮೆರಿಕನ್ ಅಂತರ್ಯುದ್ಧ ಕೊನೆಗೊಂಡ ಮೇಲೆ ಫೆಡರಲ್ ಸರ್ಕಾರದ ನುರಿತ ರಾಜಕಾರಣಿಗಳು ಈ ರಾಜ್ಯಕ್ಕೆ ಬಂದು ನೆಲಸಿದರು. ಇದರಿಂದ ರಿಪಬ್ಲಿಕನ್ ಪಕ್ಷಕ್ಕೆ ರಾಜಕೀಯದಲ್ಲಿ ಭದ್ರವಾದ ಸ್ಥಾನ ದೊರಕಿತು. ಆದರೆ 1870ರಿಂದ ಗ್ರಾಂಜರ್ಸ್, ರೈತಸಂಘ ಮತ್ತು ಪಾಪ್ಯುಲಿಸ್ಟ್ ಪಕ್ಷ ಹುಟ್ಟಿಕೊಂಡವು. ಪಾಪ್ಯುಲಿಸ್ಟ್ ಪಕ್ಷ 1892–94 ಮತ್ತು 1896–98ರ ಅವಧಿಯಲ್ಲಿ ರಾಜ್ಯದ ನಿಯಂತ್ರಣ ಪಡೆದಿತ್ತು. ಕ್ಯಾನ್ಸಸ್‌ನ ಮೊದಲ 100 ವರ್ಷಗಳ ರಾಜಕೀಯ ಇತಿಹಾಸದಲ್ಲಿ 35 ಗವರ್ನರುಗಳಾದರು. ಅವರಲ್ಲಿ 6 ಮಂದಿ ಡೆಮೊಕ್ರಾಟ್ ಪಕ್ಷದವರು. ಇಬ್ಬರು ಪಾಪ್ಯುಲಿಸ್ಟ್ ಪಕ್ಷದವರು. ಉಳಿದವರು ರಿಪಬ್ಲಿಕನ್ ಪಕ್ಷದವರು. ಎರಡನೆಯ ಮಹಾಯುದ್ಧದ ತರುವಾಯ ಡೆಮೊಕ್ರಾಟಿಕ್ ಪಕ್ಷ ರಾಜ್ಯ ಮತ್ತು ರಾಷ್ಟ್ರೀಯ ಚುನಾವಣೆಗಳಲ್ಲಿ ಯಶಸ್ವಿಯಾಗಿದೆ.

ಕ್ಯಾನ್ಸಸ್ ರಾಜ್ಯದ ಮೊದಲ ಸಂವಿಧಾನದ ಪ್ರಕಾರ ಸ್ವತ್ತಿನ ವಿಚಾರದಲ್ಲಿ ಸ್ತ್ರೀಯರಿಗೆ ಪುರುಷರೊಂದಿಗೆ ಸಮಾನ ಹಕ್ಕು ಲಭಿಸಿತು. ಈ ರಾಜ್ಯದ ಮೊದಲ ಶಾಸನಮಂಡಲ ಸ್ತ್ರೀಯರಿಗೆ ಶಾಲಾ ಚುನಾವಣೆಗಳಲ್ಲಿ ಮತದಾನ ಮಾಡುವ ಹಕ್ಕನ್ನು ನೀಡಿ, 1887ರಲ್ಲಿ ಆ ಹಕ್ಕನ್ನು ಪೌರಚುನಾವಣೆಗಳಿಗೂ ವಿಸ್ತರಿಸಿತು. 1912ರಲ್ಲಿ ಸ್ತ್ರೀಯರಿಗೆ ಸಾರ್ವತ್ರಿಕ ಚುನಾವಣೆಗಳಲ್ಲಿ ಮತದಾನ ಮಾಡುವ ಹಕ್ಕು ಲಭಿಸಿತು. 1880ರಿಂದ 1948ರ ತನಕ ಕ್ಯಾನ್ಸಸ್ ರಾಜ್ಯದಲ್ಲಿ ಪಾನನಿರೋಧ ಕಾಯಿದೆ ಜಾರಿಯಲ್ಲಿತ್ತು. (ವಿ.ಜಿ.ಕೆ.)

**ಕ್ಯಾನ್ಸಸ್ ನಗರ [1] :** ಅಮೆರಿಕ ಸಂಯುಕ್ತಸಂಸ್ಥಾನದ ಕ್ಯಾನ್ಸಸ್ ರಾಜ್ಯದಲ್ಲಿರುವ ಒಂದು ನಗರ. ವಿಯಾನ್‌ಡಾಟ್ ಕೌಂಟಿಯ ಕೇಂದ್ರ, ಕ್ಯಾನ್ಸಸ್ ರಾಜ್ಯದ ಪಶ್ಚಿಮ ಗಡಿಯಲ್ಲಿ, ಕ್ಯಾನ್ಸಸ್ ಮತ್ತು ಮಿಸ್ಸೂರಿ ನದಿಗಳ ಸಂಗಮ ಸ್ಥಳದಲ್ಲಿದೆ. ಇದೂ ಮಿಸ್ಸೂರಿ ರಾಜ್ಯದ ಕ್ಯಾನ್ಸಸ್ ನಗರವೂ ಕೂಡಿದಂತಿದ್ದು, ಎರಡಕ್ಕೂ ನಡುವೆ ಈ ರಾಜ್ಯಗಳ ಗಡಿರೇಖೆ ಹಾಯ್ದು ಹೋಗುತ್ತದೆ. ಕ್ಯಾನ್ಸಸ್ ನದಿಯ ದಡದಲ್ಲಿರುವ ಬೆಟ್ಟಗುಡ್ಡಗಳ ಮೇಲೆ ಹಬ್ಬಿರುವ ನಗರವಿದು.

ಕ್ಯಾನ್ಸಸ್ ಯೋಜನಾಬದ್ಧವಾಗಿ ನಿರ್ಮಿತವಾದ ನಗರವಲ್ಲ. ಅಮೆರಿಕನ್ ಅಂತರ್ಯುದ್ಧ ಮುಗಿದಮೇಲೆ ಪಶುಪಾಲನೆ ಮತ್ತು ಮಾಂಸ ರಫ್ತಿನ ಉದ್ಯಮ ತ್ವರಿತವಾಗಿ ಅಭಿವೃದ್ಧಿ ಹೊಂದಿದಾಗ ಸ್ಥಾಪಿತವಾದ ಸಣ್ಣಪುಟ್ಟ ನಗರಗಳು ಒಟ್ಟಾಗಿ ಕ್ಯಾನ್ಸಸ್ ನಗರವಾಯಿತು. 1843ರಲ್ಲಿ ವಿಯಾನ್‌ಡಾಟ್ ಇಂಡಿಯನ್ ಜನ ಈ ನಗರವಿರುವ ಪ್ರದೇಶವನ್ನು ಡೆಲವೇರ್ ಇಂಡಿಯನರಿಂದ ಕೊಂಡು ಇಲ್ಲಿ ನೆಲಸಿದರು. ಆದರೆ, ಬಿಳಿಯರು ಬಹುಸಂಖ್ಯೆಯಲ್ಲಿ ಬಂದು ನೆಲಸಿದಾಗ ಅವರು ಈ ಪ್ರದೇಶವನ್ನು ನಗರ ನಿರ್ಮಾಣ ಸಂಸ್ಥೆಯೊಂದಕ್ಕೆ ಮಾರಿ ಹೊರಟುಹೋದರು. ಈ ಸ್ಥಳದಲ್ಲಿ ನಗರನಿರ್ಮಾಣ ಸಂಸ್ಥೆ ವಿಯಾನ್‌ಡಾಟ್ ನಗರಕ್ಕಾಗಿ ನಿವೇಶನ ರಚಿಸಿತು. ಮಿಸ್ಸೂರಿ ಕ್ಯಾನ್ಸಸ್ ರಾಜ್ಯಗಳ ಅಂಚಿನಲ್ಲಿ ಸಂಚಾರಮಾರ್ಗ ಏರ್ಪಟ್ಟಮೇಲೆ ನದಿತೀರದ ಈ ಸಣ್ಣ ನಗರ ಬೃಹತ್ತಾಗಿ ಬೆಳೆಯತೊಡಗಿತು. ಈ ನಗರದ ಸಮೀಪದಲ್ಲಿ 1856ರಲ್ಲಿ ಮಿಸ್ಸೂರಿ ನದಿಯ ದಡದಲ್ಲಿ ಕಟ್ಟಿದ ಕ್ವಿನ್‌ಡಾರೋ ನಗರ ಅಂತರ್ಯುದ್ಧದ ಕಾಲದಲ್ಲಿ ಅವನತಿ ಹೊಂದಿದಾಗ ಅಲ್ಲಿಯ ಜನ ಆ ವೇಳೆಗಾಗಲೇ ವ್ಯಾಪಿಸುತ್ತಿದ್ದ ಕ್ಯಾನ್ಸಸ್ ನಗರದಲ್ಲಿ ನೆಲಸಿದರು.

1859ರ ಜೂನ್ 29ರಂದು ವಿಯಾನ್‌ಡಾಟ್ ಸಂಘಟಿತ ನಗರವೆಂದು ಅಧಿಕೃತವಾಗಿ ಘೋಷಿತವಾಯಿತು. ಅದೇ ವರ್ಷ ಜುಲೈ ತಿಂಗಳಲ್ಲಿ ಕ್ಯಾನ್ಸಸ್ ರಾಜ್ಯದ ಸಂವಿಧಾನ ಈ ನಗರದಲ್ಲಿ ರಚನೆಯಾಗಿ, 1861ರಲ್ಲಿ ಕ್ಯಾನ್ಸಸ್ ರಾಜ್ಯ ಅಮೆರಿಕ ಒಕ್ಕೂಟಕ್ಕೆ ಸೇರಿತು. 1863ರಲ್ಲಿ ಕ್ಯಾನ್ಸಸ್ ನಗರ ಯೂನಿಯನ್ ಪೆಸಿಫಿಕ್ ರೈಲು ಮಾರ್ಗಕ್ಕೆ ಪೂರ್ವದ ಕೊನೆಯ ನಿಲ್ದಾಣವಾಯಿತು. ರೈಲುಮಾರ್ಗ ಹಾಕಿದ ಮೇಲೆ ಲೆವೆನ್‌ವರ್ತ್ (ಕ್ಯಾನ್ಸಸ್) ಮತ್ತು ಕ್ಯಾನ್ಸಸ್ ನಗರ (ಮಿಸೂರಿ)ಗಳಿಗಿಂತ ದೊಡ್ಡದಾಗಿ ಬೆಳೆಯುವುದೆಂದು ಜನ ನಿರೀಕ್ಷಿಸಿದ್ದರು. ಆದರೆ, ಮಧ್ಯ ಮತ್ತು ದಕ್ಷಿಣ ಕ್ಯಾನ್ಸಸ್ ಕಡೆ ರೈಲುಮಾರ್ಗ ನಿರ್ಮಿಸುವ ಸಂಬಂಧದಲ್ಲಿ ಕ್ಯಾಮರನ್ (ಮಿಸ್ಸೂರಿ) ಮತ್ತು ಕ್ಯಾನ್ಸಸ್ (ಮಿಸ್ಸೂರಿ) ನಗರಗಳ ನಡುವೆ ಶಾಖಾ ಮಾರ್ಗವೊಂದನ್ನು ನಿರ್ಮಿಸಿದಾಗ ಇದರ ಬೆಳವಣಿಗೆಯ ವೇಗ ಸ್ವಲ್ಪ ಕಡಿಮೆಯಾಯಿತು.

ಜಾನುವಾರುಗಳ ವಿಕ್ರಯ ಮತ್ತು ಮಾಂಸರಫ್ತಿನ ಉದ್ಯಮ ಅಭಿವೃದ್ಧಿಹೊಂದಿದ ಮೇಲೆ ಕ್ಯಾನ್ಸಸ್ ನಗರ (ಮಿಸ್ಸೂರಿ) ಪ್ರಮುಖಸ್ಥಾನ ಪಡೆಯಿತು. 1869ರಲ್ಲಿ ಕ್ಯಾನ್ಸಸ್ ನದಿ ಮತ್ತು ಮಿಸ್ಸೂರಿ ರಾಜ್ಯದ ನಡುವಣ ಭಾಗ ಕ್ಯಾನ್ಸಸ್ ನಗರಕ್ಕೆಂದು (ಕ್ಯಾನ್ಸಸ್) ಗುರುತಿಸಲಾಯಿತು. ಸ್ವಲ್ಪಕಾಲಾನಂತರ ವಿಯಾನ್‌ಡಾಟ್, ಆರ್ಮರ್‌ಡೇಲ್, ಕ್ಯಾನ್ಸಸ್ ನಗರ ಮತ್ತು ಆರ್ಮ್‌ಸ್ಟ್ರಾಂಗ್ ನಗರಗಳು ಸಂಘಟಿತವಾಗಿ ಅವುಗಳ ಒಟ್ಟು ಪ್ರದೇಶವನ್ನು ಕ್ಯಾನ್ಸಸ್ ನಗರವೆಂದು ಕರೆಯಲಾಯಿತು.

ಈ ನಗರದಲ್ಲಿ ಉದ್ಯಮಾವಕಾಶಗಳಿದ್ದುದರಿಂದ 19ನೆಯ ಶತಮಾನದ ಉತ್ತರಾರ್ಧದಲ್ಲಿ ಐರೋಪ್ಯ ವಲಸೆಗಾರರು ಇಲ್ಲಿ ನೆಲಸಿದರು. ಹೀಗಾಗಿ, ಕ್ಯಾನ್ಸಸ್(ಮಿಸ್ಸೂರಿ) ಮಹಾನಗರಕ್ಕಿಂತ ಈ ನಗರದಲ್ಲಿ ಹೊರ ಬುಡಕಟ್ಟುಗಳ ಬಿಳಿಯರು ಹೆಚ್ಚು. ಅಂತರ್ಯುದ್ಧದ ಕಾಲದಲ್ಲಿ ನೀಗ್ರೋಜನ ಇಲ್ಲಿಗೆ ಬಂದರು. ಒಟ್ಟು ಜನಸಂಖ್ಯೆಯಲ್ಲಿ ಅವರು ಶೇ.20ರಷ್ಟು ಇದ್ದಾರೆ. ಈ ನಗರದ ಜನಸಂಖ್ಯೆ 146867 (2000).

ಇದು ಕ್ಯಾನ್ಸಸ್ ರಾಜ್ಯದ ಮುಖ್ಯ ಕೈಗಾರಿಕೆ ನಗರ. ಇಲ್ಲಿ ಐದು ನಿರ್ದಿಷ್ಟ ಕೈಗಾರಿಕಾ ಬಡಾವಣೆಗಳಿವೆ. ರಾಸಾಯನಿಕ ವಸ್ತುಗಳು, ಕಾಗದದ ಸಾಮಾನುಗಳು, ಮೋಟಾರು ವಾಹನಗಳು, ರೈಲುಗಾಡಿಗಳು, ಯಂತ್ರೋಪಕರಣಗಳು, ವ್ಯವಸಾಯದ ಮುಟ್ಟುಗಳು ಇಲ್ಲಿ ತಯಾರಾಗುತ್ತವೆ. ಅನೇಕ ಹಿಟ್ಟಿನ ಗಿರಣಿಗಳಿವೆ, ಸಾಬೂನು ತಯಾರಿಸುವ ಕಾರ್ಖಾನೆಗಳಿವೆ. ಮಾಂಸಸಂವೇಷ್ಟನ ಕೈಗಾರಿಕೆಯೂ ಬೆಳೆದಿದೆ.

ಕ್ಯಾನ್ಸಸ್ ನಗರದಲ್ಲಿ ಅನೇಕ ಉದ್ಯಾನಗಳೂ ಸಾರ್ವಜನಿಕ ಸಭಾಂಗಣಗಳೂ ಭವನಗಳೂ ಉಂಟು. ನಗರದ ಯೋಧ ಸ್ಮಾರಕ ಭವನದಲ್ಲಿ 4,000 ಪ್ರೇಕ್ಷಕರಿಗೆ ಸ್ಥಳಾವಕಾಶವುಂಟು. ಇಲ್ಲಿ ಜೂನಿಯರ್ ಕಾಲೇಜುಗಳೂ ವೈದ್ಯ ಶಿಕ್ಷಣ ಶಾಲೆಯೂ ಇವೆ.

(ವಿ.ಜಿ.ಕೆ.)

**ಕ್ಯಾನ್ಸಸ್ ನಗರ² :** ಅಮೆರಿಕ ಸಂಯುಕ್ತಸಂಸ್ಥಾನದ ಮಿಸ್ಸೂರಿ ರಾಜ್ಯದ ಪಶ್ಚಿಮದ ನಗರ, ಮಿಸ್ಸೂರಿ ನದಿಯ ದಂಡೆಯ ಮೇಲಿದೆ. ಈ ನಗರಕ್ಕೆ ಸೇರಿದಂತೆ ಸ್ಥಾಪಿತವಾಗಿರುವ ಇತರ ನಗರಗಳು ರಾಜ್ಯದ ಗಡಿಯಿಂದ ಮಾತ್ರ ಪ್ರತ್ಯೇಕವಾದಂತಿರುವ ಕ್ಯಾನ್ಸಸ್ ರಾಜ್ಯದ ಕ್ಯಾನ್ಸಸ್ ನಗರ, ಮಿಸ್ಸೂರಿ ರಾಜ್ಯದ ಇಂಡಿಪೆಂಡೆನ್ಸ್ ನಗರ ಮತ್ತು ಅದೇ ರಾಜ್ಯದ ಉತ್ತರ ಕ್ಯಾನ್ಸಸ್ ನಗರ. ಈ ನಗರದ ಜನಸಂಖ್ಯೆ 444,965 (2005).

ಸುಂದರವಾದ ಉದ್ಯಾನಗಳು, ರಸ್ತೆಗಳು ಮತ್ತು ಬೆಟ್ಟದ ಮಾರ್ಗಗಳು ಈ ನಗರದ ವೈಶಿಷ್ಟ್ಯ. ಕ್ಯಾನ್ಸಸ್ ನದಿಯ ಪಶ್ಚಿಮಕ್ಕಿರುವ ಸಮತಲ ಪ್ರದೇಶದಲ್ಲಿ ರೈಲ್ವೆ ಅಂಗಳಗಳು, ಪಶುಶಾಲೆ, ಒಟ್ಟು ವ್ಯಾಪಾರದ ಮಳಿಗೆಗಳು ಮತ್ತು ಉದ್ಯಮ ಸಂಸ್ಥೆಗಳಿವೆ. ನಗರದ ಉತ್ತರ ಮತ್ತು ಪೂರ್ವಭಾಗಗಳಲ್ಲಿರುವ ಮಿಸ್ಸೂರಿ ನದೀಕಣಿವೆ ಪ್ರದೇಶದಲ್ಲಿ ಧಾನ್ಯದ ಮಳಿಗೆಗಳು ಮತ್ತು ಕಾರ್ಖಾನೆಗಳುಂಟು.

ಈ ನಗರವಿರುವ ಪ್ರದೇಶದಲ್ಲಿ 1821ರಲ್ಲಿ ಪ್ರಪ್ರಥಮ ನೆಲಸಿಗರು ನಿವಾಸಗಳನ್ನು ನಿರ್ಮಿಸಿಕೊಂಡರು. ಎರಡನೆಯ ವಲಸೆ 1831ರಲ್ಲಿ ಬಂತು. ಹೀಗೆ ಸ್ಥಾಪಿತವಾದ ನೆಲೆ 1834ರಲ್ಲಿ ವೆಸ್ಟ್‌ಪೋರ್ಟ್ ನಗರವಾಗಿ ರೂಪುಗೊಂಡು ನ್ಯೂ ಮೆಕ್ಸಿಕೋದ ಸಾಂತ ಫೇ ನಗರದೊಂದಿಗಿನ ವ್ಯಾಪಾರದಲ್ಲಿ ಇಂಡಿಪೆಂಡೆನ್ಸ್ ನಗರದೊಂದಿಗೆ ಸ್ಪರ್ಧಿಸುತ್ತಿತ್ತು. 1838ರಲ್ಲಿ ವೆಸ್ಟ್‌ಪೋರ್ಟ್ ನಗರದ ಕ್ರಮಬದ್ಧ ರಚನೆಗಾಗಿ ನಿವೇಶನಗಳ ಸರ್ವೇಕ್ಷಣೆ ನಡೆಯಿತು.

1850ಕ್ಕೆ ಹಿಂದೆ ಈ ನಗರ ವಾಸ್ತವವಾಗಿ ಸಾಂತ ಫೇ ಗೂ ಪಶ್ಚಿಮನಗರಗಳಿಗೂ ನಡುವಣ ವ್ಯಾಪಾರಮಾರ್ಗದ ಕೊನೆಯ ಸ್ಥಳವಾಗಿತ್ತು. ಸಾಂತ ಫೇ ನಗರಕ್ಕೆ ಇಲ್ಲಿಂದ ವಿಸ್ಕಿ, ದಿನಸಿ ಮುಂತಾದ ಸರಕುಗಳು ಸಾಗುತ್ತಿದ್ದುವು. ಅಲ್ಲಿಂದ ಉಣ್ಣೆ, ಚರ್ಮದ ತೊಡಿಗೆಗಳು, ಒಣಮಾಂಸ, ಮೆಕ್ಸಿಕನ್ ಬೆಳ್ಳಿ ಮತ್ತು ಚಿನ್ನದ ನಾಣ್ಯಗಳು ಮತ್ತು ಬೆಳ್ಳಿ ಮತ್ತು ಚಿನ್ನಗಳ ಪುಡಿ ಬರುತ್ತಿದ್ದುವು. ಅಂತರ್ಯುದ್ಧದ ಕಾಲದಲ್ಲಿ ಇಂಡಿಪೆಂಡೆನ್ಸ್ ಮತ್ತು ವೆಸ್ಟ್‌ಪೋರ್ಟ್ ನಗರಗಳು ಸಮರಕ್ಷೇತ್ರಗಳಾಗಿದ್ದವು. ಆಗ ಕ್ಯಾನ್ಸಸ್ ನಗರದ ವ್ಯಾಪಾರ ಯಾವ ತಡೆಯೂ ಇಲ್ಲದೆ ನಡೆಯುತ್ತಿತ್ತು. ಯುದ್ಧದ ತರುವಾಯ ರೈಲು ರಸ್ತೆಗಳು ನಿರ್ಮಾಣವಾಗುವ ವರೆಗೆ ನಗರದ ವ್ಯಾಪಾರ ಕುಂಠಿತವಾಗಿತ್ತು. 1865ರಲ್ಲಿ ಪ್ರಥಮ ರೈಲು ರಸ್ತೆ ಸೇಂಟ್ ಲೂಯಿ ನಗರದಿಂದ ಈ ನಗರವನ್ನು ಮುಟ್ಟಿತು. ಇದರಿಂದ ನಗರದ ವಾಣಿಜ್ಯ ಕುದುರಿತು.

ಇದು ಕೈಗಾರಿಕೆಗಳ ಮತ್ತು ವಿವಿಧ ಉದ್ಯಮಗಳ ಕೇಂದ್ರ. ನೆರೆಯ ಕ್ಯಾನ್ಸಸ್ ರಾಜ್ಯದಲ್ಲಿರುವ ಕ್ಯಾನ್ಸಸ್ ನಗರದ ವಾಣಿಜ್ಯದೊಂದಿಗೆ ಈ ನಗರದ ವಾಣಿಜ್ಯ ಸಂಬಂಧ ಬೆಳೆದಿದೆ. ಇದು ಗೋದಿ ವ್ಯಾಪಾರಸ್ಥಳ. ಮೋಟಾರು ವಾಹನಗಳ ಜೋಡಣೆ ಹಾಗೂ ರೈಲುಗಾಡಿಗಳ ನಿರ್ಮಾಣ ಇಲ್ಲಿಯ ಕಾರ್ಖಾನೆಗಳಲ್ಲಿ ನಡೆಯುತ್ತವೆ. ದನಗಳ ಮಾರಾಟಕ್ಕೆ ಈ ನಗರ ಪ್ರಸಿದ್ಧ. ಹೆಂಗಸರ ಉಡುಪುಗಳು ತಯಾರಾಗುತ್ತವೆ. ಜಾನುವಾರುಗಳ ಸಾಗಣೆಗೆ ಇದೊಂದು ಮುಖ್ಯ ರೈಲ್ವೆ ಕೂಡು ನಿಲ್ದಾಣ.

ಇಲ್ಲಿ 1955ರಲ್ಲಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣ ನಿರ್ಮಾಣವಾಯಿತು. ಇದು ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಮುಖ ನಿಲ್ದಾಣಗಳಲ್ಲಿ ಒಂದು. ಮೂರು ರೈಲು ಸೇತುವೆಗಳನ್ನೂ ಆರು ರಸ್ತೆ ಸೇತುವೆಗಳನ್ನೂ ಈ ನಗರದ ಸಮೀಪದ ಮಿಸ್ಸೂರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಕಾ ಕಣಿವೆಯಲ್ಲಿ ರೈಲು ಸಂಚಾರಕ್ಕೆ ಕಮಾನು ಸೇತುವೆಯುಂಟು.

ಈ ನಗರ ಅಮೆರಿಕ ಸಂಯುಕ್ತಸಂಸ್ಥಾನದ ನಟ್ಟನಡುವೆ ಇರುವುದರಿಂದ ಇದು ರಾಷ್ಟ್ರೀಯ ಸಮ್ಮೇಳನಗಳಿಗೆ ಮುಖ್ಯ ಸ್ಥಳ. ಪ್ರತಿವರ್ಷವೂ ಇಲ್ಲಿ ನಡೆಯುವ ಜಾನುವಾರು ಪ್ರದರ್ಶನ ಅಮೆರಿಕದ ಅತ್ಯಂತ ದೊಡ್ಡ ಪ್ರದರ್ಶನಗಳಲ್ಲಿ ಒಂದು. ಇಲ್ಲಿಯ ಪಶು ವಿನಿಮಯ ಕಟ್ಟಡ ಪ್ರಖ್ಯಾತವಾದ್ದು.

ಕ್ಯಾನ್ಸಸ್‌ನಗರದ ಸರ್ಕಾರಿ ಶಾಲಾ ವ್ಯವಸ್ಥೆಯಲ್ಲಿ 1915ರಲ್ಲಿ ಸ್ಥಾಪಿತವಾದ ಜೂನಿಯರ್ ಕಾಲೇಜೂ ಸೇರಿದೆ. ಖಾಸಗಿ ಸಂಸ್ಥೆಯಾದ ಕ್ಯಾನ್ಸಸ್ ಸಿಟಿ ವಿಶ್ವವಿದ್ಯಾಲಯ 1933ರಲ್ಲಿ ಸ್ಥಾಪಿತವಾಯಿತು. ಅದಕ್ಕೆ ಸೇರಿದ ಹಾಗೆ ಅನೇಕ ಕಾಲೇಜುಗಳಿವೆ. ವಸ್ತುಸಂಗ್ರಹಾಲಯವಿರುವುದು ನಗರದ ಉತ್ತರ ಭಾಗದಲ್ಲಿ. ಇಲ್ಲಿಯ ಸಾರ್ವಜನಿಕ ಗ್ರಂಥಾಲಯಕ್ಕೆ ಅನೇಕ ಶಾಖೆಗಳುಂಟು. 1880ರಲ್ಲಿ ಸ್ಥಾಪಿತವಾದ ಕ್ಯಾನ್ಸಸ್ ಸಿಟಿ ಸ್ಟಾರ್ ಇಲ್ಲಿಯ ಪ್ರಮುಖ ದಿನಪತ್ರಿಕೆ. ಅದರ ನೌಕರರೇ ಆ ಪತ್ರಿಕೆಯ ಒಡೆಯರು. ಕ್ಯಾನ್ಸಸ್ ನಗರ ಪ್ರದೇಶದಲ್ಲಿ 50 ಉದ್ಯಾನಗಳಿವೆ. ಅವುಗಳ ಒಟ್ಟು ವಿಸ್ತೀರ್ಣ 16 ಹೆ. ಕಾರ್ಲ್‌ಮಿಲ್ಲಿಸ್ ನಿರ್ಮಿಸಿದ ವೋಲ್ಕರ್ ಸ್ಮಾರಕ ಕಾರಂಜಿ ಇರುವುದು ನಗರದ ದಕ್ಷಿಣದಲ್ಲಿ. ಲಿಬರ್ಟಿ ಮೆಮೋರಿಯಲ್ ಇಲ್ಲಿಯ ಪ್ರಸಿದ್ಧ ಕಟ್ಟಡಗಳಲ್ಲೊಂದು.

(ವಿ.ಜಿ.ಕೆ.)

**ಕ್ಯಾನ್ಸೂ :** ವಾಯವ್ಯ ಚೀನದ ಒಂದು ಪ್ರಾಂತ್ಯ. ವಿಸ್ತೀರ್ಣ 3,66,500 ಚಕಿಮೀ ಜನಸಂಖ್ಯೆ ಸು. 25 ಮಿಲಿಯನ್ (2000), ರಾಜಧಾನಿ ಲ್ಯಾಂಚೌ.

ಭೌಗೋಳಿಕವಾಗಿ ಕ್ಯಾನ್ಸೂ ಪ್ರಾಂತ್ಯ ಅತ್ಯಂತ ಜೀವಂತ ಭೂಕಂಪವಲಯದಲ್ಲಿದೆ. ಭೌತಿಕವಾಗಿ ಕ್ಯಾನ್ಸೂವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಮರುಭೂಮಿ ಪ್ರದೇಶ 480 ಕಿಮೀ ಅಗಲ 960 ಕಿಮೀ ಉದ್ದವಾಗಿದೆ. ಇದು ಹಳದಿ ನದಿಯ ಪಶ್ಚಿಮದ ಕವಲಿನಿಂದ ಪ್ರಾರಂಭವಾಗಿ ಸಿಂಕಿಯಾಂಗ್ ಉಯಿಗರ್ ಸ್ವಯಂ ಆಡಳಿತ ಪ್ರದೇಶದ ವರೆಗೂ ಹಬ್ಬಿದೆ. ಇದು ಮಂಗೋಲಿಯನ್ ಮರುಭೂಮಿಯ ಕೆಲವು ಭಾಗಗಳನ್ನೊಳಗೊಂಡಿದೆ; ಗೋಬಿ ಮರುಭೂಮಿಯವರೆಗೂ ವ್ಯಾಪಿಸಿರುವ ಇದರ ಪಶ್ಚಿಮಾರ್ಧದೊಳಕ್ಕೆ ಎಟ್‌ಸಿನ್ ಗಾಲ್ ಮತ್ತು ಸು–ಲೊಹೊ ಅಥವಾ ಷುಲೆ ನದಿಗಳು ಹರಿದು ವಿಶಾಲವಾದ ಓಯಸಿಸುಗಳಿಗೆ ನೀರೊದಗಿಸುತ್ತವೆ. ಹಳದಿ ನದಿಯ ಪಶ್ಚಿಮದ ಕವಲಿನ ಪೂರ್ವಕ್ಕಿರುವುದು ಆಗ್ನೇಯ ಕ್ಯಾನ್ಸೂ. ಇದು ಎರಡನೆಯ ವಿಭಾಗ. ಹೊ–ಸ್ಷಿ ಅಥವಾ ಕ್ಯಾನ್ಸೂ ಭೂಪಟ್ಟಿ ಮೂರನೆಯ ವಿಭಾಗ. ಇಲ್ಲಿ ಉತ್ತರ ಟಿಬೆಟಿನ ಪರ್ವತತಪ್ಪಲಿನಲ್ಲಿ, ಸಾಲಾಗಿ ಓಯಸಿಸ್‌ಗಳಿವೆ. ಪೂರ್ವ ಚೀನಕ್ಕೂ ಮಧ್ಯ ಏಷ್ಯಕ್ಕೂ ಸಂಪರ್ಕ ಕಲ್ಪಿಸುವ ಇತಿಹಾಸಪ್ರಸಿದ್ಧ ಮಾರ್ಗ ಸಾಗುವುದು ಇಲ್ಲೇ. ಮಂಗೋಲಿಯನ್ ಪ್ರಸ್ಥಭೂಮಿಗೂ ಹೊ–ಸ್ಷಿ ಭೂಪಟ್ಟಿಗೂ ನಡುವೆ 3030 ಮೀ ವರೆಗೂ ಎತ್ತರವಾಗಿರುವ ಹೊ–ಲಿ, ಲುಂಗ್–ಷೌ ಮತ್ತು ಮಾ–ಟ್ಸೂಂಗ್ ಪರ್ವತಗಳುಂಟು. ದಕ್ಷಿಣದಲ್ಲಿ 5454 ಮೀ ಎತ್ತರವಿರುವ ಚೈ–ಲೀನ್ ಅಥವಾ ನಾನ್‌ಷಾನ್‌ಗೆ ಇವು ಸಮಾಂತರದಲ್ಲಿ ಹಬ್ಬಿವೆ. ಕ್ಯಾನ್ಸೂ ಭೂಪಟ್ಟಿಯನ್ನು ಪೂರ್ವ ಕ್ಯಾನ್ಸೂವಿನಿಂದ ಪ್ರತ್ಯೇಕಿಸುವ ಪರ್ವತ ವು–ಷ್ಯಿಯಾವೂ.

ಪೂರ್ವಭಾಗದಲ್ಲಿಯ ಮಾನ್ಸೂನ್ ಮಾದರಿಯಿಂದ ವಾಯವ್ಯದಲ್ಲಿಯ ಖಂಡಾಂತರ ಮರುಭೂಮಿ ಮಾದರಿಯ ವರೆಗೆ ಇಲ್ಲಿಯ ವಾಯುಗುಣ ಕ್ರಮಕ್ರಮವಾಗಿ ವ್ಯತ್ಯಾಸವಾಗುತ್ತದೆ. ಪೂರ್ವ ಕ್ಯಾನ್ಸೂವಿನಲ್ಲಿ 40–50 ಸೆಂಮೀ ಮಳೆ ಬೀಳುತ್ತದೆ. ಆದರೆ ಪಶ್ಚಿಮಕ್ಕೆ ಹೋದಂತೆ ಕಡಿಮೆಯಾಗಿ 8 ಸೆಂಮೀ ಗಿಂತ ಕಡಿಮೆಯಾಗುತ್ತದೆ. ಚಳಿಗಾಲದಲ್ಲಿ ಎರಡು–ಮೂರು ದಿನಗಳ ಕಾಲ ಸತತವಾಗಿ ಮರಳಿನ ಬಿರುಗಾಳಿ ಬೀಸುವುದುಂಟು. ವಾಯವ್ಯದಲ್ಲಿ ಹೊಳೆಗಳು ಬಲು ವಿರಳ. ಅವು ಮರಳಿನಲ್ಲಿ ಇಂಗಿಹೋಗುತ್ತವೆ. ಇಲ್ಲವೇ ಉಪ್ಪು ನೀರಿನ ಸರೋವರಗಳನ್ನು ಸೇರುತ್ತವೆ. ಪೂರ್ವ ಕ್ಯಾನ್ಸೂವಿನಲ್ಲಿ ಕೂಡ ಚಳಿಗಾಲದಲ್ಲಿ ಹೊಳೆಗಳು ಬತ್ತಿಹೋಗಿರುತ್ತವೆ.

ಕ್ಯಾನ್ಸೂವಿನಲ್ಲಿಯ ವ್ಯವಸಾಯಕ್ರಮ ವ್ಯಾಪಕ ರೀತಿಯದು. ಗೋದಿ ಮತ್ತು ಮೆಕ್ಕೆಜೋಳವನ್ನು ಬೆಳೆಯುತ್ತಾರೆ. ತಂಬಾಕು ಮತ್ತು ಹತ್ತಿ ಆರ್ಥಿಕ ಬೆಳೆಗಳು. 19ನೆಯ ಶತಮಾನದಲ್ಲಿ ಪದೇಪದೇ ಸಂಭವಿಸುತ್ತಿದ್ದ ದಂಗೆಗಳಿಂದ ಇಲ್ಲಿಯ ಬಹುತೇಕ ನೆಲ ಪಾಳು ಬಿದ್ದಿತ್ತು. ಈಗಿನ ಸರ್ಕಾರ ಅದನ್ನು ಅಭಿವೃದ್ಧಿಪಡಿಸುತ್ತಿದೆ. ಲಿಯು-ಚಿಯ ಕಮರಿಯ ಬಳಿಯಲ್ಲೂ ವು-ಚುಂಗ್‌ಗೆ ದಕ್ಷಿಣದಲ್ಲಿ ಟ್ಸಿಂಗ್‌ಟುಂಗ್ ಬಳಿಯಲ್ಲೂ ಹಳದಿ ನದಿಗೆ ಕಟ್ಟೆ ನಿರ್ಮಿಸುವ ಯೋಜನೆಗಳಿವೆ. ಪ್ರಾಂತ್ಯದ ಕೆಲವು ಭಾಗಗಳಲ್ಲಿ ಪಶುಪಾಲನೆ ಮುಖ್ಯ ಕಸುಬು.

ಕ್ಯಾನ್ಸೂವಿನಲ್ಲಿ ಅನೇಕ ಖನಿಜಗಳು ದೊರೆಯುತ್ತವೆ. ಲಾನ್-ಚೌ ದಕ್ಷಿಣ ಭಾಗದಲ್ಲಿ ಮತ್ತು ಹೊ-ಲಾನ್ ಷಾನ್‌ನ ಪೂರ್ವಭಾಗದ ಇಳಿಜಾರುಗಳಲ್ಲಿ ಕಲ್ಲಿದ್ದಲು ಸಿಗುತ್ತದೆ. ನಿಂಗ್ಸಿಯದ ಮರುಭೂಮಿ ಸರೋವರಗಳಲ್ಲಿ ಉಪ್ಪು ಮತ್ತು ಸೋಡ ದೊರೆಯುತ್ತವೆ. ನಾನ್ ಚಿ-ಲಿಯೆನ್ ಷಾನ್ ಬಳಿ ಕಬ್ಬಿಣದ ಅದುರಿನ ನಿಕ್ಷೇಪ ಸಿಕ್ಕಿದೆ. ಇದರಿಂದಾಗಿ ಲಾನ್-ಚೌನಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಬೆಳೆದಿದೆ. ಎಣ್ಣೆ ಇನ್ನೊಂದು ಮುಖ್ಯ ಖನಿಜಸಂಪತ್ತು. ಯು-ಮೆನ್‌ನ ಮತ್ತು ಚಿಯು-ಚುವಾನ್‌ನಲ್ಲಿ ಇದನ್ನು ಬೃಹದ್ ಪ್ರಮಾಣದಲ್ಲಿ ತೆಗೆದು ಲಾನ್-ಚೌಗೆ ಪರಿಷ್ಕರಣಕ್ಕಾಗಿ ತರಲಾಗುತ್ತದೆ.

ಹಳದಿ ನದಿ ಒಂದು ಹಳೆಯ ಸಂಚಾರಮಾಧ್ಯಮ. ಈ ನದಿಯ ಮೇಲೆ ತೆಪ್ಪಗಳಲ್ಲಿ ಸರಕುಗಳನ್ನು ಸಾಗಿಸುತ್ತಾರೆ. ಹಲವಾರು ಹೆದ್ದಾರಿಗಳು ವೇ ನದಿಯ ಕಣಿವೆಯ ಮೂಲಕ ಪ್ರಾಂತ್ಯವನ್ನು ಪ್ರವೇಶಿಸಿ ಹಳದಿ ನದಿಯ ಪಕ್ಕದಲ್ಲಿ ಸಾಗಿ, ಲಾನ್-ಚೌನಲ್ಲಿ ವಾಯವ್ಯ ಹೆದ್ದಾರಿಯನ್ನು ಸೇರುತ್ತವೆ. ಟಿಯೆನ್-ಷುಯಿಯಿಂದ ವಾಯವ್ಯಾಭಿಮುಖವಾಗಿ ಪೂರ್ವ ತುರ್ಕಿಸ್ತಾನಕ್ಕೆ ಸಾಗುವ ರೈಲುಮಾರ್ಗವೂ ಮುಖ್ಯವಾದ್ದು. ತೈಲ ಮತ್ತು ಇತರ ಖನಿಜಗಳ ಅಭಿವೃದ್ಧಿಯಿಂದಾಗಿಯೂ ರೈಲು ಮಾರ್ಗದಿಂದಾಗಿಯೂ ಕ್ಯಾನ್ಸೂವಿನ ಕೈಗಾರಿಕಾಭಿವೃದ್ಧಿಯಾಗಿದೆ. ಜವಳಿ, ವಿದ್ಯುತ್, ಮುದ್ರಣ, ಅಮೃತಶಿಲೆ, ಆಹಾರ ಸಂಸ್ಕರಣ, ಗೊಬ್ಬರ, ಸಿಮೆಂಟ್, ಉಕ್ಕು ಮತ್ತು ಕಾಗದ ಕೈಗಾರಿಕೆಗಳು ಮುಖ್ಯವಾದುವು. ಕ್ಯಾನ್ಸೂವಿನ ಶೇ. 90 ಮಂದಿ ಚೀನೀಯರು. ಉಳಿದವರು ವಾಯವ್ಯ ಭಾಗದಿಂದ ಬಂದ ಮಂಗೋಲಿಯನರು. ದಕ್ಷಿಣದಿಂದ ಬಂದ ಮುಸ್ಲಿಮರು ಮತ್ತು ಟಿಬೆಟಿಯನ್ನರು. (ಕೆ.ಎನ್.ಸಿ.)

ಪ್ರಶ.ಪೂ 4-3ನೆಯ ಸಹಸ್ರಮಾನಕ್ಕೆ ಸೇರಿದ ಪನ್-ಶನ್, ಮ-ಚಾಂಗ್ ಮುಂತಾದ ನವಶಿಲಾಯುಗ ಸಂಸ್ಕೃತಿಗಳು ಇಲ್ಲಿ ಕಂಡುಬಂದಿವೆ. ಚರಿತ್ರಕಾರರ ದೃಷ್ಟಿಯಲ್ಲಿ ಈ ಸಂಸ್ಕೃತಿಗಳೇ ಮುಂದೆ ಬೆಳೆದು ಚೀನದ ವಿಶಿಷ್ಟ ಸಂಸ್ಕೃತಿಗೆ ಮೂಲವಾದುವು. ಅಲ್ಲದೆ ಈ ಕಾಲದಲ್ಲಾಗಲೇ ಇಲ್ಲಿಯ ನವಶಿಲಾಯುಗ ಸಂಸ್ಕೃತಿಗಳಿಗೂ ಕಕೇಶಿಯ ಪ್ರದೇಶದ ಸಂಸ್ಕೃತಿಗೂ ಸಂಪರ್ಕಗಳಿದ್ದುದು ಕಂಡುಬಂದಿದೆ. ಮುಂದೆ ಸಹ ಚೀನ ಮತ್ತು ಮಧ್ಯ ಏಷ್ಯದೊಡನೆ ಸಾಂಸ್ಕೃತಿಕ ಸಂಪರ್ಕವನ್ನು ಬೆಳೆಸುವುದರಲ್ಲಿ ಕ್ಯಾನ್ಸೂ ಮುಖ್ಯ ಪಾತ್ರ ವಹಿಸಿತ್ತು. ಪ್ರಸಿದ್ಧ ರೇಷ್ಮೆಹಾದಿ ಇಲ್ಲಿಯ ಹೊ-ಸ್ಸಿ ಪ್ರದೇಶದ ಮೂಲಕ ಹಾದುಹೋಗುತ್ತದೆ. ಚೀನ ದೇಶದ ಮೇಲೆ ದಾಳಿ ನಡೆಸುತ್ತಿದ್ದವರ ಮುನ್ನುಗ್ಗುವಿಕೆಯನ್ನು ತಡೆಯಲು ಕಟ್ಟಿದ ಬೃಹತ್ ಗೋಡೆಯ ಭಾಗ ಈ ಪ್ರಾಂತ್ಯದಲ್ಲೂ ಇದೆ. ಹೊರ ಜನರನ್ನು ತಡೆಯಲು ಅನೇಕ ಸೈನ್ಯಠಾಣೆಗಳು ಚೀನದ ಹ್ಯಾನ್ ಮತ್ತು ಟಾಂಗ್ ಅರಸು ಕುಲಗಳ ಆಳ್ವಿಕೆಯ ಕಾಲದಲ್ಲಿ ಇಲ್ಲಿ ಸ್ಥಾಪಿತವಾಗಿದ್ದುವು. ಆದರೂ ಚೀನ ದೇಶಕ್ಕೆ ಕ್ರೈಸ್ತ ಮತ್ತು ಬೌದ್ಧ ಧರ್ಮಗಳು ಹರಡಿದುದೂ ರೋಮ್ ಸಾಮ್ರಾಜ್ಯದೊಡನೆ ಇದರ ವ್ಯಾಪಾರ ಸಂಪರ್ಕಗಳೇರ್ಪಟ್ಟಿದ್ದೂ ಈ ಪ್ರದೇಶದ ಮೂಲಕ. ಇಲ್ಲಿ ಬೌದ್ಧ ಧರ್ಮ ಹರಡಿದ್ದುದರ ಕುರುಹಾಗಿ ಅನೇಕ ಭಿತ್ತಿಚಿತ್ರಗಳೂ ಶಿಲ್ಪಗಳೂ ಇಲ್ಲಿಯ ಹ್ವಾಂಗ್ ಗುಹೆಗಳಲ್ಲಿ ಉಳಿದುಬಂದಿವೆ. ಚೀನದ ಆಡಳಿತ ಶಕ್ತಿಗುಂದಿದಾಗ ತಾರ್ತರರ ಆಕ್ರಮಣ ನಡೆದದ್ದು ಇಲ್ಲಿಂದಲೇ. ಚೀನದ ಆಕ್ರಮಣಕ್ಕೆ ಇಲ್ಲಿಯ ಲಾಂಚೌ ಕೇಂದ್ರವಾಯಿತು. (ಎಸ್.ಎನ್.)

**ಕ್ಯಾಪರಿಡೇಸೀ :** ದ್ವಿದಳ ಸಸ್ಯವರ್ಗದ ರಿಯಡೇಲಿಸ್ ಗಣಕ್ಕೆ ಸೇರಿದ ಒಂದು ಕುಟುಂಬ. ಸುಮಾರು 46 ಜಾತಿ ಮತ್ತು 700 ಪ್ರಭೇದಗಳನ್ನೊಳಗೊಂಡಿದೆ. ಬಹುಪಾಲು ಪ್ರಭೇದಗಳು ಉಷ್ಣ ಹಾಗೂ ಸಮಶೀತೋಷ್ಣವಲಯಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆ. ಹೆಚ್ಚಿನ ಬಗೆಗಳು ಪೊದೆಸಸ್ಯ ಇಲ್ಲವೇ ಮರಗಳು (ಉದಾ:ಕಡಬ, ಕ್ರಟೀವ ಇತ್ಯಾದಿ). ಅಪೂರ್ವವಾಗಿ ಮೂಲಿಕೆ ಸಸ್ಯಗಳೂ ಇದರಲ್ಲಿ ಸೇರಿವೆ (ಉದಾ: ಗೈನಾಂಡ್ರಾಪ್ಸಿಸ್ ಇತ್ಯಾದಿ). ಈ ಕುಟುಂಬದ ಕೆಲವು ಮುಖ್ಯ ಅಂಗಗಳ ಲಕ್ಷಣಗಳು ಈ ರೀತಿ ಇವೆ. ಎಲೆಗಳು ಸರಳವಾಗಿರಬಹುದು. ಇಲ್ಲವೇ ಹಸ್ತಾಕಾರವಾಗಿ ವಿಭಜಿತವಾಗಿರಬಹುದು. ಎಲೆಗಳ ಜೋಡಣೆ ಪರ್ಯಾಯ. ಕೆಲವು ಪ್ರಭೇದಗಳಲ್ಲಿ ವೃಂತಪರ್ಣಗಳಿವೆ(ಇವು ಮುಳ್ಳುಗಳಾಗಿ ಪರಿವರ್ತಿತವಾಗಿರಬಹುದು). ಹೂಗೊಂಚಲು ಹೆಚ್ಚಾಗಿ ರೆಸೀಮ್ ಮಾದರಿಯದು. ಹೂಗಳು ದ್ವಿಲಿಂಗಿಗಳು (ಪೊಡೆಂಡ್ರೊಗೈನ್ ಎಂಬ ಗಿಡದಲ್ಲಿ ಮಾತ್ರ ಏಕಲಿಂಗಿ ಹೂಗಳನ್ನು ಕಾಣಬಹುದು); ಅರೀಯ ಸಮಾಂಗತೆಯನ್ನು ಪ್ರದರ್ಶಿಸುತ್ತವೆ. ಒಮ್ಮೊಮ್ಮೆ ಉಭಯಪಾರ್ಶ್ವಸಮಾಂಗತೆಯೂ ಇರಬಹುದು(ಉದಾ:ಟೀರೊಪೆಟಲಮ್). ಹೂಗಳಿಗೆ ಉಪಪತ್ರಗಳು, 4 ಪುಷ್ಪ ಪತ್ರಗಳು, 4 ದಳಗಳು, 4 ಕೇಸರಗಳು ಮತ್ತು 2 ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯ ಇವೆ. ಪುಷ್ಪಪತ್ರಗಳು ಬಿಡಿಬಿಡಿಯಾಗಿವೆ. ಎಂಬ್ಲಿಂಜಿಯ ಎಂಬ ಜಾತಿಯಲ್ಲಿ ಮಾತ್ರ ಸಂಯುಕ್ತ ಮಾದರಿಯ ಪತ್ರಗಳಿವೆ.

ದಳಗಳೂ ಬಿಡಿಬಿಡಿಯಾಗಿದ್ದು ಒಂದೊಂದರಲ್ಲಿ ಕ್ಲಾ ಮತ್ತು ಲಿಂಬ್‌ಗಳೆಂಬ ಎರಡು ಭಾಗಗಳನ್ನು ಗುರುತಿಸಬಹುದು. ಎಂಬ್ಲಿಂಜಿಯದಲ್ಲಿ ದಳಗಳು ಸಂಯುಕ್ತ ಮಾದರಿಯವು. ಸ್ಟೈಕ್ಸಿಸ್ ಎಂಬ ಪ್ರಭೇದದಲ್ಲಿ ದಳಗಳೇ ಇಲ್ಲ. ಕೇಸರಗಳ ಸಂಖ್ಯೆ 6 ಇದ್ದರೆ ಅವುಗಳಲ್ಲಿ ನಾಲ್ಕು ಉಳಿದೆರಡಕ್ಕಿಂತ ದೊಡ್ಡವು. ಈ ಸ್ಥಿತಿಯನ್ನು ಟೆಟ್ರಡೈನಮಸ್ ಎನ್ನಲಾಗುತ್ತದೆ. ಕ್ಯಾಪರಿಸ್ ಗಿಡದಲ್ಲಿ ಅಸಂಖ್ಯಾತ ಕೇಸರಗಳಿವೆ. ದಳಗಳಿಗೂ ಕೇಸರಗಳಿಗೂ ಮಧ್ಯೆ ಇರುವ ಹೂವಿನ ಅಕ್ಷಭಾಗ ಉದ್ದಕ್ಕೆ ಕೊಳವೆಯಂತೆ ಬೆಳೆದಿರುವುದು ಕ್ಯಾಪರಿಡೇಸೀ ಕುಟುಂಬದ ವಿಶೇಷಲಕ್ಷಣ. ಹೀಗೆ ಉಂಟಾಗಿರುವ ಕೊಳವೆಯ ಮೇಲೆ ಕೇಸರಗಳೂ ಅಂಡಾಶಯವೂ ಅಂಟಿರುತ್ತವೆ. ಈ ಕೊಳವೆಗೆ ಗೈನ್ಯಾಂಡ್ರೋಫೋರ್ ಎಂದು ಹೆಸರು. ಕೆಲವೊಮ್ಮೆ ಕೇಸರಗಳಿಗೂ ಅಂಡಾಶಯಕ್ಕೂ ನಡುವಿನಭಾಗ ಮಾತ್ರ ಕೊಳವೆಯಂತೆ ಬೆಳೆದಿರುವುದುಂಟು. ಇದಕ್ಕೆ ಗೈನೋಫೋರ್ ಎಂದು ಹೆಸರು.

ಅಂಡಾಶಯದಲ್ಲಿ ಎರಡು ಕೋಣೆಗಳೂ ಒಂದೊಂದರಲ್ಲಿ ಹಲವಾರು ಅಂಡಕಗಳೂ ಇವೆ. ಗರ್ಭಧಾರಣೆಯ ಅನಂತರ ಅಂಡಾಶಯದ ಒಳಗೋಡೆಯಿಂದ ಅಕ್ಷಭಾಗದೆಡೆಗೆ ಭಿತ್ತಿಗಳು ಬೆಳೆದು ಕೋಣೆಗಳ ಸಂಖ್ಯೆ ಹೆಚ್ಚಬಹುದು. ಫಲ ಸಂಪುಟ, ಸಿಲಿಕ್ವ ಇಲ್ಲವೆ ಬೆರಿ ಮುಂತಾದ ಮಾದರಿಗಳದ್ದಾಗಿದೆ.

ಕೆಪ್ಪಾರಿಡೇಸೀ ಕುಟುಂಬಕ್ಕೆ ಸೇರಿದ ಕೆಲವು ಸಸ್ಯಗಳ ಆರ್ಥಿಕ ಪ್ರಾಮುಖ್ಯ ಈ ರೀತಿ ಇದೆ-1.ಕ್ಯಾಪರಿಸ್ ಏಫಿಲ-ಇದರ ತೊಗಟೆಯ ಕಷಾಯವನ್ನು ಸಂಧಿವಾತ, ಕೆಮ್ಮು ಮುಂತಾದ ರೋಗಗಳಿಗೆ ಬಳಸುತ್ತಾರೆ. 2. ಕ್ರಟೀವ ರಿಲಿಜಿಯೋಸ-ಎಲೆಗಳು ಶಕ್ತಿವರ್ಧಕ, ಬೇರು ಮತ್ತು ತೊಗಟೆಗಳಿಗೆ ವಿರೇಚಕ ಗುಣ ಇದೆ. 3. ಗೈನಾಂಡ್ರಾಪ್ಸಿಸ್ ಪೆಂಟಫಿಲ-ಬೀಜ ಎಲೆ ಮತ್ತು ಬೇರುಗಳನ್ನು ಜೀರ್ಣಕಾರಿಗಳಾಗಿ ಉಪಯೋಗಿಸುವುದುಂಟು. ಬೀಜಗಳನ್ನು ಸಾಸುವೆಯ ಬದಲಿಗೆ ಬಳಸುವುದಿದೆ. ಈ ಗಿಡದ ಕೆಲವು ಬಗೆಗಳು ಉದ್ಯಾನಪ್ರಾಮುಖ್ಯವನ್ನು ಪಡೆದಿವೆ. (ಎ.ಕೆ.ಕೆ.)

**ಕ್ಯಾಪಿಟಲ್ :** ಕೋಲ್ಕೊತದಿಂದ ಪ್ರಕಟವಾಗುತ್ತಿರುವ ಇಂಗ್ಲಿಷ್ ವಾರಪತ್ರಿಕೆ. ಭಾರತದಲ್ಲಿ ಬ್ರಿಟಿಷರ ವ್ಯಾಪಾರ ಮತ್ತು ವಾಣಿಜ್ಯ ಹಿತಾಸಕ್ತಿಗಳನ್ನು ಕಾಪಾಡುವ ಮೂಲೋದ್ದೇಶದಿಂದ ಕ್ಯಾಪಿಟಲ್ ವಾರಪತ್ರಿಕೆಯನ್ನು ಬ್ರಿಟಿಷ್ ವಾಣಿಜ್ಯೋದ್ಯಮಿ ಮತ್ತು ಲೇಖಕ ಷರ್ಲಿ ಟ್ರೆಮರ್ನ್ 1888ರಲ್ಲಿ ಪ್ರಾರಂಭಿಸಿದ. ವಾಣಿಜ್ಯೋದ್ಯಮದಲ್ಲಿ ಪರಿಣತರಾದ ಬ್ರಿಟಿಷರೇ ಪತ್ರಿಕೆಯ ಸಂಪಾದಕರಾಗಿರುತ್ತಿದ್ದರು. ಆರ್ಥಿಕ ಮತ್ತು ವಾಣಿಜ್ಯ ವಿಚಾರಗಳಿಗೆ ಮೀಸಲಾದ ಈ ಪತ್ರಿಕೆಯ ಪ್ರಸಾರ 1965ರಲ್ಲಿ 2,546 ಪ್ರತಿಗಳು. ವ್ಯವಸ್ಥಾಪನ, ಹಣ ಮತ್ತು ಬ್ಯಾಂಕಿಂಗ್, ವಿನಿಯೋಜನೆ, ಪದಾರ್ಥಗಳು, ಪ್ರವಾಸೋದ್ಯಮ ಮತ್ತು ವಿಮಾನಯಾನ, ತೆರಿಗೆ ಮತ್ತು ಕಾರ್ಮಿಕ ವಿಚಾರಗಳನ್ನು ಕುರಿತ ಸಾಪ್ತಾಹಿಕ ವಾರ್ತೆಗಳೂ ಟಿಪ್ಪಣಿಗಳೂ ಇರುತ್ತವೆ. ಪರಂಪರೆಯಾಗಿ ಬೆಳೆಸಿಕೊಂಡಿರುವ ವೈಶಿಷ್ಟ್ಯಗಳಿಂದ ಕೂಡಿ ಜೀವಂತಿಕೆಯಿಂದಿರುವ ವಾಣಿಜ್ಯ ಪತ್ರಿಕೆಗಳಲ್ಲಿ ಇದೂ ಒಂದು. (ಕೆ.ಆರ್.ಡಿ.)

**ಕ್ಯಾಪಿಬಾರ :** ದಂಶಕವರ್ಗಕ್ಕೆ ಸೇರಿದ ಪ್ರಾಣಿಗಳಲ್ಲೆಲ್ಲ ಅತ್ಯಂತ ದೊಡ್ಡದು. ಹೈಡ್ರೊಕೀರಿಡೀ ಕುಟುಂಬಕ್ಕೆ ಸೇರಿದೆ. ಹೈಡ್ರೋಕೀರಸ್ ಎಂಬುದು ಇದರ ಶಾಸ್ತ್ರೀಯನಾಮ. ದಕ್ಷಿಣ ಅಮೆರಿಕದ ಮೂಲವಾಸಿ. ಮಧ್ಯ ಅಮೆರಿಕದಲ್ಲೂ ಕಾಣಬರುತ್ತದೆ. ಅರೆಜಲವಾಸಿಯಾದ ಇದು ಕೆರೆ, ಕೊಳ, ನದಿಗಳಲ್ಲೂ ಅವುಗಳ ಸುತ್ತಲಿನ ದಟ್ಟವಾದ ಕಾಡುಗಳಲ್ಲೂ ಜೀವಿಸುತ್ತದೆ. ಕ್ಯಾಪಿಬಾರ ನೋಡಲು ಗಿನಿಹಂದಿಯಂತೆಯೆ ಕಾಣುವುದಾದರೂ ಗಾತ್ರದಲ್ಲಿ ಅದಕ್ಕಿಂತ ಬಲು ದೊಡ್ಡದು. ಸಾಧಾರಣವಾಗಿ ಪೂರ್ಣ ಬೆಳೆದ ಪ್ರಾಣಿ ಸುಮಾರು 4' ಉದ್ದ ಇರುತ್ತದೆ. ತೂಕ 100-120 ಪೌಂ. ಇರುವುದುಂಟು. ಜಾಲವಿರುವ ಕಾಲ್ಬೆರಳುಗಳು(ಮುಂಗಾಲಿನಲ್ಲಿ ನಾಲ್ಕು ಮತ್ತು ಹಿಂಗಾಲಿನಲ್ಲಿ ಮೂರು ಬೆರಳುಗಳಿವೆ), ಗೊರಸಿನಂಥ ಉಗುರು, ವಿರಳವಾದ ಮೈಗೂದಲು, ಮೊಟಕಾದ ಕಿವಿಗಳು, ಸೀಳಿದ ಮೇಲ್ತುಟಿ, ಬಲು ಮೊಟಕಾದ ಬಾಲ, ಮೊಂಡುಮೂತಿ- ಇವು ಕ್ಯಾಪಿಬಾರದ ಪ್ರಮುಖ ಲಕ್ಷಣಗಳು.

ಕ್ಯಾಪಿಬಾರ ಸಂಘಜೀವಿ; ಸಾಮಾನ್ಯವಾಗಿ 10-20 ಪ್ರಾಣಿಗಳು ಗುಂಪುಗುಂಪಾಗಿ ವಾಸಿಸುತ್ತವೆ. ಇದು ಹಗಲೆಲ್ಲ ಮರೆಗಳಲ್ಲಿ ಅಡಗಿದ್ದು ಬೆಳಗಿನ ಜಾವ ಮತ್ತು ಸಂಜೆಯ ಹೊತ್ತು ಹೊರಬಂದು ಆಹಾರಾನ್ವೇಷಣೆಯಲ್ಲಿ ತೊಡಗುತ್ತದೆ. ಜಲಸಸ್ಯಗಳು ಮತ್ತು ಎಳೆಯ ಮರಗಳ ತೊಗಟೆ ಇದರ ಪ್ರಧಾನ ಆಹಾರ. ಕೆಲವೊಮ್ಮೆ ಹೊಲಗಳಿಗೆ ದಾಳಿ ಮಾಡುವುದೂ ಉಂಟು. ಕ್ಯಾಪಿಬಾರ ನೆಲದ ಮೇಲೆ ಅಷ್ಟು ಚುರುಕಾಗಿ ನಡೆಯಲಾರದು. ಶತ್ರುಗಳು ಬೆನ್ನಟ್ಟಿದಾಗ ಕೊಂಚಮಟ್ಟಿಗೆ ಓಡುವುದಾದರೂ ಬಲುಬೇಗ ನೀರಿಗೆ ಹಾರಿಬಿಡುತ್ತದೆ; ನೀರಿನಲ್ಲಿ ಮಾತ್ರ ವೇಗವಾಗಿ ಈಜಬಲ್ಲುದು. ನೀರಿನೊಳಗೆ 7-8 ಮಿನಿಟುಗಳ ಕಾಲ ಮುಳುಗಿರಲೂ ಬಲ್ಲುದು.

ಸ್ವಭಾವತಃ ಇದು ಬಲು ಸಾಧುಪ್ರಾಣಿ. ಆದರೆ ಬೆಳೆಗಳನ್ನು ನಾಶ ಮಾಡುತ್ತದೆ. ಹೊಟ್ಟೆ ತುಂಬಿದಾಗ ಹಂದಿಯಂತೆ ಗುಟುರುಹಾಕುತ್ತ ತಿರುಗಾಡುತ್ತದೆ. ಇದು ವರ್ಷಕ್ಕೆ ಒಂದುಬಾರಿ ಮಾತ್ರ ಮರಿ ಹಾಕುತ್ತದೆ. ಮರಿಗಳ ಸಂಖ್ಯೆ ಒಂದು ಸೂಲಿಗೆ 2-8;

ಗರ್ಭಧಾರಣೆಯ ಕಾಲ 15–18 ವಾರಗಳು. ಹುಟ್ಟುವಾಗಲೆ ಚೆನ್ನಾಗಿ ಬೆಳೆದಿರುವ ಮರಿಗಳು ಬಹಳ ಕಾಲ ತಾಯಿಯೊಡನೆ ಇರುತ್ತವೆ. ಕ್ಯಾಪಿಬಾರ ಸುಮಾರು 8–10 ವರ್ಷ ಬದುಕಿರುತ್ತದೆ. ಮಾಂಸಕ್ಕಾಗಿ ಈ ಪ್ರಾಣಿಯನ್ನು ಬೇಟೆಯಾಡುವುದುಂಟು. (ಎಸ್.ಎನ್.ಕೆ.ಯು.)

**ಕ್ಯಾಪ್ಸಿಡೀ : ನೋಡಿ – ಮಿರಿಡೀ**

**ಕ್ಯಾಪ್‌ಸ್ಟನ್ ಚರಕಿಯಂತ್ರ :** ಹಲ್ಲಣಕ್ಕೆ (ಸ್ಯಾಡಲ್) ಆನಿಸಿರುವ ಸಹಾಯಕ ಜಾರುಪೀಠಕ್ಕೆ ಲಗತ್ತಿಸಿರುವ, ಸ್ವಯಂ ಆವರ್ತಿಸಬಲ್ಲ ಶೀರ್ಷಕದ ಅನೇಕ ಆಯುಧಗಳು ಪರ್ಯಾಯವಾಗಿ ಕಡೆಯಲು ಏರ್ಪಾಡು ಇರುವ ಕಡೆತಯಂತ್ರ.. ಒಂದೇ ರೀತಿಯ ಬಿಡಿಭಾಗಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚು ಕರಾರುವಾಕ್ಕಾಗಿ ತಯಾರಿಸಲು ಇದನ್ನು ಉಪಯೋಗಿಸುತ್ತಾರೆ. ಸಾಮಾನ್ಯ ಕಡೆತ ಯಂತ್ರದಲ್ಲಿರುವ ಜಲಶೀರ್ಷಕ




ಕ್ಯಾಪ್‌ಸ್ಟನ್ ಚರಕಿಯಂತ್ರ

A : ಕ್ಯಾಪ್‌ಸ್ಟನ್ ಚರಕಿಯಂತ್ರದ ವಿಶೇಷವನ್ನು ನಿರೂಪಿಸುವ ಸಾಂಕೇತಿಕ ಚಿತ್ರ; B : ಕಡತಯಂತ್ರದ ನಿರೂಪಣಾ ಚಿತ್ರ; C: ಕ್ಯಾಪ್‌ಸ್ಟನ್ ಚರಕಿಯಂತ್ರದಲ್ಲಿ ಆಯುಧಗಳನ್ನು ಜೋಡಿಸಿರುವ ಒಂದು ಮಾದರಿ (ಹಲ್ಲಣಗಳು) ಚಿತ್ರದಲ್ಲಿ 1 ಆಯುಧ ಶೀರ್ಷಕ, 2 ಸಹಾಯಕ ಜಾರುಪೀಠ, 3 ಹಲ್ಲಣ, 4 ಯಂತ್ರಪೀಠ

(ಟೇಲ್ ಸ್ಟಾಕ್) ಈ ಯಂತ್ರದಲ್ಲಿರುವುದಿಲ್ಲ. ಇದರ ಬದಲು ಯಂತ್ರಪೀಠಕ್ಕೆ (ಬೆಡ್) ಒಂದು ಹಲ್ಲಣವನ್ನು ಜೋಡಿಸಿದೆ. ಇದನ್ನು ಪೀಠದ ಉದ್ದಕ್ಕೂ ಒಯ್ಯಬಹುದು. ಈ ಹಲ್ಲಣದ ಬೆನ್ನ ಮೇಲೆ ಒಂದು ಸಹಾಯಕ ಜಾರುಪೀಠವನ್ನು ಲಗತ್ತಿಸಿರುತ್ತದೆ. ಯಂತ್ರಪೀಠ ಒದಗಿಸುವ ಗರಿಷ್ಠ ಉದ್ದಕ್ಕಿಂತಲೂ ಸ್ವಲ್ಪ ಹೆಚ್ಚಿನ ಉದ್ದವನ್ನು ಇದರಿಂದ ಪಡೆಯಬಹುದು. ಈ ಸಹಾಯಕ ಜಾರುಪೀಠದ ಮೇಲೆ ಅನೇಕ ಆಯುಧಗಳನ್ನು ಒಟ್ಟಿಗೇ ಹಿಡಿಯಬಲ್ಲ ಒಂದು ಆಯುಧ ಶೀರ್ಷಕವಿದೆ (ಟೂಲ್ ಹೆಡ್). ಯುಕ್ತ ಏರ್ಪಾಡಿನಿಂದಾಗಿ ಒಂದು ಕ್ರಿಯೆ ಮುಗಿದ ಒಡನೆ ಆಯುಧ ಶೀರ್ಷಕ ತಾನಾಗಿ ಸ್ವಲ್ಪ ತಿರುಗಿ, ಪಕ್ಕದ ಆಯುಧಕ್ಕೆ ಕ್ರಿಯೆಯನ್ನು ನಡೆಸಲು ಹಾದಿಮಾಡಿಕೊಡುತ್ತದೆ. ಎಷ್ಟು ಆಯುಧಗಳನ್ನು ಒಮ್ಮೆಗೇ ಜೋಡಿಸಬೇಕಾಗುತ್ತದೋ ಅಷ್ಟು ಮುಖಗಳುಳ್ಳ ಶೀರ್ಷಕವನ್ನೇ ಬಳಸಬೇಕು (ಚತುರ್ಮುಖ, ಷಣ್ಮುಖ ಇತ್ಯಾದಿ). ಬಳಸಬೇಕಾದ ಆಯುಧಗಳಿಗೆ ತಕ್ಕಂತೆ ವಿವಿಧ ರೀತಿಯ ಆಯುಧ ಹಿಡಿಗಳನ್ನೂ ಉಪಯೋಗಿಸಬೇಕು. ಮೇಲೆ ವಿವರಿಸಿದ ಏರ್ಪಾಡಿನಲ್ಲಿ ಸಹಾಯಕ ಜಾರುಪೀಠವನ್ನು ಕೈಬಿಟ್ಟರೆ ಇದು ಟರೆಟ್ ಕಡೆತಯಂತ್ರವಾಗುವುದೆಂಬುದನ್ನು ಇಲ್ಲಿ ಗಮನಿಸಬೇಕು. ಈ ಏರ್ಪಾಡಿನ ಜೊತೆಗೆ, ಸಾಮಾನ್ಯ ಕಡೆತಯಂತ್ರದಲ್ಲಿರುವ ಹಲ್ಲಣ ಸಹ ಇರುತ್ತದೆ. ಅಂದರೆ ಒಟ್ಟು ಎರಡು ಹಲ್ಲಣಗಳಿವೆ ಎಂದಾಯಿತು. ಇವುಗಳಿಗೆ ಲಗತ್ತಿಸಿರುವ ಆಯುಧಗಳ ಶೀರ್ಷಕದ ಇತರ ಆಯುಧಗಳ ಜೊತೆಗೆ ಅಥವಾ ಪ್ರತ್ಯೇಕವಾಗಿ ಕ್ರಿಯೆಗಳನ್ನು ನಡೆಸಬಹುದು.

ಅನುಕೂಲಗಳು : 1. ಒಮ್ಮೆಗೇ ಅನೇಕ ಆಯುಧಗಳನ್ನು ಜೋಡಿಸಬಹುದಾದ್ದರಿಂದ ಕ್ರಿಯೆಯ ತರುವಾಯ ಆಯುಧವನ್ನು ಬಿಚ್ಚಿ ಆ ಸ್ಥಳದಲ್ಲಿ ಹೊಸ ಆಯುಧವನ್ನಿಟ್ಟು ಕಾರ್ಯವನ್ನು ಮುಂದುವರಿಸುವ ತೊಂದರೆ ತಪ್ಪುತ್ತದೆ. 2. ಒಂದು ಕ್ರಿಯೆ ಮುಗಿದ ಒಡನೆ ಶೀರ್ಷಕ ತಾನಾಗಿಯೇ ತಿರುಗಿ, ಕಾರ್ಯಸ್ಥಾನಕ್ಕೆ ಹೊಸ ಆಯುಧ ಬಂದು ನಿಲ್ಲಲು ದಾರಿಮಾಡಿಕೊಟ್ಟು ಆಯುಧವನ್ನು ಬಿಚ್ಚಿ ಹಾಕುವಾಗ ಆಗುವ ತಪ್ಪುಗಳನ್ನು ನಿವಾರಿಸುತ್ತದೆ. 3. ಒಟ್ಟಿಗೇ ಭಿನ್ನರೀತಿಯ ಅನೇಕ ಕ್ರಿಯೆಗಳನ್ನು ನಡೆಸಬಹುದು. ಈ ಎಲ್ಲ ಕಾರಣಗಳಿಂದ ವಿಳಂಬ ತಪ್ಪಿ ಕಾಲ ಉಳಿತಾಯವಾಗುತ್ತದೆ. (ಕೆ.ಆರ್.ಎಂಬ).

**ಕ್ಯಾಫೀನ್ :** ಪ್ರಪಂಚದ ಎಲ್ಲೆಡೆಗಳಲ್ಲೂ ಪಾನೀಯವಾಗಿ ಉಪಯೋಗಿಸುವ ಕಾಫಿ, ಚಹ, ಕೋಕೋ ಮುಂತಾದುವುಗಳ ಸಸ್ಯಗಳಲ್ಲಿ ಇರುವ ಒಂದು ಆಲ್ಕಲಾಯ್ಡ್. ಇದರ ಪರಿಣಾಮವಾಗಿ ಈ ಪಾನೀಯಗಳು ಮನುಷ್ಯನಿಗೆ ಉಲ್ಲಾಸದಾಯಕವಾಗಿವೆ. ಎಫ್. ರಂಜ್ ಎಂಬಾತ 1820ರಲ್ಲಿ ಪ್ರಥಮವಾಗಿ ಕ್ಯಾಫೀನನ್ನು ಪ್ರತ್ಯೇಕಿಸಿದ. ಆ ತರುವಾಯ ಅದನ್ನು ಬೇರೆ ಬೇರೆ ಕ್ರಮಗಳಿಂದ ಸಂಶ್ಲೇಷಿಸಲಾಗಿದೆ. ಕ್ಯಾಫೀನನ ರಾಸಾಯನಿಕ ವಿನ್ಯಾಸವನ್ನು ಇಲ್ಲಿ ತೋರಿಸಿದೆ. ಅಣುಸೂತ್ರ $C_8H_{10}N_4O_2$.

ಆಕರ: ಚಹದ ಎಲೆಗಳಲ್ಲಿ, ಕಾಫಿಯ ಬೀಜಗಳಲ್ಲಿ ಮತ್ತು ಕೋಲಾ ಕಾಯಿಗಳಲ್ಲಿ ಕ್ಯಾಫೀನ್ ದೊರೆಯುವುದು. ಒಂದು ಲೋಟ ಚಹ ಅಥವಾ ಕಾಫಿಯಲ್ಲಿ 100–150 ಮಿಲಿಗ್ರಾಂನಷ್ಟು ಕ್ಯಾಫೀನ್ ಇರುತ್ತದೆ.



ಕೆಟ್ಟುಹೋದ ಅಥವಾ ಹಾಳಾದ ಚಾ ಎಲೆಗಳನ್ನು ಚೆನ್ನಾಗಿ ಪುಡಿಮಾಡಿ ನೀರಿನಲ್ಲಿ ಕುದಿಸಿ ಸೋಸುವುದರಿಂದ ಬರುವ ದ್ರಾವಣದಲ್ಲಿ ಕ್ಯಾಫೀನ್, ಪ್ರೋಟೀನುಗಳು ಮತ್ತು ಟ್ಯಾನಿನುಗಳು ಇರುತ್ತವೆ. ಈ ದ್ರಾವಣವನ್ನು ಕ್ಷಾರಯುಕ್ತ ಲೆಡ್ ಅಸಿಟೇಟಿನೊಂದಿಗೆ ರಾಸಾಯನಿಕ ಕ್ರಿಯೆಗೆ ಒಳಪಡಿಸುವುದರಿಂದ ಪ್ರೋಟಿನುಗಳು ಮತ್ತು ಟ್ಯಾನಿನುಗಳು ಘನರೂಪದಲ್ಲಿ ಬೇರ್ಪಡುತ್ತವೆ. ಇವನ್ನು ಸೋಸಿ ಪ್ರತ್ಯೇಕಿಸಲಾಗಿ ಬರುವ ದ್ರಾವಣವನ್ನು ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದ ಜೊತೆಗೆ ಕೂಡಿಸುವುದರಿಂದ ಲೆಡ್‌ಸಲ್ಫೇಟ್ ($PbSO_4$) ಘನಪದಾರ್ಥ ಕೆಳಗೆ ಇಳಿಯುತ್ತದೆ. ಇದನ್ನು ಬೇರ್ಪಡಿಸಿದ ತರುವಾಯ ಉಳಿಯುವ ದ್ರಾವಣದಲ್ಲಿ ಕ್ಯಾಫೀನ್ ಇರುತ್ತದೆ. ಈ ಕ್ಯಾಫೀನ್‌ಯುಕ್ತ ದ್ರಾವಣವನ್ನು ಎಲುಬಿನ ಹುಡಿಯಿಂದ ವರ್ಣರಹಿತಗೊಳಿಸಿ 3–4 ಸಲ ಕ್ಲೋರೋಫಾರ್ಮಿನೊಂದಿಗೆ ಸರಿಯಾಗಿ ಮಿಶ್ರಣ ಮಾಡುವುದರಿಂದ ಕ್ಯಾಫೀನ್ ಕ್ಲೋರೋಫಾರ್ಮಿನಲ್ಲಿ ಕರಗುತ್ತದೆ. ಕ್ಯಾಫೀನ್‌ಯುಕ್ತ ಕ್ಲೋರೋಫಾರ್ಮ್ ದ್ರಾವಣವನ್ನು ಬಟ್ಟಿ ಇಳಿಸುವುದರಿಂದ ಕ್ಲೋರೋಫಾರ್ಮ್ ಬಟ್ಟೀಕರಣವಾಗಿ ಉಳಿಯುವ ಘನಪದಾರ್ಥವೇ ಕ್ಯಾಫೀನ್. ಈ ಘನಪದಾರ್ಥವನ್ನು ಬಿಸಿನೀರಿನಲ್ಲಿ ಸ್ಫಟಿಕೀಕರಿಸಲಾಗಿ ಒಂದು ಅಣು ನೀರು ಇರುವ ಸೂಜಿಯಂಥ ಆಕಾರವುಳ್ಳ ಮೃದುವಾದ ಕ್ಯಾಫೀನ್ ಸ್ಫಟಿಕಗಳು ಹೊರಬೀಳುತ್ತವೆ.

ಗುಣಗಳು: ಕ್ಯಾಫೀನಿನ ರುಚಿ ಕಹಿ. ಇದು ತಣ್ಣೀರಿನಲ್ಲಿ ಮತ್ತು ಆಲ್ಕೋಹಾಲಿನಲ್ಲಿ ಹೆಚ್ಚು ಕರಗುವುದಿಲ್ಲ. ಕ್ಯಾಫೀನಿನ ಕರಗುವ ಬಿಂದು $235^\circ$ ಸೆಂ. ಇದಕ್ಕಿಂತ ಹೆಚ್ಚಿನ ಉಷ್ಣತೆಗೆ ಒಳಪಡಿಸಿದಾಗ ಕ್ಯಾಫೀನ್ ಉತ್ಪತನಗೊಳ್ಳುತ್ತದೆ. ಇದು ಸಾರರಿಕ್ತ ಕ್ಷಾರ. ಸಾರಆಮ್ಲಗಳ ಸಂಯೋಗದಲ್ಲಿ ಇದು ಲವಣಗಳನ್ನು ಕೊಡುತ್ತದೆ. ಸಾರ ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದಾಗ ಕ್ಯಾಫೀನ್ ಹೈಡ್ರೊಕ್ಲೋರೈಡ್ ಎಂಬ ಲವಣ ಸಿಕ್ಕುತ್ತದೆ, $C_8H_{10}N_4O_2$. HCl. ಈ ಲವಣವನ್ನು ನೀರಿನಲ್ಲಿ ಉದಜ ವಿಶ್ಲೇಷಣೆಗೆ ಒಳಪಡಿಸುವುದರಿಂದ ಕ್ಯಾಫೀನ್ ಮರಳಿ ಸಿಕ್ಕುತ್ತದೆ. ಕ್ಯಾಫೀನನ್ನು ಕ್ಲೋರಿನ್ ಕರಗಿದ ನೀರಿನಲ್ಲಿ ಉತ್ಕರ್ಷಣೆ ಮಾಡುವುದರಿಂದ ಸಿಕ್ಕುವ ಸಂಯುಕ್ತಗಳು ಡೈಮೀಥೈಲ್ ಅಲ್ಲಾಕ್ಸನ್ ಮತ್ತು ಮೋನೋಮೀಥೈಲ್ ಯೂರಿಯ. ಕ್ಯಾಫೀನನ್ನು ಪ್ರಬಲವಾದ ಉತ್ಕರ್ಷಣಕ್ಕೊಳಪಡಿಸುವುದರಿಂದ ಡೈಮೀಥೈಲ್ ಆಕ್ಸಮೈಡ್ ಎಂಬ ಸಂಯುಕ್ತ ಸಿಕ್ಕುತ್ತದೆ. ಕ್ಯಾಫೀನನ್ನು ನಿಷ್ಕ್ರಿಯಮಾಧ್ಯಮದಲ್ಲಿ ಕ್ಲೋರಿನಿನೊಂದಿಗೆ ರಾಸಾಯನಿಕ ಕ್ರಿಯೆಗೆ ಒಳಪಡಿಸುವುದರಿಂದ ಮಾನೋಕ್ಲೋರೋ ಕ್ಯಾಫೀನ್ ಸಿಕ್ಕುತ್ತದೆ. ಇದನ್ನು ಆಲ್ಕೊಹಾಲ್ ಯುಕ್ತ KOHನ ಸಂಗಡ ರಾಸಾಯನಿಕ ಕ್ರಿಯೆಗೆ ಒಳಪಡಿಸಿ ಬಂದ

ಸಂಯುಕ್ತವನ್ನು HCl ಆಮ್ಲದ ಜೊತೆಗೆ ಬಿಸಿಮಾಡುವುದರಿಂದ ಹೈಡ್ರಾಕ್ಸಿ ಕ್ಯಾಫೀನ್ ಎಂಬ ಸಂಯುಕ್ತ ಸಿಕ್ಕುತ್ತದೆ. ಇದು 1:3:7 ಟ್ರೈಮೀಥೈಲ್ ಯೂರಿಕ್ ಆಮ್ಲವನ್ನು ಹೋಲುತ್ತದೆ (ಎಲ್.ಡಿ.ಎಂ.)

**ಕ್ಯಾಬ್ರರಾ, ಗೇಬ್ರಿಯೆಲೊ :** 1552–1602. ಇಟಲಿಯ ಕವಿ. ತನ್ನ ಕಾಲದ ರಾಜರುಗಳನೇಕರ ಕೃಪಾದೃಷ್ಟಿಗೆ ಪಾತ್ರನಾಗಿ ಸುಖಜೀವನವನ್ನು ನಡೆಸಿದವ. ಭಾವಗೀತೆಯ ರಚನೆಯಲ್ಲಿ ನೂತನ ಪ್ರಯೋಗಗಳನ್ನು ಮಾಡಿದ್ದಾನೆ. ಪಿಂಡಾರ್ ಕವಿಯನ್ನು ಅನುಸರಿಸಿ ಬರೆದ ಹಲವು ವಿಡಂಬನ ಕಾವ್ಯಗಳಲ್ಲಿ ಮತ್ತು ಲಘುಕವನಗಳಲ್ಲಿ ಈತನ ಕಲಾಪ್ರೌಢಿಮೆ ವ್ಯಕ್ತವಾಗಿದೆ.

ವರ್ಡ್ಸ್‌ವರ್ತ್ ಕವಿ ಈತನನ್ನು ಬಹಳವಾಗಿ ಮೆಚ್ಚಿಕೊಂಡು ಈತನ ಕೆಲವು ಚರಮವಾಕ್ಯಗಳನ್ನು ಅನುವಾದಿಸಿದ್ದಾನೆ. (ಎಚ್.ಕೆ.ಆರ್.)

**ಕ್ಯಾಮರೂನ್ :** ಪಶ್ಚಿಮ ಆಫ್ರಿಕದ ಒಂದು ಸಂಯುಕ್ತರಾಜ್ಯ. ಪೂರ್ವ ಪಶ್ಚಿಮ ಕ್ಯಾಮರೂನ್‌ಗಳನ್ನೊಳಗೊಂಡಿದೆ. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ವಾಯವ್ಯದಲ್ಲಿ ನೈಜೀರಿಯ, ಪೂರ್ವದಲ್ಲಿ ಚಾಡ್ ಮತ್ತು ಮಧ್ಯ ಆಫ್ರಿಕ ಗಣರಾಜ್ಯ, ದಕ್ಷಿಣದಲ್ಲಿ




ಕಾಂಗೋ ಗಣರಾಜ್ಯ, ಗ್ಯಾಬಾನ್ ಮತ್ತು ರೀಯೊ ಮೂನಿ–ಇವು ಇದರ ಮೇರೆಗಳು. ಇದರ ಸಮುದ್ರತೀರದ ಉದ್ದ 352 ಕಿಮೀ ಕ್ಯಾಮರೂನ್ ಸಂಯುಕ್ತರಾಜ್ಯದ ವಿಸ್ತೀರ್ಣ 183568 ಚಕಿಮೀ. 15,795,000 (2005). ರಾಜಧಾನಿ ಯಾವೂಂಡೇ.

**ಭೌತಲಕ್ಷಣ :** ಕ್ಯಾಮರೂನಿನ ಮಧ್ಯ ದಕ್ಷಿಣಭಾಗಗಳು ಪ್ರಸ್ಥಭೂಮಿ ಪ್ರದೇಶ. ಇದರ ಎತ್ತರ ಸಾಮಾನ್ಯವಾಗಿ 606 ಮೀ ವಾಯವ್ಯ ಭಾಗ ಪರ್ವತಮಯ. ಬೇನ್ವಾ ನದಿಗೆ ಉತ್ತರದಲ್ಲಿರುವ ಮ್ಯಾಂಡರ ಪರ್ವತ ಸುಮಾರು 1515 ಮೀ ಎತ್ತರವಾಗಿದೆ. ದಕ್ಷಿಣಕ್ಕೆ ಬಂದಂತೆ ಇದರ ಎತ್ತರ ಏರುತ್ತದೆ. ವೋಗೆಲ್ ಮತ್ತು ಮ್ಯಾಂಗಿಲ ಪರ್ವತಗ್ರಂಥಿಗಳು 1818 ಮೀ ಎತ್ತರವಾಗಿಯೂ ಬಮೆಂಡ 2424 ಮೀ ಎತ್ತರವಾಗಿಯೂ ಉಂಟು.

ಬಮೆಂಡದಿಂದ ಇನ್ನೊಂದು ಪರ್ವತಶ್ರೇಣಿ ಪೂರ್ವಕ್ಕೆ ಕವಲೊಡೆದು ಪೂರ್ವದ ಗಡಿಯ ಬಳಿ ಯೇಡ್ ಗ್ರಂಥಿಯಾಗಿ ಪರಿಣಮಿಸಿದೆ. ಇದರಲ್ಲೂ 1818 ಮೀಗಿಂತ ಎತ್ತರವಾದ ಶಿಖರಗಳುಂಟು. ಪಶ್ಚಿಮದಲ್ಲಿ ಸಮುದ್ರದ ಬಳಿ ಇರುವ ಶ್ರೇಣಿ ಕ್ಯಾಮರೂನ್ ಪರ್ವತ. ಪಶ್ಚಿಮ ಆಫ್ರಿಕದ ಜೀವಂತ ಜ್ವಾಲಾಮುಖಿ ಇದೊಂದೇ. ಸಮುದ್ರದಿಂದ ಥಟ್ಟನೆ ಮೇಲೇರುವ ಈ ಪರ್ವತ 4545 ಮೀ ತಲಪುತ್ತದೆ. ಇದರ ಪಶ್ಚಿಮಭಾಗ ಪ್ರಪಂಚದ ಅತಿ ಹೆಚ್ಚಿನ ಮಳೆ ಪ್ರದೇಶಗಳಲ್ಲೊಂದು. ಇದರ ನೈಋತ್ಯಕ್ಕಿರುವ ಜ್ವಾಲಾಮುಖಿಯ ದ್ವೀಪಗಳ ಪೈಕಿ ಅತ್ಯಂತ ಹತ್ತಿರದಲ್ಲಿರುವುದು ಫರ್ನಾಂಡೊ ಪೊ. ಈ ಪರ್ವತದ ಆಗ್ನೇಯದಲ್ಲಿ ಕ್ಯಾಮರೂನ್ಸ್ ಅಳಿವೆಯಿದೆ. ಇದರ ಗರಿಷ್ಠ ಅಗಲ 32 ಕಿಮೀಗಳಿಗೂ ಹೆಚ್ಚು.

ಮೇಲೆ ಹೇಳಿದ ಎರಡು ಪರ್ವತಪಂಕ್ತಿಗಳ ನಡುವೆ ಬೇನ್ವಾ ನದಿಯೂ ಲೋಗೋನ್ ನದಿಯ ಕೆಲವು ಉಪನದಿಗಳೂ ಉಗಮಿಸುತ್ತವೆ. ಉತ್ತರಕ್ಕೆ ಹರಿದು ಚಾಡ್ ಸರೋವರವನ್ನು ಸೇರುವ ಲೋಗೋನ್ ನದಿ ಸ್ವಲ್ಪದೂರ ಕ್ಯಾಮರೂನಿನ ಪೂರ್ವದ ಎಲ್ಲೆಯಾಗಿ ಪರಿಣಮಿಸಿದೆ. ಬೇನ್ವಾದ ಒಂದು ಮುಖ್ಯ ಉಪನದಿ ಮೇಯೊ ಕೆಬ್ಬಿ. ದಕ್ಷಿಣದಲ್ಲಿರುವ ನದಿಗಳ ಪೈಕಿ ಮುಖ್ಯವಾದವು ನಿಯಾಂಗ್ ಮತ್ತು ಸಾನಗ, ಆಗ್ನೇಯದ ಕೊನೆಯಲ್ಲಿರುವುದು ಸಾಂಗ ನದಿ ವ್ಯವಸ್ಥೆ.

**ವಾಯುಗುಣ :** ಕ್ಯಾಮರೂನಿನದು ಉಷ್ಣವಲಯದ ವಾಯುಗುಣ. ಪರ್ವತ ಪ್ರದೇಶದಲ್ಲಿ ಉಷ್ಣತೆ ಕಡಿಮೆ. ಮಧ್ಯಕ ವಾರ್ಷಿಕ ಉಷ್ಣತೆ ದಕ್ಷಿಣದಲ್ಲಿ 23.8°–26.6° ಸೆ. ಅತ್ಯಂತ ಉತ್ತರದಲ್ಲಿ 32.2° ಸೆ. ಉತ್ತರದಲ್ಲಿ ನವೆಂಬರಿನಿಂದ ಏಪ್ರಿಲ್‌ನವರೆಗೆ ಬೀಸುವ ಈಶಾನ್ಯ ಮಾರುತ ಶುಷ್ಕವಾಗಿಯೂ ತಂಪಾಗಿಯೂ ಧೂಳಿನಿಂದ ಕೂಡಿಯೂ ಇರುತ್ತದೆ. ದಕ್ಷಿಣದಲ್ಲಿ ಈ ಮಾರುತದ ಅವಧಿ ಕಡಿಮೆ. ವರ್ಷದ ಉಳಿದ ಕಾಲದಲ್ಲಿ ನೈಋತ್ಯದಿಂದ ಬೀಸುವ ಗಾಳಿ ಅಟ್ಲಾಂಟಿಕ್ ಸಾಗರದಿಂದ ಮೋಡಗಳನ್ನು ಹೊತ್ತು ತಂದು ಮಳೆ ಸುರಿಸುತ್ತದೆ. ವಾರ್ಷಿಕ ಮಳೆ ವಿಕ್ಟೋರಿಯದಲ್ಲಿ 326 ಚ.ಕಿಮೀ ಚಾಡ್ ಸರೋವರದ ಬಳಿ 38 ಸೆಂಮೀ ಕ್ಯಾಮರೂನ್ ಪರ್ವತದ ಪಶ್ಚಿಮದಲ್ಲಿರುವ ಡಿಬುಂಡ್ಷದಲ್ಲಿ 800 ಸೆಂಮೀ ಮಳೆಯಾಗುತ್ತದೆ.

**ಸಸ್ಯ, ಪ್ರಾಣಿಗಳು:** ಉತ್ತರ ಅಕ್ಷಾಂಶ 4°–6° ಗಳಲ್ಲಿರುವ ಮೈದಾನಗಳು ಮಳೆಗಾಡುಗಳಿಂದ ಆವೃತವಾಗಿವೆ. ಇಲ್ಲಿಯ ಕೆಲವು ಮರಗಳು 60.6 ಮೀ ವರೆಗೂ ಎತ್ತರವಾಗಿರುವುದುಂಟು. ಜವುಗು ಪ್ರದೇಶದಲ್ಲಿ ತಾಳೆ ಜೊಂಡುಗಳೂ ಕರಾವಳಿಯಲ್ಲಿ ಗುಲ್ಮ ವೃಕ್ಷಗಳೂ ಉಂಟು. 1212–2424 ಮೀ ಎತ್ತರದ ಪ್ರದೇಶಗಳ ನಿತ್ಯ ಹಸುರು ವೃಕ್ಷಗಳು ಮೈದಾನದವಕ್ಕಿಂತ ಭಿನ್ನವಾದವು. ಅವುಗಳ ಎತ್ತರ ಕಡಿಮೆ. ಇನ್ನೂ ಎತ್ತರದಲ್ಲಿ ಇತರ ಬಗೆಯ ಮರಗಳೂ ಹುಲ್ಲೂ ಬಿದಿರೂ ಬೆಳೆಯುತ್ತವೆ. ಮಳೆಗಾಡುಗಳ ಉತ್ತರಕ್ಕೆ ಸವನ್ನ ಕಾಡುಗಳುಂಟು.

ದಟ್ಟವಾದ ಮಳೆಗಾಡುಗಳಲ್ಲಿ ಗೊರಿಲ್ಲ, ಚಿಂಪಾಂಜಿ, ಬಗೆಬಗೆಯ ಕೋತಿಗಳು ಇವೆ. ಹುಲ್ಲುಬೆರೆತ ಕಾಡುಗಳಲ್ಲಿ ಆನೆ, ಬಬೂನ್, ಜಿಂಕೆಗಳುಂಟು. ಉತ್ತರದಲ್ಲಿ ಜಿರಾಫೆಗಳನ್ನೂ ಖಡ್ಗಮೃಗಗಳನ್ನೂ ಕಾಣಬಹುದು. ಬಾವಲಿ, ಸಣ್ಣ ಮಾಂಸಾಹಾರಿ ಪ್ರಾಣಿಗಳು ಮತ್ತು ಬಗೆ ಬಗೆಯ ಹಕ್ಕಿಗಳು ಇವೆ. ಹಾವು, ಹಲ್ಲಿ, ಕಪ್ಪೆಗಳೂ ಕಡಿಮೆಯಿಲ್ಲ. ಅಪಾಯಕಾರಿಗಳಾದ ಟ್ಸೆಟ್ಸಿ ನೊಣಗಳು ಕಾಡುಗಳಲ್ಲೂ ಹುಲ್ಲುಗಾಡುಗಳಲ್ಲೂ



ಕ್ಯಾಮರೂನಿನ ಕಲೆಯ ಒಂದು ಮಾದರಿ : ಸಿಂಹಾಸನವೊಂದರ ತಳದಲ್ಲಿರುವ ಮರದ ಕೆತ್ತನೆ. ಲಂಡನಿನ ಬ್ರಿಟಿಷ್ ಮ್ಯೂಸಿಯಂನಲ್ಲಿದೆ

ವ್ಯಾಪಕವಾಗಿವೆ. ಅತ್ಯಂತ ಉತ್ತರದಲ್ಲಿ ದನಗಳನ್ನು ಸಾಕುತ್ತಾರೆ. ಕುದುರೆ, ಕತ್ತೆ, ಒಂಟೆಗಳು ಹೇರುಪ್ರಾಣಿಗಳು, ಹುಲ್ಲುಗಾಡುಗಳಲ್ಲಿ ಜೇನು ಒಂದು ವಿಶೇಷ.

**ಕೃಷಿ, ಕೈಗಾರಿಕೆ :** ಆಫ್ರಿಕದ ಉಷ್ಣವಲಯ ರಾಷ್ಟ್ರಗಳ ಪೈಕಿ ಕ್ಯಾಮ ರೂನಿನಲ್ಲಿಯ ತಲಾ ವರಮಾನ ಅತ್ಯಂತ ಹೆಚ್ಚು. ಆದರೆ ಅದರ ಅರ್ಥವ್ಯವಸ್ಥೆಗೆ ಈಗಲೂ ಕೃಷಿಯೇ ತಳಹದಿ. ಮುಖ್ಯವಾದ ನಗದು ಬೆಳೆಗಳು ಕೋಕೋ, ಕಾಫಿ, ರಬ್ಬರ್ ಮತ್ತು ತಾಳೆ ಎಣ್ಣೆ. ಬಾಳೆಯೂ ಮುಖ್ಯವಾಗಿತ್ತು. ಕಳೆದ ಕೆಲವು ವರ್ಷಗಳಲ್ಲಿ ಅದರ ಪ್ರಾಮುಖ್ಯ

ಕಡಿಮೆಯಾಗಿದೆ. ಹತ್ತಿಯ ಉತ್ಪಾದನೆಯೂ ಈಚೆಗೆ ಅಭಿವೃದ್ಧಿಯಾಗುತ್ತಿದೆ. ಸಾರ್ಗಂ, ಮೆಕ್ಕೆಜೋಳ, ಬತ್ತ, ಕಬ್ಬು, ನೆಲಗಡಲೆ, ಹುರುಳಿ, ಎಳ್ಳು, ತರಕಾರಿ ಇವು ಇತರ ಬೆಳೆಗಳು. ಪಶ್ಚಿಮ ಕ್ಯಾಮರೂನಿನಲ್ಲಿ ಪ್ಲಾಂಟೇಷನ್ ಬೇಸಾಯ ವೃದ್ಧಿಯಾಗಿದ್ದರೆ ಪೂರ್ವ ಕ್ಯಾಮರೂನಿನಲ್ಲಿ ಕೈಗಾರಿಕೆ ಬೆಳೆಯುತ್ತಿದೆ. ಅಲ್ಯೂಮಿನಿಯಂ ಮತ್ತು ರಾಸಾಯನಿಕ ಕೈಗಾರಿಕೆಗಳು ಮುಖ್ಯವಾದವು. ಈಡೀಯಿ ಅಲ್ಯೂಮಿನಿಯಂ ಆಧಾರಿತ ಕೈಗಾರಿಕಾ ಕೇಂದ್ರ. ಡೌಲ ಮುಖ್ಯ ವಾಣಿಜ್ಯ ಕೇಂದ್ರ.

**ಆಡಳಿತ :** ಈಗ ಪೂರ್ವ ಕ್ಯಾಮರೂನ್ ಎನಿಸಿಕೊಂಡಿರುವ ಭಾಗ ಹಿಂದೆ ಫ್ರೆಂಚರಿಗೆ ಸೇರಿತ್ತು. 1958ರಲ್ಲಿ ಅದು ಸ್ವಾಯತ್ತತೆಯನ್ನೂ 1960ರ ಜನವರಿ 1ರಂದು

ಡೌಲ ಪಟ್ಟಣದ ಒಂದು ನೋಟ

ಸ್ವಾತಂತ್ರ್ಯವನ್ನೂ ಪಡೆದು, 1960ರ ಮಾರ್ಚ್ 1ರಂದು ಗಣರಾಜ್ಯವಾಯಿತು. 1961ರ ಅಕ್ಟೋಬರ್ 1ರಂದು ಕ್ಯಾಮರೂನ್ ಗಣರಾಜ್ಯದೊಂದಿಗೆ ಬ್ರಿಟಿಷರ ನ್ಯಾಸಪ್ರದೇಶವಾಗಿದ್ದ ದಕ್ಷಿಣ ಕ್ಯಾಮರೂನ್ಸ್ ಮತ್ತು ಬ್ರಿಟಿಷ್ ಆಡಳಿತದಲ್ಲಿದ್ದ ಉತ್ತರ ಕ್ಯಾಮರೂನ್ಸ್ ಇವು ಸೇರಿ ಕ್ಯಾಮರೂನ್ ಸಂಯುಕ್ತ ಗಣರಾಜ್ಯ ಸ್ಥಾಪಿತವಾಯಿತು. ಕ್ಯಾಮರೂನಿನ ಕೇಂದ್ರ ಸರ್ಕಾರದ ಅಧ್ಯಕ್ಷನೂ ಉಪಾಧ್ಯಕ್ಷನೂ ಸಂಯುಕ್ತ ವಿಧಾನಸಭೆಯ ಸದಸ್ಯರೂ ನೇರ ಸಾರ್ವತ್ರಿಕ ಚುನಾವಣೆಗಳಲ್ಲಿ ಆಯ್ಕೆಯಾಗುತ್ತಾರೆ. ಕೇಂದ್ರ ಮಂತ್ರಿಮಂಡಲವನ್ನು ಅಧ್ಯಕ್ಷ ನೇಮಕಮಾಡುತ್ತಾನೆ. ಕ್ಯಾಮರೂನಿನ ಪೂರ್ವಪಶ್ಚಿಮ ಪ್ರಾಂತ್ಯಗಳಿಗೆ ಪ್ರತ್ಯೇಕವಾದ ಪ್ರಧಾನಿಗಳೂ ಸಂಪುಟಗಳೂ ವಿಧಾನಸಭೆಗಳೂ ಇರುತ್ತವೆ.

**ಸಾರಿಗೆ :** ಪೂರ್ವ ಕ್ಯಾಮರೂನಿಗೂ ಫ್ರೆಂಚ್ ಸಮಭಾಜಕ ವೃತ್ತೀಯ ರಾಜ್ಯಗಳಿಗೂ ಸಾರಿಗೆ ಸಂಪರ್ಕವುಂಟು. ಪಶ್ಚಿಮ ಕ್ಯಾಮರೂನಿನ ಮಾರ್ಗಗಳು ನೈಜೀರಿಯದೊಂದಿಗೆ ಸಂಪರ್ಕ ಕಲ್ಪಿಸಿವೆ. ಡೌಲ–ಯಾವೂಂಡೇ ಮತ್ತು ಯಾವೂಂಡೇ–ಬೆಲಾಬೊ ರೈಲುಮಾರ್ಗಗಳು ಮುಖ್ಯವಾದವು. ಬೆಲಾಬೊದಿಂದ ನ್ಗಾವೂಂಡೇರೆಗೆ ರೈಲುಮಾರ್ಗವಿದೆ. ಪೂರ್ವ ಪಶ್ಚಿಮ ಪ್ರಾಂತ್ಯಗಳನ್ನು ಸೇರಿಸುವ ಮುಖ್ಯ ರಸ್ತೆಯೊಂದುಂಟು. ಡೌಲ ಮತ್ತು ವಿಕ್ಟೋರಿಯ ಮುಖ್ಯ ರೇವುಪಟ್ಟಣಗಳು. ಕ್ಯಾಮರೂನಿನ ಹಲವು ಭಾಗಗಳೊಂದಿಗೂ ಇತರ ದೇಶಗಳೊಂದಿಗೂ ಸಂಪರ್ಕ ಕಲ್ಪಿಸುವ ವಿಮಾನ ಸಂಚಾರ ವ್ಯವಸ್ಥೆಯೂ ಉಂಟು.

ಕ್ಯಾಮರೂನ್ ಸಂಯುಕ್ತ ರಾಜ್ಯಕ್ಕೂ ಪೂರ್ವ ಕ್ಯಾಮರೂನಿಗೂ ರಾಜಧಾನಿ ಯಾವೂಂಡೇ. ಜನಸಂಖ್ಯೆ 1,430,000 (2005). ಪಶ್ಚಿಮ ಕ್ಯಾಮರೂನಿನ ರಾಜಧಾನಿ ಬೂಯೇಯ. (ಟಿ.ಇ.ಎಚ್.)

**ಕ್ಯಾಮರೂನಿನ ಇತಿಹಾಸ :** ಕ್ಯಾಮರೂನ್ ಪ್ರದೇಶವನ್ನು 15ನೆಯ ಶತಮಾನದ ಅಂತ್ಯದಲ್ಲಿ ಪೋರ್ಚುಗೀಸ್ ನಾವಿಕ ಫರ್ನಾವೊ ಡೋಪೋ ಕಂಡುಹಿಡಿಯುವವರೆಗೂ ಅದರ ಇತಿಹಾಸವೇನೂ ತಿಳಿದುಬಂದಿರಲಿಲ್ಲ. 17ನೆಯ ಶತಮಾನದಲ್ಲಿ ಐರೋಪ್ಯರು ಇಲ್ಲಿ ವ್ಯಾಪಾರ ಕೋಠಿಗಳನ್ನು ನಿರ್ಮಿಸಿದರು. ಇಲ್ಲಿಯ ಆದಿವಾಸಿಗಳು ಪರಕೀಯರನ್ನು ದೇಶದ ಒಳಭಾಗಗಳಿಗೆ ಹೋಗದಂತೆ ಅಡ್ಡಿಪಡಿಸುತ್ತಿದ್ದುದರಿಂದ ಬಿಳಿಯರು ದೇಶೀಯ ಮಧ್ಯಸ್ಥಗಾರರಿಗೆ ತಮ್ಮ ಸರಕುಗಳನ್ನು ಕೊಡುತ್ತಿದ್ದರು. ಅವರು ಒಳಭಾಗಗಳಲ್ಲಿ ವ್ಯಾಪಾರ ಮಾಡಿ, ಅಲ್ಲಿಯ ದಂತ, ರಬ್ಬರು ಮತ್ತು ಗುಲಾಮರನ್ನು ತಂದು ಇವರಿಗೆ ಕೊಡುತ್ತಿದ್ದರು. ಡೂಆಲ ಬುಡಕಟ್ಟಿನ ಅಕ್ವ ಮತ್ತು ಬೆಲ್ ಪಂಗಡಗಳ ರಾಜರು ಈ ವಿಧದ ಮಧ್ಯವರ್ತಿ ವ್ಯಾಪಾರದಿಂದ ಸಿರಿವಂತರಾದರು. 1800ರ ವೇಳೆಗೆ ತೀರಪ್ರದೇಶಗಳಲ್ಲಿ ಬ್ರಿಟಿಷರ ಪ್ರಭಾವ ಹರಡಿದುದಲ್ಲದೆ 1837ರಲ್ಲಿ ಬಿಂಬಿಯಾದ ರಾಜ ತನ್ನ ಪ್ರದೇಶಗಳಲ್ಲಿ ಕೆಲವನ್ನು ಬ್ರಿಟನಿಗೆ ಬಿಟ್ಟುಕೊಡುವಂತಾಯಿತು. ಆಫ್ರಿಕ ಮತ್ತು ಅಮೆರಿಕಗಳ ನಡುವೆ ಗುಲಾಮರ ವ್ಯಾಪಾರ ಭರದಿಂದ ಸಾಗುತ್ತಿದ್ದಾಗ 1845ರಲ್ಲಿ ಬ್ಯಾಪ್ಟಿಸ್ಟ್ ಮಿಷನ್ ಸೊಸೈಟಿಯ ಆಲ್ಫ್ರೆಡ್ ಸೇಕರ್(1814–80) ಕ್ಯಾಮರೂನಿನಲ್ಲಿ ತನ್ನ ಸಂಸ್ಥೆಯನ್ನು ಸ್ಥಾಪಿಸಲು ಅಕ್ವ ರಾಜನಿಂದ ಒಪ್ಪಿಗೆ ಪಡೆದ. 1848ರಲ್ಲಿ ಈತ ಬಿಂಬಿಯದಲ್ಲೂ ತನ್ನ ಸಂಸ್ಥೆಯನ್ನು ಸ್ಥಾಪಿಸಿದ. 1858ರಲ್ಲಿ ಬ್ಯಾಪ್ಟಿಸ್ಟರನ್ನು ಫರ್ನಾಂಡೊ ಪೋದಿಂದ ಓಡಿಸಲಾಯಿತು. ಆಗ ಸೇಕರ್ ಅಂಬಾಸ್ ಕೊಲ್ಲಿಯಲ್ಲಿ ವಿಕ್ಟೋರಿಯ ಎಂಬ ಹೆಸರಿನಿಂದ ತನ್ನ ಸಂಸ್ಥೆಯ ಶಾಖೆಯನ್ನು ನೆಲೆಗೊಳಿಸಿದ. 1868ರಲ್ಲಿ ಜರ್ಮನಿಯ ವ್ಯೋರ್‌ಮನ್ ಮೊದಲ ಜರ್ಮನ್ ಕೋಠಿಯನ್ನು ಆ ಪ್ರದೇಶದಲ್ಲಿ ಸ್ಥಾಪಿಸಿದ. 1876ರಲ್ಲಿ ತನ್ನ ದೇಶಕ್ಕೆ ಹಿಂದಿರುಗುವ ಮುನ್ನ ಸೇಕರ್ ಡೂಆಲ ಭಾಷೆಗೆ ಬರವಣಿಗೆಯನ್ನು ಅಳವಡಿಸಿದನಲ್ಲದೆ, ಅಲ್ಲಿಯ ಗುಲಾಮ ವ್ಯಾಪಾರ ಪದ್ಧತಿಯನ್ನು ನಿರ್ಮೂಲಗೊಳಿಸುವ ಕಾರ್ಯದಲ್ಲಿ ಯಶಸ್ವಿಯಾದ.

1832ರ ಸುಮಾರಿನಲ್ಲಿ ಡೂಆಲದ ನಾಯಕರು ತಮ್ಮ ಪ್ರದೇಶವನ್ನು ಬ್ರಿಟನಿಗೆ ವಶಪಡಿಸಿಕೊಳ್ಳಬೇಕೆಂದು ಮಾಡಿದ ಬೇಡಿಕೆಗೆ ಸರಿಯಾದ ಪ್ರತಿಕ್ರಿಯೆ ಬ್ರಿಟನಿನಿಂದ ದೊರಕಲಿಲ್ಲ. ಅದರಿಂದ ಉತ್ತೇಜಿತರಾದ ಜರ್ಮನರು 1884ರಲ್ಲಿ ಕ್ಯಾಮರೂನ್ ಪ್ರದೇಶವನ್ನು ವಶಪಡಿಸಿಕೊಂಡರು. ಒಡನೆ ಬ್ರಿಟಿಷರೂ ಫ್ರೆಂಚರೂ ಧಾವಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಬ್ರಿಟಿಷರು ಕ್ಯಾಮರೂನ್ ಮೇಲೆ ಜರ್ಮನರ ಅಧಿಕಾರವನ್ನು ಒಪ್ಪಿಕೊಂಡರು. ವಿಕ್ಟೋರಿಯದ ಬ್ಯಾಪ್ಟಿಸ್ಟ್ ಮಿಷನ್ ಸಹ ಜರ್ಮನರ ವಶವಾಗಿ ಅಲ್ಲಿ ಬಾಸೆಲ್ ಮಿಷನ್ನಿನವರು ನೆಲಸಿದರು. ಜರ್ಮನರ ಅಧಿಕಾರ ನಿಧಾನವಾಗಿ ಒಳಪ್ರದೇಶಗಳಿಗೂ ಹರಡಿ, ಜರ್ಮನರ ನೇರ ಆಡಳಿತ ಕ್ರಮೇಣ ಸ್ಥಾಪಿತವಾಯಿತು.

ವಸಾಹತಿನ ಪ್ರಾಕೃತಿಕ ಸಿರಿಯನ್ನು ರೂಢಿಸಿಕೊಳ್ಳುವುದು ಜರ್ಮನರಿಗೆ ಸುಲಭ ಸಾಧ್ಯವಾಗಿರಲಿಲ್ಲ. ವ್ಯಾಪಾರ ಮೊದಲ ಆಕರ್ಷಣೆಯಾಗಿತ್ತು. ಕಾಡುಗಳಲ್ಲಿ ದೊರೆಯುತ್ತಿದ್ದ ರಬ್ಬರು ಮತ್ತು ತಾಳೆ ಎಣ್ಣೆಗಳೂ ದಂತವೂ ಕ್ರಮೇಣ ಕಡಿಮೆಯಾದುವು. ಆದ್ದರಿಂದ ದೊಡ್ಡ ತೋಟಗಳನ್ನು ಬೆಳೆಸಿ, ರಬ್ಬರ್, ಕೋಕೋ ತಾಳೆ ಮುಂತಾದವನ್ನು ಬೆಳೆಯಲಾರಂಭಿಸಿದರು. 1909–13ರಲ್ಲಿ 312 ಕಿಮೀ ರೈಲುಮಾರ್ಗವನ್ನು ನಿರ್ಮಿಸಿ ಸಾರಿಗೆ ಪದ್ಧತಿಯನ್ನು ಸುಲಭಗೊಳಿಸಿದರೂ ನದಿಗಳ ಮೂಲಕ ಸಾರಿಗೆ ಸಾಧ್ಯವಿಲ್ಲದಿದ್ದುದರಿಂದ ಜನರ ತಲೆಗಳ ಮೇಲೆ ಸರಕುಗಳನ್ನು ಹೊರಿಸಿ ಸಾಗಿಸಬೇಕಾಗಿತ್ತು. 1912ರ ವೇಳೆಗೆ 21854 ಹೆಕ್ಟೇರ್‌ಗಳಷ್ಟು ತೋಟಗಳಿದ್ದರೂ ಅವು ವ್ಯಾಪಾರದ ಐದನೆಯ ಒಂದರಷ್ಟು ಸರಕುಗಳನ್ನು ಮಾತ್ರ ಒದಗಿಸುತ್ತಿದ್ದುವು. 1911ರಲ್ಲಿ ಜರ್ಮನಿ ಮೊರಾಕ್ಕೋ ಮೇಲೆ ಫ್ರೆಂಚರ ರಕ್ಷಣೆಯ ಹಕ್ಕನ್ನು ಒಪ್ಪಿಕೊಂಡದ್ದರ ಫಲವಾಗಿ ಭೂಮಧ್ಯರೇಖೆಯ ಬಳಿ ಫ್ರೆಂಚ್ ವಶದಲ್ಲಿದ್ದ 1,07,000 ಚ.ಕಿಮೀ ಪರಿವರ್ತಿಸಿ ಪ್ರದೇಶವನ್ನು ಪಡೆದುಕೊಂಡಿತು. ಆದರೆ 1919ರ ವರ್ಸೇಲ್ಸ್ ಶಾಂತಿ ಒಪ್ಪಂದದ ರೀತ್ಯ ಆ ಭಾಗವನ್ನು ಫ್ರಾನ್ಸಿಗೆ ಹಿಂದಿರುಗಿಕೊಡಬೇಕಾಯಿತು.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು ಕ್ಯಾಮರೂನನ್ನು ಗೆದ್ದುವು. ಅದರ ಹೆಚ್ಚಿನ ಭಾಗವನ್ನು ಫ್ರಾನ್ಸೂ ನೈಜೀರಿಯದ ಪಕ್ಕದ ಅಲ್ಪಪ್ರದೇಶವನ್ನು ಬ್ರಿಟನ್ನೂ ವಶಪಡಿಸಿಕೊಂಡುವು. ಆ ಪ್ರದೇಶಗಳ ಆಡಳಿತ ನಡೆಸುವ ಹಕ್ಕನ್ನು ಲೀಗ್ ಆಫ್ ನೇಷನ್ಸ್ ಫ್ರಾನ್ಸ್ ಮತ್ತು ಬ್ರಿಟನ್‌ಗಳಿಗೆ ವಿಧ್ಯುಕ್ತವಾಗಿ ಒಪ್ಪಿಸಿತು. ಎರಡನೆಯ ಮಹಾಯುದ್ಧದ ಅನಂತರ ಈ ವ್ಯವಸ್ಥೆಯನ್ನು ಮುಂದುವರಿಸುವಂತೆ ವಿಶ್ವಸಂಸ್ಥೆ ಆದೇಶ ನೀಡಿತು.

ಬ್ರಿಟಿಷರ ಆಡಳಿತಕ್ಕೊಳಪಟ್ಟ ದಕ್ಷಿಣ ಮತ್ತು ಉತ್ತರ ಕ್ಯಾಮರೂನ್ ಎಂಬ ಎರಡು ವಿಭಾಗಗಳಲ್ಲಿ ದಕ್ಷಿಣ ವಿಭಾಗ ಒಬ್ಬ ಕಮಿಷನರ್ ಅಧಿಕಾರಕ್ಕೊಳಪಟ್ಟಿತ್ತು. ಆತ ನೈಜೀರಿಯದ ಬ್ರಿಟಿಷ್ ಗವರ್ನರ್–ಜನರಲ್‌ನ ಅಧಿಕಾರಕ್ಕೊಳಪಟ್ಟಿದ್ದ. ಸ್ಥಳೀಯ ಆಡಳಿತವನ್ನು ದೇಶೀಯ ನಾಯಕರು ಮತ್ತು ಅಧಿಕಾರಿಗಳಿಗೆ ವಹಿಸಲಾಗಿತ್ತು. 1954ರಿಂದ ದಕ್ಷಿಣ ಕ್ಯಾಮರೂನ್ ಸ್ವಯಮಾಡಳಿತ ಪ್ರಾಂತ್ಯವಾಯಿತು. ಉತ್ತರ ಕ್ಯಾಮರೂನ್ ಉತ್ತರ ನೈಜೀರಿಯ ಪ್ರದೇಶದ ಆಡಳಿತಕ್ಕೊಳಪಟ್ಟಿತ್ತು. ನೈಜೀರಿಯಕ್ಕೆ ಸ್ವಾತಂತ್ರ್ಯ ದೊರಕುವ ಮುನ್ನ 1959ರಲ್ಲಿ ನಡೆದ ಜನಮತಗಣನೆಯಲ್ಲಿ ಉತ್ತರ ಕ್ಯಾಮರೂನ್ ನೈಜೀರಿಯದೊಂದಿಗೆ ಸೇರುವ ಇಚ್ಛೆಯನ್ನು ಪ್ರಕಟಿಸಿತು. ಮತ್ತೆ 1961ರ ಜನಮತಗಣನೆಯಲ್ಲೂ ಉತ್ತರ ಕ್ಯಾಮರೂನ್ ಅದೇ ಇಚ್ಛೆಯನ್ನು ಪ್ರಕಟಿಸಿ ನೈಜೀರಿಯದೊಂದಿಗೆ ಸೇರಿತು. ದಕ್ಷಿಣ ಕ್ಯಾಮರೂನ್ ಈ ಎರಡು ಜನಮತಗಣನೆಗಳಲ್ಲೂ ಕ್ಯಾಮರೂನ್ ಗಣರಾಜ್ಯದೊಂದಿಗೆ ಐಕ್ಯವಾಗುವ ಇಚ್ಛೆಯನ್ನು ಪ್ರಕಟಿಸಿ 1961 ಅಕ್ಟೋಬರ್ 1ರಂದು ಅದರೊಂದಿಗೆ ಲೀನವಾಯಿತು.

ಫ್ರೆಂಚರು ತಮ್ಮ ಆಡಳಿತಕ್ಕೊಳಪಟ್ಟಿದ್ದ ಪ್ರದೇಶಗಳಿಗೆ ರಾಜಕೀಯ ಮತ್ತು ಆರ್ಥಿಕ ಸ್ವಯಮಾಡಳಿತವನ್ನು ನೀಡಿದ್ದರು. ದ್ವಿತೀಯ ಯುದ್ಧಕಾಲದಲ್ಲಿ ಸ್ವತಂತ್ರ ಫ್ರೆಂಚ್ ಚಳವಳಿಗೆ ಸೇರಿದ ಈ ಪ್ರಾಂತ್ಯ ಜನರಲ್ ಚಾರ್ಲ್ಸ್ ಡ ಗಾಲನ ಕೇಂದ್ರ ಕಾರ್ಯಸ್ಥಾನವಾಗಿತ್ತು. 1960ರ ಜನವರಿ 1ರಂದು ಕ್ಯಾಮರೂನ್ ಗಣರಾಜ್ಯವಾಯಿತು. *

**ಕ್ಯಾಮಿಡೋರಿಯ :** ಅರಿಕೇಸೀ(ಪಾಮೀ) ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯಜಾತಿ. ಈ ಜಾತಿಯಲ್ಲಿ ಸುಮಾರು 100ಕ್ಕೂ ಹೆಚ್ಚು ಪ್ರಭೇದಗಳಿವೆ. ಎಲ್ಲವೂ ನೆರಳಿನಲ್ಲಿ ಬೆಳೆಯುವ ಮೆದುವಾದ ಮತ್ತು ಸೂಕ್ಷ್ಮಪ್ರಕೃತಿಯ ಪೊದೆಗಳು; ಹಸುರಾದ, ಮೆದುವಾದ ಮತ್ತು ಗೆಣ್ಣುಗಳಿರುವ ಒಂಟಿ ಇಲ್ಲವೆ ಗುಂಪಾಗಿರುವ ಕಾಂಡಗಳನ್ನೊಳಗೊಂಡಿವೆ. ಕಾಂಡದ ತುದಿಯಲ್ಲಿ ಗರಿರೂಪದ (ಪಿನೇಟ್) ಎಲೆಗಳು ಕಿರೀಟದ ರೀತಿಯಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲುಗಳು ಈ ಗರಿಗಳ ಕೇಂದ್ರಭಾಗದಿಂದ ಹೊರಬಂದಿರುತ್ತವೆ. ಕ್ಯಾಮಿಡೋರಿಯದ ವಿವಿಧ ಪ್ರಭೇದಗಳನ್ನು ಗುಂಪಾಗಿ ಬೆಳೆಯುವ ಮತ್ತು ಒಂಟಿಯಾಗಿ ಬೆಳೆಯುವ ಸಸ್ಯಗಳು ಎಂದು ಎರಡು ಬಗೆಗಳಾಗಿ ವಿಂಗಡಿಸಬಹುದು.

ಗುಂಪುಕಾಂಡವುಳ್ಳ ಪ್ರಭೇದಗಳಲ್ಲಿ ಮುಖ್ಯವಾದವು ಕ್ಯಾಎರುಂಪೆನ್ಸ್, ಕ್ಯಾಸೈಫ್ರಿಟ್ಜಿಯೈ, ಕ್ಯಾ.ಸ್ಟೊಲೋನಿಫೆರ ಮತ್ತು ಕ್ಯಾ. ಡೆಸ್‌ಮಿನಕಾಯ್ಡಸ್. ಕ್ಯಾಮಿಡೋರಿಯ ಅರ್ಮೆನ್‌ಬರ್ಜಿಯಾನ ಮತ್ತು ಕ್ಯಾ. ಗ್ಲಾಯಿಸ್ಸಿಫೋಲಿಯ ಪ್ರಭೇದಗಳು ಒಂಟಿ ಕಾಂಡವುಳ್ಳವುಗಳಲ್ಲಿ ಮುಖ್ಯವಾದವು. (ಡಿ.ಎಂ.)

**ಕ್ಯಾಮೀಲಿಯನ್ :** ಆಕಾಶದಲ್ಲಿರುವ 88 ನಕ್ಷತ್ರ ಪುಂಜಗಳಲ್ಲಿ ಒಂದು. ಇದರ ವ್ಯಾಪ್ತಿ ವಿಷುವದಂಶ 7ಗಂ.40 ಮಿ.–13ಗಂ.35 ಮಿ. ಮತ್ತು ಘಂಟಾ ವೃತ್ತಾಂಶ $75^{\circ}$–$82^{\circ}$ ದ. ಬರಿಗಣ್ಣಿನಿಂದ ಈ ಪುಂಜವನ್ನು ಗುರುತಿಸುವುದು ಕಷ್ಟ.. ಇದು ಊಸರವಳ್ಳಿಯಂತೆ. ಆದ್ದರಿಂದ ಚಂಚಲವರ್ಣಿಕ ಎಂದು ಹೆಸರಿಸಲಾಗಿದೆ. *

**ಕ್ಯಾಮಿಲೊ ಗೊಲ್ಗಿ:** 1843–1926. ನೊಬೆಲ್ ಪುರಸ್ಕೃತ ಇಟಲಿಯ ವೈದ್ಯ. ಇಟಲಿಯ ಕೊಟ್ರೆನೊದಲ್ಲಿ 1843ರಲ್ಲಿ ಜನಿಸಿದ. ಶರೀರವಿಜ್ಞಾನದ ಸಂಶೋಧನೆಗಾಗಿ 1906ರಲ್ಲಿ ಇವನಿಗೆ ನೊಬೆಲ್ ಪ್ರಶಸ್ತಿ ಲಭಿಸಿದೆ. ಇವನ ತಂದೆಯೂ ವೈದ್ಯ. ಪಾವಿಯಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಮುಗಿಸಿದ ಕ್ಯಾಮಿಲೊ ತನ್ನ ಬಹುಪಾಲು ಅಧ್ಯಯನವನ್ನು ನರಮಂಡಲದ ಕೇಂದ್ರದ ಅಧ್ಯಯನಕ್ಕೆ ಮೀಸಲಾಗಿಟ್ಟಿದ್ದ. ಇವನ ಸಂಶೋಧನ ವಿಷಯ ನರಕೋಶದಲ್ಲಿ ಲೋಹ ಸೇರ್ಪಡೆಯ ಪರಿಣಾಮ. ಮಿದುಳಿನಿಂದ ಬಂದಿರುವ ನರಗಳ ಜೀವಕೋಶಗಳ ಹಾದಿಯನ್ನು ಕಂಡುಹಿಡಿದು ಅದಕ್ಕೆ ಬ್ಲಾಕ್‌ರಿಯಾಕ್ಷನ್ ಎಂಬ ಹೆಸರು ಇಟ್ಟ, ಮುಂದೆ ಇದು ಗೊಲ್ಗಿ ಮೆಥಡ್ ಎಂದೇ ಹೆಸರಾಯಿತು. ಗೊಲ್ಗಿಯು ಸ್ನಾಯುರಜ್ಜು ಜ್ಞಾನವಾಹಕ ಅಂಗವನ್ನು ಸಂಶೋಧಿಸಿದ. ಅದು ಗೊಲ್ಗಿ ಗ್ರಹಿಸುವಿಕೆ ಎಂದು ಪ್ರಸಿದ್ಧವಾಗಿದೆ. ಇದಲ್ಲದೆ ಪ್ಲಾಸ್ಮೋಡಿಯಂನ ಜೀವನ ಚಕ್ರವನ್ನು ಅಭ್ಯಸಿಸಿದ. ಮಲೇರಿಯಾದಲ್ಲಿ ಕಂಡುಬರುವ ಕ್ವಾರ್ಟನ ಜ್ವರ ಕಾಲಗಳನ್ನು ಅಧ್ಯಯನ ಮಾಡಿದ. ಅದನ್ನು ಪ್ಲಾಸ್ಮೋಡಿಯಂ ವಿವಾಕ್ಸ್ ಮತ್ತು ಪ್ಲಾಸ್ಮೋಡಿಯಂ ಮಲೇರಿಯಾ ಎನ್ನುತ್ತಾರೆ.

ಈತ 1900ರಲ್ಲಿ ಅಂಬರ್‌ಟೊ ರಾಜನಿಂದ ಸೆನೆಟರ್ ಪದವಿ ಪಡೆದ. 1906ರಲ್ಲಿ ಸ್ಯಾಂಟಿಯಾಗೊ ರಮೊನ್ ವೈ ಕಾಜಲ್‌ನೊಂದಿಗೆ ಈತ ಶರೀರ ರಚನಾವಿಜ್ಞಾನದಲ್ಲಿ ನೊಬೆಲ್ ಪುರಸ್ಕಾರ ಪಡೆದ. ಈತ ಇಟಲಿಯ ಪಾವಿಯಾದಲ್ಲಿ 1926ರ ಜನವರಿ 21ರಂದು ನಿಧನಹೊಂದಿದ. (ಸಿ.ಎಸ್.ಪಿ.)

**ಕ್ಯಾಮಿಲೊ ಜೋಸೇ ಸೆಲಾ:** 1916–. ಸ್ಪ್ಯಾನಿಷ್ ನೊಬೆಲ್ ಪ್ರಶಸ್ತಿ ಪುರಸ್ಕೃತ (1989) ಕಾದಂಬರಿಕಾರ, ಕಥೆಗಾರ ಹಾಗೂ ಪ್ರಸಿದ್ಧ ಪ್ರಬಂಧಕಾರ. ಇವನು 1916ರ ಮೇ 11ರಂದು ಸ್ಪೇನ್‌ನ ಗ್ಯಾಲಿಸಿಯ ಪ್ರದೇಶದಲ್ಲಿ ಮಧ್ಯಮವರ್ಗದ ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದ. ಇವನ ತಂದೆ ಸ್ಪ್ಯಾನಿಷ್, ತಾಯಿ ಬ್ರಿಟಿಷ್. ಸೆಲಾ ಬಾಲ್ಯದಲ್ಲಿರುವಾಗಲೇ ಇವನ ಕುಟುಂಬ ಮ್ಯಾಡ್ರಿಡ್‌ಗೆ ಬಂದು ನೆಲಸಿತು. ಇವನು ಶಾಲೆಯ ವಿದ್ಯಾಭ್ಯಾಸದ ಅನಂತರ ವೈದ್ಯವಿಜ್ಞಾನವನ್ನು ತನ್ನ ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡರೂ ಇವನ ಹೆಚ್ಚಿನ ಒಲವು ಸಾಹಿತ್ಯ ಹಾಗೂ ತತ್ತ್ವಶಾಸ್ತ್ರದೆಡೆಗೆ ಬೆಳೆಯಿತು. ಸ್ವತಃ ಸೆಲಾ ಸ್ಪ್ಯಾನಿಷ್ ಸಿವಿಲ್ ಯುದ್ಧಗಳಲ್ಲಿ ಭಾಗವಹಿಸಿ ಗಾಯಗೊಂಡಿದ್ದರ ಪರಿಣಾಮ ಇವನಿಗೆ ಸ್ಪ್ಯಾನಿಷ್ ಸಿವಿಲ್ ಯುದ್ಧಗಳ ಕ್ರೌರ್ಯದ ನೈಜ ಪರಿಚಯವಿತ್ತು. ಯುದ್ಧದ ಅನಂತರ ಇವನ ವಿದ್ಯಾಭ್ಯಾಸ ಮ್ಯಾಡ್ರಿಡ್‌ನಲ್ಲಿ ಮುಂದುವರಿಯಿತು.

ಉತ್ಸಾಹಶೀಲ ಸ್ವಭಾವದ ಸೆಲಾ ತನ್ನ ಬಿಡುವಿನ ಸಮಯವನ್ನು ಯಾವುದಾದರೂ ಪ್ರಯೋಗಗಳಿಗೆ ಮೀಸಲಿಡುತ್ತಿದ್ದ. ಮನುಷ್ಯನ ನಿರಾಸೆಯ ನೋವಿನ ಪರಿಚಯವನ್ನು ಹೊಂದಿದ್ದ ಇವನ ದ ಫ್ಯಾಮಿಲಿ ಆಫ್ ಪಾಸ್ಕ್ಯುಲ ಡಾರ್ಟೆ (1942) ಕೃತಿ ಇವನ ಗುಣಗಳಿಗೆ ಸಾಕ್ಷಿಯೆಂಬಂತಿದೆ. ಡಾನ್ ಕ್ವಿಕ್ಸೋಟನ ಅನಂತರದಲ್ಲಿ ಅತಿ ಹೆಚ್ಚು ಓದುಗರನ್ನು ತನ್ನದಾಗಿಸಿಕೊಂಡ ಕೃತಿ ಇದಾಗಿದೆ. ಪ್ಯಾಪೆಲೆಸ್ ಡಿ ಸನ್ ಅರಮ್‌ಡಾನ್ಸ್ ಎನ್ನುವ ಪತ್ರಿಕೆಯನ್ನೂ ಪ್ರಕಟಿಸಿದ. ಇವನ ಸಮಗ್ರ ಕೃತಿಗಳು 17 ಸಂಪುಟಗಳಲ್ಲಿ ಪ್ರಕಟಗೊಂಡಿವೆ.

ಪಬೆಲ್ಲೊನ್ ಡಿ ರೆ ಪೊಸೊ (1943); ಲಾ ಕೊಲ್‌ಮೆನಾ–ಎ ಮ್ಯಾಡ್‌ರಿಡ್ ಕೆಫೆ 1951ರಲ್ಲಿ ಪ್ರಕಟವಾಗಿ 1963ರವರೆಗೆ ಸ್ಪೇನ್‌ನಲ್ಲಿ ನಿಷೇಧಕ್ಕೊಳಗಾಯಿತು; ಮಿಸೆಸ್ ಕಾಲ್ಡ್‌ವೆಲ್ ಹಬ್ಲ ಕಾನ್ ಸು ಹಿಜೊ (1953); ಲಾ ಕಟಿರ ಮೊದಲಾದವು ಇವನ ಬಹು ಪ್ರಖ್ಯಾತ ಕೃತಿಗಳು. ವಯಾಜೆ ಅ ಲ ಅಲ್ಕಾರಿಯ (1948) ಮತ್ತು ಡೆಲ್‌ಮಿನೊ ಅಲ್ ಬಿದಸೊಅ (1952) – ಇವು ಇವನ ಪ್ರಸಿದ್ಧ ಪ್ರವಾಸ ಕಥನಗಳು.

1957ರಲ್ಲಿ ಸ್ಪ್ಯಾನಿಷ್ ಅಕಾಡೆಮಿಯ ಸದಸ್ಯನಾಗಿದ್ದ ಇವನಿಗೆ ಹಲವು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟೊರೇಟ್ ಪದವಿಗಳು ಸಂದಿವೆ. 1984ರಲ್ಲಿ ಸ್ಪೇನ್‌ನಿಂದ ಎಲ್ ಪ್ರಮಿಯೊ ನ್ಯಾಸಿಯೊನಲ್ ದಿ ಲಿಟರೇಚುರ ಪ್ರಶಸ್ತಿಯೂ 1987ರಲ್ಲಿ ಇವನ ಸಮಗ್ರ ಕೃತಿಗಳಿಗಾಗಿ ಎಲ್ ಪ್ರಮಿಯೊ ಪ್ರನ್ಸಿಪೆ ದಿ ಅಸ್ತುರಿಯಾಸ್ ದಿ ಲಾಷೆಟ್ರಾಸ್ ಪ್ರಶಸ್ತಿಯೂ ಲಭಿಸಿವೆ. (ಸಿ.ಎಸ್.ಪಿ.)

**ಕ್ಯಾಮೆಲೊಪಾರ್ಡಸ್ :** ಆಕಾಶದಲ್ಲಿರುವ 88 ನಕ್ಷತ್ರ ಪುಂಜಗಳಲ್ಲಿ ಒಂದು. ಇದರ ವ್ಯಾಪ್ತಿ ವಿಷುವದಂಶ 3 ಗಂ. 40 ಮಿ.–14 ಗಂ. 30 ಮಿ. ಮತ್ತು ಘಂಟಾ ವೃತ್ತಾಂಶ $53^{\circ}$–$86^{\circ}$ ಉ. ಬರಿಗಣ್ಣಿನಿಂದ ಈ ಪುಂಜವನ್ನು ಗುರುತಿಸುವುದು ಕಷ್ಟ. *

**ಕ್ಯಾರಕ್ಯಾಲ್ :** ಕಾರ್ನಿವೊರಗಣದ *ಫೆಲಿಡಿ* ಕುಟುಂಬಕ್ಕೆ ಸೇರಿದ ಮಾಂಸಾಹಾರಿಯಾದ ಚತುಷ್ಪಾದ ಪ್ರಾಣಿ. ಫೆಲಿಸ್ ಅಥವಾ ಲಿಂಕ್ಸ್ ಕ್ಯಾರಕ್ಯಾಲ್ ಎಂಬುದು ಇದರ ವೈಜ್ಞಾನಿಕ ಹೆಸರು. ಪರ್ಶಿಯನ್ ಲಿಂಕ್ಸ್ ಎಂದೂ ಇದನ್ನು ಕರೆಯುವುದಿದೆ. ಆಫ್ರಿಕ ಮತ್ತು ನೈರುತ್ಯ ಏಷ್ಯಗಳಲ್ಲಿ ಇದರ ವ್ಯಾಪ್ತಿ ಹೆಚ್ಚು. ಗಾತ್ರದಲ್ಲಿ ತೋಳಕ್ಕಿಂತ ದೊಡ್ಡದು. ದೇಹದ ಬಣ್ಣ ಅಚ್ಚ ಕಂದು ಅಥವಾ ದ್ರಾಕ್ಷಾರಸದ ಕೆಂಪು. ಕಣ್ಣಿನ ಮೇಲ್ಭಾಗದಲ್ಲಿ ಬಿಳಿಯಬಣ್ಣದ ಒಂದು ಚುಕ್ಕೆ ಇದೆ. ಕಿವಿಯ ತುದಿಯಲ್ಲಿ ಉದ್ದವಾದ ಕಪ್ಪು ಕೂದಲಿನ ಗೊಂಚಲು ಇದೆ. ಕ್ಯಾರಕ್ಯಾಲ್ ಅತ್ಯಂತ ಬಲಶಾಲಿ ಮತ್ತು ಕ್ರೂರಿ. ಹುಲ್ಲು ಪೊದೆ ಮುಂತಾದೆಡೆ ವಾಸಿಸುತ್ತದೆ. ಸಣ್ಣ ಜಿಂಕೆಗಳು, ಮೊಲ, ಕಾಡುಕೋಳಿ ಮೊದಲಾದವು ಇದರ ಮೆಚ್ಚಿನ ಆಹಾರ. ಈ ಪ್ರಾಣಿಯನ್ನು ಪಳಗಿಸಿ ಚಿಕ್ಕ ಚತುಷ್ಪಾದಿಗಳನ್ನೂ ಪಕ್ಷಿಗಳನ್ನೂ ಹಿಡಿಯುವುದಕ್ಕೆ ಉಪಯೋಗಿಸುತ್ತಾರೆ. (ಎಸ್.ಎನ್.ಕೆಯು.)

**ಕ್ಯಾರಟ್ :** ಅಂಬೆಲಿಫೆರೀ ಕುಟುಂಬಕ್ಕೆ ಸೇರಿದ ಜನಪ್ರಿಯ ತರಕಾರಿ ಸಸ್ಯ. ಡಾಕಸ್ ಕೆರೋಟ ಎಂಬುದು ಇದರ ವೈಜ್ಞಾನಿಕ ನಾಮ. ಕನ್ನಡದಲ್ಲಿ ಗಜ್ಜರಿ ಎಂದು ಕರೆಯುತ್ತಾರೆ. ಹೆಚ್ಚಿನ ಪರಿಮಾಣದ ಆಹಾರ ಶೇಖರಣೆಯಿಂದ ಬಹಳ ದಪ್ಪವಾಗಿ ಬೆಳೆಯುವ ತಾಯಿಬೇರು ಮತ್ತು ಹೈಪೊಕಾಟೈಲ್ ಭಾಗಗಳೇ ತರಕಾರಿಯಾಗಿ ಉಪಯೋಗವಾಗುವ ಭಾಗಗಳು. ಪಿಷ್ಟ ಮತ್ತು ಎ ವಿಟಮಿನ್ನಿನ ಪೂರ್ವಗಾಮಿ ವಸ್ತುಗಳಾದ ಕ್ಯಾರಟೀನುಗಳು ಈ ಭಾಗಗಳಲ್ಲಿ ಅತ್ಯಧಿಕ ಪರಿಮಾಣದಲ್ಲಿ ಸಂಗ್ರಹವಾಗಿವೆ.



ಇವು ಬಹಳ ಪುಷ್ಟಿದಾಯಕ ವಸ್ತುಗಳು. ಕ್ಯಾರಟ್ಟಿನ ಬಣ್ಣಕ್ಕೆ ಕ್ಯಾರಟೀನೇ ಕಾರಣ. ಕ್ಯಾರಟ್ಟಿನ ಎಲೆಗಳಲ್ಲೂ ಪ್ರೋಟೀನು, ಖನಿಜಗಳು ಮತ್ತು ವಿಟಮಿನ್ನುಗಳಿರುವುದರಿಂದ ಇವು ಕೂಡ ಬಹಳ ಪುಷ್ಟಿದಾಯಕಗಳು.

ಕ್ಯಾರಟ್ ಮಧ್ಯ ಏಷ್ಯದ ಮೂಲವಾಸಿಯೆಂದು ಭಾವನೆ. ಬಹುಶಃ ಪಂಜಾಬ್ ಇಲ್ಲವೆ ಕಾಶ್ಮೀರದ ಪರ್ವತಪ್ರದೇಶಗಳೇ ಇದರ ಉಗಮಸ್ಥಾನ. ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿ ಪ್ರಸಕ್ತಶಕ ಪೂರ್ವದಲ್ಲೇ ಇದನ್ನು ಬೆಳೆಸಲಾಗುತ್ತಿತ್ತೆಂದು ಹೇಳಲಾಗಿದೆ. ಚೀನದಲ್ಲಿ ಕ್ಯಾರಟ್ಟಿನ ಬೇಸಾಯ 13ನೆಯ ಶತಮಾನದಲ್ಲಿ ಆರಂಭವಾಯಿತು. 16ನೆಯ ಶತಮಾನದಲ್ಲಿ ಇಂಗ್ಲೆಂಡಿಗೆ ಕಾಲಿಟ್ಟ ಕ್ಯಾರಟ್ ಅನಂತರ ಅಮೆರಿಕವನ್ನು ಪ್ರವೇಶ ಮಾಡಿತು. ಬರಬರುತ್ತ ಪ್ರಪಂಚದಾದ್ಯಂತ ಹರಡಿತು. ಇದರ ಬೇಸಾಯ ಪ್ರಮುಖವಾಗಿ ಸಮಶೀತೋಷ್ಣವಲಯಗಳಲ್ಲಿದೆ.

ಸಮಶೀತೋಷ್ಣವಲಯಗಳಲ್ಲಿ ಕ್ಯಾರಟ್ ಒಂದು ದ್ವೈವಾರ್ಷಿಕ ಬೆಳೆ. ಉಷ್ಣವಲಯಗಳಲ್ಲಿ (ಉದಾ: ಭಾರತ) ಇದು ಏಕವಾರ್ಷಿಕ. ಸುಮಾರು 1'–4' ಎತ್ತರಕ್ಕೆ ಬೆಳೆಯುತ್ತದೆ. 2"–12" ಉದ್ದದ ದಪ್ಪನೆಯ ರಸಭರಿತ ತಾಯಿಬೇರೂ ಇದರ ಮೇಲ್ತುದಿಯಿಂದ ಹೊರಡುವ ಕಾಂಡವೂ ಕ್ಯಾರಟ್ಟಿನ ಮುಖ್ಯ ಲಕ್ಷಣಗಳು. ಕಾಂಡ ವಿಪುಲವಾಗಿ ಕವಲೊಡೆಯುತ್ತದೆ. ಇದರಿಂದ ಹಲವಾರು ಗರಿರೂಪದ ಸಂಯುಕ್ತ ಮಾದರಿಯ ಎಲೆಗಳು ಹುಟ್ಟುತ್ತವೆ. ಏಕವಾರ್ಷಿಕ ಬಗೆಗಳಲ್ಲಿ ಮೊದಲ ವರ್ಷದ ಬೆಳವಣಿಗೆಯ ಅವಧಿಯ ಕೊನೆಗೂ ದ್ವೈವಾರ್ಷಿಕ ಬಗೆಗಳಲ್ಲಿ ಎರಡನೆಯ ವರ್ಷದ ಅಂತ್ಯದಲ್ಲೂ ಸಂಯುಕ್ತ ಛತ್ರಮಂಜರಿ ಮಾದರಿಯ ಅನೇಕ ಹೂಗೊಂಚಲುಗಳು ಹೊರಡುತ್ತವೆ. ಒಂದೊಂದರಲ್ಲೂ ಅಸಂಖ್ಯಾತ ಹೂಗಳಿವೆ. ಹೂಗಳ ಬಣ್ಣ ಬಿಳಿ ಇಲ್ಲವೆ ಹಳದಿ. ಹೂಗೊಂಚಲಿನ ಹೊರ ಸುತ್ತಿನ ಹೂಗಳಲ್ಲಿ ಅಸಮರೀತಿಯ ದಳಗಳೂ ಒಳಗಿನ ಹೂಗಳಲ್ಲಿ ಸಮರೀತಿಯ ದಳಗಳೂ ಇವೆ. ಫಲ ಸ್ಕಿಜೋಕಾರ್ಪ್ ಬಗೆಯದರು. ಬಲಿತಾಗ ಒಂದೊಂದು ಫಲವೂ ಏಕಬೀಜವುಳ್ಳ ಎರಡು ಭಾಗಗಳಾಗಿ ಒಡೆಯುತ್ತದೆ. ಈ ಭಾಗಗಳಿಗೆ ಮೆರಿಕಾರ್ಪುಗಳೆಂದು ಹೆಸರು.

ಕ್ಯಾರಟ್ಟಿನಲ್ಲಿ ಪ್ರಮುಖವಾಗಿ ಯುರೋಪಿಯನ್ ಮತ್ತು ಏಷ್ಯನ್ ಎಂಬ ಎರಡು ಬಗೆಗಳಿವೆ. ಒಂದೊಂದರಲ್ಲೂ ಹಲವಾರು ತಳಿಗಳಿವೆ. ಇವುಗಳ ಬೇರುಗಳ ಬಣ್ಣ, ಗಾತ್ರ ಮತ್ತು ಆಕಾರಗಳಲ್ಲಿ ವೈವಿಧ್ಯ ಉಂಟು. ಬಣ್ಣ ಬಿಳಿ ಇಲ್ಲವೆ ಹಳದಿಯಿಂದ ಕಿತ್ತಳೆ, ನಸು ಊದಾ, ಕಡುಗೆಂಪು ಮತ್ತು ಕಡು ನೇರಿಳೆ ವರೆಗೆ ವ್ಯತ್ಯಾಸವಾಗುತ್ತದೆ. ಆಕಾರದಲ್ಲಿ ಕೆಲವು ಶಂಕುವಿನಂತಿದ್ದರೆ ಇನ್ನು ಕೆಲವು ಉರುಳೆಯಂತಿವೆ. ಇವುಗಳಲ್ಲಿ ಚಾಂಟೆನೆ, ಡ್ಯಾನ್ವರ್ಸ್, ನ್ಯಾಂಟಿಸ್, ಇಂಪರೇಟರ್, ಮೋರ್ಸ್ ಬಂಚಿಂಗ್, ಅರ್ಲಿ ಹಾರ್ನ್, ಅರ್ಲಿ ಜೆಮ್ ಎಂಬುವು ಮುಖ್ಯವಾದವು. ಯುರೋಪಿಯನ್ ಬಗೆಗಳಲ್ಲಿ ಹೆಚ್ಚು ಕ್ಯಾರಟೀನ್ ಇದ್ದು ಇವು ಹೆಚ್ಚು ಜನಪ್ರಿಯವಾಗಿವೆ. ಏಷ್ಯನ್ ಬಗೆಗಳು ಕೊಂಚ ಕೆಳದರ್ಜೆಯವು.

ಕ್ಯಾರಟ್ ಬೇಸಾಯ: ಕ್ಯಾರಟ್ಟನ್ನು ಬೀಜಗಳ ಮೂಲಕ ವೃದ್ಧಿಪಡಿಸಲಾಗುತ್ತದೆ. ಇದರ ಬೇಸಾಯಕ್ಕೆ ತಂಪು ಹವೆಯೂ ಬೇರುಗಳು ಸುಲಭವಾಗಿ ಇಳಿದು ಬೆಳೆಯಲು ಅವಕಾಶ ಮಾಡಿಕೊಡುವಂಥ ಸಡಿಲವಾದ, ಆಳವಾದ ಮತ್ತು ನೀರು ಸರಾಗವಾಗಿ ಚಲಿಸುವಂಥ ಮಣ್ಣೂ ಅತ್ಯಗತ್ಯ. ಮರಳು ಮಿಶ್ರಿತಗೋಡು ಶ್ರೇಷ್ಠ. ನೆಲದಲ್ಲಿ ಅಧಿಕಪರಿಮಾಣದಲ್ಲಿ ಸಾವಯವ ಪದಾರ್ಥವಿರಬೇಕು. ಸಮಶೀತೋಷ್ಣ ವಲಯಗಳಲ್ಲಿ ಕ್ಯಾರಟ್ಟನ್ನು ಮೈದಾನಪ್ರದೇಶದಲ್ಲಿ ಬೆಳೆಸುತ್ತಾರಾದರೂ ಉಷ್ಣವಲಯದಲ್ಲಿ ಬೆಟ್ಟಪ್ರದೇಶಗಳಲ್ಲೇ ಇದರ ಬೇಸಾಯ ಹೆಚ್ಚು. ಬೀಜ ಬಿತ್ತನೆಯ ಕಾಲ ಬೆಟ್ಟ ಪ್ರದೇಶಗಳಲ್ಲಿ ಮಾರ್ಚ್‌ನಿಂದ ಸೆಪ್ಟೆಂಬರ್, ಮೈದಾನಗಳಲ್ಲಿ ಆಗಸ್ಟಿನಿಂದ ನವೆಂಬರ್. ಬಿತ್ತನೆಯ ಮೊದಲು ನೆಲವನ್ನು ಚೆನ್ನಾಗಿ ಉತ್ತು ಹದಮಾಡಿ ಹೇರಳವಾಗಿ ಗೊಬ್ಬರ ಹಾಕಬೇಕು. ಸುಮಾರು ಒಂದು ಟನ್ ಇಳುವರಿ ಕೊಡುವಂಥ ಕ್ಯಾರಟ್ ಬೆಳೆ ತನ್ನ ಬೆಳವಣಿಗೆಯ ಅವಧಿಯಲ್ಲಿ ಸುಮಾರು 5 ಕಿಗ್ರಾಂ ಪೊಟ್ಯಾಷ್ ಮತ್ತು 1.5 ಕಿಗ್ರಾಂ ನೈಟ್ರೊಜನನ್ನು ಭೂಮಿಯಿಂದ ಹೀರುತ್ತದೆ ಎಂದು ಅಂದಾಜುಮಾಡಲಾಗಿದೆ. ಇದರಿಂದ ಬೀಜ ಬಿತ್ತುವ ಮೊದಲು ಯಥೇಚ್ಛವಾಗಿ (ಹೆಕ್ಟೇರ್‌ಗೆ 16 ಗಾಡಿ ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರ ಮತ್ತು 20 ಕೆಜಿ ಮ್ಯೂರಿಯೇಟ್ ಆಫ್ ಪೊಟ್ಯಾಷ್) ಗೊಬ್ಬರ ಹಾಕಬೇಕು. ಬೀಜಗಳನ್ನು 8"–18"ಗಳ ಅಂತರದ ಸಾಲುಗಳಲ್ಲಿ ಬಿತ್ತಬೇಕು. ಕ್ಯಾರಟ್ಟಿನ ಬಗೆಗಳನ್ನು ಅವಲಂಬಿಸಿ ಎಕರೆಗೆ ಸುಮಾರು 4–16 ಪೌಂ. ಬೀಜಬಿತ್ತಬೇಕಾಗುತ್ತದೆ. ಬೀಜ ಮೊಳೆಯುವುದು ನಿಧಾನ; ಬಿತ್ತನೆಯಾದ ಸುಮಾರು 10–20 ದಿವಸಗಳಲ್ಲಿ ಸಸಿಗಳು ಹುಟ್ಟುತ್ತವೆ. ಬಿತ್ತುವ ಮುನ್ನ ಬೀಜಗಳನ್ನು 12–24 ಗಂಟೆಗಳ ಕಾಲ ನೀರಿನಲ್ಲಿ ನೆನೆಯಿಟ್ಟರೆ ಶೀಘ್ರವಾಗಿ ಮೊಳೆಯುತ್ತವೆ. ಗಿಡಗಳು ಪರಸ್ಪರ ತುಂಬ ಹತ್ತಿರವಾಗಿರದಂತೆಯೂ ಕಳೆಗಳು ಬೆಳೆಯದಂತೆಯೂ ನೋಡಿಕೊಳ್ಳಬೇಕು. ಒಣತಿಂಗಳುಗಳಲ್ಲಿ ವಾರಕ್ಕೆ ಒಂದು ಬಾರಿ ಚಳಿಗಾಲದಲ್ಲಿ 15 ದಿವಸಗಳಿಗೊಮ್ಮೆ ನೀರು ಹಾಯಿಸಬೇಕು. ನೀರಿನ ಪರಿಮಾಣ ಅತಿಯಾಗದಂತೆ ಎಚ್ಚರ ವಹಿಸಬೇಕು. ಹೀಗಾದರೆ ಬೇರುಗಳ ರುಚಿ ಕಡಿಮೆಯಾಗುತ್ತದೆ. ಸಸಿಗಳು ಹುಟ್ಟಿದ 2–4 ತಿಂಗಳುಗಳ ಅನಂತರ ಕ್ಯಾರಟ್ ಬೆಳೆ ಕುಯ್ಲಿಗೆ ಬರುತ್ತದೆ. ಸಮತಟ್ಟಾದ ನೆಲದ ಮೇಲೆ ಕೃಷಿಮಾಡಿದ ಕ್ಯಾರಟ್ಟುಗಳ ಮೇಲ್ಭಾಗವನ್ನು ಕತ್ತರಿಸಿ ತೆಗೆದು ಬೇರುಗಳನ್ನು ಗುದ್ದಲಿಯ ನೆರವಿನಿಂದ ಹೊರತೆಗೆಯಲಾಗುತ್ತದೆ. ಎತ್ತರಿಸಿದ ಸಾಲುಗಳಲ್ಲಿ ಬೆಳೆದಂಥವನ್ನು ಇಡಿಯಾಗಿ ಕಿತ್ತು ತೆಗೆದು ಅನಂತರ ಮೇಲ್ಭಾಗದ ಎಲೆಗಳನ್ನು ಕತ್ತರಿಸಲಾಗುತ್ತದೆ. ಎಲೆಗಳನ್ನು ಕತ್ತರಿಸದೇ ಬಿಡುವುದೂ ಇದೆ; ಯುರೋಪ್ ಮತ್ತು ಅಮೆರಿಕಗಳಲ್ಲಿ ಈ ಕ್ರಮವೇ ವಾಡಿಕೆಯಲ್ಲಿದೆ. ಕ್ಯಾರಟ್ಟಿನ ಬಗೆ, ಬೆಳವಣಿಗೆಯ ಕಾಲ ಮತ್ತು ನೆಲದಗುಣಗಳನ್ನು ಅವಲಂಬಿಸಿ ಇದರ ಇಳುವರಿ ಹೆಕ್ಟೇರ್‌ಗೆ 7–18 ಟನ್ ವರೆಗೆ ವ್ಯತ್ಯಾಸವಾಗುತ್ತದೆ. ನೆಲದಿಂದ ಕಿತ್ತಬಳಿಕ ಬೇರುಗಳನ್ನು ಚೆನ್ನಾಗಿ ತೊಳೆದು ಬುಟ್ಟಿಗಳಲ್ಲೊ ಪೆಟ್ಟಿಗೆಗಳಲ್ಲೊ ತುಂಬಿ ಮಾರುಕಟ್ಟೆಗೆ ಕಳಿಸಲಾಗುತ್ತದೆ. ಎಲೆಗಳನ್ನು ಕತ್ತರಿಸಿದ ಕ್ಯಾರಟ್ಟನ್ನು ಅದರ ಗುಣವಾಗಲಿ ಪೌಷ್ಟಿಕ ಅಂಶಗಳಾಗಲಿ ಹಾಳಾಗದಂತೆ 5–6 ತಿಂಗಳುಗಳ ಕಾಲ ಸಂಗ್ರಹಿಸಿಡಬಹುದು. ಇವನ್ನು ಒಣಮರಳು ಮತ್ತು ಮರದ ಬೂದಿ ಇಲ್ಲವೆ ಇದ್ದಲಿನ ಮಿಶ್ರಣದಲ್ಲಿ ಶೇಖರಿಸಿಡುವುದರಿಂದ ಕೊಳೆಯದಂತೆ ಮಾಡಬಹುದು.

ಕ್ಯಾರಟ್ ಬೆಳೆಗೆ ಹಲವಾರು ಬಗೆಯ ಬೂಷ್ಟುರೋಗಗಳು ತಗಲುತ್ತವೆ. ಎರಿಸೈಫೆ ಪಾಲಿಗೋನಿ ಎಂಬ ಬೂಷ್ಟಿನಿಂದುಂಟಾಗುವ ಮಿಲ್‌ಡ್ಯೂ ರೋಗ ಮತ್ತು ಸರ್ಕೋಸ್ಪೋರ ಏಪಿಯೈ ಎಂಬುದರಿಂದ ಉಂಟಾಗುವ ಚುಕ್ಕೆರೋಗ ಮುಖ್ಯವಾದವು. ಅಲ್ಲದೆ ಸೈಲ ರೋಸೆ ಎಂಬ ನೊಣದ ಡಿಂಬಗಳು ಕ್ಯಾರಟ್ ಬೆಳೆಯ ಪ್ರಮುಖ ಪಿಡುಗುಗಳೆನಿಸಿವೆ. ಇವು ಬೇರಿನಲ್ಲಿ ತೂತು ಕೊರೆದು ಗಣನೀಯ ನಷ್ಟವನ್ನುಂಟು ಮಾಡುತ್ತವೆ. ಕ್ಯಾರಟ್ಟಿಗೆ ಒಂದು ಬಗೆಯ ವೈರಸ್ ತಗಲುವುದುಂಟು. ಇದರಿಂದ ಹಳದಿ ರೋಗ ಬರುತ್ತದೆ.

ಕ್ಯಾರಟ್ ಉತ್ತಮ ತರಕಾರಿಗಳಲ್ಲೊಂದು ಎಂದು ಹೆಸರಾಂತಿರುವುದು ಎಲ್ಲರಿಗೂ ತಿಳಿದದ್ದೆ. ಎ ವಿಟಮಿನ್ನಿನ ಪೂರ್ವಗಾಮಿ ವಸ್ತುವಾದ ಕ್ಯಾರಟೀನ್ ಇದರಲ್ಲಿರುವುದೊಂದೇ ಅಲ್ಲದೆ ಇದರಲ್ಲಿ ಬೇರೆ ಪೌಷ್ಟಿಕಾಂಶಗಳೂ ಹೇರಳವಾಗಿವೆ. ಕ್ಯಾರಟ್ಟಿನಲ್ಲಿನ ಅಂಶಗಳ ವಿವರ ಹೀಗಿದೆ: ತೇವಾಂಶ, ಶೇ. 80.6; ಪ್ರೋಟೀನು, ಶೇ.0.9; ಕೊಬ್ಬು ಶೇ.0.1; ಕಾರ್ಬೊಹೈಡ್ರೇಟು, ಶೇ.10.7; ಖನಿಜಪದಾರ್ಥ, ಶೇ.1.1; ನಾರಿನ ಅಂಶ, ಶೇ.1.2; ಕ್ಯಾಲ್ಸಿಯಂ, ಶೇ.0.08; ರಂಜಕ ಶೇ.0.03. ಅಲ್ಲದೆ ಪ್ರತಿ ನೂರು ಗ್ರಾಂ. ಕ್ಯಾರಟ್ಟಿನಲ್ಲಿ 1.5 ಮಿಗ್ರಾಂ. ಕಬ್ಬಿಣ, 2,000–4,300 ಐಯು ಕ್ಯಾರಟೀನ್, 60 ಐಯು ಬಿ ವಿಟಮಿನ್ನು ಮತ್ತು 3 ಮಿಗ್ರಾಂ. ಸಿ ವಿಟಮಿನ್ನುಗಳೂ ಇವೆ. ಕ್ಯಾರಟ್ಟಿನ ಎಲೆಗಳನ್ನು ತಿನ್ನುವ ಕ್ರಮ ಜಾವ ದೇಶದವರಲ್ಲಿ ಉಂಟು. ಅಲ್ಲದೆ ಬೇರೂ ಎಲೆಗಳೂ ದನಗಳಿಗೆ ಮತ್ತು ಕುದುರೆಗಳಿಗೆ ಒಳ್ಳೆಯ ಆಹಾರವೆಂದು ಹೆಸರಾಗಿವೆ. ದನಗಳಿಗೆ ತಿನ್ನಿಸುವುದರಿಂದ ಹಾಲಿನ ಉತ್ಪನ್ನ ಹೆಚ್ಚುವುದೆಂದೂ ಕೋಳಿಗಳಿಗೆ ತಿನ್ನಿಸಿದರೆ ಅವುಗಳ ಮೊಟ್ಟೆಗಳಲ್ಲಿ ವಿಟಮಿನ್ ಎ ಅಂಶ ಹೆಚ್ಚುವುದೆಂದೂ ಕೋಳಿಗಳಿಗೆ ತಿಳಿದುಬಂದಿದೆ. ಕ್ಯಾರಟ್ ಎಲೆಗಳು ಒಳ್ಳೆಯ ಹಸಿರುಗೊಬ್ಬರವೂ ಹೌದು. ಬೇರಿನಿಂದ ರಸವನ್ನೂ ತೆಗೆಯಬಹುದು. ಕ್ಯಾರಟ್ಟಿನಲ್ಲಿನ ಎಲ್ಲ ಪೌಷ್ಟಿಕಾಂಶಗಳೂ ಇದರಲ್ಲಿದ್ದು ಇದೊಂದು ಒಳ್ಳೆಯ ಪಾನೀಯವೆಂದು ಹೆಸರಾಗಿದೆ. ರಸವನ್ನು ತೆಗೆದಮೇಲೆ ಉಳಿಯುವ ಚರಟವನ್ನು ದನಗಳ ಆಹಾರವಾಗಿ ಬಳಸುವುದುಂಟು. ಇದರಿಂದ ಕ್ಯಾರಟೀನನ್ನೂ ತೆಗೆಯಬಹುದು. ಕ್ಯಾರಟ್ಟಿಗೆ ಔಷಧೀಯ ಗುಣಗಳೂ ಇವೆ. ಇದರಿಂದ ತಯಾರಿಸಲಾಗುವ ಕಷಾಯವನ್ನು ಲಾಡಿಹುಳುವಿನ ನಿವಾರಣೆಗೆ ಬಳಸುತ್ತಾರೆ. ಕ್ಯಾರಟ್ಟನ್ನು ಹೆಚ್ಚು ಪರಿಮಾಣದಲ್ಲಿ ಸೇವಿಸಿದರೆ ದೇಹದಲ್ಲಿನ ನೈಟ್ರೊಜನ್ ಅಂಶ ಹೆಚ್ಚುವುದೆಂದು ತಿಳಿದಿದೆ. ಒಣಗಿಸಿದ ಕ್ಯಾರಟ್ಟಿಗೆ ಪೆಟ್ರೋಲಿಯಮ್ ಈಥರ್ ಸೇರಿಸುವುದರಿಂದ ಒಂದು ರೀತಿಯ ಹಳದಿಬಣ್ಣದ ವಸ್ತುವನ್ನು ಬೇರ್ಪಡಿಸಬಹುದು. ಇದನ್ನು ಬಾದಾಮಿ ಎಣ್ಣೆಯಲ್ಲಿ ಕರಗಿಸಿ ಚುಚ್ಚು ಮದ್ದಾಗಿ ಕೊಟ್ಟರೆ ರಕ್ತದಲ್ಲಿನ ಸಕ್ಕರೆಯ ಅಂಶ ಗಣನೀಯವಾಗಿ ಕಡಿಮೆಯಾಗುವುದು ಕಂಡುಬಂದಿದೆ. ಕ್ಯಾರಟ್ ಬೀಜಗಳಿಗೆ ಉತ್ತೇಜಕ ಮತ್ತು ಜೀರ್ಣಕಾರಕ ಗುಣಗಳಿವೆ. ಮೂತ್ರಪಿಂಡ ಸಂಬಂಧಿ ರೋಗಗಳಿಗೂ ಜಲೋದರ ರೋಗಕ್ಕೂ ಬೀಜಗಳು ಒಳ್ಳೆಯ ಔಷಧಿ ಎಂದು ಹೇಳಲಾಗಿದೆ. ಬೀಜಗಳಿಂದ ಒಂದು ಬಗೆಯ ಚಂಚಲತೈಲವನ್ನು ತೆಗೆಯುವುದಿದೆ. ಹಲವಾರು ಮಾದಕ ಪಾನೀಯಗಳಿಗೆ ವಾಸನೆ ಕೊಡಲು ಇದನ್ನು ಬಳಸುತ್ತಾರೆ.

*

**ಕ್ಯಾರಲ್, ಲೂಯಿಸ್ :** 1832–98. ಆಂಗ್ಲಕವಿ ಮತ್ತು ಗಣಿತ ವಿಜ್ಞಾನಿ. ಈತನ ನಿಜನಾಮಧೇಯ ಚಾರಲ್ಸ್ ಲಟ್‌ವಿಜ್ ಡಾಜ್‌ಸನ್. ಪಾದ್ರಿಯ ಮಗನಾದ ಈತ ವಾರಿಂಗ್‌ಟನ್ನಿನ ಡಾರೆಸ್‌ಬರಿಯಲ್ಲಿ ಹುಟ್ಟಿದ. ಚಿಕ್ಕಂದಿನಿಂದಲೇ ನಾಟಕಗಳ ಬಗ್ಗೆ ತನ್ನ ಒಲವನ್ನು ಹರಿಸಿದ್ದು ಜೀವನದುದ್ದಕ್ಕೂ ಅದರಲ್ಲಿ ಆಸಕ್ತಿ ತೋರಿಸಿದ. ತನ್ನ ಸೋದರ ಸೋದರಿಯರಿಗಾಗಿ ಮೊದಲಿಗೆ ಕೈಬರೆಹದ ಪತ್ರಿಕೆಗಳಲ್ಲಿ ಈತ ಬರೆದ ಲೇಖನಗಳು ಮತ್ತು ಚಿತ್ರಗಳು ಮುಂದಿನ ಈತನ ಸಾಹಿತ್ಯ ಪ್ರಪಂಚದಲ್ಲಿನ ಬೆಳವಣಿಗೆಯ ಮುನ್ಸೂಚಕವಾಗಿದ್ದವು. ಮೂರು ವರ್ಷಗಳ ಕಾಲ ರಗ್ಬಿ ಶಾಲೆಯಲ್ಲಿ ವ್ಯಾಸಂಗ ಮಾಡಿ ಅನಂತರ 1857ರಲ್ಲಿ ಆಕ್ಸ್‌ಫರ್ಡಿನ ಕ್ರೈಸ್ಟ್ ಕಾಲೇಜು ಸೇರಿ ಗಣಿತ ಮತ್ತು ಕಾವ್ಯಗಳೆರಡರಲ್ಲೂ ಆನರ್ಸ್ ಪದವಿ ಪಡೆದ. ಅನಂತರ ಕ್ರೈಸ್ಟ್ ಚರ್ಚಿನ ಫೆಲೋ ಆಗಿ ನೇಮಕಗೊಂಡು ತನ್ನ ಜೀವನದ ಬಹುಭಾಗವನ್ನು ಅಲ್ಲಿಯೇ ಕಳೆದ. 1861ರಲ್ಲಿ ಮತ ಪ್ರಚಾರಕನಾದರೂ ಆ ಕೆಲಸವನ್ನು ಪ್ರಾಸಂಗಿಕವಾಗಿ ಮಾಡಿದನಷ್ಟೆ. ಕ್ರೈಸ್ಟ್ ಕಾಲೇಜಿಗೆ ಬಂದ ಸಮಯದಲ್ಲಿ ತಾಯಿ ತೀರಿಕೊಂಡಳು,

ಈ ದುಃಖದಿಂದ ಕ್ಯಾರಲ್‌ನ ಭಾವುಕತೆಯೆಲ್ಲ ಕಮರಿಹೋಯಿತು. ಜೊತೆಗೆ ಉಗ್ಗು ಇದ್ದುದರಿಂದ ಜನರ ಹತ್ತಿರ ಸೇರಿ ಮಾತನಾಡಲು ನಾಚಿ ಮುಖೇಡಿಯಾಗಿ ಬಾಳತೊಡಗಿದ. ಈ ಮನೋಭಾವ ಈತನನ್ನು ದೊಡ್ಡವರಿಂದ ದೂರ ಸರಿಸಿ ಮಕ್ಕಳ ಪ್ರಪಂಚದತ್ತ ಹರಿಸಿತು. ಕ್ಯಾರಲ್ ಹೆಚ್ಚು ಹೆಚ್ಚು ಮಕ್ಕಳ ಕೂಟದಲ್ಲಿ ಕಾಲ ಕಳೆಯುತ್ತಿದ್ದನಲ್ಲದೆ ಅವರ ಜೊತೆ ಅತ್ಯಂತ ಹರ್ಷಚಿತ್ತನಾಗಿರುತ್ತಿದ್ದ. ಚಿಕ್ಕ ಚಿಕ್ಕ ಹುಡುಗಿಯರೇ ಈತನ ಸಂಗಾತಿಯರು. ಅವರ ಅಗಣಿತ ಸ್ನೇಹಕ್ಕೆ ಪಾತ್ರನಾಗಿ ಅವರಿಗಾಗಿ ರಂಜನೀಯವಾದ, ಭ್ರಾಂತಿಯನ್ನು ಹುಟ್ಟಿಸುವ ಕಾಲ್ಪನಿಕ ಕಥೆಗಳನ್ನು ಹೆಣೆಯತೊಡಗಿದ. 1865ರಲ್ಲಿ ಕ್ರೈಸ್ಟ್‌ಚರ್ಚಿನ ಮುಖ್ಯ ಪಾದ್ರಿಯ ಮಗಳು ಆಲಿಸ್ ಲೈಡಲಳನ್ನು ಚಕಿತಗೊಳಿಸಲೋಸುಗ ಆಲಿಸ್ ಅಡ್ವೆಂಚರ್ಸ್ ಇನ್ ವಂಡರ್‌ಲ್ಯಾಂಡ್ ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದ. ಮೂಲಪ್ರತಿ ಆಲಿಸ್ ಅಡ್ವೆಂಚರ್ಸ್ ಅಂಡರ್ ಗ್ರೌಂಡ್ ಎಂಬ ಹೆಸರಿನಲ್ಲಿದ್ದು ಕೇವಲ 18,000 ಪದಗಳಿಂದ ಕೂಡಿತ್ತು. ಅನಂತರ ಜಾರ್ಜ್ ಮ್ಯಾಕ್‌ಡೊನಾಲ್ಡ್‌ನ ಶಿಫಾರಸ್ಸಿನ ಮೇಲೆ ಅದನ್ನು ವಿಸ್ತರಿಸಿ ಪ್ರಕಟಿಸಲಾಯಿತು. 1871ರಲ್ಲಿ ಇದರ ಉತ್ತರಾರ್ಧವಾಗಿ ಥ್ರೂ ದಿ ಲುಕಿಂಗ್ ಗ್ಲಾಸ್ ಅಂಡ್ ವಾಟ್ ಆಲಿಸ್ ಫೌಂಡ್ ದೇರ್ ಎಂಬ ಭಾಗವನ್ನು ಬರೆದು ಪ್ರಕಟಿಸಲಾಯಿತು. ಸರ್ ಜಾನ್ ಟೆನಿಯಲ್ ಈ ಗ್ರಂಥಕ್ಕೆ ಚಿತ್ರಗಳನ್ನು ಒದಗಿಸಿದ್ದಾನೆ. ಪ್ರಾಯಶಃ ಅಂದಿಗೆ ಪ್ರಚಲಿತವಿದ್ದ ಯಕ್ಷಿಣಿ ಕಥೆಗಳನ್ನು ಬಿಟ್ಟರೆ ಇದು ಅತ್ಯಂತ ಜನಪ್ರಿಯ ಮಕ್ಕಳ ಕಥೆಯೆಂದು ಹೇಳಬಹುದು. ಇದು ಅನೇಕ ಭಾಷೆಗಳಿಗೆ ಭಾಷಾಂತರವಾಗಿದೆ. ಕನ್ನಡದಲ್ಲೂ ಪಾತಾಳದಲ್ಲಿ ಪಾಪಚ್ಚಿ (ನಾ.ಕಸ್ತೂರಿ) ಎಂಬ ಹೆಸರಿನಲ್ಲಿ ಪ್ರಕಟಗೊಂಡಿದೆ. 1876ರಲ್ಲಿ ಈತನ ದಿ ಹಂಟಿಂಗ್ ಆಫ್ ದಿ ಸ್ನಾರ್ಕ್ ಎಂಬ ಬುದ್ಧಿವಂತಿಕೆಯಿಂದ ಕೂಡಿದ ಅಸಂಬದ್ಧ ಪದ್ಯವೊಂದು ಪ್ರಕಟವಾಯಿತು. ಕ್ರೈಸ್ತ ತತ್ತ್ವಗಳನ್ನು ಆಧರಿಸಿ ಸಿಲ್ವಿ ಅಂಡ್ ಬ್ರೂನೊ (1889) ಮತ್ತು ಸಿಲ್ವಿ ಅಂಡ್ ಬ್ರೂನೊ ಕನ್‌ಕ್ಲೂಡೆಡ್ (1893) ಎಂಬ ಮಕ್ಕಳ ಕಥೆಗಳನ್ನೀತ ಬರೆದ. ಇವು ಒಳ್ಳೆಯ ಹಾಸ್ಯಭರಿತ ಪದ್ಯಗಳಿಂದ ಕೂಡಿದ್ದರೂ ಸಪ್ಪೆಯಾಗಿದ್ದು ಗೊಂದಲಮಯವಾಗಿದ್ದುದರಿಂದ ಜನಪ್ರಿಯವಾಗಲಿಲ್ಲ. ಈತ ಅನೇಕ ಹಾಸ್ಯಭರಿತ ಲೇಖನಗಳು ಮತ್ತು ತೊಡಕಿನ ಪ್ರಶ್ನೆಗಳಿಂದ ಕೂಡಿದ ಒಗಟುಗಳನ್ನು ಪ್ರಕಟಿಸಿದ್ದಾನೆ.

ಇವಲ್ಲದೆ ಕ್ರೈಸ್ಟ್ ಕಾಲೇಜಿನಲ್ಲಿ ತಾನು ಬೋಧಿಸುತ್ತಿದ್ದ ಗಣಿತವಿಜ್ಞಾನಕ್ಕೆ ಸಂಬಂಧಿಸಿದಂತೆ ಈತ ಅನೇಕ ಶಾಸ್ತ್ರೀಯ ಪುಸ್ತಕಗಳನ್ನು ಬರೆದಿದ್ದಾನೆ. ಎ. ಸಿಲಬಸ್ ಆಫ್ ಪ್ಲೇನ್ ಆಲ್ಜೀಬ್ರಿಕಲ್ ಜ್ಯಾಮಿತ್ರಿ (1860) ಎಂಬುದು ಗಣಿತಕ್ಕೆ ಸಂಬಂಧಿಸಿದ ಈತನ ಮೊದಲ ಪುಸ್ತಕ. ಆಕ್ಸ್‌ಫರ್ಡ್‌ನ ವಿಷಯಗಳನ್ನು ಕುರಿತ ದಿ ಡೈನಾಮಿಕ್ಸ್ ಆಫ್ ಎ ಪಾರ್ಟಿಕಲ್ (1865), ದಿ ಡೆಸರ್ಟೆಡ್ ಪಾರ್ಕ್ಸ್ (1867), ದಿ ನ್ಯೂ ಬೆಲ್ಫ್ರಿ (1872) ಎಂಬ ವಿಡಂಬನೆಗಳನ್ನು ಈತ ಗುಪ್ತನಾಮದಿಂದ ರಚಿಸಿದ್ದಾನೆ. ಈತ ಅತ್ಯುತ್ತಮ ಛಾಯಾಚಿತ್ರ ಗ್ರಾಹಕನಾಗಿದ್ದು ಮಕ್ಕಳ ಮತ್ತು ತನ್ನ ಸಮಕಾಲೀನರ ಚಿತ್ರಗಳನ್ನು ಹಿಡಿದಿಟ್ಟಿದ್ದಾನೆ. ಗಿಲ್ಡ್‌ಫರ್ಡ್‌ನಲ್ಲಿ ಈತ ಕಾಲವಾದ. 1898ರಲ್ಲಿ ಈತನ ಸೋದರ ಸಂಬಂಧಿ ಸ್ಟೂವರ್ಟ್ ಡಾಜ್‌ಸನ್ ಕಾಲಿಂಗ್‌ವುಡ್ ಎಂಬಾತ ಈತನನ್ನು ಕುರಿತಂಥ ಲೈಫ್ ಅಂಡ್ ಲೆಟರ್ಸ್ ಎಂಬ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದ್ದಾನೆ.

ಆಲಿಸ್ ಪುಸ್ತಕಗಳು ಪ್ರಪಂಚಕ್ಕೆ ಕ್ಯಾರಲ್ ನೀಡಿದ ಅಪೂರ್ವ ಕೊಡುಗೆಗಳು. ಇವು ಮಕ್ಕಳಿಗೇ ಅಲ್ಲದೆ ಆಬಾಲವೃದ್ಧರಿಗೂ ಹಿಡಿಸುವಂಥವಾಗಿವೆ. ಇವುಗಳಲ್ಲಿನ ಪಾತ್ರ ವಿಶೇಷಗಳೂ ಇಂಗ್ಲಿಷ್ ಜಾನಪದದ ಪ್ರತೀಕಗಳಾಗಿ ನಿಂತಿವೆ. ಇಲ್ಲಿಯ ಅನೇಕ ವಾಕ್ಯಗಳು ಇಂಗ್ಲಿಷ್ ಭಾಷೆಯಲ್ಲಿ ಪಡೆಮಾತಾಗಿಬಿಟ್ಟಿವೆ. *

**ಕ್ಯಾರಲ್, ಡಬ್ಲ್ಯೂ. ಗ್ರೈಡರ್:** 1961–. ಅಮೆರಿಕದ ನೊಬೆಲ್ ಪುರಸ್ಕೃತ ಪ್ರಸಿದ್ಧ ವೈದ್ಯ ಸಂಶೋಧಕಿ, ವಿಜ್ಞಾನಿ. ಕ್ಯಾಲಿಫೋರ್ನಿಯದ ಸ್ಯಾನ್‌ಡಿಯಾಗೊನಲ್ಲಿ 1961ರಲ್ಲಿ ಜನಿಸಿದಳು. ಕ್ರೋಮೋಸೋಮ್‌ಗಳು ಡಿಲೊಮೆಕಿಸ್ ಮತ್ತು ಎಂಜೈಮ್ ಟೆಲೊಮೆರೆಸ್‌ಗಳಿಂದ ಹೇಗೆ ರಕ್ಷಣೆ ಹೊಂದಿವೆ ಎಂಬ ಸಂಶೋಧನೆಗಾಗಿ ವೈದ್ಯಕೀಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿದೆ (2009). ಇವಳ ತಂದೆ ಕೆನೆತ್ ಗ್ರೈಡರ್ ಭೌತವಿಜ್ಞಾನಿ. ತಾಯಿ ಜೇನ್ ಫೋಲೆ ಗ್ರೈಡರ್ ಸಸ್ಯವಿಜ್ಞಾನಿ. ಕ್ಯಾರೋಲ್‌ಳ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸ ಡೆವಿಸ್‌ನಲ್ಲೂ ಮುಂದಿನ ವಿದ್ಯಾಭ್ಯಾಸ ಜರ್ಮನಿಯಲ್ಲೂ ನಡೆಯಿತು. ಡಿಸ್ಲೆಕ್ಸಿಯಾದಿಂದ ತೊಂದರೆಗೆ ಒಳಗಾಗುತ್ತಿದ್ದರೂ ಮುಂದಿನ ದಿನಗಳಲ್ಲಿ ಸಂಶೋಧನೆ ಕೈಗೊಂಡಳು. ಇದಕ್ಕೆ ತಾಯಿಯ ಗೆಳತಿ ಬೀಜ್ಞಿಯಿಂದ ಅಪಾರ ಪ್ರೋತ್ಸಾಹ ದೊರೆಯಿತು. ಮೊದಲಿಗೆ ಸಂತ ಬಾರ್ಬರಾದಲ್ಲಿ ಮರಳು ನಳ್ಳಿಯ ಬಗೆಗೆ ಸಂಶೋಧನೆ ಕೈಗೊಂಡಳು. ಸಾಗರ ಜೀವಿವಿಜ್ಞಾನ ವಿಜ್ಞಾನಿಯಾಗಲು ಬಯಸಿದರೂ ಅದು ಸಾಧ್ಯವಾಗಲಿಲ್ಲ. ಅನಂತರ ಮೈಕ್ರೊ ಟ್ಯುಬಲ್ ಡೈನಮಿಕ್ಸ್ ಬಗ್ಗೆ ಸಂಶೋಧನೆ ಕೈಗೊಂಡು ಅದು ಹೇಗೆ ಸಂಯೋಜನೆಗೊಂಡಿವೆ ಎಂಬುದನ್ನು ಕಂಡುಹಿಡಿದಳು. ಕ್ರೋಮೋಸೋಮುಗಳ ಬಗ್ಗೆ ಸಂಶೋಧನ ಲೇಖನಗಳನ್ನು ಬರೆದಿದ್ದಾಳೆ. ಟೆಲೊಮೆರನ್ ಆರ್‌ಎನ್‌ಎಯನ್ನು ಜೀನ್‌ನೊಂದಿಗೆ ಸೇರಿಸಿದರೆ ಆಗುವ ಪರಿಣಾಮದ ಬಗ್ಗೆ ಸಂಶೋಧನೆ ನಡೆಸಿ, ನೊಬೆಲ್ ಪ್ರಶಸ್ತಿ ಗಳಿಸಿದಳು. (ಸಿ.ಎಸ್.ಪಿ.)

**ಕ್ಯಾರವೆ ಎಣ್ಣೆ :** ಕ್ಯಾರವೆ (ಜೀರಿಗೆ) ಬೀಜದಲ್ಲಿರುವ ಬಣ್ಣರಹಿತ ಅಥವಾ ನಸು ಹಳದಿ ಬಣ್ಣದ ಹಿತವಾಸನೆಯ ಎಣ್ಣೆ. ಇದರ ಗಿಡದ ಹೆಸರು ಕ್ಯಾರಮ್ ಕರ್ವಿ. ಈ ಎಣ್ಣೆ ಸುಲಭವಾಗಿ ಆವಿಯಾಗುತ್ತದೆ. ಬೀಜಗಳನ್ನು ಬಟ್ಟಿಯಿಳಿಸಿದಾಗ ಎಣ್ಣೆ ಬಿಡುಗಡೆಯಾಗಿ ನೀರಿನ ಆವಿಯೊಂದಿಗೆ ಬೆರೆತು ಈಚೆ ಬರುತ್ತದೆ. ಆವಿಯನ್ನು ತಂಪು ಮಾಡಿದಾಗ ಎಣ್ಣೆ ಬೇರ್ಪಡುತ್ತದೆ. 100 ಗ್ರಾಂ ಬೀಜದಿಂದ 3.5-5.2 ಗ್ರಾಮಿನಷ್ಟು ಎಣ್ಣೆ ದೊರೆಯುತ್ತದೆ. ಇದರಲ್ಲಿ ಸುಮಾರು ಶೇ. 53-63ರಷ್ಟು ಸುವಾಸನೆಗೆ ಕಾರಣವಾದ ಕಾರ್ವೊನ್ ಎಂಬ ರಾಸಾಯನಿಕ ಇದೆ. ಇದಲ್ಲದೆ ಟರ್‌ಪೀನಿನ ಗುಂಪಿಗೆ ಸೇರಿದ ಕಾರ್‌ವೀನ್ ಮತ್ತು ಸೈಮೀನ್, ಲಿಮೊನೀನ್ ಎಂಬ ರಾಸಾಯನಿಕಗಳೂ ಅಲ್ಲದೆ ಪ್ರೋಟೀನು, ಅಂಟು ಮತ್ತು ಕ್ಯಾಲ್ಸಿಯಂ ಆಕ್ಸಲೇಟುಗಳೂ ಇರುತ್ತವೆ. ಈ ಎಣ್ಣೆ ಶೇ.90ರ ಆಲ್ಕೊಹಾಲಿನಲ್ಲಿ ಒಂದು ಭಾಗದಲ್ಲಿ ಒಂದು ಭಾಗವೂ ಶೇ.80ರ ಆಲ್ಕೊಹಾಲಿನಲ್ಲಿ ಏಳು ಭಾಗದಲ್ಲಿ ಒಂದು ಭಾಗವೂ ವಿಲೀನವಾಗುತ್ತದೆ.

ಕ್ಯಾರವೆ ಎಣ್ಣೆಯ ಉಪಯೋಗ ಔಷಧಿಗಳಲ್ಲಿ ಮತ್ತು ಸುವಾಸನಾ ತೈಲಗಳ ತಯಾರಿಕೆಯಲ್ಲಿ ಉಂಟು. ಇದನ್ನು ಹಿತವಾಸನೆ ಕಟ್ಟಲು ಹಾಗೂ ಹಸಿವು ಹೆಚ್ಚಿಸಲು ಉಪಯೋಗಿಸುವರು. ಹೊಟ್ಟೆಯ ನೋವಿನ ಮತ್ತು ಅಜೀರ್ಣದ ಮದ್ದುಗಳಲ್ಲಿ ಇದನ್ನು ಸೇರಿಸುತ್ತಾರೆ. ಕಾರ್ವೋನನ್ನು ತೆಗೆದ ಮೇಲೆ ಉಳಿದ ಎಣ್ಣೆಯನ್ನು ಸಾಬೂನುಗಳಿಗೆ ಸುವಾಸನೆ ಕಟ್ಟಲು ಉಪಯೋಗಿಸುತ್ತಾರೆ. ಕಾಡುಜೀರಿಗೆಯಿಂದ ಬಂದ ಎಣ್ಣೆಗೆ ಸಾಂದ್ರತೆ ಹೆಚ್ಚು. ಆದ್ದರಿಂದ ಅದರ ಉಪಯೋಗ ವೈನ್ ತಯಾರಿಕೆಯಲ್ಲಿ ಮತ್ತು ಸುಗಂಧ ಸಾಬೂನಿನ ತಯಾರಿಕೆಯಲ್ಲಿ ಮಾತ್ರ. ಜೀರಿಗೆಯನ್ನು ನೇರವಾಗಿಯೇ ಅಡುಗೆಗೂ ಕೇಕ್ ಮುಂತಾದವುಗಳ ತಯಾರಿಕೆಯಲ್ಲಿಯೂ ಬಳಸುತ್ತಾರೆ. ಪ್ರಪಂಚದ ನಾನಾ ಭಾಗಗಳಲ್ಲಿ ಇದರ ಗಿಡ ಉಂಟು. ಭಾರತದಲ್ಲಿ ಇದು ಚಳಿಗಾಲದ ಬೆಳೆ. 9,000'-12,000' ಎತ್ತರದಲ್ಲಿಯ ಕಾಶ್ಮೀರ, ಕುಮಾಂವ್, ಘರ್‌ವಾಲ್ ಮುಂತಾದ ಪ್ರದೇಶಗಳಲ್ಲಿ ಇದು ಬೇಸಗೆಯ ಬೆಳೆ. ಹಿಮಾಲಯದಲ್ಲಿ ಇದು ಕಾಡು ಬೆಳೆ. (ಎ.ಎಸ್.ಆರ್.)

**ಕ್ಯಾರಾಜೀನೀನ್ :** ಕಾಂಡ್ರಸ್ ಕ್ರಿಸ್ಪಸ್ ಮತ್ತು ಜೈಗಾರ್ಟೈನ ಮ್ಯಾಮಿಲೋಸ ಎಂಬ ಎರಡು ಜಾತಿಯ ಸಮುದ್ರ ಕಳೆಗಳಿಂದ ಪಡೆಯಲಾಗುವ ಒಂದು ಕಲಿಲವಸ್ತು. ಕೈಗಾರಿಕಾ ಪ್ರಾಮುಖ್ಯವಿರುವ ಈ ವಸ್ತುವಿನ ಬಳಕೆ ಬಹಳ ಹಿಂದಿನಿಂದಲೂ ಐರ್ಲೆಂಡ್, ನಾರ್ಮಂಡಿ ಮತ್ತು ಬ್ರಿಟನ್ ಮುಂತಾದ ಪ್ರದೇಶಗಳಲ್ಲಿತ್ತು. ಮೇಲೆ ತಿಳಿಸಿದ ಸಮುದ್ರ ಕಳೆಗಳಿಗೆ ಕ್ಯಾರಾಜೀನ್, ಐರಿಷ್ ಮಾಸ್ ಎಂಬ ವಾಣಿಜ್ಯ ನಾಮಗಳನ್ನು ಕೊಡಲಾಗಿದ್ದು ಈಗಲೂ ಔಷಧವಿಜ್ಞಾನದಲ್ಲಿ ಈ ಹೆಸರುಗಳನ್ನೇ ಬಳಸಲಾಗುತ್ತಿದೆ.

ಕ್ಯಾರಾಜೀನೀನ್ ವಾಸನೆಯಿಲ್ಲದ, ನಸು ಕೆಂಪುಬಣ್ಣದ ಪುಡಿ. 85° ಸೆಂ. ಉಷ್ಣತೆಯಲ್ಲಿ ಇದು ನೀರಿನಲ್ಲಿ ಸಂಪೂರ್ಣವಾಗಿ ವಿಲೀನವಾಗಿ ಅಂಟಾದ ಅರೆಪಾರಕರ್ಶಕ ಕಲಿಲ ದ್ರಾವಣವಾಗುತ್ತದೆ; ಜೈವಿಕ ದ್ರಾವಣಗಳಲ್ಲಿ ವಿಲೀನವಾಗುವುದಿಲ್ಲ. ರಾಸಾಯನಿಕವಾಗಿ ಗ್ಯಾಲಕ್ಟೋಸ್, ಕೀಟೋಗ್ಲುಟಾನಿಕ್ ಆಮ್ಲ, ಕೆಲವು ಶರ್ಕರಗಳು ಮತ್ತು ಒಂದು ಸಲ್ಫೇಟ್ ಏಕಕ–ಇವು ಕೂಡಿಕೊಂಡು ರಚಿತವಾಗಿರುವಂಥ ಬೃಹದಣುವಿದು.

ಕ್ಯಾರಾಜೀನೀನನ್ನು ಪ್ರಮುಖವಾಗಿ ಮುಲಾಮುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದನ್ನು ಗ್ಲಿಸರೀನ್ ಅಥವಾ ಪ್ರೊಪೈಲೀನ್ ಗ್ಲೈಕಾಲಿನಲ್ಲಿ ವಿಲೀನಾಗಿಸಿ, ಲಭಿಸುವ ದ್ರಾವಣವನ್ನು ರಕ್ಷಕವಿರುವ (ಪ್ರಿಸರ್ವೆಟಿವ್) ನೀರಿನೊಂದಿಗೆ ಮಿಶ್ರಮಾಡಿದಾಗ ಮುಲಾಮುಗಳಿಗೆ ಬೇಕಾಗುವ ಮೆದುಪಾಕ(ಜೆಲ್ಲಿ) ಬರುತ್ತದೆ. ಐಸ್‌ಕ್ರೀಮ್, ಹಾಲಿನ ಪುಡಿಂಗ್, ಶರಬತ್ ಮುಂತಾದುವುಗಳ ತಯಾರಿಕೆಯಲ್ಲೂ ಈ ಮೆದುಪಾಕದ ಬಳಕೆ ಇದೆ. ಕ್ಯಾರಾಜೀನೀನ್ ಕೈಗಾರಿಕೆಯಲ್ಲೂ ಬಳಕೆಯಾಗುತ್ತದೆ. ಇದನ್ನು ಶೇ. 0.2-0.4 ಪ್ರಮಾಣದಲ್ಲಿ ಎಣ್ಣೆಯೊಂದಿಗೆ ಬೆರೆಸಿ ಎಮಲ್ಷನ್ ತಯಾರಿಸಬಹುದು.

ಕ್ಯಾರಾಜೀನೀನ್ ತಯಾರಿಸುವ ಕ್ರಮ ಬಹಳ ಸರಳ. ಐರಿಷ್ ಮಾಸ್ ಸಮುದ್ರಕಳೆಗಳನ್ನು ಸಂಗ್ರಹಿಸಿ, ಬಿಸಿಲಿನಲ್ಲಿ ಒಣಗಿಸಲಾಗುತ್ತದೆ. ಅನಂತರ ಅವನ್ನು ಚೆನ್ನಾಗಿ ತೊಳೆದು ಬಿಸಿನೀರಿನಲ್ಲಿ ಮುಳುಗಿಸಲಾಗುತ್ತದೆ. ಇದರಿಂದ ಮಿಶ್ರಣ ಮೆತ್ತಗಾಗಿ ಮೆದುಪಾಕ ದ್ರಾವಣದಂತಾಗುತ್ತದೆ. ಈ ದ್ರಾವಣವನ್ನು ಶುದ್ಧೀಕರಿಸಿ ಕ್ಯಾರಾಜೀನೀನನ್ನು ಬೇರ್ಪಡಿಸಲಾಗುತ್ತದೆ. (ಎ.ಎಸ್.ಆರ್.)

**ಕ್ಯಾರಿಕೇಚರುಗಳು, ಕಾರ್ಟೂನುಗಳು :** ಒಬ್ಬ ವ್ಯಕ್ತಿಯನ್ನೋ ಒಂದು ಸನ್ನಿವೇಶವನ್ನೋ ಪರಿಹಾಸ ಮಾಡುವ ಉದ್ದೇಶದಿಂದ ರಚಿತವಾದ ಚಿತ್ರಗಳಿಗೆ ಈ ಹೆಸರಿದೆ. ವ್ಯಂಗ್ಯಚಿತ್ರ, ವಿಕಟಚಿತ್ರ, ವಿಡಂಬನ ಚಿತ್ರ, ಹಾಸ್ಯಚಿತ್ರ, ಪ್ರಹಸನ ಚಿತ್ರ, ಉಪಹಾಸ ಚಿತ್ರ–ಎಂಬೆಲ್ಲ ಪರ್ಯಾಯನಾಮಗಳು ಇಂಥ ಚಿತ್ರಗಳ ಧ್ಯೇಯಗಳನ್ನು ಸಾಕಷ್ಟು ಸ್ಪಷ್ಟಪಡಿಸುತ್ತವೆ. ಇಟಾಲಿಯನ್ ಮೂಲದಿಂದ ಬಂದ ಕ್ಯಾರಿಕೇಚರ್ ಮತ್ತು ಕಾರ್ಟೂನ್ ಎಂಬ ಈ ಶಬ್ದಗಳನ್ನು ಪಾಶ್ಚಾತ್ಯರಲ್ಲಿ ಪ್ರಸಿದ್ಧ ಪಡಿಸಿದವರು ಫ್ರೆಂಚರು. ಕಾರ್ಟೂನ್ ಎಂಬ ಹೆಸರು ಮೊದಲು ವರ್ಣಚಿತ್ರರಚನೆಗಾಗಲಿ ಪರದೆಗಳ ಮೇಲೆ ರಚಿಸಲ್ಪಡುವ ಚಿತ್ರಗಳಿಗಾಗಲಿ, ಕೆತ್ತನೆಯ ಕೆಲಸಕ್ಕಾಗಲಿ, ಬಟ್ಟೆಗಳನ್ನು ನೇಯುವಾಗ ಹಾಕಬೇಕಾದ ಚಿತ್ರ ಅಥವಾ ನಮೂನೆಗಾಗಲಿ, ಮಾದರಿಯಾಗುವಂತೆ ದಪ್ಪ ಕಾಗದದ



ನಾಡಿಗ್ ಅವರ ಒಂದು ವ್ಯಂಗ್ಯಚಿತ್ರ – ಮಯೂರ ಮಾಸಪತ್ರಿಕೆಯಿಂದ.
ಗಾಂಪರಿಗೆ ಮರ ಬಹಳ ಗಟ್ಟಿ ಇದೆಯಂತೆ, ಅವರು ಗರಗಸ ಹಿಡಿದಿರುವ
ವೈಖರಿ ನೋಡಿ



“ನಿಜ ಹೇಳಬೇಕು ಅಂದ್ರ ನನಗೆ ಯಾವ ಉದ್ಯೋಗವೂ ಇಲ್ಲ ಸ್ವಾಮಿ ಸಾಕ್ಷಿ
ಹೇಳುವುದನ್ನು ಬಿಟ್ಟು” ಎಂಬ ಶೀರ್ಷಿಕೆಯ ವ್ಯಂಗ್ಯ ಚಿತ್ರ. ಸುಬ್ಬಣ್ಣ ಎಚ್.ವಿ.–
ವಿನೋದ ವಾರ್ಷಿಕ ಸಂಚಿಕೆ 1972

ಆರ್.ಕೆ. ಲಕ್ಷ್ಮಣ್ ಅವರ ಒಂದು ವ್ಯಂಗ್ಯ ಚಿತ್ರ. ಯು ಸೆಡ್ ಇಟ್–ಸೆಕೆಂಡ್–ಸೀರೀಸ್–ಎಂಬ
ಅವರ ಚಿತ್ರ ಸಂಕಲನದಿಂದ “ಇದು ನೂತನ ಪುರಸಭಾ ಭವನದ ಪ್ಲ್ಯಾನು ಸ್ವಾಮಿ, ಮುಂದೆ
ವಿಶಾಲವಾದ ಅಂಗಗಳನ್ನು ತೋರಿಸಿದೆ– ಮುಷ್ಕರ ಹೂಡುವವರ ಸೌಕರ್ಯಕ್ಕಾಗಿ”

ಸಾಹುಕಾರ – ರಾಷ್ಟ್ರಧ್ವಜಾರೋಹಣ ಸಂತೋಷವಾಗಿ ಮಾಡ್ತೀನಿ. ಆದರೆ ಈ
ಇಳಿವಯಸ್ಸಿನಲ್ಲಿ ಆ ಕಂಬ ಹತ್ತುವುದಕ್ಕಾಗುತ್ತದಯೇ ಅನ್ನೋದೇ ಸಂಶಯ.
ಅನಂತಯ್ಯ– ಕೋರವಂಜಿ, ಡಿಸೆಂಬರ್ 1947




ಶೀರ್ಷಿಕೆ ಇಲ್ಲದ ವ್ಯಂಗ್ಯ ಚಿತ್ರಕ್ಕೊಂದು ನಿದರ್ಶನ.
ಜುಲೈ 1972ರ ಮಯೂರದಿಂದ



ಡೇವಿಡ್ ಲೋ ತನ್ನ ರಾಜಕೀಯ ವ್ಯಂಗ್ಯ
ಚಿತ್ರಗಳಿಗಾಗಿ ಕಲ್ಪಿಸಿಕೊಂಡಿರುವ ನಾಯಕನ ಚಿತ್ರ –
ಕರ್ನಲ್ ಬ್ಲಿಂಪ್




ಅಬೂ ಎಂಬ ಪ್ರಸಿದ್ಧ ಭಾರತೀಯ ವ್ಯಂಗ್ಯ
ಚಿತ್ರಕಾರನ ಒಂದು ಚಿತ್ರ, ಮೇ 28, 1972ರ
ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯದಿಂದ




ಶೀರ್ಷಿಕೆಯಿಂದ ವ್ಯಂಗ್ಯಚಿತ್ರ, ಆನೆ ಹಲ್ಲು ಉಜ್ಜಿಕೊಳ್ಳುತ್ತಿದೆ ಎಂಬ ವಿಚಿತ್ರ ಕಲ್ಪನೆ, ಶಂಕರ್ಸ್
ವೀಕ್ಲಿ 17 ಅಕ್ಟೋಬರ್ 1971



ಶೀರ್ಷಿಕೆಯಿಲ್ಲದ ಇನ್ನೊಂದು ಚಿತ್ರ, ಶಂಕರ್ಸ್ ವೀಲಿ 24 ಜನವರಿ 1971




ಮಾತಿನ ವಿವರ ತೀರ ಕಡಿಮೆಯಿದ್ದು ಚಿತ್ರವೇ ಎಲ್ಲ ಭಾವವನ್ನು
ವ್ಯಕ್ತಪಡಿಸುವುದಕ್ಕೆ ಇದೊಂದು ಉತ್ತಮ ಉತ್ತಮ ಉದಾಹರಣೆ, 1972ರ
ಏಪ್ರಿಲ್ ಮೂರನೆಯವಾರದ ಪಂಚ್ ಪತ್ರಿಕೆಯಿಂದ

ಮೇಲೆ ಬರೆದ ನಕ್ಷೆಗಾಗಲಿ ಸಲ್ಲುತ್ತಿತ್ತು; ಇತ್ತೀಚೆಗೆ ವ್ಯಾಪಕವಾಗಿ ವ್ಯಂಗ್ಯ ಚಿತ್ರಗಳಿಗೆಲ್ಲ ಅನ್ವಯಿಸುವಂತಾಗಿದೆ.

ಗ್ರೀಕರ ಸುವರ್ಣಯುಗದಲ್ಲೇ ಅರಿಸ್ಟಾಟಲ್ ಮತ್ತು ಅರಿಸ್ಟಾಫನಿಸರ ಬರೆವಣಿಗೆಗಳಲ್ಲಿ ವ್ಯಂಗ್ಯಚಿತ್ರದ ಬಗ್ಗೆ ಉಲ್ಲೇಖವಿದೆ. ವೈಯಕ್ತಿಕ ವ್ಯಂಗ್ಯಚಿತ್ರಗಳನ್ನು ಬರೆದು ಆ ಕಾರಣದಿಂದಲೇ ದುಃಖಕ್ಕೀಡಾದ ಪೌಸನ್ ಎಂಬಾತನ ವಿಷಯವನ್ನು ಅವರು ತಿಳಿಸಿದ್ದಾರೆ. ಆದರೂ ವ್ಯಂಗ್ಯಚಿತ್ರಗಳ ನಿಜವಾದ ಬಳಕೆ ಪ್ರಾರಂಭವಾದದ್ದು 16ನೆಯ ಶತಮಾನದ ಅಂತ್ಯದಲ್ಲಿ ಎನ್ನಬಹುದು. ಬೋಲೋನ್ಯ ಪಟ್ಟಣದ ಅನಿಬಾಲ್ ಕರಚ್ಚಿ ಮತ್ತು ಆತನ ಶಿಷ್ಯರು ಈ ಬಗೆಯ ಕೃತಿರಚನೆಯನ್ನು ಪ್ರಾರಂಭಿಸಿದಂತೆ ಕಾಣುತ್ತದೆ. ಇಟಾಲಿಯನ್ ವ್ಯಂಗ್ಯಚಿತ್ರಗಳಲ್ಲಿ ಕೆಲವನ್ನು ಇಂಗ್ಲೆಂಡಿನಲ್ಲಿ ತಗಡಿನ ಕೆತ್ತನೆಕಾರ ಆರ್ಥರ್ ಪಾಂಡ್ ಪ್ರಕಟಿಸಿದ. ಆತನೇ ಇಂಗ್ಲೆಂಡಿನ ಆಂಟಾಯನ್ ವಾಟ್ಟೊ ರಚಿಸಿದ ಮಿಸೌಬಿನ್ ಎಂಬ ವೈದ್ಯನೊಬ್ಬನ ವಿಡಂಬನ ಚಿತ್ರವನ್ನೂ ಪ್ರಕಟಿಸಿದ(1720). ಇಂಗ್ಲೆಂಡಿನಲ್ಲಿ ಇಂಗ್ಲಿಷಿನವನಿಂದ ರಚಿಸಲ್ಪಟ್ಟ ಮೊದಲ ವ್ಯಂಗ್ಯಚಿತ್ರವಿದು. ಸ್ನೇಹಿತರ ಮನರಂಜನೆಗಾಗಿ ಬರೆದ ಈ ವ್ಯಂಗ್ಯಚಿತ್ರಗಳಲ್ಲಿ ತಿಳಿಹಾಸ್ಯಕ್ಕೆ ಅವಕಾಶವಿತ್ತೇ ಹೊರತು ಕಟುಟೀಕೆಯಾಗಲೀ ಮತ್ಸರದ ಧ್ವನಿಯಾಗಲೀ ಇರಲಿಲ್ಲ.

ರಾಜಕೀಯ ವಿಷಯಗಳನ್ನೂ ವ್ಯಕ್ತಿಗಳನ್ನೂ ವಿಡಂಬನೆ ಮಾಡುವ ವ್ಯಂಗ್ಯಚಿತ್ರಗಳು 18ನೆಯ ಶತಮಾನದಲ್ಲಿ ಪ್ರಾರಂಭವಾದುವು. ಇಂಗ್ಲೆಂಡಿನಲ್ಲಿ ಟೌನ್‍ಸೆಂಡ್ ಎಂಬಾತ ವೈಯಕ್ತಿಕ ವ್ಯಂಗ್ಯಚಿತ್ರಗಳು ಯಶಸ್ವಿಯಾಗುವುದಕ್ಕೆ ಕಾರಣನಾದ.

ಈ ಸುಮಾರಿಗೆ ವ್ಯಂಗ್ಯಚಿತ್ರರಚನೆಯಲ್ಲಿ ಹೊಸಪ್ರಯೋಗವೊಂದು ಆರಂಭವಾಯಿತು. ಮೃಗಗಳ ದೇಹವನ್ನು ರಚಿಸಿ, ವಿಡಂಬನೆಗಾಗಿ ಸರಿಯಾದವನ ತಲೆಯನ್ನು ಅದಕ್ಕೆ ಲಗತ್ತಿಸಿ ಅಣಕವಾಡುವುದನ್ನಿಲ್ಲಿ ಕಾಣಬಹುದು. ಮನುಷ್ಯರಲ್ಲಿ ಹಲವಾರು ಜನರ ನಡೆವಳಿಕೆ ಮೃಗಗಳ ಗುಣಗಳನ್ನು ನೆನಪಿಗೆ ತರುವುದು ಎಲ್ಲರಿಗೂ ತಿಳಿದ ವಿಷಯ. ಲಂಚವನ್ನು ಯಾರಿಗೂ ತಿಳಿಯದಂತೆ ತೆಗೆದುಕೊಳ್ಳುತ್ತಾನೆಂದು ಕುಪ್ರಸಿದ್ಧನಾದವನನ್ನು ಕಣ್ಣುಮುಚ್ಚಿ ಹಾಲು ಕುಡಿಯುವ ಬೆಕ್ಕಿನಂತೆ ಚಿತ್ರಿಸಿದರೆ ವಿಡಂಬನೆ ಕಟು ಟೀಕೆಯಾಗಲು ಸಾಧ್ಯ. ಮೊದ್ದುತನಕ್ಕೆ ಕತ್ತೆ, ಯುಕ್ತಿಗೆ ನರಿ, ಶಕ್ತಿಗೆ ಸಿಂಹ, ದೈನ್ಯಕ್ಕೆ ನಾಯಿ, ನಂಬಿಸಿ ಕೊಲ್ಲುವ ಗುಣಕ್ಕೆ ಕರಡಿ–ಇತ್ಯಾದಿಯಾಗಿ ದೊಡ್ಡ ಭಂಡಾರವೆ ವ್ಯಂಗ್ಯಚಿತ್ರ ಕಲೆಗಾರರಿಗೆ ಸಿಕ್ಕಿದಂತಾಯಿತು.

**ಮುದ್ರಣ ಕಲೆಯ ಪ್ರಭಾವ :** 15ನೆಯ ಶತಮಾನದಲ್ಲಿ ಮುದ್ರಣಕಲೆ ಆರಂಭವಾಗುವ ತನಕ ವ್ಯಂಗ್ಯಚಿತ್ರಗಳನ್ನು ಅಟ್ಟೆ ಕಾಗದದ (ಕಾರ್ಡು) ಮೇಲೆ ರಚಿಸಿ ಒಬ್ಬರ ಕೈಯಿಂದೊಬ್ಬರಿಗೆ ಪ್ರಸಾರ ಮಾಡಬೇಕಾಗಿತ್ತು. ವ್ಯಂಗ್ಯಚಿತ್ರಗಳ ತೀವ್ರ ಮುನ್ನಡೆಗೆ ಇದೊಂದು ದೊಡ್ಡ ಆತಂಕವಾಗಿತ್ತು. ಮುದ್ರಣಕಲೆ ಬಳಕೆಗೆ ಬಂದ ಮೊದಲ ವರ್ಷಗಳಲ್ಲಿ ಚಿತ್ರಗಳ ಅಚ್ಚುಗಳನ್ನು ತಯಾರಿಸಲು ಮರದ ಹಲಗೆಯನ್ನು ಬಳಸುತ್ತಿದ್ದರು. ಇಂಥ ಅಚ್ಚುಗಳಿಂದ ಹೆಚ್ಚಿನ ಪ್ರತಿಗಳನ್ನು ತೆಗೆಯಲಾಗುತ್ತಿರಲಿಲ್ಲ. ಲೋಹದ ತಗಡಿನಿಂದ ಅಚ್ಚುಗಳನ್ನು ಮಾಡಲು ಪ್ರಾರಂಭಿಸಿದಾಗ ಸಾವಿರಾರು ಪ್ರತಿಗಳನ್ನು ತೆಗೆಯುವುದು ಸಾಧ್ಯವಾಯಿತು. 15ನೆಯ ಶತಮಾನದ ಮಧ್ಯದಲ್ಲಿ ಜರ್ಮನಿಯ ವ್ಯಂಗ್ಯಚಿತ್ರಕಾರನೊಬ್ಬ ಅನಾದಿಯಾಗಿ ನಡೆದು ಬಂದ ಗಂಡು ಹೆಣ್ಣಿನ ಕದನವನ್ನು ಮನೆಯ ಯಜಮಾನಿಕೆ ಯಾರದು ಎಂಬ ಶಿರೋನಾಮೆಯನ್ನು ಕೊಟ್ಟು ಮರದ ಹಲಗೆಯಲ್ಲಿ ಕೆತ್ತಿ ಅಚ್ಚೊತ್ತಿ ಯಶಸ್ವಿಯಾಗಿ ಪ್ರಕಟಿಸಿದ.

ಕಾಗದದ ತಯಾರಿಕೆಯಲ್ಲಿ ಪ್ರಗತಿಯಾಗಿ ಹೊಳಪು ಕಾಗದ ಬಳಕೆಗೆ ಬಂದಾಗ ನೆರಳುಬೆಳಕುಗಳು ಕಾಣುವಂತೆ ಅಚ್ಚೊತ್ತಲು ಸಾಧ್ಯವಾಯಿತು. ಛಾಯಾಚಿತ್ರ ಹಾಗೂ ಎರಕಹೊಯ್ಯುವ ಕಲೆಗಳು ಪ್ರವೃದ್ಧಿಯಾದಾಗ ಹಾಫ್‍ಟೋನ್ ಚಿತ್ರಗಳ ಉಪಯೋಗ ಪ್ರಾರಂಭವಾಯಿತು. ಪೆನ್ಸಿಲಿನಲ್ಲಿ ಬರೆದ, ಇಜ್ಜಲಿನಿಂದ ರಚಿಸಿದ ಸೂಕ್ಷ್ಮ ಚಿತ್ರಗಳನ್ನು ವ್ಯಂಗ್ಯಚಿತ್ರಕಾರರು ಬಳಕೆಗೆ ತರತೊಡಗಿದರು. ಪತ್ರಿಕೆಗಳ ಸಂಖ್ಯೆ ಹೆಚ್ಚಾದಾಗ, ಕಾಗದದ ಬಳಕೆಯೂ ಮಿತಿ ಮೀರಿತಾಗಿ ಸುಲಭದರ ನ್ಯೂಸ್ ಪ್ರಿಂಟ್ ಕಾಗದ ಬಳಕೆಗೆ ಬಂತು. ವ್ಯಂಗ್ಯ ರೇಖಾಚಿತ್ರಗಳನ್ನು ಬರೆದು ಪ್ರಕಟಿಸುವ ಕಲೆ ಈ ಸುಮಾರಿಗೆ ಜನಪ್ರಿಯವಾಯಿತು. ಎರಡೋ ಮೂರೋ ಹತ್ತೋ ಹನ್ನೆರಡೋ ತೆಳು ದಪ್ಪ ಗೆರೆಗಳಲ್ಲಿ ಸೂಕ್ಷ್ಮವಾಗಿ ಹಾಗೂ ಕಟುವಾಗಿ ವಿಡಂಬಿಸುವ ಪ್ರಚಂಡ ವ್ಯಂಗ್ಯಚಿತ್ರಕಾರರು ಹುಟ್ಟಿಕೊಂಡರು. ವಿಡಂಬಿಸಿದ ವಿಷಯ ಎದ್ದು ಕಾಣುವಂತೆ ವ್ಯಂಗ್ಯಚಿತ್ರ ರಚಿಸುವ ವಿಧಾನವನ್ನು ಚಿತ್ರಕಾರರು ರೂಪಿಸಿಕೊಂಡರು. ಸಮಾಜದ ಏರುಪೇರುಗಳಿಂದಲೇ ಸ್ಫೂರ್ತಿಪಡೆದು, ಅಲ್ಲಿಯ ಕುಂದು ಕೊರತೆಗಳನ್ನು, ಅನ್ಯಾಯ ದಬ್ಬಾಳಿಕೆಗಳನ್ನು ವಿಡಂಬಿಸತೊಡಗಿದರು. ಹೀಗೆ ವ್ಯಂಗ್ಯ ಚಿತ್ರಗಳ ಸಾಂಸ್ಕೃತಿಕ ಮಟ್ಟ ಕೂಡ ಸಮಾಜದ ಸಾಂಸ್ಕೃತಿಕ ಸ್ಥಿತಿಯನ್ನೇ ಪ್ರತಿಬಿಂಬಿಸಿದವು.

**ವ್ಯಂಗ್ಯಚಿತ್ರಕಲೆ :** ವಿಡಂಬನವೇ ವ್ಯಂಗ್ಯಚಿತ್ರಗಳ ಜೀವಾಳವಾದ್ದರಿಂದ ಉತ್ಪ್ರೇಕ್ಷೆ ಅದರ ದಾರಿಯಾಗುತ್ತದೆ. ವ್ಯಕ್ತಿಚಿತ್ರಗಳಲ್ಲಿ ವಿಡಂಬನೆಯನ್ನು ತರುವಾಗ ವ್ಯಕ್ತಿಯ ದೈಹಿಕ ಓರೆಕೋರೆಗಳನ್ನು, ವೈಲಕ್ಷಣ್ಯಗಳನ್ನು ಎದ್ದುತೋರುವಂತೆ ಮಾಡುವುದು ಒಂದು ವಿಧಾನ. ಅಂದರೆ ವ್ಯಕ್ತಿಯ ನೀಳವಾದ ಮೂಗನ್ನೋ ದಪ್ಪನಾದ ತಲೆಯನ್ನೋ ಉದ್ದವಾದ ತೆಳುಕತ್ತನ್ನೋ ದಪ್ಪನಾದ ಹೊಟ್ಟೆಯನ್ನೋ ಎದ್ದುಕಾಣುವಂತೆ ತೋರಿಸುವುದು ಸ್ವಾಭಾವಿಕ. ತೆಳುದೇಹ, ದಪ್ಪತಲೆ ಮತ್ತು ಅಗಲವಾದ ಕಿವಿಗಳು ಗಾಂಧೀಜಿಯ ಚಿತ್ರಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಗುಣಗಳು. ಇಂದಿರಾಗಾಂಧಿಯವರನ್ನು




ನವಯುಗದ ಅತಿ ಸುಧಾರಿತ ನಾಗರಿಕ ದಂಪತಿಗಳನ್ನು ಶಂಕರ್ ಪ್ರತಿವಾರದ ತಮ್ಮ ಪತ್ರಿಕೆಯಲ್ಲಿ ರಮ್ಯವಾಗಿ ಬಯಲಿಗೆಳೆದಿದ್ದಾರೆ. ಅಂಥದೊಂದು ಚಿತ್ರವಿದು (ಶಂಕರ್ಸ್ ವೀಕ್ಲೀ, 12 ಸೆಪ್ಟೆಂಬರ್ 1971)

ಬಣ್ಣಿಸುವಾಗ ಅವರ ನಿಡುಮೂಗಿಗೆ ಪ್ರಾಶಸ್ತ್ಯ ಬರುತ್ತದೆ. ಇದಲ್ಲದೆ ಸಾಮಾನ್ಯ ವ್ಯಂಗ್ಯ ಚಿತ್ರಗಳನ್ನು ಸೃಷ್ಟಿಸುವಾಗ ಕಲೆಗಾರ ಒಂದೊಂದು ಚಿತ್ರದ ಹಿನ್ನೆಲೆ, ವ್ಯಕ್ತಿಗಳ ಚಿತ್ರಣ, ಅದರ ಭಾವವಿಲಾಸಗಳು ಎಲ್ಲವೂ ತನ್ನ ಉದ್ದೇಶಕ್ಕೆ ಹೊಂದುವಂತೆ ಮಾಡುತ್ತಾನೆ. ಅದಕ್ಕೆ ಉಚಿತವಾದ ಶೀರ್ಷಿಕೆಯನ್ನು ಕೊಡುತ್ತಾನೆ. ಶೀರ್ಷಿಕೆ ಯಾವಾಗಲೂ ಚಿಕ್ಕದಾಗಿ, ಚುರುಕಾಗಿ ಉದ್ದೇಶವನ್ನು ಇಲ್ಲದ ವ್ಯಂಗ್ಯ ಚಿತ್ರಗಳೂ ಪ್ರಕಟವಾಗುತ್ತವೆ. ಅಂಥವುಗಳಲ್ಲಂತೂ ಕಲೆಗಾರನ ಕಲ್ಪನೆ ಹುಚ್ಚೆದ್ದು ಕುಣಿದಾಡುವುದನ್ನು ಕಾಣಬಹುದು. ಇನ್ನೂ ಕೆಲವು ಕಲಾವಿದರು ತಮ್ಮ ತಮ್ಮ ಚಿತ್ರಗಳಿಗೆ ಉಚಿತ ನಾಯಕರನ್ನೂ ಸೃಷ್ಟಿಸಿಕೊಂಡುಬಿಟ್ಟಿದ್ದಾರೆ. ಉದಾಹರಣೆಗೆ ಡೇವಿಡ್ ಲೋನ ಕರ್ನಲ್ ಬ್ಲಿಂಪ್ ಅಬೂಬಿನ ಇಬ್ಬರು ಪುಡಾರಿಗಳು, ಶಂಕರರ ಕತ್ತೆ ತಲೆಯ ದಂಪತಿಗಳು, ಡೆಕ್ಕನ್ ಹೆರಾಲ್ಡ್‍ನ ಪೌರ, ನಾಡಿಗರ ಪೆದ್ದುಗುಮಾಸ್ತ, ಲಕ್ಷ್ಮಣ್ ಅವರ ಸಾಮಾನ್ಯ ಗೃಹಸ್ಥ–ಈ ಮೊದಲಾದವರನ್ನು ನೋಡಬಹುದು.

ಭಾರತ ಮತ್ತು ಚೀನಗಳ ನಡುವಣ ಸಂಬಂಧವನ್ನು ವ್ಯಂಗಿಸುವ ಚಿತ್ರ, ಡೇವಿಡ್ ಲೋ ಎಂಬ ವ್ಯಂಗ್ಯಚಿತ್ರಕಾರನ ದಿ ಫಿಯರ್‍ಫುಲ್ ಫಿಫ್ಟೀಸ್ ಎಂಬ ಸಂಕಲನದಿಂದ

ವ್ಯಂಗ್ಯಚಿತ್ರಗಳಿಗೆ ಬಣ್ಣಕೊಟ್ಟವರು ಮುಂಬಯಿಯ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ ಪತ್ರಿಕೆಯವರು. ಅದರಲ್ಲಿ ಆರ್.ಕೆ.ಲಕ್ಷ್ಮಣ್ ಶ್ಲಾಘನೀಯ ಕೆಲಸ ಮಾಡಿದ್ದಾರೆ. ಇಂಗ್ಲೆಂಡಿನ ಪಂಚ್ ಪತ್ರಿಕೆ ಬಹು ಹಿಂದಿನಿಂದ ವರ್ಣರಂಜಿತ ವ್ಯಂಗ್ಯಚಿತ್ರಗಳನ್ನು

ಪ್ರಕಟಿಸುತ್ತಿದೆ. ಸಾಮಾನ್ಯವಾಗಿ ವ್ಯಂಗ್ಯಚಿತ್ರಗಳು ಕಪ್ಪು ಬಿಳುಪಿನಲ್ಲಿರುತ್ತವೆ. ಯಾವ ಚಿತ್ರದಲ್ಲೂ ನಿರೂಪಣೆ ಪೂರ್ಣವಾಗಿರುವುದಿಲ್ಲ. ಸ್ಥೂಲವಾಗಿ ದಪ್ಪಗೆರೆಗಳನ್ನೆಳೆದು ಚಿತ್ರಕಾರ ಉಚಿತ ಭಾವ ಮೂಡುವಂತೆ ಮಾಡಿರುತ್ತಾನೆ. ಮಸಿ, ಪೆನ್ಸಿಲ್, ಕ್ರೇಯಾನ್ ಬಣ್ಣಗಳನ್ನು ಸ್ಥೂಲವಾಗಿ ಬಳಸಿ ಚಿತ್ರಗಳನ್ನು ಬಿಡಿಸುವುದು ವಾಡಿಕೆ.

ವ್ಯಂಗ್ಯಚಿತ್ರಶ್ರೇಣಿ (ಕಾರ್ಟೂನ್ ಸ್ಟ್ರಿಪ್) ಈಚೆಗೆ ಜನಪ್ರಿಯವಾಗುತ್ತಿದೆ. ಚಿತ್ರಶ್ರೇಣಿಯಲ್ಲಿ ಸಾಲಾಗಿ ನಾಲ್ಕಾರು ಚಿತ್ರಗಳಿರುತ್ತವೆ. ಎಲ್ಲವೂ ಸೇರಿ ಒಂದು ಅಭಿಪ್ರಾಯ ಮೂಡುತ್ತದೆ. ವಾರಪತ್ರಿಕೆಗಳು ಇಂಥ ಶ್ರೇಣಿಗಳನ್ನು ಪ್ರತಿವಾರವೂ ಪ್ರಕಟಿಸುತ್ತವೆ. ಬಾಂಡ್ಲಿ, ಡೆನಿಸ್ ದಿ ಮೇನೆಸ್–ಇವು ಶ್ರೇಣಿಚಿತ್ರಗಳಿಗೆ ಉದಾಹರಣೆಗಳು.

ವ್ಯಂಗ್ಯಚಿತ್ರಕಲೆಗೆ ಈಚೆಗೆ ಹೆಚ್ಚಿನ ಸ್ಥಾನಮಾನ ದೊರೆತಿದೆ. ಅದಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತಿರುವುದು ಪತ್ರಿಕೆಗಳಿಂದ. ಡೇವಿಡ್ ಲೋ, ಆರ್.ಕೆ.ಲಕ್ಷ್ಮಣ್, ಆರ್. ಮೂರ್ತಿ ಮೊದಲಾದವರ ಚಿತ್ರಗಳು ಪುಸ್ತಕರೂಪದಲ್ಲೂ ಪ್ರಕಟವಾಗಿವೆ.

**ಬ್ರಿಟನ್** : 17ನೆಯ ಶತಮಾನದ ತನಕ ಸಮಾಜದಲ್ಲಿ ರಾಜಮನೆತನಕ್ಕೆ ಅತ್ಯುನ್ನತ ಗೌರವ, ಭಯ, ಭಕ್ತಿಗಳಿದ್ದುವು. ಆದರೆ 1649ರಲ್ಲಿ 1ನೆಯ ಚಾರ್ಲ್ಸ್ ದೊರೆಯ ತಲೆಯನ್ನು ಕಡಿದುಹಾಕುವಷ್ಟರ ಮಟ್ಟಿಗೆ, ಜನರಲ್ಲಿ ರಾಜಕೀಯ ಜಾಗೃತಿ ಉಂಟಾಗಿತ್ತು. ಆ ತನಕ ವ್ಯಂಗ್ಯಚಿತ್ರಕಾರರು ಆಳರಸರನ್ನು ಅಣಕವಾಡುತ್ತಿರಲಿಲ್ಲ. ಈ ಸುಮಾರಿಗೆ ರಾಜಮನೆತನವನ್ನೂ ವ್ಯಂಗ್ಯಕ್ಕೆ ಗುರಿಮಾಡುವ ಕೆಲಸ ಆರಂಭವಾಯಿತು. ಪ್ರತಿಭಾವಂತನಾದ ಹೋಗಾರ್ಥ್ ಮಾನವೀಯ ಕುಂದು ಕೊರತೆಗಳನ್ನು ಅವಗುಣಗಳನ್ನು ವಿಡಂಬಿಸಲು ಪ್ರಾರಂಭಿಸಿ, ಸಮಕಾಲೀನ ವ್ಯಂಗ್ಯಚಿತ್ರಕಾರನಾಗಿಯೇ ಉಳಿಯದೆ, ಸಾರ್ವಕಾಲಿಕ ಮಟ್ಟವನ್ನು ಮುಟ್ಟಿದ.

18ನೆಯ ಶತಮಾನದ ಸಮಾಜದಲ್ಲಿ ಶ್ರೀಮಂತರು, ಬಡವರು, ಕೆಲಸಗಾರರು–ಹೀಗೆ ವಿವಿಧ ಹಂತಗಳಿದ್ದು, ಅವುಗಳಲ್ಲಿಯ ವ್ಯಾವಹಾರಿಕ ಅಂತರ ಹಿರಿದಾಗಿತ್ತು. ಗಿಲ್ರೆ ಮತ್ತು ರೌಲೆಂಡ್‌ಸನ್ನರು ಎಲ್ಲ ಕಸುಬುದಾರರನ್ನು ಎಲ್ಲ ಅಂತಸ್ತಿನವರನ್ನೂ ವ್ಯಂಗ್ಯಚಿತ್ರಕ್ಕೆ ಬಳಸಿಕೊಂಡು ಅಪಾರ ವೈವಿಧ್ಯ ಸಾಧಿಸಿದರು.

18ನೆಯ ಶತಮಾನದ ಅಂತ್ಯದಲ್ಲಿ, 19ರ ಆದಿಯಲ್ಲಿ ಸಮಾಜದಲ್ಲಿ ವಿಪರೀತ ಬದಲಾವಣೆಗಳಾದವು. ದೇಶದಲ್ಲಿ ಹಣದ ಸಮೃದ್ಧಿಯಿತ್ತು. ವಿರಾಮವೂ ಇತ್ತು. ಹಾಗಾಗಿ ಹೆಂಗಸರ ಗಂಡಸರ ಉಡುಪು ವೇಷಭೂಷಣಗಳಲ್ಲಿ ನಡೆವಳಿಕೆಯಲ್ಲಿ ಬೇರೊಂದು ಬಗೆಯ ಅಭಿರುಚಿ ಎದ್ದು ಕಾಣುವಂತಾಯಿತು. ಆ ಕಾಲದ ವ್ಯಂಗ್ಯಚಿತ್ರಗಳು ಕೂಡ ಬಲುಕೀಳು ಮಟ್ಟದ ಹಾಸ್ಯವನ್ನೇ ತೋರುತ್ತವೆ.

1840ರಲ್ಲಿ ಪಂಚ್ ಪತ್ರಿಕೆ ಪ್ರಾರಂಭವಾಯಿತು. ರಿಚರ್ಡ್ ಡಾಯಿಲ್, ಜಾನ್ ಲೀಚ್ ಸುಸಂಸ್ಕೃತ ಹಾಸ್ಯಚಿತ್ರಗಳ ಅತ್ಯುನ್ನತ ಮಟ್ಟವನ್ನು ಕಾಯ್ದುಕೊಂಡಿದೆ. 1880 ಮತ್ತು ಮುಂದಿನ ಕಾಲದಲ್ಲಿ ಮ್ಯಾಕ್ಸ್ ಎಂಬ ಪ್ರತಿಭಾವಂತ ವ್ಯಂಗ್ಯಚಿತ್ರಕಾರ ಆಧ್ಯಾತ್ಮಿಕ ಹಿನ್ನೆಲೆಯನ್ನು ಬಳಸಿಕೊಂಡು ವ್ಯಂಗ್ಯಚಿತ್ರಗಳನ್ನು ರಚಿಸಿದ. ವಾಸ್ತವತ್ವದಿಂದ ಊಹಾಲೋಕದಲ್ಲಿ ಎಷ್ಟು ದೂರ ಸರಿದರೂ ಅಷ್ಟಷ್ಟು ಅವನು ಸತ್ಯದ ಹತ್ತಿರಹತ್ತಿರಕ್ಕೇ ಬರುತ್ತಿದ್ದುದು ತನ್ನ ಅಸದೃಶವಾದ ಪ್ರತಿಭೆಯಿಂದಲೇ.

ಈ ಕಾಲದಲ್ಲೇ ಪಿಕ್‌ವಿಕ್ ಪೇಪರ್ಸ್ ಕಾದಂಬರಿಗೆ ಸಿಮೋರ್ ಎಂಬ ಪ್ರತಿಭಾವಂತ ಚಿತ್ರಗಳನ್ನು ರಚಿಸಿದ್ದು.

19ನೆಯ ಶತಮಾನದ ಅಂತ್ಯಕಾಲದಲ್ಲಿ ಮತ್ತು 20ರ ಆದಿಯಲ್ಲಿ ಇಂಗ್ಲೆಂಡಿನ ವ್ಯಾಪಾರ ಲೋಕದಲ್ಲೆಲ್ಲ ಹರಡಿತು. 1914ರಲ್ಲಿ ಒಂದನೆಯ ಮಹಾಯುದ್ಧವೂ ಪ್ರಾರಂಭವಾಯಿತು. ವ್ಯಾಪಾರೋದ್ಯಮಕ್ಕೆ ಸಂಬಂಧಿಸಿದ ಜಾಹಿರಾತುಗಳನ್ನು ಮನಸೆಳೆಯುವಂತೆ ಮಾಡಲು ವ್ಯಂಗ್ಯಚಿತ್ರಕಾರರು ತಮ್ಮ ಕಲೆಯನ್ನು ಬಳಸಿಕೊಳ್ಳಲಾರಂಭಿಸಿದರು. ಇದರಿಂದ ಅವರ ಸಂಪಾದನೆಯೂ ಉನ್ನತಮಟ್ಟಕ್ಕೇರಿತು.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಶತ್ರುಗಳ ಮೇಲಿನ ಕೋಪ, ತಮ್ಮ ಜೀವನದಲ್ಲಿ ಅನುಭವಿಸಬೇಕಾಗಿಬಂದ ಕಷ್ಟಗಳು ಜನರ ಮನಸ್ಸಿನ ಉದ್ವೇಗವನ್ನು ಹೆಚ್ಚಿಸಿದುವು. ಉದ್ವೇಗವನ್ನು ತೋಡಿಕೊಂಡು ಬರೆದ ವ್ಯಂಗ್ಯಚಿತ್ರಗಳು ಜನರನ್ನು ನಗಿಸಿ, ಅವರ ಕಷ್ಟಗಳು ಹಗುರವಾಗುವಂತೆ ಮಾಡಿದವು. ಹಾಗಾಗಿ ವ್ಯಂಗ್ಯಚಿತ್ರಗಳ ಜನಪ್ರಿಯತೆಯೂ ಹೆಚ್ಚಾಯಿತು. ಡೇವಿಡ್ ಲೋ, ಇಲ್ಲಿಂಗ್ಸ್‌ವರ್ಥ್, ಡೌಡ್, ಪೂಗಾಸ್ಸೆ ಮೊದಲಾದ ನೂರಾರು ಪ್ರತಿಭಾವಂತ ವ್ಯಂಗ್ಯಚಿತ್ರಕಾರರು ದಿನ, ವಾರ, ಪಕ್ಷ, ಮಾಸ ಪತ್ರಿಕೆಗಳಲ್ಲಿ ವೈವಿಧ್ಯಪೂರ್ಣ, ಸುಸಂಸ್ಕೃತ ವಿಡಂಬನ ಚಿತ್ರಗಳನ್ನು ಬರೆದರು. ಈಗಲೂ ಇವರಲ್ಲಿ ಕೆಲವರು ಬರೆಯುತ್ತಿದ್ದಾರೆ.

**ಅಮೆರಿಕ** : ಅಮೆರಿಕದಲ್ಲಿ ಸಂಪತ್ಸಮೃದ್ಧಿ ಹೆಚ್ಚಾಗಿ ಜನಜೀವನದ ವೇಗವೂ ಅತಿಯಾದುದರಿಂದ ವ್ಯಂಗ್ಯಚಿತ್ರಗಳಿಗೆ ಹೆಚ್ಚು ಹೆಚ್ಚು ಉತ್ತೇಜನ ದೊರೆಯುವಂತಾಯಿತು. ಹೆಸರಾಂತ ವ್ಯಂಗ್ಯಚಿತ್ರಕಾರರ ರಚನೆಗಳನ್ನು ಸಂಸ್ಥೆಯೊಂದು ಕೊಂಡು ಸುಲಭಬೆಲೆಗೆ ದೇಶದ ಎಲ್ಲ ಮೂಲೆಗಳಲ್ಲಿರುವ ಪತ್ರಿಕೆಗಳಿಗೂ ಹಂಚಲು ತೊಡಗಿತು. ಥಾಮಸ್ ನ್ಯಾಸ್ಟ್‌ನೇ (1840–1902), ಅಮೆರಿಕದ ವ್ಯಂಗ್ಯಚಿತ್ರಕಾರರಲ್ಲಿ ಮೊದಲಿಗನೆನ್ನಬಹುದು. ಈತನೇ ಡೆಮೋಕ್ರಟಿಕ್ ಪಕ್ಷಕ್ಕೆ ಕತ್ತೆಯ ತಲೆಯನ್ನು ಲಗತ್ತಿಸಿದವನು.

**ಫ್ರಾನ್ಸ್** : ಕ್ರಾಂತಿಗೆ ಹೆಸರಾದ ಈ ದೇಶದಲ್ಲಿ ಚಾರ್ಲ್ಸ್ ಫಿಲಿಪಾನ್ ಎಂಬಾತನೇ ಮೊದಮೊದಲು ಯಶಸ್ವಿಯಾಗಿ ವ್ಯಂಗ್ಯಚಿತ್ರಗಳನ್ನು ರಚಿಸಿದವ. ವರ್ಣವ್ಯಂಗ್ಯಚಿತ್ರಗಳನ್ನೂ ಈತನೇ ಬಳಕೆಗೆ ತಂದು, ಪತ್ರಿಕೆಗಳಿಗೆ ವ್ಯಂಗ್ಯಚಿತ್ರಗಳು ಆವಶ್ಯಕ ಎಂದು ತೋರಿಸಿಕೊಟ್ಟ. ಇವನ ಸಂಗಡಿಗರಾದ ದೋಮಿಯಾ, ದಾರೆ, ಗಾವಾರ್ನೆ ಎಲ್ಲರೂ ಪ್ರತಿಭಾವಂತರು. ಯುರೋಪಿನ ಎಲ್ಲ ದೇಶಗಳಲ್ಲಿಯೂ ಇದೇ ರೀತಿ ವ್ಯಂಗ್ಯಚಿತ್ರಗಳು ಬಳಕೆಗೆ ಬಂದು ಜನಪ್ರಿಯವಾಗಿವೆ. ಸಿಂಪ್ಲಿಸಿಸಿಮಸ್, ಕಿಕ್ಕೇರಿಕಿ ಮೊದಲಾದವರು ಶತಮಾನಗಳಿಂದಲೂ ಯಶಸ್ವಿಯಾಗಿ ಪ್ರವರ್ಧಮಾನಕ್ಕೆ ಬಂದಿವೆ.

**ರಷ್ಯ** : ಕ್ರಾಂತಿಗೆ ಮುಂಚೆ ಸ್ಟ್ರೆಕೋಸ್ಸಾ, ಪಾಲಿಮೆಟ್ ಇವುಗಳು ಜನಪ್ರಿಯವಾಗಿದ್ದುವು. ಕ್ರಾಂತಿಯಾದ ಮೇಲೆ ಕಠಿಣ ಆಡಳಿತವಾರಂಭವಾಗಿದ್ದರೂ ವ್ಯಂಗ್ಯಚಿತ್ರಕಾರರು ಬಲು ಎಚ್ಚರದಿಂದ ನಡೆಯಬೇಕಾಗಿರುವಾಗಲೂ ಕ್ರೊಕೊಡಿಲ್ ಹಾಸ್ಯ ಪತ್ರಿಕೆಯ ವ್ಯಂಗ್ಯಚಿತ್ರಗಳು ಅಂತಾರಾಷ್ಟ್ರೀಯ ಮನ್ನಣೆ ಪಡೆದವು.

**ಭಾರತ** : ಹಿಂದೆ ಸ್ವಾತಂತ್ರ್ಯಕ್ಕಾಗಿ ಇಡೀ ದೇಶ ಹೋರಾಡುತ್ತಿದ್ದ ಕಾಲದಲ್ಲಿ ವ್ಯಂಗ್ಯಚಿತ್ರಗಳು ರಾಜಕೀಯ ವಿಷಯಗಳನ್ನೇ ಹೆಚ್ಚಾಗಿ ಆರಿಸಿಕೊಳ್ಳುತ್ತಿದ್ದುದು ಸ್ವಾಭಾವಿಕವಾಗಿತ್ತು. ಸ್ವಾತಂತ್ರ್ಯಾನಂತರ ಭಾರತೀಯರೇ ಆಡಳಿತಗಾರರಾಗಿ ಸಚಿವಾದಿ ಅಧಿಕಾರಿಗಳನ್ನು ವ್ಯಂಗ್ಯಚಿತ್ರಗಳಿಗೆ ಗುರಿಮಾಡುವುದು ಹೆಚ್ಚಾಯಿತು. ಪ್ರಗತಿ ಹೊಂದಲು ಉತ್ಸಾಹದಿಂದ ಮುನ್ನುಗ್ಗುವ ಯಾವ ಆಡಳಿತದಲ್ಲೂ ಕುಂದು, ತಪ್ಪುಗಳು ಸಹಜವಾಗಿಯೇ ಇರುತ್ತವೆಯಷ್ಟೆ. ಹಾಗಾಗಿ ವಿಕಟಚಿತ್ರಗಳಿಗೆ ಅಪಾರ ಸಾಮಗ್ರಿಗಳು ಸಿಕ್ಕಿ ವ್ಯಂಗ್ಯಚಿತ್ರಗಳು ವೈವಿಧ್ಯಮಯವಾಗಿ ಬೆಳೆಯಲು ಅವಕಾಶವೇರ್ಪಟ್ಟಿತು. ಭಾರತೀಯ ಸಂಸ್ಕೃತಿಯ ಬೆಂಬಲವನ್ನು ಉಪಯೋಗಿಸಿಕೊಂಡ ಪರಿಣಾಮಕಾರಿ ವ್ಯಂಗ್ಯಚಿತ್ರಗಳಿಗೆ ಶಂಕರ್, ಸುಸಂಸ್ಕೃತ ವ್ಯಂಗ್ಯಚಿತ್ರಗಳಿಗೆ ಕುಟ್ಟಿ, ರೇಖೆಯ ಸೊಬಗು ಮತ್ತು ಉತ್ತಮ ವಿಡಂಬನೆಗೆ ಲಕ್ಷ್ಮಣ್, ಥಾನು, ವಿಜಯನ್, ಅಬೂ–ಇಂಥ ಹಲವಾರು ಪ್ರತಿಭಾವಂತರು ಯಶಸ್ವಿಯಾಗಿ ಪತ್ರಿಕೆಗಳ ಬೆಂಬಲವಾಗಿ ಕೆಲಸ ಮಾಡುತ್ತಿದ್ದಾರೆ.

ಶಂಕರ್ಸ್ ವೀಕ್ಲಿಯ ಸಂಕೇತ

**ಕರ್ನಾಟಕ** : ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಮೂರ್ತಿ ವಿಡಂಬನ ಕ್ಷೇತ್ರದಲ್ಲಿ ಯಶಸ್ವಿ ಕೆಲಸ ಮಾಡುತ್ತಿದ್ದಾರೆ. ಕೊರವಂಜಿ ಆರ್.ಕೆ.ಲಕ್ಷ್ಮಣ್ ಕರ್ನಾಟಕದ ಗಡಿಮೀರಿ ಭಾರತೀಯ, ಅಂತಾರಾಷ್ಟ್ರೀಯ ಅಂತಸ್ತನ್ನು ಮುಟ್ಟಿದ್ದಾರೆ. ಸುಧಾ ಮತ್ತು ಮಯೂರದ ನಾಡಿಗ್ ಹೊಸ ವ್ಯಂಗ್ಯಚಿತ್ರಕಾರರಲ್ಲಿ ಮುಖ್ಯರಾಗಿದ್ದಾರೆ. ಮಿಕ್ಕಪತ್ರಿಕೆಗಳಲ್ಲಿ ಹಲವರು ಇಂಗ್ಲಿಷಿನ ಇತರ ಪತ್ರಿಕೆಗಳ ವ್ಯಂಗ್ಯ ಚಿತ್ರಗಳನ್ನು ಸಾರ್ಥಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಜನ ಜಾಗೃತಿಯೂ ತಿಳಿವಳಿಕೆಯೂ ಹೆಚ್ಚಾಗಿ, ಸಮಾಜದಲ್ಲಿ ಹಾಸ್ಯಪ್ರವೃತ್ತಿ ವೃದ್ಧಿಯಾದಂತೆಲ್ಲ ವ್ಯಂಗ್ಯಚಿತ್ರಕಾರರ ಸಂಖ್ಯೆ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ನೂರಾರು ವ್ಯಂಗ್ಯ ಚಿತ್ರಕಲಾವಿದರು ಕ್ರಿಯಾಶೀಲವಾಗಿದ್ದು, ಅವರದೇ ಆದ ಸಂಘಟನೆಯೊಂದು ನಿಯಮಿತವಾಗಿ ಕಾರ್ಯಕ್ರಮ ನಡೆಸುತ್ತದೆ.

**ಚಲನಚಿತ್ರಗಳು** : ಕಾರ್ಟೂನ್ ಕಲೆಯನ್ನು ಬಳಸಿಕೊಂಡು ಚಿಕ್ಕ ದೊಡ್ಡ ಚಲನಚಿತ್ರಗಳನ್ನು ತಯಾರಿಸಲಾಗುತ್ತಿದೆ. ಇಂಥ ಕಲಾವಿದರಲ್ಲಿ ಪ್ರಸಿದ್ಧನಾದವ ವಾಲ್ಟ್‌ಡಿಸ್ನಿ. ವ್ಯಂಗ್ಯಚಿತ್ರಣವನ್ನು ಬೆಳ್ಳಿತೆರೆಯ ಮೇಲೆ ಯಶಸ್ವಿಯಾಗಿ ಕಲಾತ್ಮಕವಾಗಿ ಬಳಸಿದವರಲ್ಲಿ ಈತ ಅಗ್ರಗಣ್ಯ. ಹೆಚ್ಚಿನ ವಿವರಗಳಿಗೆ (**ನೋಡಿ– ಚಲನಚಿತ್ರ**).

(ಎಂ.ಎಸ್.ಎಚ್.ಐ.)

**ಕ್ಯಾರಿನೇಟಿ** : ಪಕ್ಷಿವರ್ಗವನ್ನು ಹಾರಾಡುವ ಹಕ್ಕಿಗಳು ಮತ್ತು ಹಾರಲಾರದ ಹಕ್ಕಿಗಳೆಂದು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಹಾರಾಡುವ ಹಕ್ಕಿಗಳ ಗುಂಪೇ ಕ್ಯಾರಿನೇಟಿ. ಇನ್ನೊಂದರ ಹೆಸರು ರ್‍ಯಾಟೈಟಿ. ಆದರೆ ಇತ್ತೀಚೆಗೆ ಪಕ್ಷಿವರ್ಗವನ್ನು ಅನೇಕ ಉಪವರ್ಗಗಳಾಗಿ ವಿಂಗಡಿಸಲಾಗಿರುವುದರಿಂದ ಮೇಲೆ ಹೇಳಿದ ವರ್ಗೀಕರಣವನ್ನು ಕೈಬಿಡಲಾಗಿದೆ. ಕ್ಯಾರಿನೇಟಿ ಗುಂಪಿನ ಹಕ್ಕಿಗಳಲ್ಲಿರುವ ಎದೆ ಮೂಳೆಯ ತಳಭಾಗ ಚಾಚಿಕೊಂಡು ದೋಣಿಯಾಕಾರವನ್ನು ತಳೆದಿದೆ. ಇದಕ್ಕೆ ಕೀಲ್ ಎಂದು ಹೆಸರು. ಇದರ ಇಕ್ಕಡೆಗಳಲ್ಲಿ ಹಾರುವುದಕ್ಕೆ ಸಂಬಂಧಿಸಿದ ಸ್ನಾಯುಗಳು ಅಂಟಿಕೊಂಡಿದ್ದು ಹಕ್ಕಿ ಹಾರಲು ಸಹಕಾರಿಯಾಗಿದೆ. (ನೋಡಿ: ಪಕ್ಷಿವರ್ಗ) (ಜಿ.ಎಂ.ಬಿ.)

**ಕ್ಯಾರಿಬ್ :** ಕ್ಯಾರಿಬೀಯನ್ ಸಮುದ್ರದ ನೆರೆಯ ಭೂಪ್ರದೇಶಗಳು ಸ್ಪೇನಿನ ಆಕ್ರಮಣಕ್ಕೊಳಗಾದ ಕಾಲದಲ್ಲಿ ಲೆಸರ್ ಆಂಟಲಿಸ್ ದ್ವೀಪಗಳಲ್ಲೂ ಇವುಗಳ ಬಳಿಯ ದಕ್ಷಿಣ ಅಮೆರಿಕನ್ ಭೂಭಾಗದಲ್ಲೂ ವಾಸಿಸುತ್ತಿದ್ದ ಯುದ್ಧೋತ್ಸಾಹಿ ನರಭಕ್ಷಕ ಇಂಡಿಯನರು. ಸೆರೆಯಾದ ಶತ್ರುಗಳನ್ನು ಭಕ್ಷಿಸುವುದು ಇವರ ಪದ್ಧತಿಯಾಗಿತ್ತು. ಈ ಜನಕ್ಕೆ ಕ್ಯಾನಿಬ ಎಂಬುದೂ ಒಂದು ಹೆಸರಾಗಿತ್ತು. ನರಭಕ್ಷಕ ಎಂಬುದಕ್ಕೆ ಕ್ಯಾನಿಬಾಲ್ ಎಂಬ ಇಂಗ್ಲಿಷ್ ಪದ ಬಂದದ್ದು ಈ ಹೆಸರಿನಿಂದ ಎಂದು ಹೇಳಲಾಗಿದೆ. ಕ್ಯಾರಿಬ್ ಜನ ವಾಸಿಸುತ್ತಿದ್ದ ಪ್ರದೇಶದ ನೆರೆಯ ಸಮುದ್ರಕ್ಕೆ ಕ್ಯಾರಬೀಯನ್ ಸಮುದ್ರವೆಂದು ಹೆಸರಾಯಿತು.

ಮೂಲತಃ ಆಂಟಿಲಿಯನ್ ಕ್ಯಾರಿಬ್ ಜನ ದಕ್ಷಿಣ ಅಮೆರಿಕದ ಉತ್ತರ ಭಾಗದಲ್ಲಿ ವಾಸಿಸುತ್ತಿದ್ದರು. ಸ್ಪೇನಿನವರು ಅಲ್ಲಿಗೆ ಆಗಮಿಸುವುದಕ್ಕೆ ಸ್ವಲ್ಪ ಮುಂಚೆ ಇವರು ಲೆಸರ್ ಆಂಟಿಲಿಸನ್ನು ಅರವಾಕನ್ ಪಂಗಡಗಳಿಂದ ಕಿತ್ತುಕೊಂಡಿದ್ದರು. ದೊಡ್ಡ ತೋಡುದೋಣಿಗಳಲ್ಲಿ ಬಹು ದೂರ ಸಾಗಿ ಜನರನ್ನು ಸೆರೆಹಿಡಿದು ಅವರ ಪೈಕಿ ಗಂಡಸರನ್ನು ಹಿಂಸಿಸಿ ಕೊಂದು, ವಿಜಯ ಸಮಾರಂಭದ ಕಾಲದಲ್ಲಿ ಅವರ ಮಾಂಸವನ್ನು ಭಕ್ಷಿಸುತ್ತಿದ್ದರು. ಸೆರೆಯಾಳುಗಳ ಹೆಂಗಸರನ್ನು ತಮ್ಮ ಹೆಂಡಿರನ್ನಾಗಿ ಮಾಡಿಕೊಳ್ಳುತ್ತಿದ್ದರು.

ಕ್ಯಾರಿಬಾನ್ ಭಾಷೆಯನ್ನಾಡುವ ಜನ ಗಿಯಾನದಲ್ಲೂ ಆಮೆಜ಼ಾನ್ ನದಿಯ ದಕ್ಷಿಣ ಭಾಗದಲ್ಲೂ ವಾಸಿಸುತ್ತಿದ್ದರು. ಕೆಲವು ಪಂಗಡಗಳ ಜನ ಕಲಹಪ್ರಿಯರೂ ನರಮಾಂಸ ಭಕ್ಷಕರೂ ಆಗಿದ್ದರು. ಆದರೆ ಒಟ್ಟಿನಲ್ಲಿ ಅವರಲ್ಲಿ ಬಹುಮಂದಿ ಹೆಚ್ಚು ಸೌಮ್ಯವಾದವರು. ಅವರು ದ್ವೀಪವಾಸಿ ಕ್ಯಾರಿಬ್ ಜನಗಳಷ್ಟು ಆಕ್ರಮಣಶೀಲರಾಗಿರಲಿಲ್ಲ. ಕೃಷಿನಿರತರು ಅಲ್ಲಲ್ಲಿ ವಾಸಿಸುತ್ತಿದ್ದರು. ಬೇಟೆಯಾಡಲು ದೇಶೀಯ ಬಂದೂಕು ಅಥವಾ ಬಿಲ್ಲುಬಾಣಗಳನ್ನು ಉಪಯೋಗಿಸುತ್ತಿದ್ದರು. ಉಷ್ಣವಲಯದ ಅರಣ್ಯವಾಸಿಗಳಂತೆ ಇವರೂ ಬಹುತೇಕ ನಗ್ನರಾಗಿಯೇ ಇರುತ್ತಿದ್ದರು. ಆದರೆ ತಮ್ಮ ಶರೀರಗಳನ್ನು ಬಣ್ಣ ಬಣ್ಣದ ಚಿತ್ರಗಳಿಂದಲೂ ಆಭರಣಗಳಿಂದಲೂ ಅಲಂಕರಿಸಿಕೊಳ್ಳುತ್ತಿದ್ದರು. ಪ್ರತಿಯೊಂದು ಹಳ್ಳಿಯಲ್ಲೂ ವಿಸ್ತೃತ ಕುಟುಂಬಗಳ ಒಂದು ಗುಂಪು ಇದ್ದು, ಅದಕ್ಕೊಬ್ಬ ಮುಖಂಡನಿರುತ್ತಿದ್ದ. ಅವರ ಧಾರ್ಮಿಕ ಆಚರಣೆಗಳು ಸರಳವಾಗಿರುತ್ತಿದ್ದುವು. ದೊಡ್ಡ ಹಾಗೂ ಸಂಕೀರ್ಣವಾದ ಸಮಾರಂಭಗಳು ಬಹಳ ಕಡಿಮೆ. ಅವರಿಗೆ ಭೂತಗಳಲ್ಲಿ ನಂಬಿಕೆಯಿತ್ತು. ಕಾಯಿಲೆಗಳಿಗೆ ಭೂತಗಳೇ ಕಾರಣವೆಂದು ಅವರು ನಂಬಿದ್ದರು. ಇವುಗಳಲ್ಲಿ ಕೆಲವು ಭೂತಗಳ ಮೇಲೆ ತಮಗೆ ಹತೋಟಿಯಿದೆಯೆಂದು ಧಾರ್ಮಿಕ ನಾಯಕರು ಹೇಳಿಕೊಳ್ಳುತ್ತಿದ್ದರು. ಅವರಿಗೆ ರೋಗವನ್ನು ಗುಣಪಡಿಸಲು ಶಕ್ತಿಯಿದೆಯೆಂಬ ನಂಬಿಕೆಯಿತ್ತು.

ಇತರ ಕ್ಯಾರಿಬೀಯನ್ ಪಂಗಡಗಳವರು ವೆನಿಜ್ವೇಲ ಮತ್ತು ಕೊಲಂಬಿಯಗಳ ನಡುವಣ ಗಡಿಯ ಉದ್ದಕ್ಕೂ ಆಂಡೀ ಪರ್ವತಗಳ ಇಳಿಜಾರುಗಳ ಅರಣ್ಯಗಳಲ್ಲಿ, ವಾಸಿಸುತ್ತಿದ್ದರು. ಈ ಪಂಗಡಗಳ ಜನರ ಬಗ್ಗೆ ಹೆಚ್ಚು ವಿಷಯ ತಿಳಿದಿಲ್ಲ. ಆದರೆ ಇವರಿಗೂ ಗಿಯಾನ ಕ್ಯಾರಿಬ್ ಜನಕ್ಕೂ ಅಷ್ಟೊಂದು ವ್ಯತ್ಯಾಸವಿರಲಿಲ್ಲ. ಮಧ್ಯ ಬ್ರೆಜ಼ಿಲ್‌ನಲ್ಲಿರುವ ಕ್ಸಿಂಗು ನದಿಯ ಉಗಮ ಪ್ರದೇಶದಲ್ಲಿ ಕುಯಿಕುರು, ಬಕೇರಿ ಮತ್ತು ಇನ್ನೂ ಹಲವು ಪಂಗಡಗಳ ಜನರಿದ್ದರು. ಇವರೂ ಕ್ಯಾರಿಬನ್ ಭಾಷೆಯನ್ನಾಡುವವರಾಗಿದ್ದರು. ಇತರ ಭಾಷೆಗಳನ್ನಾಡುವವರ ಜೊತೆಯಲ್ಲೇ ಇವರೂ ವಾಸಿಸುತ್ತಿದ್ದರು. ಬ್ರಿಟಿಷರು ಲೆಸರ್ ಆಂಟಿಲಿಸ್‌ನಲ್ಲಿ ಇದ್ದ ಕ್ಯಾರಿಬರನ್ನು ಡಾಮಿನಿಕಕ್ಕೆ ರವಾನಿಸಿದರು. ಈಗಲೂ ಅವರು ಅಲ್ಲಿದ್ದಾರೆ. ಆದರೆ ಅವರು ತಮ್ಮ ಪೂರ್ವದ ಸಂಸ್ಕೃತಿ ಮತ್ತು ಭಾಷೆಗಳನ್ನು ಸಂಪೂರ್ಣವಾಗಿ ಉಳಿಸಿಕೊಂಡಿಲ್ಲ. (ಎಸ್‌ಎಚ್‌ಐ.)

**ಕ್ಯಾರಿಬೀ ದ್ವೀಪಗಳು:** ವೆಸ್ಟ್ ಇಂಡೀಸ್ ದ್ವೀಪಸ್ತೋಮದ ಲೆಸ್ಸರ್ ಆಂಟಲಿಸ್ ದ್ವೀಪಗಳನ್ನು ಈ ಹೆಸರಿನಿಂದಲೂ ಕರೆಯುವುದುಂಟು. ವಿರಳವಾಗಿ ಇಡೀ ವೆಸ್ಟ್ ಇಂಡೀಸ್ ದ್ವೀಪಸ್ತೋಮವನ್ನೇ ಈ ಹೆಸರಿನಿಂದ ಕರೆಯುವುದೂ ಇದೆ. ಇದನ್ನು ಐರೋಪ್ಯರು ಕಂಡುಹಿಡಿದಾಗ ಇಲ್ಲಿ ವಾಸವಾಗಿದ್ದ ಕ್ಯಾರಿಬ್ ಜನರಿಂದಾಗಿ ಈ ದ್ವೀಪಸ್ತೋಮಕ್ಕೆ ಕ್ಯಾರಿಬೀ ಎಂಬ ಹೆಸರು ಬಂದಿದೆ. ಅಮೆರಿಕ ಸಂಯುಕ್ತ ಸಂಸ್ಥಾನ, ಗ್ರೇಟ್ ಬ್ರಿಟನ್, ಫ್ರಾನ್ಸ್, ನೆದರ್‌ಲೆಂಡ್ಸ್ ಮತ್ತು ವೆನಿಜ್ವೇಲ ದೇಶಗಳಿಗೆ ಸೇರಿದ ದ್ವೀಪಗಳು ಈ ಗುಂಪಿನಲ್ಲಿ ಸೇರಿವೆ. ಈ ದ್ವೀಪಸಮೂಹ ಒಂದು ಸರಪಳಿಯಾಕಾರದಲ್ಲಿ ಪೋರ್ಟರೀಕೊದಿಂದ ವೆನಿಜ್ವೇಲದ ಉತ್ತರತೀರದ ವರೆಗೂ ವಿಸ್ತರಿಸಿದೆ. ಈ ಸ್ತೋಮದ ಉತ್ತರ ಭಾಗದಲ್ಲಿ ಲೀವರ್ಡ್ ದ್ವೀಪಗಳೂ ಇವೆ. ಗ್ವಾಡಲೂಪ್, ಮಾರ್ಟನೀಕ್, ಬಾರ್ಬೇಡೋಸ್, ಟ್ರಿನಿಡಾಡ್ ಮತ್ತು ಟೊಬಾಗೋ ಇಲ್ಲಿಯ ಮುಖ್ಯ ದ್ವೀಪಗಳು.

ಕ್ಯಾರಿಬೀ ದ್ವೀಪಗಳು ಅಗ್ನಿಪರ್ವತಗಳಿಂದಾಗಿದ್ದು ಬೆಟ್ಟಗುಡ್ಡಗಳಿಂದ ಕೂಡಿವೆ. ಮೇ 1902ರಲ್ಲಿ ಗ್ವಾಡಲೂಪ್ ಮತ್ತು ಮಾರ್ಟನೀಕ್ ದ್ವೀಪಗಳಲ್ಲಿ ಜೀವಂತ ಅಗ್ನಿಪರ್ವತಗಳಿಂದ ಅಪಾರ ಹಾನಿಗಳು ಸಂಭವಿಸಿದುವು.

ಇಲ್ಲಿಯದು ಉಷ್ಣವಲಯದ ವಾಯುಗುಣ. ಸುತ್ತಮುತ್ತಲಿನ ಸಮುದ್ರಗಳ ಉಷ್ಣ ಪ್ರವಾಹಗಳು ಮತ್ತು ಪೂರ್ವದ ವ್ಯಾಪಾರ ಮಾರುತಗಳು ಇಲ್ಲಿಯ ವಾಯುಗುಣದ ಮೇಲೆ ಪರಿಣಾಮ ಬೀರಿವೆ. ಈ ಪ್ರದೇಶದಲ್ಲಿ ಪದೇ ಪದೇ ಬೀಸುವ ಚಂಡಮಾರುತಗಳ ಹಾವಳಿ ವಿಪರೀತ. ಮಳೆಯ ಪರಿಮಾಣ ದ್ವೀಪದಿಂದ ದ್ವೀಪಕ್ಕೆ ವ್ಯತ್ಯಾಸವಾಗುವುದುಂಟು.

ಇಲ್ಲಿ ಉಷ್ಣವಲಯದ ಸಸ್ಯಗಳಿವೆ. ಮಹಾಗನಿ ಮತ್ತು ಸಿಡಾರ್ ಮುಖ್ಯವಾದ ಮರಗಳು. ಜಿಂಕೆ, ಕಪಿ, ಕತ್ತೆ, ಉರಗವರ್ಗದ ಪ್ರಾಣಿಗಳು, ಆಮೆ, ಹಾವು ಇವು ಮುಖ್ಯವಾದ ಪ್ರಾಣಿಗಳು. ಅನೇಕ ಬಗೆಯ ಮೀನುಗಳೂ ಉಂಟು. ಮೈದಾನ ಪ್ರದೇಶಗಳಲ್ಲಿ ಕೃಷಿ ಮುಖ್ಯ ಉದ್ಯೋಗ. ಕಬ್ಬು, ಕಾಫಿ, ಕೋಕೋ, ಹೊಗೆಸೊಪ್ಪು, ಬಾಳೆಹಣ್ಣು ಮತ್ತು ತರಕಾರಿಗಳು ಇಲ್ಲಿಯ ಮುಖ್ಯ ಬೆಳೆಗಳು. ಟ್ರಿನಿಡಾಡ್‌ನಲ್ಲಿ ಪೆಟ್ರೋಲಿಯಂ ಮತ್ತು ಬಾರ್ಬೇಡೋಸ್‌ನಲ್ಲಿ ಎಣ್ಣೆ ದೊರೆಯುತ್ತವೆ. ಟ್ರಿನಿಡಾಡ್ ಮತ್ತು ಮಾರ್ಟನೀಕ್‌ಗಳಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. ಇಲ್ಲಿಯ ಜನರಲ್ಲಿ ಬಹು ಸಂಖ್ಯಾತರು ನೀಗ್ರೋಗಳು. ಬಿಳಿಯರೂ ಇದ್ದಾರೆ.

ಕ್ಯಾರಿಬಿ ದ್ವೀಪಗಳಲ್ಲಿ ಅನೇಕ ರಸ್ತೆಗಳುಂಟು. ಕತ್ತೆ ಇಲ್ಲಿ ಸಾಗಣೆಯ ಮುಖ್ಯ ಸಾಧನ. ಮುಖ್ಯ ವಾಯುಮಾರ್ಗಗಳಿವೆ. ಟ್ರಿನಿಡಾಡ್ ಮತ್ತು ಸೇಂಟ್ ಲೂಸಿಯಗಳಲ್ಲಿ ಉತ್ತಮ ಬಂದರುಗಳಿವೆ. (ಎಂಎಚ್.)

**ಕ್ಯಾರಿಬೀಯನ್ ಸಮುದ್ರ :** ಉತ್ತರದಕ್ಷಿಣ ಅಮೆರಿಕಗಳ ನಡುವೆ ಮೆಕ್ಸಿಕೋ ಖಾರಿಯ ದಕ್ಷಿಣಕ್ಕೆ, ಹರಡಿರುವ ಆಳವಾದ ಉಪಸಾಗರ. ಕ್ಯಾರಿಬೀಯನ್ ಸಮುದ್ರವೂ ಮೆಕ್ಸಿಕೋ ಖಾರಿಯೂ ಉತ್ತರ ದಕ್ಷಿಣ ಅಮೆರಿಕ ಭೂಖಂಡಗಳಿಂದ ಬಹಳ ಮಟ್ಟಿಗೆ ಸಂವೃತವಾಗಿರುವುದರಿಂದ ಇವೆರಡು ಜಲ ಪ್ರದೇಶಗಳನ್ನೂ ಒಂದಾಗಿ ಪರಿಗಣಿಸಿ ಅಮೆರಿಕನ್ ಮೆಡಿಟರೀನಿಯನ್ ಸಮುದ್ರವೆಂದು ಕರೆಯುವುದು ಜರ್ಮನ್ ಸಾಗರವಿಜ್ಞಾನಿಗಳ ರೂಢಿ. ಉತ್ತರಕ್ಕೆ ವೆಸ್ಟ್ ಇಂಡೀಸಿನ ಗ್ರೇಟರ್ ಅಂಟಿಲಿಸ್ ಮತ್ತು ಪೂರ್ವಕ್ಕೆ ಲೆಸರ್ ಆಂಟಿಲಿಸ್ ದ್ವೀಪಗಳು, ದಕ್ಷಿಣಕ್ಕೆ ವೆನಿಜ್ವೇಲ. ಕೊಲಂಬಿಯ, ಪನಾಮಾ ಮತ್ತು ಕಾಸ್ಟರೀಕ, ಪಶ್ಚಿಮಕ್ಕೆ ನಿಕರಾಗ್ವ, ಹಾಂಡುರಾಸ್ ಗ್ವಾಟಿಮಾಲ ಮತ್ತು ಮೆಕ್ಸಿಕೋ–ಇವು ಇದರ ಮೇರೆಗಳು. ದಕ್ಷಿಣೋತ್ತರವಾಗಿ 608 ಕಿಮೀ–1120 ಕಿಮೀ ಅಗಲವೂ ಪೂರ್ವಪಶ್ಚಿಮವಾಗಿ 2400 ಕಿಮೀ ಗರಿಷ್ಠ ಉದ್ದವೂ ಇರುವ ಇದರ ವಿಸ್ತೀರ್ಣ ಸು. 2754000 ಚ.ಕಿಮೀ.

ಕ್ಯಾರಿಬೀಯನ್ ಒಂದು ಮಹಾಕಡಲ್ಗಾಲುವೆಯಂತೆ ತೋರುವ ಸಮುದ್ರ. ಆದರೆ ಇದು ಕಾಲುವೆಯಷ್ಟು ಕ್ರಮಬದ್ಧವಾಗಿಲ್ಲ. ವಾಯವ್ಯದಲ್ಲಿ ಇದು ಯೂಕಟ್ಯಾನ್ ಕಡಲ್ಗಾಲುವೆಯ ಮೂಲಕ ಮೆಕ್ಸಿಕೋ ಖಾರಿಯೊಂದಿಗೆ ಸೇರಿಕೊಂಡಿದೆ. ಪೂರ್ವದಲ್ಲಿ ಉತ್ತರ ಅಟ್ಲಾಂಟಿಕ್ ಸಾಗರದ ಉಷ್ಣವಲಯದ ಭಾಗದೊಂದಿಗೆ ಕೂಡಿಕೊಂಡಿದೆ. ಅಟ್ಲಾಂಟಿಕಿನಿಂದ ಇದು ಬೇರ್ಪಟ್ಟಂತಿರಲು ಲೆಸರ್ ಆಂಟಿಲಿಸ್ ದ್ವೀಪಗಳು ಕಾರಣ. ಈ ದ್ವೀಪಗಳ ನಡುವೆ ಸಮುದ್ರದ ಆಳ 606 ಮೀಗಿಂತ ಹೆಚ್ಚಿಲ್ಲ. ಆನೆಗಾಡ ಜಲಸಂಧಿಯೇ ಅತ್ಯಂತ ಆಳ (1818 ಮೀ). ಕ್ಯೂಬದ ಪೂರ್ವದ ತುದಿಗೂ ಹೈಟಿಯ ವಾಯವ್ಯ ಭಾಗಕ್ಕೂ ನಡುವೆ ಇರುವ ಮಾರ್ಗದ ಮುಖದ ಬಳಿಯ ಆಳ 1667 ಮೀ. ಕ್ಯೂಬದ ಪಶ್ಚಿಮಕ್ಕೆ ಯೂಕಟ್ಯಾನಿನ ಆಳ 2060 ಮೀ.

ಕ್ಯಾರಿಬೀಯನ್ ನಡುವೆ ಅನೇಕ ನಿಡಿದಾದ ಮಡುಗಳೂ ಈ ಮಡುಗಳ ನಡುನಡುವೆ ಜಲದಡಿಯಲ್ಲಿ ಕಡಿದಾದ ನೆಲದೇಣುಗಳೂ ಉಂಟು. ಈ ಲಕ್ಷಣದಲ್ಲಿ ಇದು ಮೆಡಿಟರೇನಿಯನ್ ಸಮುದ್ರವನ್ನು ಹೋಲುವುದಾದರೂ ಮೆಡಿಟರೇನಿಯನ್‌ಗಿಂತ ಕ್ಯಾರಿಬೀಯನ್ ಹೆಚ್ಚು ಆಳ. ಅಟ್ಲಾಂಟಿಕ್ ಸಾಗರಕ್ಕೂ ಇದಕ್ಕೂ ನಡುವಣ ಸಮುದ್ರಭಾಗವೂ ಹೆಚ್ಚು ಆಳವಾಗಿದೆ. ಆದರೆ ಮೆಡಿಟರೇನಿಯನಿಗಿಂತ ಇದು ಕಿರಿದಾದ ಸಮುದ್ರ.

ಕ್ಯಾರಿಬೀಯನ್ ಮೂಲತಃ ಖಂಡೀಯ ಸಮುದ್ರವಲ್ಲ. ಆದರೆ ಇದು ಸಂಪೂರ್ಣ ಸಾಗರಿಕವೂ ಅಲ್ಲ ರಚನೆಯಲ್ಲೇನೋ ಇದು ಸಾಗರಪಾತ್ರದ ಹಾಗೆಯೇ ಇದೆ.

ಭೂರಚನೆಯ ಆಧಾರದ ಮೇಲೆ ಇದನ್ನು ಪೂರ್ವ ಪಶ್ಚಿಮ ಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮಭಾಗ ಚಿಕ್ಕದು. ಇದಕ್ಕೆ ಕೇಮ್ಯಾನ್ ಸಮುದ್ರವೆಂದೂ ಹೆಸರುಂಟು. ಈ ಎರಡು ಭಾಗಗಳಿಗೂ ನಡುವೆ–ಹಾಂಡುರಾಸ್ ನಿಕರಾಗ್ವಗಳಿಂದ ಜಮೈಕದ ವರೆಗೆ ಮತ್ತು ಅಲ್ಲಿಂದ ಹೈಟಿಯವರೆಗೆ–ಸಮುದ್ರ ತಳ ಅಗಲವಾಗಿ ಜಗಲಿಯಂತೆ ಹಬ್ಬಿದೆ. ಜಮೈಕದ ಆಗ್ನೇಯಕ್ಕೆ ಇರುವ ಸಮುದ್ರಭಾಗದ ಪಶ್ಚಿಮಪ್ರದೇಶ ಕೊಲಂಬಿಯನ್ ಮತ್ತು ವೆನಿಜ್ವೇಲನ್ ಪಾತ್ರಗಳಾಗಿ ವಿಂಗಡವಾಗಿದೆ. ಇವುಗಳ ನಡುವೆ ಜಲದ ಅಡಿಯ ನೆಲ ಎತ್ತರವಾಗಿ, ಬೆನ್ನೇಣಿನಿಂದ ಕೂಡಿದ್ದಾಗಿದೆ. ಕ್ಯಾರಿಬೀಯನ್ ಸಮುದ್ರ ಅತ್ಯಂತ ಆಳವಾಗಿರುವುದು ಕೇಮ್ಯಾನ್ ಸಮುದ್ರಭಾಗದಲ್ಲಿ–ಬಾರ್ಟ್‍ಲೆಟ್‍ನಲ್ಲಿ (6905). ಇದು ಕ್ಯೂಬಕ್ಕೂ ಜಮೈಕಕ್ಕೂ ನಡುವೆ ಇದೆ.

ಕ್ಯಾರಿಬೀಯನ್ ಸಮುದ್ರಪಾತ್ರದ ಮೇಲ್ಮೈ ತೀವ್ರವಾದ ಏರುತಗ್ಗುಗಳಿಂದ ಕೂಡಿದ್ದು. ಕಡಿದಾದ ಬೆನ್ನೇಣುಗಳ ಬದಿಯಲ್ಲಿ ಅತಿ ಆಳದ ಕೊಳ್ಳಗಳುಂಟು. ಕೆಲವು ಬೆನ್ನೇಣುಗಳು ಸಮುದ್ರದ ನೀರಿನ ಮಟ್ಟದಿಂದ ಮೇಲಕ್ಕೂ ತಲೆ ಎತ್ತಿ ನಿಂತಿವೆ. ಪ್ವೆರ್ಟ ರೀಕೋದ ಬೆನ್ನೆಲುಬಿನಂತಿರುವ ಪರ್ವತಶ್ರೇಣಿಯ ಎತ್ತರ, ಸಮುದ್ರಮಟ್ಟದಿಂದ 1333 ಕಿಮೀ ಆದರೆ ಅದರ ಬದಿ ಅತಿಕಡಿದಾಗಿದೆ; ಕಡಲ ಕಿನಾರೆಯಿಂದ ಕೇವಲ 88 ಕಿಮೀ ಸಾಗುವುದರೊಳಗೆ 5151.5 ಮೀ ಕೆಳಕ್ಕೆ ಇಳಿಯುತ್ತದೆ. ಈ ಇಳಿಜಾರು ಹೀಗೆಯೇ ಮುಂದುವರಿದು, ತೀರದಿಂದ 120 ಕಿಮೀಗಳಷ್ಟೇ ದೂರದಲ್ಲಿ ಅಟ್ಲಾಂಟಿಕ್ ಸಾಗರದ ಅತ್ಯಂತ ಆಳಪ್ರದೇಶವಾಗಿ ಪರಿಣಮಿಸುತ್ತದೆ. ಈ ಸ್ಥಳದ ಆಳ ಸಮುದ್ರಮಟ್ಟದಿಂದ 9145 ಮೀ.

ಕ್ಯಾರಿಬೀಯನ್ ಸಮುದ್ರದಲ್ಲಿ ಭರತದ ಚಲನೆ ಕಡಿಮೆ. ಇದು ನಿಲುಕುವ ಗರಿಷ್ಠ ಎತ್ತರ 0.6 ಮೀ ಸರಾಸರಿ 0.3 ಮೀ ಕ್ಯಾರಿಬೀಯನ್ ಸಮುದ್ರ ಸಂವೃತವಾಗಿರುವುದು ಇದಕ್ಕೆ ಒಂದು ಕಾರಣ. ಅಟ್ಲಾಂಟಿಕ್‍ನಿಂದ ಹರಿದುಬರುವ ಸಾಗರಪ್ರವಾಹ ಕ್ಯಾರಿಬೀಯನ್ ಸಮುದ್ರವನ್ನು ಹಾಯ್ದು ಯೂಕಟ್ಯಾನ್ ಮೂಲಕ ವೇಗವಾಗಿ ಮುಂದುವರಿಯುತ್ತದೆ. ಅಲ್ಲಿ ಇದರ ಕವಲೊಂದು ಪೂರ್ವಾಭಿಮುಖವಾಗಿ ತಿರುಗಿ ಫ್ಲಾರಿಡ ಜಲಸಂಧಿಯ ಮೂಲಕ ಹರಿಯುತ್ತದೆ. ಕ್ಯಾರಿಬೀಯನ್ ಸಮುದ್ರದ ಪ್ರತಿಪ್ರವಾಹಗಳ ಪೈಕಿ ಕೊಲಂಬಿಯನ್ ಪಾತ್ರದ ದಕ್ಷಿಣ ಪಾರ್ಶ್ವದಲ್ಲಿ ಅಪ್ರದಕ್ಷಿಣವಾಗಿ ಹರಿಯುವುದೂ ಕ್ಯೂಬದ ದಕ್ಷಿಣತೀರದ ಬಳಿ ಪೂರ್ವದ ಕಡೆಗೆ ಹರಿಯುವುದೂ ಮುಖ್ಯವಾದಂಥವು. ಕ್ಯಾರಿಬೀಯನ್ ಸಮುದ್ರದ ಮೇಲೆ ಈಶಾನ್ಯ ವಾಣಿಜ್ಯ ಮಾರುತಗಳು ಬೀಸುತ್ತವೆ. ಸೆಪ್ಟೆಂಬರಿನಿಂದ ನವೆಂಬರ್‌ವರೆಗೆ ಇವುಗಳ ಬಲ ಸ್ವಲ್ಪ ಕುಗ್ಗಿರುತ್ತದೆ. ಈ ಪ್ರದೇಶದಲ್ಲಿ ಮಂಜು ಅಪರೂಪ. ಗಾಳಿಯ ಉಷ್ಣತೆ ಫೆಬ್ರವರಿಯಲ್ಲಿ ಸು.25.5 ಸೆ. ಸೆಪ್ಟೆಂಬರಿನಲ್ಲಿ ಸು.28.3 ಕ್ಯಾರಿಬೀಯನ್ ಸಮುದ್ರ ಪ್ರದೇಶದಲ್ಲಿ ಪ್ರತಿವರ್ಷವೂ ಆಗಸ್ಟಿನಿಂದ ಅಕ್ಟೋಬರ್ ವರೆಗಿನ ಕಾಲದಲ್ಲಿ ಭೀಕರ ಚಂಡಮಾರುತಗಳು ಬೀಸುವುದುಂಟು. *

**ಕ್ಯಾರಿಬೀಯನ್ ಚರಿತ್ರೆ**:ಎರಡು ಸಾಗರಗಳ (ಅಟ್ಲಾಂಟಿಕ್ ಮತ್ತು ಪೆಸಿಫಿಕ್) ಮತ್ತು ಎರಡು ಭೂಖಂಡಗಳ (ಉತ್ತರ ದಕ್ಷಿಣ ಅಮೆರಿಕ) ನಡುವೆ ಇರುವ ಕ್ಯಾರಿಬೀಯನಿನ ಸ್ಥಾನಮಹತ್ವದಿಂದಾಗಿ ಅದಕ್ಕೆ ಹೆಚ್ಚಿನ ಐತಿಹಾಸಿಕ ಪ್ರಾಮುಖ್ಯ ಉಂಟಾಗಿದೆ. ಹಳೆಯ ಜಗತ್ತಿಗೆ ಕ್ಯಾರಿಬೀಯನ್ ಸಮುದ್ರದ ಪ್ರಥಮ ಪರಿಚಯವಾದ್ದು ಕೊಲಂಬಸ್‍ನ ಯಾತ್ರೆಯ ಫಲ. ಇಲ್ಲಿಯ ಲೆಸರ್ ಆಂಟಿಲಿಸ್ ದ್ವೀಪಗಳಲ್ಲಿದ್ದ ಕ್ಯಾರಿಬ್ ಇಂಡಿಯನ್ ಜನರಿಂದಾಗಿ ಇದಕ್ಕೆ ಕ್ಯಾರಿಬೀಯನ್ ಸಮುದ್ರವೆಂಬ ಹೆಸರು ಬಂತು. (ನೋಡಿ–ಕ್ಯಾರಿಬ್). ಇದರ ಆವಿಷ್ಕಾರವಾದ ಅನಂತರ ಸುಮಾರು ಒಂದು ಶತಮಾನ ಕಾಲ ಇಲ್ಲಿ ಸ್ಪ್ಯಾನಿಷರೇ ಏಕಮೇವ ಪ್ರಭುಗಳಾಗಿದ್ದರು. ಸ್ಪೇನಿನ ಸಾಹಸಿಗಳು ಅದೃಷ್ಟವನ್ನರಸುತ್ತ ಹೊರಟು ಕ್ಯಾರಿಬೀಯನ್ ಸಮುದ್ರದ ಸುತ್ತಮುತ್ತಣ ಪ್ರದೇಶದಲ್ಲಿ ಬೆಳ್ಳಿಬಂಗಾರಗಳನ್ನು ಪತ್ತೆ ಹಚ್ಚಿ ಅವನ್ನು ತಮ್ಮ ದೇಶಕ್ಕೆ ಸಾಗಿಸಿದರು. 16ನೆಯ ಶತಮಾನದಲ್ಲಿ ಇಲ್ಲಿ ಖಾಯಮಾಗಿ ನೆಲಸಿದವರ ಸಂಖ್ಯೆ ಬಹಳ ಕಡಿಮೆ. ಅನಂತರ ಹಿಸ್ಪಾನ್ಯೋಲ ದ್ವೀಪದ ಸಾಂಟೊ ಡೊಮಿಂಗೋ ಪ್ರದೇಶವೇ ಸ್ಪ್ಯಾನಿಷರ ಆಕ್ರಮಣ ಕಾರ್ಯದ ಪ್ರಥಮ ಕೇಂದ್ರವಾಗಿದ್ದು, ಅಲ್ಲಿಂದ ಇತರ ದ್ವೀಪಗಳಿಗೆ ಅವರ ಆಕ್ರಮಣ ವಿಸ್ತರಿಸಿತು. ಮೆಕ್ಸಿಕೋ, ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳನ್ನೂ ಅವರು ಪ್ರವೇಶಿಸಿದರು. 1513ರಲ್ಲಿ ಬ್ಯಾಲ್ಬೋವನಿಂದ ಪೆಸಿಫಿಕಿನ ಆವಿಷ್ಕಾರವಾದ ಮೇಲೆ ಆಂಡೀಸ್ ಪರ್ವತ ಪ್ರದೇಶ ಸ್ಪೇನಿನವರ ವಶವಾಯಿತು. ಪೆರು ಮತ್ತು ಅರ್ಜಂಟೀನಗಳಿಂದ ಸರಕನ್ನು ಪನಾಮಾ ಭೂಕಂಠದ ಮೂಲಕ ಸಾಗಿಸಲಾಗುತ್ತಿತ್ತು. ಕ್ಯಾರಿಬೀಯನ್ ಸಮುದ್ರದ ಮೂಲಕ ಸ್ಪೇನಿಗೆ ಸಾಗುತ್ತಿದ್ದ ಸಂಪತ್ತು ಪದೇ ಪದೇ ಕಡಲು ದರೋಡೆಗೆ ಒಳಗಾಗುತ್ತಿತ್ತು. ಇಂಗ್ಲಿಷ್, ಫ್ರೆಂಚ್ ಮತ್ತು ಡಚ್ ಕಡಲು ದರೋಡೆಕಾರರು ಖಂಡಪ್ರದೇಶಕ್ಕೂ ತಮ್ಮ ದಾಳಿ ವಿಸ್ತರಿಸಿದರು. ಹೆಚ್ಚು ಐಶ್ವರ್ಯಯುಕ್ತವಲ್ಲವೆಂಬ ಕಾರಣದಿಂದ ಸ್ಪ್ಯಾನಿಷರು ತ್ಯಜಿಸಿದ ಲೆಸರ್ ಆಂಟಿಲಿಸ್‍ಗಾಗಿ ಬ್ರಿಟಿಷರೂ ಫ್ರೆಂಚರೂ ಬಡಿದಾಡಲಾರಂಭಿಸಿದರು. 17ನೇಯ ಶತಮಾನದಲ್ಲಿ ಬ್ರಿಟಿಷ್, ಫ್ರೆಂಚ್, ಡಚ್, ಮತ್ತು ಡೇನಿಷ್ ವಸಾಹತುದಾರರು ಈ ದ್ವೀಪಗಳಲ್ಲಿ ನೆಲಸಿದರು. 1655ರಲ್ಲಿ ಬ್ರಿಟಿಷರು ಸ್ಪೇನಿನಿಂದ ಜಮೇಕವನ್ನು ಕಿತ್ತುಕೊಂಡರು. ಸ್ಪೇಇನ ಭದ್ರಕೋಟೆ ಬಿರುಕು ಬಿಟ್ಟಿತು. ಚಿನ್ನ ಬೆಳ್ಳಿಗಳನ್ನು ಸ್ವದೇಶಕ್ಕೆ ಸಾಗಿಸುವ ಸ್ಪೇನಿನ ನೀತಿಗೆ ಧಕ್ಕೆ ಒದಗಿತು. ಐಶ್ವರ್ಯ ತುಂಬಿದ ಹಡಗುಗಳು ಶತ್ರುಗಳ ವಶವಾಗಿ ಸ್ಪೇನಿಗೆ ತುಂಬ ನಷ್ಟ ಸಂಭವಿಸಿತು.

ಕ್ಯಾರಿಬೀಯನ್ ಪ್ರದೇಶ ಐರೋಪ್ಯರ ವಶವಾದಾಗ ಅವರ ವ್ಯಾಪಾರ ಕುದುರಿತು. ಸಕ್ಕರೆಯೇ ಮುಂತಾದ ಬೆಳೆಗಳ ತೋಟಗಳಲ್ಲಿ ದುಡಿಯಲು ಅವರು ಗುಲಾಮರನ್ನು ತಂದರು. ಗುಲಾಮ ಪದ್ಧತಿ ಬೆಳೆಯಿತು. 1697ರಲ್ಲಿ ಫ್ರಾನ್ಸ್ ಕ್ರಾಂತಿಯ ಹಿಸ್ಪಾನ್ಯೋಲವನ್ನು ಸ್ಪೇನಿನಿಂದ ಪಡೆದುಕೊಂಡಿತು. ಫ್ರಾನ್ಸಿನ ಕ್ರಾಂತಿಯ ಕಾಲದಲ್ಲಿ ಈ ವಸಾಹತಿನಲ್ಲಿ ನೀಗ್ರೋಗಳು ದಂಗೆಯೆದ್ದು ಫ್ರಾನ್ಸಿನ ಹಿಡಿತದಿಂದ ಬಿಡುಗಡೆ ಪಡೆದರು. ಹೇಟಿ ದ್ವೀಪ 1804ರಲ್ಲಿ ಸ್ವತಂತ್ರವಾಯಿತು. ಇದಾದ ಅನಂತರ ಸ್ಪೇನಿನ ಹಿಡಿತ ಸಡಿಲವಾಗಿ ಕ್ಯಾರಿಬೀಯನ್‍ನಲ್ಲಿದ್ದ ಸ್ಪಾನಿಷ್ ವಸಾಹತುಗಳೆಲ್ಲ ಒಂದೊಂದಾಗಿ ಸ್ವತಂತ್ರವಾದುವು. 1850ರ ಹೊತ್ತಿಗೆ ಕ್ಯಾರಿಬೀಯನ್ ಸುತ್ತ ಮೆಕ್ಸಿಕೋ, ಗ್ವಾಟಿಮಾಲ, ಹಾಂಡುರಸ್, ನಿಕರಾಗ್ವ, ಕಾಸ್ಟರೀಕ, ಕೊಲಂಬಿಯ, ವೆನಿಜ್ವೇಲ, ಹೇಟಿ ಡಾಮಿನಿಕನ್ ಗಣರಾಜ್ಯ ಮುಂತಾದ ಸ್ವತಂತ್ರ ರಾಷ್ಟ್ರಗಳು ಉದಿಸಿದುವು. 20ನೆಯ ಶತಮಾನದ ಹೊತ್ತಿಗೆ ಪ್ವೆರ್ಟ ರೀಕೊ ಸ್ಪೇನಿನ ಕೈಬಿಟ್ಟು, ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿತು. ಕ್ಯೂಬ ಸ್ವತಂತ್ರವಾಯಿತು. ಕೊಲಂಬಿಯದ ಪನಾಮಾ ಬೇರ್ಪಟ್ಟು ಸ್ವತಂತ್ರವಾಯಿತು.

1849ರಲ್ಲಿ ಕ್ಯಾಲಿಫೋರ್ನಿಯದಲ್ಲಿ ಬಂಗಾರವನ್ನು ಕಂಡುಹಿಡಿಯಲಾಗಿ ಕ್ಯಾರಿಬೀಯನ್ ಸಮುದ್ರ ಮತ್ತು ಪೆಸಿಫಿಕ್ ಸಾಗರಗಳ ಮಧ್ಯೆ ಇರುವ ಪನಾಮಾ ಭೂಕಂಠದ ಪ್ರಾಮುಖ್ಯ ಹೆಚ್ಚಿತು. ಭೂಕಂಠದಲ್ಲಿ ಒಂದು ರೈಲುಮಾರ್ಗವನ್ನು ನಿರ್ಮಿಸಲಾಯಿತು. ಭೂಕಂಠವನ್ನು ಕತ್ತರಿಸಿ ಕಾಲುವೆ ನಿರ್ಮಿಸುವುದು ಅಗತ್ಯವಾಯಿತು. 1880ರಲ್ಲಿ ಒಂದು ಫ್ರೆಂಚ್ ಕಂಪನಿ ಪನಾಮಾ ಕಾಲುವೆ ನಿರ್ಮಿಸಲಾರಂಭಿಸಿತಾದರೂ ಆರ್ಥಿಕ ಮುಗ್ಗಟ್ಟಿನಿಂದ ಮತ್ತು ರೋಗರುಜಿನಗಳ ದಸೆಯಿಂದ ಆ ಕೆಲಸ ಅಷ್ಟಕ್ಕೇ ನಿಂತಿತು. 1903ರ ಪನಾಮಾ ಕ್ರಾಂತಿಯ ಅನಂತರ ಸಂಯುಕ್ತ ಸಂಸ್ಥಾನ ಅಲ್ಲಿ ಕಾಲುವೆ ನಿರ್ಮಾಣದಲ್ಲಿ ತೊಡಗಿತು. ಪನಾಮಾ ಕಾಲುವೆ 1914ರಲ್ಲಿ ಪ್ರಾರಂಭವಾದಾಗ ದಕ್ಷಿಣ ಅಮೆರಿಕದ ಪಶ್ಚಿಮ ಕರಾವಳಿಯವರಿಗೂ ಅದೊಂದು ವರವಾಗಿ ಪರಿಣಮಿಸಿತು. ಪೂರ್ವದಿಂದ ಪಶ್ಚಿಮಕ್ಕೂ ಪಶ್ಚಿಮದಿಂದ ಪೂರ್ವಕ್ಕೂ ಸಮುದ್ರದ ಮೂಲಕ ಹೋಗಬೇಕಾದಾಗಲೆಲ್ಲ ದಕ್ಷಿಣ ಅಮೆರಿಕವನ್ನು ಬಳಸುವುದು ತಪ್ಪಿತು. ಕಾಲುವೆಯ ನಿರ್ಮಾಣದಿಂದ ಸಂಯುಕ್ತ ಸಂಸ್ಥಾನದ ದಕ್ಷಿಣದ ಎಲ್ಲೆ ವಿಸ್ತರಿಸಿತೆಂದು ಹೇಳಬಹುದು. ಸಂಯುಕ್ತ ಸಂಸ್ಥಾನದ ವಿದೇಶಾಂಗ ನೀತಿಯ ಮೇಲೆ ಉಂಟಾದ ಪರಿಣಾಮವೂ ಅಧಿಕ. ಕ್ಯೂಬ ಮತ್ತು ಪ್ವೆರ್ಟ ರೀಕೊಗಳಲ್ಲಿ ಸಂಯುಕ್ತ ಸಂಸ್ಥಾನ ನೌಕಾನೆಲೆಗಳನ್ನು ಹೊಂದಿತ್ತು. ಅದು ಡಚ್ ವೆಸ್ಟ್ ಇಂಡೀಸನ್ನು 1917ರಲ್ಲಿ ಕೊಂಡಿತು. ಯುರೋಪಿನಿಂದ ಪನಾಮಾ ಕಾಲುವೆಗೆ ಅತಿ ಸಮೀಪ ಮಾರ್ಗವಾದ ಆನಗ್ಯಾಡ ಜಲಸಂಧಿಯನ್ನು ರಕ್ಷಿಸುವುದು ವರ್ಜಿನ್ ದ್ವೀಪಗಳ ಮುಖ್ಯ ಬಂದರಾದ ಸೇಂಟ್ ಥಾಮಸ್ ಬಂದರಿನಿಂದ ಅದಕ್ಕೆ ಸುಲಭವಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಕ್ಯಾರಿಬೀಯನ್ ಸಮುದ್ರದ ಸನ್ನಿವೇಶದ ಮಹತ್ವದ ದೃಷ್ಟಿಯಿಂದ ಈ ಪ್ರದೇಶದಲ್ಲಿ ಅದು ಅನೇಕ ನೌಕಾನೆಲೆಗಳನ್ನೂ, ವಿಮಾನ ನಿಲ್ದಾಣಗಳನ್ನೂ ಸ್ಥಾಪಿಸಿತು. ಕ್ಯಾರಿಬೀಯನ್ ಪ್ರದೇಶ ಅನೇಕ ವರ್ಷದವರೆಗೆ ಸಂಯುಕ್ತಸಂಸ್ಥಾನದ ಆರ್ಥಿಕ ನಿಯಂತ್ರಣಕ್ಕೆ ಒಳಗಾಗಿತ್ತು. ಇದರ ಜೊತೆಗೆ ಸಂಯುಕ್ತಸಂಸ್ಥಾನದ ಸೈನ್ಯಗಳು ಸಹ ಈ ಪ್ರದೇಶಗಳಲ್ಲಿ ಬೀಡುಬಿಟ್ಟಿದ್ದುವು. ಕ್ಯಾರಿಬೀಯನ್ ಸಮುದ್ರದ ಆಯಕಟ್ಟಿನ ಪ್ರಾಮುಖ್ಯದಿಂದಾಗಿ ಅಮೆರಿಕ ಸಂಯುಕ್ತಸಂಸ್ಥಾನ ಪದೇಪದೇ ಅದರ ಸುತ್ತಮುತ್ತಣ ರಾಜ್ಯಗಳ ರಾಜಕೀಯದಲ್ಲಿ ಪ್ರವೇಶಿಸುತ್ತಿತ್ತು. ಅಮೆರಿಕ ಸಂಯುಕ್ತಸಂಸ್ಥಾನದ ಆರ್ಥಿಕ ರಾಜಕೀಯ ಪ್ರಭಾವಗಳಿಂದ ಬಿಡಿಸಿಕೊಳ್ಳುವುದು ಅನೇಕ ರಾಜ್ಯಗಳ ಉದ್ದೇಶವಾಗಿದೆ. ಕ್ಯಾರಿಬೀಯನ್ ಸಮುದ್ರವನ್ನು ಬಳಸಿರುವ ಹನ್ನೊಂದು ಗಣರಾಜ್ಯಗಳು ಮತ್ತು ಅನೇಕ ಸಣ್ಣ ದ್ವೀಪಗಳು ಸಕ್ಕರೆ, ಬಾಳೆ, ಕಾಫಿ, ಕೋಕೋ, ತೈಲ, ಕಬ್ಬಿಣ ಅದಿರು, ಬಾಕ್ಸೈಟ್ ಮುಂತಾದ ಅನೇಕ ಪದಾರ್ಥಗಳ ದೃಷ್ಟಿಯಿಂದ ಪ್ರಾಮುಖ್ಯ ಗಳಿಸಿವೆ. ಪ್ಲಾಂಟೇಷನ್ ವ್ಯವಸಾಯದ ಬೆಳೆವಣಿಗೆಯಿಂದಾಗಿ ಜನಸಂಖ್ಯೆಯೂ ಅಧಿಕವಾಗಿದೆ. ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನ್ ಜಲಾಂತರ್ಗಾಮಿ ನೌಕೆಗಳು ಇಲ್ಲಿ ಅನೇಕ ಹಡಗುಗಳನ್ನು ಮುಳುಗಿಸಿ ಆರೂಬಾದ ಎಣ್ಣೆ ಶೋಧನಾಲಯದ ಮೇಲೆ ಷೆಲ್ ದಾಳಿ ನಡೆಸಿದ್ದವು. (ಬಿ.ಎಸ್‍ಎಚ್.)

**ಕ್ಯಾರಿಬೂ : ನೋಡಿ – ಹಿಮಸಾರಂಗ**

**ಕ್ಯಾರಿ ಮುಲ್ಲಿಸ್:** 1944–. ಅಮೆರಿಕದ ನೊಬೆಲ್ ಪುರಸ್ಕೃತ ಜೀವರಸಾಯನವಿಜ್ಞಾನಿ, ಲೇಖಕ ಹಾಗೂ ಉಪನ್ಯಾಸಕ. ಅಮೆರಿಕದ ಉತ್ತರ ಕೆರೊಲಿನದ ಲೆನ್ಸೋರ್‌ನಲ್ಲಿ 1944ರಲ್ಲಿ ಕೃಷಿಕ ಕುಟುಂಬವೊಂದರಲ್ಲಿ ಜನಿಸಿದ. ಕೊಲಂಬಿಯಾದ ಡ್ರೆಹರ್ ಶಾಲೆಯಲ್ಲಿ ಇವನ ವಿದ್ಯಾಭ್ಯಾಸ ನಡೆಯಿತು. 1966ರಲ್ಲಿ ಅಟ್ಲಾಂಟದ ಜಾರ್ಜಿಯ ತಾಂತ್ರಿಕ ಸಂಸ್ಥೆಯಲ್ಲಿ ರಸಾಯನ ವಿಭಾಗದಲ್ಲಿ ಪದವಿ ಗಳಿಸಿದ. ಮುಂದೆ ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ

ಗಳಿಸಿದ. ಕನ್ಸಾಸ್ ವಿಶ್ವವಿದ್ಯಾಲಯದಿಂದ ಪೋಸ್ಟ್ ಡಾಕ್ಟೊರಲ್ ಪದವಿಯನ್ನು ಕಾರ್ಡಿಯಾಲಜಿ ವಿಷಯದಲ್ಲಿ ಪಡೆದ.

ರಸಾಯನ ವಿಜ್ಞಾನಕ್ಕೆ ಸಂಬಂಧಿಸಿದ ಪಾಲಿಮರೇಸ್ ಚೈನ್ ರಿಯಾಕ್ಷನ್ ಬಗೆಗಿನ ಇವನ ಸಂಶೋಧನೆಗಾಗಿ 1993ರಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತು. ಅದೇ ವರ್ಷ ಜಪಾನ್ ಬಹುಮಾನವೂ ಸಂದಿದೆ. ಈ ಮೊದಲೇ ಜೆಲ್‌ಕ್ಲೆಪ್ಪೆ ಮತ್ತು ನೊಬೆಲ್ ಪಾರಿತೋಷಕ ವಿಜೇತ ಎಂ. ಗೋಬಿಂದ ಖೊರಾನ ಅವರಿಂದ 1967ರಲ್ಲಿ ವಿಶ್ಲೇಷಣೆ ನಡೆದಿತ್ತು. ಕ್ಯಾರಿ ಮುಲ್ಲಿಸ್‌ನ ಸಂಶೋಧನೆಯು ಅದರ ಮುಂದುವರಿದ ಸಂಶೋಧನೆಯಾಗಿ ಜೀವರಸಾಯನ ಮತ್ತು ಅಣುವಿಜ್ಞಾನ ವಿಷಯದ ಪ್ರಮುಖ ತಂತ್ರವಾಯಿತು.

ವಿಜ್ಞಾನಿ ಮುಲ್ಲಿಸ್ ಪ್ರಸಿದ್ಧ ಬರಹಗಾರನೂ ಆಗಿರುವುದು ಅವನ ಹೆಗ್ಗಳಿಕೆ. ಮೊದಲು ಕಾದಂಬರಿ ಬರೆಯಲು ತೊಡಗಿ ಸ್ವಲ್ಪ ಸಮಯದ ಬಳಿಕ ಅದನ್ನು ಬಿಟ್ಟು ವೈದ್ಯ ಶಾಲೆಯಲ್ಲಿ ಜೀವರಸಾಯನತಜ್ಞನಾಗಿ ಸೇರಿದ. ಅನಂತರ ಸ್ವಲ್ಪಕಾಲ ಬೇಕರಿಯನ್ನು ನಡೆಸುತ್ತಿದ್ದ. ಎರಡು ವರ್ಷಗಳ ಬಳಿಕ ಕ್ಯಾಲಿಫೋರ್ನಿಯಾದ ಸೆಟಸ್ ಕಾರ್ಪೊರೇಷನ್‌ಗೆ ಡಿಎನ್‌ಎ ರಸಾಯನವೈದ್ಯನಾಗಿ ಸೇರಿದ. ಸಂಶೋಧನೆ ನಡೆಸುತ್ತಿದ್ದ ವೇಳೆ ಇವನಿಗೆ ಪ್ರಶಸ್ತಿ ಲಭಿಸಿತು. ಪಾಲಿಮೆರೇಸ್ ಚೈನ್ ರಿಯಾಕ್ಷನ್‌ನ್ನು ಕಂಡುಹಿಡಿದ ಖ್ಯಾತಿ ಇವನದಾಯಿತು. ರೋಗಗ್ರಸ್ಥ ವ್ಯಕ್ತಿಗಳಿಗೆ ಅಮೂಲ್ಯ ವಸ್ತುವನ್ನೊಳಗೊಂಡ ವಿಸ್ತರಣೆಯಾದ ಡಿಎನ್‌ಎ ಚೂರುಗಳನ್ನು ಮಾಡುವ ವ್ಯವಹಾರದಲ್ಲಿ ತೊಡಗಿದ.

1986ರಲ್ಲಿ ಮುಲ್ಲಿಸ್ ಥರ್ಮೋಫಿಲಸ್ ಅಕ್ವಾಟಿಕಸ್ (taq) ಡಿಎನ್‌ಎ ಪಾಲಿಮರ್ಸ್‌ಗಳನ್ನು ಡಿಎನ್‌ಎ ತಂತುಗಳಿಗೆ ವಿಸ್ತರಣೆಯಾಗಿ ಉಪಯೋಗಿಸಲು ಪ್ರಾರಂಭಿಸಿದ. ಇದು ಜೀವರಸಾಯನ, ಅಣುಜೀವವಿಜ್ಞಾನ, ತಳಿವಿಜ್ಞಾನ, ವೈದ್ಯ ಮತ್ತು ಅಪರಾಧಶಾಸ್ತ್ರ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ಮುಲ್ಲಿಸ್ UU- ಸಂವೇದ ಪ್ಲಾಸ್ಟಿಕ್‌ನ್ನು ಕಂಡುಹಿಡಿದ. ಅದು ದೀಪದ ಬೆಳಕಿಗೆ ಬಣ್ಣವನ್ನು ಬದಲಾಯಿಸುತ್ತದೆ. ಮುಲ್ಲಿಸ್ ತನ್ನ ಆತ್ಮಕಥೆಯಲ್ಲಿ ಹವಾಗುಣ ಬದಲಾವಣೆ, ಓಝೋನ್ ಪದರದ ನಶಿಸುವಿಕೆ ಮತ್ತು ಎಚ್‌ಐವಿಯಿಂದ ಏಡ್ಸ್ ಉಂಟಾಗುವುದರ ಕುರಿತು ಬಂದಿರುವ ವೈಜ್ಞಾನಿಕ ಸಾಕ್ಷ್ಯಗಳನ್ನು ಅಲ್ಲಗಳೆದಿದ್ದಾನೆ. (ಪಿ.ಎಸ್.ಪಿ.)

**ಕ್ಯಾರಿಯೋಟ : ನೋಡಿ – ಬಗನಿ**

**ಕ್ಯಾರಿ, ವಿಲಿಯಂ :** ಕ್ರೈಸ್ತಧರ್ಮದ ಪ್ರಚಾರಕ್ಕಾಗಿ ಭಾರತಕ್ಕೆ ಬಂದ ಪ್ರಮುಖ ಪಾದ್ರಿ, ಶಿಕ್ಷಣತಜ್ಞ, ಸಮಾಜ ಸುಧಾರಕ. ಮೊಚ್ಚೆ ಹೊಲಿಯುವ ವೃತ್ತಿಯಿಂದ ಆರಂಭಿಸಿ ಬ್ಯಾಪ್ಟಿಸ್ಟ್ ಮಿಷನರಿಯಾಗಿ ಕೋಲ್ಕೊತಕ್ಕೆ ಬಂದ (1793). ಇತರ ಪಾದ್ರಿಗಳೊಂದಿಗೆ ಸೆರಾಂಪುರದಲ್ಲಿ ನೆಲಸಿ ಪ್ರಚಾರ ಕಾರ್ಯದಲ್ಲಿ ನಿರತನಾದ. ಈತ ಬಂಗಾಳಿ ಭಾಷೆಯನ್ನು ಕಲಿತನಲ್ಲದೆ ತನ್ನ ಮುನ್ಷಿಯಾಗಿದ್ದ ರಾಂರಾಂ ಬೋಸನ ನೆರವಿನಿಂದ ಬೈಬಲನ್ನು ಬಂಗಾಳಿಗೆ ಭಾಷಾಂತರಿಸಿದ. ಬಂಗಾಳಿಯಲ್ಲಿ ಹಲವು ಗದ್ಯಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಪ್ರಸಿದ್ಧವಾದದ್ದು ಕಥೋಪಕಥನ. ಈತ ದಿಗ್ದರ್ಶನ ಮತ್ತು ಸಮಾಚಾರ ದರ್ಪಣ ಎಂಬೆರಡು ಬಂಗಾಳಿ ಪತ್ರಿಕೆಗಳ ಪ್ರಕಟಣೆಗೆ ನೆರವಾದ. ಇವನು ಕೋಲ್ಕೊತದ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಸಂಸ್ಕೃತ ಮತ್ತು ಬಂಗಾಳಿ ಭಾಷೆಗಳ ಅಧ್ಯಾಪಕನಾದದ್ದು 1801ರಲ್ಲಿ. 1831ರಲ್ಲಿ ಈತ ನಿಧನನಾಗುವವರೆಗೂ ಆ ಹುದ್ದೆಯಲ್ಲಿದ್ದ. ಈ ಕಾಲದಲ್ಲಿ ಇವನು ಬಂಗಾಳಿಯಲ್ಲಿ ಚರಿತ್ರೆ, ತತ್ತ್ವಶಾಸ್ತ್ರ, ಐತಿಹ್ಯಗಳು ಮತ್ತು ಕಥೆಗಳ ಪುಸ್ತಕಗಳನ್ನು ಬರೆಯಲು ಅನೇಕರಿಗೆ ಪ್ರೋತ್ಸಾಹ ನೀಡಿದ. ಪಾಶ್ಚಾತ್ಯ ವಿಜ್ಞಾನ ಮತ್ತು ಇಂಗ್ಲಿಷ್ ಸಾಹಿತ್ಯವನ್ನು ಭಾರತೀಯರಿಗೆ ಬೋಧಿಸಬೇಕೆಂಬುದಾಗಿ ಪ್ರತಿಪಾದಿಸುತ್ತಿದ್ದ. ಲಾರ್ಡ್ ವಿಲಿಯಂ ಬೆಂಟಿಂಕನ ಪಾಶ್ಚಾತ್ಯ ಶಿಕ್ಷಣ ನೀತಿಯ ಮೇಲೆ ಕ್ಯಾರಿಯ ಅಭಿಪ್ರಾಯಗಳು ಪ್ರಭಾವ ಬೀರಿದುವು. ಹೆಣ್ಣು ಮಕ್ಕಳನ್ನು ಗಂಗೆಯಲ್ಲಿ ಮತ್ತು ಸಮುದ್ರದಲ್ಲಿ ಎಸೆಯುವ ಪದ್ಧತಿಯನ್ನು ನಿಲ್ಲಿಸುವ ಕ್ರಮವನ್ನು ಲಾರ್ಡ್ ವೆಲ್ಸ್‌ಲಿ ಕೈಗೊಳ್ಳಲು ಇವನೇ ಕಾರಣ. ಈತ ಸಹಗಮನ ಪದ್ಧತಿಯನ್ನೂ ಪ್ರಬಲವಾಗಿ ವಿರೋಧಿಸಿದನಲ್ಲದೆ ಹಿಂದೂಗಳಲ್ಲಿ ಈ ಪದ್ಧತಿಯ ವಿರುದ್ಧ ಜನಾಭಿಪ್ರಾಯವನ್ನು ಕ್ರೋಢೀಕರಿಸಿದ.

ಬಹುಭಾಷಾ ವಿಶಾರದನಾದ ಕ್ಯಾರಿಗೆ ಕನ್ನಡ ಭಾಷೆಯೂ ಬರುತ್ತಿತ್ತೆಂಬುದೂ ಆತ 1817ರಲ್ಲಿ ಕನ್ನಡ ಭಾಷೆಗೆ ಇಂಗ್ಲಿಷಿನಲ್ಲಿ ಒಂದು ವ್ಯಾಕರಣವನ್ನು ಬರೆದನೆಂಬುದೂ ಗಮನಾರ್ಹವಾದ ಸಂಗತಿ. (ಎನ್.ಕೆ.)

**ಕ್ಯಾರಿ, ಹೆನ್ರಿ :** 1687–1743. ಆಂಗ್ಲಕವಿ ಮತ್ತು ಸಂಗೀತಗಾರ. ಜಾರ್ಜ್ ಸ್ಯಾವಿಲನ ಜಾರಜಪುತ್ರನೆಂದು ಭಾವಿಸಲಾಗಿದೆ. ಅನೇಕ ವಿಕಟಕವಿತೆ, ಹಾಸ್ಯಪ್ರಹಸನ ಮತ್ತು ಗೀತೆಗಳನ್ನು ರಚಿಸಿದ್ದಾನೆ. ಹಲವು ಗೀತೆಗಳಿಗೆ ತನ್ನದೇ ರಾಗರಚನೆಗಳನ್ನು ಅಳವಡಿಸಿದ್ದಾನೆ. ಈತನ ನ್ಯಾಂಬಿ ಪ್ಯಾಂಬಿ ಕವಿ ಆಂಬ್ರೋಸ್ ಫಿಲಿಪ್ಸ್‌ನನ್ನು ಕುರಿತ ಅಣಕಗೀತೆಯಾದರೂ ಭಾಷಾದೃಷ್ಟಿಯಿಂದ ಉತ್ತಮವಾದುದು. ಈತನ ಸ್ಯಾಲಿ ಇನ್ ಅವರ್ ಆಲಿ ಎಂಬ ಗೀತೆ ಇಂಗ್ಲಿಷ್ ಸಾಹಿತ್ಯದಲ್ಲಿ ಬಹು ಪ್ರಸಿದ್ಧವೆನಿಸಿದ ಗೀತೆಗಳಲ್ಲೊಂದೆನಿಸಿದೆ. ಗಾಡ್ ಸೇವ್ ದಿ ಕಿಂಗ್ ಗೀತೆಯೂ ಇವನದೇ ಎಂದು ಹೇಳಲಾಗಿದೆಯಾದರೂ ಅದಕ್ಕೆ ಸಾಕಷ್ಟು ಆಧಾರಗಳಿಲ್ಲ. (ಎನ್.ಎಸ್.ಎಲ್.)

**ಕ್ಯಾರೆಲ್, ಅಲೆಕ್ಸಿಸ್ :** 1873–1944 . ಫ್ರಾನ್ಸ್‌ದೇಶದ ಶಸ್ತ್ರಕ್ರಿಯಾ ಹಾಗೂ ಜೀವವಿಜ್ಞಾನ ತಜ್ಞ. ಲೈಯಾನಿನಲ್ಲಿ 1873ರ ಜೂನ್ 28ರಂದು ಜನನ; ವೈದ್ಯ ಹಾಗೂ ದೇಹವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಿಕ ವಿಜೇತ (1912). ಮ್ಯಾನ್ ದಿ ಅನ್‌ನೋನ್ (ಅವ್ಯಕ್ತ ಮಾನವ ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದವಾಗಿದೆ) ಎಂಬ ಶ್ರೇಷ್ಠ ಗ್ರಂಥದ ಕರ್ತೃ (ಪ್ರಥಮ ಪ್ರಕಟಣೆ 1935).

ಲೈ ಯಾನ್ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ವಿದ್ಯಾರ್ಜನೆಯನ್ನು ಕ್ಯಾರೆಲ್ 1900ರಲ್ಲಿ ಮುಗಿಸಿ ಮುಂದಿನ ಎರಡು ವರ್ಷಗಳ ಕಾಲ ಅಲ್ಲೇ ಪ್ರಾಸೆಕ್ಟರ್ (ಅಂದರೆ ವೈದ್ಯಕೀಯ ಪರೀಕ್ಷೆಗಾಗಿ ಹೆಣಗಳನ್ನು ಕೊಯ್ಯುವವನ) ಆಗಿ ಕೆಲಸಮಾಡಿದ. ಅಲ್ಲಿ ತನ್ನ ಪ್ರಯೋಗಗಳ ಮೂಲಕ ಸಂಶೋಧನೆಯನ್ನು ಆರಂಭಿಸಿದ. ಮುಂದೆ ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಅದನ್ನು ಮುಂದುವರಿಸಿದ(1905). ನ್ಯೂಯಾರ್ಕಿನ ರಾಕ್‌ಫೆಲರ್ ವೈದ್ಯವಿಜ್ಞಾನ ಸಂಶೋಧನಾಲಯದಲ್ಲಿ ಅವನಿಗೆ ಕೆಲಸ ಸಿಕ್ಕಿದ್ದು 1906ರಲ್ಲಿ. ಮುಂದೆ ಅದೇ ಸಂಸ್ಥೆಯ ಸದಸ್ಯನಾದ(1912). ಅಲ್ಲಿ ಕ್ಯಾರೆಲ್ ರಕ್ತನಾಳಗಳ ಬಗ್ಗೆ ಸಂಶೋಧನೆ ನಡೆಸಿ ರಕ್ತವನ್ನು ಒಬ್ಬರಿಂದೊಬ್ಬರಿಗೆ ಪೂರೈಸುವುದರ ಬಗ್ಗೆ ಒಂದು ಹೊಸವಿಧಾನವನ್ನೇ ಕಂಡುಹಿಡಿದ. ರಕ್ತನಾಳಗಳನ್ನೂ ಅಂಗಗಳನ್ನೂ ನಾಟಿ ಹಾಕುವುದರ (ಟ್ರಾನ್ಸ್‌ಪ್ಲಾಂಟೇಶನ್) ಬಗ್ಗೆ ಅಧ್ಯಯನ ನಡೆಸಲು ಈ ಸಂಶೋಧನೆಗಳಿಂದ ಅನುಕೂಲವಾಯಿತು. ಈ ಸಿದ್ಧಿ ಕ್ಯಾರೆಲ್‌ನಿಗೆ ನೊಬೆಲ್ ಪಾರಿತೋಷಕವನ್ನು ದೊರಕಿಸಿಕೊಟ್ಟಿತು.

ಅಂಗಾಂಶಗಳನ್ನು (ಟಿಶ್ಯೂಸ್) ದೇಹದ ಹೊರಗೆ ಕಾಪಾಡಿ, ಅವನ್ನು ಶಸ್ತ್ರ ಕ್ರಿಯೆಯಲ್ಲಿ ಬಳಸುವುದರ ಬಗ್ಗೆ ಕ್ಯಾರೆಲ್ ಅಧ್ಯಯನ ನಡೆಸಿದ. ಜೀವಿಗಳಿಂದ ಬೇರ್ಪಡಿಸಲ್ಪಟ್ಟ ಊತಕಗಳು ದೇಹದ ಹೊರಗೆ ಬದುಕಿ ಉಳಿದಿರುವಾಗ ಹೇಗಿರುತ್ತವೆ ಎಂಬುದನ್ನು ಕಂಡುಕೊಳ್ಳಲು ಇದರಿಂದ ಹೆಚ್ಚಿನ ಸಹಾಯವಾಯಿತು. ಮೊದಲನೆಯ ಮಹಾಯುದ್ಧದ ಬಳಿಕ ಕ್ಯಾರೆಲ್ ಫ್ರಾನ್ಸಿಗೆ ಮರಳಿದ. ಹನ್ರಿ ಡ್ರೈಸ್ಡೇಲ್‌ಡಾಕಿನ್ ಮತ್ತು ಕ್ಯಾರೆಲ್ ದೀರ್ಘಕಾಲ ಅಧ್ಯಯನ ನಡೆಸಿ ಡಾಕಿನ್ನನ ದ್ರಾವಣ ಎಂಬ ಹೆಸರಿನ ರೋಗಾಣುನಾಶಕ ದ್ರವವನ್ನು ಪರಿಶೋಧಿಸಿದರು. ಗಾಯಗಳಿಗೆ ಚಿಕಿತ್ಸೆ ನಡೆಸಲು ಡಾಕಿನ್ನನ ಮಾರ್ಗವನ್ನು ಕಲ್ಪಿಸುವುದರಲ್ಲಿ ಕ್ಯಾರೆಲ್ಲನ ಸಹಾಯ ಗಮನಾರ್ಹವಾಗಿತ್ತು. ಇದರಿಂದ ಕೈಕಾಲುಗಳನ್ನು ಕತ್ತರಿಸಿ ತೆಗೆದುಹಾಕಬೇಕಾದ ಅವೆಷ್ಟೋ ಸಂದರ್ಭಗಳು ತಪ್ಪಿದುವು. ಅದೇ ಕಾಲದಲ್ಲಿ ಕ್ಯಾರೆಲ್, ಲಿಕೊನ್ಯೆಟ್ ಡ್ಯೂನಾಯ್ ಮತ್ತು ಇತರ ಸಹೋದ್ಯೋಗಿಗಳೊಡನೆ, ಗಾಯ ಒಣಗಿ ವಾಸಿಯಾಗುವುದರ ಬಗ್ಗೆ ಅಧ್ಯಯನ ನಡೆಸಿದ. ಊತಕಗಳನ್ನೂ ಅಂಗಗಳನ್ನೂ ದೇಹದ ಹೊರಗೆ ಬೆಳೆಸುವುದರ ಬಗ್ಗೆ ಹೊಸ ವಿಧಾನವನ್ನೇ ಕ್ಯಾರೆಲ್ ಕಂಡುಹಿಡಿದ (1919). 1941ರಲ್ಲಿ ಫ್ರಾನ್ಸಿನಲ್ಲಿ ಫ್ರಾನ್‌ಕೈಸ್ ಸಂಸ್ಥೆಯನ್ನು ಸ್ಥಾಪಿಸುವುದರಲ್ಲಿ ಸಹಾಯಕನಾಗಿ ತನ್ನ ನಾಯಕತ್ವದಲ್ಲಿಯೇ ಮಾನವನ ಬಗ್ಗೆ ವೈಜ್ಞಾನಿಕ ಸಂಶೋಧನೆಗಳನ್ನು ಮುಂದುವರಿಸಿ ಆ ಬಗ್ಗೆ ಇನ್ನೂ ಹೆಚ್ಚಿನ ಜ್ಞಾನಾರ್ಜನೆಗೆ ಅವಕಾಶ ಕಲ್ಪಿಸಿಕೊಟ್ಟ.

ಎರಡನೆಯ ಮಹಾಯುದ್ಧದಲ್ಲಿ ಕ್ಯಾರೆಲ್ಲನ ಒಲವು ಅಕ್ಷರಾಷ್ಟ್ರಗಳ ಕಡೆಗಿತ್ತು (1940). ಫ್ರಾನ್ಸಿನ ಆಕ್ರಮಿತ ಪ್ರದೇಶದಲ್ಲಿದ್ದ ವಿಚಿ ಸರ್ಕಾರದ ಪರ ಕ್ಯಾರೆಲ್ ಕೆಲಸ ಮಾಡಿದ್ದ. ಜರ್ಮನ್ ಹಿಡಿತದಿಂದ ಫ್ರಾನ್ಸನ್ನು ವಿಮೋಚನೆಗೊಳಿಸಿದಾಗ ಕ್ಯಾರೆಲನನ್ನು ಅವನ ಹುದ್ದೆಗಳಿಂದ ವಜಾ ಮಾಡಿದರು. ಮುಂದೆ ಕೆಲವೇ ತಿಂಗಳುಗಳಲ್ಲಿ, ಪ್ಯಾರಿಸ್‌ನಲ್ಲಿ 1944ರ ನವೆಂಬರ್ 5ರಂದು ನಿಧನ ಹೊಂದಿದ. (ಎಚ್.ಆರ್.ಡಿ.ಎಚ್)

**ಕ್ಯಾಲ :** ಏರೇಸೀ ಕುಟುಂಬಕ್ಕೆ ಸೇರಿದ ಒಂದು ಮೂಲಿಕೆ ಸಸ್ಯಜಾತಿ. ರಿಚರ್ಡಿಯ, ಏಲಮ್‌ಲಿಲ್ಲಿ ಎಂಬವು ಇದರ ಪರ್ಯಾಯ ನಾಮಗಳು. ತನ್ನ ಆಕರ್ಷಕವಾದ ಎಲೆ ಮತ್ತು ಹೂಗೊಂಚಲ ಕವಚಗಳಿಂದಾಗಿ (ಸ್ಪೇತ್) ಉದ್ಯಾನ ಪ್ರಾಮುಖ್ಯ ಪಡೆದಿದೆ. ಇದನ್ನು ಅಂಚುಸಸ್ಯ ಇಲ್ಲವೆ ಕುಂಡಸಸ್ಯವಾಗಿ ಬೆಳೆಸುತ್ತಾರೆ.

ಇದೊಂದು ಬಹುವಾರ್ಷಿಕ ಸಸ್ಯ. ಭೂಮಿಯೊಳಗೆ ಹರಡಿಕೊಂಡು ಬೆಳೆಯುವ ತನ್ನ ಪ್ರಕಂಡದಿಂದಾಗಿ ವರ್ಷವರ್ಷವೂ ಬೆಳೆಯುತ್ತ ಹೋಗುತ್ತದೆ. ಪ್ರಕಂದದಿಂದ

ಮೊದಲ ವರ್ಷ ಹಲವಾರು ಎಲೆಗಳು ಹುಟ್ಟುವುವಾದರೂ ಅನಂತರದ ವರ್ಷಗಳಲ್ಲಿ ವರ್ಷಕ್ಕೆ ಎರಡೇ ಎಲೆಗಳು ಹುಟ್ಟುತ್ತವೆ. ಎಲೆಗಳಿಗೆ ಕೊಳವೆಯಂಥ ತೊಟ್ಟೂ ಹೃದಯದಾಕಾರದ ಅಲಗೂ ಇವೆ. ಹೂಗೊಂಚಲು ಸ್ಪೇಡಿಕ್ಸ್ ಬಗೆಯದು. ಇದಕ್ಕೆ ಚೆಲುವಾದ ಬಿಳಿಯ ಬಣ್ಣದ ಕವಚವಿದೆ.

ಕ್ಯಾ.ಎಲಿಯೋಟಿಯಾನ ಮತ್ತು ಕ್ಯಾ.ಆಲ್ಬೊಮ್ಯಾಕ್ಯುಲೇಟ ಎಂಬುವು ಹೆಚ್ಚು ಜನಪ್ರಿಯವಾದ ಪ್ರಭೇದಗಳು.

ಕ್ಯಾಲವನ್ನು ಪ್ರಕಂದದ ತುಂಡುಗಳಿಂದ ವೃದ್ಧಿ ಮಾಡಬಹುದು. ಪ್ರಕಂದಗಳನ್ನು ನಾಟಿಮಾಡಲು ಮೈದಾನ ಪ್ರದೇಶಗಳಲ್ಲಿ ಅಕ್ಟೋಬರ್–ನವೆಂಬರ್ ತಿಂಗಳು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಮಾರ್ಚ್–ಏಪ್ರಿಲ್ ಯೋಗ್ಯವಾದ ಕಾಲ. ಇದಕ್ಕೆ ಹೆಚ್ಚು ತೇವ ಬೇಕಾದರೂ ನೆಲ ಜೌಗಾಗಿರಬಾರದು. ಫಲವತ್ತಾದ ಮಣ್ಣು ಅಗತ್ಯ. ಚಳಿಗಾಲದಲ್ಲಿ ಭೂಮಿಯ ಮೇಲಿನ ಸಸ್ಯಭಾಗ ಸತ್ತು ಪ್ರಕಂದ ಸುಪ್ತಾವಸ್ಥೆಗೆ ಬರುತ್ತದೆ. ಮಾರ್ಚ್ ತಿಂಗಳ ವೇಳೆಗೆ ಹೊಸ ಎಲೆಗಳು ಹುಟ್ಟಿ ಅನಂತರ ಹೂ ಅರಳಲು ಪ್ರಾರಂಭಿಸುತ್ತವೆ. (ಬಿ.ಎ.ಪಿ.)

**ಕ್ಯಾಲಗಾನ್ :** ಸೋಡಿಯಂ ಹೆಕ್ಸಮೆಟಫಾಸ್ಫೇಟಿನ $[(NaPO_3)_6]$ ವಾಣಿಜ್ಯ ನಾಮ. ಬಣ್ಣವಿಲ್ಲದ, ವಾಸನೆಯಿಲ್ಲದ, ಪಾರದರ್ಶಕವಾಗಿರುವ, ತಟ್ಟೆಯ ರೂಪದ, ಹರಳುಗಳ ಅಥವಾ ಪುಡಿಯ ರೂಪದಲ್ಲಿ ಇರುವ ಸಂಯುಕ್ತ. ಇದರೊಂದಿಗೆ ಸ್ವಲ್ಪ ಟೆಟ್ರಸೋಡಿಯಂ ಪೈರೊಫಾಸ್ಫೇಟು $(NaP_2O_7)$ ಸಹ ಇರುತ್ತದೆ. ನೀರಿನಲ್ಲಿ ಇದರ ಕರಗುವಿಕೆ ಬಲು ನಿಧಾನ. ಜೈವಿಕ ದ್ರಾವಣಗಳಲ್ಲಿ ಕರಗುವುದಿಲ್ಲ. ಅತಿ ಬೆವರಿಕೆಯನ್ನು ಮತ್ತು ಬೆವರಿನ ವಾಸನೆಯನ್ನು ತಡೆಯಲು ಮತ್ತು ಬೆರಳುಗಳ ಮಧ್ಯೆ ಅತಿ ಬೆವರು ಬಂದು ಒತ್ತಿಕೊಂಡು ಹುಣ್ಣು ಆಗದಂತೆ ಮಾಡಲು ಇದರ 5% ಪುಡಿಯನ್ನು ರಕ್ಷಕ ದೂಳಾಗಿ ಬಳಸುತ್ತಾರೆ. ಬಾಯ್ಲರಿಗೆ ಹಾಕುವ ನೀರನ್ನು ಶುದ್ಧ ಮಾಡಲು, ನೀರಿನ ಗಡಸುತನವನ್ನು ಕಡಿಮೆ ಮಾಡಲು ಇದರ ವಿವಿಧ ಸಾರಗಳ ದ್ರಾವಣಗಳನ್ನು ಉಪಯೋಗಿಸುತ್ತಾರೆ. ಕ್ಯಾಲ್ಗಾನಿಗೆ ವೈದ್ಯಕೀಯ ಉಪಯೋಗವೂ ಉಂಟು. ಶಸ್ತ್ರಚಿಕಿತ್ಸೆಯ ಉಪಕರಣಗಳನ್ನು ವಿಷಕ್ರಿಮಿಗಳಿಲ್ಲದಂತೆ ಮಾಡುವಾಗ ಕುದಿಯುವ ನೀರಿಗೆ ಇದನ್ನು ಹಾಕುವುದರಿಂದ ಉಪಕರಣಗಳ ಮೇಲೆ ತುಕ್ಕು ಹಿಡಿಯುವುದೂ ಬೂದಿ ಕೂಡುವುದೂ ಕಡಿಮೆಯಾಗುತ್ತದೆ. (ಎ.ಎಸ್.ಆರ್.)

**ಕ್ಯಾಲತೀಯ :** ಉದ್ಯಾನ ಪ್ರಾಮುಖ್ಯ ಪಡೆದ ಅಲಂಕಾರಿಕ ಎಲೆಸಸ್ಯ. ಇದನ್ನು ಕೆಲವೊಮ್ಮೆ ಮರಂಟ ಎಂಬ ಜಾತಿಯ ಸಸ್ಯವೆಂದೂ ಕರೆಯುತ್ತಾರೆ. ಆದರೆ ಕೆಲವು ಲಕ್ಷಣಗಳಲ್ಲಿ ಇದು ಮರಂಟಕ್ಕಿಂತ ಭಿನ್ನವಾಗಿದೆ. ಮರಂಟದ ಕಾಯಿಗಳಲ್ಲಿ ಒಂದೇ ಬೀಜವಿದೆ. ಹೂಗೊಂಚಲು ಕವಲೊಡೆದಿದೆ. ಕೆಲಾತೀಯದ ಕಾಯಿಯಲ್ಲಿ 3 ಬೀಜಗಳು ಇವೆ. ಹೂಗೊಂಚಲು ಚಂಡಿನಂತಿದೆ. ಕೆಲಾತೀಯವನ್ನು ಕುಂಡಸಸ್ಯ ಮಡಿಸಸ್ಯ ಮುಂತಾಗಿ ಬೆಳೆಸಬಹುದು. ಮರಂಟೇಸೀ ಕುಟುಂಬಕ್ಕೆ ಸೇರಿದ ಸಸ್ಯವಿದು. ಈ ಜಾತಿಯಲ್ಲಿ ನೂರಕ್ಕೂ ಹೆಚ್ಚು ಬಹುವಾರ್ಷಿಕ (ಪೆರಿನಿಯಲ್) ಪ್ರಭೇದಗಳಿವೆ. ಇವುಗಳ ಬೇರುಗಳಲ್ಲಿ ಪಿಷ್ಟ ಶೇಖರಣೆಗೊಂಡು ಅವು ಗೆಡ್ಡೆರೂಪವನ್ನು ತಾಳಿ ನೆಲದೊಳಕ್ಕೆ ಹರಿದು ಬೆಳೆಯುತ್ತವೆ. ಸಾಮಾನ್ಯವಾಗಿ ಈ ಜಾತಿ ಸಸ್ಯಗಳಿಗೆ ಕಾಂಡವಿರುವುದಿಲ್ಲ (ಏಕಾಲೆಸೆಂಟ್). ಇದ್ದರೂ ಬಹಳ ಚಿಕ್ಕದು. ಈ ಜಾತಿಯ ಪ್ರಭೇದಗಳಲ್ಲಿ ಎಲೆಗಳ ಆಕಾರ ಮತ್ತು ಗಾತ್ರ ಬೇರೆ ಬೇರೆಯಾಗಿದ್ದು ಇವುಗಳ ಮೇಲೆ ಪ್ರಭೇದಗಳಿಗೆ ಅನುಗುಣವಾಗಿ ಕೆಂಪು, ಕಂದು, ಹಳದಿ ಮತ್ತು ಬಿಳುಪು ಬಣ್ಣದ ಮಚ್ಚೆಗಳಿರುತ್ತವೆ. ಇದರಿಂದ ಗಿಡಗಳು ಬಹಳ ಆಕರ್ಷಕವಾಗಿ ಕಾಣುತ್ತವೆ. ಹೂಗೊಂಚಲು ಚಂಡಿನಂತಿದೆ (ಕ್ಯಾಪಿಟೇಟ್). ಅದರ ಸುತ್ತ ಸುರುಳಿಯಾಕಾರದ ಉಪದಳ ಒಂದಿದೆ. ಹೂಗಳಲ್ಲಿ ಸಮವಾಗಿರುವ ಮತ್ತು ಬಿಡಿಯಾಗಿರುವ ಮೂರು ಪುಷ್ಪಪತ್ರಗಳಿವೆ. ಹೂದಳಗಳು ಮೂರು. ಇವು ಒಂದರೊಡನೊಂದು ಕೂಡಿಕೊಂಡು ಕೊಳವೆಯಾಕಾರವನ್ನು ತಾಳಿವೆ. ಕೇಸರಗಳು ಮೂರು. ಇವುಗಳಲ್ಲಿ ಎರಡು ಬಂಜೆ ಕೇಸರಗಳು. ಫಲ ಮೂರು ಬೀಜವಿರುವ ಸಂಪುಟ ಮಾದರಿಯದು.

ಬಹುಜನಪ್ರಿಯವಾಗಿರುವ ಕೆಲವು ಪ್ರಭೇದಗಳನ್ನು ಇಲ್ಲಿ ಹೆಸರಿಸಿದೆ–

1 ಕೆಲಾತೀಯ ಮಿಕಾನ್ಸ್ : ಇದು ಕೆಲಾತೀಯ ಜಾತಿಯ ಸಸ್ಯಗಳ ಪೈಕಿ ಬಲು ಚಿಕ್ಕದು. ಎಲೆಗಳು ಆಯುತಾಕಾರ ಅಥವಾ ಬರ್ಜಿಯಾಕಾರದವಾಗಿದ್ದು 2"–3" ಉದ್ದ ಮತ್ತು 1" ಅಗಲ ಇವೆ. ಅವುಗಳ ತುದಿ ಮೊನಚು, ಮೇಲ್ಭಾಗ ಹಸಿರಾಗಿಯೂ ಹೊಳಪಾಗಿಯೂ ಇದೆ. ಬಿಳಿಯ ಬಣ್ಣದ ಉಬ್ಬಿದ ನಾಳವೂ, ತಳಭಾಗದಲ್ಲಿ ನಸುಬಿಳುಪು ಬಣ್ಣದ ಗೆರೆಯೂ ಇವೆ. ಕೇಸರಗಳು ಊದಾ ಬಣ್ಣದವು. ಇದು ಬ್ರಜಿಲ್ ದೇಶದ ಮೂಲವಾಸಿ.

2 ಕೆಲಾತೀಯ ಆರ್ನೇಟ : ಇದು ಕೆಲಾತೀಯದ ಪ್ರಭೇದಗಳಲ್ಲೆಲ್ಲ ಹೆಚ್ಚು ದೃಢಕಾಯವಾಗಿ ಮತ್ತು ಸಮೃದ್ಧಿಯಾಗಿ ಬೆಳೆಯುವ ಸಸ್ಯವೆಂದು ಪ್ರಸಿದ್ಧಿಯಾಗಿದೆ. ಇದರ ಎತ್ತರ ಸುಮಾರು 3'. ಇದರಲ್ಲಿ ಕದಿರಿನಾಕಾರದ. ಬುಡದಲ್ಲಿ ಆಳವಾಗಿ ಭಾಗವಾಗಿರುವ, ಮೊನಚು ತುದಿಯ, ಅತಿ ಹಸಿರು ಬಣ್ಣದ, ಮತ್ತು ಮಾಸಲು ಕೆಂಪು ಬಣ್ಣದ–ತಳಭಾಗವುಳ್ಳ, 1'–3' ಉದ್ದದ ಎಲೆಗಳಿವೆ. ಎಲೆತೊಟ್ಟು ಸುಮಾರು 2' ಉದ್ದವಿದೆ. ಎಳೆಯ ಎಲೆ ನಾಳಗಳ ಮಧ್ಯಭಾಗದ ಬಣ್ಣ ಕಡುಗೆಂಪು. ಹೂಗೊಂಚಲು ಸ್ಪೈಕ್ ಮಾದರಿಯದು: 3" ಉದ್ದವಿದೆ. ಹೂವಿನಲ್ಲಿ ಇಬ್ಭಾಗವಾಗಿರುವ ಬಂಜೆಕೇಸರ (ಸ್ಟೈಮಿನೋಡ್) ಇದೆ. ಅದರ ಆಕಾರ ಅಂಡಾಕಾರ ಮತ್ತು ಬಣ್ಣ ಹಳದಿ. ಇದು ಗಯಾನ, ಕೊಲಂಬಿಯ ಮತ್ತು ಎಕ್ವಡಾರ್ ದೇಶಗಳ ಮೂಲನಿವಾಸಿ.

ಕ್ಯಾಲತೀಯ ಜೆಬ್ರಿನ ಪ್ರಭೇದ

3 ಕೆಲಾತೀಯ ವಿಟ್ಟೇಟ : ಸಾಮಾನ್ಯವಾಗಿ ಕುಳ್ಳಾಗಿ ಬೆಳೆಯುವ ಗುಣವುಳ್ಳದ್ದು ಇದು. ಆದರೆ ಕೆಲವು ಸಾರಿ 3' ಎತ್ತರಕ್ಕೂ ಬೆಳೆಯುವುದುಂಟು. ಹೂಗೊಂಚಲು ಚಿಕ್ಕತೊಟ್ಟಿರುವ ಸ್ಪೈಕ್ ಮಾದರಿಯದು. ಇದರ ತವರೂರು ಕೊಲಂಬಿಯ.

4 ಕೆಲಾತೀಯ ಜೆಬ್ರಿನ : ಇದರ ಎಲೆಗಳು ಜೀಬ್ರ ಪ್ರಾಣಿಯ ಬಣ್ಣವನ್ನು ಹೋಲುವುದರಿಂದ ಇದನ್ನು ಜೀಬ್ರ ಸಸ್ಯವೆಂದು ಕರೆಯುತ್ತಾರೆ. ಇದು ಕುಳ್ಳಾಗಿ ಬೆಳೆಯುವ ಗುಣವುಳ್ಳದ್ದು. ಇದು ಬ್ರಜಿಲ್ ದೇಶದ ಮೂಲವಾಸಿ ಎಂದು ಭಾವಿಸಲಾಗಿದೆ.

ಅಲ್ಲದೆ ಕ್ಯಾಲಿಂಡೆನಿಯಾನ, ಕ್ಯಾಇಲಸ್ಟ್ರಿಸ್, ಕ್ಯಾಲೆಪಾರ್ಡೈನ, ಕ್ಯಾಇಂಪೀರಿಯಾಲಿಸ್ ಮುಂತಾದುವೂ ಪ್ರಮುಖವಾಗಿವೆ. (ಬಿ.ಎ.ಪಿ.)

ಕ್ಯಾಲತೀಯದ ಎಲ್ಲ ಪ್ರಭೇದಗಳಿಗೂ ಹೆಚ್ಚಿನ ಉಷ್ಣತೆ ಬೇಕು. ಉಷ್ಣತೆ $18^o$ ಸೆಂಗಿಂತ ಕಡಿಮೆ ಇರಬಾರದು. ಇವನ್ನು ಕಾಂಡ ತುಂಡುಗಳಿಂದ ವೃದ್ಧಿಸಬಹುದು. ಗಿಡಗಳನ್ನು ಬೆಳೆಸಲು ವಸಂತಋತು ಉತ್ತಮ ಕಾಲ. ಹುಲ್ಲುಮಿಶ್ರಿತ ಗೋಡುಮಣ್ಣು, ಎಲೆಗೊಬ್ಬರ ಮತ್ತು ಮರಳು ಇವುಗಳ ಮಿಶ್ರಣವಿರುವ ಮಣ್ಣು ಕೆಲಾತೀಯಕ್ಕೆ ಶ್ರೇಷ್ಠ. ನೀರು ಸರಾಗವಾಗಿ ಹರಿದು ಹೋಗುವಂತಿರಬೇಕು. ಕೆಲಾತೀಯದ ಎಲೆಗಳು ಬಹಳ ತೆಳುವಾಗಿದ್ದು ಹೆಚ್ಚು ಬಿಸಿಲನ್ನು ತಡೆದುಕೊಳ್ಳುವುದಿಲ್ಲವಾದ್ದರಿಂದ ನೆರಳು ಅತ್ಯಗತ್ಯ. *

**ಕ್ಯಾಲಮೈಟಿಸ್ :** ಸ್ಫೀನಾಪ್ಸಿಡ ಎಂಬ ವರ್ಗದ ಕ್ಯಾಲಮೈಟೇಸೀ ಗುಂಪಿಗೆ ಸೇರಿದ ಒಂದು ಸಸ್ಯ. ಕಾರ್ಬಾನಿಫೆರಸ್ ಅವಧಿಯಲ್ಲಿ ಜೀವಂತವಾಗಿತ್ತು. ಇಂದು ಈ ಗುಂಪಿನ ಪ್ರತಿನಿಧಿಯಾಗಿ ಈಕ್ವಿಸಿಟಮ್ **(ನೋಡಿ– ಕುದುರೆಬಾಲದ ಗಿಡ)** ಮಾತ್ರ ಉಳಿದಿದೆ. ಕ್ಯಾಲಮೈಟಿಸ್ ಸಸ್ಯದ ಅವಶೇಷಗಳು ಪ್ರಪಂಚದ ಉತ್ತರಾರ್ಧಗೋಳದಲ್ಲಿ ಮಾತ್ರ ಪತ್ತೆಯಾಗಿವೆ. ಪ್ರಾರಂಭದಲ್ಲಿ ಈ ಸಸ್ಯದ ಕಾಂಡ, ಬೇರು ಮತ್ತು ಸಂತಾನಾಭಿವೃದ್ಧಿಯ ಅಂಗವಾದ ಶಂಕುಗಳು (ಕೋನ್) ಬೇರೆ ಬೇರೆಯಾಗಿ ಸಿಕ್ಕಿದ್ದು ಇವೆಲ್ಲ ಭಿನ್ನ ಸಸ್ಯಜಾತಿಗಳಿಗೆ ಸೇರಿದವೆಂದು ಭಾವಿಸಲಾಗಿತ್ತು. ಅಂತೆಯೇ ಇವಕ್ಕೆ ಬೇರೆ ಬೇರೆ ಹೆಸರುಗಳನ್ನು ಕೊಡಲಾಗಿತ್ತು. ಈಗಲೂ ಆಯಾ ಹೆಸರುಗಳೇ ರೂಢಿಯಲ್ಲಿದ್ದರೂ ಇವೆಲ್ಲವೂ ಕ್ಯಾಲಮೈಟಿಸ್ ಸಸ್ಯದ ವಿವಿಧ ಭಾಗಗಳಿಗೆ ಅನ್ವಯಿಸುತ್ತವೆ ಎಂಬುದು ಸರ್ವವಿದಿತವಾಗಿದೆ. ಕ್ಯಾಲಮೈಟಿಸ್ ಸುಮಾರು 6–7 ಮೀ ಎತ್ತರಕ್ಕೆ ಬೆಳೆಯುತ್ತಿದ್ದ ಮರ. ಇಂದಿನ ಕಾಲದ ಈಕ್ವಿಸಿಟಮ್ ಸಸ್ಯದಲ್ಲಿರುವಂತೆಯೇ ಕ್ಯಾಲಮೈಟಿಸಿನ ಸಸ್ಯದೇಹ

ಭೂಮಿಯೊಳಗಿನ ಪ್ರಕಂದಭಾಗವಾಗಿಯೂ ಇದರಿಂದ ಭೂಮಿಯ ಮೇಲೆ ಬೆಳೆಯುತ್ತಿದ್ದ ಕಾಂಡಭಾಗವಾಗಿಯೂ ವಿಭಾಗವಾಗಿತ್ತು ಪ್ರಕಂದದ ಮೇಲೆ ಗೆಣ್ಣುಗಳಿದ್ದು ಅವುಗಳಿಂದ ಆಗಂತುಕ (ಅಡ್ವೆಂಟಿಷಸ್) ಬೇರುಗಳು ಹೊರಡುತ್ತಿದ್ದುವು. ಪ್ರಕಂದ ಅನುಷಂಗಿಕ ಬೆಳವಣಿಗೆಯನ್ನು ಪ್ರದರ್ಶಿಸುತ್ತಿತ್ತು. ಕಾಂಡದ ಬೆಳವಣಿಗೆಯ ರೀತಿಯ ಆಧಾರದ ಮೇಲೆ ಸಸ್ಯವನ್ನು ಸ್ಟೈಲೊಕ್ಯಾಲ ಮೈಟಿಸ್, ಕ್ಯಾಲಮೈಟಿಸ್ ಮತ್ತು ಯೂಕ್ಯಾಲಮೈಟಿಸ್ ಎಂದು ಮೂರು ಉಪಜಾತಿಗಳಾಗಿ ವಿಂಗಡಿಸಲಾಗಿದೆ. ಭೂಮಿಯ ಮೇಲಕ್ಕೆ ಬೆಳೆಯುವ ಕಾಂಡದ ಮೇಲೆಲ್ಲ ಗೆಣ್ಣುಗಳನ್ನೂ ಅವುಗಳಿಂದ ಹೊರಡುವ ಅನೇಕ ಕಿರುರೆಂಬೆಗಳನ್ನೂ ಗುರುತಿಸಬಹುದು. ಅಲ್ಲದೆ ಕಾಂಡದ ಮೇಲೆ ಉದ್ದುದ್ದನೆಯ ಸಮಾಂತರವಾದ ಏಣುಗಳೂ ಇದ್ದುವು. ಒಂದು ಅಂತರ ಗೆಣ್ಣಿನ ಏಣುಗಳು ಮೇಲಿನ ಮತ್ತು ಕೆಳಗಿನ ಅಂತರ ಗೆಣ್ಣುಗಳ ಏಣುಗಳಿಗೆ ಪರ್ಯಾಯವಾಗಿದ್ದುವು. ತುಂಬ ಚಿಕ್ಕರೆಂಬೆಗಳ ಗೆಣ್ಣುಗಳಿಂದ ಹಲವಾರು ಎಲೆಗಳು ಹುಟ್ಟಿಕೊಳ್ಳುತ್ತಿದ್ದುವು. ಕ್ಯಾಲಮೈಟಿಸಿನ ಕಾಂಡದ ಒಳರಚನೆ ಈಗಿನ ಕಾಲದ ಈಕ್ವಿಟಿಸಮ್ ಸಸ್ಯದ ಕಾಂಡದ ಒಳರಚನೆಯನ್ನು ಹೋಲುತ್ತದೆ.ಕಾಂಡದ ಅಂತರಗೆಣ್ಣಿನ ಕೇಂದ್ರಭಾಗದಲ್ಲಿ ಯಾವುದೇ ರೀತಿಯ ಅಂಗಾಂಶವಿಲ್ಲ. ಇದರಿಂದ ಇದು ಟೊಳ್ಳಾಗಿದೆ. ಗೆಣ್ಣಿನಲ್ಲಿ ಮಾತ್ರ ಕೇಂದ್ರಭಾಗವೂ ಅಂಗಾಂಶದಿಂದ ಕೂಡಿಕೊಂಡು ಗಟ್ಟಿಯಾಗಿದೆ. ಎರಡೂ ಪ್ರದೇಶಗಳ ಹೊರವಲಯದಲ್ಲಿ ಜೈಲಮ್ ಮತ್ತು ಫ್ಲೋಯೆಮ್ ಅಂಗಾಂಶಗಳಿಂದ ರಚಿತವಾದ ನಾಳಕೂರ್ಚಗಳಿವೆ.

ಕ್ಯಾಲಮೈಟಿಸ್ ಸಸ್ಯದ ಬೇರುಗಳಿಗೆ ಆಸ್ಟಿರೊಮೈಲಾನ್ ಎಂದು ಹೆಸರು. ಇವೆಲ್ಲ ಆಗಂತುಕ ಬೇರುಗಳಾಗಿದ್ದು ಕಾಂಡದಂತೆ ಗೆಣ್ಣುಗಳನ್ನು ಪ್ರದರ್ಶಿಸುವುದಿಲ್ಲ.

ಕ್ಯಾಲಮೈಟಿಸ್ ಎಲೆಗಳಿಗೆ ಆನ್ಯುಲೇರಿಯ, ಆಸ್ಟಿರೊಫಿಲೈಟಿಸ್ ಎಂಬ ಹೆಸರುಗಳನ್ನು ಕೊಡಲಾಗಿದೆ. ಕಾಂಡದ ಒಂದೊಂದು ಗೆಣ್ಣಿನಲ್ಲಿಯೂ 8–32 ಎಲೆಗಳಿದ್ದು ಇವು ವರ್ತುಲ ಜೋಡಣೆಯನ್ನು ಪ್ರದರ್ಶಿಸುತ್ತವೆ. ಒಂದೊಂದು ಎಲೆಯೂ 5 ಮಿಮೀ.ನಿಂದ ಹಿಡಿದು ಹಲವು ಸೆಂಮೀ ಉದ್ದದ ಕೊಳವೆಯಂತಿದೆ. ಒಳಗೆ ಕೇಂದ್ರ ಭಾಗದಲ್ಲಿ ಒಂದು ನಾಳಕೂರ್ಚವೂ ಅದರ ಸುತ್ತ ಕೆಲವು ಪದರದಲ್ಲಿ ಜೋಡಣೆಗೊಂಡ ಪ್ಯಾರೆಂಕಿಮ ಜೀವಕೋಶಗಳೂ ಇದನ್ನು ಸುತ್ತುವರಿದಂತೆ ಮೀಸೋಫಿಲ್ ಜೀವಕೋಶಗಳೂ ಇವೆ. ಇವೆಲ್ಲವನ್ನೂ ಸುತ್ತಿಕೊಂಡು ಎಪಿಡರ್ಮಿಸ್ ಪದರವಿದೆ.

ಸಂತಾನಾಭಿವೃದ್ಧಿಯ ಅಂಗಗಳಿಗೆ ಸ್ಟ್ರೊಬೈಲಿ ಅಥವಾ ಕೋನುಗಳೆಂದು(ಶಂಕು) ಹೆಸರು. ಕ್ಯಾಲಮೈಟಿಸ್ ಸಸ್ಯದವೆಂದು ಹೇಳಲಾಗುವ 2 ಬಗೆಯ ಕೋನುಗಳು ಸಿಕ್ಕಿವೆ: ಒಂದು ಪೇಲಿಯೊಸ್ಟೇಕಿಯ, ಇನ್ನೊಂದು ಕ್ಯಾಲಮಾಸ್ಟೇಕಿಸ್. ಕೋನುಗಳು ವಿಶಿಷ್ಟ ಬಗೆಯ ಫಲವಂತಿ ಕಾಂಡಗಳ ಮೇಲೆ ಹುಟ್ಟುತ್ತಿದ್ದುವು. ಒಂದೊಂದು ಕೋನಿನಲ್ಲೂ ಗೆಣ್ಣುಗಳಾಗಿ ವಿಭಾಗಗೊಂಡ ಒಂದು ಕೇಂದ್ರೀಯ ಅಕ್ಷವಿದ್ದು ಇದರ ಗೆಣ್ಣುಗಳಲ್ಲಿ ವರ್ತುಲಾಕಾರವಾಗಿ ಜೋಡಣೆಗೊಂಡ 6–8 ಸ್ಪೊರ್ಯಾಂಜಿಯೊಫೋರ್‌ಗಳು ಇವೆ. ಇವಕ್ಕೆ ಪರ್ಯಾಯವಾಗಿ ಬರಡು ಉಪಪತ್ರಗಳೂ (ಸ್ಟರೈಲ್ ಬ್ರಾಕ್ಟ್ಸ್) ಇವೆ. ಒಂದೊಂದು ಸ್ಪೊರ್ಯಾಂಜಿಯೊಫೋರಿನಲ್ಲೂ ಕೋನಿನ ಕೇಂದ್ರ ಅಕ್ಷಕ್ಕೆ ಅಂಟಿಕೊಂಡಿರುವಂಥ ತೊಟ್ಟೂ ತುದಿಯಲ್ಲಿ ಒಂದು ತಟ್ಟೆಯೂ ಇವೆ. ತಟ್ಟೆಯ ತಳಭಾಗಕ್ಕೆ ಅಂಟಿಕೊಂಡಿದ್ದು ಕೋನಿನ ಅಕ್ಷದ ಕಡೆ ಮುಖಮಾಡಿರುವಂತೆ ಜೋಡಿತವಾದ 4 ಬೀಜಾಣುಕೋಶ (ಸ್ಪೊರ್ಯಾಂಜಿಯ) ಗಳು ಇವೆ. ಇದುವರೆಗೆ ಸಿಕ್ಕಿರುವ ಕ್ಯಾಲಮೈಟಿಸ್ಸಿನ ಕೋನ್ ಅವಶೇಷಗಳಲ್ಲಿ ಎರಡು ಬಗೆಯ ಬೀಜಾಣುಗಳು (ಸ್ಪೋರ್) ಇರುವುದು ಕಂಡುಬಂದಿದೆ. ಕೆಲವದರಲ್ಲಿ ಸ್ಪೋರುಗಳು ಸಮರೂಪದವಾಗಿದ್ದರೆ ಇನ್ನು ಕೆಲವದರಲ್ಲಿ ಅಸಮರೂಪದವಾಗಿವೆ. ಸಮರೂಪದ ಸ್ಥಿತಿಯನ್ನು ಹೋಮೋಸ್ಪೋರಸ್ ಎಂದೂ ಅಸಮರೂಪದ ಸ್ಥಿತಿಯನ್ನು ಹೆಟರೋಸ್ಪೋರಸ್ ಎಂದೂ ಕರೆಯಲಾಗುತ್ತದೆ. ಎರಡನೆಯ ಸ್ಥಿತಿಯಲ್ಲಿ ಕಾಣಬರುವ ದೊಡ್ಡಗಾತ್ರದ ಬೀಜಾಣುಗಳಿಗೆ ಮೆಗಾಸ್ಪೋರ್ ಎಂದೂ ಸಣ್ಣಗಾತ್ರದವಕ್ಕೆ ಮೈಕ್ರೊಸ್ಪೋರ್ ಎಂದೂ ಹೆಸರು. (ಎಂ.ವಿ.ಎ.ಎಸ್.; ಎಂ.ಎಸ್.ಎಸ್.ಆರ್.)

**ಕ್ಯಾಲರಿ :** ಉಷ್ಣದ ಪರಿಮಾಣವನ್ನು ಅಳೆಯಲು ಉಪಯೋಗಿಸುವ ಏಕಮಾನ. ಒಂದು ಗ್ರಾಂ ನೀರಿನ ಉಷ್ಣತೆಯನ್ನು 14.5$^{o}$ ಸೆಂ.ನಿಂದ 15.5$^{o}$ ಸೆಂ.ಗ್ರೇಡಿಗೆ ಏರಿಸಲು ಬೇಕಾಗುವ ಉಷ್ಣ ಪರಿಮಾಣಕ್ಕೆ ಒಂದು ಕೆಲೊರಿ ಎಂದು ಹೆಸರು. ಇದರ ಪರಿಮಾಣ, ಅಳೆಯುವ ಪರಿಸ್ಥಿತಿ ಹಾಗೂ ಸ್ಥಳವನ್ನು ಅವಲಂಬಿಸಿದೆ. ಕ್ಯಾಲರಿಯನ್ನ ಈಗ ಜೂಲ್‌ಗಳಲ್ಲಿ ನಿರ್ವಚಿಸುತ್ತಾರೆ. ಒಂದು ಕ್ಯಾಲರಿ ಸುಮಾರಾಗಿ 4.2 ಜೂಲ್‌ಗಳಿಗೆ ಸಮ.

ಕಿಲೋ ಕ್ಯಾಲರಿ: ಇದು 1,000 ಕ್ಯಾಲರಿಗಳಿಗೆ ಸಮ. ತಂತ್ರಶಾಸ್ತ್ರಜ್ಞರು ಇದನ್ನು ಬಳಸುತ್ತಾರೆ. ಇನ್ನು, ಒಂದು ಪೌಂಡ್ ಕ್ಯಾಲರಿ 453.6 ಕ್ಯಾಲರಿಗಳಿಗೆ ಸಮ. ಲಂಡನ್ನಿನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಒಂದು ಕ್ಯಾಲರಿ (1/860) ವಾಟ್–ಗಂಟೆಗೆ ಸಮ ಎಂದು ಖಚಿತಪಡಿಸಲಾಯಿತು.

ಕ್ಯಾಲರಿ ಮಾಪನ : ಭೌತ ಹಾಗೂ ರಾಸಾಯನಿಕವಾಗಿ ವಸ್ತುವಿನ ಸ್ಥಿತಿಯಲ್ಲಿ ಬದಲಾವಣೆ ಆದಾಗ ಬಿಡುಗಡೆಯಾಗುವ ಅಥವಾ ಹೀರಿಕೊಳ್ಳುವ ಉಷ್ಣದ ಪರಿಮಾಣವನ್ನು ಅಳೆಯುವ ವಿಜ್ಞಾನ (ಕ್ಯಾಲರಿಮೆಟ್ರಿ). ಉಷ್ಣವನ್ನು, ಪರೋಕ್ಷವಾಗಿ, ಅದು ಉಂಟುಮಾಡುವ ಪರಿಣಾಮಗಳಿಂದ ಅಳೆಯಬಹುದು. ಉದಾಹರಣೆಗೆ ಉಷ್ಣತಾ ವ್ಯತ್ಯಾಸ, ಭೌತಸ್ಥಿತಿ ಬದಲಾವಣೆ, ಶಕ್ತಿ ರೂಪಾಂತರ ಇತ್ಯಾದಿ. ಯಾವುದಾದರೂ ಒಂದು ವಸ್ತು ಮತ್ತು ವಾತಾವರಣದ ನಡುವಣ ಶಕ್ತಿ, ವಿನಿಮಯ ಉಷ್ಣ ಅಥವಾ ಕಾರ್ಯ ಅಥವಾ ಎರಡರ ರೂಪದಲ್ಲೂ ಇರಬಹುದು. ಕ್ಯಾಲರಿಮಾಪನ, ಶಕ್ತಿ ಬದಲಾವಣೆಗಳನ್ನು ನಿರ್ಧರಿಸಲು ಬಹಳ ಅನುಕೂಲವಾಗಿದೆ. ಉಷ್ಣರೂಪದ ಶಕ್ತಿಯನ್ನು ಅಳೆಯುವ ಸಾಧನದ ಹೆಸರು ಕ್ಯಾಲರಿಮಾಪಕ. ಇದರಲ್ಲಿ ಅನೇಕ ಬಗೆಗಳಿವೆ: ಶಕ್ತಿ ಉಷ್ಣವಾಗಿ ರೂಪಾಂತರ ಹೊಂದಿದ ಪರಿಮಾಣವನ್ನು ಇವು ಅಳೆಯಬಲ್ಲವು. ಸಾಮಾನ್ಯವಾಗಿ ಮೂರು ಘಟಕಗಳನ್ನು ಅಳೆಯುವುದರಿಂದ ಕ್ಯಾಲರಿಮಾಪನ ಸಾಧ್ಯ:

(i) ಕ್ಯಾಲರಿಮಾಪಕ ಮತ್ತು ಅದರಲ್ಲಿರುವ ವಸ್ತುಗಳ ಉಷ್ಣತೆಯನ್ನು ಅಳೆಯುವಿಕೆ.

(ii) ಹೊರಗಿನಿಂದ ಕ್ಯಾಲರಿಮಾಪಕಕ್ಕೆ ಸೇರಿಸಿದ ಶಕ್ತಿಯ ಪರಿಮಾಣ.

(iii) ಕ್ಯಾಲರಿಮಾಪಕ ಹಾಗೂ ವಾತಾವರಣ ಇವುಗಳ ನಡುವಣ ಶಕ್ತಿವಿನಿಮಯ ಪರಿಮಾಣದ ಅಳೆಯುವಿಕೆ. **(ನೋಡಿ– ಉಷ್ಣದ ಪರಿಮಾಣ)** (ಎಸ್.ವಿ.ಐ.)

**ಕ್ಯಾಲಿಕೊ :** ಭಾರತದಿಂದ ವಿದೇಶಗಳಿಗೆ ರಫ್ತಾಗುತ್ತಿದ್ದ ಸಾದಾ ಅಥವಾ ಮುದ್ರಿತ ಹತ್ತಿಯ ಬಟ್ಟೆಗೆ ಆ ದೇಶಗಳಲ್ಲಿದ್ದ ಹೆಸರು. ಕಲ್ಲಿಕೋಟೆ (ಕ್ಯಾಲಿಕಟ್) ಮತ್ತು ಕೋಲ್ಕತ್ತ ಎರಡೂ ವಸ್ತ್ರೋದ್ಯಮದಲ್ಲಿ ಅಂದು ಪ್ರಸಿದ್ಧ ಕೇಂದ್ರಗಳಾಗಿದ್ದುದರಿಂದ ಆ ಹೆಸರುಗಳ ವ್ಯುತ್ಪನ್ನವಾಗಿ ಕ್ಯಾಲಿಕೊ ಬಂದಿರಬಹುದು. ಗೃಹಕೃತ್ಯಗಳಲ್ಲಿ ಈ ಬಟ್ಟೆಯ ವಿಶೇಷ ಉಪಯೋಗ ಉಂಟು. ಕ್ಯಾಲಿಕೊ ಬಟ್ಟೆಯನ್ನು ಚಲುವೆ ಮಾಡಿರುತ್ತಾರೆ; ಇಲ್ಲವೇ ಮುದ್ರಿಸಿರುತ್ತಾರೆ. (ವಿ.ಎಸ್.ವಿ.)

**ಕ್ಯಾಲಿಫೋರ್ನಿಯ :** ಅಮೆರಿಕ ಸಂಯುಕ್ತಸಂಸ್ಥಾನದ ನೈರುತ್ಯ ಭಾಗದಲ್ಲಿ, ಪೆಸಿಫಿಕ್ ಸಾಗರ ತೀರದಲ್ಲಿರುವ ಒಂದು ರಾಜ್ಯ. ಚಿನ್ನದ ರಾಜ್ಯವೆಂದು ಇದಕ್ಕೆ ಅಡ್ಡ ಹೆಸರುಂಟು. ಆರಂಭದಲ್ಲಿ ಏಕಪ್ರಕಾರವಾಗಿ ಇಲ್ಲಿ ಚಿನ್ನ ಸಿಕ್ಕುತ್ತಿದ್ದುದೇ ಈ ಹೆಸರಿಗೆ ಕಾರಣ. ಉತ್ತರದಲ್ಲಿ ಅರೆಗನ್, ಪೂರ್ವದಲ್ಲಿ ನೆವಾಡ ಮತ್ತು ಆರಿಜೋನ, ದಕ್ಷಿಣದಲ್ಲಿ ಮೆಕ್ಸಿಕೋದ ಕೆಳ ಕ್ಯಾಲಿಫೋರ್ನಿಯ ಪ್ರದೇಶ, ಪಶ್ಚಿಮಕ್ಕೆ ಪೆಸಿಫಿಕ್ ಸಾಗರ–ಇವು ಇದರ ಮೇರೆಗಳು. ಉ.ಅ.32$^{O}$30′–42$^{O}$ ಮತ್ತು ಪ.ರೇ.114$^{O}$–124$^{O}$29′ ನಡುವೆ ಹಬ್ಬಿರುವ ಈ ರಾಜ್ಯದ ವಿಸ್ತೀರ್ಣ, 2,120 ಚ.ಮೈ ಜಲಪ್ರದೇಶವೂ ಸೇರಿ, 1,58,693 ಚ.ಮೈ ಇದು ವಿಸ್ತೀರ್ಣದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಮೂರನೆಯ ರಾಜ್ಯ, ಇದಕ್ಕೆ 2022 ಕಿಮೀ ಉದ್ದದ ಕರಾವಳಿ ಇದೆ.

**ಭೌತಲಕ್ಷಣ:** ಕ್ಯಾಲಿಫೋರ್ನಿಯದ ಪಶ್ಚಿಮ ತೀರದಲ್ಲಿ ಪರ್ವತ ಸರಗೊಂದು ಹಾದುಹೋಗಿದೆ. ರಾಜ್ಯದ ಪೂರ್ವಭಾಗದಲ್ಲಿ ಪರ್ವತಶ್ರೇಣಿ ಇದೆ. ಎರಡು ತುದಿಗಳಲ್ಲೂ ಈ ಶ್ರೇಣಿಗಳು ಕೂಡಿಕೊಂಡಿವೆ. ಇವುಗಳ ನಡುವೆ ಕಣಿವೆ ರಮ್ಯವಾದ್ದು. ಇದು ಕ್ಯಾಲಿಫೋರ್ನಿಯದ ಮಧ್ಯಭಾಗ. ಪೆಸಿಫಿಕ್ ತೀರದ ಪರ್ವತಶ್ರೇಣಿಯ ಅಗಲ 83–156 ಚಕಿಮೀ. ಇಲ್ಲಿ ಹುಟ್ಟುವ ಸಣ್ಣ ನದಿಗಳು ಕಂದರಗಳನ್ನು ಕೊರೆದು ಹರಿದು ಧುಮ್ಮಿಕ್ಕುತ್ತವೆ. ಪೂರ್ವಶ್ರೇಣಿಯ ಎತ್ತರ 600–2424 ಮೀ. ಸ್ಯಾನ್ ಫ್ರಾನ್ಸಿಸ್ಕೊ ಕೊಲ್ಲಿಯ ಬಳಿಯಲ್ಲಿಯ ಶಿಖರಗಳು ಸುಮಾರು 1212 ಮೀ ಎತ್ತರವಾಗಿವೆ. ಅವುಗಳಲ್ಲಿ ಮುಖ್ಯವಾದವು ಡಿಯಾಬ್ಲೊ (1166 ಮೀ); ಸೇಂಟ್ ಹೆಲೆನಾ (1316 ಮೀ). ಇಲ್ಲಿಂದ ಉತ್ತರಕ್ಕೂ ದಕ್ಷಿಣಕ್ಕೂ ಹಬ್ಬಿರುವ ಶ್ರೇಣಿಯ ಎತ್ತರ ಹೆಚ್ಚು. ರಾಜ್ಯದ ಪೂರ್ವಶ್ರೇಣಿ ಸಿಯೆರ ನೆವಾಡ 640 ಕಿಮೀ ಉದ್ದಕ್ಕೆ ಹಬ್ಬಿದೆ. ಪೂರ್ವದ ಶ್ರೇಣಿ ಪಶ್ಚಿಮದ ಶ್ರೇಣಿಗಿಂತ ಉನ್ನತವಾದ್ದು. ಇದರ ನಡುನಡುವೆ 606–1515 ಮೀ ಆಳದ ಕಮರಿಗಳುಂಟು. ಈ ಶ್ರೇಣಿಯ ಪೂರ್ವದ ಪಕ್ಕ ಬಹಳ ಕಡಿದಾಗಿದೆ. ಕಣಿವೆಗಳು ಕಡಿಮೆ. ಅತ್ಯಂತ ತಗ್ಗಿನ ಕಣಿವೆ ಫ್ರೆಜ್‌ನೋ (2727 ಮೀ). ಹೆಚ್ಚು ಸಂಚಾರವಿರುವುದು ಟೈಯೋಗಾ ಕಣಿವೆಯಲ್ಲಿ (3333 ಮೀ). ಈ ಶ್ರೇಣಿಯಲ್ಲಿ 4242 ಮೀ ಗಿಂತ ಎತ್ತರವಾಗಿರುವ ಶಿಖರಗಳು ನಾಲ್ಕು. ಅತ್ಯುನ್ನತ ಶಿಖರ ಹ್ವಿಟ್ನಿ (4392 ಮೀ).

ಕ್ಯಾಲಿಫೋರ್ನಿಯದ ಪರ್ವತದೃಶ್ಯ ಅತ್ಯಂತ ರಮಣೀಯವಾದ್ದು. ಓವೆನ್ಸ್ ಸರೋವರದ ಎದುರಿಗೆ 16 ಕಿಮೀ ದೂರದಲ್ಲಿ 3030 ಮೀ ಕೆಳಕ್ಕಿಳಿಯುವ ಗ್ರಾನೈಟ್ ಶೃಂಗಗಳ ಸಾಲು, ಸುತ್ತಣ ಮೈದಾನದಿಂದ ಥಟ್ಟನೆ 3333 ಮೀ ಮೇಲೆದ್ದು ನಿಂತಿರುವ ಹಿಮಾಚ್ಛಾದಿತ ಷಾಸ್ತ ಶಿಖರ, ಕರಾವಳಿಯ ಶ್ರೇಣಿಯ ಕಣಿವೆಗಳು, ಕಿಂಗ್ಸ್ ನದಿಯ ದಕ್ಷಿಣ ಕವಲು–ಒಂದೊಂದೂ ವಿಶಿಷ್ಟ ಸೌಂದರ್ಯಯುಕ್ತವಾದ್ದು. ಯೂಸೆಮಿಟಿ ಕಣಿವೆಯ ದೃಶ್ಯವಂತೂ ಅಸದೃಶ. ಕ್ಯಾಲಿಫೋರ್ನಿಯದ ಪರ್ವತಗಳ ರಮ್ಯ ಸನ್ನಿವೇಶಗಳು ಹಿಂದೊಮ್ಮೆ ಇಲ್ಲಿದ್ದ ಹಿಮನದಿಗಳ ನಗ್ನೀಕರಣ ಕಾರ್ಯಗಳಿಂದ ಸಂಭವಿಸಿದಂಥವು. ಆಳವಾದ ಕಮರಿಗಳು ನದಿಗಳ ಕೊರೆತದ ಫಲ. ಕ್ಯಾಲಿಫೋರ್ನಿಯದಲ್ಲಿ

ಅನೇಕ ಸರೋವರಗಳೂ ಉಂಟು. ಇವುಗಳಲ್ಲಿ ಅತ್ಯಂತ ಸುಂದರವಾದ್ದು ಟಾಹೋ. ಇದು ಸಮುದ್ರಮಟ್ಟದಿಂದ 1887 ಮೀ ಎತ್ತರದಲ್ಲಿದೆ. ಇದರ ಸುತ್ತಲೂ 1212ಮೀ–1515ಮೀ ಮೇಲೆದ್ದಿರುವ ಶೃಂಗಗಳು ಭವ್ಯತೆಯ ಪರಾಕಾಷ್ಠೆಯನ್ನು ಮುಟ್ಟಿಸುತ್ತವೆ.

ಪರ್ವತಶ್ರೇಣಿಯ ಉತ್ತರ ಭಾಗ ಬಹುತೇಕ ಲಾವದಿಂದ ಆವೃತವಾದ್ದು. ಇಲ್ಲಿ ಅನೇಕ ಕುಳಿಗಳೂ ಬೂದಿ ಗುಡ್ಡಗಳೂ ಉಂಟು. ಅಗ್ನಿ ಪರ್ವತ ಶಿಖರಗಳಲ್ಲಿ ಕೆಲವು ಇತ್ತೀಚಿನವು. ಇವುಗಳಲ್ಲಿ ಷಾಸ್ತ ಶಿಖರ ಒಂದು. ಓವೆನ್ಸ್ ಕಣಿವೆಯಲ್ಲಿ ಲುಪ್ತ ಮತ್ತು ಸುಪ್ತ ಜ್ವಾಲಾಮುಖಿಗಳ ಗುಚ್ಛವೊಂದುಂಟು.



ಗೋಲ್ಡನ್ ಗೇಟ್ ಸೇತುವೆ ಸ್ಯಾನ್ ಫ್ರಾನ್ಸಿಸ್ಕೋ

ಕ್ಯಾಲಿಫೋರ್ನಿಯದ ತೀರಪ್ರದೇಶಗಳಲ್ಲಿ ಭೂಕಂಪಗಳಾಗುತ್ತಿರುತ್ತವೆ. 1812ರಲ್ಲಿ ಸಂಭವಿಸಿದ ಭೂಕಂಪದಿಂದ ಕ್ಯಾಲಿಫೋರ್ನಿಯದ ದಕ್ಷಿಣ ಭಾಗದಲ್ಲಿ ನಷ್ಟವುಂಟಾಯಿತು. 1868ರಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ ಪ್ರದೇಶದಲ್ಲಿ ಭಾರಿ ಭೂಕಂಪವಾಯಿತು. 1872ರಲ್ಲಿ ನೆವಾಡ ರಾಜ್ಯ ಮತ್ತು ಸಿಯೆರ ಪ್ರದೇಶ ಕಂಪಿಸಿತು. 1906ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋ ನಗರಕ್ಕೆ ಬಹಳ ನಷ್ಟವಾಯಿತು. 1925ರಲ್ಲಿ ಸಂತ ಬಾರ್ಬರ ತೀವ್ರ ಕಂಪನಕ್ಕೊಳಗಾಯಿತು.

ಉತ್ತರ ದಕ್ಷಿಣಗಳಲ್ಲಿ ಕೂಡಿಕೊಂಡಂತಿರುವ ಪೂರ್ವ ಪಶ್ಚಿಮ ಪರ್ವತಶ್ರೇಣಿಗಳ ನಡುವೆ ಇರುವ ಕಣಿವೆ ಕ್ಯಾಲಿಫೋರ್ನಿಯದ ಮಧ್ಯಭಾಗ. ಸ್ಯಾನ್‌ಫ್ರಾನ್ಸಿಸ್ಕೋದ ಗೋಲ್ಡನ್ ಗೇಟ್‌ನ ಹಿಂಬದಿಯಲ್ಲಿ ಮಾತ್ರ ಇದು ಹೊರಕ್ಕೆ ತೆರೆದುಕೊಂಡಿದೆ. ಒಳನಾಡಿನ ನೀರೆಲ್ಲ ಹರಿದುಹೋಗಲು ಇರುವ ತೆರವು ಇದೊಂದೇ. ಈ ಕಣಿವೆಯ ಉದ್ದ 720 ಮೀ ಸರಾಸರಿ ಅಗಲ 60 ಕಿಮೀ ಕಣಿವೆ ಪ್ರದೇಶದ ಉತ್ತರ ಭಾಗದಲ್ಲಿ ಸ್ಯಾಕ್ರಮೆಂಟೊ ನದಿಯೂ ದಕ್ಷಿಣ ಭಾಗದಲ್ಲಿ ಸ್ಯಾನ್ ವಾಕೀನ್ ನದಿಯೂ ಹರಿಯುತ್ತವೆ. ಸಮುದ್ರಕ್ಕೆ ಸ್ವಲ್ಪದೂರ ಇರುವಾಗ ಸ್ಯಾಕ್ರಮೆಂಟೊ ನದಿಯನ್ನು ಸ್ಯಾನ್ ವಾಕೀನ್ ಕೂಡಿಕೊಳ್ಳುತ್ತದೆ. ಸಾಗರ ತೀರದ ಪರ್ವತಗಳಿಂದ ನಡುವಣ ಕಣಿವೆಯತ್ತ ಯಾವ ನದಿಯೂ ಹರಿಯುವುದಿಲ್ಲ. ರಾಜ್ಯದ ಪೂರ್ವಭಾಗದಿಂದ ಸ್ಯಾಕ್ರಮೆಂಟೊ ಮತ್ತು ಸ್ಯಾನ್ ವಾಕೀನ್ ನದಿಗಳಿಗೆ ಅನೇಕ ನದಿಗಳು ಬಂದು ಕೂಡುತ್ತವೆ. ಸ್ಯಾಕ್ರಮೆಂಟೊದ ಪ್ರಮುಖ ಉಪನದಿ ಫೆದರ್. ಇಲ್ಲಿಯ ಅನೇಕ ನದಿಗಳು ನಡುವೆಯೇ ಬತ್ತಿಹೋಗುತ್ತವೆ; ಇಲ್ಲವೇ ಡೆತ್‌ಕಣಿವೆಯಲ್ಲಿ ಕಂಡುಬರುವಂತೆ ಸ್ವಲ್ಪದೂರ ಭೂಮಿಯೊಳಗೆ ಹರಿದು ಇಂಗಿಹೋಗುತ್ತವೆ.

ಪಾಯಿಂಟ್ ಕನ್‌ಸೆಪ್ಷನ್‌ಗೆ ದಕ್ಷಿಣದ ಕರಾವಳಿ ಫಲವತ್ತಾದ್ದು. ಒಳನಾಡ ಮರುಭೂಮಿಗೂ ಇದಕ್ಕೂ ನಡುವೆ ಉತ್ತುಂಗ ಪರ್ವತಶ್ರೇಣಿಯುಂಟು. 1515–2125 ಮೀ ಎತ್ತರವಿರುವ ಈ ಶ್ರೇಣಿಯಲ್ಲಿ 3030 ಮಿಗೂ ಎತ್ತರವಿರುವ ಕೆಲವು ಶಿಖರಗಳುಂಟು. ಇವುಗಳಲ್ಲಿ ಸ್ಯಾನ್ ಬರ್ನಡೀನೋ (3524 ಮೀ), ಸ್ಯಾನ್ ಜಸಿಂಟೋ (3274 ಮೀ), ಸ್ಯಾನ್ ಅಂಟೋನಿಯೋ (3054.5 ಮೀ) ಮುಖ್ಯವಾದವು. ಈ ಶ್ರೇಣಿಯಲ್ಲಿ ಅನೇಕ ಕಣಿವೆಗಳಿವೆ. ರೈಲುಮಾರ್ಗಗಳು ಈ ಕಣಿವೆಗಳ ಮೂಲಕ ತೀರಪ್ರದೇಶಕ್ಕೆ ಸಾಗುತ್ತವೆ. ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ಬಿಸಿಲು ಹೆಚ್ಚು. ಇಲ್ಲಿಯ ಪ್ರದೇಶ ಬಹುಮಟ್ಟಿಗೆ ಬಂಜರು. ಕೆರ್ನ್, ಲಾಸ್ ಆಂಜೆಲೆಸ್ ಮತ್ತು ಸಾನ್ ಬರ್ನಡೀನೋ ಪ್ರದೇಶಗಳ ಭಾಗಗಳನ್ನು ಮೊಹಾವೆ ಮರಳುಗಾಡು ಆಕ್ರಮಿಸಿಕೊಂಡಿದೆ. ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ಸಮುದ್ರಕ್ಕೆ ಹರಿಯುವ ನದಿಗಳಿಲ್ಲ. ಸಾನ್ ಡಿಯೇಗೋ, ಇಂಪೀರಿಯಲ್ ಮತ್ತು ರಿವರ್‌ಸೈಡ್ ಪ್ರದೇಶಗಳಲ್ಲಿ ಕೆಲವು ಹೊಳೆಗಳು ಹರಿಯುತ್ತವೆ.

ಡೆತ್ ಕಣಿವೆ ಇರುವುದು ಓವೆನ್ಸ್ ಸರೋವರದ ಪೂರ್ವಕ್ಕೆ, 64 ಕಿಮೀ ದೂರದಲ್ಲಿ. ಅಮರ್ಗೋಸಾ ನದಿ ನೆವಾಡ ರಾಜ್ಯದಿಂದ ಈ ಕಣಿವೆಯನ್ನು ಹೊಕ್ಕು ಇಲ್ಲಿಯ ಉಪ್ಪುಭೂಮಿಯಲ್ಲಿ ಬತ್ತಿಹೋಗುತ್ತದೆ. ಬೋರ್ಯಾಕ್ಸ್, ಸೋಡಿಯಂ ನೈಟ್ರೇಟ್ ಇವು ಇಲ್ಲಿ ಸಿಗುತ್ತವೆ. ಇಡೀ ಖಂಡದ ಅತ್ಯಂತ ತಗ್ಗಿನ ಪ್ರದೇಶ ಡೆತ್ ಕಣಿವೆಯಲ್ಲಿದೆ. ಇದು ಇರುವುದು ಸಮುದ್ರ ಮಟ್ಟಕ್ಕಿಂತ 85.4 ಮೀ. ಕೆಳಗೆ.

ರಾಜ್ಯದ ದಕ್ಷಿಣ ಭಾಗದಲ್ಲಿರುವ ಮರಳು ಪರ್ವತಶ್ರೇಣಿ, ಪ್ರವಾಸಿ ಆಕರ್ಷಣೆಗಳಲ್ಲೊಂದು

**ವಾಯುಗುಣ:** ಕ್ಯಾಲಿಫೋರ್ನಿಯದ ವಾಯುಗುಣ ವಿಶಿಷ್ಟವಾದ್ದು: ತೀರ ಪ್ರದೇಶದಲ್ಲಿ ಉಷ್ಣತೆಯ ಅಂತರ ಕಡಿಮೆ. ಪರ್ವತಪ್ರದೇಶಗಳಲ್ಲಿ ಹೊರತು ಇತರ ಕಡೆಗಳಲ್ಲಿ ಚಳಿಗಾಲದಲ್ಲಿ ಉಷ್ಣತೆ ಬಹಳ ಕಡಿಮೆಯಿರುವುದಿಲ್ಲ. ಸಿಯೆರ ಪರ್ವತ ಭಾಗದಲ್ಲೂ ವಾಯವ್ಯ ಕೌಂಟಿಗಳಲ್ಲೂ 80 ಸೆಂಮೀ ಗಿಂತ ಹೆಚ್ಚು ಮಳೆಯಾಗುತ್ತದೆ. ಇನ್ಯೊ, ಕರ್ನ್, ಸ್ಯಾನ್ ಬರ್ನಡೀನೋ ಮತ್ತು ಇಂಪೀರಿಯಲ್ ಕೌಂಟಿಗಳಲ್ಲಿ ಅಲ್ಲಿ ಮಳೆ 20 ಸೆಂಮೀ ಗಿಂತ ಕಡಿಮೆ. ಉಳಿದ ಕಡೆ ಸರಾಸರಿ ಮಳೆ 1818–2121ಮೀ ಗಿಂತ ಎತ್ತರವಿರುವ ಪರ್ವತಗಳಲ್ಲಿ ಅವಪತನವಾಗುವುದು ಹಿಮರೂಪದಲ್ಲಿ.

ಇದು ಬೇಸಗೆಯಲ್ಲಿ ಕರಗಿ ಹರಿದು ನೀರಾವರಿಗೆ ಅನುಕೂಲ ಕಲ್ಪಿಸಿದೆ. ಸ್ಯಾನ್ ಫ್ರಾನ್ಸಿಸ್ಕೋಗೆ ಉತ್ತರದಲ್ಲಿ ಮೇ-ಸೆಪ್ಟೆಂಬರ್ ನಡುವೆ ರಾತ್ರಿಯ ವೇಳೆ ಮಂಜು ಬೀಳುತ್ತದೆ. ರಾಜ್ಯದ ಆಗ್ನೇಯ ಭಾಗದಲ್ಲಿ ಬಿಸಿಲು ಹೆಚ್ಚು. ಕಾಲರಾಡೋ ಮರುಭೂಮಿಯೂ ಅದರ ಅಂಚಿನ ಆರಿಜೋನ ರಾಜ್ಯದ ಹೀಲ ಕಣಿವೆಯೂ ಅಮೆರಿಕ ಸಂಯುಕ್ತಸಂಸ್ಥಾನದ ಅತ್ಯಂತ ಉಷ್ಣತೆಯ ಪ್ರದೇಶಗಳು. ಪೆಸಿಫಿಕ್ ಸಾಗರದ ದಕ್ಷಿಣ ಅಂಚಿನ ಗರಿಷ್ಠ ಉಷ್ಣತೆ 51.5°-53.8° ಫ್ಯಾ. ರಾಜ್ಯದ ಅತ್ಯಂತ ಕಡಿಮೆ ಉಷ್ಣತೆ ಇರುವುದು ತಾಹೋ ಸರೋವರದ ಬಳಿ. ಅಲ್ಲಿ ಉಷ್ಣತೆ 6°-2.2° ಸೆ. ಇರುವುದುಂಟು.

**ಸಸ್ಯ-ಪ್ರಾಣಿಜೀವನ:** ಕ್ಯಾಲಿಫೋರ್ನಿಯ ರಾಜ್ಯದ ಸಸ್ಯಪ್ರಾಣಿಜೀವನ ವೈವಿಧ್ಯಮಯವಾದ್ದು. ಇಲ್ಲಿಯ ಅರಣ್ಯಗಳಲ್ಲಿ ಪೈನ್ ಮತ್ತು ರೆಡ್‌ವುಡ್ ಮರಗಳು ಯಥೇಚ್ಛವಾಗಿವೆ. ಈ ರಾಜ್ಯದಲ್ಲಿ ಸ್ತನಿಪ್ರಾಣಿಗಳ 400 ಪ್ರಭೇದಗಳುಂಟು. ಅವುಗಳಲ್ಲಿ ಪ್ರಮುಖವಾದವು ಪಾಕೆಟ್ ಗೋಫರ್, ಕರಿಬಾಲದ ಮೊಲ, ಕ್ಯಾಲಿಫೋರ್ನಿಯ ಬ್ಯಾಡ್ಜರ್, ಕಯೋಟ್, ಯಮ ಕೂಗರ್, ಕಾಡುಕುರಿ, ಜಿಂಕೆ ಮತ್ತು ಎಲ್ಕ್. ಇಲ್ಲಿಯ ಪಕ್ಷಿಪ್ರಭೇದಗಳು 600. ಕ್ವೇಲ್, ಪಾರಿವಾಳ, ಗೂಬೆ, ಹಮಿಂಗ್‌ಬರ್ಡ್ ಮುಂತಾದ ಅನೇಕ ಪಕ್ಷಿಗಳುಂಟು.

**ಆರ್ಥಿಕತೆ:** ನೀರಾವರಿ ಅಭಿವೃದ್ಧಿ, ಉತ್ತಮ ವ್ಯವಸಾಯ ಪದ್ಧತಿ ಮತ್ತು ಸಣ್ಣ ಭೂತಾಕುಗಳು-ಇವುಗಳಿಂದಾಗಿ ಕ್ಯಾಲಿಫೋರ್ನಿಯ ರಾಜ್ಯ ಮುಖ್ಯ ಕೃಷಿ ಪ್ರದೇಶವಾಗಿದೆ. ಹಣ್ಣುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಕೇಂದ್ರ ಕಣಿವೆ ಭಾಗದಲ್ಲಿ ಫ್ರಿಯಾಂಟ್

ಲಾಸ್ ಏಂಜಲೀಸ್ ಕೌಂಟಿ ಕಲಾವಸ್ತು ಸಂಗ್ರಹಾಲಯ

ಮತ್ತು ಷಾಸ್ತ ಜಲಾಶಯಗಳ ನಿರ್ಮಾಣದಿಂದ ವ್ಯವಸಾಯಕ್ಕೆ ಹೆಚ್ಚು ಅನುಕೂಲವಾಯಿತು. ಹತ್ತಿ, ಬಾರ್ಲಿ, ಗೋದಿ, ಅಕ್ಕಿ, ಆಲೂಗೆಡ್ಡೆ, ಸಕ್ಕರೆ ಬೀಟ್, ದ್ರಾಕ್ಷಿ, ಕಿತ್ತಳೆ, ನಿಂಬೆ, ವಾಲ್‌ನಟ್, ಮರಸೇಬು, ಬಾದಾಮಿ, ಏಪ್ರಿಕಾಟ್, ಸೇಬು, ಅಂಜೂರ ಮುಂತಾದವು ಈ ರಾಜ್ಯದಲ್ಲಿ ಹೇರಳವಾಗಿ ಬೆಳೆಯುತ್ತವೆ. ಮೆಕ್ಸಿಕೋ ದೇಶದಿಂದ ವಲಸೆ ಬಂದ ಕಾರ್ಮಿಕರು ಕೃಷಿ ಭೂಮಿಗಳಲ್ಲಿ ಕೆಲಸ ಮಾಡುತ್ತಾರೆ. ಕ್ಯಾಲಿಫೋರ್ನಿಯದ ಬೀಜರಹಿತ ಕಿತ್ತಳೆ ಅಮೆರಿಕದಲ್ಲಿ ಪ್ರಸಿದ್ಧವಾಗಿದೆ.

1940-50ರ ದಶಕದಲ್ಲಿ ಕ್ಯಾಲಿಫೋರ್ನಿಯದಲ್ಲಿ ಹತ್ತಿ ವ್ಯವಸಾಯವನ್ನು ಅಭಿವೃದ್ಧಿಗೊಳಿಸಿದರು. ಸ್ಯಾನ್ ವಾಕೀನ್ ಕಣಿವೆಯಲ್ಲಿ ಹೆಚ್ಚು ನೆಲವನ್ನು ಹತ್ತಿಯ ವ್ಯವಸಾಯಕ್ಕೆ ಒಳಪಡಿಸಲಾಗಿದೆ. ಈ ರಾಜ್ಯ ಸ್ಪೇನ್ ಮತ್ತು ಮೆಕ್ಸಿಕೋಗಳ ಅಧೀನದಲ್ಲಿದ್ದಾಗ ಫ್ರಾನ್‌ಸಿಸ್ಕನ್ ಪಾದ್ರಿಗಳು ಇಲ್ಲಿ ಪಶುಪಾಲನೆಯಲ್ಲಿ ತೊಡಗಿದರು.

ಕ್ಯಾಲಿಫೋರ್ನಿಯ ಕಡಲ ತೀರದಲ್ಲಿ ಆಧುನಿಕ ರೀತಿಯಲ್ಲಿ ಮೀನುಗಾರಿಕೆ ಅಭಿವೃದ್ಧಿಯಾಗಿದೆ. ಮೀನು ಹಿಡಿಯುವ ಮುಖ್ಯ ರೇವುಗಳು ಯುರೀಕ, ಸ್ಯಾನ್ ಫ್ರಾನ್ಸಿಸ್ಕೋ, ಮಾಂಟೆರೇ, ಸಂತ ಬಾರ್ಬರ, ಲಾಸ್ ಏಂಜಲೀಸ್ ಮತ್ತು ಸ್ಯಾನ್ ಡಿಯೇಗೋ.

1860ರ ಸಮಯದಲ್ಲಿ ಕ್ಯಾಲಿಫೋರ್ನಿಯಕ್ಕೆ ಅಗತ್ಯವಾಗಿದ್ದ ಬಹುತೇಕ ಎಲ್ಲ ಸರಕುಗಳೂ ಅಮೆರಿಕದ ಪೂರ್ವ ರಾಜ್ಯಗಳಿಂದ ಇಲ್ಲವೆ ಯುರೋಪಿನಿಂದ ಬರುತ್ತಿದ್ದುವು. ಕಲ್ಲಿದ್ದಲಿನ ಅಭಾವದಿಂದಾಗಿ ಕೈಗಾರಿಕೆ ಹಿಂದೆ ಬಿದ್ದಿತ್ತು. ಮತ್ತು ವಿದ್ಯುಚ್ಛಕ್ತಿ ಬಂದ ಮೇಲೆ ಕೈಗಾರಿಕೆಗಳು ಬೆಳೆಯತೊಡಗಿದವು. 1919ರ ವೇಳೆಗೆ ವ್ಯವಸಾಯಕ್ಕಿಂತ ಕೈಗಾರಿಕೆ ಹೆಚ್ಚು ಪ್ರಾಮುಖ್ಯ ಗಳಿಸಿತು. ವಿಮಾನ ಮತ್ತು ಮೋಟಾರು ತಯಾರಿಕೆ, ಹಡಗು ನಿರ್ಮಾಣ ಇವು ಇಲ್ಲಿಯ ಕೈಗಾರಿಕೆಗಳ ಪೈಕಿ ಮುಖ್ಯವಾದವು. ಆಹಾರ ವಸ್ತುಗಳ ಉತ್ಪಾದನೆ, ಮಾಂಸ ಕೈಗಾರಿಕೆಗಳ ಪೈಕಿ ಮುಖ್ಯವಾದವು. ಆಹಾರ ವಸ್ತುಗಳ ಉತ್ಪಾದನೆ, ಮಾಂಸ ಸಂವೇಷ್ಟನ, ಮುದ್ರಣ, ಮರಗೆಲಸ, ಹತ್ತಿ ಜವಳಿ ಇವು ಇತರ ಕೆಲವು ಮುಖ್ಯ ಕೈಗಾರಿಕೆಗಳು. ಚೌಬೀನೆ ಉತ್ಪಾದನೆಯಲ್ಲಿ ಕ್ಯಾಲಿಫೋರ್ನಿಯ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಎರಡನೆಯದು. ಹಾಲಿವುಡ್ ಪ್ರಮುಖ ಚಲನಚಿತ್ರ ತಯಾರಿಕಾ ಕೇಂದ್ರ.

ಕ್ಯಾಲಿಫೋರ್ನಿಯದ ಕೆಲವು ಭಾಗಗಳಲ್ಲಿ ಚಿನ್ನವಿದ್ದದ್ದು 1848ಕ್ಕೆ ಹಿಂದೆಯೇ ಜನರಿಗೆ ತಿಳಿದಿತ್ತು. ಸ್ವಲ್ಪಕಾಲ ಇದು ಪ್ರಮುಖ ಸ್ವರ್ಣೋತ್ಪಾದಕ ರಾಜ್ಯವಾಗಿತ್ತು. ಈ ಶತಮಾನದ ನಡುಗಾಲದಿಂದ ಚಿನ್ನದ ಗಣಿಗಾರಿಕೆ ಪ್ರಾಮುಖ್ಯ ಬಹಳ ಮಟ್ಟಿಗೆ ತಗ್ಗಿದೆ.

ಪೆಟ್ರೋಲಿಯಂ ಬಹಳ ಮುಖ್ಯ ಖನಿಜ. ಕಚ್ಚಾ ತೈಲದ ಉತ್ಪಾದನೆಯಲ್ಲಿ ಈ ರಾಜ್ಯದ್ದು ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಎರಡನೆಯ ಸ್ಥಾನ. ಇಡೀ ದೇಶದ ಉತ್ಪಾದನೆಯಲ್ಲಿ ಶೇ. 15 ಕ್ಯಾಲಿಫೋರ್ನಿಯದ ಪಾಲು. ವಿಲ್ಮಿಂಗ್ಟನ್, ಲಾಂಗ್ ಬೀಚ್, ಹಂಟಿಂಗ್ಟನ್ ಬೀಚ್, ಮಿಡ್ವೇ-ಸನ್‌ಸೆಟ್, ಕೆಟ್ಲ್‌ಮನ್ ಬೆಟ್ಟಗಳು, ಕೊಲಿಂಗ-ಇವು ರಾಜ್ಯದ ಪ್ರಮುಖ ತೈಲೋತ್ಪಾದಕ ಪ್ರದೇಶಗಳು. ಬೋರಾನ್, ಯುರೇನಿಯಂ, ಉಪ್ಪು, ಸೀಸ, ಮೆಗ್ನೀಷಿಯಂ, ಜಿಪ್ಸಂ-ಇವು ರಾಜ್ಯದ ಇತರ ಕೆಲವು ಖನಿಜಗಳು.

1869ರಲ್ಲಿ ಸೆಂಟ್ರಲ್ ಪೆಸಿಫಿಕ್ ಮತ್ತು ಯೂನಿಯನ್ ಪೆಸಿಫಿಕ್ ರೈಲುಮಾರ್ಗಗಳನ್ನು ಸೇರಿಸಿದಾಗ ಪೆಸಿಫಿಕ್ ತೀರದಿಂದ ಅಟ್ಲಾಂಟಿಕ್ ತೀರದವರೆಗೆ ರೈಲ್ವೆ ಸಂಪರ್ಕ ಏರ್ಪಡಿಸಿದ ಫಲವಾಗಿ ಸಾರಿಗೆ ಬಹಳ ಶೀಘ್ರವಾಗಿ ಬೆಳೆಯಿತು.

1919ರ ತರುವಾಯ ಅನೇಕ ಹೆದ್ದಾರಿಗಳು ಅಭಿವೃದ್ಧಿ ಹೊಂದಿದುವು. ಈ ರಾಜ್ಯದಲ್ಲಿ ವಾಹನ ಸಂಚಾರ ಹೆಚ್ಚು. ಇಬ್ಬರಿಗೆ ಒಂದರಂತೆ ಇಲ್ಲಿ ಮೋಟಾರ್ ಕಾರುಗಳಿವೆ.

ಕ್ಯಾಲಿಫೋರ್ನಿಯದ ರೇವುಗಳಿಂದ ಪ್ರಪಂಚದ ವಿವಿಧ ಭಾಗಗಳಿಗೆ ಸಮುದ್ರಯಾನ ಸೌಲಭ್ಯವುಂಟು. ಸ್ಯಾನ್‌ಫ್ರಾನ್ಸಿಸ್ಕೋ ಮತ್ತು ಲಾಸ್ ಏಂಜಲಿಸ್ ರೇವುಗಳಿಂದ ಪ್ರಪಂಚದ ಹಲವು ಕಡೆಗಳಿಗೆ ಹಡಗುಗಳು ಸಂಚರಿಸುತ್ತವೆ. ಸ್ಯಾನ್ ಡಿಯೇಗೋದಲ್ಲಿ ಉತ್ತಮವಾದ ಬಂದರಿದೆ. ಅದು ಮುಖ್ಯವಾಗಿ ನೌಕಾಬಲದ ಉಪಯೋಗದಲ್ಲಿದೆ. ಈ ರಾಜ್ಯದಿಂದ ರಫ್ತಾಗುವ ಸರಕುಗಳು ಪೆಟ್ರೋಲ್, ಧಾನ್ಯಗಳು, ಹಣ್ಣು, ತರಕಾರಿ, ಮೀನು ಮತ್ತು ಕೈಗಾರಿಕಾ ಸರಕುಗಳು.

**ಜನಸಂಖ್ಯೆ, ಶಿಕ್ಷಣ:** 1858ರಲ್ಲಿ ಕ್ಯಾಲಿಫೋರ್ನಿಯದ ಜನಸಂಖ್ಯೆ 92,597 ಇದ್ದದ್ದು 1950ರ ವೇಳೆಗೆ 1,05,56,223 ಆಯಿತು. 1960ರ ಗಣತಿಯ ಪ್ರಕಾರ 1,57,17,204. ಕ್ಯಾಲಿಫೋರ್ನಿಯದ ಕೆಲವು ದೊಡ್ಡ ನಗರಗಳು ಇವು: ಲಾಸ್ ಆಂಜೆಲೆಸ್ (3849378), ಲಾಂಗ್ ಬೀಚ್ (492912), ಸ್ಯಾನ್‌ಫ್ರಾನ್ಸಿಸ್ಕೋ (80844), ಸ್ಯಾಕ್ರಮೆಂಟೋ (467343), ಸ್ಯಾನ್ ಬರ್ನಡೀನೋ (205010) ಸ್ಯಾನ್ ಡಿಯೇಗೋ (1256504), ಬೇಕರ್ಸ್ ಫೀಲ್ಡ್ (323213), ಬರ್ಕ್ಲಿ (106347), ಗ್ಲೆಂಡೇಲ್ (207157), ಓಕ್‌ಲೆಂಡ್ (415492), ಅಲಾಟ (89488), ಪೊಮೋನ (162140), ರಿವರ್‌ಸೈಡ್ (291398). ರಾಜಧಾನಿ ಸ್ಯಾಕ್ರಮೆಂಟೋ. ರಾಜ್ಯದ ಒಟ್ಟು ಜನಸಂಖ್ಯೆ 33871648 (2000).

ಸಂಗೀತ ಕಲಾ ಮಂಟಪ, ಲಾಸ್ ಏಂಜಲೀಸ್

ಕ್ಯಾಲಿಫೋರ್ನಿಯದ ಶಾಲೆಗಳಲ್ಲಿ ಉಚಿತಶಿಕ್ಷಣ ಸೌಲಭ್ಯವಿದೆ. ಶಿಶುವಿಹಾರ ಮತ್ತು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಪುಸ್ತಕಗಳನ್ನು ಉಚಿತವಾಗಿ ಒದಗಿಸುವ ಏರ್ಪಾಡಿದೆ.

ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯ 1858ರಲ್ಲಿ ಸ್ಥಾಪಿತವಾಯಿತು. ಇದರ ಕೇಂದ್ರ ಕಚೇರಿ ಇರುವುದು ಬರ್ಕ್ಲಿಯಲ್ಲಿ. ಇದಲ್ಲದೆ ಇನ್ನೂ ಏಳು ಕಡೆಗಳಲ್ಲಿ ಇದು ಶಿಕ್ಷಣ ನೀಡುತ್ತಿದೆ. ಇದು ರಾಜ್ಯದ ಅತ್ಯಂತ ದೊಡ್ಡ ವಿಶ್ವವಿದ್ಯಾಲಯ. ರಾಜ್ಯದಲ್ಲಿ ತಾಂತ್ರಿಕಶಿಕ್ಷಣ ಶಾಲೆಗಳೂ ಕುರುಡ ಮತ್ತು ಕಿವುಡರಿಗಾಗಿ ಶಾಲೆಗಳೂ ಕಲಾ ಶಾಲೆಗಳೂ ಇವೆ. ಪ್ಯಾಲೋ ದಕ್ಷಿಣ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯ ಇವು ರಾಜ್ಯದ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಅತ್ಯಂತ ದೊಡ್ಡವು **(ನೋಡಿ– ಕ್ಯಾಲಿಫೋರ್ನಿಯದ ಇತಿಹಾಸ)**.

(ವಿ.ಜಿ.ಕೆ.; ಪಿ.ಎಂ.)

**ಕ್ಯಾಲಿಫೋರ್ನಿಯಮ್ :** ಯುರೇನಿಯಮ್ ಆಚೆಯ (ಟ್ರಾನ್ಸ್‌ಯುರೇನಿಕ್) ಧಾತುಗಳಲ್ಲಿ ಒಂದು. ಇದರ ರಾಸಾಯನಿಕ ಚಿಹ್ನೆ Cf. ಆಕ್ಟಿನೈಡ್ ಶ್ರೇಣಿಯ ಧಾತುಗಳಲ್ಲಿ ಒಂಬತ್ತನೆಯದು. ಪರಮಾಣು ಸಂಖ್ಯೆ 98. ಇದರ ಸಂಭಾವ್ಯ ಎಲೆಕ್ಟ್ರಾನಿಕ್ ವಿನ್ಯಾಸ $1s^2\ 2s^2\ 2p^6\ 3s^2\ 3p^6\ 3d^{10}\ 4s^2\ 4p^6\ 4d^{10}\ 4f^{14}\ 5s^2\ 5p^6\ 5d^{10}\ 5f^{10}\ 6s^2\ 6p^6\ 7s^2$, ಇದನ್ನು 1950ರಲ್ಲಿ ಎಸ್. ಜಿ. ಥಾಂಪ್ಸನ್ ಮತ್ತು ಅವನ ಸಂಗಡಿಗರು ಸಂಶ್ಲೇಷಿಸಿದರು. ಅಮೆರಿಕದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ 60" ವ್ಯಾಸದ ಸೈಕ್ಲೋಟ್ರಾನ್ ವೇಗೋತ್ಕರ್ಷದಲ್ಲಿ ಕ್ಯೂರಿಯಮ್–242ನ್ನು ಹೀಲಿಯಮ್ ಆಯಾನುಗಳಿಂದ ತಾಡಿಸಿದಾಗ (ಬೊಂಬಾರ್ಡ್) ಕ್ಯಾಲಿಫೋರ್ನಿಯಮಿನ ಅಸ್ತಿತ್ವ ಬೆಳಕಿಗೆ ಬಂತು. ಮೂಡಿಬಂದ ಹೊಸ ಕೃತಕಧಾತುವಿಗೆ ಕ್ಯಾಲಿಫೋರ್ನಿಯಮ್ ಅನ್ವರ್ಥನಾಮವಾಯಿತು. ಇದರ ಪ್ರಧಾನ ಸಮಸ್ಥಾನಿಯ ಪರಮಾಣುತೂಕ 245. ಕ್ಯಾಲಿಫೋರ್ನಿಯಮ್ 242ರಿಂದ ಹಿಡಿದು ಕ್ಯಾಲಿಫೋರ್ನಿಯಮ್–254ರ ವರೆಗಿನ ಸಮಸ್ಥಾನಿಗಳನ್ನು ಕಂಡುಹಿಡಿಯಲಾಗಿದೆ. ಎಲ್ಲ ಸಮಸ್ಥಾನಿಗಳಿಗೂ ವಿಕಿರಣಪಟುತ್ವ (ರೇಡಿಯೋ ಆಕ್ಟಿವಿಟಿ) ಉಂಟು. ಇವುಗಳ ಅರ್ಧಾಯು (ಹಾಫ್‌ಲೈಫ್) ಕೆಲವು ಮಿನಿಟುಗಳಿಂದ ಹಿಡಿದು ಸುಮಾರು 5,000 ವರ್ಷಗಳ ತನಕ ವ್ಯಾಪಿಸಿದೆ. ಭಿನ್ನ ಭಿನ್ನ ವರ್ಗಗಳ ಸಮಸ್ಥಾನಿಗಳನ್ನು ಪ್ರಯೋಗದ ಗುರಿ ವಸ್ತುವನ್ನಾಗಿ (ಟಾರ್ಗೆಟ್ ಮೆಟೀರಿಯಲ್) ಆರಿಸಿಕೊಂಡು ಅವನ್ನು ಬೇರೆ ಬೇರೆ ಕಣಗಳಿಂದ ತಾಡಿಸಿ ಕ್ಯಾಲಿಫೋರ್ನಿಯಮಿನ ವಿವಿಧ ಸಮಸ್ಥಾನಿಗಳನ್ನು ತಯಾರಿಸುವುದರ ಜೊತೆಗೆ ನ್ಯೂಕ್ಲಿಯರ್ ರಿಯಾಕ್ಟರುಗಳಲ್ಲೂ ಪ್ಲುಟೋನಿಯಮ್-239ನ್ನು ನ್ಯೂಟ್ರಾನುಗಳ ಪ್ರಭಾವಕ್ಕೊಳಪಡಿಸಿ ಕ್ಯಾಲಿಫೋರ್ನಿಯಮಿನ ಸಮಸ್ಥಾನಿಗಳನ್ನು ತಯಾರಿಸಲಾಗುತ್ತದೆ. ಇಂಥವಲ್ಲಿ ಉತ್ಪಾದನೆಯಾಗುವ ಸಮಸ್ಥಾನಿಯ ಪರಿಮಾಣ ಹಲವು ಮಿಲಿಗ್ರಾಂಗಳಷ್ಟು ಮಾತ್ರ. ಕ್ಯಾಲಿಫೋರ್ನಿಯಮ್–252ನ್ನು ಪರಮಾಣು ಭೌತವಿಜ್ಞಾನದ ವಿವಿಧ ವಿಭಾಗಗಳಲ್ಲಿ ಬಳಸುವುದಲ್ಲದೆ ವೈದ್ಯಕೀಯ ಸಂಶೋಧನೆಯಲ್ಲೂ ಬಳಸುವುದಿದೆ. ಅಧಿಕ ತೀಕ್ಷ್ಣತೆಯ ನ್ಯೂಟ್ರಾನ್ ಆಕರಗಳ ಸಂಬಂಧದಲ್ಲಿ $^{252}$Cfರ ಉಪಯೋಗ ಹೆಚ್ಚು. ಅರ್ಧಾಯು 323 ವರ್ಷಗಳಿರುವ $^{249}$Cf ಸಮಸ್ಥಾನಿಗೆ ರಾಸಾಯನಿಕ ಪರೀಕ್ಷೆಗಳಲ್ಲಿ ಅತ್ಯಧಿಕ ಪ್ರಯೋಜನ ಉಂಟು. ಇದನ್ನು Cf(III)ರ ಕಾಂತಪ್ರವೃತ್ತಿಯನ್ನು (ಮ್ಯಾಗ್ನೆಟಿಕ್ ಸಸೆಪ್ಟಿಬಿಲಿಟಿ) ಅಳೆಯಲು ಉಪಯೋಗಿಸುತ್ತಾರೆ. ಕ್ಯಾಲಿಫೋರ್ನಿಯಮಿನ ನಾಲ್ಕು ಘನಸಂಯುಕ್ತ ವಸ್ತುಗಳನ್ನು ($CfCl_3$, CfOCl, CfCOF ಮತ್ತು $Cf_2O_3$) ವರ್ಗೀಕರಿಸಲಾಗಿದೆ. ಇವೆಲ್ಲವನ್ನೂ ಶುಷ್ಕ ರಾಸಾಯನಿಕ ವಿಧಾನಗಳಿಂದ ಕಂಡುಕೊಳ್ಳಲಾಗಿದೆ. ಎಲ್ಲ ಸಂಯುಕ್ತಗಳೂ ಹಸುರು ಬಣ್ಣದವು. 1928ರ ಮೊದಲು 252Cfರ ರಾಸಾಯನಿಕ ಗುಣ ಲಕ್ಷಣಗಳನ್ನು ಟ್ರೇಸರ್ ವಿಧಾನವನ್ನು ಅನುಸರಿಸಿ ಅಧ್ಯಯನ ಮಾಡಲಾಗಿತ್ತು. ಆಕ್ಟಿನೈಡ್ ಶ್ರೇಣಿಯ ಇತರ ಧಾತುಗಳ ರಾಸಾಯನಿಕ ಗುಣಲಕ್ಷಣಗಳು ಇದಕ್ಕೂ ಇರುವುದು ಕಂಡು ಬಂದಿತು.

*

**ಕ್ಯಾಲಿಫೋರ್ನಿಯ, ಕೆಳಗಿನ :** ಅಮೆರಿಕ ಸಂಯುಕ್ತಸಂಸ್ಥಾನದ ಕ್ಯಾಲಿಫೋರ್ನಿಯ ರಾಜ್ಯಪ್ರದೇಶದ ಮುಂದುವರಿದ ಭಾಗ; ಪರ್ಯಾಯ ದ್ವೀಪ. ಮೆಕ್ಸಿಕೋ ದೇಶಕ್ಕೆ ಸೇರಿದೆ. ಇದಕ್ಕೆ ಬಾಹಾ ಕ್ಯಾಲಿಫೋರ್ನಿಯ ಎಂದೂ ಹೆಸರಿದೆ. ವಿಸ್ತೀರ್ಣ 383196 ಚಕಿಮೀ ಉ.ಅ.28°ಗೆ ಉತ್ತರದ ಭಾಗ ಒಂದು ರಾಜ್ಯ, ಇದರ ಜನಸಂಖ್ಯೆ 5,20,913 (1960). ದಕ್ಷಿಣ ಭಾಗ ಮೆಕ್ಸಿಕೋ ಸಂಯುಕ್ತ ರಾಜ್ಯದ ಪ್ರದೇಶ; ಕೆಳ ಕ್ಯಾಲಿಫೋರ್ನಿಯದ ಉದ್ದ 1216 ಕಿಮೀ ಅಗಲ 48–240 ಕಿಮೀ ಉತ್ತರದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಕ್ಯಾಲಿಫೋರ್ನಿಯ ರಾಜ್ಯ. ಪಶ್ಚಿಮ ಮತ್ತು ದಕ್ಷಿಣಕ್ಕೆ ಪೆಸಿಫಿಕ್ ಸಾಗರ, ಪೂರ್ವ ತೀರಕ್ಕೂ ಮೆಕ್ಸಿಕೋ ಮುಖ್ಯಭೂಪ್ರದೇಶದ ತೀರಕ್ಕೂ ನಡುವೆ ಕ್ಯಾಲಿಫೋರ್ನಿಯ ಖಾರಿ ಇವೆ. ಆ ಖಾರಿಯನ್ನು ಕಾರ್ಟೆಸ್ ಸಮುದ್ರವೆಂದೂ ಕರೆಯುತ್ತಾರೆ. ಕ್ಯಾಲಿಫೋರ್ನಿಯ ಖಾರಿಗೆ ಉತ್ತರದಲ್ಲಿ, ಅಮೆರಿಕ ಸಂಯುಕ್ತಸಂಸ್ಥಾನದ ಗಡಿಯ ದಕ್ಷಿಣಕ್ಕೆ ಇರುವ ಕಿರಿದಾದ ಪ್ರದೇಶದ ಮೂಲಕ ಇದಕ್ಕೂ ಮೆಕ್ಸಿಕೋ ದೇಶದ ಉಳಿದ ಭಾಗಕ್ಕೂ ಸಂಪರ್ಕವಿದೆ.

**ಭೌತಲಕ್ಷಣ:** ಕ್ಯಾಲಿಫೋರ್ನಿಯದ ಸ್ಯಾನ್ ಜಸಿಂಟೋ ಪರ್ವತಶ್ರೇಣಿಯೇ ಕೆಳ ಕ್ಯಾಲಿಫೋರ್ನಿಯದಲ್ಲೂ ಪರ್ವತಗುಚ್ಛವಾಗಿ ಮುಂದುವರಿದಿದೆ; ಕ್ಯಾಲಿಫೋರ್ನಿಯ ಖಾರಿಯ ಪಕ್ಕದಲ್ಲೇ ಕೊನೆಯವರೆಗೂ ಸಾಗಿದೆ. ಸಮುದ್ರದಿಂದ ಥಟ್ಟನೆ ಎತ್ತರಕ್ಕೇರುವ ಈ ಶ್ರೇಣಿಗೆ ಒಂದೊಂದು ಕಡೆ ಒಂದೊಂದು ಹೆಸರುಂಟು. ಸ್ಯಾನ್ ಪ್ರೇದ್ರೋ ಮಾರ್ಟಿರ್ ಶ್ರೇಣಿಯಲ್ಲಿರುವ ಒಂದು ಶಿಖರ ಲಾ ಎನ್ಕಾಂತಾದಾ (3051 ಮೀ) ನಡುಭಾಗದಲ್ಲಿರುವ ಲಾಸ್ ತ್ರೆಸ್ ವರ್ಜೀನ್ಸ್ ಒಂದು ಮೃತಪಟ್ಟ ಅಗ್ನಿಪರ್ವತ. ಕ್ಯಾಲಿಫೋರ್ನಿಯ ಖಾರಿಯನ್ನು ಸೇರುವ ಕಾಲೊರಾಡೋ ನದಿಯ ಮುಖಜಭೂಮಿ ಪ್ರದೇಶ ಬಹಳ ಫಲವತ್ತಾದ್ದು. ಕೆಳ ಕ್ಯಾಲಿಫೋರ್ನಿಯದ ಈಶಾನ್ಯ ಭಾಗದಲ್ಲಿರುವ ಈ ಪ್ರದೇಶಕ್ಕೆ ಮೆಹಿಕಾಲಿ ಕಣಿವೆ ಎಂದು ಹೆಸರು. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಈ ಕಣಿವೆ ಮುಂದುವರಿಯುತ್ತದೆ. ಅಲ್ಲಿ ಇದಕ್ಕೆ ಇಂಪೀರಿಯಲ್ ಕಣಿವೆ ಎಂದು ಹೆಸರು. ಕೆಳ ಕ್ಯಾಲಿಫೋರ್ನಿಯದ ಉತ್ತರ ಭಾಗದಲ್ಲಿ ಚಿನ್ನದ ನಿಕ್ಷೇಪಗಳಿವೆ; ಮಧ್ಯದಲ್ಲಿ ತಾಮ್ರ ಮತ್ತು ಕಬ್ಬಿಣ ಅದಿರುಗಳೂ ದಕ್ಷಿಣದಲ್ಲಿ ಬೆಳ್ಳಿಯೂ ಸಿಗುತ್ತವೆ. ಕಾಗೆಬಂಗಾರ, ಸತು, ಟಂಗ್‌ಸ್ಟನ್, ಮ್ಯಾಂಗನೀಸ್ ಮುಂತಾದ ಅನೇಕ ಲೋಹಗಳ ನಿಕ್ಷೇಪಗಳು ಇಲ್ಲುಂಟು.

**ವಾಯುಗುಣ:** ಶುಷ್ಕತೆ ಮತ್ತು ಅಧಿಕ ಉಷ್ಣತೆ–ಇವು ಕೆಳ ಕ್ಯಾಲಿಫೋರ್ನಿಯದ ವಾಯುಗುಣದ ಲಕ್ಷಣಗಳು. ಇಲ್ಲಿಯ ಯಾವ ಭಾಗದಲ್ಲೂ ಮಳೆ ಹೆಚ್ಚಾಗಿ ಬೀಳುವುದಿಲ್ಲ. ವಾಯವ್ಯ ಭಾಗದಲ್ಲಿ ವರ್ಷದ ಸರಾಸರಿ ಮಳೆ 25 ಸೆಂಮೀ ಪರ್ವತಶ್ರೇಣಿಯಲ್ಲಿ ಹೆಚ್ಚು ಮಳೆಯಾಗುತ್ತದೆ. ವ್ಯವಸಾಯ ನೀರಾವರಿಯನ್ನವಲಂಬಿಸಬೇಕಾಗಿದೆ.

**ಸಸ್ಯಗಳು, ಪ್ರಾಣಿಗಳು:** ಮರುಭೂಮಿಯ ಸಸ್ಯವೈವಿಧ್ಯವನ್ನು ಇಲ್ಲಿ ಸಮೃದ್ಧಿಯಾಗಿ ಕಾಣಬಹುದು. ಪಾಪಾಸು, ಕತ್ತಾಳೆ ಮುಂತಾದ ಹಲವಾರು ಸಸ್ಯಗಳುಂಟು. ಉನ್ನತ ಪರ್ವತಗಳ ಇಳಿಜಾರುಗಳು ಪೈನ್ ಮರಗಳಿಂದ ಆವೃತವಾಗಿವೆ. 20ನೆಯ ಶತಮಾನದ




ಪ್ರಾರಂಭದಲ್ಲಿ ಕಾಲರಾಡೋ ನದಿಯ ನೀರನ್ನು ಬಳಸಿಕೊಳ್ಳುವ ವ್ಯವಸ್ಥೆಯ ನಿರ್ಮಾಣವಾದ ಮೇಲೆ ಮೆಹಿಕಾಲಿ ಪ್ರದೇಶದ ಕೃಷಿ ಕೈಗಾರಿಕೆಗಳು ಬೆಳೆದುವು. ಕೆಳ ಕ್ಯಾಲಿಫೋರ್ನಿಯದ ದಕ್ಷಿಣಭಾಗಕ್ಕಿಂತ ಉತ್ತರಭಾಗ ಹೆಚ್ಚು ಅಭಿವೃದ್ಧಿ ಹೊಂದಿದೆ. ಜನಸಂಖ್ಯೆಯೂ ಅಲ್ಲಿ ಹೆಚ್ಚು. ಉತ್ತರ ದಕ್ಷಿಣ ಭಾಗಗಳು ಮರುಭೂಮಿಯಿಂದ ಬೇರ್ಪಟ್ಟಿರುವುದರಿಂದ ಅವು

ಪ್ರತ್ಯೇಕವಾಗಿ ಜೀವನ ನಡೆಸುತ್ತಿವೆ. ಉತ್ತರ ಭಾಗದಲ್ಲಿರುವ ಮೆಹಿಕಾಲಿ ಪ್ರದೇಶದಲ್ಲಿ ಹತ್ತಿ ಒಂದು ಮುಖ್ಯ ಬೆಳೆ. ಗೋದಿ, ಕುದುರೆ ಮಸಾಲೆ, ದ್ರಾಕ್ಷಿ, ಟೊಮಾಟೊ, ಕಲ್ಲಂಗಡಿ, ಲಿನ್ಸೀಡ್, ಮುಸುಕಿನ ಜೋಳ-ಇವು ಇತರ ಬೆಳೆಗಳು. ಅಮೆರಿಕ ಸಂಯುಕ್ತಸಂಸ್ಥಾನದೊಂದಿಗೆ ವ್ಯಾಪಾರ ನಡೆಯುತ್ತದೆ. ದಕ್ಷಿಣಭಾಗದಲ್ಲಿ ಗಣಿಗಾರಿಕೆ, ಪಶುಪಾಲನೆ, ಕೃಷಿ ನಡೆಯುತ್ತವೆ.

1931ರಲ್ಲಿ ಕೆಳ ಕ್ಯಾಲಿಫೋರ್ನಿಯ ಪ್ರದೇಶವನ್ನು ಉತ್ತರ-ದಕ್ಷಿಣ ರಾಜಕೀಯ ವಿಭಾಗಗಳಾಗಿ ವಿಂಗಡಿಸಲಾಯಿತು. ಕ್ಯಾಲಿಫೋರ್ನಿಯದ ಉತ್ತರಭಾಗ 1952ರಲ್ಲಿ ಮೆಕ್ಸಿಕೋ ದೇಶದ 29ನೆಯ ರಾಜ್ಯವಾಯಿತು. ದಕ್ಷಿಣಭಾಗ ಒಂದು ಪ್ರದೇಶವಾಗಿಯೇ ಉಳಿಯಿತು. ಪ್ರತ್ಯೇಕ ರಾಜ್ಯದ ಸ್ಥಾನ ಗಳಿಸಲು ಅವಶ್ಯವಾದ ಕನಿಷ್ಠ ಜನಸಂಖ್ಯೆಯನ್ನು ಅದು 1960ರಲ್ಲಿ ಮೀರಿತ್ತು. ಆಗ ಅದರ ಜನಸಂಖ್ಯೆ 83,433.

ಕೆಳ ಕ್ಯಾಲಿಫೋರ್ನಿಯದ ಉತ್ತರ ಭಾಗ ಕೃಷಿ ಕೈಗಾರಿಕೆಗಳಲ್ಲಿ ಮುಂದುವರಿದಿದೆ. ಅಮೆರಿಕ ಸಂಯುಕ್ತಸಂಸ್ಥಾನದೊಂದಿಗೆ ವ್ಯಾಪಾರ ಸಂಪರ್ಕವಿದೆ. ಅಲ್ಲಿ ಹತ್ತಿ, ಗೋದಿ, ಕುದುರೆ ಮಸಾಲೆ, ದ್ರಾಕ್ಷಿ, ಕಲ್ಲಂಗಡಿ ಹಣ್ಣು, ಮುಸುಕಿನ ಜೋಳ ಬೆಳೆಯಲಾಗುತ್ತದೆ. ಚಿನ್ನದ ಗಣಿಗಳಿವೆ. ದಕ್ಷಿಣದಲ್ಲಿ ಚಿನ್ನ, ಬೆಳ್ಳಿ, ಮತ್ತು ಕಬ್ಬಿಣ ದೊರಕುತ್ತವೆ. ಹೈನುಗಾರಿಕೆ ಸಂಸ್ಥೆಗಳಿವೆ, ದ್ರಾಕ್ಷಾರಸ ತಯಾರಿಸುತ್ತಾರೆ.

ಸಂಚಾರ-ಸಂಪರ್ಕ: ಕೆಳ ಕ್ಯಾಲಿಫೋರ್ನಿಯದ ಒಳ ಹೊರ ಸಾರಿಗೆ ವ್ಯವಸ್ಥೆಗಳು ಸಮರ್ಪಕವಾಗಿಲ್ಲದ್ದೇ ಅದು ಮೆಕ್ಸಿಕೋದ ಉಳಿದ ಭಾಗದಿಂದ ಪ್ರತ್ಯೇಕವಾಗಿಯೇ ಉಳಿಯಲು ಕಾರಣ. ಮೆಕ್ಸಿಕೋ ದೇಶ ಅದರ ಮೇಲೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪ್ರಭಾವವನ್ನು ಬಹುಕಾಲ ಬೀರಲಿಲ್ಲ. ವಸಾಹತು ಕಾಲದಿಂದಲೂ ಇಲ್ಲಿ ಸುವ್ಯವಸ್ಥಿತ ರಸ್ತೆಗಳಿರಲಿಲ್ಲ. ಮಳೆಗಾಲದಲ್ಲಿ ಸಂಚಾರ ಕಷ್ಟಕರವಾಗಿತ್ತು. 1940ರ ದಶಕದಲ್ಲಿ ಉತ್ತರ ಭಾಗದಲ್ಲಿ ಹೆದ್ದಾರಿಗಳ ನಿರ್ಮಾಣ ಪ್ರಾರಂಭವಾಯಿತು. ಅಮೆರಿಕ ಸಂಯುಕ್ತಸಂಸ್ಥಾನದ ಗಡಿಯ ಬಳಿಯಲ್ಲಿ ಮಾತ್ರ ರೈಲುಮಾರ್ಗಗಳಿವೆ. ಟಿಹ್ವಾನಾ ಮತ್ತು ಆಲ್ಗೊಡೋನೆಸ್ ನಗರಗಳಿಂದ ಮೆಹಿಕಾಲಿಗೂ ಅಲ್ಲಿಂದ ಅಮೆರಿಕ ಸಂಯುಕ್ತಸಂಸ್ಥಾನಕ್ಕೂ ರೈಲುಮಾರ್ಗಗಳಿವೆ. ಮೆಹಿಕಾಲಿಯಿಂದ ಮೆಕ್ಸಿಕೋದ ಮುಖ್ಯ ಭೂಭಾಗಕ್ಕೆ 1950ರಲ್ಲಿ ರೈಲ್ವೆಸಂಪರ್ಕ ಏರ್ಪಟ್ಟಿತು. ಕೆಳ ಕ್ಯಾಲಿಫೋರ್ನಿಯ ತೀರದಿಂದ ಮೆಕ್ಸಿಕೋ ತೀರಕ್ಕೆ ನೌಕೆಗಳು ಸಂಚರಿಸುತ್ತವೆ. ಕೆಳ ಕ್ಯಾಲಿಫೋರ್ನಿಯದ ದಕ್ಷಿಣಪ್ರದೇಶದಿಂದ ಮೆಕ್ಸಿಕೋ ಪೆಸಿಫಿಕ್ ತೀರ ಮತ್ತು ಖಾರಿ ತೀರಕ್ಕೆ ಹೆಚ್ಚಿನ ನೌಕಾಸಂಪರ್ಕ ಏರ್ಪಟ್ಟಿದೆ. ಕೆಳ ಕ್ಯಾಲಿಫೋರ್ನಿಯ ಕರಾವಳಿ ಸು. 3200 ಕಿಮೀ ಉದ್ದವಾಗಿದ್ದರೂ ಅಲ್ಲಿ ಒಳ್ಳೆಯ ಬಂದರುಗಳು ಹೆಚ್ಚಾಗಿಲ್ಲ.

ಕೆಳ ಕ್ಯಾಲಿಫೋರ್ನಿಯ ರಾಜ್ಯದ ರಾಜಧಾನಿ ಮೆಹಿಕಾಲಿ (1,71,648). ಟಿಹ್ವಾನಾ (1,37,644) ಮತ್ತು ಎನ್ಸೆನಾಡಾ ಇನ್ನೆರಡು ಪಟ್ಟಣಗಳು. ದಕ್ಷಿಣ ಪ್ರದೇಶದ ರಾಜಧಾನಿ ಲಾ ಪಾಸ್ (23,252). ಸಾಂತ ರೋಸಲಿಯ ಎಂಬುದು ಗಣಿ ಜಿಲ್ಲೆಯೊಂದರ ಕೇಂದ್ರ.

**ಇತಿಹಾಸ :** ಕೆಳ ಕ್ಯಾಲಿಫೋರ್ನಿಯವನ್ನು ಮೊದಲಿಗೆ ಕಂಡವರು ಸ್ಪ್ಯಾನಿಷರು-1533ರಲ್ಲಿ. ಸ್ಥಳೀಯ ಇಂಡಿಯನರ ವಿರೋಧದಿಂದಾಗಿ ಇಲ್ಲಿ ವಸತಿಸ್ಥಾಪನೆಯ ಪ್ರಥಮ ಪ್ರಯತ್ನಗಳು ವಿಫಲವಾದುವು. ತರುವಾಯ ಬಹುಕಾಲ ಈ ಪ್ರಾಂತ್ಯಕ್ಕೆ ಹೊರಗಿನ ಜನ ಬರಲಿಲ್ಲ. 1667ರಲ್ಲಿ ರೋಮನ್ ಪಾದ್ರಿಗಳು ಹ್ವಾನ್ ಮಾರಿಯಾ ಸಾಲ್ವಟಿಯೆರ್ರಾನ ನಾಯಕತ್ವದಲ್ಲಿ ಅಲ್ಲಿಗೆ ಬಂದು ನೆಲಸಿ ಲೊರೇಟೊ ನಗರವನ್ನು ಸ್ಥಾಪಿಸಿದರು. 1824ರ ವರೆಗೆ ಈ ನಗರ ಪರ್ಯಾಯದ್ವೀಪದ ಕೇಂದ್ರವಾಗಿತ್ತು. ರೋಮನ್ ಪಾದ್ರಿಗಳು ಇಲ್ಲಿಯ ಆದಿವಾಸಿಗಳಿಗೆ ಶಿಕ್ಷಣ ಕೊಟ್ಟರು. ಊಳಿಗ ಮಾನ್ಯ ಪದ್ಧತಿ ಜಾರಿಗೆ ಬಂತು. ಮೆಕ್ಸಿಕೋ-ಅಮೆರಿಕಗಳ ನಡುವೆ ಯುದ್ಧ ನಡೆದಾಗ (1847-48) ಕೆಳ ಕ್ಯಾಲಿಫೋರ್ನಿಯವನ್ನು ಅಮೆರಿಕನ್ ಸೈನ್ಯಗಳು ಆಕ್ರಮಿಸಿದುವು. ಆದರೆ ಗ್ವಾಡಲೂಪ್-ಹಿಡ್ಯಾಲ್ಗೋ ಕೌಲಿನ ಪ್ರಕಾರ ಅಮೆರಿಕ ಸಂಯುಕ್ತಸಂಸ್ಥಾನ ಅದನ್ನು ಮೆಕ್ಸಿಕೋ ರಾಜ್ಯಕ್ಕೆ ಹಿಂದಿರುಗಿಸಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ (1939-45) ಇಲ್ಲಿಯ ಎನ್ಸೆನಾಡಾ ಮತ್ತು ಲಾ ಪಾಜ಼್ ನಗರಗಳು ಸೇನಾಕೇಂದ್ರಗಳಾಗಿದ್ದುವು.

(ವಿ.ಜಿ.ಕೆ.)

**ಕ್ಯಾಲಿಫೋರ್ನಿಯದ ಇತಿಹಾಸ :** ಕ್ಯಾಲಿಫೋರ್ನಿಯ ಎಂಬ ಹೆಸರು ಗಾರ್ಸಿ ಓರ್ಡೋನೆಜ಼್ ಡಿ ಮಾಂಟಾಲ್ವೋ ಎಂಬವನ ಬರೆವಣಿಗೆಯೊಂದರಿಂದ (1510) ತೆಗೆದುಕೊಂಡದ್ದು. ಇದು ಇಂಡೀಸಿನ ಬಲಕ್ಕಿರುವ ಒಂದು ದ್ವೀಪವೆಂದು ಆತ ಬಣ್ಣಿಸಿದ್ದ. 1533-34ರ ಸುಮಾರಿನಲ್ಲಿ ಕೆಳ ಕ್ಯಾಲಿಫೋರ್ನಿಯಕ್ಕೆ ಈ ಹೆಸರು ಬಂದಿರಬೇಕು. ತರುವಾಯ ಸ್ಯಾನ್ ಲೂಕಾಸ್ ಭೂಶಿರದಿಂದ ಪೆಸಿಫಿಕ್ ಸಾಗರದ ಅಂಚಿನ ವರೆಗೆ ಇಡೀ ಪ್ರದೇಶಕ್ಕೆ ಈ ಹೆಸರು ಅನ್ವಯವಾಯಿತು. ಕಾಲೊರಾಡೋ ನದಿಯ ದಕ್ಷಿಣ ಭಾಗವನ್ನು 1540ರಲ್ಲಿ ಕಂಡುಹಿಡಿಯಲಾಯಿತು. ಪರಿಶೋಧಕರು ಕ್ಯಾಲಿಫೋರ್ನಿಯವನ್ನು ಕಂಡರೂ ಅದರ ಒಳಹೊಕ್ಕಿರಲಿಲ್ಲ. 1542-43ರಲ್ಲಿ ವಾನ್‌ರೊಡ್ರಿಕ್ವೆಸ್ ಕಾಬ್ರಿಲ್ಲೋ ಇದರ ಪರಿಶೋಧನೆ ನಡೆಸಿದ. ಅವನ ತರುವಾಯ ಈ ಕೆಲಸವನ್ನು ಮುಂದುವರಿಸಿದವನು ಬಾರ್ತೊಲೋಮಿ ಫೆರೆಲೊ. 1579ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋಗೆ ಉತ್ತರದಲ್ಲಿ ಬೊಡೀಗಾ ಕೊಲ್ಲಿಯಲ್ಲಿ ಫ್ರಾನ್ಸಿಸ್ ಡ್ರೇಕ್ ತನ್ನ ನಾವೆಗಳನ್ನು ಸರಿಪಡಿಸಿಕೊಂಡನೆಂದು ತಿಳಿದುಬರುತ್ತದೆ. ಫಿಲಿಪೀನ್ಸ್‌ನಿಂದ ಮೆಕ್ಸಿಕೋದ ಅಕಪುಲ್ಕೊ ರೇವಿಗೆ ಸಂಚರಿಸುತ್ತಿದ್ದ ಸ್ಪಾನಿಷ್ ಹಡಗುಗಳು ಕ್ಯಾಲಿಫೋರ್ನಿಯದ ತೀರವನ್ನು ವೀಕ್ಷಿಸುತ್ತಿದ್ದುವು. ಸೆಬಾಸ್ಟಿಯನ್ ವಿಜ಼್‌ಕೇನೊ 1602-03ರಲ್ಲಿ ತೀರವನ್ನು ಪರಿಶೋಧಿಸಿ ಮಾಂಟಿರೇ ಕೊಲ್ಲಿಯನ್ನು ಕಂಡುಹಿಡಿದ. ತರುವಾಯ 150 ವರ್ಷಗಳ ತನಕ ಯಾವ ಪರಿಶೋಧನೆಯೂ ನಡೆಯಲಿಲ್ಲ. ಕ್ಯಾಲಿಫೋರ್ನಿಯ ಒಂದು ದ್ವೀಪವಾಗಿರಬೇಕೆಂಬುದೇ ಆಗಿನ ಕಲ್ಪನೆಯಾಗಿತ್ತು. ಜೆಸ್ಯುಯಿಟರು ಕೆಳ ಕ್ಯಾಲಿಫೋರ್ನಿಯ ಪ್ರದೇಶದಲ್ಲಿ 1697ರಲ್ಲಿ ನೆಲಸಿದರು. 1767ರಲ್ಲಿ ಸ್ಪೇನ್ ದೊರೆ 3ನೆಯ ಚಾರಲ್ಸ್ ಇವರನ್ನು ಹೊರದೂಡಿ ಆಜ್ಞೆ ಹೊರಡಿಸುವ ತನಕ ಅಲ್ಲಿದ್ದರು. ಅಲಾಸ್ಕವನ್ನು ರಷ್ಯನರು ಪರಿಶೋಧಿಸುವವರೆಗೂ ಅವರು ಉತ್ತರ ಕ್ಯಾಲಿಫೋರ್ನಿಯವನ್ನು ಆಕ್ರಮಿಸಿಕೊಳ್ಳುವ ಯೋಚನೆ ಮಾಡಲಿಲ್ಲ. ಸಾನ್‌ಡಿಯೇಗೋವನ್ನು 1769ರಲ್ಲೂ, ಮಾಂಟೆರೇಯನ್ನು 1770ರಲ್ಲೂ ಸ್ಪೇನ್ ಆಕ್ರಮಿಸಿಕೊಂಡಿತು.

ಕ್ಯಾಲಿಫೋರ್ನಿಯದ ಪ್ರಾರಂಭಿಕ ಇತಿಹಾಸದಲ್ಲಿ ಪಾದ್ರಿಗಳು ವಹಿಸಿದ ಪಾತ್ರ ಪ್ರಮುಖವಾದ್ದು. 1769 ಮತ್ತು 1823ರ ನಡುವೆ 21 ಕ್ರೈಸ್ತ ಮಿಷನ್‌ಗಳು ಇಲ್ಲಿ ಸ್ಥಾಪಿತವಾದುವು. ಈ ಪ್ರದೇಶದ ಆರ್ಥಿಕ ಅಭಿವೃದ್ಧಿ ಸಾಧಿಸಲು ಇವು ಕಾರಣ. ಮಾಂಟೆರೇ ನಗರದ ಸ್ಪ್ಯಾನಿಷ್ ಸೈನ್ಯಾಧಿಕಾರಿಗಳ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿತ್ತು. 1808ರಲ್ಲಿ ಸ್ಪೇನ್ ಮತ್ತು ಮೆಕ್ಸಿಕೋ ದೇಶಗಳಲ್ಲಿ ಸಂಭವಿಸಿದ ರಾಜಕೀಯ ಕ್ಷೋಭೆಗಳ ಬಿಸಿ ಈ ಭಾಗಕ್ಕೆ ತಟ್ಟಲಿಲ್ಲ. ಮೆಕ್ಸಿಕೋದಲ್ಲಿ 1810ರಲ್ಲಿ ಕ್ರಾಂತಿ ಸಂಭವಿಸಿದಾಗ ಕ್ಯಾಲಿಫೋರ್ನಿಯ ಸ್ಪೇನಿಗೆ ನಿಷ್ಠೆಯಿಂದಿತ್ತು. ಮೆಕ್ಸಿಕೋ ಸ್ವಾತಂತ್ರ್ಯ ಗಳಿಸಿದ ಮೇಲೆ 1822ರಲ್ಲಿ ಕ್ಯಾಲಿಫೋರ್ನಿಯ ಆ ದೇಶದ ಅಧೀನಕ್ಕೆ ಒಳಪಟ್ಟಿತು.

1824ರಿಂದ 1840ರ ತನಕ ಅಲ್ಲಿ ಅವ್ಯವಸ್ಥೆ ಇತ್ತು. ಸ್ಪೇನ್ ದೇಶಕ್ಕೆ ನಿಷ್ಠೆ ಹೊಂದಿದ್ದ ಫ್ರಾನ್‌ಸಿಸ್ಕನ್ ಪಾದ್ರಿಗಳಿಗೆ ಮೆಕ್ಸಿಕೋದಲ್ಲಿ ಕ್ಯಾಲಿಪೋರ್ನಿಯದ ವಿಲೀನ ಒಪ್ಪಿಗೆಯಾಗಿರಲಿಲ್ಲ. ಪಾದ್ರಿಗಳ ಸಂಸ್ಥೆಗಳನ್ನು ಲೌಕಿಕಗೊಳಿಸುವುದು ಕ್ಯಾಲಿಫೋರ್ನಿಯದ ಮುಖ್ಯ ಸಮಸ್ಯೆಯಾಯಿತು. ಪಾದ್ರಿಗಳ ಸಮಸ್ಯೆ 1831ರಲ್ಲಿ ಪರಮಘಟ್ಟವನ್ನು ಮುಟ್ಟಿ, ಗವರ್ನರ್ ಮಾನ್ಯುಯೆಲ್ ವಿಕ್ಟೋರಿಯನ ಆಡಳಿತವನ್ನು ಎದುರಿಸಿ ಜನ ದಂಗೆಯೆದ್ದರು. ಈ ದಂಗೆಗೆ ಕಾರಣ ಮೆಕ್ಸಿಕೋ ಆಡಳಿತದ ಬಗ್ಗೆ ಅತೃಪ್ತಿ ಮತ್ತು ಉತ್ತರ ಹಾಗೂ ದಕ್ಷಿಣ ಕ್ಯಾಲಿಫೋರ್ನಿಯ ಭಾಗಗಳ ಜನರ ನಡುವಣ ವೈಮನಸ್ಯ. ಮೆಕ್ಸಿಕೋ ಆಡಳಿತದಿಂದ ಕ್ಯಾಲಿಫೋರ್ನಿಯಕ್ಕೆ ಹೆಚ್ಚಿನ ಪ್ರಯೋಜನವಾಗಿರಲಿಲ್ಲ. 1831ರಲ್ಲಿ ಗವರ್ನರ್ ವಿಕ್ಟೋರಿಯ ಪದಚ್ಯುತಿಗೊಂಡ. 1836ರಲ್ಲಿ ಗವರ್ನರ್ ಮಾರಿಯಾನೋ ಚೀಕೋ ಭೀತಿಗೊಂಡು ಪಲಾಯನ ಮಾಡಿದ. ಅದೇ ವರ್ಷ ಗವರ್ನರ್ ನಿಕೊಲಾಸ್ ಗ್ಯುಟಿರೆಜ್ ಮತ್ತು 1844-45ರಲ್ಲಿ ಗವರ್ನರ್ ಮಾನ್ಯುಯೆಲ್ ಮಿಚಿಲ್‌ಟೋರಿನ ಇವರನ್ನು ಅಧಿಕಾರದಿಂದ ಅಟ್ಟಿದರು. ಹೀಗೆ ಮೆಕ್ಸಿಕನ್ ಗವರ್ನರ್‌ಗಳನ್ನು ಓಡಿಸಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿಕೊಳ್ಳಲು ಅಲ್ಲಿಯ ಜನ ಅನುವಾದರು.

19ನೆಯ ಶತಮಾನದ ಆದಿಯಲ್ಲಿ, ಕ್ಯಾಲಿಫೋರ್ನಿಯ ಪ್ರದೇಶ ಸ್ಪೇನ್ ದೇಶದ ಆಡಳಿತಕ್ಕೆ ಒಳಪಟ್ಟಿದ್ದಾಗ ಸ್ಪೇನಿನ ಕಾನೂನುಗಳಿಗೆ ವಿರುದ್ಧವಾಗಿ ಕ್ಯಾಲಿಫೋರ್ನಿಯದ ವಿದೇಶಿ ವ್ಯಾಪಾರ ಬೆಳೆಯುತ್ತಿತ್ತು. ಸ್ಪೇನ್ ಅಮೆರಿಕ ಕ್ರಾಂತಿಗಳ ಕಾಲದಲ್ಲಿ ಈ ವ್ಯಾಪಾರಕ್ಕೆ ಮತ್ತಷ್ಟು ಉತ್ತೇಜನ ದೊರಕಿತು. ರಷ್ಯನರು ಈ ಭಾಗಕ್ಕೆ 1805ರಲ್ಲಿ ಬಂದು 1812ರಲ್ಲಿ ರಾಸ್ ಕೋಟೆಯನ್ನು ಸ್ಥಾಪಿಸಿ ಅದನ್ನು 1841ರವರೆಗೆ ತಮ್ಮ ವಶದಲ್ಲಿಟ್ಟುಕೊಂಡಿದ್ದರು. ತುಪ್ಪಳು ಸಂಗ್ರಹಕ್ಕಾಗಿ ಅವರು ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿಯವರೆಗೂ ಬಂದಿದ್ದರು. 1826ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಬೇಟೆಗಾರರು ಈ ರಾಜ್ಯವನ್ನು ದಾಟಿ ಸಾಗರತೀರವನ್ನು ಮುಟ್ಟಿದರು. 1830ರಲ್ಲಿ ಹಡ್‌ಸನ್ ಬೇ ಕಂಪನಿ ತುಪ್ಪಳಿಗಾಗಿ ಉತ್ತರ ಕ್ಯಾಲಿಫೋರ್ನಿಯದಲ್ಲಿ ಕಾರ್ಯಾಚರಣೆ ನಡೆಸಿತು. ಕೊನೆಗೆ 1840ರ ಹೊತ್ತಿಗೆ ಅಮೆರಿಕನರು ಕ್ರಮಕ್ರಮವಾಗಿ ಈ ಭಾಗಕ್ಕೆ ವಲಸೆ ಬರಲಾರಂಭಿಸಿದರು. 1835ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷ ಆಂಡ್ರ್ಯೂ ಜಾಕ್‌ಸನ್ ಕ್ಯಾಲಿಫೋರ್ನಿಯವನ್ನು ಕೊಳ್ಳಲು ನೀಡಿದ ಸಲಹೆಯನ್ನು ಮೆಕ್ಸಿಕೋ ನಿರಾಕರಿಸಿತು. 1845ರಲ್ಲಿ ಕ್ಯಾಲಿಫೋರ್ನಿಯವನ್ನು ಮೆಕ್ಸಿಕೋದಿಂದ ಪ್ರತ್ಯೇಕಿಸಲು ಮಾಂಟೆರೇ ನಗರದಲ್ಲಿದ್ದ ಅಮೆರಿಕನ್ ರಾಯಭಾರಿ ತನ್ನ ಸರ್ಕಾರದ ಪರವಾಗಿ ವ್ಯವಹರಿಸಿದ. ಮೆಕ್ಸಿಕೋದೊಂದಿಗೆ ಯುದ್ಧ ಸಂಭವಿಸಿದ ಪಕ್ಷದಲ್ಲಿ ಕ್ಯಾಲಿಫೋರ್ನಿಯದ ಬಂದರುಗಳನ್ನು ಹಿಡಿದುಕೊಳ್ಳುವಂತೆ ಅದೇ ಸಮಯದಲ್ಲಿ ಅಮೆರಿಕ ಸರ್ಕಾರ ತನ್ನ ನೌಕಾಧಿಕಾರಿಗಳಿಗೆ ಸೂಚನೆ ನೀಡಿತ್ತು. ಅಮೆರಿಕನರು 1846ರಲ್ಲಿ ಸೊನೊಮವನ್ನು ಆಕ್ರಮಿಸಿದರು. ಜಾನ್ ಡ್ರೇಕ್ ಸ್ಲೋಟ್ ಜುಲೈ 1846ರಲ್ಲಿ ಮಾಂಟೆರೇ ನಗರದಲ್ಲಿ ಅಮೆರಿಕದ ಧ್ವಜವನ್ನು ಹಾರಿಸಿದ. ಕ್ಯಾಲಿಫೋರ್ನಿಯ ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಸೇರಿದ ಪ್ರದೇಶವೆಂದು ಘೋಷಿಸಿದ.

1848ರ ಕೌಲಿನ ಪ್ರಕಾರ ಕ್ಯಾಲಿಫೋರ್ನಿಯವನ್ನು ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಮೆಕ್ಸಿಕೋ ಬಿಟ್ಟುಕೊಟ್ಟಿತು. ಆ ತರುವಾಯ ಅಲ್ಲಿ ಚಿನ್ನ ಸಿಕ್ಕಿದ್ದರಿಂದ ಅದರ ಪ್ರಾಮುಖ್ಯ ಹೆಚ್ಚಿತು. ಅಮೆರಿಕನ್ ನೌಕೆಗಳಿಗೆ ಸ್ಯಾನ್‌ಫ್ರಾನ್ಸಿಸ್ಕೋ ಒಂದು ಬಂದರಾಯಿತು. ಈ ಮಧ್ಯೆ ಕ್ಯಾಲಿಫೋರ್ನಿಯದಲ್ಲಿ ಜನರ ನೆಮ್ಮದಿ ಸಾಧಿಸಲು ಯುಕ್ತ ಕಾಯಿದೆಗಳ ಅಗತ್ಯವಿತ್ತು. ಅರಾಜಕತೆಯನ್ನು ತಡೆಯಲು 1849ರಲ್ಲಿ ಹಂಗಾಮಿ ಸ್ಥಳೀಯ ಸರ್ಕಾರಗಳು ನಾನಾ ನಗರಗಳಲ್ಲಿ ಸ್ಥಾಪಿತವಾದವು. 1850ರಲ್ಲಿ ಅಮೆರಿಕದ ಕಾಂಗ್ರೆಸ್ ಅಂಗೀಕರಿಸಿದ ವಿಧೇಯಕದ ಪ್ರಕಾರ ಕ್ಯಾಲಿಫೋರ್ನಿಯ ಒಂದು ರಾಜ್ಯವಾಯಿತು. ಈ ಮಧ್ಯೆ ಚಿನ್ನದ ಆಸೆಯಿಂದ ಅಮೆರಿಕದ ಜನರು ಕ್ಯಾಲಿಫೋರ್ನಿಯದ ಪರ್ವತಭಾಗಗಳತ್ತ ಸಾಗಿದರು. ಕ್ಯಾಲಿಫೋರ್ನಿಯದಲ್ಲಿ ಶಿಸ್ತನ್ನು ಕಠಿಣ ಕಾಯಿದೆಗಳಿಂದ ರಕ್ಷಿಸಬೇಕಾಯಿತು. ಅಲ್ಲಿ ಗುಲಾಮರ ಸಮಸ್ಯೆ ಬಗೆಹರಿದಿರಲಿಲ್ಲ. ಸೆನೆಟ್ ಸದಸ್ಯ ವಿಲಿಯಂ ಎಂ.ಗ್ವಿನ್ ಕ್ಯಾಲಿಫೋರ್ನಿಯವನ್ನು ಎರಡು ರಾಜ್ಯಗಳನ್ನಾಗಿ ವಿಭಜಿಸಲು ಪ್ರಯತ್ನಿಸಿದ. ಅಮೆರಿಕ ಸಂಯುಕ್ತಸಂಸ್ಥಾನದ ಅಂತರ್ಯುದ್ಧದ ಕಾಲದಲ್ಲಿ ಈ ರಾಜ್ಯ ಒಕ್ಕೂಟಕ್ಕೆ ನಿಷ್ಠೆಯಿಂದಿತ್ತು.

ರಾಜ್ಯದ ಆಡಳಿತದಲ್ಲಿ ಸುಧಾರಣೆಗಳನ್ನು ತಂದು ಅದನ್ನು ಹೆಚ್ಚು ಪ್ರಜಾಸತ್ತಾತ್ಮಕವಾಗಿ ಮಾಡಲು ಕ್ರಮ ಕೈಕೊಂಡದ್ದು 20ನೆಯ ಶತಮಾನದ ಆದಿಯಲ್ಲಿ. 1925ರಿಂದೀಚೆಗೆ ಇದರ ಇತಿಹಾಸ ಅಮೆರಿಕ ಸಂಯುಕ್ತಸಂಸ್ಥಾನದ ಇತಿಹಾಸದಲ್ಲಿ ಸೇರಿಹೋಗಿದೆ.

(ವಿ.ಜಿ.ಕೆ.)

**ಕ್ಯಾಲಿಸ್ಟೀಮಾನ್ :** ಆಸ್ಟ್ರೇಲಿಯದ ಮೂಲವಾಸಿಯಾದ ಒಂದು ಸಸ್ಯಜಾತಿ. ಕಡುಗೆಂಪು ಬಣ್ಣದ ಕೇಸರಗಳಿಂದ ಬಲು ಸುಂದರವಾಗಿ ಕಾಣುವುದರಿಂದ ಇದನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ, ರಸ್ತೆಯ ಅಕ್ಕಪಕ್ಕಗಳಲ್ಲಿ, ಶಾಲೆಯ ಅಂಗಳದಲ್ಲಿ ಬೆಳೆಸುತ್ತಾರೆ. ಚೆಲುವಾದ ಕೇಸರಗಳಿಂದಾಗಿಯೆ ಗಿಡಕ್ಕೆ ಈ ಹೆಸರು ಬಂದಿದೆ(ಗ್ರೀಕ್ ಭಾಷೆಯಲ್ಲಿ ಕ್ಯಾಲಿಸ್ಟೀಮಾನ್ ಎಂದರೆ ಸುಂದರವಾದ ಕೇಸರ ಎಂದು ಅರ್ಥ). ಅಲ್ಲದೆ ಇದರ ಹೂಗೊಂಚಲುಗಳು ಸೀಸೆ ತೊಳೆಯಲು ಬಳಸುವ ಬ್ರಷ್ಷಿನಂತೆ ಕಾಣುವುದರಿಂದ ಇದಕ್ಕೆ ಬಾಟಲ್ ಬ್ರಷ್ ಎಂಬ ಹೆಸರೂ ಇದೆ.

ಕ್ಯಾ. ಲ್ಯಾನ್ಸಿಯೊಲೇಟಸ್ ಪ್ರಭೇದ

ಕ್ಯಾಲಿಸ್ಟೀಮಾನ್ ಸುಮಾರು 6'–30' ಎತ್ತರಕ್ಕೆ ಬೆಳೆಯುವ ಪೊದೆ ಇಲ್ಲವೆ ಮರ. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಅಲಗಿನಲ್ಲಿ ತೈಲ ಅಥವಾ ರಾಳಗ್ರಂಥಿಗಳಿವೆ. ಎಲೆಗಳನ್ನು ಮುದುಡಿದರೆ ಒಂದು ಬಗೆಯ ಸುವಾಸನೆ ಹೊರಡುತ್ತದೆ. ಹೂಗಳು ಉರುಳೆಯಾಕಾರದ ಹೂಗೊಂಚಲಿ ನಲ್ಲಿ ದಟ್ಟವಾಗಿ ಸಮಾವೇಶಗೊಂಡಿವೆ. ರೆಂಬೆಗಳ ತುದಿಯಲ್ಲೆ ಹೂಗೊಂಚಲು ಹುಟ್ಟುವುದಾದರೂ ಕೆಲಕಾಲಾ ನಂತರ ಹೂಗೊಂಚಲಿನ ದಿಂಡು ಗೊಂಚಲಿನ ತುದಿಯಿಂದ ಹೊರಕ್ಕೆ ಬೆಳೆದು ಮತ್ತೆ ಎಲೆಗಳನ್ನು ಉತ್ಪತ್ತಿ ಮಾಡುತ್ತದೆ. ಒಂದೊಂದು ಹೂವಿನಲ್ಲಿ 5 ಪುಷ್ಪಪತ್ರಗಳು, 5 ದಳಗಳು, ಅಸಂಖ್ಯಾತ ಕೇಸರಗಳು, ನೀಚಸ್ಥಾನ ಅಂಡಾಶಯ ಇವೆ.

ಕ್ಯಾಲಿಸ್ಟೀಮಾನನ್ನು ಬೀಜಗಳಿಂದ ವೃದ್ಧಿಸಬಹುದು. ಅದೇ ತಾನೆ ಬಲಿತಿರುವ ಕಾಯಿಗಳನ್ನು ಪೆಟ್ಟಿಗೆ ಇಲ್ಲವೆ ಕಾಗದದ ಚೀಲಗಳಲ್ಲಿ ಶೇಖರಿಸಿ ಅವುಗಳೊಳಗೇ ಒಡೆಯುವಂತೆ ಮಾಡಿ ಬೀಜಗಳನ್ನು ಸಂಗ್ರಹಿಸಲಾಗುತ್ತದೆ. ವಸಂತ ಋತುವಿನ ಆದಿಯಲ್ಲಿ ಗೋಡು, ಮರಳು ಮತ್ತು ಎಲೆಗೊಬ್ಬರಗಳ ಮಿಶ್ರಣದಲ್ಲಿ ಬಿತ್ತಿ ಮೊಳಕೆಯೊಡೆಸಲಾಗುತ್ತದೆ. ಅನಂತರ ಸಸಿಗಳು ಸಾಕಷ್ಟು ದೊಡ್ಡವಾದ ಮೇಲೆ ಅವನ್ನು ಬೇಕೆನಿಸಿದ ಕಡೆಗೆ ನಾಟಿ ಮಾಡಿ ವೃದ್ಧಿಸಲಾಗುತ್ತದೆ.

ಕ್ಯಾಲಿಸ್ಟೀಮಾನ್ ಜಾತಿಯಲ್ಲಿ ಸುಮಾರು 25 ಪ್ರಭೇದಗಳಿವೆ. ಇವುಗಳಲ್ಲಿ ಲ್ಯಾನ್ಸಿಯೊಲೇಟಸ್, ಸ್ಪೀಶಿಯೋಸಸ್, ರಿಜಿಡಸ್, ಸ್ಯಾಲಿಗ್ನಸ್ ಮತ್ತು ಬ್ರಾಕಿಯಾಂಡ್ರಸ್ ಪ್ರಭೇದಗಳು ಮುಖ್ಯವಾದವು.

(ಎಂ.ಎಚ್.ಎಂ.)

**ಕ್ಯಾರೊಲ್, ಡಬ್ಲ್ಯೂ. ಗ್ರೈಡರ್:** 1961–. ಅಮೆರಿಕದ ನೊಬೆಲ್ ಪುರಸ್ಕೃತ ಪ್ರಸಿದ್ಧ ವೈದ್ಯ ಸಂಶೋಧಕಿ, ವಿಜ್ಞಾನಿ. ಕ್ಯಾಲಿಫೋರ್ನಿಯದ ಸ್ಯಾನ್‌ಡಿಯಾಗೊನಲ್ಲಿ 1961ರಲ್ಲಿ ಜನಿಸಿದಳು. ಕ್ರೋಮೋಸೋಮ್‌ಗಳು ಡಿಲೊಮೆಕಿಸ್ ಮತ್ತು ಎಂಜೈಮ್ ಟೆಲೊಮೆರೆಸ್‌ಗಳಿಂದ ಹೇಗೆ ರಕ್ಷಣೆ ಹೊಂದಿವೆ ಎಂಬ ಸಂಶೋಧನೆಗಾಗಿ ವೈದ್ಯಕೀಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿದೆ (2009). ಇವಳ ತಂದೆ ಕೆನೆತ್ ಗ್ರೈಡರ್ ಭೌತವಿಜ್ಞಾನಿ. ತಾಯಿ ಜೇನ್ ಫೋಲೆ ಗ್ರೈಡರ್ ಸಸ್ಯವಿಜ್ಞಾನಿ. ಕ್ಯಾರೋಲ್‌ಳ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸ ಡೆವಿಸ್‌ನಲ್ಲೂ ಮುಂದಿನ ವಿದ್ಯಾಭ್ಯಾಸ ಜರ್ಮನಿಯಲ್ಲೂ ನಡೆಯಿತು. ಡಿಸ್ಲೆಕ್ಸಿಯಾದಿಂದ ತೊಂದರೆಗೆ ಒಳಗಾಗುತ್ತಿದ್ದರೂ ಮುಂದಿನ ದಿನಗಳಲ್ಲಿ ಸಂಶೋಧನೆ ಕೈಗೊಂಡಳು. ಇದಕ್ಕೆ ತಾಯಿಯ ಗೆಳತಿ ಬೀಜ್ಲಿಯಿಂದ ಅಪಾರ ಪ್ರೋತ್ಸಾಹ ದೊರೆಯಿತು. ಮೊದಲಿಗೆ ಸಂತ ಬಾರ್ಬರಾದಲ್ಲಿ ಮರಳು ನಳ್ಳಿಯ ಬಗೆಗೆ ಸಂಶೋಧನೆ ಕೈಗೊಂಡಳು. ಸಾಗರ ಜೀವವಿಜ್ಞಾನ ವಿಜ್ಞಾನಿಯಾಗಲು ಬಯಸಿದರೂ ಅದು ಸಾಧ್ಯವಾಗಲಿಲ್ಲ. ಅನಂತರ ಮೈಕ್ರೊ ಟ್ಯುಬಲ್ ಡೈನಮಿಕ್ಸ್ ಬಗ್ಗೆ ಸಂಶೋಧನೆ ಕೈಗೊಂಡು ಅದು ಹೇಗೆ ಸಂಯೋಜನೆಗೊಂಡಿವೆ ಎಂಬುದನ್ನು ಕಂಡುಹಿಡಿದಳು.

ಕ್ರೋಮೋಸೋಮುಗಳ ಬಗ್ಗೆ ಸಂಶೋಧನ ಲೇಖನಗಳನ್ನು ಬರೆದಿದ್ದಾಳೆ.

ಟೆಲೊಮೆರನ್ ಆರ್‌ಎನ್‌ಎಯನ್ನು ಜೀನ್‌ನೊಂದಿಗೆ ಸೇರಿಸಿದರೆ ಆಗುವ ಪರಿಣಾಮದ ಬಗ್ಗೆ ಸಂಶೋಧನೆ ನಡೆಸಿ, ನೊಬೆಲ್ ಪ್ರಶಸ್ತಿ ಗಳಿಸಿದಳು. (ಪಿ.ಎಸ್.ಪಿ.)

**ಕ್ಯಾಲೆಂಡರ್, ಹ್ಯೂ ಲಾಂಗ್‌ಬೋರ್ನ್ :** 1863–1930. ಬ್ರಿಟಿಷ್ ಭೌತ ವಿಜ್ಞಾನಿ. ಉಷ್ಣ ಹಾಗೂ ಉಷ್ಣಗತಿ ವಿಜ್ಞಾನದಲ್ಲಿ ಸಂಶೋಧನೆಗಳನ್ನು ಮಾಡಿ ಪ್ರಸಿದ್ಧನಾದ. ಈತನ ಪ್ರಥಮ ವ್ಯಾಸಂಗ ಬ್ರಿಟಿಷ್ ಮಾರ್ಲ್‌ಬರೋನಲ್ಲಿ. ಮುಂದೆ ಕೇಂಬ್ರಿಜ್ ವಿಶ್ವವಿದ್ಯಾನಿಲಯವನ್ನು ಸೇರಿದ. ಅಲ್ಲಿನ ಆನರ್ಸ್ ಪರೀಕ್ಷೆಯಲ್ಲಿ ಗಣಿತವಿಜ್ಞಾನ–ಪ್ರಾಚೀನ ಕಲೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣನಾದ.

ಪ್ರಯೋಗಕಾಲದಲ್ಲಿ ಸಂಭವಿಸುವ ಉಷ್ಣಪ್ರಸಾರದಿಂದದುಂಟಾಗುವ ಉಷ್ಣನಷ್ಟವನ್ನು ಕಡಿಮೆಯಾಗಿಸಿ, ಉಪಕರಣದ ಸಮಜಲವನ್ನು ಗಣನೆಗೆ ತೆಗೆದುಕೊಳ್ಳದೆ, ದ್ರವಗಳ ಗ್ರಾಹ್ಯೋಷ್ಣವನ್ನು ನಿರ್ಣಯಿಸುವ ವಿಧಾನವೊಂದನ್ನು ರೂಪಿಸಿದ ಕೀರ್ತಿ ಕ್ಯಾಲೆಂಡರನದು. ಇದಕ್ಕಾಗಿ ಈತ ತಯಾರಿಸಿದ ಉಪಕರಣವೇ ನಿರಂತರವಾಗಿ ಗೊತ್ತಾದ ಮೊತ್ತದಲ್ಲಿ ಹರಿಯುವ ದ್ರವದ ಉಷ್ಣತೆಯನ್ನು ಹೆಚ್ಚಿಸಲು ವಿದ್ಯುಚ್ಛಕ್ತಿಯನ್ನು ಬಳಸಲಾಗುವುದು. ಇದೇ ಉಪಕರಣದಲ್ಲಿ ದ್ರವದ ನೀರನ್ನು ಹರಿಸಿ (ಗ್ರಾಹ್ಯೋಷ್ಣ 1 ಅಥವಾ ಗೊತ್ತಾದ ಗ್ರಾಹ್ಯೋಷ್ಣವುಳ್ಳ ಯಾವುದಾದರೂ ದ್ರವ) ಉಪಯೋಗಿಸಲ್ಪಟ್ಟ ವಿದ್ಯುಚ್ಛಕ್ತಿಯಿಂದ ಕೆಲಸ ಮತ್ತು ಅದರಿಂದುಂಟಾದ ಉಷ್ಣದ ಉತ್ಪತ್ತಿ ಇವುಗಳ ನಡುವಣ ನಿಷ್ಪತ್ತಿಯನ್ನು ಕಂಡುಹಿಡಿದು ಉಷ್ಣದ ಉತ್ಪತ್ತಿ ಇವುಗಳ ನಡುವಣ ನಿಷ್ಪತ್ತಿಯನ್ನು ಕಂಡುಹಿಡಿದು ಉಷ್ಣದ ಯಾಂತ್ರಿಕ ಸಾಮ್ಯದ ಬೆಲೆಯನ್ನು ನಿರ್ಣಯಿಸಲು ಸಾಧ್ಯ. ಅನಿಲಗಳ ವಿಕಾಸವನ್ನೇ ಉಷ್ಣತೆಯ ಅಳತೆಗೆ ಆಧಾರವಾಗಿಟ್ಟುಕೊಂಡು ಸಮೀಕೃತ ಗಾಳಿಯುಳ್ಳ ಅನಿಲ ಉಷ್ಣತಾಮಾಪಕವನ್ನು ನಿರ್ಮಿಸಿದವ ಕ್ಯಾಲೆಂಡರ್ (1891). ರೇಡಿಯೋ ತ್ರಾಸನ್ನು ನಿಯೋಜಿಸಿದ ಕೀರ್ತಿಯೂ ಈತನದೇ.

ಕ್ಯಾವೆಂಡಿಷ್ ಪ್ರಯೋಗಾಲದಲ್ಲಿದ್ದಾಗ ಕ್ಯಾಲೆಂಡರ್, ಲೋಹಗಳ ರೋಧತ್ವದಲ್ಲಿ ಉಷ್ಣತೆಯ ಹೆಚ್ಚುವಿಕೆಯ ಪರಿಣಾಮವನ್ನು ಕುರಿತು ಸಂಶೋಧನೆ ನಡೆಸಿದ. ಇದರ ಫಲವಾಗಿ ಸ್ವಂತ ಉಷ್ಣಮಾಪಕವೊಂದನ್ನು ತಯಾರಿಸಿದ. ಪ್ಲಾಟಿನಂ ತಂತಿಯುಳ್ಳ ರೋಧ ಉಷ್ಣಮಾಪಕವೆಂದು ಇದರ ಹೆಸರು. ಮುಂದೆ ಕ್ಯಾಲೆಂಡರ್ ನೀರಿನ ಹಬೆಯ ಮೇಲಿನ ಸಂಶೋಧನೆ ಮತ್ತು ಆತನ ಹೆಸರಿನಿಂದಲೇ ಕರೆಯಲ್ಪಡುವ ಹಬೆಯ ಸಮೀಕರಣವನ್ನು ಬೆಳಕಿಗೆ ತಂದ. ಅತಿ ಹೆಚ್ಚು ಒತ್ತಡ ಮತ್ತು ಉಷ್ಣತೆಯಲ್ಲಿರುವ ಆವಿಯ ಮೇಲಿನ ಸಂಶೋಧನೆ ಆವಿಯ ತಿರುಬಾನಿ ಉತ್ಪಾದಕರ ಮತ್ತು ವಿದ್ಯುತ್ ಸಂಶೋಧನಾ ಕೇಂದ್ರದವರಿಗೆ ಬಹಳ ಉಪಯುಕ್ತವಾಗಿದ್ದವು. 1925ರಲ್ಲಿ ಈ ಕೇಂದ್ರದವರಿಗೆ ಸಲ್ಲಿಸಿದ ಕ್ಯಾಲೆಂಡರ್‌ನ ಲೇಖನವೊಂದರಲ್ಲಿ ಅತಿ ಹೆಚ್ಚು ಒತ್ತಡದಲ್ಲಿರುವ ಹಬೆಯ ಒಟ್ಟು ಉಷ್ಣವನ್ನು ಅವಿಚ್ಛಿನ್ನ ಪ್ರವಾಹ ರೀತಿಯಿಂದ, ನಿರ್ಧರಿಸುವ ವಿಧಾನವೊಂದನ್ನು ತಿಳಿಸಲಾಗಿತ್ತು. ಹಾರುವ ಯಂತ್ರಗಳಲ್ಲಿ ಉಪಯೋಗಿಸುವ ಮೆರುಗು ಎಣ್ಣೆಗಳಿಗೂ ಸ್ಫೋಟನಕ್ಕೂ ಇರುವ ಸಂಬಂಧವನ್ನು ಕುರಿತು ಅಲ್ಲದೇ ಆವಿಯ ಎಂಜಿನಿನಲ್ಲಿ ದಬ ದಬ ಶಬ್ದ ಮಾಡುವುದರಲ್ಲಿ ಅಂಟಿಕ್ಲಾಕ್ ವಸ್ತುಗಳ ಪರಿಣಾಮವನ್ನು ಕುರಿತು ಕ್ಯಾಲೆಂಡರ್ ತನ್ನ ಸಹೋದ್ಯೋಗಿಗಳೊಡನೆ ಸಂಶೋಧನೆ ನಡೆಸಿದ್ದ.

(ಜೆ.ಎಸ್.ಎಸ್.ಎಸ್.)

**ಕ್ಯಾಲೆಂಡರಿಂಗ್ :** ಬಟ್ಟೆ, ರಬ್ಬರ್, ಕಾಗದ ಇವುಗಳ ಹಾಳೆಗಳನ್ನು ದಿಂಡುಗಳ ಅಥವಾ ಫಲಕಗಳ ನಡುವೆ ಅಧಿಕ ಸಂಮರ್ದಕ್ಕೆ ಒಳಪಡಿಸಿ ಒತ್ತಿ ಆ ಹಾಳೆಗಳನ್ನು ತೆಳುಗೊಳಿಸುವ ಅಥವಾ ನುಣುಪುಗೊಳಿಸುವ ಅಥವಾ ಹೊಳಪುಗೊಳಿಸುವ ವಿಧಾನ. ಇದನ್ನು ಮಾಡುವ ಯಂತ್ರಕ್ಕೆ ಕ್ಯಾಲೆಂಡರ್ ಯಂತ್ರ ಎಂದು ಹೆಸರು. ಈ ಯಂತ್ರದಲ್ಲಿ 2-12 ಸುತ್ತು ದಿಂಡುಗಳನ್ನು ಒಂದರ ಮೇಲೊಂದು ಇಟ್ಟು ಬಲವಾದ ಚೌಕಟ್ಟಿನಲ್ಲಿ ಜೋಡಿಸುವರು. ಸಾಮಾನ್ಯವಾಗಿ ಸುತ್ತು ದಿಂಡುಗಳ ವ್ಯಾಸ 30-40 ಸೆಂಮೀ ದಿಂಡುಗಳನ್ನು ಕಬ್ಬಿಣ, ಉಕ್ಕು, ಹಿತ್ತಾಳೆ ಮತ್ತು ಕೆಲವು ಗಟ್ಟಿಮರದಿಂದ ಅಥವಾ ಅಧಿಕ ಸಂಮರ್ದದಲ್ಲಿ

ಒತ್ತಿದ ಹತ್ತಿ ಮತ್ತು ಕಾಗದದ ಉರುಳೆಗಳಿಂದ ತಯಾರಿಸುತ್ತಾರೆ. ಲೋಹದ ದಿಂಡುಗಳ ಮೇಲೆ ಮತ್ತು ಕೆಳಗೆ ಹತ್ತಿಯಿಂದ ಮಾಡಿರುವ ದಿಂಡುಗಳನ್ನು ಜೋಡಿಸಿರುವರು. ಈ ಯಂತ್ರವನ್ನು ಉಪಯೋಗಿಸುವಾಗ ಬಟ್ಟೆಯ ಮೇಲೆ ದಿಂಡುಗಳ ಭಾರದ ಜೊತೆಗೆ ಸಾವಿರಾರು ಕಿಗ್ರಾಂ ತೂಕ ಬೀಳುವ ಏರ್ಪಾಡು ಉಂಟು. ಅಲ್ಲದೆ ಲೋಹದ ದಿಂಡುಗಳನ್ನು ಉಗಿಯಿಂದ ಕಾಯಿಸುವರು. ಈ ಯಂತ್ರದಲ್ಲಿ ಹಾಯುವ ವಸ್ತ್ರ ಸ್ವಲ್ಪ ಒದ್ದೆಯಾಗಿರಬೇಕು. ಉಪಯೋಗಾನುಗುಣವಾಗಿ ಯಂತ್ರಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿರಬಹುದು. ಹತ್ತಿ, ಲಿನನ್, ಕೃತಕ ರೇಷ್ಮೆ ಮತ್ತು ರೇಷ್ಮೆಯಿಂದ ತಯಾರಾದ ಬಟ್ಟೆಗಳಿಗೆ ತಕ್ಕಂತೆ ಈ ಯಂತ್ರವನ್ನು ಉಪಯೋಗಿಸಬೇಕು.

ಯಂತ್ರದ ಉಪಯೋಗ ಮೂರು ವಿಧ: ಸಾದ (ಸ್ವಿಸಿಂಗ್), ಹಿಂಬಾಲಿಕೆ (ಚೇಸಿಂಗ್) ಮತ್ತು ಘರ್ಷಣ (ಫ್ರಿಕ್ಷನ್). ಸಾದ ಕ್ರಮದಲ್ಲಿ ಬಟ್ಟೆ ಒಂದು ಮಡಿಕೆಯಲ್ಲಿ ಯಂತ್ರದ ಮೂಲಕ ಹಾಯುವುದು. ಹಿಂಬಾಲಿಕೆ ಕ್ರಮದಲ್ಲಿ ಕನಿಷ್ಠ ಪಕ್ಷ ಎರಡು ಮಡಿಕೆಗಳು ಬಟ್ಟೆ ದಿಂಡುಗಳ ಮಧ್ಯೆ ಇರಬೇಕು. ಘರ್ಷಣ ಕ್ರಮದಲ್ಲಿ ಬಟ್ಟೆ ಒಂದೇ ಮಡಿಕೆಯಾಗಿ ಹಾಯುವುದು. ಆದರೆ ಇದರಲ್ಲಿ ಒಂದು ಹೊಳಪಾದ ಗಟ್ಟಿ ಲೋಹದ ದಿಂಡು ಮತ್ತೊಂದು ದಿಂಡಿಗಿಂತ ಹೆಚ್ಚು ವೇಗದಿಂದ ತಿರುಗುತ್ತದೆ. ಇದರಿಂದಾಗಿ ಹೆಚ್ಚು ಪ್ರಕಾಶ ಬರುವುದು.

ಈ ಯಂತ್ರವನ್ನು ಉಪಯೋಗಿಸಲು ಗಮನಿಸಬೇಕಾದ ಅಂಶಗಳು: ಲೋಹದ ದಿಂಡಿನ ಉಷ್ಣತೆ; ಬಟ್ಟೆಯ ಮೇಲೆ ಬೀಳುವ ಒತ್ತಡ; ದಿಂಡುಗಳ ಸಂಖ್ಯೆ, ಗುಣ ಮತ್ತು ವಸ್ತ್ರಚಲನ ವಿಧಾನ, ಯಂತ್ರದಲ್ಲಿ ಹಾಯುವ ಮುನ್ನ ಬಟ್ಟೆಯ ಸ್ಥಿತಿ ಎಂದರೆ ತನುವು (ಡ್ಯಾಂಪಿಂಗ್), ಗಂಜಿ ಹಾಕುವುದು ಇತ್ಯಾದಿ. ಈ ಅಂಶಗಳ ಬದಲಾವಣೆಗಳಿಂದ ಬಟ್ಟೆಯ ಮೇಲೆ ವಿವಿಧ ಬಗೆಯ ಹೊಳಪು ಉಂಟಾಗುತ್ತದೆ. (ಬಿ.ಎಲ್.)

**ಕ್ಯಾಲೊಮೆಲ್ ಎಲೆಕ್ಟ್ರೋಡ್ :** ದತ್ತವಿಭವವಿದ್ದು ಒಂದು ನಿರ್ದೇಶೀ ಎಲೆಕ್ಟ್ರೋಡ್ ಆಗಿ ವ್ಯಾಪಕವಾಗಿ ಬಳಕೆಯಲ್ಲಿರುವ ಎಲೆಕ್ಟ್ರೋಡ್. ಪ್ರತಿಯೊಂದು ವಿದ್ಯುತ್ ಕೋಶದಲ್ಲಿ ಸಾಮಾನ್ಯವಾಗಿ ಎರಡು ಎಲೆಕ್ಟ್ರೋಡ್‌ಗಳಿರುತ್ತವೆ. ಅವುಗಳಲ್ಲಿ ಒಂದನ್ನು ಕ್ಯಾಥೋಡ್ ಮತ್ತೊಂದನ್ನು ಆನೋಡ್ ಆಗಿ ಉಪಯೋಗಿಸುತ್ತಾರೆ. ಇಂಥ ಕೋಶದ ವಿದ್ಯುದ್ವಾಹಕ ಶಕ್ತಿ (ಎಲೆಕ್ಟ್ರೊಮೋಟಿವ್ ಫೋರ್ಸ್) ಇವೆರಡು ಎಲೆಕ್ಟ್ರೋಡ್ ವಿಭವಗಳ ಬೈಜಿಕ ಮೊತ್ತಕ್ಕೆ ಸಮ. ವಿದ್ಯುತ್ಕೋಶದ ಪ್ರತಿಯೊಂದು ಎಲೆಕ್ಟ್ರೋಡಿನ ಏಕಎಲೆಕ್ಟ್ರೋಡ್ ವಿಭವವನ್ನು (ಸಿಂಗಲ್ ಎಲೆಕ್ಟ್ರೋಡ್ ಪೊಟೆನ್ಷಿಯಲ್) ಕಂಡುಹಿಡಿಯ ಬೇಕಾದರೆ ಆ ಎಲೆಕ್ಟ್ರೋಡನ್ನು ಒಂದು ಶಿಷ್ಟ ಎಲೆಕ್ಟ್ರೋಡಿನ ಜೊತೆಗೂಡಿಸಿ ವಿದ್ಯುತ್ಕೋಶವೊಂದನ್ನು ತಯಾರಿಸಬೇಕು. ಇದರ ವಿದ್ಯುದ್ವಾಹಕ ಶಕ್ತಿಯನ್ನು ಪೊಟೆನ್ಷಿಯೋ ಮೀಟರ್ ಉಪಯೋಗಿಸಿ ಅಳೆಯಬಹುದು. ಶಿಷ್ಟ ಎಲೆಕ್ಟ್ರೋಡಿನ ಏಕಎಲೆಕ್ಟ್ರೋಡ್ ವಿಭವವನ್ನು ಶೂನ್ಯವೆಂದಿಟ್ಟುಕೊಂಡರೆ ಅಳೆದ ವಿದ್ಯುದ್ವಾಹಕ ಶಕ್ತಿಯೇ ಎಲೆಕ್ಟ್ರೋಡ್ ವಿಭವಕ್ಕೆ ಸಮವಾಗಿರುತ್ತದೆ. ಸಾಮಾನ್ಯವಾಗಿ ಜಲಜನಕ ಎಲೆಕ್ಟ್ರೋಡನ್ನು ಶಿಷ್ಟ ಎಲೆಕ್ಟ್ರೋಡಾಗಿ ಉಪಯೋಗಿಸುತ್ತಾರೆ. ಆದರೆ ಇದರ ತಯಾರಿಕೆ ಸ್ವಲ್ಪ ಕಠಿಣವಾದ್ದರಿಂದ ಕ್ಯಾಲೊಮೆಲ್ ಎಲೆಕ್ಟ್ರೋಡನ್ನು ಚಿತ್ರ1ರಲ್ಲಿ ತೋರಿಸಿದೆ. ಇಲ್ಲಿ ಗಾಜಿನ ಪಾತ್ರೆ Aಗೆ ಪಾರ್ಶ್ವ ಬಾಹು Bಯನ್ನು ಸೇರಿಸಿದೆ. ಪಾತ್ರೆಯ ತಳದಲ್ಲಿ ಶುದ್ಧ ಪಾದರಸ, ಅದರ ಮೇಲೆ ಕ್ಯಾಲೊಮೆಲ್ ($Hg_2Cl_2$) ಮತ್ತು ಪಾದರಸದ ಮತ್ತು ಪಾದರಸದ ಗಂಜಿಯನ್ನಿಟ್ಟಿದೆ. ಉಳಿದ ಜಾಗದಲ್ಲಿ ಕ್ಯಾಲೊಮೆಲಿನಲ್ಲಿ ಸಂತೃಪ್ತಗೊಳಿಸಿರುವ ಪೊಟಾಸಿಯಂ ಕ್ಲೋರೈಡ್ ದ್ರಾವಣ ತುಂಬಿದೆ. ಆಮೇಲೆ ಒಂದು ಪ್ಲಾಟಿನಂ ಎಲೆಕ್ಟ್ರೋಡನ್ನು ಚಿತ್ರದಲ್ಲಿ ತೋರಿಸಿರುವಂತೆ ಪಾತ್ರೆಯಲ್ಲಿರುವ ಪಾದರಸದಲ್ಲಿ ಮುಳುಗಿಸಿಡಬೇಕು. ಪಾರ್ಶ್ವ ಬಾಹು Bಯನ್ನು ಯಾವಾಗಲೂ ಪೊಟಾಸಿಯಂ ಕ್ಲೋರೈಡ್ ದ್ರಾವಣವಿರುವ ಸೀಸೆಯೊಂದರಲ್ಲಿ ಮುಳುಗಿಸಬೇಕು. ಈ ರೀತಿ ತಯಾರಿಸಿದ ಕ್ಯಾಲೊಮೆಲ್ ಎಲೆಕ್ಟ್ರೋಡ್ ವಿಭವ ಪೊಟಾಸಿಯಂ ಕ್ಲೋರೈಡ್ ದ್ರಾವಣದ ಸಾರ ಹೆಚ್ಚಿದಂತೆಲ್ಲ ವಿಭವ ಕಡಿಮೆ ಆಗುತ್ತದೆ. ಇದನ್ನು ಮುಂದಿನ ಪಟ್ಟಿಯಲ್ಲಿ ತೋರಿಸಿದೆ.



ಚಿತ್ರ 1 ಕ್ಯಾಲೊಮೆಲ್ ಎಲೆಕ್ಟ್ರೋಡ್ 1. ಕ್ಯಾಲೊಮೆಲ್‌ನಲ್ಲಿ ಸಂತೃಪ್ತ ಮಾಡಿರುವ ಪೊಟಾಸಿಯಂ ಕ್ಲೋರೈಡ್ ದ್ರಾವಣ, 2. ಕ್ಯಾಲೊಮೆಲ್ ಮತ್ತು ಪಾದರಸದ ಗಂಜಿ, 3. ಶುದ್ಧ ಪಾದರಸ

| ಪೊಟಾಸಿಯಂ ಕ್ಲೋರೈಡ್ ದ್ರಾವಣದ ಸಾರ | ಕ್ಯಾಲೊಮೆಲ್ ಎಲೆಕ್ಟ್ರೋಡ್ ವಿಭವ (250 ಸೆಂ.ನಲ್ಲಿ) |
|---|---|
| 0.1 ಸಮಶುಲ್ಕ | 0.3338 ವೋಲ್ಟ್ |
| 1.0 " | 0.28. " |
| ಸಂತೃಪ್ತದ್ರಾವಣ | 0.2415 " |

ಕ್ಯಾಲೊಮೆಲ್ ಎಲೆಕ್ಟ್ರೋಡಿನ ವಿಭವ ಸ್ವಲ್ಪಮಟ್ಟಿಗೆ ಪ್ರಯೋಗಶಾಲೆಯ ಉಷ್ಣತೆಯ ಮೇಲೂ ಅವಲಂಬಿಸಿದೆ. ಉಷ್ಣತೆ ಹೆಚ್ಚಿದಂತೆಲ್ಲ ವಿಭವ ಕಡಿಮೆ ಆಗುತ್ತದೆ. ಪೊಟಾಸಿಯಂ ಕ್ಲೋರೈಡ್ ದ್ರಾವಣವುಳ್ಳ ಕ್ಯಾಲೊಮೆಲ್ ಎಲೆಕ್ಟ್ರೋಡಿಗೆ ಇದನ್ನು ಕೆಳಗಿನ ಸಮೀಕರಣದಿಂದ ತೋರಿಸಬಹುದು.

ವಿಭವ = 0.2415–7.6 × 10–4 (t–25), ಇಲ್ಲಿ t ಎನ್ನುವುದು ಪ್ರಯೋಗ ಶಾಲೆಯ ಉಷ್ಣತೆ (ಸೆಂ.ಗಳಲ್ಲಿ).

ಕ್ಯಾಲೊಮೆಲ್ ಎಲೆಕ್ಟ್ರೋಡಿನಲ್ಲಿ ಉಂಟಾಗುವ ವಿದ್ಯುದ್ರಾಸಾಯನಿಕ ಕ್ರಿಯೆಯನ್ನು ಈ ರೀತಿ ವಿವರಿಸಬಹುದು.

$$Hg_2Cl_2 + 2e^- \Leftrightarrow 2Hg + 2Cl^-$$

ಘನ ಎಲೆಕ್ಟ್ರೋಡ್ ದ್ರವ

ಇತರ ಎಲೆಕ್ಟ್ರೋಡ್‌ಗಳ ವಿಭವಗಳನ್ನು ಕಂಡುಹಿಡಿಯಬೇಕಾದರೆ ಅವನ್ನು ಕ್ಯಾಲೊಮೆಲ್ ಎಲೆಕ್ಟ್ರೋಡ್ ಜೊತೆಗೆ ಸೇರಿಸಿ ಒಂದು ವಿದ್ಯುತ್ಕೋಶವನ್ನು ರಚಿಸಬೇಕು. ಇದನ್ನು ಚಿತ್ರ 2ರಲ್ಲಿ ತೋರಿಸಿದೆ. ಎಲೆಕ್ಟ್ರೋಡ್ ಇಟ್ಟಿರುವ ದ್ರಾವಣಕ್ಕೂ ಸಂಪರ್ಕ ಒದಗಿಸಲು ಲವಣಸೇತುವೆಯನ್ನು ಉಪಯೋಗಿಸಬೇಕು. ಈ ವಿದ್ಯುತ್ಕೋಶದ ವಿದ್ಯುದ್ವಾಹಕ ಶಕ್ತಿಯನ್ನು ಕಂಡುಹಿಡಿದು ಅದರಲ್ಲಿ ಕ್ಯಾಲೊಮೆಲ್ ಎಲೆಕ್ಟ್ರೋಡಿನ ವಿಭವವನ್ನು ಕಳೆದರೆ ಉಳಿಯುವುದೇ ಎಲೆಕ್ಟ್ರೋಡಿನ ವಿಭವ. ಕ್ಯಾಲೊಮೆಲ್ ಎಲೆಕ್ಟ್ರೋಡನ್ನು ದ್ರಾವಣಗಳನ್ನ ಅಳೆಯುವುದಕ್ಕೂ ಮತ್ತು ಪೊಟೆನ್ಷಿಯೋಮೀಟರ್ ಅನುಮಾಪನಗಳಲ್ಲಿಯೂ



ಚಿತ್ರ 2 ಎಲೆಕ್ಟ್ರೋಡ್‌ಗಳ ವಿಭವವನ್ನು ಕಂಡುಹಿಡಿಯುವ ವಿಧಾನದ ಉಪಕರಣ
1. ಎಲೆಕ್ಟ್ರೋಡ್, 2 KCl ದ್ರಾವಣ 3 ಕ್ಯಾಲೊಮೆಲ್ ಎಲೆಕ್ಟ್ರೋಡ್

ಉಪಯೋಗಿಸುತ್ತಾರೆ. (ಡಿ.ಎಸ್.ಎಂ.)

**ಕ್ಯಾಲ್ಕುಲಸ್ :** ನೋಡಿ–ಕಲನವಿಜ್ಞಾನ

**ಕ್ಯಾಲ್ಗಾನ್ :** ಸೋಡಿಯಂ ಹೆಕ್ಸಮೆಟಫಾಸ್ಫೇಟಿನ $[(NaPO_3)_6]$ ವಾಣಿಜ್ಯ ನಾಮ. ಬಣ್ಣವಿಲ್ಲದ, ವಾಸನೆಯಿಲ್ಲದ, ಪಾರದರ್ಶಕವಾಗಿರುವ, ತಟ್ಟೆಯ ರೂಪದ, ಹರಳುಗಳ

ಅಥವಾ ಪುಡಿಯ ರೂಪದಲ್ಲಿ ಇರುವ ಸಂಯುಕ್ತ. ಇದರೊಂದಿಗೆ ಸ್ವಲ್ಪ ಟೆಟ್ರಸೋಡಿಯಂ ಪೈರೊಫಾಸ್ಫೇಟು ($NaP_2O_7$) ಸಹ ಇರುತ್ತದೆ. ನೀರಿನಲ್ಲಿ ಇದರ ಕರಗುವಿಕೆ ಬಲು ನಿಧಾನ. ಜೈವಿಕ ದ್ರಾವಣಗಳಲ್ಲಿ ಕರಗುವುದಿಲ್ಲ. ಅತಿ ಬೆವರಿಕೆಯನ್ನು ಮತ್ತು ಬೆವರಿನ ವಾಸನೆಯನ್ನು ತಡೆಯಲು ಮತ್ತು ಬೆರಳುಗಳ ಮಧ್ಯೆ ಅತಿ ಬೆವರು ಬಂದು ಒತ್ತಿಕೊಂದು ಹುಣ್ಣು ಆಗದಂತೆ ಮಾಡಲು ಇದರ ಶೇ. 5 ಪುಡಿಯನ್ನು ರಕ್ಷಕ ದೂಳಾಗಿ ಬಳಸುತ್ತಾರೆ. ಬಾಯ್ಲರಿಗೆ ಹಾಕುವ ನೀರನ್ನು ಶುದ್ಧ ಮಾಡಲು, ನೀರಿನ ಗಡಸುತನವನ್ನು ಕಡಿಮೆ ಮಾಡಲು ಇದರ ವಿವಿಧ ಸಾರಗಳ ದ್ರಾವಣಗಳನ್ನು ಉಪಯೋಗಿಸುತ್ತಾರೆ. ಕ್ಯಾಲ್ಗಾನಿಗೆ ವೈದ್ಯಕೀಯ ಉಪಯೋಗವೂ ಉಂಟು. ಶಸ್ತ್ರಚಿಕಿತ್ಸೆಯ ಉಪಕರಣಗಳನ್ನು ವಿಷಕ್ರಿಮಿಗಳಿಲ್ಲದಂತೆ ಮಾಡುವಾಗ ಕುದಿಯುವ ನೀರಿಗೆ ಇದನ್ನು ಹಾಕುವುದರಿಂದ ಉಪಕರಣಗಳ ಮೇಲೆ ತುಕ್ಕು ಹಿಡಿಯುವುದೂ ಬೂದಿ ಕೂಡುವುದೂ ಕಡಿಮೆಯಾಗುತ್ತದೆ.

(ಎ.ಎಸ್.ಆರ್.)

**ಕ್ಯಾಲ್ಗುರ್ಲಿ :** ಪಶ್ಚಿಮ ಆಸ್ಟ್ರೇಲಿಯದ ಒಂದು ಪಟ್ಟಣ. ಕ್ಯಾಲ್ಗುರ್ಲಿ ಜಿಲ್ಲೆಯ ಮಧ್ಯದಲ್ಲಿದೆ. ಪರ್ತ್‍ಗೆ 604 ಕಿ.ಮೀ ಮತ್ತು ಕೂಲ್ಗಾರ್ಡಿಗೆ 38 ಕಿಮೀ ದೂರದಲ್ಲಿದೆ. ನಗರ ಪ್ರದೇಶದ ಜನಸಂಖ್ಯೆ 25,000 (2000).

ಈ ಪ್ರದೇಶದಲ್ಲಿ 1887–88ರಲ್ಲಿ ಚಿನ್ನ ಪತ್ತೆಯಾಯಿತು. 1892–94ರಲ್ಲಿ ಚಿನ್ನದ ಆಸೆಯಿಂದ ಜನ ಇಲ್ಲಿಗೆ ಧಾವಿಸಿದರು. 1900ರ ವೇಳೆಗೆ ಇಲ್ಲಿಯ ಜನಸಂಖ್ಯೆ 30,000ಕ್ಕೆ ಏರಿತು. ಅಲ್ಲಿಂದೀಚೆಗೆ ಇದರ ಜನಸಂಖ್ಯೆ ಗಣಿ ಉದ್ಯಮದ ಏರಿಳಿತಗಳಿಗೆ ಅನುಗುಣವಾಗಿ ವ್ಯತ್ಯಾಸಗೊಂಡಿದೆ. ಸರಾಸರಿಯಲ್ಲಿ ಇಲ್ಲಿಯ ಜನಸಂಖ್ಯೆ ಸು.30,000ರಲ್ಲಿ ಇಲ್ಲಿಯದು ಒಣವಾಯುಗುಣ. ವಾರ್ಷಿಕ ಸರಾಸರಿ ಮಳೆ 20ಸೆಂಮೀ ಗೂ ಕಡಿಮೆ. ನೀರಿನ ಅಭಾವದ್ದು ಒಂದು ದೊಡ್ಡ ತೊಂದರೆ. ಪರ್ತ್‍ಗೆ 24 ಕಿಮೀ ಪೂರ್ವದಲ್ಲಿ ಹೆಲೆನ ನದಿಯ ಮೇಲಿರುವ ಮುಂಡರಿಂಗ್ ಅಣೆಕಟ್ಟೆಯಿಂದ ಇಲ್ಲಿಗೆ ನೀರು ಸರಬರಾಯಿ ಮಾಡಲಾಗುತ್ತದೆ. ಕ್ಯಾಲ್ಗುರ್ಲಿಯಲ್ಲಿ ಗಣ ಉದ್ಯಮದ ಆರಂಭಕಾಲದಲ್ಲಿ ಚಿನ್ನದ ಉತ್ಪಾದನೆಯ ಗಾತ್ರ ತೀವ್ರವಾಗಿ ಮೇಲೇರಿತು. 1903 ರಿಂದ ಅದು ಇಳಿಮುಖವಾಯಿತು. 1920–29ರಲ್ಲಿ ತುಂಬ ಕ್ಷೀಣಿಸಿತ್ತು. ಅಲ್ಲಿಂದೀಚೆಗೆ ಚಿನ್ನದ ಬೆಲೆ ಏರಿರುವುದರಿಂದಲೂ ಆಧುನಿಕ ಗಣಿಗಾರಿಕೆ ವಿಧಾನಗಳ ಅನುಷ್ಠಾನದಿಂದಲೂ ಉದ್ಯಮ ಸ್ಥಾಯಿಕೃತವಾಗಿದೆ. ಇಲ್ಲೊಂದು ಜಿಲ್ಲಾ ಆಸ್ಪತ್ರೆಯೂ ಗಣಿ ಶಾಲೆಯೂ ಇವೆ. (ಎಂ.ಎಸ್.)

**ಕ್ಯಾಲ್ಡೀಯ ಸಾಮ್ರಾಜ್ಯ :** ಇರಾಕಿನ ದಕ್ಷಿಣದಲ್ಲಿ ಪರ್ಷಿಯನ್ ಖಾರಿಯ ತೀರದಲ್ಲಿ ಪ್ರ.ಶ.ಪೂ. 1ನೆಯ ಸಹಸ್ರಮಾನದ ಪೂರ್ವಾರ್ಧದಲ್ಲಿ ಪ್ರಬಲರಾಗಿದ್ದ ಸೆಮಿಟಿಕ್ ಜನರ ರಾಜ್ಯ. ಬೈಬಲ್ ಗ್ರಂಥದ ಹಳೆ ಒಡಂಬಡಿಕೆಯಲ್ಲಿ ಕ್ಯಾಲ್ಡೀಯ ಮತ್ತು ಕ್ಯಾಲ್ಡೀಯನರನ್ನು ಕ್ರಮವಾಗಿ ಬ್ಯಾಬಿಲೋನಿಯ ಮತ್ತು ಬೆಬಿಲೋನಿಯನರೆಂದು ಸಂಬೋಧಿಸಲಾಗಿದೆ. ಕ್ಯಾಲ್ಡೀಯನರ ಮೂಲನಿವಾಸದ ಗಡಿ ರೇಖೆಗಳನ್ನು ಸ್ಪಷ್ಟವಾಗಿ ಗುರುತಿಸುವುದು ಇನ್ನೂ ಸಾಧ್ಯವಾಗಿಲ್ಲ. ಆದರೆ ಯುಫ್ರೇಟೀಸ್ ಮತ್ತು ಟೈಗ್ರಿಸ್ ನದೀಮುಖಗಳ ಅಂದಿನ ವಿಸ್ತಾರವಾದ ಮೆಕ್ಕಲು ಪ್ರದೇಶದಲ್ಲಿ ಕ್ಯಾಲ್ಡೀಯನರು ವಾಸವಾಗಿದ್ದರೆಂದು ಹೇಳಬಹುದು. ಇವರು ಬಹುಶಃ ಸೆಮಿಟಿಕ್ ವರ್ಗದವರ ಮೂಲ ಸ್ಥಳವಾದ ಅರೇಬಿಯದಿಂದ ಬಂದವರೆಂದೂ, ಆರ್ ಪ್ರದೇಶದ ಸುತ್ತಮುತ್ತ ನೆಲಸಿದರೆಂದೂ ಅಭಿಪ್ರಾಯಪಡಲಾಗಿದೆ. ಬಿಟ್ ಯಕಿನ್ ಇವರ ಪುರಾತನ ರಾಜಧಾನಿ. ಮೊತ್ತಮೊದಲಿಗೆ ಪ್ರ.ಶ.ಪೂ. 884–859ರಲ್ಲಿ ಅಸ್ಸಿರಿಯದ ದೊರೆ ಅಷುರ್ ಬನಿಪಾಲನ ಕಾಲದ ದಾಖಲೆಗಳಲ್ಲಿ ಕ್ಯಾಲ್ಡೀಯನರ ವಿಷಯ ಕಂಡುಬರುತ್ತದೆ. ಪ್ರ.ಶ.ಪೂ.850ರಲ್ಲಿ 3ನೆಯ ಷಾಲ್ಮನೆಸೆರ್ ಈ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದ. ಪುನಃ ಇದು ಸ್ವತಂತ್ರವಾಯಿತು. ಅನಂತರ ಬಂದ 5ನೆಯ ಷಂಷಿ–ಅಂಡಾಡ್, 3ನೆಯ ಅಡಾಡ್–ನಿರಾರಿ (ಪ್ರ.ಶ.ಪೂ.ಸು.810), 3ನೆಯ ತಿಗ್ಲಾತ್–ಪಿಲೆಸೆರ್ (ಪ್ರ.ಶ.ಪೂ.745–727) ಇವರು ಪುನಃಪುನಃ ಇವರನ್ನು ಗೆದ್ದರೂ ಪ್ರಯೋಜನವಾಗಲಿಲ್ಲ. 2ನೆಯ ಸಾರಗಸನ ಕಾಲದಲ್ಲಿ ಮಿರೊಡಾಕ್–ಬಲಾಡನ್ ಎಂಬ ಕ್ಯಾಲ್ಡೀಯನ್ ವೀರ ಅಲ್ಲಿಯ ನಾಯಕನಾಗಿ 10 ವರ್ಷಗಳ ಕಾಲ (ಪ್ರ.ಶ.ಪೂ.721–710) ಸ್ವತಂತ್ರವಾಗಿ ಆಳಿದ. ಅವನು ಅಸ್ಸಿರಿಯದ ರಾಜರಾಗಿದ್ದ ಸಾರ್ಗನ್ ಮತ್ತು ಸೆನ್ನಾಚೆರಿಬ್‍ರ ವಿರುದ್ಧ ಹೋರಾಡುತ್ತಿದ್ದುದಲ್ಲದೆ ಜುಡಾ ರಾಜ್ಯವನ್ನು ಅವರ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸಿದ. ಪ್ರ.ಶ.ಪೂ. 710ರಲ್ಲಿ ಆತ ಸೋತರೂ ಹೋರಾಟವನ್ನು ಬಿಡದೆ ಮುಂದುವರಿಸಿ, ಪ್ರ.ಶ.ಪೂ. 703–02 ರಲ್ಲಿ ಮತ್ತೆ ಸ್ವಾತಂತ್ರ್ಯ ಗಳಿಸಿದ. ಆದರೆ ಕಡೆಗೂ ಆತ ಸೋತು ಓಡಿಹೋಗಬೇಕಾಯಿತು.

ಅಸ್ಸಿರಿಯ ಸಾಮ್ರಾಜ್ಯದ ಅವನತಿಯ ಅನಂತರ ಸ್ಥಳೀಯ ಪ್ರಾಂತ್ಯಾಧಿಕಾರ ನಬೊಪೊಲಸ್ಸಾರನಿಂದ ಕ್ಯಾಲ್ಡೀಯನರ ಪ್ರಭಾವ ಹೆಚ್ಚಿತು. ಆತ ಪ್ರ.ಶ.ಪೂ. 626ರಲ್ಲಿ ಬ್ಯಾಬಿಲೋನಿಯದ ದೊರೆಯಾದ. ಅವನ ವಂಶಜರು ಪ್ರ.ಶ.ಪೂ.539ರಲ್ಲಿ ಪರ್ಷಿಯನ್ ಆಕ್ರಮಣವಾಗುವ ತನಕ ಆಳಿದರು. ಅವರಲ್ಲಿ ಪ್ರಮುಖನೆಂದರೆ ನೆಬು ಚಡ್ರೆಸ್ಸಾರ್ (ಪ್ರ.ಶ.ಪೂ.605–562). ಅವನು ಈಜಿಪ್ಟಿನಿಂದ ಪರ್ಷಿಯದ ಪಶ್ಚಿಮ ಭಾಗದವರೆಗೂ ಸಾಮ್ರಾಜ್ಯವನ್ನು ವಿಸ್ತರಿಸಿದ. ಅವನ ಅನಂತರ ಬಂದ ನಬೊನಿಡಸ್ ಶಕ್ತನಾಗಿರಲಿಲ್ಲ (ಪ್ರ.ಶ.ಪೂ. 556–539). ಪ್ರ.ಶ.ಪೂ.539ರಲ್ಲಿ ಪರ್ಷಿಯದ ಸಾಮ್ರಾಟ ಸೈರಸ್ ಮಹಾಶಯ ಬ್ಯಾಬಿಲೋನಿಯವನ್ನೂ (ಕ್ಯಾಲ್ಡೀಯ ಸಾಮ್ರಾಜ್ಯವೂ ಸೇರಿ) ಗೆದ್ದು ಕ್ಯಾಲ್ಡೀಯನರ ಸ್ವಾತಂತ್ರ್ಯವನ್ನು ಕೊನೆಗಾಣಿಸಿದ.

ಕಣ್ಮರೆಯಾಗುತ್ತಿದ್ದ ಬ್ಯಾಬಿಲೋನಿಯದ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ ಕ್ಯಾಲ್ಡೀಯನ್ ಅರಸರು ಪ್ರಪಂಚದ ಏಳು ಅದ್ಭುತಗಳಲ್ಲಿ ಸೇರಿದ ತೂಗುವ ಉದ್ಯಾನಗಳು (ಹ್ಯಾಂಗಿಂಗ್ ಗಾರ್ಡನ್ಸ್) ಮತ್ತು ಬೇಬಲ್ ಗೋಪುರಗಳ ನಿರ್ಮಾತರು. ನೆಬ್ರು ಚೆಡ್ರೆಸ್ಸಾರನ ಅರಮನೆ ಆ ಕಾಲದ ವಾಸ್ತು ಕೃತಿಗಳಲ್ಲಿ ಅಪೂರ್ವ. ಅಲ್ಲಿಯ ಹೊಳಪುಹೆಂಚುಗಳ ಅಲಂಕರಣ ಅಮೋಘ, ನಾಗರಿಕತೆಯ ಇತಿಹಾಸದಲ್ಲಿ ಅವರ ಸ್ಥಾನ ಶಾಶ್ವತವಾದ್ದು.

(ಬಿ.ಎಸ್.ಪಿ.)

**ಕ್ಯಾಲ್ಯಾಂಕೋಯಿ :** ಕ್ರ್ಯಾಸ್ಯುಲೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯಜಾತಿ; ಸು. 125 ಪ್ರಭೇದಗಳನ್ನೊಳಗೊಂಡಿದೆ. ಇವು ಸದಾ ಹಸಿರಾಗಿರುವುದರಿಂದಲೂ ಇವುಗಳ ಎಲೆಗಳು ರಸಭರಿತವಾಗಿದ್ದು ಆಕಾರವೈವಿಧ್ಯವನ್ನು ಪ್ರದರ್ಶಿಸುವುದರಿಂದಲೂ ಈ ಜಾತಿಯ ಸಸ್ಯಗಳನ್ನು ಉದ್ಯಾನಗಳ ಸೊಗಸಿಗಾಗಿ ಕುಂಡಸಸ್ಯಗಳನ್ನಾಗಿಯೊ ಇಲ್ಲವೆ ಕಲ್ಲೇರಿಸಸ್ಯಗಳನ್ನಾಗಿಯೊ ಬೆಳೆಸುತ್ತಾರೆ. ಬಹುಪಾಲು ಪ್ರಭೇದಗಳು ಮೂಲತಃ ಆಫ್ರಿಕಖಂಡ ಮತ್ತು ಮಡಗಾಸ್ಕರ್ ದ್ವೀಪದ ನಿವಾಸಿಗಳು. ಇದು ದೃಢಕಾಯದ ಸಸ್ಯ; ಸುಮಾರು 2'–4' ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ಅಭಿಮುಖವಾಗಿ ಜೋಡಣೆಗೊಂಡಿವೆ: ರಸಭರಿತವಾಗಿವೆ. ಅವುಗಳ ಅಂಚು ನಯವಾಗಿರಬಹುದು. ಗರಗಸದಂತಿರಬಹುದು. ಇಲ್ಲವೆ ಹಲವಾರು ಸೀಳುಗಳಾಗಿರಬಹುದು. ಹೂಗೊಂಚಲು ಮಧ್ಯಾರಂಬಿ ಮಾದರಿಯದು; ಬಹುವಾಗಿ ಕವಲೊಡೆಯುವ ಇದು ಕಾಂಡದ ತುದಿಯಲ್ಲಿ ಹುಟ್ಟುತ್ತದೆ. ಹೂಗಳು ಚಿಕ್ಕವು; ಬಣ್ಣ ಹಳದಿ, ಉದಾ, ಕಡುಗೆಂಪು ಮುಂತಾಗಿ ವೈವಿಧ್ಯಮಯ. ಪ್ರತಿಹೂವಿನಲ್ಲಿ 4 ಪುಷ್ಪ ಪತ್ರಗಳು, 4 ದಳಗಳು, 8 ಕೇಸರಗಳು ಮತ್ತು 4 ಕಾರ್ಪೆಲುಗಳಿಂದ ಕೂಡಿದ ಅಂಡಾಶಯ ಉಂಟು. ಫಲ ಬಹುಬೀಜಗಳುಳ್ಳ ಫಾಲಿಕಲ್ ಮಾದರಿಯದು.

ಕ್ಯಾಲ್ಯಾಂಕೋಯಿ ಜಾತಿಯ ವಿವಿಧ ಪ್ರಭೇಧಗಳಲ್ಲಿ ಮುಖ್ಯವಾದವನ್ನು ಕೆಳಗೆ ವಿವರಿಸಲಾಗಿದೆ. 1. ಕ್ಯಾ.ಡೈಗ್ರಿಮೊಂಟಿಯಾನ: ಕ್ಯಾಲ್ಯಾಂಕೋಯಿ ಪ್ರಭೇದಗಳಲ್ಲೆಲ್ಲ ಹೆಚ್ಚು ಸುಲಭವಾಗಿಯೂ ದೃಢಕಾಯವಾಗಿಯೂ ಬೆಳೆಯುವಂಥದು. ಸುಮಾರು 3' ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳ ಆಕಾರ ತ್ರಿಕೋನದಂತೆ; ಬಣ್ಣ ನೀಲಿ ಮಿಶ್ರಿತ ಹಸಿರು. ಮೇಲೆ ಕಡುಗೆಂಪು ಬಣ್ಣದ ಮಚ್ಚೆಗಳಿವೆ. ಹೂಗೊಂಚಲು ಬೂದಿ ಮಿಶ್ರಿತ ನೀಲಿ ಬಣ್ಣದ್ದು.

2. ಕ್ಯಾಲ್ಯಾಂಕೋಯಿ ಲ್ಯಾಕ್ಸಿಫ್ಲೋರ: ಇದನ್ನು ಬ್ರಯೊಫಿಲಮ್ ಕ್ರಿನೆಟಮ್ ಎಂದು ಕರೆಯುವುದೂ ಉಂಟು. ಕಾಂಡ ಕವಲುಗಳಿಲ್ಲದೆ ಸುಮರು 2' ಎತ್ತರ ಎಂದು ಕರೆಯುವುದೂ ಉಂಟು. ಕಾಂಡ ಕವಲುಗಳಿಲ್ಲದೆ ಸುಮಾರು 2' ಎತ್ತರ ಬೆಳೆದು ಬುಡದಲ್ಲಿ ತೊಡಕು ಬೇರುಗಳನ್ನು ಬಿಡುತ್ತದೆ. ಉದ್ದವಾದ ತೊಟ್ಟಿರುವ ದೀರ್ಘ ವೃತ್ತಾಕಾರದ ನೀಲಿಮಿಶ್ರಿತ ಹಸಿರು ಎಲೆಗಳಿವೆ. ತೊಟ್ಟಿನ ಬಳಿ ನಿರ್ದಿಷ್ಟವಾಗಿ ಭಾಗವಾಗಿದೆ. ಹೂಗೊಂಚಲಿನ ಬಣ್ಣ ಕಿತ್ತಳೆಮಿಶ್ರಿತ ನಸುಗೆಂಪು.

3. ಕ್ಯಾಲ್ಯಾಂಕೋಯಿ ಪಿನ್ನೇಟ: ಇದಕ್ಕೆ ಬ್ರಯೊಫಿಲಮ್ ಕ್ಯಾಲಿಸಿನಮ್ ಎಂಬ ಹೆಸರೂ ಬಳಕೆಯಲ್ಲಿದೆ. ಇದು ದೃಢಕಾಯವಾಗಿ ಸುಮಾರು 3' ಎತ್ತರಕ್ಕೆ ಬೆಳೆಯುತ್ತದೆ. ಇದರ ಎಳೆಯ ಎಲೆ ಸರಳವಾಗಿದ್ದು ದೀರ್ಘವೃತ್ತಾಕಾರವಾಗಿರುತ್ತದೆ; ಬಲಿತ ಅನಂತರ ಅದರ ಅಂಚುಗಳು ಆಳವಾಗಿ ಸೀಳುವುದರಿಮದ ಸಣ್ಣ ಗರಿರೂಪದ ಸಂಯುಕ್ತಪತ್ರವಾಗುತ್ತದೆ. ಉಪಪತ್ರಗಳ ಬಣ್ಣ ನೀಲಿ ಮಿಶ್ರಿತ ಹಸಿರು, ಇಲ್ಲವೆ ಕೆಂಪು. ಉದ್ದವಾದ, ಗಂಟೆಯಾಕಾರದ ಹೂಗಳಿರುವ ಹೂಗೊಂಚಲು ಸಸ್ಯದ ತುದಿಯಿಂದ ಹೊರಬರುತ್ತದೆ. ಈ ಸಸ್ಯ ಇತರ ಪ್ರಭೇದಗಳಿಗಿಂತ ಹೆಚ್ಚಾಗಿ ವಿಶ್ವದ ಎಲ್ಲ ಭಾಗಗಳಲ್ಲೂ ಬೇಸಾಯದಲ್ಲಿದೆ.

4. ಕ್ಯಾಲ್ಯಾಂಕೋಯಿ ಸೆರೇಟ : ಇದು ಹೆಚ್ಚು ಕವಲೊಡೆದು ನಿಬಿಡವಾದ ಎಲೆಗಳಿಂದ ಕೂಡಿದ್ದು ಹರಡಿಕೊಂಡು ಬೆಳೆಯುತ್ತದೆ. ಚಿಕ್ಕ ತೊಟ್ಟಿರುವ ಕಿರಿದಾದ ಇದರ ಎಲೆ, ಗರಗಸದ ಅಂಚಿನಿಂದ ಕೂಡಿದೆ. ಹೂಗಳ ಬಣ್ಣ ಕಿತ್ತಳೆ.

5. ಕ್ಯಾಲ್ಯಾಂಕೋಯಿ ಟ್ಯೂಬಿಫ್ಲೋರ : ಸುಮಾರು 5' ಎತ್ತರ ಬೆಳೆಯುವ ಪ್ರಭೇದ ಇದು. ಕವಲೊಡೆಯದೆ ನೇರವಾಗಿ ಬೆಳೆಯುತ್ತದೆ. ಎಲೆಗಳು ಕೊಳವೆಯಾಕಾರದಲ್ಲಿದ್ದು, ಮೇಲುಭಗದಲ್ಲಿ ಕಾಲುವೆಯಿಂದ ಕೂಡಿರುತ್ತವೆ. ಇದು ಕೆಂಪು ಅಥವಾ ಉದಾ ಬಣ್ಣದ ಗಂಟೆಯಾಕಾರದ ಹೂಗಳನ್ನು ಬಿಡುತ್ತದೆ.

6. ಕ್ಯಾಲ್ಯಾಂಕೋಯಿ ಬೆಹರೆನ್‍ಸಿನ್ : ಈ ಪ್ರಭೇದದ ಸಸ್ಯದ ಎಳೆಯ ಕಾಂಡ ಮತ್ತು ಎಲೆಗಳ ಮೇಲೆ ನಿಬಿಡವಾದ ನವುರಾದ ರೋಮಗಳಿವೆ. ಸಸ್ಯದ ತುದಿಯಿಂದ ಹೊಸ ಎಲೆಗಳು ಹೊರಬಂದಂತೆಲ್ಲ ತಳಭಾಗದಲ್ಲಿರುವ ಹಳೆಯ ಎಲೆಗಳು ಉದುರಿ ಹೋಗಿ ಅವುಗಳ ಕಲೆಗಳು ಮಾತ್ರ ಉಳಿಯುತ್ತವೆ. ಹೂಗೊಂಚಲು ಉಳಿದ ಪ್ರಭೇದಗಳಿಗೆ ಹೋಲಿಸಿದರೆ ಅಷ್ಟು ಸುಮಧುರವಾಗಿಲ್ಲ.

7. ಕ್ಯಾಲ್ಯಾಂಕೋಯಿ ಮಾರ್ಮೊರೇಟ : ಇದು ಅತ್ಯಂತ ಸುಂದರವಾದ ಪ್ರಭೇದಗಳಲ್ಲಿ ಒಂದು. ತೊಟ್ಟಿಲ್ಲದ ವಿರುದ್ಧ ಕರನೆಯಾಕಾರದ ಇದರ ಎಲೆ ಅಂಚು ಹಲ್ಲುಗಳಾಗಿ

ಒಡೆದಿದೆ; ಮೇಲ್ಭಾಗದಲ್ಲಿ ನೀಲಿ ಮಿಶ್ರಿತ ಬೂದಿ ಬಣ್ಣದ ಚುಕ್ಕೆಗಳಿರುವುದರಿಂದ ನೋಡಲು ಬಹಳ ಸುಂದರವಾಗಿ ಕಾಣುತ್ತದೆ. ಇದು ಹೂಬಿಡುವುದು ಬಹುವಿರಳ.

8. ಕ್ಯಾಲ್ಯಾಂಕೋಯಿ ಟೊಮೆಂಟೋಸ : ಇದು ಬಹು ಸುಂದರವಾದುದು ಎಂದು ಪ್ರಸಿದ್ಧಿಯಾಗಿದೆ. ಇದರ ಕಾಂಡ ದಪ್ಪ, ಬುಡದಲ್ಲಿ ಕವಲೊಡೆದು ಸುಮಾರು 2' ಎತ್ತರ ಬೆಳೆಯುತ್ತದೆ. ಇದರ ಮೇಲೆ ನಿಬಿಡವಾದ ರೋಮಗಳಿವೆ. ಇದರ ಎಲೆಯ ಆಕಾರ ದೀರ್ಘ ವೃತ್ತದಂತೆ. ಇದು ದಪ್ಪ ಮತ್ತು ಮೆದುವಾಗಿರುತ್ತದೆ. ಅಂಚು ಹಲ್ಲು ಹಲ್ಲಾಗಿ ಒಡೆದು ತುದಿ ಗುಂಡಾಗಿರುತ್ತದೆ. ಇಡೀ ಸಸ್ಯವನ್ನು ಬಿಳುಪು ಮಿಶ್ರಿತ ಬೂದಿ ಬಣ್ಣದ ರೋಮಗಳು ನಿಬಿಡವಾಗಿ ಆವರಿಸಿರುತ್ತವೆ. ಎಲೆಗಳ ತುದಿಯ ಭಾಗದ ಅಂಚಿನಲ್ಲಿ ಕಂದು ಬಣ್ಣದ ಚುಕ್ಕೆಗಳಿರುವುದರಿಂದ ಈ ಸಸ್ಯ ಬಹಳ ರಮ್ಯವಾಗಿ ಕಾಣುತ್ತದೆ.

(ಎಂ.ಎಸ್.ಎಂ.)

**ಕ್ಯಾಲ್‌ವರ್ಲಿ, ಚಾರ್ಲ್ಸ್ ಸ್ಟೂ ಅರ್ಟ್ :** 1831–84. ಆಂಗ್ಲಕವಿ ಮತ್ತು ವಿಡಂಬನಾಕಾರ. ಹುಟ್ಟಿದ್ದು ವೂಸ್ಟರ್‌ಷೈರ್‌ನ ಮಾರ್ಟ್ಲಿ. ಪಾದ್ರಿಯ ಮಗನಾದ ಈತನ ಹುಟ್ಟುಹೆಸರು ಬ್ಲಾಯ್ಡ್ಸ್. ಹೆಸರು ಬದಲಾಯಿಸಿಕೊಂಡದ್ದು 1852ರಲ್ಲಿ. ವ್ಯಂಗ್ಯೋಕ್ತಿಗಳನ್ನು ಬಳಸುವುದರಲ್ಲಿಯೂ ಆಶುಕವಿತೆಗಳನ್ನು ಕಟ್ಟಿ ಮತ್ತೊಬ್ಬರನ್ನು ಗೇಲಿ ಮಾಡುವುದರಲ್ಲಿಯೂ ಈತ ಹೆಸರಾದವ. ಈತನ ವಿದ್ಯಾಭ್ಯಾಸ ಮಾರಲ್‌ಬರ, ಹಾರೊ, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್‌ಗಳಲ್ಲಿ ನಡೆಯಿತು. ಕೆಲವೊಂದು ಹುಚ್ಚು ಸಾಹಸ, ಸ್ವೇಚ್ಛಾವರ್ತನೆಗಳಿಂದಾಗಿ ಆಕ್ಸ್‌ಫರ್ಡಿನಿಂದ ಈತನ ಉಚ್ಚಾಟನೆಯಾಯಿತು. ಅಲ್ಲಿಂದ ಕೇಂಬ್ರಿಜ್‌ನ ಕ್ರೈಸ್ಟ್ ಕಾಲೇಜು ಸೇರಿ ಸ್ಥಿರಮನಸ್ಕವಾಗಿ ವ್ಯಾಸಂಗಮಾಡಿ ಅಲ್ಲಿನ ಫೆಲೋ ಆದ. ಅನಂತರ ಲಾ ಪರೀಕ್ಷೆ ಮಾಡಿಕೊಂದು 1865ರಲ್ಲಿ ಬಾರ್‌ಗೆ ಸೇರಿದ. ಆದರೆ ಅದರ ಮರುವರ್ಷವೇ ಸ್ಕೇಟಿಂಗ್ ಅಪಘಾತದಲ್ಲಿ ಸಿಲುಕಿ ತಲೆಗೆ ಏಟು ತಿಂದು, ಸಾಯುವವರೆಗೂ ಅರೆಹುಚ್ಚನಾಗಿ ಬಾಳಿದ. ಥಯೋಕ್ರಿಟಿಸನ ಜನಪದಗೀತೆಗಳನ್ನು ಪದ್ಯಶೈಲಿಯಲ್ಲೇ ಅನುವಾದ ಮಾಡಿದುದಲ್ಲದೆ 1862ರಲ್ಲಿ ವರ್ಸಸ್ ಅಂಡ್ ಟ್ರಾನ್ಸ್‌ಲೇಷನ್ಸ್ ಎಂಬ ಕೃತಿಯನ್ನೂ 1866 ಫ್ಲೈ ಲೀವ್ಸ್ ಎಂಬ ಕವನ ಸಂಕಲನವನ್ನೂ ಪ್ರಕಟಿಸಿದ. ಈ ಎರಡನೆಯ ಸಂಕಲನದ ಅಣಕವಾಡುಗಳು ಇಂಗ್ಲಿಷ್ ಸಾಹಿತ್ಯದಲ್ಲೇ ಪ್ರಸಿದ್ಧಿ ಪಡೆದವಾಗಿದೆ. (ಎನ್.ಎಸ್.ಎಲ್.)

**ಕ್ಯಾಲ್ವಿನ್, ಕೂಲಿಜ್ :** 1872–1933. ಅಮೆರಿಕ ಸಂಯುಕ್ತ ಸಂಸ್ಥಾನದ 30ನೆಯ ಅಧ್ಯಕ್ಷ. ಈತ 1899ರಲ್ಲಿ ವಕೀಲಿ ವೃತ್ತಿಯಲ್ಲಿದ್ದಾಗಿನಿಂದಲೇ ಸ್ಥಳೀಯ ರಾಜಕೀಯದಲ್ಲಿ ಆಸಕ್ತಿ ವಹಿಸಿ ವಿವಿಧ ಸ್ಥಾನಗಳಿಗೆ ಆಯ್ಕೆಯಾಗಿದ್ದ. 1918–1919ರಲ್ಲಿ ಮ್ಯಾಸಚೂಸೆಟ್ಸ್ ರಾಜ್ಯದ ಗವರ್ನರ್ ಆಗಿ ಇವನ ಚುನಾವಣೆಯಾಯಿತು. ಆ ಸಂದರ್ಭದಲ್ಲಿ ಈತ ತೋರಿಸಿದ ದಕ್ಷತೆ ಸಾಮರ್ಥ್ಯಗಳಿಂದ ಪ್ರಸಿದ್ಧನಾದ. ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಅಮೆರಿಕದ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದ. 1923ರ ಆಗಸ್ಟ್ 3 ರಂದು ಅಧ್ಯಕ್ಷ ಹಾರ್ಡಿಂಗ್ ನಿಧನನಾದಾಗ ಕ್ಯಾಲ್ವಿನನಿಗೆ ಅಧ್ಯಕ್ಷಪದವಿ ಪ್ರಾಪ್ತವಾಯಿತು. 1924ರಲ್ಲಿ ಚುನಾಯಿತ ಅಧ್ಯಕ್ಷನಾಗಿ 1928ರ ವರೆಗೆ ಮುಂದುವರಿದ. ಈತನ ಆಡಳಿತದ ಕಾಲದಲ್ಲಿ ಉಳಿತಾಯ ಸಾಧಿಸಲಾಯಿತು. ಖಾಸಗಿ ಉದ್ಯಮಕ್ಕೆ ಪ್ರೋತ್ಸಾಹ ದೊರಕಿ ಕೈಗಾರಿಕೆ ಪ್ರಗತಿ ಹೊಂದಿತು. ವಿದೇಶಾಂಗ ನೀತಿಯಲ್ಲಿ ತಾಟಸ್ಥ್ಯ ವಹಿಸುವುದು ಇವನ ಪ್ರಧಾನ ಧೋರಣೆಯಾಗಿತ್ತು. ಆರ್ಥಿಕಾಭಿವೃದ್ಧಿಯೂ ತಕ್ಕಮಟ್ಟಿಗೆ ಸಾಧಿಸಿತು. (ಜಿ.ಆರ್.ಕೆ.)

**ಕ್ಯಾಲ್ವಿನ್, ಜಾನ್ :** 1509–64. ಜಿನೀವದ ಪ್ರಸಿದ್ಧ ಕ್ರೈಸ್ತಧರ್ಮ ಸುಧಾರಕ. ಈತ 1509ನೆಯ ಜುಲೈ 10ರಂದು ನೋಯಾನ್‌ನಲ್ಲಿ ಜನಿಸಿದ. ಇವನ ತಂದೆ ಗೆರಾರ್ಡ್ ಕಾವಿನ್ ಸೊಯಾನ್ ಚರ್ಚಿನ ವಕೀಲ. ತಾಯಿ ಜೀನ್ ಲಾ ಫ್ರಾಂಕ್ ಶ್ರೀಮಂತನ ಮಗಳು. ತನ್ನ ಬಾಲ್ಯದ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲೇ ಕಳೆದು ಕ್ಯಾಲ್ವಿನ್ ಪ್ಯಾರಿಸ್ಸಿಗೆ ಹೋಗಿ ಅಲ್ಲಿಯ ಕಾಲೇಜ್ ಮಾಂಟೆಗ್ಯೂ ಎಂಬ ವಿದ್ಯಾಸಂಸ್ಥೆಯಲ್ಲಿ ಕ್ರೈಸ್ತಧರ್ಮವನ್ನು ಅಭ್ಯಸಿಸಿ ಎಂ.ಎ. ಪದವೀಧರನಾದ. ಅನಂತರ ತನ್ನ ತಂದೆಯ ಆಜ್ಞಾನುಸಾರವಾಗಿ 1529 ರಿಂದ ಎರಡು ವರ್ಷಗಳ ಕಾಲ ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡಿದ. 1531ರಲ್ಲಿ ತಂದೆ ತೀರಿಕೊಂಡಿದ್ದರಿಂದ ಅಧ್ಯಯನವನ್ನು ಬಿಟ್ಟು ಪ್ಯಾರಿಸ್ಸಿಗೆ ಹೋಗಿ ಅಲ್ಲಿ ಹೊಸದಾಗಿ ಹುಟ್ಟಿದ ರೆನೆಸಾನ್ಸ್ ಎಂಬ ನೂತನ ಧೋರಣೆಯಲ್ಲಿ ಆಸಕ್ತನಾದ. ಗ್ರೀಕ್, ಲ್ಯಾಟಿನ್ ಮತ್ತು ಹೀಬ್ರೂ ಭಾಷೆಗಳನ್ನು ಕಲಿತು 1532ರಲ್ಲಿ ಸೆನಕ ಎಂಬ ಪ್ರಸಿದ್ಧ ರೋಮಕನ ಡಿ ಕ್ಲೆಮೆನ್ಷಿಯ ಎಂಬ ಗ್ರಂಥದ ಮೇಲೆ ಲ್ಯಾಟಿನ್ ಭಾಷೆಯಲ್ಲಿ ವ್ಯಾಖ್ಯಾನವನ್ನು ಬರೆದು ಪ್ರಕಟಿಸಿದ. ಲೂಥರನ ಅಭಿಪ್ರಾಯಗಳನ್ನೊಳಗೊಂಡ ಒಂದು ಭಾಷಣದ ಕರ್ತೃ ಇವನೆಂದು ಭಾವಿಸಿ ವಿಶ್ವವಿದ್ಯಾಲಯ ಅಧಿಕಾರಿಗಳು ಬಹಿಷ್ಕರಿಸಿದುದರಿಂದ ಈತ ಪ್ಯಾರಿಸ್ಸನ್ನು ಬಿಡಬೇಕಾಯಿತು. ಹಠಾತ್ತನೆ ಪ್ರಾಟೆಸ್ಟಂಟ್ ಧರ್ಮಕ್ಕೆ ಪರಿವರ್ತನೆಗೊಂಡನಾಗಿ ಈತ ತಾನು ಪಡೆಯುತ್ತಿದ್ದ ಧರ್ಮಾದಾಯವನ್ನು ಬಿಟ್ಟುಕೊಡಬೇಕಾಯಿತು (1534). ಅದೇ ವರ್ಷ ಆಲಿವೆಟ್ಟಿ ಎಂಬಾತ ರಚಿಸಿದ್ದ ಬೈಬಲಿನ ಫ್ರೆಂಚ್ ಭಾಷಾಂತರಕ್ಕೆ ಈತ ಒಂದು ಮುನ್ನುಡಿಯನ್ನು ಬರೆದನಲ್ಲದೆ ಅಲ್ಲಿಂದ ಮುಂದೆ ಸುಧಾರಿತ ಪ್ರಾಟೆಸ್ಟಂಟ್ ಪಕ್ಷಕ್ಕೆ ಮುಖಂಡನಾದ. ಈ ಪಂಥ ಲೂಥರನ ಪ್ರಾಟೆಸ್ಟಂಟ್ ಧರ್ಮಸುಧಾರಣೆಯಿಂದ ಮೊದಲಲ್ಲಿ ಪ್ರೇರಿತವಾಯಿತಾದರೂ ಅನಂತರ ಅದರಿಂದ ಪ್ರತ್ಯೇಕವಾಯಿತು. ಲೂಥರನ ಧರ್ಮವ್ಯವಸ್ಥೆಯ ಕೇಂದ್ರ ಜರ್ಮನಿಯಾದರೂ ಅವನ ಧರ್ಮಭಾವನೆಗಳನ್ನೂ ಚರ್ಚಿನ ಆಡಳಿತ ವ್ಯವಸ್ಥೆಯನ್ನೂ ಸುಧಾರಿಸುವುದು ಅಗತ್ಯವೆಂದು ತೀವ್ರ ಚಳವಳಿ ಪ್ರಾರಂಭವಾದದ್ದು ಜಿನೀವ ಮತ್ತು ಪ್ಯಾರಿಸ್‌ಗಳಲ್ಲಿ. ಈ ಚಳವಳಿಯ ತಳಹದಿಯ ಭಾವನೆಗಳನ್ನು ವ್ಯವಸ್ಥೆಗೊಳಿಸಿದ್ದು ಕ್ಯಾಲ್ವಿನ್ನನ ಹಿರಿಯ ಕಾರ್ಯ. ತನ್ನ ಈ ಸುಧಾರಿತ ಪ್ರಾಟೆಸ್ಟಂಟ್ ಧರ್ಮವನ್ನು ಇನ್ಸ್ಟಿಟ್ಯೂಟ್ಸ್ ಆಫ್ ಕ್ರಿಶ್ಚನ್ ರಿಲಿಜನ್ ಎಂಬ ಗ್ರಂಥದಲ್ಲಿ ಈತ ಪ್ರತಿಪಾದಿಸಿದ್ದಾನೆ (1536). ಈ ಗ್ರಂಥ ಹೊರಬಿದ್ದ ಕೂಡಲೇ ಇವನನ್ನು ಸುಧಾರಿತ ಧರ್ಮದ ಆಚಾರ್ಯನೆಂದು ಜಿನೀವದ ಮತ್ತು ಫ್ರಾನ್ಸಿನ ಸುಧಾರಿತ ಧರ್ಮದ ಚಳವಳಿಗಾರರು ಅಂಗೀಕರಿಸಿದರು. ಮೊದಲಲ್ಲಿ ಸಣ್ಣ ಗ್ರಂಥವಾಗಿದ್ದ ಇದು ಪುನರ್ಮುದ್ರಣವಾದ ಹಾಗೆಲ್ಲ ಬೆಳೆದು 1559ರ ವೇಳೆಗೆ ಒಂದು ಬೃಹತ್ ಗ್ರಂಥವಾಯಿತು. ಈ ಗ್ರಂಥ ಫ್ರೆಂಚ್, ಇಟಾಲಿಯನ್, ಸ್ಪ್ಯಾನಿಷ್, ಡಚ್, ಜರ್ಮನ್, ಇಂಗ್ಲಿಷ್ ಮುಂತಾದ ಭಾಷೆಗಳಿಗೆ ಅನುವಾದವಾಯಿತು.

1537ರಿಂದ ಕ್ಯಾಲ್ವಿನ್ ಜಿನೀವವನ್ನು ತನ್ನ ಅಧ್ಯಯನದ ಮತ್ತು ಕಾರ್ಯ ಚಟುವಟಿಕೆಯ ಕ್ಷೇತ್ರವನ್ನಾಗಿ ಮಾಡಿಕೊಂಡ. ಮೊತ್ತಮೊದಲಿಗೆ ಈತ ಕೈಗೊಂಡದ್ದು ವಿದ್ಯಾಭ್ಯಾಸ, ಚರ್ಚಿನ ಆಡಳಿತ ಮತ್ತು ಸಾರ್ವಜನಿಕ ನೀತಿಕ್ಷೇತ್ರಗಳ ಸುಧಾರಣೆಯನ್ನು. ಪ್ರಭುಭೋಜನದಲ್ಲಿ ಪಾಪಿಗಳಾದವರಿಗೂ ಭಾಗಿಗಳಾಗಲು ಲೂಥರ್ ಅನುಯಾಯಿಗಳು ಅವಕಾಶ ಕೊಡುತ್ತಿದ್ದರಷ್ಟೆ. ದುಷ್ಟರೆಂದು ಕುಖ್ಯಾತರಾಗಿದ್ದರೂ ರಾಜಕೀಯದಲ್ಲಿ ಗಣ್ಯರಾಗಿದ್ದ ಕೆಲವರನ್ನು ಕ್ಯಾಲ್ವಿನ್ ಪ್ರಭುಭೋಜನದಿಂದ ಹೊರದೂಡಿದ. ಅದಕ್ಕಾಗಿ ರಾಜಕಾರಣಿಗಳು ಇವನನ್ನು ಗಡೀಪಾರು ಮಾಡಿದರು. ಆಗ ಈತ ಮೂರು ವರ್ಷಗಳ ಕಾಲ ಸ್ಟ್ರಾಸ್‌ಬರ್ಗಿನಲ್ಲಿ ನೆಲಸಬೇಕಾಯಿತು. ಈ ಕಾಲದಲ್ಲಿ ಈತ ಬೈಬಲ್ಲಿನ ಕೆಲವು ಭಾಗಗಳ ಮೇಲೆ ವ್ಯಾಖ್ಯಾನ ಬರೆದ. ಫ್ರೆಂಚ್ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಿ ಅವರ ಧರ್ಮಬೋಧಕನಾದ. 1540ರಲ್ಲಿ ಐಡಿಲೆಟ್ ಡಿ ಬ್ಯೂರಿ ಎಂಬಾಕೆಯನ್ನು ಮದುವೆಯಾದ. ಈಕೆ ತನ್ನ ಕೊನೆಗಾಲದ ವರೆಗೂ (1549) ಇವನ ಮೆಚ್ಚಿನ ಸಂಗಾತಿಯಾಗಿ ಇವನ ಕಾರ್ಯಗಳಲ್ಲಿ ಸಹಕರಿಸಿದಳು.

1541ರಲ್ಲಿ ಜಿನೀವದ ಅಧಿಕಾರಿಗಳ ಬೇಡಿಕೆಯನ್ನು ಅಂಗೀಕರಿಸಿ ಕ್ಯಾಲ್ವಿನ್ ಜಿನೀವಕ್ಕೆ ಹಿಂದಿರುಗಿ ತಾನು ರೂಪಿಸಿಕೊಂಡಿದ್ದ ಚರ್ಚಿನ ಆಡಳಿತ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದ. ಈ ಹೊಸ ಆಡಳಿತ ವ್ಯವಸ್ಥೆಯೇ ಪ್ರೆಸ್ಬಿಟೇರಿಯನ್ ಪಂಥ ಎಂದು ಯುರೋಪಿನಲ್ಲೆಲ್ಲ ಪ್ರಸಿದ್ಧವಾಯಿತು. ಕ್ಯಾಲ್ವಿನ್ ಹದಿನಾಲ್ಕು ವರ್ಷಗಳ ಕಾಲ ಬರೆವಣಿಗೆ, ಬೋಧನೆ ಮತ್ತು ಕ್ರೈಸ್ತ ಸಮಾಜ ಸುಧಾರಣೆಯ ಕೆಲಸಗಳಲ್ಲಿ ವಿರಾಮವಿಲ್ಲದೆ ಶ್ರಮಿಸಿದ. ಒಂದು ವರ್ಷದಲ್ಲಿ ಈತ ಸರಾಸರಿ ಫ್ರೆಂಚ್‌ನಲ್ಲಿ 249, ಲ್ಯಾಟಿನ್‌ನಲ್ಲಿ 189 ಉಪದೇಶಭಾಷಣಗಳನ್ನು ಮಾಡುತ್ತಿದ್ದ. ಈತ ನಡೆಸಿದ ಪತ್ರವ್ಯವಹಾರ ಹತ್ತು ಸಂಪುಟಗಳನ್ನು ತುಂಬಿವೆ. ಇಂಥ ಅದ್ಭುತ ಚಟುವಟಿಕೆಯಿಂದ ಬಹು ಸೋತುಹೋಗಿ ಈತ 1564ನೆಯ ಮೇ 27ರಂದು ನಿಧನನಾದ.

**ಕ್ಯಾಲ್ವಿನ್ ಸಿದ್ಧಾಂತ :** ಬೈಬಲ್ಲಿನಲ್ಲಿಲ್ಲದ ಹೊಸದೇನನ್ನೂ ಕ್ಯಾಲ್ವಿನ್ನನ ಸಿದ್ಧಾಂತ ಹೇಳುವುದಿಲ್ಲ. ಕ್ರೈಸ್ತಧರ್ಮ ಆಚರಣೆಯಲ್ಲಿ ಬಂದು ಸೇರಿಕೊಂಡಿದ್ದ ಕುರುಡು ಭಾವನೆಗಳನ್ನೂ ಸರ್ವಾಧಿಕಾರಿಯಾದ ಪೋಪ್ ಅನುಸರಿಸುತ್ತಿದ್ದ ದುರ್ನೀತಿಯನ್ನೂ ತೊಡೆದುಹಾಕಿ ಕ್ರೈಸ್ತಧರ್ಮವನ್ನು ಶುದ್ಧೀಕರಿಸುವುದೇ ಕ್ಯಾಲ್ವಿನ್ನನ ಮುಖ್ಯ ಉದ್ದೇಶವಾಗಿತ್ತು. ಇವನ ಮುಖ್ಯ ಧರ್ಮತತ್ತ್ವಗಳು ಇವು: ಮಾನವನ ವಿಮೋಚನೆಗೆ ಅರ್ಹನಲ್ಲದಿದ್ದರೂ ದೇವರು ಕರುಣಿಸಿ ಕೃಪೆಯಿಂದ ಅವನಿಗೆ ವಿಮೋಚನೆಯನ್ನು ದಯಪಾಲಿಸುತ್ತಾನೆ. ವಿಮೋಚನೆಯಾಗಬೇಕಾದವ ಇಂಥಿಂಥವನೇ ಎಂಬುದು ಭಗವಂತನ ಪೂರ್ವ ಸಂಕಲ್ಪದಂತೆ ಇತ್ಯರ್ಥವಾಗುತ್ತದೆ. ಒಬ್ಬನಲ್ಲಿ ಭಕ್ತಿ ಹುಟ್ಟಿದಾಗ ಅವನು ಆ ಭಕ್ತಿ ಭಗವಂತನ ಕೊಡುಗೆ ಎಂದು ಭಾವಿಸಬೇಕೇ ವಿನಾ ಸ್ವಯಾರ್ಜಿತ ಎಂದು ಹೆಮ್ಮೆಪಡಕೂಡದು. ಈ ಪೂರ್ವಸಂಕಲ್ಪತತ್ತ್ವ ಮಾನವ ಸ್ವಾತಂತ್ರ್ಯವಾಗಲಿ ಪ್ರಕೃತಿಯ ನಿಯಮಗಳನ್ನಾಗಲಿ ನಿರಾಕರಿಸುವುದಿಲ್ಲ. ಮಾನವ ಸ್ವತಂತ್ರ; ಆದರೆ ಆ ಸ್ವಾತಂತ್ರ್ಯವನ್ನು ಆತ ಪ್ರಭುವಿನ ಪೂರ್ವಸಂಕಲ್ಪದಿಂದ ಪಡೆದದ್ದು. ಪ್ರಕೃತಿಯ ನೀತಿನಿಯಮವೂ ದೇವರ ಸಂಕಲ್ಪ. ಮಾನವ ಸ್ವಾತಂತ್ರ್ಯ, ಪ್ರಕೃತಿಯ ನಿಯತಿ–ಇವು ಮೂಲ ಅಥವಾ ಪ್ರಧಾನ ಕಾರಣಗಳಲ್ಲ; ಇವು ಪ್ರಭುವಿನ ಸಂಕಲ್ಪವಾದ ಪ್ರಥಮ ಕಾರಣದಿಂದ ಇಳಿದುಬಂದುವು. ಪ್ರತಿಯೊಂದು ಮಳೆಯ ಹನಿಯಲ್ಲೂ ಮಾನವನ ಪ್ರತಿಯೊಂದು ಆಲೋಚನೆಯಲ್ಲೂ ಸಂಕಲ್ಪದಲ್ಲೂ ದೇವರು ಕಾಣಿಸಿಕೊಳ್ಳುತ್ತಾನೆ. ಆದುದರಿಂದ, ಪಡೆದ ಪಾಪದಿಂದ ಮಾನವರನ್ನು ವಿಮೋಚನೆ ಮಾಡಲು ಮಾನವರ ಪಾಪದ ವಿಷವನ್ನು ನುಂಗಿ, ತನ್ನ ಪರಿಪೂರ್ಣ ಜೀವನದ ಆದರ್ಶದಿಂದ ಮಾನವರಲ್ಲಿ ಸದ್ಭಕ್ತಿಯನ್ನೂ ಸೌಶೀಲ್ಯವನ್ನೂ ಹುಟ್ಟಿಸಿ ಅವರಿಗೆ ಬಿಡುಗಡೆಯ ದಾರಿಯನ್ನು ತೋರಿಸಲು ಸ್ವರ್ಗದಲ್ಲಿರುವ ಪ್ರಭು ತನ್ನ ಮಗನಾದ ಯೇಸುಕ್ರಿಸ್ತನನ್ನು ಕಳುಹಿಸಿದ. ಭಕ್ತಿ ಪವಿತ್ರಾತ್ಮನ ಮುಖ್ಯ ಕೊಡುಗೆ. ಅದರ ಮೂಲಕ ಮಾನವರಲ್ಲಿ ಪಶ್ಚಾತ್ತಾಪ ಹುಟ್ಟಿ ಅವರ ಅಂತಃಕರಣ ಪವಿತ್ರಾತ್ಮನ ಕಡೆಗೆ ಹರಿಯುತ್ತದೆ: ಯೇಸುವಿನ ಬೋಧೆಯಲ್ಲಿ ಅವರ ಮನಸ್ಸು ಲೀನವಾಗುತ್ತದೆ. ಹಾಗಾದಾಗ ಯೇಸುವಿನಲ್ಲಿ ಪವಿತ್ರಾತ್ಮ ಸಾಕ್ಷೀರೂಪನಾಗಿದ್ದು ಆ ಮಾನವ ಪಾಪದಿಂದ ಮುಕ್ತನೆಂದು ಆಶ್ವಾಸನೆ ನೀಡುತ್ತಾನೆ, ರುಜುವಾತು ಕೊಡುತ್ತಾನೆ. ಈ ಸಮರ್ಥನೆಗೆ ಜಸ್ಟಿಫಿಕೇಷನ್ ಎಂದು ಹೆಸರು. ಹೀಗೆ ಹೇಳಿದಾಗ ಮಾನವನ ಸ್ವಪ್ರಯತ್ನಕ್ಕೆ ಅವಕಾಶವಿಲ್ಲವೆಂದು ತಿಳಿಯಕೂಡದು.

ಮಾನವನ ಯತ್ನ ಮತ್ತು ಪವಿತ್ರಾತ್ಮನ ಕೃಪೆ ಇವೆರಡನ್ನೂ ಸ್ಪಷ್ಟವಾಗಿ ಗುರುತಿಸಬಹುದಾದರೂ ಅವೆರಡೂ ಅವಿಭಾಜ್ಯ. ಭಗವಂತ ಆಯ್ದವರು ಯೇಸುವಿನ ಸಂದೇಶದಿಂದ ಪ್ರೇರಿತರಾಗಿ ತಮ್ಮ ಸದ್ವರ್ತನೆಯ ಮೂಲಕ ಧಾರ್ಮಿಕ ಜೀವನದಲ್ಲಿ ಮುಂದುವರಿದಾಗ ತಾವು ಪಾಪದಿಂದ ವಿಮುಕ್ತರಾದೆವೆಂಬ ಸಮರ್ಥನೆ ಅವರಿಗೆ ದೊರೆಯುತ್ತದೆ. ಭಕ್ತಿ ಅಂತರಂಗಕ್ಕೆ ಸಂಬಂಧಿಸಿದ ಸಹಕಾರಿ; ಕ್ರೈಸ್ತಧರ್ಮ ಸಂಸ್ಥೆಯಾದ ಚರ್ಚ್ ಮತ್ತು ಅದರ ಸಂಸ್ಕಾರಗಳು ಬಾಹ್ಯಸಹಕಾರಿಗಳು. ಇವುಗಳ ಮೂಲಕ ಪವಿತ್ರಾತ್ಮ ಯೇಸುವಿನಲ್ಲಿ ಏಕೀಭವಿಸುವಂತೆ ಮಾನವರನ್ನು ಪ್ರೇರಿಸುತ್ತಾನೆ. ಕ್ರೈಸ್ತಧರ್ಮಸಂಸ್ಥೆಯ ಧರ್ಮದರ್ಶಿಗಳು ಪವಿತ್ರಾತ್ಮನಿಂದ ಆಯ್ದವರು. ಇವರಲ್ಲಿ ಮೂರು ಬಗೆಯವರಿರುತ್ತಾರೆ: ಚರ್ಚಿನ ಉಪದೇಶಕರು ಮತ್ತು ಸಂಸ್ಕಾರಗಳಲ್ಲಿ ಪೌರೋಹಿತ್ಯ ವಹಿಸುವವರು; ಕ್ರೈಸ್ತ ಧರ್ಮೋಪನ್ಯಾಸಕರು ಮತ್ತು ಉಪಾಧ್ಯಾಯರು; ಮೇಲ್ವಿಚಾರಣೆಗಾಗಿ ಭಕ್ತಮಂಡಲಿಯಿಂದ ಆಯ್ಕೆಯಾದ ಹಿರಿಯರು ಮತ್ತು ಡೀಕನ್ ಎಂಬ ಲೌಕಿಕ ವಿಚಾರದ ಅಧಿಕಾರಿ. ಸಂಸ್ಕಾರಗಳು ಎರಡು–ದೀಕ್ಷಾಸ್ನಾನ (ಬ್ಯಾಪ್ಟಿಸಮ್) ಮತ್ತು ಪ್ರಭುಭೋಜನ (ಕಮ್ಯೂನಿಯನ್). ದೀಕ್ಷಾಸ್ನಾನದ ಮೂಲಕ ವ್ಯಕ್ತಿ ಕ್ರೈಸ್ತಸಂಘದ ಸದಸ್ಯನಾಗುತ್ತಾನೆ. ಪ್ರಭುಭೋಜನದಲ್ಲಿ ಭಾಗವಹಿಸುವ ಮೂಲಕ ಅಂದರೆ ಯೇಸುವಿನ ದೇಹ ಮತ್ತು ರಕ್ತಸಂಕೇತಗಳಾದ ರೊಟ್ಟಿ ಮತ್ತು ಮದ್ಯವನ್ನು ಸೇವಿಸುವುದರ ಮೂಲಕ ವ್ಯಕ್ತಿ ಯೇಸುವಿನ ರಕ್ತಸಂಬಂಧಿಯಾಗುತ್ತಾನೆ. ಕಾಲದೇಶಗಳಲ್ಲಿ ಭಿನ್ನರಾದವರು ಆತ್ಮದಲ್ಲಿ ಒಂದಾಗುತ್ತಾರೆ. ಕ್ಯಾಲ್ವಿನ್ನನ ಬೃಹತ್‌ಗ್ರಂಥದ ನಾಲ್ಕನೆಯ ಅಧ್ಯಾಯದ ಕೊನೆಯಲ್ಲಿ ಕ್ರೈಸ್ತ ಧರ್ಮಸಂಸ್ಥೆಯ ಆಡಳಿತದಲ್ಲಿ ಕಾಲೋಚಿತವಾಗಿ ಆಗಬೇಕಾದ ಬದಲಾವಣೆಗಳ ವಿವರಗಳಿವೆ. ಕ್ಯಾಲ್ವಿನ್ ಸಾಮಾನ್ಯರ ಪ್ರತಿನಿಧಿ ಸರ್ಕಾರವನ್ನು ಎತ್ತಿ ಹಿಡಿದಿರುತ್ತಾನಾದರೂ ಜನ ಸಾಮಾನ್ಯರ ಅಚಾತುರ್ಯವನ್ನು ತಡೆಗಟ್ಟಲು ಆಡಳಿತವರ್ಗದಲ್ಲಿ ಮೇಲ್ವರ್ಗದ ಪ್ರತಿನಿಧಿಗಳು ಇರುವುದು ಅಗತ್ಯವೆಂದು ಸೂಚಿಸಿರುತ್ತಾನೆ.

ಕ್ಯಾಲ್ವಿನ್ನನ ಮರಣಾನಂತರ ಆತ ರೂಪಿಸಿದ ಮತಧರ್ಮ ಕ್ಯಾಲ್ವಿನಿಸಮ್ ಎಂಬ ಒಂದು ಪಂಥವಾಗಿ ಬೆಳೆಯಿತು. ಅತ ರೂಪಿಸಿದ ಚರ್ಚಿನ ಆಡಳಿತವೇ ಪ್ರೆಸ್ಬಿಟೇರಿಯನ್ ಪಂಥ (**ನೋಡಿ**) ಎಂಬ ಹೆಸರು ಪಡೆದು ಹಾಲೆಂಡ್, ಜರ್ಮನಿ, ಫ್ರಾನ್ಸ್, ಸ್ಕಾಟ್ಲೆಂಡ್ ಮತ್ತು ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಅಂಗೀಕೃತವಾಯಿತು. (ಜಿ.ಎಚ್.; ಎಂ.ವಿ.ಕೆ.)

**ಕ್ಯಾಲ್ಸಿಯಂ :** ಆವರ್ತಕೋಷ್ಟಕದ ಪ್ರಧಾನ ಗುಂಪು 2ರ ಲೋಹ. ಒಂದು ಕ್ಷಾರ ಭಸ್ಮ ಧಾತು. ಪರಮಾಣು ಸಂಖ್ಯೆ 20. ಪರಮಾಣು ತೂಕ 40.08. ರಾಸಾಯನಿಕ ಸಂಕೇತ Ca. ನೈಸರ್ಗಿಕವಾಗಿ ಲಭಿಸುವ ಸಮಸ್ಥಾನಿಗಳು (ಐಸೊಟೋಪ್ಸ್) 40, 42, 43, 44, 46, 48. ಎಲೆಕ್ಟ್ರಾನಿಕ್ ವಿನ್ಯಾಸ $1s^2$ $2s^2$ $2p^6$- $3s^2$ $3p^6$ $4s^2$. ಡೇವಿ ಎಂಬಾತ ಈ ಧಾತುವನ್ನು ಆವಿಷ್ಕರಿಸಿದವ (1808). ಕ್ಯಾಲ್ಸಿಯಂ ಬೆಳ್ಳಿಯಂತೆ ಬೆಳ್ಳಗಿರುವ ಒಂದು ಲೋಹ. ಇದನ್ನು ಹೆಚ್ಚು ಕಡಿಮೆ ತೆಳುವಾಗಿ ತಟ್ಟಬಹುದು. ಎಳೆಯಾಗಿ ಎಳೆಯಬಹುದು.

**ದೊರೆಯುವಿಕೆ:** ಕ್ಯಾಲ್ಸಿಯಂ ಬಹಳ ಪಟುಧಾತುವಾಗಿರುವುದರಿಂದ ಅದು ಸಹಜಸ್ಥಿತಿಯಲ್ಲಿ ದೊರೆಯುವುದಿಲ್ಲ. ಆದರೆ ಅನೇಕ ಸಂಯೋಜಕ ಸ್ಥಿತಿಗಳಲ್ಲಿ ದೊರೆಯುತ್ತದೆ. ಅದು ಸಾಮಾನ್ಯವಾಗಿ ದೊರೆಯುವ ಆಕರಗಳು ಈ ಮುಂದಿನವು: 1 ಕಾರ್ಬೋನೇಟ್ ರೂಪದಲ್ಲಿ ($CaCO_3$)–ಸುಣ್ಣಕಲ್ಲು, ಸೀಮೆಸುಣ್ಣ, ಅಮೃತಶಿಲೆ, ಹವಳ, ಕ್ಯಾಲ್‌ಸೈಟ್, ಐಸ್‌ಲ್ಯಾಂಡ್ ಸ್ಪಾರ್, ಮೊಟ್ಟೆಯ ಚಿಪ್ಪು ಮತ್ತು ಡಾಲೊಮೈಟ್. 2 ಸಲ್ಫೇಟ್ ರೂಪದಲ್ಲಿ–ಜಿಪ್ಸಮ್ ($CaSO_4.2H_2O$) ಮತ್ತು ಅನ್‌ಹೈಡ್ರೈಯ್ಡ್ ರೂಪಗಳು. 3 ಫ್ಲೂರೈಡ್ ರೂಪದಲ್ಲಿ–ಫ್ಲೂರೋಸ್ಪಾರ್ ($CaF_2$). 4 ಫಾಸ್ಫೇಟ್ ರೂಪದಲ್ಲಿ–ಫಾಸ್ಫೋರೈಟ್ [$Ca_3(PO_4)_2$], ಫ್ಲೂರಾಪಟೈಟ್ [$3Ca_3(PO_4)_2\ CaF_2$] ಮತ್ತು ಕ್ಲೋರೋಪಟೈಟ್ [$3Ca(PO_4)_2\ CaCl_2$].

ಸ್ವಾಭಾವಿಕ ನೀರಿನಲ್ಲಿ, ಗಿಡಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಕ್ಯಾಲ್ಸಿಯಂ ದೊರೆಯುತ್ತದೆ. ಮೊಟ್ಟೆಯ ಚಿಪ್ಪು, ಇಚ್ಚಿಪ್ಪಿನ ಮೃದ್ವಂಗಿಗಳು ಎಂಬ ಪ್ರಾಣಿ, ಹವಳ, ಕಟಲ್ ಮೀನು ಮುಂತಾದವುಗಳಲ್ಲಿ ಕ್ಯಾಲ್ಸಿಯಂ ಕಾರ್ಬೋನೇಟ್ ಹೇರಳವಾಗಿ ಇದೆ. ಪ್ರಾಣಿಗಳ ಮೂಳೆಗಳ ರಚನೆ ಆಗಿರುವುದು ಕ್ಯಾಲ್ಸಿಯಂ ಫಾಸ್ಫೇಟಿನಿಂದ. ಗಿಡಗಳ ಮತ್ತು ಪ್ರಾಣಿಗಳ ಬೆಳವಣಿಗೆಗೆ ಅತ್ಯಗತ್ಯವಾದ ವಸ್ತು ಕ್ಯಾಲ್ಸಿಯಂ.

**ತೆಗೆಯುವಿಕೆ:** ಭೂರಿ ಮೊತ್ತದಲ್ಲಿ ಕ್ಯಾಲ್ಸಿಯಂ ಲೋಹವನ್ನು ತಯಾರಿಸುವ ಯುಕ್ತ ವಿಧಾನವೆಂದರೆ ದ್ರವರೂಪೀ ಕ್ಯಾಲ್ಸಿಯಂ ಕ್ಲೋರೈಡಿನ ವಿದ್ಯುದ್ವಿಶ್ಲೇಷಣೆ. 782° ಸೆಂ. ಉಷ್ಣತೆಯಲ್ಲಿ ಕರಗುವ ಕ್ಯಾಲ್ಸಿಯಂ ಕ್ಲೋರೈಡಿನ ಕರಗುವ ಪ್ರವೃತ್ತಿಯನ್ನು ಕಡಿಮೆ ಮಾಡಲು ಅದರ ಜೊತೆಗೆ ಶೇ.16 ಭಾಗ ಕ್ಯಾಲ್ಸಿಯಂ ಫ್ಲೂರೈಡನ್ನು ಬೆರೆಸುತ್ತಾರೆ. ಈ ಮಿಶ್ರಣ 663° ಸೆಂ. ಉಷ್ಣತೆಯಲ್ಲಿ ಕರಗುತ್ತದೆ. ಗ್ರಾಫೈಟಿನ ಒಳಪದರವಿರುವ ಒಂದು ಕಬ್ಬಿಣದ ಪಾತ್ರೆಯಲ್ಲಿ ವಿದ್ಯುದ್ವಿಶ್ಲೇಷಣೆ ಸುಮಾರು 700° ಸೆಂ.ಉಷ್ಣತೆಯಲ್ಲಿ ನಡೆಯುತ್ತದೆ. ಈ ಪಾತ್ರೆಯ ಕೆಳಭಾಗದಲ್ಲಿ ಒಂದೇ ಸಮನೆ ಹರಿಯುವ ನೀರಿನ ಪ್ರವಾಹದಿಂದಾಗಿ ತಣ್ಣಗಾಗುವ ಕೋಶವನ್ನು ವಿದ್ಯುದ್ವಿಶ್ಲೇಷಣ ದ್ರವದಿಂದ ಬೇರ್ಪಡಿಸಲು ಬಹಳ ಗಟ್ಟಿಯಾದ ಘನರೂಪದ ಕ್ಯಾಲ್ಸಿಯಂ ಕ್ಲೋರೈಡನ್ನು ಉಪಯೋಗಿಸುತ್ತಾರೆ. ಧನವಿದ್ಯುನ್ನಾಳಗಳಾಗಿ ಎರಡು ಗ್ರಾಫೈಟ್ ಕಂಬಿಗಳನ್ನು ವಿಶ್ಲೇಷಣ ದ್ರವದಲ್ಲಿ ನೇತುಬಿಟ್ಟಿರುತ್ತಾರೆ. ಕರಗಿದ ವಿಶ್ಲೇಷಣ ದ್ರವವನ್ನು ಮುಟ್ಟುವಂತೆ ಇರುವ ಮತ್ತು ನೀರಿನ ಪ್ರವಾಹದಿಂದ ತಣ್ಣಗಾಗಿರಿಸಲ್ಪಟ್ಟ ಒಂದು ಕಬ್ಬಿಣದ ಕೊಳವೆಯೇ ಋಣವಿದ್ಯುನ್ನಾಳ. ಇದನ್ನು ನೀರಿನಿಂದ ತಣ್ಣಗಾಗಿರಿಸಿರುತ್ತಾರೆ. ಏಕೆಂದರೆ 650° ಸೆಂ. ಉಷ್ಣತೆಯ ಒಳಗೆ ಉತ್ಪತ್ತಿಯಾಗುವ ಕ್ಯಾಲ್ಸಿಯಂ ಆ ಉಷ್ಣತೆಯಲ್ಲಿ ಸುಟ್ಟುಹೋಗುವ ಸಂಭವವಿರುತ್ತದೆ. ಕಬ್ಬಿಣದ ಋಣವಿದ್ಯುನ್ನಾಳವನ್ನು ನಿಧಾನವಾಗಿ ಮೇಲೆತ್ತುವ ಹಾಗೆ ಒಂದು ಸೂತ್ರ ವ್ಯವಸ್ಥೆಯನ್ನು ಮಾಡಿರುತ್ತಾರೆ. ಒಂದು ಚದರ ಸೆಂಮೀಗೆ 100 ಆಂಪಿಯರುಗಳ ಮತ್ತು ಸುಮಾರು 25-30 ವೋಲ್ಟುಗಳ ಮೊತ್ತದ ವಿದ್ಯುತ್ತನ್ನು ಕರಗಿದ ವಿಶ್ಲೇಷಣ ದ್ರವದ ಮೂಲಕ ಹರಿಸುತ್ತಾರೆ. ವಿಶ್ಲೇಷಣೆಯಲ್ಲಿ ಕ್ಯಾಲ್ಸಿಯಂ ಕ್ಲೋರೈಡ್ ಧನ ವಿದ್ಯುನ್ನಾಳದ ಹತ್ತಿರ ಕ್ಲೋರಿನ್ನಾಗಿಯೂ ಋಣವಿದ್ಯುನ್ನಾಳದ ಹತ್ತಿರ ಕ್ಯಾಲ್ಸಿಯಂ ಆಗಿಯೂ ವಿಭಜನೆಗೊಳ್ಳುತ್ತದೆ.

$CaCl_2 \rightarrow Ca^{++} + 2Cl$ ಅಯಾನೀಕರಣ

$Ca^{++} + 2e- \rightarrow Ca$ (ಲೋಹ) ಋಣವಿದ್ಯುನ್ನಾಳದೆಡೆ

$2Cl^- - 2e^- \rightarrow Cl_2$ (ಅನಿಲ) ಧನವಿದ್ಯುನ್ನಾಳದೆಡೆ

ಋಣ ವಿದ್ಯುನ್ನಾಳವನ್ನು ತೊಟ್ಟಿಯಿಂದ, ನಿಧಾನವಾಗಿ ಮೇಲೆತ್ತಿದಂತೆ ಕರಗಿದ ಕ್ಯಾಲ್ಸಿಯಂ ಘನ ಕ್ಯಾಲ್ಸಿಯಂ ಕಂಬಿಯಂತಾಗಿ ಘನೀಭವಿಸುತ್ತದೆ. ಈ ಕ್ಯಾಲ್ಸಿಯಂ ಕಂಬಿಯೇ ಋಣವಿದ್ಯುನ್ನಾಳವಾಗಿ ಮುಂದೆ ವರ್ತಿಸುತ್ತದೆ. ಆದ್ದರಿಂದ ಕಂಬಿಯ ತಳ ಯಾವಾಗಲೂ ಕರಗಿದ ವಿದ್ಯುದ್ವಿಶ್ಲೇಷಣ ದ್ರವವನ್ನು ಸ್ವಲ್ಪ ತಾಕುವಂತೆ ಇಟ್ಟಿರುತ್ತಾರೆ. ಹೀಗೆ ಉತ್ಪನ್ನವಾದ ಕ್ಯಾಲ್ಸಿಯಂ ಗಾಳಿಯೊಡನೆ ಸೇರಿ ಉತ್ಕರ್ಷಣಗೊಳ್ಳುವುದನ್ನು ಅದರ ಸುತ್ತಲೂ ಘನೀಭವಿಸಿದ ದ್ರವರೂಪದ ಕ್ಯಾಲ್ಸಿಯಂ ಕ್ಲೋರೈಡಿನ ಪದರದಿಂದ ತಪ್ಪಿಸಲಾಗುತ್ತದೆ. ಪೆಟ್ರೋಲಿಯಂ ಪದರದೊಳಗೆ ಈ ಲೋಹವನ್ನಿರಿಸಿ ಗಾಳಿಯಿಂದ ದೂರವಿಟ್ಟಿರುತ್ತಾರೆ.

**ಭೌತಗುಣಗಳು:** ಕ್ಯಾಲ್ಸಿಯಂ ಬೆಳ್ಳಿಯಂಥ ಬೆಳ್ಳಗಿರುವ ಮತ್ತು ಮೆದುವಾದ ಲೋಹ. ಇದರ ದ್ರವನ ಬಿಂದು 851° ಸೆಂ. ಕುದಿಬಿಂದು 1439° ಸೆಂ.ಕ್ಯಾಲ್ಸಿಯಂ ಇತರ ಲೋಹಗಳೊಡನೆ ಸೇರಿ ಮಿಶ್ರಲೋಹಗಳನ್ನುಂಟು ಮಾಡುತ್ತದೆ. ಪಾದರಸದೊಡನೆ ರಸಮಿಶ್ರಣ (ಅಮಾಲ್ಗಂ) ಆಗುತ್ತದೆ.

**ರಾಸಾಯನಿಕ ಗುಣಗಳು:** ಒಣಗಾಳಿ ಇದರ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ. ಆದರೆ ತಂಗಾಳಿಯೊಡನೆ ಸೇರಿ ಕ್ಯಾಲ್ಸಿಯಂ ಆಕ್ಸೈಡ್ ಆಗಿ ಪರಿವರ್ತಿತವಾಗಿ ಅದೃಶ್ಯವಾಗುತ್ತದೆ. ಗಾಳಿಯಲ್ಲಿ ಕಾಯಿಸುವುದರಿಂದ ಅದು ಉಜ್ಜ್ವಲವಾಗಿ ಉರಿಯುತ್ತ ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಸ್ವಲ್ಪ ಕ್ಯಾಲ್ಸಿಯಂ ನೈಟ್ರೈಟ್ ಆಗಿ ಪರಿವರ್ತಿತವಾಗುತ್ತದೆ.

$$2Ca + O_2 \rightarrow 2CaO$$

$$3Ca + N_2 \rightarrow Ca_3N_2$$

ನೀರಿನೊಡನೆ ಸೇರಿದಾಗ ತಣ್ಣೀರು ಉದ್ಭವವಾಗಿ ಜೊತೆಗೆ ಜಲಜನಕವೂ ಹೊರ ಬರುತ್ತದೆ. ಆದರೆ ಸೋಡಿಯಮಿಗಿಂತ ಅಲ್ಪವಾಗಿ ಸೇರುತ್ತದೆ.

$$Ca + 2H_2O \rightarrow Ca(OH)_2 + H_2$$

ಆಮ್ಲಗಳೊಡನೆ ಸೇರಿ ಜಲಜನಕವನ್ನು ಉತ್ಪಾದಿಸುತ್ತದೆ.

$$Ca + 2\,HCl \rightarrow CaCl_2 + H_2$$

ಆಮ್ಲಗಳೊಡನೆ ಸೇರಿ ಕ್ಯಾಲ್ಸಿಯಮಿಗೆ ಯಾವ ವಿಧವಾದ ಕ್ರಿಯೆಯೂ ಇಲ್ಲ. ಕ್ಯಾಲ್ಸಿಯಮನ್ನು ಕ್ಲೋರಿನ್, ಗಂಧಕ, ಸಾರಜನಕ ಮತ್ತು ಜಲಜನಕದೊಡನೆ ಕಾಸಿದಾಗ ಅದು ನೇರವಾಗಿ ಇವುಗಳೊಡನೆ ಸೇರಿಕೊಂಡು ಅವುಗಳ ದ್ವಿಮಿಶ್ರಣವಾಗುತ್ತದೆ.

**ಉಪಯೋಗಗಳು:** ಆರ್ಗ್ಯಾನಿಕ್ ವಸ್ತುಗಳನ್ನು ಒಣಗಿಸುವುದಕ್ಕೆ (ಉದಾಹರಣೆಗೆ ಆಬ್ಸೊಲ್ಯೂಟ್ ಆಲ್ಕೊಹಾಲ್), ಅತಿ ಹೆಚ್ಚಿನ ನಿರ್ವಾತದಲ್ಲೂ ಉಳಿದಿರಬಹುದಾದ ಗಾಳಿ ಅಂಶವನ್ನು ತೆಗೆಯಲು, ನೈಟ್ರೋಜನ್ನಿನಿಂದ ಆರ್ಗಾನನ್ನು ಬೇರ್ಪಡಿಸಲು, ಕ್ಯಾಲ್ಸಿಯಂ ಹೈಡ್ರೈಡನ್ನು ತಯಾರಿಸಲು, ಅಪಕರ್ಷಣಕಾರಿಯಾಗಿ, ಕ್ಯಾಲ್ಸಿಯಂ ಚುಚ್ಚುಮದ್ದುಗಳನ್ನು ಕೊಟ್ಟು ಕ್ಯಾಲ್ಸಿಯಂ ಕೊರತೆಯನ್ನು ಹೋಗಲಾಡಿಸಲು–ಇವೇ ಮುಂತಾದ ಉಪಯೋಗಗಳು ಕ್ಯಾಲ್ಸಿಯಮಿಗೆ ಇದೆ. (ಬಿ.ಸಿ.ಎ.)

**ಕ್ಯಾಲ್ಸಿಯಂ ಕಾರ್ಬೋನೇಟ್ :** ಸುಣ್ಣಕಲ್ಲು, ಅಮೃತಶಿಲೆ, ಚಾಕ್ ಮತ್ತು ಕ್ಯಾಲ್‌ಸೈಟ್ ರೂಪದಲ್ಲಿ ನೈಸರ್ಗಿಕವಾಗಿ ದೊರೆಯುವ ವಸ್ತು, ಸುಣ್ಣದ ತಿಳಿನೀರಿಗೆ ಇಂಗಾಲದ ಡೈಆಕ್ಸೈಡನ್ನು ಹಾಯಿಸುವುದರಿಂದ ಇದನ್ನು ತಯಾರಿಸಬಹುದು.

$$Ca(OH)_2 + CO_2 \rightarrow CaCO_2 \downarrow + H_2O$$

ಕ್ಯಾಲ್ಸಿಯಂ ಲವಣದ ದ್ರಾವಣಕ್ಕೆ ಕರಗುವ ಕಾರ್ಬೋನೇಟನ್ನು ಸೇರಿಸುವುದರಿಂದಲೂ ಇದನ್ನು ತಯಾರಿಸಬಹುದು.

$$CaCl_2 + (NH_4)CO_3 \rightarrow CaCO_3 \downarrow + 2NH_4Cl$$

ಗುಣಗಳು : ಬೆಳ್ಳಗಿರುವ ಘನವಸ್ತು. ನೀರಿನಲ್ಲಿ ಕರಗುವುದಿಲ್ಲ, ಆಮ್ಲಗಳಲ್ಲಿ ಕರಗಿ

ಇಂಗಾಲದ ಡೈ ಆಕ್ಸೈಡನ್ನು ಉತ್ಪಾದಿಸುತ್ತದೆ. ಕಾಯಿಸಿದರೆ ಇಂಗಾಲದ ಡೈ ಆಕ್ಸೈಡನ್ನು ಬಿಟ್ಟುಕೊಟ್ಟು ವಿಭಜನೆ ಹೊಂದುತ್ತದೆ.

ಉಪಯೋಗಗಳು : ಕಟ್ಟಡ ಕಟ್ಟುವುದಕ್ಕೆ ಮತ್ತು ನೆಲಕ್ಕೆ ಗಾರೆ ಹಾಕಲು ಇದನ್ನು ಬಳಸುತ್ತಾರೆ. ಇಂಗಾಲದ ಡೈ ಆಕ್ಸೈಡಿನ ತಯಾರಿಕೆಯಲ್ಲಿ, ಸಿಮೆಂಟ್, ಸುಣ್ಣದ ಹರಳು, ಕ್ಯಾಲ್ಸಿಯಂ ಕಾರ್ಬೈಡ್ ಮತ್ತು ಗಾಜಿನ ತಯಾರಿಕೆಯಲ್ಲಿ ಇದರ ಉಪಯೋಗ ಉಂಟು. (ಬಿ.ಸಿ.ಎ.)

**ಕ್ಯಾಲ್ಸಿಯೊಲೇರಿಯ :** ಬೆಡಗಿನ ಹೂಬಿಡುವ ಅಲಂಕಾರ ಸಸ್ಯಜಾತಿ. ಸ್ಕ್ರಾಫ್ಯುಲೇರಿಯೇಸೀ ಕುಟುಂಬಕ್ಕೆ ಸೇರಿದ ಪಾದರಕ್ಷೆಗಳನ್ನು ಹೋಲುವ ವರ್ಣರಂಜಿತ ಹೂಗಳಿಗಾಗಿ ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಇದರಲ್ಲಿ ಸುಮಾರು 200 ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ಪೆರು, ಚಿಲಿ ದೇಶಗಳ ಆಂಡಿಸ್ ಪರ್ವತ ಶ್ರೇಣಿಗಳ ಮೂಲವಾಸಿಗಳು. ಮೆಕ್ಸಿಕೋದಲ್ಲೂ ಕೆಲವು ಪ್ರಭೇದಗಳು ಬೆಳೆಯುತ್ತವೆ. ಹೆಚ್ಚುಕಡಿಮೆ ಎಲ್ಲ ಪ್ರಭೇದಗಳೂ ಸುಮಾರು 2'–4' ಎತ್ತರಕ್ಕೆ ಬೆಳೆಯುವ ಮೂಲಿಕೆ ಸಸ್ಯಗಳು. ಎಲೆಗಳು ಅಭಿಮುಖ ಜೋಡಣೆಯನ್ನು ಪ್ರದರ್ಶಿಸುತ್ತವೆ. ಅವುಗಳ ಮೈ ಒರಟಾಗಿ ಸಣ್ಣಕೂದಲುಗಳಿಂದ ಆವೃತವಾಗಿದೆ. ಹೂಗಳು ರೇಸೀಮ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂ ದಳ ಹಳದಿ, ಊದಾ ಇದ್ದು ಹೂವಿನ ಅಂದ ಹೆಚ್ಚಾಗಿದೆ. ಹೂದಳ ಎರಡು ತುಟಿಗಳಾಗಿ ಭಾಗವಾಗಿದೆ. ಕೆಳದುಟಿ ಊದಿಕೊಂಡು ಪಾದರಕ್ಷೆಯಂತೆ ಕಾಣುತ್ತದೆ. ಮೇಲ್ದುಟಿ ಕೆಳದುಟಿಗಿಂತ ಚಿಕ್ಕದು; ಸಂಪುಟ ಮಾದರಿಯದು. (ಕೆ.)

ಕ್ಯಾಲ್ಸಿಯೊಲೇರಿಯದ ಹಲವಾರು ಪ್ರಭೇದಗಳು ಜನಪ್ರಿಯವಾಗಿವೆ. ಇವುಗಳಲ್ಲಿ ಕೆಲವು ಅಡ್ಡತಳಿಗಳೂ ಇವೆ. ಇವನ್ನು ಮೂಲಿಕೆಗಳು ಮತ್ತು ಪೊದೆಗಳು ಎಂದು 2



ಕ್ಯಾ. ಹರ್ಬಿಯೊಹೈಬ್ರಿಡ ಪ್ರಭೇದ

ಮುಖ್ಯ ಪಂಗಡಗಳಾಗಿ ವಿಭಾಗಿಸುವುದುಂಟು. ಮೂಲಿಕೆ ಬಗೆಗಳನ್ನು ಸಾಮಾನ್ಯವಾಗಿ ಬೀಜಗಳಿಂದ ವೃದ್ಧಿಸಲಾಗುತತದೆ. ಬೀಜಗಳನ್ನು ಬಿತ್ತುವ ಕಾಲ ಮಾರ್ಚ್ ಕೊನೆಯಿಂದ ಸೆಪ್ಟೆಂಬರ್‌ವರೆಗೆ. ಬೀಜಗಳು ಬಹುಸೂಕ್ಷ್ಮವಾಗಿರುವುದರಿಂದ ಅಗಲವಾದ ತಟ್ಟೆಗಳಂಥ ಕುಂಡಗಳಲ್ಲಿ ಸಮಪ್ರಮಾಣದಲ್ಲಿ ಮರಳು ಮತ್ತು ಸಸ್ಯಜನ್ಯ ಗೊಬ್ಬರಗಳನ್ನು ಹಾಕಿ ಬೀಜ ಬಿತ್ತಬೇಕು. ನೀರು ಹಾಯಿಸುವಾಗಲೂ ಎಚ್ಚರವಹಿಸಬೇಕು. ಮೇಲಿನಿಂದ ನೀರು ಹಾಕದೆ ಕುಂಡಗಳ ತಳವನ್ನು ಮಾತ್ರ ನೀರಿನೊಳಕ್ಕೆ ಅದ್ದಿ ನಿಧಾನವಾಗಿ ಕುಂಡದ ಬುಡದ ರಂಧ್ರಗಳ ಮೂಲಕ ನೀರು ಮೇಲೇರುವಂತೆ ಮಾಡಬೇಕು. ಹೀಗೆ ಮಾಡಿದರೆ ಬೀಜಗಳು ಸ್ಥಳಾಂತರಗೊಳ್ಳುವುದಿಲ್ಲ. ಉಷ್ಣತೆ 15° ಸೆಂ ಇರುವಂತೆ ನೋಡಿಕೊಳ್ಳಬೇಕು. ಆಗ ಬೀಜಗಳು ಮೊಳೆಯುತ್ತವೆ. ಸಸಿಗಳು ಸಾಕಷ್ಟು ದೊಡ್ಡವಾದ ಮೇಲೆ ದೊಡ್ಡ ಕುಂಡಗಳಿಗೆ ವರ್ಗಾಯಿಸಬೇಕು. ಆಗಿಂದಾಗ್ಗೆ ಗೊಬ್ಬರದ ನೀರನ್ನು (ಮೂರು ಗ್ಯಾಲನ್ ನೀರಿನಲ್ಲಿ ಒಂದು ಹಿಡಿ ದನದ ಗೊಬ್ಬರ ಹಾಕಿ ತಯಾರಿಸಿದ ಮಿಶ್ರಣ) ಹಾಕುತ್ತಿರಬೇಕು.

ಪೊದೆಯಂತೆ ಬೆಳೆಯುವ ಕ್ಯಾಲ್ಸಿಯೊಲೇರಿಯ ಬಗೆಗಳನ್ನು ಕಾಂಡ ತುಂಡುಗಳಿಂದ ವೃದ್ಧಿಸಲಾಗುತ್ತದೆ. ಎರಡು ಎಲೆಗಳಿರುವ ತುಂಡುಗಳನ್ನೇ ಆಯ್ದು ನಾಟಿ ಮಾಡುವುದೇ ರೂಢಿಯಲ್ಲಿರುವ ಕ್ರಮ.

ಕ್ಯಾಲ್ಸಿಯೊಲೇರಿಯದ ಜನಪ್ರಿಯ ಹಳದಿ ಹೂ ಬಿಡುವ ಕ್ರೆನಾಟಿ ಫೋಲಿಯ ಕೋರಿಂಬೋಸ ಮತ್ತು ಬೈಫ್ಲೋರಗಳೂ ಊದಾ ಬಣ್ಣದ ಹೂ ಬಿಡುವ ಪರ್ಪ್ಯೂರಿಯ, ಅರ್ಯಾಕ್ನಾಯ್ಡಿಯ ಮತ್ತು ಹರ್ಬಿಯೊಹೈಬ್ರಿಡಗಳೂ ಮುಖ್ಯವಾದವು. *

**ಕ್ಯಾಲ್ಸೈಟ್ :** ಸುಣ್ಣ ಶಿಲೆಯಲ್ಲಿ ಪ್ರಧಾನವಾಗಿರುವ ಖನಿಜ, $CaCO_3$, ಜಿಯೊಲೈಟ್ ರಂಧ್ರಗಳಲ್ಲೂ ತಾಮ್ರ, ಸೀಸ, ಬೆಳ್ಳಿ ಮೊದಲಾದ ಲೋಹ ಖನಿಜಗಳೊಡನೆಯೂ ಹರಡಿರುತ್ತದೆ. ಧಾರವಾಡ ಪದರಶಿಲೆಗಳಲ್ಲೂ ಅಲ್ಪಸ್ವಲ್ಪ ದೊರೆಯುವುದು. ಸುಣ್ಣಶಿಲೆಗಳಲ್ಲಿ ಕ್ಯಾಲ್ಸೈಟು ಎಳೆಎಳೆಯಾಗಿಯೂ ರೇಖೆಗಳಂತೆಯೂ ಸಿರಗಳಲ್ಲಿ ಹಬ್ಬಿರುತ್ತದೆ. ಮಡಿಗಳಂತೆಯೂ ಹಬ್ಬಿರುವುದುಂಟು. ಕ್ಯಾಲ್ಸೈಟಿನ ಬಣ್ಣ ಸಾಧಾರಣವಾಗಿ ಬೆಳ್ಳಗೆ; ಕೆಲವು ಕಡೆ ಅದು ಹಸಿರು, ಹಳದಿ, ಬೂದು, ನೀಲಿ ಮತ್ತು ಕಂದು ಬಣ್ಣಗಳ ಛಾಯೆಗಳನ್ನು ತೋರಿಸುವುದುಂಟು. ಅದು ಪಾರದರ್ಶಕವಾಗಿ ಇರಬಹುದು ಅಥವಾ ಅಪಾರದರ್ಶಕವಾಗಿ ಇರಬಹುದು. ಕ್ಯಾಲ್ಸೈಟಿನಲ್ಲಿ ಡಾಗ್ ಟೂತ್‌ಸ್ಪಾರ್, ನೈಲ್ ಹೆಡ್‌ಸ್ಪಾರ್, ಐಸ್‌ಲ್ಯಾಂಡ್ ಸ್ಪಾರ್ ಮೊದಲಾದ ಹಲವು ವಿಧಗಳಿವೆ.

ಕ್ಯಾಲ್ಸೈಟನ್ನು ಮುಖ್ಯವಾಗಿ ಗಾರೆ ಮತ್ತು ಸಿಮೆಂಟು ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಅಲ್ಲದೆ ಲೋಹ ಸಂಶೋಧನೆಯಲ್ಲಿ ಕೂಡ ಇದರ ಉಪಯೋಗ ಉಂಟು. ಕೆಲವು ಪ್ರದೇಶಗಳಲ್ಲಿ ಕ್ಯಾಲ್ಸೈಟನ್ನು ಕಟ್ಟಡಗಳಿಗೆ ಉಪಯೋಗಿಸುತ್ತಾರೆ. ಪ್ರಪಂಚದಲ್ಲಿ ಕ್ಯಾಲ್ಸೈಟು ಹಂಗರಿ, ಬೊಹೇಮಿಯ, ಇಟಲಿ ಮೊದಲಾದಕಡೆ ಹೇರಳವಾಗಿ ಸಿಗುತ್ತದೆ. ಕರ್ನಾಟಕದಲ್ಲಿ ಅದು ಬೆಟ್ಟದಬೀಡು, ಗೌಡನ ಕೆರೆ ಮತ್ತು ಇತರ ಕಡೆ ಅಲ್ಪಸ್ವಲ್ಪ ಸಿಗುತ್ತದೆ. (ಕೆ.ಜಿ.ಎಸ್.)

**ಕ್ಯಾವೆಂಡಿಷ್ ಹೆನ್ರಿ :** 1731–1810. ಇಂಗ್ಲೆಂಡಿನ ರಸಾಯನ ಹಾಗೂ ಭೌತವಿಜ್ಞಾನಿ. ಜನನ 1731 ಅಕ್ಟೋಬರ್ 10ರಂದು. ಈತನಿಗೆ ಎರಡು ವರ್ಷ ವಯಸ್ಸಾದಾಗ ತಾಯಿ ತೀರಿಕೊಂಡಳು. ಕೈಬೀಸಿ ಕರೆಯುತ್ತಿದ್ದ ಆಡಂಬರದ ಶ್ರೀಮಂತ ಜೀವನದ ಆಸೆಗೆ ಬಲಿಯಾಗದೆ ಸತ್ಯಶೋಧನೆಗಾಗಿ ವಿಜ್ಞಾನದ ಮೇಲಿನ ಹಂಬಲದಿಂದ ತನ್ನ ಇಡೀ ಜೀವನದ ಅತ್ಯಮೂಲ್ಯ ಕಾಲವೆಲ್ಲವನ್ನೂ ಪ್ರಯೋಗಾಲಯ ಮತ್ತು ಗ್ರಂಥಭಂಡಾರಗಳಲ್ಲಿ ಕಳೆದು ಸರಳಜೀವನವನ್ನು ನಡೆಸಿದ ಆದರ್ಶ ವಿಜ್ಞಾನಿ. ವಿಜ್ಞಾನವನ್ನೇ ವರಿಸಿದ್ದ ಹೆನ್ರಿ ಕ್ಯಾವೆಂಡಿಷನ ಜೀವನದಲ್ಲಿ ಬೇರೊಬ್ಬ ಮಡದಿಯ ಆವಶ್ಯಕತೆ ಇರಲಿಲ್ಲ. ಈತ ಅವಿವಾಹಿತನಾಗಿಯೇ ಉಳಿದಿದ್ದ. ಏಕಾಂತ ಜೀವನ ಇವನಿಗೆ ಬಲುಪ್ರಿಯ. ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಹೋದ್ಯೋಗಿಗಳೊಡನೆ ನಡೆಸುತ್ತಿದ್ದ ಮಾತುಕತೆಗಳೆಷ್ಟೋ ಅಷ್ಟು.. ವೈಯಕ್ತಿಕ ಜೀವನದಲ್ಲಿ ತನ್ನ ಹತ್ತಿರದ ನೆಂಟರೊಡನೆ ಕೂಡ ಹೆಚ್ಚು ಸಂಪರ್ಕವನ್ನು ಈತ ಪಡೆದಿರಲಿಲ್ಲ. ಬಲು ನಾಚಿಕೆ ಪ್ರವೃತ್ತಿಯುಳ್ಳವ. ತನ್ನ ಬಗ್ಗೆ ಪ್ರಚಾರಕ್ಕೆ ಎಂದೂ ಅವಕಾಶ ನೀಡಲಿಲ್ಲ. ಇದರಿಂದಾಗಿ ಈತನ ಅಮೂಲ್ಯ ಸಾಧನೆಗಳು ಸಕಾಲದಲ್ಲಿ ಪ್ರಕಟವಾಗಲಿಲ್ಲ. ಆದರೂ ಕ್ಯಾವೆಂಡಿಷನ ನಿಧನಾನಂತರ ಪ್ರಕಟವಾಗಿರುವ ಆತನ ಸಾಧನೆಗಳು ಅವನಿಗೆ ವಿಜ್ಞಾನಪ್ರಪಂಚದಲ್ಲಿ ವಿಶಿಷ್ಟವಾದ ಸ್ಥಾನಮಾನಗಳನ್ನು ಗಳಿಸಿಕೊಟ್ಟಿವೆ.

ಕ್ಯಾವೆಂಡಿಷನ ವಿದ್ಯಾಭ್ಯಾಸ ನಡೆದದ್ದು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ. ವ್ಯಕ್ತಿಯೊಬ್ಬನ ಪ್ರತಿಭೆಯ ಪ್ರತೀಕ ಪದವಿ ಆಗಲೇಬೇಕಾಗಿಲ್ಲ ಎಂಬುದಕ್ಕೆ ಕ್ಯಾವೆಂಡಿಷನೇ ಸಾಕ್ಷಿ. ವಿಶ್ವವಿದ್ಯಾಲಯದ ವ್ಯಾಸಂಗ ಮಾಡಿದನಾದರೂ ಪರೀಕ್ಷಕರನ್ನು ಎದುರಿಸಲು ಅಳುಕಿ ಹಿಂಜರಿದ ಇವನು ಯಾವ ಪದವಿಯನ್ನೂ ಪಡೆಯಲಿಲ್ಲ. ಈತನ ಔಪಚಾರಿಕ ವಿದ್ಯಾಭ್ಯಾಸ ಹೀಗೆ ವೈಫಲ್ಯದಲ್ಲಿ ಮುಕ್ತಾಯವಾಯಿತು(1753). ಆದರೆ ಮುಂದೆ ಕೇವಲ ಅರೇ ವರ್ಷಗಳ ಅವಧಿಯಲ್ಲಿ ಈತ ರಾಯಲ್ ಸೊಸೈಟಿಯ ಸದಸ್ಯತ್ವದ ಗೌರವಕ್ಕೆ ಪಾತ್ರನಾಗುವನೆಂದು ಆಗ ಯಾರೂ ಊಹಿಸಿರಲಾರರು. ಕ್ಯಾವೆಂಡಿಷ್ ಮುಂದೆ ಫ್ರೆಂಚ್ ಇನ್ಸ್‌ಟಿಟ್ಯೂಟಿನ ವಿದೇಶೀ ಪ್ರತಿನಿಧಿಯೂ ಆಗಿದ್ದ.

ವಿಜ್ಞಾನಪ್ರಪಂಚದಲ್ಲಿ ಕ್ಯಾವೆಂಡಿಷ್ ಸಾಧಿಸಿದ ಕಾರ್ಯಗಳು ಬೆಲೆಕಟ್ಟಲಾರದಂಥವು. ನಡೆಸಿದ ಪ್ರಯೋಗಗಳು ಅಪಾರ. ಕಾರ್ಯಸೀಮೆ ಬಲು ವಿಸ್ತಾರ. ಭೌತವಿಜ್ಞಾನಿ ಕ್ಯಾವೆಂಡಿಷ್ ರಸಾಯನವಿಜ್ಞಾನ ಸಂಶೋಧಕನೂ ಆಗಿದ್ದ. ಪ್ರೀಸ್ಟ್ಲಿ ಮತ್ತು ಷೀಲೆಯರೊಂದಿಗೆ ಈತ ಇಂದಿನ ರಸಾಯನವಿಜ್ಞಾನ ಜನಕರಲ್ಲೊಬ್ಬ. ಇವನಿಗೆ ಭೂವಿಜ್ಞಾನದಲ್ಲಿಯೂ ಅಭಿರುಚಿಯಿದ್ದಂತೆ ತೋರುವುದು. ಗಾಳಿ ಅನಿಲ ಮಿಶ್ರಣವೆಂದು ತಿಳಿಸಿದ್ದು, ಬಂಧಿತ ವಾಯುವಿನ ಗುಣಗಳನ್ನು ಬೆಳಕಿಗೆ ತಂದು ಇಂಗಾಲ ದಹಿಸಿದಾಗ ಈ ಅನಿಲ ಬಿಡುಗಡೆಯಾಗುವುದರಿಂದ ಈ ಇಂಧನ ಅಪಾಯಕಾರಿ ಎಂದದ್ದು, ಗಾಳಿಗಿಂತಲೂ ವಿಭಿನ್ನವಾದ ದಹ್ಯವಾಯುವೊಂದನ್ನು ($H_2$) ಆವಿಷ್ಕರಿಸಿ ಅದರ ಅನೇಕ ಗುಣಗಳನ್ನು

ಬೆಳಕಿಗೆ ತಂದದ್ದು, ವಾಯುಮಂಡಲದ ರಚನೆಯ ಅಂಗವಾಗಿ ನಿಷ್ಕ್ರಿಯವಾದ ಅನಿಲವೊಂದರ ಇರುವಿಕೆಯನ್ನು ಸೂಚಿಸಿದ್ದು, ನೀರು ಸರಳಧಾತುವಲ್ಲ ಬದಲು ಆಮ್ಲಜನಕ ಮತ್ತು ದಹ್ಯವಾಯುಗಳನ್ನು ($H_2$) ವಿದ್ಯುತ್ ಕಿಡಿಯ ಸಹಾಯದಿಂದ ಉರಿಸಿದಾಗ ದೊರೆಯುವ ಸಂಯುಕ್ತವಸ್ತು ಎಂಬುದನ್ನು ತೋರಿಸಿದ್ದು, ನೈಟ್ರಿಕ್ ಆಮ್ಲದ ರಾಸಾಯನಿಕ ರಚನೆಯನ್ನು ವಿವರಿಸಿದ್ದು (1704)–ಇವೇ ಮೊದಲಾದವು ಕ್ಯಾವೆಂಡಿಷ್ ರಸಾಯನವಿಜ್ಞಾನದಲ್ಲಿ ಸಾಧಿಸಿದ ಸಾಧನೆಗಳಲ್ಲಿ ಹೆಸರಾಂತವು. ಭೂಮಿಯ ಸಾಂದ್ರತೆಯನ್ನು ಕಂಡು ಹಿಡಿದದ್ದು ಭೌತವಿಜ್ಞಾನದಲ್ಲಿ ಈತನ ಮಹಾಸಾಧನೆ. ಇದನ್ನು ಪ್ರಥಮವಾಗಿ ಸಾಧಿಸಿದವ ಇವನೇ. ನ್ಯೂಟನ್ನನ ಸಾರ್ವತ್ರಿಕ ಗುರುತ್ವಾಕರ್ಷಣ ನಿಯಮದ ಪ್ರಕಾರ $M_1$ ಮತ್ತು $M_1$ ದ್ರವ್ಯರಾಶಿಗಳಿರುವ ಎರಡು ಕಾಯಗಳ ನಡುವಿನ ಪರಸ್ಪರ ಆಕರ್ಷಣಬಲ $G\frac{M_1M_2}{r^2}$ ಇಲ್ಲಿ G ಗುರುತ್ವಾಕರ್ಷಣದ ನಿಯತಾಂಕ; *r* ಆಕಾಶಕಾಯಗಳ ಗುರುತ್ವ ಕೇಂದ್ರಗಳ ನಡುವಿನ ಅಂತರ. ಜ್ಞಾತ ದ್ರವ್ಯರಾಶಿಗಳಿರುವ ( $M_1M_2$ ಗೊತ್ತಿವೆ) ಎರಡು ಕಾಯಗಳನ್ನು ಆಯಬಹುದು. ಅವುಗಳ ನಡುವಿನ ಅಂತರ *r*ನ್ನು ಅಳೆಯಬಹುದು. ಇಂಥ ಒಂದು ಪ್ರಯೋಗವನ್ನು ರೂಪಿಸಿ ಆ ಕಾಯಗಳ ನಡುವಿನ ಗುರುತ್ವಾಕರ್ಷಣ ಬಲವನ್ನು ತಿಳಿಯೋಣ ಎಂದರೆ *G* ಯ ಬೆಲೆ, ಅದು ನಿಯತಾಂಕ ವಾಗಿದ್ದರೂ, ಅಜ್ಞಾತವಾಗಿರು ವುದರಿಂದ ಪ್ರಯೋಗ ಸ್ಥಗಿತವಾಗುತ್ತದೆ. ಆದ್ದರಿಂದ *G*ಯ ಬೆಲೆಯನ್ನು ಗೊತ್ತುಪಡಿಸುವುದು ಕ್ಯಾವೆಂಡಿಷನ ಎದುರಿಗಿದ್ದ ಸಮಸ್ಯೆ. ಈತ ಒಂದು ಅಭೂತಪೂರ್ವ ಪ್ರಯೋಗವನ್ನು ರೂಪಿಸಿದ (1798). ಹಗುರಾದ ಒಂದು ಸರಳಿನ ಕೇಂದ್ರಕ್ಕೆ ತಂತಿಯನ್ನು ಬಂಧಿಸಿ ಆ ಸರಳನ್ನು ತೂಗಗೊಟ್ಟ.. ಸರಳಿನ ಒಂದೊಂದು ಕೊನೆಯಲ್ಲೂ ಸೀಸದ ಹಗುರಾದ ಒಂದೊಂದು ಚಂಡನ್ನು ಜೋಡಿಸಲಾಗಿತ್ತು. ಸರಳು ಮತ್ತು ಸೀಸದ ಚಂಡುಗಳ ಈ ವ್ಯವಸ್ಥೆ ತಂತಿಯ ಸುತ್ತ ಮುಕ್ತವಾಗಿ ಆವರ್ತಿಸಬಲ್ಲುದು. ಯಾವುದೇ ಚಂಡಿನ ಮೇಲೆ ಪ್ರಯುಕ್ತಿಸಿದ ಅತ್ಯಲ್ಪ ಬಲವೂ ಈ ವ್ಯವಸ್ಥೆಯಲ್ಲಿ ತಿರುಚನ್ನು ಉಂಟು ಮಾಡುವಷ್ಟು ಸೂಕ್ಷ್ಮವಾಗಿಯೂ ಕೋಮಲ ವಾಗಿಯೂ ಪ್ರಯೋಗವನ್ನು ರೂಪಿಸಲಾಗಿತ್ತು. ಜ್ಞಾತ ಅಲ್ಪಬಲಗಳನ್ನು ಪ್ರಯುಕ್ತಿಸಿ ಒಂದೊಂದು ಬಲವೂ ಉಂಟು ಮಾಡುವ ತಿರುಚನ್ನು ಅಳತೆ ಮಾಡಲಾಯಿತು. ಇಂಥ ಒಂದು ಯಥಾದಿ ಸಿದ್ಧವಾದ ಬಳಿಕ ಕ್ಯಾವೆಂಡಿಷ್ ಜ್ಞಾತ ದ್ರವ್ಯರಾಶಿಗಳಿರುವ ಎರಡು ದೊಡ್ಡ ಚಂಡುಗಳನ್ನು ಸರಳಿನ ಕೊನೆಯ ಹಗುರ ಚಂಡುಗಳ ಬಳಿಗೆ (ಒಂದೊಂದನ್ನು ಒಂದೊಂದು ಕಡೆಗೆ) ತಂದು ಹಿಡಿದ. ದೊಡ್ಡ ಚಂಡುಗಳ ಮತ್ತು ಹಗುರ ಚಂಡುಗಳ ನಡುವಿನ ಗುರುತ್ವಬಲದ ಪರಿಣಾಮವಾಗಿ ತಂತಿಯಲ್ಲಿ ತಿರುಚು ತಲೆದೋರಿತು. ಇದರ ಅಳತೆಯಿಂದ ಒಂದೊಂದು ಜೊತೆ ಚಂಡುಗಳ (ಹಗುರ ಹಾಗೂ ದೊಡ್ಡ) ನಡುವಿನ ಗುರುತ್ವಾಕರ್ಷಣ ಬಲವನ್ನು ನಿರ್ಧರಿಸಿದ. ಈಗ ಚಂಡುಗಳ ನಡುವಿನ ಅಂತರ ಅವುಗಳ ದ್ರವ್ಯರಾಶಿಗಳು ಎಲ್ಲವೂ ಜ್ಞಾತವಾಗಿರುವುದರಿಂದ *G*ಯ ನಿರ್ಧಾರ ಸಾಧ್ಯ. ಈ ಸರಳ ನಿಷ್ಕೃಷ್ಟ ಪ್ರಯೋಗದಿಂದ (ಇದು ಕ್ಯಾವೆಂಡಿಷ್ ಪ್ರಯೋಗವೆಂದೇ ಪ್ರಸಿದ್ಧವಾಗಿದೆ) ಲಭ್ಯವಾದ *G*ಯ ಬೆಲೆಯನ್ನು ಉಪಯೋಗಿಸಿ ಭೂಮಿಯ ದ್ರವ್ಯರಾಶಿ $6.6 \times 10^{21}$ ಟನ್ನುಗಳೆಂದೂ ಸಾಂದ್ರತೆ ಸುಮಾರಾಗಿ ನೀರಿನ 5.5. ರಷ್ಟೆಂದೂ ನಿರ್ಧಾರವಾಯಿತು.

ಸ್ಥಿರವಿದ್ಯುತ್ತಿನ ಕ್ಷೇತ್ರದಲ್ಲಿ ಕ್ಯಾವೆಂಡಿಷ್ ನಡೆಸಿದ ಸಂಶೋಧನೆಗಳ ವಿವರಗಳನ್ನು ಮ್ಯಾಕ್ಸ್‌ವೆಲ್ 1879ರಲ್ಲಿ ಪ್ರಕಟಪಡಿಸಿದ. ವಿದ್ಯುತ್ ಸಂಗ್ರಾಹಕಗಳ ಸಂಚಯನ ಶಕ್ತಿಗಳನ್ನು ಕುರಿತು ಸಂಶೋಧನೆ ನಡೆಸುತ್ತಿದ್ದಾಗ ಕ್ಯಾವೆಂಡಿಷ್ ಹಲವಾರು ಲೆಡೆನ್ ಜಾಡಿಗಳನ್ನು ಒಂದೇ ವಿದ್ಯುತ್ ಒತ್ತಡಕ್ಕೆ ಒಪ್ಪಿಸಿ, ಅನಂತರ ತನ್ನ ಶರೀರವನ್ನೇ ಗ್ಯಾಲ್ವನೋಮೀಟರ್ ಆಗಿ ಉಪಯೋಗಿಸಿ, ಆ ಸಂಗ್ರಾಹಕಗಳ ವಿಸರ್ಜನೆಯಿಂದ ತನಗೆ ಉಂಟಾದ ಆಘಾತ ಪ್ರಮಾಣಗಳಿಂದ ಅವುಗಳ ಸಂಚಯನಶಕ್ತಿಗಳ ತುಲನೆ ಮಾಡುತ್ತಿದ್ದ. ಓಮನ ನಿಯಮವನ್ನು ತಾತ್ತ್ವಿಕವಾಗಿ ಕ್ಯಾವೆಂಡಿಷ್ ಆವಿಷ್ಕರಿಸಿದ್ದ ಎಂಬ ವದಂತಿ ಉಂಟು. ಆದರೆ ಇದು ಸಕಾಲದಲ್ಲಿ ಪ್ರಕಟವಾಗಲಿಲ್ಲ.

ಭೂವಾತಾವರಣದ ಮೇಲೆ ಸತತವೂ ದಾಳಿ ಇಡುತ್ತಿರುವ ಪ್ರಕಾಶಮಾನವಾದ ಉಲ್ಕೆಗಳು ಭೂಮಿಗೆ ಎಷ್ಟು ದೂರದಲ್ಲಿದ್ದಾಗ ಗೋಚರಿಸುತ್ತವೆ ಎಂಬುದನ್ನು ಮೊದಲು ಲೆಕ್ಕಹಾಕಿದವ ಕ್ಯಾವೆಂಡಿಷ್. ಹವಾ ಮುನ್ಸೂಚಕ ಉಪಕರಣಗಳನ್ನು ಪರಿಷ್ಕರಿಸಿದ್ದಲ್ಲದೇ ಖಗೋಳವಿಜ್ಞಾನದ ಉಪಕರಣಗಳನ್ನು ಪರಿಷ್ಕರಿಸುವುದರಲ್ಲಿ ಸಹ ಈತ ನಿರತನಾಗಿದ್ದ. ಕ್ಯಾವೆಂಡಿಷ್ ಗತಿಸಿದ್ದು 1810ರ ಫೆಬ್ರುವರಿ 24 ರಂದು.

ಜಾರ್ಜ್ ವಿಲ್ಸನ್ (1818–59) ಕ್ಯಾವೆಂಡಿಷನ ಜೀವನ ಚರಿತ್ರೆಯನ್ನು ಬರೆದಿದ್ದಾನೆ. ಹೆನ್ರಿ ಕ್ಯಾವೆಂಡಿಷ್ ಉಪಯೋಗಿಸಿದ ಅನೇಕ ಉಪಕರಣಗಳನ್ನು ಕಾಪಾಡಿಕೊಂಡು ಬಂದಿದ್ದು ಅವನ್ನು ಇಂದಿಗೂ ರಾಯಲ್ ಇನ್ಸ್‌ಟಿಟ್ಯೂಟಿನಲ್ಲಿ ಕಾಣಬಹುದು. ಲಂಡನ್ನಿನಲ್ಲಿ ಕಟ್ಟಿರುವ ಕ್ಯಾವೆಂಡಿಷ್ ಭೌತವಿಜ್ಞಾನ ಪ್ರಯೋಗಾಲಯ ಮತ್ತು ಗ್ರಂಥ ಭಂಡಾರಗಳು ಈ ವಿಜ್ಞಾನಿಯ ನೆನಪನ್ನು ಸದಾಕಾಲ ಜೀವಂತಗೊಳಿಸಿವೆ. (ಡಿ.ಎಸ್.ಎಂ.; ಜಿ.ಎಸ್.ಎಸ್.)

**ಕ್ಯಾಶ್ಮೀಯರ್ :** ಕಾಶ್ಮೀರ, ಟಿಬೆಟ್ ಮೊದಲಾದ ಹಿಮಾಲಯ ಪ್ರದೇಶಗಳ ಮೇಕೆಗಳ ಉಣ್ಣೆಯಿಂದ ತಯಾರಿಸಿದ ಬಟ್ಟೆ. ಕಾಶ್ಮೀರಿಗಳು ಅನೇಕ ಶತಮಾನಗಳಿಂದಲೂ ಈ ಹೆಸರಿನ ಶಾಲುಗಳನ್ನು ತಯಾರಿಸುತ್ತಿದ್ದಾರೆ. ಇವು ವಸ್ತ್ರಗಳಲ್ಲೆಲ್ಲ ಅತ್ಯುತ್ತಮವಾದವು ಹಾಗೂ ಪ್ಯಾಷ್ಮಿನ ಉಣ್ಣೆಯಿಂದ ತಯಾರಾದ ಕೈನೂಲಿನ ಕೈಮಗ್ಗದ ಬಟ್ಟೆಗಳು. ನೇಯ್ಗೆಯ ಕ್ರಮ ಸಾದಾ ಅಥವಾ ಮೂಲೆ ನೇಯ್ಗೆ. ಶಾಲನ್ನು ಒಂದು ಹೆಚ್ಚಿನ ವರ್ಣರಂಜಿತ, ಅತ್ಯಾಕರ್ಷಕ, ಸುಂದರ ಚಿತ್ರಗಳಿಂದ, ವಿಶೇಷವಾಗಿ ಕಸೂತಿ ಹೊಲಿಗೆಯ ವೈವಿಧ್ಯದಿಂದ ಶೃಂಗರಿಸುತ್ತಾರೆ. ಹಾಸಿನಲ್ಲಿ ಎರಡು ದಾರಗಳು, ಹೊಕ್ಕಿನಲ್ಲಿ ಒಂದು ದಾರ ಎಂಬೀ ಕ್ರಮದಲ್ಲಿ ಸಾಮಾನ್ಯವಾಗಿ ನೇಯ್ದಿರುತ್ತಾರೆ. ಶಾಲುಗಳನ್ನು ಗೌನುಗಳಿಗೂ ಕೆಲವು ಧಾರಣವಸ್ತ್ರಗಳಿಗೂ ಉಪಯೋಗಿಸುತ್ತಾರೆ. (ವಿ.ಎಸ್.ವಿ.)

**ಕ್ಯಾಸನರ್, ಹ್ಯಾಮಿಲ್ಟನ್ ಯಂಗ್ :** 1858–99. ಅಮೆರಿಕದ ಪ್ರತಿಭಾವಂತ ಕೈಗಾರಿಕಾ ರಸಾಯನವಿಜ್ಞಾನಿ. ನ್ಯೂ ಯಾರ್ಕಿನ ಬ್ರೂಕ್ಲಿನ್ನಿನಲ್ಲಿ 1858 ಸೆಪ್ಟೆಂಬರ್ 11ರಂದು ಜನಿಸಿದ. ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ವಿಶ್ಲೇಷಣ ಮತ್ತು ಔದ್ಯೋಗಿಕ ರಸಾಯನವಿಜ್ಞಾನವನ್ನು ಅಭ್ಯಸಿಸಿದ. ಆದರೆ ವಿಶ್ವವಿದ್ಯಾಲಯದ ನೀರಸ ಏಕತೆ ಈತನಿಗೆ ಹಿಡಿಸಲಿಲ್ಲ. ಹೀಗಾಗಿ ಸಾಂಪ್ರದಾಯಿಕ ವಿದ್ಯಾರ್ಜನಕ್ರಮವನ್ನು ತೊರೆದು ತನ್ನ ಸಮಸ್ತ ಸಾಧನೆಯನ್ನೂ ರಸಾಯನವಿಜ್ಞಾನದ ಕಡೆಗೆ ಕೇಂದ್ರೀಕರಿಸಲು ನಿರ್ಧರಿಸಿದ. ಇದರಿಂದಾಗಿ ಅವನಿಗೆ ಮುಂದೆ ಡಿಗ್ರಿ ದೊರೆಯುವುದು ತಪ್ಪಿಹೋಯಿತು. ಸ್ವಂತ ಪ್ರಯೋಗಾಲಯವನ್ನು ಕ್ಯಾಸನರ್ ಸ್ಥಾಪಿಸಿ ವಿಶ್ಲೇಷಣ ಹಾಗೂ ಸಲಹೆಗಾರ ರಸಾಯನವಿಜ್ಞಾನಿಯಾಗಿ ಕಾರ್ಯೋದ್ಯುಕ್ತನಾದ. ಇಲ್ಲಿ ಆತ ಪ್ರವರ್ಧಿಸಿದ. ಹೀಗಾಗಿ ತನ್ನ ಪ್ರಯೋಗಶಾಲೆಯನ್ನು ವಿಶಾಲಗೊಳಿಸಬೇಕಾಯಿತು. ಇಲ್ಲಿ ತನ್ನ ಆಸಕ್ತ ಕಾರ್ಯಚಟುವಟಿಕೆಗಳ ಮಧ್ಯೆ ಬಿಡುವು ಮಾಡಿಕೊಂಡು, ಕ್ಷಾರಲೋಹಗಳು ಮತ್ತು ಅವುಗಳ ಸಂಯುಕ್ತಗಳನ್ನು ಉತ್ಪಾದಿಸುವ ವಿಧಾನಗಳ ಬಗ್ಗೆ ಸಂಶೋಧನೆ ಮಾಡಲು ಉಪಕ್ರಮಿಸಿದ. ಕಾಸ್ಟಿಕ್ ಸೋಡವನ್ನು ಕಬ್ಬಿಣದ ಕಾರ್ಬೈಡ್ ಅಥವಾ ತತ್ಸಮ ವಸ್ತುವಿನಿಂದ ಅಪಕರ್ಷಿಸಿ ಸೋಡಿಯಂ ಲೋಹವನ್ನು ಉತ್ಪಾದಿಸುವ ವಿಧಾನಕ್ಕೆ ಅವನಿಗೆ 1886ರ ಪೂರ್ವದಲ್ಲಿ ಏಕಸ್ವ (ಪೇಟೆಂಟ್) ದೊರೆಯಿತು. ಈ ವಿಧಾನ ಹಿಂದಿನ ವಿಧಾನಗಳಿಗಿಂತ ದಕ್ಷವಾಗಿತ್ತು. ಇದು ಸೋಡಿಯಂ ಲೋಹದ ಬೆಲೆ ಕಡಿಮೆಯಾಗಲು ಕಾರಣವಾಯಿತು. ಒಂದು ಪೌಂಡ್ ಸೋಡಿಯಂ 25 ಸೆಂಟುಗಳಿಗೆ ಇಳಿಯಿತು. ಇದು ಪ್ರಪಂಚದಾದ್ಯಂತ ಕೈಗಾರಿಕೋದ್ಯಮಿಗಳ ಗಮನ ಸೆಳೆಯಿತು. ಈ ವಿಧಾನಕ್ಕಾಗಿ ಮುಂದೆ ಫ್ರ್ಯಾಂಕ್ಲಿನ್ ಇನ್ಸ್‌ಟಿಟ್ಯೂಟ್ ತನ್ನ ಪ್ರತಿಷ್ಠಿತ ಸ್ವರ್ಣಪದಕವನ್ನಿತ್ತು ಕ್ಯಾಸನರನ್ನು ಗೌರವಿಸಿತು.

ಕ್ಯಾಸನರ್ ಹುಟ್ಟುವ ನಾಲ್ಕು ವರ್ಷಗಳು ಮುಂಚಿತವಾಗಿ ಫ್ರಾನ್ಸಿನ ರಸಾಯನವಿಜ್ಞಾನಿ ಹೆನ್ರಿ ಸೇಂಟ್‌ಕ್ಲೇರ್ ಡೆವಿಲ್ ಅಲ್ಯೂಮಿನಿಯಂ ಸೋಡಿಯಂ ಕ್ಲೋರೈಡ್ ಯುಗ್ಮಲವಣವನ್ನು ಸೋಡಿಯಂ ಲೋಹದಿಂದ ಅಪಕರ್ಷಿಸಿ ಅಲ್ಯೂಮಿನಿಯಂ ತಯಾರಿಸುವ ವಿಧಾನವನ್ನು ಕಂಡುಹಿಡಿದಿದ್ದ. ಈ ವಿಧಾನದಿಂದ ಒಂದು ಪೌಂಡು ಅಲ್ಯೂಮಿನಿಯಂ ತಯಾರಿಸಲು ಬೆಲೆಯುಳ್ಳ ಮೂರು ಪೌಂಡು ಸೋಡಿಯಂ ಬೇಕಾಗುತ್ತಿತ್ತು. ಅಲ್ಯೂಮಿನಿಯಮಿನ ಬೆಲೆ ಗಗನ ಮುಟ್ಟಿತ್ತು. ಇದರ ಬೆಲೆ ಕೆಳಗಿಳಿಸುವುದಕ್ಕಾಗಿ ಹಲವಾರು ವಿಜ್ಞಾನಿಗಳು ಎಷ್ಟೇ ಸಂಶೋಧಿಸಿದರೂ ಜಯಶೀಲರಾಗಿರಲಿಲ್ಲ. ಕ್ಯಾಸನರನಿಂದ ಇದು ಸಾಧ್ಯವಾಯಿತು(1886). ಕ್ಯಾಸನರ್ ವಿಧಾನಕ್ಕೆ ಆರ್ಥಿಕ ನೆರವು ದೊರೆಯದ್ದರಿಂದ ಈತ 1886–87ರ ಚಳಿಗಾಲದಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದ ಅಲ್ಲಿ ಹೊಸದಾಗಿ ಸ್ಥಾಪಿತವಾಗಿದ್ದ ಅಲ್ಯೂಮಿನಿಯಂ ಅಂಡ್ ಕಂಪನಿ ಲಿಮಿಟೆಡ್ಡಿನ ಮ್ಯಾನೇಜಿಂಗ್ ಡೈರೆಕ್ಟರಾಗಿ ಅಧಿಕಾರ ವಹಿಸಿಕೊಂಡ.

ಅಲ್ಯೂಮಿನಿಯಮಿಗೆ ಪ್ರಪಂಚ ಮಾರುಕಟ್ಟೆಯನ್ನು ಅವನ ಕಂಪನಿ ಗಳಿಸಿ ಎರಡು ವರ್ಷಗಳ ಕಾಲ ಈ ಲೋಹದ ಪೂರ್ಣಾಧಿಕಾರವನ್ನು ಅನುಭವಿಸಿತು. ಆದರೆ ಆ ವೇಳೆಗಾಗಲೇ ಅಲ್ಯೂಮಿನಿಯಮನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದಿಸುವ ಹಾಲನ ವಿಧಾನ ಪ್ರಪಂಚದ ಮಾರುಕಟ್ಟೆಯಲ್ಲಿ ಪರಿಣಾಮ ಬೀರಿತ್ತು. ಮುಂದೆ 1891ರಲ್ಲಿ ಕಾಸ್ಟಿಕ್ ಸೋಡವನ್ನು ವಿದ್ಯುದ್ವಿಶ್ಲೇಷಿಸಿ ಸೋಡಿಯಮನ್ನು ಇನ್ನೂ ಕಡಿಮೆ ಬೆಲೆಗೆ ತಯಾರಿಸುವುದನ್ನು ಕಂಡುಹಿಡಿದಾಗ ಡೆವಿಲ್–ಕ್ಯಾಸನರ್ ವಿಧಾನ ನಿರ್ನಾಮವಾಯಿತು. ಇದರಿಂದಾಗಿ ಕ್ಯಾಸನರ್ ಸೋಡಿಯಂ ಲೋಹಕ್ಕೆ ಬೇರೆ ಉಪಯೋಗಗಳನ್ನು ಕಂಡುಹಿಡಿಯುವ ಕಡೆ ದೃಷ್ಟಿ ಹರಿಸಿದ. ಆರ್ಗ್ಯಾನಿಕ್ ಸಂಶ್ಲೇಷಣೆಗಳಲ್ಲಿ ಸೋಡಿಯಂ ಪೆರಾಕ್ಸೈಡ್ ಮತ್ತು ಚಲುವೆಕಾರಿಗಳ ತಯಾರಿಕೆಯಲ್ಲಿ ಮತ್ತು ವಾಣಿಜ್ಯ ಸಯನೈಡುಗಳ ಉತ್ಪಾದನೆಯಲ್ಲಿ ಸೋಡಿಯಂ ಲೋಹದ ಉಪಯೋಗವನ್ನು ಕಂಡುಕೊಳ್ಳುವುದರಲ್ಲಿ ಸಫಲನಾದ. ಈತನ ಇತರ ಗಮನಾರ್ಹ ಸಾಧನೆಗಳಲ್ಲಿ ಕೆಲವು ಹೀಗಿವೆ: ಕರಗಿದ ಕಾಸ್ಟಿಕ್ ಸೋಡಾ ಅಥವಾ ಕಾಸ್ಟಿಕ್ ಪೊಟ್ಯಾಷನ್ನು ವಿದ್ಯುದ್ವಿಶ್ಲೇಷಿಸಿ ಅನುಕ್ರಮವಾಗಿ ಸೋಡಿಯಂ ಮತ್ತು ಪೊಟಾಸಿಯಂ ಲೋಹವನ್ನು ಉತ್ಪಾದಿಸುವ ವಿಧಾನ (1891); ಉಪ್ಪನ್ನು ವಿದ್ಯುದ್ವಿಶ್ಲೇಷಿಸಿ ಕಾಸ್ಟಿಕ್ ಸೋಡ ಮತ್ತು ಕ್ಲೋರಿನ್ ಅನಿಲವನ್ನು ಉತ್ಪಾದಿಸುವ ವಿಧಾನ (1894).

1898ರ ವೇಳೆಗೆ ಕ್ಯಾಸನರನ ಆರೋಗ್ಯ ಕೆಡುತ್ತ ಬಂತು. ಆರೋಗ್ಯ ಸುಧಾರಿಸಿಕೊಳ್ಳುವುದಕ್ಕಾಗಿ ಫ್ಲಾರಿಡದಲ್ಲಿ ಚಳಿಗಾಲವನ್ನು ಕಳೆದು ನ್ಯೂ ಯಾರ್ಕಿನ ಸಾರನಾಕಿಗೆ ಹಿಂತಿರುಗಿದ. 41ನೆಯ ವಯಸ್ಸಿನಲ್ಲಿ 1899ರ ಅಕ್ಟೋಬರ್ 11ರಂದು ಕ್ಷಯರೋಗದಿಂದ ನಿಧನಹೊಂದಿದ. ಇವನ ತಂದೆ ಮತ್ತು ಇಬ್ಬರು ಸಹೋದರರೂ ಕ್ಷಯರೋಗಕ್ಕೆ ತುತ್ತಾಗಿದ್ದರು. ವಿವಾಹಿತ ಕ್ಯಾಸನರನಿಗೆ ಮಕ್ಕಳಿರಲಿಲ್ಲ. (ಪಿ.ಜಿ.ಆರ್.)

**ಕ್ಯಾಸನೂರು ಕಾಡಿನ ಕಾಯಿಲೆ:** ವೈರಸ್ ಸೋಂಕಿನಿಂದ ಮೊದಲು ಮಂಗಗಳಲ್ಲಿಯೂ ತರುವಾಯ ಮನುಷ್ಯರಲ್ಲಿಯೂ 1957ರಲ್ಲಿ ಕಾಣಿಸಿಕೊಂಡ ಒಂದು ಪ್ರಾಣಾಂತಿಕ ವ್ಯಾಧಿ. ಇದು ಮೊಟ್ಟಮೊದಲಿಗೆ ಕಾಣಿಸಿಕೊಂಡದ್ದು ಕರ್ನಾಟಕದ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ (1955-56). ಆರೋಗ್ಯ ಇಲಾಖೆಯ ಪ್ರಥಮ ಹೊಸ ಪರಿಶೋಧನೆಯಿಂದ ಇದು ಬಹುಶಃ ಹೊಸ ಕಾಯಿಲೆ ಇರಬೇಕೆಂಬ

ಕ್ಯಾಸನೂರು ಕಾಡಿನಲ್ಲಿ ದೊರೆತ ಸತ್ತಮಂಗವೊಂದರ ಶವಪರೀಕ್ಷೆ

ಸಂಶಯ ಮೂಡಿತು. 1957ರ ಆದಿಭಾಗದಲ್ಲಿ ಇದೇ ಕಾಯಿಲೆ ಮತ್ತೆ ಆ ಹಳ್ಳಿಗಳ ಸಮೀಪದಲ್ಲಿ ಉಗ್ರರೀತಿಯಲ್ಲಿ ತಲೆದೋರಿತು. ಇದರ ವಿಶಿಷ್ಟ ಲಕ್ಷಣವೆಂದರೆ ಈ ರೋಗದಿಂದ ಮನುಷ್ಯರು ನರಳುತ್ತಿದ್ದ ಹಳ್ಳಿಗಳ ಸುತ್ತಮುತ್ತಲಿನ ಕಾಡುಗಳಲ್ಲಿ ಮಂಗಗಳು ಅಸ್ವಾಭಾವಿಕವಾಗಿ ಅಧಿಕ ಸಂಖ್ಯೆಯಲ್ಲಿ ಸಾಯುತ್ತಿದ್ದುವು. ಅಂದಿನಿಂದ ಪ್ರತಿವರ್ಷವೂ ಬೇಸಗೆಯಲ್ಲಿ ಈ ರೋಗ ಅಲ್ಲಿ ಕಾಣಿಸಿಕೊಳ್ಳುತ್ತಿದೆ. ಕಾಯಿಲೆಯ ಜನರ ರಕ್ತ ಮತ್ತು ಆಗತಾನೆ ಸತ್ತ ಮಂಗಗಳ ಅವಯವಗಳ (ಮಿದುಳು, ಹೃದಯ, ಶ್ವಾಸಕೋಶ, ಪಿತ್ತಜನಕಾಂಗ) ಪರೀಕ್ಷೆಯಿಂದ ರೋಗಕಾರಕ ವೈರಸ್ಸಿನ ಶೋಧವಾಯಿತು. ಮನುಷ್ಯ ಮತ್ತು ಮಂಗಗಳ ಕಾಯಿಲೆ ಒಂದೇ ಎಂದು ಇದರಿಂದ ಖಚಿತವಾಯಿತು. ವೈರಸ್ಸನ್ನು ಮೊಟ್ಟಮೊದಲು ಕ್ಯಾಸನೂರು ಕಾಡಿನಲ್ಲಿ ಸತ್ತ ಮಂಗದಿಂದಲೂ ಅದೇ ಕಾಡಿನಲ್ಲಿ ಓಡಾಡಿ ಬಂದ ರೋಗಿಗಳಿಂದಲೂ ಪತ್ತೆ ಹಚ್ಚಿದುದರಿಂದ ಈ ಕಾಯಿಲೆಗೆ ಕ್ಯಾಸನೂರು ಕಾಡಿನ ಕಾಯಿಲೆ ಎಂಬ ಹೆಸರು ಬಂದಿದೆ. ಅನಂತರ ಪರೀಕ್ಷೆ ಮಾಡಿದ್ದರಲ್ಲಿ ಕೆಲವು ಜಾತಿಯ ಉಣ್ಣಿಗಳಲ್ಲಿ ಸಹ ಈ ವೈರಸ್ಸಿನ ಶೋಧವಾಗಿದೆ. ಆದ್ದರಿಂದ ಉಣ್ಣಿಗಳ ಕಡಿತದಿಂದ ವೈರಸ್ಸಿನ ಸೋಂಕು ಹರಡಿ ಕಾಯಿಲೆ ವ್ಯಾಪಿಸುವುದೆಂದು ತರ್ಕಿಸಿದ್ದಾರೆ.

**ರೋಗದಲಕ್ಷಣಗಳು:** ಇದ್ದಕ್ಕಿದ್ದಂತೆ ಚಳಿಜ್ವರ ಕಾಣಿಸಿಕೊಂಡು ಸತತವಾಗಿ ಒಂದೆರಡು ವಾರಗಳು ಬಿಡದೆ ಇರುತ್ತದೆ. ತಲೆನೋವು ತೀವ್ರವಾಗಿರುವುದು. ಮೈ ಕೈ ಸೊಂಟನೋವು, ಸುಸ್ತು ನಿಶ್ಶಕ್ತಿ ಅತ್ಯಧಿಕ. ಆಗಾಗ ಕೆಲವರಿಗೆ ವಾಂತಿ ಮತ್ತು ಭೇದಿಯಾಗಬಹುದು. ವಿರಳವಾಗಿ ಮತಿವಿಕಲ್ಪವಾಗಲೂಬಹುದು. ಪ್ರಾರಂಭದಲ್ಲಿ ಕಣ್ಣುಗಳು ಕೆಂಪಾಗಿದ್ದು ಕಣ್ಣು ಗುಡ್ಡೆಗಳ ನೋವಾಗುವುದುಂಟು. ಸಾಧಾರಣವಾಗಿ ರೋಗ ಅಂಟಿದ ನಾಲ್ಕಾರು ದಿವಸಗಳ ತರುವಾಯ ಮೂಗು, ಬಾಯಿಗಳಲ್ಲಿ, ಕಫ ವಾಂತಿ ಮತ್ತು ಮಲವಿಸರ್ಜನೆಗಳ ಮೂಲಕ ರಕ್ತಸ್ರಾವವಾಗುವುದು. ಈ ರೋಗದಲ್ಲಿ ವಿಶೇಷ ಬಾಯಾರಿಕೆ, ದಣಿವು ಮತ್ತು ಬಿಳಿಯ ರಕ್ತಕಣಗಳ ಅಭಾವ, ಕೆಂಪು ರಕ್ತಕಣಗಳ ಅಭಾವ, ಕ್ಷೀಣ ರಕ್ತ ಒತ್ತಡ ಮತ್ತು ಕ್ಷೀಣ ಹೃದಯ ಬಡಿತ ವ್ಯಕ್ತಪಟ್ಟಿವೆ. ರೋಗ ಎರಡರಿಂದ ಮೂರು ವಾರಗಳಿದ್ದರೂ ರೋಗಿ ಮುಕ್ತನಾಗಿ ಯಥಾಸ್ಥಿತಿಗೆ ಬರಲು ಒಂದೆರಡು ತಿಂಗಳಾದರೂ ಬೇಕಾಗಬಹುದು.

ಈ ರೋಗ ಸಾಮಾನ್ಯವಾಗಿ ಪ್ರತಿವರ್ಷವೂ ಬೇಸಗೆಯಲ್ಲಿ ಜನವರಿಯಿಂದ ಜೂನ್ ತಿಂಗಳುಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಮಂಗಗಳು ಮತ್ತು ಮನುಷ್ಯರು ಏಕಕಾಲದಲ್ಲಿ ಈ ರೋಗಕ್ಕೆ ತುತ್ತಾಗುವರು. ಇದೇ ಸಮಯದಲ್ಲಿ ಕಾಡಿನಲ್ಲಿ ಉಣ್ಣಿಗಳು ಯಥೇಚ್ಛವಾಗಿರುವುದಲ್ಲದೆ ವೈರಸ್ ಕೂಡ ಈ ಉಣ್ಣಿಗಳಲ್ಲಿ ವಿಪುಲವಾಗಿ ಕಂಡುಬಂದಿದೆ. ವೈರಸ್ ಯುಕ್ತ ಉಣ್ಣಿಗಳು ಮನುಷ್ಯರ ಮೇಲೂ ಮಂಗಗಳ ಮೇಲೂ ದೊರಕಿವೆ. ಅಂಥ ಕಾಡಿನ ಸಂಪರ್ಕವಾದರೆ ರೋಗ ಸುಲಭವಾಗಿ ಹರಡಲು ಸಾಧ್ಯವಾಗುತ್ತದೆ. ಕಪ್ಪು ಮಂಗ ಮತ್ತು ಕೆಂಪು ಮಂಗಗಳೆರಡೂ ಈ ರೋಗಕ್ಕೆ ತುತ್ತಾಗುತ್ತವೆ. ಕ್ಯಾಸನೂರು ಕಾಡಿನ ಕಾಯಿಲೆ ಮನುಷ್ಯರಲ್ಲಿ ಸಾಂಕ್ರಾಮಿಕವಲ್ಲ.

**ರೋಗನಿರ್ಣಯ:** ರೋಗಿಯನ್ನು ವೈರಸ್ ಪ್ರವೇಶಿಸಿದ 4-6 ದಿವಸಗಳ ತರುವಾಯ ಕಾಯಿಲೆಯ ಚಿಹ್ನೆಗಳು ಪ್ರಕಟವಾಗುತ್ತವೆ. ರೋಗನಿರ್ಣಯಕ್ಕೆ ರಕ್ತ ಪರೀಕ್ಷೆ ಅತಿಮುಖ್ಯ. ಪ್ರಯೋಗಶಾಲೆಯಲ್ಲಿ ರೋಗಿಯ ಮೊದಲ ರಕ್ತವನ್ನು (ಅಕ್ಯೂಟ್‌ಬ್ಲಡ್) ಸಾಕಿದ ಆರೋಗ್ಯ ಬಿಳಿ ಇಲಿಗಳ ಸ್ವಿಸ್ ಆಲ್ಬಿನೋ ಮೈಸ್ ಮಿದುಳಿಗೆ ಚುಚ್ಚುವ ಮೂಲಕ ಕೊಡಲಾಗುವುದು. ಅನಂತರ ಇಲಿಗಳಿಗೆ ಆದ ಪರಿಣಾಮದಿಂದ ವೈರಸ್ಸಿನ ಇರುವಿಕೆಯನ್ನು ಬೇರೆ ವಿಶಿಷ್ಟಪರೀಕ್ಷೆಗಳಿಂದ ಗುರುತಿಸಲಾಗುತ್ತದೆ. ರೋಗಿಯ ಎರಡನೆಯ ರಕ್ತದಲ್ಲಿ (ಕನ್‌ವೇಲೆಸೆಂಟ್ ಬ್ಲಡ್) ಪ್ರತಿ ವಸ್ತುಗಳು ಆಂಟಿಬಾಡೀಸ್ ಎಷ್ಟರಮಟ್ಟಿಗೆ ವೃದ್ಧಿಯಾಗಿವೆ ಎಂದು ಕಂಡುಹಿಡಿದು ರೋಗವನ್ನು ಖಚಿತ ಪಡಿಸಬಹುದು. ರೋಗಿಯ ರಕ್ತವನ್ನು ಸಾಗಿಸುವಾಗ ಸದಾಮಂಜಿನಗಡ್ಡೆಯ ಸಂಪರ್ಕದೊಡನೆ ಇರಿಸುವುದು ಅತಿಮುಖ್ಯ. ಇಲ್ಲದಿದ್ದರೆ ವೈರಸ್ ನಶಿಸಿಹೋಗಿ ಗುರುತಿಸಲಾಗುವುದಿಲ್ಲ. ಈ ರೋಗ ತಗುಲಿದ ವ್ಯಕ್ತಿಯಿಂದ ಸುಮಾರು 8-10 ದಿವಸಗಳವರೆಗೆ ವೈರಸ್ಸನ್ನು ಗುರುತಿಸಲಾಗಿದೆ.

**ರೋಗದಮುನ್ನರಿವು:** ಸಾಧಾರಣವಾಗಿ ರೋಗಿ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆದರೆ ಪೂರ್ಣವಾಗಿ ಗುಣಮುಖನಾಗುತ್ತಾನೆ. ಸರಿಯಾದ ಚಿಕಿತ್ಸೆಯಿಲ್ಲದ ರೋಗಿಗಳು ಶೇ. 5 ರಿಂದ 10 ಜನರು ಸಾವಿಗೀಡಾಗುತ್ತಾರೆ. ಬದುಕಿದವರೆಲ್ಲರೂ ಯಾವ ಕುಂದೂ ಇಲ್ಲದೆ ಗುಣಮುಖರಾಗುವರು.

**ಚಿಕಿತ್ಸಾಕ್ರಮ:** ಈ ರೋಗದ ವೈರಸ್ ಯಾವ ಔಷಧಿಯೂ ಇಲ್ಲದೆ ನಾಶವಾಗುವುದಿಲ್ಲ. ಆದ್ದರಿಂದ ಚಿಕಿತ್ಸೆ ರೋಗಿಯ ತೊಂದರೆ ನಿವಾರಣೆಗೆ ಮಾತ್ರ.

**ಮುಂಜಾಗರೂಕತೆಯಕ್ರಮಗಳು:** ಮುಖ್ಯವಾಗಿ, ಮಂಗಗಳು ಸಾಯುತ್ತಿರುವ ಕಾಡಿಗೆ ಜನರು ಪ್ರವೇಶಿಸಬಾರದು. ಹೋಗಲೇಬೇಕಾದಲ್ಲಿ ಉಣ್ಣಿಗಳನ್ನು ದೂರೀಕರಿಸುವ ಮುಲಾಮನ್ನು ಹಾಕಿಕೊಳ್ಳುವುದು ಮತ್ತು ಮೈತುಂಬ ಬಟ್ಟೆಗಳನ್ನು ಹಾಕಿಕೊಂಡು ಉಣ್ಣಿಗಳು ಕಚ್ಚದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಅಂಥ ಕಾಡಿನಿಂದ ಮರಳಿದ ತರುವಾಯ ಸಾಬೂನು ಹಚ್ಚಿ ಮೈ ಉಜ್ಜಿ ಸ್ನಾನ ಮಾಡಬೇಕು. ಎರಡನೆಯದಾಗಿ ರೋಗಬಾರದಂತೆ ಈ ರೋಗದ ಲಸಿಕೆಯ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕು. ಲಸಿಕೆಯನ್ನು ಪುಣೆಯ ವೈರಸ್ ಸಂಶೋಧನ ಕೇಂದ್ರದಲ್ಲಿ ತಯಾರಿಸಿ ಪ್ರಯೋಗಾರ್ಥವಾಗಿ ಕೆಲವು ಜನರಿಗೆ ಕೊಡಲಾಗಿದೆ. ಇದು ರೋಗವನ್ನು ತಡೆಯಲು ಯಶಸ್ವಿಯಾದಲ್ಲಿ ಆಗ ಅದನ್ನು ರೋಗ ಬರಬಹುದಾದ ಜನರಿಗೆ ವ್ಯವಸ್ಥಿತ ರೀತಿಯಲ್ಲಿ ಕೊಟ್ಟು ರೋಗವನ್ನು ತಡೆಯಬಹುದು. ಕ್ಯಾಸನೂರು ಕಾಡಿನ ಕಾಯಿಲೆಯನ್ನು ನಿರ್ಮೂಲಿಸಲು ಯಶಸ್ವಿಯಾದ ಕ್ರಮ ಕೈಗೊಳ್ಳಬೇಕಾದರೆ ರೋಗ ಸ್ವಾಭಾವಿಕವಾಗಿ ಹರಡುವ ಬಗೆಯನ್ನು ತಿಳಿಯುವುದು ಅತಿಮುಖ್ಯ. ಈ ರೋಗದಲ್ಲಿ ಕಾಡಿನ ಪಾತ್ರ ಉಂಟು. ರೋಗ ಹರಡುವುದಕ್ಕೆ ಜನರು, ಮಂಗಗಳು, ದನಕರುಗಳು, ಇಲಿಗಳು, ಪಕ್ಷಿಗಳು, ಇತರೇ ಕಾಡುಪ್ರಾಣಿಗಳು ಮತ್ತು ಉಣ್ಣಿಗಳ ಪಾತ್ರಗಳನ್ನು ನಿಗದಿ ಮಾಡಬೇಕು. ಹಲವಾರು ಪ್ರಾಣಿಗಳ ಪರೀಕ್ಷೆ ನಿಮಿತ್ತ ಈ ರೋಗ ಹರಡುವ ಬಗ್ಗೆ ತನಿಖೆ ಸತತವಾಗಿ ನಡೆಯುತ್ತಿದೆ.

**ಸಂಶೋಧನೆಯಲ್ಲಿ ತೊಡಗಿರುವ ಸಂಸ್ಥೆಗಳು:** ಕರ್ನಾಟಕ ಜನಾರೋಗ್ಯ ಇಲಾಖೆಯವರು ಮನುಷ್ಯರಿಗೆ ಸಂಬಂಧಪಟ್ಟ ಪರೀಕ್ಷೆ ಮಾಡುತ್ತಿದ್ದಾರೆ. ಇದಕ್ಕಾಗಿ ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ ವಿಶೇಷ ಸಿಬ್ಬಂದಿಯಿದೆ. ರೋಗಾಣುಗಳ ಪರೀಕ್ಷೆಯ ನಿಮಿತ್ತ ಶಿವಮೊಗ್ಗದಲ್ಲಿ ಒಂದು ವೈರಸ್ ಪರಿಶೋಧನ ಪ್ರಯೋಗಶಾಲೆಯನ್ನು ಅಮೆರಿಕದ ರಾಕ್‌ಫೆಲರ್ ಫೌಂಡೇಷನ್ ಸಹಾಯದಿಂದ ಸ್ಥಾಪಿಸಲಾಗಿದೆ. ಪುಣೆಯ ವೈರಸ್ ಸಂಶೋಧನ ಕೇಂದ್ರದವರ ವಿಶೇಷ ಸಿಬ್ಬಂದಿಯವರು ಪ್ರಾಣಿಸಂಶೋಧನೆಗಳಲ್ಲಿ ನಿರತರಾಗಿದ್ದಾರೆ. *

**ಕ್ಯಾಸಿಯ ಎಣ್ಣೆ :** ಲಾರೇಸೀ ಕುಟುಂಬಕ್ಕೆ ಸೇರಿದ ಸಿನಮೋಮಮ್ ಕ್ಯಾಸಿಯ (ಚೈನೀಸ್ ಸಿನಮಮ್) ಎಂಬ ಮರದ ತೊಗಟೆಯಿಂದ ಪಡೆಯಲಾಗುವ ಸುವಾಸಿತ ಚಂಚಲ ತೈಲ (ಆಯಿಲ್ ಆಫ್ ಕ್ಯಾಸಿಯ). ತೊಗಟೆಗೂ ಎಣ್ಣೆಗೂ ದಾಲ್ಚಿನ್ನಿಯ (ಇದು ಕೂಡ ಲಾರೇಸೀ ಕುಟುಂಬಕ್ಕೆ ಸೇರಿದೆ) ವಾಸನೆಯೆ ಇರುವುದಾದರೂ ದಾಲ್ಚಿನ್ನಿಗಿಂತ ರುಚಿಯಲ್ಲಿ ಹೆಚ್ಚು ಕಟು ಮತ್ತು ವಾಸನೆಯಲ್ಲಿ ಹೆಚ್ಚು ಒರಟು. ತೊಗಟೆಯನ್ನು (ಕೆಲವು ಸಲ ಎಲೆಯನ್ನು) ಬಟ್ಟಿಯಿಳಿಸಿ ಕ್ಯಾಸಿಯ ಎಣ್ಣೆಯನ್ನು ಹೊರತೆಗೆಯಲಾಗುತ್ತದೆ. ಎಣ್ಣೆಯಲ್ಲಿ ಶೇ. 80–95 ರಷ್ಟು ಸಿನಮಾಲ್ಡಿಹೈಡ್ ಎಂಬ ವಸ್ತುವಿದೆ. ಕೆಲವು ಬಗೆಯ ಔಷಧಿಗಳು, ದಂತಚೂರ್ಣ, ಕ್ಯಾಂಡಿ, ಚೂಯಿಂಗ್ ಗಮ್, ಪಾನೀಯಗಳು ಮುಂತಾದವಕ್ಕೆ ವಾಸನೆಕಟ್ಟಲು ಕ್ಯಾಸಿಯ ಎಣ್ಣೆಯನ್ನು ಬಳಸುತ್ತಾರೆ. ದಾಲ್ಚಿನ್ನಿಯ ವಾಸನೆ ಇರುವುದರಿಂದ ಅದರ ಬದಲಿಗೆ ಉಪಯೋಗಿಸುವುದೂ ಉಂಟು. ದಕ್ಷಿಣ ಯುರೋಪಿನಲ್ಲಿ ದಾಲ್ಚಿನ್ನಿಗಿಂತ ಕ್ಯಾಸಿಯ ತೊಗಟೆಗೇ ಹೆಚ್ಚು ಬೇಡಿಕೆ ಇದೆ. ಕ್ಯಾಸಿಯ ಎಣ್ಣೆಯನ್ನು ಬೂಷ್ಟು ನಾಶಕವಾಗಿ ಬಳಸುವುದಿದೆ. ಸಾಬೂನು ತಯಾರಿಕೆಯಲ್ಲಿ ಇದರ ಉಪಯೋಗ ಉಂಟು. (ಆರ್.ಎಸ್.ಎನ್.)

**ಕ್ಯಾಸೊವರಿ :** ಕ್ಯಾಷ್ಯುಯಾರೈಯಿಫಾರ್ಮೀಸ್ ಗಣದ ಕ್ಯಾಸ್ಯುಯರೈಯಿಡೀ ಕುಟುಂಬಕ್ಕೆ ಸೇರಿದ ಕ್ಯಾಸ್ಯುಯೇರಿಯಸ್ ಎಂಬ ಜಾತಿಗೆ ಸೇರಿದ 3 ಪ್ರಭೇದಗಳ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು. ಈಮ್ಯೂ ಹಕ್ಕಿಗೆ ಬಲು ಹತ್ತಿರದ ಸಂಬಂಧಿ. ಅದರಂತೆಯೇ ಇದು ಕೂಡ ಹಾರಲಾಗದ ಹಕ್ಕಿ. ಆಸ್ಟ್ರೇಲಿಯದ ಈಶಾನ್ಯ ಭಾಗದಲ್ಲಿ *ಕ್ಯಾಸ್ಯುಯೇರಿಯಸ್* ಎಂಬ ಪ್ರಭೇದವೂ ಜೋಬಿ ದ್ವೀಪದಲ್ಲಿ *ಬೆನೆಟಿಯೈ* ಎಂಬುದೂ ಜೋಬಿ ಹಾಗೂ ಸಲಾವತಿ ದ್ವೀಪಗಳಲ್ಲಿ ಅನಪೆಂಡಿಕ್ಯುಲೇಟಸ್ ಎಂಬುದೂ ಜೋಬಿ ಮತ್ತು ಸಲಾವತಿ ದ್ವೀಪಗಳಲ್ಲಿ ಅನಪೆಂಡಿಕ್ಯುಲೇಟಸ್ ಎಂಬುದೂ ಕಾಣಸಿಕ್ಕುತ್ತವೆ. ನ್ಯೂ ಗಿನಿಯಲ್ಲಿ ಮೂರು ಪ್ರಭೇದಗಳೂ ಇವೆ. ದಟ್ಟವಾದ ಕಾಡುಗಳಲ್ಲಿ ವಾಸಿಸುತ್ತವೆ. ಕ್ಯಾಸೊವರಿ ನೋಡಲು ಹೆಚ್ಚು ಕಡಿಮೆ ಈಮ್ಯೂ ಹಕ್ಕಿಯಂತೆಯೇ ಇದೆ. ಆದರೆ ಗಾತ್ರದಲ್ಲಿ ಅದಕ್ಕಿಂತ ಚಿಕ್ಕದು; ಪೂರ್ಣ ಬೆಳೆದ ಗಂಡು ಕ್ಯಾಸೊವರಿ ಸುಮಾರು 5'

ಎತ್ತರ ಇದೆ. ಸ್ಥೂಲವಾದ ದೇಹ, ದೇಹದ ಗಾತ್ರಕ್ಕೆ ಹೋಲಿಸಿದರೆ ಚಿಕ್ಕವಾಗಿ ಕಾಣುವ ದೃಢವಾದ ಕಾಲುಗಳು, ಉದ್ದವಾಗಿ ದೇಹದಿಂದ ಇಳಿಬಿದ್ದಿರುವ ಮತ್ತು ಕೂದಲಿನಂತೆ ಕಾಣಬರುವ ಪುಕ್ಕಗಳು, ಕ್ಷೀಣವಾಗಿರುವ ರೆಕ್ಕೆಗಳು ನೆತ್ತಿಯ ಮೇಲಿರುವ ಕೊಂಬಿನ ಕಿರೀಟದಂಥ ರಚನೆ, ಕತ್ತಿನಿಂದ ಮತ್ತು ತಲೆಯ ಎರಡು ಪಕ್ಕಗಳಿಂದ ಇಳಿಬಿದ್ದಿರುವ ಕೆಂಪುಬಣ್ಣದ ಮಾಂಸಲ ಭಾಗ (ವ್ಯಾಟಲ್), ಇವು ಕ್ಯಾಸೊವರಿಯ ಪ್ರಮುಖ ಲಕ್ಷಣಗಳು. ರೆಕ್ಕೆಗಳ ತುದಿಯಲ್ಲಿ ಉದ್ದವಾದ ತಂತಿಗಳಂಥ 3–5 ಗರಿಗಳಿವೆ. ದಟ್ಟವಾದ ಪೊದೆಗಳಲ್ಲಿ ನುಗ್ಗಿ ಸಾಗುವಾಗ ಮತ್ತು ತನ್ನದೇಹದ ರಕ್ಷಣೆಗಾಗಿ ಇವನ್ನು ಬಳಸಿಕೊಳ್ಳುತ್ತದೆ. ದೇಹದ ಬಣ್ಣ ಕಪ್ಪು. ಮರಿಗಳ ದೇಹ ಮಾತ್ರ ಕಂದುಬಣ್ಣಕ್ಕಿದೆ. ಕ್ಯಾಸೊವರಿಯಲ್ಲಿ ಕಾಣಬರುವ ಸೋಜಿಗದ ಸಂಗತಿಯೆಂದರೆ ಹೆಣ್ಣುಹಕ್ಕಿ ಗಂಡಿಗಿಂತ ದೊಡ್ಡದಿರುವುದು. ಕಾಲುಗಳಲ್ಲಿ ಮೂರು ಬೆರಳುಗಳಿವೆ. ಅತ್ಯಂತ ಒಳಗಿನ ಬೆರಳಿನಲ್ಲಿ ಬಹುಹರಿತವಾದ ನಖವಿದೆ. ಶತ್ರುಗಳಿಂದ ಆವೃತವಾದಾಗ ಇದನ್ನು ಪರಿಣಾಮಕಾರಿಯಾದ ಆಯುಧವಾಗಿ ಉಪಯೋಗಿಸಬಲ್ಲುದು.

ಕ್ಯಾಸೊವರಿಗಳು ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. ತುಂಬ ಎಚ್ಚರಿಕೆಯಿಂದ ಶತ್ರುಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಓಡಾಡುತ್ತವೆ. ಶತ್ರುಪ್ರಾಣಿಗಳಾಗಲಿ ಮನುಷ್ಯನಾಗಲಿ ಆಕ್ರಮಿಸಿದಾಗ ಸಾಮಾನ್ಯವಾಗಿ ಓಡಲು ಹವಣಿಸುತ್ತವೆ. ಇವಕ್ಕೆ ಹಾರಲಾಗದಿದ್ದರೂ ವೇಗವಾಗಿ ಓಡುವ ಸಾಮರ್ಥ್ಯವಿದೆ. ಗಂಟೆಗೆ ಸು. 65 ಕಿಮೀ ವೇಗದಲ್ಲಿ ಓಡಬಲ್ಲುವು. ಅಲ್ಲದೆ ದಾರಿಯಲ್ಲಿ ಅಡಚಣೆಗಳು ಸಿಕ್ಕಿದರೆ ಸುಮಾರು 6' ಎತ್ತರಕ್ಕೂ ನೆಗೆದು ದಾಟಬಲ್ಲುವು. ನೀರು ಸಿಕ್ಕಿದರೂ ಅಷ್ಟೆ, ಸರಾಗವಾಗಿ ಈಜಿ ದಾಟುತ್ತವೆ. ನೀರು ಕಂಡರೆ ಕ್ಯಾಸೊವರಿಗಳಿಗೆ ಇಷ್ಟವೆ. ಸಮುದ್ರದಲ್ಲೂ ಈಸುತ್ತ ಕಾಲಕಳೆಯುತ್ತವೆ ಎಂದು ಹೇಳಲಾಗಿದೆ. ತುಂಬ ನಾಚಿಕೆ ಸ್ವಭಾವದ ಈ ಹಕ್ಕಿಗಳು ತಮ್ಮ ಆಹಾರಾನ್ವೇಷಣೆಗೆ ಬೆಳಗಿನ ಜಾವ ಮತ್ತು ಸಂಜೆ ಮಾತ್ರ ಹೊರಡುತ್ತವೆ. ವಿವಿಧ ಬಗೆಯ ಹಣ್ಣುಗಳು, ಕೀಟಗಳು ಇವೇ ಇವುಗಳ ಪ್ರಧಾನ ಆಹಾರ. ಕೆಲವು ಬಾರಿ ಸಣ್ಣ ಗಾತ್ರದ ಪ್ರಾಣಿಗಳನ್ನು ತಿನ್ನುವುದೂ ಉಂಟು.

ಕ್ಯಾಸೊವರಿ ದಟ್ಟವಾದ ಪೊದೆಗಳ ನಡುವೆ ನೆಲದ ಮೇಲೆ ಕಡ್ಡಿ ಎಲೆ ಮುಂತಾದುವನ್ನು ಉಪಯೋಗಿಸಿ ಗೂಡು ಕಟ್ಟುತ್ತದೆ. ಹೆಣ್ಣು 3–6 ನಸು ಹಸುರು ಬಣ್ಣದ ಮೊಟ್ಟೆಗಳನ್ನಿಟ್ಟ ಬಳಿಕ ಗಂಡು ಕಾವು ಕೊಡಲು ಆರಂಭಿಸುತ್ತದೆ. ಕಾವು ಕೊಡುವ ಕಾಲ ಸುಮಾರು 7 ವಾರಗಳು. ಮೊಟ್ಟೆಯೊಡೆದು ಬರುವ ಮರಿಗಳ ಪಾಲಿನ ಹೊಣೆಯೂ ಗಂಡಿನದೆ. ಮೊಟ್ಟೆಯಿಡುವ ಕಾಲದಲ್ಲಿ ಮಾತ್ರ ಹೆಣ್ಣು ಗುಂಪಿನಿಂದ ಬೇರೆಯಾಗುತ್ತದೆ. ಮರಿಗಳ ಮೈಮೇಲೆ ಬೂದಿಬಣ್ಣದ ಪಟ್ಟೆಗಳಿರುತ್ತವೆ.

ಪಾಪುವ ದ್ವೀಪದ ಮೂಲವಾಸಿಗಳು ಕ್ಯಾಸೊವರಿಯನ್ನು ಅಚ್ಚುಮೆಚ್ಚಿನ ಆಹಾರವಾಗಿ ಬಳಸುತ್ತಾರೆ. ಇದರ ಯಕೃತ್ತಂತೂ ಉತ್ಕೃಷ್ಟವಾದ ತಿನಿಸು ಎನಿಸಿದೆ. (ಜಿ.ಎಂ.ಬಿ.)

**ಕ್ಯಾಸ್ಟ್ರೊ, ಫೀಡೆಲ್ :** ಕ್ಯೂಬ ಗಣರಾಜ್ಯದ ಪ್ರಧಾನಿ. ಜನನ 1927ರ ಆಗಸ್ಟ್ 13. ತಂದೆ ಕಬ್ಬಿನ ಬೇಸಾಯಗಾರ. ಸ್ಯಾಂಟಿಯಾಗೋ ಮತ್ತು ಹವಾನಗಳಲ್ಲಿ ವ್ಯಾಸಂಗ ಮಾಡಿ 1950ರಲ್ಲಿ ಹವಾನ ವಿಶ್ವವಿದ್ಯಾಲಯದ ನ್ಯಾಯಾಶಾಸ್ತ್ರ ಪದವಿ ಗಳಿಸಿದ. ವಿದ್ಯಾರ್ಥಿದೆಶೆಯಲ್ಲಿದ್ದಾಗಲೇ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಾಜಕೀಯ ವಿಷಯಗಳ ಮೇಲೆ ಬಹಳ ಆಸಕ್ತಿಯಿಂದ ಸಕ್ರಿಯವಾಗಿ ಭಾಗವಹಿಸುತ್ತಿದ್ದ. 1948ರಲ್ಲಿ ವಿವಾಹವಾದ. ಇಬ್ಬರು ಸಹಪಾಠಿಗಳೊಡನೆ ವಕೀಲಿ ಪ್ರಾರಂಭಿಸಿದ. ಜನಪ್ರಿಯ, ಜಯಪ್ರದ ವಕೀಲನೆಂದು ಹೆಸರು ಗಳಿಸಿದ. ಆದರೆ ಹೆಚ್ಚು ದಿನ ವಕೀಲನಾಗಿ ಉಳಿಯಲಿಲ್ಲ. ಕ್ಯೂಬದ ಬ್ಯಾಟಿಸ್ಟನ ಸರ್ಕಾರದ ವಿರುದ್ಧ ದಂಗೆ ಏಳುವುದು ಅನಿವಾರ್ಯವಾಯಿತು.

ಕ್ಯಾಸ್ಟ್ರೊ 1952ರಲ್ಲಿ ಕ್ಯೂಬದ ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳಲ್ಲಿ ಆರ್ತೊಡಾಕ್ಸೊ ಪಕ್ಷದ ಉಮೇದುವಾರನಾಗಿ ಸ್ಪರ್ಧಿಸಿದ. 1947ರಲ್ಲಿ ಜನಿಸಿದ ಈ ಪಕ್ಷ ದೌರ್ಜನ್ಯ, ಲಂಚಗುಳಿತನ, ಅನ್ಯಾಯಗಳನ್ನು ಹೋಗಲಾಡಿ ಸುವುದಾಗಿ ಸಾರಿಕೊಂಡಿತ್ತು. ಆದರೆ ಈ ಪಕ್ಷ 1952ರ ತನಕವೂ ಪರಿಣಾಮಕಾರಿಯಾದ ಏನೇ ಕೆಲಸವನ್ನೂ ಮಾಡಲಿಲ್ಲ. ಈ ಪಕ್ಷವನ್ನು ಬ್ಯಾಟಿಸ್ಟನ ಸರ್ಕಾರ ಬಹಿಷ್ಕರಿಸಿತು. ಕ್ಯಾಸ್ಟ್ರೊ 26ರ ಜುಲೈ 1953ರಲ್ಲಿ ಕೆಲವು ಆದರ್ಶವಾದಿ ವಿದ್ಯಾರ್ಥಿಗಳನ್ನು ಕೂಡಿಕೊಂಡು ದಂಗೆ ಎದ್ದ. ಆದರೆ ಇದು ಸಫಲವಾಗಲಿಲ್ಲ. ಆದರೂ ಈ ದಿನವನ್ನು ಇಂದಿಗೂ ಕ್ಯೂಬದ ರಾಷ್ಟ್ರೀಯ ಹಾಗೂ ಐತಿಹಾಸಿಕ ದಿನವನ್ನಾಗಿ ಆಚರಿಸಲಾಗುತ್ತಿದೆ. ಪುನಃ ಇವನು ತನ್ನ 125 ಜನರೊಡನೆ, ಸೈನಿಕರಂತೆ ಉಡುಪು ತೊಟ್ಟು ಸರ್ಕಾರಿ ಆಸ್ಪತ್ರೆ, ನ್ಯಾಯಾಲಯ ಮತ್ತು ಸೈನಿಕರ ವಾಸಸ್ಥಾನಗಳನ್ನು ಮುತ್ತಿದ. ಸ್ಯಾಂಟಿಯಾಗೋ ಆಕಾಶವಾಣಿ ನಿಲಯದಿಂದ ತನ್ನ ರಾಜಕೀಯ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಬಿತ್ತರಿಸಿದ. ಆದಾಗ್ಯೂ ಇವನ ಯೋಜನೆ ಸಫಲವಾಗಲಿಲ್ಲ. ಇವನ ಜೊತೆಗಾರರಲ್ಲಿ ಅನೇಕರು ಸತ್ತರು; ಕೆಲವರು ಸೆರೆಸಿಕ್ಕಿದರು. ಇವನೂ ಬಂಧನಕ್ಕೊಳಗಾದ. 1953ರ ಅಕ್ಟೋಬರ್ 16ರಂದು ವಿಚಾರಣೆ ನಡೆದು, ಇವನಿಗೆ 26 ವರ್ಷಗಳ ಸಜಾ ವಿಧಿಸಲಾಯಿತು. 1955ರ ಮೇ 15ರಂದು ಕ್ಷಮಾದಾನದ ಮೂಲಕ ಈತ ಬಿಡುಗಡೆ ಹೊಂದಿದ. ಅನಂತರ ಇವನು ಮೆಕ್ಸಿಕೋಗೆ ಹೋಗಿ 15 ತಿಂಗಳುಗಳ ಕಾಲ ಅಲ್ಲಿದ್ದು ಕ್ಯೂಬದ ಮಿಲಿಟರಿ ಅಧಿಕಾರದ ವಿರುದ್ಧ ದಂಗೆ ಏಳಲು ಮತ್ತು ಬ್ಯಾಟಿಸ್ಟನ ಸರ್ಕಾರವನ್ನು ಉರುಳಿಸಲು ಅಗತ್ಯವಾದ ಜನರನ್ನೂ ಹಣವನ್ನೂ ಆಯುಧಗಳನ್ನೂ ಕೂಡಿಸಿದ. 82 ಜನರ ಒಂದು ತಂಡದೊಡನೆ ತನ್ನ ಸ್ವಂತ ದೋಣಿ

ಗ್ರಾನ್ಮದಲ್ಲಿ ಮೆಕ್ಸಿಕೋದಿಂದ ಹೊರಟು 1956ರ ಡಿಸೆಂಬರ್ 2ರಂದು ಕ್ಯೂಬವನ್ನು ಸೇರಿದ. ಅಲ್ಲಿ ನಡೆದ ಹೋರಾಟದಲ್ಲಿ ಇವನ ಜೊತೆಯವರಲ್ಲಿ ಅನೇಕರು ಮಡಿದರು. ಆಗ ಕ್ಯಾಸ್ಟ್ರೊ ಕ್ಯೂಬದ ಸೀಯೆರ ಮೇಸ್ತ್ರ ಪರ್ವತಪಂಕ್ತಿಯಲ್ಲಿ ಬೀಡುಬಿಟ್ಟುಕೊಂಡು ಬ್ಯಾಟಿಸ್ಟನ ಸೈನ್ಯದ ವಿರುದ್ಧ ಗೆರಿಲಾ ಯುದ್ಧ ಪ್ರಾರಂಭಿಸಿದ. ಇವನಿಗೆ ಕ್ರಮೇಣ ಜನಬೆಂಬಲ ಅಧಿಕವಾಯಿತು. ಇವನ ಉಪಟಳವನ್ನು ತಾಳಲಾರದೆ ಬ್ಯಾಟಿಸ್ಟ 1959ರ ಜನವರಿ 1ರಂದು ಹವಾನದಿಂದ ಪಲಾಯನ ಮಾಡಿದ. ಸರ್ಕಾರದ ಅಧಿಕಾರ ಇವನ ಕೈಗೆ ಬಂತು. ಫೆಬ್ರುವರಿ 1959ರಂದು ಈತ ಕ್ಯೂಬದ ಪ್ರಧಾನಿಯಾದ. 1959ರ ಜನವರಿ 7ರಂದು ಕ್ಯೂಬದ ಹೊಸ ಸರ್ಕಾರಕ್ಕೆ ಅಮೆರಿಕ ಸಂಯುಕ್ತ ಸಂಸ್ಥಾನ ಮನ್ನಣೆ ನೀಡಿತು. ಇವನು ಪ್ರಧಾನಿಯಾದ ಕೂಡಲೇ ಪರಿಣಾಮಕಾರಿ ಆರ್ಥಿಕ, ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡ. ತಾನು ಮಾರ್ಕ್ಸ್ ಮತ್ತು ಲೆನಿನರ ಸಿದ್ಧಾಂತದ ಅನುಯಾಯಿ ಎಂದು ಘೋಷಿಸಿಕೊಂಡ. 1960ರ ಜನವರಿ 13ರಂದು ಸೋವಿಯೆತ್ ದೇಶದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡ. ಅಮೆರಿಕನ್ನರ ಮಾಲೀಕತ್ವದಲ್ಲಿದ್ದ ಕೈಗಾರಿಕೆಗಳನ್ನು ವಶಪಡಿಸಿಕೊಳ್ಳಲಾಯಿತು. 1960ರ ಅಕ್ಟೋಬರ್ 13ರಂದು ಕ್ಯೂಬದ ಬ್ಯಾಂಕುಗಳು, ಕೈಗಾರಿಕೆಗಳು, ವಾಣಿಜ್ಯ ಮತ್ತು ಸಾರಿಗೆ ಸಂಸ್ಥೆಗಳು ರಾಷ್ಟ್ರೀಕರಣಗೊಂಡುವು.



ಕ್ಯಾಸ್ಟ್ರೊ ಕೈಗೊಂಡ ನಾನಾ ಉಗ್ರಕ್ರಮಗಳಿಂದಾಗಿ ಅಮೆರಿಕ ಸಂಯುಕ್ತ ಸಂಸ್ಥಾನದೊಂದಿಗೆ ವಿರಸ ಅಧಿಕವಾಯಿತು. ಈತ ಸೋವಿಯೆತ್ ದೇಶದೊಂದಿಗೆ ಸ್ನೇಹ ಸಂಪರ್ಕಗಳನ್ನು ಬೆಳೆಸಿದ. 1961ರಲ್ಲಿ ಸೋವಿಯೆತ್ ದೇಶ ಇವನಿಗೆ ಲೆನಿನ್ ಶಾಂತಿಪಾರಿತೋಷಕವನ್ನು ನೀಡಿ ಸನ್ಮಾನಿಸಿತು. ಕ್ರಾಂತಿಯ ಕಾಲದ ಗುರಿಯನ್ನು ಸಾಧಿಸುವ ತನಕ ಕ್ಯೂಬದಲ್ಲಿ ಚುನಾವಣೆಗಳು ನಡೆಯುವುದಿಲ್ಲವೆಂದು ಕ್ಯಾಸ್ಟ್ರೊ ಸಾರಿದ. 1932ರಲ್ಲಿ ವ್ಯಾಟಿಕನ್ ಚರ್ಚ್ ವ್ಯವಸ್ಥೆಯಿಂದ ಬಹಿಷ್ಕೃತನಾದ. 1963ರಲ್ಲಿ ಸೋವಿಯೆತ್ ದೇಶಕ್ಕೆ ಭೇಟಿ ನೀಡಿದ. 1966ರ ಅಕ್ಟೋಬರ್‌ನಲ್ಲಿ ತನ್ನ ಕ್ರಾಂತಿಕಾರಿ ಪಕ್ಷವನ್ನು ಕ್ಯೂಬದ ಕಮ್ಯೂನಿಸ್ಟ್ ಪಕ್ಷ ಎಂದು ಘೋಷಿಸಿದ.

ಫೀಡೆಲ್ ಕ್ಯಾಸ್ಟ್ರೊ 1966ರ ಅಕ್ಟೋಬರ್ 14ರಂದು ಏಷ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಗಳ ಏಕತಾ ಸಮ್ಮೇಳನವನ್ನು ಏರ್ಪಡಿಸಿದ್ದ. ಇದರ ಎರಡನೆಯ ಸಮ್ಮೇಳನ ಆಗಸ್ಟ್ 1967ರಲ್ಲಿ ನಡೆಯಿತು. (ಎಸ್.ಎನ್.ಎಲ್.)

**ಕ್ಯಾಸ್ಪಿಯನ್ ಸಮುದ್ರ :** ಒಳನಾಡಿನ ಉಪ್ಪುನೀರಿನ ಸರೋವರಗಳ ಪೈಕಿ ಅತ್ಯಂತ ದೊಡ್ಡದು. ಯುರೋಪ್ ಮತ್ತು ಏಷ್ಯಗಳ ನಡುವೆ ಉ.ಅ. 37°–47° ಮತ್ತು ಪೂ.ರೇ.47°–55°ಗಳ ಮಧ್ಯೆ ಇದೆ. ದಕ್ಷಿಣೋತ್ತರವಾಗಿ 1194 ಕಿಮೀ ಉದ್ದ ಮತ್ತು ಪೂರ್ವಪಶ್ಚಿಮವಾಗಿ 160–432 ಕಿಮೀ ಅಗಲ ಇದೆ. 1830–1929ರಲ್ಲಿ ಇದರ ಸರಾಸರಿ ಮಟ್ಟ ಸಮುದ್ರಮಟ್ಟಕ್ಕಿಂತ 25 ಮೀ. ಕೆಳಗೆ ಇತ್ತು. ಆಗ ಇದರ ವಿಸ್ತೀರ್ಣ 438487 ಚ.ಕಿ.ಮೀ. 1929–1956ರಲ್ಲಿ ಇದರ ಮಟ್ಟ ಸಮುದ್ರ ಮಟ್ಟದಿಂದ 27 ಮೀ. ಕೆಳಕ್ಕೆ ಇಳಿಯಿತು. ವಿಸ್ತೀರ್ಣ 393680 ಚಕಿಮೀಗೆ ಕುಗ್ಗಿತು. ಇದು ಕಾಕಸಸ್ ಮತ್ತು ಮಧ್ಯ ಏಷ್ಯಗಳ ನಡುವೆ ಇರುವ ಅವನತ ಪ್ರದೇಶದ ಅತ್ಯಂತ ತಗ್ಗಿನ ಪ್ರದೇಶದಲ್ಲಿದೆ. ಇದು ಹಿಂದೆ ಭೂಮಧ್ಯ ಸಮುದ್ರವಾಗಿತ್ತು.

ಕ್ಯಾಸ್ಪಿಯನ್ ಸಮುದ್ರತೀರದ ಒಟ್ಟು ಉದ್ದ 6,400 ಕಿಮೀ ಇದರಲ್ಲಿ 5,360 ಕಿಮೀಗಳ ತೀರ ಸೋವಿಯೆತ್ ಒಕ್ಕೂಟದಲ್ಲೂ ಉಳಿದದ್ದು ಇರಾನಿನಲ್ಲೂ ಇವೆ. ಇದರ ದಡಗಳು ಸಾಮಾನ್ಯವಾಗಿ ತಗ್ಗಾಗಿವೆಯಲ್ಲದೆ, ಕ್ಯಾಸ್ಪಿಯನ್ ಸಮುದ್ರದ ನೀರಿನ ಅಲೆಗಳ ಹೊಡೆತದಿಂದ ರಾಶಿಯಾದ ಮರಳು ಜೇಡಿಮಣ್ಣುಗಳಿಂದ ಕೂಡಿದೆ. ವೋಲ್ಗಾ ನದೀಮುಖಜಭೂಮಿಯ ಬಳಿ ಅನೇಕ ನಾಲೆಗಳ ಮತ್ತು ಲಗೂನ್‌ಗಳ ಬಿರುಸಿನ ಪ್ರಭಾವದಿಂದಾಗಿ ಅಲ್ಲಿಯ ತೀರಲಕ್ಷಣ ಉಳಿದೆಡೆಗಳಿಗಿಂತ ಭಿನ್ನವಾದ್ದು.

ಕ್ಯಾಸ್ಪಿಯನ್ ಸಮುದ್ರದ ಜಲಾನಯನ ಪ್ರದೇಶದ ವಿಸ್ತೀರ್ಣ 3733047 ಚಕಿಮೀ ಇದನ್ನು ಸೇರುವ ನದೀಜಲದಲ್ಲಿ ಶೇ.80ರಷ್ಟು ನೀರು ಉತ್ತರದ ವೋಲ್ಗಾದಿಂದ ಲಭ್ಯವಾಗುತ್ತದೆ. ಯೂರಲ್, ಟೆರೆಕ್, ಸೂಲಾಕ್, ಸಾಮೂರ್, ಕುರಾ, ಆರಾಸ್, ಸಫಿದ್ ರುದ್ ಮತ್ತು ಅಟ್ರಾಕ್–ಇವು ಈ ಸಮುದ್ರವನ್ನು ಸೇರುವ ಇತರ ನದಿಗಳು, ಕ್ಯಾಸ್ಪಿಯನ್ ಸಮುದ್ರದ ಮಟ್ಟ ಮೊದಲು ಕಪ್ಪು ಸಮುದ್ರದಷ್ಟೇ ಇತ್ತು. ಕಾಕಸಸ್ ಪರ್ವತವ್ಯವಸ್ಥೆ ಮೇಲೇಳುವ ಮೊದಲು ಇವೆರಡು ಸಮುದ್ರಗಳಿಗೂ ಸಂಬಂಧವಿತ್ತು. ಕ್ಯಾಸ್ಪಿಯನ್ ಸಮುದ್ರದ ಸರಾಸರಿ ಲವಣತ್ವ 13/1000 ಪ್ರಪಂಚದ ಸಾಗರಗಳ ಸರಾಸರಿ ಲವಣತ್ವ 35/1000. ಕ್ಯಾಸ್ಪಿಯನ್ ಸಮುದ್ರದ ಲವಣ ರಾಸಾಯನಿಕ ಸಂಯೋಜನೆ ಅದನ್ನು ಸೇರುವ ನದಿಗಳಿಂದ ಪ್ರಭಾವಿತವಾಗಿದೆ.

ಸೋವಿಯೆತ್ ಒಕ್ಕೂಟದ ಅರ್ಥವ್ಯವಸ್ಥೆಯಲ್ಲಿ ಕ್ಯಾಸ್ಪಿಯನ್ ಸಮುದ್ರದ ಪಾತ್ರ ದೊಡ್ಡದು. ಇರಾನಿನ ಅರ್ಥವ್ಯವಸ್ಥೆಯಲ್ಲೂ ಇದರ ಪಾತ್ರ ತಕ್ಕ ಮಟ್ಟಿನದು. ಮತ್ಸ್ಯೋದ್ಯಮ ಮತ್ತು ಜಲಸಾರಿಗೆ ದೃಷ್ಟಿಯಿಂದ ಇದು ಮುಖ್ಯವಾಗಿದೆ. ಸಮುದ್ರದ ನೀರಿನ ಮಟ್ಟ ಇಳಿದಿರುವುದರಿಂದ ಇವೆರಡರ ಮೇಲೂ ತೀವ್ರ ದುಷ್ಪರಿಣಾಮವುಂಟಾಗಿದೆ. ವೋಲ್ಗಾ ನದೀಮುಖಜಭೂಮಿಯ ಬಳಿಯ ಆಳವಿಲ್ಲದ ಭಾಗದಲ್ಲಿದ್ದ ಮತ್ಸ್ಯಸಂಪತ್ತಿಗೆ ಇದರಿಂದ ನೇರ ಆಘಾತವುಂಟಾಗಿದೆ. ನೀರಿನ ಮಟ್ಟ ಇಳಿದಾಗ ಮೀನುಗಾರರ ಅನೇಕ ಹಳ್ಳಿಗಳು ತೀರದಿಂದ ದೂರವಾದವಾಗಿ ಅವನ್ನು ಸ್ಥಳಾಂತರಿಸಬೇಕಾಯಿತು. ಬಂದರುಗಳು ಮರಳಿನಿಂದ ತುಂಬಿದುವು. ಬಂದರನ್ನು ಆಳಗೊಳಿಸುವುದಾದರೂ ರೇವು ಸ್ಥಾವರಗಳನ್ನು ಬೇರೆಡೆಗೆ ಬದಲಿಸುವುದೂ ಅಗತ್ಯವಾದುವು.

ಬಾಕೂ, ಮಾಕಾಚ್ಕಾಲಾ, ಆಸ್ಟ್ರಕಾನ್, ಗೂರ್ಯೆಫ್ ಮತ್ತು ಕ್ರಾಸ್ನೊವಾಟ್ಸ್ಕ ಇವು ಸೋವಿಯೆತ್ ಪ್ರದೇಶದ ಮುಖ್ಯ ಬಂದರುಗಳು. ಇರಾನಿನ ಬಂದರುಗಳು ಪಹ್ಲಾವೀ ಮತ್ತು ಬಾಂದಾರ್ ಷಾಪೂರ್. ಕ್ಯಾಸ್ಪಿಯನ್ ಸಮುದ್ರದ ಸಾರಿಗೆಯಲ್ಲಿ ಅರ್ಧದಷ್ಟು ಬಾಕೂವಿನ ಪಾಲು. ಆಸ್ಟ್ರಕಾನ್ ಮತ್ತು ಕ್ಯಾಸ್ನೋವಾಟ್ಸ್ಕ್‌ಗಳದು ಎರಡು ಮತ್ತು ಮೂರನೆಯ ಸ್ಥಾನಗಳು. (ಆರ್.ಡಿ.ಆರ್.)

**ಕ್ಯಾಸಿಟರೈಟ್ :** ತವರದ ಅದಿರುಗಳಲ್ಲಿ ಅತಿಮುಖ್ಯವಾದುದು. ಇದರ ರಾಸಾಯನಿಕ ಸೂತ್ರ $SnO_2$. ಇದರಲ್ಲಿ ತವರದ ಅಂಶ ಶೇ. 78.7. ಇದು ಚತುಷ್ಕೋಣಾಕಾರದ ಹರಳುಗಳಂತೆ ಸಿಕ್ಕುತ್ತದೆ. ಸಾಮಾನ್ಯವಾಗಿ ಇದರ ಬಣ್ಣ ಅಚ್ಚ ಕಂದು, ಕಪ್ಪು; ಆಗಾಗ್ಗೆ ಹಸಿರು ಅಥವಾ ಕೆಂಪುಬಣ್ಣದ್ದೂ ದೊರೆಯಬಹುದು. ಒರೆಯ ಬಣ್ಣ ಬಿಳುಪು. ಹೊಳಪು ವಜ್ರದಂತಿದೆ. ಇದರ ಕಾಠಿಣ್ಯ 6.5-7 ಮತ್ತು ಸಾಪೇಕ್ಷಸಾಂದ್ರತೆ 3. ಖನಿಜ ತೂಕವಾಗಿರುವುದರಿಂದ ಮೆಕ್ಕಲು ನಿಕ್ಷೇಪಗಳಲ್ಲಿ ಸಂಚಿತವಾಗಿರುತ್ತದೆ. ಗ್ರಾನೈಟ್, ನೈಸ್, ಅಪ್ಲೈಟ್ ಅಥವಾ ಶಿಲಾಪಾಕದಿಂದ ಬೆಣಚುಕಲ್ಲಿನ ಸಿರಗಳು ಈ ಖನಿಜಕ್ಕೆ ತವರು. ಈ ಶಿಲೆಗಳು ಕ್ಷಯಿಸಿದಾಗ ಶಿಲೆಗಳಿಂದ ಖನಿಜ ಬೇರ್ಪಟ್ಟು ಮರಳಿನ ಆಕಾರದಲ್ಲಿ ಮೆಕ್ಕಲು ನಿಕ್ಷೇಪಗಳಲ್ಲಿ ಶೇಖರವಾಗುತ್ತದೆ. ಖನಿಜ ಸಿರಗಳಲ್ಲಿ ತವರದ ಪ್ರಮಾಣ ಸಾಮಾನ್ಯವಾಗಿ ಶೇ. 1-8 ಮತ್ತು ಮೆಕ್ಕಲು ನಿಕ್ಷೇಪಗಳಲ್ಲಿ ಪ್ರತಿ ಚದರ ಗಜಕ್ಕೆ 0.4-5 ಪೌಂಡುಗಳು ಇರುತ್ತದೆ. ಲೋಹಗಳಿಗೆ ಕಲಾಯ ಮಾಡಲು ತವರದ ಇನ್ನೊಂದು ಉಪಯೋಗ ಉಂಟು. ತವರ ಮಿಶ್ರಿತ ಲೋಹಗಳ ಉತ್ಪತ್ತಿ ತವರದ ಇನ್ನೊಂದು ಉಪಯೋಗ. ಅವುಗಳಲ್ಲಿ ಕಂಚು, ಹಿತ್ತಾಳೆ, ಬ್ಯಾಬಿಟ್‌ಲೋಹ, ಬ್ರಿಟಾನಿಯಂ ಲೋಹ ಮತ್ತು ಫಾಸ್ಫರ್ ಬ್ರಾಂಜ಼್ ಮುಖ್ಯವಾದವು. ಬಹಳವಾಗಿ ಕಲಾಯಿಮಾಡುವ ಮಿಶ್ರಲೋಹದ ತಯಾರಿಕೆಯಲ್ಲಿ ತವರವನ್ನು ಉಪಯೋಗಿಸುತ್ತಾರೆ. ಇದರ ಕ್ಲೋರೈಡ್‌ಗಳನ್ನು ನೇಯ್ಗೆ ಉದ್ಯಮಗಳಲ್ಲಿ ಬಟ್ಟೆಗಳಿಗೆ ಬಣ್ಣಹಾಕುವುದಕ್ಕೂ ಬಟ್ಟೆಗಳ ಮೇಲೆ ಅಚ್ಚು ಹಾಕುವುದಕ್ಕೂ ಬಳಸುತ್ತಾರೆ. ತವರದ ಆಮ್ಲವನ್ನು ಪಿಂಗಾಣಿ ಉದ್ಯಮಗಳಲ್ಲಿ ಉಪಯೋಗಿಸುತ್ತಾರೆ.ಕ್ಯಾಸಿಟರೈಟ್ ಬಿಹಾರಿನ ಹಜ಼ಾರಿಬಾಗ್, ಗಯ, ರಾಂಚಿ ಜಿಲ್ಲೆಗಳಲ್ಲಿಯೂ ಗುಜರಾತಿನ ಬನಸ್‌ಕಾಂಥ ಜಿಲ್ಲೆಯಲ್ಲಿಯೂ ರಾಜಸ್ಥಾನದ ಬಿಲ್‌ವಾರಿ ಜಿಲ್ಲೆಯಲ್ಲಿಯೂ ಸ್ವಲ್ಪ ಮೊತ್ತದಲ್ಲಿ ಸಿಗುತ್ತದೆ. ಕರ್ನಾಟಕ ರಾಜ್ಯದ ಧಾರವಾಡ ಜಿಲ್ಲೆಯ ಕಪ್ಪದಗುಡ್ಡದ ಉತ್ತರಭಾಗದ ಮೆಕ್ಕಲು ಮಣ್ಣಿನಲ್ಲಿ ಕ್ಯಾಸಿಟರೈಟ್ ದೊರೆಯುವುದೆಂದು ವರದಿಯಾಗಿದೆ. ಆದರೆ ಸಾಕಾದಷ್ಟು ಮೊತ್ತದಲ್ಲಿ ಶೇಖರವಾಗಿಲ್ಲ. ಈಗ ಭಾರತಕ್ಕೆ ಬೇಕಾಗುವ ತವರ ಆಮದಾಗುತ್ತಿದೆ. ಪ್ರಪಂಚದ ಮುಖ್ಯವಾದ ತವರದ ಗಣಿಗಳಿರುವ ಪ್ರದೇಶಗಳಿವು: ಮಲಯ ಸಂಸ್ಥಾನಗಳು (ಶೇ 30). ಮಲಯದ ದಕ್ಷಿಣಕ್ಕೆ ಇರುವ ಬಂಕ, ಬಿಲ್ಲಿಟನ್ ಮತ್ತು ಸಿಂಗ್‌ಕೆಪ್ ದ್ವೀಪಗಳು (ಶೇ. 24). ಬೊಲಿವಿಯ, ನೈಜೀರಿಯ ಮತ್ತು ಯುನ್ನಾರ್ (ಶೇ. 23). (ಎಂ.ಎಸ್.ಎಸ್.)

**ಕ್ಯು ಜ್ವರ :** ಕ್ವೀನ್ಸ್‌ಲೆಂಡ್ ಜ್ವರ ಅಥವಾ ಪ್ರಶ್ನಾರ್ಥಕ ಜ್ವರ ಎಂಬುದರ ಸಂಕ್ಷಿಪ್ತ ಹೆಸರು. ಡೆರಿಕ್ ಎಂಬಾತ 1937ರಲ್ಲಿ ಮೊತ್ತಮೊದಲ ಬಾರಿಗೆ ಕ್ವೀನ್ಸ್‌ಲೆಂಡಿನ ಬ್ರಿಸ್ಬೇನ್ ಕಾರ್ಮಿಕರಲ್ಲಿ ಈ ರೋಗ ಬರುವುದೆಂದು ಕಂಡುಹಿಡಿದುದಲ್ಲದೆ ಗಿನಿಹಂದಿಗಳಲ್ಲಿ ಈ ರೋಗದ ಕಾರಕಗಳಿರುವುದನ್ನು ಕಂಡು ಅವನ್ನು ಬೇರ್ಪಡಿಸಿದ. ಈ ಕಾರಕ ಕಾಕ್ಸಿಯೆಲ್ಲ (ಸಿ) ಬರ್ನೆಟಿ ಎಂಬ ರಿಕೆಟ್ಸಿಯ–ತರ ಸೂಕ್ಷ್ಮಾಣುಜೀವಿಯೆಂದು ಅನಂತರ ಗೊತ್ತುಪಡಿಸಲಾಯಿತು. ಪ್ರಪಂಚದ ಬಹುಪಾಲು ದೇಶಗಳಲೆಲ್ಲ ಇದರ ವ್ಯಾಪ್ತಿಯಿದೆ. ದನಕರುಗಳು, ಕುರಿ, ಮೇಕೆ ಮತ್ತು ಮಾನವರಲ್ಲಿ ಇದರ ಸೋಂಕು ಬಹಳ. ನಾಯಿ, ಕುದುರೆ, ಪಾರಿವಾಳ, ಬಾತು, ಕೋಳಿ ಮತ್ತು ಕೆಲವು ವನ್ಯಪ್ರಾಣಿಗಳಲ್ಲೂ ಇದು ಇರುವುದು ಕಂಡುಬಂದಿದೆ. ಪ್ರಾಣಿಗಳು ಮತ್ತು ಪ್ರಾಣಿ ಉತ್ಪನ್ನಗಳೊಂದಿಗೆ ಸಂಪರ್ಕವಿರುವವರಲ್ಲಿ ಈ ರೋಗ ಹೆಚ್ಚು ತೀಕ್ಷ್ಣ.

ದನಕರುಗಳು ಮತ್ತು ಕುರಿಗಳ ಸಂಪರ್ಕದ ಮೂಲಕವಾಗಿ ಈ ಅಣುಜೀವಿಯ ಸೋಂಕು ತಗುಲಿದ ದೂಳಿನ ಮತ್ತು ಪದಾರ್ಥಗಳ ಸೇವನೆಯಿಂದ ರೋಗ ತಲೆದೋರುತ್ತದೆ.

ದೇಹದಲ್ಲಿ ಒಂದೆರಡು ವಾರ ಹುದುಗಿ ಕುಳಿತು ಬೆಳೆದ ಮೇಲೆ, ರೋಗದ ಲಕ್ಷಣಗಳು ಏಕಾಏಕಿಯಾಗಿ ಕಾಣಿಸಿಕೊಳ್ಳತೊಡಗುತ್ತವೆ. ಪ್ರಾರಂಭದಲ್ಲಿ ಜ್ವರ, ವಿಪರೀತ ತಲೆನೋವು, ಸುಸ್ತು, ಮೈಕೈ ನೋವು ಮತ್ತು ಆಹಾರದಲ್ಲಿ ನಿರಾಸಕ್ತಿ ಇದ್ದು ಕೆಲವು ದಿನಗಳಲ್ಲಿ ಕೆಮ್ಮು ಮತ್ತು ಉಬ್ಬಸ ತೋರಿಬರುತ್ತದೆ. ಬಲುಬೇಗ ತೂಕ ಕಡಿಮೆಯಾಗುತ್ತದೆ. ನಾಡಿ ಮಿಡಿತ ಮಂದವಾಗುತ್ತದೆ. ಎದೆಬಡಿತವನ್ನಾಲಿಸಿದಾಗ ಶ್ವಾಸೋಚ್ಛ್ವಾಸದೊಡನೆ ಪಿಟಿಪಿಟಿ ಶಬ್ದಗಳು ಕೇಳಿಬರುತ್ತವೆ. ಎದೆಯ ಎಕ್ಸ್‌ಕಿರಣ ಚಿತ್ರದಲ್ಲಿ ಅಪಾರಕ ಛಾಯೆಗಳು ಅಲ್ಲಲ್ಲಿ ಹರಡಿರುವುದು ಕಾಣಿಸುತ್ತವೆ. ರೋಗದಿಂದ ಚೇತರಿಸಿಕೊಳ್ಳುವಾಗ ರಕ್ತರಸದಲ್ಲಿ ರೋಗನಿರೋಧಕ ಕಣಗಳ ಸಂಖ್ಯೆ ಏರಿರುವುದು ರೋಗದ ಕುರುಹಾಗಿ ಉಳಿಯುತ್ತದೆ. ಹೃದಯದ ಒಳಪದರಿನ ಉರಿ ಕೆಲವರಲ್ಲಿ ಪ್ರಮುಖ ತೊಡಕಾಗಿ ತೋರಿಬರಬಹುದು. ಇನ್ನು ಕೆಲವರಲ್ಲಿ ರೋಗದಿಂದ ಚೇತರಿಸಿಕೊಳ್ಳಲು ದೀರ್ಘಾವಧಿ ಸಮಯ ಹಿಡಿಯಬಹುದು. ರೋಗ ಸ್ವಯಂತಹಬದಿಗೆ ಬರಬಲ್ಲದು. ಡೊಕ್ಸಿಸೈಕ್ಲಿನನ್ನು ಮೊದಲನೆಯ ದಿನ 200 ಮಿಗ್ರಾಂ, ಅನಂತರ ಎರಡು ವಾರಗಳು ಪ್ರತಿದಿನ 100 ಮಿಗ್ರಾಂ. ಪ್ರಮಾಣದಲ್ಲಿ ಬಾಯಿಂದ ಕೊಡಬೇಕು. ಅದರ ಬದಲು ಪ್ರತಿ 6 ಘಂಟೆಗೆ 500 ಮಿ. ಗ್ರಾಂ. ನಂತೆ ಟೆಟ್ರಸೈಕ್ಲಿನನ್ನು ಎರಡು ವಾರ ಕೊಟ್ಟರೂ ಈ ಸೋಂಕು ದೂರವಾಗುತ್ತದೆ. ರೋಗದ ಪ್ರಾರಂಭದ ಹಂತಗಳಲ್ಲೇ ಇದನ್ನು ಗುರುತಿಸಿ ಚಿಕಿತ್ಸೆ ಮಾಡಿದರೆ ರೋಗ ಬೇಗ ಗುಣವಾಗುತ್ತದೆ. (ಪಿ.ಎಸ್.ಎನ್.)

**ಕ್ಯುರೇರ್ :** ವಿಶಾಲಾರ್ಥದಲ್ಲಿ ದಕ್ಷಿಣ ಅಮೆರಿಕದ ಇಂಡಿಯನರು ತಾವು ಬಳಸುತ್ತಿದ್ದ ಹಲವಾರು ಬಗೆಯ ಆದರೆ ಪರಸ್ಪರ ಸಂಬಂಧಪಟ್ಟ ವಿಷವಸ್ತುಗಳಿಗಿಟ್ಟಿದ್ದ ಸಾಮಾನ್ಯ ಹೆಸರು. ನಿರ್ದಿಷ್ಟ ಅರ್ಥದಲ್ಲಿ ಲೊಗಾನಿಯೇಸೀ ಕುಟುಂಬಕ್ಕೆ ಸೇರಿದ ಸ್ಟ್ರಿಕ್ನಾಸ್ ಜಾತಿಯ ಸಸ್ಯಗಳಿಂದ ಪಡೆಯಲಾಗುವ ವಿಷವಸ್ತುವಿದು. ಇಂಡಿಯನರು ಇದನ್ನು ಬಾಣದ ತುದಿಗೆ ಸವರಿ ಪ್ರಾಣಿಗಳನ್ನೂ ಶತ್ರುಗಳನ್ನೂ ಕೊಲ್ಲಲು ಬಳಸುತ್ತಿದ್ದರು. ಹೆಚ್ಚಿನ ಪರಿಮಾಣದಲ್ಲಿ ಇದು ಪಟ್ಟೆಸ್ನಾಯುಗಳನ್ನು ಸಡಿಲಗೊಳಿಸುವುದಲ್ಲದೆ ಉಸಿರಾಟವನ್ನು ಕ್ಷೀಣಗೊಳಿಸುತ್ತದೆ. ಇಲ್ಲವೆ ನಿಲ್ಲಿಸುತ್ತದೆ; ಇದರಿಂದ ಸಾವಿನ ಸಂಭಾವ್ಯತೆ ಇದ್ದೇ ಇದೆ.

ಕಚ್ಚಾಕ್ಯುರೇರ್ ಕಂದುಬಣ್ಣದ ಇಲ್ಲವೆ ಕಪ್ಪುಬಣ್ಣದ ಅಂಟು ಅಂಟಾದ ರಾಳದಂಥ ವಸ್ತು. ಇದಕ್ಕೆ ಒಂದು ರೀತಿಯ ಟಾರಿನಂಥ ವಾಸನೆಯಿದೆ. ರಾಸಾಯನಿಕವಾಗಿ ಇದು ಕ್ಯೂರಿನ್, ಕ್ಯುರಾರಿನ್, ಟ್ಯೂಬೊ–ಕ್ಯುರಾರಿನ್, ಪ್ಯಾರಾ–ಕ್ಯುರಾರಿನ್, ಪ್ರೋಟೋ–ಕ್ಯುರಾರಿನ್ ಪ್ರೋಟೋ–ಕ್ಯುರಾಡಿನ್ ಇತ್ಯಾದಿ ಹಲವಾರು ಸಸ್ಯಕ್ಷಾರಗಳಿಂದ (ಆಲ್ಕಲಾಯ್ಡ್ಸ್) ಕೂಡಿದ ಜಟಿಲವಸ್ತು.

ಕ್ಯುರೇರ್ ವಿಷವಸ್ತುವಾದರೂ ಸ್ನಾಯುಗಳನ್ನು ಸಡಿಲಗೊಳಿಸುವ ಗುಣ ಇದಕ್ಕಿರುವುದರಿಂದ ನಿಯಂತ್ರಿತ ಪರಿಮಾಣಗಳಲ್ಲಿ ಶಸ್ತ್ರಚಿಕಿತ್ಸೆಯಲ್ಲೂ ಮಾನಸಿಕ ರೋಗ ನಿಯಂತ್ರಣಗಳಲ್ಲೂ ಇದನ್ನು ಬಳಸುತ್ತಾರೆ. ಶಸ್ತ್ರಚಿಕಿತ್ಸೆಯಲ್ಲಿ ಇದನ್ನು ಅರಿವಳಿಕವಾಗಿ (ಅನೆಸ್ತೆಟಿಕ್) ಉಪಯೋಗಿಸುತ್ತಾರೆ. ಕೆಲವುರೀತಿಯ ಪಾರ್ಶ್ವ ರೋಗಗಳಲ್ಲಿ ಸ್ನಾಯುಗಳ ಬಿಗಿತವನ್ನು ಕಡಿಮೆ ಮಾಡುವುದಕ್ಕೂ ಎಲುಬುಗಳು ಮುರಿದಾಗ ಉಂಟಾಗಬಹುದಾದ ಸ್ನಾಯುಗಳ ಎಳೆತವನ್ನು ನಿವಾರಿಸಲೂ ಇದನ್ನು ಬಳಸುವುದುಂಟು.

ಕ್ಯುರೇರನ್ನು ಸ್ನಾಯುಗಳ ಅಥವಾ ರಕ್ತನಾಳಗಳ ಮೂಲಕ ದೇಹದೊಳಕ್ಕೆ ಹೋಗುವಂತೆ ಮಾಡಬಹುದು. ಹೆಚ್ಚಿನ ಪರಿಮಾಣದಲ್ಲಿ ಇಲ್ಲವೆ ವೇಗವಾಗಿ ಚುಚ್ಚಿದರೆ ಉಸಿರಾಟ ನಿಲ್ಲುವ ಸಂಭವವಿರುವುದರಿಂದ ಚುಚ್ಚುವಾಗ ಎಚ್ಚರವಹಿಸಬೇಕು.

ಕ್ಯುರೇರನ್ನು ಸ್ಟ್ರಿಕ್ನಾಸ್ ಜಾತಿಯ ಸಸ್ಯಗಳಿಂದ ಮಾತ್ರವಲ್ಲದೆ ಮೆನಿಸ್ಪರ್ಮೇಸೀ ಕುಟುಂಬದ ಸಿಸಾಂಪೆಲಸ್, ಚೆಲಿಟಾಕ್ಸಿಯಮ್, ಅನಮೋಸ್ಪರ್ಮಮ್ ಮುಂತಾದ ಗಿಡಗಳು, ರೂಟೇಸಿ ಕುಟುಂಬದ ಎರಿತ್ರೊಕೈಟಾನ್, ರೂಬಿಯೇಸೀ ಕುಟುಂಬದ ಸೈಕೋಟ್ರಿಯ, ಲೆಗ್ಯೂಮಿನೋಸೀ ಕುಟುಂಬದ ಲಾಂಕೋಕಾರ್ಪಸ್, ಪೈಪರೇಸೀ ಕುಟುಂಬದ ಪೈಪರ್ ಇತ್ಯಾದಿ ಗಿಡಗಳಿಂದ ಪಡೆಯಬಹುದು. (ಎಂ.ಆರ್.ಸಿ.)

**ಕ್ಯುಲ್ಪೆ, ಓಸ್ವಾಲ್ಡ್ :** 1862–1916. ಮನೋವಿಜ್ಞಾನ ಕ್ಷೇತ್ರದಲ್ಲಿ ವಿಶಿಷ್ಟ ಪ್ರಯೋಗಗಳನ್ನು ನಡೆಸಿದ ವೂರಸ್‌ಬರ್ಗ್ ಪಂಥದ ನಾಯಕ. 1893ರಲ್ಲಿ ಈತ ಬರೆದು ಪ್ರಕಟಿಸಿದ ಗ್ರುಂಡಿಸ್ ಡರ್ ಸೈಕಾಲಜಿ ಎಂಬ ಉದ್ಗ್ರಂಥ 1901ರಲ್ಲಿ ಟಿಚ್ನರ್‌ನಂಥ ಪ್ರಖ್ಯಾತ ಮನೋವಿಜ್ಞಾನಿಯಿಂದಲೇ ಇಂಗ್ಲಿಷ್ ಭಾಷೆಗೆ ಪರಿವರ್ತಿತವಾಯಿತು. ಪ್ರಯೋಗಪ್ರಧಾನವಾದ ಈ ಗ್ರಂಥ ಹೊಸ ಪದ್ಧತಿಯೊಂದನ್ನು ಆರಂಭಿಸಿತು. ಕ್ಯುಲ್ಪೆ ಪ್ರಕಾರ ಮನೋವಿಜ್ಞಾನ ವಾಸ್ತವವಾಗಿ, ಅನುಭವಿಸುವ ವ್ಯಕ್ತಿಗಳನ್ನು ಅವಲಂಬಿಸಿ ಅನುಭವಗಳ ವಿವರಗಳನ್ನು ಅನುಸಂಧಾನ ಮಾಡುವ ವಿಜ್ಞಾನ. ವಿಶ್ಲೇಷಣೆಗೆ ಪ್ರಾಶಸ್ತ್ಯ ಕೊಟ್ಟವರಲ್ಲಿ ಕ್ಯುಲ್ಪೆ ಮೊದಲಿಗ. ಕ್ಯುಲ್ಪೆಯ ಸ್ಫೂರ್ತಿಯಿಂದ ಮೈದಳೆದ ವೂರ್ಸ್‌ಬರ್ಗ್ ಪಂಥದಲ್ಲಿ ವ್ಯವಸ್ಥಿತ, ಪ್ರಾಯೋಗಿಕ ಅಂತಃಸಮೀಕ್ಷೆಯ, ಸಂವಿಧಾನ ಸ್ಪಷ್ಟಗೊಂಡಿತು. ಮನೋವಿಜ್ಞಾನ ಸಂವಿಧಾನಗಳ ವ್ಯವಸ್ಥೆಯಲ್ಲಿ ಈ ಕಲ್ಪನೆ ತುಂಬ ಪ್ರಭಾವಶಾಲಿಯಾಯಿತು. ವಿಲ್ಹೆಲ್ಮ್ ವೂಂಟ್‌ನ ಬಳಿ ಕ್ಯುಲ್ಪೆಯ ಶಿಕ್ಷಣ ಸಾಗಿತಾದರೂ ಕ್ಯುಲ್ಪೆಯ ದಾರಿವೂಂಟ್‌ನ ದಾರಿಗಿಂತ ಭಿನ್ನವಾಯಿತು. (ಎಸ್.ಕೆ.ಆರ್.)

**ಕ್ಯುನಿಫಾರಂ ಲಿಪಿ :** ಪ್ರಪಂಚದ ಇತಿಹಾಸದಲ್ಲೇ ಮೊದಲನೆಯದಾದ ಮತ್ತು ಪ್ರಾಚೀನ ಸುಮೇರಿಯನರು ಬಳಸುತ್ತಿದ್ದ ಲಿಪಿ. ಈ ಲಿಪಿಯ ಚಿಹ್ನೆಗಳು ನಲ್ಲಿ ಬೆಣೆ, ಬಾಣದ ತುದಿ ಮೊದಲಾದ ಆಕಾರಗಳಲ್ಲಿವೆ. ಲ್ಯಾಟಿನಿನಲ್ಲಿ ಕ್ಯೂನಿಫಾರಂನ ಅರ್ಥ ಬೆಣೆಯಾಕಾರ ಎಂದಾಗುತ್ತದೆ. ಈ ಲಿಪಿಯ ಉಗಮ ಯಾವಾಗ ಎಂದು ತಿಳಿಯದಿದ್ದರೂ ಪ್ರ.ಶ.ಪೂ. 4ನೆಯ ಸಹಸ್ರಮಾನದ ಕಾಲದಿಂದ ಇದು ಬಳಕೆಯಲ್ಲಿತ್ತು. ಇದು ಮೊದಲಿಗೆ ಚಿತ್ರಲಿಪಿಯಾಗಿತ್ತು. ಕಾಲಕ್ರಮದಲ್ಲಿ ಇದು ಶಬ್ದವರ್ಣ (ವರ್ಡ್–ಸಿಲಬಿಕ್) ಲಿಪಿಯಾಗಿ ತದನಂತರ ಕೀಲಲಿಪಿ ಆಯಿತು. ಇದರಲ್ಲಿ ಅನೇಕ ಬಗೆಯ ಚಿಹ್ನೆಗಳಿವೆ. ಕೆಲವು ಏಕಧ್ವನಿಸೂಚಕಗಳು ಮತ್ತೆ ಕೆಲವು ಬಹುಧ್ವನಿಸೂಚಕಗಳು. ಇದರಿಂದುಂಟಾಗುವ ಸಂದಿಗ್ಧತೆಯನ್ನು ನಿವಾರಿಸಲು ಪದದ ಮುಂದೆ ಅಥವಾ ಹಿಂದೆ ನಿರ್ದೇಶಕ ಚಿಹ್ನೆಗಳನ್ನು ಬರೆಯುತ್ತಿದ್ದರು. ದೇಶ, ಬೆಟ್ಟ, ದೇವತೆ, ಪಕ್ಷಿ, ಪ್ರಾಣಿ ಮುಂತಾದ ನಿರ್ದೇಶಕ ಚಿಹ್ನೆಗಳು ಕೀಲಲಿಪಿ ಶಾಸನಗಳಲ್ಲಿ ವಿಶೇಷವಾಗಿವೆ. ಸುಮೇರಿಯನರು ಹಸಿಯ ಜೇಡಿಮಣ್ಣಿನ ಫಲಕಗಳ ಮೇಲೆ ಮೊನಚಾದ ಲೇಖನಿಗಳಿಂದ ತಮ್ಮ ಶಾಸನಗಳನ್ನು ಬರೆಯುತ್ತಿದ್ದುದರಿಂದ



ವೃತ್ತಾಕಾರವುಳ್ಳ ಚಿಹ್ನೆಗಳು ಮಾಯವಾಗಿ, ಮೊಳೆಯಾಕಾರದ ಬರೆಹ ರೂಢಿಗೆ ಬಂತು. ಅಸ್ಸೀರಿಯನರು ಈ ಲಿಪಿಯನ್ನು ಸುಧಾರಿಸಿ ಅನಾವಶ್ಯಕವಾದ ಚಿಹ್ನೆಗಳನ್ನು ಬಿಟ್ಟು ಸುಮಾರು 570 ಚಿಹ್ನೆಗಳನ್ನು ಬಳಸುತ್ತಿದ್ದರು. ಅವುಗಳಲ್ಲೂ ಸುಮಾರು 200 ಚಿಹ್ನೆಗಳು ಹೆಚ್ಚು ಬಳಕೆಯಲ್ಲಿರಲಿಲ್ಲ. ಪರ್ಷಿಯನರು ಅರಾಮೇಯಿಕ್ ಲಿಪಿಯ ಆಧಾರದ ಮೇಲೆ ಇದರಲ್ಲಿ ಇನ್ನೂ ಬದಲಾವಣೆಗಳನ್ನು ಮಾಡಿ ಇದು ಅಕ್ಷರಲಿಪಿಯ ಸ್ಥಿತಿಗೆ ಸಮೀಪವಾಗುವಂತೆ ಮಾಡಿದರು.

ಕೀಲಲಿಪಿಯನ್ನು ಸುಮೇರಿಯನರು, ಬ್ಯಾಬಿಲೋನಿಯನರು, ಅಸ್ಸೀರಿಯನರು, ಎಲಾಮೈಟ್, ಕಾಸೈಟ್, ಹಿಟ್ಟೈಟ್ ಮುಂತಾದ ಜನಗಳು ಬಳಸುತ್ತಿದ್ದರು. ಕಾಲಕ್ರಮದಲ್ಲಿ ಅದು ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಪ್ರ.ಶ.ಪೂ. 6ಕ್ಕೆ ಸೇರಿದ ಶಾಸನವೇ ನಮಗೆ ದೊರಕಿರುವ ಕ್ಯೂನಿಫಾರಂ ಲಿಪಿಯ ಶಾಸನಗಳಲ್ಲಿ ಕೊನೆಯದು. ಆಗಿನ ನಾಗರಿಕತೆಯ ಪ್ರತೀಕವಾಗಿದ್ದ ಕ್ಯೂನಿಫಾರಂ ಲಿಪಿ ಕಣ್ಮರೆಯಾಯಿತು. 19ನೆಯ ಶತಮಾನದಲ್ಲಿ ಜಿ.ಎಫ್.ಗ್ರೋಟ್‌ಫೆಂಟ್ ಮತ್ತು ಎಚ್.ಸಿ.ರಾಲಿನ್‌ಸನ್ ಎಂಬ ವಿದ್ವಾಂಸರು ಈ ಲಿಪಿಯನ್ನು ಓದಲು ಹಾದಿ ಹಾಕಿಕೊಟ್ಟರು. (ಎ.ವಿ.ಎನ್.)

**ಕ್ಯೂಫಿಯ :** ಲೈತ್ರೇಸೀ ಕುಟುಂಬದ ಕ್ಯೂಫಿಯ ಮಿನಿಯೇಟ ಎಂಬ ವೈಜ್ಞಾನಿಕ ಹೆಸರಿನ ವಾರ್ಷಿಕ ಸಸ್ಯ. ಇದರ ಹೊಳಪಿನ ಎಲೆಗಳ ಮತ್ತು ನಸುಗೆಂಪು ಹೂವಿನ ಅಲಂಕಾರಕ್ಕಾಗಿ ಈ ಸಸ್ಯ ತೋಟಗಾರಿಕೆಯಲ್ಲಿ ಪ್ರಾಮುಖ್ಯ ಪಡೆದಿದೆ. 12"–15" ಎತ್ತರಕ್ಕೆ ಬೆಳೆಯುವ ಈ ಸಸ್ಯವನ್ನು ಕುಂಡದಲ್ಲಿ ಅಥವಾ ಮಡಿಗಳಲ್ಲಿ ಬೆಳೆಸಬಹುದು.



ಕ್ಯೂಫಿಯ ಲಾವಿಯ ಪ್ರಭೇದ

ಅಭಿಮುಖ ಜೋಡಣೆಯನ್ನು ತೋರುವ ಅಂಡಾಕಾರದ ಇಲ್ಲವೆ ಭರ್ಜಿಯಾಕಾರದ ಸರಳ ಎಲೆಗಳು, ರೆಸೀಮ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿರುವ ದ್ವಿಲಿಂಗಿ ಹೂಗಳು ಕ್ಯೂಫಿಯದ ಮುಖ್ಯಲಕ್ಷಣಗಳಲ್ಲಿ ಕೆಲವು. ದಳಗಳ ಸಂಖ್ಯೆಯಲ್ಲಿ

ಗಮನಾರ್ಹವಾದ ವ್ಯತ್ಯಾಸಗಳನ್ನು ನೋಡಬಹುದು. ಕ್ಯೂ.ಇಗ್ನಿಯ ಎಂಬ ಪ್ರಭೇದದಲ್ಲಿ ದಳಗಳೇ ಇಲ್ಲ. ಬದಲಿಗೆ ಕಣ್ಣುಕೋರೈಸುವಂಥ ಬಣ್ಣವುಳ್ಳ ಪುಷ್ಪಪತ್ರಗಳಿವೆ. ಕ್ಯೂ. ಹಿಸೋಪಿಫೋಲಿಯ ಎಂಬುದರಲ್ಲಿ ಸಮಗಾತ್ರದ 6 ದಳಗಳಿವೆ. ಇವೆರಡು ಬಗೆಗಳ ನಡುವೆ 2 ದೊಡ್ಡ ಹಾಗೂ 4 ಚಿಕ್ಕ ದಳಗಳನ್ನು ಪಡೆದಿರುವ ಪ್ರಭೇದಗಳೂ (ಕ್ಯೂ.ಪ್ರೊಕಂಬೆನ್ಸ್) ಎರಡು ದಳಗಳನ್ನು ಮಾತ್ರ ಹೊಂದಿರುವ ಪ್ರಭೇದಗಳೂ (ಕ್ಯೂ.ಲಾವಿಯ) ಇವೆ. 12 ದಳಗಳಿರುವ ಭೇದಗಳೂ ಇಲ್ಲದಿಲ್ಲ (ಉದಾ: ಕ್ಯೂ.ಮೈಕ್ರೊಪೆಟಾಲ).

ಕ್ಯೂಫಿಯವನ್ನು ಬೀಜಗಳ ಮೂಲಕ ವೃದ್ಧಿಸಲಾಗುತ್ತದೆ. ಬೀಜಗಳನ್ನು ಮೊದಲು ಬಿತ್ತನೆ ಮಾಡಿ, 25–26ನೆಯ ದಿನದ ಸಸಿಗಳನ್ನು, 12"ನ ಕುಂಡಗಳಲ್ಲೊ ಇಲ್ಲವೆ ಮಡಿಗಳಲ್ಲಿ 9"–12" ಅಂತರ ಕೊಟ್ಟೊ ನೆಡಬೇಕು. 45, 60 ಮತ್ತು 75ನೆಯ ದಿನ ಒಂದು ಸಾರಿ ತುದಿಯನ್ನು ಚಿಗುಟಬೇಕು. 90–105 ದಿನಗಳಲ್ಲಿ ಗಿಡ ಹೂಬಿಡಲು ಆರಂಭಿಸುತ್ತದೆ. 140 ದಿನಗಳಲ್ಲಿ ಬೀಜವನ್ನು ಬಿಡಿಸಬಹುದು. (ಕೆ.)

**ಕ್ಯೂಬ**: ವೆಸ್ಟ್ ಇಂಡೀಸಿನ ಗ್ರೇಟರ್ ಆಂಟಿಲಿಸ್ ದ್ವೀಪಗಳ ಪೈಕಿ ಅತ್ಯಂತ ದೊಡ್ಡದಾದ ಮತ್ತು ಅತ್ಯಂತ ಹೆಚ್ಚಿನ ಜನಸಂಖ್ಯೆಯುಳ್ಳ ದ್ವೀಪ. ಅಮೆರಿಕ ಸಂಯುಕ್ತಸಂಸ್ಥಾನದ ಫ್ಲಾರಿಡಕ್ಕೆ 144 ಕಿಮೀ ದಕ್ಷಿಣದಲ್ಲಿರುವ ಈ ದ್ವೀಪದ ಉದ್ದ ಪೂರ್ವ–ಪಶ್ಚಿಮವಾಗಿ 1193 ಕಿಮೀ ಇದರ ಸರಾಸರಿ ಅಗಲ 99 ಕಿಮೀ ಇದರ ಅಗಲ 35 ಕಿಮೀ ಗಳಿಂದ 198 ಕಿಮೀ ವರೆಗೆ ವ್ಯತ್ಯಾಸವಾಗುತ್ತದೆ. ತೀರದ ಬಳಿಯ ಈಸ್ಲಾ ದ ಪಿನೋಸ್ ಮತ್ತು ಸುಮಾರು 1,600 ಕಿರುದ್ವೀಪಗಳೂ ಸೇರಿ ಇದರ ವಿಸ್ತೀರ್ಣ 1,10,922 ಚಕಿಮೀ, ಜನಸಂಖ್ಯೆ: 11,346700 (2001) ಉ.ಅ.19° 49'–23° 15' ಮತ್ತು ಪ.ರೇ.74° 8' ಮತ್ತು 84° 57' ನಡುವೆ, ಮೆಕ್ಸಿಕೋ ಕೊಲ್ಲಿಯ ದ್ವಾರದ ಬಳಿ, ಉತ್ತರಕ್ಕೆ ಬಾಗಿದ ಬಿಲ್ಲಿನಂತೆ ಇರುವ ಕ್ಯೂಬದ ಸನ್ನಿವೇಶ ಮಹತ್ವದ್ದು. ವಸಾಹತು ಯುಗದ ಆದಿಕಾಲದಲ್ಲಿ ಸ್ಪೇನಿನವರು ಇದನ್ನು ಹೊಸ ಜಗತ್ತಿನ ಬೀಗದಕೈ ಎಂದು ವರ್ಣಿಸುತ್ತಿದ್ದರು. ಈಗಲೂ ರಾಜಕೀಯವಾಗಿಯೂ ಆರ್ಥಿಕವಾಗಿಯೂ ಇದರ ಆಯಕಟ್ಟಿನ ಸ್ಥಾನಮಹತ್ತ್ವ ಕಡಿಮೆಯಾಗಿಲ್ಲ. ಅಮೆರಿಕ ಸಂಯುಕ್ತಸಂಸ್ಥಾನದ ಪೂರ್ವ ರಾಜ್ಯಗಳ ಜನನಿಬಿಡ ಕೇಂದ್ರಗಳಿಗೆ ಸನಿಯದಲ್ಲಿರುವುದರಿಂದ ಕ್ಯೂಬ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಬೃಹದ್ ರಾಷ್ಟ್ರಗಳ ಗಮನ ಸೆಳೆದಿದೆ.

**ಭೌತಲಕ್ಷಣ:** ಕ್ಯೂಬ ಬಹುತೇಕ ವಿಶಾಲ ಕಣಿವೆಗಳಿಂದ ಕೂಡಿದ ನಾಡು. ಒಟ್ಟು ವಿಸ್ತೀರ್ಣದ ಕಾಲುಭಾಗ ಪರ್ವತಪ್ರದೇಶ. ದೇಶದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಇದು ಹಬ್ಬಿದೆ. ಪರ್ವತಶ್ರೇಣಿಗಳ ನಡುವೆ ವಿಶಾಲವಾದ ಮೈದಾನಗಳಿವೆ. ಕೃಷಿಯ ದೃಷ್ಟಿಯಿಂದ ಅಮೂಲ್ಯವಾಗಿವೆ. ಸಾರಿಗೆ ಬೆಳೆವಣಿಗೆಗೂ ಅನುಕೂಲವಾಗಿವೆ.

ಕ್ಯೂಬದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 98 ಮೀ ಸಿಯೆರಾ ಮೇಸ್ತ್ರ ಶ್ರೇಣಿಯ ಪಿಕೋ ಟರ್ಕ್ವಿನೊ 1975 ಮೀ ಅತ್ಯುನ್ನತ ಶಿಖರ. ಆಗ್ನೇಯ ತುದಿಯ ಪರ್ವತಪ್ರದೇಶದ ಕೆಲವು ಭಾಗಗಳ ಗರಿಷ್ಠ ಎತ್ತರ 600 ಮೀ.ಗಿಂತ ಹೆಚ್ಚು. ಕಾಮಾಗ್ವೆಯಿಯ ಬೆಟ್ಟಗಳ ಗರಿಷ್ಠ ಎತ್ತರ ಸುಮಾರು 3000 ಮೀ. ದಕ್ಷಿಣ ಲಾಸ್ ವಿಲಾಸ್‌ನ ಟ್ರಿನಿಡಾಡ್ ಪರ್ವತಗಳ ಅತ್ಯುನ್ನತ ಶಿಖರ 1141 ಮೀ ಇದೆ. ಉತ್ತರ ತೀರದ ಬಳಿಯ ಪೀನಾರ್ ದೆಲ್ ರೀಯೊ ಪ್ರದೇಶದಲ್ಲಿ ಅತ್ಯಂತ ಎತ್ತರದ ಸ್ಥಳ 717 ಮೀ.

ಕ್ಯೂಬದಲ್ಲಿ 200ಕ್ಕೂ ಹೆಚ್ಚು ನದಿಗಳಿವೆ. ಇವುಗಳಲ್ಲಿ ಬಹುತೇಕ ನದಿಗಳು ಉತ್ತರಕ್ಕೋ ದಕ್ಷಿಣಕ್ಕೋ ಹರಿಯುತ್ತವೆ. ಕೆಲವು ನದಿಗಳ ಅಳಿವೆಗಳು ಆಳವಾಗಿಯೂ ಅಗಲವಾಗಿಯೂ ಉಂಟು. ಇವು ನೌಕಾಸಂಚಾರಕ್ಕೆ ಅನುಕೂಲಕರ. ಕ್ಯೂಬ ದ್ವೀಪದ ಅಗಲ ಕಿರಿದಾದ್ದರಿಂದ ಬಹುತೇಕ ನದಿಗಳು ಮೊಟಕಾಗಿವೆ. ಅತ್ಯಂತ ಉದ್ದದ ನದಿ ಕಾಟೊ (248 ಕಿಮೀ). ಪಶ್ಚಿಮ ಓರಿಯೆಂಟೆಯ ಅಗಲವಾದ ಮೈದಾನದಲ್ಲಿ ಸಿಯೆರಾ ಮೇಸ್ತ್ರಕ್ಕೆ ಸಮಾನಾಂತರದಲ್ಲಿ ಇದು ಹರಿಯುತ್ತದೆ.

ಕ್ಯೂಬದ ಕಡಲ ಕಿನಾರೆಯ (ಕೋಸ್ಟ್ ಲೈನ್) ಉದ್ದ ಸುಮಾರು 3520 ಕಿಮೀ ಇದರ ಉದ್ದಕ್ಕೂ ಅನೇಕ ಒಳ್ಳೆಯ ಬಂದರುಗಳಿವೆ.

ಕ್ಯೂಬವನ್ನು ಅದರ ಮೇಲ್ಮೈ ಲಕ್ಷಣಗಳಿಗೆ ಅನುಗುಣವಾಗಿ ನಾಲ್ಕು ಮುಖ್ಯ ಭೌಗೋಳಿಕ ಪ್ರದೇಶಗಳಾಗಿ ಹೀಗೆ ವಿಂಗಡಿಸಬಹುದು: 1. ಪಶ್ಚಿಮದ ಮೂರು ಪ್ರಾಂತ್ಯಗಳನ್ನೊಳಗೊಂಡ ಆಕ್ಸಿಡೆಂಟ್; 2. ಕೇಂದ್ರ ಪ್ರಾಂತ್ಯದ ಬಹು ಭಾಗವನ್ನಾವರಿಸಿರುವ ಲಾಸ್ ವಿಲಾಸ್; 3. ಕಾಮಾಗ್ವೆಯಿ ಮತ್ತು ಓರಿಯೆಂಟೆ ಪ್ರಾಂತ್ಯದ ವಾಯವ್ಯಭಾಗ; 4 ಓರಿಯೆಂಟೆಯ ಉಳಿದೆಲ್ಲ ಭಾಗ.

**ವಾಯುಗುಣ:** ಕ್ಯೂಬದ್ದು ಸಾಮಾನ್ಯವಾಗಿ ಸಾಗರಿಕ ಉಷ್ಣವಲಯ ವಾಯುಗುಣ. ಕ್ಯೂಬದ ಯಾವ ಭಾಗವೂ ಸಮುದ್ರದಿಂದ ಬಹು ದೂರ ಇಲ್ಲವಾದ್ದರಿಂದ ಅದು ಸಮುದ್ರದ ಪ್ರಭಾವಕ್ಕೆ ಒಳಗಾಗಿದೆ. ಜನವರಿಯಲ್ಲಿ ಮಧ್ಯಕ ಉಷ್ಣತೆ $70^0$ ಫ್ಯಾ., ಜುಲೈಯಲ್ಲಿ $81^0$ ಫ್ಯಾ. ಅಲ್ಲಿ $90^0$ ಫ್ಯಾ.ಗೂ ಹೆಚ್ಚಿನ ಗರಿಷ್ಠ ಉಷ್ಣತೆ ಬರ್ಫ ಬಿಂದುವಿಗಿಂತ ಕೆಳಕ್ಕೆ ಇಳಿಯುವುದುಂಟು. ವರ್ಷವೆಲ್ಲ ಬೀಸುವ ವ್ಯಾಪಾರಮಾರುತಗಳಿಂದ ತೀರಪ್ರದೇಶ ಹೆಚ್ಚು ತಂಪಾಗಿರುತ್ತದೆ. ಇವು ಚಳಿಗಾಲದಲ್ಲಿ ಈಶಾನ್ಯದಿಂದಲೂ ಬೇಸಗೆಯಲ್ಲಿ ಪೂರ್ವ–ಆಗ್ನೇಯಗಳಿಂದಲೂ ಬೀಸುತ್ತವೆ. ಅಪರೂಪವಾಗಿ ಅಮೆರಿಕ ಸಂಯುಕ್ತಸಂಸ್ಥಾನದ ಖಂಡಪ್ರದೇಶದಿಂದ ಮೊತ್ತವಾಗಿ ಬೀಸುವ ಚಳಿಗಾಳಿಯ ಪ್ರಭಾವಕ್ಕೆ ಉತ್ತರ ತೀರಪ್ರದೇಶ ಒಳಗಾಗುವುದುಂಟು.

ಕ್ಯೂಬದಲ್ಲಿ ಮಳೆ ಧಾರಾಳ; ವಾರ್ಷಿಕ ಸರಾಸರಿ 54". ಪೀನ್ ದೆಲ್ ರೀಯೊ ಪರ್ವತಭಾಗದಲ್ಲಿ ಗರಿಷ್ಠ ಮಳೆಯಾಗುತ್ತದೆ (65"). ಓರಿಯೆಂಟೆಯ ದಕ್ಷಿಣ ತೀರದಲ್ಲಿ 30"ಗಿಂತ ಕಡಿಮೆ. ಮೇ–ನವೆಂಬರ್ ಮಳೆಗಾಲ. ವರ್ಷದ ಮಳೆಯ ಮುಕ್ಕಾಲು ಪಾಲು ಬೀಳುವುದು ಈ ಕಾಲದಲ್ಲಿ. ಕ್ಯೂಬ ಚಂಡಮಾರುತಗಳಿಗೆ ತುತ್ತಾಗುವುದಂಟು. ವೇಗದಿಂದ ಬೀಸುವ ಗಾಳಿ, ಅತಿಯಾದ ಮಳೆ ಮತ್ತು ಅಲೆಯ ಹೊಡೆತಗಳಿಂದ ಮನೆ, ಬೆಳೆಗಳೂ ಜನರೂ ಹಾನಿಗೆ ಒಳಗಾಗುವುದುಂಟು. ಪೂರ್ವದಲ್ಲಿ ಇವುಗಳ ಹಾವಳಿ ಹೆಚ್ಚು.

**ಸಸ್ಯಗಳು, ಪ್ರಾಣಿಗಳು:** ಕ್ಯೂಬದ ಸಸ್ಯರಾಶಿ ವೈವಿಧ್ಯಪೂರಿತ. ವೆಸ್ಟ್ ಇಂಡೀಸ್, ದಕ್ಷಿಣ ಫ್ಲಾರಿಡ, ಮೆಕ್ಸಿಕೋ, ಮಧ್ಯ ಅಮೆರಿಕ ಇವುಗಳ ಪ್ರಭೇದಗಳು ಇಲ್ಲುಂಟು. ಹಲವಾರು ಹೊಸ ಸಸ್ಯಗಳನ್ನು ಬೆಳೆಸಲಾಗುತ್ತಿದೆ. ಕಬ್ಬು, ಕಾಫಿ, ಕೆಕಾವೊ, ಬಾಳೆ

ಹವಾನ ನಗರದ ಒಂದು ಬೀದಿ

ಉದಾಹರಣೆಗಳು. ಕ್ಯೂಬದ ಫಲವತ್ತಾದ ಮೈದಾನಗಳಲ್ಲಿ ಹಲವಾರು ಅಮೂಲ್ಯ ಮರಗಳ ಕಾಡುಗಳು ಹಬ್ಬಿದ್ದುವು. ಅವನ್ನೆಲ್ಲ ಬಹುತೇಕ ಕೃಷಿಗಾಗಿ ಕಡಿಯಲಾಗಿದೆ. ಪರ್ವತಗಳ ಮೇಲೆ ಕಾಡುಗಳು ಉಳಿದುಕೊಂಡಿವೆ. ಕ್ಯೂಬದ ಕಾಲುಭಾಗವನ್ನು ಉಷ್ಣವಲಯದ ಹುಲ್ಲುಗಾಡು ಆವರಿಸಿತ್ತು. ತೀರಪ್ರದೇಶದಲ್ಲಿ–ಮುಖ್ಯವಾಗಿ ದಕ್ಷಿಣದ ಕರಾವಳಿಯಲ್ಲಿ–ಗುಲ್ಮವೃಕ್ಷಗಳಿವೆ.

ಕ್ಯೂಬದ ಪ್ರಾಣಿ ಪ್ರಭೇದಗಳೂ ಬಗೆಗಳೂ ವೈವಿಧ್ಯಮಯ. ಇವುಗಳಲ್ಲಿ ಕಶೇರುಕಗಳಿಗಿಂತ ಅಕಶೇರುಕಗಳು ಅಧಿಕ. ಅನೇಕ ಪ್ರಭೇದಗಳು ಸ್ಥಳೀಯವಾದವುಗಳು. ಬಾವಲಿಗಳ, ದಂಶಕಗಳ ಹಲವು ಪ್ರಭೇದಗಳುಂಟು. ಅತ್ಯಂತ ದೊಡ್ಡ ಬಾವಲಿ ಸಣ್ಣ ಮೀನುಗಳನ್ನು ತಿನ್ನುತ್ತದೆ. ಅತಿ ಸಣ್ಣ ಬಾವಲಿಗೆ ಚಿಟ್ಟೆ ಬಾವಲಿ ಎಂದು ಹೆಸರು. ದೊಡ್ಡ ಇಲಿಗಳ ಮೂರು ಪ್ರಭೇದಗಳು ಇಲ್ಲುಂಟು. ನದೀಮುಖಗಳಲ್ಲಿ ಕಡಲು ಹಸುಗಳಿವೆ.




ಕ್ಯೂಬದಲ್ಲಿ ಹಕ್ಕಿಗಳ 297 ಪ್ರಭೇದಗಳೂ ಉಪಪ್ರಭೇದಗಳೂ ಉಂಟು. ಇವುಗಳಲ್ಲಿ 70 ಮಾತ್ರ ದೇಶೀಯವಾದವು. ಉರಗಗಳೂ ಸ್ಥಲ ಜಲೋಭಯ ಜೀವಿಗಳೂ ವಿರಳ. ಇಲ್ಲಿಯ ಬಲು ದೊಡ್ಡ ಹಲ್ಲಿ ಇಗ್ವಾನ. ಕೇಮನ್, ಕೊಕೊಡ್ರಿಲೊ ಎಂಬ ಎರಡು ಪ್ರಭೇದಗಳ ಮೊಸಳೆಗಳೂ ಸೀನೀರಿನ ಆಮೆಗಳೂ ಇವೆ. ಆದರೆ ವಿಷಸರ್ಪಗಳಿಲ್ಲ. ಸಮುದ್ರಮತ್ಸ್ಯಗಳೂ 4,000 ಮೃದ್ವಸ್ಥಿ ಜಂತುಗಳ ಪ್ರಭೇದಗಳೂ ಬಸವನಹುಳುಗಳೂ ಉಂಟು. ಕ್ಯೂಬದ ಕೀಟ ಪ್ರಪಂಚವೂ ವೈವಿಧ್ಯಮಯ. ಹಳದಿ ಜ್ವರ ಹರಡುವ ಸೊಳ್ಳೆಯನ್ನು 1902ರಲ್ಲಿ ಬಹುತೇಕ ನಿರ್ನಾಮ ಮಾಡಲಾಯಿತು.

**ಆರ್ಥಿಕತೆ:** 20ನೆಯ ಶತಮಾನದ ಆದಿಯಿಂದ ಕ್ಯೂಬದ ಆರ್ಥಿಕತೆ ಮುಖ್ಯವಾಗಿ ಕಬ್ಬಿನ ಬೆಳೆ ಮತ್ತು ಸಕ್ಕರೆ ತಯಾರಿಕೆಯನ್ನೇ ಆಧರಿಸಿದೆ. ಕ್ಯೂಬದಾದ್ಯಂತ ಕಬ್ಬನ್ನು ಬೆಳೆಯುತ್ತಾರೆ. ಆದರೆ ಕ್ಯೂಬದ ಪೂರ್ವಾರ್ಧದಲ್ಲಿ ಇದರ ಬೆಳೆ ಹೆಚ್ಚು. ಕ್ಯೂಬದಲ್ಲಿ ಕಚ್ಚಾ ಸಕ್ಕರೆ ತಯಾರಿಸುವ 160 ಕಾರ್ಖಾನೆಗಳಿದ್ದರೂ ಅದರ ಪರಿಷ್ಕರಣಕಾರ್ಯ ಅಲ್ಲಿ ಹೆಚ್ಚಾಗಿ ನಡೆಯುತ್ತಿರಲಿಲ್ಲ. ಮೊದಮೊದಲು ಕ್ಯೂಬದ ಸಕ್ಕರೆ ಕೈಗಾರಿಕೆ ಪ್ರವರ್ಧಮಾನಕ್ಕೆ ಬಂತಾದರೂ ಅನಂತರ ಇದರಲ್ಲಿ ಪದೇ ಪದೇ ಏರಿಳಿತಗಳು ಸಂಭವಿಸಿವೆ. ಸಕ್ಕರೆ ಕೈಗಾರಿಕೆಯನ್ನು ಹಲವು ನಿಯಂತ್ರಣಗಳಿಗೆ ಒಳಪಡಿಸಲಾಗಿದೆ. ಕ್ಯೂಬದ ಇತರ ಬೆಳೆಗಳು ಹೊಗೆಸೊಪ್ಪು, ಆಹಾರಧಾನ್ಯಗಳು, ಬಾಳೆ, ಅನಾನಸ್ ಮತ್ತು ಪರಂಗಿ. ಕ್ಯೂಬದ ಹೊಗೆಸೊಪ್ಪನ್ನು ಚುಟ್ಟಾ ತಯಾರಿಕೆಗೆ ವಿಶೇಷವಾಗಿ ಉಪಯೋಗಿಸಲಾಗುತ್ತದೆ. ಕ್ಯೂಬದಿಂದ ಹಲವು ಗಟ್ಟಿ ಮರಗಳನ್ನು ನಿರ್ಯಾತ ಮಾಡಲಾಗುತ್ತಿತ್ತು. ಈಗ ಇದನ್ನು ನಿಷೇಧಿಸಲಾಗಿದೆ.

ಕ್ಯೂಬನ್ ನೃತ್ಯದ ಒಂದು ದೃಶ್ಯ

ಕ್ಯೂಬದ ಗಣಿಗಾರಿಕೆಯೂ ಮುಖ್ಯವಾದ್ದು. ಪಿನಾರ್ ದೆಲ್ ರೀಯೊದಲ್ಲಿ ತಾಮ್ರದ ನಿಕ್ಷೇಪಗಳಿವೆ. ಓರಿಯೆಂಟೆ ಪ್ರಾಂತ್ಯದಲ್ಲಿ ಕಡಿಮೆ ದರ್ಜೆಯ ಕಬ್ಬಿಣದ ಅದಿರು ಧಾರಾಳವಾಗುಂಟು. ಇದನ್ನು ಅಭಿವೃದ್ಧಿಪಡಿಸಿಲ್ಲ. ಮೋವ ಕೊಲ್ಲಿ ಪ್ರದೇಶದಲ್ಲಿ ನಿಕಲ್ ಸಿಗುತ್ತದೆ. ಗಣಿ ಕೈಗಾರಿಕೆಯನ್ನು ಬಹುತೇಕ ರಾಷ್ಟ್ರೀಕರಣಗೊಳಿಸಲಾಗಿದೆ. ಕ್ಯೂಬದಲ್ಲಿ ಕಲ್ಲಿದ್ದಲು ಇಲ್ಲ. ವಿದ್ಯುತ್ ವಿಭವವೂ ಹೆಚ್ಚಾಗಿ ಇಲ್ಲ. ಮನೆಯ ಇಂಧನ ಇದ್ದಿಲು. ಸೌದೆಯಿಂದ ಇದನ್ನು ತಯಾರಿಸಲಾಗುತ್ತದೆ. ಕಬ್ಬಿನ ಹಿಪ್ಪೆಯನ್ನು ಸಕ್ಕರೆ ಕೈಗಾರಿಕೆಯಲ್ಲಿ ಇಂಧನವಾಗಿ ಉಪಯೋಗಿಸುತ್ತಾರೆ. ಸಕ್ಕರೆಯ ಜೊತೆಗೆ ತಯಾರಾಗುವ ಪದಾರ್ಥಗಳು ರಂ ಮತ್ತು ಕೈಗಾರಿಕಾ ಮದ್ಯ ಸಾರ. ಕೈಗಾರಿಕಾಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಮೀನುಗಾರಿಕೆಯನ್ನು ಹೆಚ್ಚಾಗಿ ಅಭಿವೃದ್ಧಿಪಡಿಸಲು ಸಾಧ್ಯವಿದೆ.

**ಸಾರಿಗೆ, ನಗರಗಳು:** ರೈಲುಮಾರ್ಗಗಳೂ ರಸ್ತೆಗಳೂ ಕ್ಯೂಬದ ಮುಖ್ಯ ಪಟ್ಟಣಗಳ ಮತ್ತು ಗ್ರಾಮಗಳ ನಡುವೆ ಸಂಪರ್ಕ ಕಲ್ಪಿಸಿವೆ. 4800 ಕಿಮೀ. ರೈಲುಮಾರ್ಗಗಳೂ 8300 ಕಿಮೀ ಸರ್ವಋತು ರಸ್ತೆಗಳೂ ಉಂಟು. ಕ್ಯೂಬ ಭೌಗೋಳಿಕವಾಗಿ ನೌಕಾ ಮತ್ತು ವಾಯುಮಾರ್ಗಗಳ ನಾಭಿಯಂತಿದೆ. ಹವಾನ ಜನಸಂಖ್ಯೆ (2 ಮಿಲಿಯನ್) ರಾಜಧಾನಿ. ಮುಖ್ಯ ವಾಣಿಜ್ಯ ಕೇಂದ್ರ. ಕ್ಯೂಬದ ನಾಣ್ಯ ಪೇಸೋ ಭಾಷೆ ಸ್ಪ್ಯಾನಿಷ್.


ಆಧುನಿಕ ಕ್ಯೂಬನ್ ಕಲೆಯ ಒಂದು ಮಾದರಿ. ಕಲಾವಿದ ಅಮೀಲಿಯ ಪೆಲೇಜ಼್

**ಸರ್ಕಾರ:** 1959ರ ಕ್ರಾಂತಿಯ ಅನಂತರ ಕ್ಯೂಬದ ಆಡಳಿತವನ್ನು ಗಣರಾಜ್ಯದ ಮೂಲ ಕಾಯಿದೆಯ ಪ್ರಕಾರ ನಡೆಸಲಾಗುತ್ತಿದೆ. ಇಪ್ಪತ್ತು ಮಂತ್ರಿಗಳ ಸಹಾಯದಿಂದ ದೇಶವನ್ನಾಳುವವನು ಪ್ರಧಾನಮಂತ್ರಿ. ಅವನೇ ಅಧ್ಯಕ್ಷನನ್ನು ನೇಮಿಸುತ್ತಾನೆ. ಆಡಳಿತಕ್ಕಾಗಿ ದೇಶವನ್ನು ಆರು ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ. (ಜಿ.ಇ.ಪಿ.)

**ಕ್ಯೂಬದ ಇತಿಹಾಸ :** ಕ್ಯೂಬದ ಪೂರ್ವಚರಿತ್ರೆ ಮತ್ತು ನಾಗರಿಕತೆಯ ವಿಚಾರದಲ್ಲಿ ಗಮನಾರ್ಹ ಸಂಗತಿಗಳೇನೂ ತಿಳಿದುಬಂದಿಲ್ಲ.

1492ರಲ್ಲಿ ಕೊಲಂಬಸ್ ತನ್ನ ಪ್ರಥಮ ಯಾನದಲ್ಲಿ ಕ್ಯೂಬ ದ್ವೀಪವನ್ನು ಕಂಡು ಹಿಡಿದ. 1511ರಿಂದ ಕ್ಯೂಬದ ಪರಿಶೋಧನೆ ಡೀಏಗೋ ವೆಲಜ಼್ ಕ್ವೆಜ಼್‌ನ ನೇತೃತ್ವದಲ್ಲಿ ಮುಂದುವರಿದು, 1515ರ ವೇಳೆಗೆ ಬಯಾಮೋ, ಬಾರಕೋವ, ಹವಾನ ಮುಂತಾದ ಕಡೆಗಳಲ್ಲಿ ಸ್ಪೇನ್ ವಸಾಹತುಗಳನ್ನು ಸ್ಥಾಪಿಸಿತು. ಅನಂತರದ ಕಾಲದಲ್ಲಿ ನೆರೆಯ ಭೂಭಾಗಗಳನ್ನು ಅನ್ವೇಷಿಸಲು ಸ್ಪೇನಿಗೆ ಇದು ಮುಖ್ಯ ಠಾಣೆಯಾಯಿತು. ಹವಾನ

ಮುಖ್ಯ ಬಂದರಾಯಿತು. ಕ್ಯೂಬದಲ್ಲಿ ವ್ಯವಸಾಯ ಅಭಿವೃದ್ಧಿ ಹೊಂದಿತು. ಆ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದ ನೌಕೆಗಳ ಆವಶ್ಯಕತೆಗಳನ್ನು ಅಲ್ಲಿಯ ವಸಾಹತುದಾರರು ಪೂರೈಸುವಂತಾಯಿತು. ಗೆಣಸು, ಬಾಳೆಗಳಲ್ಲದೆ ವಾಣಿಜ್ಯ ಬೆಳೆಗಳಾದ ಕಬ್ಬು, ಹೊಗೆಸೊಪ್ಪುಗಳನ್ನು ಬೆಳೆಯಲಾಗುತ್ತಿತ್ತು. ಬೇಸಾಯಕ್ಕೆ ಕೆಲಸಗಾರರು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದಿದ್ದುದರಿಂದ ವಸಾಹತುದಾರರು 1522ರಿಂದಲೇ ಗುಲಾಮರನ್ನು ಇಲ್ಲಿಗೆ ತರಲಾರಂಭಿಸಿದರು. ಸ್ಪೇನಿನ ಸ್ವಾರ್ಥಿ ಅಧಿಕಾರಿ ವರ್ಗ ಇಲ್ಲಿಯ ವ್ಯವಸಾಯಪ್ರಗತಿಯನ್ನು ತನ್ನ ಲಾಭಕ್ಕೆ ಬಳಸಿಕೊಂಡಿತ್ತು.

ಕ್ಯೂಬದ ಸ್ಥಾನಮಹತ್ತ್ವದಿಂದಾಗಿ ಅದು ಐರೋಪ್ಯ ನೌಕಾರಾಷ್ಟ್ರಗಳ ಕಲಹಕ್ಕೆ ಕಾರಣವಾಯಿತು. 17ನೆಯ ಶತಮಾನದ ಉದ್ದಕ್ಕೂ ಬ್ರಿಟನ್, ಫ್ರಾನ್ಸ್ ಮತ್ತು ಹಾಲೆಂಡ್‌ಗಳೊಡನೆ ಸ್ಪೇನ್ ಹೋರಾಡುತ್ತಿದ್ದುದರ ಫಲವಾಗಿ ಕ್ಯೂಬ ತೊಂದರೆಗೀಡಾಗಿತ್ತು. ಕಡಲ್ಗಳ್ಳರೂ ದರೋಡೆಕೋರರೂ ಕ್ಯೂಬದ ಐಶ್ವರ್ಯವನ್ನು ದೋಚುತ್ತಿದ್ದರು. ಆದರೂ ಸ್ಪೇನಿನೊಡನೆ ಕ್ಯೂಬದ ನೇರ ಸಂಪರ್ಕಕ್ಕೆ ಅನೇಕ ಅಡ್ಡಿಗಳಿದ್ದುವು. 1697ರ ರಿಸ್ವಿಕ್ ಕೌಲಿನಿಂದ ತಾತ್ಕಾಲಿಕವಾಗಿ ಈ ತೊಂದರೆಗಳು ಕೊನೆಗೊಂಡುವು. 1700–63ರಲ್ಲಿ ಕ್ಯೂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಲಿಲ್ಲ. ಸ್ಪೇನಿನ ಯುದ್ಧಗಳ ದೆಸೆಯಿಂದ ಕ್ಯೂಬದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು. ಸ್ಪೇನಿನ ಮಿಲಿಟರಿ ಆಡಳಿತಗಾರರು ಇಲ್ಲಿಯ ಐಶ್ವರ್ಯ, ಸಂಪತ್ತುಗಳ ಶೋಷಣೆ ಮಾಡಿದುದಲ್ಲದೆ ದೇಶೀಯರನ್ನು ಹಲವು ವಿಧವಾದ ದಬ್ಬಾಳಿಕೆಗಳಿಗೆ ಈಡು ಮಾಡುತ್ತಿದ್ದರು. 1732ರಲ್ಲಿ ಇಂಗ್ಲಿಷರು ಹವಾನವನ್ನು ಲೂಟಿ ಮಾಡಿದರು. ಆದರೆ 1763ರಲ್ಲಿ ಸ್ಪೇನಿಗೆ ಅದನ್ನು ಹಿಂದಿರುಗಿಸಿದರು.

1764ರಿಂದ ಕ್ಯೂಬದ ಸ್ಥಿತಿ ಉತ್ತಮಗೊಳ್ಳಲಾರಂಭಿಸಿತು. ಇದರ ಸ್ಥಾನ ಮಹತ್ತ್ವವನ್ನರಿತ ಸ್ಪೇನ್ ಇಲ್ಲಿಗೆ ದಕ್ಷ ಆಡಳಿತಗಾರರನ್ನು ನೇಮಿಸಿತು. ವ್ಯವಸಾಯ ಮತ್ತು ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನದೊಂದಿಗೆ ವ್ಯಾಪಾರ ಒಪ್ಪಂದವೇರ್ಪಟ್ಟುದರಿಂದ ಇಲ್ಲಿಯ ಸಕ್ಕರೆ, ಕಾಫಿ, ಹೊಗೆಸೊಪ್ಪುಗಳಿಗೆ ಉತ್ತಮ ಮಾರುಕಟ್ಟೆ ದೊರಕಿದಂತಾಯಿತು. ಸಾವಿರಾರು ಫ್ರೆಂಚ್ ವಲಸೆಗಾರರು ಇಲ್ಲಿ ಬಂದು ನೆಲಸಿ ಇಲ್ಲಿಯ ಅಭಿವೃದ್ಧಿಗೆ ಕಾರಣರಾದರು.

ದಕ್ಷ ಮತ್ತು ಉದಾರಮನೋಭಾವದ ಅಧಿಕಾರಿಗಳ ನೇತೃತ್ವದಲ್ಲಿ ಕ್ಯೂಬ 18ನೆಯ ಶತಮಾನದ ಉತ್ತರಾರ್ಧ ಮತ್ತು 19ನೆಯ ಶತಮಾನದ ಆರಂಭದ ದಶಕಗಳಲ್ಲಿ ಅಭಿವೃದ್ಧಿ ಹೊಂದಿತು. ಈ ಸಮಯದಲ್ಲಿ ಸ್ಪೇನ್ ಯುರೋಪಿನಲ್ಲಿ ಯುದ್ಧನಿರತವಾಗಿದ್ದುದರಿಂದ ಕ್ಯೂಬ ಬಹಳ ಮಟ್ಟಿಗೆ ಸ್ವತಂತ್ರವೇ ಆಗಿತ್ತೆನ್ನಬಹುದು. ಸ್ಪೇನಿನ ಪಾರ್ಲಿಮೆಂಟಿಗೆ ಕ್ಯೂಬದ ಪ್ರತಿನಿಧಿಗಳು ಆಯ್ಕೆಯಾಗಿ ಹೋಗುತ್ತಿದ್ದರು. ಇಲ್ಲಿಯ ಜನಸಂಖ್ಯೆ ಬೆಳೆಯುತ್ತಿತ್ತು. 1817ರ ವೇಳೆಗೆ 5,53,033ಕ್ಕೆ ಏರಿತು. ಜನರಲ್ಲಿ ರಾಜಕೀಯ ಸ್ವಾತಂತ್ರ್ಯಾಕಾಂಕ್ಷೆಯೂ ಬೆಳೆಯಿತು. ಜನತೆಯ ಆಶೋತ್ತರಗಳಿಗೆ ಸ್ಪೇನ್ ಗಮನ ನೀಡಲಿಲ್ಲ. ದೇಶೀಯರ ಮತ್ತು ವಸಾಹತುಗಾರರ ನಡುವೆ ಭೇದ ಭಾವನೆಗಳು ಹೆಚ್ಚಿದುವು. ಆದರೆ ದೇಶೀಯ ನಾಯಕರಲ್ಲಿ ಒಮ್ಮತವಿಲ್ಲದಿದ್ದುದರಿಂದ ಸ್ವಾತಂತ್ರ್ಯ ಚಳವಳಿ ಹೆಚ್ಚು ಫಲಕಾರಿಯಾಗಲಿಲ್ಲ. ಕೇಂದ್ರ ಸರ್ಕಾರ ತನ್ನ ಅಧಿಕಾರಿಗಳಿಗೆ ಅಮಿತವಾದ ಅಧಿಕಾರ ನೀಡಿದ್ದಲ್ಲದೆ 1837ರಲ್ಲಿ ಪಾರ್ಲಿಮೆಂಟಿನಲ್ಲಿ ಕ್ಯೂಬದ ಪ್ರತಿನಿಧಿಗಳ ಸ್ಥಾನವನ್ನು ರದ್ದುಗೊಳಿಸಿತು. ಈ ಮಧ್ಯೆ ಸಂಯುಕ್ತ ಸಂಸ್ಥಾನದಲ್ಲಿ ಕೆಲವರು ಕ್ಯೂಬವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಆ ಪ್ರಯತ್ನ ಸಫಲವಾಗಲಿಲ್ಲ. 1855ರ ಸುಮಾರಿನಲ್ಲಿ ಅಲ್ಲಲ್ಲಿ ಗಲಭೆಗಳುಂಟಾದುವು. 1868ರಲ್ಲಿ ಸ್ಪೇನಿನ ವಿರುದ್ಧ ಕ್ಯೂಬದ ಜನ ಯುದ್ಧ ಘೋಷಿಸಿದರು. ಹತ್ತು ವರ್ಷಗಳ ಕಾಲ ನಡೆದ ಆಂತರಿಕ ಯುದ್ಧದಲ್ಲಿ 2 ಲಕ್ಷಕ್ಕೂ ಹೆಚ್ಚು ಮಂದಿ ಸತ್ತರು. ಕ್ಯೂಬದ ಪೂರ್ವಭಾಗಗಳಿಗೆ ಮಾತ್ರ ಸೀಮಿತವಾಗಿದ್ದ ಈ ಹೋರಾಟಕ್ಕೆ ಭೋರ್ಜಡೆಲ್ ಕ್ಯಾಸ್ಪಿಲ್ಲೊ ನಾಯಕ. ಗುಲಾಮರ ವಿಮೋಚನೆ ಮತ್ತು ಸಾರ್ವತ್ರಿಕ ಮತದಾನದ ಹಕ್ಕು ಇವು ಇವನ ಬೇಡಿಕೆಗಳಾಗಿದ್ದುವು. ಈ ಹೋರಾಟವನ್ನು ಹತ್ತಿಕ್ಕಲು ಸ್ಪೇನಿನ ಸೈನ್ಯ ದೇಶಾದ್ಯಂತ ಅಮಾನುಷ ಕೃತ್ಯಗಳನ್ನು ಕೈಗೊಂಡಿತು. 1878ರಲ್ಲಿ ಎಲ್ ಜಂಜ್ಹೋನ್ ಒಪ್ಪಂದವಾಗಿ ಹೋರಾಟ ಕೊನೆಗೊಂಡಿತು. ಆದರೆ ಸ್ಪೇನ್ ಸರ್ಕಾರ ಒಪ್ಪಂದದ ಷರತ್ತುಗಳನ್ನು ಪಾಲಿಸಲಿಲ್ಲ; ಅದು ತನ್ನ ದಬ್ಬಾಳಿಕೆ ನೀತಿಯನ್ನು ಪುನರಾರಂಭಿಸಿತು. ಈ ಮಧ್ಯೆ ಆರ್ಥಿಕ ಮುಗ್ಗಟ್ಟಿನಿಂದ ಸಂಯುಕ್ತ ಸಂಸ್ಥಾನದಲ್ಲಿ ಕ್ಯೂಬದ ಸಕ್ಕರೆಗೆ ಬೇಡಿಕೆ ಕಡಿಮೆಯಾದುದರಿಂದ ಜನರ ತೊಂದರೆಗಳು ಅಧಿಕವಾದುವು. ಈ ಎಲ್ಲ ಕಾರಣಗಳಿಂದ ಪುನಃ ಸ್ವಾತಂತ್ರ್ಯ ಚಳವಳಿ ಬಲಗೊಂಡಿತು. ಕ್ಯೂಬದ ಹೋರಾಟಗಾರರಲ್ಲಿ ಐಕಮತ್ಯವುಂಟಾಯಿತು. 1895ರಲ್ಲಿ ಪ್ರಾರಂಭವಾದ ಈ ಅಂತಿಮ ಹೋರಾಟದಲ್ಲಿ ಇಡೀ ದೇಶ ಭಾಗವಹಿಸಿತು. ಈ ಮಧ್ಯೆ ಸ್ಪೇನ್ ಮತ್ತು ಸಂಯುಕ್ತಸಂಸ್ಥಾನಗಳ ನಡುವೆ ವಿರಸ ಹುಟ್ಟಿದುದರ ಕಾರಣ ಸಂಯುಕ್ತಸಂಸ್ಥಾನವೂ ಕ್ಯೂಬದ ಜೊತೆಗೂಡಿತು. ಸ್ಪೇನು ಸೋಲನ್ನನುಭವಿಸಿತು. 1898ರ ಅಕ್ಟೋಬರ್ 10ರ ಪ್ಯಾರಿಸ್ ಸಂಧಾನದ ಪ್ರಕಾರ ಸ್ಪೇನ್ ಕ್ಯೂಬವನ್ನು ಸಂಯುಕ್ತಸಂಸ್ಥಾನಕ್ಕೆ ಒಪ್ಪಿಸಿತು. ಸಂಯುಕ್ತಸಂಸ್ಥಾನ ತಾತ್ಕಾಲಿಕವಾಗಿ ಅಧಿಕಾರ ವಹಿಸಿಕೊಂಡು, ಕ್ರಮೇಣ ಕ್ಯೂಬದ ಜನತೆಗೆ ಸ್ವಾತಂತ್ರ್ಯ ನೀಡುವಂತೆ ತೀರ್ಮಾನವಾಯಿತು.

ಅಮೆರಿಕ ಸಂಯುಕ್ತಸಂಸ್ಥಾನ 1899ರ ಜನವರಿ 1ರಿಂದ ಕ್ಯೂಬದಲ್ಲಿ ತನ್ನ ಮಿಲಿಟರಿ ಸರ್ಕಾರವನ್ನು ಆರಂಭಿಸಿತು. ಹೊಸ ಸರ್ಕಾರ ಕ್ಯೂಬದ ಜನರನ್ನೇ ಅಧಿಕಾರಿಗಳನ್ನಾಗಿ ನೇಮಿಸಿ ಸಾರ್ವಜನಿಕರ ಪ್ರಗತಿಗೆ ಗಮನ ಕೊಟ್ಟು, ವಿದ್ಯಾಭ್ಯಾಸ, ಆರೋಗ್ಯ, ನೈರ್ಮಲ್ಯಗಳ ಸುಧಾರಣೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂತು. ಕ್ಯೂಬಕ್ಕೂ ಸಂಯುಕ್ತಸಂಸ್ಥಾನಕ್ಕೂ ಒಪ್ಪಂದವೇರ್ಪಟ್ಟು, ವ್ಯಕ್ತಿಸ್ವಾತಂತ್ರ್ಯವನ್ನೂ ಜನರ ಆಸ್ತಿಯನ್ನೂ ಪ್ರಜಾಸರ್ಕಾರವನ್ನೂ ಕಾಪಾಡಲು ಅಮೆರಿಕ ಪ್ರವೇಶಿಸಬಹುದೆಂದು ಕ್ಯೂಬ ಒಪ್ಪಿಕೊಂಡಿತು.

1902ರಲ್ಲಿ ಕ್ಯೂಬದಲ್ಲಿ ಕಾಂಗ್ರೆಸ್ ಸಭೆ ಸೇರಿ ಅದು ಅಮೆರಿಕದಿಂದ ಅಧಿಕಾರ ವಹಿಸಿಕೊಂಡಿತು. ಥಾಮಸ್ ಎಸ್ಟ್ರಡ ಪಾಲ್ಮ ಕ್ಯೂಬದ ಪ್ರಜಾ ಸರ್ಕಾರದ ಮೊದಲನೆಯ ಅಧ್ಯಕ್ಷ. 1902ರಿಂದ 1906ರ ತನಕ ಕ್ಯೂಬ ಸಾಧಿಸಿದ ಅಭಿವೃದ್ಧಿ ಸರ್ವತೋಮುಖವಾದ್ದು. ಆದರೆ ಚುನಾವಣೆಗೆ ಸಿದ್ಧತೆಗಳು ನಡೆಯಬೇಕೆನ್ನುವಾಗ ರಾಜಕೀಯ, ಸಾಮಾಜಿಕ, ಕ್ರಾಂತಿಕಾರಕ ಭಿನ್ನಾಭಿಪ್ರಾಯಗಳಿದ್ದುವು. ಭೇದಭಾವಗಳನ್ನು ಸರಿಪಡಿಸಿ ಶಾಂತಿಯನ್ನೇರ್ಪಡಿಸಲು ಅಮೆರಿಕ ಸರ್ಕಾರ ಒಂದು ಸಮಿತಿಯನ್ನು ಕ್ಯೂಬಕ್ಕೆ ಕಳಿಸಿತು. ಆದರೆ ಸಂಧಾನ ಯಶಸ್ವಿಯಾಗಿ ನಡೆಯದಿರಲು ಅಮೆರಿಕ ಸರ್ಕಾರ ಶಾಂತಿ ಸ್ಥಾಪನೆಗಾಗಿ ಕ್ಯೂಬದಲ್ಲಿ ಒಂದು ಕ್ರಾಂತಿ ಸರ್ಕಾರವನ್ನು ಏರ್ಪಡಿಸಿತು. ಅದು ಅಧ್ಯಕ್ಷರ ಅಧಿಕಾರ ಕರ್ತವ್ಯಗಳನ್ನು ನಿಶ್ಚಯಿಸಿ ಪ್ರಾಂತ್ಯಗಳ ಅಧಿಕಾರವನ್ನು ಬಲಪಡಿಸಿತು. 1909ರಲ್ಲಿ ಅಮೆರಿಕದ ಆಡಳಿತ ಮುಗಿದು ಅಮೆರಿಕನ್ ಸೇನೆ ವಾಪಸಾಯಿತು. ಎರಡನೆಯ ಸಲ ಕ್ಯೂಬದಲ್ಲಿ ಜೋಸ್ ಮಿಗೇಲ್ ಗೋಮೆಜ್ ಅಧ್ಯಕ್ಷನೂ ಆಲ್‌ಫ್ರೆಡೊ ಜಯಾಸ್ ಉಪಾಧ್ಯಕ್ಷನೂ ಆಗಿ ಚುನಾಯಿತರಾದರು. ಮುಂದೆಯೂ ಅಧ್ಯಕ್ಷನ ಸ್ವತಂತ್ರ ಆಡಳಿತ ನೀತಿ ಮುಂದುವರಿಯಿತು. ನೆರೆರಾಜ್ಯವಾದ ಕ್ಯೂಬದ ಪರಿಸ್ಥಿತಿ ತನ್ನ ರಾಜಕೀಯ ಧೋರಣೆಗೆ ಅನುಕೂಲವಾಗಿರಬೇಕೆಂಬುದು ಸಂಯುಕ್ತಸಂಸ್ಥಾನದ ಇಚ್ಛೆ. ಆದ್ದರಿಂದ 1909ರಿದ 1925ರ ಮಧ್ಯೆ ಅಧ್ಯಕ್ಷರಾಗಿದ್ದ ಗೋಮೆಜ್, ಮೆನೋಕಲ್ ಮತ್ತು ಜಯಾಸರ ಕಾಲದಲ್ಲಿ ಶಾಂತಿ ಕದಡಿದಾಗ ಅಮೆರಿಕ ಎರಡು ಸಲ ಮಧ್ಯೆ ಪ್ರವೇಶಿಸಿತು. 1925ರಲ್ಲಿ ಗೆರಾರ್ಡೊ ಮಕ್ಯಾಡೊ ಅಧ್ಯಕ್ಷನಾಗಿ ಆಯ್ಕೆಯಾಗಿ 1933ರ ತನಕ ಅಧಿಕಾರದಲ್ಲಿದ್ದ. ಲಂಚ, ದುರಾಡಳಿತಗಳ ಕಾರಣ ಮಕ್ಯಾಡೊನ ವಿರುದ್ಧ ಜನತೆ ದಂಗೆಯೆದ್ದು ಅವನನ್ನು ಅಧಿಕಾರದಿಂದ ಓಡಿಸಿದ ಮೇಲೆ 1933ರಿಂದ 1958ರ ತನಕ ಕ್ಯೂಬದ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಿದವ ಬ್ಯಾಟಿಸ್ಟ. 1958ರಲ್ಲಿ ಕಮ್ಯೂನಿಸ್ಟರ ಪ್ರಚಾರದ ಫಲವಾಗಿ ರಾಜಕೀಯ ಕ್ರಾಂತಿಯುಂಟಾಗಿ ಫೀಡೆಲ್ ಕ್ಯಾಸ್ಟ್ರೊ ಅಧಿಕಾರ ಗಳಿಸಿದ. 1961ರಲ್ಲಿ ತಾನು ಕಮ್ಯೂನಿಸ್ಟ್ ನೀತಿಯನ್ನನುಸರಿಸುವುದಾಗಿ ಆತ ಸಾರಿದ. ಅಮೆರಿಕಕ್ಕೆ ಇದರಿಂದ ಆತಂಕವುಂಟಾಯಿತು. ಕ್ಯೂಬಕ್ಕೆ ಸೋವಿಯೆತ್ ದೇಶದ ಬೆಂಬಲ ದೊರಕಿತು; ವಿಪುಲವಾಗಿ ಯುದ್ಧ ಸಾಮಗ್ರಿಗಳು ಸೋವಿಯೆತ್ ದೇಶದಿಂದ ಬಂದವು. ಸಂಯುಕ್ತಸಂಸ್ಥಾನದ ಯುದ್ಧ ನೌಕೆಗಳು ಕ್ಯೂಬದ ಸುತ್ತ ಕಾವಲು ಹಾಕಿದವು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸೋವಿಯೆತ್ ದೇಶ ಪರಮಾಣು ಸಜ್ಜಿತ ಶಸ್ತ್ರಾಸ್ತ್ರಗಳನ್ನು ಒದಗಿಸುವುದಿಲ್ಲವೆಂದೂ ಅಲ್ಲಾಗಲೇ ಸ್ಥಾಪಿಸಿದ ಕ್ಷಿಪಣಿಗಳನ್ನು ವಾಪಸ್ಸು ಪಡೆಯುವುದಾಗಿಯೂ ಒಪ್ಪಿಕೊಂಡಿತು. ಅಮೆರಿಕ–ರಷ್ಯಗಳ ನಡುವೆ ನಡೆಯಬಹುದಾಗಿದ್ದ ಯುದ್ಧದ ಭಯ ಈ ರೀತಿ ಕೊನೆಗೊಂಡಿತು. 1963ರ ವೇಳೆಗೆ ಅವನ್ನು ಹಿಂತೆಗೆದುಕೊಳ್ಳಲಾಯಿತು. ಕ್ಯೂಬದಲ್ಲಿ ಈಗ ಕಮ್ಯೂನಿಸ್ಟ್ ಆಡಳಿತವಿದೆ.

(ಎಸ್.ಕೆ.ಕೆ.)

**ಕ್ಯೂರಿ :** ವಿಕಿರಣಪಟುತ್ವದ (ರೇಡಿಯೊ ಆಕ್ಟಿವಿಟಿ) ಪರಿಮಾಣವನ್ನು ಅಳೆಯಲು ಬಳಸುವ ಒಂದು ಏಕಮಾನ. ಮೇರಿ ಕ್ಯೂರಿಯ ಗೌರವಾರ್ಥ ಈ ಏಕಮಾನಕ್ಕೆ ಕ್ಯೂರಿ ಎಂಬ ಹೆಸರನ್ನು ಇಡಲಾಗಿದೆ. ಒಂದು ಸೆಕೆಂಡಿಗೆ $3.7 \times 10^{10}$ ವಿಘಟನೆಗಳನ್ನು (ಡಿಸ್–ಇಂಟೆಗ್ರೇಷನ್ಸ್) ಅನುಭವಿಸುತ್ತಿರುವ ಒಂದು ವಿಕಿರಣಪಟು ವಸ್ತುವಿನ ಪರಿಮಾಣ ಒಂದು ಕ್ಯೂರಿ. I–ಕ್ಯೂರಿ ಆಕರದಲ್ಲಿನ ವಿಕಿರಣಪಟು ಪರಮಾಣುಗಳ ಸಂಖ್ಯೆ $R/\lambda$. ಇಲ್ಲಿ $R = 3.7 \times 10^{10}$ ವಿಘಟನೆಗಳು ಸೆಕೆಂಡಿಗೆ; $\lambda$ ಆಕರದಲ್ಲಿರುವ ವಿಶಿಷ್ಟ ವಿಕಿರಣಪಟು ವಸ್ತುವನ್ನು ಕುರಿತ ವಿಘಟನ ಸ್ಥಿರಾಂಕ.

*

**ಕ್ಯೂರಿ ಉಷ್ಣತೆ, ಕಾಂತೀಯ :** ಫೆರ್ರೋಕಾಂತತ್ವ ಮತ್ತು ಅನುಕಾಂತತ್ವ (ಪ್ಯಾರಾಮ್ಯಾಗ್ನೆಟಿಸಂ) ಇವುಗಳ ನಡುವಿನ ಸಂಕ್ರಮಣವನ್ನು ಗುರುತಿಸುವ ಉಷ್ಣತೆ. ಈ ಉಷ್ಣತೆಯ ಕೆಳಗೆ ಎಲ್ಲ ಫೆರ್ರೋಕಾಂತೀಯ ವಸ್ತುಗಳೂ ಸ್ವತಃ ಕಾಂತೀಕರಣವನ್ನು (ಸ್ಪಾಂಟೇನಿಯಸ್ ಮ್ಯಾಗ್ನೆಟೈಸೇಷನ್) ಪ್ರದರ್ಶಿಸುತ್ತವೆ– ಎಂದರೆ ಬಾಹ್ಯ ಪ್ರಯುಕ್ತ ಕ್ಷೇತ್ರದ ಗೈರುಹಾಜರಿಯಲ್ಲೂ ಕಾಂತೀಕರಣ. ಉಷ್ಣತೆ ಏರಿದಂತೆ ಈ ಕಾಂತೀಕರಣ ತಗ್ಗುತ್ತದೆ. ಮೊದಲು ಇದು ಕ್ರಮೇಣವಾಗಿ ಬಳಿಕ ಭರದಿಂದ ತಗ್ಗುತ್ತ ಸಾಗಿ ಕ್ಯೂರಿ

ಉಷ್ಣತೆಯಲ್ಲಿ ಮೇಲೆ ಕಾಂತೀಯ ಗ್ರಾಹಕತೆ ಕ್ಯೂರಿ–ವೀಸ್ ನಿಯಮವನ್ನು (ನೋಡಿ) ಅನುಸರಿಸುವುದು.

*

**ಕ್ಯೂರಿ ದಂಪತಿಗಳು :** ಫ್ರಾನ್ಸಿನ ರಸಾಯನವಿಜ್ಞಾನಿ ಪಿಯರ್ ಕ್ಯೂರಿ (1859–1906) ಮತ್ತು ಈತನ ಪತ್ನಿ ಪೋಲಿಷ್–ಫ್ರೆಂಚ್ ರಸಾಯನ ವಿಜ್ಞಾನಿ ಮೇರಿ ಸ್ಕ್ಲೊಡಾವ್‌ಸ್ಕ ಕ್ಯೂರಿ (1867–1934). ವಿಕಿರಣಪಟು ವಿದ್ಯಮಾನದ ವಿವರವನ್ನೂ ರೇಡಿಯಂ ಮತ್ತು ಪೋಲೋನಿಯಂ ಆವಿಷ್ಕರಿಸಿದ ಧಾತುಗಳ ಪ್ರತಿಭಾಶಾಲಿಗಳು.

ಕ್ಯೂರಿ ದಂಪತಿಗಳು

ಪಿಯರ್ ಕ್ಯೂರಿ ಪ್ಯಾರಿಸ್‌ನಲ್ಲಿ ಮೇ 15, 1859ರಂದು ಹುಟ್ಟಿದ. ಅಲ್ಲಿಯ ಸೋರ್‌ಬೋನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸಮಾಡಿ ಅಲ್ಲೇ ಭೌತವಿಜ್ಞಾನದ ಪ್ರಾಧ್ಯಾಪಕನಾದ. ಈತ ಮೊದಲು ಪೀಸೋವಿದ್ಯುತ್ ಪರಿಣಾಮದ ಮೇಲೆ ಸಂಶೋಧನೆಗಳನ್ನು ನಡೆಸಿದ. ಅನಂತರ ಉಷ್ಣತೆಯ ಬದಲಾವಣೆಗಳಿಂದ ಉಂಟಾಗುವ ಕಾಂತಗುಣಗಳ ಬದಲಾವಣೆಗಳನ್ನು ಪರಿಶೀಲಿಸಿ ಈಗ ಈತನ ಹೆಸರಿನಿಂದ ಕರೆಯಲ್ಪಡುವ ಕ್ಯೂರಿತತ್ತ್ವವನ್ನು ಸೂತ್ರರೂಪಕ್ಕೆ ತಂದ.

ಮೇರಿ ಸ್ಕ್ಲೊಡಾವ್‌ಸ್ಕಳು ಪೋಲೆಂಡಿನ ವಾರ್ಸಾ ನಗರದಲ್ಲಿ ನವೆಂಬರ್ 7, 1867ರಂದು ಹುಟ್ಟಿದಳು. ಈಕೆಯ ತಂದೆ ಹುಡುಗರ ಶಾಲೆಯ ಮುಖ್ಯಸ್ಥನಾಗಿದ್ದ; ಮುಂದೆ ಅದರ ಪ್ರಾಧ್ಯಾಪಕನಾದ. ತಾಯಿ ಉತ್ತಮ ಸಂಗೀತಗಾರ್ತಿ, ಸುಸಂಸ್ಕೃತೆ. ಇವರ ಐದು ಜನ ಮಕ್ಕಳಲ್ಲಿ ಮೇರಿಯೇ ಕೊನೆಯವಳು. ಇವಳಿಗೆ ಚಿಕ್ಕಂದಿನಲ್ಲಿಯೇ ತನ್ನ ತಂದೆಯಿಂದ ವಿಜ್ಞಾನದಲ್ಲಿ ತರಬೇತು ದೊರೆಯಿತು. ಚಿಕ್ಕವಳಾಗಿದ್ದಾಗ ರಷ್ಯನರ ಆಡಳಿತದ ವಿರುದ್ಧ ಕ್ರಾಂತಿಕಾರಕ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದಳು. ಪೋಲೆಂಡಿನಲ್ಲಿ ಪ್ರೌಢಶಾಲೆಗಿಂತ ಮೇಲಿನ ವಿದ್ಯಾಭ್ಯಾಸ ಮಾಡಲು ಆಗದೆ 1891ರಲ್ಲಿ ಈಕೆ ಫ್ರಾನ್ಸಿಗೆ ಪ್ರಯಾಣ ಮಾಡಿದಳು. ಸೋರ್‌ಬೋನಿನಲ್ಲಿ ವಿದ್ಯಾಭ್ಯಾಸ ಮಾಡಲು ಪ್ರಾರಂಭಿಸಿ ಉಚ್ಚ ದರ್ಜೆಯಲ್ಲಿ ವಿಜ್ಞಾನದ ಡಿಗ್ರಿ ಪಡೆದಳು. ಅದೇ ಸಮಯದಲ್ಲಿ ಪಿಯರ್ ಕ್ಯೂರಿಯ ಪರಿಚಯವಾಯಿತು. 1895ರಲ್ಲಿ ಅವರಿಬ್ಬರೂ ಮದುವೆಯಾದರು. ಸ್ವತಃ ಉತ್ತಮದರ್ಜೆಯ ವಿಜ್ಞಾನಿಯಾದರೂ ಪಿಯರ್ ಕ್ಯೂರಿ ತನ್ನ ಪತ್ನಿಯ ಅದ್ಭುತಶಕ್ತಿಗಳನ್ನು ಗಮನಿಸಿ ಸ್ವಂತೇಚ್ಛೆಯಿಂದ ಆಕೆಯ ಅನುಯಾಯಿಯಾಗಿ ವಿಜ್ಞಾನ ರಂಗದಲ್ಲಿ ದುಡಿಯಲು ನಿರ್ಧರಿಸಿದ (1898).

ಯುರೇನಿಯಂನಿಂದ ಉಂಟಾಗುವ ವಿಕಿರಣಪಟುತ್ವವನ್ನು ಹೆನ್ರಿ ಬೆಕರಲ್ 1896ರಲ್ಲಿ ಕಂಡುಹಿಡಿದಮೇಲೆ ಕ್ಯೂರಿ ದಂಪತಿಗಳು ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲು ಪ್ರಾರಂಭಿಸಿದರು. ಯುರೇನಿಯಂ ಇರುವ ಪಿಚ್‌ಬ್ಲೆಂಡ್ ಅದಿರಿನಿಂದ ಬಹಳ ಕಷ್ಟಪಟ್ಟು ಎರಡು ಹೊಸ ಧಾತುಗಳನ್ನು ಕಂಡುಹಿಡಿದರು. ಅವಕ್ಕೆ ಪೋಲೋನಿಯಂ (ಮೇರಿ ಹುಟ್ಟಿದ ಪೋಲೆಂಡ್ ದೇಶದ ಗೌರವಾರ್ಥಕ್ಕಾಗಿ) ಮತ್ತು ರೇಡಿಯಂ ಎಂದು ಹೆಸರಿಡಲಾಯಿತು. ಮುಂದಿನ ವರ್ಷಗಳಲ್ಲಿ ರೇಡಿಯಂನ ಗುಣಗಳ ವಿಚಾರವಾಗಿಯೂ ಇತರ ವಿಷಯಗಳ ಮೇಲೂ ಸಂಶೋಧನೆ ನಡೆಸಿ ಈಗಿನ ಪರಮಾಣು ಭೌತ ಮತ್ತು ರಸಾಯನವಿಜ್ಞಾನಗಳ ತಳಹದಿಯನ್ನು ಈ ದಂಪತಿಗಳು ಹಾಕಿದರು.

1903ರಲ್ಲಿ ಇವರಿಬ್ಬರಿಗೂ ರಾಯಲ್ ಸೊಸೈಟಿಯ ಡೇವಿ ಪದಕ ದೊರೆಯಿತು. ಬೆಕರಲ್ಲನ ಜೊತೆಯಲ್ಲಿ ಭೌತವಿಜ್ಞಾನದ ನೊಬೆಲ್ ಪಾರಿತೋಷಿಕವನ್ನು ಈ ದಂಪತಿಗಳು ಪಡೆದರು (1903). ಈ ಪಾರಿತೋಷಿಕವನ್ನು ಗಳಿಸಿದ ಮಹಿಳೆಯರಲ್ಲಿ ಮೇರಿಯೇ ಮೊದಲನೆಯವಳು. ಅದೇ ವರ್ಷ ಮೇರಿ ತನ್ನ ಸಂಶೋಧನೆಗಳ ಪರಿಣಾಮಗಳನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ ಡಾಕ್ಟೊರೇಟ್ ಪ್ರಶಸ್ತಿಯನ್ನು ಗಳಿಸಿದಳು. ಪಿಯರ್ ಕ್ಯೂರಿ 1904ರಲ್ಲಿ ಸೋರ್‌ಬೋನಿನಲ್ಲಿ ಭೌತವಿಜ್ಞಾನದ ವಿಶೇಷ ಪ್ರಾಧ್ಯಾಪಕನಾದ ಮತ್ತು 1905ರಲ್ಲಿ ವಿಜ್ಞಾನದ ಅಕಾಡೆಮಿಗೆ ಚುನಾಯಿತನಾದ. ಏಪ್ರಿಲ್ 19, 1906ರಂದು ಈತ ರಸ್ತೆಯನ್ನು ದಾಟುತ್ತಿದ್ದಾಗ ಆಕಸ್ಮಿಕವಾಗಿ ಕುದುರೆ ಬಂಡಿಯೊಂದಕ್ಕೆ ಸಿಕ್ಕಿ ಮೃತಪಟ್ಟ. ಈತನಿದ್ದ ಪ್ರಾಧ್ಯಾಪಕ ಕೆಲಸಕ್ಕೆ ಮೇರಿಯನ್ನು ನೇಮಿಸಿದರು. ಫ್ರೆಂಚ್ ವಿಶ್ವವಿದ್ಯಾಲಯಗಳ ಚರಿತ್ರೆಯಲ್ಲಿಯೇ ಈ ಉನ್ನತ ಪದವಿಯನ್ನು ಪಡೆದ ಮೊದಲನೆಯ ಮಹಿಳೆ ಈಕೆ. ಮುಂದೆಯೂ ರೇಡಿಯಂನ ಮೇಲೆ ಮೇರಿ ಸಂಶೋಧನೆಗಳನ್ನು ಮುಂದುವರಿಸಿ 1911ರಲ್ಲಿ ರಸಾಯನ ವಿಜ್ಞಾನದ ನೊಬೆಲ್ ಪಾರಿತೋಷಿಕವನ್ನು ಪಡೆದಳು. ಎರಡು ಬಾರಿ ಈ ನೊಬೆಲ್ ಪಾರಿತೋಷಿಕವನ್ನು ಗಳಿಸಿರುವವರಲ್ಲಿ ಇವಳೇ ಮೊದಲನೆಯವಳು.

1918ರ ತರುವಾಯ ಹಿರಿಯ ಮಗಳಾದ ಐರೀನಳು (1897–1956) ಮೇರಿಗೆ ಸಹಾಯಮಾಡುತ್ತಿದ್ದಳು. **(ನೋಡಿ– ಜ್ಯಾಲ್ಯೋ–––ಕ್ಯೂರಿದಂಪತಿಗಳು)** ಚಿಕ್ಕ ಮಗಳಾದ ಇವಾ ತನ್ನ ತಾಯಿಯ ಜೀವನ ಚರಿತ್ರೆಯನ್ನು ಮೇಡಂ ಕ್ಯೂರಿ (1937) ಎಂಬ ಪುಸ್ತಕದಲ್ಲಿ ಬರೆದಿದ್ದಾಳೆ. ಮೇರಿ ತಾನು ಹುಟ್ಟಿದ ವಾರ್ಸಾನಗರದಲ್ಲಿ ವಿಕಿರಣಪಟುತ್ವದ ಸಂಶೋಧನೆಗಳಿಗಾಗಿ ಪ್ರಯೋಗಶಾಲೆಯೊಂದನ್ನು ಸ್ಥಾಪಿಸಲು ಬಹಳ ಸಹಾಯ ಮಾಡಿದಳು.

ವಿಜ್ಞಾನಕ್ಕೆ ಮೇರಿ ಸಲ್ಲಿಸಿದ ಸೇವೆಯ ಜ್ಞಾಪಕಾರ್ಥವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾಗಿದ್ದ (1912) ಹಾರ್ಡಿಂಗ್ ಅವರು ಅಮೆರಿಕದ ಮಹಿಳೆಯರ ಪರವಾಗಿ ಒಂದು ಗ್ರಾಂ ರೇಡಿಯಮನ್ನು ಆಕೆಗೆ ಕೊಟ್ಟರು. ಪುನಃ 1929ರಲ್ಲಿ ಅಧ್ಯಕ್ಷ ಹೂವರ್‌ರವರು ಅಮೆರಿಕದಲ್ಲಿರುವ ವಿಜ್ಞಾನಸ್ನೇಹಿತರ ಪರವಾಗಿ ಈಕೆಗೆ (ವಾರ್ಸಾದಲ್ಲಿಯ ಪ್ರಯೋಗಶಾಲೆಯ ಉಪಯೋಗಕ್ಕೆಂದು) 50,000 ಡಾಲರುಗಳನ್ನು ಕೊಟ್ಟರು.

ಭೌತವಿಜ್ಞಾನದಲ್ಲಿ ಎರಡು ಸುಪ್ರಸಿದ್ಧ ಗ್ರಂಥಗಳನ್ನು ಮೇರಿ ಬರೆದಿದ್ದಾಳೆ. ಜೀವಮಾನವಿಡೀ ವಿಕಿರಣಪಟು ಧಾತುಗಳೊಡನೆ ಪ್ರಯೋಗ ನಡೆಸಿದುದರ ಪರಿಣಾಮವಾಗಿ ಮೇರಿಯ ದೇಹ ವಿಕಿರಣಪಟುತ್ವದಿಂದ ಘಾಸಿಗೊಳಗಾಗಿತ್ತು. ಇದರ ಫಲವಾಗಿ ತಲೆದೋರಿದ ಲ್ಯುಕೀಮಿಯ ಎಂಬ ಕಾಯಿಲೆಯಿಂದ ಈಕೆ ಅಸುನೀಗಿದಳು (ಜುಲೈ 4, 1934).

(ಆರ್.ಎ.ಎ., ಎಸ್.ಜಿ.ಪಿ.)

**ಕ್ಯೂರಿ ನಿಯಮ :** ಒಂದು ಅನುಕಾಂತೀಯ (ಪ್ಯಾರಾಮ್ಯಾಗ್ನೆಟಿಕ್) ವಸ್ತುವಿನಲ್ಲಿ ಏಕಮಾನ ದ್ರವ್ಯರಾಶಿಗೆ ಕಾಂತೀಯ ಗ್ರಾಹಕತೆ (ಮ್ಯಾಗ್ನೆಟಿಕ್ ಸಸೆಪ್ಟಿಬಿಲಿಟಿ) ನಿರಪೇಕ್ಷ ಉಷ್ಣತೆಯ ವ್ಯಸ್ತಾನುಪಾತದಲ್ಲಿದೆ ಎಂಬುದು ಇದರ ನಿರೂಪಣೆ. ಈ ನಿಯಮದ ಸರ್ವತ್ರಿಕ ಕ್ಯೂರಿ–ವೀಸ್ ನಿಯಮ (ನೋಡಿ).

*

**ಕ್ಯೂರಿಯಂ :** ಒಂದು ರಾಸಾಯನಿಕ ಧಾತು. ಸಂಕೇತ Cm. ಆವರ್ತ ಕೋಷ್ಟಕದಲ್ಲಿ ವಿಕಿರಣಪಟು ಧಾತುಗಳದೇ ಒಂದು ಸಾಲಿದೆ. ಇದಕ್ಕೆ ಆಕ್ಟಿನಿಯಂ ಶ್ರೇಣಿಯೆಂದು ಹೆಸರು. ಕ್ಯೂರಿಯಂ ಈ ಶ್ರೇಣಿಯ ಸದಸ್ಯ. ಇದರ ಪರಮಾಣು ಸಂಖ್ಯೆ 96. ಕ್ಯೂರಿಯಂ ನಿಸರ್ಗದಲ್ಲಿ ದೊರೆಯದು. ಇದರ ಎಲ್ಲ ಸಮಸ್ಥಾನಿಗಳಿಗೂ (ಐಸೊಟೋಪ್ಸ್) ವಿಕಿರಣಪಟುತ್ವ ಉಂಟು. ಇವುಗಳಲ್ಲಿ ಅತ್ಯಂತ ಸ್ಥಿರವಾದುದೆಂದು ಪರಿಗಣಿಸಲ್ಪಟ್ಟಿರುವ ಸಮಸ್ಥಾಯಿಯ ದ್ರವ್ಯರಾಶಿ 247. ಈ ಸಮಸ್ಥಾನಿಯ ಅರ್ಧಾಯು $10^6$ ವರ್ಷಗಳಿಗಿಂತ ಹೆಚ್ಚು. ಕ್ಯೂರಿಯಂ ಧಾತುವಿನ ಎಲೆಕ್ಟ್ರಾನ್ ವಿನ್ಯಾಸ ಹೀಗಿದೆ: $1s^2 2s^2 2p^6 3s^2 3p^6 3d^{10} 4s^2 4p^6 4d^{10} 4f^{14} 5s^2 5p^6 5d^{10} 5f^7 6s^2 6p^6 6d^1 7s^2$. ದ್ರವನ ಬಿಂದು $1340^0$ ಸೆಂ. $Cm^{3+}$ ಅಯಾನಿನ ತ್ರಿಜ್ಯ 1.00 A.

ವಿಕಿರಣಪಟು ಧಾತುಗಳಿಗೆ ಸಂಬಂಧಿಸಿದಂತೆ ಚಿರಸ್ಮರಣೀಯ ಸಂಶೋಧನೆಗಳನ್ನು ನಡೆಸಿದ ಮೇರಿ ಕ್ಯೂರಿ ಮತ್ತು ಆಕೆಯ ಪತಿ ಪಿಯರ್ ಕ್ಯೂರಿಯವರ ಗೌರವಾರ್ಥ ಈ ಧಾತುವನ್ನು ಕ್ಯೂರಿಯಂ ಎಂದು ಹೆಸರಿಸಲಾಯಿತು. ಹೀಗೆಯೇ ವಿರಳ ಭಸ್ಮಧಾತುಗಳ (ರೇರ್ ಅರ್ತ್ ಎಲಿಮೆಂಟ್ಸ್) ಪೈಕಿ ಒಂದಕ್ಕೆ ಗಾಡೊಲಿನಿಯಂ ಎಂದು ಹೆಸರಿಟ್ಟದ್ದು ಆ ಕ್ಷೇತ್ರದಲ್ಲಿ ದುಡಿದ ರಸಾಯನ ವಿಜ್ಞಾನಿಗಳಲ್ಲಿ ಫಿನ್ಲೆಂಡಿನ ಜೆ. ಗಾಡೊಲಿನ್ ಪ್ರಮುಖನಾಗಿ ದ್ದುದರಿಂದ. ಅಮೆರಿಕಿಯಂ ಧಾತುವಿಗಿಂತ ಮುಂಚೆಯೇ ಕ್ಯೂರಿಯಂ ಧಾತುವಿನ ಶೋಧವಾಯಿತು (1944). ಇದರ ಖ್ಯಾತಿ ಜಿ.ಟಿ.ಸೀಬೊರ್ಗ್, ಆರ್.ಎ.ಜೇಮ್ಸ್ ಮತ್ತು ಎ.ಗಿಯಾಸೊರವರಿಗೆ ಸಲ್ಲುತ್ತದೆ. ಸೈಕ್ಲೊಟ್ರಾನಿನಿಂದ ಆಲ್ಫಕಣಗಳ ವೇಗವನ್ನು ಸಾಕಷ್ಟು ಹೆಚ್ಚಿಸಿ 239 ದ್ರವ್ಯರಾಶಿಯುಳ್ಳ ಪ್ಲುಟೋನಿಯಂ ಸಮಸ್ಥಾನಿಯನ್ನು ಅವುಗಳಿಂದ ತಾಡಿಸಿದಾಗ ಮುಂದೆ ಬರೆದಿರುವ ಬೀಜಕ್ರಿಯೆ ನಡೆಯಿತು. ನ್ಯೂಟ್ರಾನ್ ಬಿಡುಗಡೆಯಾಯಿತು.

$$^{239}_{94}Pu + ^{4}_{2}He \longrightarrow ^{242}_{96}Cm + ^{1}_{0}n$$

ಉಂಟಾದ ಉತ್ಪನ್ನದಲ್ಲಿ 242 ದ್ರವ್ಯರಾಶಿಯುಳ್ಳ ಕ್ಯೂರಿಯಂ ಸಮಸ್ಥಾನಿ ಇರುವುದು ಕಂಡು ಬಂದಿತು. ಅಮೆರಿಕಿಯಂ ಧಾತುವಿನ 242 ದ್ರವ್ಯರಾಶಿಯುಳ್ಳ ಸಮಸ್ಥಾನಿ 16 ಗಂಟೆಗಳ ಅವಧಿಯಲ್ಲಿ ಬೀಟಕಣಗಳನ್ನು ಕಳೆದುಕೊಂಡಾಗಲೂ $^{242}Cm$ ಉತ್ಪತ್ತಿಯಾಗುತ್ತದೆ.

$$^{242}_{95}Am \longrightarrow ^{242}_{96}Cm + ^{0}_{-1}e$$

ಯಾವುದೇ ಪರಮಾಣುವಿನಿಂದ ಅತ್ಯಲ್ಪ ದ್ರವ್ಯರಾಶಿಯ ಬೀಟಕಣಗಳು ಹೊರ ಬಿದ್ದಾಗ ಮೂಲ ಪರಮಾಣುವಿನ ದ್ರವ್ಯರಾಶಿಯಲ್ಲಿ ಯಾವ ಗಣನೀಯ ವ್ಯತ್ಯಾಸವೂ

ಆಗದು. ದೊರೆತ ಕ್ಯೂರಿಯಂ ಸಮಸ್ಥಾನಿಯ ದ್ರವ್ಯರಾಶಿ ಸಹ 242 ಆಗಿರಲು ಇದೇ ಕಾರಣ. ಇದರ ಅರ್ಧಾಯು 150 ದಿವಸಗಳು. ಸ್ವಾಭಾವಿಕವಾಗಿ ಇದು ಆಲ್ಫಕಣಗಳನ್ನು ಉಗುಳುತ್ತದೆ. ಈ ಕ್ರಿಯೆಯಲ್ಲಿ ವಾಸ್ತವವಾಗಿ ಒದಗುವುದು ಕ್ಯೂರಿಯಂ ಅಲ್ಲ. ಅದರ ಸೆಸ್ಕ್ವಿ ಆಕ್ಸೈಡ್ ($Cm_2O_3$). 1947 ಸೆಪ್ಟೆಂಬರ್ ತಿಂಗಳಲ್ಲಿ ಎಲ್.ಬಿ.ವರ್ನರ್ ಮತ್ತು ಐ.ಪರ್ಲ್‌ಮನ್ನರು ಸಂಯುಕ್ತಸ್ಥಿತಿಯಲ್ಲಿ ಕ್ಯೂರಿಯಮ್ಮನ್ನು ತಯಾರಿಸಿದುದು ಹೀಗೆಯೇ.

238, 240, 243, 244 ಮತ್ತು 245 ದ್ರವ್ಯರಾಶಿಗಳಿರುವ ಕ್ಯೂರಿಯಂ ಸಮಸ್ಥಾನಿಗಳೂ ಇವೆಯೆಂದು ವರದಿಯಾಗಿದೆ. ಈ ಮುಂದಿನ ನಮೂನೆಯ ಬೀಜಕ್ರಿಯೆಗಳು ನಡೆದಾಗ ಇವು ಉಂಟಾಗುವುವು.

$${}^{239}_{94}\mathrm{Pu} + {}^{4}_{2}\mathrm{He} \longrightarrow {}^{238}_{96}\mathrm{Cm} + 5{}^{1}_{0}\mathrm{n}$$

$${}^{239}_{94}\mathrm{Pu} + {}^{4}_{2}\mathrm{He} \longrightarrow {}^{240}_{96}\mathrm{Cm} + 3{}^{1}_{0}\mathrm{n}$$

ಕ್ಯೂರಿಯಂ–240 ಸಹ ಆಲ್ಫಕಣ ವಿಸರ್ಜಕ. ಇದರ ಅರ್ಧಾಯು 27 ದಿವಸಗಳು. ಕ್ಯೂರಿಯಂ ಧಾತುವಿನ ಇತರ ಸಮಸ್ಥಾನಿಗಳ ಬಗ್ಗೆ ಮಾಹಿತಿ ಮುಂದಿನ ಪಟ್ಟಿಯಲ್ಲಿದೆ.

| ಸಮಸ್ಥಾನಿ | ಅರ್ಧಾಯು | ಉತ್ಪನ್ನ ವಿಧಾನ |
|---|---|---|
| 243 | 100 ವರ್ಷಗಳು | Cm-242(n); Bk-243 (K) |
| 244 | 10 ವರ್ಷಗಳು | Am-241 (a,P) Am-244 ($\beta$) |
| 245 | $2 \times 10^4$ ವರ್ಷಗಳು | Bk-245 (K) |
| 246 | 6,600 ವರ್ಷಗಳು | |
| 248 | $4.2 \times 10^5$ ವರ್ಷಗಳು | |

ರಾಸಾಯನಿಕ ಪ್ರಯೋಗಗಳಲ್ಲಿ ಬಳಸಲು 244 ದ್ರವ್ಯರಾಶಿಯ ಸಮಸ್ಥಾನಿ ಪ್ರಶಸ್ತ. ಏಕೆಂದರೆ ಅದು ಸಾಕಷ್ಟು ಸ್ಥಿರ. ಅಲ್ಲದೆ ಆಲ್ಫಕಣ ವಿಸರ್ಜನಪ್ರವೃತ್ತಿ ಅದಕ್ಕೆ ಅಷ್ಟಾಗಿಲ್ಲ. ಇದನ್ನು ತಯಾರಿಸುವುದು ಈ ಕೆಳಗಿನಂತೆ. ಮೊದಲು $^{241}Am$ ಸಮಸ್ಥಾನಿಯನ್ನು ನ್ಯೂಟ್ರಾನುಗಳಿಂದ ತಾಡಿಸಲಾಗುವುದು. ಆಗ ಪ್ಲೂಟೋನಿಯಂ–242 ದೊರೆಯುತ್ತದೆ.

$${}^{241}_{95}\mathrm{Am} + {}^{1}_{0}\mathrm{n} \rightarrow {}^{242}_{95}\mathrm{Am} + \gamma$$

$${}^{242}_{95}\mathrm{Am} \rightarrow {}^{242}_{94}\mathrm{Pu} + {}^{0}_{1}\mathrm{e}$$

ಪಾಸಿಟ್ರಾನ್

Pu–242ನ್ನು ರಾಸಾಯನಿಕ ವಿಧಾನಗಳಿಂದ ಪ್ರತ್ಯೇಕಿಸಿ ನ್ಯೂಟ್ರಾನ್ ತಾಡನಕ್ಕೆ ಒಳಪಡಿಸಿದರೆ ಅದು Am-243 ಸಮಸ್ಥಾನಿಗೆ ಪರಿವರ್ತಿತವಾಗುವುದು. ಇದನ್ನು ಬೇರ್ಪಡಿಸಿ ಮತ್ತೆ ನ್ಯೂಟ್ರಾನುಗಳಿಂದ ಘರ್ಷಿಸಿ.

$${}^{242}_{94}\mathrm{Pu} + {}^{1}_{0}\mathrm{n} \rightarrow {}^{243}_{94}\mathrm{Pu} + \gamma$$

$${}^{243}_{94}\mathrm{Pu} \rightarrow {}^{243}_{95}\mathrm{Am} + {}^{0}_{-1}\mathrm{e}$$

Cm–244 ಸಮಸ್ಥಾನಿಯನ್ನು ಪಡೆಯಬಹುದು.

$${}^{243}_{95}\mathrm{Am} + {}^{1}_{0}\mathrm{n} \rightarrow {}^{244}_{95}\mathrm{Am} + \gamma$$

$${}^{244}_{95}\mathrm{Am} \rightarrow {}^{244}_{95}\mathrm{Cm} + {}^{0}_{-1}\mathrm{e}$$

ತನ್ನ ಸಂಯುಕ್ತಗಳಲ್ಲಿ ಕ್ಯೂರಿಯಂ ತ್ರಿವೇಲೆನ್ಸೀಯ ಸ್ಥಿತಿಯಲ್ಲಿರುತ್ತದೆ. ಈ ಉತ್ಕರ್ಷಣಸ್ಥಿತಿಯಲ್ಲಿ ಅದು ಬಹು ಸ್ಥಿರ. ಅದರೊಡನೆ ಸಾಮಾನ್ಯವಾಗಿ ಇದ್ದೇ ಇರುವ ವಿರಳ ಭಸ್ಮಧಾತುಗಳು ಮತ್ತು ಅಮೆರಿಕಿಯಂಗಳನ್ನು ಕ್ಯೂರಿಯಂನಿಂದ ಬೇರ್ಪಡಿಸುವುದು ಪ್ರಯಾಸದ ಕೆಲಸ. ಏಕೆಂದರೆ ಇವೂ ತ್ರಿವೇಲೆನ್ಸೀಯ ಧಾತುಗಳು. ಇವುಗಳ ಸಂಯುಕ್ತಗಳಷ್ಟೇ ಕ್ಯೂರಿಯಂ ಸಂಯುಕ್ತಗಳೂ ದ್ರಾವ್ಯ. ಆದ್ದರಿಂದ ಈ ಧಾತುಗಳನ್ನೆಲ್ಲ ಆಯಾ ಫ್ಲೂರೈಡುಗಳಿಗೆ ಪರಿವರ್ತಿಸಿ ಅವುಗಳ ದ್ರಾವಣತೆಗಳಲ್ಲಿರುವ ವ್ಯತ್ಯಾಸದ ಲಾಭ ಪಡೆದು ಭಿನ್ನ ಸ್ಫಟಿಕೀಕರಣ ವಿಧಾನದಿಂದ ಬೇರ್ಪಡಿಸುತ್ತಾರೆ.

ಗಾಡೊಲಿನಿಯಂ ಲವಣಗಳಿಗೂ ಕ್ಯೂರಿಯಂ ಲವಣಗಳಿಗೂ ಕಾಂತತ್ವ, ಅತಿನೇರಿಳೆ ಕಿರಣಗಳನ್ನು ಹೀರುವ ಸಾಮರ್ಥ್ಯ ಮೊದಲಾದ ಗುಣಗಳಲ್ಲಿ ಸಾಮ್ಯ ಉಂಟು. ಹೀಗಾಗಲು ಗಾಡೊಲಿನಿಯಂ ಮತ್ತು ಕ್ಯೂರಿಯಂ ಧಾತುಗಳ ಎಲೆಕ್ಟ್ರಾನ್ ವಿನ್ಯಾಸದಲ್ಲಿ ಹೋಲಿಕೆಯಿರುವುದೇ ಕಾರಣವಿರಬಹುದು.

ಕ್ಯೂರಿಯಂ–242 ಸಮಸ್ಥಾನಿ ಅಲ್ಪಾಯುಷಿಯಾದ್ದರಿಂದ ಅದರಿಂದ ಆಲ್ಫ ಕಣಗಳು ಸದಾ ಬಿಡುಗಡೆಯಾಗುತ್ತಿರುತ್ತವೆ. ಪರಿಣಾಮವಾಗಿ ಅದನ್ನು ಒಳಗೊಂಡ ಪ್ರಯೋಗಗಳನ್ನು ನಡೆಸುವುದು ಕಷ್ಟ. ಏಕೆಂದರೆ ಕ್ಯೂರಿಯಂ ಸಂಯುಕ್ತ ವಿಲೀನವಾಗಿರುವ ದ್ರಾವಣದಿಂದ ಸತತವಾಗಿ ಹೀಲಿಯಂ ಅನಿಲ ಹೊರಬೀಳುತ್ತಿದ್ದು ದ್ರಾವಣ ಕಾಯುತ್ತದೆ. ವಿಸರ್ಜಿತ ಕಿರಣಗಳಿಂದ ಆರೋಗ್ಯಕ್ಕೆ ಕೇಡು ಉಂಟು. ಆದ್ದರಿಂದ ಕ್ಯೂರಿಯಂ ಸಂಯುಕ್ತಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ರಕ್ಷಿತ ಆವರಣದಲ್ಲಿ ಮಾತ್ರ ನಡೆಸಬೇಕು. ದ್ರಾವಣಸ್ಥಿತಿಯಲ್ಲೂ ಕ್ಯೂರಿಯಂ ತ್ರಿವೇಲೆನ್ಸೀಯ ಸ್ಥಿತಿಯಲ್ಲಿರುವುದು ಸರಿಯಷ್ಟೆ ($Cm^{3+}$). ಅದರ ಪರಮಾಣುವಿನ 5f ಉಪಕವಚ ಅರೆಭರ್ತಿ ($5f^7$) ಆಗಿರುವುದನ್ನು ಗಮನಿಸಿದರೆ ಇದು ಅದರ ಅತ್ಯಂತ ಸ್ಥಿರವಾದ ಉತ್ಕರ್ಷಣ ಸ್ಥಿತಿಯಾಗಿರುವುದು ಸಹಜವೆನಿಸುತ್ತದೆ. ಡೈಕ್ರೋಮೇಟ್, ಪರ್ಮ್ಯಾಂಗನೇಟ್, ಪರಾಕ್ಸಿ ಡೈ ಸಲ್ಫೇಟ್ ಮತ್ತು ಆರ್ಜೆಂಟಿಕ್ ಅಯಾನುಗಳಿಂದ ಅದು ಪ್ರಭಾವಿತವಾಗದಿರುವುದು ಈ ಭಾವನೆಯನ್ನು ಸಮರ್ಥಿಸುವುದು. ಕ್ಷಾರೀಯ ಮಾಧ್ಯಮದಲ್ಲಿ ಸೋಡಿಯಂ ಹೈಪೊಕ್ಲೋರೈಟಿನಿಂದ ತ್ರಿವೇಲೆನ್ಸೀಯ ಅಮೆರಿಕಿಯಮನ್ನು ಪಂಚವೇಲೆನ್ಸೀಯ ಸ್ಥಿತಿಗೆ ಉತ್ಕರ್ಷಿಸಬಹುದು. ಆದರೆ ಅದೇ ಪರಿಸ್ಥಿತಿಯಲ್ಲಿ ಕ್ಯೂರಿಯಂ ಉತ್ಕರ್ಷಿತವಾಗದು.

ಆಕ್ಟಿನಿಯಂ ಮತ್ತು ಲ್ಯಾಂಥನಂ ಶ್ರೇಣಿಗಳ ತ್ರಿವೇಲೆನ್ಸೀಯ ಧಾತುಗಳ ಸದೃಶ ಸಂಯುಕ್ತಗಳು ಎಷ್ಟು ದ್ರಾವ್ಯವೋ ಅಷ್ಟೇ ದ್ರಾವ್ಯವಾದ ಕ್ಯೂರಿಯಂ ಸಂಯುಕ್ತಗಳೂ ಇವೆ. ಉದಾಹರಣೆಗೆ ಅವುಗಳಂತೆಯೇ ಕ್ಯೂರಿಯಂ ಫ್ಲೂರೈಡ್ ಮತ್ತು ಆಕ್ಸಲೇಟುಗಳು ಆಮ್ಲೀಯ ಮಾಧ್ಯಮದಲ್ಲಿ ಆದ್ರಾವ್ಯ. ನೈಟ್ರೇಟ್ ಸಲ್ಫೇಟ್, ಸಲ್ಫೈಡ್ ಪರ್‌ಕ್ಲೋರೇಟ್ ಮತ್ತು ಹ್ಯಾಲೈಡುಗಳು ದ್ರಾವ್ಯ.

ಸಾರರಿಕ್ತ ನೈಟ್ರಿಕ್ ಆಮ್ಲದಲ್ಲಿ ವಿಲೀನಗೊಳಿಸಿದ ಕ್ಯೂರಿಯಮಿನ ದ್ರಾವಣಕ್ಕೆ ಹೈಡ್ರೊಫ್ಲೂರಿಕ್ ಆಮ್ಲವನ್ನು ಹಾಕಿದಾಗ ಕ್ಯೂರಿಯಂ ಟ್ರೈಫ್ಲೂರೈಡು ($CmF_3$) ಒತ್ತರಿಸುತ್ತದೆ. ಇದನ್ನು ಒಣಗಿಸಿ ಬೆರಿಲಿಯಾ (BeO) ಮೂಸೆಯಲ್ಲಿ $1275^0$ ಸೆಂ. ಉಷ್ಣತೆಯಲ್ಲಿ ಬೇರಿಯಂ ಆವಿಯಿಂದ ಅಪಕರ್ಷಿಸಿ ಕ್ಯೂರಿಯಂ ಲೋಹವನ್ನು ಪಡೆಯುವುದು ವಾಡಿಕೆ.

ಕ್ಯೂರಿಯಂ ಬೆಳ್ಳಿಯಂತೆ ಬಿಳುಪಾದ ಲೋಹ. ತನ್ನ ಗುಣಗಳಲ್ಲಿ ಆಕ್ಟಿನಿಯಂ ಶ್ರೇಣಿಯ ಇತರ ಧಾತುಗಳನ್ನು ಇದು ನಿಕಟವಾಗಿ ಹೋಲುತ್ತದೆ. (ಎಚ್.ಜಿ.ಎಸ್.)

**ಕ್ಯೂರಿ–ವೀಸ್ ನಿಯಮ :** ಫೆರ್ರೋಕಾಂತಗಳು, ಪ್ರತಿಫೆರ್ರೋಕಾಂತಗಳು, ಆಧ್ರುವೀಯ ಫೆರ್ರೋವಿದ್ಯುತ್ತುಗಳು (ನಾನ್‌ಪೋಲಾರ್ ಫೆರ್ರೋಎಲೆಕ್ಟ್ರಿಕ್ಸ್) ಮತ್ತು ಪ್ರತಿಫೆರ್ರೋ ವಿದ್ಯುತ್ತುಗಳು ಹಾಗೂ ಕೆಲವು ಅನುಕಾಂತಗಳು ಅನುಸರಿಸುವ ಕಾಂತೀಯ (ಮ್ಯಾಗ್ನೆಟಿಕ್) ಇಲ್ಲವೆ ವಿದ್ಯುತ್ ಗ್ರಾಹಕತೆಗಳು (ಎಲೆಕ್ಟ್ರಿಕ್ ಸಸೆಪ್ಟಿ ಬಿಲಿಟೀಸ್) ಮತ್ತು ನಿರಪೇಕ್ಷ ಉಷ್ಣತೆ ಇವುಗಳ ನಡುವಿನ ಸಂಬಂಧ. ಈ ನಿಯಮವನ್ನು ಸಾಮಾನ್ಯವಾಗಿ

$$X = -\frac{C}{T-\theta}$$

ಎಂಬುದಾಗಿ ಬರೆಯುತ್ತಾರೆ. ಇಲ್ಲಿ X ಗ್ರಾಹಕತೆ, *C* ಪ್ರತಿಯೊಂದು ವಸ್ತುವನ್ನು ಕುರಿತ ಒಂದು ಸ್ಥಿರಾಂಕ, *T* ನಿರಪೇಕ್ಷ ಉಷ್ಣತೆ ಮತ್ತು $\theta$ ಕ್ಯೂರಿ ಉಷ್ಣತೆ. ಎಲ್ಲ ಪ್ರತಿ–(ಆಂಟಿ–) ಗುಂಪಿಗೂ ಕ್ಯೂರಿ ಉಷ್ಣತೆ $\theta$ ಋಣಾತ್ಮಕ. ಕಾಂತೀಯ ಮತ್ತು ವಿದ್ಯುತ್ ವಸ್ತುಗಳ ತಮ್ಮ ಸಂಕ್ರಮಣ ಉಷ್ಣತೆಯನ್ನು (ಟ್ರಾನ್ಸಿಷನ್ ಟೆಂಪರೇಚರ್) ಮೀರಿದ ಮೇಲೆ ಈ ನಿಯಮಕ್ಕೆ ಒಳಪಡುತ್ತವೆ. ಸಂಕ್ರಮಣ ಉಷ್ಣತೆಯ ಆಸುಪಾಸಿನಲ್ಲಿ ಈ ನಿಯಮಕ್ಕೆ ಒಳಪಡುತ್ತವೆ. ಸಂಕ್ರಮಣ ಉಷ್ಣತೆಯ ಆಸುಪಾಸಿನಲ್ಲಿ ಈ ನಿಯಮ ಹೊಂದುವುದಿಲ್ಲ. ವಿವಿಧ ಉಷ್ಣತೆಗಳಲ್ಲಿ *C* ಮತ್ತು $\theta$ ಗಳಿಗೆ ಬೇರೆ ಬೇರೆ ಬೆಲೆಗಳಿದ್ದರೆ X ಈ ನಿಯಮದಂತೆ ವರ್ತಿಸುತ್ತದೆ.

ಕ್ಯೂರಿ ನಿಯಮಕ್ಕೆ (**ನೋಡಿ– ಕ್ಯೂರಿ–ನಿಯಮ**) ಒಳಪಡದ ಹಲವು ವಸ್ತುಗಳ X ಯನ್ನು ಪಡೆಯಲು, ಪ್ರಾಯೋಗಿಕವಾದ ಸಿದ್ಧವಾದ ಈ ನಿಯಮವನ್ನು ತತ್ತ್ವಗಳ ಆಧಾರದಿಂದ ಸ್ಥಿರಪಡಿಸಲು, ವೀಸ್ ಎಂಬಾತ ಅಣುಗಳಲ್ಲಿ ಆಂತರಿಕ ಕಾಂತಕ್ಷೇತ್ರವಿದೆ ಎಂದ. ಅಣುಗಳ ಪರಸ್ಪರ ಪ್ರಭಾವದಿಂದ ಉಂಟಾಗುವ ಈ ಆಂತರಿಕ ಕ್ಷೇತ್ರಕ್ಕೂ ಹೊರಗಿನ ಕ್ಷೇತ್ರಕ್ಕೂ ಇರುವ ಫಲಿತವನ್ನು ಪರಿಗಣಿಸಿ ವೀಸ್ ಈ ನಿಯಮವನ್ನು ಸ್ಥಿರಪಡಿಸಿದ. ಆಂತರಿಕ ಕ್ಷೇತ್ರಕ್ಕೂ ಹೊರಗಿನ ಕಾಂತ ಕ್ಷೇತ್ರಕ್ಕೂ ಇರುವ

$$Ym = H + \gamma M$$

ಸಂಬಂಧವನ್ನು ಆಧಾರವಾಗಿಟ್ಟುಕೊಂಡ ಅವನ ತತ್ತ್ವದಲ್ಲಿ

$$C = \frac{N\mu^2}{3k}, \quad \theta = \frac{\gamma N_\mu^2}{3k} = \gamma 0$$

ಮತ್ತು $x = \dfrac{C}{T-\theta}$

ಇಲ್ಲಿ $H_m$ ಆಂತರಿಕ ಕಾಂತಕ್ಷೇತ್ರ, *H* ಬಾಹ್ಯ ಕಾಂತಕ್ಷೇತ್ರ, *M* ಕಾಂತ ಭ್ರಮಣಾಂಕ, $\gamma$ ವೀಸ್ ಸ್ಥಿರಾಂಕ, *N* ಏಕಮಾನ ಗಾತ್ರದಲ್ಲಿರುವ ಪರಮಾಣುಗಳು, $\mu$ ಅಣುವಿನ ಒಟ್ಟು ಕಾಂತ ಭ್ರಮಣಾಂಕ ಮತ್ತು *k* ಬೋಲ್ಟ್ಸ್‌ಮನ್ ಸ್ಥಿರಾಂಕ.

ಫೆರ್ರೋಕಾಂತೀಯ ವಸ್ತುಗಳು ಕ್ಯೂರಿಬಿಂದುವನ್ನು ಸಂಕ್ರಮಿಸಿದ ಬಳಿಕ ಅನುಕಾಂತೀಯ ವಸ್ತುಗಳಾಗುತ್ತವೆ. ಆದರೆ $T=\theta$ ಆದಾಗ ಕ್ಯೂರಿ–ವೀಸ್ ನಿಯಮ ಕುಸಿಯುತ್ತದೆ. ಅನುಕಾಂತೀಯ ವಸ್ತುಗಳಿಗೆ $\theta$ ಕಡಿಮೆ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಶೂನ್ಯಕ್ಕಿಂತ ಕಡಿಮೆ ಇರುವುದೂ ಉಂಟು. ಕ್ಷಾರವಸ್ತುಗಳು ಈ ನಿಯಮಕ್ಕೆ ಅಪವಾದ. (ಬಿ.ಎಸ್.ಎಂ.)

**ಕ್ಯೂಲಿಸಿಡೀ :** ಕೀಟವರ್ಗದ ಡಿಪ್ಟರ ಗಣಕ್ಕೆ ಸೇರಿದ ಒಂದು ಕುಟುಂಬ. ಸೊಳ್ಳೆಗಳು ಈ ಕುಟುಂಬದವು. ಕೆಲವು ಕೀಟವಿಜ್ಞಾನಿಗಳು ಮಿಡ್ಜ್ ಮತ್ತು ನಾಟ್‌ಗಳನ್ನೂ ಈ ಕುಟುಂಬಕ್ಕೆ ಸೇರಿಸುತ್ತಾರೆ. ಚಿಕ್ಕಗಾತ್ರದ ಸೂಕ್ಷ್ಮವಾದ ಸುಲಭವಾಗಿ ಮುರಿಯುವಂಥ ದೇಹ, ಉದ್ದವಾದ ಕಾಲುಗಳು, ಕೂದಲು ಮತ್ತು ಹುರುಪೆಗಳಿಂದ ಆವೃತವಾದ ದೇಹ ಹಾಗೂ ಉಪಾಂಗಗಳು ಸೊಳ್ಳೆಗಳ ಕೆಲವು ವಿಶೇಷ ಲಕ್ಷಣಗಳು. ದೇಹದ ಬಣ್ಣ ಕಂದು, ಕಪ್ಪು, ಬೂದು ಇತ್ಯಾದಿಯಾಗಿದ್ದು ಅಲ್ಲಲ್ಲಿ ಬಿಳಿಯ ಚುಕ್ಕೆಗಳಿಂದ ಕೂಡಿ ಆಕರ್ಷಕವಾಗಿದೆ. ತಲೆ ಚಿಕ್ಕದು. ಕತ್ತು ಬಲುಸೂಕ್ಷ್ಮ. ವದನಾಂಗಗಳು ಆತಿಥೇಯ ಪ್ರಾಣಿಯ ದೇಹವನ್ನು ಚುಚ್ಚಲು ಅನುಕೂಲವಾಗಿವೆ. ಉದ್ದನೆಯ ಸೊಂಡಿಲೊಂದಿದೆ. ಕುಡಿಮೀಸೆಗಳು ಉದ್ದವಾಗಿದ್ದು ತಂತಿಯ ಹಾಗಿವೆ; ಇವುಗಳ ಮೇಲೆ 14–15 ಸಂದಿಗಳಿದ್ದು ಒಂದೊಂದು ಸಂದಿಯಲ್ಲೂ ವರ್ತುಲಾಕಾರವಾಗಿ ಜೋಡಿಸಲ್ಪಟ್ಟ ಹಲವಾರು ಕೂದಲುಗಳಿವೆ. ಗಂಡುಸೊಳ್ಳೆಗಳಲ್ಲಿ ಕೂದಲುಗಳು ಒತ್ತಾಗಿದ್ದು ಕುಡಿಮೀಸೆ ಪುಕ್ಕವನ್ನು ಹೋಲುತ್ತದೆ. ರೆಕ್ಕೆಗಳು ಉದ್ದ ಹಾಗೂ ತೆಳು. ಇವುಗಳ ಹಿಂತುದಿಯ ಅಂಚಿನ ಮೇಲೆಲ್ಲ ಕೂದಲುಗಳೂ ಹುರುಪೆಗಳೂ ಇವೆ. ರೆಕ್ಕೆಗಳಲ್ಲಿ ಪ್ರಮುಖವಾದ 6 ನಾಳಗಳನ್ನೂ ಕಾಣಬಹುದು. ನಾಳಗಳ ಮೇಲೂ ಹುರುಪೆಗಳಿವೆ. ಉದರ ಭಾಗದಲ್ಲಿ 10 ಖಂಡಗಳಿವೆ; ಕೊನೆಯ 3 ಖಂಡಗಳು ಜನನಾಂಗಗಳನ್ನೊಳಗೊಂಡಿವೆ. ಇವು ಹಲವಾರು ರೀತಿಯಲ್ಲಿ ಮಾರ್ಪಾಡಾಗಿವೆ.

ಸೊಳ್ಳೆಗಳ ಡಿಂಬಗಳು ಜಲವಾಸಿಗಳು. ಸ್ವತಂತ್ರ ಜೀವನ ನಡೆಸುತ್ತವೆ. ಇವನ್ನು ದಪ್ಪತಲೆ ಮತ್ತು ಹೊಟ್ಟೆಯ 8ನೆಯ ಖಂಡದ ಮೇಲ್ಭಾಗದಲ್ಲಿರುವ ಒಂದು ಜೊತೆ ಸ್ವೈರಕಲ್ಲುಗಳಿಂದ ಗುರುತಿಸಬಹುದು. ಡಿಂಬದ ರಚನೆಯ ಗುಣಗಳು ಸೊಳ್ಳೆಯ ವರ್ಗೀಕರಣದಲ್ಲಿ ಬಹಳ ಮುಖ್ಯವಾದವು.

ಸೊಳ್ಳೆಗಳಲ್ಲಿ ಸುಮಾರು 2,400 ಪ್ರಭೇದಗಳಿವೆ. ಇವು ಸಾಧಾರಣವಾಗಿ ಎಲ್ಲ ದೇಶಗಳಲ್ಲಿಯೂ ಕಾಣಬರುತ್ತವೆ. ಹಿಮಾಲಯದಲ್ಲಿ 14,000' ಎತ್ತರದಲ್ಲಿಯೂ ಕೋಲಾರದ ಚಿನ್ನದ ಗಣಿಗಳಲ್ಲಿ ಭೂಮಟ್ಟದಿಂದ 3,760' ಕೆಳಗೂ ಕಾಣಬಂದಿವೆ. ಉಷ್ಣವಲಯ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿರುವುವಾದರೂ ಉತ್ತರ ಮೇರು ಪ್ರದೇಶಗಳಲ್ಲಿಯೂ ಇಲ್ಲದಿಲ್ಲ.

ಕ್ಯೂಲಿಸಿಡೀ ಕುಟುಂಬವನ್ನು 3 ಉಪಕುಟುಂಬಗಳನ್ನಾಗಿ ವಿಂಗಡಿಸಬಹುದು:

**1. ಟೋಕ್ಸೊರಿಂಕೈಟಿನೀ (ಮೆಗರೈನಿನೀ):** ಈ ಸೊಳ್ಳೆಗಳ ಸೊಂಡಿಲಿನ ಕೆಳ ಅರ್ಧಭಾಗ ಗಟ್ಟಿಯಾಗಿಯೂ ಮೇಲಿನ ಭಾಗ ಮೆದುವಾಗಿಯೂ ಇರುತ್ತದೆ. ಇವುಗಳ ಡಿಂಬಗಳು ಮಾಂಸಾಹಾರಿಗಳು. ಪ್ರೌಢ ಸೊಳ್ಳೆಗಳು ಹೂಗಳನ್ನು ತಿನ್ನುತ್ತವೆ. ಉದಾಹರಣೆಗೆ–*ಟೋಕ್ಸೊರಿಂಕೈಟಿಸ್.*

**2. ಕ್ಯೂಲಿಸಿನೀ :** ಈ ಸೊಳ್ಳೆಗಳ ಸೊಂಡಿಲು ಗಟ್ಟಿಯಾಗಿಲ್ಲ. ಪಾಲ್ಪಿಯ ಉದ್ದ ಸೊಂಡಿಲಿನ ಉದ್ದದ ಅರ್ಧಕ್ಕಿಂತ ಕಡಿಮೆ. ಸ್ಕುಟೆಲಂ ಮೂರು ಭಾಗವಾಗಿದೆ. ಹೆಣ್ಣುಸೊಳ್ಳೆಗಳು ರಕ್ತ ಹೀರುತ್ತವೆ. ಉದಾಹರಣೆಗೆ–*ಕ್ಯೂಲೆಕ್ಸ್ ಸೊಳ್ಳೆ*, **(ನೋಡಿ– ಕ್ಯೂಲೆಕ್ಸ್–ಸೊಳ್ಳೆ)** *ಈಡೆಸ್.*

**3. ಅನಾಫಿಲಿನೀ :** ಇವುಗಳಲ್ಲಿ ಪಾಲ್ಪಿಗಳು ಸೊಂಡಿಲಿನಷ್ಟೇ ಉದ್ದವಾಗಿರುತ್ತವೆ. ಸ್ಕುಟೆಲಂ ಗುಂಡಗೆ ಪಟಲರಹಿತವಾಗಿದೆ. ಹೆಣ್ಣು ಸೊಳ್ಳೆಗಳು ರಕ್ತ ಹೀರಿಜೀವಿಸುತ್ತವೆ. ಉದಾಹರಣೆಗೆ–*ಅನಾಫಿಲಿಸ್.*

ಸೊಳ್ಳೆಗಳ ಜೀವನದಲ್ಲಿ ಮೊಟ್ಟೆ, ಡಿಂಬ, ಕೋಶಾವಸ್ಥೆ ಮತ್ತು ಪ್ರೌಢಾವಸ್ಥೆಗಳನ್ನು ಗುರುತಿಸಬಹುದು. ಡಿಂಬಗಳನ್ನು ರಿಗ್ಲರ್ಸ್ ಎಂದೂ ಕೋಶಾವಸ್ಥೆಯಲ್ಲಿರುವ ಮರಿಗಳನ್ನು ಟಂಬ್ಲರ್ಸ್ ಎಂದೂ ಕರೆಯಲಾಗುತ್ತದೆ. ಗಂಡುಸೊಳ್ಳೆಗಳ ವದನಾಂಗಗಳು ಚುಚ್ಚುವುದಕ್ಕೆ ಅನುಕೂಲವಾಗಿಲ್ಲ. ಆದ್ದರಿಂದ ಇವು ರಕ್ತವನ್ನು ಹೀರುವುದಿಲ್ಲ; ಹೂಗಳಲ್ಲಿಯ ಮಕರಂಧ ಮತ್ತು ಗಿಡಗಳ ರಸವನ್ನು ಹೀರಿ ಜೀವಿಸುತ್ತವೆ. ಹೆಣ್ಣುಸೊಳ್ಳೆಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು: ಮನುಷ್ಯನನ್ನು ಬಿಟ್ಟು ಮಿಕ್ಕೆಲ್ಲ ಪ್ರಾಣಿಗಳ ರಕ್ತವನ್ನು ಹೀರುವ *ಜೂಫಿಲಸ್* ಸೊಳ್ಳೆಗಳು ಮತ್ತು ಮನುಷ್ಯನ ರಕ್ತವನ್ನು ಹೀರುವ *ಆಂತ್ರೋಫಿಲಸ್* ಸೊಳ್ಳೆಗಳು. ಗಂಡುಸೊಳ್ಳೆಗಳು ಸಾಮಾನ್ಯವಾಗಿ 6–7 ದಿವಸಗಳ ಕಾಲ ಜೀವಿಸುತ್ತವೆ. ಆದರೆ ಇವನ್ನು ಒಂದು ತಿಂಗಳ ವರೆಗೂ ಸಾಕಬಹುದು. ಹೆಣ್ಣುಸೊಳ್ಳೆಗಳಿಗೆ ಒಳ್ಳೆಯ ಆಹಾರ ದೊರೆತರೆ ಸುಮಾರು 4–5 ತಿಂಗಳ ತನಕ ಬದುಕಬಲ್ಲುವು. ಅತಿ ಚುರುಕು ಜೀವನ ನಡೆಸುವ ಹೆಣ್ಣುಸೊಳ್ಳೆಗಳ ಆಯುಸ್ಸು 30 ದಿವಸಗಳಿಗಿಂತ ಹೆಚ್ಚಿಲ್ಲ. ಬೇಸಗೆ ಕಾಲದಲ್ಲಿ ಇವುಗಳ ಆಯುಸ್ಸು ಎರಡು ವಾರಗಳ ತನಕ ಮಾತ್ರ ಎಂದು ಹೇಳಲಾಗಿದೆ.

(ಎನ್.ವಿ.ಎ.)

**ಕ್ಯೂಲೆಕ್ಸ್ ಸೊಳ್ಳೆ :** ಡಿಪ್ಟಿರ ಗಣದ ಕ್ಯೂಲಿಸಿಡೀ ಕುಟುಂಬಕ್ಕೆ ಸೇರಿದ ಕೀಟ. ಗಾತ್ರ ಬಲುಸಣ್ಣದು. ಇದರ ವಾಸ ಸಾಮಾನ್ಯವಾಗಿ ನೀರಿನ ಬಳಿ. ಇದಕ್ಕೆ ಒಂದು ಜೊತೆ ರೆಕ್ಕೆಗಳಿವೆ. ಎರಡನೆಯ ಜೊತೆ ರೆಕ್ಕೆಗಳೂ ಇದ್ದು ಇವು ಸಣ್ಣ ಕೊಡತಿಯಾಕಾರದ ಉಪಾಂಗಗಳಾಗಿ ಮಾರ್ಪಾಡಾಗಿವೆ. ಇವುಗಳಿಗೆ ಹಾಲ್ಟಿಯರ್ಸ್ ಅಥವಾ ಬ್ಯಾಲೆನ್ಸರ್ಸ್ ಎಂದು ಹೆಸರು. ಕ್ಯೂಲೆಕ್ಸ್ ಸೊಳ್ಳೆಯ ದೇಹವನ್ನು ತಲೆ, ಎದೆ ಮತ್ತು ಹೊಟ್ಟೆ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. ಗಂಡು ಸೊಳ್ಳೆಗೂ ಹೆಣ್ಣು ಸೊಳ್ಳೆಗೂ ಹಲವು ವ್ಯತ್ಯಾಸಗಳಿವೆ. ಗಂಡು ಸೊಳ್ಳೆಯಲ್ಲಿ ಆಂಟೆನ ಮೊಟಕಾಗಿದ್ದು ಅದರ ಮೇಲೆ ದಟ್ಟವಾಗಿ ಕೂದಲುಗಳು ಬೆಳೆದಿರುತ್ತವೆ. ಹೆಣ್ಣುಸೊಳ್ಳೆಯಲ್ಲಿ ಆಂಟೆನ ನೀಳವಾಗಿದೆ. ಅದರ ಮೇಲೆ ಕೇವಲ ಕೆಲವೇ ಕೂದಲುಗಳಿವೆ. ಹೆಣ್ಣು ಸೊಳ್ಳೆಗಳು ರಕ್ತವನ್ನು ಹೀರಿ ಜೀವಿಸುತ್ತವೆ. ಗಂಡು ಸೊಳ್ಳೆಗಳು ಸಾಧಾರಣವಾಗಿ ಸಸ್ಯಾಹಾರಿಗಳು; ಹೂಗಳ ಮಕರಂದವನ್ನೂ ಸಸ್ಯಗಳ ರಸವನ್ನೂ ಕುಡಿದು ಬದುಕುತ್ತವೆ. ಇವು ಸೇವಿಸುವ ಆಹಾರವನ್ನು ಅವಲಂಬಿಸಿ ವದನಾಂಗಗಳು ಸ್ವಲ್ಪ ಬೇರೆಯಾಗಿವೆ. ಕ್ಯೂಲೆಕ್ಸ್ ಸೊಳ್ಳೆ ಕೆಲವು ಗುಣಲಕ್ಷಣಗಳಲ್ಲಿ ಬೇರೆ ಬಗೆಯ ಸೊಳ್ಳೆಗಳಿಂದ ಬೇರೆಯಾಗಿದೆ. ಇದು ನೆಲದ ಮೇಲೆ ಕುಳಿತಾಗ ದೇಹ ಭೂಮಿಗೆ ಸಮಾಂತರವಾಗಿರುತ್ತದೆ. ಇದಕ್ಕೆ ಸಣ್ಣ ಪಾಲ್ಪಿ ಎಂದು. ಇದಕ್ಕೆ ದೇಹದ ಮಧ್ಯಭಾಗದ ಮೇಲಿನ ಕೂದಲುಗಳು ಮೂರು ಬಗೆಯಾಗಿದ್ದು ಒಂದು ಸಣ್ಣ ಸ್ಕುಟೆಲಂ ಎಂಬ ಏಣಿನ ಜೋಡಣೆಗೊಂಡಿದೆ. ಕ್ಯೂಲೆಕ್ಸ್ ಸೊಳ್ಳೆಯ ಬೆಳವಣಿಗೆಯಲ್ಲಿ ಪೂರ್ಣರೂಪಾಂತರವನ್ನು ಕಾಣಬಹುದು. ಇದರ ಜೀವನಚಕ್ರ ಸಂಪೂರ್ಣಗೊಳ್ಳಲು ಸುಮಾರು 10–15 ದಿನಗಳು ಬೇಕು. ಇದು ಮೊಟ್ಟೆಗಳನ್ನು ನೀರಿನ ಮೇಲಿಡುತ್ತದೆ. ಅವು ಒಂದಕ್ಕೊಂದು ಅಂಟಿಕೊಂಡು ದೋಣಿಯಾಕಾರದ ರಚನೆಯನ್ನು ತಳೆದು ನೀರಿನ ಮೇಲೆ ತೆಪ್ಪದ ಹಾಗೆ ತೇಲುತ್ತಿರುತ್ತವೆ. ಡಿಂಬಗಳ ದೇಹದ 8ನೆಯ ಖಂಡದಲ್ಲಿ ಒಂದು ಉದ್ದನೆಯ ಶ್ವಾಸನಾಳವಿದೆ. ಕ್ಯೂಲೆಕ್ಸ್ ಸೊಳ್ಳೆಗಳು ಆನೆಕಾಲುರೋಗವನ್ನು ಉಂಟು ಮಾಡುವ ಫೈಲೇರಿಯ ಹುಳುಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತವೆ. ಕೆಲವು ಪ್ರಭೇದಗಳು ಮಿದುಳಿನ ಅಂಗಾಂಶಗಳನ್ನು ಬಾಧಿಸುವ ಎನ್‌ಸೆಫಲೈಟಿಸ್ ಎಂಬ ರೋಗಕಾರಕ ವೈರಸ್ಸನ್ನು ಹರಡುತ್ತವೆ.



A: ಕ್ಯೂಲೆಕ್ಸ್ ಸೊಳ್ಳೆ, B: ಕುಳಿತಿರುವ ಭಂಗಿ

(ಎನ್.ಬಿ.ಕೆ.)

**ಕ್ಯೂ ಸಸ್ಯೋದ್ಯಾನ :** ಲಂಡನ್ ನಗರದ ರಾಯಲ್ ಬೊಟಾನಿಕಲ್ ಗಾರ್ಡನ್ನಿನ ಜನಪ್ರಿಯ ಹೆಸರು. ನಗರದ ನೈರುತ್ಯ ದಿಕ್ಕಿನಲ್ಲಿ ಥೇಮ್ಸ್ ನದಿಯ ದಡದ ಮೇಲಿದೆ. ಮೊದಲಿಗೆ ಒಂದು ರಾಜಮನೆತನದ ಜಹಗೀರಾಗಿ ಪ್ರಸಿದ್ಧವಾಗಿತ್ತು. ಅಲ್ಲಿದ್ದ ಕ್ಯೂ ಅರಮನೆಯಿಂದ ಇದಕ್ಕೆ ಈ ಹೆಸರು ಬಂದಿದೆ. 16ನೆಯ ಶತಮಾನದ ಕೊನೆಯಲ್ಲಿ ಲಾರ್ಡ್ ಕೇಪೆಲ್ ಎಂಬಾತನ ಆಸಕ್ತಿಯಿಂದ ವಿವಿಧ ಜಾತಿಯ ಸಸ್ಯಗಳ ಸಂಗ್ರಹದೊಡನೆ ಇದು ಆರಂಭವಾಯಿತು. 1759ರ ವೇಳೆಗೆ ಅರ್ಲ್ ಆಫ್ ಬೂತ್ ಎಂಬಾತನ ವೈಜ್ಞಾನಿಕ ಸಾಧನ ಸಹಾಯಗಳಿಂದ ಪ್ರಿನ್ಸೆಸ್ ಅಗಸ್ಟಾ ಎಂಬಾಕೆ ಸುಮಾರು 4 ಹೆಕ್ಟೇರ್ ಪ್ರದೇಶಕ್ಕೆ ವ್ಯಾಪಿಸಿದಂತೆ ಸಸ್ಯೋದ್ಯಾನವನ್ನು ನೆಲೆಯಾರಿಸಿದಳು. ಕ್ರಮೇಣ ಅದರ ಸುತ್ತಮುತ್ತ ಇದ್ದ ಇನ್ನಷ್ಟು ಜಾಗವನ್ನು ವಶಪಡಿಸಿಕೊಳ್ಳಲಾಯಿತು. 19ನೆಯ ಶತಮಾನದ ಅಂತ್ಯದ ವೇಳೆಗೆ ಅದು 117 ಹೆಕ್ಟೇರ್‌ಗಳಷ್ಟು ಪ್ರದೇಶಕ್ಕೆ ವ್ಯಾಪಿಸಿತು. ಅನಂತರ ಸರ್ ವಿಲಿಯಂ ಚೇಂಬರ್ಸ್ ಎಂಬಾತ ಅಲ್ಲಿ ಒಂದು ಅತ್ಯುತ್ತಮ ಜಾರ್ಜಿಯ ಮಾದರಿಯ ಕಿತ್ತಳೆಹಣ್ಣಿನ ತೋಟವೊಂದನ್ನು ಬೆಳೆಸಿದ. ಅಷ್ಟೇ ಅಲ್ಲದೆ 163' ಎತ್ತರವಿರುವ ಚೀನೀ ಮಾದರಿಯ ಪಗೋಡದಂಥ ಕಟ್ಟಡವೊಂದನ್ನು ಅಲ್ಲಿ ಕಟ್ಟಿಸಿದ. ಅದು ಈಗ ಉದ್ಯಾನದ ಒಂದು ಪ್ರಮುಖ ಹಾಗೂ ವಿಶಿಷ್ಟ ಹೆಗ್ಗುರುತಾಗಿ ನಿಂತಿದೆ. ಮುಂದೆ ಮೂರನೆಯ ಜಾರ್ಜ್ ದೊರೆ ಸರ್ ಜೋಸೆಫ್ ಬ್ಯಾಂಕ್ಸ್ ಎಂಬಾತನ ಸಹಾಯ ಮತ್ತು ಮಾರ್ಗದರ್ಶನದಲ್ಲಿ ಉದ್ಯಾನವನ್ನು ಮತ್ತಷ್ಟು ವ್ಯವಸ್ಥಿತವಾಗಿ ಬೆಳೆಸಿ, ಊರ್ಜಿತಗೊಳಿಸಿದ. ಸರ್ ಜೋಸೆಫ್ ಬ್ಯಾಂಕ್ಸ್ ಸುಮಾರು 47 ವರ್ಷಗಳ ತನಕ ಒಂದು ರೀತಿಯಲ್ಲಿ ಇದರ ಮೇಲ್ವಿಚಾರಕನೂ ನಿರ್ದೇಶಕ ನಿಯಂತ್ರಕನೂ ಆಗಿದ್ದ. ಇದುವರೆಗೆ ಖಾಸಗಿ ಒಡೆತನದಲ್ಲಿದ್ದ ಈ ಉದ್ಯಾನ 1841ರಲ್ಲಿ ರಾಷ್ಟ್ರದ ಸ್ವತ್ತಾಯಿತು. ಆಗ ಸರ್ ವಿಲಿಯಂ ಹುಕರ್ ಎಂಬಾತ ಅದರ ಮೊದಲ ಸರ್ಕಾರಿ ಅಧಿಕಾರಿ ಮತ್ತು ನಿರ್ದೇಶಕ ಆಗಿ ನೇಮಕವಾದ. ಬರಬರುತ್ತ ಇದು ಪ್ರಪಂಚದ ಒಂದು ಮಹತ್ತ್ವದ ಹಾಗೂ ಪ್ರಾಮುಖ್ಯವಾದ ಸಸ್ಯೋದ್ಯಾನ ಸಂಸ್ಥೆಯಾಗಿ ಪರಿಣಮಿಸಿತು. ಹೀಗಾಗಿ 1960ರ ವೇಳೆಗೆ ಪ್ರಪಂಚದ ನಾನಾ ಭಾಗಗಳಿಂದ ಸಂಗ್ರಹಿಸಿದ 60,00,000ಕ್ಕೂ ಹೆಚ್ಚು ಅಪೂರ್ವವಾದ ಹಾಗೂ ವಿವಿಧ ಜಾತಿಯ ಸಸ್ಯಗಳನ್ನು ಹರ್ಬೇರಿಯಮ್ ಹಾಳೆಗಳ ಮೇಲೆ ಅಂಟಿಸಿ ಅವುಗಳ ಪ್ರಮುಖ ಮಾಹಿತಿಗಳನ್ನೆಲ್ಲ ಕಲೆಹಾಕಲಾಯಿತು. ಹೊಸ ಹಾಗೂ ಅಪರಿಚಿತ ಸಸ್ಯಗಳೊಂದಿಗೆ ಹೋಲಿಸಿ ನೋಡಲು ಅನುಕೂಲವಾಗುವಂತೆ ಇವನ್ನು ವ್ಯವಸ್ಥಿತ ಹಾಗೂ ವೈಜ್ಞಾನಿಕ ರೀತಿಯಲ್ಲಿ ಸುರಕ್ಷಿತವಾಗಿರಿಸಿದ್ದಾರೆ. ಮೇಲಾಗಿ, ಇಲ್ಲಿ 55 ಸಾವಿರಕ್ಕೂ ಹೆಚ್ಚು. ವಿಶೇಷ ಮಾಹಿತಿಗಳುಳ್ಳ ಮತ್ತು ಸಸ್ಯವಿಜ್ಞಾನದ

ವಿವಿಧ ಶಾಖೆಗಳಿಗೆ ಸಂಬಂಧಿಸಿದ ಒಂದು ದೊಡ್ಡ ಪುಸ್ತಕಾಲಯವನ್ನು ನಿರ್ಮಿಸಿದ್ದಾರೆ. ಅಲ್ಲಿ ಮೂರು ದೊಡ್ಡ ವಸ್ತುಪ್ರದರ್ಶನಾಲಯಗಳೂ ಇದ್ದು ಇವನ್ನು ವಿಶೇಷವಾಗಿ ಆರ್ಥಿಕ ಮಹತ್ತ್ವದ ಸಸ್ಯ ಮತ್ತು ಸಸ್ಯೋತ್ಪನ್ನಗಳಿಗೆ ಮೀಸಲಿರಿಸಿದ್ದಾರೆ.



ಪಗೋಡದ ಸಮೀಪ ನೋಟ

ಪ್ರದರ್ಶನಾಲಯಕ್ಕೆ ಸಂಬಂಧಿಸಿದಂತೆ ಒಂದು ದೊಡ್ಡ ಪ್ರಯೋಗಾಲಯವೂ ಇದೆ. ಈ ಪ್ರಯೋಗಾಲಯದಲ್ಲಿ ಸಸ್ಯಕೋಶ ಮತ್ತು ತಳಿಸಂಬಂಧದ ಪರಿಶೋಧನೆಗಳ ಜೊತೆಗೆ, ಸಸ್ಯಗಳ ಪ್ರಮುಖ ರಚನಾ ವೈವಿಧ್ಯಗಳನ್ನೂ ಅದಕ್ಕಿಂತಲೂ ಹೆಚ್ಚಾಗಿ ಸಸ್ಯಗಳ ವರ್ಗೀಕರಣದ ಬಗೆಗೂ ವಿಶೇಷ ಅಧ್ಯಯನ ಮತ್ತು ಸಂಶೋಧನೆಗಳನ್ನೂ ವಿಖ್ಯಾತ ಪರಿಣತರ ಸಹಾಯದಿಂದ ನಡೆಸುತ್ತಾರೆ. ವಿವಿಧ ವರ್ಗಗಳ ಸಜೀವ ಮಾದರಿಸಸ್ಯಗಳ ಸಂಗ್ರಹ ಸುಮಾರು 40ಸಾವಿರಕ್ಕೂ ಮಿಕ್ಕಿದೆ. ಅಲ್ಲಿರುವ ಹಲವಾರು ವಿಶಿಷ್ಟ ತಂಪುಮನೆಗಳು, ಅಂದರೆ ಕೋಮಲ ಸಸ್ಯಗಳನ್ನು ಬೆಳೆಸುವ ಗಾಜಿನ ಮನೆಗಳು, ಹೆಚ್ಚು ದಾರ್ಢ್ಯವಿಲ್ಲದ ಮತ್ತು ತಂಪು ಪ್ರದೇಶದಲ್ಲಿಯೇ ಬೆಳೆಯುವ ಸಸ್ಯಗಳಿಗೆ ಆಶ್ರಯ ನೀಡಿವೆ. ಇವುಗಳ ಪೈಕಿ ಅತ್ಯಂತ ದೊಡ್ಡದಾದ ಒಂದು ಗಾಜಿನ ಮನೆಗೆ ಸಮಶೀತೋಷ್ಣ ಗೃಹ ಎಂದು ಹೆಸರು. ಇದು ಸುಮಾರು 2 ಕಿಮೀ ಉದ್ದ ಇದೆ. ಮತ್ತೊಂದು ಗಾಜಿನ ಮನೆಗೆ ಪಾಮ್ ಹೌಸ್ ಎಂದು ಹೆಸರಿಡಲಾಗಿದೆ. ಇದನ್ನು 1848ರಲ್ಲಿಯೇ ನಿರ್ಮಿಸಲಾಯಿತು. ಇವೆರಡೂ ಗಾಜಿನ ಮನೆಗಳು ಡೆಸಿಮಸ್ ಬರ್ಟನ್ ಎಂಬಾತನಿಂದ ನಿಯೋಜಿಸಲ್ಪಟ್ಟವು. ಪಾಮ್ ಹೌಸ್‌ನಲ್ಲಿ ಪ್ರಪಂಚದ ನಾನಾ ಭಾಗಗಳಲ್ಲಿ ಬೆಳೆಯುವ ತೆಂಗಿನ ಜಾತಿಯ ಗಿಡಗಳನ್ನೂ ವೃಕ್ಷರೂಪದ ಫರ್ನ್ ಗಿಡಗಳನ್ನೂ ಮತ್ತು ಸೈಕಾಸ್ ಜಾತಿಯ ಗಿಡಗಳನ್ನೂ ಬೆಳೆಸಲಾಗಿದೆ. ಇನ್ನು ಕೆಲವು ತಂಪುಗೃಹಗಳಲ್ಲಿ ಉಷ್ಣವಲಯದ ಆರ್ಕಿಡ್ ಸಸ್ಯಗಳು, ಮೃದು ಹಾಗೂ ರಸಭರಿತ ಗಿಡಗಳು ಮತ್ತು ಫರ್ನ್ ಗಿಡಗಳನ್ನು ಬೆಳೆಸಲಾಗಿದೆ. ಅತ್ಯುತ್ತಮ ಹಾಗೂ ಬೃಹತ್ ಸಂಗ್ರಹಕ್ಕೆ ಇದು ಮಾದರಿ ನಿದರ್ಶನವಾಗಿದೆ. ಮತ್ತೊಂದು ಗೃಹವನ್ನು (ಆಸ್ಟ್ರೇಲಿಯನ್ ಹೌಸ್) ಅಲ್ಯುಮಿನಿಯಮ್ ಅಲಾಯ್ ಲೋಹದಿಂದ 1952ರಲ್ಲಿ ರಚಿಸಲಾಯಿತು. ಅಲ್ಲಿ, ಆಸ್ಟ್ರೇಲಿಯ ದೇಶದ ಸಸ್ಯಗಳನ್ನೆಲ್ಲ ಬೆಳೆಸಲಾಗುತ್ತಿದೆ. ಕ್ಯೂ ಉದ್ಯಾನದಲ್ಲಿ ರಬ್ಬರ್ ಪ್ಲಾಂಟೇಷನ್ ಉದ್ದಿಮೆಯನ್ನೂ ಸ್ಥಾಪಿಸಲಾಗಿದೆ. ಅಲ್ಲದೆ ಅನೇಕ ಹೊಸ ಹೊಸ ಜಾತಿಯ ಸಸ್ಯಗಳನ್ನು ಪ್ರಪಂಚದ ನಾನಾ ಭಾಗಗಳಿಂದ ತರಿಸಿ, ಬೆಳೆಸಿ, ವಿತರಣೆ ಮಾಡುವ ಮಹತ್ತ್ವದ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಅಂತೆಯೇ ಪರದೇಶಗಳಿಂದ ಇಂಗ್ಲೆಂಡಿಗೆ ಬರುವ ಫಲ, ಬೀಜ, ಸಸ್ಯಗಳಿಗೆಲ್ಲ ಔಷಧ ಸಿಂಪಡಿಸಿ ಇವು ರೋಗವಿಮುಕ್ತವಾಗಿರುವಂತೆ ಹಾಗೂ ಇವು ರೋಗಪ್ರಸಾರ ಸಾಧನವಾಗದಂತೆ ಎಲ್ಲ ಎಚ್ಚರಿಕೆಗಳನ್ನು ವಹಿಸಲಾಗುತ್ತಿದೆ. ಅಲ್ಲಿಂದ ಪ್ರಕಟವಾಗುವ ಬರೆಹಗಳು ಮತ್ತು ಪುಸ್ತಕಗಳೆಲ್ಲ ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿರುವ ಎಲ್ಲ ಸಸ್ಯಗಳ ಮೂಲ ಮಾಹಿತಿಗಳನ್ನು ಒಳಗೊಳ್ಳುತ್ತವೆ. ಅದಕ್ಕಾಗಿ ಕ್ಯೂ ಬುಲೆಟಿನ್ಸ್ ಎಂಬ ನಿಯತಕಾಲಿಕಗಳೂ ಇಂಡೆಕ್ಸ್ ಕ್ಯೂವೆನ್ಸಿಸ್ ಎಂಬ ಹೆಸರಿನ ಆಧಾರ ಗ್ರಂಥಗಳೂ ಅನುಕ್ರಮಣಿಕೆಗಳೂ ಕಾಲಕಾಲಕ್ಕೆ ಸಿದ್ಧವಾಗಿ ಪ್ರಕಟಗೊಳ್ಳುತ್ತವೆ. ಇವುಗಳಲ್ಲಿ ಹೊಸ ವಿಷಯಗಳನ್ನು ಕೂಡಿಸಬೇಕಾದಾಗ

ಸಮಶೀತೋಷ್ಣ ಗೃಹ

ಮತ್ತು ಇದ್ದ ಮಾಹಿತಿಗಳನ್ನು ಮಾರ್ಪಡಿಸಿ ಪುನಾರಚಿಸುವ ಆವಶ್ಯಕತೆ ಒದಗಿದಾಗ ಹೊಸ ಹೊಸ ಪರಿಶಿಷ್ಟ-ಪುರವಣಿಗಳನ್ನು ಹೊರಡಿಸಲಾಗುತ್ತದೆ. ಒಟ್ಟಿನಲ್ಲಿ ಕ್ಯೂ ಸಸ್ಯೋದ್ಯಾನ ಪ್ರಪಂಚದಲ್ಲೇ ಒಂದು ದೀರ್ಘ ಐತಿಹಾಸಿಕ ಹಿನ್ನೆಲೆಯುಳ್ಳ ಹಾಗೂ ಅದ್ವಿತೀಯವಾದ ಬೃಹತ್ ಸಸ್ಯೋದ್ಯಾನ ಸಂಸ್ಥೆಯೆನ್ನಬಹುದು. (ಎಂ.ಎಸ್.ಎಸ್.ಆರ್.)

**ಕ್ಯೂ ಸಿದ್ಧಾಂತ :** ಕ್ಯೂಗಳ (ಕಾಯುತ್ತಿರುವ ಸಾಲುಗಳ) ರೂಪಣ ಹಾಗೂ ವರ್ತನವನ್ನು ಕುರಿತ ಗಣಿತಾಭ್ಯಾಸ. ಸಾಮಾನ್ಯವಾಗಿ ಜನ ಸರ್ಕಾರೀ ಕಛೇರಿಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ವೈದ್ಯರ ದವಾಖಾನೆಗಳಲ್ಲಿ, ಹಸುಗೆ ಅಂಗಡಿಗಳಲ್ಲಿ ಮುಂತಾಗಿ ತಮ್ಮ ಪಾಲಿನ ಸೇವೆ ಪಡೆಯಲು ಸಾಲಾಗಿ ನಿಂತಿರುವುದು ವಾಡಿಕೆ. ಇಂಥ ಸಾಲಿಗೆ ಕ್ಯೂ ಎಂದು ಹೆಸರು. ಇಲ್ಲಿಯ ಅಮೂರ್ತ ಸಮಸ್ಯೆಯನ್ನು ಮಾತ್ರ ಪರಿಗಣಿಸಬೇಕು. ದೂರವಾಣಿ ಕೇಂದ್ರದಲ್ಲಿಯ ದೂರಕರೆಗಳು, ಅಚ್ಚು ಯಂತ್ರದ ಮುಂದೆ ಕಾಯುತ್ತಿರುವ ಕಬ್ಬಿಣದ ಬಿಲ್ಲೆಗಳು, ರಸ್ತೆ ಸಂಧಿಗಳಲ್ಲಿ ಹಸಿರು ದೀಪದ ಸಂಕೇತಕ್ಕಾಗಿ ಕಾಯುತ್ತಿರುವ ವಾಹನಗಳು ಇವೇ ಮುಂತಾದವುಗಳಲ್ಲಿ ತಲೆದೋರುವ ಸಮಸ್ಯೆಯೂ ಮೂಲಭೂತವಾಗಿ ಕ್ಯೂ ಸಮಸ್ಯೆಯೇ ಎಂದು ಆಗ ವಿದಿತವಾಗುವುದು.

ಕ್ಯೂಗಳ ಬಗ್ಗೆ ಮೊತ್ತ ಮೊದಲು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದವನು ಕೋಪೆನ್ ಹೇಗೆನ್ ಟೆಲಿಫೋನ್ ಕಂಪನಿಯ ಎ.ಕೆ. ಎರ್ಲಾಂಗ್ ಎಂಬಾತ. ದೂರವಾಣಿ ವಿನಿಮಯಕೇಂದ್ರದಲ್ಲಿ ಉಂಟಾಗುವ ಕರೆಗಳ ನಷ್ಟ, ಜನರಿಗೆ ಅದರಿಂದ ಆಗುವ ಆತಂಕ ಇವೇ ಮುಂತಾದ ತೊಂದರೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಅವನು ಈ ಸಮಸ್ಯೆಗಳನ್ನು ಶಾಸ್ತ್ರೀಯವಾಗಿ ಪರಿಶೀಲಿಸಲು ತೊಡಗಿದ(1908). ವಿನಿಮಯ ಕೇಂದ್ರದಲ್ಲಿ ಒಂದು ಕ್ಷಣದಲ್ಲಿ ಎಷ್ಟು ತಂತಿಗಳು ಕೆಲಸ ಮಾಡುತ್ತವೆ, ಎಷ್ಟು ಕರೆಗಳು ಕಾದುನಿಂತಿರುತ್ತವೆ ಇತ್ಯಾದಿಗಳನ್ನು ಅವನು ವಿಶ್ಲೇಷಿಸಬೇಕಾಯಿತು. ಅಂದು ಎರ್ಲಾಂಗ್ ಅಭ್ಯಸಿಸಿದ ವಿಷಯವೇ ಮುಂದೆ ಕ್ಯೂ ಸಿದ್ಧಾಂತವಾಗಿ ಪ್ರವರ್ಧಿಸಿತು. ಹೀಗೆ ಐತಿಹಾಸಿಕ ದೃಷ್ಟಿಯಿಂದ ಮೊತ್ತ ಮೊದಲು ಕ್ಯೂ ಸಿದ್ಧಾಂತದ ಆರಂಭವನ್ನು ದೂರವಾಣಿ ಕೇಂದ್ರದ ವಿವಿಧ ಸಮಸ್ಯೆಗಳ ಪರಿಹಾರದಲ್ಲಿ ಕಾಣಬಹುದು. ಕ್ಯೂ ಸಿದ್ಧಾಂತವನ್ನು ದೂರವಾಣಿ ಕೇಂದ್ರದ ವಿವಿಧ ಸಮಸ್ಯೆಗಳ ಪರಿಹಾರದಲ್ಲಿ ಕಾಣಬಹುದು. ಕ್ಯೂ ಸಿದ್ಧಾಂತವನ್ನು ದೂರವಾಣಿಗೆ ಸಂಬಂಧಪಟ್ಟ ವಿಷಯಗಳ ಚರ್ಚೆಗೆ ಅಳವಡಿಸುವಾಗ ಅದನ್ನು ಇರುಕು ಸಿದ್ಧಾಂತ (ಕಂಜೆಶನ್ ಥಿಯೊರಿ) ಎಂದು ಕರೆಯುತ್ತಾರೆ. ಎರ್ಲಾಂಗ್ ಆರಂಭಿಸಿದ ಕ್ಯೂ ಸಿದ್ಧಾಂತವನ್ನು ಮುಂದೆ ರಷ್ಯದ ಖಿಂಚಿನ್, ಫ್ರಾನ್ಸಿನ ಪೊಲ್ಲಾಚೆಕ್ ಮತ್ತು ಇಂಗ್ಲೆಂಡಿನ ಕೆಂಡಲ್ ವಿಸ್ತರಿಸಿ ಅದನ್ನು ಒಂದು ಭದ್ರ ತಳಹದಿಯ ಮೇಲೆ ಸ್ಥಾಪಿಸಿದ್ದಾರೆ.

**ಕ್ಯೂನಲ್ಲಿ ಮೂರು ಮುಖ್ಯ ಘಟಕಗಳಿವೆ:** 1 ಜನ ಅಥವಾ ವಸ್ತುಗಳು ಕ್ಯೂವನ್ನು ಸೇರುವ ಕ್ರಮ. ಜನರ ಸಂಖ್ಯೆ. ಒಂದು ದೂರವಾಣಿ ಕೇಂದ್ರಕ್ಕೆ ಬರುವ ಕರೆಗಳ ಸಂಖ್ಯೆಯಂತೆ, ಪರಿಮಿತವಿರಬಹುದು ಅಥವಾ ಅಪರಿಮಿತವಿರಬಹುದು. ವೈದ್ಯರಲ್ಲಿಗೆ ಗಮಿಸುವಂತೆ ಒಬ್ಬೊಬ್ಬರಾಗಿ ಬರಬಹುದು ಅಥವಾ ಸಿನಿಮಾಕ್ಕೆ ಹೋಗುವಂತೆ ಗುಂಪುಗಳಲ್ಲಿ ಬರಬಹುದು. ಮೊದಲೇ ಗೊತ್ತುಮಾಡಿದ ವೇಳೆಯಲ್ಲಿ ಜನ ಬರಬಹುದು; ಅಥವಾ ಇಬ್ಬರು ಕ್ಯೂ ಸೇರುವ ಕಾಲಗಳ ಅಂತರ ಸಂಭವಚರವಾಗಿರಬಹುದು. ಕ್ಯೂ ನಿಲ್ಲುವ ಜಾಗ ಪರಿಮಿತವಿರಬಹುದು. ಅಥವಾ ಅಪರಿಮಿತವಿರಬಹುದು. ಕ್ಯೂನ ಉದ್ದವನ್ನು ನೋಡಿ ಕೆಲವರು ಅದನ್ನು ಸೇರಲು ಅಥವಾ ಸೇರದಿರಲು ನಿರ್ಧರಿಸಬಹುದು.

2 ಕ್ಯೂನಲ್ಲಿರುವವರು ಅನುಸರಿಸುವ ಶಿಸ್ತು ಅಥವಾ ಕ್ಯೂಶಿಸ್ತು. ದೂರವಾಣಿ ವಿನಿಮಯ ಕೇಂದ್ರವನ್ನು ಕೂಡಲೇ ಮಾತನಾಡಲು ಬಾರದೆ ಇದ್ದ ಕರೆಗಳ ಪರಿಸ್ಥಿತಿ ಮತ್ತು ಕೇಂದ್ರವನ್ನು ನಿರ್ಮಿಸಿದ ವಿಧಾನಗಳಲ್ಲಿ ಕ್ಯೂಶಿಸ್ತು ಅಡಕವಾಗಿದೆ. ಹೆಚ್ಚಾಗಿ, ಕ್ಯೂನಲ್ಲಿ ಮೊದಲು ಸೇರಿದವನಿಗೆ ಮೊದಲು ಸೇವೆ ಸಲ್ಲಿಸಲಾಗುವುದು. ಆದರೆ ಕರೆಗಳು ಸಾದಾ (ಆರ್ಡಿನರಿ) ಮತ್ತು ತುರ್ತು (ಅರ್ಜೆಂಟ್) ಎಂಬುದಾಗಿರುವ ಎರಡು ವಿಭಾಗಗಳಲ್ಲಿ ಒಂದನ್ನು ಸೇರುವುವು. ಒಂದರಿಂದ ಹೆಚ್ಚು ಖಾನಿಗಳಿರುವ (ಕೌಂಟರ್ಸ್) ಬ್ಯಾಂಕಿನಲ್ಲಿ ಜನ ಯಾವುದಾದರೂ ಒಂದು ಕ್ಯೂವನ್ನು ಸೇರಬಹುದು. ಕೆಲವರು ಕ್ಯೂ ಸೇರಿದ ಮೇಲೆಯೂ ತಾಳ್ಮೆ ಇಲ್ಲದ ಸ್ವಲ್ಪ ಸಮಯದ ಮೇಲೆ ಕ್ಯೂ ಬಿಟ್ಟು ಹೋಗಬಹುದು.

3 ಜನರ ಸೇವಾ ವಿಧಾನ. ಜನರ ಅಥವಾ ವಸ್ತುಗಳ ಸೇವೆಗೆ ತಗಲುವ ವೇಳೆ ನಿರ್ದಿಷ್ಟವಾಗಿರಬಹುದು. ಇಲ್ಲವೆ ಸಂಭವಚರವಾಗಿರಬಹುದು. ಒಬ್ಬ ಇಲ್ಲವೆ ಅನೇಕರು ಒಂದೇ ರೀತಿಯ ಸೇವೆಯನ್ನು ನೀಡಬಹುದು. ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಸೇವೆ ಸಲ್ಲಬಹುದು.

ಈ ಘಟಕಗಳು ವ್ಯತ್ಯಾಸವಾದಂತೆ ನಮಗೆ ಬೇರೆಬೇರೆ ನಮೂನೆಯ ಕ್ಯೂಗಳು ಸಿಕ್ಕುವುವು. ಸನ್ನಿವೇಶಕ್ಕೆ ಸರಿಯಾಗಿ ಕ್ಯೂ ಮಾದರಿಯನ್ನು ಕಲ್ಪಿಸಿಕೊಂಡು, ಅದನ್ನು ಗಣಿತ ಮತ್ತು ಸಂಭವರೀತ್ಯ ವಿಶ್ಲೇಷಿಸಿ ಅನುದಿನದ ಜೀವನಕ್ಕೆ ಉಪಯೋಗಿಸುವುದೇ ಕ್ಯೂ ಸಿದ್ಧಾಂತದ ಗುರಿ. ದೂರವಾಣಿಯ ಉದಾಹರಣೆಯನ್ನಿತ್ತು ವಿವರಿಸುವುದಾದರೆ ಎಷ್ಟೋ ಸಲ ಒಂದು ಕರೆಗೆ ಕೂಡಲೇ ಉತ್ತರ ಸಿಕ್ಕದಿದ್ದಲ್ಲಿ ಅಥವಾ ಸ್ವಲ್ಪ ಹೊತ್ತು ಕಾದ ಮೇಲೂ ಉತ್ತರ ಸಿಕ್ಕದಿದ್ದಲ್ಲಿ ಅದು ನಷ್ಟವಾಗಿ ಹೋಗುವುದು. ಹೀಗೆ ಆಗುವ ನಷ್ಟವನ್ನು ಕಡಿಮೆ ಮಾಡುವುದು ನಮ್ಮ ಉದ್ದೇಶ. ದೂರಕರೆಗಳ ಉತ್ತರಕ್ಕಾಗಿ ಕಾಯುವ ವೇಳೆಯನ್ನು ಸಹ ಕಡಿಮೆ ಮಾಡುವಂತೆ ದೂರವಾಣಿವಿನಿಮಯ ಕೇಂದ್ರವನ್ನು ರೂಪಿಸಲು ಸಾಧ್ಯವಾಗುವುದು. ಎಷ್ಟು ತಂತಿಯ ಕೇಂದ್ರವನ್ನು ಸ್ಥಾಪಿಸಬೇಕು, ಯಾವರೀತಿಯ ಜೋಡಣೆ ಪದ್ಧತಿಯನ್ನು (ಟ್ರಂಕಿಂಗ್ ಸ್ಕೀಂ) ಅನುಸರಿಸಬೇಕು ಇವನ್ನು ನಿರ್ಧರಿಸಲು ಕ್ಯೂ ಸಿದ್ಧಾಂತದಿಂದ ಸಾಧ್ಯವಾಗುವುದು. ಅಂತೆಯೇ ಒಂದು ಬ್ಯಾಂಕಿನಲ್ಲಿ ನೌಕರರೆಷ್ಟು ಜನ ಕೆಲಸ ಮಾಡಬೇಕು, ಯಂತ್ರ ಎಷ್ಟು ವೇಗದಿಂದ ಚಲಿಸಬೇಕು, ಕ್ಯೂ ಎಷ್ಟು ಉದ್ದವಾದರೆ ಎಷ್ಟು ವಿಶೇಷ ಬಸ್ಸನ್ನು ಬಿಡಬೇಕು ಇತ್ಯಾದಿ ವಿಷಯಗಳ ಬಗ್ಗೆ ಶಾಸ್ತ್ರೀಯರೀತ್ಯ ಒಂದು ನಿರ್ಧಾರ ಕೈಗೊಳ್ಳಲು ಕ್ಯೂ ಸಿದ್ಧಾಂತದ ಉಪಯೋಗ ಮಾಡಿಕೊಳ್ಳಬಹುದು.

ಒಂದು ಕ್ಯೂವನ್ನು ಈ ರೀತಿ ವಿವರಿಸಬಹುದು. $t_0 = 0,\ t_1,\ t_2$ .........ಇವು ಜನ ಕ್ಯೂವನ್ನು ಸೇರುವ ಕ್ಷಣಗಳಾಗಿರಲಿ. ಕ್ಯೂ ಸೇರಲಿರುವ ಜನರ ಸಂಖ್ಯೆ ಅನಂತವಾಗಿರಲಿ. ಅವರು ಒಬ್ಬೊಬ್ಬರಾಗಿ ಕ್ಯೂ ಸೇರಲಿ. $v_r = t_r - t_{r-1},\ r = 1, 2,$ ........ಇವು ಸ್ವತಂತ್ರ ಸಂಭವಚರಗಳಾಗಿರಲಿ, ಇವೆಲ್ಲವುಗಳ ಸಂಭಾವ್ಯತಾ ವಿತರಣೆಯೂ ಒಂದೇ ಆಗಿದ್ದು $v \leq u$ ನ ಸಂಭಾವ್ಯತೆ $A(u),\ 0 \leq u \leq \infty$ ಆಗಿರಲಿ. ಎಷ್ಟೋ ಸನ್ನಿವೇಶಗಳಲ್ಲಿ ಈ ಮೇಲಿನ ಊಹೆಗಳಲ್ಲಿ ಕೆಲವು ತಪ್ಪಾಗಿರಬಹುದು. ದೂರವಾಣಿಕೇಂದ್ರದಲ್ಲಿ ಹಗಲಿನಷ್ಟು ಕರೆಗಳು ರಾತ್ರಿ ಬರುವುದಿಲ್ಲ. ರಸ್ತೆಯಲ್ಲಿ ಸಾಯಂಕಾಲದಷ್ಟು ವಾಹನಗಳು ರಾತ್ರಿ ಇಲ್ಲವೆ ಬೆಳಗ್ಗೆ ಸಂಚರಿಸುವುದಿಲ್ಲ.

ಹೆಚ್ಚಾಗಿ ಜನ ಕ್ಯೂವನ್ನು ಸೇರುವ ವೇಳೆಯ ಅಂತರಗಳ ವಿತರಣೆಗಳನ್ನು ಈ ಕೆಳಗಿನವುಗಳಲ್ಲಿ ಒಂದನ್ನಾಗಿ ಊಹಿಸುತ್ತಾರೆ.

**1 ಡಿ ವಿಧಾಯಕ (ಡಿಟರ್ಮಿನಿಸ್ಟಿಕ್):** ಇಲ್ಲಿ ವೇಳೆಯ ಅಂತರ ಒಂದು ನಿಶ್ಚಿತವಾಗಿರುವುದು.

ಉದಾಹರಣೆಗೆ $A(u) = 0,\ u < a$

$= 1,\ u \geq a$

**2 ಮಾರ್ಕಾಫಿಯನ್:** ಇಲ್ಲಿ ಪೋಸೋನ್ ಪ್ರಕ್ರಿಯೆಯಂತೆ (ಪ್ರೋಸೆಸ್) ಕ್ಯೂವನ್ನು ಸೇರುವರೆಂದು ಊಹಿಸಲಾಗಿದೆ. ಎರಡು ಜನ ಕ್ಯೂ ಸೇರುವ ವೇಳೆಯ ಅಂತರದ ಸಂಭಾವ್ಯತಾ ವಿತರಣೆ

$A(u) = 1 - e^{-\lambda u},\ u \geq 0$

$= 0 \qquad ,\ u < 0$

ಆಗಿರುವುದು. ಈ ಋಣ ಈ ಋಣಘಾತ ಸಂಭಾವ್ಯತಾ ವಿತರಣೆಯ (ನೆಗೆಟಿವ್ ಎಕ್ಸ್‌ಪೊನೆನ್ಷಿಯಲ್ ಡಿಸ್ಟ್ರಿಬ್ಯೂಷನ್) ಮುಖ್ಯ ಗುಣವೆಂದರೆ (a, b) ಕಾಲದ ಅಂತರದಲ್ಲಿ ಎಷ್ಟೇ ಜನ ಬಂದು ಸೇರಿದ್ದರೂ ಯಾವಾಗ ಬಂದು ಸೇರಿದ್ದರೂ ಅದು (b, c) ಅಂತರದಲ್ಲಿ ಬಂದುಸೇರುವ ಜನರ ಸಂಭಾವ್ಯತೆಯ ಮೇಲೆ ಪರಿಣಾಮ ಮಾಡುವುದಿಲ್ಲ. t ಅಂತರದ ವೇಳೆಯಲ್ಲಿ n ಜನ ಬಂದು ಕ್ಯೂವನ್ನು ಸೇರುವ ಸಂಭಾವ್ಯತೆ $e^{-\lambda t}(\lambda t)^n/n!$ ಆಗಿರುವುದು.

**3 $E_k$ ಎರ್ಲಾಂಗಿಯನ್:** ಇಲ್ಲಿ ಜನ ಬಂದು ಸೇರುವ ವೇಳೆಯ ಅಂತರ ಈ ಕೆಳಗಿನ ಸಂಭಾವ್ಯತಾ ಸಾಂದ್ರತೆಯನ್ನು ಹೊಂದಿದೆ:

$$dA(u) = \frac{(\lambda^k)^k}{(k-1)!} e^{-\lambda k u} \quad u^{k-1} du, 0 < u < \infty$$

ಇಲ್ಲಿ k ಒಂದು ಧನಪೂರ್ಣಾಂಕ.

**4 *GI* ಸಾರ್ವತ್ರಿಕ ಸ್ವತಂತ್ರ (ಜನರಲ್ ಇಂಡಿಪೆಂಡೆಂಟ್):** ಇಲ್ಲಿ ಜನ ಬರುವ ವೇಳೆಯ ಅಂತರದ ವಿತರಣೆ ಸ್ವತಂತ್ರವಾಗಿರಬೇಕು. ಆದರೆ ಅದು ಯಾವುದೇ ಇರಬಹುದು. ಇವಲ್ಲದೆ ಬೇರೆ ಅನೇಕ ವಿತರಣೆಗಳನ್ನೂ ಜನ ಕ್ಯೂ ಸೇರುವ ಕಾಲದ ಅಂತರದ ವಿತರಣೆಗಳೆಂದು ಊಹಿಸಿ ಅಭ್ಯಾಸ ಮಾಡಿರುವರು.

ಕ್ಯೂನಲ್ಲಿರುವವನೊಬ್ಬನ ಸೇವೆಗೆ ತಗಲುವ ವೇಳೆ ಸಂಭವಚರ. ಅದರ ವಿತರಣೆಯೂ ಮೇಲ್ಕಾಣಿಸಿದವುಗಳಲ್ಲಿ ಯಾವುದಾದರೊಂದು ಆಗಿರಬಹುದು. ಈ ಚರಗಳ ವೈಶಿಷ್ಟ್ಯವೆಂದರೆ ಅವು ಎಂದೂ ಋಣಬೆಲೆ ಪಡೆಯುವುದಿಲ್ಲ. ಈ ಸಂಭವ ಚರದ ವಿತರಣೆ *B(v)* ಆಗಿರಲಿ. uನ ಸರಾಸರಿ $\alpha$ ಆಗಿರಲಿ; ಮತ್ತು vಯ ಸರಾಸರಿ b ಆಗಿರಲಿ. ಕ್ಯೂ ಶಿಸ್ತು ಮೊದಲು ಬಂದವರಿಗೆ ಮೊದಲು ಸೇವೆ ಎಂದಿರಲಿ. ಸೇವೆ ಸಲ್ಲಿಸಲು ಓರ್ವ ಸೇವಕ ಇದ್ದರೆ $p=b/\alpha$ ಜನರ ಆಗಮನದ ಸಾಪೇಕ್ಷ ತೀವ್ರತೆಯನ್ನು ಸೂಚಿಸುವುದು. s ಜನ ಸೇವೆ ಸಲ್ಲಿಸುತ್ತಿದ್ದರೆ $p = b/\alpha s$ ಆಗಿರುವುದು. ಇದು ಕ್ಯೂನ ಇರುಕನ್ನು ಮಾಪನಮಾಡುತ್ತದೆ. *p*ನ ಬೆಲೆ ಒಂದಕ್ಕಿಂತ ಅಧಿಕವಾದರೆ ಸೇವೆಯ ದರಕ್ಕಿಂತ ಜನರ ಆಗಮನದ ದರ ಹೆಚ್ಚಾಗಿ ಕ್ಯೂ ಅತ್ಯಧಿಕವಾಗಿ ಬೆಳೆದು ಹೋಗಿ ಹತೋಟಿ ತಪ್ಪಬಹುದು. *p*ಒಂದಕ್ಕಿಂತ ಕಡಿಮೆಯಾಗಿದ್ದರೆ ಕ್ಯೂ ಕೆಲವೊಂದು ಸಮಯ ಉದ್ದವಾಗಿದ್ದರೂ ಮುಂದೆ ಸ್ವಲ್ಪ ಹೊತ್ತಿನಲ್ಲಿ ಹತೋಟಿಗೆ ಬರುವುದು. ಹೀಗಾಗಿ $p < 1$ ಆಗಿದ್ದಾಗ ಕ್ಯೂ ಕೆಲವು ಕಾಲದ ಮೇಲೆ ಸ್ತಬ್ಧ (ಸ್ಟೇಷನರಿ) ಆಗುವುದು.

**ಜನ ಬರುವ ವೇಳೆಯ ಅಂತರ ಸ್ವತಂತ್ರ:** ಅದಕ್ಕೆ ಯಾವುದೇ ವಿತರಣೆ ಇರಲಿ. ಸೇವೆಯ ವೇಳೆ ಋಣಘಾತ ಸಂಭವಚರವಾಗಿರಲಿ ಮತ್ತು 8 ಜನ ಸೇವಕರಿರಲಿ. ಕ್ಯೂ ಶಿಸ್ತು ಮೊದಲು ಬಂದವನಿಗೆ ಮೊದಲು ಸೇವೆ ಎಂದಿರಲಿ. ಸಾಂಕೇತಿಕವಾಗಿ ಈ ಕ್ಯೂ ಪದ್ಧತಿಯನ್ನು *GI/M/s* ಎಂದು ಬರೆಯುವರು. *M/G/*1 ಎಂದರೆ ಜನ ಬರುವ ವೇಳೆಯ ಅಂತರ ಋಣಘಾತ ಸಂಭವಚರವೆಂದೂ ಸೇವೆಯ ವೇಳೆ ಯಾವುದೇ ಇರಬಹುದೆಂದೂ ಒಬ್ಬ ಸೇವಕ ಇರುವನೆಂದೂ ಅರ್ಥ.

ಒಂದು ಕ್ಯೂನ ಅಭ್ಯಾಸವೆಂದರೆ ಅದಕ್ಕೆ ಸಂಬಂಧಿಸಿದ ಬೇರೆ ಬೇರೆ ಅಂಗಗಳ ವಿಶ್ಲೇಷಣೆ. ಈ ವಿಶ್ಲೇಣೆಯ ಸಹಾಯದಿಂದ ಕ್ಯೂನ ಬಗ್ಗೆ ನಮಗೆ ತಿಳಿಯಬೇಕಾದ ಮಾಹಿತಿಗಳನ್ನೆಲ್ಲ ಪಡೆಯಬಹುದು.

1. **ಕ್ಯೂನ ಉದ್ದ:** t–ಕ್ಷಣದಲ್ಲಿ ಕ್ಯೂನಲ್ಲಿ ಕಾಯುತ್ತಿರುವ ಅಥವಾ ಸೇವೆ ಪಡೆಯುತ್ತಿರುವ ಜನರ ಸಂಖ್ಯೆ *Q(t)* ಆಗಿರಲಿ. *Q(t)* ಒಂದು ಸಾಂಭವಿಕ ಪ್ರಕ್ರಿಯೆ (ಸ್ಟೊಕೇಸ್ಟಿಕ್ ಪ್ರೋಸೆಸ್). *Q(t)=0* ಆಗಿದ್ದರೆ ಆ ಕ್ಷಣದಲ್ಲಿ ಕ್ಯೂನಲ್ಲಿ ಕಾಯುತ್ತಲಾಗಲೀ ಸೇವೆ ಪಡೆಯುತ್ತಲಾಗಲೀ ಯಾರೂ ಇರುವುದಿಲ್ಲವೆಂದರ್ಥ. ಈ ಕಾಲದಲ್ಲಿ ಯಾರಾದರೂ ಬಂದರೆ ಅವನು ಕಾಯಬೇಕಾಗಿಲ್ಲ ಮಾತ್ರವಲ್ಲ *Q(t)=0* ಆಗಿದ್ದರೆ ಸೇವಕ ವಿಶ್ರಾಂತಿ ಪಡೆಯುತ್ತಿರುವನು ಎಂದರ್ಥ.

**2. ಕಾಲ್ಪನಿಕ ಕಾಯುವ ಕಾಲ *W(t)*:** *t*–ಕ್ಷಣದಲ್ಲಿ ಯಾರಾದರೂ ಕ್ಯೂವನ್ನು ಸೇರಿದರೆ ಅವನು ಸೇವೆ ಪಡೆಯಲು ಕಾಯಬೇಕಾದ ಕಾಲ *W(t)* ಆಗಿರಲಿ. ಈ ಸಮಯಕ್ಕೆ ಅವನ ಸೇವೆಯ ಕಾಲವನ್ನು ಸೇರಿಸಿದರೆ *t*–ಕ್ಷಣದಲ್ಲಿ ಸೇರಿದವನು ಕ್ಯೂನೊಂದಿಗೆ ಕಳೆಯುವ ಕಾಲದ ಮೊತ್ತ ಸಿಕ್ಕುವುದು. ಇದು ಜನರಿಗೆ ಆಗುವ ಅನನುಕೂಲವನ್ನು ಮಾಪನ ಮಾಡುತ್ತದೆ.

**3. 0 ಕ್ಷಣದಲ್ಲಿ ಸೇವಕ ಖಾಲಿ ಇದ್ದಾನೆಂದು ತಿಳಿಯೋಣ.** 0+ ಕ್ಷಣದಲ್ಲಿ ಒಬ್ಬ ಕ್ಯೂವನ್ನು ಸೇರುತ್ತಾನೆ ಮತ್ತು ಕೂಡಲೇ ಸೇವಕ ತನ್ನ ಕೆಲಸ ಆರಂಭಿಸುತ್ತಾನೆ. ಅವನ ಸೇವೆ ಮುಗಿಯುವುದರೊಳಗೆ ಇನ್ನೆಷ್ಟೊ ಜನ ಕ್ಯೂವನ್ನು ಸೇರಿರುವುದರಿಂದ ಸೇವಕ ಬಿಡುವಿಲ್ಲದೆ ಸೇವೆ ಸಲ್ಲಿಸುತ್ತ ಹೋಗುವನು. ಹೀಗೆ ಅವಿರತವಾಗಿ ಸೇವೆಸಲ್ಲಿಸುತ್ತ ಮತ್ತೊಮ್ಮೆ ಖಾಲಿಯಾಗುವವರೆಗಿನ ವೇಳೆಗೆ ಅವಿಶ್ರಾಂತ ಕಾಲ (ಬಿಸಿ ಟೈಂ) ಎಂದು ಹೆಸರು. ಈ ಕಾಲವಾದ ಮೇಲೆ ಕೆಲಹೊತ್ತು ಸೇವಕ ಖಾಲಿ ಇರಬಹುದು. ಇದು ಅವನ ವಿರಾಮ ಅವಧಿ (ಐಡಲ್ ಪೀರಿಯಡ್). ಈ ಎರಡೂ ಕಾಲಗಳು ಸೇರಿದರೆ ಒಂದು ಅವಿಶ್ರಾಂತ ಚಕ್ರವಾಗುತ್ತದೆ. ಈ ವಿರಾಮ ಮತ್ತು ಅವಿಶ್ರಾಂತ ಕಾಲಗಳು ಸಂಭವಚರಗಳಾಗಿದ್ದು ಇವುಗಳ ಮಾಹಿತಿ ಕ್ಯೂನ ಎಷ್ಟೊ ಗುಣಗಳನ್ನು ಮನದಟ್ಟು

ಮಾಡುತ್ತವೆ. ಮೇಲಿನ ಮುಖ್ಯ ಮೂರು ಅಂಗಗಳಲ್ಲದೆ ಬೇರೆ ಅನೇಕ ಅಂಗಗಳನ್ನೂ ಅಭ್ಯಸಿಸಿರುವರು.

***M/M/*1 ಕ್ಯೂ ಪದ್ಧತಿ:** ಇದು ಗಣಿತರೀತ್ಯ ಮತ್ತು ಸಂಭಾವ್ಯತಾಶಾಸ್ತ್ರರೀತ್ಯ ಪರಿಶೀಲಿಸಲು ಅತ್ಯಂತ ಸುಲಭವಾದ ಕ್ಯೂ ಪದ್ಧತಿ. ಇದರ ಎಲ್ಲ ಅಂಗಗಳನ್ನೂ ಕೂಲಂಕಷವಾಗಿ ವಿವೇಚಿಸಿ ಇದಕ್ಕ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಲು ಸಾಧ್ಯವಾಗಿದೆ. ಈ ಪದ್ಧತಿಗೆ Q(t) ಒಂದು ಮಾರ್ಕಾಫ್ ಸರಪಣಿಯಾಗಿರುವುದು. $Q(0)=i$ ಆಗಿದ್ದರೆ $Q(t)=j$ ಆಗುವ ಸಂಭಾವ್ಯತೆ ಈ ಸರಪಣಿಯ ಸ್ಥಿತ್ಯಂತರ ಸಂಭವವಾಗಿರುವುದು. ಈ ಸರಪಣಿಯ ಸ್ತಬ್ಧವಿತರಣೆ (ಸ್ಟೇಷನರಿ ಡಿಸ್ಟ್ರಿಬ್ಯೂಷನ್) ಬಹಳ ಕಾಲವಾದ ಮೇಲೆ ಕ್ಯೂನಲ್ಲಿರುವ ಜನರ ಸಂಖ್ಯೆಗಳ ಸಂಭಾವ್ಯತೆಗಳನ್ನು ತಿಳಿಸುವುದು. ಈ ಸ್ತಬ್ಧವಿತರಣೆ

$$p[Q(t)=j]=(1-p)\,p^{j},\quad j=0, 1.2 \ldots,\ p<1$$
$$=0,\ p\geq 1$$

ಆಗಿರುವುದು. ಇಲ್ಲಿ $p=\lambda/\mu$ ಎಂಬುದು ಈ ಮೊದಲೇ ವಿವರಿಸಿದ ಇರುಕಿನ ಮಾಪನ. $\lambda$ ಜನ ಕ್ಯೂವನ್ನು ಸೇರುವ ವೇಗವನ್ನೂ $\mu$ ಒಬ್ಬ ಸೇವಕ ಸೇವೆ ಸಲ್ಲಿಸುವ ವೇಗವನ್ನೂ ಸೂಚಿಸುತ್ತವೆ.

ಮೇಲಿನ ಸ್ತಬ್ಧವಿತರಣೆಯಿಂದ ಸೇವಕ ಖಾಲಿ ಇರುವ ಕಾಲದ ದರ $1-p$ ಎಂದು ತಿಳಿಯುವುದು. ಇದು ಬಹಳ ಕಾಲದ ಮೇಲೆ ಕ್ಯೂವನ್ನು ಸೇರುವವನು ಕಾಯಬೇಕಾಗಿರದ ಸಂಭಾವ್ಯತೆಯನ್ನೂ ತಿಳಿಸುತ್ತದೆ. $Q(0)=I$ ಆಗಿದ್ದು ಮೊತ್ತ ಮೊದಲಿಗೆ $t=t_0$ ಕ್ಷಣದಲ್ಲಿ $Q(t)=0$ ಆಗಿದ್ದರೆ $t_0$ ಎಂಬುದು; ಜನರಿಂದ ಪ್ರೇರೇಪಿಸಲ್ಪಟ್ಟ ಅವಿಶ್ರಾಂತ ಕಾಲದ ಉದ್ದವಾಗಿದೆ $t_0$ ಒಂದು ಸಂಭವಚರ. ಇದರ ವಿತರಣೆಯನ್ನು ಕಂಡುಹಿಡಿದಿರುವರು.

ಕ್ಯೂ ಒಂದು ಸ್ತಬ್ಧತೆಯನ್ನು ಪಡೆದಾಗ ಬಂದು ಸೇರಿದ ಮನುಷ್ಯನೊಬ್ಬ ಕಾಯಬೇಕಾದ ಸಮಯದ ಸಂಭಾವ್ಯತಾಸಾಂದ್ರತೆ

$$f(x)=\lambda(1-p)e-(\mu-\lambda)x,\ 0<x<\infty$$

ಆಗಿರುವುದು. ಕಾಯದೆ ಇರುವ ಸಂಭಾವ್ಯತೆ $1-p$ ಆಗಿರುವುದು. ಮೇಲಿನ ಸ್ತಬ್ಧ ವಿತರಣೆ p ಒಂದರಿಂದ ಅಧಿಕವಾದಲ್ಲಿ ಇರುವುದಿಲ್ಲ. ಈ ಮೇಲಿನ ವಿಶ್ಲೇಷಣೆಗಳಿಂದ ಕ್ಯೂನ ಸರಾಸರಿ ಉದ್ದ, ಕಾಯಬೇಕಾದ ಕಾಲದ ಸರಾಸರಿ ಇತ್ಯಾದಿಗಳನ್ನೂ ಕಂಡು ಹಿಡಿಯಬಹುದು.

***M/M/s* ಕ್ಯೂ ಪದ್ಧತಿ:** ಈ ಪದ್ಧತಿಯಲ್ಲಿ s ಜನ ಸೇವಕರಿದ್ದಾರೆ. $p=\lambda/\mu^{s}$ ಆಗಿರುವುದು $p<1$ ಆಗಿದ್ದರೆ ಕ್ಯೂ ಬಹಳ ಹೊತ್ತಿನ ಮೇಲೆ ಒಂದು ಸ್ತಬ್ಧತೆಗೆ ಬರುವುದು. ಆಗ ಕ್ಯೂನಲ್ಲಿರುವ ಜನರ ಸಂಖ್ಯೆಯ ಸಂಭಾವ್ಯತಾ ವಿತರಣೆ ಹೀಗಿದೆ:

$$p[Q=j]=u_j=\frac{u_0}{j!}\left(\frac{\lambda}{\mu}\right)^{j},0\leq j\leq s$$

$$=\frac{u_0}{s^{j}-s!}\left(\frac{\lambda}{\mu}\right)^{j},\ j\geq s$$

ಆಗಿರುವುದು. ಇಲ್ಲಿ $u_0$ ಯನ್ನು $\sum_{j=0}^{\infty} uj=1$ ಎಂಬ ಶರತ್ತಿನ ಮೇಲಿಂದ ಕಂಡು ಹಿಡಿಯಬಹುದು. ಈ ವಿತರಣೆಯ ಸರಾಸರಿ $sp+pu_s/(1-p)^2$ ಆಗಿರುವುದು. ಈ ಸ್ತಬ್ಧಸ್ಥಿತಿಯಲ್ಲಿ ಕ್ಯೂನಲ್ಲಿ s ಗಿಂತ ಕಡಿಮೆ ಜನರಿರುವ ಸಂಭಾವ್ಯತೆ

$$u_0\sum_{0}^{s-1}\left(\frac{\lambda}{\mu}\right)^{j}\frac{1}{j!}$$

ಆಗಿರುವುದು. ಇದು ಕ್ಯೂ ಸೇರುವವನು ಕಾಯಬೇಕಾಗಿರದ ಸಂಭಾವ್ಯತೆಯನ್ನು ಸೂಚಿಸುತ್ತದೆ.

ಅಂತೆಯೇ $M/\mu/\infty$ ಯನ್ನು ಅಭ್ಯಸಿಸಿರುವರು. ಇಲ್ಲಿ ಎಷ್ಟು ಬೇಕೋ ಅಷ್ಟು ಮಂದಿ ಸೇವಕರು ಸಿಕ್ಕುವರೆಂದರ್ಥ. ಯಾರೂ ಸೇವೆ ಪಡೆಯಲು ಕಾಯಬೇಕಾಗಿಲ್ಲ. ಕ್ಯೂ ಒಂದು ಸ್ತಬ್ಧತೆಗೆ ಬಂದಾಗ ಅಲ್ಲಿ j ಜನರನ್ನು ಕಾಣುವ ಸಂಭಾವ್ಯತೆ $e^{-p}p^{j}/j!$ ಆಗಿರುವುದು. ಅಂದರೆ ಕ್ಯೂನಲ್ಲಿರುವ ಜನರ ಸಂಖ್ಯೆ ಪೋಸೋನ್ ವಿತರಣೆಯನ್ನು ಹೊಂದಿರುತ್ತದೆ.

***M/G/*1:** ಈ ಕ್ಯೂ ಪದ್ಧತಿಯ ವೈಶಿಷ್ಟ್ಯವೆಂದರೆ nನೆಯ ಗಿರಾಕಿ ಕ್ಯೂ ಬಿಟ್ಟು ಹೋಗುವ ಕ್ಷಣ t ಆಗಿರಲಿ, n=0, 1, 2, …., $t_0=0$. ಅವನು ಬಿಟ್ಟು ಹೋದ ಕ್ಷಣದಲ್ಲಿ ಅಂದರೆ $tn+0$ ಕ್ಷಣದಲ್ಲಿ ಕ್ಯೂನಲ್ಲಿರುವ ಜನರ ಸಂಖ್ಯೆ $Q_n$ ಆಗಿರಲಿ. ಹಾಗಿದ್ದರೆ $\{Q_n\}$ ಒಂದು ಮಾರ್ಕಾಫ್ ಸರಪಣಿಯಾಗಿರುವುದು. Q(t) ಮಾರ್ಕಾಫ್ ಪ್ರಕ್ರಿಯೆಯಾಗಿರುವುದಿಲ್ಲ. ಈ ಸರಪಣಿಯನ್ನು Q(t) ಪ್ರಕ್ರಿಯೆಯಲ್ಲಿ ಅಂತರ್ಗತವಾದ ಮಾರ್ಕಾಫ್ ಸರಪಣಿಯೆನ್ನುವರು. ಇದರ ಸ್ಥಿತ್ಯಂತರ ಸಂಭಾವ್ಯತೆಯನ್ನೂ ಸ್ತಬ್ಧವಿತರಣೆಯನ್ನೂ ನಾವು ಸುಲಭವಾಗಿ ಕಂಡುಹಿಡಿಯಬಹುದು. ಇವು ಕ್ಯೂನ ಬಗ್ಗೆ ಅನೇಕ ವಿಷಯಗಳ ಪರಿಜ್ಞಾನವನ್ನು ನೀಡುವುವು.

ಇದೇ ರೀತಿ *GI/M/*1 ಕ್ಯೂ ಪದ್ಧತಿಯನ್ನು ಸಹ ಅದರಲ್ಲಿ ಅಂತರ್ಗತವಾದ ಮಾರ್ಕಾಫ್ ಸರಪಣಿಯ ಅಭ್ಯಾಸದ ಮೇಲಿಂದ ನಾವು ಪರಿಶೀಲಿಸಬಹುದು. $t_0, t_1$ …. ಇವು ಕ್ಯೂಗೆ ಜನ ಬಂದು ಸೇರುವ ಕ್ಷಣಗಳಾಗಿರಲಿ, $t_0=0$. $t_n-0$ ಕ್ಷಣದಲ್ಲಿ ಕ್ಯೂನಲ್ಲಿರುವ ಜನರ ಸಂಖ್ಯೆ $Q_n$ ಆಗಿರಲಿ. ಆಗ $\{Q_n\}$ ಮಾರ್ಕಾಫ್ ಸರಪಣಿ. ಈ ಕ್ಯೂ ಪದ್ಧತಿಯ *W(t)*, ಕ್ಯೂ ಖಾಲಿಯಾಗಲು ಬೇಕಾದ ಕಾಲ, ಅವಿಶ್ರಾಂತ ಕಾಲ ಇತ್ಯಾದಿಗಳನ್ನು ಅಭ್ಯಸಿಸಿರುವರು.

*GI/G/*1 ಕ್ಯೂ ಪದ್ಧತಿಯ ಅಭ್ಯಾಸ ಅತ್ಯಂತ ಕಷ್ಟಕರವಾದದ್ದು. ಆ ಬಗ್ಗೆ ಕೆಲವೊಂದು ಗಣಿತ ಮತ್ತು ಸಾಂಭವಿಕ ವಿಶ್ಲೇಷಣೆಗಳನ್ನು ನಡೆಸಿರುವರು. ಇವು ಪೂರ್ಣವಾದ ಬಳಿಕವೇ ಅವನ್ನು ನಮ್ಮ ದೈನಂದಿನ ಜೀವನಕ್ಕೆ ಅಳವಡಿಸಲು ಸಾಧ್ಯವಾಗುವುದು. ಈ ಕ್ಯೂ ಪದ್ಧತಿಯಲ್ಲದೆ, ಜನ ಗುಂಪು ಗುಂಪಾಗಿ ಬಂದರೆ ಏನಾಗುವುದೆಂದೂ ಪಂಗಡ ಪಂಗಡವಾಗಿ ಸೇವೆ ನಡೆಯುವುದಾದರೆ ಆ ಕ್ಯೂ ಪದ್ಧತಿಯ ಗುಣಗಳೇನೆಂದೂ ಎರಡು ಕ್ಯೂಗಳು ಒಂದರ ಹಿಂದೊಂದಿದ್ದರೆ ಅವುಗಳ ಲಕ್ಷಣಗಳೇನೆಂದೂ ಅನೇಕ ವಿಧದ ಕ್ಯೂ ಪದ್ಧತಿಗಳ ಮೇಲೆ ಸಂಶೋಧನೆ ನಡೆಯುತ್ತಲೇ ಇದೆ. ಈ ಅಭ್ಯಾಸ ಮತ್ತು ವಿಶ್ಲೇಷಣೆಗಳ ಕಾರಣದಿಂದ ನಮ್ಮ ಅನುದಿನದ ಜೀವನಕ್ಕೆ ಅತ್ಯಂತ ಸೂಕ್ತವಾದ ಕ್ಯೂ ಮಾದರಿಯನ್ನು ಉಪಯೋಗಿಸಲು ಬರುವುದು.

ಒಂದು ಕಾರ್ಖಾನೆ ಇಲ್ಲವೆ ಉದ್ಯಮ ಬೆಳೆದಂತೆ ಅದರ ಕಾರ್ಯ ಜಟಿಲಗೊಳ್ಳುತ್ತದೆ. ಅದರ ಕಾರ್ಯವನ್ನು ಉತ್ತಮಗೊಳಿಸಲು ಮತ್ತು ಲಾಭವನ್ನು ಹೆಚ್ಚಿಸಲು ಪರಿಕರ್ಮಗಳ ಸಂಶೋಧನೆ (ಆಪರೇಷನ್ಸ್ ರಿಸರ್ಚ್) ಅಗತ್ಯವಿದೆ. ಈ ಸಂಶೋಧನೆಯ ಅಂಗವಾಗಿ ಕ್ಯೂ ಪದ್ಧತಿ ವಿಶೇಷ ಪಾತ್ರ ಪಡೆದಿದೆ. **(ನೋಡಿ– ಗೋಷ್ವಾರೆ–ಸಿದ್ಧಾಂತ)** (ಬಿ.ಆರ್.ಬಿ.)

**ಕ್ಯೊಸ್ಲೆರ್, ಆರ್ಥರ್ :** 1905–. ಬ್ರಿಟನಿನಲ್ಲಿ ನೆಲಸಿದ ಹಂಗರಿಯ ಲೇಖಕ. ಬುಡಾಪೆಸ್ಟಿನಲ್ಲಿ ಹುಟ್ಟಿದ ಈತ ವಿಯನ್ನ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ. ಜರ್ಮನಿಯ ಅನೇಕ ವರ್ತಮಾನ ಪತ್ರಿಕೆಗಳಿಗೆ ಮಧ್ಯ ಪ್ರಾಚ್ಯದ ವರದಿಗಾರನಾಗಿ ದುಡಿದ. 1926–31ರಲ್ಲಿ ಪ್ಯಾರಿಸ್ ಪತ್ರಿಕೆಯೊಂದರ ವರದಿಗಾರನಾಗಿಯೂ ಬರ್ಲಿನ್ನಿನ ವಿದೇಶೀ ಸಂಪಾದಕನಾಗಿಯೂ ಕೆಲಸ ಮಾಡಿದ. 1930ರಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿ ಸೋವಿಯತ್ ರಷ್ಯದ ಅತಿಥಿಯಾಗಿ ಆ ನಾಡನ್ನೆಲ್ಲ ಸುತ್ತಿ ಬಂದ. 1936ರಲ್ಲಿ ಲಂಡನ್ನಿನ ಪತ್ರಿಕೆಯೊಂದರ ವರದಿಗಾರನಾಗಿ ಸ್ಪೇನಿಗೆ, ಅಲ್ಲಿ ನಡೆಯುತ್ತಿದ್ದ ಅಂತರ್ಯುದ್ಧದ ಸುದ್ದಿಸಂಗ್ರಹಕ್ಕಾಗಿ, ಹೋದಾಗ ಗೂಢಚಾರನೆಂದು ಈತನನ್ನು ಬಂಧಿಸಿ ಸೆರೆಯಲ್ಲಿಟ್ಟು ಮರಣದಂಡನೆ ವಿಧಿಸಿದರು. ಆಂಗ್ಲಮಿತ್ರರ ಪ್ರಯತ್ನಗಳಿಂದಾಗಿ ಈತನ ಬಿಡುಗಡೆಯಾಯಿತು. ಆ ಎಲ್ಲ ಅನುಭವಗಳನ್ನೂ ಸ್ಪ್ಯಾನಿಷ್ ಟೆಸ್ಟಮೆಂಟ್ (1937), (ಅಮೆರಿಕೆಯ ಪ್ರಕಟನೆ–ಡಯಾಲಾಗ್ ವಿತ್ ಡೆತ್ 1942) ಎಂಬ ಕೃತಿಯಲ್ಲಿ ತಿಳಿಸಿದ್ದಾನೆ. ಕಮ್ಯೂನಿಷ್ಟ್ ವಾಮಪಕ್ಷದವರಲ್ಲಿನ ಭ್ರಷ್ಟಾಚಾರವನ್ನು ಕಂಡ ಈತನಿಗೆ ಕಮ್ಯೂನಿಸ್ಟ್ ತತ್ತ್ವಗಳ ಬಗ್ಗೆ ಭ್ರಮನಿರಸನವಾಗಿ ಅಂದಿನಿಂದ ಅಂದರೆ 1941ರಿಂದೀಚೆಗೆ ಕಮ್ಯೂನಿಸಂನ ವಿರೋಧವಾಗಿ ಬರೆಯತೊಡಗಿದ. ದಿ ಗ್ಲಾಡಿಯೇಟರ್ (1939), ಸ್ಕಮ್ ಆಫ್ ದಿ ಅರ್ತ್ (1941), ದಿ ಯೋಗಿ ಆಫ್ ದಿ ಕಮೀಸರ್ (1945), ಇನ್‌ಸೈಟ್ ಅಂಡ್ ಔಟ್‌ಲುಕ್; ಎನ್ ಇನ್‌ಕ್ವೈರಿ ಇನ್‌ಟು ದಿ ಕಾಮನ್ ಫೌಂಡೇಷನ್ಸ್ ಆಫ್ ಸೈನ್ಸ್ ಆರ್ಟ್‌ಲಡ್ ಸೋಷಿಯಲ್ ಎಥಿಕ್ಸ್ (1949), ಪ್ರಾಮಿಸ್ ಅಂಡ್ ಫುಲ್‌ಫಿಲ್ ಮೆಂಟ್: ಪ್ಯಾಲಸ್ಟೈನ್ (1917–1919), ಎಂಬ ಗ್ರಂಥಗಳನ್ನೂ ಡಾರ್ಕ್‌ನೆಸ್ ಅಟ್ ನೂನ್ (1941), ಅರೈವಲ್ ಅಂಡ್ ಡಿಪಾರ್ಚರ್ (1943), ತೀವ್ಸ್ ಇನ್ ದಿ ನೈಟ್ (1946) ಎಂಬ ಕಾದಂಬರಿಗಳನ್ನೂ ಟ್ವೈಲೈಟ್ (1945) ಎಂಬ ನಾಟಕವನ್ನೂ ಬರೆದಿದ್ದಾನೆ. ದಿ ಸ್ಲೀಪ್ ವಾಕರ್ಸ್ (1959), ದಿ ಲೋಟಸ್ ಅಂಡ್ ದಿ ರೋಬಾಟ್, ದಿ ಆಕ್ಟ್ ಆಫ್ ಕ್ರಿಯೇಷನ್ ಎಂಬ ಗ್ರಂಥಗಳಲ್ಲಿ ಈತನ ಆಳವಾದ ಚಿಂತನದ ಫಲಗಳನ್ನು ಕಾಣಬಹುದು. ಆರೋ ಇನ್ ದಿ ಬ್ಲೂ ಮತ್ತು ದಿ ಇನ್‌ವಿಸಿಬಲ್ ರೈಟಿಂಗ್ ಎಂಬ ಗ್ರಂಥಗಳು ಆತ್ಮಕಥಾರೂಪವಾಗಿದೆ.

ಡಾರ್ಕ್‌ನೆಸ್ ಅಟ್ ನೂನ್ ಕಾದಂಬರಿಯನ್ನು ಕು.ಶಿ.ಹರಿದಾಸಭಟ್ಟರು ನಡುಹಗಲಿನ ಕತ್ತಲು ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. (ಕೆ.ಬಿ.ಪಿ.)

**ಕ್ಯೋಹ್, ಮಾರ್ಟಿನ್ :** 1882–1940. ಸ್ವೀಡನ್ನಿನ ಕಾದಂಬರಿಕಾರ ಮತ್ತು ಪತ್ರಿಕೋದ್ಯಮಿ. 20ನೆಯ ಶತಮಾನದ ಆದಿಯಲ್ಲಿ ಸ್ಟ್ರಿಂಡ್‌ಬರ್ಗ್ ವಾಸ್ತವತೆಯ ಪರಂಪರೆಯನ್ನು ಪುನರುಜ್ಜೀವನಗೊಳಿಸಿದ ಸಾಹಿತಿಗಳಲ್ಲಿ ಈತನ ಹೆಸರು ದೊಡ್ಡದು. ಸ್ವೀಡನ್ನಿನ ಶ್ರಮಜೀವಿಗಳ ಬಡತನದ ಬದುಕನ್ನು ತದ್ವತ್ತಾಗಿ ಚಿತ್ರಿಸಿದ ಮೊದಲ ಕಾದಂಬರಿಕಾರನೀತ. ಕಾದಂಬರಿ ಕ್ಷೇತ್ರದಲ್ಲಿ ಸಮಾಜ ಮನೋವಿಜ್ಞಾನವನ್ನು ಬಳಸಿದ ಪ್ರಥಮ ಸಾಹಿತಿ. ಸ್ಟಾಕ್‌ಹೋಮಿನ ಮಧ್ಯಮವರ್ಗದ ಕುಟುಂಬದಲ್ಲಿ ಹುಟ್ಟಿದ ಈತ ಸಾಕಷ್ಟು ಸುಖವಾಗಿಯೇ ಇದ್ದರೂ ತನಗಿರುವಷ್ಟು ಸೌಕರ್ಯಗಳೂ ಇಲ್ಲದ ದುರ್ದೈವಿಗಳ ಬಾಳಿನ ಬಗೆಗೆ ಅನುತಾಪವನ್ನೂ ಸಮಾಜದಲ್ಲಿಯ ವರ್ಗವೈಪರೀತ್ಯಗಳ ಬಗೆಗೆ ಸಂತಾಪವನ್ನೂ ವ್ಯಕ್ತಪಡಿಸಿದ. 1911ರಲ್ಲಿ ಬರೆದ ಎಲ್ಲೆನ್ ಎಂಬ ಕಾದಂಬರಿ

ಸಾಧಾರಣವಾದುದು. ಪತ್ರಿಕೆಗಳಿಗಾಗಿ ಲೇಖನಗಳನ್ನು ಬರೆಯುತ್ತ ಸಾಹಿತ್ಯದ ಹದವನ್ನು ಕಂಡುಕೊಂಡ. ಅಮೆರಿಕದ ಜಾಕ್ ಲಂಡನ್, ಅಪ್ಟನ್ ಸಿಂಕ್ಲೇರ್, ರಷ್ಯದ ಗಾರ್ಕಿ, ದಾಸ್ತಾಯೆವಸ್ಕಿ ಮೊದಲಾದ ಸಾಹಿತಿಗಳ ಪ್ರಭಾವಕ್ಕೆ ಒಳಗಾದರೂ ಅಂಧಾನುಕರಣೆ ಮಾಡದೆ ಅನೇಕ ಕಾದಂಬರಿಗಳನ್ನು ಬರೆದ. ಸ್ವೀಡಿಷ್ ಸಮಾಜ ಜೀವನದ ವಿಶಿಷ್ಟತೆ, ಪ್ರಾದೇಶಿಕತೆ ಈತನ ಎಲ್ಲ ಕಾದಂಬರಿಗಳಲ್ಲೂ ಕಾಣುತ್ತವೆ.

ದೀನದಲಿತರ ಪಾತ್ರವನ್ನು ಚಿತ್ರಿಸುವಲ್ಲಿ ವಾಸ್ತವತೆಯ ಅತಿರೇಕವಾಗಲೀ ಆದರ್ಶೀಕರಣವಾಗಲೀ ಕ್ಯೊಹ್‍ನ ಕೃತಿಗಳಲ್ಲಿ ಕಾಣುವುದಿಲ್ಲ. ಹೀನವರ್ಗದ ಕೆಲವರ ಹೀನ ಸಂಸ್ಕಾರದ ಅರಿವೂ ಈತನಿಗಿದೆ. ಅಂಥ ಜನರ ಅನೇಕ ಕೃತ್ಯಗಳಿಗೆ ಪ್ರೇರಕವಾದ ಮೃಗೀಯ ಪ್ರವೃತ್ತಿಗಳೂ ಈತನ ದೃಷ್ಟಿಗೆ ಬೀಳದೆ ಇಲ್ಲ. 1916ರಲ್ಲಿ ಪ್ರಕಟವಾದ ಗಾಡ್ಸ್ ಬ್ಯೂಟಿಫುಲ್ ವರ್ಲ್ಡ್ ಎಂಬ ಕಾದಂಬರಿಯಲ್ಲಿ ದಲಿತ ವರ್ಗದವರ ಜುಗುಪ್ಸಾಮಯವಾದ ಬದುಕನ್ನು ಚಿತ್ರಿಸುತ್ತ, ಸಮಾಜಕ್ಕೆ ಹೊರೆ, ಪಿಡುಗು ಎನ್ನಬಹುದಾದ ಯಾವ ದುಷ್ಕೃತ್ಯಕ್ಕೂ ಹೇಸದ, ಯಾವ ಉದ್ಧಾರಕ್ಕೂ ಹಂಬಲಿಸದ ಜನರೂ ಆ ದಲಿತರಲ್ಲಿ ಇರುವುದನ್ನು ತೋರಿಸುತ್ತಾನೆ.

ವರ್ಕರ್ಸ್, ದಿ ಟಿಂಬರ್ ವ್ಯಾಲಿ, ಪಯಸ್ ಪೀಪಲ್–ಇವು ಈತನ ಕೆಲವು ಕಾದಂಬರಿಗಳ ಇಂಗ್ಲಿಷ್ ಹೆಸರುಗಳು. ಜಾತಿ ಪಂಗಡಗಳ ವಿಶ್ಲೇಷಣೆ ಮತ್ತು ಮೂಲ ಶೋಧನೆ ಪಯಸ್ ಪೀಪಲ್ ಕಾದಂಬರಿಯ ವಸ್ತು. ಒಂದನೆಯ ಮಹಾಯುದ್ಧದಲ್ಲಿ ಮತ್ತು ಅದಕ್ಕೂ ಮುಂಚೆ ಬರೆದ ಈತನ ಕೃತಿಗಳೇ ಉತ್ತಮವಾಗಿವೆ. ಅನಂತರದ ಕಾದಂಬರಿಗಳು ಸತ್ತ್ವಹೀನವೆನಿಸಿವೆ. ಮಾರಿಟ್ಟ ಎಂಬುದು ಕ್ಯೊಹ್‍ನ ಬಾಲ್ಯಜೀವನವನ್ನು ಚಿತ್ರಿಸುವ ಆತ್ಮಕಥೆ. ಆವೇಗರಹಿತ, ವಸ್ತುನಿಷ್ಠ ನಿರೂಪಣೆಯಾದ ಇದು ಕ್ಯೊಹ್‍ನ ಶ್ರೇಷ್ಠ ಕೃತಿ.

(ಕೆ.ಬಿ.ಪಿ.)

**ಕ್ರಕ್ಸ್** : ದಕ್ಷಿಣಾಕಾಶದ ಒಂದು ಹೆಸರಾಂತ ನಕ್ಷತ್ರಪುಂಜ. ತ್ರಿಶಂಕು ಎಂಬುದು ಇದರ ಪರ್ಯಾಯನಾಮ. ಇದರ ವ್ಯಾಪ್ತಿ ವಿಷುವದಂಶ 11 ಗಂ. 55ಮಿ.–12ಗಂ.55ಮಿ. ಮತ್ತು ಘಂಟಾವೃತ್ತಾಂಶ 55° ದ.–64° ದ. ಕ್ರಕ್ಸ್ ಪುಂಜದ ಆಕಾರ ತಲೆಕೆಳಗಾದ ಶಿಲುಬೆಯಂತೆ. ಈ ಕಾರಣದಿಂದ ಇದಕ್ಕೆ ದಕ್ಷಿಣದ ಶಿಲುಬೆ (ಸದರ್ನ್ ಕ್ರಾಸ್) ಎಂಬ ಹೆಸರು ಸಹ ರೂಢಿಯಲ್ಲಿದೆ. ಉತ್ತರಾಕಾಶದ ಲಘು ಸಪ್ತರ್ಷಿಗೆ ಇದು ಸಂವಾದಿ ಎಂಬುದು ಕೆಲವರ ಮತ. ಇದರಲ್ಲಿಯ ನಾಲ್ಕು ಪ್ರಮುಖ ನಕ್ಷತ್ರಗಳ ಪೈಕಿ ಶಿಲುಬೆಯ ಬುಡದಲ್ಲಿರುವುದು α–ಕ್ರೂಸಿಸ್; ಇದಕ್ಕೆ ಆಕ್ರಕ್ಸ್ ಎಂಬ ಮತ್ತೊಂದು ಹೆಸರೂ ಉಂಟು. ಈ ನಕ್ಷತ್ರದ ಸಹಾಯದಿಂದ ದಿಕ್ಕಿನ ನಿರ್ದೇಶನವನ್ನು ನಾವಿಕರು ಪಡೆಯುತ್ತಿದ್ದರು. ಹೀಗಾಗಿ ಇದನ್ನು ನಾವಿಕನಕ್ಷತ್ರವೆಂದೂ(ನ್ಯಾವಿಗೇಷನಲ್ ಸ್ಟಾರ್) ಕರೆಯುವುದಿದೆ. ಶಿಲುಬೆಯ ಶಿರೋಭಾಗದಲ್ಲಿರುವ ನಕ್ಷತ್ರ ϒ ಗ್ಯಾಕ್ರಕ್ಸ್. ಈ ಎರಡೂ ನಕ್ಷತ್ರಗಳನ್ನು ಸೇರಿಸುವ ಸರಳರೇಖೆ ಹೆಚ್ಚು ಕಡಿಮೆ ಖಗೋಳೀಯ ದಕ್ಷಿಣಧ್ರುವದ ದಿಕ್ಕನ್ನು ನಿರ್ದೇಶಿಸುತ್ತದೆ.

*

**ಕ್ರಟ್ಸರ್ ಮಾಕ್ಸ್ :** 1854–1941. ಜರ್ಮನ್ ಕಾದಂಬರಿಕಾರ ಹಾಗೂ ಶ್ರಮಜೀವಿಗಳ ಪ್ರತಿನಿಧಿ. ಪೋಸೆನ್ ನಗರದಲ್ಲಿ ಹುಟ್ಟಿದ ಈತ ತನ್ನ 13ನೆಯ ವಯಸ್ಸಿನಲ್ಲಿ ಬರ್ಲಿನ್ ನಗರಕ್ಕೆ ವಲಸೆ ಬಂದು ಕಾರ್ಖಾನೆಗಳಲ್ಲಿ ಬೋರ್ಡು ಬರೆಯುವ ಉದ್ಯೋಗದಲ್ಲಿದ್ದ. ಆಕಸ್ಮಿಕವೊಂದಕ್ಕೆ ಸಿಕ್ಕಿ ಅದರಿಂದ ಚೇತರಿಸಿಕೊಳ್ಳುತ್ತಿರುವಾಗ ಬರೆಯಲು ಆರಂಭಿಸಿ ಜನಪ್ರಿಯತೆ ಗಳಿಸಿದ. ಫ್ರೆಂಚ್ ಕಾದಂಬರಿಕಾರ ಎಮಿಲಿ ಜೋಲಾನಿಂದ ಪ್ರಭಾವಿತನಾಗಿ, ಬಡವರು ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ, ಸಮಸ್ಯೆಗಳನ್ನು ಸ್ವಾಭಾವಿಕ ರೀತಿಯಲ್ಲಿ ಚಿತ್ರಿಸತೊಡಗಿ ಬರ್ಲಿನ್ ಕಾದಂಬರಿ ಎಂಬ ಪಂಥವನ್ನು ಆರಂಭಿಸಿದ. ಈತ 30ಕ್ಕಿಂತ ಹೆಚ್ಚು ಕಾದಂಬರಿಗಳನ್ನೂ ಅನೇಕ ಸಣ್ಣ ಕಥೆಗಳನ್ನೂ ಬರೆದಿದ್ದಾನೆ.

ಡಿ ಬೆಟ್ರೊಗೆನೆನ್(ಮೋಸಹೋದವರು 1882) ಕಾದಂಬರಿಯಲ್ಲಿ ಜೀವನೋಪಾಯಕ್ಕಾಗಿ ಗತ್ಯಂತರವಿಲ್ಲದೆ ಸೂಳೆಗಾರಿಕೆಯನ್ನು ಅವಲಂಬಿಸಿದ ಬಡ ಹೆಣ್ಣು ಮಗಳೊಬ್ಬಳ ಕಥೆ ಇದೆ. ಬಡತನದ ಬವಣೆಯನ್ನು ಡಿ ವೆರ್‌ಕೊಮನೆನ್ (ನೀತಿಗೆಟ್ಟವರು 1883) ಕೃತಿ ವಿವರಿಸುತ್ತದೆ. ಮೈಸ್ಟರ್ ಟಿಂಪೆಯಲ್ಲಿ (ಮಾಸ್ಟರ್ ಟಿಂಪೆ 1888) ಯಂತ್ರಗಳ ಪ್ರಾಬಲ್ಯದಿಂದ ಕೆಲಸ ಕಳೆದುಕೊಂಡ ಕುಶಲ ಕೈಕೆಲಸಗಾರನ ದಾರುಣ ಚಿತ್ರಣವಿದೆ. ಗೆಸಿಷ್ಟ್ ಕ್ರಿಸ್ಟಿಯಲ್ಲಿ (ಕ್ರಿಸ್ತನ ಬರುವಿಕೆ 1897) ಬಡವರನ್ನು ಕಂಡು ಮರುಗಿದ ಕ್ರಿಸ್ತನ ವರ್ಣನೆ ಇದೆ.

(ಟಿ.ವಿ.ಎಸ್.)

**ಕ್ರಮಕಾರಗಳು ಮತ್ತು ನಿಯಾಮಕಗಳು:** ಜವ (ಸ್ಪೀಡ್) ಉಷ್ಣತೆ, ಒತ್ತಡ ಇತ್ಯಾದಿಗಳನ್ನು ಸ್ಥಿರವಾಗಿಡುವುದರ ಮೂಲಕ ಬೇಡಿಕೆಗೆ ಅನುಗುಣವಾಗಿ ಸಾಮರ್ಥ್ಯ (ಪವರ್), ಉಷ್ಣ, ತರಲ (ಫ್ಲೂಯಿಡ್) ಮುಂತಾದವನ್ನು ನಿಯಂತ್ರಿಸುವ ಸಾಧನಗಳು (ರೆಗ್ಯುಲೇಟರ್ಸ್ ಅಂಡ್ ಗರ್ವನರ್ಸ್). ಸಾಮಾನ್ಯವಾಗಿ ಉಷ್ಣತೆ ಒತ್ತಡ ಮುಂತಾದವುಗಳ ನಿಯಂತ್ರಣ ಮಾಡುವ ಸಾಧನಗಳನ್ನು ಕ್ರಮಕಾರಕಗಳೆಂದೂ ಅಂತರ್ದಹನ ಎಂಜಿನ್, ತಿರುಬಾನಿ, ಆವಿ ಎಂಜಿನ್ ಮುಂತಾದ ಉತ್ಪಾದಕಗಳ ಜವಗಳನ್ನು ನಿಯಂತ್ರಿಸುವ ಸಾಧನಗಳನ್ನು ನಿಯಾಮಕಗಳೆಂದೂ ಕರೆಯುವುದು ವಾಡಿಕೆ. ಯಾವ ಕೆಲಸದಲ್ಲೂ ಒಂದು ಮಿತಿಯನ್ನು ದಾಟಿದರೆ ಅಪಾಯವಿರುತ್ತದೆ. ಉದಾಹರಣೆಗೆ ಎಂಜಿನ್ನುಗಳ ಹೊರೆ (ಲೋಡ್) ಹಠಾತ್ತನೆ ತಗ್ಗಿದರೆ ಜವ ಅತಿಯಾಗಿ ಹೆಚ್ಚಿ ಅಪಾಯದ ಅಂಚನ್ನು ತಲಪಬಹುದು. ಇದೇ ರೀತಿ ಹೊರೆ ಹೆಚ್ಚಿದರೆ ಜವ ತೀವ್ರವಾಗಿ ತಗ್ಗಿ ಕೈಮುಂದಿರುವ ಕಾರ್ಯಗಳಿಗೆ ಅಡ್ಡಿಯಾಗಬಹುದು. ಆವಿಗೆಗಳಲ್ಲಿ ನೀರಿನ ಮಟ್ಟ ತಗ್ಗಿದರೆ ಭಾಗಗಳು ಅತಿಯಾಗಿ ಕಾದು ಅನಾಹುತ ಸಂಭವಿಸಬಹುದು. ಆವಿಗೆಗಳಲ್ಲಿ ನೀರಿನ ಮಟ್ಟ ತಗ್ಗಿದರೆ ಭಾಗಗಳು ಅತಿಯಾಗಿ ಕಾದು ಅನಾಹುತ ಸಂಭವಿಸಬಹುದು. ಆದ್ದರಿಂದ ಇತರ ಪರಿಸ್ಥಿತಿಗಳು ಬದಲಾದರೂ ಜವ, ನೀರಿನ ಮಟ್ಟ ಇತ್ಯಾದಿ ನಿರ್ಧರಿತ ಪರಿಮಾಣಗಳು ತಮ್ಮ ಸಾಮಾನ್ಯ ಬೆಲೆಗಳನ್ನು ಕಾಪಾಡಿಕೊಳ್ಳುವಂತೆ ಮಾಡಲು ಕ್ರಮಕಾರಕಗಳು ಮತ್ತು ನಿಯಾಮಕಗಳು ಅವಶ್ಯಕ.

**ಕಾರ್ಯತತ್ತ್ವ:** A ಎಂಬುದು ಚರಪರಿಮಾಣವೆಂದೂ (ವೇರಿಯಬಲ್ ಕ್ವಾಂಟಿಟಿ) ಇದನ್ನು ನಿಯಂತ್ರಿಸುವುದು ನಮ್ಮ ಧ್ಯೇಯವೆಂದೂ ಭಾವಿಸೋಣ. ಈ ಪರಿಮಾಣ ಜವ, ಉಷ್ಣತೆ, ಒತ್ತಡ, ಪ್ರವಾಹದರ, ವಿದ್ಯುತ್ ಒತ್ತಡ ಮುಂತಾದವುಗಳಲ್ಲಿ ಯಾವುದು ಬೇಕಾದರೂ ಆಗಿರಬಹುದು. ಇದು ಬೀರುವ ಬಲವನ್ನು ಹೊರೆ, ಸ್ಪ್ರಿಂಗ್, ತರಲದ ಒತ್ತಡ ಮುಂತಾದ ಬಾಹ್ಯಬಲಗಳು ಸರಿದೂಗಿಸುತ್ತವೆ (ಬ್ಯಾಲೆನ್ಸ್). Aಎಂಬ ನಿಯಂತ್ರಿತ ಪರಿಮಾಣ ಬದಲಾದರೆ ಈ ಸರಿದೂಗಿಕೆ ಅಂದರೆ ಸಮತೋಲ ಕೆಡುತ್ತದೆ. ಈ ಅಸಮತೋಲಿತ ಬಲ (ಅನ್‌ಬ್ಯಾಲೆನ್ಸ್ಡ್ ಫೋರ್ಸ್) ಸರಬರಾಜು ಮತ್ತು ಬೇಡಿಕೆಗಳನ್ನು ನಿಯಂತ್ರಿಸಿ Aಯನ್ನು ಮತ್ತೆ ಅದರ ಸಾಮಾನ್ಯ ಬೆಲೆಗೆ ತರುತ್ತದೆ.

**ಕ್ರಮಕಾರಕಗಳು :** ಒತ್ತಡ ನಿಯಂತ್ರಣಕ್ಕೆ ಒಳಗಾದ ಮಾಧ್ಯಮದ ಮೇಲೆ ಕೊಂತ ಅಥವಾ ಮಧ್ಯಪಟವಿದ್ದು (ಡಯಾಫ್ರಂ) ಅದು ಮಾಧ್ಯಮ ಹೇರುವ ಬಲವನ್ನು ಎದುರಿಸುತ್ತದೆ. ಈ ಬಲ ಒತ್ತಡ ನಿಯಂತ್ರಣವನ್ನು ಮಾಡುತ್ತದೆ. ಉದಾಹರಣೆಗೆ ಸಿಲಿಂಡರಿನಲ್ಲಿರುವ ಅನಿಲ ಅಥವಾ ಆವಿಯ ಒತ್ತಡವನ್ನು ನಿಯಂತ್ರಿಸಬೇಕೆಂದು ಭಾವಿಸೋಣ. ಈಗ ಅನಿಲ ಅಥವಾ ಆವಿಯ ಮೇಲೆ ನಿರ್ದಿಷ್ಟ ತೂಕದ ಕೊಂತವಿಟ್ಟಾಗ ಅನಿಲದಲ್ಲಿ ನಿರ್ದಿಷ್ಟ ಒತ್ತಡವುಂಟಾಗುತ್ತದೆ. ಒತ್ತಡ ಹೆಚ್ಚಿದಾಗ ಕೊಂತ ಎತ್ತಲ್ಪಟ್ಟು ಗಾತ್ರ ಹೆಚ್ಚುತ್ತದೆ. ಇದರಿಂದ ಒತ್ತಡ ತಗ್ಗಿ ಮುಂಚಿನ ಬೆಲೆಯಲ್ಲಿ ನಿಲ್ಲುತ್ತದೆ. ಅಕಸ್ಮಾತ್ ಒತ್ತಡ ತಗ್ಗಿದರೆ ಕೊಂತ ಕೆಳಗಿಳಿದು ಗಾತ್ರ ತಗ್ಗುತ್ತದೆ. ಗಾತ್ರ ಸಂಕೋಚನದಿಂದ ಒತ್ತಡ ಹೆಚ್ಚಿ ಮುಂಚಿನ ಬೆಲೆಯನ್ನು ಮುಟ್ಟುತ್ತದೆ.




ಚಿತ್ರ 1

**ಉಷ್ಣತೆಯ ನಿಯಂತ್ರಣ:** ಚಿತ್ರ 1ರಲ್ಲಿ ತೋರಿಸಿರುವ ಉಷ್ಣತಾ ಕ್ರಮಕಾರಕ x ಎಂದು ಗುರುತು ಮಾಡಿರುವ ಆವರಣದ ಉಷ್ಣತೆಯನ್ನು ನಿಯಂತ್ರಿಸಬೇಕು. ಚಿತ್ರದಲ್ಲಿ ತೋರಿಸಿರುವ ಕ್ರಮಕಾರಕವನ್ನು ಕಡಿಮೆ ಉಷ್ಣತೆಗಳನ್ನು ನಿಯಂತ್ರಿಸಲು ಉಪಯೋಗಿಸಿಸುತ್ತಾರೆ. ಈಗ x ಆವರಣದ ಉಷ್ಣತೆ ಹೆಚ್ಚಾಯಿತೆಂದು ಭಾವಿಸೋಣ. ಆಗ ಉಷ್ಣತಾಮಾಪಿಯ ಬುರುಡೆಯಲ್ಲಿರುವ ಅನಿಲ ವಿಸ್ತರಿಸುತ್ತದೆ. ಇದು ಪುಟಿತತೆ ಇರುವ (ಇಲಾಸ್ಟಿಸಿಟಿ) ತಿದಿಯನ್ನು ಉಬ್ಬಿಸುತ್ತದೆ. ಹೀಗಾಗಿ ಅಡ್ಡದಂಡದ a ತುದಿ ಮೇಲೇಳುತ್ತದೆ b ತುದಿ ಕೆಳಗೆ ತಳ್ಳಲ್ಪಡುತ್ತದೆ. ಇದರಿಂದ ಇದಕ್ಕೆ ಜೋಡಿಸಿರುವ ಕವಾಟದಂಡ ಕೆಳಗೆ ಸರಿದು ಕವಾಟ ಮುಚ್ಚಲ್ಪಡುತ್ತದೆ. ಆಗ ಉಷ್ಣಕಮಾಧ್ಯಮ (ಹೀಟಿಂಗ್ ಮೀಡಿಯಂ) ಒಳಗೆ ಬರಲು ದಾರಿಯಿಲ್ಲದೆ ಆವರಣದ ಉಷ್ಣತೆ ತಗ್ಗುತ್ತದೆ. ಉಷ್ಣತೆ ಅಗತ್ಯದ ಬೆಲೆಗಿಂತ ತಗ್ಗಿದರೆ ತಿದಿ ಕುಗ್ಗಿ ದಂಡವನ್ನು ಜಗ್ಗುತ್ತದೆ. ಆಗ ಕವಾಟ ತೆರೆದು, ಹೆಚ್ಚು ಉಷ್ಣಕಮಾಧ್ಯಮ ಒಳಬರಲು ಅವಕಾಶ ಮಾಡಿಕೊಡುತ್ತದೆ. ಇದರಿಂದ ಉಷ್ಣತೆ ಮುಂಚಿನ ಬೆಲೆಯನ್ನು ಮುಟ್ಟುತ್ತದೆ.

**ಕಾರ್ಯಕ್ರಮ ಕ್ರಮಕಾರಗಳು (ಪ್ರೋಗ್ರಾಂ ರೆಗ್ಯುಲೇಟರ್ಸ್):** ಕೆಲವು ಕಾರ್ಯಗಳಿಗೆ ನಿಯಂತ್ರಿತ ಪರಿಮಾಣ ಸ್ಥಿರವಾಗಿರಬೇಕಾದ್ದಿಲ್ಲ. ಆದರೆ ಪೂರ್ವನಿರ್ಧಾರದಂತೆ ನಿಧಾನವಾಗಿ ಏರಿ ಮತ್ತೆ ಇಳಿಯಬೇಕು. ಉದಾಹರಣೆಗೆ ಅನ್ನೀಲನ (ಅನ್ನೀಲಿಂಗ್) ಕುಲುಮೆಯ ಉಷ್ಣತೆ ನಿಧಾನವಾಗಿ ಪೂರ್ವನಿರ್ಧರಿತ ದರದಲ್ಲಿ ಹೆಚ್ಚಿ ಬಳಿಕ ಅದೇ ದರದಲ್ಲಿ ಇಳಿಯುವುದು ಸಾಧ್ಯವಾದರೆ ಉಷ್ಣಸಂಸ್ಕರಣಕ್ಕೆ ಬೇಕಾದ ರೀತಿಯಲ್ಲಿ ಲೋಹದ ಶೀತಲಿಕೆ ಮಾಡಬಹುದು. ಇದನ್ನು ಕಾರ್ಯಕ್ರಮ ಕ್ರಮಕಾರಕಗಳು ಮಾಡಬಲ್ಲುವು. ಗಡಿಯಾರದ ಹತೋಟಿಯಲ್ಲಿರುವ ವಕ್ರ ತಟ್ಟೆ (ಕ್ಯಾಂ) ನಿಯಂತ್ರಣಬಿಂದುವನ್ನು ನಿರ್ದಿಷ್ಟವಾಗಿ ಪಲ್ಲಟಗೊಳಿಸಿ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ. ಕೇವಲ ಒಂದು ಪರಿಮಾಣವನ್ನು ಮಾತ್ರವಲ್ಲ ಕ್ರಿಯೆಯ ಎಲ್ಲ ಮುಖ್ಯ ಪರಿಮಾಣಗಳನ್ನೂ ಪೂರ್ವ ನಿಯೋಜಿತ ಕಾರ್ಯಕ್ರಮದಂತೆ ಸ್ವಯಂ

ಬದಲಾವಣೆಗೊಳ್ಳುವಂತೆ ಮಾಡಬಹುದು. ಗಡಿಯಾರದ ಹತೋಟಿಯಲ್ಲಿರುವ ಹಾಗೂ ಸ್ಥಿರ ಜವದಲ್ಲಿ ತಿರುಗುತ್ತಿರುವ ದಂಡಕ್ಕೆ ಜೋಡಿಸಿರುವ ಅನೇಕ ವಕ್ರ ತಟ್ಟೆಗಳು ಒತ್ತಡ, ಉಷ್ಣತೆ, ಪ್ರವಾಹದರ ಮುಂತಾದ ಅನೇಕ ಪರಿಮಾಣಗಳನ್ನು ನಿಯಂತ್ರಿಸುತ್ತವೆ. ದಂಡದ ಜವ ಮತ್ತು ವಕ್ರ ತಟ್ಟೆಗಳ ಬದಲಾವಣೆಯಿಂದ ಕಾರ್ಯಕ್ರಮವನ್ನೇ ಬದಲಾಯಿಸಬಹುದು.

**ಪ್ರಭರಣ ಜಲ ನಿಯಂತ್ರಣ (ಫೀಡ್ ವಾಟರ್ ರೆಗ್ಯುಲೇಷನ್):** ಆವಿಗೆಯಲ್ಲಿ ನೀರಿನಮಟ್ಟ ಕಾಪಾಡುವುದು ಆವಶ್ಯಕ. ವಾಟವಾಗಿರುವ ಲೋಹಕೊಳವೆಯ ವಿಸ್ತರಣ ಅಥವಾ ಕುಗ್ಗುವಿಕೆಯಿಂದ ಪ್ರಭರಣ ಕವಾಟ ಮುಚ್ಚುತ್ತದೆ ಅಥವಾ ತೆರೆಯುತ್ತದೆ. ಇದರಿಂದ ಪ್ರಭರಣ ಜಲನಿಯಂತ್ರಣ ಮಾಡಬಹುದು.

**ಪ್ರವಾಹದರ ನಿಯಂತ್ರಣ:** ಒಂದು ವೆಜ್ಜ (ಆರಿಫಿಸ್), ನಾಸಾಗ್ರ ಮುಂತಾದವುಗಳ ಮೂಲಕ ಆಗುವ ಒತ್ತಡಪಾತದಿಂದ ಇದನ್ನು ಸಾಧಿಸಬಹುದು.

**ನಿಯಾಮಕಗಳು (ಗರ್ವನರ್ಸ್):** ಇವು ಉತ್ಪಾದಕಗಳ ಜವವನ್ನು ನಿಯಂತ್ರಿಸುವ ಸಾಧನಗಳು. ಸಾಮರ್ಥ್ಯ ಉತ್ಪಾದನೆಯಲ್ಲಿ ಉತ್ಪಾದಕಗಳ ಮೇಲಿನ ಹೊರೆ ಮುಂತಾದ ಅನೇಕ ಪರಿಮಾಣಗಳು ಬದಲಾಗುವ ಸಾಧ್ಯತೆಯಿದ್ದು ಎಲ್ಲ ಪರಿಸ್ಥಿತಿಗಳಲ್ಲೂ ಜವ ನಿಯಂತ್ರಿಸುವ ಕರ್ತವ್ಯವನ್ನು ನಿಯಾಮಕಗಳು ನಿರ್ವಹಿಸಬೇಕು. ಅನಿಲ, ಆವಿಯ ತಿರುಬಾನಿ ಅಥವಾ ಅಂತರ್ದಹನ ಎಂಜಿನ್ನುಗಳಲ್ಲಿ ಇಂಧನ ಅಥವಾ ಆವಿ ಶಕ್ತಿಯನ್ನು ಒದಗಿಸುತ್ತದೆ. ಇಂಧನ ಒದಗಿಸುವ ದರವನ್ನು ನಿಯಾಮಕ ನಿಯಂತ್ರಿಸುವುದರ ಮೂಲಕ ಜವವನ್ನು ನಿಯಂತ್ರಿಸುತ್ತದೆ. ನಿಯಾಮಕಗಳ ಆಯ್ಕೆಯಲ್ಲಿ ಕೆಳಗಿನ ವಿಷಯಗಳನ್ನು ಗಮನಿಸಬೇಕು: 1 ಉಪರೋಧಕ ಅಥವಾ ಇಂಧನ ನಿಯಂತ್ರಣ ಕವಾಟವನ್ನು ಚಲಿಸಬೇಕಾದ ಬಲ. 2 ಜವದ ವ್ಯಾಪ್ತಿ. 3 ಸಮಶ್ವರ ಆಚರಣೆಯ (ಐಸೊಕ್ರೊನಸ್ ಆಪರೇಷನ್) ಅಗತ್ಯ. 4 ಎಂಜಿನ್ನಿನ ಲಕ್ಷಣಗಳು ಇತ್ಯಾದಿ.

ಸೇವೆಯ ಭಿನ್ನಭಿನ್ನ ಪರಿಸ್ಥಿತಿಗಳನ್ನು ಅನುಸರಿಸಿ ತತ್ತ್ವ ಹಾಗೂ ರಚನೆಯಲ್ಲಿ ವಿಭಿನ್ನವಾದ ಅಸಂಖ್ಯಾತ ರೀತಿಯ ನಿಯಾಮಕಗಳಿವೆ.

1 ಆಚರಣೆಯ ತತ್ತ್ವವನ್ನಾದರಿಸಿರುವುದು: (i) ಅಪಕೇಂದ್ರಕ ಮತ್ತು (ii) ಜಡತ್ವ ನಿಯಾಮಕಗಳು.

2 ಆಚರಣೆಯ ಪ್ರಕಾರ ವಿಭಾಗಿಸಿರುವುದು: (i) ಸಂವೇದಿ (ಸೆನ್ಸಿಟಿವ್) ಮತ್ತು (ii) ಸಮಕಾಲಿಕ ಜವ ಮತ್ತು ಚರ ಜವ ನಿಯಾಮಕಗಳು.

3 ಆವಿಯ ನಿಯಂತ್ರಣದ ಪ್ರಕಾರ ಮಾಡಿರುವ ವಿಭಾಗ: (i) ಥ್ರಾಟಲ್: ಮತ್ತು (ii) ಚರ ಭೇದನ (ವೇರಿಯೆಬಲ್ ಕಟ್ ಆಫ್) ನಿಯಾಮಕಗಳು.

4 ರಚನೆಗೆ ಸಂಬಂಧಿಸಿದ ವಿಭಾಗ: (i) ಲೋಲಕ ಮತ್ತು (ii) ದಂಡ ನಿಯಾಮಕಗಳು ಮೇಲಿನವುಗಳ ಪೈಕಿ ಕೆಲವನ್ನು ಇಲ್ಲಿ ವಿವರಿಸಿದೆ.

ಪರಿಭ್ರಮಕವನ್ನು (ರನ್ನರ್) ಮುಟ್ಟುವ ನೀರಿನ ಗಾತ್ರವನ್ನು ನಿಯಂತ್ರಿಸುವ ಮೂಲಕ ನಿಯಾಮಕ ತಿರುಬಾನಿಯ ಜವವನ್ನು ನಿಯಂತ್ರಿಸುತ್ತದೆ. ಈ ಪ್ರವಾಹ ಬದಲಾವಣೆಗೆ ಅಗತ್ಯವಾದ ಶಕ್ತಿಯನ್ನು ತೈಲ ಒತ್ತಡ ಸರ್ವೋಮೋಟಾರ್ ಒದಗಿಸುತ್ತದೆ. ಚಿತ್ರ 2ರಲ್ಲಿ ತೋರಿಸಿರುವ ನಿಯಾಮಕವನ್ನು ಅಲವಡಿಸಿರುವ ತಿರುಬಾನಿಯ ಜವ ಹೆಚ್ಚಿದಂತೆ




ಚಿತ್ರ 2

ಭಾವಿಸೋಣ. ಆಗ ತಿರುಬಾನಿಯ ಮುಖ್ಯದಂಡದಿಂದ ಜವ ನಿಯಾಮಕವನ್ನು ತಲುಪುತ್ತದೆ. ಇದರಿಂದ ನಿಯಾಮಕದ ಲೋಲಕದ ಗುಂಡುಗಳು ಜೋರಾಗಿ ತಿರುಗುತ್ತವೆ. ಅಪಕೇಂದ್ರಕ ಬಲ ವೃದ್ಧಿಸಿ ನಿಯಾಮಕ ದಂಡ ಮೇಲಕ್ಕೆತ್ತಲ್ಪಡುತ್ತವೆ. ಇದರ ಸಂಪರ್ಕದಲ್ಲಿರುವ ಸನ್ನೆಕೋಲಿನ (ಲಿವರ್) *p* ತುದಿಯೂ ಏಳುತ್ತದೆ. ಆಗ ಇದೇ ಸನ್ನೆಕೋಲಿನ *Q* ತುದಿ ಕೆಳಗೆ ನೂಕಲ್ಪಡುತ್ತದೆ. ಹೀಗಾಗಿ ಇದಕ್ಕೆ ಲಗತ್ತಾಗಿರುವ ಕೊಂತದಂಡವೂ ಕೆಳಗೆ ಸರಿದು 2ನೆಯ ದ್ವಾರದ ಮೂಲಕ ಸರ್ವೋಮೋಟಾರಿನ ಎಡಭಾಗವನ್ನು ಪ್ರವೇಶಿಸುತ್ತದೆ. ಆಗ ಕೊಂತ ಬಲಗಡೆಗೆ ಚಲಿಸಿ ಈಟಿಯನ್ನು ನಾಸಾಗ್ರದ ಬಾಯಿಗೆ ನೂಕುತ್ತದೆ. ನಾಸಾಗ್ರದ ದ್ವಾರ ಕಿರಿದಾಗಿ ಹರಿವ ನೀರಿನ ಮೊತ್ತ ಕಡಿಮೆಯಾಗಿ ತಿರುಬಾನಿಯ ಜವ ತಗ್ಗುತ್ತದೆ.

ಆವಿ ಎಂಜಿನ್ನುಗಳಲ್ಲಿ ಉಪರೋಧಕ ಹಾಗೂ ಭೇದನ ನಿಯಾಮಕಗಳೆರಡೂ ಬಳಕೆಯಲ್ಲುಂಟು. ಎಂಜಿನ್ನಿನ ದಂಡದಿಂದ ಚಲನೆ ನಿಯಾಮಕದ ರಾಟೆಗೆ ವರ್ಗವಾಗುತ್ತದೆ. ಜವ ಹೆಚ್ಚಿದಾಗ ಲೋಲಕದ ಗುಂಡುಗಳು ಅಪಕೇಂದ್ರಕ ಬಲದಿಂದ ದೂರ ಸರಿಯುತ್ತವೆ. ಆಗ ದಂಡ ಕೆಳಕ್ಕೆ ದೂಡಲ್ಪಟ್ಟು ಆವಿಯ ಪ್ರವೇಶದ್ವಾರ ಮುಚ್ಚಲ್ಪಡುತ್ತದೆ. ಇದರಿಂದ ಒಳಗೆ ಪ್ರವೇಶಿಸುವ ಆವಿಯ ಉಪರೋಧಕ ಕ್ರಿಯೆಯಿಂದ ಪ್ರವೇಶಿಕ ಒತ್ತಡ ತಗ್ಗುತ್ತದೆ. ಹೀಗಾಗಿ ಆವಿಯಿಂದಾಗುವ ಕಾರ್ಯ ತಗ್ಗಿ ಜವವೂ ತಗ್ಗುತ್ತದೆ. ಈ ವಿಧಾನದಲ್ಲಿ ಆವಿಯ ಶಕ್ತಿ ವ್ಯರ್ಥವಾಗುತ್ತದೆ. ಭೇದನ ವಿಧಾನದಲ್ಲಿ ಮೇಯರ್ ವಿಸ್ತರಣ ಕವಾಟ ಮುಂತಾದ ಉಪಕರಣಗಳ ಸಹಾಯದಿಂದ ಭೇದನ ಬಿಂದುವನ್ನು ಬದಲಾಯಿಸುವುದರಿಂದ ಒದಗಿಸುವ ಆವಿಯ ಮೊತ್ತವನ್ನು ಬದಲಾಯಿಸಿ ಜವವನ್ನು ನಿಯಂತ್ರಿಸಬಹುದು. ಅಂತರ್ದಹನ ಎಂಜಿನ್ನುಗಳಲ್ಲಿ ಇಂಧನಗಾತ್ರದ ನಿಯಂತ್ರಣದಿಂದ ಜವ ನಿಯಂತ್ರಣ ಮಾಡಬಹುದು.

**ಜಡತ್ವ ಬಲದ ನಿಯಾಮಕಗಳು:** ನಿಯಾಮಕ ದಂಡದ ಕೋನ ವೇಗೋತ್ಕರ್ಷ ಇಲ್ಲವೆ ವೇಗಾಪಕರ್ಷದಿಂದಾದ ಜಡತ್ವಬಲಗಳು ನಿಯಾಮಕ ಗುಂಡುಗಳ ಸ್ಥಾನಗಳನ್ನು ಬದಲಾಯಿಸತೊಡಗುವಂತೆ ಅವುಗಳ ಜೋಡಣೆಯಿರುತ್ತದೆ. ನಿಯಾಮಕ ಗುಂಡುಗಳ ಸ್ಥಾನಪಲ್ಲಟವನ್ನು ಸೂಕ್ತ ಸ್ಪ್ರಿಂಗುಗಳು ನಿಯಂತ್ರಿಸುತ್ತವೆ. ಈ ಪಲ್ಲವಿ ಸೂಕ್ತ ಯಂತ್ರಾವಳಿಯಿಂದ ಎಂಜಿನ್ನಿಗೆ ಒದಗಿಸುವ ಶಕ್ತಿಯನ್ನು ಹತೋಟಿಗೊಳಿಸಿ ಜವವನ್ನು ನಿಯಂತ್ರಿಸುತ್ತದೆ. (ಕೆ.ಆರ್.ಎಂ.ಬಿ.)

## ಕ್ರಮನಿರ್ದರ್ಶಜಗಳು :

ಸಂಖ್ಯಾಕಲನಶಾಸ್ತ್ರದಲ್ಲಿ ಯಾವುದೇ ಸಾಂಖ್ಯಿ ಸಮಷ್ಟಿಯಿಂದ (ಪಾಪ್ಯುಲೇಷನ್) ಸಾಂತಸಂಖ್ಯೆಯ ವೀಕ್ಷಣೆಗಳನ್ನು ಮಾಡಿ ಅವನ್ನು ಆರೋಹೀ ಪರಿಮಾಣಕ್ರಮದಲ್ಲಿ ಅಳವಡಿಸಿದಾಗ ದೊರೆಯುವ ಗಣ (ಆರ್ಡರ್ ಸ್ಟ್ಯಾಟಿಸ್ಟಿಕ್ಸ್). ಸಾಮಾನ್ಯವಾಗಿ ಸಂಖ್ಯಾಕಲನಶಾಸ್ತ್ರ ಒಂದು ಸಮಷ್ಟಿಯನ್ನು ಅದರಿಂದ ಆಯ್ದ ಕೆಲವೇ ವೀಕ್ಷಣೆಗಳ ಆಧಾರದ ಮೇಲೆ ಅರಿತುಕೊಳ್ಳುವ ಸಮಸ್ಯೆಗಳನ್ನು ಕುರಿತದ್ದು. ವೀಕ್ಷಿತ ಸಾಂಖ್ಯಿ ಬೆಲೆಗಳಾದ $x_1, x_2, \ldots x_n$ ಗಳನ್ನು ಆರೋಹೀಪರಿಮಾಣ ಕ್ರಮದಲ್ಲಿ $y_1 \le y_2 \le \ldots \le y_n$ ಎಂಬುದಾಗಿ ವ್ಯವಸ್ಥೆಗೊಳಿಸಬಹುದು. ಆಗ $x_1, x_2, \ldots x_n$ ಬೆಲೆಗಳಲ್ಲಿ $y_n$ ಗರಿಷ್ಠವಾದದ್ದು, $y_{n-1}$ ತದನಂತರದ್ದು, ಹೀಗೆಯೇ ಮುಂದುವರಿದರೆ $y_1$ ಕನಿಷ್ಠವಾದದ್ದಾಗುತ್ತದೆ. $\{y_1, y_2, \ldots, y_n\}$ ಗಣಕ್ಕೆ (ಸೆಟ್) $x_1, x_2, \ldots x_n$ ಪ್ರತಿದರ್ಶಿಗಳ (ಸ್ಯಾಂಪಲ್ಸ್) ಕ್ರಮ ನಿರ್ದರ್ಶಜಗಳು ಎಂದು ಹೆಸರು. $y_1$ ಮೊದಲನೆಯ ಕ್ರಮನಿರ್ದರ್ಶಜ, $y_2$ ಎರಡನೆಯ ಕ್ರಮನಿರ್ದರ್ಶಜ,.........$y_n$ nನೆಯ ಕ್ರಮನಿರ್ದರ್ಶಜ. ಇವನ್ನು ಪ್ರತಿದರ್ಶಿ ಬೆಲೆಗಳಿಂದ ಪಡೆಯಬಹುದು; ಅಥವಾ ಕೆಲವೊಮ್ಮೆ ಒಂದು ಪ್ರಯೋಗದ ನೇರ ಫಲಿತಾಂಶಗಳ ರೂಪದಲ್ಲಿಯೂ ಪಡೆಯಬಹುದು. ಇದರ ಒಂದು ಉದಾಹರಣೆಯನ್ನು ವಿದ್ಯುದ್ದೀಪಗಳ ಆಯುರ್ಮಾನದಲ್ಲಿ ಕಾಣಬಹುದು. ಯಾದೃಚ್ಛಿಕವಾಗಿ ಆಯ್ದ n ದೀಪಗಳನ್ನು ಏಕಕಾಲದಲ್ಲಿ ಉರಿಸಲು ತೊಡಗಿ ಅವುಗಳ ಆಯಸ್ಸುಗಳನ್ನು (ಉರಿದು ನಂದಿ ಹೋಗುವವರೆಗಿನ ಕಾಲ) ಗುರುತಿಸುವುದು ಇಂಥದೊಂದು ಪ್ರಯೋಗ. ಇಲ್ಲಿ ದೊರೆಯುವ ಆಯುರ್ಮಾನ ಬೆಲೆಗಳು ಕ್ರಮನಿರ್ದರ್ಶಜಗಳು.

ವೀಕ್ಷಣೆಗಳನ್ನು ಮಾಡಲಾದ ಯಾದೃಚ್ಛಿಕ ಚರಕ್ಕೆ ಒಂದು ಅವಿಚ್ಛಿನ್ನ ಸಮಾಕಲಿತ ವಿತರಣೆ (ಕಂಟಿನ್ಯೂಅಸ್ ಕ್ಯುಮ್ಯುಲೆಟಿವ್ ಡಿಸ್ಟ್ರಿಬ್ಯೂಷನ್) ಇದೆ ಎಂಬ ಅಭಿಗ್ರಹೀತ ಕ್ರಮನಿರ್ದರ್ಶಜಗಳನ್ನು ಆಧರಿಸಿರುವ ಹೆಚ್ಚಿನ ತಂತ್ರಗಳಿಗೆ ಅವಶ್ಯ. ಇದು ಹೀಗಾಗಿರುವಾಗ ಕ್ರಮನಿರ್ದರ್ಶಜಗಳ ಗಣ, ಸಮಷ್ಟಿಯನ್ನು ಕುರಿತು ಪ್ರತಿದರ್ಶಿ ಒಳಗೊಂಡಿರುವಷ್ಟೇ ಮಾಹಿತಿಯನ್ನು ಒಳಗೊಂಡಿದೆ ಎಂದು ತೋರಿಸಬಹುದು. ಅರ್ಥಾತ್, ಕ್ರಮನಿರ್ದರ್ಶಜಗಳ ಗಣ ಅವಿಚ್ಛಿನ್ನ ವಿತರಣೆಗಳ ಕುಟುಂಬಕ್ಕೆ "ಸಾಕು" (ಸಫಿಶಿಯಂಟ್). ಇಷ್ಟು ಮಾತ್ರವಲ್ಲ ಈ ಗಣ ಪರಿಪೂರ್ಣತೆಯ (ಕಂಪ್ಲೀಟ್‍ನೆಸ್) ಗುಣವನ್ನು ಸಹ ಪಡೆದಿದೆ ಎಂದೂ ಗೊತ್ತಿದೆ. ಸಮಷ್ಟಿ ಲಕ್ಷಣಗಳ ಅನಭಿನತ ಅಂದಾಜುಕಾರಿಗಳ (ಅನ್‍ಬಯಸ್ಡ್ ಎಸ್ಟಿಮೇಟರ್ಸ್) ಏಕೈಕತೆಯನ್ನು ಈ ಗುಣ ಖಚಿತಪಡಿಸುವುದು.

ಪ್ರತಿದರ್ಶಿ ಒಳಗೊಂಡಿರುವ ಮಾಹಿತಿಯನ್ನು ಉಪಯೋಗಿಸಿ ಸಮಷ್ಟಿಯನ್ನು ಕುರಿತ ಅನುಮಿತಿಗಳನ್ನು (ಇನ್ಫರೆನ್ಸ್) ಮಾಡುವ ಒಂದು ಮಾರ್ಗವೆಂದರೆ ಸಮಷ್ಟಿಯ ಕೆಲವು ಕ್ರಮಪ್ರಾಚಲಗಳ (ಆರ್ಡರ್ ಪ್ಯಾರಾಮೀಟರ್ಸ್) ಮೌಲ್ಯಗಳನ್ನು, ಅರ್ಥಾತ್ ಸಮಷ್ಟಿಯನ್ನು ಪೂರ್ವನಿರ್ದಿಷ್ಟ ಅನುಪಾತಗಳಾಗಿ ವಿಭಾಗಿಸುವ ಮೌಲ್ಯಗಳನ್ನು, ಅಂದಾಜು ಮಾಡುವುದಾಗಿದೆ. ಆಗ ಸಮಷ್ಟಿಯ ಈ ಕ್ರಮಪ್ರಾಚಲಗಳಿಗೆ ಸಂವಾದಿಯಾಗಿ (ಕರೆಸ್ಪಾಂಡ್) ಕ್ರಮನಿರ್ದರ್ಶಜಗಳು ಇರುತ್ತವೆಂಬುದು ಸ್ಪಷ್ಟ.

ಕ್ರಮನಿರ್ದರ್ಶಜಗಳ ಇತರ ಉಪಯೋಗಗಳನ್ನು ಮುಂದೆ ವಿವರಿಸಿದೆ.

ಪ್ರಸಾಮಾನ್ಯ ವಿತರಣೆಯಿಂದ (ನಾರ್ಮಲ್ ಡಿಸ್ಟ್ರಿಬ್ಯೂಷನ್) ಪಡೆದ ಪ್ರತಿದರ್ಶಿ

ವಿತರಣೆಗಳ ಮೇಲೆ (ಸ್ಯಾಂಪ್ಲಿಂಗ್ ಡಿಸ್ಟ್ರಿಬ್ಯೂಷನ್ಸ್) ಅಭಿಜಾತ ಸಂಖ್ಯಾಕಲನೀಯ ಅನುಮಿತಿಯ ತಂತ್ರಗಳು ಬಹಳಷ್ಟು ಅವಲಂಬಿಸಿವೆ. ಆದರೆ ಈ ತಂತ್ರಗಳು ಸಿಂಧುವಲ್ಲದಂಥ ಸಂದರ್ಭಗಳು ಇವೆ: ಉದಾಹರಣೆಗೆ, ಸಮಷ್ಟಿಯಲ್ಲಿ ಗಮನಾರ್ಹವಾದ ಅಸಮಾಂಗತ್ವ ಸ್ಪಷ್ಟವಾಗಿದ್ದಾಗ, ಇಂಥ ಸನ್ನಿವೇಶಗಳನ್ನು ಎದುರಿಸಲು ಅಪ್ರಾಚಲ ವಿಧಾನಗಳನ್ನು ಬಳಸಲಾಗಿದೆ. ಇವು ಕ್ರಮನಿರ್ದರ್ಶಜಗಳನ್ನು ವಿಪುಲವಾಗಿ ಬಳಸಿಕೊಳ್ಳುತ್ತವೆ. ಒಂದು ಮೂಲಪ್ರಮೇಯದ ಪ್ರಕಾರ, ಸರಾಸರಿಯಲ್ಲಿ n ಗಾತ್ರವಿರುವ ಒಂದು ಪ್ರತಿದರ್ಶಿ ಸಮಷ್ಟಿಯನ್ನು (n+1) ಸಮಭಾಗಗಳಾಗಿ ವಿಭಾಗಿಸುತ್ತದೆ; ಅಂದರೆ ಸಮಷ್ಟಿಯ 1/(n+1) ಪ್ರಮಾಣ (ಪ್ರಪೋರ್ಷನ್) ಯಾವುದೇ ಎರಡು ಅನುಕ್ರಮ ಕ್ರಮನಿರ್ದರ್ಶಜಗಳ ನಡುವೆ ನೆಲೆಸಿದೆ. ಈ ವಾಸ್ತವಾಂಶದ ಮೇಲೆಯೂ ಇದರ ಫಲಿತಗಳ ಮೇಲೆಯೂ ಅನೇಕ ಅಪ್ರಾಚಲವಿಧಾನಗಳು ಅವಲಂಬನೆ ಪಡೆದಿವೆ.

ಪ್ರಾಚಲಗಳ ಅಂದಾಜಿಗಾಗಿ (ಎಸ್ಟಿಮೇಷನ್ ಪ್ಯಾರಾಮಿಟರ್ಸ್) ಅಥವಾ ಸಂಖ್ಯಾಕಲನೀಯ ಊಹೆಗಳ (ಸ್ಟ್ಯಾಟಿಸ್ಟಿಕಲ್ ಹೈಪಾಥಿಸೀಸ್) ಪರೀಕ್ಷಣೆಗಳಿಗಾಗಿ ಕ್ರಮನಿರ್ದರ್ಶಜಗಳನ್ನು ಉಪಯೋಗಿಸಬೇಕಾದರೆ ಅವುಗಳ ಪ್ರತಿದರ್ಶಿವಿತರಣೆಗಳನ್ನು ಮತ್ತು ಪ್ರತಿದರ್ಶಿಯ ಗಾತ್ರ ಸ್ವೇಚ್ಛೆಯಂತೆ ಬೃಹತ್ತಾಗಿರುವಾಗ ಈ ಪ್ರತಿದರ್ಶಿವಿತರಣೆಗಳ ವರ್ತನೆಯನ್ನು ತಿಳಿದಿರುವುದು ಅವಶ್ಯ. ಈ ಸನ್ನಿವೇಶದಲ್ಲಿ *k*ನೆಯ ಕ್ರಮನಿರ್ದರ್ಶಜ. *k/n* ಒಂದು ಧನಪರಿಮಿತಿಗಾಮಿಯಾದಾಗ, ಅನಂತಸ್ಪರ್ಶೀಯವಾಗಿ ಪ್ರಸಾಮಾನ್ಯವಾಗಿ ವಿತರಣೆಗೊಂಡಿವೆ ಎಂಬುದನ್ನು ಗಮನಿಸಬೇಕು. ಅಲ್ಲದೆ ಚರಮ (ಎಕ್ಸ್‌ಟ್ರೀಮ್) ನಿರ್ದರ್ಶಜಗಳ (ಉದಾಹರಣೆಗೆ $y_n$ ಪರಿಮಿತಿ (ಲಿಮಿಟ್) ವಿತರಣೆಗಳ ರೂಪಗಳು ಸಹ ತಿಳಿದಿವೆ.

ಕ್ರಮನಿರ್ದರ್ಶಜಗಳ ಸಂಯುಕ್ತ ವಿತರಣೆ (ಜಾಯಿಂಟ್ ಡಿಸ್ಟ್ರಿಬ್ಯೂಷನ್) ತೀರ ನೇರವಾಗಿ ಜನಕ ವಿತರಣೆ ಉತ್ಪನ್ನಗಳ (ಪೇರೆಂಟ್ ಡಿಸ್ಟ್ರಿಬ್ಯೂಷನ್ ಫಂಕ್ಷನ್ಸ್) ಮೇಲೆ ನಿಂತಿದೆ: ಆದ ಕಾರಣ, ಕ್ರಮನಿರ್ದರ್ಶಜಗಳಿಂದ ಜನಕವಿಭಾಜಕಗಳ (ಪೇರೆಂಟ್ ಕ್ವಾಂಟೈಲ್ಸ್) ಬಿಂದು ಅಂದಾಜು ವಿತರಣಮುಕ್ತವಲ್ಲ. ಆದರೆ, ಯಾವುದೇ ಜನಕವಿಭಾಜಕಕ್ಕೆ ವಿತರಣಮುಕ್ತ ವಿಶ್ವಸನೀಯ ಅಂತರವನ್ನು (ಡಿಸ್ಟ್ರಿಬ್ಯೂಷನ್ ಫ್ರೀಕಾನ್ಫಿಡೆನ್ಸ್ ಇಂಟರ್ವಲ್) ಅಳವಡಿಸಲು ಕ್ರಮನಿರ್ದರ್ಶಜಗಳ ಜೊತೆಗಳನ್ನು ಉಪಯೋಗಿಸಬಹುದೆಂಬುದೊಂದು ಗಮನಾರ್ಹ ಸಂಗತಿ. ಹೀಗೆ, $(y_r,y_s)$ ಎಂಬುದು pನೆಯ ವಿಭಾಜಕವನ್ನು, ಜನಕವಿತರಣ ಉತ್ಪನ್ನದ ಮೇಲೆ ಎಂದೂ ಅವಲಂಬಿಸದ, ಒಂದು ವಿಶ್ವಸನೀಯ ಗುಣಾಂಕದಿಂದ ಆವರಿಸುವುದು. ಅಲ್ಲದೆ, $(y_r,y_s)$ ಕ್ರಮನಿರ್ದರ್ಶಜಗಳು ವಿತರಣಮುಕ್ತ ಸಹನಾಂತರವನ್ನು (ಟಾಲರೆನ್ಸ್ ಇಂಟರ್ವಲ್) ಒದಗಿಸುತ್ತವೆ. ಕ್ರಮನಿರ್ದರ್ಶಜಗಳು ಮಾತ್ರ ಹೀಗೆ ಮಾಡುತ್ತವೆ.

ಒಂದು ಸಮಷ್ಟಿಯ ಸ್ಥಾನ (ಲೊಕೇಶನ್) ಮತ್ತು ಮಾನಕ (ಸ್ಕೇಲ್) ಪ್ರಾಚಲಗಳ ಅಂದಾಜುಮಾಡುವ ಸಮಸ್ಯೆ ಕ್ರಮನಿರ್ದರ್ಶಜಗಳ ಉಪಯೋಗದಿಂದ ಚಿರಪರಿಚಿತ ರೇಖೀಯ ಮಾದರಿಗೆ (ಲೀನಿಯರ್ ಮೋಡೆಲ್) ಸಂಕ್ಷೇಪಗೊಳ್ಳುತ್ತದೆ; ಮತ್ತು ಈ ಮೂಲಕ ಕನಿಷ್ಠ ವರ್ಗಗಳ (ಲೀಸ್ಟ್ ಸ್ಕ್ವಯರ್ಸ್) ಅಂದಾಜುಕಾರಿಗಳ ವಿಧಾನ ಹಾಗೂ ಫಲಿತಾಂಶಗಳು ನಮಗೆ ಲಭಿಸುತ್ತವೆ. ವೀಕ್ಷಣೆಗಳ ಗಣದಲ್ಲಿ, ತೌಲನಿಕವಾಗಿ ಅತಿದೊಡ್ಡ ಅಥವಾ ಅತಿಸಣ್ಣ ಮೌಲ್ಯಗಳ ಇರುವಿಕೆ, ಓರ್ವ ಪ್ರಾಯೋಗಿಕ ಸಂಖ್ಯಾಕಲನ ಶಾಸ್ತ್ರಜ್ಞನನ್ನು ಇವೆಲ್ಲ ವೀಕ್ಷಣೆಗಳೂ ಒಂದೇ ಜನಕದಿಂದ ಜನಿತವಾದವುಗಳಾಗಿರಬಹುದೇ ಎಂದು ಪರೀಕ್ಷೆ ಮಾಡಲು ಒತ್ತಾಯಿಸುತ್ತವೆ.

ಚರಮ ಕ್ರಮನಿರ್ದರ್ಶಜಗಳ ವರ್ತನೆಯ ಮೇಲೆ ಮತ್ತು ವಿಶಿಷ್ಟವಾಗಿ, ಸಂದೇಹಾಸ್ಪದವಲ್ಲದ ವೀಕ್ಷಣೆಗಳಿಗೆ ಸ್ಥಾನ ನಿರ್ಧರಿಸುವ ಯಾವುದೋ ಒಂದು ಅಳತೆಯಿಂದ ಈ ಕ್ರಮನಿರ್ದರ್ಶಜಗಳ ವಿಚಲನೆಯ (ಡೀವಿಯೇಷನ್) ಮೇಲೆ ಆಧರಿಸಿದ ಪರೀಕ್ಷಾ ನಿಕಷಗಳ (ಟೆಸ್ಟ್ ಕ್ರೈಟೀರಿಯ) ಸಂವರ್ಧನೆ ಈ ಸನ್ನಿವೇಶವನ್ನು ನಿರ್ವಹಿಸುವ ಒಂದು ಸಹಜ ನಿರಪೇಕ್ಷ ವಿಧಾನ.

ಜನಕ ವಿತರಣೆಗಳನ್ನು ಲಕ್ಷಣೀಕರಿಸುವಲ್ಲಿ ಕ್ರಮನಿರ್ದರ್ಶಜಗಳು ಉಪಯುಕ್ತವಾಗಿವೆ. ವೀಕ್ಷಣೆಗಳು ನಿರ್ದಿಷ್ಟರೂಪಗಳ ಸಮಷ್ಟಿಗಳಿಂದ ಬಂದಿರಬಹುದೇ ಎಂದು ಪರಿಶೀಲಿಸಿ ಪರೀಕ್ಷಾ ವಿಧಾನಗಳನ್ನು ರೂಪಿಸುವಲ್ಲಿ ಇಂಥ ಲಕ್ಷಣೀಕರಣ ಮಹತ್ತ್ವ ಪಡೆದಿದೆ. ಉದಾಹರಣೆಗೆ, ಪ್ರತಿದರ್ಶಿತವಾದ (ಸ್ಯಾಂಪಲ್ಡ್) ಸಮಷ್ಟಿ ಋಣ ಘಾತೀಯವಾದಾಗ (ನೆಗೆಟಿವ್ ಎಕ್ಸ್‌ಪೊನೆನ್ಷಿಯಲ್) ಮತ್ತು ಆದಾಗ ಮಾತ್ರ $y_1$ ಮತ್ತು $y_2+y_3+\ldots+y_n-(n-1)y_1$ ಸ್ವತಂತ್ರರಾಗಿರಬಲ್ಲುವು. (ಆರ್.ಪಿ.ಪಿ.)

**ಕ್ರಮಮುಕ್ತಿ :** ಮುಕ್ತಿಯ ಎರಡು ಪ್ರಕಾರಗಳಲ್ಲೊಂದು. ಇನ್ನೊಂದು ಜೀವನ್ಮುಕ್ತಿ. ಜೀವನ್ಮುಕ್ತ ಇಹದಲ್ಲೇ ಬ್ರಹ್ಮವೂ ಆತ್ಮವೂ ಒಂದೇ ಎಂಬ ಜ್ಞಾನವನ್ನು ಪಡೆದು ಮುಕ್ತನಾಗಿಬಿಡುತ್ತಾನೆ. ದೇಹವಿರುವವರೆಗೆ ಅದರ ಕಾರ್ಯಗಳು ಅವನನ್ನು ಬಂಧಿಸುವುದಿಲ್ಲ. ದೇಹ ಬಿದ್ದು ಹೋದಮೇಲೆ ಸಂಪೂರ್ಣವಾಗಿ ಬ್ರಹ್ಮದಲ್ಲಿ ಅವನು ಐಕ್ಯಹೊಂದುತ್ತಾನೆ. ಇದು ಜೀವನ್ಮುಕ್ತನ ವಿದೇಹಮುಕ್ತಿ.

ಕ್ರಮಮುಕ್ತಿ ಜೀವನ್ಮುಕ್ತಿಯಲ್ಲ. ಒಮ್ಮೆಯೇ ಈ ಜೀವನದಲ್ಲಿ ಪಡೆದ ಮುಕ್ತಿಯೂ ಅಲ್ಲ. ದೇಹ ಬಿದ್ದುಹೋದ ಕೂಡಲೆ ಪಡೆಯುವ ವಿದೇಹಮುಕ್ತಿಯೂ ಅಲ್ಲ. ಅದು ಜೀವಾನಂತರ ನಿಧಾನವಾಗಿ, ಹಂತಹಂತವಾಗಿ ಪಡೆಯುವ ಮುಕ್ತಿ. ಹೀಗೆ ಕ್ರಮವಾಗಿ ಪಡೆಯುವ ಮುಕ್ತಿಯೂ ಒಂದೇ ಬಗೆಯದಾಗಿಲ್ಲ. ಅದು ಬೇರೆ ಬೇರೆ ದರ್ಶನಗಳ ತತ್ತ್ವಕ್ಕನುಗುಣವಾಗಿ ಭಿನ್ನವಾಗಿದೆ. ಅದ್ವೈತ ದರ್ಶನದ ಪ್ರಕಾರ ಮುಕ್ತಿ ಎಂದರೆ ಬ್ರಹ್ಮೈಕ್ಯ. ಇದು ಭಾವವನ್ನು ಸಶರೀರವಾಗಿ ಇಹದಲ್ಲೇ ಪಡೆಯುವ ಜೀವ, ತನ್ನ ಸಕಲ ಕರ್ಮವನ್ನೂ ಈಶ್ವರಪ್ರೀತಿಗಾಗಿ ನಿಷ್ಕಾಮದಿಂದ ಅರ್ಪಿಸಿ, ದೇವಯಾನದ ಮೂಲಕ ದೇವತೆಗಳ ಲೋಕವನ್ನು ಸೇರುತ್ತದೆ. ಕಾಮ್ಯ ಕರ್ಮವನ್ನು ಮಾಡುವ ಜೀವ ಪಿತೃಯಾನದ ಮೂಲಕ ಪಿತೃಲೋಕವನ್ನು ಸೇರುತ್ತದೆ. ಪಿತೃಲೋಕವನ್ನು ಸೇರಿದ ಜೀವರುಗಳು ತಮ್ಮ ಕರ್ಮಫಲ ತೀರಿದಮೇಲೆ ಕೆಳ ಅಂತಸ್ತಿನ ಜೀವಿಗಳಾಗುತ್ತವೆ. ನಿಷ್ಕಾಮಕರ್ಮವನ್ನು ಅನುಸರಿಸಿದ ಜೀವರುಗಳು ಪುನಃ ಈ ಲೋಕಕ್ಕೆ ಹಿಂತಿರುಗುವುದಿಲ್ಲ. ಅಲ್ಲೇ ಇದ್ದು ಬ್ರಹ್ಮಜ್ಞಾನವನ್ನು ಪಡೆದು ಬ್ರಹ್ಮದಲ್ಲಿ ಐಕ್ಯವಾಗಿ ಪರಮಮುಕ್ತಿಯನ್ನು ಪಡೆಯುತ್ತಾರೆ. ಶಂಕರಾಚಾರ್ಯರು ಜೀವನ್ಮುಕ್ತಿಯೊಂದಿಗೆ ಇದನ್ನೂ ಅಂಗೀಕರಿಸಿದ್ದಾರೆ. ಅವರ ಪ್ರಕಾರ ಈ ಮುಕ್ತಿಯೂ ಜೀವನ್ಮುಕ್ತಿಯಂತೆ ಬ್ರಹ್ಮೈಕ್ಯವೇ. ಆದರೆ ಇದು ಕಾಲಾಂತರದಲ್ಲಿ ಕ್ರಮವಾಗಿ ಪಡೆಯುವಂಥದು.

ರಾಮಾನುಜಾಚಾರ್ಯರು ಕ್ರಮಮುಕ್ತಿಯನ್ನು ಮಾತ್ರ ಅಂಗೀಕರಿಸುತ್ತಾರೆ. ಅವರ ಪ್ರಕಾರ ಕ್ರಮಮುಕ್ತಿ ಐಕ್ಯದಲ್ಲಿ ಕೊನೆಗೊಳ್ಳುವುದಿಲ್ಲ. ಆತ್ಮ ಪರಮಾತ್ಮದ ಅಂಶ ಮಾತ್ರವೇ. ಆದ್ದರಿಂದ ಅದು ಎಂದೆಂದಿಗೂ ಪರಮಾತ್ಮದಲ್ಲಿ ಐಕ್ಯಹೊಂದಲಾರದು ಎಂಬುದು ಅವರ ಮತ. ಆ ಆತ್ಮ ಪರಮಾತ್ಮದಂತೆ ಆಗುವುದೇ ಅದರ ಮುಕ್ತಿದೆಶೆ. ಈ ಮುಕ್ತಿದೆಶೆಯನ್ನು ಅದು ಇಹದಲ್ಲೇ, ಸಶರೀರವಾಗಿಯೇ ಪಡೆಯಲಾರದು. ಈ ಜನ್ಮದಲ್ಲಿ ನಿಷ್ಕಾಮಕರ್ಮವನ್ನು ಮಾಡಿ, ತಾನು ಈಶ್ವರನಿಗೆ ಸಂಪೂರ್ಣವಾಗಿ ಅಧೀನ ಎಂಬ ಜ್ಞಾನವನ್ನು ಪಡೆದುದರಿಂದ ಹುಟ್ಟಿದ ಭಕ್ತಿಯಿಂದ ತನ್ನನ್ನು ಸಂಪೂರ್ಣವಾಗಿ ಈಶ್ವರನಿಗೆ ಅರ್ಪಿಸಿಕೊಂಡು ಈ ಶರೀರ ಬಿದ್ದುಹೋದಮೇಲೆ ಆತ್ಮ ವೈಕುಂಠವಾಸಿಯಾಗುತ್ತದೆ. ಅಲ್ಲಿ ಪರಮಾತ್ಮನ ಸಹವಾಸ ಸಾಲೋಕ್ಯ, ಪರಮಾತ್ಮನಲ್ಲಿ ಸದಾ ನೆಟ್ಟನೋಟ, ಸಾಯುಜ್ಯ–ಇವುಗಳ ಮೂಲಕ ಅದಕ್ಕೆ ಪರಮಾತ್ಮನಲ್ಲಿ ಸದಾ ನೆಟ್ಟ ನೋಟ, ಸಾಯುಜ್ಯ – ಇವುಗಳ ಮೂಲಕ ಅದಕ್ಕೆ ಪರಮಾತ್ಮನ ಸಾಮೀಪ್ಯ ದೊರೆಯುತ್ತದೆ. ಪರಮಾತ್ಮ ಅಂಥ ಮುಕ್ತಾತ್ಮನನ್ನು ಆಲಿಂಗಿಸುತ್ತಾನೆ. ಈ ಮೂರು ದೆಶೆಗಳ ಅನಂತರ ಮುಕ್ತಾತ್ಮ ನಿರಂತರ ಧ್ಯಾನದಿಂದ ಪರಮಾತ್ಮನಿಗೆ ಸದೃಶವಾದ ರೂಪವನ್ನು ಪಡೆಯುತ್ತಾನೆ. ಇದು ಸಾರೂಪ್ಯ ಮುಕ್ತಿ. ಎಲ್ಲಕ್ಕಿಂತ ಮೇಲಿನ ಮುಕ್ತಿ. ಆತ್ಮಕ್ಕೆ ಅದಕ್ಕಿಂತ ಹೆಚ್ಚಿನ ಮುಕ್ತಿ ಅಲ್ಲ. **(ನೋಡಿ– ಅದ್ವೈತ) (ನೋಡಿ– ಜೀವನ್ಮುಕ್ತಿ, ಮುಕ್ತಿ)** (ಜಿ.ಎಚ್.)

**ಕ್ರಯ ವಿಕ್ರಯ ಆಯ್ಕೆ ಹಕ್ಕು :** ಭವಿಷ್ಯ ಮಾರುಕಟ್ಟೆಯಲ್ಲಿ ಬೆಲೆಗಳ ಏರಿಳಿತಗಳ ನಿರೀಕ್ಷೆಯಿಂದ ನಿರ್ವಹಿಸುವ ಸಟ್ಟಾ ವ್ಯವಹಾರಗಳ ಅಂಗವಾಗಿಯೋ ಇಂಥ ಬದಲಾವಣೆಗಳ ಫಲವಾಗಿ ಸಂಭವಿಸುವ ನಷ್ಟಗಳ ವಿರುದ್ಧ ರಕ್ಷಣೆ ಏರ್ಪಡಿಸಿಕೊಳ್ಳುವುದಕ್ಕಾಗಿಯೋ ಮಾಡಿಕೊಳ್ಳುವ ಕರಾರುಗಳ ಪ್ರಕಾರ ಪ್ರಾಪ್ತವಾಗುವ ಹಕ್ಕು (ಪುಟ್ ಅಂಡ್ ಕಾಲ್). ಮಾರುಕಟ್ಟೆಯಲ್ಲಿ ಒಂದು ಪದಾರ್ಥದ ಬೆಲೆ ಇಳಿದಿದ್ದಾಗ್ಯೂ ಅದರ ನಿಗದಿಯಾದ ಒಂದು ಪರಿಮಾಣವನ್ನು ಒಂದು ನಿಶ್ಚಿತ ಬೆಲೆಯಲ್ಲಿ ಒಬ್ಬ ಇನ್ನೊಬ್ಬನಿಗೆ ವಿಕ್ರಯಿಸಲು ಪಡೆದುಕೊಂಡದ್ದು ವಿಕ್ರಯ ಆಯ್ಕೆ ಹಕ್ಕು (ಪುಟ್); ಒಂದು ಪದಾರ್ಥದ ನಿಗದಿಯಾದ ಪರಿಮಾಣವನ್ನು ಒಂದು ನಿಶ್ಚಿತ ಬೆಲೆಯಲ್ಲಿ ಕೊಳ್ಳಲು ಪಡೆದುಕೊಂಡದ್ದು ಕ್ರಯ ಆಯ್ಕೆ ಹಕ್ಕು (ಕಾಲ್). ತನಗೆ ಅನುಕೂಲ ತೋರಿದಂತೆ ಅದನ್ನು ಕ್ರಯಿಸುವ ಅಥವಾ ವಿಕ್ರಯಿಸುವ–ಎರಡೂ ಬಗೆಯ–ಹಕ್ಕನ್ನು ಪಡೆದುಕೊಂಡರೆ ಅದು ಕ್ರಯ ವಿಕ್ರಯ ಆಯ್ಕೆ ಹಕ್ಕು ಅಥವಾ ಉಭಯ ಆಯ್ಕೆ ಹಕ್ಕು.

ಉದಾಹರಣೆಗೆ ಒಂದು ಕಂಪನಿಯ ಷೇರು ಬೆಲೆ ರೂ.80 ಆಗಿದ್ದು, ಮುಂದಿನ ಮೂರು ತಿಂಗಳುಗಳೊಳಗೆ ಅದು ರೂ.95ಕ್ಕೆ ಏರುವ ಸಂಭವ ಇರುವುದೆಂದು ಒಬ್ಬ ವ್ಯಕ್ತಿ (A) ಭಾವಿಸಿ, ಆ ಕಂಪನಿಯ 100 ಷೇರುಗಳನ್ನು ಕೊಳ್ಳಬೇಕೆಂದು ಆತ ಬಯಸಬಹುದು. ಅವನು ಅಷ್ಟೊಂದು ಷೇರುಗಳನ್ನು ಕೊಂಡಾಗ ಒಂದು ವೇಳೆ ಅವನ ನಿರೀಕ್ಷೆಯಂತೆ ಮಾರುಕಟ್ಟೆ ಪರಿಸ್ಥಿತಿ ಇಲ್ಲದಿದ್ದರೆ ಅವನಿಗೆ ನಷ್ಟವಾಗುವ ಸಂಭವವುಂಟು. ಅಲ್ಲದೆ ಅಷ್ಟೊಂದು ಷೇರುಗಳನ್ನು ಕೊಳ್ಳಲು ಅವನು ಹೆಚ್ಚು ಹಣ ತೊಡಗಿಸಬೇಕಾಗುತ್ತದೆ. ಇದರ ಬದಲು ಆತ ಇನ್ನೊಬ್ಬನಿಗೆ (B) ರೂ.500 ಆಯ್ಕೆ ಹಕ್ಕು ಧನ ಕೊಟ್ಟು ಕ್ರಯ ಆಯ್ಕೆ ಹಕ್ಕಿನ ಕರಾರು ಮಾಡಿಕೊಳ್ಳುತ್ತಾನೆ; 90 ದಿನಗಳೊಳಗೆ ರೂ.80ರಂತೆ 100 ಷೇರುಗಳನ್ನು B ಯಿಂದ ಕೊಳ್ಳುವ ಹಕ್ಕು ಪಡೆದುಕೊಳ್ಳುತ್ತಾನೆ. ಈ ಅವಧಿಯೊಳಗೆ ಆ ಷೇರುಗಳ ಬೆಲೆ ರೂ.92ಕ್ಕೆ ಏರಬಹುದು. ಆಗ A ತನ್ನ ಕೊಳ್ಳುವ ಹಕ್ಕನ್ನು ಚಲಾಯಿಸಿ, B ಯಿಂದ 100 ಷೇರುಗಳನ್ನು ರೂ.80ರಂತೆ ಕೊಂಡು, ಮಾರುಕಟ್ಟೆಯಲ್ಲಿ ರೂ.92ರಂತೆ ವಿಕ್ರಯಿಸುತ್ತಾನೆ. Aಗೆ ದೊರಕುವ ಲಾಭ ರೂ.1,200ರಲ್ಲಿ ಅಯ್ಕೆ ಹಕ್ಕು ಪಡೆದುಕೊಳ್ಳಲು ಕೊಟ್ಟ ಹಣ ರೂ.500ನ್ನೂ ದಳ್ಳಾಳಿ ಮುಂತಾದ ಖರ್ಚುಗಳನ್ನೂ ಕಳೆದರೆ ಉಳಿದದ್ದು ಅವನ ನಿವ್ವಳ ಲಾಭ. ಅವನ ನಿರೀಕ್ಷೆಯಂತೆ ಷೇರು ಬೆಲೆ ಏರುವ ಬದಲು ಅದು ರೂ.60ಕ್ಕೆ ಇಳಿದರೆ ಅವನಿಗೆ ಸಂಭವಿಸುವ ನಷ್ಟ ರೂ.500ಕ್ಕೆ ಸೀಮಿತವಾಗಿರುತ್ತದೆ.

ಅವನು ಷೇರುಗಳನ್ನು ಕೊಳ್ಳಬಾರದೆಂದು ತೀರ್ಮಾನಿಸಿದರೆ ಅವನು Bಗೆ ಕೊಟ್ಟಿದ್ದ ರೂ.500ನ್ನು ಕಳೆದುಕೊಳ್ಳುತ್ತಾನೆ. ಅವನು ಕ್ರಯ ಆಯ್ಕೆ ಹಕ್ಕಿನ ಕರಾರು ಮಾಡಿಕೊಳ್ಳದೆ 100 ಷೇರುಗಳನ್ನು ಕೊಂಡಿದ್ದಿದ್ದರೆ ಅವನಿಗೆ ಸಂಭವಿಸುತ್ತಿದ್ದ ನಷ್ಟ ರೂ.2,000.

ಆ ಕಂಪನಿಯ ಷೇರು ಬೆಲೆ ರೂ. 80 ಆಗಿದ್ದು, ಮುಂದಿನ 90 ದಿನಗಳಲ್ಲಿ ಅದು ರೂ.60ಕ್ಕೆ ಇಳಿಯುವುದಾಗಿ ನಿರೀಕ್ಷಿಸಿದ್ದರೆ ಆತ ರೂ.400 ಕೊಟ್ಟು 90 ದಿನಗಳೊಳಗೆ ಆ ಕಂಪನಿಯ 100 ಷೇರುಗಳನ್ನು ರೂ.80ರಂತೆ ವಿಕ್ರಯಿಸಲು ಕರಾರು ಮಾಡಿಕೊಳ್ಳಬಹುದು. ಆ ಅವಧಿಯಲ್ಲಿ ಷೇರು ಬೆಲೆ ರೂ.60ಕ್ಕೆ ಇಳಿದಾಗ ಮಾರುಕಟ್ಟೆಯಲ್ಲಿ ಆ ಬೆಲೆಗೆ 100 ಷೇರುಗಳನ್ನು ಕೊಂಡು, ಕರಾರಿನ ಪ್ರಕಾರ Bಗೆ ರೂ.80ರಂತೆ ವಿಕ್ರಯಿಸುತ್ತಾನೆ. ಕ್ರಯ-ವಿಕ್ರಯ ಬೆಲೆಗಳ ವ್ಯತ್ಯಾಸವಾದ ರೂ.2,000ದಲ್ಲಿ ರೂ.400ನ್ನೂ ದಳ್ಳಾಳಿ ಮುಂತಾದ ಖರ್ಚುಗಳನ್ನೂ ಕಳೆದರೆ ಉಳಿದದ್ದು ಅವನ ಲಾಭ. ಅವನ ನಿರೀಕ್ಷೆಯಂತೆ ಮಾರುಕಟ್ಟೆಯಲ್ಲಿ ಷೇರು ಬೆಲೆ ಇಳಿಯದಿದ್ದರೆ ಅವನ ನಷ್ಟ ರೂ.400ಕ್ಕೆ ಸೀಮಿತವಾಗಿರುತ್ತದೆ.

ಮೇಲೆ ವಿವರಿಸಿದ್ದು ಸಟ್ಟಾ ಉದ್ದೇಶದಿಂದ ನಡೆಸುವ ವ್ಯವಹಾರ. ಬೆಲೆ ಏರಿಳಿತದ ನಷ್ಟದ ವಿರುದ್ಧ ರಕ್ಷಣೆಗಾಗಿಯೂ ಆಯ್ಕೆ ಹಕ್ಕಿನ ಕರಾರು ಮಾಡಿಕೊಳ್ಳಬಹುದು. Aಯ ಬಳಿ ಮೇಲೆ ಹೇಳಿದ ಕಂಪನಿಯ 100 ಷೇರುಗಳಿವೆ. ಅವುಗಳ ಮಾರುಕಟ್ಟೆ ಬೆಲೆ ರೂ.80. ಅದರ ಬೆಲೆ ವ್ಯತ್ಯಾಸವಾಗಬಹುದೆಂಬ ಭಾವನೆಯಿಂದ ಅವನು ರೂ.400ಕ್ಕೆ 90 ದಿನಗಳಿಗೆ ರೂ.80ರಂತೆ ವಿಕ್ರಯ ಆಯ್ಕೆ ಹಕ್ಕು ಕೊಳ್ಳುತ್ತಾನೆ. ಮುಂದಿನ 90 ದಿನಗಳಲ್ಲಿ ಆ ಷೇರು ಬೆಲೆ ಎಷ್ಟೇ ಕಡಿಮೆಯಾಗಲಿ, ತನ್ನ 100 ಷೇರುಗಳನ್ನು ರೂ.80ರಂತೆ ವಿಕ್ರಯಿಸಬಹುದೆಂಬ ಭರವಸೆ ಅವನಿಗುಂಟು. ಒಂದು ವೇಳೆ ಷೇರು ಬೆಲೆ ರೂ.95ಕ್ಕೆ ಏರಿದರೆ ಅವನು ವಿಕ್ರಯ ಹಕ್ಕು ಚಲಾಯಿಸದೆ ರೂ.400ನ್ನು ಕಳೆದುಕೊಳ್ಳಬಹುದು. ಅವನ ಈ ನಷ್ಟಕ್ಕಿಂತ ಮಾರುಕಟ್ಟೆಯಲ್ಲಿ ತನ್ನ 100 ಷೇರುಗಳನ್ನು ಮಾರಿ ಬರುವ ಲಾಭ ಅಧಿಕವಾಗಿರುವುದರಿಂದ ಚಿಂತೆ ಇರುವುದಿಲ್ಲ. ಮೇಲೆ ಹೇಳಿದುದಕ್ಕೆ ವಿಪರ್ಯಯವಾದ ಸಂದರ್ಭದಲ್ಲಿ ಆತ ಕ್ರಯ ಆಯ್ಕೆ ಹಕ್ಕು ಕೊಳ್ಳಬಹುದು.

ಆಯ್ಕೆ ಹಕ್ಕಿನ ವ್ಯವಹಾರದಿಂದ ಹೆಚ್ಚು ಲಾಭ ಗಳಿಸುವ ನಿರೀಕ್ಷೆಯನ್ನು ಸಟ್ಟಾ ವ್ಯಾಪಾರಿ ಹೊಂದಿರುವುದು ಸಾಧ್ಯವಿಲ್ಲ. ಏಕೆಂದರೆ ಹಕ್ಕಿನ ಮೊಬಲಗನ್ನು ನಿಷ್ಕರ್ಷೆ ಮಾಡುವಾಗ ಅಗಾಧ ಲಾಭದ ಸಾಧ್ಯತೆಯನ್ನು ಅದರ ವಿಕ್ರಯದಾರ ತಡೆಯುತ್ತಾನೆ.

ಆಯ್ಕೆ ಹಕ್ಕನ್ನು ಕೊಳ್ಳುವವನು ಅವಧಿಯ ಕೊನೆಯ ತನಕ ಕಾದಿದ್ದು, ಸಾಧ್ಯವಾದರೆ ಲಾಭ ಪಡೆಯಬೇಕೆಂಬ ಉದ್ದೇಶದಿಂದ ವರ್ತಿಸುವುದಿಲ್ಲ. ಹಕ್ಕಿನ ಅವಧಿಯಲ್ಲೇ ಪೇಟೆಯಲ್ಲಾಗುವ ಬೆಲೆಗಳ ಏರಿಳಿತಗಳ ಉಪಯೋಗ ಪಡೆಯುವುದು ಅವನ ಉದ್ದೇಶ. ಪದೇ ಪದೇ ಕ್ರಯಿಸುವ ಹಾಗೂ ವಿಕ್ರಯಿಸುವ ವ್ಯವಹಾರಗಳ ಒಪ್ಪಂದಗಳನ್ನು ಅವನು ಮಾಡಿಕೊಳ್ಳುತ್ತಾನೆ; ಏಕೆಂದರೆ ಅವನು ಕೊಳ್ಳುವಾಗಲೂ ವಿಕ್ರಯಿಸುವಾಗಲೂ ಅತಿಯಾದ ನಷ್ಟಕ್ಕೆ ಒಳಗಾಗದಂತೆ ಅದಕ್ಕೆ ವ್ಯತಿರಿಕ್ತವಾದ ದಿಕ್ಕಿನಲ್ಲಿ ವ್ಯವಹಾರ ಮಾಡುವ ಹಕ್ಕಿನ ಮೂಲಕ ರಕ್ಷಣೆ ಪಡೆದಿರುತ್ತಾನೆ. ಆದ್ದರಿಂದ ಏರಿಳಿಯುತ್ತಿರುವ ಪೇಟೆಯಲ್ಲಿ ಅವನು ಹಲವಾರು ಲಾಭಗಳನ್ನು ಪಡೆಯುತ್ತಾನೆ.

ಹಕ್ಕಿನ ವ್ಯವಹಾರದಿಂದ ಸಟ್ಟಾ ವ್ಯಾಪಾರಗಳಿಗೂ ವರ್ತಕರಿಗೂ ಉತ್ಪಾದಕರಿಗೂ ಕೃಷಿಕರಿಗೂ ರಕ್ಷಣೆ ದೊರೆಯುತ್ತದೆ. ಹಕ್ಕನ್ನು ಕೊಳ್ಳುವವನಿಗೆ ನಷ್ಟಸಂಭವವಿಲ್ಲ. ಪೇಟೆ ಅವನಿಗೆ ವ್ಯತಿರಿಕ್ತವಾಗಿ ವರ್ತಿಸಿದರೂ ಅವನಿಗೆ ಲಾಭವೇ ಆಗುತ್ತದೆ. ಉದಾಹರಣೆಗೆ, ಕೊಳ್ಳುವ ಹಕ್ಕನ್ನು ಕೊಂಡುಕೊಳ್ಳುವ ಬೇಸಾಯಗಾರ ತಾನು ಉತ್ಪಾದಿಸುವ ಪದಾರ್ಥದ ಬೆಲೆ ಪೇಟೆಯಲ್ಲಿ ಇಳಿದರೂ ನಷ್ಟವಾಗದಂತೆ ವಿಮೆಯ ರಕ್ಷಣೆ ಹೊಂದಿದಂತಾಗುತ್ತದೆ. ಒಂದು ವೇಳೆ ಆ ಪದಾರ್ಥದ ಬೆಲೆ ಏರಿದ್ದೇ ಆದರೆ ಅದರಿಂದ ಅವನಿಗೆ ಲಾಭವೇ ದೊರಕುತ್ತದೆ.

ಇತರ ಬಗೆಯ ವಾಯಿದಾ ಕರಾರುಗಳೊಂದಿಗೆ ಹಕ್ಕು ಕರಾರುಗಳನ್ನು ಹೋಲಿಸಿದರೆ ಇವಕ್ಕೆ ಕೆಲವು ವಿಶಿಷ್ಟ ಅನುಕೂಲಗಳಿರುವುದು ವ್ಯಕ್ತವಾಗುತ್ತದೆ. ಉಳಿದ ಕರಾರುಗಳಲ್ಲಿ ಭಾಗವಹಿಸುವವರ ನಷ್ಟಸಂಭವಕ್ಕೆ ಮಿತಿ ಇಲ್ಲ; ಅವು ಮುಂಚೆಯೇ ಗೊತ್ತಿರುವುದೂ ಇಲ್ಲ. ಆದರೆ ಕ್ರಯ ಅಥವಾ ವಿಕ್ರಯ ಹಕ್ಕುಗಳ ಒಡಂಬಡಿಕೆದಾರರಿಗೆ ನಷ್ಟ ಸಂಭವ ಮುಂಚೆಯೇ ಗೊತ್ತಿರುತ್ತದೆ; ಅಲ್ಲದೆ ಅದನ್ನು ಪರಿಮಿತಗೊಳಿಸಲಾಗುತ್ತದೆ.

ಮುಖ್ಯವಾಗಿ ಎರಡು ಬಗೆಯ ಜನರಿಗೆ ಇಂಥ ಹಕ್ಕುಗಳು ಬಹಳ ಉಪಯುಕ್ತವಾಗಿವೆ: 1. ಮಿತವಾದ ಆರ್ಥಿಕಾನುಕೂಲಗಳಿದ್ದಾಗ್ಯೂ ಸಟ್ಟಾ ವ್ಯಾಪಾರ ಮಾಡುವ ಇಚ್ಛೆ ಹೊಂದಿರುವವರು. 2. ಮಿತವಾದ ನಷ್ಟ ಸಂಭವಕ್ಕೆ ಮಾತ್ರವೇ ಒಳಪಟ್ಟು ಸಟ್ಟಾ ವ್ಯಾಪಾರ ಮಾಡಬಯಸುವವರು.

ಆಯ್ಕೆ ಹಕ್ಕು ವ್ಯವಹಾರಗಳ ಬಗ್ಗೆ ತೀವ್ರ ವಿರೋಧವೂ ಉಂಟು. ಇವು ಸಟ್ಟಾ ವ್ಯವಹಾರವನ್ನು ಪ್ರೋತ್ಸಾಹಿಸುವುವೆಂಬುದೂ ಇವು ಜೂಜಿಗೆ ಎಡೆ ಕೊಡುವುವೆಂಬುದೂ ಈ ವಿರೋಧಕ್ಕೆ ಕಾರಣಗಳು.

ಆದ್ದರಿಂದ ವ್ಯವಸ್ಥಿತ ವಿನಿಮಯ ಮಾರುಕಟ್ಟೆಯ ನಿಬಂಧನೆಗಳು ಈ ಬಗೆಯ ವ್ಯವಹಾರಗಳಿಗೆ ಆಸ್ಪದ ನೀಡಬಹುದು ಅಥವಾ ನೀಡದೆಯೂ ಇರಬಹುದು.

ಭಾರತದಲ್ಲಿ ಇಂಥ ವ್ಯವಹಾರವನ್ನು ತೇಜಿ-ಮಂದಿ ವ್ಯವಹಾರವೆಂದು ಕರೆಯುತ್ತಾರೆ. ಸಟ್ಟಾ ವ್ಯಾಪಾರಕ್ಕೆ ಇದು ಅನುಕೂಲಕರ ಸಾಧನವಾದ್ದರಿಂದ ಹಲವರಿಗೆ ಪ್ರಿಯವಾಗಿದೆ.

(ಜೆ.ಬಿ.ಕೆ.)

**ಕ್ರಲೆಜ಼, ಮಿರಸ್ಲಾವ್**: 1873-1941. ಯುಗೋಸ್ಲಾವಿಯದ ನಾಟಕಕಾರ, ಕಾದಂಬರಿಕಾರ, ವಿವಾದಾತ್ಮಕ ಸಾಹಿತ್ಯ ಕರ್ತೃ. ಈತನ ವಿಧ್ವಂಸಕ ವಿಡಂಬನ ಸಾಹಿತ್ಯ ಆ ಕಾಲದ ಸಮಾಜದ ಹುಳುಕುಗಳನ್ನು ಬಯಲಿಗೆಳೆದು ಸಮತಾವಾದಿಗಳ ಕ್ರಾಂತಿಗೆ ನೆರವಾಯಿತು. ಕ್ರಾಂತಿಯ ಅನಂತರ ಈತ ಪ್ರಮುಖ ಬರೆಹಗಾರನಾದ. 1919ರಲ್ಲಿ ಈತ ವಾಮಪಕ್ಷದ ಪ್ರಚಾರಕ್ಕಾಗಿ ಪ್ಲಾಮೆನ್ ಎಂಬ ಪತ್ರಿಕೆಯನ್ನು ಪ್ರಕಟಿಸಿದ. ಹರ್‍ವಾಟ್‍ಸ್ಕಿ ಬೊಗ್ ಮಾರ್ಸ್ (1922) ಎಂಬ ಈತನ ವಿಡಂಬನಾತ್ಮಕ ಕೃತಿ ಆಸ್ಟ್ರಿಯದ ಸಮರಸಿದ್ಧತೆ ಮತ್ತು ಸಾಮಾನ್ಯ ಜನರ ಬಾಳಿನ ಮೇಲೆ ಅದರ ಪ್ರಭಾವಗಳನ್ನು ಎತ್ತಿತೋರಿಸುತ್ತದೆ. ಗೊಲ್‍ಗೊತ (1932) ನಾಟಕ ಹಡಗು ನಿರ್ಮಾಣದ ಕೆಲಸದಲ್ಲಿ ತೊಡಗಿದವರ ಜೀವನದ ನಿರೂಪಣೆಯಾಗಿದೆ. ಗ್ಲೆಂಬಜ಼ೆರ್ ನಾಟಕ ಚಕ್ರದಲ್ಲಿ ತನ್ನ ನಾಡಿನ ಮಧ್ಯಮವರ್ಗದವರ ಕುಸಿತವನ್ನು ಕವಿ ಹೃದಯ ವಿದ್ರಾವಕವಾಗಿ ಚಿತ್ರಿಸಿದ್ದಾನೆ.

(ಎಲ್.ಎಸ್.ಎಸ್.)

**ಕ್ರಷ್‍ನೊಹರ್‍ಸ್ಕ, ಎಲಿಷ್ಕ** : 1847-1926. ಚೆಕೊಸ್ಲೊವಾಕಿಯದ ಕವಯಿತ್ರಿಯ ಗುಪ್ತನಾಮ. ಈಕೆಯ ನಿಜವಾದ ಹೆಸರು ಎಲಿಷ್ಕ ಪೆಛೋವ. ಈಕೆಯ ಕೃತಿಗಳಲ್ಲಿ ದೇಶಾಭಿಮಾನ ಮತ್ತು ಸ್ತ್ರೀಯರ ಹಕ್ಕುಗಳ ಬಗೆಗಿನ ಆಸಕ್ತಿ ಕಂಡುಬರುತ್ತವೆ. 19ನೆಯ ಶತಮಾನದಲ್ಲಿ ತನ್ನ ದೇಶದ ಸಾಹಿತ್ಯದಲ್ಲಿ ಕಂಡುಬರುತ್ತಿದ್ದ ಅಂತಾರಾಷ್ಟ್ರೀಯ ಮನೋಭಾವವನ್ನು ವಿರೋಧಿಸಿ, ರಾಷ್ಟ್ರೀಯ ವಸ್ತುಗಳನ್ನು ಆರಿಸಿಕೊಂಡು ಈಕೆ ಕವನಗಳನ್ನು ರಚಿಸಿದಳು. ಈಕೆಯ ಕವನಗಳಲ್ಲಿ ಶ್ರದ್ಧಾವಂತ ಪ್ರಜ್ಞೆಯಿದ್ದರೂ ಭಾಷಾಡಂಬರ ಹೆಚ್ಚು. ಬೆಡ್ರಿಕ್ ಸ್ಮೆಟಾನಾನ ಗೇಯನಾಟಕಗಳಿಗೆ ಈಕೆ ಸಿದ್ಧಗೊಳಿಸಿದ ಲಿಬ್ರೆಟೊಗಳಿಂದ (ಸಂಗೀತನಾಟಕದ ಪಾಠಕೃತಿ) ಈಕೆಯ ಹೆಸರು ಚಿರಸ್ಥಾಯಿಯಾಗಿದೆ. ಈಕೆ ಮಿಟ್ಸ್‍ಕ್ಯಾವಿಚ್, ಪುಷ್ಕಿನ್ ಮತ್ತು ಬೈರನ್ ಇವುರುಗಳ ಕೃತಿಗಳನ್ನು ಸಮರ್ಥವಾಗಿ ಭಾಷಾಂತರಿಸಿದ್ದಾಳೆ.

(ಎಲ್.ಎಸ್.ಎಸ್.)

**ಕ್ರಸ್ಟೇಸಿಯ : ನೋಡಿ- ಕಠಿಣ ಚರ್ಮಿಗಳು**

**ಕ್ರಾಂತ** : ಹೆಜ್ಜೆ ಇಡು, ಆಕ್ರಮಿಸು, ವ್ಯಾಪ್ತವಾಗು, ದಾಟು, ಸಂಬಂಧಿಸು ಎಂಬ ಅರ್ಥಗಳಲ್ಲಿ ಕ್ರಾಂತಶಬ್ದ ಪ್ರಯೋಗದಲ್ಲಿದೆ. ಕ್ರಮುಪಾದವಿಕ್ಷೇಪೇ ಎಂಬ ಧಾತುವಿನಿಂದಿದು ನಿಷ್ಪನ್ನವಾಗಿದೆ.

ಮನಸೀಂದುಂ ದಿಶಃ ಶ್ರೋತ್ರೇ ಕ್ರಾಂತೇ ವಿಷ್ಣುಂ ಬಲೇ ಹರಂ।
ವಾಚ್ಯಗ್ನಿಂ ಮಿತ್ರಮುತ್ಸರ್ಗೇ ಪ್ರಜನೇ ಚ ಪ್ರಜಾಪತಿಂ॥

ಎಂದು ಮನುಸ್ಮೃತಿಯಲ್ಲಿ ತಿಳಿಸಿರುವಂತೆ ಪಾದೇಂದ್ರಿಯಕ್ಕೆ (ಕ್ರಾಂತಕ್ಕೆ) ವಿಷ್ಣು ಪ್ರಧಾನನಾದವ.

ತೈತ್ತಿರೀಯಾರಣ್ಯಕದಲ್ಲಿ ಅಶ್ವಕ್ರಾಂತೇ ರಥಕ್ರಾಂತೇ ವಿಷ್ಣುಕ್ರಾಂತೇ ವಸುಂಧರಾ। ಶಿರಸಾ ಧಾರಿತಾ ದೇವಿ ರಕ್ಷಸ್ವ ಮಾಂ ಪದೇಪದೇ॥ - ಎಂಬಲ್ಲಿ ಕ್ರಾಂತ ಶಬ್ದದ ಉಲ್ಲೇಖವಿದೆ. ಇದು ಸ್ನಾನಕಾಲದಲ್ಲಿ ಮೃತ್ತನ್ನು (ಮಣ್ಣನ್ನು) ತೆಗೆದುಕೊಂಡು ಧರಿಸುವಾಗ ಹೇಳುವ ಮಂತ್ರ. ಅಶ್ವ, ರಥ, ವಿಷ್ಣು- ಈ ಮೂರರಿಂದಾದ ಕ್ರಮವನ್ನು ಸಹಿಸಿ ಸಹನಶೀಲೆಯಾಗಿರುವ ವಸುಂಧರೆಯೇ ನನ್ನಿಂದ ತಲೆಯಲ್ಲಿ ಧರಿಸಲ್ಪಟ್ಟ ನೀನು ನನ್ನನ್ನು ಕಾಪಾಡು ಎಂದು ಈ ಮಂತ್ರದ ಅರ್ಥ.

ಅಶ್ವಕ್ರಾಂತ ಮೂರು ಬಗೆ: ಅಗ್ನಿಚಯನದಲ್ಲಿ ಉಖಾ (ಅಗ್ನಿಕುಂಡ) ನಿರ್ಮಾಣಕ್ಕಾಗಿ ಭೂಮಿಯನ್ನು ಅಗೆಯುವ ಜಾಗದಲ್ಲಿ, ಅಗೆಯುವುದಕ್ಕೆ ಮುಂಚೆ ಅಶ್ವವನ್ನು ಕ್ರಮಿಸುವುದು; ವ್ಯಾಪಕನಾದ ಪುರುಷೋತ್ತಮನಿಂದ ಕ್ರಾಂತವಾದದ್ದು (ವ್ಯಾಪ್ತವಾದದ್ದು); ಗಮನಶೀಲ ಹಯಗ್ರೀವನಿಂದ ಕ್ರಾಂತವಾದದ್ದು-ಹೀಗೆ.

ರಥಕ್ರಾಂತ ಎರಡು ಬಗೆಯದು: ಯಜ್ಞಭೂಮಿಯ ಶುದ್ಧ್ಯರ್ಥವಾಗಿ ಆ ಜಾಗದಲ್ಲಿ ರಥವನ್ನು ಕ್ರಮಿಸುವುದು; ಅರ್ಜುನಸಾರಥಿಯಾದ ಕೃಷ್ಣನಿಂದ ಅಧಿಷ್ಠಿತವಾದುದು.

ತ್ರಿವಿಕ್ರಮಾವತಾರದಲ್ಲಿ ವಾಮನರೂಪಧಾರಿ ವಿಷ್ಣುವಿನಿಂದ ಕ್ರಾಂತವಾದ ಭೂಮಿ ವಿಷ್ಣುಕ್ರಾಂತ.

ಇದು ಭಾಷ್ಯಕಾರರ ಅಭಿಪ್ರಾಯ.

ಜ್ಯೋತಿಶ್ಶಾಸ್ತ್ರದಂತೆ ಸೂರ್ಯ ಕುಜ ಶನಿ ರಾಹು ಕೇತು ಈ ಪಾಪ ಗ್ರಹಗಳಿರುವ ನಕ್ಷತ್ರ ನಿತ್ಯನಕ್ಷತ್ರವಾದಾಗ, ಪಾಪಗ್ರಹಕ್ರಾಂತವಾದ ಆ ನಕ್ಷತ್ರ ಶುಭಕಾರ್ಯಗಳಿಗೆ ಪ್ರಶಸ್ತವಲ್ಲ.

(ಎಸ್.ಎನ್.ಕೆ.)

**ಕ್ರಾಂತಿಗಳು** : ಒಂದು ದೇಶದ ಸರ್ಕಾರ ಪದ್ಧತಿ, ಆಡಳಿತ ವ್ಯವಸ್ಥೆ, ಸಂವಿಧಾನ ಅಥವಾ ಸಾಮಾಜಿಕ ವ್ಯವಸ್ಥೆಯಲ್ಲಿ ಉಂಟಾಗುವ ಅಸಾಧಾರಣ ಹಾಗೂ ಅನಿರೀಕ್ಷಿತ ಬದಲಾವಣೆ. ಸಾಮಾನ್ಯವಾಗಿ ರಾಜಕೀಯ ಬದಲಾವಣೆಯನ್ನು ಮಾತ್ರ ಕ್ರಾಂತಿಯೆಂದು

ಹೇಳುವುದುಂಟು. ಆದರೆ ಇತಿಹಾಸದ ಉದ್ದಕ್ಕೂ ಕ್ರಾಂತಿಕಾರಕ ಬದಲಾವಣೆಗಳು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಉಂಟಾಗಿವೆ. ಆದ್ದರಿಂದ ಕ್ರಾಂತಿಯ ಅರ್ಥ ವ್ಯಾಪಕವಾದ್ದು. ಅದು ಮಾನವ ಜೀವನದ ಯಾವುದೇ ಕ್ಷೇತ್ರದಲ್ಲಿಯಾದರೂ ಆಗುವ ಅಸಾಧಾರಣ ಮತ್ತು ತೀವ್ರ ಬದಲಾವಣೆಯನ್ನು ಸೂಚಿಸುತ್ತದೆ.

ಮಧ್ಯಯುಗದ ಕೊನೆಯ ಭಾಗದಲ್ಲಿ ಇಟಲಿಯ ನಗರದ ರಾಜ್ಯಗಳಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಉಂಟಾದ ತೀವ್ರ ಸುಧಾರಣೆಗಳನ್ನು ಕ್ರಾಂತಿಯೆಂದು ಬಣ್ಣಿಸಲಾಗಿತ್ತು. ಇಂಗ್ಲೆಂಡಿನಲ್ಲಿ ಆಲಿವರ್ ಕ್ರಾಮ್ವೆಲನ ಕಾಲದಲ್ಲಿ ಹಳೆಯ ಆಡಳಿತ ಪದ್ಧತಿಯನ್ನು ಪುನರ್‌ಸ್ಥಾಪಿಸುವ ಪ್ರಯತ್ನದ ಸಂಬಂಧವಾಗಿ ಕ್ರಾಂತಿ ಎಂಬ ಪದವನ್ನು ಬಳಸಲಾಯಿತು. ಇದು ಈ ಶಬ್ದದ ವಿಪರ್ಯಾಸ.

ಈಚೆಗೆ ಕ್ರಾಂತಿ ನಿಜವಾಗಿಯೂ ಆಧುನಿಕ ಅರ್ಥದಲ್ಲಿ ಬಳಕೆಗೆ ಬಂತು. ದಬ್ಬಾಳಿಕೆ, ಅನೀತಿಯುತ ಆಡಳಿತ, ಲಂಚಗುಳಿತನ, ನಿರುಪಯುಕ್ತ ರಾಜಕೀಯ ವ್ಯವಸ್ಥೆ ಹಾಗೂ ಸಾಮಾಜಿಕ ಅನ್ಯಾಯದ ವಿರುದ್ಧ ಜನತೆಯ ಬಂಡಾಯ, ವಸಾಹತು ಆಡಳಿತದ ವಿರುದ್ಧ ಜನರ ದಂಗೆ, ಸ್ವಾತಂತ್ರ್ಯ ಘೋಷಣೆ ಮತ್ತು ಯುದ್ಧಗಳು ಕ್ರಾಂತಿಗಳೆನಿಸಿಕೊಳ್ಳುತ್ತವೆ. ಇಂಥ ಸ್ವಾತಂತ್ರ್ಯ ಸಮರ ಅಥವಾ ಕ್ರಾಂತಿಯನ್ನುಂಟುಮಾಡುವುದರಲ್ಲಿ ನಾಯಕನ

ಫ್ರೆಂಚ್ ಕ್ರಾಂತಿಯ ಒಂದು ದೃಶ್ಯ: ಪ್ಯಾರಿಸ್ಸಿನ ಟ್ವೀಲರಿಸ್ ಅರಮನೆಯ ಮೇಲೆ ದಾಳಿ (1792)

ಪಾತ್ರ ಬಹು ಮುಖ್ಯ. ಕ್ರಾಂತಿಗಳು ಯಾವುದಾದರೂ ಒಂದು ಸಿದ್ಧಾಂತದ ವಿರುದ್ಧವಾಗಿ ಅಥವಾ ಪರವಾಗಿ ಉಂಟಾದ ಚಳವಳಿಯ ರೂಪವನ್ನು ತಳೆಯಬಹುದಾಗಿದೆ. ಜನತೆಯ ಮನಸ್ಸಿನಲ್ಲಿ ಹಾಗೂ ಭಾವನೆಗಳಲ್ಲಿ ಹಳೆಯ ವಿಚಾರಗಳ ಬದಲು ಹೊಸ ವಿಚಾರಗಳನ್ನು ಪ್ರಚೋದಿಸುವ ಪ್ರಯತ್ನ ಸಫಲವಾದಾಗ ಅದೂ ಕ್ರಾಂತಿ ಎನ್ನಿಸಿಕೊಳ್ಳುತ್ತದೆ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆಸಲಾದ ಹೋರಾಟ ಅಥವಾ ಬಂಡಾಯವೇ ಕ್ರಾಂತಿ–ಎಂಬುದಾಗಿ ಫ್ರೆಂಚ್ ವೈಚಾರಿಕ ಕಂಡಾರ್ಸೆ ನೀಡಿರುವುದಕ್ಕಿಂತ ಇಂದು ಇದರ ವ್ಯಾಖ್ಯೆ ಬಹಳ ವಿಸ್ತೃತವಾದ್ದಾಗಿದೆ.

ಇತಿಹಾಸದಲ್ಲಿ ಈ ತನಕ ಅನೇಕ ಬಗೆಯ ಹಲವಾರು ಕ್ರಾಂತಿಗಳು ಆಗಿಹೋಗಿವೆ. ಪ್ರತಿಯೊಂದು ದೇಶದಲ್ಲೂ ಇಂಥ ಕ್ರಾಂತಿಕಾರಕ ಬದಲಾವಣೆಗಳನ್ನು ಗುರುತಿಸಬಹುದು. ಪ್ರತಿಯೊಂದು ಕ್ರಾಂತಿಗೂ ತನ್ನದೇ ಆದ ಕಾರಣಗಳಿರಬಹುದಾದರೂ ಎಲ್ಲ ಕ್ರಾಂತಿಗಳಿಗೂ ಕೆಲವು ಸಾಮಾನ್ಯ ಲಕ್ಷಣಗಳಿರುತ್ತವೆ.

ಆಡಳಿತವರ್ಗದ ಅದಕ್ಷತೆ ಮತ್ತು ಅನೀತಿಯುತ ನಡೆವಳಿಕೆಯಿಂದ ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆ ಕುಸಿದುಬಿದ್ದು ಆರ್ಥಿಕ ಬಿಕ್ಕಟ್ಟುಂಟಾದಾಗ ಕ್ರಾಂತಿ ಅನಿವಾರ್ಯವಾಗುತ್ತದೆ. 1788ರಲ್ಲಿ ಫ್ರಾನ್ಸಿನಲ್ಲಿ ಉಂಟಾದ ಕ್ಷಾಮ 1789ರ ಮಹಾಕ್ರಾಂತಿಗೆ ಕಾರಣವಾಯಿತು.

ಹೆಚ್ಚಿನ ಕ್ರಾಂತಿಗಳಿಗೆ ಯುದ್ಧಗಳೇ ಕಾರಣ. 20ನೆಯ ಶತಮಾನದ ಪ್ರತಿಯೊಂದು ಕ್ರಾಂತಿಯೂ ಸಾಮಾನ್ಯವಾಗಿ ಯಾವುದಾದರೊಂದು ಯುದ್ಧದ ತರುವಾಯವೇ ಸಂಭವಿಸಿದೆ. 1905ರ ರಷ್ಯನ್ ಕ್ರಾಂತಿಯೂ 1914–1918ರ ಹಾಗೂ 1939–45ರ ಎರಡು ಮಹಾಯುದ್ಧಗಳ ಅನಂತರ ಉಂಟಾದ ಕ್ರಾಂತಿಗಳೂ ಅದರಲ್ಲಿಯೂ ಚೀನದಲ್ಲಿ ಆದ ಕ್ರಾಂತಿಯೂ ಇದಕ್ಕೆ ನಿದರ್ಶನಗಳಾಗಿವೆ. ಯುದ್ಧಗಳಿಂದ ಉಂಟಾಗುವ ಅನಿಶ್ಚಿತತೆ, ಅಸ್ತವ್ಯಸ್ತತೆ, ಜೀವ ವಿತ್ತಗಳ ನಷ್ಟ ಮತ್ತು ಕಷ್ಟಗಳಿಂದ ಕ್ರಾಂತಿಕಾರಕ ಬದಲಾವಣೆಗೆ ಅನುಕೂಲಕರವಾದ ವಾತಾವರಣ ನಿರ್ಮಿತವಾಗುತ್ತದೆ. ಇದೂ ಅಲ್ಲದೆ ಯುದ್ಧದಲ್ಲಿ ಸೋತದೇಶದಲ್ಲಿ ಆಡಳಿತಾಧಿಕಾರ ಸಡಿಲವಾಗಿ ಸಾಮಾಜಿಕ ಅತೃಪ್ತಿಯುಂಟಾಗುತ್ತದೆ. ಇಂಥ ಅತೃಪ್ತಿಯೊಡನೆ ಸೋಲಿನಿಂದುಂಟಾದ ಅವಮಾನವೂ ಸೇರಿ ಆ ದೇಶದ ಜನತೆಯಲ್ಲಿ ಪ್ರತೀಕಾರದ ಭಾವನೆಯುಂಟಾಗಿ ತಮ್ಮ ಸೋಲಿನ ಸೇಡು ತೀರಿಸಿಕೊಳ್ಳಲು ಎಂಥ ಕ್ರಾಂತಿಕಾರಕ ಬದಲಾವಣೆಗೂ ಅವರು ಸಿದ್ಧರಾಗುತ್ತಾರೆ. 1908ರಲ್ಲಿ ಕಿರಿಯ ತುರ್ಕಿಗಳು(ಯಂಗ್ ಟರ್ಕ್ಸ್) ಮತ್ತು 1952ರಲ್ಲಿ ಈಜಿಪ್ಟಿನ ನಗೀಬ್ ಮತ್ತು ನಾಸೆರರು ಇಂಥ ವಾತಾವರಣದಲ್ಲಿ ಕ್ರಾಂತಿಯ ನಾಯಕರಾಗಿ ತಂತಮ್ಮ ದೇಶಗಳ ಕ್ರಾಂತಿಗಳಿಗೆ ಕಾರಣರಾದರು.

ಕ್ರಾಂತಿಗಳು ಸಮಾಜದಲ್ಲಿ ಯಾವುದಾದರೂ ಒಂದು ಸಾಮಾಜಿಕ ಗುಂಪಿನ, ವರ್ಗದ ಅಥವಾ ಪಂಗಡದ ಜನರನ್ನು ಪಕ್ಷಪಾತದಿಂದ ಕಾಣುವುದರಿಂದಲೂ ಸಂಭವಿಸಬಹುದು. ಸಾಮಾಜಿಕ ಅರಾಜಕತೆ ಮತ್ತು ರಾಜಕೀಯ ಆಂದೋಲನದ ರೂಪದಲ್ಲಿ ಕ್ರಾಂತಿ ಉದ್ಭವಿಸುತ್ತದೆ. ಒಂದು ವರ್ಗದ ಜನರಿಗೆ ಇತರರಂತೆ ರಾಜಕೀಯ ಹಕ್ಕುಬಾಧ್ಯತೆಗಳು ಇಲ್ಲವೆಂಬ ಭಾವನೆಯುಂಟಾದಾಗ ಅಥವಾ ಸಾಮಾಜಿಕವಾಗಿ ತಾವು ಇತರರೊಡನೆ ಸಮಾನರಾಗಿಲ್ಲವೆಂದು ಅರಿತಾಗ ಮತ್ತು ತಮ್ಮ ಆರ್ಥಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶಕ್ತರಾಗಿಲ್ಲವೆಂದು ಪರಿತಪಿಸಿದಾಗ ಕ್ರಾಂತಿಯ ಕಿಡಿ ಹೊತ್ತಿಕೊಳ್ಳುತ್ತದೆ. ಅದರಲ್ಲಿಯೂ ತಮ್ಮ ಅಶೋತ್ತರಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವುದು ಅಸಾಧ್ಯವೆಂದು ತೋರಿದಾಗ ಅಂಥ ವರ್ಗಗಳು ಕ್ರಾಂತಿಗೆ ಶರಣಾಗುತ್ತವೆ. ಅಧಿಕಾರದಲ್ಲಿರುವವರು



ಫ್ರೆಂಚ್ ಕ್ರಾಂತಿ: 16ನೆಯ ಲೂಯಿಯ ಶಿರಚ್ಛೇದ (1793). ಸಮಕಾಲೀನ ಜಲವರ್ಣ ಚಿತ್ರವೊಂದರ ಪ್ರತಿ

ಜನತೆಯಲ್ಲಿ ಕಾಲ ಕಾಲಕ್ಕೆ ಉಂಟಾಗುವ ಆಶೋತ್ತರಗಳನ್ನು ಅರಿತುಕೊಳ್ಳದಿದ್ದರೆ, ಅರಿತುಕೊಂಡರೂ ಇತರರೊಡನೆ ತಮ್ಮ ಅಧಿಕಾರವನ್ನು ಹಂಚಿಕೊಳ್ಳಲು ಸಿದ್ಧರಿಲ್ಲದಿದ್ದರೆ, ಕ್ರಾಂತಿ ಅನಿವಾರ್ಯವಾಗುತ್ತದೆ. ಆಗ ಜನತೆ ಪರಂಪರಾನುಗತವಾಗಿ ಬಂದಿರುವ ಆಡಳಿತ ಪದ್ಧತಿ ಮತ್ತು ರಾಜಕೀಯ ವ್ಯವಸ್ಥೆಯ ವಿರುದ್ಧ ಬಂಡೆದ್ದು ಅದನ್ನು ನಿರ್ಮೂಲಗೊಳಿಸಿ ಅದರ ಸ್ಥಾನದಲ್ಲಿ ಒಂದು ಹೊಸ ವ್ಯವಸ್ಥೆಯನ್ನೇ ಸ್ಥಾಪಿಸಬಯಸುತ್ತದೆ. ಹೀಗೆ ಅತೃಪ್ತಿ ಮತ್ತು ಅಸಮಾನತೆಯ ನಿರ್ಮೂಲಕ್ಕಾಗಿ ಕ್ರಾಂತಿ ಸಂಭವಿಸುತ್ತದೆ. ಇದು ಕ್ಷಿಪ್ರವಲ್ಲದಿದ್ದರೂ ಇದರ ಪರಿಣಾಮಗಳು ಅಸಾಧಾರಣವಾದವುಗಳಾದ್ದರಿಂದ ಇದೂ ಕ್ರಾಂತಿಯೇ ಎನಿಸುವುದು. ಫ್ರೆಂಚ್ ಮತ್ತು ರಷ್ಯದ ಕ್ರಾಂತಿಗಳೂ ಆಯಾ ದೇಶಗಳ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಅನೇಕ ವರ್ಷಗಳಿಂದ ನಡೆದುಬಂದಿದ್ದ ಅನ್ಯಾಯದ ವಿರುದ್ಧವಾಗಿದ್ದುವೆ ಹೊರತು ಜನತೆಯಲ್ಲಿ ಅನಿರೀಕ್ಷಿತವಾಗಿ ಅಥವಾ ಹಠಾತ್ತನೆ ಉಂಟಾದ ಕ್ಷೋಭೆಯಿಂದಲ್ಲ.

ಒಂದು ವಸಾಹತಿನ ಜನತೆ ಸಾಕಷ್ಟು ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗದೆ ಹೋಗಿ, ತನ್ನ ವಿದೇಶಿ ಆಡಳಿತಗಾರರಿಂದ ಮುಕ್ತವಾಗುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಆ ವಸಾಹತಿಗೂ ವಸಾಹತುಶಾಹಿ ರಾಷ್ಟ್ರಕ್ಕೂ ನಡುವೆ ಉಂಟಾಗುವ ಘರ್ಷಣೆಯೂ ಕ್ರಾಂತಿಯಾಗಿ ಪರಿಣಮಿಸುತ್ತದೆ. ವಸಾಹತುಶಾಹಿ ರಾಷ್ಟ್ರ ಸ್ವಸಂತೋಷದಿಂದ ತನ್ನ ವಸಾಹತನ್ನು ಸ್ವತಂತ್ರರಾಷ್ಟ್ರವೆಂದು ಘೋಷಿಸಿರುವುದು ವಿರಳ. 18ನೆಯ ಶತಮಾನದ ಅಮೆರಿಕನ್ ಕ್ರಾಂತಿ ಸ್ವಾತಂತ್ರ್ಯಸಮರವಾಗಿ ರೂಪಿತವಾಗಿತ್ತು. ಅಂತೆಯೇ 20ನೆಯ ಶತಮಾನದಲ್ಲಿ ಏಷ್ಯ ಮತ್ತು ಆಫ್ರಿಕ ಖಂಡಗಳ ಅನೇಕ ವಸಾಹತುಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದುವು. ಭಾರತ ಸ್ವಾತಂತ್ರ್ಯ ಸಮರವೂ ವಿಶಿಷ್ಟವಾದ ಕ್ರಾಂತಿಯೇ ಆಗಿದೆ. ಈ ರೀತಿಯ ಕ್ರಾಂತಿಯಲ್ಲಿ ನಾಯಕರ ಪಾತ್ರ ಮಹತ್ತ್ವದ್ದು. ಪ್ರತಿಯೊಂದು ಕ್ರಾಂತಿಗೂ ಹೆಸರಾದ ನಾಯಕರಿದ್ದು ಅವರೇ ಸ್ವತಂತ್ರ ರಾಷ್ಟ್ರದ ಮುಖಂಡರಾಗುತ್ತಾರೆ.

ಕ್ರಾಂತಿಗಳು ಸಾಮಾನ್ಯವಾಗಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಮತ್ತು ಒಂದು ಜನತೆಯಿಂದ ಇನ್ನೊಂದು ಜನತೆಗೆ ಹಬ್ಬುತ್ತವೆ. ಒಂದು ಕಡೆ ಉಂಟಾದ ಕ್ರಾಂತಿಯಿಂದ ಇನ್ನೊಂದು ಜನಾಂಗ ಸ್ಫೂರ್ತಿ ಪಡೆಯಬಹುದು. 1820ರಲ್ಲಿ ಸ್ಪೇನಿನಲ್ಲಿ

ಜರುಗಿದ ಕ್ರಾಂತಿಯಿಂದಾಗಿ ಪೋರ್ಚುಗಲ್ ಮತ್ತು ನೇಪಲ್ಸ್‌ಗಳಲ್ಲಿ ಬಂಡಾಯಗಳಾದುವು. 1830ರಲ್ಲಿ ಫ್ರಾನ್ಸಿನಲ್ಲಿ ಜರುಗಿದ ಘಟನೆಗಳು ಬೆಲ್ಜಿಯಂ ಮತ್ತು ಪೋಲೆಂಡ್ ದೇಶಗಳ ಮೇಲೆ ತಮ್ಮ ಪ್ರಭಾವ ಬೀರಿದುವು. ಇದೇ ರೀತಿ ಅಮೆರಿಕನ್ ಸ್ವಾತಂತ್ರ್ಯ ಯುದ್ಧ ಮತ್ತು ಫ್ರಾನ್ಸಿನ ಮಹಾಕ್ರಾಂತಿಗಳು ಒಂದಕ್ಕೊಂದು ಪೂರಕವಾದುವು. 1947ರಲ್ಲಿ ಸ್ವಾತಂತ್ರ್ಯ ಗಳಿಸಿದ ಭಾರತ ಏಷ್ಯ ಮತ್ತು ಆಫ್ರಿಕ ಖಂಡಗಳಲ್ಲಿ ಅನೇಕ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿತು.

**ಕ್ರಾಂತಿಯ ವಿವಿಧ ಹಂತಗಳು:** ಪ್ರತಿಯೊಂದು ಕ್ರಾಂತಿಯೂ ಕಾಲ ಮತ್ತು ಉದ್ದೇಶಗಳಿಗನುಗುಣವಾಗಿ ಪ್ರಾರಂಭವಾಗಿ ಕೊನೆಯತನಕ ತನ್ನದೇ ಆದ ವಿವಿಧ ಹಂತಗಳಲ್ಲಿ ಮುಂದುವರಿಯುತ್ತದೆ. ಆದರೂ ಸಾಮಾನ್ಯವಾಗಿ ಕ್ರಾಂತಿಗಳಲ್ಲಿ ಕೆಲವು ಪ್ರಮುಖ ಘಟ್ಟಗಳನ್ನು ಕಾಣಬಹುದು.

ಕ್ರಾಂತಿ ತೀವ್ರಗತಿಯ ಚಟುವಟಿಕೆ ಎನಿಸಿಕೊಂಡರೂ ಅದರ ಪೂರ್ವಘಟ್ಟವನ್ನು ಗುರುತಿಸಲು ಸಾಧ್ಯ. ಪ್ರದರ್ಶನಗಳು, ಮುಷ್ಕರಗಳು, ಸಭೆಗಳು, ಹಿಂಸಾಚಾರ, ಕಾಯಿದೆಯ ಮತ್ತು ಶಿಸ್ತಿನ ಭಂಗ ಮುಂತಾದ ಅಸಾಮಾನ್ಯ ಘಟನೆಗಳು ಮುಂಬರುವ ಕ್ರಾಂತಿಯ

ರಷ್ಯನ್ ಕ್ರಾಂತಿಯ ಒಂದು ಸಂದರ್ಭ (ನವೆಂಬರ್, 1917) : ಅಖಿಲ ರಷ್ಯನ್ ಸೋವಿಯೆತ್ ಕಾಂಗ್ರೆಸ್‌ನ ಸದಸ್ಯರನ್ನು ಉದ್ದೇಶಿಸಿ ಲೆನಿನ್ ಭಾಷಣ ಮಾಡುತ್ತಿದ್ದಾನೆ

ಪೂರ್ವಭಾವಿ ಘಟ್ಟಗಳು. ಇವುಗಳಿಂದುಂಟಾಗುವ ಅರಾಜಕತೆಯಿಂದ ಇಂಥ ಚಟುವಟಿಕೆಗಳ ನಾಯಕರ ಗುಂಪೊಂದು ಅಧಿಕಾರಕ್ಕೆ ಬರಬಹುದು. ಇದು ತಾತ್ಕಾಲಿಕ ಸ್ವರೂಪದ್ದಾಗಿರ ಬಹುದು. ಕ್ರಾಂತಿಯ ಪೂರ್ವ ಇಂಥ ಅನೇಕ ಶಕ್ತಿ ಮತ್ತು ವ್ಯಕ್ತಿಗಳು

ಚೀನೀ ಕಮ್ಯೂನಿಸ್ಟ್ ಕ್ರಾಂತಿ (1949) : ಷಾಂಘೈ ನಗರದಿಂದ ಭಯತ್ರಸ್ತ ಪ್ರಜೆಗಳ ಪಲಾಯನ

ಅಧಿಕಾರದ ಮೇಲೆ ತಮ್ಮ ಕಣ್ಣನ್ನಿರಿಸಿಕೊಂಡಿರುವುದು ಸಹಜ. ಬಹು ದಿನಗಳ ಆಂತರಿಕ ಯುದ್ಧದ ತರುವಾಯ ಕ್ರಾಂತಿಕಾರಿಗಳು ಸಂಪೂರ್ಣ ಅಧಿಕಾರವನ್ನು ಗಳಿಸುವುದು ವಿರಳ. ಚೀನದಲ್ಲಿ 1949ರ ಕ್ರಾಂತಿಯ ತರುವಾಯ ಕಮ್ಯೂನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದ ನಿದರ್ಶನವುಂಟು. ಹೀಗೆ ಅಧಿಕಾರಕ್ಕೆ ಬಂದ ವ್ಯಕ್ತಿ ಶಕ್ತಿಗಳ ವಿರುದ್ಧ ಪ್ರತಿಕ್ರಾಂತಿಯ ಘಟ್ಟವನ್ನು ಕಾಣಬಹುದು. ಇಲ್ಲವೇ ವಿದೇಶಗಳು ಹಸ್ತಕ್ಷೇಪ ಮಾಡುವ ಸಾಧ್ಯತೆಯೂ ಇದೆ. ಅಧಿಕಾರದಲ್ಲಿರುವ ಶ್ರೀಮಂತರ ಅಥವಾ ಕುಲೀನರ ಗುಂಪನ್ನು ಕಿತ್ತೊಗೆದು ಅವರ ಸ್ಥಾನದಲ್ಲಿ ಸಮಾಜದ ಮಧ್ಯಮ ವರ್ಗದವರ ಮತ್ತು ಕೆಳವರ್ಗದವರ ಅಧಿಕಾರ ಸ್ಥಾಪಿಸುವುದು ಕ್ರಾಂತಿಯ ಮೂಲ ಉದ್ದೇಶವಾಗಿರುವುದರಿಂದ ಪ್ರತಿಯೊಂದು ಕ್ರಾಂತಿಯಲ್ಲೂ ಈ ಮೂರು ಹಂತಗಳಿರುವುದು ಸ್ವಾಭಾವಿಕ. ರಷ್ಯದಲ್ಲಿ 1917ರ ಫೆಬ್ರುವರಿ ಕ್ರಾಂತಿಯ ತರುವಾಯ ಅಕ್ಟೋಬರ್ ಕ್ರಾಂತಿಯಾಗಿ ಬಾಲ್ಷೆವಿಕರು ಅಧಿಕಾರಕ್ಕೆ ಬಂದರು. ಕ್ರಾಂತಿಯ ಕಾರ್ಯಕ್ರಮ ಪೂರ್ಣವಾದ ಕೂಡಲೆ ಶಾಂತಸ್ಥಿತಿಯುಂಟಾಗಿ ತದನಂತರ ಅಧಿಕಾರಕ್ಕಾಗಿ ಪೈಪೋಟಿ ನಡೆದು ಕ್ರಾಂತಿಯ ನಾಯಕರ ಸ್ಥಾನದಲ್ಲಿ ಸೈನ್ಯದ ಸಹಾಯ ಮತ್ತು ಸಹಾನುಭೂತಿಯನ್ನು ಪಡೆದಂಥ ಚತುರ ವ್ಯಕ್ತಿ ಅಧಿಕಾರಕ್ಕೆ

ಚೀನೀ ಕಮ್ಯೂನಿಸ್ಟ್ ಕ್ರಾಂತಿ (1949) : ವಿಜಯೀ ಪಡೆಗಳಿಂದ ಪೀಕಿಂಗ್ ಪ್ರವೇಶ

ಬರುವುದು ಒಂದು ವಿಶಿಷ್ಟ ಲಕ್ಷಣ. ರಷ್ಯದ ಕ್ರಾಂತಿಯ ನಾಯಕ ಲೆನಿನನ ನಿಧನಾನಂತರ ಜೋಸೆಫ್ ಸ್ಟಾಲಿನ್ ಅಧಿಕಾರಕ್ಕೆ ಬಂದ. ಈಜಿಪ್ಟಿನಲ್ಲಿ ನಗೀಬನ ಅಲ್ಪಕಾಲದ ಅಧಿಕಾರದ ಅನಂತರ ನಾಸೆರ್ ಅವನ ಸ್ಥಾನಕ್ಕೆ ಬಂದು ತನ್ನ ಜೀವನದ ಕೊನೆಯ ತನಕ ಆ ದೇಶದ ನಾಯಕ ಹಾಗೂ ಅಧ್ಯಕ್ಷನಾಗಿದ್ದ.

**ನಾಯಕತ್ವ:** ಪ್ರತಿ ವ್ಯಕ್ತಿಯಲ್ಲೂ ಕ್ರಾಂತಿಕಾರಿ ವಿಚಾರಗಳು ಇರುವುದು ಸಾಧ್ಯವಿಲ್ಲ. ಇದ್ದಾಗ್ಯೂ ಅವು ವ್ಯಕ್ತವಾಗಬೇಕಾದರೆ ಅದಕ್ಕೆ ಅನುಕೂಲಕರವಾದ ಪರಿಸರದ ಆವಶ್ಯಕತೆ ಇರುತ್ತದೆ. ಇದೇ ರೀತಿ ಒಂದು ಸಮಾಜದ ವರ್ಗರಚನೆಯೂ ಮುಖ್ಯವಾದ ಅಂಶವಾಗಿರುತ್ತದೆ. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾಜದ ವಿವಿಧ ವರ್ಗಗಳ ಸ್ಥಾನಮಾನಗಳು ಬೇರೆಯಾಗಿರುತ್ತವೆ. ಸಾಮಾನ್ಯವಾಗಿ ಶ್ರೀಮಂತ ವರ್ಗದವರು ಅಧಿಕಾರದಲ್ಲಿರುತ್ತಾರೆ. ಶ್ರೀಮಂತ ವರ್ಗಕ್ಕೂ ಕಾರ್ಮಿಕವರ್ಗಕ್ಕೂ ನಡುವಣ ಮಧ್ಯಮ ವರ್ಗದವರು ಸಾಮಾನ್ಯವಾಗಿ ಕ್ರಾಂತಿಕಾರಿ ವಿಚಾರಗಳನ್ನು ತಳೆದವರಾಗಿದ್ದು ಅವರೇ ಕ್ರಾಂತಿಗಳ ಜನಕರಾಗಿರುವುದುಂಟು. ಅವರು ವಿದ್ಯಾವಂತರೂ ಹೆಚ್ಚು ಅನುಕೂಲಗಳನ್ನು ಹೊಂದದ ವರ್ಗಕ್ಕೆ ಸೇರಿದವರೂ ಆಗಿರುವುದರಿಂದ ಸಮಾಜದ ನ್ಯೂನತೆಗಳನ್ನು ಅರಿತುಕೊಂಡು ಅವುಗಳ ನಿವಾರಣೆಗಾಗಿ ಪ್ರಯತ್ನಿಸುವ ಜ್ಞಾನ ಮತ್ತು ಪರಿಸರದ ಒತ್ತಡ ಅವರಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಹೆಚ್ಚು ವಯಸ್ಸಾದವರು ಮತ್ತು ಶ್ರೀಮಂತರು ಕ್ರಾಂತಿಯ ಪರವಾಗಿ ಇರುವುದು ಸಾಧ್ಯವಿಲ್ಲ. ಆದ್ದರಿಂದ ಉನ್ನತ ವ್ಯಾಸಂಗದಲ್ಲಿ ತೊಡಗಿರುವ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಕೀಲರು ಅಥವಾ ಸೈನ್ಯದ ಕಿರಿಯ ಅಧಿಕಾರಿಗಳೇ ಸಾಮಾನ್ಯವಾಗಿ ಕ್ರಾಂತಿಯ ನಾಯಕತ್ವವನ್ನು ವಹಿಸುತ್ತಾರೆ. ಉನ್ನತ ಶಿಕ್ಷಣ ಜನತೆಯಲ್ಲಿ ಉನ್ನತ ಆಕಾಂಕ್ಷೆಗಳನ್ನು ಹುಟ್ಟಿಸುತ್ತದೆ. ಇಂಥ ಆಕಾಂಕ್ಷೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕ್ರಾಂತಿಗಳುಂಟಾಗಿರುವುದನ್ನು ಎಲ್ಲೆಲ್ಲೂ ಕಾಣಬಹುದು. ರಷ್ಯ, ಚೀನ, ಲ್ಯಾಟಿನ್ ಅಮೆರಿಕ, ಆಫ್ರಿಕ, ಏಷ್ಯ ಮತ್ತು ಪಶ್ಚಿಮ ಏಷ್ಯ ದೇಶಗಳ ಕ್ರಾಂತಿಗಳಲ್ಲಿ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಕೀಲರು ಮತ್ತು ಕಿರಿಯ ಸೈನ್ಯಾಧಿಕಾರಿಗಳು ವಹಿಸಿದ ಪಾತ್ರವನ್ನು ಇಲ್ಲಿ ಉಲ್ಲೇಖಿಸಬಹುದು. ಐರೋಪ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಕ್ರಾಂತಿಗಳು ಸಾಮಾನ್ಯವಾಗಿ ಬುದ್ಧಿಜೀವಿಗಳ ವರ್ಗಕ್ಕೆ ಸೇರಿದ ಸೈದ್ಧಾಂತಿಕರು, ಬರೆಹಗಾರರು ಮತ್ತು ಕವಿಗಳಿಂದ ಸ್ಫೂರ್ತಿ ಪಡೆದವುಗಳಾಗಿವೆ. ಇದುವರೆಗೆ ಆಗಿಹೋಗಿರುವ ಕ್ರಾಂತಿಗಳಲ್ಲಿ ಕೆಲವು ಒಂದೇ ಒಂದು ನಿರ್ದಿಷ್ಟ ವರ್ಗದ ಜನರಿಂದ–ಕಾರ್ಮಿಕರು ಅಥವಾ ರೈತರು–ಉಂಟಾದವುಗಳಾಗಿವೆಯಾದರೂ ಕೆಲವು ಪ್ರಮುಖ ಕ್ರಾಂತಿಗಳ ಪರವಾಗಿ ಇಡೀ ಜನತೆಯ ಸಹಕಾರವಿದ್ದು ಅವು ವ್ಯಾಪಕವಾಗಿರುತ್ತವೆ. ಈ ಕ್ರಾಂತಿಗಳು ವಿಶಾಲ ತಳಹದಿ ಹೊಂದಿರುವ ಚಳವಳಿಗಳು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕ್ರಾಂತಿಗಳು ಇಂಥ ವಿಶಾಲ ತಳಹದಿಯನ್ನು ಹೊಂದಿರುತ್ತವೆಯಾದರೂ ಅಭಿವೃದ್ಧಿ ಹೊಂದುತ್ತಿರುವ ಅಥವಾ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಸೈನಿಕ ಅಧಿಕಾರಿಗಳು ಕ್ರಾಂತಿಗಳಿಗೆ ಕಾರಣರಾಗಿರುತ್ತಾರೆ. ಸೈನ್ಯವನ್ನು ಮೊದಲನೆಯ ಘಟ್ಟದಲ್ಲಿ ಉಪಯೋಗಿಸಬಹುದು. ಅಥವಾ ಕೊನೆಯ ತನಕ ಅವರೇ ಕ್ರಾಂತಿಯ ಮುಂಚೂಣಿಯಲ್ಲಿ ಇರಬಹುದು. ಇದನ್ನು ಕ್ರಾಂತಿಯೆನ್ನುವುದಕ್ಕಿಂತ ಕ್ಷಿಪ್ರಾಕ್ರಮಣವೆನ್ನಬಹುದು. ಹೀಗೆ ದೇಶ ಕಾಲ

ಸ್ಥಿತಿಗಳಿಗನುಗುಣವಾಗಿ ಸಮಾಜದ ಒಂದು ವಿಶಿಷ್ಟ ವರ್ಗದ ಅಥವಾ ಹಲವು ವರ್ಗಗಳ ಗುಂಪುಗಳು ಕ್ರಾಂತಿಗಳ ಮುಂಚೂಣಿಯಲ್ಲಿರುತ್ತವೆ. (ಎ.ಎಂ.ಆರ್.; ಎಂ.ವಿ.ಕೆ.)

**ಕ್ರಾಂತಿವೃತ್ತ :** ಖಗೋಳವನ್ನು ಭೂಮಿಯ ಕಕ್ಷಾತಲ ಛೇದಿಸಿದಾಗ ದೊರೆಯುವ ಮಹಾವೃತ್ತ (ಎಕ್ಲಿಪ್ಟಿಕ್). ಇದರ ಕೇಂದ್ರಬಿಂದು ವೀಕ್ಷಕನ ಸ್ಥಾನ, ತ್ರಿಜ್ಯ ಖಗೋಳದ ತ್ರಿಜ್ಯ (ಒಂದು ಏಕಮಾನವೆಂದು ಅಂಗೀಕರಿಸಲಾಗಿದೆ). ಭೂಮಿ ಸೂರ್ಯನ ಸುತ್ತಲೂ ಪರಿಭ್ರಮಿಸುವಾಗ ಭೂವಾಸಿಗಳಾದ ನಮಗೆ ಸೂರ್ಯ ನಮ್ಮ ಸುತ್ತಲೂ ಪರಿಭ್ರಮಿಸುವಂಥ ಅನುಭವ ಆಗುತ್ತದೆ. ಭೂಮಿಯ ಕಕ್ಷಾತಲವೂ ಸೂರ್ಯನ ತೋರ್ಕೆಯ ಕಕ್ಷಾತಲವೂ ಒಂದೇ ಆಗಿರುವುದರಿಂದ ಉಭಯ ಪರಿಶೀಲನೆಗಳಿಂದಲೂ ದೊರೆಯುವ ಕ್ರಾಂತಿವೃತ್ತ ಒಂದೇ. ಇಷ್ಟು ಮಾತ್ರವಲ್ಲ, ಸೂರ್ಯ ಭೂಮಿಯನ್ನು ಪರಿಭ್ರಮಿಸುವ (ತೋರ್ಕೆ) ವಾರ್ಷಿಕ ಕಕ್ಷೆ ಸಹ ಇದೇ ಆಗುತ್ತದೆ. ಆದ್ದರಿಂದ ಕ್ರಾಂತಿವೃತ್ತವನ್ನು ಸೌರ ಕಕ್ಷೆ ಎಂದು ಹೇಳುವುದುಂಟು.

ಭೂಮಿ ಸ್ವಂತಾಕ್ಷದ ಸುತ್ತ ಆವರ್ತಿಸುತ್ತ (ರೊಟೇಟಿಂಗ್) ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವುದು (ರಿವಾಲ್ವಿಂಗ್) ಸರಿಯಷ್ಟೆ. ಈ ಅಕ್ಷ ಕಕ್ಷಾತಲಕ್ಕೆ (ಇನ್ನು ಮುಂದೆ ಕ್ರಾಂತಿವೃತ್ತ ಎಂದೇ ಬಳಸಲಾಗುತ್ತದೆ) ಸುಮಾರು $60^\circ\ 33'$ ಗಳಷ್ಟು ಬಾಗಿಕೊಂಡಿದೆ. ಆದ್ದರಿಂದ ವಿಷುವದ್ವೃತ್ತ **(ನೋಡಿ– ವಿಷುವದ್ವೃತ್ತ)** ಕ್ರಾಂತಿವೃತ್ತಗಳ ನಡುವಿನ ಕೋನ $23^\circ\ 27'$. ಇದನ್ನು ω ಎಂಬ ಸಂಕೇತದಿಂದ ಸೂಚಿಸುತ್ತೇವೆ. ಇದರ ಹೆಸರು ಕ್ರಾಂತಿವೃತ್ತದ ಬಾಗು (ಅಬ್‌ಲೀಕ್ವಿಟಿ ಆಫ್ ದಿ ಎಕ್ಲಿಪ್ಟಿಕ್). ω ಒಂದು ಸ್ಥಿರಾಂಕ, ಎಂದರೆ ಕಾಲದಿಂದ ಇದರ ಬೆಲೆ ಬದಲಾಗುವುದಿಲ್ಲ.

ವಿಷುವದ್ವೃತ್ತ ಸೆಲೆಸ್ಟಿಯಲ್ ಈಕ್ವೇಟರ್ ಮತ್ತು ಕ್ರಾಂತಿವೃತ್ತ ಎರಡು ಬಿಂದುಗಳಲ್ಲಿ ಛೇದಿಸುತ್ತವೆ–ಇವುಗಳ ಹೆಸರು ವಿಷುವದ್ಬಿಂದುಗಳು ಈಕ್ವಿನಾಕ್ಸಸ್, (γ ಮತ್ತು ♎). ಕ್ರಾಂತಿವೃತ್ತದ ಮೇಲೆ ಅಪ್ರದಕ್ಷಿಣ ದಿಶೆಯಲ್ಲಿ ಸಾಗುವಾಗ ವಿಷುವದ್ವೃತ್ತವನ್ನು ದಕ್ಷಿಣದಿಂದ ಉತ್ತರಕ್ಕೆ ಅಡ್ಡ ಹಾಯುವ ಸಂಧಿಬಿಂದು ವಸಂತ ವಿಷುದ (ವರ್ನಲ್ ಈಕ್ವಿನಾಕ್ಸ್ γ), ಉತ್ತರದಿಂದ ದಕ್ಷಿಣಕ್ಕೆ ಅಡ್ಡಹಾಯುವ ಸಂಧಿಬಿಂದು ಶರದ್ವಿಷುವ (ಆಟಮ್ನಲ್ ಈಕ್ವಿನಾಕ್ಸ್) ♎. ಇಲ್ಲಿ Eಯಲ್ಲಿರುವ ವೀಕ್ಷಕನಿಗೆ (ಎಂದರೆ ಭೂಮಿಯ ಮೇಲಿನ ಆತನ ಸ್ಥಾನ) RLPQ ಭಾಗ ಉತ್ತರಗೋಳಾರ್ಧ, QCP'R ಭಾಗ ದಕ್ಷಿಣಗೋಳಾರ್ಧ. γ,♎ಬಿಂದುಗಳು ಸಾರ್ವಕಾಲಿಕವಾಗಿ ಸ್ಥಿರಬಿಂದುಗಳಲ್ಲ. ಅವು ಕ್ರಾಂತಿವೃತ್ತದ ಮೇಲೆ ಪ್ರದಕ್ಷಿಣದಿಶೆಯಲ್ಲಿ (ಎಂದರೆ ಸೂರ್ಯ, ಚಂದ್ರ ಮತ್ತು ಗ್ರಹಗಳ ವಾಸ್ತವ ಚಲನೆಯ ವಿರುದ್ಧ ದಿಶೆಯಲ್ಲಿ) ಮಂದಗತಿಯಿಂದ ಜಾರುತ್ತವೆ. ಈ ವಿದ್ಯಮಾನದ ಹೆಸರು ಆಯನಂಶ. **(ನೋಡಿ– ಅಯನಾಂಶ)**

**ಕ್ರಾಂತಿಚಕ್ರ (ರಾಶಿಚಕ್ರ) :** Eಯಲ್ಲಿ (ಭೂಮಿ) ಇರುವ ವೀಕ್ಷಕನಿಗೆ ಸೂರ್ಯ, ಚಂದ್ರ ಮತ್ತು ಸಕಲಗ್ರಹಗಳೂ ಕ್ರಾಂತಿವೃತ್ತದ ಉಭಯ ಪಾರ್ಶ್ವಗಳ ಇಕ್ಕಟ್ಟಾದ ಒಂದು ಪಟ್ಟಿಯ ಮೇಲೆ ಅಪ್ರದಕ್ಷಿಣ ದಿಶೆಯಲ್ಲಿ ಪರಿಭ್ರಮಿಸುವ ಅನುಭವವಾಗುತ್ತದೆ. ಆಕಾಶದಲ್ಲಿ, ದೂರದ ಸ್ಥಿರನಕ್ಷತ್ರಗಳ ಹಿನ್ನೆಲೆಯಲ್ಲಿ, ಕಾಣಬಹುದಾದ ಈ ವಿದ್ಯಮಾನದ ಪರಿಣಾಮವಾಗಿ ಕ್ರಾಂತಿವೃತ್ತದ ಉಭಯಪಾರ್ಶ್ವಗಳಲ್ಲಿ $9^\circ$ ಗಳಷ್ಟು ಅಗಲದ (ಎಂದರೆ ಒಟ್ಟಾಗಿ $18^\circ$ ಗಳಷ್ಟು ಅಗಲದ) ಒಂದು ಪಟ್ಟಿಯನ್ನು ಪ್ರಾಚೀನ ಮಾನವ ಕಲ್ಪಿಸಿದ. ಈ ಪಟ್ಟಿಯ ಹೆಸರು ಕ್ರಾಂತಿಚಕ್ರ ಅಥವಾ ರಾಶಿಚಕ್ರ (ಜೋಡಿಯಾಕ್).




ಚಿತ್ರ 1 QR–ವಿಷುವದ್ವೃತ್ತ, CL–ಕ್ರಾಂತಿವೃತ್ತ, E–ವೀಕ್ಷಕ, P′–ವಿಷುವದ್ವೃತ್ತದ ಉತ್ತರ ಧ್ರುವ, K′–ದಕ್ಷಿಣ ಧ್ರುವ, –ಕ್ರಾಂತಿ ವೃತ್ತದ ಒಂದು ಧ್ರುವ, PK-ω

ಇದಕ್ಕೆ ಸೀಮಿತವಾಗಿದ್ದ ಸ್ಥಿರ ನಕ್ಷತ್ರಚಿತ್ರಗಳಿಗೆ ಈ ಕಾರಣದಿಂದ ವಿಶೇಷ ಪ್ರಾಧಾನ್ಯ ಲಭಿಸಿತು. ವರ್ಷದ ಎರಡು ದಿವಸಗಳಲ್ಲಿ ಹಗಲು ಮತ್ತು ಇರುಳುಗಳ ಅವಧಿ ಸಮವಾಗಿದ್ದುದನ್ನೂ ಅವುಗಳ ಪೈಕಿ ಮೊದಲ ಘಟನೆಯ ಅನಂತರ ಹಗಲಿನ ಉದ್ದ ಏರಿ ಇರುಳಿನದು ತಗ್ಗುತ್ತಿದ್ದುದನ್ನೂ ಎರಡನೆಯ ಬಳಿಕ ಇರುಳಿನ ಉದ್ದ ಏರಿ ಹಗಲಿನದು ತಗ್ಗುತ್ತಿದ್ದುದನ್ನೂ ಪ್ರಾಚೀನ ಮಾನವ ಲಕ್ಷಿಸಿದ. ಮೊದಲನೆಯ ಘಟನೆ ಸಂಭವಿಸುವ ದಿವಸ ಸೂರ್ಯನ ಸ್ಥಾನ ಇರುವ ನಕ್ಷತ್ರ ಪುಂಜಕ್ಕೆ ಮೇಷರಾಶಿ ಎಂದು ಹೆಸರಿಸಿದ (ವಾಸ್ತವಿಕವಾಗಿ ಕ್ರಾಂತಿವೃತ್ತವನ್ನು ವಿಷುವದ್ವೃತ್ತ ದಕ್ಷಿಣದಿಂದ ಉತ್ತರಕ್ಕೆ ಅಡ್ಡ ಹಾಯುವ γ ಬಿಂದುವಿನಲ್ಲಿ ಅಂದು ಸೂರ್ಯ ಇರುವುದು.) ಈ ಮೂಲಬಿಂದುವಿನಿಂದ ತೊಡಗಿ ಕ್ರಾಂತಿಚಕ್ರವನ್ನು ಪಶ್ಚಿಮ–ಪೂರ್ವ ದಿಶೆಯಲ್ಲಿ 12 ಸಮಭಾಗಗಳಾಗಿ ವಿಭಾಗಿಸಿದ. ಇವನ್ನು ಗುರುತಿಸಲು ಆಯಾ ಪ್ರದೇಶಗಳಲ್ಲಿದ್ದ ನಕ್ಷತ್ರ ಚಿತ್ರಗಳಿಗೆ ವಿಶೇಷ ಹೆಸರುಗಳನ್ನು ನೀಡಲಾಯಿತು. ಹೀಗೆ ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ, ಮೀನ ಎಂಬ ದ್ವಾದಶ ನಕ್ಷತ್ರರಾಶಿಗಳು ಪ್ರಸಿದ್ಧಿಗೆ ಬಂದಿವೆ. (ಕ್ರಾಂತಿಚಕ್ರವನ್ನು ನಿರ್ಧರಿಸುವ ನಕ್ಷತ್ರ ಚಿತ್ರಗಳನ್ನು ರಾಶಿಗಳೆಂದೂ ಇತರ ಎಲ್ಲವನ್ನು ಪುಂಜಗಳೆಂದೂ ಕರೆಯುವುದು



ಚಿತ್ರ 2 ಕ್ರಾಂತಿಚಕ್ರ

ವಾಡಿಕೆ. ಈ ಕಾರಣದಿಂದ ಕ್ರಾಂತಿಚಕ್ರಕ್ಕೆ ರಾಶಿಚಕ್ರವೆಂದೂ ಹೆಸರುಂಟು.) ಸುಮಾರು 2,000 ವರ್ಷಗಳ ಹಿಂದೆ ಮೇಷರಾಶಿಯೂ γ ಬಿಂದುವೂ ಐಕ್ಯವಾಗಿದ್ದುವು. ಆದರೆ ಆಯನಾಂಶದ ಪರಿಣಾಮವಾಗಿ γ ಬಿಂದು ಮೇಷರಾಶಿಯನ್ನು ತ್ಯಜಿಸಿ ಮೀನರಾಶಿಯೆಡೆಗೆ ಸರಿದಿದೆ. ಆದ್ದರಿಂದ ಇಂದು ಮೇಷರಾಶಿ ಮತ್ತು γ ಬಿಂದುಗಳನ್ನು ಪರ್ಯಾಯ ಪದಗಳಾಗಿ ಬಳಸುವುದು ಸರಿಯಲ್ಲ.

**ಖಗೋಳೀಯ ರೇಖಾಂಶ :** γ ಬಿಂದುವಿನಲ್ಲಿ ತೊಡಗಿ ಕ್ರಾಂತಿವೃತ್ತದ ಮೇಲೆ ಅಪ್ರದಕ್ಷಿಣ ದಿಶೆಯಲ್ಲಿ ಸಾಗಿ ಪುನಃ γ ಬಿಂದುವಿಗೆ ಬಂದು ಸೇರುವಾಗ ಒಂದು ಆಕಾಶಕಾಯ (ಉದಾಹರಣೆಗೆ ಸೂರ್ಯ) ವೀಕ್ಷಕನಲ್ಲಿ (E) $360^\circ$ಗಳನ್ನು ರಚಿಸಿರುತ್ತದೆ. ಇದನ್ನು 12 ಸಮಭಾಗಗಳಾಗಿ ವಿಭಾಗಿಸಿದಾಗ ಒಂದೊಂದು ಭಾಗಕ್ಕೂ $30^\circ$ ದೊರೆಯುತ್ತವೆ. ಎಂದೇ ಒಂದು ರಾಶಿಯಿಂದ ಮುಂದಿನ ರಾಶಿಗೆ ಇರುವ ಕೋನಾಂತರ $30^\circ$. γ ಬಿಂದುವನ್ನು ಖಗೋಳೀಯ ರೇಖಾಂಶವನ್ನು ಅಳೆಯಲು ಮೂಲಬಿಂದುವಾಗಿಯೂ ಕ್ರಾಂತಿವೃತ್ತವನ್ನು (CL) ಆಧಾರತಲವಾಗಿಯೂ ಆಯುತ್ತೇವೆ.




ಚಿತ್ರ 3

ಈಗ σ ಎಂಬ ಒಂದು ನಕ್ಷತ್ರದ ನಿರ್ದೇಶಕಗಳನ್ನು ನಿರೂಪಿಸಲು KσM ಎಂಬ ಮಹಾ ವೃತ್ತವನ್ನು ಕ್ರಾಂತಿವೃತ್ತಕ್ಕೆ ಲಂಬವಾಗಿ ಎಳೆಯುತ್ತೇವೆ. ಇಲ್ಲಿ K ಬಿಂದು ಕ್ರಾಂತಿವೃತ್ತದ ಒಂದು ಧ್ರುವ. γMನ್ನು σ ನಕ್ಷತ್ರದ ಖಗೋಳೀಯ ರೇಖಾಂಶ ಎಂದು ವ್ಯಾಖ್ಯಿಸುತ್ತೇವೆ. ಇದು λ ಆಗಿರಲಿ. Mσ ಖಗೋಳೀಯ ಅಕ್ಷಾಂಶವಾಗುತ್ತದೆ. ಇದು β ಆಗಿರಲಿ. ಆಗ (λ, β)ಗಳು σ ನಕ್ಷತ್ರದ ನಿರ್ದೇಶಕಗಳು. ಇವು σವನ್ನು ಏಕೈಕವಾಗಿ ನಿರ್ಧರಿಸುತ್ತವೆ ಮತ್ತು ಯಾವುದೇ ನಕ್ಷತ್ರದ ಈ ನಿರ್ದೇಶಕಗಳು ಏಕೈಕವಾಗಿವೆ. γ ಬಿಂದು ಕ್ರಾಂತಿವೃತ್ತದ ಮೇಲೆ ಹಿಂಚಲಿಸುವುದರಿಂದ (ಅಯನಾಂಶ) ಸಹಸ್ರಾರು ವರ್ಷಗಳಲ್ಲಿ ಎಲ್ಲ ಆಕಾಶಕಾಯಗಳ ರೇಖಾಂಶಗಳಲ್ಲಿಯೂ ಸ್ಥಿರಹೆಚ್ಚಳ ತೋರುವುದು ಸಹಜ. ಒಂದು ಕಾಲದಲ್ಲಿ OP ಅಂತರ 3 ಕಿಮೀ ಎಂದು ಇದ್ದರೂ ಮುಂದೆ O ಬಿಂದು PO ದಿಶೆಯಲ್ಲಿ 0.5 ಕಿಮೀ ಹಿಂದೆ ಸರಿದರೆ ಆಗ OP ದೂರ 3.5ಕಿಮೀ ಆಗುವಂತೆ. ಆದ್ದರಿಂದ ಪ್ರಾಚೀನ ಕಾಲದ ಕೋಷ್ಟಕಗಳಲ್ಲಿ ದೊರೆಯುವ ನಕ್ಷತ್ರಗಳ ರೇಖಾಂಶಗಳಿಗೆ ಆಯನಾಂಶದ ತಿದ್ದುಪಡಿ ಮಾಡದಿದ್ದರೆ ಅವು ಸೂಚಿಸುವಲ್ಲಿ ಆ ನಕ್ಷತ್ರಗಳು ಇಂದು ನಮಗೆ ಕಾಣಿಸವು. **(ನೋಡಿ– ಕಕ್ಷೆ)** (ಸಿ.ಎಸ್.ಎಸ್.)

**ಕ್ರಾಕಟ್, ಸಾಮ್ಯುಯಲ್ ರದರ್‌ಫರ್ಡ್ :** 1860–1914. ಆಂಗ್ಲ ಕಾದಂಬರಿಕಾರ, ಪಾದ್ರಿ. ಎಡಿನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಮುಗಿಸಿ ಶಿಕ್ಷಕನಾಗಿ ಜರ್ಮನಿ, ಸ್ವಿಟ್ಸರ್‌ಲೆಂಡ್, ಇಟಲಿ ದೇಶಗಳಲ್ಲಿ ಸುತ್ತಿ ಬಂದು ಮತ್ತೆ ಎಡಿನ್‌ಬರ್ಗ್‌ನಲ್ಲಿ ವೇದಾಂತವನ್ನು ಅಭ್ಯಾಸ ಮಾಡಿದ. 1886ರಲ್ಲಿ ಮಿಡ್ಲೋಥಿಯನ್ನಿನಲ್ಲಿ ಪಾದ್ರಿಯಾದ. ಅದೇ ವರ್ಷ ಡಸ್ಸ್ ಕೊರ್ ಎಂಬ ಕವನ ಸಂಕಲನವನ್ನು ಪ್ರಕಟಿಸಿದ. 1893ರಲ್ಲಿ ದಿ ಸ್ಟಿಕಿಟ್ ಮಿನಿಸ್ಟರ್ ಎಂಬ, ವ್ಯಕ್ತಿಚಿತ್ರಗಳಿಂದ ಕೂಡಿದ ಪುಸ್ತಕವನ್ನು ಪ್ರಕಟಿಸಿದ. ಇದು ಜನಪ್ರಿಯತೆ ಗಳಿಸಿತು. ಅನಂತರ ಪ್ರಕಟಗೊಂಡ ದಿ ರೇಯ್‌ಡರ್ಸ್ ಮತ್ತು ದಿ ಲಿಲ್ಯಾಕ್

ಸನ್‌ಬಾನೆಟ್ ಕಾದಂಬರಿಗಳು ಈತನಿಗೆ ಯಶಸ್ಸು ತಂದವಾಗಿ ಈತ ಪಾದ್ರಿ ಕೆಲಸವನ್ನು ಬಿಟ್ಟು ಬರೆವಣಿಗೆಯ ಕಡೆಗೇ ಪೂರ್ಣ ಗಮನವಿತ್ತ. *

ಈತ ಬರೆದ ಸುಮಾರು 40 ಪುಸ್ತಕಗಳಲ್ಲಿ ದಿ ಮೆನ್ ಆಫ್ ದಿ ಮಾಸ್ ಹ್ಯಾಗ್ಸ್ (1895), ದಿ ಗ್ರೇ ಮ್ಯಾನ್ (1896), ಕಿಟ್ ಕೆನಡಿ (1899) ದಿ ಲವ್ಸ್ ಆಫ್ ಮಿಸ್ ಆನ್ (1904), ದಿ ಹ್ವೈಟ್ ಪ್ಲ್ಯೂಮ್ಸ್ ಆಫ್ ನಾವರೆ (1909)–ಇವು ಮುಖ್ಯವಾದವು. ಕಾದಂಬರಿ ಕ್ಷೇತ್ರದಲ್ಲಿ ಈತ ಕೇಲ್‌ಯಾರ್ಡ್ ಪಂಥದ ಮುಂದಾಳುಗಳಲ್ಲಿ ಒಬ್ಬನಾಗಿದ್ದನಲ್ಲದೆ ಆರ್.ಎಲ್. ಸ್ಟೀವನ್‌ಸನ್ನದ ಮೆಚ್ಚಿಕೆಗೆ ಪಾತ್ರನಾಗಿದ್ದ ಎಂಬ ವಿಷಯವನ್ನು ಇಲ್ಲಿ ನೆನೆಯಬಹುದು. (ಎಚ್.ವಿ.ಎಸ್.)

**ಕ್ರಾಕಟೋವ :** ಇಂಡೋನೇಷ್ಯದ ಜಾವ ಮತ್ತು ಸುಮಾತ್ರ ದ್ವೀಪಗಳ ನಡುವೆ ಸುಂದ ಜಲಸಂಧಿಯಲ್ಲಿರುವ ಚಿಕ್ಕ ಜ್ವಾಲಾಮುಖೀದ್ವೀಪ. ಇಂಡೊನೇಷ್ಯದ ದ್ವೀಪಗಳಲ್ಲಿ ಹರಡಿರುವ ನೂರಕ್ಕೂ ಹೆಚ್ಚು ಜೀವಂತ ಅಗ್ನಿಪರ್ವತಗಳಲ್ಲಿ ಇಲ್ಲಿಯದೂ ಒಂದು. ವಿಶ್ವದ ಅತ್ಯಂತ ಸಾಂದ್ರ ಜ್ವಾಲಾಮುಖೀಪ್ರದೇಶ ಈ ದ್ವೀಪಸ್ತೋಮ. ಮಾನವ ವೀಕ್ಷಿಸಿರುವ ಅತ್ಯಂತ ಭೀಕರ ಜ್ವಾಲಾಮುಖೀ ಸ್ಫೋಟಗಳ ಪೈಕಿ 1883ರಲ್ಲಿ ಕ್ರಾಕಟೋವದಲ್ಲಿ ಸಂಭವಿಸಿದ ಸ್ಫೋಟವೂ ಒಂದು. ಸುಮಾರು 10,00,000 ವರ್ಷಗಳಿಂದೀಚೆಗೆ ಚಿಮ್ಮಿದ ಕಿಟ್ಟ, ಬೂದಿ, ಮತ್ತು ಲಾವಗಳಿಂದ ಇಲ್ಲಿ ಶಂಕುವಿನಾಕಾರದ ಅಗ್ನಿಪರ್ವತ ರೂಪುಗೊಂಡಿತು. ಈ ಜ್ವಾಲಾಮುಖಿಯ ತಳ ಸಮುದ್ರಮಟ್ಟದಿಂದ 303ಮೀ ಕೆಳಗೆ ಇದೆ. ಅಲ್ಲಿಂದ ಈ ಪರ್ವತ ಸಮುದ್ರಮಟ್ಟದಿಂದ 667 ಮೀ ಎತ್ತರಕ್ಕೆ ಬೆಳೆಯಿತು. ಇತಿಹಾಸಪೂರ್ವ ಕಾಲದಲ್ಲಿ ಈ ಪರ್ವತದ ತುದಿ ನಾಶವಾಗಿ 6.44 ಕಿಮೀ ಅಗಲದ ಜ್ವಾಲಾಕುಂಡದ (ಕಾಲ್ಡೆರ) ನಿರ್ಮಾಣವಾಯಿತು. ಕುಂಡದ ಬಹುಭಾಗ ಸಮುದ್ರಮಟ್ಟಕ್ಕೆ ಕೆಳಗೆ ಇತ್ತಾದರೂ ಅದರ ಅಂಚಿನ ಭಾಗ ಎತ್ತರವಾಗಿತ್ತು; ಅದರ ಸುತ್ತ ನಾಲ್ಕು ಪುಟ್ಟ ದ್ವೀಪಗಳು ನಿರ್ಮಾಣವಾಗಿದ್ದುವು. ಜ್ವಾಲಾಮುಖಿಯ ಅಗಲವಾದ ಬಾಯಿಂದಾಗಿ ಜ್ವಾಲಾಕುಂಡದ ಚಟುವಟಿಕೆ ಮತ್ತೆ ಪ್ರಕಟವಾಯಿತು. ನಾಲ್ಕು ದ್ವೀಪಗಳ ಪೈಕಿ ಒಂದಾದ ರಕಾಟಾದ ಬಳಿಯಲ್ಲಿ ಎರಡು ಶಂಕುಗಳು ಉಂಟಾದವಲ್ಲದೆ ಕ್ರಮೇಣ ಅವೆರಡೂ ರಕಾಟಾದಲ್ಲಿ ಸೇರಿಹೋದವು. ಹೀಗಾಗಿ ರಕಾಟಾದ ಎತ್ತರ ಸಮುದ್ರಮಟ್ಟದಿಂದ 796 ಕಿಮೀಗೆ ಬೆಳೆಯಿತು.

1883ಕ್ಕೆ ಮುಂಚೆ, ಇತಿಹಾಸ ಕಾಲದಲ್ಲಿ ಸಂಭವಿಸಿದ ಒಂದೇ ಒಂದು ಸ್ಫೋಟವೆಂದರೆ 1680ರಲ್ಲಿ ಸಂಭವಿಸಿದ್ದು. ಮತ್ತೆ 1883ರಲ್ಲಿ ಮೇ 20ರಂದು ಈ ಜ್ವಾಲಾಮುಖಿ ಚೈತನ್ಯಪೂರ್ಣವಾಯಿತು. ಆಗ ಇದರ ಚಟುವಟಿಕೆ ಅಷ್ಟೇನೂ ತೀವ್ರವಾಗಿರಲಿಲ್ಲ. ಬೂದಿ ತುಂಬಿದ ಹಬೆ ಮೋಡಗಳು 10 ಕಿಮೀ ಎತ್ತರಕ್ಕೆ ಚಿಮ್ಮಿದುವು. ಅದರ ಶಬ್ದ 160 ಕಿಮೀಗಳ ದೂರಕ್ಕೆ ಕೇಳಿಸುತ್ತಿತ್ತು. ಮೇ ತಿಂಗಳ ಅಂತ್ಯದ ವೇಳೆಗೆ ಇದು ಸ್ತಬ್ಧವಾಯಿತಾದರೂ ಮತ್ತೆ ಜೂನ್ 19ರಂದು ಎಚ್ಚತ್ತು. ಆಗಸ್ಟ್‌ನಲ್ಲೂ ಮುಂದುವರಿದು ಆ ತಿಂಗಳ 26ರ ವೇಳೆಗೆ ಅತ್ಯಂತ ಉಗ್ರವಾಯಿತು. ಚಿಮ್ಮಿದ ಬೂದಿಯ ಕಪ್ಪುಮೋಡದ ಎತ್ತರ 27 ಕಿಮೀ. ಫಿರಂಗಿಯಿಂದ ಏಕಪ್ರಕಾರವಾಗಿ ಗುಂಡು ಹಾರಿಸಿದಂತೆ ಇದರ ಸದ್ದು ಬಟೇವಿಯದಲ್ಲಿ ಕೇಳಿಸುತ್ತಿತ್ತು. ಮನೆಗಳು ಅದಿರಿದುವು; ಗೋಡೆಯ ಗಾರೆ ಉದುರಿತು. ಮರುದಿನ ಬೆಳಗ್ಗೆ 10 ಗಂಟೆಯ ವೇಳೆಗೆ ಭಾರಿ ಅನಾಹುತ ಸಂಭವಿಸಿತು. ಆಗ ಚಿಮ್ಮಿದ ಬೂದಿಯ ಎತ್ತರ 80 ಕಿಮೀ. 3542 ಕಿಮೀ ಆಚೆ ಆಸ್ಟ್ರೇಲಿಯದಲ್ಲೂ ಇದರ ಸದ್ದು ಕೇಳಿಸಿತು. ಆ ಹಗಲೂ ಅಂದು ರಾತ್ರಿಯೂ ಸ್ಫೋಟ ಮುಂದುವರಿಯಿತು. ಮರುದಿನ ಬೆಳಗ್ಗೆಯ ವೇಳೆಗೆ ಸ್ತಬ್ಧವಾಯಿತು. ಆಮೇಲೂ ಕೆಲವು ತಿಂಗಳುಗಳ ಕಾಲ ಆಗಾಗ ಸ್ಫೋಟಗಳು ಸಂಭವಿಸಿದರೂ ಅವು ಉಗ್ರವಾಗಿರಲಿಲ್ಲ.

ಕ್ರಾಕಟೋವದ ಜ್ವಾಲಾಮುಖಿ

ಆ ಮಹಾಸ್ಫೋಟದ ಸಮಯದಲ್ಲಿ ಜ್ವಾಲಾಮುಖಿ ಉಗುಳಿದ ಬಂಡೆಚೂರುಗಳ ಮೊತ್ತ ಸುಮಾರು 21 ಘಕಿಮೀ. ಸುಮಾರು 114000 ಚಕಿಮೀ ಪ್ರದೇಶದಲ್ಲಿ ಬೂದಿ ತುಂಬಿತ್ತು. ಜ್ವಾಲಾಮುಖಿಯ ಬಳಿಯ ಸಮುದ್ರವನ್ನೆಲ್ಲ ದಟ್ಟವಾಗಿ ಆವರಿಸಿದ್ದ ಕಾಚುವಸ್ತುವಿನಿಂದಾಗಿ ಹಡಗುಗಳ ಸಂಚಾರ ದುರ್ಗಮವಾಗಿತ್ತು. ವಾತಾವರಣದಲ್ಲಿ ತುಂಬಿದ್ದ ಬೂದಿಯಿಂದಾಗಿ ಹಡಗುಗಳ ಸಂಚಾರ ದುರ್ಗಮವಾಗಿತ್ತು. ವಾತಾವರಣದಲ್ಲಿ ತುಂಬಿದ್ದ ಬೂದಿಯಿಂದಾಗಿ ಬೆಳಕೇ ಇರಲಿಲ್ಲ. ಬಟೇವಿಯದಲ್ಲಿ ಆಗಸ್ಟ್ 27 ರಂದು ಮನೆಗಳಲ್ಲಿ ಹಗಲಿನಲ್ಲೂ ದೀಪ ಹಚ್ಚಿಡಬೇಕಾಯಿತು. ಜ್ವಾಲಾಮುಖಿಯಿಂದ ಸುಮಾರು 80 ಕಿಮೀ ಗಳವರೆಗಿನ ಪ್ರದೇಶದಲ್ಲಿ ಎರಡೂವರೆ ದಿವಸಗಳ ಕಾಲ ಗಾಢಾಂಧಕಾರ ತುಂಬಿತ್ತು. ಜ್ವಾಲಾಮುಖಿಯಿಂದ ಹೊರಟ ಸಣ್ಣ ದೂಳು ಭೂಗೋಳವನ್ನು ಸುತ್ತುತ್ತಿದ್ದುದರಿಂದ ಸ್ಫೋಟ ಸಂಭವಿಸಿದ ಅನಂತರ ಒಂದು ವರ್ಷ ಕಾಲ ವಿಶ್ವದಲ್ಲೆಲ್ಲ ಸೂರ್ಯಾಸ್ತ ವರ್ಣಮಯವಾಗಿತ್ತು.

ಹಿಂದೆ ಇದ್ದ ನಾಲ್ಕು ಪುಟ್ಟ ದ್ವೀಪಗಳ ಪೈಕಿ ಪರ್ಬುವತನ್, ಡಾನನ್ ಮತ್ತು ಪೋಲಿಷ್ ಹ್ಯಾಟ್ ಸಂಪೂರ್ಣವಾಗಿಯೂ ರಕಾಟಾದ ಅರ್ಧಭಾಗವೂ ಕಣ್ಮರೆಯಾದುವು. ದ್ವೀಪಗಳಿದ್ದೆಡೆಯಲ್ಲಿ ಸಂಗ್ರಹವಾಗಿದ್ದ ಕಾಚುವಸ್ತುವಿನ ಚೂರುಗಳಲ್ಲಿ ಶೇ.10ರಷ್ಟು ಮಾತ್ರ ಅದೃಶ್ಯವಾದ ದ್ವೀಪಗಳ ಭಾಗವಾಗಿದ್ದುದರಿಂದ ಜ್ವಾಲಾಮುಖಿ ತನ್ನ ಹಳೆಯ ಶಿಖರಗಳನ್ನು ಹೊರತಳ್ಳಲಿಲ್ಲವೆಂದು ಅವು ಒಳಕ್ಕೆ ಕುಸಿದಿರಬೇಕೆಂದೂ ಊಹಿಸಲಾಗಿದೆ. ವಿಶ್ವದ ಇತರ ಜ್ವಾಲಾಕುಂಡಗಳೂ ಇದೇ ರೀತಿ ರೂಪುಗೊಂಡಿವೆ.

ಶಿಖರಗಳ ಕುಸಿತದ ಪರಿಣಾಮವಾಗಿ ಎತ್ತರದ ಅಲೆಗಳು ಎದ್ದುವು. ಆಗಸ್ಟ್ 27ರಂದು ಬೆಳಗ್ಗೆ 10 ಗಂಟೆಗೆ ಸಂಭವಿಸಿದ ಸ್ಫೋಟದಿಂದ ಎದ್ದ ಅಲೆಯೇ ಅತ್ಯಂತ ಭೀಕರ, ಅದು ತಲಪಿದ ಎತ್ತರ 36 ಮೀ ಜ್ವಾಲಾಮುಖಿಯ ಬಳಿಯ ಜಾವ ಸುಮಾತ್ರಗಳ ಕರಾವಳಿಯ ಪಟ್ಟಣಗಳಲ್ಲಿಯ 36000 ಮಂದಿ ಇದಕ್ಕೆ ಆಹುತಿಯಾದರು. ಎಲ್ಲ ಜೀವರಾಶಿಯೂ ಸಂಪೂರ್ಣ ನಾಶವಾಯಿತು. ಆ ಭಾಗವನ್ನು ನಿಸ್ಸಾರವಾದ ಬೂದಿ ಮುಚ್ಚಿತ್ತು. ಸಸ್ಯ ಪ್ರಾಣಿ ಜೀವನದ ಪುನರ್‌ಸ್ಥಾಪನವನ್ನು ಅಧ್ಯಯನ ಮಾಡಲು ಇದರಿಂದ ಅವಕಾಶ ದೊರಕಿತು.

1927 ಡಿಸೆಂಬರ್ 29ರಂದು ಸಮುದ್ರ ತಳದಲ್ಲಿ ಮತ್ತೆ ಚಟುವಟಿಕೆಗಳು ಆರಂಭವಾದುವು. ಹಿಂದಿದ್ದ ದನಾನ್ ಮತ್ತು ಪರ್ಬುವತನ್‌ಗಳ ನಡುವೆ ಸಂಭವಿಸಿದ ಈ ಸ್ಫೋಟದಿಂದಾಗಿ ಅಲ್ಲೊಂದು ಸಣ್ಣ ಗುಪ್ಪೆ ಎದ್ದು ಸಣ್ಣ ದ್ವೀಪವಾಗಿ ಪರಿಣಮಿಸಿತು. ಇದಕ್ಕೆ ಇಡಲಾದ ಹೆಸರು ಅನಾಕ್ ಕ್ರಾಕಟೋವ ಅಥವಾ ಕ್ರಾಕಟೋವದ ಮಗು. 1953ರ ವೇಳೆಗೆ ಈ ದ್ವೀಪ ಸಮುದ್ರಮಟ್ಟದಿಂದ 109 ಮೀ ಎತ್ತರಕ್ಕೆ ಬೆಳೆದಿತ್ತು. 1960ರ ಅನಂತರವೂ ಜ್ವಾಲಾಮುಖಿಯ ಚಟುವಟಿಕೆ ನಿಲ್ಲಲಿಲ್ಲ. (ಬಿ.ಎಸ್.ಎಚ್.)

**ಕ್ರಾಕೋತಿ :** ಮಕಾಕ ಇರಸ್ ಅಥವಾ ಸೈನೊಮಾಲ್ಗಸ್ ಇರಸ್ ಎಂಬ ಶಾಸ್ತ್ರೀಯ ಹೆಸರಿನ ಪ್ರಭೇದದ ಹಲವಾರು ಉಪಪ್ರಭೇದಗಳ ಕೋತಿಗಳಿಗೆ ಇರುವ ಸಾಮಾನ್ಯ ಹೆಸರು. ಪ್ರೈಮೇಟ್ ಗಣದ ಸೈನೊಪಿತಿಕಾಯ್ಡೀ ಕುಟುಂಬಕ್ಕೆ ಸೇರಿದೆ. ಮಲಯ ಪರ್ಯಾಯದ್ವೀಪದ ಕ್ರಾ ಭೂಕಂಠ, ನಿಕೋಬಾರ್, ಸುಮಾತ್ರ, ಜಾವ, ಬಾಲಿ, ಬೋರ್ನಿಯೊ ಮುಂತಾದ ದೇಶಗಳ ಸಮುದ್ರತೀರಪ್ರದೇಶಗಳಲ್ಲಿ ವಾಸಿಸುತ್ತದೆ. ಭಾರತದಲ್ಲಿ ಇದನ್ನು ಬಂಗಾಲದಲ್ಲಿ ಕಾಣಬಹುದು. (ಎಸ್.ಎನ್.ಕೆ.ಯು.)

ಕ್ರಾಕೋತಿ ನೋಡಲು ಹೆಚ್ಚು ಕಡಿಮೆ ಭಾರತದಲ್ಲಿ ಎಲ್ಲೆಡೆ ಕಾಣಬರುವ ರೀಸಸ್ ಕೋತಿಯಂತೆಯೇ ಇದೆ. ದೇಹದ ಬಣ್ಣ ಕಂದು, ಹಳದಿಮಿಶ್ರ ಇಲ್ಲವೆ ಬೂದು ಮಿಶ್ರ ಕಂದು ಮುಂತಾಗಿ ವ್ಯತ್ಯಾಸವಾಗುತ್ತದೆ. ಬಾಲ ಬಲು ಉದ್ದ, ಮುಖದ ಸುತ್ತ ಅಂಚು ಕಟ್ಟಿದಂತೆ ಕೂದಲಿವೆ. ಪೃಷ್ಠದ ಮೇಲೆ ನಸುಗೆಂಪು ಬಣ್ಣದ ಗುರುತುಗಳಿವೆ.

ಸಾಮಾನ್ಯವಾಗಿ ಸಮುದ್ರ ತೀರಗಳಲ್ಲೆ ಇದರ ವಾಸ. ಬಹುಪಾಲು ಪ್ರಭೇದಗಳು ಕಡಲತೀರದಲ್ಲಿನ ಮ್ಯಾಂಗ್ರೋವ್ ತೋಟಗಳಲ್ಲಿದ್ದು ಹಗಲೆಲ್ಲ ಏಡಿಗಳನ್ನು ಹಿಡಿಯುತ್ತ, ಈಜುತ್ತ ಕಾಲ ಕಳೆಯುತ್ತವೆ. ಏಡಿಗಳು, ಕಠಿಣಚರ್ಮಿಗಳು ಮತ್ತು ಕೆಲವು ಬಗೆಯ ಮೃದ್ವಂಗಿಗಳೇ ಇದರ ಪ್ರಧಾನ ಆಹಾರ. ಏಡಿಗಳಂತೂ ಇದಕ್ಕೆ ಬಲು ಅಚ್ಚುಮೆಚ್ಚು. ಇದರಿಂದಾಗಿಯೇ ಈ ಕೋತಿಗೆ ಏಡಿಭಕ್ಷಕ ಕೋತಿ (ಕ್ರ್ಯಾಬ್ ಈಟಿಂಗ್ ಮಕಾಕ್) ಎಂಬ ಹೆಸರು ಬಂದಿದೆ. ಈ ಬಗೆಯ ಆಹಾರ ಸೇವನೆ ಕೋತಿಗಳಲ್ಲಿ ಬಹಳ ಅಪೂರ್ವ. ಬಹುಶಃ ಈ ಕೋತಿಗಳು ತಾವು ಈಗ ವಾಸ ಮಾಡುವ ನೆಲೆಗಳಿಗೆ ಬೇರೆಲ್ಲಿಂದಲೋ ಬಂದುವೆಂದೂ ಇವು ಬರುವ ವೇಳೆಗೆ ಅಲ್ಲಿನ ಬಹುಪಾಲು ಪ್ರದೇಶವೆಲ್ಲ ಬೇರೆ ಬಗೆಯ ಕೋತಿಗಳಿಂದ ತುಂಬಿಕೊಂಡಿದ್ದು ಕ್ರಾ ಕೋತಿಗಳು ಸಮುದ್ರ ತೀರವಾಸಿಗಳಾಗಬೇಕಾಯಿತೆಂದೂ ಊಹೆಯಿದೆ. ಕಡಲತೀರಗಳಲ್ಲಿ ಬೇರೆ ಬಗೆಯ ಆಹಾರ ವಿರಳವಾಗಿರುವುದರಿಂದ ಇವು ಏಡಿ ಮುಂತಾದ ಕಡಲ ಪ್ರಾಣಿಗಳನ್ನೆ ತಿನ್ನಬೇಕಾಯಿತು. ಏಡಿ ಮುಂತಾದವು ಮಾತ್ರ ಈ ಕೋತಿಗಳ ಆಹಾರವೆಂದು ಇದರ ಅರ್ಥವಲ್ಲ. ಹಣ್ಣು, ಧಾನ್ಯ ಮುಂತಾದ ಸಸ್ಯಾಹಾರಗಳನ್ನು ಮೆಚ್ಚಿನಿಂದ ಇವು ಭಕ್ಷಿಸುತ್ತವೆ.

ಬಾಲಿ ದ್ವೀಪಗಳಲ್ಲಿ ಕ್ರಾ ಕೋತಿಯನ್ನು ಪೂಜ್ಯ ಭಾವನೆಯಿಂದ ನೋಡುತ್ತಾರೆ.*

**ಕ್ರಾಗ್, ಆಗಸ್ಟ್ :** 1874-1949. ಡೆನ್ಮಾರ್ಕಿನ ಅಂಗಕ್ರಿಯಾ ವಿಜ್ಞಾನಿ. ರಕ್ತಪರಿಚಲನ ಮಂಡಲದಲ್ಲಿ ಅತಿಸೂಕ್ಷ್ಮ ರಕ್ತನಾಳಗಳ ಪಾತ್ರದ ಅರಿವನ್ನು ಪ್ರಯೋಗಗಳ ಮೂಲಕ

ತೋರಿಸಿಕೊಟ್ಟವ. ಗ್ರಿನಾದಲ್ಲಿ ಜನನ. ಕಪ್ಪೆಗಳ ಉಸಿರಾಟದ ಮೇಲೆ ಪ್ರೌಢಪ್ರಬಂಧ ಬರೆದು ಡಾಕ್ಟೊರೇಟ್ ಪದವಿ ಪಡೆದ (1903). ಕೋಪೆನ್‌ಹೇಗನ್ ವಿಶ್ವವಿದ್ಯಾಲಯದಲ್ಲಿ ಪ್ರಾಣಿ ಅಂಗಕ್ರಿಯಾವಿಜ್ಞಾನ ಪ್ರಾಧ್ಯಾಪಕನಾಗಿದ್ದ. ಉಸಿರಾಡುವಾಗ ಪುಪ್ಪಸಗಳಲ್ಲಿ ಆಗುವ ಅನಿಲದ ವಿನಿಮಯವನ್ನು ಕುರಿತು ಪ್ರಯೋಗಗಳನ್ನು ನಡೆಸಿ ವಿಯೆನ್ನದ ವಿಜ್ಞಾನ ಅಕೆಡಮಿಯಿಂದ ಬಹುಮಾನ ಪಡೆದ (1906). ಪುಪ್ಪುಸಗಳು ಆಮ್ಲಜನಕವನ್ನು ಹೀರಿ ಇಂಗಾಲದ ಡೈ ಆಕ್ಸೈಡನ್ನು ಬಿಡುವುವೇ ಹೊರತು ಬೇರೆ ಏನನ್ನೂ ಸುರಿಸುವುದಿಲ್ಲವೆಂದೂ, ರಕ್ತಕ್ಕೆ ಆಮ್ಲಜನಕ ಸೇರಲು ಕೇವಲ ಭೌತಪಸರಿಕೆ ಮಾತ್ರ ಕಾರಣವೆಂದೂ ತೋರಿಸಿಕೊಟ್ಟ. ಒಬ್ಬನ ದುಡಿತದ ಕೆಲಸವನ್ನು ಅಳೆವ ಬೈಸಿಕಲ್, ಉಸಿರಾಟವನ್ನು ಅಳೆವ ಶ್ವಾಸಮಾಪಿ, ರಕ್ತಪ್ರಮಾಣಮಾಪಿ ಇವನ್ನೆಲ್ಲ ತಯಾರಿಸಿದ. ಪ್ರಪಂಚದ ಎಲ್ಲೆಡೆಗಳಿಂದಲೂ ವಿಜ್ಞಾನಿಗಳು ಬಂದು ಇವನೊಂದಿಗೆ ಕೆಲಸ ಮಾಡಿದರು. ಇದಕ್ಕಾಗಿ ರಾಕ್‌ಫೆಲ್ಲರ್ ಪ್ರತಿಷ್ಠಾನದ ವತಿಯಿಂದ ಇವನಿಗಾಗಿ ಒಂದು ಪ್ರಾಣಿ ಅಂಗಕ್ರಿಯಾವಿಜ್ಞಾನ ಇಲಾಖೆ ಊರ್ಜಿತವಾಯಿತು. ಸ್ನಾಯುಗಳಿಗೆ ಆಮ್ಲಜನಕ ಒದಗಿಸಲು ರಕ್ತ ಸಾಗುವುದನ್ನು ರಕ್ತಲೋಮನಾಳಗಳು ಹೇಗೆ ಹತೋಟಿಗೊಳಿಸುವುವೆಂದೂ ಸ್ನಾಯು ಚಟುವಟಿಕೆಗೆ ತಕ್ಕಷ್ಟು ಲೋಮನಾಳಗಳೂ ತೆರೆದುಕೊಂಡು ರಕ್ತ ಹರಿಸುತ್ತವೆಂದೂ ತೋರಿಸಿಕೊಟ್ಟುದಕ್ಕಾಗಿ ನೊಬೆಲ್ ಬಹುಮಾನ ದೊರೆಯಿತು (1920). (ಡಿ.ಎಸ್.ಎಸ್.)

**ಕ್ರಾನ್ಯಸೆವಿಚ್, ಸಿಲ್ವಿಯೆ ಸ್ಟ್ರಾಹಿಮಿರ್ :** 1865–1908 ಯುಗೋಸ್ಲಾವಿಯದ ಕವಿ. ವೃತ್ತಿಯಿಂದ ಉಪಾಧ್ಯಾಯ. ಈತ ನಿಜಕ್ಕೂ ಪ್ರತಿಮಾ ವಿಧಾನವನ್ನನುಸರಿಸಿದ ಮತ್ತು ಅಸಾಧಾರಣವಾದ ತನ್ನತನವನ್ನು ಪಡೆದಿದ್ದ ಶ್ರದ್ಧಾವಂತ ಕವಿ. ತನ್ನ ಯುಗದ ವಾಸ್ತವಿಕ ಬರೆಹಗಾರರಲ್ಲಿ ವ್ಯಕ್ತವಾದ ಬೌದ್ಧಿಕ ಯೋಚನೆಗಳಿಗೂ ತನ್ನ ಮನಸ್ಸನ್ನು ಕದಡುತ್ತಿದ್ದ ಸಮಸ್ಯೆಗಳಿಗೂ ಸಮರ್ಥ ನಿರೂಪಣೆ ಇತ್ತವ. ಗಾಢವಾದ ಚಿಂತನೆ, ಸೂಕ್ಷ್ಮಸಂವೇದನೆ, ದುಃಖ ಮತ್ತು ಅನ್ಯಾಯಗಳಿಗೆ ಸಿಲುಕಿದವರ ವಿಷಯದಲ್ಲಿ ನೈಜವಾದ ಅನುಕಂಪ, ಈತನ ಎಲ್ಲ ಕೃತಿಗಳಲ್ಲಿಯೂ ಕಾಣಬರುತ್ತದೆ. (ಎಲ್.ಎಸ್.ಎಸ್.)

**ಕ್ರಾಪ್ಪೆ, ಅಲೆಕ್ಸಾಂಡರ್ ಹ್ಯಾಗರ್ಟಿ :** 1894–1947. ಅಂತಾರಾಷ್ಟ್ರೀಯ ಖ್ಯಾತಿಪಡೆದ ಜನಪದ ವಿದ್ವಾಂಸ; ಭಾಷಾವಿಜ್ಞಾನಿ. ಇಪ್ಪತ್ತೈದರ ತರುಣನಾಗಿದ್ದಾಗ ಫ್ರೇಜ಼ರನ ಗೋಲ್ಡನ್ ಬೋ (**ನೋಡಿ– ಗೋಲ್ಡನ್ ಬೋ,–ದಿ**) ಕೃತಿಯನ್ನು ಓದಿದ. ಅಂದಿನಿಂದ ಈತನಿಗೆ ಜಾನಪದದಲ್ಲಿ ಆಸಕ್ತಿ ಮೂಡಿತು. ಆ ಕ್ಷೇತ್ರದಲ್ಲಿ ಕೆಲಸಮಾಡಿದ್ದ ಇನ್ನೂ ಅನೇಕ ಹಿರಿಯ ವಿದ್ವಾಂಸರ ಕೃತಿಗಳನ್ನೂ ಅಭ್ಯಾಸ ಮಾಡಿದ. ಆದರೆ ವಿಚಾರಧಾರೆ, ಸಂಶೋಧನೆಗಳಲ್ಲಿ ಈತ ಯಾವ ಪಂಥಕ್ಕೂ ಸೇರದೆ, ಯಾರ ಪ್ರಭಾವಕ್ಕೂ ಬೀಳದೆ ತನ್ನದೇ ದಾರಿ ಹಿಡಿದ. ಈತನ ಬಾಲ್ಯದ ವಿದ್ಯಾಭ್ಯಾಸ ಇಂಗ್ಲೆಂಡ್, ಹಾಲೆಂಡ್, ಜರ್ಮನಿಗಳಲ್ಲಿ ನಡೆಯಿತು. ಬರ್ಲಿನ್, ಅಯೋವ ಮತ್ತು ಚಿಕಾಗೋ ವಿಶ್ವವಿದ್ಯಾಲಯಗಳಲ್ಲಿ ಈತ ಉನ್ನತ ಶಿಕ್ಷಣ ಪಡೆದ. ಮಿನಿಸೋಟ ಹಾಗೂ ಕೊಲಂಬಿಯ ವಿಶ್ವವಿದ್ಯಾಲಯಗಳಲ್ಲಿ ಕೆಲವು ಕಾಲ ಅಧ್ಯಾಪಕನಾಗಿದ್ದ. 1928ರಿಂದ ಮುಂದೆ ಖಾಸಗಿಯಾಗಿ ತನ್ನ ಸಂಶೋಧನೆಗಳನ್ನು ನಡೆಸಿದ. ರೊಮಾನ್ಸ್ ಭಾಷೆಗಳಲ್ಲಿ ಮತ್ತು ಮಧ್ಯಕಾಲೀನ ಇತಿಹಾಸದಲ್ಲಿ ಕ್ರಾಪ್ಪೆಗೆ ವಿಶೇಷವಾದ ಪರಿಶ್ರಮವಿತ್ತು. ಆದರೆ ಜಾನಪದದಲ್ಲಿ ಈತನ ಹೆಸರು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ. ಜಾನಪದದ ವಿವಿಧ ಮುಖಗಳನ್ನು ಕುರಿತು ಕ್ರಾಪ್ಪೆ ವಿಪುಲವಾಗಿ ಬರೆದಿದ್ದಾನೆ. ಪುರಾಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಂಶೋಧನೆಗಳನ್ನು ನಡೆಸಿ ಗ್ರಂಥಗಳನ್ನು ಪ್ರಕಟಿಸಿದ್ದಾನೆ. 1930ರಲ್ಲಿ ಪ್ರಕಟವಾದ ದಿ ಸೈನ್ಸ್ ಆಫ್ ಫೋಕ್‌ಲೋರ್ ಎಂಬ ಇವನ ಗ್ರಂಥ ಜಾನಪದ ಸ್ವರೂಪವನ್ನು ಚರ್ಚಿಸುವ ಕೆಲವೇ ಗ್ರಂಥಗಳಲ್ಲಿ ಒಂದಾಗಿದ್ದು, ಇಂದಿಗೂ ಮಹತ್ತ್ವದ್ದಾಗಿದೆ. ಎರಡು ಸಂಪುಟಗಳಲ್ಲಿ ಪ್ರಕಟವಾಗಿರುವ ಡಿಕ್ಷನರಿ ಆಫ್ ಫೋಕ್‌ಲೋರ್ ಮೈಥಾಲಜಿ ಅಂಡ್ ಲೆಜೆಂಡ್ ಗ್ರಂಥದ ನಾಲ್ವರು ಸಮಾಲೋಚಕರಲ್ಲಿ ಕ್ರಾಪ್ಪೆಯೂ ಒಬ್ಬ. *

**ಕ್ರಾಫ್ಟ್ಸ್, ಫ್ರೀಮನ್ ವಿಲ್ಸ್ :** 1879–1957. ಪತ್ತೇದಾರಿ ಕಥೆಗಳಿಗೆ ಹೆಸರಾದವ. ಸೈನಿಕ ವೈದ್ಯನೊಬ್ಬನ ಮಗ. ಹುಟ್ಟಿದ್ದು ಡಬ್ಲಿನ್‌ನಲ್ಲಿ. ಬೆಲ್‌ಫಾಸ್ಟ್‌ನ ಕ್ಯಾಂಬೆಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ರೈಲ್ವೆ ಎಂಜಿನಿಯರ್ ಆದ. ದೀರ್ಘ ಕಾಯಿಲೆಯಿಂದ ನರಳುತ್ತಿದ್ದ ಈತ ಸಮಯ ಕಳೆಯಲು ಕಥೆ ಬರೆಯಲು ಆರಂಭಿಸಿದ (1919). ಮುಂದಿನ ವರ್ಷ ದಿ ಕ್ಯಾಸ್ಕ್ ಎಂಬ ಪತ್ತೇದಾರಿ ಕಾದಂಬರಿಯನ್ನು ಪ್ರಕಟಿಸಿದ. ಅದು ಪ್ರಕಟವಾದ 20 ವರ್ಷಗಳಲ್ಲಿ ಒಂದು ಲಕ್ಷ ಪ್ರತಿಗಳು ಮಾರಾಟವಾದುವು. ಈ ಕೃತಿ ಪತ್ತೇದಾರಿ ಕಾದಂಬರಿಗಳಲ್ಲಿ ಅತ್ಯುತ್ತಮವಾದುದೆಂದು ಪರಿಗಣಿಸಲ್ಪಟ್ಟಿದೆ. 1929ರಲ್ಲಿ ಕ್ರಾಫ್ಟ್ಸ್ ತನ್ನ ಹುದ್ದೆಯನ್ನು ತೊರೆದು ಬರವಣಿಗೆಗೆ ತನ್ನನ್ನು ಮೀಸಲಾಗಿರಿಸಿಕೊಂಡ. ದಿ ಪಿಟ್ ಪ್ರಾಪ್ ಸಿಂಡಿಕೇಟ್ (1922), ಇನ್‌ಸ್ಪೆಕ್ಟರ್ ಫ್ರೆಂಚ್ಸ್ ಗ್ರೇಟೆಸ್ಟ್ ಕೇಸ್ (1925), ದಿ ಚೈನೆ ಮಿಸ್ಟ್ರಿ (1926), ದಿ ಸ್ಟಾರ್‌ವೆಲ್ ಟ್ರಾಜಿಡಿ (1927), ದಿ ಬಾಕ್ಸ್ ಆಫೀಸ್ ಮರ್ಡರ್ಸ್ (1929), ಸಡನ್ ಡೆತ್ (1932), ದಿ 12–30 ಫ್ರಂ ಕ್ರಾಯ್‌ಡನ್ (1934), ದಿ ಲಾಸ್ ಆಫ್ ದಿ ಜೇನ್ ವಾಸ್ಸರ್ (1936), ಎ ಲೂಸಿಂಗ್ ಗೇಮ್ (1941), ಡೆತ್ ಆಫ್ ಎ ಟ್ರೇನ್ (1946), ಫ್ರೆಂಚ್ ಸ್ಟ್ರೈಕ್ಸ್ ಆಯಿಲ್ (1951)–ಇವು ಈತನ ಕೆಲವು ಮುಖ್ಯ ಪತ್ತೇದಾರಿ ಕಾದಂಬರಿಗಳು.

ಕ್ರಾಫ್ಟ್ಸ್‌ನ ಕತೆಗಾರಿಕೆ ವಾಸ್ತವಿಕ ರೀತಿಯದು. ಪೊಲೀಸ್ ದೈನಂದಿನ ಜೀವನಕ್ಕೆ ಸಂಬಂಧಿಸಿದ ಮಾಮೂಲಿ ವಿವರಗಳಿಂದಲೇ ಈತ ತನ್ನ ವಿನೂತನ ಕಥೆಗಳನ್ನು ನೇಯುತ್ತಾನೆ. ಈತ ಸೃಷ್ಟಿಸಿದ ಫ್ರೆಂಚ್ ಎಂಬ ಪತ್ತೇದಾರನ ಪಾತ್ರ ಅಂದಿನ ಪೋಲೀಸ್ ಇಲಾಖೆಯಿಂದ ಎತ್ತಿ ತೆಗೆದ ಒಬ್ಬ ಜಾಣ ಇನ್ಸ್‌ಪೆಕ್ಟರನಂತಿದೆ. *

**ಕ್ರಾಮರ್, ಥಿಯಾಡರ್ :** 1897–1958. ಆಸ್ಟ್ರಿಯದ ಜನಪದ ಕವಿ. ಇಂಗ್ಲೆಂಡಿನಲ್ಲಿ ನೆಲಸಿದವ. ಹಳ್ಳಿಯ ವೈದ್ಯನ ಮಗನಾಗಿ ಹುಟ್ಟಿದ ಈತ ಒಂದನೆಯ ಮಹಾಯುದ್ಧದಲ್ಲಿ ಅಂಗವಿಕಲನಾದ. ಅನಂತರ ಪುಸ್ತಕ ವ್ಯಾಪಾರಿಯಾಗಿ ಜೀವನ ನಡೆಸಿದ. ಅದರಲ್ಲೂ ವಿಫಲನಾಗಿ ಸಣ್ಣ ಪುಟ್ಟ ಹುದ್ದೆಗಳಲ್ಲಿದ್ದ. ಆದರೆ 1930ರಲ್ಲಿ ಆದ ಆರ್ಥಿಕಮೌಲ್ಯ ಕುಸಿತದಿಂದಾಗಿ ಕೆಲಸ ಕಳೆದುಕೊಂಡ. ಎರಡನೆಯ ಮಹಾಯುದ್ಧದಲ್ಲಿ ಹಿಟ್ಲರ್ ಆಸ್ಟ್ರಿಯವನ್ನು ಆಕ್ರಮಿಸಿದಾಗ, ನಾಟ್ಸಿಗಳಿಂದ ತಪ್ಪಿಸಿಕೊಂಡು ಇಂಗ್ಲೆಂಡಿಗೆ ತೆರಳಿ, ಅಲ್ಲಿ ಗಿಲ್‌ಫರ್ಡ್ ವೃತ್ತಿಶಿಕ್ಷಣಶಾಲೆಯಲ್ಲಿ ಗ್ರಂಥಪಾಲಕನಾದ.

ಕ್ರಾಮರನದು ಹೋರಾಟದ ಬದುಕು. ವಿಧಿಯೆದುರು ಸೆಣಸಿದುದೇ ಅಲ್ಲದೆ, ಕ್ರೌರ್ಯ, ದಬ್ಬಾಳಿಕೆ, ಕೃತಕತೆಯ ವಿರುದ್ಧವೂ ಈತ ಹೋರಾಡಿದ. ತನ್ನ ಜೀವನದುದ್ದಕ್ಕೂ ದುರ್ಬಲರ ಹಾಗೂ ಶ್ರೀಸಾಮಾನ್ಯರ ಪರವಾಗಿ ಕಾದಾಡಿದ. ಆದರೂ ಈತ ತನ್ನ ಲೇಖನಿಯನ್ನು ಸಮಾಜದ ವಿರುದ್ಧ ಬಳಸಿದವನಲ್ಲ. ಆಸ್ಟ್ರಿಯದ ವಿಯನ್ನ ನಗರದ ಹೊರವಲಯಗಳಲ್ಲಿ ವಾಸಿಸುವ ಜನರ ಜೀವನವನ್ನು ಈತ ಯಾವ ವಕ್ರೋಕ್ತಿಯೂ ಇಲ್ಲದೆ ಸರಳವಾಗಿ ನಿರೂಪಿಸಿದ್ದಾನೆ. ತನ್ನ ಕೃತಿಗಳಲ್ಲಿ ಜನಜೀವನಕ್ಕೆ ಕೈಗನ್ನಡಿಯಾದ ಈತನ ಕೃತಿಗಳು ಸಾಹಿತ್ಯ ಲೋಕದಲ್ಲಿ ಕೋಲಾಹಲವನ್ನುಂಟು ಮಾಡಿ ಯಶಸ್ಸು ತಂದವು. ಅನೇಕ ಪ್ರಶಸ್ತಿಗಳು ಈತನ ಪಾಲಿನವಾದವು.

ಇಂಗ್ಲೆಂಡಿನಲ್ಲಿ ನೆಲಸಿದ್ದರೂ ಕ್ರಾಮರ್‌ನ ಹೃದಯ ವಿಯನ್ನದಲ್ಲೇ ಇತ್ತು. ಆಧುನಿಕ ಜನಪದ ಗೀತೆಗಳನ್ನು ಸರಳ ಹಾಗೂ ಮಧುರವಾದ ಶೈಲಿಯಲ್ಲಿ ಬರೆದ ಕೆಲವೇ ಕವಿಗಳಲ್ಲಿ ಈತನೂ ಒಬ್ಬ. (ಟಿ.ವಿ.ಎಸ್.)

**ಕ್ರಾಮ್ವೆಲ್, ಆಲಿವರ್ :** 1599–1658 ರಾಜನೀತಿಜ್ಞ; ಇಂಗ್ಲೆಂಡ್ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ಕಾಮನ್ವೆಲ್ತಿನ ಪಾಲಕ ಪ್ರಭು ಲಾರ್ಡ್ ಪ್ರೊಟೆಕ್ಟರ್ (1653–1658). ಜನನ ಹಂಟಿಂಗ್ಟನ್ನಿನಲ್ಲಿ, 1599ರ ಏಪ್ರಿಲ್ 25ರಂದು–ಹಳೆಯ ಮನೆತನವೊಂದರಲ್ಲಿ. ಈತ ರಾಬರ್ಟ್ ಕ್ರಾಮ್ವೆಲ್ ಮತ್ತು ಎಲಿಜ಼ಬೆತ್ ಇವರ ಎರಡನೆಯ ಮಗ. ಕ್ರಾಮ್ವೆಲ್ ಹಂಟಿಂಗ್ಟನ್ನಿನ ಶಾಲೆಯಲ್ಲೂ ಕೇಂಬ್ರಿಜ್‌ನ ಸಸೆಕ್ಸ್ ಕಾಲೇಜಿನಲ್ಲೂ ಶಿಕ್ಷಣ ಪಡೆದ. ಲಿಂಕನ್ಸ್ ಇನ್‌ನಲ್ಲೂ ಶಿಕ್ಷಣ ಪಡೆದನೆಂದು ನಂಬಲಾಗಿದೆ. 1620ರಲ್ಲಿ ಈತ ಲಂಡನ್ನಿನ ವ್ಯಾಪಾರಿಯೊಬ್ಬನ ಪುತ್ರಿ ಎಲಿಜ಼ಬೆತ್ ಬರ್ಷರಳನ್ನು ವಿವಾಹವಾದ.

1628ರಲ್ಲಿ ಈತ ಹಂಟಿಂಗ್‌ಟನ್ ಕ್ಷೇತ್ರದಿಂದ ಪಾರ್ಲಿಮೆಂಟಿನ ಸದಸ್ಯನಾದ. ಹತ್ತು ವರ್ಷಗಳ ಅನಂತರ ಧರ್ಮಶುದ್ಧಿವಾದಿ ಧರ್ಮಕ್ಕೆ (ಪ್ಯೂರಿಟನಿಸಂ) ಪರಿವರ್ತನೆ ಹೊಂದಿದಂತೆ ಕಂಡುಬರುತ್ತದೆ. ಆದರೆ ಈತ ಎಂದೂ ಧರ್ಮಾಂಧನಾಗಿರಲಿಲ್ಲ ನಿರಂಕುಶ ಪ್ರಭುವೂ ಸ್ವೇಚ್ಛಾಚಾರಿಯೂ ಆಗಿದ್ದ 1ನೆಯ ಚಾರಲ್ಸನಿಗೂ ಸಂಸತ್ತಿಗೂ ನಡೆದ ಅಂತರ್ಯುದ್ಧದಲ್ಲಿ ಕ್ರಾಮ್ವೆಲ್ ಸಂಸತ್ತಿನ ರಾಜವಿರೋಧಿ ಪಕ್ಷದ ನೇತೃವಾಗಿದ್ದ. 1640ರಲ್ಲಿ ಕೇಂಬ್ರಿಜ್ ಕ್ಷೇತ್ರದಿಂದ ಸಂಸತ್ತಿಗೆ ಮತ್ತೆ ಇವನ ಆಯ್ಕೆಯಾಯಿತು. ಮತೀಯ ವಿಚಾರಗಳಲ್ಲೂ ಸ್ವಾತಂತ್ರ್ಯವಾದಿಯಾಗಿದ್ದ ಕ್ರಾಮ್ವೆಲ್ ಬಿಷಪ್ ಮುಂತಾದ ಧರ್ಮಾಧಿಕಾರಿಗಳನ್ನು ಪದಚ್ಯುತಗೊಳಿಸಬೇಕೆಂದು ಸಂಸತ್ತಿನಲ್ಲಿ ಹೋರಾಡಿದ.

1642ರಲ್ಲಿ ಎಸೆಕ್ಸ್‌ನ ಅಧೀನದಲ್ಲಿ ಕೇಂಬ್ರಿಜ್ ಕೋಟೆಯನ್ನು ವಶಪಡಿಸಿಕೊಂಡು, ಅಲ್ಲಿಯ ಐಶ್ವರ್ಯ ರಾಜನ ಕೈಸೇರದಂತೆ ಮಾಡಿದ್ದೇ ಈತನ ಮೊದಲ ಸೈನಿಕ ಕಾರ್ಯಾಚರಣೆ. ಅನಂತರ ಈತ ರೂಪಿಸಿದ ಹೊಸ ಮಾದರಿಯ ಸೈನ್ಯ ಗೆಯಿನ್ಸ್‌ಬರೋ (1643), ವಿನ್ಸ್‌ಬಿ (1644), ಮಾರ್ಸ್ಟನ್ ಮೂರ್ (1644) ಮತ್ತು ನೇಸ್‌ಬಿ (1645) ಗಳಲ್ಲಿ ರಾಜಪಡೆಯನ್ನು ಸಂಪೂರ್ಣವಾಗಿ ಪರಾಭವಗೊಳಿಸಿತು. 1646ರಲ್ಲಿ ಈ ಹೋರಾಟಗಳು ಮುಗಿಯುವ ವೇಳೆಗೆ ಕ್ರಾಮ್ವೆಲ್‌ನ ಪ್ರಭಾವ ವೃದ್ಧಿಯಾಗತೊಡಗಿತು. ಎರಡನೆಯ ಬಾರಿ ಆರಂಭವಾದ ಅಂತರ್ಯುದ್ಧದಲ್ಲಿ ಕ್ರಾಮ್ವೆಲ್ ರಾಜನ ಪರವಾದ ಸ್ಕಾಟರ ಸೈನ್ಯವನ್ನು ಸೋಲಿಸಿದ. ದೊರೆ ಚಾರಲ್ಸನನ್ನು ವಿಚಾರಣೆಗೆ ಗುರಿಪಡಿಸಿ 1649ರ ಜನವರಿ 30ರಂದು ಶೂಲಕ್ಕೇರಿಸಲಾಯಿತು. ಅದೇ ವರ್ಷ ಐರ್ಲೆಂಡಿನ ದಂಗೆಯನ್ನು ಹತ್ತಿಕ್ಕಿ ಅನೇಕ ಮಂದಿಯನ್ನು ಕೊಲ್ಲಲಾಯಿತು. 1650ರಲ್ಲಿ ರಾಜನ ಪಕ್ಷಕ್ಕೆ ಸೇರಿದ್ದ ಸ್ಕಾಟ್ಲೆಂಡೂ ಮಣಿಯಿತು.

ಅನಂತರ ರೂಪುಗೊಂಡ ಉಚ್ಛಿಷ್ಟ ಸಂಸತ್ತನ್ನು (ರಂಪ್ ಪಾರ್ಲಿಮೆಂಟ್) ಕ್ರಾಮ್ವೆಲ್ ವಿಸರ್ಜಿಸಿದ. ಅಂತಿಮವಾಗಿ ಇಂಗ್ಲೆಂಡಿಗೆ ಕಾಮನ್‌ವೆಲ್ತ್ ರಾಷ್ಟ್ರವೆಂದು ಘೋಷಿಸಲಾಯಿತು. ರಾಜ್ಯಮಂತ್ರಾಲೋಚನಾ ಸಭೆಯ ನೆರವಿನಿಂದ ಕ್ರಾಮ್‌ವೆಲ್ ಅದರ ಆಡಳಿತವನ್ನು ನೋಡಿಕೊಳ್ಳಬೇಕೆಂದು ತೀರ್ಮಾನವಾಯಿತು.

ಕ್ರಾಮ್ವೆಲ್ ಇಂಗ್ಲೆಂಡಿನ ಆಡಳಿತ ವಹಿಸಿಕೊಂಡು ಮುಂದೆ ಐರ್ಲೆಂಡ್ ಮತ್ತು ಸ್ಕಾಟ್‌ಲೆಂಡ್‌ಗಳ ರಾಜಪ್ರಭುತ್ವವಾದಿಗಳ ದಂಗೆಗಳನ್ನು ಹತ್ತಿಕ್ಕಿದ. ವಿಸರ್ಜಿತವಾದ ಸಂಸತ್ತಿನ

ಬದಲು ಪ್ರಮುಖ ಧರ್ಮಶುದ್ಧಿವಾದಿಗಳ ಸಭೆಯೊಂದನ್ನು ರಚಿಸಿದ. ಆದರೆ ಅದೂ ಆತನ ನಿರೀಕ್ಷೆಗೆ ತಕ್ಕಂತೆ ನಡೆಯದಿದ್ದಾಗ ಅದನ್ನೂ ವಿಸರ್ಜಿಸಿ, ರಾಜ್ಯಮಂತ್ರಾಲೋಚನಾ ಸಭೆಯನ್ನು ಪುನಃ ಕರೆದ. ಅದು ಸರ್ಕಾರದ ಕಟ್ಟಳೆಯೊಂದನ್ನು ರಚಿಸಿತು. ಇದರ ಫಲವಾಗಿ, ಕ್ರಾಮ್ವೆಲ್ ಇಂಗ್ಲೆಂಡಿಗೆ ಮಾತ್ರವೇ ಅಲ್ಲದೆ ಐರ್ಲೆಂಡ್ ಸ್ಕಾಟ್‌ಲೆಂಡ್‌ಗಳಿಗೂ ಪಾಲಕ ಪ್ರಭುವಾದ. ಅಲ್ಲದೆ, ಸ್ವಲ್ಪ ದಿವಸಗಳ ಅನಂತರ ರಚಿತವಾದ ಅನುಬಂಧ ಶಾಸನದ (ಅಡಿಷನಲ್ ಪೆಟಿಷನ್) ಪ್ರಕಾರ ತನ್ನ ಉತ್ತರಾಧಿಕಾರಿಗಳನ್ನು ನೇಮಿಸುವ ಹಕ್ಕು ಆತನಿಗೆ ದೊರಕಿತು.



ಕ್ರಾಮ್ವೆಲ್ ಒಂದು ರೀತಿಯಲ್ಲಿ ಸರ್ವಾಧಿಕಾರಿಯಾಗಿದ್ದನೆಂದೇ ಹೇಳಬೇಕು. ಆತನೊಂದು ವಿಚಿತ್ರ ಪರಿಸ್ಥಿತಿಯನ್ನೆದುರಿಸ ಬೇಕಾಗಿತ್ತು. ಪಾರ್ಲಿಮೆಂಟುಗಳನ್ನು ಬಿಟ್ಟಿರುವುದು, ಅವುಗಳೊಂದಿಗೆ ಸಹಕರಿಸಿ ಕೆಲಸ ಮಾಡುವುದು–ಎರಡೂ ಅವನಿಗೆ ಕಷ್ಟವಾಗಿದ್ದವು. ಅವನಿಗೆ ಪಾರ್ಲಿಮೆಂಟಿನಲ್ಲಿ ನಂಬಿಕೆಯಿರಲಿಲ್ಲ. ನಿಶ್ಚಿತೋದ್ದೇಶ ಮತ್ತು ದೃಢವಾದ ಕಾರ್ಯನೀತಿಗಳಲ್ಲಿ ಅವನಿಗೆ ವಿಶ್ವಾಸವಿತ್ತು. ವಿಶಾಲದೃಷ್ಟಿ, ಧರ್ಮ ಸಹಿಷ್ಣುತೆ, ರಾಷ್ಟ್ರಹಿತ ಮುಂತಾದ ಉನ್ನತಗುಣಗಳಿಂದ ಕೂಡಿದ್ದ ಆತ ನಿಸ್ವಾರ್ಥದೃಷ್ಟಿಯಿಂದ ತನ್ನ ತಾಯ್ನಾಡಿಗಾಗಿ ದುಡಿದ. ತನ್ನ ಧ್ಯೇಯಸಾಧನೆಗಾಗಿ ಆತ ಸಂಸತ್ತನ್ನು ಕಡೆಗಣಿಸಿದ. ವ್ಯಕ್ತಿ ಸ್ವಾತಂತ್ರ್ಯವನ್ನೂ ಅಲಕ್ಷಿಸಿದ್ದು ನಿಜ. ಆತ ದಕ್ಷ ಆಡಳಿತಗಾರ ಮತ್ತು ಉತ್ತಮ ಹೋರಾಟಗಾರ.

ತನ್ನ ಅಧಿಕಾರದ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ 1658ರಲ್ಲಿ ಕ್ರಾಮ್ವೆಲ್ ನಿಧನ ಹೊಂದಿದ. ವೆಸ್ಟ್‌ಮಿನಸ್ಟರ್ ಅಬೆಯಲ್ಲಿ ಆತನ ಶವಸಂಸ್ಕಾರವಾಯಿತು. (ವಿ.ಕೆ.ಯು.)

**ಕ್ರಾಸ್‌ಬಿಲ್ :** ಲಾಕ್ಸಿಯ ಜಾತಿಗೆ ಸೇರಿದ ಮೂರು ಪಕ್ಷಿ ಪ್ರಭೇದಗಳಿಗೆ ಬಳಸುವ ಸಾಮಾನ್ಯ ಹೆಸರು (ಪ್ಯಾಸೆರಿಫಾರ್ಮೀಸ್ ಗಣ, ಫ್ಲಾಸಿಯಿಡೀ ಕುಟುಂಬ). ಗಿಳಿಗಳನ್ನು ಹೋಲುವ ಈ ಹಕ್ಕಿಗಳ ಕೊಕ್ಕಿನ ಎರಡು ಭಾಗಗಳು ಅಡ್ಡ ಹಾಯ್ದಿರುವುದರಿಂದ ಇವಕ್ಕೆ ಈ ಹೆಸರು ಬಂದಿದೆ. ಕೊಕ್ಕಿನ ಈ ಮಾರ್ಪಾಡು ಇವು ಶಂಕುಧಾರಿ ಸಸ್ಯಗಳ (ಕೋನಿಫರ್ಸ್) ಫಲಗಳನ್ನು ಸೀಳಿ ಅವುಗಳಲ್ಲಿ ಅಡಗಿರುವ ಬೀಜಗಳನ್ನು ನಾಲಗೆಯಿಂದ ಆರಿಸಿಕೊಳ್ಳಲು ಅನುಕೂಲವಾಗಿದೆ. ಲಾಕ್ಸಿಯ ಕರ್ವಿರಾಸ್ಟ್ರ ಎಂಬ ಕೆಂಪು ಕ್ರಾಸ್‌ಬಿಲ್ ಉತ್ತರ ಅಮೆರಿಕದ ಉತ್ತರದ ನಿತ್ಯಹರಿದ್ವರ್ಣದ ಅರಣ್ಯಗಳಿಂದ ಹಿಡಿದು ದಕ್ಷಿಣದಲ್ಲಿರುವ ಉತ್ತರ ಕೆರೋಲಿನ ಮತ್ತು ಪಶ್ಚಿಮ ಮೆಕ್ಸಿಕೋವರೆಗೂ ಕಂಡುಬರುತ್ತದೆ. ವಯಸ್ಸಾದಾಗ ಗಂಡುಹಕ್ಕಿ ಇಟ್ಟಿಗೆ ಕೆಂಪಾಗಿರುತ್ತದೆ; ಇದರ ರೆಕ್ಕೆ ಮತ್ತು ಪುಕ್ಕಗಳು ಮಾತ್ರ ಮಾಸಲು ಬಣ್ಣವಾಗಿರುತ್ತವೆ. ಹೆಣ್ಣು ಹಕ್ಕಿ ಮತ್ತು ಮರಿಗಳು ಮಾಸಲು ಹಳದಿ ಮಿಶ್ರಿತ ಹಸಿರಾಗಿರುತ್ತವೆ. ಸ್ನೇಹಭಾವದಿಂದ ಜೀವಿಸುವ ಸಂಘಜೀವಿ ಹಕ್ಕಿಗಳಿವು. ಸಾಮಾನ್ಯವಾಗಿ ಶಂಕುಧಾರಿ ಮರಗಳನ್ನು ಹುಡುಕಿಕೊಂಡು ಒಂದು ಪ್ರದೇಶದಿಂದ ಇನ್ನೊಂದಕ್ಕೆ ತಿರುಗಾಡುವ ಇವು ಆಹಾರ ಯಥೇಚ್ಛವಾಗಿರುವೆಡೆ ಚಳಿಗಾಲವಾದರೂ ನೆಲೆಯೂರಿ ಗೂಡು ಕಟ್ಟುತ್ತವೆ. ಒರಟೊರಟಾಗಿ ಕಟ್ಟುವ ಗೂಡಿನಲ್ಲಿ ಎಳೆ ಹಸುರು ಬಣ್ಣದ 3–4 ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಮೇಲೆ ಹೆಣ್ಣುಪಕ್ಷಿ ಕಾವು ಕುಳಿತಿರುವಾಗ ಗಂಡು ಪಕ್ಷಿ ಅದಕ್ಕೆ ಆಹಾರ ಒದಗಿಸುತ್ತದೆ. ಕೆಲವು ವೇಳೆ ಕ್ರಾಸ್‌ಬಿಲ್ ಪಕ್ಷಿಗಳು ಇಂಪಾಗಿ ಹಾಡುತ್ತವೆ. ಆದರೆ ಇವು ಒಟ್ಟುಗೂಡುವಾಗ ಮಾಡುವ ಧ್ವನಿ ಒಂದು ವಿಶೇಷ ರೀತಿಯದಾಗಿರುತ್ತದೆ.

ಲಾಕ್ಸಿಯ ಲ್ಯೂಕಾಪ್ಟರ ಎಂಬ ಬಿಳಿ ರೆಕ್ಕೆಯ ಅಥವಾ ಇಗ್ಗೆರೆಯ ಕ್ರಾಸ್‌ಬಿಲ್ ಉಷ್ಣ ಮತ್ತು ಸಮಶೀತೋಷ್ಣ ವಲಯಗಳೆರಡಲ್ಲೂ ವಾಸಿಸುತ್ತದೆ. ವೆಸ್ಟ್‌ಇಂಡೀಸಿನ ಹಿಸ್ಪೇನಿಯೋಲ ಬೆಟ್ಟಗಾಡುಗಳಲ್ಲಿ ಇದರ ಒಂದು ತಳಿ ಜೀವಿಸುತ್ತದೆ.

ಸ್ಕಾಂಡಿನೇವಿಯ ದೇಶಗಳಲ್ಲಿ ಲಾಕ್ಸಿಯ ಪಿಟೋಸಿಟ್ಟಾಕಸ್ ಎಂಬ ಒಂದು ಪ್ರಭೇದ ವಾಸಿಸುತ್ತದೆ. (ಜಿ.ಎಂ.ಬಿ.)

**ಕ್ರಾಸಿಟ್‌ಸ್ಕಿ, ಇಗ್ನಾಟ್ಸಿ ಕೌಂಟ್ :** 1735–1801. 18ನೆಯ ಶತಮಾನದ ಪೋಲೆಂಡಿನ ಅತ್ಯಂತ ಹಿರಿಯ ಬರೆಹಗಾರನೆನಿಸಿಕೊಂಡ ಈತ ಹೆಸರಾಂತ ಕವಿ, ನಾಟಕಕಾರ ಮತ್ತು ಕಾದಂಬರಿಕಾರ. ಅರಸನ ಸ್ನೇಹ ಸಂಪಾದಿಸಿ ಬಿಷಪ್ ಮತ್ತು ಆರ್ಚ್‌ಬಿಷಪ್ ಆದ. ಈತನ ಅಣಕು ಮಹಾಕಾವ್ಯಗಳು ಉಲ್ಲಾಸ ಮನೋವೃತ್ತಿಯನ್ನೂ ನೀತಿಕಥೆಗಳು ಜೀವನದರ್ಶನವನ್ನೂ ವಿಡಂಬನೆಗಳು ಸಮಕಾಲೀನ ಜೀವನದ ಓರೆಕೋರೆಗಳನ್ನೂ ಚಿತ್ರಿಸುತ್ತವೆ. ಆದರೂ ಅವುಗಳಲ್ಲಿ ಎಲ್ಲಿಯೂ ಅಸಂಬದ್ಧತೆ ಕಾಣದು. ಈತನ ಬರೆಹ ಸೊಗಸಾದ ಪ್ರಾತಿನಿಧಿಕ ವ್ಯಕ್ತಿಗಳನ್ನೂ ಪ್ರಕಾರಗಳನ್ನೂ ಸೃಷ್ಟಿಸುವಂಥದು. ಪೋಲೆಂಡಿನ ಜನರ ಜೀವನವನ್ನು ಸುಂದರವಾಗಿ ಚಿತ್ರಿಸುವ ಎರಡು ಕಾದಂಬರಿಗಳನ್ನು ಈತ ಬರೆದ. ಪೋಲಿಷ್ ಭಾಷೆಯ ಆಧುನಿಕ ಕಾದಂಬರಿ ಸೃಷ್ಟಿಯಲ್ಲಿ ಈತ ಮೊದಲಿಗ. ಈತನ ಕೃತಿಗಳಲ್ಲಿ ಪ್ರಜ್ಞಾವಂತ ತರ್ಕಬದ್ಧ ಮನೋಭಾವ ಮತ್ತು ಪ್ರಾಚೀನ ಸಾಹಿತ್ಯ ಮನೋಧರ್ಮ ಎರಡನ್ನೂ ಗುರುತಿಸಬಹುದು. ಪ್ಲೂಟಾರ್ಕ್, ಲೂಸಿಅನ್ ಮೊದಲಾದ ಪ್ರಾಚೀನ ಕವಿಗಳ ಕೃತಿಗಳನ್ನು ಈತ ಅನುವಾದ ಮಾಡಿದ. ಪೋಲಿಷ್ ಭಾಷೆಯಲ್ಲಿ ಪ್ರಪಂಚ ಸಾಹಿತ್ಯ ಚರಿತ್ರೆಯ ಮೊದಲ ಸಮೀಕ್ಷೆ ನಡೆಸಿದ ಸಾಹಸಿಗನೀತ. ಬಾಯ್ಲೊ ನಿರೂಪಿಸಿದ ನಿಯಮಗಳನ್ನು ಅನುಸರಿಸಿ ಸಾಹಿತ್ಯ ರಚನೆಗೆ ತೊಡಗುವುದು ಮತ್ತು ಫ್ರಾನ್ಸಿನ ಮಹಾ ಕೃತಿಗಳನ್ನು ಅನುಕರಣೆ ಮಾಡುವುದು ಇವನ ಮತ್ತು ಇವನ ಸಂಗಡಿಗರ ಮುಖ್ಯ ಉದ್ದೇಶವಾಗಿತ್ತು.

ಮೈಶ್ಯೆಡ ಮತ್ತು ಮೊನಖೊಜೀನಿಯ–ಈ ಎರಡು ಇವನ ಪ್ರಸಿದ್ಧ ಕೃತಿಗಳು. (ಎಲ್.ಎಸ್.ಎಸ್.)

**ಕ್ರಾಸಿನ್ಸ್ಕಿ, ಜೆಗ್ಮೂಂಟ್ :** 1812–1859. ಪೋಲೆಂಡಿನ ಕವಿ, ನಾಟಕಕಾರ ಮತ್ತು ಕಾದಂಬರಿಕಾರ. ಹುಟ್ಟಿದ್ದು ಪ್ಯಾರಿಸ್‌ನಲ್ಲಿ. ಈತನ ವಿದ್ಯಾಭ್ಯಾಸ ಜೋಸೆಫ್ ಕೋಷೆನೋಫ್‌ಸ್ಕಿಯ ಬಳಿ ನಡೆಯಿತಾದರೂ ತನ್ನ ತಂದೆ ರಷ್ಯದ ಕಡೆ ಅಪಾರವಾದ ನಿಷ್ಠೆ ತೋರಿಸಿದುದರಿಂದ ವಿಶ್ವವಿದ್ಯಾಲಯದ ವ್ಯಾಸಂಗವನ್ನು ಮುಂದುವರಿಸಲಾರದೆ ಹೋದ. ಸ್ವಿಟ್ಸರ್‌ಲೆಂಡಿಗೆ ತೆರಳಿದ ಈತ 1829ರಿಂದ ಮುಂದೆ ಹೆಚ್ಚಾಗಿ ಹೊರದೇಶಗಳಲ್ಲಿಯೇ ವಾಸಿಸತೊಡಗಿದ. 1831ರಿಂದ ನಿರಂತರವಾದ ಕಣ್ಣುಬೇನೆಗೆ ತುತ್ತಾದ. 1832ರಲ್ಲಿ ಐದು ತಿಂಗಳು ಪೀಟರ್ಸ್‌ಬರ್ಗ್‌ನಲ್ಲಿ ಇದ್ದ. 1834ರಲ್ಲಿ ರೋಮಿನಲ್ಲಿ ಜೊಅನ್ನಬರೊವಳನ್ನು 1838ರಲ್ಲಿ ನೇಪಲ್ಸ್‌ನಲ್ಲಿ ಡೆಲ್ಫಿನ ಪೊಟೊಸಳನ್ನು ಪ್ರೇಮಿಸಿದ. ಈ ಇಬ್ಬರು ಸ್ತ್ರೀಯರೂ ಈತನ ಸಾಹಿತ್ಯಕೃತಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದಾರೆ. ತನ್ನ ದೈಹಿಕ ದುರ್ಬಲತೆಯಿಂದಾಗಿ 1848ರಾಚೆಗೆ ಈತ ಸಾಹಿತ್ಯ ರಚನೆ ಮಾಡಲಿಲ್ಲ.

1825ರಿಂದ 1832ರ ತನಕ ಅನಾಮಧೇಯನಾಗಿ ಈತ ಬರೆದ ಕಾದಂಬರಿಗಳಲ್ಲಿ ಸರ್ ವಾಲ್ಟರ್ ಸ್ಕಾಟನ ಪ್ರಭಾವ ಎದ್ದು ಕಾಣುತ್ತದೆ. 1833ರಿಂದ 1838ರ ಅವಧಿಯಲ್ಲಿ ಈತ ಬರೆದ ಎರಡೂ ನಾಟಕಗಳು–ಡಿ ಅನ್‌ಡಿವೈನ್ ಕಾಮಿಡಿ ಮತ್ತು ಇರಿಡಿಅನ್ ಎಂಬ ಹೆಸರಿನಲ್ಲಿ ಇಂಗ್ಲಿಷ್‌ಗೆ ಭಾಷಾಂತರಗೊಂಡಿವೆ. ಇರಿಡಿಅನ್‌ನಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣವಿದೆ. ದಿ ಅನ್‌ಡಿವೈನ್ ಕಾಮಿಡಿಯಲ್ಲಿ ಮುಂಬರಲಿರುವ ಸಾಮಾಜಿಕ ಕ್ರಾಂತಿಯ ದರ್ಶನವಿದ್ದು ಆಗತಾನೆ ದೇಶದಲ್ಲಿ ಕಾಣಿಸಿಕೊಳ್ಳುತ್ತಿದ್ದ ವರ್ಗಕಲಹ ಮತ್ತು ಸಾಮಾಜಿಕ ಕ್ರಾಂತಿಗಳನ್ನು ಎರಡು ಸಂಸ್ಕೃತಿಗಳ ಹೋರಾಟವನ್ನಾಗಿ ಕವಿ ಅಂತಃಸ್ಫೂರ್ತಿಯಿಂದ ಚಿತ್ರಿಸಿದ್ದಾನೆ. ಅದರ ಸಾಂಕೇತಿಕ ಮುಕ್ತಾಯದಲ್ಲಿ, ಕಾರ್ಯಶೀಲ ಕ್ರೈಸ್ತಧರ್ಮ ಅವೆರಡರ ಸಾಮರಸ್ಯವನ್ನು ಸಾಧಿಸಬಹುದೆಂಬ ಸೂಚನೆ ನೀಡಿದ್ದಾನೆ. 1839ರಿಂದಾಚೆಗೆ ಬರೆದವುಗಳಲ್ಲಿ ಪ್ರೆಡ್‌ಸ್ವಿಟ್ ಎಂಬ ಕಾವ್ಯಕೃತಿ ಮುಖ್ಯವಾದದ್ದು. ಇಲ್ಲಿ ಜಗತ್ತನ್ನು ಉದ್ಧಾರ ಮಾಡುವ ಕಾರ್ಯವನ್ನು ಪೋಲೆಂಡ್ ಕೈಗೊಳ್ಳಬೇಕೆಂಬ ಆಶಯವನ್ನು ವ್ಯಕ್ತಮಾಡಿದ್ದಾನೆ.

ಈತನ ಎಲ್ಲ ಕೃತಿಗಳಲ್ಲಿ ತತ್ತ್ವಚಿಂತನೆ ಗುಪ್ತಗಾಮಿನಿಯಾಗಿದೆ. ಗದ್ಯಕೃತಿಗಳಲ್ಲಿ ಭವ್ಯತೆಯಿದ್ದರೂ ನಾಟಕಗಳೇ ಈತನ ಮುಖ್ಯ ಕೃತಿಗಳೆನಿಸಿವೆ. (ಎಲ್.ಎಸ್.ಎಸ್.)

**ಕ್ರಿಂಪರ್:** ತೋಟಬತ್ತಿ(ಫ್ಯೂಸ್) ವಿಸ್ಫೋಟಪ್ರೇರಕದಿಂದ (ಡೆಟೊನೇಟರ್) ಬೇರ್ಪಡದಂತೆ ಮಾಡಲು ಬಳಸುವ ಉಪಕರಣ. ಇಕ್ಕಳವನ್ನು ಹೋಲುತ್ತದೆ. ಮುಚ್ಚಳಗಳನ್ನು ಕುಪ್ಪಿಗಳ ಮೇಲೆ ಭದ್ರಗೊಳಿಸುವ ಉಪಕರಣಕ್ಕೂ ಕ್ರಿಂಪರ್ ಎಂದು ಹೆಸರು ಉಂಟು. (ಟಿ.ಟಿ.)

**ಕ್ರಿಕೆಟ್ :** ಆಧುನಿಕ ಕ್ರೀಡಾಲೋಕದಲ್ಲಿ ಅತ್ಯಂತ ಜನಪ್ರಿಯವಾದ ಕ್ರೀಡೆಗಳ ಪೈಕಿ ಕ್ರಿಕೆಟ್ ಕೂಡ ಒಂದು. ಭಾರತದ ಕ್ರೀಡಾಲೋಕದಲ್ಲಿನ ಪರಿಸ್ಥಿತಿಯನ್ನು ಗಮನಿಸಿದಾಗ ಕ್ರಿಕೆಟ್ ಒಂದೇ ಅತ್ಯಂತ ಜನಪ್ರಿಯವಾದ ಕ್ರೀಡೆ ಎನ್ನುವ ಭ್ರಮೆ ಹುಟ್ಟಿದರೂ ಜಾಗತಿಕ ಸನ್ನಿವೇಶದಲ್ಲಿ ಫುಟ್‌ಬಾಲ್, ಟೆನಿಸ್, ಬಾಕ್ಸಿಂಗ್, ಬ್ಯಾಸ್ಕೆಟ್‌ಬಾಲ್, ಕಾರ್ ರೇಸಿಂಗ್... ಮುಂತಾದ ಕ್ರೀಡೆಗಳು ಕ್ರಿಕೆಟ್‌ಗಿಂತ ಜನಪ್ರಿಯವಾಗಿವೆ. ಒಲಿಂಪಿಕ್ಸ್ ಕೂಡ ಇನ್ನೂ ಜೀವಂತವಾಗಿಯೇ ಇದೆ.

ಬ್ರಿಟಿಷರಿಂದ ಭಾರತಕ್ಕೆ ಕಾಲಿಟ್ಟ ಕ್ರಿಕೆಟ್‌ಗೆ ಸುಮಾರು ಏಳು ಶತಮಾನಗಳಿಗಿಂತ ದೀರ್ಘವಾದ ಇತಿಹಾಸವಿದೆ. ಮೂಲತಃ ಕ್ರಿಕೆಟ್ ಎಂಬ ಪದ ಹೇಗೆ ಉದ್ಭವವಾಯಿತು ಎನ್ನುವ ಬಗ್ಗೆ ಹಲವಾರು ವಿವರಣೆಗಳನ್ನು ಮಂಡಿಸಲಾಗಿದೆ. ಸ್ಯಾಕ್ಸನ್‌ನ ಕ್ರೈಸ್ ಅರ್ಥಾತ್ ಕೋಲು ಎಂಬ ಪದವೇ ಕ್ರಿಕೆಟ್ ಆಗಿ ಪರಿವರ್ತನೆಗೊಂಡಿತು ಎಂಬ ಮಾತಿದೆ. ಅದೇ

ರೀತಿಯಲ್ಲಿ ಫ್ಲೆಮಿಷ್ ಭಾಷೆಯ ಕ್ರಿಕ್ (ಕೋಲು), ಫ್ರೆಂಚ್‌ನ ಕ್ರಿಕ್ವೆಟ್ (ಗುರಿಕಂಬ) ಪದಗಳು ಕೂಡ ಕ್ರಿಕೆಟ್ ಪದದ ಹುಟ್ಟಿಗೆ ಮೂಲ ಎನ್ನಲಾಗುತ್ತದೆ.

ಒಂದು ಸಿದ್ಧಾಂತದ ಪ್ರಕಾರ, ಕುರಿ ಕಾಯುತ್ತಿದ್ದು ಕುರುಬರು ಈ ರೀತಿಯ ಆಟವನ್ನು ಆಡಲು ಆರಂಭಿಸಿದರು. ಕೊಟ್ಟಿಗೆಯಿಂದ ಕುರಿಗಳನ್ನು ಹೊರ ಬಿಡುವ ಸ್ಥಳದಲ್ಲಿ ಇರುತ್ತಿದ್ದ ವಿಕೆಟ್ ಗೇಟ್ ಮುಂದೆ ಒಬ್ಬ ಕುರುಬ ಬ್ಯಾಟ್‌ನಂತಹ ಪರಿಕರವೊಂದನ್ನು ಹಿಡಿದು ನಿಲ್ಲುತ್ತಿದ್ದ. ಮತ್ತೊಂದು ತುದಿಯಿಂದ ಮತ್ತೊಬ್ಬ ಕುರುಬ ಗುಂಡಾದ ಕಲ್ಲು ಅಥವ ಇನ್ನಾವುದೇ ಗಟ್ಟಿಯಾದ ವಸ್ತುವನ್ನು ಆತನತ್ತ ಎಸೆಯುತ್ತಿದ್ದ. ಇದು ಕ್ರಿಕೆಟ್‌ನ ಉಗಮ ಎನ್ನಲಾಗುತ್ತದೆ. ಮತ್ತೊಂದು ವಿವರಣೆಯ ಪ್ರಕಾರ, ಚರ್ಚ್‌ಗಳ ಆವರಣದಲ್ಲಿ ಆಡುತ್ತಿದ್ದ ಒಂದು ಆಟ ಅಥವಾ ಕ್ಲಬ್ ಬಾಲ್ ಎನ್ನುವ ಆಟವು ಕ್ರಿಕೆಟ್ ಆಗಿ ಪರಿವರ್ತನೆಗೊಂಡಿತು. ಬ್ರಿಟನ್ನಿನ ಯುವರಾಜ ಎಡ್ವರ್ಡ್ ಮತ್ತು ಆತನ ಸ್ನೇಹಿತ ಪಿಯರ್ಸ್ ಗಾವೆಸ್ಟನ್ 14ನೇ ಶತಮಾನದಲ್ಲಿ ಕ್ರಿಕೆಟ್ ಆಡಿದರು ಎನ್ನುವ ಬಗ್ಗೆ ಉಲ್ಲೇಖವಿದೆ. ಆದರೆ, ಕ್ರಿಕೆಟ್ ಪಂದ್ಯವೊಂದು ನಡೆದದ್ದನ್ನು ದಾಖಲು ಮಾಡಿರುವ ಪ್ರಥಮ ಉದಾಹರಣೆ ಸಿಗುವುದು 1946ರಲ್ಲಿ – ಕೆಂಟ್‌ನ ಕಾಕ್ಸ್‌ಹೀತ್‌ನಲ್ಲಿ ನಡೆದ ಪಂದ್ಯದ ಮೂಲಕ. 1709 ಜೂನ್ 29 ರಂದು ಡಾರ್ಟ್‌ಫೋರ್ಡ್ ಬ್ರೆಂಟ್‌ನಲ್ಲಿ ಸರ್ರೆ ಮತ್ತು ಕೆಂಟ್ ತಂಡಗಳ ನಡುವೆ ನಡೆದ ಪಂದ್ಯವು ಅಧಿಕೃತವಾಗಿ ಎರಡು ಪ್ರಾಂತಗಳ ನಡುವೆ ನಡೆದ ಮೊದಲ ಕ್ರಿಕೆಟ್ ಪಂದ್ಯ ಎಂದು ದಾಖಲಾಗಿದೆ.

ಇಂಗ್ಲೆಂಡ್‌ನ ಹ್ಯಾಂಬಲ್‌ಡನ್ ಕ್ಲಬ್ ಅನ್ನು ಕ್ರಿಕೆಟ್‌ನ ತೊಟ್ಟಿಲು ಎಂದು ಪರಿಗಣಿಸಲಾಗುತ್ತದೆ. ಇದರೊಂದಿಗೆ ಕೆಂಟ್ ಇಂಗ್ಲೆಂಡ್‌ನ ಕ್ರಿಕೆಟ್ ಕ್ಲಬ್‌ಗಳ ಪೈಕಿಯೇ ಅತ್ಯಂತ ಶ್ರೇಷ್ಠವಾದುದು ಎಂಬ ಹೆಸರು ಕೂಡ ಪಡೆದಿತ್ತು. ಹ್ಯಾಂಬಲ್‌ಡನ್ ಕ್ರಿಕೆಟ್ ಕ್ಲಬ್ 1793ರಲ್ಲಿ ಲಂಡನ್‌ನ ಲಾರ್ಡ್ಸ್ ಮೈದಾನದಲ್ಲಿ ತನ್ನ ಕೊನೆಯ ಪಂದ್ಯವನ್ನು ಆಡಿದುದಾಗಿ ತಿಳಿದುಬರುತ್ತದೆ. ಈ ಕ್ರಿಕೆಟ್ ಕ್ಲಬ್‌ನ ಆಟಗಾರರಾದ ಜಾನ್ ನೈರೆನ್ ಬರೆದ 'ಕ್ರಿಕೆಟರ್ಸ್ ಆಫ್ ಮೈ ಟೈಮ್' ಹಾಗೂ ಕೌಡನ್ ಕ್ಲಾರ್ಕ್ ಬರೆದ 'ದಿ ಯಂಗ್ ಕ್ರಿಕೆಟರ್ಸ್ ಟ್ಯೂಟರ್' ಎಂಬ ಗ್ರಂಥಗಳು 1833 ರಲ್ಲಿ ಪ್ರಕಟವಾಗಿವೆ.

ಈ ನಡುವೆ ದಿ ವೈಟ್ ಕಾಂಡ್ಯೂಟ್ ಕ್ಲಬ್ ತನ್ನ ಸದಸ್ಯರಿಗಾಗಿ ಲಂಡನ್ ನಗರದ ನಡುವೆಯೇ ಲಾರ್ಡ್ಸ್ ಕ್ರಿಕೆಟ್ ಮೈದಾನ ಅಸ್ತಿತ್ವಕ್ಕೆ ಬಂತು. ಯಾರ್ಕ್‌ಷೈರ್‌ನ ಥಾಮಸ್ ಲಾರ್ಡ್ ಈ ಮೈದಾನವನ್ನು ನಿರ್ಮಿಸಿದ. ದಿ ವೈಟ್ ಕಾಂಡ್ಯೂಟ್ ಕ್ರಿಕೆಟ್ ಕ್ಲಬ್‌ನ




ಚಿತ್ರ 1

ಸದಸ್ಯರು ಕ್ರಿಕೆಟ್ ಆಡುವುದಕ್ಕಾಗಿ ಅವನು ಮೈದಾನವನ್ನು ನಿರ್ಮಿಸಿದನು. 1787ರಲ್ಲಿ ಇದೇ ಮೈದಾನದಲ್ಲಿ ದಿ ವೈಟ್ ಕಾಂಡ್ಯೂಟ್ ಕ್ರಿಕೆಟ್ ಕ್ಲಬ್ ವಿಶ್ವವಿಖ್ಯಾತ ಮರಿಲಿಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಆಗಿ ಪರಿವರ್ತನೆಗೊಂಡಿತು. ಎಂಸಿಸಿ ಕ್ರಮೇಣ ಕ್ರಿಕೆಟ್‌ನ ನಿಯಮಗಳನ್ನು ರೂಪಿಸಿ, ಜಾಗತಿಕವಾಗಿ ಕ್ರಿಕೆಟ್‌ಗೆ ಒಂದು ಅಧಿಕೃತ ರೂಪ ನೀಡಿತು. ಅನಂತರ 1909 ರಲ್ಲಿ ಇಂಪೀರಿಯಲ್ ಕ್ರಿಕೆಟ್ ಕಾನ್ಫರೆನ್ಸ್ (ಈಗಿನ ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್– ಐಸಿಸಿ) ಅಸ್ತಿತ್ವಕ್ಕೆ ಬರುವವರೆಗೆ ಕ್ರಿಕೆಟ್ ಸಾಮ್ರಾಜ್ಯವನ್ನು ಆಳಿದ್ದು ಎಂಸಿಸಿ.

1909ರಲ್ಲಿ ಅಸ್ತಿತ್ವಕ್ಕೆ ಬಂದ ಇಂಪೀರಿಯಲ್ ಕ್ರಿಕೆಟ್ ಕಾನ್ಫರೆನ್ಸ್ 1965ರಲ್ಲಿ ಇಂಟರ್‌ನ್ಯಾಷನಲ್ ಕ್ರಿಕೆಟ್ ಕಾನ್ಫರೆನ್ಸ್ ಆಗಿ ಹೆಸರು ಬದಲಾಯಿಸಿಕೊಂಡಿತು. 1989ರಲ್ಲಿ ಅದು ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್ ಆಗಿ ಪರಿವರ್ತನೆಗೊಂಡಿತು. ಅದರೊಂದಿಗೆ ಎಂಸಿಸಿಯಿಂದ ಸಂಪೂರ್ಣವಾಗಿ ಸ್ವತಂತ್ರವಾದ ಐಸಿಸಿ ಜಾಗತಿಕ ಮಟ್ಟದಲ್ಲಿ ಕ್ರಿಕೆಟ್‌ನ ಆಗುಹೋಗುಗಳನ್ನು ನಿರ್ಧರಿಸುವ ಅಧಿಕೃತ ಸಂಸ್ಥೆಯಾಯಿತು.

**ಐಸಿಸಿಯಲ್ಲಿ ಪೂರ್ಣ ಪ್ರಮಾಣದ ಸದಸ್ಯತ್ವ ಹೊಂದಿರುವ ದೇಶಗಳು :** ಇಂಗ್ಲೆಂಡ್, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಭಾರತ, ಪಾಕಿಸ್ತಾನ, ವೆಸ್ಟ್ ಇಂಡೀಸ್, ನ್ಯೂಜಿಲೆಂಡ್, ಶ್ರೀಲಂಕ, ಜಿಂಬಾಬ್ವೆ ಮತ್ತು ಬಾಂಗ್ಲಾದೇಶ. ಈ ಎಲ್ಲ ಹತ್ತು ದೇಶಗಳು ಟೆಸ್ಟ್ ಹಾಗೂ ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಆಡುವ ಅರ್ಹತೆ ಪಡೆದಿವೆ. ಉಳಿದಂತೆ ಐಸಿಸಿಯ ಸಹಸದಸ್ಯತ್ವ ಹಾಗೂ ಪೂರಕ ಸದಸ್ಯತ್ವ ಪಡೆದ ಹಲವಾರು ದೇಶಗಳು ಇವೆ. ಅವುಗಳಲ್ಲಿ ಸಹಸದಸ್ಯತ್ವ ಪಡೆದ ಕೆಲವು ದೇಶಗಳಿಗೆ ಮಾತ್ರ ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಅವಕಾಶ ಇದೆ.

**ಕ್ರಿಕೆಟ್‌ನ ನಿಯಮಗಳು :** ಕ್ರಿಕೆಟ್ ಎರಡು ತಂಡಗಳ ನಡುವೆ ನಡೆಯುವ ಆಟ. ತಲಾ ಹನ್ನೊಂದು ಆಟಗಾರರನ್ನು ಒಳಗೊಂಡ ಎರಡು ತಂಡಗಳು ಹಸಿರು ತುಂಬಿದ ಮೈದಾನದ ನಡುವೆ ಹೆಚ್ಚಿನ ಸಂಖ್ಯೆಯಲ್ಲಿ ರನ್ ಗಳಿಸಲು ಮತ್ತು ವಿಕೆಟ್ ಪಡೆಯಲು ನಡೆಸುವ ಹೋರಾಟವೇ ಕ್ರಿಕೆಟ್. ಈ ಕ್ರೀಡೆಯಲ್ಲಿ ಮೂಲ ನಿಯಮಗಳನ್ನು ರೂಪಿಸಿದ ಸಂಸ್ಥೆ ಎಂಸಿಸಿ. ಆ ಸಂಸ್ಥೆ ರೂಪಿಸಿದ 42 ನಿಯಮಗಳಿಗೆ ಅನುಗುಣವಾಗಿ ಈಗಲೂ ಕ್ರಿಕೆಟ್ ಆಟವನ್ನು ಆಡಲಾಗುತ್ತದೆ.

ಕ್ರಿಕೆಟ್ ಆಡುವ ಮೈದಾನದ ಸುತ್ತಳತೆಯ ಬಗ್ಗೆ ಯಾವುದೇ ನಿಖರವಾದ ನಿಯಮವಿಲ್ಲ. ಮೈದಾನದ ತ್ರಿಜ್ಯ ಯಾವುದೇ ಸಂದರ್ಭದಲ್ಲಿ 225 ಅಡಿಗಳಿಗಿಂತ ಹೆಚ್ಚು ಇರಕೂಡದು. ಸ್ಥಳದ ಅಭಾವ ಇದ್ದಲ್ಲಿ ತ್ರಿಜ್ಯ 5 ರಿಂದ 30 ಅಡಿ ಕಡಿಮೆ ಇರಲೂಬಹುದು. ಕ್ರಿಕೆಟ್ ಮೈದಾನ ವೃತ್ತಾಕಾರವಾಗಿಯೇ ಇರಬೇಕು ಎಂಬ ನಿಯಮವಿಲ್ಲ. ಅಂಡಾಕಾರವಾಗಿರುವ ಅಂತಾರಾಷ್ಟ್ರೀಯ ಕ್ರಿಕೆಟ್ ಮೈದಾನಗಳು ಸಾಕಷ್ಟು ಇವೆ. ಕ್ರಿಕೆಟ್ ಆಡುವ ಮೈದಾನದ ಸುತ್ತ ಹಗ್ಗವನ್ನು ಬಳಸಿ ಹಾಕಲಾಗುವ ಬಿಳಿಯ ಗೆರೆಯನ್ನು ಬೌಂಡರಿ ಗೆರೆ ಎಂದು ಕರೆಯಲಾಗುತ್ತದೆ. ಇದು ಆಟವಾಡುವ ಪ್ರದೇಶದ ಅಂತಿಮ ಗಡಿಯಿದ್ದಂತೆ. ಉಳಿದಂತೆ ಮೈದಾನದ ನಡುವಿನ ಪಿಚ್, ಉಪಯೋಗಿಸುವ ಪರಿಕರಗಳಾದ ಬ್ಯಾಟ್, ಬಾಲ್ ಹಾಗೂ ವಿಕೆಟ್‌ಗಳ ಬಗ್ಗೆ ಖಚಿತ ನಿಯಮಗಳು ಇವೆ.

ಕ್ರಿಕೆಟ್‌ನ ನಿಯಮಗಳ ಪ್ರಕಾರ ಮೈದಾನದ ನಡುವೆ ಇರುವ ಪಿಚ್ 66 ಅಡಿ ಅಥವಾ 20.12 ಮೀಟರ್‌ನಷ್ಟು ಉದ್ದವಿರಬೇಕು. ಪಿಚ್‌ನ ಎರಡು ಬದಿಯ ಕೇಂದ್ರ ಭಾಗದಲ್ಲಿ ತಲಾ 71 ಸೆಂಮೀ ಉದ್ದವಿರುವ ಮೂರು, ಮೂರು ವಿಕೆಟ್‌ಗಳನ್ನು ಹುಗಿದಿರಬೇಕು. ಆ ವಿಕೆಟ್‌ಗಳು ನೆಲದ ಮಟ್ಟದಿಂದ ಸರಿಯಾಗಿ 28 ಇಂಚು ಎತ್ತರದಲ್ಲಿರಬೇಕು. ಪಿಚ್ ಲಭ್ಯವಿಲ್ಲದಿದ್ದಲ್ಲಿ ಕೃತಕವಾದ ಮ್ಯಾಟಿಂಗ್ ಪಿಚ್‌ನಲ್ಲಿ ಕೂಡ ಆಟವನ್ನು ಆಡಬಹುದು. ಕ್ರಿಕೆಟ್ ಆಡಲು ಬಳಸುವ ಬ್ಯಾಟ್ 96 ಸೆಂಮೀಗಳಿಗಿಂತ ಹೆಚ್ಚು ಉದ್ದ ಹಾಗೂ 4.5 ಇಂಚುಗಳಿಗಿಂತ ಅಗಲ ಇರಕೂಡದು. ಆ ಬ್ಯಾಟ್ ಅನ್ನು ಮರದಿಂದಲೇ ಮಾಡಿರತಕ್ಕದ್ದು. ಮರದ ತೊಗಟೆಯ ಪುಡಿಯಿಂದ ಮಾಡಿರುವ ಕ್ರಿಕೆಟ್ ಬಾಲ್‌ಗೆ ಚರ್ಮದ ಹೊದಿಕೆ ಹಾಕಲಾಗುವುದು. ಆ ಚೆಂಡಿನ ತೂಕ 155.9 ಗ್ರಾಂಗಿಂತ ಕಡಿಮೆ ಇರಕೂಡದು. ಅದೇ ರೀತಿಯಲ್ಲಿ 163 ಗ್ರಾಂಗಿಂತ ಹೆಚ್ಚಿಗೆ ಇರಕೂಡದು. ಚೆಂಡಿನ ಸುತ್ತಳತೆ 22.4 ನಿಂದ 22.9 ಸೆಂಮೀಗಿಂತ ಒಳಗೆ ಇರಬೇಕು. ತಲಾ ಹನ್ನೊಂದು ಆಟಗಾರರಿರುವ ಎರಡು ತಂಡಗಳು ಕ್ರಿಕೆಟ್ ಆಡಬೇಕು. ಉಳಿದಂತೆ ಪಿಚ್‌ನ ಎರಡು ತುದಿಗಳಲ್ಲಿ ಕಾರ್ಯ ನಿರ್ವಹಿಸಲು ಇಬ್ಬರು ಅಂಪೈರ್‌ಗಳು ಹಾಗೂ ಒಬ್ಬ ಸ್ಕೋರರ್ ಯಾವುದೇ ಕ್ರಿಕೆಟ್ ಪಂದ್ಯದ ಅವಿಭಾಜ್ಯ ಅಂಗಗಳು. ಈ ಪೈಕಿ ಅಂಪೈರ್‌ಗಳು ಮೈದಾನದ ಒಳಗೆ ಪಂದ್ಯವನ್ನು ಸುಸೂತ್ರವಾಗಿ ನಡೆಸಿಕೊಡುವ, ತೀರ್ಪುಗಾರರಾಗಿ ಕಾರ್ಯ ನಿರ್ವಹಿಸುತ್ತಾರೆ. ಮೈದಾನದ ಹೊರಗೆ ಬೌಂಡರಿ ಗೆರೆಯಾಚೆ ಕುಳಿತುಕೊಳ್ಳುವ ಸ್ಕೋರರ್ ಪಂದ್ಯದಲ್ಲಿನ ಪ್ರಮುಖ ಅಂಕಿ–ಅಂಶಗಳ ದಾಖಲೆಯನ್ನು ಇಟ್ಟುಕೊಳ್ಳುತ್ತಾರೆ.

ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಈಗ ಮೂರು (ಟಿವಿ ಅಂಪೈರ್) ಹಾಗೂ ನಾಲ್ಕನೇ ಅಂಪೈರ್‌ಗಳೂ ಇರುತ್ತಾರೆ. ಐಸಿಸಿ ನೇಮಕ ಮಾಡಿದ ಮ್ಯಾಚ್ ರೆಫರಿ ಒಟ್ಟಾರೆ ಪಂದ್ಯದ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ.

ಕ್ರಿಕೆಟ್‌ನ ನಿಯಮಗಳ ಪ್ರಕಾರ ಒಂದು ಪಂದ್ಯದಲ್ಲಿ ಮೊದಲೇ ನಿಗದಿಯಾದಂತೆ ಎರಡೂ ತಂಡಗಳು ತಲಾ ಎರಡು ಇನಿಂಗ್ಸ್ ಆಡಬಹುದು. ಇಲ್ಲವಾದಲ್ಲಿ ತಲಾ

ಒಂದು ಇನಿಂಗ್ಸ್ ಕೂಡ ಆಡಬಹುದು. ಎಷ್ಟೇ ಇನಿಂಗ್ಸ್ ಆಡಿದರೂ, ಒಟ್ಟಾರೆ ಒಂದು ತಂಡವು ಗಳಿಸುವ ಒಟ್ಟು ರನ್‌ಗಳ ಸಂಖ್ಯೆಯು ಗೆಲುವು ಅಥವಾ ಸೋಲನ್ನು ನಿರ್ಣಯಿಸುತ್ತದೆ.

ತೀರ್ಪುಗಾರನ ಸಂಜ್ಞೆಗಳು




ಉದಾಹರಣೆಗೆ ಎರಡು ದೇಶಗಳ ತಂಡಗಳ ನಡುವೆ ನಡೆಯುವ ಟೆಸ್ಟ್ ಪಂದ್ಯಗಳನ್ನೇ ತೆಗೆದುಕೊಳ್ಳೋಣ. ಪಂದ್ಯ ಆರಂಭವಾಗುವ ಮೊದಲು ಉಭಯ ತಂಡಗಳ ನಾಯಕರು ಅಂತಾರಾಷ್ಟ್ರೀಯ ಮ್ಯಾಚ್ ರೆಫರಿಯ ಸಮ್ಮುಖದಲ್ಲಿ ನಾಣ್ಯ ಚಿಮ್ಮುವ (ಟಾಸ್) ಮೂಲಕ ಯಾರು ಮೊದಲು ಬ್ಯಾಟ್ ಮಾಡಬೇಕು ಹಾಗೂ ಯಾರು ಫೀಲ್ಡಿಂಗ್ ಮಾಡಬೇಕು ಎಂದು ನಿರ್ಧರಿಸುತ್ತಾರೆ. ಸಹಜವಾಗಿಯೇ ಟಾಸ್ ಗೆದ್ದ ನಾಯಕ ಪರಿಸ್ಥಿತಿಗೆ ಅನುಗುಣವಾಗಿ ಬ್ಯಾಟಿಂಗ್ ಅಥವಾ ಫೀಲ್ಡಿಂಗ್ ಆಯ್ಕೆ ಮಾಡಿಕೊಳ್ಳುತ್ತಾನೆ.

ಫೀಲ್ಡಿಂಗ್ ಮಾಡುವ ತಂಡದ ಎಲ್ಲ ಹನ್ನೊಂದು ಆಟಗಾರರು ಮೈದಾನಕ್ಕಿಳಿಯುತ್ತಾರೆ. ಬ್ಯಾಟಿಂಗ್ ಮಾಡುವ ತಂಡದ ಪೈಕಿ ಇಬ್ಬರು ಬ್ಯಾಟ್ಸ್‌ಮನ್‌ಗಳು ಬ್ಯಾಟ್ ಹಿಡಿದು ಮೈದಾನವನ್ನು ಪ್ರವೇಶಿಸುತ್ತಾರೆ. ಫೀಲ್ಡಿಂಗ್ ಮಾಡುವ ತಂಡದಲ್ಲಿರುವ ಬೌಲರ್ ಒಬ್ಬ ಚೆಂಡನ್ನು ಬೌಲ್ ಮಾಡುವ ಮೂಲಕ ಪಂದ್ಯ ಆರಂಭವಾಗುತ್ತದೆ. ಈಗ ಪ್ರತಿ ಓವರ್‌ಗೆ ಒಬ್ಬ ಬೌಲರ್ ಆರು ಬಾರಿ ಬೌಲ್ ಮಾಡಬಹುದು. ಹಿಂದೆ ಪ್ರತಿ ಓವರ್‌ಗೆ 4, 6 ಹಾಗೂ 8 ಬಾಲ್ ಮಾಡುವ ಅವಕಾಶ ಇತ್ತು. ಒಬ್ಬ ಬೌಲರ್ ಹೇಗೆ ಚೆಂಡನ್ನು ಎಸೆಯಬೇಕು ಎನ್ನುವ ಬಗ್ಗೆ ಕೂಡ ಖಚಿತವಾದ ನಿಯಮವಿದೆ. ಆ ನಿಯಮ ಮೀರಿದಲ್ಲಿ ನೋಬಾಲ್, ವೈಡ್ ಬಾಲ್ ಘೋಷಿಸಲು ಅಂಪೈರ್‌ಗಳಿಗೆ ಅವಕಾಶ ಇದೆ.

ಬೌಲರ್ ಬೌಲ್ ಮಾಡಿದ ಚೆಂಡನ್ನು ಬ್ಯಾಟ್ಸ್‌ಮನ್ ತನ್ನ ಬ್ಯಾಟ್‌ನಿಂದ ಬಾರಿಸಬೇಕು. ಆ ಯತ್ನದಲ್ಲಿ ಆತ ಯಶಸ್ವಿಯಾದರೆ ರನ್‌ಗಳಿಗಾಗಿ ಓಡಬಹುದು. ಎದುರಾಳಿ ತಂಡದ ಆಟಗಾರರು ನಿಂತಿರುವ ಸ್ಥಳಗಳಿಂದ ದೂರಕ್ಕೆ ಚೆಂಡನ್ನು ಬ್ಯಾಟ್‌ನಿಂದ ಬಾರಿಸಿ ಇಬ್ಬರೂ ಬ್ಯಾಟ್ಸ್‌ಮನ್‌ಗಳು ರನ್‌ಗಳಿಗಾಗಿ ಓಡಬಹುದು. ಅವರಿಬ್ಬರು ಎಷ್ಟು ಬಾರಿ ಪಿಚ್‌ನಲ್ಲಿ ಆಚೀಚೆ ಓಡುತ್ತಾರೆಯೋ ಅಷ್ಟಷ್ಟು ರನ್ ಎಂದು ಪರಿಗಣಿಸಲಾಗುತ್ತದೆ. ಈ ನಡುವೆ ಅವರು ಬಾರಿಸಿದ ಚೆಂಡು ವಿಕೆಟ್ ಬಳಿಗೆ ವಾಪಸು ಬರದೇ ಇರುವುದರತ್ತ ಬ್ಯಾಟ್ಸ್‌ಮನ್‌ಗಳು ಗಮನ ಹರಿಸಬೇಕು. ಕ್ಷೇತ್ರ ರಕ್ಷಣೆ ಮಾಡುತ್ತಿರುವ ಆಟಗಾರ ಚೆಂಡನ್ನು ವಶಪಡಿಸಿಕೊಂಡು ವಿಕೆಟ್‌ನ ಕಡೆ ಎಸೆಯುವಷ್ಟರಲ್ಲಿ ಬ್ಯಾಟ್ಸ್‌ಮನ್‌ಗಳು ಬ್ಯಾಟಿಂಗ್ ಕ್ರೀಸ್‌ನ ಒಳಗೆ ವಾಪಸು ಬಂದಿರಬೇಕು. ವಾಪಸು ತಲುಪದೇ ಇರುವ ಸಂದರ್ಭದಲ್ಲಿ ಎದುರಾಳಿ ತಂಡದ ಯಾವುದೇ ಆಟಗಾರ ಚೆಂಡಿನ ಸಹಾಯದಿಂದ ವಿಕೆಟ್ ಅಥವಾ ವಿಕೆಟ್‌ಗಳನ್ನು ಚದುರಿಸಿದರೆ ಬ್ಯಾಟ್ಸ್‌ಮನ್ ರನೌಟ್ ಆಗುತ್ತಾನೆ. ಇದು ಬ್ಯಾಟ್ಸ್‌ಮನ್ ಔಟ್ ಆಗುವ ಒಂದು ಪರಿ.

ಬೌಲ್ ಮಾಡಿದ ಚೆಂಡು ಬ್ಯಾಟ್‌ಗೆ ತಾಗದೇ ನೇರವಾಗಿ ಬ್ಯಾಟ್ಸ್‌ಮನ್ ಹಿಂದಿರುವ ವಿಕೆಟ್‌ಗಳನ್ನು ಚದುರಿಸಿದರೆ ಆತ ಬೌಲ್ಡ್ ಆಗುವ ಮೂಲಕ ಮೈದಾನದಿಂದ ಹೊರ ನಡೆಯಬೇಕಾಗುತ್ತದೆ. ನೇರವಾಗಿ ಬಂದ ಚೆಂಡು ವಿಕೆಟ್‌ಗಳ ಮುಂಬದಿಯಲ್ಲಿ ನಿಂತಿರುವ ಬ್ಯಾಟ್ಸ್‌ಮನ್ ಕಾಲಿಗೆ ಬಡಿದರೆ ಲೆಗ್ ಬಿಫೋರ್ ವಿಕೆಟ್ (ಎಲ್.ಬಿ.ಡಬ್ಲ್ಯು.) ಆಗಿ ಔಟಾಗುತ್ತಾನೆ.

ಇನ್ನು ಬ್ಯಾಟ್‌ನಿಂದ ಹೊಡೆದ ಚೆಂಡನ್ನು ನೆಲಕ್ಕೆ ತಾಗುವ ಮೊದಲೇ ಕ್ಷೇತ್ರ ರಕ್ಷಣೆ ಮಾಡುತ್ತಿರುವ 11 ಆಟಗಾರರ ಪೈಕಿ ಯಾರಾದರೂ ಕ್ಯಾಚ್ ಹಿಡಿದರೆ ಕೂಡ ಬ್ಯಾಟ್ಸ್‌ಮನ್ ಔಟಾಗುತ್ತಾನೆ. ಇದಲ್ಲದೇ ಬೌಲ್ ಮಾಡಿದ ಚೆಂಡನ್ನು ಬ್ಯಾಟ್ಸ್‌ಮನ್ ಕೈಯಿಂದ ಹಿಡಿದಲ್ಲಿ 'ಹ್ಯಾಂಡ್ಲಿಂಗ್ ದಿ ಬಾಲ್' ನಿಯಮದ ಪ್ರಕಾರ ಬ್ಯಾಟ್ಸ್‌ಮನ್‌ನನ್ನು ಔಟ್ ಎಂದು ಘೋಷಿಸಲಾಗುತ್ತದೆ.

ಮೇಲಿನ ಯಾವುದೇ ನಿಯಮಗಳನ್ನು ಮುರಿಯದೇ ಬ್ಯಾಟ್‌ನಿಂದ ಚೆಂಡನ್ನು ಬಾರಿಸುತ್ತ ರನ್ ಗಳಿಸುವ ಚಾಣಾಕ್ಷತೆಯನ್ನು ಬ್ಯಾಟ್ಸ್‌ಮನ್‌ಗಳು ತೋರುವುದೇ ಆಟದ ಹಿರಿಮೆ. ಬ್ಯಾಟ್‌ನಿಂದ ಚಿಮ್ಮಿದ ಚೆಂಡು ಯಾರ ಕೈಗೂ ಸಿಗದೇ ಬೌಂಡರಿ ಗೆರೆಯೊಳಗೆ ನೆಲಕ್ಕೆ ಬಿದ್ದು ಅದನ್ನು ದಾಟಿದರೆ ನಾಲ್ಕು ರನ್‌ಗಳು ದಕ್ಕುತ್ತವೆ. ನೆಲಕ್ಕೆ ತಾಗದೇ ನೇರವಾಗಿ ಬೌಂಡರಿ ಗೆರೆಯಾಚೆ ಹೋಗಿ ಬಿದ್ದರೆ 'ಸಿಕ್ಸರ್' ಅರ್ಥಾತ್ ಆರು ರನ್‌ಗಳು ಲಭ್ಯವಾಗುತ್ತದೆ. ಒಂದೆಡೆ ಪ್ರತಿಯೊಬ್ಬ ಬ್ಯಾಟ್ಸ್‌ಮನ್ ಗಳಿಸಿದ ರನ್‌ಗಳು ಆತನ ವೈಯಕ್ತಿಕ ಖಾತೆಗೆ ಜಮಾ ಆಗುತ್ತದೆ. ಜೊತೆಯಲ್ಲಿಯೇ ಆ ರನ್‌ಗಳು ತಂಡದ ಖಾತೆಗೂ ಜಮಾ ಆಗುತ್ತವೆ. ಬ್ಯಾಟ್ಸ್‌ಮನ್ ಗಳಿಸಿದ ರನ್‌ಗಳಲ್ಲದೇ ನಿಯಮ ಮೀರಿದ ಪರಿಣಾಮವಾಗಿ ದೊರಕುವ ವೈಡ್, ನೋಬಾಲ್, ಬೈ ಹಾಗೂ ಲೆಗ್ ಬೈ ಮೂಲಕ ಬರುವ ರನ್‌ಗಳೂ ತಂಡದ ಲೆಕ್ಕಕ್ಕೆ ಸೇರಿಕೊಳ್ಳುತ್ತವೆ.

ಒಂದು ತಂಡದಲ್ಲಿರುವ ಹನ್ನೊಂದು ಆಟಗಾರರ ಪೈಕಿ ಹತ್ತು ಜನ ಆಟಗಾರರ ಔಟಾದರೆ ಅವರ ಇನಿಂಗ್ಸ್ (ಪಾಳಿ) ಮುಗಿದಂತೆ. ಇನಿಂಗ್ಸ್ ಮುಗಿದ ಕೂಡಲೇ ಸ್ಕೋರರ್ ಆ ತಂಡವು ಎಷ್ಟು ರನ್ ಗಳಿಸಿದೆ ಎನ್ನುವುದನ್ನು ಅಧಿಕೃತವಾಗಿ ಸಾರುತ್ತಾರೆ.




ಚಿತ್ರ 3 ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ಬಳಕೆಯಲ್ಲಿರುವ ಸ್ಕೋರ್ ಬೋರ್ಡ್ ಮಾದರಿ

ನಂತರ ಕ್ಷೇತ್ರ ರಕ್ಷಣೆ ಮಾಡಿದ ತಂಡವು ಬ್ಯಾಟಿಂಗ್ ಆರಂಭಿಸಬೇಕಾಗುತ್ತದೆ. ಮೊದಲು ಬ್ಯಾಟ್ ಮಾಡಿದ ತಂಡವು 250 ರನ್ ಗಳಿಸಿದ್ದರೆ ಎರಡನೇ ಬಾರಿ ಬ್ಯಾಟಿಂಗ್‌ಗೆ ಇಳಿಯುವ ತಂಡವು ಅದಕ್ಕಿಂತ ಹೆಚ್ಚು ರನ್ ಗಳಿಸಿದರೆ ಮಾತ್ರ ಪಂದ್ಯ ಗೆಲ್ಲಲು ಸಾಧ್ಯ. ಇಲ್ಲವಾದಲ್ಲಿ ಮೊದಲು ಬ್ಯಾಟ್ ಮಾಡಿದ ತಂಡವೇ ಜಯಶಾಲಿಯಾಗುತ್ತದೆ. ಎರಡು ಇನ್ನಿಂಗ್ಸ್‌ಗಳ ಪಂದ್ಯವಾದರೂ ಒಟ್ಟು ಗಳಿಸಿದ ರನ್‌ಗಳ ಸಂಖ್ಯೆಯ ಆಧಾರದ ಮೇಲೆಯೇ ವಿಜಯೀ ತಂಡ ಯಾವುದು ಎಂದು ನಿರ್ಧಾರ ಮಾಡಲಾಗುತ್ತದೆ.

ಹೀಗೆ ಪಂದ್ಯ ನಡೆಯುವ ಸಂದರ್ಭದಲ್ಲಿ ಪ್ರತಿಯೊಬ್ಬ ಬ್ಯಾಟ್ಸ್‌ಮನ್ ಔಟಾಗಲು ಕಾರಣವಾಗುವ ಬೌಲರ್‌ಗೆ ವಿಕೆಟ್ ಪಡೆದ ಗೌರವ ದೊರಕುತ್ತದೆ. ಟೆಸ್ಟ್ ಪಂದ್ಯಗಳಲ್ಲಾದರೆ ಒಬ್ಬ ಬೌಲರ್ ಎಷ್ಟು ಓವರ್‌ಗಳನ್ನಾದರೂ ಬೌಲ್ ಮಾಡಬಹುದು. ಆದರೆ, ನಿಗದಿತ ಓವರುಗಳ ಏಕದಿನ ಪಂದ್ಯಗಳಲ್ಲಿ ಒಬ್ಬ ಬೌಲರ್ ಗರಿಷ್ಠ ಇಂತಿಷ್ಟೇ ಓವರ್‌ಗಳನ್ನು ಬೌಲ್ ಮಾಡಬಹುದು ಎಂಬ ಮಿತಿಯಿರುತ್ತದೆ. ಇವಿಷ್ಟು ಕ್ರಿಕೆಟ್ ಆಡುವಾಗ ಅನುಸರಿಸಬೇಕಾದ ಪ್ರಮುಖ ನಿಯಮಗಳು. ಇದಲ್ಲದೇ ನೂರಾರು ಉಪ ನಿಯಮಗಳು ಕೂಡ ಕ್ರಿಕೆಟ್ ಆಟವನ್ನು ಖಚಿತವಾಗಿ ಆಡಲು ರೂಪಿಸಲಾಗಿದೆ.

ಸಭ್ಯರ ಕ್ರೀಡೆ ಎಂಬ ಖ್ಯಾತಿ ಪಡೆದಿರುವ ಕ್ರಿಕೆಟ್ ಅನ್ನು ಕೇವಲ ನಿಯಮಗಳಿಗೆ ಅನುಸಾರವಾಗಿ ಮಾತ್ರ ಆಡಬಾರದು, ಈ ಕ್ರೀಡೆಯ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಕೂಡ ಆಡಬೇಕು ಎಂದು ಹೇಳಲಾಗುತ್ತದೆ. ಮುಖ್ಯವಾಗಿ ಶಿಸ್ತುಬದ್ಧವಾಗಿ, ನಿರ್ಮಲ ಮನಸ್ಸಿನಿಂದ, ಯಾವುದೇ ಮೋಸಕ್ಕೆ ಅವಕಾಶ ನೀಡದೆ, ಯಾವುದೇ ಅಹಿತಕರ ಘಟನೆಗಳಿಗೆ ದಾರಿ ಮಾಡಿಕೊಡದೆ ಕ್ರಿಕೆಟ್ ಅನ್ನು ಆಡಬೇಕು ಎಂದು ಪಂಡಿತರು ಹೇಳುತ್ತಾರೆ.

ಸ್ಕೋರ್ ಬೋರ್ಡಿನ ಒಂದು ಮಾದರಿ, ಸಿಡ್ನಿ

**ಬೆಳೆದು ಬಂದ ಹಾದಿ :** ಮೂಲತಃ ಇಂಗ್ಲೆಂಡ್‌ನ ಕ್ಲಬ್‌ಗಳ ನಡುವೆ ನಡೆಯುತ್ತಿದ್ದ ಕ್ರಿಕೆಟ್ ಪಂದ್ಯಗಳಿಗೆ ಅಂತಾರಾಷ್ಟ್ರೀಯ ಸ್ವರೂಪ ಒದಗಿ ಬಂದದ್ದು 1877ರ ಮಾರ್ಚ್ 15 ರಂದು. ಜೆ. ಲಿಲ್ಲಿ ವೈಟ್ ನೇತೃತ್ವದ ಇಂಗ್ಲೆಂಡ್ ತಂಡವು ಆಗ ಆಸ್ಟ್ರೇಲಿಯ ಪ್ರವಾಸ ಕೈಗೊಂಡಿತ್ತು. ಪ್ರವಾಸಿ ತಂಡವು ಡಿ.ಡಬ್ಲ್ಯು. ಗ್ರೆಗರಿ ನೇತೃತ್ವದ ಆತಿಥೇಯ ಆಸ್ಟ್ರೇಲಿಯ ತಂಡದ ವಿರುದ್ಧ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ವಿಶ್ವದ ಮೊದಲ ಅಧಿಕೃತ ಟೆಸ್ಟ್ ಪಂದ್ಯವನ್ನು ಆಡಿತು. ಆ ಪಂದ್ಯದಲ್ಲಿ ಕ್ರಿಕೆಟ್‌ನ ಪಿತಾಮಹ ಇಂಗ್ಲೆಂಡ್ ತಂಡವು 45 ರನ್‌ಗಳ ಅಂತರದಲ್ಲಿ ಸೋಲನ್ನು ಅನುಭವಿಸಿತು.

1882ರಲ್ಲಿ ಆಸ್ಟ್ರೇಲಿಯ ತಂಡವು ಇಂಗ್ಲೆಂಡ್ ಪ್ರವಾಸ ಕೈಗೊಂಡಿತು. ಆ ಸಂದರ್ಭದಲ್ಲಿ ಲಂಡನ್‌ನ ಓವಲ್‌ನಲ್ಲಿ ನಡೆದ ರೋಮಾಂಚಕ ಪಂದ್ಯದಲ್ಲಿ ಆಸ್ಟ್ರೇಲಿಯ ಟೀಂ ಇಂಗ್ಲೆಂಡ್ ವಿರುದ್ಧ 7 ರನ್‌ಗಳ ಗೆಲುವು ಸಾಧಿಸಿತು. ಆಗ 'ದಿ ಸ್ಪೋರ್ಟಿಂಗ್ ಟೈಮ್ಸ್' ಪತ್ರಿಕೆ 1882ರ ಆಗಸ್ಟ್ 29 ರಂದು ಇಂಗ್ಲಿಷ್ ಕ್ರಿಕೆಟ್ ಸತ್ತುಹೋಗಿದೆ. ಮೃತದೇಹದ ಅಂತ್ಯಕ್ರಿಯೆ ನಡೆಯಲಿದ್ದು, ನಂತರ ಬೂದಿಯನ್ನು ಆಸ್ಟ್ರೇಲಿಯಕ್ಕೆ ಕೊಂಡೊಯ್ಯಲಾಗುವುದು ಎಂಬ ಪ್ರಕಟಣೆಯನ್ನು ಅಚ್ಚು ಮಾಡಿತು. 1883ರ ಚಳಿಗಾಲದಲ್ಲಿ ಇಂಗ್ಲೆಂಡ್ ತಂಡ ಆಸ್ಟ್ರೇಲಿಯ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಪ್ರವಾಸಿ ತಂಡವು ಮೂರರಲ್ಲಿ ಎರಡು ಟೆಸ್ಟ್ ಗೆದ್ದು ಸರಣಿಯನ್ನು ತನ್ನದಾಗಿಸಿಕೊಂಡಿತು. ಮೆಲ್ಬರ್ನ್‌ನಲ್ಲಿ ಕೆಲವು ಮಹಿಳೆಯರು ಸಣ್ಣ ಕರಂಡಕವೊಂದರಲ್ಲಿ ಬೂದಿಯನ್ನು ಹಾಕಿ ಅದನ್ನು ಇಂಗ್ಲೆಂಡ್ ತಂಡದ ನಾಯಕನಿಗೆ ನೀಡಿದರು. ಇದರಿಂದಾಗಿ ಇಂಗ್ಲೆಂಡ್–ಆಸ್ಟ್ರೇಲಿಯ ನಡುವಿನ ಟೆಸ್ಟ್ ಸರಣಿಗೆ 'ಆಷಸ್' ಎಂಬ ಹೆಸರು ಚಿರಸ್ಥಾಯಿಯಾಯಿತು. ಆ ಬೂದಿ ತುಂಬಿದ ಕರಂಡಕ ಈಗಲೂ ಲಾರ್ಡ್ಸ್ ಮೈದಾನದಲ್ಲಿನ ಎಂಸಿಸಿ ವಸ್ತುಸಂಗ್ರಹಾಲಯದಲ್ಲಿ ಭದ್ರವಾಗಿದೆ.

ಕ್ರಮೇಣ ದಕ್ಷಿಣ ಆಫ್ರಿಕ, ನ್ಯೂಜಿಲೆಂಡ್ ಹಾಗೂ ವೆಸ್ಟ್ ಇಂಡೀಸ್ ತಂಡಗಳು ಟೆಸ್ಟ್ ಕ್ರಿಕೆಟ್ ಜಗತ್ತಿಗೆ ಕಾಲಿಟ್ಟವು. ಅನಂತರದ ದಿನಗಳಲ್ಲಿ ರಾಜಕೀಯ ಕಾರಣಗಳಿಂದ ದಕ್ಷಿಣ ಆಫ್ರಿಕವನ್ನು ಕ್ರಿಕೆಟ್ ಜಗತ್ತಿನಿಂದ ಹೊರತಳ್ಳಲಾಯಿತು. ಕೊನೆಗೆ ಎಂಬತ್ತರ ದಶಕದಲ್ಲಿ ಮತ್ತೆ ದಕ್ಷಿಣ ಆಫ್ರಿಕೆಗೆ ಐಸಿಸಿಯಲ್ಲಿ ಸ್ಥಾನ ನೀಡುವ ಮೂಲಕ ಮರಳಿ ಆಡುವ ಅವಕಾಶ ನೀಡಲಾಯಿತು.

ಆರಂಭದಲ್ಲಿ ಆಷಸ್ ಸರಣಿಗಳು ಕ್ರಿಕೆಟ್ ಲೋಕದ ಕಣ್ಮಣಿಯಾದರೂ ನಂತರದ ದಿನಗಳಲ್ಲಿ, ಮುಖ್ಯವಾಗಿ 1970 ರಿಂದ 85ರ ನಡುವೆ ವೆಸ್ಟ್ ಇಂಡೀಸ್‌ನ ದೈತ್ಯ ಪಡೆ ಕ್ರಿಕೆಟ್‌ಗೆ ಹೊಸ ಆಯಾಮವನ್ನೇ ನೀಡಿತು.

ಕ್ರಮೇಣ ಇಂಗ್ಲೆಂಡ್ ತಂಡವು ಬಲಹೀನವಾಯಿತು ಮತ್ತೊಂದೆಡೆ ವಿಂಡೀಸ್, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ ತಂಡಗಳು ಟೆಸ್ಟ್ ಕ್ರಿಕೆಟ್ ಜಗತ್ತಿನ ಮೇಲೆ ತಮ್ಮ ಹಿಡಿತ ಸಾಧಿಸಿದವು. ಶ್ರೀಲಂಕ ಧುತ್ತೆಂದು ಕ್ರಿಕೆಟ್ ಲೋಕದಲ್ಲಿ ಮಿಂಚಿತು. ಈ ನಡುವೆ

ಮೆಲ್ಬರ್ನ್ ಕ್ರಿಕೆಟ್ ಮೈದಾನ

ಜಿಂಬಾಬ್ವೆ ಹಾಗೂ ಬಾಂಗ್ಲಾದೇಶದಂತಹ ಶಕ್ತಿಹೀನ ತಂಡಗಳಿಗೆ ಕೂಡ ಟೆಸ್ಟ್ ಆಡುವ ಅವಕಾಶ ದೊರಕಿತು. ಇಂತಹ ಬಲಾಢ್ಯರು ಮತ್ತು ಬಲಹೀನರ ನಡುವೆ ಭಾರತ ಹಾಗೂ ಪಾಕಿಸ್ತಾನ ತಂಡಗಳು ಆಗಾಗ ಮಿಂಚಿದ್ದು ಕೂಡ ಇದೆ.

ಆದರೆ, ಕ್ರಿಕೆಟ್ ಲೋಕದ ಚಿತ್ರವೇ ಬದಲಾಗಿದ್ದು 1971ರ ಜನವರಿ 5ರಂದು. ಮೆಲ್ಬರ್ನ್‌ನ ಕ್ರಿಕೆಟ್ ಮೈದಾನದಲ್ಲಿ ಆ ದಿನ ನಡೆದ ಆಸ್ಟ್ರೇಲಿಯ–ಇಂಗ್ಲೆಂಡ್ ನಡುವಿನ ಪ್ರಪ್ರಥಮ ಏಕದಿನ ಅಂತಾರಾಷ್ಟ್ರೀಯ ಪಂದ್ಯ ಹೊಸದೊಂದು ಕ್ರಾಂತಿಗೆ ನಾಂದಿ ಹಾಡಿತು. ಅದುವರೆಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಎಂದರೆ ಐದು ದಿನಗಳ ಕಾಲ ನಡೆಯುವ ಟೆಸ್ಟ್ ಪಂದ್ಯಗಳು ಮಾತ್ರ ಆಗಿದ್ದವು. ನಿಧಾನಗತಿಯ ಪರಿಣಾಮವಾಗಿ ಟೆಸ್ಟ್ ಪಂದ್ಯಗಳು ಜನಪ್ರಿಯತೆ ಕಳೆದುಕೊಂಡ ಸಂದರ್ಭದಲ್ಲಿ ಉಗಮವಾದ ಏಕದಿನ ಪಂದ್ಯಗಳು ಕ್ರಿಕೆಟ್ ಪ್ರೇಮಿಗಳ ಆಸಕ್ತಿಯನ್ನು ಹೆಚ್ಚಿಸಿದವು. ಜೊತೆಗೆ ಸಂಪರ್ಕ ಮಾಧ್ಯಮ ಕ್ರಾಂತಿಯ ಫಲವಾಗಿ ಜಗತ್ತಿನಾದ್ಯಂತ ಕ್ರಿಕೆಟ್ ಮತ್ತಷ್ಟು ಜನಪ್ರಿಯವಾಗುವಂತೆ ಮಾಡಿದವು.

ಸುಮಾರು 12 ವರ್ಷಗಳಷ್ಟು ಕಾಲ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆದ ಏಕದಿನ ಕ್ರಿಕೆಟ್‌ಗೆ ಜಾಗತಿಕ ರೂಪ ದೊರಕಿದ್ದು 1975 ರಲ್ಲಿ, ಇಂಗ್ಲೆಂಡ್‌ನಲ್ಲಿ ಮೊದಲ ವಿಶ್ವ ಕಪ್ ಕ್ರಿಕೆಟ್‌ನಿಂದ. ಕ್ಲೈವ್ ಲಾಯ್ಡ್ ನೇತೃತ್ವದ ವೆಸ್ಟ್ ಇಂಡೀಸ್ ತಂಡ ಮೊದಲ ವಿಶ್ವ ಕಪ್ ಮಾತ್ರವಲ್ಲದೆ 1979ರಲ್ಲಿ ದೊರೆಗಳ ನಾಡಿನಲ್ಲಿಯೇ ನಡೆದ ಎರಡನೆಯ ವಿಶ್ವ ಕಪ್ ಅನ್ನೂ ಗೆದ್ದು ವಿಜೃಂಭಿಸಿತು.

1983 ರಲ್ಲಿ ಇಂಗ್ಲೆಂಡ್‌ನಲ್ಲಿಯೇ ನಡೆದ ಮೂರನೇ ವಿಶ್ವಕಪ್ ಟೂರ್ನಿಯಲ್ಲಿ ಕಪಿಲ್ ದೇವ್ ನೇತೃತ್ವದ ಭಾರತ ತಂಡವು ಪ್ರಶಸ್ತಿ ಗೆದ್ದು ಜಗತ್ತೇ ನಿಬ್ಬೆರಗಾಗುವಂತೆ ಮಾಡಿತು. ಆ ಮೂಲಕ ಭಾರತದಲ್ಲಿ ಕ್ರಿಕೆಟ್ ಸರ್ವವ್ಯಾಪಿಯಾಯಿತು. ಕ್ರಿಕೆಟ್ ಒಂದು ಧರ್ಮವಾಗಿ ಪರಿವರ್ತನೆಗೊಂಡಿತು. ಅಷ್ಟುವರೆಗೆ ಕೇವಲ ಆಟಗಾರರಾಗಿದ್ದವರು ಅನಂತರದ ದಿನಗಳಲ್ಲಿ ತಾರೆಗಳಾಗಿ ಹೊಳೆದರು.

1987ರಲ್ಲಿ ಭಾರತದಲ್ಲಿ ನಡೆದ ರಿಲಯನ್ಸ್ ವಿಶ್ವ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯ ತಂಡಗಳು ಮುಖಾಮುಖಿಯಾದವು. ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆದ ಆ ಫೈನಲ್‌ನಲ್ಲಿ ಏಳು ರನ್‌ಗಳ ಅಂತರದಲ್ಲಿ ಜಯ ಗಳಿಸಿದ ಅಲನ್ ಬಾರ್ಡರ್ ನೇತೃತ್ವದ

ಆಸ್ಟ್ರೇಲಿಯ ಪ್ರಶಸ್ತಿ ಗೆದ್ದಿತು. ಮೈಕ್ ಗ್ಯಾಟಿಂಗ್ ನೇತೃತ್ವದ ಇಂಗ್ಲೆಂಡ್‌ಗೆ ಮುಖಭಂಗವಾಯಿತು.

1992 ರಲ್ಲಿ ಆಸ್ಟ್ರೇಲಿಯದಲ್ಲಿ ನಡೆದ ಬೆನ್ಸನ್ ಅಂಡ್ ಹೆಜಸ್ ವಿಶ್ವ ಕಪ್ ಗೆದ್ದ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ ತಂಡ ಕ್ರಿಕೆಟ್ ಲೋಕದ ನೂತನ ಶಕ್ತಿಯಾಗಿ ಉದಯಿಸಿತು. 1996 ರಲ್ಲಿ ಭಾರತ ಉಪಖಂಡದಲ್ಲಿ ನಡೆದ ವಿಲ್ಸ್ ವಿಶ್ವ ಕಪ್‌ನಲ್ಲಿ ಅರ್ಜುನ ರಣತುಂಗಾ ನೇತೃತ್ವದ ಶ್ರೀಲಂಕ ತಂಡ ಪ್ರಶಸ್ತಿ ಗೆದ್ದಿತು.

1999ರಲ್ಲಿ ಇಂಗ್ಲೆಂಡ್ ಹಾಗೂ 2003 ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ಕೊನೆಯ ಎರಡು ವಿಶ್ವಕಪ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿರುವ ಆಸ್ಟ್ರೇಲಿಯ ತಂಡವು 'ಟೆಸ್ಟ್ ಹಾಗೂ ಏಕದಿನ ಕ್ರಿಕೆಟ್ ಲೋಕದ ಅನಭಿಷಿಕ್ತ ದೊರೆ ತಾನೇ' ಎಂದು ಸಾರಿ ಹೇಳಿದೆ.

ಅಲನ್ ಬಾರ್ಡರ್, ಸ್ಟೀವ್ ವಾ ಹಾಗೂ ರಿಕಿ ಪಾಂಟಿಂಗ್ ನೇತೃತ್ವದಲ್ಲಿ ಮಣಿಸಲಾಗದ ಶಕ್ತಿಯಾಗಿ ಬೆಳೆದು ನಿಂತಿರುವ ಆಸ್ಟ್ರೇಲಿಯ ನಿಸ್ಸಂದೇಹವಾಗಿ ಕ್ರಿಕೆಟ್ ಲೋಕದ ಸಾರ್ವಭೌಮನೇ ಸರಿ. ಸದ್ಯ ಆಸ್ಟ್ರೇಲಿಯದಷ್ಟು ವೃತ್ತಿಪರವಾಗಿ ಕ್ರಿಕೆಟ್ ಆಡುವ ಹಾಗೂ ಸದಾ ಗೆಲುವಿನ ಹಾದಿಯಲ್ಲಿ ಮುನ್ನುಗ್ಗುವ ಮತ್ತೊಂದು ತಂಡ ಇಲ್ಲ.



ಭಾರತ ಮತ್ತು ಆಸ್ಟ್ರೇಲಿಯಗಳ ನಡುವೆ ನಡೆದ ಒಂದು ಟೆಸ್ಟ್ ಪಂದ್ಯ, ಮಂಕಡ್ ಬೌಲಿಂಗಿನಲ್ಲಿ ಕೀತ್ ಮಿಲರ್ ಎಲ್‌ಬಿಡಬ್ಲ್ಯು

**ಭಾರತದಲ್ಲಿ ಕ್ರಿಕೆಟ್:** ಭಾರತ ತಂಡ ತನ್ನ ಪ್ರಥಮ ಟೆಸ್ಟ್ ಪಂದ್ಯ ಆಡಿದ್ದು 1932 ರಲ್ಲಿ. ಸಿ.ಕೆ. ನಾಯ್ಡು ನೇತೃತ್ವದ ತಂಡವು ಇಂಗ್ಲೆಂಡ್ ವಿರುದ್ಧ ಜೂನ್ 25 ರಂದು ಲಾರ್ಡ್ಸ್‌ನಲ್ಲಿ ಟೆಸ್ಟ್ ಪಂದ್ಯವಾಡುವ ಮೂಲಕ ಭಾರತ ಕ್ರಿಕೆಟ್ ಲೋಕದಲ್ಲಿ ಹೊಸದೊಂದು ಯುಗ ಆರಂಭವಾಯಿತು. ಆ ಯುಗ ಆರಂಭವಾಗುವ ಮೊದಲೇ 218 ಟೆಸ್ಟ್ ಪಂದ್ಯಗಳು ಆಗಿಹೋಗಿದ್ದವು.

ಇತಿಹಾಸದ ಪುಟಗಳನ್ನು ತಿರುವಿದರೆ 1721 ರಲ್ಲಿಯೇ ಭಾರತದಲ್ಲಿ ಕ್ರಿಕೆಟ್ ಪಂದ್ಯ ನಡೆದ ಕುರುಹುಗಳು ಸಿಗುತ್ತವೆ. ಅಲ್ಲಿಂದ ಅಧಿಕೃತ ಟೆಸ್ಟ್ ಆಡಲು ಭಾರತಕ್ಕೆ 211 ವರ್ಷಗಳಷ್ಟು ದೀರ್ಘ ಕಾಲ ಬೇಕಾಯಿತು. ಇದು ಏಕೆ ಎನ್ನುವ ಉತ್ತರ ಹುಡುಕಿದರೆ ಹಲವಾರು ರಾಜಕೀಯ ಹಾಗೂ ಸಾಮಾಜಿಕ ಕಾರಣಗಳು ಕಣ್ಣಿಗೆ ಬೀಳುತ್ತವೆ.

ಕೋಲ್ಕತ್ತ ಕ್ರಿಕೆಟ್ ಕ್ಲಬ್ ಮತ್ತು ಬ್ಯಾರಕ್‌ಪುರ್ ಕ್ರಿಕೆಟ್ ಕ್ಲಬ್ ತಂಡಗಳ ನಡುವೆ 1792 ರಲ್ಲಿ ಕ್ರಿಕೆಟ್ ಪಂದ್ಯವೊಂದು ನಡೆದ ಬಗ್ಗೆ ಉಲ್ಲೇಖವಿದೆ. ಆದರೆ, ಆ ಎರಡೂ ತಂಡಗಳಲ್ಲಿ ಬ್ರಿಟಿಷ್ ಆಟಗಾರರೇ ಅಧಿಕ ಸಂಖ್ಯೆಯಲ್ಲಿ ಇದ್ದುದಾಗಿ ಕೂಡ ತಿಳಿದು ಬರುತ್ತದೆ. ಕ್ರಿಕೆಟ್ ಭಾರತಕ್ಕೆ ಕಾಲಿಟ್ಟ ಮೊದಲ ದಿನಗಳಲ್ಲಿ ಬಿಳಿಯರಿಗೆ ಮಾತ್ರ ಆ ಆಟವನ್ನು ಆಡುವ ಅವಕಾಶ ಇರುತ್ತಿತ್ತು,

ಕ್ರಿಕೆಟ್‌ನ ಬೈಬಲ್ 'ವಿಸ್ಡನ್' ಪ್ರಕಾರ 1840 ರ ನಂತರ ಭಾರತೀಯರು ಕ್ರಿಕೆಟ್ ಆಡಲು ಆರಂಭಿಸಿದ್ದು. ಆ ದಶಕದ ಮಧ್ಯಭಾಗದಲ್ಲಿ ಪಾರ್ಸಿ ಕ್ರಿಕೆಟ್ ಭಾರತದಲ್ಲಿ ನೆಲೆ ಕಂಡಿತು. ಈಗಿನ ಕೋಲ್ಕತ್ತ ಮತ್ತು ಮುಂಬೈಗಳಲ್ಲಿ ಮಾತ್ರ ವ್ಯವಸ್ಥಿತವಾಗಿ ಕ್ರಿಕೆಟ್ ಪಂದ್ಯಗಳು ನಡೆದವು. 1850 ರಲ್ಲಿ 'ಮದ್ರಾಸ್ ಕ್ರಿಕೆಟ್ ಕ್ಲಬ್' ಸ್ಥಾಪನೆಯಾಯಿತು. ಅದರೊಂದಿಗೆ ದಕ್ಷಿಣ ಭಾರತದಲ್ಲಿ ಕ್ರಿಕೆಟ್ ಜ್ವರ ಹರಡಲಾರಂಭಿಸಿತು.

1886ರಲ್ಲಿ ಡಾ. ಪಟೇಲ್ ನಾಯಕತ್ವ ವಹಿಸಿದ್ದ ಪಾರ್ಸಿ ತಂಡವೊಂದು ಇಂಗ್ಲೆಂಡ್ ಪ್ರವಾಸ ಕೈಗೊಂಡಿತು. ಪ್ರಥಮ ಬಾರಿಗೆ ವಿದೇಶಿ ಪ್ರವಾಸ ಕೈಗೊಂಡ ಭಾರತದ ಅಧಿಕೃತ ಕ್ರಿಕೆಟ್ ತಂಡ ಇದು. 1886 ಮತ್ತು 1888 ರಲ್ಲಿ ಕೂಡ ಪಾರ್ಸಿ ತಂಡವು ಇಂಗ್ಲೆಂಡ್ ಪ್ರವಾಸ ಕೈಗೊಂಡಿತು.

ಈ ನಡುವೆ ಕ್ರಿಕೆಟ್ ಆಟವು ಭಾರತೀಯ ರಾಜಮನೆತನಗಳನ್ನು ಆಕರ್ಷಿಸಿತು. ಪಾಟಿಯಾಲದ ಮಹಾರಾಜ ರಾಜೇಂದ್ರ ಸಿಂಗ್ 1890ರ ಹೊತ್ತಿಗೆ ಕ್ರಿಕೆಟ್‌ನ ಅಭಿವೃದ್ಧಿಗೆ ಪ್ರಯತ್ನ ಮಾಡಿದರು. ಅವರು ಕಟ್ಟಿದ ತಂಡದಲ್ಲಿ ರಣಜಿತ್ ಸಿನ್ಹಜಿ ಇದ್ದರು. ಅವರ ನೆನಪಿನಲ್ಲಿಯೇ ಈಗ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ನಡೆಯುತ್ತಿದೆ.



ಆಸ್ಟ್ರೇಲಿಯ ಮತ್ತು ವೆಸ್ಟ್‌ಇಂಡೀಸ್ ಟೀಮುಗಳ ನಡುವೆ ಸಿಡ್ನಿಯಲ್ಲಿ ನಡೆದ ಮೂರನೆಯ ಟೆಸ್ಟ್ ಪಂದ್ಯದ ಒಂದು ದೃಶ್ಯ (1968–69)

ಆರಂಭದ ದಿನಗಳಲ್ಲಿ ಪಾರ್ಸಿ ತಂಡ ಮಾತ್ರ ಕ್ರಿಕೆಟ್ ಅನ್ನು ಗಂಭೀರವಾಗಿ ಪರಿಗಣಿಸಿದ್ದರೆ ಅನಂತರದ ದಿನಗಳಲ್ಲಿ ಹಿಂದೂ ಆಟಗಾರರು ಕೂಡ ಈ ಆಟವನ್ನೂ ನಾವು ಆಡಬಹುದು ಎಂಬ ಭಾವನೆ ತಳೆದರು. ಆದರೆ, ಹಿಂದೂ ಸಮಾಜದಲ್ಲಿನ ಜಾತೀಯತೆ, ಮೇಲು–ಕೀಳು ಭಾವನೆ ಕ್ರಿಕೆಟ್‌ನ ಮೇಲೆ ಕೂಡ ಸಾಕಷ್ಟು ಪರಿಣಾಮ ಬೀರಿದ ಉದಾಹರಣೆಗಳಿವೆ.

ಇಂತಹ ಏಳುಬೀಳುಗಳ ನಡುವೆಯೇ 1928ರಲ್ಲಿ ಮುಂಬೈನಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಅಸ್ತಿತ್ವಕ್ಕೆ ಬಂತು. ಕೊನೆಗೆ ಪಾಟಿಯಾಲಾದ ಮಹಾರಾಜ ಹಾಗೂ ಮಹಾರಾಜ ವಿಜಿ ಅವರ ಪ್ರಯತ್ನದ ಫಲವಾಗಿ ಸಿ.ಕೆ. ನಾಯ್ಡು ನೇತೃತ್ವದ ಭಾರತ ತಂಡವು 1932 ರಲ್ಲಿ ಇಂಗ್ಲೆಂಡ್ ಪ್ರವಾಸ ಕೈಗೊಂಡಿತು. 1933–34 ರಲ್ಲಿ ಇಂಗ್ಲೆಂಡ್ ತಂಡವು ಭಾರತ ಪ್ರವಾಸ ಕೈಗೊಂಡು ಮೂರು ಟೆಸ್ಟ್ ಪಂದ್ಯಗಳನ್ನು ಆಡಿತು. ಆ ಸರಣಿಯಲ್ಲಿಯೇ ಲಾಲಾ ಅಮರನಾಥ್ ಭಾರತದ ಪರ ಮೊದಲ ಟೆಸ್ಟ್ ಶತಕ ಬಾರಿಸಿದ ಸಾಧನೆ ಮಾಡಿದರು. ಆರಂಭದ ದಶಕದಲ್ಲಿ ಸಿ.ಕೆ.ನಾಯ್ಡು, ಅಮರ್ ಸಿಂಗ್, ಮಹಮದ್ ನಿಸ್ಸಾರ್, ಲಾಲಾ ಅಮರನಾಥ್, ವಿಜಯ್ ಮರ್ಚೆಂಟ್, ಮುಷ್ತಾಕ್ ಅಲಿ ಅವರಂತಹ ಪ್ರತಿಭಾವಂತ ಆಟಗಾರರು ಭಾರತ ತಂಡದ ಬೆನ್ನೆಲುಬಾಗಿದ್ದರು.

1952ರ ವರೆಗೆ ಭಾರತ ತಂಡವು ಒಟ್ಟು ಆಡಿದ ಟೆಸ್ಟ್‌ಗಳ ಸಂಖ್ಯೆ 24. ಆ ಪೈಕಿ ಒಂದೇ ಒಂದು ಪಂದ್ಯದಲ್ಲೂ ಗೆಲುವು ಸಾಧಿಸಲು ಆಗಲಿಲ್ಲ. ಕೊನೆಗೂ ಆ ಸುದಿನ ಬಂದದ್ದು 1952ರ ಫೆಬ್ರುವರಿ 10ರಂದು ಮದ್ರಾಸ್‌ನ ಚೆಪಾಕ್ ಕ್ರೀಡಾಂಗಣದಲ್ಲಿ. ಇಂಗ್ಲೆಂಡ್ ವಿರುದ್ಧ ನಡೆದ ಆ ಪಂದ್ಯದಲ್ಲಿ ಭಾರತ ಇನ್ನಿಂಗ್ಸ್ ಹಾಗೂ 8 ರನ್‌ಗಳ ಅಂತರದ ಭಾರಿ ಗೆಲುವು ಸಾಧಿಸಿತು. ಪಾಲಿ ಉಮ್ರಿಗರ್ ಹಾಗೂ ಪಂಕಜ್ ರಾಯ್ ಅವರ ಅಮೋಘ ಶತಕಗಳು ಮತ್ತು ಎಂ.ಎಚ್.ಮಂಕಡ್ ಹಾಗೂ ಗುಲಾಂ ಅಹಮದ್ ಅವರ ಶ್ರೇಷ್ಠ ಮಟ್ಟದ ಸ್ಪಿನ್ ಬೌಲಿಂಗ್ ಭಾರತದ 20 ವರ್ಷಗಳಷ್ಟು ದೀರ್ಘ ಕಾಲದ ಗೆಲುವಿನ ಹಸಿವನ್ನು ಸ್ವಲ್ಪ ಮಟ್ಟಿಗೆ ಇಂಗಿಸಿತು.

ಆದರೆ, ವಿದೇಶದಲ್ಲಿ ಭಾರತ ತಂಡ ಟೆಸ್ಟ್ ಪಂದ್ಯ ಗೆಲ್ಲಲು ಮತ್ತೆ ಸುಮಾರು 19 ವರ್ಷಗಳಷ್ಟು ದೀರ್ಘ ಕಾಲ ಕಾಯಬೇಕಾಯಿತು. ಲಂಡನ್‌ನ ಕೆನ್ನಿಂಗ್ಟನ್ ಓವಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಟೆಸ್ಟ್‌ನಲ್ಲಿ ಭಾರತ ನಾಲ್ಕು ವಿಕೆಟ್‌ಗಳ ಅಂತರದ ಜಯ ಸಾಧಿಸಿ ಇತಿಹಾಸ ನಿರ್ಮಿಸಿತು. ಆ ಹಿಂದೆ ಆಡಿದ್ದ 26 ಟೆಸ್ಟ್‌ಗಳಲ್ಲಿ ಸೋಲನ್ನೇ ಅನುಭವಿಸದಿದ್ದ ಇಂಗ್ಲೆಂಡ್ ತಂಡಕ್ಕೆ ಅದರ ನೆಲದಲ್ಲಿಯೇ ಭಾರತ ಆಘಾತ ನೀಡಲು ಮುಖ್ಯ ಕಾರಣವಾಗಿದ್ದು ಕರ್ನಾಟಕದ ಲೆಗ್ ಸ್ಪಿನ್ನರ್ ಬಿ.ಎಸ್. ಚಂದ್ರಶೇಖರ್. ಇಂಗ್ಲೆಂಡ್‌ನ ಎರಡನೇ ಇನಿಂಗ್ಸ್‌ನಲ್ಲಿ 38 ರನ್‌ಗಳಿಗೆ 6 ವಿಕೆಟ್ ಪಡೆದ ಚಂದ್ರಶೇಖರ್ ಕ್ರಿಕೆಟ್ ದೊರೆಗಳ ಮುಖಕ್ಕೆ ಮಸಿ ಬಳಿಯುವಲ್ಲಿ ಮಹತ್ವದ ಪಾತ್ರ ವಹಿಸಿದರು. 1973ರಲ್ಲಿ ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧ ನಡೆದ ಟೆಸ್ಟ್‌ನಲ್ಲಿ ಬಿ.ಎಸ್.ಚಂದ್ರಶೇಖರ್ ಹಾಗೂ ಬಿಷನ್‌ಸಿಂಗ್ ಬೇಡಿ ಅವರ ಅಮೋಘ ಸ್ಪಿನ್ ದಾಳಿಯ ನೆರವಿನಿಂದ ಭಾರತ 28 ರನ್‌ಗಳ ರೋಮಾಂಚಕ ಗೆಲುವು ಸಾಧಿಸಿತು.

ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ಮಹತ್ವದ ಸಾಧನೆಗಳಲ್ಲಿಯೇ ಅತ್ಯಂತ ಮಹತ್ವದ್ದು ಎಂದು ಪರಿಗಣಿಸಲಾಗಿರುವುದು 1976ರ ಏಪ್ರಿಲ್ 12ರಂದು ವೆಸ್ಟ್ ಇಂಡೀಸ್ ವಿರುದ್ಧ ಪೋರ್ಟ್ ಆಫ್ ಸ್ಪೇನ್‌ನಲ್ಲಿ ಮುಕ್ತಾಯಗೊಂಡ ಪಂದ್ಯದಲ್ಲಿ ಸಾಧಿಸಿದ ಗೆಲುವು. ಆ ಪಂದ್ಯ ಗೆಲ್ಲಲು ಉಳಿದ ಒಂದೂವರೆ ದಿನಗಳಲ್ಲಿ ಭಾರತ ತನ್ನ ಎರಡನೇ ಇನಿಂಗ್ಸ್‌ನಲ್ಲಿ 403 ರನ್ ಗಳಿಸಬೇಕಾಗಿತ್ತು. ಆದರೆ, ಅಂದಿನವರೆಗಿನ 99 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಯಾವುದೇ ತಂಡವು ನಾಲ್ಕನೇ ಇನಿಂಗ್ಸ್‌ನಲ್ಲಿ ನಾನೂರಕ್ಕಿಂತ ಹೆಚ್ಚು ರನ್‌ಗಳನ್ನು ಗಳಿಸಿ ಪಂದ್ಯ ಗೆದ್ದ ಉದಾಹರಣೆ ಇರಲಿಲ್ಲ. ಗುಂಡಪ್ಪ ವಿಶ್ವನಾಥ್, ಸುನೀಲ್ ಗಾವಸ್ಕರ್ ಹಾಗೂ ಮೊಹಿಂದರ್ ಅಮರನಾಥ್ ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಭಾರತ 4 ವಿಕೆಟ್‌ಗಳ ನಷ್ಟಕ್ಕೆ 406 ರನ್‌ಗಳಿಸಿ ಪಂದ್ಯ ಗೆದ್ದು ವಿಶ್ವ ದಾಖಲೆ ಮಾಡಿತು.

ಇದಾದ ನಂತರ ಭಾರತದ ಕ್ರಿಕೆಟ್‌ನಲ್ಲಿ ಸುನೀಲ್ ಗಾವಸ್ಕರ್ ಹಾಗೂ ಕಪಿಲ್ ದೇವ್ ಅವರ ಯುಗ ಆರಂಭವಾಯಿತು. ಆ ಪೈಕಿ ಗಾವಸ್ಕರ್ ಟೆಸ್ಟ್ ಕ್ರಿಕೆಟ್‌ನಲ್ಲಿ 34 ಶತಕ ಹಾಗೂ ಹತ್ತು ಸಾವಿರ ರನ್‌ಗಳ ಗಡಿ ದಾಟಿ ದಾಖಲೆ ನಿರ್ಮಿಸಿದರು. ಅಲನ್ ಬಾರ್ಡರ್, ಸ್ಟೀವ್ ವಾ, ಬ್ರಯಾನ್ ಲಾರಾ ಹಾಗೂ ಸಚಿನ್ ತೆಂಡೂಲ್ಕರ್ ಕೂಡ ಅನಂತರದ ದಿನಗಳಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ ಹತ್ತು ಸಾವಿರ ರನ್‌ಗಳ ದಾಟಿದ ಆಟಗಾರರ ಪಟ್ಟಿಗೆ ಸೇರ್ಪಡೆಯಾದರು. ಈ ಪೈಕಿ ವೆಸ್ಟ್ ಇಂಡೀಸ್‌ನ ಬ್ರಯಾನ್ ಲಾರಾ ಟೆಸ್ಟ್ ಇನಿಂಗ್ಸ್ ಒಂದರಲ್ಲಿ ಔಟಾಗದೇ 400 ರನ್‌ಗಳಿಸಿ ವಿಶ್ವದಾಖಲೆ ಸ್ಥಾಪಿಸಿದ್ದಾರೆ.

ಕಪಿಲ್ ದೇವ್ 434 ಟೆಸ್ಟ್ ವಿಕೆಟ್ ಪಡೆದು ನ್ಯೂಜಿಲೆಂಡ್‌ನ ವೇಗದ ಬೌಲರ್ ರಿಚರ್ಡ್ ಹ್ಯಾಡ್ಲಿ ಅವರ ಸಾಧನೆಯನ್ನು ದಾಟಿ ನಿಂತು ವಿಶ್ವ ದಾಖಲೆ ಮಾಡಿದರು. ಅನಂತರ ವೆಸ್ಟ್ ಇಂಡೀಸ್‌ನ ಕೋರ್ಟ್ನಿ ವಾಲ್ಷ್ ಅವರು ಕಪಿಲ್ ದಾಖಲೆಯನ್ನು ಅಳಿಸಿದರು. ಅದಾದ ಮೇಲೆ ಆಸ್ಟ್ರೇಲಿಯದ ಶೇನ್ ವಾರ್ನ್, ಗ್ಲೆನ್ ಮೆಕ್‌ಗ್ರಾ, ಶ್ರೀಲಂಕದ ಮುತ್ತಯ್ಯ ಮುರಳೀಧರನ್ ಅವರು ಕಪಿಲ್ ಕೂಡ ದಾಖಲೆಯನ್ನು ಮುರಿದು ಮುಂದಡಿಯಿಟ್ಟರು. ಇತ್ತೀಚೆಗೆ ಕರ್ನಾಟಕದ ಲೆಗ್ ಸ್ಪಿನ್ನರ್ ಅನಿಲ್ ಕುಂಬ್ಳೆ ಅವರು ಕಪಿಲ್‌ದೇವ್ ದಾಖಲೆಯನ್ನು ಮುರಿದು ಅತ್ಯಂತ ಹೆಚ್ಚು ಟೆಸ್ಟ್ ವಿಕೆಟ್ ಪಡೆದ ಭಾರತೀಯ ಬೌಲರ್ ಎಂಬ ಖ್ಯಾತಿಗೆ ಒಳಗಾಗಿದ್ದಾರೆ.

ಗಾವಸ್ಕರ್–ಕಪಿಲ್ ಯುಗದಲ್ಲಿ ಭಾರತದ ಟೆಸ್ಟ್ ಕ್ರಿಕೆಟ್‌ನಲ್ಲಿ ಸಾಕಷ್ಟು ವೈಯಕ್ತಿಕ ಸಾಧನೆಗಳು ಆಗಿದ್ದರೂ, ಒಂದು ತಂಡವಾಗಿ ಭಾರತ ಮೇರು ಪ್ರದರ್ಶನ ನೀಡುವಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಸಾಧಿಸಲಿಲ್ಲ.

ಅನಂತರ ಮಹಮದ್ ಅಜರುದ್ದೀನ್ ದೀರ್ಘ ಕಾಲ ಭಾರತ ತಂಡದ ನಾಯಕರಾಗಿದ್ದ ಸಂದರ್ಭದಲ್ಲಿ ಕೂಡ ಆಗಾಗ ಮಿಂಚು ಹರಿದಿದ್ದನ್ನು ಬಿಟ್ಟರೆ ಒಂದೇ ಮಟ್ಟದ ಪ್ರದರ್ಶನ ನೀಡುವಲ್ಲಿ ಭಾರತ ತಂಡವು ವಿಫಲವಾಯಿತು.

ಅನಂತರ ಸಚಿನ್ ತೆಂಡೂಲ್ಕರ್ ಭಾರತ ಕ್ರಿಕೆಟ್ ತಂಡದ ನಾಯಕತ್ವ ವಹಿಸಿಕೊಂಡು, ನಡುವೆಯೇ ಆ ಸ್ಥಾನ ತ್ಯಜಿಸಿದರು. ಅದಾದ ಮೇಲೆ ಸೌರವ್ ಗಂಗೂಲಿ ನೇತೃತ್ವದಲ್ಲಿ ಭಾರತ ತಂಡವು ಇದ್ದುದರಲ್ಲಿಯೇ ಸ್ವಲ್ಪ ಮಟ್ಟಿಗೆ ಉತ್ತಮ ಸಾಧನೆ ಮಾಡಿತು.

2005ರ ಮಾರ್ಚ್‌ವರೆಗಿನ ಸಾಧನೆಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಕಳೆದ ಬಾರಿ ಕೈಗೊಂಡ ಆಸ್ಟ್ರೇಲಿಯ ಹಾಗೂ ಪಾಕಿಸ್ತಾನ ಪ್ರವಾಸದಲ್ಲಿ ಭಾರತ ತಂಡವು ಅತ್ಯುತ್ತಮ ಪ್ರದರ್ಶನ ನೀಡಿದೆ ಎಂದು ಹೇಳಲು ಅಡ್ಡಿಯಿಲ್ಲ.

ಅದರಲ್ಲಿಯಂತೂ ಆಸ್ಟ್ರೇಲಿಯ ವಿರುದ್ಧ ಅಡಿಲೇಡ್‌ನಲ್ಲಿ ಹಾಗೂ ಪಾಕಿಸ್ತಾನದ ವಿರುದ್ಧ ಮುಲ್ತಾನ್‌ನಲ್ಲಿ ನಡೆದ ಟೆಸ್ಟ್‌ಗಳಲ್ಲಿ ಭಾರತ ಗಳಿಸಿದ ಜಯ ಚರಿತ್ರಾರ್ಹವಾದುದು.

ಇದುವರೆಗೆ ಕೇವಲ ಒಂದೋ ಎರಡೋ ವೈಯಕ್ತಿಕ ಪ್ರತಿಭೆಗಳನ್ನು ಹೊಂದಿರುತ್ತಿದ್ದ ಭಾರತ ತಂಡದಲ್ಲಿ ತರುವಾಯದ ದಿನಗಳಲ್ಲಿ ಗಂಗೂಲಿ, ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ವಿ.ವಿ.ಎಸ್.ಲಕ್ಷ್ಮಣ್ ಹಾಗೂ ವೀರೇಂದ್ರ ಸೆಹ್ವಾಗ್, ಸಚಿನ್, ದೋನಿ ಅವರಂತಹ ಶ್ರೇಷ್ಠ ಮಟ್ಟದ ಬ್ಯಾಟ್ಸ್‌ಮನ್‌ಗಳಿದ್ದಾರೆ. (ಎಚ್.ಎಸ್.ಎಸ್.ಎನ್.)

**ಕ್ರಿಟೇಷಸ್ :** ಸುಮಾರು 135 ದಶಲಕ್ಷ ವರ್ಷ ಪ್ರಾಚೀನದಿಂದ ಸು. 65 ದ.ಲ. ವರ್ಷ ಪ್ರಾಚೀನ ಕಾಲದ ಅವಧಿಯ ಭೂವೈಜ್ಞಾನಿಕ ಕಲ್ಪದ ಮತ್ತು ಶಿಲಾಸ್ತೋಮಗಳ ಅತ್ಯಾಧುನಿಕ ವ್ಯವಸ್ಥೆಯ ಹೆಸರು. ಕ್ರಿಟೇಷಸ್ ಕಲ್ಪ ಮೀಸೋಜೋಯಿಕ್ ಯುಗದ (ಸು. 225 ದ.ಲ.ವ. ಪ್ರಾಚೀನ–ಸು. 65 ದ.ಲ.ವ. ಪ್ರಾಚೀನ ; ಮಧ್ಯಜೀವಯುಗ) ಮೂರನೆಯ ಹಾಗೂ ಕೊನೆಯ ಕಲ್ಪ. ಕ್ರಿಟೇಷಸ್ ಎಂಬ ಹೆಸರನ್ನು ಒಮಲಿಯಸ್ ಡಿ. ಹೆಲಾಯ್ ಮೊದಲು ಸೂಚಿಸಿದವ(1822). ಕ್ರೀಟ ಎಂದರೆ ರೋಮನ್ ಭಾಷೆಯಲ್ಲಿ ಚಾಕ್ ಎಂದು ಅರ್ಥ. ಈ ಹೆಸರು ಇಂಗ್ಲಿಷ್ ಕಡಲ್ಗಾಲುವೆಯ ಎರಡು ಕಡೆಗಳಲ್ಲಿಯೂ ಇರುವ ಕಡಿದಾದ ಬಿಳಿ ದಿಬ್ಬಗಳಲ್ಲಿ ಉತ್ಕೃಷ್ಟವಾಗಿ ರೂಪುಗೊಂಡಿರುವ, ಚಾಕ್ ನಿಕ್ಷೇಪದಿಂದ ಬಂದಿದೆ. ಕ್ರಿಟೇಷಸ್ ಸ್ತೋಮವನ್ನು ಜುರಾಸಿಕ್ ಮತ್ತು ಆಧುನಿಕ ಜೀವಕಲ್ಪದ ಸ್ತೋಮಗಳಿಂದ ಮೊದಲಬಾರಿಗೆ ಬೇರ್ಪಡಿಸುದುದು ಈ ಕ್ಷೇತ್ರದಲ್ಲಿಯೇ. ಇಲ್ಲಿ ಕ್ರಿಟೇಷಸ್ ಸ್ತೋಮದ ಕೆಳಗೂ ಮೇಲೂ ಸ್ಪಷ್ಟ ಅನನುರೂಪತೆಗಳು **(ನೋಡಿ– ಅನುರೂಪತೆ)** ಇರುವುದರಿಂದ ಇದರ ಎಲ್ಲೆಗಳು ನಿಖರವಾಗಿವೆ.

ಕ್ರಿಟೇಷಸ್ ಸ್ತೋಮದ ವಿಶಿಷ್ಟ ಶಿಲೆ ಚಾಕ್ ಆಗಿದ್ದರೂ ಇದರಲ್ಲಿ ಇತರ ಶಿಲೆಗಳು ಕೂಡ ಇವೆ. ಜೇಡುಶಿಲೆ, ಮರಳುಶಿಲೆ ಮತ್ತು ಗಟ್ಟಿ ಸುಣ್ಣಶಿಲೆಗಳು ಅನೇಕ ಪ್ರದೇಶಗಳಲ್ಲಿ ಚಾಕಿಗಿಂತಲೂ ಹೆಚ್ಚು ಮೊತ್ತದಲ್ಲಿವೆ. ಈ ದೃಷ್ಟಿಯಿಂದ ನೋಡಿದರೆ ಕ್ರಿಟೇಷಸ್ ಎಂಬ ಹೆಸರು ಅಸಮಂಜಸವೇ ಸರಿ. ಆದರೆ ಮತ್ತಾವ ಸ್ತೋಮದಲ್ಲೂ ಇಷ್ಟೊಂದು ಮೊತ್ತದಲ್ಲಿ ಚಾಕ್ ಇಲ್ಲದಿರುವುದರಿಂದಲೂ ಈ ಸ್ತೋಮಕ್ಕೆ ಮತ್ತಾವ ಹೆಸರನ್ನು ಸೂಚಿಸಿಲ್ಲವಾದ್ದರಿಂದಲೂ ಕ್ರಿಟೇಷಸ್ ಎಂಬ ಹೆಸರಿಗೆ ಒಮ್ಮತದ ಸಮ್ಮತಿ ದೊರೆತಿದೆ.

ಕ್ರಿಟೇಷಸ್ ಸ್ತೋಮದ ಅನುಮೋದಿತ ವಿಭಜನೆಯನ್ನು ಫ್ರಾನ್ಸ್, ಸ್ವಿಟ್ಜರ್ಲೆಂಡ್, ಇಂಗ್ಲೆಂಡ್, ಜರ್ಮನಿ, ಬೆಲ್ಜಿಯಂ, ಹಾಲೆಂಡ್ ಮತ್ತು ಡೆನ್ಮಾರ್ಕ್ ದೇಶಗಳಲ್ಲಿನ ನಿಕ್ಷೇಪಗಳ ಆಧಾರದ ಮೇಲೆ ಮಾಡಲಾಗಿದೆ. ಈ ಸ್ತೋಮದ ಮುಖ್ಯಭಾಗಗಳನ್ನೂ ಅವನ್ನು ನಿರ್ಮಿಸಲು ಆಧಾರವಾಗಿಟ್ಟುಕೊಂಡ ಪ್ರದೇಶಗಳನ್ನೂ ಮುಂದೆ ಬರೆದಿದೆ.

ಪ್ರಪಂಚದಾದ್ಯಂತ ನಡೆದಿರುವ ಸಮುದ್ರಾಕ್ರಮಣ ಕ್ರಿಟೇಷಸ್ ಕಲ್ಪದ ಮಹತ್ತ್ವದ ಘಟನೆಗಳಲ್ಲಿ ಒಂದು. ಇದನ್ನು ಸಾಮಾನ್ಯವಾಗಿ ಸಿನೊಮೇನಿಯನ್ ಸಮುದ್ರಾಕ್ರಮಣ ಎನ್ನುವುದು ರೂಢಿ. ಇದು ಸಿನೊಮೇನಿಯನ್ ಕಾಲಕ್ಕಿಂತ ಮುಂಚೆಯೇ ಪ್ರಾರಂಭವಾಗಿರುವುದು ಕ್ರಿಟೇಷಸ್ ಸ್ತೋಮಗಳ ಪರಿಶೀಲನೆಯಿಂದ ಗೊತ್ತಾಗುತ್ತದೆ. ಕ್ರಿಟೇಷಸ್ ಕಲ್ಪದ ಅಂತ್ಯದಲ್ಲಿ ಉತ್ತರ ಅಮೆರಿಕದಲ್ಲಿ ಲೆರಮಿಯನ್ ಭೂಚಲನೆಯಾಯಿತು. ಗೊಂಡವಾನ ಭೂಭಾಗ ಒಡೆದು ಐದು ಭಾಗಗಳಾಯಿತು. ಈ ಎರಡು ಘಟನೆಗಳ ಕಾಲದಲ್ಲಿ ಪ್ರಪಂಚದ ಅನೇಕ ಕಡೆಗಳಲ್ಲಿ ಅಗಾಧ ಮೊತ್ತದ ಶಿಲಾರಸ ಹೊರಬಂದಿದೆ. ಭಾರತದ ಡೆಕ್ಕನ್ ಟ್ರ್ಯಾಪ್ ಮತ್ತು ಅದಕ್ಕಿಂತ ಹಿಂದಿನ ಪೂರ್ವ ಆಫ್ರಿಕದ ಜ್ವಾಲಾಮುಖಿಜ ಶಿಲೆಗಳು ಈ ಕಾಲದವು. ಗೊಂಡವಾನ ಖಂಡದ ಛಿದ್ರತೆ ಆಲ್ಪ್ಸ್ ಮತ್ತು ಹಿಮಾಲಯ ಪರ್ವತಗಳ ಉದಯಕ್ಕೆ ಕಾರಣವಾಯಿತು.

ಯುರೋಪಿನಲ್ಲಿ ಕ್ರಿಟೇಷಸ್ ಕಲ್ಪ ಸಮುದ್ರಾಕ್ರಮಣದೊಡನೆ ಪ್ರಾರಂಭವಾಯಿತು. ಈ ಕಲ್ಪದಲ್ಲಿ ಉತ್ತರ ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ ಎಂಬ ಎರಡು ಸಾಗರ ಪ್ರಾಂತ್ಯಗಳಿದ್ದುವು. ಇಂಗ್ಲೆಂಡಿನ ವಾಯವ್ಯ ಭಾಗ ಮತ್ತು ಫ್ರಾನ್ಸಿನ ಉತ್ತರ ಭಾಗಗಳನ್ನು ಒಳಗೊಂಡಿದ್ದ ಉತ್ತರ ಸಮುದ್ರ ಬೆಲ್ಜಿಯಂ, ಹಾಲೆಂಡ್, ಡೆನ್ಮಾರ್ಕ್, ಜರ್ಮನಿಗಳ ಮೂಲಕ ರಷ್ಯದವರೆಗೆ ವಿಸ್ತರಿಸಿತ್ತು. ಮೆಡಿಟರೇನಿಯನ್ ಸಮುದ್ರ ಪಶ್ಚಿಮಕ್ಕೆ ಪೈರೆನೀಸ್ ಬೆಟ್ಟಗಳ ಎರಡು ತಪ್ಪಲುಗಳಲ್ಲಿ ಹಾದು, ಪೋರ್ಚುಗಲ್ ಮತ್ತು ದಕ್ಷಿಣ ಫ್ರಾನ್ಸ್‌ವರೆಗೂ ಪೂರ್ವಕ್ಕೆ ಇಟಲಿ, ಗ್ರೀಸ್‌ಗಳ ಮೂಲಕ ಏಷ್ಯಮೈನರ್ ಮತ್ತು ಏಷ್ಯದವರೆಗೂ ವಿಸ್ತರಿಸಿತ್ತು. ಈ ಎರಡು ಪ್ರಾಂತ್ಯಗಳ ನಿಕ್ಷೇಪಗಳು ತೀರ ಭಿನ್ನವಾಗಿವೆ. ಉತ್ತರ ಸಮುದ್ರದಲ್ಲಿ ಮೃದುವಾದ ಬಿಳಿ ಚಾಕ್ ನಿಕ್ಷೇಪವಾಗಿದ್ದರೆ ಮೆಡಿಟರೇನಿಯನ್ ಸಮುದ್ರದಲ್ಲಿ ಗಟ್ಟಿ ಸುಣ್ಣಶಿಲೆ ನಿಕ್ಷೇಪಗೊಂಡಿದೆ. ಇವುಗಳಲ್ಲಿರುವ ಫಾಸಿಲುಗಳ ಭಿನ್ನತೆ ಇನ್ನೂ ಸ್ಪಷ್ಟ

ರೀತಿಯದು. ಮೆಡಿಟರೇನಿಯನ್ ನಿಕ್ಷೇಪದಲ್ಲಿ ರೂಡಿಸ್ಟಿಡ್ ಮೃದ್ವಂಗಿಗಳ ಅವಶೇಷಗಳು ಬಹು ಹೇರಳವಾಗಿವೆ. ಆದ್ದರಿಂದ ಅವನ್ನು ರೂಡಿಸ್ಟಿನ್ ಕಾಕ್ ಅಥವಾ ಹಿಪ್ಪುರೈಟಿಸ್ ಸುಣ್ಣಶಿಲೆ ಎಂದು ಕರೆದಿರುತ್ತಾರೆ. ಈ ಜಾತಿಯ ಮೃದ್ವಂಗಿಗಳ ಪ್ರಕಾರಗಳು ಒಂದಾದ ಮೇಲೊಂದರಂತೆ ಉದಯಿಸಿರುವುದರಿಂದ ಅವು ಕ್ರಿಟೇಷಸ್ ಸ್ತೋಮವನ್ನು ಅನೇಕ ಶಿಲಾಪಾದಗಳನ್ನಾಗಿ ವಿಭಜಿಸಲು ಸಹಕಾರಿಯಾಗಿವೆ. ಇವು ಉತ್ತರ ಸಮುದ್ರದಲ್ಲಿ ಬಹು ವಿರಳ. ಆದರೆ ಉತ್ತರ ಪ್ರಾಂತ್ಯದಲ್ಲಿ ಹೇರಳವಾಗಿರುವ ಅಮೋನೈಟು ಮತ್ತು ಬೆಲಿಮ್ನೈಟುಗಳು ಇಲ್ಲಿ ವಿರಳ. ಹೀಗೆ ಈ ಎರಡು ಪ್ರಾಂತ್ಯಗಳ ನಿಕ್ಷೇಪಗಳು ಸಂಯೋಜನೆ ಮತ್ತು ಫಾಸಿಲುಗಳೆರಡರಲ್ಲೂ ಭಿನ್ನತೆಯನ್ನು ವ್ಯಕ್ತಪಡಿಸುತ್ತವೆ.

ಜುರಾಸಿಕ್ ಅಂತ್ಯದಲ್ಲೇ ಅಲ್ಲ, ಕ್ರಿಟೇಷಸ್ ಆದಿಯಲ್ಲೂ ಬ್ರಿಟನಿನ ಉತ್ತರದಲ್ಲಿರುವ ಯಾರ್ಕ್‌ಷೈರ್ ಮತ್ತು ಲಿಂಕನ್‌ಷೈರುಗಳು ಮತ್ತೊಂದು ಸಮುದ್ರಾಕ್ರಮಣಕ್ಕೊಳಗಾಗಿದ್ದವು. ಇದಕ್ಕೂ ಆಂಗ್ಲೊ–ಪ್ಯಾರಿಸ್ ಪ್ರಾಂತ್ಯಕ್ಕೂ ಮಧ್ಯೆ ಒಂದು ದಿಬ್ಬವಿತ್ತು. ಇದು ಚಾರನ್‌ವುಡ್ಡಿನಿಂದ ಬೆಡ್‌ಫೋರ್ಡ್‌ಷೈರ್ ಮೂಲಕ ಬೆಲ್ಜಿಯಂವರೆಗೆ ಹಬ್ಬಿತು. ಸಿನೊಮೇನಿಯನ್ ಆಕ್ರಮಣ ಕಾಲದಲ್ಲಿ ಇವೆರಡು ಸಮುದ್ರಗಳೂ ವಿಲೀನವಾದುವು.

| ಕಲ್ಪ | ಹಂತ | ಹೆಸರಿನ ಆಧಾರ |
|---|---|---|
| ಮೇಲಿನ | ಡೇನಿಯನ್ | ಡೆನ್ಮಾರ್ಕಿನ ಬ್ರಿಯಜೋವ ಸುಣ್ಣಶಿಲೆ |
| ಕ್ರಿಟೇಷಸ್ | ಮ್ಯಾಸ್ಟ್ರಿಕ್ಟಿಯನ್ | ಹಾಲೆಂಡಿನಲ್ಲಿರುವ ಮ್ಯಾಸ್ಟ್ರಿಕ್ಟ್ ಪ್ರದೇಶದ ಬೆಲೆಮ್ನಿಟೆಲ್ಲಾ ಮ್ಯಾಕ್ರೊನೇಟ್ ಅವಶೇಷಗಳಿಂದ ಕೂಡಿದ ಸಿಲಿಕಾಂಶ ಚಾಕ್ ನಿಕ್ಷೇಪ |
| | ಸಿನೋನಿಯನ್ | ಕ್ಯಾಂಪೇನಿಯನ್ ಪ್ಯಾರಿಸ್ ಹತ್ತಿರದ ಕ್ಯಾಂಪಾಗ್ನೇಂಯುಲ್ಲಿಂಯು ಬೆ. ಕ್ವಾಡ್ರೇಟುಗಳಿಂದ ಕೂಡಿದ ಚಾಕ್ ಸ್ಯಾಂಟೋನಿಯನ್ ಮೈಕ್ರಾಸ್ಟರ್ ಕೊರಾಂಗ್ವಿನಂನಿಂದ ಕೂಡಿದ ಸ್ಯಾಟೊಂಗೆ ಬಳಿಯ ಚಾಕ್ ಕೋನಿಯೇಸಿಯನ್ ಪ. ಫ್ರಾನ್ಸಿನ ಕಾಗ್ನೆಯಲ್ಲಿನ ಮೈ. ಕಾರಟೆಸ್ಟುಡುನೇರಿಯಂ ಇರುವ ಚಾಕ್ |
| | ಟುರೋನಿಯನ್ | ಟೌರೇನ್ ಬಳಿಯ ಸಿಲಿಕಾಂಶದ ಚಾಕ್ ಮಾರಲ್ ಶಿಲೆಗಳು |
| | ಸಿನೋಮೇನಿಯನ್ | ಪ. ಫ್ರಾನ್ಸಿನ ಲೆಮಾನ್ಸ್ (ರೋಮನ್ ಹೆಸರು) ಪ್ರದೇಶದ ಗ್ಲಾಕೊನೈಟ್ ಮರಳು |
| | ಆಲ್ಬಿಯನ್ | ಪ್ಯಾರಿಸಿಗೆ ಈಶಾನ್ಯದಲ್ಲಿರುವ ಅಬು ಜಿಲ್ಲೆಯ ಹಸಿರು ಮರಳು ಮತ್ತು ನೀಲಿ ಜೇಡು ನಿಕ್ಷೇಪಗಳು ಕೆಳಗಿನ |
| ಕ್ರಿಟೇಷಸ್ | ಆಪ್ಟಿಯನ್ | ಫ್ರಾನ್ಸಿನ ವಾಕ್ಲೂಸ್ ಪ್ರಾಂತ್ಯದ ಆಪ್ಟ್ ಪಟ್ಟಣದ ಬಳಿ ಇರುವ ಸುಣ್ಣಶಿಲೆ ಮತ್ತು ಮಾರಲ್ |
| ನಿಯೊಕೋಮಿಯನ್ | | ಬೆರೆಮಿಯನ್ ಬೆರೆಮಿಯಲ್ಲಿಯ ಮಾರಲ್ (ಬಸ್ಸೆ ಆಲ್ಪ್ಸ್) ಫ್ರಾನ್ಸ್ |
| | ಹಾಟೆರ್ವಿಯನ್ | ಸ್ವಿಟ್ಜರ್ಲೆಂಡಿನ ಹಾಟರ್ವಿಯು ಮಾರಲ್ ಸುಣ್ಣ ಶಿಲೆಗಳು |
| | ವೇಲಂಗಿನಿಯನ್ | ಸ್ವಿಟ್ಜರ್ಲೆಂಡಿನ ವೇಲಿಂಗಿನ ಹತ್ತಿರದ ಮಾರಲ್ ಶಿಲೆಗಳು |
| | ಬೆರಿಯಸಿಯನ್ | ಸ್ವಿಟ್ಜರ್ಲೆಂಡ್ |

**ಉತ್ತರ ಅಮೆರಿಕ:** ಇಲ್ಲಿ ನಡೆದ ಕ್ರಿಟೇಷಸ್ ಕಲ್ಪದ ಸಮುದ್ರಾಕ್ರಮಣ ಭೂ ಇತಿಹಾಸದಲ್ಲೇ ಅತ್ಯಂತ ದೊಡ್ಡ ಪರಿಮಾಣದ್ದು. ಕ್ರಿಟೇಷಸ್ ಕಲ್ಪದ ಉತ್ತರಾರ್ಧದ ಆದಿಭಾಗದಲ್ಲಿ ಸಮುದ್ರಾಕ್ರಮಣ ಮೆಕ್ಸಿಕೋ ಕೊಲ್ಲಿಯಿಂದ ಪ್ರಾರಂಭಿಸಿ ಮೊದಲು ಟೆಕ್ಸಾಸ್ ಪ್ರಾಂತ್ಯಕ್ಕೆ ವಿಸ್ತರಿಸಿತು. ಅನಂತರ ಅದು ಕ್ಯಾನ್ಸಸ್, ನೆಬ್ರಾಸ್ಕ ಮತ್ತು ಕೊಲೊರಾಡೊ ಪ್ರಾಂತ್ಯಗಳ ಮೂಲಕ ಅಯೋವ ಪ್ರಾಂತ್ಯದವರೆಗೆ ವಿಸ್ತರಿಸಿತು. ಇದಾದ ಸ್ವಲ್ಪಕಾಲದಲ್ಲಿಯೇ ಆರ್ಕ್‌ಟಿಕ್ ಸಮುದ್ರ ರಾಕಿಪರ್ವತ ಪ್ರದೇಶಗಳಿಗೆ ನುಗ್ಗಿ ಮೊದಲಿನ ಸಮುದ್ರದೊಡನೆ ಒಂದುಗೂಡಿತು. ಅನಂತರ ಅಟ್ಲಾಂಟಿಕ್ ಸಾಗರ ನ್ಯೂಜರ್ಸಿಯಿಂದ ಟೆಕ್ಸಾಸ್‌ವರೆಗೆ ತೀರಪ್ರದೇಶವನ್ನು ಆಕ್ರಮಿಸಿತು. ಪೆಸಿಫಿಕ್ ಸಾಗರ ಸಹ ಕ್ಯಾಲಿಫೋರ್ನಿಯ, ಒರೆಗಾನ್, ವಾಷಿಂಗಟನ್ ಮತ್ತು ಬ್ರಿಟಿಷ್ ಕೊಲಂಬಿಯ ಪ್ರಾಂತ್ಯಗಳನ್ನು ಆಕ್ರಮಿಸಿತು. ಹೀಗೆ ಖಂಡಾಂತರ ಸಮುದ್ರ ಉತ್ತರ ಅಮೆರಿಕ ಖಂಡವನ್ನು ಎರಡು ದ್ವೀಪಗಳನ್ನಾಗಿ ರೂಪಿಸಿತು. ಪೆಸಿಫಿಕ್ ಸಾಗರ ಮತ್ತು ಖಂಡಾಂತರ ಸಮುದ್ರದ ಮಧ್ಯೆ ಇದ್ದ ಭೂಭಾಗ ಒಂದು ದ್ವೀಪ. ಖಂಡಾಂತರ ಸಮುದ್ರ ಮತ್ತು ಅಟ್ಲಾಂಟಿಕ್ ಸಾಗರದ ಮಧ್ಯೆ ಇದ್ದ ಭೂಭಾಗ ಮತ್ತೊಂದು ದ್ವೀಪ. ಮೊದಲನೆಯದಕ್ಕೆ ಮೀಸೊ ಕಾರ್ಡಿಲೆರಾನ್ ದ್ವೀಪ ಎಂದು ಹೆಸರು. ಈ ಆಕ್ರಮಣಗಳ ತರುವಾಯ ರಾಕಿಪರ್ವತಗಳ ಉತ್ತರ ಭಾಗ ಹಿಂದೆ ಸರಿಯಲು ಪ್ರಾರಂಭಿಸಿತು. ಪಶ್ಚಿಮದಿಂದ ತಂದು ತುಂಬಲ್ಪಟ್ಟ ಮೆಕ್ಕಲು ಮಣ್ಣು ಈ ಕಾರ್ಯವನ್ನು ತೀವ್ರಗೊಳಿಸಿತು. ಆದ್ದರಿಂದಲೇ ರಾಕಿಪರ್ವತ ಪ್ರದೇಶಗಳಲ್ಲಿ ಸಾಗರ ನಿಕ್ಷೇಪದ ಮೇಲೆ ಸಿಹಿ ನೀರು ನಿಕ್ಷೇಪ ಸಂಚಯನಗೊಂಡಿರುವುದು. ಎರಡನೆಯ ನಿಕ್ಷೇಪಗಳಲ್ಲಿ ಕಲ್ಲಿದ್ದಲು ಪದರಗಳೂ ಇವೆ.

ನಿವೇಡಿಯನ್ ಭೂ ಚಲನೆ ಕ್ರಿಟೇಷಸ್ ಕಲ್ಪದ ಅಂತ್ಯ ಕಾಲದಲ್ಲಿ ಆಯಿತಾದರೂ ಅದರ ಮುನ್ಸೂಚನೆಗಳು ಕ್ರಿಟೇಷಸ್ ಆದಿಯಲ್ಲಿಯೇ ಕಂಡುಬಂದಿವೆ. ಈ ಕಾಲದಲ್ಲಿ ಮೀಸೊಕಾರ್ಡಿಯನ್ ಭೂಭಾಗ ಮೇಲಕ್ಕೆ ಎತ್ತಲ್ಪಟ್ಟಿತು. ಆಗ ಶಿಲಾರಸ ಕೂಡ ಹೊರಹೊಮ್ಮಿತು. ಕ್ರಿಟೇಷಸ್ ಆದಿಯಲ್ಲಿ ರಾಕಿ ಪರ್ವತಗಳು ಇನ್ನೂ ಉದಯಿಸಿರಲಿಲ್ಲ. ಕ್ರಿಟೇಷಸ್ ಅಂತ್ಯಕಾಲದಲ್ಲಿ ರಾಕಿಪರ್ವತ ಪ್ರದೇಶಗಳಲ್ಲಿ ಸಂಚಯನಗೊಂಡಿದ್ದ ನಿಕ್ಷೇಪಗಳು ಭೂಚಲನೆಗೆ ಸಿಕ್ಕಿ ಪರ್ವತಗಳ ರೂಪದಲ್ಲಿ ಹೊರಹೊಮ್ಮಿದುವು. ಅಲಾಸ್ಕದಿಂದ ಮೆಕ್ಸಿಕೊವರೆಗಿನ ಪ್ರದೇಶ ಈ ಭೂಚಲನೆಯ ಹಿಡಿತಕ್ಕೆ ಸಿಕ್ಕಿತು. ಇದು 4,800 ಕಿಮೀ ಉದ್ದ ಮತ್ತು ಅತ್ಯಂತ ಹೆಚ್ಚೆಂದರೆ 800 ಕಿಮೀ ಅಗಲವಿದೆ. ಈ ಭೂಚಲನೆಗೆ ವಯೋಮಿಂಗ್ ಪ್ರಾಂತದ ಲರೆಮಿ (ಲರೆಮಿಯನ್ ಭೂಚಲನೆ) ಪರ್ವತದ ಹೆಸರನ್ನು ಇಡಲಾಗಿದೆ. ಅಲ್ಲದೆ ಈ ಕಾಲದಲ್ಲಿ ಗ್ರ್ಯಾನಿಟಿಕ್ ಶಿಲಾಪಾಕ ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳ ಪಶ್ಚಿಮ ಭಾಗದ ಉದ್ದಕ್ಕೂ ಅನೇಕ ಬ್ಯಾತೊಲಿತುಗಳ ರೂಪದಲ್ಲಿ ಅಂತಸ್ಸರಣಗೊಂಡಿತು. ಈ ಘಟನೆ ಭೂ ಇತಿಹಾಸದ ಅತ್ಯಂತ ಮಹತ್ತ್ವದ ಘಟನೆಗಳಲ್ಲಿ ಒಂದು.

**ಭಾರತ:** ಕ್ರಿಟೇಷಸ್ ಕಲ್ಪದಲ್ಲಿ ಆದಷ್ಟು ವಿವಿಧ ಘಟನೆಗಳು ಈ ಭೂಭಾಗದಲ್ಲಿ ಮತ್ತಾವ ಕಲ್ಪದಲ್ಲೂ ಆಗಿಲ್ಲ. ಈ ಕಾಲದ ಶಿಲೆಗಳು ಸಾಕಷ್ಟು ವ್ಯಾಪಕವಾಗಿ ಕೂಡ ನಿಕ್ಷೇಪವಾಗಿವೆ. ಅವು ಅನೇಕ ಮುಖಗಳಿಂದ ಕೂಡಿವೆ. ದೀರ್ಘಕಾಲದಿಂದ ಪರ್ಯಾಯ ದ್ವೀಪದ ಉತ್ತರದಲ್ಲಿದ್ದ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡಿದ್ದ ಶಿಲೆಗಳು ಟಿಬೆಟ್, ಉತ್ತರ ಹಿಮಾಲಯ, ಬಲೂಚಿಸ್ತಾನದ ಪೂರ್ವದಲ್ಲಿ ಫಾಸಿಲ್‌ಸಹಿತ ಸುಣ್ಣಶಿಲಾ ಮುಖವೂ ಪಶ್ಚಿಮದಲ್ಲಿ ಫಾಸಿಲ್‌ರಹಿತ ಮರಳುಶಿಲಾಮುಖವೂ ರೂಪುಗೊಂಡಿವೆ. ಎರಡನೆಯದು ಯುರೋಪ್ ಖಂಡದ ಫ್ಲಿಸ್ಚ್ ನಿಕ್ಷೇಪವನ್ನು ಹೋಲುತ್ತದೆ. ಈ ನಿಕ್ಷೇಪ ಟೆತಿಸ್ ಸಾಗರದ ಆಳ ಕಡಿಮೆಯಾಗುತ್ತಿದ್ದುದನ್ನು ಸೂಚಿಸುತ್ತದೆ. ಅಲ್ಲದೆ ದೀರ್ಘಕಾಲದಿಂದ ಇದ್ದ ಟೆತಿಸ್ ಸಾಗರದ ನಿರ್ಗಮನ ಅನತಿ ದೂರದಲ್ಲಿದೆ ಎಂಬುದನ್ನೂ ಸಾಗರ ತೀರ ಉತ್ತರಕ್ಕೆ ಕ್ರಮೇಣ ಹಿಂಜರಿಯುತ್ತಿತ್ತೆಂಬುದನ್ನೂ ಸೂಚಿಸುತ್ತದೆ. ಅಷ್ಟೇ ಅಲ್ಲದೆ ಟೆತಿಸ್ ಸಾಗರದ ಒಂದು ಶಾಖೆ ಪರ್ಯಾಯದ್ವೀಪ ಭಾಗವನ್ನು ಹಂಗಾಮಿಯಾಗಿ ಸ್ವಲ್ಪಕಾಲ ಆಕ್ರಮಿಸಿತ್ತು. ಆಗ ರೂಪುಗೊಂಡ ನಿಕ್ಷೇಪಗಳು ನರ್ಮದಾನದಿಯ ಕಣಿವೆಯಲ್ಲಿ ಅನೇಕ ಕಡೆಗಳಲ್ಲಿ ಹೊರ ಕಂಡಿವೆ. ಬಾಗ್ ಎಂಬಲ್ಲಿ ಅವು ಅತ್ಯುತ್ಕೃಷ್ಟ ರೀತಿಯಲ್ಲಿ ರೂಪುಗೊಂಡಿರುವುದರಿಂದ ಅವಕ್ಕೆ ಬಾಗ್ ಪದರಗಳು ಎಂದು ಹೆಸರಾಗಿದೆ. ಪೂರ್ವತೀರದ ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದ ಅಸ್ಸಾಮಿನವರೆಗೆ ಮತ್ತೊಂದು ಸಾಗರ (ದಕ್ಷಿಣ ಸಾಗರ) ಹಂಗಾಮಿಯಾಗಿ ಆಕ್ರಮಿಸಿ ನಿಕ್ಷೇಪಗಳನ್ನು ಸಂಚಯಿಸಿ ಹಿಂದೆ ಸರಿದಿದೆ. ಈ ನಿಕ್ಷೇಪಗಳು ತಿರುಚಿರಪಲ್ಲಿ, ವೃದ್ಧಾಚಲಂ, ಪಾಂಡಿಚೆರಿ, ರಾಜಮಹೇಂದ್ರಿ ಮತ್ತು ಅಸ್ಸಾಂ ಈ ಸ್ಥಳಗಳಲ್ಲಿ ಹೊರಕಂಡಿವೆ. ಹೀಗೆ ಒಂದೇ ಕಾಲದಲ್ಲಿ ಎರಡು ಸಾಗರಗಳು ಪರ್ಯಾಯ ದ್ವೀಪವನ್ನು ಆಕ್ರಮಿಸಿ ಒಂದಕ್ಕೊಂದು ಅತಿ ಸಮೀಪದಲ್ಲಿದ್ದುವು. ಆದರೂ ಇವೆರಡು ಸಾಗರಗಳಿಗೆ ಪರಸ್ಪರ ಸಂಪರ್ಕವಿರಲಿಲ್ಲ ಎಂಬುದಕ್ಕೆ ಆಧಾರವಿದೆ : ಭಿನ್ನ ಜೀವರಾಶಿಗಳ ಅವಶೇಷಗಳು ಅವುಗಳಲ್ಲಿ ದೊರೆತಿವೆ. ಮಧ್ಯಪ್ರದೇಶದ ಅನೇಕ ಕಡೆಗಳಲ್ಲಿ ಕ್ರಿಟೇಷಸ್ ಕಲ್ಪದ ನದಿ ಅಳಿವೆಯ ನಿಕ್ಷೇಪಗಳಿವೆ. ಲೆಮಟಾ ಘಾಟಿನಲ್ಲಿ ಉತ್ತಮವಾಗಿ ರೂಪುಗೊಂಡಿರುವುದರಿಂದ ಇವಕ್ಕೆ ಲೆಮಟಾ ಪದರಗಳೆಂದು ಹೆಸರು.

ಕಾರ್ಬಾನಿಫೆರಸ್ ಕಲ್ಪದ (ಸು. 350 ದ.ಲ.ವ. ಪ್ರಾಚೀನದಿಂದ ಸು. 280 ದ.ಲ.ವ. ಪ್ರಾಚೀನ ಕಾಲದ ಅವಧಿ) ಅಂತ್ಯ ಕಾಲದಲ್ಲಿ ರೂಪುಗೊಳ್ಳಲು ಪ್ರಾರಂಭವಾದ ಗೊಂಡವಾನ ಖಂಡ ಕ್ರಿಟೇಷಸ್ ಕಲ್ಪದಲ್ಲಿ ಆಸ್ಟ್ರೇಲಿಯ, ಭಾರತ, ಆಫ್ರಿಕ, ದ. ಅಮೆರಿಕ ಮತ್ತು ಅಂಟಾರ್ಕ್‌ಟಿಕ ಎಂಬ ಐದು ಭಾಗಗಳಾಗಿ ಒಡೆದು ಇವು ಬೇರೆ ಬೇರೆ ದಿಕ್ಕಿಗೆ

ಚಲಿಸಲಾರಂಭಿಸಿದುವು. ಒಡೆದ ಬಿರುಕುಗಳಲ್ಲಿ ಸ್ವಲ್ಪ ಭೂಭಾಗ ಸಮುದ್ರಗಳಲ್ಲಿ ಮುಳುಗಿ ಹೋಗಿರುವುದೇ ಅಲ್ಲದೆ, ಆರ್ಷೇಯ ಕಾಲದಿಂದ ಈಚೆಗೆ ಭೂ ಇತಿಹಾಸದ ಇನ್ನಾವ ಕಾಲದಲ್ಲೂ ಆಗಿಲ್ಲದಷ್ಟು ಅತಿ ಮಹತ್ತರ ಶಿಲಾರಸ ಬಹಿಸ್ಸರಣವಾಯಿತು. ಈ ಶಿಲಾರಸವೇ ಡೆಕ್ಕನ್ ಟ್ರ್ಯಾಪ್ ಶಿಲಾವರ್ಗವಾಗಿರುವುದು.

**ಜೀವರಾಶಿ :** ಕ್ರಿಟೇಷಸ್ ಕಲ್ಪದಲ್ಲಿ ಸಸ್ಯಗಳು ವಿಕಾಸ ಪಥದಲ್ಲಿ ಗಣನೀಯ ಪ್ರಗತಿ ಸಾಧಿಸಿದುವು. ಹೂ ಬಿಡುವ ಸಸ್ಯಗಳು ಮೊದಲ ಬಾರಿಗೆ ಕಾಣಿಸಿಕೊಂಡುದೇ ಇಲ್ಲಿಯ ಮಹಾಸಾಧನೆ. ಹೂ ಬಿಡುವ ಸಸ್ಯಗಳು ಇತರ ಎಲ್ಲ ಸಸ್ಯವರ್ಗಗಳನ್ನೂ ಮೂಲೆಗೊತ್ತಿ ಅವುಗಳ ಸ್ಥಾನಗಳನ್ನು ಆಕ್ರಮಿಸಿಕೊಂಡುವು. ಮಧ್ಯಜೀವಯುಗದಲ್ಲಿ ಹೇರಳವಾಗಿದ್ದ ಸೈಕಾಡ್ ಮತ್ತು ಕೋನಿಫರ್ ಸಸ್ಯಗಳಿಗೂ ಇದೇ ಗತಿಯಾಯಿತು. ಹೂ ಬಿಡುವ ಸಸ್ಯಗಳು ಕಾಣಿಸಿಕೊಂಡು ಪ್ರಾಣಿವರ್ಗದ ಮೇಲೆ ಹೆಚ್ಚು ಪ್ರಭಾವ ಬೀರಿದುವು. ಈ ಸಸ್ಯಗಳ ವೈಪುಲ್ಯವೇ ಸ್ತನಿಗಳು ಮತ್ತು ಪಕ್ಷಿಗಳು ಹಠಾತ್ತನೆ ಹೆಚ್ಚಲು ಮತ್ತು ಶೀಘ್ರ ವಿಕಾಸಗೊಳ್ಳಲು ಮುಖ್ಯ ಕಾರಣವೆನಿಸಿದೆ. ಅಲ್ಲದೆ ಈ ಸಸ್ಯ ಬದಲಾವಣೆಯೇ ಮಧ್ಯಜೀವಯುಗದ ಸರೀಸೃಪ ಪೆಡಂಭೂತಗಳು ಗತವಂಶಿಗಳಾಗಲೂ ಕಾರಣವಾಗಿದೆ. ಹೂ ಬಿಡುವ ಜಾತಿಯ ಸಸ್ಯಗಳ ಅವಶೇಷಗಳು ಉತ್ತರ ಅಮೆರಿಕ, ಯುರೋಪ್ ಮತ್ತು ನ್ಯೂಜಿಲೆಂಡುಗಳ ಕ್ರಿಟೇಷಸ್ ಸ್ತೋಮಗಳ ಮಧ್ಯಭಾಗದಲ್ಲಿ ಸಿಕ್ಕುತ್ತವೆ. ವರ್ಜೀನೀಯ ಮತ್ತು ಮೇರಿಲ್ಯಾಂಡ್ ಪ್ರಾಂತ್ಯಗಳಲ್ಲಿಯ ಪೊಟಮ್ಯಾಕ್ ಶ್ರೇಣಿ ಮತ್ತು ಲೆರಮಿ ಶಿಲಾಗುಂಪುಗಳು ಹೇರಳವಾದ ಮತ್ತು ನಾನಾ ಜಾತಿಯ ಸಸ್ಯಾವಶೇಷಗಳಿಂದ ಕೂಡಿವೆ. ಸ್ಪೇನ್ ಮತ್ತು ಪೋರ್ಚುಗಲ್ಲಿನ ಕ್ರಿಟೇಷಸ್ ಸ್ತೋಮಗಳ ಕೆಳಭಾಗಗಳಲ್ಲೂ ಸ್ಯಾಕ್ಸೋನಿ, ಬೊಹೇಮಿಯ ಮತ್ತು ವೆಸ್ಟ್‌ಫಾಲಿಯಗಳಲ್ಲಿಯ ಕ್ರಿಟೇಷಸ್ ಸ್ತೋಮಗಳ ಮೇಲ್ಭಾಗಗಳಲ್ಲೂ ಹೂ ಬಿಡುವ ಸಸ್ಯಗಳ ಅವಶೇಷಗಳು ವಿಪುಲವಾಗಿ ಇವೆ. ಇವು ಚಳಿಗಾಲದಲ್ಲಿ ಎಲೆ ಉದುರುವ ಸಸ್ಯವರ್ಗಕ್ಕೆ ಸೇರಿದವು. ಉತ್ತರಾರ್ಧಗೋಳದ ಬಹುಭಾಗದಲ್ಲಿ ಉಷ್ಣ ವಾಯುಗುಣವಿದ್ದುದನ್ನು ಈ ಅಂಶ ವ್ಯಕ್ತಪಡಿಸುತ್ತದೆ. ಈ ಸಸ್ಯವರ್ಗದಲ್ಲಿ ಮೇಪಲ್, ಓಕ್. ಅರಿಸಿನ, ಅಂಜೂರ, ಪೋಪ್ಲಾರ್, ಪ್ಲೇನ್, ಐವಿ, ವಿಲೊ, ಯೂಕಲಿಪ್ಟಸ್, ಕ್ಯಾಶುರಿನ ಮುಂತಾದ ಸಸ್ಯಗಳಿದ್ದುವು. ಫರ್ನ್, ಸೈಕಾಡ್ ಮತ್ತು ಕೋನಿಫರ್ ಜಾತಿಯ ಸಸ್ಯಗಳು ಕ್ರಿಟೇಷಸ್ ಕಲ್ಪದ ಪೂರ್ವಾರ್ಧದಲ್ಲಿ ಪ್ರಮುಖವಾಗಿದ್ದರೂ ಉತ್ತರಾರ್ಧದಲ್ಲಿ ವಿರಳವಾಗಿದ್ದುವು. ಸೈಕಾಡ್, ಝುಮೈಟಿಸ್, ಓಟೊಝುಮೈಟಿಸ್, ಗಿಂಕೊ, ಪೈನಸ್ ಮತ್ತು ಸಿಕ್ವೇನಿಯಗಳು ಉತ್ತರಾರ್ಧದ ಮುಖ್ಯ ಜಿಮ್ನೋಸ್ಪರ್ಮ್‌ಗಳು. ಇವುಗಳಲ್ಲೆಲ್ಲ ಸಿಕ್ವೇನಿಯ ಮುಖ್ಯವಾದದ್ದು. ಫೊರ್‍ಯಾಮಿನಿಫೆರಗಳ ವೈಪುಲ್ಯ ಹೊಸ ಜಾತಿಯ ಎಕಿನಾಯಿಡುಗಳ ಉದಯ, ವಿಚಿತ್ರ ಆಕಾರದ ರೂಡಿಸ್ಟಿಡ್ ಮೃದ್ವಂಗಿಗಳ ಪ್ರಾತಿನಿಧ್ಯ ಮತ್ತು ಸುರುಳಿ ಬಿಚ್ಚಿದ ಅಮ್ಮೊನೈಟುಗಳು ಕ್ರಿಟೇಷಸ್ ಕಲ್ಪದ ಪ್ರಾಣಿಪ್ರಪಂಚದ ಮುಖ್ಯ ಲಕ್ಷಣಗಳು. ಈ ಎಲ್ಲ ಗುಂಪಿನ ಪ್ರಾಣಿಗಳ ಅವಶೇಷಗಳು ಕ್ರಿಟೇಷಸ್ ಸ್ತೋಮವನ್ನು ಅನೇಕ ಶಿಲಾಪಾದಗಳನ್ನಾಗಿ ವಿಭಜಿಸಲು ಸಹಕಾರಿಯಾಗಿವೆ. ಫೊರ್‍ಯಾಮಿನಿಫೆರಗಳು ಎಷ್ಟು ಹೇರಳವಾಗಿದ್ದುವೆಂದರೆ ಅವುಗಳ ಅವಶೇಷಗಳಿಂದಲೇ ಕೆಲವು ಶಿಲೆಗಳು ರೂಪುಗೊಂಡಿರುತ್ತವೆ. ಚಾಕ್‌ನಿಕ್ಷೇಪ ಮತ್ತು ಕೆಲವು ಗಟ್ಟಿ ಸುಣ್ಣಶಿಲೆಗಳು ಮುಖ್ಯವಾಗಿ ಇವುಗಳ ಅವಶೇಷಗಳಿಂದಲೇ ಆಗಿವೆ. ಮೃದ್ವಂಗಿಗಳು ಹೇರಳವಾಗಿದ್ದುವು. ಅವುಗಳ ವ್ಯಾಪ್ತಿ ಅತಿ ವಿಶಾಲವಾಗಿತ್ತು. ಅವುಗಳಲ್ಲೆಲ್ಲ ರೂಡಿಸ್ಟಿಡ್ ಜಾತಿಯ ಮೃದ್ವಂಗಿಗಳು ಕ್ರಿಟೇಷಸ್ ಕಲ್ಪಕ್ಕೆ ಮಾತ್ರ ಸೀಮಿತಗೊಂಡಿದ್ದುದೇ ಅಲ್ಲದೆ ಆ ಕಾಲದ ವಿಶಿಷ್ಟ ಪ್ರಾಣಿಗಳೂ ಎನಿಸಿವೆ. ಕ್ರಿಟೇಷಸ್ ಸ್ತೋಮದ ಕೆಳಭಾಗದಲ್ಲಿ ರಿಕ್ವೇನಿಯಾ ಎಂಬುದೂ ಮೇಲ್ಭಾಗದಲ್ಲಿ ಹಿಪ್ಪುರೈಟಿಸ್ ಮತ್ತು ರೇಡಿಯೊಲೈಟಿಸುಗಳೂ ವಿಶಿಷ್ಟ ಫಾಸಿಲುಗಳೆನಿಸಿವೆ. ಕ್ಯಾಪ್ರಿನಿಡ್ಸ್ ಮತ್ತು ಮನೊಫ್ಲೂರಿಡ್‌ಗಳು ಈ ಕಾಲದ ಮತ್ತೆರಡು ವಿಶಿಷ್ಟ ರೂಡಿಸ್ಟಿಡ್ ಮೃದ್ವಂಗಿಗಳು. ಗ್ರಿಪಿಯ, ಆಸ್ಟ್ರಿಯ, ಎಕ್ಸೊಗೈರ, ಟ್ರೈಗೋನಿಯ, ಐನೊಸೆರಾಮಸ್, ಅಲೆಕ್ಟ್ರಿಯೋನಿಯ ಮತ್ತು ಕಾರ್ಡಿಟ ಜಾಕ್ವಿನೋಟಗಳು ದಕ್ಷಿಣ ಭಾರತದ ಕ್ರಿಟೇಷಸ್ ಸ್ತೋಮಗಳಲ್ಲಿ ಹೇರಳವಾಗಿವೆ; ಅವು ಇಲ್ಲಿಯ ವಿಶಿಷ್ಟ ಫಾಸಿಲುಗಳೂ ಹೌದು. ಸ್ಪಾಂಡೈಲಸ್, ವೋಲ, ಮೋಡಿಯೋಲ, ಲೈಮ, ಪೆಕ್ಟೆನ್, ಪ್ಲಿಕಟುಲ ಮೊದಲಾದವು ಈ ನಿಕ್ಷೇಪದಲ್ಲಿ ಹೆಚ್ಚಾಗಿ ದೊರೆಯುವ ಇತರ ಲೆಮಲಿಬ್ರ್ಯಾಂಕುಗಳು. ತಿರುಚಿರಪಲ್ಲಿ ಮತ್ತು ಅರಿಯಲೂರು ಭಾಗಗಳಲ್ಲಿಯ ನಿಕ್ಷೇಪದಲ್ಲಿ ಶಂಖಗಳು ಹೇರಳವಾಗಿವೆ. ಆಧುನಿಕ ಜೀವಯುಗದ ಶಂಖಜಾತಿಗಳಾದ ನರೀನಿಯ, ಟರ್ರಿಟಲ್ಲಾ ಮತ್ತು ಅವೆಲ್ಲಾನಗಳೂ ಇವೆ. ಈ ನಿಕ್ಷೇಪಗಳಲ್ಲಿ ಅಮ್ಮೊನೈಟುಗಳು ಮತ್ತು ಬೆಲಿಮ್ನೈಟುಗಳು ಅತ್ಯಂತ ಹೇರಳವಾಗಿವೆ. ಜುರಾಸಿಕ್ ಕಲ್ಪದಲ್ಲಿದ್ದ ಫಿಲ್ಲೊಸೆರಾಸ್ ಅಮ್ಮೊನೈಟುಗಳೂ ಇವೆ. ಆದರೆ ಉತಕೂರು ಶ್ರೇಣಿಯಲ್ಲಿ ಹಾಪ್ಲೈಟಿಸ್ ಮತ್ತು ಅಕ್ಯಾಂತೊಸೆರಾಸುಗಳೂ ಇತರ ಶ್ರೇಣಿಗಳಲ್ಲಿ ಸೋಲನ್ ಬೇಕಿಯ, ಅನೈಸೊಸೆರಾಸ್, ಮ್ಯಾಮೈಟಿಸ್, ಟೆಸ್ಸೋಟಿಯ, ಡೆಸ್ಮೋಸೆರಾಸ್, ಪ್ಯಾಕಿಡಿಸ್ಕಸ್ ಮತ್ತು ಕಾಸ್ಮೇಟಿಸೆರಾಸುಗಳೂ ವಿಶಿಷ್ಟ ಅಮ್ಮೊನೈಟುಗಳೆನಿಸಿವೆ. ಇವುಗಳ ಜೊತೆಯಲ್ಲಿ ಸುರುಳಿ ಬಿಚ್ಚಿದ ಅಥವಾ ಕ್ರಮವರಿತು ಸುರುಳಿ ಸುತ್ತಿಲ್ಲದ ಅಮ್ಮೊನೈಟುಗಳು ಕ್ರಿಟೇಷಸ್ ಸ್ತೋಮದ ಮೇಲ್ಭಾಗದಲ್ಲಿ ಇವೆ. ಇವುಗಳಲ್ಲಿ ಸ್ಕ್ಯಾಫೈಟಿಸ್, ಮ್ಯಾಕ್ರೊಸ್ಕ್ಯಾಫೈಟಿಸ್, ಹ್ಯಾಮೈಟಿಸ್, ಬ್ಯಾಕ್ಯುಲೈಟಿಸ್ ಮತ್ತು ಟರ್ರಿಲೈಟಿಸುಗಳು ಮುಖ್ಯವಾದವು. ಬೆಲಿಮ್ನೈಟಿಸ್ ಗಾರ್ಡುಗಳು ಅತ್ಯಂತ ಹೇರಳವಾಗಿವೆ. ಬಹುಶಃ ಭಾರತದ ಭೂ ಇತಿಹಾಸದಲ್ಲೇ ಇವು ಕೊನೆಯ ಬಾರಿಗೆ ಕಾಣಿಸಿಕೊಂಡಿವೆ. ನಾಟಿಲಾಯಿಡ್ ಗುಂಪು ನಾಟಿಲಸಿನಿಂದ ಪ್ರತಿನಿಧಿಸಲ್ಪಟ್ಟಿದೆ. ನಾಟಿಲಸ್ ಡೇನಿಕಸ್ ನಿನಿಯೂರು ಶ್ರೇಣಿಯ ಮೊದಲನೆಯ ಪದರದಲ್ಲಿದೆ.

ಸರೀಸೃಪಗಳಿಗೆ ಕ್ರಿಟೇಷಸ್ ಕಲ್ಪದಲ್ಲಿ ಕೂಡ ನೆಲಜಲ ಪ್ರದೇಶಗಳ ಒಡೆತನ ಇತ್ತು. ವಾಯು ಪ್ರದೇಶದಲ್ಲಿ ಇವು ಪಕ್ಷಿಗಳೊಡನೆ ಸಮಭಾಗಿಗಳಾಗಿದ್ದುವು. ಅಂದು ಡೈನೊಸಾರ್ ಸರೀಸೃಪಗಳು ಭೂಮಿಯನ್ನು ಆಳುತ್ತಿದ್ದುವು. ಭೂ ಇತಿಹಾಸದಲ್ಲೇ ಅತ್ಯಂತ ದೊಡ್ಡ ಗಾತ್ರದ ಪ್ರಾಣಿಗಳು ಉದಯಿಸಿದುವು. ಡಿಪ್ಲೊಡೋಕಸ್, ಜೈಗ್ಯಾಂಟೊಸಾರಸ್ ಮೊದಲಾದವು ಸಸ್ಯಾಹಾರಿಗಳಾದ ಸಾರೋಪೋಡಗಳು. ಮಾಂಸಾಹಾರಿಗಳಿಗೆ ತೀರೋಪೋಡಗಳೆಂದು ಹೆಸರು. ಇವುಗಳಲ್ಲಿ ಒಂದಾದ ಟೈರನೊಸಾರಸನ್ನು ಭೂಮಿಯ ಮೇಲೆ ಉದಯಿಸಿದ ಮಾಂಸ ತಿನ್ನುವ ಅತ್ಯಂತ ದೊಡ್ಡ ಜೀವಯಂತ್ರ ಎಂದು ವರ್ಣಿಸಲಾಗಿದೆ. ಇವುಗಳೇ ಅಲ್ಲದೆ ಬಾತು ಮೂತಿಯ ಡೈನೊಸಾರುಗಳು, ಕವಚರಕ್ಷಿತ ಡೈನೊಸಾರುಗಳು ಮತ್ತು ಕೊಂಬುಳ್ಳ ಡೈನೊಸಾರುಗಳು ಇದ್ದುವು. ಕೊಂಬುಳ್ಳ ಡೈನೊಸಾರುಗಳಿಗೆ ಸೆರಟಾಪ್ಸ್ ಎಂದು ಹೆಸರು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಸಿಕ್ಕಿರುವ ಟ್ರೈಸೆರಟಾಪ್ಸ್ ಡೈನೊಸಾರುಗಳ ಪೈಕಿ ಕೊನೆಗೆ ಗತವಂಶಿಯಾಯಿತು. ಜುರಾಸಿಕ್ ಕಲ್ಪದಲ್ಲಿ ಸಾಗರವಾಸಿಗಳಾಗಿದ್ದ ಇಕ್ತಿಯೋಸಾರಸ್ ಮತ್ತು ಪ್ಲೀಜಿಯೋಸಾರಸುಗಳಿಗೆ ಕ್ರಿಟೇಷಸ್ ಕಲ್ಪದಲ್ಲಿ ಪ್ರಾಮುಖ್ಯವಿರಲಿಲ್ಲ. ಆದರೆ ಮೋಸೊಸಾರಸ್ ಎಂಬ ಮತ್ತೊಂದು ಜಾತಿ ಜಲಪ್ರದೇಶದಲ್ಲಿ ಪ್ರಬಲವಾಗಿತ್ತು. ಇದನ್ನು ಸಾಗರದ ಟೈರನೊಸಾರಸ್ ಎಂದು ಹೇಳಬಹುದು. ಇವೇ ಅಲ್ಲದೆ ಮೊಸಳೆ, ಆಮೆ ಮೊದಲಾದವು ಸಹ ಇದ್ದುವು. ವಯೋಮಿಂಗ್ ಪ್ರಾಂತ್ಯದಲ್ಲಿ ಸಿಕ್ಕಿರುವ ಆಮೆಯ ಚಿಪ್ಪು 11' ಉದ್ದವಿದೆ. ಹಾರುವ ಸರೀಸೃಪಗಳಿಗೆ ಟೀರೊಡಾಕ್ಟೈಲ್ಸ್ ಎಂದು ಹೆಸರು. ಇವುಗಳಲ್ಲಿ ಹಲ್ಲಿಲ್ಲದ ಟಿರೊಡಾನ್ ಉಲ್ಲೇಖಾರ್ಹ. ಭಾರತದಲ್ಲಿ ಈ ಕಾಲದ ಸರೀಸೃಪಗಳ ಅವಶೇಷಗಳು, ಲೆಮಟ ಪದರಗಳಲ್ಲಿ, ಅಂತರಟ್ರ್ಯಾಪ್ ಶಿಲೆಗಳಲ್ಲಿ ಮತ್ತು ತಿರುಚಿರಪಲ್ಲಿಯ ಕ್ರಿಟೇಷಸ್ ನಿಕ್ಷೇಪಗಳಲ್ಲಿ ಸಿಕ್ಕಿವೆ. ಡೈನೊಸಾರುಗಳ ಎಲ್ಲ ಶಾಖೆಗಳೂ ಮೋಸೋಸಾರಸ್ ಮತ್ತು ಆಮೆಗಳೂ ಇಲ್ಲಿ ಪ್ರತಿನಿಧಿಸಲ್ಪಟ್ಟಿವೆ. ಅಂಟಾರ್ಟೊಸಾರಸ್, ಲಾಪ್ಲಟಸಾರಸ್, ಲೆಮಟಸಾರಸ್, ಇಂಡೊಸಾರಸ್ ಮತ್ತು ಟೈರನೊಸಾರಸುಗಳು ಲೆಮಟ ಪದರಗಳಲ್ಲಿ ಸಿಕ್ಕಿವೆ. ತಿರುಚಿರಪಲ್ಲಿ ನಿಕ್ಷೇಪಗಳಲ್ಲಿ ಸ್ಟೀಗೊಸಾರಸ್, ಕ್ಯಾಮರೊಸಾರಸ್ ಮತ್ತು ಮೋಸೋಸಾರಸುಗಳ ಅವಶೇಷಗಳು ವರದಿಯಾಗಿವೆ. ಪ್ಲೇಟಮಿ ಎಂಬ ಆಮೆಯ ಚಿಪ್ಪು ಮುಂಬಯಿಯ ವಾರ್ಲಿ ಗುಡ್ಡದಲ್ಲಿರುವ ಅಂತರಟ್ರ್ಯಾಪ್ ಶಿಲೆಗಳಿಂದ ವರದಿಯಾಗಿದೆ. ಸಿ.ಎ. ಮ್ಯಾಟ್ಲಿ ಎಂಬಾತನಿಗೆ ತಿರುಚಿರಪಲ್ಲಿ ನಿಕ್ಷೇಪದಲ್ಲೂ ಒಂದು ಆಮೆಚಿಪ್ಪು ಸಿಕ್ಕಿದೆ. ಲೆಮಟ ಪದರಗಳಲ್ಲಿ ಸರೀಸೃಪಗಳ ಜೊತೆಯಲ್ಲಿ ಪೈಕ್ನೊಡಸ್ ಮೊದಲಾದ ಮತ್ಸ್ಯಗಳ ಅವಶೇಷಗಳೂ ದೊರೆತಿವೆ.

ಕ್ರಿಟೇಷಸ್ ಕಲ್ಪದಲ್ಲಿ ಎರಡು ಸಾಗರ ಜಲಪಕ್ಷಿಗಳಿದ್ದುದು ವರದಿಯಾಗಿದೆ. ಅವುಗಳಲ್ಲಿ ಒಂದು ಇಕ್ತಿಯಾರ್ನಿಸ್, ಮತ್ತೊಂದು ಹೆಸ್ಪರಾರ್ನಿಸ್. ಇಕ್ತಿಯಾರ್ನಿಸ್ ಬಲವಾದ ರೆಕ್ಕೆಗಳುಳ್ಳ ಚಿಕ್ಕ ಪಕ್ಷಿ. ಹೆಸ್ಪರಾರ್ನಿಸ್ 6' ಉದ್ದ, 4.5' ಎತ್ತರದ ಪ್ರಾಣಿ. ಅದರ ರೆಕ್ಕೆಗಳು ಅತಿ ಚಿಕ್ಕವು. ಅದಕ್ಕೆ ಕೋನಾಕಾರದ ಬಗ್ಗಿದ ಹಲ್ಲುಗಳಿದ್ದುವು. ಜುರಾಸಿಕ್ ಸ್ತನಿಗಳ ಪೈಕಿ ಮಲ್ಟಿಟ್ಯೂಬರ್ಕ್ಯುಲೇಟ ಮಾತ್ರ ಕ್ರಿಟೇಷಸ್ ಯುಗದಲ್ಲಿ ಉಳಿದಿದೆ. ಮಾರ್ಸೂಪಿಯಂ ಮತ್ತು ಕೀಟಾಹಾರಿ ಸ್ತನಿಗಳು ಹೊಸದಾಗಿ ಉದಯಿಸಿದುವು. (ಡಿ.ಆರ್.)

**ಕ್ರಿನೊಲೀನ್ :** ಸಾದಾ ನೇಯ್ಗೆಯ ಗಡಸು ಬಟ್ಟೆ. ಇದಕ್ಕೆ ವಜ್ರ ಸರಿಯಿಂದ (ಗ್ಲೂ) ತುಂಬ ಗಂಜಿ ಹಾಕಿರುತ್ತಾರೆ. ಬಿಗಿತದ (ಸ್ಟಿಫ್‌ನೆಸ್) ಲಕ್ಷಣವನ್ನು ಕೊಡಲು ಇದನ್ನು ವಿಶಿಷ್ಟ ಕ್ರಮದಲ್ಲಿ ಹಿಗ್ಗಲಿಸುತ್ತಾರೆ (ಸ್ಟ್ರೆಚ್). ಮೊದಲಲ್ಲಿ ಇದನ್ನು ಕುದುರೆ ಕೂದಲಿನಿಂದ ಅಥವಾ ಹತ್ತಿ ನೂಲಿನಿಂದ ವಿಶಿಷ್ಟ ರೀತಿಯಲ್ಲಿ ತಯಾರಿಸುತ್ತಿದ್ದರು. ಇದನ್ನು ಮುಖ್ಯವಾಗಿ ಲಘು ಅಂಗಿಗಳಿಗೂ ಒಳ್ಪದರದ ಬಟ್ಟೆಗಳಿಗೂ ಬಿಗಿ ಬಟ್ಟೆಗಳಿಗೂ ಪುಸ್ತಕ ಬೈಂಡು ಮಾಡುವುದಕ್ಕೂ ಉಪಯೋಗಿಸುತ್ತಾರೆ. (ವಿ.ಎಸ್.ವಿ.)

**ಕ್ರಿಪ್ಟ್‌ಝೋವಾನ್ : ಸ್ಟ್ರೊಮಾಟೊಲೈಟಿನ (ನೋಡಿ)** ಒಂದು ವಿಶಿಷ್ಟ ಬಗೆ. ಹಸಿರು–ನೀಲಿ ಆಲ್ಗೆ, ಅವಸಾದನ ಕಣಗಳು ಮತ್ತು ಆಲ್ಗೆಯ ಚಟುವಟಿಕೆಯ ಪರಿಣಾಮವಾದ ಸೂಕ್ಷ್ಮ ಜೀವರಾಸಾಯನಿಕ ಸುಣ್ಣಕಲ್ಲು ವಸ್ತು (ಕಲ್ಕೇರಿಯಸ್) ಇವುಗಳಿಂದ ರೂಪುಗೊಂಡ ಅವಸಾದಿತ ಆರ್ಗ್ಯಾನಿಕ್ ರಚನೆ. ಈ ಗ್ರೀಕ್ ಪದದ ಅರ್ಥ ಅಡಗಿಸಿಟ್ಟಿರುವ ಪ್ರಾಣಿ ಎಂದು. ಪೂರ್ವಕೇಂಬ್ರಿಯನ್ ಶಿಲೆಗಳು ಅವುಗಳ ಮೇಲಿರುವ ಪ್ರಾಚೀನ ಜೀವಯುಗದ ಶಿಲೆಗಳಂತೆಯೇ ನಿಜ ಸಾಗರಜನಿತ ಶಿಲೆಗಳು. ಅವುಗಳಲ್ಲಿ ಅನೇಕ ಶಿಲೆಗಳು, ಅದರಲ್ಲಿಯೂ ಭಾರತದ ಕಡಪ ಮತ್ತು ವಿಂಧ್ಯಶಿಲೆಗಳು, ಸೂಕ್ಷ್ಮ ಕಣಶಿಲೆಗಳು. ಫಾಸಿಲುಗಳನ್ನು ಕಾದಿರಿಸಲು ಇವು ಯೋಗ್ಯವಾದವು. ಪೂರ್ವಕೇಂಬ್ರಿಯನ್ ಕಲ್ಪದಲ್ಲಿ ಜೀವರಾಶಿ ಇದ್ದಿರಲೇಬೇಕೆಂದು ನಿರ್ಧರಿಸಿದ್ದಾರೆ. ಆದರೆ ಈ ಕಾಲದ ಶಿಲೆಗಳಲ್ಲಿ ಜೀವಿಗಳ ಸುಳಿವೇ ಕಾಣಿಸದು. ಆದರೆ ಜೀವಿಗಳಿದ್ದವೆಂಬುದನ್ನು ಸ್ಥಿರೀಕರಿಸುವ ಅನೇಕ ಅಪ್ರತ್ಯಕ್ಷ ಕುರುಹುಗಳು ದೊರೆತಿವೆ. ಕೆಲವು

ಭೂವಿಜ್ಞಾನಿಗಳು ಪೂರ್ವಕೇಂಬ್ರಿಯನ್ ಕಾಲದ ಶಿಲೆಗಳಲ್ಲಿ ಫಾಸಿಲುಗಳನ್ನು ಹುಡುಕಲು ತೀವ್ರ ಪ್ರಯತ್ನ ನಡೆಸಿದರು.

ಎಲೆಕೋಸಿನಂತೆ ಒಂದರೊಳಗೊಂದು ಪದರುಗಳಿಂದ ಶಿಲಾರಚನೆಯನ್ನು ಜೇಮ್ಸ್‌ಹಾಲ್ ಎಂಬಾತ ನ್ಯೂಯಾರ್ಕ್ ಪ್ರದೇಶದ ಕೇಂಬ್ರಿಯನ್ ಶಿಲೆಗಳಲ್ಲಿ ಗುರುತಿಸಿದ (1882). ಅದನ್ನು ಕ್ರಿಪ್ಟೊಜ಼ೂನ್ ಎಂದು ಹೆಸರಿಸಿದ. ಇದೇ ರೀತಿಯ ಶಿಲಾರಚನೆಗಳನ್ನು ಕೆನಡದ ಆಂಟೇರಿಯೊ, ಗ್ರೀನ್‌ಲ್ಯಾಂಡ್, ಗೋಬಿ ಮರುಭೂಮಿ ಪ್ರದೇಶಗಳಲ್ಲಿರುವ ಪೂರ್ವಕೇಂಬ್ರಿಯನ್ ಶಿಲೆಗಳಲ್ಲಿ ಕಾಣಲಾಗಿದೆ. ವೀಲ್ಯಾಂಡ್ ಎಂಬಾತ ಪೆನ್ಸಿಲ್ವೇನಿಯ ಪ್ರದೇಶದ ಕೇಂಬ್ರಿಯನ್ ಶಿಲೆಗಳಲ್ಲಿ ಕಂಡು ಗುರುತುಗಳು ಆಲ್ಗೀ ಸಸ್ಯಗಳ ರಚನೆಯನ್ನು ಹೋಲುತ್ತವೆಂದು ಹೇಳಿದ. ಆದ್ದರಿಂದ ಅವುಗಳಿಗೆ ಕ್ರಿಪ್ಟೊಫೈಕಸ್ ಎಂದು ಹೆಸರಿಟ್ಟ. ವೀಲ್ಯಾಂಡನೇ ಪುನಃ ಅದೇ ರೀತಿಯ ಶಿಲಾರಚನೆಯನ್ನು ಕ್ರಿಟೇಷಸ್ ಕಾಲದ ಶಿಲಾಸಮುದಾಯದಲ್ಲಿರುವುದನ್ನು ವರದಿ ಮಾಡಿ ಅವನ್ನು ಸ್ಟ್ರೊಮಾಟೊಲೈಟ್ ಎಂದು ಕರೆಯುವುದು ಸಮಂಜಸವೆಂದು ಸೂಚಿಸಿದ. ಆದರೆ ಇವುಗಳಲ್ಲಿ ಎಲ್ಲೂ ಜೀವಕಣದ ರಚನೆ ಇರುವುದು ಕಂಡುಬಂದಿಲ್ಲ. ಅದಿಲ್ಲದ ಹೊರತು ಇವನ್ನು ಜೀವಜನಿತ ಅಥವಾ ಫಾಸಿಲುಗಳು ಎಂದು ಪರಿಗಣಿಸಲಾಗುವುದಿಲ್ಲ. ಅಜೀವಿಜನಿತ ವಸ್ತುಗಳಲ್ಲಿಯೂ ಇದೇ ರೀತಿ ರಚನೆಗಳಿರುವುದು ಕಂಡುಬಂದಿದೆ. ಮೇಲಾಗಿ ಪ್ರಯೋಗಶಾಲೆಯಲ್ಲಿ ಇದೇ ರೀತಿಯ ರಚನೆಯನ್ನು ರಾಸಾಯನಿಕವಾಗಿ ಪಡೆಯಬಹುದೆಂಬುದನ್ನು ಲೆಸಿಗಾಂಗ್ ಎಂಬಾತ ತೋರಿಸಿದ್ದಾನೆ.

(ಡಿ.ಆರ್.)

**ಕ್ರಿಪ್ಟಾನ್ :** ಆವರ್ತಕೋಷ್ಟಕದ ಸೊನ್ನೆ ಗುಂಪಿನ ಸದಸ್ಯ. ವಿರಳ ಅನಿಲಗಳಲ್ಲಿ ಒಂದು. ಪರಮಾಣು ಸಂಖ್ಯೆ 36. ಪರಮಾಣು ತೂಕ 83.80. ಸಂಕೇತ Kr. ವ್ಯಾಂಡೆರ್‌ವಾಲ್ ತ್ರಿಜ್ಯ 2.01Å. ನಿಸರ್ಗದತ್ತ ಸಮಸ್ಥಾನಿಗಳ (ಐಸೋಟೋಪ್ಸ್) ದ್ರವ್ಯರಾಶಿ 78, 80, 82, 83, ಮತ್ತು 84. ಎಲೆಕ್ಟ್ರಾನ್ ವಿನ್ಯಾಸ $1s^2 2s^2 2p^6 3s^2 3p^6 3d^{10} 4s^2 4p^6$. ಅಯಾನೀಕರಣ ವಿಭವ (ಎಲೆಕ್ಟ್ರಾನ್ ವೋಲ್ಟುಗಳಲ್ಲಿ): ಪ್ರಾಥಮಿಕ 13.996, ದ್ವಿತೀಯಕ 26.4, ತೃತೀಯಕ 36.8. ದ್ರವನ ಬಿಂದು–156.6° ಸೆಂ. ಕುದಿಬಿಂದು–151.7° ಸೆಂ. ಸಾಂದ್ರತೆ 3.708. ಗ್ರ್ಯಾಂ/ಲೀ (STP). ಸಂಧಿಸ್ಥ ಉಷ್ಣತೆ – 62° ಸೆಂ. ಸಂಧಿಸ್ಥ ಒತ್ತಡ 54.3 ವಾಯುಮಂಡಲಗಳು.

1898ರಲ್ಲಿ ಇದರ ಅಸ್ತಿತ್ವ ಬೆಳಕಿಗೆ ಬಂದಿತು. ಇದನ್ನು ಪತ್ತೆ ಹಚ್ಚಿದವರು ರ್‍ಯಾಂಸೆ ಮತ್ತು ಟ್ರ್ಯಾವರ್ಸ್. ನೂರಾರು ಲೀಟರುಗಳಷ್ಟು ದ್ರವಗಾಳಿಯನ್ನು ಭಿನ್ನ ಆಸವನಕ್ಕೆ ಗುರಿಪಡಿಸಿದಾಗ ಅಷ್ಟೇನೂ ಆವಿಶೀಲವಲ್ಲದ ಭಾಗ ಉಳಿಯಿತು. ಇದರಿಂದ ಕ್ರಿಪ್ಟಾನನ್ನು ಪ್ರತ್ಯೇಕಿಸಲಾಯಿತು. ವಾಯುಮಂಡಲದಲ್ಲಿ ಇದರ ಮೊತ್ತ ಅತ್ಯಲ್ಪ. ಗಾತ್ರಾನುಸಾರ 1,000 ಭಾಗ ಗಾಳಿಯಲ್ಲಿರುವ ಕ್ರಿಪ್ಟಾನಿನ ಮೊತ್ತ ಕೇವಲ 0.00005. ಇತರ ವಿರಳ ಅನಿಲಗಳಂತೆ ಇದು ಕೂಡ ಬಣ್ಣ, ವಾಸನೆ ಮತ್ತು ರುಚಿಗಳಿಲ್ಲದ ವಸ್ತು. ನೀರಿನಲ್ಲಿ ಅಲ್ಪದ್ರಾವ್ಯ, ದ್ರವೀಕರಿಸಬಹುದು. ವಿಶಿಷ್ಟವಾದ ರೋಹಿತವನ್ನು ಕೊಡುವುದರಿಂದ ಇದನ್ನು ಗುರುತಿಸುವುದು ಸುಲಭ. ಪರಮಾಣು ಸ್ಥಿತಿಯಲ್ಲೇ ದೊರೆಯುವುದು. ಎಂದರೆ ಅದರ ಅಣುವಿನಲ್ಲಿರುವುದು ಒಂದೇ ಪರಮಾಣು. ಅದರ ಪರಮಾಣ್ವಕತೆ (ಅಟಾಮಿಸಿಟಿ) 1 ಎಂಬುದಕ್ಕೆ ಕ್ರಿಪ್ಟಾನಿನ

$$\frac{C_p \quad \text{ನಿಯತ ಒತ್ತಡದಲ್ಲಿ ಅನಿಲದ ಗ್ರಾಹ್ಯೋಷ್ಣ}}{C_c \quad \text{ನಿಯತ ಗಾತ್ರದಲ್ಲಿ ಅನಿಲದ ಗ್ರಾಹ್ಯೋಷ್ಣ}}$$

ಮೌಲ್ಯ 1.689 ಆಗಿರುವುದೇ ಸಾಕ್ಷಿ.

ಕ್ರಿಪ್ಟಾನ್ ಪರಮಾಣುವಿನ ಹೊರಚಿಪ್ಪಿನಲ್ಲಿ ಎಂಟು ಎಲೆಕ್ಟ್ರಾನುಗಳ ಗುಂಪು ಇದೆ. ಪ್ರಾಯಶ: ಈ ಸ್ಥಿರಾಷ್ಟಕ (ಸ್ಟೇಬಲ್ ಆಕ್ಟಟ್) ರಚನೆ ಅದರ ಪರಮಾಣುಗಳು ಪರಸ್ಪರ ಹಾಗೂ ಇತರ ಪರಮಾಣುಗಳ ಜೊತೆಗೂಡಲು ಅಡ್ಡಿಯಾಗಬಹುದೆಂದು ತೋರುತ್ತದೆ. ಹಾಗೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಯುಕ್ತ ಸನ್ನಿವೇಶದಲ್ಲಿ ಕ್ರಿಪ್ಟಾನ್ ಫ್ಲೂರೈಡುಗಳನ್ನು ತಯಾರಿಸಿರುವ ಬಗ್ಗೆ ವರದಿಯಾಗಿದೆ. 187° ಸೆಂ. ನಲ್ಲಿಟ್ಟಿರುವ ಕ್ರಿಪ್ಟಾನ್ ಫ್ಲೂರಿನ್ ಮಿಶ್ರಣದ ಮೂಲಕ ವಿದ್ಯುತ್ ಹಾಯಿಸಿದರೆ ಕ್ರಿಪ್ಟಾನ್ ಟೆಟ್ರಫ್ಲೂರೈಡ್ ಉಂಟಾಗುತ್ತದೆ. ಇದರ ಅಣುಸೂತ್ರ $KrF_4$. ಇದೊಂದು ಹರಳುರೂಪದ ಬಿಳಿಯ ಘನ. ಬಲು ಅಸ್ಥಿರ. ಸರಾಗವಾಗಿ ವಿಭಜಿಸುವುದು. –78° ಸೆಂ. ಉಷ್ಣತೆಯಲ್ಲಾದರೆ ಕೆಲವು ತಿಂಗಳಕಾಲ ಇದನ್ನು ಕೂಡಿಡಲು ಸಾಧ್ಯ. –40° ಸೆಂ.ನಲ್ಲಿ ಬರ್ಫದ ಸಂಪರ್ಕದಲ್ಲಿಟ್ಟರೆ ನಿಧಾನವಾಗಿ ಜಲವಿಭಜನೆ ಹೊಂದಿ ಕ್ರಿಪ್ಟಾನಿನ ಆಮ್ಲವೊಂದು ಉತ್ಪತ್ತಿಯಾಗುತ್ತದೆ. ಘನೀಕರಿಸಿದ ಆರ್ಗಾನಿನಲ್ಲಿ ಫ್ಲೂರಿನ್–ಕ್ರಿಪ್ಟಾನುಗಳ ಘನ ಮಿಶ್ರಣವನ್ನಿಟ್ಟು –253° ಸೆಂ.ನಷ್ಟು ಶೈತ್ಯವೇರ್ಪಡಿಸಿ ಅತಿರಕ್ತ ಕಿರಣಗಳಿಗೆ ಒಡ್ಡಿದರೆ ಕ್ರಿಪ್ಟಾನ್ ಡೈಫ್ಲೂರೈಡು ($KrF_2$) ಉಂಟಾಗುವುದೆಂದು ಗೊತ್ತಾಗಿದೆ.

ತಣಿಸಿದ ಕ್ರಿಪ್ಟಾನ್ ಅನಿಲಕ್ಕೆ ನೀರಾವಿಯನ್ನು ಪ್ರಯೋಗ ಮಾಡಿದರೆ ಬಣ್ಣವಿಲ್ಲದ ಹರಳುರೂಪದ ಹೈಡ್ರೇಟ್ ಮೈದಳೆಯುವುದು. ಇದರ ಅಣುಸೂತ್ರ $Kr.6H_2O$ ಸಾಮಾನ್ಯ ಒತ್ತಡದಲ್ಲಿ ಇದು ವಿಭಜಿಸುವ ಉಷ್ಣತೆ–39.2°ಲಿ.ಸೆಂ. ಎಂದು ಟಮ್ಮನ್ ಮತ್ತು ಕ್ರೀಗೆಯವರು 1925ರಲ್ಲಿ ನಡೆಸಿದ ಪ್ರಯೋಗಗಳಿಂದ ದೃಢಪಟ್ಟಿದೆ.

40 ವಾಯುಮಂಡಲಗಳ ಒತ್ತಡದಲ್ಲಿರುವ ಕ್ರಿಪ್ಟಾನಿನ ವಾತಾವರಣದಲ್ಲಿ ಕ್ವಿನಾಲಿನ ನೀರಿನ ದ್ರಾವಣವನ್ನು ಸ್ಫಟಿಕೀಕರಿಸಲು ಬಿಟ್ಟರೆ ಅದು $Q_3Kr$ಸೂತ್ರವುಳ್ಳ (Q ಕ್ವಿನಾಲಿನ ಒಂದು ಅಣುವನ್ನು ಸೂಚಿಸುತ್ತದೆ) ಸಂಯುಕ್ತವನ್ನು ಕೊಡುವುದು. ಕ್ವಿನಾಲಿನ 3 ಅಣುಗಳು ಒಂದು ಪಂಜರದಂತೆ ವರ್ತಿಸಿ ಕ್ರಿಪ್ಟಾನಿನ 1 ಅಣುವನ್ನು ಅದರಲ್ಲಿ ಸೆರೆ ಹಿಡಿದಿವೆ ಎಂದು ಊಹಿಸಲಾಗಿದೆ. ಸ್ಥಿರವೆನ್ನಬಹುದಾದ ಈ ಸಂಕಲನ ಸಂಯುಕ್ತವನ್ನು ಕಾಯಿಸಿ ಕರಗಿಸಿದರೆ ಅಥವಾ ಯುಕ್ತ ದ್ರಾವಕಗಳಲ್ಲಿ ವಿಲೀನ ಮಾಡಿದರೆ ಮಾತ್ರ ಕ್ವಿನಾಲಿನ ಅಣುಗಳು ತಾವು ಬಂಧಿಸಿದ್ದ ಕ್ರಿಪ್ಟಾನಿನ ಪರಮಾಣುಗಳನ್ನು ಬಿಡುಗಡೆ ಮಾಡುತ್ತವೆ. ಆರ್ಗಾನ್ ಮತ್ತು ಕ್ಸೀನಾನುಗಳೂ ಇದೇ ನಮೂನೆಯ ಸಂಕಲನ ಸಂಯುಕ್ತಗಳನ್ನು ಕೊಡಬಲ್ಲುವು. ಇವನ್ನು ಕುರಿತು ವಿಶೇಷ ಅಧ್ಯಯನ ನಡೆಸಿರುವ ಎಚ್.ಎಂ. ಪೊವೆಲ್ ಅವನ್ನು ಕ್ಲ್ಯಾತ್ರೇಟ್ ಸಂಯುಕ್ತಗಳು (**ನೋಡಿ–** ) ಎಂದು ಕರೆದಿದ್ದಾನೆ (1950).

ಕ್ರಿಪ್ಟಾನ್ ಅತಿ ವಿರಳವಾದ ಅನಿಲವಾದುದರಿಂದ ಅದರ ಬಳಕೆ ಸೀಮಿತಗೊಂಡಿದೆ. ಕ್ಸೀನಾನ್–ಕ್ರಿಪ್ಟಾನ್ ಮಿಶ್ರಣವನ್ನು ವಿದ್ಯುತ್ ಬಲ್ಬುಗಳಲ್ಲಿ ಉಪಯೋಗಿಸಿದರೆ ಅವುಗಳ ಬಾಳಿಕೆ ಹೆಚ್ಚುವುದು ಕಂಡು ಬಂದಿದೆ. ಬಲ್ಬಿನಲ್ಲಿ ಶೂನ್ಯಪ್ರದೇಶವಿದ್ದರೆ ಬಿಳಿಗಾವಿನಲ್ಲಿರುವ ಟಂಗ್‌ಸ್ಟನ್ ತಂತುವಿನಿಂದ ಲೋಹ ಆವಿಯಾಗಿ ಬಲ್ಬಿನ ಒಳ ಮೈಮೇಲೆ ಶೇಖರಿಸುವುದರಿಂದ ಬಲ್ಬು ಕಪ್ಪಿಡುತ್ತದೆ. ಕ್ರಮೇಣ ಟಂಗಸ್ಟನ್ ತಂತು ಪುಡಿಯಾಗಿ ಉದುರಿಹೋಗುವುದು. ಆದರೆ ಕ್ರಿಪ್ಟಾನ್–ಕ್ಸೀನಾನುಗಳ ಜಡ ವಾತಾವರಣವಿದ್ದ ಪಕ್ಷದಲ್ಲಿ ಹೀಗಾಗುವ ಸಂಭವ ಕಡಿಮೆ. ಆದ್ದರಿಂದ ಬಲ್ಬು ಬಹುಕಾಲ ಬಾಳಿಕೆ ಬರುವುದು. ವಿಶ್ವಕಿರಣಗಳಿಗೆ ಸಂಬಂಧಿಸಿ ಪ್ರಯೋಗಗಳಲ್ಲಿ ಉಪಯೋಗಿಸುವ ಅಯಾನೀಕರಣ ಕೋಷ್ಠಗಳಲ್ಲಿ ಗಾಳಿಯ ಬದಲು ಕ್ರಿಪ್ಟಾನ್ ಇದ್ದರೆ ಕೋಷ್ಠದ ಕಾರ್ಯದಕ್ಷತೆ 40 ಪಟ್ಟು ಹೆಚ್ಚುವುದು.

*(ಎಚ್.ಜಿ.ಎಸ್.)*

**ಕ್ರಿಪ್ಟ್ಯಾಂತಸ್ :** ಬ್ರೊಮೀಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ ಜಾತಿ; ಬ್ರಜಿಲ್ ದೇಶದ ಮೂಲವಾಸಿ. ಸುಮಾರು 12 ಪ್ರಭೇದಗಳನ್ನೊಳಗೊಂಡಿದೆ. ಸಾಮಾನ್ಯವಾಗಿ ಅಪ್ಪುಸಸ್ಯವಾಗಿ ಬೆಳೆಯುತ್ತದೆ. ಇದನ್ನು ಕುಂಡಸಸ್ಯ ಮತ್ತು ಕಲ್ಲೇರಿ ಸಸ್ಯವನ್ನಾಗಿ ಬೆಳೆಸುತ್ತಾರೆ. ಬಹುವಾರ್ಷಿಕ ಮೂಲಿಕೆ ಸಸ್ಯವಾದ ಇದರಲ್ಲಿ ಕಾಂಡ ಪ್ರಮುಖವಾಗಿ ಕಾಣುವುದಿಲ್ಲ. ಉದ್ದವಾದ ಗರಗಸದ ಅಂಚುಳ್ಳ ಎಲೆಗಳಿವೆ. ಇವು ಗಿಡದ ಬುಡದಲ್ಲಿ ಕಮಲದ ದಳಗಳ ರೀತಿ ಜೋಡಣೆಗೊಂಡಿವೆ; ಪ್ರಭೇದಗಳಿಗೆ ಅನುಗುಣವಾಗಿ ಎಲೆಗಳಿಗೆ ವಿವಿಧ ಬಣ್ಣಗಳಿವೆ. ಹೂಗೊಂಚಲು ಚಂಡುಮಂಜರಿ ಮಾದರಿಯದು ; ಅಸಂಖ್ಯ ಉಪಪತ್ರಗಳಿಂದ ಆವೃತವಾಗಿದೆ. ಒಂದೊಂದು ಹೂವಿನಲ್ಲಿ 3 ಪುಷ್ಪಪತ್ರಗಳು, 3 ದಳಗಳು, 6 ಕೇಸರಗಳು, ಮೂರು ಕಾರ್ಪೆಲುಗಳಿಂದ ಕೂಡಿದ ನೀಚ ಸ್ಥಾನದ ಅಂಡಾಶಯ ಇವೆ. ಕೇಸರಗಳ ಬುಡ ದಳಸಮೂಹದ ಗಂಟಲಿಗೆ ಅಂಟಿಕೊಂಡಿದೆ. ಫಲ ಬಹುಬೀಜಗಳನ್ನೊಳಗೊಂಡ ಬೆರಿ ಮಾದರಿಯದು.

ಕ್ರಿಪ್ಟ್ಯಾಂತಸ್ ಜೊನೇಟಸ್, ಕ್ರಿ. ಅಂಡ್ಯುಲೇಟಸ್, ಕ್ರಿ. ಜೆಬ್ರಿನಸ್, ಕ್ರಿ. ಏಕಾಲಿಸುಗಳು ಉದ್ಯಾನ ಪ್ರಾಮುಖ್ಯವಿರುವ ಪ್ರಭೇದಗಳು. ಕ್ರಿಪ್ಟ್ಯಾಂತಸಿನ ವಿವಿಧ ಪ್ರಭೇದಗಳನ್ನು ಮೋಸುಗಳಿಂದ (ಆಫ್‌ಸೆಟ್ಸ್) ಸುಲಭವಾಗಿ ವೃದ್ಧಿ ಮಾಡಬಹುದು.

(ಬಿ.ಎ.ಪಿ.)

**ಕ್ರಿಪ್ಟೋಮೀರಿಯ :** ನಗ್ನಬೀಜಿ ಸಸ್ಯಗುಂಪಿನ ಪೈನೇಸೀ ಕುಟುಂಬಕ್ಕೆ ಸೇರಿದ ಒಂದು ನಿತ್ಯಹರಿದ್ವರ್ಣದ ಶಂಕುವೃಕ್ಷ. ಇದಕ್ಕೆ ಜಪಾನೀ ಸೀಡರ್ ಎಂಬ ಸಾಮಾನ್ಯ ಬಳಕೆಯ ಹೆಸರಿದೆ. ಜಪಾನಿಕ ಎಂಬ ಒಂದೇ ಪ್ರಭೇದವನ್ನೊಳಗೊಂಡಿರುವ ಇದರ ತವರು ಚೀನ. ಇದಕ್ಕೆ ಸುಂದರವಾದ ಪಿರಮಿಡ್ ಆಕೃತಿಯಿರುವುದರಿಂದಲೂ ಇದರ ಎಲೆಗಳು ಯಾವಾಗಲೂ ಹಸಿರಾಗಿರುವುದರಿಂದಲೂ ಇದನ್ನು ಚೀನ ಮತ್ತು ಜಪಾನುಗಳಲ್ಲಿ ರಸ್ತೆಗಳ ಅಕ್ಕಪಕ್ಕದಲ್ಲೂ ಉದ್ಯಾನಗಳಲ್ಲೂ ಶೋಭೆಗೆಂದು ಬೆಳೆಸಲಾಗಿದೆ. ಅಲ್ಲದೆ ಇದರ ಚೌಬೀನೆ ಮೃದುವಾಗಿಯೂ ಕೆಂಪುಮಿಶ್ರಿತ ಕಂದುಬಣ್ಣದ್ದಾಗಿಯೂ ಇದ್ದು ಮರಗೆಲಸಕ್ಕೆ ಸುಲಭವಾಗಿ ಮಣಿಯುವುದರಿಂದ ಇದನ್ನು ಕಟ್ಟಡದ ಕೆಲಸಗಳಿಗೆ, ಪೀಪಾಯಿ ಮತ್ತು ಟೀ ಪೆಟ್ಟಿಗೆಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಭಾರತದಲ್ಲಿ ಹಿಮಾಲಯ ಪರ್ವತಶ್ರೇಣಿಗಳಲ್ಲಿ ಇದು ಬೆಳೆಯುತ್ತದೆ.

ಕ್ರಿಪ್ಟೊಮೀರಿಯ ಸುಮಾರು 125’ ಎತ್ತರಕ್ಕೆ ಬೆಳೆಯುವ ಬೃಹದ್ಗಾತ್ರದ ಮರ. ಇದಕ್ಕೆ ನೇರವಾಗಿ ಬೆಳೆಯುವ ನಾಜೂಕಿನ ಮುಖ್ಯ ಕಾಂಡವಿದೆ. ತೊಗಟೆ ಕೆಂಪುಮಿಶ್ರಿತ ಕಂದುಬಣ್ಣದ್ದು. ಎಲೆಗಳು ಉದ್ದನೆಯ ಕಡ್ಡಿಗಳಂತಿದ್ದು ಸುರುಳಿಸುರುಳಿಯಾಗಿ ಜೋಡಣೆಗೊಂಡಿವೆ. ಹೂಗಳು ಏಕಲಿಂಗಿಗಳು; ಬೇರೆಬೇರೆ ಶಂಕುಗಳಲ್ಲಿ (ಕೋನ್) ಸಮಾವೇಶಗೊಂಡಿವೆ. ಹಲವಾರು ಗಂಡುಶಂಕುಗಳು ಗುಂಪುಗೂಡಿಕೊಂಡು ರೆಂಬೆಗಳ ತುದಿಯಲ್ಲಿ ಹುಟ್ಟುತ್ತವೆ. ಇವುಗಳ ಆಕಾರ ದೀರ್ಘ ಅಂಡದಂತೆ. ಹೆಣ್ಣು ಶಂಕುಗಳು ಗುಂಡಗಿವೆ; ಒಂಟೊಂಟಿಯಾಗಿ ಮೋಟು ರೆಂಬೆಗಳ ತುದಿಯಲ್ಲಿ ಹುಟ್ಟುತ್ತವೆ. ಪ್ರತಿ ಹೆಣ್ಣು ಶಂಕುವಿನಲ್ಲಿ ಹಲವಾರು ಪಟ್ಟಿಗಳೂ ಒಂದೊಂದು ಪಟ್ಟಿಗೆ ಅಂಟಿದಂತೆ 3–5 ಅಂಡಕಗಳೂ ಇವೆ. ಅಂಡಕಗಳು ನಿಷೇಚನಗೊಂಡು ಬೀಜಗಳಾದಂತೆ ಅವಕ್ಕೆ ತೆಳುವಾದ ರೆಕ್ಕೆ ಮೂಡುತ್ತದೆ. ಬೀಜ ಪ್ರಸರಣಕ್ಕೆ ಈ ರೆಕ್ಕೆ ಸಹಕಾರಿ. ಕ್ರಿಪ್ಟೊಮೀರಿಯವನ್ನು ಬೀಜಗಳ ಮೂಲಕ ಇಲ್ಲವೆ ಕಾಂಡ ತುಂಡುಗಳ ಮೂಲಕ ವೃದ್ಧಿಸಲಾಗುತ್ತದೆ. ಇದರ

ಬೆಳೆವಣಿಗೆಗೆ ಫಲವತ್ತಾದ ತೇವಪೂರಿತ ಗೋಡುಮಣ್ಣು ಮತ್ತು ನೆರಳು ಅತ್ಯಗತ್ಯ.
(ಎ.ಕೆ.ಎಸ್.)

**ಕ್ರಿಪ್ಸ್, ರಿಚರ್ಡ್ ಸ್ಟ್ಯಾಫರ್ಡ್ :** 1889–1952. ಬ್ರಿಟನಿನ ರಾಜಕಾರಣಿ, ಆರ್ಥಿಕ ಧುರೀಣ ಮತ್ತು ಭಾರತಕ್ಕೆ ಸ್ವಾತಂತ್ರ್ಯ ನೀಡುವ ವಿಷಯದಲ್ಲಿ ಸಂಧಾನ ನಡೆಸಿದ ಮುತ್ಸದ್ದಿ. ಚಾರ್ಲ್ಸ್ ಆಲ್ಫ್ರೆಡ್ ಕ್ರಿಪ್ಸನ ನಾಲ್ಕನೆಯ ಮಗ. ಜನನ 1889ರಲ್ಲಿ. ಕ್ರಿಪ್ಸನ ಆರಂಭದ ವಿದ್ಯಾಭ್ಯಾಸ ವಿಂಚೆಸ್ಟರ್‌ನಲ್ಲೂ ಪ್ರೌಢಶಿಕ್ಷಣ (ರಸಾಯನ ವಿಜ್ಞಾನ) ಲಂಡನ್ ವಿಶ್ವವಿದ್ಯಾಲಯದಲ್ಲೂ ನಡೆಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಸಿಡಿಮದ್ದು ಗುಂಡುಗಳ ಶಾಖೆಯಲ್ಲಿ ಕೆಲಸ ನಿರ್ವಹಿಸಿದ. ಅನಾರೋಗ್ಯದ ಕಾರಣದಿಂದಾಗಿ ಎರಡು ವರ್ಷಗಳ ಕಾಲ ಅವನು ಯಾವ ಸೇವೆಯನ್ನೂ ಸಲ್ಲಿಸುವುದಕ್ಕೆ ಸಾಧ್ಯವಾಗಲಿಲ್ಲ. 1913ರಲ್ಲಿ ಪ್ರಾರಂಭಿಸಿದ ಬ್ಯಾರಿಸ್ಟರ್ ವೃತ್ತಿಗೆ 1917ರಲ್ಲಿ ಹಿಂದಿರುಗಿ ಕೆಲವೇ ವರ್ಷಗಳಲ್ಲಿ ಸುಪ್ರಸಿದ್ಧ ನ್ಯಾಯವಾದಿಯಾದ.

ಆಗಿನ ಕಾಲದ ವಿಶ್ವದ ಸಮಸ್ಯೆಗಳಿಗೆ ಒಂದು ಧಾರ್ಮಿಕ ಅರ್ಥವನ್ನು ಕಲ್ಪಿಸಿದ ಕ್ರಿಪ್ಸ್ ಜೀವನ ಪರ್ಯಂತ ಆಂಗ್ಲಿಕನ್ ಧರ್ಮದ ಅನುಯಾಯಿಯಾಗಿದ್ದ. ರ್‍ಯಾಮ್ಸೆ ಮ್ಯಾಕ್ಡೊನಾಲ್ಡನ ಕಾರ್ಮಿಕ ಪಕ್ಷದ ಮಂತ್ರಿಮಂಡಲದಲ್ಲಿ 1930ರಲ್ಲಿ ಸಾಲಿಸಿಟರ್ ಜನರಲ್ ಆಗಿ ಅವನ ನೇಮಕವಾಯಿತು. ನ್ಯಾಯ ನಿರೂಪಣಾಧಿಕಾರಿಗಳಿಗೆ ಸಾಂಪ್ರದಾಯಿಕವಾಗಿ ಕೊಡುತ್ತಿದ್ದ ನೈಟ್ ಪದವಿಯೂ ಲಭಿಸಿತು. 1931ರಲ್ಲಿ ನಡೆದ ಚುನಾವಣೆಯಲ್ಲಿ ಪೂರ್ವ ಬ್ರಿಸ್ಟಲಿನಿಂದ ಆಯ್ಕೆಯಾಗಿ ಪಾರ್ಲಿಮೆಂಟಿನ ಸದಸ್ಯನಾದ. 1950ರ ವರೆಗೂ ಆ ಕ್ಷೇತ್ರವನ್ನು ಪ್ರತಿನಿಧಿಸಿದ. 1935ರಲ್ಲಿ ಕ್ರಿಪ್ಸನಿಗೂ ಆತನ ಪಕ್ಷಕ್ಕೂ ವೈಮನಸ್ಯವುಂಟಾಗಿ ಆತ ಆ ಪಕ್ಷದಿಂದ ಹೊರಬಂದ. 1940ರ ಮೇ ತಿಂಗಳಿನಲ್ಲಿ ವಿನ್ಸ್‌ಟನ್ ಚರ್ಚಿಲ್ ಕ್ರಿಪ್ಸನನ್ನು ರಷ್ಯಕ್ಕೆ ರಾಯಭಾರಿಯನ್ನಾಗಿ ಕಳುಹಿಸಲು ಅಲ್ಲಿ ಆತ ಎರಡು ವರ್ಷಗಳ ಕಾಲ ಇದ್ದ. ರಷ್ಯದಿಂದ ಹಿಂದಿರುಗಿ ಬಂದ ಮೇಲೆ ಕ್ರಿಪ್ಸನಿಗೆ ವಿಮಾನೋತ್ಪಾದನ ಶಾಖೆಯ ಸಚಿವ ಪದವಿ ದೊರಕಿತು. ಎರಡನೆಯ ಮಹಾಯುದ್ಧ ಮುಗಿಯುವವರೆಗೂ ಈ ಪದವಿಯಲ್ಲಿ ಮುಂದುವರಿದು, ಯುದ್ಧ ಮುಗಿದ ಮೇಲೆ ಪುನಃ ಲೇಬರ್ ಪಕ್ಷಕ್ಕೆ ಸೇರಿ ಆಟ್ಲಿಯ ಸಚಿವ ಸಂಪುಟದಲ್ಲಿ ಬೋರ್ಡ್ ಆಫ್ ಟ್ರೇಡಿನ ಅಧ್ಯಕ್ಷನಾಗಿದ್ದ. ಸ್ವಾತಂತ್ರ್ಯ

ಕ್ರಿಪ್ಸ್ ಆಯೋಗ, 1912. ಮಹಾತ್ಮ ಗಾಂಧಿಯವರೊಡನೆ ದೆಹಲಿಯಲ್ಲಿ ಕ್ರಿಪ್ಸ್

ನೀಡುವ ವಿಷಯದಲ್ಲಿ ಭಾರತದೊಂದಿಗೆ ಒಪ್ಪಂದಕ್ಕೆ ಬರಲು ಅವನು ನಡೆಸಿದ ಪ್ರಯತ್ನಗಳು ಗಮನಾರ್ಹ. 1947ರಲ್ಲಿ ಬ್ರಿಟನಿನ ಆರ್ಥಿಕ ಮಂತ್ರಿಯಾಗಿ 1950ರ ವರೆಗೆ ದೇಶದ ಒಳಾಡಳಿತದಲ್ಲಿ ಪ್ರಮುಖ ಪಾತ್ರವಹಿಸಿದ. ಹಣಕಾಸಿನ ವ್ಯವಹಾರವನ್ನು ಬಹಳ ಕಟ್ಟುನಿಟ್ಟಿನಿಂದ ನಡೆಸಿ ಬೆಲೆಗಳು ಏರದಂತೆ ತಡೆಗಟ್ಟಿದ. ಅವನು ಆರ್ಥಿಕ ಮಂತ್ರಿಯಾಗಿದ್ದಾಗ ಗ್ರೇಟ್ ಬ್ರಿಟನಿನ ಆರ್ಥಿಕಸ್ಥಿತಿ ಉತ್ತಮಗೊಂಡಿತು; ವ್ಯಾಪಾರ ವರ್ಧಿಸಿತು. ಆದರೂ 1949ರಲ್ಲಿ ಪೌಂಡ್ ಅಪಮೌಲ್ಯವಾಗುವುದನ್ನು ತಡೆಗಟ್ಟಲಾಗಲಿಲ್ಲ. ಅನಾರೋಗ್ಯದ ಕಾರಣದಿಂದಾಗಿ 1950ರ ಅಕ್ಟೋಬರ್ ತಿಂಗಳಲ್ಲಿ ಆತ ತನ್ನ ಅಧಿಕಾರಕ್ಕೂ ಪಾರ್ಲಿಮೆಂಟ್ ಸದಸ್ಯತ್ವಕ್ಕೂ ರಾಜೀನಾಮೆ ನೀಡಬೇಕಾಯಿತು. 1952ರ ಏಪ್ರಿಲ್ 21ರಂದು ಜ್ಯೂರಿಕ್‌ನಲ್ಲಿ ನಿಧನ ಹೊಂದಿದ.
(ಬಿ.ಎಸ್.ಎ.; ಕೆ.ವಿ.ವಿ.)

**ಕ್ರಿಮಿನಲ್ ಪ್ರೊಸೀಜರ್ ಕೋಡ್ :** ಅಪರಾಧಿಕ ಮೊಕದ್ದಮೆಗಳು ನಡೆಯುವ ವಿಧಾನವನ್ನು ಸೂಚಿಸುವ ಭಾರತೀಯ ಕಾಯಿದೆ (ದಂಡಪ್ರಕ್ರಿಯಾ ಸಂಹಿತೆ). 1898ರಲ್ಲಿ ಇದು ಜಾರಿಗೆ ಬಂತು. ಕೆಲವೊಂದು ಚಿಕ್ಕಪುಟ್ಟ ತಿದ್ದುಪಡಿಗಳೊಂದಿಗೆ ಇಂದಿಗೂ ಭಾರತದ ಎಲ್ಲ ನ್ಯಾಯಾಲಯಗಳಲ್ಲೂ ಬಳಕೆಯಲ್ಲಿದೆ.

ಭಾರತೀಯ ದಂಡಸಂಹಿತೆ ಮತ್ತು ಇತರ ಕಾಯಿದೆಗಳ ಪ್ರಕಾರ ಅಪರಾಧದ ಪರಿಮಾಣಕ್ಕೆ ತಕ್ಕ ಶಿಕ್ಷೆ ವಿಧಿಸುವ ವಿಧಾನ, ವಿಚಾರಣೆಯ ರೀತಿ, ಕಾನೂನಿನ ಪ್ರಕಾರ ಆಪಾದಿತನಿಗೆ ಸಿಗಬಹುದಾದ ಸವಲತ್ತು ಮುಂತಾದವನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್ ನಿರ್ದಿಷ್ಟಗೊಳಿಸುತ್ತದೆ. ಅಪರಾಧಗಳ ವಿಚಾರಣೆಯನ್ನು ಒಂದು ನಿರ್ದಿಷ್ಟವಾದ ವಿಧಾನಕ್ಕೊಳಪಡಿಸುವುದು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಉದ್ದೇಶ. ಈ ಕಾಯಿದೆ ಸ್ಥೂಲವಾಗಿ ಈ ಕೆಳಗಿನ ಮೂರು ನಿರ್ದಿಷ್ಟ ವಿಷಯಗಳ ವಿವೇಚನೆಯನ್ನು ಒಳಗೊಂಡಿದೆ: 1. ನ್ಯಾಯಾಲಯಗಳ ರಚನೆ ಹಾಗೂ ಅಧಿಕಾರ ವ್ಯಾಪ್ತಿ, ಎಂದರೆ ನ್ಯಾಯಾಲಯಗಳ ಸ್ಥಾಪನೆ, ದಂಡದ ಪ್ರಮಾಣಕ್ಕೆ ಅನುಗುಣವಾಗಿ ಹಾಗೂ ಭೌಗೋಳಿಕವಾಗಿ ಅವುಗಳ ಅಧಿಕಾರವ್ಯಾಪ್ತಿ, 2. ಅಪರಾಧಿಕ ಮೊಕದ್ದಮೆಗಳು ನಡೆಯುವ ವಿಧಾನ. ಕಾನೂನು ಹಾಗೂ ಘಟನೆಗಳ ಸಮನ್ವಯದಿಂದ ಆಪಾದಿತನಿಗೆ ಯೋಗ್ಯವಿಚಾರಣೆ ಹಾಗೂ ಯೋಗ್ಯ ನಿರ್ಣಯ ದೊರಕುವ ಅವಕಾಶವನ್ನೊದಗಿಸುವುದು. ಉದಾ: ಭಾರತದ ಸಂವಿಧಾನದ ಪ್ರಕಾರ ಯಾವುದೇ ನಾಗರಿಕನ ಜೀವ ಅಥವಾ ಸ್ವಾತಂತ್ರ್ಯವನ್ನು ಕಾನೂನಿನ ಮೂಲಕ ನಿರ್ದಿಷ್ಟಪಡಿಸಲಾದ ಪ್ರಕ್ರಿಯೆಯ ಹೊರತಾಗಿ ಹರಣ ಮಾಡುವುದನ್ನು ಅಥವಾ ಮೊಟಕು ಮಾಡುವುದನ್ನು ನಿರ್ಬಂಧಿಸಿದೆ. ಪ್ರತಿಯೊಬ್ಬ ಆಪಾದಿತನೂ ವಿಚಾರಣೆಗೊಳಪಟ್ಟು ತೀರ್ಪು ನೀಡುವವರೆಗೆ ನಿರಪರಾಧಿಯೆಂದು ತಿಳಿಯಲ್ಪಡತಕ್ಕದ್ದೆಂಬುದು ಕಾನೂನಿನ ತತ್ತ್ವ. ಸರ್ಕಾರ ಈ ಬಗ್ಗೆ ನಿರ್ದಿಷ್ಟಪಡಿಸಿದ ವಿಚಾರಣೆಯ ವಿಧಾನವನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ವಿವರಿಸಲಾಗಿದೆ. ಈ ಕಾಯಿದೆ ಸಹಜ ನ್ಯಾಯಗಳ ತಳಹದಿಯ ಆಧಾರದ ಮೇಲೆ ನಿರ್ದಿಷ್ಟಪಡಿಸಿದ್ದಾಗಿದೆ. ಆದ್ದರಿಂದ ಈ ಸಂಹಿತೆಯಲ್ಲಿ ಹೇಳಿರುವ ಪ್ರಕಾರಕ್ಕೆ ಹೊರತಾಗಿ ಬೇರೆ ಯಾವ ವಿಧಾನದಿಂದಲೂ ವ್ಯಕ್ತಿಯೊಬ್ಬನ ಸ್ವಾತಂತ್ರ್ಯ ಅಥವಾ ಜೀವವನ್ನು ಕಸಿದುಕೊಳ್ಳುವಂತಿಲ್ಲ. 3. ಅಪರಾಧಗಳನ್ನು ಸಾಧ್ಯವಾದ ಮಟ್ಟಿಗೆ ಪೂರ್ವಭಾವಿಯಾಗಿ ತಡೆಗಟ್ಟುವ ಬಗ್ಗೆ ಕ್ರಮಗಳನ್ನು ನಿರ್ದಿಷ್ಟಪಡಿಸುವುದು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಇನ್ನೊಂದು ಉದ್ದೇಶ. ಉದಾ: ಗಲಭೆ ಮುಂತಾದವು ಸಂಭವಿಸುವ ಸಂದರ್ಭದಲ್ಲಿ ಈ ಸಂಹಿತೆಯ 144ನೆಯ ಕಾಲಂ ಜಾರಿ ಮಾಡಲಾಗುವುದು. ಅದು ಸಭೆ ಮೆರವಣಿಗೆಗಳನ್ನು ನಿರ್ಬಂಧಿಸುತ್ತದೆ ಮತ್ತು ಆ ಮೂಲಕ ಸಾರ್ವಜನಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಸಹಾಯ ಮಾಡುತ್ತದೆ.
(ಬಿ.ಡಿ.ಎಚ್.)

**ಕ್ರಿಮಿಯ :** ಉಕ್ರೇನಿನ ತೀರ ದಕ್ಷಿಣಕ್ಕಿರುವ ಪರ್ಯಾಯದ್ವೀಪ. ಇದರ ಒಟ್ಟು ವಿಸ್ತೀರ್ಣ ಸು. 27,000 ಚಕಿಮೀ ಜನಸಂಖ್ಯೆ 2,033,700 (2002) ರಷ್ಯನ್ನರು ಇದನ್ನು ಕ್ರಿಮ್ ಎಂದು ಕರೆಯುತ್ತಾರೆ. 8 ಕಿಮೀ ಅಗಲದ ಪೆರಿಕೋಪ್ ಭೂಕಂಠದಿಂದಾಗಿ ಇದು ಉಕ್ರೇನಿನ ಮುಖ್ಯ ಭೂಭಾಗದೊಂದಿಗೆ ಸೇರಿದೆ. ಇದಕ್ಕೆ ಪಶ್ಚಿಮ ದಕ್ಷಿಣಗಳಲ್ಲಿ ಕಪ್ಪುಸಮುದ್ರವೂ ಈಶಾನ್ಯದಲ್ಲಿ ಅಜಾಫ್ ಸಮುದ್ರವೂ ಇದೆ. ರಾಜಧಾನಿ : ಸಿಫರೊಪೋಲ್.

ಕ್ರಿಮಿಯ ಪರ್ಯಾಯದ್ವೀಪದಲ್ಲಿ ಮೂರು ಮುಖ್ಯ ಸ್ವಾಭಾವಿಕ ವಿಭಾಗಗಳುಂಟು. ಉತ್ತರದ ಮುಕ್ಕಾಲು ಭಾಗ ಅರೆಬೆಂಗಾಡು ಪ್ರದೇಶ. ಆಗ್ನೇಯ ಭಾಗದ ತೀರಪ್ರದೇಶದ ಟರ್ಷಿಯರಿ ಯುಗಕ್ಕೆ ಸೇರಿದ ಯೈಲ ಪರ್ವತಗಳಿಂದ ಆವೃತವಾಗಿದೆ. ಇವನ್ನು ಕ್ರಿಮಿಯನ್ ಆಲ್ಪ್ಸ್ ಎಂದೂ ಕರೆಯುತ್ತಾರೆ. ಇವುಗಳ ಎತ್ತರ 600–1500 ಮೀ ಪೂರ್ವಭಾಗದಲ್ಲಿ ಕೆರ್ಚ್ ಪರ್ಯಾಯದ್ವೀಪದ ಸಣ್ಣಸಣ್ಣ ಪರ್ವತಗಳುಂಟು. ಯೈಲ ಪರ್ವತಗಳಿಂದಾಗಿ ಪರಸ್ಪರವಾಗಿ ತೀರ ವಿಭಿನ್ನವಾದ ಎರಡು ವಾಯುಗುಣಗಳು ಇಲ್ಲಿ ಕಂಡುಬರುತ್ತವೆ. ಉತ್ತರದ ಬೆಂಗಾಡು ಪ್ರದೇಶದ್ದು ವೈಪರೀತ್ಯದ ವಾಯುಗುಣ. ಅಲ್ಲಿ ಜನವರಿಯ ಚಳಿಗಾಲದ ಉಷ್ಣತೆ 42° ಸೆ. ಆದರೆ ಜುಲೈ ಬೇಸಿಗೆಯ ಉಷ್ಣತೆ 42° ಸೆ. ಅಲ್ಲಿ ಮಳೆಯಾಗುವುದು ಬಹುತೇಕ ಬೇಸಗೆಯಲ್ಲಿ. ಪರ್ವತ ಪ್ರದೇಶಕ್ಕೆ ದಕ್ಷಿಣದಲ್ಲಿ ಮೆಡಿಟರೇನಿಯನ್ ವಾಯುಗುಣ ಕಂಡುಬರುತ್ತದೆ. ಉತ್ತರದಿಂದ ಬೀಸುವ ಶೀತ ಮಾರುತಕ್ಕೆ ಯೈಲ ಪರ್ವತಗಳು ತಡೆಯೊಡ್ಡುತ್ತವೆ. ದಕ್ಷಿಣ ಕ್ರಿಮಿಯ ಅನೇಕ ವಿಹಾರಸ್ಥಳಗಳಿಗೂ ಆರೋಗ್ಯಧಾಮಗಳಿಗೂ ಪ್ರಸಿದ್ಧ. ಯೈಲ ಪರ್ವತಪ್ರದೇಶದಲ್ಲಿ ಪರ್ಣಪಾತಿ ಕಾಡುಗಳುಂಟು. ಇಲ್ಲಿ ಓಕ್, ಬೀಚ್, ಮೇಪಲ್ ಮುಂತಾದ ಮರಗಳು ವಿಶೇಷ. ಹುಲ್ಲುಗಾವಲು ವ್ಯಾಪಕವಾಗಿದೆ. ದಕ್ಷಿಣದ ತೀರಪ್ರದೇಶದಲ್ಲಿ ಜೂನಿಪರ್ಸ್, ಮ್ಯಾಸ್ಟಿಕ್, ಸೈಪ್ರೆಸ್, ಮ್ಯಾಗ್ನೋಲಿಯ ಮುಂತಾದ ಮೆಡಿಟರೇನಿಯನ್ ಮಾದರಿಯ ಮರಗಳಿವೆ. ದ್ರಾಕ್ಷಿ, ಒಂದು ಮುಖ್ಯ ಬೆಳೆ. ಸೇಬು, ಪಿಯರ್ಸ್, ಚೆರಿ, ಬಾದಾಮಿ ಮುಂತಾದವನ್ನು ಹೇರಳವಾಗಿ ಬೆಳೆಸುತ್ತಾರೆ. ಹೊಗೆಸೊಪ್ಪು ಹೆಚ್ಚಾಗಿ ಬೆಳೆಯುತ್ತದೆ.

ಮಧ್ಯಕ್ರಿಮಿಯದ ಪರ್ವತಪ್ರದೇಶದಲ್ಲಿ ಕುರಿ ಸಾಕುವುದು ಜನರ ಮುಖ್ಯ ಕಸಬು. ಹೆರಿಂಗ್ ಜಾತಿಯ ಮೀನುಗಳಿಗೆ ಕೆರ್ಚ್ ಪ್ರಸಿದ್ಧ. ಕೆರ್ಚ್ ಪ್ರದೇಶದಲ್ಲಿ ಕಬ್ಬಿಣದ ಅದಿರು ವಿಶೇಷವಾಗಿ ಸಿಗುತ್ತದೆ. ಉತ್ತರದ ಕರಾವಳಿಯಲ್ಲಿ ಬ್ರೊಮಿನ್, ಮೆಗ್ನೀಸಿಯಂ ಮುಂತಾದ ಮೂಲವಸ್ತುಗಳಿಂದ ಕೂಡಿದ ಲವಣಗಳ ನಿಕ್ಷೇಪಗಳುಂಟು. ಇಲ್ಲಿ ಅನೇಕ ರಾಸಾಯನಿಕ ಕೈಗಾರಿಕೆಗಳು ಬೆಳೆದಿವೆ.

ಸಿಂಫರಾಪಲ್ ಕ್ರಿಮಿಯಾದ ದೊಡ್ಡ ಕೈಗಾರಿಕಾ ಪಟ್ಟಣ, ಆಡಳಿತ ಕೇಂದ್ರ, ಸೆವಾಸ್ಟೊಪಾಲ್, ಕೆರ್ಚ್, ಫಿಯೋದೊಸಿಯ, ಯೆಫ್‌ಪಾತೋರಿಯ ಮತ್ತು ಯಾಲಟ ಇತರ ಪ್ರಮುಖ ಪಟ್ಟಣಗಳು.

ಕ್ರಿಮಿಯಕ್ಕೆ ವೈವಿಧ್ಯಪೂರ್ಣವಾದ ದೀರ್ಘ ಇತಿಹಾಸವಿದೆ. ಪ್ರ.ಶ.ಪೂ. 7ನೆಯ ಶತಮಾನದಲ್ಲಿ ಸಿಥಿಯನರು ಇಲ್ಲಿದ್ದ ಸುಮೇರೀಯನ್ ಮತ್ತು ಕೆಲ್ಟಿಕ್‌ರನ್ನು ಹೊಡೆದೋಡಿಸಿದರು. ಅವರಲ್ಲಿ ಕೆಲವರು ಪರ್ವತಪ್ರದೇಶಗಳಲ್ಲಿ ಆಶ್ರಯ ಪಡೆದರು. ಅವರೇ ತೌರಿಗಳೆಂದು ಪ್ರಸಿದ್ಧರಾದರು. ಇವರಿಂದಾಗಿಯೇ ಪರ್ಯಾಯದ್ವೀಪಕ್ಕೆ ತಾರಿಸ್ ಎಂಬ ಪ್ರಾಚೀನ ಹೆಸರು ಬಂದದ್ದು. ಪ್ರ.ಶ.ಪೂ. ಸು.600ರಿಂದ ಇಲ್ಲಿಯ ತೀರಪ್ರದೇಶದುದ್ದಕ್ಕೂ ಗ್ರೀಕ್ ವಸಾಹತುಗಳು ಆರಂಭವಾದುವು. ಹಲವಾರು ಶತಮಾನಗಳ ಕಾಲ ಅವು ಸಣ್ಣಪುಟ್ಟ ಗ್ರೀಕ್ ಪಾಳೆಯಪಟ್ಟುಗಳಾಗಿದ್ದುವು. ಒಳನಾಡಿನ ಬಹುಪಾಲು ಪ್ರದೇಶಗಳನ್ನು ಸಿಥಿಯನರೆ ತಮ್ಮ ವಶದಲ್ಲಿಟ್ಟುಕೊಂಡಿದ್ದರು. ಕೆರ್ಚ್ ಮತ್ತು ಸೆವಾಸ್ಟೊಪಾಲ್‌ಗಳ ನೆರೆಯ ಪ್ರದೇಶದ ಉತ್ಖನನದಲ್ಲಿ ಸಮಾಧಿ ಸುರಂಗಗಳು ಮತ್ತು ಭಿತ್ತಿಚಿತ್ರಗಳನ್ನು ಒಳಗೊಂಡ ಹಲವಾರು ಪ್ರಾಚೀನ ಗ್ರೀಕ್ ಪಟ್ಟಣಗಳ ಅವಶೇಷಗಳು ಕಂಡುಬಂದಿವೆ. ಪ್ರ.ಶ.ಪೂ. 63 ರಿಂದ ಪ್ರ.ಶ.ಪೂ. 250ರ ವರೆಗೆ ಕ್ರಿಮಿಯದ ಗ್ರೀಕ್ ಭಾಗ ರೋಮನ್ ರಕ್ಷಣೆಗೆ ಒಳಪಟ್ಟಿತ್ತು. ಮುಂದಿನ ಸಹಸ್ರ ವರ್ಷಗಳಲ್ಲಿ ಈ ಪ್ರದೇಶ ಅನೇಕ ಜನಾಂಗಗಳ ಧಾಳಿಗೆ ಒಳಗಾಯಿತು. 13ನೆಯ ಶತಮಾನದಲ್ಲಿ ವಿನಿಷಿಯನ್ನರು ಜಿನೋಯಿ ವ್ಯಾಪಾರಸ್ಥರ ಪ್ರದೇಶಗಳನ್ನು ವಶಪಡಿಸಿಕೊಂಡು, ಅದರ ಬಹುಭಾಗವನ್ನು

ಕ್ರಿಮಿಯನ್ ಬೆಟ್ಟದ ಪೂರ್ವದ ಇಳಿಜಾರು ಪ್ರದೇಶದಲ್ಲಿರುವ ದ್ರಾಕ್ಷಿ ತೋಟ. ಬೆಟ್ಟದ ಈ ಭಾಗ ಕಪ್ಪು ಸಮುದ್ರಕ್ಕೆ ಎದುರಾಗಿದೆ

ನಾಶಗೊಳಿಸಿದರು. ಈ ಗೊಂದಲದ ಕಾಲದಲ್ಲಿ ಪರ್ಯಾಯದ್ವೀಪದ ಉತ್ತರ ಮತ್ತು ಮಧ್ಯಪ್ರದೇಶಗಳ ಬಹುಪಾಲನ್ನು ತಾತಾರರು ವಶಪಡಿಸಿಕೊಂಡರು. 1395ರಲ್ಲಿ ಕ್ರಿಮಿಯ ತೈಮೂರನ ದಾಳಿಗೆ ತುತ್ತಾಗಿ ಅದರ ಬಹುಭಾಗ ನಾಶವಾಯಿತು. ಈ ದಾಳಿಯ ಅನಂತರ ತಾತಾರರು ಕ್ರಿಮಿಯವನ್ನು ತಮ್ಮದೇ ಆದ ಒಂದು ಪ್ರಾಂತ್ಯವನ್ನಾಗಿ ರಚಿಸಿಕೊಂಡರು. ಇವರು ಆಟೋಮನ್ ಸಾಮ್ರಾಜ್ಯಕ್ಕೆ ಅಧೀನರಾಗಿದ್ದರು.

ಕ್ಯಾಥರಿನ್ ರಾಣಿಯ ಆಳ್ವಿಕೆಯ ಆರಂಭಕಾಲದಿಂದಲೂ (1783) ಕ್ರಿಮಿಯ ರಷ್ಯನರ ಆಧಿಪತ್ಯಕ್ಕೆ ಒಳಪಟ್ಟಿತ್ತು. 1854–56ರ ಕ್ರಿಮಿಯನ್ ಯುದ್ಧದ ಅವಧಿಯಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಪಡೆಗಳು ಕ್ರಿಮಿಯದ ಬಂದರುಗಳನ್ನು ವಶಪಡಿಸಿಕೊಂಡುವು. 1917ರ ನವೆಂಬರ್ ತಿಂಗಳ ರಷ್ಯನ್ ಕ್ರಾಂತಿಯ ತರುವಾಯ ಮೊದಲು ಜನರಲ್ ಅಂತೋನ್ ಇವಾನೊವಿಚ್ ಡೆನಿಕಿನನ ನೇತೃತ್ವದಲ್ಲಿ, ಅನಂತರ ಪೀಟರ್ ನಿಕೊಲಾಯೆವಿಚ್ ರಾಂಗೆಲ್‌ನ ನೇತೃತ್ವದಲ್ಲಿ, ಹ್ವೈಟ್ ರಷ್ಯನ್ ಪಡೆಗಳು ದಕ್ಷಿಣ ರಷ್ಯದ ಬಹುಭಾಗದ ಜೊತೆಗೆ ಕ್ರಿಮಿಯವನ್ನೂ ವಶಪಡಿಸಿಕೊಂಡುವು. ಕೊನೆಗೆ 1920ರ ನವೆಂಬರಿನಲ್ಲಿ ಸೋವಿಯೆತ್ ಪಡೆಗಳು ರ್‍ಯಾಂಗೆಲನ ಸೇನೆಯನ್ನು ಹೊಡೆದಟ್ಟಿದುವು. ಎರಡನೆಯ ಮಹಾಯುದ್ಧದಲ್ಲಿ ಜರ್ಮನರು ಕ್ರಿಮಿಯದ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದರು(1941). 1944 ಮೇ 9ರಂದು ಸೋವಿಯತ್ ಸೈನ್ಯಗಳು ಮತ್ತೆ ಸೆವಾಸ್ಟೊಪಾಲನ್ನು ಪ್ರವೇಶಿಸಿ ಜರ್ಮನ್ ರುಮೇನಿಯನ್ ಪಡೆಗಳನ್ನು ಸೋಲಿಸಿದುವು. ಎರಡನೆಯ ಮಹಾಯುದ್ಧ ಕಾಲದಲ್ಲಿ ಮಿತ್ರರಾಷ್ಟ್ರಗಳು ಯುರೋಪಿನಲ್ಲಿ ಅಂತಿಮ ವಿಜಯ ಸಾಧಿಸುವುದಕ್ಕೆ ನಾಲ್ಕು ತಿಂಗಳ ಮುಂಚೆ (ಫೆಬ್ರುವರಿ 1945) ಅಮೆರಿಕ ಸಂಯುಕ್ತ ಸಂಸ್ಥಾನಾಧ್ಯಕ್ಷ ರೂಸ್ವೆಲ್ಟ್, ಬ್ರಿಟಿಷ್ ಪ್ರಧಾನಿ ಚರ್ಚಿಲ್, ಸೋವಿಯೆತ್ ಪ್ರಧಾನಿ ಸ್ಟಾಲಿನ್ ಇವರು ಕ್ರಿಮಿಯದ ಯಾಲ್ಟ ನಗರದಲ್ಲಿ ಸಭೆ ಸೇರಿದ್ದರು. 1993ರಲ್ಲಿ ಕ್ರಿಮಿಯಾಕ್ಕೆ ಉಕ್ರೇನಿನಿಂದ ರಾಜಕೀಯ ಮತ್ತು ಆರ್ಥಿಕ ಸಾರ್ವಭೌಮತ್ವವು ದೊರೆಯಿತು.

(ಎಚ್.ಎಸ್.ಎಚ್.)

**ಕ್ರಿಮಿಯ ಯುದ್ಧ :** 1854–1856. ರಷ್ಯಕ್ಕೂ ಬ್ರಿಟನ್, ಫ್ರಾನ್ಸ್, ತುರ್ಕಿ ಮತ್ತು ಸಾರ್ಡಿನಿಯಗಳಿಗೂ ನಡುವೆ ನಡೆದ ಯುದ್ಧ. ಸಾರ್ಡಿನಿಯ ಇದರಲ್ಲಿ ಸೇರಿದ್ದು 1855ರ ಜನವರಿಯಲ್ಲಿ. ಈ ಯುದ್ಧ ಮುಖ್ಯವಾಗಿ ಕ್ರಿಮಿಯ ಪರ್ಯಾಯ ದ್ವೀಪದಲ್ಲಿ ನಡೆದದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ತುರ್ಕಿ ಸಾಮ್ರಾಜ್ಯದ ಅವನತಿ 1700ರಲ್ಲಿ ಪ್ರಾರಂಭವಾದಾಗ ಅದರಿಂದ ಯುರೋಪಿನಲ್ಲಿ ಅನೇಕ ರಾಜಕೀಯ ಸಮಸ್ಯೆಗಳು ಉದ್ಭವಿಸಿದುವು. ಇವನ್ನು 'ಪೂರ್ವದ ಸಮಸ್ಯೆ ಅಥವಾ ಪೂರ್ವದ ಪ್ರಶ್ನೆ' ಎಂದೂ ಕರೆಯುತ್ತಾರೆ. ಕ್ರಿಮಿಯ ಯುದ್ಧಕ್ಕೂ ಇದೇ ಮೂಲಕಾರಣ. 18ನೆಯ ಶತಮಾನದಲ್ಲಿ ನಡೆದ ರಷ್ಯ–ತುರ್ಕಿ ಯುದ್ಧಗಳಿಂದ, ಪೂರ್ವ ಯುರೋಪ್ ಮತ್ತು ಪಶ್ಚಿಮ ಏಷ್ಯಗಳಲ್ಲಿ ರಷ್ಯ ಪ್ರಬಲವಾಯಿತು. ರಷ್ಯದ ಈ ವಿಸ್ತರಣನೀತಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಿಗೆ ಗಾಬರಿಯನ್ನುಂಟುಮಾಡಿತು. ತುರ್ಕಿಯನ್ನು ಹಂಚಿಕೊಳ್ಳಬೇಕೆಂಬುದು ಆಸ್ಟ್ರಿಯ ಮತ್ತು ರಷ್ಯ ದೇಶಗಳ ಯೋಜನೆಯಾಗಿತ್ತು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಇದನ್ನು ತಾತ್ಕಾಲಿಕವಾಗಿ ತಡೆಗಟ್ಟಿದುವು. ಆದಾಗ್ಯೂ 19ನೆಯ ಶತಮಾನದಲ್ಲಿ ವರ್ಷಗಳುರುಳಿದಂತೆ ತುರ್ಕಿ ಸಾಮ್ರಾಜ್ಯ ಅವನತಿಯ ಹಾದಿಯಲ್ಲೇ ಸಾಗಿತು. ಕಾನ್‌ಸ್ಟಾಂಟಿನೋಪಲ್ ಮತ್ತು ಡಾರ್ಡನೆಲ್ಸ್‌ಗಳನ್ನು ಆಕ್ರಮಿಸಿಕೊಳ್ಳಬೇಕೆಂಬ ರಷ್ಯದ ಹಂಚಿಕೆ, ಬಾಲ್ಕನ್ ರಾಷ್ಟ್ರಗಳು ತುರ್ಕಿಯಿಂದ ಬೇರ್ಪಟ್ಟು ಸ್ವಾತಂತ್ರ್ಯ ಗಳಿಸಿದ್ದರಿಂದ ಸಂಭವಿಸಿದ ಅವನತಿ–ಇವು ಕ್ರಿಮಿಯ ಯುದ್ಧಕ್ಕೆ ಮೂಲಕಾರಣಗಳಾದುವು.



ಕ್ರಿಮಿಯ ಯುದ್ಧದ ಗಾಯಾಳುವೊಬ್ಬನಿಗೆ ಶುಶ್ರೂಷೆ ಮಾಡುತ್ತಿರುವ ಫ್ಲಾರೆನ್ಸ್ ನೈಟಿಂಗೇಲ್

ಪ್ಯಾಲಸ್ತೀನಿನಲ್ಲಿದ್ದ ಧರ್ಮ ಸಂಬಂಧವಾದ ಪವಿತ್ರಸ್ಥಳಗಳ ಮೇಲಿನ ಹತೋಟಿ ಯಾರಿಗೆ ಸೇರಬೇಕೆಂಬ ಬಗ್ಗೆ ರಷ್ಯ ಮತ್ತು ಫ್ರಾನ್ಸ್ ದೇಶಗಳಲ್ಲಿ ಸಂಭವಿಸಿದ ಭಿನ್ನಾಭಿಪ್ರಾಯವೇ ಕ್ರಿಮಿಯ ಯುದ್ಧಕ್ಕೆ ತತ್‌ಕ್ಷಣದ ಕಾರಣ. ರಷ್ಯದ ಹಕ್ಕುಗಳನ್ನು ತುರ್ಕಿ ತಿರಸ್ಕರಿಸಿದಾಗ ರಷ್ಯ ಮಾಲ್ಡೇವಿಯ ಮತ್ತು ವಾಲೇಕಿಯಗಳನ್ನು ಆಕ್ರಮಿಸಿಕೊಂಡಿತು. ಇದರಿಂದ ತುರ್ಕಿ ರಷ್ಯದ ಮೇಲೆ ಯುದ್ಧ ಘೋಷಿಸಿತು (1853). 1854ರಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳೂ 1855ರಲ್ಲಿ ಸಾರ್ಡಿನಿಯವೂ ತುರ್ಕಿಯ ಪರ ಸೇರಿದುವು. ಸೆಬಾಸ್ಟೊಪಾಲಿನ ಮುತ್ತಿಗೆ, ಬ್ಯಾಲಕ್ಲಾವದಲ್ಲಿ ನಡೆದ ಹೋರಾಟ ಇವು ಕ್ರಿಮಿಯ ಯುದ್ಧದ ವಿಶೇಷ ಘಟನೆಗಳು. ಸೇನಾ ಆಸ್ಪತ್ರೆಗಳಲ್ಲಿಯ ದುಸ್ಥಿತಿಯಿಂದಾಗಿ ಸಾವಿರಾರು ಸೈನಿಕರು ಮೃತಪಟ್ಟರು. ಈ ದುರಂತ ಸ್ಥಿತಿಯನ್ನು

ಅರಿತ ಫ್ಲಾರೆನ್ಸ್ ನೈಟಿಂಗೇಲ್ ಕ್ರಿಮಿಯಕ್ಕೆ ಹೋಗಿ ಶತ್ರು ಮಿತ್ರರೆನ್ನದೆ ಸೇವೆ, ಶುಶ್ರೂಷೆ ಸಲ್ಲಿಸಿದಳು.

1856ರಲ್ಲಿ ಕ್ರಿಮಿಯ ಯುದ್ಧ ಪ್ಯಾರಿಸ್ ಒಪ್ಪಂದದಲ್ಲಿ ಕೊನೆಗೊಂಡಿತು. ಈ ಯುದ್ಧದಿಂದಾಗಿ ಆಗ್ನೇಯ ಯುರೋಪಿನಲ್ಲಿ ರಷ್ಯದ ಪ್ರಭಾವಕ್ಕೆ ತಡೆಯುಂಟಾಯಿತು.

(ಬಿ.ಎಸ್.ಎ.)

**ಕ್ರಿಯಾಟಿನ್ ಮತ್ತು ಕ್ರಿಯಾಟಿನಿನ್ :** ಕ್ರಿಯಾಟಿನ್ (ಮೀಥೈಲ್ ಗ್ವಾನಿಡಿನೋ ಅಸಿಟಿಕ್ ಆಮ್ಲ) ದೇಹದಲ್ಲಿ ಸಾರಜನಕದ ಚಯಾಪಚಯದ ಒಂದು ಅಂತಿಮ ವ್ಯುತ್ಪನ್ನ. ಆರೋಗ್ಯಶಾಲಿ ವಯಸ್ಕನ ಮೂತ್ರದಲ್ಲಿ ಸ್ವಲ್ಪ ಮೊತ್ತದಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಗರ್ಭಿಣಿಯರ ಮತ್ತು ಮಕ್ಕಳ ಮೂತ್ರದಲ್ಲಿ ಇದರ ಮೊತ್ತ ಹೆಚ್ಚು. ಆಹಾರ ಕೊರತೆಯಿಂದ ಮಾಂಸಖಂಡಗಳು ಜೀರ್ಣವಾಗಲು ಪ್ರಾರಂಭಿಸಿದಾಗ, ಇಲ್ಲವೇ ಜ್ವರಬಾಧೆ ಉಂಟಾದಾಗ, ಇಲ್ಲವೇ ಯಕೃತ್ತಿನ ಕ್ಯಾನ್ಸರಿನಲ್ಲಿ ಇದರ ಮೊತ್ತ ಮೂತ್ರದಲ್ಲಿ ಹೆಚ್ಚುತ್ತದೆ. ಇದು ಗಮನಾರ್ಹವಾಗಿ ಅಧಿಕವಾದ ಪರಿಸ್ಥಿತಿಗೆ ಕ್ರಿಯಾಟಿನೂರಿಯ ಎಂದು ಹೆಸರು. ದೇಹದಲ್ಲಿ ಕ್ರಿಯಾಟಿನಿನ ಸಂಶ್ಲೇಷಣೆ ಆಗುತ್ತದೆ. ಒಂದು ಕ್ರಿಯಾಶ್ರೇಣಿಯಲ್ಲಿ ಆರ್ಜಿನಿನ್ ತನ್ನ ಗ್ವಾನಿಡಿನೋ ಪುಂಜವನ್ನು ಗ್ಲೈಸಿನ್ನಿಗೆ ನೀಡುತ್ತದೆ. ಉತ್ಪತ್ತಿಯಾಗುವ ಮಧ್ಯವರ್ತಿ ಗ್ವಾನಿಡಿನೋ ಅಸಿಟಿಕ್ ಆಮ್ಲ ಕೋಲಿನ್ ಅಥವಾ ಮೆಥಿಯೋನ್ನಿನಿಂದ ಮೀಥೈಲ್ ಪುಂಜವನ್ನು ಪಡೆದು ಕ್ರಿಯಾಟಿನ್ನಿಗೆ ಪರಿವರ್ತನೆಯಾಗುತ್ತದೆ.

ಕ್ರಿಯಾಟಿನ್ ಫಾಸ್ಫೇಟ್ ರೂಪದಲ್ಲಿರುವ ಕ್ರಿಯಾಟಿನ್ ಮಾಂಸಖಂಡಗಳ ಸಂಕೋಚನ ಕ್ರಿಯೆಯಲ್ಲಿ ಶಕ್ತಿಯನ್ನು ಒದಗಿಸುವ ಒಂದು ಮೂಲ. ಜಡಮಾಂಸ ಖಂಡದಲ್ಲಿ ಕ್ರಿಯಾಟಿನ್ ಫಾಸ್ಫೇಟ್ ಸಂಯುಕ್ತದ ಮೊತ್ತ ಹೆಚ್ಚಾಗಿರುತ್ತದೆ. ಮಾಂಸ ಖಂಡದಲ್ಲಿ ಕ್ರಿಯಾಟಿನ್ ಕೈನೇಸ್ ಎಂಬ ಕಿಣ್ವವಿದೆ. ಶಕ್ತಿಯ ಅಗತ್ಯ ಉಂಟಾದಾಗ ಈ ಕಿಣ್ವ ಕೆಳಗಿನ ಕ್ರಿಯೆಯನ್ನು ವರ್ಧಿಸುತ್ತದೆ :

ಕ್ರಿಯಾಟಿನ್ ಫಾಸ್ಫೇಟ್ + ಎಡಿಪಿ $\Leftrightarrow$ ಕ್ರಿಯಾಟಿನ್ + ಎಟಿಪಿ

ಉತ್ಪತ್ತಿಯಾಗುವ ಎಟಿಪಿ (ಅಡಿನೋಸಿನ್ ಟ್ರೈ ಫಾಸ್ಫೇಟ್) ಮಾಂಸಖಂಡಗಳ ಸಂಕೋಚನ ಕ್ರಿಯೆಗೆ ಬೇಕಾದ ಶಕ್ತಿಯನ್ನು ಒದಗಿಸುತ್ತದೆ.

ಕ್ರಿಯಾಟಿನ್ ನೀರಿನಲ್ಲಿ ವಿಲೀನವಾಗುತ್ತದೆ. ದ್ರಾವಣ ಅಸ್ಥಿರ ಮತ್ತು ನಿಧಾನವಾಗಿ ಅಣುವಿನಲ್ಲಿರುವ ಜಲಾಂಶದ ನಷ್ಟದಿಂದ ಅದರ ಅಜಲರೂಪ (ಅನ್‌ಹೈಡ್ರಸ್) ಕ್ರಿಯಾಟಿನ್ನಿಗೆ ಪರಿವರ್ತನೆಯಾಗುತ್ತದೆ. ದ್ರಾವಣವನ್ನು ಕಾಯಿಸಿದಾಗ ಇಲ್ಲವೆ ಆಮ್ಲದ ಇರವಿನಲ್ಲಿದ್ದಾಗ ಈ ಬದಲಾವಣೆ ಶೀಘ್ರವಾಗಿ ಜರಗುತ್ತದೆ. ಈ ಕ್ರಿಯೆಯ ಆಧಾರದ ಮೇಲೆ ಕ್ರಿಯಾಟಿನ್ನನ್ನು ಪರಿಮಾಣಾತ್ಮಕವಾಗಿ ನಿರ್ಧರಿಸುವ ವಿಧಾನವೊಂದನ್ನು ರೂಪಿಸಲಾಗಿದೆ.

ಕ್ರಿಯಾಟಿನಿನ್ ಕ್ರಿಯಾಟಿನ್ನಿನ ಅಜಲ. ಮಾನವನ ಮೂತ್ರದಲ್ಲಿ ತಪ್ಪದೆ ಕಂಡುಬರುವ ವಸ್ತು. ಸಾಧಾರಣ ಪರಿಸ್ಥಿತಿಯಲ್ಲಿ ಒಬ್ಬ ವಯಸ್ಕ ವ್ಯಕ್ತಿ 24 ಗಂಟೆಯ ಅವಧಿಯಲ್ಲಿ ಸುಮಾರು 1–1.8 ಗ್ರಾಮ್ ಕ್ರಿಯಾಟಿನಿನನ್ನು ವಿಸರ್ಜಿಸುತ್ತಾನೆ. ಈ ಮೊತ್ತ ಆತ ಸ್ವೀಕರಿಸುವ ಆಹಾರವನ್ನು ಸ್ವಲ್ಪಮಟ್ಟಿಗೆ ಅವಲಂಬಿಸುತ್ತದೆ. ಏಕೆಂದರೆ ತಿನ್ನುವ ಆಹಾರದಲ್ಲಿರಬಹುದಾದ ಕ್ರಿಯಾಟಿನಿನ್ ದೇಹದಲ್ಲಿ ಯಾವ ಬದಲಾವಣೆಗೂ ಒಳಗಾಗದೆ ಮೂತ್ರದಲ್ಲಿ ವಿಸರ್ಜಿತವಾಗುತ್ತದೆ. ಕ್ರಿಯಾಟಿನಿನ್ ನಿರ್ವರ್ಣವಾದ ಮತ್ತು ಹೊಳೆಯುವ ಹರಳುಗಳಂತೆ ಸ್ಫಟಿಕೀಕರಿಸುತ್ತದೆ. ಇದು ತಣ್ಣನೆಯ ನೀರಿಗಿಂತ ಬಿಸಿನೀರಿನಲ್ಲಿ ಹೆಚ್ಚಿಗೆ ವಿಲೀನವಾಗುತ್ತದೆ. ಸಾರ ಆಮ್ಲಗಳೊಂದಿಗೆ ವರ್ತಿಸಿ ಲವಣಗಳನ್ನೂ ಪಿಕ್ರಿಕ್ ಆಮ್ಲದೊಂದಿಗೆ ವರ್ತಿಸಿ ಕೆಂಪು ಬಣ್ಣವನ್ನೂ ಕೊಡುತ್ತದೆ. ಈ ಕ್ರಿಯೆಯ ಆಧಾರದ ಮೇಲೆ ಮೂತ್ರದಲ್ಲಿ ಕ್ರಿಯಾಟಿನಿನ್ ಮೊತ್ತವನ್ನು ಪರಿಮಾಣಾತ್ಮಕವಾಗಿ ಅಳೆಯುವ ವಿಧಾನವನ್ನು ರೂಪಿಸಲಾಗಿದೆ.

(ಎಚ್.ಎಸ್.ಎಸ್.)

**ಕ್ರಿಯಾತ್ಮಕ ಸಾಕ್ಷರತೆ :** ವಯಸ್ಕರನ್ನು ಸಾಕ್ಷರರನ್ನಾಗಿ ಮಾಡುವಾಗ ನಿಯೋಜಿತ ಅವಧಿಯಲ್ಲಿ ಅವರಿಗೆ ವ್ಯಾವಹಾರಿಕ ಓದು ಬರೆಹವನ್ನು ಕಲಿಸುವುದರೊಂದಿಗೆ ಅವರ ಓದಿಗೂ ಜೀವನಕ್ಕೂ ಸಂಬಂಧವೇರ್ಪಡುವಂತೆ ಮಾಡಿ ಅವರ ಜೀವನವನ್ನು ಉತ್ತಮಗೊಳಿಸುವ ಯೋಜನೆಗೆ ಕ್ರಿಯಾತ್ಮಕ ಸಾಕ್ಷರತೆ (ಫಂಕ್ಷನಲ್ ಲಿಟರಸಿ) ಎನ್ನುತ್ತೇವೆ. ಎಳೆಯ ಮಕ್ಕಳ ಶಿಕ್ಷಣಕ್ಷೇತ್ರದಲ್ಲಿ ಬಳಕೆಯಲ್ಲಿದ್ದ ಈ ಕ್ರಮವನ್ನು ಈಗ ವಯಸ್ಕರ ಶಿಕ್ಷಣಕ್ಕೂ ಅನ್ವಯ ಮಾಡಲಾಗಿದೆ.

ವಿಶ್ವಸಂಸ್ಥೆ 1961ರ ಡಿಸೆಂಬರಿನಲ್ಲಿ ನಡೆಸಿದ ಮಹಾಸಭೆಯಲ್ಲಿ ವಿಶ್ವದ ನಿರಕ್ಷರತಾ ಸಮಸ್ಯೆಯ ನಿವಾರಣೆ ಬಗ್ಗೆ ಒಂದು ವರದಿಯನ್ನು ತಯಾರಿಸಲು ನಿರ್ಧರಿಸಿತು. ಜೊತೆಗೆ ಈ ವಿಷಯದಲ್ಲಿ ಪ್ರಪಂಚದ ನಾನಾಭಾಗಗಳಲ್ಲಿ ವಿಚಾರ ಸಂಕಿರಣಗಳನ್ನು ನಡೆಸಿತು. ವಯಸ್ಕರ ಶಿಕ್ಷಣ ತಜ್ಞರೊಡನೆ ಆಲೋಚಿಸಿತು. 1964ರಲ್ಲಿ ಅಂತಾರಾಷ್ಟ್ರೀಯ ಸಾಕ್ಷರತಾ ತಜ್ಞರ ಸಮಿತಿ ಕೆಲವು ಸಲಹೆಗಳನ್ನು ಮಾಡಿತು. ನಿರಕ್ಷರತಾ ನಿವಾರಣಾ ಕಾರ್ಯಕ್ರಮಗಳನ್ನು ವಿಶ್ವವ್ಯಾಪಿಯಾಗಿ ಕೈಗೊಂಡು ನಡೆಸುವಷ್ಟು ಹಣ ಮತ್ತು ಸಿಬ್ಬಂದಿ ಇಲ್ಲವಾಗಿ ಆಯ್ಕೆ ಮಾಡಿದ ಕ್ಷೇತ್ರಗಳಲ್ಲಿ ಮಾತ್ರ ಅಂಥ ಕಾರ್ಯವನ್ನು ಕೈಗೊಳ್ಳುವುದು ಒಳಿತು, ಅಂಥಲ್ಲಿ ಕೂಡ ಸಾಕ್ಷರತೆ ಜನತೆಯ ಆರ್ಥಿಕಾಭಿವೃದ್ಧಿಗೆ ನೆರವಾಗಬೇಕು–ಇವೇ ಆ ಸಮಿತಿ ಮಾಡಿದ ಮುಖ್ಯವಾದ ಎರಡು ಸಲಹೆಗಳು.

1965ರ ಸೆಪ್ಟೆಂಬರ್ 8 ರಿಂದ 18ರ ತನಕ ಟೆಹರಾನಿನಲ್ಲಿ ನಡೆದ ಪ್ರಪಂಚ ವಿವಿಧ ದೇಶಗಳ ವಿದ್ಯಾಮಂತ್ರಿಗಳ ಸಮ್ಮೇಳನ ಈ ಬಗ್ಗೆ ಕೈಗೊಂಡ ನಿರ್ಣಯ ಗಮನಾರ್ಹವಾಗಿದೆ: ನಿರಕ್ಷರತಾ ನಿವಾರಣಾ ಕಾರ್ಯ ಅತಿ ಜರೂರಾಗಿ ಆಗಬೇಕಾದದ್ದು. ಈ ಕಾರ್ಯವನ್ನು ಪ್ರಾಯೋಗಿಕವಾಗಿ ಕೆಲವು ಕ್ಷೇತ್ರಗಳಲ್ಲಿ ಮಾತ್ರ ಕೈಕೊಳ್ಳಬೇಕು. ಕಲಿಯಲು ಆಸಕ್ತಿ ಇರುವಂಥ ಕ್ಷೇತ್ರಗಳಲ್ಲಿ ಮಾತ್ರ ಇದನ್ನು ನಡೆಸಬೇಕು. ಸಾಕ್ಷರತೆ ವ್ಯಕ್ತಿಯ ಹಾಗೂ ದೇಶದ ಆರ್ಥಿಕ ಮತ್ತು ಸಾಮಾಜಿಕ ಹಿತಸಾಧನೆಯನ್ನು ಗುರಿಯಾಗಿಟ್ಟುಕೊಳ್ಳುವುದು ಒಳ್ಳೆಯದು. ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರಗಳಲ್ಲಿ ಮಾತ್ರ ಈ ಯೋಜನೆಯನ್ನು ಕಾರ್ಯಗತ ಮಾಡುವುದು ಒಳಿತು. ವಯಸ್ಕರ ಕಸಬಿನ ಬಗ್ಗೆ ಹೆಚ್ಚಿನ ತಿಳಿವಳಿಕೆ, ತಾಂತ್ರಿಕ ಜ್ಞಾನ ಮತ್ತು ತರಪೇತನ್ನು ಕೊಡುವುದೂ ಸಾಕ್ಷರತೆ ಯೋಜನೆಯ ಗುರಿಯಾಗಿರಬೇಕು. ಪ್ರತಿಯೊಂದು ದೇಶವೂ ತನ್ನ ಶಿಕ್ಷಣದ ಯೋಜನೆಯ ಚೌಕಟ್ಟಿನಲ್ಲೇ ನಿರಕ್ಷರತಾ ಯೋಜನೆಯನ್ನು ಅಳವಡಿಸಬೇಕು. ಯೋಜನೆಗೆ ಸರ್ಕಾರಿ ಮತ್ತು ಖಾಸಗಿ ಮೂಲಗಳು ನೆರವನ್ನು ನೀಡಬಹುದು. ಯೋಜನೆಯಲ್ಲಿ ಸಂಬಂಧಪಟ್ಟ ಎಲ್ಲ ಸರ್ಕಾರಿ ಇಲಾಖೆಗಳೂ ಸಹಕಾರ ನೀಡುವುದು ಒಳ್ಳೆಯದು. ಒಟ್ಟಿನಲ್ಲಿ ಮಾನವಶಕ್ತಿಯನ್ನು ಬಲಪಡಿಸಿ ದೇಶದ ಆರ್ಥಿಕ ಪ್ರಗತಿಯನ್ನು ಸಾಧಿಸುವುದು ಈ ಯೋಜನೆಯ ಗುರಿಯಾಗಿರಬೇಕು.

ಸಮ್ಮೇಳನದಲ್ಲಿ ಆದ ನಿರ್ಧಾರಗಳನ್ನು ಯುನೆಸ್ಕೊ 119 ಸದಸ್ಯ ರಾಷ್ಟ್ರಗಳಿಗೆ ಕಳುಹಿಸಿತು. ಹಾಗೂ ಈ ಯೋಜನೆಯಲ್ಲಿ ಭಾಗವಹಿಸುವ ಬಗ್ಗೆ ಆಯಾ ರಾಷ್ಟ್ರಗಳ ಅಭಿಪ್ರಾಯವನ್ನು ಕೇಳಿತು. 52 ದೇಶಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಂದೆ ಬಂದವು ಆಲ್ಜೀರಿಯ, ಎಕ್ವಡಾರ್, ಇಥಿಯೋಪಿಯ, ಗಿನಿ, ಇರಾನ್, ಮಡಗಾಸ್ಕರ್, ಮಾಲಿ, ಸೂಡಾನ್, ವೆನಿಜ್ವೇಲ, ಭಾರತ ಮತ್ತು ಅರಬ್ಬೀ ಗಣರಾಜ್ಯಗಳಲ್ಲಿ ಮಾತ್ರ ಪ್ರಾಯೋಗಿಕವಾಗಿ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮಗಳು ಪ್ರಾರಂಭವಾದುವು. ವೆನಿಜ್ವೇಲ ಮಾತ್ರ ಯೋಜನೆಯ ವೆಚ್ಚವನ್ನು ತಾನೇ ವಹಿಸಿಕೊಳ್ಳಲು ಒಪ್ಪಿತಾಗಿ ಉಳಿದ ದೇಶಗಳಿಗೆ ವಿಶ್ವಸಂಸ್ಥೆಯಿಂದ ಧನ ಸಹಾಯ ಒದಗುತ್ತಿದೆ. ಯುನೆಸ್ಕೋದ ತಾಂತ್ರಿಕ ನೆರವು ಎಲ್ಲ ರಾಷ್ಟ್ರಗಳಿಗೂ ಉಂಟು.

ಕೆಲವು ದೇಶಗಳಲ್ಲಿ ಕ್ರಿಯಾತ್ಮಕ ಸಾಕ್ಷರತೆಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಯೋಜನೆಯ ವೆಚ್ಚ 50 ದಶಲಕ್ಷ ಡಾಲರು. ಇದರಲ್ಲಿ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ನಿಧಿಯಿಂದ 10 ದಶಲಕ್ಷ ಡಾಲರು ನೆರವು ದೊರೆಯುವುದು. ಯೋಜನೆಯ ಅವಧಿ 4 ರಿಂದ 5 ವರ್ಷಗಳು. ಪ್ರಪಂಚ ಆಹಾರ ಸಂಸ್ಥೆ, ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಪ್ರಪಂಚ ಆರೋಗ್ಯ ಸಂಸ್ಥೆ ಮತ್ತು ವಿಶ್ವಸಂಸ್ಥೆಯ ಅಭಿವೃದ್ಧಿ ಮಂಡಳಿ–ಇವು ಈ ಯೋಜನೆಯಲ್ಲಿ ಪಾಲುಗೊಂಡಿವೆ.

ಭಾರತವೂ ಈ ಯೋಜನೆಯಲ್ಲಿ ಸೇರಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರದ ಉತ್ಪನ್ನಕ್ಕೆ ಆದ್ಯತೆ ನೀಡಲಾಗಿದೆ. ದೇಶದಲ್ಲಿ ಆಹಾರದ ಕೊರತೆಯನ್ನು ನೀಗಲು ಹೆಚ್ಚು ಇಳುವರಿ ಕೊಡುವ ತಳಿಗಳನ್ನು ಕಂಡುಹಿಡಿಯಲಾಗಿದೆ. ಹೆಚ್ಚು ಆಹಾರವನ್ನು ಬೆಳೆಯಲು ಸಾಕ್ಷರತೆಯನ್ನು ಸಾಧನವನ್ನಾಗಿ ಬಳಸುವುದು, ರೈತರಿಗೆ ಓದುಬರೆಹದ ಮೂಲಕ ಶಕ್ತಿಮಾನ್ ತಳಿಗಳನ್ನು ಬೆಳೆಯುವ ವಿಧಾನಗಳನ್ನು ತಿಳಿಸಿ ಹೆಚ್ಚು ಬೆಳೆಯಲು ಸಹಾಯ ಮಾಡುವುದು–ಈ ಯೋಜನೆಯ ಗುರಿ.

ಅಖಿಲ ಭಾರತ ಮಟ್ಟದಲ್ಲಿ ಯೋಜನೆಯ ಜವಾಬ್ದಾರಿಯನ್ನು ಭಾರತ ಸರ್ಕಾರದ ವಿದ್ಯಾ ಇಲಾಖೆ, ವ್ಯವಸಾಯ ಇಲಾಖೆ ಮತ್ತು ಪ್ರಸಾರಖಾತೆಗಳು ಹೊತ್ತಿವೆ. ಯೋಜನೆಯ ಅವಧಿ 5 ವರ್ಷ. ವೆಚ್ಚ 2 ಕೋಟಿ ರೂಪಾಯಿ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹತ್ತುಲಕ್ಷ ರೈತರನ್ನು ಕ್ರಿಯಾತ್ಮಕವಾಗಿ ಸಾಕ್ಷರರನ್ನಾಗಿ ಮಾಡುವುದು ಈ ಯೋಜನೆಯ ಗುರಿ.

67–68ನೆಯ ಸಾಲಿನಲ್ಲಿ ಭಾರತದ ಮೂರು ಪ್ರಾಂತ್ಯಗಳಲ್ಲಿ ಯೋಜನೆ ಆರಂಭವಾಯಿತು. ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ಜಿಲ್ಲೆಯನ್ನು ಆರಿಸಿಕೊಳ್ಳಲಾಯಿತು. ಈಗ ಕರ್ನಾಟಕ ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಈ ಯೋಜನೆ ನಡೆಯುತ್ತಿದೆ. ಮೊತ್ತಮೊದಲು ಆಯ್ಕೆಯಾದ ಜಿಲ್ಲೆ ರಾಯಚೂರು, ಯೋಜನೆಯ ಪೂರ್ವವೆಚ್ಚವನ್ನು ಕೇಂದ್ರ ಸರ್ಕಾರವೇ ವಹಿಸಿಕೊಂಡಿದೆ.

ಕೆಲವು ಕಡೆಗಳಲ್ಲಿ ಪ್ರಯೋಗಗಳು ಮುಗಿದು ವರದಿಗಳು ಬಂದಿವೆ. ಅವುಗಳಿಂದ ಕಂಡು ಬಂದ ಮುಖ್ಯಾಂಶಗಳು ಹೀಗಿವೆ:

ಕ್ರಿಯಾತ್ಮಕ ಸಾಕ್ಷರತಾ ತರಗತಿಗಳಿಗೆ ಸೇರಿದ ವಿದ್ಯಾರ್ಥಿಗಳಲ್ಲಿ ತರಗತಿಗಳನ್ನು ಮಧ್ಯದಲ್ಲೇ ಬಿಡುವವರು ಕಡಿಮೆ. ಅತಿ ಹೆಚ್ಚೆಂದರೆ ಶೇಕಡ 5. ದಕ್ಷರಾದ ಉಪಾಧ್ಯಾಯರು ತರಗತಿಯನ್ನು ನಡೆಸಿದಲ್ಲಿ ತರಗತಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಡೆಗಟ್ಟುವುದು ಒಂದು ಸಮಸ್ಯೆ ಎಂಬುದಾಗಿ ಇರಾನಿನ ಪ್ರಯೋಗದಿಂದ ತಿಳಿದು ಬಂದಿದೆ.

ರೈತರು ತಿಳಿವಳಿಕೆ ಹೆಚ್ಚಿಸಿಕೊಂಡು ಸುಧಾರಿತ ಬೇಸಾಯವನ್ನು ಕೈಕೊಂಡಿರುವರು. ಹಾಗೂ ಆರೋಗ್ಯದ ಕಡೆಗೆ ಗಮನ ಕೊಟ್ಟಿರುವರು. ಈ ಅಂಶ ಭಾರತ ಮತ್ತು ಕೋಸ್ಟರೀಕ ದೇಶಗಳಲ್ಲಿ ನಡೆದ ಪ್ರಯೋಗಗಳಿಂದ ಗೊತ್ತಾಗಿದೆ.

ಕಾರ್ಮಿಕರಿಗೆ ಓದು ಬರೆಹ ಕಲಿಸುವುದರಿಂದ ಕಾರ್ಖಾನೆಗೆ ಲಾಭವೇ ಹೊರತು ನಷ್ಟವಿಲ್ಲ ಎಂಬ ಅಂಶ ಇರಾನ್ ಮತ್ತು ಬ್ರಜಿಲ್ ದೇಶಗಳಲ್ಲಿ ನಡೆದ ಪ್ರಯೋಗಗಳಿಂದ ಹೊರಬಿದ್ದಿದೆ. (ಟಿ.ಆರ್.ಎಸ್.)

**ಕ್ರಿಯಾರಹಿತತ್ವ :** ಕಬ್ಬಿಣ, ಕೋಬಾಲ್ಟ್, ನಿಕ್ಕಲ್, ಕ್ರೋಮಿಯಂ ಮತ್ತು ಬಿಸ್ಮತ್ ಲೋಹಗಳು ಸಾರ ನೈಟ್ರಿಕ್‌ಆಮ್ಲ, ಕ್ರೋಮಿಕ್‌ಆಮ್ಲ, ಅಯೊಡಿಕ್ ಆಮ್ಲ, ಆರ್ಸನಿಕ್ ಆಮ್ಲ, ಹೈಡ್ರೊಜನ್ ಪೆರಾಕ್ಸೈಡ್, ಸೀಸದ ನೈಟ್ರೇಟ್, ಪೊಟ್ಯಾಸಿಯಂ ಪರ್ಮ್ಯಾಂಗನೇಟ್, ಪೊಟ್ಯಾಸಿಯಂ ಡೈಕ್ರೊಮೇಟ್ ಇತ್ಯಾದಿ ಉತ್ಕರ್ಷಣಕಾರಿಗಳ ಸಂಪರ್ಕದಲ್ಲಿ ತಮ್ಮ ಸ್ವಾಭಾವಿಕ ಕ್ರಿಯಾಶಕ್ತಿಯನ್ನು ಕಳೆದುಕೊಂಡು ತಟಸ್ಥ ಸ್ಥಿತಿಯಲ್ಲಿ ಇರುವಿಕೆ (ಪ್ಯಾಸಿವಿಟಿ). ಸಾರ ನೈಟ್ರಿಕಾಮ್ಲದಲ್ಲಿ ಅದ್ದಿದ ಕಬ್ಬಿಣವನ್ನು ಅನಂತರ ಸಾರರಿಕ್ತ ಆಮ್ಲಗಳಲ್ಲಿಟ್ಟರೂ ಕ್ರಿಯೆ ನಡೆಯುವುದಿಲ್ಲ. ಎಂದಿನಂತೆ ಲೋಹ ಲೀನವಾಗಿ ಹೈಡ್ರೊಜನ್ ಬಿಡುಗಡೆಯಾಗುವುದಿಲ್ಲ. ಅಂಥ ಕಬ್ಬಿಣ ತಾಮ್ರದ ಸಲ್ಫೇಟಿನ ದ್ರಾವಣದಲ್ಲಿ ಲೀನವಾಗಿ ತಾಮ್ರವನ್ನು ಒತ್ತರಿಸಲಾರದು. ಹೀಗೆ ಕ್ರಿಯೆ ಸ್ಥಗಿತಗೊಂಡು ಲೋಹ ಜಡವಾಗುವ ಇತರ ಸಂದರ್ಭಗಳು ಬೆಳಕಿಗೆ ಬಂದು ಕ್ರಿಯಾರಹಿತತ್ವ ಎಂಬ ಪದಕ್ಕೆ ಸರಳ ವಿವರಣೆ ಸಾಧ್ಯವಿಲ್ಲದಂತಾಗಿದೆ. ರೂಢಿಯಲ್ಲಿರುವ ಎರಡು ವಿವರಣೆಗಳು ಇಂತಿವೆ:

1. ವಿದ್ಯುದ್ರಾಸಾಯನಿಕ ಶ್ರೇಣಿಯಲ್ಲಿ (ಎಲೆಕ್ಟ್ರೊ ಕೆಮಿಕಲ್ ಸೀರೀಸ್) ಪಟುವಾದ ಲೋಹವೆಂದು ಪರಿಗಣಿಸಲ್ಪಟ್ಟಿರುವ ಧಾತುವೊಂದು ಅದಕ್ಕಿಂತ ಕೆಳದರ್ಜೆಯ ಲೋಹದಂತೆ ವರ್ತಿಸುವ ಸಂದರ್ಭ.

2. ಒಂದು ಲೋಹ ಅಥವಾ ಮಿಶ್ರಲೋಹ ಕ್ಷಯಿಸಿದಾಗ (ಕರೋಡ್) ಉಷ್ಣಗತಿ ಸಿದ್ಧಾಂತರೀತ್ಯಾ ಅದರ ಮುಕ್ತ ಶಕ್ತಿ (ಫ್ರೀ ಎನರ್ಜಿ) ಬಲು ಕಡಿತವಾಗುವ ವಾತಾವರಣವಿದ್ದರೂ ಅದು ಸವೆಯದಿರುವ ಸ್ಥಿತಿ.

ಸಾರ ನೈಟ್ರಿಕಾಮ್ಲದ ಸಂಪರ್ಕದಲ್ಲಿ ಕಬ್ಬಿಣ ಕ್ರಿಯಾರಹಿತವಾಗುವುದು ಒಂದು ರಾಸಾಯನಿಕ ಕ್ರಿಯೆಯ ಪರಿಣಾಮ. ಆದರೆ ವಿದ್ಯುದ್ರಾಸಾಯನಿಕ ಕಾರಣಗಳಿಗಾಗಿ ಕ್ರಿಯಾಹೀನವಾದ ಲೋಹಗಳ ನಿದರ್ಶನಗಳಿವೆ. ತಾಮ್ರದ ಲೇಪನ ಮಾಡುವಾಗ ತಾಮ್ರದ ಸಯನೈಡ್ ದ್ರಾವಣದಲ್ಲಿ ತಾಮ್ರದ ಧನಧ್ರುವಗಳಿರುತ್ತವೆ. ನಿರ್ದಿಷ್ಟ ವಿದ್ಯುದ್ವಿಭವ ಮುಟ್ಟುವವರೆಗೆ ಧನಧ್ರುವ ಲೀನವಾಗುತ್ತ ಹೋಗುತ್ತದೆ. ವಿದ್ಯುದ್ವಿಭವ ಮತ್ತೂ ಹೆಚ್ಚಿದರೆ ತಾಮ್ರದ ಧ್ರುವ ಲೀನವಾಗುವುದು ನಿಂತುಹೋಗಿ ಕ್ರಿಯೆ ಸ್ಥಗಿತಗೊಳ್ಳುತ್ತದೆ. ಆಗ ಅದನ್ನು ತೆಗೆದು ಅದರ ಹೊರಮೈಯನ್ನು ಉಜ್ಜಿದರೆ ಕ್ರಿಯಾರಹಿತ ಸ್ಥಿತಿ ಮಾಯವಾಗುವುದು. ಆದ್ದರಿಂದ ಈ ಜಡತೆಗೆ ಲೋಹದ ಮೇಲೆ ತಾತ್ಕಾಲಿಕವಾಗಿ ಏರ್ಪಟ್ಟಿರುವ ಪೊರೆಯೊಂದು ಕಾರಣವಾಗಿರಬೇಕೆಂದು ತೋರುವುದು ಸಹಜ. ಈ ವಾದವನ್ನು ಮೊದಲು 1836ರಲ್ಲಿ ಮಂಡಿಸಿದವನು ಷಾನ್‌ಬಿನ್. ಸಾಮಾನ್ಯ ಕಬ್ಬಿಣಕ್ಕೆ ದ್ಯುತಿ ವಿದ್ಯುತ್ (ಫೋಟೋ ಎಲೆಕ್ಟ್ರಿಕ್) ಗುಣವಿದೆ. ಆದರೆ ಕ್ರಿಯಾರಹಿತ ಸ್ಥಿತಿಯಲ್ಲಿರುವ ಕಬ್ಬಿಣಕ್ಕೆ ಈ ಗುಣ ಕಡಿಮೆ ಎಂದು 1914ರಲ್ಲಿ ಆಲೆನ್ ತೋರಿಸಿದ್ದಾನೆ. ಹೀಗಾಗಲು ಕಬ್ಬಿಣದ ಮೇಲ್ಮೈಲಕ್ಷಣ ವ್ಯತ್ಯಾಸವಾಗಿರಬೇಕು. ಆದ್ದರಿಂದ ಮೇಲ್ಕಂಡ ವಾದವನ್ನು ಈ ಫಲಿತಾಂಶ ಸಮರ್ಥಿಸುತ್ತದೆ. ಲೋಹದ ನಿಷ್ಕ್ರಿಯ ಸ್ಥಿತಿಗೆ–ಅದು ರಸಾಯನಿಕವಾಗಿರಲಿ ಇಲ್ಲವೇ ವಿದ್ಯುದ್ರಾಸಾಯನಿಕವಾಗಿರಲಿ–ಅದರ ಆಕ್ಸೈಡಿನ ಅಥವಾ ಆಕ್ಸೈಡುಗಳ ರಕ್ಷಾಕವಚವೇ ಕಾರಣವೆಂದು ಈಗ ಎಲ್ಲ ತಜ್ಞರ ಮತ.

ಕ್ರಿಯಾರಹಿತ ಸ್ಥಿತಿ ಲೋಹದ ಗುಣವನ್ನು ಮಾತ್ರ ಅವಲಂಬಿಸಿಲ್ಲ. ವಾತಾವರಣದ ಪ್ರಭಾವವೂ ಗುರುತರವಾದುದು. ಅದಕ್ಕೆ ಉತ್ಕರ್ಷಣವಾತಾವರಣ ಪ್ರೇರಕವಾಗಿಯೂ ಅಪಕರ್ಷಣ ಸನ್ನಿವೇಶ ಮಾರಕವಾಗಿಯೂ ಪರಿಣಮಿಸುವುದು ಕಂಡುಬಂದಿದೆ. ವಿದ್ಯುತ್ ಸಂಪರ್ಕ ಪಡೆದಿರುವ ಲೋಹದ ಜೋಡಿಯಲ್ಲಿ ಕಡಿಮೆ ಜಡತ್ವವುಳ್ಳ (ಲೆಸ್ ನೋಬಲ್) ಲೋಹ ಕ್ರಿಯಾರಹಿತವಾಗುವುದು. ಇದು ಎಲ್ಲ ಲೋಹದ ಜೋಡಿಗಳಿಗೂ ಅನ್ವಯಿಸುವ ಸಾರ್ವತ್ರಿಕ ನಿಯಮವಲ್ಲ. ಉದಾಹರಣೆಗೆ ಕಬ್ಬಿಣಕ್ಕಿಂತ ಪ್ಲಾಟಿನಂ ಸಂಗದಲ್ಲಿರುವ ಕಬ್ಬಿಣ ಬೇಗ ನಿಷ್ಕ್ರಿಯಗೊಳ್ಳುವುದು. ಆದರೆ ಸತುವಿನ ಸಂಪರ್ಕದಲ್ಲಿ ಹೀಗಾಗುವುದಿಲ್ಲ. ಕಬ್ಬಿಣ ಎಂದಿನಂತೆ ಕ್ರಿಯಾಶಾಲಿಯಾಗಿರುತ್ತದೆ. ಸತುವಿನ ಹೊರಕವಚದಿಂದ ರಕ್ಷಿತವಾಗಿರುವುದರಿಂದ ತನ್ನ ಸ್ವಭಾವವನ್ನು ಪ್ರದರ್ಶಿಸಲು ಅದಕ್ಕೆ ಆಸ್ಪದವಿಲ್ಲ. ಹ್ಯಾಲೊಜನ್ ಆಯಾನುಗಳ ಸಂಪರ್ಕದಲ್ಲಿ ಕ್ರಿಯಾರಹಿತತ್ವ ನಾಶವಾಗುವುದು ವ್ಯಕ್ತಪಟ್ಟಿದೆ. ಕ್ರಿಯಾ ಮಾಧ್ಯಮ ಕ್ಷಾರೀಯವಾಗಿದ್ದರೆ ಆಂಫೊಟೆರಿಕ್ ಲೋಹಗಳಾದ ಅಲ್ಯೂಮಿನಿಯಂ ಮತ್ತು ಸತುವೂ ಉತ್ಕರ್ಷಕ ಅಥವಾ ತಟಸ್ಥ ಸನ್ನಿವೇಶದಲ್ಲಿ ಇತರ ಲೋಹಗಳೂ ಕ್ರಿಯಾರಹಿತ ಸ್ಥಿತಿಯನ್ನು ಕಳೆದುಕೊಳ್ಳುತ್ತವೆ.

ಕ್ರಿಯಾರಹಿತತ್ವದಿಂದ ಪ್ರಯೋಜನವುಂಟು. ಇದಕ್ಕೆ ಸ್ಟೇನ್‌ಲೆಸ್ ಉಕ್ಕೇ ಸಾಕ್ಷಿ. ಪ್ರಾರಂಭದಲ್ಲಿ ಅದರ ಮೇಲೆ ವಾಯುಮಂಡಲದ ಪರಿಣಾಮ ತೀವ್ರವಾಗಿದ್ದು ಕ್ರಮೇಣ ರಕ್ಷಾಕವಚ ಹುಟ್ಟಿ ಕ್ರಿಯಾರಹಿತ ಸ್ಥಿತಿಯುಂಟಾಗಿ ಸುರಕ್ಷಿತವಾಗಿ ಉಳಿಯುವುದು. ಉತ್ಕರ್ಷಣ ವಾತಾವರಣದಲ್ಲಿ ಅಲ್ಯೂಮಿನಿಯಂ ಮತ್ತು ಅದರ ಮಿಶ್ರ ಲೋಹಗಳ ಮೇಲೆ ಅದರ ಆಕ್ಸೈಡಿನ ದಪ್ಪ ಪದರವನ್ನು ಹುಟ್ಟಿಹಾಕಿ ಲೋಹದ ಉಪಯುಕ್ತತೆಯನ್ನು ಹೆಚ್ಚಿಸುವ ಕ್ರಮ ಪ್ರಚಲಿತವಾಗಿದೆ. ಮೂಲತಃ ಇದೂ ಒಂದು ಕ್ರಿಯಾರಹಿತ ಸ್ಥಿತಿಯೇ. ಕೆಲವು ವೇಳೆ ಕ್ರಿಯಾರಹಿತ ಸ್ಥಿತಿಯನ್ನು ನಾಶಮಾಡಲೇಬೇಕಾದ ಅಗತ್ಯ ಬೀಳುತ್ತದೆ. ಮೊದಲು ಹೇಳಿದ ತಾಮ್ರದ ವಿದ್ಯುತ್ ಲೇಪನದ ಸಮಸ್ಯೆ ಇಂಥ ಒಂದು ಪ್ರಸಂಗ. ದ್ರಾವಣದ ಸಯನೈಡ್ ಮತ್ತು ಹೈಡ್ರೊಜನ್ ಆಯಾನುಗಳ ಪ್ರಬಲತೆಯನ್ನು ಹೆಚ್ಚಿಸುವುದರಿಂದ ತಾಮ್ರದ ಧನಧ್ರುವ ಕ್ರಿಯಾರಹಿತವಾಗುವುದನ್ನು ತಪ್ಪಿಸಲು ಸಾಧ್ಯ. ನಿಕ್ಕಲ್ ವಿದ್ಯುತ್ ಲೇಪನದಲ್ಲೂ ಶುದ್ಧವಾದ ನಿಕಲ್ ಧನಧ್ರುವ ಹೀಗೆಯೇ ವರ್ತಿಸುತ್ತದೆ. ನಿಕ್ಕಲ್ ಲೋಹವನ್ನು ಅದರ ಅದಿರಿನಿಂದ ಗಳಿಸುವಾಗಲೇ ಅದಕ್ಕೆ ಮಿತಪರಿಮಾಣದಲ್ಲಿ ಇಂಗಾಲ ಅಥವಾ ಆಕ್ಸಿಜನ್ ಸೇರಿಸಿಬಿಟ್ಟರೆ ಈ ತೊಂದರೆ ಇರುವುದಿಲ್ಲವೆಂದು ಪ್ರಯೋಗಗಳಿಂದ ಸ್ಥಿರಪಟ್ಟಿದೆ. (ಎಚ್.ಜಿ.ಎಸ್.)

**ಕ್ರಿಯಾವಾದ :** ಒಂದು ಸಮಗ್ರ ರಚನೆಯಲ್ಲಿ ಇರಬಹುದಾದ ಅನೇಕ ಅಂಗಗಳು ಅಥವಾ ಅಂಶಗಳು ತಮ್ಮ ತಮ್ಮ ಸ್ಥಾನಕ್ಕೆ ಯೋಗ್ಯವಾದ ಕರ್ಮಗಳನ್ನು (ಅಥವಾ ಕಾರ್ಯಗಳನ್ನು) ಮಾಡುವ ಮೂಲಕ ತಮ್ಮ ತಮ್ಮ ಮೌಲ್ಯಗಳನ್ನು ನಿರ್ಧರಿಸಿಕೊಳ್ಳುತ್ತವೆ ಎಂಬ ವಿವೇಚನೆಯನ್ನು ತತ್ತ್ವಶಾಸ್ತ್ರದಲ್ಲಿ ಈ ಹೆಸರಿನಿಂದ (ಫಂಕ್ಷನಲಿಸಂ) ಕರೆಯುತ್ತಾರೆ.

ಸಮಾಜ, ವ್ಯಕ್ತಿ ಅಥವಾ ಯಾವುದೇ ಘಟಕದ ಸಾಧನೆ ಹಾಗೂ ಯಶಸ್ಸು ಅವುಗಳ ರಚನೆಯಲ್ಲಿರಬಹುದಾದ ಅಂಗಾಂಗಗಳ ಅಂಶಾಂಶಗಳ–ಅವು ಭೌತಿಕ ಅಥವಾ ದೈಹಿಕ ಆಗಿರಬಹುದು. ಮಾನಸಿಕ ಅಥವಾ ಆಧ್ಯಾತ್ಮಿಕ ಆಗಿರಬಹುದು–ಕರ್ತವ್ಯ ನಿರ್ವಹಣೆಗೆ ಹೊಂದಿಕೊಂಡಿರುತ್ತವೆಂಬುದು ಸ್ಪಷ್ಟ. ಹಾಗೆಯೇ ಈ ನಿರ್ವಹಣೆಯಲ್ಲಿ ಎಲ್ಲಿಯಾದರೂ ಕುಂದು ಇರುವುದಾದರೆ ಸಮಗ್ರತೆಯ ಅಥವಾ ಘಟಕದ ಸುಸ್ಥಿತಿಗೆ ಪೆಟ್ಟು ಬರುತ್ತದೆಂಬುದೂ ಸ್ಪಷ್ಟ. ಆದರೆ ಇಲ್ಲಿ ಕರ್ತವ್ಯ ಮತ್ತು ಅದರ ಸಿದ್ಧಿ ಸಮಗ್ರ ಘಟಕಕ್ಕೆ ಸಂಬಂಧಿಸಿದುದೇ ಅಥವಾ ಪ್ರತ್ಯೇಕ ಪ್ರತ್ಯೇಕವಾಗಿರುವ ಅಂಶ (ಅಥವಾ ಅಂಗ)ಗಳಿಗೆ ಸಂಬಂಧಿಸಿದುದೇ ಎನ್ನುವುದು ಜಿಜ್ಞಾಸೆಗೆ ಎಡೆಕೊಡುತ್ತದೆ. ಈ ವಿಚಾರದಲ್ಲಿ ತಾತ್ತ್ವಿಕರಲ್ಲಿ ಪಂಗಡಗಳೇ ಆಗಿವೆ. ಕ್ರಿಯಾವಾದ ಸಮಗ್ರತೆಯ ಕರ್ತವ್ಯವನ್ನು ಹೇಗೆ ಸಮಷ್ಟಿದೃಷ್ಟಿಯಿಂದ ಮೌಲಿಕವಾದುದೆಂದು ಬಗೆಯುತ್ತದೋ ಹಾಗೆಯೇ ಅಂಶ ಅಂಶಗಳ ಕರ್ತವ್ಯವನ್ನೂ ಮೌಲಿಕವೆಂದು ತಿಳಿಯಬೇಕೆಂಬುದು ಮತ್ತೊಂದು ವಾದ. ಹಾಗೆಯೇ ಭೌತಿಕವೊ ಅಭೌತಿಕವೊ ಎಂಬುದನ್ನು ಅನುಸರಿಸಿ ಪ್ರತಿಯೊಂದು ಘಟಕಕ್ಕೂ ಒಂದು ಆಂತರಿಕ ರಚನೆ ಇರುವುದೆಂಬುದು ಸತ್ಯ. ಉದಾಹರಣೆಗೆ–ನಮ್ಮ ದೇಹದಲ್ಲಿ ವಿವಿಧ ಅಂಗಗಳು ಇರುವ ಹಾಗೆ, ಒಂದು ಯಂತ್ರದಲ್ಲಿ ವಿವಿಧ ಭಾಗಗಳು ಇರುವ ಹಾಗೆ, ಸಮಾಜದಲ್ಲಿ ವ್ಯಕ್ತಿಗಳೂ ಸಂಸ್ಥೆಗಳಿಗೂ ಇರುವ ಹಾಗೆ. ಇಲ್ಲಿ ಜಿಜ್ಞಾಸೆಗೆ ಅರ್ಹವಾದುದು ಏನೆಂದರೆ ಘಟಕದಲ್ಲಿಯ ರಚನೆ (ಸ್ಟ್ರಕ್ಚರ್) ಮುಖ್ಯವೋ ಅದರ ಕ್ರಿಯೆ ಅಥವಾ ಕಾರ್ಯ (ಫಂಕ್ಷನ್) ಮುಖ್ಯವೋ ಎನ್ನುವುದು. ಈ ವಿಚಾರದಲ್ಲೂ ವಿದ್ವಾಂಸರಲ್ಲಿ ಪಂಗಡಗಳಾಗಿವೆ.

ಪ್ರಶ್ನೆಯನ್ನು ಪರಿಶೀಲಿಸುವ ದೃಷ್ಟಿಕೋನಗಳಲ್ಲಿ ವ್ಯತ್ಯಾಸ ಬರುವುದರಿಂದ ಈ ಪಂಗಡಗಳು ಏರ್ಪಟ್ಟಿರುವುದು ಸಹಜ. ಆದರೆ ರಚನೆ ಇಲ್ಲದೆ ಕಾರ್ಯವಿಲ್ಲ, ಕಾರ್ಯವಿಲ್ಲದ ರಚನೆಯಿಲ್ಲ ಎನ್ನುವುದನ್ನು ಮರೆಯಬಾರದು. ಈ ಎರಡನ್ನೂ ಕೂಡಿಸುವ ಪ್ರಮೇಯ ಅವುಗಳ ಧ್ಯೇಯದಲ್ಲಿ ಕಾಣುತ್ತದೆ. ಪ್ರತಿಯೊಂದು ಸಮಗ್ರದ ಅಥವಾ ಘಟಕದ ಕಾರ್ಯಪ್ರವೃತ್ತಿಯಲ್ಲೂ ಅಂಶಗಳ ಕಾರ್ಯಪ್ರವೃತ್ತಿಯಲ್ಲೂ ಒಂದು ಆಂತರಿಕ ಧ್ಯೇಯ ಇರಲೇಬೇಕೆಂಬ ಸತ್ಯವನ್ನು ಅನುಸರಿಸಿದ ಕ್ರಿಯಾವಾದವೂ ಒಂದು ತರಹದ ಮೂಲ ಸಂಕಲ್ಪವಾದ (ಟೆಲಿಯಾಲೊಜಿ) ಎಂದೇ ಹೇಳಬೇಕು.

ಕ್ರಿಯಾವಾದ ಚಿತ್‌ಪ್ರಧಾನವಾದಕ್ಕೂ (ಐಡಿಯಲಿಸಂ) ಏಕತಾವಾದಕ್ಕೂ (ಮಾನಿಸಂ) ಎಡೆ ಕೊಟ್ಟಂತೆಯೇ ವಾಸ್ತವತಾವಾದಕ್ಕೂ (ರಿಯಲಿಸಂ) ಅನೇಕತಾವಾದಕ್ಕೂ (ಪ್ಲೂರಲಿಸಂ) ಎಡೆ ಕೊಟ್ಟಿರುವುದನ್ನು ಪಾಶ್ಚಾತ್ಯ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಕಾಣುತ್ತೇವೆ. (ಕೆ.ಬಿ.ಆರ್.)

I ಕ್ರಿಯಾವಾದಗಳಲ್ಲಿ ಅರಿಸ್ಟಾಟಲನ ವಾದ (ಆಕ್ಚುಯಾಲಿಟಿ ಥಿಯೊರಿ) ಒಂದು. ಅವನ ಪ್ರಕಾರ ಇರವಿನ ದಶೆಗಳು ಎರಡು–ಅಂತಸ್ಥದಶೆ ಮತ್ತು ವಾಸ್ತವದಶೆ. ಇವೆರಡನ್ನೂ ಬೇರೆ ಬೇರೆಯಾಗಿ ಗುರುತಿಸಬಹುದಾದರೂ ಇವು ಒಂದನ್ನು ಬಿಟ್ಟು ಒಂದು ಇರುವುದಿಲ್ಲ. ಅಂತಸ್ಥ ದಶೆಯಲ್ಲಿ ಇರವನ್ನು ಅರಿಸ್ಟಾಟಲ್ ದ್ರವ್ಯವೆಂದೂ (ಮ್ಯಾಟರ್) ಕ್ರಿಯಾದಶೆಯಲ್ಲಿರುವುದನ್ನು ರೂಪ (ಫಾರಂ) ಎಂದೂ ಕರೆದಿದ್ದಾನೆ. ಯಾವುದೊಂದು ರೂಪ ಪ್ರಕಟವಾಗಬೇಕಾದರೂ ಅದು ಇರವಿನಲ್ಲಿ ಅಂತಸ್ಥವಾಗಿರಬೇಕು. ಯಾವುದನ್ನಾದರೂ ಅದು ವಾಸ್ತವ ಎಂದು ಹೇಳಬೇಕಾದರೆ ಅಂತಸ್ಥವಾಗಿರುವುದು ಕ್ರಿಯಾರೂಪವಾಗಬೇಕು. ಅರಿಸ್ಟಾಟಲನ ಪ್ರಕಾರ ಪ್ರತಿಯೊಂದು ವಸ್ತುವಿಗೂ ನಾಲ್ಕು ಬಗೆಯಾದ ಕಾರಣಗಳಿವೆ. ಒಂದು ಗಿಡ ಹುಟ್ಟಿ ಬೆಳೆದು ಹೂ, ಕಾಯಿ, ಹಣ್ಣುಗಳನ್ನು ಬಿಡಬೇಕಾದರೆ ಅದಕ್ಕೆ ಬೀಜ ಕಾರಣ. ಇದು ಉಪಾದಾನ ಕಾರಣ (ಮೆಟೀರಿಯಲ್). ಬೀಜದಲ್ಲಿರುವುದನ್ನು ಕಾರ್ಯರೂಪಕ್ಕೆ ತರುವ ಶಾಖ, ನೀರು, ಭೂಸಾರ ಇತ್ಯಾದಿಗಳ ಸಮೂಹ ನಿಮಿತ್ತ ಕಾರಣ (ಎಫಿಷಂಟ್). ಗಿಡದ ವಿನ್ಯಾಸ ಭಾವಕಾರಣ (ಫಾರ್ಮಲ್). ಫಲಿಸಿ ಮುಂದೆ ಸಂತಾನಾಭಿವೃದ್ಧಿಗೊಳಿಸುವುದು ಅಂತಿಮ ಕಾರಣ (ಫೈನಲ್) ಅಥವಾ ಪ್ರಯೋಜನ ಕಾರಣ. ಪ್ರಕೃತಿ ಪರಿಣಾಮಗೊಳ್ಳಲು ನಾಲ್ಕೂ ಅಗತ್ಯ. ಹೀಗೆ ಪರಿಣಾಮಗೊಳ್ಳುವ ಸತ್ತನ್ನು ಅರಿಸ್ಟಾಟಲ್ ಎಂಟೆಲಿಕಿ ಎಂದು ಕರೆದಿರುತ್ತಾನೆ.

II ಭಾರತದಲ್ಲಿ ಅರಿಸ್ಟಾಟಲನ ಕ್ರಿಯಾವಾದವನ್ನು ಬಹುಮಟ್ಟಿಗೆ ಹೋಲುವ ವಾದವೆಂದರೆ ಸಾಂಖ್ಯ ಪರಿಣಾಮವಾದ. ಪ್ರಕೃತಿಯಲ್ಲಿ ಅಂತಸ್ಥವಾಗಿರುವುದು ವಾಸ್ತವ ವಿಶ್ವವಾಗಿ ಪರಿಣಾಮಗೊಳ್ಳುತ್ತದೆ ಎಂಬ ಒಂದು ಅಂಶದಲ್ಲಿ ಮಾತ್ರ ಸಾಂಖ್ಯಕ್ಕೂ ಅರಿಸ್ಟಾಟಲನ ತತ್ತ್ವಕ್ಕೂ ಸಾಮ್ಯವಿದೆ. ಸಾಂಖ್ಯದರ್ಶನ ವಿವರಿಸುವ ಪರಿಣಾಮ ಕ್ರಿಯೆ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದೆ. ವಿವರಗಳಿಗೆ **ನೋಡಿ–ಸಾಂಖ್ಯ ದರ್ಶನ**.

ಭಾರತದ ಇನ್ನೊಂದು ಕ್ರಿಯಾವಾದ ಜೈನ ದಾರ್ಶನಿಕರದು. ಇವರದು ಸಾಂಖ್ಯರದಕ್ಕಿಂತ ಭಿನ್ನವಾದದ್ದು. ಸಾಂಖ್ಯರು ಪ್ರಕೃತಿ ಮಾತ್ರ ಕ್ರಿಯಾರೂಪವಾದದ್ದು, ಪುರುಷ ನಿಷ್ಕ್ರಿಯಾರೂಪ ಎಂದು ಹೇಳುತ್ತಾರೆ. ಜೈನರಾದರೋ ಪುರುಷ ಕ್ರಿಯಾರೂಪನೆಂದು ಭಾವಿಸುತ್ತಾರೆ.

ಭಾರತದ ಬೌದ್ಧರು ಪರಮ ಕ್ರಿಯಾವಾದಿಗಳು. ಇವರ ಪ್ರಕಾರ ಕ್ರಿಯೆ ಇಲ್ಲದದ್ದು ಯಾವುದೂ ಇಲ್ಲ. ಯಾವುದೊಂದನ್ನಾಗಲಿ ಅದು ಇದೆ ಎಂದು ಹೇಳಬೇಕಾದರೂ ಅದು ಅರ್ಥಕ್ರಿಯಾಕಾರಿಯಾಗಿರಬೇಕು. ಕ್ರಿಯಾರೂಪವೇ ವಾಸ್ತವರೂಪ. ಕ್ರಿಯೆ ಇಲ್ಲದ ಆತ್ಮನನ್ನು ಇವರು ಒಪ್ಪುವುದಿಲ್ಲ. ಸಕಲವೂ ಸದಾ ಬದಲಾಯಿಸುತ್ತಿದೆ. ಆದ್ದರಿಂದ ಸಕಲವೂ ಕ್ಷಣಿಕ ಎಂಬುದು ಇವರ ಮೂಲತತ್ತ್ವ.

III ಅರಿಸ್ಟಾಟಲ್ ಪ್ರತಿಪಾದಿಸಿದ ನಾಲ್ಕು ಬಗೆಯ ಕಾರಣಗಳಲ್ಲಿ ಅಂತಿಮ ಕಾರಣಕ್ಕೆ ಹೆಚ್ಚು ಹೆಚ್ಚು ಪ್ರಾಶಸ್ತ್ಯ ಕೊಟ್ಟ ಆಧುನಿಕ ಪಾಶ್ಚಾತ್ಯ ತಾತ್ತ್ವಿಕರು, ಮುಖ್ಯವಾಗಿ ಧ್ಯೇಯವಾದಿಗಳು, ಸತ್ ತತ್ತ್ವವನ್ನು ಬೆಳೆಸಿದ್ದಾರೆ. ಸತ್ತಿನ ರಚನೆ ಮತ್ತು ಕ್ರಿಯೆಯನ್ನು ಕೂಡಿಸುವುದು ಅವೆರಡರಲ್ಲೂ ಅಂತಸ್ಥವಾದ ಧ್ಯೇಯ. ಆ ಧ್ಯೇಯವೇ ರಚನೆ ಮತ್ತು ಕ್ರಿಯೆಗಳ ಉದ್ದೇಶ. ಅದನ್ನು ಮುಟ್ಟುವುದೇ ಸಮಗ್ರ ಕಾರ್ಯ ಪ್ರವೃತ್ತಿಗಳ ಮತ್ತು ಅಂಶಗಳ ಕಾರ್ಯಪ್ರವೃತ್ತಿಯ ಪರಮಧ್ಯೇಯ. ಈ ಧ್ಯೇಯ ವಾದವನ್ನು ಒಂದು ಬಗೆಯ ಕ್ರಿಯಾವಾದವೆಂದು ಭಾವಿಸಬಹುದು. ಇಂಥ ಕ್ರಿಯಾವಾದ ಚಿತ್‌ಪ್ರಧಾನವಾದಕ್ಕೂ ಏಕತಾವಾದಕ್ಕೂ ಹಬ್ಬಿರುವಂತೆ ವಾಸ್ತವವಾದಕ್ಕೂ ಅನೇಕತಾವಾದಕ್ಕೂ ಹಬ್ಬಿದೆ. ಜರ್ಮನಿಯ ಪ್ರಸಿದ್ಧ ತಾತ್ತ್ವಿಕನಾದ ಹೆಗೆಲನ ತತ್ತ್ವ ಚಿತ್‌ಪ್ರಧಾನ ಏಕತಾವಾದವಾದರೆ, ಜರ್ಮನಿಯ ಇನ್ನೊಬ್ಬ ಪ್ರಖ್ಯಾತ ತಾತ್ತ್ವಿಕನಾದ ಷೋಪೆನ್‌ಹೌರನದು ಸಂಕಲ್ಪ ಪ್ರಧಾನ ಕ್ರಿಯಾವಾದ. ಜೇಮ್ಸ್ ವಾರ್ಡ್ ಎಂಬ ಆಂಗ್ಲೇಯನ ತತ್ತ್ವ ಚಿತ್‌ಪ್ರಧಾನ ಅನೇಕತಾವಾದಕ್ಕೆ ನಿದರ್ಶನ. ಪಪ್ ಅಲೆಕ್ಸಾಂಡರ್ ಎಂಬವನ ವಿಕಾಸವಾದ ವಾಸ್ತವಕ್ರಿಯಾವಾದಕ್ಕೆ ಉದಾಹರಣೆ ಎ.ಎನ್. ವೈಟ್‌ಹೆಡ್ ಆಧುನಿಕ ಕ್ರಿಯಾವಾದಗಳನ್ನು ಅರಿಸ್ಟಾಟಲನ ಕ್ರಿಯಾವಾದದೊಡನೆ ಸಮನ್ವಯಗೊಳಿಸಿದ್ದಾನೆ. ಇವನದು ಒಂದು ದೃಷ್ಟಿಯಿಂದ ವಾಸ್ತವವಾದ, ಇನ್ನೊಂದು ದೃಷ್ಟಿಯಿಂದ ಧ್ಯೇಯವಾದ; ಒಂದು ದೃಷ್ಟಿಯಿಂದ ಅದು ಏಕತಾವಾದ, ಇನ್ನೊಂದು ದೃಷ್ಟಿಯಿಂದ ಅನೇಕತಾವಾದ. ಹೀಗೆ ಅದು ಅನೇಕ ದೃಷ್ಟಿಗಳನ್ನು ಸಮನ್ವಯ ಮಾಡುವ ಕ್ರಿಯಾವಾದ. ಆತ ತನ್ನ ಒಂದು ಮುಖ್ಯ ಗ್ರಂಥಕ್ಕೆ ಪ್ರೋಸೆಸ್ ಅಂಡ್ ರಿಯಾಲಿಟಿ ಎಂಬ ಹೆಸರಿಟ್ಟು ಕಾರ್ಯಗತಿಗೆ ಆದ್ಯ ಸ್ಥಾನ ಕೊಟ್ಟಿದ್ದಾನೆ.

IV ಜೀವವಿಜ್ಞಾನದಲ್ಲಿ ಡಾರ್ವಿನ್ನನ ವಿಕಾಸವಾದ ಹುಟ್ಟಿದ ಮೇಲೆ ಕ್ರಿಯಾವಾದ ಇನ್ನೊಂದು ರೂಪ ತಾಳಿತು. ಸನ್ನಿವೇಶಕ್ಕೆ ಹೊಂದಿಕೊಳ್ಳುವುದೇ ಒಂದು ಪ್ರಾಣಿಯ ಅಥವಾ ಸಸ್ಯದ ಉಳಿವಿಗೂ ಬೆಳೆವಿಗೂ ಕಾರಣ. ಸರಿಯಾಗಿ ಹೊಂದಿಕೊಂಡದ್ದು ಉಳಿಯುತ್ತದೆ. ಹೊಂದಿಕೊಳ್ಳದ್ದು ಅಳಿಯುತ್ತದೆ. ಒಂದು ಪ್ರಾಣಿಯ ಅಂಗರಚನೆ ಈ ಹೊಂದಿಕೆಗೆ ಅನುಸಾರವಾಗಿ ಬದಲಾಯಿಸುತ್ತದೆ. ಈಗಿನ ಕುದುರೆಯ ವಂಶಕ್ಕೆ ಮೂಲವಾದ ಪ್ರಾಣಿಯ ಕಾಲಿನಲ್ಲಿ ಒಂದು ದೊಡ್ಡ ಮುಂಗೊರಸಿಗೆ ಸೇರಿದಂತೆ ಅದರ ಹಿಂದೆ ಅದಕ್ಕಿಂತ ಸಣ್ಣದಾದ ಹಿಂಗೊರಸುಗಳಿದ್ದುವು. ಈ ಹಿಂಗೊರಸುಗಳಿಂದ ಅದರ ಓಟಕ್ಕೆ ಯಾವ ರೀತಿಯ ಅನುಕೂಲವೂ ಇರಲಿಲ್ಲ. ಕೆಲಸವಿಲ್ಲದ್ದರಿಂದ ಅವು ಕ್ರಮಕ್ರಮವಾಗಿ ಸಣ್ಣವಾಗಿ ಹಿಂದಕ್ಕೆ ಸರಿದು ಈಗ ಕೇವಲ ಅವಶೇಷಗಳಾಗಿ ಉಳಿದಿವೆ. ಹೀಗೆಯೇ ತೀರ ಸರಳವಾದ ಜೀವಿಯಿಂದ ಹಿಡಿದು ಸಂಕೀರ್ಣ ದೇಹಪಡೆದ ಮಾನವನವರೆಗೆ, ಕಾರ್ಯಪ್ರವೃತ್ತಿಗೆ ಅನುಗುಣವಾಗಿ ಅಂಗಗಳ ಮತ್ತು ಇಡೀ ದೇಹದ ರಚನೆ ಮಾರ್ಪಡುತ್ತಿರುವುದನ್ನು ಕಾಣಬಹುದು. ಡಾರ್ವಿನ್ನನ ವಿಕಾಸವಾದದಿಂದ ಪ್ರೇರಿತವಾಗಿ ತತ್ತ್ವಶಾಸ್ತ್ರದಲ್ಲಿ ಹೊಸಬಗೆಯ ಕ್ರಿಯಾವಾದಗಳು ಹುಟ್ಟಿಕೊಂಡವು. ಫ್ರಾನ್ಸ್ ದೇಶದ ಪ್ರಸಿದ್ಧ ತಾತ್ತ್ವಿಕನಾದ ಬರ್ಗಸನ್ನನ ಸೃಷ್ಟ್ಯಾತ್ಮಕ ಕ್ರಿಯಾವಾದ ಅವುಗಳಲ್ಲಿ ಒಂದು. ಇನ್ನೊಂದು ಬಗೆಯ ಕ್ರಿಯಾವಾದವನ್ನು ರೂಪಿಸಿದವ ಅಮೇರಿಕದ ತಾತ್ತ್ವಿಕ ಜಾನ್ ಡ್ಯೂಯಿ. ಸತ್ತಿನಲ್ಲಾಗಲಿ ಜ್ಞಾನದಲ್ಲಾಗಲಿ ಸತ್ತ್ವವಿರುವುದು ಅದರ ಕ್ರಿಯಾಕಾರಿತ್ವದಲ್ಲೇ–ಎಂಬುದು ಇವರ ವಾದ. ಯಾವುದಾದರೂ ಇದೆ ಎಂದು ನಾವು ಬಗೆಯಬೇಕಾದರೆ ಅದು ಪರಿಣಾಮಕಾರಿಯಾಗಿರಬೇಕು. ಯಾವ ಭಾವನೆಯನ್ನೇ ಆಗಲಿ ಅದು ಸತ್ಯ ಎಂದು ನಾವು ಸ್ಥಿರಪಡಿಸಬೇಕಾದರೆ ಅದರಿಂದ ನಾವು ನಿರೀಕ್ಷಿಸಬಹುದಾದ ಫಲ ದೊರೆಯಬೇಕು. ಜೀವನದಲ್ಲಿ ಪರಿಣಾಮಕಾರಿಯಾಗುವುದೇ ಸತ್ಯದ ಹೆಗ್ಗುರುತು. ಜ್ಞಾನ ಕೇವಲ ಬೆಳಕಲ್ಲ, ಅದು ಒಂದು ಶಕ್ತಿ, ಕ್ರಿಯಾಕಾರಕ ಸಾಧನ ಅಥವಾ ಕರಣ. ಆದ್ದರಿಂದ ಡ್ಯೂಯಿ ತನ್ನ ಜ್ಞಾನತತ್ತ್ವವನ್ನು ಕರಣತತ್ತ್ವವೆಂದು ಕರೆದಿದ್ದಾನೆ. ಡ್ಯೂಯಿಗೆ ಪ್ರೇರಕವಾದದ್ದು ವಿಲಿಯಮ್ ಜೇಮ್ಸ್‌ನ ಫಲವಾದವೆಂಬ ಕ್ರಿಯಾವಾದ.

V ಡಾರ್ವಿನ್ನನ ವಿಕಾಸವಾದ ಎಲ್ಲ ಶಾಸ್ತ್ರಗಳ ಮೇಲೂ ತನ್ನ ಪ್ರಭಾವವನ್ನು ಬೀರಿತಾಗಿ ಕ್ರಿಯಾವಾದ ಕೇವಲ ಇರವಿನ ತತ್ತ್ವ ಮತ್ತು ಜ್ಞಾನತತ್ತ್ವಗಳಿಗೆ ಮಾತ್ರ ಸೀಮಿತವಾಗಲಿಲ್ಲ. ತತ್ತ್ವಶಾಸ್ತ್ರಜ್ಞರು ಯಾರೂ ತಮ್ಮ ತತ್ತ್ವವನ್ನು ಫಂಕ್ಷನಲಿಸಂ ಎಂದು ಕರೆದಿರಲಿಲ್ಲ. ಈ ಹೆಸರು ವಿಶೇಷವಾಗಿ ಉಪಯೋಗವಾಗಿರುವುದು ಜೀವವಿಜ್ಞಾನದಲ್ಲಿ ಮತ್ತು ಮನಃಶಾಸ್ತ್ರ, ಸಮಾಜಶಾಸ್ತ್ರಗಳಲ್ಲಿ. ಕ್ರಿಯಾಪರಿಣಾಮವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಷಯವನ್ನು ವಿಶ್ಲೇಷಿಸುವ ವಿಧಾನ ವಿಶೇಷವಾಗಿ ಸಮಾಜಶಾಸ್ತ್ರದಲ್ಲಿ ಬಳಕೆಗೆ ಬಂತು. ಈ ವಿಧಾನಕ್ಕೆ ಫಂಕ್ಷನಲ್ ಅನ್ಯಾಲಿಸಿಸ್ ಎಂದು ಹೆಸರು. ಫಂಕ್ಷನಲಿಸಂ ಎಂಬ ಈ ಹೊಸ ಕ್ರಿಯಾವಾದವನ್ನು ಆಕ್ಚುಯಾಲಿಟಿ ಥಿಯೊರಿ ಎಂಬ ಅರಿಸ್ಟಾಟಲನ ಕ್ರಿಯಾವಾದದಿಂದ ಬೇರ್ಪಡಿಸಲು ಅದಕ್ಕೆ ವೃತ್ತಿವಾದ ಅಥವಾ ವ್ಯಾಪಾರವಾದ ಎಂಬ ಹೆಸರನ್ನು ಕೊಡುವುದರಲ್ಲಿ ಹೆಚ್ಚು ಔಚಿತ್ಯವಿದೆ. ಈ ವಾದ ಸ್ಟ್ರಕ್ಚರಲಿಸಂ ಎಂಬ ರಚನಾಪ್ರಧಾನವಾದಕ್ಕೆ ಪ್ರತಿಯಾಗಿ ಹುಟ್ಟಿಕೊಂಡದ್ದು. ವಸ್ತು, ಸಮಾಜ, ವ್ಯಕ್ತಿ ಅಥವಾ ಘಟಕ ಯಾವುದೇ ಆಗಲಿ, ಅವು ಭೌತಿಕವಾದುವಾಗಲಿ, ದೈಹಿಕವಾದುವಾಗಲಿ, ಮಾನಸಿಕವಾದುವಾಗಲಿ, ಆಧ್ಯಾತ್ಮಿಕವಾದುವಾಗಲಿ ಅವುಗಳ ಸಾಧನೆ, ಯಶಸ್ಸು ಅಥವಾ ಬೆಲೆ ಅವುಗಳ ಅಂಗಾಂಗಗಳ ಅಂಶಾಂಗಗಳ ರಚನೆ ಮತ್ತು ಅವುಗಳ ಕಾರ್ಯಪ್ರವೃತ್ತಿಯನ್ನು ಅನುಸರಿಸಿರುತ್ತವೆ. ಒಂದು ಭೌತವಸ್ತುವಿನಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಾದ ಸರಳ ವಸ್ತುಗಳು ಅಂಗಗಳಾಗಿ ಸೇರಿ ಇರುವಂತೆ, ದೇಹದಲ್ಲಿ ಹಲವು ಅಂಗಗಳು ಸೇರಿ ಇರುವಂತೆ ಎಲ್ಲೆಲ್ಲೂ ಭಾಗಗಳಿಂದ ಕೂಡಿದ ರಚನೆ ಇದೆ. ಅವುಗಳ ಒಂದೊಂದು ಭಾಗದ ರಚನೆಯೂ ಇಡೀ ವಸ್ತುವಿನ ರಚನೆಯೂ ಒಂದು ಕ್ರಿಯೆಗೆ, ವ್ಯಾಪಾರಕ್ಕೆ ಅಥವಾ ವೃತ್ತಿಗೆ ಸಾಧನ. ರಚನೆ ಮತ್ತು ಕಾರ್ಯಪ್ರವೃತ್ತಿ ಎರಡೂ ವಾಸ್ತವವಾದುವು. ಇದನ್ನು ಎಲ್ಲ ಪಂಥದವರೂ ಒಪ್ಪಿದ್ದಾರೆ. ಆದರೆ ಜಿಜ್ಞಾಸೆಗೆ ಕಾರಣವಾದ ಪ್ರಶ್ನೆ ಇದು. ರಚನೆ ಮುಖ್ಯವೋ ಅಥವಾ ವೃತ್ತಿ ಮುಖ್ಯವೋ ಎಂಬುದು. ರಚನೆ ಕಾರ್ಯಪ್ರವೃತ್ತಿಗೆ ಅಧೀನವೆಂಬುದು ವೃತ್ತಿ ಪ್ರಧಾನವಾದಿಗಳ ನಿಲವು. ಕಾರ್ಯಪ್ರವೃತ್ತಿಗಿಂತ ರಚನೆ ಮುಖ್ಯವೆಂಬುದು ಸ್ಟ್ರಕ್ಚರಲಿಸ್ಟರು ಎಂಬ ರಚನಾಪ್ರಧಾನವಾದಿಗಳ ನಿಲವು.

ವೃತ್ತಿವಾದಿಗಳಲ್ಲೂ ಧರ್ಮಭೇದಗಳಿವೆ. ಕಾರ್ಯಪ್ರವೃತ್ತಿ ಸಮಗ್ರ ಘಟಕಕ್ಕೆ ಸೇರಿದ್ದು ಎಂಬುದು ಒಂದು ಏಕತಾವಾದ. ಆಡಳಿತ ವೃತ್ತಿ ರಾಜ್ಯದ ಕೇಂದ್ರ ಸರ್ಕಾರಕ್ಕೆ ಸಂಪೂರ್ಣವಾಗಿ ಸೇರಿದ್ದು ಎಂಬುದು ರಾಜಕೀಯ ಪ್ರಪಂಚದ ಏಕತಾವಾದ. ಸಮಾಜದಲ್ಲಿ ಶಕ್ತಿ ಇರುವುದು ಕೇವಲ ವ್ಯಕ್ತಿಯ ಬಲದಲ್ಲಲ್ಲ. ಇಡೀ ಸಮಾಜದ ಬಲದಲ್ಲಿ–ಎಂಬುದು ಸಮಾಜಶಾಸ್ತ್ರದ ಏಕತಾವಾದ. ಒಂದೇ ಕೇಂದ್ರದಲ್ಲಿ ಆಡಳಿತ ಕಾರ್ಯ ಪ್ರವೃತ್ತಿ ಅಡಗಿರುವುದು ಜನರ ಹಿತಕ್ಕೆ ಹಾನಿಕರ, ಅದು ಒಂದು ಪೀಡೆ, ಆಡಳಿತ ಪ್ರವೃತ್ತಿ ವ್ಯಕ್ತಿಗಳಲ್ಲಿ, ಸಣ್ಣ ಸಣ್ಣ ಸ್ಥಳೀಯ ಗುಂಪುಗಳಲ್ಲಿ, ಸಂಸ್ಥೆಗಳಲ್ಲಿ ಹಂಚಿಕೆಯಾಗಿದ್ದರೇನೇ ಜನರಿಗೆ ಸೌಖ್ಯ ಎಂಬುದು ರಾಜಕೀಯ ಜಗತ್ತಿನ ಅನೇಕತಾವಾದ. ಒಂದೇ ಆದ ಆತ್ಮದಲ್ಲಿ ಎಲ್ಲ ವ್ಯಾಪಾರಗಳೂ ಕೇಂದ್ರಿತವಾದಾಗಲೇ ಎಲ್ಲ ವ್ಯಾಪಾರಗಳೂ ಅದಕ್ಕೆ ಅಧೀನವಾಗಿದ್ದಾಗಲೇ ಆ ಆತ್ಮದ ಜೀವನ ಸುಗಮವಾಗುವುದು ಎಂಬುದು ಮನಶ್ಶಾಸ್ತ್ರದ ಏಕತಾವಾದ. ಬಿಡಿಬಿಡಿ ವರ್ತನೆಗಳ ಸಾಫಲ್ಯದಿಂದಲೇ ಒಂದು ವ್ಯಕ್ತಿಯ ಜೀವನ ಸುಗಮವಾಗುವುದು ಎಂಬುದು ಮನಶ್ಶಾಸ್ತ್ರದ ಅನೇಕತಾವಾದ.

**(i) ಮನೋವಿಜ್ಞಾನದಲ್ಲಿ ವೃತ್ತಿವಾದ :** ಜೀವವಿಜ್ಞಾನದಲ್ಲಿ ಕಾಣಿಸಿಕೊಂಡ ವೃತ್ತಿವಾದ ಮೊತ್ತಮೊದಲಿಗೆ ಹಬ್ಬಿದ್ದು ಮನೋವಿಜ್ಞಾನಕ್ಕೆ. ಇ.ಬಿ. ಫೆಚ್‌ನರ್ ಎಂಬುವನ ರಚನಾಪ್ರಧಾನವಾದಕ್ಕೆ ಪ್ರತಿಯಾಗಿ ವೃತ್ತಿಪ್ರಧಾನವಾದವನ್ನು ಮಂಡಿಸಿದವ ಇ.ಎ. ಎಂಜೆಲ್. ಅನಂತರ ಅದನ್ನು ಮುಂದುವರಿಸಿದವರು ಜಾನ್ ಡ್ಯೂಯಿ ಮತ್ತು ವಿಲಿಯಮ್ ಜೇಮ್ಸ್. ಇವರ ಮನೋವಿಜ್ಞಾನ ಗ್ರಂಥಗಳು ಈ ಶತಮಾನದ ಆದಿಯಲ್ಲಿ ತುಂಬ ಮೆಚ್ಚಿಗೆಯಾಗಿದ್ದುವು.

ಮನೋವಿಜ್ಞಾನದ ವೃತ್ತಿಪ್ರಧಾನವಾದದ ಮುಖ್ಯ ಅಂಶಗಳು ಇವು: 1 ಮಾನಸಿಕ ಕ್ರಿಯೆಗಳ ವರ್ಣನೆಯಲ್ಲಿ ಅವುಗಳ ಉಪಯೋಗ ಪ್ರಧಾನವಾಗಿರಬೇಕು. ಮಾನಸಿಕ ವಿಷಯಗಳ ರಚನೆಗಿಂತಲೂ ಅವು ಜೀವನದಲ್ಲಿ ಹೀಗೆ ಫಲಕಾರಿಗಳಾಗಿವೆ ಎಂಬುದನ್ನು ತಿಳಿಸುವುದು ಮನೋವಿಜ್ಞಾನದ ಮುಖ್ಯ ಕರ್ತವ್ಯ. 2. ಮನೋವಿಜ್ಞಾನದ ವಿಷಯ ಚೇತನವೂ ಅಲ್ಲ ಮಾನಸಿಕ ವರ್ತನೆಗಳನ್ನು ತಿಳಿಯುವ ವಿಧಾನ ಅಂತರಂಗಾವೇಕ್ಷಣ ವಿಧಾನವೂ ಅಲ್ಲ. ಮನೋವಿಜ್ಞಾನ ಪರಿಶೀಲಿಸಬೇಕಾದ ವಿಷಯ ವರ್ತನೆ (ಬಿಹೇವಿಯರ್). ಅದನ್ನು ತಿಳಿದುಕೊಳ್ಳಲು ಉಪಯೋಗಿಸುವ ವಿಧಾನ ಪ್ರಯೋಗವಿಧಾನ. ವೃತ್ತಿ ಪ್ರಧಾನ ವಾದಿಗಳಲ್ಲಿ ಕೆಲವರು ಅಂತರಂಗದ ಆವೇಕ್ಷಣವನ್ನೂ ಒಂದು ಸಾಧನವೆಂದು ಒಪ್ಪಿಕೊಂಡರೂ ಅದರಿಂದ ತಿಳಿದದ್ದು ಪ್ರಯೋಗವಿಧಾನದಿಂದ ತಿಳಿದಿದ್ದಕ್ಕೆ ಅಧೀನವಾಗಿರಬೇಕೆಂದು ಹೇಳಿ ಪ್ರಯೋಗವಿಧಾನದ ಶ್ರೇಷ್ಠತೆಯನ್ನು ಎತ್ತಿ ಹಿಡಿದರು.

ಕಾಲಕ್ರಮದಲ್ಲಿ ವೃತ್ತಿವಾದದ ಸತ್ಯಾಂಶವನ್ನು ಇತರ ಪಂಥಗಳೂ ಅಂಗೀಕರಿಸಿದ್ದರಿಂದ ಆ ವಿಚಾರದಲ್ಲಿ ವಾದ ಪ್ರತಿವಾದಗಳ ಘರ್ಷಣೆ, ಕಾವು ಅಡಗಿತು. ಅದೊಂದು ಪ್ರತ್ಯೇಕ ಪಂಥವಾಗಿ ನಿಲ್ಲಲಿಲ್ಲ. ಮನೋವಿಜ್ಞಾನಿಗಳು ರಚನೆಯೂ ಮುಖ್ಯ, ಪ್ರವೃತ್ತಿಯೂ ಮುಖ್ಯವೆಂದು ಒಪ್ಪಿಕೊಂಡು ಈಗ ರಚನಾಮನೋವಿಜ್ಞಾನವನ್ನೂ ವೃತ್ತಿಮನೋವಿಜ್ಞಾನವನ್ನೂ ಮನೋವಿಜ್ಞಾನದ ಎರಡು ಅಗತ್ಯ ಅಧ್ಯಯನ ಭಾಗಗಳಾಗಿ ಬೆಳೆಸಿದ್ದಾರೆ.

**(ii) ವಾಸ್ತುಶಿಲ್ಪದಲ್ಲಿ ವೃತ್ತಿಪ್ರಧಾನವಾದ :** ಮನೆಗಳಲ್ಲಿ, ಕಚೇರಿಗಳಲ್ಲಿ ಕಾರ್ಖಾನೆಗಳಲ್ಲಿ ಉಪಯೋಗಿಸುವ ಪೀಠೋಪಕರಣಗಳ ನಿರ್ಮಾಣದಲ್ಲಿ ಸೌಂದರ್ಯಕ್ಕಿಂತ ಉಪಯೋಗ ಮುಖ್ಯವೆಂಬ ಭಾವನೆ ವಿಶೇಷವಾಗಿ ಪ್ರಚಾರಕ್ಕೆ ಬಂದದ್ದು 20ನೆಯ ಶತಮಾನದ ಮೂರನೆಯ ದಶಕದಲ್ಲಿ. ಆದರೂ ಈ ಭಾವನೆ ತೀರ ಹೊಸದಲ್ಲ. ಮಧ್ಯಯುಗದ ಕೋಟೆ ಕೊತ್ತಳಗಳ ನಿರ್ಮಾಣದಲ್ಲಿ, ಕಾರ್ಖಾನೆಗಳ ಕಟ್ಟಡಗಳ ನಿರ್ಮಾಣದಲ್ಲಿ ಉಪಯೋಗವೇ ಪ್ರಧಾನವಾಗಿತ್ತು. 20ನೆಯ ಶತಮಾನದಲ್ಲಿ ಅದು ಎಲ್ಲ ಬಗೆಯ ಕಟ್ಟಡಗಳ ನಿರ್ಮಾಣದಲ್ಲೂ ಅನುಸರಿಸಬೇಕಾದ ಸಾರ್ವತ್ರಿಕ ಸೂತ್ರವಾಯಿತು. ರೂಪ ವೃತ್ತಿಯ ಅನುಯಾಯಿ ಎಂಬ ಪ್ರಸಿದ್ಧ ಸೂತ್ರವನ್ನು 1880ರಲ್ಲಿ ಘೋಷಿಸಿದಾತ ಆಧುನಿಕ ವಾಸ್ತುಶಿಲ್ಪಿ ಲೂಯೀ ಎಚ್. ಸಲವನ್. ಮನೆ ಎಂಬುದು ವಾಸಕ್ಕಾಗಿ ನಿರ್ಮಾಣವಾದ ಯಂತ್ರ ಎಂದು 1920ರಲ್ಲಿ ಸಾರಿದಾತ ವಾಸ್ತುಶಿಲ್ಪಿ ಕಲೆ. ಕಾರ್ಬೂಸರ್. ಹೀಗೆಂದ ಮಾತ್ರಕ್ಕೆ ಆತ ಕಟ್ಟಡ ಸುಂದರವಾಗಿರಬೇಕೆಂಬುದನ್ನು ನಿರಾಕರಿಸಿದನೆಂದು ಭಾವಿಸಕೂಡದು. ಉಪಯುಕ್ತವಲ್ಲದ ಕಟ್ಟಡ ಸುಂದರವಾಗಿರಲಾರದು. ಪ್ರವೇಶಕ್ಕೆ ಅಗತ್ಯವಾದ ತಲೆಬಾಗಿಲು, ಗಾಳಿ ಬೆಳಕು ಸಂಚರಿಸಲು ಅಗತ್ಯವಾದ ಕಿಟಕಿಗಳು ಇಲ್ಲದ ಕಟ್ಟಡ ಸುಂದರವಲ್ಲ. ಉಪಯೋಗಕ್ಕೆ ತಕ್ಕಂತೆ ಅದರ ಒಟ್ಟು ರೂಪವೂ ಬಿಡಿ ಭಾಗಗಳ ರೂಪವೂ ಹೊಂದಿ, ಸುಂದರವಾಗಿರಬೇಕು. ಸೌಂದರ್ಯ ಉಪಯೋಗಕ್ಕೆ ಹೊಂದಿಕೊಳ್ಳಬೇಕು, ಅದಕ್ಕೆ ಆಂತರಿಕವಾಗಿರಬೇಕು. ಅಲಂಕಾರಗಳು ಬಲಾತ್ಕಾರವಾಗಿ ಹೊರಗಿನಿಂದ ತಂದು ಹೇರಿದಂತೆ ತೋರಕೂಡದು.

**(iii) ಇತರ ಕಲೆಗಳಲ್ಲಿ ವೃತ್ತಿವಾದ :** ಇತರ ಕಲೆಗಳಲ್ಲೂ ವೃತ್ತಿವಾದ ಸ್ವಲ್ಪಮಟ್ಟಿಗೆ ತಲೆಹಾಕಿದೆ. ರಷ್ಯದ ಕಲಾಮೀಮಾಂಸೆಯಲ್ಲಿ ವೃತ್ತಿವಾದಕ್ಕೆ ವಿಶೇಷ ಸ್ಥಾನವಿದೆ. ಕಲೆ ಇರುವುದು ಕಲೆಗಾಗಿಯೇ ಅಲ್ಲ. ಜನರ ಹಿತಕ್ಕೆ ಸಾಧನವಲ್ಲದ, ಕೇವಲ ಶ್ರೀಮಂತರ ವಿನೋದಕ್ಕಾಗಿ ಹುಟ್ಟಿದ ಕಲೆ ನಿಜವಾದ ಕಲೆಯಲ್ಲ. ಅದು ಬಡಬಗ್ಗರ ಜೀವನವನ್ನು, ಹೃದಯವನ್ನು ಹದಗೊಳಿಸಬೇಕು. ಹೀಗೆ ಜನಜೀವನವನ್ನು ಹದಗೊಳಿಸಬೇಕಾದರೆ ಶ್ರೀಮಂತರಿಂದ ಬಡಜನರಿಗೆ ಆಗುತ್ತಿರುವ ಅನ್ಯಾಯವನ್ನೂ ಕಷ್ಟಗಳ ಪರಂಪರೆಯನ್ನೂ ಅವುಗಳಿಂದ ಉಂಟಾಗಬಹುದಾದ ದುಃಖಗಳನ್ನೂ ಕಲೆ ಪ್ರತಿಬಿಂಬಿಸಬೇಕು. ಜನರ ಹೃದಯದಲ್ಲಿ ಸಮತಾಭಾವನೆ ಉಕ್ಕಿ ಹರಿಯುವಂತೆ ಕಾವ್ಯವನ್ನು ರಚಿಸಬೇಕು. ಕಾವ್ಯ, ನಾಟ್ಯ, ಸಂಗೀತ ಶಿಲ್ಪ-ಎಲ್ಲವೂ ಜೀವನದ ಪುರುಷಾರ್ಥಗಳನ್ನು, ಮುಖ್ಯವಾಗಿ ಆರ್ಥಿಕ ಪುರುಷಾರ್ಥವನ್ನು ಸಾಕ್ಷಾತ್ಕರಿಸಬೇಕು. ಇದು ರಷ್ಯನರ ಅಭಿಪ್ರಾಯ. *(ಜಿ.ಎಚ್.)*

**(iv) ಸಮಾಜವಿಜ್ಞಾನದಲ್ಲಿ ಕ್ರಿಯಾವಾದ :** ಸಮಾಜವಿಜ್ಞಾನದಲ್ಲಿ ಕ್ರಿಯೆ ಎಂಬ ಪದ ವೃತ್ತಿ, ವ್ಯಾಪಾರ, ಒಂದು ಗುರಿಯ ಸಾಧನೆಗೆ ಅಗತ್ಯವಾದ ಕಾರ್ಯ, ಕ್ರಿಯಾಕಾರಕಧರ್ಮ-ಎಂಬ ಅರ್ಥಗಳಲ್ಲಿ ಉಪಯೋಗವಾಗಿದೆಯೆಂದು ಆಗಲೇ ತಿಳಿಸಿದೆಯಷ್ಟೆ. ಇತ್ತೀಚೆಗೆ ಸಮಾಜವಿಜ್ಞಾನಿಗಳು ಜೀವವಿಜ್ಞಾನ ಉಪಯೋಗಿಸಿದ ಕ್ರಿಯೆ ಎಂಬ ಅರ್ಥವನ್ನು ಗಣಿತವಿಜ್ಞಾನದ ಶ್ರಿತ ಎಂಬ ಕ್ರಿಯಾಕಲ್ಪನೆಗೆ ಅಳವಡಿಸಿಕೊಂಡರು. ಇದನ್ನು ಅನುಸರಿಸಿ ಸಾಮಾಜಿಕ ವ್ಯವಸ್ಥೆಯ ಭಿನ್ನ ಕಾರ್ಯಗಳನ್ನು ಅಥವಾ ಬೆಲೆಗಳನ್ನು ವಿಶ್ಲೇಷಿಸಿ ಅವುಗಳಿಗೆ ಹೊಂದಿಕೆಯಾಗುವಂಥ ಚಲಪರಿಣಾಮ ಅಥವಾ ಅವಲಂಬಿ ಪರಿಣಾಮವನ್ನು ನಿರ್ಧರಿಸುವ ವಿಧಾನ ಬಳಕೆಗೆ ಬಂತು. ಈ ವಿಶ್ಲೇಷಣ ವಿಧಾನವನ್ನು ರಚನಾ ಕ್ರಿಯಾತ್ಮಕ ವಿಶ್ಲೇಷಣೆ ಎಂದು ಕರೆಯುವುದುಂಟು. ಮೆರೀಯನ್ ಜೆ. ಲೆವೀ ಈ ರಚನಾ ಕ್ರಿಯಾತ್ಮಕ ವಿಶ್ಲೇಷಣೆಯನ್ನೂ ವೈಜ್ಞಾನಿಕ ವಿಶ್ಲೇಷಣೆಯನ್ನೂ ಸಮಾನಾರ್ಥಕ ಪದಗಳಾಗಿ ಉಪಯೋಗಿಸಿದ್ದಾನೆ. ಇವನಂತೆ ಎಲ್ಲ ಸಮಾಜವಿಜ್ಞಾನಿಗಳೂ ಈ ಶ್ರಿತ ವಿಧಾನಕ್ಕೆ ಪ್ರಾಶಸ್ತ್ಯ ಕೊಟ್ಟಿಲ್ಲ. ಜೀವಶಾಸ್ತ್ರ ಕ್ರಿಯೆಗೆ ಕೊಟ್ಟಿರುವ ಅರ್ಥಕ್ಕೆ ಅವರು ಪ್ರಾಶಸ್ತ್ಯ ಕೊಟ್ಟಿದ್ದಾರೆ. ಒಟ್ಟಿನಲ್ಲಿ ವಿಶೇಷವಾಗಿ ಅಧ್ಯಯನ ನಡೆದಿರುವುದು ಆದಿವಾಸಿ ಸಮಾಜದ ವಿಚಾರವಾಗಿ.

(ಅ) ಜೀವವಿಜ್ಞಾನದಲ್ಲಿ ಹುಟ್ಟಿದ ವಿಕಾಸ ಕ್ರಿಯಾಕಲ್ಪನೆಯನ್ನು ಅನುಸರಿಸಿ ಆದಿವಾಸಿಗಳ ಸರಳ ಸಾಮಾಜಿಕ ಜೀವನ ರೀತಿಗೆ ಅವರ ರಚನೆ ಕಾರಣವೆಂಬುದನ್ನು ಹರ್ಬರ್ಟ್‌ಸ್ಪೆನ್ಸರ್ ತೋರಿಸಿದ. ಆದಿವಾಸಿಗಳ ಸಮಾಜದ ಸಂಖ್ಯೆ ಆಧುನಿಕ ಸಮಾಜದ ಸಂಖ್ಯೆಯಂತೆ ಹೆಚ್ಚಿನದಲ್ಲ. ಅದರ ರಚನೆಯೂ ಸರಳವಾದುದು. ಆದ್ದರಿಂದ ಅಂಥ ಸಮಾಜದಲ್ಲಿ ವೃತ್ತಿ ವಿಭಜನೆ ಆಧುನಿಕ ಸಮಾಜದಲ್ಲಿರುವಂತೆ ಹೆಚ್ಚಾಗಿ ಕಾಣುವುದಿಲ್ಲ. ಸರಳರಚನೆಯುಳ್ಳ ಎರೆಹುಳುವಿನಂಥ ಜೀವಿಯಲ್ಲಿ ಅರ್ಧಭಾಗ ಕಡಿದು ಹೋದರೂ ಇನ್ನರ್ಧ ಬದುಕಿಯೇ ಇದ್ದು ಕಾಲಕ್ರಮದಲ್ಲಿ ಪೂರ್ಣಶರೀರಿಯಾಗಿ ಬೆಳೆಯುತ್ತದೆ. ಸಂಕೀರ್ಣ ರಚನೆಯುಳ್ಳ ಸ್ತನಿಯ ಅರ್ಧಭಾಗ ಕತ್ತರಿಸಿ ಹೋದರೆ ಅದರ ಜೀವನಕಾರ್ಯ ಕುಂಠಿತವಾಗುತ್ತದೆ; ಅದು ಸಾಯಲೂಬಹುದು. ಸರಳರಚನೆಯ ಆದಿವಾಸಿ ಗುಂಪಿನಿಂದ ಕೆಲವರು ಬಿಟ್ಟುಹೋದರೂ ಆ ಸಮಾಜಕ್ಕೆ ಧಕ್ಕೆ ಇಲ್ಲ. ಅವರು ಮಾಡುತ್ತಿದ್ದ ಕೆಲಸವನ್ನು ಇತರರು ಮಾಡಿಕೊಂಡು ಹೋಗುತ್ತಾರೆ. ಏಕೆಂದರೆ ಆ ಸಮಾಜದ ಕೆಲಸಗಳು ಕೆಲವೇ ವ್ಯವಸಾಯ, ಮೀನುಗಾರಿಕೆ, ಬೇಟೆ, ಬಟ್ಟೆಯನ್ನು ನೇಯುವುದು ಮುಂತಾದ ಕೆಲಸಗಳನ್ನು ಇಡೀ ಕುಟುಂಬದಲ್ಲಿ ಪ್ರತಿಯೊಬ್ಬನೂ ಕಲಿತಿರುತ್ತಾನೆ. ಉದಾಹರಣೆಗೆ, ಪೆರುವಿನ ಆದಿವಾಸಿಗಳೆಲ್ಲರೂ ತಮ್ಮ ಸರಳಜೀವನದ ಅಗತ್ಯಗಳನ್ನು ಪೂರೈಸಲು ಶಕ್ತರಾಗಿದ್ದರು. ಆದರೆ ಸಂಕೀರ್ಣ ರಚನೆಯುಳ್ಳ ಆಧುನಿಕ ಸಮಾಜದಲ್ಲಿ ವೃತ್ತಿ ವಿಭಜನೆ ವಿಶೇಷವಾಗಿರುವುದರಿಂದ ವಿದ್ಯುಚ್ಛಕ್ತಿಯವರು ನೀರು ಸರಬರಾಜಿನವರು ಆಹಾರವನ್ನು ಒದಗಿಸುವ ಅಂಗಡಿಯವರು ಮುಷ್ಕರ ಹೂಡಿದರೆ ಒಂದು ಕೈಗಾರಿಕೆಗೆ ಬೇಕಾದ ಕಚ್ಚಾ ಮಾಲು ಬರುವುದು ನಿಂತು ಹೋದರೆ ಜನರ ಜೀವನ ಸ್ಥಗಿತವಾಗುತ್ತದೆ. ಹೀಗೆ ಪ್ರಾಣಿಜೀವನದ ವಿಕಾಸಕ್ರಮವನ್ನೂ ಮಾನವ ಸಾಮಾಜಿಕ ಜೀವನದ ವಿಕಾಸ ಕ್ರಮವನ್ನೂ ಅವಲೋಕಿಸಿದರೆ ಎರಡರಲ್ಲೂ ಜೀವನ ಸಂಕೀರ್ಣವಾದಷ್ಟೂ ಅವುಗಳ ಅಂಗಗಳ ಪರಸ್ಪರಾವಲಂಬನೆಯೂ ಹೆಚ್ಚುತ್ತದೆ. ಪ್ರಾಣಿಗಳಾಗಲಿ ಸಮಾಜ ಸಂಸ್ಥೆಗಳಾಗಲಿ ವೈವಿಧ್ಯವಿಲ್ಲದ ಹಂತದಿಂದ ಹೆಚ್ಚು ವೈವಿಧ್ಯವುಳ್ಳ ಹಂತಕ್ಕೆ ಏರಿದಾಗ ಅವುಗಳ ಜೀವನಕಾರ್ಯ ಸಂಕೀರ್ಣವಾಗುತ್ತದೆ ಎಂದು ಸ್ಪೆನ್ಸರ್ ಪ್ರತಿಪಾದಿಸಿದ.

(ಆ) ಒಂದು ಸಾಮಾಜಿಕ ವಿಷಯದ ಅರ್ಥವನ್ನು ಅದರಿಂದ ಸಮಾಜಕ್ಕೆ ಆಗುವ ಪ್ರಯೋಜನದ ಮೂಲಕ ತಿಳಿಸಿದವರು ಹರ್ಬರ್ಟ್‌ಸ್ಪೆನ್ಸರ್ ಮತ್ತು ಆಗಸ್ಟ್‌ಕಾಂಟ್. ಮಾನವ ವಿವಿಧ ಸಂಸ್ಥೆಗಳನ್ನು ಸೃಷ್ಟಿಸಿದುದಕ್ಕೆ ಅವುಗಳಿಂದ ಅವನಿಗೆ ಆಗುವ ಪ್ರಯೋಜನವೇ ಕಾರಣ. ಜೀವನ ಮಟ್ಟ ಏರಿದಂತೆಲ್ಲ ಪ್ರಯೋಜನಕಾರಿಗಳಾದ ಸಂಸ್ಥೆಗಳ ಬಗ್ಗೆ ಅವನ ಸಹಕಾರ ಮನೋಭಾವವೂ ಬೆಳೆಯಿತು. ಸ್ಪೆನ್ಸರನ ಈ ಅಭಿಪ್ರಾಯದಲ್ಲಿರುವ ನ್ಯೂನತೆಯನ್ನು ಪ್ರಸಿದ್ಧ ಸಮಾಜ ಶಾಸ್ತ್ರಜ್ಞನಾದ ಡರ್ಕೈಮ್ ತೋರಿಸಿದ. ಒಂದು ವಿಷಯದ ಉಪಯೋಗವನ್ನು ತಿಳಿಸಿದ ಮಾತ್ರಕ್ಕೆ ಅದು ಹೇಗೆ ಉದ್ಭವಿಸಿತು, ಹೇಗೆ ರೂಪುಗೊಂಡಿತು, ಏತಕ್ಕೋಸ್ಕರ ಆ ರೂಪ ಮತ್ತು ವ್ಯವಸ್ಥೆಯನ್ನು ಹೊಂದಿದೆ-ಎಂಬುದನ್ನು ತಿಳಿಸಿದಂತಾಗುವುದಿಲ್ಲ. ಕೇವಲ ನಮ್ಮ ಅಗತ್ಯಗಳು ಸಂಸ್ಥೆಗಳ ಅಸ್ತಿತ್ವಕ್ಕೆ ಕಾರಣಗಳಲ್ಲ. ಒಂದು ಕುಟುಂಬದ ಸುಭದ್ರತೆಯ ಅಗತ್ಯವನ್ನು ತಿಳಿದ ಮಾತ್ರಕ್ಕೇ ಆ ಕುಟುಂಬದ ಜೀವನ ಸುಖಮಯವಾಗುವುದಿಲ್ಲ. ಒಂದು ಸರ್ಕಾರ ದೃಢತೆಯ ಅಗತ್ಯವನ್ನು ಅರಿತ ಮಾತ್ರಕ್ಕೆ ಅದು ಸುಭದ್ರವಾಗುವುದಿಲ್ಲ. ಆ ಅಗತ್ಯಗಳನ್ನು ಅರಿತು, ಅವನ್ನು ಹೊಂದುವ ಕಾರ್ಯಕ್ರಮವನ್ನು ಪ್ರಯತ್ನಪೂರ್ವಕವಾಗಿ ಆಚರಣೆಗೆ ತಂದಾಗ ಮಾತ್ರ ಕುಟುಂಬದ ಮತ್ತು ಸರ್ಕಾರದ ಸುಭದ್ರತೆ ಏರ್ಪಡುತ್ತದೆ. ಒಂದು ಸಮಾಜಸಂಸ್ಥೆಯ ಆರಂಭದ ಅಥವಾ ಹುಟ್ಟಿನ ಕಾರಣಗಳನ್ನು ಅರಿತು ತನ್ಮೂಲಕ ಅದರ ಉಪಯೋಗವನ್ನು ತಿಳಿಯುವ ರೀತಿ ಉತ್ತಮವಾದುದು. ಇವೆರಡೂ ಪ್ರತ್ಯೇಕವಾದವು. ಆದರೂ ಎರಡನ್ನೂ ಸಮಗ್ರವಾಗಿ ಅರಿತಾಗಲೇ ಅಧ್ಯಯನ ಪೂರ್ಣವಾಗುತ್ತದೆ. ಒಂದು ವಸ್ತು ಉಪಯೋಗವಿಲ್ಲದೆ ಇರುವುದು ಸಾಧ್ಯ. ಅದರ ಅಸ್ತಿತ್ವಕ್ಕೂ ಅದರ ಉಪಯೋಗಕ್ಕೂ ಸಂಬಂಧವಿಲ್ಲದಿರುವುದೂ ಸಾಧ್ಯ. ಹಿಂದೆ ಒಂದು ಕಾಲದಲ್ಲಿ ಅದು ನಮ್ಮ ಅಗತ್ಯಗಳ ಪೂರೈಕೆಗೆ ಅನಿವಾರ್ಯವಾಗಿದ್ದು ಇಂದು ಅದರಿಂದ ಯಾವ ಪ್ರಯೋಜನವೂ ಇಲ್ಲದಿರಬಹುದು. ಅನುಪಯುಕ್ತವಾದ ಪ್ರಾಣಿಗಳ ಅವಶೇಷಗಳಿಗಿಂತ ಅನುಪಯುಕ್ತವಾದ ಸಾಮಾಜಿಕ ಅವಶೇಷಗಳು ಹೆಚ್ಚಾಗಿವೆಯೆಂದು ಡರ್ಕೈಮ್ ತೋರಿಸಿದ್ದಾನೆ. ಉದಾಹರಣೆಗೆ, ಹಿಂದೆ ನ್ಯಾಯಸ್ಥಾನದಲ್ಲಿ ಒಬ್ಬ ಮಾಡಿದ ಪ್ರಮಾಣ ಆತ ಹೇಳಿದ್ದು ಸತ್ಯವೆಂದು ಭಾವಿಸಲು ಆದೇಶವಾಗಿತ್ತು. ಇಂದು ಆ ಪ್ರಮಾಣ ಬಾಹ್ಯಾಡಂಬರವಾಗಿದೆ. ಒಂದು ಸಂಸ್ಥೆಯ ಅರ್ಥವ್ಯಾಪ್ತಿ ಕಾಲಕ್ರಮದಲ್ಲಿ ಬದಲಾಯಿಸಬಹುದು. ರೋಮನರ ಕಾನೂನಿಗೆ ಸಂಗತವಾಗಿ ವಿವಾಹ ನಡೆದಿದ್ದರೆ ಮಾತ್ರ ತಂದೆಗೆ ಮಕ್ಕಳ ಮೇಲಿನ ಅಧಿಕಾರ ಲಭಿಸುತ್ತಿತ್ತು. ಆದರೆ ಕಾಲಕ್ರಮೇಣ ಈ ಸೂತ್ರದ ಅರ್ಥವ್ಯಾಪ್ತಿ ಬದಲಾಯಿಸಿತು. ಕ್ರಮಬದ್ಧವಾದ ವಿವಾಹದಿಂದ ಮಕ್ಕಳ ಪೋಷಣೆಯ ಹಕ್ಕು ಮಾತ್ರ ತಂದೆಗೆ ದೊರೆಯುವಂತಾಯಿತು. ವಿವಾಹ ಸೂತ್ರದ ಪದಗಳಲ್ಲಿ ಯಾವ ಬದಲಾವಣೆ ಇಲ್ಲದಿದ್ದರೂ ಅದರ ಅರ್ಥ ಬದಲಾಯಿಸಿತು. ಆದ್ದರಿಂದ ಡರ್ಕೈಮ್ ಒಂದು ಸಾಮಾಜಿಕ ವಿಷಯಕ್ಕೆ ನಿಮಿತ್ತವಾದುದನ್ನು ಅದರ ಉಪಯೋಗದಿಂದ ಪ್ರತ್ಯೇಕಿಸುವುದು ಸಾಧು ಹಾಗೂ ತರ್ಕಬದ್ಧ ಮಾರ್ಗವೆಂದು ತೋರಿಸಿದ. ನಾವು ಸಾಮಾಜಿಕ ವಿಷಯಗಳನ್ನು ಅಧ್ಯಯನ ಮಾಡುವಾಗ ಒಂದು ವಿಷಯಕ್ಕೂ ಸಾಮಾಜಿಕ ಅಗತ್ಯಕ್ಕೂ ಹೊಂದಿಕೆ ಅಥವಾ ಸಂವಾದವಿದೆಯೆ ಎಂಬುದನ್ನು ಪರಿಶೀಲಿಸಬೇಕು. ಈ ವಿಷಯದ ಪರಿಣಾಮಗಳು ಉದ್ದೇಶಪೂರಿತವಾಗಿರಬಹುದು ಅಥವಾ ಇಲ್ಲದೆ ಇರಬಹುದು. ಉದ್ದೇಶದ ವಿಷಯ ಸಮಾಜವಿಜ್ಞಾನಿಗೆ ಮುಖ್ಯವಲ್ಲ. ಅಲ್ಲಿ ಕ್ರಿಯೆ ಎಂಬ ಪದ ಕಾರ್ಯಕಾರಿ ಎಂಬ ಅರ್ಥದಲ್ಲಿ ಬಳಕೆಗೆ ಬಂದಿದೆ. ಗುರಿ ಅಥವಾ ಉದ್ದೇಶ ಎಂಬ ಅರ್ಥದಲ್ಲಲ್ಲ. ಡರ್ಕೈಮ್ ಧರ್ಮ ಕ್ರಿಯಾವಿಧಾನಗಳನ್ನು ಅಪರಾಧ, ಶಿಕ್ಷೆ, ಅವುಗಳಲ್ಲಿ ಪಾತ್ರ ವಹಿಸಿದ ವ್ಯಕ್ತಿಗಳ ವೈವಿಧ್ಯ ಮತ್ತು ಅವುಗಳ ಕಾರ್ಯಕಾರಿತ್ವಗಳನ್ನು ವಿಶದಪಡಿಸಿದ. ಕಾರ್ಯಕಾರಣ ವಿಶ್ಲೇಷಣೆಯನ್ನು ಕ್ರಿಯಾತ್ಮಕ ವಿಶ್ಲೇಷಣೆಯಿಂದ ಪ್ರತ್ಯೇಕಿಸಿ ಅವು ಪರಸ್ಪರ ಪೂರಕಗಳೇ ಹೊರತು ವಿರುದ್ಧವಲ್ಲವೆಂಬುದನ್ನು ತೋರಿಸಿದ.

(ಇ) ಕ್ರಿಯಾತ್ಮಕ ವಿಶ್ಲೇಷಣೆಯನ್ನು ಇ.ಬಿ. ಟೈಲರ್, ಡಬ್ಲ್ಯೂ, ರಾಬರ್ಟ್‌ಸನ್‌ಸ್ಮಿತ್, ಎಫ್. ಬೋಆಸ್, ಎ.ಎಲ್. ಕ್ರೋಬರ್ ಮುಂತಾದವರು ಸಮಾಜವಿಜ್ಞಾನದಲ್ಲಿ ಬಳಕೆಗೆ ತಂದರೂ ಅದು ಒಂದು ಸುವ್ಯವಸ್ಥಿತ ವೈಜ್ಞಾನಿಕ ರೂಪವನ್ನು ಪಡೆದಿರಲಿಲ್ಲ. ಅದನ್ನು ವೈಜ್ಞಾನಿಕ ಸಾಧನವಾಗಿ ವ್ಯವಸ್ಥೆಗೊಳಿಸಿದವರಲ್ಲಿ ಇಂಗ್ಲೆಂಡಿನ ಬ್ರೋನಿಸ್ ಲಾ, ಮೆಲಿನೋಸ್ಕಿ ಮತ್ತು ಎ.ಆರ್.ರ್‍ಯಾಡ್‌ಕ್ಲಿಫ್ ಬ್ರೌನ್ ಪ್ರಮುಖರು.

ಮೆಲಿನೋಸ್ಕಿ ಸಂಸ್ಕೃತಿಯ ವಿವಿಧ ಭಾಗಗಳು ಸಮಾಜದ ವ್ಯವಸ್ಥೆಗೆ ಅನುಕೂಲತೆಗಳನ್ನು ಒದಗಿಸಿಕೊಡುವ ರೀತಿಯನ್ನು ಕ್ರಿಯಾತ್ಮಕ ವಿಶ್ಲೇಷಣೆಯ ದೃಷ್ಟಿಯಿಂದ ವಿವರಿಸಿದ. ಆತನ ಅಭಿಪ್ರಾಯದಲ್ಲಿ ಕ್ರಿಯಾತ್ಮಕ ವಿಶ್ಲೇಷಣೆಗೆ ವಿಕಾಸತತ್ತ್ವದ ಅಧ್ಯಯನ ಆವಶ್ಯಕ. ವಿಕಾಸತತ್ತ್ವ ಕೇವಲ ಕಾಲಕ್ರಮವಾದ ಬದಲಾವಣೆಗಳನ್ನು ಗಮನಿಸಿ ಕರ್ತವ್ಯವನ್ನು ನಿರ್ವಹಿಸುವ ರೀತಿಯನ್ನು ವಿವರಿಸುತ್ತದೆ. ಆದುದರಿಂದ ಸರಿಯಾದ ರೀತಿಯಲ್ಲಿ ವಿಚಾರ ಮಾಡಿದರೆ ವಿಕಾಸ ತತ್ತ್ವದೃಷ್ಟಿಯ ವಿವರಣೆ ಕ್ರಿಯಾತ್ಮಕ ವಿಶ್ಲೇಷಣೆಗೆ ಸಹಾಯ ಮಾಡುತ್ತದೆ.

ಸಂಸ್ಕೃತಿಯ ವಿವಿಧ ಭಾಗಗಳ ನಿಕಟ ಸಂಬಂಧವನ್ನು ಮೆಲಿನೋಸ್ಕಿ ಆದಿವಾಸಿಗಳ ಜೀವನದ ರೀತಿಯನ್ನು ತೆಗೆದುಕೊಂಡು ವಿವರಿಸಿದ. ಆದಿವಾಸಿಗಳ ಜೀವನ ಕೇವಲ ಆಹಾರ ಮತ್ತು ಉಡುಪುಗಳನ್ನು ಪಡೆಯುವ ಮಾರ್ಗಗಳಿಗೆ ಮಾತ್ರ ಮೀಸಲಾಗಿಲ್ಲ. ಅದರಲ್ಲಿ ಧರ್ಮ, ಶ್ರದ್ಧೆ, ಸಂಪ್ರದಾಯ, ನಿಷ್ಠೆ, ಸೌಂದರ್ಯ–ಎಲ್ಲ ಮಿಳಿತವಾಗಿವೆ. ಅವರ ಊಟೋಪಚಾರಗಳಲ್ಲಿ, ಉಡಿಗೆತೊಡುಗೆಗಳಲ್ಲಿ, ನೃತ್ಯ ಸಂಗೀತಗಳಲ್ಲಿ ಕಾಣುತ್ತೇವೆ. ಫ್ರೇಸರ್ ಕ್ರಾಲಿ ಮತ್ತು ಜೇನ್ ಹ್ಯಾರಿಸನ್–ಈ ಇಬ್ಬರು ವಿದ್ವಾಂಸರು ಆದಿವಾಸಿಗಳ ಧರ್ಮವನ್ನು ವಿವರವಾಗಿ ಪರಿಶೀಲಿಸಿ, ಜೀವನದ ಸಂದಿಗ್ಧ ಸನ್ನಿವೇಶಗಳಲ್ಲಿ ಧರ್ಮದ ಮತ್ತು ನೀತಿಯ ಪಾತ್ರವೇನೆಂಬುದನ್ನು ತಿಳಿಸಿದ್ದಾರೆ.

ಸಮುದಾಯ ದೃಢವಾಗಿದ್ದು ಸಂಸ್ಕೃತಿ ಅವಿಚ್ಛಿನ್ನವಾಗಿ ಸಾಗಬೇಕಾದರೆ ಅಗತ್ಯವಾಗಿ ಇರಬೇಕಾದ ಪರಿಸ್ಥಿತಿಗಳನ್ನು ಮೆಲಿನೋಸ್ಕಿ ಸಮುದಾಯದ ಸಾಂಸ್ಕೃತಿಕ ಅಗತ್ಯಗಳೆಂದು ಕರೆದಿದ್ದಾನೆ.

(ಈ) ಇಂಗ್ಲೆಂಡಿನ ಸುಪ್ರಸಿದ್ಧ ಮಾನವಶಾಸ್ತ್ರಜ್ಞನಾದ ರ್‍ಯಾಡ್‌ಕ್ಲಿಫ್ ಬ್ರೌನ್ ಕ್ರಿಯೆಯ ಕಲ್ಪನೆಯನ್ನು ಸುವ್ಯವಸ್ಥಿತ ರೀತಿಯಲ್ಲಿ ವಿವರಿಸಿದ್ದಾನೆ. ಕ್ರಿಯೆ ಒಂದು ರಚನೆಯ ಅವಿಚ್ಛಿನ್ನತೆಗೆ ಸಹಾಯ ಮಾಡುತ್ತದೆ. ಇದರಿಂದ ಕ್ರಿಯಾತ್ಮಕ ಏಕತೆ ಅಥವಾ ಕ್ರಿಯಾತ್ಮಕ ಅಖಂಡತೆ ಎಂಬ ಒಂದು ಕಲ್ಪನೆಗೆ ಅವಕಾಶವಿದೆಯೆಂದು ಆತ ತನ್ನ ಅಧ್ಯಯನದಲ್ಲಿ ಪ್ರತಿಪಾದಿಸಿದ್ದಾನೆ. ಮೆಲಿನೋಸ್ಕಿ ಸಾಂಸ್ಕೃತಿಕ ಅಗತ್ಯಗಳ ಹಿನ್ನೆಲೆಯಲ್ಲಿ ಕ್ರಿಯಾತ್ಮಕವಾದವನ್ನು ನಿರೂಪಿಸಿದ್ದಾನಷ್ಟೆ ರ್‍ಯಾಡ್‌ಕ್ಲಿಫ್ ರಚನೆಯ ಕಲ್ಪನೆಯ ಅಗತ್ಯವನ್ನು ಮತ್ತು ರಚನೆ ಮತ್ತು ಕ್ರಿಯೆಗಳ ಪರಸ್ಪರ ನಿಕಟಸಂಬಂಧವನ್ನು ಅನೇಕ ದೃಷ್ಟಾಂತಗಳ ಮೂಲಕ ವಿವರಿಸಿ ಮೆಲಿನೋಸ್ಕಿಯ ಅಭಿಪ್ರಾಯವನ್ನು ಇನ್ನೂ ಮುಂದುವರಿಸಿ ಪರಿಷ್ಕರಿಸಿದ್ದಾನೆ. ಸಮಾಜ ಬಹು ಸಂಕೀರ್ಣವಾದ ಒಂದು ವ್ಯವಸ್ಥೆ. ಅಲ್ಲಿಯ ಕ್ರಿಯೆ ಪ್ರಕ್ರಿಯೆಗಳು ಅದರ ಭದ್ರತೆಗೆ ಪ್ರಗತಿಗೆ ಕಾರಣವಾಗುವಂತೆ ಅದರ ಅವನತಿಗೂ ಕಾರಣವಾಗುತ್ತವೆ ಎಂಬ ಅಂಶವನ್ನು ಮೆರ್ಟನ್ ಸೂಚಿಸಿದ್ದಾನೆ.

ರ್‍ಯಾಡ್‌ಕ್ಲಿಫ್ ಬ್ರೌನ್ ಸಾಮಾಜಿಕ ಕ್ರಿಯೆಗಳನ್ನು ಗುಂಪಿನ ಆವಶ್ಯಕತೆಗಳ ಹೊಂದಾಣಿಕೆಯ ದೃಷ್ಟಿಯಿಂದ ನಿರೂಪಿಸಿ ಅದಕ್ಕೆ ಮೂಲ ಸಂಕಲ್ಪವಾದದ ಭಾವನೆಯ ಅಗತ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸಿದ. ಸಾಮಾಜಿಕ ಸಮಸ್ಥಿತಿ ಎಂಬ ಭಾವನೆಯನ್ನು ಸಾಮಾಜಿಕ ಕ್ರಿಯೆಗೆ ಸಂಬಂಧಿಸಿದಾಗ ಸಮಾಜದಲ್ಲಿ ಕೆಲವು ವಿಚಾರಗಳಲ್ಲಿ ವ್ಯತಿರಿಕ್ತತೆ ಕಂಡುಬಂದರೂ ಒಟ್ಟಿನಲ್ಲಿ ಒಂದು ಸಮಾಜದ ಜೀವನದಲ್ಲಿ ಸಮಸ್ಥಿತಿಯನ್ನುಂಟು ಮಾಡುವ ವಿವಿಧ ಅಂಶಗಳೂ ಕಾರ್ಯಾಚರಣೆಯಲ್ಲಿರುತ್ತವೆಂಬ ಅಂಶ ಹೊರಪಡುತ್ತದೆಂದು ಅವನ ಮತ. ಟಾಲ್‌ಕಾರ್ಟ್ ಪಾರ್ಸನ್ಸ್ ಎಂಬಾತ ಕ್ರಿಯೆಯ ಕಲ್ಪನೆಯನ್ನು ಸಂಸ್ಥೆಗಳ ಅಧ್ಯಯನಕ್ಕೆ ಉತ್ತಮವಾದ ಉಪಕರಣವೆಂದು ತಿಳಿಸಿದ್ದಾನೆ. ಕ್ರಿಯೆ ತತ್ತ್ವದ ಸಹಾಯದಿಂದ ಒಂದು ವಸ್ತುವಿಗೂ ಮತ್ತು ಅದರ ಚಟುವಟಿಕೆಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸಬಹುದು. ಒಂದು ವಸ್ತುವಿನ ಅಥವಾ ಸಂಸ್ಥೆಯ ರಚನೆಯ ಸ್ಥಾಯಿಕ ಭಾಗಗಳಿಗೂ ಅದರ ಚಲನಾತ್ಮಕ ಚಟುವಟಿಕೆಗಳಿಗೂ ಸಂಬಂಧವನ್ನು ಸೂಚಿಸುವ ಭಾವನೆಯೇ ಕ್ರಿಯೆ ಎಂದು ಆತನ ವಾದ.

ವಿಮರ್ಶಾತ್ಮಕ ಕ್ರಿಯಾವಾದದ ವಿವರಣೆಯನ್ನು ರಾಬರ್ಟ್ ಮೆರ್ಟನ್ನನ ಬರೆವಣಿಗೆಗಳಲ್ಲಿ ಕಾಣುತ್ತೇವೆ. ಕ್ರಿಯಾತ್ಮಕವಾದವನ್ನು ಸವಿಸ್ತಾರವಾಗಿ ವಿವರಿಸಲು ಒಂದು ಮಾದರಿಯನ್ನು ಈತ ಉಪಯೋಗಿಸಿದ್ದಾನೆ. ಸಾಧಾರಣವಾಗಿ ಕ್ರಿಯಾತ್ಮಕ ವಾದಕ್ಕೆ ಮೂರು ಆಧಾರ ಪ್ರತಿಜ್ಞೆಗಳ ಅಗತ್ಯವಿದೆ : (i) ಸಮಾಜದ ಕ್ರಿಯಾತ್ಮಕ ಏಕತೆ ಅಥವಾ ಅಖಂಡತೆ, (ii) ಸಂಸ್ಕೃತಿಯ ಎಲ್ಲ ಭಾಗಗಳಲ್ಲಿರುವ ಕ್ರಿಯೆ, (iii) ಪ್ರತಿಯೊಂದು ಸಂಸ್ಕೃತಿಯ ಭಾಗವೂ ಅತ್ಯಾವಶ್ಯಕವಾಗಿ ಬೇಕಾದ ಕ್ರಿಯೆಯನ್ನು ಹೊಂದಿರುವುದು. ಇವನ್ನು ರ್‍ಯಾಡ್‌ಕ್ಲಿಫ್ ಬ್ರೌನ್ ಮತ್ತು ಮೆಲಿನೋಸ್ಕಿಗಳ ಬರೆವಣಿಗೆಗಳಲ್ಲಿ ಸ್ಫುಟವಾಗಿ ನೋಡಬಹುದು. ಮೆರ್ಟನ್ ಕ್ರಿಯೆಗಳಲ್ಲಿ ಹಲವು ಬಗೆಗಳನ್ನು ವಿಶದಪಡಿಸಿದ್ದಾನೆ : ಅವು (i) ವ್ಯಕ್ತ ಕ್ರಿಯೆಗಳು, (ii) ಗುಪ್ತ ಕ್ರಿಯೆಗಳು, (iii) ದುಷ್ಪರಿಣಾಮಕ ಕ್ರಿಯೆಗಳು.

ಎಫ್.ಎಂ. ಕಾನಿಕನ್ ಎಂಬಾತ ಕ್ರಿಯಾತ್ಮಕ ವಿಶ್ಲೇಷಣೆಗಳ ವಿವಿಧ ಅಧ್ಯಯನಗಳನ್ನು ಪರಿಶೀಲಿಸಿ ಸರ್ವವ್ಯಾಪಕವಾದ ಮೂರು ಪ್ರಮುಖ ವಿಷಯಗಳನ್ನು ತಿಳಿಸಿದ್ದಾನೆ : (i) ಕ್ರಿಯಾತ್ಮಕ ವಿಶ್ಲೇಷಣೆ ಸಮಾಜಶಾಸ್ತ್ರದ ಸಾಮಾನ್ಯ ಕಲ್ಪನೆಗಳ ಆಧಾರದ ಮೇಲೆ ನಿರೂಪಿತವಾಗಿದೆ. (ii) ಎಲ್ಲ ಸಾಮಾಜಿಕ ರೂಪಿಕೆಗಳು ಸಾಮಾಜಿಕ ವ್ಯವಸ್ಥೆಯ ಸಮಗ್ರತೆಗೆ ಅಥವಾ ದೃಢತೆಗೆ, ಇಲ್ಲವೇ ಹೊಂದಿಕೆಗೆ ಸಹಾಯಕವಾಗುತ್ತವೆ. (iii) ಸಾಮಾಜಿಕ ವ್ಯವಸ್ಥೆ ಸ್ವಯಂ ನಿಯಂತ್ರಿತ ವ್ಯವಸ್ಥೆ.

(ಉ) ಕ್ರಿಯಾತ್ಮಕವಾದದ ಕೆಲವು ನ್ಯೂನತೆಗಳನ್ನು ಸಮಾಜಶಾಸ್ತ್ರಜ್ಞರು ಹೇಳಿದ್ದಾರೆ. ಕ್ರಿಯಾತ್ಮಕ ವಿಶ್ಲೇಷಣೆ ಹೊಸ ಹೆಸರೇ ಹೊರತು, ಅದರಲ್ಲಿ ಯಾವ ನವ್ಯತೆಯೂ ಇಲ್ಲವೆಂದು ಡೇವಿಸನ ಅಭಿಪ್ರಾಯ.

ಒಂದು ಸಮಾಜ ವ್ಯವಸ್ಥೆಯ ವಿವಿಧ ಭಾಗಗಳು ಅತ್ಯಾವಶ್ಯಕವಾಗಿದ್ದರೆ, ಅವನ್ನು ಬದಲಾಯಿಸಿದರೆ ಸಮಾಜದ ವ್ಯವಸ್ಥೆಗೆ ಅಪಾಯ ಒದಗುತ್ತದೆ. ಆದುದರಿಂದ ಸಮಾಜದಲ್ಲಿ ಬದಲಾವಣೆ ಸಾಧ್ಯವಲ್ಲವೆಂದು ತಿಳಿಯಬೇಕಾಗುತ್ತದೆ. ಆದರೆ ವಾಸ್ತವಿಕವಾಗಿ ಎಲ್ಲ ಸಮಾಜಗಳಲ್ಲಿಯೂ ಬದಲಾವಣೆಗಳಾಗುತ್ತವೆ. ಕ್ರಿಯಾತ್ಮಕವಾದದ ಆಧಾರಪ್ರತಿಜ್ಞೆಗಳನ್ನು ಕಟ್ಟುನಿಟ್ಟಾದ ಅರ್ಥದಲ್ಲಿ ತೆಗೆದುಕೊಂಡರೆ ಸಮಾಜದ ಪ್ರಗತಿಗೆ ಅವಕಾಶವಿರುವುದಿಲ್ಲ. ಆದರೆ ರ್‍ಯಾಡ್‌ಕ್ಲಿಫ್ ಬ್ರೌನ್, ಮೆರ್ಟನ್ ಮೊದಲಾದವರ ವಾದವನ್ನು ಗಮನಿಸಿದರೆ ಕ್ರಿಯಾತ್ಮಕವಾದದ ಮೇಲೆ ಆರೋಪಿತವಾಗಿರುವ ದೋಷಗಳಲ್ಲಿ ತಿರುಳಿಲ್ಲದಿರುವುದು ಸ್ಪಷ್ಟವಾಗುತ್ತದೆ

ಒಟ್ಟಿನಲ್ಲಿ ಆಧುನಿಕ ಸಮಾಜವಿಜ್ಞಾನದ ಅಧ್ಯಯನದಲ್ಲಿ ಇತ್ತೀಚಿನ ದಶಕಗಳಲ್ಲಿ ರಚನಾ ಕ್ರಿಯಾತ್ಮಕ ವಿಶ್ಲೇಷಣೆ ಅತ್ಯಂತ ವ್ಯಾಪಕವಾಗಿದೆ. ಈ ತತ್ತ್ವವನ್ನು ಆದಷ್ಟು ಕಟ್ಟುನಿಟ್ಟಾಗಿ ಅವಲಂಬಿಸಿ ಮಾಡಿರುವ ಅಧ್ಯಯನಗಳಲ್ಲಿ ಮೆಲಿನೋಸ್ಕಿ, ರ್‍ಯಾಡ್‌ಕ್ಲಿಫ್ ಬ್ರೌನ್, ಜೆ.ಪಿ. ಜೊಹಾನ್‌ಸೆನ್, ರೇಪೊಪೊರ್ಟ್ ಮತ್ತು ಮೊನಿಕನ್ ಲಲವಿಲ್ಸನ್ ಇವರ ಗ್ರಂಥಗಳು ಗಣನೀಯವೆನಿಸಿವೆ.

ಅವರು ರಚಿಸಿರುವ ಸಾಮಾಜಿಕ ಸಂಘವಾದ ಗೌಟಲ್ಲಿನ ವಿಷಯವನ್ನು ರಚನಾ ಕ್ರಿಯಾತ್ಮಕತತ್ತ್ವದ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಗೌಟಲ್ಲಿನ ಮುಖ್ಯವಾದ ಕಾರ್ಯ ಯುವಕರು ಸಮಾಜದ ಕರ್ತವ್ಯಗಳನ್ನು ನಿರ್ವಹಿಸುವ ವಿಷಯದಲ್ಲಿ ದಕ್ಷತೆಯನ್ನು ಸಂಪಾದಿಸಲು ಅನುಕೂಲವಾಗುವಂತೆ ವಿವಿಧ ವಿಷಯಗಳಲ್ಲಿ ಅವರಿಗೆ ಶಿಕ್ಷಣವನ್ನು ಒದಗಿಸುವುದು. ಗೌಟಲ್ಲಿನ ಅನುಭವ ಮತ್ತು ಶಿಕ್ಷಣದ ಪ್ರಭಾವದಿಂದ ಯುವಕರು ಸಮಾಜ ಜೀವನದಲ್ಲಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತು ಸಮುದಾಯದ ಶ್ರೇಯಸ್ಸಿಗೆ ದುಡಿಯುವ ಮನೋವೃತ್ತಿಯನ್ನು ಹೊಂದುತ್ತಾರೆ. ನಾಗಪುರ ವಿಶ್ವವಿದ್ಯಾಲಯದ ಸಮಾಜವಿಜ್ಞಾನ ವಿಭಾಗದ ಟಿ.ಎಸ್. ವಿಲ್ಕಿನ್‌ಸನ್ ಗೌಟಲ್ಲಿನಲ್ಲಿ ಯುವಕರಿಗೆ ಕೊಡುವ ಹೆಸರಿಗೂ ಅವರು ಸಮಾಜದಲ್ಲಿ ನಿರ್ವಹಿಸಬೇಕಾಗುವ ಪಾತ್ರಗಳ ಕರ್ತವ್ಯಗಳಿಗೂ ಇರುವ ಸಂಬಂಧವನ್ನು ಕ್ರಿಯಾತ್ಮಕ ತತ್ತ್ವದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾನೆ.

(ಊ) ಭಾರತ ಸ್ವತಂತ್ರವಾದ ಮೇಲೆ ಮಾನವಶಾಸ್ತ್ರದ ಅಭ್ಯಾಸದಲ್ಲಿ ಹೆಚ್ಚು ಶ್ರದ್ಧೆ ಮತ್ತು ಚಟುವಟಿಕೆಗಳನ್ನು ಕಾಣುತ್ತಿದ್ದೇವೆ. ಇದರ ಪರಿಣಾಮವಾಗಿ ಸಾಮಾಜಿಕ ಮಾನವಶಾಸ್ತ್ರಜ್ಞರ ಗಮನ ಜನಾಂಗಗಳ ಅಧ್ಯಯನದಿಂದ ಗ್ರಾಮಗಳ ಅಧ್ಯಯನಗಳ ಕಡೆಗೆ ಹರಿಯಿತು. ಇವುಗಳಲ್ಲಿ ಪ್ರಮುಖವಾದುವು–ಎಸ್.ಸಿ. ದುಬೆಯವರ ಇಂಡಿಯನ್ ವಿಲೇಜ್, ಎ.ಸಿ. ಮಯರ್‌ರವರ ಕ್ಯಾಸ್ಟ್ ಅಂಡ್ ಕಮ್ಯೂನಿಕೇಷನ್ ಇನ್ ಸೆಂಟ್ರಲ್ ಇಂಡಿಯ, ಡಿ.ಎನ್. ಮಜುಂದಾರರ ಕ್ಯಾಸ್ಟ್ ಅಂಡ್ ಕಮ್ಯೂನಿಕೇಷನ್ ಇನ್ ಎನ್ ಇಂಡಿಯನ್ ವಿಲೇಜ್, ಎಂ.ಎನ್. ಶ್ರೀನಿವಾಸರು ಸಂಗ್ರಹಿಸಿರುವ ಇಂಡಿಯನ್ ವಿಲೇಜ್, ಮೇಕಿಂ ಮೇರಿಯಟ್ ಸಂಗ್ರಹಿಸಿರುವ ವಿಲೇಜ್ ಇಂಡಿಯ ಮತ್ತು ಶ್ರೀಮತಿ ಇಬ್‌ಸ್ಟೈನ್‌ರವರ ಎಕನಾಮಿಕ್ ಡೆವಲಪ್‌ಮೆಂಟ್ ಅಂಡ್ ಸೋಷಿಯಲ್ ಚೇಂಜ್, ಇನ್ ಟು ಸೌತ್ ಇಂಡಿಯನ್ ವಿಲೇಜಸ್.

ಮೊದಲಿಗೆ ಭಾರತದಲ್ಲಿ ಮಾನವಶಾಸ್ತ್ರದ ಅಧ್ಯಯನಕ್ಕೆ ಪ್ರೋತ್ಸಾಹ ದೊರಕಿದುದು ಕೇವಲ ಆಡಳಿತದ ದೃಷ್ಟಿಯಿಂದ. ಆಡಳಿತ ಪ್ರವೀಣರು ಬುಡಕಟ್ಟು ಜೀವನದ ರೀತಿಯನ್ನು ಅರಿತು, ತಮ್ಮ ಆಡಳಿತ ನೀತಿಯನ್ನು ನಿರೂಪಿಸಲು ಪ್ರಯತ್ನಿಸಿದರು. ಆದುದರಿಂದ, 19ನೆಯ ಶತಮಾನದ ಉತ್ತರಾರ್ಧದಲ್ಲಿ ಹೆಚ್ಚಾಗಿ ವ್ಯಾಪಕವಾದ ಸಾಮಾಜಿಕ ಮಾನವಶಾಸ್ತ್ರ ಆಡಳಿತಗಾರರಿಗೆ ಜನಜೀವನದ ರೀತಿನೀತಿಗಳನ್ನು ಒದಗಿಸಿ ಕೊಡುವ ಕಾರ್ಯಕ್ಕೆ ಸೀಮಿತವಾಗಿತ್ತು. ಅದು ವೈಜ್ಞಾನಿಕ ದೃಷ್ಟಿಯಿಂದ ಯಾವ ಒಂದು ನಿಶ್ಚಿತವಾದ ತತ್ತ್ವದ ಹಿನ್ನೆಲೆಯಲ್ಲಿ ವಿಷಯವನ್ನು ವಿಶ್ಲೇಷಿಸುವ ಗೊಡವೆಗೆ ಹೋಗಲಿಲ್ಲ. ಎಲ್.ಕೆ. ಅನಂತಕೃಷ್ಣಯ್ಯರ್ ಅವರು 1908ರಲ್ಲಿ ಕೊಚ್ಚಿ ಪ್ರದೇಶದ ಬುಡಕಟ್ಟುಗಳು ಮತ್ತು ಜಾತಿಗಳು ಎಂಬ ವಿಷಯವಾಗಿ ನಾಲ್ಕು ಪುಸ್ತಕಗಳನ್ನು ಬರೆದರು. ಇದರಲ್ಲಿ ವಿವಿಧ ಬುಡಕಟ್ಟುಗಳ ಜೀವನದ ರೀತಿಯನ್ನು ವಿವರಿಸಿ, ಸಮಾಜದ ವಿವಿಧ ಸಂಸ್ಥೆಗಳಿಗಿರುವ ಸಂಬಂಧಗಳನ್ನು ನಿರೂಪಿಸಿದರು. ಅನಂತರ ಅವರು ರಾವ್‌ಬಹದ್ದೂರ್ ನಂಜುಂಡಯ್ಯನವರ ಜೊತೆಯಲ್ಲಿ ಮೈಸೂರಿನಲ್ಲಿರುವ ಜಾತಿ ಪದ್ಧತಿಗಳನ್ನು ನಿರೂಪಿಸಿದರು. 20ನೆಯ ಶತಮಾನದ ಮೊದಲಿನ ದಶಕಗಳಿಂದ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಿ ಅನೇಕ ಮಾನವಶಾಸ್ತ್ರಜ್ಞರು ಆದಿವಾಸಿಗಳ ಜೀವನದ ಬಗೆಯನ್ನು ನಿರೂಪಿಸಿದರು. ಇದರ ಪರಿಣಾಮವಾಗಿ ಹಲವು ಪ್ರಸಿದ್ಧವಾದ ಏಕ ವಿಷಯ ಪ್ರಬಂಧಗಳು (ಮಾನೊಗ್ರ್ಯಾಫ್‌ಗಳು) ರಚಿತವಾದುವು. ಇವು ಹೆಚ್ಚಾಗಿ ವಿವರಣಾತ್ಮಕವಾಗಿವೆ.

ಬಸ್ತಾರಿನ ಮರಿಯಗೊಂಡರ ವಿಚಾರದಲ್ಲಿ ಅಭ್ಯಾಸ ಮಾಡಿದವರಲ್ಲಿ ವೆರಿಯರ್ ಎಲ್ವಿನ್ ಮತ್ತು ಡಿ.ಎನ್. ಮಜುಂದಾರರು ಮುಖ್ಯರು. ಎಂ.ಎನ್. ಶ್ರೀನಿವಾಸರು ಸೊಸೈಟಿ ಅಂಡ್ ರಿಲಿಜನ್ ಎಮಾಂಗ್ ಕೂರ್ಗ್ಸ್ ಆಫ್ ಸೌತ್ ಇಂಡಿಯ ಎಂಬ ಪುಸ್ತಕದಲ್ಲಿ

ಕೊಡವರ ಸಮಾಜದ ರಚನೆಗೂ ಮತ್ತು ಅವರ ಧರ್ಮಕ್ಕೂ ಇರುವ ನಿಕಟ ಸಂಬಂಧವನ್ನು ಅವರ ಸಂಘ ಸಂಸ್ಥೆಗಳ ಕೂಲಂಕಷ ವಿವರಣೆಗಳೊಂದಿಗೆ ವಿಶ್ಲೇಷಿರುವರು. ಎಂ.ಎನ್. ಶ್ರೀನಿವಾಸರು ಅನುಸರಿಸಿದ ಅಧ್ಯಯನದ ಮಾದರಿಯಲ್ಲಿ ಎಚ್.ಎಂ. ಸದಾಶಿವಯ್ಯನವರು ವೀರಶೈವರ ಸಾಮಾಜಿಕ ಜೀವನದಲ್ಲಿ ವೀರಶೈವ ಮಠಗಳ ಪಾತ್ರವನ್ನು ಎ ಕಂಪ್ಯಾರಿಟಿವ್ ಸ್ಟಡಿ ಆಫ್ ದ ವೀರಶೈವ ಮೊನಾಸ್ಟ್ರೀಸ್ ಎಂಬ ಪುಸ್ತಕದಲ್ಲಿ ವಿವರಿಸಿರುವರು. ಈ ಪುಸ್ತಕದಲ್ಲಿ ಸಮಾಜದ ವಿವಿಧ ಸಂಸ್ಥೆಗಳ ಕಾರ್ಯಗಳಲ್ಲಿ ಧರ್ಮದ ಪಾತ್ರವನ್ನು ವಿವರಿಸಿ, ಕಾಲ ಮತ್ತು ದೇಶಗಳಿಗೆ ಅನುಗುಣವಾಗುವಂತೆ ಮಠಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ, ಸಮಾಜದ ಭದ್ರತೆಗೆ ಅನುಕೂಲವಾಗಿರುವ ಅಂಶವನ್ನು ನಿರೂಪಿಸಲಾಗಿದೆ.

(ಎಚ್.ಎಂ.ಎಸ್.)

**ಕ್ರಿಯೋಸೋಟ್ :** ಟಾರಿನ ಆಸವೀಕರಣದಿಂದ ದೊರೆಯುವ ಎರಡು ಉತ್ಪನ್ನಗಳ ಪೈಕಿ ಒಂದು. ಕಲ್ಲಿದ್ದಲು, ಟಾರಿನಿಂದ ಆಸವೀಕರಿಸಲ್ಪಟ್ಟದ್ದು ವಾಣಿಜ್ಯ ಕ್ರಿಯೋಸೋಟ್. ಇದೊಂದು ವಿಷವಸ್ತು. ಇದನ್ನು ಮರ ಸಂರಕ್ಷಕವಾಗಿ ಉಪಯೋಗಿಸುತ್ತಾರೆ. ಎರಡನೆಯ ಉತ್ಪನ್ನ ಔಷಧೀಯ ಕ್ರಿಯೋಸೋಟ್. ಇದನ್ನು ಇದ್ದಲು ಟಾರಿನಿಂದ ಆಸವೀಕರಿಸಲಾಗುತ್ತದೆ. ಮೊದಲಿಗೆ ಇದನ್ನು ಉಸಿರಾಟದ ವ್ಯಾಧಿಗಳಲ್ಲಿ ಚಿಕಿತ್ಸೆಗಾಗಿ ಬಳಸುತ್ತಿದ್ದರು. ಕಲ್ಲಿದ್ದಲು ಟಾರ್ ಕ್ರಿಯೋಸೋಟ್ 160ಕ್ಕಿಂತಲೂ ಹೆಚ್ಚು ರಾಸಾಯನಿಕ ಸಂಯುಕ್ತಗಳ ಮಿಶ್ರಣ. ಇದನ್ನು 400°–450° ಸೆಂ. ಉಷ್ಣತೆಯಲ್ಲಿ ಆಸವೀಕರಿಸಿ ಪಡೆಯುತ್ತಾರೆ. ಇದ್ದಲು ಟಾರ್ ಕ್ರಿಯೋಸೋಟನ್ನು ಸಾಮಾನ್ಯವಾಗಿ ಬೀಚ್ ಮರದಿಂದ 200°–220° ಸೆಂ. ಉಷ್ಣತೆಯಲ್ಲಿ ಆಸವೀಕರಿಸಿ ಪಡೆಯುವರು. (ಜಿ.ಟಿ.ಜಿ.)

ಕ್ರಿಯೋಸೋಟ್ ನಿರ್ವರ್ಣವಾದ ಅಥವಾ ತಿಳಿ ಹಳದಿಯಾದ ತೈಲದಂತಿರುವ ದ್ರವ, ಹೊಗೆಯ ವಾಸನೆಯಿದೆ. ಕ್ಷಾರವಾದ ಮತ್ತು ನಾಲಗೆಯನ್ನು ದಹಿಸುವ ರುಚಿಯುಳ್ಳ ವಸ್ತು. ನೀರಿನೊಂದಿಗೆ ಅಲ್ಪ ಪರಿಮಾಣದಲ್ಲಿ ಬೆರೆಯುತ್ತದೆ. ಆದರೆ ಆಲ್ಕೊಹಾಲ್, ಈಥರ್ ಮತ್ತು ಬಾಷ್ಪಶೀಲ ತೈಲಗಳೊಂದಿಗೆ ಮಿಶ್ರವಾಗುತ್ತದೆ. ಇದರ ಕುದಿಬಿಂದು 203°–220°ಸೆಂ. (ಎಚ್.ಎಸ್.ಎಸ್.)

**ಕ್ರಿಲಾಫ್, ಇವ್ಯಾನ್ ಆಂದ್ರೆವಿಚ್ :** 1768–1844. ರಷ್ಯನ್ ಕತೆಗಾರ, ನಾಟಕಕಾರ, ಒಂಬತ್ತು ಸಂಪುಟಗಳಲ್ಲಿ ಅಡಕವಾಗಿರುವ ಇವನ ನೀತಿ ಕಥೆಗಳು ಬಹು ಜನಪ್ರಿಯವಾದುವು. ಇವುಗಳಲ್ಲಿಯ ಹಲವು ಮಾತುಗಳು ಇಂದಿಗೂ ಗಾದೆಗಳಾಗಿವೆ. ಅಸಾಮರ್ಥ್ಯ, ಮೂರ್ಖತನಗಳನ್ನು ನಿರ್ದಯವಾಗಿ ಈತ ಹಾಸ್ಯ ಮಾಡುತ್ತಾನೆ. ಆದರೆ ಇವನ ವಿಡಂಬನೆಯಲ್ಲಿ ರೋಷವಿಲ್ಲ. ಮುಗಿಲು ಮುಟ್ಟುವ ಆದರ್ಶ, ಅತಿ ಆಶಾವಾದಿತ್ವ, ಆವೇಶಗಳನ್ನು ಕಡೆಗಣಿಸಿ, ಯುಕ್ತಾಯುಕ್ತ ವಿವೇಚನೆ, ವ್ಯವಹಾರ ಜ್ಞಾನಗಳನ್ನಿವನು ಮೆಚ್ಚುತ್ತಾನೆ. ಭಾಷೆಯ ಮೇಲಿನ ಇವನ ಪ್ರಭುತ್ವ ಅಸಾಧಾರಣವಾದುದು.

(ಎಲ್.ಎಸ್.ಎಸ್.)

**ಕ್ರಿಶ್ಚನ್ :** 15–20ನೆಯ ಶತಮಾನಗಳ ನಡುವೆ ಡೆನ್ಮಾರ್ಕ್–ನಾರ್ವೆಗಳಲ್ಲಿ ಈ ಹೆಸರಿನ ಹತ್ತು ಮಂದಿ ದೊರೆಗಳು ರಾಜ್ಯವಾಳಿದರು. ಅವರ ಬಗ್ಗೆ ವಿವರಗಳನ್ನು ಕೆಳಗೆ ನೀಡಲಾಗಿದೆ.

**ಕ್ರಿಶ್ಚನ್ I :** 1426–1481. ಡೆನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್ ದೇಶಗಳಲ್ಲಿ ಓಲ್ಡನ್‌ಬರ್ಗ್ ಸಂತತಿಯನ್ನು ಸ್ಥಾಪಿಸಿದ ಮೊತ್ತಮೊದಲನೆಯ ದೊರೆ. ಅವನಿಗೆ ಹಿಂದೆ ಇದ್ದ ದೊರೆ 3ನೆಯ ಕ್ರಿಸ್ಟೊಫರ್ ಉತ್ತರಾಧಿಕಾರಿಗಳಿಲ್ಲದೆ ನಿಧನ ಹೊಂದಿದಾಗ ಕ್ರಿಶ್ಚನನ ಚಿಕ್ಕಪ್ಪನೂ ಹಾಲ್‌ಸ್ಟೀನ್ ಮತ್ತು ಷೆಲ್ಸ್‌ವಿನ್‌ನ ಡ್ಯೂಕನೂ ಆದ ಅಡಾಲ್ಫ್ ಸಿಂಹಾಸನಕ್ಕೆ ಹಕ್ಕುದಾರನಾಗಿದ್ದ. ಆದರೆ ಅಡಾಲ್ಫ್ ಆ ಹೊಣೆಯನ್ನು ವಹಿಸಲಿಚ್ಛಿಸದಿದ್ದುದರಿಂದ, ಗತಿಸಿದ ರಾಜನ ವಿಧವೆಯನ್ನು ಕ್ರಿಶ್ಚನ್ ವರಿಸಿ ಸಿಂಹಾಸನವನ್ನೇರಿದ. ಕ್ರಿಶ್ಚನ್ ರಾಜನಾದ ಅನಂತರ ಸ್ವೀಡನ್ ಮತ್ತೊಬ್ಬ ವಾರಸುದಾರನನ್ನು ತರಲು ಹವಣಿಸಿತು. ಆದರೆ ಕ್ರಿಶ್ಚನ್ ಚಾಣಾಕ್ಷತನದಿಂದ ಅವರ ವಿರೋಧವನ್ನು ತೊಡೆದುಹಾಕಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. 1469ರಲ್ಲಿ ಇವನ ಕುಮಾರಿ ಮಾರ್ಗರೆಟ್ ಸ್ಕಾಟ್ಲೆಂಡ್ ರಾಜಕುಮಾರ 3ನೆಯ ಜೇಮ್ಸನನ್ನು ವಿವಾಹವಾದಳು. ಈ ಸಂಬಂಧದಿಂದ ದೇಶದ ವಾಣಿಜ್ಯ ಪ್ರಗತಿ ಹೊಂದಿತು. ಕ್ರಿಶ್ಚನ್ ಪೋಪನೊಡನೆ ಒಪ್ಪಂದವನ್ನೇರ್ಪಡಿಸಿಕೊಂಡು, ಡೇನಿಷ್ ಚರ್ಚಿನ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿದ. ಪೋಪನ ಸಮ್ಮತಿಯನ್ನು ಪಡೆದು ಕೋಪನ್‌ಹೇಗನ್ ವಿಶ್ವವಿದ್ಯಾಲಯವನ್ನು 1479ರಲ್ಲಿ ಸ್ಥಾಪಿಸಿದ. ಈತ ಚತುರ, ವಿವೇಕಶಾಲಿ. 1481ರಲ್ಲಿ ಈತ ಮರಣ ಹೊಂದಿದ.

**ಕ್ರಿಶ್ಚನ್ II :** 1481–1559. ಸ್ಯಾಕ್ಸನಿಯ ರಾಜ ಹ್ಯಾನ್ಸ್ ಮತ್ತು ರಾಣಿ ಕ್ರಿಸ್ಟಿನಾರ ಮಗ. ಈತ 1513ರಲ್ಲಿ ತನ್ನ ತಂದೆಯ ನಿಧನಾನಂತರ ಡೆನ್ಮಾರ್ಕ್ ಮತ್ತು ನಾರ್ವೆ ಸಿಂಹಾಸನವನ್ನೇರಿ ಒಳ್ಳೆಯ ಹೆಸರು ಗಳಿಸಿದ. ಆ ಸಮಯದಲ್ಲಿ ನಾರ್ವೆ, ಸ್ವೀಡನ್ ಮತ್ತು ಡೆನ್ಮಾರ್ಕ್‌ಗಳಲ್ಲಿ ಒಡಕುಂಟಾಯಿತು. ಸ್ವೀಡನಿನವರು ಅವನನ್ನು ರಾಜನೆಂದು ಒಪ್ಪಲಿಲ್ಲ. ಆತ ಸ್ವೀಡನಿನ ಮೇಲೆ ಯುದ್ಧ ಘೋಷಿಸಿ ಎರಡು ಸಾರಿ ಸೋಲನ್ನನುಭವಿಸಿದ. 1520ರ ವೇಳೆಗೆ ಕ್ರಿಶ್ಚನ್ ತನ್ನ ಬಲವನ್ನು ಹೆಚ್ಚಿಸಿಕೊಂಡು ಸ್ವೀಡನಿನ ಮೇಲೆ ಯುದ್ಧ ಮಾಡಿ ಜಯ ಗಳಿಸಿದ. ಸ್ವೀಡನಿನ ನಾಯಕರು ಕ್ರಿಶ್ಚನನನ್ನು ರಾಜನೆಂಬುದಾಗಿ ಒಪ್ಪಿದರು. ಪ್ರತಿಯಾಗಿ ಅವನು ತನ್ನ ವಿರೋಧಿಗಳಿಗೆ ಕ್ಷಮೆ ನೀಡಿದ. ಆದರೆ ಈ ಒಪ್ಪಂದ ಹೆಚ್ಚು ಕಾಲ ಮುಂದುವರಿಯಲಿಲ್ಲ. ಸ್ಟಾಕ್‌ಹೋಂನಲ್ಲಿ ದಂಗೆಯುಂಟಾಗಿ 80 ಮಂದಿ ಸ್ವೀಡಿಷ್ ಪ್ರಮುಖರು ಕೊಲೆಯಾದರು. ಆದ್ದರಿಂದ 1521ರಲ್ಲಿ ಗಸ್ಟೇವಸ್‌ವಾಸನ ನಾಯಕತ್ವದಲ್ಲಿ ಸ್ವೀಡನಿನ ಜನರು ಕ್ರಿಶ್ಚನನ ವಿರುದ್ಧ ದಂಗೆಯೆದ್ದು, ಸ್ವತಂತ್ರರಾದರು. ಗಸ್ಟೇವಸ್‌ವಾಸ ಸ್ವತಂತ್ರ ಸ್ವೀಡನಿನ ರಾಜನೆಂದು ಘೋಷಿಸಲಾಯಿತು. ನಾರ್ವೆಜಿಯನ್ ಒಕ್ಕೂಟ ಒಡೆದು ಹೋಯಿತು. ಸ್ವೀಡನಿನವರಿಗೆ ರಿಯಾಯಿತಿ ಕೊಡಲು ಕ್ರಿಶ್ಚನ್ ಮುಂದೆ ಬಂದನಾದರೂ ಆ ಕಾಲ ಮೀರಿತ್ತು. ಡೆನ್ಮಾರ್ಕಿನಲ್ಲೂ ಅವನ ಜನಪ್ರಿಯತೆ ಮರೆಯಾಗಿತ್ತು. ಅಲ್ಲಿಯ ಮುಖಂಡರು ಅವನನ್ನು ಸಿಂಹಾಸನದಿಂದ ತೆಗೆಯಲು ಹವಣಿಸಿದರು. ಪರಿಸ್ಥಿತಿಯನ್ನರಿತ ಕ್ರಿಶ್ಚನ್ ಕೋಪೆನ್‌ಹೇಗೆನ್ ನಗರವನ್ನು ತ್ಯಜಿಸಿ 1523ರಲ್ಲಿ ದೇಶಭ್ರಷ್ಟನಾದ. ತನ್ನ ಭಾವಮೈದುನನೂ ಆಸ್ಟ್ರಿಯದ ಸಾಮ್ರಾಟನೂ ಆದ 5ನೆಯ ಚಾರ್ಲ್ಸ್‌ನ ಸಹಾಯದಿಂದ ಒಂದು ಸೈನ್ಯವನ್ನು ಕಟ್ಟಿ, ತನ್ನ ಹಕ್ಕನ್ನು ಸ್ಥಾಪಿಸಲು 1531ರಲ್ಲಿ ನಾರ್ವೆಗೆ ಹಿಂದಿರುಗಿದಾಗ ಅಲ್ಲಿಯ ಜನರು ಅವನನ್ನು ರಾಜನೆಂದು ಒಪ್ಪಿದರು. ಆದರೆ ಅವನಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿ ಅವನನ್ನು ಬಂಧಿಸಿದರು. ಬಂದೀಖಾನೆಯಲ್ಲಿ ಅವನು 1559ರಲ್ಲಿ ನಿಧನ ಹೊಂದಿದ.

**ಕ್ರಿಶ್ಚನ್ III :** 1503–1559. ಡೆನ್ಮಾರ್ಕ್ ಮತ್ತು ನಾರ್ವೆ ರಾಜ ಮತ್ತು ಡೆನ್ಮಾರ್ಕಿನ 1ನೆಯ ಫ್ರೆಡರಿಕನ ಹಿರಿಯ ಮಗ. ಬಾಲ್ಯದಿಂದಲೂ ಕ್ರಿಶ್ಚನ್ ಮಾರ್ಟಿನ್ ಲೂಥರನ ಪಂಥದ ಅನುಯಾಯಿ. 1521ರಲ್ಲಿ ನಡೆದ ವರ್ಮ್ಸ್ ಪಾರ್ಲಿಮೆಂಟಿನಲ್ಲಿ ಭಾಗವಹಿಸಿದ್ದ. 1523ರಲ್ಲಿ ಡೆನ್ಮಾರ್ಕಿನ ರೀಗ್ಸ್‌ರಾಡ್ ಸಭೆಯಲ್ಲಿ ಇವನ ತಂದೆ ಫ್ರೆಡರಿಕನನ್ನು ದೊರೆಯಾಗಿ ಆರಿಸಿದಾಗ ಕೆಥೊಲಿಕರು ಹೆಚ್ಚು ಸಂಖ್ಯೆಯಲ್ಲಿದ್ದುದರಿಂದ ಲೂಥರ್ ಪಂಥದ ಕ್ರಿಶ್ಚನ್ ಉತ್ತರಾಧಿಕಾರಿಯಾಗಲು ಒಪ್ಪಲಿಲ್ಲ. ಆದರೆ ಅನಂತರ ಡೆನ್ಮಾರ್ಕಿನಲ್ಲಿ ಅನೇಕ ಮತೀಯ ಬದಲಾವಣೆಗಳು ಸಂಭವಿಸಿದುವು. ಜನರು ಲೂಥರನ ಪಂಥಕ್ಕೆ ಸೇರಿದರು. ಅವರು 1ನೆಯ ಫ್ರೆಡರಿಕನ ಅನಂತರ ಅವನ ಹಿರಿಯ ಮಗ ಕ್ರಿಶ್ಚನನೇ ಉತ್ತರಾಧಿಕಾರಿಯೆಂದು ಘೋಷಿಸಿದರು. 1533ರಲ್ಲಿ ಫ್ರೆಡರಿಕನ ನಿಧನಾನಂತರ ಕೆಥೊಲಿಕರು ಕ್ರಿಶ್ಚನನ ತಮ್ಮ ಹ್ಯಾನ್ಸನನ್ನು ಸಿಂಹಾಸನಕ್ಕೆ ತರಲು ನಿರ್ಧರಿಸಿದರು. ಆದರೆ ಪ್ರಾಟೆಸ್ಟಂಟರ ಸಹಾಯದಿಂದ 1534ರಲ್ಲಿ ಕ್ರಿಶ್ಚನ್ ಸಿಂಹಾಸನಕ್ಕೆ ಬಂದ. ಅವನು ಲೂಥರನ ಪಂಥಕ್ಕೆ ಸೇರಿದ್ದು ಅದರ ಕೇಂದ್ರವಾದ ವಿಟೆನ್‌ಬರ್ಗ್ ವಿಶ್ವವಿದ್ಯಾಲಯದೊಡನೆ ನಿಕಟಸಂಪರ್ಕ ಹೊಂದಿದ್ದಾಗ್ಯೂ ತನ್ನ ಕೆಥೊಲಿಕ್ ಪ್ರಜೆಗಳ ಬಗ್ಗೆ ಉದಾರ ನೀತಿಯನ್ನನುಸರಿಸಿ ಜನಪ್ರಿಯನಾದ.

ಅವನು ಪ್ರಾಟೆಸ್ಟಂಟ್ ಪಂಥವನ್ನವಲಂಬಿಸಿದ್ದ ಜರ್ಮನ್ ರಾಜ್ಯಗಳೊಡನೆ ಮೈತ್ರಿಯಿಂದಿದ್ದುದರಿಂದ ಹೋಲಿ ರೋಮನ್ ಚಕ್ರವರ್ತಿ 5ನೆಯ ಚಾರ್ಲ್ಸ್‌ನ ವಿರೋಧವನ್ನು ಎದುರಿಸಬೇಕಾಗಿ ಬಂತು. 1542ರಲ್ಲಿ ಡೆನ್ಮಾರ್ಕ್ ಹಾಗೂ ಇತರ ಪ್ರಾಟೆಸ್ಟಂಟ್ ರಾಷ್ಟ್ರಗಳ ಮತ್ತು ಆಸ್ಟ್ರಿಯ ಸಾಮ್ರಾಜ್ಯ ಇವುಗಳ ನಡುವೆ ಯುದ್ಧ ಪ್ರಾರಂಭವಾಯಿತು. ಆದರೆ 1544ರಲ್ಲಿ 5ನೆಯ ಚಾರ್ಲ್ಸ್ ಕ್ರಿಶ್ಚನನೊಡನೆ ಒಪ್ಪಂದ ಮಾಡಿಕೊಂಡ. ಯುರೋಪಿನ ಮತೀಯ ಯುದ್ಧಗಳಲ್ಲಿ ಡೆನ್ಮಾರ್ಕ್ ಭಾಗಿಯಾಗದಂತೆ ಕ್ರಿಶ್ಚನ್ ಉಪಾಯದಿಂದ ವರ್ತಿಸಿದ. ಅವನು ಅನೇಕ ಸುಧಾರಣೆಗಳನ್ನು ಜಾರಿಗೆ ತಂದುದರಿಂದ ಡೆನ್ಮಾರ್ಕಿನಲ್ಲಿ ಶಾಂತಿ ಸಮೃದ್ಧಿಗಳು ನೆಲಸಿ ಅದು ಯುರೋಪಿನ ಇತರ ಪ್ರಗತಿಪರ ರಾಷ್ಟ್ರಗಳಂತೆ ಮುಂದುವರಿಯಿತು. 3ನೆಯ ಕ್ರಿಶ್ಚನ್ 1559ರಲ್ಲಿ ನಿಧನ ಹೊಂದಿದ.

**ಕ್ರಿಶ್ಚನ್ IV :** 1577–1648. ಡೆನ್ಮಾರ್ಕ್ ಮತ್ತು ನಾರ್ವೆ ರಾಜ, ಎರಡನೆಯ ಫ್ರೆಡರಿಕನ ಮಗ. 1588ರಲ್ಲಿ ಫ್ರೆಡರಿಕ್ ಮರಣ ಹೊಂದಿದಾಗ ಕ್ರಿಶ್ಚನನಿನ್ನೂ ಪ್ರಾಪ್ತವಯಸ್ಕನಾಗಿರಲಿಲ್ಲ. ಡೆನ್ಮಾರ್ಕಿನ ರೀಗ್ಸ್‌ರಾಡ್ ಸಭೆಯ ನಾಲ್ಕು ಮಂದಿ ಪ್ರತಿನಿಧಿಗಳು ಅವನನ್ನು ರಾಜನೆಂದು ಘೋಷಿಸಿ 1596ರ ತನಕ ಅವನ ಹೆಸರಿನಲ್ಲಿ ಆಡಳಿತ ನಡೆಸಿದರು. ಅನಂತರ ಕ್ರಿಶ್ಚನ್ ವಿಧಿವತ್ತಾಗಿ ಸಿಂಹಾಸನಾರೋಹಣ ಮಾಡಿ ಆಡಳಿತವನ್ನೂ ವಹಿಸಿಕೊಂಡ. 1599 ರಲ್ಲಿ ಈತ ರಾಜಕೀಯದಲ್ಲಿ ಸ್ವತಂತ್ರ ಧೋರಣೆ ವಹಿಸಿ ಸ್ವೀಡನಿನ ವಿರುದ್ಧ ಕ್ರಮವನ್ನೂ ಕೈಗೊಂಡಾಗ ರೀಗ್ಸ್‌ರಾಡ್ ಅವನ ಸ್ವತಂತ್ರ ನೀತಿಗೆ ಅಡ್ಡಿ ಮಾಡಿತು. 1611–13ರ ಕಾಲ್ಮರ್ ಯುದ್ಧದಲ್ಲಿ ಸ್ವೀಡನಿನ ಗಸ್ಟೇವಸ್ ಅಡಾಲ್ಫಸನ ವಿರುದ್ಧ ಜಯಗಳಿಸಿದರೂ ಅದರಿಂದ ಪ್ರಯೋಜನವಾಗಲಿಲ್ಲ. ಅವನು ಕೈಗಾರಿಕೆಗಳನ್ನು ಸ್ಥಾಪಿಸಿದನಲ್ಲದೆ ವಾಣಿಜ್ಯ ಸಂಘಗಳಿಗೆ ಪ್ರೋತ್ಸಾಹ ನೀಡಿದ. ಡೆನ್ಮಾರ್ಕಿನಲ್ಲಿ ಅನೇಕ ಹೊಸ ನಗರಗಳು ನಿರ್ಮಾಣವಾದುವು. ಡಚ್ ಶಿಲ್ಪಿಗಳ ಸಹಾಯದಿಂದ ಅನೇಕ ಸುಂದರ ಸಾರ್ವಜನಿಕ ಭವನಗಳನ್ನು ಕಟ್ಟಿಸಿದ. ಗಸ್ಟೇವಸನ ನೇತೃತ್ವದಲ್ಲಿ ಸ್ವೀಡನ್ ಪ್ರಬಲವಾಗಿದ್ದುದರಿಂದ ಡೆನ್ಮಾರ್ಕ್ ರಾಜ್ಯವನ್ನು ಬಲಯುತಗೊಳಿಸಲು ಅವನು ಕೋಪೆನ್‌ಹೇಗೆನ್ ಬಳಿಯಲ್ಲಿ ಹೊಸ ಹಡಗು ಕಟ್ಟೆಯನ್ನು ನಿರ್ಮಿಸಿ ನೌಕಾದಳವನ್ನು ಬಲಗೊಳಿಸಿದ. ಆ ವೇಳೆಗಾಗಲೇ ಯುರೋಪಿನ ಇತರ ಭಾಗಗಳಲ್ಲಿ ನಡೆಯುತ್ತಿದ್ದ 30 ವರ್ಷಗಳ ಯುದ್ಧದಲ್ಲಿ 1624ರಲ್ಲಿ ಕೆಥೋಲಿಕ್ ರಾಷ್ಟ್ರಗಳು ವಿಜಯೋನ್ಮುಖವಾಗಿದ್ದುದರಿಂದ ಕ್ರಿಶ್ಚನ್ ಪ್ರಾಟೆಸ್ಟೆಂಟರಿಗೆ ಸಹಾಯ ಮಾಡಲು ಯುದ್ಧದಲ್ಲಿ ಭಾಗಿಯಾಗಬೇಕಾಯಿತು. ಪ್ರಾರಂಭದಲ್ಲಿ ಆತ ಜಯಗಳಿಸಿದನಾದರೂ

1626ರಲ್ಲಿ ಪರಾಜಯ ಹೊಂದಿದ. 1628ರಲ್ಲಿ ಗಸ್ಟೇವಸನೊಡನೆ ಒಪ್ಪಂದ ಮಾಡಿಕೊಂಡು ತನ್ನ ಸ್ಥಾನವನ್ನು ಕಾಪಾಡಿಕೊಳ್ಳಬೇಕಾಯಿತು. ಹಾಗೂ ಹೋಲಿ ರೋಮನ್ ಸಾಮ್ರಾಜ್ಯದೊಡನೆ 1629ರಲ್ಲಿ ಸಂಧಾನ ಮಾಡಿಕೊಂಡ.

1632ರಲ್ಲಿ ಗಸ್ಟೇವಸನ ನಿಧನಾನಂತರ ಡೆನ್ಮಾರ್ಕಿನ ಪ್ರಭಾವವನ್ನು ವಿಸ್ತರಿಸಲು ಕ್ರಿಶ್ಚನ್ ಪ್ರಯತ್ನಿಸಿದ. ಅವನ ಈ ಪ್ರಯತ್ನದಿಂದ ಸ್ವೀಡನಿಗೂ ಡೆನ್ಮಾರ್ಕಿಗೂ ಮತ್ತೆ ಯುದ್ಧ ಅನಿವಾರ್ಯವಾಯಿತು. ಸ್ವೀಡನಿನ ಪಡೆಗಳು ಜಟ್‌ಲೆಂಡನ್ನು ವಶಪಡಿಸಿಕೊಂಡು ಮುನ್ನುಗ್ಗಿ, ಡೆನ್ಮಾರ್ಕಿನ ನೌಕಾಬಲವನ್ನು ನಾಶಮಾಡಿದುವು. 1644ರಲ್ಲಿ ಕ್ರಿಶ್ಚನ್ ಸ್ವೀಡನಿನೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳಬೇಕಾಯಿತು. ಕ್ರಿಶ್ಚನನ ಯುದ್ಧಪರ ನೀತಿಯಿಂದ ಡೆನ್ಮಾರ್ಕಿನ ಮುಖಂಡರು ಅಸಂತುಷ್ಟರಾದರು. 4ನೆಯ ಕ್ರಿಶ್ಚನ್ 1648ರಲ್ಲಿ ನಿಧನ ಹೊಂದಿದ.

**ಕ್ರಿಶ್ಚನ್ V:** 1646–1699. ಡೆನ್ಮಾರ್ಕಿನ ಮೂರನೆಯ ಫ್ರೆಡರಿಕನ ಮಗ; ಡೆನ್ಮಾರ್ಕ್–ನಾರ್ವೇಗಳ ದೊರೆ. ತಂದೆಯ ಮರಣಾನಂತರ 1670ರಲ್ಲಿ ರಾಜನಾದ. ಡೆನ್ಮಾರ್ಕಿನ ಸಂಪ್ರದಾಯವಾದಿ ಶ್ರೀಮಂತ ಮುಖಂಡರ ರೀತಿ ಅವನಿಗೆ ಹಿಡಿಸಲಿಲ್ಲ. 5ನೆಯ ಕ್ರಿಶ್ಚನ್ ಸಾಮಾನ್ಯ ಪ್ರಜೆಗಳಲ್ಲಿ ಹೆಚ್ಚು ಸಹಾನುಭೂತಿ ಹೊಂದಿದ್ದು ಅವರಿಗೆ ಆಡಳಿತದಲ್ಲಿ ದೊಡ್ಡದೊಡ್ಡ ಹುದ್ದೆಗಳನ್ನು ನೀಡಿದ. ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ಜನಸಾಮಾನ್ಯರ ಪ್ರತಿನಿಧಿಗಳ ಸಭೆಗಳನ್ನು ಸ್ಥಾಪಿಸಿದ. ಆತನ ಕಾಲದಲ್ಲಿ ನಡೆದ ಸ್ಕ್ಯಾನಿಯನ್ ಯುದ್ಧದಿಂದಾಗಿ ಡೆನ್ಮಾರ್ಕ್ ಹಣ ಮತ್ತು ಸೈನ್ಯದ ಕೊರತೆಯನ್ನು ವಿಶೇಷವಾಗಿ ಎದುರಿಸಬೇಕಾಗಿ ಬಂತು. ಕ್ರಿಶ್ಚನ್ ಎದೆಗೆಡದೆ ಪರಿಸ್ಥಿತಿಯನ್ನು ಸುಧಾರಿಸಿದ. 1683ರಲ್ಲಿ ಅವನು ಹೊಸ ನ್ಯಾಯ ಸಂಹಿತೆಯೊಂದನ್ನು ಜಾರಿಗೆ ತಂದ. ತನ್ನ ಕಾಲದ ರಾಜಕೀಯ ನೀತಿಗಳ, ನಿರಂಕುಶಾಧಿಕಾರದ ಬಗ್ಗೆ ವಿವರಗಳನ್ನೊಳಗೊಂಡ ಲೇಖನವೊಂದನ್ನು ತನ್ನ ಮಗ 4ನೆಯ ಫ್ರೆಡರಿಕನಿಗೆ ಅಂಕಿತ ಮಾಡಿದ. 5ನೆಯ ಕ್ರಿಶ್ಚನ್ 1699ರಲ್ಲಿ ಬೇಟೆಯಾಡುತ್ತಿದ್ದಾಗ ದುರ್ಮರಣಕ್ಕೆ ಈಡಾದ.

**ಕ್ರಿಶ್ಚನ್ VI:** 1699–1746. ಡೆನ್ಮಾರ್ಕ್ ಮತ್ತು ನಾರ್ವೇ ರಾಜ 4ನೆಯ ಫ್ರೆಡರಿಕನ ಮಗ. ತನ್ನ ತಂದೆಯ ಮರಣಾನಂತರ 1730ರಲ್ಲಿ ಪಟ್ಟಕ್ಕೆ ಬಂದ. ಈತ ಉದಾರಿಯೂ ದೂರದೃಷ್ಟಿಯುಳ್ಳವನೂ ಆಗಿದ್ದ. ದಕ್ಷರಾದ ಮಂತ್ರಿಗಳನ್ನು ನೇಮಿಸಿಕೊಂಡು ವಿಚಕ್ಷಣೆಯಿಂದ ಆಳಿದ. ಅದುವರೆಗೂ ಆಸ್ಥಾನದಲ್ಲಿ ಆಚರಣೆಯಲ್ಲಿದ್ದ ಹಲವು ಅರ್ಥರಹಿತ ಪದ್ಧತಿಗಳನ್ನು ಇವನ ಆಳ್ವಿಕೆಯ ಕಾಲದಲ್ಲಿ ನಿಲ್ಲಿಸಲಾಯಿತು. ರಾಜಧಾನಿಯಲ್ಲಿ ಭವ್ಯ ಭವನಗಳನ್ನು ಕಟ್ಟಿಸಿದ. ಇವನದು ಶಾಂತಿಪರವಾದ ನೀತಿಯಾಗಿತ್ತು. ಈತ 1734ರಲ್ಲಿ ಸ್ವೀಡನಿನೊಡನೆ 15 ವರ್ಷಗಳ ಕಾಲದ ಯುದ್ಧ ನಿಷೇಧ ಒಪ್ಪಂದವನ್ನು ಮಾಡಿಕೊಂಡ. ಫ್ರಾನ್ಸಿನೊಡನೆಯೂ ಶಾಂತಿ ಬೆಳೆಸಿದ. ಡೆನ್ಮಾರ್ಕಿನ ವಾಣಿಜ್ಯ ನೀತಿಯನ್ನೂ ವಿದ್ಯಾಭ್ಯಾಸ ಪದ್ಧತಿಯನ್ನೂ ಪ್ರಗತಿಪರಗೊಳಿಸಿದ. ಈತ 1746ರಲ್ಲಿ ನಿಧನ ಹೊಂದಿದ.

**ಕ್ರಿಶ್ಚನ್ VII:** 1749–1808. ಡೆನ್ಮಾರ್ಕ್ ಮತ್ತು ನಾರ್ವೇ ರಾಜ; ಐದನೆಯ ಫ್ರೆಡರಿಕನ ಮಗ. ತನ್ನ ತಂದೆಯ ನಿಧನಾನಂತರ 1766ರಲ್ಲಿ ಪಟ್ಟಕ್ಕೆ ಬಂದ. ಶಿಕ್ಷಣವಾಗಲಿ, ಇತರ ಧೀಮಂತ ಗುಣಗಳಾಗಲಿ ಅವನಲ್ಲಿರಲಿಲ್ಲ. 1766ರಲ್ಲಿ ಫ್ರೆಡರಿಕನ ಮಗಳಾದ ಕೆರೋಲಿನ್ ಮೆಟಿಲ್ಡಳೊಡನೆ ಅವನ ಮದುವೆಯಾಯಿತು. ಕ್ರಿಶ್ಚನ್ ಇಂದ್ರಿಯ ಲೋಲುಪನಾಗಿ ದುಶ್ಚಟಗಳಿಗೆ ಬಲಿಯಾಗಿ ಮಾನಸಿಕ ಆರೋಗ್ಯವನ್ನು ಕಳೆದುಕೊಂಡ. 1768ರಲ್ಲಿ ಹಾಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಸಂಚರಿಸಿ 1769ರಲ್ಲಿ ಹಿಂದಿರುಗಿದಾಗ ಅವನ ಮನಸ್ಸಿನ ಸ್ತಿಮಿತ ಸಂಪೂರ್ಣವಾಗಿ ಹಾಳಾಗಿತ್ತು. ಅಧಿಕಾರ ಮಂತ್ರಿಗಳ ಕೈಸೇರಿತು. ಮಂತ್ರಿ ಸ್ಟ್ರೂಯನ್ಸೀಗೂ ರಾಣಿಗೂ ಅನೈತಿಕ ಸಂಬಂಧವಿದ್ದುದರಿಂದ ಅವನನ್ನು ರೀಗ್ಸ್‌ರಾಡ್ ವಿಚಾರಣೆಗೊಳಪಡಿಸಿ 1772ರಲ್ಲಿ ಅವನಿಗೆ ಮರಣದಂಡನೆ ವಿಧಿಸಲಾಯಿತು. ರಾಣಿ ವಿವಾಹವಿಚ್ಛೇದನ ಶಿಕ್ಷೆಗೊಳಗಾದಳು. ಅನಂತರ 1808ರಲ್ಲಿ ಕ್ರಿಶ್ಚನ್ ಮರಣ ಹೊಂದುವವರೆಗೆ ರಾಜಕುಮಾರನೂ ಮಂತ್ರಿಗಳೂ ಆಡಳಿತ ನಡೆಸಿದರು.

**ಕ್ರಿಶ್ಚನ್ VIII:** 1786–1848. ಈತ 1839–1848ರಲ್ಲಿ ಡೆನ್ಮಾರ್ಕಿನ ರಾಜನಾಗಿದ್ದ. ಇವನು 6ನೆಯ ಫ್ರೆಡರಿಕನ ಕಿರಿಯ ಮಗ. ಕೀಲ್ ಒಪ್ಪಂದದ ಪ್ರಕಾರ 6ನೆಯ ಫ್ರೆಡರಿಕ್ ನಾರ್ವೇಯನ್ನು ಸ್ವೀಡನಿಗೆ ವಹಿಸಿಕೊಡಬೇಕಾಗಿತ್ತು. ಆದರೆ ರಾಜಕುಮಾರ ಕ್ರಿಶ್ಚನ್ ಅದನ್ನು ವಿರೋಧಿಸಿದ. ವಿಧಾನಸಭೆಯಲ್ಲಿದ್ದ ಈತನ ಹಿಂಬಾಲಕರು 1814ರಲ್ಲಿ ಇವನನ್ನು ನಾರ್ವೇಯ ರಾಜನನ್ನಾಗಿ ಚುನಾಯಿಸಿದರು. ಕೀಲ್ ಒಪ್ಪಂದವನ್ನು ಗೌರವಿಸಿ, ನಾರ್ವೇಯ ಅಧಿಕಾರವನ್ನು ತ್ಯಜಿಸುವಂತೆ ಆಸ್ಟ್ರಿಯ, ರಷ್ಯ, ಪ್ರಷ್ಯ ಮತ್ತು ಇಂಗ್ಲೆಂಡ್ ರಾಜತಾಂತ್ರಿಕರು ಕ್ರಿಶ್ಚನನನ್ನು ಒತ್ತಾಯಪಡಿಸಿದರು. ಕ್ರಿಶ್ಚನ್ ಈ ಒತ್ತಾಯವನ್ನು ವಿರೋಧಿಸಿ ಸ್ವೀಡನಿನ ಮೇಲೆ ಯುದ್ಧ ಹೂಡಿದ. 1814ರಲ್ಲಿ ನಡೆದ ಅಲ್ಪಕಾಲದ ಯುದ್ಧದಲ್ಲಿ ಸ್ವೀಡನಿನ ಪಡೆಗಳು ನಾರ್ವೇ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿದುವು. 1814ರ ಆಗಸ್ಟ್ 14ರಲ್ಲಿ ಮಾಸ್ ಶಾಂತಿ ಒಪ್ಪಂದವಾಗಿ ಯುದ್ಧ ಕೊನೆಗೊಂಡಿತು. ಕ್ರಿಶ್ಚನ್ ನಾರ್ವೇ ತ್ಯಜಿಸಿ ಡೆನ್ಮಾರ್ಕಿಗೆ ಹೋಗಬೇಕಾಯಿತು. 1839ರಲ್ಲಿ ತನ್ನ ತಂದೆ 6ನೆಯ ಫ್ರೆಡರಿಕನ ನಿಧನಾನಂತರ ಆತ ಸ್ವೀಡನಿನ ರಾಜನಾದ. ಲಿಬರಲ್ ಪಕ್ಷದ ಮುಖಂಡರು ಸೂಚಿಸಿದ ಹಲವು ಸುಧಾರಣೆಗಳನ್ನು ಕ್ರಿಶ್ಚನ್ ಒಪ್ಪದಿದ್ದಾಗ್ಯೂ ತಾನೇ 1843ರಲ್ಲಿ ಅನೇಕ ಸುಧಾರಣೆಗಳನ್ನು ಆಚರಣೆಗೆ ತಂದ. ಅವನು 1848ರಲ್ಲಿ ನಿಧನ ಹೊಂದಿದ.

**ಕ್ರಿಶ್ಚನ್ IX:** 1818–1906. ಷೆಲ್ಸ್‌ವಿಗ್–ಹಾಲ್‌ಸ್ಟೇನಿನ ಡ್ಯೂಕ್ ವಿಲಿಯಂನ ಕಿರಿಯ ಮಗ; ಡೆನ್ಮಾರ್ಕಿನ ರಾಜ. ಈತ 1835ರಲ್ಲಿ ಸೈನ್ಯಕ್ಕೆ ಸೇರಿದ. 1842ರಲ್ಲಿ ಡೆನ್ಮಾರ್ಕಿನ ರಾಜ 7ನೆಯ ಫ್ರೆಡರಿಕನ ದಾಯಾದಿ ಸೋದರಿಯೊಡನೆ ಈತನ ಮದುವೆಯಾಯಿತು. 7ನೆಯ ಫ್ರೆಡರಿಕನಿಗಾಗಲಿ ಅವನ ತೀರ ಸಮೀಪದ ಸಂಬಂಧಿಗಳಾಗಲಿ ಮಕ್ಕಳಿರಲಿಲ್ಲವಾದ್ದರಿಂದ ಡೆನ್ಮಾರ್ಕಿನ ಸಿಂಹಾಸನಕ್ಕೆ ಉತ್ತರಾಧಿಕಾರಿಯಿಲ್ಲವಾಗಿತ್ತು. ಡೆನ್ಮಾರ್ಕಿನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಪರಿಹರಿಸಲು 1852ರಲ್ಲಿ ಲಂಡನಿನಲ್ಲಿ ಸೇರಿದ್ದ ಐರೋಪ್ಯ ರಾಷ್ಟ್ರಗಳ ಪ್ರತಿನಿಧಿಗಳ ಸಭೆ ಕ್ರಿಶ್ಚನನನ್ನು ಡೆನ್ಮಾರ್ಕಿಗೆ ಉತ್ತರಾಧಿಕಾರಿಯಾಗಿ ನಾಮಕರಣ ಮಾಡಿತು. 1863ರಲ್ಲಿ 7ನೆಯ ಫ್ರೆಡರಿಕ್ ನಿಧನ ಹೊಂದಿದ ಅನಂತರ ಕ್ರಿಶ್ಚನ್ ಡೆನ್ಮಾರ್ಕಿನ ರಾಜನಾದ. ಇವನ ಆಳ್ವಿಕೆಯಲ್ಲಿ ಷೆಲ್ಸ್‌ವಿಗ್‌ಗೆ ಸಂಬಂಧಿಸಿದ ಜಿಜ್ಞಾಸೆ ಬಹುಕಾಲ ಮುಂದುವರಿಯಿತು. ಅಧಿಕಾರಕ್ಕಾಗಿ ಬಲಪಕ್ಷ ವಾಮಪಕ್ಷಗಳ ಮಧ್ಯೆ ಅವಿರತ ಹೋರಾಟ ನಡೆಯಿತು. 1901ರಲ್ಲಿ ಸಂಪುಟ ಪದ್ಧತಿಯ ಕಾನೂನಿಗೆ ಕ್ರಿಶ್ಚನ್ ಒಪ್ಪಿಗೆ ನೀಡಬೇಕಾಯಿತು. ತನ್ನ ಕುಮಾರಿ ಅಲೆಕ್ಸಾಂಡ್ರಳನ್ನು ಗ್ರೇಟ್ ಬ್ರಿಟನಿನ ರಾಜ 7ನೆಯ ಎಡ್ವರ್ಡ್‌ನಿಗೆ ವಿವಾಹ ಮಾಡಿಕೊಟ್ಟುದರಿಂದ ಕ್ರಿಶ್ಚನನ ಪ್ರತಿಷ್ಠೆ ಹೆಚ್ಚಿತು. ಅವನು 1906ರಲ್ಲಿ ನಿಧನ ಹೊಂದಿದ.

**ಕ್ರಿಶ್ಚನ್ X:** 1870–1947. 1912–1947ರಲ್ಲಿ ಡೆನ್ಮಾರ್ಕಿನ ಮತ್ತು 1918–44ರಲ್ಲಿ ನಾರ್ವೇ–ಸ್ವೀಡನ್‌ಗಳ ದೊರೆ. 8ನೆಯ ಫ್ರೆಡರಿಕನ ಮಗ. ಸಿಂಹಾಸನಕ್ಕೆ ಬರುವ ಮೊದಲು 1889ರಲ್ಲಿ ಸೈನ್ಯ ಸೇರಿ 1908ರಲ್ಲಿ ಮೇಜರ್–ಜನರಲ್ ಹುದ್ದೆ ಪಡೆದ. 1906ರಿಂದ ಯುವರಾಜನಾಗಿದ್ದ. ತಂದೆಯ ನಿಧನಾನಂತರ 1912ರಲ್ಲಿ ರಾಜನಾದ. ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ 1914ರ ಕೊನೆಯಲ್ಲಿ ನಡೆದ ಸ್ಕಾಂಡಿನೇವಿಯನ್ ರಾಜರ ಸಭೆಯಲ್ಲಿ ಭಾಗವಹಿಸಿದ್ದ. 1915ರಲ್ಲಿ ಅವನು ಡೆನ್ಮಾರ್ಕಿನ ಹೊಸ ವಿಧೇಯಕಕ್ಕೆ ಮನ್ನಣೆ ನೀಡಿದುದರಿಂದ ಸ್ತ್ರೀಯರಿಗೂ ಮತದಾನದ ಹಕ್ಕು ಲಭಿಸಿತು.

ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನರು ಡೆನ್ಮಾರ್ಕನ್ನು ಆಕ್ರಮಿಸಿದರು. 10ನೆಯ ಕ್ರಿಶ್ಚನ್ ನಾಟ್ಸಿಗಳನ್ನು ವಿರೋಧಿಸಿದ್ದರಿಂದ ಮಿತ್ರರಾಷ್ಟ್ರಗಳ ಮನ್ನಣೆ ಅವನಿಗೆ ದೊರಕಿತು. 1943ರಲ್ಲಿ ಜರ್ಮನರು ಅವನನ್ನು ಬಂಧಿಸಿದರು. ಜರ್ಮನಿ ಸೋಲುವತನಕ ಅವನು ಬಂಧನದಲ್ಲಿದ್ದ. 1945ರಲ್ಲಿ ಜರ್ಮನ್ ಆಕ್ರಮಣ ತೆರವಾದ ಅನಂತರ ಡೇನಿಷ್ ಪಾರ್ಲಿಮೆಂಟನ್ನು ಸೇರಿಸಿ 1947ರಲ್ಲಿ ತನ್ನ ಮರಣದತನಕ ಆಡಳಿತವನ್ನು ಮುಂದುವರಿಸಿದ. 1944ರಲ್ಲಿ ಐಸ್ಲೆಂಡಿನ ಒಕ್ಕೂಟ ಕಾಯಿದೆಯನ್ನು ತಿದ್ದುಪಡಿ ಮಾಡಿದಾಗ ಐಸ್ಲೆಂಡ್ ಸ್ವತಂತ್ರ ಗಣರಾಜ್ಯವಾಯಿತು. (ಜಿ.ಆರ್.ಆರ್)

**ಕ್ರಿಶ್ಚನ್ ಪ್ರಜಾಸತ್ತಾತ್ಮಕ ಪಕ್ಷಗಳು :** ಚರ್ಚು ಮತ್ತು ರಾಜ್ಯಗಳ ನಡುವೆ ಉಂಟಾದ ವೈಮನಸ್ಸಿನಿಂದ ಹುಟ್ಟಿಕೊಂಡ ಆಧುನಿಕ ಕ್ರಿಶ್ಚನ್ ಪಕ್ಷಗಳು. ಈ ಪಕ್ಷಗಳೂ ಮೊದಲಿಗೆ ಹುಟ್ಟಿಕೊಂಡಿದ್ದು ಜರ್ಮನಿ, ಬೆಲ್ಜಿಯಂ, ಸ್ವಿಟ್ಜರ್ಲೆಂಡ್‌ಗಳ ಕೆಥೊಲಿಕರಲ್ಲಿ. ನೆದರ್ಲೆಂಡ್ಸಿನ ಕೆಥೊಲಿಕರೊಂದಿಗೆ ಪ್ರಾಟೆಸ್ಟಂಟರೂ ಇದರಲ್ಲಿ ಭಾಗಿಗಳಾದರು. ಚರ್ಚಿನ ಸ್ವಾತಂತ್ರ್ಯ ಕಾಪಾಡುವುದು, ಶಾಲೆಗಳಲ್ಲಿ ಕ್ರೈಸ್ತ ತಂದೆ ತಾಯಿಗಳ ಹಕ್ಕುಗಳನ್ನು ಉದಾರವಾದಿಗಳ, ರಾಷ್ಟ್ರೀಯವಾದಿಗಳ ಮತ್ತು ಅನಂತರ ಬಂದ ಸಮಾಜವಾದಿಗಳ ದಾಳಿಗಳಿಂದ ರಕ್ಷಿಸುವುದು ಇವುಗಳ ಮುಖ್ಯ ಗುರಿ. ಹೀಗೆ ಧಾರ್ಮಿಕ ಕ್ಷೇತ್ರದ ಮೇಲೆ ರಾಜಕೀಯ ಪಕ್ಷಗಳ ನೇರ ಕೈವಾಡ ಬಂದೊದಗದಿದ್ದರೆ ಇಂಥ ಪಕ್ಷಗಳೂ ಉದಯವಾಗುತ್ತಿರಲಿಲ್ಲ. ಯುರೋಪಿನ ರಾಜಕೀಯದ ಒಲವು 1880ರಿಂದ ಆಚೆ ಸಾಮಾಜಿಕ ಸುಧಾರಣೆಯ ಕಡೆ ವಾಲಿತಷ್ಟೆ. ಇದು ಎಲ್ಲೆಲ್ಲಿ ಸಂಭವಿಸಿತೋ ಅಲ್ಲೆಲ್ಲ ಕ್ರೈಸ್ತರು ತಮ್ಮದೇ ಆದ ಸಾಮಾಜಿಕ, ಕಾರ್ಮಿಕ, ರೈತ, ಯುವಕ, ಮತ್ತು ಮಹಿಳಾ ಚಳವಳಿಯನ್ನಾರಂಭಿಸಿದರು. ಕ್ರಮೇಣ ಇವೆಲ್ಲ ಕ್ರೈಸ್ತ ರಾಜಕೀಯ ಪಕ್ಷಗಳಾಗಿ ಮಾರ್ಪಾಡಾದುವು.

ಒಂದನೆಯ ಮಹಾಯುದ್ಧದ ಅನಂತರ ಈ ಪಕ್ಷಗಳು ಚರ್ಚಿನ ಹಿತಾಸಕ್ತಿಗಿಂತ ರಾಜಕೀಯ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ನಾಗರಿಕರ ಹಿತಾಸಕ್ತಿಗಳತ್ತ ಹೆಚ್ಚಿನ ಗಮನ ನೀಡಿದುವು. ಈ ಕಾಲದಲ್ಲಿ ಸ್ಥಾಪಿತವಾದ ಪ್ರಮುಖ ಪಕ್ಷಗಳೆಂದರೆ ಫ್ರಾನ್ಸಿನಲ್ಲಿ ಪಾರ್ಟಿ ಡೆಮೊಕ್ರೆಟ್ ಪಾಪ್ಯುಲೇರ್ (1924). ಇಟಲಿಯಲ್ಲಿ ಪಾರ್ಟಿಯೊ ಪಾಪ್ಯುಲೇರ್ (1919). ಇಟಲಿಯಲ್ಲಿ ಸ್ಥಾಪಿತವಾದ ಪಕ್ಷ ಫ್ಯಾಸಿಸ್ಟರಿಂದ ವಿಸರ್ಜಿಸಲ್ಪಟ್ಟಿತು (1926). ಈ ಪಕ್ಷ ಪುನಃಶ್ಚೇತನಗೊಂಡದ್ದು 1944ರಲ್ಲಿ. ಪಕ್ಷ ವಿಕಾಸಗೊಂಡು ಬೆಳೆದದ್ದು ಎರಡನೆಯ ಮಹಾಯುದ್ಧದ ಕೊನೆಯಲ್ಲಿ. ಕೆಥೊಲಿಕರೇ ಹೆಚ್ಚಾಗಿದ್ದ ಜರ್ಮನ್ ಪಕ್ಷ ಸ್ಥಾಪನೆಯಾದದ್ದು 1870ರಲ್ಲಿ. ಜೇಂಟ್ರಮ್ ಎಂಬ ಹೆಸರಿನ ಈ ಪಕ್ಷ ಸ್ವಪ್ರೇರಣೆಯಿಂದ ವಿಸರ್ಜನೆಗೊಂಡಿತು (1933). ಪಶ್ಚಿಮ ಜರ್ಮನಿಯಲ್ಲಿ ಕ್ರಿಶ್ಚನ್ ಪ್ರಜಾಸತ್ತಾತ್ಮಕ ಕೂಟ ಸ್ಥಾಪನೆಯಾದದ್ದು 1946ರಲ್ಲಿ. ಇದರಲ್ಲಿ ಕೆಥೊಲಿಕರು ಪ್ರಾಟೆಸ್ಟಂಟರು ಇಬ್ಬರೂ ಇದ್ದರು.

ಎರಡನೆಯ ಮಹಾಯುದ್ಧಾನಂತರ ಪುನಃಶ್ಚೇತನಗೊಂಡ ಹಲವು ಪಕ್ಷಗಳು ಹೊಸ ಉದ್ದೇಶಗಳಿಗೆ ಅನುಗುಣವಾಗಿ ತಮ್ಮ ಸಂವಿಧಾನವನ್ನು ಬದಲಿಸಿಕೊಂಡುವು. ಕೆಲವು ಪಕ್ಷಗಳು ತಮ್ಮ ಹೆಸರನ್ನೂ ಬದಲಿಸಿಕೊಂಡುವು. ಆ ಕಾಲದ ಜ್ವಲಂತ ಸಮಸ್ಯೆಗಳಾಗಿದ್ದ ಯುರೋಪಿನ ಏಕತೆ, ಅಭಿವೃದ್ಧಿ ಹೊಂದದ ಪ್ರದೇಶಗಳಿಗೆ ನೆರವು–ಮೊದಲಾದ ಸಮಾಜೋದ್ಧಾರಕ ಕಾರ್ಯಗಳಲ್ಲಿ ಅವು ಸಹಕರಿಸಿ ಕೆಲಸ ಮಾಡಿದವು. ಕ್ರಿಶ್ಚನ್ ಪ್ರಜಾಸತ್ತಾತ್ಮಕ ಚಳವಳಿಯ ಸಾಮಾನ್ಯ ತತ್ತ್ವಗಳಿವು; ಬಹು ಜನರಿಗೆ ಸಹಾಯವಾಗುವಂಥ ನೀತಿ, ಎಲ್ಲ ಧಾರ್ಮಿಕ ಪಂಗಡಗಳನ್ನು ಗೌರವಿಸುವುದು, ಎಲ್ಲರೂ ಸಮಾನವಾದ ರಾಜಕೀಯ,

ಜರ್ಮನಿಯ ಕ್ರಿಶ್ಚನ್ ಡೆಮೊಕ್ರ್ಯಾಟ್ ಯೂನಿಯನ್ ಹೊರಡಿಸಿದ ಭಿತ್ತಿಚಿತ್ರ

ಸಾಮಾಜಿಕ ಹಕ್ಕುಗಳನ್ನು ಅನುಭವಿಸಬೇಕೆಂಬ ತತ್ತ್ವದ ಪ್ರತಿಪಾದನೆ, ಮನುಷ್ಯನ ವ್ಯಕ್ತಿತ್ವದ ಬೆಳವಣಿಗೆಗೆ ಸದವಕಾಶ ಕಲ್ಪಿಸಿಕೊಡುವುದು. ಕಲ್ಯಾಣರಾಜ್ಯ ಪಕ್ಷದ ಗುರಿಯಾದರೂ ಅದನ್ನು ಸರ್ಕಾರದ ಕಾನೂನಿನ ಮೂಲಕ ಜಾರಿಗೆ ತರುವ ವಿಷಯವನ್ನು ಪಕ್ಷ ಒಪ್ಪುವುದಿಲ್ಲ. ಜನಗಳಿಗೆ ಉಚಿತ ಶಿಕ್ಷಣ ಕೊಡುವುದರ ಮೂಲಕ ಅವರ ಕಲ್ಯಾಣವನ್ನು ಅವರೇ ಸಾಧಿಸುವಂತೆ ಮಾಡಬೇಕೆಂಬುದೇ ಈ ಪಕ್ಷದ ಗುರಿ. ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ಹೊಣೆಗಾರಿಕೆ ವಹಿಸಿಕೊಡಬೇಕೆಂಬುದರ ಪ್ರತಿಪಾದನೆ. ಕುಟುಂಬವನ್ನು ಸ್ಥಳೀಯ ಸಮಾಜದ ಸದಸ್ಯ ಎಂದೂ ರಾಜ್ಯಗಳನ್ನು ಅಂತಾರಾಷ್ಟ್ರೀಯ ಸಮಾಜದ ಸದಸ್ಯ ಎಂದೂ ಭಾವಿಸುವುದು, ಯುರೋಪ್ ಮತ್ತು ಲ್ಯಾಟಿನ್ ಅಮೆರಿಕೆಗಳ ಒಕ್ಕೂಟವನ್ನು ಬೆಂಬಲಿಸುವುದು, ಹಿಂದಿನದಕ್ಕೆ ಅಂಟಿಕುಳಿತುಕೊಳ್ಳದೇ ವಿಶಾಲ ಬದಲಾವಣೆಗೆ ಬೆಂಬಲ ನೀಡುವುದು, ಕ್ರಾಂತಿಕಾರಿ ಬದಲಾವಣೆಗೆ ವಿರೋಧ ತೋರುವುದು. ಸ್ಪರ್ಧೆಯಿರುವ ರಾಜಕೀಯ ಮತ್ತು ಸಾಮಾಜಿಕ ಪ್ರಭುತ್ವವನ್ನು ಬೆಂಬಲಿಸುವುದು–ಈ ಮೊದಲಾದ ವಿಷಯಗಳಿಗೂ ಪಕ್ಷ ತನ್ನ ಬೆಂಬಲ ನೀಡುತ್ತದೆ.

ಉದಾರವಾದಿಗಳು ಮತ್ತು ಸಮಾಜವಾದಿಗಳೊಂದಿಗೆ ಕ್ರಿಶ್ಚನ್ ಪ್ರಜಾಸತ್ತಾತ್ಮಕ ಪಕ್ಷಗಳಿಗೆ ಮೊದಲಿದ್ದ ವೈಮನಸ್ಸು ಈಗೀಗ ಇಲ್ಲವಾಗಿದೆ. ಪ್ರಜಾಪ್ರಭುತ್ವ ವಿರೋಧಿಗಳ ವಿರುದ್ಧ ಈ ಪಕ್ಷ ಒಂದಾಗಿ ಹೋರಾಡುತ್ತಿದೆ.

ಎರಡನೆಯ ಮಹಾಯುದ್ಧಾ ನಂತರ ಕ್ರಿಶ್ಚನ್ ಪ್ರಜಾಸತ್ತಾತ್ಮಕ ಪಕ್ಷಗಳು ಜರ್ಮನ್ ಫೆಡರಲ್ ರಿಪಬ್ಲಿಕ್, ಇಟಲಿ, ನೆದರ್ಲೆಂಡ್ಸ್, ಬೆಲ್ಜಿಯಂ, ಆಸ್ಟ್ರಿಯಗಳ ಪಾರ್ಲಿಮೆಂಟುಗಳಲ್ಲಿ ನಿಚ್ಚಳ ಬಹುಮತಗಳಿಸಿದುವು. ಇಲ್ಲದೇ ಬಹುಮತಕ್ಕೆ ಸಮೀಪ ಬಂದುವು. ಫ್ರಾನ್ಸ್, ಸ್ವಿಟ್ಜರ್ಲೆಂಡ್, ಲಕ್ಸಂಬರ್ಗ್ ಗಳ ಪಾರ್ಲಿಮೆಂಟುಗಳಲ್ಲಿ ಅವು ಪ್ರಭಾವಶಾಲಿಯಾದುವು. ಲ್ಯಾಟಿನ್ ಅಮೆರಿಕದಲ್ಲಿ ಈ ಪಕ್ಷಗಳ ಪ್ರಭಾವ 1945ರ ಅನಂತರ ಪ್ರಬಲವಾಯಿತು. ಪೋಲೆಂಡ್, ಹಂಗರಿ, ಜೆಕೊಸ್ಲೊವಾಕಿಯ ಮತ್ತು ಬಾಲ್ಟಿಕ್ ರಾಜ್ಯಗಳಲ್ಲಿ ಕಮ್ಯೂನಿಸ್ಟ್ ನಿರಂಕುಶ ಪ್ರಭುತ್ವ ತಲೆ ಎತ್ತುವವರೆಗೂ ಕ್ರಿಶ್ಚನ್ ಪ್ರಜಾಸತ್ತಾತ್ಮಕ ಪಕ್ಷಗಳ ರಾಜಕೀಯ ಚಳವಳಿ ಊರ್ಜಿತವಾಗಿತ್ತು. ಸ್ಪೇನಿನ ಅಂತರ್ಯುದ್ಧದಲ್ಲಿ ಜನರಲ್ ಫ್ರಾನ್ಸಿಸ್ಕೊ ಫ್ರ್ಯಾಂಕೋನ ವಿಜಯದವರೆಗೂ ಈ ಪಕ್ಷ ಬಲವಾಗಿತ್ತಲ್ಲದೇ ಈ ದೇಶಗಳಲ್ಲಿಯ ನಾಗರಿಕರು ಸೆರೆಮನೆಯಲ್ಲೂ ಚಳವಳಿ ನಡೆಸಿದ್ದುಂಟು. ಲ್ಯಾಟಿನ್ ಅಮೆರಿಕನ್ ಪಕ್ಷಗಳೂ ಕ್ರಿಶ್ಚನ್ ಪ್ರಜಾಸತ್ತಾತ್ಮಕ ಸಂಘವನ್ನು ಸ್ಥಾಪಿಸಿದ್ದು 1949ರಲ್ಲಿ. ಯುವಕ ಕ್ರಿಶ್ಚನ್ ಪ್ರಜಾಸತ್ತಾತ್ಮಕ ಅಂತಾರಾಷ್ಟ್ರೀಯ ಸಂಘವೊಂದು 1948ಕ್ಕೆ ಆಗಲೆ ಸ್ಥಾಪನೆಯಾಗಿತ್ತು. ಕ್ರಿಶ್ಚನ್ ಪ್ರಜಾಸತ್ತಾತ್ಮಕ ಪಕ್ಷಗಳ ಮೊದಲ ವಿಶ್ವಸಮ್ಮೇಳನ 1956ರಲ್ಲೂ ಎರಡನೆಯದು 1958ರಲ್ಲೂ ನಡೆಯಿತಲ್ಲದೇ ಅಂತರ ಖಂಡೀಯ ಕ್ರಿಶ್ಚನ್ ಪ್ರಜಾಪ್ರಭುತ್ವ ಸಮಿತಿಯೊಂದು ಸ್ಥಾಪನೆಯಾಯಿತು. ಕ್ರಿಶ್ಚನ್ ಪ್ರಜಾಸತ್ತಾತ್ಮಕ ಪಕ್ಷಗಳಲ್ಲಿ ಹೆಚ್ಚಿನವು ಕ್ರಿಶ್ಚನ್ ಎಂಬ ಪದವನ್ನು ಪಕ್ಷದ ಹೆಸರಿನಲ್ಲಿ ಬಳಸುತ್ತವೆ. ಫ್ರೆಂಚ್ ಎಂ.ಆರ್.ಪಿ. ತನ್ನ ಹೆಸರಿನಲ್ಲಾಗಲಿ, ನಿಯಮಾವಳಿಯಲ್ಲಾಗಲಿ ಕ್ರಿಶ್ಚನ್ ಪದ ಬಳಸುತ್ತಿಲ್ಲ. ಪ್ರಾಟೆಸ್ಟಂಟ್ ಮತ್ತು ಕೆಥೊಲಿಕರಿಬ್ಬರೂ ಈ ಪಕ್ಷಗಳನ್ನು ಬೆಂಬಲಿಸುತ್ತಿದ್ದಾರೆ. ನೆದರ್ಲೆಂಡ್ಸ್ ಮತ್ತು ಜರ್ಮನ್ ಫೆಡರಲ್ ರಿಪಬ್ಲಿಕ್‌ಗಳಲ್ಲಿ ಪ್ರಾಟೆಸ್ಟಂಟರ ಬೆಂಬಲ ಈ ಪಕ್ಷಗಳಿಗೆ ಸಾಕಷ್ಟಿದೆ. ನಾರ್ವೇಯಲ್ಲಿ ಈ ಪಕ್ಷ ಸಂಪೂರ್ಣವಾಗಿ ಪ್ರಾಟೆಸ್ಟಂಟರದು.

ಯುರೋಪಿನಲ್ಲಿ ಕೆಥೊಲಿಕ್ ರಾಜಕೀಯ ಸಂಸ್ಥೆಗಳು ಬೆಳೆಯಲು ಸ್ಫೂರ್ತಿ ನೀಡಿದ ಪೋಪ್ ಲಿಯೊ XIII

ಕ್ರಿಶ್ಚನ್ ಪ್ರಜಾಸತ್ತಾತ್ಮಕ ಪಕ್ಷಗಳ ಸಂವಿಧಾನದಲ್ಲಿ ಆಗಿರುವ ಹೊಸ ಬದಲಾವಣೆಯಂತೆ ಪಕ್ಷದ ಸದಸ್ಯತ್ವ ಕೆಥೊಲಿಕರು, ಪ್ರಾಟೆಸ್ಟಂಟರಿಗಷ್ಟೇ ಮೀಸಲಲ್ಲ. ಇತರ ಧರ್ಮಗಳವರಿಗೂ ಮಾನವತಾವಾದಿಗಳಿಗೂ ಅದು ತೆರೆದಿದೆ. ಒಂದನೆಯ ಮಹಾಯುದ್ಧ ಮುಗಿಯುವ ವರೆಗೂ ಚರ್ಚು ಮತ್ತು ಪಕ್ಷಗಳ ವ್ಯತ್ಯಾಸ ಸ್ಪಷ್ಟವಾಗಿರಲಿಲ್ಲ. ಆದ್ದರಿಂದ ಹಲವು ರಾಜ್ಯಗಳಲ್ಲಿ ಇದು ವೈಮನಸ್ಸಿಗೆ ಎಡೆಮಾಡಿಕೊಟ್ಟಿತ್ತು. ಆದರೆ 1945ರ ಅನಂತರ ವೈಮನಸ್ಯ ಕಡಿಮೆಯಾಯಿತಲ್ಲದೆ ಚರ್ಚು ಮತ್ತು ಪಕ್ಷಗಳ ನಡುವೆ ಸಹಕಾರ ಸೌಹಾರ್ದಗಳೂ ಏರ್ಪಟ್ಟಿವೆ. *

**ಕ್ರಿಶ್ಚನ್ ಬಾವುಟ :** ರೂಢಿಯಿಂದ ಅನೇಕ ಚರ್ಚುಗಳು ಬಳಕೆಗೆ ತಂದಿರುವ ಒಂದು ಬಾವುಟ. ಇದರ ವಿನ್ಯಾಸ ಹೀಗಿದೆ : ಬಿಳಿಯ ಆಯಾಕಾರದ ಬಟ್ಟೆಯ ಮೇಲು ಭಾಗದ ಎಡ ಕೊನೆಯಲ್ಲಿ–ಎಂದರೆ ಧ್ವಜಸ್ತಂಭದ ಕಡೆಯ ಕೊನೆಯಲ್ಲಿ–ನೀಲಿಯ ಚಿಕ್ಕ ಆಯವೊಂದಿದ್ದು ಅದರ ನಡುವೆ ಕೆಂಪು ಬಣ್ಣದ ಲ್ಯಾಟಿನ್ ಶಿಲುಬೆ ಇರುತ್ತದೆ. ನ್ಯೂಯಾರ್ಕಿನ ಧಾರ್ಮಿಕ ಶಾಲೆಯೊಂದರ (ಸಂಡೆ ಸ್ಕೂಲ್) ಮುಖ್ಯಸ್ಥನಾದ ಸಿ.ಸಿ. ಓವರ್ಟನ್ ಎಂಬಾತ 1897ರಲ್ಲಿ ಇದನ್ನು ರೂಪಿಸಿದನೆನ್ನಲಾಗಿದೆ. ಇದರಲ್ಲಿಯ ಬಿಳಿ ಪರಿಶುದ್ಧತೆಗೂ ನೀಲಿ ನಿರ್ಭಯತೆಗೂ ಕೆಂಪು ಶಿಲುಬೆ ತ್ಯಾಗಕ್ಕೂ ಸಂಕೇತವಾಗಿದೆ.

ಶಿಲುಬೆಯ ಚಿತ್ರವನ್ನು ಹೊಂದಿದ್ದರೂ ವಿನ್ಯಾಸದಲ್ಲಿ ಬೇರೆ ಬೇರೆಯಾಗುವ ಅನೇಕ ಬಾವುಟಗಳನ್ನು ಇತರ ಚರ್ಚುಗಳು ಬಳಸುತ್ತಲಿವೆ. *

**ಕ್ರಿಶ್ಚನ್ ಸೈನ್ಸ್ ಪಂಥ :** ಕ್ರಿಶ್ಚನ್ ಸೈನ್ಸ್ ಎಂಬ ಪದ, ಒಂದು ಬಗೆಯ ಹೊಸನಂಬಿಕೆ, ಒಂದು ಬಗೆಯ ಕ್ರೈಸ್ತ ಸಮಾಜ ವ್ಯವಸ್ಥೆ, ಒಂದು ಬಗೆಯ ಮತೀಯ ಚಳವಳಿ, ಒಂದು ಬಗೆಯ ಜೀವನ ವಿಧಾನ, ಒಂದು ಜೀವನ ತತ್ತ್ವ– ಈ ಎಲ್ಲವನ್ನೂ ನಿರ್ದೇಶಿಸುತ್ತದೆ. ಮೊತ್ತ ಮೊದಲಿಗೆ (1862) ಮೇರಿ ಬೇಕರ್ ಎಡ್ಡಿಯೆಂಬಾಕೆ ಪ್ರಾಚೀನ ಕ್ರೈಸ್ತ ತತ್ತ್ವದಲ್ಲಡಗಿದ್ದು ಜನರ ದೃಷ್ಟಿಯಿಂದ ಮರೆಯಾದ ಅಂಶಗಳಲ್ಲಿ ಮುಖ್ಯವಾಗಿ ರೋಗಗ್ರಸ್ತವಾದ ಆತ್ಮಕ್ಕೆ ನೆಮ್ಮದಿಯುಂಟು ಮಾಡುವ ಈ ವಿಧಾನವನ್ನು ಪುನರುತ್ಥಾಪನೆ ಮಾಡಿದಳು. ಯೇಸು ಉಪಯೋಗಿಸಿದ ಚಿಕಿತ್ಸಾ ವಿಧಾನವನ್ನು ತಾನು ಹೊಸದಾಗಿ ಗುರುತಿಸಿ ಅದನ್ನು ಜನರಲ್ಲಿ ಪ್ರಚಾರ ಮಾಡುವುದೇ ತನ್ನ ಮುಖ್ಯ ಉದ್ದೇಶವೆಂದು ಆಕೆ ಹೇಳಿರುತ್ತಾಳೆ. ಈ ಚಿಕಿತ್ಸಾ ವಿಧಾನವನ್ನು ಅವಳು ಪ್ರಚಾರ ಮಾಡಲು ಒಂದು ಕ್ರೈಸ್ತ ಸಂಘವನ್ನು ಏರ್ಪಡಿಸಿದಳು. ಈ ವಿಧಾನವನ್ನು ನಂಬಿ ಅದರಿಂದ ಪ್ರಯೋಜನ ಪಡೆದ ಜನರೇ ಈ ಸಂಘದ ಸದಸ್ಯರಾದರು. ಅದರಿಂದ ತಮ್ಮ ದೈಹಿಕ ಮತ್ತು ಮಾನಸಿಕ ವ್ಯಾಧಿಗಳನ್ನು ಪರಿಹರಿಸಿಕೊಂಡವರು ತಮ್ಮ ಅನುಭವಗಳನ್ನು ಈ ಸಂಘದ ಮೂಲಕ ಹೆಚ್ಚು ಜನರಲ್ಲಿ ಪ್ರಚಾರ ಮಾಡಿ ಸಂಘದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿದರು. ಈ ಚಿಕಿತ್ಸಾ ವಿಧಾನ ಔಷಧಿಗಳಿಂದ, ಶಸ್ತ್ರಚಿಕಿತ್ಸೆಯಿಂದ ರೋಗಗಳನ್ನು ಗುಣಪಡಿಸುವ ವೈದ್ಯಕೀಯ ವಿಧಾನಕ್ಕಿಂತ ಭಿನ್ನ. ಭಕ್ತಿಯ ಬಲದಿಂದ ರೋಗಗಳನ್ನು ನಿವಾರಿಸಿಕೊಳ್ಳುವ ಈ ವಿಧಾನವನ್ನು ಮಂತ್ರ ವಿಧಾನವೆಂದು ಹೇಳಬಹುದು.

ಕ್ರಿಶ್ಚನ್ ಸೈನ್ಸ್ ಕೇವಲ ಚಿಕಿತ್ಸಾ ವಿಧಾನವೇ ಅಲ್ಲ, ಇದು ಒಂದು ಕ್ರೈಸ್ತಧರ್ಮ ಮೀಮಾಂಸೆ ಕೂಡ. ಇದು ಸಾಮಾನ್ಯವಾಗಿ ಕ್ರೈಸ್ತಧರ್ಮ ಮೀಮಾಂಸೆ ಉಪಯೋಗಿಸುವ,

ದೇವರು, ಕ್ರಿಸ್ತ, ಸ್ವರ್ಗ, ಮುಕ್ತಿ ಮುಂತಾದ ಮಾತುಗಳನ್ನು ಒಂದು ಹೊಸ ಅರ್ಥದಲ್ಲಿ ಉಪಯೋಗಿಸುತ್ತದೆ. ದೇವರು ಅಂದರೆ ಅಪೌರುಷೇಯತತ್ತ್ವ. ಎಡ್ಡಿ ತನ್ನ ಸೈನ್ಸ್ ಅಂಡ್ ಹೆಲ್ತ್ ಎಂಬ ಗ್ರಂಥದಲ್ಲಿ ದೇವರನ್ನು ಅಶರೀರಿ, ದಿವ್ಯ, ಪರಮ ಹಾಗೂ ಅನಂತಚೇತನಿ, ಆತ್ಮ ಸ್ವರೂಪಿ, ತತ್ತ್ವ, ಮುಖ್ಯಪ್ರಾಣ, ಸತ್ಯ ಮತ್ತು ಪ್ರೀತಿರೂಪ–ಎಂದು ಬಣ್ಣಿಸಿದ್ದಾಳೆ. ಕ್ರಿಸ್ತ ಯೇಸುವಿನಲ್ಲಿ ವಿಶೇಷವಾಗಿ ಅಭಿವ್ಯಕ್ತವಾದರೂ ಮೂಲ ತತ್ತ್ವವಾದ ಕ್ರಿಸ್ತನೂ ಯೇಸುವೂ ಒಂದೇ ಅಲ್ಲ ಎಂಬುದು ಆಕೆಯ ಭಾವನೆ. ಕ್ರಿಸ್ತ ಮಾನವರ ಶಾಪಕ್ಕಾಗಿ ಶಿಲುಬೆಗೆ ಏರಿ ದೇಹತ್ಯಾಗ ಮಾಡಿದ್ದಕ್ಕಾಗಿ ಇತರ ಕ್ರೈಸಧರ್ಮ ಸಂಸ್ಥೆಯವರಂತೆ ಯಾರೂ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗಿಲ್ಲವೆಂದು ಈ ಸಂಘದವರು ನಂಬಿರುತ್ತಾರೆ. ಪಾಪ ಪರಿಹಾರ ಮಾಡಿಕೊಳ್ಳಲು ಇರುವ ದಾರಿ ಒಂದೇ. ಅದು ಪಾಪವೆಸಗದಿರುವುದು. ಇತರ ಕ್ರೈಸ್ತ ಧರ್ಮ ಸಂಸ್ಥೆಗಳಂತೆ ಈ ಸಂಸ್ಥೆಯೂ ಕ್ರೈಸ್ತಧರ್ಮಬೋಧೆಯನ್ನು ಅಂಗೀಕರಿಸುತ್ತದೆ. ಎಡ್ಡಿ ಹೊಸದಾಗಿ ತೋರಿದ ತತ್ತ್ವದೃಷ್ಟಿಯಿಂದ ಈ ಸಂಘದವರು ಬೈಬಲ್ಲನ್ನು ಅಧ್ಯಯನ ಮಾಡುತ್ತಾರೆ. ಅದರ ಭಾಗಗಳಿಗೆ ಪರತತ್ತ್ವದೃಷ್ಟಿಯಿಂದ ಅರ್ಥವನ್ನು ಕಲ್ಪಿಸುತ್ತಾರೆ. ಬೈಬಲ್ಲನ್ನು ಪದಶಃ ಅರ್ಥ ಮಾಡುವುದಿಲ್ಲ. ಅಲ್ಲಿಯ ಪದಗಳಿಗೆ ಅಂತರಾರ್ಥ ಅಥವಾ ಗೂಢಾರ್ಥವನ್ನು ಹುಡುಕುತ್ತಾರೆ. ಮುಖ್ಯವಾಗಿ ಎಡ್ಡಿ ಬರೆದ ಸೈನ್ಸ್ ಅಂಡ್ ಹೆಲ್ತ್ ವಿತ್ ಕೀ ಟು ದಿ ಸ್ಕ್ರಿಪ್ಚರ್ಸ್ (1875) ಎಂಬ ಗ್ರಂಥವೂ ಜೇಮ್ಸ್ ರಾಜನ ಕಾಲದ ಬೈಬಲ್ ಪಾಠವೂ ಕ್ರಿಶ್ಚನ್ ಸೈನ್ ಪಂಥದವರಿಗೆ ಆಧಾರ ಗ್ರಂಥಗಳೆನಿಸಿವೆ.

ಕ್ರಿಶ್ಚನ್ ಸೈನ್ಸ್ ಚಳವಳಿ ಅದಕ್ಕಿಂತ ವಿಶಾಲವಾದ ಒಂದು ತತ್ತ್ವಪಂಥದ ಒಂದು ಭಾಗ. ಇಮ್ಯಾನ್ಯುಯೆಲ್ ಸ್ವೀಡನ್‌ಬೊರ್ಗ್ ಎಂಬ ಅನುಭಾವಿಯ ತತ್ತ್ವದಿಂದ ಅದು ತನ್ನ ಆರಂಭ ದೆಶೆಯಲ್ಲಿ ಸ್ಫೂರ್ತಿ ಪಡೆಯಿತು. ಪ್ರೇತಪ್ರಪಂಚದೊಡನೆ ಸಂಬಂಧವನ್ನು ಬೆಳೆಸುವುದಕ್ಕಾಗಿ ಏರ್ಪಟ್ಟ ಸ್ಪಿರಿಚ್ಯುಯಲಿಸಮ್ ಮತ್ತು ಮಾನಸಿಕ ರೋಗಗಳನ್ನು ನಿವಾರಿಸಲು ಉಪಯೋಗದಲ್ಲಿದ್ದ ಹಿಪ್ನಾಟಿಸಮ್, ಆಟೋಸಜೆಷನ್ (ಸ್ವಪ್ರೇರಣೆ) ಮುಂತಾದ ವಿಧಾನಗಳಿಂದಲೂ ಅದು ಸ್ವಲ್ಪಮಟ್ಟಿಗೆ ಪ್ರೇರಿತವಾಯಿತು. ಫಿನಿಯಸ್ ಪಾರ್ಕ್‌ಹರ್ಸ್ಟ್ ಕ್ವಿಂಬಿ ಎಂಬವನ ನ್ಯೂ ಥಾಟ್ ಎಂಬ ಚಿಕಿತ್ಸಾವಿಧಾನದಿಂದಲೂ ಎಡ್ಡಿ ಸ್ಫೂರ್ತಿ ಪಡೆದಳು. ಅನುಕೂಲ ಭಾವನೆಗಳನ್ನು ಉದ್ಬೋಧಿಸುವುದರ ಮೂಲಕ ದೈಹಿಕ ಹಾಗೂ ಮಾನಸಿಕ ಉಲ್ಬಣಗಳನ್ನು ಹತೋಟಿಗೊಳಿಸಬಹುದೆಂಬುದು ನ್ಯೂಥಾಟ್ ಪಂಥದ ಧೋರಣೆ. ಆದರೆ ಆ ಅನುಕೂಲ ಭಾವನೆಗಳು ಧಾರ್ಮಿಕವಾಗಿರಬೇಕೆಂದು ಹೇಳುವುದು ಕ್ರಿಶ್ಚನ್ ಸೈನ್ಸ್ ಪಂಥದ ಒಂದು ವೈಶಿಷ್ಟ್ಯ.

ಮೊದಲಿಗೆ ಕೇವಲ ಒಂದು ಭಾವನೆಯಾಗಿದ್ದ ಕ್ರಿಶ್ಚನ್ ಸೈನ್ಸ್ 1875ರಲ್ಲಿ ಚರ್ಚ್



ಕ್ರಿಶ್ಚನ್ ಸೈನ್ಸ್ ಪಂಥಕ್ಕೆ ಸೇರಿದ ಮದರ್ ಚರ್ಚ್ ಕಟ್ಟಡ, ಮ್ಯಾಸಚೂಸೆಟ್ಸ್‌ನ ಬಾಸ್ಟನಿನಲ್ಲಿದೆ

ರೂಪ ತಾಳಿತು. ಮೊತ್ತಮೊದಲಿಗೆ ಆ ಹೊಸ ಕ್ರೈಸ್ತಸಂಸ್ಥೆ ಸ್ಥಾಪಿತವಾದದ್ದು ಬಾಸ್ಟನ್ ನಗರದಲ್ಲಿ. ಅದರ ಕಾರ್ಯನಿಬಂಧನೆಗಳನ್ನು ರೂಪಿಸಿದವಳೂ ಎಡ್ಡಿಯೇ. ಅದು ಪ್ರಪಂಚದ ಇತರ ಭಾಗಗಳಲ್ಲಿ ಹುಟ್ಟಿಕೊಂಡ ಕ್ರಿಶ್ಚನ್ ಸೈನ್ಸ್ ಚರ್ಚುಗಳಿಗೆ ಮಾತೃಪ್ರಾಯವಾದದ್ದು. ಅದರ ಮೂರುಸಾವಿರ ಶಾಖೆಗಳ ಸದಸ್ಯರ ಸಂಖ್ಯೆ ಸುಮಾರು ಮೂರುಲಕ್ಷ. ಈ ಮೂಲಸಂಸ್ಥೆ ಐದು ಸದಸ್ಯರ ಕಾರ್ಯನಿರ್ವಾಹಕ ಮಂಡಲಿಯ ಆಡಳಿತಕ್ಕೆ ಒಳಪಟ್ಟಿದೆ. ಮಾನಸಿಕ ಮತ್ತು ದೈಹಿಕ ಕಾಯಿಲೆಗಳನ್ನು ಗುಣಪಡಿಸುವುದು, ಉಪನ್ಯಾಸಗಳ ಮೂಲಕ, ವಿದ್ಯಾಸಂಸ್ಥೆಗಳ ಮೂಲಕ ಅದರ ತತ್ತ್ವವನ್ನು ಪ್ರಚಾರ ಮಾಡುವುದು. ಈ ಸಂಸ್ಥೆಯ ಮೂಲ ಉದ್ದೇಶ. ಉಪ ಶಾಖೆಗಳು ಮೂಲಸಂಸ್ಥೆಗೆ ಹೊಂದಿಕೊಂಡಿದ್ದು ಕಾರ್ಯನಿರ್ವಾಹಕ ಮಂಡಲಿಯ ಮೂಲಕ ಅದೇ ವಿಧವಾದ ಕೆಲಸಗಳನ್ನು ನೆರವೇರಿಸುತ್ತವೆ.

ಕ್ರಿಶ್ಚನ್ ಸೈನ್ಸ್‌ನಲ್ಲಿ ಆಸಕ್ತರಾದವರೆಲ್ಲರೂ ಈ ಸಂಸ್ಥೆಗಳ ಸದಸ್ಯರಾಗಿಲ್ಲ. ಆದರೂ ಆಸಕ್ತರೆಲ್ಲರೂ ಸಂಸ್ಥೆಯ ಏಳಿಗೆಗಾಗಿ ದುಡಿಯುತ್ತಿದ್ದಾರೆ.

ಕ್ರಿಶ್ಚನ್ ಸೈನ್ಸ್ ತತ್ತ್ವಶುದ್ಧ ಚಿತ್‌ಪ್ರಧಾನ ಏಕತ್ವತತ್ತ್ವ. ಅದ್ವೈತದಂತೆ ಇದು ಜಡವಾದ ಜಗತ್ತನ್ನು ತೋರಿಕೆಯೆಂದು ಭಾವಿಸುತ್ತದೆ. ಇಲ್ಲಿ ಅಮಂಗಳಕರವಾದದ್ದು ಅಶಿಷ್ಟವಾದದ್ದೂ ಯಾವುದೂ ಇಲ್ಲ ಎಂದು ವಾದಿಸುತ್ತದೆ. ಇದು ಅಪ್ಪಟ ಆಶಾವಾದ. ಈ ಎರಡು ಅಂಶಗಳಲ್ಲಿ ಇದು ಸಾಂಪ್ರದಾಯಿಕ ಕ್ರೈಸ್ತ ಧರ್ಮಕ್ಕಿಂತ ಭಿನ್ನವಾದದ್ದಾಗಿದೆ. ಚಿತ್ತಶುದ್ಧಿಗೂ ಆತ್ಮಶುದ್ಧಿಗೂ ಆತ್ಮಶಾಂತಿಗೂ ಇದು ವಿಶೇಷ ಬೆಲೆ ಕೊಡುತ್ತದೆ. ಅವೆರಡೇ ಆತ್ಮದ ನೆಮ್ಮದಿ ಮತ್ತು ಆರೋಗ್ಯಕ್ಕೆ ಸಾಧನಗಳು ಎಂದು ವಾದಿಸುತ್ತದೆ. ಜರೂರಾದ ಸಂದರ್ಭಗಳಲ್ಲಿ ಸದಸ್ಯರು

ಮದರ್ ಚರ್ಚಿನ ಸಭಾಂಗಣದ ಒಂದು ನೋಟ

ಸಾಮಾನ್ಯ ವೈದ್ಯಕೀಯ ಚಿಕಿತ್ಸೆ ಪಡೆಯಬಹುದೆಂದು ಎಡ್ಡಿ ಅನುಮತಿ ಕೊಟ್ಟಿದ್ದಳು. ಆದರೆ ಅವರಲ್ಲಿ ಅತಿವಾದಿಗಳಾದ ಕೆಲವರು ಅಂಥ ಸಂದರ್ಭಗಳಲ್ಲೂ ಕ್ರಿಶ್ಚನ್ ಸೈನ್ಸ್ ವಿಧಾನವನ್ನು ಬಿಟ್ಟು ಬೇರೆ ಎಲ್ಲ ಬಗೆಯ ವೈದ್ಯಕೀಯ ಚಿಕಿತ್ಸೆಗಳನ್ನೂ ನಿರಾಕರಿಸಿದರು. (ಜಿ.ಎಚ್.)

**ಕ್ರಿಶ್ಚನ್ ಸೈನ್ಸ್ ಮಾನಿಟರ್ :** ಕ್ರಿಶ್ಚನ್ ಸೈನ್ಸ್ ಸಂಸ್ಥೆಯ ಸ್ಥಾಪಕಳಾದ ಮೇರಿ ಬೇಕರ್ ಎಡ್ಡಿ 1908ರಲ್ಲಿ ಬಾಸ್ಟನ್ ನಗರದಲ್ಲಿ ಸ್ಥಾಪಿಸಿದ ಇಂಗ್ಲಿಷ್ ದಿನಪತ್ರಿಕೆ. ಮೊದಲನೆಯ ಪುಟದಲ್ಲಿ ಜಾಹೀರಾತುಗಳನ್ನೂ ಕೊನೆಯ ಪುಟದಲ್ಲಿ ಸಂಪಾದಕೀಯ ಲೇಖನಗಳನ್ನೂ ಮುದ್ರಿಸುತ್ತಿದ್ದ ಮಾನಿಟರ್ ಪತ್ರಿಕೆ ಬಾಸ್ಟನಿನ ಇತರ ಪತ್ರಿಕೆಗಳಿಗೆ ಸಾಟಿಯಾಗಿ ಸ್ಪರ್ಧಿಸಲಾರಂಭಿಸಿತು. ಇದರಲ್ಲಿ ಪ್ರಕಟವಾಗುತ್ತಿದ್ದ ವಿದೇಶೀ ಬಾತ್ಮಿಗಳೂ ವಿಶೇಷ ಲೇಖನಗಳೂ ಕಲೆ, ಸಂಗೀತ ಮತ್ತು ಸಾಹಿತ್ಯ ವಿಷಯಗಳನ್ನು ಕುರಿತ ಲೇಖನಗಳೂ ಮೊದಲಿನಿಂದಲೂ ಶ್ರೇಷ್ಠದರ್ಜೆಯವೆಂದು ಪರಿಗಣಿತವಾಗಿದ್ದುವು. ಭಾವೋದ್ರೇಕಕರವಾದ, ನಿಂದಾತ್ಮಕವಾದ ಮತ್ತು ಅಪರಾಧಗಳಿಗೆ ಸಂಬಂಧಿಸಿದ ಸುದ್ದಿಗಳನ್ನು ಪ್ರಕಟಿಸಿ ಓದುಗರ ಮನಸ್ಸು ಕ್ಷೋಭೆಗೆ ಒಳಗಾಗುವಂತೆ ಮಾಡಬಾರದೆಂಬ ನೀತಿಯನ್ನು ಅನುಸರಿಸಿಕೊಂಡು ಬರಬೇಕೆಂದು ಎಡ್ಡಿ ಬೇಕರ್ ಕಟ್ಟಪ್ಪಣೆ ಮಾಡಿದ್ದಳು. ಈ ತೆರನಾದ ಸುದ್ದಿಗಳನ್ನು ಪ್ರಕಟಿಸುವುದರಿಂದ ಸಾಮಾಜಿಕ ಜೀವನದ ಆರೋಗ್ಯ ಕೆಡುವುದೆಂಬುದು ಈ ಪತ್ರಿಕೆಯ ಸ್ಥಾಪನೆಗೆ ಕಾರಣವಾದ ಕ್ರಿಶ್ಚನ್ ಸೈನ್ಸ್ ಚರ್ಚಿನ ಭಾವನೆಯಾಗಿತ್ತು. ಆದರೆ ಅಂಥ ಸುದ್ದಿಗಳು ಸರ್ಕಾರದ ಅಸ್ತಿತ್ವಕ್ಕೆ ಅಥವಾ ಸಮಾಜಕ್ಕೆ ಧಕ್ಕೆ ತರುವಂತಿದ್ದರೆ ಅವನ್ನು ಪತ್ರಿಕೆ ಪ್ರಕಟಿಸಿ, ಸರ್ಕಾರ ಮತ್ತು ಸಮಾಜ ಸರಿಯಾದ ಮಾರ್ಗದಲ್ಲಿ ಸಾಗಲು ಸಹಾಯ ಮಾಡುತ್ತಿತ್ತು. ಅಂಥ ಪ್ರಕಟಣೆಗಳಲ್ಲೂ ಉದ್ರೇಕಕ್ಕಾಗಲಿ ಅತಿರಂಜನೆಗಾಗಲಿ ಎಡೆಕೊಡುತ್ತಿರಲಿಲ್ಲ.

ಆದರೆ ಪತ್ರಿಕೆ ಕೇವಲ ಧರ್ಮಸಂಬಂಧ ಸುದ್ದಿಗಳಿಗೆ ಮೀಸಲಾದ ಧಾರ್ಮಿಕ ಪತ್ರಿಕೆಯಾಗಿರಲಿಲ್ಲ. ಮಾನಿಟರ್ ಪತ್ರಿಕೆ ಹುಟ್ಟಿದ್ದೇ ಪೀತಪತ್ರಿಕೋದ್ಯಮವನ್ನು ಪ್ರತಿಭಟಿಸುವುದಕ್ಕಾಗಿ. 1910ರ ಪ್ರಾರಂಭದಿಂದ ಕ್ರಿಶ್ಚನ್ ಸೈನ್ಸ್ ಚರ್ಚ್ ಸಂಸ್ಥೆ ಅನೇಕ

ಪ್ರಚಾರಸಭೆಗಳನ್ನು ಏರ್ಪಡಿಸಿ ಶುದ್ಧ ಮತ್ತು ತಿಳಿಯಾದ ಪತ್ರಿಕೋದ್ಯಮ ತತ್ತ್ವಗಳನ್ನು ಜನರಿಗೆ ತಿಳಿಸಿತು. ತನ್ಮೂಲಕ ಮಾನಿಟರ್‌ಗೂ ಪ್ರಚಾರ ಲಭ್ಯವಾಯಿತು.

ಪತ್ರಿಕೆ ಪ್ರಾರಂಭವಾದ ಹತ್ತು ವರ್ಷಗಳ ಅವಧಿಯಲ್ಲಿ ಕ್ರಿಶ್ಚನ್ ಸೈನ್ಸ್ ಚರ್ಚಿನ ಪ್ರಯತ್ನದ ಫಲವಾಗಿಯೂ ಅದು ಶ್ರೇಷ್ಠದರ್ಜೆಯ ಲೇಖನಗಳನ್ನು ಮತ್ತು ಉತ್ತಮ ರೀತಿಯ ವರದಿ ಮತ್ತು ಸುದ್ದಿಗಳನ್ನು ಪ್ರಕಟಿಸುತ್ತಿದ್ದುದರಿಂದಲೂ ಪತ್ರಿಕೆಯ ಪ್ರಸಾರ 1,20,000 ಪ್ರತಿಗಳನ್ನು ಮುಟ್ಟಿತ್ತು. ಇತರ ದಿನಪತ್ರಿಕೆಗಳಿಗಿಂತ ಈ ಪತ್ರಿಕೆ ಅಮೆರಿಕದ ಎಲ್ಲ ಭಾಗಗಳಲ್ಲೂ ಪ್ರಸಾರವಾಗಿತ್ತು. ವಿದೇಶಗಳಲ್ಲೂ ಈ ಪತ್ರಿಕೆಯ ಪ್ರಸಾರ ತಕ್ಕಮಟ್ಟಿಗಿತ್ತು. ಇದಕ್ಕೆ ಕಾರಣ ಪತ್ರಿಕೆಯ ಉತ್ತಮ ದರ್ಜೆಯ ವಿದೇಶಿ ಬಾತ್ಮಿಗಳು.

ಬ್ರಿಟನಿನಲ್ಲಿ ತರಬೇತು ಹೊಂದಿದ ಫ್ರೆಡರಿಕ್ ಡಿಕ್ಸನ್ ಒಂದನೆಯ ಮಹಾಯುದ್ಧದ ಕಾಲದಲ್ಲಿ ಇದರ ಸಂಪಾದಕನಾಗಿದ್ದ. ಯುದ್ಧನೀತಿಗೂ ಕ್ರಿಶ್ಚನ್ ಸೈನ್ಸ್ ಚರ್ಚ್ ಧ್ಯೇಯಕ್ಕೂ ವಿರೋಧ ಬಂದುದರಿಂದ ಡಿಕ್ಸನ್ ಆ ಕೆಲಸ ಬಿಡಬೇಕಾಯಿತು. ಆ ಕಾಲಕ್ಕೆ ಪತ್ರಿಕೆಯ ಪ್ರಸಾರ, ಜಾಹೀರಾತು ಮತ್ತು ಪ್ರಭಾವಗಳು ಕಡಿಮೆಯಾಗಿದ್ದುವು.

ಹರ್ಸ್ಟ್ ಪತ್ರಿಕಾಗುಂಪಿನಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದ ವಿಲಿಸ್ ಜೆ. ಅಬಟ್ 1918ರಲ್ಲಿ ಇದರ ಸಂಪಾದಕನಾಗಿ ಪತ್ರಿಕೆಯ ಅಭಿವೃದ್ಧಿಗೆ ಕಾರಣನಾದ. ಅಬಟ್ ಅಧಿಕಾರ ವಹಿಸಿಕೊಂಡ ಐದು ವರ್ಷಗಳಲ್ಲಿ ಪತ್ರಿಕೆಯ ಪ್ರಸಾರ ಹೆಚ್ಚಾಯಿತು; ಕೀರ್ತಿ ಬೆಳೆಯಿತು. ಅಮೆರಿಕದ ಮುಖ್ಯನಗರಗಳಲ್ಲೂ ವಿದೇಶಗಳ ರಾಜಧಾನಿಗಳಲ್ಲೂ ಪತ್ರಿಕೆಯ ಕಚೇರಿಗಳು ಸ್ಥಾಪಿತವಾದುವು. 1927ರಿಂದ ಸಂಪಾದಕೀಯ ಮಂಡಳಿಯೊಂದು ಪತ್ರಿಕೆಯನ್ನು ನಡೆಸುವ ಜವಾಬ್ದಾರಿ ಹೊತ್ತಿತು. ಎರ್ವಿನ್ ಡಿ. ಕ್ಯಾನನ್ 1940 ರಿಂದ 1964ರವರೆಗೆ ಇದರ ವ್ಯವಸ್ಥಾಪಕ ಸಂಪಾದಕನಾದ ಇವರ ನೇತೃತ್ವದಲ್ಲಿ ಮಾನಿಟರ್ ಪತ್ರಿಕೆ ದೊಡ್ಡದಾಗಿ ಬೆಳೆಯಿತು; ಅಮೆರಿಕದಲ್ಲಿ ಐದು ಕಡೆ ಪ್ರಕಟವಾಗತೊಡಗಿತು. ಅದರ ಒಂದು ವಿದೇಶಿ ಪ್ರಕಟಣೆಯೂ ಪ್ರಾರಂಭವಾಯಿತು. ಪ್ರಪಂಚದ 120 ದೇಶಗಳಲ್ಲಿ ಪತ್ರಿಕೆಗೆ ಚಂದಾದಾರರಾದರು. ಶುದ್ಧ ಪತ್ರಿಕೋದ್ಯಮದ ನೀತಿ ನಿಯಮಗಳನ್ನನುಸರಿಸಿ ಜನಪ್ರಿಯತೆ ಗಳಿಸಿದ ವಾರದಲ್ಲಿ 3 ದಿನ ಪ್ರಕಟವಾಗುವ ಕೆಲವೇ ಅಮೆರಿಕನ್ ದಿನಪತ್ರಿಕೆಗಳಲ್ಲಿ ಕ್ರಿಶ್ಚನ್ ಸೈನ್ಸ್ ಮಾನಿಟರ್ ಒಂದು. 1988ರಲ್ಲಿ ಇಂಗ್ಲಿಷ್‌ನಲ್ಲಿ ವಾರಪತ್ರಿಕೆ ರೂಪದಲ್ಲಿ ಪ್ರಕಟವಾಯಿತು. 'ವರ್ಲ್ಡ್ ಮಾನಿಟರ್' ಮಾಸಪತ್ರಿಕೆ ಇದರ ಸಹ ಪ್ರಕಟಣೆ.

(ಎನ್.ಕೆ.)

**ಕ್ರಿಸಾಲ್ :** ಮೆಥಿಲ್‌ಫಿನಾಲುಗಳ ಮೂರು ಸಮಘಟಕಗಳಲ್ಲಿ (ಐಸೋಮರ್ಸ್) ಒಂದು. ಕ್ರಿಸಾಲುಗಳ ಮತ್ತು ಅನಿಸೋಲಿನ ಅಣುಸೂತ್ರ ಒಂದೇ, $C_7H_8O$. ಆದರೆ ಅವುಗಳೆರಡರ ರಚನೆ ಬೇರೆ ಬೇರೆಯಾಗಿದ್ದು ಅವುಗಳ ರಾಸಾಯನಿಕ ಗುಣಗಳೂ ಬೇರೆ ಬೇರೆ ಆಗಿರುತ್ತವೆ. ಆರ್ಥೊ ಕ್ರಿಸಾಲ್, ಮೆಟಾ ಕ್ರಿಸಾಲ್ ಮತ್ತು ಪ್ಯಾರಾ ಕ್ರಿಸಾಲ್ ಎಂಬ ಮೂರು ವಿಧಗಳಲ್ಲಿ ಕ್ರಿಸಾಲುಗಳು ದೊರೆಯುತ್ತವೆ. ಇವುಗಳ ರಚನೆಗಳನ್ನು ಚಿತ್ರಗಳಲ್ಲಿ ತೋರಿಸಿದೆ.




o- ಕ್ರಿಸಾಲ್ m- ಕ್ರಿಸಾಲ್ p- ಕ್ರಿಸಾಲ್

**ಉತ್ಪಾದನೆ :** ಭಿನ್ನ ಆಸವನದಲ್ಲಿ ದೊರೆಯುವ ಮಧ್ಯವರ್ತಿ ಎಣ್ಣೆ (ಮಿಡ್ಲ್ ಆಯಿಲ್) ಮತ್ತು ಭಾರ ಎಣ್ಣೆ (ಹೆವಿ ಆಯಿಲ್) ಅಂಶಗಳಲ್ಲಿ ಕ್ರಿಸಾಲ್ ದೊರೆಯುತ್ತದೆ. ಮಧ್ಯವರ್ತಿ ಎಣ್ಣೆಯನ್ನು ಕೂಡಲೆ ಶೀತಲಿಸುವುದರಿಂದ ನ್ಯಾಫ್ತಲೀನ್ ಎಂಬ ಸಂಯುಕ್ತದ ಸ್ಫಟಿಕಗಳು ಬೇರ್ಪಡುತ್ತವೆ. ಇವನ್ನು ಹೊರ ತೆಗೆದು ಉಳಿಯುವ ಮಾತೃ ದ್ರವಾಂಶವನ್ನು ಆಸವಿಸಿ ಬಂದ ದ್ರವವನ್ನು ಶೀತಲಿಸಿದಾಗ ಫಿನಾಲ್ ಎಂಬ ಸಂಯುಕ್ತದ ಸ್ಫಟಿಕಗಳು ಬೇರ್ಪಡುತ್ತವೆ. ಇವನ್ನು ಹೊರತೆಗೆದು ಉಳಿಯುವ ಮಾತೃ ದ್ರವಾಂಶವನ್ನು ಭಿನ್ನವಾಗಿ 185° ಸೆಂ.–194° ಸೆಂ. ವ್ಯಾಪ್ತಿಯಲ್ಲಿ ಆಸವಿಸುವಾಗ ಶೇಖರವಾಗುವ ದ್ರವವೇ ಆರ್ಥೊ ಕ್ರಿಸಾಲ್. ಭಿನ್ನ ಆಸವನವನ್ನು ಇನ್ನೂ ಮುಂದುವರಿಸಿ *m*- ಕ್ರಿಸಾಲ್ ಮತ್ತು *p*-ಕ್ರಿಸಾಲುಗಳನ್ನು ಬೇರ್ಪಡಿಸಲು ಸಾಧ್ಯವಾಗುವುದಿಲ್ಲ. ಕಾರಣ, ಅವುಗಳ ಕುದಿಬಿಂದುಗಳು ಒಂದಕ್ಕೊಂದು ಬಲು ಸಮೀಪ (*m*–ಕ್ರಿಸಾಲ್ 201° ಸೆಂ. ಮತ್ತು *p*- ಕ್ರಿಸಾಲ್ 202° ಸೆಂ.). ಭಾರ ಎಣ್ಣೆಯಿಂದ ಕ್ರಿಸಾಲುಗಳನ್ನು ಬೇರ್ಪಡಿಸುವುದು ಫಲಕಾರಿ ಅಲ್ಲ.

**ರಾಸಾಯನಿಕ ತಯಾರಿಕೆ :** 1 ಅನುಗುಣವಾಗಿರುವ ಟೊಲಿಡಿನುಗಳಿಂದ *o*- *m*- ಅಥವಾ *p*-ಟೊಲಿಡಿನನ್ನು ಡೈ ಆಜ಼ೋಟೈಜ಼್ ಮಾಡಲಾಗಿ ಬರುವ ಆಜ಼ೋ ಸಂಯುಕ್ತವನ್ನು ಜಲವಿಶ್ಲೇಷಣೆ ಮಾಡಲಾಗಿ ಬರುವ ಸಂಯುಕ್ತವೇ *o*- *m*- ಅಥವಾ *p*- ಕ್ರಿಸಾಲ್.




2 ಅನುಗುಣವಾಗಿರುವ ಕ್ಲೋರೋ ಟೊಲಿನುಗಳಿಂದ : *o*- *m*- ಅಥವಾ *p*- ಕ್ಲೋರೋಟೊಲಿನನ್ನು ಸಾರ, ಸೋಡಿಯಂ ಹೈಡ್ರಾಕ್ಸೈಡಿನೊಂದಿಗೆ 300°ಸೆಂ.ವರೆಗೆ ಹೆಚ್ಚಿನ ಒತ್ತಡದಲ್ಲಿ ಕಾಯಿಸುವುದರಿಂದ *o*- *m*-ಅಥವಾ *p*-ಕ್ರಿಸಾಲ್ ಸಿಕ್ಕುತ್ತದೆ.




3 ಟೊಲಿನ್ ಸಲ್ಫೂರಿಕ್ ಆಮ್ಲಗಳಿಂದ *o*- *m*-ಅಥವಾ *p*-ಟೊಲಿನ್ ಸಲ್ಫೋನಿಕ್ ಆಮ್ಲವನ್ನು ಸೋಡಿಯಂ ಹೈಡ್ರಾಕ್ಸೈಡ್ ಸ್ಫಟಿಕಗಳೊಂದಿಗೆ ಮಿಶ್ರಣ ಮಾಡಿ ಮಿಶ್ರಣವನ್ನು ಅಧಿಕ ಉಷ್ಣತೆಯಲ್ಲಿ ಕರಗಿಸಿದಾಗ ಕ್ರಿಸಾಲಿನ ಸೋಡಿಯಂ ಲವಣ ಸಿಕ್ಕುತ್ತದೆ. ಇದನ್ನು ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ಜಲ ವಿಶ್ಲೇಷಣೆ ಮಾಡುವುದರಿಂದ ಕ್ರಿಸಾಲ್ ತಯಾರಾಗುತ್ತದೆ.

ಕ್ರಿಸಾಲುಗಳ ಲಕ್ಷಣಗಳು : ಇವು ಎಣ್ಣೆಯಂಥ ದ್ರವಗಳು, ಬಣ್ಣರಹಿತ ಮತ್ತು ಉಷ್ಣಸ್ವಭಾವದವು. ಕ್ರಿಸಾಲುಗಳ ವಿಷ ಸ್ವಭಾವ ಫಿನಾಲಿನಷ್ಟು ಪ್ರಭಾವಿತವಾದುದಲ್ಲ. ಇವುಗಳಿಗೆ ಫಿನಾಲಿನ ಪರಿಮಳ ಇರುತ್ತದೆ. ಕ್ರಿಸಾಲುಗಳು ಫಿನಾಲಿಗಿಂತ ಸಾರರಿಕ್ತ ಆಮ್ಲಗಳು. ಇವು ಹೆಚ್ಚು ಪರಿಣಾಮಕಾರಿಯಾದ ಸೋಂಕು ನಿವಾರಕಗಳು ಮತ್ತು ಪೂತಿನಾಶಕಗಳು. ನೀರಿನಲ್ಲಿ ಕರಗುವ ಅಂಶ ಕಡಿಮೆ. ಆದರೆ ಆಲ್ಕೋಹಾಲ್ ಮತ್ತು ಈಥರುಗಳಲ್ಲಿ ಬಹುವಾಗಿ ಕರಗುತ್ತವೆ. *o*-ಕ್ರಿಸಾಲ್ 191° ಸೆಂ.ನಲ್ಲಿ ಕುದಿಯುತ್ತದೆ. *m*-ಕ್ರಿಸಾಲ್ 201 ಸೆಂ.ನಲ್ಲಿ ಕುದಿಯುತ್ತದೆ. ಹಾಗೂ ಕ್ರಿಸಾಲ್202 ಸೆಂ.ನಲ್ಲಿ ಕುದಿಯುತ್ತದೆ.




**ರಾಸಾಯನಿಕ ಗುಣಗಳು :** ಕ್ರಿಸಾಲುಗಳು ಫಿನಾಲಿಕ್ ಸಂಯುಕ್ತಗಳು. ಫಿನಾಲಿನ ಎಲ್ಲ ಸಾಮಾನ್ಯ ಗುಣಗಳೂ ಇವುಗಳಿಗೆ ಇವೆ.

**1. ಹೆಲೋಜನೀಕರಣ :** ಬ್ರೋಮಿನ್ ಮಿಶ್ರಿತ ನೀರಿನೊಂದಿಗೆ ಕ್ರಿಸಾಲುಗಳು ರಾಸಾಯನಿಕ ಕ್ರಿಯೆಗೆ ಒಳಪಡುತ್ತವೆ. ಮತ್ತು ಕ್ರಿಸಾಲಿನಿಂದ ಡೈಬ್ರೋಮೋ ಸಂಯುಕ್ತವೂ (ಕರಗುವ ಬಿಂದು 58 ಸೆಂ.) *m*-ಕ್ರಿಸಾಲಿನಿಂದ ಟ್ರೈಬ್ರೋಮೋ ಸಂಯುಕ್ತವೂ (ಕರಗುವ

ಬಿಂದು 105° ಸೆಂ.) *p*-ಕ್ರಿಸಾಲಿನಿಂದ ಟೆಟ್ರಾಬ್ರೋಮೋ ಸಂಯುಕ್ತವೂ (ಕರಗುವ ಬಿಂದು 108 ಸೆಂ.) ಅನುಗುಣವಾಗಿ ದೊರೆಯುತ್ತವೆ.




**2 ಡೈಜೋನಿಯಂ ಲವಣದೊಂದಿಗೆ ಸಂಯೋಗ :** ಇದರಿಂದ ಅಜೋಬಣ್ಣಗಳು ದೊರೆಯುತ್ತವೆ. ಈ ಸಂಯೋಗ ಸಾರರಿಕ್ತ ಕ್ಷಾರದ ಮಾಧ್ಯಮದಲ್ಲಿ ಹೆಚ್ಚು ಫಲಕಾರಿ ಮತ್ತು ಈ ಸಂಯೋಗ ಹೈಡ್ರಾಕ್ಸಿ (ಓಹೆಚ್) ಗುಂಪಿಗೆ ಸಂಬಂಧಪಟ್ಟಂತೆ *p*-ಸ್ಥಾನದಲ್ಲಿರುವ ಇಂಗಾಲದ ಪರಮಾಣುವಿನೊಂದಿಗೆ ಆಗುತ್ತದೆ. ಒಂದು ಪಕ್ಷದಲ್ಲಿ *p*-ಸ್ಥಾನದಲ್ಲಿ ಆಗುವ ಸಂಯೋಗ ಅಲ್ಲಿರುವ ಬೇರೆ ಗುಂಪಿನಿಂದ ತಡೆಗಟ್ಟಲ್ಪಟ್ಟರೆ ಈ ಸಂಯೋಗ *o*-ಸ್ಥಾನದಲ್ಲಿರುವ ಇಂಗಾಲದ ಪರಮಾಣುವಿನೊಂದಿಗೆ ಆಗುತ್ತದೆ.




**3. ಫೆರಿಕ್ಲೋರೈಡ್ ಸಂಗಡ ಬಣ್ಣಗಳು :**

o–ಕ್ರಿಸಾಲ್ $\xrightarrow{FeCl_3}$ ನೀಲಿ–ನೇರಳೆ ಮಿಶ್ರಿತ ಬಣ್ಣ

*m*–ಕ್ರಿಸಾಲ್ $\xrightarrow{FeCl_3}$ ನೇರಳೆ ಬಣ್ಣ

*p*–ಕ್ರಿಸಾಲ್ $\xrightarrow{FeCl_3}$ ನೀಲಿ ಬಣ್ಣ

**4. ಪಿಕ್ರಿಕ್ ಆಮ್ಲದ ಸಂಗಡ ಪ್ರತಿಕ್ರಿಯೆ :** *o*- ಅಥವಾ *m*-ಕ್ರಿಸಾಲುಗಳು ಪಿಕ್ರಿಕ್ ಆಮ್ಲದೊಂದಿಗೆ ರಾಸಾಯನ ಇಕ ಕ್ರಿಯೆಗೊಂಡು ಪಿಕ್ರೇಟ್ ಎಂಬ ಸಂಕೀರ್ಣ ಸಂಯುಕ್ತಗಳಾಗುತ್ತವೆ. ಆದರೆ *p*-ಕ್ರಿಸಾಲ್ ಪಿಕ್ರಿಕ್ ಆಮ್ಲದ ಸಂಗಡ ಪ್ರತಿಕ್ರಿಯೆಗೊಳ್ಳುವುದಿಲ್ಲ.

**5. ಜಿಂಕ್ ಪುಡಿಯೊಂದಿಗೆ ಆಸವನ:** *o*-, *m*- ಅಥವಾ *p*- ಕ್ರಿಸಾಲುಗಳನ್ನು ಪ್ರತ್ಯೇಕವಾಗಿ ಜಿಂಕ್ ಪುಡಿಯೊಂದಿಗೆ ಆಸವಿಸುವುದರಿಂದ ಎಲ್ಲ ಕ್ರಿಸಾಲುಗಳು ಟಾಲುಯೀನನ್ನು ಕೊಡುತ್ತವೆ.




**6. ಉತ್ಕರ್ಷಣೆ :** ಕ್ರಿಸಾಲುಗಳು ಪ್ರಬಲ ಉತ್ಕರ್ಷಣಕ್ಕೂ ಒಳಪಡದೆ ಇರುವುದು ಅಪವಾದ. ಆದರೆ OH ಗುಂಪನ್ನು ಅಸಿಟೈಲೇಟ್ ಮಾಡಿ ರಕ್ಷಿಸಿದರೆ ಆಗತ ಉಂಟಾಗುವ ಅಸಿಟೈಲ್ ಕ್ರಿಸಾಲುಗಳು ಸುಲಭವಾಗಿ ಉತ್ಕರ್ಷಣೆಯಾಗಿ $CH_3$ ಗುಂಪು COOH ಗುಂಪಾಗಿ ಪರಿವರ್ತನೆಯಾಗುತ್ತದೆ. ಇದನ್ನು ಕೆಳಗಿನಂತೆ ಚಿತ್ರಿಸಬಹುದು.




**ಉಪಯೋಗಗಳು:** 1 ಕ್ರಿ ಸಾಲುಗಳನ್ನು ಕೀಟನಾಶಕಗಳಾಗಿ ಉಪಯೋಗಿಸುತ್ತಾರೆ. 2 ಸ್ವಲ್ಪ ಫಿನಾಲ್ ಸಂಗಡ ಕೂಡಿದ ಕ್ರಿಸಾಲುಗಳ ಮಿಶ್ರಣಕ್ಕೆ ಕ್ರಿಯೋಸೋಟ ಅಥವಾ ಕ್ರಿಸರಿಕ್ ಆಮ್ಲ ಎಂದು ಹೆಸರು. ಕಟ್ಟಿಗೆಗಳನ್ನು ರಕ್ಷಿಸಲು ಇದರ ಉಪಯೋಗವುಂಟು. 3 ಕ್ರಿಸಾಲುಗಳಿಂದ ತಯಾರಿಸಿದ ಪ್ಲಾಸ್ಟಿಕ್ ಬಹಳ ತಾಳಿಕೆ ಮತ್ತು ಬಾಳಿಕೆಯುಳ್ಳದ್ದು. 4 ಅಜೋ ರಂಗಗಳನ್ನು ತಯಾರಿಸಲು ಮತ್ತು ಸಿಡಿಮದ್ದುಗಳನ್ನು ತಯಾರಿಸಲು ಉಪಯೋಗವಿದೆ. 5 ಕ್ರಿಸಾಲುಗಳನ್ನು ಪರಿಣಾಮಕಾರಿಯಾದ ಸೋಂಕು ನಿವಾರಕಗಳಾಗಿಯೂ ಪೂತಿನಾಶಕಗಳಾಗಿಯೂ ಉಪಯೋಗಿಸುತ್ತಾರೆ. (ಎಲ್.ಡಿ.ಎಂ.)

**ಕ್ರಿಸ್ಟಿ, ಆಗಥ ಮೇರಿ ಕ್ಲಾರಿಸ :** 1891–. ಇಂಗ್ಲಿಷ್ ಕಾದಂಬರಿಗಾರ್ತಿ. ಅನೇಕ ಪತ್ತೇದಾರಿ ಕಾದಂಬರಿಗಳನ್ನು ಬರೆದು ಪ್ರಸಿದ್ಧಳಾಗಿದ್ದಾಳೆ. ಆರ್ಚಿಬಲ್ಡ್ ಕ್ರಿಸ್ಟಿಯೆಂಬ ಸೈನ್ಯಾಧಿಕಾರಿಯನ್ನು ಮದುವೆಯಾದಳು (1914). 1920ರಲ್ಲಿ ದಿ ಮಿಸ್ಟೀರಿಯಸ್ ಅಫೇರ್ ಎಟ್ ಸ್ಟೈಲ್ಸ್ ಎಂಬ ತನ್ನ ಮೊದಲ ಕಾದಂಬರಿಯನ್ನು ಪ್ರಕಟಿಸಿದಳು. ಇದರಲ್ಲಿ ಈಕೆ ಸೃಷ್ಟಿಸಿದ ಬೆಲ್ಜಿಯನ್ ಪತ್ತೇದಾರ ಹರ್ಕ್ಯೂಲ್ ಪಾಯ್ರಾನ ಪ್ರಥಮ ಪರಿಚಯವಾಗುತ್ತದೆ. ದಿ ಮರ್ಡರ್ ಆಫ್ ರೋಜರ್ ಆಕ್ರಾಯ್ಡ್‌ನಲ್ಲಿ (1926) ಕತೆಗಾರನೇ ಕೊಲೆಗಾರನೆಂಬ ವಿಷಯ ವಿಸ್ಮಯಕಾರಿಯಾಗಿದೆ. ಈ ನಡುವೆ ಕ್ರಿಸ್ಟಿ ಇದ್ದಕ್ಕಿದ್ದಂತೆ ಕಾಣೆಯಾದಳು ಎಂಬ ಸುದ್ದಿ ಹಬ್ಬಿ ಹಲವರ ಗಮನ ಸೆಳೆಯಿತು. ನಿಜಕ್ಕೂ ಈಕೆ ಆಗ ಮರವೆರೋಗಕ್ಕೆ ತುತ್ತಾಗಿ ಯಾರಿಗೂ ಹೇಳದಂತೆ ಯಾರ್ಕ್‌ಷೈರಿನ ಆಸ್ಪತ್ರೆ ಸೇರಿದ್ದಳು. 1928ರಲ್ಲಿ ವಿವಾಹವಿಚ್ಛೇದನ ಮಾಡಿಕೊಂಡು 1930ರಲ್ಲಿ ಮ್ಯಾಲೋವನ್ ಎಂಬ ಪ್ರಾಕ್ತನ ಸಂಶೋಧಕನನ್ನು ಮದುವೆಯಾಗಿ ಆತನೊಡನೆ ಏಷ್ಯಖಂಡದಲ್ಲಿ ಸಂಚರಿಸಿ ಕಾದಂಬರಿಗಳನ್ನು ಬರೆದು ಬಹಳ ಹಣ

ಗಳಿಸಿದಳು. ಪತಿಯ ಪ್ರಾಕ್ತನ ಸಂಶೋಧನೆಗಳ ಸುತ್ತ ಕ್ರಿಸ್ಟಿ ನೇಯ್ದಿರುವ ಕಾದಂಬರಿ ಎಂದರೆ ಮರ್ಡರ್ ಇನ್ ಮೆಸಪೊಟೇಮಿಯ. ಈಕೆಯ ಮೂರು ನಾಟಕಗಳು ಏಕಕಾಲದಲ್ಲಿ ವೆಸ್ಟ್‌ಎಂಡ್‌ನಲ್ಲಿ ಪ್ರದರ್ಶಿತವಾದುವು.

ಈಕೆಯ ಪ್ರಸಿದ್ಧ ಕಾದಂಬರಿಗಳು ಇವು: ದಿ ಮಿಸ್ಟರಿ ಆಫ್ ದಿ ಬ್ಲೂ ಟ್ರೇನ್ (1928). ದಿಸೆವೆನ್ ಡಯಲ್ಸ್ ಮಿಸ್ಟರಿ (1929), ಲಾರ್ಡ್ ಎಜ್‌ವೇರ್ ಡೈಸ್ (1933). ಮೇರಿ ವೆಸ್ಟ್‌ಮ್ಯಾಕಾಟ್ ಎಂಬ ಬದಲು ಹೆಸರನ್ನಿಟ್ಟುಕೊಂಡು ಈಕೆ ಆಬ್ಸೆಂಟ್ ಇನ್ ದಿ ಸ್ಪ್ರಿಂಗ್ (1944), ದಿ ರೋಸ್ ಅಂಡ್ ದಿ ಯೂ ಟ್ರೀ (1948) ಎಂಬ ಕಾದಂಬರಿಗಳನ್ನೂ ಬರೆದಳು. ವಿಟ್‌ನೆಸ್ ಫಾರ್ ದಿ ಪ್ರಾಸೆಕ್ಯೂಷನ್ ಮೊದಲಾದ ಈಕೆಯ ಕೆಲವು ಕಥೆಗಳು ಚಲನಚಿತ್ರಗಳಾಗಿ ಖ್ಯಾತಿಗಳಿಸಿವೆ. ಈಕೆ ರಾಯಲ್ ಸೊಸೈಟಿ ಆಫ್ ಲಿಟರೇಚರ್ ಸಂಸ್ಥೆಯ ಫೆಲೊ ಆಗಿದ್ದಳಲ್ಲದೆ 1956ರಲ್ಲಿ ಈಕೆಗೆ ಸಿ.ಬಿ.ಇ. ಪ್ರಶಸ್ತಿಯೂ ದೊರಕಿತು. (ಎಚ್.ವಿ.ಎಸ್.)

**ಕ್ರಿಸ್ಟಿಯನ್ ರಿನೆ, ವಿಸ್ಕೌಂಟ್ ಡಿ ದುವೆ :** 1917–. ನೊಬೆಲ್ ಪುರಸ್ಕೃತ ಜೀವಕೋಶ ಮತ್ತು ಜೀವರಸಾಯನ ವಿಜ್ಞಾನಿ. 1917 ಅಕ್ಟೋಬರ್ 2ರಂದು ಗ್ರೇಟ್ ಬ್ರಿಟನ್‌ನ ಥೇಮ್ಸ್ ಡಿಟ್ಟನ್‌ನಲ್ಲಿ ಜನಿಸಿದ. ಬೆಲ್ಜಿಯಂ ನಿರಾಶ್ರಿತರಾಗಿ ಇವನ ಪೋಷಕರು ಇಲ್ಲಿ ನೆಲೆಸಿದ್ದರು. 1920ರಲ್ಲಿ ಪುನಃ ಬೆಲ್ಜಿಯಂಗೇ ಹಿಂತಿರುಗಿದರು. ದುವೆನ ಪದವಿ ವ್ಯಾಸಂಗ ಆಂಟ್‌ವರ್ಪ್ (Antwerp)ನಲ್ಲಿ ಜೆಸೂಟ್ಸ್ (Jesuits) ಕಾಲೇಜಿನಲ್ಲಿ ನಡೆಯಿತು. 1947ರಲ್ಲಿ ಕ್ಯಾಥೋಲಿಕ್ ವಿಶ್ವವಿದ್ಯಾಲಯ ಲ್ಯುವೆನ್‌ನಲ್ಲಿ ಪ್ರಾಧ್ಯಾಪಕನಾಗಿ ಸೇರಿದ. ಜೀವರಸಾಯನ ಮತ್ತು ಅಂಗಾಂಶ ಜೀವವಿಜ್ಞಾನದಲ್ಲಿ ವಿಶೇಷ ಜ್ಞಾನ ಹೊಂದಿದ್ದ ಇವನು ಲೈಸೋಸೋಮ್ಸ್ ಮತ್ತು ಪೆರೊಕ್ಸಿಸೋಮ್ ಸೆಲ್ ಆರ್ಗನೆಲ್ಲ್‌ಗಳನ್ನು ಪತ್ತೆಮಾಡುವಲ್ಲಿ ಯಶಸ್ವಿಯಾದ.

ಅನಂತರ 1962ರಲ್ಲಿ ನ್ಯೂಯಾರ್ಕ್ ನಗರದ ರಾಕ್‌ಫೆಲ್ಲರ್ ವಿಶ್ವವಿದ್ಯಾಲಯವನ್ನು ಸೇರಿದ. ನ್ಯೂಯಾರ್ಕ್ ಮತ್ತು ಲ್ಯುವೆನ್ ನಡುವೆ ಓಡಾಟ ಆರಂಭಿಸಿದ. ವಿಶ್ರಾಂತನಾದ ಮೇಲೆ (1985) ಕ್ಯಾಥೋಲಿಕ್ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕನಾಗಿ ಕಾರ್ಯನಿರ್ವಹಿಸುತ್ತಿದ್ದ. ದುವೆ ಇಲಿಯ ಪಿತ್ತಕೋಶಗಳಲ್ಲಿನ ಕಿಣ್ವಗಳ ವಿತರಣೆ ಬಗ್ಗೆ ಅಧ್ಯಯನ ಕೈಗೊಂಡ. ಈ ಸಂಶೋಧನೆಯು ಅಂಗಾಂಶ ರಚನೆಯ ಕಾರ್ಯದಲ್ಲಿ ಹೊಸ ಬೆಳಕನ್ನು ಮೂಡಿಸಿದೆ.

1960ರಲ್ಲಿ ಜೀವ ಮತ್ತು ವೈದ್ಯಕೀಯ ವಿಜ್ಞಾನದಲ್ಲಿಯ ಅಧ್ಯಯನಕ್ಕಾಗಿ ಫ್ರಾಂಕ್ವಿ ಬಹುಮಾನ ಲಭಿಸಿತು. 1974ರಲ್ಲಿ ಆಲ್ಬರ್ಟ್ ಕ್ಲಾಡ್ ಮತ್ತು ಜಾರ್ಜ್, ಇ. ಪಾಲಡೆಯೊಂದಿಗೆ ಸೇರಿ ಲೈಸೋಸೋಮ್ಸ್ ಮತ್ತು ಪೆರೊಕ್ಸಿಸೋಮ್ಸ್‌ಗಳ ರಚನೆ ಮತ್ತು ಚಟುವಟಿಕೆಯನ್ನು ಕುರಿತು ಮಾಡಿರುವ ಅತ್ಯುತ್ತಮ ವಿಶ್ಲೇಷಣೆಗೆ ನೊಬೆಲ್ ಪಾರಿತೋಷಕ ಲಭಿಸಿತು.

(ಸಿ.ಎಸ್.ಪಿ.)

**ಕ್ರಿಸ್ಟೋಫರ್ ಆಂಟೋನಿಯೊ ಪಿಸ್ಸಾರಿಡ್ಸ್ :** 1948–. ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ. ಸೈಪ್ರಸ್‌ನ ನಿಕೊಸಿಯಾದಲ್ಲಿ 1948ರಲ್ಲಿ ಜನಿಸಿದ. 1970ರಲ್ಲಿ ಬಿ.ಎ. ಪದವಿಯನ್ನೂ 1971ರಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನೂ ಎಸೆಕ್ಸ್ ವಿಶ್ವವಿದ್ಯಾಲಯದಿಂದ ಪಡೆದ. 1973ರಲ್ಲಿ ಪಿಎಚ್.ಡಿ. ಪದವಿಯನ್ನು ಮಿಚೆಲೊ ಮೊರಿಷಿಮಾ ಅವರ ಮಾರ್ಗದರ್ಶನದಲ್ಲಿ ಪಡೆದ. ಲಂಡನ್‌ನ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ನಾರ್ಮನ್ ಸೊರ್‌ನೌ ಪೀಠದ ಅಧ್ಯಕ್ಷನಾಗಿಯೂ ಅರ್ಥಶಾಸ್ತ್ರ ವಿಭಾಗದಲ್ಲಿ ಸ್ಥೂಲ ಅರ್ಥಶಾಸ್ತ್ರದ (ಮ್ಯಾಕ್ರೊ ಎಕನಾಮಿಕ್ಸ್) ಸಂಶೋಧನಾ ಕಾರ್ಯಕ್ರಮದ ನಿರ್ದೇಶಕನೂ ಆಗಿ ಕೆಲಸ ಮಾಡುತ್ತಿದ್ದಾನೆ.

ಸ್ಥೂಲ ಅರ್ಥಶಾಸ್ತ್ರದ ವಿಷಯಗಳಾದ ಕಾರ್ಮಿಕರು, ಆರ್ಥಿಕ ಬೆಳವಣಿಗೆ, ಆರ್ಥಿಕ ಯೋಜನೆಗಳು ಇತ್ಯಾದಿಗಳು ಇವನ ಸಂಶೋಧನೆಯ ಮುಖ್ಯ ವಿಷಯಗಳು. ಇವನ ಶೋಧನಾ ಘರ್ಷಣದ ಸಿದ್ಧಾಂತಗಳು (Theory of search frictions) ಹಾಗೂ ಸ್ಥೂಲ ಅರ್ಥಶಾಸ್ತ್ರಕ್ಕೆ ನೀಡಿದ ಕೊಡುಗೆಗಳಿಗಾಗಿ ಪೀಟರ್ ಡೈಮಂಡ್ ಮತ್ತು ಡಲೆ ಮಾರ್ಟಿನ್‌ಸನ್‌ರೊಂದಿಗೆ 2010ರಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದ.

ಪಿಸ್ಸಾರಿಡ್ಸ್ ಸ್ಥೂಲ ಅರ್ಥಶಾಸ್ತ್ರ ಹಾಗೂ ಕಾರ್ಮಿಕ ಮಾರುಕಟ್ಟೆ ನಡುವಿನ ಚಟುವಟಿಕೆಗಳ ಅಧ್ಯಯನದಿಂದ ಮಾಡಿದ ಸಂಶೋಧನೆ ಮತ್ತು ಹೊಂದಾಣಿಕೆಯ ಸಿದ್ಧಾಂತದಿಂದ ಪರಿಚಿತನಾಗಿದ್ದಾನೆ. ಹೊಂದಾಣಿಕೆಯ ಕಾರ್ಯಯೋಜನೆಯ ಬೆಳವಣಿಗೆಯ (ನಿರ್ದಿಷ್ಟ ಸಮಯದಲ್ಲಿ ನಿರುದ್ಯೋಗದಿಂದ ಉದ್ಯೋಗದ ಕಡೆಗೆ ಕರೆದೊಯ್ಯುವ ಬಗೆಗಿನ ವಿವರಣೆ) ಬಗೆಗಿನ ಇವನ ಸಂಶೋಧನೆ ಬಹಳ ಉಪಯುಕ್ತವೆನಿಸಿದೆ.

1994ರಲ್ಲಿ 'ರಿವ್ಯೂ ಆಫ್ ಎಕನಾಮಿಕ್ಸ್ ಸ್ಟಡೀಸ್'ನಲ್ಲಿ ನಿರುದ್ಯೋಗ ಸಿದ್ಧಾಂತದಲ್ಲಿ ಕೆಲಸದ ಸೃಷ್ಟಿ ಮತ್ತು ಕೆಲಸಕ್ಕೆ ಅಡ್ಡಿಯಾಗುವಿಕೆ ಎಂಬುದರ ಬಗೆಗಿನ ಇವನ ಸಂಶೋಧನಾತ್ಮಕ ಲೇಖನ ಮಹತ್ತ್ವಪೂರ್ಣವಾದುದು. ಇವನ ಇಕ್ವಿಲಿಬ್ರಿಯಂ ಎಂಪ್ಲಾಯ್‌ಮೆಂಟ್ ಥಿಯರಿ ಪುಸ್ತಕವು ನಿರುದ್ಯೋಗದ ಸ್ಥೂಲ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಅತ್ಯುತ್ತಮ ಆಕರ ಗ್ರಂಥವೂ ಆಗಿದೆ.

1997ರಲ್ಲಿ ಎಕನಾಮೆಟ್ರಿಕ್ ಸೊಸೈಟಿಯ ಫೆಲೋ ಆಗಿ, 2002ರಲ್ಲಿ ಬ್ರಿಟಿಷ್ ಅಕಾಡೆಮಿಯ ಫೆಲೊ ಆಗಿ, 2005ರಲ್ಲಿ ಯುರೋಪಿಯನ್ ಎಕನಾಮಿಕ್ ಅಸೋಸಿಯೇಷನ್ ಫೆಲೋ ಆಗಿ ಅನೇಕ ಸಾಧನೆಗಳನ್ನು ಮಾಡಿದ ಇವನಿಗೆ 2005ರಲ್ಲಿ ಡೇಲ್ ಮಾರ್ಟಿನ್‌ಸನ್‌ನೊಂದಿಗೆ IZA ಪ್ರಶಸ್ತಿಯೂ, 2011ರಲ್ಲಿ ಅಮೆರಿಕನ್ ಎಕನಾಮಿಕ್ ಅಸೋಸಿಯೇಷನ್‌ನ ಫಾರಿನ್ ಗೌರವ ಸದಸ್ಯತ್ವ ಮತ್ತು ಯುರೋಪಿಯನ್ ಎಕನಾಮಿಕ್ ಅಸೋಸಿಯೇಷನ್‌ನ ಅಧ್ಯಕ್ಷಸ್ಥಾನವೂ ಇವೆಲ್ಲಕ್ಕಿಂತ ಮಿಗಿಲಾಗಿ 2010ರಲ್ಲಿ ನೊಬೆಲ್ ಪ್ರಶಸ್ತಿಯೂ ಲಭಿಸಿ ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಇವನ ಹೆಸರನ್ನು ಚಿರಸ್ಥಾಯಿಗೊಳಿಸಿದೆ.

'ಜಾಬ್ ಮ್ಯಾಚಿಂಗ್ ವಿತ್ ಸ್ಟೇಟ್ ಎಂಪ್ಲಾಯ್‌ಮೆಂಟ್ ಏಜೆನ್ಸೀಸ್ ಆ್ಯಂಡ್ ರ‍್ಯಾಂಡಮ್ ಸರ್ಚ್ – ಎಕನಾಮಿಕ್ ಜರ್ನಲ್' (1979); 'ಶಾರ್ಟ್ ರನ್ ಇಕ್ವಿಲಿಬ್ರಿಯಮ್ ಡೈನಮಿಕ್ಸ್ ಆಫ್ ಅನ್‌ಎಂಪ್ಲಾಯ್‌ಮೆಂಟ್ ಏಜೆನ್ಸೀನ್ ಆ್ಯಂಡ್ ರಿಯಲ್ ವೇಜಸ್' – ಅಮೆರಿಕನ್ ಎಕನಾಮಿಕ್ ರಿವ್ಯೂ (1985); ಇಕ್ವಿಲಿಬ್ರಿಯಂ ಅನ್‌ಎಂಪ್ಲಾಯ್‌ಮೆಂಟ್ ಥಿಯರಿ (ಎರಡನೇ ಮುದ್ರಣ) ಕೇಂಬ್ರಿಡ್ಜ್ (2000) ಇತ್ಯಾದಿ ಇವನ ಪ್ರಸಿದ್ಧ ಲೇಖನಗಳು.

(ಸಿ.ಎಸ್.ಪಿ.)

**ಕ್ರಿಸ್ತ : ನೋಡಿ– ಯೇಸು ಕ್ರಿಸ್ತ.**

**ಕ್ರಿಸ್ತನ ಚರ್ಚುಗಳು :** ಅಮೆರಿಕ ಸಂಯುಕ್ತ ಸಂಸ್ಥಾನದಲ್ಲೇ ವಿಶೇಷವಾಗಿ ಕಾಣಬರುವ ಕೆಲವು ಚರ್ಚುಗಳು (ಚರ್ಚಸ್ ಆಫ್ ಕ್ರೈಸ್ಟ್). ಈ ಚರ್ಚುಗಳ ಅನುಯಾಯಿಗಳ ಸಂಖ್ಯೆ 1964ರಲ್ಲಿ 22,50,000 ಆಗಿತ್ತು. ಇವರೆಲ್ಲ ತಮ್ಮನ್ನು ಕ್ರಿಶ್ಚನರೆಂದು ಕರೆದುಕೊಳ್ಳುತ್ತಾರೆ. ಹೊಸ ಒಡಂಬಡಿಕೆಯ (ನ್ಯೂ ಟೆಸ್ಟಮೆಂಟ್) ಪಾಠದಲ್ಲಿ ಪೂರ್ಣನಂಬಿಕೆ, ಅದರಂತೆ ಆಚರಣೆ–ಇವು ಈ ಪಂಗಡದ ಪ್ರಧಾನ ಅಂಶಗಳು. ಈ ಚರ್ಚುಗಳ ಉಗಮ ಪ್ರ.ಶ. 30 ಎಂದು ಅನುಯಾಯಿಗಳು ಹೇಳಿಕೊಳ್ಳುತ್ತಾರೆ. ಆದರೆ ಇವುಗಳ ಆಧುನಿಕ ಇತಿಹಾಸ ಪ್ರಾರಂಭವಾಗುವುದು 19ನೆಯ ಶತಮಾನದಿಂದ. ಈ ಚಳವಳಿ ಮೊದಲು ಇಂಗ್ಲೆಂಡಿನಲ್ಲಿ ಪ್ರಾರಂಭವಾಗಿ, ಅಮೆರಿಕಕ್ಕೆ ವಲಸೆಹೋಗಿ ಅಲ್ಲಿ ಒಂದು ಸ್ಪಷ್ಟ ರೂಪ ತಳೆಯಿತು. ಚಳವಳಿಯ ಅಗ್ರೇಸರ ಥಾಮಸ್ ಕ್ಯಾಂಪ್‌ಬೆಲ್ ತನ್ನ ಹೊಸ ವಿಚಾರಗಳಿಗಾಗಿ ಇಂಗ್ಲೆಂಡಿನಲ್ಲಿ ದೂಷಿತನಾಗಿ 1807ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಬಂದ.

ಮೂಲ ಹೊಸ ಒಡಂಬಡಿಕೆ ಗ್ರಂಥದಲ್ಲಿರುವುದು ಮಾತ್ರ ಪವಿತ್ರಭಾಗ, ಅನುಕರಣೀಯ. ಅನಂತರ ಸೇರಿದ ಭಾಗಗಳನ್ನು ಧಾರ್ಮಿಕ ಗ್ರಂಥದಿಂದ ತೆಗೆದುಹಾಕಬೇಕು. ಮೂಲಗ್ರಂಥದಂತೆ ದೇವರಿಂದ ಎಲ್ಲ ಅಧಿಕಾರಗಳೂ ಕ್ರಿಸ್ತನಿಗೆ ಸೇರಿದ್ದರಿಂದ, ಮಾನವರಾರಿಗೂ ಅಧಿಕಾರ ಹೊಂದುವ ಹಕ್ಕಿಲ್ಲ. ಆದ್ದರಿಂದ ಚರ್ಚಿನ ಆಡಳಿತದಲ್ಲಿ ಅಧಿಕಾರಿಗಳ ನೇಮಕ ಸಲ್ಲದು–ಇವು ಕ್ಯಾಂಪ್‌ಬೆಲನ ವಿಚಾರಗಳು. ಇವನ ಅನಂತರ ಇವನ ಮಗ ಅಲೆಕ್ಸಾಂಡರ್ ತಂದೆಯ ಚಳವಳಿಯನ್ನು ಮುಂದುವರಿಸಿದ. 19ನೆಯ ಶತಮಾನದ ಮಧ್ಯದಲ್ಲಿ ಪಂಗಡದ ಕೆಲವರಲ್ಲಿ ಮಿಷನರಿ ಕೆಲಸ ಮತ್ತು ಚರ್ಚಿನಲ್ಲಿ ಆರಾಧನೆಯ ಸಮಯದಲ್ಲಿಯ ವಾದ್ಯಸಂಗೀತದ ಬಳಕೆಗಳ ಬಗ್ಗೆ ಭಿನ್ನಾಭಿಪ್ರಾಯ ತಲೆದೋರಿತು. ಕೊನೆಗೆ 1906ರಲ್ಲಿ ಸಂಸ್ಥೆ ಇಬ್ಭಾಗವಾಗಿ ಡಿಸೈಪಲ್ಸ್ ಆಫ್ ಕ್ರೈಸ್ಟ್ (ಕ್ರಿಸ್ತನ ಅನುಯಾಯಿಗಳು) ಮತ್ತು ಚರ್ಚಸ್ ಆಫ್ ಕ್ರೈಸ್ಟ್ ಎಂದು ಎರಡು ಪಂಗಡಗಳಾದುವು. ಕ್ರಿಸ್ತನ ಅನುಯಾಯಿಗಳು ಮಿಷನರಿ ಕೆಲಸ ಹಾಗೂ ಆರಾಧನೆಯ ಸಮಯದಲ್ಲಿ ವಾದ್ಯಸಂಗೀತ ಇಟ್ಟುಕೊಂಡರೆ ಕ್ರಿಸ್ತನ ಚರ್ಚು ಪಂಗಡದವರು ಅವನ್ನು ತ್ಯಜಿಸಿದರು.

ಇದೊಂದನ್ನು ಬಿಟ್ಟರೆ ಎರಡೂ ಪಂಗಡದವರ ದೇವತಾರಾಧನೆಯಲ್ಲಿ ವಿಶೇಷ ವ್ಯತ್ಯಾಸವೇನೂ ಇಲ್ಲ. ಹಾಡು, ಉಪದೇಶ ಹಾಗೂ ಪ್ರಭುಭೋಜನ ಇವು ಎರಡು ಪಂಗಡಗಳಲ್ಲೂ ಇವೆ. ಕ್ರಿಸ್ತನ ಚರ್ಚು ಪಂಗಡದವರು ಹೊಸ ಒಡಂಬಡಿಕೆ ಅಪೌರುಷೇಯ ಎಂದು ನಂಬುತ್ತಾರೆ. ಅದರ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆಯವರು ಬರೆದರೂ ಅವರಿಗೆ ಮೂಲ ಸತ್‌ಪ್ರೇರಣೆ ಬಂದದ್ದು ದೇವರಿಂದ, ಆದ್ದರಿಂದ ಗ್ರಂಥದಲ್ಲಿರುವುದೆಲ್ಲ ದೇವವಾಕ್ಯ, ಅದನ್ನು ಮೀರತಕ್ಕದ್ದಲ್ಲ– ಎನ್ನುವುದು ಇವರ ಧಾರ್ಮಿಕ ನಂಬಿಕೆ. ಈ ಪಂಗಡದವರ ಧಾರ್ಮಿಕ ಮುಖಂಡರಿಗೆ ರೆವರೆಂಡ್ ಎಂಬ ಹೆಸರಿಲ್ಲ. ಅನುಯಾಯಿಗಳಂತೆ ಇವರಲ್ಲೂ ಧರ್ಮದೀಕ್ಷೆ ಸ್ನಾನದಿಂದಲೇ. ಆದರೆ ಇವರಲ್ಲಿ ದೀಕ್ಷೆ ಕೊಡುವುದು ವಯಸ್ಕನಿಗೆ ಮಾತ್ರ, ಅದೂ ಆತನಿಗೆ ಪಂಗಡದ ಆಚರಣೆಗಳಲ್ಲಿ ಸಂಪೂರ್ಣ ನಂಬಿಕೆ ಇದೆ ಎಂಬುದು ಖಾತ್ರಿ ಆದಾಗ.

ಅನುಯಾಯಿಗಳಿಂದ ಬೇರ್ಪಟ್ಟ ಅನಂತರ ಚರ್ಚಸ್ ಆಫ್ ಕ್ರೈಸ್ಟ್ ಪಂಗಡ ಅಗಾಧವಾಗಿ ಬೆಳೆಯಿತು. ಕ್ರಿಶ್ಚನ್ ಶಿಕ್ಷಣದಲ್ಲಿ ನಂಬಿಕೆಯುಳ್ಳ ಈ ಸಂಸ್ಥೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಅನೇಕ ಕಾಲೇಜುಗಳನ್ನು ನಡೆಸುತ್ತಿದೆ. *

**ಕ್ರಿಸ್ತಶಕ :** ಪ್ರಪಂಚದಲ್ಲಿ ಬಳಕೆಯಲ್ಲಿರುವ ವರ್ಷ ತಿಂಗಳು ದಿವಸಗಳನ್ನು ಸೂಚಿಸುವ ಒಂದು ವ್ಯವಸ್ಥೆ (ಕ್ರಿಶ್ಚನ್ ಈರ). ಉದಾಹರಣೆಗೆ, 15–8–1972 ಎಂದರೆ ಒಂದು ನಿಶ್ಚಿತ ಮುಹೂರ್ತದಿಂದ ತೊಡಗಿ 1971 ವರ್ಷಗಳು ಮತ್ತು 7 ತಿಂಗಳುಗಳು ಸಂದ ಬಳಿಕ ಬರುವ 15ನೆಯ ದಿವಸ ಎಂದು ಅರ್ಥವಾಗುತ್ತದೆ. ಇಲ್ಲಿ ದಿವಸ–ತಿಂಗಳು ಸಂಬಂಧ ಸಹ ಗೊತ್ತಾದ ಕ್ರಮದಲ್ಲಿಯೇ ಇರಬೇಕು.(**ನೋಡಿ: ತಾರೀಕುಪಟ್ಟಿ ಗ್ರೆಗೋರಿಯನ್ ತಾರೀಕುಪಟ್ಟಿ**)

ಕ್ರಿಸ್ತಶಕದ ಪ್ರಾರಂಭ ಜನವರಿ 1, 754 ಎ.ಯು.ಸಿ. (ಆನ್ನೋ ಆರ್ಬಿಸ್ ಕಾಂಡಿಟೇ ಎಂಬುದರ ಸಂಕ್ಷೇಪ ರೂಪ. ರೋಮ್ ನಗರದ ತಳಪಾಯ ಹಾಕಿದಂದಿನಿಂದ 754

ವರ್ಷಗಳ ತರುವಾಯ ಕ್ರಿಸ್ತಶಕ ಆರಂಭವಾಗುತ್ತದೆ ಎಂದು ಇದರ ಅರ್ಥ). ಕ್ರಿಸ್ತನ ಜನನ ಅದೇ ಹಿಂದಿನ ಡಿಸೆಂಬರ್ 25ರಂದು ಆಗಿದ್ದಿರಬೇಕು ಎಂದು ಮೊದಲು ನಂಬಲಾಗಿತ್ತು. ಇದರ ವಿಚಾರದಲ್ಲಿ ಸಾಕಷ್ಟು ಗೊಂದಲ ಮುಂದಿನ ಹಲವಾರು ಶತಮಾನಗಳ ಕಾಲ ಪ್ರಚಲಿತವಾಗಿತ್ತು. ಇವನ್ನೆಲ್ಲ ನಿವಾರಿಸಿ ಸಮನ್ವಯ ಸಾಧಿಸಿದವ ಡಯೊನೀಸಿಯಸ್ ಎಗ್ಸಿಜಸ್ (ಸು. 496–540) ಎಂಬ ಇಟಲಿ ದೇಶದ ಕ್ರಿಶ್ಚನ್ ಪಾದ್ರಿ. ವಾಸ್ತವಿಕವಾಗಿ ಈತನೇ ಕ್ರಿಸ್ತಶಕದ ಸಂಸ್ಥಾಪಕ. ಖಚಿತತೆಯ ದೃಷ್ಟಿಯಿಂದ ವರ್ಷದ ಸಂಖ್ಯೆಯ ಒತ್ತಿಗೆ ಎ.ಡಿ. ಎಂಬ ಸಂಕ್ಷೇಪಗಳನ್ನು ಬರೆಯುವ ಕ್ರಮವನ್ನೂ ಈತ ಬಳಕೆಗೆ ತಂದ. (ಕನ್ನಡದಲ್ಲಿ ಕ್ರಿ.ಶ. ಎಂದು ಸಂಖ್ಯೆಯ ಮೊದಲೇ ಬರೆಯುತ್ತೇವೆ. ಇದಕ್ಕೆ ಸಂವಾದಿಯಾಗಿ ಕ್ರಿಸ್ತಪೂರ್ವ, ಇಂಗ್ಲಿಷಿನಲ್ಲಿ ಬಿಫೋರ್ ಕ್ರೈಸ್ಟ್ ಅಥವಾ ಬಿ.ಸಿ. ಇದೆ.) ಈ ಅಕ್ಷರಗಳ ವಿಸ್ತೃತ ರೂಪ ಅನ್ನೊ ಡೋಮಿನಿ; ಅರ್ಥ ನಮ್ಮ ಪ್ರಭುವಿನ ವರ್ಷದಲ್ಲಿ ಎಂದು. ಡಯೊನೀಸಿಯಸನ ಸುಧಾರಣೆಯನ್ನು ಎಲ್ಲ ಗುರುಗಳೂ ಎಲ್ಲ ಪಂಥಗಳವರೂ ಒಡನೆಯೇ ಸ್ವೀಕರಿಸಲಿಲ್ಲ; ಸಾಕಷ್ಟು ದೀರ್ಘಕಾಲ ಕ್ರಿಸ್ತನ ಹುಟ್ಟಿನ – ಆದ್ದರಿಂದ ಕ್ರಿಸ್ತಶಕದ – ಆರಂಭದ ದಿವಸ ಮತ್ತು ವರ್ಷವನ್ನು ಕುರಿತು ವಿವಾದ ಮುಂದುವರಿದಿತ್ತು. ಇಂಗ್ಲೆಂಡ್ 676ರಲ್ಲಿ ಡಯೊನೀಸಿಯಸ್ ವಿಧಾನವನ್ನು ಬಳಕೆಗೆ ತಂದಿತು. ಯುರೋಪ್ ಖಂಡದಲ್ಲಿ ಇದು ವ್ಯಾಪಕವಾಗಿ ಪಸರಿಸಿದ್ದು 11ನೆಯ ಶತಮಾನದ ಅನಂತರ; ಗ್ರೀಕ್ ಪ್ರಪಂಚದಲ್ಲಿ ಕಾಲೂರಿದ್ದು 15ನೆಯ ಶತಮಾನದಲ್ಲಿ. ಇದು ಹೇಗೂ ಇರಲಿ, ಇಂದು ಪ್ರಸಕ್ತಶಕ ಪ್ರಪಂಚದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವುದು ಮಾತ್ರವಲ್ಲ, ಎಲ್ಲ ನಾಗರಿಕರಿಗೂ ಸುಲಭವಾಗಿ ಅರ್ಥವೂ ಆಗುವುದು. ಇದರಿಂದಾಗಿ ವರ್ಷ, ತಿಂಗಳು, ದಿವಸಗಳ ನಿರೂಪಣೆಯಲ್ಲಿ ಒಂದು ವಿಧದ ಏಕತೆ ಒದಗಿದೆ.

*

**ಕ್ರಿಸ್ತು ಆಗಮನ ದೂತ :** ಸಿಕಂದರಾಬಾದಿನಿಂದ ಪ್ರಕಟವಾಗುತ್ತಿರುವ ತೆಲುಗು ಮಾಸಪತ್ರಿಕೆ. 1957ರಲ್ಲಿ ಆರಂಭವಾಯಿತು. ಧರ್ಮ ಹಾಗೂ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳಿಗೆ ಮೀಸಲಾಗಿದೆ. ಬಿ.ಎ. ಪ್ರಭಾಕರ್ ಸಂಪಾದಕ, ಜೆ.ಎಸ್. ಬೆನ್ನಿ ಮುದ್ರಕ. ಡಬ್ಲ್ಯೂ.ಸಿ.ಮೂರ್ ಮಾಲೀಕ. ಸಿಕಂದರಾಬಾದಿನ ಡೆಕನ್ ಲಿಟರೇಚರ್ ಪ್ರಿಂಟರ್ಸ್‌ನಲ್ಲಿ ಅಚ್ಚಾಗುತ್ತದೆ. ವಾರ್ಷಿಕ ಚಂದಾ ರೂ. 1. ಪತ್ರಿಕೆಯ ಪ್ರಸಾರ ಸುಮಾರು 18,000.

(ಎನ್.ಕೆ.)

**ಕ್ರಿಸ್ಮಸ್ :** ಕ್ರಿಸ್ತನ ಜನನ ದಿನ ಡಿಸೆಂಬರ್ 25 ಎಂಬ ಸಾಂಪ್ರದಾಯಿಕ ನಂಬಿಕೆಯಂತೆ ಅಂದು ಎಲ್ಲ ದೇಶಗಳ ಕ್ರೈಸ್ತ ಮತೀಯರು ಆಚರಿಸುವ ಕ್ರಿಸ್ತನ ಜನ್ಮದಿನೋತ್ಸವ. ಕ್ರಿಸ್‌ಮಸ್ ಎಂಬುದು ಕ್ರೈಸ್ಟ್ಸ್ ಮಾಸ್ (ಎಂದರೆ ಕ್ರಿಸ್ತನಿಗೆ ಸಂಬಂಧಿಸಿದ ಆರಾಧನೆ,

ಕ್ರಿಸ್‌ಮಸ್, ಪೀರೂ ಡೆಲ ಫ್ರಾನ್ಸಿಸ (1420–1492) ಒಂದು ವರ್ಣಚಿತ್ರ

ಹಬ್ಬ) ಎಂಬುದರ ಸಂಕ್ಷಿಪ್ತರೂಪ. ಪ್ರ.ಶ. 4ನೆಯ ಶತಮಾನದ ಉತ್ತರಾರ್ಧದಿಂದ ಈ ಉತ್ಸವ ಅಸ್ತಿತ್ವಕ್ಕೆ ಬಂದಿದೆ ಎನ್ನಲಾಗಿದೆ. ರೋಮನ್ ಕೆಥೊಲಿಕರು ಜನವರಿ 6ರಂದು ಆಚರಿಸುತ್ತಿದ್ದ ಸೂರ್ಯನ ಹಬ್ಬವಾದ ಎಪಿಫೆನಿಯೂ ಕ್ರಿಸ್ತನ ಜನನವನ್ನು ಸ್ಮರಣೆಗೆ ತರುವಂಥ ಹಬ್ಬವಾಗಿತ್ತು. ಈ ಹಬ್ಬವನ್ನು ಆಚರಿಸಲಿಕ್ಕೆ ಪೌರಸ್ತ್ಯರು ಒಂದು ತಾರೀಖನ್ನೂ ಪಾಶ್ಚಾತ್ಯರು ಒಂದು ತಾರೀಖನ್ನೂ ಗೊತ್ತುಮಾಡಿದುದರಿಂದ ಎರಡು ಭಿನ್ನ ದಿನಗಳಲ್ಲಿ ಈ ಹಬ್ಬವನ್ನು ಆಚರಿಸುವಂತಾಯಿತು. ಆದರಿದು ಕ್ರಮೇಣ ಡಿಸೆಂಬರ್ 25ರಂದೇ ಎಲ್ಲ ದೇಶಗಳಲ್ಲೂ ಆಚರಣೆಗೆ ಬಂತು.

ಕ್ರಿಸ್ತ ಹುಟ್ಟಿದ ತಾರೀಖಿನ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಪ್ರ.ಶ. 336ಕ್ಕಿಂತ ಮುಂಚೆ ರೋಮಿನ ಕ್ರೈಸ್ತೇತರರು (ಪೇಗನ್ಸ್) ಡಿಸೆಂಬರ್ 25ರಂದು ಸೂರ್ಯನ ಹಬ್ಬವನ್ನು ಆಚರಿಸುತ್ತಿದ್ದರು. ಅದೇ ದಿನವನ್ನು ಕ್ರಿಸ್ಮಸ್ ಹಬ್ಬವನ್ನಾಗಿ ಗೊತ್ತುಮಾಡಿರಬಹುದೆಂದು ಇನ್ನೊಂದು ಊಹೆ.

ಆ ದಿನ ಚರ್ಚ್‌ಗಳಲ್ಲಿ ಮೂರು ಆರಾಧನೆಗಳು ನಡೆಯುತ್ತವೆ. ಮೊದಲನೆಯದು ರಾತ್ರಿ 12 ಗಂಟೆಗೂ ಎರಡನೆಯದು ಬೆಳಗ್ಗೆಯೂ ನಡೆಯುತ್ತವೆ. ಜನ ಚರ್ಚುಗಳಲ್ಲಿ ಕ್ರಿಸ್ಮಸ್ ಹಬ್ಬದ ಕೀರ್ತನೆಗಳನ್ನು (ಕರೋಲ್ಸ್) ಹಾಡಿಕೊಂಡು ನಲಿಯುತ್ತಾರೆ. ಸಾಮಾನ್ಯವಾಗಿ ಈ ಹಬ್ಬದ ಉತ್ಸಾಹವನ್ನು ಹೊಸ ವರ್ಷದ ಮೊದಲ ದಿನದವರೆಗೂ ಅಂದರೆ ಜನವರಿ ಒಂದರವರೆಗೂ ಕಾಣಬಹುದಾಗಿದೆ.

ಈ ಹಬ್ಬಕ್ಕೆ ಸಂಬಂಧಿಸಿದಂತೆ ಅನೇಕ ರೀತಿಯ ಪದ್ಧತಿಗಳು ರೂಢಿಗೆ ಬಂದಿವೆ. ಆ ದಿನ ಪ್ರತಿಯೊಬ್ಬರೂ ತಮ್ಮ ತಮ್ಮ ಗೃಹಗಳನ್ನು ಮನಮೆಚ್ಚುವಂತೆ ಅಲಂಕರಿಸುತ್ತಾರೆ. ಅಂದು ಸ್ತ್ರೀಪುರುಷ ಮಕ್ಕಳಾದಿಯಾಗಿ ಶುಭ್ರವಸ್ತ್ರಧಾರಿಗಳಾಗಿ ಚರ್ಚಿಗೆ ಹೋಗಿ ಕರ್ತನಿಗೆ ಪ್ರಾರ್ಥನೆಯನ್ನು ಸಲ್ಲಿಸಿ ಬಂದು, ಭಕ್ಷ್ಯ ಭೋಜ್ಯ ತಿಂಡಿ ತಿನಿಸುಗಳನ್ನು ತಿಂದುಂಡು ಸಂತೋಷವಾಗಿರುತ್ತಾರೆ. ಆ ದಿನ ಬಡ ಬಗ್ಗರಿಗೆ ಅನ್ನ ವಸ್ತ್ರಾದಿಗಳನ್ನು ದಾನ ಮಾಡುವುದು ರೂಢಿಯಲ್ಲಿದೆ. ಉಳ್ಳವರು ಈ ದಿನದಂದು ತಮ್ಮ ಪ್ರೀತಿ ಪಾತ್ರರಿಗೆ ಬೆಲೆ ಬಾಳುವ ಪದಾರ್ಥಗಳನ್ನು ಉಡುಗೊರೆಯಾಗಿ ಕೊಡುತ್ತಾರೆ. ಅಂದು ದೂರದಲ್ಲಿರುವ ತಮ್ಮ ಆಪ್ತರು ಆತ್ಮೀಯರಿಗೆ ಶುಭಾಕಾಂಕ್ಷೆ ಪತ್ರಗಳನ್ನು ಬರೆದು ಶುಭ ಕೋರುವುದು ಸರ್ವೇಸಾಮಾನ್ಯವಾಗಿದೆ. ಕ್ರಿಸ್‌ಮಸ್‌ಗಿಡವನ್ನು ನಿರ್ಮಿಸಿ ಅದನ್ನು ಕಾಗದದ ಹೂ ಮತ್ತು ದೀಪಗಳಿಂದ ಅಲಂಕರಿಸುವ ಪದ್ಧತಿ ಜರ್ಮನರಿಂದ ಬಂದಿತೆನ್ನಲಾಗಿದೆ. ನ್ಯೂಯಾರ್ಕಿನಲ್ಲಿ ಮೊದಲು ರೂಢಿಗೆ ಬಂದ ಸಾಂತ ಕ್ಲಾಸನ ಕಲ್ಪನೆಗೆ ಕಾರಣವಾದ್ದು ಅಲ್ಲಿಯ ಡಚ್‌ಸಂಪ್ರದಾಯಗಳು ಎಂದು ಹೇಳಲಾಗಿದೆ. **(ನೋಡಿ– ನಿಕಲಸ್ ಸಂತ)**

(ಡಿ.ವಿ.ಡಬ್ಲ್ಯು.)

**ಕ್ರಿಸ್ಮಸ್ ದ್ವೀಪಗಳು :** ಕ್ರಿಸ್ಮಸ್ ಎಂಬ ಹೆಸರಿನ ಎರಡು ದ್ವೀಪಗಳಿವೆ. ಒಂದು ಪೆಸಿಫಿಕ್ ಸಾಗರದಲ್ಲಿದೆ. ಮತ್ತೊಂದು ಹಿಂದೂ ಸಾಗರದಲ್ಲಿದೆ.

ಪೆಸಿಫಿಕ್ ಸಾಗರದ ಮಧ್ಯದಲ್ಲಿರುವ ಕ್ರಿಸ್ಮಸ್ ದ್ವೀಪ ಭೂಮಧ್ಯರೇಖೆಯ ಉತ್ತರಕ್ಕೆ ಹವೈಯಿ ದ್ವೀಪಗಳ ದಕ್ಷಿಣಕ್ಕೆ (ಉ.ಅ. 2°, ಪ.ರೇ. 157°) ಇದೆ. ಇಲ್ಲಿನ ಉಪ್ಪು ಸರೋವರಗಳನ್ನೂ ಸೇರಿಸಿಕೊಂಡಲ್ಲಿ ಒಟ್ಟು ದ್ವೀಪದ ವಿಸ್ತೀರ್ಣ 135 ಚಕಿಮೀ ಇದು ಪೆಸಿಫಿಕ್ ಸಾಗರದಲ್ಲಿರುವ ಹವಳ ದ್ವೀಪಗಳಲ್ಲೆಲ್ಲ ದೊಡ್ಡದು. ಜೇಮ್ಸ್ ಕುಕ್ 1777ರ ಡಿಸೆಂಬರ್‌ನಲ್ಲಿ ಗುರುತಿಸಿದ. ಈ ದ್ವೀಪ 1888ರಲ್ಲಿ ಗ್ರೇಟ್ ಬ್ರಿಟನಿಗೆ ಸೇರಿತು. 1919ರ ನವೆಂಬರ್‌ನಲ್ಲಿ ಗಿಲ್ಬರ್ಟ್ ಮತ್ತು ಎಲಿಸ್ ದ್ವೀಪಗಳ ಕಾಲೋನಿಯೊಂದಿಗೆ ವಿಲೀನಗೊಂಡಿತು. ಈ ದ್ವೀಪ ತನಗೆ ಸೇರಬೇಕೆಂದು ಅಮೆರಿಕ ಸಂಯುಕ್ತ ಸಂಸ್ಥಾನ ಒಂದು ಶತಮಾನದಿಂದಲೂ ಹೇಳುತ್ತಿದೆ. ಆರ್ಥಿಕ ದೃಷ್ಟಿಯಿಂದ ಈ ದ್ವೀಪಕ್ಕೆ ಯಾವ ಮಹತ್ತ್ವವೂ ಇಲ್ಲ. ಇರುವ ಮಹತ್ತ್ವವೆಲ್ಲ ಇದು ನೆಲೆಗೊಂಡಿರುವ ಸ್ಥಳದಿಂದಾಗಿದೆ. ಇಲ್ಲಿ ಗಿಲ್ಬರ್ಟ್ ದ್ವೀಪದ ಕಾರ್ಮಿಕರು ಅಪಾರವಾಗಿ ತೆಂಗನ್ನು ಬೆಳೆಯುತ್ತಿದ್ದಾರೆ. ಇತ್ತೀಚೆಗೆ ಬ್ರಿಟಿಷರು ಈ ಸ್ಥಳವನ್ನು ಪರಮಾಣು ಪರೀಕ್ಷಾಸ್ಫೋಟನೆಯ ನೆಲೆ ಮಾಡಿಕೊಂಡಿದ್ದಾರೆ. 1940ರಲ್ಲಿ ಇಲ್ಲಿಯ ಜನಸಂಖ್ಯೆ 42 ಇತ್ತು. ಈಗಿನ ಜನಸಂಖ್ಯೆ 1493 (2005).

ಹಿಂದೂ ಸಾಗರದಲ್ಲಿರುವ ಕ್ರಿಸ್ಮಸ್ ದ್ವೀಪ ಜಾವದ ನೈರುತ್ಯಕ್ಕೆ 320 ಕಿಮೀ ದೂರದಲ್ಲಿ (ದ.ಅ. 10°, ಪೂ.ರೇ. 105°41′) ಇದೆ. ರಿಚರ್ಡ್‌ರೋ ಎಂಬ ಬ್ರಿಟಿಷ್ ನಾವಿಕ ಈ ದ್ವೀಪವನ್ನು 1615ರಲ್ಲಿ ಗುರುತಿಸಿದ. ಇದು ಬಹು ಸಣ್ಣ ದ್ವೀಪ. ಇದರ ಉದ್ದ 18 ಕಿಮೀ. ಕನಿಷ್ಠ ಅಗಲ, 8 ಕಿಮೀ ಪೆಸಿಫಿಕ್ ಸಾಗರದಲ್ಲಿನ ಕ್ರಿಸ್ಮಸ್ ದ್ವೀಪದಂತೆ ಈ ದ್ವೀಪವೂ 1888ರಲ್ಲಿ ಬ್ರಿಟನಿನ ವಶಕ್ಕೆ ಬಂತು. 1900ರಲ್ಲಿ ಸಿಂಗಪುರ ನೆಲಸುನಾಡಿಗೆ ಈ ದ್ವೀಪ ಸೇರಿತು. ಇದು ಆಸ್ಟ್ರೇಲಿಯದ ಆಡಳಿತಕ್ಕೆ 1958ರಲ್ಲಿ ಒಳಪಟ್ಟಿತು. ಇಲ್ಲಿ ಕ್ಯಾಲ್ಸಿಯಂ ಫಾಸ್ಫೇಟ್ ನಿಕ್ಷೇಪಗಳು ಹೇರಳವಾಗಿವೆ. ಇಲ್ಲಿಯ ಬಹು ಜನ ಕ್ಯಾಲ್ಸಿಯಂ ಫಾಸ್ಫೇಟ್ ಗಣಿ ಕೆಲಸದಲ್ಲಿ ನಿರತರಾಗಿದ್ದಾರೆ. ಇದು ಈ ದ್ವೀಪದ ಮುಖ್ಯ ನಿರ್ಯಾತ ವಸ್ತುವಾಗಿದೆ.

*

**ಕ್ರೀಟ್ :** ಮೆಡಿಟರೇನಿಯನ್ ಸಮುದ್ರದಲ್ಲಿರುವ ಐದನೆಯ ದೊಡ್ಡ ದ್ವೀಪ; ಗ್ರೀಸಿಗೆ ಸೇರಿದ ದ್ವೀಪಗಳಲ್ಲಿ ಪೈಕಿ ದೊಡ್ಡದು; ಅದರ ಒಂದು ಪ್ರಾಂತ್ಯ. ಉ.ಅ. 34° 55′–35° 41′ ಮತ್ತು ಪೂ.ರೇ. 26° 30′–26° 20′ ನಡುವೆ ಇದೆ. ಇದು ಯುರೋಪ್ ಖಂಡದ ದಕ್ಷಿಣದ ತುದಿ. ಈಜಿಯನ್ ಸಮುದ್ರದ ದಕ್ಷಿಣದಲ್ಲಿದೆ. ಪೂರ್ವಪಶ್ಚಿಮವಾಗಿ ಈ ದ್ವೀಪದ ಉದ್ದ ಸುಮಾರು 243 ಕಿಮೀ ಅಗಲ 12.4 ರಿಂದ 56 ಕಿಮೀ ವ್ಯತ್ಯಾಸವಾಗುತ್ತದೆ. ವಿಸ್ತೀರ್ಣ 8336 ಚಕಿಮೀ (3,218 ಚಮೈ.) ಜನಸಂಖ್ಯೆ 601,159 (2002).

**ಭೌತಲಕ್ಷಣ:** ವಾಸ್ತವವಾಗಿ ಈ ದ್ವೀಪ ಸಮುದ್ರದಿಂದ ಮೇಲೆದ್ದು ನಿಂತಿರುವ ಪರ್ವತಗಳ ಮಾಲೆ. ಇದು ಗ್ರೀಕ್ ಪ್ರಸ್ಥಭೂಮಿ ಮತ್ತು ಏಷ್ಯ ಮೈನರ್‌ಗಳ ನಡುವೆ ಸಂಪರ್ಕವನ್ನು ಕಲ್ಪಿಸುತ್ತದೆ. ಇದರ ಮೇಲ್ಮೈ ತುಂಬ ಕಡಿದಾಗಿರುವ ಬೆಟ್ಟಗುಡ್ಡಗಳನ್ನೊಳಗೊಂಡಿದ್ದು ಏರಿಳಿತಗಳಿಂದ ಕೂಡಿದೆ. ಈ ದ್ವೀಪದ ಶೇ. 10 ಭಾಗ ಸಮುದ್ರಮಟ್ಟದಿಂದ 915 ಮೀಗಿಂತ ಕಡಿಮೆ ಎತ್ತರದಲ್ಲೂ ಶೇ. 45 ಭಾಗ 396 ಮೀಗೂ ಕಡಿಮೆ ಎತ್ತರದಲ್ಲೂ ಇದೆಯಾದರೂ, ಈ ದ್ವೀಪದ ಪಶ್ಚಿಮ ದಿಕ್ಕಿನಲ್ಲಿರುವ ಲೆವ್ಕ ಓರಿ ಅಥವಾ ಬಿಳಿಯ ಪರ್ವತಗಳು ಸಮುದ್ರಮಟ್ಟದಿಂದ ಸುಮಾರು 2450 ಮೀ ಎತ್ತರವನ್ನು (ಪಾಖ್ನೆಸ್ ಶಿಖರ) ತಲುಪುತ್ತವೆ. ದ್ವೀಪದ ಮಧ್ಯಭಾಗದಲ್ಲಿರುವ ಸಿಲೋರಿತಿಯ ಗರಿಷ್ಠ ಎತ್ತರ 2454 ಮೀ (ಸ್ಟಾವ್ರೋಸ್ ಶಿಖರ). ಇದು ಇಡೀ ಕ್ರೀಟ್ ದ್ವೀಪದ ಅತ್ಯುನ್ನತ ಸ್ಥಳ. ಪೂರ್ವದ ಕೊನೆಯಲ್ಲಿ ಲ್ಯಾಸಿತಿಯ ಉನ್ನತ ಶಿಖರ ಅಫೆಂಡಿಸ್ ಬ್ರಿಸ್ಟಾಸ್ 2140 ಮೀ ಇನ್ನೂ ಪೂರ್ವಕ್ಕಿರುವ ಸಿತಿಯ ಉನ್ನತ ಶಿಖರ ತ್ರಿಪ್ಟಿ ಓರಾಸ್ 1449 ಮೀ ಮಧ್ಯದಲ್ಲಿರುವ ಮೆಸಾರ ಮೈದಾನಕ್ಕೂ ದಕ್ಷಿಣ ಕರಾವಳಿಗೂ ನಡುವೆ ಇರುವ ಪರ್ವತ ಅಸ್ಪರೂಷ್ಯ 1230 ಮೀ ಈ ಪರ್ವತೀಯ ಪ್ರದೇಶದಲ್ಲಿ ಆಳವಾದ ಮತ್ತು ಕಡಿದಾದ ಕಮರಿಗಳಿವೆ.

ಈ ದ್ವೀಪದ ದಕ್ಷಿಣ ಕರಾವಳಿ ತುಂಬ ಕಡಿದಾಗಿರುವುದರಿಂದ ನೈಸರ್ಗಿಕ ಬಂದರುಗಳು ಯಾವುವೂ ಇಲ್ಲ. ಉತ್ತರ ಕರಾವಳಿಯಲ್ಲಿ ಅನೇಕ ಒಳಚಾಚುಗಳಿವೆ. ಒಟ್ಟಿನಲ್ಲಿ ಕರಾವಳಿ ತುಂಬ ಕಡಿದಾಗಿರುವುದರಿಂದ ಬಂದರುಗಳನ್ನು ಅಭಿವೃದ್ಧಿಪಡಿಸುವುದು ಸಾಧ್ಯವಿಲ್ಲ. ಕರಾವಳಿ ಪ್ರದೇಶದಲ್ಲಿಯ ಜನಸಾಂದ್ರತೆ ಹೆಚ್ಚು. ಮೆಸಾರವೂ ವಾಯವ್ಯ ದಿಕ್ಕಿನಲ್ಲಿರುವ ಕೇನಿಯವೂ ವಿಶಾಲವಾದ ಮೈದಾನಗಳು. ಕೇನಿಯದ ರಾಜಧಾನಿಯ ಪೂರ್ವಕ್ಕೆ ಇರುವ ಸೂಡ ಕೊಲ್ಲಿಯಲ್ಲಿ ಉತ್ತಮವಾದ ನೈಸರ್ಗಿಕ ಬಂದರಿದೆ. ಬ್ರಿಟಿಷ್ ನೌಕಾಪಡೆ ಅನೇಕ ಸಂದರ್ಭಗಳಲ್ಲಿ ಇದನ್ನು ಸೈನಿಕ ಕಾರ್ಯಾಚರಣೆಯ ಠಾಣ್ಯವಾಗಿ ಬಳಸಿಕೊಂಡಿದ್ದುಂಟು. ಆದರೂ ಇದನ್ನು ಅಭಿವೃದ್ಧಿಪಡಿಸಿಲ್ಲ. ಈ ದ್ವೀಪದ ಕರಾವಳಿಗೆ ಸ್ವಲ್ಪ ದೂರದಲ್ಲಿ ಅನೇಕ ಸಣ್ಣಪುಟ್ಟ ದ್ವೀಪಗಳಿವೆ. ಇವುಗಳಲ್ಲಿ ಗವಧೋಸ್ ದ್ವೀಪವೇ ತುಂಬ ದೊಡ್ಡದು. ಇದು ಲಿಥಿಯಾನ್ ಭೂಶಿರದ ನೈರುತ್ಯಕ್ಕೆ ಸುಮಾರು 64 ಕಿಮೀಗಳ ದೂರದಲ್ಲಿದೆ.

ಇಲ್ಲಿ ಅನೇಕ ಪರ್ವತಝರಿಗಳುಂಟು. ಆದರೆ ಬೇಸಗೆಯಲ್ಲಿ ಇವು ಒಣಗಿ ಹೋಗುತ್ತವೆ. ಮೆಸಾರ ಕೊಲ್ಲಿಯ ಪೂರ್ವಕ್ಕಿರುವ ಮೆಸಾರ ಬಯಲು ಪ್ರದೇಶದಲ್ಲಿ ಯೆರೊಪೊಟಾಮೋಸ್ ಮತ್ತು ಅನಪೊಧಾರಿಸ್ ನದಿಗಳು ಹರಿಯುತ್ತವೆ. ಪ್ಲಟನಿಯಾಸ್ ಮತ್ತು ಮಿಲೊಪೊಟಾಮೋಸ್–ಇವು ಉತ್ತರದ ಮುಖ್ಯ ನದಿಗಳು. ಈ ದ್ವೀಪದ ಯಾವ ನದಿಯೂ ನೌಕಾ ಸಂಚಾರಯೋಗ್ಯವಾಗಿಲ್ಲ. 65 ಹೆಕ್ಟೇರ್‌ರಷ್ಟು ವಿಸ್ತೀರ್ಣವುಳ್ಳ ಕೋರ್‌ನಾಸ್ ಈ ದ್ವೀಪದ ಅತ್ಯಂತ ದೊಡ್ಡ ಸ್ವಚ್ಛ ಜಲ ಸರೋವರ. ಇದು ವಾಯವ್ಯ ಕರಾವಳಿಯ ಬಳಿ ಇದೆ. ಈ ದ್ವೀಪದಲ್ಲಿ ಅಲ್ಲಲ್ಲಿ ನೀರಿನ ಬುಗ್ಗೆಗಳುಂಟು.

ಗೂರ್ನಿಯ ನಗರದ ಅವಶೇಷಗಳು. ಮಿನೋವನ್ ನಾಗರಿಕತೆ

**ವಾಯುಗುಣ:** ಸ್ಥಳೀಯ ಭೂಲಕ್ಷಣಗಳಿಗನುಗುಣವಾಗಿ ಇಲ್ಲಿಯ ವಾಯುಗುಣ ವ್ಯತ್ಯಾಸವಾಗುತ್ತದೆ. ಉತ್ತರ ಕರಾವಳಿಯ ಬಯಲುಗಳಲ್ಲಿ ಉಷ್ಣತೆ ಸುಮಾರು 55.6° ಸೆ. ತಲಪುವುದುಂಟು. ಆದರೆ ಕರಾವಳಿ ಪ್ರದೇಶದ ಸರಾಸರಿ ಉಷ್ಣತೆ 36° ಸೆ. ಒಳನಾಡಿನಲ್ಲಿ ಋತುವಿಗೆ ಅನುಗುಣವಾಗಿ ಉಷ್ಣತೆಯಲ್ಲಿ ಹೆಚ್ಚಿನ ವ್ಯತ್ಯಾಸಗಳಾಗುತ್ತವೆ. ಕರಾವಳಿಯಲ್ಲಿ ಚಳಿಗಾಲದಲ್ಲೂ ಬಹುಮಟ್ಟಿಗೆ ಹಿಮಗಟ್ಟುವುದಿಲ್ಲ. ವೈದೃಶ್ಯವೆಂಬಂತೆ, ಪರ್ವತಶಿಖರಗಳು ವರ್ಷದಲ್ಲಿ ಬಹುಕಾಲ ಹಿಮದ ಕಿರೀಟ ಧರಿಸಿರುತ್ತವೆ. ಚಳಿಗಾಲದ ಸರಾ ಸರಿ ಉಷ್ಣಾಂಶ 12° ಸೆ. ಮತ್ತು ಬೇಸಿಗೆಯಲ್ಲಿ ಅದು 24° ಸೆ.ಗಳಾಗಿರುತ್ತದೆ.

ಮಳೆ ಋತುಬದ್ಧವಾದ್ದು. ಚಳಿಗಾಲದಲ್ಲಿ ಮಳೆ ಹೆಚ್ಚು. ಆಗ ಅಟ್ಲಾಂಟಿಕ್ ಸಾಗರದ ಕಡೆಯಿಂದ ಬೀಸುವ ಚಂಡಮಾರುತಗಳು ಮಳೆಯನ್ನೂ ಹಿಮಪಾತವನ್ನೂ ಉಂಟುಮಾಡುತ್ತವೆ. ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಈ ದ್ವೀಪ ವಾಣಿಜ್ಯ

ಕ್ರೀಟನಲ್ಲಿರುವ ಮೆಸಾರ ಮೈದಾನ, ಹಿಂಬದಿಯಲ್ಲಿರುವ ಗ್ರೀಕ್ ಪುರಾಣಪ್ರಸಿದ್ಧವಾದ ಇಡಾ ಪರ್ವತ

ಮಾರುತಗಳ ವಲಯಕ್ಕೆ ಒಳಪಡುತ್ತದೆ. ವಾರ್ಷಿಕ ಸರಾಸರಿ ಮಳೆ ವಾಯವ್ಯ ಕರಾವಳಿಯಲಿ 70'; ಆಗ್ನೇಯ ಕರಾವಳಿಯಲ್ಲಿ 70 ಸೆಂಮೀ; ಉನ್ನತ ಪ್ರದೇಶಗಳಲ್ಲಿ ಸುಮಾರು 100 ಸೆಂಮೀ; ಪರ್ವತಗಳ ಇಳಿಜಾರು ಪ್ರದೇಶಗಳಲ್ಲಿ 38–45 ಸೆಂಮೀ.

ಚಳಿಗಾಲ ಬೆಚ್ಚಗೂ ಆರ್ದ್ರವಾಗಿಯೂ ಇದ್ದರೆ, ಬೇಸಗೆ ಉಷ್ಣವಾಗಿಯೂ ಶುಷ್ಕವಾಗಿಯೂ ಇರುತ್ತದೆ. ಉಷ್ಣತೆ ಸಾಪೇಕ್ಷವಾಗಿ ಹೆಚ್ಚಾಗಿರುವುದರಿಂದಲೂ ಭೂಮಿ ಸಚ್ಛಿದ್ರವಾಗಿರುವುದರಿಂದಲೂ ಅಗತ್ಯವಾದಷ್ಟು ಮಾತ್ರ ಮಳೆಯಾಗುವುದರಿಂದ ಹಿಡಿದು ವಿರಳವಾಗಿ ಮಾತ್ರ ಮಳೆಯಾಗುವವರೆಗೆ ಒಟ್ಟಿನಲ್ಲಿ ಮಳೆ ಅಪರ್ಯಾಪ್ತವಾಗಿ ರುವುದರಿಂದಲೂ ಈ ದ್ವೀಪದಲ್ಲಿ ನೀರಿನದೊಂದು ಉಲ್ಬಣ ಸಮಸ್ಯೆಯಾಗಿದೆ. ಬೇಸಗೆಯಲ್ಲಿ ಅನೇಕ ಹಳ್ಳಿಗಳಲ್ಲಿ ಸಾಕಷ್ಟು ಕುಡಿಯುವ ನೀರೂ ದೊರೆಯುವುದಿಲ್ಲ.

**ಸಸ್ಯ, ಪ್ರಾಣಿ ಸಂಪತ್ತು :** ಈ ದ್ವೀಪದಲ್ಲಿ ಸುಣ್ಣಕಲ್ಲಿನ ಬಂಡೆಗಳನ್ನೊಳಗೊಂಡಿರುವ ವಿಶಾಲ ಪ್ರದೇಶಗಳುಂಟು. ಈ ಬಂಜರು ಪ್ರದೇಶಗಳಲ್ಲಿ ಹಿಂದೊಮ್ಮೆ ಮರಗಳು ಬೆಳೆದಿದ್ದುವು. ಆದರೆ ಜನರು ದೀರ್ಘಕಾಲದಿಂದ ಇಲ್ಲಿ ವಾಸಿಸುತ್ತಿರುವುದರಿಂದ ನಿಸರ್ಗ ಸಸ್ಯ ಸಂಪತ್ತು ಸಂಪೂರ್ಣವಾಗಿ ನಾಶಗೊಂಡಿದೆ. ವನ್ಯಮೃಗಗಳೂ ತುಂಬ ವಿರಳ. ಹಕ್ಕಿಗಳ ಸಂಖ್ಯೆ ತೀರ ಕಡಿಮೆ. ಇಲ್ಲಿಯ ಸಸ್ಯಗಳು ಏಷ್ಯ ಮೈನರ್ ಮತ್ತು ಗ್ರೀಕ್ ಪ್ರಸ್ಥಭೂಮಿಯಲ್ಲಿರುವ ಸಸ್ಯವರ್ಗಗಳೊಡನೆ ನಿಕಟ ಸಂಬಂಧವನ್ನು ಹೊಂದಿದ್ದರೂ ಇವು ಸಸ್ಯವಿಜ್ಞಾನಿಗಳ ಗಮನ ಸೆಳೆದಿವೆ. ಇಲ್ಲಿ 130 ವಿಶಿಷ್ಟ ಪ್ರಭೇದದ ಸಸ್ಯಗಳುಂಟು.

**ಆರ್ಥಿಕತೆ :** ಶೇಕಡ 30ರಷ್ಟು ಭೂಮಿಯನ್ನು ಬೇಸಾಯಕ್ಕೆ ಒಳಪಡಿಸಲಾಗಿದೆ. ಶೇಕಡ 48ರಷ್ಟು ಭೂಮಿ ಕುರಿ ಮತ್ತು ಮೇಕೆಗಳಿಗೆ ಮೇವು ನೆಲವಾಗಿದೆ. ಇದರಲ್ಲಿ ಶೇಕಡ 2ರಷ್ಟು ಭೂಮಿಯನ್ನು ಅರಣ್ಯ ಪ್ರದೇಶವೆಂದು ವರ್ಗೀಕರಿಸಲಾಗುತ್ತಿದೆಯಾದರೂ ಇಲ್ಲಿ ಅರಣ್ಯ ನಾಮಾವಶೇಷವಾಗಿದೆ. ಸೈಪ್ರೆಸ್ ಮತ್ತು ಆಲಿವ್ ವೃಕ್ಷಗಳು ಮಾತ್ರ ಸಾಕಷ್ಟು ಸಂಖ್ಯೆಯಲ್ಲಿ ಕಾಣದೊರೆಯುತ್ತವೆ. ಆಲಿವ್, ಜಂಬೀರ ಫಲಗಳು, ಸೇಬು, ದ್ರಾಕ್ಷಿ, ಗೋದಿ, ಬಾರ್ಲಿ ಮತ್ತು ಕೆಲವು ಬಗೆಯ ಕಾಳುಗಳು ಇಲ್ಲಿಯ ಬೆಳೆಗಳು. ಪರ್ವತ ಪ್ರದೇಶಗಳಲ್ಲಿ ಕುರಿಗಳನ್ನೂ ಮೇಕೆಗಳನ್ನೂ ಸಾಕುತ್ತಾರೆ. ಹಿಂದೆ ಇಲ್ಲಿ ಅನೇಕ ಖನಿಜಗಳ ಉತ್ಪಾದನೆಯಾಗುತ್ತಿತ್ತು. ಈಗ ಇವುಗಳ ಪ್ರಾಮುಖ್ಯ ಕಡಿಮೆ. ಕಬ್ಬಿಣ, ಸತು, ಮ್ಯಾಂಗನೀಸ್, ಲಿಗ್ನೈಟ್, ಕ್ರೋಂ, ಗಂಧಕ ಮುಂತಾದ ಖನಿಜ ನಿಕ್ಷೇಪಗಳಿವೆಯಾದರೂ ಗುಣ ಗಾತ್ರಗಳ ದೃಷ್ಟಿಯಿಂದ ಇವು ಮುಖ್ಯವಲ್ಲ. ಕ್ರೀಟ್‌ನ ಕೈಗಾರಿಕೆಗಳು ಸಣ್ಣ ಗಾತ್ರದವು; ಆಹಾರ ಪರಿಷ್ಕರಣಕ್ಕೆ ಸಂಬಂಧಿಸಿದವು. ಸಾಬೂನು, ಚರ್ಮ ಹದಗಾರಿಕೆ, ಜವಳಿ, ಕೃಷಿ ಉಪಕರಣ ಕೈಗಾರಿಕೆಗಳೂ ಇವೆ.

**ಜನಜೀವನ :** ಕ್ರೀಟ್‌ನಲ್ಲಿ ಅಲ್ಲಲ್ಲಿ ಚದರಿದಂತೆ ಇರುವ ಕೆಲವು ಐರೋಪ್ಯರು, ಯೆಹೂದ್ಯರು ಮತ್ತು ಬೆಂಗಾಜ಼ಿ ಅರಬರನ್ನು ಬಿಟ್ಟರೆ ಉಳಿದವರೆಲ್ಲ ಗ್ರೀಕರು. ಸುಮಾರು 1/5 ರಷ್ಟು ಮಂದಿ ಇಸ್ಲಾಂ ಧರ್ಮಾವಲಂಬಿಗಳು. ಅವರು ತಮ್ಮನ್ನು ತುರ್ಕರೆಂದು ಕರೆದುಕೊಳ್ಳುತ್ತಾರೆ.

ಪ್ರಾಚೀನ ಕ್ರೀಟ್‌ನಲ್ಲಿ ನೂರಕ್ಕೂ ಹೆಚ್ಚು ನಗರಗಳಿದ್ದುವೆಂದು ಹೋಮರ್ ತನ್ನ ಕಾವ್ಯದಲ್ಲಿ ಹೇಳಿದ್ದಾನೆ. ಉತ್ತರ ಕರಾವಳಿಯಲ್ಲಿ ಪ್ರಮುಖವಾದ ಮೂರು ಪಟ್ಟಣಗಳಿವೆ. ಇವುಗಳ ಪೈಕಿ ಒಂದಾದ ಖಾನಿಯ ಇಲ್ಲಿಯ ರಾಜಧಾನಿ. ಇರಾಕ್ಲಿಯೋನ್ ಮತ್ತು ರೇತಿಮ್ನಾನ್ ಇನ್ನೆರಡು ಪಟ್ಟಣಗಳು. ಇಂದೂ 5/6 ಭಾಗದಷ್ಟು ಜನ ಗ್ರಾಮೀಣ

ಹಾಗೂ ಪರ್ವತ ಪ್ರದೇಶಗಳಲ್ಲಿಯೇ ವಾಸ ಮಾಡುತ್ತಿದ್ದಾರೆ. ಕ್ರೀಟನರ ಅನೇಕ ಕ್ರಾಂತಿಗಳ ಉಗಮ ಹಳ್ಳಿಗಳಲ್ಲೇ. (ಪಿ.ಜಿ.ಡಿ.)

**ಕ್ರೀಟ್ ಇತಿಹಾಸ :** ಕ್ರೀಟಿನ ಪ್ರಾಚೀನ ನಾಗರಿಕತೆ ನಾಶವಾದ ಮೇಲೆ ಹಲವು ಶತಮಾನಗಳ ಕಾಲ ಕ್ರೀಟ್ ದ್ವೀಪದಲ್ಲಿ ಅಷ್ಟು ಉತ್ಕೃಷ್ಟವಾದ ಸಂಸ್ಕೃತಿ ಪ್ರಚಾರಕ್ಕೆ ಬರಲಿಲ್ಲ. ನೂರಾರು ವರ್ಷಗಳ ಅನಂತರ ಕ್ರೀಟ್ ನಿವಾಸಿಗಳು ಗ್ರೀಸ್, ಏಷ್ಯ ಮೈನರ್ ಮತ್ತು ಇತರ ಪ್ರದೇಶಗಳೊಡನೆ ವಾಣಿಜ್ಯ ಸಂಪರ್ಕವನ್ನು ಕಲ್ಪಿಸಿಕೊಂಡರು. ಜನಸಂಖ್ಯೆ ಕ್ರಮೇಣ ಹೆಚ್ಚುತ್ತ ಬಂತು. ಪಟ್ಟಣಗಳೂ ನಗರಗಳೂ ಬೆಳೆಯಲಾರಂಭಿಸಿದುವು. ಧಾರ್ಮಿಕ ಕೇಂದ್ರಗಳಾಗಿದ್ದ ಹಲವು ನಗರಗಳಲ್ಲಿ ಸುಂದರ ದೇವಾಲಯಗಳನ್ನು ನಿರ್ಮಿಸಲಾಯಿತು. ಆದರೂ ಆ ಕಾಲದಲ್ಲಿ ಕಟ್ಟಿದ್ದ ದೇವಮಂದಿರಗಳೂ ಕೆತ್ತಲಾದ ಕಲೆಯೂ ಪ್ರಾಕ್ಚಾರಿತ್ರಿಕ ಯುಗದ ಕಟ್ಟಡಗಳಂತೆ ಭವ್ಯವಾಗಿರಲಿಲ್ಲ. ಐತಿಹಾಸಿಕ ಯುಗದ ಪ್ರಾರಂಭದಿಂದಲೂ ಕ್ರೀಟ್ ದ್ವೀಪ ಗ್ರೀಕ್ ಭೂಭಾಗದೊಡನೆ ಹೆಚ್ಚು ಸಂಪರ್ಕ ಬೆಳೆಸಲಿಲ್ಲ. ಪೆಲೊಪೊನೀಷಿಯನ್ ಯುದ್ಧಗಳಲ್ಲೂ ಕ್ರೀಟ್ ಜನ ಭಾಗವಹಿಸಲಿಲ್ಲ. ಆಗಾಗ ಗ್ರೀಕ್ ನಗರರಾಜ್ಯಗಳಿಂದ ಸಂಭವಿಸುತ್ತಿದ್ದ ಉಪದ್ರವಗಳನ್ನು ತಡೆಗಟ್ಟಲು ಕ್ರೀಟ್ ದ್ವೀಪದ ತೀರಪ್ರದೇಶದ ನಗರಗಳಿಗೆ ಕೋಟೆಗಳನ್ನು ಕಟ್ಟಿದ್ದರು. ಪ್ರ.ಶ.ಪೂ. 67ರಲ್ಲಿ ಕ್ರೀಟ್ ರೋಮನರ ಆಕ್ರಮಣಕ್ಕೊಳಗಾಗಿ ಆ ಸಾಮ್ರಾಜ್ಯದ ಭಾಗವಾಯಿತು. ಕ್ರೀಟ್ ದ್ವೀಪ ಸಿರಿಯ, ಈಜಿಪ್ಟ್ ಮೊದಲಾದ ಪ್ರದೇಶಗಳಿಗೆ ಹೋಗಿ ಬರುವ ಜಲಮಾರ್ಗದಲ್ಲಿದ್ದುದರಿಂದ ರೋಮನ್ ಸಾಮ್ರಾಜ್ಯದ ಮುಖ್ಯ ಭಾಗಗಳಲ್ಲೊಂದೆಂದು ಪರಿಗಣಿತವಾಗಿತ್ತು. ಆ ಕಾಲದಲ್ಲಿ ಕ್ರೀಟ್ ದ್ವೀಪದಲ್ಲಿ ಅನೇಕ ಸುಂದರ ದೇವಾಲಯಗಳೂ ರಂಗಮಂದಿರಗಳೂ ಸಾರ್ವಜನಿಕ ರಸ್ತೆಗಳೂ ನಿರ್ಮಿತವಾದುವು. ರೋಮನರ ಆಕ್ರಮಣ ಕಾಲದಿಂದ 9ನೆಯ ಶತಮಾನದ ಪ್ರಾರಂಭದಲ್ಲಿ ಬೈಜಾಂಟಿಯನ್ ಸಾಮ್ರಾಜ್ಯ ಅರಬರ ಆಕ್ರಮಣಕ್ಕೆ ಒಳಗಾಗುವವರೆಗೆ ಕ್ರೀಟ್ ಶಾಂತಿಸಮೃದ್ಧಿಗಳ ಬೀಡಾಗಿತ್ತು.

826ರಲ್ಲಿ ಕ್ರೀಟ್ ಸ್ಪೇನಿನಿಂದ ಹೊರದೂಡಲಾದ ಅರಬರ ಆಡಳಿತಕ್ಕೊಳಪಟ್ಟಿತು. ಕಡಲುಗಳ್ಳರ ನೆಲೆಯಾಗಿದ್ದ ಕ್ರೀಟ್ ದ್ವೀಪವನ್ನು 960ರಲ್ಲಿ ಬೈಜಾಂಟಿಯನ್ ಚಕ್ರವರ್ತಿ 2ನೆಯ ನೈಸಿಫೋರಸ್ ಫೋಕಾಸ್ ವಶಪಡಿಸಿಕೊಂಡ. ಮತೀಯ ಯುದ್ಧಗಳ ಕಾಲದಲ್ಲಿ ಅದು ಅರಬರ ಆಳ್ವಿಕೆಯಿಂದ ವಿಮೋಚನೆಗೊಂಡು ಕ್ರಮೇಣ ವೆನಿಸಿಗೆ ಸೇರಿ ಸು.ನಾಲ್ಕು ಶತಮಾನಗಳ ಕಾಲ ಅದರ ಆಳ್ವಿಕೆಗೊಳಪಟ್ಟಿತು. ಕ್ಯಾಂಡಿಯ ಕ್ರೀಟಿನ ರಾಜಧಾನಿಯಾಯಿತು. ಆ ಕಾಲದಲ್ಲಿ ವ್ಯಾಪಾರ, ಕೈಗಾರಿಕೆ ವ್ಯವಸಾಯ ಮುಂತಾದವು ವಿಶೇಷ ಅಭಿವೃದ್ಧಿ ಹೊಂದಿ ಕ್ರೀಟ್ ಸಂಪದ್ಭರಿತ ನಾಡಾಗಿತ್ತು. ಆದರೆ ಕ್ರೀಟ್ ಜನರಿಗೂ ವೆನಿಸಿನ ಆಡಳಿತವರ್ಗಕ್ಕೂ ಆಗಾಗ ಘರ್ಷಣೆಗಳು ಸಂಭವಿಸುತ್ತಿದ್ದುವು. ವೆನಿಸ್ ಆಡಳಿತದಿಂದ ಬೇಸರಗೊಂಡ ಕ್ರೀಟ್ ಜನ 1207ರಿಂದ 1365ರ ಮಧ್ಯೆ 14 ಬಾರಿ ದಂಗೆಯೆದ್ದರು. ಕ್ರಮೇಣ ತುರ್ಕಿಯನ್ನು ಆಶ್ರಯಿಸಿದರು. ಆದರೆ ಮೊದಲಿಗೆ ಕ್ರೀಟ್ ಬಗ್ಗೆ ವಿಮುಖರಾಗಿದ್ದ ತುರ್ಕರು 1645ರಲ್ಲಿ ಕ್ರೀಟಿನ ಬಹು ಭಾಗವನ್ನು ವಶಪಡಿಸಿಕೊಂಡರು. 1715ರಲ್ಲಿ ಕ್ರೀಟ್ ಪೂರ್ಣವಾಗಿ ತುರ್ಕರ ವಶವಾಯಿತು. ಆಟೋಮನ್ ಸಂತತಿಯ ಆಳ್ವಿಕೆಯಲ್ಲಿ ಕ್ರೀಟ್ ದ್ವೀಪದಲ್ಲಿ ಇಸ್ಲಾಂ ಧರ್ಮ ಪ್ರಸಾರವಾಯಿತು. ಇಸ್ಲಾಂ ಧರ್ಮಕ್ಕೆ ಪರಿವರ್ತನೆಗೊಂಡ ಬಹುಸಂಖ್ಯಾತ ಕ್ರೀಟ್ ನಿವಾಸಿಗಳು ಆಡಳಿತದಲ್ಲಿ ಪ್ರಾಮುಖ್ಯಕ್ಕೆ ಬಂದರು. ಆದರೂ ಸರ್ಕಾರ ಜನಹಿತಕ್ಕೆ ಅನುಗುಣವಾಗಿರಲಿಲ್ಲ. ಆದ್ದರಿಂದ ಪದೇ ಪದೇ ದಂಗೆಗಳು ನಡೆಯುತ್ತಿದ್ದುವು. ಅವುಗಳಲ್ಲಿ 1813ರಲ್ಲಿ ನಡೆದ ದಂಗೆ ಮುಖ್ಯವಾದ್ದು. ಅಲ್ಲಿ ಗವರ್ನರ್–ಜನರಲ್ ಆಗಿದ್ದ ಹಾಜಿ ಉಸ್ಮಾನ್ ದಂಗೆಯನ್ನಡಗಿಸಿ ಅದರ ಮುಖಂಡನನ್ನು ಉಗ್ರವಾಗಿ ಶಿಕ್ಷಿಸಿದ. ಪುನಃ 1821ರಲ್ಲಿ ಉಗ್ರವಾದ ದಂಗೆಯುಂಟಾಯಿತು. ತುರ್ಕಿ ಸುಲ್ತಾನನ ವಿನಂತಿಯ ಮೇರೆಗೆ ಈಜಿಪ್ಟಿನ ಮಹಮ್ಮದಾಲಿ ಈ ದಂಗೆಯನ್ನಡಗಿಸಿದ. ಕೊನೆಗೆ 1832ರಲ್ಲಿ ಕ್ರೀಟ್ ದ್ವೀಪದ ಆಡಳಿತಾಧಿಕಾರಿಯಾಗಿ ಮುಸ್ತಾಫಾ ಪಾಷಾನನ್ನು ನೇಮಿಸಲಾಯಿತು. 1832ರಿಂದ 1852ರ ತನಕ ಈತ ಆಳಿದ. ಈ ಕಾಲ ಕ್ರೀಟ್ ದ್ವೀಪದ ಇತಿಹಾಸದ ಸುವರ್ಣಯುಗವೆಂದು ಪರಿಗಣಿತವಾಗಿದೆ. ಈ ಕಾಲದಲ್ಲಿ ವ್ಯವಸಾಯ ಅಭಿವೃದ್ಧಿ ಹೊಂದಿತು. ರಸ್ತೆಗಳು ನಿರ್ಮಾಣವಾದುವು. ಸಮಾಜದಲ್ಲಿ ಸಮೃದ್ಧಿಯುಂಟಾಯಿತು. ಅನಂತರ ಕ್ರೀಟ್ ದ್ವೀಪದಲ್ಲಿ ಅಶಾಂತಿಯೂ ಸರ್ಕಾರದ ವಿರುದ್ಧ ಕ್ರಾಂತಿಗಳೂ ನಡೆದುವು. 1868ರಲ್ಲಿ ಸುಲ್ತಾನ ಹಲವು ಸುಧಾರಣೆಗಳನ್ನು ಜಾರಿಗೆ ತಂದ. ಆದರೆ ಈ ಸುಧಾರಣೆಗಳು ತೃಪ್ತಿಕರವಾಗಿರಲಿಲ್ಲ. 1878ರಲ್ಲಿ ಪುನಃ ಕ್ರಾಂತಿಯುಂಟಾಯಿತು. ಗ್ರೇಟ್ ಬ್ರಿಟನಿನ ಸಲಹೆಯ ಮೇರೆಗೆ ತುರ್ಕಿಯ ಸುಲ್ತಾನ ಮತ್ತೊಂದು ಸಂವಿಧಾನಾತ್ಮಕ ಸುಧಾರಣೆಯನ್ನು ಜಾರಿಗೆ ತಂದ. ಇದರ ಪ್ರಕಾರ 49 ಕ್ರೈಸ್ತ ಮುಖಂಡರು ಹಾಗೂ 31 ಮಂದಿ ಮಹಮದೀಯ ಸದಸ್ಯರಿಂದ ಕೂಡಿದ ವಿಧಾಯಕ ಸಭೆ ಅಸ್ತಿತ್ವಕ್ಕೆ ಬಂತು. ಕ್ರೈಸ್ತರಿಗೂ ಮಹಮ್ಮದೀಯರಿಗೂ ವಿರಸ ಬೆಳೆದು, ಕ್ರಮೇಣ ಮತೀಯ ಗಲಭೆಗಳುಂಟಾದುವು. ಅಶಾಂತ ವಾತಾವರಣವನ್ನು ಹೋಗಲಾಡಿಸಲು 1894 ಮತ್ತು 1895ರಲ್ಲಿ ಮಾಡಿದ ಪ್ರಯತ್ನಗಳು ವಿಫಲವಾಗಿ 1897ರಲ್ಲಿ ಮತ್ತೆ ಪರಿಸ್ಥಿತಿ ಹದಗೆಟ್ಟಿತ್ತು. ಅದನ್ನು ದಮನ ಮಾಡಲು ಸೈನ್ಯವನ್ನು ಕಳುಹಿಸಲಾಯಿತು. ಕ್ರೀಟ್ ನಿವಾಸಿಗಳ ಸಂಕಷ್ಟವನ್ನು ಗಮನಿಸಿದ ಐರೋಪ್ಯ ರಾಷ್ಟ್ರಗಳು ಸುಲ್ತಾನನ ಕಾರ್ಯವನ್ನು ಖಂಡಿಸಿ ಸಂಧಾನಮಾರ್ಗದಿಂದ ಜನರ ಅಸಂತುಷ್ಟಿಯನ್ನು ನಿವಾರಿಸುವಂತೆ ಮನವಿ ಮಾಡಿದುವು. ಸುಲ್ತಾನ ಸೈನ್ಯವನ್ನು ಹಿಂದಕ್ಕೆ ಕರೆಸಿ ಒಬ್ಬ ಕ್ರೈಸ್ತ ಗವರ್ನರ್–ಜನರಲನನ್ನು ಅಲ್ಲಿಗೆ ನೇಮಿಸಿದ.

ಆದರೆ ಅಶಾಂತಿ ಮುಂದುವರಿಯಿತು. ಹೊಸದಾಗಿ ಅಧಿಕಾರ ವಹಿಸಿದ ಆಡಳಿತ ವರ್ಗ ಸುಧಾರಣೆಗಳನ್ನು ಜಾರಿಗೆ ತರುವ ಸ್ಥಿತಿಯಲ್ಲಿರಲಿಲ್ಲ. ಕ್ರೈಸ್ತ ಮತ್ತು ಮಹಮ್ಮದೀಯ ಪಂಗಡಗಳು ಪರಸ್ಪರ ಸಂಶಯದಿಂದ ನೋಡತೊಡಗಿದವು. ಗ್ರೀಕರು ಕ್ರೀಟ್ ದ್ವೀಪದ ಕ್ರೈಸ್ತರ ಸಹಾಯಕ್ಕೆ ಧಾವಿಸಿದರು. ಕ್ಯಾನೇ ಮೊದಲಾದ ಪಟ್ಟಣಗಳಲ್ಲಿ ಭೀಕರ ಮತೀಯ ಜ್ವಾಲೆ ಹರಡಿತು. ಅನೇಕ ಮಂದಿ ಮಹಮ್ಮದೀಯರು ಮರಣ ಹೊಂದಿದರು. ಗ್ರೀಕ್ ಸೈನ್ಯಗಳು ಕ್ರೀಟ್ ದ್ವೀಪವನ್ನು ಹೊಕ್ಕುವು. ಕ್ರೀಟ್ ದ್ವೀಪ ಗ್ರೀಸಿನ ಭಾಗವೆಂದು ಘೋಷಿಸಲಾಯಿತು. ಆದರೆ ಐರೋಪ್ಯ ರಾಷ್ಟ್ರಗಳು ಈ ಘೋಷಣೆಗೆ ಮನ್ನಣೆ ನೀಡಲಿಲ್ಲ. ಕ್ರೀಟ್ ದ್ವೀಪ ಹೆಸರಿಗೆ ಮಾತ್ರ ತುರ್ಕಿ ಸುಲ್ತಾನನ ಅಧೀನದಲ್ಲಿದ್ದು, ಸ್ವಾತಂತ್ರ್ಯ ಹೊಂದಿರತಕ್ಕದ್ದೆಂದು ನಿರ್ಣಯಿಸಲಾಯಿತು. 1898ರಲ್ಲಿ ತುರ್ಕಿ ಸೈನ್ಯವನ್ನು ಕ್ರೀಟ್ ದ್ವೀಪದಿಂದ ಪೂರ್ಣವಾಗಿ ಹಿಂದಕ್ಕೆ ಕರೆಸಿಕೊಳ್ಳಲಾಯಿತು. ಅಯೋನೆಸ್ ಸ್ಫಾಕಿಯಾನಾಕಿಸ್‌ನ ಅಧ್ಯಕ್ಷತೆಯಲ್ಲಿ ಕ್ರೀಟ್ ಸರ್ಕಾರ ರಚಿತವಾಯಿತು.

ಕ್ರೀಟ್ ದ್ವೀಪವನ್ನು ಗ್ರೀಸ್ ರಾಷ್ಟ್ರದೊಂದಿಗೆ ವಿಲೀನಗೊಳಿಸುವ ಪ್ರಯತ್ನಗಳು ನಡೆಯುತ್ತಲೇ ಇದ್ದವು. ಆದರೆ ಅದರಿಂದ ತಮ್ಮ ವ್ಯಾಪಾರಾಭಿವೃದ್ಧಿಗೆ ತೊಂದರೆಯುಂಟಾಗುವುದೆಂದು ಐರೋಪ್ಯ ರಾಷ್ಟ್ರಗಳು ವಿಲೀನ ಪ್ರಯತ್ನಗಳನ್ನು ವಿರೋಧಿಸಿದುವು. ಅಲ್ಲದೆ ಅಲ್ಲಿಯ ಮಹಮ್ಮದೀಯರು ಅಷ್ಟಾಗಿ ಗ್ರೀಸಿನೊಡನೆ ವಿಲೀನವನ್ನು ಪುರಸ್ಕರಿಸಲಿಲ್ಲ. 1908ರಲ್ಲಿ ಮತ್ತೊಂದು ಸಾರಿ ವಿಲೀನಕ್ಕೆ ಪ್ರಯತ್ನಗಳು ನಡೆದುವು. ಆದರೆ ಫಲಕಾರಿಯಾಗಲಿಲ್ಲ. ಕೊನೆಗೆ 1912ರಲ್ಲಿ ಬಾಲ್ಕನ್ ಯುದ್ಧಗಳು ಪ್ರಾರಂಭವಾದಾಗ ಯುರೋಪಿನ ಆಸಕ್ತ ರಾಷ್ಟ್ರಗಳ ಗಮನ ಆ ಕಡೆಗೆ ಹರಿಯಿತು. ಗ್ರೀಕ್ ಪ್ರಧಾನಿ ಕ್ರೀಟ್ ಮುಖಂಡರನ್ನು ಗ್ರೀಸಿನ ಪ್ರತಿನಿಧಿ ಸಭೆಗೆ ಆಹ್ವಾನಿಸಿದ. ಕ್ರೀಟ್ ದ್ವೀಪ ಗ್ರೀಸ್ ರಾಷ್ಟ್ರದೊಡನೆ ಸರಿಸುಮಾರಾಗಿ ವಿಲೀನವಾದಂತಾಯಿತು. 1913ರ ಲಂಡನ್ ಒಪ್ಪಂದದ ಪ್ರಕಾರ ಕ್ರೀಟ್ ಗ್ರೀಸಿನ ಭಾಗವೆಂದು ಮನ್ನಣೆ ಪಡೆಯಿತು. ಅನಂತರ ಕ್ರೀಟಿನ ಇತಿಹಾಸ ಗ್ರೀಸಿನ ಇತಿಹಾಸದ ಭಾಗವಾಗಿದೆ. (ಜಿ.ಆರ್.ಆರ್.)

**ಕ್ರೀಟ್ ಸಂಸ್ಕೃತಿ :** ಗ್ರೀಸ್ ಮತ್ತು ತುರ್ಕಿಗಳ ದಕ್ಷಿಣಕ್ಕೆ ಮತ್ತು ಈಜಿಪ್ಟಿನ ಉತ್ತರಕ್ಕೆ–ಮೆಡಿಟರೇನಿಯನ್ ಸಮುದ್ರದಲ್ಲಿ–ಇರುವ ಕ್ರೀಟ್ ದ್ವೀಪದಲ್ಲಿ ಪ್ರ.ಶ.ಪೂ. 4ನೆಯ ಸಹಸ್ರಮಾನದಿಂದ ಬೆಳೆದು ಬಂದ ಸಂಸ್ಕೃತಿ. ಗ್ರೀಕ್ ಮಹಾಕಾವ್ಯಗಳಿಗಿಂತ ಹಲವು ಶತಮಾನಗಳ ಹಿಂದೆಯೇ ಇದ್ದ ಈ ಸಂಸ್ಕೃತಿಯ ಬಗ್ಗೆ ಹೋಮರ್ ಮತ್ತು ಹೆಸಿಯಡರ ಮಹಾಕಾವ್ಯಗಳಲ್ಲಿ ಬರುವ ದಂತಕಥೆಗಳಿಂದ ಅಲ್ಪಸ್ವಲ್ಪ ವಿಷಯ ತಿಳಿದುಬರುತ್ತದೆ. ಆದರೆ ಈ ಉಲ್ಲೇಖಗಳು ಬರಿಯ ದಂತ ಕಥೆಗಳೆಂದೂ ಇವಕ್ಕೂ ಐತಿಹಾಸಿಕ ಸತ್ಯಕ್ಕೂ ಯಾವ ಸಂಬಂಧವೂ ಇಲ್ಲವೆಂದೂ ಪ್ರಸಿದ್ಧ ಚರಿತ್ರಕಾರರು ಅಭಿಪ್ರಾಯ ಸೂಚಿಸಿದ್ದಾರೆ. ಈ ಭವ್ಯ ಸಂಸ್ಕೃತಿಯನ್ನು 1900ರಲ್ಲಿ ಆರ್ಥರ್ ಇವಾನ್ಸ್ ಬೆಳಕಿಗೆ ತಂದ. ಕ್ರೀಟ್ ಸಂಸ್ಕೃತಿಗೆ ಮಿನೋವನ್ ಸಂಸ್ಕೃತಿಯೆಂಬ ಹೆಸರೂ ಇದೆ. ಗ್ರೀಕ್ ದಂತಕಥೆಗಳಲ್ಲಿ ಬರುವ ಮೈನಾಸ್ ರಾಜನ ಹೆಸರಿನ ಮೇಲೆ ಇದನ್ನು ಆತ ಹೀಗೆಂದು ಕರೆದ.

ಈ ನಗರಸಂಸ್ಕೃತಿಯನ್ನು ಪ್ರತಿನಿಧಿಸುವ ಸ್ಥಳಗಳಾದ ಫೈಸ್ಟಾಸ್, ಅಯಿಯ–ಟ್ರಿಯಾಡ, ಗೌರ್ನಿಯ, ಪ್ರೈಸೊಸ್, ಪಲೈಕಸ್ಟ್ರೋನ್, ಮಲ್ಲಿಯ ಹಾಗೂ ನಾಸಸ್‌ಗಳಲ್ಲಿ ನವಶಿಲಾಯುಗದಿಂದ ಕ್ರೀಟ್ ಸಂಸ್ಕೃತಿಯ ಅವನತಿಯವರೆಗಿನ ಕಾಲವನ್ನು ಪ್ರತಿಬಿಂಬಿಸುವ ಅವಶೇಷಗಳನ್ನೊಳಗೊಂಡ ನಾಸಸ್ ಅತಿ ಮುಖ್ಯವಾದ್ದು.

ಕ್ರೀಟ್ ಸಂಸ್ಕೃತಿಯ ಎರಡಂತಸ್ತಿನ ಚಕ್ರವ್ಯೂಹ ಅರಮನೆಗಳು, ವಾಸದ ಮನೆಗಳು ಹಾಗೂ ಚರಂಡಿಗಳ ಅವಶೇಷಗಳನ್ನು ನೋಡಿದರೆ ಈ ಜನತೆ ಗಳಿಸಿದ್ದ ವಾಸ್ತುವಿದ್ಯಾಕೌಶಲ ಬೆರಗುಗೊಳಿಸುವಂಥದ್ದು. ಕೈರಟೊಸ್ ನದಿಯ ದಡದಲ್ಲಿರುವ ನಾಸಸ್‌ನ ಅರಮನೆ ಹಲವು ಆವಾರಗಳಿಂದ ಪ್ರವೇಶಿಸಬಹುದಾದಂಥ ಹಾಗೂ ಬೆಳಕಿನ ಕಿಂಡಿಗಳನ್ನುಳ್ಳ ಮಧ್ಯ ಪ್ರಾಂಗಣ, ಪಡಸಾಲೆಗಳು, ಸಿಂಹಾಸನದ ಕೊಠಡಿ, ಧಾರ್ಮಿಕ ಸಂಸ್ಕಾರಕ್ಕಾಗಿ ಕಟ್ಟಿಸಿದ ತೊಟ್ಟಿ, ಖಾಸಗಿ ಕೊಠಡಿಗಳು ಗುಪ್ತ ಕೊಠಡಿಗಳೂ, ಉಗ್ರಾಣಗಳು, ಪಾವಟಿಗೆಗಳು ಹಾಗೂ ಸ್ನಾನದ ಕೊಠಡಿಗಳಿಂದೊಡಗೂಡಿದೆ. ಇವುಗಳಲ್ಲಿ ಸಿಂಹಾಸನದ ಕೊಠಡಿ ಅತಿಮುಖ್ಯವಾದ್ದು ಮತ್ತು ಸುಂದರವಾದ್ದು. ಇತರ ಕೊಠಡಿಗಳೊಂದಿಗೆ ಹೋಲಿಸಿದರೆ ಇದು ಚಿಕ್ಕದು. ಇದಕ್ಕೆ ಹೊಂದಿಕೊಂಡು ಮತ್ತೊಂದು ಚಿಕ್ಕ ಕೊಠಡಿ ಇದೆ. ಸಿಂಹಾಸನದ ಕೊಠಡಿಯ ನೆಲಕ್ಕಿಂತ ಅದರದು ಬಹಳ ತಗ್ಗಿನಲ್ಲಿದೆ. ಈ ಕೊಠಡಿಯನ್ನು ಧಾರ್ಮಿಕ ಸಂಸ್ಕಾರಕ್ಕಾಗಿ ತೊಟ್ಟಿಯಾಗಿ ಉಪಯೋಗಿಸಿದ್ದಿರಬೇಕು. ಇದಕ್ಕೆ ಎದುರಿನಲ್ಲಿ ಸಿಂಹಾಸನದ ಕೊಠಡಿಯ ಗೋಡೆಗೆ ಹತ್ತಿದಂತೆ ಅಮೃತಶಿಲೆಯಲ್ಲಿ ಕೆತ್ತಿದ ಸಿಂಹಾಸನವನ್ನು ಇರಿಸಲಾಗಿದೆ. ಸಿಂಹಾಸನದ ಎರಡು ಪಕ್ಕಗಳಲ್ಲೂ ಗೋಡೆಗೆ

ಹತ್ತಿದಂತೆ ಕಲ್ಲಿನ ಆಸನಗಳನ್ನು ಹಾಕಲಾಗಿದೆ. ಸಿಂಹಾಸನದ ಅಕ್ಕಪಕ್ಕಗಳಲ್ಲಿ ಗೋಡೆಗಳನ್ನು ಸಿಂಹದ ದೇಹ ಮತ್ತು ಹದ್ದಿನ ಕೊಕ್ಕು ಉಳ್ಳ ಪ್ರಾಣಿಗಳ ಮತ್ತು ಸಾಂಪ್ರದಾಯಿಕ ಗಿಡಗಳ ಚಿತ್ರಗಳಿಂದ ಅಲಂಕರಿಸಲಾಗಿದೆ.

ಅರಮನೆಯ ಇನ್ನೊಂದು ಎಡೆಯಲ್ಲಿ ದೊಡ್ಡದೊಡ್ಡ ಜಾಡಿಗಳಿಂದ ಕೂಡಿದ ಕೊಠಡಿಗಳಿವೆ. ಇವು ಅರಮನೆಯ ಉಗ್ರಾಣಗಳಾಗಿರಬೇಕು. ಜಾಡಿಗಳಲ್ಲಿ ಇಪ್ಪೆ ಎಣ್ಣೆ, ಮದಿರೆ, ದವಸ–ಧಾನ್ಯ ಹಾಗೂ ಹಣ್ಣುಗಳನ್ನು ಸಂಗ್ರಹಿಸಿಡುತ್ತಿದ್ದರಬೇಕು. ಕೆಲವೆಡೆಗಳಲ್ಲಿ ಕಲ್ಲಿನ ಪೆಟ್ಟಿಗೆಗಳನ್ನು ನೆಲದಲ್ಲಿ ಹೂತಿರುವುದನ್ನು ನೋಡಬಹುದು. ಬಂಗಾರ ಹಾಗೂ ಹೆಚ್ಚು ಬೆಲೆಬಾಳುವ ವಸ್ತುಗಳನ್ನು ಗುಪ್ತವಾಗಿಡಲು ಇವುಗಳನ್ನು ಉಪಯೋಗಿಸುತ್ತಿದ್ದಿರಬೇಕು. ಈ ಅರಮನೆಯ ಮತ್ತೊಂದೆಡೆ, ಮಣ್ಣಿನ ಬಿಲ್ಲೆಗಳ ಮೇಲೆ ಲೆಕ್ಕಪತ್ರಗಳನ್ನಿಡುತ್ತಿದ್ದ ಅರಮನೆಯ ಗುಮಾಸ್ತರಿಗಾಗಿ ಕಟ್ಟಿಸಿದ್ದ ಕೊಠಡಿಗಳಿವೆ. ಇನ್ನೊಂದೆಡೆಯಲ್ಲಿ ಶಿಲ್ಪಿ ಹಾಗೂ ಕುಶಲಕಲಾಕಾರರ, ಬಂಗಾರವೇ ಮುಂತಾದ ಲೋಹಗಳ ಮತ್ತು ಕಲ್ಲಿನ ಕೆಲಸವನ್ನೂ ಮಣ್ಣಿನ ಪಾತ್ರೆಗಳನ್ನೂ ಮಾಡುವವರ ಹಾಗೂ ಇನ್ನಿತರರ ಕೊಠಡಿಗಳಿವೆ.

ಸಮುದ್ರಕ್ಕೆ ಮುಖಮಾಡಿ ನಿಂತಿರುವ ಮಹಾದ್ವಾರ ಅಥವಾ ಸಮುದ್ರದ್ವಾರ

ನಾಸ್ಸಸ್ : ಅರಮನೆಯ ಶಿಲ್ಪಗಳಲ್ಲಿ ಸಿಕ್ಕಿದ ನಾಗದೇವತೆ

ಅತ್ಯಾಕರ್ಷಕವಾದ್ದು. ಏರುತ್ತ ಬರುವ ಹಾಸುಗಲ್ಲಿನ ಹಾದಿ ತಳದಲ್ಲಿ ಕಿರಿದಾಗುವ ಕಂಬಗಳಿಂದ ಕೂಡಿದ ಮುಖಮಂಟಪಗಳ ಮಧ್ಯದಲ್ಲಿ ಹಾದು ಮಧ್ಯಪ್ರಾಂಗಣವನ್ನು ಸೇರುತ್ತದೆ. ಮುಖಮಂಟಪಗಳು ವಿವಿಧ ಬಣ್ಣಗಳ ಚಿತ್ರಗಳಿಂದ ಅಲಂಕೃತವಾಗಿರುತ್ತಿದ್ದುವು. ಒಂದು ಮುಖಮಂಟಪದಲ್ಲಿ ಹೋರಿಯ ಮೇಲೆ ಮನುಷ್ಯ ನೆಗೆಯುತ್ತಿರುವ ದೃಶ್ಯದ ಚಿತ್ರವಿದೆ.

ದ್ವೀಪದ ಎಲ್ಲೆಡೆಗಳಲ್ಲೂ ಅರಮನೆಗಳನ್ನು ನಾಸ್ಸಸ್ ಅರಮನೆಯಂತೆಯೇ ಕಟ್ಟುತ್ತಿದ್ದರು. ಅರಮನೆ ಹಾಗೂ ವಾಸದ ಮನೆಗಳನ್ನು ಕಟ್ಟಲು ಕಲ್ಲುಗಳನ್ನೂ ಯಥೇಚ್ಛವಾಗಿ ಮರವನ್ನೂ ಉಪಯೋಗಿಸುತ್ತಿದ್ದರು. ಧಾರ್ಮಿಕ ಜೀವನವನ್ನೂ ಇತರ ಬಗೆಯ ಚಟುವಟಿಕೆಗಳನ್ನೂ ಕುರಿತ ಚಿತ್ರಗಳಿಂದ ಗೋಡೆಗಳನ್ನು ಅಲಂಕರಿಸುತ್ತಿದ್ದರು. ವಾಸದ ಮನೆಗಳನ್ನು ಕೂಡ ಸಾಧಾರಣ ಅರಮನೆಯ ರೀತಿಯಲ್ಲೇ ಕಟ್ಟುತ್ತಿದ್ದರು.

ಕೊಳಚೆನೀರನ್ನು ನದಿಗೆ ಸಾಗಿಸಲು ಮಾಡಿದ್ದ ವ್ಯವಸ್ಥೆಯನ್ನು ನೋಡಿದಾಗ ಈ ಜನರಿಗೆ ಜಲಗತಿವಿಜ್ಞಾನ ಮತ್ತು ಆರೋಗ್ಯ ರಕ್ಷಣೆಯ ಬಗ್ಗೆ ತಿಳಿವಳಿಕೆಯಿದ್ದಿತೆಂಬುದು ವ್ಯಕ್ತವಾಗುತ್ತದೆ. ಅರಮನೆಯ ಪ್ರತಿಭಾಗದಿಂದಲೂ ಕೊಳಚೆ ನೀರು ಮೋರಿಗಳ ಮೂಲಕ ದೊಡ್ಡ ಮೋರಿಗೆ ಸೇರಿ ಅಲ್ಲಿಂದ ನದಿಗೆ ಸೇರುವಂತೆ ಅವರು ವ್ಯವಸ್ಥೆ ಮಾಡಿರುತ್ತಿದ್ದರು. ಈ ಚರಂಡಿ ವ್ಯವಸ್ಥೆ ಇದ್ದದ್ದು ನೆಲದ ಕೆಳಗೆ. ಛತ್ತಿನ ಮೇಲೆ ಬಿದ್ದ ಮಳೆಯ ನೀರು ಗೋಡೆಗಳೊಳಗೆ ಕೊರೆದಿರುತ್ತಿದ್ದ ನಾಲೆಗಳ ಮೂಲಕ ನೆಲದೊಳಗಿನ ಮೋರಿಗೆ ಸೇರುವಂತೆ ವ್ಯವಸ್ಥೆ ಮಾಡಿರುತ್ತಿದ್ದರು. ಮೋರಿಗಳನ್ನು ಸ್ವಚ್ಛಪಡಿಸಲು ಅಲ್ಲಲ್ಲಿ ಕಿಂಡಿಗಳಿದ್ದುವು. ಕೆಲವೆಡೆಗಳಲ್ಲಿ ಮಣ್ಣಿನ ಕೊಳವೆಗಳನ್ನು ಉಪಯೋಗಿಸುತ್ತಿದ್ದುದುಂಟು. ದೊಡ್ಡ ಮೋರಿಯಲ್ಲಿ ನೀರು ರಭಸವಾಗಿ ಹರಿದು ಮೇಲೆ ಬರದಂತೆ ಅಲ್ಲಲ್ಲಿ ಸಮಕಕ್ಷಭಿನ್ನ ತಿರುವುಗಳಿರುತ್ತಿದ್ದುವು.

**ಕುಂಬಾರನ ಚಕ್ರದ ಮಾಲೆ:** ಇಪ್ಪೆ ಎಣ್ಣೆ ಮತ್ತು ಮದಿರೆ ತುಂಬಲು ಮಾಡಿದ್ದ ದೊಡ್ಡ ಜಾಡಿಗಳೂ ಧಾರ್ಮಿಕ ಕಾರ್ಯಗಳಿಗಾಗಿ ಹಾಗೂ ನಿತ್ಯಜೀವನದಲ್ಲಿ ಉಪಯುಕ್ತವಾಗಿದ್ದ ಮಣ್ಣಿನ ಪಾತ್ರೆಗಳೂ ಕುಂಬಾರನ ಚಕ್ರದ ಮೇಲೆ ಇವರು ಸಾಧಿಸಿದ್ದ ನೈಪುಣ್ಯಕ್ಕೆ ನಿದರ್ಶನಗಳು. ಚಿತ್ರಾಲಂಕೃತ ವಾದ, ಮೊಟ್ಟೆಯ ಸಿಪ್ಪೆಯಷ್ಟು ತೆಳುವಾದ ಮಣ್ಣಿನ ಪಾತ್ರೆಗಳು ಅತ್ಯಂತ ಸುಂದರವಾಗಿವೆ. ಮಡಕೆ ಗಳ ಮೇಲೆ ಚಿತ್ರ ಬಿಡಿಸುವುದನ್ನು ಇವರು ಒಂದು ಕಲೆಯಾಗಿಯೇ ಅಭ್ಯಸಿಸಿದ್ದಿರಬೇಕೆಂಬುದು ಇವರು ಬಿಡಿಸಿರುವ ಕೆಲವು ಸಂಕೀರ್ಣವಾದ ಮತ್ತು ವೈವಿಧ್ಯಮಯವಾದ ಚಿತ್ರಗಳಿಂದ ವೇದ್ಯವಾಗುತ್ತದೆ. ಮಣ್ಣಿನಲ್ಲೇ ಚಿತ್ರವಿಚಿತ್ರವಾದ ಪ್ರತಿರೂಪ ಗಳನ್ನು ಮಾಡಿ, ಪಾತ್ರೆಗಳನ್ನು ಸುಡುವುದಕ್ಕಿಂತ ಮೊದಲೇ ಅವಕ್ಕೆ ಅಂಟಿಸುವುದು ಇವರು ಅನುಸರಿಸುತ್ತಿದ್ದ ಇನ್ನೊಂದು ಪಾತ್ರಾಲಂಕರಣ ವಿಧಾನ.

ತಾಮ್ರದ ಬಳಕೆಯನ್ನು ಇವರು ಹೊರದೇಶದಿಂದ ಕಲಿತರೂ ಸ್ವಲ್ಪ ಸಮಯದಲ್ಲೇ ತಮಗೆ ಬೇಕಾದ ಆಯುಧ ಹಾಗೂ ಸಲಕರಣೆಗಳನ್ನು ಮಾಡಿಕೊಳ್ಳುವುದನ್ನು ಹಸ್ತಗತ ಮಾಡಿಕೊಂಡಿದ್ದರು.

ಗೋಡೆಗಳ ಮೇಲೆ ವಿವಿಧ ವರ್ಣಗಳ ಚಿತ್ರ ಬಿಡಿಸುವುದು ಈ ಜನ ಕಲಿತಿದ್ದ ಇನ್ನೊಂದು ಕಲೆ. ಸಾಮಾಜಿಕ ಮತ್ತು ಧಾರ್ಮಿಕ ದೃಶ್ಯಗಳನ್ನು ಹಾಗೂ ಜಲಚರ ಪ್ರಾಣಿಗಳನ್ನು ನೈಜವಾಗಿ ಹಾಗೂ ಸುಂದರವಾಗಿ ಇವರು ಚಿತ್ರಿಸಿ ದ್ದಾರೆ. ಮಾತೃದೇವತೆಯ ಮಂದಿರದ ಮುಂದೆ ಕುಳಿತಿರುವ ರಾಜಪರಿವಾರ ಮತ್ತು ಸ್ತ್ರೀ ಸಮೂಹ, ಕ್ರೀಡಾಪಟುಗಳು ಗೂಳಿಯ ಮೇಲೆ ನೆಗೆಯುವ ದೃಶ್ಯ, ಸಮುದ್ರದೊಳಗೆ ಗಿಡಗಳ ಮಧ್ಯದಲ್ಲಿರುವ ಹಂದಿ ಮೀನುಗಳು ಹಾಗೂ ಚಿಕ್ಕಮೀನುಗಳು–ಇಂಥ ಚಿತ್ರಗಳು ಈ ಜನತೆ ಗಳಿಸಿದ್ದ ನೈಪುಣ್ಯವನ್ನು ಪ್ರದರ್ಶಿಸುತ್ತವೆ. ಮುದ್ರೆಗಳನ್ನು ಮಾಡುವುದು, ದಂತ ಮತ್ತು ಕಲ್ಲಿನಲ್ಲಿ ಕೆತ್ತನೆಯ ಕೆಲಸ, ಮಣ್ಣಿನ ಮತ್ತು ಪಿಂಗಾಣಿಯ ಗೊಂಬೆಗಳ ತಯಾರಿಕೆ, ಬಂಗಾರ ಮತ್ತು ಇತರ ಬೆಲೆಬಾಳುವ ಲೋಹಗಳಲ್ಲಿ ಆಭರಣಗಳ ನಿರ್ಮಾಣ–ಈ ಕಲೆಗಳಲ್ಲೂ ಇವರು ತಕ್ಕಮಟ್ಟಿನ ನೈಪುಣ್ಯ ಸಾಧಿಸಿದ್ದರು.

ನಾಸ್ಸಸ್ : ಕಲ್ಲಿನ ಅಲಂಕೃತ ಕೊಳವಿ

ಇವರ ಕ್ರೀಡೆಗಳ ಪೈಕಿ ಗೂಳಿಯ ಮೇಲೆ ನೆಗೆಯುವ ಆಟ ಮುಖ್ಯಸ್ಥಾನ ಪಡೆದಿದ್ದಂತೆ ತೋರುತ್ತದೆ. ದ್ವೀಪದ ಅರಮನೆಯ ಪ್ರಾಂಗಣದಲ್ಲಿ ಹಬ್ಬದ ದಿನಗಳಲ್ಲಿ ಇದನ್ನು ಬಹುಶಃ ಆಡುತ್ತಿದ್ದರು. ಇದರಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳಲ್ಲಿ ಚಾಕಚಕ್ಯತೆ, ಅಸಾಧಾರಣವಾದ ಧೈರ್ಯ ಮತ್ತು ಕಠೋರ ಅಭ್ಯಾಸಬಲ ಇರುತ್ತಿದ್ದುವೆಂದು ಕಾಣುತ್ತದೆ. ಅಟ್ಟಿಸಿಕೊಂಡು ಬರುವ ಕೊಬ್ಬಿದ ಗೂಳಿಯ ಕೋಡುಗಳನ್ನು ಹಿಡಿದು ಅದರ ಬೆನ್ನ ಮೇಲೆ ಜಿಗಿಯುವುದೂ ಹಾರುವವನು ಸಮತೋಲ ತಪ್ಪಿ ಬೀಳದಂತೆ ಹಿಡಿದು ನಿಲ್ಲಿಸಲು ಕೈಚಾಚಿ ಗೂಳಿಯ ಬಾಲದ ಕಡೆಯಲ್ಲಿ ನಿಂತವನ ಕೈಗೆ ಹಾರುವುದೂ ಈ ಆಟದ ವಿಧಾನ. ಹೀಗೆ ಒಬ್ಬನಾದ ಮೇಲೊಬ್ಬನಂತೆ ಅನೇಕರು ಹಾರುತ್ತಿದ್ದರೆಂದು ಕಾಣುತ್ತದೆ. ಈ ಆಟವನ್ನು ಆಡಲೂ ಇದನ್ನು ವೀಕ್ಷಿಸಲು ಅನುಕೂಲವಾಗುವಂತೆ ನಿರ್ಮಿಸಿದ್ದ ಕ್ರೀಡಾಗಾರದ ಅವಶೇಷಗಳು ಸಿಕ್ಕಿವೆ. ಈ ಆಟಕ್ಕೆ ಧಾರ್ಮಿಕ ಹಿನ್ನೆಲೆಯಿತ್ತೇ ಅಥವಾ ಇದರದು ಲೌಕಿಕ ಹಿನ್ನೆಲೆಯೇ ಎಂಬುದನ್ನು ನಿರ್ದಿಷ್ಟವಾಗಿ

ಹೇಳುವುದು ಕಷ್ಟ. ಆದರೆ ನಾಸ್ಸಸ್‌ನ ಒಂದು ಮನೆಯ ತಳಪಾಯದ ಕೆಳಗೆ ಗೂಳಿಯೊಂದರ ಅಸ್ಥಿಪಂಜರ ಸಿಕ್ಕಿದೆ. ಕ್ರೀಡಾ ಪಟುಗಳು  ಸೋಲಿಸಿದ ಗೂಳಿಗಳನ್ನು ಮಾತೃದೇವತೆಗೆ ಬಲಿ ಕೊಡುತ್ತಿದ್ದಿರಬಹುದು ಎಂಬುದಾಗಿ ಊಹಿಸಬಹುದಾಗಿದೆ. ಆದರೆ ಮಿನೋವನ್ ನಾಗರಿಕತೆ ಅತ್ಯಂತ ಉನ್ನತವಾಗಿದ್ದಾಗ ಇದನ್ನು ಲೌಕಿಕ ಆಟವನ್ನಾಗಿ ಆಡುತ್ತಿದ್ದರು. ಈ ಆಟದ ಜೊತೆಗೆ ಓಟ, ಮುಷ್ಟಿಯುದ್ಧ ಇವನ್ನೂ ಆಡುತ್ತಿದ್ದರೆಂಬುದಕ್ಕೆ ಆಧಾರಗಳಿವೆ. ನೃತ್ಯ ಕೂಡ ಇವರ ಧಾರ್ಮಿಕ ಲೌಕಿಕ ಜೀವನದಲ್ಲಿ ಒಂದು ಮುಖ್ಯಸ್ಥಾನ ಗಳಿಸಿತ್ತು.



ಫೇಸ್ಟಾಸ್ : ಅರಮನೆಯ ಅವಶೇಷಗಳು

ಕ್ರೀಟ್ ನಾಗರಿಕತೆಯಲ್ಲಿ ದೇವಾಲಯಗಳನ್ನು ಕಟ್ಟಿಲ್ಲ. ಆದರೆ ಧಾರ್ಮಿಕ ಸಂಸ್ಕಾರಗಳನ್ನು ಅರಮನೆಯಲ್ಲೋ ವಾಸದ ಮನೆಗಳಲ್ಲೋ ಇದಕ್ಕಾಗಿಯೇ ಮೀಸಲಾಗಿದ್ದ ಕೊಠಡಿಯಲ್ಲಿ ನೆರವೇರಿಸುತ್ತಿದ್ದರು. ಇವರು ಮಾತೃದೇವತೆಯ ಆರಾಧಕರಾಗಿದ್ದರು. ಆಕೆಗಾಗಿ ಬಯಲು ಪ್ರದೇಶದಲ್ಲಿ ಮರಗಳ ಅಥವಾ ಕಂಬಗಳ ಕೆಳಗೆ ಚಿಕ್ಕ ಗುಡಿಗಳನ್ನು ಕಟ್ಟುತ್ತಿದ್ದರು; ಬೆಟ್ಟಗಳ ಗುಹೆಗಳಲ್ಲೂ ಮಾತೃದೇವತೆಯನ್ನು ಪ್ರತಿಷ್ಠಾಪಿಸುತಿದ್ದರು. ಪ್ರಾಣಿಗಳ ಒಡತಿಯಾಗಿ, ಸಮುದ್ರ ದೇವತೆಯಾಗಿ, ಬೆಟ್ಟಗಳ ರಾಣಿಯಾಗಿ ಅಥವಾ ಪೀಡಕ ಬಲಗಳ ಅಧಿದೇವತೆಯಾಗಿ ಪಕ್ಷಿಯನ್ನೋ ಅಭಿಮಂತ್ರಿತ ಕೊಂಬುಗಳನ್ನೋ ಹೂವನ್ನೋ ಹಾವುಗಳನ್ನೋ ಹಿಡಿದಂತೆ ಆಕೆಯನ್ನು ರೂಪಿಸಿ ಪೂಜಿಸುತ್ತಿದ್ದರು.

ಗೂಳಿಯ ಕೊಂಬುಗಳೂ ಎರಡು ಬಾಯಿಗಳಿದ್ದ ಕೊಡಲಿಯೂ ಈ ಜನತೆಗೆ ಪವಿತ್ರ ಗುರುತುಗಳಾಗಿದ್ದುವು. ಅರಮನೆಯ ಹಲವೆಡೆಗಳಲ್ಲಿ ಮುಖ್ಯವಾಗಿ ಪವಿತ್ರ ಸ್ಥಳದಲ್ಲಿ ಈ ಗುರುತುಗಳನ್ನು ಚಿತ್ರಿಸಿರುತ್ತಿದ್ದರು. ಹೋರಿಯನ್ನು ಬಹುಶಃ ಇಂಥ ಕೊಡಲಿಯಿಂದಲೇ ಬಲಿ ಕೊಡುತ್ತಿದ್ದಿರಬೇಕು. ಹಲವೆಡೆ ಮಾತೃದೇವತೆಯ ಕೈಯಲ್ಲಿ ಇಂಥ ಆಯುಧವಿರುತ್ತದೆ.

ಹೆಂಗಸರು ನೆರಿಗೆಯ ಉದ್ದಲಂಗ ಹಾಗೂ ಬಿಗಿಯಾದ ರವಿಕೆ ತೊಡುತ್ತಿದ್ದರು. ಕುಚಗಳನ್ನು ಮುಚ್ಚಿಕೊಳ್ಳುತ್ತಿರಲಿಲ್ಲ. ತಲೆಗೂದಲನ್ನು ಗುಂಗುರುಗುಂಗುರಾಗಿ ಮಾಡಿ ಹಿಂದಕ್ಕೆ ಬೆನ್ನಿನ ಮೇಲೆ ಬಿಡುತ್ತಿದ್ದರು. ಗಂಡಸರು ಸಾಧಾರಣವಾಗಿ ಟೊಂಕದಿಂದ ಮೊಳಕಾಲಿನವರೆಗೆ ಬಿಗಿಯಾದ ಲಂಗವನ್ನು ಧರಿಸುತ್ತಿದ್ದರು. ತಲೆಗೂದಲನ್ನು ಹೆಂಗಸರಂತೆಯೇ ಬಿಡುತ್ತಿದ್ದರು. ಗಂಡಸರು ಮತ್ತು ಹೆಂಗಸರು ಕೈಕಡಗ ಮತ್ತು ಕಂಠಾಭರಣಗಳನ್ನು ತೊಡುತ್ತಿದ್ದರು. ಹೆಂಗಸರು ಬಂಗಾರ ಅಥವಾ ಬೆಳ್ಳಿಯ ಸೂಕ್ಷ್ಮ ತಂತಿಗಳಿಂದ ಮಾಡಿದ ಒಡವೆಗಳನ್ನು ತಲೆಗೂದಲುಗಳಲ್ಲಿ ಧರಿಸುತ್ತಿದ್ದರು. ಗಂಡಸರು ತಲೆಗೂದಲನ್ನು ಮಣಿಗಳಿಂದ ಭದ್ರಪಡಿಸಿಕೊಳ್ಳುತ್ತಿದ್ದರು. ಅವರು ಕಾಲ ಕಡಗ, ಮಣಿಕಟ್ಟಿಗೆ ಕಲ್ಲಿನ ಮುದ್ರೆ ಮತ್ತು ನಡುಪಟ್ಟಿಯನ್ನು ಧರಿಸುತ್ತಿದ್ದರು.

ಕ್ರೀಟ್ ನಾಗರಿಕತೆಯ ಆದಿ ಭಾಗದಲ್ಲಿ ಸ್ವದೇಶಿ ಚಿತ್ರಲಿಪಿಯ ಬರೆಹ ಬಳಕೆಯಲ್ಲಿತ್ತು. ಇದನ್ನು ಕಲ್ಲಿನ ಮುದ್ರೆಗಳು ಮತ್ತು ಮಣ್ಣಿನ ಬಿಲ್ಲೆಗಳ ಮೇಲೆ ಕೊರೆಯುತ್ತಿದ್ದರು. ಈ ಬರೆಹ ಇವಾನ್ಸ್ ಲೀನಿಯಾರ್–ಎ ಎಂದು ಹೆಸರಿಸಿರುವ, ಅನಂತರ ಕಾಲದ, ಲಿಪಿಗೆ ಮೂಲವಾಯಿತು. ಶಬ್ದಾಕ್ಷರಕ್ರಮದಲ್ಲಿ ಲೀನಿಯಾರ್–ಎ ಬರೆಹವನ್ನು ಕೊರೆದಿರುವ ಮಣ್ಣಿನ ಬಿಲ್ಲೆ ಮತ್ತು ಕಲ್ಲುಗಳು, ಲೋಹದ ವಸ್ತುಗಳು, ಮಣ್ಣಿನ ಪಾತ್ರೆಗಳು–ಇವೆಲ್ಲ ಈ ದ್ವೀಪದಲ್ಲಿ ಕ್ರೀಟ್ ನಾಗರಿಕತೆಯ ಮಧ್ಯಯುಗಕ್ಕೆ ಸಂಬಂಧವಿರುವ ಎಲ್ಲ ಸ್ಥಳಗಳಲ್ಲೂ ಹೇರಳವಾಗಿ ದೊರೆಯುತ್ತವೆ. ಇವರ ಬರೆಹವನ್ನು ಇನ್ನೂ ಓದಲಾಗಿಲ್ಲ. ವಸ್ತುಗಳ ಹೆಸರುಗಳು, ಅವುಗಳ ಬೆಲೆಗಳು ಅಥವಾ ಸಂಖ್ಯೆ–ಇವನ್ನು ಪಟ್ಟಿ ಮಾಡಲು ಇದನ್ನು ಬಳಸುತ್ತಿದ್ದಿರಬೇಕು. ಈ ನಾಗರಿಕತೆಯ ಅಂತ್ಯ ಕಾಲದಲ್ಲಿ ನಾಸ್ಸಸ್ ಅರಮನೆಯಲ್ಲಿ ಲೀನಿಯಾರ್–ಎ ಯಿಂದಲೇ ಜನಿಸಿದ ಇನ್ನೊಂದು ಬಗೆಯ ಬರೆಹ, ಲೀನಿಯಾರ್–ಎ ಯಿಂದಲೇ ಜನಿಸಿದ ಇನ್ನೊಂದು ಬಗೆಯ ಬರೆಹ, ಲೀನಿಯಾರ್–ಬಿ, ಉಪಯೋಗಕ್ಕೆ ಬಂತು. ಭಾಷೆ ಗ್ರೀಕ್. ನಾಸ್ಸಸ್‌ನ ಮೇಲೆ ಖಂಡೀಯ ಮೈಸೀನೆಯನರ ಪ್ರಭಾವ ಬಿದ್ದುದನ್ನು ಇದು ತೋರಿಸುತ್ತದೆ. ಈ ಬರೆಹ ಕ್ರೀಟಿನ ಬೇರೆ ಸ್ಥಳಗಳಲ್ಲಿ ಇನ್ನೂ ಸಿಕ್ಕಿದಂತಿಲ್ಲ.

ಪ್ರತಿ ಪಟ್ಟಣವೂ ಅದರ ಧರ್ಮಗುರುವಾದ ರಾಜನ ಆಡಳಿತಕ್ಕೊಳಪಟ್ಟಿದ್ದರೂ ಎಲ್ಲ ಪಟ್ಟಣಗಳೂ ಒಂದು ಕೇಂದ್ರಾಡಳಿತಕ್ಕೆ ಒಳಪಟ್ಟಿದ್ದುವೆಂದು ತೋರುತ್ತದೆ. ಏಕೆಂದರೆ ದ್ವೀಪದ ಎಲ್ಲೆಡೆಗಳಲ್ಲೂ ಮನೆಗಳನ್ನು ಕಟ್ಟುವ ವಿಧಾನ, ಧಾರ್ಮಿಕ ಸಂಸ್ಕಾರ ಪದ್ಧತಿ, ಉಡುಗೆ–ತೊಡುಗೆ, ನಿತ್ಯಜೀವನಕ್ಕೆ ಉಪಯೋಗಿಸುತ್ತಿದ್ದ ವಸ್ತುಗಳು, ಆಟ, ಕಲೆ ಎಲ್ಲದರಲ್ಲೂ ಸಾಮ್ಯವಿದೆ. ಲೌಕಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಧರ್ಮಗುರುವಾದ ರಾಜನೇ ಅಗ್ರಗಣ್ಯ. ಇವನು ಉದ್ದನೆಯ ಪುಕ್ಕಗಳ ಕಿರೀಟ ಧರಿಸುತ್ತಿದ್ದ. ನಾಸ್ಸಸ್ ಇವನ ರಾಜಧಾನಿ.



ಫೇಸ್ಟಾಸ್ : ಮದ್ಯಶೇಖರಣೆಯ ಜಾಡಿ

ಇಂಥ ಅದ್ಭುತ ಹಾಗೂ ಸಂಪದ್ಭರಿತ ನಾಗರಿಕತೆಯನ್ನು ನಿರ್ಮಿಸಲು ಸಹಕಾರಿಯಾಗಿದ್ದದ್ದು ನೌಕಾವ್ಯಾಪಾರ. ಆ ಕಾಲದ ಮಹಾನ್ ಸಂಸ್ಕೃತಿ ಕೇಂದ್ರಗಳಾದ ಈಜಿಪ್ಟ್, ಮೆಸಪೊಟೇಮಿಯ ಹಾಗೂ ಸಿಂಧೂ ಕಣಿವೆಯೊಂದಿಗೆ ಇವರ ವ್ಯಾಪಾರ ಬೆಳೆದಿತ್ತು. ಇದರಿಂದಾಗಿ ಹೊಸಹೊಸ ವಿಚಾರಗಳನ್ನು ಮತ್ತು ಕಲಾಕೌಶಲಗಳನ್ನು ತಿಳಿದು ಅವನ್ನು ತಮ್ಮ ನಿತ್ಯಜೀವನದಲ್ಲಿ ಉಪಯೋಗಿಸಿಕೊಳ್ಳುವುದು ಇಲ್ಲಿಯ ಜನರಿಗೆ

ಮೈಸಿನೆ : ರಾಜರ ಸಮಾಧಿಗಳಲ್ಲಿ ದೊರಕಿದ ಲೋಹದ ಬಾಕುಗಳು

ಸಾಧ್ಯವಾಯಿತು. ಈ ದ್ವೀಪ ಗ್ರೀಕ್, ತುರ್ಕಿ ಹಾಗೂ ಈಜಿಪ್ಟ್ ಭೂಖಂಡಗಳಿಂದ ದೂರದಲ್ಲಿದೆ. ಆದ್ದರಿಂದ ಆಗ ಇವರಿಗೆ ಹೊರಗಿನ ಆಕ್ರಮಣದ ಭಯ ಇರಲಿಲ್ಲ. ಇವರು ಪಟ್ಟಣಗಳ ಸುತ್ತ ಯಾವ ಬಗೆಯ ಕೋಟೆಯನ್ನೂ ಕಟ್ಟುತ್ತಿರಲಿಲ್ಲ. ಇಪ್ಪೆ ಎಣ್ಣೆ ಮತ್ತು ಮದಿರೆಯನ್ನೂ ಇತರ ವಸ್ತುಗಳನ್ನೂ ಇವರು ಹೊರದೇಶಗಳಿಗೆ ಮಾರುತ್ತಿದ್ದರು. ಇವರು ಕಟ್ಟಿದ್ದ ಬಂದರುಗಳೂ ಕರಾವಳಿಯ ವಸತಿಗಳೂ ಹೇರಳವಾಗಿ ಸಿಕ್ಕಿವೆ. ನಿರೌಖಾನಿ ಮತ್ತು ಅಮ್ನಿಸಾಸ್ ಬಂದರುಗಳು ಮೆಡಿಟರೇನಿಯನ್ ಕರಾವಳಿಯಲ್ಲೇ ಅತ್ಯಂತ ಪುರಾತನವಾದವುಗಳು. ಅವು ಯುರೋಪಿನ ಪ್ರಥಮ ಬಂದರುಗಳು.

ಕ್ರೀಟ್ ದ್ವೀಪದಲ್ಲಿ ವಸತಿ ಪ್ರಾರಂಭವಾದ್ದು ಯಾವಾಗ ಎಂದು ನಿಶ್ಚಯವಾಗಿ ಹೇಳುವುದು ಕಷ್ಟ. ಪ್ರ.ಶ.ಪೂ. 3000ಕ್ಕಿಂತ ಮುಂಚೆ ನವಶಿಲಾಯುಗದ ಜನರು ಏಷ್ಯ ಮೈನರ್, ಸಿರಿಯ, ಪ್ಯಾಲಸ್ಟೀನ್, ಈಜಿಪ್ಟ್ ಮತ್ತು ಲಿಬಿಯಗಳಿಂದ ವಲಸೆ ಬಂದು ಇಲ್ಲಿ ಸ್ಥಿರವಾಗಿ ನೆಲಸಿರಬೇಕೆಂಬುದನ್ನು ಆ ಕಾಲದ ಮಣ್ಣಿನ ಪಾತ್ರೆಗಳು ಹಾಗೂ ಇತರ ಅವಶೇಷಗಳಿಂದ ಹೇಳಬಹುದು. ಈ ಜನರ ಅವಶೇಷಗಳು ಬೆಟ್ಟಗಳ ಗುಹೆಗಳಲ್ಲಿ ದೊರೆತಿವೆ. ಅನಂತರದ ಸುಮಾರು 500 ವರ್ಷಗಳಲ್ಲಿ ಈ ಜನರು ಕ್ರಮ ಕ್ರಮವಾಗಿ ದ್ವೀಪವನ್ನೆಲ್ಲ ಪೂರ್ತಿಯಾಗಿ ಆಕ್ರಮಿಸಿಕೊಂಡರು. ಆ ಕಾಲದಲ್ಲಿ ಇವರು ಈಜಿಪ್ಟಿನೊಂದಿಗೆ ತಮ್ಮ ಸಂಪರ್ಕ ಇಟ್ಟುಕೊಂಡಿದ್ದರು ಎಂಬುದು ಕೆಲವು ಅವಶೇಷಗಳಿಂದ ತಿಳಿದು ಬರುತ್ತದೆ. ಮುಂದೆ ಇವರು ಯುರೋಪಿನ ಅತ್ಯಂತ ಪುರಾತನ ಹಾಗೂ ಮಹಾನ್ ಸಂಸ್ಕೃತಿಯೆನಿಸಿದ ಕ್ರೀಟ್ ಅಥವಾ ಮಿನೋವನ್ ಸಂಸ್ಕೃತಿಗೆ ತಳಹದಿಯನ್ನು ಹಾಕಿದರು. ಪ್ರ.ಶ.ಪೂ. 2500ರ ಸುಮಾರಿನಲ್ಲಿ, ಲೋಹದ ಉಪಯೋಗ ತಿಳಿದ ಮೇಲೆ, ಈ ಸಂಸ್ಕೃತಿ ಅತ್ಯಂತ ಶೀಘ್ರಗತಿಯಲ್ಲಿ ಮುಂದುವರಿಯಿತು. ಇಲ್ಲಿ ದೊರೆತಿರುವ, ಈಜಿಪ್ಟಿನ ಕೆಲವು ವಸ್ತುಗಳ ಸಹಾಯದಿಂದ ಈ ಸಂಸ್ಕೃತಿಯ ಕಾಲವನ್ನು ಹೀಗೆ ವಿಂಗಡಿಸಬಹುದು: ಪ್ರ.ಶ.ಪೂ. 4500ರಿಂದ ಪ್ರ.ಶ.ಪೂ.3000 ವರೆಗಿನದು ಆದಿಕಾಲ; ಪ್ರ.ಶ.ಪೂ. 3000ರಿಂದ ಪ್ರ.ಶ.ಪೂ. 1500ರ ವರೆಗಿನದು ಮಧ್ಯಕಾಲ; 1500 ರಿಂದ ಈ ಸಂಸ್ಕೃತಿ ಕೊನೆಗಾಣುವವರೆಗಿನದು ಅಂತ್ಯಕಾಲ.

ಈ ಸಂಸ್ಕೃತಿ ಕೊನೆಗೊಂಡ ರೀತಿಯ ಬಗ್ಗೆ ಕೂಡ ವಾದವಿವಾದಗಳಿವೆ. ಭಾರಿ ಭೂಕಂಪನದಿಂದ ಈ ಸಂಸ್ಕೃತಿಯ ನಗರಗಳು ಸಂಪೂರ್ಣವಾಗಿ ನಾಶವಾಗಿರಬೇಕೆಂಬುದು ಒಂದು ವಾದ. ಮೈಸೀನೆಯ ಜನರು ಈ ದ್ವೀಪವನ್ನು ಆಕ್ರಮಿಸಿ ಇಲ್ಲಿಯ ಸಂಸ್ಕೃತಿಯನ್ನು ನಾಶಮಾಡಿ, ಇದನ್ನು ಗ್ರೀಸ್ ಭೂಖಂಡಕ್ಕೆ ಸೇರಿಸಿಕೊಂಡಿದ್ದಿರಬೇಕೆಂದು ಇನ್ನೊಂದು ವಾದ. ಈ ಎರಡು ವಾದಗಳಿಗೂ ಸಾಕಷ್ಟು ಪುರಾವೆಗಳಿವೆ. ನಾಸ್ಸಸ್ ಅರಮನೆ ಮೂರು ನಾಲ್ಕು ಸಲವಾದರೂ ಭೂಕಂಪನದಿಂದ ಬಿದ್ದು ಮತ್ತೆ ನಿರ್ಮಾಣಗೊಂಡಿದ್ದುದಕ್ಕೆ ಪುರಾವೆಗಳಿವೆ. ಕೊನೆಯ ಬಾರಿಗೆ ಸಂಭವಿಸಿದ ಭೂಕಂಪನದಿಂದ ಆದ ನಷ್ಟ ಅಗಾಧವಾಗಿದ್ದಿರಬೇಕೆಂದೂ ಅದರಿಂದ ಚೇತರಿಸಿಕೊಳ್ಳಲಾಗದೆ ಈ ಸಂಸ್ಕೃತಿ ಕೊನೆಗೊಂಡಿರಬೇಕೆಂದೂ ಹೇಳುವುದಾದರೆ, ಹಿಂದೆ ಅರಮನೆ ಬಿದ್ದುಹೋದಾಗ ಅದನ್ನು ಮತ್ತೆ ಕಟ್ಟಿದವರು ಕೊನೆಯ ಬಾರಿಯೂ ಏಕೆ ಪ್ರಯತ್ನಿಸಲಿಲ್ಲ? ಅಲ್ಲದೆ ಒಂದು ಇಡೀ ಸಂಸ್ಕೃತಿಯೇ ಭೂಕಂಪನದಿಂದ ಸಂಪೂರ್ಣವಾಗಿ ನಾಶವಾಗಲು ಸಾಧ್ಯವೇ? ಎನ್ನುವ ಸಂದೇಹಗಳಿಗೆ ಸಮಂಜಸವಾದ ಉತ್ತರ ದೊರೆತಿಲ್ಲ. ಈ ನಾಗರಿಕತೆಯ ಅಂತ್ಯಕಾಲದಲ್ಲಿ ಗ್ರೀಸ್ ಭೂಖಂಡದಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದ ಮೈಸೀನೆಯ ಪ್ರಭಾವ ಈ ದ್ವೀಪದ ಮೇಲೆ ಬಿದ್ದಿರುವುದಕ್ಕೆ ಆಧಾರಗಳಿವೆ. ಈ ಸಂಸ್ಕೃತಿ ಕೊನೆಗೆ ಭೂಖಂಡದ ಸಂಸ್ಕೃತಿಯಲ್ಲಿ ಐಕ್ಯವಾಯಿತು. ಈ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳು ಗ್ರೀಕ್ ಮಹಾಕಾವ್ಯಗಳಲ್ಲಿ ದಂತಕತೆಗಳಾಗಿ ಸೇರಿಕೊಂಡಿವೆ. ಆದ್ದರಿಂದ ಮೈಸೀನೆಯ ಜನರ ಆಕ್ರಮಣದಿಂದ ಕ್ರೀಟ್ ಸಂಸ್ಕೃತಿ ಕೊನೆಗೊಂಡಿತೆಂಬ ವಾದ ಹೆಚ್ಚು ಸಮಂಜಸವೆನ್ನಬಹುದು.

ಈ ಸಂಸ್ಕೃತಿ ಹೇಗೇ ಕೊನೆಗೊಂಡಿರಲಿ, ಅಂತೂ ಇದು 10–11 ಶತಮಾನಗಳ ಕಾಲ ಭವ್ಯವಾಗಿ ಮೆರೆದು, ಯುರೋಪಿನ ಪ್ರಥಮ ಸಂಸ್ಕೃತಿಯಾಗಿದ್ದು ಅನಂತರ ಸಂಪೂರ್ಣ ನಾಶವಾಯಿತು. **(ನೋಡಿ– ಈಜಿಯನ್ ನಾಗರಿಕತೆ)**

(ಬಿ.ಎನ್.ಎ.ಆರ್.; ಎಂ.ಎಂ.ಪಿ.)

**ಕ್ರೀಟಾನ್ :** ಬಹು ಒತ್ತಾದ ಹಾಗೂ ಬಿಗಿಯಾದ ನೇಯ್ಗೆಯ ಮತ್ತು ಮುದ್ರಿತವಾದ ಹತ್ತಿ, ಲಿನನ್ ಅಥವಾ ಕೃತಕ ರೇಷ್ಮೆ ವಸ್ತ್ರ. ಇದನ್ನು ಪರದೆಗಳಿಗೂ ಪೀಠೋಪಕರಣಗಳಿಗೂ ವಸ್ತ್ರವಾಗಿ ಉಪಯೋಗಿಸುತ್ತಾರೆ. ಭಾರತದಲ್ಲಿ ಕ್ರೀಟಾನುಗಳನ್ನು ಸಾದಾ ಅಥವಾ 2/2ರ ಮೂಲೆ ನೇಯ್ಗೆಯಿಂದ ನೇಯ್ದಿರುತ್ತಾರೆ. ಸ್ಯಾಟಿನ್ ಮತ್ತು ಓಟ್ ಮೀಲ್ ನೇಯ್ಗೆಗಳನ್ನು ಕೆಲವು ಸಮಯದಲ್ಲಿ ಉಪಯೋಗಿಸುತ್ತಾರೆ. ಎರಡು ಕಡೆಯೂ ಮುದ್ರಿತವಾದುದನ್ನು ಓಟ್‌ಮೀಲ್ ನೇಯ್ಗೆ ಎಂದು ಕರೆಯುವುದುಂಟು. ಇದು ಪರದೆಗಳಿಗೆ ಬಹುಸೂಕ್ತವಾದದ್ದು. ಈ ಬಟ್ಟೆ ದ್ವಿಮುಖಿ ವಸ್ತ್ರ(ರಿವರ್ಸಿಬಲ್). ಇದನ್ನು 30ನೆಯ ದಾರದ ಸೆಂಮೀ 48 ಹಾಸು ಎಳೆಗಳಿಂದಲೂ 8ನೆಯ ದಾರದ ಸೆಂಮೀ 32 ಹೊಕ್ಕು ಎಳೆಗಳಿಂದಲೂ ನೇಯುತ್ತಾರೆ. ಸಾದಾ ನೇಯ್ಗೆಯ ಹಾಗೂ ಮುದ್ರಿತ ಹಾಸುದಾರವುಳ್ಳ ಮತ್ತು ಒರಟಾದ ಹೊಕ್ಕುದಾರವುಳ್ಳ ವಸ್ತ್ರಗಳು ಈ ವಿಧಾನದಲ್ಲಿ ಬಹು ಪ್ರಖ್ಯಾತವಾಗಿವೆ. ಬಟ್ಟೆಯ ಎರಡು ಮುಖಗಳಲ್ಲೂ ವೈವಿಧ್ಯ ತೋರುವುದರಿಂದ ಇವು ದ್ವಿಮುಖಿವಸ್ತ್ರಗಳೆನಿಸಿವೆ. ಇವನ್ನು ಛಾಯಾ ರೂಪಿತ ಪರದೆ ಎಂದೂ ಕರೆಯುತ್ತಾರೆ.

(ವಿ.ಎಸ್.ವಿ.)

**ಕ್ರೀಡಾಂಗಣ :** ಸುತ್ತಣ ಪೀಠವ್ಯವಸ್ಥೆಯೂ ಸೇರಿದಂತೆ ಆಟೋಟಗಳ ಅಂಗಳಕ್ಕೆ ಇರುವ ಹೆಸರು (ಸ್ಟೇಡಿಯಂ). ಸ್ಟೇಡಿಯಂ ಎಂಬ ಪದದ ಗ್ರೀಕ್ ಮೂಲದ ಸ್ಟೇಡ್ ಎಂಬುದಕ್ಕೆ 185 ಮೀ ಎಂಬ ಅರ್ಥವಿತ್ತು. ಒಲಿಂಪಿಯದ ಓಟದ ಅಖಾಡ ಇಷ್ಟೇ ಉದ್ದವಾಗಿತ್ತಾಗಿ ಮೊದಲು 'ಸ್ಟೇಡ್' ಎಂಬ ಪದ ಅಂಥ ಪಂದ್ಯಕ್ಕೆ ಅನ್ವಯವಾಗಿ ಅನಂತರ ಪಂದ್ಯದ ಅಂಗಳಕ್ಕೂ ಬಳಕೆಗೊಂಡಿತು. ಆಧುನಿಕ ನಗರಗಳ ರಚನೆ ಮತ್ತು ಅಭಿವೃದ್ಧಿಯಲ್ಲಿ ಕ್ರೀಡಾಂಗಣಕ್ಕೆ ಪ್ರಮುಖ ಸ್ಥಾನ ಇತ್ತೀಚೆಗೆ ದೊರೆಯುತ್ತಿದೆ. ಪ್ರತಿಯೊಂದು ನಗರಕ್ಕೂ ಹೇಗೆ ಒಂದು ಸುಸಜ್ಜಿತವಾದ ಸಭಾಭವನ ಆವಶ್ಯಕವೊ ಅಂತೆಯೇ ಸಮರ್ಪಕವಾದ ಒಂದು ಕ್ರೀಡಾಂಗಣವೂ ಆವಶ್ಯಕವಾಗಿದೆ.

ಕ್ರೀಡಾಂಗಣದ ರಚನೆಯಲ್ಲಿ ಎರಡು ಮುಖ್ಯ ವಿಷಯಗಳನ್ನು ಗಮನಿಸಬೇಕು. ಕ್ರೀಡೆಯಲ್ಲಿ ಭಾಗವಹಿಸುವ ಆಟಗಾರರಿಗೆ ಅಲ್ಲಿ ಎಲ್ಲ ರೀತಿಯ ಅನುಕೂಲಗಳು ದೊರೆಯಬೇಕು. ಎರಡನೆಯದು, ಕ್ರೀಡೆಗಳನ್ನು ನೋಡಲು ಬರುವ ಪ್ರೇಕ್ಷಕವೃಂದಕ್ಕೆ ಕ್ರೀಡೆಯನ್ನು ವೀಕ್ಷಿಸಲು ಬೇಕಾದ ಅನುಕೂಲತೆಯೂ ಅಲ್ಲಿ ಒದಗಬೇಕು.

ಎಲ್ಲ ಆಟಗಳಿಗೂ ಒಂದೇ ಕ್ರೀಡಾಂಗಣವನ್ನು ನಿರ್ಮಿಸುವುದು ಕಷ್ಟದ ಮಾತು. ಏಕೆಂದರೆ ಆಟದ ವೈಶಿಷ್ಟ್ಯಕ್ಕೆ ತಕ್ಕಂತೆ ಅಖಾಡ ಇರಬೇಕಾಗುತ್ತದೆ. ಸಾಮಾನ್ಯವಾಗಿ ದೈಹಿಕ ಚಟುವಟಿಕೆಗಳ ಕ್ರೀಡಾಂಗಣ ಇನ್ನೂ ಅನೇಕ ರೀತಿಯ ಕ್ರೀಡೆಗಳಿಗೂ ಉಪಯೋಗಕ್ಕೆ ಬರುತ್ತದೆ. ದೈಹಿಕ ಚಟುವಟಿಕೆಗಳ ಕ್ರೀಡಾಂಗಣದ ಪ್ರಮುಖ ಆವಶ್ಯಕತೆಗಳು ಅನೇಕ. ಮೊದಲನೆಯದಾಗಿ 400 ಮೀಟರ್ ಸುತ್ತಳತೆಯ—ಅಂದರೆ ಏಳು ಅಥವಾ ಎಂಟು ಓಟಗಾರರು ಒಟ್ಟಿಗೆ ಅಕ್ಕಪಕ್ಕದಲ್ಲಿ ನಿಂತು ಓಡಲು ಅವಕಾಶವಾಗುವಂಥ–ರನ್ನಿಂಗ್ ಟ್ರ್ಯಾಕ್ ಅಂದರೆ ಓಡುವ ಮಾರ್ಗವೊಂದು ಇದ್ದೇ ತೀರಬೇಕು. ಈ ಸುತ್ತಿನ ಅನಂತರ, ಕ್ರೀಡಾಂಗಣದ ಮೆಟ್ಟಲುಗಳು ಬರಬೇಕು. ಈ ಮಧ್ಯೆ ಸೈಕಲ್ ಓಟವನ್ನು ನಡೆಸಲು ಅನುಕೂಲವಾಗುವಂತೆ ಸಿಮೆಂಟಿನಿಂದ ಕಟ್ಟಿದ ಸೈಕಲ್ ದಾರಿ ಇರುವುದೂ ಒಳ್ಳೆಯದು. ಕ್ರೀಡಾಂಗಣದ ಸುತ್ತಲೂ ಪ್ರೇಕ್ಷಕರು ಕೂಡಲು ಕೊನೆಯ ಪಕ್ಷ ಎಂಟು ಹತ್ತು ಅಂತಸ್ತಿನ ಮೆಟ್ಟಲುಗಳು ಇರಬೇಕು. ಈ ಮೆಟ್ಟಲುಗಳ ಮೇಲೆ ಚಾವಣಿ ಇದ್ದರೆ ಇನ್ನೂ ಅನುಕೂಲ. ಚಾವಣಿಯ ಭಾರ ಹೊರಲು ಕಂಬಗಳನ್ನು ಉಪಯೋಗಿಸದೆ ಇದ್ದರೆ, ಪ್ರೇಕ್ಷಕರು ಕ್ರೀಡೆಯನ್ನು ನೋಡಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಕಂಬಗಳು ನೋಟಕ್ಕೆ ಅಡ್ಡಬರುತ್ತವೆ.

ಆಟಗಾರರು ವಿಶ್ರಾಂತಿ ತೆಗೆದುಕೊಳ್ಳಲು, ತಮ್ಮ ಉಡುಪುಗಳನ್ನು ಬದಲಾಯಿಸಿಕೊಳ್ಳಲು ಅನುಕೂಲವಾಗುವಂಥ ಕೊಠಡಿಗಳೂ, ಸ್ನಾನ ಮತ್ತು ಶೌಚಗೃಹಗಳು ಕ್ರೀಡಾಂಗಣದ ಒಂದು ಅವಿಭಾಜ್ಯ ಭಾಗ. ಸುಸಜ್ಜಿತ ಉಪಹಾರ ಮತ್ತು ಭೋಜನ ಗೃಹವೊಂದನ್ನು ಏರ್ಪಡಿಸಿದಲ್ಲಿ ಇನ್ನೂ ಉತ್ತಮ. ಪ್ರೇಕ್ಷಕರು ಟಿಕೆಟ್ಟುಗಳನ್ನು ಅನಾಯಾಸವಾಗಿ ಕೊಳ್ಳಲು ಸಾಕಷ್ಟು ಸಂಖ್ಯೆಯಲ್ಲಿ ಟಿಕೆಟ್ ಬೂತುಗಳು ಇರಬೇಕು. ಪ್ರೇಕ್ಷಕರು ಒಬ್ಬೊಬ್ಬರಾಗಿ ಒಳಗೆ ಬರಲು ಕಿರಿದಾದ ಪ್ರವೇಶದ್ವಾರಗಳಿದ್ದು ಆಟದ ಅನಂತರ ಇಡೀ ಗುಂಪು ಆದಷ್ಟು ಬೇಗ ಹೊರಗೆ ಹೋಗಲು ಅನುಕೂಲವಾಗುವಂಥ ದೊಡ್ಡ ದೊಡ್ಡ ನಿರ್ಗಮನದ್ವಾರಗಳೂ ಇರಬೇಕು. ಕ್ರೀಡೆಗಳನ್ನು ವೀಕ್ಷಿಸಿ ವರದಿ ಮಾಡಲು ಬರುವ ಪತ್ರಿಕಾ ಪ್ರತಿನಿಧಿಗಳಿಗೆ, ಆಕಾಶವಾಣಿ ವರ್ಗದವರಿಗೆ ಕ್ರೀಡೆಯನ್ನು ಯಾವ ರೀತಿಯ ಅಡಚಣೆಯೂ ಇಲ್ಲದೆ,



ಬೂಷ್ ಕ್ರೀಡಾಂಗಣ, ಸೇಂಟ್ ಲೂಯಿ, ಮಿಸೂರಿ

ನೋಡಲು ಮತ್ತು ತಮ್ಮ ಕಾರ್ಯದಲ್ಲಿ ಸಂಪೂರ್ಣವಾಗಿ ಮಗ್ನರಾಗಲು ಅವಕಾಶ ನೀಡುವಂಥ, ಪ್ರತ್ಯೇಕವಾದ ಸ್ಥಾನಗಳನ್ನು ಮೀಸಲಾಗಿರಿಸುವುದು ಬಹು ಅಗತ್ಯ.

ಒಲಿಂಪಿಕ್ ಜ್ಯೋತಿಕುಂಡ, ಧ್ವಜಸ್ತಂಭಗಳು, ವಂದನಾವೇದಿಕೆ, ಪ್ರಮಾಣವಚನ ಸ್ವೀಕಾರ ವೇದಿಕೆ, ಮುಖ್ಯ ಅತಿಥಿಗಳು ಕೂರುವ ವೇದಿಕೆ ಇವೆಲ್ಲವೂ ಪ್ರತ್ಯೇಕವಾಗಿ ಅಗತ್ಯಕ್ಕೆ ತಕ್ಕಂತೆ ನಿರ್ಮಾಣವಾಗಬೇಕು.

ಕ್ರೀಡೆಗಳನ್ನು ನಡೆಸುವ ಕಾರ್ಯಕರ್ತರ ಅನುಕೂಲತೆಗಾಗಿ ಸುಸಜ್ಜಿತ ಕಾರ್ಯಾಲಯವಿರಬೇಕು. ಇಂಥ ಕಾರ್ಯಾಲಯದಲ್ಲಿ ಟೆಲಿಫೋನ್, ಕಂಪ್ಯೂಟರ್, ಮೇಜು, ಕುರ್ಚಿಗಳು, ಸಣ್ಣ ಸಮಿತಿಗಳ ಸಭೆಯನ್ನು ನಡೆಸುವಂಥ ಸಭಾಂಗಣ ಇವುಗಳೂ ಇರಬೇಕಾದ್ದು ಅಗತ್ಯವಾಗಿವೇ.

ಕ್ರೀಡಾಂಗಣದ ಸುತ್ತಲೂ ಮೆಟ್ಟಿಲುಗಳ ಕೆಳಗಿನ ಜಾಗದಲ್ಲಿ, ಕೊಠಡಿಗಳನ್ನು ನಿರ್ಮಿಸಬಹುದು. ಈ ಕೊಠಡಿಗಳಲ್ಲಿ ವಿವಿಧ ಕ್ರೀಡಾಸಂಸ್ಥೆಗಳು ತಮ್ಮ ತಮ್ಮ ಕಚೇರಿಗಳನ್ನು ನಡೆಸಲು ಅನುಕೂಲವಾಗುತ್ತದೆ. ಜೊತೆಗೆ ಇವುಗಳಲ್ಲಿ ಪರ ಊರಿನಿಂದ ಬರುವ ಆಟಗಾರರಿಗೆ ಮತ್ತು ಅಧಿಕಾರಿವರ್ಗದವರಿಗೆ ತಂಗಲು ವಸತಿ ಒದಗಿಸಬಹುದು.

ಕ್ರೀಡಾಂಗಣದ ಸುತ್ತಲೂ ಸೈಕಲ್ಲುಗಳು, ಕಾರುಗಳು, ಮತ್ತಿತರ ವಾಹನಗಳನ್ನು ಬಿಡಲು ಸಾಕಷ್ಟು ಸ್ಥಳಾವಕಾಶವಿರಬೇಕು. ಅಂತೆಯೇ ವಾಹನಗಳ ಮತ್ತು ಜನರ ಸಂಚಾರಕ್ಕೆ ಅಗಲವಾದ ರಸ್ತೆಗಳಿರಬೇಕು. ತುರ್ತು ಪರಿಸ್ಥಿತಿಯಲ್ಲಿ ಉಪಯೋಗಕ್ಕೆ ಬರುವಂಥ ಒಂದು ಸುಸಜ್ಜಿತ ಪ್ರಥಮ ಚಿಕಿತ್ಸಾ ಕೇಂದ್ರ ಇರಲೇಬೇಕು.

**ಇತಿಹಾಸ:** ಕ್ರೀಡಾಂಗಣದ ವ್ಯವಸ್ಥೆ ಕಾಲಕಾಲಕ್ಕೆ ಹೇಗೆ ಬದಲಾಗುತ್ತ ಬಂದಿದೆ ಎಂಬ ವಿಷಯ ಕುತೂಹಲಕಾರಿಯಾಗಿದೆ.

ಗ್ರೀಸಿನ ಒಲಿಂಪಿಯದಲ್ಲಿ ಪ್ರ.ಶ.ಪೂ. 3ನೆಯ ಶತಮಾನದ ಹೊತ್ತಿಗೆ ಒಂದು ಕ್ರೀಡಾಂಗಣವಿದ್ದಂತೆ ತಿಳಿದುಬಂದಿದೆ. ಆ ಅಂಗಣದ ಸುತ್ತಲೂ ಅರ್ಧಚಂದ್ರಾಕಾರವಾಗಿ ಅಳವಡಿಸಿದ್ದ ಕಲ್ಲಿನ ಪೀಠಗಳ ಅಟ್ಟಣೆಗಳನ್ನು ಜೋಡಿಸಿದ್ದರೆನ್ನಲು ಅವಶೇಷಗಳ ದಾಖಲೆ ಇದೆ. ಅನಂತರ ರೋಮನರು ಗ್ರೀಕರ ಮೇಲ್ಪಂಕ್ತಿಯನ್ನು ಅನುಸರಿಸಿ ವಿಶಾಲವಾದ ಕ್ರೀಡಾಂಗಣಗಳನ್ನು ರಚಿಸಿದರು. ಪ್ರಸಿದ್ಧವಾದ ಸರ್ಕಸ್ ಮ್ಯಾಕ್ಸಿಮಸ್ ಕ್ರೀಡಾಂಗಣದಲ್ಲಿ 2,50,000 ಪ್ರೇಕ್ಷಕರು ಕುಳಿತುಕೊಂಡು ಆಟ ನೋಡಲು ಅವಕಾಶವಿದ್ದಿತಂತೆ. ಇಂಥ ದೊಡ್ಡ ಅಖಾಡವನ್ನು ಇದುವರೆಗೆ ಯಾರೂ ಕಟ್ಟಿಲ್ಲವೆನ್ನಲಾಗಿದೆ.

ರೋಮನರ ವಾಸ್ತುಕಲೆ ಉನ್ನತಮಟ್ಟಕ್ಕೇರಿದಾಗ ಸುಮಾರು ಪ್ರ.ಶ. 72–80ರ ಸುಮಾರಿನಲ್ಲಿ ರೋಮನ್ ಕೊಲೀಸಿಯಂ (ಕ್ರೀಡೆ ಹಾಗೂ ಸಭಾಕಾರ್ಯಗಳಿಗಾಗಿ ಕಟ್ಟಿದ ಭವನ) ಅಸ್ತಿತ್ವಕ್ಕೆ ಬಂತು. ನಾಲ್ಕು ಅಂತಸ್ತಿನ ಈ ಬೃಹತ್ ಭವನದಲ್ಲಿ 50,000 ಮಂದಿ ಕುಳಿತು ಯಾವ ಅಡಚಣೆಯೂ ಇಲ್ಲದೆ ಕಾರ್ಯಕ್ರಮವನ್ನು ವೀಕ್ಷಿಸಬಹುದಾದಷ್ಟು



ಫಿಲಡೆಲ್ಫಿಯದಲ್ಲಿನ ವೆಟೆರನ್ಸ್ ಕ್ರೀಡಾಂಗಣ

ಸ್ಥಳವಿತ್ತು. ಜನ ನಿರಾಂತಕವಾಗಿ ಒಳಗೆ ಬರಲು, ಹೊರಗೆ ಹೋಗಲು ಬೇಕಾದ ಅನುಕೂಲಗಳೂ ಇದ್ದುವು.

ರೋಮನ್ ಸಾಮ್ರಾಜ್ಯ ಇಳಿಮುಖವಾದ ಮೇಲೆ ಸುಮಾರು 12 ಶತಮಾನಗಳ ಕಾಲ ಕ್ರೀಡಾಂಗಣಗಳ ರಚನೆ ಆಗಲೇ ಇಲ್ಲವೆನ್ನಲಾಗಿದೆ. 1900 ಕ್ಕೆ ಮೊದಲು ಅಮೆರಿಕದಲ್ಲಿ ಕ್ರೀಡಾಂಗಣಗಳೇ ಇರಲಿಲ್ಲ. ಒಂದನೆಯ ಮಹಾಯುದ್ಧದ ವೇಳೆಗೆ ಐದು ಕ್ರೀಡಾಂಗಣಗಳನ್ನು ನಿರ್ಮಿಸಲಾಯಿತು. ಕುದುರೆಲಾಳದ ಆಕಾರದ ಹಾರ್ವರ್ಡ್ ಕ್ರೀಡಾಂಗಣ ನಿರ್ಮಿತವಾದದ್ದು 1912ರಲ್ಲಿ; 70,900 ಜನಕ್ಕೆ ಅವಕಾಶವಿರುವ ಯೇಲ್ ಬೌಲ್ ನಿರ್ಮಾಣವಾದದ್ದು 1914ರಲ್ಲಿ. ಅಲ್ಲಿಂದಾಚೆಗೆ ಸುಮಾರು 1930ರ ಹೊತ್ತಿಗೆ ಇಡೀ ಸಂಯುಕ್ತ ಸಂಸ್ಥಾನದಲ್ಲಿ 30 ಕ್ರೀಡಾಂಗಣಗಳು ಹುಟ್ಟಿಕೊಂಡವು. 1932ರಲ್ಲಿ ವಿಸ್ತಾರಗೊಂಡ ಲಾಸ್ ಏಂಜಲೆಸ್‌ನ ಕ್ರೀಡಾಂಗಣದಲ್ಲಿ 1,05,000 ಜನಕ್ಕೆ ಪೀಠ ವ್ಯವಸ್ಥೆ ಇದೆ. 1963ರಲ್ಲಿ ರೂಪುಗೊಂಡ ರಾಬರ್ಟ್ ಎಫ್. ಕೆನಡಿ ಕ್ರೀಡಾಂಗಣದಲ್ಲಿ ಫುಟ್‌ಬಾಲ್, ಬೇಸ್‌ಬಾಲ್ ಮೊದಲಾದ ಅನೇಕ ಆಟಗಳಿಗೆ ಅನುಕೂಲವಿದೆ.

ಈಗ ಇರುವ ಕ್ರೀಡಾಂಗಣಗಳಲ್ಲಿ ಅತಿ ದೊಡ್ಡದು ಎಂದರೆ ರಿಯೋ ಡಿ ಜನೇರೋದ ಪುರಸಭೆಯು ನಿರ್ಮಿಸಿರುವಂಥದು. ಅದರ ಸುತ್ತಳತೆ 2½ ಚಕಿಮೀ ಇದ್ದು ಒಳಗೆ 1,55,000 ಜನರಿಗೆ ಕೂಡಲು ಅವಕಾಶವಿದೆ.

ಹೊರಾಂಗಣ ಅಖಾಡಗಳಂತೆ ಈಚೆಗೆ ಒಳಾಂಗಣ ಅಖಾಡಗಳೂ ಬಳಕೆಗೆ ಬರುತ್ತಿವೆ. ಚಿಕಾಗೋದಲ್ಲಿ ಇಂಥ ಅತಿ ದೊಡ್ಡ ಕ್ರೀಡಾಂಗಣವೊಂದಿದೆ. (ಎ.ಆರ್.ಸಿ.ಪಿ.)

ಮಾಸ್ಕೋದಲ್ಲಿರುವ ಲೆನಿನ್ ಸೆಂಟ್ರಲ್ ಕ್ರೀಡಾಂಗಣ

**ಭಾರತದ ಕ್ರೀಡಾಂಗಣಗಳು:** ಎರಡನೆಯ ಮಹಾಯುದ್ಧಕ್ಕೆ ಮೊದಲಿನಿಂದಲೂ ಭಾರತದಲ್ಲಿ ವಿವಿಧ ಕ್ರೀಡೆಗಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವ ಕೆಲಸ ನಡೆಯುತ್ತಲಿದೆ. ಇಲ್ಲಿ ಮುಖ್ಯವಾದ ಮೂರು ಕ್ರೀಡಾಂಗಣಗಳ ವಿಷಯವನ್ನು ಮಾತ್ರ ಪ್ರಸ್ತಾಪಿಸಲಾಗಿದೆ.

ನ್ಯೂಯಾರ್ಕ್ ನಗರದ ಫ್ಲಷಿಂಗ್ ಭಾಗದಲ್ಲಿರುವ ಷೇ ಕ್ರೀಡಾಂಗಣ

**ಬ್ರೆಬರ್ನ್ ಕ್ರೀಡಾಂಗಣ :** 1933ರಲ್ಲಿ ಅಸ್ತಿತ್ವಕ್ಕೆ ಬಂದ ಭಾರತದ ಕ್ರಿಕೆಟ್ ಕ್ಲಬ್ಬಿನ ಆಸಕ್ತಿಯಿಂದಾಗಿ ಈ ಕ್ರೀಡಾಂಗಣ ಮುಂಬೈನಲ್ಲಿ 1937ರಲ್ಲಿ ನಿರ್ಮಾಣವಾಯಿತು. ಆಗ್ಗೆ ಮುಂಬೈ ಗವರ್ನರ್ ಆಗಿದ್ದ ಲಾರ್ಡ್ ಬ್ರಾಬೌರ್ನ್ ಇದರ ಶಂಕುಸ್ಥಾಪನೆ ಮಾಡಿದನು (1936). ಕ್ಲಬ್ ಹೌಸನ್ನು ಬಿಟ್ಟು ಉಳಿದ ಕ್ರೀಡಾಂಗಣ ನಿರ್ಮಾಣಕ್ಕೆ ಆಗಿರುವ ಖರ್ಚು 7,70,000 ರೂಪಾಯಿಗಳು. ಕ್ರೀಡಾಂಗಣದಲ್ಲಿ 35,000 ಜನ ಪ್ರೇಕ್ಷಕರು ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿದೆ. ಪಕ್ಕದ ಕ್ಲಬ್ ಹೌಸಿನಲ್ಲಿ 5,000 ಜನ ಕೂಡಬಹುದು. ಇಲ್ಲಿನ ಕ್ರಿಕೆಟ್ ಮೈದಾನದ ವಿಸ್ತೀರ್ಣ 2560 ಚಮೀ. ಇದಲ್ಲದೆ ಈ ಕ್ರೀಡಾಂಗಣದಲ್ಲಿ ಪಾಟಿಯಾಲ ಮಹಾರಾಜ ಮತ್ತು ಗವರ್ನರುಗಳ ಹೆಸರಿನಲ್ಲಿ ಎರಡು ಪೆವಿಲಿಯನುಗಳು, ಒಂದು ಈಜುಕೊಳ, ಟೆನಿಸ್ ಅಂಗಳಗಳು, ಬ್ಯಾಡ್ಮಿಂಟನ್ ಅಂಗಳ, ಬಿಲಿಯರ್ಡ್ಸ್ ಮತ್ತು ಇಸ್ಪೀಟು ಆಟದ ಕೋಣೆಗಳು–ಇವೆಲ್ಲ ಇವೆ.

ತಿರುವನಂತಪುರದ ವಿಶ್ವವಿದ್ಯಾಲಯ ಕ್ರೀಡಾಂಗಣ: ಇದು 1939 ರಲ್ಲಿ ಅಸ್ತಿತ್ವಕ್ಕೆ ಬಂತು. ಇಡೀ ಮೈದಾನದಲ್ಲಿ ಹುಲ್ಲು ಬೆಳೆಸಲಾಗಿದೆ. ಊರಿನ ನಡುವೆ ಇದ್ದು ವಸ್ತುಪ್ರದರ್ಶನಾಲಯಕ್ಕೂ ಪ್ರಾಣಿಸಂಗ್ರಹಾಲಯಕ್ಕೂ ಹತ್ತಿರವಾಗಿರುವುದರಿಂದ ಆಟಗಳಲ್ಲಿ ಆಸಕ್ತರಾದ ಜನರಿಗೆ ತುಂಬ ಅನುಕೂಲ ಒದಗಿಸಿದೆ. ಇಲ್ಲಿ 30,000 ಜನ ಕೂಡಲು ಅವಕಾಶವಿದೆ. ಅಂಗಣದಲ್ಲಿನ ಫುಟ್‌ಬಾಲ್ ಮತ್ತು ಹಾಕಿ ಆಟಗಳಿಗೆ ಸ್ಥಳಾವಕಾಶವಿದೆ. ಜೊತೆಗೆ ಒಳ್ಳೆಯ ಕ್ರಿಕೆಟ್ ಮೈದಾನವೂ ಇದೆ. ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಇಲ್ಲಿನ ಪೆವಿಲಿಯನಿಗೆ ಜಿ.ವಿ. ರಾಜ ಪೆವಿಲಿಯನ್ ಎಂದು ಹೆಸರು.

ವಿಶ್ವವಿದ್ಯಾನಿಲಯದ ಹಾಗೂ ಸಾರ್ವಜನಿಕ ಕ್ಷೇತ್ರದ ಎಲ್ಲ ಕ್ರೀಡೆಗಳೂ ಇಲ್ಲಿ ನಡೆಯುತ್ತವೆ.

**ದೆಹಲಿಯ ರಾಷ್ಟ್ರೀಯ ಕ್ರೀಡಾಂಗಣ :** 1933 ರಲ್ಲಿ ಭಾವನಗರದ ಮಹಾರಾಜರು ಈ ಕ್ರೀಡಾಂಗಣವನ್ನು ಕಟ್ಟಿಸಿಕೊಟ್ಟರು. ಅನಂತರ 1951 ರಲ್ಲಿ ಪ್ರಥಮ ಏಷ್ಯನ್ ಕ್ರೀಡೆಗಳು ನಡೆಯಬೇಕಾಗಿ ಬಂದಾಗ ಈ ಕ್ರೀಡಾಂಗಣವನ್ನು ಪರಿಷ್ಕರಿಸಿ ವಿಸ್ತರಿಸಲಾಯಿತು. ಈಗ ಇದರಲ್ಲಿ 22,000 ಪ್ರೇಕ್ಷಕರಿಗೆ ಕೂಡುವಷ್ಟು ಸ್ಥಳಾವಕಾಶವಿದೆ. ಅಂತಾರಾಷ್ಟ್ರೀಯ ಮಟ್ಟದ

ಮ್ಯೂನಿಕ್ ಒಲಿಂಪಿಕ್ ಕ್ರೀಡಾಂಗಣ (1972)

ಆಟೋಟಗಳನ್ನು ನಡೆಸಲು ಬೇಕಾಗುವ ಎಲ್ಲ ಸೌಕರ್ಯಗಳೂ ಇಲ್ಲಿವೆ. ಫುಟ್‌ಬಾಲ್ ಮೈದಾನ, 400 ಮೀಟರ್ ಓಟದ ದಾರಿ, ಈಜು ಕೊಳ, 4 ಲಾನ್ ಟೆನಿಸ್ ಕೋರ್ಟುಗಳು,

ನವದೆಹಲಿಯ ರಾಷ್ಟ್ರೀಯ ಕ್ರೀಡಾಂಗಣದ ಒಂದು ಭಾಗ

6 ಗಟ್ಟಿನೆಲದ ಕೋರ್ಟುಗಳು, ಒಂದು ಹಾಕಿ ಮೈದಾನ, ಒಂದು ಟೇಬಲ್ ಟೆನಿಸ್ ಅಂಕಣ, 6 ಕ್ರಿಕೆಟ್ ಅಭ್ಯಾಸದ ಮೈದಾನಗಳು, ಒಂದು ಹೊರಾಂಗಣ, ವ್ಯಾಯಾಮಶಾಲೆ, 3 ವಾಲಿಬಾಲ್ ಅಂಕಣ, ಒಂದು ಬ್ಯಾಸ್ಕೆಟ್ ಬಾಲ್ ಅಂಕಣ–ಹೀಗೆ ಇಷ್ಟೊಂದು ಅವಕಾಶ ಇರುವ ಕ್ರೀಡಾಂಗಣ ಭಾರತದಲ್ಲಿ ಸದ್ಯಕ್ಕೆ ಇದೊಂದೇ.

*

**ಕ್ರೀಡಾ ಸಿದ್ಧಾಂತ :** ಬದುಕಲು ಸಾಮರ್ಥ್ಯ ಬೇಕು. ಇದನ್ನು ರೂಢಿಸಿಕೊಳ್ಳುವುದೇ ಜೀವನ. ಈ ಸಾಮರ್ಥ್ಯ ಕಳೆದುಕೊಳ್ಳುವುದೇ ಸಾವು. ನಿಸರ್ಗವು ಸಮರ್ಥ ಜೀವಿಗಳಿಗೆ ಮಾತ್ರ ಅವಕಾಶ ನೀಡುತ್ತದೆ. ಇದನ್ನೇ ಜೀವನಸಂಗ್ರಾಮ ಎನ್ನುವರು. ಹಾಗಾಗಿ ಜೀವನವೇ ಒಂದು ತೀವ್ರ ಹೋರಾಟ. ಇಂಥ ಹೋರಾಟಕ್ಕೆ ಬೇಕಾದ ಶಕ್ತಿಯನ್ನು ರೂಢಿಸಿಕೊಳ್ಳುವುದೂ ಸಹ ಆಟದ ಒಂದು ಉದ್ದೇಶ. ಸಮರ್ಥವಾಗಿ ಆಡಬೇಕಾದದ್ದು ಆಟದ ಗುರಿ. ಫಲಾಫಲಗಳನ್ನು ದೈವ ನಿರ್ಧರಿಸಬೇಕು. 'ಬೊಂಬೆಯಾಟವಯ್ಯಾ . . . .'ಎಂಬ ದಾಸವಾಣಿಯೂ ಇದನ್ನೇ ಹೇಳುತ್ತದೆ.

ಆಟದಲ್ಲಿ ಸೋಲು ಅಥವಾ ಗೆಲುವು ನಿಶ್ಚಿತ. ಒಬ್ಬನ ಗೆಲುವು ಎಂದರೆ ಎದುರಾಳಿಯ ದೌರ್ಬಲ್ಯದ ಲಾಭ. ಸೋಲಿನ ಅನುಭವದಿಂದಲೇ ಗೆಲುವಿನ ಹಾದಿ ಗೋಚರ. ಗೆಲುವು ಸೋಲಿನ ನಾಂದಿಯೂ ಆಗಬಹುದು. ಇಂಥ ಹೋರಾಟದಲ್ಲಿ ಸೋತು ಗೆದ್ದವರಿದ್ದಾರೆ. ಗೆದ್ದು ಸೋತವರೂ ಉಂಟು. ಸೋಲು–ಗೆಲುವುಗಳು ಜೀವನಪರ್ಯಂತ ನಡೆಯುವ ಸಂಗತಿಗಳು. ಇವುಗಳ ಮೂಲವನ್ನು ಅರಿಯುವುದೂ ಸಹ ಜೀವನದ ಉದ್ದೇಶಗಳಲ್ಲಿ ಒಂದು. ಇದು ತೊಡಕಾಗಿ ಕಂಡಷ್ಟೂ ಜೀವನದಲ್ಲಿ ಜಂಜಾಟ ಹಾಗೂ ತೊಡಕುಗಳು ಹೆಚ್ಚು. ಮನುಷ್ಯ ಜೀವನದಲ್ಲಿ ಮೇಲೇರಬೇಕು. ಇದು ಆಕಾಂಕ್ಷೆ. ಸೋಲು–ಗೆಲವುಗಳ ಸಮ್ಮಿಳನದಿಂದ ಹಾಗೂ ಗೆಲವು ಹೆಚ್ಚಿದಂತೆ ಇಂಥ ಆಕಾಂಕ್ಷೆ ಈಡೇರಬಲ್ಲದು. ಇದೇ ಜೀವನದ ಆಟ.

ಯಾವುದೇ ಒಂದು ಆಟದಲ್ಲಿ, ಆಟಗಾರನು ಸಾಧ್ಯವಿರುವ ಅನೇಕ ಅವಕಾಶಗಳಲ್ಲಿ, ಒಂದು ಸಲಕ್ಕೆ ಒಂದು ಅವಕಾಶವನ್ನು ಮಾತ್ರ ಉಪಯೋಗಿಸಬೇಕಾಗುತ್ತದೆ. ಇದಕ್ಕೆ ತಂತ್ರವೆಂತಲೂ ಕರೆಯಬಹುದು. ಆದ್ದರಿಂದ ತಂತ್ರ ಎಂಬುದು ಆಟಗಾರನೊಬ್ಬ, ಒಂದು ಆಟದಲ್ಲಿ ನಿಯೋಜಿಸಿಕೊಳ್ಳಬಲ್ಲ ಪ್ರಕ್ರಿಯೆ. ಆಟವಾಡುವ ಪ್ರತಿಯೊಬ್ಬನಿಗೂ ಇಂಥ ತಂತ್ರಗಳು ಸಾಕಷ್ಟಿದ್ದು, ಒಂದು ಸಲಕ್ಕೆ ಒಂದನ್ನು ಮಾತ್ರ ಆಯ್ದುಕೊಳ್ಳಬೇಕಾಗುತ್ತದೆ. ಇದರಿಂದ ಆಟದ ಪರಿಣಾಮ ಹೀಗೆ ಆಗಬಹುದೆಂದು ನಿರ್ಧರಿಸುವುದು ಕಷ್ಟಸಾಧ್ಯ. ಅದಕ್ಕಾಗಿ ಅಲ್ಲಿನ ತೀವ್ರ ಪೈಪೋಟಿ ಎದುರಿಸಬೇಕೆಂದಾಗ ಆಟದ (ಬದುಕುವ) ಹೊಸ ತಂತ್ರಗಳನ್ನು ರೂಢಿಸಿಕೊಳ್ಳುತ್ತಲೇ ಇರಬೇಕಾಗುತ್ತದೆ. ಆಟದಲ್ಲಿ ಗೆಲ್ಲಬೇಕೆಂದರೆ ತಂತ್ರ, ಜಾಣ್ಮೆ ಹಾಗೂ ಆಯಕಟ್ಟಿನಿಂದ ಕೂಡಿರಬೇಕು. ಅಂದರೆ ಆಟವೂ ಸಹ ಸಮರ್ಥ ಲೆಕ್ಕಾಚಾರವನ್ನು ಹೊಂದಿರಬೇಕಾದದ್ದು ಅನಿವಾರ್ಯ.

ಆಟವನ್ನು ಹೀಗೆ ಲೆಕ್ಕಾಚಾರದ ಚೌಕಟ್ಟಿಗೆ ಒಳಪಡಿಸುವುದೇ ಕ್ರೀಡಾ ಸಿದ್ಧಾಂತ. ಇದು ಗಣಿತದ ಒಂದು ಶಾಖೆಯಾಗಿದ್ದು. ಹೋರಾಟಗಳ (ಕಾನ್‌ಫ್ಲಿಕ್ಟ್) ಅನೇಕ ಸಮಸ್ಯೆಗಳ ವಿಶ್ಲೇಷಣೆಯನ್ನು ಗಣಿತರೀತ್ಯಾ ಲೆಕ್ಕಾಚಾರ ಹಾಕಿ, ಪರಿಹಾರ ದೊರಕಿಸುವುದೇ ಇದರ ಮುಖ್ಯ ಉದ್ದೇಶ. ಈ ಅಭ್ಯಾಸಕ್ರಮ ಕೆಲವೊಂದು ಆಟಗಳನ್ನು ಅವಲಂಬಿಸಿ ಬೆಳೆಯುತ್ತದೆ.

ಚದುರಂಗ, ಪಗಡೆ, ಬ್ರಿಜ್ ಮುಂತಾದವುಗಳಿಗೆ ಯುಕ್ತಿಯ ಆಟಗಳು (ಗೇಮ್ಸ್ ಆಫ್ ಸ್ಟ್ರ್ಯಾಟಿಜಿ) ಎಂದು ಹೆಸರು. ಶತ್ರುವಿನ ಬಲವನ್ನೂ ಚಲನವಲನಗಳನ್ನೂ ಮುಂದಾಗಿಯೇ ಊಹಿಸಿ, ಸ್ವಂತ ಬಲವನ್ನು, ನೆಲವನ್ನು ಚೆನ್ನಾಗಿ ವಿವೇಚಿಸಿಕೊಂಡು, ದಳಗಳನ್ನು ಮುಂಚೂಣಿ ಪ್ರದೇಶಗಳಿಗೆ ಯುಕ್ತ ವೇಳೆಯಲ್ಲಿ ವಿತರಣೆ ಮಾಡುವ ಸಮರತಂತ್ರದ ಹೆಸರು ಯುಕ್ತಿ. ಇಂಥ ಒಂದು ಚಲನೆ ಯುಕ್ತಿಯ ನಡೆ (ಸ್ಟ್ರ್ಯಾಟೆಜಿಕ್ ಮೂವ್). ಯುಕ್ತಿಯ ಆಟದಲ್ಲಿ ಸಂಘರ್ಷಣೆಗಳು (ಕಾನ್‌ಫ್ಲಿಕ್ಟ್ಸ್) ತಲೆದೋರುತ್ತವೆ. ಆಟದ ನಿಯಮಗಳಿಗನುಸಾರವಾಗಿ ಆಟವಾಡಿದಾಗ ಇಂಥ ಘರ್ಷಣೆಗಳು ಸಹಜ. ಇಂಥ ಸನ್ನಿವೇಶಗಳ ಅಮೂರ್ತ ಮಾದರಿಗಳಿಗೆ (ಅಬ್‌ಸ್ಟ್ರ್ಯಾಕ್ಟ್ ಮಾಡೆಲ್ಸ್) ಗಣಿತ ವಿಶ್ಲೇಷಣೆಗಳನ್ನು ಅನ್ವಯಿಸಿ ಬೆಳೆಸಿದ ಸಿದ್ಧಾಂತಕ್ಕೆ 'ಕ್ರೀಡಾ ಸಿದ್ಧಾಂತ' (ಥಿಯರಿ ಆಫ್ ಗೇಮ್ಸ್) ಎಂದು ಹೆಸರು.

ಚದುರಂಗ, ಬ್ರಿಜ್ ಮುಂತಾದ ಆಟಗಳನ್ನು ಮೊದಲ ಬಾರಿಗೆ (1921) ಕ್ರೀಡಾಸಿದ್ಧಾಂತ ರೀತ್ಯಾ ವಿಶ್ಲೇಷಿಸಲಾಯಿತು. ಎಮಿಲಿ ಬೊರೆಲ್ ಎಂಬಾತ ಇದರ ಆದ್ಯ ಪ್ರವರ್ತಕ. ಮುಂದೆ 1928ರಲ್ಲಿ ಜಾನ್ ಫಾನ್ ನ್ಯೂಮೆನ್ ಹಾಗೂ ಆಸ್ಕರ್ ಮಾರ್ಗನ್‌ಸ್ಟನ್ ಎಂಬುವರು ಸ್ಪರ್ಧಾತ್ಮಕ ಆರ್ಥಿಕ ವರ್ತನೆಯನ್ನು (ಉದಾ: ಮಾರುಕಟ್ಟೆಯಲ್ಲಿನ ಆರ್ಥಿಕ ಚಟುವಟಿಕೆಗಳು) ಕ್ರೀಡಾಸಿದ್ಧಾಂತದ ಅನುಸಾರ ಅಭ್ಯಾಸಮಾಡಿ ಈ ಸಿದ್ಧಾಂತವನ್ನು ಭದ್ರವಾಗಿ ನೆಲೆಗೊಳಿಸಿದರು. ಈ ವಿಷಯವನ್ನು ಕುರಿತಂತೆ 1944ರಲ್ಲಿ ಒಂದು ಗ್ರಂಥವನ್ನು ಪ್ರಕಟಿಸಿದರು.

ಒಳಾಂಗಣ ಅಥವಾ ಹೊರಾಂಗಣದ ಆಟಗಳೇ ಆಗಲಿ, ಯುದ್ಧರಂಗದ ಆಯಕಟ್ಟಿನ ಪಡೆಗಳೇ ಆಗಲಿ, ಆರ್ಥಿಕ ಹಾಗೂ ಸಾಮಾಜಿಕ ವಿದ್ಯಮಾನಗಳೇ ಆಗಲಿ, ಅವುಗಳ ಹಿನ್ನೆಲೆಯಲ್ಲಿನ ಅಮೂರ್ತ ತತ್ತ್ವಗಳು ಮೂಲತಃ ಆಯಕಟ್ಟಿಗೆ (ಯುಕ್ತಿಗೆ) ಸಂಬಂಧಿಸಿದವುಗಳೇ ಆಗಿರುತ್ತವೆ ಎಂಬುದು ಸ್ಪಷ್ಟ. ಆದ್ದರಿಂದ ಕ್ರೀಡಾಸಿದ್ಧಾಂತ ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುತ್ತದೆ. ಅಂದಮಾತ್ರಕ್ಕೆ ನಾವು ಆಡುವ ಎಲ್ಲ ಆಟಗಳೂ ಕ್ರೀಡಾಸಿದ್ಧಾಂತದ ಸಂಪೂರ್ಣ ವಿಶ್ಲೇಷಣೆಗೆ ಒಳಪಡುತ್ತವೆ ಎನ್ನುವಂತಿಲ್ಲ. ಕಾರಣ, ಇಂಥ ಕಡೆ ಪರಿಗಣಿಸಬೇಕಾದ ಗಣನೆಗಳು ಬಹುಸಂಖ್ಯಾತವೂ, ಜಟಿಲವೂ ಆಗಿದ್ದು, ಅವುಗಳ ಕ್ರೋಡಿಕರಣ ಹಾಗೂ ವಿಶ್ಲೇಷಣೆ ಬಲು ಶ್ರಮದಾಯಕವಾಗುತ್ತದೆ. ಮುಖ್ಯ ಸಂಗತಿ ಎಂದರೆ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಮಾನವಿಕ ವಿಭಾಗದ ಶಾಸ್ತ್ರಗಳಲ್ಲಿ ಏಳುವ ಕ್ರೀಡಾಸದೃಶ ಸಮಸ್ಯೆಗಳಿಗೆ ಗಣಿತೋಪಕರಣದ ಅನ್ವಯವನ್ನು ಒದಗಿಸಿರುವುದು ಕ್ರೀಡಾಸಿದ್ಧಾಂತ.

ಚದುರಂಗ, ಇಸ್ಪೀಟ್ ಮುಂತಾದ ಒಳಾಂಗಣ ಆಟಗಳನ್ನು ಆಡಲು ಕೆಲವು ನಿರ್ದಿಷ್ಟ ವಿಧಿಗಳಿವೆ.

1. ಆಟವನ್ನು ಪ್ರಾರಂಭಿಸಲು ಬೇಕಾದ ಒಂದು ರೀತಿ ಇರಬೇಕು.

2. ಆಟದಲ್ಲಿ ಒದಗಬಹುದಾದ ಯಾವುದೇ ಸಮಸ್ಯಾತ್ಮಕ ಸನ್ನಿವೇಶವನ್ನು ಎದುರಿಸಲು ಕಾನೂನುರೀತ್ಯಾ ನಡೆಗಳಿರಬೇಕು.

3. ಪ್ರತಿಯೊಂದು ನಡೆಯನ್ನೂ ಹೇಗೆ ತೊಡಗಿಸಬೇಕೆಂಬ ಆಯ್ಕೆ ಮಾಡಲು ಆಟಗಾರರ ಪೈಕಿ ಒಬ್ಬನನ್ನು ಮಾತ್ರ ನಿಗದಿಗೊಳಿಸಬೇಕು; ಅಥವಾ ಈ ಆಯ್ಕೆಯನ್ನು ಒಂದು ಪ್ರಾಮಿಕತಾ ಸಾಧನೆಯಿಂದ (ಚಾನ್ಸ್ ಡಿವೈಸ್) ಮಾಡುವಂತಿರಬೇಕು. (ಉದಾ: ದಾಳಗಳನ್ನು ಉರುಳಿಸಿ ಸಂಖ್ಯೆಯನ್ನು ಪಡೆಯುವ ವಿಧಾನ)

4. ಕೆಲವು ಸಾಂತ ನಡೆಗಳ ತರುವಾಯ ಆಟ ಮುಕ್ತಾಯವಾಗಬೇಕು; ಮತ್ತು ವಿಜಯಿ ಯಾರೆಂದು ನಿರ್ಧರಿತವಾಗಬೇಕು.

ಈ ನಾಲ್ಕು ಅಥವಾ ತತ್ಸದೃಶ ಆದ್ಯುಕ್ತಿಗಳನ್ನು (ಆಕ್ಸಿಮ್ಸ್) ತೃಪ್ತಿಪಡಿಸುವ ಬೇರೆ ಯಾವುದೇ ಸಂಘಟ್ಟನ ಸನ್ನಿವೇಶವನ್ನೂ ಸಹ ಒಂದು ಆಟವೆಂದು ಪರಿಗಣಿಸಿ ಅದಕ್ಕೆ ಕ್ರೀಡಾಸಿದ್ಧಾಂತದ ವಿಶ್ಲೇಷಣೆಯನ್ನು ಅನ್ವಯಿಸಬಹುದು.

ತತ್ತ್ವಜ್ಞಾನಿಗಳೂ, ವರ್ತನ ವಿಜ್ಞಾನಿಗಳೂ ಬಹು ಕಾಲದಿಂದ ಪರಿಶೀಲಿಸುತ್ತಿದ್ದ ಹಲವಾರು ಸಮಸ್ಯೆಗಳಿಗೆ ಕ್ರೀಡಾಸಿದ್ಧಾಂತ ಒಂದು ಆಧಾರವನ್ನು ಒದಗಿಸಿದೆ. ಉದಾಹರಣೆಗೆ, ಸುಖೀ ರಾಜ್ಯದ ಕಲ್ಪನೆ, ಏಕಸ್ವಾಮ್ಯ ಸಿದ್ಧಾಂತ, ಗರಿಷ್ಠ ಮಂದಿಯ ಗರಿಷ್ಠ ಸುಖದ ಭಾವನೆ, ಸ್ವಲ್ಪ ಜನಸ್ವಾಮ್ಯ ಸ್ಪರ್ಧೆ ಇವೆಲ್ಲವೂ ಅದರ ಬೆಳಕಿನಲ್ಲಿ ನವೀಕೃತವೂ ಹೆಚ್ಚು ತೀವ್ರವೂ ಆದ ಪರೀಕ್ಷೆಗೆ ಒಳಗಾಗಿವೆ. ಗರಿಷ್ಠ ಸುಖದ ಭಾವನೆ ಸಂಭಾವ್ಯವಲ್ಲವೆಂಬುದನ್ನು ತೋರಿಸಲಾಗಿದೆ. ಅದರಂತೆ 'ಗರೀಬಿ ಹಟಾವೋ' ಕೂಡ ಸಾಧ್ಯವಿಲ್ಲ. ಏಕೆಂದರೆ ಕನಿಷ್ಠ–ಗರಿಷ್ಠ ತತ್ತ್ವ ಕಾರ್ಯಸಾಧ್ಯ. ಸಮಾಜವಿಜ್ಞಾನ ಹಾಗೂ ರಾಜ್ಯವಿಜ್ಞಾನಗಳಲ್ಲಿ ಹಳೆಯ ಸಮಸ್ಯೆಗಳ ವಿಶ್ಲೇಷಣೆಗೆ ಸಹಾಯಕವಾಗುವ ಮತ್ತು ಹೊಸ ವಿಶ್ಲೇಷಣೆಗಳನ್ನು ಹರಿತಗೊಳಿಸುವ ಮಾದರಿಗಳನ್ನು ರೂಪಿಸಲಾಗುತ್ತಿದೆ.

ಕ್ರೀಡಾಸಿದ್ಧಾಂತ ಮಾನವಿಕ ಶಾಸ್ತ್ರಗಳಲ್ಲಿ ಸಾಕಷ್ಟು ಪ್ರಾಧಾನ್ಯತೆ ಗಳಿಸುತ್ತಲಿದ್ದರೂ ಸಹ ದೈಹಿಕ ಶಿಕ್ಷಣದಲ್ಲಿ ಇನ್ನೂ ಅದಕ್ಕೆ ಅಂಥ ಮನ್ನಣೆ ಪ್ರಾಪ್ತವಾಗಿಲ್ಲ. ನಮ್ಮ ದೇಶೀಯ ಕ್ರೀಡೆಗಳನ್ನೂ ಸಹ ಇಂಥ ಸಿದ್ಧಾಂತಗಳ ಮೂಲಕ ವಿಶ್ಲೇಷಿಸಿ, ಹೊಸ ರೂಪ ಪಡೆಯುವಂಥ ಪ್ರಯತ್ನವಾಗಬೇಕಿದೆ. (ಕೆ.ಪಿ.)

**ಕ್ರೀಡೆಗಳು :** ಗೇಮ್ಸ್ ಎಂಡ್ ಸ್ಪೋರ್ಟ್ಸ್ ಎಂದರೆ ಆಟಗಳು ಹಾಗೂ ಮೇಲಾಟ ಎಂದರ್ಥ. ಇಲ್ಲಿ ಕ್ರೀಡೆ ಎಂದರೆ ವೈಯಕ್ತಿಕ ಸ್ಪರ್ಧೆ. ಆಟ ಎಂದರೆ ಗುಂಪುಸ್ಪರ್ಧೆ ಎಲ್ಲ ಆಟಗಳನ್ನು ಕ್ರೀಡೆ ಓಲಿಂಪಿಕ್ ಕ್ರೀಡೆ ಇತ್ಯಾದಿಗಳಲ್ಲಿ ಆಟ ಮೇಲಾಟಗಳೆರಡೂ ಇವೆ. ಆದ್ದರಿಂದ ಕ್ರೀಡೆಯನ್ನು ಸುಸಂಬದ್ಧ ಚೌಕಟ್ಟಿನ ಚಟುವಟಿಕೆಯಾಧಾರಿತ ವ್ಯವಸ್ಥೆ ಎಂದು ಹೇಳಬಹುದಾಗಿದೆ. ಕ್ರೀಡೆಯ ಮೂಲಾರ್ಥ ಮನೋಲ್ಲಾಸ ನೀಡುವದು ಎಂದಿದೆಯಾದರೂ ಸರ್ಕಾರಿ ಹೊರವಲಯ ಮುದ್ರಣಾಲಯ ತನ್ಮೂಲಕ ದೈಹಿಕ ಹಾಗೂ ಮಾನಸಿಕ ದಾರ್ಢ್ಯತೆಯನ್ನು ಬೆಳೆಸುವದೂ ಅಷ್ಟೆ ಮುಖ್ಯವಾಗಿದೆ. ಹೀಗಾಗಿ ಕ್ರೀಡೆ ಎಂಬ ಶಬ್ದವನ್ನು ಇಲ್ಲಿ ವಿಶಾಲಾರ್ಥದಲ್ಲಿ ಬಳಸಿಕೊಳ್ಳಲಾಗಿದೆ.

ದೇಹ, ಮನಸ್ಸು ಹಾಗೂ ಬುದ್ಧಿಗಳ ಸಹಯೋಗದಿಂದ ಮಾಡುವ ಪ್ರತಿಯೊಂದು ಕೌಶಲ್ಯಯುತವಾದ ಕಾರ್ಯವೂ ಕ್ರೀಡಾಚೌಕಟ್ಟಿನಲ್ಲಿಯೇ ಬರುತ್ತದೆ. ಕ್ರೀಡೆಯನ್ನು ಒಂದು ಕಲೆ, ವಿಜ್ಞಾನ, ಸಂಸ್ಕೃತಿ ಎಂದೂ ಕರೆಯಲಾಗಿದೆ. ನಮ್ಮ ನಾಗರಿಕತೆಯ ಹಾಗೂ ಸಂಸ್ಕೃತಿಯ ಮೂಲಬೇರನ್ನು ಕ್ರೀಡೆಗಳಲ್ಲಿ ಗುರುತಿಸಲಾಗಿದೆ.

ಕ್ರೀಡೆ ಮಾನವನಷ್ಟೇ ಪ್ರಾಚೀನ ಮಾನವನ ವಿಕಾಸವನ್ನು ಅವಲೋಕಿಸಿದಾಗ ಅವನು ತನ್ನ ಆಹಾರಕ್ಕಾಗಿ, ನೆಲೆಗಾಗಿ, ಒಟ್ಟಿನಲ್ಲಿ ಇರುವಿಕೆಗಾಗಿ ನಡೆಸುತ್ತಿದ್ದ ಹೋರಾಟದ ಅನಿವಾರ್ಯ ಚಟುವಟಿಕೆ ಹಿನ್ನೆಲೆಯಲ್ಲಿ ಕ್ರೀಡೆಯ ರೂಪವನ್ನು ಗುರುತಿಸಬಹುದಾಗಿದೆ. ಗವಿವಾಸಿಯಾಗಿದ್ದ ಈತ ಕೃಷಿ ಕಲಿತ. ಕಲ್ಲಿನ ಬದಲು ಬಿಲ್ಲು ಬಂತು ಗುರಿಮುಖ್ಯವಾಯಿತು.

ಕಾಲ ಉರುಳಿದಂತೆ ಗುಂಪುಗಳ ರಚನೆ ನಂತರ ಗುಂಪು ಗುಂಪಿನ ಮಧ್ಯ ಯುದ್ಧ ಅದಕ್ಕಾಗಿ ಯುದ್ಧ ಕೌಶಲ್ಯ, ಯುದ್ಧದಲ್ಲಿ ಆನೆ, ಕುದುರೆ ಸವಾರಿ, ಈಟಿ, ಬಿಲ್ಲು ಬಾಣಗಳ ಬಳಕೆ ಪ್ರಾರಂಭವಾದವು. ಯುದ್ಧಕ್ಕಾಗಿ ಕಿರಿಯರನ್ನು ಅಣಿಗೊಳಿಸಲು ತರಬೇತಿ ಅನಿವಾರ್ಯವಾಯಿತು. ಮಲ್ಲಯುದ್ಧ, ಕುದುರೆಸವಾರಿ, ಗುರಿಹೊಡೆಯುವ ಮುಂತಾದ ಒಂದೊಂದೇ ಕ್ರೀಡೆಗಳು ಸಾಕಾರಗೊಂಡವು.

ಆಗಿನ ಮಾನವನಿಗೂ ಮನರಂಜನೆ ಮುಖ್ಯವಾಗಿರಬೇಕು. ತನ್ನ ಇರುವಿಕೆಗೂ ಹೊಟ್ಟೆ ಹೊಡೆಯುವ ದುಡಿಮೆಗೂ, ಸಾಮಾಜಿಕ ಜೀವನದ ಅಗತ್ಯತೆಗೂ ಅನುಕೂಲವಾಗುವಂಥ ಕ್ರೀಡೆಗಳನ್ನು ಸೃಷ್ಟಿಸಿದ. ವಯಸ್ಕ ಜೀವನಕ್ಕೆ ಕಿರಿಯರನ್ನು ಅಣಿಗೊಳಿಸುವಂಥ ಆಟಗಳನ್ನು ಆಡಿದ. ತನ್ನ ಧಾರ್ಮಿಕ ಹಿನ್ನೆಲೆಯಲ್ಲೂ ಇಂಥ ಕ್ರೀಡೆಗಳ ಮೂಲಕ ಮನರಂಜನೆ ಪಡೆದಿರಬೇಕು.

ಕ್ರೀಡೆಗಳ ಇತಿಹಾಸವನ್ನು ಅವಲೋಕಿಸಿದಾಗ ಬಗೆ ಬಗೆಯ ಕ್ರೀಡೆಗಳು ಐದು ಸಾವಿರ ವರ್ಷಗಳ ಹಿಂದೆಯೇ ಕಂಡು ಬಂದಿವೆ. ಪ್ರಾಚೀನ ಈಜಿಪ್ಟಿನಲ್ಲಿ ಮಲ್ಲಯುದ್ಧ, ಅಂಗಸಾಧನೆ, ಭಾರ ಎತ್ತುವುದು ಚೆಂಡಾಟ, ಬೇಟೆ, ಮೀನು ಹಿಡಿಯುವುದು ಮುಂತಾದ ಕ್ರೀಡೆಗಳಿದ್ದವಂತೆ.

ಪ್ರಾಚೀನ ಗ್ರೀಸ್‌ನಲ್ಲಿ ಹೋಮರಿಕ್ ಯುಗ ಕ್ರೀಡೆಗಳ ದೃಷ್ಟಿಯಿಂದ ಪ್ರಧಾನವಾಗಿದೆ. ಇಲಿಯಡ್‌ನಲ್ಲಿ ವರ್ಣಿತವಾಗಿರುವಂತೆ ರಥಪಂದ್ಯ, ಮುಷ್ಟಿಯುದ್ಧ, ಕುಸ್ತಿ, ನೃತ್ಯ ಹಾಗೂ ನೀಳ ಈಟಿಗಳ ದ್ವಂದ್ವಯುದ್ಧಗಳಿದ್ದವು. ಗ್ರೀಕ್ ಶಾಲೆಗಳಲ್ಲಿ ಆಟ ಪಾಠಗಳೆರಡಕ್ಕೂ ಪ್ರಾಧಾನ್ಯತೆ ಇತ್ತು. ನಮ್ಮ ಮಕ್ಕಳು ಚಿಕ್ಕಂದಿನಿಂದಲೇ ಕ್ರಮಬದ್ಧ ಕ್ರೀಡೆಗಳಲ್ಲಿ ಹೆಚ್ಚಾಗಿ ಭಾಗವಹಿಸಬೇಕು. ಏಕೆಂದರೆ ಅವರ ಸುತ್ತಲೂ ಅಂಥ ವಾತಾವರಣವಿಲ್ಲದೆ ಹೋದರೆ ಅವರೆಂದೂ ಸದ್ವರ್ತನೆಯ ಗುಣಶೀಲ ನಾಗರಿಕರಾಗಿ ಬೆಳೆಯಲಾರರು ಎಂದು ತತ್ತ್ವವೇತ್ರ ಸಾಕ್ರೆಟಿಸ್ ಹೇಳಿದ್ದಾನೆ.

ರಾಮನಾಥನ್ ಕೃಷ್ಣನ್ (ಪದ್ಮಭೂಷಣ, ಟೆನ್ನಿಸ್–1967)

'ಸದೃಢ ದೇಹದಲ್ಲಿ ಸುಸಂಸ್ಕೃತ ಮನಸ್ಸು' ಎಂಬ ಖ್ಯಾತ ಹೇಳಿಕೆ ಪ್ಲೇಟೊನದು. ಗ್ರೀಕ್‌ರಿಗೆ ವಿರಾಮ ಹೆಚ್ಚು. ಅವರಿಗೆ ಸ್ನಾಯುಬಲ ಹಾಗೂ ವಿವೇಕಶಕ್ತಿಯನ್ನು ಬೆಳಸುವ ಚಪಲವಿತ್ತು. ಸಾಮರಸ್ಯವುಳ್ಳ ಪರಿಪೂರ್ಣ ವ್ಯಕ್ತಿತ್ವ ಸಾಧಿಸಲು ಅವರ ಯತ್ನಿಸಿದರು. ಪ್ರಾಚೀನ ಓಲಂಪಿಕ್ ಕ್ರೀಡೆಗಳನ್ನೂ ಸರ್ಕಾರಿ ಹೊರವಲಯ ಮುದ್ರಣಾಲಯ ರೂಪಿಸಿದರು.

ಉಳಿದ ಸಂಸ್ಕೃತಿಗಳಂತೆ ನಮ್ಮದೂ ಸರ್ಕಾರಿ ಹೊರವಲಯ ಮುದ್ರಣಾಲಯ ಪ್ರಾಚೀನ ವೈಭವ. ಸಿಂಧೂನದಿ ಸಂಸ್ಕೃತಿಯಲ್ಲಿ ಕ್ರೀಡೆಗಳಿಗೆ ಮಹತ್ವದ ಸ್ಥಾನವಿತ್ತೆಂದು ತಿಳಿದುಬರುತ್ತದೆ. ಈಜುಕೊಳ ಆಗಿನ ಕಾಲದಲ್ಲಿ ನಿರ್ಮಾಣವಾಗಿತ್ತೆಂಬುದು ಗಮನಾರ್ಹ. ಸುಮಾರು ನಾಲ್ಕುವರೆ ಸಾವಿರ ವರ್ಷಗಳ ಹಿಂದೆಯೇ ಈ ನೆಲದ ಮಕ್ಕಳು ಆಡುತ್ತಿದ್ದ ಆಟಿಗೆ ಲಭಿಸಿವೆ.

ವೇದಕಾಲದಲ್ಲಿ ಬೇಟೆ, ಕುದುರೆ ಹಾಗೂ ಆನೆ ಸವಾರಿ, ಮುಷ್ಟಿ ಯುದ್ಧ, ಬಿಲ್ಲುಗಾರಿಕೆ ಮುಂತಾದವುಗಳ ವರ್ಣನೆಯಿದೆ. ಅವರಿಗೆ ಅಹಾರ ವಿಜ್ಞಾನದ ಕ್ರಮವಾದ ಜ್ಞಾನವಿತ್ತಲ್ಲದೆ, ಗೊತ್ತಾದ ವಯಸ್ಸಿನವರೆಗೆ ಬ್ರಹ್ಮಚರ್ಯ ಪಾಲನೆ ಮಾಡುತ್ತಲಿದ್ದರು. ದೈಹಿಕ ಶ್ರಮ ಹಾಗೂ ದೇಹದಂಡನೆಗೆ ಆಗ ಪ್ರಾಮುಖ್ಯತೆ ಇತ್ತು.

ಕ್ರೀಡೆಗಳ ದೃಷ್ಟಿಯಿಂದ ಪುರಾಣಕಾಲವನ್ನು ಸ್ವರ್ಣಯುಗ ಎನ್ನಬಹುದು. ಬಿಲ್ಲುಗಾರಿಕೆ ಪ್ರಾಮುಖ್ಯವಾಗಿತ್ತು. ಮಲ್ಲಯುದ್ಧ, ಗಧಾಯುದ್ಧ, ಕತ್ತಿವರೆಸೆಗಳಷ್ಟೇ ಏಕೆ ಪಗಡಿ, ದೊಂಬರಾಟಗಳಂಥ ಕಸರತ್ತಿನ ಉಲ್ಲೇಖಗಳೂ ಇವೆ. ರಾಜಕುಮಾರರಿಗೆ ಗುರುಕುಲಗಳಲ್ಲಿ ದೈಹಿಕ, ಮಾನಸಿಕ ಹಾಗೂ ನೈತಿಕ ತಳಹದಿಯ ಶಿಕ್ಷಣವಿತ್ತು. ಯೋಗಸಾಧನೆ ಆವಶ್ಯವಾಗಿತ್ತು.

ನಾಲಂದಾದಲ್ಲಿ ಕ್ರೀಡಾಂಗಣವಿತ್ತು. ಅಲ್ಲಿ ಓಡಿದ ಸ್ಪರ್ಧೆ, ಈಟಿ ಎಸೆತ, ಬಿಲ್ಲುಗಾರಿಕೆ, ಕತ್ತಿವರೆಸೆ, ಈಜು ಸ್ಪರ್ಧೆಗಳು ನಡೆಯುತ್ತಿದ್ದವು. ಇಲ್ಲಿ ಯೋಗ, ಪ್ರಾಣಾಯಾಮ, ಸೂರ್ಯ ನಮಸ್ಕಾರಗಳನ್ನು ಕಲಿಸಲಾಗುತ್ತಿತ್ತು. ತಕ್ಷ ಶಿಲಾ ವಿಶ್ವವಿದ್ಯಾಲಯ ಸೈನಿಕ ಶಿಕ್ಷಣದಲ್ಲಿ ಪ್ರಧಾನವಾಗಿತ್ತು.

ಇದು ಪ್ರಾಚೀನ ಯುಗವಾಯಿತು. ಇನ್ನು ಮಧ್ಯಯುಗದಲ್ಲಿ ತಮ್ಮ ಅನುಕೂಲವನ್ನವಲಂಬಿಸಿ ವಿವಿಧ ಆಟಗಳನ್ನು ಆಡಿದರು. ಕೆಲವು ಕೈಬಿಟ್ಟು ಹೋದರೆ, ನೆಗೆತ, ಈಜು, ಕುಸ್ತಿ ಮುಂತಾದ ಕ್ರೀಡೆಗಳು ಭದ್ರವಾಗಿ ನೆಲೆಮೂರಿದವು. ಮುಂದೆ ಶ್ರೀಮಂತ ಹಾಗೂ ಬಲಹೀನ ವರ್ಗಗಳುಂಟಾದವು. ಆಗ ಸಾಮಾನ್ಯ ಕ್ರೀಡೆ ಹಾಗೂ ಶ್ರೀಮಂತರ ಹವ್ಯಾಸಿ ಕ್ರೀಡೆಗಳು ಬದಲಾದವು.

ಪ್ರ ಶ. 14–16ನೆಯ ಶತಮಾದಲ್ಲಿ ನವೋದಯದ ಗಾಳಿ ಬೀಸಿತು. ಜೀವನವೆಂದರೆ ಕೇವಲ ತ್ಯಾಗವಲ್ಲ. ಗುರಿ, ಭೋಗ, ಭಾಗ್ಯಗಳನ್ನು ಅನುಭವಿಸುವುದು ಎಂದ ತತ್ತ್ವಕ್ಕೆ ಜನ ತತ್ವ ಮತ್ತೊಮ್ಮೆ ಜಾರಿಗೆ ಬಂತು. ದೇಹಾರೋಗ್ಯ ಜೀವನಕ್ಕೆ ಆವಶ್ಯ ಎಂದು ಬಗೆಯಲಾಯಿತು. ಇಂಥ ಬದಲಾದ ಬದುಕು ಕ್ರೀಡೆಗಳ ಮೇಲೂ ಪರಿಣಾಮ ಬೀರಿತು. ಕಟ್ಟು ಹರಿದ ಚೇತನ ಆಟ ಓಟಗಳಲ್ಲಿ ಸಂತೋಷ ಪಡುವುದನ್ನು ತಡೆಯುವುದು ಯಾರಿಂದಲೂ ಆಗಲಿಲ್ಲ. ಔದ್ಯೋಗಿಕ ಕ್ರಾಂತಿ ತೀವ್ರಗೊಂಡಂತೆ ಕ್ರೀಡೆಗಳಲ್ಲೂ ಮಾರ್ಪಾಡು ಕಂಡುಬಂದು ಅವು ಸಾಮಾನ್ಯರ ಸ್ವತ್ತಾದುವು.

ಶಿಕ್ಷಣದಲ್ಲಿ ಕ್ರೀಡೆಗೆ ಸ್ಥಾನ ಪ್ರಾಪ್ತವಾಯಿತು. ಆಗಿನ ಶಿಕ್ಷಣವೇತ್ತರೂ ಸರ್ಕಾರಿ ಹೊರವಲಯ ಮುದ್ರಣಾಲಯ ಇದರ ಮಹತ್ವವನ್ನು ಗುರುತಿಸಿದರು. ರುಸೋ–ಹುಡುಗ ಮೊದಲ ವರ್ಷಗಳನ್ನು ಏನೂ ಮಾಡದೆ ಕಳೆಯುತ್ತಿದ್ದಾನಲ್ಲ ಎಂದು ನಿಮಗೆ ಕಸಿವಿಸಿ ಆಗುತ್ತಿದೆಯೇನು? ಅವನು ಸಂತೋಷ ವಾಗಿರುವದು ಸಾಮಾನ್ಯವೆ? ಜಿಗಿಯುತ್ತಾನೆ, ಆಡುತ್ತಾನೆ, ದಿನವೆಲ್ಲ ಓಡಾಡುತ್ತಾನೆ ಇದೇನು ಸಾಮಾನ್ಯವೇ? ಈಗಿನಷ್ಟು ಬಿಡುವಿಲ್ಲದ ಕಾಲ ಆತನ ಜೀವನದಲ್ಲಿ ಮುಂದೆಂದೂ ಬರುವದಿಲ್ಲ ಎಂದು ಹೇಳಿದ.

ಮಿಲ್ಖಾಸಿಂಗ್ (ಅರ್ಜುನ ಪ್ರಶಸ್ತಿ–ಓಟ)

ಮುಂದಿನ ಶತಮಾನದಲ್ಲಿ ರೂಸೋನ ವಿಚಾರ ಸರಣಿಯನ್ನು ಮುಂದುವರೆಸಿದವ ಕುಬರ್ತಿ ಪ್ರಾಚೀನ ಗ್ರೀಕ್‌ನ ದೃಢಚಿತ್ತ ದೃಢಕಾಯ ಆದರ್ಶದಿಂದ ಆಕರ್ಷಿತನಾದ ಆತ ಜಗತ್ತಿನ ಇತಿಹಾಸವನ್ನು ನಾಲ್ಕು ಸಂಪುಟಗಳಲ್ಲಿ ಬರೆದು, ಆಧುನಿಕ ಓಲಿಂಪಿಕ್ಸ್‌ನ ಪುನರುತ್ಥಾನಕ್ಕೆ ಕಾರಣನಾಗಿ ತಾನೇ ಇತಿಹಾಸದ ಒಂದು ಅಧ್ಯಾಯವಾದ.

ಕ್ರೀಡೆಗಳು ಮೊದಲಿಗಿಂತ ಈಗ ಹೆಚ್ಚು ಪ್ರಭಾವಶಾಲಿಗಳಾಗಿವೆ. ಕ್ರೀಡೆಯಲ್ಲಿನ ಪರಾಕ್ರಮ ದೇಶ ಹಾಗೂ ವ್ಯಕ್ತಿಯ ಘನತೆಯ ಪ್ರತೀಕವಾಗಿ ಜಗತ್ತಿನಾದ್ಯಂತ ಕಂಡುಬರುತ್ತಲಿದೆ. ದೇಶ ಹಾಗೂ ವಿದೇಶಗಳ ಜನರ ಸಂಪರ್ಕ ಹಾಗೂ ಸ್ನೇಹದ ಕೊಂಡಿಯಾಗಿದೆ. ಅಂತಾರಾಷ್ಟ್ರೀಯ ಸ್ನೇಹ ಹಾಗೂ ಸಾಂಸ್ಕೃತಿಕ ಸೌಹಾರ್ದತೆಗೆ ಹಾದಿಯಾಗಿದೆ. ಕ್ರೀಡೆಗಳು ಪ್ರತಿಯೊಬ್ಬರಲ್ಲೂ ಕನಸನ್ನು ಮೂಡಿಸುತ್ತಲಿದೆ. ಈ ಕುರಿತ ಕೆಲ ತಜ್ಞರ ಹೇಳಿಕೆಗಳನ್ನು ಗಮನಿಸೋಣ.

ಮಾರ್ಟಿನ್‌ರ ವಿಶ್ಲೇಷಣೆ– ಕ್ರೀಡೆಯಲ್ಲಿ ಭಾಗವಹಿಸುವ ರಾಷ್ಟ್ರ ತನ್ನ ಸಾಮಾಜಿಕ ಹಂತಗಳನ್ನು ಮೈಗೂಡಿಸಿಕೊಂಡ ಹಾಗೂ ಪ್ರಾಮುಖ್ಯತಾ ಪದ್ಧತಿ, ರಾಜಕೀಯ ಹಾಗೂ ಆರ್ಥಿಕ ಸಂಗತಿಗಳ ಸದೃಢತೆಯ ಅನೇಕ ಮುಖಗಳನ್ನು ತೋರಿಸಿಕೊಡುತ್ತದೆ ಎಂದಿದೆ.

ಕೋಜನ್ಸ್ ಹಾಗೂ ಸ್ಟಂಫ್ – ಕ್ರೀಡೆಗಳು ಒಂದು ದೇಶದ ಜನರ ಬದುಕು, ಕೆಲಸ ಹಾಗೂ ಯೋಚನೆಗಳನ್ನು ಅರ್ಥಮಾಡಿಕೊಳ್ಳುವ ಮೈಲುಗಲ್ಲು ಅಲ್ಲದೆ ಇವು ಒಂದು ದೇಶದ ಸಾಂಸ್ಕೃತಿಕ ಹಿನ್ನಲೆಯ ಮಾಪಕಗಳು ಎಂದಿದ್ದಾರೆ.

ಸಮಾಜತಜ್ಞ ಮ್ಯಾಕ್ಸ್ ವೇಬರ್ ಅವರಿಗೆ ಆಟ ಪ್ರಚಲಿತವಿದ್ದ ಐತಿಹಾಸಿಕ ಸಂಗತಿ ಒಂದು ಸಾಮಾಜಿಕ ಅದ್ಭುತವಾಗಿ ಕಂಡು ಬಂದಿದೆ.

ಸಿಮೆಲ್ ಅವರು ಕ್ರೀಡಾ ಚಟುವಟಿಕೆ ಗಳು ಜನರನ್ನು ಹೆಚ್ಚು ಪ್ರೌಢರನ್ನಾಗಿಸಲು ಪ್ರಮುಖ ಪಾತ್ರವಹಿಸುತ್ತವೆ. ಎಂದು ಹೇಳಿದ್ದಾರೆ.


ಫರೂಕ್ ಆರ್ ಖೋಡಿಯಾಜಿ (ಅರ್ಜುನ ಪ್ರಶಸ್ತಿ–ಟೇಬಲ್ ಟೆನ್ನಿಸ್, 1967)

ಮೀಡ್‌ರ ಪ್ರಕಾರ ಮಕ್ಕಳು ಆಟವಾಡುವುದನ್ನು ನೋಡಿದರೆ ಕ್ರೀಡೆಯು ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಕಾರಣ ಎನ್ನುವ ಸಂಗತಿಯ ವಿಶ್ಲೇಷಣೆಗೆ ಅರ್ಥ ಸಿಗುತ್ತದೆ ಎಂದಿದೆ.

ಎರ್ವಿನ್ ಸಾಫ್‌ಮನ್ ಕ್ರೀಡೆ ಎಂದರೆ ನಿರ್ದಿಷ್ಟ ಚಟುವಟಿಕೆಯುಳ್ಳ ಪದ್ಧತಿ (Situated activity system or focussed gathering) ಇಲ್ಲಿ ಪ್ರತಿ ಆಟಗಾರ ಹಾಗೂ ಅವನ ಪಾತ್ರ ಮತ್ತು ಆ ಕ್ರೀಡೆಯ ನಿಯಮ ಇವುಗಳ ಪರಸ್ಪರ ಸಂಬಂಧಗಳನ್ನು ಹೊಂದಿವೆ ಎನ್ನುತ್ತಾರೆ.

ಕ್ರೀಡೆಗಳು ಹೀಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮುಂತಾದ ಮೌಲ್ಯಗಳನ್ನು ಕ್ರೋಡಿಕರಿಸುತ್ತ ತನ್ನದೇ ಆದ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಲಿವೆ. ಹವ್ಯಾಸಿ ಸ್ವರೂಪದ ಇವು ವಾಣಿಜ್ಯೀಕರಣವೂ ಆಗುತ್ತಲಿವೆ. ವಿಜ್ಞಾನ ಹಾಗೂ ತಂತ್ರಜ್ಞಾನದ ನೆರವಿನಿಂದ ಕ್ರೀಡಾಸ್ಪರ್ಧೆಗಳು ತಮ್ಮ ಔನತ್ಯದೆಡೆಗೆ ಸಾಗುತ್ತಲಿವೆ. ಇದರೊಡನೆ ಉದ್ದೀಪನ ಮದ್ದುಗಳಂಥ ಪಿಡುಗು ಸಹ ಹರಡಿಕೊಳ್ಳುತ್ತಿರುವದು ವಿಷಾದನೀಯ. ಇದೇನೇ ಇದ್ದರೂ ಸಹ ಮಾನವನ ಮಹತ್ವಾಕಾಂಕ್ಷೆಯ ಕ್ರೀಡೆಗಳು ಇನ್ನೂ ಹೆಚ್ಚು ಸ್ಪರ್ಧಾತ್ಮಕವಾಗಲಿವೆ.

ಕ್ರೀಡಾಸಾಧನೆಯಲ್ಲಿ ಮಾನವನ ಅದಮ್ಯ ಚೇತನಕ್ಕೆ ಸಂಬಂಧಿಸಿದ ಸಂಗತಿಗಳು ಸ್ಫೂರ್ತಿದಾಯಕವಾಗಿವೆ. ಒಲಂಪಿಕ್ಸ್ ಕ್ರೀಡೆಗಳ ಇತಿಹಾಸದಲ್ಲಿ ಇಂಥ ಕೆಲ ಉದಾಹರಣೆಗಳನ್ನು ನೋಡಬಹುದು.


ಪ್ರವೀಣ್‌ಕುಮಾರ್ (ಅರ್ಜುನ ಪ್ರಶಸ್ತಿ–ಅಥ್ಲೆಟಿಕ್ಸ್) (1967)

ತನ್ನ ಸತತ ಪ್ರಯತ್ನದಿಂದ ಪುಟ್ಟ ಫಿನ್ಲೆಂಡ್‌ದೇಶ ಸ್ವರ್ಣ ಪದಕದ ಸಂಪಾದನೆಯಲ್ಲಿ ಅಮೆರಿಕಕ್ಕೆ ಸರಿದೊರೆ ಯಾಗುವಂತೆ ಮಾಡಿದ ಕ್ರೀಡಾಪಟು, ಪಾವೊನುರ್ಮ.

ಮಗುವಾಗಿದ್ದಾಗ ಪೋಲಿಯೋ ಪೀಡಿತನಾಗಿದ್ದು, ನಿಂತಲ್ಲಿಂದಲೇ ನೆಗೆಯುವ ಹೊಸ ವಿಧಾನ ರೂಢಿಸಿಕೊಂಡು; ನೆಗೆತ ಸ್ಪರ್ಧೆಗಳಲ್ಲಿ ಒಂದೇ ದಿನದಲ್ಲಿ ಮೂರು ಚಿನ್ನದ ಪದಕ ಸಂಪಾದಿಸಿದವ ರೇ ಯೂರಿ.

ಪಾದ್ರಿ ಜೀವನದಲ್ಲೂ ಕೋಲುಜಿಗಿತ ಮುಂದುವರೆಸಿ ವಾಲ್ಟಿಂಗ್ ವಿಕಾರ್ ಎನ್ನಿಸಿಕೊಂಡವ ಬಾಬ್ ರಿಚರ್ಡ್ಸ್.

ತರಬೇತಿ ಇಲ್ಲದೆ ಮ್ಯಾರಾಥಾನ್ ಓಡಿ ಸ್ವರ್ಣ ಗೆದ್ದವ, ವೇಗದ ಓಟಗಾರ ಮಾನವರೈಲು ಎಮಿಲಿ ಝಟೋಪೆಕ್.

ಯಾವ ತರಬೇತಿ ಇಲ್ಲದೆಯೇ ಸತತ ಪರಿಶ್ರಮದಿಂದ ಖ್ಯಾತ ಓಟಗಾರನಾಗಿ, ಜಗತ್ತನ್ನು ಮೂರು ಬಾರಿ ಸುತ್ತಿ ಬಂದಷ್ಟು ಓಡಿದವ ವ್ಲದಿಮಿರ್ ಕುಟ್ಸ್.

ಪಕ್ಕೆಲಬು ಮುರಿದು, ಎದೆಯಿಂದ ತೊಡೆಯತನಕ ಬ್ಯಾಂಡೇಜ್ ಕಟ್ಟಿಸಿಕೊಂಡಿದ್ದರೂ ಡಿಸ್ಕಸ್ ಎಸೆತದಲ್ಲಿ ಚಿನ್ನ ಪಡೆದವ ಆಲ್ ಆರ್ಟರ್.

ನಿಗ್ರೊ ಪಾದರಕ್ಷೆ ತಯಾರಕನ ಮಗನಾದ ಉದ್ದಜಿಗಿತದಲ್ಲಿ ನೂತನ ವಿಕ್ರಮ ಸ್ಥಾಪಿಸಿದಾತ ಬಾಬ್ ಬೀಮನ್.

ಒಮ್ಮೆ ಒಂಭತ್ತನೆಯವನಾದರೂ ಮುಂದಿನ ಸಲ ಪ್ರಥಮನಾದವರಾನ್ ಕ್ಲಾರ್ಕ್.

ತನ್ನ 40ನೆಯ ವಯಸ್ಸಿನಲ್ಲಿ ಮ್ಯಾರಾಥನ್ ಗೆದ್ದವ ಅಲ್ವಿನ್ ಸ್ಟೆನ್‌ರೋಸ್.

ಹತ್ತು ಸಾವಿರ ಮೀ. ಓಟದ ಸ್ಪರ್ಧೆಯಲ್ಲಿ ಬಿದ್ದರೂ, ಎದ್ದು ಓಡಿ ದಾಖಲೆ ಮಾಡಿದವ ಲಾಸ್ ವೈರನ್.

ಕಾಲು ಮುರಿದು ಮೂರು ವರ್ಷ ಆಸ್ಪತ್ರೆಯಲ್ಲಿದ್ದು, ಅಗಾಧ ಇಚ್ಛಾಶಕ್ತಿಯಿಂದ ಎತ್ತರಜಿಗಿತದಲ್ಲಿ ಸ್ವರ್ಣ ಪಡೆದವ ವಾಲೆರಿ ಭ್ರೂಮನ್.

ಕಳೆದ ಒಲಂಪಿಕ್ಸ್‌ನ ಹೆಪ್ಟಾಥ್ಲಾನ್ ಸ್ಪರ್ಧೆಯಲ್ಲಿ ಜಾವೆಲಿನ್ ಎಸೆತದಲ್ಲಿ ತೀವ್ರ ಸ್ನಾಯು ಸೆಳೆತದಿಂದ ಬಿದ್ದು ನಡೆಯಲೂ ಆಗದ ಸ್ಥಿತಿಯಲ್ಲಿ 800 ಮೀ. ಓಡಿದ ಕರ್ನಾಟಕ ಅಪ್ಪಟ ಗ್ರಾಮೀಣ ಪ್ರತಿಭೆ – ಜೆ.ಜೆ. ಶೋಭಾ.

ಇವು ಕೆಲವು ಮಾತ್ರ. ಪ್ರತಿಕೂಲ ಪರಿಸ್ಥಿತಿಯಲ್ಲೂ ಅದ್ಭುತ ಇಚ್ಛಾಶಕ್ತಿಯಿಂದ, ಅಸಾಧಾರಣ ಕ್ರೀಡಾ ಚೇತನಗಳಾಗಿರುವ ತಾರಾಮಂಡಲ ಬಹಳ ದೊಡ್ಡದು. ಕ್ರೀಡೆಯಲ್ಲಿನ ಮಾನಸಿಕ ದೃಢತೆಯ ಪ್ರಾಮುಖ್ಯತೆಯನ್ನು ಇವು ತೋರಿಸಿಕೊಡುತ್ತವೆ.

(ಎಂ.ಎನ್.ಎಚ್.;ಎಚ್.ಎಸ್.ಎಸ್.ಎನ್.;ಬಿ.ಎಲ್.ಆರ್.)

**ಕ್ರೀಯೊಡಾಂಟ** : ಕಾರ್ನಿವೋರ ಗಣಕ್ಕೆ ಸೇರಿದ ಒಂದು ಉಪಗಣ. ಸೀನೋಜೋಯಿಕ್ ಯುಗದ ಟರ್ಷಿಯರಿ ಅವಧಿಯ ಇಯೋಸೀನ್ ಮತ್ತು ಪೇಲಿಯೊಸೀನ್ ಕಲ್ಪಗಳಲ್ಲಿ ಜೀವಿಸಿದ್ದ ಮಾಂಸಾಹಾರಿ ಪ್ರಾಣಿಗಳನ್ನೊಳಗೊಂಡಿದೆ. ಈಗ ಸಂಪೂರ್ಣವಾಗಿ ನಿರ್ವಂಶವಾಗಿರುವ ಈ ಪ್ರಾಣಿಗಳು ಪಳೆಯುಳಿಕೆ ರೂಪದಲ್ಲಿ ಮಾತ್ರ ಸಿಕ್ಕಿವೆ. ಇಂದಿನ ಆಧುನಿಕ ಮಾಂಸಾಹಾರಿಗಳ ಪೂರ್ವಜಪ್ರಾಣಿಗಳು ಇವು ಎಂದು ಹೇಳಲಾಗಿದೆ. ಈ ಗಣದಲ್ಲಿ ಹಲವಾರು ಕುಟುಂಬಗಳಿದ್ದು ಇವು ಪರಸ್ಪರ ವ್ಯತ್ಯಾಶಗಳನ್ನು ಪ್ರದರ್ಶಿಸಿದರೂ ಎಲ್ಲಕ್ಕೂ ಸಮಾನವಾದ ಕೆಲವು ನಿಮ್ನ ಗುಣಲಕ್ಷಣಗಳಿದ್ದುವು. ಚಿಕ್ಕಗಾತ್ರದ ಮಿದುಳು, ಕಾರ್ಪಸಿನ ಸ್ಕ್ಯಾಫಾಯ್ಡ್ ಮತ್ತು ಲೂನಾರ್ ಮೂಳೆಗಳು ಪರಸ್ಪರ ಬೇರೆಯಾಗಿರುವುದು, ಎಲುಬಾಗಿಲ್ಲದ ಟಿಂಪ್ಯಾನಿಕ್ ಬುಲ್ಲ, ಕಾರ್ನೇಸಿಯಲ್ ಹಲ್ಲು ಇಲ್ಲದಿರುವುದು–ಇವು ಕೆಲವು ಲಕ್ಷಣಗಳು. ಕಾರ್ನೇಸಿಯಲ್ ಹಲ್ಲಿನ ಬದಲು ದವಡೆಯ ಉಳಿದ ಹಲ್ಲುಗಳು ಮಾಂಸಾಹಾರವನ್ನು ಹರಿಯಲು ಅನುಕೂಲವಾಗಿದ್ದುವು. ಕ್ರಿಯೊಡಾಂಟುಗಳು ಕೀಟಭಕ್ಷಕಗಳಿಗಿಂತ (ಇನ್ಸೆಕ್ಟಿವೋರ) ಹಲವಾರು ಲಕ್ಷಣಗಳಲ್ಲಿ ಭಿನ್ನವಾಗಿದ್ದು ತಮ್ಮ ದೊಡ್ಡ ಗಾತ್ರದ ಕೋರೆಹಲ್ಲುಗಳು, ಸ್ಥೂಲವಾದ ಮೂತಿ ಮತ್ತು ಬಲವಾದ ಜೈಗೊಮ್ಯಾಟಿಕ್ ಕಮಾನುಗಳುಳ್ಳ ದವಡೆಗಳಿಂದ ಆಧುನಿಕ ಕಾರ್ನಿವೋರ ಗುಂಪಿನ ಪ್ರಾಣಿಗಳನ್ನು ಹೆಚ್ಚು ಹೋಲುತ್ತಿದ್ದವು.

ಕ್ರಿಯೊಡಾಂಟ ಉಪಗಣವನ್ನು ಹಲವಾರು ಕುಟುಂಬಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಆರ್ಕ್ಟೊಸಯಾನಿಡೀ, ಆಕ್ಸೈಯೆನಿಡೀ, ಹೈಯನೊಡಾಂಟಿಡೀ ಮತ್ತು ಮೀಸೊನೈಕಿಡೀಗಳು ಮುಖ್ಯವಾದವು. ಆರ್ಕ್ಟೊಸಯಾನಿಡೀ ಕುಟುಂಬದ ಪ್ರಾಣಿಗಳು ಸರ್ವಭಕ್ಷಿಗಳಾಗಿದ್ದುವು. ಪೇಲಿಯೊಸೀನ್ ಮತ್ತು ಇಯೊಸೀನ್ ಕಲ್ಪಗಳ ಪೂರ್ವಾರ್ಧದಲ್ಲಿ ಜೀವಿಸಿದ್ದ ಇವು ಪ್ರಾಚೀನ ಗೊರಸುಳ್ಳ ಪ್ರಾಣಿಗಳನ್ನು ಬಹುವಾಗಿ ಹೋಲುತ್ತಿದ್ದುವು. ಆಕ್ಸೈಯೆನಿಡೀ ಕುಟುಂಬದವು ಪೇಲಿಯೊಸೀನ್ ಕೊನೆಯಲ್ಲಿ ಮತ್ತು ಇಯೊಸೀನಿನಲ್ಲಿ ಜೀವಂತವಾಗಿದ್ದುವು. ಮಾಂಸಹಾರಿಗಳಾದ ಇವುಗಳಲ್ಲಿ ಕೆಲವು ಆಧುನಿಕ ವುಲ್ವರೈನ್ ಪ್ರಾಣಿಯಂತೆ ಇದ್ದುವು (ಉದಾ: ಆಕ್ಸೈಯೀನ). ಪೇಲಿಯೊನಿಕ್ಟಿಸ್ ಎಂಬ ಪ್ರಾಣಿ ಆಧುನಿಕ ಹುಲಿಜಾತಿಯವುಗಳನ್ನು ಹೋಲುತ್ತದೆ. ಹೈಯನೊಡಾಂಟಿಡೀ ಕುಟುಂಬದ ಕ್ರೀಯೊಡಾಂಟುಗಳು ಉತ್ತರ ಅಮೆರಿಕ, ಯುರೋಪ್, ಏಷ್ಯ ಮತ್ತು ಆಫ್ರಿಕಗಳಲ್ಲೆಲ್ಲ ವ್ಯಾಪಿಸಿದ್ದುವು. ಇಯೊಸೀನ್ ಕಲ್ಪದ ಆದಿ ಮತ್ತು ಮಧ್ಯಭಾಗ ಇವುಗಳ ಕಾಲ. ಸೈನೋಪ, ಪ್ರೋವೈವೆರ ಮುಂತಾದ ಪ್ರಭೇದಗಳ ದೇಹ ಮತ್ತು ಕಾಲುಗಳ ಗಾತ್ರ ಆಧುನಿಕ ಸಿವೆಟ್ ಬೆಕ್ಕುಗಳಲ್ಲಿ ಈಗ ಇರುವಂತೆಯೆ ಇತ್ತು. ಬಾಲ ಮಾತ್ರ ಹೆಚ್ಚು ಉದ್ದ ಮತ್ತು ಭಾರ. ಲಿಮ್ನೊಸಯಾನ್ ಎಂಬುದು ಆಕಾರ, ಹಲ್ಲು ಮತ್ತು ನಡತೆಗಳಲ್ಲಿ ಆಧುನಿಕ ವೀಸಲ್ ಮತ್ತು ಮಾರ್ಟನುಗಳಂತೆಯೆ ಇತ್ತೆಂದು ಹೇಳಲಾಗಿದೆ. ಈ ಕುಟುಂಬದ ಪ್ರಭೇದಗಳ ವ್ಯಾಪ್ತಿ ಇಯೊಸೀನ್ ಮತ್ತು ಆಲಿಗೊಸೀನ್ ಕಲ್ಪಗಳಲ್ಲಿ ಅತಿ ಹೆಚ್ಚಾಗಿದ್ದುದಲ್ಲದೆ ಕೆಲವು ಆಫ್ರಿಕದಲ್ಲಿ ಮಯೊಸೀನ್ ಕಲ್ಪದಲ್ಲೂ ಭಾರತದಲ್ಲಿ ಪ್ಲಿಯೊಸೀನ್ ಕಲ್ಪದಲ್ಲೂ ಜೀವಿಸಿದ್ದುವು. ಮೀಸೊನೈಕಿಡೀ ಕುಟುಂಬದವು ವಿಚಿತ್ರ ರೀತಿಯಲ್ಲಿ ಮಾರ್ಪಾಡಾಗಿದ್ದುವು. ಇವುಗಳ ದವಡೆ ಹಲ್ಲುಗಳು ಮೊಂಡಾಗಿದ್ದವು; ಬಹುಶಃ ಗಟ್ಟಿಯಾದ ಚಿಪ್ಪುಗಳನ್ನು ಪುಡಿ ಮಾಡುವುದಕ್ಕೋ ರಂಧ್ರ ಮಾಡುವುದಕ್ಕೋ ಈ ಹಲ್ಲುಗಳನ್ನು ಉಪಯೋಗಿಸಿರಬಹುದು. ಮುಸುಡಿಯೂ ದವಡೆಗಳೂ ಉದ್ದವಾಗಿದ್ದುವು. ಕೆಲವಕ್ಕೆ ಕಾಲು ಮತ್ತು ಬೆರಳುಗಳು ನೀಳವಾಗಿದ್ದು ಓಡುವುದಕ್ಕೆ ಅನುಕೂಲವಾಗಿದ್ದುವು. ಇವುಗಳಲ್ಲಿ ಕೆಲವು ಕರಡಿಯಷ್ಟು ಭಾರಿ ಗಾತ್ರದವಾಗಿದ್ದುವು. ಇವಕ್ಕೆ ಉಗುರಿನ ಬದಲು ತಟ್ಟೆಯಾದ ಗೊರಸುಗಳಿದ್ದುವು. ಇವು ಇಯೊಸೀನ್ ಕಾಲದಲ್ಲಿ ಉತ್ತರ ಅಮೆರಿಕದ ಪಶ್ಚಿಮ ಭಾಗದಲ್ಲಿಯೂ ಪಶ್ಚಿಮ ಯುರೋಪು ಮತ್ತು ಮಧ್ಯ ಏಷ್ಯದಲ್ಲಿಯೂ ವಾಸಿಸುತ್ತಿದ್ದುವು. ಈ ಕುಟುಂಬದ ಕ್ರಿಯೊಡಾಂಟುಗಳು ಆಗಿನ ಕಾಲದ ಅತಿ ದೊಡ್ಡಗಾತ್ರದ ಮಾಂಸಾಹಾರಿಗಳಾಗಿದ್ದುವು. ಉದಾಹರಣೆಗೆ ಮಂಗೋಲಿಯದಲ್ಲಿ ಇಯೊಸೀನ್ ಕಲ್ಪದ ಉತ್ತರಾರ್ಧದಲ್ಲಿ ಜೀವಿಸಿದ್ದ ಆಂಡ್ರೂ ಸಾರ್ಕಸ್ ಎಂಬ ಪ್ರಾಣಿಯ ತಲೆಬುರುಡೆ 3' ಉದ್ದ ಇತ್ತು. (ಎಸ್.ಎನ್.ಕೆಯು.)

**ಕ್ರೀಸಸ್ :** ಲಿಡಿಯ ದೇಶದ ಕೊನೆಯ ದೊರೆ. ಆಳ್ವಿಕೆಯ ಕಾಲ ಪ್ರ.ಶ.ಪೂ. 560–546. ಏಷ್ಯ ಮೈನರಿನ ಬಹುಭಾಗ ಇವನ ಆಳ್ವಿಕೆಗೆ ಸೇರಿತ್ತು. ಈತ ಮಹಾ ಐಶ್ವರ್ಯವಂತ. ಗಣಿಗಳಲ್ಲೂ ಪ್ಯಾಕ್ಟೊಲುಸ್ ನದಿಯಲ್ಲೂ ದೊರೆಯುತ್ತಿದ್ದ ಚಿನ್ನದ ಅದಿರುಗಳಿಂದ ಯಥೇಚ್ಛವಾಗಿ ಧನ ಗಳಿಸಿದ್ದ. ಆ ಕಾಲದಲ್ಲಿ ಇವನಿಗಿಂತ ಹೆಚ್ಚಿನ ಐಶ್ವರ್ಯವಂತ ದೊರೆ ಮತ್ತಾರೂ ಇರಲಿಲ್ಲವೆಂಬುದೇ ಇವನ ಖ್ಯಾತಿಗೆ ಕಾರಣವಾಯಿತು. ಇವನ ಕಾಲದಲ್ಲಿದ್ದ ಈಜಿಪ್ಟಿನ ದೊರೆ ಅಮಾಸಿಸ್ ಮತ್ತು ಕ್ಯಾಲ್ಡೀಯದ ನಬೊಪೊಲಸ್ಸರ್ ಇವನನ್ನು ಗೌರವಿಸುತ್ತಿದ್ದರು. ಮಿಡಿಯದ ದೊರೆಯೂ ತನ್ನ ಭಾವನೂ ಆಗಿದ್ದ ಅಸ್ಟ್ಯಾಜಿಸನನ್ನು ಪರ್ಷಿಯದ ಚಕ್ರವರ್ತಿ ಸೈರಸ್ ಕೊಂದು ಹಾಕಿದ್ದರಿಂದ ಅವನ ಮೇಲೆ ಸೇಡು ತೀರಿಸಿಕೊಳ್ಳಲೆಳಸಿ ಹೂಡಿದ ಯುದ್ಧದಲ್ಲಿ ಈತ ನಿಧನ ಹೊಂದಿದನೆಂದು ಕಾಣುತ್ತದೆ. ಆಗ ಇವನು ಸಾಯಲಿಲ್ಲವೆಂದೂ ಬಹುಶಃ ಅನಂತರದ ಕಾಲದಲ್ಲಿ ಸೈರಸ್ ಮತ್ತು ಕ್ಯಾಂಬೆಸಿಸನ ಸಲಹೆಗಾರನಾಗಿದ್ದಂತೆಯೂ ಮತ್ತೆ ಕೆಲವು ಮಾಹಿತಿಗಳಿಂದ ತಿಳಿದುಬರುತ್ತದೆ. ಇವನು ಹದಿನಾಲ್ಕು ವರ್ಷ ರಾಜ್ಯವಾಳಿದ. ಕೊನೆಗೆ ಇವನ ರಾಜ್ಯ ಪರ್ಷಿಯನರ ಕೈ ಸೇರಿತು. (ಕೆ.ಜಿ.)

**ಕ್ರುಶ್ಚಾಫ್, ನಿಕಿತ ಸೆರ್ಗೆವಿಚ್ :** 1894–1971. ಸೋವಿಯೆತ್ ರಾಜಕಾರಣಿ, ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿ (1953–64) ಮತ್ತು ಸೋವಿಯೆತ್ ಒಕ್ಕೂಟದ ಪ್ರಧಾನಿ (1958–64). ರಷ್ಯ ಮತ್ತು ಉಕ್ರೇನ್‍ಗಳ ಎಲ್ಲೆಯಲ್ಲಿ, ಕುರ್ಸ್ಕ್ ಪ್ರಾಂತ್ಯದ ಕಾಲಿನೋವ್ಕ್‍ನಲ್ಲಿ ರಷ್ಯದ ಗಣಿ ಕೆಲಸಗಾರನೊಬ್ಬನ ಮಗನಾಗಿ ಹುಟ್ಟಿದ. ಬಾಲ್ಯದಲ್ಲಿ ವಿದ್ಯಾಭ್ಯಾಸವಿಲ್ಲದೆ ಕುರಿಗಳನ್ನು ಕಾಯ್ದ. ತರುಣನಾದ ಮೇಲೆ ಯಂತ್ರಾಗಾರಗಳಲ್ಲಿ, ಗಣಿಗಳಲ್ಲಿ ದುಡಿದ; ದಕ್ಷ, ಬುದ್ಧಿವಂತ ಎಂದು ಹೆಸರು ಗಳಿಸಿದ. ಉಚ್ಚ ವೃತ್ತಿ ಶಿಕ್ಷಣ ಮತ್ತು ರಾಜಕೀಯ ಶಿಕ್ಷಣ ಪಡೆಯಲು ಈತ ಆಯ್ಕೆ ಹೊಂದಿ ಅವುಗಳ ಲಾಭ ಪಡೆದ. 1917ರ ಕ್ರಾಂತಿಯ ಸಮಯದಲ್ಲಿ ಯುಜ್ಹೋವ್ಕ ಪ್ರಾಂತ್ಯದ ರೆಡ್ ಗಾರ್ಡ್ಸ್ ಪಡೆ ಸೇರಿದ. 1918ರಲ್ಲಿ, ಸಾಮಾನ್ಯ ಸದಸ್ಯನಾಗಿ ಕಮ್ಯೂನಿಸ್ಟ್ ಪಕ್ಷವನ್ನು ಸೇರಿದ ಸುಮಾರು ಇಪ್ಪತ್ತು ವರ್ಷಗಳ ದುಡಿಮೆಯಿಂದಾಗಿ ಪಕ್ಷದಲ್ಲಿ ಈತನ ಪ್ರಭಾವ ಬೆಳೆಯಿತು. ಅಂದಿನ ರಷ್ಯದ ಅತ್ಯಂತ ಬಲಿಷ್ಠ ವ್ಯಕ್ತಿ ಸರ್ವಾಧಿಕಾರಿ ಸ್ಟಾಲಿನನ ಮೆಚ್ಚುಗೆಗೆ ಪಾತ್ರನಾದ. 1938ರಲ್ಲಿ ಉಕ್ರೇನಿನ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿ ಸ್ಥಾನ ಇವನಿಗೆ ದೊರಕಿತು. 1939ರ ಮಾರ್ಚ್ ತಿಂಗಳಲ್ಲಿ ಪಕ್ಷದ ಅತ್ಯುನ್ನತ ಕಾರ್ಯಮಂಡಲಿಯ ಸದಸ್ಯತ್ವವೂ ಇವನ ಪಾಲಿಗೆ ಬಂದು, ಪಕ್ಷದ ಗಣ್ಯ ವ್ಯಕ್ತಿಗಳಲ್ಲಿ ಈತ ಸೇರುವಂತಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಉಕ್ರೇನಿನಲ್ಲಿ ಪಕ್ಷದ ಮತ್ತು ಸರ್ಕಾರದ ನಾಯಕನಾಗಿದ್ದು ಸ್ಟಾಲಿನ್‍ಗ್ರಾಡಿನ ರಕ್ಷಣೆಯ ವ್ಯವಸ್ಥೆ ಮಾಡಿದ್ದೇ ಅಲ್ಲದೆ, ಯುದ್ಧಾನಂತರ ಜರ್ಮನ್ ಸೈನ್ಯಗಳು ವಾಪಸಾದಾಗ ಅಲ್ಲಿಯ ಪಕ್ಷದ ಮತ್ತು ಸರ್ಕಾರದ ಕಾರ್ಯಗಳನ್ನು ನಿರ್ವಹಿಸಿದ. 1952ರಲ್ಲಿ ಪಕ್ಷದ ಅಧ್ಯಕ್ಷ ಮಂಡಲಿ ರೂಪುಗೊಂಡಾಗ ಅದರ ಸದಸ್ಯತ್ವವೂ ಇವನಿಗೆ ಲಭಿಸಿತು.

1953ರಲ್ಲಿ ಸ್ಟಾಲಿನನ ಸಾವು ಸಂಭವಿಸಿತು. ಅದರ ಪರಿಣಾಮವಾದ ರಾಜಕೀಯ ಬದಲಾವಣೆಗಳಲ್ಲಿ ಕ್ರುಶ್ಚಾಫ್ ಪಕ್ಷದ ಅತ್ಯಂತ ಪ್ರಭಾವಶಾಲಿ ಸ್ಥಾನವಾದ ಪ್ರಥಮ ಕಾರ್ಯದರ್ಶಿ ಪದವಿಗೇರಿದ. ಹೊಸ ಹೊಸ ಕಾರ್ಯಕ್ರಮ ಮತ್ತು ಕಾರ್ಯನೀತಿ ಮಂಡಿಸಿದ. ಇದರಿಂದಾಗಿ ಇತರ ನಾಯಕರೊಡನೆ ಘರ್ಷಣೆ ಉಂಟಾಯಿತು. ದೀರ್ಘಕಾಲದ ಹೋರಾಟದ ಅನಂತರ ಕ್ರುಶ್ಚಾಫನ ಕೈಮೇಲಾಯಿತು. 1958ರ ಮಾರ್ಚ್ ತಿಂಗಳಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯ ಜೊತೆಗೆ ರಾಷ್ಟ್ರದ ಪ್ರಧಾನಿಯೂ ಆದ. ಸುಮಾರು ಆರೂವರೆ ವರ್ಷಗಳ ಕಾಲ ಈ ಎರಡೂ ಅಧಿಕಾರಗಳನ್ನು ತನ್ನ ಕೈಯಲ್ಲಿಟ್ಟುಕೊಂಡು, ಜಗತ್ತಿನ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬನಾಗಿ ಬಾಳಿದ; ಆದರೂ 1964ರ ಅಕ್ಟೋಬರ್ 15ರಂದು ವಿರೋಧಿಗಳಿಗೆ ಮಣಿದು ತನ್ನ ಅಧಿಕಾರ ಸ್ಥಾನಗಳಿಂದ ಕೆಳಗಿಳಿಯಬೇಕಾಯಿತು. 1971ರ ಸೆಪ್ಟೆಂಬರ್ 11ರಂದು ಕ್ರುಶ್ಚಾಫ್ ನಿಧನನಾದ.

ಕ್ರುಶ್ಚಾಫನ ಯೋಜನೆಗಳೂ ಸಾಧನೆ ಗಳೂ ಗಣನೀಯವಾದವು; ಕೆಲವು ದೃಷ್ಟಿಗಳಿಂದ ಕ್ರಾಂತಿಕಾರಕವಾದವು ಕೂಡ. ಇವನು ದಕ್ಷ ವ್ಯವಸ್ಥಾಪಕನೂ ಕಾರ್ಯ ಸಾಧಕನೂ

ಆಗಿದ್ದ. ಆದರೂ ಅವನ ಕೆಲವು ಯೋಜನೆಗಳು–ಮುಖ್ಯವಾಗಿ ವ್ಯವಸಾಯೋತ್ಪಾದನೆ ಹೆಚ್ಚಿಸುವ ಕಾರ್ಯಕ್ರಮ–ವಿಫಲವಾದ್ದು ಇವನ ವಿರೋಧಿಗಳ ಕೈ ಬಲಪಡಿಸಿತೆಂದರೆ ತಪ್ಪಲ್ಲ.

ತನ್ನ ಹಿಂದೆ ಸ್ಟಾಲಿನನ ಕಾಲದಿಂದ ಬೆಳೆದು ಬಂದಿದ್ದ ರಾಜಕೀಯ ಭಯಗ್ರಸ್ತತೆಯಿಂದ ಜನತೆಯನ್ನು ಪಾರು ಮಾಡಲೂ ಜನರ ಉಪಯೋಗಕ್ಕಾಗಿ ದಿನಬಳಕೆಯ ವಸ್ತುಗಳನ್ನೂ ವಾಸದ ಮನೆಗಳನ್ನೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಒದಗಿಸಲೂ ಕ್ರುಶ್ಚಾಫ್ ನಿಷ್ಠೆಯಿಂದ ಪ್ರಯತ್ನಿಸಿದ. ಆಕಾಶಯಾನ ಮತ್ತು ಸಂಶೋಧನೆಯ ರಂಗದಲ್ಲಿ ಸೋವಿಯೆತ್ ದೇಶ ವಿಶ್ವ ದಾಖಲೆಗಳನ್ನು ಸ್ಥಾಪಿಸಿದ್ದು ಇವನು ಪ್ರಧಾನಿಯಾಗಿದ್ದ ಕಾಲದಲ್ಲಿ.

ಸೋವಿಯೆತ್ ವಿದೇಶಾಂಗ ನೀತಿಗೆ ಅಂಟಿಕೊಂಡಿದ್ದ ಏಕಾಕಿತನವನ್ನು ಕಳೆದು, ಇತರ ರಾಷ್ಟ್ರಗಳೊಡನೆ ಸಹಬಾಳ್ವೆ ನಡೆಸುವ ಆವಶ್ಯಕತೆಯನ್ನು ಮನಗಂಡು, ಆ ನೀತಿಗೆ ಪೋಷಕವಾಗಿ ಪ್ರವಾಸ ಸಂಧಾನಾದಿಗಳನ್ನು ಕೈಗೊಂಡ ಕೀರ್ತಿ ಇವನಿಗೆ ಸಲ್ಲುತ್ತದೆ.

ಕ್ರುಶ್ಚಾಫ್ ಒಳ್ಳೆಯ ಮಾತುಗಾರ ; ವಿನೋದಪ್ರಿಯ, ಹತ್ತು ಜನರ ಕೂಟದಲ್ಲಿ ಸಂತೋಷವಾಗಿ ಕಾಲ ಕಳೆಯುವುದರಲ್ಲಿ ಅವನಿಗೆ ಆಸಕ್ತಿಯಿತ್ತು. ಇಂಥ ಸಂದರ್ಭಗಳಲ್ಲಿ ಅವನು ಸರಸವಾಗಿರುತ್ತಿದ್ದ. ಥಟ್ಟನೆ ಅವನಿಗೆ ಕೋಪವೂ ಬರುತ್ತಿತ್ತು. ಆಗ ಇವನ ಮಾತು, ನಡೆವಳಿಕೆ ಎರಡೂ ಒರಟು ಎನ್ನುವಷ್ಟು ಉಗ್ರವಾಗಿರುತ್ತಿದ್ದುವು.

(ಎಂ.ಎನ್.ಸಿಎಚ್.; ವಿ.ಆರ್.ಎಚ್.)

**ಕ್ರೂಕ್ಸ್, ಸರ್ ವಿಲಿಯಂ :** 1832–1919. ಇಂಗ್ಲೆಂಡಿನ ರಸಾಯನ ಮತ್ತು ಭೌತ ವಿಜ್ಞಾನಿ. ಥಾಲಿಯಂ ಧಾತುವಿನ ಆವಿಷ್ಕರಣಕಾರ. ಜನನ ಲಂಡನ್ನಿನಲ್ಲಿ 1832ರ ಜೂನ್ 17ರಂದು. ರಸಾಯನ ವಿಜ್ಞಾನದ ರಾಯಲ್ ಕಾಲೇಜನ್ನು ಸೇರಿ ಅಲ್ಲಿ ಫಾನ್ ಹಾಫ್‍ಮನ್ ಎಂಬಾತನ ಸಹಾಯಕನಾದ (1848). ಆಕ್ಸ್‍ಫರ್ಡಿನಲ್ಲಿರುವ ರ್ಯಾಡ್‍ಕ್ಲಿಫ್ ವೀಕ್ಷಣಾಲಯದಲ್ಲಿ ಪವನವಿಜ್ಞಾನದ ಕಾರ್ಯನಿರ್ವಾಹಕ ನಾದದ್ದು 1854ರಲ್ಲಿ. ಮುಂದಿನ ವರ್ಷ (1855) ಚೆಸ್ಟರ್ ನಗರದಲ್ಲಿ ರಸಾಯನ ವಿಜ್ಞಾನದ ಪ್ರಾಧ್ಯಾಪಕನಾದ. 1856ರಲ್ಲಿ ಮದುವೆಯಾದ ತರುವಾಯ ಕ್ರೂಕ್ಸ್ ಲಂಡನ್ ವಾಸಿಯಾಗಿ ತನ್ನ ಪೂರ್ತಿ ಕಾಲವನ್ನು ಸಂಶೋಧನೆಗಳಿಗೋಸ್ಕರ ಮೀಸಲಿಟ್ಟ. ಮನೆಯಲ್ಲೇ ಒಂದು ಸ್ವಂತ ಪ್ರಯೋಗಾಲಯವೂ ಈತನಿಗೆ ಇತ್ತು.

1861ರಲ್ಲಿ ಕ್ರೂಕ್ಸ್ ಸಲ್ಫ್ಯೂರಿಕ್ ಆಮ್ಲವನ್ನು ತಯಾರಿಸಿ ಮಿಗುವ ಅದಿರಿನ ಉಳಿಕೆ ವಸ್ತುವಿನ ಮೇಲೆ ಪ್ರಯೋಗಗಳನ್ನು ಮಾಡಿ ರೋಹಿತದ ಪರಿಶೀಲನೆಯಿಂದ ಥಾಲಿಯಂ ಎಂಬ ಧಾತುವನ್ನು ಆವಿಷ್ಕರಿಸಿದ. ಇದರ ಗುಣಗಳನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ

ನಡೆಸಿದ ಸಂಶೋಧನೆಗಳ ಫಲವಾಗಿ ಈತ ವಿಕಿರಣಪಟುತ್ವ ಮಾಪಕಗಳನ್ನು ನಿರ್ಮಿಸಬೇಕಾಯಿತು (1875–77). ಅಲ್ಪಸಂಮರ್ದ ಅನಿಲಗಳ ಮೇಲೆ ವಿದ್ಯುತ್ತನ್ನು ವಿಸರ್ಜನೆ ಮಾಡಿದಾಗ ಆಗುವ ಪರಿಣಾಮಗಳ ಮೇಲೆ ಸಂಶೋಧನೆ ನಡೆಸಿ ಈಗ ಈತನ ಹೆಸರಿನಿಂದ ಕರೆಯಲ್ಪಡುವ ಕ್ರೂಕ್ಸನ ಕತ್ತಲೆಯ ಜಾಗವನ್ನು ಗಮನಿಸಿದ. ಅಧೋವಾಟ (ಕ್ಯಾಥೋಡ್) ಕಿರಣಗಳನ್ನು ಪರಿಶೀಲಿಸಲು ಹಲವಾರು ಸಲಕರಣೆಗಳನ್ನು ನಿರ್ಮಿಸಿದ (**ನೋಡಿ– ಅಧೋವಾಟ-ಕಿರಣಗಳು**). ಇಂಥ ವಿಸರ್ಜನ ಕೊಳವೆಯನ್ನು ಉಪಯೋಗಿಸಿಯೇ ಜರ್ಮನ್ ಭೌತವಿಜ್ಞಾನಿ ರಂಟ್‍ಗೆನ್ ಎಕ್ಸ್ ಕಿರಣಗಳನ್ನು 1895ರಲ್ಲಿ ಕಂಡು ಹಿಡಿದದ್ದು. ರೇಡಿಯಮನ್ನು ಕ್ಯೂರಿ ದಂಪತಿಗಳು ಆವಿಷ್ಕರಿಸಿದ ಮೇಲೆ ಅದರ ಗುಣಗಳ ಪರಿಶೀಲನೆ ಕ್ರೂಕ್ಸ್‌ನ ಆಸಕ್ತ ವಿಷಯವಾಯಿತು. ಆಗ ಈತ ಸ್ಫುರಣದರ್ಶಕವನ್ನು (ಸಿನ್‍ಥಾರಿ ಸ್ಕೋಪ್) ರಚಿಸಿದ. ಈ ದರ್ಶಕದ ನೆರವಿನಿಂದ ಅತ್ಯಲ್ಪ ಪರಿಮಾಣದ ರೇಡಿಯಂ ಧಾತುವನ್ನು ಸಹ ಗುರುತಿಸುವುದು ಸಾಧ್ಯ. ಕೆಲಸಗಾರರ ಕಣ್ಣುಗಳಿಗೆ ಹಾನಿಕರವಾದ ಉಷ್ಣ ಮತ್ತು ಅತಿನೇರಿಳೆ ಕಿರಣಗಳಿಂದ ರಕ್ಷಣೆ ನೀಡುವಂಥ ಹೊಸ ಮಾದರಿಯ ಗಾಜನ್ನು ಕ್ರೂಕ್ಸ್ ತಯಾರಿಸಿದ.

ಸರ್ಕಾರ ಕ್ರೂಕ್ಸನನ್ನು ರಸಾಯನ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಯಾವಾಗಲೂ ಸಲಹೆ ಕೇಳುತ್ತಿತ್ತು. ಈತ ಕೆಮಿಕಲ್ ನ್ಯೂಸ್ ಎಂಬ ಪತ್ರಿಕೆಯನ್ನು ಸ್ಥಾಪನೆ ಮಾಡಿ (1859) 1906ರ ವರೆಗೆ ಅದರ ಸಂಪಾದಕನಾಗಿದ್ದ. ರಸಾಯನ ವಿಜ್ಞಾನದ ಮೇಲೆ ಹಲವಾರು ಪುಸ್ತಕಗಳನ್ನು ಬರೆದಿದ್ದಾನೆ ಇಲ್ಲವೇ ಅವುಗಳಿಗೆ ಸಂಪಾದಕನಾಗಿದ್ದಾನೆ. ಸೆಲೆಕ್ಟ್ ಮೆಥಡ್ಸ್ ಆಫ್ ಕೆಮಿಕಲ್ ಅನ್ಯಾಲಿಸಿಸ್ (1871) ಅವುಗಳಲ್ಲಿ ಮುಖ್ಯವಾದ ಪುಸ್ತಕ. ಕ್ರೂಕ್ಸನಿಗೆ 1897ರ ನೈಟ್ ಪದವಿಯನ್ನೂ, 1910ರಲ್ಲಿ ಆರ್ಡರ್ ಆಫ್ ಮೆರಿಟ್ ಗೌರವವನ್ನೂ ಕೊಡಲಾಯಿತು. ಲಂಡನ್ನಿನಲ್ಲಿ ಏಪ್ರಿಲ್ 4, 1919ರಂದು ಕ್ರೂಕ್ಸ್ ಗತಿಸಿದ. (ಎನ್.ಜಿ.ಪಿ.)



**ಕ್ರೂಗರ್, ಸ್ಟೀಫಾನಸ್ ಜೆಹಾನೀಸ್ ಪಾಲಸ್** : 1825–1904. ದಕ್ಷಿಣ ಆಫ್ರಿಕ ಗಣರಾಜ್ಯದ ಅಧ್ಯಕ್ಷ (1883–1900): ಬೋಯರ್ ಬುಡಕಟ್ಟಿನ ನಾಯಕ. ದಕ್ಷಿಣ ಆಫ್ರಿಕದ ಕೇಪ್ ಕಾಲೊನಿಯಲ್ಲಿ 1825ರ ಅಕ್ಟೋಬರ್ 10ರಂದು ಜನಿಸಿದ. 1841ರಲ್ಲಿ ಇವನ ತಂದೆ ತಾಯಿಗಳು ಕ್ರೂಗರನೊಂದಿಗೆ ಟ್ರಾನ್ಸ್‌ವಾಲಿನಲ್ಲಿ ನೆಲಸಿದರು. ಕ್ರೂಗರನಿಗೆ ದೊರಕಿದ ಶಿಕ್ಷಣ ಅತ್ಯಲ್ಪ. ಆದರೆ ಇವನು ಧರ್ಮಶುದ್ಧಿವಾದದಲ್ಲಿ ನಿಷ್ಠೆ ಬೆಳಸಿಕೊಂಡನಲ್ಲದೆ ಟ್ರಾನ್ಸ್‌ವಾಲ್ ಪ್ರಾಂತ್ಯದ ಏಕೀಕರಣ ಮತ್ತು ಸರ್ವತೋಮುಖ ಪ್ರಗತಿಗಳಿಗಾಗಿ ದುಡಿದ.

ಕ್ರೂಗರ್ 1857ರಲ್ಲಿ ಲೈಡನ್‌ಬರ್ಗಿನ ದಬ್ಬಾಳಿಕೆಯ ವಿರುದ್ಧ ಪೊಚೆಸ್ಟ್ರೂಮ್ ದಂಗೆಯಲ್ಲಿ ಪ್ರಿಟೋರಿಯಸ್ಸನ ಜೊತೆಗೆ ಸೇರಿಕೊಂಡು ಅದರಲ್ಲಿ ಮಹತ್ತ್ವದ ಪಾತ್ರ ವಹಿಸಿದ. ಅನಂತರ 1861–64ರ ತನಕ ನಡೆದ ಅಂತರ್ಯುದ್ಧದಲ್ಲಿ ಭಾಗವಹಿಸಿದ. 1852ರ ಸ್ಯಾಂಡ್ ರಿವರ್ ಸಂಧಾನದಲ್ಲೂ 1871ರ ಬ್ಲೋಮ್‌ಹಾಫ್ ಪಂಚಾಯಿತಿಯಲ್ಲೂ ಇವನದು ಪ್ರಮುಖ ಪಾತ್ರವಾಗಿತ್ತು. ಮತ್ತೆ 1877 ಮತ್ತು 1878ರಲ್ಲಿ ಆಫ್ರಿಕ ಸ್ವಾತಂತ್ರ್ಯ ಸಾಧನೆಗಾಗಿ ಇಂಗ್ಲೆಂಡಿನೊಂದಿಗೆ ನಡೆಸಿದ ಮಾತುಕತೆಗಳಲ್ಲೂ ಭಾಗವಹಿಸಿ ಆಫ್ರಿಕದ ಮೇಲೆ ಅಧಿಕಾರ ನಡೆಸಲು ಬ್ರಿಟಿಷರಿಗಿದ್ದ ಹಕ್ಕನ್ನೇ ಪ್ರಶ್ನಿಸಿದ. 1881ರಲ್ಲಿ ಮಜುಬದಲ್ಲಿ ಬೋಯರರು ವಿಜಯ ಗಳಿಸಿದ ತರುವಾಯ ಈತ ವಿರುದ್ಧ ಸರ್ಕಾರದ ನಾಯಕನಾಗಿ ಬ್ರಿಟಿಷರೊಂದಿಗೆ ಸಂಧಾನ ನಡೆಸಿದ. ಗಣರಾಜ್ಯದ ಅಧ್ಯಕ್ಷ ಪದವಿಗೆ ಈತನನ್ನು ಡೋಪರ್ ಪಕ್ಷ ತನ್ನ ಅಭ್ಯರ್ಥಿಯಾಗಿ ಆರಿಸಿತು. 1883ರಲ್ಲಿ ನಡೆದ ಚುನಾವಣೆಯಲ್ಲಿ ಕ್ರೂಗರ್ ಅಧ್ಯಕ್ಷನಾಗಿ ಆಯ್ಕೆಯಾದ. ಮತ್ತೆ ಮೂರು ಬಾರಿ ಆಯ್ಕೆ ಹೊಂದಿ 1900ರ ತನಕ ಈ ಸ್ಥಾನದಲ್ಲಿದ್ದ. ವಿದೇಶಿ ಜನರ (ಉಯಿಟ್ ಲ್ಯಾಂಡರ್ಸ್) ಮತದಾನದ ಹಕ್ಕಿನಲ್ಲಿ ಇವನಿಗೆ ನಂಬಿಕೆ ಇರಲಿಲ್ಲ. ಆ ಹಕ್ಕನ್ನು ಕ್ರಮೇಣ ಮೊಟಕು ಮಾಡಲು ಕ್ರೂಗರನೇ ಕಾರಣ. ವಿದೇಶೀಯರಿಗಾಗಿ ಬೇರೊಂದು ವಿಧಾನಸಭೆಯನ್ನು ಸ್ಥಾಪಿಸಿ ಅದರ ಪ್ರವೇಶದ ಅರ್ಹತೆಗಳನ್ನು ಹೆಚ್ಚಿಸಿದ. ಕ್ರೂಗರನ ಆಡಳಿತ ನೀತಿಯಿಂದ ಬ್ರಿಟಿಷರು ಇವನ ವಿರೋಧಿಗಳಾದರು. 1900ರಲ್ಲಿ ಬ್ರಿಟಿಷ್ ಸೈನ್ಯ ಪ್ರಿಟೋರಿಯವನ್ನು ವಶಪಡಿಸಿಕೊಂಡಾಗ ಈತ ತಲೆ ತಪ್ಪಿಸಿಕೊಂಡು ಯುರೋಪಿಗೆ ಓಡಿಹೋದ. 1904ರ ಜುಲೈ 14ರಂದು ಸ್ವಿಟ್ಸರ್ಲೆಂಡಿನ ಕ್ಲಾರೆನ್ಸಿನಲ್ಲಿ ಕ್ರೂಗರ್ ನಿಧನನಾದ. ಕ್ರೂಗರ್ ಲೇಖಕನೂ ಆಗಿದ್ದ. ಈತ ತನ್ನ ಜೀವನದ ಸ್ಮೃತಿಗಳನ್ನು ಬರೆದಿಟ್ಟಿದ್ದಾನೆ. (ಕೆ.ಎಸ್.ಆರ್.ಎ.)

**ಕ್ರೂಸಿಫೆರೀ** : ದ್ವಿದಳಸಸ್ಯ ಗುಂಪಿನ ರೀಯಡೇಲೀಸ್ ಗಣಕ್ಕೆ ಸೇರಿದ ಒಂದು ಕುಟುಂಬ. ಬ್ರಾಸಿಕೇಸೀ ಇದರ ಪರ್ಯಾಯನಾಮ; ಸುಮಾರು 350 ಜಾತಿ ಮತ್ತು ಸುಮಾರು 2500 ಪ್ರಭೇದಗಳನ್ನೊಳಗೊಂಡಿದೆ. ಈ ಕುಟುಂಬಕ್ಕೆ ಸೇರಿದ ಬಹು ಪಾಲು ಸಸ್ಯಗಳು ಪ್ರಪಂಚದ ಉತ್ತರಾರ್ಧಕ್ಕೆ, ಮುಖ್ಯವಾಗಿ ತಂಪು ಹವೆಯುಳ್ಳ ಪ್ರದೇಶಗಳಿಗೆ ಸೀಮಿತವಾಗಿದ್ದರೂ ಸುಮಾರು 10 ಜಾತಿಗಳು ಪ್ರಪಂಚದ ಎಲ್ಲ ಕಡೆ ಹರಡಿವೆ. ಭಾರತದಲ್ಲಿ ಸುಮಾರು 107 ಜಾತಿಗಳು ಕಂಡುಬರುತ್ತವೆ.

ಇದಕ್ಕೆ ಸೇರಿದ ಪ್ರಭೇದಗಳೆಲ್ಲ ವಾರ್ಷಿಕ, ದ್ವೈವಾರ್ಷಿಕ ಅಥವಾ ಬಹುವಾರ್ಷಿಕ ಮೂಲಿಕೆ ಸಸ್ಯಗಳು. ಕಾಂಡದ ಮೇಲೆ ಕವಲಾದ ಅಥವಾ ನಕ್ಷತ್ರಾಕಾರದ ಏಕಕೋಶ ರೋಮಗಳಿವೆ. ಎಲೆಗಳು ಸರಳ ಮಾದರಿಯವು; ಅಭಿಮುಖವಾಗಿ ಜೋಡಣೆಗೊಂಡಿವೆ. ವೃಂತಪರ್ಣಗಳು (ಸ್ಟಿಪ್ಯೂಲ್ಸ್) ಇಲ್ಲ. 0ದ್ವೈವಾರ್ಷಿಕ ಸಸ್ಯಗಳಲ್ಲಿ ರ್‍ಯಾಡಿಕಲ್ ಎಲೆಗಳೂ ಇರುವುದುಂಟು. ಅಪರೂಪವಾಗಿ ಮೇಲಿನ ಎಲೆಗಳ ಕಂಕುಳಲ್ಲೊ (ಉದಾ: ಡೆಂಟೇರಿಯ ಬಲ್ಬಿಫೆರ), ಎಲೆಗಳ ಮೇಲೊ (ಉದಾ: ಕಾರ್ಡಮೈನ್ ಪ್ರೆಟನ್ಸಿಸ್) ಸಣ್ಣ ಗಾತ್ರದ ಗಂಟುಗಳಂಥ ರಚನೆಗಳು ಮೂಡುತ್ತವೆ. ಇವಕ್ಕೆ ಬಲ್ಬಿಲುಗಳೆಂದು ಹೆಸರು. ಇವು ಗಿಡದಿಂದ ಬೇರ್ಪಟ್ಟು ನಿರ್ಲಿಂಗ ರೀತಿ ವಂಶಾಭಿವೃದ್ಧಿಗೆ ಸಹಾಯಕವಾಗುತ್ತವೆ. ಕೆಲವು ಪ್ರಭೇದಗಳಲ್ಲಿ ಎಲೆಗಳು ಆಹಾರವನ್ನು ಶೇಖರಿಸುವ ಅಂಗಗಳಾಗಿ ಮಾರ್ಪಾಡಾಗಿರುತ್ತವೆ. ಇಂಥ ಎಲೆಗಳನ್ನು ತರಕಾರಿಯಾಗಿ ಉಪಯೋಗಿಸುವರು. ಉದಾಹರಣೆಗೆ ಎಲೆಕೋಸು.

ಬೇರು ತಾಯಿಬೇರು ಮಾದರಿಯದು; ಮೂಲಂಗಿ (ರಫ್ಯಾನಸ್ ಸೇಟಿವಸ್), ಟರ್ನಿಪ್ (ಬ್ರಾಸಿಕ ಕ್ಯಾಂಪೆಸ್ಟ್ರಿಸ್) ಮುಂತಾದವುಗಳಲ್ಲಿ ಆಹಾರ ಶೇಖರಣಾಂಗವಾಗಿ ಮಾರ್ಪಾಡಾಗಿರುತ್ತದೆ.

ಹೂಗೊಂಚಲು ಅಂತ್ಯಾರಂಭಿ ಮಾದರಿಯದು. ಹೂಗೊಂಚಲಿನ ಹೂಗಳೆಲ್ಲಕ್ಕೂ ಒಂದೇ ಉದ್ದದ ತೊಟ್ಟು ಇರುವುದರಿಂದ ಎಲ್ಲ ಹೂಗಳೂ ಒಂದೇ ಮಟ್ಟದಲ್ಲಿರುತ್ತವೆ. ಹೂಗಳು ದ್ವಿಲಿಂಗಿಗಳು. ಆರೀಯ ಸಮಾಂಗತೆಯುಳ್ಳವು. ಒಂದೊಂದು ಹೂವಿನಲ್ಲೂ ನಾಲ್ಕು ಬಿಡಿಬಿಡಿಯಾದ ಪುಷ್ಪಪತ್ರಗಳು, ನಾಲ್ಕು ದಳಗಳು, 6 ಕೇಸರಗಳು, 2 ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯ ಇವೆ. ಪುಷ್ಪಪತ್ರಗಳು 2 ವರ್ತುಲಗಳಲ್ಲಿ ಜೋಡಣೆಗೊಂಡಿವೆ. ದಳಗಳ ಜೋಡಣೆ ಶಿಲುಬೆಯಂತೆ. ಈ ಜೋಡಣೆಗೆ ಕ್ರೂಸಿಫಾರಮ್ ಜೋಡಣೆ ಎಂದು ಹೆಸರು. ಪ್ರತಿಯೊಂದು ದಳದ ಬುಡಭಾಗ ಸಣ್ಣದಾಗಿದ್ದು ಬಾಗಿಕೊಂಡಿದೆ. ಕೇಸರುಗಳೂ ಎರಡು ವರ್ತುಲಗಳಲ್ಲಿ ಜೋಡಣೆಗೊಂಡಿವೆ. ಹೊರವರ್ತುಲದಲ್ಲಿ 2 ಕೇಸರಗಳೂ ಒಳವರ್ತುಲದಲ್ಲಿ 4 ಕೇಸರಗಳೂ ಇವೆ. ಹೊರಗಿನವು ಉದ್ದದಲ್ಲಿ ಒಳಗಿನವಕ್ಕಿಂತ ಚಿಕ್ಕವು. ಈ ರೀತಿಯ ಕೇಸರ ರಚನೆಗೆ ಟೆಟ್ರಡೈನಮಸ್ ಎಂದು ಹೆಸರು. ಇದು ಕ್ರೂಸಿಫೆರೀ ಕುಟುಂಬದ ಮುಖ್ಯ ಲಕ್ಷಣ.

ಅಂಡಕೋಶದೊಳಗೆ ಪ್ರತಿ ಕಾರ್ಪೆಲಿನ ಒಳಭಿತ್ತಿಗೆ ಅಂಟಿಕೊಂಡಂತೆ ಎರಡು ಸಾಲುಗಳಲ್ಲಿ ಅಂಡಕಗಳು ಜೋಡಣೆಗೊಂಡಿವೆ. ಎರಡು ಕಾರ್ಪೆಲುಗಳ ಮಧ್ಯೆ ಬೆಳೆದ ಮಿಥ್ಯಾಪಟಲದಿಂದಾಗಿ ಅಂಡಾಶಯ ಫಲವಾಗಿ ಬೆಳೆದಾಗ ಎರಡು ಭಾಗಗಳಾಗಿ ಒಡೆಯುತ್ತದೆ. ಈ ಪಟಲಕ್ಕೆ ರೆಪ್ಲಮ್ ಎಂದು ಹೆಸರು. ಪುಷ್ಪಪತ್ರ, ದಳ ಅಥವಾ ಕೇಸರಗಳ ಕೆಳಗಡೆ ಕೆಲವೊಮ್ಮೆ ಮಧುಗ್ರಂಥಿಗಳಿರುವುದುಂಟು. ಮೇಲೆ ಹೇಳಿದ ಹೂವಿನ ರಚನೆಗಿಂತ ಸ್ವಲ್ಪ ಭಿನ್ನರೂಪದ ರಚನೆಯನ್ನು ಕೆಲವು ಜಾತಿಯ ಗಿಡಗಳಲ್ಲಿ ಕಾಣಬಹುದು. ಉಭಯಪಾರ್ಶ್ವ ಸಮಾಂಗತೆಯುಳ್ಳ ಹೂಗಳು, ದಳರಹಿತ ಹೂಗಳು ಮತ್ತು ದಳಗಳು ಹಾಗೂ ಕೇಸರಗಳು ಬೇರೆ ರಚನೆಗಳಾಗಿ ಮಾರ್ಪಟ್ಟ ನಿದರ್ಶನಗಳಿವೆ.

ಫಲ ಸಂಪುಟ ಮಾದರಿಯದು. ಬೀಜಗಳು ಮಿಥ್ಯಾಪಟಲಕ್ಕೆ ಅಂಟಿಕೊಂಡಿರುವಂತೆಯೇ ಫಲ ಕೆಳಗಡೆಯಿಂದ ಎರಡು ಹೋಳಾಗಿ ಒಡೆಯುತ್ತದೆ. ಇದನ್ನು ಸಾಮಾನ್ಯವಾಗಿ ಸಿಲಿಕ್ವ ಎಂದೂ ಹಣ್ಣಿನ ಉದ್ದ ಅದರ ಅಗಲದಷ್ಟೆ ಇದ್ದಾಗ ಸಿಲಿಕ್ಯುಲ ಎಂದೂ ಕರೆಯಲಾಗುತ್ತದೆ. ಫಲದ ರಚನೆ ಹಾಗೂ ಬೀಜಗಳ ಜೋಡಣೆಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಸಾಮಾನ್ಯವಾಗಿ ಬೀಜಗಳು ಪ್ರತಿಕೋಣೆಯಲ್ಲಿ ಎರಡು ಸಾಲಿನಲ್ಲಿರುತ್ತವೆ. ಆದರೆ ಕೆಲವು ಸಾರಿ ಒಂದು ಕೋಣೆಯಲ್ಲಿ ಬೀಜಗಳು ಒಂದೇ ಸಾಲಿನಲ್ಲಿ ಇರುವುದುಂಟು. ಮತ್ತೆ ಕೆಲವು ವೇಳೆ ಒಂದು ಕೋಣೆಯ ಬೀಜಗಳ ಸಾಲು ಮತ್ತೊಂದು ಕೋಣೆಯ ಬೀಜಗಳ ಸಾಲಿಗೆ ಅಭಿಮುಖವಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ಫಲದಲ್ಲಿ ಒಂದೇ ಸಾಲು ಬೀಜವಿರುವ ಹಾಗೆ ಕಾಣುತ್ತದೆ (ಉದಾಹರಣೆಗೆ ಮೂಲಂಗಿ). ಬೀಜಗಳ ಮಧ್ಯೆ ತಗ್ಗುಗಳು ಬೆಳೆದು ಮುಂದೆ ಒಂದೊಂದು ಬೀಜಗಳಿರುವ ಭಾಗಗಳಾಗಿ ಬೇರ್ಪಡಬಹುದು. ಹಣ್ಣು ಒಡೆದಾಗ ಬೀಜಗಳು ಮಧ್ಯದ ಪೊರೆಗೆ ಲಘುವಾಗಿ ಅಂಟಿಕೊಂಡಿರುತ್ತವೆ. ಗಾಳಿಯಿಂದ ಇಲ್ಲವೆ ಇನ್ನಾವುದೊ ಕಾರಣದಿಂದ ಗಿಡ ಅಲುಗಾಡಿದಾಗ ಬೀಜಗಳು ಪೊರೆಯಿಂದ ಕಳಚಿ ಬೀಳುತ್ತವೆ. ಬೀಜಗಳಿಗೆ ಕೆಲವು ಸಾರಿ ರೆಕ್ಕೆಯಂಥ ಪೊರೆಯಿದ್ದು ಅದರ ಸಹಾಯದಿಂದ ಅವು ಗಾಳಿಯಲ್ಲಿ ದೂರ ಸಾಗಬಲ್ಲವು.

ಕ್ರೂಸಿಫೆರೀ ಕುಟುಂಬ ಹಲವಾರು ಉಪಯುಕ್ತ ಸಸ್ಯಗಳನ್ನು ಒಳಗೊಂಡಿದ್ದು ಆರ್ಥಿಕ ಪ್ರಾಮುಖ್ಯ ಗಳಿಸಿದೆ. ಉದಾಹರಣೆಗೆ ತರಕಾರಿ ಸಸ್ಯಗಳಾದ ಬ್ರಾಸಿಕ ಓಲರೇಸಿಯ ಪ್ರಭೇದದ ವಿವಿಧ ಬಗೆಗಳು (ಎಲೆಕೋಸು, ಗೆಡ್ಡೆಕೋಸು, ಹೂಕೋಸು ಇತ್ಯಾದಿ).

ರಫ್ಯಾನಸ್ ಸೇಟಿವಸ್ (ಮೂಲಂಗಿ), ಬ್ರಾಸಿಕ ಕ್ಯಾಂಪೆಸ್ಟ್ರಿಸ್ (ಟರ್ನಿಪ್), ಲೆಪಿಡಿಯಮ್ ಸೇಟಿವಮ್ (ಕುರ್ತಿಗೆ – ಗಾರ್ಡನ್ ಕ್ರೆಸ್), ಸಂಬಾರ ಸಸ್ಯಗಳಾದ ಬ್ರಾಸಿಕ ನೈಗ್ರ (ಸಾಸುವೆ), ಬ್ರಾಸಿಕ ನೇಪಸ್ (ರೇಪ್), ಅಲಂಕಾರ ಸಸ್ಯಗಳಾದ ಐಬೆರಿಸ್ (ಕ್ಯಾಂಡಿಟಫ್ಟ್), ಕೈರ್ಯಾಂತಸ್ ಮುಂತಾದವು ಈ ಕುಟುಂಬಕ್ಕೆ ಸೇರಿವೆ. (ಎಸ್.ಆರ್.ಜ.)

**ಕ್ರೆಬ್ಸ್ ಚಕ್ರ** : ಹಲವಾರು ಜೀವಿಗಳ, ವಿಶೇಷವಾಗಿ ಉಸಿರಾಟ ವ್ಯವಸ್ಥೆ ಇರುವವುಗಳ, ಉತ್ಕರ್ಷಕ ಚಯಾಪಚಯದಲ್ಲಿ ಮಗ್ನವಾಗಿರುವ ಎನ್‌ಜೈಮುಗಳ ಪ್ರತಿಕ್ರಿಯೆಗಳ ಒಂದು ಸರಣಿ. ಸಿಟ್ರಿಕ್ ಆಮ್ಲ ಚಕ್ರ ಎಂಬ ಪರ್ಯಾಯ ನಾಮವೂ ಉಂಟು. ಕಾರ್ಬೊಹೈಡ್ರೇಟ್ ಮತ್ತು ಫ್ಯಾಟಿ ಆಮ್ಲಗಳೆರಡರಿಂದಲೂ ಉತ್ಕರ್ಷಣ ಕ್ರಿಯೆಯಿಂದ ಬರುವ ಅಸಿಟಿಕ್ ಆಮ್ಲ ಸಂಪೂರ್ಣವಾಗಿ ಉತ್ಕರ್ಷಣಗೊಂಡು ಇಂಗಾಲಾಮ್ಲ ವಾಯು ಆಗಿ ತನ್ನಲ್ಲಿನ ಶಕ್ತಿಯನು ವಿಟಮಿನುಗಳನ್ನು ಒಳಗೊಂಡ ಸಹ ಎನ್‌ಜೈಮುಗಳಿಗೆ ವರ್ಗಾಯಿಸುವ ಕಾರ್ಯ ನಡೆಯಲು ಪ್ರಕೃತಿ ಮಾಡಿರುವ ವಿಶೇಷ ಪಥವೇ ಈ ಸಿಟ್ರಿಕ್ ಆಮ್ಲ ಚಕ್ರ.

ಒಂದು ರಾಸಾಯನಿಕ ಕ್ರಿಯೆಗೆ ಒಂದು ಎನ್‌ಜೈಮು ಇದ್ದು ಅದು ವೇಗೋತ್ಕರ್ಷಕವಾಗಿ ಕೆಲಸ ಮಾಡುವುದು ಒಂದು ಪಥ. ಹಂತ ಹಂತದಲ್ಲಿ ಕ್ರಿಯೆಗಳು ನಡೆದು ಒಂದು ರಾಸಾಯನಿಕ ಕ್ರಿಯೆ ಪೂರ್ಣವಾಗುವುದು ಎರಡನೆಯ ಪಥ. ಅಪಕರ್ಷಕ ರೂಪದಲ್ಲಿರುವ ಸಹ ಎನ್‌ಜೈಮುಗಳು ತಮ್ಮಲ್ಲಿನ ಜಲಜನಕಗಳನ್ನು ಆಮ್ಲಜನಕಕ್ಕೆ ಸಾಗು ಹಾಕುವ ಪಥ ಎರಡನೆಯ ಪಥಕ್ಕೆ ಸೇರಿದುದು. ಇನ್ನೂ ಜಟಿಲವಾದ ರಾಸಾಯನಿಕ ಸಮಗ್ರ ಕ್ರಿಯೆಯನ್ನು ಸಾಕಷ್ಟು ವೇಗದಲ್ಲಿ ನಡೆಸಲು ಪ್ರಕೃತಿಯ ಬತ್ತಳಿಕೆಯಲ್ಲಿರುವ ಮೂರನೆಯ ಅಸ್ತ್ರ ಚಕ್ರಪಥ. ಕ್ರೆಬ್ಸ್ ಚಕ್ರ ಇದಕ್ಕೆ ಉತ್ತಮ ಉದಾಹರಣೆ.

ಶಕ್ತಿ ಜನನ ಕ್ರಿಯೆಯ ಸಂಶೋಧನೆಯನ್ನು ಮಾಡಿ ಸಿಟ್ರಿಕ್ ಆಮ್ಲ ಚಕ್ರದ ಈಗಿನ ಜ್ಞಾನಕ್ಕೆ ತಳಹದಿ ಹಾಕಿದಾತ ಶೆಂಟ್–ಜ್ಯಾರ್ಜಿ ಈತ ಪಾರಿವಾಳದ ಎದೆಯ




ಮಾಂಸಖಂಡವನ್ನು ತೆಗೆದು ಚೆನ್ನಾಗಿ ಅರೆದು ಕಾರ್ಬೊಹೈಡ್ರೇಟಿನಿಂದ ಬರುವ ಪೈರುವೇಟನ್ನು ಹಾಕಿದಾಗ ಅದು ಉತ್ಕರ್ಷಣ ಕ್ರಿಯೆಗೆ ಒಳಪಡುತ್ತದೆ ಎಂದೂ ಫ್ಯೂಮರೇಟ್, ಮ್ಯಾಲೇಟ್ ಆಕ್ಸಾಲೊ ಅಸಿಟೇಟುಗಳನ್ನು ಹಾಕಿದಾಗ ಈ ಕ್ರಿಯೆಯ ವೇಗ ಹೆಚ್ಚುವುದೆಂದೂ ಕಂಡು ಹಿಡಿದ. ಮುಂದೆ ಕ್ರೆಬ್ಸ್ ಸಂಶೋಧನೆ ನಡೆಸಿ ವೇಗವರ್ಧಕ ಶಕ್ತಿ ಆಲ್ಫಕೀಟೋ ಗ್ಲುಟರೇಟಿಗೂ ಸಿಟ್ರೇಟಿಗೂ ಇದೆಯೆಂದು ಕಂಡು ಹಿಡಿದ. ಈ ಫಲಿತಾಂಶಗಳನು ವಿವರವಾಗಿ ಅಭ್ಯಾಸ ಮಾಡಿ ಉತ್ಕರ್ಷಣ ಕ್ರಿಯೆ ಒಂದು ಚಕ್ರಪಥದಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳ ಕೂಟ ಎಂಬ ಸಿದ್ಧಾಂತವನ್ನು ಮುಂದಿಟ್ಟ. ಅದೇ ಈಗ ಸುಪ್ರಸಿದ್ಧವಾಗಿರುವ ಕ್ರೆಬ್ಸ್ ಚಕ್ರ. ಈ ಚಕ್ರದಲ್ಲಿ ಯಾವ ಯಾವ ರಾಸಾಯನಿಕ ವಸ್ತುಗಳು ಹೇಗೆ ಭಾಗವಹಿಸುತ್ತವೆ ಎಂಬುದರ ವಿವರಗಳನ್ನು ಇದರೊಂದಿಗಿರುವ ಚಿತ್ರದಲ್ಲಿ ಕಾಣಬಹುದು.

ಕ್ರೆಬ್ಸ್ ಚಕ್ರದಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳನ್ನು ಕೂಡಿ ನೋಡಿದರೆ ಒಟ್ಟಿನಲ್ಲಿ ಒಂದು ಅಸಿಟೇಟ್ ಉತ್ಕರ್ಷಣ ಹೊಂದಿ ಅಪಕರ್ಷಣ ರೂಪದಲ್ಲಿರುವ ನಾಲ್ಕು ಸಹ ಎನ್‌ಜೈಮುಗಳು ಬಿಡುಗಡೆಯಾಗುವುದು ಕಂಡು ಬರುತ್ತದೆ. ಇಂಥ ಒಂದು ಸಹೆನ್‌ಜೈಮ್ ಎನ್‌ಎಡಿಇಎಚ್ ತನ್ನಲ್ಲಿನ ಜಲಜನಕಗಳನ್ನು ಆಮ್ಲಜನಕಕ್ಕೆ ಸಾಗು ಹಾಕಿದಾಗ ಸುಮಾರು ಮೂರು ಎಟಿಪಿ ಅಣುಗಳು ತಯಾರಾಗುತ್ತವೆ. ಅಪಕರ್ಷಣ ರೂಪದಲ್ಲಿನ ಎಫ್‌ಎಡಿಯಿಂದ ಎರಡೇ ಏಟಿಪಿ ಗಳಿಕೆ ಸಾಧ್ಯ. ಆದ್ದರಿಂದ ಒಂದು ಸುತ್ತಿನಲ್ಲಿ ಜಿಟಿಪಿ ಸೇರಿ ಒಟ್ಟು 12 ಶಕ್ತಿಯ ನಾಣ್ಯಗಳು (ಎಟಿಪಿ) ಜೀವಕೋಶಕ್ಕೆ ದೊರೆಯುತ್ತವೆ.

ಸಿಟ್ರಿಕ್ ಆಮ್ಲ ಚಕ್ರ ಕಾರ್ಬೊಹೈಡ್ರೇಟ್ ಮತ್ತು ಫ್ಯಾಟಿ ಆಮ್ಲಗಳಿಗೆ ಸಂಬಂಧ ಕಲ್ಪಿಸುವುದಲ್ಲದೆ ಎರಡಕ್ಕೂ ಇದು ಅಂತ್ಯ ಉತ್ಕರ್ಷಕ ಮಾರ್ಗವಾಗಿದೆ. ಕೊಬ್ಬು ಕಾರ್ಬೊಹೈಡ್ರೇಟಿನ ಒಲೆಯಲ್ಲಿ ಉರಿಯುತ್ತದೆ ಎಂದು ಹೇಳುವುದು ಸತ್ಯವಿದೆ. ಆದ್ದರಿಂದ ಕಾರಣಾಂತರದಿಂದ ಕಾರ್ಬೊಹೈಡ್ರೇಟಿನ ಚಯಾಪಚಯ ಸರಿಯಾಗಿಲ್ಲದಿದ್ದರೆ ಅದು ಫ್ಯಾಟಿ ಆಮ್ಲದ ಚಯಾಪಚಯದ ಮೇಲೆ ಪ್ರಭಾವ ಬೀರುತ್ತದೆ. ಇನ್ಸುಲಿನ್ನಿನ ಅಭಾವ ಆ ರೀತಿಯ ಪರಿಸ್ಥಿತಿಗೆ ಒಂದು ಕಾರಣ. ಅಂಥ ಸಂದರ್ಭದಲ್ಲಿ ಫ್ಯಾಟಿ ಆಮ್ಲಗಳು ಹೆಚ್ಚು ಹೆಚ್ಚಾಗಿ ಉತ್ಕರ್ಷಣ ಹೊಂದಿ ಅಸಿಟೇಟನ್ನು ಬಿಡುಗಡೆ ಮಾಡುತ್ತವೆ. ಆಗ ಸಾಕಷ್ಟು ಆಕ್ಸಾಲೋ ಅಸಿಟೇಟುಗಳು ಇರದಿದ್ದರೆ ಅಸಿಟೇಟುಗಳು ಸೇರಿಕೊಂಡು ಅಸಿಟೋನ್ ರಾಸಾಯನಿಕ ವಸ್ತುಗಳು, ವಿಷವಸ್ತುಗಳು ಆಗುವ ಪರಿಸ್ಥಿತಿಯುಂಟು. ಆದರೆ ಆಕ್ಸಾಲೋ ಅಸಿಟೇಟಿನ ಮಟ್ಟ ಪ್ರೋಟೀನುಗಳಲ್ಲಿರುವ ಆಸ್ಪಾರ್ಟಿಕ್ ಅಮೈನೊ ಆಮ್ಲದಿಂದ ಒಂದೇ ಸಮವಾಗಿರಲು ಸಾಧ್ಯ. ಅಲ್ಲದೆ ಪೈರುವಿಕ್ ಆಮ್ಲವೂ ಇಂಗಾಲಾಮ್ಲ ವಾಯುವಿನೊಂದಿಗೆ ಸೇರಿಕೊಂಡು ಆಕ್ಸಾಲೋ ಅಸಿಟೇಟ್ ಆಗಲು ಎನ್‌ಜೈಮಿನ ಏರ್ಪಾಡು ಉಂಟು. ಆದರೂ ಅಸಿಟೋನ್ ರಾಸಾಯನಿಕ ವಸ್ತುಗಳು ರಕ್ತದಲ್ಲಿ ಹೆಚ್ಚಲು ಇದರ ಮಟ್ಟದ ವ್ಯತ್ಯಾಸವೂ ಕಾರಣ ಇರಬಹುದು ಎನ್ನುತ್ತಾರೆ.

ಕ್ರೆಬ್ಸ್ ಚಕ್ರಕ್ಕೂ ಪ್ರೋಟೀನಿನಲ್ಲಿರುವ ಕೆಲವು ಅಮೈನೊ ಆಮ್ಲಗಳಿಗೂ ನಂಟು ಉಂಟು. ಅಂಥ ಅಮೈನೊ ಆಮ್ಲಗಳ, ಗ್ಲುಟಾಮಿಕ್ ಆಮ್ಲ ಮತ್ತು ಆಸ್ಪಾರ್ಟಿಕ್ ಆಮ್ಲ ಇವುಗಳ ತಯಾರಿಕೆ ಚಕ್ರದಲ್ಲಿನ ಆಲ್ಫಕೀಟೊ ಗ್ಲುಟಾರಿಕ್ ಆಮ್ಲ ಮತ್ತು ಆಕ್ಸಾಲೊ




ಗ್ಲೈಆಕ್ಸಲೇಟ್ ಚಕ್ರ

ಅಸಿಟಿಕ್ ಆಮ್ಲದಿಂದ ಆಗುತ್ತದೆ. ಕ್ರೆಬ್ಸ ಚಕ್ರದಲ್ಲಿ ಸಿಟ್ರಿಕ್ ಮುಂತಾದ ಆಮ್ಲಗಳ ತಯಾರಿಕೆಯಾದರೂ ನಿವ್ವಳ ತಯಾರಿಕೆಯಿಲ್ಲ. ಆದರೆ ಇದಕ್ಕೆ ಎರಡು ರಾಸಾಯನಿಕ ಕ್ರಿಯೆಗಳನ್ನು ಸೇರಿಸಿ ಬರುವ ವಿಶೇಷಪಥವಾದ ಗ್ಲೈಆಕ್ಸಲೇಟ್ ಚಕ್ರದಿಂದ ನಿವ್ವಳ ತಯಾರಿಕೆ

ಸಾಧ್ಯ. ಈ ವಿಶೇಷ ಚಕ್ರ ಹಣ್ಣು ಮತ್ತು ಕಾಯಿಗಳಲ್ಲಿ ಇದ್ದು ಅವುಗಳಲ್ಲಿ ಸಿಟ್ರಿಕ್ ಮುಂತಾದ ಆಮ್ಲಗಳು ಶೇಖರವಾಗಲು ಕಾರಣವಾಗಿವೆ. ಇದರಲ್ಲಿ ಒಂದು ಸುತ್ತಿನ ಕ್ರಿಯೆಯಲ್ಲಿ ಎರಡು ಆಕ್ಸಾಲೊ ಅಸಿಟೇಟುಗಳು (ಒಂದು ಗ್ಲೈಆಕ್ಸಲೇಟಿನ ಮುಖಾಂತರ, ಎರಡನೆಯದು ಸಕ್ಸಿನೇಟಿನ ಮುಖಾಂತರ) ಬರುವುದನ್ನು ಕಾಣಬಹುದು. ಅಂದರೆ ಎರಡು ಅಸಿಟೇಟುಗಳಿಂದ ಒಂದು ನಿವ್ವಳ ಆಕ್ಸಾಲೊ ಅಸಿಟೇಟ್ ಬಂದು ಅದು ಮೂರನೆಯ ಅಸಿಟೇಟಿನೊಂದಿಗೆ ಸಿಟ್ರಿಕ್ ಆಮ್ಲ ಆಗುವುದು. ಅಂದರೆ ಅಸಿಟೇಟುಗಳಿಂದ ಆಮ್ಲಗಳ ನಿವ್ವಳ ತಯಾರಿಕೆ ಆದಂತಾಯಿತು.

ಕ್ರೆಬ್ಸ್ ಚಕ್ರದ ರಾಸಾಯನಿಕ ಕ್ರಿಯೆಗಳು ಸರಿಯಾಗಿ ನಡೆಯಬೇಕಾದರೆ ಅದರಲ್ಲಿ ಭಾಗವಹಿಸುವ ರಾಸಾಯನಿಕ ವಸ್ತುಗಳು ಮತ್ತು ಕ್ರಿಯೆಯ ವೇಗೋತ್ಕರ್ಷಕಗಳಾದ ಎನ್‌ಜೈಮುಗಳು ಅನುಕ್ರಮವಾಗಿ ಇರಬೇಕು; ಹಾಗೂ ಸುವ್ಯವಸ್ಥಿತವಾಗಿರಬೇಕು. ಈ ವ್ಯವಸ್ಥೆ ಜೀವಕೋಶದಲ್ಲಿನ ಜೀವರಸದಲ್ಲಿ ಕಾಳಿನ ರೂಪದಲ್ಲಿರುವ ಮೈಟೋಕಾಂಡ್ರಿಯಾಗಳಲ್ಲಿ ಇದೆ. ಇವುಗಳಲ್ಲಿ ಜಿಡ್ಡಿನ ಗುಂಪಿನ ರಾಸಾಯನಿಕ ವಸ್ತುಗಳು ಇದ್ದು ಇವು ಈ ಆವಶ್ಯಕ ವ್ಯವಸ್ಥೆಯನ್ನು ಮಾಡಿರುತ್ತವೆ. ಹೆಚ್ಚು ಶಕ್ತಿಯ ಬಿಡುಗಡೆ ಇಲ್ಲಿಯೇ. ಆದ್ದರಿಂದಲೇ ಮೈಟೋಕಾಂಡ್ರಿಯಾವನ್ನು ಶಕ್ತಿ ಜನನ ನಿಲಯ ಎಂದು ಕರೆಯಬಹುದು. ಈ ಚಿತ್ರಕ್ಕೆ ಬೇಕಾಗುವ ಎಲ್ಲ ಎನ್‌ಜೈಮುಗಳೂ ಪ್ರಾಣಿಗಳಲ್ಲಿಯೂ ಸಸ್ಯ, ಬ್ಯಾಕ್ಟೀರಿಯ ಮುಂತಾದವುಗಳಲ್ಲಿಯೂ ಇರುವುದನ್ನು ನೋಡಿದರೆ ಆಮ್ಲಜನಕವನ್ನು ಅವಲಂಬಿಸಿರುವ ಎಲ್ಲ ಜೀವಕೋಶಗಳಲ್ಲಿ ಈ ಚಕ್ರವಿದ್ದು ಶಕ್ತಿ ಜನನ ಕ್ರಿಯೆಯಲ್ಲಿ ಇದು ಹಿರಿಯ ಪಾತ್ರ ವಹಿಸುವುದು ಕಂಡುಬರುತ್ತದೆ. (ಎ.ಎಸ್.ಆರ್.)

**ಕ್ರೆಬ್ಸ್ ಯೂರಿಯಾ ಚಕ್ರ :** ಅಮೈನೋ ಆಮ್ಲಗಳಲ್ಲಿಯ $-NH_2$ ಗುಂಪು ದೇಹದಿಂದ ಯೂರಿಯಾ ರೂಪದಲ್ಲಿ ವಿಸರ್ಜನೆಯಾಗುವ ಪಥ. ಕ್ರೆಬ್ಸ್ ಈ ಪಥವನ್ನು ಆವಿಷ್ಕರಿಸಿದುದರಿಂದ ಆತನ ಹೆಸರನ್ನು ಸೇರಿಸಿ ಹೇಳುವುದು ವಾಡಿಕೆ. (**ನೋಡಿ–ಕ್ರೆಬ್ಸ್‌ಸರ್‌ಹ್ಯಾನ್ಸ್‌ಅಡಾಲ್ಫ್**). ಆರ್ನಿಥೀನ್ ಚಕ್ರ ಎಂಬುದು ಪರ್ಯಾಯ ನಾಮ.




ಯೂರಿಯಾದ ತಯಾರಿಕೆ ನಡೆಯುವುದು ಕೆಲವು ರಾಸಾಯನಿಕ ವಸ್ತುಗಳು ಮತ್ತು ಎನ್‌ಜೈಮುಗಳು ಸೇರಿ ನಡೆಯುವ ಚಕ್ರೀಯ ರಾಸಾಯನಿಕ ಕಾರ್ಯದಿಂದ ಆಹಾರದಲ್ಲಿಯ ಪ್ರೋಟೀನು ಅರಗಿ ಅಮೈನೋ ಆಮ್ಲದ ಅಣುಗಳಾಗಿ ರಕ್ತದ ಮೂಲಕ ದೇಹದ ಎಲ್ಲ ಭಾಗಗಳಿಗೂ ಹೋಗಿ ಸಂಶ್ಲೇಷಣೆ ಹೊಂದಿ ಪ್ರೋಟೀನಿನ ಅಣುಗಳಾಗುತ್ತವೆ. ಈ ಕ್ರಿಯೆಯಲ್ಲಿ ಅದರಿಂದ ಬರಬಹುದಾದ ಅಮೈನೋ ಅಯಾನು ದೇಹಕ್ಕೆ ವಿಷ. ಆದ್ದರಿಂದ ಬಿಡುಗಡೆಯಾಗುವ ಮುಂಚೆಯೇ ಅಥವಾ ಬಿಡುಗಡೆಯಾದ ಒಡನೆಯೇ ಅದನ್ನು ದೇಹಕ್ಕೆ ವಿಷವಾಗಿರದ ಯೂರಿಯಾ ರೂಪಕ್ಕೆ ಪರಿವರ್ತಿಸಬೇಕು. ಈ ರಾಸಾಯನಿಕ ಕಾರ್ಯ ಪಥ ಚಕ್ರೀಯವಾಗಿದೆ ಎಂದು ಸಿದ್ಧಾಂತ ಮಾಡಿದವ ಕ್ರೆಬ್ಸ್. ಇಂಗಾಲಾಮ್ಲದ ವಾಯುವಿನ ಒಂದು ಅಣು ಮತ್ತು ಅಮೋನಿಯದ ಎರಡು ಅಣುಗಳು ಸೇರಿ ಒಂದು ಯೂರಿಯಾ ಅಣುವಿನ ತಯಾರಿಕೆ ಆಗುತ್ತದೆ. ಈ ರಸಾಯನ ವಸ್ತು ದೇಹಕ್ಕೆ ಕೆಟ್ಟುದೇನೂ ಮಾಡುವುದಿಲ್ಲ. ಅಲ್ಲದೆ ನೀರಿನಲ್ಲಿ ಸುಲಭವಾಗಿ ಕರಗುವುದರಿಂದ ರಕ್ತದಲ್ಲಿ ಹರಿದು ಹೋಗಿ ಮೂತ್ರದ ಮೂಲಕ ದೇಹದಿಂದ ಹೊರದೂಡಲ್ಪಡುತ್ತದೆ.

ಸುಲಭ ರಾಸಾಯನಿಕ ಬದಲಾವಣೆಗೆ ಒಂದೇ ಒಂದು ವೇಗೋತ್ಕರ್ಷಕ ಎನ್‌ಜೈಮ್ ಸಾಕು. ಆದರೆ ಯೂರಿಯಾ ತಯಾರಿಕೆ ಬಲು ಕಷ್ಟ ಸಾಧ್ಯ. ಆದ್ದರಿಂದಲೇ ಒಂದು ವಿಶೇಷ ಮಾರ್ಗದ, ಚಕ್ರೀಯ ಪಥವ ಆವಶ್ಯಕತೆ. ಸ್ಥೂಲವಾಗಿ ಯೂರಿಯಾದ ತಯಾರಿಕೆಯಲ್ಲಿ ಭಾಗವಹಿಸುವ ರಾಸಾಯನಿಕಗಳು ಮೂರು–ಆರ್ನಿಥೀನ್, ಸಿಟ್ರುಲೀನ್ ಮತ್ತು ಆರ್ಜಿನೀನ್ ಎಂಬ ಅಮೈನೋ ಆಮ್ಲಗಳು. ಇಂಗಾಲಾಮ್ಲ ವಾಯುವಿನ ಒಂದು ಅಣು ಮತ್ತು ಅಮೋನಿಯದ ಒಂದು ಅಣುವನ್ನು ತೆಗೆದುಕೊಂಡು ಅಮೈನೊ ಆರ್ನಿಥೀನ್ ಆಮ್ಲ ಸಿಟ್ರುಲೀನ್ ಆಗುವುದು. ತರುವಾಯ ಸಿಟ್ರುಲೀನ್ ಅಮೈನೊ ಗುಂಪನ್ನು ಅಸ್ಪಾರ್ಟಿಕ್ ಆಮ್ಲದಿಂದ ಪಡೆದು ಆರ್ಜಿನೀನ್ ಆಗುವುದು. ಆರ್ಜಿನೇಸ್ ಎಂಬ ಎನ್‌ಜೈಮು ಆರ್ಜಿನೀನನ್ನು ಒಡೆದು ಯೂರಿಯಾದ ಒಂದು ಅಣು ಮತ್ತು ಆರ್ಜಿನೀನಿನ ಇನ್ನೊಂದು ಅಣುವನ್ನು ಬಿಡುಗಡೆ ಮಾಡುವುದು. ಈ ರಾಸಾಯನಿಕ ಚಕ್ರದ ವಿವರಗಳನ್ನು ಚಿತ್ರದಲ್ಲಿ ಕೊಟ್ಟಿದೆ.

ಯೂರಿಯಾದ ತಯಾರಿಕೆಯ ಚಕ್ರದ ವಿವರಗಳನ್ನು ನೋಡಿದರೆ ಪ್ರಾರಂಭದಲ್ಲಿ ವೆಚ್ಚವಾಗಿದ್ದ ಆರ್ನಿಥೀನ್ ಮತ್ತೆ ಬಿಡುಗಡೆಯಾಗುವುದರಿಂದ ಮೊದಲಿನ ಪರಿಸ್ಥಿತಿಯೇ ಉಂಟಾಗುವುದು. ಈ ರಾಸಾಯನಿಕ ಕಾರ್ಯಗಳಿಂದ ಆದ ಫಲಿತಾಂಶ ಏನೆಂದರೆ ಅಮೋನಿಯದ ಒಂದು ಅಣು, ಅಸ್ಪಾರ್ಟಿಕ್ ಆಮ್ಲದ ಅಮೈನೊ ಗುಂಪು, ಇಂಗಾಲಾಮ್ಲ ವಾಯುವಿನ ಒಂದು ಅಣು ಸೇರಿ ಯೂರಿಯಾ ಅಣುವೊಂದು ತಯಾರಾದಂತಾಯಿತು. ಆರ್ನಿಥೀನ್, ಸಿಟ್ರುಲೀನ್ ಮತ್ತು ಆರ್ಜಿನೀನ್ ಒಂದು ಯಂತ್ರ ಚಕ್ರವಾದಂತಾಯಿತು. ಕುಂಬಾರ ಮಡಕೆಯನ್ನು ಮಾಡುವಂತೆಯೇ ಈ ರಾಸಾಯನಿಕ ಕಾರ್ಯ ಉಂಟು. ತಿರುಗುತ್ತಿರುವ ಚಕ್ರದ ಮೇಲೆ ಜೇಡಿಮಣ್ಣಿನ ಮುದ್ದೆಯಿಟ್ಟು, ಮಡಕೆಯ ರೂಪ ತಂದು ಬೇಕಾದರೆ ಹಿಡಿ ಸಿಕ್ಕಿಸಿ, ಅನಂತರ ಕತ್ತರಿಸಿ ಈಚೆ ಇಡುವಂತೆ ಯೂರಿಯಾ ತಯಾರಿಕೆಯ ಚಕ್ರವಿದೆ. ಮೊದಲನೆಯ ಹೆಜ್ಜೆಯಾದ ಸಿಟ್ರುಲೀನಿನ ತಯಾರಿಕೆಯಾಗಲು ಅಮೋನಿಯ ಮತ್ತು ಇಂಗಾಲಾಮ್ಲ ವಾಯು ಸೇರಿ ಕಾರ್ಬಮೈಲ್ ಫಾಸ್ಫೇಟ್ ಆಗಬೇಕು. ಈ ತಯಾರಿಕೆಯ ರಾಸಾಯನಿಕ ಕ್ರಿಯೆಯ ಎನ್‌ಜೈಮನ್ನು ಕ್ರಿಯಾಶಕ್ತವನ್ನಾಗಿ ಮಾಡಲು ಅಸಿಟೈಲ್ ಗ್ಲುಟಮೇಟ್ ಎಂಬುದು ಬೇಕು. ಇದಲ್ಲದೆ ಬೇಕಾದ ಫಾಸ್ಫೇಟನ್ನೂ ಶಕ್ತಿಯನ್ನೂ ಒದಗಿಸಲು ಶಕ್ತಿ ಹೊಂದಿರುವ ಎಟಿಪಿ ಎಂಬ ರಾಸಾಯನಿಕ ಬೇಕು. ಹಾಗೆಯೆ ಎರಡನೆಯ ಹೆಜ್ಜೆಗೂ ಶಕ್ತಿಯ ಆವಶ್ಯಕತೆ ಇರುವುದರಿಂದ ಯೂರಿಯ ತಯಾರಿಕೆಗೆ ಶಕ್ತಿಯ ವೆಚ್ಚ ಹೆಚ್ಚು. ಆದರೆ ವಿಧಿಯಿಲ್ಲ.

ಅಸ್ಪಾರ್ಟಿಕ್ ಆಮ್ಲ ಎರಡನೆಯ ಹೆಜೆಯಲ್ಲಿ ಭಾಗವಹಿಸಿ ಅಮೈನೊ ಗುಂಪನ್ನು ಕೊಟ್ಟ ಮೇಲೆ ಫ್ಯೂಮರಿಕ್ ಆಮ್ಲ ಆಗಿ ಕೆಲವೊಂದು ಬದಲಾವಣೆ ಹೊಂದಿ ಆಕ್ಸಾಲೊ ಅಸಿಟಿಕ್ ಆಮ್ಲವಾಗುತ್ತದೆ. ಇದು ಗ್ಲುಟಾಮಿಕ್ ಆಮ್ಲದ ಮುಖಾಂತರ ಬೇರೆ ಬೇರೆ ಅಮೈನೊ ಆಮ್ಲಗಳಿಂದ ಅಮೈನೊ ಗುಂಪನ್ನು ಬೇರೆ ತೆಗೆದುಕೊಂಡು ಅಸ್ಪಾರ್ಟಿಕ್ ಆಮ್ಲವಾಗಲು ಏರ್ಪಾಡು ಇದೆ. ಒಟ್ಟಿನಲ್ಲಿ ಬೇಡದ ಅಮೈನೊ ಆಮ್ಲಗಳು ತಮ್ಮಲ್ಲಿನ ಅಮೈನೊ ಗುಂಪನ್ನು ಯೂರಿಯ ತಯಾರಿಕೆಗೆ ಈ ರೀತಿ ಕೊಟ್ಟಂತಾಗುತ್ತದೆ. ಯೂರಿಯದ ತಯಾರಿಕೆ ಆಗುವುದು ಪಿತ್ತಕೋಶದಲ್ಲಿ. ಮೂತ್ರಜನಕಾಂಗಕ್ಕೆ ಸ್ವಲ್ಪ ಶಕ್ತಿ ಇದ್ದರೂ ಪಿತ್ತಕೋಶದಲ್ಲಿ ಈ ಕಾರ್ಯಕ್ಕೆ ಬೇಕಾಗುವ ಎಲ್ಲ ಎನ್‌ಜೈಮುಗಳೂ ಹೆಚ್ಚಾಗಿದ್ದು ಪರಿಸ್ಥಿತಿಯೂ ಅನುಕೂಲವಾಗಿರುವುದರಿಂದ ಪಿತ್ತಕೋಶವೇ ಯೂರಿಯ ತಯಾರಿಕೆಯ ರಂಗ. (ಎ.ಎಸ್.ಆರ್.)

**ಕ್ರೆಬ್ಸ್ ಸರ್ ಹ್ಯಾನ್ಸ್ ಅಡಾಲ್ಫ್ :** 1900– . ಬ್ರಿಟಿಷ್ ಜೀವ ರಸಾಯನ ವಿಜ್ಞಾನಿ. ವಿದ್ಯಾರ್ಥಿ ದೆಸೆಯಲ್ಲಿ ವೈದ್ಯಕೀಯ ಶಿಕ್ಷಣ ಪಡೆದ. ಆದರೆ ಆಸಕ್ತಿ ಕುದುರಿದ್ದು ಜೀವ ರಸಾಯನ ವಿಜ್ಞಾನದಲ್ಲಿ. ದೇಹದಲ್ಲಿ ಅಮೈನೊ ಆಮ್ಲಗಳು ಮತ್ತು ಕಾರ್ಬೊಹೈಡ್ರೇಟುಗಳು ಹೊಂದುವ ರಾಸಾಯನಿಕ ಪರಿವರ್ತನೆಗಳ ಪಥಗಳ ಬಗ್ಗೆ ಸಂಶೋಧನೆಗಳನ್ನು ಕೈಗೊಂಡು ಮೂಲಭೂತ ಆವಿಷ್ಕಾರಗಳನ್ನು ಮಾಡಿದ್ದಕ್ಕಾಗಿ ನೊಬೆಲ್ ಬಹುಮಾನವನ್ನು ಪಡೆದ (1953).

1900 ಆಗಸ್ಟ್ 25ರಂದು ಜರ್ಮನಿಯ ಹಿಲ್ಡೆಷೈಮಿನಲ್ಲಿ ಜನಿಸಿದ ಕ್ರೆಬ್ಸ್ 1919ರಿಂದ 1925ರ ತನಕ ಬೇರೆ ಬೇರೆ ಜರ್ಮನ್ ವಿಶ್ವವಿದ್ಯಾಲಯಗಳಲ್ಲಿ ವೈದ್ಯಕೀಯ ಶಿಕ್ಷಣ ಪಡೆದು 1925ರಲ್ಲಿ ಹ್ಯಾಂಬರ್ಗ್ ವಿಶ್ವವಿದ್ಯಾಲಯದ ವೈದ್ಯಕೀಯ ಡಿಗ್ರಿಯನ್ನು ಗಳಿಸಿದ. ಅದಾದ ಬಳಿಕ ರಸಾಯನ ವಿಜ್ಞಾನವನ್ನು ಅಭ್ಯಸಿಸಿ ಬರ್ಲಿನ್–ಡಾಲೆಮಿನಲ್ಲಿ

ನೊಬೆಲ್ ಪ್ರಶಸ್ತಿ ವಿಜೇತ ವಾರ್ಬುರ್ಗನ ಸಹಾಯಕನಾಗಿ ಈತ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದ. ತರುವಾಯ ಕೆಲಕಾಲ ವೈದ್ಯವಿಜ್ಞಾನಕ್ಕೆ ಹಿಂತಿರುಗಿ ವೈದ್ಯಕೀಯ ಶಿಕ್ಷಕನಾಗಿದ್ದ. ನಾಟ್ಸಿಗಳು ಅಧಿಕಾರಕ್ಕೆ ಬಂದು ಪ್ರಬಲರಾಗಿದ್ದಾಗ ಕ್ರೆಬ್ಸ್ ಜರ್ಮನಿಯನ್ನು ತೊರೆದು ನಿರಾಶ್ರಿತನಾಗಿ ಬ್ರಿಟನ್ನಿಗೆ ವಲಸೆ ಹೋಗಬೇಕಾಯಿತು. 1933ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಜೀವರಸಾಯನ ವಿಜ್ಞಾನ ವಿಭಾಗವನ್ನು ಸೇರಿ ಎರಡು ವರ್ಷಗಳ ಮೇಲೆ ಷೆಫೀಲ್ಡ್ ವಿಶ್ವವಿದ್ಯಾಲಯಕ್ಕೆ ಹೋದ (1935). 1954ರಲ್ಲಿ ಕ್ರೆಬ್ಸ್ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಜೀವರಸಾಯನ ವಿಭಾಗದ ಪ್ರಾಧ್ಯಾಪಕನಾದ. 1947ರಲ್ಲಿ ಈತ ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ. 1958ರಲ್ಲಿ ಬ್ರಿಟಿಷ್ ಸರ್ಕಾರ ಇವನಿಗೆ ನೈಟ್ ಪದವಿ ನೀಡಿ ಗೌರವಿಸಿತು. 1964ರಲ್ಲಿ ಅಮೆರಿಕದ ನ್ಯಾಷನಲ್ ಅಕಾಡಮಿ ಆಫ್ ಸೈನ್ಸಸ್ ಕ್ರೆಬ್ಸ್‌ನನ್ನು ತನ್ನ ಓರ್ವ ವಿದೇಶೀ ಸದಸ್ಯನನ್ನಾಗಿ ಚುನಾಯಿಸಿ ಸನ್ಮಾನಿಸಿತು.

ಆಹಾರದ ಮೂಲಕ ದೇಹವನ್ನು ಪ್ರವೇಶಿಸುವ ಪ್ರೋಟೀನುಗಳು ಜಲವಿಭಜನೆ (ಹೈಡ್ರಾಲಿಸಿಸ್) ಹೊಂದಿ ಅಮೈನೊ ಆಮ್ಲಗಳಾದ ಬಳಿಕ ಆ ಅಮೈನೊ ಆಮ್ಲಗಳು ದೇಹಕ್ಕೆ ಅಗತ್ಯವಾದ ವಿವಿಧ ಪ್ರೋಟೀನುಗಳ ಸಂಶ್ಲೇಷಣೆಯಲ್ಲಿ ಉಪಯೋಗ ಪಡೆಯುವುದು ಸರಿಯಷ್ಟೆ. ಕೆಲವು ವೇಳೆ ಅವು ಉತ್ಕರ್ಷಣೆ ಹೊಂದಿ ಶಕ್ತಿಯನ್ನು ಒದಗಿಸುವುದೂ ಉಂಟು. ಅಂಥ ಸಂದರ್ಭಗಳಲ್ಲಿ ಅಮೈನೊ ಆಮ್ಲಗಳಲ್ಲಿಯ $-NH_2$ ಗುಂಪು ಮೊದಲು ಬಿಡುಗಡೆಯಾಗಬೇಕು. ಹಾಗೆ ಬಿಡುಗಡೆಯಾದ $-NH_2$ ಯೂರಿಯ ರೂಪದಲ್ಲಿ ದೇಹದಿಂದ ಹೊರಬರುವುದು. ಇದು ನಡೆಯುವುದು ಹೇಗೆ ಎಂಬುದರ ಬಗ್ಗೆ ಕ್ರೆಬ್ಸ್ ಕುತೂಹಲ ತಳೆದು ಅದಕ್ಕೆ ಸಂಬಂಧಿಸಿದ ರಾಸಾಯನಿಕ ಕ್ರಿಯೆಗಳ ಪಥಗಳ ಪತ್ತೆ ಹಚ್ಚಿದ. ಆರ್ನಿಥೀನ್ ಎಂಬ ಅಮೈನೊ ಆಮ್ಲ ಅಮೋನಿಯ ಮತ್ತು ಕಾರ್ಬನ್ ಆಕ್ಸೈಡುಗಳನ್ನು ತೆಗೆದುಕೊಂಡು ಮೊದಲು ಸಿಟ್ರುಲ್ಲೀನ್ ಆಗಿ ಅದು ಇನ್ನೊಂದು ಅಮೋನಿಯ ಅಣುವನ್ನು ತೆಗೆದುಕೊಂಡು ಅರ್ಜಿನೀನ್ ಆಗುವುದೆಂದೂ ಅನಂತರ ಆರ್ಜಿನೀನ್ ವಿಭಜನೆ ಹೊಂದಿ ಯೂರಿಯಾವನ್ನು ನೀಡುವುದಲ್ಲದೆ ಆರ್ನಿಥೀನನ್ನು ಪುನರುತ್ಪಾದಿಸುವುದೆಂದೂ ತೋರಿಸಿದ. ಹಾಗೆ ಉತ್ಪತ್ತಿಯಾದ ಆರ್ನಿಥೀನ್ ಪುನಃ ಇದೇ ಕ್ರಿಯಾ ಸರಣಿಯಲ್ಲಿ ಪಾಲುಗೊಳ್ಳುವುದು. ಹೀಗೆ ಕ್ರಿಯೆಗಳು ಚಕ್ರೀಯವಾಗಿ ಮುಂದುವರಿಯುವುದರಿಂದ ಈ ಕ್ರಿಯಾಸರಣಿಗೆ ಆರ್ನಿಥೀನ್ ಚಕ್ರ ಅಥವಾ ಕ್ರೆಬ್ಸ್ ಯೂರಿಯ ಚಕ್ರ ಎಂಬ ಹೆಸರು ಬಂದಿದೆ.

ಕ್ರೆಬ್ಸ್ ಜರ್ಮನಿಯನ್ನು ಬಿಟ್ಟು ಬ್ರಿಟನ್ನಿಗೆ ಬಂದ ಬಳಿಕ ಆತನ ಗಮನ ಕಾರ್ಬೊಹೈಡ್ರೇಟುಗಳ ಚಯಾಪಚಯದ (ಮೆಟಬಾಲಿಸಂ) ಕಡೆ ಹರಿಯಿತು. ಕಾರ್ಬೊಹೈಡ್ರೇಟುಗಳು ನಿರ್ದಿಷ್ಟ ಕ್ರಿಯಾಸರಣಿಯನ್ನು ಅನುಸರಿಸಿ ಲ್ಯಾಕ್ಟಿಕ್ ಆಮ್ಲವನ್ನು ಉತ್ಪತ್ತಿ ಮಾಡುವುದು ತಿಳಿದಿತ್ತು. ಲ್ಯಾಕ್ಟಿಕ್ ಆಮ್ಲ ಉತ್ಕರ್ಷಣೆ ಹೊಂದಿ ಅಂತಿಮವಾಗಿ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ಉತ್ಪತ್ತಿ ಮಾಡುವುದು ಹೇಗೆ ಎಂಬುದು ಗೊತ್ತಿರಲಿಲ್ಲ. ಕ್ರೆಬ್ಸ್ ಇದನ್ನು ಪತ್ತೆ ಮಾಡಿದ. ಈ ಕ್ರಿಯಾ ಸರಣಿಯೂ ಒಂದು ಚಕ್ರೀಯ ಪಥದಲ್ಲಿ ನಡೆಯುವುದರಿಂದ ಮತ್ತು ಈ ಚಕ್ರದಲ್ಲಿ ಸಿಟ್ರಿಕ್ ಆಮ್ಲ ಒಂದು ಮುಖ್ಯ ಹಂತವಾದುದರಿಂದ ಈ ಚಕ್ರೀಯ ಕ್ರಿಯಾ ಸರಣಿಗೆ ಸಿಟ್ರಿಕ್ ಆಮ್ಲ ಚಕ್ರ ಅಥವಾ ಕ್ರೆಬ್ಸ್ ಚಕ್ರ ಎಂದು ಹೆಸರು ಬಂದಿದೆ. ದೇಹದಲ್ಲಿ ಶಕ್ತಿ ಉತ್ಪಾದನೆಯ ಪ್ರಮುಖ ಹಂತವೆಂದು ಈಗ ಸ್ಥಿರಪಟ್ಟಿರುವ ಈ ಸಿಟ್ರಿಕ್ ಆಮ್ಲ ಚಕ್ರವನ್ನು ಕಂಡುಹಿಡಿದುದಕ್ಕಾಗಿಯೇ ಕ್ರೆಬ್ಸ್‌ನಿಗೆ ನೊಬೆಲ್ ಬಹುಮಾನದ ಒಂದು ಪಾಲು ದೊರೆತದ್ದು. ಕ್ರೆಬ್ಸ್ ಚಕ್ರದ ವಿಶದೀಕರಣಕ್ಕೆ ನೆರವಾಗುವ ಅಮೂಲ್ಯ ಸಂಶೋಧನೆಗಳನು ನಡೆಸಿದ ಲಿಪ್‌ಮನ್ ಆ ಬಹುಮಾನದ ಉಳಿದೊಂದು ಪಾಲನ್ನು ಪಡೆದ.

ಇನ್ನೂ ಅನೇಕ ಜೀವ ರಾಸಾಯನಿಕ ಕ್ರಿಯೆಗಳನ್ನು ಪೂರ್ತಿಯಾಗಿ ಇಲ್ಲವೇ ಭಾಗಶಃ ಕ್ರೆಬ್ಸ್ ಪತ್ತೆ ಮಾಡಿರುವನಾದರೂ ಸಿಟ್ರಿಕ್ ಆಮ್ಲ ಚಕ್ರದ ಆವಿಷ್ಕಾರ ಅವನಿಗೆ ಅತ್ಯಂತ ಹೆಚ್ಚಿನ ಕೀರ್ತಿಯನ್ನು ತಂದು ಕೊಟ್ಟಿದೆ ಎಂದು ಹೇಳಬಹುದು. **(ನೋಡಿ– ಕ್ರೆಬ್ಸ್ ಚಕ್ರ; ಕ್ರೆಬ್ಸ್‌ಯೂರಿಯಾ ಚಕ್ರ).** (ಜೆ.ಆರ್.ಎಲ್.; ಡಿ.ಎಸ್.ಎಸ್.)

**ಕ್ರೆಮ್ಲಿನ್ :** ರಷ್ಯದಲ್ಲಿ ಮಧ್ಯಯುಗದಲ್ಲಿ ನಗರ ಮಧ್ಯದಲ್ಲಿ ರಕ್ಷಣೆಗಾಗಿ ಕಟ್ಟುತ್ತಿದ್ದ ಕೋಟೆ. ಇದನ್ನು ಸಾಮಾನ್ಯವಾಗಿ ನದಿಯ ಎತ್ತರದ ದಡದಲ್ಲಿ ಅಥವಾ ಎರಡು ನದಿಗಳು ಕೂಡುವೆಡೆಯಲ್ಲಿ ಅವುಗಳ ನಡುವೆ ಕಟ್ಟುತ್ತಿದ್ದರು. ಸುತ್ತಲ ಗೋಡೆಯನ್ನು ಮೊದಲು ಮರದಿಂದಲೂ ಇಟ್ಟಿಗೆಗಳಿಂದಲೂ ಕಟ್ಟಲಾಗುತ್ತಿತ್ತು. ಅನಂತರ ಕಾಲದಲ್ಲಿ ಕಲ್ಲು ಗೋಡೆಗಳನ್ನು ಕಟ್ಟಲಾರಂಭಿಸಿದರು. ಗೋಡೆಯ ಸುತ್ತಲೂ ಕಂದಕ ತೆಗೆಯುತ್ತಿದ್ದುದೂ ಉಂಟು. ರಕ್ಷಣೆಗಾಗಿ ಮತ್ತು ಯುದ್ಧದ ಸಮಯದಲ್ಲಿ ಸೈನಿಕ ಕಾರ್ಯಾಚರಣೆಗೆ ಉಪಯೋಗವಾಗುವಂತೆ ಕೋಟೆ ಕಟ್ಟುತ್ತಿದ್ದರು.

ಮಾಸ್ಕೋ, ಪ್ಸ್ಕಾಫ್, ನಾವ್ಗರಾಡ್, ಸ್ಮೊಲೆನ್‌ಸ್ಕ್, ರಾಸ್ಟಾಫ್, ಸೂಜ್‌ದಾಲ್, ಯೂರೊಸ್ಲಾವ್ಲ್, ವ್ಲಾಡಿಮಿರ್, ನಿಜ್‌ನಿನಾವ್ಗರಾಡ್ ಮೊದಲಾದ ಅನೇಕ ನಗರಗಳು ಹಿಂದಿನ ಕಾಲದ ಕ್ರೆಮ್ಲಿನ್‌ಗಳ ಸುತ್ತಲೂ ಬೆಳೆದಂಥವು. ಕ್ರೆಮ್ಲಿನ್‌ನ ಒಳಗಡೆ ರಾಜ ಮತ್ತು ಬಿಷಪರ ಅರಮನೆಗಳು, ಕಥೀಡ್ರಲ್, ಸರ್ಕಾರದ ಕಚೇರಿಗಳು, ರಾಜಪರಿವಾರಗಳ ವಾಸದ ಮನೆಗಳು, ಮದ್ದಿನ ಮನೆ, ಮುತ್ತಿಗೆಯ ಸಮಯದಲ್ಲಿ ಅವಶ್ಯವಾದ ಆಹಾರ ಸಂಗ್ರಹಿಸಿಡಲು ಉಗ್ರಾಣಗಳು– ಇವೆಲ್ಲ ಇರುತ್ತಿದ್ದುವು. ಈ ಕಟ್ಟಡಗಳ ವಿನ್ಯಾಸದಲ್ಲಿ ಯಾವೊಂದು ಕ್ರಮವನ್ನೂ ಕಟ್ಟುನಿಟ್ಟಾಗಿ ಅನುಸರಿಸುತ್ತಿರಲಿಲ್ಲ. ಹಿಂದೆ ಮುಂದೆ, ಎತ್ತರ ತಗ್ಗು–ಹೀಗೆ ಧಾರಾಳವಾಗಿ ಇವನ್ನು

ಮಾಸ್ಕೋದ ಕ್ರೆಮ್ಲಿನಲ್ಲಿರುವ ಅನನ್ಸಿಯೇಷನ್ ಕಥೀಡ್ರಲ್

ನಿರ್ಮಿಸಲಾಗುತ್ತಿತ್ತು. ಕಥೀಡ್ರಲ್ ಮತ್ತು ಕೋಟೆಯ ಗೋಡೆಗಳು ಉಳಿದ ಕಟ್ಟಡಗಳಿಗಿಂತ ಎತ್ತರವಾಗಿರುತ್ತಿದ್ದುವು. (ಬಿ.ಎಸ್.ಎಚ್.)

**ಕ್ರೆಸ್: ನೋಡಿ–ಕುರ್ತಿಗೆ**

**ಕ್ರೆಸ್ ವಿಲಿಯನ್ ಸಂಸ್ಕೃತಿ :** ಇಂಗ್ಲೆಂಡಿನ ಡರ್ಬಿಷೈರ್ ಮತ್ತು ನಾಟಿಂಗ್ಹ್ಯಾಮ್‌ಷೈರ್‌ಗಳ ಎಲ್ಲೆಯಲ್ಲಿರುವ ಕ್ರೆಸ್ವಿಲ್ ಕ್ರ್ಯಾಗ್ಸ್ ಎಂಬಲ್ಲಿಯ ಬೆಟ್ಟದ ಗುಹೆಗಳಲ್ಲಿ ದೊರಕಿರುವ ಪೂರ್ವ ಮತ್ತು ಮಧ್ಯಶಿಲಾಯುಗದ ಅವಶೇಷಗಳಿಂದ ವ್ಯಕ್ತವಾಗಿರುವ ಸಂಸ್ಕೃತಿ, ಪೂರ್ವ ಶಿಲಾಯುಗದ ಅಂತ್ಯದಲ್ಲಿದ್ದ ಆರಿಗ್ನೇಷಿಯನ್ ಗ್ರಾವೆಟ್ಟಿಯನ್, ಮ್ಯಾಡಲೀನಿಯನ್ ಮುಂತಾದ ಐರೋಪ್ಯ ಸಮಕಾಲೀನ ಸಂಸ್ಕೃತಿಗಳ ಹಲವಾರು ಲಕ್ಷಣಗಳು ಈ ಸಂಸ್ಕೃತಿಯಲ್ಲಿ ಕಂಡುಬಂದರೂ ಅವುಗಳ ಉನ್ನತ ಮಟ್ಟವನ್ನು ತಲುಪದಿದ್ದ ಮತ್ತು ಬಹುಶಃ ಇಂಗ್ಲೆಂಡಿನಲ್ಲೇ ಬೆಳೆದು ತನ್ನದೇ ಆದ ವೈಶಿಷ್ಟ್ಯವನ್ನು ರೂಪಿಸಿಕೊಂಡ ಸಂಸ್ಕೃತಿಗಳಲ್ಲಿ ಇದಕ್ಕೆ ಅಗ್ರಸ್ಥಾನ ಸಲ್ಲುತ್ತದೆ. ಕಲ್ಲುಫಲಕದ ಆಯುಧಗಳನ್ನು ಒಂದು ಪಕ್ಕ ಮೊಂಡು ಮಾಡಿದ ಚಾಕು, ಮೊನೆಗಳು, ಎರಡು ಸಾಲು ಹಲ್ಲುಗಳಿದ್ದ ಜಿಂಕೆ ಕೊಂಬಿನ ಈಟಿಗಾಳ ಮುಂತಾದ ಆಯುಧಗಳನ್ನು ಬಳಸುತ್ತಿದ್ದ ಈ ಸಂಸ್ಕೃತಿಯಲ್ಲಿ ಕ್ರಮೇಣ ಸೂಕ್ಷ್ಮ ಶಿಲಾಯುಧ ಹಂತದ ಜ್ಯಾಮಿತಿಕ ಆಕಾರಗಳಿದ್ದ ಉಪಕರಣಗಳು ಬಳಕೆಗೆ ಬಂದುವು. (ಬಿ.ಕೆ.ಜಿ.)

**ಕ್ರೇಕ್, ಜಾರ್ಜ್ ಲಿಲ್ಲಿ** : 1798–1866. ಸಾಹಿತ್ಯ ಚರಿತ್ರೆಕಾರ. ಹುಟ್ಟಿದ್ದು ಫೈಫ್‌ಷೈರ್‌ನ ಕೆನೋವೆಯಲ್ಲಿ. ಸೇಂಟ್ ಆಂಡ್ರ್ಯೂಸ್‌ನಲ್ಲಿ ವ್ಯಾಸಂಗ ಮಾಡಿ 1824ರಲ್ಲಿ ಲಂಡನ್ನಿಗೆ ತೆರಳಿದ. ಅಲ್ಲಿ ವಿಸ್ತಾರಗೊಳ್ಳುತ್ತಿದ್ದ 'ಉಪಯುಕ್ತ ಜ್ಞಾನ'ದ ಬಗ್ಗೆ ಬೇಕಾದಷ್ಟು ಲೇಖನಗಳನ್ನು ಬರೆದ. 1849ರಲ್ಲಿ ಬೆಲ್ಫಾಸ್ಟ್‌ನಲ್ಲಿ ಆಂಗ್ಲ ಸಾಹಿತ್ಯ ಮತ್ತು ಚರಿತ್ರೆಯ ಪ್ರಾಧ್ಯಾಪಕನಾಗಿ ನೇಮಕಗೊಂಡ. ದಿ ಪರ್‌ಸ್ಯೂಟ್ ಆಫ್ ನಾಲೆಜ್ ಅಂಡರ್ ಡಿಫಿಕಲ್ಟೀಸ್ (1831), ಹಿಸ್ಟರಿ ಆಫ್ ಬ್ರಿಟಿಷ್ ಕಾಮರ್ಸ್ (1844), ಹಿಸ್ಟರಿ ಆಫ್ ಇಂಗ್ಲಿಷ್ ಲಿಟರೇಚರ್ ಅಂಡ್ ದಿ ಇಂಗ್ಲಿಷ್ ಲಾಂಗ್ವೇಜ್ (1861) – ಈತನ ಮುಖ್ಯ ಗ್ರಂಥಗಳು. ಸ್ಪೆನ್ಸರ್ ಮತ್ತು ಬೇಕನ್‌ರನ್ನು ಕುರಿತೂ ಬರೆದಿದ್ದಾನೆ. *

**ಕ್ರೇಕ್, ಡಿನಾ ಮರಿಯಾ ಮುಲಾಕ್ :** 1826–1887. ಆಂಗ್ಲ ಕಾದಂಬರಿಗಾರ್ತಿ. ಮಕ್ಕಳಿಗಾಗಿ ಅನೇಕ ಕಥೆ, ಕವನಗಳನ್ನೂ ಬರೆದಿದ್ದಾಳೆ. ಹುಟ್ಟಿದ್ದು ಸ್ಟೋಕಾನ್‌ಟ್ರೆಂಟ್‌ನಲ್ಲಿ. ಈಕೆಯ ತಂದೆ ಥಾಮಸ್ ಮುಲಾಕ್ ಇಲ್ಲಿ ಪಾದ್ರಿಯಾಗಿದ್ದ. 1865ರಲ್ಲಿ ಈಕೆ ಜಾರ್ಜ್ ಲಿಲ್ಲಿಕ್ರೇಕ್ ಎಂಬ ಪ್ರಕಾಶಕನನ್ನು ಮದುವೆಯಾದಳು. 1849ರಲ್ಲಿ ದಿ ಆಗಿಲ್ವೀಸ್ ಎಂಬ ಈಕೆಯ ಮೊದಲ ಕಾದಂಬರಿ ಪ್ರಕಟವಾಯಿತು. ಅನಂತರ ಆಲಿವ್ (1850), ದಿ ಹೆಡ್ ಆಫ್ ದಿ ಫ್ಯಾಮಿಲಿ (1851), ಅಗಾಥಾಸ್ ಹಸ್ಬೆಂಡ್ (1853) ಕಾದಂಬರಿಗಳು ಪ್ರಕಟವಾದುವು. ಆ ವೇಳೆಗೆ ಪ್ರತಿಭಾವಂತ ಲೇಖಕಿ ಎನಿಸಿಕೊಂಡು ಹ್ಯಾಂಪ್‌ಸ್ಟೆಡ್‌ನಲ್ಲಿ ವಾಸಿಸತೊಡಗಿದಳು. 1857ರಲ್ಲಿ ಪ್ರಕಟವಾದ ಜಾನ್ ಹ್ಯಾಲಿಫಾಕ್ಸ್, ಜಂಟಲ್‌ಮನ್ ಈಕೆಯ ಜನಪ್ರಿಯ ಕಾದಂಬರಿ. ಅನಂತರ ಎ ಲೈಫ್ ಫಾರ್ ಎ ಲೈಫ್ (1859), ಕ್ರಿಶ್ಚನ್ಸ್ ಮಿಸ್ಟೇಕ್ (1865) ಎಂಬ ಕಾದಂಬರಿಗಳು ಹೊರಬಂದುವು. ದಿ ಅಡ್ವೆಂಚರ್ಸ್ ಆಫ್ ಎ ಬ್ರೌನಿ (1872), ದಿ ಲಿಟ್ಲ್ ಲೇಮ್ ಪ್ರಿನ್ಸ್ – ಇವು ಈಕೆ ಮಕ್ಕಳಿಗಾಗಿ

ಬರೆದ ಸುಂದರವಾದ ಕಥೆಗಳು. 1881ರಲ್ಲಿ ಪೊಯಮ್ಸ್ ಆಫ್ ಥರ್ಟಿ ಇಯರ್ಸ್, ನ್ಯೂ ಅಂಡ್ ಓಲ್ಡ್ ಕೃತಿ ಪ್ರಕಟಗೊಂಡಿತು. ಮಕ್ಕಳಿಗಾಗಿ ಸುಂದರ ಕಥೆಗಳನ್ನು ಹೆಣೆಯುವುದರಲ್ಲೂ ಕಾದಂಬರಿಗಳಲ್ಲಿ ಆಂಗ್ಲರ ಪದ್ಧತಿ ಹಾಗೂ ನೀತಿ ನಿಯಮಗಳನ್ನು ಚೆನ್ನಾಗಿ ಚಿತ್ರಿಸುವುದರಲ್ಲೂ ಹೆಸರಾಗಿದ್ದಾಳೆ. (ಎಚ್.ವಿ.ಎಸ್.)

**ಕ್ರೇಟರ್ :** ಆಕಾಶದಲ್ಲಿರುವ 88 ನಕ್ಷತ್ರಪುಂಜಗಳ ಪೈಕಿ ಒಂದು. ಭಾರತೀಯ ನಾಮ ಕಂದರ. ವಿಷುವದಂಶ 10 ಗಂ. 50 ಮಿ.–11 ಗಂ. 55 ಮೀ ಮತ್ತು ಘಂಟಾವೃತ್ತಾಂಶ 6°–25°ದ. ಈ ಪುಂಜವನ್ನು ಬರಿಗಣ್ಣಿನಿಂದ ಗುರುತಿಸುವುದು ಕಷ್ಟ. *

**ಕ್ರೇನ್, ಸ್ಟೀವನ್ :** 1871–1900. ಅಮೆರಿಕೆಯ ಯುದ್ಧ ಬಾತ್ಮೀದಾರ, ಕವಿ, ಕಾದಂಬರಿಕಾರ. ನ್ಯೂ ಜರ್ಸಿಯ ನ್ಯೂಯಾರ್ಕ್‌ನ ಮೆಥಾಡಿಸ್ಟ್ ಕ್ರೈಸ್ತ ಪಾದ್ರಿಯೊಬ್ಬನ 14ನೆಯ ಮಗ. ಸೈರಾಕ್ಯೂಸ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಬೇಸ್‌ಬಾಲ್ ಟೀಮಿನ ಮುಖಂಡತ್ವವನ್ನು ವಹಿಸಿದ್ದ. ಅನಂತರ ಪತ್ರಿಕೋದ್ಯಮಿಯಾದ. ಮ್ಯಾಗಿ: ಎ ಗರ್ಲ್ ಆಫ್ ದಿ ಸ್ಟ್ರೀಟ್ಸ್ (1892) ಈತನ ಪ್ರಥಮ ಕೃತಿ. ಜನರ ಗಮನ ಸೆಳೆಯದಿದ್ದರೂ ಇದು ಈತನ ಪ್ರೌಢ ಸಾಹಿತ್ಯ ಶಕ್ತಿಗೆ ಸಾಕ್ಷಿಯಾಗಿದೆ. ಮರುವರ್ಷ ದಿ ರೆಡ್ ಬ್ಯಾಡ್ಜ್ ಆಫ್ ಕರೇಜ್ ಎಂಬ ಕಾದಂಬರಿಯನ್ನು ಅಮೆರಿಕ ಅಂತರ್ಯುದ್ಧದ ಹಿನ್ನೆಲೆಯನ್ನಿಟ್ಟುಕೊಂಡು ರಚಿಸಿದ. ಇದು ತುಂಬ ಜನಪ್ರಿಯತೆಯನ್ನು ಗಳಿಸಿತು. ಅಲ್ಲಿಂದ ಮುಂದಿನ ಈತನ ಜೀವನ ಯುದ್ಧಗಳನ್ನು ನೋಡುವುದರಲ್ಲಿಯೂ ಅವುಗಳನ್ನು ನಿರೂಪಿಸಿ ಬರೆಯುವುದರಲ್ಲಿಯೂ ಕಳೆಯಿತು. 1896ರಲ್ಲಿ ಲಂಡನಿಗೆ ಬಂದು ಕಾನ್ರಾಡನ ಸ್ನೇಹ ಗಳಿಸಿದ. ಅನಂತರ ಸ್ಪ್ಯಾನಿಷ್ ಅಮೆರಿಕನ್ ಯುದ್ಧದ ಹಿನ್ನೆಲೆಯನ್ನು ಇಟ್ಟುಕೊಂಡು ವೂಂಡ್ಸ್ ಇನ್ ದಿ ರೇನ್ (1900) ಕೃತಿಯನ್ನು ರಚಿಸಿದ. ಈತನ ಕವನ ಸಂಕಲನಗಳಲ್ಲಿ ದಿ ಬ್ಲ್ಯಾಕ್ ರೈಡರ್ಸ್ (1895) ಮತ್ತು ವಾರ್ ಈಸ್ ಕೈಂಡ್ (1900) ಎಂಬುವು ಸೇರಿವೆ. ಕ್ಷಯ ರೋಗಕ್ಕೆ ತುತ್ತಾದ ಈತ ಜರ್ಮನಿಯಲ್ಲಿ ಸತ್ತ. ವ್ಯವಸ್ಥೆಗೆಟ್ಟ ಈ ಜಗತ್ತಿನಲ್ಲಿ ಸಿಗಬಹುದಾದ ಒಂದು ಸಮಾಧಾನ ವ್ಯಕ್ತಿ–ವ್ಯಕ್ತಿಗಳ ನಡುವಿನ ಸ್ನೇಹ ಸಂಬಂಧದಿಂದ–ಎಂಬುದನ್ನು ದಿ ರೆಡ್ ಬ್ಯಾಡ್ಜ್ ಆಫ್ ಕರೇಜ್ ಕಾದಂಬರಿಯ ಮುಖೇನ ಈತ ಸಾರಿದ್ದಾನೆ. ದಿ ಓಪನ್ ಬೋಟ್ ಮೊದಲಾದ ಶ್ರೇಷ್ಠ ಸಣ್ಣ ಕಥೆಗಳನ್ನೂ ಈತ ರಚಿಸಿದ್ದಾನೆ. ಕ್ರೇನನ ಸಮಗ್ರ ಸಾಹಿತ್ಯ 1926ರಲ್ಲಿ 12 ಸಂಪುಟಗಳಲ್ಲಿ ಪ್ರಕಟವಾಗಿದೆ. (ಎನ್.ಎಸ್.ಎಲ್.)

**ಕ್ರೇನ್, ಹ್ಯಾರಲ್ಡ್ ಹಾರ್ಟ್ :** 1899–1932. ಅಮೆರಿಕದ ಕವಿ. ಒಹಾಯೊದ ಗಾರೆಟ್ಸ್ ವಿಲ್ಲೆಯಲ್ಲಿ ಹುಟ್ಟಿದ. ಚಿಕ್ಕಂದಿನಲ್ಲಿ ಈತನ ತಂದೆ ತಾಯಿಗಳು ಕ್ಲೀವ್‌ಲೆಂಡಿಗೆ ತೆರಳಿದುದರಿಂದ ಈತನೂ ಅವರನ್ನು ಹಿಂಬಾಲಿಸಿದ. ಅಲ್ಲಿ ಈತನ ತಂದೆ ಮಿಠಾಯಿ ಅಂಗಡಿಯ ದೊಡ್ಡ ವ್ಯಾಪಾರಿಯಾಗಿದ್ದ. ಕೆಲ ಸಮಯದ ಅನಂತರ ತಂದೆ ತಾಯಿಗಳು ದಾಂಪತ್ಯ ವಿಚ್ಛೇದನ ಪಡೆದುದರಿಂದ ಕ್ರೇನ್ ಅನಾಥನಾದ. ಕೇವಲ 13ನೇ ವಯಸ್ಸಿನಲ್ಲೆ ಪದ್ಯಗಳನ್ನು ಬರೆಯತೊಡಗಿದ. ತನ್ನ 17ನೆಯ ವಯಸ್ಸಿನಲ್ಲಿ ಒಂದು ವರ್ಷ ಕಾಲ ತಂದೆಯ ನೆಲಸು ನಾಡಿನಲ್ಲಿ ಕಳೆದ. ಅನಂತರ ಒಂದನೆಯ ಮಹಾಯುದ್ಧದಲ್ಲಿ ಶಸ್ತ್ರಗಳ ಸರಬರಾಜಿನಲ್ಲಿ ನಿರತನಾದ. ಆ ಮೇಲೆ ಕ್ಲೀವ್‌ಲೆಂಡನ 'ಪ್ಲೇನ್ ಡೀಲರ್'ನ ಸುದ್ದಿಗಾರನಾದ. ಈತನ ಮುಖ್ಯ ಕೃತಿಗಳೆಂದರೆ ವೈಟ್ ಬಿಲ್ಡಿಂಗ್ಸ್ (1926) ಮತ್ತು ದಿ ಬ್ರಿಜ್ (1930) ಎಂಬ ಕವನ ಸಂಕಲನಗಳು. ದಿ ಬ್ರಿಜ್ ಅಮೆರಿಕನರ ಮನೋಧರ್ಮವನ್ನು ತಿಳಿಸುವ ವಿಚಾರಾತ್ಮಕ ದೀರ್ಘಕವನ. 1931ರಲ್ಲಿ ಗುಗೆನ್‌ಹೈಮ್‌ನ ಫೆಲೊ ಪದವಿಯನ್ನು ಪಡೆದು ಮೆಕ್ಸಿಕೋಗೆ ತೆರಳಿದ. ಆ ವೇಳೆಗಾಗಲೇ ಕ್ರೇನ್ ತನ್ನ ನಿರ್ಲಕ್ಷ್ಯ ಜೀವನ ಹಾಗೂ ಅತಿಯಾದ ಮದ್ಯಪಾನದಿಂದಾಗಿ ವ್ಯಕ್ತಿತ್ವವನ್ನು ಕಳೆದುಕೊಂಡಿದ್ದ, ದೈಹಿಕವಾಗಿ ಸೊರಗಿಹೋಗಿದ್ದ. ಜೀವನದಲ್ಲಿ ಜುಗುಪ್ಸೆಗೊಂಡ ಈತ ನ್ಯೂಯಾರ್ಕಿಗೆ ಹೋಗುವ ದಾರಿಯಲ್ಲಿ ಹಡಗಿನಿಂದ ಹಾರಿ ಮೆಕ್ಸಿಕೋ ಖಾರಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡ. 1933ರಲ್ಲಿ ಈತನ ಕಲೆಕ್ಟೆಡ್ ಪೊಯಮ್ಸ್ ಮತ್ತು 1952ರಲ್ಲಿ ಲೆಟರ್ಸ್ ಎಂಬ ಕೃತಿಗಳು ಪ್ರಕಟಗೊಂಡವು. ಕ್ರೇನ್ ಅಮೆರಿಕದ ಆಧುನಿಕ ಕವಿಗಳಲ್ಲಿ ಇಂದಿಗೂ ಅಗ್ರಪಂಕ್ತಿಯಲ್ಲಿ ಸೇರಿದ್ದಾನೆ. ತನ್ನ ಕೃತಿಗಳಲ್ಲಿ ಈತ ಸೂಚ್ಯಾರ್ಥವನ್ನು ಬಳಸಿರುವ ಬಗೆ ವಿಶಿಷ್ಟ ರೀತಿಯದು. (ಎಂ.ಕೆ.ಎನ್.)

**ಕ್ರೇಪ್ :** ಸಾಧಾರಣವಾದ ದಾರವನ್ನು ಉಪಯೋಗಿಸಿ ವಿಶೇಷ ನೇಯ್ಗೆ ಕ್ರಮದಿಂದ ತಯಾರಿಸಿರುವ ಮತ್ತು ಮೇಲ್ಮೈ ಕ್ರಮರಹಿತ ಹಾಗೂ ವಿಚ್ಛಿನ್ನವಾಗಿರುವ ಬಟ್ಟೆ. ಬಹುತೇಕ ಕ್ರೇಪ್ ವಸ್ತ್ರಗಳಲ್ಲಿ ಹಾಸುಹೊಕ್ಕುಗಳು ಹತ್ತಿ–ಉಣ್ಣೆ, ಹತ್ತಿ–ಕೃತಕ ರೇಷ್ಮೆ ಇತ್ಯಾದಿ ವಿಷಮ ಜಾತಿ ಎಳೆಗಳಿಂದ ಕೂಡಿರುತ್ತದೆ. ವಿಶೇಷವಾಗಿ ಕ್ರೇಪ್ ಬಟ್ಟೆಗಳಲ್ಲಿ ನೇಯ್ಗೆ ಸಾದಾ. ಕ್ರೇಪ್ ಸ್ವರೂಪ ಹಾಸನ್ನಾಗಲಿ ಹೊಕ್ಕನ್ನಾಗಲಿ ಅಥವಾ ಎರಡನ್ನೂ ವಿಪರೀತ ಹುರಿ ಮಾಡುವುದರಿಂದ ಏರ್ಪಡುತ್ತದೆ. ಈ ರೀತಿ ನೇಯ್ದ ಬಟ್ಟೆಯನ್ನು ಆಕ್ಲೇದನ ಪೂರ್ಣಕ್ರಿಯೆಗೆ (ವೆಟ್ ಫಿನಿಷಿಂಗ್) ಒಳಪಡಿಸಿದರೆ ಹೊಕ್ಕು ದಾರ ಸಾಕಷ್ಟು ಸಂಕುಚಿತವಾಗುತ್ತದೆ. ನಿಯಮದಂತೆ ದಾರಗಳನ್ನು ಬಲಹುರಿ–ಎಡಹುರಿಗಳ ದಾರಗಳು ಸಮಾನ ಪ್ರಮಾಣದಲ್ಲಿರುವಂತೆ ಏರ್ಪಡಿಸುತ್ತಾರೆ. ಆದಕಾರಣ ಬಟ್ಟೆ ಸಂಕುಚಿಸಿದಾಗ ಎಳೆಗಳು ಪರಸ್ಪರ ವಿರುದ್ಧ ದೆಸೆಗಳಲ್ಲಿ ಸಂಕುಚಿಸುತ್ತವೆ. ಇದರಿಂದಲೇ ಕ್ರಮರಹಿತ ಮೇಲ್ಮೈ ರೂಪ ಏರ್ಪಡುತ್ತದೆ. ಕ್ರೇಪ್ ಬಟ್ಟೆಗಳು ಹಗುರ ಮತ್ತು ಮೃದು. (ವಿ.ಎಸ್.ವಿ.)

**ಕ್ರೇಪ್–ಡಿ–ಷನ್ :** ಸಾದಾ ನೇಯ್ಗೆಯಿರುವ ಹಾಗೂ ಚಿತ್ರಿತ ಅಥವಾ ಮುದ್ರಿತ ಮತ್ತು ಅತಿ ನುಣುಪಾದ ಒಂದು ವಿಧವಾದ ಕ್ರೇಪ್. ಬಹು ಹಸನಾದ ರೇಷ್ಮೆಯ ಹಾಸು ದಾರ ಮತ್ತು ಬಿಗಿಯಾಗಿ ಹುರಿ ಮಾಡಿದ ಉರ್‌ಸ್ಟೆಡ್ ಉಣ್ಣೆ ಹೊಕ್ಕಿನಿಂದ ಇದನ್ನು ತಯಾರಿಸಲಾಗುವುದು. ವಸ್ತ್ರಕ್ಕೆ ಪೂರ್ಣೀಕರಣವನ್ನು ಒದಗಿಸಿದ ಬಳಿಕ ಅದಕ್ಕೆ ಮುದುರಿದಂಥ ಹೊರಮೈ ಉಂಟಾಗುತ್ತದೆ. ಹೊಕ್ಕನ್ನು ಹಾಸಿನ ವ್ಯತಿರಿಕ್ತದೆಸೆಯಲ್ಲಿ ಹುರಿ ಮಾಡಿರುತ್ತಾರೆ. ಬಿಗಿಯಾಗಿ ಹುರಿ ಮಾಡಿದ ಹಾಸು ಮತ್ತು ಹೊಕ್ಕುಗಳಲ್ಲಿ ಎರಡು ಹೊಕ್ಕು ದಾರಗಳು ಎಡ ಹುರಿಯವು ಮತ್ತು ಎರಡು ಬಲ ಹುರಿಯವು ಇರುವಂತೆ ಕೆಲವು ಕ್ರೇಪ್–ಡಿ–ಷನ್ ಬಟ್ಟೆಗಳನ್ನು ಏರ್ಪಡಿಸಿರುತ್ತಾರೆ. ಸಾದಾ ನೇಯ್ಗೆಯಲ್ಲಿ ಹಸನಾದ ಮತ್ತು ನವಿರಾದ ರೇಷ್ಮೆ ಬಟ್ಟೆಗಳೂ ಈ ಗುಂಪಿಗೆ ಸೇರಿದ ವಸ್ತ್ರಗಳು. (ವಿ.ಎಸ್.ವಿ.)

**ಕ್ರೇಪೆಲಿನ್, ಎಮಿಲ್ :** 1856–1926. ವೂಂಟ್‌ನ ಶಿಷ್ಯರಲ್ಲಿ ಪ್ರಮುಖನಾದ ಈತ ವೃತ್ತಿಯಲ್ಲಿ ಮನೋರೋಗ ಚಿಕಿತ್ಸಕ. 1883ರಲ್ಲಿ, ಇನ್ನೂ ತನಗೆ ಇಪ್ಪತ್ತೊಂದು ವರ್ಷ ಪ್ರಾಯವಾಗಿದ್ದಾಗಲೇ ಈ ವಿಚಾರವಾಗಿ ಗ್ರಂಥವೊಂದನ್ನು ಬರೆದಿದ್ದ. ಇದು ಪ್ರಖ್ಯಾತವಾಗಿ ಹಲವಾರು ಪರಿಷ್ಕರಣಗಳನ್ನು ದಾಟಿತು. ಈತ ಹೈಡೆಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ 1890ರಿಂದ 1903ರ ತನಕ ಮ್ಯೂನಿಚ್‌ನಲ್ಲಿ 1903 ರಿಂದ 1926ರ ತನಕ ಪ್ರಾಧ್ಯಾಪಕನಾಗಿದ್ದ. ಮಾನಸ ಪ್ರವೃತ್ತಿಗಳ ವಿಚಾರವಾಗಿ ಹಲವಾರು ಪ್ರಬಂಧಗಳನ್ನೂ ಪುಸ್ತಕಗಳನ್ನೂ ಈತ ಪ್ರಕಟಿಸಿದ್ದಾನೆ.

ಈಗ ಸ್ಕಿಜೋಫೇನಿಯಾ ಎಂದು ಕರೆಯಲ್ಪಡುವ ಕಾಯಿಲೆಯನ್ನು, 'ಡಿಮೆನ್ಷಿಯಾ ಪ್ರೇಕಾಕ್ಸ್' (ಚಿಕ್ಕವರಲ್ಲಿ ಉಂಟಾಗುವ ಚಿತ್ತವೈಕಲ್ಯ) ಎಂದು ಕರೆದಿದ್ದನು. ಇದು ಮ್ಯಾನಿಕ್ ಡಿಪ್ರೆಸಿವ್ ಸೈಕೋಸಿಸ್ (ನೋಡಿ – ಉನ್ಮಾದ ವಿಷಣ್ಣತಾ ಮನೋವಿಕ್ಷಿಪ್ತಿ) ಎಂಬ ಖಾಯಿಲೆಗಿಂತ ಭಿನ್ನವಾದುದು ಎಂಬುದನ್ನು ತೋರಿಸಿಕೊಟ್ಟನು. ಈ ಖಾಯಿಲೆ ತೋರಿಕೊಳ್ಳುವ ವಯಸ್ಸು ಮತ್ತು ಅವು ವಾಸಿಯಾಗುವ ಸೂಚನೆ ಈ ಆಧಾರದ ಮೇಲೆ, ಈ ಹಿಂದೆ ಗುರುತಿಸಲಾಗಿದ್ದ ಹೆಬೆಫ್ರೇನಿಯಾ, ಪ್ಯಾರನೋಯಿಯಾ ಮತ್ತು ಕ್ಯಾಟಮೋನಿಯ ಎಂಬ ಮೂರು ಬೇರೆ ಬೇರೆ ಖಾಯಿಲೆಗಳೂ ಡಿಮೆನ್ಷಿಯಾ ಪ್ರೇಕಾಕ್ಸ್‌ನ ವಿಧಗಳು ಎಂದು ತೀರ್ಮಾನಿಸಿದ. ಆತನ ಪ್ರಕಾರ ಯಾವುದೇ ಒಂದು ರೋಗ ಲಕ್ಷಣ ಈ ಖಾಯಿಲೆಯಲ್ಲಿ ಕಾಣುವುದಿಲ್ಲ. ಅದಕ್ಕೆ ಬದಲಾಗಿ ರೋಗ ಲಕ್ಷಣಗಳು ಹೇಗೆ ವಿಕಸಿತವಾಗಿ ಯಾವ ರೀತಿಯ ರೂಪ ತಾಳುತ್ತವೆ ಎಂಬುದು ರೋಗನಿದಾನಕ್ಕೆ ಮುಖ್ಯ ಎಂದು ತಿಳಿಸಿದ. ಒಬ್ಬ ಮನೋವಿಕ್ಷಿಪ್ತ ವ್ಯಕ್ತಿ ಕಾಲಾನುಕ್ರಮದಲ್ಲಿ ಮಾನಸಿಕವಾಗಿ ಕ್ಷೀಣಿಸುತ್ತಾ ಬಂದರೆ ಆತ ಡಿಮೆನ್ಷಿಯ ಪ್ರೇಕಾಕ್ಸ್‌ನಿಂದ ಬಳಲುತ್ತಿದ್ದಾನೆ ಎಂದು ಹೇಳಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ. ಸ್ಕಿಜೋಫೇನಿಯ ದೊಡ್ಡವರಲ್ಲೂ ಕಾಣಿಸಿಕೊಳ್ಳಬಹುದು ಮತ್ತು ಅಲ್ಪಾವಧಿಯಲ್ಲೂ ಇರಬಹುದು ಎಂದು ಇತ್ತೀಚಿನ ಸಂಶೋಧನೆಗಳು ದೃಢಪಡಿಸಿವೆ. (ಎಸ್.ಕೆ.ಕೆ.)

**ಕ್ರೇಮರ್, ಗೇಬ್ರಿಯಲ್ :** 1704–1752. ಸ್ವಿಟ್ಜರ್ಲೆಂಡಿನ ಗಣಿತ ವಿಜ್ಞಾನಿ. ಈತನ ಜನನ ಜಿನೀವದಲ್ಲಿ. ತಂದೆ ಜೀನ್ ಐಸಾಕ್ ಕ್ರೇಮರ್; ತಾಯಿ ಆನಿ ಮ್ಯಾಲೆಟ್. ಇವರ ಮೂರನೆಯ ಮಗನೇ ಗೇಬ್ರಿಯಲ್ ಕ್ರೇಮರ್ ಜೀನ್ ಐಸಾಕ್ ಕ್ರೇಮರ್ ಜೀವನೋಪಾಯಕ್ಕಾಗಿ ತನ್ನ ಕುಟುಂಬದವರೊಡನೆ ಹೋಲ್‌ಸ್ಟೈನಿನಿಂದ ಸ್ಟ್ರಾಸ್‌ಬರ್ಗಿಗೂ ಅನಂತರ ಅಲ್ಲಿಂದ ಜಿನೀವಕ್ಕೂ ಪ್ರಯಾಣ ಬೆಳೆಸಿದ. ಹಿರಿಯ ಮಗ ಜೀನ್ ಆಂಟೊಯ್ನಿ ತನ್ನ ತಂದೆಯೊಡನೆ ಸೇರಿ ಜಿನೀವದಲ್ಲಿ ವೈದ್ಯವೃತ್ತಿ ನಡೆಸಿದ. ಜೀನ್ ಕ್ರೇಮರ್ ನ್ಯಾಯಶಾಸ್ತ್ರದ ಪ್ರಾಧ್ಯಾಪಕನಾದ; ಗೇಬ್ರಿಯಲ್ ಕ್ರೇಮರ್ ಗಣಿತವಿಜ್ಞಾನದ ಮತ್ತು ತತ್ತ್ವಶಾಸ್ತ್ರದ ಪ್ರಾಧ್ಯಾಪಕನಾದ. ಒಟ್ಟಿನಲ್ಲಿ ಮೂರು ಗಂಡುಮಕ್ಕಳೂ ಸ್ಥಳೀಯ ಸರ್ಕಾರದ ವ್ಯವಹಾರಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು.

ಕ್ರೇಮರನ ಮೊದಲ ವಿದ್ಯಾಭ್ಯಾಸವೆಲ್ಲವೂ ಜಿನೀವದಲ್ಲೇ ನಡೆಯಿತು. ಹದಿನೆಂಟರ ಹರೆಯದಲ್ಲಿ ಶಬ್ದಶಾಸ್ತ್ರಕ್ಕೆ ಸಂಬಂಧಿಸಿದ ಪ್ರಬಂಧವೊಂದನ್ನು ಪ್ರಸಿದ್ಧಿಸಿದ. ಇಪ್ಪತ್ತರಲ್ಲಿ ಜಿನೀವದ ಕೆಲ್ವಿನ್ ಆಕಾಡೆಮಿಯಲ್ಲಿ ತತ್ತ್ವಶಾಸ್ತ್ರದ ಪೀಠಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ. ಆದರೆ ಸ್ಪರ್ಧಿಸಿದ ಮೂವರಲ್ಲಿ ಅತ್ಯಂತ ಹಿರಿಯನಾದ ಅಮೀಡೀದೆಲಾ ರೀವ್ ಎಂಬುವನಿಗೆ ಆ ಸ್ಥಾನ ದೊರಕಿತು. ಕ್ರೇಮರ್ ಮತ್ತು ಮತ್ತೊಬ್ಬ ಸ್ಪರ್ಧಿಯಾದ 21 ವರ್ಷದ ಜಿಯೊವಾನಿ ಲುಡೋವಿಕೋ ಕ್ಯಾಲಂಡ್ರಿನಿಯಂಥ ಯುವಕರಿಗೆ ಸ್ಥಾನಮಾನಗಳನ್ನು ಕಲ್ಪಿಸಬೇಕೆಂಬುದು ಅಕೆಡಮಿಯ ಪ್ರಾಜ್ಞರ ಅಭಿಮತವಾಗಿತ್ತು. ಇದನ್ನು ನೆರವೇರಿಸಲು ಆ ತತ್ತ್ವಶಾಸ್ತ್ರ ಪೀಠವನ್ನು ಎರಡು ವಿಭಾಗಗಳಾಗಿ ಮಾಡಿ ಇಬ್ಬರನ್ನೂ ಆಯಾ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿದರು. ಸ್ಥಾನದ ಕರ್ತವ್ಯಗಳು ಹಾಗೂ ಅದರಿಂದ ಬರುವ ಸಂಭಾವನೆಯನ್ನು ಇಬ್ಬರೂ ಹಂಚಿಕೊಳ್ಳಲಿಕ್ಕೆ ಅಲ್ಲಿ ಅವಕಾಶವಿತ್ತಲ್ಲದೆ ಅವರು

ಜ್ಞಾನಾರ್ಜನೆಗಾಗಿ ಎರಡು ಮೂರು ವರ್ಷಗಳ ಕಾಲ ಪ್ರವಾಸ ಮಾಡುವುದು ಸಹ ಸಾಧ್ಯವಿತ್ತು. ಒಬ್ಬನ ಪ್ರವಾಸ ಕಾಲದಲ್ಲಿ ಮತ್ತೊಬ್ಬ ಪ್ರವಾಸಿಯ ಕರ್ತವ್ಯಗಳನ್ನು ನಿರ್ವಹಿಸಿ ಆತನ ಸಂಭಾವನೆಯನ್ನೂ ಪಡೆಯುತ್ತಿದ್ದ. ಕ್ಯಾಲಂಡ್ರಿನಿ ಮತ್ತು ಕ್ರೇಮರ್–ಇವರುಗಳ ಅನ್ಯೋನ್ಯ ಸಂಬಂಧ ಹೇಗಿತ್ತೆಂದರೆ ಇವರನ್ನು ಅವರ ಮಿತ್ರರು ಕ್ಯಾಸ್ಟರ್ ಮತ್ತು ಪೊಲ್ಲಕ್ಸ್ ಎಂದು ಕರೆಯುತ್ತಿದ್ದರು. ಗಣಿತವಿಜ್ಞಾನದಲ್ಲಿ ಹೊಸತನವನ್ನು ತರಲು ಇವರಿಗೆ ಲ್ಯಾಟಿನ್ ಭಾಷೆಯುನ್ನು ಬಳಸುವುದರ ಬದಲು ಫ್ರೆಂಚನ್ನು ಬಳಸಲು ಅವಕಾಶವೀಯಲಾಯಿತು. ಅಲ್ಲಿನ ವಿದ್ಯಾರ್ಥಿಗಳಿಗೆ ಕ್ಯಾಲಂಡ್ರಿನಿ ಬೀಜಗಣಿತವನ್ನೂ ಕ್ರೇಮರ್ ಖಗೋಳವಿಜ್ಞಾನವನ್ನೂ ಕಲಿಸಿದರು. 1734ರಲ್ಲಿ ಕ್ಯಾಲಂಡ್ರಿನಿಗೆ ತತ್ತ್ವಶಾಸ್ತ್ರದ ಪ್ರಾಧ್ಯಾಪಕನ ಹುದ್ದೆಯೂ ಕ್ರೇಮರನಿಗೆ ಗಣಿತವಿಜ್ಞಾನದ ಪೀಠಾಧ್ಯಕ್ಷನ ಸ್ಥಾನವೂ ದೊರೆತವು. ಕ್ಯಾಲಂಡ್ರಿನಿ ಸರ್ಕಾರೀ ವೃತ್ತಿಯನ್ನು ಕೈಗೊಂಡಾಗ ಕ್ರೇಮರನನ್ನು ವಿಜ್ಞಾನವಿಭಾಗದ ಪ್ರಾಧ್ಯಾಪಕನನ್ನಾಗಿ ಮಾಡಲಾಯಿತು (1750). ತನ್ನ ನಿತ್ಯಜೀವನದಲ್ಲೂ ವ್ಯಾಸಂಗವಿಷಯುಗಳಲ್ಲೂ ಕ್ರೇಮರನಿಗಿದ್ದ ಆಸಕ್ತಿಗಳು ಹೆಚ್ಚಿದ್ದು ಅವನ ಕಾರ್ಯಚಟುವಟಿಕೆಗಳು ಬಹುಮುಖವಾಗಿದ್ದವು. ಒಂದು ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ತತ್ತ್ವಶಾಸ್ತ್ರದ ಉಪಯೋಗದ ವಿಚಾರ ಮುಂತಾದ ವಿಷಯಗಳ ಮೇಲೆ ಈತನ ಅನೇಕ ಬರೆಹಗಳಿವೆ.

ಲಂಡನಿನ ರಾಯಲ್ ಸೊಸೈಟಿಯ ಸದಸ್ಯತ್ವವೂ ಸೇರಿದಂತೆ ಕ್ರೇಮರನಿಗೆ ಅನೇಕ ಸಂಘ–ಸಂಸ್ಥೆಗಳಿಂದ ಗೌರವ ಲಭಿಸಿತು. ಬರ್ಲಿನ್, ಲೈಯನ್ಸ್, ಮಾಂಟಿಪೀಲ್ಯರುಗಳ ಅಕೆಡಮಿಗಳ ಪ್ರಶಸ್ತಿಗಳೂ ಬೋಲೋನ್ಯಾ ಇನ್‌ಸ್ಟಿಟ್ಯೂಟಿನ ಪ್ರಶಸ್ತಿಯೂ ಇವನಿಗೆ ಬಂದುವು. ಕ್ರೇಮರ್ ಸೂತ್ರವಿಧಿ (**ನೋಡಿ– ಕ್ರೇಮರ್–ಸೂತ್ರವಿಧಿ**) ಮತ್ತು ಕ್ರೇಮರ್ ಅಸಂಗತೋಕ್ತಿಗಳು (ಪ್ಯಾರಡಾಕ್ಸಸ್) ಜನಪ್ರಿಯವಾಗಿರುವಂಥ ಎರಡು ವಿಷಯಗಳು. *

**ಕ್ರೇಮರ್, ರಾವ್ ಅಸಾಮ್ಯ :** ಸಂಖ್ಯಾಕಲನೀಯ ಅಂದಾಜಿನ ಮೂಲಕ ಆಕಲನದ (ಎಸ್ಟಿಮೇಟರ್) ವಿಚಲನೆಯ ಗರಿಷ್ಠ ಬೆಲೆಯನ್ನು ನಿರೂಪಿಸುವ ಸಂಬಂಧ. ಗರಿಷ್ಠತಮ ಪ್ರಾಯಿಕತೆಯ (ಮ್ಯಾಕ್ಸಿಮಂ ಲೈಕ್‌ಲಿಹುಡ್) ಆಕಲನಗಳು ಸಂಖ್ಯಾಕಲನಶಾಸ್ತ್ರದಲ್ಲಿ (ಸ್ಟ್ಯಾಟಿಸ್ಟಿಕ್ಸ್) ಮಹತ್ತಮ ಸ್ಥಾನವನ್ನು ಪಡೆದಿವೆ. ಅವುಗಳಿಗೆ ಹಲವು ಆಕರ್ಷಕ ಗುಣಧರ್ಮಗಳಿವೆ. ಅವುಗಳಲ್ಲಿ ಮುಖ್ಯವಾದವು :

1. ಗ.ಪ್ರಾ. ಆಕಲನಗಳು ಸಂಗತವಾಗಿರುವುವು (ಕನ್ಸಿಸ್ಟೆಂಟ್).

2. ಪ್ರತಿಚಯನದ (ಸ್ಯಾಂಪಲ್) ಗಾತ್ರ $N$ ಹೆಚ್ಚಿದಂತೆಲ್ಲ ಗ.ಪ್ರಾ. ಆಕಲನಗಳು ಪ್ರಸಾಮಾನ್ಯ ವಿತರಣೆಗೆ (ನಾರ್ಮಲ್ ಡಿಸ್ಟ್ರಿಬ್ಯೂಷನ್) ಅಭಿಸರಿಸುವುವು.

3. ಗ.ಪ್ರಾ. ಆಕಲನಗಳು ದಕ್ಷತಮವಾಗಿರುವುವವು

$\theta$ ಪ್ರಾಚಲದ (ಪ್ಯಾರಾಮೀಟರ್) ಗರಿಷ್ಠತಮ ಪ್ರಾಯಿಕತೆಯ ಆಕಲನ $T$ ಆಗಿದ್ದರೆ ಅದರ ವಿಚಲನೆಯನ್ನು ಈ ಸಾಮ್ಯದಿಂದ ಪಡೆಯಬಹುದು :

$$\left[V(T)\right]^{-1} = -N\int_{-\infty}^{\infty}\left(\frac{\partial \log f}{\partial\theta}\right)^2 \Bigg] f\,dx_{\theta=\theta_0}$$

$$= NE\left(\frac{\partial \log f}{\partial\theta}\right)\Bigg]^2_{\theta=\theta_0} \qquad ...[1]$$

ಇಲ್ಲಿ $f$ ಎಂಬುದು $x$ ಚರದ ಸಂಭಾವ್ಯತಾ ಸಾಂದ್ರತೆಯ ಉತ್ಪನ್ನ, $E$ ಗಣಿತ ನಿರೀಕ್ಷಣೆಯನ್ನು ಸೂಚಿಸುವ ಸಂಕೇತ. ಈಗ $f$ ಉತ್ಪನ್ನದ ಪ್ರಾಂತ (ಡೊಮೇನ್) ದ ಮೇಲೆ ಅವಲಂಬಿಸದೆ ಇದ್ದ ಪಕ್ಷದಲ್ಲಿ ಈ ಸಂಬಂಧವನ್ನು ಬೇರೆ ರೀತಿಯಲ್ಲೂ ಹೀಗೆ ನಿರೂಪಿಸಬಹುದು.

$$\left[V(T)\right]^{-1} = -NE\left(\frac{\sigma^2 \log f}{\partial\theta^2}\right)_{\theta=\theta_0} \qquad ...[2]$$

ಪ್ರಾಯಿಕತೆಯ ಉತ್ಪನ್ನವನ್ನು (ಲೈಕ್‌ಲಿಹುಡ್ ಫಂಕ್ಷನ್) L ಎಂದು ಸೂಚಿಸಿದರೆ $\log L = \sum_i \log f(x_i)$ ಆಗುವುದು. ಎಲ್ಲ $x_i$ ಗಳ ವಿತರಣೆಯೂ ಒಂದೇ ಆಗಿರುವುದರಿಂದ

$$E \;\log L = E\sum_i \log f(x_i) = N\log f(x) \qquad ...[3]$$

ಇದರಿಂದಾಗಿ ಸಂಬಂಧ (2) ನ್ನು ಹೀಗೂ ನಿರೂಪಿಸಬಹುದು.

$$\left[V(T)\right]^{-1} = -E\left(\frac{\sigma^2 \log L}{\partial\theta^2}\right)_{\theta=\theta_0} \qquad ...[4]$$

ಆರ್. ಎ. ಫಿಷರ್ ಎಂಬ ಸಂಖ್ಯಾಕಲನ ಶಾಸ್ತ್ರಜ್ಞ $\int_{-\infty}^{\infty}\left(\frac{\partial \log}{\partial\theta}\right)^2 f\,dx$ ಎಂಬ ಉತ್ಪನ್ನವನ್ನು ಪ್ರತಿಚಯನಾಕಾಶದ (ಸ್ಯಾಂಪಲ್ ಸ್ಪೇಸ್) ಒಂದು ಅವೇಕ್ಷಣೆಯಲ್ಲಿ ಅಡಗಿರುವ θದ ಮೇಲಿನ ಮಾಹಿತಿಯ ಮಾನ (ಇನ್‌ಫರ್ಮೇಷನ್ ಮೆಶರ್) ಎಂದು ಕರಿದಿದ್ದಾನೆ. ಇದನ್ನು $I(\theta)$ ಎಂಬುದಾಗಿ ಸಂಕೇತಿಸುತ್ತೇವೆ. ಈ ಸಂಕೇತವನ್ನು ಬಳಸಿದರೆ ಸಂಬಂಧ (1) ನ್ನು ಈ ರೀತಿ ನಿರೂಪಿಸಬಹುದು:

$$[\mathrm{V(T)}]^{-1} = \mathrm{N}\,I(\theta) \qquad ...(5)$$

ಈಗ $U$ ಎಂಬುದು θ ಪ್ರಾಚಲದ ಯಾವುದಾದರೂ ಆಕಲನವಾಗಿರಲಿ. ಬೃಹತ್ ಪ್ರತಿಚಯನಗಳಲ್ಲಿ ಇದರ ವಿತರಣೆ ಪ್ರಸಾಮಾನ್ಯವಾಗಿದ್ದು ಅದರ ಮಧ್ಯಮಾನ $\theta_o$ ಆಗಿಯೂ ವಿಚಲನೆ $V(U)$ ಆಗಿಯೂ ಇರಲಿ. $f(x)$ ವಿತರಣೆಯ ಪ್ರದೇಶ ದ ಮೇಲೆ ಅವಲಂಬಿಸದೆ ಇದ್ದ ಪಕ್ಷದಲ್ಲಿ

$$\left[V(U)\right]^{-1} \le NE\left[\left(\frac{\partial \log f}{\partial\theta}\right)\right]_{\theta=\theta_0} \qquad ...(6)$$

ಮೇಲೆ ಕೊಟ್ಟಿರುವ ಸಂಬಂಧ (1)ನ್ನು ಇದರೊಡನೆ ಹೋಲಿಸಿ ನೋಡಲು ಗರಿಷ್ಠತಮ ಪ್ರಾಯಿಕತೆಯ ಅಕಲನ ಪರಮದಕ್ಷವಾದುದು ಎಂದು ಖಚಿತವಾಗಿ ತಿಳಿಯಬರುವುದು. ಯಾವುದಾದರೂ $T$ ಆಕಲನ θ ಪ್ರಾಚಲದ ಅಂದಾಜಾಗಿದ್ದು ಅದರ ಅಭಿನತಿ (ಬಯಸ್) $b$ ಇರಲಿ; ಅಂದರೆ $E(T) = \theta + b$ ಇರಲಿ. ಈ ಸಾಮ್ಯದಲ್ಲಿ $b$ ಎಂಬುದು θವನ್ನು ಅವಲಂಬಿಸಿರಬಹುದು. ಆಗ

$$E[(T-\theta)^2] \ge \left(1+\frac{db}{d\theta}\right)^2 / NI(\theta) \qquad ...(7)$$

ಹಾಗೂ $T$ ಯ ವಿಚಲನೆ $V(T)=E[(T-\theta)^2]-b^2$ ಇರುವುದು. ಇದರಿಂದಾಗಿ

$$V(T) \le E[(T-\theta)^2] \qquad ...(8)$$

ಎಂಬುದು ಸಿದ್ದ. $T$ ಆಕಲನದ ಆವೃತ್ತಿ ಉತ್ಪನ್ನ $g(t/\theta)$ ಆಗಿರಲಿ. ಈ ಕೆಳಗಿನ ನಿಯಮಗಳು ಪಾಲಿತವಾದರೆ ಮತ್ತು ಪಾಲಿತವಾದಾಗ ಮಾತ್ರ ಮೇಲಿನ ಸಂಬಂಧದಲ್ಲಿನ ಸಮತೆ ಸಾಮ್ಯದ ಚಿಹ್ನೆ ಸಲ್ಲುವುದು.

(*a*) θಕ್ಕೆ $T$ ಆಕಲನ ಪರ್ಯಾಪ್ತವಾಗಿರಬೇಕು ; ಮತ್ತು

(b) $\frac{\partial \log g}{\partial\theta} = k(T-\theta)^2$. ಇಲ್ಲಿ $T$ ಯಿಂದ $k$ ಸ್ವತಂತ್ರವಾಗಿರಬೇಕು;

ಆದರೆ θ ದ ಮೇಲೆ ಅವಲಂಬಿತವಾಗಿರಬಹುದು. $T$ ನಿದರ್ಶಜ (ಸ್ಟ್ಯಾಟಿಸ್ಟಿಕ್) θದ ಅನಭಿನತ (ಅನ್‌ಬಯಸ್ಡ್) ಆಕಲನವಾದರೆ $b$=0 ಆಗುವುದು. ಆಗ $E(T-\theta)^2$ ಉತ್ಪನ್ನ $T$ಯ ವಿಚಲನೆಯಾಗುವುದು. ಆ ಪರಿಸ್ಥಿತಿಯಲ್ಲಿ

$$\mathrm{V(T)} \ge \frac{1}{NI(\theta)} \qquad ...(9)$$

ಇದಕ್ಕೆ ಕ್ರೇಮರ್–ರಾವ್ ಅಸಾಮ್ಯ ಎಂದು ಹೆಸರು ಮತ್ತು ಈ ಸಂಬಂಧದ ಬಲಬದಿಯ ಉತ್ಪನ್ನಕ್ಕೆ ಮಾಹಿತಿಯ ಪರಿಮಿತಿ ಎಂದು ಹೆಸರು. ಈ ಮಾಹಿತಿಯ ಪರಿಮಿತಿಯೇ $T$ಯ ವಿಚಲನೆಯ ಕನಿಷ್ಠತಮ ಬೆಲೆ.

ಈ ಫಲಿತವನ್ನು ಸಿ. ರಾಧಾಕೃಷ್ಣರಾವ್ ಎಂಬ ಭಾರತೀಯ ಸಂಖ್ಯಾಕಲನ ಶಾಸ್ತ್ರಜ್ಞರು, 1945ರಲ್ಲಿ, ಕೋಲ್ಕತ್ತೆಯ ಗಣಿತ ಸಂಘದ ಪತ್ರಿಕೆಯಲ್ಲಿ (ಸಂಪುಟ 37, ಪುಟಗಳು 81–91) ಪ್ರಕಟಿಸಿದರು. ತರುವಾಯ, 1946ರಲ್ಲಿ ಪ್ರಕಟವಾದ ಹೆರೊಲ್ಡ್ ಕ್ರೇಮರ್ ಬರೆದ ಮ್ಯಾಥ್‌ಮ್ಯಾಟಿಕಲ್ ಮೆಥಡ್ಸ್ ಆಫ್ ಸ್ಟ್ಯಾಟಿಸ್ಟಿಕ್ಸ್ ಎಂಬ ಗ್ರಂಥದಲ್ಲಿ ಇದನ್ನು ಕೊಡಲಾಗಿತ್ತು. ಅಂದರೆ ರಾವ್ ಅವರ ಲೇಖನದ ಪ್ರಕಟಣೆಯಾಗಿ ಒಂದು ವರ್ಷದ ಅನಂತರ ಕ್ರೇಮರನ ಪುಸ್ತಕದ ಪ್ರಕಟಣೆ ಆಯಿತು. ಆದಾಗ್ಯೂ ಕ್ರೇಮರ್ ಮುಂಚಿತವಾಗಿಯೇ ಈ ಫಲಿತವನ್ನು ಕಂಡುಹಿಡಿದಿದ್ದನಂತೆ. ಆಗ ಎರಡನೆಯ ಮಹಾಯುದ್ಧದ ಕಾಲ. ಆದ್ದರಿಂದ ಅದನ್ನು ಪ್ರಚುರಪಡಿಸಲು ವಿಳಂಬವಾಯಿತು ಎಂಬ ಕಾರಣದಿಂದ ಈ ಅಸಾಮ್ಯಕ್ಕೆ ಕ್ರೇಮರನ ಹೆಸರನ್ನೂ ಲಗತ್ತಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಅದರ ಮೇರೆಗೆ ಈ ಅಸಾಮ್ಯಕ್ಕೆ ಕ್ರೇಮರ್–ರಾವ್ ಅಸಾಮ್ಯ ಎಂಬ ಹೆಸರಾಯಿತು. (ಎಂ.ವಿ.ಜೆ.)

**ಕ್ರೇಮರ್ ಸೂತ್ರವಿಧಿ :** ಒಂದಕ್ಕಿಂತ ಹೆಚ್ಚು ಅಜ್ಞಾತಗಳನ್ನು ಒಳಗೊಳ್ಳುವ ಯಾವುದೇ ಸೂಕ್ತ ಸರಳ ಸಮೀಕರಣವ್ಯವಸ್ಥೆಯ ಪರಿಹಾರವನ್ನು ಪ್ರಕಟರೂಪದಲ್ಲಿ

ವ್ಯಕ್ತಪಡಿಸುವ ಒಂದು ಏರ್ಪಾಡು (ಕ್ರೇಮರ್ಸ್ ರೂಲ್). ಅಜ್ಞಾತಗಳು $x_1, x_2 ..... x_n$ ಆಗಿಯೂ ವ್ಯವಸ್ಥೆಯ ಸಮೀಕರಣಗಳು

$$a_{11}x_1 + a_{12}x_2 + .......... + a_{1n}x_n = b_1$$

$$a_{21}x_1 + a_{22}x_2 + .......... + a_{2n}x_n = b_2$$

.............................................................

$$a_{n1}x_1 + a_{n2}x_2 + ......... + a_{2n}x_n = b_n ................ \quad ......(1)$$

ಆಗಿಯೂ ಇರಲಿ. ಇಲ್ಲಿ n ಅಜ್ಞಾತಗಳೂ(ಅನ್ನೋನ್ಸ್) n ಸರಳ ಸಮೀಕರಣಗಳೂ (ಲೀನಿಯರ್ ಈಕ್ವೇಷನ್ಸ್) ಇವೆ. ಕ್ರೇಮರ್ ಸೂತ್ರವಿಧಿಯ ನೇರಪ್ರಯೋಗಕ್ಕೆ ಹೀಗೆ ಸಮೀಕರಣಗಳ ಸಂಖ್ಯೆ ಅಜ್ಞಾತಗಳ ಸಂಖ್ಯೆಗೆ ಸಮವಾಗಿರುವುದು ಅಗತ್ಯ. ಈ ಸೂತ್ರವಿಧಿ ಮೇಲಿನ ಸಮೀಕರಣಗಳನ್ನು ಒಳಗೊಳ್ಳುವ ಜ್ಞಾತಾಕ್ಷರಗಳಿಂದ (ಅಂದರೆ, a,bಗಳಿಂದ) ರಚಿಸಿದ ಹಲವಾರು ನಿರ್ಧಾರಕಗಳನ್ನು (ಡಿಟರ್ಮಿನೆಂಟ್ಸ್) ಅವಲಂಬಿಸುತ್ತದೆ. ಅಂಥ ನಿರ್ಧಾರಕಗಳ (**ನೋಡಿ– ನಿರ್ಧಾರಕ**) ಪೈಕಿ ಪ್ರಧಾನವಾದದ್ದು:

$$C = \begin{vmatrix} a_{11}a_{12}..........a_{1n} \\ a_{21}a_{22}...........a_{2n} \\ ......................... \\ ......................... \\ a_{n1}a_{n2}..........a_{nn} \end{vmatrix}$$

ಇದಕ್ಕೆ ಗುಣಾಂಕಗಳ ನಿರ್ಧಾರಕ ಎಂದು ಹೆಸರು. C ನಿರ್ಧಾರಕದ ಮೊದಲನೆಯ

ನೀಟಸಾಲಿನ (ಕಾಲಮ್) ಧಾತುಗಳನ್ನು (ಎಲಿಮೆಂಟ್ಸ್) ಅಳಿಸಿ ಅವುಗಳ ಸ್ಥಾನದಲ್ಲಿ ಸಮೀಕರಣ ವ್ಯವಸ್ಥೆ (1)ರ ಬಲಭಾಗದಲ್ಲಿರುವ $b_1, b_2 ........ b_n$ ಗಳನ್ನು ಬರೆದರೆ ಇನ್ನೊಂದು ನಿರ್ಧಾರಕ $C_1$ ಫಲಿಸುತ್ತದೆ.

$$C_1 = \begin{vmatrix} b_1a_{12}.............a_{1n} \\ b_2a_{22}............a_{2n} \\ .......................... \\ .......................... \\ b_na_{n2}............a_{nm} \end{vmatrix}$$

ಇದೇ ರೀತಿ Cಯ ಎರಡನೆಯ ನೀಟಸಾಲಿನ ಧಾತುಗಳನ್ನು ಅಳಿಸಿ ಅವುಗಳ ಸ್ಥಾನದಲ್ಲಿ $b_i (i = 1,2, ......n)$ ಗಳನ್ನು ಬರೆದಾಗ ಮತ್ತೂ ಒಂದು ನಿರ್ಧಾರಕ $C_2$ ರೂಪುಗೊಳ್ಳುವುದು; ಇತ್ಯಾದಿ, $C_n$ ಲಭಿಸುವ ವರೆಗೆ ಮುಂದುವರಿಯುತ್ತದೆ.. ಈಗ ಕ್ರೇಮರ್ ವಿಧಿಯ ಸೂತ್ರಗಳು ಇಂತಿವೆ :

$$Cx_1 = C_1, Cx_2 = C_2 ......... Cx_n = C_n .............(2) \quad ......(2)$$

C ಅಶೂನ್ಯವಾಗಿರುವುದಾದರೆ ಇವುಗಳ ನೆರವಿನಿಂದ

$$x_1 = \frac{C_1}{C}, \quad x_2 = \frac{C_2}{C}, .......... x_n = \frac{C_n}{C}$$

ಎಂಬ ರೂಪದಲ್ಲಿ (1) ಸಮೀಕರಣಗಳ ಪ್ರಕಟ ಪರಿಹಾರ (ಎಕ್ಸ್‌ಪ್ಲಿಸಿಟ್ ಸೊಲ್ಯೂಷನ್) ಸಹ ನಮಗೆ ದೊರೆಯುವುದು. ಉದಾಹರಣೆಗೆ,

$$3x_1 - 5x_2 = 1$$
$$4x_1 - 11x_2 = 3 .............................. \quad ......(3)$$

ಎಂಬೆರಡು ಸಮೀಕರಣಗಳನ್ನು ಬಿಡಿಸಬೇಕಾದಲ್ಲಿ (ಇಲ್ಲಿ n = 2)

$$C = \begin{vmatrix} 3 & -5 \\ 4 & -11 \end{vmatrix} = -13, \quad C_1 = \begin{vmatrix} 1 & -5 \\ -3 & -11 \end{vmatrix} = -26 C_2 = \begin{vmatrix} 3 & 1 \\ 4 & -3 \end{vmatrix} = -13$$

ಆಗುತ್ತದೆ. ಆದ್ದರಿಂದ (3) ಸಮೀಕರಣ ವ್ಯವಸ್ಥೆಯ ಏಕೈಕ ಪರಿಹಾರ

$$x_1 = \frac{C_1}{C} = 2, \quad x_2 = \frac{C_2}{C} = 1$$

ಈ ಬೆಲೆಗಳನ್ನು (3) ಸಮೀಕರಣಗಳಲ್ಲಿ ಆದೇಶಿಸಿದಾಗ ಅವು ಸಮರ್ಪಕವಾಗುವುದನ್ನು ಸುಲಭವಾಗಿ ತಾಳೆ ನೋಡಬಹುದು, ಆದರೆ,

$$2x_1 + 4x_2 = 1$$
$$3x_1 + 6x_2 = 2 ............... \quad ......(4)$$

ಎಂಬ ವ್ಯವಸ್ಥೆಯನ್ನು ಕುರಿತಂತೆ

$$C = \begin{vmatrix} 2 & 4 \\ 3 & 6 \end{vmatrix} = 0, \quad C_1 = \begin{vmatrix} 1 & 4 \\ 2 & 6 \end{vmatrix} = 2, \quad C_2 = \begin{vmatrix} 2 & 1 \\ 3 & 2 \end{vmatrix} = 1$$

ಆಗುವುದರಿಂದ ಸೂತ್ರಸಂಕಲನ (2) ಮೇರೆಗೆ

$$0.x_1 = -2. \quad 0.x_2 = 1$$

ಎಂದಾಗಬೇಕಾಗುವುದು. ಯಾವೊಂದು ಸಂಖ್ಯೆಯನ್ನು 0ಯಿಂದ ಗುಣಿಸಿದಾಗಲೂ 0ಯೇ ಲಭಿಸುವ ಕಾರಣ ಇದು ಸಾಧ್ಯವಿಲ್ಲ. ಆದ್ದರಿಂದ (4) ಸಮೀಕರಣಗಳಿಗೆ ಪರಿಹಾರವೇ ಇಲ್ಲ. [$2x_1 + 4x_2 = 1$ ಆದಲ್ಲಿ $3x_1 + 6x_2 = (3/2) \times (2x_1 + 4x_2) = 3/2$ ಆಗಬೇಕೇ ವಿನಾ 2 ಅಲ್ಲ ಎಂಬುದನ್ನು ಗಮನಿಸಿದಾಗ ಈ ಪರಿಹಾರರಹಿತ ಪರಿಸ್ಥಿತಿಯ ಸಹಜತೆ ಮನದಟ್ಟಾಗುವುದು.] $C, C_1, C_2 ....... C_n$ ಗಳೆಲ್ಲವೂ ಶೂನ್ಯವಾಗುವ ಸಂದರ್ಭದಲ್ಲಿಯಾದರೋ ದತ್ತ ಸಮೀಕರಣ ವ್ಯವಸ್ಥೆಗೆ ಏಕೈಕ ಪರಿಹಾರವಿರದೆ ಅನಂತ ಸಂಖ್ಯೆಯಷ್ಟು ಬೇರೆ ಬೇರೆ ಪರಿಹಾರಗಳಿರುತ್ತವೆ.

ಕ್ರೇಮರ್ ಸೂತ್ರವಿಧಿಯ ವ್ಯುತ್ಪತ್ತಿ ಮಾರ್ಗ ಗಮನಾರ್ಹ. ಇದನ್ನು ಗ್ರಹಿಸಲು n=3 ಆಗುವ ವಿಶೇಷ ಪ್ರಸಂಗವನ್ನು ಮಾದರಿಯಾಗಿ ಪರಿಶೀಲಿಸಿದರೆ ಸಾಕು. ಅಂದಮೇಲೆ ನಾವು ಬಿಡಿಸಬೇಕಾಗಿರುವ ಸಮೀಕರಣಗಳು.

$$a_{11}x_1 + a_{12}x_2 + a_{13}x_3 = b_1 ...........(5)$$
$$a_{21}x_1 + a_{22}x_2 + a_{23}x_3 = b_2 ..........(6)$$
$$a_{31}x_1 + a_{32}x_2 + a_{33}x_3 = b_3 ..........(7)$$

ಎಂಬುದಾಗಿ ಇವೆ. ಈಗ ಗುಣಾಂಕಗಳ ನಿರ್ಧಾರಕ

$$C = \begin{vmatrix} a_{11} & a_{12} & a_{13} \\ a_{21} & a_{22} & a_{23} \\ a_{31} & a_{32} & a_{33} \end{vmatrix}$$

ಇದರಲ್ಲಿ $a_{11}$ ಕ್ಕೆ ಬದಲು 1 ನ್ನೂ $a_{21}$ ಮತ್ತು $a_{31}$ ಗಳ ಬದಲು 0 ಗಳನ್ನೂ ಬರೆದಾಗ ಫಲಿಸುವ ನಿರ್ಧಾರಕಕ್ಕೆ $a_{11}$ರ ಸಹಾಪವರ್ತನ (ಕೋಫ್ಯಾಕ್ಟರ್) ಎಂದು ಹೆಸರು; ಅದನ್ನು $A_{11}$ ಎಂದು ಸೂಚಿಸೋಣ. ಇದೇ ಪ್ರಕಾರ $a_{21}$ರ ಸಹಾಪವರ್ತನ $A_{21}$ನ್ನೂ $a_{31}$ ರ ಸಹಾಪವರ್ತನ $A_{31}$ನ್ನೂ ವ್ಯಾಖ್ಯಿಸಬಹುದು. ಈಗ p,q,r ಗಳು ಯಾವುದೇ ಸಂಖ್ಯೆಗಳಾದರೂ

$$p\ A_{11} + q\ A_{21} + r\ A_{31} = p \begin{vmatrix} 1 & a_{12} & a_{13} \\ 0 & a_{22} & a_{23} \\ 0 & a_{32} & a_{33} \end{vmatrix}$$

$$q \begin{vmatrix} 0 & a_{12} & a_{13} \\ q & a_{22} & a_{23} \\ 0 & a_{32} & a_{33} \end{vmatrix} + r \begin{vmatrix} 0 & a_{12} & a_{13} \\ 0 & a_{22} & a_{23} \\ 1 & a_{32} & a_{33} \end{vmatrix} = \begin{vmatrix} p & a_{12} & a_{13} \\ q & a_{22} & a_{23} \\ r & a_{32} & a_{33} \end{vmatrix} .......(8)$$

ಎಂಬ ಲೆಕ್ಕಾಚಾರ ಸರಳ. ಇದರಲ್ಲಿ p, q, r ಗಳಿಗೆ $b_1, b_2, b_3$ ಗಳನ್ನು ಆದೇಶಿಸಿದಾಗ

$$b_1\ A_{11} + b_2\ A_{21} + b_3\ A_{31} = \begin{vmatrix} b_1 & a_{12} & a_{13} \\ b_2 & a_{22} & a_{23} \\ b_3 & a_{32} & a_{33} \end{vmatrix} = C_1$$

ಎಂದಾಗುವುದು. ಅಂತೆಯೇ (8)ರಲ್ಲಿ p, q, r ಗಳಿಗೆ $a_{11}, a_{21}, a_{31}$ ಗಳನ್ನು ಆದೇಶಿಸಿದರೆ $a_{11}\ A_{11} + a_{21}\ A_{21} + a_{31}\ A_{31} = C.$ ಬದಲು, ಅದಕ್ಕೆ $a_{12}, a_{22}, a_{32}$ ಗಳನ್ನು ಆದೇಶಿಸಿದರೆ

$$a_{12}\ A_{11} + a_{22}\ A_{21} + a_{32}\ A_{31} = \begin{vmatrix} a_{12} & a_{12} & a_{13} \\ a_{22} & a_{22} & a_{23} \\ a_{32} & a_{32} & a_{33} \end{vmatrix} = 0$$

ಇದೇ ಪ್ರಕಾರ

$$a_{13}\ A_{11} + a_{23}\ A_{21} + a_{33}\ A_{31} = 0$$

ಕೊನೆಯ ನಾಲ್ಕು ಸಂಬಂಧಗಳನ್ನು ನೆನಪಿನಲ್ಲಿಟ್ಟುಕೊಂಡು (5), (6) ಮತ್ತು (7)

ಸಮೀಕರಣಗಳನ್ನು ಅನುಕ್ರಮವಾಗಿ $A_{11}, A_{21}$ ಮತ್ತು $A_{31}$ಗಳಿಂದ ಗುಣಿಸಿ ಎಲ್ಲವನ್ನೂ ಕೂಡಿಸಿದರೆ ಒಡನೆಯೇ $Cx_1 - C_1$ ಎಂಬ ಪ್ರಥಮ ಕ್ರೇಮರ್ ಸೂತ್ರ ಫಲಿಸುತ್ತದೆ. ಅನಂತರ ಇದೇ ರೀತಿ ಉಳಿದ ಸೂತ್ರಗಳನ್ನೂ ವ್ಯುತ್ಪಾದಿಸಬಹುದು. ಈ ವಿಶ್ಲೇಷಣೆಯಿಂದ $C \neq 0$ ಆದಾಗ (5), (6) ಮತ್ತು (7) ಸಮೀಕರಣಗಳಿಗೆ $x_i = C_i / C, \quad (i = 1, 2, 3)$ ಎಂಬುದರ ಹೊರತಾಗಿ ಬೇರಾವ ಪರಿಹಾರವೂ ಇರಲು ಶಕ್ಯವಿಲ್ಲವೆಂದು ಗೊತ್ತಾಗುತ್ತದೆ. $A_{11}$ ಮುಂತಾದ ಸಹಾಪವರ್ತನಗಳ ಕೆಲವು ಪರ್ಯಾಯ ರೂಪಗಳನ್ನೂ ಬಳಸಿಕೊಂಡು (ಉದಾಹರಣೆಗೆ

$$A_{11} = \begin{vmatrix} 1 & 0 & 0 \\ a_{21} & a_{22} & a_{23} \\ a_{31} & a_{32} & a_{33} \end{vmatrix}$$

ಎಂಬುದು $A_{11}$ರ ಒಂದು ಪರ್ಯಾಯ ರೂಪ) $C \neq 0$ ಪ್ರಸಂಗದಲ್ಲಿ $x_i = C_i / C$

ಎಂಬುದು ನಿಜಕ್ಕೂ (5), (6), (7) ಗಳ ಪರಿಹಾರ ಎಂದು ಸಹ (ಇದು ಈ ವರೆಗೆ ಸಾಧಿಸಿರುವುದರ ವಿಲೋಮ ಪ್ರತಿಜ್ಞೆ) ನೇರವಾಗಿ ಶ್ರುತಪಡಿಸಲು ಸಾಧ್ಯವಾಗುವುದು.

ಪರಿಶೀಲಿತ ಸಮೀಕರಣ ವ್ಯವಸ್ಥೆಗಳ ಜ್ಞಾತಾಜ್ಞಾತಗಳನ್ನೆಲ್ಲ ಸಾಧಾರಣ ಸಂಖ್ಯೆಗಳೆಂದೇ ಇದುವರೆಗೆ ಪರಿಗಣಿಸಿದ್ದೇವೆ. ಬದಲು ಅವು ಯಾವುದಾದರೊಂದು ಬೀಜಗಣಿತೀಯ ಕ್ಷೇತ್ರದ (ಫೀಲ್ಡ್ ; **(ನೋಡಿ– ಕ್ಷೇತ್ರ,–ಬೀಜಗಣಿತೀಯ)**) ಧಾತುಗಳಾಗಿದ್ದರೂ ಸಲ್ಲುವುದು. ಇನ್ನೂ ಸಾಮಾನ್ಯವಾಗಿ ಅವು ಒಂದು ವ್ಯತ್ಯಯಶೀಲ ವಲಯದ **(ನೋಡಿ– ವಲಯಗಳು)** ಧಾತುಗಳಾಗಿರಬಹುದು. ಆಗಲೂ ಸರಳೀಕೃತ ಸಮೀಕರಣ ವ್ಯವಸ್ಥೆ $Cx_i = C_i$ ದತ್ತ ಸಮೀಕರಣ ವ್ಯವಸ್ಥೆಯ ಯಾವುದೇ ಪರಿಹಾರವಾಗಲಿ ಬದ್ಧವಾಗಿಯೇ ಇರುತ್ತದೆ. ಆದರೆ ವಿಲೋಮವಾಗಿ $Cx_i = C_i$ಗೆ ಬದ್ಧವಾಗಿರುವ $x_i$ಗಳು ದತ್ತ ಸಮೀಕರಣಗಳನ್ನೂ ಸಾರ್ವತ್ರಿಕವಾಗಿ ಪಾಲಿಸುವ ಆಶ್ವಾಸನೆ ಬೇಕಿದ್ದರೆ C ನಿರ್ಧಾರಕದ ಬೆಲೆ ಜ್ಞಾತಾಜ್ಞಾತಗಳ ವಲಯದಲ್ಲಿ ಶೂನ್ಯಭಾಜಕ (ಜ಼ೀರೋ ಡಿವೈಜರ್) ಆಗಿಲ್ಲವೆಂದು ಖಚಿತಪಡಿಸಿಕೊಳ್ಳುವುದು ಅಗತ್ಯ.**(ನೋಡಿ– ಕ್ರೇಮರ್,–ಗೇಬ್ರಿಯಲ್)** (ಎಸ್.ಆರ್.ಎಂ.)

**ಕ್ರೇಷಾ, ರಿಚರ್ಡ್ :** 1613–1649. ಆಂಗ್ಲಕವಿ. ಪಾದ್ರಿಯ ಮಗ. ಹುಟ್ಟಿದ್ದು ಲಂಡನಿನಲ್ಲಿ. ಚಾರ್ಟರ್ ಹೌಸ್ ಮತ್ತು ಕೇಂಬ್ರಿಜ್‍ನಲ್ಲಿ ವ್ಯಾಸಂಗ ನಡೆಸಿದ ಈತ ಪೀಟರ್ ಹೌಸ್‍ನಲ್ಲಿ ಫೆಲೋ ಆದ. ಅಲ್ಲಿಯ ಧಾರ್ಮಿಕ ಆಚರಣೆ ಮತ್ತು ಕರಾರುಗಳನ್ನು ಒಪ್ಪದೇ ಇದ್ದುದರಿಂದ ಅಲ್ಲಿಂದ ಉಚ್ಚಾಟನೆಗೊಂಡ ಅನಂತರ ಫ್ರಾನ್ಸಿಗೆ ಹೋಗಿ ರೋಮನ್ ಕೆಥೊಲಿಕ್ ಪಂಗಡಕ್ಕೆ ಸೇರಿದ. ಅಲ್ಲಿ ಅನೇಕ ಕಷ್ಟನಷ್ಟಗಳಿಗೆ ಸಿಲುಕಿ ಹೊಟ್ಟೆಗೆ ಅನ್ನವಿಲ್ಲದೆ ಉಪವಾಸ ಮಾಡಿದ. ಆದರೆ ತನ್ನ ಸ್ನೇಹಿತ ಏಬ್ರಹಾಂ ಕೌಲಿಯ ಸಹಾಯದಿಂದ ರಾಣಿ ಹೆನ್ರಿಯಟ ಮರಿಯಳ ಪರಿಚಯ ಮಾಡಿಕೊಂಡು ಅವಳಿಂದ ಸಕಾಲಿಕ ಸಹಾಯ ಪಡೆದು ಚೇತರಿಸಿಕೊಂಡ. ಈತ ಮೊದಮೊದಲು ಬರೆದ ಲ್ಯಾಟಿನ್ ಮತ್ತು ಗ್ರೀಕ್ ಕವನಗಳು 1634ರಲ್ಲಿ ಪ್ರಕಟಗೊಂಡವು. ಈತನ ಅತ್ಯುತ್ತಮ ಗ್ರಂಥವಾದ ಸ್ಟೆಪ್ಸ್ ಟು ದಿ ಟೆಂಪಲ್ (1646) ಎಂಬ ಕವನ ಸಂಕಲನದಲ್ಲಿ ಧಾರ್ಮಿಕ ಗೀತೆಗಳಿವೆ. ಕವಿ ಇಲ್ಲಿ ಹರ್ಬರ್ಟನ ಶೈಲಿಯನ್ನು ಅನುಕರಿಸಿದ್ದಾನೆ. ಈತ ಶ್ರೇಷ್ಠವಾದ ಧರ್ಮ ಬೋಧಕ ಕವಿ ಮತ್ತು ವಿದ್ವಾಂಸನಾಗಿದ್ದ. ಈತನ ಜ್ಞಾಪಕಾರ್ಥವಾಗಿ ಗೆಳೆಯ ಕೌಲಿ ಒಂದು ಭಾವಗೀತೆಯನ್ನು ಬರೆದಿದ್ದಾನೆ. (ಎನ್.ಎಸ್.ಎಲ್.)

**ಕ್ರೈನಮ್ :** ಅಮರಿಲ್ಲಿಡೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯಜಾತಿ. ದೊಡ್ಡಗಾತ್ರದ ಬೆಡಗಿನ ಹೂಗಳನ್ನು ಬಿಡುವುದರಿಂದ ಇದನ್ನು ಅಂಚುಸಸ್ಯ ಇಲ್ಲವೆ ಕುಂಡಸಸ್ಯವನ್ನಾಗಿ ಬೆಳೆಸುತ್ತಾರೆ. ಹೂವಿನ ಅಂದಕ್ಕೆ ಪೂರಕವಾಗುವಂತೆ ಇದರ ಎಲೆಗಳೂ ಚೆಲುವಾಗಿರುವುದರಿಂದ ಕ್ರೈನಮಿನ ಹಿರಿಮೆ ಮತ್ತಷ್ಟು ಹೆಚ್ಚಿದೆ.

ಅಮರಿಲ್ಲಿಸ್ ಸಸ್ಯಕ್ಕೆ ಹತ್ತಿರದ ಸಂಬಂಧಿಯಿದು. ಅದರಂತೆಯೆ ಕ್ರೈನಮಿನಲ್ಲೂ ಭೂಗತವಾದ ಗೆಡ್ಡೆಯಿದೆ. ಗೆಡ್ಡೆಯ ಗಾತ್ರ ಮತ್ತು ಆಕಾರ ಕ್ರೈನಮಿನ ವಿವಿಧ ಪ್ರಭೇದಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ; ಕೆಲವದರಲ್ಲಿ ಕೇವಲ ಕೆಲವು ಸೆಂಮೀಗಳಷ್ಟು ಉದ್ದವಾಗಿದ್ದರೆ ಮಿಕ್ಕವುಗಳಲ್ಲಿ 2'–3' ಉದ್ದ ಇರುವುದುಂಟು. ಕೆಲವು ಪ್ರಭೇದಗಳ ಗೆಡ್ಡೆ ಬುಡದಲ್ಲಿ ಕೊಂಚವೇ ದಪ್ಪವಾಗಿದ್ದು ತುದಿಯ ಕಡೆಗೆ ಕ್ರಮೇಣ ಸಣ್ಣದಾಗುತ್ತ ಹೋಗುತ್ತದೆ. ಇನ್ನು ಕೆಲವು ಪ್ರಭೇದಗಳಲಿ ಈರುಳ್ಳಿ ಗೆಡ್ಡೆ ಆಕಾರದ ಗೆಡ್ಡೆಯಿದೆ. ಗೆಡ್ಡೆಯ ಸುತ್ತ ಈರುಳ್ಳಿ ಗೆಡ್ಡೆಯಲ್ಲಿರುವಂತೆ ಹಲವಾರು ಎಲೆಗಳ ಬುಡಗಳ ಹೊದಿಕೆಯಿದೆ. ಗೆಡ್ಡೆಯಿಂದ ಉದ್ದವಾದ ಅನೇಕ ಎಲೆಗಳು ಮೇಲ್ಮುಖವಾಗಿ ಬೆಳೆಯುತ್ತವೆ. ಎಲೆಗಳು ಅಗಲವಾಗಿಯೂ ಹಲವಾರು ಮೀಗಳಷ್ಟು ಉದ್ದವಾಗಿಯೂ ಇವೆ. ಹೂಗಳು ಛತ್ರಮಂಜರಿ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಒಂದೊಂದು ಗೊಂಚಲಲ್ಲೂ ಕೇವಲ ಕೆಲವು ಹೂಗಳಿಂದ ಹಿಡಿದು ಅನೇಕ ಹೂಗಳಿರಬಹುದು. ಹೂಗಳ ಬುಡವನ್ನು ಆವರಿಸುವಂತೆ ಎರಡು ಉಪಪತ್ರಗಳಿವೆ (ಬ್ರಾಕ್ಟ್ಸ್). ಹೂಗಳ ಬಣ್ಣ ಪ್ರಮುಖವಾಗಿ ಮೂರು ಬಗೆಯದು. ಅಚ್ಚ ಬಿಳಿ, ಬಿಳಿಯಾಗಿದ್ದು ಕೇಂದ್ರಭಾಗದಲ್ಲಿ ಕೆಂಪು ಇಲ್ಲವೆ ಉದಾ ಬಣ್ಣದ ಪಟ್ಟೆಯಿರುವುದು ಅಥವಾ ಗುಲಾಬಿ ಇಲ್ಲವೆ ಉದಾ. ಹೂಗಳಿಗೆ ನವುರಾದ ಸುವಾಸನೆಯೂ ಉಂಟು. ದಳಗಳಾಗಲಿ ಪುಷ್ಪಪತ್ರಗಳಾಗಲಿ ಬೇರೆಬೇರೆಯಾಗಿಲ್ಲ. ಎರಡು ಭಾಗಗಳೂ ಒಂದುಗೂಡಿ ಪೆರಿಯಾಂತ್ ಎಂಬ ಭಾಗವಾಗಿವೆ. ಇದು ಬುಡದಲ್ಲಿ ಕೂಡಿಕೊಂಡಿದ್ದು ಅಂಚಿನಲ್ಲಿ 6 ಭಾಗಗಳಾಗಿ ಸೀಳಿದೆ. ಪೆರಿಯಾಂತಿನ ಆಕಾರ ಆಲಿಕೆಯಂತೆ ಇಲ್ಲವೆ ತಟ್ಟೆಯಂತೆ. ಕೇಸರಗಳು 6. ಇವುಗಳ ದಂಡ ಪೆರಿಯಾಂತಿನ ಗಂಟಲಿಗೆ ಅಂಟಿಕೊಂಡಿದೆ. ಅಂಡಾಶಯ ನೀಚ ಸ್ಥಾನದ್ದು. ಮೂರು ಕಾರ್ಪೆಲುಗಳಿಂದ ಕೂಡಿದೆ. ಫಲ ಸಂಪುಟ ಮಾದರಿಯದು. ಬೀಜಗಳು ದೊಡ್ಡಗಾತ್ರದವು; ದಪ್ಪವಾಗಿಯೂ ಹಸಿರಾಗಿಯೂ ಇವೆ.

ಕ್ರೈನಮಿನಲ್ಲಿ ಸುಮಾರು 100 ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ಉಷ್ಣ ದೇಶಗಳ ನಿವಾಸಿಗಳು. ಅಲಂಕಾರಕ್ಕಾಗಿ ಸಮಶೀತೋಷ್ಣ ಇಲ್ಲವೆ ತಂಪು ಹವೆಯುಳ್ಳ ದೇಶಗಳಲ್ಲಿ ಇವನ್ನು ಬೆಳೆಸುವುದಿದ್ದರೂ ಉಷ್ಣ ದೇಶಗಳಲ್ಲಿ ಬೆಳೆದಷ್ಟು ಚೆನ್ನಾಗಿ ಬೆಳೆಯಲಾರವು. ಅಲ್ಲದೆ ತಂಪು ಹವೆಯ ಪ್ರದೇಶಗಳಲ್ಲಿ ಬೇಸಗೆಯಲ್ಲಿ ಮಾತ್ರ ಇವುಗಳ ಬೆಳೆವಣಿಗೆ ಹುಲುಸು. ಕ್ರೈನಮಿನ ವಿವಿಧ ಪ್ರಭೇದಗಳನ್ನು ಸ್ಥೂಲವಾಗಿ ಎರಡು ಬಗೆಗಳಾಗಿ

ಕ್ರೈನಮ್ ಪಾವೆಲಿಯೈ ಪ್ರಭೇದ

ವಿಂಗಡಿಸಬಹುದು. 1 ತೆಳುಗೆಡ್ಡೆಯಿದ್ದು ಸದಾ ಹಸಿರಾಗಿರುವ ಹಾಗೂ ನಕ್ಷತ್ರದಾಕೃತಿಯ ಹೂ ಬಿಡುವ ಬಗೆ. 2 ದಪ್ಪ ಹಾಗೂ ಗುಂಡನೆಯ ಗೆಡ್ಡೆ ಮತ್ತು ವರ್ಷಕ್ಕೊಮ್ಮೆ ಉದುರುವ ಎಲೆಗಳು ಇದ್ದು ಗಂಟೆಯಾಕಾರದ ಹೂ ಬಿಡುವ ಬಗೆ. ಉದ್ಯಾನ ಪ್ರಾಮುಖ್ಯವಿರುವ ಪ್ರಭೇದಗಳು ಇವು. ಕ್ರೈ, ಆಗಸ್ಟಮ್, ಕ್ರೈ, ಏಷ್ಯಾಟಿಕಮ್, ಕ್ರೈ, ಮೋರಿಯೈ, ಕ್ರೈ, ಪಾವೆಲಿಯೈ, ಕ್ರೈ, ಅಮೆರಿಕಾನಮ್, ಕ್ರೈ, ಜೈಗಾಂಶಿಯಮ್, ಕ್ರೈ, ಲ್ಯಾಟಿ ಫೋಲಿಯಮ್, ಕ್ರೈ, ಲಾಂಜಿಫೋಲಿಯಮ್.

ಕ್ರೈನಮ್ ಜಾತಿಯ ಸಸ್ಯಗಳನ್ನು ಗೆಡ್ಡೆಗಳಿಂದ ಹೊರಡುವ ಚಿಕ್ಕ ಶಾಖೆಗಳಿಂದ ವೃದ್ಧಿಸಬಹುದು.

ಇದು ಮೈದಾನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಗುಡ್ಡಗಾಡು ಪ್ರದೇಶಗಳಲ್ಲಿ ಬೆಳೆಯಬೇಕಾದರೆ ನೆರಳು ವಾತಾವರಣವನ್ನು ಕಲ್ಪಿಸಬೇಕು. ಇದು ವಿಶಾಲವಾದ ಬೇರು ಬಿಡುವುದರಿಂದ ಇದನ್ನು ಕುಂಡಗಳಲ್ಲಿ ಬೆಳೆಸುವಾಗ 18" ಎತ್ತರದ ಕುಂಡಗಳನ್ನು ಉಪಯೋಗಿಸಬೇಕು. ಧಾರಾಳವಾದ ಗಾಳಿ, ಸೂರ್ಯನ ಬೆಳಕು, ಸಡಿಲವಾದ ಫಲವತ್ತಾದ ಮಣ್ಣು ಮತ್ತು ಹೆಚ್ಚು ತೇವಾಂಶ ಅಗತ್ಯ. ಶಾಖೆಗಳನ್ನು ನಾಟಿ ಮಾಡಲು ಅಕ್ಟೋಬರ್ ತಿಂಗಳು ಯೋಗ್ಯವಾದ ಕಾಲ. (ಡಿ.ಎಂ.)

**ಕ್ರೈನಾಯ್ಡಿಯ :** ಎಕಿನೋಡರ್ಮೇಟ ವಿಭಾಗಕ್ಕೆ (ಕಂಟಕಚರ್ಮಿಗಳು) ಸೇರಿದ ಒಂದು ವರ್ಗ. ಇದಕ್ಕೆ ಸೇರಿದ ಪ್ರಾಣಿಗಳೆಲ್ಲವೂ ಸಮುದ್ರವಾಸಿಗಳು. ಇವನ್ನು ಆಡುಮಾತಿನಲ್ಲಿ ಕಡಲ ತಾವರೆಗಳು (ಸೀ ಲಿಲೀಸ್) ಮತ್ತು ಗರಿ ನಕ್ಷತ್ರಗಳು (ಫೆದರ್ ಸ್ಟಾರ್ಸ್) ಎಂದು ಕರೆಯಲಾಗುತ್ತದೆ. ಎಕಿನೋಡರ್ಮೇಟದ ಉಳಿದ ಪ್ರಾಣಿಗಳಲ್ಲಿರುವಂತೆ ಇವುಗಳಲ್ಲೂ ಪಂಚ ಅರೀಯ ಸಮಾಂಗತೆ, ಜಲ ಪರಿಚಲನಾಂಗ ವ್ಯವಸ್ಥೆ ಮತ್ತು ಸುಣ್ಣಕಲ್ಲಿನಿಂದ ಕೂಡಿದ ಫಲಕಗಳನ್ನುಳ್ಳ ಬಾಹ್ಯ ಕವಚಗಳು ಇವೆ. ಆದರೆ ಈ ಪ್ರಾಣಿಗಳು ತಮ್ಮ ಜೀವಮಾನವಿಡೀ ಸಾಗರದ ತಳಕ್ಕೆ ಅಂಟಿಕೊಂಡು ಜೀವಿಸುವ ಸ್ಥಾವರ ಪ್ರಾಣಿಗಳಾಗಿದ್ದು ಉಳಿದ ಎಕಿನೋಡರ್ಮಗಳಿಂದ ಭಿನ್ನವಾಗಿವೆ.

ದೇಹದ ಉದ್ದ ಕೆಲವೇ ಸೆಂಮೀಗಳಿಂದ ಹಲವಾರು ಮೀಗಳವರೆಗೆ ವ್ಯತ್ಯಾಸವಾಗುತ್ತದೆ. ಕೆಲವು ಪ್ರಭೇದಗಳ ದೇಹ ವರ್ಣರಂಜಿತವಾಗಿರುವುದುಂಟು. ಹಲವಾರು ಸುತ್ತುಗಳಲ್ಲಿ

ಜೋಡಣೆಗೊಂಡಿರುವ ತಟ್ಟೆಗಳಿಂದ ಕೂಡಿದ ಬಟ್ಟಲಿನಾಕಾರದ ರಚನೆಯೊಳಗೆ ದೇಹ ಹುದುಗಿದೆ. ಈ ಬಟ್ಟಲಿಗೆ ಕೇಲಿಕ್ಸ್ ಎಂದು ಹೆಸರು. ಕೆಲವು ಪ್ರಭೇದಗಳಲ್ಲಿ ಈ ಬಟ್ಟಲಿಗೆ ಅಂಟಿಕೊಂಡಂತೆ ಒಂದು ಉದ್ದನೆಯ ತೊಟ್ಟು ಇದೆ. ಇದರ ಸಹಾಯದಿಂದ ಪ್ರಾಣಿಯ ದೇಹ ಸಾಗರ ತಳಕ್ಕೆ ಅಂಟಿರುತ್ತದೆ. ಹಲವಾರು ಸಣ್ಣ ತಟ್ಟೆಗಳಿಂದ ಕೂಡಿದ ಕಂಬದಂಥ ರಚನೆಯಿದು. ತಟ್ಟೆಗಳು ಸ್ನಾಯುಗಳ ಸಹಾಯದಿಂದ ಒಂದಕ್ಕೊಂದು ಅಂಟಿರುವುದರಿಂದ ತೊಟ್ಟು ಸುಲಭವಾಗಿ ಬಾಗುತ್ತದೆ. ಈ ಕಂಬ ಕವಲೊಡೆದಿರಬಹುದು ಇಲ್ಲವೆ ಏಕವಾಗಿದ್ದು ಅಲ್ಲಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಬೇರುಗಳಂಥ ರಚನೆಗಳನ್ನು ಪಡೆದಿರಬಹುದು. ಇವುಗಳಿಗೆ ಸಿರ್ರಿಗಳೆಂದು ಹೆಸರು. ಸಾಮಾನ್ಯವಾಗಿ ಗರಿನಕ್ಷತ್ರಗಳಲ್ಲಿ (ಉದಾ: ಆಂಟಿಡಾನ್ ಜಾತಿ) ತೊಟ್ಟಿನ ಮೊದಲನೆಯ ಖಂಡ ಮಾತ್ರ ಇರುತ್ತದೆ. ಕಡಲತಾವರೆಗಳಲ್ಲಿ (ಉದಾ: ರೈಜೊಕ್ರೈನಸ್, ಪೆಂಟಕ್ರೈನಸ್, ಬಾಟ್ರಿಯೊಕ್ರೈನಸ್ ಇತ್ಯಾದಿ) ತೊಟ್ಟು ಬಲು ಉದ್ದ ಮತ್ತು ಅದರ ತುದಿಯಲ್ಲಿರುವ ಬಟ್ಟಲಿನಲ್ಲಿ ದೇಹ ಹುದುಗಿರುತ್ತದೆ.

ಎರಡು ಬಗೆಯ ದೇಹ ರಚನೆಯುಳ್ಳ ಪ್ರಾಣಿಗಳಲ್ಲೂ ಬಟ್ಟಲಿನ ಅಂಚಿನಿಂದ ಉದ್ದವಾದ ಹಾಗೂ ಸುಲಭವಾಗಿ ಬಾಗುವಂಥ ಕೈಗಳು ಹೊರಡುತ್ತವೆ. ಇವುಗಳ ಮೂಲಸಂಖ್ಯೆ 5. ಆದರೆ ಹೆಚ್ಚು ಕಡಿಮೆ ಎಲ್ಲ ಬಗೆಯ ಕ್ರೈನಾಯಿಡುಗಳಲ್ಲೂ ಒಂದೊಂದು ಕೈಯೂ ಬುಡದಲ್ಲಿ ಇಬ್ಭಾಗವಾಗಿ ಸೀಳುಗೊಂಡು ಒಟ್ಟು 10 ಕೈಗಳಾಗುತ್ತವೆ. ಉಷ್ಣವಲಯದಲ್ಲಿ ವಾಸಿಸುವ ಕಡಲತಾವರೆಗಳಲ್ಲಿ ಇವು ಹೆಚ್ಚು ವಿಭಾಗವಾಗಿ ಕೈಗಳ ಒಟ್ಟು ಸಂಖ್ಯೆ ಹೆಚ್ಚಾಗುತ್ತದೆ. ಒಂದೊಂದು ಕೈಯಲ್ಲೂ ಪಿನ್ನ್ಯೂಲುಗಳೆಂಬ ಹಲವಾರು ರಚನೆಗಳಿದ್ದು ಇಡೀ ಕೈ ಒಂದು ಗರಿಯಂತೆ ಕಾಣುವ ಹಾಗೆ ಇವು ಮಾಡುತ್ತವೆ.



ಬಾಟ್ರಿಯೊಕ್ರೈನಸ್ ಪ್ರಭೇದ (ಪಳೆಯುಳಿಕೆ)

ಬಟ್ಟಲಿನ ಮೇಲಿನ ಹಾಗೂ ಕೈಗಳ ಬುಡಗಳ ಬಳಿಯ ಭಾಗಕ್ಕೆ ತಟ್ಟೆ (ಡಿಸ್ಕ್) ಎಂದು ಹೆಸರು. ಇದರ ಕೇಂದ್ರಭಾಗದಲ್ಲಿ ಬಾಯಿಯೂ ಒಂದು ಪಕ್ಕಕ್ಕೆ, ಕೊಂಚ ಮೇಲಕ್ಕೆ ಎತ್ತಿರುವಂತಿರುವ ಗುದದ್ವಾರವೂ ಇವೆ. ದೇಹದೊಳಗೆ ಉದ್ದವಾದ ಮತ್ತು ಸುರುಳಿ ಸುತ್ತಿರುವ ಆಹಾರನಾಳ ಉಂಟು. ಬಾಯ ಸುತ್ತ ಒಂದು ತೋಡು ಇದ್ದು ಇದರಿಂದ ಸಣ್ಣ ಗಾತ್ರದ ಹಲವಾರು ತೋಡುಗಳು ಉತ್ಪತ್ತಿಯಾಗುತ್ತವೆ. ಇವು ಒಂದೊಂದೂ ಕೈಯ ಒಳಭಾಗಕ್ಕೂ ಸಾಗಿ ಪಿನ್ನ್ಯೂಲುಗಳಿರುವೆಡೆಯಲ್ಲೆಲ್ಲ ಒಂದೊಂದು ಕವಲಾಗಿ ಭಾಗವಾಗುತ್ತವೆ. ತೋಡಿನ ಈ ವ್ಯವಸ್ಥೆಗೆ ಆಂಬುಲೇಕ್ರಲ್ ತೋಡು ವ್ಯವಸ್ಥೆ ಎಂದು ಹೆಸರು. ಇದು ಬೇರೆ ಎಕಿನೋಡರ್ಮ್ ಪ್ರಾಣಿಗಳಲ್ಲಿರುವ ಆಂಬುಲೇಕ್ರಲ್ ತೋಡಿಗೆ ಸಮಾನವಾಗಿರುವುದಾದರೂ ಇದರಿಂದ ಹುಟ್ಟುವ ನಳಿಕೆ ಪಾದಗಳು ಬರಿಯ ಆಹಾರವನ್ನು ಹಿಡಿಯುವ ಕಾರ್ಯವನ್ನು ಮಾತ್ರ ನಿರ್ವಹಿಸುತ್ತವೆ; ಪ್ರಾಣಿ ಚಲನೆಯಲ್ಲಿ ಪಾಲುಗೊಳ್ಳುವುದಿಲ್ಲ. ಕ್ರೈನಾಯಿಡುಗಳ ಆಹಾರ ಸಾಗರದಲ್ಲಿ ಕಾಣಬರುವ ಸೂಕ್ಷ್ಮಗಾತ್ರದ ತೇಲುಜೀವಿಗಳು. ಕೈಗಳಲ್ಲಿಯ ಪಿನ್ನ್ಯೂಲುಗಳಲ್ಲಿ ಹುದುಗಿರುವ ಶಿಲಕೆಗಳ ಚಲನೆಯಿಂದ ಆಹಾರವನ್ನು ಬಾಯೆಡೆಗೆ ಎಳೆದುಕೊಳ್ಳುತ್ತವೆ.

ಬಟ್ಟಲಿನ ಬುಡದಲ್ಲಿ ಒಂದು ಪುಟ್ಟ ನರಸಮೂಹವಿದೆ. ಇದೇ ಮಿದುಳು. ಇದರಿಂದ ಒಂದೊಂದು ಕೈಯೆಡೆಗೂ ಒಂದೊಂದು ನರಹುರಿ ಹೊರಡುತ್ತದೆ.

ಕ್ರೈನಾಯಿಡ್ ಪ್ರಾಣಿಗಳಲ್ಲಿ ಲಿಂಗಭೇದವಿದೆ. ಪ್ರತಿಯೊಂದು ಕೈಯ ಮಧ್ಯಭಾಗದಲ್ಲಿರುವ ಪಿನ್ನ್ಯೂಲುಗಳಲ್ಲಿ ಉಬ್ಬುಗಳಂತೆ ಇರುವ ರಚನೆಗಳೇ ಜನನಾಂಗಗಳು. ಗರಿನಕ್ಷತ್ರಗಳ ಸಂತಾನ ಕ್ರಮಗಳ ಬಗ್ಗೆ ಅಧ್ಯಯನ ನಡೆದಿದೆ. ಅಂಡಗಳ ನಿಷೇಚನ ಸಮುದ್ರದಲ್ಲಿ ಪ್ರಾಣಿದೇಹದ ಹೊರಭಾಗದಲ್ಲಿ ನಡೆಯುತ್ತದೆ. ಕ್ರಮೇಣ ಇವು ಪೀಪಾಯಿ ಆಕಾರದ ಡಿಂಬಗಳಾಗಿ ಬೆಳೆಯುತ್ತವೆ. ಇವಕ್ಕೆ ಬಾಯಿಯಿಲ್ಲ. ಮೊಟ್ಟೆಗಳಲ್ಲಿ ಶೇಖರಣೆಗೊಂಡ ಬಂಡಾರವನ್ನು ತಮ್ಮ ಪೋಷಣೆಗೆ ಬಳಸಿಕೊಳ್ಳುತ್ತವೆ. ಕೆಲವು ದಿನಗಳ ಅನಂತರ ಇವು ಸಾಗರ ತಳಕ್ಕೆ ಇಳಿದು ಉದ್ದವಾದ ತೊಟ್ಟುಳ್ಳ ಡಿಂಬಗಳಾಗಿ ಪರಿವರ್ತಿತವಾಗಿ ನೆಲಕ್ಕೆ ಅಂಟಿಕೊಳ್ಳುತ್ತವೆ. ಇವಕ್ಕೆ ಪೆಂಟಕ್ರೈನಾಯಿಡ್ ಡಿಂಬಗಳೆಂದು ಹೆಸರು. ಇವುಗಳ ದೇಹದ ಮೇಲ್ತುದಿಯಲ್ಲಿ ಬಟ್ಟಲು ರೂಪುಗೊಂಡು ಡಿಂಬಗಳು ಆಹಾರ ಸೇವನೆಯಲ್ಲಿ ತೊಡಗುತ್ತವೆ. ಕಾಲಕ್ರಮೇಣ ಡಿಂಬಗಳು ಬೆಳೆದು ಗರಿ ನಕ್ಷತ್ರಗಳಾಗಿ



ಆಂಟಿಡಾನ್ ಎಡ್ರಿಯಾಟಿಕ ಪ್ರಭೇದ

ರೂಪುಗೊಳ್ಳುತ್ತವೆ. ದಕ್ಷಿಣ ಮೇರು ಪ್ರದೇಶದಲ್ಲಿ ಕಾಣಬರುವ ಪ್ರಾಣಿಗಳಲ್ಲಿ ಬೆಳೆವಣಿಗೆಯ ಪ್ರಾರಂಭದ ಹಂತಗಳು ತಾಯಿ ದೇಹದೊಳಗಿನ ಕಾವುಗೂಡುಗಳಲ್ಲಿ ನಡೆಯುತ್ತವೆ.

ಕ್ರೈನಾಯ್ಡಿಯ ವರ್ಗದಲ್ಲಿ ಸುಮಾರು 600–700 ಪ್ರಭೇದಗಳಿವೆ. ಇಂದು ಜೀವಿಸಿರುವ ಬಗೆಗಳನ್ನು ಆರ್ಟಿಕ್ಯುಲೇಟ ಎಂಬ ಗಣಕ್ಕೆ ಸೇರಿಸಲಾಗಿದೆ. ಈ ಗಣದ ಮೂರು ಮುಖ್ಯ ಕುಟುಂಬಗಳು ಇವು: ಐಸೊಕ್ರೈನಿಡೀ, ಆಂಟಿಡಾನಿಡೀ ಮತ್ತು ಕೊಮಾಸ್ಟರಿಡೀ **(ನೋಡಿ–ಎಕಿನೊಡರ್ಮೇಟ)**. (ಪಿ.ಎ.ಆರ್.)

**ಕ್ರೈಯೊಲೈಟ್ :** ಅಲ್ಯೂಮಿನಿಯಂ ಮತ್ತು ಸೋಡಿಯಂ ಲವಣಗಳ ಫ್ಲೂರೈಡ್. ಇದರ ರಾಸಾಯನಿಕ ಸೂತ್ರ $Na_3AlF_6$. ಇದು ಹರಳುಗಳಾಗಿ ಮತ್ತು ದಟ್ಟವಾದ ಉಂಡೆಗಳಾಗಿ ನಿಸರ್ಗದಲ್ಲಿ ದೊರೆಯುತ್ತದೆ. ಇದೊಂದು ಸಚ್ಛಿದ್ರ ಖನಿಜಕಣ. ಗಾಜಿನ ಅಥವಾ ಗೋಂದಿನ ಹೊಳಪಿನಿಂದ ಕೂಡಿರುತ್ತದೆ. ಹರಳಿನ ಪದರಗಳ ಅಂಚುಗಳಿಗೆ ಮುತ್ತಿನ ಹೊಳಪಿದೆ. ಹರಳಿನ ಬಣ್ಣ ಸಾಮಾನ್ಯವಾಗಿ ವರ್ಣರಹಿತವಾದ ಅಥವಾ ಹಿಮಸದೃಶವಾದ ಬಿಳಿ. ಕೆಲವೊಮ್ಮೆ ಕೆಂಪು, ಬೂದಿಗೆಂಪು, ಇಟ್ಟಿಗೆ–ಕೆಂಪು, ಕಪ್ಪು ಬಣ್ಣದಲ್ಲಿ ಸಹ ಕಾಣಿಸಿಕೊಳ್ಳುತ್ತದೆ. ಇದರ ರಿಫ್ರೇಕ್ಷಣಾಂಕ 1.388. ಅಂದರೆ ಹೆಚ್ಚುಕಡಿಮೆ ನೀರಿನ ರಿಫ್ರೇಕ್ಷಣಾಂಕದಷ್ಟಾಯಿತು. ಆದ ಕಾರಣ ಹರಳುಗಳನ್ನು ನೀರಿನಲ್ಲಿ ಮುಳುಗಿಸಿದರೆ ಇದನ್ನು ನೀರಿನಿಂದ ಬೇರೆಯಾಗಿ ಗುರುತಿಸುವುದು ಕಷ್ಟಸಾಧ್ಯ. ಮೋಹ್ಸ್‌ಮಾನಕದಲ್ಲಿ ಇದರ ಕಾಠಿಣ್ಯ 2.5. ಸಾಪೇಕ್ಷ ಸಾಂದ್ರತೆ 2.95. ಸೈಡರೈಟ್, ಗ್ಯಾಲಿನ ಮತ್ತು ಚಾಲ್ಕೊಪೈರೇಟುಗಳೊಡನೆ ಕ್ರೈಯೊಲೈಟಿನ ಸಂಪರ್ಕ ಇರುವುದನ್ನು ಗ್ರೀನ್‌ಲೆಂಡಿನ ಈವಿಗ್‌ಟೂಟ್ ಎಂಬಲ್ಲಿ ಪರಿಶೋಧಿಸಲಾಯಿತು (1794).

ಅಲ್ಯೂಮಿನಿಯಂ ಉತ್ಪಾದನೆಯಲ್ಲಿ ಅದಿರನ್ನು ಜಾಗ್ರತೆ ಕರಗಿಸುವುದಕ್ಕಾಗಿ ಮತ್ತು ಸೋಡಿಯಂ ಲವಣಗಳು ಮತ್ತು ಕೆಲವು ಬಗೆಯ ಗಾಜುಗಳ ಮತ್ತು ಪಿಂಗಾಣಿ ಸಾಮಾನುಗಳ ತಯಾರಿಕೆಯಲ್ಲಿ ಕ್ರೈಯೊಲೈಟಿನ ಉಪಯೋಗವಿದೆ. ಅಲ್ಯೂಮಿನಿಯಂ ಲೋಹದ ಉತ್ಪಾದನೆಯಲ್ಲಿ ನೈಸರ್ಗಿಕ ಕ್ರೈಯೊಲೈಟ್ ಒಂದು ಅಗತ್ಯ ವಸ್ತು. ಕ್ರೈಯೊಲೈಟ್ ಬಹಳ ವಿರಳ ವಸ್ತು. ಪ್ರಪಂಚದಲ್ಲಿ ಗ್ರೀನ್‌ಲೆಂಡ್ ಮತ್ತು ರಷ್ಯಗಳಲ್ಲಿ ಮಾತ್ರ ಕ್ರೈಯೊಲೈಟಿನ ಗಣಿಗಳಿವೆ. ಕೃತಕ ಕ್ರೈಯೊಲೈಟಿನ ತಯಾರಿಕೆಯೂ ಆಗುತ್ತಿದೆ. ಭಾರತದಲ್ಲಿ ಕ್ರೈಯೊಲೈಟಿನ ಪೂರೈಕೆ ಗಣಿಗಳಿಂದಲ್ಲ, ಬದಲು ಅದರ ಆಮದಿನಿಂದ ಆಗುತ್ತಿದೆ. (ಎಸ್.ಆರ್.ಎನ್.; ಎಂ.ಆರ್.ಪಿ.)

**ಕ್ರೈಲ್, ಜಾರ್ಜ್ ವಾಷಿಂಗ್‌ಟನ್ :** 1864–1943. ಅಮೆರಿಕದ ಅತ್ಯಂತ ಪ್ರಖ್ಯಾತ ಶಸ್ತ್ರವೈದ್ಯ. ಶಸ್ತ್ರಚಿಕಿತ್ಸೆಯ ಆಘಾತವನ್ನು ಕುರಿತು ಈತ ಆಳವಾದ ಪ್ರಯೋಗಗಳನ್ನು ನಡೆಸಿದ (1897). ಅಲ್ಲದೆ ಶಸ್ತ್ರವೈದ್ಯದಲ್ಲಿ ರಕ್ತದ ಒತ್ತಡವನ್ನೂ (1903) ಆಘಾತದಲ್ಲಿ ರಕ್ತ ಸಂಯೋಜನೆಯನ್ನೂ (1909) ಅಧ್ಯಯನ ಮಾಡಿದ. ಈ ಸಂಶೋಧನೆಗಳ ಫಲವಾದ ಆಘಾತ ಸಿದ್ಧಾಂತವನ್ನು ಕ್ರೈಲ್ 1913ರಲ್ಲಿ ಪ್ರಕಟಿಸಿದ. ಅದಕ್ಕೆ ಕ್ರೈಲ್ ಸಿದ್ಧಾಂತ ಎಂಬ ಹೆಸರು ಬಂದಿತು. ಶಸ್ತ್ರಚಿಕಿತ್ಸೆ ಮಾಡುವಾಗ ಸ್ಥಳೀಯ ಅರಿವಳಿಕೆಯನ್ನು ಉಪಯೋಗಿಸಿ ನರಗಳ ಕಾಂಡದಲ್ಲಿ ತಡೆಯನ್ನು ಉಂಟುಮಾಡುವುದನ್ನು 1906ರಲ್ಲಿ ಕಂಡುಹಿಡಿದ.

1864ನೆಯ ನವಂಬರ್ 11ರಂದು ಚಿಲಿಯಲ್ಲಿ ಜನಿಸಿದ ಕ್ರೈಲ್ ಅಮೆರಿಕದ ಒಹಾಯೋ ವಿಶ್ವವಿದ್ಯಾಲಯ ಮತ್ತು ವೂಸ್ಟರ್ ವಿಶ್ವವಿದ್ಯಾಲಯದ ವೈದ್ಯಶಾಲೆಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಬಳಿಕ ಲಂಡನ್, ವಿಯನ್ನಾ ಮತ್ತು ಪ್ಯಾರಿಸುಗಳಲ್ಲೂ ಅಧ್ಯಯನ ಮುಂದುವರಿಸಿದ. ಒಂದನೆಯ ಮಹಾಯುದ್ಧದ ಸಮಯದಲ್ಲಿ ಫ್ರಾನ್ಸಿನಲ್ಲಿ ಅಮೆರಿಕ ಸ್ಥಾಪಿಸಿದ್ದ ಒಂದು ಆಸ್ಪತ್ರೆಯಲ್ಲಿ ಕ್ರೈಲ್ ನಿರ್ದೇಶಕನಾಗಿಯೂ ಸಮಾಲೋಚಕನಾಗಿಯೂ ಕೆಲಸ ಮಾಡುತ್ತಿದ್ದ. ಹಲವಾರು ಉತ್ತಮ ವೈದ್ಯ ಗ್ರಂಥಗಳನ್ನು ರಚಿಸಿ ಪ್ರಸಿದ್ಧನಾಗಿದ್ದಾನೆ. 1943ನೆ ಜನವರಿ 7ರಂದು ಕ್ರೈಲ್ ತೀರಿಕೊಂಡ. (ಎಸ್.ಎಚ್.ಪಿ.)

**ಕ್ರೈಸಮೀನ್, ಜಿ. :** ಆಜ್ಞೋವರ್ಣ ದ್ರವ್ಯ (ಡೈ); ಹಳದಿಮಿಶ್ರಿತ ಕಂದು ಬಣ್ಣದ ಪುಡಿ. ನೀರಿನಲ್ಲಿ ತೀರ ಮಿತವಾಗಿ ವಿಲೀನವಾಗುತ್ತದೆ. ಬೆಂಜಿಡೀನಿನಿಂದ ತಯಾರಿಸಬಹುದಾದ ಅನೇಕ ವರ್ಣದ್ರವ್ಯಗಳಲ್ಲಿ ಇದೂ ಒಂದು. ಬೆಂಜಿಡೀನನ್ನು ಟೆಟ್ರಜ಼ೊಟೈಸ್ ಮಾಡಿ ಸ್ಯಾಲಿಸಿಲಿಕ್ ಆಮ್ಲದೊಡನೆ ಸಂಲಗ್ನಗೊಳಿಸಿ (ಕಪಲ್) ಕ್ರೈಸಮೀನ್, ಜಿ. ಯನ್ನು ತಯಾರಿಸುತ್ತಾರೆ. ಇದನ್ನು ಹತ್ತಿಗೆ ನೇರ ಹಳದಿ ವರ್ಣದ್ರವ್ಯವಾಗಿ ಉಪಯೋಗಿಸಲಾಗುವುದು. (ಎಲ್.ಎ.ಆರ್.)

**ಕ್ರೈಸಲಿಡೊಕಾರ್ಪಸ್ :** ಪಾಮೇಸೀ ಅಥವಾ ಅರಿಕೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯಜಾತಿ. ಇದರಲ್ಲಿ ಸುಮಾರು 20 ಪ್ರಭೇದಗಳಿದ್ದರೂ ಲ್ಯೂಟಸೆನ್ಸ್ ಪ್ರಭೇದವೇ ಬಲು ಮುಖ್ಯವಾದುದು. ಬಿಲ್ಲಿನಂತೆ ಬಾಗಿದ ಗರಿರೂಪದ ಎಲೆಗಳಿಂದಾಗಿ ಬಲು ರಮ್ಯವಾಗಿ ಕಾಣುವ ಇದನ್ನು ಉದ್ಯಾನಗಳ ಪಸಲೆಗಳಲ್ಲಿ (ಲಾನ್) ಮತ್ತು ಕುಂಡಗಳಲ್ಲಿ ಶೋಭೆಗೆಂದು ಬೆಳೆಸುತ್ತಾರೆ.

ಇದು ಬಾಹ್ಯರಚನೆಯಲ್ಲಿ ಅಡಕೆಮರವನ್ನು ಹೆಚ್ಚು ಕಡಿಮೆ ಹೋಲುತ್ತದೆ. ಆದರೆ ಅಡಕೆ ಮರದಷ್ಟು ದಪ್ಪವಾಗಲಿ ಎತ್ತರವಾಗಲಿ ಇಲ್ಲ. ಅಡಿಕೆ ಮರದಲ್ಲಿ ಮುಖ್ಯ ಕಾಂಡವೊಂದೇ ಇದೆ. ಆದರೆ ಇದರಲ್ಲಿ ಗಿಡದ ಬುಡದಿಂದ ಅನೇಕ ರೆಂಬೆಗಳು ಹೊರಡುತ್ತವೆ. ಇದರಿಂದ ಗಿಡ ಚಿಕ್ಕ ಬಿದಿರು ಪೊದೆಯಂತೆ ಕಾಣುತ್ತದೆ. ರೆಂಬೆಗಳ ಬುಡದಿಂದ ಹಲವಾರು ಗರಿರೂಪದ ಎಲೆಗಳು ಹುಟ್ಟುತ್ತವೆ. ಒಂದೊಂದು ಎಲೆಯೂ ಸುಮಾರು 4'–6' ಉದ್ದ ಮತ್ತು 3' ಅಗಲ ಇದೆ. ಪ್ರತಿಯೊಂದು ಎಲೆಯಲ್ಲೂ 40–60 ಕಿರು ಎಲೆಗಳಿವೆ. ಹೂಗೊಂಚಲು ಕದಿರುಗುಚ್ಛ ಮಾದರಿಯದು; ಹೂಗಳು ಏಕಲಿಂಗಿಗಳು. ಗಂಡು ಮತ್ತು ಹೆಣ್ಣು ಹೂಗಳು ಬೇರೆ ಬೇರೆ ಸಸ್ಯಗಳಲ್ಲಿರುತ್ತವೆ.

ಕ್ರೈಸಲಿಡೊಕಾರ್ಪಸ್ ಸಸ್ಯವನ್ನು ಬೀಜಗಳ ಮೂಲಕ ವೃದ್ಧಿಸಲಾಗುತ್ತದೆ. ಸಣ್ಣ ಪೆಟ್ಟಿಗೆಗಳಲ್ಲಿ ಇಲ್ಲವೆ ತಟ್ಟೆಗಳಲ್ಲಿ ಬಿತ್ತಿ ಇವುಗಳಿಂದ ಮೊಳೆಯುವ ಸಸಿಗಳು ಎರಡು ಎಲೆಗಳನ್ನು ಉತ್ಪಾದಿಸುವವರೆಗೂ ಹಾಗೆಯೆ ಬಿಟ್ಟದ್ದು ಅನಂತರ ಎಚ್ಚರಿಕೆಯಿಂದ ಸಸಿಗಳನ್ನು ಬೇರೆಡೆಗೆ ವರ್ಗಾಯಿಸಲಾಗುತ್ತದೆ. ಹೀಗೆ ಸಸಿಗಳನ್ನು ಕೀಳಲು ಅನುಕೂಲವಾಗುವಂತೆ ಪೆಟ್ಟಿಗೆಗಳ ತಳದಲ್ಲಿ ಕೊಂಚ ಕಂಕರೆಯನ್ನು ಹಾಕಬೇಕು. ಕಿತ್ತಬಳಿಕ ಬೇರುಗಳನ್ನು ಚೆನ್ನಾಗಿ ತೊಳೆದು ಸ್ವಲ್ಪ ತೇವವಿರುವ ಮಣ್ಣಿನಲ್ಲಿ ನೆಟ್ಟು, ಆಮೇಲೆ ಕೆಲವು ಕಾಲ ಹೆಚ್ಚು ಉಷ್ಣತೆ ಹಾಗೂ ತೇವಾಂಶವಿರುವ ಪರಿಸರದಲ್ಲಿ ಗಿಡಗಳನ್ನು ಇಡಬೇಕು. ಬಿಸಿಲು ನೇರವಾಗಿ ಬೀಳದಂತೆ ಕಾಪಾಡಬೇಕು. (ಬಿ.ಎ.ಪಿ.)

**ಕ್ರೈಸಾಪಿಡೀ :** ಕೀಟವರ್ಗದ ನ್ಯೂರಾಪ್ಟರ ಗಣಕ್ಕೆ ಸೇರಿದ ಒಂದು ಕುಟುಂಬ. ಇದಕ್ಕೆ ಸೇರಿದ ಕೀಟಗಳು ಸಸ್ಯಗಳಿಗೆ ಹಾನಿಯುಂಟು ಮಾಡುವ ಏಫಿಡ್ಡುಗಳನ್ನು ತಿಂದು ಜೀವಿಸುವುದರಿಂದ ಇವಕ್ಕೆ ಏಫಿಡ್ ಲಯನ್ಸ್ ಎಂಬ ಸಾಮಾನ್ಯ ಬಳಕೆಯ ಹೆಸರು ಬಂದಿದೆ. ಆಕರ್ಷಕವಾದ ಮತ್ತು ಕೃಶವಾದ ದೇಹ, ಹಸುರು ಬಣ್ಣದ ವೈವಿಧ್ಯಮಯ ವಿನ್ಯಾಸದಿಂದ ಕೂಡಿದ ಎರಡು ಜೊತೆ ರೆಕ್ಕೆಗಳು ಮತ್ತು ಸುಂದರವಾದ ಚಿನ್ನದ ಬಣ್ಣದ ಕಣ್ಣುಗಳು ಇವಕ್ಕೆ ಇರುವುದರಿಂದ ಇವುಗಳನ್ನು ಜರಿ ರೆಕ್ಕೆ ಕೀಟಗಳೆಂದೂ (ಲೇಸ್ ವಿಂಗ್ಸ್) ಕರೆಯುತ್ತಾರೆ. ಕೆಲವು ಪ್ರಭೇದಗಳ ಕೀಟಗಳನ್ನು ಮುಟ್ಟಿದರೆ ದುರ್ವಾಸನೆ ಹೊರ ಸೂಸುತ್ತದೆ. ಇದರಿಂದಾಗಿ ಇವನ್ನು ಸ್ಟಿಂಕ್‌ಫ್ಲೈಸ್ ಎಂದೂ ಕರೆಯಲಾಗುತ್ತದೆ. ಸಾಮಾನ್ಯವಾಗಿ ಗಿಡಗಂಟೆಗಳಿಗೆ ಅಂಟಿಕೊಂಡೇ ವಾಸಿಸುತ್ತವೆ. ಎರಡು ಜೊತೆ ರೆಕ್ಕೆಗಳಿದ್ದರೂ ಹಾರಲು ಹೆಚ್ಚು ಸಾಮರ್ಥ್ಯವಿಲ್ಲ. ಈ ಕೀಟಗಳ ತಲೆ ಬಲು ಚಿಕ್ಕದು, ಕುಡಿ ಮೀಸೆಗಳು ಉದ್ದವಾಗಿಯೂ ತೆಳುವಾಗಿಯೂ ಇವೆ. ಕೆಲವೊಮ್ಮೆ ಕುಡಿ ಮೀಸೆಗಳು ದೇಹಕ್ಕಿಂತ ಉದ್ದವಿರುವುದುಂಟು. ವದನಾಂಗಗಳು ಆಹಾರವನ್ನು ಕಡಿಯುವುದಕ್ಕೆ ಅನುಕೂಲವಾಗಿವೆ. ಎರಡು ಜೊತೆ ರೆಕ್ಕೆಗಳೂ ರಚನೆಯಲ್ಲಿ, ಆಕಾರದಲ್ಲಿ ಒಂದೇ ತೆರನಾಗಿವೆ. ಮುಂದಿನ ಜೊತೆಯವು ಹಿಂದಿನ ಜೊತೆಯ ರೆಕ್ಕೆಗಿಂತ ಗಾತ್ರದಲ್ಲಿ ದೊಡ್ಡವು. ಎರಡು ಜೊತೆಗಳು ಸಾಮಾನ್ಯವಾಗಿ ಪಾರದರ್ಶಕವಾಗಿವೆ. ಕೆಲವು ಪ್ರಭೇದಗಳಲ್ಲಿ ಮಾತ್ರ ರೆಕ್ಕೆಗಳ ಮೇಲೆ ಅಲ್ಲಲ್ಲಿ ಮಾಸಲು ಛಾಯೆಗಳಿವೆ.

ಕ್ರೈಸಾಪಿಡೀ ಕುಟುಂಬದ ಕೀಟಗಳು ಮರಗಿಡಗಳ ಕಾಂಡ ಮತ್ತು ಎಲೆಗಳ ಮೇಲೆ ಗುಂಪು ಗುಂಪಾಗಿ ಮೊಟ್ಟೆಯಿಡುತ್ತವೆ. ಒಂದೊಂದು ಮೊಟ್ಟೆಗೂ ಉದ್ದವಾದ ಹಾಗೂ ತೆಳುವಾದ ತೊಟ್ಟು ಇದೆ. ಡಿಂಬಗಳು ಕದಿರಿನಾಕಾರದವು. ಇವಕ್ಕೆ ರಕ್ತ ಹೀರಲು ಸಹಾಯಕವಾಗಿರುವ ಕುಡುಗೋಲಿನ ಆಕಾರದ ವದನಾಂಗಗಳಿವೆ. ತಂತುರೂಪದ ಕುಡಿ ಮೀಸೆಗಳು, ಕೃಶವಾದ ಕಾಲುಗಳು ಮತ್ತು ದೇಹದ ಎರಡು ಪಕ್ಕಗಳ ತಳಭಾಗದಲ್ಲಿ ಸಣ್ಣ ಸಣ್ಣ ಮುಳ್ಳುಗಳಂತಿರುವ ರಚನೆಗಳೂ ಇವಕ್ಕೆ ಉಂಟು. ಇವುಗಳ ದೇಹ ಸಾಮಾನ್ಯವಾಗಿ ಬೂದಿ ಮಿಶ್ರಿತ ಕೆಂಪು, ಕಪ್ಪು, ಹಳದಿ ಬಣ್ಣಗಳಿಂದ ಕೂಡಿದೆ. ಒಂದು ವಾರದ ಅನಂತರ ಡಿಂಬಗಳು ಮರಗಳಿಗೆ ಅಥವಾ ಇತರ ವಸ್ತುಗಳಿಗೆ ಅಂಟಿಕೊಂಡು ಬಿಳಿಯ ಬಣ್ಣದ ನಯವಾದ ರೇಶ್ಮೆಯಿಂದಾದ ಕೋಶಗಳಲ್ಲಿ ದೇಹವನ್ನು ಮುದುರಿಕೊಮಡು ಕೋಶಾವಸ್ಥೆಯನ್ನು ಸೇರುತ್ತವೆ. ಡಿಂಬಗಳೂ ಪ್ರೌಢಕೀಟಗಳೂ ಇತರ ಕೀಟಗಳನ್ನು ತಿಂದು ಜೀವಿಸುತ್ತವೆ.

ಕ್ರೈಸಾಪಿಡೀ ಕುಟುಂಬದ ಕೀಟಗಳು ಸಸ್ಯ ಪಿಡುಗುಗಳಾದ ಏಫಿಡ್ಡುಗಳು ಮತ್ತು ಇತರ ಹಾನಿಕರ ಕೀಟಗಳನ್ನು ತಿನ್ನುವುದರಿಂದ ಬಹಳ ಉಪಯುಕ್ತವೆನಿಸಿವೆ. ಉದಾಹರಣೆಗೆ ಹತ್ತಿ ಮತ್ತು ಜೋಳದ ಪೈರಿಗೆ ಅಂಟುವ ಏಫಿಡ್ಡುಗಳನ್ನು ತಿನ್ನುವ ಕ್ರೈಸೋಪ. (ಪಿ.ಎ.ಆರ್.)

**ಕ್ರೈಸಾಯ್ಡಿನ್ :** ಕ್ಷಾರೀಯ ಅಜ಼ೊವರ್ಣದ್ರವ್ಯ. ಡೈಅಜ಼ೋಟೈಜ಼್ ಮಾಡಿದ ಅನಿಲೀನನ್ನು ಮೆಟಫಿನೈಲೀನ್ ಡೈ ಅಮೀನಿನೊಡನೆ ಸಂಲಗ್ನಗೊಳಿಸಿ (ಕಪಲ್) ಇದನ್ನು ತಯಾರಿಸಲಾಗುವುದು. ಕ್ರೈಸಾಯ್ಡಿನ್ ಕೆಂಪು ಮಿಶ್ರಿತ ಕಂದು ಬಣ್ಣದ ಪುಡಿ ಅಥವಾ ಹಸಿರು ಸೂಸುವ ಕಪ್ಪು ಹರಳುಗಳು. ಕರಗುವ ಬಿಂದು 117° ಸೆಂ. ಇದು ನೀರಿನಲ್ಲಿ ಮತ್ತು ಮದ್ಯಸಾರದಲ್ಲಿ ವಿಲೀನವಾಗಿ ಕಿತ್ತಳೆ ಬಣ್ಣದ ದ್ರಾವಣ ಕೊಡುತ್ತದೆ. ಈಥರಿನಲ್ಲಿ ವಿಲೀನವಾಗುವುದಿಲ್ಲ. ಹತ್ತಿ ಮತ್ತು ರೇಷ್ಮೆಗಳಿಗೆ ಕಿತ್ತಳೆ ಬಣ್ಣವಾಗಿ ಟ್ಯಾನಿನ್ ಬಣ್ಣಗಚ್ಚಿನ (ಮಾರ್ಡೆಂಟ್) ಮೇಲೆ ಉಪಯೋಗಿಸಲಾಗುವುದು. (ಎಲ್.ಎ.ಆರ್.)

**ಕ್ರೈಸೊಮೆಲಿಡೀ :** ಕೀಟವರ್ಗದ ಕೋಲಿಯಾಪ್ಟರ ಗಣದ ಪಾಲಿಫೇಗ ಉಪಗಣಕ್ಕೆ ಸೇರಿದ ಕುಟುಂಬ. ಎಲೆ ಜೀರುಂಡೆಗಳೆಂದು ಕರೆಯಲಾಗುವ ಕೀಟಗಳನ್ನು ಒಳಗೊಂಡಿದೆ. ಸಣ್ಣ ಗಾತ್ರದಿಂದ ಮಧ್ಯಮ ಗಾತ್ರದ ದೇಹವನ್ನುಳ್ಳ ಕೀಟಗಳಿವು. ಸಾಮಾನ್ಯವಾಗಿ 1 ರಿಂದ 1.5 ಮಿಮೀ. ಉದ್ದ ಇರುತ್ತವೆ. ಅಪರೂಪವಾಗಿ 25 ಮಿಮೀ. ಉದ್ದ ಇರುವುದೂ ಉಂಟು (ಉದಾಹರಣೆಗೆ ಸಾಗ್ರಿಯ ಪಾಪುವ ಎಂಬ ಪ್ರಭೇದ). ದೇಹದ ಆಕಾರ ಅಂಡದಂತೆ. ಬಹುಪಾಲು ಕೀಟಗಳ ದೇಹದ ಬಣ್ಣ ಸಾಮಾನ್ಯವಾಗಿ ಕಾಮನಬಿಲ್ಲಿನ ಎಲ್ಲ ಬಣ್ಣಗಳನ್ನು ಹೋಲುತ್ತಿದ್ದು ಥಳಥಳನೆ ಮಿನುಗುತ್ತಿರುತ್ತದೆ. ಇದರಿಂದ ಕೀಟಗಳು ಅತ್ಯಂತ ಆಕರ್ಷಕವಾಗಿ ಕಾಣುತ್ತವೆ. ತಲೆ ಚಿಕ್ಕದು. ಕುಡಿಮೀಸೆಗಳು (ಆಂಟೆನ) 11 ಖಂಡಗಳಿಂದ ಕೂಡಿವೆ. ವದನಾಂಗಗಳು ಆಹಾರವನ್ನು ಕಡಿಯಲು ಅನುಕೂಲವಾಗಿವೆ. ಕಾಲುಗಳಲ್ಲಿಯ ಟಾರ್ಸಸ್ ಭಾಗ 5 ಖಂಡಗಳಿಂದ ಕೂಡಿದೆ. ಇವುಗಳಲ್ಲಿ ನಾಲ್ಕನೆಯದು ಬಹಳ ಕಿರಿದಾಗಿದ್ದು ಒಂದು ರೀತಿಯ ಉಂಗುರದಂತೆ 5ನೆಯ ಖಂಡದ ಬುಡದಲ್ಲಿ ಹುದುಗಿರುತ್ತದೆ. ಈ ಲಕ್ಷಣ ಕ್ರೈಸೊಮೆಲಿಡೀ ಕುಟುಂಬದ ಕೀಟಗಳಿಗೆ ವಿಶಿಷ್ಟವಾದುದು. ಕೋಲಿಯಾಪ್ಟರ ಗಣದ ಇತರ ಕೀಟಗಳಂತೆಯೆ ಈ ಕುಟುಂಬದ ಕೀಟಗಳಲ್ಲೂ ಕವಚದಂಥ ಗಡುಸಾದ ಹೊರ ರೆಕ್ಕೆಗಳೂ (ಎಲಿಟ್ರ) ಹಾರಲು ಸಹಾಯಕವಾದ ತೆಳುವಾದ ಒಳರೆಕ್ಕೆಗಳೂ ಇವೆ. ಈ ಕುಟುಂಬದ ಬಹುಪಾಲು ಕೀಟಗಳು ಭೂವಾಸಿಗಳು. ಕೆಲವು ಜಾತಿಗಳು ಮಾತ್ರ ಅರೆ ಜಲವಾಸಿಗಳು. ಎಲ್ಲ ಪ್ರಭೇದಗಳೂ ಸಸ್ಯಾಹಾರಿಗಳು. ಜೀವಂತ ಸಸ್ಯಗಳನ್ನೆ ತಿಂದು ಬದುಕುತ್ತವೆ. ಪ್ರೌಢಕೀಟಗಳು ಎಲೆಗಳನ್ನು ತಿನ್ನುತ್ತವಾದರೆ ಡಿಂಬಗಳು ಬೇರು ಮತ್ತು ಕಾಂಡಗಳನ್ನು ತಿನ್ನುವುದುಂಟು. ಹಲವಾರು ಪ್ರಭೇದಗಳು ಕೃಷಿ ಸಸ್ಯಗಳಿಗೆ ದಾಳಿಯಿಕ್ಕಿ ಗಮನಾರ್ಹ ನಷ್ಟವನ್ನುಂಟು ಮಾಡುತ್ತವೆ. ಹೆಚ್ಚಿನ ಪಾಲು ಕೀಟಗಳು ಮೊಟ್ಟೆಯಿಡುತ್ತವೆ. ಕೆಲವು ಮಾತ್ರ ನೇರವಾಗಿ ಮರಿಗಳನ್ನೆ ಈಯುವುದುಂಟು. ಮೊಟ್ಟೆಗಳನ್ನು ಆತಿಥೇಯ ಸಸ್ಯಗಳ ಮೇಲೆ ಇಲ್ಲವೆ ಸಸ್ಯದೇಹದೊಳಗೆ ಅಥವಾ ಅವುಗಳ ಬಳಿಯ ಮಣ್ಣಿನಲ್ಲಿ ಇಡುವುದೇ ವಾಡಿಕೆ. ಮೊಟ್ಟೆಯೊಡೆದು ಹೊರಬರುವ ಮರಿಗಳಿಗೆ ಗ್ರಬ್‌ಗಳೆಂದು ಹೆಸರು. ಸ್ವತಂತ್ರ ಜೀವಿಗಳಾದ ಇವು ಸಸ್ಯಾಹಾರವನ್ನು ಹುಡುಕುತ್ತ ಓಡಾಡುತ್ತಿದ್ದು ಕೆಲವು ದಿನಗಳ ಅನಂತರ ಕೋಶಾವಸ್ಥೆಯನ್ನು ಸೇರುತ್ತವೆ.

ಕ್ರೈಸೊಮೆಲಿಡೀ ಕುಟುಂಬವನ್ನು 16 ಉಪ ಕುಟುಂಬಗಳಾಗಿ ವಿಂಗಡಿಸಲಾಗಿದೆ. ಇವೆಲ್ಲಕ್ಕೂ ಸೇರಿದಂತೆ ಒಟ್ಟು 24,000 ಪ್ರಭೇದಗಳಿವೆ. ಇವುಗಳಲ್ಲಿ ಆರ್ಥಿಕವಾಗಿ ಮುಖ್ಯವಾದವು ಇವು–ಆಲೂಗೆಡ್ಡೆಗೆ ಹತ್ತುವ ಲೆಪ್ಟಿನೊಟಾರ್ಸ ಡಿಸೆಮ್‌ಲೈನಿಯೇಟ (ಕಾಲರಾಡೊ ಪೊಟ್ಯಾಟೊ ಬೀಟಲ್), ಸೌತೆ ಗಿಡಗಳನ್ನು ಹಾಳು ಮಾಡುವ

ಡಯಬ್ರೋಟಿಕ ವಿಟೆಟ, ಎಲೆಕೋಸು, ಟರ್ನಿಪ್ ಮುಂತಾದ ಗಿಡಗಳಿಗೆ ಅಂಟುವ ಹಾಲ್ಬಿಕ ನೆಮೋರಮ್, ಮುಸುಕಿನ ಜೋಳದ ಪಿಡುಗಾದ ಲೀಮ ಮೆಲನೋಪ.

(ಬಿ.ಎಚ್.ಎಂ.)

**ಕ್ರೈಸ್ಟ್‌ಚರ್ಚ್ :** ನ್ಯೂಜ಼ೀಲೆಂಡಿನ ಕ್ಯಾಂಟರ್‌ಬೆರಿ ಪ್ರಾಂತೀಯ ಜಿಲ್ಲೆಯ ಆಡಳಿತ ಕೇಂದ್ರ. ದಕ್ಷಿಣ ದ್ವೀಪದ (ಸೌತ್ ಐಲೆಂಡ್) ಪೂರ್ವತೀರದಲ್ಲಿ, ಬ್ಯಾಂಕ್ಸ್ ಪರ್ಯಾಯದ್ವೀಪದ ಉತ್ತರಕ್ಕಿದೆ. ಇದು ನ್ಯೂಜ಼ೀಲೆಂಡಿನ ಎರಡನೆಯ ದೊಡ್ಡ ನಗರ (ಮೊದಲನೆಯದು ಆಕ್‌ಲೆಂಡ್). ಇದರ ಉಪನಗರಗಳೂ ಸೇರಿದಂತೆ ಈ ನಗರದ ಜನಸಂಖ್ಯೆ 324200 (1999). ಒಮ್ಮೆ ಜ್ವಾಲಾಮುಖಿಯ ದ್ವೀಪವಾಗಿದ್ದ ಬ್ಯಾಂಕ್ ಪರ್ಯಾಯದ್ವೀಪದ ಮೆಕ್ಕಲುಮಣ್ಣಿನಿಂದ ಕೂಡಿದ ಕ್ಯಾಂಟರ್‌ಬರಿ ಮೈದಾನದಲ್ಲಿ ಈ ನಗರವಿದೆ. ಆಯಾಕಾರದಲ್ಲಿ ನಿರ್ಮಿಸಲಾದ ಈ ನಗರವನ್ನು ಉದ್ಯಾನ ನಗರ ಅಥವಾ ಮೈದಾನದ ನಗರ ಎಂದೂ ಕರೆಯುವುದುಂಟು. ಗಾತ್ರದಲ್ಲಿ ಸಣ್ಣದಿದ್ದರೂ ಬಹು ಆಕರ್ಷಕವಾಗಿರುವ ಏವನ್ ನದಿ ಈ ನಗರದ ಮೂಲಕ ಹರಿಯುತ್ತದೆ. ಸುಂದರವಾದ ಉದ್ಯಾನಗಳೂ ತೋಟಗಳೂ ಅಭಯಾರಣ್ಯಗಳೂ ವಿಹಾರ ಸ್ಥಳಗಳೂ ಈ ನಗರದ ಎಂಟನೆಯ ಒಂದು ಭಾಗದಷ್ಟು ಸ್ಥಳವನ್ನು ಆವರಿಸಿಕೊಂಡಿವೆ. ನಗರದ ಮುಖ್ಯಸ್ಥಳ ಕೆಥೀಡ್ರಲ್ ಚೌಕ. ಸರ್ ಗೈಲ್ಸ್ ಗಿಲ್ಬರ್ಟ್ ಸ್ಕಾಟ್ (1811–78) ರೂಪಿಸಿದ ಆಲೇಖ್ಯಗಳ ಪ್ರಕಾರ ಗೋಥಿಕ್ ಮಾದರಿಯಲ್ಲಿ ನಿರ್ಮಿತವಾಗಿರುವ ಆಂಗ್ಲಿಕನ್ ಕೆಥೀಡ್ರಲ್ ಈ ಚೌಕದಲ್ಲಿದೆ. ಇದರ 70 ಮೀ ಎತ್ತರದ ಮಿನಾರು ಪ್ರಧಾನವಾಗಿ ಎದ್ದು ಕಾಣಿಸುತ್ತದೆ. ಸೇಕ್ರೆಡ್ ಹಾರ್ಟ್ ಕಾನ್ವೆಂಟಿಗೆ ಸೇರಿದ ಒಂದು ರೋಮನ್ ಕೆಥೊಲಿಕ್ ಪ್ರೋಕೆಥೀಡ್ರಲ್ ಸಹ ಇಲ್ಲಿದೆ. ನ್ಯೂಜ಼ೀಲೆಂಡಿನ ಪ್ರಮುಖ ಶಿಕ್ಷಣಕೇಂದ್ರಗಳಲ್ಲಿ ಕ್ರೈಸ್ಟ್ ಚರ್ಚೂ ಒಂದು. ಕ್ರೈಸ್ಟ್ ಕಾಲೇಜ್, 1873ರಲ್ಲಿ ಸ್ಥಾಪಿತವಾದ ಕ್ಯಾಂಟರ್‌ಬೆರಿ ವಿಶ್ವವಿದ್ಯಾಲಯ ಮುಂತಾದವುಗಳ ಹಳೆಯ ಮತ್ತು ಸುಂದರ ಕಟ್ಟಡಗಳು ಇಲ್ಲುಂಟು. ಸಸ್ಯೋದ್ಯಾನ ಮತ್ತು ಹ್ಯಾಗ್ಲಿ ಉದ್ಯಾನಗಳ ಬಳಿಯಲ್ಲಿ ರಾಬರ್ಟ್ ಮೆಕ್‌ಡೂಗಲ್ ಚಿತ್ರಶಾಲೆಯೂ ಕ್ಯಾಂಟರ್‌ಬೆರಿ ವಸ್ತುಸಂಗ್ರಹಾಲಯವೂ ಇವೆ. ಕ್ಯಾಂಟರ್‌ಬೆರಿ ವಸ್ತು ಸಂಗ್ರಹಾಲಯದಲ್ಲಿ ದೇಶೀಯ ಹಕ್ಕಿಗಳನ್ನು ಸಂಗ್ರಹಿಸಲಾಗಿದೆ. ನಿರ್ವಂಶವಾದ ಮೋವ ಹಕ್ಕಿಯ ಅವಶೇಷಗಳನ್ನಿಡಲಾಗಿದೆ. ಹಳೆಯ ಕಾಲದ ಕ್ರೈಸ್ಟ್‌ಚರ್ಚಿನ ಬೀದಿಯೊಂದರ ಪಡಿಯಚ್ಚೂ ನಕ್ಷತ್ರಮಂದಿರವೂ(ಪ್ಲಾನೆಟೋರಿಯಂ) ಇಲ್ಲಿವೆ. ನಗರದ ಇತರ ಕಟ್ಟಡಗಳ ಪೈಕಿ ಪ್ರಿನ್ಸೆಸ್ ಮಾರ್ಗರೆಟ್ ಆಸ್ಪತ್ರೆಯೂ ಸರ್ಕಾರಿ ಕಚೇರಿ ಭವನಗಳೂ ಮುಖ್ಯವಾದವು.

ಲಿಟಲ್‌ಟನ್ ಇಲ್ಲಿಯ ಪ್ರಮುಖ ಮತ್ತು ಆಳವಾದ ನೈಸರ್ಗಿಕ ಬಂದರು. ವರ್ಷಕ್ಕೆ 15,00,000 ಟನ್‌ಗಳಿಗಿಂತ ಅಧಿಕ ತೂಕದ ಸರಕು ಈ ಬಂದರಿನ ಮೂಲಕ ಸಾಗುತ್ತದೆ. ಉಣ್ಣೆ, ಮಾಂಸ, ಹೈನ ಉತ್ಪನ್ನ, ಗೋದಿ–ಇವು ಮುಖ್ಯ ನಿರ್ಯಾತಗಳು. ಆಯಾತಗಳಲ್ಲಿ ಮುಖ್ಯವಾದವು ಮೋಟಾರ್ ಎಣ್ಣೆಗಳು, ರಾಸಾಯನಿಕ ಗೊಬ್ಬರಗಳು, ತೈಲ, ಕಬ್ಬಿಣ ಮತ್ತು ಉಕ್ಕು.

ನಗರದ ಮಧ್ಯಭಾಗದಿಂದ 9.6 ಕಿಮೀ ದೂರದಲ್ಲಿ, ವಾಯವ್ಯಕ್ಕೆ, ಕ್ರೈಸ್ಟ್ ಚರ್ಚಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಇದೆ. ಇದು 405 ಹೆಕ್ಟೇರ್‌ಗಳ ಪ್ರದೇಶದಲ್ಲಿ ನಿರ್ಮಿತವಾಗಿದೆ. ಇದು ನ್ಯೂಜ಼ೀಲೆಂಡಿನ ಪ್ರಮುಖ ವಿಮಾನ ನಿಲ್ದಾಣಗಳಲ್ಲೊಂದು. ಇಲ್ಲಿಂದ ನ್ಯೂಜ಼ೀಲೆಂಡಿನ ಇತರ ನಗರಗಳಿಗೂ ಮೆಲ್ಬರ್ನ್ ಮತ್ತು ಸಿಡ್ನಿಗಳಿಗೂ ವಿಮಾನ ಸಂಪರ್ಕವುಂಟು. ಕ್ರೈಸ್ಟ್‌ಚರ್ಚ್ ನಗರಕ್ಕೂ ವಿಮಾನ ನಿಲ್ದಾಣಕ್ಕೂ ನಡುವೆ ನಾಲ್ಕು ಪಥಗಳ ಹೆದ್ದಾರಿಯಿದೆ. ಇದರಿಂದಾಗಿ ಸರಕು ಸಾಗಣೆಗೆ ಬಹಳ ಅನುಕೂಲವಾಗಿದೆ. ಕ್ರೈಸ್ಟ್‌ಚರ್ಚ್‌ನ ಉತ್ತರಕ್ಕಿರುವ ಬ್ಲೆನ್‌ಇಮ್, ದಕ್ಷಿಣಕ್ಕಿರುವ ಡ್ಯೂನೀಡನ್ ಮತ್ತು ಇನ್ವರ್‌ಕಾರ್ಗಿಲ್ ಮತ್ತು ಪಶ್ಚಿಮಕ್ಕಿರುವ ಗ್ರೇಮೌತ್ ಪಟ್ಟಣಗಳಿಗೂ ಈ ನಗರಕ್ಕೂ ರೈಲು ಮತ್ತು ರಸ್ತೆ ಮಾರ್ಗಗಳಿವೆ.

ಸಾರಿಗೆ ಸೌಲಭ್ಯ, ಆರ್ಟೀಸಿಯನ್ ಬಾವಿಗಳಿಂದ ಸಮೃದ್ಧಿಯಾದ ಜಲ ಸೌಕರ್ಯ, ಅಗ್ಗದ ವಿದ್ಯುತ್ ಸರಬರಾಯಿ–ಮುಂತಾದ ಅನುಕೂಲಗಳಿಂದಾಗಿ ಕ್ರೈಸ್ಟ್‌ಚರ್ಚ್ ನ್ಯೂಜ಼ೀಲೆಂಡಿನ ಎರಡನೆಯ ಪ್ರಮುಖ ಕೈಗಾರಿಕಾ ಕೇಂದ್ರವಾಗಿ ಪರಿಣಮಿಸಿದೆ. ಎರಡನೆಯ ಮಹಾಯುದ್ಧಕ್ಕೆ ಮುಂಚೆ ಸುತ್ತಣ ಫಲವತ್ತಾದ ಕೃಷಿ ಪ್ರದೇಶಗಳನ್ನೇ ಈ ನಗರ ಅವಲಂಬಿಸಿತ್ತು. ಆಗ ಇಲ್ಲಿ ಮಾಂಸ ಶೀತಲೀಕರಣ, ಉಣ್ಣೆ, ಉಪಕರಣ ತಯಾರಿಕೆ ಮುಂತಾದ ಕೆಲವು ಕೈಗಾರಿಕೆಗಳೂ ಇದ್ದುವು. 1945ರ ಅನಂತರ ತೀವ್ರ ಗತಿಯಲ್ಲಿ ಕೈಗಾರಿಕಾಭಿವೃದ್ಧಿಯಾಯಿತು. ಬಟ್ಟೆ, ಜಮಖಾನೆ, ಮರ ಮತ್ತು ಬೆಂಡಿನ ಉತ್ಪನ್ನಗಳು, ಅಣೆಕಟ್ಟು, ಸಾರಿಗೆ ಉಪಕರಣ–ಮುಂತಾದ ಕಾರ್ಖಾನೆಗಳು ಇಲ್ಲಿವೆ.

ಎಡ್ವರ್ಡ್ ಗಿಬನ್ ವೇಕ್‌ಫೀಲ್ಡನ ಮತ್ತು ಅವನ ನ್ಯೂಜ಼ೀಲೆಂಡ್ ಕಂಪೆನಿಯ ಸ್ಫೂರ್ತಿಯಿಂದ ಏರ್ಪಡಿಸಲಾದ ನೆಲಸುನಾಡುಗಳಲ್ಲಿ ಕ್ರೈಸ್ಟ್‌ಚರ್ಚ್ ಕೊನೆಯದು. ಜಾನ್ ರಾಬರ್ಟ್ ಗಾಡ್ಲಿಯ ಪ್ರಯತ್ನದಿಂದಾಗಿ ಕ್ಯಾಂಟರ್‌ಬೆರಿ ಸಂಘದಿಂದ ಇದು ಸ್ಥಾಪಿತವಾಯಿತು (1848). ಇಂಗ್ಲೆಂಡಿನ ಚರ್ಚಿನ ಅನುಯಾಯಿಗಳ ಮಾದರಿ ನೆಲೆಯೊಂದನ್ನು ಸ್ಥಾಪಿಸುವುದು ಆ ಕಂಪನಿಯ ಯೋಜನೆಯಾಗಿತ್ತು. ಆ ಯೋಜನೆಯ ಪ್ರಕಾರ ಇಲ್ಲಿ ನೆಲಸುವ ಉದ್ದೇಶದಿಂದ ಬಂದ ವಲಸೆಗಾರರ ಮೊದಲ ತಂಡ ಲಿಟಲ್‌ಟನ್ನನ್ನು ತಲಪಿದ್ದು 1850ರಲ್ಲಿ. *

**ಕ್ರೈಸ್ತ ಆರಾಧನಾ ವಿಧಿ :** ಧರ್ಮಸಭೆ (ಚರ್ಚು) ನಿರೂಪಿಸಿರುವಂತೆ ಪ್ರಭು ಭೋಜನ (ಮಾಸ್), ಸಪ್ತಸಂಸ್ಕಾರಗಳ (ಸ್ಯಾಕ್ರಮೆಂಟ್ಸ್) ಪ್ರದಾನ ಮತ್ತು ಅಧಿಕೃತ ಪ್ರಾರ್ಥನಾಪಠಣ–ಇವನ್ನು ಒಳಗೊಂಡಿರುವ ವಿಸ್ತಾರವಾದ ಆರಾಧನಾ ವಿಧಿಗೆ ಈ ಹೆಸರಿದೆ (ಲಿಟರ್ಜಿ). ಇದರ ಮುಖೇನ ಧರ್ಮಸಭೆ ಯೇಸುವಿನ ಗುರುತ್ವದ ಹಾಗೂ ರಕ್ಷಣಾ ಕಾರ್ಯದ ಫಲಗಳ ಉಪಯೋಗಗಳನ್ನು ಪಡೆಯುತ್ತದೆ. ಧಾರ್ಮಿಕ ಶ್ಲೋಕ–ಸೂತ್ರಗಳ ಉಚ್ಚಾರಣೆ, ಹಾವಭಾವಗಳ ವಿನ್ಯಾಸ ಹಾಗೂ ಮತ್ತಿತರ ದೃಗ್ಗೋಚರ ಸಂಕೇತ ಮತ್ತು ಸಾಮಗ್ರಿಗಳನ್ನು ಈ ವೇಳೆಯಲ್ಲಿ ಬಳಸಲಾಗುತ್ತದೆ. ಧರ್ಮಸಭೆಯಿಂದ ಅಧಿಕೃತವಾಗಿ ನೇಮಿಸಲಾದ ಪುರೋಹಿತ ವರ್ಗದವರು ಆರಾಧನಾ ವಿಧಿಗಳನ್ನು ನಡೆಸಿಕೊಟ್ಟಾಗ ಮಾತ್ರ ಅದಕ್ಕೆ ಮನ್ನಣೆಯುಂಟು. ಶ್ಲೋಕ–ಸೂತ್ರಗಳು ಸಂಕೇತ ಸಾಮಗ್ರಿಗಳು ವ್ಯಕ್ತಿಯ ಅಂತರ್ಯದ ಭಕ್ತಿ ಭಾವವನ್ನು ಅಭಿವ್ಯಕ್ತಿಗೊಳಿಸಲು ಸಹಕಾರಿಯಾಗುತ್ತವೆ. ಈ ಮೂಲಕ ಕ್ರೈಸ್ತ ಜನತೆ ಭಗವಂತನಿಂದ ಪವಿತ್ರವಾಗುತ್ತದೆ; ಇವರ ಪ್ರೀತಿ ಅದರ ಮನ್ನಣೆ ಕೃತಜ್ಞತೆಗಳು ಭಗವಂತನಿಗೆ ಸಲ್ಲುತ್ತವೆ.

ಪ್ರಭು ಭೋಜನದ (ನೋಡಿ) ವಿತರಣೆ ಆರಾಧನಾ ವಿಧಿಯ ಕೇಂದ್ರಬಿಂದು. ಈ ಕಾರ್ಯವನ್ನು ನೆರವೇರಿಸುವಾಗ ಪರಂಪರಾಗತವಾಗಿ ಅನೇಕ ಹೊಸವಿಧಿ ವಿಧಾನಗಳು ಸೇರಿಕೊಂಡಿವೆಯಾದರೂ ಪ್ರಧಾನ ಅಂಶಗಳಲ್ಲಿ ಯಾವ ಮಾರ್ಪಾಟೂ ಆಗಿಲ್ಲ.

ಪುರೋಹಿತರು ದಿನಂಪ್ರತಿ ಹೇಳುವ ಪ್ರಾರ್ಥನೆಯೂ ಆರಾಧನಾ ವಿಧಿಯ ಅವಿಭಾಜ್ಯ ಅಂಗವೇ.

ಆರಾಧನಾ ವಿಧಿಯಲ್ಲಿ ಅನೇಕ ಬಗೆಗಳಿವೆ. ಮೂಲತಃ ನಾಲ್ಕು ವರ್ಗಗಳಿದ್ದುವು. 1. ಅಂಟಿಯೋಕನದು, 2. ಅಲೆಗ್ಸಾಂಡ್ರಿಯದ್ದು, 3. ರೋಮಿನದು. 4. ಪ್ರಾಚೀನ ಫ್ರಾನ್ಸಿನದು. ಅನಂತರ ಇವುಗಳಿಂದ ನಾನಾ ಬಗೆಗಳು ಕವಲೊಡೆದಿವೆ. ಸಿರಿಯನ್, ಸಿರೊ–ಮೆಸಪೊಟೇಮಿಯನ್, ಕಾಲ್ಡೀಯನ್, ಸಿರೊ–ಮಲಬಾರ್, ಬೈಜ಼ಾಂಟಿಯನ್ ಅರ್ಮೇನಿಯನ್, ಅಲೆಗ್ಸಾಂಡ್ರಿಯನ್, ಕಾಪ್ಟಿಕ್, ಈಥಿಯೋಪಿಯನ್–ಇತ್ಯಾದಿಗಳನ್ನು ಹೆಸರಿಸಬಹುದು.

2ನೆಯ ವ್ಯಾಟಿಕನ್ ವಿಶ್ವ ಸಮ್ಮೇಳನ ಆರಾಧನಾ ವಿಧಿಯ ಬಗ್ಗೆ ಒಂದು ಮಹತ್ತ್ವ ಪೂರ್ಣ ಶಾಸನವನ್ನು ಹೊರಡಿಸಿ ಆರಾಧನಾ ವಿಧಿಯಲ್ಲಿ ಅಳಿದು ಹೋಗುತ್ತಿರುವ ಮೂಲದ ಅಂಶಗಳನ್ನು ಮತ್ತೆ ಆಚರಣೆಗೆ ತರುವ ಪ್ರಯತ್ನ ಮಾಡಿತು. ಅಲ್ಲದೆ ಭಾಷೆಯ ಸಂಕೇತ ಸಾಮಗ್ರಿಗಳ ಬಳಕೆಯಲ್ಲಿ ಪ್ರಾಂತೀಯ ಸಂಸ್ಕೃತಿಗೆ ಪ್ರಾಶಸ್ತ್ಯ ಕೊಟ್ಟಿತು.

ಈಗ ಭಾರತೀಯ ಕ್ರೈಸ್ತರು ಭಾರತೀಯ ಭಾಷೆಗಳಲ್ಲಿ ಅಲ್ಲಲ್ಲಿಯ ಸಂಸ್ಕೃತಿಗೆ ಅನುಗುಣವಾದ ರೀತಿಯಲ್ಲಿ ಆರಾಧನಾ ವಿಧಿಯನ್ನು ನಡೆಸುತ್ತಿದ್ದಾರೆ. (ಡಿ.ವಿ.ಡಬ್ಲ್ಯು.)

**ಕ್ರೈಸ್ತ ಧರ್ಮ :** ಯೇಸು ಕ್ರಿಸ್ತನ ಉಪದೇಶದ ಆಧಾರದ ಮೇಲೆ ಹುಟ್ಟಿ ಬೆಳೆದು ಬಂದಿರುವ ಎಲ್ಲ ಸಿದ್ಧಾಂತಗಳಿಗೂ ಧರ್ಮ ಸಂಸ್ಥೆಗಳಿಗೂ ಒಟ್ಟಾಗಿ ಅನ್ವಯವಾಗುವ ಪದವಿದು. ಈ ಧರ್ಮವನ್ನು ಅನುಸರಿಸುವವರೆಲ್ಲರನ್ನೂ ಒಟ್ಟಾಗಿ ಕ್ರೈಸ್ತರೆನ್ನುತ್ತೇವೆ. ಎರಡು ಸಾವಿರ ವರ್ಷಗಳ ಹಿಂದೆ ಪ್ಯಾಲಸ್ಟೈನ್ ದೇಶದಲ್ಲಿ ಆರಂಭವಾಗಿ ಈಗ ಪ್ರಪಂಚದಲ್ಲೆಲ್ಲ ಹಬ್ಬಿಕೊಂಡಿರುವ ಕ್ರೈಸ್ತಧರ್ಮ ಸುಮಾರು 850 ದಶಲಕ್ಷ ಮತಾನುಯಾಯಿಗಳ ನ್ನೊಳಗೊಂಡಿದೆ. ಜಗತ್ತಿನ ಪ್ರಮುಖ ಧರ್ಮಗಳಲ್ಲೊಂದಾಗಿದ್ದು ಅನೇಕ ಪಂಗಡಗಳಾಗಿ ವಿಭಾಗಿಸಲ್ಪಟ್ಟಿದ್ದು ಬೇರೆ ಬೇರೆ ಸಾಂಸ್ಕೃತಿಕ ಹಿನ್ನೆಲೆಗಳಿರುವ ಜನಾಂಗಗಳ ಮಧ್ಯೆ ಇರುವುದಾದರೂ ಈ ಧರ್ಮದಲ್ಲಿ ತಾತ್ತ್ವಿಕ ಏಕತೆ ಇದೆ ಎಂಬುದನ್ನು ಮರೆಯಬಾರದು. ಈ ಲೇಖನದಲ್ಲಿ ಕ್ರೈಸ್ತಧರ್ಮದ ಇತಿಹಾಸ, ತಿರುಳು, ಸಭೆಯ ಆಡಳಿತ ವ್ಯವಸ್ಥೆ, ಭಾರತದಲ್ಲಿ ಅದು ಹರಡಿದ ಬಗೆ – ಈ ವಿಷಯಗಳನ್ನು ಸಂಗ್ರಹವಾಗಿ ತಿಳಿಸಿದೆ.

(ಎ) ಕ್ರೈಸ್ತ ಧರ್ಮದ ಸಂಸ್ಥಾಪಕ ಯೇಸುಕ್ರಿಸ್ತ. ಆತನ ಜೀವನ, ಮರಣ, ಪುನರುತ್ಥಾನ, ಬೋಧನೆ ಮತ್ತು ದೇವರ ಪ್ರೀತಿಯನ್ನು ಪ್ರಕಟಿಸಿ ಮಾನವ ಕುಲಕ್ಕೆಲ್ಲ ಆತ ತೋರಿದ ರಕ್ಷಣಾಮಾರ್ಗ–ಈ ಅಂಶಗಳ ಮೇಲೆ ಕ್ರೈಸ್ತ ಧರ್ಮ ನಿಂತಿದೆ.

ಯೇಸು ಕ್ರಿಸ್ತ ತನ್ನ ಲೋಕಸೇವೆಯನ್ನು ಆರಂಭಿಸುವಾಗ ಹನ್ನೆರಡು ಮಂದಿ ಶಿಷ್ಯರನ್ನು ಆರಿಸಿಕೊಂಡದ್ದರಲ್ಲೇ ಒಂದು ಧಾರ್ಮಿಕ ಸಂಘ ಅಥವಾ ಸಭೆಯನ್ನು ಕಟ್ಟುವ ಉದ್ದೇಶ ಆತನಿಗಿತ್ತೆಂಬುದು ಸ್ಪಷ್ಟವಾಗುತ್ತದೆ. ದೈವಪ್ರೀತಿ ಪ್ರಕಟಣೆಯೂ ಪಾಪಿ ಮಾನವ ರಕ್ಷಣೆಯೂ ಆತನ ಮುಖ್ಯ ಉದ್ದೇಶವಾಗಿದ್ದುದರಿಂದ, ಜನ ಆತನನ್ನ ಹೆಚ್ಚಾಗಿ ಹಿಂಬಾಲಿಸುತ್ತಿದ್ದರೂ ಅವರನ್ನು ಒಂದು ಸಭೆಯಾಗಿ ಕೂಡಿಸಿ ಕ್ರಮಸೂತ್ರಗಳ ಮೂಲಕ ಸಂಘಟಿಸುವುದಕ್ಕೆ ಆತ ಹೆಚ್ಚಿನ ಗಮನ ಕೊಡಲಿಲ್ಲ. ಆದರೆ ಆತನ ಪುನರುತ್ಥಾನದ ತರುವಾಯ ಶಿಷ್ಯರು ಸುವಾರ್ತಾ ಸಂದೇಶವನ್ನು ಸಾರಿದ್ದರ ಫಲವಾಗಿ ಅನೇಕ ಮಂದಿ ಆತನ ಶಿಷ್ಯರ ಗುಂಪನ್ನು ಸೇರಿದರು. ಈ ಲೇಖನದಲ್ಲಿ ಮುಂದೆ ಧರ್ಮಸಭೆ, ಕ್ರೈಸ್ತ ಸಭೆ, ಸಭೆ, ಧಾರ್ಮಿಕ ಸಂಘ–ಈ ಮಾತುಗಳನ್ನು ಚರ್ಚು ಎಂಬ ಅರ್ಥದಲ್ಲಿ ಬಳಸಿದೆ.

ಕಾಲಕ್ರಮೇಣ ಇವರನ್ನು ಕ್ರೈಸ್ತ ಸಭೆಯಾಗಿ ಸಂಘಟಿಸುವ ಅಗತ್ಯ ಸಹಜವಾಗಿ ಬಂದೊದಗಿತು. ಆದಿ ಕ್ರೈಸ್ತ ಸಭೆಯಲ್ಲಿದ್ದ ಪೀಟರ್, ಯೋಹಾನ, ಯಾಕೋಬ ಮತ್ತು ಪಾಲ್ ಮೊದಲಾದ ಮುಂದಾಳುಗಳು ಈ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಿದರು.

(ಬಿ) ಕ್ರೈಸ್ತ ಸುವಾರ್ತೆಯನ್ನು ಭೂಮಧ್ಯ ಸಮುದ್ರದ ದೇಶಗಳಲ್ಲಿ ಪ್ರಚುರಪಡಿಸಿ ಅನೇಕ ಸಭೆಗಳನ್ನು ಸ್ಥಾಪಿಸಿ ಕ್ರೈಸ್ತಧರ್ಮದ ಚಾರಿತ್ರಿಕ ಮುನ್ನಡೆಗೆ ಬಲವಾದ ಪ್ರೇರಣೆಯನ್ನಿತ್ತು ಅದಕ್ಕಾಗಿ ಕೆಲಸ ಮಾಡಿದಾತ ಅಪೋಸಲರಲ್ಲೊಬ್ಬನಾದ ಪಾಲನೇ. ಪಾಲ್ ಕ್ರಿಸ್ತನಿಗಿಂತ ಮುಂಚೆ ಟಾರ್ಸಸ್ ಎಂಬ ಪಟ್ಟಣದಲ್ಲಿ ಹುಟ್ಟಿದ, ಉತ್ತಮ ಕುಲದ ಒಬ್ಬ ಯೆಹೂದ್ಯ ; ರೋಮ್ ಸಾಮ್ರಾಜ್ಯದ ಹಕ್ಕುಳ್ಳ ನಾಗರಿಕ; ಯೆಹೂದ್ಯ ತತ್ತ್ವ ಮತ್ತು ನ್ಯಾಯ ಪ್ರಮಾಣದಲ್ಲಿ ಘನ ಪಂಡಿತನಾಗಿದ್ದ ವ್ಯಕ್ತಿ. ಆರಂಭದಲ್ಲಿ ಕ್ರೈಸ್ತರನ್ನು ನಾನಾ ವಿಧವಾಗಿ ಹಿಂಸೆಗೆ ಗುರಿಪಡಿಸಿದರೂ ಕೊನೆಗೆ ತಾನೇ ಯೇಸುಕ್ರಿಸ್ತನ ದರ್ಶನದಿಂದ ಆತನ ಶಿಷ್ಯನಾದವ. ಆಮೇಲೆ ಈ ಶ್ರೇಷ್ಠ ಭಕ್ತ ತನ್ನ ಸಂಪೂರ್ಣ ಜೀವನವನ್ನೇ ಯೇಸುಕ್ರಿಸ್ತನ ಸುವಾರ್ತೆಯನ್ನು ಸಾರುವ ಸೇವೆಗೆ ಮೀಸಲಾಗಿಟ್ಟು ಸುಮಾರು ಮೂವತ್ತು ವರ್ಷಗಳ ಸೇವಾ ಕಾಲದಲ್ಲಿ ಬಹು ಕಷ್ಟನಷ್ಟಗಳಿಗೊಳಗಾಗಿ ಅನೇಕ ಸಭೆಗಳನ್ನು ಸ್ಥಾಪಿಸಿದ. ಪ್ರ.ಶ. ಸುಮಾರು 64ರಲ್ಲಿ ಈತ ಹುತಾತ್ಮನಾದ ಎಂಬ ಪ್ರತೀತಿಯಿದೆ. ಪಾಲನ ತತ್ತ್ವನಿರೂಪಣಾ ರೀತಿ, ಬೋಧನಾ ಕ್ರಮ, ಸಂಘಟನಾಶಕ್ತಿ ಮತ್ತು ಸುವಾರ್ತಾಸೇವೆ–ಇವುಗಳಿಲ್ಲದಿದ್ದರೆ ಕ್ರೈಸ್ತ ಧರ್ಮ ಯೆಹೂದ್ಯರಲ್ಲಿ ಒಂದು ಪಂಗಡದ ಧರ್ಮವಾಗಿ ಉಳಿಯಬಹುದಿತ್ತೇ ಹೊರತು ಸಾರ್ವತ್ರಿಕ ಧರ್ಮವಾಗುತ್ತಿರಲಿಲ್ಲ.

ಯೇಸುಕ್ರಿಸ್ತ ಯೆಹೂದ್ಯರ ನಿರೀಕ್ಷೆಯನ್ನು ಸಂಪೂರ್ಣಗೊಳಿಸಿದ ಮೆಸ್ಸೈಯ (ಉದ್ಧಾರಕ) ಮಾತ್ರವಲ್ಲ. ಪುನರುತ್ಥಾನದ ಕರ್ತನೂ ಹೌದು. ಕ್ರೈಸ್ತ ಸಂದೇಶದ ಕೇಂದ್ರಸ್ಥಾನ ಯೇಸುಕ್ರಿಸ್ತನ ಮರಣದಲ್ಲಿದೆ. ಈ ಮರಣ ಮಾನವರ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ದೇವರು ತಾನೇ ಕೈಗೊಂಡ ಮಾರ್ಗ. ಯೇಸುಕ್ರಿಸ್ತ ಯೆಹೂದ್ಯರ ನ್ಯಾಯಪ್ರಮಾಣವನ್ನು ಸಂಪೂರ್ಣಗೊಳಿಸಿದ್ದರಿಂದ ಇನ್ನು ಮುಂದೆ ಕರ್ಮಮಾರ್ಗದ ಅಗತ್ಯವಿಲ್ಲ. ಕೇವಲ ಕೃಪೆಯಿಂದಲೇ ನಂಬಿಕೆಯಿಂದಲೇ ರಕ್ಷಣೆ ದೊರಕುವ ಸಾಧ್ಯತೆ ಇದೆ. ಕ್ರಿಸ್ತ ಮಾನವಕುಲದ ಪರವಾಗಿ ನಿಧನ ಹೊಂದಿದ್ದರಿಂದ ಆತನ ಮರಣವನ್ನು ಪ್ರಾಯಶ್ಚಿತ್ತ ಯಜ್ಞವೆಂಬುದಾಗಿ ತಿಳಿದುಕೊಳ್ಳತಕ್ಕದ್ದು. ಇದು ಪಾಲನ ಬೋಧನೆಯ ಸಾರಾಂಶ. ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತ ನಿಯಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟ. ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತ ನಮಗೋಸ್ಕರ ಪ್ರಾಣ ಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ. ಇಂಥ ಸುವಾರ್ತಾ ಸಂದೇಶವನ್ನೂ ಬೋಧನೆಯನ್ನೂ ತಾತ್ತ್ವಿಕ ದೃಷ್ಟಿಯಿಂದ ಬೋಧಿಸುವುದು ಮಾತ್ರ ಪಾಲನ ಉದ್ದೇಶವಾಗಿರಲಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಕ್ರೈಸ್ತ ಸಭೆಗಳನ್ನು ಸ್ಥಾಪಿಸಿ ಯೋಗ್ಯ ಆಡಳಿತ ಕ್ರಮಗಳ ಮೂಲಕ ಅವನ್ನು ಸಂಘಟಿಸಿದ್ದರಿಂದ ಕ್ರೈಸ್ತಧರ್ಮ ರೋಮ್ ಸಾಮ್ರಾಜ್ಯದಲ್ಲಿ ಬಲವಾಗಿ ಬೇರೂರಲೂ ಹಬ್ಬಲೂ ಸಾಧ್ಯವಾಯಿತು.

ಕ್ರಿಸ್ತನ ದೀಕ್ಷಾಸ್ನಾನ : ಪಿಯೆರೊ ಡೆಲ ಫ್ರಾನ್ಸೆಸ್ಕನ ಕೃತಿ. ಲಂಡನಿನ ನ್ಯಾಷನಲ್ ಗ್ಯಾಲರಿಯಲ್ಲಿದೆ

(ಸಿ) ಆದಿ ಕ್ರೈಸ್ತ ಸಭೆಯನ್ನು ಕಟ್ಟುವ ಕೆಲಸದಲ್ಲಿ ಪಾಲನಂತೆ ಇತರರೂ ನೆರವಾಗಿದ್ದರು. ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಮುಂದಾಳುವಾಗಿದ್ದ ಸಿಮೋನ್ ಪೀಟರ್ ಕೂಡ ಇದಕ್ಕಾಗಿ ಹೆಚ್ಚಿನ ಕೆಲಸ ಮಾಡಿದ. ಕ್ರೈಸ್ತಧರ್ಮವನ್ನು ಯೆಹೂದ್ಯರ ಮಧ್ಯದಲ್ಲಿ ಸ್ಥಾಪಿಸಲು ಮತ್ತು ಯೆಹೂದ್ಯರ ನ್ಯಾಯಪ್ರಮಾಣಕ್ಕೆ ಕ್ರೈಸ್ತಧರ್ಮ ನಿರೂಪಣೆಯಲ್ಲಿ ತಕ್ಕ ಸ್ಥಾನವನ್ನು ಕೊಡಲು ಪೀಟರ್ ಹೆಚ್ಚಿನ ಪ್ರಯತ್ನ ಮಾಡಿದರೂ ಯೆಹೂದ್ಯರಲ್ಲದವರಿಗೆ ಕ್ರೈಸ್ತ ಸಂದೇಶವನ್ನು ಸಾರುವುದಕ್ಕೆ ಆತ ಅಡ್ಡಿ ಮಾಡಲಿಲ್ಲ. ಯೇಸುಕ್ರಿಸ್ತನ ಪುನರುತ್ಥಾನದ ಅನಂತರ ಸುವಾರ್ತೆಯನ್ನು ಜನರಲ್ಲಿ ಹರಡಿ, ಸಾವಿರಾರು ಮಂದಿ ಕ್ರೈಸ್ತ ಸಭೆಯಲ್ಲಿ ಸೇರಿಕೊಳ್ಳುವಂತೆ ಮಾಡಿದವರಲ್ಲಿ ಮುಂದಾಳು ಪೀಟರನೇ. ಇದನ್ನರಿತುದರಿಂದಲೇ ಯೇಸುಪ್ರಭು ಪೀಟರನೆಂಬ ಬುನಾದಿಯ ಮೇಲೆ (ಪೀಟರನ ಎಂದರೆ ಕಲ್ಲುಬಂಡೆ ಎಂಬ ಅರ್ಥವೂ ಇದೆ) ತನ್ನ ಸಭೆಯನ್ನು ಕಟ್ಟುವುದಾಗಿ ಹೇಳಿದ.

ಪಾಲ್, ಪೀಟರರಲ್ಲದೆ ಕ್ರೈಸ್ತ ತತ್ತ್ವ ನಿರೂಪಣೆಯಲ್ಲಿ ಯೋಹಾನನಿಗೂ ಅಗ್ರಸ್ಥಾನ ಸಲ್ಲಬೇಕು. ಯೋಹಾನನ ಸುವಾರ್ತೆಯಲ್ಲಿ ಕ್ರೈಸ್ತ ತತ್ತ್ವ ನಿರೂಪಣೆಗೆ ವಿಶೇಷ ಸ್ಥಾನವಿದೆ. ಆ ಕಾಲದ ಗ್ರೀಕ್ ತತ್ತ್ವಜ್ಞಾನಿಗಳ ಬೋಧನೆಗಳನ್ನು ಗಮನಿಸಿ ಯೇಸುಕ್ರಿಸ್ತನ ಸರಳ ಸುವಾರ್ತೆಯನ್ನು ಅವರು ಒಪ್ಪಬೇಕೆಂಬ ದೃಷ್ಟಿಯಿಂದ ಈತ ನಿರೂಪಿಸಲು ಪ್ರಯತ್ನ ಮಾಡಿದ ಕಾರಣ ಕ್ರೈಸ್ತ ಧರ್ಮ ತನ್ನ ಚಾರಿತ್ರಿಕ ಮುನ್ನಡೆಯಲ್ಲಿ ಇನ್ನೊಂದು ದೊಡ್ಡ ಹೆಜ್ಜೆಯನ್ನಿಟ್ಟಂತಾಯಿತೆಂದು ಹೇಳಬಹುದು. ಯೇಸುಕ್ರಿಸ್ತ ನರಾವತಾರವನ್ನೆತ್ತಿ ಬಂದ ದೇವದೂತ. ಈ ಅವತಾರದ ಮುಖ್ಯ ಉದ್ದೇಶ ದೇವರ ಬೆಳಕನ್ನು ಮಾನವರಿಗೆ ನೀಡುವುದು. ಆ ಬೆಳಕೇ ಮಾನವರಿಗೆ ಜೀವನವನ್ನು ಕೊಡುವಂಥದ್ದು. ಯೇಸುಕ್ರಿಸ್ತನ ಚಾರಿತ್ರಿಕ ಜೀವನದಲ್ಲೇ ದೇವರ ಕೃಪೆಯನ್ನೂ ಸತ್ಯವನ್ನೂ ನಾವು ಕಾಣಬಹುದು ಎಂದು

ಕ್ರಿಸ್ತ ಮತ್ತು ಚರ್ಚು : ಜರ್ಮನ್ ಶಿಲ್ಪಿ ಟೋನಿಜೆಂಜ್ ಕಂಚಿನಲ್ಲಿ ಕಡೆದ ಕೃತಿ (1961). ಕ್ರಿಸ್ತನಿಂದ ಚರ್ಚು ಉಪದೇಶವನ್ನು ನಿರೀಕ್ಷಿಸುತ್ತಿರುವ ಭಾವ

ಯೋಹಾನ ಹೇಳುತ್ತಾನೆ. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟ. ಆತನನ್ನು ನಂಬಿದವರಲ್ಲೊಬ್ಬರೂ ನಾಶವಾಗದೆ ಎಲ್ಲರೂ ಶಾಶ್ವತ ಜೀವವನ್ನು ಪಡೆಯಬೇಕು. ದೇವಕುಮಾರನ ಮೂಲಕ ದೊರಕುವ ದೈವಜ್ಞಾನವೇ ಮಾನವ ಜೀವನವನ್ನು ಮಾರ್ಪಡಿಸುವ ಜೀವದಾಯಕವಾದ ಶಕ್ತಿ–ಎಂಬುದು ಈತನ ತತ್ತ್ವ ನಿರೂಪಣೆಯ ಸಾರಾಂಶ.

ಪಾಲ್ ಮತ್ತು ಪೀಟರರ ನಿಧನಾನಂತರ ಮೆಡಿಟರೇನಿಯನ್ ಸಮುದ್ರದ ರೋಮನ್ ಸಂಸ್ಥಾನಗಳಲ್ಲಿ ಕ್ರೈಸ್ತ ಧರ್ಮ ಹಬ್ಬುತ್ತ ಬಂದರೂ ಅದು ರೋಮ್ ಸಾಮ್ರಾಜ್ಯದ ಅರಸರ ಆಗ್ರಹಕ್ಕೊಳಗಾಗಿ ಬಹು ಕಠಿಣವಾದ ಹಿಂಸೆಗೆ ಗುರಿಯಾಗಬೇಕಾಯಿತು. ಹೀಗೆ ಕೇವಲ ಬಡ ಸಂಸ್ಥೆಯಾಗಿದ್ದ ಕ್ರೈಸ್ತ ಸಭೆ ಮಹಾರೋಮ್ ಸಾಮ್ರಾಜ್ಯದ ಹಿಂಸೆಯನ್ನು ತಾಳಿಕೊಂಡು ಉಳಿದು, ಕ್ರಮೇಣ ರೋಮ್ ಸಾಮ್ರಾಜ್ಯದಲ್ಲೆಲ್ಲ ಹಬ್ಬಿಕೊಂಡದ್ದು ಬಹು ಗಮನಾರ್ಹ ವಿಷಯ.

ರೋಮ್ ಸಾಮ್ರಾಜ್ಯದ ಅರಸನಾದ ಕಾನ್‌ಸ್ಟಂಟೈನ್ ಎಂಬಾತ ಪ್ರ.ಶ. 312ರಲ್ಲಿ ಕ್ರೈಸ್ತ ಧರ್ಮ ರೋಮ್ ಸಾಮ್ರಾಜ್ಯದ ಅಧಿಕೃತ ಧರ್ಮವೆಂದು ಸಾರಿದ್ದು ಈ ಧರ್ಮದ ಮುನ್ನಡೆಯಲ್ಲಿ ಬಹು ದೊಡ್ಡ ಮೈಲುಗಲ್ಲು. ಇದರ ಫಲವಾಗಿ ಹೆಚ್ಚು ಮಂದಿ ಕ್ರೈಸ್ತ ಧರ್ಮವನ್ನು ಅಂಗೀಕರಿಸಿದ ಕಾರಣ ಯುರೋಪ್ ಖಂಡದ ಸಂಸ್ಕೃತಿಯ ಮೇಲೆ ಕ್ರೈಸ್ತ ತತ್ತ್ವಗಳು ಹೆಚ್ಚಿನ ಪ್ರಭಾವವನ್ನು ಬೀರುತ್ತ ಬಂದವು. ಅಂದಿನಿಂದ ಇಂದಿನ ತನಕ ಶತಮಾನಗಳಲ್ಲಿ ಈ ಧರ್ಮ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಪ್ರಚುರಗೊಂಡು ಅಲ್ಲಲ್ಲಿಯ ಸಾಂಸ್ಕೃತಿಕ ಹಿನ್ನೆಲೆಗಳಿಗೆ ಅನುಸಾರವಾಗಿ ಬೆಳೆಯುತ್ತ ಬಂದಿದೆ.

ಚಾರಿತ್ರಿಕ ಮತ್ತು ತಾತ್ತ್ವಿಕ ದೃಷ್ಟಿಗಳಿಂದ ಜಾಗತಿಕ ಕ್ರೈಸ್ತ ಸಭೆಯಲ್ಲಿ ಮೂರು ಮುಖ್ಯ ವಿಭಾಗಗಳಿವೆ ಎಂದು ಹೇಳಬಹುದು: (i) ರೋಮನ್ ಕೆಥೊಲಿಕ್ ಸಭೆ (ii)ಪೌರಸ್ತ್ಯ ಸಾಂಪ್ರದಾಯಿಕ ಸಭೆ (ಈಸ್ಟರ್ನ್ ಆರ್ಥೊಡಾಕ್ಸ್ ಚರ್ಚು) (iii) ಪ್ರಾಟೆಸ್ಟಂಟ್ ಸಭೆ. ಸುಧಾರಣೆಯ ಸ್ವಾತಂತ್ರ್ಯವಹಿಸಿರುವ ಪ್ರಾಟೆಸ್ಟಂಟ್ ಸಭೆಗಳಲ್ಲಿ ಎಷ್ಟೋ ಚಿಕ್ಕ ದೊಡ್ಡ ಶಾಖೆಗಳಿವೆ. ಅಮೆರಿಕದ ಪ್ರಾಟೆಸ್ಟಂಟ್ ಸಭೆಯಲ್ಲಿಯೇ ಸುಮಾರು 255 ಶಾಖೆಗಳಿವೆ. ಈ ಎಲ್ಲ ಸಭೆಗಳು ಪ್ರಪಂಚದ ಬೇರೆ ಬೇರೆ ಕಡೆಗಳಿಗೆ ಹೋಗಿ ಸುವಾರ್ತೆಯನ್ನು ಸಾರಿ, ಸಭೆಗಳನ್ನು ಸ್ಥಾಪಿಸಿರುವುದರಿಂದ ಈ ಪಂಗಡಗಳು ಎಲ್ಲ ದೇಶಗಳಲ್ಲಿಯೂ ಹಬ್ಬಿವೆ ಎಂದು ಹೇಳಬಹುದು. ಈ ಮುಖ್ಯ ವಿಭಾಗಗಳಿಗೂ ಪಂಗಡಗಳಿಗೂ ಕ್ರೈಸ್ತ ತತ್ತ್ವದ ತಿರುಳಿನಲ್ಲಿ ಮತ್ತು ಮುಖ್ಯವಾಗಿ ಯೇಸುಕ್ರಿಸ್ತನನ್ನು ಕುರಿತಾದ ನಂಬಿಕೆಯಲ್ಲಿ ಐಕ್ಯಮತ್ಯವಿದ್ದರೂ ಆಡಳಿತ ಕ್ರಮಗಳಲ್ಲಿ, ಸಂಸ್ಕಾರಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮತ್ತು ಇನ್ನೂ ಕೆಲವು ಮುಖ್ಯ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿವೆ.

**(i) ರೋಮನ್ ಕೆಥೊಲಿಕ್ ಸಭೆ:** ರೋಮ್ ನಗರದಲ್ಲಿರುವ ಪೋಪನ ಸರ್ವಾಧಿಕಾರವನ್ನು ಮನ್ನಿಸುವ ಈ ಸಭೆಯಲ್ಲಿ ಸುಮಾರು 423 ದಶಲಕ್ಷ ಸದಸ್ಯರಿದ್ದಾರೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಯುರೋಪ್ ಖಂಡದ ಜನಾಂಗಗಳ



ಪುನರುತ್ಥಾನ ಚಿತ್ರಕಾರ ಟಿಷನ್ನನ ಕೃತಿ. ಕ್ರಿಸ್ತ ಸಾವನ್ನು ಗೆದ್ದ ಭಾವವನ್ನು ವ್ಯಕ್ತಪಡಿಸುತ್ತಾರೆ

ಚರಿತ್ರೆಯ ಮೇಲೂ ಜನಜೀವನದ ಮೇಲೂ ಈ ಸಭೆ ಹೆಚ್ಚಿನ ಪರಿಣಾಮವನ್ನು ಬೀರಿದೆ. ಕೆಥೊಲಿಕ್ ಎಂಬ ಗ್ರೀಕ್ ಪದದ ಮೂಲ ಅರ್ಥ ಸಾರ್ವತ್ರಿಕ ಎಂದು. ಇಗ್ನೇಷಿಯಸ್ ಎಂಬ ಸಭಾಪಿತೃ ಪ್ರ.ಶ. 115ರಲ್ಲಿ ಬರೆದ ಒಂದು ಪತ್ರದಲ್ಲಿ ಈ ಪದವನ್ನು ಮೊದಲು ಉಪಯೋಗಿಸಿದ, ಆತನ ಅಭಿಪ್ರಾಯದ ಮೇರೆಗೆ ಎಲ್ಲಿ ಕ್ರಿಸ್ತನಿದ್ದಾನೋ ಅಲ್ಲಿ ಸಾರ್ವತ್ರಿಕ ಕ್ರೈಸ್ತ ಸಭೆಯಿದೆ. ಮೊದಲಿನ ಶತಮಾನಗಳಲ್ಲಿ ಕ್ರೈಸ್ತ ಸಭೆ ಇತರ ಧರ್ಮಗಳೊಡನೆಯೂ ರಾಜಕೀಯ ಶಕ್ತಿಗಳೊಡನೆಯೂ ಹೋರಾಡಿ ಪ್ರೌಢಾವಸ್ಥೆಗೆ ಮುಟ್ಟುವ ಅಗತ್ಯವಿತ್ತು. ಅದು ಸಭೆಯ ಸತ್ವಪರೀಕ್ಷೆಯ ಕಾಲ. ತನ್ನ ಸಂದೇಶದ ತಿರುಳನ್ನೂ ಆಡಳಿತ ಕ್ರಮಗಳನ್ನೂ ಈ ಎಲ್ಲ ಭಿನ್ನಾಭಿಪ್ರಾಯಗಳ ಮಧ್ಯದಲ್ಲಿ ಕಾಪಾಡಿಕೊಳ್ಳುವ ಅಗತ್ಯವಿದ್ದುದರಿಂದಲೇ ಪಾಶ್ಚಾತ್ಯ ರಂಗದಲ್ಲಿ ಕೆಥೊಲಿಕ್ ಸಭೆ ಬೆಳೆದು ಬಂತು. ಈ ಸಭಾತತ್ತ್ವದಲ್ಲಿ ಮೂರು ಮುಖ್ಯವಾದ ವಿಷಯಗಳು ಅಡಕವಾಗಿವೆ ಎಂದು ಹೇಳಬಹುದು. ರೋಮ್ ನಗರದಲ್ಲಿ ಅಪೋಸಲನಾದ ಪೀಟರ್ ಬಿಷಪ್ಪನಾಗಿದ್ದ ಎಂಬ ಅಭಿಪ್ರಾಯವನ್ನು ಮನ್ನಿಸಿ ಪಾರಂಪರ್ಯವಾಗಿ ಬಂದಿರುವದೆಂದು ತಿಳಿದ ಬಿಷಪರ ಆಡಳಿತದ ಸ್ವೀಕಾರ ಮೊದಲನೆಯದು. ಇದೇ ಕ್ರಮೇಣ ಪೋಪನ ಸ್ಥಾನವನ್ನೂ ಅಧಿಕಾರವನ್ನೂ ಧಾರ್ಮಿಕ ಮಾನ್ಯತೆಯನ್ನೂ ರೂಪಿಸಿ ಬಲಪಡಿಸಿತು. ಎರಡನೆಯದು ಬೈಬಲ್ ಗ್ರಂಥ ಮತ್ತು ಸಭೆಯ ಸಾಂಪ್ರದಾಯಿಕ ಬೋಧನೆಗಳು ಸಭೆಯ ತತ್ತ್ವನಿರೂಪಣೆಗೆ ಮೂಲವೂ ಬೋಧನಾ ಶುದ್ಧತೆಗೆ ಪ್ರಮಾಣಗಳೂ ಆಗಿವೆ ಎಂಬ ಸೂತ್ರದ ಸ್ವೀಕಾರ. ಕೊನೆಯದು ಸರ್ವ ಸಭಾಂಗೀಕೃತವಾಗಿದ್ದು ಕ್ರೈಸ್ತ ಬೋಧನೆಯ ಸಾರಾಂಶವನ್ನು ಒಳಗೊಂಡಿರುವ ವಿಶ್ವಾಸ ಪ್ರಮಾಣಗಳು. ಇವುಗಳಲ್ಲಿ ಪ್ರ.ಶ. 325ರಲ್ಲಿ ಸ್ವೀಕರಿಸಲ್ಪಟ್ಟ ನಿಕೇಯದ ವಿಶ್ವಾಸ ಪ್ರಮಾಣವೂ ಪ್ರ.ಶ.ಸು. 400ರಲ್ಲಿ ರೂಪಿತವಾದ ಅಪೋಸಲರ ವಿಶ್ವಾಸ ಪ್ರಮಾಣವೂ ಮುಖ್ಯವಾದವು. ಯೇಸುಕ್ರಿಸ್ತನ ಮಾತೆಯಾದ ಕನ್ಯಾ ಮೇರಿಗೆ ಈ ಸಭೆಯಲ್ಲಿ ಹೆಚ್ಚಿನ ಮನ್ನಣೆಯಿದೆ.

**(ii) ಪೌರಸ್ತ್ಯ ಸಾಂಪ್ರದಾಯಿಕ ಸಭೆ :** ಪೌರಸ್ತ್ಯ ದೇಶಗಳಲ್ಲಿ ಅಂದರೆ ಪ್ಯಾಲಸ್ಟೈನ್, ಸಿರಿಯ, ಈಜಿಪ್ಟ್, ಇಥಿಯೋಪಿಯ, ಭಾರತ, ಗ್ರೀಸ್, ರಷ್ಯ ಮೊದಲಾದ ದೇಶಗಳಲ್ಲಿ ಹಬ್ಬಿಕೊಂಡಿರುವ ಈ ಸಭೆಗಳ (ಈಸ್ಟರ್ನ್ ಆರ್ಥೊಡಾಕ್ಸ್ ಚರ್ಚ್) ವಿಷಯವಾಗಿ ಸಾಕಷ್ಟು ತಿಳಿವಳಿಕೆ ಪಡೆದುಕೊಳ್ಳುವುದು ಅನೇಕ ಸಲ ಕಷ್ಟವಾಗುತ್ತದೆ. ರೋಮ್ ನಗರದಲ್ಲಿ ಕ್ರೈಸ್ತರು ನೆಲಸುವ ಮುಂಚೆಯೇ ಈ ದೇಶಗಳಲ್ಲಿ ಕ್ರೈಸ್ತರೂ ಕ್ರೈಸ್ತ ಸಭೆಗಳೂ ಇದ್ದವೆಂಬುದನ್ನು ಮರೆಯಲಾಗದು. ಪೌರಸ್ತ್ಯ ಸಾಂಪ್ರದಾಯಿಕ ಸಭೆಗೆ ಸಂಬಂಧಿಸಿದಂತೆ ಸುಮಾರು 150 ದಶಲಕ್ಷ ಕ್ರೈಸ್ತರೂ 35 ಸಾವಿರ ಧರ್ಮಬೋಧಕರೂ 20 ಸಾವಿರ ಚಿಕ್ಕ ಪುಟ್ಟ ಸಭೆಗಳೂ ಇವೆ. ರೋಮ್ ನಗರದಲ್ಲಿ ಕೇಂದ್ರೀಕೃತವಾದ ಪಾಶ್ಚಾತ್ಯ ರೋಮನ್ ಕೆಥೊಲಿಕ್ ಸಭೆಗೂ ಈ ಸಭೆಗಳಿಗೂ ತಾತ್ತ್ವಿಕ, ಭೌಗೋಳಿಕ ಮತ್ತು ಚಾರಿತ್ರಿಕ ದೃಷ್ಟಿಗಳಿಂದ ಭಿನ್ನಾಭಿಪ್ರಾಯಗಳು ಹುಟ್ಟಿ ಕೊನೆಗೆ 1054ರಲ್ಲಿ ಇವು ರೋಮ್ ಸಭೆಯಿಂದ ಬೇರ್ಪಟ್ಟು ಅಂದಿನಿಂದ ಇಂದಿನ ತನಕ ಹಾಗೆಯೇ ಉಳಿದಿವೆ. ಪ್ರಭುಭೋಜನದ ವಿವರಣೆಗೆ ಇವರ ಆರಾಧನೆಯಲ್ಲಿ ಹೆಚ್ಚಿನ ಪ್ರಾಮುಖ್ಯ ಇದೆ. ಇವರು ವಿಗ್ರಹಗಳನ್ನು ನಿರಾಕರಿಸಿ ಶಿಲುಬೆಯನ್ನು ಮಾತ್ರ ಸ್ವೀಕರಿಸಿದ್ದಾರೆ. ರೋಮನ್ ಕೆಥೊಲಿಕ್ ಸಭೆ ಏಳು ಸಂಸ್ಕಾರಗಳನ್ನೂ (ಸ್ಯಾಕ್ರಮೆಂಟ್ಸ್) ಪ್ರಾಟೆಸ್ಟಂಟರು ಎರಡು ಸಂಸ್ಕಾರಗಳನ್ನೂ ಒಪ್ಪಿಕೊಳ್ಳುವಾಗ ಇವರು ಐದು ಸಂಸ್ಕಾರಗಳನ್ನೂ ಸ್ವೀಕರಿಸುತ್ತಾರೆ. ಬೇರೆ ಬೇರೆ ದೇಶಗಳಿಗೆ ಹೋಗಿ ಸುವಾರ್ತಾ ಪ್ರಸಾರ ಮಾಡುವ ಕೆಲಸಕ್ಕೆ ಇವರು ಹೆಚ್ಚಿನ ಗಮನಕೊಟ್ಟಿಲ್ಲ. ಹೀಗಿದ್ದರೂ ದಕ್ಷಿಣ ಭಾರತಕ್ಕೆ ಸುವಾರ್ತೆಯನ್ನು ತಂದು ಕೇರಳದ ಕ್ರೈಸ್ತ ಸಭಾ ಸ್ಥಾಪನೆಗೆ ಇವರು ಕಾರಣರಾದರು ಎಂಬುದನ್ನು ಮರೆಯುವಂತಿಲ್ಲ.

**(iii) ಪ್ರಾಟೆಸ್ಟಂಟ್ ಸಭೆಗಳು :** ಈ ಸಭೆಗಳ ಮೂಲಪಿತೃ ಜರ್ಮನಿ ದೇಶದಲ್ಲಿ ಕ್ರೈಸ್ತ ಧರ್ಮ ಸುಧಾರಣೆಯನ್ನು ಆರಂಭಿಸಿದ ಮಾರ್ಟಿನ್ ಲೂಥರ್ (1443–1546). ಈತ ಬಹು ಧೈರ್ಯದಿಂದ ಸಾರಿದ ಧಾರ್ಮಿಕ ಸ್ವಾತಂತ್ರ್ಯದ ಚಳವಳಿ ಬಹುಬೇಗ ಯುರೋಪು ಖಂಡದಲ್ಲಿ ಮಾತ್ರವೇ ಅಲ್ಲ, ಇತರ ದೇಶಗಳಲ್ಲೂ ಹರಡಿತು. ಲೂಥರ್ ಮೊದಲು ರೋಮನ್ ಕೆಥೊಲಿಕ್ ಸಭೆಯಲ್ಲೇ ಸಂನ್ಯಾಸಿಯಾಗಿದ್ದು, ದೇಹದಂಡನೆಯಿಂದಲೂ ಆಳವಾದ ಧ್ಯಾನ, ಅಭ್ಯಾಸಗಳಿಂದಲೂ ಆತ್ಮಶಾಂತಿಯನ್ನು ದೊರಕಿಸಿಕೊಳ್ಳಲು ಬಹುನಿಷ್ಠೆಯಿಂದ ಪ್ರಯತ್ನಿಸುತ್ತಿದ್ದ. ಸ್ವಲ್ಪ ಸಮಯ ಜರ್ಮನಿಯ ಒಂದು ವಿಶ್ವವಿದ್ಯಾಲಯದಲ್ಲಿ ಮತಧರ್ಮ ಶಾಸ್ತ್ರದ ಪ್ರಾಧ್ಯಾಪಕನೂ ಆಗಿದ್ದ. ಮನಸ್ಸಿಗೆ ಶಾಂತಿ ದೊರಕದೆ ಹೆಚ್ಚಿನ ಒಳತೋಟಿಗೆ ಗುರಿಯಾಗಿ ಕಾಲಕ್ರಮೇಣ ಸತ್ಯವನ್ನು ಕಂಡುಕೊಂಡ. ದೇಹದಂಡನೆಯಿಂದ, ವೈದಿಕ ಆಚಾರಗಳಿಂದ ಅಥವಾ ಕೇವಲ ಕರ್ಮಮಾರ್ಗದಿಂದ ಉಪಶಾಂತಿ ಒದಗುವುದಿಲ್ಲ. ಅದು ದೃಢವಿಶ್ವಾಸ ಹೊಂದಿದವನಿಗೆ ಮಾತ್ರ ಯೇಸುಕ್ರಿಸ್ತನ ಮೂಲಕ ದೊರಕುವ ವರಪ್ರಸಾದವದು–ಎಂಬ ಆಳವಾದ ಅನುಭಾವ ಇವನಿಗೆ ಉಂಟಾಯಿತು. ತನ್ನ ನಂಬಿಕೆಗೆ ಆಧಾರಗಳನ್ನೀತ ಸಂತ ಆಗಸ್ಟೀನ್ ಮತ್ತು ಸಂತ ಪಾಲರಲ್ಲಿ ಕಂಡುಕೊಂಡ.

ಪ್ರಾಟೆಸ್ಟಂಟ್ ಸಭೆಗಳ ಅಸ್ತಿತ್ವಕ್ಕೆ ಕಾರಣನಾದ ಲೂಥರ್ ನಿರೂಪಿಸಿದ ಮುಖ್ಯ ಸೂತ್ರಗಳನ್ನು ಹೀಗೆ ಸಂಕ್ಷೇಪವಾಗಿ ಹೇಳಬಹುದು: ಕ್ರಿಸ್ತನ ಬೋಧನೆಗೂ ಜೀವಿತಕ್ಕೂ ಬೈಬಲ್ ಅಲ್ಲದೆ ಬೇರೆ ಯಾವ ಮೂಲವಾಗಲೀ ಆಧಾರವಾಗಲೀ ಇಲ್ಲ. ದೇವರ ವಾಕ್ಯವಾದ ಬೈಬಲ್ಲಿಗೆ ವಿರೋಧವಾಗಿ ಹೋಗುವ ಯಾವ ವಿಷಯಗಳನ್ನೂ ಸ್ವೀಕರಿಸಲಾಗದು. ಪಾಪಿಮಾನವನಿಗೆ ರಕ್ಷಣೆ ದೊರಕುವುದು ಪುಣ್ಯಕಾರ್ಯಗಳಿಂದಲ್ಲ, ಕೇವಲ ಭಕ್ತಿಯಿಂದಲೇ. ಒಳ್ಳೆಯ ಕೃತ್ಯಗಳು ಅಥವಾ ನೈತಿಕ ಸೂತ್ರಗಳು ಭಕ್ತಿವಿಶ್ವಾಸಗಳ ಫಲಗಳೇ ಹೊರತು, ತಾವಾಗಿ ಅವನ್ನು ಹುಟ್ಟಿಸುವಂಥವಲ್ಲ. ದೇವ ಕೃಪಾಸಾಧನಗಳಾದ ದೀಕ್ಷಾಸ್ನಾನ ಮತ್ತು ಪ್ರಭುಭೋಜನ ಎಂಬ ಎರಡು ಸಂಸ್ಕಾರಗಳು ಮಾತ್ರ ಸ್ವೀಕಾರಾರ್ಹ.

ಲೂಥರನ ಆದ್ಯ ಉದ್ದೇಶ ಸಭೆಯನ್ನು ಶುದ್ಧೀಕರಿಸಿ ಪುನರುಜ್ಜೀವನಗೊಳಿಸುವುದೇ ಹೊರತು ಸಭೆಯ ಐಕ್ಯತೆಯನ್ನು ಭಂಗಪಡಿಸುವದಾಗಿರಲಿಲ್ಲ. ಆದರೆ ಆತನ ಬೋಧನೆಯ ಫಲವಾಗಿ ಸಾರ್ವತ್ರಿಕ ಸಭೆಯಲ್ಲಿ ಇನ್ನೊಂದು ವಿಭಾಗ ಅಸ್ತಿತ್ವಕ್ಕೆ ಬಂತು. ಪ್ರಪಂಚದ ದೇಶಗಳಲ್ಲೆಲ್ಲ ಪರಿಣಾಮಕಾರಿಯಾದ ಈ ಧಾರ್ಮಿಕ ಸುಧಾರಣೆ ಈ ಒಬ್ಬ ವ್ಯಕ್ತಿಯಿಂದಲೇ ಆಯಿತೆಂದು ಹೇಳಲಿಕ್ಕೆ ಆಗುವುದಿಲ್ಲ. ಲೂಥರನ ನಂಬಿಕೆ, ವಾಕ್ಚಾತುರ್ಯ, ದೇವರ ಮೇಲಿನ ಭರವಸೆ, ಧೈರ್ಯ, ಇವನ್ನು ಗಮನಿಸುವುದು ಅಗತ್ಯವಾದರೂ ಸುಧಾರಣೆ ಮುಂದುವರಿಯಲು ಇತರ ವಿಷಯಗಳೂ ಸಹಾಯಕವಾದುವು. ಆ ಸಮಯದಲ್ಲಿದ್ದ ರೋಮ್ ಸಭೆಯ ಕೀಳ್ಮಟ್ಟ, ಆಧ್ಯಾತ್ಮಿಕ ವಿಷಯಗಳನ್ನು ಬದಿಗೊತ್ತಿದ್ದ ಲೌಕಿಕತ್ವ, ಪೋಪನ ಅಧಿಕಾರಕ್ಕೆ ಒಳಗಾಗಲು ಅಂತರ್ಯದಲ್ಲಿ ಒಪ್ಪದಿದ್ದ ರಾಜಕೀಯ ಮುಂದಾಳುಗಳ ಮನೋಭಾವನೆ, ಯುರೋಪಿನ ಜನಾಂಗಗಳೊಳಗಿದ್ದ ಪರಸ್ಪರ ಸ್ಪರ್ಧೆ–ಇವೆಲ್ಲವುಗಳ ಫಲವಾಗಿ ದೇಶ ದೇಶಗಳಲ್ಲಿ ಪ್ರಾಟೆಸ್ಟಂಟ್ ಸಭೆಗಳು ಬಲವಾಗುತ್ತ ಬಂದುವು. ಕ್ಯಾಲ್ವಿನ್, ಜ್ವಿಂಗ್ಲಿ, ನಾಕ್ಸ್, ವೆಸ್ಲಿ–ಮೊದಲಾದ ಮುಂದಾಳುಗಳು ಲೂಥರನ ಸೂತ್ರಗಳನ್ನು ತಮ್ಮ ದೇಶಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಿಗೆ ಅನುಸಾರವಾಗಿ ರೂಪಿಸುತ್ತ ಬಂದರು. ಜರ್ಮನಿಯಲ್ಲಿ ಲೂಥರನ ಸಭೆ, ಸ್ವಿಟ್ಜರ್ಲೆಂಡ್‌ನಲ್ಲಿ ಪ್ರೆಸ್ಬಿಟೇರಿಯನ್ ಸಭೆ, ಇಂಗ್ಲೆಂಡಿನಲ್ಲಿ ಆಂಗ್ಲಿಕನ್ ಸಭೆ ಮತ್ತು ಮುಂದಿನ ಶತಮಾನಗಳಲ್ಲಿ ಇಂಥ ಎಷ್ಟೋ ಇತರ ಪ್ರಾಟೆಸ್ಟಂಟ್ ಸಭೆಗಳು ಅಸ್ತಿತ್ವಕ್ಕೆ ಬಂದುವು.

ಈ ಚಳವಳಿಯಿಂದ ಎಚ್ಚೆತ್ತ ರೋಮನ್ ಕೆಥೊಲಿಕ್ ಸಭೆ ಸ್ವಸುಧಾರಣೆಗಾಗಿ ಪ್ರಯತ್ನಗಳನ್ನು ಮಾಡದೆ ಬಿಡಲಿಲ್ಲ. ಟ್ರೆಂಟಿನ ಸಮಿತಿ (1545–64) ಸುಮಾರು 18 ವರ್ಷಗಳ ಕಾಲ ಅನೇಕ ರೀತಿಗಳಲ್ಲಿ ಕೆಥೊಲಿಕ್ ತತ್ತ್ವವನ್ನೂ ಜೀವನವನ್ನೂ ಸುಧಾರಿಸಲು ಪ್ರಯತ್ನಿಸಿತು. ಮುಖ್ಯವಾಗಿ ಲಯೋಲದ ಇಗ್ನೇಷಿಯಸನಿಂದ ಸ್ಥಾಪಿತವಾದ ಯೇಸು ಪಂಥ ತನ್ನ ಸಂಘಟನಾ ಶಕ್ತಿಯಿಂದಲೂ ಶ್ರೇಷ್ಠ ಧ್ಯೇಯಗಳಿಂದಲೂ ಸಮರ್ಥ ಕಾರ್ಯಗಳಿಂದಲೂ ಕಟ್ಟುನಿಟ್ಟಾದ ಶಿಕ್ಷಣದಿಂದಲೂ ಮುಖ್ಯವಾದ ವಿದ್ಯಾಸಂಸ್ಥೆಗಳ ಮೂಲಕ ಈಗಲೂ ಕೆಲಸ ಮಾಡುತ್ತಿದೆ.

**ಆಧುನಿಕ ಕಾಲ:** ಕ್ರೈಸ್ತ ಸಭೆಯ ಚರಿತ್ರೆಯನ್ನು ವಿಚಾರ ಮಾಡುವಾಗ ಅದರ ಜಾಗತಿಕ ವಿಸ್ತಾರಕ್ಕೆ ಕಾರಣವಾದ ಧರ್ಮಪ್ರಚಾರ ಮಂಡಲಿಗಳನ್ನು ಮರೆಯಲು ಸಾಧ್ಯವಿಲ್ಲ. ತಮ್ಮ ಧಾರ್ಮಿಕ ಪುನರುಜ್ಜೀವನದೊಡನೆ ಕ್ರೈಸ್ತ ಸಂದೇಶವನ್ನು ಇತರ ದೇಶಗಳ ಜನರಿಗೂ ಸಾರಿ ಹೇಳಿ ಅಲ್ಲೂ ಸಭೆಗಳನ್ನು ಸ್ಥಾಪಿಸಬೇಕೆಂಬ ಆಕಾಂಕ್ಷೆ ಎಷ್ಟೋ ಕ್ರೈಸ್ತರಲ್ಲಿ ಮೂಡಿಬಂತು. ಪರಿಣಾಮವಾಗಿ 1706ರಲ್ಲಿ ದಕ್ಷಿಣ ಭಾರತದ ಟ್ರಾಂಕ್ವೆಬಾರ್ ಎಂಬಲ್ಲಿ ಡೆನ್ಮಾರ್ಕ್ ದೇಶದ ಅರಸನ ಆಶ್ರಯ ಪಡೆದ ಕೆಲವು ಪ್ರಚಾರಕರು ಭಾರತಕ್ಕೆ ಬಂದಿಳಿದರು. 1813ರಲ್ಲಿ ಬ್ರಿಟಿಷರ ಈಸ್ಟ್ ಇಂಡಿಯ ಕಂಪನಿಯವರು ತಮ್ಮ ಪ್ರಚಾರಕರು ಈ ದೇಶಕ್ಕೆ ಬಂದು ಸೇವೆ ಮಾಡಲು ಅನುಮತಿಕೊಟ್ಟರು. ಕೋಲ್ಕೊತ ಪಕ್ಕದಲ್ಲಿರುವ ಸೆರಾಂಪೂರ್‌ನಲ್ಲಿ ಬಹು ಪರಿಣಾಮಕಾರಿಯಾಗಿ ಕ್ರೈಸ್ತ ಸೇವೆ ನಡೆಸಿದ ಪ್ರಸಿದ್ಧ ಭಕ್ತ ವಿಲಿಯಂ ಕ್ಯಾರಿ (**ನೋಡಿ– ಕ್ಯಾರಿ, ವಿಲಿಯಂ**). ಇದೇ ರೀತಿಯಲ್ಲಿ ಬೇರೆ ಬೇರೆ ಸಭೆಗಳಿಗೆ ಸೇರಿದ ಪ್ರಚಾರ ಸಂಸ್ಥೆಗಳು ಏಷ್ಯ ಮತ್ತು ಆಫ್ರಿಕ ಖಂಡಗಳಲ್ಲಿ ತಮ್ಮ ಕೆಲಸವನ್ನಾರಂಭಿಸಿದ್ದರಿಂದ ಆ ದೇಶಗಳಲ್ಲೂ ಕ್ರೈಸ್ತ ಸಭೆಗಳು ಹುಟ್ಟಿ ಬೆಳೆದಿವೆ. ಅಷ್ಟೇ ಅಲ್ಲ, ಎಷ್ಟೋ ವಿದ್ಯಾಸಂಸ್ಥೆಗಳೂ ಆಸ್ಪತ್ರೆಗಳೂ ಇತರ ಸೇವಾ ಕೇಂದ್ರಗಳೂ ಕ್ರಿಸ್ತನ ಸಂದೇಶವನ್ನು ಪ್ರಚುರ ಪಡಿಸಲು ಪ್ರಯತ್ನಿಸುತ್ತಿವೆ.

ಕ್ರೈಸ್ತ ಸಭೆಗಳು ಹರಿದು ಹಂಚಿ ಹೋಗಿರುವುದು ಸರಿಯಲ್ಲ, ಕ್ರೈಸ್ತ ಸಭೆಯ ಆದರ್ಶ ಜೀವನಕ್ಕೂ ಪರಿಣಾಮಕಾರಿ ಸೇವೆಗೂ ಸಭೆ ಸಭೆಗಳ ನಡುವೆ ಐಕ್ಯತೆ ಅಗತ್ಯವಾಗಿದೆ–ಎಂಬ ಅರಿವು 19ನೆಯ ಶತಮಾನದಲ್ಲೇ ಅನೇಕರನ್ನು ಎಚ್ಚರಿಸಿತು. ಕ್ರಮೇಣ ಸಭಾ ಸಂಘಟನ ಚಳವಳಿಗಳು ಆಯಾ ದೇಶಗಳಲ್ಲಿ ಹುಟ್ಟಿಕೊಂಡುವು. ಭಾರತದಲ್ಲಿ ಅನೇಕ ವರ್ಷಗಳ ಕೆಲಸದ ಪರಿಣಾಮವಾಗಿ 1947ರಲ್ಲಿ ದಕ್ಷಿಣ ಭಾರತ ಸಭೆ ಅಸ್ತಿತ್ವಕ್ಕೆ ಬಂತು. ಪಾಶ್ಚಾತ್ಯ ದೇಶಗಳಲ್ಲೂ ಕಷ್ಟಸಾಧ್ಯವಾಗಿ ತೋರಿದ ಈ ಪ್ರಯತ್ನ ಭಾರತದಲ್ಲಿ ಸುಲಭವಾಗಿ ಕೈಗೂಡಿತು. ಐಕ್ಯಗೊಂಡ ಈ ಸಭೆಯಲ್ಲಿ ಐದು ಪ್ರಾಟೆಸ್ಟಂಟ್ ಸಭೆಗಳಿಗೆ ಸೇರಿದ ಸುಮಾರು ಒಂದು ದಶಲಕ್ಷ ಕ್ರೈಸ್ತರು ಒಂದಾಗಿ ಕ್ರಿಸ್ತನಲ್ಲಿ ತಮಗಿರುವ ಪರಸ್ಪರ ಅನ್ಯೋನ್ಯತೆಗೆ ಕಾರ್ಯತಃ ಸಾಕ್ಷಿ ಕೊಡುವವರಾಗಿದ್ದರು. ಇದೇ ಐಕ್ಯದ ದಾರಿಯಲ್ಲಿ ಶ್ರೀಲಂಕದ, ಉತ್ತರ ಹಿಂದೂಸ್ತಾನದ ಮತ್ತು ಆಫ್ರಿಕದ ಸಭೆಗಳೂ ಮುನ್ನಡೆಯುವ ನಿರೀಕ್ಷೆಯಿದೆ.

ಜಾಗತಿಕ ಐಕ್ಯತಾ ಚಳವಳಿಯೊಂದು ಇಡೀ ಪ್ರಪಂಚದಲ್ಲಿರುವ ಕ್ರೈಸ್ತಸಭೆಗಳನ್ನು ಕಾಲಕ್ರಮೇಣ ಒಂದುಗೂಡಿಸಲು ಪ್ರಯತ್ನಿಸುತ್ತಿದೆ. ಸಾರ್ವತ್ರಿಕ ಕ್ರೈಸ್ತ ಸಭಾಮಂಡಲಿಯ ಮೊದಲನೆಯ ಮಹಾಕೂಟ 1948ರಲ್ಲಿ ಆಮ್ಸ್ಟರ್‌ಡ್ಯಾಮ್‌ನಲ್ಲೂ ಇನ್ನೊಂದು ಮಹಾಕೂಟ 1961ರ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ನವದೆಹಲಿಯಲ್ಲೂ ಜರುಗಿದುವು.

**ಕ್ರೈಸ್ತಧರ್ಮದ ತಿರುಳು :** ಪ್ರಪಂಚದಲ್ಲಿರುವ ಕ್ರೈಸ್ತಸಭೆಗಳೆಲ್ಲ ಸರ್ವಸಾಧಾರಣವಾಗಿ ಕ್ರೈಸ್ತತತ್ತ್ವದಲ್ಲಿ ಕೆಲವು ಮುಖ್ಯ ವಿಷಯಗಳನ್ನು ಐಕ್ಯಮತದಿಂದ ಸ್ವೀಕರಿಸಿದರೂ ಅವನ್ನು ನಿರೂಪಿಸುವ ರೀತಿಯಲ್ಲಿ ಅನೇಕ ವೇಳೆ ಭಿನ್ನಾಭಿಪ್ರಾಯಗಳು ಕಂಡು ಬರುತ್ತವೆ. ಆದರೂ ಬೈಬಲ್ ಗ್ರಂಥ, ವಿಶ್ವಾಸ ಪ್ರಮಾಣಗಳು, ಸಭೆಯ ಸಾಮೂಹಿಕ ಆರಾಧನೆ, ಪ್ರಪಂಚದಲ್ಲಿ ಕ್ರೈಸ್ತಸಭೆಗಿರುವ ಕರ್ತವ್ಯ ಮತ್ತು ಸ್ಥಾನ–ಇವುಗಳ ವಿಷಯದಲ್ಲಿ ಬಹುಮಟ್ಟಿನ ಸಭೆಯವರು ತಕ್ಕಮಟ್ಟಿಗೆ ಒಮ್ಮತದಿಂದಿದ್ದಾರೆಂದು ಹೇಳಬಹುದು. ಸಾಧಾರಣವಾಗಿ ಅಪೋಸಲರ ಉಪದೇಶಗಳು ಕ್ರೈಸ್ತಸಭೆಯ ನಂಬಿಕೆಗಳನ್ನು ಸಂಕ್ಷಿಪ್ತರೀತಿಯಲ್ಲಿ ನಿರೂಪಿಸುತ್ತವೆಂದು ಹೇಳಬಹುದು. ಅವುಗಳ ಸಾರಾಂಶ ಹೀಗಿದೆ:

'ವಿಶ್ವಸೃಷ್ಟಿಕರ್ತನಾದ, ಸರ್ವಶಕ್ತನಾದ, ತಂದೆಯಾದ ದೇವರನ್ನು ನಂಬುತ್ತೇನೆ. ಆತನ ಕುಮಾರನೂ ನಮ್ಮ ಪ್ರಭುವೂ ಆದ ಯೇಸುಕ್ರಿಸ್ತನನ್ನು ನಂಬುತ್ತೇನೆ. ಈತ ಪರಿಶುದ್ಧಾತ್ಮನಿಂದ ಕನ್ಯೆ ಮೇರಿಯ ಗರ್ಭದಲ್ಲಿ ಧರಿಸಲ್ಪಟ್ಟು, ಆಕೆಯಲ್ಲಿ ಹುಟ್ಟಿ ಪೋಂಟಿಯಸ್ ಪೈಲಟ್‌ನ ಕಾಲದಲ್ಲಿ ಬೆಳೆದು, ಶಿಲುಬೆಗೆ ಆಹುತಿಯಾಗಿ, ಸಮಾಧಿಹೊಂದಿ ಪಾತಾಳಕ್ಕೆ ಇಳಿದುಹೋಗಿ, ಮೂರನೆಯ ದಿನ ಎದ್ದು ಬಂದ. ಪರಲೋಕಕ್ಕೆ ಏರಿ ಹೋಗಿ ಅಲ್ಲಿ ತಂದೆಯಾದ ದೇವರ ಬಲಪಾರ್ಶ್ವದಲ್ಲಿ ಕುಳಿತುಕೊಂಡ. ಅಲ್ಲಿಂದ ತಿರುಗಿ ಬಂದು ಬದುಕಿರುವವರಿಗೂ ಸತ್ತವರಿಗೂ ನ್ಯಾಯ ತೀರ್ಪು ನಡೆಸುತ್ತಲಿದ್ದಾನೆ–ಎಂಬುದನ್ನು ನಂಬುತ್ತೇನೆ.

'ಪರಿಶುದ್ಧಾತ್ಮರನ್ನು ನಂಬುತ್ತೇನೆ. ಒಂದೇ ಪರಿಶುದ್ಧ ಕ್ರೈಸ್ತಸಭೆಯೂ ಭಕ್ತರ ಅನ್ಯೋನ್ಯತೆಯೂ ಪಾಪದ ಪರಿಹಾರವೂ ದೇಹದ ಪುನರುತ್ಥಾನವೂ ನಿತ್ಯಜೀವವೂ ಉಂಟು ಎಂಬುದನ್ನು ನಂಬುತ್ತೇನೆ.'

ಕ್ರೈಸ್ತಸಭೆ ಅಂಗೀಕರಿಸುವ ಕೆಲವು ಮುಖ್ಯ ತತ್ತ್ವಗಳ ಸಾರಾಂಶವಿದು: ಯೇಸುಕ್ರಿಸ್ತನೇ ಕ್ರೈಸ್ತಧರ್ಮದ ತಿರುಳೆಂದು ತಿಳಿಯಬೇಕು. ಕ್ರಿಸ್ತನಿಲ್ಲದಿದ್ದರೆ ಕ್ರೈಸ್ತ ಧರ್ಮವೇ ಇಲ್ಲ. ಈ ಯೇಸುಕ್ರಿಸ್ತ ದೇವಕುಮಾರನೂ ಮಾನವರಕ್ಷಕನೂ ಆಗಿರುವುದರಿಂದ ದೇವರ ಪ್ರೀತಿಯನ್ನು ತನ್ನ ಚರಿತ್ರೆಯಲ್ಲಿ ಪ್ರಕಟ ಮಾಡುವುದಲ್ಲದೆ ಪಾಪಿಮಾನವನ ರಕ್ಷಣೆಯನ್ನು ಸಾಧಿಸಿ ದೇವ ಮಾನವ ಸಂಧಾನವನ್ನು ಮಾಡಿದ ಕರ್ತನಾಗಿದ್ದಾನೆ–ಎಂಬುದು ಕ್ರೈಸ್ತ ಸಂದೇಶದ ಮುಖ್ಯ ಪಾಠ. ಕ್ರಿಸ್ತನೆಂಬ ಅಸ್ತಿಭಾರದ ಮೇಲೆ ಕ್ರೈಸ್ತಸಭೆ ನಿಂತಿದೆ. ಸಭೆ ದೇವರ ಆಲಯವೂ ತನ್ನ ಶಿರಸ್ಸಾಗಿರುವ ಯೇಸುಕ್ರಿಸ್ತನ ಉದ್ದೇಶವನ್ನು ಸಾಧಿಸುವ ದೇಹವೂ ಆಗಿದೆ. 'ಸಮಾಧಾನವನ್ನು ಸಂಪಾದಿಸಿ ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಆಸಕ್ತರಾಗಿರಿ. ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು. ಒಬ್ಬನೇ ಆತ್ಮನನ್ನು ಹೊಂದಿರುವವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು. ನಿಮ್ಮೆಲ್ಲರಿಗೆ ಕರ್ತ ಒಬ್ಬನೇ, ಭರವಸೆ ಒಂದೇ, ಸ್ನಾನದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ. ಆತ ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯ ನಡೆಸುವವನೂ ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ.' ಕ್ರಿಸ್ತಯೇಸುವಿಗೂ ತಂದೆ ದೇವರಿಗೂ ಪವಿತ್ರಾತ್ಮನಿಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸುವ ತತ್ತ್ವನಿರೂಪಣೆಯ ಫಲವಾಗಿ ತ್ರಿತ್ವಸಿದ್ಧಾಂತದ ಬಳಕೆಗೆ ಬಂತು. 'ತಂದೆಯಾದ ದೇವರು ಸೃಷ್ಟಿಕರ್ತ. ಆತನ ಪ್ರೀತಿಯೇ ನಮಗೆ ಆಧಾರ. ಯೇಸುಕ್ರಿಸ್ತನೇ ಅವತಾರವೆತ್ತಿ ಬಂದಿರುವ ದೇವಕುಮಾರ. ಆತನೊಬ್ಬನೇ ನಮಗೆ ರಕ್ಷಕ. ಪವಿತ್ರಾತ್ಮನ ಶುದ್ಧೀಕರಣದ ಕೆಲಸದ ಮೂಲಕ ನಾವು ಕ್ರೈಸ್ತರಾಗಿ ಬಾಳುತ್ತೇವೆ. ಈ ನಂಬಿಕೆಯ ಆಧಾರದ ಮೇಲೆ ಕ್ರೈಸ್ತರು ತಂದೆ, ಮಗ, ಪರಿಶುದ್ಧಾತ್ಮರಿಂದ ಕೂಡಿದ ತ್ರಿಮೂರ್ತಿ ದೇವರನ್ನು ಆರಾಧಿಸುತ್ತಾರೆ.

ಮಾನವ ಸ್ವಭಾವ, ಲಕ್ಷಣ, ರಕ್ಷಣಾಮಾರ್ಗ ಮತ್ತು ಜೀವನದ ಉದ್ದೇಶ–ಇವನ್ನು ಕುರಿತು ಕೂಡ ಕೆಲವು ವಿಷಯಗಳು ಕ್ರೈಸ್ತಸಭೆಯಿಂದ ಅಂಗೀಕೃತವಾಗಿವೆ. ಮಾನವ ದೇವರ ರೂಪವನ್ನು ಹೊಂದಿದ್ದರೂ ತನ್ನ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ದೇವರಿಗೆ ಅವಿಧೇಯನಾಗಿ ಪಾಪದ ಬಂಧನದಲ್ಲಿ ಸಿಕ್ಕಿಬಿದ್ದು ಅದರಿಂದ ತನ್ನನ್ನು ರಕ್ಷಿಸಿಕೊಳ್ಳಲಾರದೆ ತೊಳಲುತ್ತಾನೆ. ಸ್ವಪ್ರಯತ್ನದಿಂದ ಅಂಥ ರಕ್ಷಣೆ ಅಸಾಧ್ಯವಾಗಿರುವುದರಿಂದ ಯೇಸುಕ್ರೈಸ್ತ ತಾನೇ ತನ್ನ ಮರಣದ ಮೂಲಕ ಪಾಪಕ್ಷಮೆಯನ್ನು ಒದಗಿಸಿಕೊಟ್ಟು ಮಾನವ ದೇವತ್ವವನ್ನು ಪಡೆಯಲು ಸಹಾಯ ಮಾಡಿದ್ದಾನೆ. ಪಾಪಕ್ಷಮೆಯ ಸಂದೇಶ ಕ್ರೈಸ್ತಸಭೆಯ ಸುವಾರ್ತಾ ಪ್ರಸರಣೆಯ ತಿರುಳು ಎಂದು ಹೇಳಿದರೆ ತಪ್ಪಾಗಲಾರದು. 'ಕ್ಷೇಮದಿಂದಿರುವವರಿಗೆ ವೈದ್ಯ ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು–ನೀತಿವಂತರನ್ನು ಕರೆಯುವುದಕ್ಕೆ ನಾನು ಬಂದವನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದವನು' ಎಂಬ ಕ್ರಿಸ್ತ ಸಂದೇಶ ಅವನ ಬೋಧನೆ ಎಲ್ಲದರ ಸಾರವಾಗಿದೆ.

ಸಿನ್ಯೆ ಬೆಟ್ಟದ ಮೇಲೆ ದೇವರು ಸಂತ ಮೋಸಸ್‌ಗೆ ಕೃಪೆಮಾಡಿದ ದಶ ದೈವಾಜ್ಞೆಗಳ ಪ್ರಸ್ತಾಪ ಬೈಬಲಿನಲ್ಲಿ ಬರುತ್ತದೆ. ಈ ಹತ್ತು ಕಟ್ಟಳೆಗಳು ಜ್ಯೂಡಾಯಿಸಂಗೂ ಕ್ರೈಸ್ತಧರ್ಮಕ್ಕೂ ಇಸ್ಲಾಂ ಧರ್ಮಕ್ಕೂ ತಳಹದಿಯಾಗಿವೆಯಲ್ಲದೆ ಪ್ರಪಂಚದ ಎಲ್ಲ ಧರ್ಮಗಳ ಪಲ್ಲವಿಗಳಾಗಿವೆ. ಇವುಗಳ ಕ್ರಮದಲ್ಲೂ ವ್ಯಾಖ್ಯಾನದಲ್ಲೂ ಏಕಮತವಿಲ್ಲವಾದರೂ ಸ್ಥೂಲವಾಗಿ

ಇವನ್ನು ಹೀಗೆ ಗ್ರಹಿಸಬಹುದು: ದೇವರ ಹೆಸರನ್ನು ಯಾರೂ ಅಪವಿತ್ರಗೊಳಿಸಬಾರದು. ಅಂದರೆ ಒಬ್ಬನೇ ದೈವವೆಂದು ತಿಳಿದು ಅವನನ್ನು ಆರಾಧಿಸಬೇಕು. ವಿಗ್ರಹಾರಾಧನೆ ಸಲ್ಲದು; ಸಬ್ಬತು (Sabbath) ದಿನವನ್ನು ಆಚರಿಸಬೇಕು; ಮಾತಾಪಿತೃಗಳನ್ನು ಗೌರವದಿಂದ ಕಾಣಬೇಕು; ಕೊಲ್ಲಬಾರದು; ವಿಷಯಾಸಕ್ತಿಗಳಿಗೆ ಆಸ್ಪದಕೊಡಬಾರದು; ಕಳಬಾರದು; ಸುಳ್ಳುಸಾಕ್ಷಿ ಹೇಳಬಾರದು; ಪರಸ್ತ್ರೀಗೂ ಪರಧನಕ್ಕೂ ಆಶಿಸಬಾರದು. ಬಹುಮಟ್ಟಿಗೆ ಇದು ಕ್ರೈಸ್ತಧರ್ಮದ ತಿರುಳಾಗಿದೆ.

ದೇವರು ಕ್ರಿಸ್ತನ ಮೂಲಕ ನಡೆಸುವ ರಕ್ಷಣಾ ಕಾರ್ಯಕ್ಕಾಗಿ ಕ್ರೈಸ್ತಸಭೆ ಅಸ್ತಿತ್ವಕ್ಕೆ ಬಂದಿದೆ. ರಕ್ಷಣೆ ಎಂಬುದು ಕೇವಲ ವ್ಯಕ್ತಿಪರವಾದುದಲ್ಲ. ಸಾಮಾಜಿಕವಾದುದು. ಈ ಕಾರಣ ಕ್ರೈಸ್ತಸಭಾಜೀವನ ಕ್ರೈಸ್ತಧರ್ಮಕ್ಕೆ ಅಗತ್ಯ. ಸಭೆ ಎಂಬುದು ಕ್ರಿಸ್ತನ ಮೂಲಕ ದೇವರ ಆರಾಧನೆಯನ್ನೂ ಸೇವೆಯನ್ನೂ ಮಾಡುವುದಕ್ಕಾಗಿ ಕರೆಯಲ್ಪಟ್ಟಿರುವ ಅನ್ಯೋನ್ಯ ಸಂಘ. ಈ ಸಭೆಯ ಅನ್ಯೋನ್ಯತೆಗೆ ಬೇರೆ ಬೇರೆ ಜನಾಂಗಗಳವರು, ಭಾಷೆಗಳವರು, ದೇಶಗಳವರು ಕ್ರಿಸ್ತನ ಮೂಲಕ ಸೇರಿಕೊಂಡಿರುವುದರಿಂದಲೇ ಕ್ರೈಸ್ತಸಭೆ ಸಾರ್ವತ್ರಿಕ ಸಭೆಯಾಗಿರುತ್ತದೆ. ತನ್ನ ಆರಾಧನೆ ಸೇವೆ ಮತ್ತು ಸುವಾರ್ತಾ ಕೆಲಸಗಳಿಂದ ದೇವರ ಸಂಕಲ್ಪವನ್ನು ನೆರವೇರಿಸುವುದು ಸಭೆಯ ಕರ್ತವ್ಯ. ಆದುದರಿಂದ ಸುವಾರ್ತಾಸೇವೆ ಅಂದರೆ ಯೇಸುಕ್ರಿಸ್ತನಲ್ಲಿ ದೊರಕಿರುವ ರಕ್ಷಣಾ ಸಂದೇಶವನ್ನು ಸಾರಿ ಹೇಳುವುದು ಸಭೆಯ ಆದ್ಯಕರ್ತವ್ಯ. 'ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆ ದೇವರಶಕ್ತಿ ಸ್ವರೂಪವಾಗಿದ್ದು, ನಂಬುವವರೆಲ್ಲರಿಗೂ ರಕ್ಷಣೆ ಕೊಡುತ್ತದೆ. ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಅಧಿಕಾರ ನನ್ನದೇ. ಆದ್ದರಿಂದ ನೀವು ಹೋಗಿ ಎಲ್ಲ ದೇಶಗಳ ಜನರನ್ನೂ ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ; ನಾನು ನಿಮಗೆ ಬೋಧಿಸಿದ ರೀತಿ ಬದುಕುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿ, ನಾನು ಯುಗದ ಸಮಾಪ್ತಿಯ ತನಕ ನಿರಂತರ ನಿಮ್ಮ ಸಂಗಡ ಇರುತ್ತೇನೆ'–ಇದು ಕ್ರಿಸ್ತೋಪದೇಶ.

ಮಾನವಚರಿತ್ರೆಯ ವಿಷಯದಲ್ಲಿ ಕ್ರೈಸ್ತರಿಗೊಂದು ದೃಢವಾದ ನಿರೀಕ್ಷೆ ಇದೆ. ಸೃಷ್ಟಿಕರ್ತನಾದ ತಂದೆ ದೇವರು ಕ್ರಿಸ್ತನ ಮೂಲಕ ರಕ್ಷಣಾ ಮಾರ್ಗವನ್ನು ಮಾನವಗೆ ತಿಳಿಸಿದ್ದು ಮಾತ್ರವೇ ಅಲ್ಲ, ಮಾನವ ಚರಿತ್ರೆಯಲ್ಲಿ ತನ್ನ ಉದ್ದೇಶವನ್ನು ಸಾಧಿಸುತ್ತ ಕೊನೆಗೆ ಯುಗಾಂತ್ಯದಲ್ಲಿ ನ್ಯಾಯಾಧಿಪತಿಯಾಗಿ ಬರುವ ಕ್ರಿಸ್ತನ ಮೂಲಕ ದೇವರ ರಾಜ್ಯವನ್ನು ಸಂಪೂರ್ಣಗೊಳಿಸಿ ತನ್ನ ಸಂಕಲ್ಪವನ್ನು ನೆರವೇರಿಸುತ್ತಾನೆ–ಎಂಬುದು ಕ್ರೈಸ್ತ ನಿರೀಕ್ಷೆ. ಕಾಲ ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪಾಪೂರ್ಣ ಸಂಕಲ್ಪವನ್ನೂ ಪರಮಾತ್ಮ ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದ. ಅದೇನೆಂದರೆ ಲೋಕದಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬುದು. ಈ ಮಹತ್ತಾದ ನಿರೀಕ್ಷೆಯನ್ನು ಮುಂದಿಟ್ಟುಕೊಂಡು ಕ್ರೈಸ್ತ ಸಭೆ ತನ್ನ ಆರಾಧನೆ, ಸೇವೆ, ಸುವಾರ್ತಾ ಪ್ರವಚನ–ಇವನ್ನು ಜವಾಬ್ದಾರಿಯಿಂದ ಪ್ರಪಂಚದ ಎಲ್ಲ ಕಡೆಗಳಲ್ಲಿ ಮುಂದುವರಿಸುತ್ತಿದೆ.

(ಎಸ್.ಜೆ.ಎಸ್.; ಎಚ್.ಎಸ್.)

**ಧರ್ಮಸಭೆಯ ಆಡಳಿತ :** ಆಡಳಿತವರ್ಗದ ಈ ವಿಷಯದಲ್ಲಿ ರೋಮನ್ ಕೆಥೊಲಿಕ್ ಆರ್ಥೊಡಾಕ್ಸ್ ಸಭೆಯವರಿಗೂ ಪ್ರಾಟೆಸ್ಟಂಟರಿಗೂ ಏಕಾಭಿಪ್ರಾಯವಿಲ್ಲವಾಗಿ ಆಡಳಿತ ವರ್ಗಶ್ರೇಣಿ ಒಬ್ಬೊಬ್ಬರಲ್ಲಿ ಒಂದೊಂದು ಬಗೆಯಾಗಿದೆ. ಆದರೂ ಎಲ್ಲ ಶ್ರೇಣಿಗಳಲ್ಲೂ ಬೈಬಲ್ ಗ್ರಂಥದಲ್ಲಿಯೂ ಹುದುವಾಗಿ ಕಂಡುಬರುವ ವಿಷಯಗಳನ್ನು ಹೀಗೆ ಸಂಗ್ರಹಿಸಬಹುದು.

**ಅಪೋಸಲರು :** ಯೇಸುವಿನ ಶಿಷ್ಯವರ್ಗದವರಾಗಿದ್ದು ಅವನ ಮರಣ, ಪುನರುತ್ಥಾನ ಮತ್ತು ದಿವಾರೋಹಣಾನಂತರ ಅವನ ಸುವಾರ್ತೆಯನ್ನು ಲೋಕಕ್ಕೆ ಬಿತ್ತರಿಸಿದವರನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಇವರೇ ಧರ್ಮಸಭೆಯ ಮೂಲ ಪ್ರವರ್ತಕರು. ಇವರು ಹನ್ನೆರಡು ಮಂದಿ. ಇವರು ಯಾರು ಯಾರೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಇವರಲ್ಲಿ ಮೊದಲಿಗ ಸಂತ ಪಾಲನೆಂದು ಎಲ್ಲರೂ ಒಪ್ಪುತ್ತಾರೆ.

**ಪ್ರವಾದಿಗಳು:** ಇವರು ಅಪೋಸಲರೊಂದಿಗೆ ಸಹಕರಿಸಿ ಪ್ರಾರಂಭದಲ್ಲಿ ಧರ್ಮಸಭೆಗಳಿಗೆ ಸುಭದ್ರ ಬುನಾದಿ ಹಾಕಿದರು. ಬೋಧನೆಯ ಜೊತೆಗೆ ಇವರು ದೈವ ಕೃಪೆಯಿಂದ ಮುಂದಾಗುವುದನ್ನೂ ತಿಳಿದು ಹೇಳುತ್ತಿದ್ದರು.

**ಸೌವಾರ್ತಿಕರು :** ಕ್ರಿಸ್ತನ ಬೋಧೆಯನ್ನು ಅಂದರೆ ಸುವಾರ್ತೆಯನ್ನು ಬರೆದಿಟ್ಟ ನಾಲ್ವರಿಗೆ (ಮತ್ತಾಯ, ಮಾರ್ಕ, ಲ್ಯೂಕ ಮತ್ತು ಯೋಹಾನ) ಈ ಹೆಸರಿದೆ. ಅದನ್ನು ಪ್ರಚಾರ ಮಾಡುವವರನ್ನೂ ಈಗ ಇದೇ ಹೆಸರಿನಿಂದ ಕರೆಯುತ್ತಾರೆ.

**ಬೋಧಕರು :** ಯೇಸು ಜನತೆಗೆ ಬೋಧನೆ ಮಾಡಿದಂತೆ ಅವನ ಸುವಾರ್ತೆಯನ್ನು ಉಪಾಧ್ಯಾಯರಾಗಿ ಉಪದೇಶ ಮಾಡುವವರಿಗೆ ಈ ಹೆಸರು ಉಳಿದುಬಂದಿದೆ.

**ಸಭಾಪಾಲಕರು :** ಕುರುಬ ಕುರಿಮಂದೆಯನ್ನು ಕಾಪಾಡುವಂತೆ ಧರ್ಮಸಭೆಯ ಸದಸ್ಯರನ್ನು ಪಾಲನೆಮಾಡುವವರು (ಪ್ಯಾಸ್ಟರ್ಸ್). ಯೇಸುಕ್ರಿಸ್ತನನ್ನೇ ಹಿರಿಯ ಕುರುಬನೆನ್ನಲಾಗಿದೆ.

ಪ್ರ.ಶ. 2ನೆಯ ಶತಮಾನದಿಂದ ಸಭಾಧ್ಯಕ್ಷ (ಬಿಷಪ್) ಹಿರಿಯ ಸಭಾಪಾಲಕ (ಎಲ್ಡರ್ ಅಥವಾ ಪ್ಯಾಸ್ಟರ್) ಮತ್ತು ಸಭಾಸೇವಕ(ಡೀಕನ್)–ಎಂಬ ಮೂರು ಅಧಿಕಾರ ವರ್ಗಗಳು ಪ್ರಖ್ಯಾತವಾಗಿ ಉಳಿದು ಬಂದುವು. ಈಗಲೂ ಕ್ರೈಸ್ತ ಸಭೆಯ ಎಲ್ಲ ಪಂಗಡಗಳೂ ಈ ಮೂರು ವರ್ಗಗಳನ್ನು ಪುರಸ್ಕರಿಸಿವೆ.

ಮೊದಲಿಗೆ ಸಭಾಧ್ಯಕ್ಷರಿಗೂ ಸಭಾಪಾಲರಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಕ್ರಮೇಣ ಒಂದು ರೀತಿಯ ವಿಭಾಗವೇರ್ಪಟ್ಟಿತು. ಮೊದಮೊದಲು ಒಂದು ಸ್ಥಳಿಕ ಸಭೆಯಲ್ಲಿ ಒಬ್ಬನಿಗಿಂತ ಹೆಚ್ಚು ಸಭಾಧ್ಯಕ್ಷರಿರುತ್ತಿದ್ದರು. ಅನಂತರ ಒಂದೊಂದು ಸಭೆಗೆ ಒಬ್ಬೊಬ್ಬ ಅಧ್ಯಕ್ಷನಿರಬೇಕೆಂದು ನಿಗದಿಯಾಯಿತು. ಸಭೆಗಳನ್ನು ಶ್ರೇಣೀಕರಿಸಿ ಎಲ್ಲ ಸಭೆಗಳ ಮೇಲೆ ಹಿರಿಯ ಸಭಾಧ್ಯಕ್ಷನೊಬ್ಬನಿರಬೇಕೆಂಬ ಕ್ರಮ ಈಗ ರೂಢಿಯಲ್ಲಿದೆ. ಸಭಾಧ್ಯಕ್ಷನ ಕೈಕೆಳಗೆ ಸಭಾಪಾಲಕನಿರುತ್ತಾನೆ. ಸಭಾಸೇವಕ ಸಭಾಪಾಲಕನ ಕೆಳಗಿನ ಅಧಿಕಾರಿ.

ಧರ್ಮ ಪ್ರಚಾರಕ್ಕಾಗಿ ಧರ್ಮಸಭೆ ಆಗಿಂದಾಗ್ಗೆ ದೇಶವಿದೇಶಗಳಿಗೆ ಕಳಿಸಿ ಕೊಡುವ ಪ್ರಚಾರಕರನ್ನು ಮಿಷನರಿಗಳೆಂದು ಕರೆಯುತ್ತಾರೆ. ಇವರು ಆಯಾ ಧರ್ಮಸಭೆಯಿಂದಲೂ ಸ್ಥಳೀಯ ಸಂಘಸಂಸ್ಥೆಗಳಿಂದಲೂ ಸಹಾಯ ಪಡೆದುಕೊಂಡು ಶಾಲೆ, ಆಸ್ಪತ್ರೆ ಮೊದಲಾದ ಸಾರ್ವಜನಿಕ ಸೇವಾಕಾರ್ಯಗಳನ್ನು ನಡೆಸುತ್ತ ಧರ್ಮಬೋಧೆ ಮಾಡುತ್ತಿರುತ್ತಾರೆ.

(ಎಸ್.ಎ.ಕೆ.ಯು; ಎಚ್.ಎಸ್.)

**ಭಾರತದಲ್ಲಿ ಕ್ರೈಸ್ತಧರ್ಮ:** ಭರತಖಂಡದಲ್ಲಿ ಹಿಂದೂ ಧರ್ಮ ಬಹುಪಕ್ಷೀಯ ಧರ್ಮವಾಗಿದ್ದರೂ ಆರಂಭದಿಂದಲೇ ಇತರ ಧರ್ಮಗಳಿಗೂ ಈ ದೇಶದಲ್ಲಿ ಮನ್ನಣೆ ದೊರಕುತ್ತ ಬಂದಿದೆ. ಪ್ರಸಕ್ತಶಕದ ಮೊದಲ ಶತಮಾನದಲ್ಲಿಯೇ ಇಲ್ಲಿಗೆ ಬಂದ ಕ್ರೈಸ್ತಧರ್ಮ ಕ್ರಮೇಣ ಬೇರೂರಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಜೀವನಕ್ಕೆ ಸಹಾಯ ಮಾಡುತ್ತಿದೆ ಎಂಬುದು ಇಲ್ಲಿ ಸಮಾಧಾನದ ಸಂಗತಿ.

ದಕ್ಷಿಣ ಭಾರತದಲ್ಲಿ ಕ್ರೈಸ್ತ ಧರ್ಮದ ಪ್ರಚಾರ ಕಾರ್ಯ ಮೂರೂ ಸಮುದ್ರತೀರಗಳ ರೇವುಗಳಲ್ಲಿ ಆರಂಭವಾಯಿತು. ಪಶ್ಚಿಮ ತೀರದಲ್ಲಿ ಕ್ರಾಂಗನೂರು ಮತ್ತು ಗೋವ, ಪೂರ್ವದಲ್ಲಿ ಟ್ರಾಂಕ್ವಿಬಾರ್–ಈ ಸ್ಥಳಗಳಲ್ಲಿ ಸಿರಿಯನ್, ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಮಿಷನುಗಳು ಸುವಾರ್ತಾ ಸೇವೆಯನ್ನು ಆರಂಭಿಸಿದುವು.

ಪಶ್ಚಿಮ ತೀರಕ್ಕೂ ಪೌರಸ್ತ್ಯ ಸಭೆಗಳಿಗೂ ಮೊದಲ ಶತಮಾನದಿಂದಲೇ ಸಂಬಂಧವಿತ್ತೆಂದು ಹೇಳಬಹುದು. ಅಪೋಸಲ ಥಾಮಸ್ ಪ್ರ.ಶ.ಸು. 52ರಲ್ಲಿ ದಕ್ಷಿಣ ಭಾರತಕ್ಕೆ ಬಂದು ಮಲಬಾರಿನ ತೀರದಲ್ಲಿ ಹಲಕೆಲವು ಸಭೆಗಳನ್ನು ಸ್ಥಾಪಿಸಿದನೆಂದು ಕೇರಳದ ಸಿರಿಯನ್ ಕ್ರೈಸ್ತರು ಹೇಳುತ್ತಾರೆ. ಆ ಮೇಲೆ ಈ ಭಕ್ತ ಪೂರ್ವ ತೀರಕ್ಕೆ ಹೋಗಿ ಚೆನ್ನೈನ ಬಳಿಯಲ್ಲಿ ಕೊಲೆಯಾದನೆಂಬ ಐತಿಹ್ಯವಿದೆ. ಹೇಗೂ ಮೊದಲಿನ ಶತಮಾನದಲ್ಲೇ ಕ್ರೈಸ್ತಧರ್ಮ ಭಾರತಕ್ಕೆ ಬಂತು. ಆದರೆ ಪ್ರಚಾರಕರು ಸುವಾರ್ತಾ ಸೇವೆಗೆ ಹೆಚ್ಚಿನ ಗಮನ ಕೊಡದಿದ್ದುದರಿಂದ ಅದು ದೇಶದ ಇತರ ಭಾಗಗಳಿಗೆ ಹಬ್ಬಲಿಲ್ಲ.

ವ್ಯಾಸ್ಕೊಡಗಾಮ 1498ರಲ್ಲಿ ಕಲ್ಲಿಕೋಟೆಗೆ ಬಂದು ಮುಟ್ಟಿದ್ದು ಯುರೋಪು ಮತ್ತು ಭಾರತಗಳ ಸಂಪರ್ಕದಲ್ಲೇ ದೊಡ್ಡದೊಂದು ಮೈಲುಗಲ್ಲು ಎಂದು ಹೇಳಬೇಕು. ಆಮೇಲೆ ಬಹು ಬೇಗನೆ ಪೋರ್ಚುಗಲ್ಲಿನಿಂದ ರೋಮನ್ ಕೆಥೊಲಿಕ್ ಪ್ರಚಾರ ತಂಡಗಳು ಮುಖ್ಯವಾಗಿ ಗೋವ, ಕೊಚ್ಚಿ ಮೊದಲಾದ ಸ್ಥಳಗಳನ್ನು ಸೇವಾ ಕೇಂದ್ರಗಳನ್ನಾಗಿ ಮಾಡಿಕೊಂಡು ತಮ್ಮ ಕೆಲಸವನ್ನು ಆರಂಭಿಸಿದುವು. ಭಾರತದ ಅಪೋಸಲನೆಂದು ಹೆಸರು ಹೊತ್ತು ಫ್ರಾನ್ಸಿಸ್ ಕ್ಸೇವಿಯರ್ ಎಂಬಾತ ಭಾರತಕ್ಕೆ ಬಂದ ಜೆಸ್ಯೂಟ್ ಪ್ರಚಾರಕರಲ್ಲಿ ಮೊದಲನೆಯವ. ರಾಬರ್ಟ್ ಡಿ.ನೋಬಿಲಿ ಎಂಬಾತ ಸಹ ಹಿಂದೂ ಸಂಸ್ಕೃತಿಯ ಹಿನ್ನೆಲೆಗೆ ಮನ್ನಣೆ ಕೊಟ್ಟು ಸಂನ್ಯಾಸಿಯ ಮಾರ್ಗವನ್ನವಲಂಬಿಸಿ ತನ್ನ ಕೆಲಸವನ್ನು ಮುಂದುವರಿಸಿದ. ಮುಂದಣ ಶತಮಾನಗಳಲ್ಲಿ ಕೂಡ ರೋಮನ್ ಕೆಥೊಲಿಕ್ ಪ್ರಚಾರಸಂಸ್ಥೆಗಳು ಮುಖ್ಯವಾಗಿ ತಮ್ಮ ಪ್ರಸಿದ್ಧ ವಿದ್ಯಾಸಂಸ್ಥೆಗಳ ಮೂಲಕ ಈ ದೇಶದಲ್ಲಿ ತಮ್ಮ ಕ್ರೈಸ್ತ ಸೇವೆಯನ್ನು ಮುಂದುವರಿಸುತ್ತಿವೆ. ದೇಶೀಯ ಮುಂದಾಳುಗಳನ್ನು ತರಬೇತು ಮಾಡಿ ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ಒಪ್ಪಿಸುವ ವಿಷಯದಲ್ಲಿ ರೋಮನ್ ಕೆಥೊಲಿಕ್ ಸಭೆಗಳು ಹೆಚ್ಚಿನ ಪ್ರಯತ್ನ ಮಾಡಿವೆ.

ತಿರುಚಿರಪಳ್ಳಿಯ ಹತ್ತಿರವಿರುವ ಟ್ರಾಂಕ್ವಿಬಾರ್ ಎಂಬುದು ದಕ್ಷಿಣ ಭಾರತದಲ್ಲಿ ಪ್ರಾಟೆಸ್ಟಂಟ್ ಕ್ರೈಸ್ತ ಸಭೆಯ ಉಗಮಸ್ಥಾನವೆನ್ನಬಹುದು. ಈ ಪಶ್ಚಿಮತೀರದ ಪಟ್ಟಣಕ್ಕೆ 1706ರರಲ್ಲಿ ಡೆನ್ಮಾರ್ಕಿನ ಅರಸನ ಆಶ್ರಯ ಹೊಂದಿದ್ದ ಇಬ್ಬರು ಜರ್ಮನ್ ಪ್ರಚಾರಕರು ಬಂದಿಳಿದರು. ತೊಂದರೆ, ಇಕ್ಕಟ್ಟು, ಕಷ್ಟಗಳ ಮಧ್ಯದಲ್ಲಿಯೂ ಇವರ ಸೇವೆ ಫಲದಾಯಕವಾಗಿ ಮುಂದುವರಿಯಿತು. ಜಿಗೆನ್ ಬಾಲ್ಗ್ ನಾಲ್ಕು ಸುವಾರ್ತೆಗಳನ್ನು ತಮಿಳು ಭಾಷೆಗೆ ಭಾಷಾಂತರಿಸಿದ್ದು (1714) ದೊಡ್ಡ ಪ್ರಯತ್ನ. ಈ ಪ್ರಚಾರಕರಲ್ಲಿ ಅತಿ ಪ್ರಸಿದ್ಧನಾದವ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಸುಮಾರು 50 ವರ್ಷಗಳವರೆಗೆ ಸೇವೆ ಮಾಡಿದ ಸಿ.ಎಫ್.ಶ್ವಾರ್ಟ್ಸ್. ತಂಜಾವೂರಿನ ರಾಜನೊಡನೆಯೂ ಹೈದರ್

ಆಲಿಯೊಡನೆಯೂ ಬ್ರಿಟಿಷರೊಡನೆಯೂ ಹೆಚ್ಚಿನ ಸ್ನೇಹ ಸಂಪರ್ಕವನ್ನಿಟ್ಟು ಕೊಂಡಿದ್ದರಿಂದ ಈತನಿಗೆ ಕ್ಷಾಮ ಸಮಯಗಳಲ್ಲಿ ಎಷ್ಟೋ ಜನರಿಗೆ ಸಹಾಯ ಮಾಡಲು ಸಾಧ್ಯವಾಯಿತು.

ಕಾಲಕ್ರಮೇಣ ಯುರೋಪು ಮತ್ತು ಅಮೆರಿಕ ಖಂಡಗಳಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದ ಅನೇಕ ಪ್ರಚಾರಕ ಸಂಸ್ಥೆಗಳು ಈ ದೇಶದಲ್ಲೆಲ್ಲ ಕೆಲಸವನ್ನು ಮುಂದುವರಿಸಿದುವು. ಉತ್ತರ ಹಿಂದೂಸ್ಥಾನದಲ್ಲಿ 1793ರಲ್ಲಿ ವಿಲಿಯಮ್ ಕ್ಯಾರಿ ಬಂದಿಳಿದಾಗ ಭಾರತದ ಕ್ರೈಸ್ತ ಸಭಾ ಚರಿತ್ರೆ ಹೊಸತೊಂದು ಮೈಲುಗಲ್ಲನ್ನು ಮುಟ್ಟಿದಂತಾಯಿತು. ಏಕೆಂದರೆ ಅದುವರೆಗೆ ಭಾರತಕ್ಕೆ ಬಂದಿದ್ದ ಇತರ ಪ್ರಚಾರಕರಂತಲ್ಲದೆ, ಕ್ಯಾರಿ ಒಂದು ಪ್ರಚಾರ ಸಂಸ್ಥೆಯ ಪ್ರತಿನಿಧಿಯಾಗಿ ಭಾರತಕ್ಕೆ ಬಂದ. ಆಧುನಿಕ ಪ್ರಚಾರ ಸೇವೆಯ ಪಿತೃ ಎಂಬ ಬಿರುದು ಕ್ಯಾರಿಗೆ ಸಹಜವಾಗಿ ಸಲ್ಲುತ್ತದೆ. ಬೈಬಲನ್ನು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಿಸುವುದರಲ್ಲಿ, ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವುದರಲ್ಲಿ, ಪತ್ರಿಕೆ ಮತ್ತು ಸಾಹಿತ್ಯ ರಚನೆಗಳನ್ನು ಆರಂಭಿಸುವುದರಲ್ಲಿ ಅನಿವಾರ್ಯವಾಗಿ ಕಷ್ಟ ತೊಂದರೆಗಳಿರುವಾಗಲೂ ತನ್ನ ಧ್ಯೇಯವನ್ನು ಅಚಲವಾಗಿ ಅನುಸರಿಸಿದ ಧೈರ್ಯ ತಾಳ್ಮೆಗಳ ನಿಮಿತ್ತ ಕ್ಯಾರಿಗೆ ಉತ್ತರ ಹಿಂದೂಸ್ಥಾನದ ಕ್ರೈಸ್ತಧರ್ಮ ಪ್ರಚಾರಕ್ಷೇತ್ರದಲ್ಲಿ ಅಗ್ರಸ್ಥಾನ ಸಲ್ಲಬೇಕು. ಭಕ್ತಿಮಾರ್ಗದ ಅಭಿವೃದ್ಧಿಗಾಗಿಯೂ ವಿದ್ಯಾಭಿವೃದ್ಧಿಗಾಗಿಯೂ ಕ್ರೈಸ್ತ ತತ್ತ್ವ ನಿರೂಪಣೆಯ ಅಭ್ಯಾಸಕ್ಕಾಗಿಯೂ ಕೋಲ್ಕತ್ತದ ಹತ್ತಿರವಿರುವ ಸೆರಾಂಪೂರ್‌ನಲ್ಲಿ ಒಂದು ದೊಡ್ಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಏಷ್ಯ ಖಂಡದಲ್ಲಿ ಇದು ಸ್ಥಾಪಿತವಾದ ಇಂಥ ಆದ್ಯ ವಿಶ್ವವಿದ್ಯಾಲಗಳಲ್ಲಿ ಒಂದೆನಿಸಿದೆ.

ಇಂದು ಭಾರತದ ಕ್ರೈಸ್ತ ಸಭೆಯಲ್ಲಿ ಸುಮಾರು ಹದಿನೈದು ದಶಲಕ್ಷಕ್ಕೂ ಹೆಚ್ಚಿನ ಸದಸ್ಯರಿದ್ದಾರೆ. ಅನೇಕ ಪ್ರಚಾರ ಸಂಘಗಳು ತಮ್ಮ ಆಡಳಿತದ ಜವಾಬ್ದಾರಿಯನ್ನು ಭಾರತೀಯ ಸಭೆಗಳಿಗೆ ಕ್ರಮೇಣ ಒಪ್ಪಿಸಿಕೊಡುವ ಧೋರಣೆಯನ್ನು ಮುಂದುವರಿಸುತ್ತಿವೆ. ಕ್ರೈಸ್ತ ಪ್ರಚಾರ ಸಂಘಗಳ ಸೇವೆಯ ಫಲವಾಗಿ ದೇಶಕ್ಕೆ ಅನೇಕ ರೀತಿಯ ಪ್ರಯೋಜನಗಳಾಗಿವೆ. ಭಾರತದ ಭಾಷೆಗಳ ಪ್ರಗತಿಗೆ, ಸಾಹಿತ್ಯ ರಚನೆಗೆ ಅನೇಕ ಪಾದ್ರಿಗಳು ಸ್ಫೂರ್ತಿ, ಸಹಾಯಗಳನ್ನು ನೀಡಿದ್ದಾರೆ, ನೀಡುತ್ತಿದ್ದಾರೆ. ತಮಿಳು ಭಾಷೆಯಲ್ಲಿ ಫಾದರ್ ಬೆಶಿ, ಕನ್ನಡದಲ್ಲಿ ಕಿಟ್ಟೆಲ್, ಬಂಗಾಳಿಯಲ್ಲಿ ಕ್ಯಾರಿ ಮೊದಲಾದವರು ಈ ವಿಷಯದಲ್ಲಿ ಮಾಡಿದ ಸೇವೆ ಗಮನಾರ್ಹವಾಗಿದೆ. ಅಲ್ಲದೆ ದೇಶದ ಬಡಜನ, ಸಾಮಾಜಿಕ ಆರ್ಥಿಕ ದೃಷ್ಟಿಯಿಂದ ಕೀಳ್ಮಟ್ಟದಲ್ಲಿದ್ದವರು. ಬೇರೆ ಬೇರೆ ರೀತಿಯಲ್ಲಿ ಕಷ್ಟಕ್ಕೊಳಗಾದವರು– ಇವರಿಗೆ ನಾನಾ ವಿಧವಾಗಿ ಸೇವೆ ಮಾಡುವುದರ ಮೂಲಕ ಪ್ರಚಾರಸಂಸ್ಥೆಗಳು ಎಷ್ಟೋ ಸುಧಾರಣಾ ಕೆಲಸಗಳಿಗೆ ಸ್ಫೂರ್ತಿ ನೀಡಿವೆ. ಮಾರ್ಗದರ್ಶನ ಮಾಡಿವೆ. ಆಸ್ಪತ್ರೆಗಳು, ಅನಾಥಾಲಯಗಳು, ಶಾಲೆಗಳು, ವಿಶ್ವವಿದ್ಯಾಲಯಗಳು, ಇನ್ನೂ ಅನೇಕ ಸೇವಾ ಕೇಂದ್ರಗಳು–ಇವುಗಳ ಮೂಲಕ ಕ್ರೈಸ್ತಧರ್ಮವನ್ನು ಪ್ರಚುರಪಡಿಸುವ ಕಾರ್ಯ ಮುಂದುವರಿಯುತ್ತಿದೆ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಮತ್ತು ಅದೇ ವರ್ಷದಲ್ಲಿ ದಕ್ಷಿಣ ಭಾರತ ಸಂಘಟಿತ ಸಭೆಯ ಸ್ಥಾಪನೆಯಾದ ಮೇಲೆ ಕ್ರೈಸ್ತ ಧರ್ಮ ಜನ ಜೀವನದಲ್ಲಿ ಇನ್ನೂ ಹೆಚ್ಚಿನ ಪರಿಣಾಮಕಾರಿಯಾದ ರೀತಿಯಲ್ಲಿ ಭಾಗವಹಿಸುವಂತಾಯಿತು. ಕ್ರೈಸ್ತಧರ್ಮ, ಪರಧರ್ಮ, ಪಾಶ್ಚಾತ್ಯ ಸಂಸ್ಕೃತಿಯನ್ನವಲಂಬಿಸಿದುದು; ದೇಶಪ್ರೇಮವನ್ನೂ ಜಾನಾಂಗಿಕ ಜವಾಬ್ದಾರಿಯನ್ನೂ ಅಸಡ್ಡೆ ಮಾಡುತ್ತಿದೆ–ಎಂಬಿವೇ ಮೊದಲಾದ ಆಧಾರವಿಲ್ಲದ ಅಪವಾದಗಳನ್ನು ತೆಗೆದುಹಾಕಲು ನಿರಂತರ ಪ್ರಯತ್ನನಡೆಯುತ್ತಿದೆ. ಕ್ರೈಸ್ತ ತತ್ತ್ವ ನಿರೂಪಣೆಯ ರೀತಿಯಲ್ಲಿಯೂ ಆರಾಧನಾ ಕ್ರಮಗಳಲ್ಲಿಯೂ ಭಾರತೀಯ ಸಾಂಸ್ಕೃತಿಕ ಹಿನ್ನೆಲೆಗೆ ಸಂಬಂಧಿಸಿದ ವಿಷಯಗಳನ್ನು ಉಪಯೋಗಿಸಿಕೊಳ್ಳುವ ಪ್ರಯತ್ನಗಳಾಗುತ್ತಿವೆ. ಅಲ್ಲಲ್ಲಿ ಕ್ರೈಸ್ತ ಆಶ್ರಮಗಳ ಮೂಲಕ ದೇಶೀಯ ಧಾರ್ಮಿಕ ಸಾಧನಗಳನ್ನೂ ಉಪಯೋಗಿಸಿಕೊಂಡು ಕ್ರೈಸ್ತ ಸಂದೇಶವನ್ನೂ ಸರಳ ಜೀವನವನ್ನೂ ರೂಪಿಸಲು ಸಭೆ ಮುಂದೆ ಬರುತ್ತಲಿದೆ. ತಿರುಪತ್ತೂರಿನಲ್ಲಿ 1921ರಲ್ಲಿ ಸ್ಥಾಪಿತವಾದ ಕ್ರಿಸ್ತಕುಲ ಆಶ್ರಮ ಇದಕ್ಕೊಂದು ಮುಖ್ಯ ಉದಾಹರಣೆ. ಅಷ್ಟೇ ಅಲ್ಲ, ಕ್ರೈಸ್ತ ತತ್ತ್ವ ನಿರೂಪಣೆಯಲ್ಲಿ ಭಾರತದ ವಿಚಾರ ಸರಣಿಯನ್ನು ಉಪಯೋಗಿಸುವುದರ ಮೂಲಕವೂ ಸಭೆಯ ಸಾಮೂಹಿಕ ಆರಾಧನೆಗಳಲ್ಲಿ ದೇಶೀಯ ಭಜನೆ, ಸಂಗೀತ ಮೊದಲಾದವನ್ನು ಬಳಕೆಗೆ ತರುವುದರ ಮೂಲಕವೂ ಕ್ರೈಸ್ತ ಧರ್ಮ ತನ್ನ ತಿರುಳನ್ನು ಕಾಪಾಡಿಕೊಂಡೇ ಭಾರತೀಯ ಸಂಸ್ಕೃತಿಯಲ್ಲಿ ಬೇರು ಬಿಡಲು ಹೆಚ್ಚಿನ ಪ್ರಯತ್ನ ಮಾಡುತ್ತಲಿದೆ. ಜಾತಿ ಮತ ಭೇದಗಳಿಲ್ಲದೆ ಸ್ನೇಹ, ಪ್ರೀತಿ, ಅನ್ಯೋನ್ಯತೆಗಳನ್ನು ಕ್ರಿಸ್ತನ ಸಂದೇಶದ ಆಧಾರದ ಮೇಲೆಕಟ್ಟುವ ಮನಸ್ಸು, ಜನಜೀವನದಲ್ಲಿ ಜವಾಬ್ದಾರಿಯಿಂದ ಭಾಗವಹಿಸುವ ಧೋರಣೆ– ಇವನ್ನು ಭಾರತದ ಸಭೆಯಲ್ಲೀಗ ಹೆಚ್ಚು ಹೆಚ್ಚಾಗಿ ಕಂಡುಕೊಳ್ಳಬಹುದು. ಒಟ್ಟಾರೆ ಹೇಳುವುದಾದರೆ ಕ್ರೈಸ್ತ ಧರ್ಮ ಭಾರತದಲ್ಲಿ ಬೇರೂರಿ ಇತರ ಧರ್ಮಗಳ ಮಧ್ಯೆ ಮನ್ನಣೆಯ ಸ್ಥಾನವನ್ನು ಗಳಿಸಿಕೊಂಡಿದೆ. (ಎಸ್.ಜೆ.ಎಸ್.; ಡಿ.ವಿ.ಡಬ್ಲ್ಯು.)

**ಕ್ರೈಸ್ತ ಪಾಷಂಡವಾದ :** ಕ್ರಿಸ್ತ ತೋರಿಕೆಗೆ ಮಾನವ; ಆತನ ಹುಟ್ಟು, ಜೀವನ, ವೇದನಾನುಭವ–ಎಲ್ಲ ತೋರಿಕೆಯದು ಮಾತ್ರ ಎಂಬ ವಾದಕ್ಕೆ ಈ ಹೆಸರಿದೆ(ಡೊಸಿಟಿಸಂ). ಈ ವಾದದ ಅನುಯಾಯಿಗಳಲ್ಲಿ ಕೆಲವರು ಕ್ರಿಸ್ತನಲ್ಲಿ ಮಾನವ ಸ್ವಭಾವವಿತ್ತೆಂಬುದನ್ನು ನಿರಾಕರಿಸಿದರೆ, ಇನ್ನು ಕೆಲವರು ಅವನಿಗೆ ಮಾನವ ದೇಹವಿತ್ತು, ಅವನು ಹುಟ್ಟಿದ್ದು ನಿಜ ಎಂಬ ವಿಷಯವನ್ನೇ ಅಲ್ಲಗಳೆದರು. ಈ ವಾದ ಕ್ರೈಸ್ತಧರ್ಮದಷ್ಟೇ ಪುರಾತನದ್ದು. ಅಧ್ಯಾತ್ಮರಹಸ್ಯ ಜ್ಞಾನವಾದದಲ್ಲಿ (ನಾಸ್ಟಿಸಿಸಂ) ಇದರ ಮೂಲವಿದೆಯೆನ್ನಲಾಗಿದೆ. ಕ್ರಿಸ್ತನ ಶಿಷ್ಯ ಸಂತ ಯೋಹಾನನೇ ತನ್ನ ಬರೆಹಗಳಲ್ಲಿ ಈ ವಾದವನ್ನು ಉಲ್ಲೇಖಿಸಿ ಖಂಡಿಸಿದ್ದಾನೆ. (ಡಿ.ವಿ.ಡಬ್ಲ್ಯು.)

**ಕ್ರೈಸ್ತಮಠ :** ಸಾಮಾನ್ಯವಾಗಿ ಕ್ರೈಸ್ತವಿರಕ್ತರು ಇರುವ ಸ್ಥಳಕ್ಕೆ ಈ ಹೆಸರಿದೆ. ಕ್ರಮೇಣ ಆಬಟ್ (ಮಠಾಧಿಪತಿ) ಅಥವಾ ಆಬೆಸ್ (ಸಂನ್ಯಾಸಿನಿ) ಅಧಿಕಾರಕ್ಕೊಳಪಟ್ಟವಕ್ಕೆ ಮಾತ್ರ ಕ್ರೈಸ್ತಮಠ(ಆಬೆ) ಎಂಬ ಹೆಸರು ಉಳಿದು ಬಂತು. ಕ್ರೈಸ್ತಮಠವೆನಿಸಿಕೊಳ್ಳಬೇಕಾದರೆ ಅದು ಸ್ವಯಮಾಡಳಿತ ಸಂಸ್ಥೆಯಾಗಿದ್ದು ಧರ್ಮಸಭೆಯ ನಿಯಮಾವಳಿಯನುಸಾರ ಸ್ಥಾಪಿತವಾಗಿರಬೇಕು. ಅದರಲ್ಲಿಯ ಸಂನ್ಯಾಸಿಗಳ ಸಂಖ್ಯೆ ಹನ್ನೆರಡಕ್ಕೆ ಕಡಿಮೆ ಇರಬಾರದು. ಮೊದಮೊದಲು ಮಠದ ಸ್ಥಾಪಕನ ಅಥವಾ ಮಠವಿದ್ದ ಪ್ರದೇಶದ ಅಥವಾ ಮಠದ ಪ್ರತಿಷ್ಠಿತ ಸಂನ್ಯಾಸಿಯೊಬ್ಬನ ಅಥವಾ ಮಠವಿದ್ದ ಪ್ರದೇಶದ ಅಥವಾ ಮಠದ ಪ್ರತಿಷ್ಠಿತ ಸನ್ಯಾಸಿಯೊಬ್ಬನ ಹೆಸರೇ ಮಠಕ್ಕೂ ಇರುತ್ತಿತ್ತು. ಅನಂತರ ಕ್ರೈಸ್ತಸಂತನೊಬ್ಬನ ಹೆಸರನ್ನು ಮಠಕ್ಕೆ ಕೊಡುವ ರೂಢಿ ಪ್ರಾರಂಭವಾಯಿತು.

ಪ್ರಾರಂಭದಲ್ಲಿ ಸಂನ್ಯಾಸಿಗಳು ಸಾಮಾನ್ಯವಾಗಿ ನಿಸರ್ಗದತ್ತ ಗವಿಗಳನ್ನೋ ಶ್ಮಶಾನದ ಗೋರಿಗಳನ್ನೋ ಸ್ವಯಂನಿರ್ಮಿತ ಗುಡಿಸಲುಗಳನ್ನೋ ತಮ್ಮ ವಾಸಸ್ಥಾನವನ್ನಾಗಿ ಆರಿಸುತ್ತಿದ್ದರು. ಕೆಲವರು ನಗರಗಳಲ್ಲಿಯೇ ಮಠಗಳನ್ನು ಸ್ಥಾಪಿಸಿದ ದೃಷ್ಟಾಂತಗಳೂ ಇವೆ. ಕೆಲವೊಮ್ಮೆ ನಿರ್ಜನವಾಗಿದ್ದ ಮಠದ ಪ್ರದೇಶಗಳು ಶಿಷ್ಯವರ್ಗದ ನೆಲಸುವಿಕೆಯಿಂದಾಗಿ ಜನನಿಬಿಡಪ್ರದೇಶಗಳಾದ ನಿದರ್ಶನಗಳಿವೆ. ನಿದರ್ಶನವಾಗಿ ವೆಸ್ಟ್‌ಮಿನ್ಸ್ಟರ್ ಆಬೆಯನ್ನು ನೋಡಬಹುದು. 616ರ ಸುಮಾರಿಗೆ ಕೇವಲ ಒಂದು ಸಣ್ಣ ಮಠವಿದ್ದ ಜಾಗದಲ್ಲಿ ಈಗ ಬಹುಸುಂದರವಾದ ಗಾಥಿಕ್ ಭವನವೊಂದು ನಿರ್ಮಿತವಾಗಿದೆ.

ಕ್ರೈಸ್ತಧರ್ಮ ಪೂರ್ವದಲ್ಲಿಯೇ ಯೆಹೂದ್ಯರಲ್ಲಿ ಎಸ್ಸೇನೀಸ್ ಎಂಬ ಸಂನ್ಯಾಸಿಗಳ ಮಠಗಳು ಇದ್ದುವೆಂದು ತಿಳಿದುಬಂದಿದೆ. ಕ್ರೈಸ್ತಧರ್ಮದ ಅತ್ಯಂತ ಪುರಾತನ ಮಠಗಳ ಉಗಮ ಹೀಗಿದೆ: ಯಾವನಾದರೊಬ್ಬ ಸನ್ಯಾಸಿ ನಿರ್ಜನಪ್ರದೇಶದಲ್ಲಿ ಜಪ ಧ್ಯಾನ ತಪಸ್ಸಿನಲ್ಲಿ ನಿರತನಾಗಿದ್ದುದನ್ನು ಕಂಡಾಗ ಜನ ಆಕರ್ಷಿತರಾಗಿ ಆತನ ಸಂದೇಶ, ಉಪದೇಶ ಮತ್ತು ಜೀವನದ ರೀತಿನೀತಿಗಳನ್ನು ಅರಿತು ಅನುಸರಿಸಲು ಅವನ ಸುತ್ತಲೂ ಸೇರುತ್ತಿದ್ದರು. ಯಾವ ನಿಶ್ಚಿತಯೋಜನೆಯೂ ಇಲ್ಲದೆ ಮೂಲ ಗುಡಿಸಿಲಿನ ಸುತ್ತಲು ಇತರ ಗುಡಿಸಿಲುಗಳನ್ನು ನಿರ್ಮಿಸುತ್ತಿದ್ದರು. ಹೀಗೆ ಸೇರಿದ ಶಿಷ್ಯರ ಸಂಖ್ಯೆ ಬೆಳೆದಂತೆಲ್ಲ ಮಠದ ಶಾಖೋಪಶಾಖೆಗಳು ಬೆಳೆಯುತ್ತಿದ್ದವು. ಮಠಗಳ ವಿಸ್ತರಣೆ ಆದದ್ದು ಹೀಗೆ. ಕೆಲವೊಮ್ಮೆ ಒಂದು ಪ್ರದೇಶದ ಧರ್ಮಾಧ್ಯಕ್ಷರು ಅಥವಾ ದೊರೆಗಳು ಅಥವಾ ಕುಲೀನ ಶ್ರೀಮಂತರು ಮಠಗಳನ್ನು ಸ್ಥಾಪಿಸಿ ಅವುಗಳಿಗಾಗಿ ಧಾರಾಳ ದತ್ತಿಗಳನ್ನು ಕೊಡುತ್ತಿದ್ದರು. ಪ್ರ.ಶ.451ರಲ್ಲಿ ನಡೆದ ಕ್ರೈಸ್ತಧರ್ಮದ ವಿಶ್ವಸಮ್ಮೇಳನ ಮಠಗಳನ್ನು ಸ್ಥಾಪಿಸಲು ಧರ್ಮಾಧ್ಯಕ್ಷರ ಅಧಿಕೃತ ಅನುಮತಿಯನ್ನು ಪಡೆಯಬೇಕೆಂಬ ನಿಯಮವನ್ನು ಮಾಡಿತು.

ಜೋಡಿಮಠಗಳು ಸಹ ಕೆಲವು ಪ್ರದೇಶಗಳಲ್ಲಿ ಇದ್ದುವು. ಸಂನ್ಯಾಸಿ–ಸಂನ್ಯಾಸಿನಿಯರು ಒಂದೇ ಅಧಿಕಾರಿಯ ಕೈಕೆಳಗೆ ಒಂದೇ ಮಠದಲ್ಲಿ ಇದ್ದುದುಂಟು. ಸ್ತ್ರೀ–ಪುರುಷರು ಒಂದೇ ಕಡೆಯಲ್ಲಿ ಇರುವುದರಿಂದ ಅಪ್ರಯಾಸವಾಗಿ ಉಂಟಾಗಬಹುದಾಗಿದ್ದ ಅಕ್ರಮಗಳನ್ನು ತಡೆಗಟ್ಟಲು ತೀವ್ರ ವಿಧಾನಗಳಿದ್ದುವು. ಜಸ್ಟಿನಿಯನ್ ಚಕ್ರವರ್ತಿ ಇಂಥ ಮಠಗಳನ್ನು ರದ್ದು ಮಾಡಿದನಾದರೂ ಇಂಗ್ಲೆಂಡ್, ಫ್ರಾನ್ಸ್ ಮತ್ತು ಸ್ಪೇನ್‌ಗಳಲ್ಲಿ ಅವು ಕೆಲಕಾಲ ಮುಂದುವರಿದುವು.

ಗುಹೆ, ಗೋರಿ, ಗುಡಿಸಿಲುಗಳಷ್ಟೇ ಸೀಮಿತವಾಗಿದ್ದ ಪ್ರಾಚೀನ ಮಠಗಳು ಸಂನ್ಯಾಸಿಗಳ ಸಂಖ್ಯೆ ಬೆಳೆದಂತೆಲ್ಲ ಸುಸಜ್ಜಿತವೂ ವಿಶಾಲವೂ ಆಗುತ್ತ ಬಂದುವು. ಮಠದ ಸದಸ್ಯರೆಲ್ಲರೂ ಒಬ್ಬ ಹಿರಿಯನ ಅಧಿಕಾರಕ್ಕೆ ಒಳಪಟ್ಟು ನಿರ್ದಿಷ್ಟ ನಿಯಮಗಳಿಗನುಸಾರ ಬಾಳುವ ಪದ್ಧತಿ ರೂಢಿಗೆ ಬಂತು. ಕಟ್ಟಡಗಳ ರಚನೆಯಲ್ಲೂ ನಿರ್ದಿಷ್ಟ ರೂಪುರೇಖೆಗಳು ಬಳಕೆಗೆ ಬಂದುವು.

ಪಾಶ್ಚಾತ್ಯ ದೇಶಗಳಲ್ಲಿ ಮಠಗಳ ಪ್ರಾಬಲ್ಯಕ್ಕೆ ಮುಖ್ಯ ಕಾರಣಕರ್ತ ಸಂತಬೆನೆಡಿಕ್ಟ್ (480–543) ಎಂಬ ಪ್ರಸಿದ್ಧ ಸಂನ್ಯಾಸಿ, ಈತ ಹಾಕಿ ಕೊಟ್ಟ ಸಂನ್ಯಾಸಿಗಳ ನಿಯಮಾವಳಿ ಬಹುಬೇಗ ಜನಪ್ರಿಯವಾಯಿತು. 520–700 ರ ತನಕ ಬಹಳ ಮಠಗಳು ಸ್ಥಾಪಿತವಾದುವು. 1415ರಲ್ಲಿ ಬೆನೆಡಿಕ್ಟನ ನಿಯಮಾವಳಿಯನ್ನು ಪಾಲಿಸುತ್ತಿದ್ದ ಮಠಗಳ ಸಂಖ್ಯೆ 15,000ಕ್ಕೂ ಹೆಚ್ಚಿತ್ತೆಂದು ತಿಳಿದುಬರುತ್ತದೆ.

ಸಂತ ಬೆನೆಡಿಕ್ಟ್ ತನ್ನ ನಿಯಮಾವಳಿಯಲ್ಲಿ ಮಠದ ಕಟ್ಟಡದ ಯೋಜನೆಯ ರೂಪುರೇಖೆಗಳನ್ನು ಸಹ ಸೂಕ್ಷ್ಮವಾಗಿ ನಿರೂಪಿಸಿದ್ದಾನೆ. ಪ್ರಾರ್ಥನಾಲಯ, ಶಯ್ಯಾಗೃಹ, ಭೋಜನಾಲಯ, ಅಡುಗೆ ಮನೆ, ಕಾರ್ಯಾಗಾರಗಳು, ನೆಲಮಾಳಿಗೆಗಳು, ರೋಗಿಗಳಿಗೆ ವಿರಾಮಧಾಮ, ಅತಿಥಿಗೃಹ ಮತ್ತು ಗೋಷ್ಠಿಗಾಗಿ ಪ್ರಧಾನ ಕೊಠಡಿ ಇವೆಲ್ಲವೂ– ಆದರ್ಶಮಠದಲ್ಲಿ ಇರುತ್ತಿದ್ದವು. ಚೌಕಾಂಗಳದಲ್ಲಿ ಈ ಕಟ್ಟಡಗಳು ಇರುತ್ತಿದ್ದು, ಉತ್ತರದಲ್ಲಿ

ದೇವಾಲಯ, ಸಂನ್ಯಾಸಿಗಳ ಸಾಮೂಹಿಕ ಪ್ರಾರ್ಥನಾಲಯಗಳೂ ಪಶ್ಚಿಮದಲ್ಲಿ ಗುರುಗೃಹ ಮತ್ತು ಕಿರುದೇವಾಲಯಗಳೂ ಇರುತ್ತಿದ್ದವು. ಗ್ರಂಥಗಳ ಸಂಖ್ಯೆ ಬೆಳೆದಂತೆ ಪುಸ್ತಕ ಭಂಡಾರ, ಅನಂತರ ಭೇಟಿ ಕೊಠಡಿ ವ್ಯವಹಾರಗಳ ಕೊಠಡಿ ಇತ್ಯಾದಿಗಳು ನಿರ್ಮಾಣ ವಾಗತೊಡಗಿದುವು.

ಕಾರ್ಥುಜಿಯನ್ ಮಠದ ಕಟ್ಟಡದ ಯೋಜನೆ ಸಾಮಾನ್ಯ ಮಠದದ್ದಕ್ಕಿಂತ ಭಿನ್ನವಾಗಿರುತ್ತದೆ. ಅಲ್ಲಿಯ ಸಂನ್ಯಾಸಿಗಳು ಏಕಾಂತ ಯೋಗಿಗಳಾದ್ದರಿಂದ ಪ್ರತಿಯೊಬ್ಬನ ನಿವಾಸವೂ ಮೂರು ಕೊಠಡಿಗಳನ್ನೊಳಗೊಂಡ ಒಂದು ಗುಡಿಸಿಲಿನಂತಿರುತ್ತದೆ. ದೇವಾಲಯದಲ್ಲಿ ಧಾರ್ಮಿಕ ಕಾರ್ಯಕ್ರಮವಿದ್ದಾಗ ಮತ್ತು ಕೆಲವೊಮ್ಮೆ ಎಲ್ಲ ಸಂನ್ಯಾಸಿಗಳೂ ಭೋಜನಾಲಯದಲ್ಲಿ ಒಟ್ಟು ಸೇರುವಾಗ ಮಾತ್ರ ಈ ಏಕಾಂತ ಯೋಗಿಗಳು ತಮ್ಮ ಗುಡಿಸಿಲಿನಿಂದ ಹೊರಬರುತ್ತಿದ್ದರು. ಚೌಕಾಂಗಳದ ಮೂರು ಪಕ್ಕಗಳಲ್ಲಿ ಇಂಥ ನಿವಾಸ ಸ್ಥಾನಗಳಿದ್ದು, ನಾಲ್ಕನೆಯ ಪಕ್ಕದಲ್ಲಿ ದೇವಾಲಯ, ಭೋಜನಶಾಲೆ, ಗೋಷ್ಠಿಗೃಹ ಹಾಗೂ ಇತರ ಕೊಠಡಿಗಳಿರುತ್ತವೆ.

ಮಠಗಳ ಸುತ್ತಲೂ ಇರುವ ಎತ್ತರವಾದ ಪ್ರಾಕಾರಗಳು ಸಂಸಾರಿಗಳ ಪ್ರವೇಶಕ್ಕೂ ಅನುಮತಿ ಇಲ್ಲದೆ ಸಂನ್ಯಾಸಿಗಳ ನಿಷ್ಕ್ರಮಣಕ್ಕೂ ತಡೆಯಾಗಿದ್ದುವು. ಮಠವನ್ನು ಬಾಹ್ಯಜಗತ್ತಿನಿಂದ ಬೇರ್ಪಡಿಸುತ್ತಿದ್ದ ಈ ಎತ್ತರವಾದ ಗೋಡೆಗಳಿಗೆ ಹಿಂದಿನ ಕಾಲದ ಮಠದ ನಿವಾಸಿಗಳು ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿದ್ದರು. ಪುರುಷರ ಮಠದೊಳಗೆ ಸ್ತ್ರೀಯರಿಗೆ ಪ್ರವೇಶ ನಿಷಿದ್ಧವಾಗಿತ್ತು. ಸ್ತ್ರೀಯರ ಮಠಗಳೊಳಗಡೆ ಪುರುಷರಿಗೆ ಪ್ರವೇಶಾವಕಾಶವಿರಲಿಲ್ಲ. ಪ್ರವೇಶ ಅತ್ಯವಶ್ಯವಿದ್ದಾಗ ವಿಶೇಷ ವ್ಯವಸ್ಥೆ ಮಾಡಬೇಕಾಗಿತ್ತು. ಅನುಭವಸ್ಥ ಸಂನ್ಯಾಸಿಯೊಬ್ಬ ದ್ವಾರಪಾಲಕನಾಗಿ ಹಾಗೂ ಒಳಹೊರಗಿನವರೊಡನೆ ಸಂಪರ್ಕ ಏರ್ಪಡಿಸುವ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದ.

ಅತಿ ಪುರಾತನ ಕಾಲದಿಂದಲೂ ಮಠಗಳು ಅತಿಥಿ ಸತ್ಕಾರಕ್ಕೆ ಪ್ರಸಿದ್ಧಿ ಪಡೆದಿವೆ. ಮಠಗಳಲ್ಲಿ ಕುದುರೆ ಲಾಯ, ಆಸ್ಪತ್ರೆಗಳು, ಅತಿಥಿ ಗೃಹಗಳು, ಅತಿಥಿಗಳ ಉಪಚಾರಕ್ಕೆಂದೇ ಕಾಲಕ್ರಮೇಣ ನಿರ್ಮಿಸಿದ್ದಾಗಿವೆ.

ಮಠಗಳು ಮೊದಲಿನಿಂದಲೂ ಸ್ವಸಂಪೂರ್ಣವಾಗಿದ್ದು ತಮ್ಮಲ್ಲಿಯೇ ಬೇಸಾಯ, ತೋಟಗಾರಿಕೆಗಳನ್ನು ಇಟ್ಟುಕೊಂಡಿದ್ದುವು. ಕಲೆಗಳ ವ್ಯಾಸಂಗ, ಹಸ್ತಪ್ರತಿ ಮಾಡುವ ಕಾರ್ಯ, ಹೊಲಿಗೆ, ಪಾದರಕ್ಷೆಗಳ ಕಸಬು, ಮರಗೆಲಸ, ರೊಟ್ಟಿ ಮಾಡುವುದು ಇತ್ಯಾದಿ ಕೆಲಸ ಕಾರ್ಯಗಳಿಗೆ ಮಠದಲ್ಲಿ ಅವಕಾಶ ಕಲ್ಪಿಸಲಾಗುತ್ತಿತ್ತು. ಪ್ರತಿಯೊಂದು ಮಠವೂ ಒಂದು ಪುಟ್ಟ ನಗರವೇ ಆಗಿತ್ತು.

ಆಧುನಿಕ ಕಾಲಧರ್ಮಕ್ಕನುಗುಣವಾಗಿ, ಆವಶ್ಯಕತೆಗಳಿಗನುಗುಣವಾಗಿ ಮಠಗಳ ಕಟ್ಟಡಗಳಲ್ಲಿ, ಸಂನ್ಯಾಸಿಗಳ ಜೀವನ ವಿಧಾನದಲ್ಲಿ, ನಿಯಮಾವಳಿಗಳಲ್ಲಿ ಮೂಲೋದ್ದೇಶಕ್ಕೆ ಭಂಗಬಾರದಂತೆ ಯಥೋಚಿತ ಮಾರ್ಪಾಟುಗಳನ್ನು ಮಾಡಲಾಗಿದೆ. (ಡಿ.ವಿ.ಡಬ್ಲ್ಯು)

**ಕ್ರೈಸ್ತರ ಮದುವೆ :** ಸಾಮಾನ್ಯವಾಗಿ ಕ್ರೈಸ್ತರ ಮದುವೆ ಸಂಪ್ರದಾಯ ಸ್ವಭಾವ ಸಿದ್ಧವಾದ ಸೂತ್ರಗಳನ್ನು ಅನುಸರಿಸುತ್ತದಾದರೂ ಕೆಲವು ವಿಷಯಗಳಲ್ಲಿ ತೀರ ಪ್ರಾಚೀನ ಮತ್ತು ತೀರ ಆಧುನಿಕ ಪದ್ಧತಿಗಳಿಂದ ಬೇರೆಯಾಗಿದೆ. ಮುಖ್ಯವಾಗಿ ಸ್ತ್ರೀಯರಿಗೆ ಪುರುಷರೊಂದಿಗೆ ಸಮಾನ ಸ್ಥಾನವನ್ನು ಕೊಡುವುದೂ ಅಲ್ಲದೆ ಮದುವೆಯ ಸಂಬಂಧಕ್ಕೆ ಬಿಡುಗಡೆ (ವಿಚ್ಛೇದ) ಇಲ್ಲವೆಂತಲೂ ಇದು ಒತ್ತಿ ಹೇಳುತ್ತದೆ.

ಮದುವೆಯ ಸಂಬಂಧವನ್ನು ಪರಿತ್ಯಾಗ ಪತ್ರದ ಮೂಲಕ ರದ್ದು ಮಾಡಿಕೊಳ್ಳುವ ಯೆಹೂದ್ಯ ಪದ್ಧತಿಯನ್ನು ಯೇಸುಕ್ರಿಸ್ತ ಖಂಡಿಸಿ ದೇವರು ಆದಿಯಲ್ಲಿ ಅದಕ್ಕೆ ನಿರ್ಣಯಿಸಿದ ಉನ್ನತ ಸ್ಥಾನವನ್ನೇ ಸ್ಥಾಪಿಸಿ, ತಾನು ಮಾಡಿದ ಕಾರ್ಯಗಳಿಂದಲೂ ತನ್ನ ಬೋಧನೆಯಿಂದಲೂ ಮದುವೆ ಎಷ್ಟು ಪವಿತ್ರವಾದುದೆಂಬುದನ್ನು ತಿಳಿಯಪಡಿಸಿದ. ಮದುವೆಯ ಸಂಬಂಧದ ಪವಿತ್ರ ಸ್ವಭಾವವನ್ನು ಪ್ರಸ್ತಾಪಿಸುತ್ತ ಸಂತಪಾಲ್ ಅದು ಸಭೆಯ ಪವಿತ್ರಸಂಸ್ಕಾರಗಳಲ್ಲಿ ಒಂದಾಗಿರತಕ್ಕದ್ದೆಂದು ಸೂಚಿಸಿದ್ದಾನೆ. ಈಗಲೂ ಮದುವೆಯ ವಿಷಯದಲ್ಲಿ ಧರ್ಮಸಭೆಯ ಪಾತ್ರ ಹಿರಿಯದೇ ಆಗಿದೆ. ಸಿವಿಲ್ ಮದುವೆ, ವಿವಾಹ ವಿಚ್ಛೇದ ಇವೆಲ್ಲ ಇತ್ತೀಚಿನವು. (ಎಚ್.ಡಿ.ಎಲ್.ಎ.)

**ಕ್ರೈಸ್ತವೇದಪ್ರಾಮಾಣ್ಯವಾದ :** ಹೆಸರೇ ತಿಳಿಸುವಂತೆ ಬೈಬಲಿನ ಮೂಲಭೂತ ಉಪದೇಶಗಳ ಪ್ರಾಮಾಣ್ಯವನ್ನು ಎತ್ತಿಹಿಡಿಯಲು ಪ್ರಯತ್ನಿಸಿದ ಒಂದು ಸಾಂಪ್ರದಾಯಿಕ ಕ್ರೈಸ್ತಮತಸಂಸ್ಥೆ(ಫಂಡಮೆಂಟಲಿಸಂ). ಪ್ರಾಟೆಸ್ಟಂಟ್ ವಿಭಾಗದ ಹಲವು ಶಾಖೆಗಳಲ್ಲೊಂದು. 20ನೆಯ ಶತಮಾನದ ಆದಿಯಲ್ಲಿ ಇದು ಅವಿರ್ಭವಿಸಿತೆನ್ನಲಾಗಿದೆ. ಬೈಬಲನ್ನು ಐತಿಹಾಸಿಕ ಹಾಗೂ ಭಾಷಿಕ ವಿಶ್ಲೇಷಣೆಗೆ ಗುರಿ ಮಾಡುತ್ತಿದ್ದುದನ್ನು ಈ ಸಂಸ್ಥೆ ಖಂಡಿಸಿತಲ್ಲದೆ ಆಗ ತಾನೆ ವಿಶೇಷ ಪ್ರಾಮುಖ್ಯಕ್ಕೆ ಬರುತ್ತಿದ್ದ ವೈಜ್ಞಾನಿಕ ಆವಿಷ್ಕರಣಗಳ ವಿರುದ್ಧವಾಗಿ ಬೈಬಲಿನ ನಂಬಿಕೆಗಳನ್ನು ಮತ್ತೆ ಸ್ಥಾಪಿಸುವ ಉದ್ದೇಶದಿಂದ ಕೆಲಸ ಮಾಡಿತು. ಪ್ರಾರಂಭದಲ್ಲಿ ಈ ಬಗ್ಗೆ ತೀರ ಕಟುವಾದ ಚರ್ಚೆಗಳೇ ಆದುವು. ದೇಶದ ಕಾನೂನಿಗೆ ವಿರುದ್ಧವಾಗಿ ಡಾರ್ವಿನನ ವಾದವನ್ನು ಮಂಡಿಸಿದನೆಂಬ ಆಪಾದನೆಯ ಮೇಲೆ ಜುಲೈ 1925ರಲ್ಲಿ ಜಾನ್ ಟಿ.ಸ್ಕೋಪ್ಸ್ ಎಂಬಾತನನ್ನು ವಿಚಾರಣೆಗೆ ಗುರಿ ಮಾಡಿದಾಗ ಕ್ರೈಸ್ತವೇದಪ್ರಾಮಾಣ್ಯವಾದದ ವಕ್ತಾರರಲ್ಲೊಬ್ಬನಾದ ವಿಲಿಯಂ ಜೆನಿಂಗ್ಸ್ ಬ್ರಯನ್ ಎಂಬಾತ ದೇಶದ ಪರ ವಾದಿಸಿ ಗೆದ್ದನೆನ್ನಲಾಗಿದೆ. (ಡಿ.ವಿ.ಡಬ್ಲ್ಯು.)

**ಕ್ರೈಸ್ತ ಸಮತಾವಾದ :** ಕ್ರೈಸ್ತ ಧರ್ಮದಲ್ಲಿ ಹೇಳಿರುವ ಸಾಮಾಜಿಕ ಧಾರ್ಮಿಕ ರೀತಿನೀತಿಗಳನ್ನು ಅನುಸರಿಸಿ ಹುಟ್ಟಿಕೊಂಡ ಅನೇಕ ಸಮಾಜವಾದಿ ಧೋರಣೆಗಳಿಗೆ ಈ ಹೆಸರಿದೆ (ಕ್ರಿಶ್ಚನ್ ಸೋಷಿಯಲಿಸಂ). ಸಮತಾವಾದದ ಮುನ್ಸೂಚನೆಗಳು ಕ್ರೈಸ್ತಧರ್ಮದ ಆರಂಭಕಾಲದಲ್ಲಿ ಏರ್ಪಟ್ಟ ಕ್ರೈಸ್ತಭ್ರಾತೃವರ್ಗ, ಕ್ರೈಸ್ತಮಿತ್ರ ಮಂಡಲಿಗಳಲ್ಲೂ ಮಧ್ಯಯುಗದ ತೀವ್ರಗಾಮಿ ಕ್ರೈಸ್ತ ಗುಂಪುಗಳಲ್ಲೂ 17ನೆಯ ಶತಮಾನದ ಸುಧಾರಿತ ಪ್ರಾಟೆಸ್ಟಂಟ್ ಎಡಪಕ್ಷದಲ್ಲೂ ಕಂಡುಬರುತ್ತವೆ. ಕ್ರಿಶ್ಚನ್ ಸೋಷಿಯಲಿಸಂ ಎಂಬ ಪದ ಮೊತ್ತಮೊದಲಿಗೆ ಉಪಯೋಗವಾದದ್ದು ಆಂಗ್ಲೇಯರಾದ ಜೆ.ಎಫ್.ಡಿ ಮಾರಿಸ್, ಕಾದಂಬರಿಕಾರ ಚಾರಲ್ಸ್ ಕಿಂಗ್ಸ್ಲಿ, ಜೆ.ಎಂ ಲಡ್‌ಲೊ ಮುಂತಾದವರ ಭಾಷಣಗಳಲ್ಲಿ ಮತ್ತು ಬರವಣಿಗೆಗಳಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಕೆಲಸಗಾರರ ಸಮಾಜವನ್ನು ಕ್ರೈಸ್ತ ಸಾಮ್ರಾಜ್ಯವನ್ನಾಗಿ ಮಾರ್ಪಡಿಸುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಶ್ರಮಜೀವಿಗಳು ಗೊಣಗದಂತೆ ಅವರನ್ನು ಶಮನಮಾಡುವ ಒಂದು ಬಗೆಯ ಅಫೀಮು ಈ ಕ್ರೈಸ್ತಧರ್ಮ ಎಂದು 1844ರಲ್ಲಿ ಕಾರ್ಲ್ ಮಾರ್ಕ್ಸ್ ಸಾರಿದ. ನಾಲ್ಕು ವರ್ಷಗಳ ಅನಂತರ ಅದಕ್ಕೆ ಪ್ರತಿಯಾಗಿ ಕಿಂಗ್ಸ್ಲಿ ಮತಧರ್ಮ ಎಂಬುದು ಬಡವರಲ್ಲಿ ಸಹನೆ ಮೂಡಿಸಲು ಏರ್ಪಟ್ಟ ಅಫೀಮಲ್ಲವೆಂದು ಘೋಷಿಸಿದ. ಸಾಂಪ್ರದಾಯಿಕ ಧರ್ಮಸಭೆಗಳು(ಚರ್ಚ್) ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಬಡವರಿಗೆ ಆಗುತ್ತಿದ್ದ ಅನ್ಯಾಯವನ್ನು ಕಣ್ಣಾರ ಕಂಡರೂ ಉದಾಸೀನರಾಗಿರುವುದನ್ನು ಕಿಂಗ್ಸ್ಲಿ ಮತ್ತು ಇತರ ದೀನಬಂಧುಗಳು ತೀವ್ರವಾಗಿ ಖಂಡಿಸಿದರು. ಯೇಸು ಬೋಧಿಸಿದ ಸ್ವಾರ್ಥತ್ಯಾಗ, ಸಹಕಾರ, ಭ್ರಾತೃಭಾವನೆಗಳು ಬರಿಯ ಬಾಯಿಮಾತುಗಳಾಗದೆ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಕಾರ್ಯಕಾರಿಗಳಾಗಬೇಕೆಂದು ವಾದಿಸಿದರು. ಸಹಕಾರ ಸಂಘಗಳನ್ನು ಸ್ಥಾಪಿಸಿದುದಲ್ಲದೆ ಕೈಗಾರಿಕೆಗಳ ಮಾಲೀಕರನ್ನು ಅವರು ಗಳಿಸಿದ ಲಾಭದಲ್ಲಿ ಗೊತ್ತಾದ ಭಾಗವನ್ನು ಕೆಲಸಗಾರರಲ್ಲಿ ಹಂಚಬೇಕೆಂದು ಒತ್ತಾಯಪಡಿಸಿದರು. ಕೆಲಸಗಾರರ ಹಿತಸಾಧನೆಗಾಗಿ ಒಂದು ಸಮಿತಿಯನ್ನು ಸ್ಥಾಪಿಸಿದರು. ಇಷ್ಟೆಲ್ಲ ಪ್ರಯತ್ನದ ಪರಿಣಾಮವಾಗಿ 1852ರಲ್ಲಿ ಇಂಡಸ್ಟ್ರಿಯಲ್ ಅಂಡ್ ಪ್ರಾವಿಡೆಂಟ್ ಪಾರ್ಟ್ನರ್‌ಶಿಪ್ ಮಸೂದೆ ಪಾರ್ಲಿಮೆಂಟಿನ ಒಪ್ಪಿಗೆ ಪಡೆಯಿತು. ಕೆಲಸಗಾರರ ವಿದ್ಯಾಭ್ಯಾಸಕ್ಕಾಗಿ ಲಂಡನಿನಲ್ಲಿ 1859ರಲ್ಲಿ ವರ್ಕಿಂಗ್‌ಮೆನ್ಸ್ ಕಾಲೇಜನ್ನು ಸ್ಥಾಪಿಸಿದರು. 1877ರಲ್ಲಿ ಸ್ಟೂವರ್ಟ್ ಹೆಡ್‌ಲ್ಯಾಮ್ ಎಂಬಾತ ಸೇಂಟ್ ಮ್ಯಾಥ್ಯೂ ಗಿಲ್ಡ್ ಎಂಬ ಕೆಲಸಗಾರರ ಸಂಸ್ಥೆಯನ್ನು ಸ್ಥಾಪಿಸಿದ. ಇದರ ಮೂಲತತ್ತ್ವಗಳು ಬರ್ನಾರ್ಡ್ ಷಾನ ಫೇಬಿಯನ್ ಸೋಷಿಯಲಿಸಮ್ ಮತ್ತು ಮಾರಿಸ್‌ನ ಸಮತಾವಾದಕ್ಕೆ ಅನುಗುಣವಾದವು. ಸ್ವಲ್ಪಕಾಲದಲ್ಲೆ ಇವನ ಸಮತಾತತ್ತ್ವಕ್ಕೆ ಕ್ರೈಸ್ತಸಂಘಗಳ ಬೆಂಬಲ ದೊರೆಯಿತು. 1889ರಲ್ಲಿ ಕ್ರಿಶ್ಚನ್ ಸೋಷಿಯಲ್ ಯೂನಿಯನ್ ಎಂಬ ಸಂಸ್ಥೆಗಳು ಜನ್ಮತಾಳಿದುವು. ಹೀಗೆ ಕೆಲಸಗಾರರ ಹಿತಸಾಧನೆ ಕ್ರೈಸ್ತಧರ್ಮದ ಒಂದು ಮುಖ್ಯ ಅಂಶ ಎಂಬುದನ್ನು ಅನೇಕ ಚರ್ಚುಗಳು ಒಪ್ಪಿಕೊಂಡವು. ಇದುವರೆಗೆ ಮಾರ್ಕ್ಸ್‌ನ ಸಮತಾವಾದ ಕ್ರೈಸ್ತಧರ್ಮಕ್ಕೆ ವಿರುದ್ಧವೆಂಬ ಭಾವನೆ ಇತ್ತು. 1930ರಲ್ಲಿ ಫ್ರೀಚರ್ಚಿನ ಮುಖಂಡನಾದ ಜಾನ್ ಮ್ಯಾಕ್‌ಮರೆ ಕೆಲವು ಅಂಶಗಳಲ್ಲಿ ಕ್ರೈಸ್ತಧರ್ಮಕ್ಕೆ ಮಾರ್ಕ್ಸ್‌ವಾದ ಸಂಗತವೆಂದು ವಾದಿಸಿದ. ಇಂಗ್ಲೆಂಡಿನ ಕ್ರೈಸ್ತ ಸಮಾಜವಾದ ಕೆಲಸಗಾರರಿಗೆ ಹೆಚ್ಚು ಅನುಕೂಲವನ್ನು ಕಲ್ಪಿಸಲೂ ಕಾರ್ಖಾನೆಗಳು ಗಳಿಸಿದ ಲಾಭ ಕೆಲಸಗಾರರಲ್ಲಿ ಹಂಚಿಕೆಯಾಗಬೇಕೆಂದು ಒತ್ತಾಯಪಡಿಸಲೂ ಪ್ರಯತ್ನಿಸಿತೇ ಹೊರತು ಕೈಗಾರಿಕೆಗಳ ಮಾಲೀಕತ್ವವನ್ನು ಅವರಿಗೆ ದೊರಕಿಸಲು ಪ್ರಯತ್ನಿಸಲಿಲ್ಲ.

ಇಂಗ್ಲೆಂಡಿನಲ್ಲಿ ಹುಟ್ಟಿದ ಕ್ರೈಸ್ತಸಮತಾವಾದ ಫ್ರಾನ್ಸ್, ಜರ್ಮನಿ, ನಾರ್ವೆ, ಸ್ವೀಡನ್ ಮುಂತಾದ ಐರೋಪ್ಯ ದೇಶಗಳಿಗೂ ಅಮೆರಿಕಕ್ಕೂ ಹಬ್ಬಿತು. ಫ್ರಾನ್ಸಿನಲ್ಲಿ 1888ರಲ್ಲಿ ಸ್ಥಾಪಿತವಾದ ಪ್ರಾಟೆಸ್ಟಂಟ್ ಅಸೋಸಿಯೇಷನ್ ಫಾರ್ ದಿ ಪ್ರ್ಯಾಕ್ಟಿಕಲ್ ಸ್ಟಡಿ ಆಫ್ ಸೋಷಿಯಲ್ ಕ್ವಶ್ಚನ್ ಎಂಬ ಸಂಘ ಸಮಾಜಸುಧಾರಣೆಯ ಕಾರ್ಯದಲ್ಲಿ ಮಾತ್ರ ಆಸಕ್ತಿ ವಹಿಸಿತ್ತು. ಆದರೂ ಅದರ ಮುಖಂಡನಾದ ಟಿ.ಫ್ಯಾಲಟ್ ಸಮತಾವಾದವನ್ನು ಮೊತ್ತಮೊದಲಿಗೆ ಫ್ರಾನ್ಸ್ ದೇಶದಲ್ಲಿ ಸಾರಿದ. ಒಂದನೆಯ ಮಹಾಯುದ್ಧಾನಂತರ ಸಮತಾವಾದ ಫ್ರಾನ್ಸಿನಲ್ಲಿ ಬಲಗೊಂಡಿತು. 20ನೆಯ ಶತಮಾನದ ಮೂರನೆಯ ದಶಕದಲ್ಲಿ ಆಂಡ್ರಿ ಫಿಲಿಪ್ ಎಂಬ ಅರ್ಥಶಾಸ್ತ್ರಜ್ಞನೂ ಕ್ರೈಸ್ತಧರ್ಮ ಮೀಮಾಂಸಕನೂ ಕೆಲಸಗಾರರ ಮುಂದಾಳಾಗಿ ಅವರಲ್ಲಿ ಒಗ್ಗಟ್ಟನ್ನೂ ಕುದುರಿಸಿದ. ಜರ್ಮನಿಯಲ್ಲಿ 19ನೆಯ ಶತಮಾನದ ಕೊನೆಯ ಭಾಗದಲ್ಲಿ ಸಮಾಜವಾದವನ್ನು ಎತ್ತಿಹಿಡಿದವರು ಪ್ರಾಟೆಸ್ಟಂಟ್ ಪಂಗಡಕ್ಕೆ ಸೇರಿದ ರೂಡಾಲ್ಫ್ ಟಾಡ್ಟ್ ಮತ್ತು ಫ್ರೆಡರಿಚ್ ನಾಮನ್. 20ನೆಯ ಶತಮಾನದ ಆದಿಯಲ್ಲಿ ಜೂರಿಚ್ಚಿನ ಸವೊನರೋಲ(ಸುಧಾಕರ) ಎಂದು ಪ್ರಸಿದ್ಧನಾದ ಹರ್ಮನ್ ಕುಟ್ಟರ್ ಪ್ರಜಾಸಮಾಜವಾದವನ್ನು (ಡೆಮೊಕ್ರಟಿಕ್ ಸೋಷಿಯಲಿಸಮ್) ಬಲಪಡಿಸಿದ. ಒಂದನೆಯ ಮಹಾಯುದ್ಧಾನಂತರ ಕ್ರೈಸ್ತ ಸಮತಾವಾದ ಅನೇಕ ರೂಪಗಳನ್ನು ತಾಳಿತು. ಕೆಲವರು ಸಮತಾವಾದ ನೇರವಾಗಿ ಕ್ರೈಸ್ತಧರ್ಮದಿಂದ ಅನುಗತವಾದುದೆಂದೂ ಇನ್ನು ಕೆಲವರು ಹಾಗಲ್ಲವೆಂದೂ ವಾದಿಸತೊಡಗಿದರು. ಕ್ರೈಸ್ತಸಂಘಕ್ಕೂ ಕೆಲಸಗಾರರ ಸಂಸ್ಥೆಗಳಿಗೂ ನಿಕಟಸಂಬಂಧವನ್ನು ಏರ್ಪಡಿಸುವುದೇ ಕ್ರೈಸ್ತ ಸಮತಾವಾದದ ಮುಖ್ಯ ಉದ್ದೇಶವೆಂದು

ಮತ್ತೆ ಕೆಲವರು ಸಾರಿದರು. ಇತರರು ಕ್ರೈಸ್ತಧರ್ಮಕ್ಕೂ ಕಾರಲ್ ಮಾರ್ಕ್ಸನ ಸಮತಾವಾದಕ್ಕೂ ನೇರ ಸಂಬಂಧವನ್ನು ಕಲ್ಪಿಸಿ, ಅವನ ಸಮತಾವಾದವನ್ನು ಕ್ರೈಸ್ತಧರ್ಮಕ್ಕೆ ಸಂಗತವಾಗಿ ರೂಪಿಸುವುದೇ ಕ್ರೈಸ್ತ ಸಮತಾವಾದದ ಮುಖ್ಯ ಕರ್ತವ್ಯವೆಂದು ಬಗೆದರು. ಮೂರನೆಯ ಬಗೆಯ ಸಮತಾವಾದಿಗಳು ದಕ್ಷಿಣ ಜರ್ಮನಿಯ ರಿಲಿಜಸ್ ಸೋಷಿಯಲಿಸ್ಟ್ ಲೀಗಿನವರು, ಈ ಗುಂಪಿನಲ್ಲಿ ಪ್ರಾಟೆಸ್ಟಂಟರೂ ಮತ್ತು ಕೆಥೊಲಿಕ್ಕರೂ ಸೇರಿದ್ದರು. ನಾಲ್ಕನೆಯ ಬಗೆಯ ಸಮತಾವಾದಿಗಳು ಬರ್ಲಿನ್ನಿನ ಕೈರೋಸ್ ಗುಂಪಿನವರು. ಅವರ ಮುಖಂಡ ಪಾಲ್ ಟಿಲಿಚ್.

ನಾರ್ವೆ ಮತ್ತು ಸ್ವೀಡನ್ ದೇಶಗಳಲ್ಲಿ ಸಮತಾವಾದ 1930ರ ಆಚೆಗೆ ಹುಲುಸಾಗಿ ಬೆಳೆಯಿತು. ಅದಕ್ಕೆ ಕಾರಣನಾದವ ಒಂದು ಕಾಲದಲ್ಲಿ ಮಾರ್ಕ್ಸ್ ವಾದಿಯಾಗಿದ್ದ ನಿಲೋಲೈ ಬರ್ಡಿಯೇವ್. ಅವನು ವಿಶೇಷವಾಗಿ ಲಿಯೋ ಟಾಲ್‌ಸ್ಟಾಯ್ ಬರವಣಿಗೆಗಳಿಂದ ಪ್ರೇರಿತನಾದವ.

ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಸಮತಾವಾದವನ್ನು 1849ರಲ್ಲಿ ಬಿತ್ತಿದವರಲ್ಲಿ ಹೆನ್ರಿ ಜೇಮ್ಸ್ (ಹಿರಿಯ) ಮೊದಲನೆಯವ. ಸಮತಾವಾದ ಕ್ರೈಸ್ತಧರ್ಮದ ಮುಖ್ಯ ಗುರಿಯೆಂಬುದು ಅವನ ದೃಢ ನಂಬಿಕೆ. 20ನೆಯ ಶತಮಾನದಲ್ಲಿ ಸಮತಾವಾದವನ್ನು ಪ್ರಚಾರ ಮಾಡಿದವರಲ್ಲಿ ವಾಲ್ಟರ್ ರಾಶ್ಚೆನ್ ಬುಶ್ಚ್ ಮುಖ್ಯನಾದವ. ಈತ ಕ್ರೈಸ್ತಸಮತಾವಾದಕ್ಕೂ ಲೌಕಿಕ ಸಮತಾವಾದಕ್ಕೂ ಇರುವ ಭೇದವನ್ನು ಸ್ಪಷ್ಟಪಡಿಸಿ ಸಮತಾವಾದಕ್ಕೆ ಕ್ರೈಸ್ತಧರ್ಮವೇ ಭದ್ರವಾದ ತಳಹದಿ ಎಂದು ಸಾರಿದ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಅವನ ಕೃಪೆಯಿಂದ ದೊರೆತ ಸಂಪತ್ತಿನಲ್ಲಿ ಎಲ್ಲರೂ ಸಮಭಾಗಿಗಳಾಗುವ ಹಕ್ಕನ್ನು ಪಡೆದಿರುತ್ತಾರೆ ಎಂದು ಬೋಧಿಸಿದ. ಇವನ ಅನುಯಾಯಿಗಳು ಇವನ ಸಮತಾವಾದವನ್ನು ಜಪಾನ್, ಚೀನ, ಭಾರತ ಮತ್ತು ದಕ್ಷಿಣ ಅಮೆರಿಕ ದೇಶಗಳಲ್ಲಿ ಪ್ರಚಾರಮಾಡಿದರು. 1933ರಲ್ಲಿ ಜರ್ಮನಿಯ ಸಮಾಜವಾದಿ ಟಿಲಿಚ್ ಅಮೆರಿಕಕ್ಕೆ ಹೋಗಿ ಅಲ್ಲಿ ಹಿಂದೆ ಹೇಳಿದ ನಾಲ್ಕನೆಯ ಬಗೆಯ ಸಂಯುಕ್ತ ಕ್ರೈಸ್ತ ಮಾರ್ಕ್ಸ್ ಸಮತಾವಾದವನ್ನು ಪ್ರಚಾರಮಾಡಿದ. ಅಮೆರಿಕದಲ್ಲಿ ಇದಕ್ಕೆ ಹೊಸ ಮಾರ್ಕ್ಸ್‌ವಾದವೆಂಬ ಹೆಸರು ಬಂತು. ಕ್ರೈಸ್ತಸಮತಾವಾದ ಅಮೆರಿಕದ ಕೆಲಗಾರರನ್ನು ಹೆಚ್ಚಾಗಿ ಆಕರ್ಷಿಸದಿದ್ದರೂ ಕ್ರೈಸ್ತಸಂಘಗಳು ಬಹು ಸಂಖ್ಯಾತರ ಆರ್ಥಿಕ ನೆಮ್ಮದಿಗೆ ಹೆಚ್ಚು ಗಮನಕೊಡುವಂತೆ ಪ್ರೇರಿಸಿದೆ.

(ಜಿ.ಎಚ್.)

**ಕ್ರೈಸ್ತ ಸೋದರಿಯರ ಸಂಘ :** ಕನ್ಯಾದೀಕ್ಷೆಯನ್ನು ಪಡೆದು ನಿಷ್ಠಾವಂತ ಜೀವನ ನಡೆಸುತ್ತ ಲೋಕಸೇವಾನಿರತರಾಗಿರುವ ಸ್ತ್ರೀಯರ ಸಂಘ (ಸಿಸ್ಟರ್‌ಹುಡ್). ಯೇಸು ಕ್ರಿಸ್ತ ಇಂಥವರಿಗಾಗಿ ಮೂರು ಮುಖ್ಯ ಜೀವನ ನಿಯಮಗಳನ್ನು ಹೇಳಿದ್ದಾನೆ. ಮೊದಲನೆಯದು ಜಿತೇಂದ್ರಿಯತ್ವ. ಸೋದರಿಯಾಗುವವಳು ಐಹಿಕ ಕಾಮನೆಗಳನ್ನು ತ್ಯಜಿಸಿದವಳಾಗಿರಬೇಕು. ಎರಡನೆಯದು ಬಡತನದ ಜೀವನ. ಸೋದರಿ ಎಂದಿಗೂ ಅಧಿಕಾರ ಮತ್ತು ಆಸ್ತಿಗೆ ಆಸೆಪಡಬಾರದು. ಇದು ವಿರಕ್ತ ಸಂನ್ಯಾಸಿ ಜೀವನದಿಂದ ಮಾತ್ರ ಸಾಧ್ಯ. ಮೂರನೆಯದು ವಿಧೇಯತೆ. ಅಂದರೆ ಸಂಘದ ಮೂಲತತ್ತ್ವಗಳಿಗೆ ಮತ್ತು ಸಂಚಾಲಕರ ಆಜ್ಞೆಗಳಿಗೆ ತಲೆಬಾಗಿ ವರ್ತಿಸುವುದು. ಈ ಮೂರು ನಿಯಮಗಳನ್ನು ಎಲ್ಲ ಸೋದರಿಯರೂ ಅನುಸರಿಸಬೇಕಾಗುತ್ತದೆ. ಸೋದರಿಯರಲ್ಲಿ ಮುಖ್ಯವಾಗಿ ಎರಡು ಬಗೆಯವರನ್ನು ಕಾಣಬಹುದಾಗಿದೆ. ಒಂದು ಬಗೆಯವರು ದೀಕ್ಷೆ ಪಡೆದು ಮಠಗಳಲ್ಲಿ ಜೀವಿಸಿ ಆಧ್ಯಾತ್ಮಿಕ ಶಾಂತಿಗಾಗಿ ದುಡಿಯುತ್ತಾರೆ. ಇನ್ನೊಂದು ಬಗೆಯವರು ದೀಕ್ಷೆ ಪಡೆದು ಮಠಗಳ ಮೂಲಕ ಲೋಕಸೇವೆಯಲ್ಲಿ ನಿರತರಾಗುತ್ತಾರೆ.

ಇಂಥ ಸೋದರಿ ಸಂಘಗಳು ಇರುವ ಮಠಗಳು ನೇರ ಜಗದ್ಗುರುಗಳ ಅಧಿಕಾರಕ್ಕೆ ಒಳಪಟ್ಟವಾಗಿರಬಹುದು. ಇಲ್ಲವೆ ಪ್ರಾಂತೀಯ ಧರ್ಮಾಧ್ಯಕ್ಷರ ಅಧಿಕಾರಕ್ಕೆ ಒಳಪಟ್ಟವಾಗಿರಬಹುದು.

(ಎ.ಪಿ.ಆರ್.)

**ಕ್ರೊಪಾಟ್ಕಿನ್, ಪೀಟರ್, ಅಲೆಕ್ಸೀವಿಚ್ :** 1842–1921. ರಷ್ಯದ ಭೂಗೋಳವಿಜ್ಞಾನಿ, ಕ್ರಾಂತಿಕಾರಿ; ಅಲೌಕಿಕವೂ ಸಾತ್ತ್ವಿಕವೂ ಆದ ಗುಣದಿಂದ ಕಷ್ಟಗಳನ್ನು ನಗುನಗುತ್ತ ಸಹಿಸಿ, ಕ್ರಾಂತಿ ಚಳವಳಿಗೆ ಜನತೆಯ ಗೌರವ ದೊರಕಿಸಿಕೊಟ್ಟ ವ್ಯಕ್ತಿ. ಚಕ್ರವರ್ತಿ 2ನೆಯ ಅಲೆಕ್ಸಾಂಡರನ ಪರಿವಾರದಲ್ಲಿ ಸೇವೆ ಮಾಡಿ, ಅರಮನೆಯ ಜೀವನದಿಂದ ಬೇಸರ ಹೊಂದಿ ಪ್ರಾಂತೀಯ ಸೇನೆಯಲ್ಲಿ ಅಶ್ವದಳವೊಂದರ ನಾಯಕನಾಗಿ ಸೇರಿದ. ಈತ ಸೈಬೀರಿಯದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಭೂವಿಜ್ಞಾನದಲ್ಲಿ ಆಸಕ್ತಿ ವಹಿಸಿ ಅಲ್ಲಿ ಶೋಧನೆಗಳಲ್ಲಿ ನಿರತನಾದ.

1872ರಲ್ಲಿ ಸ್ವಿಟ್ಜರ್ಲೆಂಡಿಗೆ ಹೋಗಿದ್ದಾಗ ಅಲ್ಲಿ ಸುಪ್ರಸಿದ್ಧ ಕ್ರಾಂತಿಕಾರಿ ಎಂ.ಎ. ಬಕುನಿನ್ನನ ಸಂದರ್ಶನ ಇವನಿಗೆ ಲಭ್ಯವಾಯಿತು. ಈತ ಬಕುನಿನ್ನನ ಆಕರ್ಷಣೆಗೆ ಒಳಗಾಗಿ ರಷ್ಯಕ್ಕೆ ಹಿಂದಿರುಗಿದ ತರುವಾಯ ಕ್ರಾಂತಿತತ್ತ್ವಗಳನ್ನು ಜನರಲ್ಲಿ ಬೋಧಿಸಲಾರಂಭಿಸಿದ. ಅದರ ಫಲವಾಗಿ 1874ರಲ್ಲಿ ಬಂಧನಕ್ಕೆ ಗುರಿಯಾದ. 1876ರಲ್ಲಿ ಸೆರೆಯಿಂದ ತಪ್ಪಿಸಿಕೊಂಡು ಇಂಗ್ಲೆಂಡಿಗೂ ತರುವಾಯ ಸ್ವಿಟ್ಜರ್ಲೆಂಡಿಗೂ ಹೋದ. ಮತ್ತೆ 1882ರಲ್ಲಿ ಈತ ಫ್ರಾನ್ಸಿನಲ್ಲಿ ಬಂಧನಕ್ಕೆ ಒಳಗಾದ. 1886ರಲ್ಲಿ ಬಿಡುಗಡೆಯಾದ ಅನಂತರ ಲಂಡನ್ ಬಳಿ ನೆಲೆಸಿದ. ಮನುಷ್ಯ ಜೀವನದ ಮೇಲೆ ಯಂತ್ರಗಳ ಪ್ರಭಾವ ಬೆಳೆಯುತ್ತಿರುವುದೆಂಬುದೂ ಅದರಿಂದ ಮಾನವರ ಸ್ವಾಭಾವಿಕ ಏಳಿಗೆಗೆ ಅಡ್ಡಿಯುಂಟಾಗುತ್ತದೆಂಬುದೂ ಇವನ ನಂಬಿಕೆಯಾಗಿತ್ತು. ಆಗ ಸಂಭವಿಸಿದ ಒಂದನೆಯ ಮಹಾಯುದ್ಧವನ್ನು ಇವನು ಸ್ವಾಗತಿಸಿದ. ಆಗ ಅಸ್ತಿತ್ವದಲ್ಲಿದ್ದ ಸೈನಿಕ ಆಡಳಿತ ಇದರಿಂದ ಕೊನೆಗೊಳ್ಳುವುದೆಂಬುದು ಅವನ ನಿರೀಕ್ಷೆಯಾಗಿತ್ತು. 1917ರ ಫೆಬ್ರವರಿಯಲ್ಲಿ ನಡೆದ ರಷ್ಯನ್ ಕ್ರಾಂತಿಗೂ ಇವನ ಸ್ವಾಗತವಿತ್ತು. ಇವನ ಕ್ರಾಂತಿ ದೃಷ್ಟಿಗೆ ಈ ಘಟನೆ ಉತ್ತೇಜಕವಾಗಿತ್ತು. ಆದರೆ ಅದೇ ನವೆಂಬರಿನಲ್ಲುಂಟಾದ ಬಾಲ್‌ಷೆವಿಕ್ ಕ್ರಾಂತಿಯನ್ನು ಈತ ಖಂಡಿಸಿದ. ಕಮ್ಯುನಿಸ್ಟರು ಜನಪ್ರಿಯತೆ ಗಳಿಸಲಾರರೆಂಬುದು ಇವನ ಅಭಿಪ್ರಾಯವಾಗಿತ್ತು. ಈ ಮಧ್ಯೆ ರಷ್ಯದ ಆಂತರಿಕ ವಿಷಯಗಳಲ್ಲಿ ಕೈಹಾಕಿದ ಪಾಶ್ಚಾತ್ಯ ರಾಷ್ಟ್ರಗಳನ್ನು ಈತ ತೀವ್ರವಾಗಿ ಟೀಕಿಸಿದ. ರಷ್ಯ ಆಂತರಿಕವಾಗಿ ನೆಮ್ಮದಿ ಸಾಧಿಸಿಕೊಳ್ಳುವ ಮುನ್ನವೆ, 1921ರ ಫೆಬ್ರುವರಿ 8 ರಂದು, ಈತ ಮಾಸ್ಕೋ ಬಳಿ ನಿಧನನಾದ. ತನ್ನ ಸೌಮ್ಯ ಮತ್ತು ಸಾಧು ಸ್ವಭಾವದಿಂದ ಜನತೆಯಲ್ಲಿ ಕ್ರಾಂತಿಕಾರರ ಬಗ್ಗೆ ಅನುಕಂಪವನ್ನುಂಟುಮಾಡಿದ ವಿಶಿಷ್ಟ ವ್ಯಕ್ತಿ ಕ್ರೊಪಾಟ್ಕಿನ್. (ಕೆ.ಎಸ್.ಆರ್.ಎ.; ವಿ.ಆರ್.ಎಚ್.)

**ಕ್ರೋಚೆ, ಬೆನೆಡೆಟೋ :** 1866–1952. ಇಟಲಿಯ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ, ಇತಿಹಾಸಕಾರ, ಸಂಪಾದಕ, ವಿಮರ್ಶಕ ಮತ್ತು ರಾಜಕೀಯ ಧುರೀಣ. ಹುಟ್ಟಿದ್ದು ಪೆಸ್ಕಸ್ಸೆರೋಲಿಯಲ್ಲಿ. ಅಲ್ಲಿಯ ಒಂದು ಕೆಥೊಲಿಕ್ ಪಾಠಶಾಲೆಯಲ್ಲಿ ಈತನ ವಿದ್ಯಾಭ್ಯಾಸ ನಡೆಯಿತು. 1883ರಲ್ಲಿ ಆದ ಭೂಕಂಪಕ್ಕೆ ಸಿಕ್ಕಿ ಈತನ ತಾಯಿತಂದೆ ಮೃತರಾದರು. ಅನಂತರ ಈತ ತನ್ನ ತಂದೆಯ ಸೋದರ ಸಿಲ್ವೋಸ್ಪಾವೆಂಟನ ಆಶ್ರಯದಲ್ಲಿ ರೋಮಿನಲ್ಲಿ ನೆಲಸಿದ. ರೋಮ್ ವಿಶ್ವವಿದ್ಯಾಲಯದಲ್ಲಿ ಕೆಲವು ಕಾಲ ವ್ಯಾಸಂಗ ನಡೆಸಿದ ಮೇಲೆ, ವ್ಯಾಸಂಗವನ್ನು ಮುಂದುವರಿಸಲಾಗದೆ 1886ರಲ್ಲಿ ನೇಪಲ್ಸ್‌ಗೆ ಹೋದ. ಅಲ್ಲಿ ನೇಪಲ್ಸ್‌ಗೆ ಸಂಬಂಧಪಟ್ಟ ಚರಿತ್ರೆಯ ಸಂಶೋಧನೆಯಲ್ಲಿ ಮಗ್ನನಾದ. ಚರಿತ್ರೆಯ ಸ್ವಭಾವ(1893) ಮತ್ತು ಸಾಹಿತ್ಯ ವಿಮರ್ಶೆಯ ವಿಧಾನ(1895) ಎಂಬ ಪ್ರಬಂಧಗಳನ್ನು ಪ್ರಕಟಿಸಿದ. 1896ರಿಂದ 1900ರ ತನಕ ಮಾರ್ಕ್ಸ್ ಸಿದ್ಧಾಂತವನ್ನು ಕುರಿತು ಹಲವು ಪ್ರಬಂಧಗಳನ್ನು ಬರೆದ. 1902ರ ಅನಂತರ ತನ್ನ ತಾತ್ತ್ವಿಕ ಸಿದ್ಧಾಂತವನ್ನು **ಫಿಲೊಸೊಫಿಯ ಡೆಲ್ಲೊ ಸ್ಪಿರಿಟೊ** ಎಂಬ ಹೆಸರಿನಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದ; **ಈಸ್ತೆಟಿಕ್ ಆಸ್ ಸೈನ್ಸ್ ಆಫ್ ಎಕ್ಸ್‌ಪ್ರೆಷನ್ ಅಂಡ್ ಜನರಲ್ ಲಿಂಗ್ವಿಸ್ಟಿಕ್ಸ್, ಲಾಜಿಕ್ ಆಸ್ ದಿ ಸೈನ್ಸ್ ಆಫ್ ಪ್ಯೂರ್ ಕಾನ್ಸೆಪ್ಟ್; ಫಿಲಾಸಫಿ ಆಫ್ ದಿ ಪ್ರಾಕ್ಟಿಕಲ್; ಎಕನಾಮಿಕ್ ಅಂಡ್ ಎಥಿಕ್; ಥಿಯೊರಿ ಅಂಡ್ ಹಿಸ್ಟರಿ ಆಫ್ ಹಿಸ್ಟೊರಿಯೊಗ್ರಫಿ**, ಈ ನಾಲ್ಕೂ ಇಂಗ್ಲಿಷಿಗೆ ಭಾಷಾಂತರಗೊಂಡ ಕೃತಿಗಳು. ಇವುಗಳಾದ ಮೇಲೆ ಹೆಗೆಲನ ತತ್ತ್ವದಲ್ಲಿ ಜೀವಂತವಾದದ್ದು ಯಾವುದು ನಿಸ್ತೇಜನವಾದದ್ದು ಯಾವುದು ಎಂಬುದನ್ನು ಕುರಿತು ಒಂದು ಗ್ರಂಥವನ್ನು ಬರೆದ. ಇವಲ್ಲದೆ ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟಂತೆ ಈತ ಅನೇಕ ಗ್ರಂಥಗಳನ್ನು ಬರೆದಿದ್ದಾನೆ.

ಕ್ರೋಚೆ 1903ರಲ್ಲಿ ಲಾ ಕ್ರಿಟಿಕ ಎಂಬ ನಿಯತಕಾಲಿಕ ಪತ್ರಿಕೆಯನ್ನು ಪ್ರಾರಂಭಿಸಿ ನಲವತ್ತೊಂದು ವರ್ಷಗಳ ಕಾಲ ಅದನ್ನು ನಡೆಸಿದ. ಈ ಪತ್ರಿಕೆಯಲ್ಲಿಯೇ ಇವನ ಗ್ರಂಥಗಳು ಭಾಗ ಭಾಗವಾಗಿ ಪ್ರಕಟವಾದುವು. ಅಲ್ಲದೆ ಆ ಕಾಲದಲ್ಲಿ ಪ್ರಕಟವಾದ ಮುಖ್ಯ ತಾತ್ತ್ವಿಕ ಮತ್ತು ಸಾಹಿತ್ಯ ಗ್ರಂಥಗಳನ್ನು ಈತ ತನ್ನ ಪತ್ರಿಕೆಯಲ್ಲಿ ವಿಮರ್ಶಿಸಿದ. 1945ರಿಂದ ತನ್ನ ಅಂತ್ಯಕಾಲದ ತನಕ ಕ್ವಾಡೆರ್ನಿಡೆಲ್ಲ ಕ್ರಿಟಕದ ಇಪ್ಪತ್ತು ಸಂಪುಟಗಳನ್ನು ಹೊರ ತಂದ. ಚರಿತ್ರೆ, ಸಾಹಿತ್ಯ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ ಅನೇಕ ಪ್ರಬಂಧಗಳನ್ನು ಕ್ರೋಚೆ ಬರೆದ. ಅವುಗಳಲ್ಲಿ ಇಟಲಿಯ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಚಾರಿತ್ರಿಕ ಹಾಗೂ ವಿಮರ್ಶಾತ್ಮಕ ಲೇಖನಗಳು ಹೆಚ್ಚು ಮಹತ್ತ್ವಪೂರ್ಣವೆನಿಸಿವೆ.

ಈತ ತತ್ತ್ವಶಾಸ್ತ್ರ ಮತ್ತು ಸಾಹಿತ್ಯ ವಿಮರ್ಶೆಯಲ್ಲಿ ತೋರಿದ ಆಸಕ್ತಿಯನ್ನೇ ರಾಜಕೀಯದಲ್ಲೂ ತೋರಿಸಿದ. 1910ರಲ್ಲಿ ಸೆನೆಟ್ ಸದಸ್ಯನಾದ. 1920–21ರ ತನಕ ವಿದ್ಯಾಮಂತ್ರಿಯಾಗಿದ್ದ. 1925ರಲ್ಲಿ ಫ್ಯಾಸಿಸ್ಟರ ವಿರುದ್ಧವಾಗಿ ಒಂದು ಘೋಷಣೆಯನ್ನು ಮಂಡಿಸಿದ. ಇದರಿಂದ ಕೆರಳಿದ ಫ್ಯಾಸಿಸ್ಟರು 1926ರಲ್ಲಿ ಇವನ ಮನೆಯ ಮೇಲೆ ದಾಳಿ ನಡೆಸಿದರು. ಈತನ ಖ್ಯಾತಿ ಎಷ್ಟಿತ್ತೆಂದರೆ ಸ್ವತಃ ಮುಸಲೋನಿಯೇ ಈತನ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಹೆದರಿದ. 1943ರಲ್ಲಿ ಲಿಬರಲ್ ಪಾರ್ಟಿಯನ್ನು ಪುನರುಜ್ಜೀವನಗೊಳಿಸಿ ಅದರ ಅಧ್ಯಕ್ಷನಾದ. 1944ರಲ್ಲಿ ಖಾತೆ ಇಲ್ಲದ ಮಂತ್ರಿಯಾಗಿ ಸೇವೆ ಸಲ್ಲಿಸಿದ. 1945ರಲ್ಲಿ ಕನ್‌ಸಲ್ಟೆಟಿವ್ ಕೌನ್ಸಿಲ್, 1946ರಲ್ಲಿ ಕಾನ್ಸ್ಟಿಟ್ಯೂಟಿವ್ ಅಸೆಂಬ್ಲಿಗಳ ಸದಸ್ಯನಾಗಿದ್ದ. 1947ರಲ್ಲಿ ತನ್ನ ಮನೆಯ ಒಂದು ಭಾಗದಲ್ಲಿ ಇಟಲಿಯ ಚರಿತ್ರೆಯ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದ. ದೀರ್ಘಕಾಲದ ಕಾಯಿಲೆಯಿಂದಾಗಿ 1952ನೆಯ ನವೆಂಬರ್ 20ರಂದು ನೇಪಲ್ಸ್‌ನಲ್ಲಿ ನಿಧನನಾದ.

(ಜಿ.ಎಚ್.)

**ಕ್ರೋಚೆಯ ವಿಮರ್ಶೆ :** ಲಲಿತಕಲೆಯ ವಿಚಾರವಾಗಿ ಭೌತಾತೀತ ಚಿಂತನೆಗೆ ಕ್ರೋಚೆಯನ್ನು ಪ್ರಚೋದಿಸಲು ಕಾರಣವಾದದ್ದು ಸಾಹಿತ್ಯ ವಿಮರ್ಶೆಯಲ್ಲಿ ಬಹುಮಟ್ಟಿಗೆ ಅಂಗೀಕೃತವಾಗಿದ್ದ ಶಿಷ್ಟತಾ ಸೂತ್ರಾವಳಿ(ಕ್ಲಾಸಿಕಲ್ ರೂಲ್ಸ್) ಮತ್ತು ಕಾವ್ಯ ಪ್ರಭೇದಗಳು. ಸೂತ್ರಗಳಿಗಾಗಲಿ ಪ್ರಭೇದಗಳಿಗಾಗಲಿ ತತ್ತ್ವಶಃ ಅಸ್ತಿತ್ವವಿಲ್ಲ, ಅರ್ಥವಿಲ್ಲ ಎಂದು ಈತ

ಮನಗಂಡ. ಏತಕ್ಕೆಂದರೆ ನಿಸರ್ಗ ತಾನಾಗಿಯೇ ವಾಸ್ತವವಾದ ದ್ರವ್ಯವಲ್ಲ. ಅಂತಃಶ್ಚೈತನ್ಯ ಉತ್ಪತ್ತಿಮಾಡಿದ ದ್ರವ್ಯ. ಕ್ರೋಚೆಯ ತತ್ತ್ವಶಾಸ್ತ್ರದಲ್ಲಿ ಚೈತನ್ಯವೇ ಎಲ್ಲಕ್ಕೂ ಮೂಲ; ಎಲ್ಲವೂ ಅದರಿಂದ ಜನ್ಯ. ಚೈತನ್ಯದ ಚಟುವಟಿಕೆಗಳಲ್ಲಿ ನಾಲ್ಕು ಮುಖ್ಯ: ಅಂತರ್ಬೋಧೆ–ಅಭಿವ್ಯಕ್ತಿ; ಬೌದ್ಧಿಕ ಕಲ್ಪನೆ; ಸಂಕಲ್ಪ ಶಕ್ತಿ; ವಿಶಿಷ್ಟ ಸಂಕಲ್ಪ. ಇವುಗಳಲ್ಲಿ ಮೊದಲನೆಯದನ್ನೇ ಕಲೆಯ ಸ್ವರೂಪ ಮತ್ತು ಸಾಧನೆಯನ್ನು ವಿಚಾರಿಸುವವ ಪರ್ಯಾಲೋಚಿಸಬೇಕಾದದ್ದು.

ಕ್ರೋಚೆಯ ದೃಢನಿಶ್ಚಯದಂತೆ ಅಂತರ್ಬೋಧೆ ಅಭಿವ್ಯಕ್ತಿ ಎರಡೂ ಒಂದೇ. ಒಂದನ್ನು ಬಿಟ್ಟು ಇನ್ನೊಂದು ಆಗುವಂತಿಲ್ಲ, ಇರುವಂತಿಲ್ಲ. ಕಲೆಯಲ್ಲಿ ಅಂತರ್ಬೋಧೆ ಅಭಿವ್ಯಕ್ತಿಗಳನ್ನು ಸಮಾನಾರ್ಥಕ ಶಬ್ದಗಳೆಂದು ಭಾವಿಸಿಕೊಂಡರೆ ತಪ್ಪಾಗದು. ಹಾಗಾದರೆ, ನೋಟಕರಿಗೊ ಶ್ರೋತೃಗಳಿಗೊ ವಾಚಕರಿಗೊ ಸಂವೇದ್ಯವಾಗುವ ಚಿತ್ರ ಸಂಗೀತ ಕಾವ್ಯ ಮುಂತಾದುವನ್ನು ಏನೆಂದು ಬರೆಯಬೇಕು? ಕ್ರೋಚೆಯ ದೃಷ್ಟಿಗೆ ಅವೆಲ್ಲ ಕಲೆಗಾರ ಇಚ್ಛೆಪಟ್ಟು ತನ್ನ ಅಂತರ್ಯದಲ್ಲಾದ ಕಲೆಗೆ ಹೊಂದಿಸಿದ ಬಾಹ್ಯರೂಪ, ಮೂರ್ತರೂಪ. ಅವು ಆ ಕಲೆಯ ಸಮರ್ಪಕ ಪ್ರತಿಬಿಂಬವೂ ಅಲ್ಲವೂ ಹೇಳಲಾಗದು. ಒಳಗಿದ್ದದ್ದೇನೊ ಹೊರತಂದದ್ದೇನೊ ಯಾರಿಗೆ ಗೊತ್ತು? ಶ್ರೇಷ್ಠ ಕಲಾವಿದನಿಗೂ ಸಾಧಾರಣ ಕಲಾವಿದನಿಗೂ ಇರುವ ವ್ಯತ್ಯಾಸ ಶುದ್ಧ ಅಥವಾ ಪರಿಪೂರ್ಣ ಕಲಾಕೃತಿಯ ನಿರ್ಮಾಣದಲ್ಲಿ ಕಂಡುಬರುತ್ತದೆ. ಅವನಿಗೆ ಮಾತ್ರ ಅದು ಸಾಧ್ಯ.

ಕಲೆಯ ಅಥವಾ ಸಾಹಿತ್ಯದ ಜಿಜ್ಞಾಸೆಯಲ್ಲಿ ಬಲು ಬಳಕೆಯಾಗುವ ಇನ್ನೆರಡು ಪದಗಳು–ವಿಭಾವನೆ(ಇಮ್ಯಾಜಿನೇಷನ್) ಮತ್ತು ಅಂದಚಂದ (ಬ್ಯೂಟಿ). ಕ್ರೋಚೆಯ ತಿಳಿವಳಿಕೆಗೆ ಅವೂ ಪ್ರತ್ಯೇಕ ಅಭಿಪ್ರಾಯವನ್ನು ಸೂಚಿಸುವ ಭಿನ್ನ ನುಡಿಗಳಲ್ಲ. ಹೆಚ್ಚು ಕಡಿಮೆ ಅವು ಸಮಾನಾರ್ಥಕ; ಅಷ್ಟೇ ಅಲ್ಲ, ದಿಟವಾಗಿ ತರ್ಕಬದ್ಧವಾಗಿ ಆಲೋಚನೆ ಮಾಡಿದರೆ, ಅಂತರ್ಬೋಧೆ ಅಭಿವ್ಯಕ್ತಿ ಎಂದು ಯಾವುದನ್ನು ಕರೆಯುತ್ತೇವೆಯೊ ಅದನ್ನೇ ವಿಭಾವನೆಯೆಂದು ಕರೆದರೂ ಸಲ್ಲುತ್ತದೆ. ವಿಭಾವನೆ ಬೇರೊಂದು ಪದ ಅಷ್ಟೆ; ಅದರ ಸ್ವರೂಪವೂ ಸಾಧನೆಯೂ ಅಂತರ್ಬೋಧೆಯ ಅಥವಾ ಅಭಿವ್ಯಕ್ತಿಯ ಸ್ವರೂಪ ಸಾಧನೆಗಳಿಂದ ಬೇರೆಯಾಗಿರಲಾರದು. ಹಾಗೆಯೇ ಕಲಾವಿದ ಎಲ್ಲೋ ಹೊರಗಿರುವ ಅಂದಚಂದವನ್ನು ಅನುಕರಿಸಿ ಕಲಾಕೃತಿಯನ್ನು ರಚಿಸುವುದಿಲ್ಲ; ಅವನ ಒಳಗಿರುವ ಅಂತರ್ಬೋಧೆ ಅಭಿವ್ಯಕ್ತಗೊಳ್ಳುವುದೇ ಅಂದಚಂದವಾಗಿ ಕಂಡುಬರುತ್ತದೆ. ಆದ್ದರಿಂದ ಸೌಂದರ್ಯವೆಂಬುದೂ ಒಂದೇ ಕಲಾತತ್ತ್ವಕ್ಕೆ ಇರಬಹುದಾದ ಇನ್ನೊಂದು ಹೆಸರು. ಕಲಾಕೃತಿಯಲ್ಲಿ ಅಂದಚಂದ ಕಡಿಮೆ ಅಥವಾ ಇಲ್ಲ ಎನ್ನುವುದರ ಬದಲು ಅದು ಅಪೂರ್ಣ, ಅಸಮಗ್ರ, ಅಶುದ್ಧ, ಕುರೂಪ ಎನ್ನುವ ಅಭ್ಯಾಸ ವಾಡಿಕೆಗೆ ಬಂದಿದೆ; ತತ್ತ್ವಶಾಸ್ತ್ರದಂತೆ ಅಂಥ ಮಾತು ಸಮಂಜಸವಲ್ಲ. ಇಂಥ ಸಂದರ್ಭಗಳಲ್ಲಿ ಗೋಚರಿಸುವ ವ್ಯತ್ಯಾಸ ಗುಣಕ್ಕೆ ಸಂಬಂಧಪಟ್ಟದ್ದಲ್ಲ. ಪರಿಮಾಣಕ್ಕೆ ಸಂಬಂಧಪಟ್ಟದ್ದು, ಶಾಸ್ತ್ರ ಗುಣವನ್ನು ಪರಿಗಣಿಸಬೇಕೇ ವಿನಾ ಪರಿಮಾಣವಲ್ಲ. ಪ್ರೇಮಗೀತದ ಕವಿಯ ಒಂದು ಪದ್ಯಕ್ಕೂ ಸಾಮಾನ್ಯ ಮನುಷ್ಯನ ಪ್ರೇಮದ ಸೊಲ್ಲಿಗೂ ಭಾವತೀವ್ರತೆಯಲ್ಲಿ ಯಾವ ಅಂತರವೂ ಇಲ್ಲದಿರುವುದು ಸಂಭವನೀಯವಷ್ಟೇ ಅಲ್ಲ, ಸತ್ಯವೂ ಹೌದು. ಅಂತರ ಇರುವುದು ವಿಸ್ತೀರ್ಣದಲ್ಲಿ, ಅಂಗವೈವಿಧ್ಯದಲ್ಲಿ, ಬಾಹ್ಯಾಕಾರದಲ್ಲಿ; ಅದು ಸಂಕೀರ್ಣ, ಇದು ಸರಳ.

ಕಲಾವಿಮರ್ಶೆಯಲ್ಲಿ ಭಾವ(ಫೀಲಿಂಗ್) ಅಥವಾ ರಾಗಕ್ಕೆ (ಎಮೋಷನ್) ದೊಡ್ಡ ಜಾಗ ಇರುವುದನ್ನು ಸಕಲರೂ ಬಲ್ಲರು. ಕಲಾವಿದರು ಭಾವಜೀವಿಗಳು ಎಂಬುದು ಸಾಮಾನ್ಯ ಗಾದೆಯಂತೆ ಪ್ರಸಿದ್ಧವಾಗಿದೆ. ಕ್ರೋಚೆ ಭಾವಕ್ಕೆ ಲಕ್ಷ್ಯವನ್ನು ಕೊಟ್ಟರೂ ಅದನ್ನು ಮಾರ್ಪಾಡಿಸಿಯೇ ತನ್ನ ಕಲಾತತ್ತ್ವದೊಳಕ್ಕೆ ಬರಗೊಟ್ಟಿದ್ದಾನೆ. ಬರಿ ಭಾವಕ್ಕೂ ಕಲೆಗೂ ಎಂದೂ ನಿಕಟ ಬಾಂಧವ್ಯ ಏರ್ಪಡಲಾರದು ಎಂದು ಅವನ ನಂಬಿಕೆ. ಭಾವವೆಂಬುದು ಜನರ ನಿತ್ಯಜೀವನದ ಪರಿಚಿತ ಭಾಗ. ಅದು ವಾಸ್ತವ. ಅದರಿಂದ ಅಷ್ಟಿಷ್ಟು ಪರಿಣಾಮ. ಆದರೆ ಕಲೆಯೊಳಕ್ಕೆ ಸೇರಿಕೊಳ್ಳಬಲ್ಲದ್ದು ಅಂತರ್ಬೋಧಿತವಾಗಿ ರೂಪುಗೊಂಡು ಅಭಿವ್ಯಕ್ತವಾದ, ಕೇವಲ ಭಾವೋದ್ರೇಕವಲ್ಲದ ಭಾವ. ಒಂದು ಕಲಾಕೃತಿಯ ಅನುಭವ ನಮಗೆ ಸಂತೋಷ ತಂದುಕೊಡುತ್ತದೆ ಎಂದು ನಾವು ಹೇಳುವಾಗ ಆ ಕೃತಿಗೂ ನಮ್ಮ ಸಂತೋಷಕ್ಕೂ ಕಾರ್ಯ–ಕಾರಣ ಸಂಬಂಧವಿದೆಯೆಂದು ಭ್ರಾಂತಿಪಡಕೂಡದು. ಅಂತಃಶ್ಚೈತನ್ಯದ ನಾಲ್ಕು ಚಟುವಟಿಕೆಗಳಲ್ಲಿ ಪ್ರತಿಯೊಂದೂ ಇಲ್ಲ ವಿಜಯದಲ್ಲೊ ಇಲ್ಲ ಸೋಲಲ್ಲೊ ಕೊನೆಗೊಂಡಾಗ ಜೊತೆಯಲ್ಲೇ ಇನ್ನೊಂದು ವಿಶೇಷ ಚಟುವಟಿಕೆ ಉಲ್ಬಣವಾಗುತ್ತದೆ; ನಲಿವಾಗಲಿ, ನೋವಾಗಲಿ ಕಲಾವಿದನ ವೈಯಕ್ತಿಕ ಬದುಕಿಗೆ ಅಷ್ಟೊ ಇಷ್ಟೊ ಅಂಟಿಕೊಂಡಿರಬಹುದು. ಅವನ ಕಲಾಸೃಷ್ಟಿಯಿಂದ ಅವು ದೂರ. ಕಲೆಗೂ ವ್ಯಾವಹಾರಿಕ ಜೀವನಕ್ಕೂ ಸಂಬಂಧ ಕಲ್ಪಿಸಹೋಗುವುದು ತರವಲ್ಲ; ಮಿಥ್ಯೆ ಹೇಗೆ ಸತ್ಯವಾದೀತು?

ಎಂದಮೇಲೆ, ಕ್ರೋಚೆಯ ಸಾಹಿತ್ಯ ವಿಮರ್ಶೆ ನಕಾರಾತ್ಮಕ ಹೇಳಿಕೆಗಳಿಂದ ನಿಬಿಡವಾಗಿದೆ. ಅವನು ಒಪ್ಪುವಂತಾದ್ದು ಕೃತಿಸೀಮಿತ ವಿಮರ್ಶೆ, ಕಲಾತಿಷ್ಠ ವಿಮರ್ಶೆ. ಸಾಹಿತಿ; ಅವನ ಜೀವನ ಗುಣಶೀಲ ಬಡತನ ಸಿರಿತನ; ಅವನ ಸಮಯ ಸನ್ನಿವೇಶ; ಧಾರ್ಮಿಕ ಸಾಮಾಜಿಕ ರಾಜಕೀಯ ಆಗುಹೋಗುಗಳು; ವಿಜ್ಞಾನ ನಾಗರಿಕತೆಗಳು ಅವುಗಳ ಬೆಳೆವಣಿಗೆ–ಮುಂತಾದ ಸಂಗತಿಗಳ ಪರಿಚಯದಿಂದ ಕಾವ್ಯ, ನಾಟಕ ಯಾವುದೂ ಪರಿಚಯವಾಗಲಾರದು, ಸರಿಯಾಗಿ. ಕೇವಲ ಅವೇ ತಮ್ಮ ಪರಿಚಯವನ್ನು ಮಾಡಿಕೊಡಬೇಕು. ಭವ್ಯಕಾವ್ಯ (ಎಪಿಕ್), ನಾಟಕ, ಭಾವಗೀತೆ ಎಂಬ ವಿಂಗಡಣೆ ಕ್ರೋಚೆಯ ಮತದಂತೆ, ಅಪ್ರಯೋಜಕ ಮಾತ್ರವಲ್ಲ, ತಪ್ಪುತಿಳುವಳಿಕೆ. ಯಾವ ಕಾವ್ಯವೇ ಆಗಲಿ ಅದರಲ್ಲಿ ಕವಿಯ ಆಂತರ್ಯ ರೂಪುಗೊಂಡಿರುವುದರಿಂದ ಅದು ನಿಜವಾಗಿ ಭಾವಗೀತೆ. ಎಲ್ಲಾ ಕಾವ್ಯವೂ ಸಹಜವಾಗಿ ಭಾವಗೀತೆ. ವಿಮರ್ಶಕನ ಕರ್ತವ್ಯ ಒಂದೆ: ತನ್ನ ಮುಂದಿರುವ ಕಾವ್ಯಕ್ಕೆ ಕಾವ್ಯತನವನ್ನು ಒದಗಿಸಿರುವ ಅಂಶ ಯಾವುದು, ಅದರ ಬಗೆಯೇನು ಎಂಬ ಪ್ರಶ್ನೆಗೆ ಸದುತ್ತರವನ್ನು ಖಚಿತವಾಗಿ ವಿವರಿಸುವುದು. ಮಿಕ್ಕ ಯಾವ ಪ್ರಶ್ನೆಯೂ ಅವನ ಪ್ರಜ್ಞೆಗೆ ತೋಚಬೇಕಾದಿಲ್ಲ. ತೋಚಿದರೆ ಅನರ್ಥ ಖಂಡಿತ. ವಿಮರ್ಶಾಪ್ರಪಂಚದಲ್ಲಿ ಚಲಾವಣೆಯ ನಾಣ್ಯಗಳಾಗಿರುವ ನಿಯಮಾವಳಿ, ಅಲಂಕಾರಗಳು, ಛಂದೋರೀತಿ, ಪದ್ಯಗದ್ಯಭೇದ, ಪದಪುಂಜ, ಕಥಾವಸ್ತು, ಕಥಾನಿಯಂತ್ರಣ, ಪಾತ್ರಶಿಲ್ಪ, ಶೈಲಿ, ವಿಶ್ಲೇಷಣ, ವರ್ಗೀಕರಣ ಶಿಷ್ಟತೆ, ನವಶಿಷ್ಟತೆ, ರಮ್ಯತೆ, ಸಾಂಕೇತಿಕತೆ, ಆಧುನಿಕತೆ, ಅತ್ಯಾಧುನಿಕತೆ–ಮುಂತಾದುವೆಲ್ಲವನ್ನೂ ಕೆಚ್ಚೆದೆಯಿಂದ ಕಿತ್ತೊಗೆದಿದ್ದಾನೆ, ಕ್ರೋಚೆ. ಯಾವೊಬ್ಬ ವಿಮರ್ಶಕನ ನಿಯಮಾವಳಿಯೂ ಸಾಹಿತ್ಯಲೋಕದಲ್ಲಿ ಅನುಲ್ಲಂಘನೀಯ ಕಾಯಿದೆಯಾಗಿಲ್ಲ; ಮುಂದೆ ಬಂದ ಕವಿಗಳು ಅದನ್ನು ಒಡೆದಿದ್ದಾರೆ. ವಿಮರ್ಶಕರು ಅಲ್ಲಗಳೆದಿದ್ದಾರೆ–ಎಂಬ ಅರ್ಧ ಸತ್ಯಾಂಶ ಕ್ರೋಚೆಯ ಪ್ರಧಾನ ಆಯುಧ.

ಅಂತರ್ಬೋಧೆ, ಅಭಿವ್ಯಕ್ತಿ ಶಬ್ದಗಳ ಜೊತೆಗೆ ಅಲ್ಲೊಮ್ಮೆ ಇಲ್ಲೊಮ್ಮೆ ಕವಿಯ ನಿಜ ರಾಗಭಾವನೆ ಎಂಬ ಪದಪುಂಜವನ್ನು ಕ್ರೋಚೆ ಉಪಯೋಗಿಸಿದ್ದಾನೆ. ತಾತ್ಪರ್ಯ ಒಂದೆ. ಬಳಕೆಯ ನುಡಿಗಳಿಗೆ ತನ್ನದೇ ಆದ ವಿಶೇಷಾರ್ಥವನ್ನು ಕೂಡಿಸುವುದರಲ್ಲಿ ಕ್ರೋಚೆ ನಿಸ್ಸೀಮ. ಕವಿಯ ನಿಜ ರಾಗಭಾವನೆಯೇ ಅವನ ಕಾವ್ಯತ್ವ, ಅವನ ಕಾವ್ಯ. ಅದು ಎಲ್ಲಿ ಮೂಡಿಬಂದಿದೆಯೋ ಅಲ್ಲಿ ವಿಮರ್ಶಕ ತನ್ನ ಬೆರಳನ್ನಿಟ್ಟು ಇತರರಿಗೆ ತೋರಿಸಿಕೊಡಬೇಕು; ಹಾಗೆ ಮಾಡಿದರೆ ಅವನು ಧನ್ಯ. ಕಾವ್ಯವನ್ನು ಪಠಿಸುವಾಗ, ಕಾವ್ಯಕ್ಕೆ ವ್ಯಾಖ್ಯಾನ ಮಾಡುವಾಗ, ವಿಮರ್ಶಕ ಕಾವ್ಯತ್ವ ಎದ್ದು ಕಾಣುವ ಭಾಗಗಳನ್ನು ಮಾತ್ರ ಗಮನಿಸಿ ಉಳಿದ ಭಾಗಗಳನ್ನು ಅಲಕ್ಷಿಸತಕ್ಕದ್ದು. ಈ ವಿಧದ ರಸಘಟ್ಟ ಗ್ರಹಿಕೆಯಿಂದ ಕವಿಗೆ ಅನ್ಯಾಯವೇನೂ ಆಗುವುದಿಲ್ಲ. ಬದಲಾಗಿ, ಕವಿಯ ಕವಿವ್ಯಕ್ತಿತ್ವ (ಪೊಯೆಟಿಕ್ ಪರ್ಸನ್ಯಾಲಿಟಿ) ಚೆನ್ನಾಗಿ ಚಿತ್ರಿತವಾಗುತ್ತದೆ. ಷೇಕ್ಸ್‌ಪಿಯರಾಗಲಿ, ಕಾರ್ನೀಲನಾಗಲಿ ಅವನ ಕಳಪೆಯೂ ಕುರೂಪವೂ ಆದ ಭಾಗಗಳನ್ನು ಕಟ್ಟಿಕೊಂಡು ನಾವೇಕೆ ದುಗುಡಗೊಳ್ಳಬೇಕು? ಅವಾವುವೂ ಅವನ ಕವಿವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯಲಾರವು. ಕ್ರೋಚೆ ಉಪದೇಶಿಸುವುದು ಒಂದು ಬಗೆಯ ಕವಿತಾಸಂಗ್ರಹ ವಿಮರ್ಶೆ, ಜೋಪಾನವಾಗಿ ಆರಿಸಿ ತೆಗೆದ ಕವಿತಾ ಸಂಗ್ರಹ ವಿಮರ್ಶೆ. ಪ್ರಾಯೋಗಿಕ ವಿಮರ್ಶಕನಾಗಿ ಕ್ರೋಚೆ ಅಂಥ ನಿದರ್ಶನವನ್ನು ಸಾಕಷ್ಟು ಕೊಟ್ಟಿದ್ದಾನೆ. ಒಳ್ಳೆಯ ರಸಜ್ಞ ಆತ; ಅವನ ವಾಕ್ಯಗಳಿಗೆ ಮನ್ನಣೆ ಸಲ್ಲಲೇಬೇಕು.

ಹಿಂದಿನಿಂದ ಮುಖ್ಯವಾಗಿ 18–19ನೆಯ ಶತಮಾನಗಳಲ್ಲಿ ಕೆಲವು ಕಟ್ಟುಪಾಡು ಹುಟ್ಟಿಬಂದು ಸಾಹಿತ್ಯ ವಿಮರ್ಶೆಯನ್ನು ಸಂಕಲೆಗೊಳಿಸಿದ್ದುವು. ಕ್ರೋಚೆ ಸ್ವಲ್ಪಮಟ್ಟಿಗೆ ಅವುಗಳಿಂದ ವಿಮೋಚನೆಗೆ ಕಾರಣನಾದ. ಕೃತಿಗೂ ವಿಮರ್ಶಕನಿಗೂ ಮಧ್ಯೆ ಯಾವ ಸಿದ್ಧಾಂತವಾಗಲಿ, ಪೂರ್ವಭಾವನೆಯಾಗಲಿ ಹೊರಗಣ ಸಂಗತಿಯಾಗಲಿ ವಿಚಾರವಾಗಿ ನಿಲ್ಲಕೂಡದು, ತಡೆಯಾಗಬಾರದು, ಎಂಬ ಅಭಿಪ್ರಾಯ ಮೆಚ್ಚಲರ್ಹವಾದದ್ದು. ಕೊನೆಗೆ ವೈಯಕ್ತಿಕವಾಗಿ ಕೃತಿಕಾರನೂ ಅಡ್ಡ ಬರಬಾರದು ಎಂಬುದೇ ಅವನ ವಿಸ್ಮಯತರುವ ಅಭಿಮತ. ಅದು ಸರಿ. ಆದರೆ ವಿಮರ್ಶೆಯಲ್ಲಿ ಅವನು ಉಳಿಯಗೊಡುವುದೇನು? ಅದರ ಬೆಲೆಯೆಷ್ಟು? ವಿಮರ್ಶಕನ ವೈಯಕ್ತಿಕ ಅನಿಸಿಕೆಯೇ ಪ್ರಮಾಣವಾಗಿಬಿಟ್ಟರೆ, ಬೇರಾವ ಪ್ರಮಾಣಕ್ಕೂ ಸ್ಥಾನಸಿಕ್ಕದೇ ಹೋದರೆ, ಅಭಿಪ್ರಾಯ ವಿನಿಮಯವಾಗಲಿ, ಪರಸ್ಪರ ಹೊಂದಾಣಿಕೆಯಾಗಲಿ ಹೇಗೆ ಸಾಧ್ಯ? ಅಭಿವ್ಯಕ್ತಿ ಪಂಥದ ಆದಿಪತ್ಯದಿಂದ ಗೊಂದಲಯೇಳುವುದಿಲ್ಲವೆ? ಎರಡನೆಯದಾಗಿ, ಸಾವಿರಾರು ವರ್ಷಗಳಿಂದ ನಡೆದುಬಂದ ವಿಮರ್ಶೆಯಲ್ಲಿ ಆ ವ್ಯವಸಾಯಕ್ಕೆ ಸದಾ ಮಾರ್ಗದರ್ಶಿಯಾಗಿ ನಿಲ್ಲಬಲ್ಲ, ಅನುಸರಿಸಬೇಕಾದ, ಶಾಶ್ವತ ತತ್ತ್ವ ಪದ್ಧತಿ, ನುಡಿಗಟ್ಟು ಒಂದೂ ಇಲ್ಲವೆಂದು ಕ್ರೋಚೆ ಹೇಳಿಬಿಟ್ಟರೆ ಅದನ್ನು ನಂಬಬೇಕೆ? ಕೆಲವು ವಿಮರ್ಶಕರು ತಮ್ಮ ತಮ್ಮ ವ್ಯಾಮೋಹವನ್ನು ಹಿಂಬಾಲಿಸಿ ಅತಿಯಿಂದ ಅತಿರೇಕಕ್ಕೆ ಧುಮ್ಮಿಕ್ಕಿರುವುದು ದಿಟ; ಕ್ರೋಚೆಯೂ ಅವರ ಗುಂಪಿಗೆ ಸೇರಿದವನೆಂದು ಭಾಸವಾಗದೆ ಹೋಗುತ್ತದೆಯೆ? ಮೂರನೆಯದಾಗಿ ಕಲೆ, ಅಂತರ್ಬೋಧೆ, ಅಭಿವ್ಯಕ್ತಿ, ವಿಭಾವನೆ ಸೌಂದರ್ಯವೆಲ್ಲಕ್ಕೂ ರೂಢಿಗೆ ವ್ಯತಿರಿಕ್ತವಾಗಿ ಒಂದೇ ಅರ್ಥವನ್ನು ಆರೋಪಿಸುವುದು ಸಮವೇ, ನ್ಯಾಯವೇ? ನಾಲ್ಕನೆಯದಾಗಿ, ವಿಮರ್ಶೆಯೂ ಒಂದು ವಿದ್ಯೆ, ಪಾರಿಭಾಷಿಕತೆ ಅದಕ್ಕೂ ಉಂಟು, ಎಂಬುದನ್ನು ಮರೆಯಬಹುದೆ? ಈ ಎಲ್ಲಾ ದೃಷ್ಟಿಯಿಂದ ಕ್ರೋಚೆಯ ವಿಮರ್ಶನ ಪದ್ಧತಿಯನ್ನೂ ಸಂಪೂರ್ಣವಾಗಿ ಒಪ್ಪಲಾಗುವುದಿಲ್ಲ. (ಎಸ್.ಎ.ಆರ್)

# ಕ್ರೋಟನ್

**ಕ್ರೋಚೆಯ ಸೌಂದರ್ಯ ಮೀಮಾಂಸೆ :** ತನ್ನ ಮಹಾಗ್ರಂಥವಾದ ಈಸ್ತೇಟಿಕದಲ್ಲಿ ಸೌಂದರ್ಯ, ಕಲಾನುಭವ ಮತ್ತು ಕಲಾಕೃತಿಗಳ ವಿಷಯದಲ್ಲಿ ತನ್ನದೇ ಆದ ವಿಶಿಷ್ಟ ಮತವನ್ನು ಕ್ರೋಚೆ ಸ್ಥಾಪಿಸಿದ್ದಾನೆ. ಈತನ ಪ್ರಕಾರ ಕಲಾಕ್ರಿಯೆ ಮಾನವನ ಆಧ್ಯಾತ್ಮಿಕ ಚರಿತ್ರೆಯಲ್ಲಿ ಒಂದು ರಸನಿಮಿಷ. ಸೌಂದರ್ಯಾನುಭವ ಒಂದು ಆಧ್ಯಾತ್ಮಿಕ ಅನುಭೂತಿ. ಇದರೊಡನೆ ನೀತಿ, ಧರ್ಮ, ಪ್ರಯೋಜನ ಮುಂತಾದ ವಿಷಯಗಳ ಯಾವ ಸಂಬಂಧವೂ ಇಲ್ಲ. ಆಧ್ಯಾತ್ಮಿಕ ಶಕ್ತಿಯಾದ ಪ್ರತಿಭಾನದ ದೃಷ್ಟಿಗೆ ಸಮಸ್ತ ಪ್ರಪಂಚವೂ ಗೋಚರವಾಗುತ್ತದೆ. ಅಲ್ಲದೆ, ಪ್ರತಿಭಾನಕ್ಕೆ ಕಂಡ ದೃಶ್ಯ ಸಂಪೂರ್ಣವಾಗಿ ಆತ್ಮವೇದ್ಯವಾಗುತ್ತದೆ. ಅಸಂಪೂರ್ಣವಾದ ನೋಟ ಪ್ರತಿಭಾನದ ನೋಟವಾಗಲಾರದು. ಎಂದರೆ ಒಂದು ವಿಷಯ ಅಥವಾ ವಸ್ತು ಸಂಪೂರ್ಣವಾಗಿ ವ್ಯಕ್ತವಾಗದಿದ್ದಲ್ಲಿ ಪ್ರತಿಭಾನದ ಮಟ್ಟಕ್ಕೆ ಏರಿಲ್ಲವೆಂದೇ ತಿಳಿಯಬೇಕು. ಆದ್ದರಿಂದ ಒಂದು ವಸ್ತುವಿನ ವ್ಯಕ್ತವಾಗುವಿಕೆಯೇ ಪ್ರತಿಭಾನವೆನ್ನಿಸಿಕೊಳ್ಳುತ್ತದೆ. ಅಥವಾ ಪ್ರತಿಭಾನವೇ ವ್ಯಕ್ತಮಾಡುವಿಕೆಯೂ ಆಗಿರುತ್ತದೆ. ಇದೇ ಕ್ರೋಚೆಯ ಸೌಂದರ್ಯ ಮೀಮಾಂಸೆಯ ಸೂತ್ರ. ಈ ವಾದ ಮನದಟ್ಟಾಗುವುದು ಸ್ವಲ್ಪ ಕಷ್ಟ.

ಸಾಮಾನ್ಯಾಭಿಪ್ರಾಯದಲ್ಲಿ ವ್ಯಕ್ತಮಾಡುವುದೆನ್ನುವುದು ಬಹಿರಂಗಪಡಿಸುವ ಒಂದು ಕಾರ್ಯ. ಅಂದರೆ ಭಾವನೆಗಳನ್ನು ಪದ, ಬಣ್ಣ, ಶಬ್ದ, ಮತ್ತಿತರ ಸಾಧನಗಳ ಮೂಲಕ ಬಹಿರಂಗ ಪಡಿಸುವಿಕೆ–ಅಂದರೆ ಪ್ರತಿಭಾನದ ಅನಂತರ ನಡೆಸುವ ಕಾರ್ಯ ಎಂದಾಗುತ್ತದೆ. ಆದರೆ ಇದಕ್ಕೆ ವಿರುದ್ಧವಾದುದೇ ಕ್ರೋಚೆಯ ವಾದ. ಕ್ರೋಚೆಯ ಪ್ರಕಾರ ಮನೋವೇದ್ಯವಾದ ಅಥವಾ ಪ್ರತಿಭಾನಾಗ್ರಾಹ್ಯವಾದ ಕಲಾನುಭವ ಸ್ವತಃ ಸಂಪೂರ್ಣ. ಸೌಂದರ್ಯಾನುಭವವನ್ನು ಯಾವ ಮಾಧ್ಯಮದ ಮೂಲಕವೂ ಹೊರಗೆಡಹುವ ಆವಶ್ಯಕತೆ ಇಲ್ಲವೇ ಇಲ್ಲ. ಆತ್ಮಾನುಭವದಲ್ಲಿಯೇ ಸೌಂದರ್ಯಾನುಭವ ಮತ್ತು ಕಲಾಕೃತಿಗಳು ಸಂಪೂರ್ಣಗೊಳ್ಳುತ್ತವೆ. ಎಂದರೆ ಸೌಂದರ್ಯ ಮತ್ತು ಕಲಾನುಭವಗಳು ಮನೋನಿಷ್ಠವೆಂದಂತಾಯಿತು.

ಇಂಥ ಆಧ್ಯಾತ್ಮಿಕ ಅಥವಾ ಮನೋನಿಷ್ಠ ಅನುಭವ ಸ್ವಯಂಪರಿಪೂರ್ಣವಾಗಿದ್ದು ಬಾಹ್ಯಾಭಿವ್ಯಕ್ತಿಗೆ ಸಂಬಂಧಪಟ್ಟಿರುವುದಿಲ್ಲ. ಎಂದರೆ ನಾವು ಸಾಮಾನ್ಯವಾಗಿ ಕರೆಯುವ ಕಲಾಕೃತಿಗಳಿಗೂ–ಎಂದರೆ ಚಿತ್ರ, ಕವನ, ಶಿಲ್ಪ ಮುಂತಾದವು–ಆ ಆದರ್ಶ, ಆಧ್ಯಾತ್ಮಿಕ ಅನುಭವಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಭೌತಮಾಧ್ಯಮ ಮೂಲಕವಾದ ಅಭಿವ್ಯಕ್ತಿ ಕಲಾನುಭವಕ್ಕೆ ಹೊರತಾಗಿ ಕೇವಲ ಪ್ರಾಪಂಚಿಕವಾಗುತ್ತದೆ. ಆದ್ದರಿಂದ ಆಧ್ಯಾತ್ಮಿಕವಾದ ಕಲಾನುಭವ ಮತ್ತು ಕಲಾಕೃತಿಗಳು ಪ್ರಾಪಂಚಿಕ ಮೌಲ್ಯ ವಿಮರ್ಶೆಗಳಿಗೆ, ಮಾನದಂಡಗಳಿಗೆ ಸಂಬಂಧಿಸಿರುವುದಿಲ್ಲ. ಸುಂದರ, ಅಸುಂದರವೆನ್ನುವ ತೀರ್ಮಾನಗಳೆಲ್ಲ ಭೌತಿಕವಾಗಿ ನಮಗೆ ಕಾಣಸಿಗುವ ಅಥವಾ ಕೇಳಿಬರುವ ಕೃತಿಗೆ ಸೇರಿದ್ದಲ್ಲದೆ, ಆಂತರಿಕವಾದ ಕಲಾನುಭವ ಅಥವಾ ಕಲಾಕೃತಿಗೆ ಸಲ್ಲುವುದಿಲ್ಲ. ಕಲೆಗೆ ಬೇರೊಂದು ಆದರ್ಶವಿಲ್ಲ. ಅದೇ ಅದರ ಆದರ್ಶ. ಯಾವ ರಸನಿಮಿಷದಲ್ಲಿ ಒಬ್ಬ ಭಾವಾವೇಶ ಹೊಂದುತ್ತಾನೆಯೋ ಆಗಲೆ ಕಲೆ ಉತ್ಪನ್ನವಾಗುತ್ತದೆ. ವಸ್ತುವಿನ ಪೂರ್ವಪರಿಚಯದ ಅರಿವು ಬೇಕಾಗಿಲ್ಲ. ಅದನ್ನು ಕಲಾವಿದ ಅರಸುವುದೂ ಇಲ್ಲ. ಅದರ ವಿವೇಚನೆಯೇ ಆತನಿಗೆ ಇಲ್ಲ. ಒಂದು ಉದ್ದೇಶ ಸಾಧನೆಗೆ ಮಾಡುವ ಕಲಾಕೃತಿ ಕಲೆಯಲ್ಲ. ಕಲೆ ಉದ್ದೇಶರಹಿತವಾದುದು. ನೀತಿ, ಧರ್ಮಗಳ ಕಟ್ಟಳೆಗಳಿಂದ ಪಾರಾದುದು. ಕಲೆಗೆ ಒಂದು ವಿಶಿಷ್ಟರೀತಿಯಲ್ಲಿ ಪ್ರಾಪಂಚಿಕ ಮಾನದಂಡಗಳಿಗೆ ನಿಲುಕದಂಥ ಸ್ವಾತಂತ್ರ್ಯವಿದೆ. ಕಲೆ, ಕಲೆಗಾಗಿ ಎನ್ನುವ ವಾದಕ್ಕೆ ಕ್ರೋಚೆಯ ವಿಚಾರ ಬಹಳ ಪುಷ್ಟಿಕೊಡುತ್ತದೆ.

ಬೊಸಾಂಕೆ, ಕಾಲಿಂಗ್‌ವುಡ್, ಕ್ಯಾರಿಟ್ ಮುಂತಾದವರು ಕ್ರೋಚೆಯ ಆದರ್ಶಪ್ರಧಾನವಾದ ಸೌಂದರ್ಯದರ್ಶನವನ್ನು ಮೆಚ್ಚಿಕೊಂಡರೂ ವಾಸ್ತವಿಕ ನೆಲೆಯಲ್ಲಿ ರೂಪುಗೊಳ್ಳದ ಪ್ರತಿಭಾನ ಕುಂಠಿತ ಅಥವಾ ಅಪೂರ್ಣವೆಂದು ಅಭಿಪ್ರಾಯಪಡುತ್ತಾರೆ. ಬೊಸಾಂಕೆ ತನ್ನ **ತ್ರಿ ಲೆಕ್ಚರ್ಸ್ ಆನ್ ಈಸ್ತೆಟಿಕ್ಸ್** ಎನ್ನುವ ಗ್ರಂಥದಲ್ಲಿ ಹೇಳುವಂತೆ, ಆತ್ಮದ ಪ್ರಕಾಶಕ್ಕೆ ದೇಹ ಬೇಕಾಗುವಂತೆ ಅಧ್ಯಾತ್ಮಶಕ್ತಿ ಎನಿಸಿದ ಪ್ರತಿಭೆಗೆ ಭೌತಿಕ ದೇಹ ಬೇಕಾಗುತ್ತದೆ. ವಸ್ತುಗತಮಾಡದ ಪ್ರತಿಭಾನ ಪ್ರತಿಭಾನವಾಗಲಾರದು. ಎರಡನೆಯವನ ಕಣ್ಣಿಗೆ ಅಥವಾ ಕಿವಿಗೆ ಬೀಳದ ಶಿಲ್ಪ, ಚಿತ್ರ ಅಥವಾ ಸಂಗೀತ ಯಾವ ಮೌಲ್ಯನಿರ್ಧಾರಕ್ಕೂ ಸಹಾಯಕವಾಗಲಾರದು. (ಕೆ.ಬಿ.ಆರ್.)

**ಕ್ರೋಟನ್ :** ಯೂಫೋರ್ಬಿಯೇಸೀ ಕುಟುಂಬಕ್ಕೆ (ಹರಳಿನ ಗಿಡದ ಕುಟುಂಬ) ಸೇರಿದ ಒಂದು ಸುಂದರ ಹಾಗೂ ಸುಪ್ರಸಿದ್ಧ ಅಲಂಕಾರ ಸಸ್ಯ ಜಾತಿ. ಕೋಡೀಯಂ ವೇರಿಗೇಟಂ ಇದರ ಶಾಸ್ತ್ರೀಯ ನಾಮ. ಇದರಲ್ಲಿ ಅಸಂಖ್ಯಾತ ಬಗೆಗಳಿದ್ದು ಒಂದೊಂದೂ ವರ್ಣ ವೈವಿಧ್ಯಮಯವಾದ ಉಜ್ಜ್ವಲವಾದ ಎಲೆಗಳನ್ನು ಪಡೆದಿರುವುದರಿಂದ ಇವನ್ನು ಅಂದಕ್ಕಾಗಿ ಉದ್ಯಾನಗಳಲ್ಲಿ ಮನೆ ತೋಟಗಳಲ್ಲಿ ಬೆಳೆಸಲಾಗುತ್ತದೆ. ಎಲೆಗಳ ವರ್ಣವಿನ್ಯಾಸ ಒಂದೊಂದು ಬಗೆಯಲ್ಲೂ ಒಂದೊಂದು ವಿಧ.

ಇದೊಂದು ಬಹುವಾರ್ಷಿಕ ಪೊದೆ ಸಸ್ಯ. ಸುಮಾರು 2'–6' ಎತ್ತರಕ್ಕೆ ಬೆಳೆಯುತ್ತದೆ. ಗಿಡದ ಬುಡದಲ್ಲಿ 2–3 ಮುಖ್ಯ ಕಾಂಡಗಳಿದ್ದು ಇವು ಮಿತವಾಗಿ ಕವಲೊಡೆದಿರುತ್ತವೆ. ಎಲೆಗಳು ಸರಳ; ಪರ್ಯಾಯವಾಗಿ ಜೋಡಣೆಗೊಂಡಿವೆ. ಇವುಗಳ ತೊಟ್ಟು ಚಿಕ್ಕದು. ಅಂಚು ಸಾಮಾನ್ಯವಾಗಿ ನಯ. ಕೆಲವೊಮ್ಮೆ ಅಲೆಗಳಾಗಿ ವಿಭಾಗವಾಗಿರುವುದು ಉಂಟು. ತುದಿ ಮೊನಚಾಗಿರಬಹುದು, ಇಲ್ಲವೆ ಮೊಂಡಾಗಿರಬಹುದು. ಅಲಗು ಉದ್ದುದ್ದವಾಗಿರಬಹುದು ಇಲ್ಲವೆ ಕಿರಿದಾಗಿ ಎಸಳಿನಂತಿರಬಹುದು. ಮೇಲ್ಮೈ ಹೊಳೆಯುತ್ತಿರುತ್ತದೆ. ಬಣ್ಣ ಅಚ್ಚ ಬಿಳಿಯಿಂದ ಹಿಡಿದು ನಸುಹಳದಿ, ಗಾಢ ಹಳದಿ, ಕಿತ್ತಳೆ ನಸುಗೆಂಪು, ಕೆಂಪು, ಕಡುಗೆಂಪು, ನೇರಳೆವರೆಗೂ ವ್ಯತ್ಯಾಸವಾಗುತ್ತದೆ. ಕೆಲವು ಬಗೆಗಳಲ್ಲಿ ಈ ಬಣ್ಣಗಳ ಮನಮೋಹಕ ಮಿಶ್ರಣವೂ ಅಲ್ಲಲ್ಲಿ ಭಿನ್ನಬಗೆಯ ಬಣ್ಣದ ಮಚ್ಚೆಗಳೂ ಇದ್ದು ಎಲೆಗಳು ಅತ್ಯಾಕರ್ಷಕವಾಗಿರುತ್ತವೆ. ಕ್ರೋಟನ್ನಿನ ಎಲೆಗಳು ಎಷ್ಟು ಆಕರ್ಷಕವೋ ಇದರ ಹೂಗಳು ಅಷ್ಟೇ ಅನಾಕರ್ಷಕ. ಹೂಗಳು ಏಕಲಿಂಗಿಗಳು; ಎಲೆಗಳ ಕಂಕುಳಲ್ಲಿ ಹುಟ್ಟುವ ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಒಂದೇ ಹೂ ಗೊಂಚಲಿನ ಮೇಲ್ಭಾಗದಲ್ಲಿ ಗಂಡು ಹೂಗಳು, ಕೆಳಭಾಗದಲ್ಲಿ ಹೆಣ್ಣುಹೂಗಳು ಇವೆ. ಗಂಡು ಹೂವಿನಲ್ಲಿ ದಳಗಳು ಪುಷ್ಪಪತ್ರಗಳೂ 20–30 ಕೇಸರಗಳೂ ಇವೆ. ಹೆಣ್ಣು ಹೂವಿನಲ್ಲಿ ಬರಿಯ ಪುಷ್ಪಪತ್ರಗಳು ಮೂರು ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ಫಲ ಸಂಪುಟ ಮಾದರಿಯದು. ಕ್ರೋಟನ್ ಮಲಯದೇಶದ ಮೂಲವಾಸಿ. ಎಲೆಗಳ ಅಂದದಿಂದ ಬಲುಬೇಗ ಜನಪ್ರಿಯವಾದ ಇದನ್ನು ಇಂದು ಪ್ರಪಂಚದ ಎಲ್ಲ ಕಡೆಗಳಲ್ಲೂ ಬೆಳೆಸಲಾಗುತ್ತಿದೆ. ಕಳೆದ ಶತಮಾನದಲ್ಲಿ ಇದನ್ನು ಯುರೋಪಿಗೆ ತಂದು ರೂಢಿಸಲಾಯಿತೆಂದು ಹೇಳಿಕೆ ಉಂಟು. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತಕ್ಕೆ ಕಾಲಿಟ್ಟ ಕ್ರೋಟನ್ ಕಳೆದ ಸು. 75 ವರ್ಷಗಳಿಂದೀಚೆಗೆ ಹೆಚ್ಚು ಪ್ರಸಿದ್ಧಿಗೆ ಬಂದಿದೆ. ಬೆಂಗಳೂರಿನ ಜಗತ್ಪ್ರಸಿದ್ಧ ಲಾಲ್‌ಬಾಗ್ ತೋಟದಲ್ಲಿ ಕ್ರೋಟನ್ನಿನ ಅತ್ಯುತ್ತಮ ತಳಿಗಳ ಸಂಗ್ರಹ ಉಂಟು.

ಕ್ರೋಟನ್ ಸಸ್ಯವನ್ನು ಬೀಜಗಳ ಇಲ್ಲವೇ ಗೂಟಿ ಮಾಡುವುದರ ಮೂಲಕವೂ ಕಾಂಡತುಂಡುಗಳಿಂದಲೋ ವೃದ್ಧಿಮಾಡಬಹುದು. ಇದರ ವಿವಿಧ ಬಗೆಗಳನ್ನು ಅಡ್ಡಹಾಯಿಸಿ ಬೀಜಗಳನ್ನು ಪಡೆದು ವಿಭಿನ್ನ ರೀತಿಯ ಹಾಗೂ ಆಕರ್ಷಕ ತಳಿಗಳನ್ನು ಪಡೆಯಬಹುದು.



ಹೀಗೆ ಪಡೆದ ಯಾವುದೇ ಒಂದು ಚೆಲುವಾದ ತಳಿಯನ್ನು ಗೂಟಿ ಮಾಡಿ ಸುಲಭವಾಗಿ ವೃದ್ಧಿಮಾಡಬಹುದು. ಸಾಮಾನ್ಯವಾಗಿ ಒಂದೆರಡು ಎಲೆಗಳಿರುವ ಕಾಂಡತುಂಡುಗಳನ್ನು ಮರಳುತುಂಬಿದ ಆಳವಿಲ್ಲದ ಪೆಟ್ಟಿಗೆಯಲ್ಲಿ ನೆಟ್ಟು ಯಂತ್ರಗಳ ಸಹಾಯದಿಂದ 10 ಮಿನಿಟುಗಳಿಗೊಂದಾವರ್ತಿ ಸಣ್ಣ ಸಣ್ಣ ತುಂತುರಾಗಿ ನೀರು ಹನಿಸುವ ವ್ಯವಸ್ಥೆಮಾಡಿದಲ್ಲಿ ತುಂಡುಗಳು ಸುಲಭವಾಗಿ ಬೇರುಬಿಡುತ್ತವೆ.

ಕ್ರೋಟನ್ ಸಸ್ಯಗಳನ್ನು ಸಾಮಾನ್ಯವಾಗಿ ಕುಂಡ ಸಸ್ಯಗಳಾಗಿ ಬೆಳೆಸುತ್ತಾರೆ. ನೆಲದಲ್ಲಿ ನೇರವಾಗಿ ನೆಟ್ಟು ಬೆಳೆಸಲೂ ಬಹುದು. ನೆಲದಲ್ಲಿ ಬೆಳೆಯುವಂತವೂ ಕುಂಡದಲ್ಲಿ ಬೆಳೆಯುವ ಬಗೆಗಳಿಗಿಂತ ಹೆಚ್ಚು ದಷ್ಟಪುಷ್ಟವಾಗಿಯೂ ಎತ್ತರವಾಗಿಯೂ ಇರುತ್ತವೆ. ಕುಂಡದಲ್ಲಾಗಲಿ ನೆಲದಲ್ಲಾಗಲಿ ಇವನ್ನು ಬೆಳೆಸುವಾಗ ಮಣ್ಣಿನ ಫಲವಂತಿಕೆಯ ಬಗ್ಗೆ ಎಚ್ಚರಿಕೆವಹಿಸಬೇಕು. ಕುಂಡದಲ್ಲಿ ಬೆಳೆಸುವಾಗ ಅದರಲ್ಲಿರುವ ಮಣ್ಣನ್ನು ಮೂರು ತಿಂಗಳುಗಳಿಗೆ ಒಂದು ಸಾರಿ ಬದಲಾಯಿಸಬೇಕು. ಇವುಗಳ ಹುಲುಸಾದ ಬೆಳವಣಿಗೆಗೆ ನಾಲ್ಕುಭಾಗ ಕೆಂಪುಮಣ್ಣು, ನಾಲ್ಕು ಭಾಗ ಕುದುರೆಗೊಬ್ಬರ, ಮೂರುಭಾಗ ಮರಳು, ಎರಡು ಭಾಗ ಎಲೆಗೊಬ್ಬರ ಮತ್ತು ಒಂದುಭಾಗ ಹಳೆಗಾರೆ ಅಥವಾ ಸುಣ್ಣದ ಅಂಶವಿರುವ ಮಣ್ಣು ಅಗತ್ಯ. ಹಳೆ ಗಾರೆಯನ್ನು ಉಪಯೋಗಿಸುವಾಗ ಇದನ್ನು ನುಣ್ಣಗೆ ಪುಡಿಮಾಡಿ ಹಾಕಬೇಕು.

ಕುಂಡದ ತುಂಬ ಸಸ್ಯದ ಬೇರು ತುಂಬಿಕೊಂಡು ಬೇರುಗಳು ಮಣ್ಣಿನ ಮೇಲುಭಾಗದಲ್ಲಿ ಕಾಣಿಸಿಕೊಂಡಾಗ, ಕುಂಡದಿಂದ ಸಸ್ಯವನ್ನು ಬದಲಾಯಿಸಿ ದೊಡ್ಡದಾದ ಕುಂಡದಲ್ಲಿ ಮೇಲೆ ಹೇಳಿರುವ ಮಣ್ಣಿನ ಮಿಶ್ರಣವನ್ನು ತುಂಬಿ ಅದರಲ್ಲಿ ಗಿಡವನ್ನು ನಾಟಿಮಾಡಬೇಕು.



ಪ್ರತಿನಿತ್ಯ ನೀರು ಹಾಕಬೇಕು. ಕೆಲವು ಸಾರಿ ಕುಂಡದ ತಳದಲ್ಲಿಯ ರಂಧ್ರ ಮುಚ್ಚಿಕೊಂಡು ಕುಂಡದಲ್ಲಿ ಹೆಚ್ಚಾದ ನೀರು ಸರಿಯಾಗಿ ಬಸಿದುಹೋಗದೆ ಇದ್ದು ಗಿಡ ಬಿಳಿಚಿಕೊಂಡು ರೋಗಪೀಡಿತವಾದ ರೀತಿಯಲ್ಲಿ ಕಾಣುತ್ತದೆ. ಆಗ ಕುಂಡದಲ್ಲಿರುವ ಗಿಡವನ್ನು ಹೊರತೆಗೆದು, ಮುಚ್ಚಿಕೊಂಡಿರುವ ರಂಧ್ರವನ್ನು ತೆಗೆದು ಹೊಸಗೊಬ್ಬರ ಮಿಶ್ರಣವನ್ನು ತುಂಬಿ ಮತ್ತೆ ನಾಟಿ ಮಾಡಬೇಕು. ನೆಲದಲ್ಲಿ ಬೆಳೆಸುವ ಕ್ರೋಟನ್ ಗಿಡಗಳ ನೀರಿನ ಆವಶ್ಯಕತೆ ಮಳೆಯನ್ನು ಅವಲಂಬಿಸಿದೆ. ಇವು ಹೆಚ್ಚು ಬಿಸಿಲಿನ ತಾಪವನ್ನು ಸಹಿಸುವುದಿಲ್ಲವಾದ್ದರಿಂದ ಇವನ್ನು ಪಾರ್ಶ್ವನೆರಳಿನಲ್ಲಿ ಇಡಬೇಕು. ವಿಪರೀತ ಬಿಸಿಲಿನಲ್ಲಿ ಬೆಳೆಸಿದ ಗಿಡಗಳ ಎಲೆಗಳ ಬಣ್ಣ ನಶಿಸಿಹೋಗುತ್ತದೆ.

ಗಾಳಿ ಮತ್ತು ಇತರ ಕಾರಣಗಳಿಂದ ಗಿಡ ಮತ್ತು ಎಲೆಗಳ ಮೇಲೆ ದೂಳು ತುಂಬಿಕೊಂಡು ಮಂಕಾಗಿ ಕಾಣುತ್ತವೆ. ಯಂತ್ರಗಳ ಸಹಾಯದಿಂದ ನೀರನ್ನು ಸಿಂಪಡಿಸಿ ದೂಳನ್ನು ತೊಳೆಯುವುದರಿಂದ ಎಲೆಗಳು ಶುಭ್ರವಾಗಿ ಕಾಣುವುವಲ್ಲದೆ ಲವಲವಿಕೆಯಾಗಿ ಕಾಣುತ್ತವೆ. ಅಲ್ಲದೆ ನೀರನ್ನು ಸಿಂಪಡಿಸುವುದರಿಂದ ಕೀಟ ಮತ್ತು ಬೂಷ್ಟು ರೋಗಗಳನ್ನು ಸ್ವಲ್ಪಮಟ್ಟಿಗೆ ತಡೆಯಬಹುದು. ಕ್ರೋಟನಿಗೆ ಹಲವಾರು ಬಗೆಯ ಕೀಟಪೀಡೆಗಳು ಅಂಟುವುದುಂಟು. ಇವುಗಳಲ್ಲಿ ಬಲುಮುಖ್ಯವಾದವು ಇವು. ಬಿಳಿತಿಗಣೆ(ಮೀಲೀಬಗ್ಸ್): ಇವು ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳ ಎಳೆಯ ಅಂಗಗಳಲ್ಲಿ ಕಾಣಿಸಿಕೊಂಡು ಸಸ್ಯರಸವನ್ನು ಹೀರಿ ತೊಂದರೆಪಡಿಸುತ್ತವೆ. 0.025%ರ ಪ್ಯಾರಥಿಯಾನ್ ದ್ರಾವಣ ಸಿಂಪಡಿಸುವುದರಿಂದ ಇವನ್ನು ಹತೋಟಿ ಮಾಡಬಹುದು. ಕೆಂಪು ಜೇಡ: ಎಲೆಗಳ ತಳಭಾಗದಲ್ಲಿ ಮತ್ತು ಎಳೆಯ ಕಾಂಡ ತುದಿಯಲ್ಲಿ ಅಗಾಧ ಸಂಖ್ಯೆಯಲ್ಲಿ ಇದ್ದು ಸಸ್ಯ ರಸವನ್ನು ಹೀರುತ್ತವೆ. ಇದರಿಂದ ಸಸ್ಯದ ಬೆಳವಣಿಗೆ ನಿಂತು ಹೋಗುತ್ತದೆ. ಈ ಕೀಟಗಳ ಹಾವಳಿ ವಿಪರೀತವಾದಾಗ ಸಸ್ಯಗಳು ಸತ್ತು ಹೋಗುತ್ತವೆ.

ಕ್ರೋಟನ್ ಪ್ರಸಿದ್ಧ ಅಲಂಕಾರ ಸಸ್ಯವೊಂದೇ ಅಲ್ಲ. ಮಲಯದಲ್ಲಿ ಇದು ಅತ್ಯುತ್ತಮವಾದ ಔಷಧಿಸಸ್ಯವೂ ಹೌದು; ಇದರ ಬೇರಿನ ಪುಡಿಯನ್ನು ಗಾಯಗಳ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ. ಎಲೆಯ ಪುಡಿ ಮಕ್ಕಳ ಮೂತ್ರವ್ಯಾಧಿಗೆ ಉತ್ತಮವಾದ ಮದ್ದು. ಕೆಲವು ಬಗೆಗಳ ರಸ ಮಲವಿಸರ್ಜನೆಯನ್ನು ಪರಿಣಾಮಕಾರಿಯಾಗಿ ತೀವ್ರಗೊಳಿಸುತ್ತದೆ. ಈ ರಸ ಗರ್ಭಪಾತ ಪ್ರಚೋದನಕಾರಿ ಎಂದೂ ತಿಳಿದುಬಂದಿದೆ. ಹಲವು ಬಗೆಗಳ ಎಲೆಗಳು ಸಿಹಿಯಾಗಿರುವುದರಿಂದ ಭಕ್ಷ್ಯಭೋಜ್ಯಗಳಲ್ಲಿ ಉಪಯೋಗಿಸುವುದುಂಟು. ಪೆಸಿಫಿಕ್ ಸಾಗರದಲ್ಲಿಯ ದ್ವೀಪಗಳಲ್ಲಿ ಹಾಗೂ ಮಲಯದಲ್ಲಿ ಅತಿಥಿಗಳಿಗೆ ಕ್ರೋಟನಿನ ಎಲೆಗುಚ್ಛವನ್ನು ಕೊಡುವುದು ಗೌರವಸೂಚಕವೆಂದು ತಿಳಿಯಲಾಗಿದೆ.

ಕ್ರೋಟನಿನಲ್ಲಿ ಹಲವಾರು ಬಗೆಗಳಿವೆ ಎಂದು ಮೊದಲೇ ಹೇಳಲಾಗಿದೆ. ಉದ್ಯಾನಗಾರಿಕೆಯ ದೃಷ್ಟಿಯಿಂದ ಬಹುಮುಖ್ಯವಾಗಿರುವ ಬಗೆಗಳ ಹೆಸರುಗಳನ್ನು ಮಾತ್ರ ಮುಂದೆ ತಿಳಿಸಲಾಗಿದೆ. ರೊಸೆಟ್, ಸ್ಪಾಪ್‌ಲೈಟ್, ಮಿಸೆಸ್ ಕೋಲೆಡ್, ಪಂಕ್ಟೇಟಮ್ ಆರಿಯಮ್, ಫಿಲಡೆಲ್ಫಿಯ, ಔಕ್ಯುಬೀ, ಫೋಲಿಯಮ್, ಗೋಲ್ಡನ್ ರಿಂಗ್, ರೇಡಿಯೈ, ಪಾಲಿಕ್ರೋಮ್, ಮಾನ್ಸ್‌ಫ್ಲಾರಿನ್, ಕೊಲಂಬಿಯಾನ ಗೋಲ್ಡ್, ಸನ್‌ರೈಸ್, ಮೆಜೆಸ್ಟಿಕಮ್ ಮುಂತಾದವು ಪ್ರಪಂಚಾದ್ಯಂತ ಜನಪ್ರಿಯವಾದವು. ಅಲೆಕ್ಸಾಂಡ್ರ, ಎಕ್ಸೆಲ್ಸಿಯರ್, ಇಂಪರೇಟರ್, ಮ್ಯಾಕ್ಯುಲೇಟಮ್, ಪ್ರಿನ್ಸ್ ಆಫ್ ವೇಲ್ಸ್, ಸನ್‌ಸೆಟ್, ಮೂರಿಯಾನಸ್, ಮ್ಯುಟಾಬಿಲಿಸ್ ಇತ್ಯಾದಿ ಇನ್ನು ಕೆಲವು ಪ್ರಸಿದ್ಧ ಬಗೆಗಳು. (ಬಿ.ಎ.ಸಿ; ವಿ.ಬಿ.)

**ಕ್ರೋಟನಾಲ್ಡಿಹೈಡ್ :** ಅಸಿಟಾಲ್ಡಿಹೈಡಿನ ಎರಡು ಅಣುಗಳು ಅಲ್ಡಾಲ್ ಸಂಘನನ ಕ್ರಿಯೆಗೆ ಒಳಗಾದಾಗ ದೊರೆಯುವ ಉತ್ಪನ್ನ. ಅಣುಸೂತ್ರ $CH_3CH=CH.CHO$. ಔದ್ಯೋಗಿಕವಾಗಿ ದೊರೆಯುವ ಕ್ರೋಟನಾಲ್ಡಿಹೈಡ್ ಟ್ರಾನ್ಸ್ ಸಮರೂಪಿ. ಇದು $102^\circ$ ಸೆಂ. ನಲ್ಲಿ ಕುದಿಯುವ ತಿಳಿನೀರಿನ ಬಣ್ಣದ ದ್ರವ. ಗಾಳಿಗೆ ಮತ್ತು ಬೆಳಕಿಗೆ ಒಡ್ಡಿದಾಗ ನಸು ಹಳದಿಬಣ್ಣಕ್ಕೆ ತಿರುಗುತ್ತದೆ. ಜ್ವಲಿಸಬಲ್ಲ ದ್ರವ. ಘಾಟುವಾಸನೆ ಉಂಟು. ಆವಿಯ ಸಂಪರ್ಕದಲ್ಲಿ ಕಣ್ಣಲ್ಲಿ ಉರಿಯುಂಟಾಗಿ ನೀರು ಬರುತ್ತದೆ. ನೀರಿನಲ್ಲಿ ತುಸುಮಟ್ಟಿಗೆ ಮಾತ್ರ ವಿಲೀನವಾದರೂ ಮದ್ಯಸಾರ, ಈಥರ್, ಬೆಂಜೀನ್, ಟಾಲೀನ್, ಸೀಮೆ ಎಣ್ಣೆಗಳಲ್ಲಿ ಎಲ್ಲ ಪರಿಮಾಣಗಳಲ್ಲಿಯೂ ಬೆರೆಯುತ್ತದೆ. N ಬ್ಯುಟೈಲ್ ಆಲ್ಕೊಹಾಲ್ ಮತ್ತು 2–ಈಥೈಲ್ ಹೆಕ್ಸೈಲ್ ಆಲ್ಕೊಹಾಲುಗಳ ತಯಾರಿಕೆಯಲ್ಲಿ ಇದು ಮಧ್ಯವರ್ತಿ ವಸ್ತು. ವಿಲೀನಕಾರಿಯಾಗಿಯೂ ಉಪಯೋಗ ಉಂಟು. ರಬ್ಬರ್ ವೇಗವರ್ಧಕಗಳ ತಯಾರಿಕೆಯಲ್ಲೂ ರಾಸಾಯನಿಕ ಯುದ್ಧದಲ್ಲೂ ಇದರ ಬಳಕೆ ಅಧಿಕ. ಅನೇಕ ಆರ್ಗ್ಯಾನಿಕ್ ವಸ್ತುಗಳ ಸಂಶ್ಲೇಷಣೆಯಲ್ಲಿ ಅಲ್ಲದೆ ಚರ್ಮವನ್ನು ಹದಮಾಡುವಾಗ ಈಥೈಲ್ ಆಲ್ಕೊಹಾಲಿನೊಂದಿಗೆ ಬೆರೆಸುವಲ್ಲಿ ಈ ವಸ್ತುವನ್ನು ಉಪಯೋಗಿಸುತ್ತಾರೆ.

(ಎಚ್.ಎಸ್.ಎಸ್.)

**ಕ್ರೋಟಲೇರಿಯ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೊನೇಸೀ ಉಪಕುಟುಂಬಕ್ಕೆ ಸೇರಿದ ಒಂದು ಮುಖ್ಯವಾದ ಸಸ್ಯಜಾತಿ. ಉಷ್ಣ ಹಾಗೂ ಸಮಶೀತೋಷ್ಣ ವಲಯಗಳ ಮೂಲವಾಸಿಯಿದು. ಸುಮಾರು 400ಕ್ಕೂ ಹೆಚ್ಚು ಪ್ರಭೇದಗಳನ್ನೊಳಗೊಂಡಿದೆ. ಭಾರತದಲ್ಲಿ ಸುಮಾರು 80 ಪ್ರಭೇದಗಳಿವೆ. ಇವುಗಳಲ್ಲೆಲ್ಲ ಅತ್ಯಂತ ಮುಖ್ಯವಾದುದು ಕ್ರೊ.ಜನ್ಸಿಯ ಪ್ರಭೇದ. ಇದನ್ನು ಸಾಮಾನ್ಯ ಬಳಕೆಯಲ್ಲಿ ಅಪಸಣಬು ಎಂದು ಕರೆಯಲಾಗುತ್ತದೆ. (**ನೋಡಿ– ಅಪಸಣಬು**). ಉಳಿದವುಗಳಲ್ಲಿ

ಮುಖ್ಯವಾದವು ಏಲೇಟ, ಬರ್ಡ್ಗಿಯ, ಫೆರುಜಿನಿಯ, ಲ್ಯಾಬರ್ನಿ ಫೋಲಿಯ, ರೆಟ್ಯೂಸ, ಸ್ಟ್ರಯೇಟ ಮತ್ತು ವೆರುಕೋಸ ಪ್ರಭೇದಗಳು.

ಎಲ್ಲ ಪ್ರಭೇದಗಳೂ ಏಕವಾರ್ಷಿಕ ಇಲ್ಲವೆ ಬಹುವಾರ್ಷಿಕ ಸಸ್ಯಗಳು. ಏಲೇಟ, ಸ್ಟ್ರಯೇಟ ಮುಂತಾದ ಪ್ರಭೇದಗಳು 1'–5' ಎತ್ತರಕ್ಕೆ ಬೆಳೆದರೆ ಅನಜಿರಾಯ್ಡಿಸ್, ರೆಟ್ಯೂಸ ಮುಂತಾದವು 15'–20' ಎತ್ತರಕ್ಕೆ ಬೆಳೆಯುತ್ತವೆ. ಎಲೆಗಳು ಸರಳ ಇಲ್ಲವೆ ಸಂಯುಕ್ತ ಮಾದರಿಯವು. ಸಂಯುಕ್ತ ಮಾದರಿಯವುಗಳಲ್ಲಿ ಸಾಮಾನ್ಯವಾಗಿ 3 ಕಿರುಎಲೆಗಳಿರುತ್ತವೆ. ಹೂಗಳು ರೆಂಬೆಗಳ ತುದಿಯಲ್ಲಿಯ ರೇಸೀಮ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗಳ ಬಣ್ಣ ಸಾಮಾನ್ಯವಾಗಿ ಹಳದಿ. ಕೆಲವು ಪ್ರಭೇದಗಳಲ್ಲಿ ನೀಲಿ ಬಣ್ಣ ಇರಲೂಬಹುದು. ಹೂಗಳು ಉಭಯಪಾರ್ಶ್ವ ಸಮಾಂಗತೆಯನ್ನು ಪ್ರದರ್ಶಿಸುತ್ತವೆ. ಪ್ರತಿ ಹೂವಿನಲ್ಲಿ 5 ಪುಷ್ಪಪತ್ರಗಳು, 5 ದಳಗಳು, 10 ಕೇಸರಗಳು ಮತ್ತು ಒಂದೇ ಕಾರ್ಪೆಲಿನಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯ ಇವೆ. ದಳಗಳಲ್ಲಿ ಹೂವಿನ ಮೇಲ್ಭಾಗದ್ದು ಬಲು ದೊಡ್ಡದು; ಪತಾಕೆಯಂತೆ ಇದೆ. ಇನ್ನೆರಡು ಹೂವಿನ ಅಕ್ಕಪಕ್ಕಗಳಲ್ಲಿದ್ದು ರೆಕ್ಕೆಗಳಂತಿವೆ. ಉಳಿದವೆರಡು ತಮ್ಮ ತಳಭಾಗದಲ್ಲಿ ಒಂದರೊಡನೊಂದು ಕೂಡಿದ್ದು ದೋಣಿಯಾಕಾರದಲ್ಲಿವೆ. ಕೇಸರಗಳೆಲ್ಲ ಪರಸ್ಪರ ಕೂಡಿವೆ. ಫಲ ಸಂಪುಟ ಮಾದರಿಯದು. ಸಾಮಾನ್ಯವಾಗಿ ಗಾಳಿಯಿಂದ ತುಂಬಿ ಊದಿಕೊಂಡಿದ್ದು ಅಲ್ಲಾಡಿಸಿದಾಗ ಒಳಗಿನ ಬೀಜಗಳು ಬುಡುಬುಡಿಕೆಯಂತೆ ಸದ್ದು ಮಾಡುತ್ತವೆ.

ಕ್ರೋಟಲೇರಿಯದ ವಿವಿಧ ಪ್ರಭೇದಗಳಿಂದ ಅನೇಕ ಬಗೆಯ ಉಪಯೋಗಗಳಿವೆ. ಜನ್ಸಿಯ ಪ್ರಭೇದವನ್ನು (ಅಪಸಣಬು) ನಾರಿಗಾಗಿ, ಹಸುರೆಲೆ ಗೊಬ್ಬರಕ್ಕಾಗಿ ಬೆಳೆಸುತ್ತಾರೆ. ಏಲೇಟ, ಅನಜಿರಾಯ್ಡಿಸ್, ಬರ್ಡ್ಗಿಯ, ಫೆರುಜಿನಿಯ, ಸ್ಟ್ರಯೇಟ ಪ್ರಭೇದಗಳನ್ನು ಮೇವಾಗಿ ಬಳಸುವುದುಂಟು. ರೆಟ್ಯೂಸ ಪ್ರಭೇದವನ್ನು ಕಜ್ಜಿ ಮತ್ತಿತರ ಚರ್ಮದ ತುರಿಗಳ ನಿವಾರಣೆಗೆ ಉಪಯೋಗಿಸುತ್ತಾರೆ. ಆಲ್ಬಿಡ ಮತ್ತು ಟ್ರೈಫೋಲಿಯಾಸ್ಟ್ರಮ್ ಪ್ರಭೇದಗಳ ಬೇರು ಭೇದಿಕಾರಕವೆಂದು ಹೇಳಲಾಗಿದೆ. (ಡಿ.ಜಿ.)

**ಕ್ರೋಟಾನಿಕ್ ಆಮ್ಲ :** ಮೆಲಾನಿಕ್ ಆಮ್ಲ ಮತ್ತು ಅಸಿಟಾಲ್ಡಿಹೈಡುಗಳ ರಾಸಾಯನಿಕ ಕ್ರಿಯೆಯಿಂದ ದೊರೆಯುವ ಸಂಯುಕ್ತ.

$$CH_3\text{-}CHO + CH_2\text{–}(COOH)_2 \xrightarrow{20^\circ\text{ಸೆಂ.}} CH_3 - CH = CH - COOH$$

ಇದು ಕ್ರೋಟಾನಿಕ್ ಆಮ್ಲ ಮತ್ತು ಐಸೋಕ್ರೋಟಾನಿಕ್ ಆಮ್ಲ ಎಂಬ ಎರಡು ರೂಪದಲ್ಲಿ ಸಿಕ್ಕುತ್ತದೆ. ಇವೆರಡರ ಅಣುಸೂತ್ರ ಒಂದೇ ಇದ್ದರೂ ಅಣು ರಚನೆ ಮಾತ್ರ ಬೇರೆ ಬೇರೆ. ಇವೆರಡರಲ್ಲೂ ಒಂದು ದ್ವಿಬಂಧ ಇರುವುದರಿಂದ ಇವನ್ನು ಜ್ಯಾಮಿತಿಯ ಐಸೋಮರುಗಳೆಂದು ಕರೆಯುತ್ತಾರೆ. ಈ ಆಮ್ಲಗಳ ಅಣುರಚನೆಯನ್ನು ಕೆಳಗಿನಂತೆ ಚಿತ್ರಿಸಬಹುದು.

| | |
|---|---|
| $CH_3 - C - H$ | $CH_3 - C - H$ |
| ‖ | ‖ |
| HOOC –C-H | H – C – COOH |
| ಕ್ರೋಟಾನಿಕ್ ಆಮ್ಲ | ಐಸೋಕ್ರೋಟಾನಿಕ್ ಆಮ್ಲ |

ಕ್ರೋಟಾನಿಕ್ ಆಮ್ಲ ಹೆಚ್ಚು ಸ್ಥಿರವಾಗಿದ್ದು ಕ್ರೋಟಾನ್ ಎಣ್ಣೆಯಲ್ಲಿ ಗ್ಲಿಸರಿನ್ನಿನ ಎಸ್ಟರ್ ರೂಪದಲ್ಲಿ ದೊರೆಯುವುದರಿಂದ ಇದಕ್ಕೆ ಆ ಹೆಸರು ಬಂದಿದೆ. (ಎಲ್.ಡಿ.ಎಂ)

**ಕ್ರೋಟಾಲಿಡೀ(ಕ್ರೋಟಲಿನೆ) :** ಮಂಡಲ ಹಾವುಗಳ ಹತ್ತಿರದ ಸಂಬಂಧಿಯಾದ ಗುಳಿಮಂಡಲಗಳ ಕುಟುಂಬ. ಈ ಕುಟುಂಬದ ಹಾವುಗಳಿಗೆ ಕಣ್ಣಿನ ಮುಂದೆ ಪ್ರತಿಪಾರ್ಶ್ವದಲ್ಲೂ ಕಣ್ಣಿಗೆ ಸ್ವಲ್ಪ ಕೆಳಮಟ್ಟದಲ್ಲಿ ಒಂದು ಕುಳಿಯಿದೆ. ಇದರ ಸ್ಥಾನ ಬೇರೆ ಬೇರೆ ಪ್ರಭೇದಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಎಲ್ಲ ಪ್ರಭೇದಗಳಲ್ಲೂ ಇದು ಇದ್ದೇ ಇದೆ. ಆದ್ದರಿಂದ ಈ ಹಾವುಗಳನ್ನು ಗುಳಿಸರ್ಪಗಳೆಂದೂ (ಪಿಟ್ ವೈಪರ್ಸ್) ಕರೆಯುತ್ತಾರೆ. ಮೂಗಿನ ಹೊಳ್ಳೆಗಿಂತಲೂ ಪ್ರಧಾನವಾಗಿ ಎದ್ದು ಕಾಣುವ ಈ ಅಂಗಗಳನ್ನು ಇನ್ನೆರಡು ಮೂಗಿನ ಹೊಳ್ಳೆಗಳೇ ಎಂದು ಭಾವಿಸಿ ಹಾವುಗಳನ್ನು ದಕ್ಷಿಣ ಅಮೆರಿಕದಲ್ಲಿ ನಾಲ್ಕು ಹೊಳ್ಳೆಗಳ (ಫೋರ್ ನಾಸ್ಟ್ರಿಲ್ಸ್) ಹಾವು ಎನ್ನುವುದುಂಟು. ಈ ಕುಳಿ ನಾಸಿಕರಂಧ್ರವಲ್ಲ. ಇದೊಂದು ಉಷ್ಣಗ್ರಾಹಕಾಂಗವೆಂಬುದು ಈಚೆಗೆ ಗೊತ್ತಾಗಿದೆ. ಕುಳಿ ಇಬ್ಭಾಗವಾಗಿದ್ದು ಇವುಗಳ ನಡುವೆ ಇರುವ ಪೊರೆಯಲ್ಲಿ ಯಥೇಚ್ಛವಾಗಿ ನರಗಳ ತುದಿಗಳು ಹರಡಿಕೊಂಡಿವೆ. ರಚನೆಯಲ್ಲಿ ಕರ್ಣದುಂದುಭಿಯನ್ನು ಈ ಪೊರೆ ಹೋಲುತ್ತದೆ. ಹಾವುಗಳಲ್ಲಿ ಕರ್ಣದುಂದುಭಿ ಇಲ್ಲದ್ದರಿಂದ ಕೆಲವರು ಇದನ್ನೇ ಕರ್ಣದುಂದುಭಿಯೆಂದು ಭಾವಿಸಿ ಹಾವುಗಳು ಇದರ ಸಹಾಯದಿಂದ ಕೇಳಬಲ್ಲವೆಂದು ಭಾವಿಸಿದ್ದರು. ಆದರೆ ಈ ಭಾವನೆಗೆ ಅಗತ್ಯವಾದ ಪ್ರಾಯೋಗಿಕ ಸಾಕ್ಷ್ಯಗಳು ಒದಗದ್ದರಿಂದ ಪೊರೆ ರಚನೆ ಎಂಬುದು ನಮಗೆ ಅರಿವಿಲ್ಲದಂಥ ಇನ್ನಾವುದೋ ಒಂದು ವಿಶೇಷ ಜ್ಞಾನೇಂದ್ರಿಯವಿರಬೇಕೆಂದೂ ವಾದಿಸಿದರು. ಇದರ ನೆರವಿನಿಂದ ಹಾವು ಬಿಸಿರಕ್ತ ಪ್ರಾಣಿಗಳಾದ ಸ್ತನಿ ಮತ್ತು ಪಕ್ಷಿಗಳನ್ನು ಗುರುತಿಸಬಲ್ಲುದು ಎಂದು ನೋಬೆಲ್ ಮತ್ತು ಷ್ಮಿಡ್ಟ್ ಸೂಚಿಸಿದರು (1935) ಆಹಾರವನ್ನು ಗುರುತಿಸುವುದಕ್ಕೂ ಹಾವಿಗೂ ಇರುವ ಅಂತರವನ್ನು ಅರಿಯುವುದಕ್ಕೂ ಇದು ಸಹಾಯ ಮಾಡುತ್ತದೆ.

ಕ್ರೋಟಾಲಿಡೀ ಹಾವುಗಳು ಗಾತ್ರದಲ್ಲೂ ನೋಟದಲ್ಲೂ ಭೀತಿಹುಟ್ಟಿಸುವಂಥವು. ಯೂರೇಷಿಯದ ಮಂಡಲದ ಹಾವುಗಳಿಗಿಂತಲೂ ದಪ್ಪವಾಗಿದ್ದು ಇವುಗಳಲ್ಲಿ ಕೆಲವು 8' ಉದ್ದವಿದ್ದು 16 ಪೌಂಡ್ ತೂಗುತ್ತವೆ. ಇವುಗಳ ವಿಷದ ಹಲ್ಲುಗಳು ಮಾತ್ರ ಚಿಕ್ಕವಾಗಿವೆ. ವಿಷಗ್ರಂಥಿಗಳು ಇತರ ವಿಷಪೂರಿತ ಹಾವುಗಳಲ್ಲಿಯ ರಚನೆಯಂತೆಯೆ ಇವೆ. ಮೇಲ್ದವಡೆಯಲ್ಲಿ ವಿಷದ ಹಲ್ಲುಗಳನ್ನುಳಿದು ಇನ್ನಾವ ಹಲ್ಲುಗಳೂ ಇಲ್ಲ. ಮುಖದ ಮೇಲಿನ, ಮೇಲೆ ವಿವರಿಸಿದ ಕುಳಿಗಳ ಹಿಂದೆ ಒಂದೊಂದು ತಗ್ಗು ಕಾಣುತ್ತದೆ. ಈ ತಗ್ಗು ಮತ್ತು ಕುಳಿ ಇತರ ವೈಪರ್ ಜಾತಿಯ ಹಾವುಗಳಾವುದರಲ್ಲೂ ಇಲ್ಲ. ಎಂದರೆ, ಕುಳಿಹಾವುಗಳನ್ನು ಗುರುತಿಸಲು ಇವೆರಡೂ ವಿಶಿಷ್ಟ ಲಕ್ಷಣಗಳೆನಿಸಿವೆ.

**ಕ್ರೋಟಾಲಿಡೀ ಕುಟುಂಬಕ್ಕೆ ಸೇರಿದ ಮುಖ್ಯ ಬಗೆಯ ಹಾವುಗಳು :** ಬುಡುಬುಡಿಕೆ ಹಾವು (Rattle snakes, crotalus) ಕಾಪರ್‌ಹೆಡ್ (Agkistrodon controtrix) ಮತ್ತು ಅಂಗ್ಕಿಸ್ಟ್ರಡಾಸ್ ಕಾಂಟಾರ್ಟ್ರಿಕ್ಸ್: ಕಾಟನ್ ಮೌತ್ (Agkistrodon piscivorus) ಅಗ್ಕಿಸ್ಟ್ರಡಾನ್ ಪಿಸಿವೋರಸ್. ಬುಡುಬುಡಿಕೆ ಹಾವು ಉತ್ತರ ಮತ್ತು ದಕ್ಷಿಣ ಅಮೆರಿಕಕ್ಕೆ ಸೀಮಿತ. ಟ್ರೈಮರ್‌ಸ್ಯುರಸ್ ಅಥವಾ ಲ್ಯಾಚೇಸಿಸ್ ಜಾತಿಯ ಗುಳಿ ಮಂಡಲಗಳು ದಕ್ಷಿಣ ಭಾರತದಲ್ಲಿ ಕಂಡುಬರುತ್ತವೆ. ಕರ್ನಾಟಕದಲ್ಲಿ ಮಲಬಾರ್ ಪಿಟ್ ವೈಪರ್, ಗ್ರೀನ್ ಪಿಟ್ ವೈಪರ್, ಹಂಪ್‌ನೋಸ್ಡ್ ಪಿಟ್ ವೈಪರ್ ಬ್ಯಾಂಬೂ ಪಿಟ್ ವೈಪರ್ ಮುಂತಾದ ಪ್ರಭೇದಗಳು ಕಾಣಬರುತ್ತವೆ. (ಕೆ.ಎಂ.ವಿ.)

**ಕ್ರೋಡೀಕರಣ :** ಒಂದುಗೂಡಿಸುವುದು (ಕನ್ಸಾಲಿಡೇಶನ್). ಶತ್ರುವಿನ ನೆಲವನ್ನು, ಆಕ್ರಮಣದಿಂದ ವಶಪಡಿಸಿಕೊಂಡ ಬಳಿಕ ಅದನ್ನು ಭದ್ರಪಡಿಸಿಕೊಳ್ಳುವ ಸಮರತಂತ್ರವನ್ನು ಕ್ರೋಡೀಕರಣ ಅಥವಾ ಸ್ಥಾನಭದ್ರೀಕರಣ ಎಂದು ಕರೆಯುತ್ತಾರೆ. ಮೂಲತಃ ಆ ನೆಲ ಶತ್ರುವಿನದಾಗಿದ್ದುದರಿಂದ ಹಾಗೂ ಸಾಮಾನ್ಯವಾಗಿ ಅದರ ಹಿನ್ನೆಲೆಯಲ್ಲಿ ಶತ್ರುವಿನ ಪಡೆಗಳು ವಿಪುಲವಾಗಿ ವಿತರಣೆಗೊಂಡಿರಬಹುದಾದ್ದರಿಂದ ಶತ್ರು ತಾನು ಕಳೆದುಕೊಂಡ ನೆಲವನ್ನು ಹಿಂದೆ ಪಡೆಯಲು ನಾನಾಯುದ್ಧತಂತ್ರಗಳನ್ನು ಅತಿಕೌಶಲದಿಂದ ಪ್ರಯೋಗಿಸುವುದು ತೀರ ಸಹಜ. ಇಂಥಲ್ಲಿ ಆಕ್ರಮಣದಿಂದ, ಹೊಂಚಿನಿಂದ, ಸ್ಥಳೀಯ ಸನ್ನಿವೇಶಗಳ ನಿಕಟ ಪರಿಚಯದಿಂದ ಶತ್ರುವಿಗೆ ಅಪಾರ ಸೌಕರ್ಯ ಮತ್ತು ಲಾಭ ಉಂಟು. ಇವನ್ನೆಲ್ಲ ಚೆನ್ನಾಗಿ ಅರಿತು, ಒಮ್ಮೆ ಪಡೆದ ನೆಲವನ್ನು ಮತ್ತೆ ಶತ್ರುವಿಗೆ ಬಿಟ್ಟುಗೊಡದಂತೆ ಭದ್ರವಾಗಿ ಹಿಡಿದುಕೊಳ್ಳಲು ಕ್ರೋಡೀಕರಣವನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕಾಗುತ್ತದೆ. ಈ ತಂತ್ರದ ವಿವರಗಳು ನೆಲ ಹಾಗೂ ಸನ್ನಿವೇಶಗಳನ್ನು ಅವಲಂಬಿಸಿವೆ. ಕಂದಕಗಳನ್ನು ಅಗೆಯುವುದು, ಮುಳ್ಳುತಂತಿ ಬೇಲಿಗಳನ್ನು ರಚಿಸುವುದು, ಯುಕ್ತ ಪಹರೆಗಳನ್ನು ನಿಯುಕ್ತಿಸುವುದು, ಸ್ಥಳೀಯರಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕ್ಷಿಪ್ರವಾಗಿ ತಂದು ಅವರ ಪೂರ್ಣಬೆಂಬಲ ಗಳಿಸುವುದು, ಸೈನ್ಯ ಬಲಗಳ ರಕ್ಷಣೆಗೆ ಬೇಕಾದ ಭೌತ ನಿರ್ಮಾಣಗಳನ್ನು ಮಾಡುವುದು ಇವೇ ಮುಂತಾದವು ಕ್ರೋಡೀಕರಣದ ಅಂಗಗಳು. (ಎಂ.ಜಿ.ಕೆ.ಎಂ.)

ಎಂಜಿನಿಯರಿಂಗಿನಲ್ಲಿ ಕಟ್ಟಡದ ಕಾಮಗಾರಿ, ಏರಿಕೆಲಸಗಳು ಮುಂತಾದವುಗಳಲ್ಲಿ ಕ್ರೋಡೀಕರಣ ಪದದ ಬಳಕೆ ಉಂಟು. ನೆಲದಿಂದ ಮಣ್ಣನ್ನು ಅಗೆದು ಏರಿ ಅಥವಾ ರಸ್ತೆ ಕೆಲಸಗಳಿಗೆ ಗುಡ್ಡೆ ಹಾಕಿದಾಗ ಮಣ್ಣಿನ ಕಣಗಳು ಬೇರೆಬೇರೆಯಾಗಿರುತ್ತವೆ. ಆ ಕಣಗಳ ಮಧ್ಯದಲ್ಲಿ ಗಾಳಿ ಅಥವಾ ನೀರು ಪ್ರವೇಶಿಸಿ ಶಿಥಿಲತೆ ತಲೆದೋರುವುದು. ಆದ್ದರಿಂದ ಕೆಲಸದಲ್ಲಿ ಜಲ್ಲಿ, ಕಾಂಕ್ರೀಟ್, ಇಟ್ಟಿಗೆ ಕಾಂಕ್ರೀಟ್ ಗಾರೆಯನ್ನು ಉಪಯೋಗಿಸಿದಾಗ ಕ್ರೋಡೀಕರಣ ಮಾಡಬೇಕು. ಇಲ್ಲದಿದ್ದರೆ ಸಂದುಗಳು ಬಿಟ್ಟು ಗಾಳಿ ಮತ್ತು ನೀರು ಕಾಂಕ್ರೀಟುಗಳಲ್ಲಿ ತುಂಬಿಕೊಂಡು ಕಟ್ಟಡಗಳಿಗೆ ಅಪಾಯವನ್ನುಂಟುಮಾಡುತ್ತವೆ. ಹಿಂದಿನ ಕಾಲದಲ್ಲಿ ಏರಿ ಅಥವಾ ರಸ್ತೆ ಮಣ್ಣನ್ನು ಕ್ರೋಡೀಕರಿಸಲು ಕುರಿಗಳನ್ನು ಮಣ್ಣಿನ ಮೇಲೆ ಬಿಡುತ್ತಿದ್ದರು. ದಮಾಸುಗಳನ್ನು ಮನುಷ್ಯ ಶಕ್ತಿಯಿಂದ ಉಪಯೋಗಿಸಿ ಕಾಂಕ್ರೀಟನ್ನು ಕ್ರೋಡೀಕರಿಸುವುದುಂಟು. ದೊಡ್ಡ ದೊಡ್ಡ ಕಾಂಕ್ರೀಟ್ ಕೆಲಸಗಳಲ್ಲಿ ವಿದ್ಯುಚ್ಛಕ್ತಿಯಿಂದ ತಿರುಗುವ ಉಪಕರಣಗಳನ್ನು ಉಪಯೋಗಿಸುತ್ತಾರೆ. (ಜಿ.ಟಿ.ಜಿ.)

**ಕ್ರೋಧ :** ಅರಿಷಡ್ವರ್ಗಗಳೆಂದು ಪ್ರಸಿದ್ಧವಾಗಿದ್ದು ನಮ್ಮ ಶರೀರದೊಳಗೇ ಇರುವ ದುಷ್ಟಶತ್ರುಗಳಲ್ಲಿ ಎರಡನೆಯದು. ಕಾಮ ಏಷಃ ಕ್ರೋಧ ಏಷಃ ರಜೋಗುಣ ಸಮುದ್ಭವಃ. ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಭಿಜಾಯತೇ–ಎಂಬ ಗೀತಾ ವಾಕ್ಯಗಳಂತೆ ಕಾಮಕ್ರೋಧಗಳೆರಡು ರಜೋಗುಣದಿಂದ ಹುಟ್ಟುವಂಥವು. ನಮಗೆ ಅಭಿಲಾಷೆ ಪೂರ್ತಿಯಾಗದೆ ಹೋದಾಗ ಅಥವಾ ನಮ್ಮ ಬಯಕೆಗೆ ಯಾವುದರಿಂದಲೇ ಆಗಲಿ ಅಡ್ಡಿಯುಂಟಾದಾಗ ಕ್ರೋಧ ಉಂಟಾಗುವುದರಿಂದ ಕ್ರೋಧ ಕಾಮಜವೆಂಬ ಭಾವನೆ ಇದೆ. ಕ್ರೋಧ ಉಂಟಾದಾಗ ರಕ್ತಚಲನೆಯಲ್ಲಿ ವೇಗ ಹೆಚ್ಚಿ ಮುಖ ಕೆಂಪಾಗುತ್ತದೆ. ಇದರಿಂದ ಕ್ರೋಧದ ವರ್ಣ ರಕ್ತ (ಕೆಂಪು) ಎಂದು ಕ್ರೋಧದ ಅಧಿದೇವತೆ ರುದ್ರ ಎಂದು ಕ್ರೋಧವನ್ನೇ ಸ್ಥಾಯಿಭಾವವಾಗಿ ಉಳ್ಳ ರಸರೌದ್ರ ಎಂದು

ಅಭಿಪ್ರಾಯ ಬೇರೂರಲು ಅವಕಾಶವಾಯಿತು. ಕ್ರೋಧ ಹೆಚ್ಚಿದಾಗ ರಕ್ತವೇಗದಿಂದ ನೇತ್ರದೃಷ್ಟಿ ಕುಂಠಿತವಾಗುವುದರಿಂದ ಕ್ರೋಧಾಂಧ ಎಂಬ ಪದವೂ ಕ್ರೋಧವುಂಟಾದಾಗ ಕಣ್ಣುಕೆಂಪಗಾಗಿ ಜ್ವಲಿಸುವುದರಿಂದ ಕ್ರೋಧಾಗ್ನಿ ಎಂಬ ಪದವೂ ಬಳಕೆಗೆ ಬಂದಿವೆ. ಕ್ರೋಧವನ್ನು ಜಯಿಸಬಲ್ಲುವುದು ಕ್ಷಮಾಗುಣವೊಂದೇ ಎಂಬುದು ಅನುಭವಸಿದ್ಧ.

ವರ್ಷಗಳ 60 ಹೆಸರುಗಳಲ್ಲಿ ಕ್ರೋಧಿ ಎಂಬುದು 38ನೆಯ ವರ್ಷದ ಹೆಸರು. ಆ ವರ್ಷ ಜನಿಸುವವರಲ್ಲಿ ರಜೋಗುಣ–ಅದರಲ್ಲೂ ಕ್ರೋಧ–ಪ್ರಧಾನವಾಗಿರುವುದೆಂದು ಜ್ಯೋತಿಃಶ್ಶಾಸ್ತ್ರದಲ್ಲಿ ಹೇಳಿದೆ. ಕೋಪ, ಅಮರ್ಶ, ರೋಷ, ಪ್ರತಿಘ, ರುಟ್, ಕ್ರುದ್–ಇವು ಅಮರಕೋಶದಲ್ಲಿ ಹೇಳಿರುವ ಕ್ರೋಧ ಶಬ್ದದ ಪರ್ಯಾಯಪದಗಳು. (ಎಸ್.ಆರ್.ಎ.ಎನ್.)

**ಕ್ರೋಧನ : ನೋಡಿ–ಸಂವತ್ಸರಗಳು**

**ಕ್ರೋಧಿ : ನೋಡಿ – ಸಂವತ್ಸರಗಳು**

**ಕ್ರೋನಿನ್, ಆರ್ಚಿಬಲ್ಡ್ ಜೋಸೆಫ್ :** 1896–. ಆಂಗ್ಲ ಕಾದಂಬರಿಕಾರ. ಡಂಬರ್ಟನ್‌ಷೈರ್‌ನ ಕಾರ್‌ಡ್ರಾಸ್‌ನಲ್ಲಿ ಹುಟ್ಟಿದ. ಡಂಬರ್ಟನ್ ಅಕಾಡಮಿ ಮತ್ತು ಗ್ಲಾಸ್ಗೋ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ನಡೆಸಿ ವೈದ್ಯಪದವಿ ಪಡೆದ. ಅನೇಕ ಆಸ್ಪತ್ರೆಗಳಲ್ಲಿ ವೈದ್ಯನಾಗಿದ್ದು, 1921ರಲ್ಲಿ ಆಗ್ನೆಸ್ ಮೇರಿ ಗಿಬ್ಸನ್ ಎಂಬ ವೈದ್ಯಳನ್ನು ಮದುವೆಯಾಗಿ ಸೌತ್‌ವೇಲ್ಸ್‌ನಲ್ಲಿ ಸ್ವತಂತ್ರವಾಗಿ ಆಸ್ಪತ್ರೆ ಆರಂಭಿಸಿದ. ಅನಂತರ ಲಂಡನ್ನಿಗೆ ಬಂದ. 1930ರಲ್ಲಿ ಕಾಯಿಲೆ ಬಿದ್ದು ಚೇತರಿಸಿಕೊಳ್ಳುವಾಗ ಕೇವಲ ಮೂರು ತಿಂಗಳ ಅವಧಿಯಲ್ಲಿ ಹ್ಯಾಟರ್ಸ್ ಕ್ಯಾಸಲ್ ಎಂಬ ಕಾದಂಬರಿಯನ್ನು ಬರೆದ. ಈ ಕಾದಂಬರಿ ಬಹು ಜನಪ್ರಿಯವೆನಿಸಿ 5 ಭಾಷೆಗಳಿಗೆ ತರ್ಜುಮೆಯಾಯಿತು. ಈ ಯಶಸ್ಸಿನ ಫಲವಾಗಿ ಕ್ರೋನಿನ್ ವೈದ್ಯಕೀಯ ವೃತ್ತಿಯನ್ನು ತೊರೆದು ಸಾಹಿತ್ಯ ಸೃಷ್ಟಿಗೆ ದುಮುಕಿದ. ತ್ರೀ ಲೌವ್ಸ್ (1932), ಗ್ರ್ಯಾಂಡ್ ಕನೇರಿ (1933), ದಿ ಸ್ಟಾರ್ಸ್ ಲುಕ್ ಡೌನ್(1935), ದಿ ಸಿಟಡೆಲ್ (1937), ದಿ ಕೀಸ್ ಆಫ್ ದಿ ಕಿಂಗ್‌ಡಮ್ (1942), ದಿ ಗ್ರೀನ್ ಇಯರ್ಸ್ (1944), ಷ್ಯಾನನ್ಸ್ ವೇ (1948), ದಿ ಸ್ಪ್ಯಾನಿಷ್ ಗಾರ್ಡನರ್ (1950), ಕ್ರುಸೆಡರ್ಸ್ ಟೋಂಬ್(1956)–ಇವು ಈತನ ಇತರ ಕಾದಂಬರಿಗಳು. ಆದರೆ ಇವು ಯಾವುವೂ ಮೊದಲಿನ ಕಾದಂಬರಿಯಷ್ಟು ಜನಪ್ರಿಯವಾಗಲಿಲ್ಲ. ಈತ ಜ್ಯೂಪಿಟರ್ ಲಾಫ್ಸ್ (1940) ಎಂಬ ನಾಟಕವನ್ನು ಬರೆದಿದ್ದಾನೆ. ಈತ ಶಕ್ತಿವಂತ ಮತ್ತು ವಾಸ್ತವಿಕ ಪ್ರಜ್ಞೆಯುಳ್ಳ ಕಾದಂಬರಿಕಾರನಾದರೂ ಉದಾಸ ಪ್ರವೃತ್ತಿಯವ. (ಎಚ್.ವಿ.ಎಸ್.)

**ಕ್ರೋನೆಕರ್, ಲಿಯೋಪಾಲ್ಡ್ :** 1823–1891. ಜರ್ಮನಿಯ ಸುಪ್ರಸಿದ್ಧ ಗಣಿತ ವಿದ್ವಾಂಸ. ಪ್ರಷ್ಯ ದೇಶದ ಲೆಗಿಟ್ಸ್ ಎಂಬಲ್ಲಿ ಯಹೂದ್ಯ ಕುಟುಂಬದಲ್ಲಿ 1823ನೆಯ ಇಸವಿ ಡಿಸೆಂಬರ್ 7 ರಂದು ಜನಿಸಿದ. ಈತನ ತಂದೆ ಧನಿಕ ವ್ಯಾಪಾರಿ. ಜೊತೆಗೆ ವಿದ್ಯಾವಂತ ಮತ್ತು ಸುಸಂಸ್ಕೃತ. ಹೀಗಾಗಿ ತಂದೆಯೇ ಕ್ರೋನೆಕರನಿಗೆ ಪ್ರಥಮ ಗುರು. ಅಂದಿನ ಗಣಿತ ತಜ್ಞರಲ್ಲಿ ಶ್ರೇಷ್ಠನಾದ ಕುಮ್ಮರ್ (1810–1893) ಪ್ರೌಢಶಾಲೆಯಲ್ಲೂ ಮುಂದೆ ವಿಶ್ವವಿದ್ಯಾಲಯದಲ್ಲೂ ಕ್ರೋನೆಕರನಿಗೆ ಗಣಿತವನ್ನು ಕಲಿಸಿದ. 1841ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯವನ್ನು ಪ್ರವೇಶಿಸಿ ಅಂದಿನ ಗಣಿತ ಪ್ರಪಂಚದಲ್ಲಿ ಹೆಸರಾಂತ ಡಿರಿಷ್ಲೆ (1805–1859) ಜ್ಯಾಕೋಬಿ (1804–1851), ಸ್ಟೈನರ್ (1796–1863) ಮೊದಲಾದವರ ಪ್ರವಚನಗಳನ್ನು ಕೇಳಿ ವಿವಿಧ ಕ್ಷೇತ್ರಗಳಲ್ಲಿ ಪಾಂಡಿತ್ಯಗಳಿಸಿದ.

ಅಂಕಗಣಿತದ ಆಧಾರದ ಮೇಲೆ ಗಣಿತವಿಜ್ಞಾನದ ಪೂರ್ಣರಚನೆ ಶಾಸ್ತ್ರಬದ್ಧವಾಗಿ ಆಗಬೇಕೆಂಬ ಪಂಥವನ್ನು ಪ್ರಾರಂಭಿಸಿದವ ವೈಯರ್‌ಸ್ಟ್ರಾಸ್(1815–1897). ಆದರೂ ಅದನ್ನು ಪೂರ್ಣಗೊಳಿಸಿ 20ನೆಯ ಶತಮಾನದ ಗಣಿತಜ್ಞದಲ್ಲಿ ಇಂಥ ಶಾಸ್ತ್ರಬದ್ಧತೆಯ ಸಂಶೋಧನೆಗೆ ಪ್ರಚೋದನೆ ನೀಡಿದವ ಕ್ರೋನೆಕರ್. ಈತನಿಗೆ 1,2,3,4....... ಎಂಬ ನೈಸರ್ಗಿಕ ಸಂಖ್ಯೆಗಳಲ್ಲಿ (ನ್ಯಾಚುರಲ್ ನಂಬರ್ಸ್) ಅಪಾರಭಕ್ತಿ ಮತ್ತು ವಿಶ್ವಾಸ. ಇವು ಭಗವಂತನ ಸೃಷ್ಟಿ; ಉಳಿದುವೆಲ್ಲ ಮಾನವಕೃತ ಎಂಬುದು ಅವನ ಅಸ್ಖಲಿತ ನಿರ್ಧಾರ. ಗಣಿತವಿಜ್ಞಾನದ ಎಲ್ಲಾ ಪ್ರಮೇಯಗಳ ಸಾಧನಗಳು ನೈಸರ್ಗಿಕ ಸಂಖ್ಯೆಗಳನ್ನು ಅವಲಂಬಿಸಬೇಕು, ಮತ್ತು ಸಾಂತ (ಫೈನೈಟ್) ಹಂತಗಳಲ್ಲಿ ಮುಗಿಯಬೇಕು. ವೈಯರ್‌ಸ್ಟ್ರಾಸ್‌ನ ಅನ್ಯಾಲಿಸಿಸ್ ಮತ್ತು ಕ್ಯಾಂಟರನ ಅನಂತತೆಗಳ ದರ್ಜೆ ಕ್ರೋನೇಕರನಿಗೆ ಹಿಡಿಸುತ್ತಿರಲಿಲ್ಲ. ಅವರ ವಾದಗಳನ್ನು ಈತ ತೀವ್ರವಾಗಿ ಖಂಡಿಸುತ್ತಿದ್ದ.

$\pi = 1 - \frac{1}{3} + \frac{1}{8} - $......... ಎಂಬ ಸಮೀಕರಣವು ಧನ ಪೂರ್ಣಾಂಕಗಳಾದ 1, 3, 5, .......ಗಳ ವ್ಯಾಪ್ತಿಗೆ ಒಳಪಟ್ಟಿದೆ. ಎಲ್ಲವೂ ಸಂಖ್ಯಾಶಾಸ್ತ್ರದ ವ್ಯಾಪ್ತಿಯೊಳಗಿರಬೇಕೆಂಬುದು ಇವನ ಸ್ಪಷ್ಟ ಅಭಿಪ್ರಾಯ. ಪ್ಲೇಟೋ ಜ್ಯಾಮಿತೀಕರಣದಲ್ಲಿ ವಿಶ್ವಾಸವಿಟ್ಟಿದ್ದಂತೆಯೇ ಕ್ರೋನೆಕರ್ ಅಂಕಗಣಿತೀಕರಣದಲ್ಲಿ ಅಪಾರ ನಂಬಿಕೆ ಇಟ್ಟಿದ್ದ.

**ಕೊಡುಗೆಗಳು :** ಕ್ರೋನೆಕರನ ಸಂಶೋಧನೆಗಳೆಲ್ಲಾ ಅಂಕಗಣಿತ ಮತ್ತು ಬೀಜಗಣಿತಗಳಲ್ಲಿ. ಸಂಖ್ಯಾಶಾಸ್ತ್ರ (ಥಿಯೋರಿ ಆಫ್ ನಂಬರ್ಸ್) ಎಲಿಪ್ಟಿಕ್ ಉತ್ಪನ್ನಗಳು ಮತ್ತು ಬೀಜಗಣಿತ ಸಂಖ್ಯೆಗಳು, ಬೀಜಗಣಿತ ಸಮೀಕರಣಗಳು–ಇವು ಅವನ ಸಂಶೋಧನಾ ಕ್ಷೇತ್ರಗಳು. ಸಂಶೋಧನೆಗಿಂತಲೂ ಹೆಚ್ಚಾಗಿ ಇವನ ಸಿದ್ಧಾಂತವಾದ ಅಂಕಗಣಿತೀಕರಣ ಇಂದಿಗೂ ಕ್ರೋನೆಕರನ ಹೆಸರನ್ನು ಅಳಿಸದಂತೆ ಉಳಿಸಿದೆ. ಅಂದಿನ ದಿನಗಳಲ್ಲಿ ಗ್ಯಾಲ್ವಾನಾ ಸಮೀಕರಣ ಸಿದ್ಧಾಂತವನ್ನು ಓದಿದವರು ಮತ್ತು ಅರ್ಥಮಾಡಿಕೊಂಡವರು ಯಾರೂ ಇರಲಿಲ್ಲ. ಕ್ರೋನೇಕರ್ ಈ ಸಿದ್ಧಾಂತವನ್ನು ಚೆನ್ನಾಗಿ ವ್ಯಾಸಂಗಮಾಡಿದನಲ್ಲದೆ, ತಾನೂ ಆ ಭಾಗದಲ್ಲಿ ಸಂಶೋಧನೆಗಳನ್ನು ನಡೆಸಿದ.

$$ax^2 + bx + c = 0$$

ಎಂಬ ಸಮೀಕರಣದ ಮೂಲಗಳು.

$$x = \frac{-b \pm \sqrt{b^2 - 4ac}}{2a}$$

ಎಂಬ ಸೂತ್ರದಿಂದ ನಿರ್ಧರಿಸಲ್ಪಡುತ್ತದೆ. ಇಂಥ ಸೂತ್ರ

$$ax^3 + bx^2 + cx + d = 0$$

ಎಂಬ ಸಮೀಕರಣಕ್ಕಾಗುವ ಜಟಿಲ ರೂಪವನ್ನು ತಾಳುತ್ತದೆ. ಅಂತೆಯೇ

$$ax^4 + bx^3 + cx^2 + dx + e = 0$$

ಎಂಬ ಸಮೀಕರಣವನ್ನು ಸೂತ್ರದ ಮೂಲಕ ಬಿಡಿಸುವುದು ಇನ್ನೂ ಕಷ್ಟತರವಾಗುತ್ತದೆ. ಆದರೆ ಪಂಚಮ ಘಾತೀಯ ಸಮೀಕರಣಗಳು ಮತ್ತು ಅವಕ್ಕಿಂತ ಹೆಚ್ಚಿನ ಘಾತ ಸಮೀಕರಣಗಳ ಸೂತ್ರ ಗಣಿತಜ್ಞರಿಗೆ ಹಲವು ಶತಮಾನಗಳಿಂದಲೇ ಸವಾಲಾಗಿತ್ತು. ಅಂಥ ಸೂತ್ರವಿಲ್ಲ ಎಂಬ ನಿರ್ಧಾರಕ್ಕೆ ಬಂದವರಲ್ಲಿ ಅಬೆಲ್ ಒಬ್ಬ. ಪಂಚಮಗಾತಿಯ ಸಮೀಕರಣಗಳ ಬಿಡಿಸುವಿಕೆ ಎಂಬ ಶೀರ್ಷಿಕೆಯ ಲೇಖನವನ್ನು 1858ರಲ್ಲಿ ಕ್ರೋನೇಕರ್ ಪ್ರಕಟಿಸಿದ. ಗ್ಯಾಲ್ವಾನ ಸಿದ್ಧಾಂತದ ಆಧಾರದ ಮೇಲೆ ರಚಿತವಾದ ಈ ಲೇಖನ ಬಹು ಸ್ವಾಭಾವಿಕವಾಗಿ ಕಾಣುತ್ತದೆ. ಬೀಜಗಣಿತ ಸಂಖ್ಯೆಗಳಲ್ಲಿ ಸಂಶೋಧನೆ ನಡೆಸಿದವರೆಂದರೆ ಕುಮ್ಮರ್, ಡೆಡಿಕಿಂಟ್(1831–1916) ಮತ್ತು ಕ್ರೋನೇಕರ್. ಇವರ ಸಂಶೋಧನೆಗಳಿಂದ ಅಂಕಗಣಿತದ ವ್ಯಾಪ್ತಿ ವಿಶಾಲವಾದುದಲ್ಲದೆ ಇಂದಿಗೂ ಆದರ್ಶಪ್ರಾಯವಾಗಿದೆ. ಸಂಖ್ಯಾಶಾಸ್ತ್ರ, ಎಲಿಪ್ಟಿಕ್ ಉತ್ಪನ್ನಗಳು ಮತ್ತು ಬೀಜಗಣಿತ ಸಂಖ್ಯೆಗಳು ಈ ಮೂರು ವಿಭಿನ್ನ ಭಾಗಗಳನ್ನು ಪೋಣಿಸಿ ಒಂದು ಕಲಾಕೃತಿ ರಚಿಸಿದ ಕೀರ್ತಿ ಕ್ರೋನೇಕರನದು. ಬೀಜಗಣಿತ ಸಂಖ್ಯೆಗಳಲ್ಲಿಯೂ ಇವನದೇ ವೈಶಿಷ್ಟ್ಯವುಂಟು. ಇಂದು ಈತನ ಮಾರ್ಗವನ್ನು ಯಾರೂ ಅಭ್ಯಸಿಸುವುದಿಲ್ಲ. ಕಾರಣ ಇವನ ಬರವಣಿಗೆಗಳೆಲ್ಲವೂ ಕ್ಲಿಷ್ಟ. ಸಾಮಾನ್ಯವಾಗಿ ಡೆಡಿಕೆಂಟನ ಮಾರ್ಗವನ್ನೇ ಅನುಸರಿಸುತ್ತಾರೆ. ಎಂದ ಮಾತ್ರಕ್ಕೆ ಕ್ರೋನೆಕರ್ ಕೃತಿ ಕೀಳುಮಟ್ಟದ್ದು ಎಂದು ಹೇಳಲಾಗುವುದಿಲ್ಲ. ಕ್ರೋನೆಕರ್ ಡೆಲ್ಟಾ, ಎಂದರೆ

$$\delta_{ij} = 1 \ (i = j)$$

$$\delta_{ij} = 0 \ (i \neq j)$$

ಎಂಬ ಸಂಕೇತಗಳು ನಿರ್ಧಾರಕಗಳಲ್ಲಿ (ಡಿಟರ್ಮಿನೆಂಟ್ಸ್) ಮತ್ತು ಮಾತೃಕೆಗಳಲ್ಲಿ (ಮ್ಯಾಟ್ರಿಸಸ್) ಹೆಚ್ಚು ಬಳಕೆಯಲ್ಲಿರುವುದಲ್ಲದೆ ಎಲ್ಲಾ ಗಣಿತ ವಿದ್ಯಾರ್ಥಿಗಳಿಗೂ ಪರಿಚಿತವೂ ಆಗಿದೆ.

ಬಹು ಛಲವಾದಿಯಾದ ಕ್ರೋನೆಕರನ ಹಗೆಗೆ ಗಣಿತ ಪ್ರಪಂಚದಲ್ಲಿ ಎದುರಾದವರು ಇಬ್ಬರು: ವೈಯರ್‌ಸ್ಟ್ರಾಸ್ ಮತ್ತು ಕ್ಯಾಂಟರ್.

$$x^2 - 2 = 0$$

ಎಂಬ ಸಮೀಕರಣವನ್ನು ಧನಪೂರ್ಣಾಂಕಗಳಿಂದ ಬಿಡಿಸಲಾಗುವುದಿಲ್ಲ.

$$x = \pm \sqrt{2}$$

ಈ ಸಮೀಕರಣದ ಮೂಲಗಳು. ಆದರೆ $\sqrt{2}$ ಎಂಬ ಸಂಖ್ಯೆ ಇದೆಯೇ? ಇದ್ದರೆ ಅದರ ವ್ಯಾಖ್ಯೆ ಹೇಗೆ? $\sqrt{2}, \sqrt{3}, \sqrt{5}$ ಮೊದಲಾದ ಸಂಖ್ಯೆಗಳನ್ನು ಅಭಾಗಲಬ್ಧ (ಇರ್‍ರ್ಯಾಷನಲ್) ಸಂಖ್ಯೆಗಳೆನ್ನುತ್ತೇವೆ. ಆದರ ಅವುಗಳ ಅಸ್ತಿತ್ವವನ್ನು ಸಾಧಿಸಿದಲ್ಲದೆ ಅವನ್ನು ಬಳಸುವುದು ಅಶಾಸ್ತ್ರೀಯ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ ಯಾವ ಭಾಗಲಬ್ಧ ಸಂಖ್ಯೆಯನ್ನು (ರ್‍ಯಾಷನಲ್ ನಂಬರ್) ವರ್ಗಿಸಿದರೆ 2 ಬರುತ್ತದೆ? 1.4, 1.41, 1.414 ಮೊದಲಾದ ಸಂಖ್ಯೆಗಳನ್ನು ವರ್ಗಿಸಿದರೆ 2ನ್ನು ಸಮೀಪಿಸುತ್ತೇವೆ. ಇಂಥ ಅನಂತ ಅನುಕ್ರಮದ (ಇನ್‌ಫೈನೆಟ್ ಸೀಕ್ವೆನ್ಸ್) ಪರಿಮಿತಿ $\sqrt{2}$ ಆಗುತ್ತದೆ. ಹೀಗೆಯೇ ಅನಂತ ಅನುಕ್ರಮಗಳ ಪರಿಮಿತಿಯಾಗಿ ಅಭಾಗಲಬ್ಧಸಂಖ್ಯೆಗಳನ್ನು ಪಡೆಯಬಹುದು ಎನ್ನುತ್ತಾನೆ ವೈಯರ್‌ಸ್ಟ್ರಾಸ್. ಈ ವಿಷಯವನ್ನೇ ಜ್ಯಾಮಿತಿಯ ರೀತ್ಯಾ ಅರ್ಥಮಾಡೋಣ. ಅನಂತವಾಗಿ ಎರಡೂ ಕಡೆ ಲಂಬಿಸಿದ ಸರಳರೇಖೆಯಲ್ಲಿ ಯಾವುದಾದರೂ ಒಂದು ಬಿಂದುವನ್ನು 0 ಎನ್ನೋಣ. ಯಾವುದೋ ಒಂದು ಮಾನಕವನ್ನಿಟ್ಟುಕೊಂಡು 0 ಯ ಬಲಗಡೆ 1, 2, 3. . . . . ಮತ್ತು ಎಡಗಡೆಗೆ –1, –2. –3, . . . . ಸಂಖ್ಯೆಗಳನ್ನು ಗುರುತಿಸಬಹುದು. ಅಂತೆಯೇ ಭಾಗಲಬ್ಧ ಸಂಖ್ಯೆಗಳಾದ ½ ¾. . . . -½, - ¾. . . . ಗಳನ್ನು ಸಹ ಗುರುತಿಸಬಹುದು. ಹೀಗೆ ಎಲ್ಲಾ ಭಾಗಲಬ್ಧ ಸಂಖ್ಯೆಗಳನ್ನು ಗುರುತಿಸಿದರೂ ಈ ಸರಳ ರೇಖೆ ಭರ್ತಿಯಾಗುವುದಿಲ್ಲ ಮತ್ತು ಎಡೆಬಿಡದೆ ತುಂಬಿಕೊಳ್ಳುವುದಿಲ್ಲ. $\sqrt{2}, \sqrt{3}$, ಮೊದಲಾದ ಅಭಾಗಲಬ್ಧ ಸಂಖ್ಯೆಗಳಿಲ್ಲದೆ ಸರಳರೇಖೆ ಅವಿಚ್ಛಿನ್ನವಾಗಿ ಸಂಖ್ಯೆಗಳಿಂದ ತುಂಬಲಾರದು. ಭಾಗಲಬ್ಧ ಸಂಖ್ಯೆಗಳು ಅಭಾಗಲಬ್ಧ ಸಂಖ್ಯೆಗಳೂ ಸೇರಿ ಸರಳ ರೇಖೆಯಲ್ಲಿ ಬೇರೆ ತರಹ ಯಾವ ಸಂಖ್ಯೆಗೂ ಜಾಗವಿಲ್ಲದಂತೆ ಭರ್ತಿಯಾಗುತ್ತವೆ. ಇಂಥ ಅಭಾಗಲಬ್ಧ ಸಂಖ್ಯೆಗಳ ವ್ಯಾಖ್ಯೆಯನ್ನು

ವೈಯರ್‌ಸ್ಟ್ರಾಸ್ ಶಾಸ್ತ್ರಬದ್ಧವಾಗಿ ಮಾಡಿದನಲ್ಲದೆ ಗಣಿತಕ್ಕೆ ಭದ್ರವಾದ ತಳಪಾಯಕೂಡ ಹಾಕಿದ. ಅವನ ಅನ್ಯಾಲಿಸೀಸ್ ಇಲ್ಲದ ಗಣಿತ ಬಡಕಲಾಗುತ್ತದೆ. ಈ ಅಭಾಗಲಬ್ಧ ಸಂಖ್ಯೆಗಳ ವ್ಯಾಖ್ಯೆಯನ್ನು ಡೆಡಿಕಿಂಟ್ ಬೇರೆ ರೀತಿಯಲ್ಲಿ ಮಾಡುತ್ತಾನೆ. ಸಂಖ್ಯೆಗಳ ಎರಡೂ ವರ್ಗಗಳ ಸಂಧಿ ಒಂದು ಅಭಾಗಲಬ್ಧ ಸಂಖ್ಯೆಯನ್ನು ನಿರ್ಧರಿಸುತ್ತದೆ. ಅಂತೂ ವೈಯರ್‌ಸ್ಟ್ರಾಸ್ ಮತ್ತು ಡೆಡಿಕಿಂಟ್ ಗಣಿತ ಕಟ್ಟಡದ ಕರ್ತೃಗಳಾದರು. ಇಂಥ ತರ್ಕಬದ್ಧವಾದ ಸಿದ್ಧಾಂತವನ್ನು ಕ್ರೋನೇಕರ್ ಅಶಾಸ್ತ್ರೀಯ ಎಂದು ತೀವ್ರವಾಗಿ ಖಂಡಿಸಿದ. ಅಭಾಗಲಬ್ಧ ಸಂಖ್ಯೆ ಇದ್ದರೆ ತಾನೇ ಅದರ ಅಸ್ತಿತ್ವವನ್ನು ಸಾಧಿಸುವುದು ಎಂಬುದು ಅವನ ಉದ್ಗಾರ. ಹಾಗೆಯೇ $i = \sqrt{-1}$ ಎಂಬ ಸಂಖ್ಯೆಯ ಅಸ್ತಿತ್ವವನ್ನು ಆಧಾರವಾಗಿಟ್ಟುಕೊಂಡು ತನ್ನದೇ ಆದ ರೀತಿಯಲ್ಲಿ ಅಂಥ ಸಂಖ್ಯೆ ಇರುವುದು ಅಸಾಧ್ಯ ಎಂದು ಸಾಧಿಸಿದ ಕ್ರೋನೇಕರ್. ವೈಯರ್‌ಸ್ಟ್ರಾಸ್‌ನಂಥ ಉಪಾಧ್ಯಾಯ ಯುರೋಪಿನಲ್ಲೇ ಇರಲಿಲ್ಲ. ಅವನ ಸಿದ್ಧಾಂತ ಬಹು ತರ್ಕಬದ್ಧವಾದದ್ದು. ಅಂತವನು ಕ್ರೋನೇಕರನ ಪ್ರತಿಭಟನೆಯಿಂದ ಕಾತುರನಾದುದಲ್ಲದೆ ಅವನ ಕಡೆಯ ದಿವಸಗಳಲ್ಲಿ ಬಹು ಮಾನಸಿಕ ಬಾಧೆಗೊಳಗಾದನೆಂದರೆ ತನ್ನ ಸಿದ್ಧಾಂತದಲ್ಲಿದ್ದ ನಂಬಿಕೆಯನ್ನು ಕ್ರೋನೇಕರ್ ಜಗ್ಗಿಸಿದನೆಂದೆ ಹೇಳಬೇಕಾಗುವುದು. ಕ್ರೋನೇಕರ್ ಅನಂತ ಅನುಕ್ರಮಗಳ ಪರಿಮಿತಿ ಅರ್ಥವಿಲ್ಲದ ವ್ಯರ್ಥ ಜಿಜ್ಞಾಸೆ ಎಂದು ಸ್ಪಷ್ಟವಾಗಿ ಘೋಷಿಸುತ್ತಾನೆ.




ಕ್ರೋನೇಕರನ ಎರಡನೆಯ ವೈರಿ ಕ್ಯಾಂಟರ್. ಈತ ಕ್ರೋನೇಕರನ ಶಿಷ್ಯ. ಅನಂತದ (∞) ಬಗ್ಗೆ ಬಹುಕಾಲದಿಂದಲೂ ಅಸ್ಪಷ್ಟ ಕಲ್ಪನೆಗಳಿದ್ದವು. ಗೌಸ್‌ನಂಥ (1777–1855) ರಾಜಗಣಿತಜ್ಞ ಅನಂತದ ಅಕ್ರಮ ಬಳಕೆಯನ್ನು ತೀವ್ರವಾಗಿ ಪ್ರತಿಭಟಿಸಿದ್ದಾನೆ. ಕ್ಯಾಂಟರ್ ಅನಂತತೆಗಳನ್ನು ದರ್ಜೆಯಾಗಿ ವಿಂಗಡಿಸಿ ಕಾರ್ಡಿನಲ್ ಮತ್ತು ಆರ್ಡಿನಲ್ ಎಂಬ ಸಂಖ್ಯೆಗಳನ್ನು ವ್ಯಾಖ್ಯಿಸಿದ. ಭಾಗಲಬ್ಧಸಂಖ್ಯೆಗಳು ಅನಂತವಾಗಿವೆ. ಆದರೆ ಅದು ಅಭಾಗಲಬ್ಧ ಸಂಖ್ಯೆಗಳ ಅನಂತತೆಗಿಂತ ಒಂದು ದರ್ಜೆ ಕಿರಿದು ಎಂದು ಸಾಧಿಸಿದ. ಸಂಖ್ಯಾಶಾಸ್ತ್ರದಲ್ಲಿ ಕ್ಯಾಂಟರನ ಸಿದ್ಧಾಂತ ಒಂದು ದೊಡ್ಡ ಕ್ರಾಂತಿ ಎಂದು ಹೇಳಬಹುದು. ಅಲ್ಲದೆ ಗಣಿತಶಾಸ್ತ್ರ ಇಂದು ಕ್ಯಾಂಟರನ ಸಿದ್ಧಾಂತವನ್ನು ಧಾರಾಳವಾಗಿ ಬಳಸುತ್ತಲೇ ಬೆಳೆಯುತ್ತಿದೆ. ಇಂಥ ಕ್ಯಾಂಟರ್ ಕ್ರೋನೇಕರನ ಕಟುಟೀಕೆಗೂ ಆಗ್ರಹಕ್ಕೂ ಪಾತ್ರನಾಗಿ ಕೊನೆಯವರೆಗೂ ಮಾನಸಿಕ ಬಾಧೆಗೊಳಗಾಗಿ ಹುಚ್ಚಾಸ್ಪತ್ರೆಗೆ ಸೇರಿ ಸಾಯಬೇಕಾದಂಥ ಪ್ರಸಂಗ ಬಂತು. ಅನಂತತೆಗಳ ದರ್ಜೆ ಎಂಬುದು ಮೂರ್ಖತನದ ಪರಮಾವಧಿ ಮತ್ತು ಅದು ಪಾಷಂಡಿಗಳ ಕಲ್ಪನೆ ಎಂದು ಕ್ರೋನೇಕರ್ ಮೂದಲಿಸಿದ. ಅಂದ ಮಾತ್ರಕ್ಕೆ ಕ್ರೋನೇಕರನ ಟೀಕೆಗಳು ಕೇವಲ ತರ್ಕವಿಲ್ಲದ ಬರಡು ವಾದವಲ್ಲ. ಇಂದಿಗೂ ಈ ವಿಷಯಗಳಲ್ಲಿ ಖಚಿತ ನಿರ್ಧಾರವಿಲ್ಲದೆ ವಾದವಿವಾದಗಳು ನಡೆಯುತ್ತಿರುವುದೇ ಇದಕ್ಕೆ ಸಾಕ್ಷಿ.

1845ರಲ್ಲಿ ಕ್ರೋನೇಕರನ ಧನಿಕ ಚಿಕ್ಕಪ್ಪ ತೀರಿಕೊಂಡ. ಅವನ ಬೃಹತ್ ವ್ಯಾಪಾರೋದ್ಯಮವೆಲ್ಲವೂ ಆಗ ಈತನ ಹೊಣೆಯಾಯಿತು. 1845–1853ರ ಎಂಟು ವರ್ಷಗಳ ಅವಧಿಯಲ್ಲಿ ಕ್ರೋನೇಕರ್ ವ್ಯಾಪಾರವನ್ನು ಬಹು ಚತುರತೆಯಿಂದ ಕುದುರಿಸಿ ಮುಂದಿನ ಜೀವನಕ್ಕೆ ಬೇಕಾಗುವ ಭದ್ರ ಆರ್ಥಿಕ ತಳಹದಿಯನ್ನು ಹಾಕಿಕೊಂಡ. ಎಲ್ಲ ಕೆಲಸಗಳಲ್ಲಿಯೂ ಕ್ರೋನೇಕರ್ ಬಹು ಅಚ್ಚುಕಟ್ಟು. ಈತ 25ನೆಯ ವಯಸ್ಸಿನಲ್ಲಿ ತನ್ನ ಶ್ರೀಮಂತ ಚಿಕ್ಕಪ್ಪನ ಮಗಳನ್ನೇ ಪ್ರೇಮಿಸಿ ವರಿಸಿದನಲ್ಲದೆ ಆತನ ಎಲ್ಲ ಆಸ್ತಿಗಳಿಗೂ ಹಕ್ಕುದಾರನಾದ. ಕ್ರೋನೇಕರನ ವೈವಾಹಿಕ ಜೀವನ ಸುಖಮಯವಾಗಿತ್ತು. ಈ ದಂಪತಿಗಳಿಗೆ ಆರು ಜನ ಮಕ್ಕಳು. 8 ವರ್ಷದ ವ್ಯಾಪಾರಾವಧಿಯಲ್ಲಿ ಬೇರೆಯವರಾಗಿದ್ದರೆ ಗಣಿತಕ್ಕೆ ತರ್ಪಣ ಕೊಡುತ್ತಿದ್ದರು. ಈ ಸಮಯದಲ್ಲಿ ತನ್ನ ಮೆಚ್ಚಿನ ಗಣಿತಕ್ಕೆ ಬೇಕಾದ ಎಲ್ಲ ಪತ್ರ ವ್ಯವಹಾರಗಳನ್ನೂ ನಡೆಸಿ ಶ್ರೇಷ್ಠ ಗಣಿತಜ್ಞರೊಡನೆ ಸ್ನೇಹ ಸಂಪರ್ಕ ಬೆಳೆಸಿ ತನ್ನ ಪಾಂಡಿತ್ಯವನ್ನು ಬೆಳೆಸಿಕೊಂಡ. ವ್ಯಾಪಾರದಲ್ಲಿ ಹೇಗೋ ಬಿಡುವು ಮಾಡಿಕೊಂಡು ಹರ್‌ಮೈಟ್ (1822–1901) ಮತ್ತು ಫ್ರಾನ್ಸಿನ ಇತರ ಖ್ಯಾತ ಗಣಿತಜ್ಞರ ಸ್ನೇಹಕ್ಕಾಗಿ ಪದೇ ಪದೇ ಪ್ರಯಾಣ ಮಾಡುತ್ತಿದ್ದ. ಕುಮ್ಮರನೊಡನೆ ಪತ್ರ ವ್ಯವಹಾರ ಎಂದಿನಂತೆಯೇ ಮುಂದುವರಿಯಿತು. ಅಂತೂ ಈತನ ಪ್ರಗತಿದಾಯಕ ವ್ಯಾಪಾರೋದ್ಯಮ ಗಣಿತಪಾಂಡಿತ್ಯಕ್ಕೆ ಪೂರಕವಾದುದು ಒಂದು ಚಾರಿತ್ರಿಕ ವಿಸ್ಮಯ.

ಜ್ಞಾನ ವಿತರಣೆ ಮಾಡುವ ಹಂಬಲದಿಂದ ಕ್ರೋನೇಕರ್ ಹಣಸಂಪಾದನೆಯನ್ನು ಸಾಕುಮಾಡಿ ಗಣಿತರಂಗಕ್ಕೆ 1845ರಲ್ಲಿ ಪುನರುತ್ಸಾಹದಿಂದ ದುಮುಕಿದ. ಇಲ್ಲಿಯೂ ಆತನದು ವೈಶಿಷ್ಟ್ಯ. ಯಾರ ಹಂಗೂ ಇಲ್ಲದೆ, ಯಾವ ಹುದ್ದೆಗೂ ಪರರ ಆಶ್ರಯ ಪಡೆಯದೇ, ಉಚಿತ ಪ್ರವಚನಗಳನ್ನು ವಿದ್ಯಾರ್ಥಿಗಳಿಗೆ ಕೊಡಲು ಬರ್ಲಿನ್ ವಿಶ್ವವಿದ್ಯಾಲಯದ ಅಪ್ಪಣೆ ಪಡೆದ. ಕುಮ್ಮರ್ ನಿವೃತ್ತನಾಗುವವರೆಗೂ ಈ ಜ್ಞಾನದಾನವನ್ನು ಮುಂದುವರಿಸಿ 1883ರಲ್ಲಿ ಗುರುಪೀಠವನ್ನು ಪ್ರಾಧ್ಯಾಪಕನಾಗಿ ಅಲಂಕರಿಸಿದ. ಆ ದಿವಸಗಳಲ್ಲಿ ವಿಶೇಷವಾಗಿ ಗಣಿತಜ್ಞರ ಭೇಟಿ ಮಾಡಿ ದೊಡ್ಡ ದೊಡ್ಡ ಸಮಿತಿ ಸಭೆಗಳಲ್ಲಿ ಭಾಗವಹಿಸಿದ. ಗಣಿತದ ಉಪಾಧ್ಯಾಯನಾಗಿ ಅಜಾತಶತ್ರುವೂ ಅಜೇಯನೂ ಆದ ವೈಯರ್‌ಸ್ಟ್ರಾಸನಂಥ ನುರಿತ ಅಧ್ಯಾಪಕನೊಡನೆ ಪೈಪೋಟಿಯಿಂದ ಸೆಣಸಿ ಯಶಸ್ವಿಯಾದವ ಕ್ರೋನೇಕರ್, ಎಂದೂ ಹಿಂಗದ ಉತ್ಸಾಹ ನಂಬಿಕೆಗಳಿಂದ ವಿದ್ಯಾರ್ಥಿಗಳಿಗೆ ಸದಾ ಜ್ಞಾನದಾನ ಮಾಡಲು ಕ್ರೋನೇಕರ್ ಕಾತರನಾಗಿದ್ದ. ವಿಶ್ವವೇ ಆತನ ಪಾಠಶಾಲೆ; ಆತನ ಮನೆ ಧರ್ಮಸತ್ರ.

1891ನೆಯ ಇಸವಿ ಡಿಸೆಂಬರ್ 29ರಂದು ಕ್ರೋನೇಕರ್ ನಿಧನನಾದ. (ಕೆ.ಎಂಎಎಸ್.)

**ಕ್ರೋಬರ್, ಆಲ್‌ಫ್ರೆಡ್ ಲೂಯಿಸ್ :** 1870–1960. ಅಮೆರಿಕದ ಪ್ರಸಿದ್ಧ ಮಾನವಶಾಸ್ತ್ರಜ್ಞರಲ್ಲೊಬ್ಬ. 1876ರಲ್ಲಿ ನ್ಯೂ ಜರ್ಸಿಯ ಹೊಬೊಕೆನ್ ಎಂಬಲ್ಲಿ ಜನಿಸಿದ. ಈತನ ತಂದೆತಾಯಿಗಳು ಜರ್ಮನ್ ಮೂಲದ ಪ್ರಾಟೆಸ್ಟಂಟರು. ಅವರು ಇಂಗ್ಲಿಷ್ ಭಾಷೆಯನ್ನು ಸಮರ್ಥವಾಗಿ ಮಾತನಾಡುತ್ತಿದ್ದರಾದರೂ ಮನೆಯ ಭಾಷೆ ಜರ್ಮನ್ ಆಗಿತ್ತು. ಕ್ರೋಬರನಿಗೆ ಬಾಲ್ಯದಲ್ಲಿಯೇ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಪರಿಚಯವಾಯಿತು. ಹುಡುಗನಾಗಿದ್ದಾಗಲೇ ಹೀಗೆ ನಾಲ್ಕು ಭಾಷೆಗಳ ಪರಿಚಯವಾದುದರಿಂದ ಭಾಷಾವಿಜ್ಞಾನದಲ್ಲಿ ಇವನಿಗೆ ಆಸಕ್ತಿ ಮೂಡಿತು. ಪ್ರಾಥಮಿಕ ವಿದ್ಯಾಭ್ಯಾಸ ಎಥಿಕಲ್ ಕಲ್ಚರ್ ಶಾಲೆಯಲ್ಲಿ ನಡೆಯಿತು. ಅಲ್ಲಿ ಪ್ರಾಚೀನ ಇತಿಹಾಸದ ಬಗ್ಗೆ ಕ್ರೋಬರ್ ಆಸಕ್ತಿ ತಳೆದ. ಕೆಲ ಕಾಲದ ಅನಂತರ ಕ್ರೋಬರ್ ಮತ್ತು ಅವನ ಕೆಲವು ಮಿತ್ರರ ಗುಂಪೊಂದು ಸೈಂಟಿಫಿಕ್ ಸೊಸೈಟಿ ಎಂಬ ಸಂಘವೊಂದನ್ನು ಸ್ಥಾಪಿಸಿಕೊಂಡು ಪಳೆಯುಳಿಕೆಗಳು, ಖನಿಜಗಳು, ಮತ್ತು ಜೀವವಿಜ್ಞಾನಕ್ಕೆ ಸಂಬಂಧಪಟ್ಟ ಮಾದರಿಗಳು–ಮುಂತಾದುವನ್ನು ಸಂಗ್ರಹಿಸಿ ಅವುಗಳ ಬಗ್ಗೆ ಪ್ರಬಂಧಗಳನ್ನು ತಯಾರಿಸಿ ಪರಸ್ಪರ ಓದಿ ಚರ್ಚಿಸುತ್ತಿದ್ದರು. ಹೀಗಾಗಿ ಕ್ರೋಬರನಿಗೆ ಪ್ರಾಕೃತಿಕ ಚರಿತ್ರೆ ಮತ್ತು ಜೀವವಿಜ್ಞಾನದ ಬಗ್ಗೆ ಹೆಚ್ಚು ಆಸಕ್ತಿ ಉಂಟಾಯಿತು.

ಅನಂತರ ಕ್ರೋಬರ್ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಎಂ.ಎ. ಡಿಗ್ರಿ ಪಡೆದು (1897) ಫ್ರಾನ್ಜ್ ಬೋಆಸನ ವಿದ್ಯಾರ್ಥಿಯಾಗಿ ಮಾನವಶಾಸ್ತ್ರ ಭಾಗವೊಂದರ ಅಧ್ಯಯನ ನಡೆಸಿ ಪಿಎಚ್.ಡಿ., ಡಿಗ್ರಿಯನ್ನು ಪಡೆದ(1901). ಅದೇ ವರ್ಷ ಬರ್ಕ್ಲಿಯ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರ ವಿಭಾಗವೊಂದನ್ನು ತೆರೆದು ತನ್ನ ನಿವೃತ್ತಿಕಾಲದವರೆಗೂ ಅಲ್ಲಿದ್ದುಕೊಂಡು ಅದರ ಅಭಿವೃದ್ಧಿಗಾಗಿ ಕೆಲಸ ಮಾಡಿದ.

ಕ್ರೋಬರ್ ಮಾನವಶಾಸ್ತ್ರವನ್ನು ತನ್ನ ಅಧ್ಯಯನ ಮಾರ್ಗವನ್ನಾಗಿ ಮಾಡಿಕೊಂಡುದಕ್ಕೆ ಮುಖ್ಯ ಕಾರಣ ಮಾನವನ ಸಂಸ್ಕೃತಿ ಮತ್ತು ಬೆಳವಣಿಗೆಯ ಬಗ್ಗೆ ಅವನಿಗಿದ್ದ ಅಪಾರವಾದ ಆಸಕ್ತಿ. ಈತ ರಾಜಕೀಯ ಮತ್ತು ಸಾಮಾಜಿಕ ನೀತಿಗಳಲ್ಲಿ ಪ್ರಜಾಪ್ರಭುತ್ವವಾದಿಯಾಗಿದ್ದ. ಜನತೆಯ ಉದ್ಧಾರದ ಬಗ್ಗೆ ಇವನಿಗೆ ಅಪಾರವಾದ ಆಸಕ್ತಿ ಇತ್ತು. ಕ್ಯಾಲಿಫೋರ್ನಿಯಯಾದ ಇಂಡಿಯನ್ನರ ಭೂ ಆಕ್ರಮಣ ಚಳವಳಿಯಲ್ಲಿ ಈತ ಸಕ್ರಿಯ ಪಾತ್ರವಹಿಸಿದ. 1930ರಲ್ಲಿ ಮೊದಲಬಾರಿಗೆ ಬ್ಯೂರೋ ಆಫ್ ಇಂಡಿಯನ್ ಅಫೇರ್ಸ್ ಎಂಬ ಸಂಸ್ಥೆ ಜಾನ್ ಕಾಲಿಯರ್‌ನ ನೇತೃತ್ವದಲ್ಲಿ ಪ್ರಾರಂಭವಾದಾಗ ಅದರಲ್ಲಿ ಕ್ರೋಬರ್ ಮಾನವಶಾಸ್ತ್ರಜ್ಞನಾಗಿ ಕೆಲಸ ಮಾಡಿದನಲ್ಲದೆ ಸಂಸ್ಥೆ ಇಂಡಿಯನ್ನರ ಸಮಸ್ಯೆಗಳತ್ತ ಗಮನ ಹರಿಸಬೇಕೆಂಬ ಸೂಚಿಸಿ ಸಂಶೋಧಕರಿಗೆ ವ್ಯಾಸಂಗ ಮಾಡುವುದಕ್ಕೂ ಅದರ ಪ್ರಕಟಣೆಗೂ ಹೆಚ್ಚಿನ ಸ್ವತಂತ್ರ್ಯವಿರಬೇಕಾದ್ದು ಅಗತ್ಯವೆಂದು ತಿಳಿದು ಅದಕ್ಕಾಗಿ ಹೋರಾಡಿದ.

ಕ್ರೋಬರ್ ಮಾನವಶಾಸ್ತ್ರದ ಎಲ್ಲ ವಿಭಾಗಗಳಿಗೂ ಗಮನಾರ್ಹವಾದ ಕೊಡುಗೆಯನ್ನು ಕೊಟ್ಟಿದ್ದಾನೆ ಎಂಬುದು ವಿದ್ವಾಂಸರ ಅಭಿಮತ. ಮಾನವಶಾಸ್ತ್ರದಲ್ಲಿ ಒಂದು ಹೊಸ ದೃಷ್ಟಿಯನ್ನು, ಒಂದು ನಿಯಮವನ್ನು ಹಾಕಿಕೊಟ್ಟ ಮಟ್ಟಿಗೆ ಈ ಮಾತು ಸತ್ಯ. ಪ್ರಥಮವಾಗಿ ತಾನೊಬ್ಬ ಜನಾಂಗಶಾಸ್ತ್ರಜ್ಞನೆಂದೂ ತನ್ನ ಮುಖ್ಯ ಉದ್ದೇಶ ಪ್ರಾಕೃತಿಕ ಸಂಸ್ಕೃತಿ ಮತ್ತು ಅದರ ಬೆಳವಣಿಗೆಯನ್ನು ಹುಡುಕಿ ಕಂಡುಹಿಡಿದು ಅರ್ಥ ಮಾಡಿಕೊಳ್ಳುವುದು ಎಂದೂ ಪರಿಗಣಿಸಿದ್ದನಾದ ಕಾರಣ ಕ್ರೋಬರ್ ಜನಾಂಗಶಾಸ್ತ್ರದ ಹೊರಗೆ ಏನನ್ನೇ ಮಾಡಿದ್ದರೂ ಅದು ಪ್ರಾಸಂಗಿಕವಷ್ಟೆ. ಅಂಥ ಕಡೆಗಳಲ್ಲೂ ಈತ ತನ್ನ ಮೂಲ ಧೋರಣೆಯನ್ನೇ ಪ್ರದರ್ಶಿಸುತ್ತಾನೆ. ಈತ ಉಪಯೋಗಿಸಿಕೊಂಡ ವಿಧಾನಗಳು, ಸಮಸ್ಯೆಗಳ ವೈವಿಧ್ಯ, ವಿವರಣಾತ್ಮಕ ತತ್ತ್ವಗಳು– ಇವೆಲ್ಲ ಚಾರಿತ್ರಕಾಂಶಗಳಿಂದ ಕೂಡಿರುತ್ತಿದ್ದುವೆಂಬುದನ್ನು ಮರೆಯುವಂತಿಲ್ಲ.

ಕ್ರೋಬರ್ ಮಾನವಶಾಸ್ತ್ರದಲ್ಲಿ ಪ್ರವೇಶ ಮಾಡುವ ಹೊತ್ತಿಗಾಗಲೆ ಪ್ರಕಟವಾದ ಕೃತಿಗಳು ಪ್ರಪಂಚದಾದ್ಯಂತ ಸಮಾಜದ ನಡೆವಳಿಕೆ ಮತ್ತು ಸಂಸ್ಕೃತಿಯ ಪ್ರಾಮುಖ್ಯವನ್ನು ಕುರಿತು ವಿವರಿಸಿದ್ದುವು. ಅವುಗಳ ಪ್ರಕಾರ ಮಾನವಶಾಸ್ತ್ರಜ್ಞರು ಕಡೆಯ ಪಕ್ಷ ಸಂಸ್ಕೃತಿಯ ಪ್ರಾಮುಖ್ಯವನ್ನಾದರೂ ಒಪ್ಪಿಕೊಳ್ಳಬೇಕಾಗಿತ್ತು. ಇಲ್ಲಿ ಜೀವವಿಜ್ಞಾನಿಗಳ ಮತ್ತು ಪರಿಸರವಿಜ್ಞಾನಿಗಳ ಮಹತ್ತ್ವ ಎಷ್ಟೆಂಬುದನ್ನು ಕ್ರೋಬರ್ ಒತ್ತಿ ಹೇಳಿದ.

1923ರಲ್ಲಿ ಪ್ರಕಟವಾದ ಕ್ರೋಬರನ ಮಾನವಶಾಸ್ತ್ರವನ್ನು ಕುರಿತ ಪುಸ್ತಕ ಬಹಳ ಪ್ರಭಾವಶಾಲಿ ಕೃತಿ. ಮಾನವಶಾಸ್ತ್ರ ಮೊದಲಿಗೆ ಒಂದು ಕ್ರಮಬದ್ಧವಾದ ಅಧ್ಯಯನ ವಿಷಯವಾಗಿ ಒಪ್ಪಿಗೆ ಗಳಿಸಿದಾಗ, ಅನೇಕ ಮಂದಿ ಮಾನವಶಾಸ್ತ್ರಜ್ಞರು ಕಾಣಿಸಿಕೊಳ್ಳಲಾರಂಭಿಸಿದಾಗ, ಈ ಕೃತಿ ಎಲ್ಲರ ಕೈಪಿಡಿಯಂತೆ ಕಂಗೊಳಿಸಿತು. ಮಾನವಶಾಸ್ತ್ರದ ಬಗ್ಗೆ ಮತ್ತಿತರ ಮಾನವ ಸಂಸ್ಕೃತಿಯ ಬಗ್ಗೆ ವಿದ್ವಾಂಸರಿಗೆ ಮತ್ತು ಜನಸಾಮಾನ್ಯರಿಗೆ ಈ ಕೃತಿ ಸಾಕಷ್ಟು ಹೊಸ ವಿಷಯಗಳನ್ನು ಒದಗಿಸಿತು. ಮೊದಲನೆಯ ಆವೃತ್ತಿಯಲ್ಲಿ ಮನುಷ್ಯನ ಸಾಂಪ್ರದಾಯಿಕ ನಡೆವಳಿಕೆಯ, ಜೀವ ಮತ್ತು ಪರಿಸರ ವಿವರಣೆಗಳಲ್ಲಿ ಸ್ವಲ್ಪ ಕೊರೆ ಕಂಡುಬಂದಿತಾದರೂ 1948ರಲ್ಲಿ ಪ್ರಕಟವಾದ ಎರಡನೆಯ ಆವೃತ್ತಿಯಲ್ಲಿ ಮಾನವಶಾಸ್ತ್ರದ ಮುಖ್ಯ ವಿಷಯಗಳಾದ ಜನಾಂಗ, ಭಾಷೆ, ಸಂಸ್ಕೃತಿ ಮನೋವಿಜ್ಞಾನ. ಪ್ರಾಚೀನ ಇತಿಹಾಸ–ಇವುಗಳಿಗೆಲ್ಲ ಯುಕ್ತಸ್ಥಾನ ದೊರೆತದ್ದರಿಂದ ಗ್ರಂಥ ಹೆಚ್ಚು ಪರಿಪೂರ್ಣವಾಯಿತು.

ಭೌತಿಕ ಮಾನವಶಾಸ್ತ್ರಕ್ಕೆ ಕ್ರೋಬರನ ಕೊಡುಗೆ ಹೆಚ್ಚಿನದು. ಈತ ಆ ಕಾಲು ಶತಮಾನದಲ್ಲಿ ಜನಾಂಗಗಳ ಬಗ್ಗೆ ಬಂದಿದ್ದ ಪುಸ್ತಕಗಳನ್ನೆಲ್ಲ ವಿಮರ್ಶಿಸಿ ಅವುಗಳಲ್ಲಿರುವ ಲೋಪದೋಷಗಳನ್ನು ಕುರಿತು ಬರೆದ. 1920ರಲ್ಲಿ ಮಾನವಜನಾಂಗ ಮತ್ತು ಅದರ ಪ್ರಾಚೀನತೆ ಎಂಬ ಬಗ್ಗೆ ಮೂರು ಪ್ರಬಂಧಗಳನ್ನು ಪ್ರಕಟಿಸಿದ. ಈ ವಿಷಯವನ್ನೇ ಅನಂತರ ಸಾಕಷ್ಟು ವಿಸ್ತರಿಸಿ ತನ್ನ ಮಾನವಶಾಸ್ತ್ರ ಕೃತಿಯನ್ನು ಪುನಾರಚಿಸಿದ. ಈತನಿಗೆ ಆಧುನಿಕ ತಳಿವಿಜ್ಞಾನದ ಮಾಹಿತಿ ಇರಲಿಲ್ಲವಾದರೂ ಮಾನವನ ಪಳೆಯುಳಿಕೆ ಮತ್ತು ಜನಾಂಗ ಮೂಲಗಳನ್ನು ಕುರಿತು ವಿಕಾಸವಾದದ ಆಧಾರದ ಮೇಲೆ ಅನೇಕ ಅಂಶಗಳನ್ನೀತ ವಿವರಿಸಿದ. 1928ರಲ್ಲಿ ಮಾನವ ಸಂಸ್ಕೃತಿಯ ಒಳಪದರಗಳ ವಿವರಣೆಯನ್ನು ಗುರುತಿಸಿದ. 1934ರಲ್ಲಿ ರಕ್ತಸಂಬಂಧ ವಿಭಜನೆಯತ್ತ ಗಮನ ಸೆಳೆದ. ಭೌತಿಕ ಮಾನವಶಾಸ್ತ್ರಕ್ಕೆ ವಿಕಾಸವಾದದ ಒರೆ ಹಚ್ಚಿದ್ದು, ಹೊಸ ವಿಷಯಗಳನ್ನು ಮಂಡಿಸಿದ್ದು, ಸಂಶೋಧನೆಯ ಹೊಸ ಹೊಸ ಮಾರ್ಗಗಳನ್ನು ಕಂಡು ಹಿಡಿದದ್ದು ಕ್ರೋಬರನ ಮುಖ್ಯ ಕೊಡುಗೆಗಳು.

ಭಾಷಾವಿಜ್ಞಾನಕ್ಕೆ ಕ್ರೋಬರನ ಕೊಡುಗೆ ಅಷ್ಟೇ ಹೆಚ್ಚಿನದು ಮತ್ತು ಬಹಳ ಕಾಲ ನಿಲ್ಲುವಂಥದು. ಆಸ್ಟ್ರೇಲಿಯದ ಭಾಷೆಗಳ ಪರಸ್ಪರ ಸಂಬಂಧದ ಬಗ್ಗೆಯೂ ಈತ ಬರೆದಿದ್ದಾನೆ. ಮಧ್ಯ ಅಮೆರಿಕದ ಅನೇಕರ ಆಸಕ್ತಿಯೆಲ್ಲ ಭಾಷೆಗಳ ಚಾರಿತ್ರಿಕ ಅಂಶಗಳ ಬಗ್ಗೆ ಮಾತ್ರ ಇತ್ತು. ಆದರೆ ಕ್ರೋಬರ್ ಭಾಷೆಗಳ ಪರಸ್ಪರ ತೋಲನ ಮಾಡಿ ಕ್ಯಾಲಿಫೋರ್ನಿಯದ ಇಂಡಿಯನ್ ಭಾಷೆಗಳಲ್ಲಿ ಅನೇಕ ಪ್ರಭೇದಗಳನ್ನು ಗುಂಪುಗಳನ್ನು ಗುರುತಿಸಿದ್ದಾನೆ. ಅಲ್ಲದೆ ಅಮೆರಿಕದ ಮೂಲವಾಸಿಗಳಾದ ಇಂಡಿಯನ್ನರ ಉಪಭಾಷಾಪರಿವೀಕ್ಷಣೆಗೂ ಮಾರ್ಗದರ್ಶಕನಾಗಿದ್ದಾನೆ.

ಕ್ರೋಬರ್ ಮೂಲತಃ ಸಮಾಜ ವಿಜ್ಞಾನಿ. ಇವನ ಸಂಶೋಧನೆಯ ಪ್ರಥಮ ಗುರಿ ಮಾನವಶಾಸ್ತ್ರ. ಆದರೆ ಈತ ತನ್ನ ಸಂಶೋಧನೆಯ ಹಾದಿಯಲ್ಲಿ ಪ್ರಾಚೀನ ವಸ್ತು ಸಂಶೋಧನೆಯನ್ನೂ ನಡೆಸಿದ್ದಾನೆ. ಇವನ ಪ್ರಾಚ್ಯ ಸಂಶೋಧನೆಯ ಮೊದಲ ಕೃತಿ ನೇಟೀವ್ ಕಲ್ಚರ್ ಆಫ್ ದಿ ಸೌತ್ ವೆಸ್ಟ್(1928). ಇದಕ್ಕಿಂತ ಮುಂಚೆಯೇ ಈ ದಿಸೆಯಲ್ಲಿ ಪ್ರಕಟವಾದ ಎರಡು ಕೃತಿಗಳಿಗಿಂತ ಕ್ರೋಬರನದು ಉತ್ತಮವೆಂದು ವಿದ್ವಾಂಸರ ಮತ. ಈತನ ಪ್ರಾಚ್ಯ ಸಂಶೋಧನೆ ಮೆಕ್ಸಿಕೋ ಮತ್ತು ಪೆರುಗಳಿಗೆ ಹೆಚ್ಚು ಸೀಮಿತವಾಗಿತ್ತೆಂದು ಹೇಳಬಹುದು. ಪ್ರಾಚ್ಯ ಸಂಶೋಧನೆಯಲ್ಲಿ ಖಚಿತ ತಂತ್ರಗಳನ್ನು ಜಾರಿಗೆ ತರುವಲ್ಲಿ ಕ್ರೋಬರನ ಪಾತ್ರವೂ ಪ್ರಮುಖವಾದುದು.

ಕ್ರೋಬರ್ ತನ್ನ ಸಂಶೋಧನೆಯ ತೆಕ್ಕೆಯಲ್ಲಿ ಸೇರಿಸಿಕೊಂಡ ಮತ್ತು ಪ್ರಮುಖವೆಂದು ಪರಿಗಣಿಸಿದ ಮತ್ತೊಂದು ಅಂಗ ಮಾನವಕುಲಗಳ ವಿವರಣೆ. ಕ್ಷೇತ್ರಕಾರ್ಯದಲ್ಲಿ ಈತ ಹಾಕಿಕೊಟ್ಟ ಮಾರ್ಗ ಅನುಕರಣೀಯವಾದುದು. ಈ ದಿಸೆಯಲ್ಲಿ ಈತನ ಟಿಪ್ಪಣಿಗಳು ಅಪಾರ ಬೆಲೆ ಬಾಳತಕ್ಕವೆಂದು ವಿದ್ವಾಂಸರ ಮತ. ಕ್ರೋಬರ್ ತನ್ನ ವಿದ್ಯಾರ್ಥಿಗಳಿಗೆ ಎಲ್ಲವನ್ನು ಹೇಳುವ ಬದಲು ಅವರೇ ನೋಡಿ ಮಾಡಿ ಕಲಿಯುವಂತೆ ಮಾರ್ಗದರ್ಶನ ಮಾಡುತ್ತಿದ್ದನಂತೆ. ಪ್ರಾಚ್ಯ ಸಂಶೋಧನಾಶಾಸ್ತ್ರಕ್ಕೆ ಕ್ರೋಬರನ ಮುಖ್ಯ ಕೊಡುಗೆಯಾದ ದಿ ಹ್ಯಾಂಡ್ ಬುಕ್ ಆಫ್ ದಿ ಇಂಡಿಯನ್ಸ್ ಆಫ್ ಕ್ಯಾಲಿಫೋರ್ನಿಯ ಎಂಬುದು 1925ರಲ್ಲಿ ಪ್ರಕಟವಾಯಿತು. ಹೀಗೆ ಕ್ರೋಬರ್ ತನ್ನ ಸಂಶೋಧನ ಮಾರ್ಗದಲ್ಲಿ ದೊರೆಯಬಹುದಾದ ಅನೇಕ ವಿಷಯಗಳಲ್ಲಿ ಸಮರ್ಥವಾಗಿಯೇ ಕೈಯಾಡಿಸಿದ್ದಾನೆಂದು ಹೇಳಬಹುದು. ಈತ ಪ್ರತಿಪಾದಿಸುವ ವಿಷಯಗಳನ್ನೆಲ್ಲ ಒಪ್ಪಲಾಗದಿದ್ದರೂ ಅವನ್ನು ಕಡೆಗಣಿಸುವುದಂತೂ ಖಂಡಿತ ಸಾಧ್ಯವಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ.

ತಾನು 1960ರಲ್ಲಿ ಏರ್ಪಡಿಸಿದ್ದ ಮಾನವಶಾಸ್ತ್ರದ ದಿಗಂತಗಳು ಎಂಬ ವಿದ್ವದ್‌ಗೋಷ್ಠಿಯಿಂದ ಹಿಂತಿರುಗುವಾಗ ಪ್ಯಾರಿಸ್ ನಗರದಲ್ಲಿ ಕ್ರೋಬರ್ ತೀರಿಕೊಂಡ.

ಕ್ರೋಬರ್ ಅಮೆರಿಕದ ಮಾನವಶಾಸ್ತ್ರ ಸಂಘದ ಸಂಸ್ಥಾಪಕರಲ್ಲೊಬ್ಬ. 1907ರಲ್ಲಿ ಅದರ ಅಧ್ಯಕ್ಷನೂ ಆಗಿ ಕೆಲಸ ಮಾಡಿದ್ದಾನೆ. ಅದಕ್ಕೆ ಮುಂಚೆ 1906ರಲ್ಲಿ ಅಮೆರಿಕ ಜಾನಪದ ಸಂಘದ ಅಧ್ಯಕ್ಷನೂ ಆಗಿದ್ದನಲ್ಲದೆ ಮುಂದೆ 1940ರಲ್ಲಿ ಅಮೆರಿಕ ಭಾಷಾ ವಿಜ್ಞಾನ ಸಂಘದ ಅಧ್ಯಕ್ಷನೂ ಆಗಿ ಸೇವೆ ಸಲ್ಲಿಸಿದ. ಕ್ರೋಬರನಿಗೆ ಅನೇಕ ಬಹುಮಾನಗಳು ಬಂದಿವೆ. 1945ರಲ್ಲಿ ರಾಯಲ್ ಆಂತ್ರೊಪಾಲಜಿಕಲ್ ಇನ್‌ಸ್ಟಿಟ್ಯೂಟಿನ ಹಕ್ಸ್‌ಲೆ ಮೆಮೊರಿಯಲ್ ಪದಕವೂ 1946ರಲ್ಲಿ ಮಾನವಶಾಸ್ತ್ರ ಸಂಶೋಧನೆಗೆ ವೆನ್ನರ್ ಗ್ರೆನ್ ಸಂಸ್ಥೆಯ ವೈಕಿಂಗ್ ಪದಕವೂ ಈತನಿಗೆ ಬಂದುವು. ಅಮೆರಿಕದ ಕ್ಯಾಲಿಫೋರ್ನಿಯ, ಶಿಕಾಗೊ, ಕೊಲಂಬಿಯ, ಹಾರ್ವರ್ಡ್, ಯೇಲ್ ಮುಂತಾದ ವಿಶ್ವವಿದ್ಯಾಲಯಗಳು ಈತನಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ಕೊಟ್ಟು ಗೌರವಿಸಿವೆ.

ಕ್ರೋಬರ್ ಮುನ್ನೂರಕ್ಕೂ ಹೆಚ್ಚು ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾನೆ. ಫಿಲಿಪ್ಪೈನ್ಸಿನ ಜನರು(1919) ಮಾನವಶಾಸ್ತ್ರ(1923), ಕ್ಯಾಲಿಫೋರ್ನಿಯದ ಇಂಡಿಯನ್ನರ ಕೈಪಿಡಿ (1925) ಮೂಲ ಉತ್ತರ ಅಮೆರಿಕದ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪ್ರದೇಶಗಳು(1939), ಸ್ಟಿಮ್ಯುಲಸ್ ಡಿಫ್ಯೂಷನ್(1940), ಹೆಂಗಸರ ಉಡುಪಿನ ವೈವಿಧ್ಯದ ಮೂರು ಶತಮಾನಗಳು(1940), ಪೆರೂವಿಯನ್ ಆರ್ಕಿಯಾಲಜಿ ಇನ್ 1942(1944), ಕಾನ್‌ಫಿಗರೇಷನ್ಸ್ ಆಫ್ ಕಲ್ಚರ್ ಗ್ರೋತ್(1944), ಮೊಹಾವೆಯ ಒಂದು ಚಾರಿತ್ರಿಕ ಮಹಾಕಾವ್ಯ(1951), ಸಂಸ್ಕೃತಿ, ಒಂದು ವಿಮರ್ಶಾತ್ಮಕ ವಿವೇಚನೆ (1952), ಸಂಸ್ಕೃತಿಯ ಸ್ವಭಾವ(1952), ರೀತಿ ಮತ್ತು ನಾಗರಿಕತೆಗಳು(1957), ಸ್ಪಾರ್ಕ್‌ಮನ್ನನ ಲೂಸೆನೋ ವ್ಯಾಕರಣ (1960)–ಇವು ಕ್ರೋಬರನ ಅತ್ಯುತ್ತಮ ಗ್ರಂಥಗಳಲ್ಲಿ ಕೆಲವು. (ಎಚ್.ಕೆ.ಆರ್.ಜಿ.)

**ಕ್ರೋಮಟಾಗ್ರಫಿ :** ವಸ್ತುಗಳ ಮಿಶ್ರಣಗಳನ್ನು ಬೇರ್ಪಡಿಸುವ ಮತ್ತು ವಿಶ್ಲೇಷಿಸುವ ಒಂದು ವಿಧಾನ. ಇದರಲ್ಲಿ ಅನಿಲ, ದ್ರವ ಅಥವಾ ದ್ರಾವಕಗಳಲ್ಲಿ (ಸಾಲ್ವೆಂಟ್ಸ್) ವಿಲೀನವಾಗದ ಘನಗಳ ಅಂಶಗಳ ನಡುವೆ ಮಿಶ್ರಣದ ಘಟಕಗಳನ್ನು ವಿತರಣೆಮಾಡಿ ಬೇರ್ಪಡಿಸಬಹುದು. ವಸ್ತುಗಳು ಅಲ್ಪಗಾತ್ರದಲ್ಲಿದ್ದಾಗ ಅವನ್ನು ಬೇರ್ಪಡಿಸಲು ಸಹ ಕ್ರೋಮಟಾಗ್ರಫಿಯನ್ನು ಬಳಸಬಹುದು. ಈ ವಿಧಾನವನ್ನು ಸುಮಾರು 50 ವರ್ಷಗಳ ಹಿಂದೆ ಸ್ವೆಟ್ ಎಂಬಾತ ಮೊದಲಬಾರಿ ನೈಸರ್ಗಿಕ ಬಣ್ಣಗಳ ದ್ರಾವಣ ಮಿಶ್ರಣವನ್ನು ಬೇರ್ಪಡಿಸಲು ಉಪಯೋಗಿಸಿದ. ಇದರ ಪ್ರಕಾರ ಬಣ್ಣಗಳ ಮಿಶ್ರಣದ ದ್ರಾವಣವನ್ನು ಘನ ಕ್ಯಾಲ್ಸಿಯಂ ಕಾರ್ಬೊನೇಟ್ ತುಂಬಿರುವ ಸ್ತಂಭದಲ್ಲಿ ಹಾಯಿಸಿದಾಗ ಅವುಗಳ ಅಧಿಶೋಷಣ ದರದಲ್ಲಿ (ಅಡ್ಸಾರ್ಪ್ಷನ್ ರೇಟ್) ವ್ಯತ್ಯಾಸವಿರುವುದರಿಂದ ಅವು ಬೇರ್ಪಡೆಯಾಗಿ ಸ್ತಂಭದಲ್ಲಿ ಬಣ್ಣದ ಪಟ್ಟಿಗಳು ಕಂಡುಬರುತ್ತವೆ. ಈ ಪಟ್ಟಿಗಳಿಗೆ ಕ್ರೋಮಟಾಗ್ರಾಮ್ ಎಂದು ಹೆಸರು. ಆಧುನಿಕ ಕ್ರೋಮಟಾಗ್ರಫಿ ವಿಧಾನದಲ್ಲಿ ಬಣ್ಣಗಳ ಮಿಶ್ರಣಗಳಲ್ಲದೆ ಅಯಾನಿಕ ವಸ್ತುಗಳು, ಸಾವಯವ ರಾಸಾಯನಿಕಗಳು ಮತ್ತು ಅನಿಲಗಳ ಮಿಶ್ರಣಗಳನ್ನು ಸಹ ಬೇರ್ಪಡಿಸಬಹುದು. ಈ ವಿಧಾನಗಳಲ್ಲಿ ಹಲವಾರು ವರ್ಗಗಳಿವೆ. ಇವುಗಳಲ್ಲಿ ಮುಖ್ಯವಾದವು ಆಯಾನುವಿನಿಮಯ ಕ್ರೋಮಟಾಗ್ರಫಿ. ಅಧಿಶೋಷಣ ಕ್ರೋಮಟಾಗ್ರಫಿ ಮತ್ತು ಭಾಗೀಕರಣ (ಪಾರ್ಟಿಷನ್) ಕ್ರೋಮಟಾಗ್ರಫಿ. ಇವುಗಳ ಜೊತೆಗೆ ವಿದ್ಯುತ್ ಕ್ರೋಮಟಾಗ್ರಫಿ ಮತ್ತು ಅನಿಲ ಕ್ರೋಮಟಾಗ್ರಫಿಗಳನ್ನು ಸಹ ಸೇರಿಸಿಕೊಳ್ಳಬಹುದು. ಇವೆಲ್ಲವುಗಳಲ್ಲೂ ಮಿಶ್ರಣದಲ್ಲಿನ ವಸ್ತುಗಳು ಆಯ್ಕೆಯ ಮೂಲಕ ಅಧಿಶೋಷಣೆ ಯಾಗಿದ್ದರೂ ಸ್ವಲ್ಪಮಟ್ಟಿಗಾದರೂ ಅಧಿಶೋಷಣಕಾರ್ಯ ಉಂಟಾಗುತ್ತದೆ.

**1. ಅಯಾನುವಿನಿಮಯ ಕ್ರೋಮಟಾಗ್ರಫಿ:** ಇದರಲ್ಲಿ ದ್ರಾವಣದಲ್ಲಿರುವ ಅಯಾನುಗಳ ಮಿಶ್ರಣವನ್ನು ಘನರೂಪದಲ್ಲಿರುವ ಅಯಾನುವಿನಿಮಯ ರಾಳವನ್ನು ಉಪಯೋಗಿಸಿ ಬೇರ್ಪಡಿಸಬಹುದು. ಈ ರಾಳವನ್ನು ಒಂದು ಸ್ತಂಭದಲ್ಲಿ ತುಂಬಿ ಅದರ ಮೂಲಕ ಅಯಾನುಮಿಶ್ರಣ ದ್ರಾವಣವನ್ನು ಹಾಯಿಸಿದಲ್ಲಿ ಅಯಾನುಗಳು ರಾಳದಲ್ಲಿ ಅಧಿಶೋಷಿತವಾಗುತ್ತವೆ. ಅಧಿಶೋಷಿತವಾದ ಅಯಾನುಗಳನ್ನು ಅನುಕ್ರಮವಾಗಿ ಬಿಡುಗಡೆಮಾಡಲು ಹಲವು ಅಭಿಕರ್ಮಕಗಳನ್ನು (ರೀಏಜೆಂಟ್ಸ್) ಉಪಯೋಗಿಸುತ್ತಾರೆ. ಈ ಅಭಿಕರ್ಮಕ ದ್ರಾವಣಗಳಿಗೆ ಸ್ಥಪನಕಾರಿಗಳೆಂದು (ಎಲ್ಯೂಯೆಂಟ್ಸ್) ಹೆಸರು. ಎಲ್ಲಕ್ಕಿಂತ ಸಾರರಿಕ್ತವಾಗಿ ಅಧಿಶೋಷಿಸಲ್ಪಟ್ಟ ಅಯಾನು ಮೊದಲು ಬಿಡುಗಡೆಯಾಗಿ ಸ್ತಂಭದಿಂದ ಹೊರಬರುತ್ತದೆ. ಇತರ ಅಯಾನುಗಳ ಬಿಡುಗಡೆ ಅವುಗಳ ಅಧಿಶೋಷಿತ ಸಾಮರ್ಥ್ಯವನ್ನು ಅವಲಂಬಿಸಿರುವುದು. ಅಧಿಶೋಷಿತವಾದ ಅಯಾನು ಕೊನೆಯಲ್ಲಿ ಬಿಡುಗಡೆಯಾಗುತ್ತದೆ. ಅಯಾನ್, ವಿನಿಮಯ ರಾಳಗಳು ಸಾಮಾನ್ಯವಾಗಿ ಫೀನಾಲ್ ಮತ್ತು ಫಾರ್ಮಾಲ್‌ಡಿಹೈಡ್ ಅಥವಾ ಸ್ಟೈರೀನ್ ಮತ್ತು ಡೈವೀನೈಲ್ ಬೆಂಜೀನುಗಳ ಬಹ್ವಂಶ ಕ್ರಿಯೆಯಿಂದ ಉತ್ಪತ್ತಿಯಾದ ಪಾಲಿಮರುಗಳು. ಇವುಗಳಲ್ಲಿ ಅಯಾನಶೀಲ ಪುಂಜಗಳಿರುತ್ತವೆ. ಈ ರಾಳಗಳನ್ನು ಧನ ಮತ್ತು ಋಣ ಅಯಾನುವಿನಿಮಯ ರಾಳಗಳೆಂದು ವಿಂಗಡಿಸಬಹುದು. ಇಂಥ ವರ್ಗೀಕರಣ ರಾಳದಲ್ಲಿರುವ ಅಯಾನಿಕ ಅಥವಾ ವಿನಿಮಯವಾಗುವ ಪುಂಜದ ಮೇಲೆ ಅವಲಂಬಿಸಿದೆ. ಧನ ಅಯಾನುವಿನಿಮಯ ರಾಳಗಳಲ್ಲಿ ಸಲ್ಫೋನಿಕ್ ಆಮ್ಲ ($-SO_3H$) ಅಥವಾ ಕಾರ್ಬಾಕ್ಸಿಲಿಕ್ ಆಮ್ಲ ($-COOH$) ಪುಂಜಗಳಿದ್ದು ಅಯಾನಿಕ ರೂಪದಲ್ಲಿ $H^+$ ಅಯಾನನ್ನು ($Na^+$, $Ca^2 + La^3+$, $Th^4+$ ಮುಂತಾದ ಲೋಹದ ಅಯಾನುಗಳ ಕೂಡ ಉತ್ಕ್ರಮಣ ರೀತಿಯಲ್ಲಿ ವಿನಿಮಯ ಮಾಡಿಕೊಳ್ಳುವ ಸಾಮರ್ಥ್ಯ ಪಡೆದಿರುತ್ತದೆ. ಈ ಪುಂಜಗಳು ರಾಳದಲ್ಲಿ $-SO_3Na$ ಅಥವಾ $-COON_a$ ಮುಂತಾದ ಲವಣಗಳ ರೂಪದಲ್ಲಿದ್ದಾಗ $Na+$ ಅಯಾನು $H+$ ಅಯಾನು ಮತ್ತು ಇತರ ಲೋಹದ ಅಯಾನುಗಳ ಕೂಡ ವಿನಿಮಯ ಮಾಡಿಕೊಳ್ಳಬಹುದು. ಸಲ್ಫೋನಿಕ್ ಆಮ್ಲವಿ ರುವ

ರಾಳಗಳನ್ನು ಸಾರ ಆಮ್ಲ ರಾಳಗಳೆಂದು ಕರೆಯಬಹುದು. ಏಕೆಂದರೆ ಇಲ್ಲಿ ಪುಂಜದ ಅಯಾನೀಕರಣ ಪೂರ್ತಿಯಾಗಿರುತ್ತದೆ. ಕಾರ್ಬಾಕ್ಸಿಲಿಕ್ ಆಮ್ಲ ಇದ್ದಾಗ ಪುಂಜದ ಅಯಾನೀಕರಣ ಪೂರ್ತಿಯಾಗಿಲ್ಲವಾದ್ದರಿಂದ ಇಂಥ ರಾಳಗಳನ್ನು ಸಾರರಿಕ್ತ ಆಮ್ಲರಾಳಗಳೆಂದು ಕರೆಯುತ್ತಾರೆ. ಆದರೆ ರಾಳ ಲವಣದ ರೂಪದಲ್ಲಿದ್ದರೆ ಅಯಾನೀಕರಣ ಪೂರ್ತಿಯಾಗಿರುತ್ತದೆ. ಲವಣರೂಪದಲ್ಲಿದ್ದಾಗ ರಾಳದಲ್ಲಿ ಅಯಾನುವಿನಿಮಯ ವೇಗವಾಗಿಯೂ ಆಮ್ಲರೂಪದಲ್ಲಿ ನಿಧಾನವಾಗಿಯೂ ಆಗುತ್ತದೆ. ಋಣ ಅಯಾನು ವಿನಿಮಯ ರಾಳಗಳಲ್ಲಿ ಚತುರ್ಥಿಕ ಅಮೋನಿಯಂ ಪ್ರತ್ಯಾಮ್ಲ (≡N—OH) ಅಥವಾ ಅಮೈನುಗಳಿರುತ್ತವೆ. ಮೊದಲ ವರ್ಗದ ಪುಂಜಗಳು ರಾಳಗಳಲ್ಲಿದ್ದಾಗ ಅವು ಸಾರ ಕ್ರಿಯಾಶೀಲಪುಂಜಗಳೆನಿಸಿಕೊಳ್ಳುತ್ತವೆ. ಇವು ಪ್ರತ್ಯಾಮ್ಲ ಅಥವಾ ಲವಣರೂಪದಲ್ಲಿದ್ದಾಗ $Cl^-$,$FeCl_4^-$ ಮುಂತಾದ ಋಣ ಅಯಾನುಗಳೊಂದಿಗೆ ಶೀಘ್ರವಾಗಿ ವಿನಿಮಯ ಹೊಂದುತ್ತವೆ. ಅಮೈನ್ ಪುಂಜಗಳಿದ್ದಾಗ ಅದು ಸಾರರಿಕ್ತ ರಾಳವೆಂದು ಗೊತ್ತು ಮಾಡಬಹುದು. ಸಾಮಾನ್ಯವಾಗಿ ರಾಳದ ಅಯಾನುವಿನಿಮಯ ಸಾಮರ್ಥ್ಯ ಅದರಲ್ಲಿರುವ ಬಹ್ವಂಶಿ ಮತ್ತು ಕ್ರಿಯಾಶೀಲ ಪುಂಜಗಳ ಮೇಲೆ ಅವಲಂಬಿಸಿದೆ. ಸಾರರಿಕ್ತ ಆಮ್ಲ ಅಥವಾ ಪ್ರತ್ಯಾಮ್ಲ ಪ್ರವೃತ್ತಿಯ ರಾಳಗಳ ವಿನಿಮಯ ಸಾಮರ್ಥ್ಯ ಅಯಾನು ಮಿಶ್ರಣವುಳ್ಳ ದ್ರಾವಣದ pH ಮೇಲೂ ಅವಲಂಬಿಸಿರುತ್ತದೆ. ರಾಳದ ವಿನಿಮಯ ಸಾಮರ್ಥ್ಯವನ್ನು ಒಂದು ಗ್ರಾಂ ತೂಕ ಒಣ ರಾಳ ಅಥವಾ ಒಂದು ಮಿಲಿಲೀಟರಿನಷ್ಟು ಒದ್ದೆ ರಾಳ ವಿನಿಮಯ ಮಾಡುವ ಮಿಲಿ ಸಮತುಲ್ಯಗಳಲ್ಲಿ (ಮಿಲಿ ಈಕ್ವಿವಲೆಂಟ್ಸ್) ಕೊಡಬಹುದು. ಉದಾಹರಣೆಗೆ, ಧನ ಅಯಾನು ವಿನಿಮಯ ರಾಳ ಡೊವೆಕ್ಸ್–50 ಉಪಯೋಗಿಸಿದ ಸಂದರ್ಭಗಳಲ್ಲಿ ಈ ಬೆಲೆಗಳು 5.0 ಮತ್ತು 1.9 ಮಿಲಿ ಸಮತುಲ್ಯಗಳೆಂದು ಕಂಡುಹಿಡಿಯಲಾಗಿದೆ. ಸಾಮಾನ್ಯವಾಗಿ 0.1 ಪ್ರಸಾಮಾನ್ಯ (ನಾರ್ಮಲ್) ಅಯಾನು ದ್ರಾವಣವನ್ನು ಉಪಯೋಗಿಸಿದರೆ ಧನ ಅಯಾನು ವಿನಿಮಯ ರಾಳದಲ್ಲಿ ಅಯಾನಿನ ವಾತ್ಸಲ್ಯ (ಅಫಿನಿಟಿ) ಧನ ಅಯಾನಿನ ವಿದ್ಯುದಾವೇಶದ ಮೇಲೆ ಅವಲಂಬಿಸಿರುತ್ತದೆ. ಧನ ವಿದ್ಯುದಾವೇಶ ಹೆಚ್ಚಿದಂತೆ ಈ ವಾತ್ಸಲ್ಯವೂ ಹೆಚ್ಚುತ್ತದೆ. ಆದರೆ ಜಲಸಂಯೋಜಿತ ಧನ ಅಯಾನಿನ ಗಾತ್ರ ಹೆಚ್ಚಿದಂತೆ ಕಡಿಮೆ ಆಗುವುದು. ಅಯಾನುಗಳ ಸಾಪೇಕ್ಷ ವಿನಿಮಯ ವಾತ್ಸಲ್ಯಕ್ರಮ ರಾಳದ ಮತ್ತು ಪ್ರಯೋಗದ ಸ್ಥಿತಿಗಳ ಮೇಲೆ ಅವಲಂಬಿಸಿರುತ್ತದೆ. ಸಾರರಿಕ್ತ ಅಯಾನುದ್ರಾವಣಗಳನ್ನು ಉಪಯೋಗಿಸಿದಾಗ ಈ ಕ್ರಮ ಕೆಳಗಿನಂತೆ ಇದೆ.

**ಧನ ಅಯಾನುಗಳು :** ಸಾರ ಕ್ರಿಯಾಶೀಲ ಪುಂಜಗಳಿರುವ ರಾಳ.

**ತ್ರಿವೇಲೆನ್ಸೀಯ ಅಯಾನುಗಳು :** La > Ce > Pr > Nd > Pm > Sm > Eu > Gd > Tb > Dy > Y > Ho > Er > Tm >Yb > Lu

**ದ್ವಿವೇಲೆನ್ಸೀಯ ಅಯಾನುಗಳು :** Ba > Sr > Ca > Ni > Cu > Zn > Mg > Be

**ಏಕವೇಲೆನ್ಸೀಯ ಅಯಾನುಗಳು :** Ag > Tl > Cs > Rb > $NH_4$ > K > Na > H >Li

**ಋಣ ಅಯಾನುಗಳು :** ಸಾರ ಕ್ರಿಯಾಶೀಲ ಪುಂಜಗಳಿರುವ ರಾಳ.

**ಮಿಶ್ರಿತ ವೇಲೆನ್ಸಿ ಇರುವ ಅಯಾನುಗಳು :** ಸಿಟ್ರೇಟ್ > $SO_4$ = > $C_2O_4$ = > $CrO_4$ =

**ಏಕವೇಲೆನ್ಸೀಯ ಅಯಾನುಗಳು:** I > $HSO_4$ > $NO_3$ > Br > CN > $HSO_3$ > $NO_2$ > $BrO_3$ > Cl >$HCO_3$ > $H_2PO_4$ > HCOO > $CH_3COO$ > OH > F

ಅಯಾನು ಮಿಶ್ರಣಗಳ ಬೇರ್ಪಡೆಯನ್ನು ಅಯಾನುವಿನಿಮಯ ಸ್ತಂಭಗಳಲ್ಲಿ ಮಾಡಬಹುದು. ಹಲವು ವಿಧವಾದ ಸ್ತಂಭಗಳನ್ನು ಚಿತ್ರ 1 ರಲ್ಲಿ ತೋರಿಸಿದೆ. ಇವುಗಳಲ್ಲಿ ರಾಳವನ್ನು ತುಂಬಲು ಮತ್ತು ಹೊರಬರುವ ಅಯಾನು ದ್ರಾವಣದ ಪ್ರವಾಹವನ್ನು ನಿಯಂತ್ರಣ ಮಾಡಲು ಅನುಕೂಲ ಉಂಟು. ಅಯಾನು ವಿನಿಮಯ ಸ್ತಂಭವನ್ನು ಅತಿಸರಳ ವಿಧಾನದಲ್ಲಿ ರಚಿಸಬೇಕಾದರೆ ಒಂದು ಬ್ಯೂರೆಟ್ಟಿನ ತಳದಲ್ಲಿ ಗಾಜಿನ ಹತ್ತಿ ಇಟ್ಟು ಅದರ ಮೇಲೆ ರಾಳವನ್ನು 5–6 ಸೆಂಮೀ ಎತ್ತರದ ವರೆಗಾದರೂ ತುಂಬಬೇಕು. ರಾಳವನ್ನು ಬ್ಯೂರೆಟ್ಟಿಗೆ ತುಂಬಬೇಕಾದರೆ ಅದನ್ನು ನೀರಿನಲ್ಲಿ ಗಂಜಿಯಂತೆ ಮಾಡಿ ಅದಕ್ಕೆ ಸುರಿಯುವುದು ಸುಲಭವಿಧಾನ. ಆಗ ಗಾಳಿಯ ಅಥವಾ ಯಾವ ಅನಿಲದ ಗುಳ್ಳೆಗಳೂ ರಾಳದೊಳಗೆ ಸೇರೆಯಾಗದಂತೆ ಎಚ್ಚರಿಕೆ ವಹಿಸಬೇಕು. ಈ ರೀತಿ ತಯಾರು ಮಾಡಿದ ಅಯಾನು ವಿನಿಮಯ ಸ್ತಂಭದಲ್ಲಿ ಅಯಾನುಗಳುಳ್ಳ ಮಿಶ್ರಣ ದ್ರಾವಣವನ್ನು ಸುರಿದರೆ ಎಲ್ಲ ಅಥವಾ ಕೆಲವು ಅಯಾನುಗಳು ರಾಳದಲ್ಲಿ ಅಧಿಶೋಷಿತವಾಗಬಹುದು. ಅಧಿಶೋಷಿತವಾಗದಿರುವ ಅಯಾನುಗಳನ್ನು ಬಟ್ಟಿ ಇಳಿಸಿದ ನೀರು, ಸಾರರಿಕ್ತ ಆಮ್ಲ ಅಥವಾ ವಿಶೇಷ ತರದ ಅಭಿಕರ್ಮಕಗಳನ್ನು ಉಪಯೋಗಿಸಿ ಬಿಡುಗಡೆ ಮಾಡಬಹುದು. ರಾಳದಲ್ಲಿ ಅಧಿಶೋಷಿತವಾದ ಅಯಾನುಗಳನ್ನು ಅನುಕ್ರಮವಾಗಿ ಬಿಡುಗಡೆಮಾಡಲು ಆಮ್ಲ, ಪ್ರತ್ಯಾಮ್ಲ ಅಥವಾ ಲವಣ ದ್ರಾವಣಗಳನ್ನು ಉಪಯೋಗಿಸಬೇಕಾಗುತ್ತದೆ. ಇವನ್ನೇ ಸ್ಥಪನಕಾರಿಗಳೆಂದು ಕರೆಯುವುದು. ಧನ ಅಯಾನು ವಿನಿಮಯ ರಾಳವನ್ನು ಉಪಯೋಗಿಸಿದರೆ 3–4 ಮೋಲಾರ್ ಹೈಡ್ರೊಕ್ಲೋರಿಕ್ ಆಮ್ಲ ಸ್ಥಪನಕಾರಿಯಾಗುತ್ತದೆ. ಋಣ ಅಯಾನು ವಿನಿಮಯ ರಾಳಕ್ಕೆ ಆಮ್ಲ, ಪ್ರತ್ಯಾಮ್ಲ ಹಾಗೂ ತಟಸ್ಥ ಲವಣದ್ರಾವಣಗಳನ್ನು ಉಪಯೋಗಿಸಬಹುದು. ಸ್ಥಪನಕಾರಿಗಳನ್ನು ಉಪಯೋಗಿಸಿದಾಗ ಹೊರಬಂದ ಪ್ರತಿಯೊಂದು ಅಯಾನಿನ ಅಂಶ ಮತ್ತು ಹೊರಬರುತ್ತಿರುವ ದ್ರಾವಣದ ಗಾತ್ರದ ಅಥವಾ ದ್ರಾವಣ ಒಂದೇ ದರದಲ್ಲಿ ಹೊರಬರಲು ಬೇಕಾಗುವ ಕಾಲದ ನಕ್ಷೆಯನ್ನು ಬರೆದಲ್ಲಿ ಮಿಶ್ರಣದಲ್ಲಿಂಯ ಅಯಾನುಗಳನ್ನು ಗುರುತಿಸಿ ಅಂದಾಜುಮಾಡಬಹುದು.




ಚಿತ್ರ 1. ಅಯಾನು ವಿನಿಮಯ ಸ್ತಂಭಗಳು : A, B, C- ಗಾಜಿನ ಹತ್ತಿ ಇಟ್ಟಿರುವ ಸ್ತಂಭಗಳು : –ಇತರ ಸಲಕರಣೆಗಳು. 1 ಲಾಳಿಕೆ, 2 ರಾಳ, 3 ಹೆಪ್ಪುಕಟ್ಟಿದ ಗಾಜಿನ ದುಂಡು ತಗಡು, 4 ಸ್ಟಾಪ್ ಕಾಕ್, 5 ಹೊರ ಬಂದ ದ್ರಾವಣ, 6 ಮಿಶ್ರಣ, 7 ರಾಳದ ಸ್ತಂಭ, ಹೆಪ್ಪುಕಟ್ಟಿದ ಗಾಜಿನ ತುಂಡು ತಗಡು.

ಹಲವು ಬಾರಿ ಮಿಶ್ರಣದ ಕೆಲವು ಅಯಾನುಗಳು ರಾಳದಲ್ಲಿ ಜಟಿಲ ಋಣ ಅಯಾನುಗಳಾಗಿ ಬದಲಾವಣೆ ಹೊಂದಿ ಅಧಿಶೋಷಿತವಾಗುವ ಸಾಧ್ಯತೆ ಇದೆ. ಇವನ್ನು ಋಣ ಅಯಾನು ವಿನಿಮಯ ಸ್ತಂಭವನ್ನು ಉಪಯೋಗಿಸಿ ಇತರ ಅಯಾನುಗಳಿಂದ ಬೇರ್ಪಡಿಸಬಹುದು.

**2. ಅಧಿಶೋಷಣ ಕ್ರೋಮಟಾಗ್ರಫಿ :** ಈ ವಿಧಾನದಲ್ಲಿ ವಸ್ತುಗಳ ಮಿಶ್ರಣವನ್ನು ಬೇರ್ಪಡಿಸಲು ಘನರೂಪದಲ್ಲಿರುವ ಅಧಿಶೋಷಕ ಮತ್ತು ದ್ರಾವಕಗಳ ನಡುವೆ ಹಲವಾರು ಬಾರಿ ವಿತರಣೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಪಟುಗೊಳಿಸಿದ ಇದ್ದಲು ಅಥವಾ ಅಲ್ಯೂಮಿನ, ಕ್ಯಾಲ್ಸಿಯಂ ಕಾರ್ಬೊನೇಟ್, ಸಿಲಿಕ ಜೆಲ್ ಮುಂತಾದವುಗಳನ್ನು ಅದಿಶೋಷಕಗಳಾಗಿ ಮತ್ತು ಹೈಡ್ರೊಕಾರ್ಬನುಗಳನ್ನು ಅಥವಾ ಆಲ್ಕೊಹಾಲುಗಳನ್ನು ದ್ರಾವಕಗಳಾಗಿ ಉಪಯೋಗಿಸುತ್ತಾರೆ. ವಸ್ತುಗಳು ಮಿಶ್ರಣದಿಂದ ಬೇರ್ಪಡೆಯಾಗುವ ದಕ್ಷತೆ ಅವುಗಳ ಚಲನಶೀಲತೆಯಲ್ಲಿರುವ (ಮೊಬಿಲಿಟಿ) ವ್ಯತ್ಯಾಸಗಳನ್ನು ಅವಲಂಬಿಸಿದೆ. ಒಂದು ಗೊತ್ತಾದ ಅಧಿಶೋಷಕ ಮತ್ತು ದ್ರಾವಕಗಳಲ್ಲಿ ವಸ್ತುವಿನ ಚಲನಶೀಲತೆಯನ್ನು $R_f$ ಪ್ರಮಾಣದಲ್ಲಿ ತಿಳಿಸಬಹುದು.

$$R_f = \frac{\text{ವಸ್ತು ಚಲಿಸಿದ ದೂರ}}{\text{ದ್ರಾವಕ ಚಲಿಸಿದ ದೂರ}}$$

ಅಧಿಶೋಷಣ ಕ್ರೋಮಟಾಗ್ರಫಿ ಅತಿ ಸೂಕ್ಷ್ಮವಿಧಾನವಾದ್ದರಿಂದ ಸ್ವಲ್ಪಮಟ್ಟಿಗೆ ರಚನಾತ್ಮಕ ಭಿನ್ನತೆಯಿರುವ ಆರ್ಗ್ಯಾನಿಕ್ ಅಣುಗಳನ್ನು ಬೇರ್ಪಡಿಸಿ ಗುರುತಿಸಬಹುದು.

**3. ಭಾಗೀಕರಣ ಕ್ರೋಮಟಾಗ್ರಫಿ :** ಇಲ್ಲಿ ವಸ್ತುಗಳ ಬೇರ್ಪಡೆ ದ್ರಾವಕ ಆಸವೀಕರಣ ತತ್ತ್ವದ (ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಷನ್ ಪ್ರಿನ್ಸಿಪಲ್) ಮೇಲೆ ಅವಲಂಬಿಸಿದೆ. ವಸ್ತುಗಳ ಮಿಶ್ರಣವನ್ನು ಹರಿಯುತ್ತಿರುವ ಆರ್ಗ್ಯಾನಿಕ್ ದ್ರಾವಕ ಮತ್ತು ಸ್ಥಿರವಾದ ನೀರಿನ ಅಂಶಗಳ ನಡುವೆ ವಿತರಣೆ ಮಾಡಬೇಕು. ನೀರಿನ ಅಂಶಕ್ಕೆ ಆಧಾರವಾಗಿ ಸೋಸುಕಾಗದದ ಚೂರುಗಳು ಅಥವಾ ಸೋಸುಕಾಗದದ ಹಾಳೆಗಳನ್ನೇ ಉಪಯೋಗಿಸಬಹುದು. ಆಗ ಇದನ್ನು ಸೋಸುಕಾಗದ ಕ್ರೋಮಟಾಗ್ರಫಿಯೆನ್ನುತ್ತಾರೆ. ಸಿಲಿಕ ಜೆಲ್ ಮುಂತಾದವನ್ನು ಉಪಯೋಗಿಸಿದರೆ ಆ ವಿಧಾನಕ್ಕೆ ತೆಳು ಪದರ ಕ್ರೋಮಟಾಗ್ರಫಿಯೆಂದು ಹೆಸರು. ಸೋಸುಕಾಗದ ಕ್ರೋಮಟಾಗ್ರಫಿಯಲ್ಲಿ ವಾಟ್‌ಮನ್ 1, 3 MM ಮತ್ತು 4 ಸೋಸುಕಾಗದಗಳನ್ನು ಉಪಯೋಗಿಸಬಹುದು. ಪ್ರಯೋಗ ವಿಧಾನದಲ್ಲಿ ಮಿಶ್ರಣ ದ್ರಾವಣದ ಒಂದು ತೊಟ್ಟನ್ನು ಸೋಸುಕಾಗದದ ಒಂದು ಅಂಚಿನಲ್ಲಿ ಅಂದರೆ ಸುಮಾರು 3–6 ಸೆಂಮೀ ಎತ್ತರದಲ್ಲಿಡಬೇಕು. ಹಲವಾರು ಮಿಶ್ರಣಗಳಿದ್ದರೆ ಅವುಗಳ ತೊಟ್ಟುಗಳನ್ನು ಒಂದೊಂದಕ್ಕೂ 2–3 ಸೆಂಮೀ ಅಂತರವಿರುವಂತೆ ಒಂದೇ ಹಾಳೆಯ ಮೇಲಿಡಬಹುದು. ಆಮೇಲೆ ಈ ಅಂಚನ್ನು ದ್ರಾವಕವಿರುವ ತೊಟ್ಟಿಯೊಂದರಲ್ಲಿ ಮುಳುಗಿಸಿ ಒಂದು ಘಂಟಾಪಾತ್ರೆಯಿಂದ ತೊಟ್ಟಿಯನ್ನು ಮುಚ್ಚಬೇಕು. ಸೋಸುಕಾಗದದಲ್ಲಿ ದ್ರಾವಕ ಮೇಲೇರಿದಾಗ ಮಿಶ್ರಣದಲ್ಲಿರುವ ವಸ್ತುಗಳು ದ್ರಾವಕ ಹರಿಯುವ ದಿಕ್ಕಿನಲ್ಲಿ ಚಲಿಸುತ್ತವೆ. ಆದರೆ ಚಲನಶೀಲತೆಯಲ್ಲಿರುವ ವ್ಯತ್ಯಾಸದಿಂದ ಬೇರೆ ಬೇರೆ ಚುಕ್ಕೆಗಳ ರೂಪದಲ್ಲಿ ಬೇರ್ಪಡೆಯಾಗುತ್ತವೆ. ವಸ್ತುಗಳ ಬೇರ್ಪಡೆಯ ದಕ್ಷತೆಯನ್ನು ಅವುಗಳ $R_f$ ಪ್ರಮಾಣದಿಂದ

ತಿಳಿಯಬಹುದು. Rf ಬೆಲೆ ಸೊನ್ನೆಯಿಂದ ಒಂದರವರೆಗಿರಬಹುದು. ಈ ಬೆಲೆ ಸಾಮಾನ್ಯವಾಗಿ ದ್ರಾವಕದ ವ್ಯವಸ್ಥೆ ಮತ್ತು ಅಭಿಕರ್ಮಕಗಳ ಸಾರತೆಯ (ಕಾನ್‌ಸೆಂಟ್ರೇಷನ್) ಮೇಲೆ ಅವಲಂಬಿಸಿದೆ. ಅನೇಕ ವಸ್ತುಗಳಿಗೆ ಪ್ರಮಾಣಪಟ್ಟಿಗಳನ್ನು ತಯಾರು ಮಾಡಿದೆ. ಮಿಶ್ರಣದಲ್ಲಿಯ ಎರಡು ವಸ್ತುಗಳ ಬೇರ್ಪಡೆಯ ದಕ್ಷತೆಯನ್ನು ಅವುಗಳ ಪ್ರಮಾಣ ವ್ಯತ್ಯಾಸದಲ್ಲಿ ($\Delta R_f$) ತಿಳಿಸಬಹುದು. ಈ ವ್ಯತ್ಯಾಸ ಹೆಚ್ಚಿದಷ್ಟೂ ಮಿಶ್ರಣದ ಬೇರ್ಪಡೆ ಉತ್ತಮವಾಗಿರುತ್ತದೆ. ಸೋಸುಕಾಗದ ಕ್ರೋಮಟಾಗ್ರಫಿಯಲ್ಲಿ ಕೆಲವು ಮಿಶ್ರಣಗಳಿಗೆ ಎರಡು ದ್ರಾವಕಗಳನ್ನು ಉಪಯೋಗಿಸಿದಾಗ ಅವುಗಳ ಬೇರ್ಪಡೆ ಉತ್ತಮವಾಗುತ್ತದೆ. ಮೊದಲನೆಯ ದ್ರಾವಕವನ್ನು ಮಿಶ್ರಣದ ತೊಟ್ಟು ಇರುವ ದಿಕ್ಕಿನಲ್ಲಿ ಹರಿಯಲು ಬಿಟ್ಟು ಅನಂತರ ಎರಡನೆಯ ದ್ರಾವಕವನ್ನು ಇದಕ್ಕೆ ಸಮಕೋನದ ದಿಕ್ಕಿನಲ್ಲಿ ಹರಿಯಲು ಬಿಡಬೇಕು. ಈ ವಿಧಾನಕ್ಕೆ ಎರಡು ಆಯಾಮಗಳ (ಟೂ ಡೈಮೆನ್ಷನಲ್) ಕ್ರೋಮಟಾಗ್ರಫಿಯೆಂದು ಹೆಸರು. ಸೋಸುಕಾಗದ ಕ್ರೋಮಟಾಗ್ರಾಮ್‌ಗಳ ವರ್ಗೀಕರಣ ದ್ರಾವಕವನ್ನು ಉಪಯೋಗಿಸುವ ವಿಧಾನ ಮತ್ತು ಸೋಸುಕಾಗದಗಳ ಆಕಾರದ ಮೇಲೆ ತಿಳಿಸಬಹುದು. ಸೋಸುಕಾಗದದಲ್ಲಿ ದ್ರಾವಕ ಮೇಲೇರಿದರೆ ಊರ್ಧ್ವಮುಖಿ ಕ್ರೋಮಟಾಗ್ರಾಮ್ ಎಂದೂ ಮೇಲಿನಿಂದ ಕೆಳಗಿಳಿದರೆ ಅಧೋಮುಖಿ ಕ್ರೋಮಟಾಗ್ರಾಮ್ ಎಂದೂ ಕರೆಯುತ್ತಾರೆ. ಸೋಸುಕಾಗದವನ್ನು ಉದ್ದವಾಗಿ ಸೀಳಿನ ಅಥವಾ ದೊಡ್ಡ ಹಾಳೆಗಳ ರೂಪದಲ್ಲಿ ಉಪಯೋಗಿಸಬಹುದು. ಈ ಕಾಗದ ವರ್ತುಲಾಕಾರದಲ್ಲಿದ್ದಾಗ ದ್ರಾವಕವನ್ನು ಕೇಂದ್ರಕ್ಕೆ ತಾಗುವಂತೆ ಇಡಬೇಕು. ಆಗ ಬೇರ್ಪಡೆಯಾದ ವಸ್ತುಗಳು ಸಹ ಕೇಂದ್ರೀಯ ಉಂಗುರಗಳ ರೂಪದಲ್ಲಿ ಕಾಣುತ್ತವೆ. ಸೋಸುಕಾಗದ ಕ್ರೋಮಟಾಗ್ರಫಿಯಲ್ಲಿ ಆಲ್ಕೊಹಾಲ್, ಈಥರ್, ಕೀಟೋನುಗಳು, ಕ್ಲೋರಿನ್ ಒಳಗೊಂಡ ಹೈಡ್ರೋಕಾರ್ಬನುಗಳು, ಆರ್ಗ್ಯಾನಿಕ್ ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ದ್ರಾವಕಗಳಾಗಿ ಉಪಯೋಗಿಸುತ್ತಾರೆ. ನೀರಿನ ಜೊತೆಯಲ್ಲಿ ಬೆರೆಯದಿರುವ N– ಬ್ಯುಟೆನಾಲ್ ಮುಂತಾದವನ್ನು ಹೆಚ್ಚಿನ ನೀರು ಅಥವಾ ಆಮ್ಲಗಳ ಜೊತೆಯಲ್ಲಿ ಸೇರಿಸಿ ದ್ವಿಅಂಶಿಗಳ ರೂಪದಲ್ಲಿ ಉಪಯೋಗಿಸಬಹುದು. ಒಂದು ಕ್ರೋಮಟಾಗ್ರಾಂ ತಯಾರು ಮಾಡಲು ಸುಮಾರು 1–24 ಗಂಟೆಗಳ ಕಾಲಬೇಕಾಗಬಹುದು. ಸೋಸುಕಾಗದ ಮತ್ತು ದ್ರಾವಕಗಳನ್ನು ಈ ಕಾಲ ಅವಲಂಬಿಸಿದೆ. ಕ್ರೋಮಟಾಗ್ರಾಮಿನಲ್ಲಿ ಬೇರ್ಪಡೆಯಾದ ವಸ್ತುಗಳ ಚುಕ್ಕೆಗಳನ್ನು ಅವುಗಳ ಬಣ್ಣಗಳಿಂದ ಅಥವಾ ಅತಿನೇರಿಳೆ ಕಾಗದದ ಮೇಲೆ ಪತನವಾದಾಗ ಕಂಡುಬರುವ ಭಿನ್ನ ವರ್ಣಗಳಿಂದ ಗುರುತಿಸಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ವಸ್ತುಗಳನ್ನು ಗುರುತಿಸಲು ಒಂದು ವಿಶಿಷ್ಟ ಅಭಿಕರ್ಮಕವನ್ನು ಕಾಗದದ ಮೇಲೆ ಸಿಂಪಡಿಸಬೇಕಾಗುತ್ತದೆ. ಇದಕ್ಕೆ ಕ್ರೋಮಟಾಗ್ರಾಮಿನ ವಿಕಾಸ ವಿಧಾನವೆಂದು ಹೆಸರು. ವಸ್ತುಗಳ ಚುಕ್ಕೆಗಳನ್ನು ಗುರುತಿಸಿದ ಮೇಲೆ ಆ ಕಾಗದದ ಭಾಗಗಳನ್ನು ಕತ್ತರಿಸಿ ವಿವಿಧ ಅಭಿಕರ್ಮಗಳಲ್ಲಿ ಶೋಷಿಸಿದರೆ ವಸ್ತುಗಳು ದ್ರಾವಣದಲ್ಲಿ ಉಳಿಯುತ್ತವೆ. ಇವುಗಳ ಪ್ರಮಾಣವನ್ನು ಸ್ಪೆಕ್ಟ್ರೋಫೋಟೋಮೀಟರ್, ಪೋಲರೋಗ್ರಾಫ್ ಮುಂತಾದ ಸಾಧನಗಳನ್ನು ಉಪಯೋಗಿಸಿ ನಿರ್ಧರಿಸಬಹುದು. ಮಿಶ್ರಣದಲ್ಲಿ ವಿಕಿರಣಪಟುವಸ್ತುಗಳಿದ್ದರೆ ಕತ್ತರಿಸಿದ ಭಾಗಗಳನ್ನು ಗೈಗರ್‌ಮುಲ್ಲರ್ ಗುಣಕ ಅಥವಾ ಸಿಂಟಿಲೇಷನ್ ಗುಣಕಗಳಲ್ಲಿಟ್ಟು ಅವನ್ನು ಗುರುತಿಸಿ ನಿರ್ಧರಿಸಬಹುದು. ವಿಕಿರಣಪಟು ಇಂಗಾಲವನ್ನು (14C) ಉಪಯೋಗಿಸಿ ದ್ಯುತಿಸಂಶ್ಲೇಷಣಕ್ರಿಯೆಯನ್ನು ಅರಿತುಕೊಳ್ಳಲು ಈ ವಿಧಾನವನ್ನು ಪ್ರಯೋಗಿಸಲಾಗಿದೆ.

**4. ವಿದ್ಯುತ್ ಕ್ರೋಮಟಾಗ್ರಫಿ :** ಅಯಾನು ಮಿಶ್ರಣವಿರುವ ದ್ರಾವಣದಲ್ಲಿ ಎಲೆಕ್ಟ್ರೋಡುಗಳ ಮೂಲಕ ವಿದ್ಯುಚ್ಛಕ್ತಿಯನ್ನು ಹರಿಸಿದಲ್ಲಿ ಅಯಾನುಗಳು ಎಲೆಕ್ಟ್ರೋಡುಗಳ ದಿಕ್ಕಿನಲ್ಲಿ ಗಮಿಸುತ್ತವೆ. ಇವು ಗಮಿಸುವ ವೇಗದಲ್ಲಿ ಸಾಮಾನ್ಯವಾಗಿ ವ್ಯತ್ಯಾಸವಿರುವುದರಿಂದ ಅಯಾನುಗಳ ಬೇರ್ಪಡೆ ಸಾಧ್ಯವಾಗುತ್ತದೆ. ಎಲೆಕ್ಟ್ರೋಡುಗಳ ನಡುವೆ ಕಾಗದ, ಜೆಲಟಿನ್, ಗಾಜಿನಪುಡಿ ಅಥವಾ ಅಯಾನುವಿನಿಮಯ ರಾಳದ ಆಸರೆಯಿದ್ದರೆ, ಅದರ ಮೇಲೆ ಬೇರ್ಪಡೆಯಾದ ಅಯಾನುಗಳು ನಿಂತು ಚುಕ್ಕೆಗಳನ್ನುಂಟುಮಾಡುತ್ತವೆ. ವಿದ್ಯುತ್ ಕ್ರೋಮಟಾಗ್ರಫಿಯಲ್ಲಿ ಸುಮಾರು 100–400 ವೋಲ್ಟುಗಳಷ್ಟು ವೋಲ್ಟೇಜ್ ಮತ್ತು 50–100 ರಷ್ಟು ಮಿಲಿ ಆಂಪೇರ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಹರಿಸಬೇಕಾಗುತ್ತದೆ.

**5. ಅನಿಲ ಕ್ರೋಮಟಾಗ್ರಫಿ :** ಮಿಶ್ರಣವನ್ನು ಸ್ತಂಭವೊಂದರಲ್ಲಿರುವ ಘನ ಪದಾರ್ಥದಲ್ಲಿ ಅಧಿಶೋಷಣೆ ಮಾಡಿ ಆಮೇಲೆ ಅನಿಲವೊಂದನ್ನು ಹಾಯಿಸಿ ಬಿಡುಗಡೆ ಮಾಡಿಯಾಗಲಿ ಅಥವಾ ಈ ಅನಿಲ ಮತ್ತು ಜಡ ಆಧಾರವೊಂದರಲ್ಲಿ ಮಿಶ್ರಿತವಾದ ಶೋಷಕ ದ್ರವದ ನಡುವೆ ವಿತರಣೆಮಾಡಿಯಾಗಲಿ ಬೇರ್ಪಡಿಸುವ ವಿಧಾನ ಅನಿಲ ಕ್ರೋಮಟಾಗ್ರಫಿ. ಮೊದಲ ವಿಧಾನಕ್ಕೆ ಅನಿಲ ಅಧಿಶೋಷಣ ಕ್ರೋಮಟಾಗ್ರಫಿಯೆಂದು ಹೆಸರು. ಎರಡನೆಯದು ಅನಿಲ–ದ್ರವ ಕ್ರೋಮಟಾಗ್ರಫಿ. ಅನಿಲ ಅಧಿಶೋಷಣ ಕ್ರೋಮಟಾಗ್ರಫಿಯಲ್ಲಿ ಪಟುತ್ವಗೊಳಿಸಿದ ಇದ್ದಲು ಅಥವಾ ಅಲ್ಯುಮಿನ ಮತ್ತು ಸಿಲಿಕ ಜೆಲ್ಲುಗಳನ್ನು ಅಧಿಶೋಷಕಗಳಾಗಿ ಉಪಯೋಗಿಸಬಹುದು. ಇಲ್ಲಿ ಮೊದಲು ಅನಿಲ ಮಿಶ್ರಣವನ್ನು ಸ್ತಂಭದಲ್ಲಿ ಅಧಿಶೋಷಿತವಾಗುವಂತೆ ಮಾಡಿ ಒಂದು ಜಡ ಅನಿಲವನ್ನು (ಉದಾ : ಸಾರಜನಕ, ಆರ್ಗಾನ್, ಹೀಲಿಯಂ) ಸ್ಥಪನಕಾರಿಯಾಗಿ ಸ್ತಂಭದಲ್ಲಿ ಹಾಯಿಸಬೇಕು. ಇದನ್ನು ವಾಹಕಾನಿಲವೆಂದು ಕರೆಯಬಹುದು. ಸ್ತಂಭದಲ್ಲಿ ವಾಹಕಾನಿಲ ಪ್ರವಹಿಸಿದಾಗ ಅಧಿಶೋಷಿತವಾದ ಅನಿಲಗಳು ಒಂದಾದ ಮೇಲೊಂದು ಬಿಡುಗಡೆಯಾಗಿ




ಚಿತ್ರ 2 ಅನಿಲದ್ರವ ಕ್ರೋಮಟಾಗ್ರಾಫಿನ ರಚನೆಯ ಸ್ಥೂಲಚಿತ್ರ : 1 ಒತ್ತಡ ನಿಯಂತ್ರಕ, 2 ವಾಹಕಾನಿಲ, 3 ಒತ್ತಡಮಾಪಕ, 4 ಅನಿಲ ನಿರ್ಗಮನ ಮಾರ್ಗ, 5 ಶೋಧಕ, 6 ವೀಟ್‌ಸ್ಟನ್, 7 ಅನಿಲ ಮಿಶ್ರಣ, 8 ಸ್ತಂಭ, 9 ದಾಖಲೆ ಮಾಡುವ ಯಂತ್ರ

ವಾಹಕಾನಿಲಕ್ಕಿಂತ ನಿಧಾನವಾಗಿ ಚಲಿಸುತ್ತವೆ. ಇವುಗಳ Rf ಪ್ರಮಾಣವನ್ನು ವಾಹಕಾನಿಲದ ವೇಗಕ್ಕೆ ಸಾಪೇಕ್ಷವಾಗಿ ಕಂಡುಹಿಡಿಯಬಹುದು.

ಅನಿಲದ್ರವ ಕ್ರೋಮಟಾಗ್ರಫಿಯಲ್ಲಿ ಕೀಸಲ್‌ಗರ್ ಅಥವಾ ಇಟ್ಟಿಗೆಪುಡಿಯನ್ನು ಶೋಷಕದ್ರವದಲ್ಲಿ ನೆನೆಸಿ ಒಣಗಿಸಿ ಸ್ತಂಭದಲ್ಲಿ ಹಾಯಿಸಬೇಕು. ಮಿಶ್ರಣದ ವಸ್ತುಗಳ ಗಮನದರದಲ್ಲಿ (ಮೈಗ್ರೇಷನ್ ರೇಟ್) ವ್ಯತ್ಯಾಸಗಳಿರುತ್ತವೆ. ಪ್ರತಿಯೊಂದು ವಸ್ತುವಿಗೂ ಸ್ತಂಭದಲ್ಲಿರುವ ಧಾರಣಸಾಮರ್ಥ್ಯದಲ್ಲಿ ವ್ಯತ್ಯಾಸಗಳಿರುವುದರಿಂದ ಅವು ಒಂದಾದ ಮೇಲೊಂದು ವಾಹಕಾನಿಲದ ಜೊತೆಯಲ್ಲಿ ಹೊರಬಂದು ಒಂದು ಸೋಸಣಿಗೆಯ ಮೇಲೆ ಹಾಯ್ದುಹೋಗುವಂತೆ ಏರ್ಪಡಾಗಿರುತ್ತದೆ. ಅನಿಲ ದ್ರವ ಕ್ರೋಮಟಾಗ್ರಫಿಯಲ್ಲಿ ಬರುವ ಕ್ರೋಮಟಾಗ್ರಾಮನ್ನು ಸರಿಯಾದ ವ್ಯವಸ್ಥೆಯಿಂದ ದಾಖಲು ಮಾಡಿಕೊಳ್ಳಬಹುದು. ಇದರಲ್ಲಿ ಪ್ರತ್ಯೇಕಿತವಾದ ಪ್ರತಿಯೊಂದು ವಸ್ತುವಿನ ಪ್ರಮಾಣ ಕ್ರೋಮಟಾಗ್ರಾಮಿನಲ್ಲಿ ತತ್ಸಂಬಂಧಿತ ಶೃಂಗದ ವಿಸ್ತೀರ್ಣಕ್ಕೆ ಅನುಪಾತದಲ್ಲಿರುತ್ತದೆ. ಅನಿಲದ್ರವ ಕ್ರೋಮಟಾಗ್ರಫಿಯಿಂದ ಪೆಟ್ರೋಲಿಯಂ ಫಲಿತಗಳು, ಸುವಾಸನಾದ್ರವಗಳು, ಗಂಧಗಳು ಮತ್ತು ಜೈವಿಕ ಮೂಲವಸ್ತುಗಳನ್ನು ಗುರುತಿಸಿ ಅಂದಾಜು ಮಾಡಬಹುದು. ಅನಿಲ ಮಿಶ್ರಣವನ್ನು ಬೇರ್ಪಡಿಸುವ ಅನಿಲದ್ರವ ಕ್ರೋಮಟಾಗ್ರಫಿನ ರಚನೆಯನ್ನು ಚಿತ್ರ 2 ರಲ್ಲಿ ತೋರಿಸಲಾಗಿದೆ.

(ಡಿ.ಎಸ್.ಎಂ)

**ಕ್ರೋಮಿಯಂ :** ಆವರ್ತಕೋಷ್ಟಕದ 6ನೆಯ ಗುಂಪಿನಲ್ಲಿರುವ ಸಂಕ್ರಾಂತಿ ಲೋಹಧಾತು. ಪರಮಾಣುಸಂಖ್ಯೆ 24. ಪರಮಾಣುತೂಕ 51.996 ± 0001. ರಾಸಾಯನಿಕ ಸಂಕೇತ Cr. ನೈಸರ್ಗಿಕವಾಗಿ ಲಭಿಸುವ ಸಮಸ್ಥಾನಿಗಳು 50, 52, 53, 54 ಎಲೆಕ್ಟ್ರಾನಿಕ್ ವಿನ್ಯಾಸ $1s^2\ 2s^2\ 2p^6\ 3s^2\ 3p^6\ 3d^5\ 4s^1$.

ಲೇಹ್ಮನ್ ಎಂಬಾತನಿಗೆ ರಷ್ಯದೇಶದಲ್ಲಿ ಕ್ರೋಕೋಸೈಟ್ ಎಂಬ ಅದುರು ಸುಮಾರು 1765ರಲ್ಲಿ ದೊರೆಯಿತು. ವ್ಯಾಕ್ವೆಲಿನ್ ಮತ್ತು ಕ್ಲ್ಯಾಪ್ರಾಕ್ ಅವರ ಸಂಶೋಧನೆಯಿಂದ ಅದು ಸೀಸದ ಕ್ರೋಮೈಟ್ ಎಂದು ತಿಳಿದುಬಂದಿತು (1797). ಇವು ಈ ಲೋಹದ ಬಗ್ಗೆ ಮೊದಲ ಉಲ್ಲೇಖಗಳು. ಅದರ ಲವಣಗಳು ವರ್ಣಪೂರಿತವಾಗಿರುವುದೇ ಈ ಲೋಹಕ್ಕೆ ಕ್ರೋಮಿಯಂ ಎಂದು ಹೆಸರು ಬರಲು ಕಾರಣ. ಗ್ರೀಕ್ ಭಾಷೆಯಲ್ಲಿ ಕ್ರೋಮ ಎಂದರೆ ಬಣ್ಣ ಎಂದರ್ಥ. ಹಲವು ಕಾಲದ ಅನಂತರ ವ್ಯಾಕ್ವೆಲಿನ್ ಲೋಹವನ್ನು ಅಸಂಯೋಜಿತ ರೂಪದಲ್ಲಿ ತಯಾರಿಸಿದರೂ ಅದು ಪರಿಶುದ್ಧವಾಗಿರಲಿಲ್ಲ. ಪರಿಶುದ್ಧ ಲೋಹವನ್ನು ತಯಾರಿಸಿದ ಕೀರ್ತಿ ಬನ್ಸೆನ್ನನಿಗೆ (1811–1899) ಸಲ್ಲುತ್ತದೆ.

**ಆಕರ:** ಕ್ರೋಮಿಯಂ ಲೋಹ ಅಸಂಯೋಜಿತ ರೂಪದಲ್ಲಿ ದೊರೆಯುವುದಿಲ್ಲ. ಪ್ರಕೃತಿಯಲ್ಲಿ ಸಾಕಷ್ಟು ಪರಿಮಾಣದಲ್ಲಿದ್ದರೂ ಬಹು ಎಡೆಗಳಲ್ಲಿ ಇದು ಅತ್ಯಲ್ಪ ಮೊತ್ತದಲ್ಲಿರುವುದರಿಂದ ಲೋಹ ತಯಾರಿಕೆಗೆ ಉಪಯೋಗವಿಲ್ಲ. ಹವಳದ ಕೆಂಪಿಗೆ, ಪಚ್ಚೆಯ ಹಸುರಿಗೆ ಮತ್ತು ಅನೇಕ ಖನಿಜಗಳ ಮನೋಹರ ಬಣ್ಣಗಳಿಗೆ ಅವುಗಳಲ್ಲಿ ಅಲ್ಪಾಂಶದಲ್ಲಿರುವ ಕ್ರೋಮಿಯಂ ಲವಣಗಳೇ ಕಾರಣ. ಕ್ರೋಮಿಯಂ ಲೋಹ ಮತ್ತು ಲವಣಗಳನ್ನು ತಯಾರಿಸಲು ಮುಖ್ಯವಾದ ಆಕರ ಕ್ರೋಮೈಟ್ ಎಂಬ ಅದುರು. ಇದರಲ್ಲಿ ಶೇ. 40–55 ಕ್ರೋಮಿಕ್ ಆಕ್ಸೈಡ್ ಇದೆ. ಅದುರಿನ ಮಾದರಿಗಳನ್ನು ಕ್ರೋಮಿಕ್

ಆಕ್ಸೈಡಿನ ಪರಿಮಾಣಕ್ಕನುಗುಣವಾಗಿ ವಿವಿಧ ದರ್ಜೆಯವುಗಳಾಗಿ ವಿಂಗಡಿಸಲಾಗುತ್ತದೆ. ಈ ಬಗೆಯ ಅದುರಿನಲ್ಲಿ ಕ್ರೋಮಿಕ್ ಆಕ್ಸೈಡಿನೊಡನೆ ಅಲ್ಯೂಮಿನಿಯಂ ಆಕ್ಸೈಡ್, ಫೆರ್ರಸ್ ಆಕ್ಸೈಡ್, ಮೆಗ್ನೀಸಿಯಂ ಆಕ್ಸೈಡ್, ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಸಿಲಿಕಗಳಿವೆ. ಇವುಗಳ ಪರಸ್ಪರ ಸರಾಸರಿ ಪ್ರಮಾಣವನ್ನು ಮುಂದೆ ಬರೆದಿದೆ :

| | | |
|---|---|---|
| $Cr_2O_3$ | .... | ಶೇ. 40-45 |
| $Al_2O_3$ | .... | ಶೇ. 7-16 |
| FeO | .... | ಶೇ. 11-20 |
| MgO | .... | ಶೇ. 4-15 |
| CaO | .... | ಶೇ. 1-5 |
| $SiO_2$ | .... | ಶೇ. 3-8 |

ಶೇ. 48 ಕ್ಕಿಂತಲೂ ಹೆಚ್ಚಿದ್ದು, ಅದರಲ್ಲಿ ಕಬ್ಬಿಣದ ಅಂಶ ಕ್ರೋಮಿಯಂ ಅಂಶದ ಮೂರರಲ್ಲೊಂದಕ್ಕಿಂತಲೂ ಕಡಿಮೆಯಿದ್ದು ಮತ್ತು ಅದುರು ಗಡುಸು ಗಟ್ಟಿ ಅಥವಾ ಮುದ್ದೆಗಳ ರೂಪದಲ್ಲಿದ್ದರೆ ಆ ಅದುರನ್ನು ಲೋಹ ತಯಾರಿಕೆ ದರ್ಜೆಯದೆಂದು (ಮೆಟಲರ್ಜಿಕಲ್ ಗ್ರೇಡ್) ಪರಿಗಣಿಸಲಾಗುತ್ತದೆ.

ಕ್ರೋಮಿಯಂ ಅಂಶ ಅಷ್ಟು ಹೆಚ್ಚಾಗಿಲ್ಲದಿದ್ದರೂ ಅದುರಿನಲ್ಲಿ ಕ್ರೋಮಿಕ್ ಆಕ್ಸೈಡ್ ಮತ್ತು ಅಲ್ಯೂಮಿನಿಯಂ ಆಕ್ಸೈಡುಗಳ ಹಂಚಿಕೆ ಏಕರೀತಿಯಾಗಿದ್ದು ಮತ್ತು ಕಬ್ಬಿಣ ಹಾಗೂ ಸಿಲಿಕಗಳ ಅಂಶ ಕಡಿಮೆಯಿರುವ ಗಡುಸಾದ ಭೂರಿಗಾತ್ರದ (ಮ್ಯಾಸ್ಸೀವ್) ಅದುರನ್ನು ತಾಪಧಾರಕ (ರಿಫ್ರ್ಯಾಕ್ಟರಿ) ದರ್ಜೆಯದೆಂದು ವರ್ಗೀಕರಿಸಲಾಗುತ್ತದೆ. ಶೇ. 40–45 ಕ್ರೋಮಿಕ್ ಆಕ್ಸೈಡ್ ಇದ್ದು ಸಿಲಿಕದ ಅಂಶ ಅಲ್ಪವಿರುವ ಅದುರು ರಾಸಾಯನಿಕ ದರ್ಜೆಗೆ ಸೇರುತ್ತದೆ. ಇದನ್ನು ಕ್ರೋಮಿಯಂ ಸಂಯುಕ್ತಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

ಕ್ರೋಮೈಟ್ ಅದುರು ಮುಖ್ಯವಾಗಿ ರೊಡೀಷಿಯಾ, ಟ್ರಾನ್ಸ್‌ವಾಲ್, ನ್ಯೂ ಕೆಲಿಡೋನಿಯಾ, ಫಿಲಿಪೈನ್ ದ್ವೀಪಗಳು, ಭಾರತ, ರಷ್ಯ, ಟರ್ಕಿ, ಗ್ರೀಸ್ ಮತ್ತು ಕ್ಯೂಬ ಈ ಪ್ರದೇಶಗಳಲ್ಲಿ ದೊರೆಯುತ್ತದೆ. ಭಾರತದಲ್ಲಿ ಇದು ಸಿಕ್ಕುವ ಸ್ಥಳಗಳು ಮೈಸೂರು ಜಿಲ್ಲೆಯ ಕಡಕೊಳದ ಬಳಿ, ಹಾಸನಜಿಲ್ಲೆ, ತಮಿಳುನಾಡಿನ ಸೇಲಂ ಜಿಲ್ಲೆ, ಆಂಧ್ರಪ್ರದೇಶದ ಕೊಂಡಪಲ್ಲಿ ಕೃಷ್ಣಾಜಿಲ್ಲೆಗಳು, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ ಮತ್ತು ಬಿಹಾರದ ಸಿಂಗಭೂಮ್ ಪ್ರದೇಶ.

**ಲೋಹದ ತಯಾರಿಕೆ :** ಅದುರಿನಿಂದ ಲೋಹದ ತಯಾರಿಕೆಗೆ ಮೂರು ಮುಖ್ಯ ವಿಧಾನಗಳನ್ನು ಅನುಸರಿಸಲಾಗುತ್ತಿದೆ ಬೇಕಾಗಿರುವ ಲೋಹಗುಣ ಮತ್ತು ಪರಿಶುದ್ಧತೆಗಳಿಗೆ ಅನುಸಾರವಾಗಿ ವಿಧಾನವನ್ನು ಆರಿಸಲಾಗುತ್ತದೆ. ಆದ್ದರಿಂದ ಮೂರು ಬಗೆಯ ವಿಧಾನಗಳೂ ಉಪಯೋಗದಲ್ಲಿವೆ.

**1. ಅಲ್ಯೂಮಿನೋಥರ್ಮಿಕ್ ವಿಧಾನ :** ಇದು ಅತ್ಯಂತ ಹಳೆಯ ವಿಧಾನ. ಸಿಲಿಕಾನ್ ಧಾತು ಅಗ್ಗವಾಗಿ ದೊರೆಯುವ ವರೆಗೂ ಇದೊಂದೇ ವಿಧಾನ ಉಪಯೋಗದಲ್ಲಿತ್ತು. ಈಗ ಸಹ ಅಲ್ಪಾಂಶ ಸಿಲಿಕಾನ್ ಉಳ್ಳ ಕ್ರೋಮಿಯಂ ಲೋಹದ ಬೇಡಿಕೆಯನ್ನು ಪೂರೈಸಲು ಈ ವಿಧಾನವನ್ನು ಸಾಕಷ್ಟು ಅಧಿಕ ಮೊತ್ತದಲ್ಲಿಯೇ ಉಪಯೋಗಿಸಲಾಗುತ್ತಿದೆ. ತಾಪಧಾರಕ ಅಸ್ತರ (ಲೈನಿಂಗ್) ಇರುವ ಪೆಟ್ಟಿಗೆಯೊಂದರಲ್ಲಿ ಕ್ರೋಮಿಕ್ ಆಕ್ಸೈಡ್ ಮತ್ತು ಹರಳು (ಗ್ರ್ಯಾನ್ಯುಲರ್) ಅಲ್ಯೂಮಿನಿಯಂ ಲೋಹದ ಮಿಶ್ರಣವನ್ನು ರಾಸಾಯನಿಕ ಕ್ರಿಯೆಗೆ ಒಳಪಡಿಸಲಾಗುತ್ತದೆ. ಈ ಕುಲುಮೆಯಲ್ಲಿ ನಡೆಯುವ ಕ್ರಿಯೆ ಹೀಗಿದೆ:

$$Cr_2O_3 + 2Al \rightarrow 2Cr + Al_2O_3$$

ಈ ಕ್ರಿಯೆ ಉಷ್ಣಜನಕ (ಎಗ್ಸೋಥರ್ಮಿಕ್) ಕ್ರಿಯೆಯಾದರೂ ಇದರ ಆರಂಭಕ್ಕಾಗಿ ಕ್ರೋಮಿಯಂ ಟ್ರೈಆಕ್ಸೈಡ್ ಅಥವಾ ಇನ್ನೊಂದು ಇತರ ಉತ್ಕರ್ಷಣಕಾರಿಯನ್ನು ಉಪಯೋಗಿಸಲಾಗುತ್ತದೆ. ಈ ಕ್ರಿಯೆಯಿಂದ ಉತ್ಪಾದನೆಯಾಗುವ ಉಷ್ಣ ಕ್ರಿಯೆಯನ್ನು ಸರಾಗವಾಗಿ ನಡೆಸಬಲ್ಲದಾದರೂ ಅಲ್ಯೂಮಿನಿಯಂ ಆಕ್ಸೈಡಿನ ಧಾತುಮಲವನ್ನು (ಸ್ಲ್ಯಾಗ್) ಕ್ರೋಮಿಯಂ ಲೋಹದಿಂದ ದ್ರವವಾಗಿ ಬೇರ್ಪಡಿಸಿಟ್ಟಿರಲು ಇನ್ನೂ ಅಧಿಕ ಉಷ್ಣಬೇಕು. ಆದ್ದರಿಂದ ಆಗಾಗ ಅಲ್ಪಮೊತ್ತದಲ್ಲಿ ಉತ್ಕರ್ಷಣಕಾರಿಯನ್ನು ಸೇರಿಸುತ್ತಿರಬೇಕು. ಕ್ರಿಯೆ ಆರಂಭವಾದ ಮೇಲೆ ಕ್ರಿಯಾಪಾತ್ರೆ ಲೋಹದಿಂದ ತುಂಬುವ ವರೆಗೂ ಧಾತುಮಲವನ್ನು ಒಂದೇ ಸಮ ಬೇರ್ಪಡಿಸಿ ತೆಗೆಯಲಾಗುತ್ತಿರುತ್ತದೆ; ಮತ್ತು ಅದುರು ಅಲ್ಯೂಮಿನಿಯಂಗಳ ಮಿಶ್ರಣವನ್ನು ತಕ್ಕ ಮೊತ್ತದಲ್ಲಿ ಸೇರಿಸಲಾಗುತ್ತಿರುತ್ತದೆ. ಕ್ರಿಯಾಪಾತ್ರೆ ಕ್ರೋಮಿಯಂನಿಂದ ತುಂಬಿದ ಅನಂತರ ಕರಗಿದ ಲೋಹವನ್ನು ಅಚ್ಚುಗಳಿಗೆ ಎರಕ ಹೊಯ್ದು ಗಟ್ಟಿಗಳನ್ನು ತಯಾರಿಸಲಾಗುತ್ತದೆ.

ಈ ರೀತಿಯಾಗಿ ತಯಾರಿಸಿದ ಗಟ್ಟಿಗಳಲ್ಲಿ ಕ್ರೋಮಿಯಂ ಅಂಶ ಶೇ. 90 ರಷ್ಟಿರುತ್ತದೆ. ಉಳಿದುದರಲ್ಲಿ ಶೇ. 0.8 ಅಲ್ಯೂಮಿನಿಯಂ ಮತ್ತುಳಿದುದು ಕಬ್ಬಿಣ ಮತ್ತು ಸಿಲಿಕಾನ್ ಅಂಶಗಳು.

**2. ಸಿಲಿಕೋಥರ್ಮಿಕ್ ವಿಧಾನ :** ಈಗ ಉಪಯೋಗಿಸಲಾಗುತ್ತಿರುವ ಮೂರು ವಿಧಾನಗಳಲ್ಲಿ ಇದೇ ಅತ್ಯಂತ ಅಗ್ಗವಾದ ವಿಧಾನ; ಮತ್ತು ಈ ವಿಧಾನದಿಂದಲೇ ಕ್ರೋಮಿಯಂ ಲೋಹವನ್ನು ಅತ್ಯಧಿಕ ಮೊತ್ತದಲ್ಲಿ ತಯಾರಿಸಲಾಗುತ್ತಿದೆ. ಕ್ರೋಮಿಕ್ ಆಕ್ಸೈಡನ್ನು ಅಪಕರ್ಷಿಸಲು ಸಿಲಿಕಾನ್ ಧಾತುವನ್ನು ಉಪಯೋಗಿಸುವ ಈ ಅಪಕರ್ಷಕ ಕ್ರಿಯೆ ಉಷ್ಣಜನಕ ಕ್ರಿಯೆ. ಆದರೆ ಉತ್ಪಾದನೆಯಾಗುವ ಉಷ್ಣ ಕ್ರಿಯಾ ಮಿಶ್ರಣವನ್ನು ಕ್ರಿಯೆಗೆ ಬೇಕಾಗುವ ಉಷ್ಣತೆಯಲ್ಲಿಟ್ಟಿರಲು ಸಾಲದು. ಆದ್ದರಿಂದ ಈ ಕ್ರಿಯೆಯನ್ನು ಮಾಲುವ ವಿದ್ಯುತ್ಕುಲುಮೆಯಲ್ಲಿ (ಟಿಲ್ಟಿಂಗ್ ಎಲೆಕ್ಟ್ರಿಕ್ ಫರ್ನೇಸ್) ನಡೆಸಲಾಗುತ್ತದೆ. ಕುಲುಮೆಯಲ್ಲಿ ನಡೆಯುವ ಕ್ರಿಯೆ ಈ ಕೆಳಗಿನಂತಿದೆ :

$$2Cr_2O_3 + 3Si \rightarrow 4Cr + 3SiO_2$$

ಉತ್ಪಾದನೆಯಾಗುವ ಸಿಲಿಕ ಧಾತುಮಲವನ್ನು ಬೇರ್ಪಡಿಸಲು ಸುಲಭವಾಗುವಂತೆ ದ್ರವರೂಪದಲ್ಲಿಟ್ಟಿರುವುದು ಕಷ್ಟ. ಕ್ರಿಯಾಮಿಶ್ರಣಕ್ಕೆ ಸುಟ್ಟ ಸುಣ್ಣವನ್ನು ಸೇರಿಸಿದರೆ ಸಿಲಿಕ ಸುಣ್ಣದೊಡನೆ ಸೇರಿ ಕ್ಯಾಲ್ಸಿಯಂ ಸಿಲಿಕೇಟ್ ಆಗಿ ಪರಿವರ್ತಿತವಾಗುತ್ತದೆ. ಕ್ಯಾಲ್ಸಿಯಂ ಸಿಲಿಕೇಟಿನ ಬೇರ್ಪಡೆ ಸುಲಭ ಮತ್ತು ಈ ಮಾರ್ಪಾಡು ಕುಲುಮೆಯ ಅಸ್ತರವನ್ನು ಸಿಲಿಕ ಜಂಗು ಹಿಡಿಸುವುದನ್ನೂ ತಪ್ಪಿಸುತ್ತದೆ. ಕ್ರಿಯೆ ನಡೆದು ಕ್ಯಾಲ್ಸಿಯಂ ಸಿಲಿಕೇಟ್ ಬೇರೆ ಆದಂತೆ ಅದನ್ನು ಹೊರ ತೆಗೆಯಲಾಗುತ್ತದೆ ಮತ್ತು ಅದುರು–ಸಿಲಿಕಾನ್–ಸುಣ್ಣಗಳ ಮಿಶ್ರಣವನ್ನು ಕುಲುಮೆಗೆ ತುಂಬಲಾಗುತ್ತದೆ. ಕಡೆಗೆ ಕುಲುಮೆಯ ತುಂಬ ತುಂಬಿರುವ ಲೋಹವನ್ನು ಎರಕದ ಅಚ್ಚುಗಳಲ್ಲಿ ಹೊಯ್ದು ಗಟ್ಟಿಗಳನ್ನು ತಯಾರಿಸಲಾಗುತ್ತದೆ. ಈ ಬಗೆಯಲ್ಲಿ ತಯಾರಿಸಲಾದ ಕ್ರೋಮಿಯಂ ಶೇ. 99% ಪರಿಶುದ್ಧವಾಗಿದ್ದು ಇದರಲ್ಲಿ ಶೇ. 0–8 ಸಿಲಿಕಾನ್ ಮತ್ತು ಅಲ್ಪಾಂಶ ಕಬ್ಬಿಣ, ಇಂಗಾಲಗಳೂ ಇರುತ್ತವೆ.

**3. ವಿದ್ಯುದ್ವಿಶ್ಲೇಷಣ ವಿಧಾನ :** ಇದು ಅತಿ ವೆಚ್ಚದ ವಿಧಾನ. ತೆಳು ವಿದ್ಯುಲ್ಲೇಪನಗಳಿಗಾಗಿ ಅಥವಾ ಪುಡಿ, ಚಕ್ಕೆಗಳ ರೂಪದಲ್ಲಿ ಲೋಹ ಬೇಕಾದಾಗ ಈ ವಿಧಾನವನ್ನು ಬಳಸಲಾಗುತ್ತದೆ. ಪ್ರತಿಯೊಂದು ಲೀಟರಿನಲ್ಲಿ 2.5 ಗ್ರಾಂ ಸಲ್ಫೇಟ್ ಅಯಾನುಗಳಿರುವ ನೀರಿನಲ್ಲಿ ಲೀಟರಿಗೆ 250 ಗ್ರಾಂನಂತೆ ಕ್ರೋಮಿಕ್ ಆಕ್ಸೈಡ್ ಸೇರಿಸಿ ದೊರೆಯುವ ದ್ರಾವಣವನ್ನು ವಿದ್ಯುದ್ವಿಶ್ಲೇಷಣಕ್ಕೆ ಒಳಪಡಿಸಲಾಗುತ್ತದೆ. ಈ ವಿಶ್ಲೇಷಣಕ್ಕೆ 6 ವೋಲ್ಟಿನ ವಿದ್ಯುತ್ತನ್ನೂ ಸೀಸದ ಧನವಿದ್ಯುದ್ಧ್ರುವಗಳನ್ನೂ ಉಪಯೋಗಿಸಲಾಗುತ್ತದೆ. ಧನಧ್ರುವದ ಬಳಿ ಸಂಗ್ರಹಿಸಲಾಗುವ ಕ್ರೋಮಿಯಂ ಆರು ಮುಖಗಳುಳ್ಳ ಹರಳುಗಳಾಗಿ ದೊರೆಯುತ್ತದೆ. ಇವುಗಳಲ್ಲಿ ಸಾಕಷ್ಟು ಜಲಜನಕ ಸೆರೆಯಾಗಿರುವುದರಿಂದ 130° ಸೆಂ. ಉಷ್ಣತೆಗೆ ಹಿಡಿದು ಅದನ್ನು ಹೊರಗೆ ಅಟ್ಟಲಾಗುತ್ತದೆ. ಈ ಸಂದರ್ಭದಲ್ಲಿ ಹರಳುಗಳ ಆಕೃತಿ ಘನಾಕೃತಿಗೆ ಬದಲಾಗುವುದು. ಈ ಬಗೆಯ ವಿದ್ಯುದ್ವಿಶ್ಲೇಷಣಕ್ಕೆ ಅನೇಕ ಇತರ ಕ್ರೋಮಿಯಂ ಲವಣಗಳನ್ನೂ ಉಪಯೋಗಿಸಬಹುದು.

**ಗುಣಲಕ್ಷಣಗಳು :** ಕ್ರೋಮಿಯಂ ತೆಳು ನೀಲಛಾಯೆಯುಳ್ಳ ಒಂದು ಬಿಳಿಯ ಲೋಹ. ಇದರ ಸಾಂದ್ರತೆ ಸುಮಾರು 7 ಗ್ರಾಂ/ಘ.ಸೆಂ. ದ್ರವನ ಬಿಂದು 1840° ಸೆಂ. ಕುದಿಬಿಂದು 2200° ಸೆಂ. ಇದು ಬಲು ಗಡುಸಾದ (ಹಾರ್ಡ್) ಲೋಹ. ಆದರೆ ಭಿದುರತೆ (ಬ್ರಿಟಲ್‌ನೆಸ್) ಹೆಚ್ಚಿಲ್ಲದುದರಿಂದ ಈ ಲೋಹವನ್ನು ಸುಲಭವಾಗಿ ತಟ್ಟೆಗಳಾಗಿ ಬಡಿಯಬಹುದು. ಕ್ರೋಮಿಯಂ ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಆಮ್ಲಗಳೊಡನೆಯೂ ಸುಲಭವಾಗಿ ವರ್ತಿಸಿ ಲವಣಗಳಾಗಿ ಮಾರ್ಪಡುತ್ತದೆ. ಸಾರಜನಕ, ಇಂಗಾಲ, ಸಿಲಿಕಾನ್ ಮತ್ತು ಬೋರಾನ್ ಧಾತುಗಳೊಡನೆ ನೇರವಾಗಿ ವರ್ತಿಸಿ ನೈಟ್ರೈಡ್, ಕಾರ್ಬೈಡ್, ಸಿಲಿಸೈಡ್ ಮತ್ತು ಬೋರೈಡುಗಳಾಗಿ ಪರಿವರ್ತಿತವಾಗುತ್ತದೆ. ಈ ಲೋಹ ತೇವದ ಹವೆಯಲ್ಲಿಯೂ ಸುಲಭವಾಗಿ ಉತ್ಕರ್ಷಣಕ್ಕೊಳಗಾಗುವುದಿಲ್ಲ. ಕಾಸಿದಾಗ ಅಲ್ಪಾಂಶ ಮಾತ್ರ ಆಕ್ಸೈಡ್ ಆಗಿ ಪರಿವರ್ತಿತವಾಗುತ್ತದೆ. ಸಾರರಿಕ್ತ (ಡೈಲ್ಯೂಟ್) ನೈಟ್ರಿಕ್ ಆಮ್ಲದಂಥ ಉತ್ಕರ್ಷಕಗಳ ಪ್ರಭಾವಕ್ಕೆ ಒಡ್ಡಿದಾಗ ಲೋಹದ ಮೇಲೆ ಆಕ್ಸೈಡಿನ ತೆಳುಪದರವೊಂದು ಏರ್ಪಟ್ಟು ಲೋಹನಿಷ್ಕ್ರಿಯ (ಪ್ಯಾಸ್ಸೀವ್) ಆಗುತ್ತದೆ.

**ಉಪಯೋಗಗಳು :** ಕ್ರೋಮಿಯಂನ ಮುಖ್ಯ ಉಪಯೋಗಗಳು ಮೂರು: 1. ಇತರ ಲೋಹಗಳ ಮೇಲೆ ವಿದ್ಯುಲ್ಲೇಪನಕ್ಕಾಗಿ; 2. ಮಿಶ್ರಲೋಹಗಳ ತಯಾರಿಕೆಯಲ್ಲಿ; 3. ಉಪಯುಕ್ತ ಕ್ರೋಮಿಯಂ ಲವಣಗಳ ತಯಾರಿಕೆಯಲ್ಲಿ.

1. ಹೊರ ವಾತಾವರಣದಲ್ಲಿ ಕ್ರೋಮಿಯಂ ಉತ್ಕರ್ಷಣಕ್ಕೆ ಒಳಗಾಗುವುದಿಲ್ಲ. ಆದ್ದರಿಂದ ಅದರ ಮೆರುಗು ಹಾಗೆಯೇ ಉಳಿಯುತ್ತದೆ. ಹೀಗಾಗಿ ಇತರ ಲೋಹಗಳ ಮೇಲೆ ಇದರ ವಿದ್ಯುಲ್ಲೇಪನವೊಂದನ್ನು ಕೊಟ್ಟಾಗ ಅವುಗಳ ಚೆಲುವು ಹೆಚ್ಚಾಗಿ ಹೊಳೆಯುತ್ತಿರುವುದು ಮಾತ್ರವಲ್ಲದೆ ಲೇಪಿಸಲ್ಪಟ್ಟ ಲೋಹಗಳು ಜಂಗು ಅಥವಾ ಕಿಲುಬು ಹಿಡಿಯುವುದನ್ನು ತಡೆಗಟ್ಟಿ ಅವು ದೀರ್ಘಕಾಲ ಬಾಳಿಕೆ ಬರುವಂತೆ ಮಾಡುತ್ತವೆ. ಅಲ್ಲದೆ ಈ ಲೇಪನ ಒಳಲೋಹದಿಂದ ಸುಲಭವಾಗಿ ಬೇರ್ಪಡುವುದಿಲ್ಲವಾದ್ದರಿಂದ ಪದೇ ಪದೇ ಲೇಪನವೂ ಅವಶ್ಯವಿಲ್ಲ. ಈ ಸೌಕರ್ಯಗಳ ದೆಸೆಯಿಂದ ಕ್ರೋಮಿಯಂ ಲೋಹವನ್ನು ವಿದ್ಯುಲ್ಲೇಪನಗಳಿಗಾಗಿ ಸಾಕಷ್ಟು ಪರಿಮಾಣದಲ್ಲಿ ಉಪಯೋಗಿಸಲಾಗುತ್ತಿದೆ.

**2. ಕ್ರೋಮಿಯಂ ಮಿಶ್ರಲೋಹಗಳು :** ಮಿಶ್ರಲೋಹಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿರುವ ಲೋಹಗಳಲ್ಲಿ ಕ್ರೋಮಿಯಂ ಇಂದು ಒಂದು ಪ್ರಮುಖ ಲೋಹ. ಕಬ್ಬಿಣ, ನಿಕಲ್, ಕೋಬಾಲ್ಟ್, ಟಂಗ್‌ಸ್ಟನ್ ಮತ್ತು ಮಾಲೆಬ್ಡಿನಮುಗಳೊಡನೆ ಉಪಯೋಗಿಸಿ ತಯಾರಿಸುವ ಕ್ರೋಮಿಯಂ ಮಿಶ್ರಲೋಹಗಳು ಮುಖ್ಯವಾದವು. ಫೆರ್ರೊಕ್ರೋಮ್‌ಗಳೆಂಬ ಕಬ್ಬಿಣ–ಕ್ರೋಮಿಯಂ ಮಿಶ್ರಲೋಹಗಳನ್ನು ವಿಶಿಷ್ಟ ರೀತಿಯ ಉಕ್ಕುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಫೆರ್ರೊಕ್ರೋಮ್ ಮಿಶ್ರಲೋಹಗಳನ್ನು ನೇರವಾಗಿ ಅದುರಿನಿಂದಲೇ ತಯಾರಿಸಬಹುದು. ಈ ಮಿಶ್ರಲೋಹಗಳನ್ನು ಅಲ್ಪ ಇಂಗಾಲಾಂಶ ಮತ್ತು ಅಧಿಕ ಇಂಗಾಲಾಂಶದವುಗಳೆಂದು ಎರಡು ಬಗೆಯವುಗಳಾಗಿ ವಿಂಗಡಿಸಬಹುದು. ಅಧಿಕ ಇಂಗಾಲಾಂಶ ಎಂದರೆ ಶೇ. 5–8 ಇಂಗಾಲವುಳ್ಳ ಮಿಶ್ರ ಲೋಹವನ್ನು ತಯಾರಿಸಲು ಕ್ರೋಮಿಯಂ ಅದುರನ್ನು ವಿಶಿಷ್ಟ ರೀತಿಯ ವಿದ್ಯುಚ್ಚಾಪ ಕುಲುಮೆಯಲ್ಲಿ (ಆರ್ಕ್ ಫರ್ನೇಸ್) ಕಲ್ಲಿದ್ದಲ ಕಿಟ್ಟದಿಂದ ಅಪಕರ್ಷಿಸಲಾಗುತ್ತದೆ. ಈ ಬಗೆಯ ಮಿಶ್ರಲೋಹದಲ್ಲಿ ಕ್ರೋಮಿಯಂನ ಅಂಶ ಶೇ. 60–66 ರಷ್ಟು. ಅಲ್ಪ ಇಂಗಾಲಾಂಶದ ಫೆರ್ರೊಕ್ರೋಮುಗಳನ್ನು ತಯಾರಿಸಲು ಅದುರನ್ನು ಸಿಲಿಕಾನ್‌ನಿಂದ ಮಾಲುವ ವಿದ್ಯುತ್ಕುಲುಮೆಯೊಂದರಲ್ಲಿ ಅಪಕರ್ಷಿಸಲಾಗುತ್ತದೆ. ಅದುರಿನೊಡನೆ ಸೇರಿಸುವುದು ಆವಶ್ಯಕ. ಈ ಬಗೆಯ ಮಿಶ್ರಲೋಹದಲ್ಲಿ ಕ್ರೋಮಿಯಂನ ಅಂಶ ಶೇ. 65–70, ಇಂಗಾಲ ಶೇ. 0.1–1 ಮತ್ತು ಉಳಿತಾಯ ಕಬ್ಬಿಣ, 0.03 ಮಾತ್ರ ಇಂಗಾಲವಿರುವ ವಿಶಿಷ್ಟದರ್ಜೆಯ ಫೆರ್ರೊಕ್ರೋಮಿಗೆ ಅಧಿಕ ಬೆಲೆ ದೊರೆಯುತ್ತದೆ.

ಫೆರ್ರೊಕ್ರೋಮುಗಳನ್ನು ಉಪಯೋಗಿಸಿ ತಯಾರಿಸುವ ಕ್ರೋಮಿಯಂ ಉಕ್ಕುಗಳನ್ನು ಮೂರು ತರಹದವುಗಳಾಗಿ ವರ್ಗೀಕರಿಸಬಹುದು; 1. ಅಲ್ಪಕ್ರೋಮಿಯಂ ಉಳ್ಳ ಉಕ್ಕುಗಳು (ಕ್ರೋಮಿಯಂ ಅಂಶ ಶೇ. 0.5–4.0) ಗಡಸು ಮಾತ್ರವಲ್ಲದೆ ಉತ್ತಮ ಧಾರಣ ತ್ರಾಣ (ಟೆನ್ಸೈಲ್ ಸ್ಟ್ರೆಂತ್), ತನ್ಯತೆ (ಡಕ್ಟಿಲಿಟಿ) ಮತ್ತು ಆಘಾತ ನಿರೋಧತೆಗಳನ್ನೂ (ಇಂಪೇಕ್ಟ್ ರೆಸಿಸ್ಟೆನ್ಸ್) ಪಡೆದಿರುತ್ತವೆ. ಈ ಬಗೆಯ ಉಕ್ಕುಗಳನ್ನು ಉಳಿ, ಗರಗಸಗಳಂಥ ಉಪಕರಣಗಳು, ಹಲ್ಲುಳ್ಳ ಚಕ್ರಗಳು ಮತ್ತು ಗೋಳ ತಿರುಗುಣಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. 2. ಮಧ್ಯಮ ಕ್ರೋಮಿಯಂ ಅಂಶದ ಉಕ್ಕುಗಳಲ್ಲಿ ಕ್ರೋಮಿಯಂನ ಅಂಶ ಶೇ. 4–12. ಈ ಬಗೆಯ ಉಕ್ಕುಗಳಲ್ಲಿ ಮ್ಯಾಂಗನೀಸ್, ನಿಕಲ್, ಟಂಗ್‌ಸ್ಟನ್ ಮೊದಲಾದ ಇತರ ಲೋಹಗಳೂ ಇರುವುದುಂಟು. ಇವನ್ನು ಅಧಿಕ ಒತ್ತಡ, ಅಧಿಕ ಉಷ್ಣತೆಗಳಿಗೆ ಒಳಗಾಗುವ ಯಂತ್ರ ಭಾಗಗಳನ್ನು ತಯಾರಿಸಲು ಉಪಯೋಗಿಸಲಾಗುತ್ತದೆ. ಈ ಬಗೆಯ ಹಲವು ವಿಶಿಷ್ಟ ಉಕ್ಕುಗಳು ಮಂದಗೆಂಪು ಬರುವಷ್ಟು ಬಿಸಿಯಾದರೂ ದೀರ್ಘಕಾಲದವರೆಗೆ ತಮ್ಮ ತ್ರಾಣವನ್ನು ಕಳೆದುಕೊಳ್ಳುವುದಿಲ್ಲ. 3. ನಿಕಲಿನೊಡನೆ ಶೇ. 10ಕ್ಕಿಂತ ಹೆಚ್ಚು ಅಂಶ ಕ್ರೋಮಿಯಂ ಉಳ್ಳ ಅಧಿಕ ಕ್ರೋಮಿಯಂ ಉಕ್ಕುಗಳು ತುಕ್ಕುಹಿಡಿಯದ ಉಕ್ಕುಗಳೆಂದು (ಸ್ಟೇನ್‌ಲೆಸ್ ಸ್ಟೀಲ್) ಪ್ರಸಿದ್ಧವಾಗಿದೆ. ಇವುಗಳಲ್ಲಿ ಮುಖ್ಯವಾದ 18/8 ಎಂದರೆ ಶೇ. 18 ಕ್ರೋಮಿಯಂ ಮತ್ತು ಶೇ. 8 ನಿಕಲ್ ಉಳ್ಳ ಉಕ್ಕು ತುಕ್ಕನ್ನು ಅನೇಕ ಪರಿಸ್ಥಿತಿಗಳಲ್ಲಿ ನಿರೋಧಿಸಬಲ್ಲ ಗುಣಪಡೆದಿರುವುದರಿಂದ ಇದನ್ನು ಅಧಿಕ ಮೊತ್ತದಲ್ಲಿ ಉಪಯೋಗಿಸಲಾಗುತ್ತಿದೆ. ಇದರಿಂದ ಯಂತ್ರಭಾಗಗಳು, ರಾಸಾಯನಿಕ ಕೈಗಾರಿಕೆಗಳಲ್ಲಿ ಬೇಕಾಗುವ ಪಾತ್ರೆಗಳು, ಸಾಮಾನ್ಯ ದಿನಬಳಕೆಯ ಉಪಕರಣಗಳು ಮೊದಲಾದವನ್ನು ತಯಾರಿಸಬಹುದು. ಈಚೆಗೆ ಭಾರತದ ನ್ಯಾಷನಲ್ ಮೆಟಲರ್ಜಿಕಲ್ ಲ್ಯಾಬೋರೇಟರಿಯಲ್ಲಿ ನಿಕಲ್ ರಹಿತ ತುಕ್ಕುಹಿಡಿಯದ ಉಕ್ಕುಗಳನ್ನು ತಯಾರಿಸಲಾಗಿದೆ. ನಿಕಲ್ ಅದುರುಗಳಿಲ್ಲದ ನಮ್ಮ ದೇಶಕ್ಕೆ ಈ ಸಂಶೋಧನೆ ಅಮೂಲ್ಯವಾದುದು. ಕೋಬಾಲ್ಟ್, ಟಂಗ್‌ಸ್ಟನ್ ಮತ್ತು ಮಾಲೆಬ್ಡಿನಮುಗಳನ್ನುಳ್ಳ ಕ್ರೋಮಿಯಂ ಮಿಶ್ರಲೋಹಗಳು ಗಡುಸಾಗಿದ್ದು, ಆಘಾತ ನಿರೋಧಕ ಗುಣಗಳನ್ನು ಪಡೆದಿರುವುದರಿಂದ ಚಲಿಸುವ ಯಂತ್ರ ಭಾಗಗಳು ಮತ್ತು ಆಘಾತ ಪಡೆಯುವ ಯಂತ್ರೋಪಕರಣಗಳ ತಯಾರಿಕೆಗಳಲ್ಲಿ ಇವನ್ನು ಉಪಯೋಗಿಸಲಾಗುತ್ತಿದೆ. ಶೇ. 65 ನಿಕಲ್, ಶೇ. 15–20 ಕ್ರೋಮಿಯಂ ಮತ್ತು ಶೇ. 15–20 ಕಬ್ಬಿಣವನ್ನುಳ್ಳ ಸೈಕ್ರೋಮ್ ಎಂಬ ಮಿಶ್ರಲೋಹ ಅಧಿಕ ವಿದ್ಯುನ್ನಿರೋಧಕ ಮತ್ತು ಉಷ್ಣನಿರೋಧಕ ಗುಣಗಳನ್ನು ಪಡೆದಿರುವುದರಿಂದ ಇದನ್ನು ವಿದ್ಯುತ್ ಒಲೆಗಳೇ ಮೊದಲಾದ ಉಷ್ಣೋಪಕರಣಗಳಲ್ಲಿ ಉಪಯೋಗಿಸಲಾಗುತ್ತದೆ.

**ಕ್ರೋಮಿಯಂ ಸಂಯುಕ್ತಗಳು :** ಕ್ರೋಮಿಯಂ ಧಾತುವಿಗೆ ಮೂರು ಬಗೆಯ ವೇಲೆನ್ಸಿಗಳು ಇವೆ. ಕ್ರೋಮಿಯಂ ಪರಮಾಣುವಿನ ವೇಲೆನ್ಸಿಯನ್ನು ಅನುಸರಿಸಿ ಸಂಯುಕ್ತಗಳನ್ನು ಮೂರು ಬಗೆಯವಾಗಿ ವಿಂಗಡಿಸಬಹುದು.

**1. ಕ್ರೋಮಸ್ ಸಂಯುಕ್ತಗಳು:** ಇವುಗಳಲ್ಲಿ ಕ್ರೋಮಿಯಮಿನ ವೇಲೆನ್ಸಿ ಎರಡು. ಕ್ರೋಮಸ್ ಆಕ್ಸೈಡ್ (CrO) ಇತರ ಸಾಮಾನ್ಯ ಲೋಹಗಳ ಆಕ್ಸೈಡುಗಳಂತೆ ಪ್ರತ್ಯಾಮ್ಲೀಯ (ಬೇಸ್) ಗುಣವನ್ನು ಪಡೆದಿದೆ. ಕ್ರೋಮಸ್ ಲವಣಗಳು ಉತ್ತಮ ಅಪಕರ್ಷಕಗಳು. ಕ್ರೋಮಿಕ್ ಲವಣಗಳನ್ನು ಆಮ್ಲೀಯ (ಆಸಿಡಿಕ್) ಮಾಧ್ಯಮದಲ್ಲಿ (ಮೀಡಿಯಂ) ಉದ್ಭವಾವಸ್ಥೆಯಲ್ಲಿರುವ (ನ್ಯಾಸೆಂಟ್) ಜಲಜನಕದಿಂದ ಅಪಕರ್ಷಿಸಿ ಕ್ರೋಮಸ್ ಲವಣಗಳನ್ನು ತಯಾರಿಸಬಹುದು. ಕ್ರೋಮಸ್ ಲವಣಗಳು ದ್ರಾವಣದಲ್ಲಿ ನೀಲಿ ಬಣ್ಣ ತಾಳುತ್ತವೆ.

**2. ಕ್ರೋಮಿಕ್ ಸಂಯುಕ್ತಗಳು:** ಕ್ರೋಮಿಯಂನ ವೇಲೆನ್ಸಿ ಇವುಗಳಲ್ಲಿ ಮೂರು. ಇವು ಕ್ರೋಮಸ್ ಸಂಯುಕ್ತಗಳಿಗಿಂತ ಸ್ಥಿರವಾದವು. ಹಸುರು ಬಣ್ಣದ ಕ್ರೋಮಿಕ್ ಆಕ್ಸೈಡ್ ($Cr_2O_3$) ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಗುಣಗಳೆರಡನ್ನು ಪಡೆದಿದೆ. ಕ್ರೋಮಿಕ್ ಲವಣಗಳು ಮತ್ತು ಅವುಗಳ ದ್ರಾವಣಗಳು ಹಸುರು ಅಥವಾ ನೇರಿಳೆ ಬಣ್ಣ ತಳೆದಿರುತ್ತವೆ. ರಾಸಾಯನಿಕ ಗುಣಗಳಲ್ಲಿ ಇವು ಅಲ್ಯೂಮಿನಿಯಂ ಸಂಯುಕ್ತಗಳನ್ನು ಹೋಲುತ್ತವೆ. ಅಮೋನಿಯ, ಅಮೈನುಗಳೇ ಮೊದಲಾದ ಎಲೆಕ್ಟ್ರಾನುಗಳು ದಾನಗೈಯಬಲ್ಲ (ಡೋನೇಟ್) ಅನೇಕ ಸಂಯುಕ್ತಗಳೊಡನೆ ಸಂಕೀರ್ಣ ಸಂಯುಕ್ತಗಳನ್ನೀಯುತ್ತವೆ. ಕ್ರೋಮಿಕ್ ಆಕ್ಸೈಡನ್ನು ಗಾಜು, ಪಿಂಗಾಣಿಗಳಿಗೆ ಹಸುರು ಬಣ್ಣ ನೀಡಬಲ್ಲ ವರ್ಣದ್ರವ್ಯ (ಪಿಗ್ಮೆಂಟ್) ಆಗಿಯೂ ಮೀಥೈಲ್ ಆಲ್ಕೋಹಾಲ್ ಸಂಯೋಜನೆಯೆ ಮೊದಲಾದ ಹಲವು ಸಾವಯವ ಉತ್ಕರ್ಷಣ ಕ್ರಿಯೆಗಳಲ್ಲಿ ವೇಗವರ್ಧಕ (ಕ್ಯಾಟಲಿಸ್ಟ್) ಆಗಿಯೂ ಉಪಯೋಗಿಸಲಾಗುತ್ತದೆ. ಕ್ರೋಮಿಕ್ ಕ್ಲೋರೈಡ್ ($CrCl_3$) ಮತ್ತು ನೈಟ್ರೇಟುಗಳನ್ನು [$Cr(NO_3)_3$] ಬಟ್ಟೆಗಳಿಗೆ ಬಣ್ಣಹಾಕುವಾಗ ವರ್ಣಬಂಧಕವಾಗಿ (ಮಾರ್ಡೆಂಟ್) ಉಪಯೋಗಿಸುತ್ತಾರೆ. ಕ್ರೋಮಿಕ್ ಅಸಿಟೇಟನ್ನು [$Cr(C_2H_3O_2)_3 . xH_2O$] ವರ್ಣಬಂಧಕವಾಗಿ ಮಾತ್ರವಲ್ಲದೆ ಚರ್ಮಗಳನ್ನು ಹದಮಾಡುವುದಕ್ಕೂ ಉಪಯೋಗಿಸಲಾಗುತ್ತದೆ. ಕ್ರೋಮ್ ಪಟಿಕವನ್ನು [$K Cr (SO_4)_2 . 12 H_2O$] ಬಣ್ಣ ಹಾಕುವ ಉದ್ದಿಮೆಯಲ್ಲಿ ಬಟ್ಟೆಗಳ ಮೇಲೆ ಮುದ್ರಿಸಲು ಮತ್ತು ಚರ್ಮ ಹದಮಾಡಲು ಉಪಯೋಗಿಸುತ್ತಾರೆ.

**3. ಕ್ರೋಮಿಯಂ ಟ್ರೈ ಆಕ್ಸೈಡ್ ($CrO_3$) ಕ್ರೋಮೇಟ್, ಕ್ರೋಮೇಟ್ ಮತ್ತು ಡೈಕ್ರೋಮೇಟುಗಳು:** ಈ ಗುಂಪಿನ ಸಂಯುಕ್ತಗಳಲ್ಲಿ ಕ್ರೋಮಿಯಂನ ವೇಲೆನ್ಸಿ 6. ಕ್ರೋಮಿಯಂ ಟ್ರೈ ಆಕ್ಸೈಡ್ ಆಮ್ಲೀಯ ಗುಣವನ್ನು ಪಡೆದಿದ್ದು, ಇತರ ಲೋಹಗಳ ಆಕ್ಸೈಡುಗಳೊಡನೆ ವರ್ತಿಸಿ ಕ್ರೋಮೇಟ್ ಮತ್ತು ಡೈ ಕ್ರೋಮೇಟುಗಳನ್ನು ನೀಡುತ್ತದೆ. ಈ ಗುಂಪಿನ ಸಂಯುಕ್ತಗಳೆಲ್ಲವೂ ಉತ್ತಮ ಉತ್ಕರ್ಷಣಕಾರಿಗಳು. ಆದ್ದರಿಂದ ಇವು ಅನೇಕ ಔದ್ಯಮಿಕ ರಾಸಾಯನಿಕ ಸಂಯೋಜನೆಗಳಲ್ಲಿ ಉಪಯೋಗಕ್ಕೆ ಬರುತ್ತವೆ. ಕ್ರೋಮಿಕ್ ಆಕ್ಸೈಡನ್ನು ಕ್ರೋಮಿಯಂ ವಿದ್ಯುಲ್ಲೇಪನಗಳಿಗಾಗಿ ಹಲವು ವರ್ಣದ್ರವ್ಯಗಳ ತಯಾರಿಕೆಗಾಗಿ ಮತ್ತು ಲೋಹಗಳ ಮೇಲೆ ರಾಸಾಯನಿಕ ಕೊರೆತ (ಎಚ್ಚಿಂಗ್) ಉಂಟುಮಾಡಲು ಸಹ ಉಪಯೋಗಿಸುತ್ತಾರೆ. ಸತುವಿನ ಕ್ಲೋರೈಡಿನೊಡನೆ ಮರದ ದಿಮ್ಮಿಗಳನ್ನು ಕೀಟಗಳಿಂದ ರಕ್ಷಿಸಲು ಉಪಯೋಗಿಸಬಹುದು. ಅಮೋನಿಯಂ ಕ್ರೋಮೇಟನ್ನು [$(NH_4)_2 CrO_4$] ಛಾಯಾಚಿತ್ರ ಫಿಲಂಗಳ ತಯಾರಿಕೆಯಲ್ಲಿಯೂ ಸೀಸದ ಕ್ರೋಮೇಟನ್ನು ($PbCrO_4$) ಬಣ್ಣ ಮಸಿಗಳ ಉದ್ಯಮಗಳಲ್ಲಿಯೂ ಸೋಡಿಯಂ ಕ್ರೋಮೇಟ್ ($Na_2CrO_4$) ಮತ್ತು ಪೊಟಾಸಿಯಂ ಕ್ರೋಮೇಟುಗಳನ್ನು ($K_2CrO_4$) ಛಾಯಾಚಿತ್ರ, ಬಣ್ಣ ಮತ್ತು ಚರ್ಮದ ಹದಗಾರಿಕೆಯ ಉದ್ದಿಮೆಗಳಲ್ಲಿಯೂ ಉಪಯೋಗಿಸಲಾಗುತ್ತದೆ. ಸೋಡಿಯಂ ಕ್ರೋಮೇಟಿಗೆ ತಕ್ಕಮಟ್ಟಿನ ಅಧಿಕ ಮೊತ್ತದಲ್ಲಿ ಸಾವಯವ ಸಂಯೋಜನೆಗಳಲ್ಲಿ ಉತ್ಕರ್ಷಣಾಕಾರಿಯಾಗಿಯೂ ಉಪಯೋಗ ಉಂಟು. ಅಮೋನಿಯಂ ಕ್ರೋಮೇಟ್ ಛಾಯಾಚಿತ್ರ ಉದ್ದಿಮೆ ಮಾತ್ರವಲ್ಲದೆ ಶಿಲಾಮುದ್ರಣ ಕಲೆ (ಲಿಥೋಗ್ರಫಿ), ಸುಡುಮದ್ದಿನ ಉದ್ದಿಮೆ(ಪೈರೋಟೆಕ್ನಿಕ್ಸ್), ಬಣ್ಣ ಮತ್ತು ಪಿಂಗಾಣಿ ಉದ್ದಿಮೆಗಳಲ್ಲೂ ಉಪಯೋಗಕ್ಕೆ ಬರುತ್ತದೆ. ಪೊಟಾಸಿಯಂ ಡೈಕ್ರೋಮೇಟಿನ ($K_2Cr_2O_7$) ಬೆಲೆ ಸೋಡಿಯಂ ಡೈಕ್ರೋಮೇಟಿನ ಬೆಲೆಗಿಂತ ಹೆಚ್ಚು. ಆದ್ದರಿಂದ ಇದನ್ನು ಹಲವು ಪ್ರತ್ಯೇಕ ಮತ್ತು ವಿಶಿಷ್ಟವಾದ ಬಟ್ಟೆಯ ಬಣ್ಣಗಳಲ್ಲಿ, ವಿಶಿಷ್ಟ ಮಾದರಿಯ ಚರ್ಮದ ತಯಾರಿಕೆಗಳಲ್ಲಿ ಮತ್ತು ವಿಶಿಷ್ಟ ಪಿಂಗಾಣಿಯ ಬಣ್ಣಗಳಲ್ಲಿ ಮಾತ್ರ ಉಪಯೋಗಿಸಲಾಗುತ್ತದೆ. ಅಗ್ಗದ ಬೆಲೆಯ ಸೋಡಿಯಂ ಡೈಕ್ರೋಮೇಟಿನ ಉಪಯೋಗದ ಮೊತ್ತ ಅಧಿಕ. ತುಕ್ಕು ಹಿಡಿಯದಂತೆ ಲೋಹಗಳನ್ನು ರಕ್ಷಿಸಬಲ್ಲ ಹೊದಿಕೆಗಳನ್ನೀಯಲು, ಲೋಹಗಳ ಮೇಲ್ಮೈಯನ್ನು ಸ್ವಚ್ಛಗೊಳಿಸಲು, ವರ್ಣದ್ರವ್ಯವಾಗಿ, ವರ್ಣಬಂಧಕವಾಗಿ ಮತ್ತು ಹಲವು ಇತರ ವರ್ಣದ್ರವ್ಯಗಳ ತಯಾರಿಕೆಯಲ್ಲಿ ಈ ಸಂಯುಕ್ತವನ್ನು ಹೇರಳವಾಗಿ ಉಪಯೋಗಿಸಲಾಗುತ್ತಿದೆ. ಅಷ್ಟೇ ಅಲ್ಲದೆ ಛಾಯಾಚಿತ್ರ ಉದ್ದಿಮೆಯಲ್ಲಿ, ವರ್ಣ ನಿವಾರಕವಾಗಿ (ಬ್ಲೀಚಿಂಗ್ ಏಜೆಂಟ್), ಎಣ್ಣೆ, ಕೊಬ್ಬುಗಳನ್ನು ಶುದ್ಧೀಕರಿಸುವುದಕ್ಕಾಗಿ, ಮರದ ದಿಮ್ಮಿ, ಹಲಗೆಗಳನ್ನು ಕೀಟಗಳಿಂದ ರಕ್ಷಿಸುವುದಕ್ಕಾಗಿ, ಅನೇಕ ಸಾವಯವ ಸಂಯೋಜನೆಗಳಲ್ಲಿ ಉತ್ಕರ್ಷಕವಾಗಿ ಮೊದಲಾಗಿ ವಿವಿಧ ಬಗೆಗಳಲ್ಲಿ ಈ ಸಂಯುಕ್ತವನ್ನು ಉಪಯೋಗಿಸಲಾಗುತ್ತಿದೆ. (ಕೆ.ಟಿ.ಎಸ್)

**ಕ್ರೋಮೈಟ್ :** ಕ್ರೋಮಿಯಂ ಧಾತುವನ್ನೊಳಗೊಂಡಿರುವ ಏಕೈಕ ಮುಖ್ಯ ಅದಿರು. ಇದರ ಬಣ್ಣ ಕಪ್ಪು. ಕಬ್ಬಿಣದಂತೆ ತೂಕವಾಗಿರುತ್ತದೆ. ಸಾಪೇಕ್ಷ ಸಾಂದ್ರತೆ 4.6. ಆದರೆ ಅಯಸ್ಕಾಂತ ಕಬ್ಬಿಣವನ್ನು ಆಕರ್ಷಿಸುವಂತೆ ಕ್ರೋಮೈಟನ್ನು ಆಕರ್ಷಿಸುವುದಿಲ್ಲ. ಸಾಮಾನ್ಯವಾಗಿ ಕ್ರೋಮೈಟ್ ನಿರ್ದಿಷ್ಟ ಆಕಾರವಿಲ್ಲದ ಘನರೂಪದಲ್ಲಿ ದೊರೆತರೂ ಕೆಲವೊಮ್ಮೆ ಅಷ್ಟಮುಖಿಗಳುಳ್ಳ ಹರಳುಗಳಂತೆಯೂ ಸಿಗುವುದುಂಟು. ಶುದ್ಧವಾದ ಅದುರಿನಲ್ಲಿ ಶೇ. 68 ರಷ್ಟು $Cr_2O_3$ ಮತ್ತು ಶೇ. 32 ರಷ್ಟು FeO ಇವೆ. ಶುದ್ಧವಾದ ರೂಪದಲ್ಲಿ ಅದಿರು ದೊರೆಯುವುದಿಲ್ಲ. ಅಲ್ಯುಮಿನ ($Al_2O_3$), ಕಬ್ಬಿಣ (FeO), ಮ್ಯಾಗ್ನಿಸಿಯ (MgO) ,

ಕ್ಯಾಲ್ಸಿಯಂ (CaO) ಮತ್ತು ಸಿಲಿಕ ($SiO_2$) ಅಂಶಗಳು ವಿವಿಧ ಪ್ರಮಾಣಗಳಲ್ಲಿ ಸೇರಿ ಬೇರೆ ಬೇರೆ ದರ್ಜೆಯ ಕ್ರೋಮೈಟ್ ಅದಿರುಗಳನ್ನು ಕೊಡುತ್ತವೆ. ಕ್ರೋಮಿಯಂ ಅಂಶ ಕಡಿಮೆಯಾದಂತೆ ಅದುರಿಗಿರುವ ಬೆಲೆಯೂ ಇಳಿದು ಹೋಗುತ್ತದೆ. ಶೇ. 42 ಕ್ಕಿಂತಲೂ ಕಡಿಮೆ ಇರುವ ಅದುರು ಅಷ್ಟಾಗಿ ಉಪಯೋಗಕ್ಕೆ ಬರುವುದಿಲ್ಲ. ಕರ್ನಾಟಕದಲ್ಲಿ ದೊರೆಯುವ ಉತ್ತಮ ಅದಿರಿನಲ್ಲಿ ಶೇ. 50ರ ವರೆಗೆ $Cr_2O_3$ ಇರುತ್ತದೆ. ಕ್ರೋಮ್ ($Cr_2O_3$) ಮತ್ತು ಕಬ್ಬಿಣ ($Fe_2O_3$) ಇವು 2.5 : 1 ಅನುಪಾತದಲ್ಲಿದ್ದರೆ ಅಂಥ ಅದುರು ಮಿಶ್ರಲೋಹಗಳ ಕೈಗಾರಿಕೆಯಲ್ಲಿ ಶ್ರೇಷ್ಠವಾದುದೆನಿಸಿಕೊಳ್ಳುತ್ತದೆ.

ಕ್ರೋಮೈಟ್ ಅದಿರು ಅತ್ಯಲ್ಪ ಸಿಲಿಕವಿರುವ ವಿಶೇಷ ತರದ ಶಿಲೆಗಳಲ್ಲಿ ಮಾತ್ರ ದೊರೆಯುತ್ತದೆ. ಮುಖ್ಯವಾದ ಶಿಲಾರೂಪಗಳ ಹೆಸರು ಡನೈಟ್, ಪೆರಿಡೋಟೈಟ್ ಮತ್ತು ಅವುಗಳ ರೂಪಾಂತರ ಹೊಂದಿದ ಸರ್ಪೆಂಟಿನೈಲ್. ದ್ರವರೂಪವಾಗಿರುವ ಶಿಲಾಪಾಕ ಆರುತ್ತ ಬಂದಾಗ ಮೊದಲು ಜನಿಸುವ ಖನಿಜವೇ ಕ್ರೋಮೈಟ್. ಇದು



ಪೆರಿಡೋಟೈಟ್ ಶಿಲಾರೂಪದಲ್ಲಿನ ಕ್ರೋಮೈಟ್ ಸಿರಗಳು

ಹರಳು ಹರಳುಗಳಾಗಿ ಶಿಲಾದ್ರವದಿಂದ ಬೇರ್ಪಟ್ಟು ಕೆಳಗೆ ತಂಗಿ, ಶುದ್ಧ ಖನಿಜ ಭಂಡಾರವಾಗಿ ರೂಪುಗೊಳ್ಳುತ್ತದೆ. ಕ್ರೋಮೈಟ್ ಅದುರನ್ನು ಹುಡುಕುವವರು ಅತ್ಯಲ್ಪ ಸಿಲಿಕಾಂಶವಿರುವ ಶಿಲೆಗಳ ಜಾಡನ್ನೇ ಹಿಡಿದು ನೋಡಿ ಗುರುತಿಸುತ್ತಾರೆ. ಕಡಿಮೆ ಮೊತ್ತದಲ್ಲಿ ಸೇರಿರುವ ಕೀಳುದರ್ಜೆಯ ಅದುರನ್ನು ಕುಟ್ಟಿ ಪುಡಿ ಮಾಡಿ, ನೀರಿನಲ್ಲಿ ಜಾಲಾಡಿ ತೂಕವಾಗಿರುವ ಶುದ್ಧ ಕ್ರೋಮೈಟನ್ನು ಬೇರೆಯಾಗಿ ಪಡೆಯಲು ಸಾಧ್ಯವಿದೆ. ಉತ್ತಮ ದರ್ಜೆಯ ಕಲ್ಲು ದೊರೆಯುವುದು ಕಡಿಮೆಯಾದಾಗ ಈ ಕೀಳುದರ್ಜೆಯ ಅದಿರನ್ನು ಉಪಯೋಗಿಸಬೇಕಾಗುತ್ತದೆ. ಈ ರೀತಿ ಶುದ್ಧೀಕರಣದಿಂದ ಶೇ. 10–15 ಕ್ರೋಮಿಯಂ ಅಂಶವಿರುವ ಕಲ್ಲನ್ನು ಶೇ. 50 ಇರುವ ವರೆಗೂ ಉತ್ತಮಗೊಳಿಸಲು ಸಾಧ್ಯವಾಗುತ್ತದೆ.

**ಮುಖ್ಯ ಉಪಯೋಗ :** ಕ್ರೋಮೈಟಿನ ಉಪಯೋಗ ಮುಖ್ಯವಾಗಿ ವಿವಿಧವಾದ ಉಕ್ಕುಗಳ ತಯಾರಿಕೆಯಲ್ಲಿ. ಈಗ ನಮ್ಮ ದೇಶದಲ್ಲಿ ವಿಶೇಷವಾಗಿ ಬಳಕೆಗೆ ಬಂದಿರುವ ತುಕ್ಕು ಹಿಡಿಯದ ಉಕ್ಕಿನ ಪಾತ್ರೆಗಳ ತಯಾರಿಕೆಗೆ ಕ್ರೋಮ್ ಉಕ್ಕು ಅಗತ್ಯವಾಗಿ ಬೇಕು. ಪ್ರಪಂಚದ ಕ್ರೋಮೈಟ್ ಉತ್ಪತ್ತಿಯಲ್ಲಿ ಶೇ. 50ಕ್ಕೂ ಹೆಚ್ಚಿನದು ಮಿಶ್ರ ಉಕ್ಕಿನ ಕೈಗಾರಿಕೆಯಲ್ಲಿ ಉಪಯೋಗವಾಗುತ್ತದೆ. **(ನೋಡಿ– ಕ್ರೋಮಿಯಂ)**

ನಾನಾ ದೇಶಗಳಲ್ಲಿನ ಉತ್ಪತ್ತಿ. ಕ್ರೋಮೈಟ್ ಕೆಲವು ದೇಶಗಳಲ್ಲಿ ಮಾತ್ರ ದೊರೆಯುತ್ತದೆ. ಉಕ್ಕಿನ ಕೈಗಾರಿಕೆಯಲ್ಲಿ ಕ್ರೋಮಿಯಂ ತೀರ ಅಗತ್ಯವಾದ ಲೋಹವಾಗಿರುವುದರಿಂದ ಕ್ರೋಮೈಟ್ ಅದುರಿಗೆ ಪ್ರಮುಖ ಸ್ಥಾನ ಬಂದಿದೆ. ಯುದ್ಧಕಾಲದಲ್ಲಿ ಅದಕ್ಕೆ ಪ್ರಾಮುಖ್ಯ ಹೆಚ್ಚು.. ಉಕ್ಕಿನ ತಯಾರಿಕೆಯಲ್ಲಿ ಬಹಳ ಮುಂದುವರಿದಿರುವ ಅಮೆರಿಕ, ಜಪಾನ್ ದೇಶಗಳಲ್ಲಿ ಕ್ರೋಮೈಟ್ ಅದಿರು ದೊರೆಯುವುದಿಲ್ಲವಾದ್ದರಿಂದ ಅವು ಆಫ್ರಿಕ, ಟರ್ಕಿ, ಫಿಲಿಪೀನ್ಸ್, ಭಾರತ ಮೊದಲಾದ ದೇಶಗಳಿಂದ ತಮಗೆ ಬೇಕಾಗುವ ಕ್ರೋಮೈಟನ್ನು ಆಮದು ಮಾಡಿಕೊಳ್ಳುತ್ತವೆ. ಪ್ರಕೃತ ಪ್ರಪಂಚದ ಸರಾಸರಿ ವಾರ್ಷಿಕ ಉತ್ಪನ್ನ 40 ಲಕ್ಷ ಟನ್ ಕ್ರೋಮೈಟ್ ಅದಿರು. ಭಾರತ ವರ್ಷವೊಂದರಲ್ಲಿ ಸುಮಾರು 60000 ಟನ್ನು ಕ್ರೋಮೈಟನ್ನು ಉತ್ಪಾದನೆ ಮಾಡುತ್ತಿದೆ. ಇದರಲ್ಲಿ ಬಹು ಭಾಗ ಅಮೆರಿಕ, ಜಪಾನ್ ದೇಶಗಳಿಗೆ ರಫ್ತಾಗಿ ಹೋಗುವುದು. ಭಾರತದಲ್ಲಿ ಕ್ರೋಮೈಟಿನ ಮುಖ್ಯ ಆಕರಗಳು ಒರಿಸ್ಸ, ಬಿಹಾರ್ ಮತ್ತು ಕರ್ನಾಟಕಗಳಲ್ಲಿವೆ. ಮಹಾರಾಷ್ಟ್ರದಲ್ಲೂ ಸ್ವಲ್ಪಮಟ್ಟಿನ ಉತ್ಪಾದನೆ ಉಂಟು. ಕರ್ನಾಟಕದಲ್ಲಿ ಮೊದಲಬಾರಿಗೆ ಕ್ರೋಮೈಟ್ ದೊರೆತದ್ದು 1905ರಲ್ಲಿ. 1907ರಲ್ಲಿ ಇದನ್ನು ಉತ್ಪಾದನೆ ಮಾಡಲಾಯಿತು. ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣತಾಲ್ಲೂಕಿನ ಬೈರಾಪುರ, ಭಕ್ತರಹಳ್ಳಿ, ಚಿಕ್ಕೇನಹಳ್ಳಿ, ತಗಡೂರು ರಂಗನಬೆಟ್ಟ, ಮತ್ತು ಜಂಬೂರು ಗ್ರಾಮಗಳ ಬಳಿ ಮುಖ್ಯವಾದ ಗಣಿಗಳಿವೆ. ಮೈಸೂರು ನಗರಕ್ಕೆ 10 ಕಿಮೀ ದೂರದಲ್ಲಿರುವ ಸಿಂಧುವಳ್ಳಿ, ತಳೂರು, ಉದ್ದೂರು ಗ್ರಾಮಗಳ ಬಳಿಯೂ ಹಿಂದೆ ವಿಶೇಷವಾಗಿ ಕ್ರೋಮೈಟನ್ನು ತೆಗೆದು ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಈಗ ಈ ಗಣಿಗಳಲ್ಲಿ ಕೆಲಸ ನಿಂತುಹೋಗಿದೆ.

ಕ್ರೋಮೈಟಿಗಾಗಿ ಮೊದಲು ಕೆಲಸ ನಡೆದದ್ದು ಸಿಂಧುವಳ್ಳಿಯಲ್ಲಿ. 1907ರಿಂದ 1915ರ ತನಕ 12,186 ಟನ್ನುಗಳನ್ನು ಇಲ್ಲಿಯ ಗಣಿಗಳಿಂದ ತೆಗೆಯಲಾಯಿತು. 1917ರಿಂದೀಚೆಗೆ ಹಾಸನ ಜಿಲ್ಲೆಯಲ್ಲಿಯ ಮುಖ್ಯವಾಗಿ ಬೈರಾಪುರ, ಭಕ್ತರಹಳ್ಳಿ, ಜಂಬೂರು ಗಣಿಗಳ ಉತ್ಪಾದನೆ ಹೆಚ್ಚಾಯಿತು. 1922ರಿಂದ 1930ರ ತನಕ ಸರಾಸರಿ ಉತ್ಪನ್ನ 20,000 ದಿಂದ ಹಿಡಿದು 30,000 ಟನ್ ತನಕ ಏರಿತು. 1955ರಿಂದೀಚೆಗೆ ಉತ್ಪಾದನೆ ಬಹಳಮಟ್ಟಿಗೆ ಬಿದ್ದುಹೋಗಿದೆ. ಮತ್ತೆ 1968ರಿಂದ ಉತ್ಪಾದನೆ ಹೆಚ್ಚಿದಂತೆ ತೋರುವುದು. ಬೈರಾಪುರದ ಗಣಿ ಅಭಿವೃದ್ಧಿಯ ಕಾರ್ಯಕ್ರಮವನ್ನು ಹಾಕಿಕೊಂಡಿದೆ. (ಬಿ.ಪಿ.ಆರ್)

**ಕ್ರೋಮೋಫೋರ್ :** ವರ್ಣಯುಕ್ತ ಸಂಯುಕ್ತವೊಂದರಲ್ಲಿ ಬಣ್ಣಕ್ಕೆ ಕಾರಣವಾದ ಪರಮಾಣು ಪುಂಜ. ನಿರ್ದಿಷ್ಟ ಬಣ್ಣಕ್ಕೆ ಪೂರ್ಣ ಸಂಯುಕ್ತ ರಚನೆ ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದಾದರೂ ಬಹುಮಟ್ಟಿಗೆ ಕ್ರೋಮೋಫೋರ್ ಪುಂಜವೇ ಕಾರಣ.

4,000Å– 8,000Å ಅಲೆಯುದ್ದದ (ವೇವ್ ಲೆಂತ್) ವಿಸರಣೆಗಳ ಮಿಶ್ರಣವಾದ ಬಿಳಿಯ ಬೆಳಕಿನಿಂದ ವಿವಿಧ ಅಲೆಯುದ್ದದ ವಿಸರಣ ಭಾಗ ಸಂಯುಕ್ತ ಅಣುಗಳಿಂದ ಹೀರಲ್ಪಟ್ಟಾಗ ಉಳಿದ ವಿಸರಣ ಭಾಗ ತನ್ನ ಅಲೆಯುದ್ದಗಳಿಗೆ ಅನುಸಾರವಾದ ಬಣ್ಣ ತಳೆದು ಪ್ರತಿಫಲನಗೊಳ್ಳುವುದರಿಂದ ಸಂಯುಕ್ತಬಣ್ಣದಿಂದ ಕೂಡಿದಂತೆ ಕಾಣುತ್ತದೆ. ಬೆಳಕಿನ ಪರಿಮಿತಿಯನ್ನುಳಿದು ಅತಿರಕ್ತ ಮತ್ತು ಅತಿನೇರಿಳೆ ಪ್ರದೇಶಗಳಲ್ಲಿಯ ಅಲೆಯುದ್ದಗಳ ವಿಸರಣೆಗಳನ್ನು ಹೀರಿಕೊಳ್ಳುವ ಸಂಯುಕ್ತಗಳಲ್ಲಿಯೂ ಕ್ರೋಮೋಫೋರುಗಳಿದ್ದರೂ ಇವು ಕಣ್ಣಿಗೆ ಕಾಣುವ ಬಣ್ಣಗಳನ್ನು ತಳೆಯುವುದಿಲ್ಲ.

ಮನುಷ್ಯನ ಕಣ್ಣಿಗೆ ಕಾಣುವ ಬಣ್ಣಗಳಿಗೆ ಕಾರಣವಾದ ಕ್ರೋಮೋಫೋರುಗಳು ಅಸಂತೃಪ್ತ (ಅನ್‌ಸ್ಯಾಚುರೇಟೆಡ್) ಬಂಧಗಳನ್ನುಳ್ಳ N=N, N=O, C≡C, C=S, C=C ಗಳಂಥ ಪುಂಜಗಳು. ಹೀರಲ್ಪಡುವ ವಿಸರಣೆಯ ಅಲೆಯುದ್ದ ಮತ್ತು ತೀವ್ರತೆ ಅಸಂತೃಪ್ತ ಬಂಧಗಳಲ್ಲಿಯ π ವಿದ್ಯುತ್ಕಣಗಳ ಮುಕ್ತತೆ (ಫ್ರೀಡಂ) ಮತ್ತು ವ್ಯಾಪ್ತಿಗಳನ್ನು ಅವಲಂಬಿಸಿದೆ. ಎರಡು ಅಥವಾ ಹೆಚ್ಚು ಅಸಂತೃಪ್ತ ಬಂಧಗಳು ಪರಸ್ಪರ ಸಂಯುಗ್ಮವಾಗಿದ್ದರೆ (ಕಾಂಜ್ಯುಗೇಟೆಡ್) ಅವುಗಳಲ್ಲಿಯ π ವಿದ್ಯುತ್ಕಣಗಳ ಮುಕ್ತತೆ ಮತ್ತು ವ್ಯಾಪ್ತಿಗಳಲ್ಲಿ ವ್ಯತ್ಯಾಸವಾಗಿ ಬಣ್ಣ ಹೀರುವಿಕೆಯ ಗುಣದಲ್ಲಿ ಮಾರ್ಪಾಡಾಗಿ ಹೀರಿಕೊಳ್ಳಲಾಗುವ ವಿಸರಣೆಯ ಅಲೆಯುದ್ದ ತೀವ್ರತೆಗಳು ಭಿನ್ನವಾಗಿ ಸಂಯುಕ್ತ ಪ್ರತಿಫಲಿಸುವ ಬಣ್ಣದಲ್ಲಿ ವ್ಯತ್ಯಾಸವಾಗುತ್ತದೆ. ಅನಿರ್ಬಂಧ ರ್‍ಯಾಡಿಕಲುಗಳಲ್ಲಿನ ಮುಕ್ತ ವಿದ್ಯುತ್ಕಣವೂ ಅಸಂತೃಪ್ತ ಬಂಧಗಳಿಗೆ ಸಂಯುಗ್ಮವಾಗಿದ್ದರೆ ಕ್ರೋಮೋಫೋರಿನ ಗುಣದ ಮೇಲೆ ಪ್ರಭಾವ ಬೀರುತ್ತದೆ. (ಕೆ.ಟಿ.ಎಸ್.)

**ಕ್ರೋಮೊಸೋಮುಗಳು :** ಪ್ರತಿಯೊಂದು ಜೀವಿಯ ಜೀವಕೋಶದಲ್ಲಿಯ ನ್ಯೂಕ್ಲಿಯಸಿನ ಬಹು ಮುಖ್ಯ ಭಾಗಗಳು. ಸಂಕೀರ್ಣ ರಚನಾವ್ಯವಸ್ಥೆಯುಳ್ಳ ದಾರದಂತೆ ಕಾಣುವ ರಚನೆಗಳಿವು. ಆನುವಂಶೀಯ ಘಟಕಗಳು (ಜೀನ್‌ಗಳು) ಇವುಗಳ ಮೇಲೆ ಸಾಲುಜೋಡಣೆಯಲ್ಲಿ ವ್ಯವಸ್ಥಿತವಾಗಿವೆ. ರಾಸಾಯನಿಕವಾಗಿ ಡೀಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ, ಹಿಸ್ಟೋನ್‌ಗಳೆಂಬ ಪ್ರೋಟೀನುಗಳು ಹಾಗೂ ಕೊಂಚ ರೈಬೊನ್ಯೂಕ್ಲಿಯಿಕ್ ಆಮ್ಲ ಮತ್ತು ಸಂಕೀರ್ಣ ಬಗೆಯ ಪ್ರೋಟೀನುಗಳನ್ನೊಳಗೊಂಡಿವೆ. ಸೂಕ್ಷ್ಮದರ್ಶಕ ವೀಕ್ಷಣೆಗಳಿಗೆ ಅಂಗಾಂಶ ಅಥವಾ ಅಂಗಗಳ ತೆಳುಸೀಳಿಕೆಗಳನ್ನು ವರ್ಣೀಕರಿಸಿದಾಗ ಇವು ಬಣ್ಣವನ್ನು ಹೆಚ್ಚಾಗಿ ಗ್ರಹಿಸುವುದರಿಂದ ಇವಕ್ಕೆ ಈ ಹೆಸರು ಬಂದಿದೆ. ಟ್ರಾಡಿಸ್ಕಾನ್ಷಿಯ ಗಿಡಗಳ ಪರಾಗ ಮಾತೃಜೀವಕೋಶಗಳನ್ನು ಅಭ್ಯಾಸ ಮಾಡುತ್ತಿದ್ದ ಹಾಫ್‌ಮಿಸ್ಟರ್ ಈ ರಚನೆಗಳನ್ನು ಮೊದಲು ಕಂಡ (1884). ಇವಕ್ಕೆ ಕ್ರೋಮೊಸೋಮುಗಳೆಂಬ ಹೆಸರನ್ನು ಕೊಟ್ಟ ಗೌರವ ವಾಲ್ಡೆಯರ್‌ಗೆ ಸಲ್ಲುತ್ತದೆ.

ಕ್ರೋಮೋಸೋಮುಗಳು ಜೀವಕೋಶ ವಿಭಜನೆಯ ಕಾಲದಲ್ಲಿ ಮಾತ್ರ ಗೋಚರಿಸುತ್ತವೆ. ಆದ್ದರಿಂದ ಇವುಗಳ ಅಭ್ಯಾಸಕ್ಕೆ ವಿಭಜನೆಯಾಗುವ ಜೀವಕೋಶಗಳೇ ಉತ್ತಮ. ವಿಭಜನೆಯ ಮೆಟಫೇಸ್ ಮತ್ತು ಅನಫೇಸ್ ಹಂತಗಳಲ್ಲಿ ಇವುಗಳ ರಚನೆ ಸ್ಪಷ್ಟವಾಗಿ ಕಾಣುತ್ತದೆ. ಸಾಮಾನ್ಯವಾಗಿ ವಿಭಜನೆಯ ಕಾಲದಲ್ಲಿ ಕ್ರೋಮೊಸೋಮುಗಳು ದ್ವಿಪ್ರತಿಯಾಗುತ್ತವೆ. ಹೀಗೆ ಉತ್ಪತ್ತಿಯಾದ ಪ್ರತಿರಚನೆಗಳು ಪ್ರತ್ಯೇಕಗೊಳ್ಳುವವರೆಗೆ ಇವನ್ನು ಕ್ರೊಮ್ಯಾಟಿಡ್‌ಗಳೆಂದು ಕರೆಯುತ್ತಾರೆ. ಕ್ರೊಮ್ಯಾಟಿಡ್‌ಗಳಲ್ಲೂ ಸೂಕ್ಷ್ಮವಾದ ಉಪಘಟಕಗಳಿವೆಯೆಂದು ತಿಳಿಯಲಾಗಿದ್ದರೂ ಇವುಗಳ ಇರವು ಮತ್ತು ಸಂಖ್ಯೆಗಳ ಬಗ್ಗೆ ವಾದವಿವಾದ ನಡೆದೇ ಇದೆ.

ಕ್ರೋಮೊಸೋಮಿನ ಸ್ಥೂಲ ರಚನೆಯನ್ನು ಪರಿಶೀಲಿಸಿದರೆ ಈ ಮುಂದಿನ ರಚನೆಗಳನ್ನು ಕಾಣಬಹುದು. ಒಂದೊಂದು ಕ್ರೊಮ್ಯಾಟಿಡ್‌ನಲ್ಲಿಯೂ ಕ್ರೋಮೊನಿಮೇಟಗಳೆಂಬ ಎರಡು ಉಪಘಟಕಗಳಿರುತ್ತವೆ. ಇದರ ಸುತ್ತಲೂ

ಮಾತೃಕೆ (ಮ್ಯಾಟ್ರಿಕ್ಸ್) ಎಂಬ ವಸ್ತುವಿದೆ. ಇವಿಷ್ಟನ್ನು ಆವರಿಸಿದಂತೆ ಪೆಲಿಕಲ್ ಹೊದಿಕೆಯುಂಟು.

ಒಂದೊಂದು ಕ್ರೋಮೊಸೋಮಿನಲ್ಲಿಯೂ ಸಾಮಾನ್ಯವಾಗಿ ಎರಡು ಬಾಹುಗಳಿವೆ. ಬಾಹುಗಳು ಕೂಡುವ ಭಾಗ ಸಂಪೀಡಿತವಾದಂತೆ (ಕನ್ಸ್ಟ್ರಿಕ್ಟೆಡ್) ಕಾಣಬರುತ್ತದೆ. ಇದೇ ಪ್ರಾಥಮಿಕ ಸಂಪೀಡನ (ಪ್ರೈಮರಿ ಕನ್ಸ್ಟ್ರಿಕ್ಷನ್) ಅಥವಾ ಸೆಂಟ್ರೋಮಿಯರ್ ಅಥವಾ ಕೈನೋಕೋರ್. ಕ್ರೋಮೊಸೋಮಿನ ಈ ಭಾಗ ಉಳಿದ ಭಾಗಗಳಂತಲ್ಲದೆ ಬಣ್ಣವನ್ನು ಗ್ರಹಿಸುವುದಿಲ್ಲ. ಕ್ರೋಮೊಸೋಮಿನಲ್ಲಿ ಸೆಂಟ್ರೋಮಿಯರ್ ಇರುವ ಸ್ಥಾನವನ್ನನುಸರಿಸಿ ಕ್ರೋಮೊಸೋಮುಗಳ ಆಕಾರ ಬದಲಾಗುತ್ತದೆ. ಮೆಟಾಫೇಸ್ ಹಂತದಲ್ಲಿ ಕ್ರೋಮೊಸೋಮುಗಳು ಸೆಂಟ್ರೋಮಿಯರ್ ಭಾಗದಲ್ಲಿ ಬಾಗುವುದರಿಂದ ಆಕಾರಗಳು ಸ್ಪಷ್ಟವಾಗುತ್ತವೆ.ಅನಾಫೇಸ್ ಹಂತದಲ್ಲಿ ವಿಭಜನಾಕದಿರಿನ ಮೇಲೆ ಕ್ರೋಮೊಸೋಮುಗಳು ಚಲಿಸುವುದಕ್ಕೂ ಈ ಸೆಂಟ್ರೋಮಿಯರ್‌ಗೂ ನೇರವಾದ ಸಂಬಂಧವಿದೆ. ಸಾಮಾನ್ಯವಾಗಿ ಪ್ರತಿಯೊಂದು ಕ್ರೋಮೋಸೋಮಿನಲ್ಲಿಯೂ ಒಂದು ಸೆಂಟ್ರೋಮಿಯರ್ ಇರುತ್ತದೆ. ಇಂಥ ಕ್ರೋಮೋಸೋಮನ್ನು ಏಕಕೇಂದ್ರಕ (ಮಾನೋಸೆಂಟ್ರಿಕ್) ಎಂದು ಕರೆಯುತ್ತಾರೆ. ಅಪರೂಪವಾಗಿ ಎರಡು (ದ್ವಿಕೇಂದ್ರಕ–ಡೈಸೆಂಟ್ರಿಕ್) ಅಥವಾ ಬಹು ಸೆಂಟ್ರೋಮಿಯರುಗಳಿರಬಹುದು (ಪಾಲಿಸೆಂಟ್ರಿಕ್). ಕೆಲವೊಮ್ಮೆ ಈ ಸೆಂಟ್ರೋಮಿಯರ್ ಒಂದೇ ಕಡೆ ಕೇಂದ್ರೀಕೃತವಾಗಿರದೆ ಕ್ರೋಮೋಸೋಮಿನ ಉದ್ದಕ್ಕೂ ಹರಡಿರಬಹುದು (ಡಿಫ್ಯೂಸ್)– ಉದಾಹರಣೆಗೆ ಹೆಮಿಪ್ಟರ ಗಣದ ಕೀಟಗಳು, ಆಸ್ಕಾರಿಸ್ ಮೆಗಲೋಕೆಫಾಲ(ಜಂತುಹುಳು), ಲುಜುಲ ಎಂಬ ಸಸ್ಯ.



ಚಿತ್ರ 1 ಕ್ರೋಮೊಸೋಮಿನ ಸ್ಥೂಲ ರಚನೆ: 1 ಪ್ರಾಥಮಿಕ ಸಂಪೀಡನ, 2 ಕ್ರೋಮೊನಿ ಮೇಟ, 3 ಮಾತೃಕೆ, 4 ಪೆಲಿಕಲ್

ಸೆಂಟ್ರೋಮಿಯರ್ ಸ್ಥಾನವನ್ನವಲಂಬಿಸಿ ಕ್ರೋಮೋಸೋಮಿನ ಆಕಾರ ಬದಲಾಗುತ್ತದೆ ಎಂದು ಹಿಂದೆಯೇ ತಿಳಿಸಿದೆ. ಇವು ಸರಳ L ಅಥವಾ V ಆಕಾರ ತಾಳಬಹುದು. ಇವೇ ಕ್ರಮವಾಗಿ ಆಕ್ರೋಸೆಂಟ್ರಿಕ್, ಸಬ್ ಮೆಟಾಸೆಂಟ್ರಿಕ್ ಮತ್ತು ಮೆಟಾಸೆಂಟ್ರಿಕ್ ಕ್ರೋಮೋಸೋಮುಗಳು. ಆಕ್ರೋಸೆಂಟ್ರಿಕ್ ಕ್ರೋಮೋಸೋಮಿನಲ್ಲಿ ಒಂದು ಬಾಹು ಇನ್ನೊಂದಕ್ಕಿಂತ ಬಲು ಉದ್ದ. ಮತ್ತೊಂದು ಸೆಂಟ್ರೋಮಿಯರ್ ಒಂದು ತುದಿಗಿಂತ ಸ್ವಲ್ಪ ಹಿಂದಿದೆ. ಸಬ್‌ಮೆಟಾಸೆಂಟ್ರಿಕ್ ಕ್ರೋಮೋಸೋಮಿನಲ್ಲಿ ಬಾಹುಗಳು ಉದ್ದದಲ್ಲಿ ಅಸಮ ಮತ್ತು ಸೆಂಟ್ರೋಮಿಯರ್ ಸ್ಪಷ್ಟವಾಗಿ ನಡುಭಾಗದಲ್ಲಿರದೆ ಸ್ವಲ್ಪ ಅತ್ತಿತ್ತ ಇರುತ್ತದೆ. ಮೆಟಾಸೆಂಟ್ರಿಕ್ ಕ್ರೋಮೋಸೋಮಿನಲ್ಲಿ ಬಾಹುಗಳೆರಡೂ ಸಮವಾಗಿದ್ದು ಸೆಂಟ್ರೋಮಿಯರ್ ನಟ್ಟನಡುವಿನಲ್ಲಿರುತ್ತದೆ.

ಚಿತ್ರ 2 ಕ್ರೋಮೊಸೋಮಿನ ಆಕಾರ : 1 ಸರಳ, 2 L –ಆಕಾರ, 3 V–ಆಕಾರ

ಸೆಂಟ್ರೋಮಿಯರ್ ಕೂಡ ಒಂದು ಜಟಿಲವಾದ ರಚನೆ. ಇದರ ರಚನೆಯ ಬಗೆಗೆ ಅನೇಕ ವಿವರಣೆಗಳಿವೆ. ಲಿಮಾಡಿಫೆರಿಯಾ ಎಂಬಾತ ಕೊಟ್ಟ ವಿವರಣೆ ಹೆಚ್ಚು ಸಮಂಜಸವಾಗಿ ತೋರುತ್ತದೆ.

ಒಂದು ಕ್ರೋಮೊಸೋಮಿನಲ್ಲಿ ಪ್ರಥಮ ಸಂಪೀಡನದ ಜೊತೆಗೆ ದ್ವಿತೀಯಕ ಸಂಪೀಡನ ಗಳು (ಸೆಕೆಂಡರಿ ಕನ್ಸ್ಟ್ರಿಕ್ಷನ್ಸ್) ಇರಬಹುದು. ಕೆಲವೊಮ್ಮೆ ದ್ವಿತೀಯಕ ಸಂಪೀಡನಗಳು ಒಂದು ತುದಿಯಲ್ಲಿದ್ದು ಅದಕ್ಕೆ ಅಂಟಿಕೊಂಡಂತೆ ಒಂದು ಪುಟ್ಟ ಕ್ರೋಮೊಸೋಮು ಖಂಡ ಇರಬಹುದು.

ಈ ಖಂಡಕ್ಕೆ ಸ್ಯಾಟಿಲೈಟ್ ಎಂದು ಹೆಸರು. ಇದನ್ನುಳ್ಳ ಕ್ರೋಮೊಸೋಮಿಗೆ ಸ್ಯಾಟ್ ಕ್ರೋಮೊಸೋಮ್ ಎಂದು ಹೆಸರು. ದ್ವಿತೀಯಕ ಸಂಪೀಡನೆ ನ್ಯೂಕ್ಲಿಯೋಲಸ್‌ಗಳನ್ನು



ಚಿತ್ರ 3 ಕ್ರೊಮೊಸೋಮಿನ ಬಗೆಗಳು : 1 ಆಕ್ರೊಸೆಂಟ್ರಿಕ್, 2 ಸಬ್ ಮೆಟಸೆಂಟ್ರಿಕ್ 3 ಮೆಟಸೆಂಟ್ರಿಕ್

ಸಂಘಟಿಸುವುದರಿಂದ ಇದಕ್ಕೆ ನ್ಯೂಕ್ಲಿಯೋಲಸಿನ ಸಂಘಟಕ ಎಂಬ ಹೆಸರಿದೆ.

ಕ್ರೋಮೊಸೋಮಿನ ಬಿಡಿಯಾದ ಎರಡು ತುದಿಗಳಿಗೆ ಟಿಲೋಮಿಯರ್‌ಗಳೆಂದು ಹೆಸರು. ಈ ಪದವನ್ನು ಮುಲ್ಲರ್ ಎಂಬಾತ ಬಳಸಿದ(1940). ಟಿಲೋಮಿಯರಿಗೂ



ಚಿತ್ರ 4 ಸೆಂಟ್ರೊಮಿಯರಿನ ರಚನೆ : 1 ಕ್ರೊಮ್ಯಾಟಿಡ್, 2 ಸೆಂಟ್ರೊಮಿಯರ್

ವಿಶೇಷ ಲಕ್ಷಣಗಳಿರುವುದನ್ನು ಜಾನ್ ಮತ್ತು ಲೂಯಿಸ್(1965) ತಿಳಿಸಿದ್ದಾರೆ. ಟಿಲೋಮಿಯರ್ ಭಾಗವನ್ನು ಪ್ರಾಯೋಗಿಕವಾಗಿ ಕ್ರೋಮೊಸೋಮಿನ ಯಾವ ಭಾಗಕ್ಕೂ ಸ್ಥಳಾಂತರಿಸುವುದು ಸಾಧ್ಯವಿಲ್ಲ. ಕೋಶ ವಿಭಜನೆ ನಡೆಯುವ ಕಾಲದಲ್ಲಿ ಕಾರಣಾಂತರದಿಂದ ಟಿಲೋಮಿಯರ್



ಚಿತ್ರ 5 ಮೆಟಸೆಂಟ್ರಿಕ್ ಕ್ರೋಮೋಸೋಮಿನ ವಿವರಗಳು : 1 ದ್ವಿತೀಯಕ ಸಂಪೀಡನ, 2 ಸ್ಯಾಟಲೈಟ್, 3 ಕ್ರೋಮೋನಿಮೇಟ, 4. ಸೆಂಟ್ರೊಮಿಯರ್

ಕಳೆದುಹೋದರೆ ಕ್ರೋಮೊಸೋಮಿನ ವರ್ತನೆಯ ಮೇಲೆ ಮಹತ್ಪರಿಣಾಮ ಉಂಟಾಗಬಹುದು. ಒಂದು ಕ್ರೋಮೊಸೋಮ್ ಪರಿಪೂರ್ಣವಾಗಬೇಕಾದರೆ, ಅದು ತನ್ನ ಸ್ವಾಭಾವಿಕತೆಯನ್ನು ಉಳಿಸಿಕೊಂಡು ತನ್ನ ನಿಯಮಿತ ಕೆಲಸವನ್ನು ನಿರ್ವಹಿಸಬೇಕಾದರೆ, ಅದರಲ್ಲಿ ಒಂದು ಸೆಂಟ್ರೋಮಿಯರ್ ಮತ್ತು ಎರಡು ಟಿಲೋಮಿಯರ್‌ಗಳು ಕಡ್ಡಾಯವಾಗಿ ಇರಲೇಬೇಕು. ಟಿಲೋಮಿಯರಿನಲ್ಲಿ ಪ್ರೋಟಿಲೋಮಿಯರ್ ಮತ್ತು ಯೂಟಿಲೋಮಿಯರ್ ಎಂಬ ಎರಡು ಪ್ರತ್ಯೇಕ ಭಾಗಗಳಿರುವ ವರದಿಗಳಿವೆ. ಇದು ಕ್ರೋಮೊಸೋಮಿನ ಅಂತ್ಯವಾದರೂ ಕ್ರೋಮೊನಿಮೇಟಗಳು ಇಲ್ಲಿ ಅಂತ್ಯವಾಗದೆ ಮಡಿಚಿಕೊಂಡಿವೆ. ಟಿಲೋಮಿಯರಿನ ಭಾಗಾಂಶಗಳೆಲ್ಲಕ್ಕೂ ಏಕಧ್ರುವತೆಯ ಮುಖ್ಯ ಲಕ್ಷಣಗಳು ಇವೆ.

ಕ್ರೋಮೊಸೋಮಿನ ವಸ್ತುವನ್ನು ಕ್ರೊಮ್ಯಾಟಿನ ಎಂದು ಕರೆಯುತ್ತಾರೆ. ಇದನ್ನು ಯುಕ್ರೊಮ್ಯಾಟಿನ್ ಮತ್ತು ಹೆಟರೋಕ್ರೊಮ್ಯಾಟಿನ್‌ಗಳೆಂದು ವಿಂಗಡಿಸಬಹುದು. ಯುಕ್ರೊಮ್ಯಾಟಿನ್ ಭಾಗ ಸಾಮಾನ್ಯವಾಗಿ ಕೋಶವಿಭಜನೆಯ ಕಾಲದಲ್ಲಿ ಮಾತ್ರ ವರ್ಣ ಗ್ರಹಿಸುವ ಗುಣವನ್ನು ಪ್ರದರ್ಶಿಸುತ್ತದೆ. ಕೋಶದ ಅಂತರಾವಸ್ಥೆಯಲ್ಲಿ ಈ ಗುಣ ಇಲ್ಲ. ಯುಕ್ರೋಮ್ಯಾಟಿನ ಭಾಗದಲ್ಲಿಯೇ ಜೀನ್‌ಗಳಿವೆ ಎಂಬುದು ಸಾಮಾನ್ಯಭಾವನೆ. ಜೊಲ್ಲು ಗ್ರಂಥಿ ಕ್ರೋಮೊಸೋಮುಗಳಲ್ಲಿ ಪಟ್ಟಿಗಳಾಗಿ ಕಾಣಿಸಿಕೊಳ್ಳುವುದು ಈ ಭಾಗವೇ. ವಿಭಜನೆಯ ಕಾಲದಲ್ಲಿ ಮಿಕ್ಕೆಲ್ಲ ಕ್ರೊಮ್ಯಾಟಿನ ಭಾಗ ಬಣ್ಣ ಗ್ರಹಿಸಿ ಸ್ಪಷ್ಟವಾಗಿ ಕಾಣಿಸಿಕೊಳ್ಳುವಾಗ ಕೆಲವು ಭಾಗಗಳು (ಅಥವಾ ಕೆಲವು ಕ್ರೋಮೊಸೋಮು ಗಳು) ಬಣ್ಣ ಗ್ರಹಿಸದೆ ಅಸ್ಪಷ್ಟ ವಾಗಿದ್ದು, ಭಿನ್ನ ಗುಣವನ್ನು ಪ್ರದರ್ಶಿಸಬಹುದು. ಕ್ರೋಮೊಸೋಮಿನ ಉಳಿದ ಭಾಗಗಳು ಅಥವಾ ಕೆಲವು ಕ್ರೋಮೊಸೋಮುಗಳು ಕಾಣಿಸಿಕೊಳ್ಳದಿರುವ ಅಂತರಾವಸ್ಥೆಯಲ್ಲಿ ಇವು ಬಣ್ಣ ಗ್ರಹಿಸಿ ಇವು ಗೋಚರವಾಗಬಹುದು. ಹೀಗೆ ಭಿನ್ನ ವರ್ತನೆಯನ್ನು ಪ್ರದರ್ಶಿಸುವ ಭಾಗಕ್ಕೆ ಹೆಟರೋಕ್ರೊಮ್ಯಾಟಿನ್ ಎಂದು ಹೆಸರು. ಸಾಮಾನ್ಯವಾಗಿ ಲಿಂಗ ಕ್ರೋಮೋಸೋಮುಗಳು ಹೆಟರೋಕ್ರೊಮ್ಯಾಟಿನ್‌ಗಳು. ಈ ವರ್ತನೆಯನ್ನು ಪ್ರದರ್ಶಿಸುವ ಗುಣವೇ ಹೆಟರೊಪಿಕ್ನಾಸಿಸ್. ಕೆಲವೊಮ್ಮೆ ಹೆಟರೋಪಿಕ್ನಾಸಿಸ್‌ನಲ್ಲಿ ಧನ ಮತ್ತು ಋಣ ಎಂಬ ಎರಡು ಬಗೆಗಳನ್ನು ಗುರುತಿಸಬಹುದು. ಯುಕ್ರೊಮ್ಯಾಟಿನ್ ಭಾಗ ಸ್ವಾಭಾವಿಕವಾದ ಸುರುಳಿ ಆವರ್ತವನ್ನು ತೋರುತ್ತದೆ. ಇದರಲ್ಲಿ ಕ್ರೊಮೋನಿಮಕಗಳು ಅಡಕವಾಗಿ ಬಿಗಿ ಸುರುಳಿಗಳನ್ನು ಹೊಂದಿರುತ್ತವೆ. ಹೆಟರೊಕ್ರೊಮ್ಯಾಟಿನ್ ಭಾಗದಲ್ಲಿ ಸುರುಳಿಗಳು ಸಡಿಲವಾಗಿವೆ ಎಂಬ ಭಾವನೆ ಇತ್ತು. ಆದರೆ ಈಗ ಇದೊಂದು ರಾಸಾಯನಿಕ ವ್ಯತ್ಯಾಸ ಎಂದು ತಿಳಿದುಬಂದಿದೆ. ಗಸಿ ಪ್ರೋಟೀನು, ಒಟ್ಟು ಫಾಸ್ಫೋಲಿಪಿಡ್ ಮತ್ತು ಒಟ್ಟು ಆರ್.ಎನ್.ಎ. ಅಂಶಗಳು ಹೆಟರೋಕ್ರೊಮ್ಯಾಟಿನ್ ಭಾಗದಲ್ಲಿ ಬಹಳ ಕಡಿಮೆ ಇವೆ. ಈ ಭಾಗ ಆನುವಂಶೀಯವಾಗಿ ಜಡ ಎಂಬ ಭಾವನೆಯೂ ಉಂಟು.

ಸಂಖ್ಯಾಕ್ಷೀಣ (ಮಯಾಸಿಸ್) ವಿಭಜನೆಯ ಪ್ರೊಫೇಸ್ ಹಂತದಲ್ಲಿ ಕ್ರೋಮೊಸೋಮುಗಳಲ್ಲಿ ಪರ್ಯಾಯವಾಗಿ ಜೋಡಿಸಿದ ದಪ್ಪ ಮತ್ತು ತೆಳುಭಾಗಗಳು ಕಾಣಿಸಿಕೊಳ್ಳುತ್ತವೆ. ಇದರಿಂದಾಗಿ ಮಣಿಗಳನ್ನು ಪೋಣಿಸಿದ ಸರದಂತೆ ಇವು ಕಾಣಬರುತ್ತವೆ. ಮಣಿಗಳಂತಿರುವ ರಚನೆಗಳಿಗೆ ಕ್ರೋಮೊಮಿಯರ್‌ಗಳ ಸಂಖ್ಯೆ ಮತ್ತು ಸ್ಥಾನ ಬಹಳ ನಿಖರವಾದದ್ದು. ಕ್ರೋಮೊಮಿಯರ್‌ಗಳ ರಚನೆ ವಾದಗ್ರಸ್ತ ವಿಷಯ. ನ್ಯೂಕ್ಲಿಯಿಕ್ ಪ್ರೋಟೀನಿನ ಕ್ರೋಡೀಕೃತ ರಚನೆಗಳಿವೆ ಎಂಬ ವಿವರಣೆಯನ್ನು ಇವು ಸೂಚಿಸುತ್ತವೆ. ಈ ವಿವರಣೆಗಳಿಗೆ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ವೀಕ್ಷಣಾ ಫಲಿತಾಂಶಗಳು ಪುಷ್ಟಿಕೊಡುತ್ತವೆ. ಪ್ರೊಫೇಸ್ ಹಂತ ಮುಂದುವರಿದು ಕ್ರೋಮೊಸೋಮುಗಳು ಹೆಚ್ಚು ದಪ್ಪವಾಗಿ ಮತ್ತು ಮೋಟಾಗಿ ಕಾಣಿಸಿಕೊಂಡಂತೆ ಕ್ರೋಮೊಮಿಯರುಗಳ ಸಂಖ್ಯೆಯೂ ಕಡಿಮೆಯಾಗುವಂತೆ ಕಾಣುತ್ತದೆ.

**ಕ್ರೋಮೊಸೋಮುಗಳ ಸೂಕ್ಷ್ಮಾತೀತ ರಚನೆ :** ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಕ್ರೋಮೊಸೋಮಿನ ಸೀಳಿಕೆಗಳನ್ನು ವೀಕ್ಷಿಸಿದಾಗ ಒಂದೊಂದರಲ್ಲೂ 200 $\mathring{A}$ ವ್ಯಾಸದ ಮೂಲ ಎಳೆಗಳಿರುವುದು ಕಾಣಬರುತ್ತವೆ. ಈ ಎಳೆಗಳು ಒಂದಕ್ಕೊಂದು ಹೊಸೆದುಕೊಂಡು ಕ್ರೋಮೊಸೋಮುಗಳು ರೂಪುಗೊಂಡಿವೆ ಎಂದು ಹ್ಯಾನ್ಸ್‌ರೀಸ್ ಅಭಿಪ್ರಾಯಪಡುತ್ತಾನೆ. ಡೂಪ್ರಾ ಎಂಬಾತ ಈ ಬಗ್ಗೆ ಅಭ್ಯಸಿಸಿ ರಿಸ್‌ನ ಅಭಿಪ್ರಾಯವನ್ನು ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾನೆ. ಕ್ರೋಮೊಸೋಮು ಉಪಘಟಕಗಳಾದ ಈ ಎಳೆಗಳ ಬಗೆಗೆ ಕೆಲವೊಂದು ಭಿನ್ನಭಿಪ್ರಾಯಗಳಿವೆ. ರಿಸ್ ಬಳಸಿದ ಅಭ್ಯಾಸ ವಸ್ತುಗಳಲ್ಲಿ ಕಜ್ಜಾಯ ಅಥವಾ ಕೋಡುಬಳೆಯಂತೆ ನಡುವೆ ಟೊಳ್ಳಿರುವ ತಂತುಗಳು ಕಾಣಬಂದುವು. ನಡುವಿನ ಟೊಳ್ಳುಭಾಗದಲ್ಲಿ ಡಿಎನ್‌ಎ ಇದೆಯೆಂದು ಸುತ್ತಲೂ ಪ್ರೋಟೀನಿನ ಆವರಣವಿದೆಯೆಂದು ರೀಸ್ ಅಭಿಪ್ರಾಯಪಟ್ಟ.. ಪ್ರತಿಯೊಂದು ಎಳೆಯ ಒಳಗಡೆ ಡಿಎನ್‌ಎ ಸುರುಳಿ ಅಡಗಿದೆ ಎನ್ನಲು ಸಾಕಷ್ಟು ಪುರಾವೆಗಳಿವೆ. ಈ ಎಳೆಗಳಲ್ಲಿ ಎ ಮತ್ತು ಬಿ ಮಾದರಿಯ ಎರಡು ರೀತಿಯ ಎಳೆಗಳಿವೆ. ಎ ಎಳೆಗಳು ದಟ್ಟವಾಗಿವೆ ಮತ್ತು ಇವುಗಳ ವ್ಯಾಸ 30–35 $\mathring{A}$, ಬಿ ಬಳೆಗಳು 200–300 $\mathring{A}$ ವ್ಯಾಸದವು. ಈ ಎಳೆಗಳು ಕ್ರೋಮೊಸೋಮಿನ ಸೆಂಟ್ರೊಮಿಯರ್ ಭಾಗದಲ್ಲಿಯೂ ಇವೆ. ಆದರೆ ಇಲ್ಲಿ ಎಳೆಗಳು ಹೆಚ್ಚು ಅಡಕವಾಗಿವೆ. ಸೆಂಟ್ರೋಮಿಯರ್ ಮೂಲಕ 5 ರಿಂದ 7 ಬಿ ಮಾದರಿಯ ತಂತುಗಳು ಕ್ರೋಮೊಸೋಮಿನ ಒಂದು ಬಾಹುವಿನಿಂದ ಇನ್ನೊಂದು ಬಾಹುವಿಗೆ ಹಾದುಹೋಗಿವೆ ಎಂದು ಡುಪ್ರಾ ಮತ್ತು ಬ್ರಾಹ್ ತಿಳಿಸಿದ್ದಾರೆ (1968). ಸೆಂಟ್ರೊಮಿಯರ್ ಭಾಗದಲ್ಲಿ ಕಪ್ಪು ಕಣ ಒಂದಿದೆ. ಇದು ಕ್ರೋಮೊಸೋಮನ್ನು ವಿಭಜನಾ ಕದಿರಿನ ನಳಿಕೆಗಳಿಗೆ ಅಂಟಿಸುವ ಸಿಮೆಂಟಿನಂತೆ ವರ್ತಿಸುತ್ತದೆ. ಟಿಲೋಮಿಯರ್ ಭಾಗದಲ್ಲಿ ಕುಣಿಕೆಯಂತೆ ಮಡಿಚಿಕೊಂಡಿರುವ ಎಳೆಗಳಿವೆ. ಹೆಟರೋಕ್ರೋಮ್ಯಾಟಿನ ಭಾಗದಲ್ಲಿಯೂ ಈ ಎಳೆಗಳಿವೆ.

ಭೌತರಾಸಾಯನಿಕ ವಿಧಾನ, ಎಕ್ಸ್–ಕಿರಣ ನಮನ(ಡಿಫ್ರಾಕ್ಷನ್) ತಂತ್ರ ಮತ್ತು ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ವೀಕ್ಷಣೆಗಳಿಂದ ಕ್ರೋಮೊಸೋಮುಗಳ ಅಣುವಿನ್ಯಾಸವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಗಳು ನಡೆದಿವೆ. ಕ್ರೋಮೊಸೋಮಿನ ಬಹುಭಾಗ ಡಿಎನ್‌ಎ ಯಿಂದಾಗಿದೆ ಎಂಬುದು ನಿರ್ವಿವಾದ. ಆದರೆ ಒಂದೇ ಡಿಎನ್‌ಎ ಸುರುಳಿ ಒಂದು ತುದಿಯಿಂದ ಇನ್ನೊಂದಕ್ಕೆ ಹರಡಿದೆಯೇ ಅಥವಾ ಇಲ್ಲವೇ ಎಂಬುದರ ಬಗೆಗೆ ಸ್ಪಷ್ಟವಾಗಿ ತಿಳಿಯದು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ವೀಕ್ಷಣೆಗಳಲ್ಲಿ 150 μ ಉದ್ದದ ಡಿಎನ್‌ಎ ಎಳೆಗಳನ್ನು ನೋಡಿದ್ದಾರೆ. ಡಿಎನ್‌ಎ ಎಳೆಗಳು ಸಂಸ್ಕರಣೆಯ (ಟ್ರೀಟ್‌ಮೆಂಟ್) ಕಾಲದಲ್ಲಿ ಬಹಳ ಸುಲಭವಾಗಿ ತುಂಡಾಗುವುದರಿಂದ 150 μ ಉದ್ದದ ಈ ಎಳೆಗಳು ಮೂಲ ಉದ್ದವನ್ನು ಸೂಚಿಸುತ್ತವೆಯೋ ಅಥವಾ ಸಂಸ್ಕರಣ ಪ್ರಭಾವದ ಪ್ರತಿಕ್ರಿಯೆಯನ್ನು ಸೂಚಿಸುತ್ತವೆಯೋ ಎಂದು ಹೇಳುವುದು ಕಷ್ಟ. ಸಮಾಂತರವಾಗಿ ಜೋಡಿಸಿದ ಅನೇಕ ಡಿಎನ್‌ಎ ಸುರುಳಿಗಳು ಸೇರಿ ಕ್ರೋಮೊಸೋಮ್ ಆಗುತ್ತದೆ ಎಂದು ಸೂಚಿಸುವ ದಾಖಲೆಗಳು ಇದ್ದರೂ ಒಂದು ಕ್ರೋಮೊಸೋಮಿನಲ್ಲಿ ಒಂದು ಡಿಎನ್‌ಎ ಎಳೆ ಇದೆಯೇ ಅಥವಾ ಹಲವಾರು ಎಳೆಗಳು ಕೂಡಿವೆಯೆ ಎಂಬುದು ಇನ್ನೂ ನಿಶ್ಚಿತವಾಗಿಲ್ಲ.

**ರಾಸಾಯನಿಕ ಅಂಶಗಳು :** ಕ್ರೋಮೊಸೋಮುಗಳಲ್ಲಿ ಪ್ರಧಾನವಾಗಿ ಕಾಣಬರುವ ಅಂಶಗಳೆಂದರೆ ಡಿಎನ್‌ಎ ಮತ್ತು ಆರ್‌ಎನ್‌ಎ ಗಳು ಹಿಸ್ಟೋನ್ ಮತ್ತು ಗಸಿ ಪ್ರೋಟೀನುಗಳು, ಲಿಪಿಡ್, ಕ್ಯಾಲ್ಸಿಯಂ, ಮೆಗ್ನೀಸಿಯಂ ಮತ್ತು ಕಬ್ಬಿಣಗಳು ಇವೆ. ಡಿಎನ್‌ಎ ದ್ವಿಪ್ರತೀಕರಣದಲ್ಲಿ ಪಾತ್ರವಹಿಸುವ ಡಿಎನ್‌ಎ ಪಾಲಿಮರೇಸ್ ಎಂಬ ಕಿಣ್ವವೂ ಇದೆ. ಇದರಲ್ಲಿ ಡಿಎನ್‌ಎ ಮತ್ತು ಹಿಸ್ಟೋನ್‌ಗಳು ಹಾಗೂ ಆರ್ ಎನ್ ಎ ಮತ್ತು ಗಸಿ ಪ್ರೋಟೀನುಗಳು ಕೂಡಿ ಆದ ನ್ಯೂಕ್ಲಿಯೋಪ್ರೊಟೀನುಗಳು ಇವೆ.

**ವಿಶೇಷ ರೀತಿಯ ಕ್ರೋಮೊಸೋಮುಗಳು :** ಡ್ರೊಸಾಫಿಲ ನೊಣದ ಡಿಂಬದ ಜೊಲ್ಲುಗ್ರಂಥಿಗಳಲ್ಲಿ ಕಾಣಬರುವ ಜೊಲ್ಲುಗ್ರಂಥಿ ಕ್ರೋಮೊಸೋಮುಗಳು (ಸಲೈವರಿ ಕ್ರೋಮೊಸೋಮ್ಸ್) ಮತ್ತು ದ್ವಿಚರಿಗಳ ಊಸೈಟ್ ಅವಸ್ಥೆಯಲ್ಲಿ ಕಾಣಬರುವ ಲ್ಯಾಂಪ್‌ಬ್ರಷ್ ಕ್ರೋಮೊಸೋಮುಗಳು ತಮ್ಮ ಭಿನ್ನ ಆಕಾರ, ರಚನೆ ಮತ್ತು ಗಾತ್ರಗಳಿಂದ ವಿಶಿಷ್ಟವಾಗಿದೆ. ಎರಡೂ ಬೃಹದ್‌ಗಾತ್ರದ ರಚನೆಗಳು ಮತ್ತು ಅಭ್ಯಾಸಕ್ಕೆ ತುಂಬ ಅನುಕೂಲವಾಗಿವೆ. ಸಾಮಾನ್ಯ ಕ್ರೋಮೊಸೋಮುಗಳಲ್ಲಿ ಕಾಣಲು ಸಾಧ್ಯವಿಲ್ಲದ ರಚನಾವಿವರಗಳನ್ನು ಇವುಗಳಲ್ಲಿ ಕಾಣಬಹುದು.

ಜೊಲ್ಲುಗ್ರಂಥಿ ಕ್ರೋಮೊಸೋಮುಗಳು ಡಿಪ್ಟರ ಗಣದ ಕೀಟಗಳ ಡಿಂಬಗಳಲ್ಲಿ (ಡ್ರೊಸಾಫಿಲ, ನೊಣ, ಸೊಳ್ಳೆ, ಕೈರಾನಮಸ್ ಚಿಟ್ಟೆ) ಜೊಲ್ಲುಗ್ರಂಥಿ, ಅನ್ನನಾಳ, ಶ್ವಾಸನಾಳ, ಯಕೃತ್, ಮಲಾಶಯ, ಮ್ಯಾಲ್ಪಿಘಿಯನ್ ನಾಳ ಮುಂತಾದ ಅಂಗಗಳ




ಚಿತ್ರ 6 ಲ್ಯಾಂಪ್‌ಬ್ರಷ್‌ಕ್ರೋಮೊಸೋಮು 1 ಕುಣಿಕೆಗಳು

ಜೀವಕೋಶಗಳಲ್ಲಿ ದೊರಕುತ್ತವೆ. ಈ ಕ್ರೋಮೊಸೋಮುಗಳು ಏಕಗಣಿತವಾಗಿ ಕಾಣಬರುವುದು. ಇವುಗಳ ವಿಶಿಷ್ಟತೆ ಅಂದರೆ ಒಂದು ಜೊತೆಯ ಸದೃಶ ಕ್ರೋಮೊಸೋಮುಗಳು ಸಂಪೂರ್ಣ ಜೊತೆಗೂಡಿವೆ. ಡ್ರೊಸಾಫಿಲದಲ್ಲಿ ನಾಲ್ಕು

ಕ್ರೋಮೊಸೋಮುಗಳು ಸಂಪೂರ್ಣ ಜೊತೆಗೂಡಿವೆ. ಡ್ರೊಸಾಫಿಲದಲ್ಲಿ ನಾಲ್ಕು ಕ್ರೋಮೊಸೋಮುಗಳು ಕ್ರೋಮೊಸೆಂಟರ್ ಎಂಬ ಕೇಂದ್ರ ರಚನೆಯೊಂದಕ್ಕೆ ಅಂಟಿಕೊಂಡಿವೆ. ಇವು ಸಾಮಾನ್ಯ ಕ್ರೋಮೊಸೋಮುಗಳಿಗಿಂತಲೂ ಸಾವಿರ ಪಾಲು ದೊಡ್ಡವು. ಇವುಗಳ ಒಟ್ಟು ಉದ್ದ 2000 $\mu$; ಒಂದೊಂದರ ವ್ಯಾಸವೂ 20$\mu$. ಇವುಗಳಲ್ಲಿ ಪಟ್ಟೆ ಮಾದರಿಗಳಿವೆ. ಈ ಪಟ್ಟೆಗಳನ್ನು ಗುರುತಿಸಿ ನಕ್ಷೆಗಳನ್ನು ತಯಾರಿಸಬಹುದು. ಅಲ್ಲಲ್ಲಿ ಪಟ್ಟೆಗಳು ಸಡಿಲವಾಗಿ ಬಿಡಿಸಿಕೊಂಡ ಹಗ್ಗದ ಗಂಟಿನ ಭಾಗದಂತೆ ಊದಿಕೊಂಡು ಉರುವುಗಳಾಗುತ್ತವೆ. ಇವುಗಳಲ್ಲಿ ಆರ್ ಎನ್ ಎ ಸಂಶ್ಲೇಷಣೆ ತೀವ್ರವಾಗಿ ನಡೆಯುತ್ತದೆ. ಒಂದೊಂದು ಅಂಗಾಂಶದಲ್ಲಿ ಒಂದೊಂದು ಪಟ್ಟೆ ಭಾಗವೂ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಕೆಲವು ನಿರ್ದಿಷ್ಟ ಪಟ್ಟೆಗಳೂ ರೂಪ ತಾಳುತ್ತವೆ. ಹೀಗಾಗುವುದು ಜೀನ್ ಚಟುವಟಿಕೆಯ ಭೌತಾಭಿವ್ಯಕ್ತಿ ಎಂದು ಹೇಳುತ್ತಾರೆ. ಕ್ರೋಮೊಸೋಮುಗಳು ಅನೇಕ ಸಾರಿ ದ್ವಿಪ್ರತಿಗೊಂಡು ಬೇರ್ಪಡದೆ ಉಳಿದು ಈ ಕ್ರೋಮೊಸೋಮುಗಳಾಗಿವೆ ಎಂದು ಭಾವಿಸಲಾಗಿದೆ. ಆದ್ದರಿಂದ ಇವಕ್ಕೆ ಪಾಲಿಟೀನ್ ಕ್ರೋಮೊಸೋಮುಗಳೆಂಬ ಹೆಸರೂ ಉಂಟು.

ಮೀನು, ದ್ವಿಚರಿ, ಸರೀಸೃಪ ಮತ್ತು ಪಕ್ಷಿಗಳ ಊಸೈಟುಗಳ (ಹೆಚ್ಚು ಬಂಡಾರವುಳ್ಳಂಥವು) ಡಿಪ್ಲೊಟೀನ್ ಅವಸ್ಥೆಯಲ್ಲಿ ಲ್ಯಾಂಪ್ ಬ್ರಷ್ ಕ್ರೋಮೊಸೋಮುಗಳು ಕಾಣಿಸಿಕೊಳ್ಳುತ್ತವೆ. ಈ ಪ್ರಾಣಿಗಳ ತತ್ತಿಗಳ ವಿಭಜನೆಯಲ್ಲಿ ಮೊದಲನೆಯ ಮಯಾಟಿಕ್ ಡಿಪ್ಲೊಟೀನ್ ಅವಸ್ಥೆ ಸುದೀರ್ಘಕಾಲ ಮುಂದುವರಿಯುತ್ತದೆ. ಆಗ ಕ್ರೋಮೊಸೋಮುಗಳು ಲಂಬಿಸಿ ಪಕ್ಕಗಳಲ್ಲಿ ಕುಣಿಕೆ ರಚನೆಗಳನ್ನು ಬೆಳೆಸಿಕೊಂಡು ಲ್ಯಾಂಪ್‌ಬ್ರಷ್ ಆಕಾರವನ್ನು ತಾಳುತ್ತವೆ. ಪಾರ್ಶ್ವ ಕುಣಿಕೆಗಳ ಮೇಲೆ ಆರ್ ಎನ್ ಎ ಸಂಶ್ಲೇಷಣೆ ನಡೆಯುತ್ತದೆ. ಕುಣಿಕೆಗಳ ಬುಡದಲ್ಲಿ ಕ್ರೋಮೊಮಿಯರುಗಳಿವೆ. ಇದರ ಅಕ್ಷದಲ್ಲಿ ಜೊತೆ ಕೂಡಿದ ಸದೃಶ ಕ್ರೋಮೊಸೋಮುಗಳಿವೆ. ಕುಣಿಕೆಗಳೂ ಜೀನ್ ಚಟುವಟಿಕೆಯ ಭೌತಾಭಿವ್ಯಕ್ತಿ ಎಂದು ಹೇಳಲಾಗಿದೆ.

ಡ್ರೊಸಾಫಿಲ ಹೈಡಿ ಪ್ರಭೇದದ ಸ್ಪರ್ಮ್ಯಾಟೊಸೈಟ್‌ಗಳಲ್ಲಿ Y-ಕ್ರೋಮೊಸೋಮುಗಳಿಂದಲೂ ಕುಣಿಕೆಗಳು ಬೆಳೆಯುತ್ತವೆ. ಇವನ್ನು Y-ಕ್ರೋಮೊಸೋಮ್ ಕುಣಿಕೆಗಳೆಂದು ಕರೆಯುತ್ತಾರೆ. ಇದುವರೆಗೆ ಜಡವೆಂದು ತಿಳಿದಿದ್ದ Y-ಕ್ರೋಮೊಸೋಮುಗಳು ಜಡವಲ್ಲ ಎಂಬ ಜಿಜ್ಞಾಸೆಗೆ ಇದರ ಇರವು ಕಾರಣವಾಗಿದೆ.



ಚಿತ್ರ 7 ಡ್ರೊಸಾಫಿಲ ಹೈಡಿ ಯ ಸ್ಪರ್ಮ್ಯಾಟೊಸೈಟ್

**ಕ್ರೋಮೊಸೋಮ್ ಸಂಖ್ಯೆ :** ಪ್ರತಿಯೊಂದು ಪ್ರಭೇದದಲ್ಲಿಯೂ ಒಂದು ನಿರ್ದಿಷ್ಟ ಸಂಖ್ಯೆಯ ಕ್ರೋಮೊಸೋಮುಗಳಿರುತ್ತವೆ :

| | | |
|---|---|---|
| ಮನುಷ್ಯ | ,,,,,,,,,, | 46 |
| ಕಪ್ಪೆ | ,,,,,,,,,, | 26 |
| ಮಂಗ | ,,,,,,,,,, | 42 |
| ಇಲಿ | ,,,,,,,,, | 42 |
| ಡ್ರೊಸಾಫಿಲ | ,,,,,..... | 8 |

ಈರುಳ್ಳಿ 16 ಮತ್ತು ಪ್ರೋಟೊಜೋವಾಗಳಲ್ಲಿ 800ರ ವರೆಗೆ.

ಕ್ರೋಮೊಸೋಮುಗಳು ಸಾಮಾನ್ಯವಾಗಿ ಜೋಡಿಯಾಗಿರುತ್ತವೆ. ಒಂದು ಜೋಡಿಯಲ್ಲಿನ ಎರಡು ಕ್ರೋಮೊಸೋಮುಗಳು ಆಕಾರ, ಉದ್ದ, ಗಾತ್ರ ಮತ್ತು ಪಡೆದಿರುವ ಜೀನ್‌ಗಳ ಸಂಖ್ಯೆಯಲ್ಲಿ ಒಂದೇ ಆಗಿರುತ್ತವೆ. ಆದ್ದರಿಂದ ಇವನ್ನು ಸದೃಶಕ್ರೋಮೊಸೋಮುಗಳೆಂದು ಕರೆಯುತ್ತಾರೆ. ಇವು ಜೋಡಿಯಲ್ಲಿದ್ದರೆ ಅದು ಡಿಪ್ಲಾಯಿಡ್ ಅಥವಾ ದ್ವಿಗುಣಿತಸಂಖ್ಯೆ. ಲಿಂಗಾಣುಗಳ ಉತ್ಪತ್ತಿಯ ಕಾಲದಲ್ಲಿ ಇವು ಒಂಟಿಗಳಾಗಿ ಉಳಿದು ಹ್ಯಾಪ್ಲಾಯಿಡ್ ಅಥವಾ ಏಕಗುಣಿತ ಸಂಖ್ಯೆ ಆಗುತ್ತದೆ. ಇದನ್ನು ಸೂತ್ರರೂಪದಲ್ಲಿ ಅನುಕ್ರಮವಾಗಿ 2n ಮತ್ತು n ಎಂದು ಸೂಚಿಸುತ್ತಾರೆ. ಇಲ್ಲಿ n ಅಂಕಿತ ಒಟ್ಟು ಒಂಟಿ ಕ್ರೋಮೊಸೋಮುಗಳ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಮನುಷ್ಯನಲ್ಲಿ 23 ಜೊತೆ ಅಥವಾ 46 ಕ್ರೋಮೊಸೋಮುಗಳಿವೆ. ಲಿಂಗಾಣುಗಳಲ್ಲಿ ಏಕಗುಣಿತವಾಗಿದ್ದ ಈ ಸಂಖ್ಯೆ ನಿಷೇಚನ ಕಾಲದಲ್ಲಿ ಕೂಡಿ ದ್ವಿಗುಣಿತವಾಗುತ್ತದೆ. ಆದ್ದರಿಂದ ಇರುವ ಜೋಡಿ ಕ್ರೋಮೊಸೋಮುಗಳಲ್ಲಿ ಒಂದು ತಂದೆಯಿಂದಲೂ (ಸ್ಪರ್ಮ್ ಅಥವಾ ಪುರುಷಾಣು ಮೂಲಕ) ಮತ್ತು ಇನ್ನೊಂದು ತಾಯಿಯಿಂದಲೂ (ಅಂಡಾಣು ಮೂಲಕ) ಬರುತ್ತದೆ. ಇವುಗಳಿಗೆ ಅನುಕ್ರಮವಾಗಿ ಪಿತೃವತ್ (ಪೆಟರ್ನಲ್) ಮತ್ತು ಮಾತೃವತ್ (ಮೆಟರ್ನಲ್) ಎಂದು ಹೆಸರು. ತಾತ್ತ್ವಿಕವಾಗಿ ಇವನ್ನು ಗುರುತಿಸಬಹುದಾದರೂ ಕಾರ್ಯತಃ ಸಾಧ್ಯವಿಲ್ಲ.

**ಲಿಂಗಕ್ರೋಮೊಸೋಮುಗಳು :** ಲಿಂಗ ರೀತಿಯಲ್ಲಿ ಪ್ರಜನನ ನಡೆಸುವ ಮತ್ತು ಲಿಂಗದ್ವಿರೂಪತ್ವವನ್ನು ಪ್ರದರ್ಶಿಸುವ ಪ್ರಾಣಿಗಳಲ್ಲಿ ಒಂದು ಜೊತೆ (ಇದಕ್ಕೆ ಅಪವಾದಗಳಿರಬಹುದು) ಕ್ರೋಮೊಸೋಮುಗಳು ಪ್ರಾಣಿಯ ಲಿಂಗವನ್ನು ನಿರ್ಧರಿಸುತ್ತವೆ. ಇವಕ್ಕೆ ಲಿಂಗನಿರ್ಧಾರಕ ಅಥವಾ ಲಿಂಗ ಕ್ರೋಮೊಸೋಮುಗಳೆಂದು ಹೆಸರು. ಉಳಿದ ಕ್ರೋಮೊಸೋಮುಗಳೆಲ್ಲವನ್ನೂ ಒಟ್ಟಾರೆ ಆಟೋಸೋಮುಗಳೆನ್ನುತ್ತಾರೆ. ಲಿಂಗ ಕ್ರೋಮೊಸೋಮುಗಳು ಒಂದು ಲಿಂಗದಲ್ಲಿ ಎರಡಿದ್ದು ಇನ್ನೊಂದರಲ್ಲಿ ಒಂದೇ ಇರಬಹುದು ಅಥವಾ ಒಂದು ಲಿಂಗದಲ್ಲಿ ಎರಡು ಸದೃಶಗಳಿದ್ದು ಇನ್ನೊಂದು ಲಿಂಗದಲ್ಲಿ ಒಂದು ಭಿನ್ನವಾಗಿರಬಹುದು. ಇವನ್ನು ಇಂಗ್ಲಿಷ್ ಅಕ್ಷರ ಮಾಲೆಯ X ಮತ್ತು Y ಅಕ್ಷರಗಳಿಂದ ಸೂಚಿಸುತ್ತಾರೆ. ಮನುಷ್ಯನಲ್ಲಿ ಒಂದು ಜೊತೆ ಲಿಂಗ ಕ್ರೋಮೊಸೋಮುಗಳಿವೆ. ಹೆಂಗಸರಲ್ಲಿ ಸದೃಶವಾದ 2 X ಕ್ರೋಮೊಸೋಮುಗಳಿವೆ. ಗಂಡಸರಲ್ಲಿ ಒಂದು ಹೆಂಗಸರ X ಅನ್ನು ಹೋಲುತ್ತದೆ ಮತ್ತು ಇನ್ನೊಂದು ಭಿನ್ನವಾಗಿರುವುದರಿಂದ Y ಆಗುತ್ತದೆ. ಇಲ್ಲಿ Y ಕ್ರೋಮೊಸೋಮು X ಗಿಂತಲೂ ಚಿಕ್ಕದು. ಹೆಂಗಸರಲ್ಲಿ ಒಂದೇ ತೆರನಾದ ಅಂಡಾಣುಗಳು (ಓವ) ಅಂದರೆ ಒಂದೊಂದು X ಕ್ರೋಮೊಸೋಮನ್ನುಳ್ಳ ಅಂಡಾಣುಗಳು ಉತ್ಪತ್ತಿಯಾಗುತ್ತವೆ. ಆದರೆ ಗಂಡಸರಲ್ಲಿ ಒಂದರಲ್ಲಿ X ಮತ್ತು ಇನ್ನೊಂದರಲ್ಲಿ Y ಕ್ರೋಮೊಸೋಮುಗಳುಳ್ಳ ಎರಡು ರೀತಿಯ ಪುರುಷಾಣುಗಳು ಉತ್ಪತ್ತಿಯಾಗುತ್ತವೆ. ನಿಷೇಚನೆಯ ಕಾಲದಲ್ಲಿ ಯಾವ ಪುರುಷಾಣು ಕೂಡುತ್ತದೆ ಎನ್ನುವುದನ್ನು ಅನುಸರಿಸಿ ಭ್ರೂಣದ (ಮುಂದಿನ ಮಗುವಿನ) ಲಿಂಗ ನಿರ್ಧಾರವಾಗುತ್ತದೆ. ಕೆಲವು ಕೀಟಗಳ ಹೆಣ್ಣುಗಳಲ್ಲಿ XY ಗಳಿದ್ದು ಗಂಡಿನಲ್ಲಿ ಒಂದೇ ಒಂದು X ಇರುತ್ತದೆ. ಇದನ್ನು XO ಎಂದು ನಿರೂಪಿಸುತ್ತಾರೆ. ಎರಡು ರೀತಿಯ ಲಿಂಗಾಣುಗಳನ್ನು ಉತ್ಪತ್ತಿಮಾಡುವ ಗುಣಕ್ಕೆ ಹೆಟರೋಗ್ಯಾಮೆಟಿಕ್ ಲಿಂಗ ಎಂದೂ ಒಂದೇ ರೀತಿಯ ಲಿಂಗಾಣುಗಳನ್ನು ಉತ್ಪತ್ತಿಮಾಡುವ ಗುಣಕ್ಕೆ ಹೋಮೋಗ್ಯಾಮೆಟಿಕ್ ಲಿಂಗ ಎಂದೂ ಹೆಸರು. ಬಹುಪಾಲು ಪ್ರಾಣಿಗಳಲ್ಲಿ ಗಂಡು ಹೆಟರೊಗ್ಯಾಮೆಟಿಕ್ ಲಿಂಗ. ಪಕ್ಷಿಗಳು ಮತ್ತು ಚಿಟ್ಟೆಗಳಲ್ಲಿ ಹೆಣ್ಣು ಹೆಟರೊಗ್ಯಾಮೆಟಿಕ್ ಲಿಂಗ.

**ಕ್ರೋಮೊಸೋಮ್ ಅಪಸರಣೆಗಳು (ಅಬೆರೇಷನ್ಸ್) :** ಜೀವಿಗಳ ಪ್ರತಿಯೊಂದು ಗುಣಲಕ್ಷಣವೂ ಪ್ರಕಟವಾಗಲು ಜೀನ್‌ಗಳೇ ಕಾರಣ. ಜೀನ್‌ಗಳು ಕ್ರೋಮೊಸೋಮಿನ ಮೇಲೆ ಸಾಲಾಗಿ ವ್ಯವಸ್ಥೆಯಾಗಿವೆ. ಇವು ಕ್ರೋಮೊಸೋಮುಗಳೊಡನೆ ಪೀಳಿಗೆಯಿಂದ ಪೀಳಿಗೆಗೆ ಸಾಗಿಬಂದು ಆನುವಂಶೀಯತೆಗೆ ಕಾರಣವಾಗುತ್ತವೆ. ಆದ್ದರಿಂದಲೇ ಕ್ರೋಮೊಸೋಮುಗಳಿಗೆ ಆನುವಂಶೀಯ ವಾಹಕಗಳೆಂದು ಹೆಸರು. ಕ್ರೋಮೊಸೋಮುಗಳಲ್ಲಿ ಕಾಣಬರುವ ಕ್ರೋಮೊಮಿಯರ್‌ಗಳು, ಜೊಲ್ಲುಗ್ರಂಥ ಕ್ರೋಮೊಸೋಮುಗಳ ಪಟ್ಟೆಗಳು ಜೀನ್‌ಗಳನ್ನು ಪ್ರತಿನಿಧಿಸುತ್ತವೆ ಎಂಬ ಅಭಿಪ್ರಾಯವಿದೆ. ಗುಣಲಕ್ಷಣಗಳು ಪ್ರಕಟವಾಗಲು ಕ್ರೋಮೊಸೋಮುಗಳ ಮೇಲೆ ತಾವು ಆಕ್ರಮಿಸಿಕೊಳ್ಳುವ ಸ್ಥಾನವನ್ನು ಮತ್ತು ತಮ್ಮ ನೆರೆಯಲ್ಲಿರುವ ಇತರ ಜೀನ್‌ಗಳನ್ನು ಇವು ಅನುಸರಿಸುತ್ತವೆ. ಆಕಸ್ಮಿಕವಾಗಿ ಈ ಸ್ಥಾನ ಬದಲಾದಾಗ ಅವುಗಳ ಅಭಿವ್ಯಕ್ತಿಯಲ್ಲಿಯೂ ವ್ಯತ್ಯಾಸವಾಗಬಹುದು. ಹೀಗೆ ಆದಾಗ ಕೆಂಪು ಹೂಬಿಡುವ ಗಿಡಗಳಲ್ಲಿ ಬಿಳಿಯ ಹೂಗಳು ಅರಳಬಹುದು.

ಬೂದು ಕಣ್ಣುಗಳನ್ನುಳ್ಳ ವ್ಯಕ್ತಿಗಳ ವಂಶದಲ್ಲಿ ನೀಲಿ ಕಣ್ಣು, ಬೆಕ್ಕಿನ ಕಣ್ಣುಗಳು ಕಾಣಿಸಿಕೊಳ್ಳಬಹುದು. ಹೀಗೆ ಒಂದು ನಿರ್ದಿಷ್ಟ ಪ್ರಭಾವ ಬೀರಿ ಒಂದು ನಿರ್ದಿಷ್ಟ ಗುಣಲಕ್ಷಣ ಕಾಣಿಸಿಕೊಳ್ಳಲು ಕಾರಣವಾಗುವುದನ್ನು ಸ್ಥಾನಪ್ರಭಾವ (ಪೊಸಿಷನ್ ಎಫೆಕ್ಟ್) ಎನ್ನುತ್ತಾರೆ. ಸಾಮಾನ್ಯವಾಗಿ ಒಂದು ಕ್ರೋಮೊಸೋಮಿನ ಮೇಲೆ ನೂರಾರು, ಕೆಲವೊಮ್ಮೆ (ಕ್ರೋಮೊಸೋಮಿನ ಉದ್ದವನ್ನು ಅವಲಂಬಿಸಿ) ಸಾವಿರಾರು ಜೀನ್‌ಗಳು ಇರಬಹುದು. ಆನುವಂಶೀಯತೆಯಲ್ಲಿ ಈ ಎಲ್ಲ ಜೀನ್‌ಗಳು ಒಂದು ಗುಂಪಾಗಿ ಮುಂದಿನ ಪೀಳಿಗೆಯನ್ನು ಸೇರುತ್ತವೆ. ಇದಕ್ಕೆ ಸಂಲಗ್ನತೆ (ಲಿಂಕೇಜ್) ಎಂದು ಹೆಸರು. ಕೋಶವಿಭಜನೆಯ ಕಾಲದಲ್ಲಿ, ಅದರಲ್ಲಿಯೂ ವಿಶೇಷವಾಗಿ ಸಂಖ್ಯಾಕ್ಷೀಣ ವಿಭಜನೆಯಲ್ಲಿ, ಸದೃಶ ಕ್ರೋಮೊಸೋಮುಗಳು ಜೊತೆಗೂಡುವಿಕೆ ಮತ್ತು ಅಡ್ಡಹಾಯುವಿಕೆಗಳಿಂದ (ಕೈಯಾಸ್ಮೆಟ) ತಮ್ಮ ಖಂಡಭಾಗಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಕಾಲದಲ್ಲಿ ಕೆಲವು ಅಸಾಂಗತ್ಯಗಳು ಕಾಣಿಸಿಕೊಳ್ಳಬಹುದು. ಇವು ಜೀವಿಗಳ ಗುಣ ಲಕ್ಷಣ ಪ್ರಕಟನೆಗಳಲ್ಲಿ ವ್ಯತ್ಯಾಸಗಳನ್ನುಂಟುಮಾಡಬಹುದು. ಇವೇ ವ್ಯತ್ಯಯ ಅಥವಾ ಮ್ಯುಟೇಷನ್‌ಗಳು. ಇವು ಮ್ಯಾಕ್ರೋಮ್ಯುಟೇಷನ್‌ಗಳು ಎಂದರೆ ಬೃಹದ್ವ್ಯತ್ಯಯಗಳು. ಇವುಗಳಲ್ಲಿ ಹಲವಾರು ಬಗೆಯುಂಟು. ಇವನ್ನು ಕ್ರೋಮೊಸೋಮ್ ಅಪಸರಣೆಗಳೆಂದು ಒಟ್ಟಾರೆ ಕರೆಯುತ್ತಾರೆ. ಜೀನ್ ಮಟ್ಟದಲ್ಲಿ ನಡೆಯಬಹುದಾದ ವ್ಯತ್ಯಯಗಳನ್ನು ಲಕ್ಷಣಗಳು ಪ್ರಕಟವಾಗುವುದರಿಂದ ಮಾತ್ರ ಕಂಡುಕೊಳ್ಳಲು ಸಾಧ್ಯ. ಆದರೆ ಕ್ರೋಮೊಸೋಮ್ ಅಪಸರಣೆಗಳಿಂದಾಗುವ ವ್ಯತ್ಯಯಗಳನ್ನು ಸೂಕ್ಷ್ಮದರ್ಶಕಗಳ ಸಹಾಯದಿಂದ ವೀಕ್ಷಿಸಬಹುದು. ಇವನ್ನು ಇಲ್ಲಿ ವಿವರಿಸಿದೆ :

**1. ಯುಪ್ಲಾಯಿಡಿ :** ಇರಬೇಕಾದ ಕ್ರೋಮೊಸೋಮುಗಳ ಒಟ್ಟು ಸಂಖ್ಯೆಯ ಹೆಚ್ಚಳದಿಂದ ಅಥವಾ ಒಂದೆರಡು ಕ್ರೋಮೊಸೋಮುಗಳು ಮಾತ್ರ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಾಗುವುದರಿಂದ ಅಸಾಂಗತ್ಯ ಜರುಗಬಹುದು. ಒಂದು ಗುಣಲಕ್ಷಣ ಪ್ರಕಟಗೊಳ್ಳಲು ಒಂದು ಜೀನ್ (ಅಥವಾ ಕೆಲವೊಮ್ಮೆ ಹಲವಾರು) ಸಾಕು. ಆದರೆ ಜೀವಿಗಳ ಒಂದು ಜೋಡಿ ಸದೃಶ ಕ್ರೋಮೊಸೋಮುಗಳಲ್ಲಿ ಒಂದು ಗುಣಲಕ್ಷಣಕ್ಕೆ ಸಂಬಂಧಿಸಿದಂತೆ ಒಂದೊಂದರಲ್ಲಿ ಒಂದು ಜೀನ್‌ನಂತೆ ಒಟ್ಟು ಎರಡು ಜೀನ್‌ಗಳಿರುತ್ತವೆ. ಈ ಎರಡರಲ್ಲಿ ಒಂದಕ್ಕೆ ಪ್ರಬಲ ಮತ್ತು ಇನ್ನೊಂದಕ್ಕೆ ಹಿಂಜರಿಕೆಯ ಗುಣವಿದ್ದು ಸಂದರ್ಭವನ್ನು ಅನುಸರಿಸಿ ಪ್ರಬಲ ಅಥವಾ ಹಿಂಜರಿಕೆಯ ಗುಣಲಕ್ಷಣಗಳು ಪ್ರಕಟಗೊಳ್ಳಬಹುದು. ಆದರೆ ಈ ಜೀನ್ ಗುಂಪು ಎರಡಕ್ಕಿಂತಲೂ ಹೆಚ್ಚಾದಾಗ ಪ್ರಕಟವಾಗುವ ಗುಣಲಕ್ಷಣದಲ್ಲಿ ವ್ಯತ್ಯಾಸವಾಗಬಹುದು ಅಥವಾ ಸ್ಥಾನಪ್ರಭಾವರೀತ್ಯಾ ಇಲ್ಲವೆ ಇದಕ್ಕೂ ಇತರ ಜೀನ್‌ಗಳಿಗೂ ಇರುವ ಪರಸ್ಪರ ಪ್ರಭಾವದಿಂದಾಗಿ ವ್ಯತ್ಯಾಸವಾಗಬಹುದು ಅಥವಾ ಮಾರ್ಪಡಬಹುದು. ಈ ಮಟ್ಟಿಗೆ ಇದು ವ್ಯತ್ಯಾಸಕ್ಕೆ ಕಾರಣವಾಗಿ ವ್ಯತ್ಯಯ ಆಗಬಹುದು. ಬಹುಗುಣಿತದಲ್ಲಿ ಅನೇಕ ವಿಧಗಳಿರಬಹುದು. ಸಾಮಾನ್ಯ ಸಂಖ್ಯೆ ದ್ವಿಗುಣಿತ, ತ್ರಿಗುಣಿತ, ಚತುರ್‌ಗುಣಿತ, ಪಂಚಗುಣಿತ, ಷಡ್‌ಗುಣಿತ, ಸಪ್ತಗುಣಿತ, ಅಷ್ಟಗುಣಿತ ಇತ್ಯಾದಿ ಇರಬಹುದು. ಇದರಲ್ಲಿ ಮುಖ್ಯವಾಗಿ ಎರಡು ವಿಧ.

**(i) ಪಾಲಿಪ್ಲಾಯಿಡಿ (ಬಹುಗುಣಿತತೆ):** ಕ್ರೋಮೊಸೋಮುಗಳ ಬಹುಗುಣಿತ ಸಂಖ್ಯೆ ಪ್ರಜನನ ಜೀವಕೋಶಗಳಲ್ಲಿ ಕಾಣಿಸಿಕೊಳ್ಳುವುದರಿಂದ ಪೂರ್ಣಜೀವಿಯ ಕ್ರೋಮೊಸೋಮ್ ಸಂಖ್ಯೆಯೇ ಬದಲಾಗಬಹುದು.

**(ii) ಪಾಲಿಸೊಮೆಟಿ :** ಪ್ರಜನನ ಜೀವಕೋಶಗಳಲ್ಲಿ ವ್ಯತ್ಯಾಸವಾಗದೆ ದೈಹಿಕ(ಕಾಯಕ) ಜೀವಕೋಶಗಳಲ್ಲಿ ಈ ಸಂಖ್ಯಾವ್ಯತ್ಯಾಸಗಳು ಕಾಣಿಸಿಕೊಳ್ಳಬಹುದು.

ಕೋಶ ವಿಭಜನೆಯ ಕಾಲದಲ್ಲಿ ಕ್ರೋಮೊಸೋಮುಗಳ ದ್ವಿಪ್ರತೀಕರಣ ನಡೆಯುವುದು ಸರಿಯಷ್ಟೆ. ಸಾಮಾನ್ಯವಾಗಿ ದ್ವಿಪ್ರತಿಗಳು ಪ್ರತ್ಯೇಕಗೊಂಡು ಮರಿ ಜೀವಕೋಶಗಳಿಗೆ ಹಂಚಿಹೋಗುತ್ತವೆ. ಆಕಸ್ಮಿಕವಾಗಿ ಕೋಶವಿಭಜನೆ ಸ್ಥಗಿತವಾಗಿ ದ್ವಿಪ್ರತಿಗೊಂಡ ಕ್ರೋಮೊಸೋಮುಗಳು ಒಂದೇ ಜೀವಕೋಶದಲ್ಲಿ ಉಳಿದುಹೋಗ ಬಹುದು. ಇದನ್ನು ಎಂಡೊಮೈಟೊಸಿಸ್ ಎನ್ನುತ್ತಾರೆ. ಕಾಲ್ಚಿಸಿನ್ ಮುಂತಾದ ಕೆಲವು ರಾಸಾಯನಿಕಗಳ ಸಂಸ್ಕರಣದಿಂದ ಈ ಸ್ಥಿತಿಯನ್ನು ಪ್ರಾಯೋಗಿಕವಾಗಿ ಉತ್ಪತ್ತಿಮಾಡಬಹುದು.

**2. ಅನ್ಯುಪ್ಲಾಯಿಡಿ :** ಇದರಲ್ಲಿ ಪೂರ್ಣ ಕ್ರೋಮೊಸೋಮುಗಳ ಸಂಖ್ಯೆ ಹೆಚ್ಚಾಗದೆ ಯಾವುದೋ ಒಂದು ಅಥವಾ ಹೆಚ್ಚು ಕ್ರೋಮೊಸೋಮುಗಳ ಸಂಖ್ಯೆ ಹೆಚ್ಚಾಗುತ್ತದೆ. ಇದರಲ್ಲಿಯೂ ಎರಡು ವಿಧ.

**(i) ಪಾಲಿಸೋಮಿ :** ಈ ಬದಲಾವಣೆ ಪ್ರಜನನ ಜೀವಕೋಶಗಳಲ್ಲಿ ಕಾಣಿಸಿಕೊಂಡು ಲಿಂಗಾಣುಗಳ ಮೂಲಕ ಮುಂದಿನ ಪೀಳಿಗೆಯನ್ನು ಸೇರುವುದರಿಂದ ಆ ಜೀವಿಯ ಪೂರ್ತಿ ಈ ಬದಲಾವಣೆ ಇರುತ್ತದೆ. ಉದಾಹರಣೆಗೆ ಟ್ರೈಸೋಮಿಗಳು.

**(ii) ದೇಹೀಯ ಅನ್ಯುಪ್ಲಾಯಿಡಿ :** ಈ ಬದಲಾವಣೆ ಒಂದು ಅಂಗಾಂಶದ ಕೆಲವು ಜೀವಕೋಶಗಳಿಗೆ ಮೀಸಲಾದಂತೆ ಕಾಣಿಸಿಕೊಳ್ಳಬಹುದು. ಉದಾಹರಣೆಗೆ ವ್ರಣಗಳಲ್ಲಿ (ಟ್ಯೂಮರ್) ಮತ್ತು ಕೃತಕ ಮಾಧ್ಯಮಗಳಲ್ಲಿ ಬೆಳೆಸಿದ ಜೀವಕೋಶಗಳಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಕೋಶವಿಭಜನೆಯ ಕಾಲದಲ್ಲಿ ನಡೆದ ಆಕಸ್ಮಿಕಗಳಿಂದ ಈ ಪರಿಸ್ಥಿತಿ ಉದ್ಭವಿಸಬಹುದು. ಒಂದೆರಡು ಮರಿಕ್ರೋಮೊಸೋಮುಗಳು ಪ್ರತ್ಯೇಕಗೊಳ್ಳದೆ ಹೋಗಿ ಯಾವುದಾದರೂ ಒಂದು ಮರಿಜೀವಕೋಶದಲ್ಲಿ ಸೇರಿಹೋದಾಗ ಅಥವಾ ಅನಫೇಸ್ ಹಂತದಲ್ಲಿ ನಡೆಯುವ ಧ್ರುವ ಚಲನೆಯಲ್ಲಿ ಕಾರಣಾಂತರದಿಂದ ಭಾಗವಹಿಸದೆ ಮರಿಕೋಶಗಳನ್ನು ಸೇರದೆ ಉಳಿದುಹೋದಾಗ ಮೇಲೆ ತಿಳಿಸಿದ ಬದಲಾವಣೆಗಳು ಕಾಣಿಸಿಕೊಳ್ಳಬಹುದು.

ಇವಿಷ್ಟೂ ಕ್ರೋಮೊಸೋಮ್ ಸಂಖ್ಯೆಗೆ ಮೀಸಲಾದಂತೆ ನಡೆಯಬಹುದಾದ ಅಸಾಂಗತ್ಯಗಳು. ಆದರೆ ಕ್ರೋಮೊಸೋಮ್ ರಚನೆಗೆ ಸಂಬಂಧಿಸಿದಂತೆ, ಅಂದರೆ ಜೀನ್‌ಗಳ ವ್ಯವಸ್ಥೆ, ಸಂಖ್ಯೆ ಮತ್ತು ಅನುಕ್ರಮಣಿಕೆಗಳೂ ಬದಲಾಗಿ, ಅಪಸರಣೆಗಳು ಕಾಣಿಸಿಕೊಳ್ಳಬಹುದು.

**3. ಅಸಮತೆ ಅಥವಾ ಖಂಡವಿಸರ್ಜನೆ (ಡಿಫಿಸಿಯೆನ್ಸಿ ಅಥವಾ ಡಿಲಿಷನ್):** ಕಾರಣಾಂತರದಿಂದ ಕ್ರೋಮೊಸೋಮಿನ ಸ್ವಲ್ಪಭಾಗ ಅಥವಾ ಖಂಡ ಕಳಚಿಕೊಂಡು ವಿಭಜನೆಯ ಕಾಲದಲ್ಲಿ ಕಳೆದುಹೋಗಬಹುದು. ಹೀಗೆ ಕಳಚಿಕೊಂಡ ತುಂಡಿನಲ್ಲಿ ಸೆಂಟ್ರೊಮಿಯರ್ ಇಲ್ಲದಿದ್ದರೆ ಅದು ಸಮಗ್ರ ಕ್ರೋಮೊಸೋಮಿನಂತೆ ವರ್ತಿಸುವುದು

ಚಿತ್ರ 8 ಖಂಡ ವಿಸರ್ಜನೆ

ಸಾಧ್ಯವಿಲ್ಲ. ಸಾಮಾನ್ಯವಾಗಿ ಅದೃಶ್ಯವಾಗಿಬಿಡುತ್ತದೆ. ಹೀಗಾದಾಗ ಒಂದು ಕ್ರೋಮೊಸೋಮಿನಲ್ಲಿ ಇರಬೇಕಾದ ಜೀನುಗಳ ಸಂಖ್ಯೆ ಕಡಿಮೆಯಾಗುತ್ತದೆ. ಹೀಗಾಗದೆ ಒಂದು ಕ್ರೋಮೊಸೋಮ್ ಎರಡು ಕಡೆಗಳಲ್ಲಿ ತುಂಡಾಗಿ ಈ ತುಂಡುಗಳು ಮುಂಚಿನ ಕ್ರಮಕ್ಕೆ ಭಿನ್ನವಾದ ರೀತಿಯಲ್ಲಿ ಪುನಃ ಕೂಡಿಕೊಂಡಾಗ ಅಸಮತೆ ಉಂಟಾಗುತ್ತದೆ.




ಚಿತ್ರ 9 ಡ್ರೊಸಾಫಿಲ ನೊಣದಲ್ಲಿ ಕ್ರೋಮೊಸೋಮು ದ್ವಿಪ್ರತೀಕರಣ : ಲಿಂಗ ಕ್ರೋಮೊಸೋಮನ್ನು *X* ಎಂಬ ಅಕ್ಷರದಿಂದಲೂ ದ್ವಿಪ್ರತೀಕರಣಗೊಂಡ ಭಾಗವನ್ನು *D* ಅಕ್ಷರದಿಂದಲೂ ಸೂಚಿಸಿದೆ.

ಅಸಮತೆ ಅಥವಾ ಖಂಡ ವಿಸರ್ಜನೆಗಳು ಯಾವುದಾದರೂ ಒಂದು ಸದೃಶಕ್ರೋಮೊಸೋಮಿನಲ್ಲಿ ಮಾತ್ರ ಕಾಣಿಸಿಕೊಂಡಾಗ ಹೆಚ್ಚು ಪರಿಣಾಮಕಾರಿಯಾಗದಿರಬಹುದು. ಏಕೆಂದರೆ ಇನ್ನೊಂದು ಸದೃಶ ಕ್ರೋಮೊಸೋಮ್ ಸ್ವಾಭಾವಿಕ ವಾಗಿರುತ್ತದೆ. ಗುಣ ಲಕ್ಷಣಗಳು ಪ್ರಕಟವಾಗಲು ಒಂದು ಗುಂಪು ಜೀನುಗಳು ಮಾತ್ರ ಸಾಕು. ಇಲ್ಲಿ ಒಂದು ಸ್ವಾಭಾವಿಕ ಗುಂಪು ಇರುವುದರಿಂದ ಪರಿಣಾಮ ವಿಲ್ಲ. ಆದರೆ ಜೋಡಿಯ ಎರಡೂ ಸದೃಶಗಳು ಈ ಭಿನ್ನತೆಯನ್ನು ತೋರಿದಾಗ ಅನೇಕ ಬಾರಿ ಇದು ಮಾರಕವಾಗಿ ಜೀವಿಗಳು ಭ್ರೂಣಾವಸ್ಥೆಯಲ್ಲಿಯೇ ಸಾವಿಗೀಡಾಗಬಹುದು.

**4. ಸ್ಥಳಾಂತರಣ (ಟ್ರಾನ್ಸ್‌ಲೊಕೇಷನ್):** ಕ್ರೋಮೊಸೋಮುಗಳು ತುಂಡುಗಳಾಗಿ ಈ ತುಂಡುಗಳು ಪುನಃ ಕೂಡಿಕೊಳ್ಳುವಾಗ ಅದಲುಬದಲಾಗಿ ಒಂದು ಕ್ರೋಮೊಸೋಮಿನಲ್ಲಿ

ಇರಬೇಕಾದ ಒಂದು ಜೀನು ಇನ್ನೊಂದು ಕ್ರೋಮೊಸೋಮಿಗೆ ವರ್ಗಾಂತರವಾಗ ಬಹುದು ಅಥವಾ ಸ್ಥಳಾಂತರಗೊಳ್ಳಬಹುದು. ಈ ಸ್ಥಳಾಂತರಣ ಒಂದು ಜೋಡಿಯ ಎರಡು ಸದೃಶಗಳ ನಡುವೆ ಇಲ್ಲವೆ ಭಿನ್ನ ಜೋಡಿಯ ಅಸದೃಶ ಕ್ರೋಮೊಸೋಮುಗಳ ನಡುವೆ ನಡೆಯಬಹುದು ಅಥವಾ ಒಂದು ಕ್ರೋಮೊಸೋಮಿನ ತುಂಡು ಅದೇ ಕ್ರೋಮೊಸೋಮಿನ ಇನ್ನೊಂದು ಭಾಗಕ್ಕೆ ಸ್ಥಳಾಂತರಗೊಳ್ಳಬಹುದು. ಇವನ್ನು ಕ್ರಮವಾಗಿ ಪರಸ್ಪರ ಸ್ಥಳಾಂತರಣ ಮತ್ತು ಸರಳ ಸ್ಥಳಾಂತರಣ ಎಂದು ಕರೆಯುತ್ತಾರೆ. ಇವು ಕೂಡ ಅಸಮತೆಯಂತೆಯೇ ವರ್ತಿಸುತ್ತವೆ.

**5. ದ್ವಿಪ್ರತೀಕರಣ (ಡೂಪ್ಲಿಕೇಷನ್):** ಒಂದು ಕ್ರೋಮೊಸೋಮಿನಲ್ಲಿ ಕೆಲವು ಜೀನುಗಳಿಗೆ ಸಂಬಂಧಿಸಿದಂತೆ ದ್ವಿಪ್ರತೀಕರಣ ನಡೆದು ಅವು ಅದೇ ಕ್ರೋಮೊಸೋಮಿನಲ್ಲಿ ಉಳಿದು ಹೋಗಬಹುದು. ಆಗ ಆ ಕ್ರೋಮೊಸೋಮಿನಲ್ಲಿ ಕೆಲವು ಜೀನುಗಳ ಸಂಖ್ಯೆ ದ್ವಿಗುಣಗೊಳ್ಳುತ್ತದೆ. ಇದು ಸ್ಥಾನ ಪ್ರಭಾವದಿಂದ ಗುಣಲಕ್ಷಣ ಪ್ರಕಟಣೆಯ ಮೇಲೆ ಪ್ರಭಾವ ಬೀರಬಹುದು.

**6. ವಿಪರ್ಯಯ (ಇನ್‌ವರ್ಷನ್) :** ಒಂದು ಕ್ರೋಮೊಸೋಮ್ ತುಂಡು ಪುನಃ ಕೂಡಿಕೊಳ್ಳುವಾಗ 180° ಕೋನದಲ್ಲಿ ತಿರುಗಿ ಹಿಂದು ಮುಂದಾಗಿ ಕೂಡಿಕೊಳ್ಳಬಹುದು. ಉದಾಹರಣೆಗೆ ಕ, ಗ, **ಚ, ಜ, ಟ, ಡ,** ತ ದ ಕ್ರಮದಲ್ಲಿ ಇರಬೇಕಾದ ಜೀನುಗಳು ಕ, ಗ, **ಡ, ಟ, ಜ, ಚ,** ತ ದ ಕ್ರಮದಲ್ಲಿ ವ್ಯವಸ್ಥೆಗೊಳ್ಳಬಹುದು. ಇದೇ ವಿಪರ್ಯಯ. ಎಂದೂ ಸೆಂಟ್ರೋಮಿಯರೂ ಸೇರಿದ್ದರೆ ಪೆರಿಸೆಂಟ್ರಿಕ್ ವಿಪರ್ಯಯ ಎಂದೂ ಸೆಂಟ್ರೊಮಿಯರ್ ಸೇರದೆ ವಿಪರ್ಯಯದ ಹೊರಗಿದ್ದರೆ ಪ್ಯಾರಸೆಂಟ್ರಿಕ್ ವಿಪರ್ಯಯ ಎಂದೂ ಹೆಸರು.

ಮೇಲೆ ತಿಳಿಸಿದ ಅಪಸರಣೆಗಳಲ್ಲಿ 4, 5 ಮತ್ತು 6 ನೆಯವುಗಳನ್ನು ಸಾಮಾನ್ಯವಾಗಿ ಡ್ರೊಸಾಫಿಲ ಪ್ರಭೇದಗಳಲ್ಲಿ ಕಾಣಬಹುದು. ಇವು ಆ ಪ್ರಭೇದದ ವಿಕಾಸದಲ್ಲಿ ಮತ್ತು



ಚಿತ್ರ 10 ವಿಪರ್ಯಯ

ಹೊಂದಾಣಿಕೆ ಪ್ರಸರಣದಲ್ಲಿ ಪ್ರಧಾನ ಪಾತ್ರವಹಿಸುತ್ತವೆ ಎಂದು ತಿಳಿದಿದೆ. ಜೀವಿಗಳು ತಮ್ಮ ಜೀವನವನ್ನು ಉತ್ತಮಗೊಳಿಸಲು ಸುಧಾರಿಸಿಕೊಳ್ಳಲು ಬದುಕಿನಲ್ಲಿ ಎಲ್ಲ ಕಾಲದಲ್ಲೂ ಪ್ರಯೋಗಗಳನ್ನು ನಡೆಸಿರುತ್ತವೆ. ಈ ಪ್ರಯೋಗಗಳಿಗೆ ಜೀನ್ ಜೋಡಣಾವ್ಯವಸ್ಥೆಯೇ ವಸ್ತು. ಪ್ರಯತ್ನ ಮತ್ತು ತಪ್ಪು ತಿದ್ದಿಕೆಗಳಿಂದಾಗಿ ಒಳ್ಳೆಯ ಜೀನ್ ಜೋಡಣೆಗಳನ್ನು ಕಂಡುಕೊಂಡು ಅವನ್ನು ಅನುಷ್ಠಾನಕ್ಕೆ ತಂದುಕೊಂಡು ಮುಂದುವರಿದಿವೆ ಮತ್ತು ಮುಂದುವರಿಯುತ್ತಿವೆ.

ಈ ಅಪಸರಣೆಗಳಿಂದಾಗಿ ಒಂದು ಜೀವಿಸಂದಣಿಯಲ್ಲಿ ಹೊಸಪ್ರಭೇದಗಳು ಕಾಣಿಸಿ ಕೊಳ್ಳಬಹುದು. ಕ್ರೋಮೊಸೋಮ್ ಬಹುರೂಪಗಳಂತೂ ಕಾಣಿಸಿ ಕೊಂಡೇ ಇವೆ. ಒಂದು ಜಾತಿ, ಕುಟುಂಬ ಅಥವಾ ಗಣಕ್ಕೆ ಸಂಬಂಧಿಸಿದ ಜೀವಿಗಳಲ್ಲಿ ಈ ರೀತಿಯ ಕ್ರೋಮೊಸೋಮ್ ಬಹುರೂಪಕತೆಗಳು ಕಾಣಿಸಿ ಕೊಂಡಿರುವುದಕ್ಕೆ ಮತ್ತು ಈ ಲಕ್ಷಣ ವಿಕಾಸಕ್ಕೆ ಆಧಾರವಾದ ಅನೇಕ ನಿದರ್ಶನಗಳಿವೆ. ಸರಳ ಉದಾಹರಣೆಗಳನ್ನು ಕೊಡಬಹುದಾದರೆ XO ವಿಧದ ಲಿಂಗ ಕ್ರೋಮೊಸೋಮುಗಳಿದ್ದ ಗುಂಪಿನಲ್ಲಿ ಖಂಡ ವಿಸರ್ಜನೆಯಿಂದ, ಸ್ಥಳಾಂತರಣದಿಂದ XY ವಿಧ ಕಾಣಿಸಿಕೊಳ್ಳಬಹುದು ಅಥವಾ XY ವಿಧ XO ಆಗಬಹುದು. ಆದ್ದರಿಂದ ಜೀವವಿಕಾಸದಲ್ಲಿ ಕ್ರೋಮೊಸೋಮ್ ಅಪಸರಣೆಗಳು ಪ್ರಧಾನ ಪಾತ್ರ ವಹಿಸಿರಬಹುದೆನ್ನಲು ಸಾಕಷ್ಟು ಕಾರಣಗಳಿವೆ. **(ಎಚ್.ಬಿ.ಡಿ.)**

**ಕ್ರೋಮ್ಯಾಗ್ನನ್ ಮಾನವ :** ಪ್ರ.ಶ.ಪೂ ಸು. 35,000–8,000 ಅವಧಿಯಲ್ಲಿ ಮಾನವ ಬುಡಕಟ್ಟಿನ ಪಳೆಯುಳಿಕೆ. ಫ್ರಾನ್ಸ್ ದೇಶದ ಡಾರ್ಡೋಗ್ನೆ ವಿಭಾಗಕ್ಕೆ ಸೇರಿದ ಲೆಈಜಿಸ್ ಎಂಬಲ್ಲಿರುವ ಕ್ರೋಮ್ಯಾಗ್ನನ್ ಗುಹೆಯಲ್ಲಿ ಲೂಯಿಸ್ ಲಾರ್ಟೆ ಎಂಬ ಭೂವಿಜ್ಞಾನಿ ಗತಕಾಲದ ಐದು ಮಾನವ ಕಂಕಾಲಗಳನ್ನು ಕಂಡುದಾಗಿ ವರದಿಮಾಡಿದ (1868). ಅವುಗಳ ಜೊತೆಯಲ್ಲಿ ಪ್ರಾಣಿಗಳ ಎಲುಬುಗಳು, ಸಾಗರಪ್ರಾಣಿಗಳ ಚಿಪ್ಪುಗಳಿಂದ ರಚಿತವಾದ ಕಂಠಹಾರಗಳು ಮತ್ತು ಆಯುಧಗಳು ಸಹ ಇದ್ದುವು. ಈ ಮಾನವ ಬುಡಕಟ್ಟಿಗೆ ಕ್ರೋಮ್ಯಾಗ್ನನ್ ಮಾನವ ಎಂಬ ಹೆಸರು ಬಂತು. ಅಲ್ಲಿ ದೊರೆತ ಶಿಲಾಯುಧಗಳು ಎಡ್ವರ್ಡ್ ಲಾರ್ಟೆ ಹಿಂದೆ ಅರಿಗ್ನಾತ್ ಎಂಬ ಸ್ಥಳದಿಂದ ಪಡೆದು ವರ್ಣಿಸಿದ್ದ ಶಿಲಾಯುಧಗಳನ್ನು ಹೋಲುತ್ತಿದ್ದುದಿಂದ ಕ್ರೋಮ್ಯಾಗ್ನನ್ ಮಾನವ ಹಳೆ ಶಿಲಾಯುಗದ ಆದಿಯ ಆರಿಗ್ನೇಷಿಯನ್ ಕಾಲದವನೆಂದು ಹೇಳಬಹುದು. ಅನಂತರ ಇದೇ ಮಾದರಿ ಅಸ್ಥಿಗಳು ಕೂಂಬ್–ಕ್ಯಾಪೆಲ್, ಮೆಂಟಾನ್ ಮತ್ತಿತರ ಕಡೆಗಳಲ್ಲೂ ದೊರೆತಿವೆ. ಈಗ ಆರಿಗ್ನೇಸಿಯನ್ ಕಾಲದಲ್ಲಿ ಪಶ್ಚಿಮ ಯೂರೋಪಿನಲ್ಲಿ ನೆಲಸಿದ್ದ ಮಾನವ ಕುಲಕ್ಕೆಲ್ಲ ಕ್ರೋಮ್ಯಾಗ್ನನ್ ಮಾನವ ಎಂಬ ಹೆಸರನ್ನು ಅನ್ವಯಿಸಲಾಗಿದೆ. ಕ್ರೋಮ್ಯಾಗ್ನನ್ ಮಾನವ ಬುಡಕಟ್ಟು ಆ ಕಾಲದಲ್ಲಿ ಯುರೋಪಿನಾದ್ಯಂತ ಹಬ್ಬಿತ್ತು. ಫ್ರಾನ್ಸಿನಿಂದ ಬೆಲ್ಜಿಯಂ ಮತ್ತು ವೇಲ್ಸ್‌ನಿಂದ ಪೂರ್ವ ಯುರೋಪಿನವರೆಗಿನ ಪ್ರದೇಶಗಳಲ್ಲಿ ಈ ಬುಡಕಟ್ಟಿನ ಸಾಂದ್ರತೆ ಹೆಚ್ಚಾಗಿತ್ತು.

ಆರಿಗ್ನೇಷಿಯನ್ ಕಾಲಕ್ಕಿಂತ ಹಿಂದೆ, ಅಂದರೆ ಮೌಸ್ಟೀರಿಯನ್ ಕಾಲದಲ್ಲಿ ಪಶ್ಚಿಮ ಯುರೋಪಿನಲ್ಲಿ ಬೇರೊಂದು ಮಾನವ ಬುಡಕಟ್ಟು ಇತ್ತು. ನಿಯಾಂಡರ್‌ತಲ್ ಮಾನವ ಎಂದು ಅದರ ಹೆಸರು. ಇವೆರಡು ಜನಾಂಗಗಳ ನಡುವೆ ಮೈಕಟ್ಟು ಸಂಸ್ಕೃತಿ ಮತ್ತು ಬುಡಕಟ್ಟಿನ ಉಗಮಗಳಲ್ಲಿ ಭಿನ್ನತೆ ಎದ್ದುಕಾಣುತ್ತದೆ. ಆದ್ದರಿಂದ ಕ್ರೋಮ್ಯಾಗ್ನನ್ ಮಾನವ ಬೇರೆ ಕಡೆಗಳಿಂದ ಪಶ್ಚಿಮ ಯುರೋಪಿಗೆ ವಲಸೆ ಬಂದು, ಸ್ಥಳೀಯ ನಿಯಾಂಡರ್‌ತಲ್ ಮಾನವನನ್ನು ನಿರ್ನಾಮಮಾಡಿ, ನೆಲಸಿರಬೇಕೆಂದು ಅಭಿಪ್ರಾಯಪಡಲಾಗಿದೆ. ಹೆಚ್ಚು ಬುದ್ಧಿಶಾಲಿಯೂ ಚತುರನೂ ಆಗಿದ್ದ ಕ್ರೋಮ್ಯಾಗ್ನನ್ ಮಾನವ ಈ ದಿಶೆಯಲ್ಲಿ ಜಯಗಳಿಸಿದುದು ಸ್ವಾಭಾವಿಕವೇ ಆಗಿದೆ. ನೀರ್ಗಲ್ಲುಯುಗದ ಅತಿಶೀತವಾಯುಗುಣ ಅವನಿಗೆ ಸಹಕಾರಿಯಾಗಿದ್ದಿರಬಹುದು. ಅವನ ಉಗಮ ಏಷ್ಯದಲ್ಲಿ ಆಗಿ ಆತ ಪಶ್ಚಿಮಾಭಿಮುಖವಾಗಿ ವಲಸೆ ಬಂದಿರಬೇಕೆಂದು ತಜ್ಞರ ಅಭಿಪ್ರಾಯ.

ಕ್ರೋಮ್ಯಾಗ್ನನ್ ಮಾನವನ ತಲೆಬುರುಡೆ

**ಕ್ರೋಮ್ಯಾಗ್ನನ್ ಮಾನವನ ವಿಶೇಷ ಲಕ್ಷಣಗಳು:** ಇವನಲ್ಲಿ ಆಧುನಿಕ ಮಾನವನಲ್ಲಿರುವ ಲಕ್ಷಣಗಳೇ ಅತ್ಯಧಿಕವಾಗಿರುವುದು ಒಂದು ವೈಶಿಷ್ಟ್ಯ. ಈತ ಹಾಲಿ ಜೀವಿಸುತ್ತಿರುವ ಕಾಕಸಾಯಿಡ್ ಜನಾಂಗದ ಒಂದು ಪ್ರಭೇದ ಎನ್ನಬಹುದು. ಆಧುನಿಕ ಮಾನವನಿಗಿಂತ ಎತ್ತರವಾಗಿಯೂ ದೃಢಕಾಯನಾಗಿಯೂ ಇದ್ದ. ಇವನ ಮಿದುಳು ಸಹ (1550–1750 ಘ.ಸೆಂಮೀ) ಆಧುನಿಕ ಮಾನವನ ಮಿದುಳಿಗಿಂತ (1350 ಘ.ಸೆಂಮೀ) ದೊಡ್ಡದು. ಇವನು ಪಂಚಭುಜಾಕೃತಿಯ ಅಡ್ಡತಲೆಯ ದೊಡ್ಡ ಬುರುಡೆಯ ಮಾನವ. ಮುಖ ಅಗಲ, ಆಯಾಕಾರದ ಕಣ್ಣುಗುಳಿಗಳು. ಎರಡರ ಅಂತರ ಸ್ವಲ್ಪ ದೂರವೆಂದೇ ಹೇಳಬೇಕು. ದವಡೆಗಳು ಮುನ್‌ಚಾಚಿವೆ.

ಪ್ಲೀಸ್ಟೋಸೀನ್ ನೀರ್ಗಲ್ಲುಯುಗದ ಮೊದಲನೆಯ ಹಂತ ಮುಗಿದಮೇಲೆ ಯುರೋಪಿನಲ್ಲಿ ನೀರ್ಗಲ್ಲುಗಳು ಉತ್ತರಕ್ಕೆ ಹಿಂದಕ್ಕೆಸರಿದುವು. ಯುರೋಪು ಹುಲ್ಲುಗಾವಲು ಪ್ರದೇಶವಾಯಿತು. ಇಲ್ಲಿ ಕಾಡೆಮ್ಮೆಗಳು, ದನಗಳು, ಕುದುರೆಗಳು ಹೇರಳವಾಗಿ ಜೀವಿಸಿದ್ದುವು. ಉತ್ತರದ ಶೀತವಾಯುಗುಣ ಪ್ರದೇಶದಲ್ಲಿ ರೋಮ ಬೃಹದ್ಗಜಗಳು, ಹಿಮಸಾರಂಗಗಳು ಮತ್ತು ಖಡ್ಗಮೃಗಗಳು ಹೇರಳವಾಗಿದ್ದುವು, ಅಲ್ಲಿ ಕ್ರೋಮ್ಯಾಗ್ನನ್ ಮಾನವರು ಗುಂಪು ಕಟ್ಟಿಕೊಂಡು ಬೇಟೆಯಾಡುತ್ತಿದ್ದರು. ಈ ಪ್ರಾಣಿಗಳನ್ನು ಕಂಗೆಡಿಸಿ ಕಡಿದಾದ ಪ್ರಪಾತ, ಇಕ್ಕಟ್ಟಾದ ಕಮರಿ ಅಥವಾ ಕೊರಕಲಿನ ಕಡೆಗೆ ಪಲಾಯನ ಮಾಡುವಂತೆ ಮಾಡಿ ಆಯಕಟ್ಟಿನ ಸ್ಥಳಗಳಲ್ಲಿ ಎದುರಿಸುವುದು ಬೇಟೆಯ ಕೌಶಲವಾಗಿತ್ತು. ಈ ಪ್ರಾಣಿಗಳ ಮಾಂಸವೇ ಇವರ ಆಹಾರ. ಇವುಗಳ ಚರ್ಮವನ್ನು ಹೊದಿಕೆಗೂ ಕೊಬ್ಬನ್ನು ದೀಪ ಉರಿಸುವುದಕ್ಕೂ ಎಲುಬನ್ನು ಆಯುಧಗಳ ತಯಾರಿಕೆಗೂ ಉಪಯೋಗಿಸುತ್ತಿದ್ದರು. ಜೊತೆಗೆ ಕ್ರೋಮ್ಯಾಗ್ನನ್ ಮಾನವ ಮೀನು ಹಿಡಿಯುವುದರಲ್ಲಿಯೂ ನಿಪುಣನಾಗಿದ್ದ. ಚಳಿಗಾಲದ ಹೆಚ್ಚು ಭಾಗವನ್ನು ಇವನು ಶಿಲೆಗಳ ಸಂದು ಅಥವಾ ಗವಿಗಳಲ್ಲಿ ಕಳೆಯುತ್ತಿದ್ದ. ಇವರಲ್ಲಿ ಸತ್ತವರನ್ನು ಹೂಳುತ್ತಿದ್ದರು. ಇವರಿಗಿಂತ ಹಿಂದೆ ಇದ್ದ ನಿಯಾಂಡರ್‌ತಲ್ ಮಾನವರಲ್ಲಿಯೂ ಇದೇ ಪದ್ಧತಿ ಇತ್ತು. ಆದ್ದರಿಂದ ಇವರಿಗೆ ಪುನರ್ಜನ್ಮದಲ್ಲಿ ನಂಬಿಕೆ ಇದ್ದ ಹಾಗೆ ಕಾಣುತ್ತದೆ. ಹೆಣಗಳಿಗೆ ಕಾವಿಮಣ್ಣನ್ನು ಸವರಿ ಹೂಳುತ್ತಿದ್ದರು. ಜೀವಿಸಿದ್ದಾಗಲೂ ತಮ್ಮ ಮೈಗೆ ಕೆಂಪು ಪಟ್ಟೆಗಳನ್ನು ಬಳಿದುಕೊಳ್ಳುವುದಿತ್ತು. ಕ್ರೋಮ್ಯಾಗ್ನನ್ ಮಾನವ ನಯವಾದ ಶಿಲಾಯುಧಗಳು ಮತ್ತು ಅಸ್ಥಿ ಆಯುಧಗಳ ತಯಾರಿಕೆಗೆ ಶಂಕುಸ್ಥಾಪನೆ ಮಾಡಿದುದೇ ಅಲ್ಲದೆ, ಪ್ರಪ್ರಥಮ ಕಲಾವಿದನಾಗಿ ಕಲೆಯ ಉಗಮಕ್ಕೆ ಕಾರಣೀಭೂತನೂ ಆಗಿದ್ದಾನೆ. ಅವನು ಕಂಡು ಮೆಚ್ಚಿದ ಮತ್ತು ಬೇಟೆಯಾಡಿದ ಪ್ರಾಣಿಗಳ ಚಿತ್ರಗಳನ್ನು ಕೆತ್ತನೆ, ಉಬ್ಬುಚಿತ್ರ ಮತ್ತು ಮೂರ್ತಿಶಿಲ್ಪಗಳ ಮೂಲಕ ಅಮರವಾಗಿಸಿದ್ದಾನೆ. ಅತಿಸೂಕ್ಷ್ಮಕಣಶಿಲೆಗಳು ಮತ್ತು ದಂತಗಳಲ್ಲಿ ಹೆಂಗಸರ ಚಿತ್ರ ಮತ್ತು ಪ್ರತಿಮೆಗಳನ್ನು ತಯಾರಿಸಿದ್ದಾನೆ. ಗರ್ಭಿಣಿಯರ ಉತ್ಪ್ರೇಕ್ಷಿತ ಚಿತ್ರ, ಕೆಲವು ಮಹಿಳೆಯರ ವಿಕಟ ಅಥವಾ ವಿರೂಪ ಚಿತ್ರ ಮತ್ತು ಮೂರ್ತಿಗಳನ್ನು ತಯಾರಿಸಿದ್ದಾನೆ. ದಂತದ ಆಯುಧಗಳಿಗೆ ಬಣ್ಣಹಾಕಿದ್ದಾನೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಎಲ್ಲೋರ ಅಜಂತ ಗುಹೆಗಳಲ್ಲಿರುವ ಹಾಗೆ ಕಲ್ಲುಗುಹೆಗಳಲ್ಲಿ ವರ್ಣಚಿತ್ರಗಳನ್ನು ತಯಾರಿಸುವುದು ಮಹತ್ತ್ವದ ಸಂಗತಿ. ಗುಹೆಗಳ ಗೋಡೆಗಳ ಮೇಲೆ ಆ ಕಾಲದ ಪ್ರಾಣಿಗಳ ಆಕೃತಿ, ನಿಸರ್ಗದಲ್ಲಿ ಕಂಡ ಅವುಗಳ ಬಣ್ಣ, ಅವನ್ನು ಬೇಟೆಯಾಡುವ ವಿಧಾನ ಮುಂತಾದವನ್ನು ಚಿತ್ರಿಸಿದ್ದಾನೆ. ಇವು ಅವನ ಮೃಗಾನ್ವೇಷಣೆಯ ಕಾರ್ಯದಲ್ಲಿ ಪ್ರಭಾವ ಹಾಗೂ ಚಾತುರ್ಯವನ್ನು ಇಮ್ಮಡಿಸುವ ಉದ್ದೇಶವಿರಬಹುದು. ಈ ಬುಡಕಟ್ಟಿನವರು ಸ್ಪಷ್ಟವಾದ ಭಾಷೆಯನ್ನು ಬಳಸುತ್ತಿದ್ದಿರಬೇಕು ಎಂದು ನಂಬಲಾಗಿದೆ. ಕ್ರೋಮ್ಯಾಗ್ನನ್ ಮಾನವ ದೈಹಿಕ ಮತ್ತು ಬೌದ್ಧಿಕ ಶಕ್ತಿಗಳೆರಡರಲ್ಲೂ ಉನ್ನತ ಹಂತವನ್ನು ತಲಪಿದ್ದ.

**ಕ್ರೊಮ್ಯಾಗ್ನನ್ ಮಾನವನ ಕಾಲ:** ಇವನು ಪ್ರ.ಶ.ಪೂ 30,000 ವರ್ಷಗಳ ಹಿಂದೆ ಇದ್ದನೆಂದು ಕಾರ್ಬನ್–14 ಕಾಲಮಾಪನ ಸೂಚಿಸುತ್ತದೆ. ಆದರೆ ಇವನ ಸಂಸ್ಕೃತಿಯ ಅವಶೇಷಗಳು 5,000–10,000 ವರ್ಷಗಳ ಹಿಂದೆ ಇದ್ದುದನ್ನು ಸೂಚಿಸುತ್ತದೆ. ಕ್ರೋಮ್ಯಾಗ್ನನ್ ಮಾನವನ ಅವಶೇಷಗಳು ಆರಿಗ್ನೇಷಿಯನ್ ಕಾಲದಿಂದ ವರ್ತಮಾನ ಕಾಲದವರೆಗಿನ ಎಲ್ಲ ಕಾಲಗಳ ಶಿಲೆಗಳಲ್ಲಿಯೂ ದೊರೆತಿವೆ. ಡಾರ್ಡೋಗ್ನೆ, ಸ್ಕ್ಯಾಂಡಿನೇವಿಯ, ಸ್ಪೇನ್ ದೇಶದ ಕೆಲವು ಭಾಗ ಮತ್ತು ಕ್ಯಾನರಿ ದ್ವೀಪಗಳಲ್ಲಿ ವಾಸಿಸುವ ಕೆಲವು ಜನಾಂಗಗಳಲ್ಲಿ ಕ್ರೋಮ್ಯಾಗ್ನನ್ ಲಕ್ಷಣಗಳು ಇವೆ ಎಂದು ಮಾನವಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

(ಡಿ.ಆರ್.)

**ಕ್ರೌಸ್, ಕಾರ್ಲ್ :** 1874–1936. ಆಸ್ಟ್ರಿಯದ ಪತ್ರಿಕೋದ್ಯಮಿ, ವಿಮರ್ಶಕ, ಪ್ರಬಂಧಕಾರ ಮತ್ತು ಕವಿ. ಚೆಕಸ್ಲೋವಾಕಿಯಾದ ಜಿಸಿನ್ ನಗರದಲ್ಲಿ ಜನಿಸಿದ ಈತ ವಿಯನ್ನ ವಿಶ್ವವಿದ್ಯಾಲಯದಲ್ಲಿ ಓದಿ ತನ್ನ ಜೀವಿತದ ಬಹುಭಾಗವನ್ನು ಅಲ್ಲಿಯೇ ಕಳೆದ. ಹಲವು ವರ್ಷಗಳ ಕಾಲ ಪತ್ರಿಕೋದ್ಯಮಿಯಾಗಿ ದುಡಿದ ಅನಂತರ ಡೀ ಫಾಕೆಲ್ (ಸ್ಪರ್ಶತೆ) ಎಂಬ ನಿಯತಕಾಲಿಕೆಯನ್ನು ಸ್ಥಾಪಿಸಿ (1899) ಆಸ್ಟ್ರಿಯನ್ ಸಮಾಜದಲ್ಲಿ ಮಧ್ಯವರ್ಗದ ಧನಿಕರನ್ನು ಟೀಕಿಸಿದ. ರಾಷ್ಟ್ರೀಯ ಸಮಾಜವಾದಿ ಪಂಥದ ಬೆಳವಣಿಗೆಯಿಂದ ಈ ಪತ್ರಿಕೆ ನಿಂತುಹೋಯಿತು (1936). ಪತ್ರಿಕೋದ್ಯಮಿಯಾಗಿ ಆಸ್ಟ್ರಿಯನ್ ಸಂಸ್ಕೃತಿ ಸಂಪ್ರದಾಯಗಳನ್ನು ಉಳಿಸಿಕೊಂಡು ಬರುವಂತೆ ಕ್ರೌಸ್ ಜನಕ್ಕೆ ಮನವಿ ಮಾಡಿದ. ಆಸ್ಟ್ರಿಯದ ಸಮಾಜ ಹಾಗೂ ಐರೋಪ್ಯ ಪದ್ಧತಿಗಳ ಶೈಥಿಲ್ಯದ ವಿರುದ್ಧ ಸೆಣಸಿದ. ಒಂದನೆಯ ಮಹಾಯುದ್ಧದ ಕಾಲದಲ್ಲಿ ಸೇನಾಪ್ರವೃತ್ತಿಯನ್ನು ವಿರೋಧಿಸಿದ. ಈತನ ಯುದ್ಧವಿರೋಧಿ ನಾಟಕ ಡೀ ಲೆಟ್ಸೆನ್ ಟಾಗೆ ಡೆರ್ ಮೆನ್ಷ್‌ಹೈಟ್ (ಮಾನವ ಜನಾಂಗದ ಕೊನೆಯ ದಿನಗಳು)–1918–22ರಲ್ಲಿ ಬೆಳಕಿಗೆ ಬಂತು. ವಿಡಂಬನೆಯಲ್ಲಿ ಈತನನ್ನು ಇಂಗ್ಲಿಷ್ ಸಾಹಿತ್ಯದ ಜೊನಾಥನ್ ಸ್ವಿಫ್ಟ್ ಹಾಗೂ ಲ್ಯಾಟಿನ್ ಸಾಹಿತ್ಯದ ಜುವೆನಲ್ ಇವರುಗಳಿಗೆ ಹೋಲಿಸುತ್ತಾರೆ.

(ಟಿ.ವಿ.ಎಸ್.)

**ಕ್ರ್ಯಾಬ್, ಜಾರ್ಜ್ :** 1754–1832. ಆಂಗ್ಲಕವಿ, ಉಪ್ಪಿನ ಸುಂಕ–ವಸೂಲಿಗಾರನೊಬ್ಬನ ಮಗ. ಸಫಕ್‌ನ ಆಲ್ಡೆಬರ್ಗ್‌ನಲ್ಲಿ ಹುಟ್ಟಿದ. ವೈದ್ಯನೊಬ್ಬನ ಬಳಿ ಉದ್ಯೋಗಾರ್ಥಿಯಾಗಿ ನಿಂತರೂ ಆ ಕೆಲಸದಲ್ಲಿ ಮನಸ್ಸಿಲ್ಲದೆ ಸಾಹಿತ್ಯದಲ್ಲಿ ತನ್ನ ಅದೃಷ್ಟವನ್ನು ಕಾಣಬೇಕೆಂದು ಲಂಡನ್ನಿಗೆ ತೆರಳಿದ. ಆದರೆ ಅದರಲ್ಲೂ ಯಶಸ್ಸು ಕಾಣದೆ ತೀರ ನಿರಾಶನಾಗಿ ಕೊನೆಗೊಂದು ದಿನ ಎಡ್‌ಮಂಡ್ ಬರ್ಕನಿಗೆ ತನ್ನ ಕೆಲವು ಲೇಖನಗಳನ್ನು ಲಗತ್ತಿಸಿ ಒಂದು ಪತ್ರ ಬರೆದ. ಈ ವ್ಯವಹಾರದಿಂದಾಗಿ ಬರ್ಕ್ ಈತನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಫಾಕ್ಸ್, ರೆನಾಲ್ಡ್ಸ್ ಮುಂತಾದವರ ಪರಿಚಯ ಮಾಡಿಕೊಟ್ಟ. 1781ರಲ್ಲಿ **ದಿ ಲೈಬ್ರರಿ** ಎಂಬ ಗ್ರಂಥವನ್ನು ಪ್ರಕಟಿಸಿ ಕ್ರ್ಯಾಬ್ ಸಾಕಷ್ಟು ಖ್ಯಾತಿಯನ್ನು ಗಳಿಸಿದ. ಕೆಲಕಾಲ ಡ್ಯೂಕ್ ಆಫ್ ರಟ್‌ಲೆಂಡನ ರಾಜಗುರುವಾಗಿದ್ದು ಅನಂತರ ಟ್ರೋಬ್ರಿಜ್‌ನ ರೆಕ್ಟರ್ ಆಗಿ ನೇಮಕಗೊಂಡ. ಅದೇ ಸುಮಾರಿಗೆ **ದಿ ವಿಲೇಜ್** ಎಂಬ ಪದ್ಯವನ್ನು ಹೊರತಂದ (1783). ಇದನ್ನು ಬರ್ಕ್ ಮತ್ತು ಜಾನ್ಸನರು ಪರಿಷ್ಕರಿಸಿದರು. ಅನಂತರದ ಕವನ ಸಂಕಲನದಲ್ಲಿ ಸೇರಿರುವ ದಿ ಪ್ಯಾರಿಷ್ ರಿಜಿಸ್ಟರ್ (1807) ಎಂಬ ನೀಳ್ಗವನದಲ್ಲಿ ಕ್ರ್ಯಾಬ್ ವರ್ಣನಾತ್ಮಕ ಚಿತ್ರಗಳನ್ನು ಹೆಣೆಯುವ ಸಾಮರ್ಥ್ಯವನ್ನು ಪ್ರಕಟಿಸಿದ್ದಾನೆ. ಇದು ಫಾಕ್ಸ್ ಮತ್ತು ವಾಲ್ಟರ್ ಸ್ಕಾಟರ ಪ್ರಶಂಸೆಯನ್ನು ಗಳಿಸಿತು. **ದಿ ಬರೊ** (1810) ಎಂಬುದು ಗ್ರಾಮವೊಂದರ ಬದುಕನ್ನು ಅನೇಕ ಕಥೆಗಳ ಮೂಲಕ ಚಿತ್ರಿಸುವ ಕೃತಿ. **ದಿ ಟೇಲ್ಸ್ ಆಫ್ ದಿ ಹಾಲ್** (1812) ಎಂಬ ಗ್ರಂಥ ಜಾನ್ ಮರ್ರೆಯಿಂದ 3,000 ಪೌಂಡುಗಳನ್ನು ಕೊಡುಗೆಯಾಗಿ ಪಡೆದುದಲ್ಲದೆ ಕ್ರ್ಯಾಬ್‌ನ ಅಸಾಧಾರಣ ವರ್ಣನಾಶಕ್ತಿ ಮತ್ತು ಪಾತ್ರಚಿತ್ರಣಸಾಮರ್ಥ್ಯವನ್ನು ಸಾರಿತು. ಕ್ರ್ಯಾಬ್‌ನ ಮರಣಾನಂತರ ಅವನ ಮಗ ತಂದೆಯ ಎಲ್ಲ ಕೃತಿಗಳನ್ನೂ ಒಂದು ಸಂಪುಟದಲ್ಲಿ ಹೊರತಂದಾಗ ಅದರಲ್ಲಿ ಕೆಲವು ಹೊಸಕಥೆಗಳು ಸೇರಿದ್ದವು. ಕ್ರ್ಯಾಬ್‌ನದು ವಾಸ್ತವದೃಷ್ಟಿ. ಬದುಕನ್ನು ತಾನು ಕಂಡಂತೆ ಅದರ ಸಮಸ್ತ ಕೊರತೆಗಳೊಡನೆ ಈತ ಚಿತ್ರಿಸಿದ್ದಾನೆ. ಆದುದರಿಂದಲೇ ಈತನನ್ನು ಬಡವರ ಕವಿ ಎಂದು ಬಣ್ಣಿಸಲಾಗಿದೆ. ಪ್ರಕೃತಿಯ ಕಟುಚಿತ್ರಗಳನ್ನೇ ರಚಿಸಿದ್ದರೂ ಈತ ಶ್ರೇಷ್ಠವರ್ಣಶಿಲ್ಪಿ ಎಂದು ಬೈರನ್ ಕ್ರ್ಯಾಬ್‌ನನ್ನು ಪ್ರಶಂಸಿಸಿದ್ದಾನೆ.

(ಎನ್.ಎಸ್.ಎಲ್.)

**ಕ್ರ್ಯಾಸ್ಯುಲ :** ಹೆಸರಾಂತ ಅಲಂಕಾರ ಸಸ್ಯ. ಕ್ರ್ಯಾಸ್ಯುಲೇಸೀ **(ನೋಡಿ– ಕ್ರ್ಯಾಸ್ಯುಲೇಸೀ)** ಕುಟುಂಬಕ್ಕೆ ಸೇರಿದೆ. ಇದಕ್ಕೆ ವಿಚಿತ್ರವಾದ ಹಾಗೂ ಆಕರ್ಷಕವಾದ ಎಲೆಗಳಿರುವುದರಿಂದ ಮತ್ತು ಇದು ಸುಂದರವಾದ ಹೂಗಳನ್ನು ಬಿಡುವುದರಿಂದ ಇದನ್ನು ಕುಂಡಸಸ್ಯ, ಕಲ್ಲೇರಿಸಸ್ಯ ಇತ್ಯಾದಿಯಾಗಿ ಉದ್ಯಾನಗಳಲ್ಲಿ ಬೆಳೆಸಲಾಗುತ್ತದೆ.

ಇದರಲ್ಲಿ ಸು. 250ಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ದಕ್ಷಿಣ ಆಫ್ರಿಕದ ಮೂಲವಾಸಿಗಳು. ಹೆಚ್ಚುಕಡಿಮೆ ಎಲ್ಲವೂ ಮೆದುಕಾಂಡದ ಮೂಲಿಕೆಗಳು. ಎತ್ತರ ಸುಮಾರು 1'–3' (ಕ್ರ್ಯಾ.ಆರ್ಬೊರೆಸೆನ್ಸ್ ಎಂಬ ಪ್ರಭೇದ ಮಾತ್ರ 8'–10' ಎತ್ತರಕ್ಕೆ ಬೆಳೆಯುತ್ತದೆ). ಎಲೆಗಳು ಸಾಮಾನ್ಯವಾಗಿ ಅಭಿಮುಖವಾಗಿ ಜೋಡಣೆಗೊಂಡಿರುತ್ತವೆ. ಕೆಲವು ಪ್ರಭೇದಗಳಲ್ಲಿ ಮಾತ್ರ ಕಮಲದ ಹೂವಿನ ದಳಗಳ ರೀತಿಯಲ್ಲಿ ಜೋಡಿಸಲ್ಪಟ್ಟಿರುತ್ತವೆ. ಕ್ರ್ಯಾಸ್ಯುಲದ ವಿವಿಧ ತಳಿಗಳಿಗನುಸಾರವಾಗಿ ಅವುಗಳ ಎಲೆಗಳ ಆಕಾರ ಮತ್ತು ಬಣ್ಣ ವ್ಯತ್ಯಾಸವಾಗುತ್ತವೆ. ಎಲೆಗಳು ದಪ್ಪ ಮತ್ತು ರಸಭರಿತವಾಗಿಯೂ ನಯವಾದ ಅಂಚುಳ್ಳವಾಗಿಯೂ ಇವೆ. ಹೂಗೊಂಚಲು ಮಧ್ಯಾರಂಭಿ ಮಾದರಿಯದು; ಸಾಮಾನ್ಯವಾಗಿ ಕವಲೊಡೆಯುವುದಿಲ್ಲ. ಅಪೂರ್ವವಾಗಿ ಕವಲೊಡೆಯಬಹುದು. ಹೂಗಳು ದ್ವಿಲಿಂಗಿಗಳು. ಪುಷ್ಪಪತ್ರಗಳು 5, ದಳಗಳು 5, ಇವು ಬಿಡಿಯಾಗಿರಬಹುದು ಇಲ್ಲವೆ ಬುಡದಲ್ಲಿ ಮಾತ್ರ ಪರಸ್ಪರ ಕೂಡಿಕೊಂಡಿರಬಹುದು. ಕೇಸರಗಳು 5, ಉದ್ದದಲ್ಲಿ ಹೂದಳಗಳಿಗಿಂತ ಚಿಕ್ಕವು. ಅಂಡಾಶಯ ಉಚ್ಚಸ್ಥಾನದ್ದು, ಫಲ ಫಾಲಿಕಲ್ ಮಾದರಿಯದಾಗಿದ್ದು, ಅಸಂಖ್ಯ ಬೀಜಗಳನ್ನೊಳಗೊಂಡಿದೆ.

ಉದ್ಯಾನಗಾರಿಕೆಯಲ್ಲಿ ಪ್ರಮುಖವಾಗಿರುವ ಪ್ರಭೇದಗಳಿವು–ಕ್ರ್ಯಾ.ಕ್ವಾಡ್ರಿಫಿಡ, ಕಾರ್ಡೇಟ, ಲ್ಯಾಕ್ಟಿಯ, ಲೈಕೋಪೋಡಿಯಾಯ್ಡಿಸ್, ಆರ್ಬೊರೆಸೆನ್ಸ್, ಫ್ಯಾಲ್ಕೇಟ, ಟೆಟ್ರಗೋನ ಮತ್ತು ಸ್ಕ್ಯಾಬ್ರ, ಮೊದಲಾದುವು.

ಕ್ರ್ಯಾಸ್ಯುಲ ಸಸ್ಯಗಳನ್ನು ಕಾಂಡತುಂಡುಗಳು ಮತ್ತು ಬೀಜಗಳಿಂದ ವೃದ್ಧಿಮಾಡಬಹುದು. ಬೀಜಗಳಿಂದ ವೃದ್ಧಿ ಮಾಡುವುದಕ್ಕೆ ಹೆಚ್ಚು ಕಾಲ ಮತ್ತು ಶ್ರಮ ಹಿಡಿಯುವುದರಿಂದ ಕಾಂಡತುಂಡುಗಳಿಂದ ವೃದ್ಧಿಮಾಡುವುದೇ ವಾಡಿಕೆಯಲ್ಲಿರುವ ಕ್ರಮ. ಇವುಗಳಿಗೆ ಒಣವಾತಾವರಣ ಅಗತ್ಯ; ಪ್ರತಿನಿತ್ಯ ನೀರುಕೊಡುವ ಆವಶ್ಯಕತೆ ಇಲ್ಲ. ಇಟ್ಟಿಗೆ ಚೂರು, ಮರಳು ಮತ್ತು ಸ್ವಲ್ಪ ಗೊಬ್ಬರದ ಮಿಶ್ರಣದ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತವೆ. ಇವಕ್ಕೆ ಕೀಟಗಳ ಇಲ್ಲವೆ ಶಿಲೀಂಧ್ರ ರೋಗಗಳ ತೊಂದರೆ ಹೆಚ್ಚು ಇಲ್ಲವಾದರೂ ಮುನ್ನೆಚ್ಚರಿಕೆ ಕ್ರಮವಾಗಿ ಎರಡು ವಾರಗಳಿಗೆ ಒಂದು ಸಾರಿ ಕೀಟ ಮತ್ತು ಶಿಲೀಂಧ್ರ ನಾಶಕಗಳನ್ನು ಸಿಂಪಡಿಸಿದರೆ ಒಳ್ಳೆಯದು.

(ಬಿ.ಎ.ಸಿ.)

ಈತ ಶವಸಂಸ್ಕಾರದ ಸಂದರ್ಭಗಳಲ್ಲಿನ ಭಾಷಣಗಳಿಗೆ ಹೆಸರಾದವ. ಈತನ ಭಾಷಣಗಳು ಉಪಲಬ್ಧವಿಲ್ಲ. ಸ್ಯಾಟರ್ನಿಯನ್ ಛಂದಸ್ಸಿನಲ್ಲಿ ಈತ ರಚಿಸಿದ ಸಾರೋಕ್ತಿಗಳು ಮಾತ್ರ ಉಳಿದಿವೆ.

(ಎಲ್.ಎಸ್.ಎಸ್.)

**ಕ್ರ್ಯಾಸ್ಸುಲೇಸೀ :** ದ್ವಿದಳ ಸಸ್ಯವರ್ಗದ ಒಂದು ಕುಟುಂಬ. ಸು. 33 ಜಾತಿ ಮತ್ತು 1,300 ಪ್ರಭೇದಗಳನ್ನು ಒಳಗೊಂಡಿದೆ. ಇದಕ್ಕೆ ಸೇರಿದ ಸಸ್ಯಗಳು ಪ್ರಪಂಚದ ಒಣಹವೆಯುಳ್ಳ ಪ್ರದೇಶಗಳಲ್ಲಿ, ಮುಖ್ಯವಾಗಿ ಮಧ್ಯ ಏಷ್ಯದ ದಕ್ಷಿಣಭಾಗ, ದಕ್ಷಿಣ ಆಫ್ರಿಕ ಮತ್ತು ಸಮಶೀತೋಷ್ಣ ವಲಯದ ದ್ವೀಪಗಳಲ್ಲಿ ಹೇರಳವಾಗಿ ಕಾಣಬರುತ್ತವೆ.

ಕ್ರ್ಯಾಸ್ಸುಲೇಸೀ ಕುಟುಂಬದ ಪ್ರಭೇದಗಳಲ್ಲಿ ಮುಖ್ಯವಾದವು ಕ್ರ್ಯಾಸ್ಸುಲ, ಬ್ರಯೊಫಿಲಮ್, ಟೆಲ್ಲಿಯ ಕ್ಯಾಲ್ಯಾಂಕೋಯಿ, ಕಾಟಿಲೀಡನ್, ಎಚಿವಿರಿಯ, ಇಯೊನಿಮಾ ಮತ್ತು ಸೆಮ್‍ಪರ್‍ವೈವಮ್ ಇತ್ಯಾದಿ. ಭಾರತದಲ್ಲಿ ಕ್ರ್ಯಾಸ್ಸುಲ, ಬ್ರಯೊಫಿಲಮ್ ಮತ್ತು ಕೆಲಂಚೊ ಪ್ರಭೇದಗಳು ಸ್ವಾಭಾವಿಕವಾಗಿ ಬೆಳೆಯುತ್ತವೆ.

ಈ ಕುಟುಂಬಕ್ಕೆ ಸೇರಿದ ಸಸ್ಯಗಳು ಸಾಮಾನ್ಯವಾಗಿ ಮೂಲಿಕೆ ಅಥವಾ ಚಿಕ್ಕಚಿಕ್ಕ ಪೊದೆಗಳು. ಕಾಂಡ ಮತ್ತು ಎಲೆಗಳು ದಪ್ಪವಾಗಿದ್ದು ರಸಭರಿತವಾಗಿವೆ. ಎಲೆಗಳು ವೃಂತಪತ್ರರಹಿತ ಮತ್ತು ಸರಳ; ಇವುಗಳ ಜೋಡಣೆ ಪರ್ಯಾಯ, ಅಭಿಮುಖ ಇಲ್ಲವೆ ಸುತ್ತು ಮಾದರಿಯದು; ಅಂಚು ನಯ (ಬ್ರಯೊಫಿಲಮ್ ಮತ್ತು ಕ್ಯಾಲ್ಯಾಂಕೋಯಿಗಳಲ್ಲಿ ಎಲೆಯ ಅಂಚು ಗರಗಸದಂತಿದೆ). ಹೂಗೊಂಚಲು ಮಧ್ಯಾರಂಭಿ ಮಾದರಿಯದು. ಕೆಲವುವೇಳೆ ಕದಿರು (ಉದಾಹರಣೆಗೆ ಕಾಟಿಲೀಡನ್) ಇಲ್ಲವೆ ಸಂಕೀರ್ಣ(ಉದಾಹರಣೆಗೆ ಬ್ರಯೊಫಿಲಮ್) ಮಾದರಿಯದಾಗಿರಬಹುದು. ಹೂಗಳಿಗೆ ಉಪಪುಷ್ಪಪತ್ರಗಳಿವೆ; ಹೂಗಳು ಸಂಪೂರ್ಣ ಮತ್ತು ದ್ವಿಲಿಂಗಿಗಳು; ಆರೀಯ ಸಮರೂಪತೆಯನ್ನು ಪ್ರದರ್ಶಿಸುತ್ತವೆ. ಪುಷ್ಪಪತ್ರಗಳ ಸಂಖ್ಯೆ 4 – 30ರ ವರೆಗೆ ವ್ಯತ್ಯಾಸವಾಗುತ್ತದೆ. ಪತ್ರಗಳು ಬಿಡಿಬಿಡಿಯಾಗಿವೆ. ದಳಗಳ ಸಂಖ್ಯೆ ಪುಷ್ಪಪತ್ರಗಳ ಸಂಖ್ಯೆಗೆ ಸಮ. ಇವು ಕೂಡ ಬಿಡಿಬಿಡಿಯಾಗಿವೆ. ಕೇಸರಗಳ ಸಂಖ್ಯೆ ದಳಗಳ ಸಂಖ್ಯೆಯಷ್ಟೆ ಇರಬಹುದು ಇಲ್ಲವೆ ಇಮ್ಮಡಿಯಾಗಿರಬಹುದು. ಅಂಡಾಶಯ ಉಚ್ಚಸ್ಥಾನದ್ದು; 4 5 ಕಾರ್ಪೆಲುಗಳಿಂದ ಕೂಡಿದೆ. ಪ್ರತಿಯೊಂದು ಕಾರ್ಪೆಲಿನ ಬುಡದಲ್ಲಿ ಒಂದೊಂದು ಸಣ್ಣ ಹುರುಪೆಯಂತಿರುವ ಮಧುಗ್ರಂಥಿಯಿದೆ. ಅಂಡಕೋಶದ ಒಳಗೆ ಅದರ ಭಿತ್ತಿಗೆ ಅಂಟಿಕೊಂಡಿರುವ ಅಸಂಖ್ಯಾತ ಅಂಡಕಗಳಿವೆ. ಫಲ ಫಾಲಿಕಲ್ ಮಾದರಿಯದು. ಬೀಜಗಳು ಬಹು ಚಿಕ್ಕವು; ಗಾಳಿಯ ಮುಖಾಂತರ ಪ್ರಸಾರವಾಗುತ್ತವೆ.

ಕ್ರ್ಯಾಸ್ಸುಲೇಸೀ ಕುಟುಂಬದ ಕ್ರ್ಯಾಸ್ಸುಲ **(ನೋಡಿ)**, ಕೆಲಂಚೊ **(ನೋಡಿ)**, ಕಾಟಿಲೀಡನ್ **(ನೋಡಿ)**, ಸಂಪರ್‍ವೈವಮ್ ಪ್ರಭೇದಗಳು ಅಲಂಕಾರಸಸ್ಯಗಳೆಂದು ಹೆಸರಾಗಿದ್ದು ಉದ್ಯಾನಪ್ರಾಮುಖ್ಯ ಪಡೆದಿವೆ. (ಡಿ.ಆರ್.ಎ.)

**ಕ್ಲಚ್ಚು :** ಚಾಲಕದಂಡಗಳ ಅಕ್ಷರೇಖೆ ಒಂದೇ ಇರುವಾಗ ಒಂದು ಚಾಲಕದಂಡದ ಆವರ್ತಚಲನೆಯನ್ನು ಮತ್ತೊಂದು ಚಾಲಕದಂಡಕ್ಕೆ ರವಾನಿಸುವ ಯಂತ್ರ ಸಾಧನ. ಕ್ಲಚ್ಚುಗಳಲ್ಲಿ ಎರಡು ವಿಧ; 1. ಶುದ್ಧ ಕ್ಲಚ್ಚು, 2. ಕ್ರಮೇಣ ಒಂದು ಗೂಡುವ ಕ್ಲಚ್ಚು.

**1. ಶುದ್ಧ ಕ್ಲಚ್ಚು :** ಇದು ಅತ್ಯಂತ ಸರಳ ರೀತಿಯದು. ಚಾಲಕದಂಡದ ಮೇಲೆ ಹಿಂದು ಮುಂದೆ ಸರಿದಾಡಲು ಅನುಕೂಲವಾಗುವಂತೆ ಮಾಡಿರುವ ಜಾಗದಲ್ಲಿ ಶುದ್ಧಕ್ಲಚ್ಚು ಸರಿದಾಡುತ್ತದೆ. ಕ್ಲಚ್ಚುಪಟ್ಟಿಯ ಭಾಗದ ಮೇಲಿರುವ ಪಲ್ಲಟಸನ್ನೆಯೊಡನೆ ಇದು ಕಾರ್ಯ ನಡೆಸುತ್ತದೆ. ಈ ಕ್ಲಚ್ಚು ಜಾರುವುದಿಲ್ಲವಾದ್ದರಿಂದ ಉಷ್ಣ ಉತ್ಪತ್ತಿಯಾಗುವುದಿಲ್ಲ. ವೇಗ ಹೆಚ್ಚಿದಾಗ ಪರಸ್ಪರ ತೊಡರಿಕೊಳ್ಳುವ ಭಾಗಗಳು (ಇಂಟರ್‌ಲಾಕಿಂಗ್ ಪಾರ್ಟ್ಸ್) ಅಡ್ಡಬಂದು ಕ್ಲಚ್ಚಿನ ಭಾಗಗಳು ಒಂದಕ್ಕೊಂದು ಸೇರುವುದಕ್ಕೆ ತಡೆ ತರುತ್ತವೆ. ವೇಗ ಕಡಿಮೆ ಇದ್ದಾಗ ಈ ಭಾಗಗಳ ಸಂಪರ್ಕ ಏರ್ಪಡುವುದಿಲ್ಲ. ಧಕ್ಕೆಯ ಹೊರೆಯನ್ನು (ಶಾಕ್ ಲೋಡ್) ಈ ಕ್ಲಚ್ಚಿನಲ್ಲಿ ಯಶಸ್ವಿಯಾಗಿ ಚಾಲಕದಂಡಗಳಿಗೆ ರವಾನಿಸಬಹುದು.

ಶುದ್ಧ ಕ್ಲಚ್ಚನ್ನು ಬಳಸಿದಾಗ ಎರಡು ಚಾಲಕ ದಂಡಗಳೂ ಸಂಪೂರ್ಣವಾಗಿ ಒಂದುಗೂಡಿರಬೇಕು. ಇಲ್ಲವೆ ಸಂಪೂರ್ಣವಾಗಿ ಬೇರೆ ಬೇರೆ ಇರಬೇಕು. ಇಲ್ಲಿ ಚಾಲಕ ದಂಡಗಳು ಕ್ರಮೇಣ ಒಂದುಗೂಡಲು ಸಾಧ್ಯವಿಲ್ಲ. ಆದ್ದರಿಂದ ಈ ರೀತಿಯ ಕ್ಲಚ್ಚನ್ನು ಎಂಜಿನ್ ಮತ್ತು ಅಳವಡಿಕೆ ಪೆಟ್ಟಿಗೆಗಳ ನಡುವೆ ಉಪಯೋಗಿಸಲು ಆಗುವುದಿಲ್ಲ. ಇಂಥವುಗಳ ಬಳಕೆ ಇರುವುದು ಅಳವಡಿಕೆ ಪೆಟ್ಟಿಗೆ ಹಾಗೂ ಇತರ ಎಡೆಗಳಲ್ಲಿ.


ಚಿತ್ರ 1 ಚಚ್ಚೌಕ ದವಡೆ ಕ್ಲಚ್ಚು

ಶುದ್ಧ ಕ್ಲಚ್ಚುಗಳಲ್ಲಿ ಚೌಕ ದವಡೆ ಕ್ಲಚ್ಚು ಮತ್ತು ಸುರುಳಿ ದವಡೆ ಕ್ಲಚ್ಚು ಎಂಬ ಎರಡು ಮುಖ್ಯ ಪ್ರಭೇದಗಳಿವೆ.

**ಚೌಕ ದವಡೆ ಕ್ಲಚ್ಚು (ಸ್ಕ್ವೇರ್ ಜಾಕ್ಲಚ್) :** ಶುದ್ಧ ಕ್ಲಚ್ಚಿಗೆ ಎರಡು ಅಥವಾ ಹೆಚ್ಚು ದವಡೆಗಳಿರ ಬಹುದು. ಎದುರು ಬದಿರಿರುವ ಕ್ಲಚ್ಚುಗಳ ಈ ಚೌಕ ದವಡೆಗಳು ಒಂದಕ್ಕೊಂದು ಸೇರುತ್ತವೆ. ದವಡೆಗಳ ಮುಂಭಾಗ, ಪಕ್ಕ ಹಾಗೂ ತಳಭಾಗಗಳ ಆಕಾರ ಆಯಾಕಾರ. ಆದ್ದರಿಂದ ದವಡೆಗಳನ್ನು ಒಂದೇ ಸಮರೇಖೆಗೆ ತರುವವರೆಗೂ ಅವು ಒಂದಕ್ಕೊಂದು ಸೇರಿಕೊಳ್ಳುವುದಿಲ್ಲ. ಈ ಅಡಚಣೆಯಿಂದಾಗಿ ಚೌಕ ದವಡೆ ಕ್ಲಚ್ಚು ಬಲಿಷ್ಠವಾಗಿದ್ದು ಅದರ ತಯಾರಿಕೆ ಸುಲಭವಾಗಿದ್ದರೂ ಬಳಕೆ ಮಾತ್ರ ಮಿತಿಯಾಗಿದೆ.

**ಸುರುಳಿ ದವಡೆ ಕ್ಲಚ್ಚು :** ಇದು ಚೌಕ ದವಡೆ ಕ್ಲಚ್ಚಿನ ಮೇಲಿನ ಸುಧಾರಣೆ. ಅಲ್ಲಿ ದವಡೆಗಳು ಒಂದಕ್ಕೊಂದು ಸೇರಲು ಇದ್ದ ಅಡಚಣೆಯನ್ನು ಇಲ್ಲಿ ಯಶಸ್ವಿಯಾಗಿ ಸುಧಾರಿಸಲಾಗಿದೆ. ಇದು ಹೆಚ್ಚು ಬಳಕೆಯಲ್ಲಿರುವ ಶುದ್ಧ ಕ್ಲಚ್ಚು. ಬೇಕಿದ್ದಲ್ಲಿ ಕ್ಲಚ್ಚಿನ ಭಾಗಗಳ ಮೇಲ್ಮೈ ಮೇಲೆ ತಡೆಹಲ್ಲು ಚಕ್ರ ಮತ್ತು ಅಳವಡಿಕೆ ಹಲ್ಲುಗಳನ್ನು ಬಳಸಬಹುದು. ಯಾಂತ್ರಿಕ ಒತ್ತುಯಂತ್ರಗಳಲ್ಲಿ ಒತ್ತು ರಂಧ್ರಿಕಗಳ ಭಾಗಗಳನ್ನು ನಡೆಸಲು ಇದನ್ನು ಬಹಳವಾಗಿ ಬಳಸುತ್ತಾರೆ.

**2. ಕ್ರಮೇಣ ಒಂದುಗೂಡುವ ಕ್ಲಚ್ಚು:** ಇದನ್ನು ಬಳಸಿದಾಗ ಒಂದು ಚಾಲಕದಂಡ ತೀವ್ರವೇಗದಿಂದ ಆವರ್ತಿಸುತ್ತಿರಬಹುದು. ಮತ್ತೊಂದು ನಿಶ್ಚಲವಾಗಿರಬಹುದು ಇಲ್ಲವೆ ಕಡಿಮೆ ವೇಗದಲ್ಲಿ ಆವರ್ತಿಸುತ್ತಿರಬಹುದು. ಕ್ಲಚ್ಚಿನ ಒಂದುಗೂಡುವಿಕೆ ಮುಂದುವರಿದಂತೆಲ್ಲ ಎರಡು ಚಾಲಕದಂಡಗಳ ವೇಗವೂ ಕ್ರಮೇಣ ಒಂದೇ ಆಗುತ್ತದೆ. ಕ್ಲಚ್ಚು ಸಂಪೂರ್ಣವಾಗಿ ಒಂದುಗೂಡಿದ ಬಳಿಕ ಆ ದಂಡಗಳು ಆವರ್ತಿಸುತ್ತವೆ. ಈ ರೀತಿಯ ಕ್ಲಚ್ಚನ್ನು ಅಳವಡಿಕೆ ಪೆಟ್ಟಿಗೆ ಮತ್ತು ಎಂಜಿನ್ನುಗಳ ನಡುವೆ ಬಳಸುತ್ತಾರೆ. ಎರಡು ವಸ್ತುಗಳನ್ನು ಒಂದಕ್ಕೊಂದು ತಾಗುವಂತೆ ಅದುಮಿ ಹಿಡಿದಾಗ ಘರ್ಷಣೆ (ಫ್ರಿಕ್ಷನ್) ಉತ್ಪತ್ತಿಯಾಗುತ್ತದೆ. ಕ್ರಮೇಣ ಒಂದುಗೂಡುವ ಕ್ಲಚ್ಚಿನಲ್ಲಿ ಕಾರ್ಯ ಸಾಧನೆಗೆ ಘರ್ಷಣೆ ಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಘರ್ಷಣ ಕ್ಲಚ್ಚು ಎಂಬ ಹೆಸರು ಸಹ ಉಂಟು.

A ಮತ್ತು B ಚಾಲಕದಂಡಗಳು. C ಮತ್ತು D ಚಾಲಕದಂಡಗಳನ್ನು ಹೊತ್ತಿರುವ ಅಚ್ಚುಗಳು. ಚಾಲಕದಂಡಗಳು ಒಂದೇ ಅಕ್ಷರೇಖೆಯ ಮೇಲೆ ಎಡರುತೊಡರಿಲ್ಲದೆ ಆವರ್ತಿಸಬಹುದು. E ಮತ್ತು F ದುಂಡಾಗಿರುವ ಚಪ್ಪಟೆ ಭಾಗಗಳು ಎಂದರೆ ಬಿಲ್ಲೆಗಳು (ಡಿಸ್ಕ್ಸ್). ಇವನ್ನು ಚಾಲಕ ದಂಡಗಳ ಕೊನೆಗೆ ಎದುರುಬದಿರಾಗಿರುವಂತೆ ಸೇರಿಸಿದೆ. ಚಾಲಕ ದಂಡ A ಮತ್ತು ಅದರ ದುಂಡಾಗಿರುವ ಚಪ್ಪಟೆ ಭಾಗ E ಆವರ್ತಿಸುತ್ತಿವೆ ಎಂದೂ ಚಾಲಕ ದಂಡ B ಮತ್ತು ಅದರ ದುಂಡಾಗಿರುವ ಚಪ್ಪಟೆ ಭಾಗ F ನಿಶ್ಚಲವಾಗಿವೆ ಎಂದೂ ಭಾವಿಸೋಣ. ಎರಡು ಚಾಲಕದಂಡಗಳೂ ಒಂದಕ್ಕೊಂದು ಕೂಡಿಕೊಳ್ಳುವಂತೆ B ಬದಿ ಮತ್ತು D ಬದಿಯಿಂದ ಒತ್ತಡ ಹೇರಬೇಕು.



ಚಿತ್ರ 2

ದುಂಡು ಚಪ್ಪಟೆ ಭಾಗಗಳ ಮೇಲ್ಮೈಗಳಿಗೆ ಸಂಪರ್ಕವೇರ್ಪಟ್ಟ ಒಡನೆ ಅವುಗಳ ನಡುವೆ ಘರ್ಷಣೆ ಉತ್ಪತ್ತಿಯಾಗುತ್ತದೆ. ಇದು ದುಂಡಾಗಿರುವ ಚಪ್ಪಟೆ ಭಾಗ Eಯ ವೇಗವನ್ನು ಕಡಿಮೆ ಮಾಡುತ್ತದೆ. ಅದೇ ಸಂದರ್ಭದಲ್ಲಿ Fನ ವೇಗವನ್ನು ಹೆಚ್ಚಿಸುತ್ತದೆ. ಮೊದಮೊದಲು ಸಾಮಾನ್ಯವಾಗಿ ದುಂಡಾಗಿರುವ ಚಪ್ಪಟೆ ಭಾಗಗಳನ್ನು ಒತ್ತುವ ಬಲ ಕಡಿಮೆ. ಅಂದರೆ ಉತ್ಪತ್ತಿಯಾದ ಘರ್ಷಣೆಯೂ ಕಡಿಮೆ ಎಂದಾಯಿತು. ಚಾಲಕದಂಡದ ಚಲನನಿರೋಧ ಬಲ ಬಲುಮಟ್ಟಿಗೆ ಇದಕ್ಕಿಂತ ಹೆಚ್ಚಿರುತ್ತದೆ. ಆದ್ದರಿಂದ ಚಾಲಕದಂಡ B ಮೊದಮೊದಲು ನಿಶ್ಚಲ ಸ್ಥಿತಿಯಲ್ಲಿಯೇ ಇರುತ್ತದೆ. ಆದರೆ ದುಂಡಗಿರುವ ಚಪ್ಪಟೆ ಭಾಗಗಳು ಒಂದಕ್ಕೊಂದು ಒತ್ತುವ ಬಲ ಹೆಚ್ಚಿದಂತೆಲ್ಲ ಚಲನನಿರೋಧಬಲವನ್ನು ಜಯಿಸಿ ಚಾಲಕದಂಡ B ಚಲಿಸುವಂತೆ ಮಾಡುವಷ್ಟು ಘರ್ಷಣೆ ಉತ್ಪತ್ತಿಯಾಗುತ್ತದೆ. ಒಮ್ಮೆ ಚಲಿಸಲು ಮೊದಲುಮಾಡಿದ ಚಾಲಕದಂಡ ಕ್ರಮೇಣ ವೇಗವನ್ನು ಗಳಿಸುತ್ತದೆ. ಕ್ಲಚ್ಚು ಸಂಪೂರ್ಣವಾಗಿ ಒಂದುಗೂಡುವಾಗ ಉಭಯ ಚಾಲಕದಂಡಗಳ ವೇಗವೂ ಒಂದೇ ಇರುತ್ತದೆ. ಕ್ಲಚ್ಚು ಸಂಪೂರ್ಣವಾಗಿ ಒಂದುಗೂಡುವ ವರೆಗೂ E, F ಗಿಂತ ಹೆಚ್ಚು ವೇಗದಲ್ಲಿ ಆವರ್ತಿಸುತ್ತಿರುತ್ತದೆ. ಆದ್ದರಿಂದ ಅವುಗಳ ಮೇಲ್ಮೈ ಮೇಲೆ ಜಾರುವಿಕೆ ಇರುತ್ತದೆ. ಕ್ಲಚ್ಚು ಸಂಪೂರ್ಣವಾಗಿ ಒಂದುಗೂಡಿದಾಗ ಅವೆರಡೂ ಒಂದೇ ವೇಗದಲ್ಲಿ ಚಲಿಸುವುದರಿಂದ ಅವುಗಳ ನಡುವೆ ಜಾರುವಿಕೆ ಇರುವುದಿಲ್ಲ. ಮೋಟಾರು ಬಂಡಿಗಳಲ್ಲಿ ದುಂಡಗಿರುವ ಚಪ್ಪಟೆ ಭಾಗಗಳು ಒಂದಕ್ಕೊಂದು ಸಂಪರ್ಕಗಳಿಸುವಂತೆ ಒತ್ತಡ ಹೇರಲು ಸ್ಪ್ರಿಂಗುಗಳನ್ನು ಬಳಸುತ್ತಾರೆ. ಇವುಗಳಿಗೂ ಕ್ಲಚ್ಚಿಗೂ ಸದಾ ಸಂಪರ್ಕ ಇರುವುದು. ಕ್ಲಚ್ಚನ್ನು ಬೇರ್ಪಡಿಸಬೇಕಾದಲ್ಲಿ ಯಾವುದಾದರೂ ಒಂದು ದುಂಡಗಿರುವ ಚಪ್ಪಟೆ ಭಾಗವನ್ನು ಸ್ಪ್ರಿಂಗಿನ ಒತ್ತಡಕ್ಕೆ

ವಿರುದ್ಧ ದಿಕ್ಕಿನಲ್ಲಿ ಎಳೆಯಬೇಕು. ಕ್ರಮೇಣ ಒಂದುಗೂಡುವ ಕ್ಲಚ್ಚುಗಳಲ್ಲಿ ಶಂಕು ಕ್ಲಚ್ಚು ಮತ್ತು ನೇಮಿಕ್ಲಚ್ಚು ಎನ್ನುವ ಎರಡು ಮುಖ್ಯ ಪ್ರಭೇದಗಳಿವೆ.

**ಶಂಕು ಕ್ಲಚ್ಚು (ಕೋನ್ ಕ್ಲಚ್):** ಇದು ಒಂದು ರೀತಿಯ ಘರ್ಷಣ ಕ್ಲಚ್ಚು. ಇದರಲ್ಲಿ ದುಂಡಾಗಿರುವ ಚಪ್ಪಟೆ ಭಾಗಗಳಿರುವುದಿಲ್ಲ ಅವುಗಳ ಬದಲಿಗೆ ಶಂಕುವಿನ ಕತ್ತರಿಸಿದ ಭಾಗಗಳಿರುತ್ತವೆ ಇವನ್ನು ಬಳಸುವಾಗ ಇವುಗಳ ನಡುವೆ ಬೆಣೆ ಕ್ರಿಯೆ (ವೆಡ್ಜಿಂಗ್ ಆಕ್ಷನ್) ಉತ್ಪತ್ತಿಯಾಗುತ್ತದೆ. ಈ ಕ್ರಿಯೆ ಕಡಿಮೆ ಒತ್ತಡವನ್ನು ಹೇರಿದಾಗಲೂ ಘರ್ಷಣೆ ಭ್ರಾಮಕಶಕ್ತಿ ಯನ್ನು ರವಾನಿಸಲು ಸಹಾಯ ಮಾಡುತ್ತದೆ. ಶಂಕುವಿನ ಕೋನ 20°ಗಿಂತ ಕಡಿಮೆ ಇರಬಾರದು. ಇಲ್ಲವಾದಲ್ಲಿ ಕ್ಲಚ್ಚನ್ನು ಬೇರ್ಪಡಿಸು ವುದು ಕಷ್ಟಸಾಧ್ಯ. ಇಂಥ ಕ್ಲಚ್ಚಿನ ಕಾರ್ಯನಿರ್ವಾಹಕ ಸಾಮರ್ಥ್ಯಕ್ಕೆ ಬಹಳಷ್ಟು ಮಿತಿ ಉಂಟು.



ಚಿತ್ರ 3 ಶಂಕು ಕ್ಲಚ್ಚು

**ನೇಮಿ ಕ್ಲಚ್ಚು (ರಿಮ್ ಕ್ಲಚ್ಚು):** ಇದರಲ್ಲಿ ಮೇಲ್ಮೈ ಭಾಗಗಳು ನೇಮಿಯ ಒಳಭಾಗಕ್ಕೆ ಅಥವಾ ಹೊರಭಾಗಕ್ಕೆ ಒತ್ತಡವನ್ನು ಹೇರುತ್ತವೆ. ಈ ಕ್ಲಚ್ಚಿಗೆ ಹಿಗ್ಗುವ ಅಥವಾ ಕುಗ್ಗುವ ನೇತಾಡುವ ತಡೆಗಳಿವೆ. ಇವುಗಳಿಗೆ ಚಲನ ಸಲಕರಣೆಯಿಂದ ಸಂಪರ್ಕ ಒದಗುತ್ತದೆ. ಕ್ಲಚ್ಚನ್ನು ಹಿಗ್ಗಿಸುವ ಉಂಗುರಗಳು ಅಥವಾ ಹೊರಪಟ್ಟಿಗಳು ಇವುಗಳಿಗಿವೆ. ಇವನ್ನು ಪಲ್ಲಟಿಸಿದಾಗ ಕ್ಲಚ್ಚಿನ ನೇಮಿಗೆ ಭ್ರಾಮಕ ಶಕ್ತಿಯನ್ನು ರವಾನಿಸುತ್ತವೆ. ಮೇಲ್ಮೈಯನ್ನು ಹೆಚ್ಚಿಸಲು ನೇಮಿಯಲ್ಲಿ ಗುಳಿಗಳನ್ನು ಮಾಡಬಹುದು. ಕ್ಲಚ್ಚಿಗೆ ಹೊರ ಮತ್ತು ಒಳ ಬಿಗಿ ಇರಬಹುದು. ಇಲ್ಲವೆ ವಾಯುವಿನಿಂದ ಹಿಗ್ಗುವ ಕೊಳವೆಗಳು ನೇಮಿಗೆ ವಿರುದ್ಧವಾಗಿ ಮೇಲ್ಮೈ ಘರ್ಷಣೆಯನ್ನು ಹೂಡಬಹುದು. ಸಂಪರ್ಕಗೊಂಡಾಗ ಕ್ಲಚ್ಚು ಚಾಲಕದಂಡದೊಡನೆ ಚಲಿಸುವುದರಿಂದ ಅದರ ಸ್ಥಿರತೆಯನ್ನು ಗಮನದಲ್ಲಿಡಬೇಕು.

ಇತರ ಕ್ಲಚ್ಚುಗಳು, ಅತಿ ಓಟದ (ಓವರ್ ರನ್ನಿಂಗ್) ಕ್ಲಚ್ಚು : ಇದರಲ್ಲಿ ಓಡಿಸಲ್ಪಡುವ ಚಾಲಕದಂಡ ಅದನ್ನು ಓಡಿಸುವ ಚಾಲಕ ದಂಡಕ್ಕಿಂತ ಹೆಚ್ಚು ವೇಗವಾಗಿ ಓಡಬಹುದು. ಎರಡನೆಯ ಚಾಲಕದಂಡ ಓಡಿಸಲ್ಪಟ್ಟಾಗ ಕ್ಲಚ್ಚು ಜಾರುವುದಿಲ್ಲ. ಆದರೆ ಎರಡನೆಯ ಚಾಲಕದಂಡ ಮೊದಲನೆಯ ಚಾಲಕದಂಡಕ್ಕಿಂತ ವೇಗವಾಗಿ ಓಡಿದರೆ ಕ್ಲಚ್ಚಿನ ಭಾಗಗಳು ಸ್ವಯಂ ಬೇರ್ಪಡುತ್ತವೆ.

**ಕೇಂದ್ರಾಭಿಗಾಮಿ ಕ್ಲಚ್ಚು :** ಇದರಲ್ಲಿ ಆವರ್ತನೆಯ ವೇಗದ ಪರಿಣಾಮವಾಗಿ ಉತ್ಪತ್ತಿಯಾಗುವ ಕೇಂದ್ರಾಭಿಗಾಮಿ ಬಲದಿಂದ ಕ್ಲಚ್ಚು ಕಾರ್ಯನಡೆಸುತ್ತದೆ. ಇಂಥ ಕ್ಲಚ್ಚುಗಳ ಬಳಕೆ ಕಡಿಮೆ. ಏಕೆಂದರೆ ಗಾತ್ರ ಹೆಚ್ಚಿದಂತೆಲ್ಲ ಅವುಗಳ ನಿಯಂತ್ರಣ ಕಷ್ಟಸಾಧ್ಯ ಮತ್ತು ಬಳಕೆ ಅಪಾಯಕಾರಿ.



ಚಿತ್ರ 4 ವಿದ್ಯುತ್ಕಾಂತ ಕ್ಲಚ್ಚು

ದ್ರವಸಂಮರ್ದ ಕ್ಲಚ್ಚು (ಹೈಡ್ರಾಲಿಕ್ ಕ್ಲಚ್) ದ್ರವಸಂಮರ್ದದ ಸಂಯೋಜಕಗಳೂ (ಹೈಡ್ರಾಲಿಕ್ ಕಪ್ಲಿಂಗ್ಸ್) ಕ್ಲಚ್ಚುಗಳ ಕಾರ್ಯ ನಿರ್ವಹಿಸುತ್ತದೆ. ಇವುಗಳಷ್ಟು ನಯವಾಗಿ ಯಾಂತ್ರಿಕ ಕ್ಲಚ್ಚುಗಳು ಕೆಲಸ ಮಾಡಲಾರವು.

**ವಿದ್ಯುತ್ಕಾಂತ ಕ್ಲಚ್ಚು :** ವಾಹಕಗಳ ನಡುವಿನ ಕಾಂತಸಂಯೋಜಕಗಳು ಅನೇಕ ರೀತಿಯಲ್ಲಿ ಕ್ಲಚ್ಚುಗಳಿಗೆ ಆಧಾರ. ವಿದ್ಯುತ್ತನ್ನು ಒಯ್ಯುವ ತಂತಿ ಮತ್ತು ಕಾಂತ ಬಲವಿರುವ ಕ್ಲಚ್ಚಿನ ತಟ್ಟೆ ಇವುಗಳ ನಡುವೆ ಇರುವ ಕಾಂತಾಕರ್ಷಣೆ ದುಂಡಾಗಿರುವ ಚಪ್ಪಟೆ ಭಾಗ ಕ್ಲಚ್ಚಿನ (ಡಿಸ್ಕ್ ಕ್ಲಚ್) ರೀತಿಯವನ್ನು ಚೋದಿಸಲು ಸಹಾಯ ಮಾಡುತ್ತದೆ. ಇಂಥ ಕ್ಲಚ್ಚುಗಳಲ್ಲಿ ಜಾರುವಿಕೆಯಿಂದಾಗಿ ಉಷ್ಣ ಉತ್ಪತ್ತಿಯಾಗುತ್ತದೆ. ಈ ಕಾರಣದಿಂದ ಕ್ಲಚ್ಚಿನ ತಟ್ಟೆಯ ಆಯುಸ್ಸು ಕಡಿಮೆಯಾಗುತ್ತದೆ. ಆದ್ದರಿಂದ ಉಷ್ಣನಿಯಂತ್ರಣ ಅತ್ಯಗತ್ಯ.

**ಕಾಂತತರಲ ಮತ್ತು ಪುಡಿ ಕ್ಲಚ್ಚು (ಮ್ಯಾಗ್ನೆಟಿಕ್ ಫ್ಲೂಯಿಡ್ ಅಂಡ್ ಪೌಡರ್ ಕ್ಲಚ್) :** ಚೆನ್ನಾಗಿ ನುರಿದ ಕಾಂತ ಪುಡಿಯನ್ನು ಎಣ್ಣೆಯಲ್ಲಿ ಬೆರೆಸಿ ಅಥವಾ ಬೆರೆಸದೆ ಕ್ಲಚ್ಚಿನ ದುಂಡಾಗಿರುವ ಚಪ್ಪಟೆ ಭಾಗದ ನಡುವಣ ಖಾಲಿ ಜಾಗದಲ್ಲಿ ಇಟ್ಟು ಅದಕ್ಕೆ ಕಾಂತಕ್ಷೇತ್ರವನ್ನು ಪ್ರಯೋಗಿಸಬೇಕು. ಆಗ ಕಣಗಳು ಒಂದುಗೂಡುತ್ತವೆ. ಇದರಿಂದಾಗಿ ಕ್ಲಚ್ಚಿನ ಎರಡು ಭಾಗಗಳ ನಡುವೆ ಘರ್ಷಣೆ ಉತ್ಪತ್ತಿಯಾಗುತ್ತದೆ. ಕಾಂತ ಪುಡಿಯನ್ನು ಎಣ್ಣೆಯಲ್ಲಿ ಬೆರೆಸಿದರೆ ಕಣಗಳ ನಷ್ಟ ಆಗುವುದಿಲ್ಲ. ಎಣ್ಣೆಯಲ್ಲಿ ಬೆರೆಸದೆ ಹಾಗೆಯೇ ಉಪಯೋಗಿಸಿದರೆ ಕಣಗಳ ನಷ್ಟವಾದರೂ ಕ್ಲಚ್ಚು ನಯವಾಗಿ ಕಾರ್ಯನಿರ್ವಹಿಸುತ್ತದೆ.

**ಸುಳಿ ವಿದ್ಯುತ್ ಪ್ರವಾಹ ಕ್ಲಚ್ಚು (ಎಡ್ಡಿ ಕರೆಂಟ್ ಕ್ಲಚ್):** ಕಾಂತಕ್ಷೇತ್ರದಿಂದ ಚೋದಿಸಲ್ಪಟ್ಟ ವಿದ್ಯುತ್ಪ್ರವಾಹ ಭ್ರಾಮಕಶಕ್ತಿಯನ್ನು ರವಾನಿಸುತ್ತದೆ. ಇಂಥ ಕ್ಲಚ್ಚುಗಳಲ್ಲಿ ವಿದ್ಯುತ್ಪ್ರವಾಹವನ್ನು ಒಯ್ಯುವ ತಂತಿ ಆವರ್ತಿಸುವ ಅಂಗದಲ್ಲಿ ಧ್ರುವಗಳನ್ನು ಸೃಷ್ಟಿಸುತ್ತದೆ. ಇವು ಮತ್ತೊಂದು ಆವರ್ತಿಸುವ ಅಂಗದಲ್ಲಿರುವ ವಾಹಕ ಉಂಗುರದಲ್ಲಿ ವಿದ್ಯುತ್ಪ್ರವಾಹವನ್ನು ಉತ್ಪತ್ತಿ ಮಾಡುತ್ತವೆ. ಚೋದಕ ಶಕ್ತಿ ಹೆಚ್ಚಿದಂತೆ ಹಾಗೂ ಜಾರುವಿಕೆ ಹೆಚ್ಚಿದಂತೆ ಭ್ರಾಮಕಶಕ್ತಿ ಹೆಚ್ಚುತ್ತದೆ. ಚೋದಕ ಶಕ್ತಿ ಗಾತ್ರವನ್ನು ಅವಲಂಬಿಸಿದೆ. ಇದು ಒಟ್ಟು ಶಕ್ತಿಯ ಶೇ. 2 ರಷ್ಟಿರುವುದು.

**ಕಾಂತಜಡತ್ವ (ಹಿಸ್ಟೆರಿಸಿಸ್) ಕ್ಲಚ್ಚು :** ಕ್ಲಚ್ಚಿನ ಒಂದು ಭಾಗದಲ್ಲಿರುವ ತಂತಿಯ ಚೋದನೆ ಅಭಿವಾಹ (ಫ್ಲಕ್ಸ್) ಕ್ಷೇತ್ರವನ್ನು ಉಂಟುಮಾಡುತ್ತದೆ. ಈ ಕ್ಷೇತ್ರಕ್ಲಚ್ಚಿನ ಮತ್ತೊಂದು ಭಾಗದಲ್ಲಿರುವ ಕಬ್ಬಿಣದ ಉಂಗುರವನ್ನು ಕಾಂತವನ್ನಾಗಿ ಮಾಡುತ್ತದೆ. ಇದರಿಂದಾಗಿ ಕಬ್ಬಿಣದ ಉಂಗುರದಲ್ಲಿ ಧ್ರುವಗಳ ಸೃಷ್ಟಿ ಆಗುತ್ತದೆ. ಧ್ರುವಗಳಿಗೂ ನಿಯಂತ್ರಣ ಕ್ಷೇತ್ರಕ್ಕೂ ಆಕರ್ಷಣೆ ಬಹಳ. ಇದರಿಂದ ಉತ್ಪತ್ತಿಯಾದ ಭ್ರಾಮಕ ಶಕ್ತಿ ಕ್ಲಚ್ಚಿನ ಎರಡು ಭಾಗಗಳ ನಡುವೆ ಇರುವ ಆವರ್ತನೆಯನ್ನು ವಿರೋಧಿಸುತ್ತದೆ. ಕಾಂತಜಡತ್ವ ಕ್ಲಚ್ಚಿನಲ್ಲಿ ಜಾರುವಿಕೆ ಕಡಿಮೆ. ಇದರ ಬಾಳಿಕೆ ಹೆಚ್ಚು.

ಕ್ಲಚ್ಚಿನ ನೆರವಿನಿಂದ ಚಾಲಕದಂಡಗಳ ಮೂಲಕ ಶಕ್ತಿಯನ್ನು ರವಾನಿಸಬಹುದಷ್ಟೆ. ಆದರೆ ಈ ರವಾನಿಸುವಿಕೆಗೆ ಬಹಳಷ್ಟು ಮಿತಿಗಳಿವೆ. ಚಾಲಕದಂಡಗಳ ಆವರ್ತನವೇಗ, ಉತ್ಪತ್ತಿಯಾಗುವ ಭ್ರಾಮಕಶಕ್ತಿ, ಯಾಂತ್ರಿಕ ಭಾಗಗಳಿಗೆ ಬೇಕಾದ ಸ್ಥಳ, ಘರ್ಷಣೆ ಬಲವನ್ನು ಹೇರಲು ಆವಶ್ಯಕವಾದ ವಸ್ತುಗಳ ದೊರೆಯುವಿಕೆ ಹಾಗೂ ಯಂತ್ರ ಜೋಡಣೆಯ ಉಷ್ಣವನ್ನು ಆರಿಸುವ ಶಕ್ತಿ ಈ ಮಿತಿಗಳಿಗೆ ಕಾರಣ. *(ಎಚ್.ಎಲ್.ಕೆ.)*

**ಕ್ಲಫ್, ಆರ್ಥರ್ ಹ್ಯೂ :** 1819–61. ಆಂಗ್ಲಕವಿ. ಹತ್ತಿ ವ್ಯಾಪಾರಿಯೊಬ್ಬನ ಮಗ. ಲಿವರ್‌ಪೂಲಿನಲ್ಲಿ ಹುಟ್ಟಿದ. ಬಾಲ್ಯವನ್ನು ಅಮೆರಿಕದಲ್ಲಿ ಕಳೆದನಾದರೂ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಬಂದು ರಗ್‌ಬಿ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ ವ್ಯಾಸಂಗ ಮಾಡಿದ. ಓರಿಯಲ್ ಕಾಲೇಜಿನಲ್ಲಿ ಫೆಲೋ ಆಗಿದ್ದು(1842) ನ್ಯೂಮನ್ನನ ಪ್ರಭಾವಕ್ಕೆ ಒಳಗಾದ. ತನ್ನ ಧರ್ಮಭೀರುತನದಿಂದಾಗಿ ಫೆಲೋ ಹುದ್ದೆಗೆ ರಾಜೀನಾಮೆ ನೀಡಿ(1848) ರೋಮ್, ಪ್ಯಾರಿಸ್ ನಗರಗಳಲ್ಲಿ ಸುತ್ತಿ ಬಂದು ಲಂಡನ್ನಿನ ಯೂನಿವರ್ಸಿಟಿ ಹಾಲಿನ ವಾರ್ಡನ್ ಆಗಿ ನೇಮಕಗೊಂಡ(1849–52). 1848ರಲ್ಲಿ ಷಡ್ಗಣಪಾದಗಳಿಂದ ಕೂಡಿದ ದಿ ಬೋತೀ ಆಫ್ ಟೋಬರ್–ನಾ–ವೊಲಿಚ್ ಎಂಬ ಪದ್ಯವನ್ನು ಪ್ರಕಟಿಸಿದ. 1849ರಲ್ಲಿ ಅಮೂರ್ಸ್ ಡ ವಾಯೇಜ್ ಎಂಬ ಷಡ್ಗಣಪಾದಗಳ ಕವನವನ್ನೂ, 1850ರಲ್ಲಿ ಡಿಪ್‌ಸೈಕುಸ್ ಎಂಬ, ನಾಟಕೀಯ ಸಂಭಾಷಣೆಯಿಂದ ಕೂಡಿದ ಪದ್ಯವನ್ನೂ ಪ್ರಕಟಿಸಿದ. 1854ರಲ್ಲಿ ವಿದ್ಯಾ ಇಲಾಖೆಯ ಪರೀಕ್ಷಾಧಿಕಾರಿಯಾಗಿ ನೇಮಕಗೊಂಡ. ಸೈನಿಕ ಶಾಲೆಗಳ ಕಮಿಷನಿನ ಕಾರ್ಯದರ್ಶಿ ಹುದ್ದೆಯೇ ಈತನ ಕೊನೆಯ ಹುದ್ದೆಯಾಯಿತು. ಈ ಹುದ್ದೆಯಲ್ಲಿದ್ದಾಗ ಅನೇಕ ದೇಶಗಳನ್ನು ಸುತ್ತಿ ರೋಗಕ್ಕೆ ತುತ್ತಾಗಿ ಫ್ಲಾರೆನ್ಸಿನಲ್ಲಿ ಸತ್ತ. ಕ್ಲಫ್ ನಿಜಕ್ಕೂ ಸತ್ಯವನ್ನು ಅರಸುವ ಪ್ರಾಮಾಣಿಕ ಕವಿ ಎನಿಸಿದ್ದ. ಈತನ ಪದ್ಯಗಳು ಒಳ್ಳೆಯ ಆಲೋಚನೆಗಳಿಂದ ಕೂಡಿ ಸುಂದರವಾಗಿದ್ದರೂ ರಚನೆ ಮತ್ತು ವಿನ್ಯಾಸದಲ್ಲಿ ಸಪ್ಪೆಯಾಗಿವೆ. ಬೋತೀ ಕವನದಲ್ಲಿ ಅಳವಡಿಸಿಕೊಂಡ ಷಡ್ಗಣಪಾದಗಳ ಛಂದಸ್ಸು ಹಲವು ಕಡೆ ತೀರ ಒರಟೊರಟಾಗಿದೆ ಎನಿಸುತ್ತದೆ. ಈತನ ಕೆಲವು ಭಾವಗೀತೆಗಳನ್ನು ಬಿಟ್ಟರೆ ಉಳಿದವು ಅಷ್ಟೇನೂ ಉತ್ತಮವಾದುವಲ್ಲವೆಂಬ ಮಾತಿದೆ. ಈತ ಮ್ಯಾಥ್ಯೂ ಆರ್ನಾಲ್ಡನ ಆಪ್ತಸ್ನೇಹಿತ. ಆರ್ನಾಲ್ಡ್ ಈತನನ್ನು ಕುರಿತು ಥಿರ್ಸಿಸ್ ಎಂಬ ಸುಂದರ ಶೋಕಗೀತೆಯೊಂದನ್ನು ರಚಿಸಿದ್ದಾನೆ. (ಎನ್.ಎಸ್.ಎಲ್.)

**ಕ್ಲಬ್ಬುಗಳು :** ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಕಲೆತು, ತನ್ನ ಸದಸ್ಯರೆಲ್ಲರ ಹಿತಕ್ಕಾಗಿ, ಸಹಕಾರಕ್ಕಾಗಿ ಆಗಾಗ ಸಭೆ ಸೇರಿ ಆಸಕ್ತಿಯ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವ ಸಂಘ, ಸಮಾಜ ಅಥವಾ ಕೂಟಗಳಿಗೆ ಇರುವ ಹೆಸರು. ಕಾಫಿ ಕ್ಲಬ್, ಟೆನಿಸ್ ಕ್ಲಬ್, ಲಿಟರರಿ ಕ್ಲಬ್ ಎಂಬಲ್ಲಿ ಈ ಪದ ಉಳಿದು ಬಂದಿದೆ. ಕ್ಲಬ್ ಎಂಬ ಪದಕ್ಕೆ ಸಮಾನಾರ್ಥಕವಾಗಿ ಸಂಘ,ಸಮಾಜ, ಕೂಟ, ಗೋಷ್ಠಿ ಎಂಬ ಪದಗಳಿವೆಯಾದರೂ

ಯಾವ ಒಂದೂ ಕ್ಲಬ್ಬಿನ ವೈಶಿಷ್ಟ್ಯ ಮತ್ತು ವ್ಯಾಪ್ತಿಯನ್ನು ಪಡೆದಿಲ್ಲವಾಗಿ ಅದೇ ಪದವನ್ನು ಇಲ್ಲಿ ಅಂಗೀಕರಿಸಲಾಗಿದೆ. ಪ್ರಾಚೀನ ಗ್ರೀಸಿನಲ್ಲಿ ಭೋಜನ, ಪಾನ, ಸಮೂಹವಿವಾಹ–ಇತ್ಯಾದಿ ಸಮಾರಂಭಗಳಲ್ಲಿ ಸೇರುತ್ತಿದ್ದ ಕೂಟಗಳಿಗೆ ಈ ಹೆಸರಿತ್ತು. ಅನಂತರ ಇದನ್ನು ಮತೀಯ ದೀಕ್ಷೆ ಪಡೆದವರ ಸಂಘಕ್ಕೂ ರಾಜಕೀಯ, ವಾಣಿಜ್ಯ, ವ್ಯಾಯಾಮ ಮುಂತಾದ ಗೋಷ್ಠಿಗಳಿಗೂ ಬಳಸಲಾಯಿತು. ರೋಮಿನಲ್ಲಿ ಮತೀಯ ಮತ್ತು ವಾಣಿಜ್ಯ ಸಂಘಗಳಿಗೆ ಈ ಹೆಸರಿತ್ತು. ಅವರ ರಾಜಕೀಯ ಸಂಘಗಳು ತಮ್ಮ ಉದ್ದೇಶ ಮತ್ತು ವ್ಯವಸ್ಥೆಗಳಲ್ಲಿ ಆಧುನಿಕ ಕ್ಲಬ್ಬುಗಳನ್ನೇ ಹೋಲುವಂತಿದ್ದುವು. ಆದರೆ ಕ್ರಮಕ್ರಮವಾಗಿ ಅವು ಪಿತೂರಿಯ ಕೂಟಗಳಾಗುತ್ತ ಬಂದದ್ದರಿಂದ ಜೂಲಿಯಸ್ ಸೀಸರ್ ರಾಷ್ಟ್ರಹಿತಕ್ಕೆ ಹಾನಿ ತರತಕ್ಕವೆಂದು ಬಗೆದು ಅವನ್ನು ದಮನ ಮಾಡಬೇಕಾಯಿತು. ಬಡ ಕುಟುಂಬಗಳಲ್ಲಿ ಸತ್ತವರ ಹೆಣಗಳ ಸಂಸ್ಕಾರಕ್ಕಾಗಿ ಹಣವೊದಗಿಸಲೋಸ್ಕರವೂ ಅಲ್ಲಿ ಕ್ಲಬ್ಬುಗಳು ಏರ್ಪಟ್ಟಿದ್ದುವು. ಭೋಜನಾನಂತರ ನಡೆಯುತ್ತಿದ್ದ ವಿಚಾರಗೋಷ್ಠಿಗಳಿಗೂ ಈ ಪದವನ್ನು ಬಳಸುತ್ತಿದ್ದರು. ಅಂಥ ಗೋಷ್ಠಿಯೊಂದರಲ್ಲಿ ಭಾಗವಹಿಸಿದ ಸಿಸಿರೋ ಅಲ್ಲಿಯ ಚರ್ಚೆ, ಸಂಭಾಷಣೆ ಮತ್ತು ಭಾಷಣಾದಿಗಳು ಅಂದಿನ ಊಟದಷ್ಟೇ ರುಚಿಕರವಾಗಿದ್ದುವೆಂದು ಪ್ರಶಂಸಿಸಿದ್ದಾನೆ. ಕ್ಲಬ್ಬುಗಳ ಆಡಳಿತಕ್ಕಾಗಿ ಸಮಿತಿಗಳನ್ನು ರಚಿಸುವುದು, ಕೆಲವು ನೀತಿನಿಯಮಗಳನ್ನೂ ವಿಧಾಯಕಗಳನ್ನೂ ಅನುಮೋದಿಸುವುದು ಈ ಕಾಲಕ್ಕಾಗಲೆ ಕಂಡುಬರುತ್ತಿತ್ತು ಎನ್ನಲಾಗಿದೆ. ಅಲ್ಲಿಯ ಸಾರ್ವಜನಿಕ ಸ್ನಾನಘಟ್ಟಗಳಲ್ಲಿ ಸೇರುತ್ತಿದ್ದವರಲ್ಲಿ ಕೂಡ ನಿಜವಾದ ಕ್ಲಬ್ಬಿನ ಮನೋಧರ್ಮ ಕಂಡುಬರುತ್ತಿತ್ತೆಂದು ಹೇಳಲಾಗಿದೆ.

**ಬ್ರಿಟಿಷ್ ಕ್ಲಬ್ಬುಗಳು :** ಇಂಗ್ಲೆಂಡಿನ ನಾಲ್ಕನೆಯ ಹೆನ್ರಿಯ ಕಾಲದಲ್ಲಿ ಲಂಡನ್ ನಗರದ ಮಿಡ್ಲ್ ಟೆಂಪಲ್ಲಿನ ಬಳಿಯ ಗೃಹವೊಂದರಲ್ಲಿ ಭೋಜನಕ್ಕಾಗಿ ಕ್ಲಬ್ಬಿನಂಥ ಕೂಟವೊಂದನ್ನು ಮಾಡಿಕೊಳ್ಳಲಾಗಿತ್ತು. ಎಲಿಜಬೆತ್ ರಾಣಿಯ ಕಾಲದಲ್ಲೂ ಸರ್ ವಾಲ್ಟರ್ ರ್‍ಯಾಲೆಯಿಂದ ಸ್ಥಾಪಿತವಾಗಿದ್ದ ಬ್ರೆಡ್ ಸ್ಟ್ರೀಟ್ ಕ್ಲಬ್ ಎಂಬುದು ಮರ್ಮೇಡ್ ಟ್ಯಾವರ್ನ್‌ನಲ್ಲಿ ಸೇರುತ್ತಿತ್ತು. ಮುಖ್ಯವಾಗಿ ಅದೂ ಒಂದು ಭೋಜನಕೂಟವೇ. 1616ರ ಸುಮಾರಿನಲ್ಲಿ ಟೆಂಪಲ್‌ಬಾರ್‌ನ ಬಳಿಯ ಡೆವಿಲ್ ಟ್ಯಾವರ್ನ್‌ನಲ್ಲಿ ಅಪಾಲೊ ಕ್ಲಬ್ ಎಂಬ ಕ್ಲಬ್ಬೊಂದನ್ನು ಬೆನ್ ಜಾನ್ಸನ್ ಆರಂಭಿಸಿದ್ದ. ಲೂಷಿಯಸ್ ಕ್ಯಾರಿ, ಸರ್ ಜಾನ್ ಸಕ್ಲಿಂಗ್,

ಲಂಡನಿನ ಕ್ರಾಕ್‌ಫರ್ಡ್ಸ್ ಕ್ಲಬ್ : ಸು. 1840

ರಾಬರ್ಟ್ ಹೆರಿಕ್ ಮುಂತಾದ ಪ್ರಸಿದ್ಧ ವ್ಯಕ್ತಿಗಳು ಅದರ ಸದಸ್ಯರಾಗಿದ್ದರು. ಕೇವಲ ಪುರುಷರಿಗೆಂದು ಆರಂಭವಾದ ಈ ಕ್ಲಬ್ಬಿನಲ್ಲಿ ವಿಶೇಷ ಸಂದರ್ಭಗಳಲ್ಲಿ ಮಹಿಳೆಯರಿಗೂ ಅವಕಾಶ ದೊರೆಯುತ್ತಿತ್ತು. 17ನೆಯ ಶತಮಾನದ ಮಧ್ಯಕಾಲದ ಸುಮಾರಿಗೆ ಕಾಫಿ ನಿಲಯಗಳು ಆರಂಭವಾದಂತೆ ಕ್ಲಬ್ಬುಗಳಿಗೆ ನಿರ್ದಿಷ್ಟ ರೂಪ, ನಿಗದಿಯಾದ ವಸತಿ ರೂಪುಗೊಳ್ಳುವಂತಾಯಿತು. ಕಾಫಿ ನಿಲಯದ ಒಡೆಯ ತನ್ನ ಗೃಹದಲ್ಲಿ ಕ್ಲಬ್ಬಿಗೆಂದು ಒಂದು ಕೊಠಡಿಯನ್ನು ಮೀಸಲಿಡುತ್ತಿದ್ದ. ಅದಕ್ಕೆ ಬಾಡಿಗೆ ಕೇಳುತ್ತಿರಲಿಲ್ಲ. ಅಲ್ಲಿಗೆ ಬರುತ್ತಿದ್ದ ಸದಸ್ಯರು ಕೊಳ್ಳುತ್ತಿದ್ದ ತಿಂಡಿ ತೀರ್ಥಗಳಿಂದ ಅವನಿಗೆ ಆದಾಯ ಬರುತ್ತಿತ್ತು. ಖ್ಯಾತ ವ್ಯಕ್ತಿಗಳು ಬರುತ್ತಿದ್ದುದರಿಂದ ಅವನ ಕಾಫಿ ನಿಲಯಕ್ಕೆ ಒಳ್ಳೆಯ ಹೆಸರೂ ಬರುತ್ತಿತ್ತು. ಆ ವೇಳೆಗೆ ಕ್ಲಬ್ ಎಂಬ ಪದಕ್ಕೆ ಆಧುನಿಕ ಅರ್ಥ ವ್ಯಾಪ್ತಿ ಬರತೊಡಗಿತು. ಸ್ಯಾಮ್ಯುಯೆಲ್ ಪೆಪ್ಸ್ ಪಾಲ್‌ಮಾಲ್‌ನಲ್ಲಿದ್ದ ವುಡ್ಸ್ ಟ್ಯಾವರ್ನ್ ಎಂಬ ಒಂದು ಕ್ಲಬ್ಬನ್ನು ಹೆಸರಿಸಿರುವುದಲ್ಲದೆ ಅವನೂ ಅವನ ಗೆಳೆಯರೂ ಅದರ ಸದಸ್ಯರಾಗಿಯೂ ಇದ್ದರು. 1659ರಲ್ಲಿ ಜೇಮ್ಸ್ ಹ್ಯಾರಿಂಗ್‌ಟನ್ ಸ್ಥಾಪಿಸಿದ ರೋಟಾ ಎಂಬುದು 17ನೆಯ ಶತಮಾನದಲ್ಲಿ ಖ್ಯಾತಿಪಡೆದಿದ್ದ ರಾಜಕೀಯ ಕ್ಲಬ್ಬು. ಲಾರ್ಡ್ ವಿಲಿಯಂ ರಸೆಲ್ ಮುಂತಾದ ರಾಜಕಾರಣಿಗಳು ಆಂಡ್ರೂ ಮಾರ್ವೆಲ್ ನಂಥ ಕವಿಗಳೂ ಅದರ ಸದಸ್ಯರಾಗಿದ್ದರು. ಪೆಪ್ಸ್ ಅದನ್ನು ಕಾಫಿಕ್ಲಬ್ ಎಂದು ಕರೆದಿದ್ದಾನೆ. ಬಹುಶಃ ವೆಸ್ಟ್‌ಮಿನ್‌ಸ್ಟರ್‌ನ ಕಾಫಿ ನಿಲಯವೊಂದರ ಕೊಠಡಿಯಲ್ಲಿ ಸೇರುತ್ತಿದ್ದುದರಿಂದ ಅದನ್ನು ಹಾಗೆ ಕರೆದಿರಬಹುದು. 1693ರಲ್ಲಿ ಮುಂದೆ ಟೋರಿಪಕ್ಷದ ಕಾರ್ಯಕೇಂದ್ರವಾಗಿ ಪರಿವರ್ತನೆಗೊಂಡ ಹ್ವೈಟ್‌ಕ್ಲಬ್ ಎಂಬ ಸಂಸ್ಥೆ ಹ್ವೈಟ್ ಎಂಬಾತನ ಒಂದು ಚಾಕೊಲೆಟ್ ನಿಲಯದಲ್ಲಿ ಆರಂಭವಾಗಿ ಪ್ರಸಿದ್ಧಿಪಡೆಯಿತು. ಮೊದಲು ಅದು ಸಾಮಾಜಿಕ ಸಂಘದಂತೆ ಆರಂಭವಾದರೂ ಅದರ ಒಡೆಯ ಸದಸ್ಯತ್ವವನ್ನು ಆಯ್ದ ವ್ಯಕ್ತಿಗಳಿಗೆ ಮಾತ್ರ ಮೀಸಲು ಮಾಡಿದ್ದುದಲ್ಲದೆ ಅದಕ್ಕಾಗಿ ನಿಯಮಾವಳಿಯನ್ನೂ ರೂಪಿಸಿದ್ದ. ಇದು 18ನೆಯ ಶತಮಾನದಲ್ಲಿ ಖ್ಯಾತಿಗಳಿಸಿ ಸ್ಥಳದಿಂದ ಸ್ಥಳಕ್ಕೆ ವರ್ಗವಾಗುತ್ತ ಕೊನೆಗೆ ಜಾನ್ ಆರ್ಥರನ ಯತ್ನದಿಂದ ಆರ್ಥರ್ಸ್ ಕ್ಲಬ್ ಆಗಿ ಪರಿವರ್ತನೆಗೊಂಡಿತು. 17ನೆಯ ಶತಮಾನದಲ್ಲಿ ಸ್ಟೂವರ್ಟ್ ದೊರೆಗಳ ಕಾಲದಲ್ಲಿ ರಾಯಲ್ ನೇವಿ ಎಂಬುದು ವಿಲಿಯಂ ಪೀಟರ್‌ಸನ್ ಎಂಬಾತನಿಂದ ಡಾಗ್ ಅಂಡ್ ಹ್ವಿಸ್ಲ್ ಟ್ಯಾವರ್ನ್‌ನಲ್ಲಿ ಆರಂಭವಾಗಿತ್ತು. ಪೀಟರ್‌ಸನ್ ಆ ಕಾಲದ ಆರ್ಥಿಕ ತಜ್ಞನೆನಿಸಿದ್ದ. ಮುಂದೆ ಬ್ಯಾಂಕ್ ಆಫ್ ಇಂಗ್ಲೆಂಡಿನ ಉದಯಕ್ಕೆ ಅಲ್ಲಿ ನಡೆಯುತ್ತಿದ್ದ ಕೂಟಗಳು ಅಸ್ತಿಭಾರ ಹಾಕಿದುವು.

18ನೆಯ ಶತಮಾನದಲ್ಲಿ ದೇಶಾದ್ಯಂತ ರಾಜಕೀಯ ಧ್ಯೇಯಗಳ ಕ್ಲಬ್ಬುಗಳು ಆರಂಭವಾದುವು. ಅವೆಲ್ಲ ಬಹುಮಟ್ಟಿಗೆ ಉಗ್ರನೀತಿ ಪ್ರತಿಪಾದಕ ಸಂಘಗಳಂತಿದ್ದುವು. ಒಂದನೆಯ ಚಾರ್ಲ್ಸ್‌ನ ಕ್ರೌರ್ಯವನ್ನೂ ಉದ್ದಂಡತನವನ್ನೂ ಧಿಕ್ಕರಿಸಿದ್ದ ಕಾವ್ಸ್ ಹೆಡ್ ಕ್ಲಬ್ ಎಂಬುದು ಪ್ರಸಿದ್ಧವಾದದ್ದು. ಪುಂಡರು ಪೋಕರಿಗಳು ರಚಿಸಿಕೊಂಡು, ಸಮಾಜಘಾತುಕ ಕಾರ್ಯಗಳನ್ನು ನಡೆಸುತ್ತಿದ್ದ ಕ್ಲಬ್ಬುಗಳೂ ಆ ಕಾಲದಲ್ಲಿ ಇದ್ದುವು. ಜೊತೆಗೆ ನಿರ್ದಿಷ್ಟ ದೃಷ್ಟಿ ಧ್ಯೇಯಗಳೇ ಇಲ್ಲದ ಕ್ಲಬ್ಬುಗಳೂ ಆರಂಭವಾಗಿದ್ದುವು. ಈ ಕ್ಲಬ್ಬುಗಳ ವಿವರ ಸ್ಪೆಕ್ಟೇಟರ್ ಪತ್ರಿಕೆಯಲ್ಲಿವೆ.

ಉತ್ತಮ ದೃಷ್ಟಿಧ್ಯೇಯಗಳಿಂದ ಪ್ರೇರಿತವಾಗಿ, ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡು, ಕೀರ್ತಿಪಡೆದಿದ್ದ ಆ ಕಾಲದ ಕ್ಲಬ್ಬುಗಳೆಲ್ಲ ಬಹುಮಟ್ಟಿಗೆ ರಾಜಕೀಯ ಬಣ್ಣದವಾಗಿದ್ದುವು. ಅಕ್ಟೋಬರ್ ಕ್ಲಬ್ ಎಂಬುದು ಟೋರಿಗಳದ್ದಾದರೆ, ಕೋಕೋ ಟ್ರೀ ಜಾಕೊಬೈಟ್ ಪಕ್ಷದವರದ್ದು. ಜೋನಾಥನ್ ಸ್ವಿಫ್ಟ್ ಎರಡನೆಯದರ ಸದಸ್ಯನಾಗಿದ್ದ. ಸೇಂಟ್ ಜೇಮ್ಸ್ ರಸ್ತೆಯಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಬ್ರೂಕ್ಸ್ ಕ್ಲಬ್ಬೂ ಆಗಲೆ ಆರಂಭವಾಯಿತು.

ಅಂದಿನ ಕ್ಲಬ್ಬುಗಳು ರಾಜಕೀಯವಾಗಿ ತುಂಬ ಪ್ರಭಾವಶಾಲಿಗಳಾಗಲಿಲ್ಲವಾಗಿ ಕ್ರಮೇಣ ಅವು ಸಾಮಾಜಿಕ, ಕಲಾತ್ಮಕ ಮತ್ತು ಸಾಹಿತ್ಯಾತ್ಮಕ ರುಚಿಪ್ರಸಾರಕ್ಕೆ ತವರೆನಿಸಿದ್ದುವು. ಬ್ರೂಕ್ಸ್ ಕ್ಲಬ್ಬಿನ ಸದಸ್ಯರು ಸಾಹಿತ್ಯದಲ್ಲಿ ರುಚಿಶುದ್ಧಿಯನ್ನು ತಂದರು. ಬ್ಲೂ ಸ್ಟಾಕಿಂಗ್ ಕ್ಲಬ್ಬಿನ ಸದಸ್ಯರು ಶ್ರೀಮಂತ ಸಮಾಜದ ನಯನಾಜೂಕಿನ ಜೀವನಕ್ಕೆ ಮಾರ್ಗದರ್ಶಿಗಳೆನಿಸಿದ್ದರು. 1714ರಲ್ಲಿ ಸ್ವಿಫ್ಟ್ ಸ್ಥಾಪಿಸಿದ ಸ್ಕ್ರಿಬ್ಲರ್ಸ್ ಕ್ಲಬ್ಬು ಅರ್ಲ್ ಆಫ್ ಆಕ್ಸ್‌ಫರ್ಡ್, ವೈಕೌಂಟ್ ಬೋಲಿಂಗ್ ಬ್ರೂಕ್ ಮುಂತಾದ ಸೌಂದರ್ಯೋಪಾಸಕರನ್ನೂ

ಪಾಲ್‌ಮಾಲ್ ವಿಭಾಗದಲ್ಲಿರುವ ಕ್ಲಬ್ಬುಗಳು : ಬಲಗಡೆ ಮುಂದಿನಿಂದ ಹಿಂದಕ್ಕೆ ಕಾರ್ಲ್‌ಟನ್ ಕ್ಲಬ್, ರಿಫಾರಂ ಕ್ಲಬ್, ಟ್ರ್ಯಾವಲರ್ಸ್ ಕ್ಲಬ್, ದಿ ಅಥೀನಿಯಂ, ದಿ ಯುನೈಟೆಡ್ ಸರ್ವಿಸಸ್ ಕ್ಲಬ್ಬುಗಳನ್ನು ಕಾಣಬಹುದು.

ಜಾನ್ ಗೇ, ಅಲೆಕ್ಸಾಂಡರ್ ಪೋಪ್‌ರಂಥ ಕವಿಗಳನ್ನೂ ಸದಸ್ಯರನ್ನಾಗಿ ಪಡೆದಿತ್ತು. 1734ರಲ್ಲಿ ಆರಂಭವಾದ ಡಲೆಂಟಾಂಟಿ ಕ್ಲಬ್ಬು ಕಲಾಕೃತಿಗಳನ್ನು ಸಂಗ್ರಹಿಸುವ ಹವ್ಯಾಸಿಗಳನ್ನು ಒಳಗೊಂಡಿತ್ತು. ಅಂದು ಅದು ಸಂಗ್ರಹಿಸಿದ್ದ ಜಾಷುವ ರೆನಲ್ಡ್ಸ್ ಮತ್ತು ಜಾರ್ಜ್ ನಾಪ್ಟನ್‌ರ ಚಿತ್ರಗಳನ್ನು ಇಂದಿಗೂ ಪಿಕ್ಯಾಡಿಲಿಯ ಸೇಂಟ್ ಜೇಮ್ಸ್ ಕ್ಲಬ್ಬಿನಲ್ಲಿ ರಕ್ಷಿಸಿಡಲಾಗಿದೆ. ಜೋಸೆಫ್ ಜೇಕಬ್ ಟಾನ್ಸನ್ ಎಂಬ ಪುಸ್ತಕ ವ್ಯಾಪಾರಿಯೊಬ್ಬ 18ನೆಯ ಶತಮಾನದ

ಆದಿಯಲ್ಲಿ ಸ್ಥಾಪಿಸಿದ ಕಿಟ್–ಕ್ಯಾಟ್ ಕ್ಲಬ್ಬು ಪ್ರಸಿದ್ಧ ಸಾಹಿತಿಗಳ ಸಮ್ಮೇಳನಗಳಿಗೆ ಆಶ್ರಯಸ್ಥಾನವಾಗಿತ್ತು. 1749ರಲ್ಲಿ ಜಾನ್ಸನ್ ಐವಿ ಲೇನ್ ಕ್ಲಬ್ಬನ್ನು ಆರಂಭಿಸಿದ. 15 ವರ್ಷಗಳ ಅನಂತರ ಜಾಷುವ ರೆನಲ್ಡ್ಸ್‌ನ ಸಹಕಾರದೊಡನೆ ಆತ ಮತ್ತೊಂದು ಕ್ಲಬ್ಬನ್ನು ಆರಂಭಿಸಿದ. ಅದರ ಹೆಸರು ದಿ ಕ್ಲಬ್ ಎಂದು. ಅದರ ಸದಸ್ಯರ ಸಂಖ್ಯೆಯನ್ನು 40ಕ್ಕೆ ಸೀಮಿತಗೊಳಿಸಲಾಗಿತ್ತು. ಆಲಿವರ್ ಗೋಲ್ಡ್ ಸ್ಮಿತ್, ಎಡ್ಮಂಡ್ ಬರ್ಕ್, ಡೇವಿಡ್ ಗ್ಯಾರಿಕ್, ಜೇಮ್ಸ್ ಬಾಸ್ವೆಲ್ ಜಾನ್ ಹಾಕಿನ್ಸ್ ಮುಂತಾದ ಪ್ರಸಿದ್ಧ ಪುರುಷರು ಅದರ ಸದಸ್ಯತ್ವ ಹೊಂದಿದ್ದರು. ಅನಂತರ ತಾನು ಸಾಯುವುದಕ್ಕೆ ಸ್ವಲ್ಪ ಮೊದಲು 1783ರಲ್ಲಿ ಜಾನ್ಸನ್ ಎಸೆಕ್ಸ್ ಹೆಡ್ ಎಂಬ ಮತ್ತೊಂದು ಕ್ಲಬ್ಬನ್ನು ಆರಂಭಿಸಿದ. ಬೂಡ್ಲ್ ಕ್ಲಬ್, ಕವೆಂಟ್ರಿ ಹೌಸ್‌ಕ್ಲಬ್ ಮುಂತಾದವೂ ಆ ಕಾಲದಲ್ಲಿ ಆರಂಭವಾಗಿ ಇಂದಿಗೂ ಉಳಿದುಕೊಂಡು ಬಂದಿವೆ.

ಇಂಗ್ಲೆಂಡಿನ ಮತ್ತು ಫ್ರಾನ್ಸಿನ ಮಾದರಿಯ ಕ್ಲಬ್ಬುಗಳ ಪ್ರಭಾವ 18ನೆಯ ಶತಮಾನದ ಕೊನೆಯ ವೇಳೆಗೆ ಆ ರಾಷ್ಟ್ರಗಳ ವಸಾಹತುಗಳಿಗೂ ಹರಿದು ಬಂತು. ಫ್ರೆಂಚರು ದಕ್ಷಿಣ ಭಾರತದಲ್ಲೂ ಇಂಗ್ಲಿಷರು ಕಲ್ಕತ್ತ, ಮದ್ರಾಸು ಮುಂತಾದೆಡೆಯೂ ಕೆಲವು ಕ್ಲಬ್ಬುಗಳನ್ನು ಆರಂಭಿಸಿದರು. ಟಿಪ್ಪೂ ಸುಲ್ತಾನ್ ಸಾಯುವುದಕ್ಕೆ ಸ್ವಲ್ಪ ಮುಂಚೆ, ಶ್ರೀರಂಗಪಟ್ಟಣದಲ್ಲಿ, ಕ್ಲಬ್ಬೊಂದನ್ನು ಫ್ರಾನ್ಸಿನ ರಾಜದೂತನೊಬ್ಬ ಆರಂಭಿಸಿದನೆನ್ನಲಾಗಿದೆ.

19–20ನೆಯ ಶತಮಾನಗಳಲ್ಲಿ ವಿವಿಧ ವೃತ್ತಿಯವರು, ವಿವಿಧ ಸಾರ್ವಜನಿಕ ಸೇವಾಕ್ಷೇತ್ರದವರು, ಮಕ್ಕಳು, ಯುವಕರು, ನಿವೃತ್ತ ಅಧಿಕಾರಿಗಳು, ಮಹಿಳೆಯರು, ಆಟಗಾರರು, ಹವ್ಯಾಸಿಗಳು, ಪ್ರವಾಸಿಗರು ತಮ್ಮದೇ ಆದ ಕ್ಲಬ್ಬುಗಳನ್ನು ಎಲ್ಲ ದೇಶಗಳಲ್ಲೂ ಸ್ಥಾಪಿಸತೊಡಗಿದರು. ಅವುಗಳಲ್ಲಿ ಖ್ಯಾತಿಗಳಿಸಿದ ಕೆಲವು ಕಲಾ ಮತ್ತು ಸಾಹಿತ್ಯಕ ಕ್ಲಬ್ಬುಗಳನ್ನು ಇಲ್ಲಿ ಉಲ್ಲೇಖಿಸಬಹುದು. 1823ರಲ್ಲಿ ಲಂಡನ್ನಿನ ಆಲ್ಬಿಮಾರ್ಲೆ ರಸ್ತೆಯ ಜಾನ್ ಮರ‍್ರೇ ನಿಲಯದಲ್ಲಿ ಜಾನ್ ವಿಲ್ಸನ್ ಕ್ರೋಕರ್ ಆರಂಭಿಸಿದ ಅಥೀನಿಯಂ ಎಂಬುದು ಇಂಗ್ಲೆಂಡಿನ ಆ ಕಾಲದ ಪ್ರಸಿದ್ಧ ಸಾಹಿತಿಗಳ ಸಂಪರ್ಕ ಹೊಂದಿತ್ತು. ವಾಲ್ಟರ್ ಸ್ಕಾಟ್, ಟಾಮ್ ಮೂರ್ ಮತ್ತು ಇತರ ಲೇಖಕರು ಅದರ ಸದಸ್ಯರಾಗಿದ್ದರು. 1868ರಲ್ಲಿ ಆರಂಭವಾದ ಸ್ಯಾವಿಲ್, 1857ರಲ್ಲಿ ಆರಂಭವಾದ ಸ್ಯಾವೇಜ್ ಎಂಬ ಕ್ಲಬ್ಬುಗಳು ಅಷ್ಟೇ ಖ್ಯಾತಿ ಗಳಿಸಿದ್ದುವು. 1863ರಲ್ಲಿ ಆರ್ಟ್ಸ್ ಕ್ಲಬ್ಬೂ 1891ರಲ್ಲಿ ಆಥರ್ಸ್ ಕ್ಲಬ್ಬೂ 1921ರಲ್ಲಿ ಪಿ.ಇ.ಎನ್. ಕ್ಲಬ್ಬಿನ ಮೂಲಕೇಂದ್ರವೂ ಆರಂಭವಾದುವು. ಆಗ ಎಂದರೆ 19ನೆಯ ಶತಮಾನದಲ್ಲಿ ಇಂಗ್ಲೆಂಡಿನ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ತಮ್ಮವೇ ಆದ ಕ್ಲಬ್ಬುಗಳೂ ಅಸ್ತಿತ್ವಕ್ಕೆ ಬಂದುವು. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳ ಸಂಘಗಳು 1830ರಲ್ಲಿ ಆರಂಭವಾದುವು. 1885ರಲ್ಲಿ ಸಿಟಿ ಯೂನಿವರ್ಸಿಟಿ ಕ್ಲಬ್ಬು ಅಸ್ತಿತ್ವಕ್ಕೆ ಬಂತು.

ರಾಜಕೀಯ ಕ್ಷೇತ್ರದಲ್ಲಿ ಆಗ ಎರಡು ಪ್ರಮುಖ ಕ್ಲಬ್ಬುಗಳು ಅಸ್ತಿತ್ವಕ್ಕೆ ಬಂದುವು. 1831ರಲ್ಲಿ ಕನ್ಸರ್‌ವೇಟಿವ್ ಪಕ್ಷದವರು ಕಾರ್ಲ್‌ಟನ್ ಕ್ಲಬ್ಬನ್ನೂ ಲಿಬರಲ್ ಪಕ್ಷದವರು ರಿಫಾರಂ ಕ್ಲಬ್ಬನ್ನೂ ಸ್ಥಾಪಿಸಿದರು. ಅವೆರಡೂ ಲಂಡನ್ ನಗರದಲ್ಲಿ ಭವ್ಯಮಂದಿರಗಳನ್ನು ಪಡೆದಿದ್ದುವು. ಅವೆರಡನ್ನು ಅನುಸರಿಸಿ ಇತರ ಅನೇಕ ರಾಜಕೀಯ ಕ್ಲಬ್ಬುಗಳು ಕ್ರಮೇಣ ಹುಟ್ಟಿಕೊಂಡುವು.

18ನೆಯ ಶತಮಾನದ ಕೊನೆಯಲ್ಲಿ ಕೆಲವು ಕ್ಲಬ್ಬುಗಳಲ್ಲಿ ಜೂಜಾಟ ನಡೆಯುತ್ತಿತ್ತು. ಮುಂದಿನ ಶತಮಾನದಲ್ಲಿ ಅಂಥ ಕ್ಲಬ್ಬುಗಳೂ ಇನ್ನೂ ಹೆಚ್ಚಿಕೊಂಡುವು. ದಾಳದಾಟ, ಇಸ್ಪೀಟಾಟ ಮುಂತಾದ ಜೂಜಿನಾಟಗಳಿಗೆ ಅವು ತವರೆನಿಸಿ ಸೋಮಾರಿ ಶ್ರೀಮಂತರಲ್ಲಿ ಕೆಲವರಿಗೆ ಅವು ಪ್ರಿಯವಾಗುತ್ತ ಬಂದುವು. ಆಟಗಾರರಿಗೆ ಅಲ್ಲಿ ಊಟ ತಿಂಡಿ ತೀರ್ಥಗಳಿಗೂ ಸಮರ್ಪಕ ಏರ್ಪಾಡಿದ್ದುದರಿಂದ ಅನೇಕರು ಮನೆ ಮಠಗಳನ್ನು ಮರೆತು ತಿಂಗಳುಗಟ್ಟಲೆ ಅಲ್ಲಿಯೇ ಮೊಕ್ಕಾಂ ಮಾಡುತ್ತಿದ್ದುದೂ ಉಂಟು. ಇದರ ಫಲವಾಗಿ ಆ ಶತಮಾನದ ಕೊನೆಕೊನೆಗೆ ಕ್ಲಬ್ಬು ಜೀವನವೆಂದರೆ ದೂಷ್ಯವೆಂಬ ಮನೋಭಾವ ಜನತೆಯಲ್ಲಿ ಬೆಳೆಯುತ್ತ ಬಂತು.

ವಿಕ್ಟೋರಿಯ ರಾಣಿಯ ಆಳ್ವಿಕೆಯ ಕೊನೆಕೊನೆಗೆ ಮಹಿಳಾ ಕ್ಲಬ್ಬುಗಳು ಆರಂಭವಾದುವು. ಅವುಗಳೆಲ್ಲ ಬಹುಮಟ್ಟಿಗೆ ಕೆಲಸಕ್ಕೆ ಸೇರಿದ್ದ ಮಹಿಳೆಯರ ವಸತಿಗೃಹಗಳ ರೂಪದಲ್ಲಿದ್ದವು. 1883ರ ವರೆಗೆ ಕ್ಲಬ್ಬುಗಳ ಸದಸ್ಯತ್ವ ಪುರುಷರಿಗೆ ಮಾತ್ರ ಮೀಸಲಾಗಿತ್ತು. ಕೆಲವು ಕ್ಲಬ್ಬುಗಳಲ್ಲಿ ಮಹಿಳೆಯರಿಗೆ ಪ್ರವೇಶವಿತ್ತಾದರೂ ಅದು ಕೇವಲ ರಿಯಾಯಿತಿ ರೂಪದಲ್ಲಿತ್ತು. ಅದೇ ವರ್ಷ ಅಲೆಕ್ಸಾಂಡ್ರಿಯ ಕ್ಲಬ್ಬು ಕೇವಲ ಮಹಿಳೆಯರಿಗೆ ಮಾತ್ರವೆಂದು ಆರಂಭವಾಯಿತು. ಒಮ್ಮೆ ಕಾರಣಾಂತರದಿಂದ ಅಲ್ಲಿಗೆ ಹೋಗಬಯಸಿದ ವೇಲ್ಸಿನ ರಾಜಕುಮಾರನಿಗೂ ಅಲ್ಲಿ ಪ್ರವೇಶ ದೊರೆಯಲಿಲ್ಲವಂತೆ. ಅನಂತರ 1887ರಲ್ಲಿ ವಿಶ್ವವಿದ್ಯಾಲಯದ ಮಹಿಳೆಯರ ಕ್ಲಬ್ಬೂ 1892ರಲ್ಲಿ ಪಯನಿಯರ್ ಕ್ಲಬ್ಬೂ ಆರಂಭವಾದುವು. ಮೂರು ವರ್ಷಗಳ ಅನಂತರ ಅಮೆರಿಕದಿಂದ ಲಂಡನ್ನಿಗೆ ಬರುತ್ತಿದ್ದ ಮಹಿಳೆಯರಿಗಾಗಿ ಅಮೆರಿಕನ್ ವಿಮೆನ್ಸ್ ಕ್ಲಬ್ಬೂ 1897ರಲ್ಲಿ ಎಂಪ್ರೆಸ್ ಕ್ಲಬ್ಬೂ ಜನ್ಮವೆತ್ತಿದುವು. ಲೇಡೀಸ್ ಎಂಪೈರ್ (1902). ಲಂಡನ್ ಲೈಸಿಯಂ(1904), ಲೇಡೀಸ್ ಕಾರ್ಲ್‌ಟನ್ (1906)–ಇವೆಲ್ಲ ಕ್ರಮೇಣ ಹುಟ್ಟಿದ ಕ್ಲಬ್ಬುಗಳು. ಹಾಗೆ ಆರಂಭವಾದ ಕ್ಲಬ್ಬುಗಳು ಕೇವಲ ವಿಹಾರಗೃಹಗಳಾಗಿರದೆ ಮಹಿಳೆಯರ ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಇತ್ಯಾದಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಚಳವಳಿ ಆರಂಭಿಸಿದ್ದು ಗಮನಾರ್ಹ ಸಂಗತಿ. ಕ್ರಮಕ್ರಮವಾಗಿ ಸಾಹಿತ್ಯ, ಸಂಗೀತ, ನೃತ್ಯ, ಆಟಪಾಟಗಳು, ರಾಜಕೀಯ ಇತ್ಯಾದಿ ಆಸಕ್ತಿಗಳಿಗೆಲ್ಲ ಪ್ರತ್ಯೇಕ ಮಹಿಳಾ ಕ್ಲಬ್ಬುಗಳು ನಿರ್ಮಾಣವಾದುವು. ಲಂಡನ್ನಿನಲ್ಲಿ ಮೊದಲು ಆರಂಭವಾದ ಮಹಿಳಾ ಕ್ಲಬ್ಬುಗಳು ಈ ಚಳವಳಿ ಕ್ರಮೇಣ ಗ್ರಾಮಾಂತರ ಪ್ರದೇಶಗಳಿಗೂ ಹರಡಿತು.

ಟ್ಯೂಡರ್ ದೊರೆಗಳ ಕಾಲದಿಂದಲೂ ಕ್ರೀಡಾ ಕ್ಲಬ್ಬುಗಳು ಅಸ್ತಿತ್ವದಲ್ಲಿದ್ದುವು. 18ನೆಯ ಶತಮಾನದ ಮಧ್ಯಕಾಲದಿಂದ ಇಂಗ್ಲೆಂಡಿನಲ್ಲೂ ಯುರೋಪಿನಲ್ಲೂ ಕ್ರೀಡಾಪಟುಗಳು ತಮ್ಮವೇ ಆದ ಕ್ಲಬ್ಬುಗಳನ್ನು ಏರ್ಪಡಿಸಿಕೊಳ್ಳಲಾರಂಭಿಸಿದರು. ಪ್ರಿನ್ಸ್ ಆರ್ಥರ್ಸ್ ನೈಟ್ಸ್, ಸನ್ಸ್ ಆಫ್ ದಿ ಥೇಂಸ್ ಎಂಬುವು ಅವುಗಳಲ್ಲಿ ಮುಖ್ಯವಾದುವು. ಥೇಂಸ್ ರೋಯಿಂಗ್ ಕ್ಲಬ್, ರಾಯಲ್ ಥೇಂಸ್ ಯಾಚ್ ಕ್ಲಬ್, ಲಂಡನ್ ರೋಯಿಂಗ್ ಕ್ಲಬ್, ರಾಯಲ್ ಟಾಕ್ಸೊಫಿಲೈಟ್ ಇವೆಲ್ಲ ಅದೇ ಮಾದರಿಯ ಕ್ಲಬ್ಬುಗಳು. ಹ್ಯಾಂಬಲ್ಡನ್ ಕ್ಲಬ್ಬಿನ ಸದಸ್ಯರು ಕ್ರಿಕೆಟ್ ಕ್ರೀಡೆಯ ಪ್ರಗತಿಗೆ ಅಸ್ತಿಭಾರ ಹಾಕಿದರು. ಇದು ಶಿಥಿಲವಾಗುತ್ತಿದ್ದಂತೆ ಪ್ರಖ್ಯಾತ ಎಂ.ಸಿ.ಸಿ.ಯ (ಮಾರ್ಲ್‌ಬನ್ ಕ್ರಿಕೆಟ್ ಕ್ಲಬ್) ಉದಯವಾಯಿತು(1787). 1750ರಲ್ಲಿ ಪಾಲ್‌ಮಾಲ್ ಎಂಬಲ್ಲಿಯ ಒಂದು ಕಾಫಿ ನಿಲಯದಲ್ಲಿ ಕುದುರೆಜೂಜಿನಲ್ಲಿ ಆಸಕ್ತಿಯಿದ್ದ ಕೆಲವರು ಜಾಕೀಸ್ ಕ್ಲಬ್ಬನ್ನು ಆರಂಭಿಸಿದರು. ಅದು ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ ನಡೆಯುತ್ತಿದ್ದ ಕುದುರೆ ಜೂಜಿಗೆ ಸಂಬಂಧಿಸಿದಂತೆ ನೀತಿನಿಯಮಗಳನ್ನು ರೂಪಿಸಲು ಶಕ್ತವಾಯಿತು. ಅನಂತರ ಟರ್ಫ್ ಕ್ಲಬ್, ವಿಕ್ಟೋರಿಯ ಕ್ಲಬ್ ಮತ್ತು ಇತರ ಕ್ಲಬ್ಬುಗಳೂ ಜೂಜಿನಲ್ಲಿ ಆಸಕ್ತಿಯಿದ್ದವರಿಂದ ಆರಂಭವಾದುವು. ಕಾಲಕ್ರಮದಲ್ಲಿ ಈಜುವ ಕ್ಲಬ್ಬು, ಗಾಲ್ಫರ್ಸ್ ಕ್ಲಬ್, ಫುಟ್‌ಬಾಲ್ ಕ್ಲಬ್, ಓಷನ್ ರೇಸಿಂಗ್ ಕ್ಲಬ್, ಆಲ್ಪೈನ್ ಕ್ಲಬ್–ಇತ್ಯಾದಿ ವಿವಿಧ ಆಟಗಳ ಕ್ಲಬ್ಬುಗಳು ಆರಂಭವಾದುವು.

ಪಟ್ಟಣಗಳಂತೆ ಗ್ರಾಮಾಂತರ ಪ್ರದೇಶಗಳಲ್ಲೂ ಕ್ಲಬ್ಬುಗಳು ಆರಂಭವಾದುವು. ಅವು ಗ್ರಾಮಜೀವನದ ಕೇಂದ್ರಗಳಂತಿದ್ದುವು. ವಿವಿಧ ಮೂಲಗಳಿಂದ ಚಂದಾಹಣವನ್ನು ಸಂಗ್ರಹಿಸಿ ಕಷ್ಟದಲ್ಲಿ ಸಿಕ್ಕಿದವರಿಗೆ ಸಹಾಯ ಮಾಡುವುದು ಅವುಗಳ ಒಂದು ಮುಖ್ಯ ಉದ್ದೇಶವಾಗಿತ್ತು. ಆಗಾಗ ಸದಸ್ಯರು ಊರಿನ ಒಂದೆಡೆ ಸಭೆ ಸೇರುತ್ತಿದ್ದರು. ವರ್ಷಕ್ಕೊಮ್ಮೆ ಆಟಪಾಟಗಳನ್ನೂ ಪೂಜೆಪುನಸ್ಕಾರಗಳನ್ನೂ ನಡೆಸುತ್ತಿದ್ದರು. ಮುಖ್ಯವಾಗಿ ಅವು ಬೆನಿಫಿಟ್ ಕ್ಲಬ್‌ಗಳಾಗಿದ್ದವು. ತಮ್ಮ ಸದಸ್ಯರಿಗೆ ಅಗತ್ಯವಾದಾಗ ಸಹಾಯ ನೀಡುತ್ತಿದ್ದ ಆ ಕ್ಲಬ್ಬುಗಳು ಈಚೆಗೆ ರಾಷ್ಟ್ರೀಯ ಜೀವವಿಮೆ ಜಾರಿಗೆ ಬಂದ ಮೇಲೆ ನಿಂತುಹೋದುವು.

**ಕ್ಲಬ್ಬುಗಳ ಅವನತಿ :** ಈಚೆಗೆ ಕಾರಣಾಂತರಗಳಿಂದ ಬ್ರಿಟಿಷ್ ಕ್ಲಬ್ಬುಗಳ ಪ್ರಾಶಸ್ತ್ಯ ಕುಗ್ಗುತ್ತಿದೆ. ತಮ್ಮ ಸಾಹಿತ್ಯ ಮತ್ತು ಇತಿಹಾಸದೊಡನೆ ಹೆಣೆದುಕೊಂಡು ಬಂದಿರುವ ಇವುಗಳ ಅವನತಿ ಅಲ್ಲಿಯ ಸಂಪ್ರದಾಯವಾದಿಗಳ ಮನಸ್ಸಿನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅವನತಿಗಿಂತಲೂ ತೀವ್ರತರವಾದ ಪರಿಣಾಮವನ್ನುಂಟು ಮಾಡಿದೆ. ಕ್ಲಬ್ಬುಗಳ ರಾಜಕೀಯ ಪ್ರಭಾವ ಇಂದಿಗೂ ಉಳಿದುಕೊಂಡು ಬಂದಿದ್ದರೂ ಯುವಜನರು ತಮ್ಮ ಜೀವನದ ಉನ್ನತಿಗಾಗಲಿ, ಅಂತಸ್ತಿನ ಸ್ಥಾಪನೆಗಾಗಲಿ ಇವನ್ನು ಆಶ್ರಯಿಸುತ್ತಿಲ್ಲ; ಅಲ್ಲಿಯ ಅಧಿಕಾರ ಸ್ಥಾನಮಾನಗಳನ್ನು ಗಳಿಸುವುದರಲ್ಲಿ ಯಾವ ಆಸಕ್ತಿಯನ್ನೂ ತೋರುತ್ತಿಲ್ಲ. ಏಕೆಂದರೆ ಆ ಸ್ಥಾನಗಳಿಗೆ ಹಿಂದಿದ್ದ ಮಹತ್ತ್ವ ಉಳಿದುಕೊಂಡು ಬಂದಿಲ್ಲ. ಆರ್ಥಿಕ ಸ್ಥಿತಿ ಹದಗೆಟ್ಟಿರುವುದರಿಂದ ಹೆಚ್ಚು ಸದಸ್ಯರನ್ನು ಆಕರ್ಷಿಸಲು ಸದಸ್ಯತ್ವದ ಶುಲ್ಕವನ್ನು ತಗ್ಗಿಸಲಾಗಿದೆ. ದುಡ್ಡು ಕೊಡಬಲ್ಲ ಯಾರನ್ನಾದರೂ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು ಕಂಡುಬರುತ್ತಿದೆ. ಸದಸ್ಯತ್ವ ನೀಡುವಲ್ಲಿ ವ್ಯಕ್ತಿಗಳ ಮನೆತನವನ್ನಾಗಲಿ ಸಾಮಾಜಿಕ ಸ್ಥಾನವನ್ನಾಗಲಿ ಅಷ್ಟಾಗಿ ಪರಿಗಣಿಸುತ್ತಿಲ್ಲ.

ಬೂಡ್ಲ್ಸ್, ಬ್ರೂಕ್ಸ್ ಹ್ವೈಟ್ಸ್ ಮುಂತಾದ ಕೆಲವು ಕ್ಲಬ್ಬುಗಳೇನೊ ಇನ್ನೂ ಉತ್ತಮಸ್ಥಿತಿಯಲ್ಲೇ ಇವೆ. ಅಲ್ಲಿ ಸದಸ್ಯತ್ವ ಪಡೆಯುವುದು ಸುಲಭವಲ್ಲ. ಅವುಗಳ ಆರ್ಥಿಕ ಸ್ಥಿತಿಯೂ ಚೆನ್ನಾಗಿದೆ. ಆದರೆ ಮಿಕ್ಕ ಬಹುತೇಕ ಕ್ಲಬ್ಬುಗಳು ಕ್ರಮೇಣ ತಮ್ಮ ಆಸ್ತಿಪಾಸ್ತಿಗಳನ್ನು ಮಾರಿಕೊಂಡು ಕರಗಿಹೋಗುತ್ತಿವೆ.

**ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕ್ಲಬ್ಬುಗಳು :** 17ನೆಯ ಶತಮಾನದ ಇಂಗ್ಲಿಷ್ ಕ್ಲಬ್ಬುಗಳು ಅಮೆರಿಕಕ್ಕೆ ಮಾದರಿಯೆನಿಸಿದುವು. 18ನೆಯ ಶತಮಾನದಲ್ಲಿ ಅಲ್ಲಿನ ಪ್ರಮುಖ ನಗರಗಳಲ್ಲಿ ಪ್ರಾರಂಭವಾದ ಕ್ಲಬ್ಬುಗಳು ಸದಸ್ಯರ ಸಾಮಾಜಿಕ ಜೀವನದ ಕೇಂದ್ರಗಳಾದುವು. ಅನಂತರ ಅವು ಕ್ರಮಕ್ರಮವಾಗಿ ಗ್ರಾಮಾಂತರ ಪ್ರದೇಶಗಳಿಗೂ ಹರಡಿದುವು. ನಗರಗಳಲ್ಲಿ ಮೊದಮೊದಲು ಆರಂಭವಾದವು ಕೇವಲ ಶ್ರೀಮಂತರನ್ನು ಮಾತ್ರ ಸದಸ್ಯರನ್ನಾಗಿ ಸೇರಿಸಿಕೊಂಡು ಹೆಚ್ಚು ಚಂದಾ ತೆಗೆದುಕೊಳ್ಳುತ್ತಿದ್ದುವು. ಅನಂತರ ಆರಂಭವಾದುವು ಸಾಹಿತ್ಯ, ಕಲೆ, ವಿಜ್ಞಾನ ಇತ್ಯಾದಿ ವಿಶಿಷ್ಟ ಆಸಕ್ತಿಯವರನ್ನು ಮಾತ್ರ ಸೇರಿಸಿಕೊಳ್ಳಲಾರಂಭಿಸಿದುವು. ಹಾಗೆಯೆ, ವಿವಿಧ ಕ್ರೀಡಾಕ್ಲಬ್ಬುಗಳೂ ಅಸ್ತಿತ್ವಕ್ಕೆ ಬಂದುವು.

ಪೌರಸತ್ತೆಯ ತತ್ತ್ವಕ್ಕೆ ರಾಷ್ಟ್ರದಲ್ಲಿ ಮನ್ನಣೆ ಹೆಚ್ಚಿದಂತೆ ಎಲ್ಲರನ್ನೂ ಸೇರಿಸಿಕೊಳ್ಳುವ ಸಾಮಾನ್ಯ ಕ್ಲಬ್ಬುಗಳು 19ನೆಯ ಶತಮಾನದಲ್ಲಿ ರಾಷ್ಟ್ರಾದ್ಯಂತ ಅಸ್ತಿತ್ವಕ್ಕೆ ಬಂದುವು. ಈ ನೂತನ ಕ್ಲಬ್ಬುಗಳು ಈಚೆಗೆ ದೇಶದ ರಾಜಕೀಯ ಜೀವನಕ್ಕೆ ಅಸ್ತಿಭಾರವಾಗಿ ಪರಿಣಮಿಸಿವೆ. ಚುನಾವಣೆಗಳಲ್ಲಿ ಅವು ಪ್ರಧಾನಪಾತ್ರ ವಹಿಸುತ್ತಿವೆ ಆದರೂ ಆಯಾ ಕ್ಲಬ್ಬು ತನ್ನ ಸದಸ್ಯರ ಸಾಮಾಜಿಕ ಜೀವನದ ಕಾರ್ಯಕ್ರಮಗಳಿಗೂ ವ್ಯವಸ್ಥೆ ಮಾಡುತ್ತಿದೆ. ಈಚೆಗೆ ವಿವಿಧ ರೀತಿಯ ಸೇವಾನಿರತ ಕ್ಲಬ್ಬುಗಳೂ ಆರಂಭವಾಗಿವೆ. ಅವುಗಳಲ್ಲಿ ಅಂತಾರಾಷ್ಟ್ರೀಯವಾಗಿ ವ್ಯಾಪಿಸಿ ಖ್ಯಾತಿಗಳಿಸಿರುವ ರೋಟರಿ ಕ್ಲಬ್, ಎಕ್ಸ್‌ಚೇಂಜ್ ಕ್ಲಬ್, ಕಿವಾನಿಸ್ ಕ್ಲಬ್, ಲಯನ್ಸ್ ಕ್ಲಬ್–ಇವು ಮುಖ್ಯವಾದುವು. ಇವೆಲ್ಲ ಆದರ್ಶ ಸದಸ್ಯತ್ವಕ್ಕೆ ಹೆಚ್ಚಿನ ಪ್ರಾಮುಖ್ಯವೀಯತಕ್ಕವು. ಜೊತೆಗೆ ವಿವಿಧ ಸೇವಾ ಕಾರ್ಯಕ್ರಮಗಳನ್ನು ಇವು ಏರ್ಪಡಿಸುತ್ತವೆ.

20ನೆಯ ಶತಮಾನದಲ್ಲಿ ಉದ್ಯೋಗಗಳು ಹೆಚ್ಚು ಹೆಚ್ಚು ಯಂತ್ರಚಾಲಿತವಾದಂತೆ ಕೆಲಸಗಾರರಿಗೆ ವಿರಾಮವೂ ಹೆಚ್ಚಾಗಿ ಸಿಕ್ಕುವಂತಾಯಿತು. ಇದರಿಂದ ನಗರಗಳಲ್ಲಿ ಕೇವಲ ವಿರಾಮಕಾಲದ ವಿನಿಯೋಗಕ್ಕೂ ವಿಹಾರಕ್ಕೂ ವಿಧವಿಧವಾದ ಕ್ಲಬ್ಬುಗಳು ಅಸ್ತಿತ್ವಕ್ಕೆ ಬಂದುವು. ನಗರ ಜೀವನದ ತೊಡಕುಗಳ ಫಲವಾಗಿ ಮೂಡಿಕೊಳ್ಳುವ ಜಂಜಡವನ್ನು ಕಳೆಯಲು ಹಲವು ರೀತಿಯ ಕ್ರೀಡಾಕ್ಲಬ್ಬುಗಳೂ ಆರಂಭವಾದವು. ಗ್ರಾಮಾಂತರ ಪ್ರದೇಶಗಳಲ್ಲೂ ಉಪನಗರಗಳಲ್ಲೂ ಹೇರಳವಾಗಿ ಆರಂಭವಾಗುತ್ತಿರುವ ಕಂಟ್ರಿ ಕ್ಲಬ್ಬುಗಳು ಮಧ್ಯಮವರ್ಗದ ಜನತೆಯ ಸಾಮಾಜಿಕ ಕೇಂದ್ರಗಳಾಗುತ್ತಿವೆ.

ಅಮೆರಿಕದಲ್ಲಿ ರಾಷ್ಟ್ರೀಯ ಮತ್ತು ಧಾರ್ಮಿಕ ರೀತಿಯ ಕ್ಲಬ್ಬುಗಳೂ ಆರಂಭವಾಗಿವೆ. ಪ್ರತಿಯೊಂದು ಧಾರ್ಮಿಕ ವರ್ಗದವರೂ ತಮ್ಮದೇ ಆದ ಕ್ಲಬ್ಬನ್ನು ಹೊಂದಿದ್ದು ಅಲ್ಲಿ ತಮಗೆ ಅನುಕೂಲಿಸುವಂತೆ ಧಾರ್ಮಿಕ, ಸಾಮಾಜಿಕ ಮತ್ತು ಇತರ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಳ್ಳುತ್ತಿರುವರು. ಇವುಗಳಲ್ಲಿ ಕೆಲವು ಆಯಾಧಾರ್ಮಿಕ ಪೀಠಗಳಿಗೆ ಅಂಗಸಂಸ್ಥೆಗಳಾಗಿರುವುದೂ ಉಂಟು.

ಅಮೆರಿಕದ ಮಹಿಳಾ ಕ್ಲಬ್ಬುಗಳು ವೈಶಿಷ್ಟ್ಯಪೂರ್ಣವೆನಿಸಿವೆ. ಸಂಖ್ಯೆಯಲ್ಲೂ ವ್ಯಾಪ್ತಿಯಲ್ಲೂ ಅವು ಮಿಕ್ಕೆಲ್ಲ ಕ್ಲಬ್ಬುಗಳಿಗಿಂತ ಅಧಿಕವಾಗಿರುವುದಲ್ಲದೆ ತಮ್ಮ ಎಲ್ಲ ಕ್ಲಬ್ಬುಗಳಿಗೂ ಅನ್ವಯವಾಗುವಂತೆ ರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡಿವೆ(1889). ಮೊದಮೊದಲು ಸಾಹಿತ್ಯ, ಲಲಿತಕಲೆ, ತೋಟಗಾರಿಕೆ ಇತ್ಯಾದಿಯಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದ ಆ ಕ್ಲಬ್ಬುಗಳು ಈಚೆಗೆ ಸಾಮಾಜಿಕ ಮತ್ತು ರಾಜಕೀಯ ಹವ್ಯಾಸಗಳ ಕಾರ್ಯಕ್ರಮಗಳಿಗೂ ಅವಕಾಶ ಕಲ್ಪಿಸುತ್ತಿದೆ.

**ಫೋರ್ ಎಚ್ ಕ್ಲಬ್ :** ಸಹಕಾರೀ ಬೇಸಾಯ ವಿಸ್ತರಣ ಪದ್ಧತಿಯಲ್ಲಿ ಬಾಲಕ ಬಾಲಕಿಯರಿಗಾಗಿ ಏರ್ಪಟ್ಟು ಅಮೆರಿಕದ ಸಂಯುಕ್ತಸಂಸ್ಥಾನಗಳ ಆದ್ಯಂತ ಅಂಗಸಂಸ್ಥೆಗಳನ್ನು ಹೊಂದಿರುವ ಒಂದು ವಿಶಿಷ್ಟರೀತಿಯ ಸಂಸ್ಥೆ ಇದು. ಬುದ್ಧಿ(ಹೆಡ್), ಹೃದಯ (ಹಾರ್ಟ್), ಆರೋಗ್ಯ (ಹೆಲ್ತ್), ಕೈ (ಹ್ಯಾಂಡ್)–ವ್ಯಕ್ತಿಶಿಕ್ಷಣದ ಮುಖ್ಯ ಅಂಗಗಳಾದ ಈ ನಾಲ್ಕಕ್ಕೆ ಗಮನವೀಯುವುದು ಈ ಕ್ಲಬ್ಬಿನ ಮುಖ್ಯ ಧ್ಯೇಯ. ಕ್ಲಬ್ಬಿನ ಹೆಸರಿನಲ್ಲಿ ಅದರ ಧ್ಯೇಯ ಅಡಗಿದೆ. ಬಾಲಕ ಬಾಲಕಿಯರಿಗೆ ಪ್ರತ್ಯೇಕವಾಗಿ ಅಥವಾ ಒಟ್ಟಿಗೆ ವ್ಯವಸಾಯ, ಗೃಹವಿಜ್ಞಾನ, ಹೊಲಗದ್ದೆಗಳಲ್ಲೂ ಮನೆಯಲ್ಲೂ ಜೀವನವನ್ನು ಉತ್ತಮಪಡಿಸಿಕೊಳ್ಳುವ ಮಾರ್ಗ, ಗ್ರಾಮಾಂತರ ಪ್ರದೇಶದಲ್ಲಿ ನಾಯಕತ್ವ ವಹಿಸಲು ಬೇಕಾಗುವ ಜ್ಞಾನ ಮತ್ತು ಅನುಭವ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

**ಭಾರತದಲ್ಲಿ ಕ್ಲಬ್ಬುಗಳು :** ಪಾಶ್ಚಾತ್ಯ ಮಾದರಿಯ ಕ್ಲಬ್ಬುಗಳನ್ನು ಹೋಲುವ ಸಂಸ್ಥೆಗಳು ಭಾರತದಲ್ಲಿ ಇತ್ತೀಚಿನ ಬೆಳವಣಿಗೆಯಾದರೂ ಪ್ರಾಚೀನ ಕಾಲದಲ್ಲಿ ಅಂಥ ಸಂಸ್ಥೆಗಳನ್ನು ಹೋಲುವ ಸಂಘಗಳಿದ್ದುದನ್ನು ಗುರುತಿಸಬಹುದು. ಮಹಾಭಾರತದ ಶಾಂತಿಪರ್ವದಲ್ಲಿ ಉಲ್ಲೇಖವಾಗಿರುವ ಗಣಗಳು ಈ ಮಾದರಿಯವಾಗಿದ್ದವು. ಸ್ಮೃತಿ ಮತ್ತು ನಿಬಂಧಗಳಲ್ಲೂ ಇವುಗಳ ಬಗ್ಗೆ ಉಲ್ಲೇಖವುಂಟು. ಪ್ರತಿಗಣಕ್ಕೂ ಒಬ್ಬ ಗಣಮುಖ್ಯ ಅಧ್ಯಕ್ಷನಾಗಿರುತ್ತಿದ್ದ. ಇವು ಕೇವಲ ಉದ್ಯೋಗ ಸಂಸ್ಥೆಗಳಂತಿದ್ದರೂ ಸಮಾಜ ಹಿತದ ಸೇವಾಕಾರ್ಯಗಳನ್ನೂ ಕೈಕೊಳ್ಳುತ್ತಿದ್ದುವು. ತಮ್ಮ ನಡೆವಳಿಕೆಯ ಬಗ್ಗೆ ಇವು ತಮ್ಮವೇ ಆದ ನೀತಿ ನಿಯಮಗಳನ್ನು ರೂಪಿಸಿಕೊಂಡಿದ್ದುವು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಂಥ ನೀತಿನಿಯಮಗಳನ್ನು ಸೂಚಿಸಿದೆ. ಇವು ರಾಷ್ಟ್ರಹಿತಕ್ಕೆ ಧಕ್ಕೆ ತರುವಂತೆ ನಡೆದಾಗ ರಾಜ ಇವುಗಳ ವಿಷಯದಲ್ಲಿ ಯುಕ್ತ ಕಾರ್ಯಕ್ರಮ ಕೈಗೊಳ್ಳುತ್ತಿದ್ದ. 12ನೆಯ ಶತಮಾನದ ಕರ್ಣಾಟಕದ ವೀರ ಬಲಂಜು ಎಂಬಲ್ಲಿನ ವಾಣಿಜ್ಯ ಸಂಘವೊಂದು ಡಂಬಳ ಎಂಬಲ್ಲಿ ಒಂದು ಕಲಾಶಾಸ್ತ್ರದ ವಿದ್ಯಾಲಯವನ್ನು ನಡೆಸುತ್ತಿತ್ತು. ಇದನ್ನು ಇಂದಿನ ರೋಟರಿ ಕ್ಲಬ್, ಲಯನ್ಸ್ ಕ್ಲಬ್ ಮುಂತಾದ ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ಹೋಲಿಸಬಹುದು.

ಭಾರತದಲ್ಲಿ ಸಾಮೂಹಿಕ ಜೀವನಕ್ಕೆಂದು ಏರ್ಪಟ್ಟಿದ್ದ ಸಾಮಾಜಿಕ, ಧಾರ್ಮಿಕ ಮತ್ತು ಇತರ ಉದ್ದೇಶಗಳನ್ನೊಳಗೊಂಡಿದ್ದ ಸಂಘಗಳು ಪ್ರಾಚೀನಕಾಲದಿಂದಲೂ ಕಂಡುಬರುತ್ತಿವೆ. ಅವುಗಳಲ್ಲಿ ಗರಡಿಯ ಮನೆ, ಭಜನೆಯ ಮನೆ, ನಾಟಕಮಂಡಲಿ, ನೃತ್ಯಮಂಡಲಿ, ಜೂಜುಕಟ್ಟೆ, ಗಸ್ತುಕೂಟ (ಹಳ್ಳಿಯ ಕಾವಲಿಗಾಗಿ) ಇತ್ಯಾದಿಗಳನ್ನು ಉಲ್ಲೇಖಿಸಬಹುದು. ಇವುಗಳ ಜೊತೆಗೆ ಗ್ರಾಮಜೀವನದಲ್ಲಿ ತಲೆದೋರಬಹುದಾದ ಪರಗ್ರಾಮದ ದಾಳಿ, ಅಲ್ಲಿಯವರ ಜಗಳ, ಮತೀಯವಾದದ ಸಮಸ್ಯೆ ಇತ್ಯಾದಿಗಳು ಉದ್ಭವಿಸಿದಾಗ ನಡೆಯುತ್ತಿದ್ದ ಕೂಟ, ಪಂಚಾಯತಿ ಇತ್ಯಾದಿಗಳೂ ಶಾಶ್ವತವಾಗಿಯೊ ತಾತ್ಕಾಲಿಕವಾಗಿಯೊ ಅಸ್ತಿತ್ವಕ್ಕೆ ಬರುತ್ತಿದ್ದುವು. ಜಾತ್ರೆ ಉತ್ಸವ ಮುಂತಾದವನ್ನು ನಿಯತಕಾಲದಲ್ಲಿ ನಡೆಸತಕ್ಕ ಹತ್ತೂಜನರ ಊರೊಟ್ಟಿನ ಕೂಟಗಳೂ ಇರುತ್ತಿದ್ದುವು. ಇವೆಲ್ಲ ಒಂದು ರೀತಿಯ ಕ್ಲಬ್ಬುಗಳಂತೆಯೇ ಕೆಲಸ ಮಾಡುತ್ತಿದ್ದುವು.

ಇಂಗ್ಲಿಷ್ ಮಾದರಿಯ ಕ್ಲಬ್ಬುಗಳು ಭಾರತಕ್ಕೆ 19ನೆಯ ಶತಮಾನದ ಪೂರ್ವಾರ್ಧದಲ್ಲಿ ಆಗಮಿಸಿದುವು. ಕಂಪನಿಯ ಅಧಿಕಾರಿಗಳ ಆನಂದವಿಹಾರಗಳಿಗಾಗಿ ಅವು ಮೊದಲು ಕಲ್ಕತ್ತ ಮದ್ರಾಸು ಮುಂತಾದ ಆಡಳಿತ ಕೇಂದ್ರಗಳಲ್ಲಿ ಆರಂಭವಾದುವು. ಗವರ್ನರ್ ಜನರಲ್ ಬೆಂಟಿಂಕ್ ಬೇಸಗೆಯ ನಿವಾಸಕ್ಕೆಂದು ಏರ್ಪಡಿಸಿಕೊಂಡಿದ್ದ ಸಿಮ್ಲಾದ ಗಿರಿಧಾಮ ಪ್ರಸಿದ್ಧ ಕ್ಲಬ್ಬುಗಳೆರಡರ ಉಗಮಸ್ಥಾನವಾಯಿತು. 19ನೆಯ ಶತಮಾನದ ಪೂರ್ವಾರ್ಧದಲ್ಲಿ ಅಲ್ಲಿ ಯುನೈಟೆಡ್ ಸರ್ವಿಸ್ ಕ್ಲಬ್ ಎಂಬ ಸಂಸ್ಥೆ ಸ್ಥಾಪನೆಯಾಯಿತು. 1887ರಲ್ಲಿ ಗವರ್ನರ್ ಜನರಲ್‌ರ ಕಾರ್ಯಾಲಯವನ್ನು ಕೊಂಡುಕೊಂಡು ಅಲ್ಲಿ ನ್ಯೂ ಕ್ಲಬ್ ಎಂಬ ಮತ್ತೊಂದು ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದು ಬೇಗ ಜನಪ್ರಿಯತೆಯನ್ನು ಗಳಿಸಿ ಹಳೆಯ ಕ್ಲಬ್ಬಿಗೆ ಪ್ರತಿಸ್ಪರ್ಧಿಯಾಯಿತು. ಕಾರಣಾಂತರದಿಂದ ಸರ್ಕಾರದ ವಕ್ರದೃಷ್ಟಿ ಅದರ ಮೇಲೆ ಬಿದ್ದು ಕೆಲವೇ ವರ್ಷಗಳಲ್ಲಿ ಅದು ತನ್ನ ಕಟ್ಟಡವನ್ನು ಮಾರಿಕೊಂಡು ನಾಮಾವಶೇಷವಾಯಿತು. 1972ರಲ್ಲಿ ನಡೆದ ಭಾರತ ಪಾಕಿಸ್ತಾನಗಳ ಶೃಂಗಸಭೆಗೆ ಬಂದಿದ್ದ ಪತ್ರಿಕಾ ಪ್ರತಿನಿಧಿಗಳಿಗೆ ಈ ಕಟ್ಟಡದಲ್ಲೇ ಬಿಡಾರವೇರ್ಪಡಿಸಿದ್ದುದು.

ಕ್ರಮೇಣ ಭಾರತೀಯ ಅಧಿಕಾರಿಗಳು ಕೆಲವು ಕ್ಲಬ್ಬುಗಳನ್ನು ಆರಂಭಿಸಿದರು. 20ನೆಯ ಶತಮಾನದ ಆರಂಭಕಾಲಕ್ಕೇ ದೇಶಾದ್ಯಂತ ಅಂಥ ಕ್ಲಬ್ಬುಗಳು ಅಸ್ತಿತ್ವಕ್ಕೆ ಬಂದಿದ್ದುವು. ಸದ್ಯದಲ್ಲಿ ಭಾರತದಲ್ಲಿ ಇರತಕ್ಕ ಕ್ಲಬ್ಬುಗಳನ್ನು ಹೀಗೆ ವಿಂಗಡಿಸಬಹುದು. ಸರ್ಕಾರದ ಸೇವಾಶಾಖೆಗಳಲ್ಲಿ ಕೆಲಸಮಾಡುವ ಅಧಿಕಾರಿಗಳವು; ಸಾರ್ವಜನಿಕರು ಏರ್ಪಡಿಸಿಕೊಂಡಿರುವಂಥವು; ಆಟಗಾರರವು; ಹವ್ಯಾಸಿಗಳವು; ಮಹಿಳಾ ಕ್ಲಬ್ಬುಗಳು ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿಯ ಕ್ಲಬ್ಬುಗಳು. ಈಚೆಗೆ ಯುವಜನ ಸಂಘಗಳೂ ದೇಶದ ಬೇರೆಬೇರೆ ಭಾಗಗಳಲ್ಲಿ ಆರಂಭವಾಗಿವೆ. ಅವೆಲ್ಲ ಬಹುಮಟ್ಟಿಗೆ ಯುವಕರ ವಿಹಾರಕ್ಕೂ ಅವರ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೂ ನೆರವಾಗತಕ್ಕ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಳ್ಳುತ್ತವೆ. ಅಮೆರಿಕದಲ್ಲಿ ಅಸ್ತಿತ್ವದಲ್ಲಿರುವ ರೈತರ ಕ್ಲಬ್ಬುಗಳ ಮಾದರಿಯಲ್ಲಿ ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಕ್ಲಬ್ಬುಗಳೂ ಆರಂಭವಾಗಿವೆ. 20ನೆಯ ಶತಮಾನದಲ್ಲಿ ಪ್ರೌಢಶಾಲೆಗಳಲ್ಲೂ ಕಾಲೇಜುಗಳಲ್ಲೂ ಶೈಕ್ಷಣಿಕ ಕ್ಲಬ್ಬುಗಳೂ ಆರಂಭವಾಗಿವೆ. ಅವುಗಳ ಉದ್ದೇಶ ಮತ್ತು ಕಾರ್ಯಕ್ರಮಗಳು ಕೇವಲ ಶಾಲಾ ಕಾಲೇಜುಗಳ ವಿದ್ಯಾರ್ಥಿ ಜೀವನಕ್ಕೆ ಮಾತ್ರ ಸೀಮಿತವಾಗಿರುವುದಲ್ಲದೆ ವಿಶಿಷ್ಟ ರೀತಿಯವೂ ಆಗಿರುವುದರಿಂದ ಅವನ್ನು ಮುಂದೆ ಪ್ರತ್ಯೇಕವಾಗಿ ಪರಿಗಣಿಸಿದೆ.

(ಎನ್.ಎಸ್.ವಿ.)

**ಶಿಕ್ಷಣ ಸಂಸ್ಥೆಗಳಲ್ಲಿ ಕ್ಲಬ್ಬುಗಳು :** ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಫೋರ್ ಎಚ್ ಕ್ಲಬ್ ಮುಂತಾದ ಕೆಲವು ಕ್ಲಬ್ಬುಗಳು ತಮ್ಮ ಉದ್ದೇಶಗಳಲ್ಲಿ ಶೈಕ್ಷಣಿಕ, ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಸೇರಿಸಿಕೊಂಡಿವೆಯಷ್ಟೆ. ಅವುಗಳ ಪ್ರಭಾವ ಶಿಕ್ಷಣ ಕ್ಷೇತ್ರದಲ್ಲೂ ಬಿದ್ದು ವಿದ್ಯಾರ್ಥಿ ಜೀವನಕ್ಕೆ ಸಂಬಂಧಿಸಿದಂತೆ ವಿಧವಿಧವಾದ ಕ್ಲಬ್ಬುಗಳು ಆರಂಭವಾಗಿವೆ. ಪ್ರಾಥಮಿಕ ಶಾಲೆಯಲ್ಲಿ ಅಷ್ಟಾಗಿ ಅವು ಪ್ರಚಾರಕ್ಕೆ ಬಂದಿಲ್ಲ. ಪ್ರೌಢಶಾಲೆಯಲ್ಲೂ ಇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಪ್ರಪಂಚದ ಅನೇಕ ಕಡೆಗಳಲ್ಲಿ ಅವು ಪ್ರಚಾರಕ್ಕೆ ಬಂದಿವೆ. ಅವನ್ನು ಕ್ಲಬ್ ಅಥವಾ ಸಂಘ ಎಂದು ಕರೆಯುವುದು ವಾಡಿಕೆ.

ಶಾಲಾಕಾಲೇಜುಗಳಲ್ಲಿರುವ ಕ್ಲಬ್ಬುಗಳನ್ನು 1. ಅಧ್ಯಯನ ವಿಷಯಗಳ ಕ್ಲಬ್ಬುಗಳು, 2. ಹವ್ಯಾಸದ ಕ್ಲಬ್ಬುಗಳು, 3.ಕ್ರೀಡಾಕ್ಲಬ್ಬುಗಳು. 4.ಅಂತಾರಾಷ್ಟ್ರೀಯ ಸಂಸ್ಥೆಗೆ ಸೇರಿದ ಕ್ಲಬ್ಬುಗಳು ಎಂದು ನಾಲ್ಕು ವಿಧವಾಗಿ ವಿಂಗಡಿಸಬಹುದು. ಈ ಒಂದೊಂದು ವಿಧದ ಕ್ಲಬ್ಬುಗಳೂ ತಮ್ಮವೇ ಆದ ಉದ್ದೇಶಗಳನ್ನೂ ಕಾರ್ಯಕ್ರಮಗಳನ್ನೂ ಹೊಂದಿರುವುವಲ್ಲದೆ ಅವು ಸೇರಿಸಿಕೊಳ್ಳುವ ಸದಸ್ಯರು. ಹಾಕಿಕೊಳ್ಳುವ ಕಾರ್ಯಕ್ರಮ, ಆರ್ಥಿಕ ವ್ಯವಸ್ಥೆ ಇವುಗಳೆಲ್ಲದರಲ್ಲೂ ವ್ಯತ್ಯಾಸವಿರುವುದರಿಂದ ಅವನ್ನು ಪ್ರತ್ಯೇಕವಾಗಿ ಪರಿಶೀಲಿಸಿದೆ.

**1. ಅಧ್ಯಯನ ವಿಷಯಗಳ ಕ್ಲಬ್ಬುಗಳು :** ಶಾಲೆಯ ಪಠ್ಯಕ್ರಮದಲ್ಲಿ ಸೇರಿರುವ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಏರ್ಪಡುವ ಈ ಕ್ಲಬ್ಬುಗಳಿಗೆ ಆ ಶಾಲೆಯಲ್ಲಿ ಆ ವಿಷಯವನ್ನು ಅಧ್ಯಯನ ಮಾಡುವ ಎಲ್ಲ ವಿದ್ಯಾರ್ಥಿಗಳೂ ಸದಸ್ಯರಾಗಿರುವುದುಂಟು. ತರಗತಿಯಲ್ಲಿ ಬೋಧಿಸಲಾಗದ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕ ಅನುಭವವನ್ನು ಪಡೆಯುವುದು, ವ್ಯಾಸಂಗ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಯೋಗಗಳನ್ನು ನಡೆಸುವುದು, ಉಪಕರಣಗಳನ್ನು ನಿರ್ಮಿಸುವುದು, ಅವನ್ನು ಬಳಸುವುದು, ವಿಷಯಕ್ಕೆ ಸಂಬಂಧಿಸಿದ ಕಾರ್ಖಾನೆ ಪ್ರದೇಶ–ಇವೇ ಮುಂತಾದೆಡೆಗಳಿಗೆ ಪ್ರವಾಸಗಳನ್ನು ಕೈಗೊಳ್ಳುವುದು, ವಿಷಯಕ್ಕೆ ಸಂಬಂಧಿಸಿದಂತೆ ಉಪನ್ಯಾಸ, ಚರ್ಚೆ, ಅಧ್ಯಯನ ಗೋಷ್ಠಿ ಮುಂತಾದುವನ್ನು ಏರ್ಪಡಿಸುವುದು, ಆ ವಿಷಯವನ್ನು ವ್ಯಾಸಂಗ ಮಾಡುವ

ವಿದ್ಯಾರ್ಥಿಗಳಲ್ಲಿ ಸಂಪರ್ಕ ಬೆಳೆಸುವುದು ಮುಂತಾದ ಕಾರ್ಯಕ್ರಮಗಳು ಈ ಕ್ಲಬ್ಬುಗಳಲ್ಲಿ ಸೇರಿರುತ್ತವೆ. ಭಾಷೆ, ಗಣಿತ, ಇತಿಹಾಸ, ವಿಜ್ಞಾನ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕ್ಲಬ್ಬುಗಳು ಏರ್ಪಡುವುದುಂಟು. ಇವುಗಳಲ್ಲಿ ಈಚೆಗೆ ಪ್ರಚಾರಕ್ಕೆ ಬಂದಿರುವ ವಿಜ್ಞಾನದ ಕ್ಲಬ್ಬುಗಳು ಹೆಚ್ಚು ಜನಪ್ರಿಯವಾಗುತ್ತಿವೆ.

**2. ಹವ್ಯಾಸದ ಕ್ಲಬ್ಬುಗಳು :** ಸಂಗೀತ, ನೃತ್ಯ, ನಾಟಕ, ಸಾಹಿತ್ಯರಚನೆ, ಛಾಯಾಚಿತ್ರ ಗ್ರಹಣ, ಅಕ್ಷರ ಪ್ರಚಾರ, ಸಮಾಜಸೇವೆ, ತೋಟಗಾರಿಕೆ ಇತ್ಯಾದಿ ವಿಷಯಗಳಲ್ಲಿ ವಿಶೇಷ ಆಸಕ್ತಿಯಿರುವ ಶಾಲೆಯ ವಿದ್ಯಾರ್ಥಿಗಳನ್ನೊಳಗೊಂಡ ಆಯಾ ಆಸಕ್ತಿಯ ಕ್ಲಬ್ಬುಗಳಿವು. ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ಅಥವಾ ಅಭಿರುಚಿಯ ಕಸುಬು, ಕಲೆ ಮುಂತಾದವುಗಳಲ್ಲಿ ಮುಂದುವರಿಯಲು ಅನುಕೂಲಿಸುವಂಥ ಕಾರ್ಯಕ್ರಮಗಳನ್ನು ಇವು ಏರ್ಪಡಿಸಿಕೊಳ್ಳುವುದುಂಟು.

**3 ಕ್ರೀಡಾ ಕ್ಲಬ್ಬುಗಳು :** ಫುಟ್‌ಬಾಲ್, ವಾಲಿಬಾಲ್, ಕ್ರಿಕೆಟ್, ಹಾಕಿ, ಬ್ಯಾಡ್‌ಮಿಂಟನ್, ಕಬಡ್ಡಿ ಇತ್ಯಾದಿ ಆಟಗಳಿಗೂ ಗರಡಿ, ಕುಸ್ತಿ, ವ್ಯಾಯಾಮ, ಈಜುಗಾರಿಕೆ, ಸೈಕ್ಲಿಂಗ್, ವಿಮಾನಯಾನ ಮುಂತಾದ ಅಭ್ಯಾಸಗಳಿಗೂ ವಿದ್ಯಾರ್ಥಿಗಳು ಏರ್ಪಡಿಸಿಕೊಳ್ಳುವ ಕೂಟಗಳಿವು.

**4. ಅಂತಾರಾಷ್ಟ್ರೀಯ ಕ್ಲಬ್ಬುಗಳು :** ಬಾಯ್‌ಸ್ಕೌಟ್, ಗರ್ಲ್‌ಗೈಡ್ ಮುಂತಾದ ಅಂತಾರಾಷ್ಟ್ರೀಯ ವ್ಯಾಪ್ತಿಯ ಕ್ಲಬ್ಬುಗಳೂ ಶಿಕ್ಷಣಸಂಸ್ಥೆಗಳಲ್ಲಿ ತಮ್ಮ ಘಟಕಗಳನ್ನು ಏರ್ಪಡಿಸಿಕೊಂಡಿರುವುದುಂಟು. ಅವು ತಮ್ಮವೇ ಆದ ಕಾರ್ಯಕ್ರಮಗಳ ಮೂಲಕ ಮಕ್ಕಳಿಗೆ ಶಿಕ್ಷಣವನ್ನೊದಗಿಸುತ್ತವೆ. ಇವು ಶಾಲಾಕಾಲೇಜುಗಳ ಶಿಕ್ಷಣಕ್ಕೆ ಪೂರಕವಾಗಿ ಕೆಲಸ ಮಾಡುತ್ತವೆ. (ಜಿ.ಎಸ್.ಕೆ.ಆರ್.)

**ಕ್ಲಾಕ್ಟೋನಿಯನ್ ಆಯುಧಗಳು :** ಪೂರ್ವಶಿಲಾಯುಗದ ಮೊದಲ ಕಾಲದಲ್ಲಿ ಬಳಕೆಗೆ ಬಂದ ಕಲ್ಲುಚಕ್ಕೆಗಳ ಆಯುಧಗಳ ಒಂದು ಬಗೆ. ಇಂಗ್ಲೆಂಡಿನ ಥೇಮ್ಸ್ ನದಿಯ ದಡದಲ್ಲಿರುವ ಕ್ಲಾಕ್ಟನ್–ಆನ್–ಸೀ ಎಂಬೆಡೆಯಲ್ಲಿ ಈ ಅವಶೇಷಗಳನ್ನು ಮೊದಲು ಕಂಡುದರಿಂದ ಇವಕ್ಕೆ ಈ ಹೆಸರು ಕೊಡಲಾಗಿದೆ. ಒಂದು ಉಂಡೆಕಲ್ಲನ್ನು ಸ್ಥಿರವಾಗಿ ನಿಂತ ಮತ್ತೊಂದು ಕಲ್ಲಿನ ಮೇಲೆ ಬೀಸಿ ಹೊಡೆದೋ ಗುಂಡಾದ ಸುತ್ತಿಗೆ ಕಲ್ಲಿನಿಂದ ಹೊಡೆದೋ ದಪ್ಪನಾದ, ಅಗಲವಾದ ಚಕ್ಕೆಗಳನ್ನು ತೆಗೆದು ಅವುಗಳಿಂದ ಈ ರೀತಿಯ ಆಯುಧಗಳನ್ನು ತಯಾರಿಸುತ್ತಿದ್ದರು. ಕತ್ತರಿಸಲೂ ಹೆರೆಯಲೂ ಪ್ರಾಣಿಗಳ ಚರ್ಮವನ್ನು ಹದಗೊಳಿಸಲೂ ಇಂಥ ಇತರ ಅನೇಕ ಕಾರ್ಯಗಳಿಗೂ ಈ ಚಕ್ಕೆಗಳ ಚೂಪಾದ ಅಂಚುಗಳನ್ನು ಉಪಯೋಗಿಸುತ್ತಿದ್ದರು. ಕೈಗೊಡಲಿಸಂಸ್ಕೃತಿ ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲೂ ಚಕ್ಕೆಕಲ್ಲಿನ ಆಯುಧಗಳ ಸಂಸ್ಕೃತಿ ಶೀತವಲಯ ಪ್ರದೇಶಗಳಲ್ಲೂ ವ್ಯಾಪಕವಾಗಿತ್ತೆಂಬುದು ಯುರೋಪಿನಲ್ಲಿ ನಡೆದ ಸಂಶೋಧನೆಗಳಿಂದ ತಿಳಿದುಬರುತ್ತದೆಯೆಂದು ಹೇಳಲಾಗಿದೆ. ಇದು ಯುರೋಪಿನ ವಿಷಯದಲ್ಲಿ ನಿಜವಿದ್ದರೂ ಆಫ್ರಿಕ, ಭಾರತ ಮುಂತಾದ ಉಷ್ಣವಲಯ ಪ್ರದೇಶಗಳಲ್ಲಿ ಈ ಎರಡೂ ರೀತಿಯ ಸಂಸ್ಕೃತಿಗಳು ಒಟ್ಟಿಗೆ ಬೆಳೆದದ್ದನ್ನು ಕಾಣಬಹುದು. (ಬಿ.ಕೆ.ಜಿ.)

**ಕ್ಲಾಡ್‌ಸಿಮನ್:** 1913–2005. ನೊಬೆಲ್ ಪ್ರಶಸ್ತಿ ಪುರಸ್ಕೃತ (1985) ಪ್ರಸಿದ್ಧ ಫ್ರೆಂಚ್ ಕಾದಂಬರಿಕಾರ. 1913ರಲ್ಲಿ ಮಡಗಾಸ್ಕರ್‌ನ ಟನನರಿವ್‌ನಲ್ಲಿ ಜನಿಸಿದ. ಕೆರಿಯರ್ ಆಫೀಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಇವನ ತಂದೆ ಒಂದನೆಯ ಮಹಾಯುದ್ಧದಲ್ಲಿ ನಿಧನನಾದ ಕಾರಣ ಸಿಮನ್ ತಾಯಿಯೊಂದಿಗೆ ಬೆಳೆಯುವಂತಾಯಿತು.

ಸ್ಟ್ಯಾನಿಸಲಾಸ್ ಶಾಲೆಯಲ್ಲಿ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸ ಮುಗಿಸಿ ಆ್ಯಂಡ್ರೆ ಲ ಹೊಟೆ ಅಕಾಡೆಮಿಯಲ್ಲಿ ಚಿತ್ರಕಲೆಯ ಅಧ್ಯಯನವನ್ನೂ ಕೈಗೊಂಡ. ಸ್ಪೇನ್, ಜರ್ಮನಿ, ಸೋವಿಯತ್ ಒಕ್ಕೂಟ, ಇಟಲಿ, ಗ್ರೀಸ್‌ಗಳಲ್ಲಿ ವ್ಯಾಪಕವಾಗಿ ಪ್ರಯಾಣ ಮಾಡಿದ ಇವನಿಗೆ ಪ್ರವಾಸದ ಹಾಗೂ ಎರಡನೆಯ ಮಹಾಯುದ್ಧದ ಅನುಭವಗಳು ತೀವ್ರವಾಗಿತ್ತು. ಇದು ಇವನ ಕೃತಿಗಳಲ್ಲಿಯೂ ಅಭಿವ್ಯಕ್ತಗೊಂಡಿವೆ. ಮಹಾಯುದ್ಧದ ಸಮಯದಲ್ಲಿ (1940) ಭಾಗವಹಿಸಿ ಸೆರೆಸಿಕ್ಕಿ ಅಲ್ಲಿಂದ ತಪ್ಪಿಸಿಕೊಂಡು ನಿಗ್ರಹ ಚಳವಳಿಗೆ ಸೇರಿದ. ಅದೇ ಸಮಯದಲ್ಲಿ ಇವನ ಮೊದಲ ಕಾದಂಬರಿ 'ದಿ ಚೀಟ್' (1946) ಪ್ರಕಟವಾಯಿತು. ದಿ ಟೈಟ್‌ರೋಪ್ (1947), ಗಲಿವರ್ (1952), ದಿ ಅನಾಯಿನ್ಟ್‌ಮೆಂಟ್ ಆಫ್ ಸ್ಪ್ರಿಂಗ್ (1954), ದಿ ಸೆಪರೇಷನ್ (1963), ಇವನ ಕಾದಂಬರಿ ಎಲ್' ಹರ್ಬೆ (ನಾಟಕರೂಪಾಂತರವನ್ನೂ ತಳೆದಿದೆ), ದಿ ಇನ್ವಿಟೇಷನ್ (1987), ದಿ ಟ್ರಾಲಿ (2001) – ಇವು ಇವನ ಪ್ರಸಿದ್ಧ ಕಾದಂಬರಿಗಳು. ಇವನು ಇನ್ನೂ ಅನೇಕ ಕೃತಿಗಳನ್ನೂ ಉತ್ತಮ ಲೇಖನಗಳನ್ನೂ ಪ್ರಕಟಿಸಿದ್ದಾನೆ. ನೊಬೆಲ್ ಪ್ರಶಸ್ತಿಯೊಂದಿಗೆ ಇವನಿಗೆ ಇತರ ಹಲವು ಬಹುಮಾನಗಳೂ ಪೂರ್ವ ಆಂಗ್ಲಿಯಾದ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟೊರೇಟ್ ಪದವಿಯೂ (1973) ಲಭಿಸಿವೆ. (ಸಿ.ಎಸ್.ಪಿ.)

**ಕ್ಲಾಡಿಯಸ್, ಆಪಿಯಸ್ ಸೀಕಸ್ :** ಪ್ರ.ಪೂ. 3ನೆಯ ಶತಮಾನದಲ್ಲಿದ್ದ ರೋಮಿನ ವಾಗ್ಮಿ. ಕೆಳವರ್ಗದವರ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದು ಉದಾರವೂ ಸ್ವತಂತ್ರವೂ ಆದ ಅಭಿಪ್ರಾಯಗಳನ್ನು ಪಡೆದಿದ್ದ ಶ್ರೀಮಂತ. ಪೌರ, ರಾಜಕೀಯ ಮತ್ತು ಶವಸಂಸ್ಕಾರದ ಸಂದರ್ಭಗಳಲ್ಲಿನ ಭಾಷಣಗಳಿಗೆ ಹೆಸರಾದವ. ಈತನ ಭಾಷಣಗಳು ಉಪಲಬ್ಧವಿಲ್ಲ. ಸ್ಯಾಟರ್ನಿಯನ್ ಛಂದಸ್ಸಿನಲ್ಲಿ ಈತ ರಚಿಸಿದ ಸಾರೋಕ್ತಿಗಳು ಮಾತ್ರ ಉಳಿದಿವೆ. (ಎಲ್.ಎಸ್.ಎಸ್.)

**ಕ್ಲಾಡೆ, ಜಾರ್ಜ್ :** 1870–1960. ಫ್ರೆಂಚ್ ಭೌತ ಮತ್ತು ರಸಾಯನ ವಿಜ್ಞಾನಿ. ಜನನ 1870ನೆಯ ಇಸವಿ ಸೆಪ್ಟೆಂಬರ್ 24ರಂದು. ವಿಜ್ಞಾನಕ್ಷೇತ್ರದಲ್ಲಿ ಈತನ ಅತಿಮುಖ್ಯ ಸಾಧನೆಯೆಂದರೆ ಗಾಳಿ ಮತ್ತು ಇತರ ಕೆಲವು ಅನಿಲಗಳನ್ನು ವಿಶಿಷ್ಟವಾದ ನೂತನ ವಿಧಾನದಿಂದ ದ್ರವೀಕರಿಸಿದ್ದು, ಅಲ್ಲದೆ ಗಾಳಿಯಲ್ಲಿರುವ ವಿವಿಧ ಅನಿಲಘಟಕಗಳನ್ನು ಬೇರ್ಪಡಿಸಿದ್ದು, ಸ್ಥಿರೋಷ್ಣ ಸಂದರ್ಭದಲ್ಲಿ ಅನಿಲವನ್ನು ಹಿಗ್ಗಿಸಿ ಬಾಹ್ಯಬಲಗಳ ವಿರುದ್ಧ ಕೆಲಸ ಮಾಡುವಂತೆ ಮಾಡಿದರೆ ಅದು ತನ್ನ ಶಕ್ತಿಯನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡು ತಂಪಾಗುತ್ತದೆ. ಅನಿಲಗಳನ್ನು ತಂಪುಮಾಡುವ ಈ ವಿಧಾನವನ್ನು ಅನುಸರಿಸಿ ಕ್ಲಾಡೆ ಗಾಳಿಯನ್ನು ದ್ರವೀಕರಿಸಿದ. **(ನೋಡಿ– ಅನಿಲ–ದ್ರವೀಕರಣ)**

ಮೊದಲ ಮಹಾಯುದ್ಧದಲ್ಲಿ ಉಪಯೋಗಿಸುತ್ತಿದ್ದ ವಿಷಪೂರಿತ ಅನಿಲಗಳ ತಯಾರಿಕೆಗೆ ಆವಶ್ಯವಾಗಿ ಬೇಕಾಗಿದ್ದ ದ್ರವ ಕ್ಲೋರಿನ್ನನ್ನು ಕ್ಲಾಡೆ ತನ್ನ ಹೊಸ ವಿಧನದಿಂದ ತಯಾರಿಸಿ ಫ್ರೆಂಚ್ ಸರ್ಕಾರಕ್ಕೆ ಒದಗಿಸುತ್ತಿದ್ದ. ಅಲ್ಲದೆ ಜಡ ಅನಿಲಗಳಿಗೆ ಸಂಬಂಧಿಸಿದಂತೆ ರ್‍ಯಾಂಸೆ ಕೈಗೊಂಡಿದ್ದ ಸಂಶೋಧನೆಗಳಿಗೆ ಬೇಕಾಗಿದ್ದ ದ್ರವೀಕೃತ ಗಾಳಿಯನ್ನು ಕೂಡ ಕ್ಲಾಡೆ ಒದಗಿಸಿದ. ರ್‍ಯಾಂಸೆಯ ಸಂಶೋಧನೆಗಳ ಫಲವಾಗಿ ದೊರೆತ ಜಡ ಅನಿಲಗಳನ್ನು ಉಪಯೋಗಿಸಿಕೊಂಡು ಕ್ಲಾಡೆ ಸೂಕ್ತ ಸಂದರ್ಭಗಳಲ್ಲಿ ಇವುಗಳ ಮೂಲಕ ಜರುಗುವ ವಿದ್ಯುದ್ವಿಸರ್ಜನೆಯನ್ನು ಪರೀಕ್ಷಿಸಿದ. ಮತ್ತು ತನ್ನ ಈ ಪ್ರಯತ್ನಗಳ ಫಲವಾಗಿ ಜಾಹೀರಾತು ಉದ್ದೇಶಗಳಿಗಾಗಿ ಇಂದು ವ್ಯಾಪಕವಾಗಿ ಉಪಯೋಗಿಸುವ ನಿಯಾನ್ ದೀಪವನ್ನು ತಯಾರಿಸಿ ಅದರಿಂದ ಅಪಾರ ಹಣವನ್ನು ಗಳಿಸಿದ. ಎರಡನೆಯ ಮಹಾಯುದ್ಧ ಕಾಲದಲ್ಲಿ ವಿಚಿ ಸರ್ಕಾರಕ್ಕೆ ಈತ ಬೆಂಬಲ ನೀಡಿದ್ದ ಕಾರಣ 1945ರಲ್ಲಿ ಫ್ರಾನ್ಸ್ ಪುನಃ ಸ್ವತಂತ್ರವಾದ ಬಳಿಕ ಕ್ಲಾಡೆ 5 ವರ್ಷಗಳ ಕಾಲ ಜೈಲುವಾಸ ಅನುಭವಿಸಬೇಕಾಯಿತು. ಕ್ಲಾಡೆ ಗತಿಸಿದ್ದು 1960ನೆಯ ಇಸವಿ ಮೇ 23ರಂದು. (ಕೆ.ಎಸ್.ಆರ್.ಐ.)

**ಕ್ಲಾಪ್‌ಸ್ಟಾಕ್, ಫ್ರಿಡ್ರಿಕ್ ಗಾಟ್‌ಲೀಪ್ :** 1724–1803. ಜರ್ಮನ್ ಕವಿ. ಆಚಾರವಂತ ಹಾಗೂ ಸದ್ಗುಣಿ ವಕೀಲನೊಬ್ಬನ ಹಿರಿಯ ಮಗ. ಹುಟ್ಟಿದ್ದು ಕ್ವೆಡ್ಲಿನ್‌ಬರ್ಗ್‌ನಲ್ಲಿ. ದೃಢಕಾಯನಾಗಿ ಬೆಳೆದು ಅತ್ಯುತ್ತಮ ಅಶ್ವಾರೋಹಿ ಮತ್ತು ಸ್ಕೇಟರ್ ಎನಿಸಿಕೊಂಡ. 1739ರಲ್ಲಿ ಸ್ಕುಲ್ಪ್ ಫೋರ್ಟ್‌ಶಾಲೆಗೆ ಸೇರಿ ಓದುತ್ತಿರುವಾಗಲೇ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಕವಿತೆಗಳನ್ನು ರಚಿಸಿದುದಲ್ಲದೆ ಜರ್ಮನ್ ಭಾಷೆಯಲ್ಲೂ ಗ್ರಾಮೀಣ ಪದ್ಯಗಳು ಹಾಗೂ ಭಾವಗೀತೆಗಳನ್ನು ರಚಿಸಿ ನಿಪುಣ ಕವಿ ಎನಿಸಿಕೊಂಡ. ಅಲ್ಲಿಂದ ಯಾನ ಮತ್ತು ಲೀಪ್‌ಜಿಗ್ ವಿಶ್ವವಿದ್ಯಾಲಯಗಳಲ್ಲಿ ಓದು ಮುಂದುವರಿಸಿದ. ವಿದ್ಯಾರ್ಥಿ ದೆಸೆಯಲ್ಲಿ ಉತ್ತಮ ಕವಿತೆಗಳನ್ನು ರಚಿಸಿದ ಈತ ಮಹಾಕಾವ್ಯ ರಚನೆಯೊಂದಕ್ಕೆ ಅಪೂರ್ವ ಸಿದ್ಧತೆ ಮಾಡಿಕೊಂಡ. ಬೊಡ್‌ಮರ್ ಭಾಷಾಂತರಿಸಿದ ಮಿಲ್ಟನ ಪ್ಯಾರಡೈಸ್ ಲಾಸ್ಟ್ ಓದಿ ಅದರಿಂದ ಪ್ರಭಾವಿತನಾಗಿ ತನ್ನ ಮಹಾಕಾವ್ಯಕ್ಕೆ ಚಕ್ರವರ್ತಿ ಒಂದನೆಯ ಹೆನ್ರಿಯನ್ನು ನಾಯಕನನ್ನಾಗಿ ಮಾಡಿಕೊಂಡು ಮತಧರ್ಮದ ಕಥೆಯನ್ನು ಆಧರಿಸಿ ಅಂಥದೇ ಒಂದು ಕಾವ್ಯ ರಚಿಸಲು ನಿರ್ಧರಿಸಿದ. ಆ ಮಹಾಕಾವ್ಯವೇ ಡೆರ್ ಮೆಸ್ಸೈಯಾಸ್(1748). ಮೊದಲಿಗೆ ಇದರ 3 ಸಂಧಿಗಳನ್ನು ರಚಿಸಿ ಪ್ರಕಟಿಸಿದ. ಇದು ಅಪಾರ ಯಶಸ್ಸು ತಂದಿತು. ಅದೇ ವರ್ಷ ಲಾಂಜೆನ್‌ಸಾಲ್ಜಾನಲ್ಲಿ ತನ್ನ ಸಂಬಂಧಿಕರ ಮಕ್ಕಳಿಗೆ ಪಾಠ ಹೇಳಲು ಖಾಸಗಿ ಶಿಕ್ಷಕನಾಗಿ ನಿಂತ.

1750ರಲ್ಲಿ ಪ್ರಸಿದ್ಧ ಸ್ವಿಸ್ ವಿಮರ್ಶಕ ಹಾಗೂ ಮಿಲ್ಟನನ ಪ್ಯಾರಡೈಸ್ ಲಾಸ್ಟ್‌ನ ಭಾಷಾಂತರಕಾರ ಜಾಕಬ್ ಬೊಡ್‌ಮರನನ್ನು ಸಂಧಿಸಿದ. ಇದೇ ಸಮಯದಲ್ಲಿ ಡೆನ್ಮಾರ್ಕಿನ ದೊರೆ ಐದನೆಯ ಫ್ರೆಡ್ರಿಕ್ ತನ್ನ ಮಂತ್ರಿ ಬರ್ನ್‌ಸ್ಟೋರ್ಫ್‌ನ ಶಿಫಾರಸ್ಸಿನ ಮೇಲೆ ಕ್ಲಾಪ್‌ಸ್ಟಾಕನನ್ನು ಕೋಪೆನ್‌ಹೇಗನ್‌ನಲ್ಲಿ ನೆಲಸಿ ಮೆಸ್ಸೈಯಾಸ್ ಕಾವ್ಯವನ್ನು ಪೂರೈಸುವಂತೆ ಆಹ್ವಾನಿಸಿದ. ವರ್ಷಕ್ಕೆ ನಾಲ್ಕು ನೂರು ಡಾಲರುಗಳನ್ನು ನಿಗದಿಪಡಿಸಿದ. ಏತನ್ಮಧ್ಯೆ ಡೆನ್ಮಾರ್ಕಿಗೆ ಹೋಗುವ ಮಾರ್ಗವಾದ ಹಮ್‌ಬರ್ಗ್‌ನಲ್ಲಿ ಮಾರ್ಗರೇಟ(ಮೇಟ) ಮೊಲರ್‌ಳನ್ನು ಸಂಧಿಸಿ(ಕ್ಲಾಪ್ ಷ್ಟಾಕನ ಗೀತೆಗಳಲ್ಲಿ ಬರುವ ಸಿಡ್ಲಿ ಈಕೆಯೇ) 1754ರಲ್ಲಿ ಆಕೆಯನ್ನೇ ಮದುವೆಯಾದ. ಆದರೆ ಈ ಸಂತೋಷ ಬಹುಕಾಲ ಉಳಿಯಲಿಲ್ಲ. 1758ರಲ್ಲಿ ಆಕೆ ಸತ್ತಳು. ಆಗ ಈತ ಅನುಭವಿಸಿದ ದುಃಖವನ್ನು ಮೆಸ್ಸೈಯಾಸ್ ಕಾವ್ಯದ 15ನೆಯ ಸಂಧಿಯಲ್ಲಿ ಕಾಣಬಹುದು. 1759ರಲ್ಲಿ ಆಕೆಯ ಬರೆಹಗಳನ್ನು ಈತನೇ ಪ್ರಕಟಿಸಿದ. ಅಲ್ಲಿಂದ ಕ್ಲಾಪ್‌ಷ್ಟಾಕ್ ಏಕಾಂಗಿಯಾದ; ಬರೆವಣಿಗೆ ಕುಂಠಿತವಾಯಿತು. ಬರೆದದ್ದು ಶುಷ್ಕವಾಗಿ ಕಂಡಿತು. 1770ರಲ್ಲಿ ಬರ್ನ್‌ಸ್ಟೋರ್ಫ್ ಮಂತ್ರಿ ಪದವಿಯಿಂದ ನಿರ್ಗಮಿಸಿದಾಗ ಈತನೂ ಆತನ ಜೊತೆಯಲ್ಲಿಯೇ ಹೊರಟು ಬಂದು ಹ್ಯಾಂಬರ್ಗ್‌ನಲ್ಲಿ ನೆಲೆಸಿದ. 1773ರಲ್ಲಿ ಮೆಸ್ಸೈಯಾಸ್ ಕಾವ್ಯದ ಕೊನೆಯ ಐದು ಸಂಧಿಗಳನ್ನು ಬರೆದು ಪ್ರಕಟಿಸಿದ. 1774ರಲ್ಲಿ ಜರ್ಮನರ ಜೀವನ ಹಾಗೂ ಸಾಹಿತ್ಯದ ಪುನರುಜ್ಜೀವನಕ್ಕಾಗಿ, ಅವರ ರಾಜಕೀಯ, ಸಾಂಸ್ಕೃತಿಕ ವಿದ್ಯಾಭ್ಯಾಸಕ್ಕಾಗಿ ಒಂದು ಯೋಜನೆ ತಯಾರಿಸಿ ಪ್ರಕಟಿಸಿದ.

1775ರಲ್ಲಿ ದಕ್ಷಿಣದ ಕಡೆಗೆ ಹೊರಟ ಈತ ಮಾರ್ಗದಲ್ಲಿ ಗಯಟೆಯನ್ನು ಸಂಧಿಸಿದ. ಅಲ್ಲಿಂದ ಒಂದು ವರ್ಷ ಸೇನಾಧಿಪತಿಯೊಬ್ಬನ ಆಸ್ಥಾನದಲ್ಲಿದ್ದ. 1776ರಲ್ಲಿ ಆತನಿಂದ ಹೊಫ್ರ್‍ಯಾಟ್ ಎಂಬ ಗೌರವ ಪದವಿ ಹಾಗೂ ನಿವೃತ್ತಿವೇತನ ಪಡೆದು ಹಮ್‍ಬರ್ಗ್‍ಗೆ ಬಂದು ತನ್ನ ಜೀವಿತದ ಉಳಿದ ದಿನಗಳನ್ನು ಅಲ್ಲಿಯೇ ಕಳೆದ.

ಮೊದಮೊದಲು ಫ್ರಾನ್ಸಿನ ಮಹಾಕ್ರಾಂತಿಯ ಬಗ್ಗೆ ಈತನಿಗೆ ಅಪಾರ ಸಹಾನುಭೂತಿ ಇತ್ತು. ಫ್ರೆಂಚ್ ಗಣರಾಜ್ಯ ಈತನನ್ನು ಗೌರವ ಪ್ರಜೆಯೆಂದು ಪರಿಗಣಿಸಿತು. ಕ್ರಾಂತಿ ಅತಿರೇಕಕ್ಕೆ ತಿರುಗಿದಾಗ ಬೇಸರಗೊಂಡ ಈತ ಗೌರವವನ್ನು ನಿರಾಕರಿಸಿದ. ತನ್ನ 67ನೇ ವಯಸ್ಸಿನಲ್ಲಿ ಮೊದಲ ಹೆಂಡತಿಯ ಸೋದರ ಸಂಬಂಧಿಯಾದ ವಿಧವೆ ಯೋಹಾನ್ನ ಎಲಿಜಬೆತ್‍ಳನ್ನು ಮದುವೆಯಾದ. ಈಕೆಯೊಂದಿಗೆ ಅನೇಕ ವರ್ಷಗಳ ಕಾಲ ಅನ್ಯೋನ್ಯವಾಗಿ ಬಾಳಿದ. 1803ರಲ್ಲಿ ಈತ ಸತ್ತ. ಆಗ ಇಡೀ ಜರ್ಮನಿಯೇ ದುಃಖಿಸಿತು. ಓಟೆನ್‍ಸೆನ್ ಗ್ರಾಮದ ಚರ್ಚ್ ಅಂಗಳದಲ್ಲಿ ಈತನ ಮೊದಲ ಹೆಂಡತಿಯ ಸಮಾಧಿಯ ಬಳಿಯೇ ಈತನನ್ನು ಸಮಾಧಿ ಮಾಡಲಾಯಿತು.

ಈತನ ಮಹಾಕಾವ್ಯ ಡೆರ್ ಮೆಸ್ಸೈಯಾಸ್ (ಪ್ರವಾದಿಗಳು–1773) ಭಾವಪೂರ್ಣವಾಗಿದ್ದು ವಿಕೃತ ಕರುಣರಸ ಹಾಗೂ ಭಕ್ತಿಯನ್ನು ಸೂಸುತ್ತದೆ. ಕ್ರಿಸ್ತನ ಉದಾತ್ತ ಜೀವನ ಇಲ್ಲಿ ಪಡಿಮೂಡಿದೆಯಾಗಿ ಜರ್ಮನ್ ಸಾಹಿತ್ಯದಲ್ಲೇ ಈ ಕಾವ್ಯಕ್ಕೆ ಉನ್ನತ ಸ್ಥಾನವಿದೆ. ಈ ಕಾವ್ಯ ರಚಿಸಲು ಈತ 25 ವರ್ಷಗಳನ್ನು ತೆಗೆದುಕೊಂಡ. ಇದು 17 ಭಾಷೆಗಳಿಗೂ ಮಿಕ್ಕಿ ತರ್ಜುಮೆಯಾಗಿದೆ. ಈತ ಬರೆದ ನಾಟಕಗಳಲ್ಲಿ ಹೆರ್‌ಮಾನ್ಸ್ ಷ್ಲಾಟ್ (1769) ಉತ್ತಮವಾದುದು. ಜರ್ಮನ್ ಸಾಹಿತ್ಯ ಮತ್ತು ತತ್ತ್ವಶಾಸ್ತ್ರಗಳ ಬಗ್ಗೆ ಈತ ಅನೇಕ ಲೇಖನಗಳನ್ನು ಬರೆದಿದ್ದಾನೆ. ಮೆಸ್ಸೈಯಾಸ್ ಕಾವ್ಯದಲ್ಲಿ ಈತ ಬಳಸಿದ ಷಡ್ಗಣ ಪಾದಗಳ ಛಂದಸ್ಸು ಜರ್ಮನ್ ಕಾವ್ಯ ಪ್ರಪಂಚಕ್ಕೆ ಹೊಸ ತಿರುವನ್ನು ನೀಡಿತು. ಈತ ತನ್ನ ಭಾವಗೀತೆಗಳಲ್ಲಿ ಅಳವಡಿಸಿರುವ ಮುಕ್ತ ಛಂದಸ್ಸು ಈತನ ಕಾವ್ಯಶಕ್ತಿಯ ದ್ಯೋತಕವಾಗಿದೆ. (ಟಿ.ವಿ.ಎಸ್.)

**ಕ್ಲಾಬೂಂಟ್ :** 1891–1928. ಜರ್ಮನ್ ಅಭಿವ್ಯಕ್ತವಾದಿ ಕವಿ, ಕಾದಂಬರಿಕಾರ, ಮತ್ತು ನಾಟಕಕಾರ. ಈತನ ನಿಜನಾಮಧೇಯ ಆಲ್‍ಫ್ರ್‍ಯಾಟ್ ಹೆನ್ಷೆಕ್. ಓಡರ್ ಪ್ರಾಂತ್ಯದ ಕ್ರಾಸೆನ್‍ನಲ್ಲಿ ಹುಟ್ಟಿದ. ಈತನ ಅನೇಕ ಭಾವಗೀತೆಗಳು ಮೊದಲಿಗೆ ಪ್ಯಾನ್ ಪತ್ರಿಕೆಯಲ್ಲಿ ಪ್ರಕಟಗೊಂಡುವು. ಟೊಟೆನ್‍ಕ್ಲಾಗೆ ಎಂಬ ಪುಸ್ತಕದಲ್ಲಿರುವ ಅನೇಕ ಕವನಗಳು ಈತನ ಹೆಂಡತಿಯ ಜ್ಞಾಪಕಾರ್ಥವಾಗಿ ಬರೆದವು. ಈತನ ನಾಟಕ ಕ್ರೈಡೆಕ್ರೀಸ್(1924); ಇದರ ಇಂಗ್ಲಿಷ್ ಭಾಷಾಂತರ ಸರ್ಕಲ್ ಆಫ್ ಚಾಕ್ (19290 ಜನಪ್ರಿಯ ಕೃತಿ. ಮಹಮದ್ ಮತ್ತು ಪೀಟರ್ ಎಂಬ ಎರಡು ಚಾರಿತ್ರಿಕ ಕಾದಂಬರಿಗಳನ್ನು ಈತ ರಚಿಸಿದ್ದಾನೆ. ಈತನ ಅನೇಕ ನೀಳ್ಗತೆಗಳು ಇಂಗ್ಲಿಷ್‍ಗೆ ಭಾಷಾಂತರಗೊಂಡಿವೆ. ಅವುಗಳಲ್ಲಿ ಬ್ರ್ಯಾಕೀ ದಿ ಫೂಲ್ (1929); ಪೀಟರ್ ದಿ ಜಾರ್(1925); ದಿ ಇನ್‍ಕ್ರೆಡಿಬಲ್ ಬೊರ್ಜಿಯಾಸ್ (1929)– ಮುಖ್ಯವಾದವು. ಅಲ್ಲದೆ ಈತ ಜರ್ಮನ್ ಸಾಹಿತ್ಯ ಚರಿತ್ರೆಯೊಂದನ್ನು ಬರೆದಿದ್ದಾನೆ. (ಟಿ.ವಿ.ಎಸ್.)

**ಕ್ಲಾರ್ಕ್, ಜಾನ್ ಬೇಟ್ಸ್ :** 1847–1938. ಅಮೆರಿಕದ ಒಬ್ಬ ಪ್ರಮುಖ ಸೃಜನಶೀಲ ಅರ್ಥಶಾಸ್ತ್ರಜ್ಞ. ಸೀಮಾಂತುಪಯುಕ್ತತಾ–ಸೀಮಾಂತ ಉತ್ಪಾದಕಾ ಸಿದ್ಧಾಂತದ ವಿಶಿಷ್ಟರೂಪುರೇಷೆಯೊಂದನ್ನು ತೋರಿಸಿಕೊಟ್ಟ. ಸಂಪೂರ್ಣ ಸ್ಪರ್ಧಾತ್ಮಕ ಸಮತೋಲದಲ್ಲಿ ಕಾಲ್ಪನಿಕ 'ಸ್ಥಿರ ಸ್ಥಿತಿ' ಯ ಮಾದರಿಯನ್ನು ರಚಿಸಿದ. ಇದನ್ನನುಸರಿಸಿ, ಊಹಾತ್ಮಕ ಬದಲಾವಣೆಗಳ ಸಾಮಾನ್ಯ ಪರಿಣಾಮಗಳನ್ನು ವಿಶ್ಲೇಷಿಸಿದ.

ಕ್ಲಾರ್ಕ್ ನ್ಯೂ ಇಂಗ್ಲೆಂಡಿನ ಪ್ಯೂರಿಟನ್ ವಂಶಸ್ಥ. ತಂದೆ ರೋಡ್ ಐಲೆಂಡಿನ ಪ್ರಾವಿಡೆನ್ಸ್‌ನಲ್ಲಿ ಚಿಲ್ಲರೆ ವ್ಯಾಪಾರಿಯಾಗಿದ್ದ. ಅನಂತರ ಅವನು ಕಾರ್ಲಿಸ್ ಎಂಜಿನ್ ವರ್ಕ್ಸ್ ಎಂಬ ಉದ್ಯಮ ಸಂಸ್ಥೆಯ ಸಲಹೆಗಾರನಾಗಿದ್ದ. ಕೊನೆಗೆ ಆರೋಗ್ಯ ದೃಷ್ಟಿಯಿಂದ ಮಿನ್ನೆಸೋಟದಲ್ಲಿ ನೆಲೆಸಿ, ಅಲ್ಲಿ ನೇಗಿಲು ವ್ಯಾಪಾರದಲ್ಲಿ ನಿರತನಾದ. ಕ್ಲಾರ್ಕನ ವಿದ್ಯಾಭ್ಯಾಸ ಆಮ್‍ಅರ್ಸ್ಟ್ ಕಾಲೇಜಿನಲ್ಲಿ ನಡೆಯಿತು. ತಂದೆಯ ಅನಾರೋಗ್ಯದಿಂದಾಗಿ ಎರಡು ಬಾರಿ ಅವನು ವಿದ್ಯಾಭ್ಯಾಸವನ್ನು ನಿಲ್ಲಿಸಿ ವ್ಯಾಪಾರ ನಿರ್ವಹಿಸಬೇಕಾಗಿ ಬಂದಿತ್ತು. ತಂದೆ ಮರಣಹೊಂದಿದಾಗ ಆತ ವ್ಯಾಪಾರ ಸಂಸ್ಥೆಯನ್ನು ವಿಕ್ರಯಿಸಿದ. 1872ರಲ್ಲಿ ಕ್ಲಾರ್ಕನಿಗೆ ಪದವಿ ಪ್ರಾಪ್ತವಾಗುವ ವೇಳೆಗೆ ಅವನು ತನ್ನ ಜೊತೆಗಾರ ವಿದ್ಯಾರ್ಥಿಗಳಿಗಿಂತ ಹೆಚ್ಚು ಮಾಗಿದ್ದ, ಅನುಭವಿಯಾಗಿದ್ದ.

ಸರ್ಕಾರದಲ್ಲಿ ಉದ್ಯೋಗ ಪಡೆಯಬೇಕೆಂಬುದು ಕ್ಲಾರ್ಕನ ಇಚ್ಛೆಯಾಗಿತ್ತು. ಆದರೆ ಅವನು ಅರ್ಥಶಾಸ್ತ್ರ ವ್ಯಾಸಂಗ ಮುಂದುವರಿಸಬೇಕೆಂದು ಆತನ ಪ್ರಾಧ್ಯಾಪಕ ಸಲಹೆ ನೀಡಿದ. ಯುರೋಪಿನಲ್ಲಿ, ಮುಖ್ಯವಾಗಿ ಹೈಡಲ್‍ಬರ್ಗ್ ಮತ್ತು ಜ್ಯೂರಿಕ್‍ಗಳಲ್ಲಿ ಮೂರು ವರ್ಷಕಾಲ ಕ್ಲಾರ್ಕನ ಅಧ್ಯಯನ ಸಾಗಿತು. ಆಗ ಅವನ ಮುಖ್ಯ ಪ್ರಾಧ್ಯಾಪಕನಾಗಿದ್ದವನು ಕಾರ್ಲ್ ಕ್ನೀಸ್. ಜರ್ಮನ್ ಇತಿಹಾಸ ಪಂಥ ಕ್ಲಾರ್ಕನ ಮೇಲೆ ಪ್ರಭಾವ ಬೀರಿತು. ಆತನ ಸಾಮಾಜಿಕ–ನೈತಿಕ ದೃಷ್ಟಿ ರೂಪಿತವಾದ್ದು ಅದರಿಂದಾಗಿ. ಬ್ರಿಟಿಷ್ ಕ್ರಿಶ್ಚನ್ ಸಮಾಜವಾದದಲ್ಲೂ ಅವನು ಆಸಕ್ತಿ ತಳೆದ.

ಕ್ಲಾರ್ಕ್ ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಮರಳಿದ ಮೇಲೆ ಅವನ ವಿವಾಹವಾಯಿತು. ಪತ್ನಿ ಮೈರ ಸ್ಮಿತ್. ಆಕೆಯೂ ನ್ಯೂ ಇಂಗ್ಲೆಂಡಿನವಳೇ.

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಅವನು ಅನೇಕ ಕಾಲೇಜುಗಳಲ್ಲಿ ಬೋಧಿಸಿ ಕೊನೆಗೆ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಕಾಲು ಶತಮಾನಕ್ಕೂ ಹೆಚ್ಚು ಕಾಲ (1895–1923) ಬೋಧಿಸಿದ. 1895–1911ರಲ್ಲಿ ಪೊಲಿಟಿಕಲ್ ಸೈನ್ಸ್ ಕ್ವಾರ್ಟರ್ಲಿ ತ್ರೈಮಾಸಿಕೆಯ ಸಂಪಾದಕನಾಗಿದ್ದ. ದಿ ಫಿಲಾಸಫಿ ಆಫ್ ವೆಲ್ತ್ (1895), ದಿ ಡಿಸ್ಟ್ರಿಬ್ಯೂಷನ್ ಆಫ್ ವೆಲ್ತ್ (1899), ದಿ ಕಂಟ್ರೋಲ್ ಆಫ್ ಟ್ರಸ್ಟ್ಸ್ (1901), ದಿ ಪ್ರಾಬ್ಲೆಮ್ ಆಫ್ ಮನಾಪಲಿ (1904)–ಇವು ಆತನ ಪುಸ್ತಕಗಳಲ್ಲಿ ಮುಖ್ಯವಾದುವು.

ಜರ್ಮನ್ ಇತಿಹಾಸಪಂಥ ಕ್ಲಾರ್ಕನ ಮೇಲೆ ಎರಡು ರೀತಿಯ ಪ್ರಭಾವ ಬೀರಿತು. ಒಂದನೆಯದಾಗಿ ಆ ಪಂಥದ ವಿಶ್ಲೇಷಣ ಸಲಕರಣೆಯಾದ ಸೀಮಾಂತ ಸಿದ್ಧಾಂತದಲ್ಲೂ ಎರಡನೆಯದಾಗಿ ಮೌಲ್ಯಸಿದ್ಧಾಂತ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವುದರಲ್ಲೂ ಅವನು ಆಸಕ್ತಿ ವಹಿಸಿದ. ಮೊದಲನೆಯ ಪ್ರಭಾವದಿಂದಾಗಿ ಅವನು ಸೀಮಾಂತ ಉಪಯುಕ್ತತಾ ಸಿದ್ಧಾಂತವನ್ನು ಸ್ವಪ್ರಯತ್ನದಿಂದ ರೂಪಿಸುವುದರಲ್ಲಿ ಯಶಸ್ವಿಯಾದ. ಎರಡನೆಯದರಿಂದಾಗಿ ಅವನು ಸೀಮಾಂತತೆಯ ಸಿದ್ಧಾಂತವನ್ನು ಉತ್ಪಾದನೆ ವಿತರಣೆಗಳಿಗೆ ಅನ್ವಯಿಸಿ ಅಲ್ಲಿಯ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನ ಮಾಡಿದ. ಇದು ಅರ್ಥ ಮೀಮಾಂಸೆಗೆ ಅವನ ಮೂಲಭೂತ ಕಾಣಿಕೆಯೆನಿಸಿದೆ.

ಜರ್ಮನ್ ಪ್ರಭಾವದಿಂದಾಗಿ ಅವನು ಅಭಿಜಾತ ಅರ್ಥಶಾಸ್ತ್ರವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವುದನ್ನು ಕಲಿತ. ಅವನ ಪ್ರಕಾರ ಅಭಿಜಾತ ಅರ್ಥಶಾಸ್ತ್ರ ಐದು ಆಧಾರ ಪ್ರತಿಜ್ಞೆಗಳಿಂದ ಕೂಡಿದೆ; ಖಾಸಗಿ ಆಸ್ತಿ, ವ್ಯಕ್ತಿ ಸ್ವಾತಂತ್ರ್ಯ, ಆರ್ಥಿಕ ಜೀವನದಲ್ಲಿ ಸರ್ಕಾರ ಕೈಹಾಕದಿರುವುದು, ಬಂಡವಾಳ ಮತ್ತು ಕಾರ್ಮಿಕ ವರ್ಗಗಳಲ್ಲಿ ಗತಿಶೀಲತೆ ಮತ್ತು ಕೆಲವು ಬಯಕೆಗಳನ್ನು ಪೂರೈಸಿಕೊಳ್ಳಬೇಕೆಂಬ ಮಾನವನ ಆಸೆ. ಆದರೆ ಕ್ಲಾರ್ಕನ ದೃಷ್ಟಿಯಲ್ಲಿ ಇಷ್ಟೇ ಆಧಾರ ಪ್ರತಿಜ್ಞೆಗಳು ಸಾಲವು; ಇವಕ್ಕೆ ಇನ್ನು ಮೂರನ್ನು ಸೇರಿಸಬೇಕು. ಒಂದನೆಯದಾಗಿ, ವ್ಯಕ್ತಿಯನ್ನು ಸಮಾಜದಿಂದ ಪ್ರತ್ಯೇಕವಾಗಿ ನೋಡುವುದು ಸೂಕ್ತವಲ್ಲ; ಸಮಾಜ ಪರಸ್ಪರಾವಲಂಬಿಗಳಾದ ವ್ಯಕ್ತಿಗಳಿಂದ ಕೂಡಿದ್ದು, ಎರಡನೆಯದಾಗಿ, ಸಮಾಜದ ಮೌಲಿಕ ಪ್ರಜ್ಞೆಗೆ ಒಪ್ಪುವಂತಿದ್ದರೆ ಮಾತ್ರ ಆರ್ಥಿಕ ತತ್ತ್ವಗಳು ಸಮಂಜಸವೆನಿಸುತ್ತವೆ. ಮೂರನೆಯದಾಗಿ, ಆರ್ಥಿಕ ವಿಶ್ಲೇಷಣೆಯಲ್ಲಿ ಸ್ಥಿತಿ ಮತ್ತು ಗತಿವಿಜ್ಞಾನಗಳೆಂಬ ಬೇರೆಬೇರೆ ಸಲಕರಣೆಗಳ ಉಪಯೋಗ, ಕೊನೆಯ ಆಧಾರ ಪ್ರತಿಜ್ಞೆ ಅವನಿಗೆ ಲಾಭಸಿದ್ಧಾಂತವನ್ನು ರೂಪಿಸಲು ಉಪಯುಕ್ತವಾದರೆ, ಉಳಿದೆರಡು ಆಧಾರ ಪ್ರತಿಜ್ಞೆಗಳು ವಿತರಣೆಯ ಬಗ್ಗೆ ನ್ಯಾಯಸಮ್ಮತವೆನಿಸಿದ ಸೂತ್ರಗಳನ್ನು ಕಂಡುಹಿಡಿಯಲು ಅವನನ್ನು ಪ್ರೇರೇಪಿಸಿದುವು.

ಕ್ಲಾರ್ಕನ ಅಭಿಪ್ರಾಯದಲ್ಲಿ ಯಾವುದೇ ಸಮಾಜ ನ್ಯಾಯಸಮ್ಮತವೆನಿಸಬೇಕಾದರೆ ಅಲ್ಲಿ ಪದಾರ್ಥಗಳನ್ನು ಸೃಷ್ಟಿಸಲು ಯಾರು ಕಾರಣರೋ ಅವರಿಗೇ ಅವು ಸಿಕ್ಕಬೇಕಾದ್ದು ಧರ್ಮ. ಈ ಸೂತ್ರದ ಆಧಾರದ ಮೇಲೆ ಅವನು ಉತ್ಪನ್ನದಲ್ಲಿ ನ್ಯಾಯಸಮ್ಮತವಾದ ಭಾಗವನ್ನು ಉತ್ಪಾದನಾಂಗಗಳಲ್ಲಿ ಹಂಚಲು ಅನುವಾಗುವಂಥ ಒಂದು ವಿಶ್ಲೇಷಣ ಸಲಕರಣೆಯನ್ನು ರೂಪಿಸುವ ಪ್ರಯತ್ನ ಮಾಡಿದ. ಈ ಪ್ರಯತ್ನದಲ್ಲಿ ಆತ ಯಶಸ್ವಿಯೂ ಆದ. ಉತ್ಪಾದನಾಂಗಗಳ ಸಂಭಾವನೆ ಅವುಗಳ ಸೀಮಾಂತುತ್ಪಾದಕತೆಗೆ ಸಮನಾಗಬೇಕೆಂಬುದು ಅವನ ಅಭಿಪ್ರಾಯ. ಉದಾಹರಣೆಗೆ, ಪ್ರತಿ ಕಾರ್ಮಿಕನ ವೇತನವೂ ಅವನ ಸೀಮಾಂತ ಉತ್ಪಾದಕತೆಗೆ ಸಮನಾಗಿರಬೇಕು. ಉತ್ಪಾದನೆಯಲ್ಲಿ ಇಳಿಮುಖ ಸೀಮಾಂತ ಪ್ರತಿಫಲ ಪ್ರವೃತ್ತಿ ಕಂಡುಬರುವುದರಿಂದ ಕಾರ್ಮಿಕರನ್ನು ಅಧಿಕಾಧಿಕ ಸಂಖ್ಯೆಯಲ್ಲಿ ನೇಮಿಸಿಕೊಂಡಂತೆ ಸೀಮಾಂತುತ್ಪಾದಕತೆ ಕಡಿಮೆಗೊಳ್ಳುತ್ತ ಬಂದು ಕೊನೆಗೆ ಸಮಾಜದಲ್ಲಿ ಪೂರ್ಣ ಉದ್ಯೋಗವನ್ನು ನಿಶ್ಚಿತಪಡಿಸುವಂಥ ಒಂದು ವೇತನಮಟ್ಟ ನಿರ್ಣಯಿಸಲ್ಪಡುತ್ತದೆಯೆಂದು ಕ್ಲಾರ್ಕ್ ಅಭಿಪ್ರಾಯಪಡುತ್ತಾನೆ. ಈ ಮಟ್ಟಕ್ಕಿಂತ ಹೆಚ್ಚಿನ ವೇತನವನ್ನು ಕಾರ್ಮಿಕರು ಬೇಡಿದ ಪಕ್ಷದಲ್ಲಿ ನಿರುದ್ಯೋಗ ಉಂಟಾಗುವ ಸಂಭವವುಂಟು. ಕಾರ್ಮಿಕ ಸಂಘಗಳು ಕಾರ್ಮಿಕರ ಸೀಮಾಂತ ಉತ್ಪಾದಕತೆಗಿಂತ ಮೀರಿದ ವೇತನದರವನ್ನು ಪಡೆಯುವುದು ಸಾಧ್ಯವಿಲ್ಲವೆಂದು ಕ್ಲಾರ್ಕ್ ಸ್ಥಾಪಿಸಲು ಯತ್ನಿಸಿದ್ದಾನೆ. ಇದು ಸೀಮಾಂತ ಉತ್ಪಾದಕತಾ ವೇತನ ಸಿದ್ಧಾಂತ. ಈಗಲೂ ಇದು ವಿಶೇಷವಾಗಿ ಬಳಕೆಯಲ್ಲಿದೆ. ಆದರೆ ಇದು ಕಾರ್ಮಿಕರ ಬೇಡಿಕೆಯನ್ನು ನಿರ್ಣಯಿಸುವ ಅಂಶವನ್ನು ಮಾತ್ರ ಒತ್ತಿಹೇಳುತ್ತದೆಯೇ ಹೊರತು, ಕಾರ್ಮಿಕರ ಸರಬರಾಯಿಯನ್ನು ನಿಶ್ಚಯಿಸುವ ಅಂಶಗಳ ಬಗ್ಗೆ ಬೆಳಕು ಚೆಲ್ಲುವುದಿಲ್ಲವಾದ್ದರಿಂದ ಇದು ವೇತನ ನಿರ್ಣಯದ ಬಗ್ಗೆ ಪೂರ್ಣ ವಿವರ ನೀಡುವುದರಲ್ಲಿ ಸಮರ್ಥವಾಗುವುದಿಲ್ಲವೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಈ ಸಿದ್ಧಾಂತಕ್ಕೆ ಪೂರ್ಣರೂಪ ನೀಡುವ ದೃಷ್ಟಿಯಿಂದ ಇತರ ಅರ್ಥಶಾಸ್ತ್ರಜ್ಞರು ಕಾರ್ಮಿಕರ ಸರಬರಾಯಿಯನ್ನು ನಿರ್ಣಯಿಸುವ ಅಂಶಗಳ ಬಗ್ಗೆ ಅಧ್ಯಯನ ಮಾಡಿ, ಕಾರ್ಮಿಕರ ಬೇಡಿಕೆ ಮತ್ತು ಸರಬರಾಯಿಗಳನ್ನು ನಿರ್ಣಯಿಸುವ ಅಂಶಗಳ ಆಧಾರದ ಮೇಲೆ ವೇತನದ ನಿರ್ಧಾರವಾಗುತ್ತದೆಯೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಬಡ್ಡಿದರದ ನಿರ್ಣಯದ ಬಗ್ಗೆಯೂ ಕ್ಲಾರ್ಕನ ಅಭಿಪ್ರಾಯ ಇದೇ ಬಗೆಯದು. ವೇತನದಂತೆಯೇ ಬಡ್ಡಿದರವೂ ಬಂಡವಾಳದ ಸೀಮಾಂತ ಉತ್ಪಾದಕತೆಯ ಆಧಾರದ ಮೇಲೆ ನಿರ್ಣಯಿಸಲ್ಪಡುತ್ತದೆ. ಇಲ್ಲಿಯೂ ಅವನು ಬಂಡವಾಳಕ್ಕಿರುವ ಬೇಡಿಕೆಯನ್ನು ನಿರ್ಧರಿಸುವ ಅಂಶವನ್ನು ಮಾತ್ರ ಗಮನಿಸಿದ್ದಾನೆಯೇ ಹೊರತು ಬಂಡವಾಳದ ಸರಬರಾಯಿಯನ್ನು ನಿರ್ಧರಿಸುವ ಅಂಶಗಳನ್ನು ಉಪೇಕ್ಷಿಸಿದ್ದಾನೆ.

ಕ್ಲಾರ್ಕ್‌ನ ಲಾಭ ಹಾಗೂ ಗೇಣಿ ಸಿದ್ಧಾಂತಗಳು ಸ್ಥಿತಿ ಮತ್ತು ಗತಿ ಆರ್ಥಿಕತೆಗಳ ಬಗ್ಗೆ ಅವನು ನೀಡಿರುವ ವ್ಯಾಖ್ಯೆಗಳಿಗೆ ಅನುಗುಣವಾಗಿವೆ. ಸ್ಥಿತಿ ಮತ್ತು ಗತಿ ಆರ್ಥಿಕತೆಗಳ ನಡುವೆ ಅವನು ಸೂಚಿಸಿರುವ ವ್ಯತ್ಯಾಸ, ಅರ್ಥಶಾಸ್ತ್ರದ ಅಧ್ಯಯನ ಕ್ರಮಕ್ಕೆ ನೀಡಿರುವ ಒಂದು ಅಮೂಲ್ಯ ಕಾಣಿಕೆ ಎಂದು ಪರಿಗಣಿತವಾಗಿದೆ. ಆರ್ಥಿಕತೆಯಲ್ಲಿ ಯಾವ ಬಗೆಯ ಬದಲಾವಣೆಯೂ ಇಲ್ಲದಿರುವುದು ಸ್ಥಿತಿಆರ್ಥಿಕತೆಯ ಪರಿಸ್ಥಿತಿಯನ್ನು ಸೂಚಿಸುತ್ತದೆ. ಆದರೆ ಗತಿಆರ್ಥಿಕತೆಯಲ್ಲಿ ಐದು ಬಗೆಯ ಗತ್ಯಾತ್ಮಕ ಬದಲಾವಣೆಗಳು ಕಂಡುಬರುತ್ತವೆ: 1.ಜನಸಂಖ್ಯೆಯ ಬೆಳೆವಣಿಗೆ, 2.ಬಂಡವಾಳದ ಬೆಳೆವಣಿಗೆ, 3.ತಾಂತ್ರಿಕ ಪ್ರಗತಿ, 4.ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಬದಲಾವಣೆ, 5.ಅನುಭೋಗಿಗಳ ಬಯಕೆಗಳಲ್ಲಿ ಬದಲಾವಣೆ–ಇವೇ ಆ ಬದಲಾವಣೆಗಳು. ಇವುಗಳ ಪ್ರಭಾವವೇನೆಂಬುದನ್ನು ಅವನು ವಿಶ್ಲೇಷಿಸಿದ್ದಾನೆ. ನಿಗಮನಚೌಕಟ್ಟಿನಲ್ಲಿ ಅನುಗಮನ ಗತಿಶಾಸ್ತ್ರವನ್ನು ಹೊಂದಿಸಲು ಯತ್ನಿಸಿದ್ದು ಕ್ಲಾರ್ಕ್‌ನ ವೈಶಿಷ್ಟ್ಯ. ಅವನ ಪ್ರಕಾರ ಸ್ಥಿತಿ ಆರ್ಥಿಕತೆಯಲ್ಲಿ ಲಾಭದ ಪ್ರಶ್ನೆಯೇ ಬರುವುದಿಲ್ಲ. ಇಲ್ಲಿ ಸಾಮಾನ್ಯವಾದ ಉತ್ಪಾದನಾಂಗಗಳ ಸಂಭಾವನೆಯಗಳೆಂದರೆ ವೇತನ ಮತ್ತು ಬಡ್ಡಿ ಮಾತ್ರ. ಗೇಣಿಯೆಂಬುದು ಉತ್ಪಾದನಾಂಗಗಳಲ್ಲಿ ಅವುಗಳ ವಿರಳತೆಯ ಕಾರಣದಿಂದಾಗಿ ಉಂಟಾಗುವ ಹೆಚ್ಚಳ ಸಂಭಾವನೆಯಷ್ಟೆ. ಆದರೆ ಗತಿ ಆರ್ಥಿಕತೆಯಲ್ಲಿ ಲಾಭ ಮೂಡಿ ಬರುವುದು ಸ್ವಾಭಾವಿಕ. ಹೀಗೆ ಸ್ಥಿತಿ ಆರ್ಥಿಕತೆಯಲ್ಲಿ ಸಂಘಟಕ ಕೇವಲ ಉಸ್ತುವಾರಿ ಕಾರ್ಯವನ್ನು ನಿರ್ವಹಿಸಿ ತನ್ನ ಶ್ರಮಕ್ಕೆ ತಕ್ಕ ವೇತನ ಪಡೆಯುತ್ತಾನೆಯೇ ಹೊರತು ಲಾಭವನ್ನಲ್ಲ. ಆದರೆ ಆರ್ಥಿಕತೆಯಲ್ಲಿ ಬದಲಾವಣೆಗಳುಂಟಾದಾಗ ಸಂಘಟಕ ಹೊಸ ಸಮಸ್ಯೆಗಳನ್ನು ಎದುರಿಸಬೇಕು. ಇಲ್ಲಿ ಶ್ರಮ, ಬಂಡವಾಳ ಮತ್ತಿತರ ಉತ್ಪಾದನಾಂಗಗಳನ್ನು ಸಂಯೋಜಿಸಿ ಉತ್ಪಾದನೆಯ ಗತಿಯನ್ನು ಬದಲಾದ ಸ್ಥಿತಿಗೆ ಅಳವಡಿಸಿಕೊಂಡು ಉತ್ಪಾದನಾಕಾರ್ಯ ಕೈಗೊಳ್ಳಬೇಕು. ಸಂಘಟಕನಿಗೆ ಈ ಕಾರ್ಯಕ್ಕಾಗಿ ಲಭ್ಯವಾಗುವ ಸಂಭಾವನೆಯೇ ಲಾಭ. ಆದ್ದರಿಂದ ಕ್ಲಾರ್ಕನ ದೃಷ್ಟಿಯಲ್ಲಿ ಲಾಭವೆಂಬುದು ಬದಲಾವಣೆಗಳ ಕಾರಣದಿಂದಾಗಿ ಮೂಡಿ ಬರುವಂಥ ಅಂಶ.

ಕ್ಲಾರ್ಕನ ಅನಂತರ ಬಂದ ಅರ್ಥಶಾಸ್ತ್ರಜ್ಞರು–ಮುಖ್ಯವಾಗಿ ಫ್ರಾಂಕ್ ಎಚ್.ನೈಟ್–ಅವನ ಈ ವಾದವನ್ನು ಒಪ್ಪಿಕೊಂಡರಾದರೂ ಲಾಭ ಆರ್ಥಿಕತೆಯಲ್ಲುಂಟಾಗುವ ಎಲ್ಲ ಬದಲಾವಣೆಗಳನ್ನು ನಿರ್ವಹಿಸುವ ಕಾರ್ಯಕ್ಕಾಗಿ ಸಂಘಟಕನಿಗೆ ಕೊಡುವ ಸಂಭಾವನೆಯಲ್ಲವೆಂದೂ ಅದು ಅನಿಶ್ಚಿತ ಬದಲಾವಣೆಗಳನ್ನು ನಿರ್ವಹಿಸುವ ಕಾರ್ಯಕ್ಕಾಗಿ ಪಡೆಯುವ ಸಂಭಾವನೆ ಎಂದೂ ಭಾವಿಸಲಾಗಿದೆ.

ತಾನು ವಿಶ್ಲೇಷಿಸಿರುವ ನಿಯಮಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ಮಾತ್ರ ಅನ್ವಯವಾಗುವುದೆಂಬುದನ್ನು ಕ್ಲಾರ್ಕ್ ತನ್ನ ಎಸೆನ್ಷಿಯಲ್ಸ್ ಆಫ್ ಎಕಾನಾಮಿಕ್ ಥಿಯೊರಿ ಎಂಬ ಪುಸ್ತಕದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ.

ಕ್ಲಾರ್ಕ್‌ನಿಗೆ ಜೀವನದಲ್ಲಿ ವಿಶೇಷವಾದ ಶ್ರದ್ಧೆ ಇತ್ತು. ಅವನು ಕೊನೆಯವರೆಗೂ ಆಶಾವಾದಿಯಾಗಿದ್ದ. ವಿಶ್ವಶಾಂತಿಸಾಧನೆಯಲ್ಲಿ ಅವನಿಗೆ ವಿಶೇಷವಾದ ಆಸಕ್ತಿಯಿತ್ತು. 1935ರಲ್ಲಿ ಈ ಬಗ್ಗೆ ಅವನು ಒಂದು ಪುಸ್ತಕ ಬರೆದ (ಎ ಟೆಂಡರ್ ಫಾರ್ ಪೀಸ್). ಕ್ಲಾರ್ಕ್ ತನ್ನ 91ನೆಯ ವಯಸ್ಸಿನಲ್ಲಿ, ಎರಡನೆಯ ಮಹಾಯುದ್ಧ ಆರಂಭವಾಗಲು ಒಂದು ವರ್ಷ ಮುಂಚೆ (1938), ತೀರಿಕೊಂಡ. (ಎ.ಬಿ.ಎ.)

**ಕ್ಲಾರ್ಕ್, ಜಾನ್ ಮಾರಿಸ್ :** 1884–1963. ಅಮೆರಿಕನ್ ಅರ್ಥಶಾಸ್ತ್ರಜ್ಞ. ಅಮೆರಿಕನ್ ಎಕನಾಮಿಕ್ ಅಸೋಸಿಯೇಷನಿನ ಮೂವತ್ತೇಳನೆಯ ಅಧ್ಯಕ್ಷ. ಮ್ಯಾಸಚೂಸೆಟ್ಸ್‌ನ ನಾರ್ತಾಂಪ್ಟನಿನಲ್ಲಿ 1884ರಲ್ಲಿ ಜನಿಸಿದ. ಜೆ.ಎಸ್. ಮಿಲ್ ಮತ್ತು ಜೆ.ಎಂ.ಕೇನ್ಸರ ಹಾಗೆ ಜಾನ್ ಮಾರಿಸ್ ಕ್ಲಾರ್ಕನೂ ಅರ್ಥಶಾಸ್ತ್ರಜ್ಞನ ಮಗ. ಇವನ ತಂದೆ ಜೆ.ಬಿ. ಕ್ಲಾರ್ಕ್. **(ನೋಡಿ– ಕ್ಲಾರ್ಕ್, ಜಾನ್‌ಬೇಟ್ಸ್)**. ಆಮ್‌ಅರ್ಸ್ಟ್ ಕಾಲೇಜಿನಲ್ಲಿ ಓದಿ 1905ರಲ್ಲಿ ಎ.ಬಿ. ಪದವಿ ಗಳಿಸಿದ. ಅನಂತರ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರಾಭ್ಯಾಸ ಮುಂದುವರಿಸಿ ಎಂ.ಎ (1906) ಮತ್ತು ಪಿಎಚ್.ಡಿ(1910) ಪಡೆದ. ಈತ ಕಾಲೊರಾಡೋ ಕಾಲೇಜಿನಲ್ಲಿ ಅರ್ಥಶಾಸ್ತ್ರ ಸಮಾಜಶಾಸ್ತ್ರಗಳಲ್ಲಿ ಬೋಧಕನಾದ್ದು 1908ರಲ್ಲಿ. ಅರ್ಥಶಾಸ್ತ್ರದ ಸಹಪ್ರಾಧ್ಯಾಪಕನಾಗಿ ಈತ ಆಮ್‌ಅರ್ಸ್ಟ್ ಕಾಲೇಜಿಗೆ ಹಿಂದಿರುಗಿದ್ದ 1910ರಲ್ಲಿ. 1915ರಲ್ಲಿ ಈತ ಷಿಕಾಗೋ ವಿಶ್ವವಿದ್ಯಾಲಯ ಸೇರಿದ. 1926ರಲ್ಲಿ ಅಲ್ಲಿಂದ ಕೊಲಂಬಿಯ ವಿಶ್ವವಿದ್ಯಾಲಯಕ್ಕೆ ಬಂದು ಅರ್ಥಶಾಸ್ತ್ರದ ಪ್ರಾಧ್ಯಾಪಕನಾದ. ಆ ಸ್ಥಾನದಿಂದ ಕ್ಲಾರ್ಕ್ ನಿವೃತ್ತಿ ಹೊಂದಿದ್ದು 1957ರಲ್ಲಿ. ಹೀಗೆ ಐವತ್ತು ವರ್ಷಕಾಲ ಈತ ಸತತವಾಗಿ ಕ್ರಿಯಾತ್ಮಕ ಚಿಂತನೆ ಬೋಧನೆಗಳಲ್ಲಿ ನಿರತನಾಗಿ ಸಾರ್ಥಕ ಜೀವನ ನಡೆಸಿದ. ಅನೇಕ ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಲೇಖನಗಳನ್ನು ಬರೆದು ತನ್ನ ಸಮಕಾಲೀನ ಆರ್ಥಿಕ ಚಿಂತನೆಯಲ್ಲಿ ಭಾಗವಹಿಸಿದ್ದಲ್ಲದೆ ಅನೇಕ ಪುಸ್ತಕಗಳನ್ನೂ ಪ್ರಕಟಿಸಿದ. ಸ್ಟಡೀಸ್ ಇನ್ ದಿ ಎಕನಾಮಿಕ್ಸ್ ಆಫ್ ಓವರ್ ಹೆಡ್ ಕಾಸ್ಟ್ಸ್ (1923), ಸ್ಟ್ರಾಟೆಜಿಕ್ ಫ್ಯಾಕ್ಟರ್ಸ್ ಇನ್ ಬಿಸಿನೆಸ್ ಸೈಕಲ್ಸ್ (1934), ದಿ ಎಕನಾಮಿಕ್ಸ್ ಆಫ್ ಪ್ಲಾನಿಂಗ್ ಪಬ್ಲಿಕ್ ವರ್ಕ್ಸ್ (1934), ಪ್ರಿಫೇಸ್ ಟು ಸೋಷಿಯಲ್ ಎಕನಾಮಿಕ್ಸ್(1936) ಮುಂತಾದ ಅನೇಕ ಪುಸ್ತಕಗಳನ್ನು ಈತ ಬರೆದಿದ್ದಾನೆ. ಕ್ಲಾರ್ಕ್ ತೀರಿಕೊಂಡದ್ದು 1963ರಲ್ಲಿ.

1920 ಮತ್ತು 1930ರ ದಶಕಗಳು ಮೌಲ್ಯ ಹಾಗೂ ಆರ್ಥಿಕ ಆವರ್ತ ಸಿದ್ಧಾಂತಗಳು ರೂಪಿತವಾಗುತ್ತಿದ್ದ ಕಾಲ. ಈ ಅವಧಿಯ ಆರ್ಥಿಕ ಚಿಂತನೆಯಲ್ಲಿ ಪಾಲುಗೊಂಡಿದ್ದ ಕ್ಲಾರ್ಕ್ ಈ ಎರಡೂ ಕ್ಷೇತ್ರಗಳಿಗೂ ಮೂಲಭೂತ ಕಾಣಿಕೆ ಸಲ್ಲಿಸಿದ್ದಾನೆ.

ಆರ್ಥಿಕ ಆವರ್ತಗಳ ಆಧುನಿಕ ಮೀಮಾಂಸೆಯ ಆಧಾರಸ್ತಂಭಗಳೆನಿಸಿದ ಗುಣಕ ಮತ್ತು ವೇಗೋತ್ಕರ್ಷ ನಿಯಮಗಳನ್ನು ಪರಿಪೂರ್ಣಗೊಳಿಸಿದವರಲ್ಲಿ ಕ್ಲಾರ್ಕನೂ ಒಬ್ಬ. ಆರ್ಥಿಕತೆಯ ಕ್ರಯಶಕ್ತಿಯಲ್ಲಿ ಸಂಭವಿಸುವ ಏರಿಕೆಗೆ ಹಲವು ಮಡಿಯಾಗಿ ಆದಾಯ ಅಧಿಕವಾಗುತ್ತದೆಂಬುದನ್ನು ಗುಣಕ ನಿಯಮ ವಿವರಿಸುತ್ತದೆ. ಪ್ರಪಂಚದ ಮಹಾ ಆರ್ಥಿಕ ಕುಸಿತದ ಕಾಲದಲ್ಲಿ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ ಸರ್ಕಾರ ಕೈಗೊಂಡ ನೆರವು ನೀಡಿಕೆ ನೀತಿಯ ಪರಿಣಾಮ ಈ ನಿಯಮಕ್ಕನುಗುಣವಾಗಿಲ್ಲದಿದ್ದಾಗ ಕ್ಲಾರ್ಕನೂ ಇನ್ನೊಬ್ಬ ಅರ್ಥಶಾಸ್ತ್ರಜ್ಞ ಕಾನನೂ ಇದಕ್ಕೆ ಕಾರಣಗಳನ್ನು ವಿವರಿಸಿದರು. ಆರ್ಥಿಕ ನೆರವು ಪಡೆದವರು ಅದರ ಒಂದು ಭಾಗವನ್ನು ಸಾಲ ತೀರಿಸುವುದಕ್ಕೂ ಆಮದು ಮಾಡಿಕೊಂಡ ವಸ್ತುಗಳಿಗಾಗಿ ಹಣ ಸಲ್ಲಿಸುವುದಕ್ಕೂ ಬಳಸುವುದರಿಂದ ಕ್ರಯಶಕ್ತಿ ಸೋರಿಹೋಗುವುದೇ ಇದಕ್ಕೆ ಕಾರಣ ಎಂಬುದನ್ನು ತೋರಿಸಿಕೊಟ್ಟರು. ವೇಗೋತ್ಕರ್ಷ ನಿಯಮವನ್ನು ಪ್ರತಿಪಾದಿಸಿದವನು ಜೆ.ಎಂ. ಕ್ಲಾರ್ಕ್ ಅಲ್ಲವಾದರೂ ಅವನು ಅದನ್ನು ಬೆಳೆಸಿ ಪರಿಪೂರ್ಣಗೊಳಿಸಿದನೆಂದು ಪರಿಗಣಿತನಾಗಿದ್ದಾನೆ. ಅನುಭೋಗ ಸರಕುಗಳ ಬೇಡಿಕೆಗಿಂತ ಉತ್ಪಾದಕ ಸರಕುಗಳ ಬೇಡಿಕೆ ಹೆಚ್ಚು ತೀವ್ರವಾಗಿ ಏರಿಳಿಯುವುದೆಂಬುದನ್ನು ಜೆ.ಎಂ. ಕ್ಲಾರ್ಕ್ ವಿಶದಗೊಳಿಸುತ್ತ, ಪ್ರಾಸಂಗಿಕವಾಗಿ ಈ ಎರಡೂ ಬಗೆಯ ಬೇಡಿಕೆಗಳ ನಡುವಣ ಸಂಬಂಧವನ್ನು ಸ್ಥಾಪಿಸುವ ವೇಗೋತ್ಕರ್ಷ ನಿಯಮವನ್ನು ಪರಿಪೂರ್ಣಗೊಳಿಸಿದ. ಉತ್ಪಾದಕ ಸರಕುಗಳಲ್ಲಿ ಹೆಚ್ಚಿನ ಏರಿಳಿತಗಳಾಗಲು ಕಾರಣವಿಷ್ಟೆ: ಒಮ್ಮೆ ತಯಾರಾದ ಉತ್ಪಾದಕ ಸರಕುಗಳು, ದೀರ್ಘಕಾಲ ಬಳಕೆಯಲ್ಲಿರುತ್ತವೆ. ಆದ್ದರಿಂದ ಅನಂತರ ಆ ಕ್ಷೇತ್ರದಲ್ಲಿ ಬೇಡಿಕೆ ಇರುವುದು ಅವುಗಳ ಪುನಸ್ಸ್ಥಾಪನದ ಅಗತ್ಯ ದೃಷ್ಟಿಯಿಂದ ಮಾತ್ರ; ಅಷ್ಟಕ್ಕೆ ಮಾತ್ರ ಅವುಗಳ ಉತ್ಪಾದನೆ ಪರಿಮಿತವಾಗಿರುತ್ತದೆ. ಆದರೆ ಯಾವುದೇ ವರ್ಷದಲ್ಲಿ ಅನುಭೋಗ ಸರಕುಗಳ ಬೇಡಿಕೆಯಲ್ಲಿ ಏರಿಳಿತಗಳುಂಟಾದರೆ ಉತ್ಪಾದಕ ವಸ್ತುಗಳ ಬೇಡಿಕೆಯ ಮೇಲುಂಟಾಗುವ ಪರಿಣಾಮ ಗುಣಕರೂಪದ್ದು. ಅನುಭೋಗ ಸರಕುಗಳ ಉತ್ಪಾದಕರು ಸರಕುಗಳಿಗೆ(ಉದಾಹರಣೆ: ಯಂತ್ರ ಇತ್ಯಾದಿ) ಬೇಡಿಕೆ ನಿಲ್ಲಿಸುತ್ತಾರೆ. ಉತ್ಪಾದಕ ಸರಕುಗಳ ಪುನಸ್ಸ್ಥಾಪನ ಕಾರ್ಯವನ್ನು ಮುಂತಳ್ಳುತ್ತಾರೆ. ಆದ್ದರಿಂದ ಉತ್ಪಾದಕ ಸರಕು ಕೈಗಾರಿಕೆಗಳಲ್ಲಿ ಉತ್ಪಾದನೆ, ಉದ್ಯೋಗ, ಆದಾಯಗಳು ಅತಿಯಾದ ಏರಿಳಿತಗಳಿಗೆ ಒಳಗಾಗಿ ಆರ್ಥಿಕ ಆವರ್ತಗಳನ್ನು ತೀವ್ರಗೊಳಿಸುತ್ತವೆ–ಎಂದು ಕ್ಲಾರ್ಕ್ ವಾದಿಸಿದ್ದಾನೆ.

ಚೇಂಬರ್ಲಿನ್ ಎಂಬ ಅರ್ಥಶಾಸ್ತ್ರಜ್ಞ: ಏಕಸ್ವಾಮ್ಯ ಸ್ಪರ್ಧೆಯ ಪರಿಸ್ಥಿತಿಯಲ್ಲಿ ದೀರ್ಘಾವಧಿ ಬೆಲೆ ನಿರ್ಧಾರದ ಬಗ್ಗೆ ಬರೆಯುತ್ತ, ಜಾಹೀರಾತು ಮುಂತಾದ ವೆಚ್ಚಗಳಿಂದಾಗಿ ಉತ್ಪಾದನೆಯ ಸರಾಸರಿ ವೆಚ್ಚರೇಖೆ ಕಡಿದಾಗಿರುತ್ತದೆ ಹಾಗೂ ಪದಾರ್ಥದ ಅತಿಯಾದ ಭಿನ್ನತೆಯ ಕಾರಣ ಸರಾಸರಿ ಹುಟ್ಟುವಳಿ ಅಥವಾ ಬೇಡಿಕೆಯ ರೇಖೆ ಕೂಡ ಕಡಿದಾಗಿರುತ್ತದೆ ಎಂದು ಸಾಧಿಸಿ ತೋರಿಸಿದ್ದ. ಆದಕಾರಣ ಈ ಸನ್ನಿವೇಶದಲ್ಲಿ ಉತ್ಪಾದನೆಯ ಮಟ್ಟ ಪರಿಪೂರ್ಣ ಸ್ಪರ್ಧೆಯಲ್ಲಿಯ ಮಟ್ಟಕ್ಕಿಂತ ಕಡಿಮೆ ಇದ್ದರೂ ಬೆಲೆ ಹೆಚ್ಚಾಗಿರುತ್ತದೆ. ಆದ್ದರಿಂದ ಏಕಸ್ವಾಮ್ಯ ಸ್ಪರ್ಧೆಯ ಸ್ಥಿತಿಯ ಕಾರ್ಯದಕ್ಷತೆ ಪರಿಪೂರ್ಣ ಸ್ಪರ್ಧೆಯ ಸ್ಥಿತಿಯದಕ್ಕಿಂತ ಕಡಿಮೆಯದು ಎಂಬುದು ಚೇಂಬರ್ಲಿನನ ಅಭಿಪ್ರಾಯ. ಕ್ಲಾರ್ಕ್ ಈ ಅಭಿಪ್ರಾಯವನ್ನು ವಿಮರ್ಶಿಸುತ್ತ, ಉತ್ಪಾದನ ವೆಚ್ಚ ಹಾಗೂ ಬೆಲೆನಿರ್ಧಾರ ಕ್ಷೇತ್ರಗಳಿಗೆ ಒಂದು ಅಮೂಲ್ಯವಾದ ಕೊಡುಗೆಯನ್ನಿತ್ತ. ಚೇಂಬರ್ಲಿನ್ ಉಪಯೋಗಿಸಿರುವ ರೇಖೆಗಳ ಅತಿಯಾದ ಕಡಿದುಗುಣದಿಂದಾಗಿ ಅವನು ಆ ಬಗೆಯ ತೀರ್ಮಾನಕ್ಕೆ ಬಂದಿದ್ದಾನೆ. ಆದರೆ ಸರಾಸರಿ ಹುಟ್ಟುವಳಿ (ಬೇಡಿಕೆ) ಹಾಗೂ ಸರಾಸರಿ ವೆಚ್ಚದ ರೇಖೆಗಳು ದೀರ್ಘಾವಧಿಯಲ್ಲಿ ಅಷ್ಟು ಕಡಿದಾಗಿರುವುದಿಲ್ಲ. ಏಕಸ್ವಾಮ್ಯ ಪರಿಸ್ಥಿತಿಯಲ್ಲೂ ದೀರ್ಘಾವಧಿಯಲ್ಲಿ ಸ್ಪರ್ಧೆ ಉಂಟಾಗುವ ಸಂಭವವಿರುತ್ತದೆ. ಅಲ್ಲದೆ ಪ್ರತಿನಿಧಾನ ಪದಾರ್ಥಗಳು ಮಾರುಕಟ್ಟೆಗೆ ಬರುವ ಸಾಧ್ಯತೆಯಿರುತ್ತದೆ. ಇದರಿಂದಾಗಿ ಬೇಡಿಕೆ ರೇಖೆಗೆ ಅಧಿಕ ಪ್ರಮಾಣದ ಸ್ಥಿತಿಸ್ಥಾಪಕತ್ವ ಉಂಟಾಗಿ ಅದು ಮಟ್ಟಸವಾಗಿರುತ್ತದೆ. ದೀರ್ಘಾವಧಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಲಾಗುವುದು ಉದ್ಯಮ ಸಂಸ್ಥೆಯ ವಿಸ್ತರಣದಿಂದಲೇ ಹೊರತು ಇರುವ ಸೌಲಭ್ಯಗಳನ್ನೇ ತೀವ್ರವಾಗಿ ಬಳಸಿಕೊಳ್ಳುವುದರಿಂದಲ್ಲ. ಈ ಕಾರಣದಿಂದಾಗಿ ಸ್ಥಿರ ಮೇಲುವೆಚ್ಚವೂ ಬದಲಾಗುತ್ತಿರುತ್ತದೆ–ಎಂಬುದನ್ನು ಕ್ಲಾರ್ಕ್ ತೋರಿಸಿಕೊಟ್ಟು, ಸರಾಸರಿ ವೆಚ್ಚರೇಖೆ ದೀರ್ಘಾವಧಿಯಲ್ಲಿ ಕಡಿದಾಗಿರದೆ

ಮಟ್ಟಸವಾಗಿರುತ್ತದೆಯೆಂಬುದನ್ನು ಸಾಧಿಸಿ ತೋರಿಸಿದ. ಬೇಡಿಕೆ ಮತ್ತು ಸರಾಸರಿ ವೆಚ್ಚರೇಖೆಗಳು ಮಟ್ಟಸವಾಗಿದ್ದಾಗ ಅವು ಪರಸ್ಪರ ಸ್ಪರ್ಶಿಸುವ ಬಿಂದುವಿನಲ್ಲಿಯ ಸಮತೋಲ ಉತ್ಪನ್ನ ಮೊತ್ತ, ಈ ರೇಖೆಗಳು ಕಡಿದಾಗಿದ್ದಾಗಿನ ಪರಿಸ್ಥಿತಿಯಲ್ಲಿಯ ಸಮತೋಲ ಉತ್ಪನ್ನ ಮೊತ್ತಕ್ಕಿಂತ ಸಹಜವಾಗಿಯೇ ಅಧಿಕವಾಗಿರುತ್ತದೆ. ಆದ್ದರಿಂದ ಏಕಸ್ವಾಮ್ಯ ಸ್ಪರ್ಧಾಸ್ಥಿತಿಯಲ್ಲಿರುವ ಉತ್ಪಾದನೆಯ ಕಾರ್ಯದಕ್ಷತೆ ಚೇಂಬರ್ಲಿನ್ ತೋರಿಸಿರುವಷ್ಟು ಕೀಳಲ್ಲ. ಅದು ದೀರ್ಘಾವಧಿಯಲ್ಲಿ ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯ ಕಾರ್ಯದಕ್ಷತೆಗೆ ಸಮೀಪವಾಗಿರುತ್ತದೆ ಎಂಬುದು ಕ್ಲಾರ್ಕ್ ಅಭಿಪ್ರಾಯ.

ಕ್ಲಾರ್ಕ್ ತನ್ನ ಜೀವಮಾನ ಕಾಲದಲ್ಲಿ ಪ್ರಮುಖವಾಗಿದ್ದ ಎಲ್ಲ ಆರ್ಥಿಕ ಸಮಸ್ಯೆಗಳ ಮೇಲೂ ಬರೆದಿದ್ದಾನೆ. ಸ್ಥಿತಿಶಾಸ್ತ್ರದ ಅಮೂರ್ತೀಕರಣಕ್ಕೂ ಗತಿಶಾಸ್ತ್ರದ ವಾಸ್ತವತೆಗೂ ಇದ್ದ ಅಂತರವನ್ನು ನಿವಾರಿಸುವತ್ತ ವಿಶೇಷವಾಗಿ ಗಮನ ಹರಿಸಿದ್ದಾನೆಂದು ಅವನು ಪ್ರಸಿದ್ಧನಾಗಿದ್ದಾನಾದರೂ, ವ್ಯಾಪಾರ ಆವರ್ತ, ಯುದ್ಧದ ಆರ್ಥಿಕ ವೆಚ್ಚ, ಯುದ್ಧ ಕಾಲದ ನಿಯಂತ್ರಣಗಳು, ಕಾರ್ಮಿಕ ಮಾರುಕಟ್ಟೆ, ಶಿಕ್ಷಣ ಮುಂತಾದ ಅನೇಕ ವಿಷಯಗಳ ಮೇಲೆ ಲೇಖನ ಬರೆದಿದ್ದಾನೆ. ಲೇಖನಗಳ ಬಾಹುಳ್ಯ, ಗುಣ ಎರಡು ದೃಷ್ಟಿಗಳಿಂದಲೂ ಕ್ಲಾರ್ಕ್ ಉನ್ನತ ಸ್ಥಾನ ಗಳಿಸಿದ್ದಾನೆ. ಸ್ವಕ್ಷೇತ್ರದಲ್ಲಿಯ ಎಲ್ಲ ಹಿರಿಯ ಮರ್ಯಾದೆಗಳೂ ಅವನಿಗೆ ಲಭ್ಯವಾದುವು. ಅನೇಕ ವಿಶ್ವವಿದ್ಯಾಲಯಗಳು ಕ್ಲಾರ್ಕನಿಗೆ ಗೌರವ ಪದವಿಗಳನ್ನು ನೀಡಿದುವು. ಅವನು ವಿಶಿಷ್ಟವಾದ ಯಾವ ಆರ್ಥಿಕ ಪಂಥದ ಸ್ಥಾಪಕನೂ ಅಲ್ಲ. ಆದರೂ ಬಹು ದೊಡ್ಡ ವಿದ್ವಾಂಸನೆಂದು ಅಪಾರವಾದ ಕೀರ್ತಿ ಗಳಿಸಿದ ಅರ್ಥಶಾಸ್ತ್ರಜ್ಞರಲ್ಲಿ ಕ್ಲಾರ್ಕನೂ ಒಬ್ಬ. (ಎಬಿ.ಎ.)

**ಕ್ಲಾರ್ಕಿಯ :** ಅಂದವಾದ ಹೂಬಿಡುವ ಒಂದು ಏಕವಾರ್ಷಿಕ ಬಗೆಯ ಸಸ್ಯ. ಒನಾಗ್ರೇಸೀ ಕುಟುಂಬಕ್ಕೆ ಸೇರಿದೆ. ಮೂಲಿಕೆಸಸ್ಯವಾದ ಇದು ಸುಮಾರು 1½ '–2' ಎತ್ತರ ಬೆಳೆಯುತ್ತದೆ. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಹೂಗಳು ಬಲು ಬೆಡಗಿನವು; ಇವುಗಳ ಬಣ್ಣ ನಸುಗೆಂಪು, ಬಿಳಿ, ಕಡುಗೆಂಪು ಹೀಗೆ ವೈವಿಧ್ಯಪೂರ್ಣ. ಪ್ರತಿ ಹೂವಿನಲ್ಲೂ 4 ಪುಷ್ಪಪತ್ರಗಳು, 4 ದಳಗಳು, 8 ಕೇಸರಗಳು ಮತ್ತು ಉಚ್ಚಸ್ಥಾನದ ಅಂಡಾಶಯ ಇವೆ. ಹೂಗಳು ಉದ್ದ ತೊಟ್ಟಿನ ರೆಸೀಮ್ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿರುವುದರಿಂದ ಇಡೀ ಹೂಗೊಂಚಲನ್ನೇ ಕತ್ತರಿಸಿ ಹೂದಾನಿಗಳಲ್ಲಿ ಇಡಲು ಸೊಗಸಾಗಿವೆ. ಕ್ಲಾರ್ಕಿಯವನ್ನು ಸುಲಭವಾಗಿ ವೃದ್ಧಿಸಬಹುದು. ವೃದ್ಧಿ ಬೀಜಗಳ ಮುಖಾಂತರ, ಸಸಿಗಳನ್ನು ಒಟ್ಲುಪಾತಿಯಿಂದ ಬೇರೆಡೆಗೆ ನಾಟಿ ಮಾಡಲು ಬರುವುದಿಲ್ಲವಾದ್ದರಿಂದ ಬೇಕಾದ ಸ್ಥಳಗಳಲ್ಲಿ ನೇರವಾಗಿ ಬೀಜಗಳನ್ನೇ ಬಿತ್ತಿ ಗಿಡ ಬೆಳೆಸಬೇಕು. ಬೀಜಗಳೆಲ್ಲ ಮೊಳೆತು ಸಸಿಗಳು 3" ಎತ್ತರವಾದಾಗ ಗಿಡದಿಂದ ಗಿಡಕ್ಕೆ 6"–8" ಅಂತರವಿರುವಂತೆ ಬಿಟ್ಟು ಹೆಚ್ಚಾದ ಸಸಿಗಳನ್ನು ಕಿತ್ತುಹಾಕಬೇಕು. ಸಸಿಗಳು ಹೆಚ್ಚು ಶೀತವನ್ನು ತಡೆಯುವುದಿಲ್ಲವಾದ್ದರಿಂದ ಮಳೆಯಿಂದ ಮತ್ತು ಚಳಿಯಿಂದ ಇವನ್ನು ರಕ್ಷಿಸಬೇಕು. ಗಿಡಗಳು ಬೆಳೆಯುತ್ತಿರುವಾಗ ಅವುಗಳ ತುದಿಯನ್ನು ಆಗಿಂದಾಗ್ಗೆ ಚಿವುಟ ಹಾಕಬೇಕು. ಇದರಿಂದ ಗಿಡಗಳು ಪೊದೆಯಂತೆ ಬೆಳೆದು ಚೆನ್ನಾಗಿ ಕಾಣುತ್ತವೆ. ಆಗಿಂದಾಗ್ಗೆ ಗೊಬ್ಬರವನ್ನೂ ಹಿಂಡಿಗೊಬ್ಬರದ ದ್ರಾವಣವನ್ನೂ ಹಾಕಬೇಕು. ಸುಮಾರು 3–3½ ತಿಂಗಳ ಅನಂತರ ಗಿಡಗಳು ಹೂ ಬಿಡಲು ಆರಂಭಿಸುತ್ತವೆ.

ಕ್ಲಾರ್ಕಿಯ ಎಲಿಗೆನ್ಸ್, ಪಲ್ಚೆಲ ಮತ್ತು ರಾಂಬಾಯ್ಡಿಯಗಳು ಜನಪ್ರಿಯವಾದ ಪ್ರಭೇದಗಳು. (ಕೆ.)

**ಕ್ಲಾಷಿಯಸ್, ರುಡಾಲ್ಫ್ ಜೂಲಿಯಸ್ ಈಮ್ಯಾನ್ಯುಎಲ್ :** 1822–1888. ಜರ್ಮನಿ ದೇಶದ ಭೌತವಿಜ್ಞಾನಿ, ಜನನ 1822ನೆಯ ಇಸವಿ ಜನವರಿ 2 ರಂದು. ಭೌತವಿಜ್ಞಾನದಲ್ಲಿ ಉನ್ನತ ಪದವೀಧರನಾದ ಈತನಿಗೆ ಬರ್ಲಿನ್ ನಗರದ ರಾಯಲ್ ಆರ್ಟಿಲರಿ ಮತ್ತು ಎಂಜಿನಿಯರಿಂಗ್ ಸ್ಕೂಲಿನಲ್ಲಿ ಪ್ರಾಧ್ಯಾಪಕತ್ವ ಲಭಿಸಿತು (1850). ಮುಂದೆ 1855ರಲ್ಲಿ ಝೂರಿಕ್ ಪಾಲಿಟೆಕ್ನಿಕ್ ಮತ್ತು ಝೂರಿಕ್ ವಿಶ್ವವಿದ್ಯಾಲಯಗಳಲ್ಲೂ 1867ರಲ್ಲಿ ವುರ್ಜ್‌ಬರ್ಗಿನಲ್ಲಿಯೂ ಪ್ರಾಧ್ಯಾಪಕನಾಗಿ ಕೆಲಸಮಾಡಿ 1869ರಲ್ಲಿ ಬಾನಿನಲ್ಲಿ ಪ್ರಾಧ್ಯಾಪಕನಾಗಿ ಸೇರಿ ತನ್ನ ಮರಣದವರೆಗೂ ಅಲ್ಲಿಯೇ ಇದ್ದ.

ಕ್ಲಾಷಿಯಸ್ ಹೆಸರು ಪಡೆದದ್ದು ತಾತ್ತ್ವಿಕ ಭೌತವಿಜ್ಞಾನಿಯಾಗಿ. ಅಣುಭೌತವಿಜ್ಞಾನದಲ್ಲಿ ಈತ ಹೆಚ್ಚಿನ ಅಧ್ಯಯನ ನಡೆಸಿದ್ದಾನೆ. ಕಾರ್ನೋ ತತ್ತ್ವವನ್ನು ಬೇರೊಂದು ರೀತಿಯಲ್ಲಿ ನಿರೂಪಿಸಿ ಉಷ್ಣಗತಿವಿಜ್ಞಾನವನ್ನು ಒಂದು ನಿಷ್ಕೃಷ್ಟ ವಿಜ್ಞಾನವನ್ನಾಗಿ ಬೆಳೆಸಿದವ ಈತನೆ. ಕ್ಲಾಷಿಯಸನ ಹೆಸರುವಾಸಿಯಾದ ಉಷ್ಣಗತಿವಿಜ್ಞಾನದ ಎರಡನೆಯ ನಿಯಮದ ನಿರೂಪಣೆ ಹೀಗಿದೆ : ತಣ್ಣಗಿರುವ ಕಾಯದಿಂದ ಬಿಸಿಯಾಗಿರುವ ಕಾಯದ ಕಡೆಗೆ ಉಷ್ಣ ತನ್ನಷ್ಟಕ್ಕೇ ಹರಿಯಲಾರದು. ಇದರ ಫಲಿತಾಂಶಗಳನ್ನು ಹಬೆಯಂತ್ರದ ಸಿದ್ಧಾಂತದ ಬೆಳವಣಿಗೆಯಲ್ಲಿ ಉಪಯೋಗಿಸಲಾಗಿದೆ. ಎಂಟ್ರೊಪಿಯ ಪರಿಕಲ್ಪನೆಯನ್ನು ಬಹುವಾಗಿ ಒತ್ತಿ ಹೇಳುವುದರ ಮೂಲಕ ಹಬೆಯಂತ್ರದ ಸಿದ್ಧಾಂತವನ್ನು ಬೆಳೆಸಿದ್ದಾನೆ.

ಗತಿಸಿದ್ಧಾಂತವನ್ನು ಆಧರಿಸಿ ಅನಿಲಗಳ ಅಣುಚಲನ ಸಿದ್ಧಾಂತವನ್ನು ಈತ ಬೆಳೆಸಿದ. ಈ ಸಿದ್ಧಾಂತದಲ್ಲಿ ಅಣುವಿನ ಸರಾಸರಿ ಮುಕ್ತಪಥವನ್ನು (ಮೀನ್ ಫ್ರೀ ಪಾತ್) ಲೆಕ್ಕಾಚಾರ ಹಾಕಿದ. ವಿದ್ಯುತ್ಕ್ಷೇತ್ರ ಪ್ರಭಾವಕ್ಕೆ ಒಳಗಾದ ವಿದ್ಯುದ್ವಿಭಜನೀಯಗಳಲ್ಲಿ ಅಣುಗಳಿಂದ ಅಣುಗಳಿಗೆ ಪರಮಾಣುಗಳು ವಿನಿಮಯಗೊಳ್ಳುವುದೆಂಬ ಅಂಶವನ್ನು ತಿಳಿಸಿದವನೂ ಈತನೆ. ಈ ಅಂಶದ ಆಧಾರದ ಮೇಲೆ ಅರ್ಹೀನಿಯಸ್ ಎಂಬ ವಿಜ್ಞಾನಿ ವಿದ್ಯುದ್ವಿಭಜನೀಯ ವಿಯೋಜನಾ ಸಿದ್ಧಾಂತವನ್ನು ಬೆಳೆಸಿದ (ಥಿಯೊರಿ ಆಫ್ ಎಲೆಕ್ಟ್ರೊಲೈಟಿಕ್ ಅಸೋಸಿಯೇಷನ್). ಕ್ಲೇಪ್‌ಯಾರ್ನ್ ಎಂಬ ವಿಜ್ಞಾನಿ 1834ರಲ್ಲಿ ತಿಳಿಸಿದ್ದ ಬಾಷ್ಪಗುಪ್ತೋಷ್ಣ ಮತ್ತು ಒತ್ತಡಕ್ಕಿರುವ ಸಂಬಂಧದ ಸಮೀಕರಣವನ್ನು ಕ್ಲಾಷಿಯಸ್ 1850ರಲ್ಲಿ ಸೈದ್ಧಾಂತಿಕವಾಗಿ ಕಂಡುಹಿಡಿದ. ಈ ಸಮೀಕರಣವನ್ನು ಕ್ಲಾಷಿಯಸ್–ಕ್ಲೇಪಿರಾನ್ ಸಮೀಕರಣವೆಂದು ಕರೆಯುವರು.

ಕ್ಲಾಷಿಯಸ್ 1888 ನೆಯ ಇಸವಿ ಆಗಸ್ಟ್ 24ರಂದು ಬಾನ್ ನಗರದಲ್ಲಿ ಗತಿಸಿದ. (ಪಿ.ವಿ.)

**ಕ್ಲಿಯೋಮೀ :** ಕ್ಲಿಯೋಮೇಸೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಸಸ್ಯ. ಜೇಡರಹುಳುವಿನ ಆಕಾರದ ಹೂಬಿಡುವುದರಿಂದ ಕೆಲವೊಮ್ಮೆ ಜೇಡರ ಹೂ ಗಿಡ ಎಂದೂ ಕರೆಯಲಾಗುತ್ತದೆ. ಇದರಲ್ಲಿ ಸುಮಾರು 140ಕ್ಕೂ ಹೆಚ್ಚು ಪ್ರಭೇದಗಳಿವೆ. ಭಾರತದಲ್ಲಿ ಸುಮಾರು 13 ಪ್ರಭೇಗಳಿವೆ. ಕ್ಲಿ.ಐಕೊಸ್ಯಾಂಡ್ರ ಎಂಬುದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಉದ್ಯಾನ ಪ್ರಾಮುಖ್ಯವಿರುವ ಪ್ರಭೇದಗಳೂ ಇಲ್ಲದಿಲ್ಲ. ಇವುಗಳಲ್ಲಿ ಮುಖ್ಯವಾದವು ಕ್ಲಿಯೋಮೀ ಸ್ಪೈನೋಸ, ಕ್ಲಿ.ಸ್ಪೀಶಿಯೊಸಿಸ್ಸಿಮ ಮತ್ತು ಕ್ಲಿ.ಸೆರುಲೇಟ. ಪೊದೆಯಂತೆ ತುಂಬಿಕೊಂಡು ಬೆಳೆದು, ರೆಂಬೆಗಳಿಂದ ಹೊರಚಾಚುವ ಬಿಳಿ, ಹಳದಿ ಇಲ್ಲವೆ ಊದಾ ಬಣ್ಣದ ಹೂಗಳನ್ನು ಬಿಡುವುದರಿಂದ ಈ ಪ್ರಭೇದಗಳನ್ನು ತೋಟಗಳಲ್ಲಿ ಮಡಿಗಳಲ್ಲೊ, ಪಸಲೆಗಳ ಅಂಚಿನಲ್ಲೊ ಅಂದಕ್ಕಾಗಿ ಬೆಳೆಸಲಾಗುತ್ತದೆ. ಎಲ್ಲ ಪ್ರಭೇದಗಳೂ ಸುಮಾರು 2'–3' ಎತ್ತರಕ್ಕೆ ಬೆಳೆಯುವ ಏಕವಾರ್ಷಿಕ ಮೂಲಿಕೆ ಇಲ್ಲವೆ ಪೊದೆಸಸ್ಯಗಳು. ಎಲೆಗಳು ಸರಳ ಇಲ್ಲವೆ 3–7 ಕಿರುಪತ್ರಗಳಿರುವ ಸಂಯುಕ್ತ ಮಾದರಿಯವು. ಹೂಗಳು ಒಂಟಿಯಾಗಿಯೊ ಅಂತ್ಯಾರಂಭಿ ಹೂ ಗೊಂಚಲುಗಳಲ್ಲೊ ಹುಟ್ಟುತ್ತವೆ. ಪ್ರತಿ ಹೂವಿನಲ್ಲಿ ಬಿಡಿಬಿಡಿಯಾದ 4 ಪುಷ್ಪಪತ್ರಗಳು ಬಿಡಿಬಿಡಿಯಾದ 4 ದಳಗಳು, 6 ಕೇಸರಗಳು, 2 ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯ ಇವೆ. ಅಂಡಾಶಯಕ್ಕೆ ಕೇಸರಗಳಿಗಿಂತಲೂ ಉದ್ದವಾದ ತೊಟ್ಟು ಇದೆ. ಈ ತೊಟ್ಟನ್ನು ಗೈನೋಫೋರ್ ಎನ್ನಲಾಗುತ್ತದೆ.

ಕ್ಲಿಯೋಮೀ ಸಸ್ಯದ ವಿವಿಧ ಪ್ರಭೇದಗಳನ್ನು ಬೀಜಗಳಿಂದ ಸುಲಭವಾಗಿ ವೃದ್ಧಿ ಮಾಡಬಹುದು. ಇವುಗಳ ಬೆಳವಣಿಗೆಗೆ ಫಲವತ್ತಾಗಿರುವ ಜೌಗಿಲ್ಲದ ಮಣ್ಣು ಮತ್ತು ಧಾರಾಳವಾಗಿ ಬಿಸಿಲು ಗಾಳಿಯಿರುವ ವಾತಾವರಣ ಯೋಗ್ಯವಾದದ್ದು. ಬೀಜಗಳನ್ನು ಬಿತ್ತುವುದಕ್ಕೆ ಮುಂಚೆ ಅವನ್ನು ಸುಮಾರು 3 ಗಂಟೆಗಳ ಕಾಲ ನೀರಿನಲ್ಲಿ ನೆನೆಸಬೇಕು. ಇದರಿಂದ ಬೀಜಗಳು ಸುಲಭವಾಗಿ ಮೊಳೆಯುತ್ತವೆ. ಒತ್ತಾಗಿರುವ ಸಸಿಗಳನ್ನು ಬಿತ್ತನೆ ಮಾಡಿದ ಮೂರು ವಾರಗಳಲ್ಲಿ ವಿರಳಮಾಡಿ, ಗಿಡಗಳ ತುದಿಯನ್ನು ಚಿವುಟಿಹಾಕಬೇಕು. ಬೀಜ ಬಿತ್ತಿದ ಸುಮಾರು ಮೂರು ತಿಂಗಳಿಗೆ ಗಿಡಗಳು ಹೂಬಿಡಲು ಆರಂಭಿಸುತ್ತವೆ. ಕ್ಲಿಯೋಮೀ ಐಕೊಸ್ಯಾಂಡ್ರ ಪ್ರಭೇದಕ್ಕೆ ಔಷಧೀಯ ಗುಣಗಳಿವೆ. ಗಾಯ ಮತ್ತು ಹುಣ್ಣುಗಳಿಗೆ ಲೇಪಿಸಲು ಇದರ ಎಲೆಗಳನ್ನು ಬಳಸುತ್ತಾರೆ. ಎಲೆಗಳಿಗೆ ಪ್ರತ್ಯುದ್ರೇಕಕಾರಿ, ಸ್ವೇದಕಾರಿ ಮತ್ತು ಚರ್ಮದ ಮೇಲೆ ಗುಳ್ಳೆಗಳೆಬ್ಬಿಸುವ ಗುಣಗಳೂ ಇವೆ. ಈ ಗಿಡದ ಬೀಜ ಒಳ್ಳೆಯ ಜಂತುನಾಶಕವೆಂದು ಹೇಳಲಾಗಿದೆ. ಬಡವರು ಈ ಪ್ರಭೇದವನ್ನು ತರಕಾರಿಯಾಗಿ ಬಳಸುವುದುಂಟು (ಈ ಗಿಡಕ್ಕೆ ನಾಯಿಬೇಲ ಎಂಬ ಆಡುಮಾತಿನ ಹೆಸರಿದೆ). ಕ್ಲಿಯೋಮೀಯ ಇನ್ನೊಂದು ಪ್ರಭೇದವಾದ ಬ್ರಾಕಿಕಾರ್ಪವನ್ನು ಕಜ್ಜಿ, ಸಂಧಿವಾತ ಮತ್ತು ವಿವಿಧ ಬಗೆಯ ಊತಗಳ ನಿವಾರಣೆಗೆ ಉಪಯೋಗಿಸುತ್ತಾರೆ. ಫೆಲಿನ ಪ್ರಭೇದ ರಕ್ತಪಿತ್ತರೋಗಕ್ಕೆ ಮದ್ದು ಎನಿಸಿದೆ. (ಎಂ.ಎಚ್.ಎಂ.)

**ಕ್ಲೀಯೊಪಾತ್ರ :** ಇತಿಹಾಸದಲ್ಲಿ ಈ ಹೆಸರಿನವರು ಅನೇಕರಿದ್ದಾರೆ. ಮ್ಯಾಸೆಡೋನಿಯದ ಅಲೆಕ್ಸಾಂಡರ್ ಮಹಾಶಯನ ಸೋದರಿ ಒಬ್ಬಳು. ಸೆಲ್ಯೂಸಿಡ್ ದೊರೆ 3ನೆಯ ಆಂಟಿಯೋಕಸನ ಮಗಳು ಇನ್ನೊಬ್ಬಳು. ಈಕೆಯನ್ನು ಈಜಿಪ್ಟಿನ ದೊರೆ 5ನೆಯ ಟಾಲೆಮಿ ಮದುವೆಯಾಗಿದ್ದ (ಪ್ರ.ಶ.ಪೂ. 193). ಅನಂತರ ಟಾಲೆಮಿ ದೊರೆಗಳ ವಂಶದಲ್ಲಿ ಈ ಹೆಸರಿನ ಅನೇಕ ರಾಣಿಯರೂ ರಾಜಕುಮಾರಿಯರೂ ಆಗಿಹೋದರು. ಇವರಲ್ಲಿ ಪ್ರಸಿದ್ಧಳಾದವಳು 93ನೆಯ ಕ್ಲೀಯೊಪಾತ್ರ (ಪ್ರ.ಶ.ಪೂ. 69–30). ಇವಳು 12ನೆಯ ಟಾಲೆಮಿಯ ಮಗಳು. ಪ್ರ.ಶ.ಪೂ. 51ರಲ್ಲಿ ಅವನ ಮರಣಾನಂತರ ಈಜಿಪ್ಟಿನ ರಾಣಿಯಾಗಿ ತನ್ನ ತಮ್ಮಂದಿರಾದ 13ನೆಯ ಮತ್ತು 14ನೆಯ ಟಾಲೆಮಿಯರೊಂದಿಗೂ ತನ್ನ ಮಗ 15ನೆಯ ಟಾಲೆಮಿಯೊಂದಿಗೂ ಆಳಿದಳು. ಆ ಅವಧಿಯಲ್ಲಿ ರೋಮ್ ಚಕ್ರಾಧಿಪತ್ಯದ ಪ್ರಮುಖ ನಾಯಕರಾದ ಜೂಲಿಯಸ್ ಸೀಸರ್ ಮತ್ತು ಮಾರ್ಕ್ ಆಂಟೊನಿಯರೊಂದಿಗೆ ಈಕೆ ಪಡೆದಿದ್ದ ವೈಯಕ್ತಿಕ ಸಂಬಂಧದಿಂದಾಗಿ ರೋಮಿನ ರಾಜಕಾರಣದಲ್ಲೂ ಇವಳು ಗಮನಾರ್ಹ ಪಾತ್ರ ವಹಿಸಿದ್ದಳು.

# ಕ್ಲೀವೈಟ್

ಪ್ರ.ಶ.ಪೂ 69ರಲ್ಲಿ ಗ್ರೀಕ್ ಮತ್ತು ಮ್ಯಾಸೆಡೋನಿ ಯನ್ ಸಮಮಿಶ್ರವಂಶ ವೊಂದರಲ್ಲಿ ಜನಿಸಿದ ಕ್ಲೀಯೊಪಾತ್ರ ಸುಂದರಿಯಲ್ಲ. ದಿದ್ದರೂ ಪುರುಷರನ್ನು ಆಕರ್ಷಿಸುವ ರೂಪ ಪಡೆದಿದ್ದಳು. ವಿದ್ಯಾವಂತಳೂ ಬಹುಭಾಷೆ ಗಳನ್ನು ಬಲ್ಲವಳೂ ಆಗಿದ್ದಳು. ಈಜಿಪ್ಟಿನ ಜನರ ಬಗ್ಗೆ ಹೆಚ್ಚು ಪ್ರೀತಿವಿಶ್ವಾಸಗಳನ್ನು ತಳೆದಿದ್ದಳು. ಈಜಿಪ್ಟಿನ ರಾಜಕೀಯದಲ್ಲಿ ತನ್ನ ವಂಶದ ಪ್ರಾಮುಖ್ಯವನ್ನುಳಿಸಿ ಕೊಳ್ಳುವುದು ಮತ್ತು ರೋಮಿನ ರಾಜಕಾರಣದಲ್ಲೂ ಪ್ರಭಾವ ಬೀರುವುದು ಇವಳ ಆಕಾಂಕ್ಷೆಗಳಾಗಿದ್ದುವು.

7ನೆಯ ಕ್ಲೀಯೊಪಾತ್ರ ಈಜಿಪ್ಟಿನ ರಾಣಿ–ಐಸಿಸ್ ದೇವತೆಯ ವೇಷದಲ್ಲಿ

ಈಜಿಪ್ಟಿನ ರಾಜ ಮನೆತನದ ಸಂಪ್ರದಾಯದಂತೆ ಪ್ರ.ಶ.ಪೂ 51ರಲ್ಲಿ ತನ್ನ ತಂದೆಯ ಮರಣಾನಂತರ ತನ್ನ ಸೋದರ 13ನೆಯ ಟಾಲೆಮಿಯನ್ನು ವಿವಾಹವಾಗಿ ರಾಣಿಯಾದಳು. ಮೂರು ವರ್ಷಗಳಲ್ಲಿ ಅವನೊಂದಿಗೆ ವೈಮನಸ್ಯ ವೇರ್ಪಟ್ಟಾಗ ಆ ವೇಳೆಗೆ ದಂಡೆತ್ತಿ ಬಂದ ರೋಮಿನ ನಾಯಕ ಜೂಲಿಯಸ್ ಸೀಸರನೊಂದಿಗೆ ಸೇರಿಕೊಂಡು ಅವನ ಸಹಾಯ ದಿಂದ ತನ್ನ ಪತಿಯನ್ನೂ ಇತರ ಶತ್ರುಗಳನ್ನೂ ಕೊನೆಗಾಣಿಸಿದಳು. ಕ್ಲೀಯೊಪಾತ್ರ ಸೀಸರನೊಂದಿಗೆ ರೋಮಿಗೆ ಹೋಗಿ ಅಲ್ಲಿ ತನಗಾಗಿ ನಿರ್ಮಿತವಾದ ಭವನವೊಂದರಲ್ಲಿ ಪ್ರ.ಶ.ಪೂ 46ರಿಂದ ವಾಸಿಸುತ್ತಿದ್ದಳು. ಪ್ರ.ಶ.ಪೂ 47 ಅಥವಾ 44ರಲ್ಲಿ ಅವಳಿಗೊಬ್ಬ ಮಗ ಹುಟ್ಟಿದ. ಅವನು ಸೀಸರನಿಗೆ ಹುಟ್ಟಿದವನೆಂದು ಕ್ಲೀಯೊಪಾತ್ರ ಹೇಳಿಕೊಳ್ಳುತ್ತಿದ್ದಳೆನ್ನಲಾಗಿದೆ. ಆದರೆ ಈ ಬಗ್ಗೆ ಲಭ್ಯವಿರುವಷ್ಟೇ ಪುರಾವೆಯ ಆಧಾರದ ಮೇಲೆ ಇದನ್ನು ದೃಢೀಕರಿಸಲು ಸಾಧ್ಯವಾಗುವುದಿಲ್ಲ. ಆ ಮಗನಿಗೆ ಟಾಲೆಮಿ ಸೀಸರ್ ಎಂದು ಹೆಸರಿಸಲಾಗಿತ್ತು. ಈಜಿಪ್ಟಿನ ದೈವದತ್ತ ಪ್ರಭುವಾಗಲೆಂಬ ಉದ್ದೇಶದಿಂದಲೇ ಸೀಸರ್ ಕ್ಲೀಯೊಪಾತ್ರಳೊಂದಿಗೆ ವಿವಾಹ ಜೀವನ ನಡೆಸಿದನೆಂಬುದು ಒಂದು ಅಭಿಪ್ರಾಯವಾಗಿದೆ. ಪ್ರ.ಶ.ಪೂ 44ರಲ್ಲಿ ಸೀಸರನ ಕೊಲೆಯಾದಾಗ ರೋಮಿನಲ್ಲಿ ತನ್ನ ಪ್ರಭಾವ ನಶಿಸಿದುದರಿಂದ ಕ್ಲೀಯೊಪಾತ್ರ ಈಜಿಪ್ಟಿಗೆ ಹಿಂದಿರುಗಿದಳು. ಸೀಸರನ ಪರವಾಗಿ ಕ್ಲೀಯೊಪಾತ್ರ ನಡೆಸಿದ ಕೃತ್ಯಗಳ ವಿಚಾರಣೆಗಾಗಿ ಇವಳನ್ನು ಮಾರ್ಕ್ ಆಂಟೊನಿ ಪ್ರ.ಶ.ಪೂ 41ರಲ್ಲಿ ಸಿಲಿಷಿಯಕ್ಕೆ ಕರೆಸಿದಾಗ ಆಂಟೊನಿಯನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಂಡು ಅಲೆಕ್ಸಾಂಡ್ರಿಯದಲ್ಲಿ ಕೆಲಕಾಲ ಅವನೊಡನೆ ಬಾಳುವೆ ನಡೆಸಿದಳು. ಆಂಟೊನಿ ರೋಮಿಗೆ ಹಿಂದಿರುಗಿದಾಗ ಅವಳಿ ಮಕ್ಕಳನ್ನು ಹೆತ್ತು ಅಲೆಕ್ಸಾಂಡರ್ ಹೆಲಿಯೋಸ್ ಮತ್ತು ಕ್ಲೀಯೊಪಾತ್ರ ಸೆಲಿನೆ ಎಂದು ಅವರಿಗೆ ಹೆಸರಿಟ್ಟಳು. ಪುನಃ ಪ್ರ.ಶ.ಪೂ 37ರಲ್ಲಿ ಆಂಟೊನಿಯೊಂದಿಗೆ ಸೇರಿಕೊಂಡಾಗ ಅವಳಿಗೆ ರೋಮಿನ ರಾಜಕಾರಣದಲ್ಲಿ ಭಾಗವಹಿಸುವ ಅವಕಾಶ ದೊರಕಿತು. ಪರಂಪರಾಗತವಾಗಿ ಈಜಿಪ್ಟಿನ ಬೊಕ್ಕಸದಲ್ಲಿ ಸಂಗ್ರಹವಾಗಿದ್ದ ಅಪಾರಧನವನ್ನು ವ್ಯಯಮಾಡಿ, ಆಂಟೊನಿಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡು, ಅದರಿಂದ ತನ್ನ ರಾಜಕೀಯ ಪ್ರಭಾವವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಿದಳು. ಆಕೆಯನ್ನು ಆಂಟೊನಿ ವಿದ್ಯುಕ್ತವಾಗಿ ವಿವಾಹವಾದ. ಪ್ರ.ಶ.ಪೂ. 40ರಲ್ಲಿ ಅವಳಿಗೆ ಹುಟ್ಟಿದ ಅವಳಿಗಳನ್ನು ತನ್ನ ಮಕ್ಕಳೆಂದು ಆಂಟೊನಿ ಸ್ವೀಕರಿಸಿದ. ರೋಮ್ ಸಾಮ್ರಾಜ್ಯಕ್ಕೆ ಏಷ್ಯದಲ್ಲಿ ಸೇರಿದ ಅನೇಕ ಪ್ರಾಂತ್ಯಗಳನ್ನು ಕ್ಲೀಯೊಪಾತ್ರಳಿಗೆ ವಹಿಸಿಕೊಟ್ಟ. ಪ್ರ.ಶ.ಪೂ. 34ರಲ್ಲಿ ಆಂಟೊನಿ ಪೂರ್ವ ರೋಮನ್ ಚಕ್ರಾಧಿಪತ್ಯವೊಂದನ್ನು ಸ್ಥಾಪಿಸಿ ಅದರ ವಿವಿಧ ಪ್ರದೇಶಗಳನ್ನು ಕ್ಲೀಯೊಪಾತ್ರಳ ಮಕ್ಕಳು ಆಳತಕ್ಕದೆಂದೂ ಕ್ಲೀಯೊಪಾತ್ರ ರಾಜರ ರಾಣಿಯೆನಿಸಿಕೊಂಡು ಅವರಿಗೆ ಮೇಲ್ಪಟ್ಟು ಇರತಕ್ಕದೆಂದೂ ಘೋಷಿಸಿದ.

ಪ್ರ.ಶ.ಪೂ. 33ರಲ್ಲಿ ಕ್ಲೀಯೊಪಾತ್ರಳ ಪ್ರೇರೇಪಣೆಯಿಂದ ಆಂಟೊನಿ ತನ್ನ ಪ್ರತಿಕಕ್ಷಿ ಆಕ್ಟೇವಿಯನನ ಮೇಲೆ ಯುದ್ಧ ಸಾರಿದ. ಆ ಕದನಗಳಲ್ಲಿ ಕ್ಲೀಯೊಪಾತ್ರ ಆಂಟೊನಿಯ ಜೊತೆಯಲ್ಲೇ ಇದ್ದು ಪ್ರಧಾನ ಪಾತ್ರ ವಹಿಸಿದಳು. ಆದರೆ ಇದರಿಂದ ಅವಳ ಮತ್ತು ಆಂಟೊನಿಯ ಬಗ್ಗೆ ಶತ್ರುಗಳು ಅಪಪ್ರಚಾರಮಾಡಲು ಅವಕಾಶವಾಯಿತು. ಯುದ್ಧದಲ್ಲಿ ಅವರಿಬ್ಬರೂ ಸೋತು ಓಡಿಹೋಗಿ ಮೊದಲು ಆಂಟೊನಿಯೂ ಕೆಲದಿನಗಳ ಅನಂತರ

7ನೆಯ ಕ್ಲೀಯೊಪಾತ್ರ, ಹಾವಿನಿಂದ ಕಚ್ಚಿಸಿಕೊಂಡು ಸಾಯುವ ಮುನ್ನ, ಫ್ಲಾರೆನ್ಸ್‌ನ ಅರಮನೆಯೊಂದರಲ್ಲಿನ ಚಿತ್ರವೊಂದರ ಪ್ರತಿ.

ಕ್ಲೀಯೊಪಾತ್ರಳೂ ಆತ್ಮಹತ್ಯೆ ಮಾಡಿಕೊಂಡರು. ಹಾವು ಆಮನ್–ರಾ ಎಂಬ ಸೂರ್ಯದೇವರ ಮಂತ್ರಿಯೆಂಬ ನಂಬಿಕೆ ಆಗ ಈಜಿಪ್ಟಿನಲ್ಲಿತ್ತು. ಆದ್ದರಿಂದ ತನ್ನ ಪ್ರಜೆಗಳ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಅವಳು ಹಾವಿನಿಂದ ಕಚ್ಚಿಸಿಕೊಂಡು ಸತ್ತಳು. ಸಾಯುವ ಮುನ್ನ ಕ್ಲೀಯೊಪಾತ್ರ ಆಕ್ಟೇವಿಯನನನ್ನು ಸಂಧಿಸಿ ತನ್ನ ಮಕ್ಕಳ ರಕ್ಷಣೆಗಾಗಿ ಬೇಡಿಕೊಂಡಳೆಂದು ತಿಳಿದುಬರುತ್ತದೆ. (ಆರ್.ಪಿ.)

**ಕ್ಲೀವೈಟ್ :** ಯುರೇನಿಯಂ ಲೋಹದ ಒಂದು ಖನಿಜ. ನಿಸರ್ಗದಲ್ಲಿ ಯುರೇನಿಯಂ ಲೋಹದ ಪ್ರಮುಖ ಖನಿಜಗಳಲ್ಲೊಂದಾದ ಯುರೇನಿನೈಟ್ ಎಂಬುದು ರಾಸಾಯನಿಕವಾಗಿ ಯುರೇನಿಯಂ ಆಕ್ಸೈಡ್, ಪ್ರಥಮತಃ $UO_2$ ಆಗಿದ್ದು ಕ್ರಮೇಣ ಉತ್ಕರ್ಷಣ ಹೊಂದಿ $UO_{2.67}$ ಅಥವಾ $U_3O_8$ ಆಗುವುದು. ಯುರೇನಿನೈಟ್ ವರ್ಗದ ಖನಿಜಗಳಲ್ಲಿ ಕ್ಲೀವೈಟ್ ಒಂದು. ಗಣನೀಯ ಮೊತ್ತದಲ್ಲಿ ಥೋರಿಯಂ ಮತ್ತು ಸೀರಿಯಂ ಶ್ರೇಣಿಯ ಲ್ಯಾಂಥನೈಡುಗಳು ಬೆರೆತಿರುವ ಯುರೇನಿನೈಟ್ ಖನಿಜವೇ ಕ್ಲೀವೈಟ್ ಎನಿಸಿಕೊಳ್ಳುತ್ತದೆ. ಯುರೇನಿಯಂ ಲೋಹದ ವಿಕಿರಣಪಟುತ್ವದಿಂದಾಗಿ ರೇಡಿಯಂ ಲೋಹ ಸದಾ ಉತ್ಪಾದಿತವಾಗುತ್ತಲಿದ್ದು ಕ್ಲೀವೈಟ್ ಖನಿಜದಲ್ಲಿ ರೇಡಿಯಂ ಕೂಡ ಒಂದು ವಿಶಿಷ್ಟಾಂಶವಾಗಿರುವುದು ಸಹಜ. ಕ್ಲೀವೈಟ್ ಖನಿಜವನ್ನು ಶೂನ್ಯ ವಾತಾವರಣದಲ್ಲಾಗಲಿ ಇಲ್ಲವೆ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಡನೆಯಾಗಲಿ ಕಾಸಿದಾಗ ಸಾರಜನಕವನ್ನು ಹೋಲುವಂಥ ಮತ್ತು ರಾಸಾಯನಿಕವಾಗಿ ಜಡವಾದ ಒಂದು ಅನಿಲ ಹೊರ ಸೂಸುವುದಾಗಿ ಬಲು ಹಿಂದೆಯೇ ತಿಳಿದುಬಂದಿತ್ತು. 1894ರಲ್ಲಿ ಈ ಜಡ ಅನಿಲದ ಪುನಃಪರಿಶೀಲನೆಯಿಂದಾಗಿ ಅದರಲ್ಲಿ ಶೇ.20 ರಷ್ಟು ಮಾತ್ರ ಸಾರಜನಕವಿರುವುದಾಗಿಯೂ ಉಳಿದುದು ರಾಸಾಯನಿಕವಾಗಿ ಸಾರಜನಕಕ್ಕಿಂತ ಜಡವಾದ ಒಂದು ಅನಿಲವೆಂದೂ ತಿಳಿದುಬಂದಿತು. ಅಲ್ಲದೆ ಅದು ಆಗ ತಾನೆ ಇತರ ಮೂಲಗಳಿಂದ ಕಂಡು ಹಿಡಿಯಲ್ಪಟ್ಟಿದ್ದ ಹೀಲಿಯಂ ಧಾತುವೇ ಎಂಬುದೂ ನಿರ್ವಿವಾದವಾಗಿ ನಿರ್ಧರಿಸಲ್ಪಟ್ಟಿತು. ಕ್ಲೀವೈಟ್ ವಿಶೇಷವಾಗಿ ನಾರ್ವೆ ದೇಶದಲ್ಲಿ ದೊರೆಯುತ್ತದೆ. ಘನಸ್ಥಿತಿಯಲ್ಲಿ ಇದಕ್ಕೆ ಸ್ಫಟಿಕ ರಚನೆ ಉಂಟು. ಯುರೇನಿಯಮ್ಮಿನ ಪ್ರಮಾಣ ಶೇ.53.3–66.4, ಲ್ಯಾಂಥನೈಡುಗಳ ಪ್ರಮಾಣ ಶೇ.5.17 (ಇಟ್ರಿಯಂ, ಎರ್ಬಿಯಂ, ಸೀರಿಯಂ ಮತ್ತು ಲ್ಯಾಂಥನಂ, $UO_2/UO$ ಪ್ರಮಾಣ ಶೇ. 0.5–0.7 ವರೆಗಿರುತ್ತದೆ. (ಎಚ್.ಎಸ್.ಎನ್.)

**ಕ್ಲೀವ್‌ಲೆಂಡ್ :** ಅಮೆರಿಕ ಸಂಯುಕ್ತಸಂಸ್ಥಾನದ ಒಹಾಯೊ ರಾಜ್ಯದ ಒಂದು ನಗರ. ಈರಿ ಸರೋವರದ ಒಂದು ರೇವುಪಟ್ಟಣ. ಕೈಹಾಗ ನದಿಯ ದಂಡೆಯ ಮೇಲಿದೆ. ವಿಸ್ತೀರ್ಣ : 214 ಚ.ಕಿಮೀ ಜನಸಂಖ್ಯೆ 408,403 (2000). ಕ್ಲೀವ್‌ಲೆಂಡ್ ನಗರ ಪ್ರದೇಶದಲ್ಲಿ 24 ನಗರಗಳು ಮತ್ತು 53 ಹಳ್ಳಿಗಳುಂಟು. ಅವುಗಳಲ್ಲಿ ಕ್ಲೀವ್‌ಲೆಂಡ್ ಹೈಟ್ಸ್, ಈಸ್ಟ್ ಕ್ಲೀವ್‌ಲೆಂಡ್, ಷೇಕರ್ ಹೈಟ್ಸ್, ಲೇಕ್‌ವುಡ್, ಯೂಕ್ಲಿಡ್, ಬೆಡ್‌ಫೋರ್ಡ್, ಪಾರ್ಮ ಮತ್ತು ಯೂನಿವರ್ಸಿಟಿ ಹೈಟ್ಸ್ ಮುಖ್ಯವಾದುವು. ಪೋಲೀಷ್, ಚೆಕೊಸ್ಲವಾಕ್, ಇಟಾಲಿಯನ್, ಹಂಗರಿಯನ್, ಜರ್ಮನ್, ಯೂಗೊಸ್ಲಾವ್, ರಷ್ಯನ್, ಆಸ್ಟ್ರಿಯನ್ ಮುಂತಾದ ಜನ ಇಲ್ಲಿ ಅಧಿಕ ಸಂಖ್ಯೆಗಳಲ್ಲಿದ್ದಾರಾದರೂ ಅವರ ವೈಶಿಷ್ಟ್ಯಗಳಿಗೆ ಕುಂದುಂಟಾಗುವ ರೀತಿಯಲ್ಲಿ ಐಕ್ಯ ಸಾಧನೆಯಾಗಿದೆ. ಕ್ಲೀವ್‌ಲೆಂಡ್ ಒಂದು ಮುಖ್ಯ ವ್ಯಾವಹಾರಿಕ, ಕೈಗಾರಿಕಾ ಹಾಗೂ ಸಾಂಸ್ಕೃತಿಕ ಕೇಂದ್ರ.

ಕ್ಲೀವ್‌ಲೆಂಡಿನಲ್ಲಿ ಅಲ್ಯೂಮಿನಿಯಂ, ವಿದ್ಯುತ್ ಉಪಕರಣ, ಟ್ರಾಕ್ಟರ್, ಬಸ್, ವಿಮಾನಗಳ ಬಿಡಿಭಾಗಗಳು ಮುಂತಾದ ಕೈಗಾರಿಕೆಗಳಿವೆ. ಇದು ಒಹಾಯೊ ರಾಜ್ಯದ ಮುಖ್ಯ ತೈಲಶುದ್ಧೀಕರಣ ಕೇಂದ್ರ. ಮೂಲಭೂತ ರಾಸಾಯನಿಕಗಳು, ಬಣ್ಣಗಳು ಮತ್ತು ಪ್ಲಾಸ್ಟಿಕ್ ವಸ್ತುಗಳ ಕೈಗಾರಿಕೆಗಳಿಗೂ ಈ ನಗರ ಪ್ರಸಿದ್ಧಿ ಪಡೆದಿದೆ. ಕ್ಲೀವ್‌ಲೆಂಡ್ ನಗರಪ್ರದೇಶದಲ್ಲಿ ಒಟ್ಟು 400 ಸಂಶೋಧನಾಲಯಗಳುಂಟು.

ಕ್ಲೀವ್‌ಲೆಂಡ್ ನಗರದ ಒಂದು ದೊಡ್ಡ ಚೌಕ. ಮಧ್ಯದಲ್ಲಿ ಸೈನಿಕರ ಮತ್ತು ನಾವಿಕರ ಸ್ಮಾರಕ ಇದೆ

ಕ್ಲೀವ್‌ಲೆಂಡಿನ ಪ್ರಮುಖ ವಿದ್ಯಾಸಂಸ್ಥೆಯೆಂದರೆ ವೆಸ್ಟರ್ನ್ ರಿಸರ್ವ್ ವಿಶ್ವವಿದ್ಯಾಲಯ. ಇದು ಸ್ಥಾಪಿತವಾದ್ದು 1826ರಲ್ಲಿ. ಇದರ ಕಕ್ಷೆಯಲ್ಲಿ ಅನೇಕ ಕಾಲೇಜುಗಳು ಸ್ಥಾಪಿತವಾಗಿವೆ.

ಕೇಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (1880), ಜಾನ್ ಕ್ಯಾರಲ್ ವಿಶ್ವವಿದ್ಯಾಲಯ, ಪುರುಷರ ರೋಮನ್ ಕೆಥೊಲಿಕ್ ವಿಶ್ವವಿದ್ಯಾಲಯ (1886), ಬಾಲ್ಡ್‌ವಿನ್ ವಾಲೇಸ್ ಕಾಲೇಜ್(1845), ಕ್ಲೀವ್‌ಲೆಂಡ್ ಕಲಾ ಸಂಸ್ಥೆ (1882), ಕ್ಲೀವ್‌ಲೆಂಡ್ ಸಂಗೀತ ಸಂಸ್ಥೆ (1920), ಕ್ಲೀವ್‌ಲೆಂಡ್–ಮಾರ್ಷಲ್ ನ್ಯಾಯಶಾಸ್ತ್ರ ಶಾಲೆ (1897) ಮುಂತಾದ ಅನೇಕ ಶಿಕ್ಷಣ ಸಂಸ್ಥೆಗಳಿವೆ.

ಕ್ಲೀವ್‌ಲೆಂಡಿನಲ್ಲಿ ಕಲಾ ವಸ್ತು ಸಂಗ್ರಹಾಲಯ, ಪ್ರಕೃತಿ ವಿಜ್ಞಾನ ವಸ್ತು ಸಂಗ್ರಹಾಲಯ, ಆರೋಗ್ಯ ವಸ್ತುಸಂಗ್ರಹಾಲಯ, ಅಲೆನ್ ಮೆಮೋರಿಯಲ್ ವೈದ್ಯಕ ಗ್ರಂಥಾಲಯ ಮುಂತಾದ ಅನೇಕ ಸಾರ್ವಜನಿಕ ಸಂಸ್ಥೆಗಳಿವೆ. ಕ್ಲೀವ್‌ಲೆಂಡಿನಲ್ಲಿ ಅನೇಕ ನಾಟ್ಯಶಾಲೆಗಳುಂಟು. ವರ್ಷವಿಡೀ ಅಲ್ಲಿ ವೃತ್ತಿರಂಗಭೂಮಿಯ ನಟರೂ ಕಲಾಭಿಮಾನಿಗಳೂ ನಾಟಕ ಪ್ರದರ್ಶಿಸುತ್ತಿರುತ್ತಾರೆ. ಇಲ್ಲಿರುವ ಅನೇಕ ಉದ್ಯಾನಗಳಲ್ಲಿ ಸ್ಥಳೀಯ ನಿಸರ್ಗ ಸೌಂದರ್ಯವನ್ನು ಹಾಗೆಯೇ ರಕ್ಷಿಸಲಾಗಿದೆ. ಬಿಗ್ ಕ್ರೀಕ್‌ನಲ್ಲಿಯ ಪ್ರಾಣಿಸಂಗ್ರಹಾಲಯ ಪ್ರಸಿದ್ಧವಾದ್ದು. ಕ್ಲೀವ್‌ಲೆಂಡ್ ನಗರ ಪ್ರದೇಶದಲ್ಲಿ ಸು. 60 ಆಸ್ಪತ್ರೆಗಳುಂಟು.

ಸಾಹಸಿ ಉದ್ಯಮಶೀಲರು ಮೊದಲಿಂದಲೂ ಈ ಪ್ರದೇಶವನ್ನು ಸದುಪಯೋಗ ಪಡಿಸಿಕೊಂಡು ಬಂದಿದ್ದಾರೆ. ಈ ಪ್ರದೇಶದ ಮಹತ್ತ್ವವನ್ನು ಮೊದಲಿಗೆ ಕಂಡುಕೊಂಡಿದ್ದವರು ಇಂಡಿಯನರು. ಅವರು ಈಗಿರುವ ನಗರದಲ್ಲಿ ಸಣ್ಣಸಣ್ಣ ದಿಬ್ಬಗಳನ್ನೂ ಕೋಟೆಗಳನ್ನೂ ಕಟ್ಟಿಕೊಂಡಿದ್ದರು. ಇವರೇ ಇಲ್ಲಿಯ ಮೊಟ್ಟಮೊದಲ ನಿವಾಸಿಗಳು. ಅನಂತರ ಕೈಹಾಗದ ತಗ್ಗುಪ್ರದೇಶದಲ್ಲಿ ಇಂಡಿಯನರು ಮತ್ತು ಫ್ರೆಂಚರು ವ್ಯಾಪಾರಕೇಂದ್ರಗಳನ್ನು ಸ್ಥಾಪಿಸಿದರು.

ಅಮೆರಿಕನ್ ಕ್ರಾಂತಿಯ ಅನಂತರ ಒಹಾಯೊ ನಗರ ಸ್ಥಾಪನೆಯಾಗಿ ಅಲ್ಲಿ ಸಂಸಾರಗಳು ನೆಲಸಲಾರಂಭಿಸಿರುವುದು. ಕ್ಲೀವ್‌ಲೆಂಡ್ ನಗರದ ನಕ್ಷೆ ತಯಾರಾದ್ದು 1796ರಲ್ಲಿ. 1832ರಲ್ಲಿ ಒಹಾಯೊ ಕಾಲುವೆ ನಿರ್ಮಾಣಕಾರ್ಯ ಮುಗಿದ ಮೇಲೆ ಈ ನಗರದ ಪ್ರಾಮುಖ್ಯತೆ ಹೆಚ್ಚಿತು. ಅನಂತರ ರೈಲುಮಾರ್ಗಗಳು ನಿರ್ಮಾಣವಾದುವು. ನಗರ ಶೀಘ್ರವಾಗಿ ಬೆಳೆಯಿತು.

ಕ್ಲೀವ್‌ಲೆಂಡಿನ ನಾಗರಿಕರು ರಾಷ್ಟ್ರೀಯ ಅಂದೋಳನದಲ್ಲಿ ಯಾವಾಗಲೂ ಪ್ರಮುಖ ಪಾತ್ರ ವಹಿಸಿದ್ದಾರೆ. ಅಲ್ಲದೆ ಗುಲಾಮಗಿರಿ ರದ್ದಿಗಾಗಿ ದುಡಿದವರಿವರು. 20ನೆಯ ಶತಮಾನದ ಆರಂಭದಲ್ಲಿ ಸುಧಾರಣೆ ಮತ್ತು ಸಮಾಜ ಕಲ್ಯಾಣಾಭಿವೃದ್ಧಿ ಕಾರ್ಯಗಳು ನಡೆದುವು. ಧರ್ಮಕಾರ್ಯಗಳಿಗಾಗಿ ಸಾಮೂಹಿಕ ಕ್ಷೇಮನಿಧಿಯನ್ನು ಮೊದಲಿಗೆ ಆರಂಭಿಸಿದ್ದು ಈ ನಗರದಲ್ಲಿಯೇ. ಈ ಯೋಜನೆ ಮುಂದೆ ಸಂಯುಕ್ತ ಸಂಸ್ಥಾನದ ಇತರ ರಾಜ್ಯಗಳಿಗೂ ಹರಡಿತು. ಕಾರ್ಮಿಕ ಚಳವಳಿ ಇಲ್ಲಿ ಯಾವಾಗಲೂ ಉಗ್ರವಾಗಿತ್ತು. *

**ಕ್ಲೆಬ್ಸ್, ಥಿಯೊಡೊರ್ ಆಲ್‌ಬ್ರೆಸ್ಟ್ ಎಡ್ವಿನ್ :** 1834–1913. ಜರ್ಮನಿಯ ಏಕಾಣುಜೀವಿ ವಿಜ್ಞಾನಿ ಮೂತ್ರಕೋಶದ ರೋಗವಾದ ಗ್ಲಾಮೆರುಲೊ ನೆಫ್ರೈಟಿಸನ್ನು ಆವಿಷ್ಕರಿಸಿದವ (1870). ಆದ್ದರಿಂದ ಅದಕ್ಕೆ ಕ್ಲೆಬ್ಸ್ ಕಾಯಿಲೆ ಎಂದು ಹೆಸರಾಯಿತು. ಉಪದಂಶ (ಸಿಫಿಲಿಸ್) ರೋಗವನ್ನು ಕೋತಿಗಳಿಗೆ ವರ್ಗಾಯಿಸಿ ಪ್ರಯೋಗ ನಡೆಸಿದ. ಫ್ರೆಡರಿಕ್ ಲಾಫೆಲರ್‌ನೊಡನೆ ಸಹಕರಿಸಿ ಡಿಫ್ತೀರಿಯಾ ದಂಡಾಣು ಜೀವಿಗಳನ್ನು ಆವಿಷ್ಕರಿಸಿದ. ಆದ್ದರಿಂದ ಅವುಗಳಿಗೆ ಕ್ಲೆಬ್ಸ್–ಲಾಫೆಲರ್ ದಂಡಾಣು ಜೀವಿಗಳೆಂದು ಹೆಸರು ಬಂದಿದೆ.

ಕ್ಲೆಬ್ಸ್ ಜನಿಸಿದ್ದು ಜರ್ಮನಿಯ ಕೊನಿಗ್ಸ್ ಬರ್ಗ್ ಎಂಬಲ್ಲಿ, 1834 ಫೆಬ್ರುವರಿ 6 ರಂದು. ಬರ್ಲಿನ್ನಿನ ರೋಗವಿಜ್ಞಾನ ಸಂಸ್ಥೆಯಲ್ಲಿ (ಪ್ಯಾಥಾಲಾಜಿಕಲ್ ಇನ್ಸ್‌ಟಿಟ್ಯೂಟ್) 1861–1866ರ ತನಕ ರುಡೋಲ್ಫ್ ವರ್ಷೊ ಎಂಬಾತನ ಸಹಾಯಕನಾಗಿ ಕೆಲಸ ಮಾಡಿದ. ಅನಂತರ ರೋಗವೈಜ್ಞಾನಿಕ ಅಂಗರಚನಾವಿಜ್ಞಾನದ (ಪ್ಯಾಥಾಲಾಜಿಕಲ್ ಅನಾಟಮಿ) ಪ್ರಾಧ್ಯಾಪಕನಾಗಿ ಬರ್ನ್ (1866), ವಾರ್ಟ್ಸ್‌ವರ್ಗ್ (1871), ಪ್ರೇಗ್ (1873), ಜ಼ುರಿಕ್ (1882) ಮತ್ತು ಶಿಕಾಗೊ (1896) ಪ್ರದೇಶಗಳಲ್ಲಿ ಕೆಲಸ ಮಾಡಿದ. ಫ್ರಾನ್ಸ್ ಮತ್ತು ಜರ್ಮನಿಗಳ ನಡುವೆ ನಡೆದ ಯುದ್ಧದಲ್ಲಿ, ಕೆಲವು ಗಾಯಗಳನ್ನು ಆಧರಿಸಿ ಗಾಯಗಳ ಸಾಂಕ್ರಾಮಿಕ ಏಕಾಣುಜೀವಿಗಳನ್ನು ಕುರಿತು ಸಂಶೋಧನೆ ನಡೆಸಿದ. ದೇಹದ ಯಾವುದೇ ಭಾಗದಲ್ಲಿರುವ ಸೋಂಕು ಹೃದಯದ ಒಳಪೊರೆಯ ಊತವನ್ನು (ಎಂಡೊಕಾರ್ಡೈಟಿಸ್) ಉಂಟುಮಾಡಬಹುದು ಎಂಬುದನ್ನು ಪ್ರಯೋಗದಿಂದ ತೋರಿಸುವುದರಲ್ಲಿ ಯಶಸ್ವಿಯಾದ (1876). ಕ್ಷಯರೋಗಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳನ್ನು ನಡೆಸಿ ಹಾಲಿನ ಮೂಲಕ ಕ್ಷಯರೋಗದ ಸಾಂಕ್ರಾಮಿಕತೆ ಉಂಟಾಗುವುದನ್ನು ಕಂಡುಹಿಡಿದ. 1913ರ ಅಕ್ಟೋಬರ್ 23ರಂದು ಬರ್ನಿನಲ್ಲಿ ಕ್ಲೆಬ್ಸ್ ಗತಿಸಿದ. (ಎಸ್.ಎಚ್.ಪಿ)

**ಕ್ಲೆಮಾಟಿಸ್ :** ರ್‍ಯಾನನ್‌ಕ್ಯುಲೇಸೀ ಕುಟುಂಬಕ್ಕೆ ಸೇರಿದ ಸುಂದರವಾದ ಹಂಬು. ಸಾಮಾನ್ಯಬಳಕೆಯ ಇಂಗ್ಲಿಷಿನಲ್ಲಿ ಇದಕ್ಕೆ ವರ್ಜಿನ್ಸ್ ಬವರ್ ಎಂದೂ ಕನ್ನಡದಲ್ಲಿ ಹೊಟ್ಟು ಹಂಬು, ತಲೆಜಡಾರಿ ಎಂದೂ ಹೆಸರಿದೆ. ಇದರಲ್ಲಿ ಸುಮಾರು 250 ಪ್ರಭೇದಗಳಿವೆ. ಪ್ರಪಂಚದಾದ್ಯಂತ ಇವುಗಳ ವ್ಯಾಪ್ತಿ ಇರುವುದಾದರೂ ಸಮಶೀತೋಷ್ಣವಲಯಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ. ಭಾರತದಲ್ಲಿ ಸುಮಾರು 25 ಪ್ರಭೇದಗಳು ಕಾಣದೊರೆಯುತ್ತವೆ. ಇವುಗಳಲ್ಲಿ ಕ್ಲಿಮಾಟಿಸ್ ಗೌರಿಯಾನ ಎಂಬ ಪ್ರಭೇದ ಬಹುಮುಖ್ಯವಾದುದು ಮತ್ತು ಸ್ವಾಭಾವಿಕವಾಗಿ ಬೆಳೆಯುವಂಥದು. ಕೆಲವು ಪ್ರಭೇದಗಳ ಹೂಗಳು ಬಲು ಅಂದವಾಗಿರುವುದರಿಂದ ಉದ್ಯಾನಗಾರಿಕೆಯಲ್ಲಿ ಪ್ರಾಮುಖ್ಯ ಪಡೆದಿವೆ. ಇವನ್ನು ಗೋಡೆಗಳ ಇಲ್ಲವೆ ಚಪ್ಪರಗಳ ಮೇಲೆ ಅಲಂಕಾರಕ್ಕಾಗಿ ಹಬ್ಬಿಸಿ ಬೆಳೆಸುವುದುಂಟು. ಎಲ್ಲ ಪ್ರಭೇದಗಳೂ ಬಹುವಾರ್ಷಿಕ ಬಳ್ಳಿಗಳು; ತಮ್ಮ ಎಲೆಗಳ ತೊಟ್ಟಿನ ಸಹಾಯದಿಂದ ಆಸರೆಗಳನ್ನು ತಬ್ಬಿ ಬೆಳೆಯುತ್ತವೆ. ಎಲೆಗಳು ಸಂಯುಕ್ತ ಮಾದರಿಯವು. ಅಭಿಮುಖ ಜೋಡಣೆಯನ್ನು ಪ್ರದರ್ಶಿಸುತ್ತವೆ. ಹೂಗಳು ಮಧ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಪ್ರತಿ ಹೂವಿನಲ್ಲಿ 4 ಇಲ್ಲವೆ 5 ಪುಷ್ಪಪತ್ರಗಳೂ ಅನೇಕ ಕೇಸರಗಳೂ ಅನೇಕ ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯವೂ ಇವೆ. ದಳಗಳು ಇಲ್ಲದಿರುವುದು ಮತ್ತು ಕಾರ್ಪೆಲುಗಳು ಬಿಡಿಬಿಡಿಯಾಗಿರುವುದು ಈ ಗಿಡದ ಕೆಲವು ವಿಶೇಷ ಲಕ್ಷಣಗಳು. ಫಲ ಒಂದೇ ಬೀಜವುಳ್ಳದ್ದು. ಅದಕ್ಕೆ ಎಕೀನ್ ಎಂಬ ಹೆಸರಿದೆ. ಶಲಾಕೆಯ ಮೇಲೆ ಅದರ ಉದ್ದಕ್ಕೂ ಸೂಕ್ಷ್ಮವಾದ ಅನೇಕ ಕೂದಲುಗಳಿವೆ. ಪ್ರತಿಯೊಂದು ಹೂವಿನ ಕಾರ್ಪೆಲುಗಳ ಶಲಾಕೆಗಳೆಲ್ಲಕ್ಕೂ ಈ ಬಗೆಯ ಕೂದಲಿರುವುದರಿಂದ ಎಲ್ಲವೂ ಒಟ್ಟುಗೂಡಿ ಕೂದಲಿನ ಜೊಂಪೆಯಂತೆ ಕಾಣುತ್ತದೆ. ಇದರಿಂದಾಗಿ ಗಿಡಕ್ಕೆ ಮುದುಕನ ಗಡ್ಡ ಎಂಬ ಹೆಸರೂ ಬಂದಿದೆ.

ಕ್ಲೆಮಾಟಿಸ್‌ನ ಹಲವು ಪ್ರಭೇದಗಳಿಗೆ ಔಷಧೀಯ ಪ್ರಾಮುಖ್ಯವೂ ಇದೆ. ಕ್ಲೆ.ಗೌರಿಯಾನದ ಎಲೆ ಮತ್ತು ಕಾಂಡಗಳಿಗೆ ಗುಳ್ಳೆಗಳೆಬ್ಬಿಸುವ ಗುಣ ಇದೆ. ಕ್ಲೆ.ಸ್ಟ್ರೈಲಾಸಿಫೋಲಿಯ ಪ್ರಭೇದದ ಬೇರಿನಿಂದ ಪಡೆಯಲಾಗುವ ಕಷಾಯ ಕುರು, ಇಸಬು, ರಕ್ತದೋಷಗಳು, ಜ್ವರ ಮುಂತಾದವುಗಳಿಗೆ ಪರಿಹಾರಕವೆಂದು ಹೇಳಲಾಗಿದೆ. ಟ್ರೈಲೋಬ ಪ್ರಭೇದವನ್ನು ಕುಷ್ಠರೋಗ, ಜ್ವರ ಇತ್ಯಾದಿಗಳ ನಿವಾರಣೆಗೆ ಬಳಸಲಾಗುತ್ತಿದೆ. ಕ್ಲೆಮಾಟಿಸಿನ

ಇನ್ನು ಕೆಲವು ಪ್ರಭೇದಗಳು ವಿಷಪೂರಿತ, ಉದಾಹರಣೆಗೆ ಕ್ಲೆ. ನೇಪಾಲೆನ್ಸಿಸ್ ಮತ್ತು ಕ್ಲೆ.ಓರಿಯಂಟ್ಯಾಲಿಸ್ ಇವುಗಳಲ್ಲಿರುವ ಅನಿಮೋನಿನ್ ಎಂಬ ವಿಷವಸ್ತು ಇವುಗಳ ನಂಜುಗುಣಕ್ಕೆ ಕಾರಣವೆಂದು ನಂಬಲಾಗಿದೆ.

ಕ್ಲ. ಲಾಸೋನಿಯಾನ ಪ್ರಭೇದ

ಉದ್ಯಾನಪ್ರಾಮುಖ್ಯವಿರುವ ಪ್ರಭೇದಗಳಲ್ಲಿ ಮುಖ್ಯವಾದವು ಅರಿಸ್ಟೇಟ, ಜಾಕ್‌ಮ್ಯಾನಿಯೈ, ಫ್ಲಾಮ್ಯುಲ, ಲಾಸೋನಿಯಾನ, ಫ್ಲಾರಿಡ, ಸ್ಟ್ಯಾನ್ಲಿಯೈ, ವಿಯೋರ್ನ, ಫ್ರೆಮಾಂಟಿಯೈ ಮುಂತಾದುವು. ಇವನ್ನು ಬೀಜ, ಲೇಯರಿಂಗ್ ಇಲ್ಲವೆ ಇನಾರ್ಚಿಂಗ್ ವಿಧಗಳಿಂದ ವೃದ್ಧಿಸಬಹುದು. ಇವುಗಳ ಬೆಳವಣಿಗೆಗೆ ಆಳವಾದ, ಗೋಡು ಶ್ರೇಷ್ಠವಾದುದು. ಮಣ್ಣು ಕ್ಷಾರೀಯವಾಗಿದ್ದರೆ ಉತ್ತಮ, ನೆಲದಲ್ಲಿ ನೀರು ಸರಾಗವಾಗಿ ಇಳಿಯುವಂತಿರಬೇಕು. ಕುದುರೆಗೊಬ್ಬರ ಇಲ್ಲವೆ ದನದ ಗೊಬ್ಬರ ಅತ್ಯವಶ್ಯ.

(ಡಿ.ಎಂ.; ಎಂ.ಎಸ್.ಎಸ್.ಆರ್.)

**ಕ್ಲೆಮೆಂಜ್, ಸ್ಯಾಮ್ಯುಯೆಲ್ ಲಾಂಗ್‌ಹಾರನ್ : (ನೋಡಿ- ಟ್ವೇನ್, ಮಾರ್ಕ್)**

**ಕ್ಲೆಮೆನ್ಸೋ, ಜಾರ್ಜ್ :** 1841–1929. ಫ್ರೆಂಚ್ ರಾಜಕಾರಣಿ, ಪ್ರಧಾನಿ, ಪತ್ರಕರ್ತ, ಫ್ರಾನ್ಸಿನ ವೆಂಡೀ ಪ್ರಾಂತ್ಯದಲ್ಲಿ 1841ರಲ್ಲಿ ಜನಿಸಿದ. ಒಂದನೆಯ ಮಹಾಯುದ್ಧದ ಕಾಲದ ಯುರೋಪಿನ ಪ್ರಖ್ಯಾತ ಮುತ್ಸದ್ದಿಗಳಲ್ಲಿ ಒಬ್ಬನೆಂದು ಪ್ರಸಿದ್ಧನಾದ ಕ್ಲೆಮೆನ್ಸೋಗೆ ಮೊದಲಿನಿಂದಲೂ ಪ್ರಜಾಪ್ರಭುತ್ವದಲ್ಲಿ ವಿಶೇಷ ನಂಬಿಕೆಯಿತ್ತು. ಇವನಿಗೆ ಇಪ್ಪತ್ತು ವರ್ಷಗಳಾಗಿದ್ದಾಗ ಪ್ರಜಾಸತ್ತೆಗೆ ಬೆಂಬಲವಿತ್ತುದಕ್ಕಾಗಿ ಈತ ಜೈಲುವಾಸ ಅನುಭವಿಸಬೇಕಾಯಿತು. ಕ್ಲೆಮೆನ್ಸೋ ಪ್ಯಾರಿಸಿನಲ್ಲಿ ವೈದ್ಯವಿಜ್ಞಾನವನ್ನು ಅಭ್ಯಾಸ ಮಾಡಿದರೂ ವೈದ್ಯವೃತ್ತಿಗಿಂತ ರಾಜಕೀಯ ಕ್ಷೇತ್ರ ಇವನನ್ನು ಹೆಚ್ಚಾಗಿ ಆಕರ್ಷಿಸಿತು. ಇದಕ್ಕಾಗಿ ತನ್ನ ದೇಶವನ್ನು ಬಿಟ್ಟು ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ನೆಲಸಿದ. ಪುನಃ 1869ರಲ್ಲಿ ಸ್ವದೇಶಕ್ಕೆ ಹಿಂದಿರುಗಿ ರಾಜಕೀಯವನ್ನು ಪ್ರವೇಶಿಸಿದ.

ಕ್ಲೆಮೆನ್ಸೋ 1906–1909 ಮತ್ತು 1917–1919ರಲ್ಲಿ ಫ್ರಾನ್ಸಿನ ಪ್ರಧಾನಿಯಾಗಿದ್ದ. ಈತ ಧೈರ್ಯಶಾಲಿ, ಯುಕ್ತಿವಂತ; ಫ್ರಾನ್ಸಿನ ಹುಲಿ ಎಂದು ಹೆಸರು ಗಳಿಸಿದ್ದ. ಒಂದನೆಯ ಮಹಾಯುದ್ಧದಲ್ಲಿ ಮಿತ್ರರಾಷ್ಟ್ರಗಳ ವಿಜಯಕ್ಕೆ ಕ್ಲೆಮೆನ್ಸೋ ರಚಿಸಿದ ಪವಿತ್ರ ಒಕ್ಕೂಟ (ಸೇಕ್ರೆಡ್ ಯೂನಿಯನ್) ಮಂತ್ರಿ ಮಂಡಲ ಬಹಳಮಟ್ಟಿಗೆ ಕಾರಣವಾಯಿತು. ಒಂದನೆಯ ಮಹಾಯುದ್ಧವಾದ ಅನಂತರ ಪ್ಯಾರಿಸಿನಲ್ಲಿ ನಡೆದ ಶಾಂತಿಸಮ್ಮೇಳನದಲ್ಲಿ ಅಮೆರಿಕದ ಅಧ್ಯಕ್ಷ ವುಡ್ರೋ ವಿಲ್ಸನನನ್ನು ಈತ ಅನೇಕ ವಿಷಯಗಳಲ್ಲಿ ವಿರೋಧಿಸಿದ. ವರ್ಸೇಲ್ಸ್ ಒಪ್ಪಂದ ಬಹು ಉದಾರವಾದ್ದೆಂಬುದು ಈತನ ಅಭಿಪ್ರಾಯವಾಗಿತ್ತಾದರೂ ಜರ್ಮನಿಯ ಬಗ್ಗೆ ಈತ ತಳೆದಿದ್ದ ಮಿತವಾದಿ ಧೋರಣೆಯ ಫಲವಾಗಿ 1919ರ ಚುನಾವಣೆಗಳಲ್ಲಿ ಪರಾಜಯ ಹೊಂದಿದ. ಅನಂತರ ಫ್ರಾನ್ಸಿನ ರಾಜಕೀಯದಲ್ಲಿ ಕ್ಲೆಮೆನ್ಸೋನ ಪ್ರಭಾವ ಕಡಿಮೆಯಾಯಿತು. ಈತ ಅನೇಕ ಗ್ರಂಥಗಳನ್ನು ರಚಿಸಿದನಲ್ಲದೆ ಸ್ವಲ್ಪಕಾಲ ಪತ್ರಿಕೆಗಳನ್ನೂ ಪ್ರಕಟಿಸುತ್ತಿದ್ದ. ಕ್ಲೆಮೆನ್ಸೋ 1929ರಲ್ಲಿ ಪ್ಯಾರಿಸಿನಲ್ಲಿ ಮರಣಹೊಂದಿದ. (ಬಿ.ಎಸ್.ಎ.)

**ಕ್ಲೆಯಿರ :** ತಿಯೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಸದಾ ಹಸಿರಾಗಿರುವ ಪೊದೆಸಸ್ಯವಿದು. ಸುಮಾರು 4'–6' ಎತ್ತರಕ್ಕೆ ಬೆಳೆಯುತ್ತದೆ. ಚೆಲುವಾದ ಬಣ್ಣದ ಬಿಡಿಬಿಡಿಯಾದ ದಳಗಳುಳ್ಳ ಹೂಗಳು, ರೋಮಮಯ ಪರಾಗಕೋಶಗಳು, ಮಿಶ್ರ ಬಣ್ಣದ ಎಲೆಗಳು–ಇವುಗಳಿಂದಾಗಿ ಗಿಡ ಅಂದವಾಗಿ ಕಾಣುತ್ತದೆ. ಕ್ಲೆಯಿರದಲ್ಲಿ ಸುಮಾರು 9 ಪ್ರಭೇದಗಳಿವೆ. ಇವುಗಳಲ್ಲೆಲ್ಲ ಹೆಚ್ಚು ಪ್ರಸಿದ್ಧವಾದುದು ಜಪಾನಿಕ ಅಥವಾ ಆಕ್ನೇಸಿಯ ಪ್ರಭೇದ. ಉದ್ದನೆಯ ಭರ್ಜಿಯಾಕಾರದ ಎಲೆಗಳು, ನವುರಾದ ಸುವಾಸನೆಯಿರುವ ಹಳದಿ ಬಣ್ಣದ ಹೂಗಳಿಂದಾಗಿ ಗಿಡದ ಚೆಲುವು ಹೆಚ್ಚಿದೆ. ಇದರಲ್ಲಿಯ ಟ್ರೈಕಲರ್ ಎಂಬ ಬಗೆಯ ಎಲೆಗಳಿಗೆ ಕಡುಹಸಿರು ಬಣ್ಣವಿದ್ದು ಅವುಗಳ ಅಂಚು ಮಾತ್ರ ಬಿಳಿ ಮತ್ತು ಗುಲಾಬಿ ಬಣ್ಣದ್ದಾಗಿರುವುದರಿಂದ ಗಿಡ ಬಲು ಸೊಗಸಾಗಿ ಕಾಣುತ್ತದೆ. ಕ್ಲೆಯಿರವನ್ನು ಕಾಂಡತುಂಡುಗಳಿಂದ ವೃದ್ಧಿಸಲಾಗುತ್ತದೆ. ವೃದ್ಧಿಗೆ ಆಗಸ್ಟ್–ಸೆಪ್ಟೆಂಬರ್ ತಿಂಗಳು ಯುಕ್ತಕಾಲ.

(ಬಿ.ಎ.ಸಿ.)

**ಕ್ಲೆರೋ, ಅಲೆಕ್ಸಿಸ್ ಕ್ಲಾಡ್ :** 1713–1765. ಫ್ರೆಂಚ್ ಗಣಿತವಿಜ್ಞಾನಿ. ಈತ ಜನಿಸಿದ್ದು ಪ್ಯಾರಿಸ್ಸಿನಲ್ಲಿ (ಮೇ 7 ಅಥವಾ 13, 1713). ಹತ್ತರ ಹರೆಯದಲ್ಲೇ ಕಲನಶಾಸ್ತ್ರವನ್ನು ಅಭ್ಯಸಿಸುತ್ತಿದ್ದ ಮೇಧಾವಿ ಈತ. ಹದಿಮೂರನೆಯ ವಯಸ್ಸಿನಲ್ಲಿ ಗಣಿತವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಮೇಲೆ ಪ್ರೌಢ ಲೇಖನಗಳನ್ನು ಬರೆದದ್ದುಂಟು. ಹದಿನೆಂಟನೆಯ ವಯಸ್ಸಿನಲ್ಲಿ ಇವನು ಪ್ರಕಟಿಸಿದ ಗಣಿತವಿಜ್ಞಾನದ ಬಗೆಗಿನ ಪುಸ್ತಕವೊಂದರ ಸಲುವಾಗಿ ಫ್ರೆಂಚ್ ಅಕೆಡಮಿ ಆಫ್ ಸೈನ್ಸಸ್ಸಿನ ಸದಸ್ಯತ್ವ ಕ್ಲೆರೋಗೆ ಲಭಿಸಿತು(1731). ಕ್ಲೆರೋ ಮತ್ತೊಬ್ಬ ಗಣಿತಜ್ಞ ಮೋಪರ್‌ಟ್ಯೂಯಿ (1698–1759) ಸಂಗಡ ಉತ್ತರ ಯುರೋಪಿನ ಲ್ಯಾಪ್ಲ್ಯಾಂಡಿಗೆ ಹೋಗಿ ಅಲ್ಲಿ ಮಧ್ಯಾಹ್ನರೇಖೆಯ ಉದ್ದವನ್ನು ನಿರ್ಧರಿಸುವಲ್ಲಿ ಆತನಿಗೆ ನೆರವಾದ. ಈ ಕೆಲಸ ಕ್ಲೆರೋಗೆ ಕೇಂದ್ರಾಪಗಾಮಿ ಬಲ ಮತ್ತು ಗುರುತ್ವಬಲಗಳ ಪರಿಸರದಲ್ಲಿ ಭೂಮಿಯಂಥ ಪರಿಭ್ರಮಿಸುವ ಕಾಯದ ಆಕಾರದ ಬಗ್ಗೆ ಒಂದು ಪುಸ್ತಕವನ್ನು ಬರೆಯಲು(1743) ನಾಂದಿ ಹಾಕಿಕೊಟ್ಟಿತು. ಇದರ ಬಗ್ಗೆ ಅಧ್ಯಯನ ಮತ್ತು ಸಂಶೋಧನೆಗಳನ್ನು ನಡೆಸಿದ ಐಸಾಕ್ ನ್ಯೂಟನ್ನನಿಗಿಂತಲೂ (1642–1721) ಈತ ಬಹುಪಾಲು ಮುಂದುವರಿದಿದ್ದ. ಭೂಮಿಯ ಮೇಲ್ಮೈ ಮೇಲೆ ವಿವಿಧ ಭಾಗಗಳಲ್ಲಿ ಗುರುತ್ವಬಲವನ್ನು ಅಳೆದು ಭೂಮಿಯ ಆಕಾರವನ್ನು ಕಂಡುಹಿಡಿಯಬಹುದೆಂಬುದನ್ನು ಪ್ರಯೋಗ ರೀತ್ಯ ತೋರಿಸಿದ. ಭೂಮಿಯಸುತ್ತ ಪ್ರದಕ್ಷಿಣೆ ಹಾಕುವ ಚಂದ್ರನ ಚಲನೆಯ ಬಗ್ಗೆ ಹೆಚ್ಚು ಅಧ್ಯಯನಗಳನ್ನು ಮಾಡಿದವರಲ್ಲಿ ಕ್ಲೆರೋ ಒಬ್ಬ. ಶುಕ್ರಗ್ರಹದ ಬಲ ಮತ್ತು ಚಂದ್ರನ ಸೆಳೆತ ಇವು ಯಾವ ರೀತಿ ಭೂಮಿಯ ಮೇಲೆ ಪರಿಣಾಮವೆಸಗುತ್ತವೆ ಎಂಬುದನ್ನು ಈತ ತೌಲನಿಕವಾಗಿ ಅಭ್ಯಾಸಮಾಡಿದ. ಮತ್ತೊಬ್ಬ ಫ್ರೆಂಚ್ ಖಗೋಳವಿಜ್ಞಾನಿ ಲಾಕಾಯ್ (1713–1762) ಈ ವಿಚಾರವಾಗಿ ಕಂಡುಕೊಂಡ ಅಂಶಗಳಲ್ಲಿ ಕೆಲವನ್ನು ತೆಗೆದುಕೊಂಡು ಅವುಗಳೊಡನೆ ತನ್ನವನ್ನೂ ಸೇರಿಸಿ ಶುಕ್ರದ ದ್ರವ್ಯ ರಾಶಿ ಎಷ್ಟೆಂಬುದನ್ನು ನಿರ್ಧರಿಸಿದ. ಇದು ಸಮಂಜಸವಾಗಿತ್ತು. ಹೀಗೆಯೇ ಚಂದ್ರನ ದ್ರವ್ಯರಾಶಿಯನ್ನೂ ಲೆಕ್ಕಹಾಕಿದ. ಈ ಅಂಕಿ ಅಂಶಗಳಲ್ಲಿ ಈಗ ತಾರತಮ್ಯವಿರುವುದಾದರೂ ಆಗಿನ ಕಾಲಕ್ಕೆ ಅವೇ ಅತ್ಯಂತ ಸಮಂಜಸವೆನಿಸಿದ್ದುವು.

ಇಂಗ್ಲಿಷ್ ಖಗೋಳವಿಜ್ಞಾನಿ ಎಡ್ಮಂಡ್ ಹ್ಯಾಲಿ (1656–1742) ಆವಿಷ್ಕರಿಸಿದ್ದ ಧೂಮಕೇತು ಮತ್ತೆ ಗೋಚರವಾಗುವ ಕಾಲ ಆಗ ಸಮೀಪವಾಗುತ್ತಿತ್ತು. ಫ್ರೆಂಚ್ ಖಗೋಳವಿಜ್ಞಾನಿ ಲ್ಯಾಲಾಂಡನೊಡಗೂಡಿ ಕ್ಲೆರೋ ಗುರು ಮತ್ತು ಶನಿಗ್ರಹಗಳ ಗುರುತ್ವ ಬಲಗಳು ಈ ಧೂಮಕೇತುವಿನ ಮೇಲೆ ಉಂಟುಮಾಡುವ ಪರಿಣಾಮವನ್ನು ಕುರಿತು ಅಧ್ಯಯನ ನಡೆಸಿದ. ಇವೆರಡು ಬೃಹತ್ ಗ್ರಹಗಳು ಧೂಮಕೇತುವಿನ ಚಲನೆಯ ಮೇಲೆ ಬೀರುವ ಸಂಯುಕ್ತಪ್ರಭಾವದ ಪರಿಣಾಮವಾಗಿ ಅದು ಸೂರ್ಯನೀಚ ಬಿಂದುವನ್ನು 1759ರ ಏಪ್ರಿಲ್ 13ನೆಯ ದಿವಸದ ವರೆಗೂ ತಲುಪುವುದು ಸಾಧ್ಯವಿಲ್ಲವೆಂದು ಕ್ಲೆರೋ ಹೇಳಿದ. 1758ರ ಕ್ರಿಸ್ಮಸ್ ದಿವಸದಂದು (ಡಿಸೆಂಬರ್25) ಈ ಧೂಮಕೇತು ಕಾಣಿಸಿಕೊಂಡಿತು. ಸೂರ್ಯನೀಚ ಬಿಂದುವನ್ನು ಅದು ತಲಪಿದ್ದು ಕ್ಲೆರೋ ಮುನ್ನುಡಿದಿದ್ದ ಕಾಲದ ಒಂದು ತಿಂಗಳ ಅಂತರದೊಳಗೆ ಎನ್ನುವಲ್ಲಿ ಈತನ ತರ್ಕ ಹಾಗೂ ಗಣನೆಯ ನಿಷ್ಕೃಷ್ಟತೆ ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಕ್ಲೆರೋ ಮಡಿದದ್ದು 1765ರ ಮೇ 17ರಂದು.
**(ನೋಡಿ: ಕ್ಲೇರೋ ಸಮೀಕರಣ)** *

**ಕ್ಲೇಟನ್ಸ್ ಸಿದ್ಧಾಂತ :** ಪ್ರ.ಶ. 1816 ರಲ್ಲಿ ದೇವೇನ್ಸ್ ಹಾಗು ನೊಬೆಲ್ ವಿರುದ್ಧದ ಕ್ಲೇಟನ್ಸ್ ದಾವೆಯ ಇಂಗ್ಲೆಂಡಿನಲ್ಲಿ ನಡೆಯಿತು. ಅದರಲ್ಲಿಯ ತೀರ್ಪು\ ಒಂದು ಐತಿಹಾಸಿಕ ಮಹತ್ವದ್ದಾಯಿತು. ಮುಂದಿನ ನೂರಾರು, ಸಾವಿರಾರು ನ್ಯಾಯಾಲಯದ ಅಂತಹ ದಾವೆಗಳಿಗೆ ಇದು ಒಂದು ಮಾರ್ಗದರ್ಶಿಯಾಯಿತು. ಈ ದಾವೆಯಲ್ಲಿ ನ್ಯಾಯಾಲಯವು ನೀಡಿದ ತೀರ್ಪು ಏನೆಂದರೆ, ಚಾಲ್ತಿ ಖಾತೆಗಳಲ್ಲಿ ಗ್ರಾಹಕರು ಹಲವಾರು ಬಾರಿ ಖಾತೆಗೆ ಖರ್ಚು ಹಾಕಿಸಿ ಪಾವತಿಯನ್ನು ಪಡೆದಿರುತ್ತಾರೆ. ಅಂತಹ ಪಾವತಿಗಳನ್ನು ಅದೇ ಕ್ರಮದಲ್ಲಿ ಮೊದಲು ಬಂದ ಜಮವು ಮೊದಲ ಖರ್ಚನ್ನು ತಾನೇತಾನಾಗಿ ಚುಕ್ತಾ ಮಾಡಿದಂತೆ ಭಾವಿಸುವುದೇ ಈ ನಿರ್ಣಯದ ಅಂತರಾಳ.

ಇದು ನ್ಯಾಯಾಲಯದಲ್ಲಿಯ ದಾವೆ ದಾಖಲಾದುದರ ಅಧಿಕೃತ ವಿವರಣೆ ಹಾಗು ಕ್ರಮ ಸಂಖ್ಯೆ : ದೆವೆನಸ್ ವಿ ನೊಬ್ಲ್: ಕ್ಲೇಟನ್ಸ್ ಕೇಸ್ (1816), 1 ಮೆರ್ 572,35, ಇ ಆರ್ 781).

ಈ ಕ್ಲೇಟನ್ನಿನ ದಾವೆಯಲ್ಲಿ ನಿರ್ಧರಿತವಾದುದು ಇಡೀ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಒಂದು ಹೊಸ ಚಿಂತನೆಯನ್ನು ಸೃಷ್ಟಿಸಿತು. ಬಂದ ಜಮಾ ಹಣವನ್ನು ಆತನ ಸಾಲಕ್ಕೆ ವಿಶೇಷವಾಗಿ ಚಾಲ್ತಿ ಠೇವಣಿ ಖಾತೆಗೆ ಹೇಗೆ ಯುಕ್ತವಾಗಿ ಬಳಸಿಕೊಳ್ಳುವುದು ಎಂಬುದನ್ನು ನಿರ್ಧರಿಸಲು ಕೆಲವು ನಿಯಮಗಳಿವೆ.

1. ಗ್ರಾಹಕನ ಹಕ್ಕು ಹಾಗು ಯುಕ್ತೋಪಯೋಗ ಮೊದಲ ಹಕ್ಕು :

ಅ) ಜಮಾ ಹಣವನ್ನು ತನಗೆ ತಿಳಿದಂತೆ ತನ್ನ ಬೇಕಾದ ಸಾಲಕ್ಕೆ ಜಮಾ ಮಾಡುವ ಹಕ್ಕನ್ನು ಸಾಲಗಾರನಿಗೆ ಆದ್ಯತೆ ಮೇಲೆ ನೀಡಲಾಗಿದೆ.

ಬ) ಸಾಲಗಾರ ಈ ಜಮೆಯ ಹಣದ ಯುಕ್ತವಾದ ಉಪಯೋಗದ ಸಮಯದಲ್ಲಿ ತನ್ನ ಹಕ್ಕನ್ನು ಚಲಾಯಿಸಬೇಕು ಇಲ್ಲದಿದ್ದಲ್ಲಿ ಅದು ತನ್ನ ಅಧಿಕಾರವನ್ನು ಕಳೆದುಕೊಳ್ಳುತ್ತದೆ.

ಕ). ಸಾಲಗಾರನು ತನಗೆ ಬಂದ ಜಮೆಯ ಹಣವನ್ನು ತನ್ನ ನಿರ್ಧಾರದಂತೆ ನಿರ್ದಿಷ್ಟ ಚೆಕ್ಕುಗಳ ಪಾವತಿಗಾಗಿ ಮೀಸಲಿಟ್ಟುಕೊಳ್ಳಬಹುದು; ಖಾತೆಯು ಮೀರೆಳೆದಿದ್ದರೂ ಇದು ಅನ್ವಯವಾಗುತ್ತದೆ.

2. ಯುಕ್ತೋಪಯೋಗದ ಹಕ್ಕಿನಲ್ಲಿಯ ಎರಡನೆಯ ನಿಯಮ :

1. ಸಾಲಗಾರನು ಈ ಜಮೆ ಹಣವನ್ನು ಯಾವ ಸಾಲಕ್ಕೆ ಬಳಸುವುದೆಂಬ ತನ್ನ ಹಕ್ಕನ್ನು ಸಾಲಗಾರನು ಚಲಾಯಿಸುವುದರಲ್ಲಿ ವಿಫಲನಾದಲ್ಲಿ, ಸಾಲದಾತನಿಗೆ ಈ ಹಕ್ಕು ಸಹಜವಾಗಿ ವರ್ಗಾವಣೆಯಾಗುತ್ತದೆ. ಕಾಲ ಮೀರಿದ ಸಾಲವೂ ಸೇರಿದಂತೆ ತನಗಿಷ್ಟ ಬಂದ ಸಾಲಕ್ಕೆ ಜಮೆಯನ್ನು ಬಳಸುವ ಹಕ್ಕನ್ನು ಚಲಾಯಿಸಬಹುದಾಗಿದೆ.

2. ಈ ಸಾಲದ ಬಗ್ಗೆ ಯಾವುದೇ ಕಾನೂನಿನ ಕ್ರಮ ಕೈಗೊಳ್ಳುವುದರ ಮೊದಲೇ ಸಾಲದಾತನು ಈ ಹಕ್ಕನು ಚಲಾಯಿಸಬಹುದು.

3. ಒಮ್ಮೆ ಈ ರೀತಿ ಜಮೆಯನ್ನು ಸಾಲಕ್ಕೆ ಬಳಸಿಕೊಂಡ ಮೇಲೆ ಯಾವುದೇ ರೀತಿಯಲ್ಲೂ ಅದನ್ನು ಬದಲಾಯಿಸಲು ಆಗುವುದಿಲ್ಲ.

ಈ ಕ್ಲೇಟನ್ನಿನ ದಾವೆಯಲ್ಲಿ ಕಂಡು ಬಂದ ತೀರ್ಪಿನ ಸಾರಾಂಶವೇನೆಂದರೆ:

ಯಾವುದೇ ಚಾಲ್ತಿ ಖಾತೆಯಲ್ಲಿ ಮೀರೆಳೆತವಾಗಿದ್ದು ಶಿಲ್ಕು ಖರ್ಚಿನದ್ದಾಗಿದ್ದಲ್ಲಿ, ಹಾಗೂ ಬರುವ ಜಮೆಯ ಬಗ್ಗೆ ಯಾವುದೇ ನಿಖರ ಸೂಚನೆಯಿಲ್ಲದಿದ್ದಲ್ಲಿ, ಖಾತೆಯಲ್ಲಿ ಬರುವ ಜಮೆಯು ಅದರಲ್ಲಿಯ ಮೊದಲಿನ ಖರ್ಚನ್ನು ತೀರಿಸಿದಂತೆ ಭಾವಿಸಲಾಗುತ್ತದೆ.

ಮೇಲಿನ ಉದಾಹರಣೆಯಲ್ಲಿ 12–03–04 ರಂದು ಜಮೆಯಾದ ಹಣದಲ್ಲಿ ಮೊದಲ ಖರ್ಚಾದ ರೂ.50,000/–ವು ಪಾವತಿಯಾದಂತೆ ಆಗುತ್ತದೆ. ಹಾಗೆಯೇ ಕ್ರಮವಾಗಿ ಬಂದ ಖರ್ಚುಗಳು ಬರುವ ಜಮೆ ಹಣದಲ್ಲಿ ಪಾವತಿಯಾದಂತೆ ಆಗುತ್ತದೆ.

ಇದೇ ರೀತಿ 1912 ರಲ್ಲಿ ಆದ ಡೀಲೇ ಹಾಗು ಲಾಯಿಡ್ಸ್ ಬ್ಯಾಂಕ್ಸ್ (1912) ಕ್ಲೇಟನ್ಸ್ ತತ್ತ್ವವನ್ನನುಸರಿಸಿ ತೀರ್ಪು ಬಂದಿತು. ಬ್ಯಾಂಕು ಎರಡನೇ ಅಡಮಾನ ತೆಗೆದುಕೊಂಡು ಅವರಿಗೆ ಮೀರೆಳೆತ ಸಾಲ ನೀಡಿತ್ತು.

ಬ್ಯಾಂಕು ತನ್ನ ಗ್ರಾಹಕನ ಚಾಲ್ತಿ ಖಾತೆಯಲ್ಲಿಯ ಮೀರೆಳೆತವನ್ನು ಭದ್ರಪಡಿಸಲೋಸುಗ ಎರಡನೆಯ ಅಡಮಾನವನ್ನು ಅವನಿಂದ ತೆಗೆದುಕೊಂಡಿತು. ಗ್ರಾಹಕನು ಅನಂತರ ತಾನು ಮೂರನೇ ಅಡಮಾನದಲ್ಲಿ ಬೇರೆಡೆ ಸಾಲ ತೆಗೆದುಕೊಂಡಿರುವುದನ್ನು ತಿಳಿಸಿದನು. ಬ್ಯಾಂಕು ತನ್ನ ಎರಡನೆಯ ಅಡಮಾನದ ಹಕ್ಕನ್ನು ಚಲಾಯಿಸಿ ತನ್ನ ಆಧಾರವನ್ನು ಭದ್ರಪಡಿಸಿಕೊಳ್ಳುವುದರೊಳಗಾಗಿ ಖಾತೆಯಲ್ಲಿ ಸಾಕಷ್ಟು ಜಮ ಬಂದು ಮೊದಲ ಖರ್ಚುಗಳು ಇದರಿಂದ ಕಳೆದು ಖಾತೆಯಲ್ಲಿ ಜಮೆ ಬಂದು ಅನಂತರ ಹೊಸ ಖರ್ಚುಗಳು ಬಂದಿದ್ದವು. ಈ ಹೊಸ ಮೀರೆಳೆತವು ಹೊಸ ಸಾಲದಂತಾಗಿ ಹಳೆಯ ಆಧಾರದ ಅಡಮಾನ ಅದಕ್ಕೆ ಅನ್ವಯವಾಗುವಂತೆ ಬ್ಯಾಂಕು ದಾಖಲೆ, ಕ್ರಮ ಸರಿಯಾಗಿ ಕೈಗೊಳ್ಳದ್ದರಿಂದ ಮೂರನೆಯ ಅಡಮಾನವು ಮೊದಲ ಪ್ರಾಶಸ್ತ್ಯ ಗಳಿಸಿ ಬ್ಯಾಂಕಿನ ಆಧಾರ ಅನಂತರದ್ದಾಯಿತು. ಕೊನೆಗೆ ಆ ಅಡಮಾನದ ಆಸ್ತಿಯ ವಿಲೇವಾರಿಯಿಂದ ಬಂದ ಹಣವು ಮೂರನೆಯ ಅಡಮಾನಕ್ಕೆ ಸಾಕಾಗಿ ಬ್ಯಾಂಕಿಗೆ ಏನೂ ಸಿಗಲಿಲ್ಲ. ದಾವೆಯೇ ಬಿದ್ದು ಹೋಯಿತು. (ಜಿ.ಆರ್.ವಿ;ವೈ.ಕೆ)

**ಕ್ಲೇರ್, ಜಾನ್ :** 1783–1864. ಆಂಗ್ಲಕವಿ. ಬಡ ಕೂಲಿಕಾರನೊಬ್ಬನ ಮಗನಾದ ಈತ ಪೀಟರ್‌ಬರೊ ಬಳಿಯಿರುವ ಹೆಲ್ಪ್‌ಸ್ಟನ್‌ನಲ್ಲಿ ಹುಟ್ಟಿದ. ಬಾಲ್ಯವನ್ನು ಹೊಲತೋಟಗಳ ಕೆಲಸದಲ್ಲಿ ಕಳೆದನಲ್ಲದೆ ಕೆಲಕಾಲ ಸೈನ್ಯಖಾತೆಯಲ್ಲಿ ದುಡಿದ. ಬಹಳ ಶ್ರಮದಿಂದ ಒಂದು ಪೌಂಡು ಉಳಿಸಿ ಅದರಿಂದ ತನ್ನ ಕವನಗಳ ಪರಿಚಯ ಪುಸ್ತಕವೊಂದನ್ನು ಹೊರತಂದ. ಸ್ಟಾಂಡರ್ಡ್‌ನ ಪುಸ್ತಕ ವ್ಯಾಪಾರಿಯಾದ ಡ್ರೂರಿಯನ್ನು ಕಂಡು ಆತನ ಸ್ನೇಹ ಸಂಪಾದಿಸಿ ಆತನ ಸಹಾಯದಿಂದ ಪೊಯಮ್ಸ್ ಡಿಸ್ಕ್ರಿಪ್ಟಿವ್ ಆಫ್ ರೂರಲ್ ಲೈಫ್ (1820) ಎಂಬ ಕವನ ಸಂಕಲನವನ್ನು ಹೊರತಂದ. ಈ ವ್ಯವಹಾರದಿಂದಾಗಿ ಈತನಿಗೆ 20 ಪೌಂಡು ಹಣ ಸಿಕ್ಕಿತಲ್ಲದೆ ಪುಸ್ತಕ ಅನೇಕರ ಗಮನವನ್ನು ಸೆಳೆಯಿತು. ಅನೇಕ ವಿದ್ವಾಂಸರ ಮತ್ತು ಹಿರಿಯರ ಸ್ನೇಹವೂ ಆಯಿತು. ವ್ಯವಹಾರ ತಿಳಿಯದವನಾದ್ದರಿಂದ ಕ್ಲೇರ್ ಅನೇಕ ಕಷ್ಟನಷ್ಟಗಳಿಗೆ ಈಡಾದ. ಆದರೂ ಕವನಗಳನ್ನು ಬರೆಯುವುದನ್ನು ನಿಲ್ಲಿಸಲಿಲ್ಲ. ಅದರ ಫಲವಾಗಿ ದಿ ವಿಲೇಜ್ ಮಿನ್‌ಸ್ಟ್ರೆಲ್ (1821), ದಿ ಷಪರ್ಡ್ಸ್ ಕ್ಯಾಲೆಂಡರ್ (1827), ರೂರಲ್ ಮ್ಯೂಸ್ (1835) ಕೃತಿಗಳು ಹೊರಬಂದುವು. ಅನಂತರ ಈತನ ಮಾನಸಿಕ ಸ್ಥಿತಿ ತೀರ ಇಳಿಮುಖವಾಗಿ ಬುದ್ಧಿಭ್ರಮಣೆಯಾಯಿತು. 1837ರಿಂದ ಹುಚ್ಚಾಸ್ಪತ್ರೆಯಲ್ಲಿ ಇರತೊಡಗಿದ. ಗ್ರಾಮೀಣ ಸೌಂದರ್ಯವನ್ನು ಚಿತ್ರಿಸುವಲ್ಲಿ ಕ್ಲೇರನನ್ನು ಮೀರಿಸಿದವರಿಲ್ಲ. ಹಳ್ಳಿಯ ಜನಜೀವನ, ಆ ಜನರ ನಿಷ್ಕಪಟ ಹೃದಯ ಮತ್ತು ಅವರ ಆಲೋಚನೆಗಳನ್ನು ತನ್ನ ಕವನಗಳಲ್ಲಿ ಮನೋಹರವಾಗಿ ಈತ ಚಿತ್ರಿಸಿದ್ದಾನೆ. (ಎನ್.ಎಸ್.ಎಲ್.)

**ಕ್ಲೇರಿಹ್ಯೂ :** ಪ್ರಾಸಬದ್ಧವಾದ ಎರಡು ದ್ವಿಪದಿಗಳನ್ನೊಳಗೊಂಡ ಒಂದು ಚುಟುಕ ಪದ್ಯಜಾತಿ. ಎಡ್ಮಂಡ್ ಕ್ಲೇರಿಹ್ಯೂ ಬೆಂಟ್ಲೆ (1875–1956) ಎಂಬಾತ ಬಳಕೆಗೆ ತಂದನಾಗಿ ಈ ಪದ್ಯಜಾತಿಗೆ ಅವನ ಹೆಸರೇ ಬಂದಿದೆ. ಮುಖ್ಯವಾಗಿ ಅಣಕ, ಪರಿಹಾಸಗಳೇ ಈ ಚುಟುಕಗಳ ಗುರಿ. ಮೊದಲ ಸಾಲಿನಲ್ಲಿ ಒಬ್ಬನ ಹೆಸರು ಬರುತ್ತದೆ. ಅನಂತರ ಅವನನ್ನು ಕುರಿತ ಒಂದು ವಿನೋದ ಪ್ರಸಂಗ ಬರುತ್ತದೆ. ಬೆಂಟ್ಲೆ ಪತ್ರಿಕೋದ್ಯಮಿ. ಕಾದಂಬರಿಕಾರ. ಬೇಸರ ಕಳೆಯುವುದಕ್ಕಾಗಿ ಆಗಾಗ ಚುಟುಕ ಪದ್ಯಗಳನ್ನು ಗೀಚಿದನಂತೆ. ಬಯಾಗ್ರಫಿ ಫಾರ್ ಬಿಗಿನರ್ಸ್ (1905), ಮೋರ್ ಬಯಾಗ್ರಫಿ (1929) ಮತ್ತು ಬೇಸ್‌ಲೆಸ್ ಬಯಾಗ್ರಫಿ (1939) ಎಂಬ ಮೂರು ಸಂಕಲನಗಳಲ್ಲಿ ಈತನ ಕ್ಲೇರಿಹ್ಯೂಗಳು ಪ್ರಕಟವಾಗಿವೆ. ಉದಾಹರಣೆಗಾಗಿ ಒಂದು ಪದ್ಯನೋಡಬಹುದು.

ಆಫ್ಟರ್ ಡಿನರ್, ಎರಾಸ್‌ಮಸ್
ಟೋಲ್ಡ್ ಕೋಲೆಟ್ ಟು ಬಿ **"ಬ್ಲಾಸ್'ಮಸ್"**
ಹ್ವಿಚ್ ಕೋಲೆಟ್, ವಿತ್ ಸಮ್ ಹೀಟ್
ರಿಕ್ವೆಸ್ಟೆಡ್ ಹಿಮ್ ಟು ರಿಪೀಟ್.

ಈ ಪದ್ಯಜಾತಿ ಲಿಮರಿಕ್‌ನಷ್ಟೇ ಜನಪ್ರಿಯವಾಯಿತು. ಈಚೆಗೆ ಇಂಥ ಪದ್ಯ ರಚನೆ ಮಾಡುವುದು ಮನೋರಂಜನೆಯ ಆಟವಾಗಿದೆ. ಟೈಮ್ಸ್ ಲಿಟರಲಿ ಸಪ್ಲಿಮೆಂಟಿನಂಥ ಪತ್ರಿಕೆಗಳು ಮೊದಲೆರಡು ಸಾಲುಗಳನ್ನು ಕೊಟ್ಟು ಪದ್ಯ ಪೂರ್ಣಮಾಡುವ ಸ್ಪರ್ಧೆಗಳನ್ನು ಆಗಾಗ ಏರ್ಪಡಿಸಿರುವುದನ್ನು ಇಲ್ಲಿ ನೆನೆಯಬಹುದು. ಜಿ.ಪಿ.ರಾಜರತ್ನಂ ಅವರು ಕನ್ನಡದಲ್ಲಿ ಮಕ್ಕಳಿಗಾಗಿ ಇಂಥ ಚುಟುಕಗಳನ್ನು ಯಶಸ್ವಿಯಾಗಿ ರಚನೆ ಮಾಡಿದ್ದಾರೆ. ದಿನಕರ ದೇಸಾಯಿಯವರ ರಚನೆಗಳು ರಾಜಕೀಯ ವಿಷಯಗಳನ್ನು ಟೀಕಿಸುತ್ತವೆ. **(ನೋಡಿ: ಲಿಮರಿಕ್)** (ಎಸ್.ವಿ.ಆರ್.)

**ಕ್ಲೇರೋ ಸಮೀಕರಣ :** $f(y-xy', y')=0$ ರೂಪದಲ್ಲಿರುವ ಒಂದು ಅವಕಲನ ಸಮೀಕರಣ. ಇದರ ಪರಿಹಾರ $f(y-Cx,C)=0$ ರೂಪದಲ್ಲಿದೆ. ರೂಢಿಯಲ್ಲಿ

$y = x\frac{dy}{dx} + f\left(\frac{dy}{dx}\right)$ ಅಥವಾ $y = px + f(p)$ $\left[p = \frac{dy}{dx}\right]$ ಈ ರೂಪದ ಸಮೀಕರಣ ಕ್ಲೆರೋ ಸಮೀಕರಣ. ಇಲ್ಲಿ $f$ ಒಂದು ಏಕಚರ ಉತ್ಪನ್ನ, ಇದನ್ನು ಬಿಡಿಸಲು ಈ ಸಮೀಕರಣವನ್ನು $x$ ನ್ನು ಕುರಿತು ಒಂದು ಸಲ ಅವಕಲಿಸುತ್ತೇವೆ. ಆಗ

$$\frac{dy}{dx} = p + x\frac{dp}{dx} + f'(p)\frac{dp}{dx}, p = \frac{dy}{dx}$$

ಅಥವಾ $$[x + f'(p)]\frac{dp}{dx} = 0$$

$\therefore \frac{dp}{dx} = 0$ ಆದಾಗ ಮೇಲಿನ ಸಮೀಕರಣ ನಿಜ.

$\therefore \quad p = C$

$\therefore \quad y = Cx + f(C)$ ಒಂದು ಪರಿಹಾರ.

ಇದು ಸರಳ ರೇಖೆಗಳ ಒಂದು ಗಣವನ್ನು ಸೂಚಿಸುತ್ತದೆ. ಇಲ್ಲಿ C ಪ್ರಾಚಲ. ಈ ಸರಳರೇಖೆಗಳು ವೇಷ್ಟಿಸುವ (ಎನ್ವಲಪ್) ವಕ್ರರೇಖೆಯ ಪ್ರಾಚಲ ಸಮೀಕರಣಗಳು.

$$y = Cx + f(C)$$
$$x + f'(C) = 0$$

ಇದು ವಿಚಿತ್ರ (ಸಿಂಗ್ಯುಲರ್ ) ಪರಿಹಾರ. C ಯನ್ನು p ಯಿಂದ ಪ್ರತಿಸ್ಥಾಪಿಸಿದಾಗ

$$y = px + f(p)$$
$$x + f'(p) = 0$$

ದೊರೆಯುತ್ತವೆ. **(ನೋಡಿ: ಕ್ಲೆರೋ, ಅಲೆಕ್ಸಿಸ್ ಕ್ಲಾಡ್)** *

**ಕ್ಲೈನ್, ಫೆಲಿಕ್ಸ್ :** 1849–1925. ಜರ್ಮನಿಯ ಗಣಿತವಿದ್ವಾಂಸ. ಗೌಸನಂಥ (1777–1855). ಸೀಮಾಪುರುಷ ಅಲಂಕರಿಸಿದ್ದ ಗಟಿಂಜೆನ್ನಿನ ಗಣಿತಪೀಠವನ್ನು 1886ರಲ್ಲಿ ಏರಿ ಅದಕ್ಕೆ ತೂಕವನ್ನೂ ಮೆರುಗನ್ನೂ ತಂದ ಕ್ರಿಯಾಶೀಲ ಪ್ರತಿಭೆ ಕ್ಲೈನನದು. ಆಧುನಿಕ ಗಣಿತದ ಬೆಳೆವಣಿಗೆಗೆ ಈತನ ಕೊಡುಗೆ ಗಮನಾರ್ಹವಾದದ್ದು. ಜ್ಯಾಮಿತಿ ಮತ್ತು ಉತ್ಪನ್ನ ಸಿದ್ಧಾಂತ (ಥಿಯೊರಿ ಆಫ್ ಫಂಕ್ಷನ್ಸ್) ಇವುಗಳ ಮೇಲೆ ಇವನು ತನ್ನ ಗಮನವನ್ನು ಸಾಂದ್ರೀಕರಿಸಿದ. ಈತನ ಮುಖ್ಯ ಕೊಡುಗೆಗಳು ಈ ಕ್ಷೇತ್ರದಲ್ಲೇ. ಜ್ಯಾಮಿತಿಯಲ್ಲಿ ನೂತನ ವಿಧಾನದ ಸಂಶೋಧನೆ ಪ್ರಾರಂಭಿಸಿದ. ಮುಂದೆ ಪರಿವರ್ತನ ಗ್ರೂಪುಗಳ (ಟ್ರಾನ್ಸ್‌ಫರ್ಮೇಷನ್‌ಗ್ರೂಪ್ಸ್) ಮೇಲೆ ಸಂಶೋಧನೆಯನ್ನು ಮುಂದುವರಿಸಿದ. ಜ್ಯಾಮಿತಿಯ ಅಧ್ಯಯನದ ಮೇಲೆ ಈತ ಪ್ರತಿಪಾದಿಸಿದ (1872) ಎರ್ಲಾಂಗೆನ್ ಪ್ರೋಗ್ರಾಂ ಪ್ರಪಂಚದ ಎಲ್ಲೆಡೆ ಪರಿಣಾಮಕಾರಿ ಪ್ರಭಾವವನ್ನು ಬೀರಿತು, ಅಯೂಕ್ಲಿಡೀಯ ಜ್ಯಾಮಿತಿ (ನಾನ್ ಯೂಕ್ಲಿಡಿಯನ್ ಜ್ಯಾಮಿಟ್ರಿ) ಒಂದು ವಿಶಿಷ್ಟರೂಪದ ಮೆಟ್ರಿಕ್ ಇರುವ ಜ್ಯಾಮಿತಿ ಎಂಬುದಾಗಿ ಅಂಗೀಕೃತವಾದದ್ದು ಕ್ಲೈನನ ತರ್ಕದಿಂದ. ಗ್ರೂಪ್‌ಗಳ ಸಿದ್ಧಾಂತವನ್ನು ಇವನು ಗಣಿತದ ಇತರ ಶಾಖೆಗಳಿಗೆ ಅನ್ವಯಿಸಿದ; ಅಲ್ಲದೆ ಭೌತವಿಜ್ಞಾನಕ್ಕೂ ಗಣಿತಾನ್ವಯವನ್ನು ಈತ ಮಾಡಿದ.

ಕ್ಲೈನ್‌ಕುಪ್ಪಿ (ಕ್ಲೈನ್ ಬಾಟಲ್) ಎಂಬ ನಾಲ್ಕು ಆಯಾಮಗಳ ಜಟಿಲ ಮೈಯನ್ನು(ಸರ್ಫೇಸ್) ಊಹಿಸಿ (ಮೂರು ಆಯಾಮಗಳ ನಮ್ಮ ದೃಶ್ಯವಿಶ್ವದಲ್ಲಿ ಇಂಥ ಒಂದು ರಚನೆಯನ್ನು ಪ್ರತ್ಯಕ್ಷವಾಗಿ ನಿರ್ಮಿಸಲು ಸಾಧ್ಯವಿಲ್ಲ) ಅದರ ಲಕ್ಷಣಗಳನ್ನು ನಿರೂಪಿಸಿದ. ಕ್ಲೈನ್ ಕುಪ್ಪಿ ಒಂದು ಭುಜದ ಮೈ. ಅದರ ಮೇಲಿರುವ ಯಾವುದೇ ಎರಡು ಬಿಂದುಗಳನ್ನು ಒಂದು ರೇಖೆಯಿಂದ, ಅದು ಮೈಯನ್ನು ಅಡ್ಡಹಾಯದಂತೆ, ಜೋಡಿಸಬಹುದು. ಇಂಥ ವಿಶಿಷ್ಟ ಮೈಗಳ ಅಭ್ಯಾಸ ಟೊಪಾಲಜಿಯಲ್ಲಿ ಬರುತ್ತದೆ.

ಕ್ಲೈನನ ಕಾಲದಲ್ಲಿ ಗಟಿಂಜೆನ್ನಿಗೆ ಆಕರ್ಷಿತರಾಗಿ ಬಂದಿದ್ದ ಇತರ ಗಣಿತ ಪ್ರತಿಭಾನ್ವಿತರೆಂದರೆ ರಂಜ್, ಹಿಲ್ಬರ್ಟ್ ಹಾಗೂ ಮಿಂಕೋವಿಸ್ಕಿ. ಕ್ಲೈನ್ ಸ್ವತಃ ಉತ್ತಮ ಬೋಧಕ. ಈತನ ದೃಷ್ಟಿ ವಿಶಾಲವಾದದ್ದು. ಆದ್ದರಿಂದಲೇ ಗಣಿತ, ಇತರ ಶುದ್ಧ ವಿಜ್ಞಾನಗಳು ಹಾಗೂ ಅನ್ವಯ ವಿಜ್ಞಾನಗಳು ಇವುಗಳ ಸಂಪೂರ್ಣ ಸಮನ್ವಯವಾಗದ ವಿನಾ ರಾಷ್ಟ್ರದ ಪ್ರಗತಿ ಸಿದ್ಧಿಸದು ಎಂಬುದನ್ನು ಚೆನ್ನಾಗಿ ಮನಗಂಡಿದ್ದ. ವಾಸ್ತವಿಕವಾಗಿ ಕ್ಲೈನ್ ಜರ್ಮನಿಗೆ ಮೊದಲು ಆಗಮಿಸಿದಾಗ ಅಲ್ಲಿ ಸೈದ್ಧಾಂತಿಕ ವಿಜ್ಞಾನ ಪ್ರಾಯೋಗಿಕ ವಿಜ್ಞಾನದಿಂದ ಪೂರ್ಣವಾಗಿ ಬೇರ್ಪಟ್ಟು ಇವೆರಡರ ನಡುವೆ ಒಂದು ವಿಧದ ಜಲಬಂಧ ಪರಿಸ್ಥಿತಿ ತಲೆದೋರಿತ್ತು. ಸೈದ್ಧಾಂತಿಕ ವಿಜ್ಞಾನಿ ತನ್ನ ದಂತಗೋಪುರ ಪ್ರವೃತ್ತಿಯನ್ನು ತೊರೆದು ಪ್ರಾಯೋಗಿಕ ವಿಜ್ಞಾನಿಯೊಡನೆ ಸಹಕರಿಸಿದರೆ ಮಾತ್ರ ಸಮಗ್ರ ವಿಜ್ಞಾನ ಮತ್ತು ವಿಜ್ಞಾನತಂತ್ರ ಹೇಗೆ ಪ್ರವರ್ಧಿಸಬಲ್ಲುವು ಎಂಬುದನ್ನು ಕ್ಲೈನ್ 1893ರಲ್ಲಿ ಅಮೆರಿಕ ದೇಶವನ್ನು ಪ್ರತ್ಯಕ್ಷವಾಗಿ ಸಂದರ್ಶಿಸಿದಾಗ ಅರಿತುಕೊಂಡ. ಅಂದಿನಿಂದ, ಎಂದಿಗಿಂತಲೂ ಹೆಚ್ಚು ತೀವ್ರತೆಯಿಂದ, ಜರ್ಮನಿಯ ಯಂತ್ರಾಗಾರಗಳ ಆಧುನೀಕರಣದ ವಿಚಾರದಲ್ಲಿ ಕ್ಲೈನ್ ಆಸಕ್ತಿ ತಳೆದ. ಹೊಸ ಸಂಸ್ಥೆಗಳನ್ನು ಸ್ಥಾಪಿಸಿದ. ಅಂದು ಗಟಿಂಜೆನ್ ವಲಯದಲ್ಲಿ ಯಂತ್ರಾಗಾರಗಳ ಉಸಿರೇ ಕ್ಲೈನ್ ಆಗಿದ್ದ ಎನ್ನಬಹುದು. ಕ್ಲೈನನ ಈ ದೂರದರ್ಶಿತ್ವ ಮುಂದೆ ಜರ್ಮನಿಯನ್ನು ಪ್ರಮುಖ ತಾಂತ್ರಿಕ ರಾಷ್ಟ್ರವನ್ನಾಗಿ ಮಾಡಲು ತುಂಬ ನೆರವಾಯಿತು.

ಜರ್ಮನಿಯ ಡಸೆಲ್‌ಡಾರ್ಫ್‌ನಲ್ಲಿ1849ರ ನವೆಂಬರ್ 25ರಂದು ಕ್ಲೈನ್ ಜನಿಸಿದ. ವಿದ್ಯಾಭ್ಯಾಸ ಬಾನ್, ಗಟಿಂಜೆನ್ ಮತ್ತು ಬರ್ಲಿನ್ನುಗಳಲ್ಲಿ ನಡೆಯಿತು. 1872ರಲ್ಲಿ ಎರ್ಲಾಂಗೆನ್ ವಿಶ್ವವಿದ್ಯಾಲಯದಲ್ಲಿ ಗಣಿತವಿಜ್ಞಾನ ಪ್ರಾಧ್ಯಾಪಕನ ಹುದ್ದೆ ಈತನಿಗೆ ದೊರಕಿತು. 1875ರಲ್ಲಿ ಅಲ್ಲಿಂದ ಮ್ಯೂನಿಕ್‌ಗೆ ತೆರಳಿ ಅಲ್ಲಿ ಕೆಲಕಾಲ ಗಣಿತವಿಜ್ಞಾನವನ್ನು ಬೋಧಿಸಿದ. ಅನಂತರ ಲೀಪ್‌ಜಿಗ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾದ. 1886ರಿಂದ 1913ರ ವರೆಗೂ ಗಟಿಂಜೆನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ. 1872ರ ಅನಂತರ ಗಟಿಂಜೆನ್ನಿನಲ್ಲಿ ಮ್ಯಾಥಮಾಟಿಷೆ ಅನಲೆನ್ ಎಂಬ ಸಂಶೋಧನಪತ್ರಿಕೆಯ ಸಂಪಾದಕತ್ವವನ್ನು ಹೊತ್ತ. ಗಣಿತವಿಜ್ಞಾನಕ್ಕೆ ಸಂಬಂಧಿಸಿದ ಒಂದು ಬೃಹತ್ ಕೋಶದ ರಚನೆಗೆ (1895) ಈತ ಸ್ಥಾಪಕ ಪುರುಷನಾದ.

1925ರ ಜೂನ್ 22ರಂದು ಗಟಿಂಜೆನ್ನಿನಲ್ಲಿ ಕ್ಲೈನ್ ವಿಧಿವಶನಾದ. (ಎನ್.ವಿ.ಎಂ.)

**ಕ್ಲೈನೋಸ್ಟ್ಯಾಟ್ :** ಸಸ್ಯಾಂಗಗಳ ಚಲನೆಗೂ ಗುರುತ್ವಾಕರ್ಷಣಕ್ಕೂ ಇರುವ ಸಂಬಂಧವನ್ನು ವಿವರಿಸಲು ಉಪಯೋಗಿಸುವ ಒಂದು ಉಪಕರಣ. ಉದಾಹರಣೆಗೆ ಸಸ್ಯಾಂಗಗಳ ಬೆಳೆವಣಿಗೆಯ ದಿಕ್ಕನ್ನು ಗುರುತ್ವಾಕರ್ಷಣೆ ನಿರ್ಧರಿಸುತ್ತದೆ. ಪ್ರಥಮ ಬೇರು ಯಾವಾಗಲೂ ನೆಲದೆಡೆಗೆ ಬಾಗಿ ಬೆಳೆಯುತ್ತದೆ. ಇದಕ್ಕೆ ಗುರುತ್ವ ಪ್ರೇರಿತಚಲನೆ (ಜಿಯೋಟ್ರೋಪಿಸಂ) ಎಂದು ಹೆಸರು. ಹಾಗೆಯೇ ಪ್ರಥಮಕಾಂಡ ಭೂಮಿಗೆ ವಿಮುಖವಾಗಿ (ಊರ್ಧ್ವ ಮುಖ) ಬೆಳೆಯುತ್ತದೆ. ಈ ತೆರನ ಬೆಳೆವಣಿಗೆಗೆ ಆಯಾ ಭಾಗಗಳಲ್ಲಿ ಪ್ರಚೋದಕ ರಾಸಾಯನಿಕ ಮತ್ತು ಆಕ್ಸಿನ್ ಉತ್ಪತ್ತಿಯಾಗುವುದೇ ಕಾರಣ. ಗುರುತ್ವ ಪ್ರೇರಿತಚಲನೆ ಎಲ್ಲ ಸಸ್ಯಗಳಲ್ಲೂ ಕಂಡುಬರುತ್ತದೆ. ಒಂದು ಗಿಡವನ್ನು ಭೂಮಿಗೆ ಸಮಾಂತರವಾಗಿ ಇಟ್ಟು ಬೆಳೆಸಿದರೆ ಬೇರಿನ ತುದಿ ಅಧೋಮುಖವಾಗಿ ಭೂಮಿಯ ಕಡೆಗೂ ಕಾಂಡದ ತುದಿ ಊರ್ಧ್ವ ಅಥವಾ ಮೇಲ್ಮುಖವಾಗಿ ಭೂಮಿಗೆ ವಿಮುಖವಾಗಿಯೂ ಬಾಗಿ ಬೆಳೆಯುತ್ತವೆ. ಈ ಬಗೆಯ ಬೆಳೆವಣಿಗೆಯನ್ನು ಪ್ರಾಯೋಗಿಕವಾಗಿ ವಿವರಿಸಲು ಕ್ಲೈನೋಸ್ಟ್ಯಾಟನ್ನು ಉಪಯೋಗಿಸುತ್ತಾರೆ. ಇದರಲ್ಲಿ ಒಂದು ಕೇಂದ್ರಬಿಂದುವಿನ ಸುತ್ತಲೂ ಗಡಿಯಾರದ ಮಾದರಿಯಲ್ಲಿ ಸುತ್ತುವ ಒಂದು ಚಕ್ರವುಂಟು. ಚಕ್ರದ ಒಂದು ಕಡೆ ಸರಳು ಇದ್ದು ಅದರ ಒಂದು ತುದಿ ಬಟ್ಟಲಿನಂತಿದೆ. ಇದರಲ್ಲಿ ಕುಂಡದಲ್ಲಿ ಬೆಳೆಯುತ್ತಿರುವ ಸಸ್ಯವನ್ನು ಕುಂಡದ ಸಮೇತ ಅಳವಡಿಸಿ ಸಸ್ಯಭೂಮಿಗೆ ಸಮಾಂತರವಾಗಿರುವಂತೆ ಇಡುತ್ತಾರೆ. ಕ್ಲೈನೋಸ್ಟ್ಯಾಟಿನ ಚಕ್ರ ಗಂಟೆಗೆ 1–4 ಸುತ್ತು ತಿರುಗುತ್ತದೆ. ಚಕ್ರ ಸುತ್ತುತ್ತಿರುವಂತೆ ಸಸ್ಯವೂ ತನ್ನ ಅಕ್ಷದ ಮೇಲೆ ಸುತ್ತುತ್ತಲೇ ಇರುತ್ತದೆ. ಹೀಗೆ ಸುತ್ತುತ್ತಿರುವಾಗ ಬೆಳೆಯುತ್ತಿರುವ ಸಸ್ಯದ ಎಲ್ಲ ಭಾಗಗಳೂ ಗುರುತ್ವಾಕರ್ಷಣೆಗೆ ಸಮವಾಗಿ ಗುರಿಯಾಗುತ್ತವೆ. ಇದರಿಂದ ಗಿಡದಕಾಂಡ ಹಾಗೂ ಬೇರು ಭೂಮಿಗೆ ಸಮಾಂತರವಾಗಿಯೇ ಬೆಳೆಯುತ್ತದೆ. ಬೇರು ಭೂಮಿಯ ಕಡೆ ಬಾಗಿ ಬೆಳೆಯುವುದಿಲ್ಲ. ಕ್ಲೈನೋಸ್ಟ್ಯಾಟಿನ ಚಲನೆಯನ್ನು ನಿಲ್ಲಿಸಬಹುದು. ಹೀಗೆ ನಿಲ್ಲಿಸಿದಾಗ ಸಸ್ಯದ ಕಾಂಡವೂ ಬೇರೂ ಗುರುತ್ವಾಕರ್ಷಣೆಯ ಪ್ರಭಾವಕ್ಕೆ ಮತ್ತೆ ಒಳಗಾಗಿ ತಮಗೆ ವಿಶಿಷ್ಟವಾದ ಬಾಗು ಚಲನೆಯನ್ನು ಪ್ರದರ್ಶಿಸುತ್ತದೆ. (ಬಿ.ಪಿ.)

**ಕ್ಲೈವ್, ರಾಬರ್ಟ್ :** 1725–74. ಬ್ರಿಟಿಷ್ ಸೈನಿಕ, ರಾಜಕಾರಣಿ, ಭಾರತದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಸ್ಥಾಪನೆಗೆ ಕಾರಣರಾದವರಲ್ಲೊಬ್ಬ. ತಂದೆ ದೀರ್ಘಕಾಲ ಪಾರ್ಲಿಮೆಂಟ್ ಸದಸ್ಯನಾಗಿದ್ದ. ಬಾಲ್ಯದಲ್ಲಿ ಅಪ್ರಯೋಜಕನೂ ತುಂಟನೂ ಆಗಿದ್ದ ರಾಬರ್ಟ್ ಹೆಚ್ಚು ಕಲಿಯಲಿಲ್ಲ. ಬೇಸರಗೊಂಡ ತಂದೆ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ಗುಮಾಸ್ತಗಿರಿಯನ್ನು ದೊರಕಿಸಿಕೊಟ್ಟು ರಾಬರ್ಟನ 18ನೆಯ ವಯಸ್ಸಿನಲ್ಲಿ (1743) ಅವನನ್ನು ಭಾರತಕ್ಕೆ ಕಳಿಸಿದ. ಮದ್ರಾಸಿನಲ್ಲಿ ಗುಮಾಸ್ತನಾಗಿದ್ದ ರಾಬರ್ಟ್ ಜಗಳಗಂಟನಾಗಿದ್ದು ಒಂಟಿತನದ ಜೀವನ ನಡೆಸುತ್ತಿದ್ದ. ಬಾಳಿನಲ್ಲಿ ಬೇಸರಹೊಂದಿ ಎರಡು ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿ ಬದುಕಿಕೊಂಡಾಗ ತನ್ನಿಂದ ಯಾವುದೋ ಮಹತ್ಕಾರ್ಯ ನಡೆಯಬೇಕಾಗಿರುವುದರಿಂದ ದೇವರು ತನ್ನನ್ನು ಉಳಿಸಿದುದಾಗಿ ಬಗೆದು ಸ್ವಂತ ವಿದ್ಯಾಭ್ಯಾಸದ ಕಡೆಗೆ ಅವನು ಗಮನ ನೀಡತೊಡಗಿದ. ದಕ್ಷಿಣ ಭಾರತದಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ಹೋರಾಟಗಳು ನಡೆಯುತ್ತಿದ್ದಾಗ ಅವನಿಗೆ ಸೈನಿಕ ವೃತ್ತಿಗೆ ನುಸುಳಿಕೊಳ್ಳುವ ಅವಕಾಶ ದೊರಕಿತು. 1746ರಲ್ಲಿ ಫ್ರೆಂಚರಿಗೆ ಸೆರೆ ಸಿಕ್ಕಿದರೂ ಅವರಿಂದ ತಪ್ಪಿಸಿಕೊಂಡು ಪುನಃ ಇಂಗ್ಲಿಷ್ ಪಡೆಗಳನ್ನು ಸೇರಿದ. ಕರ್ನಾಟಕದ ಸುಲ್ತಾನ್ ಪದವಿಗಾಗಿ ನಡೆಯುತ್ತಿದ್ದ ಹೋರಾಟಗಳಲ್ಲಿ (ನೋಡಿ–ಕರ್ನಾಟಕ ಯುದ್ಧಗಳು) ಫ್ರೆಂಚರ ಬೆಂಬಲ ಪಡೆದ ಚಂದಾಸಾಹೇಬ ಬ್ರಿಟಿಷರ ಬೆಂಬಲಿಗ ಮಹಮ್ಮದಾಲಿಯ ವಿರುದ್ಧ 1751ರಲ್ಲಿ ತಿರುಚಿರಾಪಳ್ಳಿಯ ಕೋಟೆಗೆ ಮುತ್ತಿಗೆ ಹಾಕಿದಾಗ ಚಂದಾಸಾಹೇಬನ ರಾಜಧಾನಿ ಆರ್ಕಾಟನ್ನು ರಾಬರ್ಟ್ ಕ್ಲೈವ್ ವಶಪಡಿಸಿಕೊಂಡು ಮಹಮ್ಮದಾಲಿಯ ತೊಂದರೆಗಳನ್ನು ಕೊನೆಗಾಣಿಸಿದ. ತರುವಾಯ ಗೆರಿಲಾ ಕದನಗಳಲ್ಲಿ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ಕರ್ನಾಟಕದಲ್ಲಿ ಫ್ರೆಂಚರು ಬ್ರಿಟಿಷರಿಗೆ ಮಣಿಯುವಂತೆ ಮಾಡಿದ. 1753ರಲ್ಲಿ ತನ್ನ ವಿಜಯಗಳಿಂದ ಸಾಕಷ್ಟು ಐಶ್ವರ್ಯಗಳಿಸಿಕೊಂಡು ಬ್ರಿಟನಿಗೆ ಹಿಂದಿರುಗಿದ. ಭಾರತದಲ್ಲಿದ್ದಾಗಲೇ ಮಾರ್ಗರೇಟ್ ಮ್ಯಾಸ್ಕಿಲೀನಳೊಡನೆ ಆತನ ವಿವಾಹವಾಗಿತ್ತು.



1755ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಅವನಿಗೆ ಸೋಲಾಯಿತು. ಫೋರ್ಟ್‌ಸೇಂಟ್ ಡೇವಿಡ್‌ನ ಮತ್ತು ಮದ್ರಾಸಿನ ಗವರ್ನರ್ ಆಗಿಯೂ ಬ್ರಿಟಿಷ್ ಸೈನ್ಯದಲ್ಲಿ ಕರ್ನಲ್ ಆಗಿಯೂ ನೇಮಕಗೊಂಡು ಆತ ಮರಳಿ ಭಾರತಕ್ಕೆ ಬಂದ. ದಕ್ಷಿಣ ಭಾರತದಿಂದ ಫ್ರೆಂಚರನ್ನು ಹೊಡೆದೋಡಿಸುವುದೇ ಆ ಹುದ್ದೆಯಲ್ಲಿ ಅವನ ಮುಖ್ಯಧ್ಯೇಯವಾಗಿತ್ತು.

ಜೂನ್ 1756ರಲ್ಲಿ ಕ್ಲೈವ್ ಮದ್ರಾಸಿಗೆ ಬಂದೊಡನೆ ಬಂಗಾಳದ ರಾಜಕೀಯದ ತೊಡಕಿನಲ್ಲಿ ಸಿಲುಕಿಕೊಳ್ಳಬೇಕಾಯಿತು. ಬಂಗಾಳದ ರಾಜಧಾನಿ ಕಲ್ಕತ್ತ ಪ್ರಮುಖ ವ್ಯಾಪಾರಕೇಂದ್ರವಾಗಿತ್ತು. ಅಲ್ಲಿ ಬ್ರಿಟಿಷರು ತಮ್ಮ ವ್ಯಾಪಾರ ಕೋಠಿಯ ಸುತ್ತ ಕೋಟೆ ಕಟ್ಟಿಸಲು ಪ್ರಯತ್ನಿಸಿದರು. ಬಂಗಾಳದ ನವಾಬ ಸಿರಾಜದ್ದೌಲ ಅದನ್ನು ನಿಷೇಧಿಸಿ, 1756ರಲ್ಲಿ ಅದನ್ನು ವಶಪಡಿಸಿಕೊಂಡ. ಅವನಿಂದ ಅದನ್ನು ಬಿಡಿಸಿಕೊಳ್ಳಲು ನೌಕಾಧಿಕಾರಿ ವ್ಯಾಟ್ಸನನ ನೇತೃತ್ವದಲ್ಲಿ ಕ್ಲೈವನೂ ಹೋದ.

1757ರಲ್ಲಿ ನಡೆಸಿದ ಪ್ಲಾಸಿ ಕದನದಲ್ಲಿ ಕಲ್ಕತ್ತವನ್ನು ವಶಪಡಿಸಿಕೊಂಡು ಸಿರಾಜುದ್ದೌಲನೊಡನೆ ಸಂಧಿ ಮಾಡಿಕೊಳ್ಳಲಾಯಿತು. ಕಲ್ಕತ್ತದ ಕೋಟೆಯನ್ನು ನಿರ್ಮಿಸಲು ಬ್ರಿಟಿಷರಿಗೆ ಅನುಮತಿ ದೊರಕಿತು. ಅನಂತರ ಚಂದ್ರನಗರದಲ್ಲಿದ್ದ ಫ್ರೆಂಚರ ವಸಾಹತನ್ನು ವಶಪಡಿಸಿಕೊಳ್ಳಲಾಯಿತು. ಕ್ಲೈವ್ ಭೇದನೀತಿಯನ್ನನುಸರಿಸಿ ಬಂಗಾಳದ ನವಾಬಗಿರಿಗೆ ಸಿರಾಜುದ್ದೌಲನ ಅಧಿಕಾರಿಗಳಲ್ಲೊಬ್ಬನಾದ ಮೀರ್‌ಜಾಫರನನ್ನು ನೇಮಿಸಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡ. ಈ ಕಾರ್ಯದಲ್ಲಿ ಸಹಕಾರ ನೀಡಲಿಲ್ಲವೆಂದು ಕಲ್ಕತ್ತದ ಶ್ರೀಮಂತರಲ್ಲೊಬ್ಬನಾದ ಅಮೀನ್ ಚಂದನಿಗೆ ಅಪಾರ ಧನದಾಶೆ ತೋರಿ ಬಾಯಿ ಮುಚ್ಚಿಸಲಾಯಿತು. ಅನಂತರ ಅಮೀನ್‌ಚಂದನಿಗೆ ಮೋಸ ಮಾಡಿದುದರಿಂದ ಅವನು ಹುಚ್ಚನಾಗಿ ಮೃತನಾದ.

ಈ ರೀತಿ ಬಂಗಾಳದಲ್ಲಿ ಬ್ರಿಟಿಷರ ಪ್ರಾಬಲ್ಯ ಹೆಚ್ಚಿಸಿದ ಕ್ಲೈವ್ 1760ರ ತನಕ ಬಂಗಾಳದಲ್ಲೇ ಗವರ್ನರ್ ಅಧಿಕಾರದಲ್ಲಿದ್ದ. ಬಂಗಾಳವನ್ನು ವಶಪಡಿಸಿಕೊಳ್ಳಲು ಬಂದ ಮೊಗಲ್ ಸೈನ್ಯ 1759ರಲ್ಲಿ ಸೋತುಹೋಯಿತು. ಚಿನ್‌ಸುರಾದಲ್ಲಿದ್ದ ಡಚ್ಚರ ವಸಾಹತನ್ನು ಕ್ಲೈವ್ ಉಪಾಯದಿಂದ ನಾಶಗೊಳಿಸಿದ. 1760ರಲ್ಲಿ ಕ್ಲೈವ್ ಇಂಗ್ಲೆಂಡಿಗೆ ವಾಪಸಾಗುವ ವೇಳೆಗೆ ಮೀರ್‌ಜಾಫರನ ಅಧಿಕಾರದಲ್ಲಿ ಬಂಗಾಳದಲ್ಲಿ ಬ್ರಿಟಿಷ್ ಪ್ರಭಾವ ನಿರುಪಾಧಿಕವಾಗಿತ್ತು. ಮೀರ್‌ಜಾಫರ್ ಪೂರ್ಣವಾಗಿ ಬ್ರಿಟಿಷರ ವಶವರ್ತಿಯಾಗಿದ್ದ.

ತನ್ನ ಈ ಅಧಿಕಾರಾವಧಿಯಲ್ಲಿ ಕ್ಲೈವ್ ಅನುಸರಿಸಿದ ನೀತಿಯಿಂದ ಬಂಗಾಳಕ್ಕೂ ಈಸ್ಟ್ ಇಂಡಿಯಾ ಕಂಪನಿಗೂ ಅನೇಕ ಕಷ್ಟಗಳೊದಗಿದುವು. ತನಗೂ ಕಂಪನಿಯ ಇತರ ಸ್ಥಳೀಯ ಅಧಿಕಾರಿಗಳಿಗೂ ನವಾಬನ ಬೊಕ್ಕಸದಿಂದ ಹೆಚ್ಚಿನ ಹಣ ದೊರೆಯುವಂತೆ ಮಾಡಿಕೊಂಡಿದ್ದಲ್ಲದೆ, ಕಂಪನಿಯ ಮತ್ತು ಅದರ ನೌಕರರ ವ್ಯಾಪಾರ ಸರಕುಗಳ ಮೇಲೆ ಸುಂಕಗಳನ್ನು ವಿಧಿಸದಂತೆ ಏರ್ಪಾಡು ಮಾಡಿಕೊಂಡದ್ದರಿಂದ ನವಾಬನ ಬೊಕ್ಕಸ ಬರಿದಾಗಿ ತೊಂದರೆ ಉದ್ಭವಿಸಿತು. ಕಂಪನಿಯ ನೌಕರರಲ್ಲಿ ಲಂಚಗುಳಿತನ ಹೆಚ್ಚಿತು. ಇಷ್ಟಾದರೂ ಕ್ಲೈವನ ಅಧಿಕಾರ ಮಹತ್ತ್ವಪೂರಿತವಾದುದಾಗಿತ್ತು.

ಕ್ಲೈವ್ 1760ರ ಫೆಬ್ರವರಿಯಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದಾಗ ಅವನಿಗೆ ಬ್ಯಾರನ್ ಪದವಿಯನ್ನೂ (1762)'ಸರ್' ಎಂಬ ಬಿರುದನ್ನೂ (1764) ಕೊಡಲಾಯಿತು. ಪ್ರಧಾನ ಮಂತ್ರಿ ವಿಲಿಯಂ ಪಿಟ್ ಅವನನ್ನು 'ಸ್ವರ್ಗದಿಂದಿಳಿದು ಬಂದ ದಳಪತಿ'ಯೆಂದು ಹೊಗಳಿದ. ಕ್ಲೈವ್ ಇಂಗ್ಲೆಂಡಿನಲ್ಲಿ ಜಮೀನನ್ನು ಕೊಂಡು ಅಲ್ಲೇ ನೆಲಸಿದ; ಪಾರ್ಲಿಮೆಂಟಿಗೆ ಚುನಾಯಿತನಾದ. ಇಂಗ್ಲೆಂಡಿನ ರಾಜಕೀಯದಲ್ಲಿ ಪ್ರಾಬಲ್ಯಗಳಿಸುವುದು ಅವನ ಆಸೆಯಾಗಿತ್ತು ಆದರೆ ರಾಜಕೀಯದಲ್ಲೂ ಈಸ್ಟ್ ಇಂಡಿಯ ಕಂಪನಿಯ ಆಡಳಿತವರ್ಗದಲ್ಲೂ ಇದ್ದ ಅಸೂಯಾಪರರೂ ದ್ವೇಷಿಗಳೂ ಅವನ ಪ್ರಗತಿಗೆ ಅಡ್ಡಿಯನ್ನುಂಟುಮಾಡಿದರು.

1764ರ ವೇಳೆಗೆ ಭಾರತದಲ್ಲಿ ಕಂಪನಿಯ ವ್ಯವಹಾರ ಹದಗೆಟ್ಟಿತ್ತು. ಮೀರ್‌ಜಾಫರ್‌ನನ್ನು ಅಧಿಕಾರದಿಂದ ತಳ್ಳಿ ಆ ಪದವಿಗೆ ಮೀರ್‌ಖಾಸಿಮನನ್ನು ತರಲಾಗಿತ್ತು.

ಮೊಗಲ್ ಚಕ್ರವರ್ತಿಯ ಷಾ ಆಲಮನಿಂದ ಕ್ಲೈವನಿಗೆ ಬಂಗಾಳದ ಪರಮಾಧಿಕಾರದ ಕೊಡುಗೆ

1763ರಲ್ಲಿ ಅವನನ್ನು ನವಾಬಪದವಿಯಿಂದ ಕಿತ್ತು ಹಾಕಲಾಯಿತು. ಮೊಗಲ್ ಚಕ್ರವರ್ತಿ ಷಾ ಆಲಂ ಬಂಗಾಳದ ಮೇಲೆ ದಾಳಿ ಮಾಡಿದ್ದರಿಂದ ಕಂಪನಿಗೆ ದುರ್ದೆಶೆಯುಂಟಾಗಿತ್ತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪುನಃ ಕ್ಲೈವನನ್ನು ಬಂಗಾಳದ ಗವರ್ನರಾಗಿಯೂ ಉಚ್ಚ ಸೈನಾಧಿಕಾರಿಯಾಗಿಯೂ ನೇಮಿಸಿ ಸಲಹಾಸಮಿತಿಯ ಸೂಚನೆಗಳನ್ನು ಅತಿಕ್ರಮಿಸುವ ಅಧಿಕಾರವನ್ನೂ ನೀಡಿ 1765ರಲ್ಲಿ ಕಲ್ಕತ್ತೆಗೆ ಕಳಿಸಲಾಯಿತು. ಆ ವೇಳೆಗೆ ಬಕ್ಸಾರ್ ಕದನ ಮುಗಿದಿದ್ದು ಅಯೋಧ್ಯೆಯ ನವಾಬ ಷೂಜಾ ಉದ್ದೌಲ ಓಡಿಹೋಗಿದ್ದ. ಮೊಗಲ್ ಚಕ್ರವರ್ತಿ ಬ್ರಿಟಿಷರ ಅನುವರ್ತಿಯಾಗಿದ್ದ. ಆದರೂ ಬಂಗಾಳದಲ್ಲಿ ಹೆಚ್ಚಿನ ಅರಾಜಕತೆ ತುಂಬಿತ್ತು.

ಈ ಪರಿಸ್ಥಿತಿಯಲ್ಲಿ ಕ್ಲೈವ್ ಕೈಕೊಂಡ ಧೋರಣೆಗಳಿಂದ ಅವನ ರಾಜಕಾರ್ಯಪಟುತ್ವ ಬೆಳಕಿಗೆ ಬಂತು. ಕಂಪನಿಯ ಅಧಿಕಾರವನ್ನು ಬಂಗಾಳ ಬಿಹಾರಗಳಿಗೆ ಸೀಮಿತಗೊಳಿಸಿಕೊಂಡು, ಅಯೋಧ್ಯೆಯನ್ನು ಷೂಜಾ ಉದ್ದೌಲನಿಗೆ ಹಿಂದಿರುಗಿಸಲಾಯಿತು. ಮೊಗಲ್ ಚಕ್ರವರ್ತಿ ಷಾ ಆಲಮನಿಂದ ಅಲಹಾಬಾದ್ ಮತ್ತು ಕೋರಾ ಪ್ರದೇಶಗಳನ್ನೂ ವಾರ್ಷಿಕ ಕಪ್ಪವನ್ನೂ ಬಂಗಾಳದ ದಿವಾನ್ ಪದವಿಯನ್ನೂ ಕಂಪನಿಗೆ ದೊರಕಿಸಿಕೊಂಡು ಪ್ರತಿಯಾಗಿ ಅವನಿಗೆ ಬ್ರಿಟಿಷರ ನೆರವಿನ ಭರವಸೆ ನೀಡಲಾಯಿತು. ಅನಂತರ ಬಂಗಾಳದ ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸುವುದರ ಕಡೆಗೆ ಕ್ಲೈವ್ ಗಮನ ನೀಡಿದ. ಬಂಗಾಳದಲ್ಲಿ ದ್ವಿಸರ್ಕಾರ ಪದ್ಧತಿಯನ್ನು ಜಾರಿಗೆ ತಂದು ಆಡಳಿತವನ್ನು ಕಂಪನಿಯ ವಶಕ್ಕೆ ಒಳಪಡಿಸಿದ. ಕಂಪನಿಯ ನೌಕರರಲ್ಲಿದ್ದ ಅವಿಧೇಯತೆಯನ್ನು ಮಟ್ಟ ಹಾಕಿ, ಸಲಹಾಸಮಿತಿಯನ್ನು ವಿಸರ್ಜಿಸಿದ. ನೌಕರರು ರೂ.1,000 ಗಳಿಗಿಂತ ಹೆಚ್ಚಿನ ಮೌಲ್ಯದ ವಸ್ತುಗಳನ್ನು ಯಾರಿಂದಲೂ ತನ್ನ ಅನುಮತಿಯಿಲ್ಲದೆ ಸ್ವೀಕರಿಸಬಾರದೆಂಬ ನಿಯಮವನ್ನು ಜಾರಿಗೆ ತಂದ. ನೌಕರರು ನಡೆಸುತ್ತಿದ್ದ ಸ್ವಂತ ವ್ಯಾಪಾರವನ್ನು ನಿಷೇಧಿಸಲಾಯಿತು. ಆದರೆ ಅವರಿಗೆ ಅಲ್ಪ ಸಂಬಳ ಬರುತ್ತಿದ್ದುದರಿಂದ ಅವರ ಜೀವನ ನಡೆಯುವುದೇ ಕಷ್ಟವಾಗಿದ್ದುದರಿಂದ ಅವರಿಗೆ ಉಪ್ಪಿನ ವ್ಯಾಪಾರದ ಏಕಸ್ವಾಮ್ಯವನ್ನು ಒಂದು ವ್ಯಾಪಾರ ಸಂಸ್ಥೆಯ ಮೂಲಕ ವಹಿಸಿಕೊಟ್ಟ. ಸೈನಿಕರ ಅಶಿಸ್ತನ್ನು ಮಟ್ಟ ಹಾಕಿದ್ದರಿಂದ ಕ್ಲೈವನಿಗೆ ಅವರಿಂದ ತೊಂದರೆಯಾದರೂ ಕ್ಲೈವ್ ದೃಢಸಂಕಲ್ಪದಿಂದ ಅವರನ್ನು ಎದುರಿಸಿದ. ಹೀಗೆ ಭಾರತದಲ್ಲಿ ತನ್ನ ಅಧಿಕಾರಾವಧಿಯಲ್ಲಿ ಹಲವಾರು ಸುಧಾರಣೆಗಳನ್ನು ರೂಢಿಸಿ ಬ್ರಿಟಿಷ್ ಅಧಿಕಾರ ಇಲ್ಲಿ ನೆಲಸಲು ಕಾರಣನಾದ.

1767ರ ಫೆಬ್ರವರಿಯಲ್ಲಿ ಕ್ಲೈವ್ ಇಂಗ್ಲೆಂಡಿಗೆ ಹಿಂದಿರುಗಿದ. ಅವನ ವಿರೋಧಿಗಳು ಪುನಃ ಪ್ರಬಲರಾದರು. ಲಾರ್ಡ್ ಚ್ಯಾಟಾಮ್‌ನ ನಾಯಕತ್ವದಲ್ಲಿ ಕಂಪನಿಯ ನಿರ್ದೇಶಕ ಮಂಡಳಿಯ ಕೆಲವರು ಭಾರತದಲ್ಲಿ ಕ್ಲೈವ್ ಆಡಳಿತದ ಬಗ್ಗೆ ಅಪಾದನೆಗಳನ್ನು ಮಾಡಿದರು. 1772ರಲ್ಲಿ ಪಾರ್ಲಿಮೆಂಟಿನಲ್ಲಿ ಅವನ ವಿರುದ್ಧ ಅಪಾದನೆಗಳನ್ನು ಚರ್ಚಿಸಲಾಯಿತು. ತನಗಿದ್ದ ಸಂದರ್ಭಗಳನ್ನು ಪೂರ್ಣವಾಗಿ ಸ್ವಾರ್ಥಕ್ಕೆ ಉಪಯೋಗಿಸಿಕೊಂಡಿದ್ದಲ್ಲಿ ಅಪಾರ ಐಶ್ವರ್ಯವನ್ನು ಸಂಗ್ರಹಿಸಬಹುದಾಗಿದ್ದರೂ ತಾನು ಆ ರೀತಿ ಮಾಡಲಿಲ್ಲವೆಂದು ಕ್ಲೈವ್ ವಾದಿಸಿದ. ಕೊನೆಗೆ ಕ್ಲೈವನನ್ನು ಆ ಆಪಾದನೆಗಳಿಂದ ವಿಮೋಚನೆಗೊಳಿಸಿದರೂ, ಆತ ನಿರಾಶನಾಗಿ 1774ರ ನವೆಂಬರ್ 22ರಂದು ಆತ್ಮಹತ್ಯೆ ಮಾಡಿಕೊಂಡ. ತ್ವರಿತಗತಿಯಲ್ಲಿ ಉಚ್ಚಸ್ಥಾನಕ್ಕೇರಿದ ಕ್ಲೈವ್ ಆರಂಭದಶೆಯಲ್ಲಿ ಆ ಕಾಲಕ್ಕೆ ಸಾಮಾನ್ಯವೆನಿಸಿದ ತಪ್ಪುಗಳನ್ನು ಮಾಡಿದ್ದುಂಟು. ಅವನ ವಿರೋಧಿಗಳು ಅವನ್ನು ಎತ್ತಿಹಿಡಿದು ಅವನ ಮನಶ್ಶಾಂತಿ ಮತ್ತು ಗೌರವಗಳಿಗೆ ಕೊಡಲಿ ಪೆಟ್ಟು ಹಾಕಿದರು. ಆದರೂ ಭಾರತದಲ್ಲಿ ಬ್ರಿಟಿಷ್ ಆಡಳಿತದ ಅಡಿಪಾಯ ನಿರ್ಮಿಸಿದ ಪ್ರಧಾನ ವ್ಯಕ್ತಿಗಳಲ್ಲಿ ಕ್ಲೈವ್ ಒಬ್ಬನೆಂಬುದು ನಿರ್ವಿವಾದ. (ಬಿ.ಎಂ.)

**ಕ್ಲೈವಿಯ :** ಹಳದಿ ಇಲ್ಲವೆ ಹೊಳೆಯುವ ಕೆಂಪು ಬಣ್ಣದ ಹೂ ಬಿಡುವ ಮತ್ತು ಸದಾ ಹಸುರಾಗಿರುವ ಎಲೆಗಳುಳ್ಳ ಲಶುನ ಸಸ್ಯ. ಇಮ್ಯಾಂಟೊ ಫಿಲಮ್ ಪರ್ಯಾಯ

ಕ್ಲೈವಿಯ ಮಿನಿಯೇಟ ಪ್ರಭೇದ

ನಾಮ. ಅಮರಿಲ್ಲಿಡೇಸೀ ಕುಟುಂಬಕ್ಕೆ ಸೇರಿದೆ. ದಕ್ಷಿಣ ಆಫ್ರಿಕದ ಮೂಲವಾಸಿಯಾದ ಇದು ಬೆಟ್ಟಗುಡ್ಡ ಮುಂತಾದ ಉನ್ನತ ಪ್ರದೇಶಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ಚೆಲುವಿಗೆ

ಹೆಸರಾಗಿರುವ ಇದನ್ನು ಅಂಚುಸಸ್ಯ ಇಲ್ಲವೆ ಕುಂಡ ಸಸ್ಯವಾಗಿ ಬೆಳೆಸುವುದು ವಾಡಿಕೆ. ಕ್ಲೈವಿಯ ಮೂರು ಪ್ರಭೇದಗಳನ್ನೊಳಗೊಂಡಿದೆ. ಎಲ್ಲವೂ ಬಹುವಾರ್ಷಿಕ ಮೂಲಿಕೆ ಸಸ್ಯಗಳು. ಸದಾ ಹಸಿರಾಗಿರುವ ಎಲೆಗಳು, ದಪ್ಪನೆಯ ಹಾಗೂ ರಸಭರಿತವಾದ ಬೇರುಗಳು ಛತ್ರಮಂಜರಿಗಳಲ್ಲಿ ಸಮಾವೇಶಗೊಂಡಿರುವ ಬೆಡಗಿನ ಬಣ್ಣದ ಹೂಗಳು ಈ ಗಿಡದ ಮುಖ್ಯ ಲಕ್ಷಣಗಳು. ಹೂಗಳು ಆಲಿಕೆಯಾಕಾರದವು. ಪ್ರತಿ ಹೂವಿನಲ್ಲಿ 6 ಪೆರಿಯಾಂತ್ ಹಾಲೆಗಳು, 6 ಕೇಸರಗಳು, ಮೂರು ಕಾರ್ಪೆಲುಗಳ ನೀಚ ಸ್ಥಾನದ ಅಂಡಾಶಯ ಇವೆ.ಫಲ ಬೆರಿಮಾದರಿಯದು.

ಕ್ಲೈವಿಯದ 3 ಪ್ರಭೇದಗಳಲ್ಲಿ ಹೆಚ್ಚು ಸುಂದರವಾದುದು ಮತ್ತು ಜನಪ್ರಿಯವಾದುದು ಮಿನಿಯೇಟ ಪ್ರಭೇದ. ಹೂಗಳ ಗಾತ್ರದಲ್ಲಿ ಮತ್ತು ಬಣ್ಣದ ಗಾಢತೆಯಲ್ಲಿ ವೈವಿಧ್ಯವನ್ನು ಪ್ರದರ್ಶಿಸುವ ಹಲವಾರು ಬಗೆಗಳು ಈ ಪ್ರಭೇದದಲ್ಲಿವೆ. 2' ಉದ್ದದ ಹಾಗೂ ಕತ್ತಿಯಾಕಾರದ 16–20 ಎಲೆಗಳು, ಪ್ರತಿ ಹೂಗೊಂಚಲಿನಲ್ಲಿ 16–20 ಕಡುಗೆಂಪು ಬಣ್ಣದ ಹೂಗಳು; ಮತ್ತು ಕೆಂಪು ಬಣ್ಣದ ಬೆರಿ ಫಲಗಳು ಈ ಪ್ರಭೇದದ ವಿಶೇಷ ಲಕ್ಷಣಗಳು.

ಕ್ಲೈವಿಯ ಜಾತಿಯ ಸಸ್ಯಗಳನ್ನು ಬೀಜ ಮತ್ತು ಚಿಕ್ಕ ಲಶುನಗಳಿಂದ ವೃದ್ಧಿಮಾಡಬಹುದು. ಬೀಜಗಳನ್ನು ಬಿತ್ತಿ, ಸಸಿಗಳನ್ನು ಪಡೆದು ಬೇಕಾದ ಸ್ಥಳಗಳಲ್ಲಿ ನಾಟಿ ಮಾಡುವುದು ಉತ್ತಮ. ಲಶುನಗಳನ್ನು ನಾಟಿ ಮಾಡಲು ನವೆಂಬರ್–ಡಿಸೆಂಬರ್ ತಿಂಗಳು (ಗುಡ್ಡಗಾಡು ಪ್ರದೇಶಗಳಲ್ಲಿ ಫೆಬ್ರವರಿ–ಮಾರ್ಚ್ ತಿಂಗಳು) ಯೋಗ್ಯವಾದ ಕಾಲ. ಕ್ಲೈವಿಯ ಸಸ್ಯಗಳ ಬೇಸಾಯ ಯಶಸ್ವಿಯಾಗಬೇಕಾದರೆ ಭೂಮಿ ಫಲವತ್ತಾಗಿರಬೇಕು. ಎರಡು ವಾರಗಳಿಗೆ ಒಂದು ಸಾರಿ ದ್ರಾವಣ ಗೊಬ್ಬರ ಹಾಕುವುದರಿಂದ ಗಿಡಗಳು ಶೀಘ್ರವಾಗಿ ಬೆಳೆದು ದೊಡ್ಡ ಗಾತ್ರದ ಹೂಗಳನ್ನು ಕೊಡುವಂತಾಗುತ್ತವೆ. ಗಿಡಗಳು ಬಹುವಾರ್ಷಿಕವಾದ್ದರಿಂದ ವರ್ಷಂಪ್ರತಿ ಒಂದೇ ಕುಂಡದಲ್ಲಿ ಬೆಳೆಸಬಹುದು. ಆದರೆ ವರ್ಷಕ್ಕೊಮ್ಮೆ ಕುಂಡದ ಮೇಲ್ಭಾಗದ ಮಣ್ಣನ್ನು ತೆಗೆದುಹಾಕಿ ಹೊಸ ಮಣ್ಣನ್ನು ತುಂಬಬೇಕು.

(ಡಿ.ಎಂ.)

**ಕ್ಲೈಸ್ತೆನೀಸ್ :** ಪ್ರಾಚೀನ ಗ್ರೀಸಿನ ಇಬ್ಬರು ರಾಜಕಾರಣಿಗಳು ಈ ಹೆಸರಿನವರು. ಒಬ್ಬ ಸಿಕಿಯಾನ್ ಪಟ್ಟಣದವ, ಇನ್ನೊಬ್ಬ ಅಥೆನ್ಸ್ ನಗರದವ.

**ಕ್ಲೈಸ್ತೆನೀಸ್, ಸಿಕಿಯಾನಿ :** ಸಿಕಿಯಾನಿ ಕ್ಲೈಸ್ತೆನೀಸ್ (ಪ್ರ.ಶ. ಪೂ. 600–570) ಡೋರಿಯನರ ವಿರೋಧ ಪಂಗಡಕ್ಕೆ ಸೇರಿದ ಮತ್ತು ಅಯೋನಿಯನರ ಸಹಾಯದಿಂದ ಅಧಿಕಾರ ಸ್ಥಾಪಿಸಿದ್ದ ಆರ್ಥಗೊರಾಸ್ ವಂಶಸ್ಥ. ಡೋರಿಯನರ ಸೊಕ್ಕನ್ನು ಮುರಿಯುವುದು ಇವನ ಧ್ಯೇಯ. ಇವನು ಆರ್ಗಾಸ್ ಪಟ್ಟಣಕ್ಕೆ ಮುತ್ತಿಗೆ ಹಾಕಿ, ಡೋರಿಯನ್ ವೀರರ ಬಗ್ಗೆ ಆದರ ಹೊಂದಿದ್ದ ಜನರನ್ನೆಲ್ಲ ನಾಶಮಾಡಿದ. ಪ್ರ.ಶ.ಪೂ. 590ರಲ್ಲಿ ನಡೆದ ಧಾರ್ಮಿಕ ಯುದ್ಧದಲ್ಲಿ ಇವನು ಡೆಲ್ಫಿಯ ಪರವಾಗಿ ನಿಂತು ಕ್ರಿಸ್ತ ನಗರವನ್ನು ಮುತ್ತಿ ಅದನ್ನು ನಾಶಗೊಳಿಸಿದ. ಡೆಲ್ಫಿಯವನ್ನು ಕೇಂದ್ರವನ್ನಾಗಿಟ್ಟುಕೊಂಡು ಇವನು ಪೈಥಿಯನ್ ಕ್ರೀಡೆಗಳಿಗೆ ಪ್ರೋತ್ಸಾಹ ಕೊಟ್ಟು ಪ್ರ.ಶ.ಪೂ. 528ರಲ್ಲಿ ನಡೆದ ರಥಗಳ ಪಂದ್ಯದಲ್ಲಿ ಮೊದಲನೆಯ ಸ್ಥಾನ ಗಳಿಸಿದ. ಇವನ ಕಾಲದಲ್ಲಿ ಸಿಕಿಯಾನ್ ಮತ್ತು ಡೆಲ್ಫಿ ನಗರಗಳು ಸಂಪದ್ಭರಿತವಾಗಿದ್ದವು.

**ಕ್ಲೈಸ್ತೆನೀಸ್ ಅಥೆನ್ಸಿನ:** ಅಥೆನ್ಸಿನ ಪ್ರಖ್ಯಾತ ರಾಜಕಾರಣಿ. ಪ್ರ.ಶ.ಪೂ. 6ನೆಯ ಶತಮಾನದ ಅಂತ್ಯಭಾಗದಲ್ಲಿದ್ದ. ಮೆಗಕ್ಲಿಸ್ ಮತ್ತು ಆಗರಿಸ್ಟೆಯರ ಮಗ. ಸ್ಪಾರ್ಟದ ದೊರೆ 1ನೆಯ ಕ್ಲಿಯಾಮೆನೀಸನ ಸಹಾಯದಿಂದ ಇವನು ಪ್ರ.ಶ.ಪೂ. 510ರಲ್ಲಿ ಪಿಸಿಸ್ಟ್ರಟೈಡೆ ಜನಾಂಗವನ್ನು ಅಥೆನ್ಸಿನಿಂದ ಓಡಿಸಿ, ಅಥೆನ್ಸಿನ ಜನ ನಿರಂಕುಶ ಪ್ರಭುತ್ವವನ್ನು ಸಹಿಸುವುದಿಲ್ಲವೆಂದು ಘೋಷಿಸಿ ಶ್ರೀಮಂತರ ಆಗ್ರಹಕ್ಕೆ ತುತ್ತಾಗಿ ಜನಸಾಮಾನ್ಯರ ಪಕ್ಷ ಸೇರಿದ. ಇವನಿಗೂ ಇವನ ಎದುರಾಳಿಯಾದ ಐಸಾಗರಸನಿಗೂ ನಡುವೆ 508ರಲ್ಲಿ ವಿರಸ ತಲೆದೋರಿದಾಗ ಸಭೆಯ ಸದಸ್ಯರು ಕ್ಲೈಸ್ತೆನೀಸನ ಪ್ರಜಾಪ್ರಭುತ್ವಗಳನ್ನು ಒಪ್ಪಿಕೊಂಡರು. ಆದರೆ ಐಸಾಗರಸ್ ಸ್ಪಾರ್ಟದ ಸಹಾಯ ಪಡೆದು ಕ್ಲೈಸ್ತೆನೀಸ್ ಮತ್ತು ಅವನ ಅನುಯಾಯಿಗಳನ್ನು ದೇಶಭ್ರಷ್ಟರನ್ನಾಗಿಸಿದ. ಪ್ರಜಾಪಕ್ಷದವರು ದಂಗೆಯೆದ್ದು, ಕ್ಲಿಯಾಮೆನೀಸ್ ಮತ್ತು ಐಸಾಗರಸರ ಅಧಿಕಾರವನ್ನು ಕಸಿದುಕೊಂಡು, ಕ್ಲೈಸ್ತೆನೀಸನನ್ನು ಸ್ವದೇಶಕ್ಕೆ ಬರಮಾಡಿಕೊಂಡರು. ಪ್ರಜಾರಾಜ್ಯವನ್ನು ಅಥೆನ್ಸಿನಲ್ಲಿ ಸ್ಥಾಪನೆಗೊಳಿಸಲು ಸಾಧ್ಯವಾದ್ದಕ್ಕೆ ಕ್ಲೈಸ್ತೆನೀಸನೇ ಕಾರಣ. ದೇಶದ ಪಂಗಡಗಳನ್ನು ಬಹಳಮಟ್ಟಿಗೆ ಪುನರ್ರಚಿಸಿ ಪ್ರಾದೇಶಿಕತೆಯ ಮನೋಭಾವವನ್ನು ತೊಡೆದುಹಾಕಿ ರಾಷ್ಟ್ರೀಯತೆಯನ್ನು ಸ್ಥಾಪಿಸಲು ಇವನು ಕೈಗೊಂಡ ಕ್ರಮಗಳು ಶಾಶ್ವತ ಫಲ ನೀಡಿದವು. ಮತದಾನದ ಹಕ್ಕನ್ನು ಸುಧಾರಿಸಿ ಪ್ರಭುತ್ವದಲ್ಲಿ ಹೆಚ್ಚಿನ ಜನ ಭಾಗವಹಿಸುವಂತೆ ಮಾಡಿದ ಕೀರ್ತಿ ಸಹ ಇವನದು. ಸ್ವಾರ್ಥಿ ಮತ್ತು ಸರ್ವಾಧಿಕಾರಿ ನಾಯಕರನ್ನು ಅಧಿಕಾರದಿಂದ ತೆಗೆದುಹಾಕಲು ಇವನು ಆಸ್ಟ್ರಸಿಸಂ ಪದ್ಧತಿಯನ್ನು (ಬಲಿಷ್ಠನಾದ ದುರ್ಜನನ್ನು ಅಥವಾ ಜನವಿರೋಧಿಯಾದವನನ್ನು ಕೆಲವು ವರ್ಷಗಳ ಕಾಲ ಗಡೀಪಾರು ಮಾಡುವ ಪದ್ಧತಿ) ಜಾರಿಗೆ ತಂದ.

(ಬಿ.ಎಂ.)

**ಕ್ಲೋಜೆವಿಟ್ಸ್, ಕಾರ್ಲ್‌ಫಾನ್ :** 1780–1831. ಪ್ರಷ್ಯದೇಶದ ಜನರಲ್, ಜಗದ್ವಿಖ್ಯಾತ ಸೇನಾಚರಿತ್ರಕಾರ ಮತ್ತು ಆಧುನಿಕ ಭೂಯುದ್ಧ ತತ್ತ್ವದಲ್ಲಿ ಅಗ್ರೇಸರ. 12ನೆಯ ವಯಸ್ಸಿನಲ್ಲಿ ಸೇನೆಗೆ ಸೇರಿ ಒಂದೇ ವರ್ಷದಲ್ಲಿ ಕಮಿಷನ್ ಪಡೆದ. ಸ್ವಯಂಶಿಕ್ಷಣದಿಂದ ವಿದ್ವಾಂಸನಾಗಿ 21ನೆಯ ವಯಸ್ಸಿನಲ್ಲಿ ಬರ್ಲಿನಿನ ಯುದ್ಧ ಅಕಾಡೆಮಿಯಲ್ಲಿ ಸೈನಿಕ ವಿಜ್ಞಾನದಲ್ಲಿ ಪ್ರವೀಣನಾದ. ತತ್ತ್ವಶಾಸ್ತ್ರ, ಸಾಹಿತ್ಯಗಳನ್ನೂ ಅಧ್ಯಯನ ಮಾಡಿದ. ಸ್ವಯಂಕಲ್ಪಿತ ಮೂಲಭೂತ ಸೈನಿಕಯುಕ್ತಿ, ವ್ಯೂಹನಿರ್ಮಾಣ ತಂತ್ರಗಳ ಭಾವನೆಯನ್ನು ಪ್ರವರ್ಧಿಸಿದ. ಗೆನಾ ಯುದ್ಧದಲ್ಲಿ ಸೆರೆ ಹಿಡಿಯಲ್ಪಟ್ಟು ಎರಡು ವರ್ಷಗಳ ಬಳಿಕ ಬಿಡುಗಡೆ ಪಡೆದ. ಪ್ರಷ್ಯದ ಸೇನೆಗಳನ್ನು ಸುಧಾರಿಸಿ ಬಹಳ ಪ್ರಗತಿಗೆ ತಂದ. ನೆಪೋಲಿಯನ್ ರಷ್ಯವನ್ನು ದಾಳಿಮಾಡಿದಾಗ ಕ್ಲೋಜೆವಿಟ್ಸ್ ಸ್ವದೇಶಾಭಿಮಾನದಿಂದ ತನ್ನ ಕಮಿಷನ್ನಿಗೆ ರಾಜೀನಾಮೆ ಕೊಟ್ಟು ಫ್ರೆಂಚರೊಡನೆ ಹೋರಾಡಲು ರಷ್ಯನ್ ಸೇನೆಯನ್ನು ಸೇರಿ ಧೈರ್ಯ, ಸಾಹಸಗಳಿಂದ ಯಶಸ್ವಿಯಾದ. ಪ್ರಷ್ಯಕ್ಕೆ ಹಿಂತಿರುಗಿ ವಾಟರ್‌ಲೂ ಯುದ್ಧದಲ್ಲಿ ಸೇನಾಧಿಕಾರಿಯಾಗಿ 1818ರಲ್ಲಿ ಜನರಲ್ ಪದವಿಗೇರಿದ. ಪ್ರಷ್ಯದ ಸೇನಾ ಅಕಾಡೆಮಿಯ ಡೈರೆಕ್ಟರಾಗಿ 12 ವರ್ಷಗಳ ಕಾಲ ಅಮೋಘ ಸೇನಾಚರಿತ್ರೆಗಳನ್ನು ಬರೆದ. ಫ್ರೆಡರಿಕ್ ಮಹಾಶಯ ಮತ್ತು ನೆಪೋಲಿಯನ್ನರ ಸಾಹಸಿಕ ದಿಗ್ವಿಜಯಗಳನ್ನು ನಿರೂಪಿಸಿದ. ಹಿಂದಿನ ಕಾಲಗಳ ಸೈನಿಕ ನಿಬಂಧನೆಗಳನ್ನು ಖಂಡಿಸಿ ಯುದ್ಧಕಲೆಯಲ್ಲಿ ನವೀನ ಮೂಲತತ್ತ್ವ ಸಿದ್ಧಾಂತಗಳನ್ನು ಸ್ಥಾಪಿಸಿ ಅನುಪಮ ಇತಿಹಾಸಕಾರನೆನಿಸಿಕೊಂಡ.

ಕ್ಲೋಜೆವಿಟ್ಸನ ಅಮೂಲ್ಯ ಗ್ರಂಥಗಳು ಮಹಾಪ್ರಭಾವಶಾಲಿಗಳು. ಅವು ಅವನ ಪ್ರಚಂಡ ಪ್ರತಿಭಾಶಕ್ತಿಯನ್ನು ಪ್ರದರ್ಶಿಸುತ್ತವೆ. ರಾಜಕೀಯ ಮತ್ತು ಸೈನಿಕ ನಾಯಕತ್ವಗಳ ಪರಸ್ಪರ ಸಂಬಂಧವನ್ನು ಮೊತ್ತಮೊದಲು ತೋರಿಸಿದ್ದು ಈ ಗ್ರಂಥಗಳು. ಅವನ ವಿಶ್ವವಿಖ್ಯಾತ ಆನ್ ವಾರ್ ಎಂಬ ಗ್ರಂಥ ಏಳೆಂಟು ಭಾಷೆಗಳಿಗೆ ಅನುವಾದವಾಗಿದೆ. ಅದರ ಬೋಧೆಗಳನ್ನು ನಾನಾ ದೇಶಗಳ ಪ್ರಮುಖ ಜನರಲ್ಲುಗಳು ನಾನಾ ಯುದ್ಧಗಳಲ್ಲಿ ಅನುಸರಿಸಿದರು. ಅದರಲ್ಲಿ ರೂಪಿಸಿರುವ ಅಪೂರ್ವ ಕಲ್ಪನಾಶಕ್ತಿ ಅದಕ್ಕೆ ಪ್ರಪಂಚದ ಇತಿಹಾಸ ಪ್ರಸಿದ್ಧ ಗ್ರಂಥಗಳ ಅಂತಸ್ತಿನಲ್ಲಿ ಸ್ಥಾನ ದೊರಕಿಸಿಕೊಟ್ಟಿದೆ.

(ಎಂ.ಜಿ.ಕೆ.ಎಂ.)

**ಕ್ಲೋರಮೀನ್– T :** ಸಲ್ಫೋನಮೈಡುಗಳಿಂದ ವ್ಯುತ್ಪನ್ನಿಸುವ ಕ್ಲೋರಮೀನುಗಳಲ್ಲಿ ಒಂದು. ಡೈಕ್ಲೋರಮೀನ್– T, ಕ್ಲೋರಮೀನ್–B ಮತ್ತು ಹ್ಯಾಲೋಜ಼ೋನ್ ಇವು ಇತರ ಕ್ಲೋರಮೀನುಗಳು. ಟಾಲ್ವೀನ್–p- ಸಲ್ಫೋನ್ ಸೋಡಿಯಂ ಕ್ಲೋರಮೈಡ್ ಎಂಬುದು ಇದರ ಸಂಪೂರ್ಣ ನಾಮ. ರಾಸಾಯನಿಕ ಸೂತ್ರ $CH_3C_6H_4.SO_2.NClNa3H_2O$. ಚಾಟವೇ ಎಂಬಾತ ಮೊದಲ ಬಾರಿಗೆ 1905ರಲ್ಲಿ ಇದನ್ನು ತಯಾರಿಸಿದ. ಇದು ಬಿಳಿಬಣ್ಣದ ಸ್ಫಟಿಕಾಕೃತಿಯ ವಸ್ತು. ಇದಕ್ಕೆ ಕ್ಲೋರಿನ್ ವಾಸನೆ ಸ್ವಲ್ಪ ಇದೆ. ಕಹಿ ರುಚಿಯುಳ್ಳದ್ದು. ಆಲ್ಕೊಹಾಲಿನಲ್ಲಿ ವಿಲೀನವಾಗುತ್ತದೆ. ನೀರಿನಲ್ಲಿ 1 ಗ್ರಾಂ/7ಮಿಲೀ. ಪ್ರಮಾಣದಲ್ಲಿ ವಿಲೀನವಾಗುತ್ತದೆ. ಸ್ಯಾಕರೀನನ್ನು ಉತ್ಪಾದಿಸುವಾಗ ಉಪಪದಾರ್ಥವಾಗಿ ಬರುವ p-ಟಾಲ್ವೀನ್ ಸಲ್ಫೋನಿಲ್ ಕ್ಲೋರೈಡಿನಿಂದ ಇದನ್ನು ತಯಾರಿಸಬಹುದು. ಅಲ್ಲದೆ ಟಾಲ್ವೀನಿನಿಂದ ನೇರವಾಗಿಯೂ ತಯಾರಿಸಬಹುದು. ಟಾಲ್ವೀನನ್ನು ಸಾರ ಸಲ್ಫ್ಯೂರಿಕ್ ಆಮ್ಲದೊಡನೆ 100° ಸೆಂ. ಉಷ್ಣತೆಯಲ್ಲಿ ವರ್ತಿಸಿದಾಗ ಸಲ್ಫಾನಿಕ್ ಆಮ್ಲವಾಗುತ್ತದೆ. ಇದನ್ನು ಸಲ್ಫೊನಿಲ್ ಕ್ಲೋರೈಡಾಗಿ ಪರಿವರ್ತಿಸಿ ಅಮೋನಿಯದೊಡನೆ ವರ್ತಿಸಿದಾಗ ಸಲ್ಫೋನಮೈಡ್ ಬರುತ್ತದೆ. ಸಲ್ಫೋನಮೈಡನ್ನು ಚಲುವೆಯ ಪುಡಿ ಅಥವಾ ಸೋಡಿಯಂ ಹೈಪೋಕ್ಲೋರೈಟಿನೊಂದಿಗೆ ಸಂಯೋಜಿಸಿದಾಗ ಡೈಕ್ಲೋರಮೀನ್ ಉತ್ಪತ್ತಿಯಾಗುತ್ತದೆ. ಇದು ಕಾಸ್ಟಿಕ್ ಸೋಡದ ಸಂಪರ್ಕದಲ್ಲಿ ಕ್ಲೋರಮೀನ್– T ಯನ್ನು ಕೊಡುತ್ತದೆ.

$p\text{-}CH_3C_6H_4SO_2NH_2$ + $NaOCl \longrightarrow$

p-ಟಾಲ್ವೀನ್ ಸಲ್ಫೊನಮೈಡ್ ಸೋಡಿಯಂ ಹೈಪೊಕ್ಲೋರೈಟ್

$\longrightarrow$ $p\ CH_3C_6H_9\ .SO_{2.}\ NClNa$

ಕ್ಲೋರಮೀನ್ -T

ಕ್ಲೋರಮೀನ್– T ಕ್ಲೋರಿನಿನ ಒಳ್ಳೆಯ ಆಕರ. ಇದರಿಂದ ಶೇ.25 ರಷ್ಟು ಕ್ಲೋರಿನ್ ದೊರೆಯುತ್ತದೆ. ಡಾಕಿನ್ ಎಂಬಾತ ಗಾಯಗಳನ್ನು ತೊಳೆಯಲು ಅಸ್ಥಿರವಾದ ಹೈಪೋಕ್ಲೋರೈಟಿನ ಬದಲು ಕ್ಲೋರಮೀನ್– T ಯನ್ನು ಉಪಯೋಗಿಸಬಹುದೆಂದು 1916ರಲ್ಲಿ ತೋರಿಸಿಕೊಟ್ಟ. ಅಲ್ಲಿಂದೀಚೆಗೆ ಇದನ್ನು ಗಾಯಗಳ ಪೂತಿನಾಶಕ ಮತ್ತು ಕ್ರಿಮಿನಾಶಕವಾಗಿ ಆಕ್ಟಿವಿನ್ ಎಂಬ ಹೆಸರಿನಲ್ಲಿ ಉಪಯೋಗಿಸುತ್ತಿದ್ದಾರೆ. ನೀರಿನಲ್ಲಿ ತಯಾರಿಸಿದ ಇದರ ದ್ರಾವಣಗಳು ಸಾಕಷ್ಟು ಸ್ಥಿರವಾಗಿರುತ್ತವೆ. ಇದು ರಕ್ತದಲ್ಲಿ ಸೇರಿದರೆ ವಿಷವಾಗಿ ಪರಿಣಮಿಸುತ್ತದೆ. ಆದರೆ ಬಾಯಿ ಮುಕ್ಕಳಿಸಲು ಉಪಯೋಗಿಸುವ ಸಾರರಿಕ್ತ ದ್ರಾವಣದ ಪ್ರಮಾಣದಲ್ಲಿರುವಾಗ (ಶೇ.0.2) ಅಕಸ್ಮಾತ್ ಸೇವಿಸಿದರೆ ಹಾನಿಕಾರಿಯಲ್ಲ.

ಕ್ಲೋರಮೀನ್– T ಯನ್ನು ಅನೇಕ ಕೈಗಾರಿಕೆಗಳಲ್ಲಿ ಉಪಯೋಗಿಸುವುದುಂಟು. ಹತ್ತಿಯಬಟ್ಟೆಗಳನ್ನು ಚಲುವೆ ಮಾಡಲು ಮತ್ತು ನೂಲಿಗೆ ಬಣ್ಣ ಹಚ್ಚಲು ಇದನ್ನು ಉಪಯೋಗಿಸುತ್ತಾರೆ. ಮುದ್ರಣದಲ್ಲಿ ಉಪಯೋಗಿಸುವ ಮಸಿ ಮತ್ತು ದ್ರಾವ್ಯಪಿಷ್ಟವನ್ನು ತಯಾರಿಸಲು ಇದನ್ನು ಬಳಸುತ್ತಾರೆ. ಮಾದಕ ಪಾನೀಯಗಳನ್ನು ತಯಾರಿಸುವ ಕೈಗಾರಿಕೆಯಲ್ಲಿ

ಕ್ರಿಮಿಶುದ್ಧಿಕಾರಕವಾಗಿ ಇದನ್ನು ಉಪಯೋಗಿಸುವುದಿದೆ. ಅಲ್ಲದೆ ಚರ್ಮ ಹದಮಾಡುವಾಗ ರಕ್ಷಕ ವಸ್ತುವಾಗಿಯೂ ಮರವಜ್ರ ಮತ್ತು ಅಂಟಂಟಾದ ಪದಾರ್ಥಗಳ ತಯಾರಿಕೆಯಲ್ಲಿಯೂ ಬಳಸುತ್ತಾರೆ. ಇದು ಅಲ್ಯೂಮಿನಿಯಂ, ಹಿತ್ತಾಳೆ, ತವರ ಮತ್ತು ಎನಾಮಲುಗಳೊಡನೆ ವರ್ತಿಸುವುದಿಲ್ಲ. ಆದ್ದರಿಂದ ಆಹಾರ ಪದಾರ್ಥಗಳನ್ನು ತಯಾರಿಸುವುದಕ್ಕೂ ಶೇಖರಿಸಿಟ್ಟುಕೊಂಡಿರುವುದಕ್ಕೂ ಬಳಸುವ ಲೋಹಪದಾರ್ಥಗಳ ಪಾತ್ರೆಗಳನ್ನು ಚೊಕ್ಕಟಗೊಳಿಸುವುದಕ್ಕೂ ಕ್ಲೋರಮೀನ್–T ಯನ್ನು ಉಪಯೋಗಿಸುತ್ತಾರೆ. (ಪಿ.ಜಿ.ಆರ್.)

**ಕ್ಲೋರಾಲ್ :** ಟ್ರೈಕ್ಲೋರೊ ಅಸಿಟಾಲ್ಡಿಹೈಡ್. ಇದು ಘಾಟು ವಾಸನೆಯಿಂದ ಕೂಡಿದ, ಪ್ರಖರ ರುಚಿ ಇರುವ, ಭಾರವಾದ, ಬಣ್ಣವಿಲ್ಲದ, ಎಣ್ಣೆರೂಪದ ರಸಾಯನವಸ್ತು. ಇದರ ಹೈಡ್ರೇಟನ್ನು ಔಷಧರೂಪವಾಗಿ ಬಳಸುತ್ತಾರೆ. ಕ್ಲೋರಾಲನ್ನು ಮೊದಲು ತಯಾರಿಸಿದ್ದು ಜೆ.ಫಾನ್ ಲೀಬಿಗ್ (1882). ಆ ಮೊದಲು ಓ.ಲೀಬ್ರೀಜ್ ಎಂಬಾತ ಕ್ಲೋರಾಲ್ ದೇಹದಲ್ಲಿ ಕ್ಲೋರೊಫಾರಂ ಆಗಿ ಜ್ಞಾನತಪ್ಪಿಸಬಹುದು ಎಂದು ಭಾವಿಸಿ ಬಳಸಿದ(1869).



ಕ್ಲೋರಾಲಿನ ಅಣುರಚನೆ

ಈ ರಾಸಾಯನಿಕ ಬದಲಾವಣೆ ಆಗದಿದ್ದರೂ ಈ ಔಷಧಿಗೆ ದೇಹದಲ್ಲಿಯ ನರವ್ಯವಸ್ಥೆಯನ್ನು ಕುಂಠಿತಗೊಳಿಸುವ ಮತ್ತು ನಿದ್ರೆಬರಿಸುವ ಶಕ್ತಿ ಇದೆ ಎಂಬುದು ತಿಳಿಯಿತು. ಕ್ಲೋರಾಲ್ ಅಣುವಿನಲ್ಲಿ ಆಲ್ಡಿಹೈಡ್ ಗುಂಪು ದೇಹದಲ್ಲಿ ಅಪಕರ್ಷಣಗೊಂಡು ಆಲ್ಕೊಹಾಲ್ ಆಗುವುದು. ಹೀಗೆ ಬಂದ ಟ್ರೈಕ್ಲೋರೊ ಈಥೈಲ್ ಆಲ್ಕೊಹಾಲ್ ನರವ್ಯವಸ್ಥೆಯ ಮೇಲೆ ತನ್ನ ಪ್ರಭಾವಬೀರಿ ಮತ್ತು ತರಿಸುತ್ತದೆ ಎಂದು ಈಗ ಗೊತ್ತಾಗಿದೆ.

ಕ್ಲೋರಾಲ್ ನೀರಿಗಿಂತ 1.5ರಷ್ಟು ಭಾರ. ಇದರ ಕುದಿ ಬಿಂದು $97.8^0$ ಸೆಂ. ಶುದ್ಧವಾದ ಮತ್ತು ಶೀತವಾಗಿರುವ ಈಥೈಲ್ ಆಲ್ಕೊಹಾಲ್ ಮೂಲಕ ಶುಷ್ಕಕ್ಲೋರೀನನ್ನು ಹಾಯಿಸಿದಾಗ ಕ್ಲೋರಾಲ್ ತಯಾರಾಗುವುದು. ಇದು ಪ್ರತ್ಯಾಮ್ಲದೊಂದಿಗೆ ರಾಸಾಯನಿಕ ಬದಲಾವಣೆಗೊಂಡು ಕ್ಲೋರೊಫಾರಂ ಆಗುವುದು. ಬರಿಯ ನೀರಿದ್ದರೆ ಕ್ಲೋರಾಲ್ ಹೈಡ್ರೇಟ್ ಆಗಿ ಪರಿವರ್ತನಗೊಳ್ಳುವುದು. ಈ ರೀತಿ ಬಂದ ಕ್ಲೋರಾಲ್ ಹೈಡ್ರೇಟ್ ಪಾರದರ್ಶಕ ಘನವಸ್ತು. ಇದರ ದ್ರವನ ಬಿಂದು $57^0$ ಸೆಂ. ಪ್ರಸಿದ್ಧ ಕೀಟನಾಶಕವಾದ ಡಿ.ಡಿ.ಟಿ.ಯ ತಯಾರಿಕೆ ಇದರಿಂದಲೇ. ಇದನ್ನು ಕ್ಲೊರೊಬೆಂಜೀನ್ ಮತ್ತು ಸಾರ ಸಲ್ಫ್ಯೂರಿಕ್ ಆಮ್ಲದೊಂದಿಗೆ ರಾಸಾಯನಿಕ ಕ್ರಿಯೆಗೆ ಒಳಪಡಿಸಿದಾಗ ಡಿ.ಡಿ.ಟಿ ತಯಾರಾಗುವುದು.

ಕ್ಲೋರಾಲ್ ಮತ್ತು ಅದರ ಜನ್ಯವಸ್ತುವಾದ ಕ್ಲೋರಾಲ್ ಹೈಡ್ರೇಟುಗಳಿಗೆ ಪೂರ್ಣಜ್ಞಾನ ತಪ್ಪಿಸುವ ಶಕ್ತಿ ಉಂಟು, ನಿಜ. ಆದರೆ ಈ ಕಾರ್ಯಕ್ಕೆ ಬೇಕಾಗುವ ಔಷಧವಮಟ್ಟ ತೀರ ಹೆಚ್ಚು. ಇದು ಸಾವು ತರುವ ಮಟ್ಟಕ್ಕಿಂತ ಸ್ವಲ್ಪವೇ ಕಡಿಮೆಯಾಗಿರುವುದರಿಂದ ಇದರ ಉಪಯೋಗ ಶಸ್ತ್ರಚಿಕಿತ್ಸೆಯಲ್ಲಿ ಸಾಧ್ಯವಿಲ್ಲ. ಟ್ರೈಬ್ರೊಮೋ ಇಥನಾಲ್ ಎಂಬ ಇದೇ ರೀತಿಯ ರಾಸಾಯನಿಕವನ್ನು (ಕ್ಲೋರಾಲ್ ಅಣುವಿನಲ್ಲಿಯ ಕ್ಲೋರಿನ್ನಿನ ಬದಲು ಬ್ರೋಮಿನ್ ಮತ್ತು ಆಲ್ಡಿಹೈಡ್ ಗುಂಪಿನ ಬದಲು ಆಲ್ಕೊಹಾಲ್ ಗುಂಪು ಇರುವ ರಾಸಾಯನಿಕ) ಗುದನಾಳದ ಮೂಲಕ ಕೊಟ್ಟು ಶಸ್ತ್ರಚಿಕಿತ್ಸೆಗಾಗಿ ಜ್ಞಾನ ತಪ್ಪಿಸಲು ಬಳಸಬಹುದು. ಕ್ಲೋರಾಲಿನ ಉಪಯೋಗ ಅದಕ್ಕೆ ಇರುವ ಮತ್ತು ತರಿಸುವ (ಸೆಡೆಟಿವ್) ಶಕ್ತಿಯಿಂದ. ಒಂದು ಅಥವಾ ಎರಡು ಗ್ರಾಂನಷ್ಟು ಕೊಟ್ಟಾಗ 10–15 ಮಿನಿಟುಗಳಲ್ಲಿ ಮತ್ತು ಬಂದು ಒಂದು ಗಂಟೆಯಲ್ಲಿ ನಿದ್ರೆ ಬಂದುಬಿಡುತ್ತದೆ. 5–8 ಗಂಟೆಗಳ ತನಕ ಈ ನಿದ್ರೆ ಇರುತ್ತದೆ. ಇದು ಸಾಧಾರಣವಾಗಿ ಪ್ರತಿವರ್ತಿ ಕ್ರಿಯೆಯನ್ನು (ರಿಫ್ಲೆಕ್ಸ್ ಏಕ್ಷನ್) ಕುಂದಿಸುವುದಿಲ್ಲ. ಬಾಯಿಯ ಮೂಲಕ ಕೊಟ್ಟಾಗ ಮಾರಕಮಟ್ಟ 10 ಗ್ರಾಮಿನಷ್ಟು.. ಕ್ಲೋರಾಲ್ ಹೈಡ್ರೇಟಿನ ವಿಷವೇರಿರುವ ಚಿಹ್ನೆಗಳು ಮುಖ್ಯವಾಗಿ ಆಳನಿದ್ರೆ, ಕಡಿಮೆಯಾದ ರಕ್ತದ ಒತ್ತಡ, ಅತಿ ನಿಧಾನವಾದ ಉಸಿರಾಟ, ಕಡಿಮೆಯಾದ ದೇಹೋಷ್ಣತೆ ಇತ್ಯಾದಿ. ಸರಿಯಾದ ಚಿಕಿತ್ಸೆ ಇಲ್ಲದಿದ್ದರೆ 5–10 ಗಂಟೆಗಳಲ್ಲಿ ಸಾವು ಉಂಟಾಗುವುದು. ಕ್ಲೋರಾಲಿನೊಂದಿಗೆ ಆಲ್ಕೊಹಾಲ್ ತೆಗೆದುಕೊಂಡರಂತೂ ಅದರ ಈ ಮತ್ತು ಬರಿಸುವ ಗುಣ ಅತಿಶಯವಾಗುತ್ತದೆ. ಒಂದೇ ಕುಡಿತಕ್ಕೆ ಜ್ಞಾನತಪ್ಪಿಸುವ ಮಿಂಕಿಫಿನ್ ಎಂಬ ಹೆಂಡದಲ್ಲಿರುವ ಕ್ರಿಯಾವಸ್ತುಗಳು ಇವೆರಡೇ. ಕ್ಲೋರಾಲ್ ವಿಷವೇರಿರುವಾಗ ಅನುಸರಿಸಬೇಕಾದ ಚಿಕಿತ್ಸಾಕ್ರಮವೆಂದರೆ ಮೊದಲು ರೋಗಿಯ ಹೊಟ್ಟೆಯಲ್ಲಿಯ ವಿಷವನ್ನು ರಬ್ಬರ್ ನಾಳದ ಮೂಲಕ ತೆಗೆದು ಹೊಟ್ಟೆಯನ್ನು ತೊಳೆಯಬೇಕು; ಅಲ್ಲದೆ ದೇಹವನ್ನು ಬೆಚ್ಚಗಿಡುವುದೂ ಉಸಿರಾಟವನ್ನೂ ರಕ್ತದ ಒತ್ತಡವನ್ನೂ ಹೆಚ್ಚಿಸುವಂತೆ ಉತ್ತೇಜಕಗಳನ್ನು ಕೊಡುವುದೂ ಬಲು ಮುಖ್ಯ. ಅನೇಕವೇಳೆ ಕೃತಕ ಉಸಿರಾಟವನ್ನೂ ಮಾಡಿಸಬೇಕಾಗುವುದು. ಬಾರ್ಬಿಟರೇಟುಗಳ ಕ್ರಿಯೆಯಂತೆಯೇ ಕ್ಲೋರಾಲಿಗೆ ಕೂಡ ನಿದ್ರೆ ಬರಿಸುವ ಗುಣವಿದ್ದರೂ ಇದರ ಬೆಲೆ ಕಡಿಮೆ ಮತ್ತು ಇದು ಹೆಚ್ಚು ಶಕ್ತಿಯುತವಾಗಿದ್ದರೂ ಬಾರ್ಬಿಟರೇಟುಗಳ ಬಳಕೆಯೇ ಹೆಚ್ಚು. ಆಲ್ಕೊಹಾಲ್, ಮಾರ್ಫಿನ್ ಅಥವಾ ಬಾರ್ಬಿಟರೇಟುಗಳ ಚಟಗ್ರಸ್ತರಾದ ರೋಗಿಗಳ ಚಿಕಿತ್ಸಾಮಾರ್ಗದ ಮೊದಲನೆಯ ಹಂತದಲ್ಲಿ ಅವಿಲ್ಲದೆ ಒದ್ದಾಡುವ ರೋಗಿಗಳ ಕಷ್ಟವನ್ನು ಕಡಿಮೆ ಮಾಡಲು ಕ್ಲೋರಾಲನ್ನು ಬಳಸಬಹುದು. (ಎ.ಎಸ್.ಆರ್)

**ಕ್ಲೋರಾಲ್ ಹೈಡ್ರೇಟ್ :** ಸುಪ್ತಾವಾಹಕವಾಗಿಯೂ ನಿದ್ರಾಜನಕವಾಗಿಯೂ ಬಳಸಲಾಗುವ ಒಂದು ವಸ್ತು. ಇದರ ರಾಸಾಯನಿಕ ಸೂತ್ರ $CCl_3CH(OH)_2$. ಇದನ್ನು ಕ್ಲೋರಾಲಿನಿಂದ ಪಡೆಯಲಾಗುತ್ತದೆ. ಮತ್ತು ಬರುವಂತೆ ಮಾಡಲು ಬಂಗಿ, ಅಫೀಮು ಮುಂತಾದವನ್ನು ಬಳಸುವ ಬದಲು ಇದನ್ನು ಬಳಸಬಹುದೆಂದು ಓ.ಲೀಬ್ರೈಕ್ ಎಂಬಾತ 1869ರಲ್ಲಿ ತೋರಿಸಿಕೊಟ್ಟ.. ದೇಹದಲ್ಲಿ ಇದು ಕ್ಲೋರೊಫಾರಂ ಆಗಿ ಪರಿವರ್ತನೆ ಹೊಂದಿ ಆ ಮೂಲಕ ಅರಿವಳಿಕವಾಗಿ ಪರಿಣಮಿಸುತ್ತದೆ ಎಂಬ ತಪ್ಪು ಕಲ್ಪನೆ ಇತ್ತು. ಆದರೆ ಇದು ಯಾವ ಬದಲಾವಣೆಗೂ ಒಳಗಾಗದೆ ಕೇಂದ್ರ ನರಮಂಡಲವನ್ನು ಸ್ತಿಮಿತಗೊಳಿಸಲು ಸಮರ್ಥವಾಗಿದೆ ಎಂದು ಈಗ ಗೊತ್ತಾಗಿದೆ.

ಕ್ಲೋರಾಲಿಗೆ ಗೊತ್ತಾದ ಪರಿಮಾಣದಲ್ಲಿ ನೀರನ್ನು ಕೂಡಿಸಿ ಕ್ಲೋರಾಲ್ ಹೈಡ್ರೇಟನ್ನು ತಯಾರಿಸಬಹುದು. ಇದನ್ನು ಬೆಂಜೀನ್ ಕ್ಲೋರೋಫಾರಂ ಅಥವಾ ಹಗುರವಾದ ಪೆಟ್ರೋಲಿನಿಂದ ಸ್ಫಟಿಕೀಕರಿಸಿ ಶುದ್ಧಗೊಳಿಸಬಹುದು. ಬೇಕಾಗುವುದಕ್ಕಿಂತ ಹೆಚ್ಚಿನ ಪರಿಮಾಣದಲ್ಲಿ ನೀರನ್ನು ಸೇರಿಸಿ, ಮಿಶ್ರಣವನ್ನು ಚೆನ್ನಾಗಿ ಕಲಕಿ ಶೈತ್ಯಗೊಳಿಸಿದ ಬಳಿಕ ಪಿಂಗಾಣಿ ತಟ್ಟೆಗಳ ಮೇಲಿರಿಸಿ, ನಿರ್ವಾತದಲ್ಲಿ ಸಾರಸಲ್ಫ್ಯೂರಿಕ್ ಆಮ್ಲದ ಮೇಲೆ ಒಣಗಿಸಿದರೆ, ತಟ್ಟೆಯಾಕಾರದ ಅಥವಾ ಘನಾಕಾರದ ಕ್ಲೋರಾಲ್ ಹೈಡ್ರೇಟ್ ಹರಳುಗಳು ಉಂಟಾಗುತ್ತವೆ.

ಈ ಹರಳು 57 ° ಸೆಂ. ಉಷ್ಣತೆಯಲ್ಲಿ ಕರಗುತ್ತದೆ. ಇದಕ್ಕೆ ಘಾಟುವಾಸನೆಯೂ ಕಹಿ ರುಚಿಯೂ ಉಂಟು. ನೀರು, ಆಲ್ಕೊಹಾಲ್, ಕ್ಲೋರೋಫಾರಂ, ಈಥರ್ ಮತ್ತು ಎಣ್ಣೆಗಳಲ್ಲಿ ಸುಲಭವಾಗಿ ವಿಲೀನವಾಗುತ್ತದೆ. ಸಲ್ಫ್ಯೂರಿಕ್ ಆಮ್ಲದೊಡನೆ ಕಾಸಿದಾಗ ನಿರ್ಜಲೀಕೃತ ಕ್ಲೋರಾಲ್ ಮತ್ತು ಕ್ಲೋರಾಲೈಡ್ ಆಗಿ ಪರಿವರ್ತಿತವಾಗುತ್ತದೆ. ಹಾಲು ಮತ್ತು ಮಾಂಸಗಳಂಥ ವಸ್ತುಗಳು ಕೆಡದಂತೆ ಇಡುವ ಗುಣ ಕ್ಲೋರಾಲ್ ಹೈಡ್ರೇಟಿಗೆ ಉಂಟು. ಗ್ಲಿಸರೀನ್ ಮಿಶ್ರಿತ ಕ್ಲೋರಾಲ್ ಹೈಡ್ರೇಟಿನ ಮಿಶ್ರಣ ಶಾರೀರಿಕ ವಸ್ತುಗಳನ್ನು ರಕ್ಷಿಸಿಡಲು ಅನುಕೂಲವೆಂದು ಜೆ.ಪರ್ಸನ್ ತೋರಿಸಿದ್ದಾನೆ.

ವೈದ್ಯಕೀಯದಲ್ಲಿ ಕ್ಲೋರಾಲ್ ಹೈಡ್ರೇಟನ್ನು ಮತ್ತು ಬರಿಸಲು ವಿಶೇಷವಾಗಿ ಬಳಸುತ್ತಾರೆ. ನಿದ್ರೆ ಬಾರದಿರುವಿಕೆ (ಇನ್‌ಸಾಮ್ನಿಯ), ಮದ್ಯೋನ್ಮಾದ (ಡಿಲಿರಿಯಂ ಟ್ರೆಮೆನ್ಸ್) ಮತ್ತು ಕೆಲವು ತರಹದ ಬುದ್ಧಿಭ್ರಮಣೆಗಳ ಚಿಕಿತ್ಸೆಯಲ್ಲಿ ಇದು ಬಲು ಪರಿಣಾಮಕಾರಿ ಮದ್ದು. ಇದನ್ನು ಅರಿವಳಿಕವಾಗಿಯೂ ಬಳಸುವುದುಂಟು. ಇದು ಅತ್ಯಂತ ಒಳ್ಳೆಯ ಶಾಮಕವೆಂದೂ (ಸಿಡೇಟಿವ್) ಹೆಸರಾಗಿದೆ. ಒಂದು ಅಥವಾ ಎರಡು ಗ್ರೇನುಗಳು ಸೂಕ್ತವಾದ ಪರಿಮಾಣ. ಸುಮಾರು 10–15 ಮಿನಿಟುಗಳಲ್ಲಿ ಗಾಢವಾದ ನಿದ್ರೆ ಬಂದು 5–8 ಗಂಟೆಗಳ ಕಾಲ ಇರಬಲ್ಲುದು. ಮಿತ ಪರಿಮಾಣದಲ್ಲಿ ಕೊಟ್ಟಾಗ ಯಾವ ಹಾನಿಯೂ ಉಂಟಾಗದಾದರೂ ಇದರ ರುಚಿ ಅಷ್ಟು ಹಿತವಲ್ಲ. ಅಲ್ಲದೆ ಹೊಟ್ಟೆಯನ್ನು ಕೆರಳಿಸುವ ಗುಣವೂ ಇದಕ್ಕೆ ಉಂಟು. ಔಷಧಿಯ ಪರಿಮಾಣ ಮಿತಿಮೀರಿದರೆ ಮಾತ್ರ ಅಪಾಯ. ಗಾಢವಾದ ಮಂಪರು ಬಂದು, ರಕ್ತನಾಳಗಳು ಹಿಗ್ಗಿ ರಕ್ತದ ಒತ್ತಡ ಹಾಗೂ ದೇಹದ ಉಷ್ಣತೆ ಇಳಿದು ಉಸಿರಾಟ ತೀವ್ರವಾಗುತ್ತದೆ. ಸುಮಾರು 5–10 ಗಂಟೆಗಳಲ್ಲಿ ಸಾವು ಸಂಭವಿಸಬಹುದು. ಕ್ಲೋರಾಲ್ ಹೈಡ್ರೇಟಿನ ಮಾರಕ ಪರಿಮಾಣ (ವಯಸ್ಕರಿಗೆ) 10 ಗ್ರೇನ್ ಇರುವುದಾದರೂ 2 ಗ್ರೇನಿಗಿಂತ ಹೆಚ್ಚು ಕೊಡುವಾಗ ಎಚ್ಚರ ವಹಿಸುವುದು ಅಗತ್ಯ. ಕ್ಲೋರಾಲ್ ಹೈಡ್ರೇಟ್ ಆಲ್ಕೊಹಾಲಿನಲ್ಲಿ ಪ್ರಭಾವಶಾಲಿ ಮಾಂದ್ಯಜನಕವಾಗುವುದರಿಂದ (ಡಿಪ್ರೆಸೆಂಟ್) ಇದರೊಂದಿಗೆ ಅದನ್ನು ಎಂದೂ ಕೊಡಬಾರದು. ಆಕಸ್ಮಿಕವಾಗಿ ಪರಿಮಾಣ ಮಿತಿಮೀರಿ ರೋಗಿಗೆ ತೊಂದರೆಯುಂಟಾದಾಗ ಸಾಸುವೆ ಮುಂತಾದ ವಮನಕಾರಿ ವಸ್ತುಗಳನ್ನು ಕೊಟ್ಟು ವಾಂತಿ ಮಾಡಿಸಬೇಕು. ಪ್ರಬಲ ಕಾಫಿಯನ್ನು ಚುಚ್ಚುಮದ್ದಾಗಿ ಪ್ರಯೋಗಿಸುವುದು, ಗಲಾಟೆ ಮಾಡಿ ಎಬ್ಬಿಸುವುದು ಅಥವಾ ಕೊನೆಯ ಪ್ರಯತ್ನವಾಗಿ ಕೃತಕ ಉಸಿರಾಟ ಅಳವಡಿಸುವುದು ಮುಂತಾದವನ್ನು ಮಾಡಬೇಕು. ರಕ್ತಪರಿಚಲನೆ ಅಥವಾ ಉಸಿರಾಟದಲ್ಲಿ ತೊಂದರೆಯಿದ್ದಾಗ ಇಲ್ಲವೇ ಪಿತ್ತ ಪ್ರಕೋಪವಾಗಿದ್ದಾಗ ಇದನ್ನು ಕೊಡಬಾರದು. ಅಲ್ಲದೆ ಹೃದ್ರೋಗಿಗಳಿಗೆ ಅಥವಾ ಮೂತ್ರಜನಕಾಂಗಗಳ ತೊಂದರೆಯಿಂದ ನರಳುತ್ತಿರುವ ರೋಗಿಗಳಿಗೆ ಇದರ ಸೇವನೆ ನಿಷಿದ್ಧ.

ಕ್ಲೋರಾಲ್ ಹೈಡ್ರೇಟಿನ ಸಾಂತ್ವನಗುಣ ಬಾರ್ಬಿಟರೇಟುಗಳಂತೆಯೇ ಇರುತ್ತದೆ. ಮಾರ್ಫೀನು, ಆಲ್ಕೊಹಾಲ್ ಅಥವಾ ಬಾರ್ಬಿಟರೇಟುಗಳ ಸೇವನೆಯ ಚಟವನ್ನು ಬಿಡಿಸಲು ಇದನ್ನು ರೋಗಿಗಳಿಗೆ ಕೊಡುತ್ತಾರೆ. ಅತಿ ಕುಡುಕರಿಗೆ ಬರುವ ಕಂಪಸನ್ನಿಯನ್ನೂ ಇದು ನಿವಾರಿಸಬಲ್ಲುದು. ಆದರೂ ಇತ್ತೀಚೆಗೆ, ಬಾರ್ಬಿಟರೇಟುಗಳ ಬಳಕೆ ಹೆಚ್ಚಿದಂತೆ, ಕ್ಲೋರಾಲ್ ಹೈಡ್ರೇಟಿನ ಪ್ರಾಶಸ್ತ್ಯ ತಗ್ಗುತ್ತಿದೆ. (ಪಿ.ಜಿ.ಆರ್.)

# ಕ್ಲೋರಿನ್

**ಕ್ಲೋರಿನ್ :** ಆವರ್ತಕೋಷ್ಟಕದ ಏಳನೆಯ ಶ್ರೇಣಿಯ ಬಿ ಉಪಶ್ರೇಣಿಯಲ್ಲಿರುವ ಹ್ಯಾಲೋಜನ್ ವರ್ಗಕ್ಕೆ ಸೇರಿದ ಒಂದು ಧಾತು. ಇದರ ಸಂಕೇತ Cl, ಪರಮಾಣು ಸಂಖ್ಯೆ 17, ಪರಮಾಣು ತೂಕ 35,457. ಸಾಂದ್ರತೆ : ಅನಿಲ 3,214 ಗ್ರಾಂ/ಲೀಟರ್ (0° ಸೆಂ., 760 ಮಿಮೀ. ಒತ್ತಡದಲ್ಲಿ); ದ್ರವ 1.468 ಗ್ರಾಂ/ ಲೀಟರ್ (0° ಸೆಂ.ನಲ್ಲಿ) ಘನೀಭವನ ಬಿಂದು–100.98° ಸೆಂ. ಕುದಿಬಿಂದು –34.5° ಸೆಂ. ಸಂಧಿಸ್ಥ ಸಾಂದ್ರತೆ 573 ಗ್ರಾಂ/ಲೀಟರ್. ಸಂಧಿಸ್ಥ ಒತ್ತಡ 76.1 ವಾಯುಮಾನಗಳು. ಸಂಧಿಸ್ಥ ಉಷ್ಣತೆ 144° ಸೆಂ. ಪ್ರಕೃತಿದತ್ತ ಸಮಸ್ಥಾನಿಗಳು 35 ಮತ್ತು 37. ಎಲೆಕ್ಟ್ರಾನ್ ವಿನ್ಯಾಸ $1s^2 2s^2 2p^6 3s^2 3p^5$.

ಷೇಲೆ (1742–86) ಎಂಬ ವಿಜ್ಞಾನಿ ಮ್ಯಾಂಗನೀಸ್ ಡೈ ಆಕ್ಸೈಡನ್ನು ಹೈಡ್ರೋಕ್ಲೋರಿಕ್ ಆಮ್ಲದೊಡನೆ ಕಾಸಿ ಕ್ಲೋರಿನ್ನನ್ನು ಆವಿಷ್ಕರಿಸಿದ(1774). ದ್ರವರೂಪದ ಕ್ಲೋರಿನ್ನನ್ನು ಮೊದಲು ತಯಾರಿಸಿದವ ನಾರ್ತ್‌ಮೋರ್ (1805). ಫ್ಲಾಜಿಸ್ಟಾನ್ ಸಿದ್ಧಾಂತಿಗಳು ಭಾವಿಸಿದ್ದಂತೆ ಕ್ಲೋರಿನ್ ಆಕ್ಸಿಮ್ಯೂರಿಯಾಟಿಕ್ ಆಮ್ಲವಲ್ಲವೆಂದೂ ಅದೊಂದು ಧಾತುವೆಂದೂ 1810ರಲ್ಲಿ ಹಂಫ್ರಿ ಡೇವಿ ತೋರಿಸಿದ. ತಿಳಿ ಹಸುರು ಎಂಬ ಅರ್ಥವುಳ್ಳ ಗ್ರೀಕ್ ಪದದ ಕ್ಲೋರೋಸ್ ಆಧಾರದಿಂದ ಕ್ಲೋರಿನ್ ಎಂದು ಹೆಸರಿಟ್ಟವನೂ ಇವನೇ.

ರಾಸಾಯನಿಕವಾಗಿ ಕ್ಲೋರಿನ್ ಅತ್ಯಂತ ಪಟುವಸ್ತುವಾದ್ದರಿಂದ ಪ್ರಕೃತಿಯಲ್ಲಿ ಇದು ಧಾತುರೂಪದಲ್ಲಿ ಲಭಿಸುವುದಿಲ್ಲ. ಸಂಯುಕ್ತ ಸ್ಥಿತಿಯಲ್ಲಿ (ಅಂದರೆ ಕ್ಲೋರೈಡುಗಳ ರೂಪದಲ್ಲಿ) ಸಮುದ್ರದ ನೀರು, ಲವಣ ಸರೋವರಗಳು ಮತ್ತು ಜರ್ಮನಿಯ ಸ್ಟ್ಯಾಸ್‌ಫರ್ಟ್ ಲವಣ ನಿಕ್ಷೇಪದಲ್ಲಿ ಹಂಚಿಹೋಗಿದೆ. ಇವುಗಳ ಪೈಕಿ ಉಪ್ಪು (NaCl, ಸೋಡಿಯಮ್ ಕ್ಲೋರೈಡ್) ಮತ್ತು ಕಾರ್ನಲೈಟ್ ($KCl, MgCl_2.6H_2O$) ಮುಖ್ಯ ಆಕರಗಳು.

**ತಯಾರಿಕೆ :** ಕ್ಲೋರಿನ್ನನ್ನು ಎರಡು ಮುಖ್ಯ ವಿಧಾನಗಳಿಂದ ತಯಾರಿಸುತ್ತಾರೆ. 1.ಪ್ರಯೋಗಶಾಲೆಯ ವಿಧಾನ; 2. ಕೈಗಾರಿಕಾ ವಿಧಾನ.

1. ಪ್ರಯೋಗಶಾಲೆಯ ವಿಧಾನದಲ್ಲಿ ಸಾರ ಹೈಡ್ರೋಕ್ಲೋರಿಕ್ ಆಮ್ಲವನ್ನು ಉತ್ಕರ್ಷಣಕಾರಿಗಳಾದ ಪೊಟ್ಯಾಸಿಯಮ್ ಪರ್ಮ್ಯಾಂಗನೇಟ್ ಅಥವಾ ಮ್ಯಾಂಗನೀಸ್ ಡೈ ಆಕ್ಸೈಡಿನಿಂದ ಉತ್ಕರ್ಷಿಸಿ ಕ್ಲೋರಿನ್ನನ್ನು ಪಡೆಯಲಾಗುತ್ತದೆ. ಇವುಗಳಲ್ಲಿ ಪೊಟ್ಯಾಸಿಯಮ್ ಪರ್ಮ್ಯಾಂಗನೇಟ್ ಹೆಚ್ಚು ಕ್ರಿಯಾಶಾಲಿಯಾದ್ದರಿಂದ ಮಿಶ್ರಣವನ್ನು ಕಾಸಬೇಕಾಗಿಲ್ಲ. ಚಲುವೆ ಪುಡಿಯನ್ನು ಸಾರರಿಕ್ತ ಆಮ್ಲಗಳೊಂದಿಗೆ ವರ್ತಿಸುವಂತೆ ಮಾಡಿಯೂ ಕ್ಲೋರಿನ್ನನ್ನು ತಯಾರಿಸಬಹುದು.

2. ಕೈಗಾರಿಕಾ ಗಾತ್ರದಲ್ಲಿ ಕ್ಲೋರಿನ್ನನ್ನು ಎರಡು ರೀತಿಗಳಲ್ಲಿ ತಯಾರಿಸುತ್ತಾರೆ. (ಎ) ವಿದ್ಯುದ್ವಿಧಾನ (ಬಿ)ರಾಸಾಯನಿಕ ವಿಧಾನ.

(ಎ) **ವಿದ್ಯುದ್ವಿಧಾನ :** ದ್ರವಿತ ಉಪ್ಪನ್ನು ವಿದ್ಯುದ್ವಿಭಜನೆಗೆ ಗುರಿಪಡಿಸಿದಾಗ ಋಣಧ್ರುವದಲ್ಲಿ ಸೋಡಿಯಂ ಲೋಹ ಬಿಡುಗಡೆಯಾಗುತ್ತದೆ. ಆದರೆ ಉಪ್ಪಿನ ದ್ರಾವಣ ವಿದ್ಯುದ್ವಿಶ್ಲೇಷಿತವಾದಾಗ ಸೋಡಿಯಮ್ ಹೈಡ್ರಾಕ್ಸೈಡ್ ಮತ್ತು ಹೈಡ್ರೋಜನ್ ಉಂಟಾಗುತ್ತದೆ. ಎರಡು ಸಂದರ್ಭಗಳಲ್ಲೂ ಧನಧ್ರುವದಲ್ಲಿ ಕ್ಲೋರಿನ್ ಅನಿಲ ಹೊರಬೀಳುತ್ತದೆ. ಉತ್ಪತ್ತಿಯಾದ ವಸ್ತುಗಳು ಅಪಾಯಕಾರಿಗಳಾದ್ದರಿಂದ ಕ್ಲೋರಿನ್ನಿನ ತಯಾರಿಕೆ ಸುಲಭಸಾಧ್ಯವಾದ ಉದ್ಯಮವಲ್ಲ. ಅದರ ಕಾರ್ಖಾನೆಯನ್ನು ಸ್ಥಾಪಿಸುವ ಪ್ರದೇಶದಲ್ಲಿ ಸುಲಭ ದರದಲ್ಲಿ ವಿದ್ಯುತ್ ಸರಬರಾಜು, ಹೇರಳವಾದ ಉಪ್ಪಿನ ದ್ರಾವಣ, ಸಾರಿಗೆ ಸೌಲಭ್ಯ, ಧಾರಾಳವಾದ ನೀರಿನ ಸೌಕರ್ಯ, ಕುಶಲ ಕೆಲಸಗಾರರು, ಸ್ಥಳದಲ್ಲೇ ಕ್ಲೋರಿನ್ನನ್ನು ಬಳಸಿಕೊಳ್ಳುವ ಮತ್ತೊಂದು ಉದ್ಯಮ ಅಥವಾ ಹತ್ತಿರದ ಮಾರುಕಟ್ಟೆಯಲ್ಲಿ ತತ್‌ಕ್ಷಣ ಅದರ ವಿಲೇವಾರಿ ಇಷ್ಟೆಲ್ಲ ಸವಲತ್ತುಗಳಿರಬೇಕು. ಇಂಥ ಆದರ್ಶ ನಿವೇಶನ ದೊರೆಯಲಾರದು. ಆದರೂ ಕ್ಲೋರಿನ್ ಉತ್ಪಾದನಕೇಂದ್ರದಲ್ಲಿ ಇವುಗಳ ಪೈಕಿ ಕೆಲವು ಸೌಲಭ್ಯಗಳಾದರೂ ಇರಲೇಬೇಕು.

(ಬಿ) **ರಾಸಾಯನಿಕ ವಿಧಾನ :** ಇದರಲ್ಲಿ ಮೂರು ಮುಖ್ಯ ರೀತಿಗಳುಂಟು. (ಅ)ವೆಲ್ಡನ್ ರೀತಿಯಲ್ಲಿ (1866) ಪೈರೊಲ್ಯೂಸೈಟಿನಿಂದ ($MuO_2$) ಸಾರ ಹೈಡ್ರೋಕ್ಲೋರಿಕ್ ಆಮ್ಲವನ್ನು ಉತ್ಕರ್ಷಿಸುತ್ತಾರೆ. (ಆ) ಡೀಕನ್ ರೀತಿಯಲ್ಲಿ (1868) ಕ್ಯುಪ್ರಿಕ್ ಕ್ಲೋರೈಡ್ ವೇಗವರ್ಧಕದ ಸಂಪರ್ಕದಲ್ಲಿ 450 ° ಸೆಂ. ಉಷ್ಣತೆಯಲ್ಲಿ ಗಾಳಿಯಲ್ಲಿರುವ ಆಕ್ಸಿಜನ್ನಿನಿಂದ ಹೈಡ್ರೋಜನ್ ಕ್ಲೋರೈಡನ್ನು ಉತ್ಕರ್ಷಿಸುತ್ತಾರೆ. (ಇ) ಸಾಲ್ವೆ ರೀತಿಯಲ್ಲಿ ಉಪ್ಪಿನೊಡನೆ ನೈಟ್ರಿಕ್ ಆಮ್ಲ ವರ್ತಿಸುವಂತೆ ಮಾಡುತ್ತಾರೆ. ಆಗ ನೈಟ್ರೋಸಿಲ್ ಕ್ಲೋರೈಡು (NOCl) ಮತ್ತು ಕ್ಲೋರಿನ್ನಿನ ಮಿಶ್ರಣ ಬರುತ್ತದೆ. ಇದು ಆಕ್ಸಿಜನ್ನಿನ ಸಂಪರ್ಕದಲ್ಲಿ ನೈಟ್ರೋಜನ್ ಡೈ ಆಕ್ಸೈಡ್ ಮತ್ತು ಕ್ಲೋರಿನ್ನಿನ ಮಿಶ್ರಣವಾಗುತ್ತದೆ. ಅನಿಲಮಿಶ್ರಣವನ್ನು ದ್ರವರೂಪಕ್ಕೆ ತಂದು ಭಿನ್ನ ಆಸವನದಿಂದ (ಫ್ರಾಕ್ಷನಲ್ ಡಿಸ್ಟಿಲ್ಲೇಷನ್) ಕ್ಲೋರಿನ್ನನ್ನು ಬೇರ್ಪಡಿಸಬಹುದು. ಉಳಿದ ನೈಟ್ರೋಜನ್ ಆಕ್ಸೈಡನ್ನು ನೀರಿನಲ್ಲಿ ವಿಲೀನ ಮಾಡಿದರೆ ನೈಟ್ರಿಕ್ ಆಮ್ಲ ದೊರೆಯುತ್ತದೆ. ಇದನ್ನು ಪುನಃ ಉಪಯೋಗಿಸಬಹುದು.

ವಿದ್ಯುದ್ವಿಧಾನಗಳಲ್ಲಿ ಉಪವಸ್ತುವಾಗಿ ಸಾಕಷ್ಟು ಕ್ಲೋರಿನ್ ಸಿಗುವುದರಿಂದ ರಾಸಾಯನಿಕ ವಿಧಾನಗಳು ಅಷ್ಟಾಗಿ ಬಳಕೆಯಲ್ಲಿಲ್ಲ.

ಅನಿಲರೂಪದಲ್ಲಿ ಕ್ಲೋರಿನ್ನನ್ನು ಸಾಗಿಸುವುದು ವಿರಳ. ಹತ್ತಿರದ ಸ್ಥಳಗಳಿಗಾದರೆ ಕೊಳಾಯಿಗಳ ಮೂಲಕ ಒಯ್ಯಬಹುದು. ಆದರೆ ದೂರದ ಮಾರುಕಟ್ಟೆಗಳಿಗೆ ಒಯ್ಯಬೇಕಾದರೆ ಕ್ಲೋರಿನ್ ದ್ರವರೂಪದಲ್ಲಿರಬೇಕು. ದ್ರವರೂಪಕ್ಕೆ ಪರಿವರ್ತಿಸುವ ವಿಧಾನ ಹೀಗಿದೆ: ವಿದ್ಯುದ್ವಿಧಾನದಲ್ಲಿ ಧನಧ್ರುವದ ವಿಭಾಗದಿಂದ ಹೊರಬಿದ್ದ ಕ್ಲೋರಿನ್ನನ್ನು ಮೊದಲು ಶೀತಲಿಸುತ್ತಾರೆ. ಸಾರ ಸಲ್ಫ್ಯೂರಿಕ್ ಆಮ್ಲವನ್ನು ಸಿಂಪಡಿಸುತ್ತಿರುವ ಕೋಶದ ಮೂಲಕ ಕ್ಲೋರಿನ್ನನ್ನು ಹಾಯಿಸಿದರೆ ಅದು ಶುಷ್ಕವಾಗುತ್ತದೆ. ಅನಂತರ 15 ಪೌಂಡುಗಳಷ್ಟು ಒತ್ತಡ ಹೇರಿ ಜೋಡಿ ಭಿತ್ತಿಯುಳ್ಳ ನಳಿಗೆಗಳಲ್ಲಿ ತಣಿಯಲು ಬಿಡಲಾಗುವುದು. ಇದರ ಮಧ್ಯಭಾಗದಲ್ಲಿ ಕಾರ್ಬನ್ ಡೈ ಆಕ್ಸೈಡ್ ದ್ರವ ಆವಿಯಾಗುತ್ತಿರುತ್ತದೆ. ಆಗ ಅದು ಕ್ಲೋರಿನ್ನಿನಿಂದ ಉಷ್ಣವನ್ನು ಹೀರಿಕೊಳ್ಳುತ್ತದೆ. ಪರಿಣಾಮವಾಗಿ ಕ್ಲೋರಿನ್ ತ್ವರಿತವಾಗಿ ತಣಿದು ದ್ರವವಾಗುತ್ತದೆ. ದ್ರವಿತ ಕ್ಲೋರಿನ್ನನ್ನು 50 ಅಥವಾ 100 ಪೌಂಡು ಉಕ್ಕಿನ ಸಿಲಿಂಡರುಗಳಲ್ಲಿ ತುಂಬಿ ರಫ್ತುಮಾಡುವುದು ವಾಡಿಕೆ. ಇದು ಉಗ್ರವಿಷವಾದ್ದರಿಂದ ಇದರ ವಿತರಣೆಯಲ್ಲಿ ಎಚ್ಚರವಿದ್ದಷ್ಟೂ ಕ್ಷೇಮ. ಒತ್ತಡ ಧಾರಕಗಳ ಸಾಮರ್ಥ್ಯ ಮುಂತಾದವುಗಳ ಬಗ್ಗೆ ವಿಧಿನಿಯಮಗಳಿವೆ. ಮಾನವಶರೀರದ ಮೇಲೆ ಕ್ಲೋರಿನ್ನಿನಿಂದ ಆಗುವ ದುಷ್ಪರಿಣಾಮಗಳನ್ನು ಇಲ್ಲಿ ಬರೆದಿದೆ.

| ದೈಹಿಕ ಪರಿಣಾಮ | ಗಾತ್ರಾನುಸಾರ ಒಂದು ಮಿಲಿಯನ್ ಭಾಗ ಗಾಳಿಯಲ್ಲಿ ಇರಬೇಕಾದ ಕ್ಲೋರಿನ್ನಿನ ಪರಿಮಾಣ |
|---|---|
| ವಾಸನೆ ಹತ್ತಲು | 3.5 |
| ತೀವ್ರಪರಿಣಾಮಗಳಿಲ್ಲದೆ, ಒಂದು ಗಂಟೆಯ ಕಾಲ ಸೇವಿಸ ಬಹುದಾದ್ದು | 4.0 |
| ಗಂಟಲು ಕೆರೆತ | 15.1 |
| ಕೆಮ್ಮು | 30.2 |
| 30 ಮಿನಿಟುಗಳಿಂದ 1 ಗಂಟೆಯವರೆಗೆ ಸೇವಿಸಿದರೆಪ್ರಾಣಾಪಾಯವುಂಟಾಗಲು | 40–60 |
| ಒಂದೆರಡು ಬಾರಿ ದೀರ್ಘವಾಗಿ ಉಸಿರೆಳೆದು ಸೇವಿಸಿದಾಗ ಮಾರಕವಾಗಲು | 1000 |

ಒಂದನೆಯ ಮಹಾಯುದ್ಧದ ದಿನಗಳಲ್ಲಿ ಜರ್ಮನರು ಅವರ ವೈರಿಗಳ ವಿರುದ್ಧ ಕ್ಲೋರಿನ್ ಅನಿಲವನ್ನು ಪಸರಿಸಿದುದರ ಬಗ್ಗೆಯೂ (ಏಪ್ರಿಲ್ 22, 1915) ಇದರಿಂದ ಮತ್ತು ಇತರ ವಿಷವಾಯುಗಳ ಪ್ರಯೋಗಗಳಿಂದ ವಾತಾವರಣ ಕಲುಷಿತವಾಗಿ ರೋಗರುಜಿನಗಳು ಹರಡಿದ ಬಗ್ಗೆಯೂ ಉಲ್ಲೇಖ ಉಂಟು.

**ಕ್ಲೋರಿನ್ನಿನ ಲಕ್ಷಣಗಳು :** (ಅ) ಭೌತಲಕ್ಷಣಗಳು : ಇದೊಂದು ಹಸಿರು ಛಾಯೆಯ ಹಳದಿ ಬಣ್ಣದ ಅನಿಲ. ಇದರ ಘಾಟುವಾಸನೆ ವಿಶಿಷ್ಟ ರೀತಿಯದು. ಇದು ವಿಷಪೂರಿತ, ಮೂಗು, ಗಂಟಲು ಮತ್ತು ಶ್ವಾಸಕೋಶಗಳ ಒಳಪೊರೆಯನ್ನು ಉದ್ರೇಕಿಸಿ ಘಾಸಿಪಡಿಸುತ್ತದೆ. 240 ° –1200 ° ಸೆಂ, ಉಷ್ಣತಾ ಮಿತಿಯಲ್ಲಿ ಇದರ ಆವಿಸಾಂದ್ರತೆ $Cl_2$ ಅಣುಗಳಿರುವುದೆಂದು ಸೂಚಿಸುತ್ತದೆ. 1200 ° ಸೆಂ.ಗೆ ಹೆಚ್ಚಿನ ಉಷ್ಣತೆಯಲ್ಲಿ ಅಣುಗಳು ಭಾಗಶಃ ವಿಭಜಿಸಿ ಪರಮಾಣು ರೂಪದಲ್ಲಿರುತ್ತವೆ. ನೀರಿನಲ್ಲಿ ಅಲ್ಪ ಮೊತ್ತದಲ್ಲಿ ವಿಲೀನವಾಗುವುದು. ಸಾಮಾನ್ಯ ಉಷ್ಣತೆಯಲ್ಲಿ ನೀರು ಅದರ ಗಾತ್ರದ ಸುಮಾರು ಎರಡರಷ್ಟು ಅನಿಲವನ್ನು ವಿಲೀನಮಾಡಿಕೊಳ್ಳಬಲ್ಲುದು. ದ್ರಾವಣಕ್ಕೆ ಅನಿಲದ ಬಣ್ಣ ವಾಸನೆ ಮತ್ತು ರಾಸಾಯನಿಕ ಗುಣಗಳಿರುತ್ತವೆ. ಘನೀಭವಿಸಿದ ಕಾರ್ಬನ್ ಡೈಆಕ್ಸೈಡ್ ಮತ್ತು ಈಥರಿನ ಶೈತ್ಯ ಮಿಶ್ರಣದಲ್ಲಿಟ್ಟಾಗ ಕಿತ್ತಳೆ ಬಣ್ಣದಲ್ಲಿರುವ ಕ್ಲೋರಿನ್ನಿನ ದ್ರವ ಲಭಿಸುತ್ತದೆ. ದ್ರವಿತ ಗಾಳಿಯಿಂದ ತಣಿಸಿದರೆ ತಿಳಿಹಳದಿ ಘನವಸ್ತುವಾಗುವುದು. ಕ್ಲೋರಿನ್ ದ್ರಾವಣವನ್ನು 0 ° ಸೆಂ. ಉಷ್ಣತೆಗೆ ತಣಿಸಿದಾಗ ಹರಳುರೂಪದ ಕ್ಲೋರಿನ್ ಹೈಡ್ರೇಟ್ ಲಭಿಸುತ್ತದೆ. ಇದರ ಅಣುಸೂತ್ರ $Cl_2.6H_2O$ ಅಥವಾ $Cl_2.8H_2O$ ಎಂದು ಭಾವಿಸಲಾಗಿದೆ.

**(ಆ) ರಾಸಾಯನಿಕ ಲಕ್ಷಣಗಳು :** ಕ್ಲೋರಿನ್ ಒಂದು ಕ್ರಿಯಾಶಾಲಿಯಾದ ಧಾತು. ಇದು ಅನೇಕ ಧಾತುಗಳೊಡನೆ ನೇರವಾಗಿ ವರ್ತಿಸುತ್ತದೆ. ಹೈಡ್ರೋಜನ್ನಿನ ಅಭಿಮಾನಿ; ಅದರೊಡನೆ ಕಲೆತು ಹೈಡ್ರೋಜನ್ ಕ್ಲೋರೈಡ್ ಅನಿಲವನ್ನು ಕೊಡುತ್ತದೆ. ಕತ್ತಲಿನಲ್ಲಿ ಈ ಕ್ರಿಯೆ ನಡೆಯುವುದಿಲ್ಲ. ಮಬ್ಬು ಬೆಳಕಿನಲ್ಲಿ ನಿಧಾನವಾಗಿಯೂ ಪ್ರಕಾಶವಾದ ಸೂರ್ಯನ ಬೆಳಕಿನಲ್ಲಿ ಆಸ್ಫೋಟನೆಯೊಡನೆಯೂ ಸಂಯೋಜಿಸುವುದು. ಉರಿಯುತ್ತಿರುವ ಹೈಡ್ರೋಜನ್ನಿನ ಧಾರೆ ಕ್ಲೋರಿನ್ನಿನ ವಾತಾವರಣದಲ್ಲಿಯೂ ಉರಿಯುವುದು ಕ್ಲೋರಿನ್ನಿನ ವಿಶೇಷ ಸಂಯೋಗಪ್ರವೃತ್ತಿಗೆ ನಿದರ್ಶನ. ಹೈಡ್ರೋಕ್ಲೋರಿಕ್ ಆಮ್ಲವನ್ನು ತಯಾರಿಸುವ ಪ್ರಚಲಿತ ಕೈಗಾರಿಕಾ ವಿಧಾನಗಳಲ್ಲಿ ಇದೂ ಒಂದು. ಬಿಳಿಯ ರಂಜಕ ಕ್ಲೋರಿನ್ನಿನಲ್ಲಿ ತಾನಾಗಿಯೇ ಹೊತ್ತಿಕೊಂಡು ಫಾಸ್ಫರಸ್ ಟ್ರೈಕ್ಲೋರೈಡನ್ನೂ ಕ್ಲೋರಿನ್ನಿನ ಅಂಶ ಹೆಚ್ಚಾಗಿದ್ದರೆ ಫಾಸ್ಫರಸ್

ಪೆಂಟಕ್ಲೋರೈಡನ್ನೂ ಉತ್ಪತ್ತಿ ಮಾಡುತ್ತದೆ. ಚಿನ್ನ ಮತ್ತು ಪ್ಲಾಟಿನಂ ಹೊರತು ಉಳಿದ ಲೋಹಗಳು ಕ್ಲೋರಿನ್ನಿನೊಡನೆ ಸೇರಿ ಆಯಾ ಕ್ಲೋರೈಡುಗಳಿಗೆ ಪರಿವರ್ತಿತವಾಗುತ್ತವೆ. ಬಿಸಿಮಾಡಿದ ಆಂಟಿಮೊನಿ ಪುಡಿಯನ್ನು ಕ್ಲೋರಿನ್ ಇರುವ ಅನಿಲದ ಜಾಡಿಗೆ ಉದುರಿಸಿದರೆ ಅದು ಕಿಡಿ ಕಾರುತ್ತ ಸಂಯೋಜಿಸುತ್ತದೆ. ತೆಳುವಾದ ತಾಮ್ರದ ಪತ್ರ ಕ್ಲೋರಿನ್ನಿನಲ್ಲಿ ಹೊತ್ತಿಕೊಳ್ಳುತ್ತದೆ. ಕಾಸಿದ ಕಬ್ಬಿಣ, ಅಲ್ಯೂಮಿನಿಯಂ, ತವರ ಮುಂತಾದ ಲೋಹಗಳ ಮೇಲೆ ಕ್ಲೋರಿನ್ನನ್ನು ಹಾಯಿಸಿದಾಗ ಅವು ಆಯಾ ಕ್ಲೋರೈಡುಗಳಾಗಿ ಪರಿವರ್ತಿತವಾಗುತ್ತವೆ.

ಕ್ಲೋರಿನ್ ದ್ರಾವಣಕ್ಕೆ ಆಮ್ಲೀಯ ಸ್ವಭಾವ ಉಂಟು. ನೀರಿನೊಡನೆ ವರ್ತಿಸಿದಾಗ ಹೈಡ್ರೊಕ್ಲೋರಿಕ್ ಆಮ್ಲ ಮತ್ತು ಹೈಪೊಕ್ಲೋರಸ್ ಆಮ್ಲಗಳು ಉಂಟಾಗುವುದೇ ಇದಕ್ಕೆ ಕಾರಣ. ದ್ರಾವಣವನ್ನು ಸೂರ್ಯರಶ್ಮಿಗೆ ಒಡ್ಡಿದಾಗ ಹೈಪೊಕ್ಲೋರಸ್ ಆಮ್ಲ (HClO) ವಿಭಜನೆಯಾಗಿ ಹೈಡ್ರೊಕ್ಲೋರಿಕ್ ಆಮ್ಲ (HCl) ಮತ್ತು ಆಕ್ಸಿಜನ್ ಬಿಡುಗಡೆಯಾಗುತ್ತವೆ. ಕ್ಲೋರಿನ್ನಿನ ಉತ್ಕರ್ಷಣ ಗುಣ ಮತ್ತು ಚಲುವೆಗೊಳಿಸುವ ಶಕ್ತಿಗೆ ಈ ಮೂಲ ಕ್ರಿಯೆಯೇ ಆಧಾರ. ಉತ್ಕರ್ಷಣಯೋಗ್ಯವಾದ ಬಣ್ಣಗಳು ಮಾತ್ರ ಶಾಶ್ವತವಾಗಿ ಕ್ಲೋರಿನ್ನಿನಿಂದ ನಿರ್ನಾಮವಾಗುತ್ತವೆ. ಚಲುವೆಮಾಡಿದ ಬಳಿಕ ಬಟ್ಟೆಯ ಮೇಲೆ ಹೈಡ್ರೊಕ್ಲೋರಿಕ್ ಆಮ್ಲ ಉಳಿಯುತ್ತದೆ. ಇದು ನೂಲನ್ನು ಶಿಥಿಲಗೊಳಿಸುತ್ತದೆ. ಹೀಗಾಗಿ ಸೂಕ್ಷ್ಮವಾದ ರೇಷ್ಮೆ ಮತ್ತು ಉಣ್ಣೆಯ ಬಟ್ಟೆಗಳನ್ನು ಕ್ಲೋರಿನ್ನಿನಿಂದ ಚಲುವೆ ಮಾಡಲಾಗುವುದಿಲ್ಲ. ಕ್ಲೋರಿನ್ನಿನ ಕ್ರಿಮಿನಾಶಕ ಶಕ್ತಿಯೂ ಇದರ ಉತ್ಕರ್ಷಣ ಗುಣವನ್ನು ಅವಲಂಬಿಸಿದೆ. ಕುಡಿಯುವ ನೀರಿನಲ್ಲಿರುವ ರೋಗಾಣುಗಳನ್ನು ಕೊಲ್ಲಲು ಕ್ಲೋರಿನ್ ಉಪಯೋಗವಾಗುತ್ತದೆ. ಸಲ್ಫ್ಯೂರಸ್ ಆಮ್ಲವನ್ನು ($H_2SO_3$) ಸಲ್ಫ್ಯೂರಿಕ್ ಆಮ್ಲಕ್ಕೂ ($H_2SO_4$) ಹೈಡ್ರೊಜನ್ ಸಲ್ಫೈಡನ್ನು ($H_2S$) ಸಲ್ಫರಿಗೂ ಫೆರ್ರಸ್ ಲವಣಗಳನ್ನು ಫೆರ್ರಿಕ್ ಸ್ಥಿತಿಗೂ ಪೊಟ್ಯಾಸಿಯಂ ಬ್ರೋಮೈಡು ಮತ್ತು ಅಯೊಡೈಡುಗಳನ್ನು ಅನುಕ್ರಮವಾಗಿ ಬ್ರೋಮಿನ್ ಮತ್ತು ಅಯೊಡಿನ್ನಿಗೂ ಪರಿವರ್ತಿಸುವುದು ಕ್ಲೋರಿನ್ನಿನ ಉತ್ತಮ ಉತ್ಕರ್ಷಣ ಗುಣಕ್ಕೆ ಇತರ ಉದಾಹರಣೆಗಳು.

ಬಿಸಿಲಿನ ಅಥವಾ ಪಟುಗೊಳಿಸಿದ ಇದ್ದಲಿನ ಸಂಪರ್ಕದಲ್ಲಿ ಸಲ್ಫರ್ ಡೈ ಆಕ್ಸೈಡ್, ಕಾರ್ಬನ್ ಮಾನಾಕ್ಸೈಡ್ ಮತ್ತು ನೈಟ್ರಿಕ್ ಆಕ್ಸೈಡುಗಳೊಡನೆ ಕೂಡಿ ಉಪಯುಕ್ತ ವಸ್ತುಗಳಾದ ಸಲ್ಫ್ಯೂರಿಕಲ್ ಕ್ಲೋರೈಡ್ ($SO_2Cl_2$), ಕಾರ್ಬೊನಿಲ್ ಕ್ಲೋರೈಡ್ ($COCl_2$) ಮತ್ತು ನೈಟ್ರೊಸಿಲ್ ಕ್ಲೋರೈಡುಗಳನ್ನು (NOCl) ಕೊಡುವುದು. ಸಾವಯವ ವಸ್ತುಗಳು ಸಂತೃಪ್ತವಾಗಿದ್ದರೆ ಇವುಗಳಲ್ಲಿ ಹೈಡ್ರೊಜನ್ನಿನ ಪರಮಾಣುಗಳನ್ನು ಪಲ್ಲಟಿಸಿ ಅವುಗಳ ಸ್ಥಾನವನ್ನು ಕ್ಲೋರಿನ್ ಆಕ್ರಮಿಸುತ್ತದೆ. ಇದಕ್ಕೆ ಮೀಥೇನ್ ($CH_4$) ಮತ್ತು ಕ್ಲೋರಿನ್ನಿನ ನಡುವೆ ಬಿಸಿಲಿನಲ್ಲಿ ನಡೆಯುವ ಕ್ರಿಯೆಯನ್ನು ಉದಾಹರಿಸಬಹುದು. ಆಗ ಇವುಗಳ ಪ್ರಮಾಣಕ್ಕೆ ಅನುಸಾರವಾಗಿ ಮೀಥೈಲ್ ಕ್ಲೋರೈಡ್ ($CH_3Cl$), ಮೆಥಿಲೀನ್ ಕ್ಲೋರೈಡ್ ($CH_2Cl_2$), ಕ್ಲೋರೋಫಾರಂ ($CHCl_3$) ಮತ್ತು ಕಾರ್ಬನ್ ಟೆಟ್ರಕ್ಲೋರೈಡಿನ ($CCl_4$) ಮಿಶ್ರಣ ದೊರೆಯುವುದು. ಆದರೆ ಅಸಂತೃಪ್ತ ಸಂಯುಕ್ತಗಳಾದ (ಕಾರ್ಬನ್ನಿನ ಚತುರ್ವೇಲೆನ್ಸಿ ಸ್ವಾಭಾವಿಕ ರೀತಿಯಲ್ಲಿ ತೃಪ್ತಿಯಾಗದಿರುವ) ಎಥಿಲೀನ್ ($C_2H_4$) ಮತ್ತು ಅಸಿಟಲೀನುಗಳು($C_2H_2$) ತಮ್ಮ ಶಕ್ತ್ಯಾನುಸಾರ ಕ್ಲೋರಿನ್ ಪರಮಾಣುಗಳನ್ನು ಲಗತ್ತಿಸಿಕೊಂಡು ಎಥಿಲೀನ್ ಡೈಕ್ಲೋರೈಡ್ ($C_2H_4Cl_2$) ಮತ್ತು ಅಸಿಟಲಿನ್ ಟೆಟ್ರಕ್ಲೋರೈಡುಗಳನ್ನು ($C_2H_2Cl_4$) ಕೊಡುತ್ತವೆ. ಕ್ಷಾರಗಳೊಡನೆ ಕ್ಲೋರಿನ್ನಿನ ವರ್ತನೆ ದ್ರಾವಣದ ಸಾರತೆ ಮತ್ತು ಉಷ್ಣತೆಗೆ ಅನುಗುಣವಾಗಿರುತ್ತದೆ. ಉದಾಹರಣೆಗೆ, ತಣ್ಣಗಿರುವ ಸಾರರಿಕ್ತ ಕಾಸ್ಟಿಕ್ ಸೋಡ ದ್ರಾವಣದ ಮೂಲಕ ಕ್ಲೋರಿನ್ನನ್ನು ಹಾಯಿಸಿದರೆ ಸೋಡಿಯಂ ಹೈಪೊಕ್ಲೋರೈಟೂ (NaClO) ದ್ರಾವಣ ಬಿಸಿಯಾಗಿದ್ದು(70° ಸೆಂ.) ಸಾರವಾಗಿದ್ದರೆ ಸೋಡಿಯಂ ಕ್ಲೋರೇಟೂ ($NaClO_3$) ಬರುತ್ತವೆ.

ಕ್ಲೋರಿನ್ನಿನ ಉಪಯೋಗಗಳು ಹಲವು. ಅದರ ವಾರ್ಷಿಕ ಉತ್ಪಾದನೆಯ ಸುಮಾರು ಶೇ.65 ರಷ್ಟು ಕಾಗದದ ಪಲ್ಪನ್ನೂ ಶೇ.20 ರಷ್ಟು ಬಟ್ಟೆಯನ್ನೂ ಚಲುವೆ ಮಾಡಲು ವಿನಿಯೋಗವಾಗುತ್ತಿದೆ. ಶೇ.10 ರಷ್ಟು ಕ್ಲೋರಿನ್ ನೀರಿನ ಶುದ್ಧೀಕರಣಕ್ಕೆ ಬಳಕೆಯಾಗುತ್ತಿದೆ. ಕೈಗಾರಿಕೆಗಳು ವಿಸರ್ಜಿಸುವ ವಸ್ತುಗಳು, ಈಜುಕೊಳದ ನೀರು ಇತ್ಯಾದಿಗಳ ನಿರ್ಮಲೀಕರಣಕ್ಕೆ ಕ್ಲೋರಿನ್ ಅಗತ್ಯ. ಈ ಕೆಲಸಗಳಿಗೆ ಚಲುವೆಪುಡಿಯನ್ನು ($CaOCl_2$) ಉಪಯೋಗಿಸುವುದು ಸಾಮಾನ್ಯವಾಗಿದ್ದರೂ ದ್ರವಿತ ಕ್ಲೋರಿನ್ನಿನ ನೇರ ಉಪಯೋಗಕ್ಕೆ ಮಹತ್ತ್ವ ಉಂಟು. ನಿರುಪಯೋಗಿ ತವರದಿಂದ ಲೋಹವನ್ನು ಪಡೆಯಲೂ ಕ್ಲೋರಿನ್ ಅಗತ್ಯ. ರಬ್ಬರನ್ನು ವಲ್ಕನೈಸ್‌ಮಾಡಲು ಸಲ್ಫರ್ ಮಾನೊಕ್ಲೋರೈಡ್ ಬೇಕು. ಕಾರ್ಬನ್ ಟೆಟ್ರಕ್ಲೋರೈಡ್ ಉಪಯುಕ್ತ ಲೀನಕಾರಿ. ಕ್ಲೋರೋಫಾರಂ ಶಸ್ತ್ರಕ್ರಿಯೆಯಲ್ಲಿ ಅವಶ್ಯ. ಸೋಡಿಯಂ ಹೈಪೊಕ್ಲೋರೈಟು ಉತ್ತಮ ಕ್ರಿಮಿನಾಶಕ. ಇವುಗಳಲ್ಲದೆ ಕ್ಲೋರೊ ಬೆಂಜೀನ್, ಎಥಿಲೀನ್ ಗ್ಲೈಕಾಲ್, ಸಂಯೋಜಿತ ಗ್ಲಿಸರಾಲ್, ಟೆಟ್ರ ಈಥೈಲ್ ಲೆಡ್ ಮೊದಲಾದ ಅಸಂಖ್ಯಾತ ಉಪಯುಕ್ತ ಸಂಯುಕ್ತಗಳ ತಯಾರಿಕೆ ಕ್ಲೋರಿನ್ ಇಲ್ಲದೆ ನಡೆಯುವಂತಿಲ್ಲ. (ಎಚ್.ಜಿ.ಎಸ್.)

**ಕ್ಲೋರೇಟುಗಳು :** ಕ್ಲೋರಿಕ್ ಆಮ್ಲದ ($HClO_3$) ಲವಣಗಳು. ಇವುಗಳ ಸಾಮಾನ್ಯ ಸೂತ್ರ $M(ClO_3)_n$. ಇಲ್ಲಿ M ಎಂಬುದು ಲೋಹದ ಸಂಕೇತ n ಅದರ ವೇಲೆನ್ಸಿ. ಕ್ಲೋರೇಟುಗಳ ಪೈಕಿ ಸೋಡಿಯಂ, ಪೊಟಾಸಿಯಂ ಮತ್ತು ಬೇರಿಯಮ್ ಕ್ಲೋರೇಟುಗಳು ಮುಖ್ಯವಾದವು. ಕ್ಲೋರೇಟುಗಳನ್ನು ವಿದ್ಯುದ್ವಿಧಾನಗಳಿಂದ ತಯಾರಿಸುತ್ತಾರೆ. ಉಕ್ಕಿನ ತೊಟ್ಟಿಯೊಂದರಲ್ಲಿ ಅಗತ್ಯವೆನಿಸಿದ ಲೋಹದ ಕ್ಲೋರೈಡಿನ ಬಿಸಿಯಾದ ಸಾರ ದ್ರಾವಣವನ್ನು ವಿದ್ಯುದ್ವಿಭಜಿಸಲಾಗುತ್ತದೆ. ತೊಟ್ಟಿ ಋಣಧ್ರುವವಾಗಿ ವರ್ತಿಸುತ್ತದೆ. ಇದರೊಳಗೆ ಅಲ್ಪ ಅಂತರವಿರುವಂತೆ ಜೋಡಿಸಿರುವ ಗ್ರ್ಯಾಫೈಟ್ ಸರಳುಗಳು ಧನಧ್ರುವಗಳಾಗಿ ವರ್ತಿಸುತ್ತವೆ. ಧನಧ್ರುವದಲ್ಲಿ ಬಿಡುಗಡೆಯಾದ ಕ್ಲೋರಿನ್ ಋಣಧ್ರುವದಲ್ಲಿ ಉತ್ಪತ್ತಿಯಾದ ಕ್ಷಾರದೊಡನೆ ವರ್ತಿಸುವಂತೆ ಮಾಡುವರು. ಆಗ ಉಂಟಾಗುವ ಹೈಪೊಕ್ಲೋರಸ್ ಆಮ್ಲ ಹೈಪೊಕ್ಲೋರೈಟಿನ ಅಯಾನುಗಳೊಂದಿಗೆ ವರ್ತಿಸಿ ಕ್ಲೋರೇಟಿನ ಅಯಾನುಗಳು ಬಿಡುಗಡೆಯಾಗುತ್ತವೆ.

$$2HOCl + ClO^{1-} \rightarrow ClO^{1-} + 2H^{1+} + 2Cl^{1-}$$

ಕ್ಲೋರೇಟುಗಳ ವೈಶಿಷ್ಟ್ಯವೆಂದರೆ ಇವುಗಳ ಉತ್ಕರ್ಷಕ ಗುಣ. ಬ್ರೋಮೇಟ್ ಮತ್ತು ಅಯೊಡೇಟುಗಳಿಗಿಂತ ಇವು ಉತ್ತಮ ಉತ್ಕರ್ಷಣಕಾರಿಗಳು. ಉತ್ಕರ್ಷಕ ಗುಣದಿಂದಾಗಿ ಕ್ಲೋರೇಟುಗಳು ಬಲು ಅಪಾಯಕಾರಿ ವಸ್ತುಗಳೆನಿಸಿವೆ. ಸಾವಯವ ವಸ್ತುಗಳು, ಅಲ್ಯೂಮಿನಿಯಂ, ಮೆಗ್ನೀಸಿಯಮ್, ತಾಮ್ರ ಮೊದಲಾದ ಲೋಹಗಳನ್ನಾಗಲಿ ಕಾರ್ಬನ್, ಫಾಸ್ಫರಸ್, ಸಲ್ಫರ್ ಮುಂತಾದ ಅಲೋಹಗಳನ್ನಾಗಲಿ ಕ್ಲೋರೇಟಿನೊಡನೆ ಬೆರೆಸಿ ಮಿಶ್ರಣವನ್ನು ಸುತ್ತಿಗೆಯಿಂದ ಕುಟ್ಟಿದರೆ ಅಥವಾ ಕಾಸಿದರೆ ತೀವ್ರ ಆಸ್ಫೋಟನೆಯಾಗುವುದು. ಆದ್ದರಿಂದ ಇಂಥ ಮಿಶ್ರಣವನ್ನು ಕುಟ್ಟಾಣಿಗಳಲ್ಲಿ ಅರೆಯಬಾರದು. ಈ ವಸ್ತುಗಳನ್ನು ಮಿಶ್ರಮಾಡಬೇಕಾಗಿ ಬಂದರೆ ಇವನ್ನು ಬೇರೆಬೇರೆಯಾಗಿ ಅರೆದು ಕಾಗದದ ಮೇಲೆ ಒಂದು ಗರಿಯಿಂದ ಬೆರೆಸಬೇಕು.

ಕ್ಲೋರೇಟುಗಳಿಗೆ ಹಲವಾರು ಬಗೆಯ ಉಪಯೋಗಗಳಿವೆ. ಪೊಟ್ಯಾಸಿಯಮ್ ಕ್ಲೋರೇಟಿನ ಲಾಸೆಂಜುಗಳನ್ನು ಗಂಟಲುಹುಣ್ಣಿನ ನಿವಾರಣೆಗೆ ಬಳಸುತ್ತಾರೆ. ಬೆಂಕಿಕಡ್ಡಿ ಮತ್ತು ಆಸ್ಫೋಟಕಗಳ ತಯಾರಿಕೆಗೂ ಇದು ಅಗತ್ಯ. ಬಾಣ ಬಿರುಸುಗಳಲ್ಲಿ ಬೇರಿಯಮ್ ಕ್ಲೋರೇಟಿನ ಉಪಯೋಗ ಉಂಟು. ಇದರಿಂದ ಹಸಿರು ಬೆಳಕು ಹೊರಡುತ್ತದೆ. ಪ್ರಯೋಗಶಾಲೆಯಲ್ಲಿ ಆಕ್ಸಿಜನ್ನನ್ನು ತಯಾರಿಸಲು ಪೊಟ್ಯಾಸಿಯಮ್ ಕ್ಲೋರೇಟನ್ನು ಉಪಯೋಗಿಸುತ್ತಾರೆ. ಅಸಿಟಿಕ್ ಆಮ್ಲ ಮತ್ತು ಈಥೈಲ್ ಆಲ್ಕೊಹಾಲುಗಳ ಎಸ್ಟರೀಕರಣ ಕ್ರಿಯೆಗೆ ಕ್ಯಾಲ್ಸಿಯಮ್ ಕ್ಲೋರೇಟು ವೇಗವರ್ಧಕವಾಗಿ ಬಳಕೆಯಾಗುತ್ತದೆ. ಸೋಡಿಯಮ್ ಕ್ಲೋರೇಟನ್ನು ಕಳೆನಾಶಕವಾಗಿ ಮತ್ತು ಅನಿಲೀನ್ ಬ್ಲ್ಯಾಕ್ ಬಣ್ಣದ ಉತ್ಪಾದನೆಯಲ್ಲಿ ಬಳಸಲಾಗುತ್ತಿದೆ. ಕ್ಯಾಲಿಕೊ ಮುದ್ರಣದಲ್ಲಿ ಕ್ಲೋರೇಟುಗಳ ಬಳಕೆ ಉಂಟು. (ಎಚ್.ಜಿ.ಎಸ್.)

**ಕ್ಲೋರೈಟ್ :** ಜೇಡಿಖನಿಜಗಳಲ್ಲೊಂದು (ಕ್ಲೇ ಮಿನೆರಲ್ಸ್): ಹಲವಾರು ಲೋಹಗಳ ಸಿಲಿಕೇಟ್ ಲವಣಗಳು ನೀರಿನೊಂದಿಗೆ ಸೇರಿ ಉಂಟಾಗುವ ವಸ್ತು. ಅಭ್ರಕಕ್ಕೆ ಬಲು ಹತ್ತಿರದ ಸಂಬಂಧಿ. ಅದರಂತೆಯೆ ಪದರಪದರವಾದ ರಚನೆಯನ್ನು ಪ್ರದರ್ಶಿಸುತ್ತದೆ; ಇದು ಕೂಡ ಮಾನೊಕ್ಲಿನಿಕ್ ಹರಳುವರ್ಗಕ್ಕೆ ಸೇರಿದೆಯಲ್ಲದೆ ಒರೆಗಲ್ಲಿಗೆ ಉಜ್ಜಿದಾಗ ಬಿಳಿ ಇಲ್ಲವೆ ತಿಳಿಹಸಿರು ಬಣ್ಣದ ಒರೆಯನ್ನು ಕೊಡುತ್ತದೆ. ಆದರೆ ಕ್ಲೋರೈಟಿನ ಪದರಗಳು ಅಭ್ರಕದ ಪದರಗಳಂತೆ ಹಿಗ್ಗುವುದಿಲ್ಲ. ಸುಲಭವಾಗಿ ಮುರಿಯುತ್ತವೆ. ಕ್ಲೋರೈಟಿನಲ್ಲಿ ಸಂಯೋಗವಾಗಿರುವ ಲೋಹಗಳು ಮೆಗ್ನೀಸಿಯಂ, ಕಬ್ಬಿಣ, ಅಲ್ಯೂಮಿನಿಯಮ್ ಇತ್ಯಾದಿ. ಕೆಲವೊಮ್ಮೆ ಕ್ರೋಮಿಯಮ್, ಮ್ಯಾಂಗನೀಸ್, ನಿಕಲ್, ಟೈಟೇನಿಯಮ್ ಮುಂತಾದವೂ ಅಲ್ಪ ಪರಿಮಾಣಗಳಲ್ಲಿ ಇರುವುದುಂಟು. ಕ್ಲೋರೈಟಿನಲ್ಲಿ ಮುಖ್ಯವಾಗಿ ಎರಡು ಬಗೆಗಳುಂಟು–ಆರ್ಥೊಕ್ಲೋರೈಟ್ ಮತ್ತು ಲೆಪ್ಟೊಕ್ಲೋರೈಟ್, ಪೆನಿಟೈಟ್ ಕ್ಲೈನೊಕ್ಲೋರ್, ಕೊರಂಡೊಫಿಲೈಟ್ ಡ್ಯಾಫ್ನೈಟ್ ಮುಂತಾದವು ಆರ್ಥೊಕ್ಲೋರೈಟುಗಳು. ಲೆಪ್ಟೊಕ್ಲೋರೈಟುಗಳಿಗೆ ಉದಾಹರಣೆ ಕ್ಯಾಮೊಸೈಟ್ ಮತ್ತು ತುರಿಂಜೈಟ್.

ಕ್ಲೋರೈಟುಗಳು ಪದರಗಲ್ಲುಗಳಲ್ಲೂ (ಷಿಸ್ಟ್ಸ್) ಜಲೋಷ್ಣವ್ಯತ್ಯಸ್ತವಾದ ಅಗ್ನಿಶಿಲೆಗಳಲ್ಲೂ ಕಾಣಬರುತ್ತವೆ. (ಎ.ಎಸ್.ಎಸ್.ಐ.)

**ಕ್ಲೋರೈಡ್ :** ಹೈಡ್ರೊಕ್ಲೋರಿಕ್ ಆಮ್ಲ ಮತ್ತು ಹಲವಾರು ಬಗೆಯ ಧಾತುಗಳಿಂದ ಉತ್ಪತ್ತಿಯಾಗುವ ಒಂದು ಸಂಯುಕ್ತ. ಧಾತು ಲೋಹ ಇಲ್ಲವೆ ಅಲೋಹವಾಗಿರಬಹುದು. ಕ್ಲೋರೈಡುಗಳಲ್ಲಿ ಎರಡು ವಿಧ–ಇನಾರ್ಗ್ಯಾನಿಕ್ ಮತ್ತು ಆರ್ಗ್ಯಾನಿಕ್. ಇನಾರ್ಗ್ಯಾನಿಕ್ ಕ್ಲೋರೈಡುಗಳನ್ನು ಸಹವೇಲೆಂಟ್, ಅಯಾನಿಕ್ ಮತ್ತು ಸಂಕೀರ್ಣ ಎಂದು ಮೂರು ಬಗೆಗಳಾಗಿ ವಿಂಗಡಿಸಲಾಗಿದೆ, ಸಹವೇಲೆಂಟ್ ಕ್ಲೋರೈಡುಗಳು ತಮ್ಮ ಕೆಳಮಟ್ಟದ ಕುದಿಬಿಂದು ಹಾಗೂ ದ್ರವನಬಿಂದುಗಳಿಂದಾಗಿ ಉಳಿದ ಬಗೆಗಳಿಂದ ಬೇರೆಯಾಗಿವೆ. ಬೋರಾನ್ ಟ್ರೈಕ್ಲೋರೈಡ್ ($BCl_3$), ಕಾರ್ಬನ್ ಟೆಟ್ರಕ್ಲೋರೈಡ್ ($CCl_4$), ಫಾಸ್ಫರಸ್ ಪೆಂಟಕ್ಲೋರೈಡ್ ($PCl_5$) ಮುಂತಾದ ಅಲೋಹೀಯ ಕ್ಲೋರೈಡುಗಳೂ ಅಲ್ಯೂಮಿನಿಯಂ ಕ್ಲೋರೈಡ್ ($Al_2Cl_6$), ಸ್ಟ್ಯಾನಿಕ್ ಕ್ಲೋರೈಡ್ ($S_nCl_4$), ಆಂಟಿಮನಿ ಪೆಂಟಕ್ಲೋರೈಡ್ ($SbCl_5$) ಮುಂತಾದ ಲೋಹೀಯ ಕ್ಲೋರೈಡುಗಳೂ ಸಹವೇಲೆಂಟ್ ಕ್ಲೋರೈಡುಗಳಿಗೆ ಕೆಲವು ಉದಾಹರಣೆಗಳು.

ಅಯಾನಿಕ್ ಕ್ಲೋರೈಡುಗಳ ಕುದಿ ಹಾಗೂ ದ್ರವನ ಬಿಂದುಗಳು ಹೆಚ್ಚಿನ ಮಟ್ಟದವು. ಕರಗಿದ ಸ್ಥಿತಿಯಲ್ಲಿ ಇವು ಉತ್ತಮ ಬಗೆಯ ವಿದ್ಯುದ್ವಾಹಕಗಳು. ಉದಾಹರಣೆ: ಸೋಡಿಯಂ ಕ್ಲೋರೈಡ್ (NaCl), ಕ್ಯಾಲ್ಸಿಯಂ ಕ್ಲೋರೈಡ್ ($CaCl_2$) ಮತ್ತು ಮೆಗ್ನೀಸಿಯಂ ಕ್ಲೋರೈಡ್ ($MgCl_2$), ಬೆರಿಲಿಯಂ ಕ್ಲೋರೈಡ್ ($BeCl_2$), ಝಿಂಕ್ ಕ್ಲೋರೈಡ್ ($ZnCl_2$), ಮರ್ಕ್ಯೂರಿಕ್ ಕ್ಲೋರೈಡ್ ($HgCl_2$) ಮುಂತಾದವು ಸಹ–ವೇಲೆಂಟ್ ಮತ್ತು ಅಯಾನಿಕ್ ಕ್ಲೋರೈಡುಗಳ ಮಧ್ಯವರ್ತಿ ಬಗೆಯವು.

ಲೋಹೀಯ ಕ್ಲೋರೈಡುಗಳನ್ನು ಅವಕ್ಕೇ ಸಂಬಂಧಿಸಿದ ಹಾಗೂ ಕ್ಲೋರೈಡು ಅಯಾನುಗಳನ್ನು ಹೆಚ್ಚಿನ ಪರಿಮಾಣದಲ್ಲಿ ಒಳಗೊಂಡಿರುವ ದ್ರಾವಣಗಳಲ್ಲಿ ಕರಗಿಸಿದಾಗ ಸಂಕೀರ್ಣ ಬಗೆಯ ಕ್ಲೋರೈಡುಗಳು ಉತ್ಪತ್ತಿಯಾಗುತ್ತವೆ. ಉದಾಹರಣೆಗೆ ಸಿಲ್ವರ್ ಕ್ಲೋರೈಡನ್ನು ($AgCl_2$) ಹೆಚ್ಚಿನ ಪರಿಮಾಣದಲ್ಲಿ ಕ್ಲೋರೈಡ್ ಅಯಾನುಗಳನ್ನು ಒಳಗೊಂಡಿರುವ ದ್ರಾವಣದಲ್ಲಿ ವಿಲೀನಗೊಳಿಸಿದಾಗ $AgCl_3$ ಎಂಬ ಸಂಕೀರ್ಣ ಬಗೆಯ ಕ್ಲೋರೈಡ್ ಉತ್ಪತ್ತಿಯಾಗುತ್ತದೆ. ಕೋಬಾಲ್ಟ್ ಕ್ಲೋರೈಡ್ $COCl_4$ ಟಿನ್ ಕ್ಲೋರೈಡ್ $SnCl_6$ ಪ್ಲಾಟಿನಂ ಕ್ಲೋರೈಡ್ $PtCl_6$ ಮುಂತಾದವು ಸಂಕೀರ್ಣ ಬಗೆಯ ಕ್ಲೋರೈಡುಗಳಿಗೆ ಇತರ ಉದಾಹರಣೆಗಳು. ಕೆಲವು ಬಗೆಯ ಸಂಕೀರ್ಣ ಕ್ಲೋರೈಡುಗಳಲ್ಲಿ ಕ್ಲೋರಿನ್ನಿನೊಂದಿಗೆ ಒಂದಕ್ಕಿಂತ ಹೆಚ್ಚು ಧಾತುಗಳು ಸಂಯೋಗವಾಗಿರಬಹುದು. ಉದಾಹರಣೆಗೆ $NH_4CdCl_3$, $K_2HgCl_4.H_2O$, $K_2SnCl_4Cl_4H_2O$ ಇತ್ಯಾದಿ.

ಕ್ಲೋರೈಡುಗಳಲ್ಲೆಲ್ಲ ಸೋಡಿಯಂ ಕ್ಲೋರೈಡ್ (ಅಡುಗೆಉಪ್ಪು) ಅತ್ಯಂತ ಮುಖ್ಯವಾದುದು, ಸೋಡಿಯಂ, ಕ್ಲೋರಿನ್ ಮತ್ತು ಇವುಗಳ ಸಂಯುಕ್ತಗಳ ಉದ್ಯಮಕ್ಕೆ ಇದೇ ಮೂಲ. (ಎಚ್.ಜಿ.ಎಸ್.)

**ಕ್ಲೋರೊಅಸಿಟಿಕ್ ಆಮ್ಲ :** ಅಸಿಟಿಕ್ ಆಮ್ಲದಲ್ಲಿರುವ ಮೀಥೈಲ್ ಗುಂಪಿನ ಜಲಜನಕವನ್ನು ಕ್ಲೋರಿನ್ನಿನ ಒಂದು, ಎರಡು ಮತ್ತು ಮೂರು ಪರಮಾಣುಗಳಿಂದ ಪಲ್ಲಟಿಸಿದಾಗ ಉತ್ಪತ್ತಿಯಾಗುವ ಸಂಯುಕ್ತ. ಕ್ಲೋರಿನ್ನಿನ ಪರಮಾಣುಗಳ ಸಂಖ್ಯೆಯ ಆಧಾರದ ಮೇಲೆ ಇದನ್ನು ಮಾನೋ–, ಡೈ– ಮತ್ತು ಟ್ರೈಕ್ಲೋರೊ ಅಸಿಟಿಕ್ ಆಮ್ಲಗಳೆಂದು 3 ಬಗೆಗಳಾಗಿ ವಿಂಗಡಿಸಬಹುದು. ಇವುಗಳ ಭೌತ ನಿಯತಾಂಕಗಳನ್ನು ಮುಂದೆ ಕಾಣಿಸಿರುವ ಯಾದಿಯಲ್ಲಿ ತೋರಿಸಲಾಗಿದೆ.

| ಹೆಸರು | ಸಾಂದ್ರತೆ ಬಿಂದು | ಕರಗುವ ಬಿಂದು 0 ° ಸೆಂ. | ಕುದಿ 0° ಸೆಂ. | ವಿಯೋಜನಾ ನಿಯತಾಂಕ X $10^3$ |
|---|---|---|---|---|
| ಮಾನೋಕ್ಲೋರೊಅಸಿಟಿಕ್ ಆಮ್ಲ | 1.370 | 62 | 189 | 1.55 |
| ಡೈಕ್ಲೋರೊಅಸಿಟಿಕ್ ಆಮ್ಲ | 1.536 | 11 | 194 | 51.4 |
| ಟ್ರೈಕ್ಲೋರೊಅಸಿಟಿಕ್ ಅಮ್ಲ | 1.617 | 57.5 | 197.5 | 1210 |

**ಮಾನೊಕ್ಲೋರೊಅಸಿಟಿಕ್ ಆಮ್ಲ :** ಕ್ಲೋರಿನ್ನನ್ನು ಅಯೊಡೀನ್, ರಂಜಕ ಅಥವಾ ಗಂಧಕದ ಸಂಪರ್ಕದಲ್ಲಿ ಕುದಿಯುತ್ತಿರುವ ಅಸಿಟಿಕ್ ಆಮ್ಲದ ಮುಖಾಂತರ ಹಾಯಿಸಿದಾಗ ಇದು ಉತ್ಪತ್ತಿಯಾಗುತ್ತದೆ. ಅಸಿಟಿಲೀನಿನಿಂದ ತಯಾರಿಸಿದ ಟ್ರೈಕ್ಲೋರ್ ಎಥಿಲೀನನ್ನು ಶೇ.75 ಸಲ್ಫ್ಯೂರಿಕ್ ಆಮ್ಲದೊಡನೆ 140° ಸೆಂ. ಉಷ್ಣತೆಯಲ್ಲಿ ಜಲವಿಶ್ಲೇಷಿಸಿಯೂ ಇದನ್ನು ಪಡೆಯಬಹುದು.

ಇದು ಬಣ್ಣವಿಲ್ಲದ, ಜಲಾಕರ್ಷಕ, ಸ್ಫಟಿಕಾಕೃತಿಯ, ತೀಕ್ಷ್ಣದಾಹಕ ಗುಣವುಳ್ಳ ವಸ್ತು. ನೀರು, ಆಲ್ಕೊಹಾಲ್ ಮತ್ತು ಈಥರುಗಳಲ್ಲಿ ವಿಲೀನವಾಗುತ್ತವೆ. ಇದು ಅಸಿಟಿಕ್ ಆಮ್ಲಕ್ಕಿಂತಲೂ ಪ್ರಬಲವಾದದ್ದು, ಆಮ್ಲದ ಮತ್ತು ಮೀಥೈಲ್ ಗುಂಪುಗಳೆರಡರ ಗುಣಗಳನ್ನೂ ಪ್ರದರ್ಶಿಸುತ್ತದೆ. ಕ್ಷಾರ, ಸತು, ಆಲ್ಕೊಹಾಲುಗಳೊಂದಿಗೆ ವರ್ತಿಸಿ ತನ್ನ ಆಮ್ಲೀಯ ಗುಣಗಳನ್ನು ವ್ಯಕ್ತಪಡಿಸುತ್ತದೆ. ಪೊಟ್ಯಾಸಿಯಂ ಹೈಡ್ರಾಕ್ಸೈಡಿನ ನೀರಿನ ದ್ರಾವಣ ಅಥವಾ ತೇವವಿರುವ ಸಿಲ್ವರ್ ಆಕ್ಸೈಡಿನೊಡನೆ ಕಾಸಿದಾಗ ಗ್ಲೈಕಾಲಿಕ್ ಆಮ್ಲವಾಗಿ ಪರಿವರ್ತಿತವಾಗುತ್ತದೆ.

ಮಾನೊಕ್ಲೋರೊಅಸಿಟಿಕ್ ಆಮ್ಲದ ಉಪಯೋಗಗಳು ಬಹಳ. ಹಲವಾರು ಸಂಯುಕ್ತಗಳ ಉತ್ಪಾದನೆಗೆ ಇದನ್ನು ಮಧ್ಯವರ್ತಿಯನ್ನಾಗಿ ಬಳಸುತ್ತಾರೆ. ಸೋಡಮೈಡು ವಿಧಾನದಿಂದ ಕೃತಕ ಇಂಡಿಗೊ ಬಣ್ಣದ ಉತ್ಪಾದನೆಗೆ ಇದು ಬಹುಮುಖ್ಯ ಕಚ್ಚಾವಸ್ತು. ಈಥೈಲ್ ಕ್ಲೋರೊಅಸಿಟಿಕ್ ಆಮ್ಲ, ಗ್ಲೈಸಿನ್, ಸಂಶ್ಲೇಷಿತ ಕ್ಯಾಫೀನ್, ಥಯೋಗ್ಲೈಕಾಲಿಕ್ ಆಮ್ಲ ಸರ್ಕೋಸಿನ್ ಮತ್ತು ಪಿರಿಡಾಕ್ಸಿನ್ (ವಿಟಮಿನ್ $B_6$) ಮುಂತಾದವುಗಳ ತಯಾರಿಕೆಯಲ್ಲೂ ಇದು ಆವಶ್ಯಕ. ಅಲ್ಲದೆ ಇದರಿಂದ ಪ್ರಸಿದ್ಧ ಕಳೆನಿವಾರಕವಾದ 2.4– ಡೈಕ್ಲೋರೊಫೀನಾಕ್ಸಿ ಅಸಿಟಿಕ್ ಆಮ್ಲವನ್ನು (2,4D) ಉತ್ಪಾದಿಸಬಹುದು. ಇದಕ್ಕೆ ಔಷಧೀಯ ಗುಣಗಳೂ ಉಂಟು. ಆಣಿ, ನರಹುಲಿ ಮುಂತಾದವುಗಳ ನಿವಾರಣೆಗೂ ಗುಳ್ಳೆಗಳೆಬ್ಬಿಸುವ ಮದ್ದಾಗಿಯೂ ಇದನ್ನು ಬಳಸುವುದಿದೆ.

**ಡೈಕ್ಲೋರೊಅಸಿಟಿಕ್ ಆಮ್ಲ :** ಕ್ಲೋರಾಲ್ ಹೈಡ್ರೇಟನ್ನು ಪೊಟ್ಯಾಸಿಯಂ ಸಯನೈಡಿನ ನೀರಿನ ದ್ರಾವಣದೊಂದಿಗೆ ಕುದಿಸಿದಾಗ ಇದು ತಯಾರಾಗುತ್ತದೆ. ಇದರ ರಾಸಾಯನಿಕ ಸೂತ್ರ : $CHCl_2.COOH$. ಇದು ಬಣ್ಣವಿಲ್ಲದ ಒಂದು ದ್ರವ. ಮಾನೊಕ್ಲೋರೊಅಸಿಟಿಕ್ ಆಮ್ಲದಂತೆಯೆ ಇದು ಕೂಡ ನೀರು, ಆಲ್ಕೊಹಾಲ್, ಈಥರ್ ಮುಂತಾದವುಗಳಲ್ಲಿ ವಿಲೀನವಾಗುತ್ತದೆ. ಇದಕ್ಕೂ ಗುಳ್ಳೆಗಳೆಬ್ಬಿಸುವ ಗುಣ ಇದೆ.

**ಟ್ರೈಕ್ಲೋರೊಅಸಿಟಿಕ್ ಆಮ್ಲ :** ಕ್ಲೋರಾಲ್ ಹೈಡ್ರೇಟನ್ನು ಸಾರನೈಟ್ರಿಕ್ ಆಮ್ಲದಿಂದ ಉತ್ಕರ್ಷಿಸಿ ಇದನ್ನು ಪಡೆಯಬಹುದು. ಇದರ ರಾಸಾಯನಿಕ ಸೂತ್ರ : $CCl_3.COOH$. ಇದು ಬಣ್ಣವಿಲ್ಲದ ಸ್ಫಟಿಕಾಕೃತಿಯ, ಜಲಾಕರ್ಷಕ ಘನ ವಸ್ತು. ಸಾವಯವ ಆಮ್ಲಗಳಲ್ಲೆಲ್ಲ ಅತ್ಯಂತ ಪ್ರಬಲವಾದುದು. ಚರ್ಮಕ್ಕೆ ತಗುಲಿದರೆ ಚರ್ಮ ಸುಡುತ್ತದೆ. ಪ್ರೋಟೀನುಗಳನ್ನು ಅವುಗಳ ದ್ರಾವಣಗಳಿಂದ ಪರಿಮಾಣಾತ್ಮಕವಾಗಿ ಒತ್ತರಿಸುತ್ತದೆ. ಕ್ಷಾರಗಳೊಂದಿಗೆ ವರ್ತಿಸಿದಾಗ ಕ್ಲೋರೊಫಾರಂ ಮತ್ತು ಕಾರ್ಬನ್ ಡೈಆಕ್ಸೈಡ್ ಆಗಿ ವಿಭಜಿತವಾಗುತ್ತದೆ.

ಆಣಿ ಹಾಗೂ ನರಹುಲಿ ತೆಗೆಯುವುದಕ್ಕೂ ಪ್ರತಿಬಂಧಕವಾಗಿಯೂ ಇದನ್ನು ಉಪಯೋಗಿಸುತ್ತಾರೆ. (ಪಿ.ಜಿ.ಆರ್.)

**ಕ್ಲೋರೊಡೈಫ್ಲೂರೊಮೀಥೇನ್ :** ಕಾರ್ಬನ್ ಟೆಟ್ರಕ್ಲೋರೈಡನ್ನು ಆಂಟಿಮನಿ ಪೆಂಟಸಲ್ಫೈಡಿನೊಡನೆ ಆಂಟಿಮನಿ ಟ್ರೈಫ್ಲೂರೈಡ್ ವೇಗವರ್ಧಕದ ಸಾನ್ನಿಧ್ಯದಲ್ಲಿ ಕಾಸಿದಾಗ ಬರುವ ಉತ್ಪನ್ನಗಳಲ್ಲೊಂದು. ಇದು ಶೀತಕಗಳಲ್ಲಿಯೂ (ರೆಫ್ರಿಜಿರೇಟರ್ಸ್) ಅತಿಶೀತಕ ಘಟಕಗಳಲ್ಲೂ (ಡೀಪ್ ಫ್ರೀಜ್ ಯೂನಿಟ್ಸ್) ಹೇರಳವಾಗಿ ಬಳಕೆಯಾಗುತ್ತದೆ. ಕ್ಲೋರೊಡೈಫ್ಲೂರೊಮೀಥೇನನ್ನು ಚೆನ್ನಾಗಿ ಕಾಸಿ ವಿಭಜಿಸಿ, ಇಮಲ್ಷನ್ ಪಾಲಿಮರೀಕರಣಕ್ಕೆ ಒಳಪಡಿಸಿದಾಗ ಟೆಫ್ಲಾನ್ ಎಂಬ ಬಹೂಪಯೋಗೀ ಪ್ಲಾಸ್ಟಿಕ್ ದೊರೆಯುತ್ತದೆ. ಕುದಿಯುವ ಆಮ್ಲಗಳಲ್ಲಾಗಲಿ ಆಕ್ವರೀಜೀಯದಲ್ಲಾಗಲಿ ಇಲ್ಲವೆ 325° ಸೆಂ. ಉಷ್ಣತೆಯಲ್ಲಾಗಲಿ ಟೆಫ್ಲಾನ್ ಕೆಡದೆ ಇರುತ್ತದೆ. ವಿಶೇಷ ತರದ ಗ್ಯಾಸ್ಕೆಟ್ಟುಗಳಲ್ಲಿ, ವಿದ್ಯುದವಾಹಕಗಳಲ್ಲಿ(ಇನ್ಸುಲೇಟರ್ಸ್) ಕ್ರಿಮಿನಾಶಕ ಬಾಂಬುಗಳಲ್ಲಿ ಮತ್ತು ಸಂರಕ್ಷಕ ಹೊದಿಕೆಗಳಲ್ಲಿ ಇದನ್ನು ಬಳಸುತ್ತಾರೆ. (ಆರ್.ಎಸ್.ಎನ್.)

**ಕ್ಲೋರೊಪಿಕ್ರಿನ್ :** ಚಲುವೆಪುಡಿಯನ್ನು ಹಲವಾರು ಬಗೆಯ ಸಸಾರಜನಕ ಸಂಯುಕ್ತ ವಸ್ತುಗಳೊಂದಿಗೆ (ಉದಾಹರಣೆಗೆ ಪಿಕ್ರಿಕ್ ಆಮ್ಲ, ನೈಟ್ರೊ ಮೀಥೇನ್ ಇತ್ಯಾದಿ) ಸೇರಿಸಿ ಆಸವೀಕರಣಕ್ಕೊಳಪಡಿಸಿ ಪಡೆಯಲಾಗುವ ಒಂದು ರಾಸಾಯನಿಕ ವಸ್ತು. ರಾಸಾಯನಿಕವಾಗಿ ಇದು ಟ್ರೈಕ್ಲೋರೊ ನೈಟ್ರೊಮೀಥೇನ್ ಇಲ್ಲವೆ ನೈಟ್ರೊಕ್ಲೋರೊಫಾರಂ. ಇದರ ಸರಳಸೂತ್ರ $CCl_3NO_2$. ಕ್ಲೋರಾಲ್ ಅಥವಾ ಕ್ಲೋರೊಫಾರಮ್ಮನ್ನು ಸಾರ ನೈಟ್ರಿಕ್ ಆಮ್ಲದಿಂದ ವರ್ತಿಸುವುದರಿಂದಾಗಲಿ ಸ್ಟ್ರೈಮೀನ್, ಅಸಿಟೋನ್ ಅಥವಾ ಅಸಿಟೋನ್ ತಯಾರಿಕೆಯಲ್ಲಿ ಬರುವ ಹಲವಾರು ಉಪೋತ್ಪನ್ನಗಳನ್ನು ಆಕ್ವರೀಜೀಯದ ವರ್ತನೆಗೆ ಒಳಪಡಿಸುವುದರಿಂದಾಗಲಿ ಕ್ಲೋರೊಪಿಕ್ರಿನ್ನನ್ನು ತಯಾರಿಸಬಹುದು.

ಕ್ಲೋರೊಪಿಕ್ರಿನ್ ವರ್ಣರಹಿತ ಮತ್ತು ಎಣ್ಣೆಯಂಥ ದ್ರವ. ನೀರಿನಲ್ಲಿ ಅತ್ಯಂತ ಕಡಿಮೆ ಪರಿಮಾಣದಲ್ಲೂ ಬೆಂಜೀನ್, ಅಮೈಲ್ ಆಲ್ಕೊಹಾಲ್, ಈಥೈಲ್ ಆಲ್ಕೊಹಾಲ್ ಮುಂತಾದವುಗಳಲ್ಲಿ ಸುಲಭವಾಗಿಯೂ ವಿಲೀನವಾಗುತ್ತದೆ. ಇದಕ್ಕೆ ಮಧುರವಾದ ಆದರೆ ತೀಕ್ಷ್ಣವಾದ ವಾಸನೆ ಉಂಟು. ಕ್ಲೋರೊಪಿಕ್ರಿನ್ನಿನ ಒಂದು ವಿಶೇಷ ಲಕ್ಷಣವೆಂದರೆ ಇದರ ಹಬೆ ಅತ್ಯಂತ ಪ್ರಬಲ ಅಶ್ರುಕಾರಕವಾಗಿರುವುದು. ಹೆಚ್ಚಿನ ಪರಿಮಾಣದಲ್ಲಿದ್ದಾಗ ಇದು ವಿಷಪೂರಿತವೂ ಹೌದು; ಶ್ವಾಸಕೋಶಗಳ ಮೇಲೆ ತೀವ್ರವಾದ ದುಷ್ಪರಿಣಾಮವನ್ನು ಉಂಟುಮಾಡಿ ಸಾವು ತರಬಲ್ಲುದು. ಈ ಕಾರಣದಿಂದಾಗಿ ಒಂದನೆಯ ಮಹಾಯುದ್ಧದಲ್ಲಿ ಕ್ಲೋರೊಪಿಕ್ರಿನ್ನನ್ನು ವಿಷಾನಿಲವಾಗಿ ಬಳಸಲಾಯಿತು. ಈಚೀಚೆಗೆ ಇದನ್ನು ಸೋಂಕು ನಿವಾರಕ ಕೀಟನಾಶಕ ಹಾಗೂ ದಂಶಕನಾಶಕವಾಗಿ ಬಳಸುವುದೇ ಹೆಚ್ಚು.. ನೇರಿಳೆ ವರ್ಣದ್ರವ್ಯದ (ಕ್ರಿಸ್ಟಲ್ ವೈಯೊಲೆಟ್) ತಯಾರಿಕೆಯಲ್ಲಿ ಮತ್ತು ಕ್ವಿನಲೀನ್ ತಯಾರಿಕೆಯಲ್ಲಿ ನೈಟ್ರೊಬೆಂಜೀನ್ ಬದಲಿಗೆ ಉತ್ಕರ್ಷಕವಾಗಿ ಇದನ್ನು ಉಪಯೋಗಿಸುತ್ತಾರೆ. (ಎಚ್.ಎಸ್.ಎನ್.)

**ಕ್ಲೋರೊಪ್ಲಾಟಿನಿಕ್ ಆಮ್ಲ :** ಪ್ಲಾಟಿನಂ ಲೋಹವನ್ನು ಅಕ್ವರೀಜೀಯದಲ್ಲಿ ವಿಲೀನಗೊಳಿಸಿ, ಫಲಿತದ್ರಾವಣವನ್ನು ಹೈಡ್ರೊಕ್ಲೋರಿಕ್ ಆಮ್ಲದ ಸಂಪರ್ಕದಲ್ಲಿ ಕುದಿಸಿ ಇಂಗಿಸಿದಾಗ ಬರುವ ರಾಸಾಯನಿಕ ವಸ್ತು. ಹೆಕ್ಸ ಕ್ಲೋರೊಪ್ಲಾಟಿನಿಕ್ ಆಮ್ಲವೆಂಬ ಹೆಸರೂ ಇದೆ. ಇದರ ರಾಸಾಯನಿಕ ಸೂತ್ರ $H_2PtCl_6.6H_2O$. ಇದು ಕಂದುಮಿಶ್ರಿತ ಕೆಂಪು ಹರಳಿನ ರೂಪದಲ್ಲಿರುತ್ತದೆ. ಇದನ್ನು ಕ್ಲೋರಿನ್ ಅನಿಲದ ಸಂಪರ್ಕದಲ್ಲಿ, 370° ಸೆಂ.ನಲ್ಲಿ ಕಾಸಿದರೆ ಶುದ್ಧ ಪ್ಲಾಟಿನಿಕ್ ಕ್ಲೋರೈಡ್ ಆಗಿ ಪರಿವರ್ತನೆಯಾಗುತ್ತದೆ. ಇದು ನೀರು, ಈಥೈಲ್ ಆಲ್ಕೊಹಾಲ್ ಮತ್ತು ಈಥರುಗಳಲ್ಲಿ ವಿಲೀನವಾಗಬಲ್ಲುದು. ಈ ಆಮ್ಲದ ಎರಡು ಮುಖ್ಯ ಲವಣಗಳೆಂದರೆ ಪೊಟ್ಯಾಸಿಯಂ ಮತ್ತು ಅಮೋನಿಯಂ ಲವಣಗಳು. ಲೋಹಗಳ ರಾಸಾಯನಿಕ ವಿಶ್ಲೇಷಣೆಯಲ್ಲಿ ಪ್ಲಾಟಿನಂ ಲೋಹವನ್ನು ಗುರುತಿಸುವ ವಿಧಾನ ಈ ಲವಣಗಳ ಲಕ್ಷಣಗಳ ಮೇಲೆ ಆಧಾರಿತವಾಗಿದೆ. ಕೈಗಾರಿಕಾ ವೇಗವರ್ಧಕಗಳು, ಅಳಿಸಲಾಗದ ಶಾಯಿಗಳು ಮತ್ತು ಪ್ರತಿಬಿಂಬಕ ಫಲಕಗಳ ತಯಾರಿಕೆಯಲ್ಲಿ ಉನ್ನತ ದರ್ಜೆಯ ಪಿಂಗಾಣಿ ವಸ್ತುಗಳಿಗೆ ಮನೋಹರ ವರ್ಣವಿನ್ಯಾಸ ಕೊಡುವಲ್ಲಿ,

ಮುದ್ರಣಕಾರ್ಯದಲ್ಲಿ ಮತ್ತು ಸತು ಲೋಹದ ಮೇಲಿನ ಕೆತ್ತನೆ ಕೆಲಸಗಳಲ್ಲಿ ಈ ಆಮ್ಲದ ಉಪಯೋಗ ಉಂಟು. (ಎಚ್.ಎಸ್.ಎನ್.)

**ಕ್ಲೋರೊಫಾರಂ :** ಮಧುರವಾಸನೆಯುಳ್ಳ ಬಣ್ಣವಿಲ್ಲದ ಒಂದು ದ್ರವ, $CHCl_3$. ಅರಿವಳಿಕವಾಗಿಯೂ ಕೊಬ್ಬು ಪದಾರ್ಥಗಳ ವಿಲೀನಕವಾಗಿಯೂ ಬಳಕೆಯಲ್ಲಿದೆ. ಜರ್ಮನಿಯಲ್ಲಿ ಜಸ್ಟಸ್ ಫಾನ್ ಲೀಬಿಗ್ (1831), ಅಮೆರಿಕದಲ್ಲಿ ಸಾಮ್ಯುಯೆಲ್ ಗತ್ರಿ ಮತ್ತು ಫ್ರಾನ್ಸಿನಲ್ಲಿ ಸೂಬಿರಾ ಎಂಬ ವಿಜ್ಞಾನಿಗಳು ಇದನ್ನು ತಯಾರಿಸಿದರು. ಮೊತ್ತಮೊದಲ ಬಾರಿಗೆ ಇದನ್ನು ಶಸ್ತ್ರವೈದ್ಯದಲ್ಲಿ ಅರಿವಳಿಕವನ್ನಾಗಿ ಬಳಸಿದವ ಎಡಿನ್‍ಬರೋ ವಿಶ್ವವಿದ್ಯಾಲಯದ ಜೇಮ್ಸ್ ಸಿಂಪ್ಸನ್. ಇದು ಅತ್ಯಂತ ಪ್ರಬಲವಾದ ನಿಶ್ಯಾಸ ಅರಿವಳಿಕಗಳಲ್ಲೊಂದು; ಗಾಳಿಯಲ್ಲಿ ಕೇವಲ ಕೆಲವೇ ಮಿಲಿಲೀಟರ್ ಪರಿಮಾಣದಲ್ಲಿದ್ದರೂ ಜ್ಞಾನವನ್ನು ತಪ್ಪಿಸಬಹುದು. ಇದನ್ನು ಒಳಗೆಳೆದುಕೊಂಡ ಕೆಲವೇ ಮಿನಿಟುಗಳಲ್ಲಿ ಜ್ಞಾನ ತಪ್ಪುತ್ತದೆ. 10–15 ಮಿನಿಟುಗಳ ಅನಂತರ, ಓಕರಿಕೆಯಾಗಲೀ ವಾಂತಿ ಮಾಡುವುದಾಗಲೀ ಇಲ್ಲದೆ, ಅರಿವು ಮರಳಿ ಬರುತ್ತದೆ. (ಕೊಂಚ ಕಾಲ ಅಮಲೇರಿದಂತೆ ಇರಬಹುದು ಅಷ್ಟೆ). ಆದರೆ ಹೃದಯ, ರಕ್ತನಾಳ, ಯಕೃತ್, ಮೇದೋಜೀರಕ ಗ್ರಂಥಿ ಮತ್ತು ಮೂತ್ರಪಿಂಡಗಳ ಚಟುವಟಿಕೆಯನ್ನು ಕುಗ್ಗಿಸುವ ಗುಣ ಇದಕ್ಕಿದೆಯಾಗಿ ಕ್ಲೋರೊಫಾರಮನ್ನು ಬಳಸುವಾಗ ಬಲು ಎಚ್ಚರಿಕೆ ವಹಿಸಬೇಕು. ಸರಿಯಾದ ಪರಿಮಾಣದಲ್ಲಿ ಆಕ್ಸಿಜನ್ನಿನೊಂದಿಗೆ ಸೇರಿಸಬೇಕಾದ ಪರಿಮಾಣವನ್ನು ಮೀರದಂತೆ ಇದನ್ನು ಕೊಡಬೇಕು. ಇಲ್ಲದಿದ್ದರೆ ಸಾವು ಸಂಭವಿಸಬಹುದು. ಕ್ಲೋರೊಫಾರಮಿನ ತೀವ್ರತೆಯಿಂದಾಗಿ ಈಗ ಈಥರ್ ಮತ್ತು ಇದರ ಬಗೆಯ ಅರಿವಳಿಕಗಳನ್ನು ಬಳಸಲಾಗುತ್ತಿದೆ. (ಎ.ಆರ್.ಜಿ.)

**ತಯಾರಿಕೆ :** ಚಲುವೆ ಪುಡಿಯನ್ನು ಅಸಿಟೋನಿನೊಂದಿಗೆ ಇಲ್ಲವೆ ಆಲ್ಕೊಹಾಲಿನೊಂದಿಗೆ ಸೇರಿಸಿ ಕುದಿಸಿ ಅಥವಾ ಕಾರ್ಬನ್ ಟೆಟ್ರಕ್ಲೋರೈಡ್ ದ್ರಾವಣವನ್ನು ನೀರಿನೊಡನೆ ಬೆರೆತಿರುವ ಕಬ್ಬಿಣದ ಚೂರುಗಳ ಜೊತೆಗೆ ಸೇರಿಸಿ ಕುದಿಸಿ ಕ್ಲೋರೊಫಾರಮನ್ನು ತಯಾರಿಸುವುದುಂಟು. ಇದರ ಕುದಿಬಿಂದು 61 ° ಸೆಂ. ನೀರಿನಲ್ಲಿ ಬಲುಕಡಿಮೆ ಪರಿಮಾಣದಲ್ಲಿ ವಿಲೀನವಾಗುತ್ತದೆ. ಆದರೆ ಆಲ್ಕೊಹಾಲ್, ಈಥರ್, ಅಸಿಟೋನ್ ಮುಂತಾದ ಸಾವಯವ ವಿಲೀನಕಾರಿಗಳಲ್ಲಿ ಸುಲಭವಾಗಿ ವಿಲೀನವಾಗುವುದು. ಕ್ಲೋರೊಫಾರಂ ದಹ್ಯ ವಸ್ತುವಲ್ಲ. ಆದರೆ ಬೆಳಕು, ಉಷ್ಣ ಆಕ್ಸಿಜನ್ ಅಥವಾ ಜ್ವಾಲೆಗಳಿಗೆ ಒಡ್ಡಿದಾಗ ವಿಷವಸ್ತುಗಳಾದ ಫಾಸ್ಜೀನ್, ಈಥೈಲ್ ಕ್ಲೋರೈಡ್, ಹೈಡ್ರೊಕ್ಲೋರಿಕ್ ಆಮ್ಲ ಮುಂತಾದವುಗಳಾಗಿ ಪರಿವರ್ತಿತವಾಗುತ್ತದೆ. ಇದರಿಂದಾಗಿ ಕ್ಲೋರೊಫಾರಮನ್ನು ಸಾಮಾನ್ಯವಾಗಿ ಕಂದು ಬಣ್ಣದ ಸೀಸೆಗಳಲ್ಲಿ ಗಾಳಿ ಸೇರಲು ಅವಕಾಶವಿಲ್ಲದಿರುವ ರೀತಿಯಲ್ಲಿ ಭರ್ತಿ ಮಾಡಿಡಬೇಕು.

ಕ್ಲೋರೊಫಾರಮನ್ನು ಕ್ಷಾರದ ಜೊತೆಯಲ್ಲಿ ಕುದಿಸಿದರೆ ಫಾರ್ಮೇಟ್ ಲವಣ ಉತ್ಪತ್ತಿಯಾಗುತ್ತದೆ. ಇದನ್ನು ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ಸೇರಿಕಾಸಿದರೆ ಫಾರ್ಮಿಕ್ ಆಮ್ಲವನ್ನು ಪಡೆಯಬಹುದು. ಕ್ಲೋರೋಫಾರಮನ್ನು ಅಪಕರ್ಷಿಸಿದರೆ ಮೀಥೇನ್ ಮತ್ತು ಮೀಥೈಲ್ ಕ್ಲೋರೈಡುಗಳು ಉತ್ಪತ್ತಿಯಾಗುತ್ತವೆ. (ಕೆ.ಎಸ್.ಎಲ್.)

**ಕ್ಲೋರೊಫಿಲ್ :** ಸಸ್ಯಗಳ ದ್ಯುತಿಸಂಶ್ಲೇಷಣ ಕ್ರಿಯೆಗೆ ಕಾರಣವಾದ ಹಸಿರು ಬಣ್ಣದ ವಸ್ತು. ಶಿಲೀಂಧ್ರಗಳು ಮತ್ತು ಕೆಲವು ಬಗೆಯ ಪರಾವಲಂಬಿ ಸಸ್ಯಗಳನ್ನು ಬಿಟ್ಟು ಎಲ್ಲ ಸಸ್ಯಗಳಲ್ಲೂ ಇದೆ. ಹೂ ಬಿಡುವ ಸಸ್ಯಗಳಲ್ಲಿ ಕ್ಲೋರೊಪ್ಲಾಸ್ಟ್ ಎಂಬ ವಿಶೇಷ ಅಂಗಕಗಳಲ್ಲಿ ಸ್ಥಿತವಾಗಿರುತ್ತದೆ. ವ್ಯವಸ್ಥಿತ ಕ್ಲೋರೊಪ್ಲಾಸ್ಟುಗಳಿಲ್ಲದ ಸಸ್ಯಗಳಲ್ಲಿ (ಉದಾಹರಣೆಗೆ ಸಯನೋಫೈಸೀ ವರ್ಗದವು) ಕೋಶದ್ರವ್ಯದಲ್ಲಿ ಹರಡಿಕೊಂಡಿರುತ್ತದೆ. ಇದರ ಸಹಾಯದಿಂದ ಸಸ್ಯಗಳು ಸೂರ್ಯನ ಬೆಳಕು ಮತ್ತು ಕಾರ್ಬನ್ ಡೈಆಕ್ಸೈಡ್ ಸಮ್ಮುಖದಲ್ಲಿ ತಮ್ಮ ಆಹಾರವನ್ನು ತಯಾರು ಮಾಡಿಕೊಳ್ಳಬಲ್ಲವು. ಕ್ಲೋರೊಫಿಲ್ ಮುಖ್ಯವಾಗಿ ಎಲೆಗಳಲ್ಲಿ ಕಂಡುಬರುತ್ತದೆ. ಆದರೆ ಕಾಂಡ, ಭೂಮಿಯ ಮೇಲಿರುವ ಬೇರುಗಳು, ಹೂಗಳು ಮುಂತಾದ ಭಾಗಗಳಲ್ಲಿ ಸಹ ಇದು ಇರಬಹುದು.

ಉನ್ನತ ದರ್ಜೆಯ ಸಸ್ಯಗಳಲ್ಲಿ ಕ್ಲೋರೊಫಿಲ್ ಬಂಧಕ ರೂಪದಲ್ಲಿ (ಹೋಲೊಕ್ರೋಮ್) ಇರುತ್ತದೆ. ಇದರ ಜೊತೆಗೆ ಪ್ರೋಟೀನುಗಳು ಮತ್ತು ಲಿಪಿಡ್ಡುಗಳು ಇರುತ್ತವೆ. ಅಸಿಟೋನ್, ಪೆಟ್ರೋಲಿಯಂ ಈಥರ್ ಮುಂತಾದ ವಿಲೀನಕಾರಿ ವಸ್ತುಗಳ ಸಹಾಯದಿಂದ ಇದನ್ನು ಪ್ರತ್ಯೇಕಿಸಬಹುದು. ಕ್ಲೋರೊಪ್ಲಾಸ್ಟಿನಲ್ಲಿ ಕ್ಲೋರೊಫಿಲ್ ಮಾತ್ರವಲ್ಲದೆ ಕ್ಯಾರಟೀನ್, ಜ್ಯಾಂತೊಫಿಲ್ ಮುಂತಾದ ಹಳದಿ ಬಣ್ಣದ ವರ್ಣದ್ರವ್ಯಗಳು ಸಹ ಇರುತ್ತವೆ. ಇವು ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ಕ್ಲೋರೊಫಿಲ್ಲಿಗೆ ಸಹಾಯವನ್ನು ನೀಡುತ್ತವೆ. ಹೂ ಬಿಡುವ ಸಸ್ಯಗಳಲ್ಲಿ 5 ಬಗೆಯ ಕ್ಲೋರೊಫಿಲ್ಲುಗಳಿವೆ ಎಂದು ಗೊತ್ತಾಗಿದೆ. ಇವು ಎ, ಬಿ, ಸಿ, ಡಿ ಮತ್ತು ಇ. ಇವಲ್ಲದೆ ದ್ಯುತಿಸಂಶ್ಲೇಷಣ ಕಾರ್ಯವನ್ನು ಪ್ರದರ್ಶಿಸುವ ಬ್ಯಾಕ್ಟೀರಿಯಗಳಲ್ಲಿ ಬ್ಯಾಕ್ಟೀರಿಯಲ್ ಕ್ಲೋರೊಫಿಲ್ ಎಂಬ ಇನ್ನೊಂದು ಬಗೆಯೂ ಹಸಿರು ಬ್ಯಾಕ್ಟೀರಿಯಗಳಲ್ಲಿ ಕ್ಲೋರೊಬಿಯಮ್ ಕ್ಲೋರೋಫಿಲ್ (ಬ್ಯಾಕ್ಟೀರಿಯೊವಿರಿಡಿನ್) ಎಂಬುದೂ ಕಾಣಬರುತ್ತವೆ. ಎ ಬಗೆಯದು ಎಲ್ಲ ಸಸ್ಯವರ್ಗಗಳಲ್ಲಿ ಇದೆ. ಬಿ ಬಗೆಯದು ಆಲ್ಗೆ ಮತ್ತು ಬ್ಯಾಕ್ಟೀರಿಯಗಳನ್ನು ಬಿಟ್ಟು ಎಲ್ಲ ಸಸ್ಯಗಳಲ್ಲೂ ಇದೆ. ಸಿಹಿ ಮತ್ತು ಸಮುದ್ರ ನೀರಿನಲ್ಲಿ ವಾಸಿಸುವ ಡೈನೊಫ್ಲಾಜೆಲೇಟ್ಸ್ ಕಂದು ಆಲ್ಗೆ ಮತ್ತು ಹೊನ್ನಿನ ಬಣ್ಣದ ಆಲ್ಗೆಗಳಲ್ಲಿ ಸಿ ಬಗೆಯದು ಇದೆ. ಡಿ ಬಗೆಯದು ಕೆಂಪು ಆಲ್ಗೆಯಲ್ಲೂ ಇ ಬಗೆಯದು ಕ್ರೈಸೊಫೈಸೀ ಗುಂಪಿನಲ್ಲೂ ಉಂಟು.

ಕ್ಲೋರೊಫಿಲ್ಲನ್ನು ದಟ್ಟ ಹಸಿರು ಬಣ್ಣದ ಮೇಣಗಳಾಗಿ ಪ್ರತ್ಯೇಕಿಸಬಹುದು. ಇವನ್ನು ಹೆಚ್ಚು ಶುದ್ಧೀಕರಿಸಿದಾಗ ಹರಳು ರೂಪಕ್ಕೆ ತಿರುಗುತ್ತವೆ. ಹರಳು ರೂಪಕ್ಕೆ ತಿರುಗಿದಾಗ ಎ ಕ್ಲೋರೊಫಿಲ್ ಷಡ್ಭುಜಾಕೃತಿಯಲ್ಲೂ ಬಿ ಕ್ಲೋರೊಫಿಲ್ ದಟ್ಟ ಹಸಿರು ಬಣ್ಣದ ಸೂಜಿಗಳಂತೆಯೂ ಇರುತ್ತದೆ.

ಚಿತ್ರ 1 ಕ್ಲೋರೋಫಿಲ್ ಎ

ಕ್ಲೋರೊಫಿಲ್ಲನ್ನು ಶುದ್ಧೀಕರಿಸಿ ಹರಳು ರೂಪದಲ್ಲಿ ಸೂಜಿಗಳಂತೆಯೂ ಇರುತ್ತವೆ. ಕ್ಲೋರೊಫಿಲ್ಲನ್ನು ಶುದ್ಧೀಕರಿಸಿ ಹರಳು ರೂಪದಲ್ಲಿ ಪಡೆಯುವ ವಿಧಾನವನ್ನು ಜರ್ಮನ್ ದೇಶದ ರಸಾಯನ ತಜ್ಞ ಆರ್.ವಿಲ್‍ಸ್ಟೆಟರ್ ಈ ಶತಮಾನದ ಆದಿಯಲ್ಲಿ ನಿರೂಪಿಸಿದ. ದ್ರಾವಣ ರೂಪದಲ್ಲಿ ಎ ಕ್ಲೋರೊಫಿಲ್ ನೀಲಿ ಮಿಶ್ರಿತ ಹಸಿರು ಬಣ್ಣದ್ದಾಗಿಯೂ ಬಿ ಕ್ಲೋರೊಫಿಲ್ ಶುದ್ಧ ಹಸಿರು ಬಣ್ಣದ್ದಾಗಿಯೂ ಇರುತ್ತವೆ.




ರಾಸಾಯನಿಕವಾಗಿ ಕ್ಲೋರೊಫಿಲ್ ಮೆಗ್ನೀಸಿಯಂ ಪಾರ್ಫೈರಿನ್ ಸಂಯುಕ್ತ ವಸ್ತು. ಇದರ ಅಣುವಿನ ಕೇಂದ್ರದಲ್ಲಿ ಒಂದು ಮೆಗ್ನೀಸಿಯಂ ಪರಮಾಣು ಮತ್ತು ಅದಕ್ಕೆ ಸೇರಿಕೊಂಡಂತೆ ಅದರ ಸುತ್ತ 4 ಪೈರೊಲ್ ಉಂಗುರಗಳು ಇವೆ. ಸ್ಥೂಲವಾಗಿ ಮನುಷ್ಯನ ರಕ್ತದಲ್ಲಿರುವ ಹೆಮೊಗ್ಲಾಬಿನ್ನಿನ ಹೆಮೆ ಗುಂಪಿನಂತಿವೆ. (ಹೆಮೆಯಲ್ಲಿ ಮೆಗ್ನೀಸಿಯಮಿಗೆ ಬದಲು ಒಂದು ಕಬ್ಬಿಣ ಪರಮಾಣು ಇದೆ.) ಕ್ಲೋರೊಫಿಲ್ ಆಮ್ಲಗಳ ಜೊತೆ ವರ್ತಿಸಿದಾಗ ಮೆಗ್ನೀಸಿಯಂ ಪರಮಾಣು ಸುಲಭವಾಗಿ ವಿಘಟನೆಯಾಗುತ್ತದೆ ಮತ್ತು ಕ್ಲೋರೊಫಿಲ್ಲಿನ ಹಸಿರುಬಣ್ಣ ಕಂದುಬಣ್ಣಕ್ಕೆ ತಿರುಗುತ್ತದೆ. ಕ್ಲೋರೊಫಿಲ್ಲಿನ ಅಣುವಿನಲ್ಲಿ ಮೂಲವಾಗಿ, ಚಪ್ಪಟೆ ಭಾಗದಲ್ಲಿ 4 ಪೈರೊಲುಗಳು ಮತ್ತು ಒಂದು ಉದ್ದವಾದ ಬಾಲದಂತೆ ಇರುವ ಆಲ್ಕೊಹಾಲ್ (ಫೈಟೊಲ್) ಇವೆ. ಕೆ ಮತ್ತು ಇ ವಿಟಮಿನುಗಳಲ್ಲಿ ಸಹ ಇವು ಇರುತ್ತವೆ.

ಬಿ ಕ್ಲೋರೊಫಿಲ್ಲಿನಲ್ಲಿ, ಮೂರನೆಯ ಸ್ಥಾನದಲ್ಲಿ ಎರಡನೆಯ ಪೈರೊಲ್ ಉಂಗುರದ ಸ್ಥಳದಲ್ಲಿ, ಮೀಥೈಲ್ ಗುಂಪಿಗೆ ($CH_3$) ಬದಲು ಒಂದು ಆಲ್ಡಿಹೈಡ್ ($CHO$) ಇದೆ. ಇದರಿಂದ ಇದು ಎ ಬಗೆಗಿಂತ ಭಿನ್ನವಾಗಿದೆ. ಸಿ ಬಗೆ ಒಂದು ಬಿಡಿಯಾದ ಆಮ್ಲವಾಗಿ (ಕ್ಲೋರೊಫಿಲೈಡ್ ಸಿ) ಸಿಕ್ಕುತ್ತದೆ.

ಇದರ ರಚನೆ ಖಚಿತವಾಗಿ ತಿಳಿದುಬಂದಿಲ್ಲ. ಡಿ ಕ್ಲೋರೋಫಿಲ್ಲಿನಲ್ಲಿ ಎರಡನೆಯ ಸ್ಥಾನದ ಪೈರೊಲ್ ಉಂಗುರದಲ್ಲಿ ವಿನೈಲ್ ಗುಂಪಿನ ($CH{=}CH_2$) ಬದಲು ಒಂದು ಆಲ್ಡಿಹೈಡ್ ಗುಂಪು ಇರುತ್ತದೆ. ಇ ಬಗೆಯ ರಚನೆ ಸ್ಪಷ್ಟವಾಗಿಲ್ಲ. ಬ್ಯಾಕ್ಟೀರಿಯದ ಕ್ಲೋರೊಫಿಲ್ಲಿನಲ್ಲಿ ಎರಡನೆಯ ಪೈರೊಲ್ ಉಂಗುರದ 3 ಮತ್ತು 4 ನೆಯ ಸ್ಥಳಗಳಲ್ಲಿ 2 ಜಲಜನಕ ಪರಮಾಣುಗಳು ಹೆಚ್ಚಾಗಿರುತ್ತವೆ. ಮೊದಲನೆಯ ಉಂಗುರದಲ್ಲಿ ಸಾಮಾನ್ಯ ಫೈಟೊಲ್ ಜೊತೆಗೆ 2ನೆಯ ಸ್ಥಾನದಲ್ಲಿ ಫಾರ್ಮೈಲ್ ಗುಂಪು ಇರುತ್ತದೆ.

ಈ ಶತಮಾನದ ಪ್ರಾರಂಭದಲ್ಲಿ, ಜರ್ಮನ್ ರಸಾಯನವಿಜ್ಞಾನಿಗಳಾದ ವಿಲ್‌ಸ್ಟೆಟರ್ ಮತ್ತು ಅವನ ಸಹೋದ್ಯೋಗಿಗಳು ಮಾಡಿದ ಸಂಶೋಧನೆಗಳಿಂದ ಕ್ಲೋರೋಫಿಲ್




ಚಿತ್ರ 2 ಕ್ಲೋರೋಫಿಲ್ ಬಿ

ಅಣುವಿನ ರಚನೆ ಸ್ಪಷ್ಟವಾಗಿ ಗೊತ್ತಾಯಿತು. ಇದಕ್ಕಾಗಿ ವಿಲ್‌ಸ್ಟೆಟರ್‌ನಿಗೆ ರಸಾಯನಶಾಸ್ತ್ರದಲ್ಲಿ ನೊಬೆಲ್ ಪಾರಿತೋಷಿಕ ದೊರೆಯಿತು(1915). ಕ್ಲೋರೋಫಿಲ್ಲನ್ನು ರಾಸಾಯನಿಕವಾಗಿ ಪ್ರನಾಳದಲ್ಲಿ ಉತ್ತರ ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಆರ್.ಬಿ.ವುಡ್ ವರ್ಡ್ ಮತ್ತು ಆತನ ಸಹೋದ್ಯೋಗಿಗಳು ತಯಾರಿಸಿದರು(1960). ಇದಕ್ಕಾಗಿ ಇವರಿಗೆ 1967ರಲ್ಲಿ ನೊಬೆಲ್ ಪಾರಿತೋಷಿಕದಲ್ಲಿ ಪಾಲು ದೊರೆತಿದೆ.




ಚಿತ್ರ 3 ಬ್ಯಾಕ್ಟೀರಿಯಲ್ ಕ್ಲೋರೋಫಿಲ್

**ಬೆಳಕನ್ನು ಹೀರಿಕೊಳ್ಳುವುದು :** ಕ್ಲೋರೋಫಿಲ್ ಬಿಳಿಯ ಬೆಳಕಿನಿಂದ ನೀಲಿ ಮತ್ತು ಕೆಂಪು ಬೆಳಕಿನ ಅಲೆಗಳನ್ನು ಹೀರಿಕೊಂಡು, ಹಸಿರು ಬೆಳಕನ್ನು ತನ್ನ ಮೂಲಕ ಹರಿಯಲು ಬಿಡುತ್ತದೆ. ಇದರಿಂದಾಗಿ ಇದು ಕಣ್ಣಿಗೆ ಹಸಿರಾಗಿ ಕಾಣುತ್ತದೆ. ಹೀರಿಕೊಂಡ ಬೆಳಕನ್ನು ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ಉಪಯೋಗಿಸಿಕೊಳ್ಳುತ್ತದೆ. ಆಲ್ಕೊಹಾಲಿನಲ್ಲಿರುವ ಕ್ಲೋರೋಫಿಲ್ಲಿನ ಅಥವಾ ತೆಳುವಾದ ಹಸಿರು ಎಲೆಯ ಮುಖಾಂತರ ಬೆಳಕು ಹಾದುಹೋಗುವಂತೆ ಮಾಡಬಹುದು. ಹೀಗೆ ಹಾದುಹೋದಾಗ ಬೆಳಕಿನ ಕೊಂಚ ಭಾಗವನ್ನು ಕ್ಲೋರೋಫಿಲ್ ಹೀರಿಕೊಳ್ಳುತ್ತದೆ.

ಆಲ್ಕೊಹಾಲಿನಲ್ಲಿ ಹಾದುಬಂದ ಬೆಳಕನ್ನು ಮಸೂರದ ಮೇಲೆ ಬೀಳುವಂತೆ ಮಾಡಿ ರೋಹಿತವನ್ನು ಪಡೆಯಬಹುದು. ಇದು ಬಿಳಿ ಬೆಳಕಿನ ರೋಹಿತಕ್ಕಿಂತ ಭಿನ್ನವಾಗಿರುತ್ತದೆ. ಕ್ಲೋರೋಫಿಲ್ ಹೀರಿಕೊಂಡ ಅಲೆ ಉದ್ದಗಳು ಕಪ್ಪುಪಟ್ಟಿಗಳಾಗಿ ಕಾಣಿಸುತ್ತವೆ. ಆದ್ದರಿಂದ ಯಾವ ಅಲೆಉದ್ದದ ಬೆಳಕನ್ನು ಕ್ಲೋರೋಫಿಲ್ ಹೀರಿಕೊಂಡಿದೆ ಎಂಬುದನ್ನು ಕಪ್ಪುಪಟ್ಟಿಗಳು ಸೂಚಿಸುತ್ತವೆ. ಮೊದಲೇ ಹೇಳಿದಂತೆ ಎ ಮತ್ತು ಬಿ ಬಗೆಗಳು ಸೂರ್ಯನ ಬೆಳಕಿನ ನೀಲಿ ಮತ್ತು ಕೆಂಪು ಭಾಗಗಳನ್ನು ಹೀರಿಕೊಳ್ಳುತ್ತವೆ.

ಕ್ಲೋರೋಫಿಲ್ಲುಗಳು ಹಸಿರು ಬಣ್ಣಕ್ಕೆ ಕಾಣುವ ಕಾರಣವೆಂದರೆ ಅವು ನೀಲಿ ಮತ್ತು ಕೆಂಪು ಬೆಳಕಿಗಿಂತ ಹಸಿರು ಬೆಳಕಿಗೆ ಹೆಚ್ಚು ಪಾರದರ್ಶಕವಾಗಿವೆ. ತೋಟವಿನ್ಯಾಸದಲ್ಲಿ ಮರಗಳ ಎಲೆಗಳು ಮತ್ತು ಹುಲ್ಲುಗಳು ಸುತ್ತಲಿನ ಸ್ಥಳಕ್ಕಿಂತ (ನೀಲಿ ಆಕಾಶವನ್ನು ಸೇರಿ) ಪ್ರಧಾನವಾಗಿ ಕಾಣುವುದಕ್ಕೆ ಇದೇ ಕಾರಣ. ಈ ಪ್ರತಿಕ್ರಿಯೆಯನ್ನು ಸಸ್ಯಗಳ ಅತಿರಕ್ತ ಫೋಟೊಗ್ರಫಿಯಲ್ಲಿ ಉಪಯೋಗಿಸುತ್ತಾರೆ. ಕ್ಲೋರೋಫಿಲ್ಲಿಗೆ ಪ್ರತಿದೀಪ್ತಿಗುಣವೂ(ಫ್ಲೂರೆಸೆನ್ಸ್) ಇದೆ. ಎ ಕ್ಲೋರೋಫಿಲ್ಲಿನ ದ್ರಾವಣಕ್ಕೆ ಬೆಳಕು ಹಾಯಿಸಿದರೆ ಅದು ಅತಿರಕ್ತ ಪ್ರತಿದೀಪ್ತಿಯನ್ನೂ ಬಿ ಬಗೆಯದು ಕೆಂಪು ಪ್ರತಿದೀಪ್ತಿಯನ್ನೂ ಪ್ರದರ್ಶಿಸುತ್ತವೆ.

ಉನ್ನತ ದರ್ಜೆಯ ಸಸ್ಯಗಳಲ್ಲಿ ಕ್ಲೋರೋಫಿಲ್ ಮತ್ತಿತರ ವರ್ಣದ್ರವ್ಯಗಳು ಪ್ಲಾಸ್ಟಿಡ್ಡುಗಳೆಂಬ ಅಂಗಕಗಳಲ್ಲಿ ಸ್ಥಿತವಾಗಿರುತ್ತದೆ. ಈ ಪ್ಲಾಸ್ಟಿಡ್ಡುಗಳಿಗೆ ಕ್ಲೋರೊಪ್ಲಾಸ್ಟುಗಳೆಂದು ಹೆಸರು. ಒಂದೊಂದು ಕ್ಲೋರೊಪ್ಲಾಸ್ಟೂ ಬಲು ಸೂಕ್ಷ್ಮಗಾತ್ರದ (ಸುಮಾರು 3–4 ಮೈಕ್ರಾನ್ ವ್ಯಾಸದ) ತಟ್ಟೆಯಂಥ ರಚನೆ. ಅದರ ಸುತ್ತ ತೆಳುವಾದ ಎರಡು ಪದರಗಳ ಹೊದಿಕೆಯೂ ಒಳಗೆ ಸ್ಟ್ರೋಮ ಎಂಬ ಮಾತೃಕೆಯೂ ಇವೆ. ಸ್ಟ್ರೋಮದೊಳಗೆ ಹುದುಗಿರುವಂತೆ ಅಲ್ಲಲ್ಲಿ ಅನೇಕ ಸಣ್ಣ ಸಣ್ಣ ತಟ್ಟೆಗಳಂಥ ರಚನೆಗಳಿವೆ. ಇವಕ್ಕೆ ಗ್ರಾನ ಎಂದು ಹೆಸರು. ಒಂದೊಂದು ಗ್ರಾನವೂ 10–100 ಸೂಕ್ಷ್ಮಗಾತ್ರದ ತಟ್ಟೆಗಳಿಂದ ಕೂಡಿದೆ. ಈ ತಟ್ಟೆಗಳಿಗೆ ತೈಲಕಾಯಿಡುಗಳೆಂದು ಹೆಸರು. ಇವು ಒಂದರ ಮೇಲೊಂದು ಕೂತಿದ್ದು ನಾಣ್ಯಗಳನ್ನು ಪೇರಿಸಿಟ್ಟಂತೆ ಕಾಣುತ್ತವೆ. ಪ್ರತಿ ತೈಲಕಾಯಿಡನ್ನೂ ಒಂದು ಚಪ್ಪಟೆಯಾದ ಬಲೂನಿಗೆ ಹೋಲಿಸಬಹುದು. ಇದರ ಸುತ್ತ 50–80°A ದಪ್ಪದ ಪೊರೆಯೂ ಒಳಗೆ 80°A ಅಗಲದ ಅವಕಾಶವೂ ಇವೆ. ತೈಲಕಾಯಿಡಿನ ಪೊರೆಯೊಳಗೆ ಕ್ಲೋರೋಫಿಲ್ಲಿನ ಅಣುಗಳು ವ್ಯವಸ್ಥಿತವಾಗಿವೆಯೆಂದು ನಂಬಲಾಗಿದೆ. ಜೊತೆಗೆ ದ್ಯುತಿಸಂಶ್ಲೇಷಣೆಯಲ್ಲಿ ಅತ್ಯವಶ್ಯವಾದ ಹಲವಾರು ಕಿಣ್ವಗಳು ಮತ್ತು ಕೆರೊಟೀನ್ ಸಂಯುಕ್ತಗಳು ಇವೆ. ಇವೆಲ್ಲವೂ ಮುಖ್ಯವಾಗಿ ಎರಡು ಬಗೆಯ ದ್ಯುತಿಸಂಶ್ಲೇಷಣ ಘಟಕಗಳಾಗಿ ಕೂಡಿಕೊಂಡಿವೆ. ಒಂದನ್ನು ದ್ಯುತಿವ್ಯವಸ್ಥೆ I (ಫೋಟೋಸಿಸ್ಟಮ್) ಎಂದೂ ಇನ್ನೊಂದನ್ನು ದ್ಯುತಿವ್ಯವಸ್ಥೆ II ಎಂದೂ ಕರೆಯಲಾಗುತ್ತದೆ. ಮೊದಲನೆಯ ಘಟಕದಲ್ಲಿ ಎ ಕ್ಲೋರೋಫಿಲ್ಲಿನ ಪರಿಮಾಣ ಹೆಚ್ಚು. ಇದು ಕಡಿಮೆ ಅಲೆಯುದ್ದದ ಬೆಳಕನ್ನು ಹೀರಿಕೊಳ್ಳುತ್ತದೆ. ಎರಡನೆಯದರಲ್ಲಿ ಬಿ ಕ್ಲೋರೋಫಿಲ್ಲಿನ ಪರಿಮಾಣ ಅಧಿಕ. ಇದು ಹೆಚ್ಚು ಅಲೆಯುದ್ದದ ಬೆಳಕನ್ನು ಹೀರಿಕೊಳ್ಳುತ್ತದೆ.

ಫೋಟಾನುಗಳ ರೂಪದಲ್ಲಿರುವ ಸೂರ್ಯನ ಶಕ್ತಿಯನ್ನು ಕ್ಲೋರೋಫಿಲ್ ದ್ಯುತಿ ಸಂಶ್ಲೇಷಣ ಕ್ರಿಯೆಯಲ್ಲಿ ಹೀರಿಕೊಳ್ಳುತ್ತದೆ. ಆಗ ಕ್ಲೋರೋಫಿಲ್ಲಿನಲ್ಲಿರುವ ಒಂದು ಎಲೆಕ್ಟ್ರಾನ್ ಉತ್ತೇಜಿತವಾಗಿ ಹೊರಬೀಳುತ್ತದೆ. ಈ ಎಲೆಕ್ಟ್ರಾನನ್ನು ಪ್ಲಾಸ್ಟೋಕ್ವಿನೋನ್, ಫೆರಡಾಕ್ಸಿನ್ ಮತ್ತು ಸೈಟೋಕ್ರೋಮ್ ಮುಂತಾದ ರಾಸಾಯನಿಕ ವಸ್ತುಗಳು ಸ್ವೀಕರಿಸುತ್ತವೆ. ಅನಂತರ ಒಂದು ನೀರಿನ ಅಣು ಹೈಡ್ರೋಜನ್ ಮತ್ತು ಆಕ್ಸಿಜನ್ ಆಗಿ ವಿಶ್ಲೇಷಿತವಾಗಿ ಆಕ್ಸಿಜನ್ ಬಿಡುಗಡೆಯಾಗುತ್ತದೆ. ಈ ಘಟನಾವಳಿಗಳಲ್ಲಿ ಎಲೆಕ್ಟ್ರಾನ್ ಹಿಡಿದಿಟ್ಟ ಸೂರ್ಯನ ವಿಸಂತ ಶಕ್ತಿ ರಾಸಾಯನಿಕ ಶಕ್ತಿಯಾಗಿ ಪರಿವರ್ತಿತವಾಗುತ್ತದೆ. ಮುಂದೆ ಕಾರ್ಬನ್ ಡೈಆಕ್ಸೈಡ್ ಅಪಕರ್ಷಿತವಾಗಿ ಕಾರ್ಬೋಹೈಡ್ರೇಟ್ ಆಗಲು ಈ ಶಕ್ತಿಯ ಬಳಕೆಯಾಗುತ್ತದೆ. ವಿವರಗಳಿಗೆ **(ನೋಡಿ– ದ್ಯುತಿಸಂಶ್ಲೇಷಣೆ)**.

**ಸಸ್ಯಗಳಲ್ಲಿ ಕ್ಲೋರೋಫಿಲ್ಲಿನ ಉತ್ಪತ್ತಿ :** ಕ್ಲೊರೆಲ್ಲ ಎಂಬ ಪಾಚಿಯನ್ನು ಬಳಸಿಕೊಂಡು ಕ್ಲೋರೋಫಿಲ್ ಉತ್ಪತ್ತಿಯನ್ನು ಅಭ್ಯಸಿಸಲಾಗಿದೆ. ಗ್ಲೈಸಿನ್ ಮತ್ತು ಸಕ್ಸಿನಿಕ್ ಆಮ್ಲಗಳೇ ಕ್ಲೋರೋಫಿಲ್ ತಯಾರಿಕೆಗೆ ಬೇಕಾದ ಮೂಲವಸ್ತುಗಳು. ಹಲವಾರು ಕಿಣ್ವನಿಯಂತ್ರಿತ ಹಂತಗಳ ಮೂಲಕ ಇವೆರಡು ರಾಸಾಯನಿಕಗಳು ಪ್ರೋಟೋಕ್ಲೋರೋಫಿಲ್ ಎಂಬ ಪೂರ್ವಗಾಮಿ ವಸ್ತುವಾಗಿ ಪರಿವರ್ತಿತವಾಗುತ್ತವೆ. ಈ ಹಂತಗಳಿಗೆ ಬೆಳಕಿನ ಆವಶ್ಯಕತೆ ಇಲ್ಲ. ಅನಂತರ ಬೆಳಕಿಗೆ ಒಡ್ಡಿದಾಗ ಪ್ರೋಟೊಕ್ಲೋರೋಫಿಲ್ ಕ್ಲೋರೋಫಿಲ್ ಆಗುತ್ತದೆ.

(ಆರ್.ಎನ್.)

**ಕ್ಲೋರೊಬೆಂಜ಼ೀನ್ :** ಬೆಂಜ಼ೀನ್ ಅಣುವಿನಲ್ಲಿರುವ ಆರು ಜಲಜನಕ ಪರಮಾಣುಗಳಲ್ಲಿ ಒಂದನ್ನು ಕ್ಲೋರಿನ್ ಪರಮಾಣುವಿನಿಂದ ಪಲ್ಲಟಿಸಿದಾಗ ಉತ್ಪತ್ತಿಯಾಗುವ ವಸ್ತು. ಫೀನೈಲ್ ಕ್ಲೋರೈಡ್ ಪರ್ಯಾಯನಾಮ. ಕ್ಲೋರಿನನ್ನು ಫೆರ್ರಿಕ್ ಕ್ಲೋರೈಡ್, ಫೆರ್ರಿಕ್ ಬ್ರೋಮೈಡ್, ಅಲ್ಯೂಮಿನಿಯಂ ಕ್ಲೋರೈಡ್, ಅಯೊಡೀನ್ ಮುಂತಾದ ಯಾವುದಾದರೂ ಒಂದು ವೇಗವರ್ಧಕದ ಸಾನ್ನಿಧ್ಯದಲ್ಲಿ ಬೆಂಜ಼ೀನಿನ ಮೂಲಕ ಹಾಯಿಸುವುದರಿಂದ ಇದನ್ನು ತಯಾರಿಸಬಹುದು. ಅಲ್ಲದೆ ಬೆಂಜ಼ೀನ್ ಡಯಜ಼ೋನಿಯಂ ಕ್ಲೋರೈಡನ್ನು ನೀರು ಮತ್ತು ಕ್ಯುಪ್ರಸ್ ಕ್ಲೋರೈಡುಗಳೊಡನೆ ಕಾಸುವುದರಿಂದಲೂ ಇದನ್ನು ಉತ್ಪಾದಿಸಬಹುದು. ಬೃಹತ್ಪರಿಮಾಣದಲ್ಲಿ ಬೆಂಜ಼ೀನ್, ಗಾಳಿ (ಆಮ್ಲಜನಕ), ಹೈಡ್ರೋಜನ್ ಕ್ಲೋರೈಡ್ ಅನಿಲಗಳ ಮಿಶ್ರಣವನ್ನು 230° ಸೆಂ.ಉಷ್ಣತೆಯಲ್ಲಿ ಕ್ಯುಪ್ರಸ್ ಕ್ಲೋರೈಡ್ ವೇಗವರ್ಧಕದ ಮೇಲೆ ಹಾಯಿಸುವುದರಿಂದಲೂ ಕ್ಲೋರೊಬೆಂಜ಼ೀನನ್ನು ತಯಾರಿಸುವುದಿದೆ. ಇದಕ್ಕೆ ರ್‍ಯಾಷಿಗ್ ವಿಧಾನವೆಂದು ಹೆಸರು. ಕ್ಲೋರೊಬೆಂಜ಼ೀನ್ ಬಣ್ಣವಿಲ್ಲದ, ಸುವಾಸನೆಯುಳ್ಳ ದ್ರವ. ಇದರ ಸಾಂದ್ರತೆ ನೀರಿಗಿಂತ ಹೆಚ್ಚು ; ಕುದಿಬಿಂದು 132° ಸೆಂ. ಇದು ನೀರಿನಲ್ಲಿ ವಿಲೀನವಾಗುವುದಿಲ್ಲ. ಆದರೆ ಈಥೈಲ್ ಆಲ್ಕೊಹಾಲ್, ಈಥರ್ ಮುಂತಾದವುಗಳಲ್ಲಿ ಸುಲಭವಾಗಿ ವಿಲೀನವಾಗುತ್ತದೆ. ಕ್ಲೋರೊಬೆಂಜ಼ೀನಿನ ಬೆಂಜ಼ೀನ್ ಉಂಗುರದಲ್ಲಿಯ ಕ್ಲೋರಿನ್ನನ್ನು ರಾಸಾಯನಿಕ ಕ್ರಿಯೆಗಳಿಂದ ಪಲ್ಲಟಿಸುವುದು ಕಷ್ಟಸಾಧ್ಯವಾದ್ದರಿಂದ ಕ್ಲೋರೊಬೆಂಜ಼ೀನಿನ ಕೆಲವೇ ಬಗೆಯ ರಾಸಾಯನಿಕ ಕ್ರಿಯೆಗಳಿಗೆ ಒಳಪಡುತ್ತದೆ. ಇವುಗಳಲ್ಲಿ ಕೈಗಾರಿಕಾ ದೃಷ್ಟಿಯಿಂದ ಮುಖ್ಯವಾದ ಕೆಲವನ್ನು ಸೂಚಿಸಿದೆ. ಸೋಡಿಯಂ ಹೈಡ್ರಾಕ್ಸೈಡ್ ಅಥವಾ ಸೋಡಿಯಂ ಕಾರ್ಬೊನೇಟಿನೊಡನೆ 320° ಸೆಂ.ಉಷ್ಣತೆ ಮತ್ತು 3,000 ಪೌಂಡು/ಚ.ಅಂ. ಒತ್ತಡದಲ್ಲಿ ಕಾಸಿದಾಗ ಇದು ವಿಶ್ಲೇಷಿತವಾಗಿ ಕಾರ್ಬಾಲಿಕ್ ಆಮ್ಲವನ್ನು (ಫೀನಾಲ್) ಕೊಡುತ್ತದೆ. 200° ಸೆಂ ಉಷ್ಣತೆ ಮತ್ತು 900 ಪೌಂಡ್/ಚ.ಅಂ ಒತ್ತಡದಲ್ಲಿ ಕ್ಲೋರೊಬೆಂಜ಼ೀನಿನ ಮೂಲಕ ಹೆಚ್ಚು ಪರಿಮಾಣದಲ್ಲಿ ಅಮೋನಿಯವನ್ನು ಹಾಯಿಸಿದಾಗ ಅನಿಲೀನ್ ತಯಾರಾಗುತ್ತದೆ. ಸೋಡಿಯಮ್ ಲೋಹದೊಡನೆ ಕಾಸಿದಾಗ ಡೈಫೀನೈಲ್ ಎಂಬುದೂ ಮೀಥೈಲ್ ಅಯೊಡೈಡ್ ಹಾಗೂ ಸೋಡಿಯಮುಗಳೊಡನೆ ಕಾಸಿದಾಗ ಟಾಲ್ವೀನ್ ಎಂಬುದೂ ಉತ್ಪತ್ತಿಯಾಗುತ್ತವೆ. ಮೆಗ್ನೀಸಿಯಮ್ ಪುಡಿಯನ್ನು ಇದರಲ್ಲಿ ಕರಗಿಸಿದಾಗ ಕೆಲವು ಮುಖ್ಯ ವಸ್ತುಗಳ ತಯಾರಿಕೆಗೆ ಬೇಕಾಗುವ ಗ್ರಿನ್ಯಾರ್ಡ್ ಸಂಯುಕ್ತಗಳು ದೊರೆಯುತ್ತವೆ. ಸಾರಸಲ್ಫ್ಯೂರಿಕ್ ಆಮ್ಲ ಮತ್ತು ಕ್ಲೋರಾಲುಗಳೊಡನೆ ಕಾಸಿದಾಗ ಕ್ರಿಮಿಕೀಟನಾಶಕವಾದ ಡಿ.ಡಿ.ಟಿ ಉಂಟಾಗುತ್ತದೆ. ಬೆಂಜ಼ೀನ್ ಉಂಗುರದಲ್ಲಿರುವ ಇನ್ನೊಂದು ಜಲಜನಕ ಪರಮಾಣುವನ್ನು ಇನ್ನೊಂದು ಕ್ಲೋರಿನ್ನಿನಿಂದ ಪಲ್ಲಟಿಸಿದಾಗ ಆರ್ಥೋಡೈಕ್ಲೋರೊಬೆಂಜ಼ೀನ್ ತಯಾರಾಗುತ್ತದೆ. ಇದನ್ನು ವಿಷಕ್ರಿಮಿನಾಶಮಾಡುವ ಧೂಪದಲ್ಲಿಯೂ ನುಸಿ ನಿರೋಧಕ ವಸ್ತುಗಳಲ್ಲಿಯೂ ಬಳಸುತ್ತಾರೆ. ಬೆಂಜ಼ೀನ್ ಉಂಗುರದ ಆರು ಜಲಜನಕ ಪರಮಾಣುಗಳನ್ನೂ ಕ್ಲೋರಿನ್ನಿನಿಂದ ಪಲ್ಲಟಿಸಿದಾಗ ಹೆಕ್ಸಕ್ಲೋರೊಬೆಂಜ಼ೀನ್ ದೊರೆಯುತ್ತದೆ. ಇದಕ್ಕೆ ಮಾರುಕಟ್ಟೆಯಲ್ಲಿ 666 ಗ್ಯಾಮಕ್ಸೇನ್, ಲಿಂಡೇನ್ ಮುಂತಾದ ಹೆಸರುಗಳಿವೆ. ನೊಣ ಮತ್ತು ಜಿರಲೆಗಳನ್ನು ನಾಶಮಾಡುವುದರಲ್ಲಿ ಇದು ಬಹು ಸಮರ್ಥವಾದುದು. (ಆರ್.ಎಸ್.ಎನ್.)

**ಕ್ಲೋರೊಸಲ್ಫಾನಿಕ್ ಆಮ್ಲ :** ಸಲ್ಫರ್ ಟ್ರೈಆಕ್ಸೈಡ್ ಮತ್ತು ಶುಷ್ಕ ಹೈಡ್ರೊಕ್ಲೋರಿಕ್ ಆಮ್ಲದ ಅನಿಲಗಳ ರಾಸಾಯನಿಕ ಕ್ರಿಯೆಯ ಫಲವಾಗಿ ಉತ್ಪನ್ನವಾಗುವ ಒಂದು ದ್ರವ. ಇದರ ರಾಸಾಯನಿಕ ಸೂತ್ರ $ClSO_2.OH$. ಅತ್ಯಂತ ಶುದ್ಧರೂಪದಲ್ಲಿ ಬಣ್ಣರಹಿತವಾಗಿಯೂ ಹಾಗಿಲ್ಲದಿದ್ದಲ್ಲಿ ತಿಳಿಹಳದಿ ಬಣ್ಣದ್ದಾಗಿಯೂ ಇದೆ. ಇದು ತೇವ ವಾತಾವರಣದಲ್ಲಿ ಹೊಗೆ ಸೂಸುತ್ತಿರುವುದು. ಇದಕ್ಕೆ ಬಲು ಘಾಟುವಾಸನೆಯಿದೆ. ಕಣ್ಣು, ಮೂಗು ಶ್ವಾಸಕೋಶಗಳಿಗೆ ಇದು ಅಪಾಯಕಾರಿ. ಚರ್ಮದ ಮೇಲೆ ಬಿದ್ದರೆ ತೀವ್ರವಾದ ಸುಟ್ಟ ಗಾಯಗಳಾಗುತ್ತವೆ. ನೀರಿನೊಡನೆ ಬೆರೆತಾಗಲಂತೂ ಉಗ್ರವಾದ ಕ್ರಿಯೆಗೊಳಗಾಗಿ (ಆಸ್ಫೋಟನೆಯ ಅಪಾಯವೂ ಅಸಂಭವವೇನಲ್ಲ) ರಾಸಾಯನಿಕವಾಗಿ ವಿಭಜನೆಗೊಂಡು ಸಲ್ಫ್ಯೂರಿಕ್ ಮತ್ತು ಹೈಡ್ರೊಕ್ಲೋರಿಕ್ ಆಮ್ಲಗಳನ್ನು ಕೊಡುತ್ತದೆ. ಆದ್ದರಿಂದ ಇದನ್ನು ಉಪಯೋಗಿಸುವವರು ಕನ್ನಡಕ ಮತ್ತು ಮುಖವಾಡಗಳನ್ನು ಧರಿಸುವುದು ಬಹು ಅಗತ್ಯ. ಕೃತಕ ಸಾಬೂನುಗಳು, ಔಷಧಿಗಳು, ಕ್ರಿಮಿಕೀಟನಾಶಕಗಳು, ಬಣ್ಣಗಳು ಅಯಾನುಗಳನ್ನು ಅದಲುಬದಲು ಮಾಡಿಕೊಳ್ಳುವ ರಾಳಗಳು. ಯುದ್ಧದಲ್ಲಿ ಬಳಸುವ ವಿಷಾನಿಲಗಳು ಮತ್ತು ದಟ್ಟ ಹೊಗೆ ಸೂಸುವ ರಾಸಾಯನಿಕಗಳು, ಬಣ್ಣಗಳು, ಮುಂತಾದವುಗಳ ತಯಾರಿಕೆಯಲ್ಲಿ ಕ್ಲೋರೊಸಲ್ಫಾನಿಕ್ ಆಮ್ಲವನ್ನು ಉಪಯೋಗಿಸುತ್ತಾರೆ. (ಎಚ್.ಎಸ್.ಎನ್)

**ಕ್ಲೋರೊಹೈಡ್ರಿನ್ :** ಒಂದು ಅಥವಾ ಹೆಚ್ಚಿನ ಕ್ಲೋರಿನ್ ಪರಮಾಣುಗಳನ್ನು ಮತ್ತು ಒಂದು ಅಥವಾ ಹೆಚ್ಚು ಹೈಡ್ರಾಕ್ಸಿಲ್ ಗುಂಪುಗಳನ್ನು ಹೊಂದಿರುವ ಒಂದು ವಿಶಿಷ್ಟ ವರ್ಗದ ಸಾವಯವ ಸಂಯುಕ್ತ. ಇದರಲ್ಲಿ ಹಲವಾರು ಬಗೆಗಳುಂಟು. ಗ್ಲಿಸರೈಲ್ ಆಲ್ಫ ಕ್ಲೋರೊಹೈಡ್ರಿನ್, ಎಥಿಲೀನ್ ಕ್ಲೋರೊಹೈಡ್ರಿನ್, ಎಪಿಕ್ಲೋರೊಹೈಡ್ರಿನ್, ಪ್ರೊಪಿಲೀನ್ ಕ್ಲೋರೊಹೈಡ್ರಿನ್, ಕ್ಲೋರೊಹೈಡ್ರಿನ್ ಕೃತಕ ರಬ್ಬರ್ ಮುಂತಾದವು ಮುಖ್ಯ ಬಗೆಯ ಕ್ಲೋರೊಹೈಡ್ರಿನುಗಳು.

ಹೈಡ್ರೊಕ್ಲೋರಿಕ್ ಆಮ್ಲದ ಅನಿಲವನ್ನು ಶೇ.2 ಅಸಿಟಿಕ್‌ಆಮ್ಲ ಮಿಶ್ರಿತ ಗ್ಲಿಸರಾಲಿನೊಳಕ್ಕೆ ಪ್ರವಹಿಸಿ ರಾಸಾಯನಿಕ ಕ್ರಿಯೆಗೆ ಒಳಪಡಿಸುವುದರ ಮೂಲಕ ಗ್ಲಿಸರೈಲ್‌ಕ್ಲೋರೊಹೈಡ್ರಿನನ್ನು ಪಡೆಯಬಹುದು. ವಾಣಿಜ್ಯ ದರ್ಜೆಯ ಉತ್ಪನ್ನ ಆಲ್ಫ ಮತ್ತು ಬೀಟ ಎಂಬ ಎರಡು ರೂಪಗಳ ಮಿಶ್ರಣ. ಇವೆರಡು ತಮ್ಮ ಪರಮಾಣು ವಿನ್ಯಾಸಗಳಲ್ಲಿ ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ. ಗ್ಲಿಸರೈಲ್ ಕ್ಲೋರೊಹೈಡ್ರಿನ್ ಒಂದು ಬಣ್ಣವಿಲ್ಲದ ಭಾರವಾದ ದ್ರವ. ಎಣ್ಣೆಗಳೊಡನೆ ಬೆರೆಯಲಾರದು. ಅಂಟುಗಳು, ರಾಳಗಳು, ಸೆಲ್ಯುಲೋಸ್ ಅಸಿಟೇಟ್, ಗ್ಲಿಸರೈಲ್ ಫಾಸ್ಫೇಟುಗಳಿಗೆ ಒಂದು ಉತ್ತಮ ಲೀನಕಾರಿಯಾಗಿಯೂ ಸ್ಫೋಟಕ, ಬಟ್ಟೆ, ಕಾಗದ, ಕೀಲೆಣ್ಣೆ ಮುಂತಾದ ಕೈಗಾರಿಕೆಗಳಲ್ಲೂ ಇದರ ಬಳಕೆಯಿದೆ. (ಎಚ್.ಎಸ್.ಎನ್.)

**ಕ್ಲೋರೋಪಿಡೀ :** ಕೀಟವರ್ಗದ ಡಿಪ್ಟರ ಗಣದಲ್ಲಿಯ ಒಂದು ಕುಟುಂಬ. ಇದಕ್ಕೆ ಸೇರಿದ ಕೀಟಗಳನ್ನು ಗುಂಗುರುನೊಣ, ಗುಂಗಾಡು, ಮುಂತಾಗಿ ಕರೆಯಲಾಗುತ್ತದೆ. ಬಲು ಸಣ್ಣ ಗಾತ್ರದ ದೇಹ, ಕೂದಲಿಲ್ಲದಿರುವುದು ಇವುಗಳ ಮುಖ್ಯ ಲಕ್ಷಣಗಳು. ಬಹುಪಾಲು ಬಗೆಗಳು ಮಾಸಲು ಬಣ್ಣದವಾದರೂ ಕೆಲವು ಮಾತ್ರ ಪ್ರಕಾಶಮಾನವಾದ ಕಪ್ಪು ಇಲ್ಲವೆ ಹಳದಿ ಬಣ್ಣವನ್ನು ಪಡೆದಿವೆ. ಹುಲ್ಲುಗಾವಲು ಪ್ರದೇಶಗಳಲ್ಲಿ ಇವುಗಳ ವಾಸ. ಈ ನೊಣಗಳ ಡಿಂಬಗಳು ಸಸ್ಯಾಹಾರಿಗಳು; ಹುಲ್ಲುಗಳ ಕಾಂಡವನ್ನು ಕೊರೆದು ತಿನ್ನುತ್ತವೆ. ಕೆಲವು ಪ್ರಭೇದಗಳು ಧಾನ್ಯ ಬೆಳೆಗಳ ಪೀಡೆಗಳೆನಿಸಿವೆ. ಕೆಲವು ಮಾತ್ರ ಕಸಕಡ್ಡಿಗಳನ್ನು ತಿಂದು ಶುಚಿಕಾರಕಗಳು ಎಂದು ಹೆಸರಾಗಿವೆ. ಪರಾವಲಂಬಿಗಳೂ ಪರಕೀಟಗಳನ್ನು ತಿನ್ನುವ ಮಾಂಸಾಹಾರಿಗಳೂ ಇಲ್ಲದಿಲ್ಲ. *ಹಿಪ್ಪಲೇಟಿಸ್* ಜಾತಿಯ ನೊಣಗಳು ಕೊಳೆಯುವ ಸಸ್ಯಪದಾರ್ಥಗಳು, ಮಲ, ಸಗಣಿ ಮುಂತಾದವನ್ನು ತಿಂದು ಬದುಕುತ್ತವೆ. ಕೀವು, ರಕ್ತ ಮೊದಲಾದವನ್ನೂ ಭಕ್ಷಿಸುವುದುಂಟು. ಈ ಜಾತಿಯ *ಪ್ಯೂಸಿಯೊ, ಫ್ಲಾವಿಪಸ್, ಪ್ಲೆಬೀಜಸ್* ಮುಂತಾದ ಪ್ರಭೇದಗಳು ಪ್ರಾಣಿಗಳ ಮತ್ತು ಮನುಷ್ಯನ ಕಣ್ಣುಗಳಿಂದ ಆಕರ್ಷಿತವಾಗಿ, ಕಣ್ಣಿನ ಬಳಿಯೇ ಹಾರಾಡುತ್ತಿರುತ್ತವೆ. ಇದರಿಂದಾಗಿ ಇವಕ್ಕೆ ಕಣ್ಣು ನೊಣಗಳೆಂಬ ಹೆಸರಿದೆ. ಹಲವಾರು ಬಗೆಯ ಕಣ್ಣುರೋಗಗಳನ್ನು ಇವು ಹರಡುತ್ತವೆ ಎಂದು ನಂಬಲಾಗಿದೆ. (ವಿ.ಕೆ.ವಿ.)

**ಕ್ಲೋರ್‌ಟೆಟ್ರಸೈಕ್ಲಿನ್ :** ಒಂದು ವಿಶಾಲರೋಹಿತ ಜೀವಿರೋಧಕ. ಬಿ.ಎಂ.ಡುಗರ್ ಮತ್ತು ಸಹೋದ್ಯೋಗಿಗಳು ಆವಿಷ್ಕರಿಸಿದರು. ಇದರ ರಾಸಾಯನಿಕ ಸೂತ್ರ $C_{22}H_{23}O_8N_2Cl$. ಶುದ್ಧರೂಪದಲ್ಲಿ ಇದೊಂದು ಹಳದಿ ಬಣ್ಣದ ಹರಳು. ಶುಷ್ಕ ಸ್ಥಿತಿಯಲ್ಲಿ ಅನಿರ್ದಿಷ್ಟಕಾಲ ಸ್ಥಿರವಾಗಿರುವುದಾದರೂ ನೀರಿರುವ ದ್ರಾವಣರೂಪದಲ್ಲಿ ಪೃಥಕ್ಕರಣಕ್ಕೊಳಗಾಗುತ್ತದೆ. ಟೆಟ್ರಸೈಕ್ಲಿನ್ ಜೀವಿರೋಧಕಗಳ ಗುಂಪಿನಲ್ಲಿ ಇದು ಮೊದಲನೆಯದು. ಮಣ್ಣಿನಲ್ಲಿ ವಾಸಿಸುವ ಸ್ಟ್ರೆಪ್ಟೊಮೈಸಿಸ್ ಅರಿಯೊಫೇಸಿಯನ್ಸ್ ಎಂಬ ಬೂಷ್ಟು ಇದರ ಆಕರ. ಕಾರನ್ ಸ್ಟೀಪ್ ಲಿಕರ್, ಕಾರ್ಬೊಹೈಡ್ರೇಟ್ ಮತ್ತು ಕ್ಯಾಲ್ಸಿಯಮ್ ಕಾರ್ಬೊನೇಟುಗಳ ಮಾಧ್ಯಮದಲ್ಲಿ ಬೂಷ್ಟನ್ನು ಬೆಳೆಸಿ, ದೊಡ್ಡ ದೊಡ್ಡ ಮುಚ್ಚಿದ ಕಡಾಯಿಗಳಲ್ಲಿಟ್ಟು, ಪೂತಿರಹಿತ ಸ್ಥಿತಿಯಲ್ಲಿ ಗಾಳಿಯನ್ನು ಹಾಯಿಸುವುದರ ಮೂಲಕ ಹುದುಗೆಬ್ಬಿಸಿ ಅನಂತರ ಹಲವಾರು ಬಾರಿ ಶೋಧಿಸಿ, ಸಂಸ್ಕರಿಸಿ ಈ ಜೀವಿರೋಧಕವನ್ನು ಪ್ರತ್ಯೇಕಿಸಲಾಗುತ್ತದೆ. ಲೆಡರ್ಲಿ ಪ್ರಯೋಗಶಾಲೆ 1948ರಲ್ಲಿ ಇದನ್ನು ಮೊತ್ತ ಮೊದಲಬಾರಿಗೆ ಆರಿಯೊಮೈಸೀನ್ ಎಂಬ ವಾಣಿಜ್ಯನಾಮದಿಂದ ಬಳಕೆಗೆ ತಂದಿತು.

ಹಲವಾರು ಬಗೆಯ ಬ್ಯಾಕ್ಟೀರಿಯಗಳಿಂದ ಹಾಗೂ ವೈರಸುಗಳಿಂದ ಉಂಟಾಗುವ ಕಾಯಿಲೆಗಳಿಗೆ ಕ್ಲೋರ್‌ಟೆಟ್ರಸೈಕ್ಲಿನ್ ಒಳ್ಳೆಯ ಔಷಧಿ. ಮನುಷ್ಯನ ಹಾಗೂ ಪಶುಗಳ ವ್ಯಾಧಿಗಳಲ್ಲಿ ಇದನ್ನು ಬಳಸುತ್ತಾರೆ. ಸ್ಪೈರೊಕೀಟ್ಸ್, ರಿಕೆಟ್ಸಿಯ, ಲಿಂಫೊಗ್ರ್ಯಾನ್ಯುಲೋಮ–ಸಿಟಕೋಸಿಸ್ ಗುಂಪಿನ ವೈರಸುಗಳು, ಪ್ರೊಟೋಜ಼ೋವ ಗುಂಪಿನ ಜೀವಿಗಳಿಂದ ಉಂಟಾಗುವ ಬೇನೆಗಳಿಗೂ ಇದು ಪರಿಣಾಮಕಾರಿ ಮದ್ದು. ಇದನ್ನು ಬಾಯಿ ಮೂಲಕ ಇಲ್ಲವೆ ಚುಚ್ಚುಮದ್ದಿನ ರೂಪದಲ್ಲಿ ಅಥವಾ ಸ್ಥಳೀಯ ಔಷಧಿಯಂತೆ ಬಳಸಲಾಗುತ್ತದೆ. ದಿನವೊಂದಕ್ಕೆ ಬೇಕಾಗುವ ಸರಾಸರಿ ಪರಿಮಾಣ ಒಂದು ಕೆಜಿ. ದೇಹದ ತೂಕಕ್ಕೆ 12.5–20 ಮಿಗ್ರಾಂ. ಈ ಪರಿಮಾಣದ ಸೇವನೆಯಿಂದ ದೇಹದ ಮೇಲೆ (ಮುಖ್ಯವಾಗಿ ಮೂತ್ರಪಿಂಡ, ಯಕೃತ್ ಮತ್ತು ರಕ್ತ) ಯಾವ ದುಷ್ಪರಿಣಾಮ ಆಗದಿದ್ದರೂ ಕೆಲವೊಮ್ಮೆ ಓಕರಿಕೆ ಬರುವಂತಾಗಬಹುದು, ವಾಂತಿ ಇಲ್ಲವೆ ಭೇದಿಯಾಗಬಹುದು. ಬಾಯಿಹುಣ್ಣು ಅಥವಾ ಚರ್ಮ ಊತವಾಗಬಹುದು. ಕ್ಲೋರ್‌ಟೆಟ್ರಸೈಕ್ಲಿನನ್ನು ಕೋಳಿ ಮತ್ತು ಪಶುಗಳ ಆಹಾರದ ರಕ್ಷಕ ಹಾಗೂ ಪೂರಕವಾಗಿ ಬಳಸುತ್ತಾರೆ. ಇದು ಆ ಪ್ರಾಣಿಗಳ ಬೆಳವಣಿಗೆಯನ್ನು ಹೆಚ್ಚಿಸುತ್ತದೆ. ಸುಲಭವಾಗಿ ಕೆಡುವಂಥ (ಮಾಂಸ, ಮೀನು ಇತ್ಯಾದಿ) ಆಹಾರಗಳನ್ನು ಸುರಕ್ಷಿತವಾಗಿ ಬಹಳ ಕಾಲ ಕೆಡದಂತೆ ಇಡಲು ಇದನ್ನು ಬಳಸುವುದಿದೆ. (ಎಸ್.ಎಚ್.ಪಿ.)

**ಕ್ಲೋರ್‌ಪ್ರಾಮಜ಼ೀನ್ :** ಫೀನೊಥೈಯಜೀನ್ ಜಾತಿಗೆ ಸೇರಿದ ಒಂದು ಶಮನಕಾರಿ(ಟ್ರ್ಯಾಂಕ್ವಿಲೈಸರ್). ಇದನ್ನು ಪ್ರಥಮವಾಗಿ 1952ರಲ್ಲಿ ಸ್ಕಿಜೊಫ್ರೀನಿಯ ಮೊದಲಾದ ಪ್ರಮುಖ ಮನೋವ್ಯಾಧಿಗಳ ಚಿಕಿತ್ಸೆಯಲ್ಲಿ ಬಳಸಲಾಯಿತು. ಇದು ಮನೋವಿಕಲತೆಯನ್ನು ಶಮನಗೊಳಿಸಿದರೂ ಸಂಪೂರ್ಣವಾಗಿ ಗುಣಪಡಿಸಿದ ನಿದರ್ಶನಗಳಿಲ್ಲ. ಆದರೆ ಇದರ

ಸತತಸೇವನೆಯಿಂದ ಚಟ ಹಿಡಿಯುವುದಾಗಲೀ ಮತ್ತಾವುದೇ ತೊಂದರೆಯಾಗಲೀ ಆಗುವುದಿಲ್ಲ. (ಎಲ್.ಎ.ಆರ್.)

**ಕ್ಲೋರ್ಯಾಂಫೆನಿಕಾಲ್ :** ಒಂದು ವಿಶಾಲ ರೋಹಿತ ಜೀವಿರೋಧಕ. ರಾಸಾಯನಿಕ ಸೂತ್ರ $C_{11}H_{12}Cl_2N_2O_5$. ಕ್ಲೋರೋಮೈಸೀಟಿನ್ ಇದರ ಪರ್ಯಾಯ ನಾಮ. ಸ್ಟ್ರೆಪ್ಟೊಮೈಸಿಸ್ ವೆನಿಜ್ವೇಲೀ ಎಂಬ ಬೂಷ್ಟು ಇದರ ಆಕರ. ಬರ್ಕ್‌ಹೋಲ್ಡರ್ ಎಂಬಾತ 1947ರಲ್ಲಿ ವೆನಿಜ್ವೇಲದ ರಾಜಧಾನಿ ಕರ್‍ಯಾಕಸಿನಲ್ಲಿ ಮಣ್ಣನ್ನು ಪರೀಕ್ಷಿಸುವಾಗ ಈ ಬೂಷ್ಟನ್ನು ಗುರುತಿಸಿ ಇದರಿಂದ ಕ್ಲೊರ್ಯಾಂಫೆನಿಕಾಲನ್ನು ಪಡೆಯಬಹುದೆಂದು ಕಂಡುಹಿಡಿದ. ಕೆಲವು ಬಗೆಯ ರೋಗಕಾರಕ ಬ್ಯಾಕ್ಟೀರಿಯ ಮತ್ತು ವೈರಸುಗಳ ವಿರುದ್ಧ ಈ ಜೀವಿರೋಧಕವನ್ನು ಬಳಸಲಾಗುತ್ತದೆ.

ಸ್ಟ್ರೆಪ್ಟೊಮೈಸಿಸ್ ವೆನಿಜ್ವೇಲೀ ಬೂಷ್ಟನ್ನು ಕೃತಕ ಮಾಧ್ಯಮಗಳಲ್ಲಿ ಬೆಳೆಸಿ ಪೂತಿರಹಿತ ಸ್ಥಿತಿಯಲ್ಲಿ ಗಾಳಿಯನ್ನು ಹಾಯಿಸಿ ಹುದುಗಿಸಿದಾಗ ಕ್ಲೋರ್ಯಾಂಫೆನಿಕಾಲ್ ದೊರೆಯುವುದು. ಹುದುಗುವಿಕೆಯನ್ನು 28 ° ಸೆಂ. ಉಷ್ಣತೆಯಲ್ಲಿ 3 ದಿವಸಗಳ ಕಾಲ ನಡೆಸಿ ಅನಂತರ ಬೂಷ್ಟನ್ನು ಒಳಗೊಂಡ ಮಾಧ್ಯಮವನ್ನು ಶೋಧಿಸಿ ಪಡೆಯುವ ಸೋಸನ್ನು ಅಮೈಲ್ ಅಸಿಟೇಟಿನೊಂದಿಗೆ ವರ್ತಿಸಲಾಗುತ್ತದೆ. ಅನಂತರ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ, ಸೋಡಿಯಮ್ ಬೈಕಾರ್ಬೊನೇಟ್ ಹಾಗೂ ನೀರಿನಲ್ಲಿ ತೊಳೆದು ಸಾಂದ್ರಗೊಳಿಸಿ ಬಳಿಕ ಉಷ್ಣತೆಯನ್ನು 8 ° ಸೆಂ.ಗೆ ಇಳಿಸಿ ಶೈತ್ಯಗೊಳಿಸಿ ಹರಳುರೂಪದಲ್ಲಿ ಇದನ್ನು ಪಡೆಯಲಾಗುತ್ತದೆ. ಹರಳುಗಳನ್ನು ಶೋಧಿಸಿ ತೆಗೆದು, ನಿರ್ವಾತಪ್ರದೇಶದಲ್ಲಿ ಒಣಗಿಸಿ, ಬಿಸಿನೀರಿನಲ್ಲಿ ಕರಗಿಸಿ ದ್ರವರೂಪಕ್ಕೆ ತರಲಾಗುತ್ತದೆ. ದ್ರಾವಣವನ್ನು ಕಾರ್ಬನ್ನಿನೊಂದಿಗೆ ಸೇರಿಸುವುದರ ಮೂಲಕ ಬಣ್ಣರಹಿತವನ್ನಾಗಿ ಮಾಡಲಾಗುತ್ತದೆ. ಮತ್ತೆ ಶೋಧಿಸಿ ತೊಳೆದು, ಒಣಗಿಸಿ ಹರಳಿನ ರೂಪಕ್ಕೆ ಪರಿವರ್ತಿಸಲಾಗುವುದು.

ಡಿಪ್ಲೊಕಾಕಸ್, ಸ್ಟಾಫೈಲೊಕಾಕಸ್ ಸ್ಟ್ರೆಪ್ಟೊಕಾಕಸ್ ಮುಂತಾದ ಬ್ಯಾಕ್ಟೀರಿಯಗಳನ್ನೂ ಅನೇಕ ಬಗೆಯ ದೊಡ್ಡ ಗಾತ್ರದ ವೈರಸುಗಳನ್ನೂ ಕ್ಲೋರ್ಯಾಂಫೆನಿಕಾಲ್ ಸಂಪೂರ್ಣವಾಗಿ ನಾಶಗೊಳಿಸುತ್ತದೆ. ಏಕಾಣುಜೀವಿ ಮತ್ತು ಸಾಂಕ್ರಾಮಿಕ ರೋಗಗಳ ಚಿಕಿತ್ಸೆಯಲ್ಲಿ ಇದನ್ನು ಬಳಸುತ್ತಾರೆ. ಟೈಫಾಯ್ಡ್ ಮತ್ತು ಹೀಮೊಫೈಲಸ್ ಇನ್‌ಫ್ಲೂಯೆಂಜೀ ಎಂಬುದರಿಂದ ಉಂಟಾಗುವ ಮೆನಿಂಜೈಟಿಸ್ ರೋಗಕ್ಕಂತೂ ಇದು ಪರಿಣಾಮಕಾರಿ ಔಷಧಿ. ರಿಕೆಟ್ಸಿಯೆ, ಸೆಪ್ಟಿಸೀಮಿಯ, ಬ್ರೂಸೆಲೋಸಿಸ್, ನಾಯಿಕೆಮ್ಮು, ಸಿಟಕೋಸಿಸ್, ಕರುಳು, ಕಣ್ಣು , ಕಿವಿ, ಗಂಟಲು, ಮೂಗು, ಚರ್ಮ ಸಂಬಂಧಿ ಕಾಯಿಲೆಗಳಿಗೂ ಲಿಂಫೊಗ್ರಾನ್ಯುಲೋಮ ವೆನಿರಿಯಮ್ ಎಂಬುದರಿಂದ ಉಂಟಾಗುವ ಗುಹ್ಯರೋಗ ನಿವಾರಣೆಗೂ ಬಳಸುವುದುಂಟು. ಆದರೆ ಕ್ಲೋರ್ಯಾಂಫೆನಿಕಾಲ್ ಬಳಕೆಯಿಂದ ಅಪಾಯ ಇಲ್ಲದಿಲ್ಲ; ಅಮೆರಿಕದಲ್ಲಿ ಇದರ ಉಪಯೋಗದಿಂದ 1952ರಲ್ಲಿ ಏಗ್ರ್ಯಾನ್ಯುಲೊಸೈಟೋಸಿಸ್ ಎಂಬ ತೀವ್ರ ಬಗೆಯ ರಕ್ತಹೀನತೆಯ ಕಾಯಿಲೆ ಉಂಟಾಯಿತು. ಆದ್ದರಿಂದ ಕ್ಲೋರ್ಯಾಂಫೆನಿಕಾಲನ್ನು ಅತ್ಯಂತ ಎಚ್ಚರಿಕೆಯಿಂದ ಉಪಯೋಗಿಸಬೇಕು. ಆದರೆ ಇದರಿಂದಾಗುವ ಉಪಯೋಗ ಇದರ ಅಲ್ಪ ಸ್ವಲ್ಪ ಅಪಾಯವನ್ನು ಬಹುಮಟ್ಟಿಗೆ ಮೀರಿ ನಿಂತಿದೆ. (ಎಸ್.ಎಚ್.ಪಿ.)

**ಕ್ಲೋಸ್‌ಪೇಟೆ ಗ್ರಾನೈಟ್ :** ಬೆಂಗಳೂರು ಜಿಲ್ಲೆಯ ಕ್ಲೋಸ್‌ಪೇಟೆ (ಈಗಿನ ರಾಮನಗರಂ) ಸುತ್ತಮುತ್ತಲೂ ಕಂಡುಬರುವ ಗ್ರಾನೈಟ್‌ಶಿಲೆಗಳ ಸ್ತೋಮ. ಇದು ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯ ಸಾತನೂರಿನಿಂದ ಪ್ರಾರಂಭವಾಗಿ ಉತ್ತರದಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರಿನ ವರೆಗೆ ಸುಮಾರು 320 ಕಿಮೀಗಳಷ್ಟು ಉದ್ದಕ್ಕೂ ಹರಡಿದೆ. ಕ್ಲೋಸ್‌ಪೇಟ್ ಗ್ರಾನೈಟ್‌ಗಳು ಬಿಜಾಪುರದ ಇಳಕಲ್‌ವರೆಗೂ ಚಾಚಿಕೊಂಡಿವೆ. ಇವುಗಳ ವಯಸ್ಸು ಹಾಗೂ ಉಗಮ 2500 ಮಿಲಿಯನ್ ವರ್ಷಗಳೆಂದು ವಿಜ್ಞಾನಿಗಳು ಖಚಿತಪಡಿಸಿರುತ್ತಾರೆ. ಇವು ನೈಸ್ ಶಿಲೆ ಜಾಡಿನೊಂದಿಗೆ ಚಿತ್ರದುರ್ಗದ ಮುಖ್ಯವಾದ ಸ್ತರ ಭಂಗದೊಂದಿಗೆ ಸಂಬಂಧ ಹೊಂದಿ ಅದೇ ಜಾಡಿನವುಗಳಾಗಿವೆ. ಆದರೆ ಚಾಮುಂಡಿ ಗ್ರಾನೈಟ್‌ಗೆ ಇದೇ ಹೋಲಿಕೆಯಿದ್ದಿದ್ದರೂ ಅದು ಅತ್ಯಂತ ಕಡಿಮೆ ವಯಸ್ಸಿನದು. (ಚಾಮುಂಡಿ ಗ್ರಾನೈಟ್) 89 ಮಿಲಿಯನ್ ವರ್ಷ. ಅಗಲ ಸುಮಾರು 16 ಕಿಮೀಗಳು. ಈ ಜಾಡಿನಲ್ಲಿ ಕ್ಲೋಸ್‌ಪೇಟೆ ಗ್ರಾನೈಟ್ ಅನೇಕ ಕಡೆ ಬೋಳುಬೋಳಾದ ಬೆಟ್ಟಗುಡ್ಡಗಳೋಪಾದಿಯಲ್ಲಿ ಗುಂಪುಗುಂಪಾಗಿ ಕಂಡುಬರುತ್ತದೆ.

ಇತರ ಗ್ರಾನೈಟ್ ಶಿಲೆಗಳಂತೆ ಕ್ಲೋಸ್‌ಪೇಟೆ ಗ್ರಾನೈಟ್ ಸಹ ಕ್ವಾರ್ಟ್ಸ್, ಫೆಲ್ಸ್‌ಫಾರ್ ಮತ್ತು ಬಯಟೈಟ್ ಮೈಕ ಖನಿಜಗಳಿಂದ ಕೂಡಿದೆ. ಇವುಗಳ ಶೋಧನೆಯ ವಿಚಾರದ ಮುಖ್ಯಾಂಶಗಳೆಂದರೆ ಒಳರಚನೆ. ಖನಿಜಪ್ರಮಾಣದಲ್ಲಿ ಹಲಕೆಲವು ವ್ಯತ್ಯಾಸಗಳು ಮತ್ತು ವಿಶಾಲವಾದ ಕ್ಷೇತ್ರದಲ್ಲಿ ಹರಡಿರುವಿಕೆ. ಸಾಮಾನ್ಯವಾಗಿ ಇವು ದಪ್ಪಕಣಗಳಿಂದ ಕೂಡಿದ ಒಳರಚನೆಯನ್ನು ತೋರಿಸುತ್ತವೆ. ಇದರ ಜೊತೆಗೆ ಪಾರ್ಫಿರಿಟಿಕ್ ರಚನೆ ಸಹ ಕಂಡುಬರುತ್ತದೆ. ಫೆಲ್ಸ್‌ಪಾರಿನ ಹರಳುಗಳು ಬಹುದೊಡ್ಡವಾಗಿದ್ದು ಅನೇಕವೇಳೆ 2–3 ಅಂಗುಲಗಳಿಗೂ ಹೆಚ್ಚು ಉದ್ದವಾಗಿರುತ್ತವೆ. ಇವುಗಳ ಬಣ್ಣ ನಸುಗೆಂಪು. ಕೆಂಪು ಮತ್ತು ಬಿಳಿ ಅಥವಾ ಬೂದು. ಹೀಗಾಗಿ ಇವು ನಸುಗೆಂಪು ಮತ್ತು ಬೂದುಬಣ್ಣದ ಗ್ರಾನೈಟ್ ಶಿಲೆಗಳನ್ನು ಉಂಟುಮಾಡುತ್ತವೆ. ಇದಲ್ಲದೆ ಸಣ್ಣ ಸಣ್ಣ ಕಣಗಳಿಂದ ಕೂಡಿದ ಗ್ರಾನೈಟುಗಳೂ ಇವೆ. ಕರ್ನಾಟಕದ ಭೂ ಚರಿತ್ರೆಯಲ್ಲಿ ಇವಕ್ಕೆ ಒಂದು ನಿರ್ದಿಷ್ಟ ಸ್ಥಾನ ಉಂಟು. ಭೂವಿಜ್ಞಾನಿಗಳ ಅಭಿಪ್ರಾಯದಲ್ಲಿ ಕರ್ನಾಟಕದ ಆರ್ಷೇಯ ಶಿಲಾಸ್ತೋಮದಲ್ಲಿ ಅದರಲ್ಲೂ ಊರ್ಧ್ವಮುಖವಾಗಿ ಚಾಚಿಕೊಂಡ ಉದ್ಭವಿಸಿರುವ ಶಿಲೆಗಳಲ್ಲಿ ಕ್ಲೋಸ್‌ಪೇಟೆ ಗ್ರಾನೈಟ್ ಶಿಲೆಗಳು ವಯಸ್ಸಿನಲ್ಲಿ ಅತ್ಯಂತ ಕಿರಿಯವು. ಮೊದಲಿಗೆ ಇವು ತಮಗಿಂತ ಹಳೆಯದಾದ ನೈಸ್‌ಸ್ತೋಮವನ್ನು ಭೇದಿಸುತ್ತವೆಂದು ಅಭಿಪ್ರಾಯಪಡಲಾಗಿತ್ತು. ಈಚಿನ ವರ್ಷಗಳಲ್ಲಿ ಸೂರ್ಯನಾರಾಯಣ ಅವರು ಅತ್ಯಾಧುನಿಕ ವೈಜ್ಞಾನಿಕ ರೀತಿಯಲ್ಲಿ ಇವುಗಳ ಬಗೆಗೆ ಅಧ್ಯಯನ ನಡೆಸಿ ಹೊಸ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಇವರ ಅಭಿಪ್ರಾಯದಂತೆ ಕ್ಲೋಸ್‌ಪೇಟೆ ಗ್ರಾನೈಟುಗಳಿಗೆ ನೈಸ್ ಶಿಲೆಗಳ ಗುಣಗಳೇ ಇದ್ದು ಅವುಗಳ ಜಾಡನ್ನೇ ಬಹುಮಟ್ಟಿಗೆ ಅನುಸರಿಸುತ್ತವೆ. ಅಲ್ಲದೆ ಇವುಗಳಂತೆಯೇ 56° –80°ಗಳಷ್ಟು ಇಳಿವೋರೆಯನ್ನು ತೋರಿಸುತ್ತವೆ. ಇವು ದಕ್ಷಿಣದಲ್ಲಿ ಸಾತನೂರಿನ ಬಳಿ ಶಾಖೋಪಶಾಖೆಗಳಾಗಿ ಒಡೆದು ಮಾಯವಾಗುತ್ತವೆ. ತಮಗಿಂತಲೂ ಹಳೆಯ ಶಿಲೆಗಳಾದ ನೈಸುಗಳನ್ನು ಭೇದಿಸಿ ಹೊರಬರುವ ಬದಲು ನೈಸ್ ಜಾಡಿನ ಮಧ್ಯೆ ಅವುಗಳಿಗೆ ಬಹುಮಟ್ಟಿಗೆ ಸಮಾಂತರವಾಗಿ ಹೊರಬಂದು ಕಾಣಿಸಿಕೊಂಡಿವೆ. ಇವುಗಳಿಗೂ ಚಾಮುಂಡಿ ಮತ್ತು ಚಿತ್ರದುರ್ಗ ಗ್ರಾನೈಟುಗಳಿಗೂ ಹೆಚ್ಚಿನ ಹೋಲಿಕೆ ಉಂಟು. (ಎಸ್.ಕೆ.ವಿ.)

**ಕ್ಲೋಸ್, ಬ್ಯಾರಿ:** 1756–1813. ಮೈಸೂರು ಸಂಸ್ಥಾನದಲ್ಲಿದ್ದ ಪ್ರಥಮ ಬ್ರಿಟಿಷ್ ರೆಸಿಡೆಂಟ್ (1799–1801). 1771ರಲ್ಲಿ ಮದರಾಸು ಸೈನ್ಯವನ್ನು ಸೇರಿ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ಸೇವೆಯನ್ನು ಪ್ರಾರಂಭಿಸಿದ ಈತ 1780ರ ತಲಚೇರಿ ಕದನದಲ್ಲಿ ಹೈದರನ ಸೈನ್ಯಕ್ಕೆ ಸಿಕ್ಕಿಬಿದ್ದಿದ್ದ. ಅನಂತರ ಬ್ರಿಟಿಷರು ಮತ್ತು ಟಿಪ್ಪುವಿನ ನಡುವೆ ನಡೆದ ಗಡಿನಿರ್ಣಯ ಚರ್ಚೆಯಲ್ಲಿ ಈತ ಭಾಗವಹಿಸಿದ್ದ. 1792 ಮತ್ತು 1799ರಲ್ಲಿ ನಡೆದ ಶ್ರೀರಂಗಪಟ್ಟಣದ ಮುತ್ತಿಗೆಗಳಲ್ಲಿ ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಅಡ್ಜುಟೆಂಟ್ ಜನರಲ್ ಆಗಿ ಪರಿಣಾಮಕಾರಿ ಪಾತ್ರವಹಿಸಿ ಅಂದಿನ ಮುಖ್ಯಸೈನ್ಯಾಧಿಕಾರಿಯಿಂದ ಪ್ರಶಂಸೆ ಗಳಿಸಿದ. ಟಿಪ್ಪುವಿನ ಪತನಾನಂತರ ಬ್ರಿಟಿಷರ ವಶಕ್ಕೆ ಬಂದ ಅವನ ರಾಜ್ಯದ ಕೆಲವು ಭಾಗಗಳನ್ನು ಮೈಸೂರು ರಾಜವಂಶದವರಿಗೆ ವಹಿಸಿಕೊಡುವ ಸಲುವಾಗಿ ಗೌರ್ನರ್ ಜನರಲ್ ವೆಲ್ಲೆಸ್ಲಿ ರಚಿಸಿದ ಸಮಿತಿಯ ಸದಸ್ಯನಾಗಿ ಕೆಲಸಮಾಡಿದ (1799). ವೆಲ್ಲೆಸ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೈಸೂರು ಸಂಸ್ಥಾನವನ್ನು ಕೊಟ್ಟು, ಅವರ ಆಸ್ಥಾನದಲ್ಲಿ ಕ್ಲೋಸ್‌ನನ್ನು ರೆಸಿಡೆಂಟಾಗಿ ನೇಮಿಸಿದ. 1801ರಲ್ಲಿ ಇವನು ಪುಣೆಗೆ ವರ್ಗವಾದ. ಅಲ್ಲಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿ ಮೇಜರ್ ಜನರಲ್ ಆಗಿ (1810) ನಿವೃತ್ತಿ ಹೊಂದಿ (1811) ಇಂಗ್ಲೆಂಡಿಗೆ ಹಿಂದಿರುಗಿದ. ಅಲ್ಲಿ ಬ್ಯಾರೊನೆಟ್ ಪ್ರಶಸ್ತಿ ಗಳಿಸಿದ. 1813ರಲ್ಲಿ ನಿಧನನಾದ.

ಇವನು ದಕ್ಷ ಆಡಳಿತಗಾರ, ಚಾಣಾಕ್ಷ, ರಾಜಕೀಯ ಮುತ್ಸದ್ದಿ ಎಂದು ಹೆಸರು ಗಳಿಸಿದ್ದ. ಭಾರತೀಯರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದ ಹಾಗೂ ಅವರ ಭಾಷೆಗಳನ್ನು ಅರಿತಿದ್ದ ಕೆಲವೇ ಆಡಳಿತಗಾರರಲ್ಲಿ ಅವನೊಬ್ಬ ಎಂದು ವೆಲ್ಲೆಸ್ಲಿ ಹೊಗಳಿದ್ದಾನೆ. ದಿವಾನ್ ಪೂರ್ಣಯ್ಯನವರಿಗೆ ಇವನಲ್ಲಿ ಬಹಳ ವಿಶ್ವಾಸವಿತ್ತು. ಮೈಸೂರು ಸಂಸ್ಥಾನದ ಆಡಳಿತವನ್ನು ಸುವ್ಯವಸ್ಥೆಗೆ ತರಲು ಅವರಿಗೆ ಸಾಧ್ಯವಾದುದು ಇವನ ಸಹಕಾರದಿಂದ.

ಇಂಥ ವ್ಯಕ್ತಿಯ ನೆನಪಿಗಾಗಿ ಪೂರ್ಣಯ್ಯನವರು 1800ರಲ್ಲಿ ಒಂದು ಹೊಸ ಊರನ್ನು ಸ್ಥಾಪಿಸಿ ಕ್ಲೋಸ್‌ಪೇಟೆ ಎಂದು ಹೆಸರಿಟ್ಟರು (ಇದು ಇಂದಿನ ರಾಮನಗರ). (ಕೆ.ಎಸ್.ಎಸ್.)

**ಕ್ಲ್ಯಾತ್ರೇಟ್ ಸಂಯುಕ್ತಗಳು :** ಕ್ಲ್ಯಾತ್ರೇಟ್ ಎಂಬ ಶಬ್ದದ ಗ್ರೀಕ್ ಮೂಲಪದ ಕ್ಲ್ಯಾತ್ರೇಟಸ್. ಇದರ ಅರ್ಥ ಬೋನು ಅಥವಾ ಪಂಜರದೊಳಗೆ ಸಲಾಕಿಗಳಿಂದ ಆವರಿತವಾಗಿರುವ ಅಥವಾ ರಕ್ಷಿಸಲ್ಪಟ್ಟಿರುವ ಎಂದು. ಕೆಲವು ವೇಳೆ ಘನ ರಾಸಾಯನಿಕ ವಸ್ತುವಿಗೆ ತನ್ನೊಳಗೆ ಮತ್ತೊಂದು ರಾಸಾಯನಿಕ ಸಂಯುಕ್ತವನ್ನಾಗಲಿ ಧಾತುವನ್ನಾಗಲಿ ಒಂದು ನಿರ್ದಿಷ್ಟ ಪರಿಮಾಣದಲ್ಲಿ ಅಳವಡಿಸಿಕೊಳ್ಳುವ ಸಾಮರ್ಥ್ಯ ಇರುವುದು. ಉದಾಹರಣೆಗೆ ಕ್ವಿನಾಲ್$[C_6H_4(OH)_2]$ ಸಂಯುಕ್ತದ ದ್ರಾವಣವೊಂದನ್ನು (ನೀರು ಅಥವಾ ಆಲ್ಕೊಹಾಲಿನಲ್ಲಿ) ಸುಮಾರು 10–40 ವಾಯುಮಂಡಲ ಒತ್ತಡದಲ್ಲಿಯ ಕ್ಸಿನಾನ್ ಅನಿಲ ಸಂಪರ್ಕದಲ್ಲಿ ಸ್ಫಟಿಕೀಕರಣಕ್ಕೆ ಒಳಪಡಿಸಿದರೆ ಸುಮಾರು 1 ಸೆಂಮೀ.ಉದ್ದದ ವರೆಗೆ ಇರುವ ಸಾಮಾನ್ಯ ಕ್ವಿನಾಲಿನಿಂದ ವಿಭಿನ್ನ ರೂಪದ ಹರಳುಗಳು ಉಂಟಾಗುತ್ತವೆ. ಇವುಗಳಲ್ಲಿ ಕ್ವಿನಾಲ್/ಕ್ಸಿನಾನ್ 3:0.88. ಹಾಗೆಯೇ ಕ್ರಿಪ್ಟಾನ್ ಅನಿಲದೊಡನೆ 3:0.74 ಪರಸ್ಪರಾನುಪಾತದ ಹರಳುಗಳು ಉಂಟಾಗುವುವು. ಅಸಿಟೊ ನೈಟ್ರೈಲಿನೊಂದಿಗೆ ಗರಿಷ್ಠಾನುಪಾತ 3:1. ರಾಸಾಯನಿಕವಾಗಿ ಶುದ್ಧ ಜಡವಸ್ತುಗಳೆಂದು ಪರಿಗಣಿತವಾಗಿದ್ದ ಕ್ಸಿನಾನ್, ಕ್ರಿಪ್ಟಾನ್ ಅನಿಲಗಳು ಕೊಡಬಲ್ಲ ಸಂಯುಕ್ತಗಳ ಮೇಲಿನ ಸಂಶೋಧನೆಗಳಲ್ಲಿ ಅವುಗಳ ಕ್ಲ್ಯಾತ್ರೇಟ್ ಸಂಯುಕ್ತಗಳಿಗೆ 1962ರ ತನಕ ಒಂದು ವಿಶಿಷ್ಟ ಸ್ಥಾನವಿತ್ತು. ಆದಾಗ್ಯೂ ಇವು ನಿಜವಾಗಿಯೂ ಒಂದು ವಿಶಿಷ್ಟ ವರ್ಗದ ಸಂಯುಕ್ತಗಳೇ ಹೊರತು ರಾಸಾಯನಿಕ ಬಂಧದ ಬಿಗಿತದಲ್ಲಿರುವ ಸಂಯುಕ್ತಗಳಲ್ಲ. ಆಶ್ರಯದಾತ ಕ್ವಿನಾಲ್ ಘನ ಸ್ಫಟಿಕ ನೀರಿನಲ್ಲಿ ವಿಲೀನವಾಗುವುದರಿಂದಾಗಲಿ ಕಾಸಿದಾಗಾಗಲಿ ತನ್ನ ಘನ ಸ್ಥಿತಿಯನ್ನು ಕಳೆದುಕೊಂಡಾಗ ಅದರೊಳಗೆ ಬಿಗಿಯಾಗಿ ಸೆರೆಹಿಡಿಯಲ್ಪಟ್ಟಿದ್ದ ಕ್ಸಿನಾನ್ ಅಥವಾ ಕ್ರಿಪ್ಟಾನ್ ಅನಿಲ ಹೊರಬೀಳುತ್ತದೆ. ಅಂದರೆ ಕ್ವಿನಾಲ್

ಸಂಯುಕ್ತದ ಹರಳುಗಳ ಒಳರಚನೆಯಲ್ಲಿ ಟೊಳ್ಳಿದೆ ಅಥವಾ ಡೊಗರುಗಳಿವೆ. ಆ ಸ್ಥಾನಗಳನ್ನು ಬಿಗಿಯಾಗಿ ತುಂಬಿಕೊಳ್ಳಬಲ್ಲ ಗಾತ್ರವಿರುವ ಇತರ ಧಾತು ಅಥವಾ ಸಂಯುಕ್ತಗಳನ್ನು ಮಾತ್ರ ಭದ್ರವಾಗಿ ಸೆರೆಹಿಡಿಯಲು ಸಾಧ್ಯ. ಅಂಥ ಕೆಲವಸ್ತುಗಳೆಂದರೆ ಆಮ್ಲಜನಕ, ಗಂಧಕದ ಡೈಆಕ್ಸೈಡ್, ಆರ್ಗಾನ್, ಹೈಡ್ರೊಜನ್ ಸಲ್ಫೈಡ್, ಮಿಥೈಲ್ ಆಲ್ಕೊಹಾಲ್ ಇತ್ಯಾದಿ. ಅಂದರೆ ಕ್ಲ್ಯಾತ್ರೇಟ್ ಸಂಯುಕ್ತಗಳು ಉಂಟಾಗಲು ಆಶ್ರಯದಾತ ಸಂಯುಕ್ತದ ಹರಳುಗಳೊಳಗಿನ ಡೊಗರುಗಳ ಗಾತ್ರ ಬಹಳ ಕಡಿಮೆಯಾದರೂ ಸುಭದ್ರ ಕ್ಲ್ಯಾತ್ರೇಟ್ ಸಾಧ್ಯವಿಲ್ಲ. ಡೊಗರುಗಳ ಮೂಲಕ ಅದು ಹಾದು ಹೋಗುವುದೇ ವಿನಾ ಬಿಗಿಯಾಗಿ ಬಂಧಿತವಾಗುವುದಿಲ್ಲ. ಈ ಕಾರಣದಿಂದಲೇ ಸಣ್ಣಗಾತ್ರದ ಹೀಲಿಯಂ ಮತ್ತು ನಿಯಾನ್ ಪರಮಾಣುಗಳು ಕ್ವಿನಾಲಿನೊಂದಿಗೆ ಕ್ಲ್ಯಾತ್ರೇಟ್ ಸಂಯುಕ್ತಗಳನ್ನು ಕೊಡುವುದಿಲ್ಲ. ಅಂದರೆ ಈ ಮೂಲಕ ಆರ್ಗಾನ್ ಮತ್ತು ನಿಯಾನ್ ಮಿಶ್ರಣದ ಬೇರ್ಪಡೆಯೂ ಸಾಧ್ಯ. ಜೇಡಿಮಣ್ಣಿನ ವರ್ಗದ ಕೆಲ ನಿರವಯವ ಸಂಯುಕ್ತ ಖನಿಜವಸ್ತುಗಳಿಗೂ ಈ ಲಕ್ಷಣ ಉಂಟು. ಅವನ್ನೇ ಅಣು ಜರಡಿಯಂತೆ ಉಪಯೋಗಿಸಿ ಮಿಶ್ರಣವೊಂದರಿಂದ ವಿವಿಧ ಗಾತ್ರದ ಅಣುಗಳನ್ನು ಬೇರ್ಪಡಿಸಲು ಸಾಧ್ಯ. ಆಶ್ರಯದಾತ ಸಂಯುಕ್ತದ ಹರಳುಗಳೊಳಗಿನ ಡೊಗರುಗಳು ಸೂಕ್ಷ್ಮರಂಧ್ರಗಳಾಗಿರಬಹುದು, ನಾಳಗಳಾಗಿರಬಹುದು ಅಥವಾ ಜೇನುಗೂಡುಗಳ ರಚನೆಯಂತೆ ಷಡ್ಭುಜಾಕಾರದಲ್ಲಿದ್ದರೂ ಇರಬಹುದು. ಡೊಗರುಗಳ ಗಾತ್ರ ಆಕಾರಗಳೆರಡೂ ಅವುಗಳ ಮೂಲಕ ಒಂದು ಗೊತ್ತಾದ ಸಂಯುಕ್ತ ಪ್ರವಹಿಸಬಲ್ಲುದೋ ಇಲ್ಲವೋ ಎಂಬುದನ್ನು ನಿರ್ಣಯಿಸುತ್ತವೆ. ಕ್ಲ್ಯಾತ್ರೇಟುಗಳ ರಚನೆಯನ್ನು ತಿಳಿದುಕೊಳ್ಳುವುದರಲ್ಲಿ ಎಕ್ಸ್‌ಕಿರಣಗಳ ವಿಶ್ಲೇಷಣವಿಧಾನ ಉಪಯುಕ್ತವಾದುದು. ಮೂರು ಕ್ವಿನಾಲ್ ಅಣುಗಳು ಜಲಜನಕ ಬಂಧದ ಪರಿಣಾಮವಾಗಿ ಸುಮಾರು 4°A ನಷ್ಟು ವ್ಯಾಸದ ರಂಧ್ರವಿರುವ ಒಂದು ವೃತ್ತಾಕಾರದ ಪಂಜರವನ್ನು ಸೃಷ್ಟಿಸುವುವು. ಅದೇ ಸಾವಯವ ಸಂಯುಕ್ತ ಯೂರಿಯಕ್ಕೆ ತನ್ನ ಹರಳಿನಲ್ಲಿ ಅನೇಕ ಸಮಾಂತರ ಸೂಕ್ಷ್ಮನಾಳಗಳು ಇರುತ್ತವೆ. ಇವು ನೇರವಾದ ಸರಪಳಿ ರಚನೆಯುಳ್ಳ ಹೈಡ್ರೊಕಾರ್ಬನುಗಳನ್ನು ತಮ್ಮೊಳಕ್ಕೆ ಪ್ರವೇಶಕ್ಕೆಡೆ ಮಾಡಿಕೊಡಬಲ್ಲವು. ಆದರೆ ಅದೇ ಕೊಂಬೆಗಳ ರಚನೆಯ ಹೈಡ್ರೊಕಾರ್ಬನುಗಳ ಪ್ರವೇಶ ಸಾಧ್ಯವಿಲ್ಲ. ಹೀಗಾಗಿ ಈ ಎರಡು ಬಗೆಯ ರಚನೆಯ ಹೈಡ್ರೊಕಾರ್ಬನುಗಳನ್ನು ಬೇರ್ಪಡಿಸುವುದೂ ಸಾಧ್ಯವೆಂದಾಯಿತು. ನೀರಿನ ರಚನೆಯಲ್ಲೂ ಜಲಜನಕಬಂಧದ ಪಾತ್ರ ಹಿರಿದು. ನೀರು ಘನೀಭೂತವಾದಾಗ ಮಂಜುಗಡ್ಡೆಯುಂಟಾಗಿ ಅದರ ಒಳರಚನೆಯಲ್ಲಿ ಡೊಗರುಗಳಿದ್ದು ಸಾಂದ್ರತೆ ಕಡಿಮೆಯಾಗಿ ಬರ್ಫ ನೀರಿನ ಮೇಲೆ ತೇಲುವುದು ತಿಳಿದ ವಿಷಯ. ನೀರನ್ನು ಕೆಲ ಅನಿಲಗಳ (x ಅನ್ನೋಣ) ಸಂಪರ್ಕದಲ್ಲಿ ಬರ್ಫವಾಗಿ ಪರಿವರ್ತಿಸಿದಾಗ ನೀರು ಅನಿಲಗಳ ಕ್ಲ್ಯಾತ್ರೇಟ್ ಸಂಯುಕ್ತಗಳುಂಟಾಗುವುವು. ಉದಾಹರಣೆಗೆ, x= ಆರ್ಗಾನ್, ಕ್ರಿಪ್ಟಾನ್, ಕ್ಸಿನಾನ್, ಕ್ಲೋರಿನ್, ಗಂಧಕದ ಡೈಆಕ್ಸೈಡ್ ಇತ್ಯಾದಿ. ಇವುಗಳಿಗೆ ಗರಿಷ್ಠ ಪ್ರಮಾಣದಲ್ಲಿ $x.7.67\,H_2O$, $x.5.76\,H_2O$ ಸೂತ್ರ ಅನ್ವಯವಾಗುವುದು. ಕ್ಲೋರೋಫಾರಂ, ಈಥೈಲ್ ಕ್ಲೋರೈಡ್ ಮುಂತಾದ ದ್ರವ ವಸ್ತುಗಳೂ ನೀರಿನೊಂದಿಗೆ ಕ್ಲ್ಯಾತ್ರೇಟ್ ಸಂಯುಕ್ತಗಳನ್ನು ಕೊಡುವುವು. ಮನುಷ್ಯನಿಗೆ ಶಸ್ತ್ರಕ್ರಿಯೆ ನಡೆಸುವಾಗ ಪೂರ್ವಭಾವಿಯಾಗಿ ಜ್ಞಾನ ತಪ್ಪಿಸಲು ಬಳಸುವ ಕ್ಲೋರೊಫಾರಂ ಮಿದುಳಿನಲ್ಲಿರುವ ದ್ರವದೊಂದಿಗೆ ಕ್ಲ್ಯಾತ್ರೇಟ್ ಸಂಯುಕ್ತವಾಗುತ್ತದೆ ಎಂದೂ ಸೂಚಿಸಲ್ಪಟ್ಟಿದೆ. ಪಿಷ್ಟ, ಪ್ರೋಟೀನ್ ಮತ್ತು ನ್ಯೂಕ್ಲಿಯಿಕ್ ಆಮ್ಲಗಳಂಥ ದೊಡ್ಡ ಅಣುಗಳು ಕ್ಲ್ಯಾತ್ರೇಟ್ ಸಂಯುಕ್ತಗಳಿಗೆ ಅನುಕೂಲಕರವಾದ ರಚನಾವಸ್ತುಗಳಾಗಿವೆ. ಹೀಗಾಗಿ ಜೀವರಸಾಯನವಿಜ್ಞಾನದಲ್ಲೂ ಕ್ಲ್ಯಾತ್ರೇಟುಗಳ ಪಾತ್ರ ಹಿರಿದು ಎಂದು ಭಾವಿಸಲಾಗಿದೆ. ಪಾಲಿವಿನೈಲ್ ಆಲ್ಕೊಹಾಲ್ ಮತ್ತು ಅಯೊಡೀನುಗಳ ನೀಲವರ್ಣದ ಕ್ಲ್ಯಾತ್ರೇಟ್ ಸಂಯುಕ್ತಕ್ಕೆ ಬೆಳಕಿನ ಧ್ರುವೀಕರಣವನ್ನು ಉಂಟುಮಾಡುವ ಲಕ್ಷಣ ಉಂಟು. ಅದನ್ನು ಕನ್ನಡಕದ ಗಾಜಾಗಿ ಉಪಯೋಗಿಸುವರು.

(ಎಚ್.ಎಸ್.ಎನ್.)

**ಕ್ಲ್ಯಾಪೆರಾನ್, ಬನ್ಯಾ-ಪಿಯರ್-ಎಮೈಲ್ :** 1799-1864. ಫ್ರಾನ್ಸಿನ ಖ್ಯಾತ ಸಿವಿಲ್ ಎಂಜಿನಿಯರ್. ರಷ್ಯದಲ್ಲಿ ಸ್ವಲ್ಪಕಾಲ (1820-30) ಸೇವೆ ಸಲ್ಲಿಸಿದ. ಕಟ್ಟಡಗಳ ನಿರ್ಮಾಣವನ್ನು ಕುರಿತು ಸಂಶೋಧನ ಪ್ರಬಂಧಗಳನ್ನು ಆಗ ಪ್ರಕಟಿಸಿದ್ದುಂಟು. ಫ್ರಾನ್ಸಿಗೆ ಮರಳಿದ ಬಳಿಕ ಈತನ ಆಸಕ್ತಿ ರೈಲುಹಾದಿಗಳ ನಿರ್ಮಾಣ, ಉಗಿಯಂತ್ರಗಳ ಆಲೇಖ್ಯ ಹಾಗೂ ರಚನೆಗಳ ಕಡೆಗೆ ಹರಿಯಿತು. ಕ್ಲ್ಯಾಪೆರಾನ್ 1848ರಲ್ಲಿ ಅಕೆಡಮಿ ಆಫ್ ಸೈನ್ಸಸ್‌ಗೆ ಆಯ್ಕೆಗೊಂಡ. ಸೂಯೆಜ್ ಭೂಖಂಡವನ್ನು ಛೇದಿಸುವಲ್ಲಿ ಮತ್ತು ನೌಕೆಯಲ್ಲಿ ಉಗಿಯನ್ನು ಶಕ್ತಿ ಆಕರವಾಗಿ ವಿನಿಯೋಗಿಸುವಲ್ಲಿ ಕ್ಲ್ಯಾಪೆರಾನ್ ನೀಡಿದ ತಾಂತ್ರಿಕ ಅಭಿಪ್ರಾಯಗಳು ಗಮನಾರ್ಹವಾಗಿದ್ದುವು. ಉಷ್ಣಗತಿವಿಜ್ಞಾನದಲ್ಲಿ ಈತನ ಹೆಸರಿನಿಂದಲೇ ಕರೆಯಲ್ಪಡುವ ಒಂದು ಸಮೀಕರಣವಿದೆ. **(ನೋಡಿ- ಕ್ಲ್ಯಾಪೆರಾನ್-ಸಮೀಕರಣ)**

ಜನನ 1799ರ ಫೆಬ್ರುವರಿ 26ರಂದು. ಮರಣ 1864ರ ಜನವರಿ 28ರಂದು. *

**ಕ್ಲ್ಯಾಪೆರಾನ್ ಸಮೀಕರಣ :** ಉಷ್ಣಗತಿವಿಜ್ಞಾನದಲ್ಲಿ ಬರುವ ಒಂದು ಮುಖ್ಯ ಸಮೀಕರಣ. ಒಂದು ವಸ್ತು ಸಮತೋಲ ಸ್ಥಿತಿಯಲ್ಲಿ ಇರುವಾಗ ಅದರ ಸ್ಥಿತ್ಯಂತರಕ್ಕೆ ಸಂಬಂಧಿಸಿದ ಚರಗಳನ್ನು ಈ ಸಮೀಕರಣ ಕೆಳಗೆ ಬರೆದಿರುವಂತೆ ಸಂಬಂಧಿಸುವುದು:

$$\frac{dp}{dt} = \frac{L}{T(V_B - V_A)}$$

ಸಮತೋಲ ಸ್ಥಿತಿಯಲ್ಲಿ ವಸ್ತು A ಮತ್ತು Bಗಳೆಂಬ ಎರಡು ಸ್ಥಿತಿಗಳಲ್ಲಿರುವುದಾದರೆ ಈ ಸಮೀಕರಣದಲ್ಲಿ $\frac{dp}{dt}$ ಉಷ್ಣತೆಯಲ್ಲಿ ಅತ್ಯಲ್ಪ ವ್ಯತ್ಯಾಸ ಒತ್ತಡದ ಮೇಲೆ ಬೀರುವ ಪ್ರಭಾವವನ್ನೂ L ಸ್ಥಿರಾಂಕ ಸ್ಥಿತ್ಯಂತರದಲ್ಲಿ ಒಂದು ಗ್ರಾಂ ಅಣುತೂಕವಸ್ತುವಿನಲ್ಲಿ ಆಗುವ ಉಷ್ಣವ್ಯತ್ಯಾಸವನ್ನೂ T ಕೆಲ್ವಿನ್ ಮಾನಕದಲ್ಲಿ ಸಮತೋಲ ಸ್ಥಿತಿಯ ಉಷ್ಣತೆಯನ್ನೂ $V_A$ ಹಾಗೂ $V_B$ ಗಳು ಈ ಪರಿಸ್ಥಿತಿಯಲ್ಲಿ ಒಂದು ಗ್ರಾಂ ಅಣುತೂಕದಷ್ಟು ವಸ್ತು A ಮತ್ತು B ಸ್ಥಿತಿಗಳಲ್ಲಿ ಆಕ್ರಮಿಸಿಕೊಳ್ಳಬಲ್ಲ ಗಾತ್ರವನ್ನೂ ಸೂಚಿಸುತ್ತದೆ. ಈ ಸಮೀಕರಣವನ್ನು ಸಾಮಾನ್ಯವಾಗಿ ಒಂದು ವಸ್ತು, ಘನ, ದ್ರವ ಅಥವಾ ಅನಿಲ ಸ್ಥಿತಿಗಳಲ್ಲಿ ಒಂದರಿಂದ ಒಂದಕ್ಕೆ ಬದಲಾಗುವಾಗಿನ ದ್ರವನ ಬಿಂದು, ಕುದಿ ಬಿಂದು ಇವೇ ಮೊದಲಾದ ಭೌತ ಸ್ಥಿರಾಂಕಗಳು ಹೊರಗಿನ ಒತ್ತಡದ ವ್ಯತ್ಯಾಸದಿಂದ ಹೇಗೆ ವ್ಯತ್ಯಸ್ತಗೊಳ್ಳುತ್ತವೆ ಎಂಬುದನ್ನು ಗೊತ್ತುಮಾಡಿಕೊಳ್ಳಲು ಉಪಯೋಗಿಸಲಾಗುತ್ತದೆ. ಫ್ರೆಂಚ್ ಭೌತವಿಜ್ಞಾನಿ ಇ.ಕ್ಲ್ಯಾಪೆರಾನ್ (1799-1864) ಎಂಬಾತನಿಂದ ಮೊದಲು ಆವಿಷ್ಕರಿಸಲ್ಪಟ್ಟು ತರುವಾಯ ಕ್ಲಾಷಿಯಸ್ (1822-88) ಎಂಬಾತನಿಂದ ಪರಿಷ್ಕರಿಸಲ್ಪಟ್ಟ ಸಮೀಕರಣವಿದು.

(ಕೆ.ಟಿ.ಎಸ್.; ಕೆ.ಎಸ್.ಆರ್.ಐ.)

**ಕ್ಲ್ಯಾವಿಸೆಪ್ಸ್ :** ಆಸ್ಕೊಮೈಸಿಟೀಸ್ ಗುಂಪಿನ ಕ್ಲ್ಯಾವಿಸೆಪಿಟೇಸೀ ಕುಟುಂಬಕ್ಕೆ ಸೇರಿದ ಒಂದು ಶಿಲೀಂಧ್ರ. ರೈ, ಬಾರ್ಲಿ, ಗೋದಿ, ಓಟ್ ಮುಂತಾದ ಧಾನ್ಯ ಬೆಳೆಗಳ ಮೇಲೆ ಪರಾವಲಂಬಿಯಾಗಿ ಬೆಳೆಯುವ ಇದು ಈ ಬೆಳೆಗಳಲ್ಲಿ ಅರ್ಗಟ್ ಎಂಬ ರೋಗವನ್ನು ಉಂಟು ಮಾಡುತ್ತದೆ. ಕ್ಲ್ಯಾವಿಸೆಪ್ಸ್ ಜಾತಿಯಲ್ಲಿ ಸುಮಾರು 10 ಪ್ರಭೇದಗಳಿವೆ. ಇವುಗಳಲ್ಲಿ ಪರ್ಫ್ಯೂರಿಯ ಪ್ರಭೇದವೇ ಬಲು ಮುಖ್ಯವಾದುದು. ಅರ್ಗಟ್ ರೋಗ ಸಾಮಾನ್ಯವಾಗಿ ಹೂಗೊಂಚಲುಗಳಿಗೇ ಸೀಮಿತವಾಗಿದ್ದು ಪ್ರಮುಖವಾಗಿ ಒಂದೊಂದು ಬಿಡಿ ಕಾಳಿನಲ್ಲೂ ತಲೆದೋರುತ್ತದೆ. ಈ ರೋಗಸ್ಥಿತಿಗೆ ಅರ್ಗಾಟಿಸಮ್ ಎಂದು ಹೆಸರು. ಅರ್ಗಟ್ ಸ್ಥಿತಿಯಲ್ಲಿರುವ ಶಿಲೀಂಧ್ರ ದೇಹವನ್ನು ಸ್ಕ್ಲೀರೋಷಿಯಮ್ ಎಂದು ಕರೆಯಲಾಗುತ್ತದೆ.

ಕ್ಲ್ಯಾವಿಸೆಪ್ಸಿನ ಜೀವನಚರಿತ್ರೆ ಬಹಳ ಕೌತುಕಮಯವಾಗಿದೆ. ಧಾನ್ಯ ಬೆಳೆಗಳು ಹೂ ಬಿಡುವ ಕಾಲದಲ್ಲಿ ಶಿಲೀಂಧ್ರ ಹೂವಿನ ಅಂಡಾಶಯವನ್ನು ಹೊಗುತ್ತದೆ. ಶಿಲೀಂಧ್ರ ಉತ್ಪತ್ತಿ ಮಾಡುವ ಆಸ್ಕೊಸ್ಪೋರುಗಳೆಂಬ ಬೀಜಾಣುಗಳು ಅಂಡಾಶಯದ ಮೇಲೆ ಮೊಳೆಯುವುದರಿಂದ ರೋಗ ತಗಲುತ್ತದೆ. ಆಸ್ಕೊಸ್ಪೋರುಗಳಿಂದ ಮೊದಲು ಮೊಳೆನಳಿಕೆಗಳು ಉತ್ಪತ್ತಿಯಾಗಿ ಹೂವಿನ ಅಂಡಾಶಯವನ್ನು ಕೊರೆದುಕೊಂಡು ಹೊಕ್ಕು ಅಲ್ಲಿರುವ ಅಂಗಾಂಶಗಳನ್ನು ನಾಶಮಾಡಿ ಅಥವಾ ತಿಂದು ಬದುಕುತ್ತವೆ. ಅನಂತರ ಶಿಲೀಂಧ್ರ ದ್ವಿಗುಣಗೊಂಡು ಇಡೀ ಅಂಡಾಶಯ ಭಾಗವನ್ನು ಆವರಿಸುತ್ತದೆ. ಶಿಲೀಂಧ್ರದೇಹ ಬಹುಕೋಶ ಜೀವಿ. ತಂತಿಗಳಂಥ ಅನೇಕ ಎಳೆಗಳಿಂದ ಮಾಡಲ್ಪಟ್ಟಿದೆ. ಆದರೆ ನಿರ್ದಿಷ್ಟ ಆಕಾರವಿಲ್ಲ. ಎಳೆಗಳು ಮೃದು; ಬಣ್ಣ ನಸುಬಿಳುಪು. ಒಂದೊಂದು ಎಳೆಯಲ್ಲೂ ಅಸಂಖ್ಯಾತ ಜೀವಕೋಶಗಳಿದ್ದು ಪ್ರತಿಕೋಶದಲ್ಲಿ ಸಾಮಾನ್ಯವಾಗಿ ಒಂದೊಂದೇ ನ್ಯೂಕ್ಲಿಯಸ್ ಇರುತ್ತದೆ; ಕೆಲವೊಮ್ಮೆ ಎರಡು ನ್ಯೂಕ್ಲಿಯಸ್ ಇರುವುದೂ ಉಂಟು. ರೋಗ ತಗಲಿದ ಸ್ವಲ್ಪ ಕಾಲಾನಂತರ ಒಟ್ಟೊಟ್ಟಿಗೆ ಇರುವ ಎಳೆಗಳ ಗುಂಪಿನ ಚಿಕ್ಕಚಿಕ್ಕ ಲಾಳಾಕಾರದ ಸಂತಾನಾಂಗಗಳು ಬೆಳೆಯುತೊಡಗುತ್ತದೆ. ಇವಕ್ಕೆ ಕೊನಿಡಿಯೋಫೋರುಗಳು ಎಂದು ಹೆಸರು. ಪ್ರತಿಯೊಂದರಿಂದಲೂ ಸಣ್ಣ ಸಣ್ಣ ಕೊನಿಡಿಯಗಳೆಂಬ ಬೀಜಾಣುಗಳು ಉತ್ಪತ್ತಿಯಾಗುತ್ತವೆ. ಇದೇ ಸಮಯದಲ್ಲಿ ಹಳದಿ ಬಣ್ಣದ, ಲೋಳೆಯಂಥ ಅಂಟು ಪದಾರ್ಥ ಒಸರತೊಡಗುತ್ತದೆ. ಇದರಲ್ಲಿ ಸಕ್ಕರೆ ಅಂಶ ಹೆಚ್ಚಾಗಿರುವುದರಿಂದ ಕೆಲವು ಜಾತಿಯ ಕೀಟಗಳು ಆಕರ್ಷಿತವಾಗಿ ಕೊನಿಡಿಯಗಳ ಬಳಿ ಬರುತ್ತವೆ. ಇವುಗಳ ಸಹಾಯದಿಂದ ಕೊನಿಡಿಯಗಳು ಪ್ರಸಾರವಾಗುತ್ತವೆ. ಈ ರೀತಿ ಪ್ರಸಾರವಾದ ಕೊನಿಡಿಯಗಳು ಅನುಕೂಲ ಪರಿಸ್ಥಿತಿ ಒದಗಿದಾಗ ಮೊಳೆತು ಬೇರೆ ಆರೋಗ್ಯವಂತ ಸಸ್ಯಗಳ ಹೂಗಳನ್ನು ಆಕ್ರಮಿಸುತ್ತವೆ. ಇದು ರೋಗ ಹರಡುವ ಕ್ರಮ. ಕೆಲವು ದಿನಗಳ ಅನಂತರ ಅಂಡಾಶಯಗಳಲ್ಲಿ ಸ್ಕ್ಲೀರೋಷಿಯಗಳೆಂಬ ವಿಶೇಷ ಬಗೆಯ ರಚನೆಗಳು ಉತ್ಪತ್ತಿಯಾಗುತ್ತವೆ. ನಸುಗಪ್ಪು ಇಲ್ಲವೆ ಕೆಂಪು ಬಣ್ಣದವಾದ ಇವು ಅನೇಕ ಎಳೆಗಳಿಂದ ಕೂಡಿದ ರಚನೆಗಳು. ಪೂರ್ಣವಾಗಿ ಬೆಳೆದ ಮೇಲೆ ಹೂಗೊಂಚಲಿನ ಮೇಲೆ ದೃಢವಾಗಿ ಎದ್ದುಕಾಣುತ್ತವೆ. ಈ ರೀತಿ ಉತ್ಪತ್ತಿಯಾಗುವ ಸ್ಕ್ಲೀರೋಷಿಯಗಳೇ ವಾಣಿಜ್ಯ ಅರ್ಗಟಿನ ಆಕರ.

ಸ್ಕ್ಲೀರೋಷಿಯಗಳು ಪೈರು ಕೊಯ್ಯುವಾಗ ಕಳಚಿ ನೆಲಕ್ಕೆ ಬೀಳುತ್ತವೆ. ಚಳಿಗಾಲವನ್ನು ಭೂಮಿಯಲ್ಲೇ ಕಳೆಯುವ ಇವು ಮುಂಬರುವ ವಸಂತಮಾಸದಲ್ಲಿ ಮೊಳೆಯಲಾರಂಭಿಸುತ್ತವೆ. ಪ್ರತಿಯೊಂದು ಸ್ಕ್ಲೀರೋಷಿಯಮಿನಿಂದಲೂ ಒಂದು ಅಥವಾ

ಹೆಚ್ಚಿನ ಸಂಖ್ಯೆಯಲ್ಲಿ ಸ್ಪೋರಮ ಎನ್ನಲಾಗುವ ವಿಶೇಷವಾದ ರಚನೆಗಳು ಉತ್ಪತ್ತಿಯಾಗುತ್ತವೆ. ಒಂದೊಂದು ಸ್ಪೋರಮವೂ ಪುಟ್ಟ ಕೊಡೆಯಾಕಾರದ್ದಾಗಿದ್ದು ಉದ್ದವಾದ ಬುಡ ಅಥವಾ ತೊಟ್ಟನ್ನು ಹೊಂದಿರುತ್ತದೆ. ಸ್ಕ್ಲೀರೋಷಿಯಮಿನಂತೆ ಸ್ಪೋರಮದಲ್ಲಿ ಕೂಡ ಒತ್ತೊತ್ತಾಗಿ ಅಂಟಿದಂತೆ ಕಾಣುವ ಅನೇಕ ಎಳೆಗಳಿವೆ. ಸ್ಪೋರಮ ಬೆಳೆದಂತೆಲ್ಲ ಅದರ ಸುತ್ತ ಚಿಕ್ಕದಾದ ಹಾಗೂ ಬಿಡಿಬಿಡಿಯಾಗಿರುವ ಗುಳಿಗಳು ಉತ್ಪತ್ತಿಯಾಗುತ್ತವೆ. ಈ ಗುಳಿಗಳಲ್ಲಿ ಎಳೆಗಳ ತುದಿಗಳು ಚಾಚಿಕೊಂಡು ಕ್ರಮೇಣ ಆಸ್ಕೊಗೋನಿಯಮ್ ಎಂಬ ಹೆಣ್ಣು ಮತ್ತು ಆಂತೆರಿಡಿಯಮ್ ಎಂಬ ಗಂಡು ಸಂತಾನಾಂಗಗಳಾಗಿ ಮಾರ್ಪಡುತ್ತವೆ. ಇವು ಒಂದೊಂದರಲ್ಲೂ ಅನೇಕ ನ್ಯೂಕ್ಲಿಯಸುಗಳು ಇರುತ್ತವೆ. ಕೆಲಕಾಲಾನಂತರ ಗಂಡು ಮತ್ತು ಹೆಣ್ಣು ಅಂಗಗಳು ಸಂಯೋಗವಾಗುತ್ತವೆ. ಮೊದಲ ಹಂತದಲ್ಲಿ ಸಂಯೋಗಕ್ರಿಯೆ ಇವುಗಳ ಕೋಶದ್ರವ್ಯಕ್ಕೆ ಮಾತ್ರ ಸೀಮಿತವಾಗಿದ್ದು ಇವುಗಳ ನ್ಯೂಕ್ಲಿಯಸುಗಳು ಮಾತ್ರ ಬೇರೆಬೇರೆಯಾಗಿಯೆ ಇರುತ್ತವೆ. ಅನಂತರ ಸಂಯೋಗಗೊಂಡ ಕೋಶಗಳ ಸುತ್ತ ಆಸ್ಕೊಜೀನಸ್ ಹೈಫೆಗಳೆಂದು ಕರೆಯಲಾಗುವ ಸೂಕ್ಷ್ಮ ಎಳೆಗಳು ಹುಟ್ಟುತ್ತವೆ. ಅಲ್ಲಲ್ಲಿ ಅಡ್ಡಗೋಡೆಗಳು ಉತ್ಪತ್ತಿಯಾಗಿ ಕ್ರಮೇಣ ಇವುಗಳಲ್ಲಿ ಬಹುಕೋಶಗಳಾಗುತ್ತವೆ. ಪ್ರತಿಯೊಂದು ಕೋಶದಲ್ಲಿಯೂ ಎರಡೆರಡು (ಒಂದು ಗಂಡು ಮತ್ತು ಒಂದು ಹೆಣ್ಣು) ನ್ಯೂಕ್ಲಿಯಸುಗಳು ಇರುತ್ತವೆ. ಈಗ ನ್ಯೂಕ್ಲಿಯಸುಗಳ ಸಂಯೋಗ ನಡೆಯುತ್ತದೆ. ಅನಂತರ ಇವುಗಳಲ್ಲಿ ಸಂಖ್ಯಾಕ್ಷೀಣ ವಿಭಜನೆ ನಡೆದು ಆಸ್ಕಸ್ ಎಂದು ಕರೆಯಲ್ಪಡುವ ಅನೇಕ ಅಂಗಗಳು ಉತ್ಪತ್ತಿಯಾಗುತ್ತವೆ. ಪ್ರತಿಯೊಂದು ಆಸ್ಕಸಿನಿಂದಲೂ ಎಂಟು ಆಸ್ಕೊ ಸ್ಪೋರುಗಳು ರೂಪುಗೊಳ್ಳುತ್ತವೆ. ಈ ಹಂತವನ್ನು ಮುಟ್ಟುವ ವೇಳೆಗೆ ಸ್ಪೋರಮದಲ್ಲಿ ಮೊದಲು ಇರುವ ಗುಳಿಗಳೆಲ್ಲ ಕ್ರಮವಾಗಿ ಮುಚ್ಚಿಕೊಂಡು ಹೊರಗಡೆ ತುತ್ತತುದಿಗೆ ಅವುಗಳ ಸ್ಥಾನದಲ್ಲಿ ಒಂದೊಂದು ರಂಧ್ರ ಮಾತ್ರ ಕಾಣುತ್ತದೆ. ಈ ಬಗೆಯ ರಚನೆಗಳಿಗೆ ಪೆರಿತೀಸಿಯಂ ಅಥವಾ ಶಿಲೀಂಧ್ರಫಲಗಳು ಎಂದು ಹೆಸರು. ಪೆರಿತೀಸಿಯಮ್ ಬಲಿತ ಅನಂತರ ಒಡೆದು ಆಸ್ಕೊಸ್ಪೋರುಗಳನ್ನು ಹೊರಚೆಲ್ಲುತ್ತದೆ. ಹೀಗೆ ಸ್ವಾರಸ್ಯಪೂರ್ಣವಾದ ಇದರ ಜೀವನ ಚರಿತ್ರೆಯನ್ನು ಮೊದಲು ವಿಶದವಾಗಿ ತಿಳಿಯಪಡಿಸಿದವನು ಫ್ರೆಂಚ್ ದೇಶದ ಶಿಲೀಂಧ್ರ ತಜ್ಞ ಟುಲಾಸ್ನೆ (1953).

ಕ್ಲ್ಯಾವಿಸೆಪ್ಸ್‌ನಿಂದ ಪಡೆಯಲಾಗದ ಅರ್ಗಟಿನ ಆರ್ಥಿಕ ಪ್ರಾಮುಖ್ಯವನ್ನೂ ಇದರಿಂದ ಮನುಷ್ಯರಲ್ಲಿ ಉಂಟಾಗುವ ಅನಿಷ್ಟ ಪರಿಣಾಮಗಳನ್ನೂ ಎರ್ಗಟ್ ಎಂಬ ಲೇಖನದಲ್ಲಿ ವಿವರಿಸಲಾಗಿದೆ. **(ನೋಡಿ– ಎರ್ಗಟ್)** **(ಕೆ.ಎಸ್.ಜಿ.; ಕೆ.ಎಸ್.ಎನ್.ಎ.)**

**ಕ್ವಟರ್ನಿಯನ್ :** ಸಮ್ಮಿಶ್ರಸಂಖ್ಯೆಯ ವಿಸ್ತೃತ ಆವೃತ್ತಿಯೆಂದು ಪರಿಗಣಿಸಬಹುದಾದ ಒಂದು ಬಗೆಯ ಗಣಿತೀಯ ಧಾತು. ಎರಡು ನೈಜಸಂಖ್ಯೆ (ರಿಯಲ್ಸ್) α ಮತ್ತು β ಗಳನ್ನು α+β.i ರೂಪದಲ್ಲಿ ಸಂಯೋಜಿಸಿದಾಗ ಒಂದು ಸಮ್ಮಿಶ್ರ ಸಂಖ್ಯೆ (ಕಾಂಪ್ಲೆಕ್ಸ್ ನಂಬರ್) ಫಲಿಸುತ್ತದಷ್ಟೆ. i ಇಲ್ಲಿ ಯಾವೊಂದು ನೈಜಸಂಖ್ಯೆಯ ಅಂಗವೂ ಆಗಿರದ ಒಂದು ಪ್ರತ್ಯೇಕ ನವಚಿಹ್ನೆ. $u \equiv \alpha + \beta.i$ $v \equiv \gamma + \delta.i$, (ಇಲ್ಲಿ ಹಾಗೂ ಮುಂದೆಲ್ಲ α,β,γ,δ ನೈಜಸಂಖ್ಯೆಗಳು) ಮುಂತಾದ ಸಮ್ಮಿಶ್ರಗಳ ಸಮತೆ(=), ಅಸಮತೆ (≠), ಸಂಕಲನ (+), ಗುಣಾಕಾರ (.) ಇವನ್ನು ಕುರಿತಂತೆ ಕೆಳಗಿನ ವ್ಯಾಖ್ಯೆಗಳು ಅಂಗೀಕೃತವಾಗಿವೆ :

[Co1] $\alpha = \gamma$ ಮತ್ತು $\beta = \delta$ ಆದಾಗ $u = v$

[Co 2] $\alpha \neq$ ಅಥವಾ $\beta \neq \delta$ ಆದಾಗ $u \neq v$

[Co 3] $u + v \equiv (\alpha\ \gamma) + (\beta + \delta).,i$

[Co 4] $u.v \equiv (\alpha\gamma - \beta\delta) + (\alpha\delta + \beta\gamma).i$

[Co 5] $\alpha - \beta.i, -(\alpha + .i), \alpha + i, \alpha - i, \beta.i, i$ ಮತ್ತು $\alpha$ ಇವೂ ಸಮ್ಮಿಶ್ರಗಳೇ; ಸಮತೆ ಅಸಮತೆಗಳನ್ನು ನಿಷ್ಕರ್ಷಿಸುವ ಸಲುವಾಗಿಯೂ ಸಂಕಲನಾದಿ ಲೆಕ್ಕಾಚಾರಗಳನ್ನು ನಿರ್ವಹಿಸುವ ಸಲುವಾಗಿಯೂ ಇವನ್ನು ಅನುಕ್ರಮವಾಗಿ α+(−β).i, −α+(−β).i, α+1.i, α+(−1).i, o+β.i, 0+1.i, ಮತ್ತು α+o.i, ಎಂದು ಪುನಾರೂಪಿಸಿಕೊಳ್ಳತಕ್ಕದ್ದು. i ಒಂದು ಸಾಧಾರಣ ಅಜ್ಞಾತ ಮತ್ತು ಯಾವುದೇ ನೈಜ p ಗೆ p.i=i.p ಆಗುತ್ತದೆ ಎಂದು ಪರಿಗಣಿಸಿ ಸಮ್ಮಿಶ್ರಗಳ ಸಂಕಲನ ಗುಣಾಕಾರಗಳನ್ನು ಶಾಲಾ ಬೀಜಗಣಿತದಲ್ಲಿ ಪರಿಪಾಠವಾಗಿರುವ ಪ್ರಕಾರವೇ ನಿರ್ವಹಿಸಬೇಕು. ಆದರೆ i.i ಕಾಣಿಸಿಕೊಂಡೆಡೆಯೆಲ್ಲ (−1)ನ್ನು ಆದೇಶಿಬೇಕು ಎಂಬುದು $[C_0 3],[C_0 4]$ ವಿಧಿಗಳ ಸಾರಾಂಶ. ಹೀಗೆ ವಿಧಿತವಾದ ಸಂಕಲನ ಮತ್ತು ಗುಣಾಕಾರಗಳಿಗೆ ವ್ಯಸ್ತಗಳಾಗಿ (ಇನ್ವರ್ಸಸ್) ವ್ಯವಕಲನ ಮತ್ತು ಭಾಗಾಹಾರಗಳನ್ನು ಕೆಳಗೆ ಸೂಚಿಸಿರುವಂತೆ ನಿಯೋಜಿಸಲು ಶಕ್ಯವಾಗುವುದು;

$[C_0 6] u - v \equiv (\alpha - \beta) + (\beta - \delta).i$

$[C_0 7] v \neq 0$ ಆದಲ್ಲಿ [ಆಥವಾ

$u / v] \equiv [(\alpha\gamma + \beta\delta)]/(\gamma^2 + \delta^2)\ ] + [(\beta\gamma - \alpha\delta)/(\gamma^2 + \delta^2)]i$

ಇವಿಷ್ಟೂ ವ್ಯಾಖ್ಯೆಗಳ ಫಲವಾಗಿ ಎಲ್ಲ ಸಮ್ಮಿಶ್ರಗಳ ವ್ಯವಸ್ಥೆ Co ಒಂದು ಕ್ಷೇತ್ರವಾಗಿ (ಫೀಲ್ಡ್) ಪರಿಣಮಿಸುತ್ತದೆ. $\alpha - \beta.$i ಎಂಬ ಸಮ್ಮಿಶ್ರಕ್ಕೆ $u \equiv \alpha + \beta.$i ಸಮ್ಮಿಶ್ರದ ಸಂಯುಗ್ಮಿ (ಕಾಂಜುಗೇಟ್) ಎಂದು ಹೆಸರು, ಅದನ್ನು $\bar{u} \equiv \overline{\alpha + \beta}$ i ಎಂಬ ಸಂಕೇತದಿಂದ ಸೂಚಿಸುತ್ತೇವೆ. ಯಾವುದೇ ಎರಡು ಸಮ್ಮಿಶ್ರ $u$ ಮತ್ತು $v$ ಗಳಿಗೆ $\overline{u + v} = \bar{u} + \bar{v}$ $\overline{u.v} = \bar{u}.\bar{v}$ ಹಾಗೂ $\bar{\bar{u}} = u$ ಆಗವುವು. ಗುಣಲಬ್ಧ $u.\bar{u}$ ಗೆ $u$ ಸಮ್ಮಿಶ್ರದ ನಾರ್ಮ್ ಎಂದು ಹೆಸರು. ಅದನ್ನು $nrm\ u$ ಎಂದು ಸೂಚಿಸಿದಲ್ಲಿ $nrm\ \bar{u} = nrm\ u$ ಮತ್ತು $nrm(u.v) = (nrm\ u).(nrm\ v)$ ಆಗುತ್ತವೆ. $u \equiv \alpha + \beta.$i ಆದಾಗ $nrm\ u = \alpha^2 + \beta^2$ ಆಗುವುದೆಂದು ಸುಲಭವಾಗಿ ಲೆಕ್ಕಹಾಕಬಹುದು. ಅಂದಮೇಲೆ ಪ್ರತಿಯೊಂದು ಸಮ್ಮಿಶ್ರಸಂಖ್ಯೆಯ ನಾರ್ಮೂ ಒಂದು ಅನೃಣ ನೈಜಸಂಖ್ಯೆ (ನಾನ್‌ನೆಗೆಟಿವ್ ರಿಯಲ್), ನವಚಿಹ್ನೆ i ಮತ್ತು ನೈಜಸಂಖ್ಯೆಗಳನ್ನು ಬಳಸಿಕೊಂಡು ಸಮ್ಮಿಶ್ರಸಂಖ್ಯೆಗಳನ್ನೂ ಅವುಗಳ ಬೀಜಗಣಿತವನ್ನೂ ರೂಪಿಸುವ ಮಾರ್ಗದ ಸಂಕ್ಷಿಪ್ತ ಪರಿಚಯ ಇದಿಷ್ಟು..

ಈಗ ಹೆಚ್ಚು ಕಡಿಮೆ ಇದೇ ತಂತ್ರವನ್ನು ನೈಜಸಂಖ್ಯೆಗಳ ಬದಲು ಸಮ್ಮಿಶ್ರ ಸಂಖ್ಯೆಗಳ ಮೇಲೆಯೇ ಪ್ರಯೋಗಿಸಲು ಪ್ರಾರಂಭಿಸೋಣ. J ಎಂಬುದು ಯಾವೊಂದು ಸಮ್ಮಿಶ್ರಸಂಖ್ಯೆಯ ಅಂಗವೂ ಆಗಿರದ ಒಂದು ಹೊಸ ಚಿಹ್ನೆಯಾಗಿರಲಿ. ಯಾವುದೇ ಎರಡು ಸಮ್ಮಿಶ್ರ $u$ ಮತ್ತು $v$ ಗಳನ್ನು ಈ J ಯೊಂದಿಗೆ ಸಂಯೋಜಿಸಿ ವ್ಯುತ್ಪಾದಿಸಬಹುದಾದ $u + v.$ J ರೂಪದ ಗಣಿತೀಯ ಧಾತುಗಳೇ ಕ್ವಟರ್ನಿಯನುಗಳು.

$P \equiv u + v.$J. $Q = w + x.$J(ಇಲ್ಲಿಯೂ ಮುಂದೆಯೂ $u, v, w, x$ ಸಮ್ಮಿಶ್ರಸಂಖ್ಯೆಗಳು) ಯಾವುದಾದರೂ ಎರಡು ಕ್ವಟರ್ನಿಯನುಗಳಾಗಿರಲಿ. ಇಂಥ ಧಾತುಗಳ ಸಮತೆ, ಅಸಮತೆ ಹಾಗೂ ಸಂಕಲನಗಳ ಬಗ್ಗೆ ಕೆಳಗಿನ ವ್ಯಾಖ್ಯೆಗಳನ್ನು ಅಂಗೀಕರಿಸುವುದು ಸ್ವಾಭಾವಿಕ:

$[Q_u 1]$ $u = w$ ಮತ್ತು $v = x$ ಆದಾಗ $P = Q$

$[Q_u 2]$ $u \neq w$ ಅಥವಾ $v \neq x$ ಆದಾಗ $P \neq Q$

$[Q_u 3]$ $P + Q \equiv (u + w) + (v + x).$ J

$[Q_u 4]$ $u - v.J, -(u + v.J,)u + J, u - J, v.J,$

J ಮತ್ತು u ಇವೂ ಕ್ವಟರ್ನಿಯನುಗಳೇ; ಸಮತೆ ಅಸಮತೆಗಳನ್ನು ನಿಷ್ಕರ್ಷಿಸುವುದಕ್ಕಾಗಿ ಹಾಗೂ ಸಂಕಲನಾದಿ

ಲೆಕ್ಕಾಚಾರಗಳನ್ನು ನಿರ್ವಹಿಸುವುದಕ್ಕಾಗಿ ಇವನ್ನು ಅನುಕ್ರಮವಾಗಿ $u + (-v).j, -u + (-v.).j, u + 1.j, u + (-1).j, 0 + v.j, 0 + 1.j\ )$ ಮತ್ತು $u + 0.j$ ಎಂಬುದಾಗಿ ಪುನಾರೂಪಿಸಿಕೊಳ್ಳಬೇಕು. ಇಷ್ಟಾದ ಬಳಿಕ ಇನ್ನು ಉಳಿಯುವುದು ಅತಿಮುಖ್ಯವಾದ ಗುಣಾಕಾರದ ಪ್ರಶ್ನೆ. ಗುಣಾಕಾರದ ಸಂಬಂಧದಲ್ಲಿ ಎಂದಿನಂತೆ ಸಾಹಚರ್ಯನಿಯಮ (ಅಸೋಸಿಯೆಟಿವ್ ಲಾ) $(P.Q).S = P.(Q.S)$ ಮತ್ತು ವಿತರಣ ನಿಯಮ (ಡಿಸ್ಟ್ರಿಬ್ಯೂಟಿವ್ ಲಾ) $P.(Q + S) = P.Q + P.S$ $(Q + S).P = Q.P + S.P$ ಗಳ ಸತ್ಯತೆಯನ್ನು ಸಂರಕ್ಷಿಸಬೇಕು, ಹಾಗೂ i.i ನಂತೆ J.J ಯನ್ನು ಕೂಡ (−1)ಕ್ಕೆ ಸಮೀಕರಿಸಬೇಕು ಎಂಬುದಾಗಿ ಉದ್ದೇಶಪಡುತ್ತೇವೆ. ಈ ಬೇಡಿಕೆಗಳ ಜೊತೆಗೆ ವ್ಯತ್ಯಯನಿಯಮ (ಕಾಮ್ಯುಟೆಟಿವ್ ಲಾ) $P.Q = Q.P$ ಯನ್ನೂ ನಾವು ಉಳಿಸಿಕೊಳ್ಳುವ ಪ್ರಯತ್ನ ನಡೆಸಿದಲ್ಲಿ ಅಷ್ಟೇನೂ ಸ್ವಾರಸ್ಯಕರವಲ್ಲದ ಒಂದು ಗಣಿತೀಯ ವ್ಯವಸ್ಥೆ Q'u ನಮ್ಮ ಹಸ್ತಗತವಾಗುವುದು. Q'u ನಲ್ಲಿ $P \neq 0, Q \neq 0$ ಅದಾಗ್ಯೂ $P.Q = 0$ ಆಗುವ ಅನಂತಾನಂತ ನಿದರ್ಶನಗಳೂ $P.X = Q$ ಸಮೀಕರಣಕ್ಕೆ ಸರಿಹೊಂದುವಂತೆ ಯಾವೊಂದು $X$ ನ್ನಾಗಲಿ ಕಂಡುಹಿಡಿಯಲು ಶಕ್ಯವಾಗದೆ ಹೋಗುವ ಸನ್ನಿವೇಶಗಳೂ ಉದ್ಭವಿಸುತ್ತವೆ. ಆದಕಾರಣ ನಾವು Q'u ವನ್ನೂ ಅದರೊಂದಿಗೆ ವ್ಯತ್ಯಯ ನಿಯಮವನ್ನೂ ಪರಿತ್ಯಜಿಸಿ

$[Q_u 5]\alpha$ ಯಾವುದೇ ನೈಜಸಂಖ್ಯೆಯಾದಾದ $\alpha.$J= J. $\alpha$; ಮತ್ತು

$[Q_u 6]$ J. i = -i .J[=(-1).i .J] ಎಂಬೆರಡು ಶಿಫಾರಸುಗಳನ್ನು ಅಂಗೀಕರಿಸುತ್ತೇವೆ,

$u \equiv \alpha + \beta i$ ಆದಾಗ ಇವುಗಳ ಪ್ರಕಾರ

J.u = J. $(\alpha + \beta.i) = j.\alpha + j.\beta.i = \alpha.j + \beta.j.i$

$= \alpha.$J+ $\beta.(-1).i.j = (\alpha - \beta.j).j$

$= \bar{u}\ j$

ಆಗಬೇಕಷ್ಟೆ (ಸಾಹಚರ್ಯ ಹಾಗೂ ವಿತರಣ ನಿಯಮಗಳನ್ನು ನಾವು ಕೈಬಿಟ್ಟಿಲ್ಲ). ಈ ಫಲಿತಾಂಶವನ್ನು ಬಳಸಿಕೊಂಡು ನಮ್ಮ ಉದ್ದೇಶಿತ ಗುಣಾಕಾರದ ರೀತ್ಯ P, Q ಕ್ವಟನಿರ್ಯಯನುಗಳ ಗುಣಲಬ್ಧದ ರೂಪವೆಂತಿರ ಬೇಕೆಂಬುದನ್ನು ಪತ್ತೆಹಚ್ಚಲು ಸಾಧ್ಯ.

$P.Q \equiv (u + v.j).(w + x.j) = u.w + v.j.w$

$+\ \ u.x.j + v.j.x.j$

$= u.w + v.\bar{w}.j + u.x.j + v.x.\bar{j}.j$

ನಮ್ಮ ಅಪೇಕ್ಷೆಯಂತೆ J.J = – 1 ಆಗಬೇಕಾಗಿರುವುದರಿಂದ ಅಂತಿಮವಾಗಿ ನಾವೀಗ ಕೆಳಗಿನ ಗುಣಾಕಾರ ವಿಧಿಯನ್ನು ಅಂಗೀಕರಿಸುತ್ತೇವೆ.:

$[Qu^7]$ $P.Q \equiv (u+v.J).(w+xJ)$

$$\equiv \left(u.w - v.\bar{x}\right) + \left(u.x + v.\bar{w}\right).J$$

ಈ ವಿಧಿಯ ಪ್ರಕಾರ ಕ್ವಟರ್ನಿಯನುಗಳ ಗುಣಾಕಾರ ನಿಜಕ್ಕೂ ಸಾಹಚರ್ಯ ಮತ್ತು ವಿತರಣ ನಿಯಮಗಳನ್ನು ಪರಿಪಾಲಿಸುತ್ತದೆಂದು ತೋರಿಸುವುದು ಕಷ್ಟವೇನಲ್ಲ. $[Qu^1]$, $[Qu^2]$, $[Qu^3]$, $[Qu^4]$ ಹಾಗೂ $[Qu^7]$ ನಿಯಮಗಳು ವ್ಯಾಖ್ಯಿಸುವ ಗಣಿತೀಯ ವ್ಯವಸ್ಥೆಯೇ ಕ್ವಟರ್ನಿಯನುಗಳ ವ್ಯವಸ್ಥೆ.

$\bar{P} \equiv \bar{u} - v.J$ ಎಂಬ ಕ್ವಟರ್ನಿಯನನ್ನು $P \equiv u + v.J$ ಯ ಸಂಯುಗ್ಮಿ (ಕಾಂಜುಗೇಟ್) ಎಂದು ಕರೆಯುತ್ತೇವೆ. $P, Q$ ಯಾವುದೇ ಎರಡು ಕ್ವಟರ್ನಿಯನುಗಳಾಗಲಿ $\bar{\bar{P}} = P, \overline{P+Q} = \overline{P+Q}$ ಹಾಗೂ $\overline{P.Q} = \overline{Q.P}$ ಆಗುವುವು. $nrmP$ ಎಂದು ಬರೆಯಲಾಗುವ $P$ ಕ್ವಟರ್ನಿಯನ್ನಿನ ನಾರ್ಮಿನ ವ್ಯಾಖ್ಯೆ ಹೀಗೆ :

$$nrmP \equiv P.\bar{P} \equiv (u+v.J).\left(\bar{u} - v.J\right) = u.\bar{u} + v.\bar{v} = nrmu + nrm\ v$$

ಸಮ್ಮಿಶ್ರಗಳ ನಾರ್ಮುಗಳಂತೆಯೇ ಕ್ವಟರ್ನಿಯನುಗಳ ನಾರ್ಮುಗಳೂ ಅನೃಣ ನೈಜ ಸಂಖ್ಯೆಗಳೆಂಬುದು ಇದರಿಂದ ಸ್ಪಷ್ಟವಾಗುವುದು. $P \neq 0$ ಆದಾಗಲೆಲ್ಲ $nrm\ p$ ಕೂಡ $\neq 0$ ಆಗುತ್ತದೆ, ಆಗ $(1/nrmP)$ ಎಂಬ ನೈಜ ಧನಸಂಖ್ಯೆಯನ್ನು $P$ ಎಂದು ಸೂಚಿಸಿದಲ್ಲಿ $P.\bar{P}$ ಕ್ವಟರ್ನಿಯನಿಗೆ $P$ ಯ ವ್ಯಸ್ತ (ಇನ್ವರ್ಸ್) ಎಂದು ಹೆಸರು. $P$ ಯ ವ್ಯಸ್ತವನ್ನು $P^{-1}$ ಎಂದು ಬರೆಯುತ್ತೇವೆ. $\rho$ ನೈಜವಾದ ಕಾರಣ

$P.P^{-1} = P.\rho\bar{P} = \rho.P.\bar{P} = (1/nrmP)(nrmP) = 1$ ಆಗುವುದು. $P^{-1}.P.$ ಸಹ 1ಕ್ಕೆ ಸಮ ಎಂದು ತೋರಿಸಬಹುದು. Qu ವ್ಯವಸ್ಥೆಯಲ್ಲಿ $P.X = Q$ ಹಾಗೂ $Y.P = Q$ ಸಮೀಕರಣಗಳಿಗೆ $P \neq 0$ ಆದಾಗ) ಕೆಳಗೆ ಪ್ರದರ್ಶಿಸಿರುವ ಏಕೈಕ ಪರಿಹಾರಗಳು (ಯುನೀಕ್ ಸೊಲ್ಯೂಷನ್ಸ್) ಇರುತ್ತವೆ:

$X = P^{-1}.Q; Y = Q.P^{-1}$ ಈ ಕಾರಣದಿಂದ Qu ವ್ಯವಸ್ಥೆಯನ್ನು ಒಂದು ಭಾಗಾಹಾರವಲಯ (ಡಿವಿಷನ್ ರಿಂಗ್/ಸ್ಕ್ಯೂಫೀಲ್ಡ್) ಎಂದು ವರ್ಣಿಸುತ್ತೇವೆ. ನಾರ್ಮುಗಳ ಬಗ್ಗೆ ಗಮನಾರ್ಹವೆನಿಸುವ ಎರಡು ಸೂತ್ರಗಳು ಇಂತಿವೆ: $nrm(P.Q) = (nrmP)$. ಮೊದಲನೆಯ ಸೂತ್ರದಿಂದ $P \neq 0, Q \neq 0$ ಆದಾಗ $PQ \neq 0$ ಎಂದು ತೀರ್ಮಾನಿಸಲು ಸಾಧ್ಯವಾಗುತ್ತದೆ. (ಕ್ವಟರ್ನಿಯನುಗಳ ವ್ಯವಸ್ಥೆ ಒಂದು ಭಾಗಾಹಾರ ವಲಯವಾಗಿರುವುದರಿಂದಲೂ ಇದೇ ಅಂಶಶ್ರುತಪಡುವುದು).




ಚಿತ್ರ 1 ದೃಢ ತಗಡಿನ ಆಕೃತಿಯನ್ನು ಮೇಜಿನ ಮೇಲುಗಡೆಗೆ Oನಲ್ಲಿ ತಿರುಗಾಡೆ ಮೊಳೆಯಿಂದ ಬಂಧಿಸಲಾಗಿದೆ. O ಸುತ್ತ ಆಕೃತಿ ಬಾಗಿದಾಗ ಅದರಲ್ಲಿ ಗುರುತಿಸಿರುವ ಬಿಂದುವೊಂದು u ಸ್ಥಾನದಿಂದ v ಸ್ಥಾನಕ್ಕೆ ಚಲಿಸುತ್ತದೆ

**ದೃಢ ಆವರ್ತನೆಯ ವರ್ಣನೆಗಾಗಿ ಕ್ವಟರ್ನಿಯನುಗಳ ಅನ್ವಯ :** ಕ್ವಟರ್ನಿಯನುಗಳ ಅನ್ವಯಕ್ಕೆ ಎದ್ದುಕಾಣುವ ಒಂದು ನಿದರ್ಶನ ದೃಢ ಆವರ್ತನೆಯ (ರೊಟೇಶನ್) ವರ್ಣನೆ. ಇಲ್ಲಿ ಸಹ ನಾವು ಸಮ್ಮಿಶ್ರಗಳ ಸಂಬಂಧದಲ್ಲಿ ಕಂಡು ಬರುವ ಸದೃಶ ಪರಿಸ್ಥಿತಿಯನ್ನು ಮೊದಲು ಗಮನಿಸುವುದೊಳ್ಳಿತು. ದೃಢವಾದ ತಗಡಿನ (ರಿಜಿಡ್ ಲ್ಯಾಮಿನ) ಆಕೃತಿಯೊಂದನ್ನು ಮೇಜಿನ ಮೇಲುಗಡೆಗೆ O ಎಂಬಲ್ಲಿ ತಿರುಗಾಣಿ ಮೊಳೆಯಿಂದ (ಪಿವಟ್) ಬಂಧಿಸಲಾಗಿದೆಯೆಂದು ಭಾವಿಸಿ (ಚಿತ್ರ1).

O ಗೂ ತಗಡಿನ ಮೇಲೆ ಗುರುತು ಮಾಡಿರುವ ಬಿಂದುವೊಂದಕ್ಕೂ ಇರುವ ಪೂರ್ವಾಭಿಮುಖ ಮತ್ತು ಉತ್ತರಾಭಿಮುಖ ದೂರಗಳು ಅನುಕ್ರಮವಾಗಿ $\alpha$ ಮತ್ತು $\beta$ ಆದಲ್ಲಿ $u \equiv \alpha + \beta.\mathbf{i}$ ಎಂಬ ಸಮ್ಮಿಶ್ರ ಸಂಖ್ಯೆ ಆ ಬಿಂದುವಿನ ಪ್ರಸಕ್ತಸ್ಥಾನವನ್ನು ಸಂಪೂರ್ಣವಾಗಿ ನಿರ್ದೇಶಿಸುತ್ತದೆ. ಈಗ ಇಡೀ ಆಕೃತಿಯನ್ನು O ಮೊಳೆಯ ಸುತ್ತ θ ಕೋನದಷ್ಟು ತಿರುಗಿಸಿದಾಗ ಆ ಬಿಂದುವಿನ ವ್ಯತ್ಯಸ್ತಸ್ಥಾನವನ್ನು ಬೇರೆ ಒಂದು ಸಮ್ಮಿಶ್ರಸಂಖ್ಯೆ $v$ ಸೂಚಿಸಬೇಕಾಗುತ್ತದಷ್ಟೆ, $csi\ \theta\ (\cos\theta) + (\sin\theta)\mathbf{i}$ ಎಂದು ಬರೆದರೆ ಪ್ರಸಕ್ತ ಸ್ಥಾನಸೂಚಿ $u$, ಭವಿಷ್ಯಸ್ಥಾನ ಸೂಚಿ $v$ ಮತ್ತು ಆವರ್ತನ ಕೋನ $\theta$ ಗಳಿಗೆ ಇರುವ ಸಂಬಂಧ $v = u.sci\theta$ ಎಂಬ ರೂಪವನ್ನು ತಾಳುತ್ತವೆ.

ಅಲ್ಲಿಗೆ ಸಮ್ಮಿಶ್ರಗಳ ವ್ಯವಸ್ಥೆ $C_0$ ಯೊಳಗೆ $csi\,\theta$ ದಿಂದ ಎಸಗಬಹುದಾದ ಗುಣಾಕಾರವೂ ತಗಡಿನ ಆಕೃತಿಯ ಮೇಲೆ ಆರೋಪಿಸಬಹುದಾದ $\theta$ ಕೋನದಷ್ಟು




ಚಿತ್ರ 2 ದೃಢಕಾಯವನ್ನು ಸೂಚಿತ ಅಕ್ಷದ ಸುತ್ತ θ ಕೋನದಷ್ಟು ತಿರುಗಿಸಿದಾಗ CzgÀðUÀgÀvÀgÀ ÀCAzÀ P ಸ್ಥಾನದಿಂದ Q ಸ್ಥಾನಕ್ಕೆ ತೆರಳುವುದು

ಆವರ್ತನೆಯೂ ಒಂದಕ್ಕೊಂದು ಅನುರೂಪವಾದ ಕ್ರಿಯೆಗಳು ಎಂದಾಯಿತು. $nrm\ csi\ \theta = ccs^2\theta + \sin^2 = 1$ ಆದ್ದರಿಂದ ಈ ಸಂದರ್ಭದಲ್ಲಿ ಭೌತಾವರ್ತನೆಯ ಗಣಿತ ಪ್ರತಿನಿಧಿಯಾದ $csi\,\theta$ ನಾರ್ಮು 1 ಆಗಿರುವಂಥ ಒಂದು ಸಮ್ಮಿಶ್ರವಾಯಿತು. ನಾರ್ಮು 1 ಆಗಿರುವಂಥ ಕ್ವಟರ್ನಿಯನುಗಳಾದರೋ ಮೂರು ಆಯಾಮಗಳ ಆಕಾಶದಲ್ಲಿ (ತ್ರೀ ಡೈಮೆನ್‌ಶನಲ್ ಸ್ಪೇಸ್) ದೃಢಕಾಯವೊಂದರ ಮೇಲೆ (ರಿಜಿಡ್ ಬಾಡಿ) ಒಂದು ಸ್ಥಿರ ಬಿಂದುವಿನ ಸುತ್ತ ಆರೋಪಿಸಲು ಶಕ್ಯವಿರುವ ಎಲ್ಲ ರೀತಿಯ ಆವರ್ತನೆಗಳನ್ನೂ (ರೊಟೇಷನ್ಸ್) ಸಂಪೂರ್ಣವನ್ನು ನಿರ್ದೇಶಿಸಬಲ್ಲವು. ಉಕ್ತ ಸ್ಥಿರಬಿಂದು O ಆಗಿರಲಿ; ಕಾಯ ತಿರುಗುವ ಅಕ್ಷ ಊರ್ಧ್ವ ದಿಕ್ಕಿನೊಂದಿಗೆ $\psi$ ಕೋನವನ್ನೂ ಅದರ ಕ್ಷಿತಿಜೀಯ ವಿಕ್ಷೇಪ (ಹಾರಿಝಾಂಟಲ್ ಪ್ರೊಜೆಕ್ಷನ್) ಪೂರ್ವದಿಕ್ಕಿನೊಂದಿಗೆ $\phi$ ಕೋನವನ್ನು ಏರ್ಪಡಿಸಲಿ (ಚಿತ್ರ 2). ಕೆಳಗಿನ ಕ್ವಟರ್ನಿಯನುದ್ವಯಗಳನ್ನು ಗಮನಿಸಿ :

$$S = \left(\cos\frac{1}{2}\theta\right) + \left(\cos\psi.\sin\frac{1}{2}\right)i + \left[\sin\psi.\sin\frac{1}{2}\theta.\ csi\,\phi\right]i.J$$

$$S^* \equiv \left(\cos\frac{1}{2}\right) + \left(\cos\psi.\sin\frac{1}{2}\theta\right) - \left[\sin\psi\ \sin\frac{1}{2}\theta.\ csi(-\phi)\right]i.J$$

(ಇಲ್ಲಿ θ ಯಾವುದಾದರೂ ಒಂದು ಕೋನ). $S$ ಮತ್ತು $S^*$ ಗಳು ಪರಸ್ಪರ ಸ್ವತಂತ್ರ ಕ್ವಟರ್ನಿಯನುಗಳೇನೂ ಅಲ್ಲವೆಂಬುದು ಅವುಗಳ ರೂಪಗಳಿಂದಲೇ ಸ್ಪಷ್ಟವಾಗಿದೆ: ನಿಜಕ್ಕೂ $S^* = i.J.\overline{S.J.i}$ ಹಾಗೂ $S = i.J\overline{S^*.Ji}$ ಅಲ್ಲದೆ $nrm\ S = nrm\ S^* = 1$ ಎಂದೂ ಸುಲಭವಾಗಿ ತಾಳೆ ನೋಡಬಹುದು. ಸ್ಥಿರ ಬಿಂದು Oಗೂ ಕಾಯದೊಳಗಡೆ

ಗುರುತು ಮಾಡಿರುವ ಯಾವುದಾದರೊಂದು ಬಿಂದುವಿಗೂ ಇರುವ ಪೂರ್ವಾಭಿಮುಖ, ಉತ್ತರಾಭಿಮುಖ ದೂರಗಳು ಅನುಕ್ರಮವಾಗಿ $\alpha, \beta$ ಮತ್ತು $\gamma$ ಆದಲ್ಲಿ ಗುರುತಿಸಿರುವ ಬಿಂದುವಿನ ಪ್ರಸಕ್ತ ಸ್ಥಾನವನ್ನು $P \equiv \alpha + \beta.i + r.J$ ಎಂಬ ಕ್ವಟರ್ನಿಯನು ಸಂಪೂರ್ಣವಾಗಿ ನಿರ್ದೇಶಿಸಬಲ್ಲುದು. ಈ ನಿರ್ದೇಶನ ಯೋಜನೆಯಂತೆ ಸ್ಥಾನ ನಿರ್ದೇಶಕ ಕ್ವಟರ್ನಿಯನುಗಳು **i.J** ಘಟಕಗಳನ್ನೊಳಗೊಳ್ಳುವಂತಿಲ್ಲ. ಮೇಲೆ ಹೇಳಿದ ಅಕ್ಷದ ಸುತ್ತ ಕಾಯವನ್ನು $\theta$ ಕೋನದಷ್ಟು ತಿರುಗಿಸಿದ ಬಳಿಕವಾದರೋ ಇದೇ ಬಿಂದು ಬೇರೆಡೆಗೆ ಚಲಿಸಿರುವುದರಿಂದ ಅದರ ಸ್ಥಾನನಿರ್ದೇಶಕ $P$ ಆಗಿ ಉಳಿಯದೆ $Q$ ಎಂಬೊಂದು ಭಿನ್ನ ಕ್ವಟರ್ನಿಯನಾಗಬೇಕಷ್ಟೆ. ಆಗ $P, Q, \theta, \psi$ ಮತ್ತು $\phi$ ಗಳಿಗಿರುವ ಸಂಬಂಧ

$$Q = S.P.S^*$$

ಎಂಬ ರೂಪವನ್ನು ತಾಳುತ್ತದೆಂದು ತೋರಿಸಬಹುದು. ಈ ಪ್ರಕಾರ ಕ್ವಟರ್ನಿಯನು ದೃಢಕಾಯದ ಆವರ್ತನೆಯನ್ನು ಸಂಪೂರ್ಣವಾಗಿ ಪ್ರತಿನಿಧಿಸುವುದು. [$S.P.S^* = (-S).P.(-S^*)$]ಆಗುವ ಕಾರಣ $S$ ಪ್ರತಿನಿಧಿಸುವ ಆವರ್ತನೆಯನ್ನೇ $(-S)$ ಕೂಡ ಪ್ರತಿನಿಧಿಸುತ್ತದೆ ಎಂಬ ಅಂಶ ಗಮನಾರ್ಹ.] ಕಾಯದ ಮೇಲೆ ಈಗ $S$ ಮತ್ತು $T$ ಕ್ವಟರ್ನಿಯನುಗಳಿಂದ ಸೂಚಿತವಾದ ಎರಡು ಬೇರೆ ಬೇರೆ ಆವರ್ತನೆಗಳನ್ನು ಅನುಕ್ರಮಿಕವಾಗಿ ಆರೋಪಿಸುತ್ತೇವೆಂದು ಭಾವಿಸಿ (ಮೊದಲು $S$ ತರುವಾಯ $T; nrmS = nrmT = 1$). ಗುರುತು ಮಾಡಿರುವ ಬಿಂದುವನ್ನು ಈ ಆವರ್ತನೆಗಳು $R$ ನಿಂದ ಸೂಚಿತವಾದ ಸ್ಥಾನಕ್ಕೆ ಕೊಂಡೊಯ್ದಲ್ಲಿ

$$R = T.Q.T^* = T.S.P.S^*.T^*$$

$$= T.S.P.i.J\overline{S.i}.i.i.J\overline{T.J.i}$$

$$= T.S.P.i.J.\overline{S}.\overline{T}.J.i$$

$$= T.S.P.J\overline{TS}.Ji$$

$$= (T.S).P.(T.S)^*$$

ಆಗಬೇಕಷ್ಟೆ.. ಆದ್ದರಿಂದ ಅಂತಿಮ ಪರಿಣಾಮದ ಗಣನೆಯಲ್ಲಿ ಕಾಯವನ್ನು ಖ ಮತ್ತು ಖ ಸೂಚಿತ ಆವರ್ತನೆಗಳ

ಅನುಕ್ರಮಿಕ ವರ್ತನೆಗೆ ಗುರಿಪಡಿಸುವುದೂ ಒಂದೇ. T. S ನಿಂದ ಸೂಚಿತವಾದ $nrm\ T.S = nrm\ T.nrmS = 1$ ಎಂಬುದನ್ನು ಗಮನಿಸಬೇಕು) ಒಂದೇ ಒಂದು ಆವರ್ತನೆಗೆ ಗುರಿಪಡಿಸುವುದೂ ಒಂದೇ. ಅಲ್ಲಿಗೆ ಆವರ್ತನೆಗಳ ಅನುಕ್ರಮಿಕ ಭೌತಸಂಯೋಜನೆಗೆ ಅನುರೂಪವಾದ ಗಣಿತಪರಿಕರ್ಮ ಅವುಗಳ ನಿರ್ದೇಶಕ ಕ್ವಟರ್ನಿಯನುಗಳ ಕ್ರಮಾನುಗತ ಗುಣಾಕಾರ ಎಂದಾಯಿತು. ಉದಾಹರಣೆಗೆ ದೃಢಕಾಯವನ್ನು (ಅಪ್ರದಕ್ಷಿಣ ದಿಶೆಯಲ್ಲಿ) ಊರ್ಧ್ವಾಭಿಮುಖ ಅಕ್ಷದ ಸುತ್ತ $90^0$ ತಿರುಗಿಸುವುದರ ಕ್ವಟರ್ನಿಯನಿಗೆ ಗ ಎಂದೂ ಪೂರ್ವಾಭಿಮುಖ ಅಕ್ಷದ ಸುತ್ತ $90^0$ ತಿರುಗಿಸುವುದರ ಕ್ವಟರ್ನಿಯನಿಗೆ ಗ ಎಂದೂ ನಾಮಕರಿಸಿದಲ್ಲಿ

$U = (1+i)/\sqrt{2}.V = (1+iJ)/\sqrt{2}$ (ಮೊದಲ ಸಂದರ್ಭದಲ್ಲಿ $\theta = 90^0, \psi = 0;$ ಎರಡನೆಯದರಲ್ಲಿ), ಕಾಯವನ್ನು ಮೊದಲು ಊರ್ಧ್ವಾಕ್ಷದ ಸುತ್ತ $\theta = 90^0, \psi = 90^0, \phi = 0$ ತಿರುಗಿಸಿ ಅನಂತರ ಪೂರ್ವಾಕ್ಷದ ಸುತ್ತ $90^0$ ತಿರುಗಿಸುವುದಕ್ಕೂ (ಚಿತ್ರ 3ಡಿ) ಮೊದಲು ಪೂರ್ವಾಕ್ಷದ ಸುತ್ತ $90^0$ ತಿರುಗಿಸಿ ಅನಂತರ ಊರ್ಧ್ವಾಕ್ಷದ ಸುತ್ತ $90^0$ ತಿರುಗಿಸುವುದಕ್ಕೂ (ಚಿತ್ರ 3ಎಫ್) ಪರಿಣಾಮತಃ ಭಾರಿ ವ್ಯತ್ಯಾಸವುಂಟು. ಒಂದು ವೇಳೆ ಕ್ವಟರ್ನಿಯನುಗಳನ್ನು ವ್ಯತ್ಯಯನಿಯಮ $V.U = U.V$ ಪಾಲಿಸುವಂತೆ ನಾವೇನಾದರೂ ನಿರ್ಮಾಣ ಮಾಡಿದ್ದಲ್ಲಿ ಅವು ಕಾಯಗಳ ಆವರ್ತನೆಯನ್ನು ಪ್ರತಿನಿಧಿಸುವಲ್ಲಿ ಪೂರ್ಣ ವಿಫಲವಾಗುತ್ತಿದ್ದುವೆಂದು ಇದರಿಂದ ನಮಗೆ ವೇದ್ಯವಾಗುತ್ತದೆ. ನಿಜಕ್ಕೂ ಕ್ವಟರ್ನಿಯನುಗಳ ಗಣಿತದಲ್ಲಿ $V.U \neq U.V$ ಆಗಿದೆ.

$$V.U = (1 + i + J + i.J)/2$$

$$U.V = (1 + i - J + i.J)/2$$

$V.U$ ವನ್ನು $(\cos 60^0) + (\cos 54^0 44'.\sin 60^0)i + [\sin 54^0 44'.\sin 60^0 . \sin 54^0 44'.\sin 60^O, csi\ 315^O].i.J$ ಎಂದೂ U.V. ಯನ್ನು $(\cos 60^O) + (\cos 54^O 44'.\sin 60^O).i + (\sin 54^O 44'.\sin 60^O csi 45^O].i.J.$ ಎಂದೂ (ಸನ್ನಿಹಿತವಾಗಿ) ವ್ಯಕ್ತಪಡಿಸಬಹುದು. ಬಹುಶಃ ನಮ್ಮ ಮನಸ್ಸಿಗೆ ತಟ್ಟನೆ ಸ್ಫುರಿಸದೆ ಹೋಗಬಹುದಾದ ಎರಡು ಸಂಗತಿಗಳನ್ನು ಈ ಗಣಿತೋಕ್ತಿಗಳು ಬೆಳಕಿಗೆ ತಂದುಕೊಡುತ್ತವೆ: ಊರ್ಧ್ವ ಹಾಗೂ ಆಗ್ನೇಯ ದಿಕ್ಕುಗಳ ಅರ್ಧತಲದಲ್ಲಿ (ಹಾಫ್ ಪ್ಲೇನ್) ಊರ್ಧ್ವದಿಂದ $54^0 44'$ ಕೋನಾಂತರಕ್ಕೆ ಸರಿಯಾಗಿ




ಚಿತ್ರ 3. ಬೆಂಕಿಪೊಟ್ಟಣವೊಂದರ ಕೆಲವಷ್ಟು ಭಂಗಿಗಳು (A) ದಿಕ್ಸೂಚಿ ; (B) ಪ್ರಾರಂಭದಲ್ಲಿ ಪೊಟ್ಟಣದ ನಿಲುವು; (C) ಊರ್ಧ್ವಾಕ್ಷದ ಸುತ್ತ 90°ತಿರುಗಿದೆ; (D) ಬಳಿಕ ಪೂರ್ವಾಕ್ಷದ ಸುತ್ತ 90° ತಿರುಗಿದೆ; (E) ಮತ್ತೆ (B) ಭಂಗಿಯಿಂದ ಪ್ರಾರಂಭಿಸಿ ಪೂರ್ವಾಕ್ಷದ ಸುತ್ತ 90° ತಿರುಗಿದೆ : (F) ತರುವಾಯ ಊರ್ಧ್ವಾಕ್ಷದ ಸುತ್ತ 90° ತಿರುಗಿದೆ. D ಮತ್ತು F ಭಂಗಿಗಳಿಗಿರುವ ಭಾರಿ ವ್ಯತ್ಯಾಸವನ್ನು ಗಮನಿಸಬಹುದು.

ಒಂದು ಅಕ್ಷವನ್ನೆಳೆದು ಅದರ ಸುತ್ತ ಚಿತ್ರ 3Bಯ ಕಾಯವನ್ನು ಅಪ್ರದಕ್ಷಿಣ ದಿಶೆಯಲ್ಲಿ $120^0$ ಗಳಷ್ಟು ತಿರುಗಿಸಿದರೆ ಆ ಕಾಯ ನೇರವಾಗಿಯೇ ಚಿತ್ರ 3Dಯ ನಿಲುವಿಗೆ ತೆರಳುತ್ತದೆ; ಊರ್ಧ್ವದಿಂದ ಅಷ್ಟೇಂ ಕೋನಾಂತರಕ್ಕೆ ಸರಿಯಾಗಿ ಮತ್ತೊಂದು ಆವರ್ತನಾಕ್ಷವನ್ನು ಊರ್ಧ್ವ ಮತ್ತು ಈಶಾನ್ಯ ದಿಕ್ಕುಗಳ ಅರ್ಧ ತಲದಲ್ಲೆಳೆದು ಚಿತ್ರ 3B ಕಾಯವನ್ನು ಅದರ ಸುತ್ತ $120^0$ ತಿರುಗಿಸಿದರೆ ಆ ಕಾಯ ನೇರವಾಗಿ 3Fನ ನಿಲುವನ್ನು ಮುಟ್ಟುತ್ತದೆ.

**ಚಾರಿತ್ರಿಕ ಹಿನ್ನೆಲೆ ಮತ್ತು ಮುಂದಿನ ಬೆಳವಣಿಗೆಗಳು :** ಎರಡು ಆಯಾಮಗಳ ತಲದಲ್ಲಿ (ಟೂ ಡೈಮೆನ್‌ಶನಲ್ ಪ್ಲೇನ್) ಸದಿಶ ಪರಿಮಾಣಗಳನ್ನು ಸಮ್ಮಿಶ್ರ ಸಂಖ್ಯೆಗಳು ಪ್ರತಿನಿಧಿಸಬಲ್ಲವಾದರೆ ಮೂರು ಆಯಾಮಗಳ ಆಕಾಶದೊಳಗಿನ ಸದಿಶಗಳನ್ನು ಸಹ ಪ್ರತಿನಿಧಿಸಬಲ್ಲ ಒಂದಲ್ಲ ಒಂದು ರೀತಿಯ ಸಂಖ್ಯಾವರ್ಗವನ್ನು ನಿರ್ಮಾಣಮಾಡಲು ಸಾಧ್ಯವಾಗಬಹುದೆಂಬ ಅಂದಾಜು 1843ರಲ್ಲಿ ಇಂಗ್ಲಿಷ್ ಗಣಿತಜ್ಞ ಸರ್ ವಿಲಿಯಂ ಆರ್ ಹ್ಯಾಮಿಲ್ಟನ್‌ನಿಗೆ (1805–1865) ಮೂಡಿಬಂದಿತು. ಆ ದಿಸೆಯಲ್ಲಿ ಆತ ನಡೆಸಿದ ಸಂಶೋಧನೆಯ ಫಲವೇ ಕ್ವಟರ್ನಿಯನುಗಳು. ಭೌತಶಾಸ್ತ್ರ ಮತ್ತು ಜ್ಯಾಮಿತಿಯಲ್ಲಿ ಕ್ವಟರ್ನಿಯನುಗಳು ಅತ್ಯುಪಯುಕ್ತವಾಗಿ ಕಂಡುಬಂದರೂ ಎರಡೆರಡೂ ಸಮ್ಮಿಶ್ರಗಳ ಮುಖಾಂತರ ಅವು ನಾಲ್ಕು ನಾಲ್ಕು ನೈಜ ಸಂಖ್ಯೆಗಳನ್ನೊಳಗೊಳ್ಳುವ ಕಾರಣ ಕೇವಲ ಮೂರೇ ಅಳತೆಗಳು ಪ್ರವೇಶಿಸುವಂಥ ಅನೇಕ ಲೆಕ್ಕಾಚಾರಗಳಲ್ಲಿ ಅವುಗಳ ಬಳಕೆ ತುಸು ಅದಕ್ಷವಾಗುವುದು ಅನಿವಾರ್ಯ. ಈ ನ್ಯೂನತೆಗೆ ಉತ್ತರವಾಗಿ ಅಮೆರಿಕದ ಭೌತಗಣಿತಜ್ಞ ಜೆ.ವಿಲರ್ಡ್ ಗಿಬ್ಸ್ (1839–1903) ಕ್ವಟರ್ನಿಯನುಗಳ ಗಣಿತದ ಕೆಲ ಅಂಶಗಳನ್ನು

ಮಾತ್ರ ವಿಶಿಷ್ಟೀಕರಿಸಿ ಇಂದು ಅಧಿಕ ಜನಪ್ರಿಯತೆಯನ್ನು ಗಳಿಸಿರುವ ಮೂರು ಆಯಾಮಗಳ ಯೂಕ್ಲಿಡೀಯ ಸದಿಶ ಗಣಿತವನ್ನು ರಚಿಸಿದ. [ಸದಿಶ ಗಣಿತದ ಮತ್ತೊಬ್ಬ ಹೆಸರಾಂತ ನಿರ್ಮಾತೃ ಇಂಗ್ಲೆಂಡಿನ ಭೌತಶಾಸ್ತ್ರಜ್ಞ ಆಲಿವರ್ ಹೆವಿಸೈಡ್ (1850–1925).] ಮೂರು ಆಯಾಮಗಳ ಆಕಾಶದಲ್ಲಿ ಸದಿಶ ಬೀಜಗಣಿತದ ಬೆಳವಣಿಗೆಯನ್ನು ಸಾಧಿಸುವಲ್ಲಿ ಗಿಬ್ಸ್ ಮತ್ತು ಇತರರು ಜರ್ಮನ್ ಗಣಿತ ವಿಜ್ಞಾನಿ ಗ್ರಾಸ್ ಮ್ಯಾನ್(1809–1877) ಎಂಬಾತ ಆವಿಷ್ಕರಿಸಿದ್ದ ಬೀಜಗಣಿತದ ನೆರವನ್ನು ಸಹ ಪಡೆದಿದ್ದರು. ಬಳಿಕ ಅಂಥ ಸದಿಶ ಪರಿಕಲ್ಪನೆಯ ಸ್ವಾಭಾವಿಕ ವಿಸ್ತರಣೆ ಗಣಿತಜ್ಞರನ್ನು ಮತ್ತೊಮ್ಮೆ ಶೀಘ್ರವೇ ಮೂರಕ್ಕಿಂತ ಹೆಚ್ಚು ಆಯಾಮಗಳ ಋಜುಸದಿಶ ಸಮಷ್ಟಿಗಳೆಡೆಗೆ (ಲೀನಿಯರ್ ವೆಕ್ಟರ್ ಸ್ಪೇಸಸ್) ಕೊಂಡೊಯ್ದಿತು. $\alpha..(u+v.J)=(u+v.J).\alpha=(\alpha.u+\alpha.v.J)$ ಎಂಬ ನಿಯಮವನ್ನು (ಎಂದಿನಂತೆ αನೈಜಸಂಖ್ಯೆ) **[$Q_u$1]-[$Q_u$4]** ನಿಯಮಗಳೊಂದಿಗೆ ಸೇರಿಸಿಕೊಂಡಲ್ಲಿ ಈ ಐದು ನಿಯಮಗಳು ಕ್ವಟರ್ನಿಯನು ವ್ಯವಸ್ಥೆ **$Q_u$** ವನ್ನು ನೈಜಸಂಖ್ಯೆಗಳ ಕ್ಷೇತ್ರಕ್ಕೆ ಸಾಪೇಕ್ಷವಾಗಿ ನಾಲ್ಕು ಆಯಾಮಗಳ ಒಂದು ಋಜುಸದಿಶ ಸಮಷ್ಟಿಯಾಗಿ ಪ್ರತಿಷ್ಠಾಪಿಸುತ್ತವೆ. ಸದಿಶಗಳನ್ನು ಕುರಿತಂತೆ ಅನ್ಯೋನ್ಯ ಗುಣಾಕಾರವನ್ನೂ ವ್ಯಾಖ್ಯಿಸಲಾಗಿರುವ ಋಜುಸದಿಶ ಸಮಷ್ಟಿಗಳಿಗೆ ಗುಣಾಕಾರಯುತ ಸದಿಶ ಸಮಷ್ಟಿಗಳೆಂದು ನಾಮಕರಣ ಮಾಡೋಣ. **$M_r$** ಎಂಬುದು ನೈಜಸಂಖ್ಯೆಗಳ್ನು ಆಧರಿಸಿ ರಚಿಸಿರುವ ಟ್ರ ಆಯಾಮಗಳ ಇಂಥದೊಂದು ಗುಣಾಕಾರಯುತ ಸದಿಶ ಸಮಷ್ಟಿ ಆಗಿರಲಿ. $P,Q,S$ಗಳು **$M_r$**ವ್ಯವಸ್ಥೆಯ ಯಾವುದೇ ಮೂರು ಸದಿಶಗಳೂ α ಎಂಬುದು ಯಾವುದೇ ಸಂಖ್ಯೆಯೂ ಆದಾಗಲೆಲ್ಲ $\alpha..(P.Q)=(\alpha.P).Q=P.(\alpha.Q), S.(P+Q)=S.P+S.Q \quad (P+Q).S=P.S+Q.S$ ಹಾಗೂ ಆಗುವಂತಿದ್ದರೆ ನೈಜಸಂಖ್ಯಾಕ್ಷೇತ್ರಕ್ಕೆ ಸಾಪೇಕ್ಷವಾಗಿ **$M_r$** ಒಂದು ಬೀಜಗಣಿತ (ಆಲ್ಜಿಬ್ರ) ಎಂದೆನಿಸಿಕೊಳ್ಳುವುದು. **[$Q_u$ 7]** ನಿಯಮದ ಫಲವಾಗಿ ಕ್ವಟರ್ನಿಯನುಗಳ **$Q_u$** ವ್ಯವಸ್ಥೆ ಕೂಡ ಇಂಥದೊಂದು ಬೀಜಗಣಿತ ಆಗುತ್ತದೆ. ಅಂದಮೇಲೆ ಇಂದಿನ ಆಧುನಿಕ ದೃಷ್ಟಿಕೋನದಲ್ಲಿ **$Q_u$** ಬೀಜಗಣಿತಗಳ ಒಂದು ವಿಶೇಷ ಪ್ರಸಂಗ. ಅಷ್ಟೇ ಅಲ್ಲದೆ ಅದು ಬೀಜಗಣಿತಗಳ ಒಂದು ಪ್ರಮುಖ ಪ್ರಸಂಗವೂ ಹೌದು. ಏಕೆಂದರೆ ಅದರಲ್ಲಿ ಶೂನ್ಯಕ್ಕೆ ಸಮವಾಗಿರುವ ಧಾತುಗಳಿಂದ ಇತರ ಧಾತುಗಳನ್ನು ಭಾಗಿಸಲು ಸಹ ಶಕ್ಯವುಂಟು. ಈ ಲಕ್ಷಣವಿರುವ ಬೀಜಗಣಿತಗಳಿಗೆ ಭಾಗಾಹಾರ ಬೀಜಗಣಿತಗಳು (ಡಿವಿಷನ್ ಆಲ್ಜೀಬ್ರಾಸ್) ಎಂದು ಹೆಸರು. ನೈಜಸಂಖ್ಯೆಗಳನ್ನು ಆಧರಿಸಿ ರಚಿಸಬಹುದಾದ ಭಾಗಾಹಾರ ಬೀಜಗಣಿತಗಳು ವಸ್ತುತಃ ನಾಲ್ಕೇ: ಏಕ ಆಯಾಮದ ನೈಜಸಂಖ್ಯಾಕ್ಷೇತ್ರ **$R_e$**, ಎರಡು ಆಯಾಮಗಳ ಸಮ್ಮಿಶ್ರ ಸಂಖ್ಯಾಕ್ಷೇತ್ರ **$C_o$** (ಇವೆರಡರಲ್ಲಿ ಗುಣಾಕಾರದ ವ್ಯತ್ಯಯ, ಸಾಹಚರ್ಯ ಮತ್ತು ವಿತರಣ ನಿಯಮಗಳು ಮೂರೂ ಸಲ್ಲುತ್ತವೆ), ನಾಲ್ಕು ಆಯಾಮಗಳ ಕ್ವಟರ್ನಿಯನು ಭಾಗಾಹಾರ ವಲಯ **$Q_u$** (ಇದರಲ್ಲಿ ವ್ಯತ್ಯಯ ನಿಯಮ ಸಲ್ಲದಷ್ಟೆ), ಮತ್ತು ಎಂಟು ಆಯಾಮಗಳ ಕೇಲಿ ಬೀಜಗಣಿತ **$C_a$** (ಇದರಲ್ಲಿ ಸಾಹಚರ್ಯ ನಿಯಮವೂ ಕುಸಿದು ಬೀಳಬೇಕಾಗಿ ಬರುವುದು). ಇಂಗ್ಲೆಂಡಿನ ಆರ್ಥರ್ ಕೇಲಿ(1821–1895) 1843ರಲ್ಲೇ ಕೊನೆಯಲ್ಲಿ ಹೆಸರಿಸಿದ **$C_a$** ವ್ಯವಸ್ಥೆಯನ್ನು ರಚಿಸಿದ; ಸಮ್ಮಿಶ್ರಸಂಖ್ಯೆಗಳನ್ನು ಕ್ವಟರ್ನಿಯನುಗಳಾಗಿ ವಿಸ್ತರಿಸಿದ ಪ್ರಕಾರವೇ ಕ್ವಟರ್ನಿಯನುಗಳನ್ನು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ವಿಸ್ತರಿಸಿದಾಗ ಕೇಲಿ ಧಾತುಗಳು (ಅವಕ್ಕೆ ಕೇಲಿ ಸಂಖ್ಯೆಗಳು ಎಂಬ ಹೆಸರೂ ಉಂಟು) ಉದ್ಭವಿಸುತ್ತವೆ. (ಎಸ್.ಆರ್.ಎಂ)

**ಕ್ವಾಂಟಂ** : ಕ್ವಾಂಟಂ ಸಿದ್ಧಾಂತದಲ್ಲಿ ಶಕ್ತಿಯ ಪೃಥಕ್ಕಾದ ಮತ್ತು ಅಲ್ಪವಾದ ಕಟ್ಟಿಗೆ (ಪ್ಯಾಕೆಟ್) ಇರುವ ಹೆಸರು. 1 ಕ್ವಾಂಟಂ ಶಕ್ತಿಯನ್ನು E ಎಂದು ಬರೆದರೆ $E=h\nu$. ಇಲ್ಲಿ $h$ ಪ್ಲಾಂಕನ ಸ್ಥಿರಾಂಕ; ಮತ್ತು $v$ ಶಕ್ತಿ ವಿಸ್ತರಣಾಕರದ ಆವರ್ತಾಂಕ (ಫ್ರೀಕ್ವೆನ್ಸಿ), $h$ ನ ಬೆಲೆ $6.55 \times 10^{-27}$ ಅರ್ಗ್–ಸೆಕೆಂಡ್. 19ನೆಯ ಶತಮಾನದ ಕೊನೆಯ ದಶಕಗಳಲ್ಲಿ ವಿಜ್ಞಾನಿಗಳು ನಡೆಸಿದ ಕೆಲವು ಪ್ರಯೋಗಗಳಿಂದ ಬೆಳಕು, ಕೆಂಪಗೆ ಕಾಯಿಸಿದ ಕಾಯಗಳ ಮೇಲ್ಮೈಗಳಿಂದ ಹೊರಡುವ ವಿಸರಣೆ ಇವೇ ಮೊದಲಾದ ವಿದ್ಯುತ್ಕಾಂತವಿಸರಣದ ನಾನಾರೂಪಗಳು ವಿದ್ಯುತ್ಕಾಂತಶಕ್ತಿಯ ಪುಟ್ಟ ಕಟ್ಟುಗಳಾಗಿರುವುವೇ ವಿನಾ ಅವಿಚ್ಛಿನ್ನವಾಗಿರುವುದಿಲ್ಲ ಎಂಬುದು ಕಂಡುಬಂದಿತು. ಇಂಥ ಪ್ರತಿಯೊಂದು ಕಟ್ಟನ್ನೂ ಕ್ವಾಂಟಂ ಅಥವಾ ಫೋಟಾನ್ ಎಂದು ಕರೆದಿರುತ್ತಾರೆ. ಯಾವುದೇ ಮಾಧ್ಯಮದ ಮೂಲಕ ಬೆಳಕಿನ ಪ್ರಸಾರ ಅಲೆಗಳಂತೆ ಮಾತ್ರವೇ ಅಲ್ಲ, ಅಲ್ಪ ಶಕ್ತಿಯನ್ನು ಹೊತ್ತು ಅತಿವೇಗದಿಂದ ಚಲಿಸುತ್ತಿರುವ ಸಣ್ಣ ಸಣ್ಣ ಕಣಗಳ ಸುರಿಮಳೆಯಂತೆ ಕೂಡ ಆಗುತ್ತದೆಂಬುದನ್ನು ಪ್ರಯೋಗಗಳು ತೋರಿಸಿಕೊಟ್ಟವು. ಹೀಗೆ ಆ ತನಕ ಬೆಳಕು ಮತ್ತು ವಿದ್ಯುತ್ಕಾಂತವಿಸರಣದ ಬಗ್ಗೆ ಇದ್ದ ಭಾವನೆಗಳಿಗೆ ಪ್ರಯೋಗ ಫಲಿತಾಂಶಗಳು ಒಂದು ವಿರೋಧೋಕ್ತಿಯನ್ನು (ಪ್ಯಾರಡಾಕ್ಸ್) ತಂದೊಡ್ಡಿದ್ದುವು. ಕಾಯಗಳನ್ನು ಕೆಂಪಗೆ ಕಾಯಿಸಿ ಅವು ವಿಸರಿಸುವ ಉಷ್ಣವನ್ನು ಯುಕ್ತವಾದ ಅಶ್ರಗದ ಮೂಲಕ ಹಾಯಿಸಿ ಪ್ರಯೋಗಗಳಲ್ಲಿ ವಿದ್ಯುತ್ಕಾಂತವಿಸರಣದ (ಉಷ್ಣ) ರೋಹಿತವನ್ನು ಪಡೆಯಲಾಯಿತು. ಇಂಥ ಸಂದರ್ಭಗಳಲ್ಲಿ ರೋಹಿತ ಅವಿಚ್ಛಿನ್ನವೇ ವಿನಾ ಪರಮಾಣು ಅಥವಾ ಅಣುಗಳು ಕೊಡುವಂತೆ ಸ್ಪಷ್ಟರೇಖೆಗಳನ್ನಾಗಲೀ ಪಟ್ಟಿಗಳನ್ನಾಗಲೀ ಒಳಗೊಂಡಿರುವುದಿಲ್ಲ ಎಂದು ತಿಳಿಯಲಾಯಿತು. ಹಾಗೆಯೇ ಕಾಯದ ಉಷ್ಣತೆ $T$ ಯನ್ನು ಏರಿಸಿದಾಗ ಅದು ಸೂಸುವ ವಿಸರಣ ಶಕ್ತಿಯ ಒಟ್ಟು ಮೌಲ್ಯ ಅತಿ ಶೀಘ್ರವಾಗಿ $T^4$ ಕ್ಕೆ ಸರಳಾನುಪಾತದಲ್ಲಿ ಏರುತ್ತದೆಂಬುದನ್ನು ಪ್ರಯೋಗಗಳು ತೋರಿಸಿಕೊಟ್ಟವು. ಆದರೆ ವಿಸರಣಶಕ್ತಿ ಪ್ರತಿ ಅಲೆಯುದ್ದದಲ್ಲಿಯೂ ಎಷ್ಟು ಅಡಗಿದೆ ಎಂದು ತಿಳಿಯಲು ಯತ್ನಿಸಿದಾಗ ಅದು (ವಿಸರಣಶಕ್ತಿ) ಪ್ರತಿ ಅಲೆಯುದ್ದದ ಏಕಮಾನ ಅಂತರದಲ್ಲಿಯೂ ಒಂದೇ ಸಮವಾಗಿ ಹಂಚಿಕೆಯಾಗಿಲ್ಲ. ಕಡಿಮೆ ಅಲೆಯುದ್ದಗಳ ಏಕಮಾನಗಳಲ್ಲಿ (ಹೆಚ್ಚಿನ ಆವರ್ತಾಂಕಗಳಲ್ಲಿ) ಹೆಚ್ಚಾಗಿಯೂ ಹೆಚ್ಚಿನ ಅಲೆಯುದ್ದಗಳ ಏಕಮಾನಗಳಲ್ಲಿ (ಕಡಿಮೆ ಆವರ್ತಾಂಕಗಳಲ್ಲಿ) ಕಡಿಮೆಯಾಗಿಯೂ ಹಂಚಿಕೊಂಡಿರುತ್ತದೆ; ಮತ್ತು ಅಲೆಯುದ್ದ ಸೊನ್ನೆಯನ್ನಾಗಲಿ ಅನಂತವನ್ನಾಗಲಿ ಸಮೀಪಿಸಿದಂತೆ ಶಕ್ತಿ ಸೊನ್ನೆ ಆಗುತ್ತದೆಂದು ಪ್ರಯೋಗ ಫಲಿತಾಂಶಗಳು ತೋರಿಸಿಕೊಟ್ಟವು. ಈ ವಿಷಯಗಳಿಂದ ಅಲೆಯುದ್ದಕ್ಕೆ ವಿರುದ್ಧವಾಗಿ ವಿಸರಣಶಕ್ತಿಯ ತೀಕ್ಷ್ಣತೆಯನ್ನು ತೋರಿಸುವಂತೆ ನಕ್ಷೆಗಳನ್ನು ಎಳೆದಾಗ ಅವು ಚಿತ್ರದಲ್ಲಿ ಕಾಣಿಸಿರುವಂತೆ ಇರುವುವು.



ಚಿತ್ರದಲ್ಲಿ 1 ವಿಸರಣಶಕ್ತಿಯ ತೀಕ್ಷ್ಣತೆ. λ ಅಲೆಯುದ್ದ

ಒಂದು ಆವೃತ ಆವರಣದಲ್ಲಿರುವ ಅಣುಗಳ ವೇಗಗಳನ್ನು ತಿಳಿಸುವ ವಕ್ರರೇಖೆಗಳಿಗೂ ಈ ವಕ್ರರೇಖೆಗಳಿಗೂ ಸಾದೃಶ್ಯ ಉಂಟು. ಅಲ್ಲದೆ ಪ್ರತಿಯೊಂದು ವಕ್ರರೇಖೆಯೂ ಒಂದು ಸುವ್ಯಾಖ್ಯಿತ ಗರಿಷ್ಠವನ್ನು ಪಡೆದಿರುತ್ತದೆ; ಉಷ್ಣತೆ ಹೆಚ್ಚಿದಂತೆ ಗರಿಷ್ಠದ ಸ್ಥಾನ ಕಡಿಮೆ ಅಲೆಯುದ್ದದ ದಿಕ್ಕಿನಲ್ಲಿ ಬದಲಾಗುತ್ತದೆಂಬುದನ್ನು ವಕ್ರರೇಖೆಗಳನ್ನು ನೋಡಿ ತಿಳಿಯಬಹುದು.

ಈ ಪ್ರಯೋಗಗಳಲ್ಲಿ ಟೊಳ್ಳಾಗಿರುವ ಒಂದು ಕುಹರವನ್ನು(ಹಾಲೊ ಕ್ಯಾವಿಟಿ) ಕೆಂಪಗೆ ಕಾಯಿಸಿ ವಿದ್ಯುತ್ಕಾಂತವಿಸರಣೆ ಅದನ್ನು ತುಂಬುವಂತೆ ಮಾಡಲಾಯಿತು. ಕುಹರದ ಗೋಡೆಗಳನ್ನು ದೊರಗಾಗಿಯೂ ಕಪ್ಪಗೂ ಇರುವಂತೆ ಅಳವಡಿಸಿದೆ. ಹೀಗಾಗಿ ಅವು ವಿಸರಣೆಯನ್ನು ಅವಿಚ್ಛಿನ್ನವಾಗಿ ಹೀರುತ್ತಲೂ ಪ್ರತಿಫಲಿಸುತ್ತಲೂ ಇರುತ್ತವೆ. ಈ ಕ್ರಿಯೆಗಳು ಅನೇಕ ಸಲ ಆಗುವುದರಿಂದ ಕುಹರದಲ್ಲಿರುವ ವಿಸರಣೆಗೆ ಒಂದು ನಿರ್ದಿಷ್ಟ ಉಷ್ಣತೆಯಲ್ಲಿ ($T$) ಸಮತೋಲ ಉಂಟಾಗುತ್ತದೆ. ಆಗ ಕುಹರದಲ್ಲಿ ಮಾಡಿರುವ ಒಂದು ಸಣ್ಣ ರಂಧ್ರಕ್ಕೆ ಎದುರಾಗಿ ಉಪಕರಣಗಳನ್ನು ಇರಿಸಿ ವಿಸರಣ ಶಕ್ತಿ ಪ್ರತಿ ಅಲೆಯುದ್ದದಲ್ಲಿಯೂ ಎಷ್ಟು ಅಡಗಿರುತ್ತದೆಂಬುದನ್ನು ಕರಾರುವಾಕ್ಕಾಗಿ ಅಳೆಯಲಾಯಿತು.

ಪ್ರಯೋಗಗಳಿಂದ ಕಂಡುಬಂದ ಶಕ್ತಿವಿತರಣೆಯನ್ನು ವಿದ್ಯುತ್ಕಾಂತ ಕ್ಷೇತ್ರಕ್ಕೆ ಅನ್ವಯಿಸುವ ಮ್ಯಾಕ್ಸ್‌ವೆಲ್ಲನ ಸಮೀಕರಣ ಮತ್ತು ಕಣಗಳ ಚಲನೆಯನ್ನು ವಿವರಿಸುವ ನ್ಯೂಟನ್ನನ ನಿಯಮಗಳ ಆಧಾರದ ಮೇಲೆ ಸಮಂಜಸವಾಗಿ ವರ್ಣಿಸಲು ಅನೇಕ ವಿಜ್ಞಾನಿಗಳು ಪ್ರಯತ್ನಿಸಿದರು. ವೀನ್, ಜೇಮ್ಸ್, ಜೀನ್ಸ್, ರ್‍ಯಾಲಿ ಎಂಬ ವಿಜ್ಞಾನಿಗಳು ಇಂಥ ಪ್ರಯತ್ನವನ್ನು ನಡೆಸಿದವರಲ್ಲಿ ಕೆಲವರು.

ಕಾಯ ಪ್ರತಿ ಆವರ್ತಾಂಕ $v$ ನಲ್ಲೂ ವಿಸರ್ಜಿಸುವ ಶಕ್ತಿ $Ev$ ಉಷ್ಣತೆ $T$ಯ ಒಂದು ನಿರ್ದಿಷ್ಟ ಉತ್ಪನ್ನ. ಅಶ್ರಗ ವಿಸರಣಶಕ್ತಿಯನ್ನು ಚದರಿಸಿ ಅವಿಚ್ಛಿನ್ನ ರೋಹಿತವನ್ನು ಮಾತ್ರ ಉಂಟು ಮಾಡುತ್ತದೆ. $Ev$ ನ ಮೌಲ್ಯ ಕುಹರದ ರಚನೆ ಮತ್ತು ಅದರ ರಂಧ್ರದ ಆಕಾರಗಳನ್ನು ಅವಲಂಬಿಸಿರುವುದಿಲ್ಲ ಎಂಬ ಆಧಾರಗಳ ಮೇಲೆ $v$ ಮತ್ತು $T$ ಗಳ ಮೇಲೆ $Ev$ ಪಡೆದಿರುವ ಅವಲಂಬನೆಯನ್ನು

$$E_V = V^3 F\left(\frac{CT}{V}\right)$$

ಎಂದು ಭಾವಿಸಿ ಸಮೀಕರಣಗಳನ್ನು ಪಡೆದಿರುತ್ತಾರೆ.

ಆದರೆ ಯಾರೊಬ್ಬರು ಕೊಟ್ಟ ಸೂತ್ರವೂ ಪ್ರಯೋಗದಿಂದ ಕಂಡುಬಂದ ವಿಷಯಗಳನ್ನು ಕೂಲಂಕಷವಾಗಿ ವರ್ಣಿಸಲಿಲ್ಲ. ವೀನ್ ಸೂತ್ರದಿಂದ ಪಡೆದ ವಕ್ರರೇಖೆ ಕಡಿಮೆ ಅಲೆಯುದ್ದಗಳಲ್ಲಿಯೂ ರ್‍ಯಾಲಿ–ಜೀನ್ಸ್ ಸೂತ್ರದಿಂದ ಪಡೆದ ವಕ್ರರೇಖೆ ಹೆಚ್ಚಿನ

ಅಲೆಯುದ್ದಗಳಲ್ಲಿಯೂ ಪ್ರಯೋಗದಿಂದ ಪಡೆದ ವಕ್ರರೇಖೆಯೊಡನೆ ಐಕ್ಯವಾಗುತ್ತವೆ; ಅಷ್ಟೇ ಅಲ್ಲದೆ ರ್‍ಯಾಲಿ ಸೂತ್ರದ ಪ್ರಕಾರ ಕಾಯ ತಾನು ಪಡೆದಿರುವ ವಿಸರಣಶಕ್ತಿಯನ್ನು ಅತಿ ಶೀಘ್ರವಾಗಿಯೂ ಅನಂತವಾಗಿಯೂ ವಿದ್ಯುತ್ಕಾಂತರೋಹಿತದ ಅತಿನೇರಿಳೆ ಪ್ರಾಂತಕ್ಕೆ (ಅಲ್ಟ್ರವಯೊಲೆಟ್ ರೀಜನ್) ವಿಸರ್ಜಿಸುತ್ತದೆ ಎಂಬ ಅನಾಹುತ ತಲೆದೋರುತ್ತದೆ. ಇದನ್ನು ವಿಜ್ಞಾನಿಗಳು ಅತಿನೇರಿಳೆ ಅನಾಹುತ (ಅಲ್ಟ್ರವಯೊಲೆಟ್ ಕ್ಯಟಾಸ್ಟ್ರಫಿ) ಎಂದು ಕರೆದಿರುತ್ತಾರೆ.

ಮೇಲಿನ ಪ್ರಯೋಗಗಳಿಂದ ಕಂಡುಬಂದ ವಿಷಯಗಳ ಬಗ್ಗೆ ಸತತವಾಗಿ ಯೋಚಿಸುತ್ತಿದ್ದ ಮಾಕ್ಸ್ ಪ್ಲಾಂಕ್ ಎಂಬ ಜರ್ಮನ್ ವಿಜ್ಞಾನಿ ವಿದ್ಯುತ್ಕಾಂತ ವಿಸರಣದ ಬಗ್ಗೆ ಊಹೆ ಒಂದನ್ನು ಮಾಡಿ (1899) ರ್‍ಯಾಲಿ ಸೂತ್ರದಿಂದ ಬಂದ ಈ ಅನಾಹುತವನ್ನು ನಿವಾರಿಸಿದ. ಪ್ರತಿಯೊಂದು ದ್ರವ್ಯವೂ ಅನೇಕ ಸಣ್ಣ ಸಣ್ಣ ಕಣಗಳಿಂದ ಆಗಿದೆ; ವಿದ್ಯುತ್ಕಾಂತ ವಿಸರಣವನ್ನು ಕಾಯ ವಿಸರ್ಜಿಸಿದಾಗ ಶಕ್ತಿಯನ್ನು ಹೊತ್ತ ಸಣ್ಣ ಸಣ್ಣ ಕಣಗಳಲ್ಲಿ ಕಳುಹುತ್ತದೆಯೇ ವಿನಾ ಅವಿಚ್ಛಿನ್ನವಾಗಿ ಕಳುಹುವುದಿಲ್ಲ ಎಂಬುದೇ ಈತನ ಗಾಢವಾದ ಊಹೆ. ರ್‍ಯಾಲಿ–ಜೀನ್ಸ್ ಪಡೆದ ಸೂತ್ರ ಈ ವಿಷಯದಲ್ಲಿ ಎಷ್ಟು ವಿರೋಧಾಭಾಸವನ್ನು ಎಬ್ಬಿಸಿತೋ ಅಷ್ಟೇ ಕಷ್ಟವನ್ನು ಈ ಅಭಿಪ್ರಾಯಕೊಡುತ್ತದೆಂದು ವಿಜ್ಞಾನಿಗಳು ಮೊದಲಲ್ಲಿ ತವಕಗೊಂಡರು. ಆದರೆ ಪ್ರಯೋಗ ಫಲಿತಾಂಶಗಳು ಆತನ ಊಹೆಯನ್ನು ತತ್‌ಕ್ಷಣ ಸಮರ್ಥಿಸಿದುವು. ಅಂದರೆ ಪ್ಲಾಂಕ್ ಪಡೆದ

$$E(\lambda, T) = \frac{8\pi hc}{\lambda 5} \times \frac{1}{\exp(hc/\lambda KT) - 1}$$

ಸೂತ್ರದಿಂದ (ಡಿಸೆಂಬರ್ 14, 1900), ಪ್ರಯೋಗಗಳಿಂದ ಪಡೆದ ವಕ್ರರೇಖೆಗಳನ್ನು, ಖಚಿತವಾಗಿ ಸಮರ್ಥಿಸಲು ಸಾಧ್ಯವಾಗಿದೆ.

ಪ್ಲಾಂಕನ ಪ್ರಕಾರ $v$ ಆವರ್ತಾಂಕ ಇರುವ ಏಕವರ್ಣೀ ಅಲೆ (ಮಾನೊಕ್ರೋಮ್ಯಾಟಿಕ್ ವೇವ್) $hv$ ನ ಪೂರ್ಣಾಂಕ ಗುಣಕಗಳಲ್ಲಿ ($hvn$) ಶಕ್ತಿಯನ್ನು ಪಡೆದಿರುತ್ತದೆ. $hv$ ಗಿಂತ ಚಿಕ್ಕದಾದ ಯಾವುದೇ ಮೌಲ್ಯವನ್ನು ಪಡೆದಿರುವುದಿಲ್ಲ; ಅಂದರೆ $n$ ಎಂಬುದು ಪೂರ್ಣಾಂಕ ಎಂಬುದೇ ಈತನ ಊಹೆ. $hv$ ನಷ್ಟು ಶಕ್ತಿ ಹೊತ್ತ ಪ್ರತಿಯೊಂದು ಶಕ್ತಿಕಟ್ಟನ್ನೂ (ಎನರ್ಜಿ ಪ್ಯಾಕೆಟ್) ಫೋಟಾನ್ ಎಂದು ಕರೆಯುತ್ತಾರೆ. $h$ ನ ನಿರ್ದಿಷ್ಟತೆ ಮತ್ತು ಅದು ಸೂಚಿಸುವ ಅರ್ಥಗಳು ಕ್ವಾಂಟಂ ಸಿದ್ಧಾಂತದ ತಳಹದಿ ಆಗಿವೆ; ಹೀಗೆ

$$E = hv$$

**ಸಮೀಕರಣ ತಿಳಿಸುವುದು ಎರಡು ವಿಷಯಗಳನ್ನು :** (1) ವಿಸರಣಶಕ್ತಿ ಆಕಾಶದ ಮಿತ ಪ್ರಾಂತಗಳಲ್ಲಿ ಕೇಂದ್ರೀಕೃತವಾಗಿದೆ; ಆದ್ದರಿಂದ ಅದು ಕಣಗಳ ಶಕ್ತಿಯಂತೆ ವರ್ತಿಸುತ್ತದೆ. (2) ವಿಸರಣಶಕ್ತಿಯ ಆವರ್ತಾಂಕ $v$ ಮತ್ತು ಕಣದಶಕ್ತಿ $E$ ಗೆ ನೇರ ಸಂಬಂಧ ಉಂಟು. ಹೀಗೆ ವಿಸರಣೆಯ ದ್ವೈತೀಭಾವ ವಿದ್ಯುತ್ಕಾಂತ ಕ್ಷೇತ್ರವನ್ನು ಕ್ವಾಂಟಂ ವಿವರಣೆಯಿಂದಲೇ ನೆರವೇರಿಸಬೇಕೆಂದು ವಿಜ್ಞಾನಿಗಳನ್ನು ಒತ್ತಾಯಪಡಿಸಿದೆ. ಶಕ್ತಿ ಮತ್ತು ಸಂವೇಗದ ಎಲ್ಲ ರೂಪಗಳಿಗೂ ಈ ದ್ವೈತಭಾವ ಅನ್ವಯಿಸುವಂತೆ ಒಂದು ಏಕೀಕೃತ ದೃಷ್ಟಿಯನ್ನು ದೆಬ್ರಾಯ್ ಬೆಳೆಸಿರುತ್ತಾನೆ. ಇವನ ಸಿದ್ಧಾಂತದಿಂದ ಕಂಡುಬರುವ ವಿಷಯಗಳನ್ನೆಲ್ಲ ಸೂಕ್ಷ್ಮಣಗಳೊಡನೆ ಮಾಡಿರುವ ಪ್ರಯೋಗಗಳು ಸಮರ್ಥಿಸಿವೆ. (ಸಿ.ಕೆ.ವಿ.)

**ಕ್ವಾಂಟಂ ಕ್ಷೇತ್ರ ಸಿದ್ಧಾಂತ :** ಕ್ವಾಂಟಂ ಬಲವಿಜ್ಞಾನವನ್ನು ಯಾವುದಾದರೊಂದು ಕ್ಷೇತ್ರಕ್ಕೆ ಅನ್ವಯಿಸಿದಂತೆ ಬೆಳೆಸಿ ಪಡೆದಿರುವ ಸೈದ್ಧಾಂತಿಕ ವಿಜ್ಞಾನದ ಒಂದು ಶಾಖೆ (ಕ್ವಾಂಟಂ ಫೀಲ್ಡ್ ಥಿಯರಿ). ಅಭಿಜಾತ ಭೌತವಿಜ್ಞಾನದ ಅಧ್ಯಯನದಲ್ಲಿ ಕ್ಷೇತ್ರದ ವಿವರಗಳನ್ನು ಅರಿಯಬೇಕಾದದ್ದು ಅಗತ್ಯ. ಬಲವಿಜ್ಞಾನವನ್ನು ಯಾವುದೇ ಕ್ಷೇತ್ರಕ್ಕೆ ಅನ್ವಯಿಸುವಂತೆ ಬೆಳೆಸಲು ಚರಗಳ ಅನಂತಗಣವೊಂದು ಬೇಕು. ಉದಾಹರಣೆಗೆ ಪ್ರವಾಹಿಯಲ್ಲಿ ಪ್ರತಿಯೊಂದು ಕಣವೂ ಸ್ವತಂತ್ರವಾಗಿ ಚಲಿಸಬಹುದಾದ್ದರಿಂದ ಕಣಗಳ ವೇಗಕ್ಷೇತ್ರವನ್ನು (ವೆಲಾಸಿಟಿ ಫೀಲ್ಡ್) ವರ್ಣಿಸಲು ಚರಗಳ ಅನಂತಗಣ ಒಂದನ್ನು ಕೊಡುತ್ತೇವೆ. ಆಕಾಶದ ಪ್ರತಿಯೊಂದು ಬಿಂದುವಿನಲ್ಲಿಯೂ ಯಾವುದಾದರೊಂದು ಭೌತ ಪರಿಮಾಣಕವನ್ನು ಲಕ್ಷಣಿಸುವ ಅವಿಚ್ಛಿನ್ನ ಉತ್ಪನ್ನಗಳ ಗಣದ ಮೌಲ್ಯಗಳಾಗಿ ಈ ಅನಂತಗಣವನ್ನು ಕೊಡಲಾಗುತ್ತದೆ. ಉದಾಹರಣೆಗೆ, ಆಕಾಶದ ಪ್ರತಿಯೊಂದು ಬಿಂದುವಿನಲ್ಲಿಯೂ ಸ್ಪಷ್ಟಪಡಿಸಬಹುದಾದ ವಿಭವಶಕ್ತಿಯ (ಪೊಟನ್ಷಿಯಲ್ ಎನರ್ಜಿ) ಮೌಲ್ಯದಿಂದ ನ್ಯೂಟನೀಯ ಗುರುತ್ವಕ್ಷೇತ್ರವನ್ನು ವಿವರಿಸಲಾಗುತ್ತದೆ. ವಿದ್ಯುತ್ಕಾಂತಕ್ಷೇತ್ರ ಅಥವಾ ಮ್ಯಾಕ್ಸ್‌ವೆಲ್ ಕ್ಷೇತ್ರ ಅಭಿಜಾತ ಭೌತವಿಜ್ಞಾನದಲ್ಲಿ ಚರ್ಚಿಸುವ ಕ್ಷೇತ್ರದ ಮತ್ತೊಂದು ಉದಾಹರಣೆ. ವಿದ್ಯುದಾವಿಷ್ಟ ಕಣ (ಎಲೆಕ್ಟ್ರಿಕಲಿ ಚಾರ್ಜ್ ಪಾರ್ಟಿಕಲ್) ಆಕಾಶದ ಪ್ರತಿ ಬಿಂದುವಿನಲ್ಲಿಯೂ ಅನುಭವಿಸುವ ವಿದ್ಯುತ್ ಮತ್ತು ಕಾಂತಬಲಗಳೇನು ಎಂದು ತಿಳಿದು ಈ ಕ್ಷೇತ್ರವನ್ನು ವರ್ಣಿಸುತ್ತೇವೆ.

ಸ್ಥೂಲಮಟ್ಟದಲ್ಲಿ (ಮ್ಯಾಕ್ರೋಸ್ಕೋಪಿಕ್ ಲೆವೆಲ್) ನಮಗೆ ಪರಿಚಿತವಾಗಿರುವ ಈ ಕ್ಷೇತ್ರಗಳ ಜೊತೆಗೆ ಅಭಿಜಾತ ಪಡಿಯಚ್ಚುಗಳು (ಕ್ಲಾಸಿಕಲ್ ಕೌಂಟರ್ ಪಾರ್ಟ್ಸ್) ಇಲ್ಲದ ಅನೇಕ ಕ್ಷೇತ್ರಗಳನ್ನು ಪರಮಾಣು ಮತ್ತು ನ್ಯೂಕ್ಲಿಯಸುಗಳನ್ನು ಆವರಿಸಿರುವ ಆಕಾಶಗಳಲ್ಲಿ ಕಾಣುತ್ತೇವೆ. ಇಲ್ಲಿ ದ್ರವ್ಯದ ಮೂಲಕಣಗಳಾದ ಎಲೆಕ್ಟ್ರಾನ್, ಪ್ರೋಟಾನ್ ಇವೇ ಮೊದಲಾದವು ಗತೀಯ ಲಕ್ಷಣಗಳ (ಡೈನಮಿಕಲ್ ಕ್ಯಾರೆಕ್ಟರಿಸ್ಟಿಕ್ಸ್) ಅರಿವಿಗೆ ಕ್ಷೇತ್ರದ ಅಭಿಪ್ರಾಯ ಬಹು ಉಪಯುಕ್ತ.

ಪರಮಾಣ್ವಿಕ ದ್ರವ್ಯದ ಅಂತರಕ್ರಿಯೆಗಳಿಂದ ಮೂಲಕಣಗಳು ಜನಿಸುತ್ತವೆ ಅಥವಾ ನಾಶವಾಗುತ್ತವೆ ಎಂಬುದು ನಮಗೆ ಗೊತ್ತು. ದ್ರವ್ಯ ಮತ್ತು ಶಕ್ತಿಗಳ ನಡುವೆ $E=mc^2$ ಸಮೀಕರಣದ ಪ್ರಕಾರ ಆಗುವ ಪರಿವರ್ತನೆ ಯಾವುದೇ ಮೂಲಕಣದ ಉತ್ಪತ್ತಿ ಅಥವಾ ನಾಶಕ್ಕೆ ಕಾರಣವಾಗಿದೆ. ಅಲ್ಲದೆ ಪ್ರತಿಯೊಂದು ದ್ರವ್ಯಕಣದೊಡನೆಯೂ ಒಂದು ಕ್ವಾಂಟಂ–ಮೆಕಾನಿಕಲ್ ಅಲೆ (ಕ್ವಾಂಟಂ–ಮೆಕಾನಿಕಲ್ ವೇವ್) ಜೊತೆಗೂಡಿರುತ್ತದೆ. ಈ ಅಲೆಯ ವ್ಯತಿಕರಣ ಲಕ್ಷಣಗಳು ಅಭಿಜಾತ ಭೌತವಿಜ್ಞಾನದಲ್ಲಿ ಬಳಸಿದ ಕ್ಷೇತ್ರದ ಅಭಿಪ್ರಾಯವನ್ನು ಇಲ್ಲೂ ಬಳಸಬಹುದೆಂದು ತಿಳಿಸುತ್ತವೆ. ವಾಸ್ತವವಾಗಿಯೂ ಕ್ವಾಂಟಂ ಕ್ಷೇತ್ರದ ಅಭಿಪ್ರಾಯವನ್ನು ಉಪಯೋಗಿಸಿದಾಗ ಅಲೆ–ಕಣ, ಅಥವಾ ಇನ್ನೂ ಚೆನ್ನಾಗಿ, ಕ್ಷೇತ್ರ–ಕಣ ಎಂಬ ದ್ರವ್ಯದ ದ್ವೈತಭಾವವನ್ನು (ಫೀಲ್ಡ್–ಪಾರ್ಟಿಕಲ್ ಡ್ಯುಯ್ಯಲಿಟಿ ಕ್ಯಾರೆಕ್ಟರಿಸ್ಟಿಕ್ಸ್ ಆಫ್ ಮ್ಯಾಟರ್) ಸ್ಪಷ್ಟಪಡಿಸಬಹುದು.

ಕ್ಷೇತ್ರಗಳಲ್ಲಿ ಕಂಡುಬರುವ ಶುದ್ಧಗತೀಯ ಲಕ್ಷಣಗಳು (ಕೈನಮ್ಯಾಟಿಕಲ್ ಕ್ಯಾರೆಕ್ಟರಿಸ್ಟಿಕ್ಸ್) ಸಾಪೇಕ್ಷತಾ ಸಿದ್ಧಾಂತದೊಡನೆ) (ಥಿಯರಿ ಆಫ್ ರಿಲೆಟಿವಿಟಿ) ಸಮಂಜಸವಾಗಿರುವಂತೆ ಕ್ಷೇತ್ರಗಳ ಸಿದ್ಧಾಂತವನ್ನು ಸೂತ್ರೀಕರಿಸಿ ಬೆಳೆಸಬೇಕಾಗುತ್ತದೆ. ಕ್ಷೇತ್ರಗಳಲ್ಲಿ ಕಣಗಳು ಅನುಭವಿಸುವ ಚಲನೆಯನ್ನು ಕ್ವಾಂಟಂ ಬಲವಿಜ್ಞಾನ ನಿರ್ಧರಿಸುತ್ತದೆ. ಓದುಗರಿಗೆ ಸಾಪೇಕ್ಷತಾ ಸಿದ್ಧಾಂತ ಮತ್ತು ಕ್ವಾಂಟಂ ಬಲವಿಜ್ಞಾನಗಳ ಪರಿಚಯವಿದೆ ಎಂದು ಭಾವಿಸಿ ಮುಂದಿನ ವಿವರಣೆಯನ್ನು ಕೊಡಲಾಗಿದೆ.

ಒಂದು ಅವಿಚ್ಛಿನ್ನ ಕ್ಷೇತ್ರವನ್ನು ಕ್ವಾಂಟಂ ಬಲವಿಜ್ಞಾನದಿಂದ ವರ್ಣಿಸಿದಾಗ ಕಣಲಕ್ಷಣಗಳು ಹೊರಹೊಮ್ಮುತ್ತವೆ. ಅದಿಶಕ್ಷೇತ್ರವನ್ನು (ಸ್ಕೇಲಾರ್ ಫೀಲ್ಡ್) ಉದಾಹರಣೆಯನ್ನಾಗಿ ತೆಗೆದುಕೊಂಡು ಇದನ್ನು ತೋರಿಸಬಹುದು. ಅದಿಶಕ್ಷೇತ್ರ ಆಕಾಶ ಮತ್ತು ಕಾಲನಿರ್ದೇಶಕಗಳಾದ $x$ ಮತ್ತು $t$ ಗಳ ಅಚರೋತ್ಪನ್ನ (ಇನ್ವೇರಿಯಂಟ್ ಫಂಕ್ಷನ್ ಆಫ್ ಸ್ಪೇಸ್ ಟೈಂ ಕೋಆರ್ಡಿನೇಟ್ಸ್). ಸ್ವತಂತ್ರ ಕಣಗಳನ್ನು ಕ್ಷೇತ್ರ ವಿವರಿಸುವಾಗ ಅವು $m$ ಜಡಾಂಶವುಳ್ಳ ಒಂದು ಸ್ವತಂತ್ರ ಕಣದ ಶಕ್ತಿ ಮತ್ತು ಸಂವೇಗದ ನಡುವೆ ಇರುವ

$$E^2 = c^2\,[\mathbf{P}^2 + (mc)^2]$$

ಸಾಪೇಕ್ಷತಾ ಸಿದ್ಧಾಂತದಿಂದ ಬರುವ ಸಂಬಂಧದೊಡನೆ ಹೊಂದಿಕೊಳ್ಳಬೇಕು. ಕ್ವಾಂಟಂ ಬಲವಿಜ್ಞಾನದ ಸಾಮಾನ್ಯ ನಿಯಮದ ಪ್ರಕಾರ

$$E \to ih\frac{\partial}{\partial t},\ P \to ih\nabla$$

ಎಂಬ ಪರಿಕರ್ಮಿಗಳು $E$ ಮತ್ತು $P$ ಗಳನ್ನು ಆದೇಶಿಸುತ್ತವೆ. ಇವು ಆಕಾಶ ಮತ್ತು ಕಾಲಗಳ ಉತ್ಪನ್ನ $\varnothing$ ಮೇಲೆ ವರ್ತಿಸಿದಾಗ

$$\left[ih\frac{\partial}{\partial t}\right]^2 \phi = c\left[\left(\frac{h}{i}\nabla\right)^2 + (mc)^2\right]\phi$$

ಎಂಬ ಕ್ಷೇತ್ರಕ್ಕೆ ಸಲ್ಲುವ ಸಮೀಕರಣವನ್ನು ಪಡೆಯುತ್ತೇವೆ.

ಆಕಾಶ ಅವಲಂಬನೆಯ ಫೂರಿಯರ್ ಪರಿವರ್ತನೆಯನ್ನು ಮಾಡಿದ್ದೇ ಆದರೆ (ಫೂರಿಯರ್ ಟ್ರಾನ್ಸ್‌ಫಾರ್ಮೇಷನ್ ಆಫ್ ಸ್ಪೇಷಿಯಲ್ ಡಿಪೆಂಡೆನ್ಸ್) ಆಗ ಸಮೀಕರಣ

$$\left[ih\frac{\partial}{\partial t}\right]^2 \phi = c^2\left[P^2 + (mc)^2\right]\phi$$

ಎಂದಾಗುತ್ತದೆ. **P** ಯ ಪ್ರತಿಯೊಂದು ಮೌಲ್ಯಕ್ಕೂ ಈ ಸಮೀಕರಣ

$\dfrac{c\left[P^2 + (mc)^2\right]^{\frac{1}{2}}}{h}$ ಆವರ್ತಾಂಕ ಆಗಿರುವ ಒಂದು ಸಂಗತ ಆಂದೋಳಕವನ್ನು (ಹಾರ್ಮಾನಿಕ್ ಆಸಿಲೇಟರ್) ವಿವರಿಸುತ್ತದೆ. n =0, 1,2,.... ಆದಾಗ

$$(n + \frac{1}{2})\left[P^2 + (mc)^2\right]^{\frac{1}{2}} c$$

ಎಂಬ ಗಣಿತೋಕ್ತಿ ಆಂದೋಳಕದ ಶಕ್ತಿರೋಹಿತವನ್ನು (ಎನರ್ಜಿ ಸ್ಪೆಕ್ಟ್ರಂ) ತಿಳೀಸುವುದರಿಂದ $\phi$ ಅದಿಶಕ್ಷೇತ್ರ ವಿವರಿಸುವ ವ್ಯವಸ್ಥೆಯ ಶಕ್ತಿಹಂತಗಳನ್ನು (ಎನರ್ಜಿ ಲೆವೆಲ್ಸ್)

$$E = \sum [n(P) + \frac{1}{2}]\left[P^2 + (mc)^2\right]^{\frac{1}{2}} c$$

ಗಣಿತೋಕ್ತಿ ವಿವರಿಸುತ್ತದೆ. ಇಲ್ಲಿ ಪ್ರತಿಯೊಂದು **P** ಯ ಮೌಲ್ಯಕ್ಕೂ n(**P**) ಗೆ ಸಾಧ್ಯವಾಗುವ ಮೌಲ್ಯಗಳು ಪೂರ್ಣಾಂಕಗಳಾಗಿರುತ್ತವೆ.ಇದರಿಂದ ಶಕ್ತಿಯ ಮೌಲ್ಯಗಳಲ್ಲಿ ಆಗುವ ಬದಲಾವಣೆಗಳು

$$\left[P^2+(mc)^2\right]^{\frac{1}{2}}c$$

ಗುಣಿತಗಳಲ್ಲಿ (ಮಲ್ಟಿಪಲ್ಸ್) ಉಂಟಾಗುತ್ತವೆ; ಮತ್ತು

$$\left[P^2+(mc)^2\right]^{\frac{1}{2}}c$$

ಅಷ್ಟು ಶಕ್ತಿಯುಳ್ಳ n(**P**) ಕಣ ಅಥವಾ ಕ್ವಾಂಟಗಳು ಇರುತ್ತವೆ. ನಿರ್ವಾತ ಎಂದು ಕರೆಯುವ ಕನಿಷ್ಠ ಶಕ್ತಿಹಂತಕ್ಕೆ ಸೊನ್ನೆ ಮೌಲ್ಯವನ್ನು ಒಪ್ಪಿಸಬಹುದಾದ್ದರಿಂದ

$$\frac{1}{2}\left[P^2+(mc)^2\right]^{\frac{1}{2}}c$$

ಗೆ ಸಮವಾದ ಪ್ರತಿಯೊಂದು ಆಂದೋಳಕದ ಶೂನ್ಯಬಿಂದುಶಕ್ತಿಯನ್ನು ಬಿಟ್ಟುಬಿಡಬಹುದು. ಆದರೆ ಕನಿಷ್ಠಶಕ್ತಿಯ ಹಂತದಲ್ಲಿ ಕ್ಷೇತ್ರದಲ್ಲಿನ ಡೋಲಾಯಮಾನಗಳಿಂದ ಈ ಶಕ್ತಿ ಉಂಟಾಗುತ್ತದೆ ಎಂಬುದನ್ನು ಜ್ಞಾಪಕವಿಟ್ಟುಕೊಳ್ಳಬೇಕು.

ϕ (**P**, *t*) ಎಂಬುದು ಆಂದೋಳಕದ ನಿರ್ದೇಶಕವಾಗಿರುತ್ತದೆ. ಒಂಟಿ ಸಂಗತ ಆಂದೋಳಕದ ಸಂದರ್ಭದಲ್ಲಿ

$$\phi(P,t)+ih.\frac{1}{\left[P^2+(mc)^2\right]^{1/2}}.\frac{\partial}{\partial(ct)}\phi(P,t)=\phi^{\pm}(P,t)$$

ಎಂಬವು ಶಕ್ತಿ ಐಗೆನ್ ಸ್ಥಿತಿಯನ್ನು (ಎನರ್ಜಿ ಐಗೆನ್ ಸ್ಟೇಟ್) ಅನುಕ್ರಮವಾಗಿ ಇಳಿಸುವ ಮತ್ತು ಏರಿಸುವ ಪರಿಕರ್ಮಿಗಳಾಗಿರುತ್ತವೆ. ಆದ್ದರಿಂದ ಇವನ್ನು ಕಣ–ಹೀರಿಕೆ ಮತ್ತು ವಿಸರ್ಜನೆ ಪರಿಕರ್ಮಿಗಳೆಂದು ಕರೆಯುತ್ತಾರೆ.

ಅತ್ಯಂತ ಹೆಚ್ಚಿನ ವಿವರಣೆಯೊಡನೆ ಅಧ್ಯಯನ ಮಾಡಲ್ಪಟ್ಟಿರುವ ಮತ್ತು ಪರಮಾಣ್ವಕ ವ್ಯವಸ್ಥೆಗಳಲ್ಲಿ ಕಂಡುಬರುವ ಗುಣಗಳನ್ನು ವಿವರಿಸುವುದರಲ್ಲಿ ಮಹತ್ತರವಾದ ಯಶಸ್ಸನ್ನು ಪಡೆದಿರುವ ಸಿದ್ಧಾಂತವೆಂದರೆ ವಿದ್ಯುತ್ಕಾಂತ ಕ್ಷೇತ್ರದ ಸಿದ್ಧಾಂತ.

ಯಾವುದೇ ಒಂದು ದ್ರವ್ಯರಾಶಿಯನ್ನು ಆವರಿಸಿರುವ ಕ್ಷೇತ್ರ ಗುರುತ್ವಕ್ಷೇತ್ರ ಎನಿಸಿಕೊಳ್ಳುತ್ತದೆ. ಕ್ವಾಂಟಂ ಬಲವಿಜ್ಞಾನದ ಮೂಲಭೂತ ಅಭಿಪ್ರಾಯಗಳಿಂದ ವಿದ್ಯುತ್ಕಾಂತ ಕ್ಷೇತ್ರದ ಬಗ್ಗೆ ವಿವರಣೆಗಳನ್ನು ಪಡೆದಿರುವಂತೆ ಗುರುತ್ವಕ್ಷೇತ್ರವನ್ನು ವಿಶ್ಲೇಷಿಸಿ ತಿಳಿಯಲು ಸಾಧ್ಯವಾಗಿಲ್ಲ. ಇದಕ್ಕೆ ಎರಡು ಕಾರಣಗಳುಂಟು. ವ್ಯಾವಹಾರಿಕ ದೃಷ್ಟಿಕೋನದಿಂದ ನೋಡಿದರೆ ಪರಮಾಣ್ವಕ ವಿದ್ಯಮಾನಗಳ ಅರಿವಿಗೆ ಕಣಗಳ ಗುರುತ್ವಕ್ಷೇತ್ರ ಅಷ್ಟಾಗಿ ಅಗತ್ಯವಿಲ್ಲ. ಏಕೆಂದರೆ ಕ್ಷೇತ್ರ ಮತ್ತು ಅದನ್ನು ಉಂಟು ಮಾಡುವ ದ್ರವ್ಯಗಳ ಕೂಡಿಕೆ ಬಹಳ ದುರ್ಬಲವಾಗಿರುತ್ತದೆ. ಉದಾಹರಣೆಗೆ ಹೈಡ್ರೊಜನ್ ಪರಮಾಣುವಿನಲ್ಲಿ ಎಲೆಕ್ಟ್ರಾನ್ ಮತ್ತು ಪ್ರೋಟಾನ್ ನಡುವೆ ಇರುವ ಸ್ಥಿರ ವಿದ್ಯುದ್ಬಲ (ಎಲೆಕ್ಟ್ರೋಸ್ಟ್ಯಾಟಿಕ್ ಫೋರ್ಸ್) ಅವುಗಳ ನಡುವೆ ಇರುವ ಗುರುತ್ವಾಕರ್ಷಣ ಬಲದ $10^{39}$ ರಷ್ಟು. ಎರಡನೆಯದಾಗಿ ಗುರುತ್ವಕ್ಷೇತ್ರ ಸಮೀಕರಣಗಳು ರೇಖೀಯ ಸಮೀಕರಣಗಳಲ್ಲ. ಆದ್ದರಿಂದ ಅವನ್ನು ಕ್ವಾಂಟಂ ಬಲವಿಜ್ಞಾನದ ರೀತ್ಯಾ ಸಂಸ್ಕರಿಸಿ ತಿಳಿಯಬೇಕಾದರೆ ಬಹು ಕಷ್ಟ. ಎಲ್ಲಕ್ಕಿಂತ ಮಿಗಿಲಾಗಿ ಗುರುತ್ವಕ್ಷೇತ್ರದ ಭೌತ ಒಳವಿಷಯವನ್ನು (ಫಿಸಿಕಲ್ ಕಂಟೆಂಟ್) ವಿಜ್ಞಾನಿಗಳು ಇನ್ನೂ ಚೆನ್ನಾಗಿ ಅರಿತಿಲ್ಲ. ಸೈದ್ಧಾಂತಿಕವಾಗಿ ನಿಷ್ಪತ್ತಿಸಿರುವ ಗುರುತ್ವಕ್ಷೇತ್ರದ ಕ್ವಾಂಟವನ್ನು ಗ್ರಾವಿಟಾನ್ ಎಂದು ಕರೆಯುತ್ತಾರೆ. ಐನ್‌ಸ್ಟೈನನ ಸಾರ್ವತ್ರೀಕೃತ ಸಾಪೇಕ್ಷತಾಸಿದ್ಧಾಂತದ ಪ್ರಕಾರ ವೇಗೋತ್ಕರ್ಷಿತ ದ್ರವ್ಯರಾಶಿಗಳು ಗುರುತ್ವ ಅಲೆಗಳನ್ನು ವಿಸರ್ಜಿಸಬೇಕು. ಹಾಗೆಯೇ ಕ್ವಾಂಟಂ ಕ್ಷೇತ್ರ ಸಿದ್ಧಾಂತದ ಪ್ರಕಾರ ಈ ತೆರನಾದ ವಿಸರಣಕ್ಷೇತ್ರ (ರೇಡಿಯೇಷನ್ ಫೀಲ್ಡ್) ಕ್ವಾಂಟೀಕೃತವಾಗಿರಬೇಕು. ಅಂದರೆ ಅದರ ಶಕ್ತಿ ಗ್ರಾವಿಟಾನ್ ಎಂದು ಕರೆಯುವ ವಿವಿಕ್ತ ಕ್ವಾಂಟಗಳಲ್ಲಿ (ಡಿಸ್ಕ್ರೀಟ್‌ಕ್ವಾಂಟ) ಬೆಳಕಿನ ಶಕ್ತಿ ಫೋಟಾನ್ ಎಂಬ ಹೆಸರಿನ ಕಣಗಳಲ್ಲಿ ಕಾಣಿಸಿಕೊಳ್ಳುವಂತೆ ಮೈದೋರಬೇಕು. ಅದರ ವಿರಾಮ ದ್ರವ್ಯರಾಶಿ (ರೆಸ್ಟ್ ಮಾಸ್) ಮತ್ತು ವಿದ್ಯುದಾವೇಶಗಳು ಸೊನ್ನೆ ಎಂದು ಅಭಿಜಾತ ಗುರುತ್ವಕ್ಷೇತ್ರದಲ್ಲಿ ಕಂಡುಬರುವ ಗುಣಗಳಿಂದ ಗ್ರಾವಿಟಾನ್ ಕಣದ ಮಿಕ್ಕ ಗುಣಗಳು ನಿಗಮಿತವಾಗುತ್ತವೆ. h=h/2ð ಏಕಕಣಗಳಲ್ಲಿ ಅದರ ಭ್ರಮಣೆ (ಸ್ಪಿನ್) ಎರಡು. ಆದ್ದರಿಂದ ಅದು ಒಂದು ಬೋಸಾನ್; ಅಂದರೆ ಬೋಸ್–ಐನ್‌ಸ್ಟೈನ್ ಸಂಖ್ಯಾಕಲನಶಾಸ್ತ್ರವನ್ನು (ಬೋಸ್–ಐನ್‌ಸ್ಟೈನ್ ಸ್ಟ್ಯಾಟಿಸ್ಟಿಕ್ಸ್) ಪಾಲಿಸುವಂಥ ಒಂದು ಕಣ. ಅದರ ವಿರಾಮ ದ್ರವ್ಯರಾಶಿ ಸೊನ್ನೆಯಾಗುವ ಕಾರಣ ಅದರ ಭ್ರಮಣೆ ಚಲನೆಯ ನೇರಕ್ಕೆ ಸಮಾಂತರವಾಗಿರುತ್ತದೆ. ಇದರಿಂದ ಗ್ರಾವಿಟಾನಿಗೆ ಸ್ವತಂತ್ರವಾಗಿರುವ ಎರಡು ಭ್ರಮಣ ಹಂತಗಳು ಮಾತ್ರ ಇರುತ್ತವೆ.

ಒಂದು ದ್ರವ್ಯರಾಶಿಯಿಂದ ಗುರುತ್ವ ವಿಸರಣೆ ಆಗುತ್ತದೆಂಬುದನ್ನು ಪ್ರಾಯೋಗಿಕವಾಗಿ ವೀಕ್ಷಿಸಲು ಇನ್ನೂ ಸಾಧ್ಯವಾಗಿಲ್ಲ. ದ್ರವ್ಯ ಗುರುತ್ವಕ್ಷೇತ್ರದೊಡನೆ ಬಹಳ ದುರ್ಬಲವಾಗಿ ಅಂಟಿಕೊಂಡಿರುವುದರಿಂದ ಇದು ಬಹಳ ಕಷ್ಟಸಾಧ್ಯವಾದ ಕೆಲಸ. ಅಲ್ಲದೆ ಅತಿ ದುರ್ಬಲವಾದ ಈ ಸಂಯೋಜನೆಯಿಂದ ಗುರುತ್ವ ವಿಸರಣೆಯ ಹೀರಿಕೆ ಮತ್ತು ವಿಸರ್ಜನೆಯ ದರಗಳು ಅಳತೆ ಮಾಡಲಾಗದಷ್ಟು ಅತ್ಯಲ್ಪವಾಗಿರುತ್ತವೆ; ಆದರೂ ಪ್ರಚಲಿತ ಕ್ವಾಂಟಂ ಕ್ಷೇತ್ರ ಸಿದ್ಧಾಂತಗಳಲ್ಲಿ ಕಂಡುಬರುವ ಅಪಸರಣ ಕಷ್ಟಗಳನ್ನು (ಡೈವರ್ಜೆನ್ಸ್ ಡಿಫಿಕಲ್ಟೀಸ್) ನಿರ್ಮೂಲಗೊಳಿಸಲು ಸಹಾಯಕವಾಗುತ್ತವೆಂಬ ಭರವಸೆಯಿಂದ ಗುರುತ್ವಕ್ಷೇತ್ರದ ಅಧ್ಯಯನವನ್ನು ಸವಿಸ್ತಾರವಾಗಿ ಮಾಡಿರುತ್ತಾರೆ.

ಪರಮಾಣ್ವಕ ಮಟ್ಟದಲ್ಲಿ ಕಾಣಿಸಿಕೊಳ್ಳುವ ಕ್ಷೇತ್ರಗಳೆಂದರೆ ನ್ಯೂಕ್ಲಿಯರ್ ಕ್ಷೇತ್ರಗಳು. ಪರಮಾಣುಗಳ ಗುಣಗಳಿಗೆ ಕಾರಣವಾಗಿರುವ ವಿದ್ಯುದ್ಬಲಗಳ ಕರ್ತೃ ವಿದ್ಯುತ್ಕಾಂತಕ್ಷೇತ್ರ. ಹಾಗೆಯೇ ನ್ಯೂಕ್ಲಿಯರ್ ರಚನೆ ನ್ಯೂಕ್ಲಿಯರ್ ಬಲಗಳ ಇರುವಿಕೆಯನ್ನು ಹೊರಗೆಡಹುತ್ತದೆ. ನ್ಯೂಕ್ಲಿಯಸುಗಳಲ್ಲಿ ವಿದ್ಯುದಾವಿಷ್ಟ ಪ್ರೋಟಾನುಗಳ ನಡುವೆ ಇರುವ ವಿಕರ್ಷಕ ಬಲಗಳಿಗಿಂತ ಆಕರ್ಷಕ ಬಲಗಳ ತೀವ್ರತೆ ಬಹಳ ಜಾಸ್ತಿ. ಆದರೆ ವ್ಯಾಪ್ತಿ ಅತಿ ಕಡಿಮೆ; ಮತ್ತು ನ್ಯೂಕ್ಲಿಯರ್ ಕಣಗಳ ಒಂದು ನಿರ್ದಿಷ್ಟ ಅಲ್ಪ ದೂರದೊಳಗೆ ಇದ್ದಾಗ ಮಾತ್ರ ನ್ಯೂಕ್ಲಿಯರ್ ಬಲಗಳು ಪ್ರಭಾವಕಾರಿ. ವಿದ್ಯುತ್ ಮತ್ತು ನ್ಯೂಕ್ಲಿಯರ್ ಬಲಗಳ ನಡುವೆ ಕಂಡುಬರುವ ಹೋಲಿಕೆ ಮತ್ತು ವ್ಯತ್ಯಾಸಗಳಿಂದ ನ್ಯೂಕ್ಲಿಯರ್ ಕ್ಷೇತ್ರವೊಂದು ನ್ಯೂಕ್ಲಿಯರ್ ಬಲಗಳಿಗೆ ಕಾರಣವಾಗಿರುತ್ತದೆಂಬ ಅಭಿಪ್ರಾಯವಿದೆ. ಈ ತೆರನಾದ ಕ್ಷೇತ್ರವೊಂದಕ್ಕೆ ವಿದ್ಯುತ್ಕಾಂತ ಕ್ಷೇತ್ರಕ್ಕಿರುವಂತೆ ತನ್ನದೇ ಆದ ಸ್ವಾತಂತ್ರ್ಯಾಂಕಗಳು (ಡಿಗ್ರೀಸ್ ಆಫ್ ಫ್ರೀಡಂ) ಇರುವುದರಿಂದ ಅದು ಸ್ವತಂತ್ರವಾದ ಅಸ್ತಿತ್ವವನ್ನು ಪಡೆದಿರಲು ಸಾಧ್ಯ. ಈ ತೆರನಾದ ಕ್ಷೇತ್ರ ಕ್ವಾಂಟೀಕೃತವಾದಾಗ ಅದು ಕಣಗಳ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಪ್ರತಿಯೊಂದು ನ್ಯೂಕ್ಲಿಯರ್ ಕಣವನ್ನು ಆವರಿಸಿರುವ ಬಲಕ್ಷೇತ್ರದ ವಿವರಣೆಯಿಂದ ಕ್ಷೇತ್ರಕ್ಕೆ ವಿಸರ್ಜಿತವಾದ ಮತ್ತು ಅದರಿಂದ ಹೀರಲ್ಪಟ್ಟ ಕ್ವಾಂಟಾಗಳಲ್ಲಿ ನ್ಯೂಕ್ಲಿಯರ್ ಕಣಗಳ ದ್ರವ್ಯರಾಶಿಗಳನ್ನು ಅಂದಾಜು ಮಾಡಬಹುದು. ಹೀಗೆ ϕ ಕ್ಷೇತ್ರದೊಡನೆ ರೇಖೀಯವಾಗಿ ಸೂಕ್ತವಾದ ನ್ಯೂಕ್ಲಿಯರ್ ನಿರ್ದೇಶಕವನ್ನು ಹಾಗೆಯೇ ವಿಸರ್ಜಿತ ಮತ್ತು ಹೀರಿಕೆ ಪರಿಕರ್ಮಿಗಳಾದ ϕ ± ಗಳೊಡನೆ ಕೂಡಿಸಲು ಸಾಧ್ಯ. ಈ ತೆರನಾದ ಕ್ವಾಂಟಂನ ದ್ರವ್ಯರಾಶಿ *m* ಆಗಿದ್ದರೆ ಈ ಕ್ರಿಯೆಗೆ ವೆಚ್ಚವಾಗುವ ಶಕ್ತಿ ~$mc^2$ ಆಗಿರುತ್ತದೆ. ಅನಿಶ್ಚಿತತತ್ತ್ವದ ಪ್ರಕಾರ (ಅನ್‌ಸರ್ಟಂಟಿ ಪ್ರಿನ್ಸಿಪಲ್) ಯಾವುದೇ ವ್ಯವಸ್ಥೆಯ ಶಕ್ತಿಯನ್ನು ΔE ನಿಷ್ಕೃಷ್ಟತೆ ವರೆಗೆ ಮಾಡಬೇಕಾದರೆ ℏ/ΔE ಗಿಂತ ಹೆಚ್ಚಾದ ಕಾಲ Δt ವರೆಗೆ ಮಾಡಬೇಕಾಗುತ್ತದೆ. ಹೀಗೆ $mc^2$ ಪರಿಮಾಣವಿರುವ ನ್ಯೂಕ್ಲಿಯಾನಿನಲ್ಲಿ ಶಕ್ತಿ ಏರಿಳಿತ (ಎನರ್ಜಿ ಫ್ಲಕ್ಚುಯೇಷನ್) ಶಕ್ತಿ ನಿತ್ಯತ್ವ ನಿಯಮವನ್ನು $\Delta t<\hbar/mc^2$ ಕಾಲದ ಒಳಗೆ ಪಾಲಿಸಬೇಕಾಗಿಲ್ಲ. ಈ ಅವಧಿಯಲ್ಲಿ ಕ್ಷೇತ್ರದ ಕ್ವಾಂಟಂ ಸಂಚರಿಸಬಲ್ಲ ದೂರ $c\Delta t<\hbar/mc$ಆಗಿರುತ್ತದೆ. ಆದ್ದರಿಂದ ಈ ದೂರವನ್ನು ಕ್ವಾಂಟಂ ಸಂಚರಿಸುವ ಮುನ್ನ ಮತ್ತೊಂದು ನ್ಯೂಕ್ಲಿಯಾನಿನಿಂದ ಅದು ಹೀರಲ್ಪಡಬೇಕು. ಹೀಗೆ ನ್ಯೂಕ್ಲಿಯಾನನ್ನು ಸುತ್ತುಗಟ್ಟಿರುವ ಬಲಕ್ಷೇತ್ರದ ವ್ಯಾಪ್ತಿಯ ಅಳತೆ $\hbar/mc$ ಆಗಿರುತ್ತದೆ. ಇದಕ್ಕೆ ಕಾಂಪ್ಟನ್ ಅಲೆಯುದ್ದ ಎಂದು ಹೆಸರು. ಗೊತ್ತಿರುವ ನ್ಯೂಕ್ಲಿಯರ್ ಬಲದ ದೂರದೊಡನೆ ಈ ದೂರವನ್ನು ಸಮೀಕರಿಸಿ ಕ್ಷೇತ್ರದ ಕ್ವಾಂಟಂನ ದ್ರವ್ಯರಾಶಿ ಎಷ್ಟೆಂದು ಅಂದಾಜು ಮಾಡಿ ತಿಳಿಯಬಹುದು. ಈ ರೀತಿಯಲ್ಲಿ ಎಚ್.ಯುಕಾವಾ ಎಂಬಾತ ಮೇಸಾನ್ ಕಣದ ಇರುವಿಕೆಯ ಬಗ್ಗೆ ಬೇರೆಯವರ ಪ್ರಯೋಗಗಳ ಮೂಲಕ ಆ ಕಣವನ್ನು ಆವಿಷ್ಕರಿಸುವ ಮೊದಲೇ, ಮುನ್ನುಡಿದಿದ್ದ. ಈ ಕಣ ನ್ಯೂಕ್ಲಿಯರ್ ಬಲಕ್ಷೇತ್ರದ ಕ್ವಾಂಟಂ ಆಗಿರುತ್ತದೆ. ಇದರ ದ್ರವ್ಯರಾಶಿ ಎಲೆಕ್ಟ್ರಾನಿನ ದ್ರವ್ಯರಾಶಿ ($m_e=9.107 \times 10^{-28}$ ಗ್ರಾಂ) ಮತ್ತು ನ್ಯೂಕ್ಲಿಯಾನಿನ ದ್ರವ್ಯರಾಶಿಯ ($1840m_e$ ) ನಡುವೆ ಇದ್ದು ಸುಮಾರು 270 $m_e$ ಆಗಿರುತ್ತದೆ. ಹೀಗೆ ಸಿದ್ಧಾಂತದಿಂದ ಕಂಡುಬಂದ ಯುಕಾವಾ ಮೇಸಾನನ್ನು ಪ್ರಯೋಗಗಳು π- ಮೇಸಾನ್ ಎಂದು ತೋರಿಸಿಕೊಟ್ಟಿವೆ. ಇದರಲ್ಲಿ ಮೂರು ವಿಧ. ಎರಡರ ವಿದ್ಯುದಾವೇಶಗಳು ಪರಿಮಾಣಗಳಲ್ಲಿ ಸಮವಾಗಿಯೂ ಆದರೆ ಚಿಹ್ನೆಗಳಲ್ಲಿ ವಿರುದ್ಧವಾಗಿಯೂ ಇರುತ್ತವೆ. ಮೂರನೆಯದಕ್ಕೆ ವಿದ್ಯುದಾವೇಶವಿರುವುದಿಲ್ಲ. ಹಾಗೆಯೇ π–ಮೇಸಾನುಗಳು ಅಲ್ಪಾಯುಷಿಗಳು. $\pi\pm$ ಮೇಸಾನುಗಳು $10^{-8}$ ಸೆಕೆಂಡಿಗಿಂತ ಕಡಿಮೆ ಕಾಲದಲ್ಲಿ ಇತರ ಕ್ಷೇತ್ರಗಳ ಕ್ವಾಂಟಗಳಾಗಿ ಪರಿವರ್ತನೆ ಆಗುತ್ತವೆ ಎಂದು ಪ್ರಯೋಗಗಳಿಂದ ಕಂಡುಬಂದಿದೆ. ಹಾಗೆಯೇ ತಟಸ್ಥ (ನ್ಯೂಟ್ರಲ್) ಮೆಸಾನ್ ($\pi^o$) $10^{-15}$ ಸೆಕೆಂಡಿಗಿಂತ ಕಡಿಮೆ ಕಾಲದಲ್ಲಿ ವಿದ್ಯುತ್ಕಾಂತಕ್ಷೇತ್ರದ ಕ್ವಾಂಟಗಳಾಗಿ ಪರಿವರ್ತನೆ ಆಗುತ್ತದೆ. ಆದ್ದರಿಂದ ಕ್ಷೇತ್ರ ಸ್ವತಂತ್ರ ಅಸ್ತಿತ್ವವನ್ನು ಪಡೆದಿರುವ ಕಾಲ ಅತ್ಯಲ್ಪವಾದ್ದರಿಂದ ಕ್ಷೇತ್ರದ ಇರುವಿಕೆಯನ್ನು ಪ್ರಯೋಗಗಳಿಂದ ನೇರವಾಗಿ ತಿಳಿಯಲು ಸಾಧ್ಯವಾಗಿಲ್ಲ. ಅಲ್ಲದೆ ಕ್ಷೇತ್ರಗಳ ಕಣಗಳಿಗೆ ಭ್ರಮಣೆಗಳಿವೆ ಎಂದು ಪ್ರಯೋಗಗಳು ತೋರಿಸಿಕೊಟ್ಟಿರುವುದರಿಂದ ಅವುಗಳಿಗೆ ಸಲ್ಲುವ ಸಂಖ್ಯಾಕಲನವಿಜ್ಞಾನವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಮೂಲ ಕಣಗಳ ಭ್ರಮಣೆ ಮತ್ತು ಸಂಖ್ಯಾಕಲನವಿಜ್ಞಾನಗಳ ನಡುವೆ ಏನು ಸಂಬಂಧ ಇರಬೇಕೆಂಬುದನ್ನು ಕ್ವಾಂಟಂ ಕ್ಷೇತ್ರಸಿದ್ಧಾಂತ ಮತ್ತು ಸಾಪೇಕ್ಷತಾ ಸಿದ್ಧಾಂತಗಳಿಂದ ತಿಳಿಯಬಹುದು. ಈ ಭವಿಷ್ಯ ನುಡಿ ಈ ಸಿದ್ಧಾಂತಗಳು ಸಾಧಿಸಿರುವ ಮಹತ್ತರವಾದ ಪರಿಣಾಮಗಳಲ್ಲಿ ಒಂದಾಗಿರುತ್ತದೆ.

ಪ್ರಾಯೋಗಿಕವಾಗಿ ವಿವಿಧ ರೀತಿಯ ಮೇಸಾನುಗಳನ್ನು ಕಂಡುಹಿಡಿದ ಬಳಿಕ ಅವುಗಳಿಗೆ ಸಲ್ಲುವ ಯುಕ್ತ ಸಿದ್ಧಾಂತಗಳನ್ನು ಸೈದ್ಧಾಂತಿಕ ಭೌತವಿಜ್ಞಾನಿಗಳು ಬೆಳೆಸಿರುತ್ತಾರೆ. ಆದರೆ ನ್ಯೂಕ್ಲಿಯಾನುಗಳ ನಡುವೆ ಕಂಡುಬರುವ ಅನೇಕ ರೀತಿಯ ಅಂತರಕ್ರಿಯೆಗಳನ್ನು ವರ್ಣಿಸಬೇಕಾದ ಸಂದರ್ಭಗಳಲ್ಲಿ ಹೆಚ್ಚಿನ ಅವ್ಯವಸ್ಥೆ ತಲೆದೋರುತ್ತದೆ. ಈ ಪರಿಸ್ಥಿತಿಗಳೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳುವ ಕ್ಷೇತ್ರ ಸಮೀಕರಣಗಳನ್ನು ಸರಿಯಾಗಿ ರೂಪಿಸುವುದಕ್ಕಾಗಲೀ ಸಾಧಿಸುವುದಕ್ಕಾಗಲೀ ಇನ್ನೂ ಸಾಧ್ಯವಾಗಿಲ್ಲ. ನಿಷ್ಕೃಷ್ಟವಾಗಿ ಏರ್ಪಡಿಸಬಲ್ಲ ಸಮೀಕರಣಗಳಿಗೆ ಉತ್ತರವಿರುತ್ತದೆಯೇ ಎಂಬ ಶಂಕೆ ಕೂಡ ಸೈದ್ಧಾಂತಿಕ ವಿಜ್ಞಾನಿಗಳಲ್ಲಿ ಮೂಡಿರುತ್ತದೆ. ಯುಕ್ತವಾದ ಪ್ರಾಚಲಗಳನ್ನು ಉಪಯೋಗಿಸಿ ವಿದ್ಯುತ್ಕಾಂತ ಅಂತರಕ್ರಿಯೆಗಳನ್ನು ವರ್ಣಿಸುವಂತೆ ಶ್ರೇಣಿ ವಿಸ್ತರಣೆಗೆ (ಸೀರೀಸ್ ಎಕ್ಸ್‌ಪಾನ್ಷನ್) ಉಪಯೋಗಿಸಬೇಕಾದ ಪ್ರಾಚಲಗಳೇನು ಎಂಬುದು ಇನ್ನೂ ತಿಳಿದುಬಂದಿಲ್ಲ. ಇಷ್ಟೇ ಅಲ್ಲದೆ ಅಂತರಕ್ರಿಯೆಗಳು ಅತಿ ತೀವ್ರವಾಗಿರುವ ಕಣಗಳು ಅನೇಕ ಉಂಟು; ಮತ್ತು ಯಾವುದೊಂದೂ ಮತ್ತೊಂದಕ್ಕಿಂತ ಮೂಲಭೂತವಾದದ್ದು ಎಂದು ಕಣಗಳನ್ನು ವಿಂಗಡಿಸಲು ಇನ್ನೂ ಸಾಧ್ಯವಾಗಿಲ್ಲ.

ಈ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುವ ಸೈದ್ಧಾಂತಿಕ ಭೌತವಿಜ್ಞಾನಿಗಳು ಸಮೀಕರಣಗಳ ನಿರ್ದಿಷ್ಟ ತಂಡವೊಂದನ್ನು ರೂಪಿ ಸಾಧಿಸುವುದಕ್ಕಿಂತ ಸಾಪೇಕ್ಷಿತ ಕ್ವಾಂಟಂಕ್ಷೇತ್ರ ಸಿದ್ಧಾಂತದ ಸಾಮಾನ್ಯಲಕ್ಷಣಗಳನ್ನು ಕಂಡುಹಿಡಿಯುವುದು ಸುಲಭ ಎನ್ನುವ ಪ್ರಯತ್ನದಲ್ಲಿ ತೊಡಗಿರುತ್ತಾರೆ. ಈ ದಿಶೆಯಲ್ಲಿ ನಡೆಸಿರುವ ಪ್ರಯತ್ನಗಳು ಕೆಳಗಿನ ಕ್ಷೇತ್ರಗಳಲ್ಲಿ ಫಲಕಾರಿಯಾಗಿವೆ:

1. ಸಮಾಂಗತ್ವಗಳ ಕ್ವಾಂಟಂ ಸಿದ್ಧಾಂತ (ಕ್ವಾಂಟಂ ಥಿಯರಿ ಆಫ್ ಸಿಮೆಟ್ರೀಸ್) ಮತ್ತು ಅದಕ್ಕೂ ಶಕ್ತಿಸಂವೇಗ ಮತ್ತು ಕೋನಸಂವೇಗ ನಿತ್ಯತ್ವ ನಿಯಮಗಳಿಗೂ ಇರುವ ಸಂಬಂಧಗಳನ್ನು ಕಂಡುಹಿಡಿಯಬಹುದು.

2. ಸಂಘಟನ ಪ್ರಕ್ರಿಯೆಗಳನ್ನು (ಕೊಲಿಷನ್ ಪ್ರೋಸೆಸಸ್) ವಿವರಿಸಲು ಸಾಧ್ಯವಾಗುವ ಉತ್ಪನ್ನಗಳ ವಿಶ್ಲೇಷಿತ ಗುಣಗಳು (ಪ್ರಾಪರ್ಟೀಸ್ ಆಫ್ ಅನಾಲಿಸಿಟಿ ಆಫ್ ಫಂಕ್ಷನ್ಸ್) ಏನಿರಬೇಕೆಂದು ತಿಳಿಯುವುದು.

3.ಕ್ವಾಂಟಂ ವಿದ್ಯುತ್ ಗತಿವಿಜ್ಞಾನಕ್ಕೆ ಆರ್.ಪಿ.ಫೈನ್‌ಮನ್ ಬೆಳೆಸಿರುವ ವಿಧಾನವನ್ನು ಸಾಪೇಕ್ಷಿಕ ಕಣಗಳ(ರಿಲೆಟಿವಿಸ್ಟಿಕ್ ಪಾರ್ಟಿಕಲ್ಸ್) ನಡುವೆ ಉಂಟಾಗುವ ಅಂತರಕ್ರಿಯೆಗಳನ್ನು ವರ್ಣಿಸುವುದು. ಹೀಗೆ ಕ್ವಾಂಟಂ ಕ್ಷೇತ್ರಸಿದ್ಧಾಂತವನ್ನು ಸಾರ್ವತ್ರೀಕರಿಸುವುದು.

ಕ್ವಾಂಟಂ ಕ್ಷೇತ್ರ ಸಿದ್ಧಾಂತದಲ್ಲಿನ ಸಾರ್ವತ್ರಿಕ ಸಮಸ್ಯೆಯನ್ನು ಈ ರೀತಿ ವಿವರಿಸಬಹುದು : ಪ್ರಯೋಗಗಳಿಂದ ಕಂಡುಬಂದ ವಿವಿಧ ಮೂಲಕಣಗಳನ್ನು ವಿವರಿಸಲು ಕ್ಷೇತ್ರಗಳ ಗಣಗಳನ್ನು ಆಚರಣೆಗೆ ತರಬೇಕು; ಮತ್ತು ಅವುಗಳ ಯುಗ್ಮನವನ್ನು (ಕಪ್ಲಿಂಗ್) ಕಣಗಳ ನಡುವೆ ಪ್ರಾಯೋಗಿಕವಾಗಿ ಕಂಡುಬರುವ ಅಂತರಕ್ರಿಯೆಗಳಿಂದ ನಿಷ್ಪತ್ತಿಸಿ ತಿಳಿಯಬೇಕು. ಈ ದಿಶೆಯಲ್ಲಿ ಸೈದ್ಧಾಂತಿಕ ವಿಜ್ಞಾನಿಗಳು ಪ್ರಯತ್ನಗಳನ್ನು ಸತತವಾಗಿ ಮಾಡುತ್ತಿದ್ದಾರೆ. ಆದರೆ ಈ ಸಮಸ್ಯೆ ಬಹಳ ಕಷ್ಟಸಾಧ್ಯವಾದ್ದರಿಂದ ಪ್ರಕೃತಿಯಲ್ಲಿ ಕಂಡುಬರುವ ಎಲ್ಲ ಕ್ಷೇತ್ರಗಳನ್ನೂ ಏಕೈಕವಾಗಿ ಸಿದ್ಧಾಂತರೀತ್ಯಾ ವಿವರಿಸಲು ಇದುವರೆಗೂ ಸಾಧ್ಯವಾಗಿಲ್ಲ.

(ಪಿ.ಕೆ.ವಿ.)

**ಕ್ವಾಂಟಂ ಬಲವಿಜ್ಞಾನ :** ದ್ರವ್ಯ, ವಿದ್ಯುತ್ಕಾಂತ ವಿಸರಣೆ ಮತ್ತು ಅವುಗಳ ನಡುವೆ ಆಗುವ ಅಂತರಕ್ರಿಯೆಗಳನ್ನು ವರ್ಣಿಸುವ ಆಧುನಿಕ ಸಿದ್ಧಾಂತ (ಕ್ವಾಂಟಂ ಮೆಕಾನಿಕ್ಸ್). ಹಾಗೆಯೇ, ಇದನ್ನು ಅನ್ವಯಿಸಬಹುದಾದ ಇತರ ವಿದ್ಯಮಾನಗಳ ಬಲವಿಜ್ಞಾನವನ್ನೂ ಇದೇ ಹೆಸರಿನಿಂದ ಕರೆಯಲಾಗುತ್ತದೆ. ಕ್ವಾಂಟಂ ಬಲವಿಜ್ಞಾನವನ್ನು ಅಲೆ ಬಲವಿಜ್ಞಾನ (ವೇವ್ ಮೆಕಾನಿಕ್ಸ್) ಎಂದೂ ಕರೆಯುವುದುಂಟು. ಅಭಿಜಾತ ಬಲವಿಜ್ಞಾನ (ಕ್ಲಾಸಿಕಲ್ ಮೆಕಾನಿಕ್ಸ್) ಮತ್ತು ಮ್ಯಾಕ್ಸ್ ವೆಲ್ಲನ ವಿದ್ಯುತ್ಕಾಂತ ಸಿದ್ಧಾಂತಗಳನ್ನು (ಎಲೆಕ್ಟ್ರೋಮ್ಯಾಗ್ನೆಟಿಕ್ ಥಿಯೊರೀಸ್) ಇದು ಸಾರ್ವತ್ರೀಕರಿಸುತ್ತದೆ; ಅಲ್ಲದೆ ಪರಮಾಣ್ವಕ ಮತ್ತು ಅಣ್ವಕ ವಿದ್ಯಮಾನಗಳನ್ನು ನಿಷ್ಕೃಷ್ಟವಾಗಿ ವರ್ಣಿಸಲು ಅವು ಸಾಲದು ಎಂದು ತೋರಿಸುತ್ತದೆ. ಕ್ವಾಂಟಂ ಬಲವಿಜ್ಞಾನ ಮತ್ತು ಅಭಿಜಾತ ಭೌತಸಿದ್ಧಾಂತಗಳ ನಡುವೆ ಪ್ರಾಯೋಗಿಕವಾಗಿ ಕಂಡುಬರುವ ವ್ಯತ್ಯಾಸಗಳನ್ನು ತಿಳಿಯಲು ಕ್ವಾಂಟಂ ಬಲವಿಜ್ಞಾನ ಅತ್ಯಾವಶ್ಯಕ. ಸ್ಥೂಲಕಾಯದ ಅನೇಕ ಗುಣಗಳ ನಡುವೆ, ಉದಾಹರಣೆಗೆ ಅದರ ಗ್ರಾಹ್ಯೋಷ್ಣ (ಸ್ಪೆಸಿಫಿಕ್ ಹೀಟ್) ಮತ್ತು ಉಷ್ಣತೆಗಳ ನಡುವೆ, ಇರುವ ಸಂಬಂಧವನ್ನು ಪರಿಮಾಣಾತ್ಮಕವಾಗಿ ವರ್ಣಿಸಲು ಕ್ವಾಂಟಂ ಬಲವಿಜ್ಞಾನ ಅಗತ್ಯ.

ಕ್ವಾಂಟಂ ಬಲವಿಜ್ಞಾನದ ಕ್ರಮೀಕೃತತ್ವ (ಫಾರ್ಮಲಿಸಂ) ಅದನ್ನು ಬಳಸುವ ಸಂದರ್ಭಗಳಲ್ಲೆಲ್ಲ ಒಂದೇ ಸಮವಾಗಿ ಇರುವುದಿಲ್ಲ. ಪರಿಕಲ್ಪನೆಗಳ ತೊಂದರೆಗಳು, ಗಣಿತೀಯ ಜಟಿಲತೆ ಮತ್ತು ಮೂಲಭೂತ ತಿದ್ದುಪಡಿಗಳ ಪ್ರಾಯಿಕತೆ (ಲೈಕ್‌ಲಿಹುಡ್) ಇವುಗಳ ದೃಷ್ಟಿಯಿಂದ ಕ್ವಾಂಟಂ ಬಲವಿಜ್ಞಾನವನ್ನು ಈ ಮುಂದಿನಂತೆ ವಿಂಗಡಿಸಬಹುದು:

1. ಕಣಗಳು ಜನಿಸುವುದಾಗಲೀ ನಾಶವಾಗುವುದಾಗಲೀ ಆಗದ ಮತ್ತು ಬೆಳಕಿನ ªÉÃUÀPÉÌ ÉÃÀ ¹zÀÀvÉ($c \simeq 3 \times 10^{10}$ ಸೆಂ.ಮೀ/ಸೆ.) ನಿಧಾನವಾಗಿ ಚಲಿಸುವ ಕಣಗಳಿಗೆ ಅನ್ವಯಿಸುವ ಸಿದ್ಧಾಂತ. ಇದನ್ನು ಅಸಾಪೇಕ್ಷಿಕ ಕ್ವಾಂಟಂ ಬಲವಿಜ್ಞಾನ ಎಂದು (ನಾನ್ ರಿಲೆಟಿವಿಸ್ಟಿಕ್ ಕ್ವಾಂಟಂ ಮೆಕಾನಿಕ್ಸ್) ಕರೆಯುತ್ತೇವೆ. ಇಲ್ಲಿ ಕಣವನ್ನು ದ್ರವ್ಯರಾಶಿ ಇರುವ, ತನ್ನ ಆಂತರಿಕ ರಚನೆ ಬದಲಾಗದ ಅಥವಾ ವ್ಯವಸ್ಥೆಯ ವಿವರಣೆಗೆ ಈ ರಚನೆಯ ಗೊಡವೆ ಅನಗತ್ಯವಾದ, ಒಂದು ಅಸ್ತಿತ್ವ ಎಂದು ನಿರೂಪಿಸುತ್ತೇವೆ.

2. ಬಳಕೆಯಲ್ಲಿ, ಒಂದೇ ಒಂದು ಸಾಪೇಕ್ಷಿಕ ಕಣಕ್ಕೆ ಅನ್ವಯಿಸುವ, ಸಾಪೇಕ್ಷಿಕ ಕ್ವಾಂಟಂ ಬಲವಿಜ್ಞಾನದಲ್ಲಿ ಕಣದ ವಿರಾಮ ದ್ರವ್ಯರಾಶಿ (ರೆಸ್ಟ್ ಮಾಸ್) ಸೊನ್ನೆಯಾಗಿರಲು ಸಾಧ್ಯ. ಆದರೆ ಅದರ ಜವ (ಸ್ಪೀಡ್) ಮಾತ್ರ ಬೆಳಕಿನ ವೇಗ $c$ಗೆ ಸಮವಾಗಿರಬೇಕು.

3. ಕಣಗಳ ಜನನ ಮತ್ತು ನಾಶ ಸಂಭವಿಸಬಹುದಾದ ಕ್ವಾಂಟಂ ಕ್ಷೇತ್ರ ಸಿದ್ಧಾಂತ. ಇದರಲ್ಲಿ ಕಣಗಳ ವಿರಾಮ ದ್ರವ್ಯರಾಶಿ ಸೊನ್ನೆಯಾಗಿ ಅಥವಾ ಅಲ್ಲದೇ ಇರಬಹುದು.

ಇಲ್ಲಿ ಮುಖ್ಯವಾಗಿ ಅಸಾಪೇಕ್ಷಿಕ ಕ್ವಾಂಟಂ ಬಲವಿಜ್ಞಾನವನ್ನು ಕುರಿತು ಚರ್ಚಿಸುತ್ತೇವೆ. ಇದು ಪರಮಾಣ್ವಕ ಮತ್ತು ಅಣ್ವಕ ವಿದ್ಯಮಾನಗಳನ್ನೆಲ್ಲ ಚೆನ್ನಾಗಿ ವಿವರಿಸುತ್ತದೆ. ಆದರೆ ಪರಮಾಣುಗಳ ರೋಹಿತದ ಸೂಕ್ಷ್ಮತರ ವಿವರಗಳನ್ನು ಇದರಿಂದ ಒದಗಿಸಲು ಸಾಧ್ಯವಿಲ್ಲ. ಅಲ್ಪಶಕ್ತಿ (ಲೋ ಎನರ್ಜಿ) ನ್ಯೂಕ್ಲಿಯರ್ ಭೌತವಿಜ್ಞಾನದ ಪ್ರಾಂತದಲ್ಲೂ ಇದು ಚೆನ್ನಾಗಿ ಪ್ರತಿಸ್ಥಾಪಿಸಲ್ಪಟ್ಟಿದೆ. ಅಲ್ಪಶಕ್ತಿ ನ್ಯೂಕ್ಲಿಯರ್ ಭೌತವಿಜ್ಞಾನ ಎಂದರೆ ಸುಮಾರು $10^8 eV$ ಯಷ್ಟು ಅಥವಾ ಅದಕ್ಕಿಂತ ಕಡಿಮೆಯಾದ ಚಲನಶಕ್ತಿ ಇರುವ ನ್ಯೂಕ್ಲಿಯರ್ ಕಣಗಳ ವಿದ್ಯಮಾನಗಳು ಎಂದರ್ಥ. ($1\ eV = 1$ ಎಲೆಕ್ಟ್ರಾನ್ ವೋಲ್ಟ್ $= 1.6 \times 10^{-12}$ ಅರ್ಗ್. 1 ವೋಲ್ಟ್ ವಿಭವವನ್ನು ಅನುಭವಿಸಿದಾಗ ಎಲೆಕ್ಟ್ರಾನ್ ಪಡೆಯುವ ಶಕ್ತಿಗೆ 1 ಎಲೆಕ್ಟ್ರಾನ್ ವೋಲ್ಟ್ ಎಂದು ಹೆಸರು). ಕ್ವಾಂಟಂ ಬಲವಿಜ್ಞಾನದಿಂದ ಪರಮಾಣ್ವಕ ಮತ್ತು ಅಣ್ವಕ ವ್ಯವಸ್ಥೆಗಳಿಗೆ ನಿಗಮಿತವಾಗುವ ಅನೇಕ ಮುನ್ನುಡಿಗಳು (ಪ್ರೆಡಿಕ್ಷನ್ಸ್) ಪರಿಮಾಣಾತ್ಮಕವಾಗಿ ಕರಾರುವಾಕ್ಕಾಗಿ ಇರುತ್ತವೆ. ಆದರೆ ನ್ಯೂಕ್ಲಿಯರ್ ಕ್ರಿಯೆಗಳಲ್ಲಿ ಕಂಡುಬಂದ ಪ್ರಾಯೋಗಿಕ ಫಲಿತಾಂಶಗಳಲ್ಲಿ ಈ ಹೊಂದಾಣಿಕೆ ಕಂಡುಬರುವುದಿಲ್ಲ. ಏಕೆಂದರೆ ನ್ಯೂಕ್ಲಿಯರ್ ಬಲಗಳ ವಿವರಗಳನ್ನೆಲ್ಲ ವಿಜ್ಞಾನಿಗಳು ಇನ್ನೂ ನಿಷ್ಕೃಷ್ಟವಾಗಿ ತಿಳಿದಿಲ್ಲ.

ಅಸಾಪೇಕ್ಷಿತ ಕ್ವಾಂಟಂ ಬಲವಿಜ್ಞಾನದ ಕ್ರಮೀಕೃತ ಗಣಿತೀಯ ರಚನೆಗೆ (ಫಾರ್ಮಲ್ ಮ್ಯಾಥ್‌ಮ್ಯಾಟಿಕಲ್ ಸ್ಟ್ರಕ್ಚರ್) ಅಸಾಪೇಕ್ಷಿತ ಕ್ವಾಂಟಂ ಸಿದ್ಧಾಂತವನ್ನು ನೋಡಬಹುದು. ಈ ಮುಂದಿನ ಉಪವಿಭಾಗಗಳಲ್ಲಿ ಮಾಡಿರುವ ಅನೇಕ ಹೇಳಿಕೆಗಳಿಗೆ ಆ ಪ್ರಕರಣದಲ್ಲಿ ಸಮರ್ಥನೆ ದೊರೆಯುತ್ತದೆ. ಅಲ್ಲಿ (ಅಭಿಜಾತ ಭೌತವಿಜ್ಞಾನದ ದೃಷ್ಟಿಯಿಂದ) ಅಸಾಪೇಕ್ಷಿಕ ಕ್ವಾಂಟಂ ಬಲವಿಜ್ಞಾನದ ಲಕ್ಷಣಗಳನ್ನು ವಿವರಿಸಲಾಗಿದೆ. ಈ ಲಕ್ಷಣಗಳಲ್ಲಿ ಕೆಲವನ್ನು ಜಟಿಲತರವಾದ ಸಾಪೇಕ್ಷಿತ ಕ್ವಾಂಟಂ ಬಲವಿಜ್ಞಾನ ಮತ್ತು ಕ್ವಾಂಟಂ ಕ್ಷೇತ್ರ ಸಿದ್ಧಾಂತಗಳಲ್ಲಿ ಹಾಗೆಯೇ ಉಳಿಸಿಕೊಂಡು ಮಿಕ್ಕವನ್ನು ಮಾರ್ಪಡಿಸಿಕೊಳ್ಳಲಾಗಿದೆ.

**ಪ್ಲಾಂಕನ ಸ್ಥಿರಾಂಕ :** ಮಾಕ್ಸ್ ಪ್ಲಾಂಕ್ ಎಂಬಾತ ಭೌತವಿಜ್ಞಾನಕ್ಕೆ ಮೊಟ್ಟ ಮೊದಲು 1901ರಲ್ಲಿ ಪರಿಚಯ ಮಾಡಿಕೊಟ್ಟ $6.61 \times 10^{-27}$ಅರ್ಗ್–ಸೆಕೆಂಡ್ ಪರಿಮಾಣಕ ಕ್ವಾಂಟಂ ಬಲವಿಜ್ಞಾನವನ್ನು ಕ್ರಮೀಕರಿಸುವಾಗ ಬಳಸುವ ಮೂಲಭೂತ ಘಟಕಾಂಸ. ಇದನ್ನು ಸಾಮಾನ್ಯವಾಗಿ $h$ ನಿಂದ ಸೂಚಿಸುತ್ತಾರೆ. ಶ್ರೋಡಿಂಗರ್ ಸಮೀಕರಣ, ಹೈಸನ್‌ಬರ್ಗನ ಅನಿಶ್ಚಿತತಾತತ್ತ್ವ (ಅನ್‌ಸರ್ಟಂಟಿ ಪ್ರಿನ್ಸಿಪಲ್) ಇವೇ ಮೊದಲಾದ ಕ್ವಾಂಟಂ ಬಲವಿಜ್ಞಾನದ ಮೂಲಭೂತ ಸಂಬಂಧಗಳು ಮತ್ತು ಪ್ರಯೋಗಗಳು ಚೆನ್ನಾಗಿ ಸಮರ್ಥಿಸುವ ಪರಿಣಾಮಗಳು ಪ್ಲಾಂಕನ ಸ್ಥಿರಾಂಕವನ್ನು (ಪ್ಲಾಂಕ್ಸ್ ಕಾನ್‌ಸ್ಟಂಟ್) ಒಳಗೊಂಡಿರುತ್ತವೆ. ಪ್ಲಾಂಕನ ಸ್ಥಿರಾಂಕ ಅಭಿಜಾತ ಸಿದ್ಧಾಂತಗಳಲ್ಲಿ ಯಾವ ಪಾತ್ರವನ್ನೂ ವಹಿಸುವುದಿಲ್ಲ.

**ಅನಿಶ್ಚಿತತಾ ತತ್ತ್ವ :** ಅಭಿಜಾತ ಭೌತವಿಜ್ಞಾನದಲ್ಲಿ ಯಾವುದಾದರೊಂದು ವ್ಯವಸ್ಥೆಯನ್ನು ಲಕ್ಷಿಸುವ ವೀಕ್ಷಿತಾಂಶಗಳನ್ನು (ಅಬ್ಸರ್ವೇಬಲ್ಸ್) ಏಕಕಾಲಿಕವಾಗಿ ಯಾವ ದೋಷವೂ ಇಲ್ಲದೆ ಅಳೆಯಲು ತತ್ತ್ವಶಃ ಸಾಧ್ಯ ಎಂದು ಭಾವಿಸುತ್ತೇವೆ. ಉದಾಹರಣೆಗೆ ಚಲಿಸುತ್ತಿರುವ ಒಂದು ಕಣದ ಪ್ರಾರಂಭ ಸ್ಥಾನ ಮತ್ತು ವೇಗವನ್ನು ಏಕಕಾಲಿಕವಾಗಿ ನಿರ್ಧರಿಸಬಹುದು. ಅನಂತರ ಯಾವುದೇ ಒಂದು ಬಲಕ್ಷೇತ್ರದಲ್ಲಿ ಅದು ರಚಿಸುವ ಪಥ ಏನೆಂಬುದನ್ನು ನ್ಯೂಟನ್ನನ ನಿಯಮಗಳಿಂದ ನಿರ್ಧರಿಸಬಹುದು. ಹೈಸನ್‌ಬರ್ಗನ ಪ್ರಕಾರ ಯಾವುದೇ ಒಂದು ವೀಕ್ಷಿತಾಂಶದ ಕರಾರುವಾಕ್ಕಾದ ಅಳತೆ ಅದೇ ಕಾಲದಲ್ಲಿ ಮಾಡಬೇಕಾದ ಇತರ ವೀಕ್ಷಿತಾಂಶಗಳ ಮೌಲ್ಯಗಳಲ್ಲಿ ಅನಿಶ್ಚಿತತೆಗಳನ್ನು ಉಂಟು ಮಾಡುತ್ತದೆ (1927). ಉದಾಹರಣೆಗೆ ಯಾವುದಾದರೊಂದು ಕ್ಷಣದಲ್ಲಿ ಕಣದ $x$– ನಿರ್ದೇಶಕದ ಖಚಿತವಾದ ಅಳತೆಯಲ್ಲಿ $\Delta x$ ನಷ್ಟು ಅನಿಶ್ಚಿತತೆ (ಅಥವಾ ದೋಷ) ಉಂಟಾದರೆ ಅದರ ಸಂವೇಗದ $x$– ಘಟಕದ ಅಳತೆಯಲ್ಲಿ $\Delta px$ ನಷ್ಟು ದೋಷ ಉಂಟಾಗುತ್ತದೆ; ಮತ್ತು ಈ ಎರಡು ದೋಷಗಳ ಗುಣಲಬ್ಧ $h/2\pi$ ಗಿಂತ ಹೆಚ್ಚಾಗಿ ಇರಬೇಕೇ ವಿನಾ ಎಂದಿಗೂ ಕಡಿಮೆ ಇರಲು ಸಾಧ್ಯವಿಲ್ಲ. ಅಂದರೆ

$$\Delta x \Delta px > \frac{h}{2\pi} \qquad \ldots(1)$$

ಮತ್ತೊಂದು ಸಂದರ್ಭ ಯೋಚಿಸಿದರೆ ಸ್ಥಾನದ $x$– ಘಟಕ ಮತ್ತು ಸಂವೇಗದ $y$– ಘಟಕಗಳನ್ನು ಏಕಕಾಲಿಕವಾಗಿ ನಿರ್ಧರಿಸುವಾಗ ಅಳತೆಗಳಲ್ಲಿ ತತ್ತ್ವಶಃ ಯಾವದೋಷವೂ ಉಂಟಾಗುವುದಿಲ್ಲ. ಅಂದರೆ $\Delta x \Delta py$ ಗುಣಲಬ್ಧ ಸೊನ್ನೆಗೆ ಸಮವಾಗಿರಲು ಸಾಧ್ಯ. ಹೀಗೆಯೇ ಒಂದೇ ಒಂದು ಕಣಕ್ಕೆ ಸಲ್ಲುವ ಅನಿಶ್ಚಿತತಾ ಅಸಮತೆಗಳನ್ನು

$$\Delta\phi \Delta lz \geq \frac{h}{2\pi} \quad \ldots (2)$$

ಮತ್ತು

$$\Delta x \Delta E \geq -\frac{h}{2\pi m} px \quad \ldots (3)$$

ಎಂದು ವ್ಯಕ್ತಪಡಿಸಬಹುದು. ಸಂಬಂಧ (2)ರಲ್ಲಿ ಕಣದ ಸ್ಥಾನವನ್ನು $z$–ಅಕ್ಷದ ನೇರದಲ್ಲಿ ಧ್ರುವಾಕ್ಷ ಇದೆ ಎಂದು ಭಾವಿಸಿ ಗೋಳೀಯ ನಿರ್ದೇಶಕಗಳಲ್ಲಿ ಸೂಚಿಸಲಾಗಿದೆ; ಹಾಗೆಯೇ $\Delta\phi$ ಮತ್ತು $\Delta l_Z$ ಗಳು ಅನುಕ್ರಮವಾಗಿ ಕ್ಷಿತಿಜಾಂಶಕೋನ (ಅಜಿಮತಲ್ ಆಂಗಲ್) ಮತ್ತು ಕಕ್ಷಕ ಕೋನಸಂವೇಗದ (ಆರ್ಬಿಟಲ್ ಆಂಗ್ಯುಲರ್ ಮೊಮೆಂಟಂ) $z$ ಘಟಕದಲ್ಲಿನ ಅನಿಶ್ಚಿತತೆಗಳಾಗಿರುತ್ತವೆ. ಸಂಬಂಧ (3)ರಲ್ಲಿ $\Delta E$ ಎಂಬುದು ಕಣದ ಶಕ್ತಿಯ ಅಳತೆಯಲ್ಲಿ ಉಂಟಾಗುವ ದೋಷವೂ $m$ ಎಂಬುದು ಅದರ ದ್ರವ್ಯರಾಶಿಯೂ ಆಗಿರುತ್ತವೆ. ಹೀಗೆಯೇ

$$\Delta t \Delta E \geq \frac{h}{2\pi} \quad \ldots (4)$$

ಎಂಬ ಅನಿಶ್ಚಿತತಾಸಂಬಧವನ್ನು ಮತ್ತೊಂದು ರೀತಿಯಲ್ಲಿ ಪಡೆಯಬಹುದು. ಇದರಿಂದ ಯಾವುದಾದರೊಂದು ವ್ಯವಸ್ಥೆ $\Delta t$ ಸೆಕೆಂಡುಗಳಷ್ಟು ಕಾಲ ಮಾತ್ರ ಜೀವಂತವಾಗಿದ್ದರೆ ಅದರ ಶಕ್ತಿಯ ಯಾವುದೇ ಅಳತೆಯಲ್ಲಿ

$$\Delta E \sim \frac{h}{2\pi \Delta t}$$

ಅರ್ಗುಗಳಷ್ಟು ದೋಷ ಉಂಟಾಗುತ್ತದೆ. ಇದನ್ನು ಒಪ್ಪಿಕೊಳ್ಳಬೇಕೇ ವಿನಾ ಯಾವುದೇ ರೀತಿಯಿಂದ ಶಕ್ತಿಯನ್ನು ಇದಕ್ಕಿಂತ ಮಿಗಿಲಾಗಿ ನಿರ್ಧರಿಸಲು ಸಾಧ್ಯವಿಲ್ಲ. $h/2\pi$ ಯ ಸಾಂಖ್ಯಿಕೀಯ ಮೌಲ್ಯ (ನ್ಯೂಮರಿಕಲ್ ವೇಲ್ಯೂ) ಅತಿ ಕಡಿಮೆ; ಹಾಗೆಯೆ $\Delta_{px} = m\,\Delta_{vx}$ ಆಗಿರುವುದರಿಂದ ಈ ಸಂಬಂಧಗಳನ್ನು ಸ್ಥೂಲಕಾಯ ಗಳನ್ನೊಳಗೊಂಡಿರುವ ವ್ಯವಸ್ಥೆಗಳಿಗೆ ಉಪಯೋಗಿಸುವುದು ಅನುಚಿತ. ಏಕೆಂದರೆ ಅಲ್ಲಿ ದ್ರವ್ಯರಾಶಿಗಳನ್ನು ಕೊನೆಯ ಪಕ್ಷ ಗ್ರಾಮುಗಳಲ್ಲಿ ಇರುತ್ತವೆ. ಆದರೆ ಎಲೆಕ್ಟ್ರಾನಿನ ದ್ರವ್ಯರಾಶಿ $9.1 \times 10^{-28}$ ಗ್ರಾಂ ಆಗಿರುವುದರಿಂದ ಅನಿಶ್ಚಿತತಾತತ್ತ್ವವನ್ನು ಈ ಸಂದರ್ಭದಲ್ಲಿ ಲಕ್ಷ್ಯ ಮಾಡದಿರುವುದು ಸರಿಯಲ್ಲ. ಹಾಗೆಯೇ ಸ್ಥೂಲಕಾಯಗಳನ್ನು ಒಳಗೊಂಡ ವ್ಯವಸ್ಥೆಗಳಿಗೆ ಸಂಬಂಧ (4) ಮುಖ್ಯವಲ್ಲ. ಆದರೆ ಪರಮಾಣ್ವಿಕ ವ್ಯವಸ್ಥೆಗಳಲ್ಲಿ ಅವುಗಳ ಒಟ್ಟು ಶಕ್ತಿ $E$ ಕಡಿಮೆಯಾದ್ದರಿಂದ $\Delta E$ ಯನ್ನು ಲಕ್ಷ್ಯ ಮಾಡದೇ ಇರುವುದು ಸರಿಯಲ್ಲ.

**ಅಲೆ–ಕಣ ದ್ವೈತೀಭಾವ :** ಪ್ರೋಟಾನ್ ಮತ್ತು ಎಲೆಕ್ಟ್ರಾನುಗಳ ತೆರನಾದ ದ್ರವ್ಯದ ಮೂಲಭೂತ ಘಟಕಗಳನ್ನು ಅಭಿಜಾತ ಬಲವಿಜ್ಞಾನದ ದ್ರವ್ಯರಾಶಿ ಬಿಂದುಗಳು ಅಥವಾ ಕಣಗಳು ಎಂದು ಗುರ್ತಿಸುವುದು ಸಹಜ. ಆದರೆ ಕ್ವಾಂಟಂ ಬಲವಿಜ್ಞಾನದ ಪ್ರಕಾರ ಈ ಕಣಗಳಿಗೆ, ವಾಸ್ತವವಾಗಿ ದ್ರವ್ಯವನ್ನೊಳಗೊಂಡ ಎಲ್ಲ ವ್ಯವಸ್ಥೆಗಳಿಗೂ, ಅಲೆರೀತಿಯ ಲಕ್ಷಣಗಳಿರುತ್ತವೆ. ವಿಲೋಮವಾಗಿ ಮ್ಯಾಕ್ಸ್ ವೆಲ್ಲನ ವಿದ್ಯುತ್ಕಾಂತ ಸಿದ್ಧಾಂತದಿಂದ ಅಲೆವಿದ್ಯಮಾನವೆಂದು ತಿಳಿದಿರುವ ಬೆಳಕಿನ ಪ್ರಸಾರ (ಪ್ರೋಪಗೇಶನ್) ಶಕ್ತಿ ಮತ್ತು ಸಂವೇಗವನ್ನು ರವಾನಿಸುವ ಫೋಟಾನ್ ಎಂದು ಕರೆಯುವ ಕಣಗಳೊಡನೆ ಕೂಡಿರುತ್ತದೆ. ಅಲೆ ಮತ್ತು ಕಣ ಪರಿಕಲ್ಪನೆಗಳ ಕ್ವಾಂಟಂ ಬಲವೈಜ್ಞಾನಿಕ ಸಂಶ್ಲೇಷಣೆಯನ್ನು ಕೆಳಗೆ ತಿಳಿಸಿರುವ

$$\lambda = \frac{h}{p} \quad \ldots (5)$$

$$f = \frac{E}{h} \quad \ldots (6)$$

ಸಮೀಕರಣಗಳು ಸ್ಪಷ್ಟಪಡಿಸುತ್ತವೆ. ಇವು ಒಂದು ಮುಕ್ತ ಕಣದೊಂದಿಗೆ (ಯಾವ ಬಲಕ್ಕೂ ಒಳಗಾಗದೆ ಚಲಿಸುತ್ತಿರುವ ಕಣದೊಂದಿಗೆ) ಕೂಡಿರುವ ಅಲೆಯುದ್ದ $\lambda$ ಮತ್ತು ಅಲೆ ಆವರ್ತಾಂಕ (ವೇವ್ ಫ್ರೀಕ್ವೆನ್ಸಿ) $f$ ಎಷ್ಟೆಂದು ತಿಳಿಸುತ್ತವೆ. ಅಲ್ಲದೆ, ನಿರ್ವಾತ ಪ್ರದೇಶದಲ್ಲಿ ಅಲೆಯುದ್ದ $\lambda$ ಮತ್ತು ಆವರ್ತಾಂಕ $f$ ಇರುವ ವಿದ್ಯುತ್ಕಾಂತ ಅಲೆಯೊಂದಿಗೆ ಕೂಡಿರುವ ಫೋಟಾನಿನ ಸಂವೇಗ $p$ ಮತ್ತು ಶಕ್ತಿ $E$ ಗಳು ಎಷ್ಟೆಂಬುದನ್ನೂ ಈ ಸಮೀಕರಣಗಳು ತಿಳಿಸುತ್ತವೆ.

ಪ್ರಯೋಗಗಳಲ್ಲಿ ಎಲೆಕ್ಟ್ರಾನ್, ನ್ಯೂಟ್ರಾನ್, ಹೈಡ್ರೋಜನ್ ಮತ್ತು ಹೀಲಿಯಂ ಪರಮಾಣುಗಳನ್ನು ಒಳಗೊಂಡ ಕಿರಣದಂಡಗಳನ್ನು ಉಪಯೋಗಿಸಿ ದ್ರವ್ಯದ ಕಣಗಳಿಗೆ ಅಲೆ ಲಕ್ಷಣಗಳಿವೆ ಎಂಬುದನ್ನು ಸಂದೇಹಾತೀತವಾಗಿಯೂ ನಿರ್ಧರಣೀಯವಾಗಿಯೂ (ಕನ್‌ಕ್ಲೂಸೀವ್‌ಲಿ) ಪ್ರದರ್ಶಿಸಲಾಗಿದೆ. ಈ ತೆರನಾದ ಕಿರಣದಂಡಗಳು ಹರಳುಗಳ ಮೇಲೆ ಬಿದ್ದಾಗ ಅವು ನಮನ ಪ್ರತಿರೂಪಗಳನ್ನು (ಡಿಫ್ರಾಕ್ಷನ್ ಪ್ಯಾಟರ್ನ್ಸ್) ನಿರ್ದಿಷ್ಟ ನೇರಗಳಲ್ಲಿ ಪ್ರತಿಫಲಿಸುತ್ತವೆ. ಹೀಗೆ ಉಂಟಾದ ನಮನ ಪ್ರತಿರೂಪಗಳನ್ನು ಕಿರಣದಂಡಗಳು ಕಣಗಳನ್ನೊಳಗೊಂಡಿವೆ ಎಂದು ಭಾವಿಸಿ ವಿವರಿಸುವುದು ಬಲು ಕಷ್ಟ. ಅವನ್ನು ಅಲೆ ಪರಿಕಲ್ಪನೆಗಳ ಮೇಲೆ ಒಡನೆಯೇ ವಿವರಿಸಬಹುದು. ಅಲೆ ಪರಿಕಲ್ಪನೆಯ ಚಿತ್ರದಲ್ಲಿ ಹರಳಿನ ಜಾಲಕದಲ್ಲಿ ಕ್ರಮವಾಗಿ ಜೋಡಿಸಲ್ಪಟ್ಟಿರುವ ಪರಮಾಣುಗಳು ಅಲೆಗಳನ್ನು ಚದುರಿಸುವುದರಿಂದ ಕಿರಣದಂಡ ನಿರ್ದಿಷ್ಟ ನೇರಗಳಲ್ಲಿ ಮಾತ್ರ ರಚನಾತ್ಮಕವಾಗಿ ವ್ಯತಿಕರಿಸುತ್ತದೆ (ಇಂಟರ್ ಫಿಯರ್ಸ್). ಅಲ್ಲದೆ ಹೀಗೆ ಉಂಟಾದ ನಮನ ಪ್ರತಿರೂಪಗಳಿಂದ ನಿರ್ಧರಿಸಿದ ದ್ರವ್ಯಅಲೆಗಳ (ಮ್ಯಾಟರ್ ವೇವ್ಸ್) ಅಲೆಯುದ್ದ ಮೇಲಿನ (5),(6) ಸಂಬಂಧಗಳಿಂದ ಕಂಡುಹಿಡಿದ ಮೌಲ್ಯಗಳೊಡನೆ ಸರಿಹೊಂದುತ್ತದೆ. ಇದನ್ನು ಮೊಟ್ಟಮೊದಲಿಗೆ ಪ್ರಾಯೋಗಿಕವಾಗಿ ಸಿ.ಜೆ.ಡೇವಿಸನ್ ಮತ್ತು ಎಲ್. ಎಚ್.ಗರ್ಮರ್ ಎಂಬ ವಿಜ್ಞಾನಿಗಳು ಪ್ರದರ್ಶಿಸಿದರು (1927).

ದ್ಯುತಿವಿದ್ಯುತ್ ಪರಿಣಾಮ (ಫೋಟೋ ಎಲೆಕ್ಟ್ರಿಕ್ ಎಫೆಕ್ಟ್) ಮತ್ತು ಕಾಂಪ್ಟನ್ ಪರಿಣಾಮ; ದ್ಯುತಿ ವಿದ್ಯುತ್ ಪರಿಣಾಮದಲ್ಲಿ ಬೆಳಕಿನ ಅಲೆಗಳಿಗೆ ಕಣ ಲಕ್ಷಣಗಳಿವೆ ಎಂಬುದು ಎದ್ದು ಕಾಣುತ್ತದೆ. ಆವರ್ತಾಂಕ $f$ ಇರುವ ಬೆಳಕು ಯಾವುದಾದರೊಂದು ಮೇಲ್ಮೈ ಮೇಲಿರುವ ಎಲೆಕ್ಟ್ರಾನುಗಳ ವಿಸರ್ಜನೆಗೆ ಕಾರಣವಾದರೆ ಎಲೆಕ್ಟ್ರಾನುಗಳೆಲ್ಲ ಬಹುಮಟ್ಟಿಗೆ ಒಂದೇ ಗರಿಷ್ಠ ಚಲನಶಕ್ತಿ ಉಳ್ಳವಾಗಿರುತ್ತವೆ. ಏಕಮಾನ ಕಾಲದಲ್ಲಿ, ಉದಾಹರಣೆಗೆ ಒಂದು ಸೆಕೆಂಡಿನಲ್ಲಿ, ವಿಸರ್ಜಿಸಲ್ಪಟ್ಟ ಎಲೆಕ್ಟ್ರಾನುಗಳ ಸಂಖ್ಯೆ ಬೆಳಕಿನ ತೀಕ್ಷ್ಣತೆಗೆ ಸರಳಾನುಪಾತದಲ್ಲಿರುತ್ತದೆ $f$ ಬದಲಾದಂತೆ ಎಲೆಕ್ಟ್ರಾನ್ ಚಲನಶಕ್ತಿಯ ಗರಿಷ್ಠ ಮೌಲ್ಯ $f$ ನೊಡನೆ ರೇಖೀಯಾಗಿ ಬದಲಾಯಿಸುತ್ತದೆ. ವಾಸ್ತವವಾಗಿ $W = hf - C$ ಇಲ್ಲಿ $C$ ಎಲೆಕ್ಟ್ರಾನುಗಳನ್ನು ಬಿಡುಗಡೆಮಾಡುವ ವಸ್ತುವಿಗೆ ಸಂಬಂಧಿಸಿದ ಸ್ಥಿರಾಂಕ. ಈ ವೀಕ್ಷಣೆಗಳನ್ನು ಬೆಳಕು ಅಲೆ ಎಂದು ಭಾವಿಸಿ ಅರ್ಥ ಮಾಡಿಕೊಳ್ಳುವುದು ಕಷ್ಟ. ಏಕೆಂದರೆ ಎಲೆಕ್ಟ್ರಾನನ್ನು ಹೊರದೂಡಲು ಬೇಕಾದ ಬಲವನ್ನು ಒದಗಿಸುವ ಬೆಳಕಿನ ಅಲೆಯ ವಿದ್ಯುತ್ ಸದಿಶ ಪಾತಬೆಳಕಿನ (ಇನ್ಸಿಡೆಂಟ್ ಲೈಟ್) ತೀಕ್ಷ್ಣತೆಯ ವರ್ಗಮೂಲಕ್ಕೆ ಸರಳಾನುಪಾತದಲ್ಲಿರುತ್ತದೆ; ಮತ್ತು ಪಾತಬೆಳಕಿನ ಆವರ್ತಾಂಕ $f$ ನೊಡನೆ ನೇರವಾಗಿ ಸಂಬಂಧಿಯಾಗಲಿ ಮಿತಿಗೊಳಪಟ್ಟಾಗಲಿ ಇರುವುದಿಲ್ಲ. ಬೆಳಕಿನ ಕಿರಣದಂಡದಲ್ಲಿನ ಶಕ್ತಿಯನ್ನು ಪ್ರತಿಯೊಂದೂ $E = hf$ ಶಕ್ತಿಯುಳ್ಳ ಕ್ವಾಂಟಮುಗಳು ಹೊತ್ತಿರುತ್ತವೆ. ಒಂದು ಕ್ವಾಂಟಮಿನ (ಒಂದು ಫೋಟಾನ್) ಹೀರಿಕೆಯಿಂದ ಒಂದು ಎಲೆಕ್ಟ್ರಾನ್ ವಿಸರ್ಜಿಸಲ್ಪಟ್ಟುತ್ತದೆ; ಮತ್ತು ಕ್ವಾಂಟಮಿನ ಅರ್ಧ ಅಥವಾ ಯಾವುದಾದರೊಂದು ಭಿನ್ನರಾಶಿಯ ಹೀರಿಕೆ ಫೋಟಾನುಗಳು ವಿಭಜಿಸಲಾಗದ ಕಣಗಳಾದುದರಿಂದ ಸಾಧ್ಯವಿಲ್ಲ ಎಂದು ಭಾವಿಸಿ ದ್ಯುತಿವಿದ್ಯುತ್ ಪರಿಣಾಮವನ್ನು ತತ್‌ಕ್ಷಣ ಅರ್ಥ ಮಾಡಿಕೊಳ್ಳಬಹುದು. ದ್ಯುತಿವಿದ್ಯುತ್ ಪರಿಣಾಮದ ಮೇಲಿನ ಹೆಚ್ಚಿಗೆ ಮಾಹಿತಿಗೆ **ನೋಡಿ–ದ್ಯುತಿ ವಿಸರ್ಜನೆ** (ಫೋಟೊ ಎಮಿಶನ್).

ವಿದ್ಯುತ್ಕಾಂತ ಅಲೆಗಳ ಕಣಲಕ್ಷಣಗಳು ಕಾಂಪ್ಟನ್ ಪರಿಣಾಮದಲ್ಲಿ ಕೂಡ ವೇದ್ಯವಾಗುತ್ತವೆ. ಇಲ್ಲಿ ಮುಕ್ತ (ಫ್ರೀ) ಎಲೆಕ್ಟ್ರಾನುಗಳು ಎಕ್ಸ್‌ಕಿರಣಗಳನ್ನು ಚದುರಿಸುವುದರಿಂದ ಅವುಗಳ ಅಲೆಯುದ್ದ ಹೆಚ್ಚಾಗುತ್ತದೆ. ಫೋಟಾನ್ ಮತ್ತು ಎಲೆಕ್ಟ್ರಾನುಗಳ ನಡುವೆ ಘಟಿತ ಸಂಘಟ್ಟನೆಗಳಿಂದ ಚದುರಿಕೆ ಪರಿಣಮಿಸುತ್ತದೆ ಎಂದು ಭಾವಿಸಿ ಎಕ್ಸ್‌ಕಿರಣಗಳ ಅಲೆಯುದ್ದದಲ್ಲಿ ಆಗುವ ಬದಲಾವಣೆಯನ್ನು ಲೆಕ್ಕಮಾಡಿ ತಿಳಿಯಬಹುದು. ಹೀಗೆ ಭಾವಿಸಿದಾಗ ಎಕ್ಸ್‌ಕಿರಣಗಳನ್ನು ಸಾಲಾಗಿ ಹೋಗುತ್ತಿರುವ ಫೋಟಾನುಗಳ ಸಮೂಹ ಎಂದು ತಿಳಿಯುತ್ತೇವೆ. ಕ್ವಾಂಟಂ ಸಿದ್ಧಾಂತ ಬರುವುದಕ್ಕಿಂತ ಮುಂಚೆ ಹರಳುಗಳಿಂದ ಎಕ್ಸ್‌ಕಿರಣಗಳು ಅನುಭವಿಸುವ ನಮನವನ್ನು ಅವು ಅಲೆಗಳೇ ಹೊರತು ಕಣಗಳಲ್ಲ ಎಂದು ಭಾವಿಸಲಾಗಿತ್ತು. **(ನೋಡಿ– ಕಾಂಪ್ಟನ್ ಪರಿಣಾಮ)**

ವ್ಯತಿಕರಣ ಮತ್ತು ನಮನ (ಇಂಟರ್‌ಫಿಯರೆನ್ಸ್ ಮತ್ತು ಡಿಫ್ರಾಕ್ಷನ್) :ವಿದ್ಯುತ್ಕಾಂತ ಅಲೆಗಳಲ್ಲಿ ಕಂಡುಬರುವ ವ್ಯತಿಕರಣ ಮತ್ತು ನಮನಗಳು ಅಲೆ ಪ್ರಸಾರವನ್ನು ಕಣಪ್ರಸಾರದಿಂದ ಬೇರ್ಪಡಿಸಿ ತಿಳಿಸುತ್ತವೆ. ವ್ಯತಿಕರಣ ಮತ್ತು ನಮನಗಳ ಪರಿಣಾಮಗಳು, ಬಹುಮಟ್ಟಿಗೆ, (ಪಾತಕಿರಣಕ್ಕೆ ಸಾಪೇಕ್ಷವಾಗಿ) ಸುಮಾರು $\lambda/d$ ಕೋನಕ್ಕೆ (ರೇಡಿಯನುಗಳಲ್ಲಿ ಅಳೆದದ್ದು) ನಿರ್ಬಂಧಿತವಾಗಿರುತ್ತವೆಂಬುದು ಅಲೆ ಸಿದ್ಧಾಂತದ ಸಾಮಾನ್ಯ ಫಲಿತಾಂಶ. ಇಲ್ಲಿ $d$ ಎಂಬುದು ನಮನ ಅಥವಾ ವ್ಯತಿಕರಣವನ್ನು ಉಂಟುಮಾಡುವ ವ್ಯವಸ್ಥೆಯ ಲಾಕ್ಷಣಿಕ ಆಯಾಮ (ಕ್ಯಾರೆಕ್ಟರಿಸ್ಟಿಕ್ ಡೈಮೆನ್ಷನ್)–ಉದಾಹರಣೆಗೆ ಅಲೆಯನ್ನು ನಮನಿಸುವ ಸೀಳು ಗಂಡಿಯ ಅಗಲ ಅಥವಾ ಅಲೆಗಳನ್ನು ಚದುರಿಸುವ ಅಂತರ ಪರಮಾಣುದೂರ (ಇಂಟರ್‌ಅಟಾಮಿಕ್ ಡಿಸ್ಟೆನ್ಸ್). ಇದು ಮತ್ತು ಸಂಬಂಧ (5) ರಿಂದ ಲೆಕ್ಕಮಾಡಿ

ತಿಳಿಯಬಹುದಾದ ಇದ ಮೌಲ್ಯಗಳು, ಸಾಮಾನ್ಯ ಸ್ಥೂಲಕಾಯಗಳ ಪ್ರಸಾರದಲ್ಲಿ ಅಲೆ ಲಕ್ಷಣಗಳು ಏಕೆ ಕಾಣಿಸುವುದಿಲ್ಲ, ಆದರೆ ಎಲೆಕ್ಟ್ರಾನ್, ನ್ಯೂಟ್ರಾನ್, ಪರಮಾಣು ಮತ್ತು ಅಣುಗಳ ಪ್ರಸಾರದಲ್ಲಿ ಸ್ಪಷ್ಟವಾಗಿ ಏಕೆ ವ್ಯಕ್ತವಾಗುತ್ತವೆ ಎಂಬುದನ್ನು ತಿಳಿಸುತ್ತದೆ. ಉದಾಹರಣೆಗೆ 1 ಸೆಂ.ಮೀ/ಸೆಕೆಂಡ್ ವೇಗದಿಂದ ಚಲಿಸುತ್ತಿರುವ 1 ಗ್ರಾಂ ದ್ರವ್ಯರಾಶಿ ಇರುವ ಕಣಕ್ಕೆ $\lambda=6.6\times10^{-27}$ ಸೆಂಮೀ ಆಗಿದ್ದರೆ ಕೊಠಡಿಯ ಉಷ್ಣತೆಗೆ (ಸುಮಾರು 300° ಕೆ.) ಅನುಗುಣವಾದ ವೇಗದಲ್ಲಿ ಚಲಿಸುತ್ತಿರುವ ನ್ಯೂಟ್ರಾನ್ ಅಥವಾ ಹೈಡ್ರೋಜನ್ ಪರಮಾಣುವಿಗೆ ಇದ ಮೌಲ್ಯ ಸುಮಾರು $1.45\ 10^{-8}$ ಸೆಂಮೀ. ಆಗಿರುವುದು. ಇಲ್ಲಿ $M=1.66\ 10^{-24}$ ಗ್ರಾಂ ಮತ್ತು $P=Mv=\sqrt{2ME}$; $E=\frac{2}{3}kT$ (*k*=ಬೋಲ್ಟ್ಸ್‌ಮನ್ ಸ್ಥಿರಾಂಕ $1.38\times10^{-10}$ ಅರ್ಗ್ ಡಿಗ್ರಿ$^{-1}$) ಎಂಬ ವಿಷಯಗಳನ್ನು ಉಪಯೋಗಿಸಿದ್ದೇವೆ. ಹಾಗೆಯೇ 100 *eV* ಯಷ್ಟು ಶಕ್ತಿಯುಳ್ಳ ಎಲೆಕ್ಟ್ರಾನಿಗೆ ಇದ ಮೌಲ್ಯ $\lambda=1.22\times10^{-8}$ ಸೆಂ.ಮೀ $1\ MeV=10^{6}eV$ ಶಕ್ತಿಯುಳ್ಳ ಫೋಟಾನಿಗೆ $\lambda=2.88\times10^{-12}$ ಸೆಂಮೀ. ಹರಳುಗಳಲ್ಲಿ ಅಂತರ ಪರಮಾಣುಆಕಾಶ (ಇಂಟರ್ ಆಟಾಮಿಕ್ ಸ್ಪೇಸ್) ಸುಮಾರು $10^{-8}$ ಸೆಂ.ಮೀ.ನಷ್ಟಿರುವುದರಿಂದ ಹರಳುಗಳು ಎಲೆಕ್ಟ್ರಾನ್ ಮತ್ತು ಪರಮಾಣುಗಳನ್ನು ಚದರಿಸಿ ನಮನಪ್ರಭಾವಗಳನ್ನು ಉಂಟುಮಾಡುವುದರಲ್ಲಿ ಪರಿಣಾಮಕಾರಿಗಳಾಗಿರುತ್ತವೆ. ಹಾಗೆಯೇ ಪರಮಾಣ್ವಕ ವ್ಯವಸ್ಥೆಗಳ ರಚನೆಯನ್ನು ಅರಿಯಲು ಕ್ವಾಂಟಂ ಬಲವಿಜ್ಞಾನ ಅಗತ್ಯ ಮತ್ತು ನ್ಯೂಕ್ಲಿಯರ್ ಆಯಾಮ $10^{-13}$ ಸೆಂಮೀ.ನಷ್ಟಿರುವ ನ್ಯೂಕ್ಲಿಯರ್ ಪ್ರಾಂತದಲ್ಲಿ ನಡೆಯುವ ವಿದ್ಯಮಾನವಗಳನ್ನು ಅರಿಯಲು ಹಾಗೆಯೇ ಹಗುರವಾದ ಹೈಡ್ರೋಜನ್ ಮತ್ತು ಹೀಲಿಯಂ ಅನಿಲಗಳಲ್ಲಿ ಕ್ವಾಂಟಂ ಪರಿಣಾಮಗಳು ಒಡನೆಯೇ ಏಕೆ ಕಾಣಿಸಿಕೊಳ್ಳುತ್ತವೆ ಎಂಬುದನ್ನು ವಿವರಿಸಲು ಕ್ವಾಂಟಂ ಬಲವಿಜ್ಞಾನ ಅವಶ್ಯಕ ಎಂಬುದನ್ನು ಮೇಲಿನ ಡೆಬ್ರಾಯ್ ಸಮೀಕರಣಗಳಿಂದ ಪಡೆದ ಸಂಖ್ಯಾ ಮೌಲ್ಯಗಳು ತಿಳಿಸುತ್ತವೆ.

**ಅನಿಶ್ಚಿತತಾ ತತ್ತ್ವದೊಡನೆ ಸಂಬಂಧ :** ಅಲೆ–ಕಣ ದ್ವೈತೀಭಾವ ಅನಿಶ್ಚಿತತಾತತ್ತ್ವದೊಡನೆ ನಿಕಟವಾಗಿ ಸಂಬಂಧಿಸಿದೆ. ಏಕೆಂದರೆ ನಿರ್ದಿಷ್ಟ ಪ್ರಯೋಗಗಳ ವಿಶ್ಲೇಷಣೆಗಳಿಂದ ಅನಿಶ್ಚಿತತಾತತ್ತ್ವವನ್ನು ತಿಳಿಸುವ ಅಸಮತೆಗಳನ್ನು ಪಡೆಯ ಬಹುದು. ಅನಿಶ್ಚಿತತಾತತ್ತ್ವವನ್ನು ನಿಷ್ಠುರವಾಗಿ ಸೂತ್ರೀಕರಿಸುವಾಗ ಕಂಡುಬರುವ ಮೂಲಾಂಶಗಳನ್ನು ಒಳಗೊಂಡಂತೆ ಅಸಾಪೇಕ್ಷಿತ ಕಣ ಒಂದಕ್ಕೆ ತತ್ತ್ವವನ್ನು ಕೆಳಗಿನ ತರ್ಕದಿಂದ ಪಡೆಯಬಹುದು. ಮುಂದೆ ವಿವರಿಸಲಾಗುವಂತೆ $x$– ನಿರ್ದೇಶಕ $x$ ನಿಂದ $x+dx$ ಅಂತರದೊಳಗೆ ಇರುವ ಕಣದ ಸಂಭಾವ್ಯತೆ (ಪ್ರಾಬೆಬಿಲಿಟಿ) $|\psi(x)|^2dx$ ಆಗಿರುತ್ತದೆ. ಇಲ್ಲಿ $\psi(x)$ ನ್ನು ಅಲೆಉತ್ಪನ್ನ ಎಂದು ಕರೆಯುತ್ತೇವೆ. $x=0$ ಆಗಿರುವಂತೆ $\Delta x$ ಅಗಲವಿರುವ ಒಂದು ಅಂತರದಲ್ಲಿ ಕಣ ಇದೆ ಎಂಬುದನ್ನು ಪ್ರಯೋಗದಲ್ಲಿ ಮಾಡಿದ ಅಳತೆಯೊಂದು ತಿಳಿಸುತ್ತದೆ ಎನ್ನೋಣ. ಅಂದರೆ $x$ ಮೇಲೆ ಇರುವ $\psi(x)$ ನ ಅವಲಂಬನೆ ಸನ್ನಿಹಿತವಾಗಿ ಚಿತ್ರ (1)ರಲ್ಲಿ ಕಾಣಿಸಿರುವಂತೆ ಇದೆ ಎನ್ನೋಣ.

ಅಲೆ ಕಣದ ದ್ವೈತೀಭಾವದ ಕಾರಣ ಚಿತ್ರ (1)ರಲ್ಲಿ ತೋರಿಸಿರುವ ಸಣ್ಣ ಅಲೆಕಟ್ಟನ್ನು (ವೇವ್ ಪ್ಯಾಕೆಟ್) ಅನೇಕ ಅಲೆಗಳನ್ನು ಒಂದರ ಮೇಲೆ ಮತ್ತೊಂದನ್ನು ಇರಿಸಿ ಪಡೆದಿದ್ದೇವೆ ಎಂದು ಭಾವಿಸಬಹುದು. $\Delta x$ ಅಂತರದಲ್ಲಿ $\psi(x)$ ನ ಮೌಲ್ಯ ಅತ್ಯಂತ ಸಣ್ಣದಾಗಿ ಏರಿ ಬೀಳುವುದರಿಂದ ಈ ಕಟ್ಟಿನಲ್ಲಿ ಅರ್ಧ ಅಲೆಯುದ್ದಗಳು $\Delta x$ ನಷ್ಟು ಚಿಕ್ಕದಾಗಿರುವ




ಚಿತ್ರ–1 $x$ ನ ವಿರುದ್ಧವಾಗಿ $\psi$ ಎಳೆದ $(x)$ನ ನಕ್ಷೆ

ಅಲೆಗಳು ಮಾತ್ರ ಅಡಗಿರಬೇಕು. ಅಲ್ಲದೆ $\psi(x)$ ನ ಚಿಹ್ನೆ ಅಂತರದಲ್ಲಿ ಬದಲಾಗದೇ ಇರುವುದರಿಂದ ಕಟ್ಟಿನಲ್ಲಿ ಅತಿ ದೀರ್ಘವಾದ ಅಲೆಯುದ್ದವುಳ್ಳ ಅಲೆಗಳು ಇರಬೇಕು ಎಂದು ಸಾಧಿಸಬಹುದು. ಹೀಗೆ ಕಟ್ಟಿನಲ್ಲಿರುವ ಅಲೆಯುದ್ದಗಳು $2\Delta x$ ನಿಂದ ವರೆಗೆ ಹರಡಿರಲು ಸಾಧ್ಯ. ಆದ್ದರಿಂದ ಅಲೆಯುದ್ದದ ವ್ಯಸ್ತಾಂಕಗಳು 0 ಯಿಂದ $1/2(\Delta x)$ ವರೆಗೆ ಬದಲಾಗಬಹುದು. ಆದರೆ $\lambda=h/p$ ಸಂಬಂಧದಿಂದ $\Delta px=h\Delta\lambda^{-1}$ ಆದ್ದರಿಂದ $\Delta px\ \Delta x$ ಗುಣಲಬ್ಧ ಸುಮಾರು h/2 ಕ್ಕಿಂತ ಕಡಿಮೆ ಇರಲು ಸಾಧ್ಯವಿಲ್ಲ. ಹೀಗೆ ಈ ಫಲಿತಾಂಶಕ್ಕೆ ಅನಿಶ್ಚಿತತಾ ತತ್ತ್ವವನ್ನು ತಿಳಿಸುವ

$$\Delta x\ \Delta px > \frac{h}{2\pi}$$

ಸಂಬಂಧದೊಡನೆ ನಿಕಟ ಸಾಮೀಪ್ಯ ಇದೆ. ಈ ಪ್ರಕಾರ ಸರಳವಾದ ಒಂದು ತರ್ಕ ಸರಣಿಯಿಂದ ಪ್ರಾಯೋಗಿಕ ಫಲಿತಾಂಶ ಮತ್ತು ಅನಿಶ್ಚತತಾತತ್ತ್ವಗಳಿಗೆ ಇರುವ ಸಂಬಂಧವನ್ನು ಪಡೆಯಬಹುದು. ಹಾಗೆಯೇ ಪ್ರಯೋಗದಲ್ಲಿ ಯಾವುದೇ ಒಂದು ಅಳತೆಯನ್ನು ಅತಿ ಚಿಕ್ಕದಾದರೂ ನಿರ್ದಿಷ್ಟವಾದ $\Delta t$ ಎಂಬ ಕಾಲದ ಅವಧಿಯಲ್ಲಿ ಮಾಡುತ್ತೇವೆ; ಮತ್ತು ಈ ಕಾಲದಲ್ಲಿ ಕ್ವಾಂಟಂ ವ್ಯವಸ್ಥೆಯಲ್ಲಿ ನಡೆಯುವ ವಿದ್ಯಮಾನಗಳನ್ನು ಅಳತೆಯ ಉಪಕರಣಕ್ಕೆ ರವಾನಿಸಿ ಮಾಹಿತಿ ಪಡೆಯಲು $(2\Delta t)^{-1}$ ಕ್ಕಿಂತ ಹೆಚ್ಚಿನ ಆವರ್ತಾಂಕವುಳ್ಳ ಅಲೆಗಳನ್ನು ಉಪಯೋಗಿಸುವುದು ಅಗತ್ಯ. ಅಲ್ಲದೆ ಡೆಬ್ರಾಯ್ ಸಂಬಂಧದಿಂದ $f=Eh$ . ಮೇಲಿನ ವಿಷಯಗಳಿಂದ

$$\Delta t\Delta E \geq \frac{h}{2\pi} \qquad \ldots(7)$$

ಸಂಬಂಧವನ್ನು ಪಡೆಯಬಹುದು.

ಪರಮಾಣುಗಳ ಆಯಾಮಗಳು $(\Delta x)$ ಸುಮಾರು $10^{-8}$ ಸೆಂಮೀ. ಎಂದು ಪ್ರಯೋಗಗಳಿಂದ ಕಂಡುಬಂದಿದೆ. ಈಗ

$$\Delta x\Delta px > \frac{h}{2\pi}$$

ಯನ್ನು ಉಪಯೋಗಿಸಿದರೆ ಪ್ರತಿಯೊಂದು ಪರಮಾಣುವಿನಲ್ಲಿಯೂ ಇರುವ ಎಲೆಕ್ಟ್ರಾನುಗಳ ಶಕ್ತಿ

$$E=\frac{p^2}{2m}=\frac{h^2}{8\pi^2m(\Delta x)^2}=3.8\,eV$$

ಆಗಿರಬೇಕೆಂದು ಗೊತ್ತಾಗುತ್ತದೆ. ಲೆಕ್ಕಾಚಾರಗಳಿಂದ ಪಡೆದ ಈ ಮೌಲ್ಯ ಸರಿ ಎಂಬುದನ್ನು ಪ್ರಯೋಗಗಳು ಸಮರ್ಥಿಸುತ್ತವೆ.

ಹಾಗೆಯೇ $\Delta x$ ಆಯಾಮಗಳು ಸುಮಾರು $10^{-13}$ ರಷ್ಟಿರುವ ಪರಮಾಣ್ವಕ ನ್ಯೂಕ್ಲಿಯಸುಗಳಲ್ಲಿ ಸುಮಾರು (ಕೆಲವು) 20 *MeV* ಯಷ್ಟು ಶಕ್ತಿಯುಳ್ಳ ನ್ಯೂಟ್ರಾನ್ ಅಥವಾ ಪ್ರೋಟಾನುಗಳು ಇರಲು ಸಾಧ್ಯ ಎಂಬುದು ಮೇಲಿನ ಸಮೀಕರಣಗಳಿಂದ ಕಂಡುಬರುತ್ತದೆ. ಈ ವಿಷಯ ಸರಿ ಎಂಬುದನ್ನು ಪ್ರಯೋಗಗಳು ಪುನಃ ತೋರಿಸಿ ಕೊಡುತ್ತವೆ. ಮತ್ತೊಂದು ಸಂದರ್ಭವನ್ನು ಯೋಚಿಸಿದರೆ ನ್ಯೂಕ್ಲಿಯಸುಗಳಲ್ಲಿ ಎಲೆಕ್ಟ್ರಾನುಗಳು ಅಡಗಿರುವಂತಾದರೆ ಅವುಗಳ ಶಕ್ತಿ 200 *MeV* ಗಿಂತ ಹೆಚ್ಚಾಗಿರಬೇಕು ಎಂಬುದನ್ನು ಈ ಸಮೀಕರಣಗಳಿಂದ ತಿಳಿಯುತ್ತೇವೆ. ಸುಮಾರು $10^{-13}$ ಸೆಂ.ಮೀ ನಷ್ಟು ಬೇರ್ಪಟ್ಟಿರುವ ಎಲೆಕ್ಟ್ರಾನ್ ಮತ್ತು ಪ್ರೋಟಾನುಗಳ ಸ್ಥಿರವಿದ್ಯುತ್ ಬಲಗಳನ್ನು ಗಣನೆಗೆ ತೆಗೆದುಕೊಂಡು ಎಲೆಕ್ಟ್ರಾನುಗಳಿಗೆ ಇರಬೇಕಾದ ಈ ಉನ್ನತ ಶಕ್ತಿಯನ್ನು ವಿವರಿಸಲು ಸಾಧ್ಯವಿಲ್ಲ. ಹೀಗೆ ಅನಿಶ್ಚಿತತಾತತ್ತ್ವದಿಂದ ಪರಮಾಣ್ವಕ ನ್ಯೂಕ್ಲಿಯಸುಗಳಲ್ಲಿ ಎಲೆಕ್ಟ್ರಾನುಗಳು ಅಡಗಿರಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ತೀರ್ಮಾನ ನ್ಯೂಕ್ಲಿಯಸ್ ರಚನೆ ಮತ್ತು $\beta$–ಕ್ಷಯಗಳ ಬಗ್ಗೆ ಬೆಳೆಸಿರುವ ಆಧುನಿಕ ಸಿದ್ಧಾಂತಗಳೊಡನೆ ಹೊಂದಿಕೊಂಡಿದೆ.

**ಪೂರಕತೆ :** ಅಲೆ–ಕಣ ದ್ವೈತೀಭಾವ ಮತ್ತು ಅನಿಶ್ಚಿತತಾತತ್ತ್ವಗಳು ಪೂರಕತೆಯ ತತ್ತ್ವ ಎಂಬ ಇನ್ನೂ ಹೆಚ್ಚಿನ ಮಹತ್ತ್ವವುಳ್ಳ ತತ್ತ್ವವೊಂದರ ಉದಾಹರಣೆಗಳು ಎಂದು ಭಾವಿಸುವುದು ಸಹಜ. ಈ ತತ್ತ್ವವನ್ನು ಮೊಟ್ಟಮೊದಲಿಗೆ ನೀಲ್ಸ್ ಬೋರ್ ಎಂಬ ವಿಜ್ಞಾನಿ ಪ್ರತಿಪಾದಿಸಿದ (1928). ಪೂರಕತೆಯ ತತ್ತ್ವದ ಪ್ರಕಾರ ಪ್ರಕೃತಿಯಲ್ಲಿ ಪೂರಕ ತೋರ್ಕೆಗಳು (ಕಾಂಪ್ಲಿಮೆಂಟರಿ ಆಸ್ಪೆಕ್ಟ್ಸ್) ಇವೆ. ಈ ತೋರ್ಕೆಗಳಲ್ಲಿ ಒಂದನ್ನು ಮಾತ್ರ ತೋರುವ ಪ್ರಯೋಗ ಒಂದರಲ್ಲಿ ಅವಶ್ಯಕವಾಗಿ, ಅದೇ ಕಾಲದಲ್ಲಿ, ಮತ್ತೊಂದು ತೋರ್ಕೆ ಕಂಡುಬರುವುದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪ್ರತಿಯೊಂದು ಪ್ರಯೋಗವೂ ಸಂಶೋಧಿಸುತ್ತಿರುವ ವ್ಯವಸ್ಥೆಯ ಬಗ್ಗೆ ಮಾಹಿತಿಯನ್ನು ಕೇವಲ ಪರಿಮಿತಿಗೆ ಒಳಪಟ್ಟಂತೆ ಮಾತ್ರ ಒದಗಿಸುತ್ತದೆ. ಈ ಮಾಹಿತಿಯನ್ನು ಪಡೆಯುವ ಸಂದರ್ಭದಲ್ಲಿ ಅಷ್ಟೇ ಸ್ವಾರಸ್ಯಕರವಾದ ಮತ್ತೊಂದು ಮಾಹಿತಿ ದೊರೆಯುವುದಿಲ್ಲ. ಆದರೆ ವಾಸ್ತವವಾಗಿ ಪ್ರಯೋಗಕಾರ ಹಿಂದಿನ ಪ್ರಯೋಗಗಳ ಫಲಿತಾಂಶಗಳನ್ನು ಮರೆಯುವುದಿಲ್ಲ. ಯಾವುದಾದರೊಂದು ಕ್ಷಣದಲ್ಲಿ ವ್ಯವಸ್ಥೆಯ ಮುಂದಿನ ಹಾದಿ ಏನೆಂಬುದರ ಬಗ್ಗೆ ಮುನ್ನುಡಿಯಲು ಹೀಗೆ ಮಾಹಿತಿಯ

ಮಿತಪರಿಮಾಣವನ್ನು ಮಾತ್ರ ಆತ ಉಪಯೋಗಿಸುತ್ತಾನೆ. ಏಕವರ್ಣೀ ಬೆಳಕಿನೊಡನೆ (ಮಾನೊಕ್ರೋಮ್ಯಾಟಿಕ್ ಲೈಟ್) ಸಾಮಾನ್ಯವಾಗಿ ಮಾಡುವ ಎರಡು ಕಂಡಿ ಪ್ರಯೋಗ (ಡಬಲ್ ಸ್ಲಿಟ್ ಎಕ್ಸ್‌ಪೆರಿಮೆಂಟ್) ಪೂರಕತೆಯ ತತ್ತ್ವವನ್ನು ಚೆನ್ನಾಗಿ ಉಲ್ಲೇಖಿಸುತ್ತದೆ.

ಏಕವರ್ಣೀ ಬಿಂದು ಆಕರ $P$ ಯಿಂದ ಬರುವ ಬೆಳಕನ್ನು (ಚಿತ್ರ 2) $Q$ ತೆಯೆಯಲ್ಲಿರುವ $S_1$ ಮತ್ತು $S_2$ ಎಂಬ ಎರಡು ಕಂಡಿಗಳು ನಮನಿಸುತ್ತವೆ. $Q_2$ ತೆರೆಯಮೇಲೆ ಪರ್ಯಾಯವಾಗಿ ಪ್ರಕಾಶ ಮತ್ತು ಕತ್ತಲಾಗಿರುವ ಪಟ್ಟೆಗಳು (ಬ್ಯಾಂಡ್ಸ್)




ಚಿತ್ರ–2 ಎರಡು–ಕಂಡಿ ಪ್ರಯೋಗ

ಉಂಟಾಗುತ್ತವೆ. ಇವು ವ್ಯತಿಕರಣದ ಪ್ರತಿರೂಪ (ಇಂಟರ್ ಫಿಯರೆನ್ಸ್ ಪ್ಯಾಟರ್ನ್); ಮತ್ತು ಇದು $D_1, D_2$ ಪ್ರದೇಶದಲ್ಲಿ ಉಂಟಾಗುತ್ತದೆ. ಈ ಪ್ರದೇಶದಲ್ಲಿ $S_1$ ಮತ್ತು $S_2$ ಸೀಳುಗಂಡಿಗಳಿಂದ ಉಂಟಾದ ನಮನ ಪ್ರತಿರೂಪಗಳು ಒಂದರ ಮೇಲೊಂದು ಬೀಲುವುದರಿಂದ ಹೀಗಾಗುತ್ತದೆ. $P$ ಆಕರ ಸೀಳುಗಂಡಿಗಳಿಂದ ಸಮದೂರದಲ್ಲಿದೆ; ಮತ್ತು $PS_1$ ಅಥವಾ $S_1O$ ದೂರಕ್ಕೆ ಹೋಲಿಸಿದಂತೆ ಸೀಳುಗಂಡಿಗಳ ಅಗಲ ಅತಿ ಕಡಿಮೆ ಎಂದು ಭಾವಿಸಿದರೆ

$$S_2O - S_1O = n\lambda$$

ಸಮವಾದಾಗ ಪ್ರಕಾಶ ಪಟ್ಟೆಗಳು ಉಂಟಾಗುತ್ತವೆ. ಹಾಗಲ್ಲದೆ

$$S_2O - S_1O = (n + ½)\lambda \qquad \ldots(8)$$

ಆದಾಗ ಕಪ್ಪು ಪಟ್ಟೆಗಳು (ಡಾರ್ಕ್ ಬ್ಯಾಂಡ್ಸ್) ಪರಿಣಮಿಸುತ್ತವೆ ಎಂದು ತಿಳಿಯಬಹುದು. ಪ್ರಕಾಶ ಗರಿಷ್ಠವಾಗಿರುವ ಯಾವುದೇ ಜಾಗದಿಂದ ನೆರೆಯ ಗರಿಷ್ಠ ಜಾಗಕ್ಕೆ ಹೋದಾಗ $S_2O$ ಮತ್ತು $S_1O$ ಪಥಗಳಿಗಿರುವ ವ್ಯತ್ಯಾಸ ನಿಷ್ಕೃಷ್ಟವಾಗಿ ಒಂದು ಅಲೆಯುದ್ದವಾಗಿರುತ್ತದೆ. ಆದ್ದರಿಂದ ಅನುಕ್ರಮಿಕ ಪ್ರಕಾಶ ಪಟ್ಟೆಗಳ ದೂರ $Y$ ಹಾಗೂ $S_1S_2$ ಅಂತರ ಮತ್ತು $Q_1$, $Q_2$ ಗಳಿಗಿರುವ ದೂರ $X$ ಗಳನ್ನು ಅಳೆದು

$$\lambda = \frac{Y(S_1S_2)}{X}$$

ಸಮೀಕರಣದಿಂದ ಲೆಕ್ಕ ಮಾಡಿ ತಿಳಿಯಬಹುದು.

ಹೀಗೆ ಎರಡು–ಕಂಡಿ ಪ್ರಯೋಗವನ್ನು ಬೆಳಕಿನ ಅಲೆ ಲಕ್ಷಣಗಳಲ್ಲಿ ವಿವರಿಸಲು ಸಾಧ್ಯ; ಮತ್ತು ಈ ಪ್ರಯೋಗ ಬೆಳಕಿಗೆ ಅಲೆ ಲಕ್ಷಣಗಳು ಇವೆ ಎಂದು ಸಮರ್ಥಿಸುತ್ತದೆ.

ಎರಡು ಕಂಡಿ ಪ್ರಯೋಗ ಬೆಳಕಿನ ಕಣಲಕ್ಷಣಗಳಿಗೆ ಸಂಬಂಧಿಸಿದಂತೆ ಯಾವ ಮಾಹಿತಿಯನ್ನೂ ಒದಗಿಸುವುದಿಲ್ಲ. ವಾಸ್ತವವಾಗಿ ಕಣಚಿತ್ರದಿಂದ ಪ್ರಯೋಗವನ್ನು ವರ್ಣಿಸಲು ಪ್ರಯತ್ನಿಸಿದರೆ ವಿವರಣೆ ಕಷ್ಟವಾಗುತ್ತದೆಯೇ ವಿನಾ ಸಾಧ್ಯವಾಗುವುದಿಲ್ಲ. ಆಕರದ ತೀಕ್ಷ್ಣತೆಯನ್ನು ಕಡಿಮೆ ಮಾಡಿದ್ದೇ ಆದರೂ ತೆರೆಯ ಮೇಲೆ ಕಾಣುವ ವ್ಯತಿಕರಣದ ಪ್ರತಿರೂಪ ಬದಲಾಗುವುದಿಲ್ಲ ಎಂಬ ಅರಿವಿನೊಡನೆ ಈ ತೊಂದರೆಗಳು ಕಾಣಿಸಿಕೊಳ್ಳುತ್ತವೆ. $P$ ಯಿಂದ $Q_2$ ಕ್ಕೆ ಬೆಳಕು ಯಾವುದಾದರೊಂದು ಸೀಳುಗಂಡಿ ಮಾರ್ಗವಾಗಿ ಹೋಗಲು ಬೇಕಾಗುವ ಅಲ್ಪಕಾಲದಲ್ಲಿ ಆಕರ ಮತ್ತೊಂದು ಫೋಟಾನನ್ನು ಬಿಡದಿರುವಂತೆ ಆಕರದ ತೀಕ್ಷ್ಣತೆಯನ್ನು ಕಡಿಮೆ ಮಾಡಲು ಪ್ರಾಯೋಗಿಕವಾಗಿ ಸಾಧ್ಯ. ಆದರೂ ಆ ಕಾಲದಲ್ಲೂ ವ್ಯತಿಕರಣದ ಪ್ರತಿರೂಪ ಉಂಟಾಗುವುದರಿಂದ ಅದು ಮುಕ್ತವಾಗಿರುವ ಪ್ರತ್ಯೇಕ ಫೋಟಾನುಗಳಿಂದ ಉಂಟಾಯಿತು. ಎರಡು ಅಥವಾ ಹೆಚ್ಚಿನ ಫೋಟಾನುಗಳ ನಡುವೆ ಆಗಬಹುದಾದ ವ್ಯತಿಕರಣದಿಂದಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಮತ್ತೊಂದು ಸಂದರ್ಭದಲ್ಲಿ ಯೋಚಿಸಿದರೆ ಸೀಳುಗಂಡಿಗಳಲ್ಲಿ ಯಾವುದಾದರೊಂದನ್ನು ಮುಚ್ಚಿದರೆ ವ್ಯತಿಕರಣದ ಪ್ರತಿರೂಪ ನಾಶವಾಗುತ್ತದೆ. ಸೀಳುಗಂಡಿಗಳಲ್ಲಿ ಒಂದೇ ಒಂದರ ಮೂಲಕ ಪ್ರತಿಯೊಂದೂ ಹಾಯುವ ಫೋಟಾನುಗಳನ್ನು ಒಳಗೊಂಡ ಪ್ರವಾಹ ಒಂದು ಸೀಳುಗಂಡಿಯನ್ನು ಮುಚ್ಚುವುದರಿಂದ ನಾಶವಾಗುವಂಥ ವ್ಯತಿಕರಣದ ಪ್ರತಿರೂಪವನ್ನು ಹೇಗೆ ಉಂಟುಮಾಡಬಲ್ಲದು ಎಂಬ ಪ್ರಶ್ನೆ ಈ ಪ್ರಯೋಗಗಳಿಂದ ಉದ್ಭವಿಸುತ್ತದೆ. ಅಥವಾ ಒಂದು ಫೋಟಾನ್ ಹೋಗುವಂಥ ಸೀಳುಗಂಡಿಯನ್ನು ಮುಚ್ಚುವುದು ಅಥವಾ ತೆರೆಯುವುದು, $Q_2$ ತೆರೆಯ ಮೇಲಿನ ಯಾವುದಾದರೊಂದು ನಿರ್ದಿಷ್ಟ ಬಿಂದುವನ್ನು ಆ ಫೋಟಾನ್ ಸೇರುವುದರ ಸಂಭಾವ್ಯತೆಯನ್ನು ಹೇಗೆ ಬಾಧಿಸಬಲ್ಲುದು ಎಂದು ಕೇಳಬೇಕಾಗುತ್ತದೆ.

ಪ್ರತಿಯೊಂದು ಫೋಟಾನ್ ಒಂದು ಅಥವಾ ಮತ್ತೊಂದು ಸೀಳುಗಂಡಿಯ ಮೂಲಕ ಒಂದು ಸ್ಪಷ್ಟ ನಿರೂಪಿತ ಪಥದಲ್ಲಿ ಚಲಿಸುತ್ತದೆ ಎಂದು ಪ್ರಾಯೋಗಿಕವಾಗಿ ಪ್ರದರ್ಶಿಸಲು ಸಾಧ್ಯ. ಈ ಪ್ರದರ್ಶನ ಅದರ ಕಣಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಆದರೆ ಇದು ವ್ಯತಿಕರಣದಿಂದ ಅಲೆಲಕ್ಷಣವನ್ನು ಪ್ರದರ್ಶಿಸುವ ಸಾಧ್ಯತೆಗೆ ಪೂರಕವಾಗಿರುತ್ತದೆ. ಈ ಹೇಳಿಕೆಗಳಿಂದ ಪೂರಕತಾತತ್ತ್ವ ಮೇಲೆ ತಿಳಿಸಿದ ತೊಂದರೆಗಳಿಗೆ ಸಮಾಧಾನ ನೀಡುತ್ತದೆ. ಮೇಲೆ ವಿವರಿಸಿರುವ ಎರಡು–ಕಂಡಿ ಪ್ರಯೋಗದಲ್ಲಿ ಪ್ರತಿಯೊಂದು ಫೋಟಾನ್ $Q_2$ ಯಾವುದಾದರೊಂದು ಬಿಂದುವಿನಲ್ಲಿ ಬೀಳೂತ್ತದೆಂದು ಫೋಟೋಗ್ರಾಫಿಕ್ ಫಲಕದ ಮೇಲೆ ಉಂಟಾಗುವ ರಾಸಾಯನಿಕ ಕ್ರಿಯೆಯಿಂದ ಅರ್ಥಮಾಡಿಕೊಳ್ಳಬಹುದು. ಆದರೆ ಆ ಬಿಂದುವಿನಲ್ಲಿ ಬೀಳುವವರೆಗೂ ಆಕಾಶದಲ್ಲಿನ (ಸ್ಪೇಸ್) ಯಾವುದಾದರೊಂದು ನಿರ್ದಿಷ್ಟ ಬಿಂದುವಿನಲ್ಲಿ ಫೋಟಾನನ್ನು ಸ್ಥಳೀಕರಿಸಲು ಸಾಧ್ಯವಿಲ್ಲ. ಅಲ್ಲದೆ ಆ ಫೋಟಾನ್ ಒಂದೇ ಒಂದು ಸೀಳುಗಂಡಿಯ ಮೂಲಕ ಹೋಗಿರಬೇಕು ಎಂದು ಪಟ್ಟು ಹಿಡಿಯುವುದೂ ಸರಿಯಲ್ಲ. ಅಲ್ಲದೆ ಪೂರಕತೆಯ ತತ್ತ್ವದ ಪ್ರಕಾರ ಒಂದು ಸೀಳುಗಂಡಿಯಲ್ಲಿ ಹೋಗುವ ಪ್ರತಿಯೊಂದು ಫೋಟಾನನ್ನು ಪತ್ತೆ ಹಚ್ಚಿ ಅದರಿಂದ ಫೋಟಾನ್ ಯಾವ ಸೀಳುಗಂಡಿಯ ಮೂಲಕ ಹೋಯಿತೆಂಬುದನ್ನು ತಿಳಿಯುವಂತೆ ಪ್ರಯೋಗವನ್ನು ಮಾರ್ಪಡಿಸಿದರೆ ಈ ಪ್ರಯತ್ನ ವ್ಯತಿಕರಣ ಪ್ರತಿರೂಪವನ್ನು ಅವಶ್ಯಕವಾಗಿ ನಾಶಮಾಡುತ್ತದೆ. ಈ ರೀತಿಯಲ್ಲಿ ಪ್ರತಿಪಾದಿಸಿದ ಪ್ರಯೋಗಗಳು ವಾಸ್ತವವಾಗಿಯೂ ಮನಸ್ಸಿನಲ್ಲಿ ಉದ್ಭವಿಸಿದವು. ಆದರೂ ಫೋಟನನ್ನು ಪತ್ತೆ ಹಚ್ಚುವ ಅನೇಕ ವಿಧಾನಗಳು ಕೊಡುವ ಪ್ರಯೋಗಾಂಶಗಳಿಂದ ಕೊನೆಯ ಹೇಳಿಕೆಯನ್ನು ಮಾಡಲಾಗಿದೆ. ಫೋಟಾನ್ ಯಾವ ಸೀಳುಗಂಡಿ ಮೂಲಕ ಹಾಯುತ್ತದೆ ಎಂಬ ಅಳತೆ ಅತಿಹೆಚ್ಚಿನ ನಿಷ್ಕೃಷ್ಟತೆಯನ್ನು ಕೋರುತ್ತದೆ; ಮತ್ತು ಇದನ್ನು ಪ್ರಯತ್ನಿಸಿಲ್ಲ. ಕ್ವಾಂಟಂ ಬಲವಿಜ್ಞಾನ ವಿರೋಧೋಕ್ತಿಗಳ ಅಸಮಂಜಸತೆಗಳನ್ನು ಒಳಗೊಂಡಿರುವುದಿಲ್ಲ ಎಂದು ತೀರ್ಮಾನಿಸುತ್ತೇವೆ. ಪೂರಕತಾ ತತ್ತ್ವದ ದೃಷ್ಟಿಯಿಂದ ಹಿಂದೆ ಉದ್ಭವಿಸಿದ ಪ್ರಶ್ನೆ ವಾಸ್ತವವಾಗಿ ಪಡೆಯಬಲ್ಲ ಮಾಹಿತಿಗಿಂತ ಹೆಚ್ಚಿನ ಮಾಹಿತಿಯನ್ನು ಒಳಗೊಂಡ ನಿಜವಾದ ಭಾವನೆಗಳ ಮೇಲೆ ಇರುತ್ತದೆ.

ಅನಿಶ್ಚಿತತಾ ತತ್ತ್ವ, ಅಲೆ–ಕಣದ್ವೈತೀಭಾವಗಳು ಸಫಲವಾಗಲು ಆಗಬೇಕಾದ ವಿಷಯಗಳು ಪ್ರಯೋಗಗಳ ಮೇಲೆ ಮಿತಿಗಳನ್ನು ಆರೋಪಿಸುತ್ತವೆ. ಇದು ಹೇಗೆ ಎಂಬುದನ್ನು ತಿಳಿಯಲು ಚಿತ್ರ (2)ರಲ್ಲಿನ $S_2$ ಮತ್ತು $S_2$ ಸೀಳುಗಂಡಿಗಳ ಹಿಂದೆ ಬಹಳ ಹತ್ತಿರದಲ್ಲಿ ಭೂಲಂಬ ನೇರದಲ್ಲಿ ಚಲಿಸಬಲ್ಲ ಸೂಚಕಗಳನ್ನು ಇರಿಸಿದ್ದೇವೆ ಎಂದು ಭಾವಿಸೋಣ. ಚಿತ್ರ (2)ರಲ್ಲಿ ಇವುಗಳ ಸ್ಥಾನಗಳನ್ನು ಸಣ್ಣ ವೃತ್ತಗಳು ಪ್ರತಿನಿಧಿಸುತ್ತವೆ. ಸೂಚಕ ಅನುಭವಿಸುವ ಹಿನ್ನೆಗೆತ (ರೀಕಾಯಿಲ್ ಆಫ್ ಎನ್ ಇಂಡಿಕೇಟರ್) ಅದನ್ನು ಒಂದು ಫೋಟಾನ್ ಸಂಘಟ್ಟಿಸಿತು ಎಂದು ತಿಳಿಸುತ್ತದೆ. ಈ ಹಿನ್ನೆಗೆತದಿಂದ ಫೋಟಾನ್ ಯಾವ ಸೀಳುಗಂಡಿಯ ಮೂಲಕ ಬಂದಿತು ಎಂದು ತಿಳಿಯಬೇಕಾದರೆ ಭೂಲಂಬವಾಗಿ ಅದರ ಪ್ರತಿಯೊಂದು ಸ್ಥಾನದಲ್ಲೂ ಇರುವ ಅನಿಶ್ಚಿತತೆ $d/2$ ಕ್ಕಿಂತ ಕಡಿಮೆಯಾಗಿರಬೇಕು. ಇಲ್ಲದಿದ್ದರೆ ಅದು ಯಾವ ಸೀಳುಗಂಡಿಯಿಂದ ಬಂದಿತು ಎಂಬುದನ್ನು ಖಚಿತವಾಗಿ ತಿಳಿಯಲು ಸಾಧ್ಯವಿಲ್ಲ. ಆದರೆ $\Delta x\,\Delta px > \hbar$ ಎಂಬ ಸಂಬಂಧದ ಪ್ರಕಾರ ಸೂಚಕದ ಪ್ರತಿಯೊಂದು ಸ್ಥಾನದ ಭೂಲಂಬ ಸಂವೇಗ $\Delta p_y$ ಯ ಮೌಲ್ಯ $\Delta p_y >> 2\hbar/d$ಯಷ್ಟು ಅನಿಶ್ಚಿತವಾಗಿರುತ್ತದೆ. ಸೂಚಕಕ್ಕೆ ಫೋಟಾನ್ ರವಾನಿಸುವ ಸಂವೇಗ $\delta p_y$ ಆಗಿದ್ದರೆ ಇದು $\Delta p_y$ ಗಿಂತ ಹೆಚ್ಚಾದ ಅಥವಾ ಸಮವಾದ ಹೊರತು ಸೂಚಕ ಆ ಫೋಟಾನನ್ನು ಗುರ್ತಿಸಲು ಸಾಧ್ಯವಿಲ್ಲ. ಸೀಳುಗಂಡಿಗಳು ಅತಿ ಕಡಿದಾಗಿದ್ದಾಗ ಮತ್ತು $X >> d$ ಅದರ ಸಂವೇಗದ $\delta p_y$ ಯಷ್ಟು ಸಂವೇಗ ವರ್ಗಾವಣೆ ಫೋಟಾನನ್ನು $\theta \sim \delta p_y/p$ ಕೋನದ ಮೂಲಕ ವಿಚಲಿಸುತ್ತದೆ. ಹೀಗಾದಾಗ ಫೋಟಾನ್ ತೆರೆಯನ್ನು ಸಂಘಟ್ಟಿಸುವ ಸ್ಥಾನ $Y$, $\Delta y$, ಯಷ್ಟು ಬದಲಾಗುತ್ತದೆ. $\Delta Y = \theta X \cong X\delta p_y / p$ ಮತ್ತು $p = h/\lambda$. ಆದ್ದರಿಂದ ಹಿನ್ನೆಗೆತಗಳನ್ನು ವೀಕ್ಷಿಸಿ ಫೋಟಾನ್ ಯಾವ ಸೀಳುಗಂಡಿಯಿಂದ ಬಂದಿತೆಂದು ತಿಳಿಯಲು ಸಾಧ್ಯವಾದಾಗ $\Delta Y >> \frac{Xh}{\pi dp}$ ಅಥವಾ $>> \frac{X\lambda}{\pi d}$ ಆದರೆ $\frac{Y}{2}\left(= \frac{\lambda X}{2d}\right)$ ದೂರ ವ್ಯತಿಕರಣದ ಪ್ರತಿರೂಪದ ಅಕ್ಕಪಕ್ಕದ ಗರಿಷ್ಠ ಮತ್ತು ಕನಿಷ್ಠ ಪಟ್ಟೆಗಳಿಗಿರುವ ಅಂತರವಾಗಿರುವುದರಿಂದ

$$\Delta Y >> \frac{Y}{\pi}$$

ಎಂದಾಗುತ್ತದೆ. ಹೀಗೆ ಫೋಟಾನ್ ಯಾವ ಸೀಳುಗಂಡಿಯ ಮೂಲಕ ಹಾಯಿತು ಎಂದು ನಿರ್ಧರಿಸಲು ಮಾಡುವ ಪ್ರಯತ್ನ ಅದಕ್ಕೆ ಭೂಲಂಬ ನೇರದಲ್ಲಿ ನಿಗ್ರಹಿಸಲಾಗದ ಮತ್ತು ಗೊತ್ತುಗುರಿಯಿಲ್ಲದ ಒಂದು ವಿಚಲನೆಯನ್ನು ($Q_2$ ತೆರೆಯ ಮೇಲೆ) ಉಂಟುಮಾಡುತ್ತದೆ; ಮತ್ತು ಇದು (ಅಂದರೆ $\Delta Y$) ಅಕ್ಕಪಕ್ಕದ ಗರಿಷ್ಠ ಮತ್ತು ಕನಿಷ್ಠ ಪಟ್ಟೆಗಳಿರುವ ದೂರಕ್ಕಿಂತ ಹೆಚ್ಚು. ಹೀಗಾದಾಗ ಫೋಟಾನುಗಳು $\Delta Y$ ಭೂಲಂಬ ದೂರಗಳ ಮೇಲೆ ಏಕರೀತಿ ತೀಕ್ಷ್ಣತೆ (ಯೂನಿಫಾರಂ ಇಂಟೆನ್ಸಿಟಿ) ಉಂಟುಮಾಡುವಂತೆ ಹರಡಿಕೊಳ್ಳುತ್ತವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ವ್ಯತಿಕರಣದ ಪ್ರತಿರೂಪ ನಾಶವಾಗುತ್ತದೆ.

**ಕ್ವಾಂಟೀಕರಣ** : ಅಭಿಜಾತ ಭೌತವಿಜ್ಞಾನದ ಪ್ರಕಾರ ಯಾವುದಾದರೊಂದು ಪ್ರಯೋಗದಲ್ಲಿ ನಿಷ್ಕೃಷ್ಟವಾಗಿ ಅಳೆದ ಪ್ರತಿಯೊಂದು ವೀಕ್ಷಿತಾಂಶಕ್ಕೂ ಲಭಿಸುವ ಸಾಂಖ್ಯಿಕೀಯ ಮೌಲ್ಯಗಳು ಸಾಮಾನ್ಯವಾಗಿ ಒಂದು ಅವಿಚ್ಛಿನ್ನ ಗುಣವನ್ನು ರೂಪಿಸಬಹುದು. ಉದಾಹರಣೆಗೆ ಒಂದು ಕಣದ ಸ್ಥಾನವನ್ನು ಸೂಚಿಸುವ x‑ ನಿರ್ದೇಶಕ $-\infty$ ಯಿಂದ $+\infty$ ವರೆಗಿರುವ ಯಾವುದೇ ಮೌಲ್ಯವನ್ನು ಪಡೆದಿರ ಬಹುದು. ಹಾಗೆಯೇ ಸಂವೇಗದ x‑ ಘಟಕವಾದ $p_x$ ಕೂಡ $-\infty$ ಯಿಂದ $+\infty$ ವರೆಗಿರುವ ಯಾವುದೇ ಮೌಲ್ಯವನ್ನು ಪಡೆದಿರಬಹುದು. ಚಲನಶಕ್ತಿ *T* ಕೂಡ 0 ಯಿಂದ $+\infty$ ವರೆಗಿರುವ ಯಾವುದೇ ಒಂದು ಮೌಲ್ಯವನ್ನು ಪಡೆದಿರಲು ಸಾಧ್ಯ. ಹೈಡ್ರೊಜನ್ ಪರಮಾಣುವಿನಲ್ಲಿರುವ ಎಲೆಕ್ಟ್ರಾನಿನ ಕಕ್ಷಕೋನ ಸಂವೇಗವನ್ನು ತಿಳಿಸುವ ಸದಿಶ l 0 ಯಿಂದ $\infty$ ವರೆಗಿನ ಯಾವುದೇ ಒಂದು ಮೌಲ್ಯವನ್ನು ಹೊಂದಿರಬಹುದು. l ಯ ಪರಿಮಾಣ *l* ಎಂದು ತಿಳಿದಿದ್ದರೆ ಕಕ್ಷೆಯ ಸಮತಲಕ್ಕೆ ಯಾದೃಚ್ಛಿಕ ವಿನ್ಯಾಸ ಇರಬಹುದಾದ್ದರಿಂದ l ಯ ಘಟಕ $-l$ ನಿಂದ $+l$ ವರೆಗಿರುವ ಯಾವುದೇ ಮೌಲ್ಯವನ್ನು ಪಡೆದಿರಲು ಸಾಧ್ಯ.

ಆದರೆ ಕ್ವಾಂಟಂ ಬಲವಿಜ್ಞಾನದಲ್ಲಿ ಯಾವುದೇ ಒಂದು ವೀಕ್ಷಿತಾಂಶದ ಸಾಧ್ಯ ಸಂಖ್ಯಿಕೀಯ ಮೌಲ್ಯಗಳು (ಪಾಸಿಬ್ಲ್ ನ್ಯೂಮರಿಕಲ್ ವೇಲ್ಯೂಸ್) ಒಂದು ಅವಿಚ್ಛಿನ್ನ ಗಣವನ್ನು (ಸೆಟ್) ರೂಪಿಸಬೇಕಾಗಿಲ್ಲ. ಕೆಲವು ವೀಕ್ಷಿತಾಂಶಗಳಿಗೆ ನಿಷ್ಕೃಷ್ಟವಾಗಿ ಅಳತೆಮಾಡಿದ ಮೌಲ್ಯಗಳು ಭಿನ್ನವಾದ ಗುಣವೊಂದನ್ನು ರೂಪಿಸುತ್ತವೆ; ಇನ್ನು ಕೆಲವಕ್ಕೆ ಸಾಂಖ್ಯಿಕೀಯಮೌಲ್ಯಗಳು ಭಾಗಶಃ ಭಿನ್ನವಾಗಿಯೂ ಭಾಗಶಃ ಅವಿಚ್ಛಿನ್ನವಾಗಿಯೂ ಇರುತ್ತವೆ. ಉದಾಹರಣೆಗೆ ಪ್ರೋಟಾನಿನ ಕ್ಷೇತ್ರದಲ್ಲಿರುವ ಎಲೆಕ್ಟ್ರಾನಿನ ಸಂಪೂರ್ಣ ಶಕ್ತಿ 0 ಯಿಂದ $+\infty$ ವರೆಗಿರುವ ಯಾವುದೇ ಒಂದು ಧನ ಮೌಲ್ಯವನ್ನು ಅಥವಾ ಗೊತ್ತಾದ ಋಣ ಮೌಲ್ಯಗಳನ್ನು ಅಂದರೆ -13.6, -13.6/4, -13.6/9, -13.6/16,. . . ಇತ್ಯಾದಿ ಮೌಲ್ಯಗಳನ್ನು ಪಡೆದಿರಲು ಸಾಧ್ಯ. ಕ್ವಾಂಟಂಬಲವಿಜ್ಞಾನದ ಪ್ರಕಾರ ಮೌಲ್ಯಗಳು ಹೀಗಿರಬಹುದಾದ್ದರಿಂದ ವೀಕ್ಷಿತಾಂಶಗಳು ಕ್ವಾಂಟೀಕೃತವಾಗಿವೆ ಎನ್ನತ್ತೇವೆ. ಪ್ರತಿಯೊಂದು ವೀಕ್ಷಿತಾಂಶದ ಅಂಗೀಕಾರಾರ್ಹ ಪೃಥಕ್ ಮೌಲ್ಯಗಳಾವುವು (ಅಲೋಯಬಲ್ ಡಿಸ್‌ಕ್ರೀಟ್ ವೇಲ್ಯೂಸ್) ಎಂಬುದನ್ನು ಕ್ವಾಂಟಂ ಸಂಖ್ಯೆಗಳು ಸ್ಪಷ್ಟವಾಗಿ ತಿಳಿಸುತ್ತವೆ. ಇವನ್ನು ನಿರ್ಧರಿಸಲು ಕೆಲವು ಸರಳ ಕ್ವಾಂಟೀಕರಣ ನಿಯಮಗಳು ಇವೆ. ಉದಾಹರಣೆಗೆ ಒಂದು ಕಕ್ಷೆಯಲ್ಲಿ ಸುತ್ತುತ್ತಿರುವ ಕಣದ ಕೋನ ಸಂವೇಗದ ವರ್ಗ $L^2, l(l+1)\hbar^2$ ಕ್ಕೆ ಸಮವಾಗಿರಬೇಕು. ಇಲ್ಲಿ *l* ಎಂಬುದು 0 ಅಥವಾ ಒಂದು ಧನಪೂಣಾಂಕವಾಗಿ ಮಾತ್ರ ಇರಲು ಸಾಧ್ಯ. ಮತ್ತೊಂದು ಸಂದರ್ಭದಲ್ಲಿ ಒಂದು ಸಾಪೇಕ್ಷಿತ ಕಣಕ್ಕೆ x, $p_x$ ಮತ್ತು T ಗಳು ಕ್ವಾಂಟೀಕೃತವಾಗಿರುವುದಿಲ್ಲ; ಮತ್ತು ಕ್ವಾಂಟಂ ಬಲವಿಜ್ಞಾನದಲ್ಲಿ ಈ ವೀಕ್ಷಿತಾಂಶಗಳ ಅಂಗೀಕಾರ್ಹ ಮೌಲ್ಯಗಳು ಅಭಿಜಾತ ಭೌತವಿಜ್ಞಾನದಲ್ಲಿ ಪಡೆಯುವಂತೆ ಯಾವುದೇ ಮೌಲ್ಯವನ್ನು ಪಡೆಯಬಹುದು. ಕ್ರಮೀಕೃತ ಕ್ವಾಂಟಂ ಸಿದ್ಧಾಂತದಲ್ಲಿ ಪ್ರತಿಯೊಂದು ವೀಕ್ಷಿತಾಂಶವೂ ಒಂದು ರೇಖೀಯ ಪರಿಕರ್ಮಿ (ಲೀನಿಯರ್ ಆಪರೇಟರ್) ಆಗಿರುತ್ತದೆ. ಇದರ ಲಾಕ್ಷಣಿಕ ಅಥವಾ ಐಗನ್ ಮೌಲ್ಯಗಳು ಪ್ರಯೋಗಗಳಲ್ಲಿ ಆ ವೀಕ್ಷಿತಾಂಶ ಪಡೆಯಬಲ್ಲ ಮೌಲ್ಯಗಳಾಗಿರುತ್ತವೆ. ಐಗನ್ ಮೌಲ್ಯಗಳ ಗುಣವನ್ನು ಆ ವೀಕ್ಷಿತಾಂಶದ ರೋಹಿತ ಎಂದು ಕರೆಯುತ್ತೇವೆ. ರೋಹಿತ ಪೃಥಕ್ಕಾಗಿ ಆಗಲಿ ಅವಿಚ್ಛಿನ್ನ ಅಥವಾ ಮಿಶ್ರವಾಗಿ ಆಗಲಿ ಇರಬಹುದು. **(ನೋಡಿ– ಕ್ವಾಂಟಂ–ಸಂಖ್ಯೆಗಳು; ಕ್ವಾಂಟೀಕರಣ)**

ಪ್ರಕೃತಿ ಕ್ವಾಂಟೀಕೃತವಾಗಿದೆ ಎಂಬ ವಿಷಯವನ್ನು ಪ್ರಾಯೋಗಿಕವಾಗಿ ಸಾಕಷ್ಟು ಸಮರ್ಥಿಸಲಾಗಿದೆ. ಉದಾಹರಣೆಗೆ ಬೆಳಕಿನ ಅಲೆಗಳಲ್ಲಿ ಶಕ್ತಿ ಮತ್ತು ಸಂವೇಗಗಳು ಕ್ವಾಂಟೀಕೃತವಾಗಿವೆ ಎಂಬುದನ್ನು ಮುಂಚೆ ವಿವರಿಸಿದ ದ್ಯುತಿವಿದ್ಯುತ್ ಮತ್ತು ಕಾಂಪ್ಟನ್ ಪರಿಣಾಮಗಳು ಪ್ರದರ್ಶಿಸುತ್ತವೆ. ಕೋನಸಂವೇಗದ ಕ್ವಾಂಟೀಕರಣವನ್ನು ಸ್ಟರ್ನ್, ಗೆರ್‌ಲಾಕ್ ಪ್ರಯೋಗ ಮನಮುಟ್ಟುವಂತೆ ವ್ಯಕ್ತಪಡಿಸುತ್ತದೆ. ಇಲ್ಲಿ ಪರಮಾಣುಗಳನ್ನು, ಉದಾಹರಣೆಗೆ ಹೈಡ್ರೊಜನ್ ಪರಮಾಣುಗಳನ್ನು, ಒಳಗೊಂಡ ಕಿರಣದಂಡವೊಂದು ತೀಕ್ಷ್ಣತೆ ಒಂದೇ ಸಮವಾಗಿಲ್ಲದ ಮತ್ತು ಪ್ರಬಲವಾಗಿ ಬೇರೆಬೇರೆಯಾಗಿರುವ ಕಾಂತಕ್ಷೇತ್ರದ ಮೂಲಕ ಹಾಯುತ್ತದೆ. ಕಾಂತಕ್ಷೇತ್ರದ ನೇರಕ್ಕೆ ಸಂಬಂಧಿಸಿದಂತೆ ಕೋನಸಂವೇಗ ಕ್ವಾಂಟೀಕರಿಸುವುದರಿಂದ ಅಭಿಜಾತ ಭೌತವಿಜ್ಞಾನದ ರೀತ್ಯ ಪರಮಾಣುಗಳು ಸುಮ್ಮನೆ ಚದರದೆ ಸ್ಪಷ್ಟವಾಗಿ ಎರಡೇ ಎರಡು ದಂಡಗಳಾಗಿ ಕಾಣಿಸಿಕೊಳ್ಳುತ್ತವೆ. ಈ ಪ್ರಯೋಗವನ್ನು ಇತರ ಪರಮಾಣುಗಳನ್ನು ಒಳಗೊಂಡ ಕಿರಣದಂಡಗಳಿಂದಲೂ ಮಾಡಿರುತ್ತಾರೆ. ಎಲ್ಲ ಸಂದರ್ಭಗಳಲ್ಲೂ ಪ್ರಯೋಗದಲ್ಲಿ ಕಂಡುಬಂದ ವಿಕ್ಷಣೆಗಳು ಕ್ವಾಂಟಂ ಬಲವಿಜ್ಞಾನ ನಿರೀಕ್ಷಿಸುವುದರೊಡನೆ ಸರಿಹೊಂದುತ್ತವೆ.

**ಸಂಭಾವ್ಯತಾ ಪರಿಶೀಲನೆಗಳು (ಪ್ರಾಬೆಬಿಲಿಟಿ ಕನ್ಸಿಡರೇಶನ್ಸ್)** : ಅನಿಶ್ಚಿತತಾ ಮತ್ತು ಪೂರಕತೆಯ ತತ್ತ್ವಗಳು ಭೌತವ್ಯವಸ್ಥೆಯೊಂದನ್ನು ವಿವರಿಸಲು ಪ್ರಯೋಗಕಾರನ ಸಾಮರ್ಥ್ಯವನ್ನು ಮಿತಿಗೊಳಿಸುತ್ತವೆ. ಹಾಗೆಯೇ ಆ ವ್ಯವಸ್ಥೆಯ ಮೇಲೆ ಮಾಡಿದ ಅಳತೆಗಳ ಫಲಿತಾಂಶಗಳ ಬಗ್ಗೆ ಭವಿಷ್ಯ ನುಡಿಯುವ ಸಾಮರ್ಥ್ಯವನ್ನೂ ಈ ತತ್ತ್ವಗಳು ಮಿತಿಗೊಳಿಸಬೇಕು. ಉದಾಹರಣೆಗೆ ಬಹಳ ಜಾಗರೂಕತೆಯಿಂದ ಮಾಡಿದ ಒಂದು ಅಳತೆ ಕಣದ x‑ ನಿರ್ದೇಶಕ ಖಚಿತವಾಗಿ $x = x_0$ ಎಂದು ತಿಳಿಸುತ್ತದೆ ಎಂದು ಭಾವಿಸೋಣ. ಅಸಾಪೇಕ್ಷಿಕ ಕ್ವಾಂಟಂ ಬಲವಿಜ್ಞಾನದಲ್ಲಿ ಇದು ಸಾಧ್ಯ. ಆಗ x ಪರಿಕರ್ಮಿಯ $x = x_0$ ಐಗೆನ್ ಮೌಲ್ಯಕ್ಕೆ ಅನುರೂಪವಾದ ಐಗೆನ್ ಸ್ಥಿತಿಯಲ್ಲಿ ಕಣವಿರುತ್ತದೆಂದು ಕ್ರಮೀಕೃತವಾಗಿ (ಫಾರ್ಮಲ್ಲಿ) ಗೊತ್ತಾಗುತ್ತದೆ. ಈ ಪರಿಸ್ಥಿತಿಗಳಲ್ಲಿ ಕಣದ ಸ್ಥಾನವನ್ನು ತತ್‌ಕ್ಷಣ ಅಳೆದರೆ ಅದು $x = x_0$ ಯಲ್ಲೇ ಇದೆಯೆಂದು ಅಳತೆ ಸೂಚಿಸುತ್ತದೆ. ಕಣ ಏಕಾಯಾಮವಿರುವ ಬಲಕ್ಷೇತ್ರವೊಂದರಲ್ಲಿ ಚಲಿಸುತ್ತಿದ್ದರೆ ಆ ಸ್ಥಳದಲ್ಲಿ ಅದರ ವಿಭವಶಕ್ತಿ (ಪೋಟೆನ್ಶಿಯಲ್ ಎನರ್ಜಿ) ನಿಷ್ಕೃಷ್ಟವಾಗಿ $V(x_0)$ ಆಗಿರುತ್ತದೆ. ಕಣ $x = x_0$ ಎಂಬಲ್ಲಿ ಇದೆ ಎಂದು ತಿಳಿದಾಗ ಅದರ ಸಂವೇಗ $p_x$ ಸಂಪೂರ್ಣವಾಗಿ ಅನಿಶ್ಚಿತವಾಗುತ್ತದೆ. ಆದ್ದರಿಂದ $x = x_0$ ಎಂಬಲ್ಲಿ ಕಣ ಸ್ಥಳೀಕರಿಸಲ್ಪಟ್ಟ ತತ್‌ಕ್ಷಣ $p_x$ ನ್ನು ಅಳೆದರೆ ಅದರ ಮೌಲ್ಯ $-\infty$ ಯಿಂದ $+\infty$ ವರೆಗಿರುವ ಯಾವುದೇ ಮೌಲ್ಯವನ್ನು ಹೊಂದಿರಬಹುದು. ಹಾಗೆಯೇ $T=p_x^2/2m$ನ ಅಳತೆ *T*ಗೆ 0 ಯಿಂದ $+\infty$ ವರೆಗಿರುವ ಯಾವುದೇ ಮೌಲ್ಯವನ್ನು ಪಡೆದಿರಬಹುದು. ಈ ಪರಿಸ್ಥಿತಿಗಳಲ್ಲಿ ವಾಸ್ತವವಾಗಿ *T* ಯ ಸರಾಸರಿ ಅಥವಾ ನಿರೀಕ್ಷಣ ಮೌಲ್ಯ ಅನಂತವಾಗಿರುತ್ತದೆ.

ಇನ್ನೂ ಸಾಮಾನ್ಯವಾಗಿ *A* ವೀಕ್ಷಿತಾಂಶದ ಐಗೆನ್ ಮೌಲ್ಯ $\alpha$ಕ್ಕೆ ಅನುರೂಪವಾದ ಐಗೆನ್ ಸ್ಥಿತಿಯಲ್ಲಿ ಕ್ವಾಂಟಂ ವ್ಯವಸ್ಥೆ ಇರುವುದಾಗಿ ಗೊತ್ತಿದೆ ಎಂದು ಭಾವಿಸೋಣ. ಆಗ *A*ಗೆ ಸ್ವಲ್ಪಮಟ್ಟಿಗಾದರೂ ಪೂರಕವಾಗಿರುವ ಮತ್ತೆ ಯಾವುದಾದರೊಂದು ವೀಕ್ಷಿತಾಂಶ *B*ಗೆ ಅಂದರೆ *A* ಮತ್ತು *B* ಯನ್ನು ಏಕಕಾಲದಲ್ಲಿ ಅತಿ ನಿಷ್ಕೃಷ್ಟತೆಯಿಂದ ಅಳೆಯಬಲ್ಲೆವೆಂಬ ವಿಷಯವನ್ನು ಅನಿಶ್ಚಿತತಾ ಸಂಬಂಧ ಮಿತಿಗೊಳಿಸಿದರೆ $B=\beta$ ವೀಕ್ಷಿತಾಂಶಕ್ಕೆ ಯಾವ ಮೌಲ್ಯ ಪಡೆಯುತ್ತೇವೆ ಎಂಬುದರ ಬಗ್ಗೆ ಏನನ್ನೂ ಹೇಳಲಾಗುವುದಿಲ್ಲ. ಆದರೆ $B = \beta$ ಐಗೆನ್ ಮೌಲ್ಯಕ್ಕೆ ಅನುರೂಪವಾದ ಐಗೆನ್ ಸ್ಥಿತಿಯಲ್ಲಿ ವ್ಯವಸ್ಥೆಯನ್ನು *A* ವೀಕ್ಷಿತಾಂಶವನ್ನು ಅಳೆದ ತರುವಾಯದಲ್ಲಿ ಪಡೆಯುವ ಸಂಭಾವ್ಯತೆ ಹೆಚ್ಚೇ ಅಥವಾ ಕಡಿಮೆಯೇ ಎಂಬುದನ್ನು ಮಾತ್ರ ತಿಳಿಯಬಹುದು. ಈ ಸಂಭಾವ್ಯತೆಯನ್ನು $P_\alpha(\beta)$ ಎಂದು ಕರೆಯೋಣ. ಹೀಗೆ ಯಾವುದಾದರೊಂದು ವೀಕ್ಷಿತಾಂಶವನ್ನು ಅಳೆದ ತತ್‌ಕ್ಷಣದಲ್ಲೆ ಅಳೆದ ಮತ್ತೊಂದು ವೀಕ್ಷಿತಾಂಶದ ಮೌಲ್ಯದ ಸಂಭಾವ್ಯತೆಯನ್ನು ಮಾತ್ರ ಪಡೆಯಬಹುದು. ವ್ಯವಸ್ಥೆಯನ್ನು *A* ವೀಕ್ಷಿತಾಂಶದ $\alpha$ ಐಗೆನ್ ಸ್ಥಿತಿಯಲ್ಲಿ ಇದ್ದಾಗ ಅನೇಕ ಸಲ ವೀಕ್ಷಿಸಿ ಪ್ರತಿಸಲವೂ *B* ವೀಕ್ಷಿತಾಂಶವನ್ನು ಮರುಕ್ಷಣದಲ್ಲೇ ಅಳೆದರೆ ಹೀಗೆ ಕಂಡುಹಿಡಿದ B ಯ ವೀಕ್ಷಿತ ಮೌಲ್ಯಗಳ ಸರಾಸರಿ *B* ಯ ನಿರೀಕ್ಷಿತ ಮೌಲ್ಯಕ್ಕೆ ಸಮ. ಇದನ್ನು *B* ವೀಕ್ಷಿತಾಂಶಕ್ಕೆ ಇರುವ ಐಗೆನ್ ಮೌಲ್ಯಗಳ ಮೇಲೆಲ್ಲ ಸಂಕಲಿಸಿ

$$\langle B \rangle = \sum \beta P_\alpha(\beta) \qquad \ldots\ldots(9)$$

ಎಂಬ ಸಂಬಂಧದಿಂದ ಪಡೆಯುತ್ತೇವೆ. *B* ವೀಕ್ಷಿತಾಂಶದ ರೋಹಿತ ಅವಿಚ್ಛಿನ್ನವಾಗಿದ್ದರೆ ಸಂಕಲನವನ್ನು ಸೂಚಿಸುವ $\Sigma$ ಚಿಹ್ನೆಯನ್ನು $\int$ ಚಿಹ್ನೆಯಿಂದ ಆದೇಶಿಸುತ್ತೇವೆ. ಪ್ರತಿಯೊಂದು ಐಗೆನ್ ಮೌಲ್ಯಕ್ಕೂ ಅನುರೂಪವಾದ ಐಗೆನ್ ಉತ್ಪನ್ನಗಳುಂಟು. ಇವನ್ನು ಉಪಯೋಗಿಸಿ $P_\alpha(\beta)$ ವನ್ನು ಲೆಕ್ಕ ಮಾಡಿ ತಿಳಿಯಬಹುದು. ವಿಶೇಷವಾಗಿ $\alpha$ವು *A* ವೀಕ್ಷಿತಾಂಶದ ಪೃಥಕ್ ಐಗೆನ್ ಮೌಲ್ಯ ಮತ್ತು ವೀಕ್ಷಿತಾಂಶಗಳಿಗೆ ಸಲ್ಲುವ ಪರಿರ್ಮಿಗಳು *x* ಮತ್ತು $p_x$ಗಳನ್ನು ಮಾತ್ರ ಅವಲಂಬಿಸಿದ್ದರೆ $P\alpha(\beta)$ ಸಂಭಾವ್ಯತೆಯನ್ನು

$$P\alpha(\beta) = \left| \int_{-\infty}^{\infty} dx\, v^*(x,\beta)\, u(x,\alpha) \right|^2 \qquad \ldots(10)$$

ಸಮೀಕರಣದಲ್ಲಿರುವಂತೆ ಆಧಾರವಾಗಿ ಇಟ್ಟುಕೊಳ್ಳುತ್ತೇವೆ. ಇಲ್ಲಿ $u(x, \alpha)$ ಎಂಬುದು $A = \alpha$ ಎಂಬುದಕ್ಕೆ ಅನುರೂಪವಾದ ಐಗೆನ್ ಉತ್ಪನ್ನ, $v(x, \beta)$ ಎಂಬುದು $B = \beta$ಕ್ಕೆ ಅನುರೂಪವಾದ ಐಗೆನ್ ಉತ್ಪನ್ನಗಳಾಗುತ್ತವೆ; ಮತ್ತು ನಕ್ಷತ್ರ ಚಿಹ್ನೆ ಸಂಮಿಶ್ರ ಸಂಯುಗ್ಮವನ್ನು (ಕಾಂಪ್ಲೆಕ್ಸ್ ಕಾಂಜ್ಯುಗೇಟ್) ಸೂಚಿಸುತ್ತದೆ. $A = \alpha$ ಸ್ಥಿತಿಯಲ್ಲಿ *A*

ವೀಕ್ಷಿತಾಂಶವನ್ನು ಅಳೆದಾಗ ಅದಕ್ಕೆ ದೊರೆಯುವ ಮೌಲ್ಯ αವೇ ಸರಿ. ಆದ್ದರಿಂದ u(x, α) ಉತ್ಪನ್ನಗಳು ಸೂಚಿಸುವ ಸ್ಥಿತಿಗಳು

$$\left|\int_{-\infty}^{\infty} dx\, u^*(x,\alpha')u(x,\alpha)\right|^{2=\delta} \alpha\alpha' \qquad ...(11)$$

ಎಂಬ ಲಂಬೀಕರಣ ಮತ್ತು ಪ್ರಸಾಮಾನ್ಯೀಕರಣಗಳನ್ನು ತಿಳಿಸುವ ನಿರ್ಬಂಧಗಳನ್ನು (ಆರ್ಥಾಗೊನಲೈಸಿಂಗ್ ಅಂಡ್ ನಾರ್ಮಲೈಸಿಂಗ್ ಕಂಡಿಷನ್ಸ್) ಸಫಲಗೊಳಿಸಬೇಕು, ಇಲ್ಲಿ $\alpha \neq \alpha'$ ಆದಾಗ $\delta_{\alpha\alpha'} = 1$ ಮತ್ತು $\alpha \neq \alpha'$ ಆದಾಗ $\delta_{\alpha\alpha'} = 1$ ಆಗಿರುತ್ತವೆ. ಸಮೀಕರಣ (10)ರಿಂದ ವ್ಯಕ್ತವಾದ ಅನುಕಲನಾಂಕವನ್ನು (ಇಂಟೆಗ್ರಲ್) v(x, β) ಮೇಲೆ u(x, α) ದ ವಿಕ್ಷೇಪ (ಪ್ರೊಜೆಕ್ಷನ್) ಎಂದು ಕರೆಯುತ್ತೇವೆ. x- ಪರಿಕರ್ಮಿಯ ಐಗೆನ್ ಉತ್ಪನ್ನಗಳ ಮೇಲೆ $A = \alpha$ ಕ್ಕೆ ಅನುರೂಪವಾದ ಐಗೆನ್ ಉತ್ಪನ್ನದ ವಿಕ್ಷೇಪ u (x, α) ಆಗಿರುತ್ತದೆ; ಮತ್ತು ವ್ಯವಸ್ಥೆ $A = \alpha$ ಐಗೆನ್ ಸ್ಥಿತಿಯಲ್ಲಿದೆ ಎಂದು ತಿಳಿದಿರುವಾಗ ಅದನ್ನು x ನಿಂದ x + dx ಅಂತರದಲ್ಲಿ ಕಾಣುವ ಸಂಭಾವ್ಯತೆ $|u(x,\alpha)|^2 dx$ ಆಗಿರುತ್ತದೆ.

ಕ್ವಾಂಟಂ ವ್ಯವಸ್ಥೆ ಹೊಸ ಮಾಹಿತಿಯನ್ನು ಬೆಳೆಸಿಕೊಳ್ಳುವ ಕಾರಣ ಅದರ ಬಗ್ಗೆ ಪಡೆದ ಹಿಂದಿನ ಮಾಹಿತಿಗಳಲ್ಲಿ (ವೀಕ್ಷಿತಾಂಶಗಳ ಮೌಲ್ಯಗಳಲ್ಲಿ) ಕೆಲವನ್ನು ಅದು ಕಳೆದುಕೊಳ್ಳುತ್ತದೆ ಅಥವಾ ಅವನ್ನು ಸುಳ್ಳು ಮಾಡುತ್ತದೆ ಎಂಬ ಪ್ರಧಾನ ಲಕ್ಷಣವನ್ನು ಈಗ ತಾನೇ ವಿವರಿಸಿದ ಕ್ವಾಂಟಂ ವ್ಯವಸ್ಥೆಯ ಕ್ರಮೀಕೃತತ್ವ (ಫಾರ್ಮಲಿಸಂ) ಒಳಗೊಂಡಿರುತ್ತದೆ. ವಾಸ್ತವವಾಗಿ ಕ್ರಮೀಕೃತತ್ವದಿಂದ ಅನಿಶ್ಚಿತತಾ ತತ್ತ್ವವನ್ನು ನಿರ್ದುಷ್ಟವಾಗಿ (ರಿಗರಸ್ಲಿ) ನಿಷ್ಪತ್ತಿಸಬಹುದು: ಮತ್ತು ಪ್ರಾಯೋಗಿಕ ಫಲಿತಾಂಶಗಳೊಡನೆ ಅತ್ಯುತ್ತಮವಾಗಿ ಹೊಂದಿಕೊಳ್ಳುವ ಮೌಲ್ಯಗಳನ್ನು ಈ ಸಿದ್ಧಾಂತದಿಂದ ಪಡೆಯಬಹುದು. ಅಲ್ಲದೆ ಈ ಕ್ರಮೀಕೃತತ್ವ ಆಂತರಿಕವಾಗಿ ಸಮಂಜಸವಾಗಿದೆ ಎಂಬುದು ಅರ್ಥವಾಗುತ್ತದೆ. ಸರ್ವಸಮವಾಗಿರುವ ವ್ಯವಸ್ಥೆಗಳ ಬಗ್ಗೆ ಅಸಂಖ್ಯಾತ ವೀಕ್ಷಣೆಗಳಿಂದ ಪಡೆದ ಮೌಲ್ಯಗಳ ಸರಾಸರಿ ಏನು ಎಂಬುದರ ಬಗ್ಗೆ ಭವಿಷ್ಯವನ್ನು ನುಡಿಯಬಹುದಾದರೂ ಒಂದೇ ಒಂದು ಕ್ವಾಂಟಂ ವ್ಯವಸ್ಥೆಯ ಮೇಲೆ ಮಾಡಿದ ಅಳತೆಯ ಭವಿಷ್ಯವನ್ನು ನುಡಿಯಲಾಗುವುದಿಲ್ಲ. ಯಾವುದಾದರೊಂದು ಸಂದರ್ಭದಲ್ಲಿ ಹಾಗೇನಾದರೂ ಆದರೆ ಬಹುಮಟ್ಟಿಗೆ ಅದು ಅದೃಷ್ಟವೇ ಸರಿ. ಆದರೂ ಕೆಲವು ಭೌತವಿಜ್ಞಾನಿಗಳು ಪ್ರಕೃತಿಯಲ್ಲಿ ಈ ಆಂತರಿಕ ಅನಿರ್ಧಾರತೆ (ಇನ್‌ಹೆರೆಂಟ್ ಇಂಡಿಟೆರ್ಮಿನೆನ್ಸಿ) ಅಡಗಿದೆ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ ಹಾಗೂ ಈ ತತ್ತ್ವ ಆಧುನಿಕ ಭೌತಸಿದ್ಧಾಂತದಲ್ಲಿರುವ ಪ್ರಬಲ ನ್ಯೂನತೆ ಎಂದು ನಂಬಿರುತ್ತಾರೆ. ಈ ಸಮಸ್ಯೆಯನ್ನು ಅತ್ಯಂತ ಸರಳವಾಗಿ ನುಡಿಯಲು ಸುಮಾರು $10^{21}$ ಪರಮಾಣುಗಳನ್ನುಳ್ಳ 1 ಗ್ರಾಂ ರೇಡಿಯಮವನ್ನು ಪರಿಗಣಿಸೋಣ. ಸಾಮಾನ್ಯವಾಗಿ ಬಳಕೆಯಲ್ಲಿರುವ ಸಿದ್ಧಾಂತದ ಪ್ರಕಾರ ಯಾವುದಾದರೊಂದು ಪರಮಾಣು ಯಾವಾಗ ನಾಶವಾಗುತ್ತದೆ ಎಂದು ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಆದರೆ ಪ್ರತಿ ಸೆಕೆಂಡಿನಲ್ಲಿಯೂ ಕ್ಷಯಿಸುತ್ತಿರುವ ಪರಮಾಣುಗಳ ಸರಾಸರಿ ಸಂಖ್ಯೆ ಎಷ್ಟೆಂದು ಅತಿನಿಷ್ಕೃಷ್ಟವಾಗಿ ತಿಳಿಸಲು ಸಾಧ್ಯ. ಪ್ರಕೃತಿಯಲ್ಲಿ ಅನಿರ್ಧಾರತೆ ಆಂತರಿಕವಾಗಿ ಅಡಗಿದೆ ಎಂಬ ತತ್ತ್ವವನ್ನು ಒಪ್ಪದ ಭೌತವಿಜ್ಞಾನಿಗಳು ಪ್ರತಿಯೊಂದು ಪರಮಾಣುವಿಗೂ ತರುವಾಯ ಆಗುವ ಚರಿತ್ರೆಯ ಬಗ್ಗೆ ಭವಿಷ್ಯ ನುಡಿಯುವುದೂ ಸಾಧ್ಯ ಎಂದು ಎಣಿಸುತ್ತಾರೆ. ಹಾಗೆ ಮಾಡಲು ಸಾಧ್ಯವಿಲ್ಲ ಎಂಬುದು ಪ್ರಕೃತಿಯಲ್ಲಿ ಅಡಗಿರುವ ಅನಿರ್ಧಾರತೆಯನ್ನು ವ್ಯಕ್ತಪಡಿಸುವುದಿಲ್ಲ; ಆದರೆ ವಿಕಿರಣಪಟುಕ್ಷಯದ ಕ್ರಿಯಾವಿನ್ಯಾಸದ (ಮೆಕಾನಿಸಂ ಆಫ್ ದಿ ರೇಡಿಯೋ ಆಕ್ಟಿವ್ ಡಿಕೆ) ಪಡೆಯಬೇಕಾದ ಮಾಹಿತಿಯ ಅಭಾವವನ್ನು ಮಾತ್ರ ತಿಳಿಸುತ್ತದೆ ಎಂದು ಭಾವಿಸುತ್ತಾರೆ. ಈ ನಂಬಿಕೆಯೊಡನೆ ಪ್ರತಿಯೊಂದು ಕ್ವಾಂಟಂ ವ್ಯವಸ್ಥೆಯಲ್ಲೂ ಅದರ ಮೇಲೆ ಪ್ರಭಾವ ನೀಡುವ ಗುಪ್ತ ಪ್ರಾಚಲಗಳಿವೆ. ಇವು ತತ್ತ್ವಶಃ ಪ್ರತಿಯೊಂದು ಕ್ವಾಂಟಂ ವ್ಯವಸ್ಥೆಯ ಅಂದರೆ ಪ್ರತಿಯೊಂದು ಪರಮಾಣುವಿನ ವರ್ತನೆಯನ್ನು ನಿಷ್ಕೃಷ್ಟವಾಗಿ ನಿರ್ಧರಿಸುತ್ತವೆ. ಆದರೆ ಈ ಪ್ರಾಚಲಗಳ ಮೌಲ್ಯಗಳನ್ನು ಈಗ ಮಾಡುತ್ತಿರುವ ಪ್ರಯೋಗಗಳಿಂದ ತಿಳಿಯಲು ಸಾಧ್ಯವಿಲ್ಲ; ಪ್ರಯೋಗಗಳ ರೀತಿಯನ್ನು ಬದಲಾಯಿಸಿ ಅವನ್ನು ಕಂಡುಹಿಡಿಯಬೇಕು ಎಂದು ನಂಬುತ್ತಾರೆ.

**ಅಲೆಉತ್ಪನ್ನ :** ಕ್ವಾಂಟಂ ವ್ಯವಸ್ಥೆ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಎಷ್ಟು ಸಾಧ್ಯವೋ ಅಷ್ಟು ನಿಷ್ಕೃಷ್ಟತೆಯಿಂದ (ಅನಿಶ್ಚಿತತಾ ಮತ್ತು ಪೂರಕತಾ ತತ್ತ್ವಗಳ ಮಿತಿಗೊಳಪಟ್ಟಂತೆ) ತಿಳಿಸಬಲ್ಲ $\psi(x)$ ಉತ್ಪನ್ನವನ್ನು ಅಲೆ ಉತ್ಪನ್ನ ಎನ್ನುತ್ತೇವೆ. $\psi(x)$ ಉತ್ಪನ್ನ ಒಂದು ಗೊತ್ತಾದ ಪರಿಕರ್ಮಿಯ ಐಗೆನ್ ಉತ್ಪನ್ನವಲ್ಲದಿದ್ದರೂ ಅದನ್ನು ನಿಖರವಾಗಿ ತಿಳಿಯಬಹುದು. ಅಲೆ ಉತ್ಪನ್ನ ಶ್ರೇಡಿಂಗರ್ ಸಮೀಕರಣವನ್ನು ಪಾಲಿಸುವುದರಿಂದ ಈ ಪರಿಸ್ಥಿತಿ ಉಂಟಾಗುತ್ತದೆ. $t = 0$ ಕಾಲದಲ್ಲಿ $\psi(x)$ನ ಮೌಲ್ಯವೇನು ಎಂದು ತಿಳಿದ ಅಲೆ ಸಮೀಕರಣವನ್ನು ಉಪಯೋಗಿಸಿ ಮುಂದಿನ ಕ್ಷಣಗಳಲ್ಲೆಲ್ಲ $\psi(x)$ನ್ನು ಸಂಪೂರ್ಣವಾಗಿ ನಿರ್ಧರಿಸಬಹುದು. ಅಂದರೆ ಕ್ವಾಂಟಂ ವ್ಯವಸ್ಥೆ ಪಡೆಯಬಲ್ಲ ಸ್ಥಿತಿಗಳನ್ನೆಲ್ಲ $\psi(x)$ ಮೂಲಕ ವಿವರಿಸಲು ಸಾಧ್ಯ.

**ಶ್ರೇಡಿಂಗರ್ ಸಮೀಕರಣ :** ಈ ಮುಂದಿನ ಸಮೀಕರಣ

$$\Psi(x,t) = A(\lambda)\exp\left[2\pi i\left(\frac{x}{\lambda} - ft\right)\right] \qquad ...(12)$$

ಅಲೆಯುದ್ದ λ, ಆವರ್ತಾಂಕ $f$ ಮತ್ತು ಕಂಪನ ವೈಸಾಲ್ಯ A(λ) ಮೌಲ್ಯಗಳನ್ನು ಹೊಂದಿ $x^-$ ಧನ ನೇರದಲ್ಲಿ ಪ್ರಸಾರವಾಗುತ್ತಿರುವ ಅಲೆಯೊಂದನ್ನು ವ್ಯಕ್ತಪಡಿಸುತ್ತದೆ. ಅಲೆ–ಕಣ ದ್ವೈತೀಭಾವದೊಡನೆ ಸಂಬಂಧಿಸಿದ ಹಿಂದಿನ ಚರ್ಚೆಯಿಂದ λ ಮತ್ತು $f$ ಗಳನ್ನು

$$\lambda = \frac{L}{P}$$

$$f = \frac{E}{h}$$

ಎಂಬ ಡೆಬ್ರಾಯ್ ಸಂಬಂಧಗಳನ್ನು ಉಪಯೋಗಿಸಿ E ಮತ್ತು p ಗಳಲ್ಲಿ ಬರೆಯಬಹುದು. ಆಗ

$$\Psi(x,t) = A(\lambda)\exp\left\{2\pi i\left(\frac{px}{h} - \frac{Et}{h}\right)\right\} \qquad ...(13)$$

ಎಂದಾಗುತ್ತದೆ. $\psi(x, t)$ ಯನ್ನು $x^-$ ಧನ ನೇರದಲ್ಲಿ $p = p_x$ ಸಂವೇಗದಿಂದ ಮುಕ್ತವಾಗಿ ಚಲಿಸುತ್ತಿರುವ (ಅಂದರೆ ಯಾವ ಬಾಹ್ಯ ಬಲವೂ ಇಲ್ಲದೆ ಚಲಿಸುತ್ತಿರುವ) ಕಣಗಳ ದಂಡಕ್ಕೆ ಅನ್ವಯಿಸುವ ಅಲೆ ಉತ್ಪನ್ನ ಎನ್ನುತ್ತೇವೆ. ಸಮೀಕರಣ (13)ನ್ನು ಅನುಕ್ರಮವಾಗಿ $x$ ಮತ್ತು $t$ ಗೆ ಸಂಬಂಧಿಸಿದಂತೆ ಅವಕಲಿಸಿದರೆ

$$px\Psi = \frac{h}{\lambda}\Psi = \frac{h}{i}\frac{\partial\Psi}{\partial x} \qquad ...(14\ a)$$

$$E\Psi = hf\Psi = -\frac{h}{i}\frac{\partial\Psi}{\partial t} \qquad ...(14b)$$

ಎಂಬ ಸಮೀಕರಣಗಳು ಸಿದ್ಧಿಸುತ್ತವೆ.

ಒಂದು ಮುಕ್ತಕಣಕ್ಕೆ $E=p^2/2m$ ಆಗಿರುವುದರಿಂದ ಸಮೀಕರಣ *(14 a), (14 b)* ಗಳನ್ನು $x$ ಗೆ ಸಂಬಂಧಿಸಿದಂತೆ ಅವಕಲಿಸಿ

$$-\frac{h^2}{2m}\frac{\partial^2\Psi}{\partial x^2} = -\frac{h}{i}\frac{\partial\Psi}{\partial t} \qquad ...(15)$$

ಎಂಬ ಸಂಬಂಧವನ್ನು ಸುಲಭವಾಗಿ ಪಡೆಯಬಹುದು. ಅಲೆಯುದ್ದ ë ಯಾದೃಚ್ಛಿಕವಾಗಿರುವ ಯಾವುದೇ ಒಂದು ಸಮತಲ ಅಲೆಗೆ ಸಮೀಕರಣ (15) ಅನ್ವಯಿಸುತ್ತದೆ. ಆದ್ದರಿಂದ ಅನೇಕ ಯಾದೃಚ್ಛಿಕ ë ಗಳನ್ನೊಳಗೊಂಡ ಅಂದರೆ ಯಾದೃಚ್ಛಿಕ ಸಂವೇಗ $p_x$ ಗಳನ್ನೊಳಗೊಂಡ ಅಲೆಗಳ ಯಾವುದೇ ಒಂದು ಅಧ್ಯಾರೋಪಣಕ್ಕೂ ಸರಿಹೊಂದುತ್ತದೆ. ಆದಕಾರಣ ಯಾವ ಬಲಕ್ಕೂ ಒಳಪಡದಂತೆ ಚಲಿಸುತ್ತಿರುವ ಕಣದ ಅಲೆ ಉತ್ಪನ್ನ ಸಮೀಕರಣ (15) ವಿವರಿಸುವ ಅಲೆಸಮೀಕರಣವನ್ನು ಪಾಲಿಸುತ್ತದೆ. ವಿಭವಶಕ್ತಿ ಬದಲಾಯಿಸುವ ಕ್ಷೇತ್ರದಲ್ಲಿ ಅಂದರೆ ಸ್ಥಾಯೀ ಬಲಕ್ಷೇತ್ರದಲ್ಲಿ (ಕನ್ ಸರ್ವೇಟಿವ್ ಫೋರ್ಸ್ ಫೀಲ್ಡ್) ಚಲಿಸುತ್ತಿರುವ ಕಣಕ್ಕೆ ಸಲ್ಲುವ ಅಲೆ ಉತ್ಪನ್ನ $\psi(x, t)$

$$-\frac{h^2}{2m}\frac{\partial^2\Psi}{\partial x^2} + V(x)\Psi = -\frac{h}{i}\frac{\partial\Psi}{\partial t} \qquad ...(16)$$

ಸಮೀಕರಣವನ್ನು ಪಾಲಿಸುತ್ತದೆ ಎಂದು ಸಮೀಕರಣ (14) ಮತ್ತು (15)ರಿಂದ ತಿಳಿಯಬಹುದು. ಈ ಸಮೀಕರಣ ನೇರದಲ್ಲಿ ಏಕ ಆಯಾಮ ಚಲನೆಯುಳ್ಳ ಮತ್ತು ಭ್ರಮಣವಿಲ್ಲದ (ಸ್ಪಿನ್‌ಲೆಸ್) ಕಣಕ್ಕೆ ಕಾಲಾವಲಂಬಿತ ಶ್ರೇಡಿಂಗ್ ಸಮೀಕರಣವಾಗಿದೆ.

$$E\ \Psi = hf\Psi = -\frac{h}{i}\frac{\partial\Psi}{\partial t}$$

ಎಂಬ ಸಂಬಂಧವನ್ನು

$$\psi(x, t) = \psi(x)\exp\left(-\frac{iET}{\hbar}\right) \qquad ......(17)$$

ಎಂಬುದು ಸಮೀಕರಣ (16)ರ ಉತ್ತರ ಎಂಬುದನ್ನೂ ಗಮನಿಸಿದರೆ

$$-\frac{h2}{2m}\frac{\partial 2\Psi}{\partial x2} + V(x)\Psi = E(\Psi) \qquad ...(18)$$

ಎಂದು ಬರೆಯಬಹುದು. ಸಮೀಕರಣ (18)ನ್ನು ಕಾಲನಿರವಲಂಬಿತ ಶ್ರೇಡಿಂಗರ್ ಸಮೀಕರಣ ಎಂದು ಕರೆಯುತ್ತಾರೆ. $\psi$ ಉತ್ಪನ್ನ ಪ್ರತಿಯೊಂದು ಬಿಂದುವಿನಲ್ಲಿಯೂ ಅವಿಚ್ಛಿನ್ನವಾಗಿರಬೇಕು; ಮತ್ತು x, $\pm\infty$ಯನ್ನು ಸಮೀಪಿಸಿದಂತೆ, ಅದು ಅನಂತವಾಗಬಾರದು ಎಂಬ ನ್ಯಾಯಸಮ್ಮತವಾದ ಸೀಮಾನಿರ್ಬಂಧಗಳನ್ನು (ಬೌಂಡರಿ ಕಂಡಿಷನ್ಸ್) ಅನುಸರಿಸಿ ಸಮೀಕರಣ (18)ನ್ನು ಸಾಧಿಸಬಹುದು. ಹೀಗೆ ಪಡೆದ ಉತ್ತರಗಳು ಗ್ರಾಹ್ಯುತ್ಪನ್ನಗಳನ್ನು ಮಿತಿಗೊಳಿಸುತ್ತವೆ. ಹಾಗೆಯೇ ಪ್ರತಿಯೊಂದು ಉತ್ಪನ್ನವೂ ಸಮೀಕರಣದಲ್ಲಿ E ಯ ಮೌಲ್ಯ ಎಷ್ಟಿರಬೇಕೆಂಬುದನ್ನು ತಿಳಿಸುತ್ತದೆ. E ಯ ಮೌಲ್ಯಗಳು V(x) ನ್ನು ಅವಲಂಬಿಸಿರುತ್ತವೆ. ಈ ರೀತಿಯಲ್ಲಿ ಕ್ವಾಂಟೀಕರಣವನ್ನು ಚರ್ಚಿಸುವಾಗ ತಿಳಿಸಿದ ಹೈಡ್ರೊಜನ್ ಪರಮಾಣುವಿನ ಸ್ಥಿತಿಗಳಿಗೆ ಸಲ್ಲುವ ಶಕ್ತಿ ಗಳನ್ನು ಪಡೆಯುತ್ತೇವೆ. ಇವು ಆ ಪರಮಾಣುವಿನ ಸ್ತಬ್ಧಸ್ಥಿತಿಗಳ (ಸ್ಟೇಷನರಿ ಸ್ಟೇಟ್ಸ್) ಶಕ್ತಿಗಳಾಗಿ ಇರುತ್ತವೆ. ಸಮೀಕರಣ (14 a), (16) ಮತ್ತು (18)ರ ರೂಪಗಳು ಕ್ವಾಂಟಂ ಬಲವಿಜ್ಞಾನದಲ್ಲಿ ಅಭಿಜಾತ ವೀಕ್ಷಿತಾಂಶ $p_x$ನ್ನು $\frac{h}{i}\left(\frac{\partial}{\partial x}\right)$ ಪರಿಕರ್ಮಿಯಿಂದ ಆದೇಶಿಸಬೇಕು ಎಂದು ತಿಳಿಸುತ್ತವೆ ಹೀಗೆ ಮಾಡಿದರೆ

$$(xp_x - p_xx)\ \psi = i\hbar\psi \qquad \ldots(19)$$

ಎಂಬ ಸಮೀಕರಣವನ್ನು ಪಡೆಯುತ್ತೇವೆ.

ಅಭಿಜಾತ ಭೌತವಿಜ್ಞಾನದಲ್ಲಿ x ಮತ್ತು $p_x$ ಗಳು ಕೇವಲ ಸಂಖ್ಯೆಗಳು. ಆದರೆ ಇಲ್ಲಿ ಅವು ಪರಿಕರ್ಮಿಗಳಾಗಿ

$$x\,p_x - p_x\,x = i\hbar \qquad \ldots\ldots.(20)$$

ಎಂಬ ವ್ಯತ್ಯಯ ನಿಯಮವನ್ನು (ಕಾಮ್ಯುಲೇಟಿವ್ ಲಾ) ಪಾಲಿಸುತ್ತವೆ.

**ಅನುರೂಪತಾ ತತ್ತ್ವ (ಕರೆಸ್‌ಪಾಂಡೆನ್ಸ್ ಪ್ರಿನ್ಸಿಪಲ್):** ಅಭಿಜಾತ ಬಲವಿಜ್ಞಾನ ಮತ್ತು ಮ್ಯಾಕ್ಸ್‌ವೆಲ್ಲನ ವಿದ್ಯುತ್ಕಾಂತ ಸಿದ್ಧಾಂತಗಳು ಸ್ಥೂಲ ವಿದ್ಯಮಾನಗಳನ್ನು (ಮ್ಯಾಕ್ರೋಸ್ಕೋಪಿಕ್ ಫಿನಾಮಿನ) ಚೆನ್ನಾಗಿ ವರ್ಣಿಸುತ್ತವೆ ಎಂದು ತಿಳಿದಿದ್ದೇವೆ. ಆದ್ದರಿಂದ ಕ್ವಾಂಟಂ ಬಲವಿಜ್ಞಾನ ಪರಿಮಿತಿಯಲ್ಲಿ ಮೇಲಿನ ಅಭಿಜಾತ ಬಲವಿಜ್ಞಾನಗಳನ್ನು ನಮಗೆ ಒದಗಿಸಬೇಕು ಎಂದು ನಿರೀಕ್ಷಿಸುವುದು ಸಹಜ. ಭೌತವಿಜ್ಞಾನದಲ್ಲಿ ಹೊಸದಾಗಿ ಕಂಡುಹಿಡಿದ ಪ್ರತಿಯೊಂದು ಸಿದ್ಧಾಂತವೂ ಸಫಲಗೊಳಿಸಬೇಕಾದ ಈ ತತ್ತ್ವವನ್ನು ಅನುರೂಪತಾ ತತ್ತ್ವ ಎನ್ನುತ್ತಾರೆ. ಈ ತತ್ತ್ವವನ್ನು ನಿಷ್ಕೃಷ್ಟವಾಗಿ ಸಾಧಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಕ್ವಾಂಟಂ ವ್ಯವಸ್ಥೆಗಳ ಮೇಲೆ ಮಾಡಿದ ಅನೇಕ ಪ್ರಯೋಗಗಳು ಇದನ್ನು ಸಮರ್ಥಿಸುತ್ತವೆ. ಸಾಮಾನ್ಯವಾಗಿ (i) $h \to 0$ ಆಗುವ, (ii) ದ್ರವ್ಯರಾಶಿ m ಹೆಚ್ಚುವ, (iii) ಅಲೆಯುದ್ದ ಕಡಿಮೆ ಆಗುವ ಮತ್ತು (iv) ಕ್ವಾಂಟಂ ಸಂಖ್ಯೆ ಅತಿಯಾಗಿ ಹೆಚ್ಚುವ ಸಂದರ್ಭಗಳಲ್ಲೆಲ್ಲ ಕ್ವಾಂಟಂ ಬಲವಿಜ್ಞಾನದಿಂದ ಬರುವ ಪರಿಣಾಮಗಳು ಅಭಿಜಾತ ಬಲವಿಜ್ಞಾನದಿಂದ ಬರುವವೇ ಆಗಿರುತ್ತವೆ. (ಸಿದ್ಧಾಂತದಲ್ಲಿ ಕಂಡುಬರುವ ಪರಿಮಾಣಗಳು ಸ್ಥಿರಮೌಲ್ಯವುಳ್ಳವು ಎಂದು ಭಾವಿಸಿ hನ್ನು ಕಡಿಮೆ ಮಾಡುತ್ತಿದ್ದೇವೆ ಎಂಬುದನ್ನು $h \to 0$ ಸಂಕೇತ ಸೂಚಿಸುತ್ತದೆ ಎಂದು ತಿಳಿಯಬೇಕು). ಈ ಲಕ್ಷಣಗಳು ಅನುರೂಪತಾ ತತ್ತ್ವವನ್ನು ಸಮರ್ಥಿಸಲು ಮಾರ್ಗದರ್ಶಕವಾಗಿರುತ್ತವೆ.

ಶ್ರೇಡಿಂಗರ್ ತನ್ನ ಸಮೀಕರಣವನ್ನು ಪ್ರತಿಪಾದಿಸುವುದಕ್ಕಿಂತ ಮುಂಚೆ ಈ ತತ್ತ್ವದಿಂದ ನೀಲ್ಸ್ ಬೋರ್ ಎಂಬ ವಿಜ್ಞಾನಿ ಕ್ವಾಂಟೀಕರಣ ನಿಯಮಗಳನ್ನು ಸ್ವಪ್ರಯತ್ನದಿಂದ ಕಂಡುಹಿಡಿಯಬಲ್ಲ ವಿಧಾನ ಒಂದನ್ನು ಒದಗಿಸಿದ್ದಾನೆ. (ಪಿ.ಕೆ.ವಿ.)

**ಕ್ವಾಂಟಂ ರಸಾಯನ ವಿಜ್ಞಾನ :** ರಾಸಾಯನಿಕ ವಿದ್ಯಮಾನಗಳನ್ನು ಕ್ವಾಂಟಂ ಬಲವಿಜ್ಞಾನದ ನಿಯಮಗಳಿಂದ ವಿವರಿಸುವ ಶಾಸ್ತ್ರ (ಕ್ವಾಂಟಂ ಕೆಮಿಸ್ಟ್ರಿ). ಇದು ಭೌತರಸಾಯನವಿಜ್ಞಾನದ ಒಂದು ವಿಭಾಗ. ಕ್ವಾಂಟಂ ರಸಾಯನಶಾಸ್ತ್ರ ಅಭಿಜಾತ ಬಲವಿಜ್ಞಾನದ ಸೂತ್ರಗಳನ್ನು ಅಣು–ಪರಮಾಣುಗಳ ಜಗತ್ತಿಗೆ ಹೊಂದುವಂತೆ ಅನ್ವಯಿಸಿಕೊಂಡು ಅವುಗಳ ರಚನೆ ಅಂತರಕ್ರಿಯೆ ಮುಂತಾದ ಗುಣಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. **(ನೋಡಿ– ಕ್ವಾಂಟಂ ಬಲವಿಜ್ಞಾನ ಕ್ವಾಂಟಂ ಸಿದ್ಧಾಂತ, ಅಸಾಪೇಕ್ಷಿಕ)**

**ಅಲೆಗಳು ಮತ್ತು ಅಲೆ ಸಮೀಕರಣಗಳು :** ಅಲೆಗಳಲ್ಲಿ ಹಲವಾರು ವಿಧಗಳಿವೆ. ನಿಂತಿರುವ ನೀರಿನಲ್ಲಿ ಒಂದು ಕಲ್ಲೆಸೆದಾಗ ಉಂಟಾಗುವ ಅಲೆಗಳಿಗೆ ನೀರಿನ ಅಲೆಗಳೆಂದು ಹೆಸರು. ಒಂದು ವಾದ್ಯದಿಂದ ಶಬ್ದ ತರಂಗಗಳು ಉತ್ಪತ್ತಿಯಾಗುತ್ತವೆ. ಬೆಳಕಿನ ಪ್ರಸರಣೆ ವಿದ್ಯುತ್ಕಾಂತ ತರಂಗಗಳಿಂದ ಆಗುತ್ತದೆಂದು ತಿಳಿದಿದೆ. ಸಾಮಾನ್ಯವಾಗಿ ಇಂಥ ತರಂಗಗಳು ಪ್ರಸಾರವಾಗುತ್ತಿರುವಾಗ ಅವುಗಳ ಹಾದಿಯಲ್ಲಿ ಯಾವ ಅಡಚಣೆಯೂ ಇಲ್ಲದಿದ್ದಲ್ಲಿ ಆಗ ಆ ತರಂಗಗಳ ಪ್ರಸಾರಕ್ಷೇತ್ರ ವಿಸ್ತಾರವಾಗಿರುತ್ತದೆ. ಇಂಥ ಅಲೆಗಳಿಗೆ ಮುಂದುವರಿಯುವ ಅಲೆಗಳು ಎಂದು ಹೆಸರು (ಚಿತ್ರ 1).

ಎಲ್ಲ ತರಹದ ಅಲೆಗಳ ಪ್ರಸಾರವನ್ನು ಈ ಕೆಳಗಿನ ಅವಕಲನ ಸಮೀಕರಣದಿಂದ ವಿವರಿಸಬಹುದು.



ಚಿತ್ರ–1 ಮುಂದುವರಿದ ಅಲೆಗಳು

$$\frac{\partial^2\phi}{\partial x^2} = \frac{1}{C^2}\frac{\partial^2\phi}{\partial t^2} \qquad \ldots\ldots.(1)$$

ಇಲ್ಲಿ $\phi$ ತರಂಗದ ಕಂಪನವೈಶಾಲ್ಯ (ಆಂಪ್ಲಿಟ್ಯೂಡ್). x ಮತ್ತು t ಗಳು ಪ್ರಸಾರದಿಕ್ಕು ಮತ್ತು ಕಾಲವನ್ನು ಸೂಚಿಸುತ್ತವೆ. c ತರಂಗಚಲನವೇಗ, ಸಮೀಕರಣ (1) ನ್ನು ಬಿಡಿಸಿದರೆ ಪರಿಹಾರ

$$\phi = a \sin 2\pi \left(\frac{x}{\lambda} - vt\right) \qquad \ldots\ldots(2)$$

ಎಂದಾಗುತ್ತದೆ. ಇಲ್ಲಿ $\alpha$, $\lambda$ ಮತ್ತು v ಗಳು ಅನುಕ್ರಮವಾಗಿ ಕಂಪನ ವೈಶಾಲ್ಯ, ಅಲೆಯುದ್ದ ಮತ್ತು ಆವರ್ತಾಂಕವನ್ನು ಸೂಚಿಸುತ್ತವೆ.

ಚಿತ್ರ–2 ಸ್ಥಿರ ಅಲೆಗಳು

ಪ್ರಸಾರವಾಗುತ್ತಿರುವ ಒಂದು ತರಂಗಕ್ಕೆ ಅಡಚಣೆ ಎದುರಾದಾಗ ಅದು ಪ್ರತಿಬಿಂಬಿಸುತ್ತದೆ. ಇಂಥ ಒಂದು ಸಂದರ್ಭವನ್ನು ಚಿತ್ರ (2) ರಲ್ಲಿ ತೋರಿಸಿದೆ. ಈ ಕಂಪನವನ್ನು ಕೆಳಗಿನ ಸಮೀಕರಣ ತಿಳಿಸುತ್ತದೆ.

$$\phi_1 = \alpha \sin 2\pi\left(\frac{x}{y} - vt\right)$$

ಇದು ಬಲಕೊನೆಗೆ ಬಂದಾಗ ಪ್ರತಿಬಿಂಬಿಸುತ್ತದೆ. ಈ ಅಲೆಯ ಸಮೀಕರಣ

$$\phi_2 = \alpha \sin 2\pi\left(\frac{x}{y} + vt\right)$$

ಎಂದಾಗುತ್ತದೆ. ಸಾಮಾನ್ಯವಾಗಿ ಒಂದು ರೇಖೀಯ ಅವಕಲನ ಸಮೀಕರಣಕ್ಕೆ $\phi_1$ ಮತ್ತು $\phi_2$ ಎಂಬ ಎರಡು ಪರಿಹಾರಗಳಿದ್ದರೆ $\phi_1 + \phi_2$ ಕೂಡ ಆ ಸಮೀಕರಣದ ಪರಿಹಾರವಾಗುತ್ತದೆ. ಅಂದರೆ ಫಲಿತ ತರಂಗಚಲನೆಯ ವೈಶಾಲ್ಯ $\phi$ ಆಗಿದ್ದರೆ

$$\phi = \phi_1 + \phi_2 = \alpha \sin 2\pi \left(\frac{x}{y} - vt\right) + \alpha \sin 2\pi\left(\frac{x}{y} + vt\right)$$

$$= 2\,\alpha \sin \frac{2\pi r}{\lambda} \cos 2\pi vt \qquad \ldots(3)$$

ಸಮೀಕರಣ (3) ರ ಪ್ರಕಾರ ಉತ್ಪತ್ತಿಯಾದ ತರಂಗಮಾಲೆಯ ವೈಶಾಲ್ಯ $\phi$ ಕೆಲವು ಸಂದರ್ಭಗಳಲ್ಲಿ

ಶೂನ್ಯವಾಗಬಹುದು. ಅಂದರೆ $\sin \frac{2\pi x}{\lambda} = 0$ ಅಥವಾ $\frac{2\pi x}{\lambda} = n\pi$ ಆಗಬೇಕು. ಇಲ್ಲಿ n ಒಂದು ಪೂರ್ಣಾಂಕ. ಆದ್ದರಿಂದ $x = n\lambda/2$ ಆದಾಗ $\phi$ ಶೂನ್ಯವಾಗುತ್ತದೆ.

ಈ ಮೇಲ್ಕಂಡಂತೆ ಹಿಗ್ಗಿಸಿದ ತಂತಿಯಲ್ಲಿ ಉತ್ಪತ್ತಿಯಾದ ಅಲೆಗಳನ್ನು ಸ್ತಬ್ಧ ಅಲೆಗಳೆಂದು (ಸ್ಟೇಶನರಿ ವೇವ್ಸ್) ಕರೆಯುತ್ತಾರೆ. ಸಮೀಕರಣ (3)ರಲ್ಲಿ $2\alpha \sin\left(\frac{2\pi x}{\lambda}\right)$ಕ್ಕೆ ಬದಲು $f$(x) ಬರೆದರೆ

$$\phi = f(x) \cos 2\pi\, vt$$

$$\frac{\partial^2\phi}{\partial x^2}=\frac{\partial^2 f(x)}{\partial x^2}\cos 2\pi vt$$

$$\frac{\partial^2\phi}{\partial t^2}=-4\pi^2v^2 f(x)\cos 2\pi vt$$

ಅಲೆಸಂಬಂಧ $c = v\lambda$ ವನ್ನು ಉಪಯೋಗಿಸಿಕೊಂಡು ಸಮೀಕರಣ (1)ರಲ್ಲಿ ಅನ್ವಯಿಸಿದರೆ

$$\frac{\partial^2 f(x)}{\partial x^2}=\frac{4\pi^2}{\lambda^2}f(x) \qquad \text{......(4)}$$

ಎಂದಾಗುತ್ತದೆ. ಇಲ್ಲಿ $f$(x) ನ್ನು ಹಿಗ್ಗಿಸಿದ ತಂತಿಯಲ್ಲಿ ಉತ್ಪತ್ತಿಯಾದ ಅಲೆಗಳ ವೈಶಾಲ್ಯ ಉತ್ಪನ್ನ (ಆಂಪ್ಲಿಟ್ಯೂಡ್ ಫಂಕ್ಷನ್) ಎನ್ನಬಹುದು. ಸಾಮಾನ್ಯವಾಗಿ ಸಮೀಕರಣ (4) ರೇಖೀಯ ಅವಕಲನ ಸಮೀಕರಣವಾದ್ದರಿಂದ ಅದಕ್ಕೆ ಅನಂತ ಪರಿಹಾರಗಳಿರುತ್ತವೆ. ಈ ಉತ್ತರಗಳ ಸಂಖ್ಯೆ ಸಾಂತವಾಗಬೇಕಾದರೆ $f$(x)ಗೆ ಗಡಿನಿರ್ಬಂಧಗಳನ್ನು (ಬೌಂಡರಿ ಕಂಡಿಷನ್ಸ್) ವಿಧಿಸಬೇಕು. ಈ ನಿರ್ಬಂಧಗಳ ಪ್ರಕಾರ $f$(x) ಅವಿಚ್ಛಿನ್ನವಾಗಿರಬೇಕು.

ಚಿತ್ರ–1 ಮುಂದುವರಿಯುವ ಅಲೆಗಳು

ಸಾಂತವಾಗಿರಬೇಕು, ಪ್ರತಿಸ್ಥಳದಲ್ಲೂ ಅದಕ್ಕೆ ಏಕಮೌಲ್ಯವಿರಬೇಕು ಮತ್ತು ಗಡಿಗಳ ಬಳಿ ಶೂನ್ಯವಾಗಬೇಕು. ಈ ರೀತಿ ಬಂದ ಪರಿಹಾರಗಳನ್ನು ಮಾತ್ರ ಸಮೀಕರಣದ ಸಮರ್ಪಕ ಉತ್ತರಗಳೆಂದು ತೆಗೆದುಕೊಳ್ಳಬೇಕು. ಇಲ್ಲಿ $f$(x) ಗೆ ಅಲೆಉತ್ಪನ್ನ ಅಥವಾ ಐಗನ್ ಉತ್ಪನ್ನ ಎಂದೂ ಅದಕ್ಕೆ ಸಂಬಂಧಿಸಿದ ಅಲೆಯುದ್ದ ಮೌಲ್ಯಗಳಿಗೆ ಐಗನ್ ಮೌಲ್ಯಗಳೆಂದೂ ಹೆಸರು.

ಸಮೀಕರಣ(4)ನ್ನು ಎಲೆಕ್ಟ್ರಾನ್ ಮುಂತಾದ ಕಣಗಳಿಗೂ ಅನ್ವಯಿಸಬಹುದು. ಇವುಗಳ ದ್ರವ್ಯತರಂಗಗಳ (ಮ್ಯಾಟರ್ ವೇವ್ಸ್) ವೈಶಾಲ್ಯವನ್ನು $\psi$x ಎಂದಿಟ್ಟುಕೊಂಡಲ್ಲಿ $f$(x) ಬದಲು $\psi$ ಯನ್ನು ಜೋಡಿಸಿದರೆ

$$\frac{\partial^2\psi}{\partial x^2}=-\frac{4\pi}{\lambda^2}\psi_x$$

ಎಂದಾಗುತ್ತದೆ. ಈ ಸಮೀಕರಣವನ್ನು ಮೂರು ಆಯಾಮಗಳಲ್ಲಿ (ಡೈಮೆನ್ಷನ್ಸ್) ಬರೆದಾಗ

$$\frac{\partial^2\psi}{\partial x^2}+\frac{\partial^2\psi}{\partial y^2}+\frac{\partial^2\psi}{\partial x^2}=-\frac{4\pi^2}{\lambda^2}\psi$$

ಎಂದಾಗುತ್ತದೆ. ಈಗ ಡೀಬ್ರಾಗ್ಲಿ ಸಮೀಕರಣ $\lambda=\frac{h}{mv}$ ಮತ್ತು ಕಣದ ಪೂರ್ಣ ಶಕ್ತಿ E = ಚಲನಶಕ್ತಿ + ವಿಭವಶಕ್ತಿ = 1/2 $mv^2$ +V ಎಂಬ ಸಂಬಂಧಗಳನ್ನು ಉಪಯೋಗಿಸಿಕೊಂಡರೆ ಮೇಲಿನ ಸಮೀಕರಣವನ್ನು

$$\frac{\partial^2\psi}{\partial x^2}+\frac{\partial^2\psi}{\partial y^2}+\frac{\partial^2\psi}{\partial z^2}+\frac{8\pi^2}{h^2}(E-V)\psi=0$$

ಎಂಬ ರೂಪಕ್ಕೆ ತರಬಹುದು. ಇಲ್ಲಿ ಲಾಪ್ಲಾಸಿಯನ್ ಪರಿಕರ್ಮಿ

$$\nabla^2=\frac{\partial^2}{\partial x^2}+\frac{\partial^2}{\partial y^2}+\frac{\partial^2}{\partial z^2}$$

ಎಂದಿಟ್ಟುಕೊಂಡರೆ ಮೇಲಿನ ಸಮೀಕರಣ

$$\nabla^2\psi+\frac{8\pi^2 m}{h^2}(E-V)\psi=0 \qquad \text{.......(5)}$$

ಎಂದಾಗುತ್ತದೆ.

ಸಮೀಕರಣ (5)ನ್ನು ಶ್ರೇಡಿಂಗರ್ ಸಮೀಕರಣವೆಂದು ಕರೆಯುತ್ತಾರೆ. ಇದು ಒಂದು ಸಾರ್ವತ್ರಿಕ ಸಮೀಕರಣವಾಗಿದ್ದು ದ್ರವ್ಯರಾಶಿ m, ಪೂರ್ಣಶಕ್ತಿ E, ವಿಭವ ಶಕ್ತಿ V ಮತ್ತು ಚಲನವೇಗ v ಇರುವ ಎಂಥ ಕಣಕ್ಕಾದರೂ ಅನ್ವಯಿಸುತ್ತದೆ. ಸಮೀಕರಣ (5)ನ್ನು ಇನ್ನೂ ಕಿರಿದಾಗಿ ಬರೆಯಬೇಕಾದರೆ $-\frac{h^2}{8\pi^2 m}\nabla^2+V=H$ ಎಂದಿಟ್ಟುಕೊಳ್ಳಬೇಕು. ಇಲ್ಲಿ H ಹ್ಯಾಮಿಲ್ಟೋನಿಯನ್ ಪರಿಕರ್ಮಿ. ಈಗ ಸಮೀಕರಣ (5) ಈ ಕೆಳಗಿನ ರೂಪ ತಳೆಯುತ್ತದೆ.

$$H\psi = E\psi \qquad \text{.......(6)}$$

ಸಮೀಕರಣ (6)ರ ಪ್ರಕಾರ $\psi$ ಯ ಮೇಲೆ H ಪರಿಕರ್ಮಿತವಾದರೆ ವಸ್ತುವಿನ ಪೂರ್ಣಶಕ್ತಿ E ಯನ್ನು ಲೆಕ್ಕಾಚಾರಮಾಡಬಹುದು. ಅದರಿಂದ H ಅನ್ನು ಪೂರ್ಣಶಕ್ತಿ ಪರಿಕರ್ಮಿ ಎಂದೂ ಕರೆಯುವುದುಂಟು.

ಶ್ರೇಡಿಂಗರ್ ಸಮೀಕರಣದಲ್ಲಿ $\psi$ ಎನ್ನುವುದು ಕಣದ ದ್ರವ್ಯ–ಅಲೆಗಳ ವೈಶಾಲ್ಯದ ಮೌಲ್ಯವನ್ನು ಗುರುತಿಸುತ್ತದೆ. ಆದರೆ $\psi^2$ ವನ್ನು ತೆಗೆದುಕೊಂಡರೆ ಅದು ಯಾವುದೇ ಸ್ಥಳದಲ್ಲಿ ಕಣ ಇರುವಿಕೆಯ ಸಂಭಾವ್ಯತೆಯನ್ನು ತೋರಿಸುತ್ತದೆ. ಏಕೆಂದರೆ ಬೆಳಕು ಅಥವಾ ಇತರ ತರಂಗಗಳಲ್ಲಿ ವೈಶಾಲ್ಯದ ವರ್ಗ ಅಲೆಯ ತೀವ್ರತೆಗೆ ಸಮವಾಗಿದೆ. ಅದೇ ರೀತಿ ಒಂದು ಕಣದ ದ್ರವ್ಯಅಲೆಗಳ $\psi^2$dv ಬೆಲೆಯನ್ನು ತೆಗೆದುಕೊಂಡರೆ ಅದು dv ಸಲೆಯಿರುವ ಫಲಿತಾಂಶವೊಂದರಲ್ಲಿ ಕಣವಿರುವ ಸಂಭಾವ್ಯತೆಯನ್ನು ತಿಳಿಸುತ್ತದೆ.

$\psi$ ಯನ್ನು ಸಂಭಾವ್ಯತೆಯ ವೈಶಾಲ್ಯ ಉತ್ಪನ್ನವೆಂದು (ಪ್ರಾಬೆಬಿಲಿಟಿ ಆಂಪ್ಲಿಟ್ಯೂಡ್ ಫಂಕ್ಷನ್) ಕರೆಯಬಹುದಾದರೆ ಅದು ಕೆಲವು ಗಣಿತ ನಿರ್ಬಂಧಗಳಿಗೆ ಒಳಪಟ್ಟಿರಬೇಕು.

1. $\psi$ ಗೆ ಪ್ರತಿಯೊಂದು ಸ್ಥಾನದಲ್ಲೂ ಒಂದೇ ಒಂದು ಮೌಲ್ಯವಿರಬೇಕು. ಅಂದರೆ ಪ್ರತಿಯೊಂದು ಸ್ಥಾನದಲ್ಲೂ ಕಣವಿರುವಿಕೆಯನ್ನು ಕಂಡುಹಿಡಿಯುವ ಸಂಭಾವ್ಯತೆಗೆ ಏಕಮೌಲ್ಯವಿರಬೇಕು. ಆದರೆ

$$\int_{\infty}^{\infty}\psi^2 dr=\int_{\infty}^{\infty}P(x,y,z)\,dv=1$$

ಆಗಿರಬೇಕು. [ ಇಲ್ಲಿ (P $x, y, z$ ) ಅನ್ನು ಸಂಭಾವ್ಯತೆಯ ಸಾಂದ್ರತೆಯೆಂದು ಕರೆಯಬಹುದು]. ಏಕೆಂದರೆ ಕಣ ವಿಶ್ವದೊಳಗೆ ಇರಬೇಕಾದ್ದರಿಂದ $-\infty$ ದಿಂದ $+\infty$ ದ ವರೆಗಿನ ಆಕಾಶದಲ್ಲಿ ಇದು ಇರಬಹುದಾದ ಸಂಭಾವ್ಯತೆ 1 ಆಗಿದೆ. ಕೆಲವು ಭಾರಿ $\psi$ ಮೌಲ್ಯವನ್ನು ಸಮ್ಮಿಶ್ರ ಸಂಖ್ಯೆಯಲ್ಲಿ (ಕಾಂಪ್ಲೆಕ್ಸ್ ನಂಬರ್) ತಿಳಿಸಬೇಕಾಗುತ್ತದೆ. ಅಂದರೆ $\psi$ ಯನ್ನು a + ib ಯಿಂದ ತೋರಿಸಿದರೆ ಇದರ ಸಮ್ಮಿಶ್ರಸಂಯುಗ್ಮಿ (ಕಾಂಪ್ಲೆಕ್ಸ್ ಕಾಂಜ್ಯುಗೇಟ್) a - ib ಎಂದಿಟ್ಟುಕೊಳ್ಳಬಹುದು. ಈ ಸಂದರ್ಭಗಳಲ್ಲಿ

$$\int_{-8}^{\infty}\psi\psi^*\ dv=1$$

ಆಗಬಹುದು.

2. $\psi_X$ ನ್ನು x–ದಿಕ್ಕಿನ ಅಲೆಉತ್ಪನ್ನ ಎಂದಿಟ್ಟುಕೊಂಡರೆ x ಗೆ ಭೌತಿಕವಾಗಿ ಸಾಧ್ಯವಾಗುವ ಎಲ್ಲ ಮೌಲ್ಯಗಳಿಗೂ $\psi_X$ ಸಾಂತವಾಗಿರಬೇಕು. $\psi_X$ ಯಾವ ಸ್ಥಾನಗಳಲ್ಲೂ ಅನಂತವಾಗಿರಬಾರದು. ಒಂದು ವೇಳೆ ಈ ರೀತಿಯಾದಲ್ಲಿ ಆಗ ಕಣದ ನಿಖರವಾದ ಸ್ಥಾನ ಗೊತ್ತಾಗುತ್ತದೆ. ಇದು ಕಣದ ಅಲೆಗುಣಗಳಿಗೆ ವಿರುದ್ಧವಾಗುತ್ತದೆ.

3. $\psi_X$ ಭೌತಿಕವಾಗಿ ಸಾಧ್ಯವಾಗುವ ಎಲ್ಲ ಮೌಲ್ಯಗಳಿಗೂ ಅವಿಚ್ಛಿನ್ನವಾಗಿರಬೇಕು. ಈ ನಿರ್ಬಂಧ ಕಣದ ಅಲೆಸಮೀಕರಣಕ್ಕೆ ಭೌತಿಕವಾಗಿ ಅನುಗುಣವಾದ ಪರಿಹಾರಗಳನ್ನು ಕಂಡುಹಿಡಿಯಲು ಸಹಾಯಮಾಡುತ್ತದೆ.

4. $\psi_X$ ಗಡಿಯ ಅಂಚಿನಲ್ಲಿ ಶೂನ್ಯವಾಗುವಂಥ ಗುಣವನ್ನು ಪಡೆದಿರಬೇಕು. ಅಲೆ ಸಮೀಕರಣದ ಉಪಯೋಗಗಳು. 1.ಮುಕ್ತಕಣಗಳು (ಫ್ರೀ ಪಾರ್ಟಿಕಲ್ಸ್): ಇಂಥ ಕಣಗಳಿಗೆ ಚಲನಶಕ್ತಿ ಮಾತ್ರ ಇರುತ್ತದೆ. ಅಂದರೆ ವಿಭವಶಕ್ತಿ ಸೊನ್ನೆ. ಆಗ ಶ್ರೇಡಿಂಗರ್ ಸಮೀಕರಣವನ್ನು (ಒಂದೇ ಆಯಾಮದಲ್ಲಿ) ಈ ಕೆಳಗಿನಂತೆ ಬರೆಯಬಹುದು.

$$\frac{d^2\psi}{dx^2}+\frac{8\pi^2 m}{h^2}E_x\,\psi=0$$

ಇದರ ಪರಿಹಾರ

$$\psi_x=A\sin\left(\frac{8\pi^2 mE_x}{h^2}\right)$$

ಇಲ್ಲಿ A ಒಂದು ಸ್ಥಿರಾಂಕ. ಈ ಪರಿಹಾರದ ಪ್ರಕಾರ E ಧನವಾಗಿರುವ ವರೆಗೂ $\psi_x$ ಸಾಂತವಾಗುವ ಏಕಮೌಲ್ಯ ಮತ್ತು ಅವಿಚ್ಛಿನ್ನ ಗುಣಗಳನ್ನು ಪಡೆದಿರುತ್ತದೆ. ಇದನ್ನು ಪರಮಾಣು ಪಟಲದ ಕೊನೆಯಲ್ಲಿ ಬರುವ ಅವಿಚ್ಛಿನ್ನಸ್ಥಿತಿಯನ್ನು, ಅಂದರೆ ಎಲೆಕ್ಟ್ರಾನ್ ಪರಮಾಣುವಿನಿಂದ ಬಿಡುಗಡೆ ಹೊಂದಿ ಅದಕ್ಕುಂಟಾಗುವ ಅವಿಚ್ಛಿನ್ನಶಕ್ತಿ ಸ್ಥಿತಿಯನ್ನು ವಿವರಿಸಲು, ಉಪಯೋಗಿಸಬಹುದು.

2. ಪೆಟ್ಟಿಗೆಯೊಳಗಡೆ ಇರುವ ಕಣ : ಯಾವುದಾದರೊಂದು ಕಣವನ್ನು ಅದರ ಪೂರ್ಣಶಕ್ತಿ E ಗಿಂತ ಹೆಚ್ಚಿನ ವಿಭವಶಕ್ತಿ ಕೋಟೆಯೊಂದರಿಂದ ಸುತ್ತುವರಿಸಿದಲ್ಲಿ ಆಗ ಆ ಕಣ ತಪ್ಪಿಸಿಕೊಳ್ಳಲಾಗದೆ ಸೆರೆಯಾಗುವುದು. ಇಂಥ ವಿಭವಶಕ್ತಿ ಆಯಾಕಾರದ ಪೆಟ್ಟಿಗೆಯ ರೂಪದಲ್ಲಿದೆಯೆಂದು ಊಹಿಸಿದರೆ ಇಲ್ಲಿ ಎರಡು ತರಹದ ಸಂದರ್ಭಗಳನ್ನು ಗೊತ್ತುಮಾಡಬಹುದು:

(i) ಅನಂತ ವಿಭವಶಕ್ತಿಯುತ ತಡೆಯುಳ್ಳ ಪೆಟ್ಟಿಗೆಯಲ್ಲಿನ ಕಣ;

(ii) ಸಾಂತ ವಿಭವಶಕ್ತಿಯುತ ತಡೆಯುಳ್ಳ ಪೆಟ್ಟಿಗೆಯಲ್ಲಿನ ಕಣ;

(i) ಅನಂತ ವಿಭವಶಕ್ತಿಯುತ ತಡೆಯುಳ್ಳ ಪೆಟ್ಟಿಗೆ : ಕಣ ಇಂಥ ಪೆಟ್ಟಿಗೆಯಲ್ಲಿದ್ದರೆ ಅದು ತಪ್ಪಿಸಿಕೊಂಡು ಹೊರಬರುವ ಸಂಭಾವ್ಯತೆ ಶೂನ್ಯ. ಪೆಟ್ಟಿಗೆಯೊಳಗೆ ಕಣ ಯಾವಾಗಲೂ ಓಡಾಡುತ್ತಲೇ ಇರುವುದರಿಂದ ಅದರ ವಿಭವಶಕ್ತಿ ಶೂನ್ಯವಾಗುತ್ತದೆ. ಅಂದರೆ ಕಣ ಚಲನಶಕ್ತಿಯನ್ನು ಮಾತ್ರ ಪಡೆದಿರುತ್ತದೆ. ಆಗ ಇದರ ಶ್ರೇಡಿಂಗರ್ ಸಮೀಕರಣ (ಒಂದು ಆಯಾಮ)

$$\frac{d^2\psi}{dx_2} + \frac{8\pi^2 mE_x}{h^2}\psi = 0$$

ಎಂದಾಗುತ್ತದೆ. ಇದರ ಪರಿಹಾರ




$$\psi_x = A\sin\left(\frac{8\pi^2 mE_x}{h^2}\right)^{1/2} x$$

ಕಣದ ಈ ಸ್ಥಿತಿಯನ್ನು ಚಿತ್ರ (3) (a) , (b), (c) ಗಳಲ್ಲಿ ತೋರಿಸಿದೆ. ಗಡಿ ನಿರ್ಬಂಧಗಳನ್ನು ಉಪಯೋಗಿಸಿದಲ್ಲಿ

$$A = \sqrt{\frac{2}{a}}$$

ಆಗುತ್ತದೆ. ಮತ್ತು

$$\left(\frac{8\pi^2 mE_x}{h^2}\right)^{1/2} a = n_x\pi$$

ಇಲ್ಲಿ $n_x$ ಅಶೂನ್ಯ ಪೂರ್ಣಾಂಕ.

$$\therefore \Psi x = \sqrt{\frac{2}{a}}\sin\left(\frac{8\pi^2 mE_x}{h^2}\right)^{\frac{1}{2}} x$$

$$= \sqrt{\frac{2}{a}}\sin\left(\frac{n_x\pi}{a}\right)$$

ಮೂರು ಆಯಾಮಗಳಲ್ಲಿ $\psi = \psi_x \psi_y \psi_z$

ಅಂದರೆ

$$\Psi = \sqrt{\frac{8}{abc}} \quad \sin\left(\frac{n_x\pi_x}{a}\right)\sin\left(\frac{n_y\pi_y}{b}\right)\sin\left(\frac{n_z\pi_z}{c}\right)$$

ಕಣದ ಶಕ್ತಿ ಕ್ವಾಂಟಂ ರೂಪದಲ್ಲಿವೆ. ಅದು

$$E = \frac{h2}{8m}\left(\frac{n_x^{\,2}}{a^2} + \frac{n_y^{\,2}}{b^2} + \frac{n_z^{\,2}}{c^2}\right)$$

ಎಂಬ ಸಮೀಕರಣದಿಂದ ಗೊತ್ತಾಗುತ್ತದೆ.




ಚಿತ್ರ–4 ಸಾಂತ ವಿಭವಶಕ್ತಿಯುತ ತಡೆಯುಳ್ಳ ಪೆಟ್ಟಿಗೆ

(ii) ಸಾಂತ ವಿಭವಶಕ್ತಿಯುತ ತಡೆಯುಳ್ಳ ಪೆಟ್ಟಿಗೆಯಲ್ಲಿನ ಕಣ; ಈ ಪರಿಸ್ಥಿತಿಯನ್ನು 4ನೆಯ ಚಿತ್ರದಲ್ಲಿ ತೋರಿಸಿದೆ.

ವಿಭವಶಕ್ತಿ ತಡೆ ಸಾಂತವಾದರೂ ಕಣದ ಪೂರ್ಣಶಕ್ತಿಗಿಂತ ಹೆಚ್ಚಿನದಾಗಿರುವುದರಿಂದ ಅಭಿಜಾತ ಬಲವಿಜ್ಞಾನದ ಪ್ರಕಾರ ಕಣ ಪೆಟ್ಟಿಗೆಯಿಂದ ತಪ್ಪಿಸಿಕೊಳ್ಳಲಾರದು.

ಆದರೆ ಕ್ವಾಂಟಂ ಬಲವಿಜ್ಞಾನದ ಪ್ರಕಾರ ಕಣ ಇಂಥ ಸಂದರ್ಭದಲ್ಲಿ ತಪ್ಪಿಸಿಕೊಳ್ಳುವ ಸಂಭಾವ್ಯತೆ ಉಂಟು. ಶ್ರೇಡಿಂಗರ್ ಸಮೀಕರಣದ ಸಾರ್ವತ್ರಿಕ ಪರಿಹಾರವನ್ನು

$$\Psi = A\exp\left[\frac{2\pi ix}{h}\sqrt{2m(E-V)}\right]$$

ಎಂದು ಬರೆಯಬಹುದು. ಕಣ ಪೆಟ್ಟಿಗೆಯೊಳಗಿದ್ದಾಗ ಕಣದ ಪೂರ್ಣಶಕ್ತಿ E (ಅಂದರೆ ಚಲನಶಕ್ತಿ) ವಿಭವಶಕ್ತಿ ತಡೆ V ಗಿಂತ ಹೆಚ್ಚಿನದಾದ್ದರಿಂದ ಅಲ್ಲಿ

$$\psi_x = A\sin\left(\frac{8\pi^2 mE_x}{h^2}\right)^{1/2} x$$

ಆಗುತ್ತದೆ. ಆದರೆ ವಿಭವಶಕ್ತಿ ತಡೆಯೊಳಗೆ $V > E$ ಆದ್ದರಿಂದ $\sqrt{2m(E-V)}$ ಋಣವಾಗುತ್ತದೆ. ಆಗ $\sqrt{-1}$ ನ್ನು ಹೊರಕ್ಕೆ ತೆಗೆದು iಯ ಜೊತೆ ಗುಣಿಸಿದಲ್ಲಿ

$$\Psi = A\exp\left[-\frac{2\pi x}{h}\sqrt{2m(V-E)}\right]$$

ಎಂದಾಗುತ್ತದೆ. ಈ ಸಮೀಕರಣದ ಪ್ರಕಾರ ಕಣದ ಸಂಭಾವ್ಯತೆ ವಿಭವ ಶಕ್ತಿ ತಡೆಯಲ್ಲಿ ಶೂನ್ಯವಾಗುವುದಿಲ್ಲ. ψ ಮೌಲ್ಯ ಈ ಸ್ಥಿತಿಯಲ್ಲಿ ಚಿಕ್ಕದಾದರೂ ಸಾಂತವಾಗಿರುವುದರಿಂದ ಕಣ ಪೆಟ್ಟಿಗೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿದೆಯೆಂದು ತೋರಿಸುತ್ತದೆ. ಇದಕ್ಕೆ ಸುರಂಗ ಪರಿಣಾಮ (ಟನೆಲ್ ಎಫೆಕ್ಟ್) ಎಂದು ಹೆಸರು. ಈ ಪರಿಣಾಮದಿಂದ ವಿಕಿರಣ ಪಟು ರಸಾಯನವಸ್ತುಗಳ ನ್ಯೂಕ್ಲಿಯುಸಿನಿಂದ α–ಕಣಗಳು ಹೊರಬರುವುದನ್ನು ವಿವರಿಸಬಹುದು. ಸುರಂಗ ಪರಿಣಾಮ ಪರಮಾಣು ಜಗತ್ತಿನಲ್ಲಿ ಮಾತ್ರ ಸಾಧ್ಯ.

3. ಸಂಗತ ಆಂದೋಳಕ (ಹಾರ್ಮೋನಿಕ್ ಆಸಿಲೇಟರ್): ದ್ವಿಪರಮಾಣ್ವಕ ಅಣುಗಳನ್ನು ಸಂಗತ ಆಂದೋಳಕದ ಮಾದರಿಯೆಂದಿಟ್ಟುಕೊಳ್ಳಬಹುದು.




ಚಿತ್ರ–5

ಇಂಥ ಅಣುವಿನಲ್ಲಿ (AB) ಸಹವೇಲೆಂಟ್ ಬಂಧವಿದ್ದಾಗ AB ಪರಮಾಣುಗಳು ಬಂಧವುದ್ದಕ್ಕೂ ಪರಸ್ಪರ ಕಂಪನ ಪಡೆಯುತ್ತವೆ. ಅಣುಗಳಿಗೆ ಶ್ರೇಡಿಂಗರ್ ಸಮೀಕರಣವನ್ನು ಈ ಕೆಳಗಿನಂತೆ ಬರೆಯಬಹುದು. :

$$\frac{d^2\psi}{dx^2} + \frac{8\pi^2 m}{h^2}(E - V_x)\,\psi = 0$$

ಈ ಆಂದೋಳಕದ ವಿಭವಶಕ್ತಿ ಹೂಕನ ನಿಯಮಕ್ಕೆ ಒಳಪಟ್ಟಿದ್ದು ಅದರ ಬೆಲೆ $\frac{1}{2}kx^2$ ಆಗುವುದು. ಅಂದರೆ $V_x = \frac{1}{2}kx^2$. ಆಗ

$$\frac{d^2\psi}{dx^2} + \frac{8\pi^2 m}{h^2}\left(E - \frac{1}{2}kx^2\right)\psi = 0$$

ಇದರ ಪರಿಹಾರವನ್ನು ಹರ್ಮೀಟ್ ಬಹುಪದಿಯನ್ನು (ಪಾಲಿನಾಮಿಯಲ್) ಉಪಯೋಗಿಸಿಕೊಂಡು ಈ ಕೆಳಗಿನಂತೆ ಬರೆಯಬಹುದು.

$$\Psi_n(x) = N_n \exp(-\xi 2/2) H_n(\xi)$$

ಇಲ್ಲಿ $\xi = \sqrt{a.x},\ a = \frac{4\pi^2 v_0 m}{h},\ v_0 = \frac{1}{2\pi}\sqrt{\frac{k}{m}}$ ಮತ್ತು

$$N_n = \sqrt{\frac{a}{\pi}}\ \frac{1}{2^n, n|}!\,.H_n(\xi)$$

ಹರ್ಮೀಟ್ ಬಹುಪದಿ. ದ್ವಿಪರಮಾಣ್ವಕ ಅಣುಗಳ ಕಂಪನಶಕ್ತಿ ಮಟ್ಟಗಳನ್ನು $E_V = (v + \frac{1}{2})hv_0$ ಸಮೀಕರಣದಿಂದ ಲೆಕ್ಕಾಚಾರ ಮಾಡಬಹುದು. ಇಲ್ಲಿ $v_0$ ಅಣುವಿನ

ಸಮತೋಲ ಆವರ್ತಾಂಕ. Vಯನ್ನು ಕಂಪನ ಕ್ವಾಂಟಂ ಸಂಖ್ಯೆಯೆನ್ನಬಹುದು. ಇದು ಪೂರ್ಣಾಂಕ. ಈ ಸಮೀಕರಣ ಕಂಪನರೋಹಿತದ ಅಧ್ಯಯನದಲ್ಲಿ ಬಹಳ ಉಪಯುಕ್ತವಾಗಿದೆ.

4. ದೃಢಾವರ್ತಕ (ರಿಜಿಡ್ ರೊಟೇಟರ್) : ಒಂದು ದ್ವಿಪರಮಾಣ್ವಕ ಅಣುವನ್ನು AB ದೃಢಾವರ್ತಕದ ಉದಾಹರಣೆಯೆಂದು ತೆಗೆದುಕೊಳ್ಳಬಹುದು. ಏಕೆಂದರೆ ಈ ಅಣು ಅದರ ಗುರುತ್ವಕೇಂದ್ರದ ಸುತ್ತಲೂ ತಿರುಗುತ್ತದೆ. ಈ ಪರಿಭ್ರಮಣ ಶಕ್ತಿಯೂ ಕ್ವಾಂಟಂ ರೂಪದಲ್ಲಿದೆಯೆಂದು ತೋರಿಸಬಹುದು.




ಚಿತ್ರ–6

ಈ ಅಣುವಿನ ಜಡತ್ವ ಭ್ರಮಣಾಂಕ (ಮೊಮೆಂಟ್ ಆಫ್ ಇನರ್ಷಿಯ) $\mu r^2$ ಕ್ಕೆ ಸಮ. ಇಲ್ಲಿ $\mu$ ಅಣುವಿನ ಸಂಕುಚಿತ ದ್ರವ್ಯರಾಶಿ (ರೆಡ್ಯೂಸ್ಡ್ ಮಾಸ್), $\mu = \frac{m_1 m_2}{m_1 + m_2}$; ಮತ್ತು r ಪರಮಾಣುಗಳ ಅಂತರ. ಪರಿಭ್ರಮಣೆಯಲ್ಲಿ ಈ ಅಂತರ ವ್ಯತ್ಯಾಸವಾಗುವುದಿಲ್ಲವಾದ್ದರಿಂದ r ನ್ನು ಸ್ಥಿರಾಂಕವೆಂದಿಟ್ಟುಕೊಳ್ಳಬಹುದು. ಸರಳತೆಗೋಸ್ಕರ r =1 ಎಂದಿಟ್ಟುಕೊಂಡು ಆವರ್ತಕಕ್ಕೆ ವಿಭವಶಕ್ತಿ V ಶೂನ್ಯವಾದ್ದರಿಂದ ಶ್ರೇಡಿಂಗರ್ ಸಮೀಕರಣವನ್ನು ಈ ಕೆಳಗಿನಂತೆ ತಿಳಿಸಬಹುದು;

$$\nabla^2\psi + \frac{8\pi^2 I}{h^2} E\psi = 0$$

ಇದರ ಪರಿಹಾರವನ್ನು ಪಡೆಯಲು ಧ್ರುವೀಯ ಸ್ಥಾನ ನಿರ್ದೇಶಕ r, θ, ϕ ಗಳನ್ನು ಉಪಯೋಗಿಸಬೇಕಾಗುತ್ತದೆ. ಇಲ್ಲಿ r ಸ್ಥಿರಾಂಕವಾಗಿರುವುದರಿಂದ θ ಮತ್ತು ϕ ಸಮೀಕರಣಗಳ ಪರಿಹಾರಗಳು ಈ ರೀತಿ ಇವೆ :

$$\psi = \quad \Phi$$

ಅಂದರೆ

$$\Phi = \sqrt{\frac{2l+1}{2} \cdot \frac{(l-m)|}{(l+m)|}} pe^{|m|} \cos\theta$$

$$\Phi = \frac{1}{\sqrt{2\pi}} \cdot \exp(\pm im\phi)$$

ಆಗ $\Psi = \sqrt{\frac{2l+1}{2} \cdot \frac{(l-m)|}{(l+m)|}} Pe^{|m|} \cos\theta$

$$\times \quad \frac{1}{\sqrt{2\pi}} \exp(\pm im\phi)$$

l,m ಕ್ವಾಂಟಂ ಸಂಖ್ಯೆಗಳು. ದೃಢಾವರ್ತಕದ ಶಕ್ತಿಮಟ್ಟಗಳನ್ನು

$$E_r = \frac{h^2}{8\pi^2 I} l(l+1)$$

ಸಮೀಕರಣದಿಂದ ಲೆಕ್ಕಾಚಾರ ಮಾಡಬಹುದು. *l* ಅನ್ನು ಆವರ್ತನ ಕ್ವಾಂಟಂ ಸಂಖ್ಯೆಯೆಂದು ಕರೆಯಬಹುದು. ಇದು ಪೂರ್ಣಾಂಕ. ಮೇಲಿನ ಸಮೀಕರಣ ಅಣುಗಳ ಆವರ್ತನ ರೋಹಿತಾಧ್ಯಯನದಲ್ಲಿ ಉಪಯೋಗವಾಗುತ್ತದೆ.

5. ಜಲಜನಕದ ಪರಮಾಣು : ಈ ಪರಮಾಣುವಿನಲ್ಲಿ ಒಂದು ಪ್ರೋಟಾನ್ ಮತ್ತು ಒಂದು ಎಲೆಕ್ಟ್ರಾನ್ r ಅಂತರದಲ್ಲಿವೆ. ಅಂದರೆ ಎಲೆಕ್ಟ್ರಾನಿನ ವಿಭವಶಕ್ತಿ $V = e^2/r$. ಇಲ್ಲಿ e ಎನ್ನುವುದು ಈ ಕಣಗಳ ಮೇಲಿರುವ ವಿದ್ಯುದಾವೇಶ.




ಚಿತ್ರ–7

ಪರಮಾಣುವಿನ ದ್ರವ್ಯರಾಶಿ $\mu = \frac{Mm}{M+m}$ ಎಂದಾಗುತ್ತದೆ. ಇಲ್ಲಿ M ಪ್ರೋಟಾನಿನ ದ್ರವ್ಯರಾಶಿ ಮತ್ತು m ಎಲೆಕ್ಟ್ರಾನಿನ ದ್ರವ್ಯರಾಶಿ. ಇಲ್ಲಿರುವ ಎಲೆಕ್ಟ್ರಾನಿಗೆ ಶ್ರೇಡಿಂಗರ್ ಸಮೀಕರಣ ಈ ಕೆಳಗಿನಂತಿದೆ.

$$\nabla^2\psi + \frac{8\pi^2\mu}{h^2}\left(E + \frac{e^2}{r}\right)\psi = 0$$

ಈ ಸಮೀಕರಣದ ಪರಿಹಾರವನ್ನು ಕಂಡುಹಿಡಿಯಲು ಧ್ರುವೀಯ ಸ್ಥಾನನಿರ್ದೇಶಕ (r, θ, ϕ) ಗಳನ್ನು ಉಪಯೋಗಿಸಬೇಕು. ಮೇಲಿನ ಸಮೀಕರಣವನ್ನು ಕಾರ್ಟೀಸಿಯನ್ ನಿರ್ದೇಶಕ (x, y, z) ಗಳಿಂದ (r, θ, ϕ) ಗಳಿಗೆ ವರ್ಗಾಯಿಸಲು ಈ ಕೆಳಗಿನ ಸಂಬಂಧಗಳನ್ನು ಉಪಯೋಗಿಸಬೇಕು:

$$x = r\sin\theta\ \cos\phi,\ y = r\sin\theta\ \sin\phi,\ z = r\cos\theta$$

ಈ ವರ್ಗಾವಣೆಯಿಂದ ಬರುವ ಬೃಹತ್ ಸಮೀಕರಣವನ್ನು r, θ, ϕಗಳ ಮೇಲೆ ಮಾತ್ರ ಅವಲಂಬಿಸಿರುವಂತೆ ವಿಂಗಡಿಸಿ ಮೂರು ಚಿಕ್ಕ ಸಮೀಕರಣಗಳನ್ನು ಪಡೆಯಬಹುದು. ಇವನ್ನು ಬೇರೆಯಾಗಿಯೇ ಬಿಡಿಸಿದರೆ ಬರುವ ಪರಿಹಾರಗಳನ್ನು R, (θ) Φ, ಗಳೆಂದು ಇಟ್ಟುಕೊಳ್ಳಬಹುದು. ಆಗ ಸಂಪೂರ್ಣ ಪರಿಹಾರವಾದ $\psi = R(\theta)\ \Phi$ ಅಂದರೆ ಇವು ಮೂರು ಪರಿಹಾರಗಳ ಉತ್ಪನ್ನಕ್ಕೆ ಸಮವಾಗುತ್ತದೆ. ಒಂದೊಂದು ಸಮೀಕರಣವನ್ನು ಬಿಡಿಸಿದಾಗಲೂ ಗಣಿತನಿರ್ಬಂಧಗಳಿಗೆ ಅನುಸಾರವಾಗಿ ಒಂದೊಂದು ಕ್ವಾಂಟಂ ಸಂಖ್ಯೆಯ ಅವತರಣಿಕೆಯಾಗುತ್ತದೆ. Φ ಸಮೀಕರಣವನ್ನು ಬಿಡಿಸಿದಾಗ ಎಲೆಕ್ಟ್ರಾನಿನ ಕಾಂತೀಯ ಕ್ವಾಂಟಂ ಸಂಖ್ಯೆ m ಬರುತ್ತದೆ. Φ ಸಮೀಕರಣದಿಂದ ಕ್ಷಿತಿಜಾಂಶ ಕ್ವಾಂಟಂ ಸಂಖ್ಯೆ *l* (ಅಜ್ಹಿತಮಲ್ ಕ್ವಾಂಟಂ ನಂಬರ್) ಮತ್ತು R ಸಮೀಕರಣದಿಂದ ಪ್ರಧಾನ ಕ್ವಾಂಟಂ ಸಂಖ್ಯೆ n (ಪ್ರಿನ್ಸಿಪಲ್ ಕ್ವಾಂಟಂ ನಂಬರ್) ಬರುತ್ತವೆ. ಈ ಕ್ವಾಂಟಂ ಸಂಖ್ಯೆಗಳ ಮೌಲ್ಯಗಳು ಪರಸ್ಪರ ಸಂಖ್ಯೆಗಳ ಮೌಲ್ಯಗಳನ್ನು ಅವಲಂಬಿಸಿವೆ. n=1, 2, 3, *l* ….,*l*=0 ಯಿಂದ (n – 1) ವರೆಗಿನ ಬೆಲೆಗಳು., m = –*l* ನಿಂದ +*l* ವರೆಗಿನ ಬೆಲೆಗಳು.

ಆಗ $\psi$ n, *l,m (r, θ, ϕ)* = $R_n$ *l(r)* Φ….*l, m* (θ) Φ m (ϕ)

ಕ್ವಾಂಟಂ ಸಂಖ್ಯೆ n ಗೆ ಬೇರೆ ಬೇರೆ ಮೌಲ್ಯಗಳನ್ನು ಕೊಟ್ಟಾಗ ಅದರಿಂದ ಉತ್ಪತ್ತಿಯಾದ *l*, ಮತ್ತು *m* ಮೌಲ್ಯಗಳನ್ನು ಉಪಯೋಗಿಸಿಕೊಂಡು ψ ಯ ಮೌಲ್ಯವನ್ನು ಕಂಡುಹಿಡಿಯಬಹುದು. ಈ ರೀತಿ ಬಂದ ψಯನ್ನು ಕಕ್ಷಕ (ಆರ್ಬಿಟಲ್) ಎಂದು ಕರೆಯುವುದುಂಟು. ψಯ ಬೆಲೆಗಳು ಈ ಕೆಳಗಿನಂತೆ ಇರುತ್ತವೆ.

n = 1, *l = 0, m = 0;* ಆಗ $\psi_{100} = \psi_{1s}$ ಎಂದು ಕರೆಯಬಹುದು.

$$\Psi_{1s} = \frac{1}{\sqrt{\pi}}\left(\frac{1}{a_0}\right)3/2\left(2 - \frac{r}{a_0}\right)e^{-r/a0}, \quad \text{ಇಲ್ಲಿ} \quad a_0 = \frac{h^2}{4\pi^2\mu^{e2}}$$

n = 2, *l* = 0, 1, m = 0, 0, ± 1

ಇಲ್ಲಿ *l* = 0, m = 0 ಆದಾಗ ಬರುವ ಕಕ್ಷಕ $\psi_{200} = \psi_{2s}$

$$\Psi_{2s} = \frac{1}{4\sqrt{2\pi}}\left(\frac{1}{a_0}\right)^{\frac{3}{2}}\left(2 - \frac{r}{a_0}\right)e^{-r/2a_0}$$

*l* = 1, m = 0, ±, 1. $\psi_{2p}$ ಕಕ್ಷಕಗಳು (ಮೂರು) ಉತ್ಪತ್ತಿಯಾಗುತ್ತವೆ.

$$\Psi_{2px} = \frac{1}{4\sqrt{2\pi}}\left(\frac{1}{a_0}\right)^{\frac{5}{2}} e^{-r/2a_0} r\sin\theta\cos\phi$$

$$\Psi_{2py} = \frac{1}{4\sqrt{2\pi}}\left(\frac{1}{a_0}\right)^{\frac{5}{2}} e^{-r/2a_0} r \sin\theta \cos\phi$$

$$\Psi_{2pz} = \frac{1}{4\sqrt{2\pi}}\left(\frac{1}{a_0}\right)^{\frac{5}{2}} e^{-r/2a_0} r \cos\theta$$

n = 3, *l* = 0, 1, 2; m = 0, 0, 0, ± 1, 0, ± 1, ± 2

*l* = 2, m = 0, ± 1, ± 2ಗಳು d ಕಕ್ಷಕಗಳನ್ನು ಸೂಚಿಸುತ್ತವೆ. ಇವುಗಳ ಸಮೀಕರಣಗಳು ಈ ಕೆಳಗಿನಂತೆ ಇರುತ್ತವೆ.

$$\Psi 3d(i) = d_{z^2} = N_1 R_{(r)} (3\cos^2\theta - 1)$$
$$\Psi 3d(ii) = d_{xz} = N_2 R_{(r)} (\sin\theta \cos\theta \cos\phi)$$
$$\Psi 3d(iii) = d_{yz} = N_3 R_{(r)} (\sin\theta \cos\theta \sin\phi)$$
$$\Psi 2d(iv) = d_{x^2 - y^2} = N_4 R_{(r)} (\sin^2\theta \cos 2\phi)$$
$$\Psi 3d(v) = d_{xy} = N_5 R_{(r)} (\sin^2\theta \sin 2\phi)$$

ಇಲ್ಲಿ N ಗಳು ಕ್ರಮಬದ್ಧವಾದ ಸ್ಥಿರಾಂಕಗಳೆನಿಸುತ್ತವೆ.

ಈ ಮೇಲಿನ ಪ್ರತಿಯೊಂದು ಕಕ್ಷಕದ ನಕ್ಷೆಯನ್ನು ತಯಾರಿಸಬೇಕಾದರೆ ನಾಲ್ಕು ಆಯಾಮಗಳ ನಕ್ಷೆಯೇ ಬೇಕಾಗುತ್ತದೆ. ಇದು ಅಸಾಧ್ಯವಾದ್ದರಿಂದ ψ ಯ ಮೌಲ್ಯ *R* ಮೌಲ್ಯಕ್ಕೆ ಅನುಗುಣವಾಗಿಯೂ ψ ಯು (θ Φ)ಗಳ ಉತ್ಪನ್ನಕ್ಕೆ ಅನುಗುಣವಾಗಿಯೂ ಬದಲಾವಣೆಯಾಗುವ ಎರಡು ನಕ್ಷೆಗಳನ್ನು ತಯಾರಿಸಬಹುದು.




ಚಿತ್ರ–8 (i) ಹೈಡ್ರೋಜನ್ನಿನ 1s ಮತ್ತು 2s ಎಲೆಕ್ಟ್ರಾನ್ ಕಕ್ಷಕಗಳಿಗೆ ಸಂಬಂಧಿಸಿದ ಸಂಭಾವ್ಯತಾ ವಿತರಣೆ (ಎಡಗಡೆಯದು); ಹೈಡ್ರೋಜನ್ನಿನ 1s ಎಲೆಕ್ಟ್ರಾನ್ ಕಕ್ಷಕಕ್ಕೆ ಸಂಬಂಧಿಸಿದ ಆರೀಯ ಸಂಭಾವ್ಯತಾ ವಿತರಣೆ (ಬಲಗಡೆಯ ಮೇಲಿನದು); ಹೈಡ್ರೋಜನ್ನಿನ 2s ಎಲೆಕ್ಟ್ರಾನ್ ಕಕ್ಷಕಕ್ಕೆ ಸಂಬಂಧಿಸಿದ ಆರೀಯ ಸಂಭಾವ್ಯತಾ ವಿತರಣೆ (ಬಲಗಡೆಯ ಕೆಳಗಿನದು)




ಚಿತ್ರ–8 (ii) ಹೈಡ್ರೋಜನ್ನಿನ 1s ಎಲೆಕ್ಟ್ರಾನಿನ ವಿದ್ಯುದಾವೇಶ ಮೋಡದ ರೂಪ (ಎಡಗಡೆ); ಹೈಡ್ರೋಜನ್ನಿನ 2s ಎಲೆಕ್ಟ್ರಾನಿನ ವಿದ್ಯುದಾವೇಶ ಮೋಡದ ರೂಪ (ಬಲಗಡೆ)







ಚಿತ್ರ 8(iii) $2p_x$, $2p_y$ ಮತ್ತು $2p_z$ ಎಲೆಕ್ಟ್ರಾನುಗಳ $(\Theta\Phi)^2$ನ ರೂಪ (ಮೇಲುಭಾಗದ ಚಿತ್ರ); 2p ಎಲೆಕ್ಟ್ರಾನೊಂದರ ಆರೀಯ ಅಲೆ ಉತ್ಪನ್ನ (ಕೆಳಭಾಗದ ಚಿತ್ರ)




ಚಿತ್ರ 8(iv) 3d ಎಲೆಕ್ಟ್ರಾನುಗಳ $((\Theta\Phi)^2$ನ ರೂಪ







ಚಿತ್ರ 8 (V)

ಇವುಗಳನ್ನು ಚಿತ್ರ 8(1– V)ರಲ್ಲಿ ತೋರಿಸಿದೆ. ಹೈಡ್ರೊಜನ್ ಪರಮಾಣುವಿನ R ಸಮೀಕರಣವನ್ನು ಬಿಡಿಸಿದಾಗ ಎಲೆಕ್ಟ್ರಾನ್ ಶಕ್ತಿ ಕ್ವಾಂಟಂ ರೂಪದಲ್ಲಿದೆಯೆಂದು ತಿಳಿದುಬರುತ್ತದೆ. ಎಲೆಕ್ಟ್ರಾನ್ ಶಕ್ತಿಯನ್ನು ಈ ಕೆಳಗಿನ ಸಮೀಕರಣದಿಂದ ಸೂಚಿಸಬಹುದು:

$$E_n = -\frac{2\pi^2\mu e^4}{h^2 n^2}$$

ಈ ಸಮೀಕರಣವೂ ನೀಲ್ಸ್ ಬೋರನ ಸಿದ್ಧಾಂತದಿಂದ ಕೊಡಲ್ಪಟ್ಟ ಎಲೆಕ್ಟ್ರಾನ್ ಶಕ್ತಿ ಸಮೀಕರಣವೂ ಒಂದೇ. ಆದರೆ ಬೋರ್ ಸಿದ್ಧಾಂತದ ಮುಖ್ಯ ತಪ್ಪುಗಳೇನೆಂದರೆ ಕ್ವಾಂಟಂ ಸಂಖ್ಯೆ (n, *l*, m) ಗಳನ್ನು ಗಣಿತಶಾಸ್ತ್ರದ ಬೆಂಬಲವಿಲ್ಲದೆ ಊಹಿಸಿಕೊಂಡು ಬಳಸಿದ್ದು ಮತ್ತು ನ್ಯೂಕ್ಲಿಯಸಿನಿಂದ ಎಲೆಕ್ಟ್ರಾನಿನ ದೂರ ಯಾವಾಗಲೂ 0.53 $^0$A(ಬೋರ್ ವ್ಯಾಸ) ಎಂದು ಪ್ರತಿಪಾದನೆ ಮಾಡಿದ್ದು, ಆದರೆ ಕ್ವಾಂಟಂ ಬಲವಿಜ್ಞಾನದ ಬಳಕೆಯಲ್ಲಿ ಕ್ವಾಂಟಂ ಸಂಖ್ಯೆಗಳು ಗಣಿತ ಗಡಿನಿರ್ಬಂಧಗಳ ಮೂಲಕ ಪ್ರತಿಪಾದಿಸಲ್ಪಟ್ಟವು. ಈ ಶಾಸ್ತ್ರ ಎಲೆಕ್ಟ್ರಾನ್ ಇಂಥ ಕಡೆ ಖಚಿತವಾಗಿ ಇದೆಯೆನ್ನುವುದನ್ನು ನಿರ್ದಿಷ್ಟವಾಗಿ ತಿಳಿಸಲು ಸಾಧ್ಯವಿಲ್ಲವೆಂದು ಪ್ರತಿಪಾದಿಸಿ ಈ ಕಣದ ಸ್ಥಾನವನ್ನು ತಿಳಿಸಲು ಸಂಭಾವ್ಯತೆಯನ್ನು ಉಪಯೋಗಿಸುತ್ತದೆ.

**ಹೀಲಿಯಂ ಪರಮಾಣು :** ಈ ಪರಮಾಣುವಿನಲ್ಲಿ ಎರಡು ಧನವಿದ್ಯುದಾವೇಶಗಳಿರುವ ನ್ಯೂಕ್ಲಿಯಸ್ ಮತ್ತು ಎರಡು ಎಲೆಕ್ಟ್ರಾನುಗಳಿವೆ. ಈ ಪರಮಾಣುವಿನ ವಿಭವಶಕ್ತಿಯನ್ನು




ಚಿತ್ರ 9

$$V = -\frac{e^2}{r_1} - \frac{e^2}{r_2} + \frac{e^2}{r_{12}}$$

ಸಮೀಕರಣದಿಂದ ತಿಳಿದುಕೊಳ್ಳಬಹುದು. ಆಗ ಶ್ರೇಡಿಂಗರ್ ಸಮೀಕರಣ

$$\left(\nabla_1{}^2 + \nabla^2{}_2\right)\psi + \frac{8\pi^2 m}{h^2}\left(E + \frac{e^2}{r^1} + \frac{e^2}{r_2} - \frac{e^2}{r_{12}}\right)\psi = 0$$

ಎಂದಾಗುತ್ತದೆ. ಎಲೆಕ್ಟ್ರಾನುಗಳ ವಿಕರ್ಷಣಬಲವನ್ನೊಳಗೊಂಡ $e^2/r_{12}$ ಪದ ಇರುವುದರಿಂದ ಈ ಸಮೀಕರಣವನ್ನು ಕರಾರುವಕ್ಕಾಗಿ ಬಿಡಿಸಲು ಸಾಧ್ಯವಿಲ್ಲ. ಆಗ ಸನ್ನಿಹಿತ ವಿಧಾನಗಳಾದ ಪಥಕಲ್ಪವಿಧಾನ (ಪರ್ಟರ್ಬೇಷನ್ ಮೆಥಡ್) ಅಥವಾ ವಿಚಲನಪ್ರಮೇಯದ (ವೇರಿಯೇಷನ್ ಥಿಯೊರಮ್) ಮೂಲಕ ಪರಿಹಾರವನ್ನು ಪಡೆಯಬಹುದು. ಮೊದಲನೆಯ ದರ್ಜೆಯ ಪಥವೈಕಲ್ಯವಿಧಾನವನ್ನು ಉಪಯೋಗಿಸಿದಾಗ ಹೀಲಿಯಂ ಪರಮಾಣುವಿನ ಪೂರ್ಣಶಕ್ತಿ

$$E = \left(2Z^2 - \frac{5}{4}Z\right)E_{1s(H)}$$

ಎಂದು ಕಂಡುಬಂದಿದೆ. ಇಲ್ಲಿ Z ಹೀಲಿಯಮಿನ ಪರಮಾಣು ಸಂಖ್ಯೆ ಮತ್ತು $E_{1s}$(H) ಹೈಡ್ರೊಜನ್ ಪರಮಾಣುವಿನ ಭೂಸ್ಥಿತಿಶಕ್ತಿ (ಗ್ರೌಂಡ್ ಸ್ಟೇಟ್ ಎನರ್ಜಿ). ವಿಚಲನ ಪ್ರಮೇಯವನ್ನು ಉಪಯೋಗಿಸಿದ್ದಲ್ಲಿ

$$E = 2\left(Z - \frac{5}{16}Z\right)^2 E_{1s(H)}$$ ಎಂದಾಗುತ್ತದೆ.

ಹೈಡ್ರೊಜನ್ ತರಹವಿರುವ ಪರಮಾಣುಗಳು : ಉದಾಹರಣೆಗೆ $He^+$, $Le^{++}$, $Be^{+++}$ ಮುಂತಾದವು. ಇವುಗಳಿಗೆ ಶ್ರೇಡಿಂಗರ್ ಸಮೀಕರಣವನ್ನು

$$\nabla^2\psi + \frac{8\pi^2 m}{h^2}\left(E + \frac{Ze^2}{r}\right)\psi = 0$$

ಎಂದು ಬರೆಯಬಹುದು. ಇಲ್ಲಿ Z ಪರಮಾಣು ಸಂಖ್ಯೆ. ಇದನ್ನು ಹೈಡ್ರೊಜನ್ ಪರಮಾಣುವಿಗೆ ಅನುಸರಿಸಿದ ವಿಧಾನದಲ್ಲೇ ಬಿಡಿಸಬಹುದು.

ಎಲೆಕ್ಟ್ರಾನ್ ಭ್ರಮಣ (ಸ್ಪಿನ್) ಮತ್ತು ಪೌಲಿಯ ಬಹಿಷ್ಕರಣ ತತ್ತ್ವ : ಪರಮಾಣುವಿನಲ್ಲಿರುವ ಎಲೆಕ್ಟ್ರಾನಿಗೆ ಎರಡು ವಿಧದ ಚಲನೆಗಳು ಇವೆ. ಒಂದು, ನ್ಯೂಕ್ಲಿಯಸ್ ಸುತ್ತಲೂ ಇರುವ ಕಕ್ಷೆಯೊಂದರಲ್ಲಿ ಚಲಿಸುವುದು. ಇನ್ನೊಂದು, ನ್ಯೂಕ್ಲಿಯಸ್ ಸುತ್ತಲೂ ಸುತ್ತುತ್ತಿರುವಾಗಲೇ ತನ್ನ ಅಕ್ಷದಲ್ಲಿಯೇ ಭ್ರಮಣಗೊಳ್ಳುತ್ತಿರುವುದು (ಸ್ಪಿನ್).

ಕೋನ ಸಂವೇಗವನ್ನು $s(s+1)\hbar$ ಸಮೀಕರಣದಿಂದ ಲೆಕ್ಕಾಚಾರ ಮಾಡಬಹುದು. ಇಲ್ಲಿ s ಎಲೆಕ್ಟ್ರಾನಿನ ಭ್ರಮಣ ಕ್ವಾಂಟಂ ಸಂಖ್ಯೆ ಮತ್ತು h ಪ್ಲಾಂಕನ ಸ್ಥಿರಾಂಕ.




ಚಿತ್ರ–10

s ನ ಬೆಲೆ ± ½. ಒಂದೇ ಪರಮಾಣುವಿನಲ್ಲಿ ಎರಡು ಅಥವಾ ಹೆಚ್ಚಿಗೆ ಎಲೆಕ್ಟ್ರಾನುಗಳಿದ್ದಲ್ಲಿ ಅವುಗಳ ರಚನೆಯನ್ನು ಪೌಲಿಯ ಬಹಿಷ್ಕರಣ ತತ್ತ್ವದಿಂದ ತಿಳಿದುಕೊಳ್ಳಬಹುದು. ಈ ತತ್ತ್ವದ ಪ್ರಕಾರ ಒಂದು ಪರಮಾಣುವಿನಲ್ಲಿರುವ ಎರಡು ಎಲೆಕ್ಟ್ರಾನುಗಳ ನಾಲ್ಕು ಕ್ವಾಂಟಂ ಸಂಖ್ಯೆ (*n, l, m ,s*) ಗಳಿಗೂ ಸಮಬೆಲೆಯಿರಲು ಸಾಧ್ಯವಿಲ್ಲ. ಅಂದರೆ ಮೂರು ಕ್ವಾಂಟಂ ಸಂಖ್ಯೆಗಳಿಗೆ ಸಮಬೆಲೆಯಿದ್ದರೂ ನಾಲ್ಕನೆಯ ಕ್ವಾಂಟಂ ಸಂಖ್ಯೆಗೆ ವಿವಿಧ ಮೌಲ್ಯಗಳಿರಬೇಕಾಗುತ್ತದೆ. ಉದಾಹರಣೆಗೆ ಒಂದು ಪರಮಾಣುವಿನಲ್ಲಿರುವ ಎರಡು ಎಲೆಕ್ಟ್ರಾನುಗಳ ಪ್ರಮುಖ, ಕ್ಷಿತಿಜಾಂಶೀಯ ಮತ್ತು ಕಾಂತೀಯ ಕ್ವಾಂಟಂ ಸಂಖ್ಯೆಗಳೂ ಒಂದೇ ಆಗಿದ್ದಲ್ಲಿ ಆಗ ಭ್ರಮಣ ಕ್ವಾಂಟಂ ಸಂಖ್ಯೆ ಒಂದು ಎಲೆಕ್ಟ್ರಾನಿಗೆ 1/2 ಇದ್ದು ಇನ್ನೊಂದಕ್ಕೆ – 1/2 ಆಗಿರುತ್ತದೆ. ಎಲೆಕ್ಟ್ರಾನಿನ ಭ್ರಮಣ ಗುಣವನ್ನು ಗಣನೆಗೆ ತಂದುಕೊಂಡಲ್ಲಿ ಅದರ ಪೂರ್ಣ ಅಲೆ ಉತ್ಪನ್ನ ψ ಎಲೆಕ್ಟ್ರಾನ್ನು ಸ್ಥಾನ (*n, l, m*) ಮತ್ತು ಭ್ರಮಣ (*s*) ಭಾಗಗಳೆಂದು ವಿಂಗಡಿಸಬಹುದು.

$$\psi_{\text{ಎಲೆಕ್ಟ್ರಾನ್}} = \psi_{\text{ಸ್ಥಾನ}} * \psi_{\text{ಭ್ರಮಣ}}$$

ಉದಾಹರಣೆಗೆ ಎರಡು ಹೈಡ್ರೊಜನ್ ಪರಮಾಣುಗಳಿರುವ ಸಮೂಹದಲ್ಲಿ ಈ ಪರಮಾಣುಗಳಿರುವ $\psi_{1s}$ ಕಕ್ಷಕಗಳನ್ನು $\psi_a(1)$ ಮತ್ತು $\psi_b(1)$ ಎಂದಿಟ್ಟುಕೊಂಡಲ್ಲಿ ಸಮೂಹದ ಪೂರ್ಣ ಅಲೆಉತ್ಪನ್ನ $\psi_T = [\psi_a(1) \;\; \psi_b(2) \pm \psi_a(2) \;\; \psi_b(1)]$ (ಭ್ರಮಣ ಅವಲಂಬಿತ ಪರಿಮಾಣಗಳು). ಈ ಮೇಲಿನ ಸಮೀಕರಣ ಹೈಡ್ರೊಜನ್ ಅಣುವಿನಲ್ಲಿರುವ ಸಹವೇಲೆಂಟ್ ಬಂಧದ ವಿವರಣೆ ಕೊಡಲು ಸಹಾಯವಾಗುತ್ತದೆ.

ಅಣುಗಳಿಗೆ ಶ್ರೇಡಿಂಗರ್ ಸಮೀಕರಣದ ಅನ್ವಯ. 1 ಹೈಡ್ರೊಜನ್ ಅಣು ಅಯಾನು $H_2+$ : H+ ಅನ್ನು ಅತಿ ಸರಳವಾದ ಅಣುವೆಂದು ಕರೆಯಬಹುದು. ಇಲ್ಲಿ ಎರಡು ಪ್ರೋಟಾನ್ ಮತ್ತು ಒಂದು ಎಲೆಕ್ಟ್ರಾನ್ ಜೊತೆಗೂಡಿರುತ್ತವೆ. ಈ ಅಣುವಿನ ವಿಭವಶಕ್ತಿ

$$V = \frac{e^2}{r_A} - \frac{e^2}{r_B} + \frac{e^2}{R_{AB}}$$

ಇದರ ಶ್ರೇಡಿಂಗರ್ ಸಮೀಕರಣ

$$\nabla^2\psi + \frac{8\pi^2 m}{h^2}\left(E + \frac{e^2}{r_A} + \frac{e^2}{r_B} - \frac{e^2}{r_{AB}}\right)\psi = 0$$

ಇದನ್ನು ನೇರವಾಗಿ ಬಿಡಿಸಲು ಸಾಧ್ಯವಿಲ್ಲವಾದ್ದರಿಂದ ಎಲೆಕ್ಟ್ರಾನಿಗೆ ಒಂದು ಪರೀಕ್ಷಾರ್ಥ ಅಲೆಉತ್ಪನ್ನ $\psi = \psi_a + \psi_b$ ಯನ್ನು ಊಹಿಸಿಕೊಂಡು ಅದನ್ನು ಶ್ರೇಡಿಂಗರ್ ಸಮೀಕರಣಕ್ಕೆ ಜೋಡಿಸಿ ಉತ್ತರವನ್ನು ಕಂಡುಹಿಡಿಯಬಹುದು. ಇಲ್ಲಿ ಮತ್ತು $\psi_a$ ಗಳು $\psi_b$ ಹೈಡ್ರೊಜನ್ನಿನ $1_s$ ಕಕ್ಷಕಗಳು. ಈ ಪರಿಹಾರ $\psi_s$ ಮತ್ತು $\psi_A$ ಎಂಬ

ಎರಡು ಸ್ಥಿತಿಗಳನ್ನು ತೋರಿಸುತ್ತದೆ. ಇವುಗಳ ಶಕ್ತಿ $E_S$ ಮತ್ತು $E_A$ ಆಗಿರುತ್ತವೆ. $E_S$ ಸ್ಥಿತಿಯಲ್ಲಿ ಅಂದರೆ ಸಮಾಂಗತ್ವ (ಸಿಮೆಟ್ರಿಕ್) ಸ್ಥಿತಿಯಲ್ಲಿ ಎಲೆಕ್ಟ್ರಾನ್ ಎರಡು ಪ್ರೋಟಾನುಗಳ ಕೂಡ ಅನುರಣನ (ರೆಸೊನೆನ್ಸ್) ಹೊಂದಿ ಇವೆರಡು ಕಣಗಳ ಮಧ್ಯದಲ್ಲಿ ಹೆಚ್ಚಿನ ಎಲೆಕ್ಟ್ರಾನ್ ಸಾಂದ್ರತೆಯನ್ನು ತೋರಿಸುತ್ತದೆ. ಆಗ ಈ ಪ್ರೋಟಾನುಗಳು ಬಲವಾಗಿ ಬಂಧಿಸಲ್ಪಡುತ್ತವೆ. $E_A$ ಸ್ಥಿತಿಯಲ್ಲಿ ಅಂದರೆ ಪ್ರತಿಸಮಾಂಗತ್ವ (ಆಂಟಿಸಿಮೆಟ್ರಿಕ್) ಸ್ಥಿತಿಯಲ್ಲಿ ಪ್ರೋಟಾನುಗಳ ಮಧ್ಯೆ ಎಲೆಕ್ಟ್ರಾನ್ ಸಾಂದ್ರತೆ ಶೂನ್ಯವಾಗಿದ್ದು ಅಣುರಚನೆ ಸಾಧ್ಯವಾಗುವುದಿಲ್ಲ. ಇವನ್ನು ಈ ಕೆಳಗಿನ ಚಿತ್ರಗಳಲ್ಲಿ ತೋರಿಸಿದೆ.




ಚಿತ್ರ–11

ಇಲ್ಲಿ P ಎಲೆಕ್ಟ್ರಾನ್ ಸಾಂದ್ರತೆಯನ್ನು ತೋರಿಸುತ್ತದೆ.

2.ಹೈಡ್ರೋಜನ್ ಅಣು : ಈ ಅಣುವಿಗೆ ವಿಭವಶಕ್ತಿ V ಯನ್ನು ಈ ಕೆಳಗಿನಂತೆ ಲೆಕ್ಕಾಚಾರಮಾಡಬಹುದು.




ಚಿತ್ರ–12

$$V = -\frac{e^2}{r_{A_1}} - \frac{e^2}{r_{B_1}} - \frac{e^2}{r_{A_2}}\frac{e^2}{r_{B_1}} + \frac{e^2}{r_{12}} + \frac{e^2}{R_{AB}}$$

ಆಗ ಹ್ಯಾಮಿಲ್ಟೋನಿಯನ್ ಚಾಲಕ

$$H\left[-\frac{h^2}{8\pi^2 m}\left(\nabla_1{}^2 + \nabla_2{}^2\right) - \frac{e^2}{r_{A1}} - \frac{e^2}{r_{A2}} - \frac{e^2}{r_{B1}} - \frac{e^2}{r_{B2}} + \frac{e^2}{r_{12}} + \frac{e^2}{R_{AB}}\right]$$

ಆಗ ಸಮೀಕರಣ $H\psi = E\psi$ ಎಂದಾಗುತ್ತದೆ. ಆದರೆ ಈ ಸಮೀಕರಣವನ್ನು ಕರಾರುವಾಕ್ಕಾಗಿ ಬಿಡಿಸಲು ಸಾಧ್ಯವಿಲ್ಲ. ಆದ್ದರಿಂದ ಸನ್ನಿಹಿತ ವಿಧಾನಗಳನ್ನು ಉಪಯೋಗಿಸಬೇಕಾಗುತ್ತದೆ. ಈ ವಿಧಾನಗಳಲ್ಲಿ ಮುಖ್ಯವಾದವೆಂದರೆ ವೇಲೆನ್ಸ್ ಬಂಧ ಸಿದ್ಧಾಂತ ಮತ್ತು ಅಣ್ವಕ ಕಕ್ಷಕ ಸಿದ್ಧಾಂತ. ಇವೆರಡು ಸಿದ್ಧಾಂತಗಳು ಜಲಜನಕ ಪರಮಾಣುವಿನಲ್ಲಿರುವ ಸಹವೇಲೆಂಟ್ ಬಂಧದ ವಿವರಣೆ ಕೊಡಲು ಪ್ರಯತ್ನಿಸಿವೆ.

**ವೇಲೆನ್ಸ್ ಬಂಧ ಸಿದ್ಧಾಂತ :** ಇದನ್ನು ಹೇಟ್ಲರ್ ಮತ್ತು ಲಂಡನ್‌ರವರು ಮಂಡಿಸಿದ್ದಾರೆ. ಈ ಸಿದ್ಧಾಂತದ ಪ್ರಕಾರ ಎರಡು ಪರಮಾಣುಗಳು ಒಂದುಗೂಡಿ




ಚಿತ್ರ 13

ಅಣುವಾಗಬೇಕಾದಲ್ಲಿ ಅವುಗಳಲ್ಲಿರುವ ವೇಲೆನ್ಸ್ ಎಲೆಕ್ಟ್ರಾನುಗಳು ಜೊತೆಯಾಗಬೇಕು. ಎರಡು ಜಲಜನಕ ಪರಮಾಣುಗಳು ಒಟ್ಟುಗೂಡಿದಲ್ಲಿ ಅವುಗಳಲ್ಲಿರುವ $1_s$ ಎಲೆಕ್ಟ್ರಾನುಗಳಲ್ಲಿ ಒಂದಕ್ಕೆ + ½ ಭ್ರಮಣವಿದ್ದು ಇನ್ನೊಂದಕ್ಕೆ – ½ ಇದ್ದರೆ ಹೈಡ್ರೋಜನ್ ಅಣುವಾಗಲು ಸಾಧ್ಯ. ಇವೆರಡು ಎಲೆಕ್ಟ್ರಾನುಗಳ ಅಲೆಉತ್ಪನ್ನಗಳು $\psi a(1)$ ಮತ್ತು $\psi b(2)$ ಎಂದಾದರೆ ಅಣುವಿನ ಪೂರ್ಣ ಅಲೆಉತ್ಪನ್ನ $\psi$ ಯು $\psi a(1)\ \psi b(2)$ ಆಗುತ್ತದೆ. ಆದರೆ ಪರಮಾಣುಗಳು ಬಹಳ ಹತ್ತಿರವಿದ್ದಲ್ಲಿ ಎಲೆಕ್ಟ್ರಾನ್ 1 ಮತ್ತು 2ರ ಗುರ್ತು ಹಿಡಿಯಲು ಅಸಾಧ್ಯವಾಗುತ್ತದೆ. ಈ ಸಂದರ್ಭಗಳಲ್ಲಿ ಪೂರ್ಣ ಅಲೆಉತ್ಪನ್ನವನ್ನು ಬರೆಯಲು $\psi$ಗಳ ರೇಖೀಯ ಜೋಡಣೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

$$\psi = \psi a(1)\ \psi b(2) \pm \psi a(2)\ \psi b(1)$$

ಮೇಲಿನ $\psi$ ಸ್ಥಾನ ಅಥವಾ ಆಕಾಶ ಅಲೆಉತ್ಪನ್ನ ಮಾತ್ರವಾಗಿದೆ. ಇಲ್ಲಿ $\psi_S = \psi a(1)\ \psi b(2) + \psi a(2)\ \psi b(1)$ ಸಮಾಂಗತ್ವಾವಲಂಬಿ ಪರಿಮಾಣ, $\psi_A = \psi a(1)\ \psi b(2) - \psi a(2)\ \psi b(1)$ ಪ್ರತಿಸಮಾಂಗತ್ವಾವಲಂಬಿ ಪರಿಮಾಣ, $\psi_S$ ಮತ್ತು $\psi_A$ ಗಳ ಜೊತೆಗೆ ನಾವು ಎಲೆಕ್ಟ್ರಾನ್ ಭ್ರಮಣವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇರುವ ಎರಡು ಎಲೆಕ್ಟ್ರಾನುಗಳ ಭ್ರಮಣವನ್ನು $\alpha = +½, \beta = -½$ ಎಂದಿಟ್ಟುಕೊಂಡಲ್ಲಿ ಇಲ್ಲಿ ಭ್ರಮಣಗಳದೇ ನಾಲ್ಕು ಜೊತೆಯಾಗುತ್ತದೆ.

$\alpha(1)\,\alpha(2)$

$b(1)\,b(2)$ } ಸಮಾಂಗತ್ವ ಭ್ರಮಣಾವಲಂಬಿ ಪರಿಮಾಣ

$\alpha(1)\beta(2) + \alpha(2)\beta(1)$

$\alpha(1)\beta(2) - \alpha(2)\beta(1)$ ಅಸಮಾಂಗತ್ವ ಭ್ರಮಣಾವಲಂಬಿ ಪರಿಮಾಣ ಈಗ ಅಣುವಿನ ಪೂರ್ಣ ಅಲೆಉತ್ಪನ್ನ ಬರೆಯಬೇಕಾದಲ್ಲಿ ಅದರಲ್ಲಿ ಸ್ಥಾನ ಮತ್ತು ಭ್ರಮಣಗಳ ಭಾಗಗಳಿರಬೇಕು. ಅಂದರೆ

$\psi$ ಪೂರ್ಣ = $\psi$ ಸ್ಥಾನ X $\psi$ ಭ್ರಮಣ

ಇಲ್ಲಿ ಸ್ಥಾನ $\psi$ ಗಳು ಎರಡಿದ್ದು ಭ್ರಮಣ $\psi$ ಗಳು 4 ಇರುವುದರಿಂದ ಎಂಟು ಜೊತೆಗಳಾಗುತ್ತವೆ. ಆದರೆ ನಮಗೆ ಒಪ್ಪಿಗೆಯಾಗುವ ಒಂದೇ ಒಂದು ಜೊತೆಯನ್ನು ಆರಿಸಲು ಪೌಲಿಯ ಬಹಿಷ್ಕರಣ ತತ್ತ್ವ ಸಹಾಯಮಾಡುತ್ತದೆ. ಕ್ವಾಂಟಂ ಬಲ ವಿಜ್ಞಾನದ ಪ್ರಕಾರ ಪೌಲಿಯ ತತ್ತ್ವದ ಇನ್ನೊಂದು ರೂಪವನ್ನು ಈ ಕೆಳಗಿನಂತೆ ಬರೆಯಬಹುದು. ಒಂದು ಜೊತೆ ಎಲೆಕ್ಟ್ರಾನುಗಳ ಸ್ಥಾನನಿರ್ದೇಶಕಗಳನ್ನು ಪರಸ್ಪರ ಬದಲುಮಾಡಿದರೆ ಅವುಗಳ ಪೂರ್ಣ ಅಲೆಉತ್ಪನ್ನ ಪ್ರತಿಸಮಾಂಗ ಆಗಿರಬೇಕು. ಅಂದರೆ ಈ ರೀತಿಯಾಗಲು ಒಂದು ಸಮಾಂಗಸ್ಥಾನಾವಲಂಬಿ ಪರಿಮಾಣವನ್ನು ಮತ್ತೊಂದು ಪ್ರತಿಸಮಾಂಗ ಭ್ರಮಣಾವಲಂಬಿ ಪರಿಮಾಣದಿಂದಾಗಲಿ ಒಂದು ಪ್ರತಿಸಮಾಂಗಸ್ಥಾನಾವಲಂಬಿ ಪರಿಮಾಣವನ್ನು ಮತ್ತೊಂದು ಸಮಾಂಗ ಭ್ರಮಣಾವಲಂಬಿ ಪರಿಮಾಣದಿಂದಾಗಲಿ ಗುಣಿಸಿದರೆ ಮಾತ್ರ ಸಾಧ್ಯ. ಆದರೆ ಪರಮಾಣುಗಳು ಒಟ್ಟುಗೂಡಿದಾಗ ಬರುವ ಅಣು ಸುಭದ್ರವಾಗಲು ಅದರ ಪೂರ್ಣಶಕ್ತಿ ಈ ಪರಮಾಣುಗಳ ಶಕ್ತಿಯ ಮೊತ್ತಕ್ಕಿಂತ ಕಡಿಮೆಯಾಗಿರಬೇಕು. ಸಾಮಾನ್ಯವಾಗಿ ಸಮಾಂಗಸ್ಥಾನಾವಲಂಬಿ ಪರಿಮಾಣಗಳು ಪ್ರತಿಸಮಾಂಗ ಸ್ಥಾನಾವಲಂಬಿ ಪರಿಮಾಣಗಳಿಗಿಂತ ಕಡಿಮೆ ಶಕ್ತಿಯನ್ನು ತೋರಿಸುತ್ತವೆ. ಈಗ ಜಲಜನಕ ಅಣುವಿಗೆ ಸಮಾಂಗಸ್ಥಾನಾವಲಂಬಿ ಪರಿಮಾಣವನ್ನು ಆರಿಸಿದಲ್ಲಿ ಅದಕ್ಕೆ ಪ್ರತಿಸಮಾಂಗ ಭ್ರಮಣಾವಲಂಬಿ ಪರಿಮಾಣವನ್ನೇ ಜೊತೆಗೂಡಿಸಬೇಕು. $H_2$ ಅಣುವಿಗೆ ಪೂರ್ಣ ಅಲೆ ಉತ್ಪನ್ನ $\psi r$ ಯನ್ನು ಈ ಕೆಳಗಿನಂತೆ ತೋರಿಸಬಹುದು:

$$\psi T = \left\lfloor \psi_{a(1)}\psi_{b(2)} + \psi_{a(2)}\psi_{b(2)} \right\rfloor \left\lfloor a_{(1)}\beta_{(2)} - a_{(2)}\beta_{(1)} \right\rfloor$$

ಈ ಅಲೆಉತ್ಪನ್ನವನ್ನು ಶ್ರೇಡಿಂಗರ್ ಸಮೀಕರಣದಲ್ಲಿ ಉಪಯೋಗಿಸಿ ಸನ್ನಿಹಿತ ವಿಧಾನದಿಂದ ಬಿಡಿಸಿದಲ್ಲಿ ಸಿಕ್ಕುವ ಪರಿಹಾರ ಅಣುವಿನ $E_S$ ಮತ್ತು $E_A$ ಎಂಬ ಎರಡು ಸ್ಥಿತಿಗಳನ್ನು ಗುರುತಿಸುತ್ತದೆ. $E_S$ ನಲ್ಲಿ ಆಕರ್ಷಣಸ್ಥಿತಿಯಿದ್ದು ಒಂದು ಭದ್ರ ಅಣು ಉತ್ಪತ್ತಿಯಾಗುತ್ತದೆ. ಆದರೆ $E_A$ ಯಲ್ಲಿ ವಿಕರ್ಷಣಸ್ಥಿತಿಯಾದ್ದರಿಂದ ಇಲ್ಲಿ ಪ್ರೋಟಾನುಗಳ ಮಧ್ಯೆ ಎಲೆಕ್ಟ್ರಾನ್ ಸಾಂದ್ರತೆ ಶೂನ್ಯವಿರುತ್ತದೆ. ಇವನ್ನು ಈ ಕೆಳಗಿನ ಚಿತ್ರದಲ್ಲಿ ತೋರಿಸಿದೆ. ಅಂದರೆ $E_A$ ಸ್ಥಿತಿಯಲ್ಲಿ ಅಣುವಿನ ಉತ್ಪತ್ತಿ ಸಾಧ್ಯವಿಲ್ಲ. $E_S$ ಸ್ಥಿತಿಯಲ್ಲಿ $R_{AB}$ = 0.869 A ಮತ್ತು ಬಂಧಶಕ್ತಿ E' = -3.14 eV ಎಂದೂ ಲೆಕ್ಕಾಚಾರಮಾಡಲಾಗಿದೆ. ಆದರೆ ಅಣುರೋಹಿತವನ್ನು ಉಪಯೋಗಿಸಿಕೊಂಡು ಪ್ರಯೋಗ ಮೌಲ್ಯಗಳು $R_{AB}$ = 0.74A ಮತ್ತು E' = -4.745 eV ಎಂದಿವೆ. ಇವುಗಳಿಂದ ವೇಲೆನ್ಸ್ ಬಂಧ ಸಿದ್ಧಾಂತದಲ್ಲಿ ಉಪಯೋಗಿಸಿದ ಪರೀಕ್ಷಾರ್ಥ ಅಲೆಉತ್ಪನ್ನ ಅಷ್ಟು ಸಮಂಜಸವಲ್ಲವೆಂದು ತೋರುತ್ತದೆ. ಇದರ ಹಲವಾರು ತಿದ್ದುಪಡಿಗಳನ್ನು ವಿಜ್ಞಾನಿಗಳು ಸೂಚಿಸಿದ್ದಾರೆ.




ಚಿತ್ರ–14

**ಅಣ್ವಕ ಕಕ್ಷಕ ಸಿದ್ಧಾಂತ :** ಇದನ್ನು ಹುಂಡ್, ಮುಲಿಕನ್ ಮತ್ತು ಲೆನ್ನಾರ್ಡ್ ಜೋನ್ಸ್‌ರವರು ಮಂಡಿಸಿದ್ದಾರೆ. ಈ ಸಿದ್ಧಾಂತದ ಪ್ರಕಾರ ಎರಡು ಪರಮಾಣುಗಳು ಜೊತೆಗೂಡಿ ಅಣುವಾಗಬೇಕಾದಲ್ಲಿ ಪರಮಾಣುಗಳಲ್ಲಿದ್ದ ಎಲೆಕ್ಟ್ರಾನುಗಳೆಲ್ಲ ಉತ್ಪತ್ತಿಯಾದ ಅಣ್ವಕ ಕಕ್ಷಕದಲ್ಲಿ ಪೂರ್ಣವಾಗಿ ವ್ಯವಸ್ಥೆಯಾಗಬೇಕು. ಈ ಅಣ್ವಕ ಕಕ್ಷಕಗಳು (ಮಾಲಿಕ್ಯುಲರ್ ಆರ್ಬಿಟಲ್ಸ್) ಪರಮಾಣು ಕಕ್ಷಕಗಳ ರೇಖೀಯ ಜೋಡಣೆಗಳಿಂದ ಉತ್ಪತ್ತಿಯಾಗಿ ಅಣುವನ್ನು ಪೂರ್ಣವಾಗಿ ಸುತ್ತುವರಿಯುತ್ತವೆ. ಈ ವ್ಯವಸ್ಥೆಯಲ್ಲಿ ಕೆಲವು ಬಾರಿ ಎಲೆಕ್ಟ್ರಾನುಗಳು ತಾವಿದ್ದ ಪರಮಾಣು ಕಕ್ಷಕಕ್ಕಿಂತ ಕಡಿಮೆಯಾದ ಅಣ್ವಕ ಕಕ್ಷಕವನ್ನು ಸೇರಬಹುದು. ಆಗ ಆ ಎಲೆಕ್ಟ್ರಾನುಗಳನ್ನು ಬಂಧಕ (ಬಾಂಡಿಂಗ್) ಎಲೆಕ್ಟ್ರಾನುಗಳೆಂದು ಕರೆಯಬಹುದು. ಆದರೆ ಹೆಚ್ಚಿನ ಶಕ್ತಿಯುಳ್ಳ ಅಣ್ವಕ ಕಕ್ಷಕಕ್ಕೆ ಹೋದಲ್ಲಿ ಅವು ಪ್ರತಿಬಂಧಕ (ಆಂಟಿಬಾಂಡಿಂಗ್) ಎಲೆಕ್ಟ್ರಾನುಗಳಾಗುತ್ತವೆ. ಕೆಲವು ಎಲೆಕ್ಟ್ರಾನುಶಕ್ತಿ ಮಟ್ಟಗಳು ಬದಲಾವಣೆ ಆಗದಿದ್ದಲ್ಲಿ ಅವು ಅಬಂಧಕ (ನಾನ್ ಬಾಂಡಿಂಗ್) ಎಲೆಕ್ಟ್ರಾನುಗಳೆನ್ನಿಸಿಕೊಳ್ಳುತ್ತವೆ. ಅಣುರಚನೆಗೆ ಪ್ರತಿಬಂಧಕ ಎಲೆಕ್ಟ್ರಾನುಗಳಿಗಿಂತ ಬಂಧಕ ಎಲೆಕ್ಟ್ರಾನುಗಳು ಹೆಚ್ಚಿಗೆ ಇರಬೇಕು. ಈಗ ಅಣ್ವಕ ಕಕ್ಷಕ ಪರೀಕ್ಷಾರ್ಥ ಅಲೆ ಉತ್ಪನ್ನವನ್ನು

$$\psi MO = \lfloor \psi_{a(1)} \psi_{b(1)} \rfloor \; \lfloor \psi_{a(1)} + a_{b(2)} \rfloor$$

ಎಂದಿಟ್ಟುಕೊಂಡು ಶ್ರೇಡಿಂಗರ್ ಸಮೀಕರಣದಲ್ಲಿ ಉಪಯೋಗಿಸಿ ಬಿಡಿಸಿದರೆ $H_2$ ಅಣುವಿನ ಬಂಧಶಕ್ತಿ $E = -2.68$ ev ಮತ್ತು $R_{AB} = 0.85\,A^{\circ}$ ಎಂದು ಲೆಕ್ಕಾಚಾರ ಮಾಡಬಹುದು. ಆದರೆ ಈ ರೀತಿ ಲೆಕ್ಕಾಚಾರ ಮಾಡಿದ ಮೌಲ್ಯಗಳಿಗೂ ಪ್ರಯೋಗದಿಂದ ಪಡೆದ ಮೌಲ್ಯಗಳಿಗೂ ಬಹಳ ವ್ಯತ್ಯಾಸವಿರುವುದರಿಂದ ಇಲ್ಲಿ ಉಪಯೋಗಿಸಿದ ಪರೀಕ್ಷಾರ್ಥ ಅಲೆಉತ್ಪನ್ನ ಅಷ್ಟು ಸಮಂಜಸವಾಗಿಲ್ಲ. ಪೌಲಿಂಗ್ ಮತ್ತು ಸ್ಲೇಟರ್ ರವರು ವೇಲೆನ್ಸ್ ಬಂಧ ಸಿದ್ಧಾಂತವನ್ನು ಮುಂದುವರಿಸಿ ಅನುರಣನ ಮತ್ತು ಕಕ್ಷಕಗಳ ಭಿನ್ನಮಿಶ್ರಣವೇ (ಹೈಬ್ರಿಡೈಸೇಷನ್) ಮುಂತಾದ ವಾದಗಳನ್ನು ಮಂಡಿಸಿದ್ದಾರೆ.

ಕ್ವಾಂಟಂ ರಸಾಯನಶಾಸ್ತ್ರದ ವ್ಯಾಪ್ತಿ ಬಹಳ ಹಿರಿದಾಗಿದೆ. ಇನ್ನು ಕೆಲವು ವಿಷಯಗಳ ಬಗ್ಗೆ ತಿಳಿಸುವುದಾದಲ್ಲಿ ಈ ಶಾಸ್ತ್ರ ರೋಹಿತ ಅಧ್ಯಯನದಲ್ಲಿ ಸಂಕ್ರಮದ (ಟ್ರಾನ್ಸಿಷನ್) ಸಂಭಾವ್ಯತೆಯನ್ನು ಕೂಡ ಲೆಕ್ಕಾಚಾರ ಮಾಡಬಲ್ಲುದು. ಅಣುಗಳಲ್ಲಿ ಎಲೆಕ್ಟ್ರಾನ್ ಸಾಂದ್ರತೆ ಯಾವ ಬಿಂದುವಿನಲ್ಲಿ ಎಷ್ಟಿರುತ್ತದೆಂದೂ ಲೆಕ್ಕಾಚಾರ ಮಾಡಬಹುದು. ಈ ಶಾಸ್ತ್ರ ಎಲ್ಲ ವಿಧವಾದ ಭೌತ ರಾಸಾಯನಿಕ ಬದಲಾವಣೆಗಳ ವಿವರಗಳನ್ನು ಕೊಡಲು ಪ್ರಯತ್ನಿಸುತ್ತದೆ. (ಡಿ.ಎಸ್.ಎಂ)

**ಕ್ವಾಂಟಂ ವೈದ್ಯುತಚಲನವಿಜ್ಞಾನ :** ವಿದ್ಯುತ್ಕಾಂತ ವಿಸರಣೆಯ ಗುಣಗಳ ಹಾಗೂ ವಿದ್ಯುದಾವಿಷ್ಟ ದ್ರವ್ಯದೊಡನೆ ಆ ವಿಸರಣೆಯ ಅಂತರ ಕ್ರಿಯೆಯ ಅಧ್ಯಯನ; ವಿಶಿಷ್ಟವಾಗಿ ಪರಮಾಣುಗಳೊಡನೆ ಮತ್ತು ಅವುಗಳ ಘಟಕ ಎಲೆಕ್ಟ್ರಾನುಗಳೊಡನೆ ಇಂಥ ಅಧ್ಯಯನ (ಕ್ವಾಂಟಂ ಎಲೆಕ್ಟ್ರೊಡೈನಮಿಕ್ಸ್). ಕ್ವಾಂಟಂ ವೈದ್ಯುತ ಚಲನಶಾಸ್ತ್ರವನ್ನು ನಿರ್ದೇಶಿಸುವ ಮೂಲಭೂತ ಸಮೀಕರಣಗಳು ಸಮಗ್ರ ಪರಮಾಣ್ವಕ ಭೌತವಿಜ್ಞಾನವನ್ನೂ ರಸಾಯನ ವಿಜ್ಞಾನವನ್ನೂ ಅಭಿಜಾತ (ಕ್ಲಾಸಿಕಲ್) ವಿದ್ಯುತ್ಕಾಂತ ಸಿದ್ಧಾಂತವನ್ನೂ ಒಳಗೊಂಡಿವೆ ಎಂದು ನಂಬಲಾಗಿದೆ. ಇಂದ್ರಿಯಗಳು ಸುಲಭವಾಗಿ ಗ್ರಹಿಸುವ ಎಲ್ಲ ವಿದ್ಯಮಾನಗಳನ್ನೂ ಅಂತಿಮವಾಗಿ ಕ್ವಾಂಟಂ ವೈದ್ಯುತ ಚಲನಶಾಸ್ತ್ರದ ನಿಯಮಗಳಿಂದ ಅರ್ಥವಿನಿಕೊಳ್ಳಬಹುದೆಂದೂ ಊಹಿಸಲಾಗಿದೆ. ಅದರ ಅನ್ವಯ ಹಾಗೂ ನಿಬಂಧಿತಗಳಲ್ಲಿ (ಇಂಪ್ಲಿಕೇಶನ್ಸ್) ಮತ್ತು ಸಿದ್ಧಾಂತದ ಹಿನ್ನೆಲೆಯಲ್ಲಿರುವ ಅಭಿಗೃಹೀತಗಳ (ಅಸಂಪ್ಷನ್ಸ್) ಸರಳತೆಯಲ್ಲಿ ಕ್ವಾಂಟಂ ವೈದ್ಯುತ ಚಲನಶಾಸ್ತ್ರಕ್ಕಿಂತ ಸರಳತರವಾದದ್ದೊಂದಿದ್ದರೆ ಅದು ಗುರುತ್ವಾಕರ್ಷಣ ಸಿದ್ಧಾಂತವೊಂದೇ. ವ್ಯವಹಾರದಲ್ಲಿ ಕ್ವಾಂಟಂ ವೈದ್ಯುತಚಲನಶಾಸ್ತ್ರ ವಿದ್ಯುತ್ಕಾಂತ ವಿಸರಣೆಯ ಕ್ವಾಂಟಂ ಸ್ವಭಾವಕ್ಕೆ ಸೀಮಿತವಾದ ವಿದ್ಯಮಾನಗಳನ್ನು ಕುರಿತು ಮಾತ್ರ ಇದೆ. ಪರಮಾಣುಗಳಿಂದ ಬೆಳಕಿನ ಉತ್ಸರ್ಜನೆ (ಎಮಿಶನ್) ಮತ್ತು ಅವಶೋಷಣೆಗಳ (ಅಬ್‌ಸಾರ್ಪ್ಷನ್) ಅಭ್ಯಾಸವೂ ಎಲೆಕ್ಟ್ರಾನುಗಳು ಹಾಗೂ ಇತರ ಮೂಲ ಕಣಗಳೊಡನೆ (ಫಂಡಮೆಂಟಲ್ ಪಾರ್ಟಿಕಲ್ಸ್) ಬೆಳಕಿನ ಮೂಲ (ಬೇಸಿಕ್) ಅಂತರ ಕ್ರಿಯೆಗಳ ಅಧ್ಯಯನವೂ ಇದರಲ್ಲಿ ಸೇರಿವೆ. ಡಿರಾಕ್, ಹೈಸೆನ್‌ಬರ್ಗ್ ಮತ್ತು ಪೌಲಿ ಎಂಬ ಮೂವರು ಭೌತವಿಜ್ಞಾನಿಗಳಿಂದ ಸ್ಥಾಪಿತವಾದ (1925ರ ತರುವಾಯ) ಶಾಸ್ತ್ರವಿದು. *

**ಕ್ವಾಂಟಂ ಸಂಖ್ಯಾಕಲನವಿಜ್ಞಾನ :** ಕ್ವಾಂಟಂ ಬಲವಿಜ್ಞಾನದ ವಿಧಾನಗಳಿಂದ ತಾತ್ತ್ವಿಕವಾಗಿ ಯಾವುದೇ ಭೌತವ್ಯವಸ್ಥೆಯ ವಿವರಣೆ ಸಾಧ್ಯ. ಆದರೆ ಕೇವಲ ಎರಡು ಎಲೆಕ್ಟ್ರಾನುಗಳಿರುವ ಒಂದು ಪರಮಾಣುವಿನ ಕ್ವಾಂಟಂ ವಿವರಣೆ ಕೂಡ ಗಣಿತೀಯವಾಗಿ ಅತಿ ಜಟಿಲವಾಗುತ್ತದೆನ್ನುವಾಗ ಅಸಂಖ್ಯಾತ ($\sim 10^{23}$) ಪರಮಾಣುಗಳಿಂದ ಕೂಡಿದ ಒಂದು ಸ್ಥೂಲಕಾಯದ ಶ್ರೇಡಿಂಗರ್ ಸಮೀಕರಣವನ್ನು ಬಿಡಿಸುವುದು ಹಾಗಿರಲಿ ಬರೆಯುವುದು ಕೂಡ ದುಸ್ಸಾಧ್ಯವಾಗುತ್ತದೆ. ಈ ರೀತಿ ಒಂದು ವ್ಯವಸ್ಥೆಯ, ಅಂದರೆ ಬಹುಕಣಗಳ ಒಂದು ಒಕ್ಕೂಟದ, ಕ್ವಾಂಟಂ ಸ್ಥಿತಿಯ ಸಂಪೂರ್ಣ ಮಾಹಿತಿ ಇಲ್ಲದೇ ಇರುವಾಗ ವ್ಯವಸ್ಥೆಯ ವರ್ತನೆಯ ಕೆಲವು ಸರಾಸರಿ ಲಕ್ಷಣಗಳು ಹಾಗೂ ನಿಯಮಗಳನ್ನು ಹೇಳಲು ಪ್ರಯತ್ನಿಸುವ ಭೌತಶಾಸ್ತ್ರದ ಭಾಗವೇ ಸಂಖ್ಯಾಕಲನೀಯ ಬಲವಿಜ್ಞಾನ ಅಥವಾ ಸಂಖ್ಯಾಕಲನೀಯ ಭೌತಶಾಸ್ತ್ರ ಅಥವಾ ಸರಳವಾಗಿ ಕ್ವಾಂಟಂ ಸಂಖ್ಯಾಕಲನವಿಜ್ಞಾನ (ಕ್ವಾಂಟಂ ಸ್ಟ್ಯಾಟಿಸ್ಟಿಕ್ಸ್). ಈ ಶಾಸ್ತ್ರದಲ್ಲಿ ಒಂಟಿಕಣದ ಗತಿವಿಜ್ಞಾನದಲ್ಲಿ (ಡೈನಮಿಕ್ಸ್) ಇಲ್ಲದ ಅನೇಕ ಹೊಸ ಪರಿಕಲ್ಪನೆಗಳನ್ನು ಬಳಸುತ್ತೇವೆ. ಉದಾಹರಣೆಗೆ ಒಂದು ಕಾಯದ ಉಷ್ಣತೆ ಆ ಕಾಯದಲ್ಲಿನ ಕಣಗಳ ಸರಾಸರಿ ಶಕ್ತಿಗೆ ಸಂಬಂಧಿಸಿದ ಒಂದು ಸಂಖ್ಯಾಕಲನೀಯ ಪರಿಕಲ್ಪನೆ. ಅನಿಲವೊಂದನ್ನು ಸುತ್ತಣ ಪರಿಸರದಿಂದ ಸಾಕಷ್ಟು ದೀರ್ಘಕಾಲ ಪ್ರತ್ಯೇಕಿಸಿ ಬಂಧಿಸಿಟ್ಟರೆ ಫಲಿಸುವ ಕಣಗಳ ಶಕ್ತಿಯ ಹಂಚಿಕೆ ಇಂಥ ಇನ್ನೊಂದು ಸಂಖ್ಯಾಕಲನೀಯ ಪರಿಕಲ್ಪನೆ.

ಮುಂದಿನ ಉಪಯೋಗದ ದೃಷ್ಟಿಯಿಂದ ಅನಿಲದ ಉದಾಹರಣೆಯನ್ನು ಸ್ವಲ್ಪ ದೀರ್ಘವಾಗಿ ಚರ್ಚಿಸೋಣ. ಅನಿಲವನ್ನು ಹಿಡಿದಿಟ್ಟಿರುವ ಪಾತ್ರೆಯ ಗಾತ್ರ V ಎಂದೂ ಅನಿಲದಲ್ಲಿರುವ ಕಣಗಳ ಒಟ್ಟು ಸಂಖ್ಯೆ N ಎಂದೂ ಇಟ್ಟುಕೊಳ್ಳೋಣ. ಅನಿಲವನ್ನು ಸುತ್ತಣ ಜಗತ್ತಿನಿಂದ ಪ್ರತ್ಯೇಕಿಸಿಟ್ಟಿರುವುದರಿಂದ ಅನಿಲದ ಒಟ್ಟು ಶಕ್ತಿ E ಕಾಲದೊಡನೆ ಬದಲಾಯಿಸುವುದಿಲ್ಲ. ಅನಿಲದ ಒಟ್ಟು ಶಕ್ತಿ E ಅನಿಲದ ಕಣಗಳ ಶಕ್ತಿಯ ಮೊತ್ತಕ್ಕೆ ಸಮವಾಗಿರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು E ಯನ್ನು N ಕಣಗಳಲ್ಲಿ ಅಸಂಖ್ಯಾತ ರೀತಿಯಲ್ಲಿ ಹಂಚಬಹುದು. ಈ ರೀತಿಯ ಪ್ರತಿಯೊಂದು ಹಂಚಿಕೆಯನ್ನೂ ಈ ವ್ಯವಸ್ಥೆಯ ಒಂದು ಸೂಕ್ಷ್ಮಸ್ಥಿತಿ (ಮೈಕ್ರೋಸ್ಕೋಪಿಕ್ ಸ್ಟೇಟ್) ಎಂದೂ ಪರಿಗಣಿಸಿದರೆ ಅನಿಲದ ಒಟ್ಟು ಶಕ್ತಿ E ಆಗಿರಬೇಕೆಂಬ ಸ್ಥೂಲಸ್ಥಿತಿಗೆ (ಮ್ಯಾಕ್ರೋಸ್ಕೋಪಿಕ್ ಸ್ಟೇಟ್) ಹೊಂದಿಕೊಂಡಂತೆ ಒಟ್ಟು ಶಕ್ತಿಯ ಬೇರೆ ಬೇರೆ ಆಂತರಿಕ ಹಂಚಿಕೆಯುಳ್ಳ ಅಸಂಖ್ಯಾತ ಸೂಕ್ಷ್ಮಸ್ಥಿತಿಗಳಿವೆ ಎಂದು ತಿಳಿಯುತ್ತದೆ. ಈಗ ಯಾವುದೋ ಒಂದು ಗೊತ್ತಾದ ಕ್ಷಣದಲ್ಲಿ ಈ ಅನಿಲದಲ್ಲಿ ಶಕ್ತಿ ಯಾವ ರೀತಿಯಲ್ಲಿ ಹಂಚಿಹೋಗಿದೆ ಎಂಬುದನ್ನು ತಿಳಿಯಲು ಸಾಧ್ಯವೇ ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ.ಒಂದು ಕಣದ ಚಲನೆಯ ಮೊದಲ ಬೆಲೆಗಳು, ಅಂದರೆ ಒಂದು ಗೊತ್ತಾದ ಕ್ಷಣದಲ್ಲಿ ಆ ಕಣದ ಸ್ಥಾನ ಹಾಗೂ ಸಂವೇಗ (ಮೊಮೆಂಟಂ), ಗೊತ್ತಿದ್ದರೆ ಉಳಿದ ಕ್ಷಣಗಳಲ್ಲಿ ಅದರ ಸಂವೇಗ ಹಾಗೂ ಸ್ಥಾನಗಳನ್ನು ನ್ಯೂಟನ್ ಚಲನೆಯ ಸಮೀಕರಣಗಳನ್ನು ಬಿಡಿಸುವುದರ ಮೂಲಕ ತಿಳಿಯಬಹುದು. (ಇಲ್ಲಿ ಅಭಿಜಾತ ಬಲವಿಜ್ಞಾನದ ವ್ಯಾಪ್ತಿಯಲ್ಲಿ ಮಾತ್ರ ಮಾತನಾಡುತ್ತಿದ್ದೇವೆ.) ಆದರೆ ಚಲನೆಯ ಮೊದಲ ಬೆಲೆಗಳು ಗೊತ್ತಿಲ್ಲದಿರುವಾಗ ಕಣದ ಸ್ಥಿತಿಯನ್ನು ಬೇರೆ ಕಾಲಗಳಲ್ಲಿ ತಿಳಿಯಲು ಸಾಧ್ಯವಾಗುವುದಿಲ್ಲ. ಅನಿಲದಲ್ಲಿರುವ ಕಣಗಳ ಚಲನೆಯ ಮೊದಲ ಬೆಲೆಗಳನ್ನು ಯಾವ ರೀತಿಯಿಂದಲೂ ತಿಳಿಯಲು ಸಾಧ್ಯವಿಲ್ಲದ ಕಾರಣ ಕಣಗಳ ಚಲನೆಯನ್ನು, ತನ್ಮೂಲಕವಾಗಿ ಶಕ್ತಿಯ ಹಂಚಿಕೆಯನ್ನು, ನಿಖರವಾಗಿ ತಿಳಿಯಲು ತಾತ್ತ್ವಿಕವಾಗಿ ಕೂಡ ಸಾಧ್ಯವಾಗುವುದಿಲ್ಲ. ಅನಿಲದಲ್ಲಿನ ಕಣಗಳ (ನೂರು ಕೋಟಿ ಕೋಟಿ ಕೋಟಿಗೂ ಮಿಗಿಲಾದ) ಅಪಾರ ಸಂಖ್ಯೆಯಿಂದ ಹುಟ್ಟಿದ ವ್ಯಾವಹಾರಿಕ ಅಸಾಧ್ಯತೆ (ಪ್ರ್ಯಾಕ್ಟಿಕಲ್ ಇಂಪಾಸಿಬಿಲಿಟಿ) ಮತ್ತು ಕಣಗಳ ಗೊತ್ತಿಲ್ಲದ ಮೊದಲ ಬೆಲೆಗಳಿಂದ ಜನಿಸಿದ ತಾತ್ತ್ವಿಕ ಅಸಾಧ್ಯತೆಗಳು ಸಮಸ್ಯೆಯನ್ನು ಮತ್ತಷ್ಟು ಜಟಿಲವನ್ನಾಗಿ ಮಾಡುತ್ತವೆ. ಇಂಥ ಸನ್ನಿವೇಶಗಳಲ್ಲಿ ವ್ಯವಸ್ಥೆಯ ಸೂಕ್ಷ್ಮಸ್ಥಿತಿಯನ್ನು ಅಥವಾ ಶಕ್ತಿಹಂಚಿಕೆಯನ್ನು ಸಂಪೂರ್ಣ ನಿಖರತೆಯಿಂದ ಹೇಳುವ ಹಂಬಲವನ್ನು ಬಿಟ್ಟು ವ್ಯವಸ್ಥೆ ಉಷ್ಣ ಸಮತೋಲನದಲ್ಲಿರುವಾಗ, ಅಂದರೆ ವ್ಯವಸ್ಥೆಯ ಎಂಟ್ರೊಪಿ ಗರಿಷ್ಠವಾಗಿರುವಾಗ, ಯಾವ ಶಕ್ತಿ ಹಂಚಿಕೆ ಅತ್ಯಂತ ಸಂಭಾವ್ಯ ಎಂದು ಲೆಕ್ಕ ಮಾಡುವುದು

ಇದ್ದುದರಲ್ಲಿ ಸುಲಭ. ಹೀಗಾಗಿ ನಾವು ಸಂಭಾವ್ಯತೆಗಳ ಲೆಕ್ಕಾಚಾರಕ್ಕೆ ಅಥವಾ ಸಂಖ್ಯಾಕಲನೀಯ ವಿಧಾನಗಳಿಗೆ ಶರಣು ಬರುತ್ತೇವೆ. ಇಲ್ಲಿ ಸಂಖ್ಯಾಕಲನೀಯ ವಿಧಾನಗಳ ಅನಿವಾರ್ಯತೆ ವ್ಯವಸ್ಥೆಯಲ್ಲಿನ ಕಣಗಳ ಅಪಾರ ಸಂಖ್ಯೆ ಹಾಗೂ ವ್ಯವಸ್ಥೆಯ ಸ್ಥಿತಿಯ ಬಗ್ಗೆ ಇರುವ ಅಸಂಪೂರ್ಣ ಮಾಹಿತಿಯ ಕಾರಣದಿಂದ ಜನಿಸುತ್ತದೆ. ಇಷ್ಟೇ ಸಾಲದೇನೋ ಎಂಬಂತೆ ಈ ಸಂಖ್ಯಾಕಲನೀಯ ವಿಧಾನಗಳನ್ನು ಕ್ವಾಂಟಂ ವ್ಯವಸ್ಥೆಗಳಿಗೆ ಅಳವಡಿಸುವಾಗ ಕ್ವಾಂಟಂ ಬಲವಿಜ್ಞಾನದ ವಿಶಿಷ್ಟವಾದ, ಒಂಟಿಕಣದ ವಿವರಣೆಯಲ್ಲಿ ಕೂಡ ಇರುವ, ಸರಾಸರಿಯ ಪರಿಕಲ್ಪನೆಗಳು ನುಸುಳುತ್ತವೆ.

ಹಲವು ಸಾರಿ ಭೌತವ್ಯವಸ್ಥೆಯ ಚಲನೆಯನ್ನು ವಿವರಿಸುವಾಗ ಅಭಿಜಾತ ಬಲವಿಜ್ಞಾನದ ಅಳವಡಿಕೆಯೇ ತೃಪ್ತಿಕರವಾದ ಫಲಿತಾಂಶಗಳನ್ನು ನೀಡುತ್ತದೆ. ಇಂಥ ಸಂದರ್ಭಗಳಲ್ಲಿ ಚಲನೆಯ ವಿವರಣೆಯಲ್ಲಿ ಕ್ವಾಂಟಂ ಸಿದ್ಧಾಂತದ ಪರಿಷ್ಕಾರಗಳಿಂದ ಗಮನಾರ್ಹವಾದ ಬದಲಾವಣೆಯೇನೂ ಆಗುವುದಿಲ್ಲ. ಅಭಿಜಾತ ಬಲವಿಜ್ಞಾನದ ನಿಯಮಗಳನ್ನು ಪಾಲಿಸುವ, ಅಂದರೆ ಅಭಿಜಾತ ಬಲವಿಜ್ಞಾನದ ನಿಯಮಗಳಿಂದ ತೃಪ್ತಿಕರವಾಗಿ ವಿವರಿಸಬಹುದಾದ, ವ್ಯವಸ್ಥೆಗಳ ಸಂಖ್ಯಾಕಲನೀಯ ವಿವರಣೆ ಅಭಿಜಾತ ಸಂಖ್ಯಾಕಲನೀಯ ಬಲವಿಜ್ಞಾನದ ಗುರಿ. ಈ ಶಾಸ್ತ್ರದ ಸಾಮಾನ್ಯ ವಿಧಾನಗಳು ಎಲ್.ಬೋಲ್ಟ್ಸ್‌ಮಾನ್ ಮತ್ತು ಡಬ್ಲ್ಯು ಗಿಬ್ಸ್ ಇವರೀರ್ವರ ಕೊಡುಗೆ. ಆದರೆ ದ್ರವ ಹೀಲಿಯಂ, ಲೋಹಗಳಲ್ಲಿನ ವಾಹಕ ಎಲೆಕ್ಟ್ರಾನುಗಳ ಸಮೂಹ, ಒಂದು ಆವರಣದಲ್ಲಿನ ವಿದ್ಯುತ್ಕಾಂತೀಯ ವಿಸರಣ ಮುಂತಾದ ಭೌತವ್ಯವಸ್ಥೆಗಳ ಸಂಖ್ಯಾಕಲನೀಯ ವಿವರಣೆ ಅಭಿಜಾತ ಸಂಖ್ಯಾಕಲನೀಯ ಬಲವಿಜ್ಞಾನದ ಸಹಾಯದಿಂದ ಮಾಡಲು ಸಾಧ್ಯವಾಗುವುದಿಲ್ಲ. ಈ ವ್ಯವಸ್ಥೆಗಳು ಮೂಲತಃ ಕ್ವಾಂಟಂ ವ್ಯವಸ್ಥೆಗಳಾಗಿರುವುದೇ ಇದಕ್ಕೆ ಕಾರಣ. ಕ್ವಾಂಟಂ ವ್ಯವಸ್ಥೆಗಳ ಸಂಖ್ಯಾಕಲನೀಯ ವಿವರಣೆಯನ್ನು ಕೊಡಲು ಪ್ರಯತ್ನಿಸುವ ಕ್ವಾಂಟಂ ಸಂಖ್ಯಾಕಲನೀಯ ಬಲವಿಜ್ಞಾನದ ಅಥವಾ ಕ್ವಾಂಟಂ ಸಂಖ್ಯಾಕಲನಶಾಸ್ತ್ರದ ಬೆಳವಣಿಗೆಗೆ ಬಹಳಮಟ್ಟಿಗೆ ಎಸ್.ಎನ್.ಬೋಸ್, ಇ.ಫರ್ಮಿ, ಪಿ.ಎ.ಎಂ.ಡಿರಾಕ್, ಆಲ್ಬರ್ಟ್ ಐನ್‌ಸ್ಟೈನ್ ಮುಂತಾದ ವಿಜ್ಞಾನಿಗಳು ಕಾರಣರಾಗಿದ್ದಾರೆ ಎನ್ನಬಹುದು.

ಈ ಲೇಖನದಲ್ಲಿ ಒಂದು ಆದರ್ಶ ಅನಿಲದ (ಐಡಿಯಲ್ ಗ್ಯಾಸ್) ಉದಾಹರಣೆಯ ಮೂಲಕ ಕ್ವಾಂಟಂ ಸಂಖ್ಯಾಕಲನವಿಜ್ಞಾನದ ಸಾಮಾನ್ಯ ವಿಧಾನಗಳ ಸ್ಥೂಲ ಪರಿಚಯವನ್ನು ಮಾಡಿಕೊಡುತ್ತೇವೆ. ಆದರ್ಶ ಅನಿಲವೆಂದರೆ ಸಂಪೂರ್ಣವಾಗಿ ಸ್ವತಂತ್ರವಾದ ಅಂದರೆ ಪರಸ್ಪರ ಅಂತರಕ್ರಿಯಾರಹಿತ ಬಹುಕಣಗಳ ಒಂದು ವ್ಯವಸ್ಥೆ. ಇಂಥ ವ್ಯವಸ್ಥೆಯೊಂದರಲ್ಲಿ ಕಾಣಸಿಗುವ ಕ್ವಾಂಟಂ ಪರಿಣಾಮಗಳನ್ನು ಸ್ಥೂಲವಾಗಿ ನಮನ ಪರಿಣಾಮಗಳು(ಡಿಫ್ರಾಕ್ಟಿವ್ ಎಫೆಕ್ಟ್ಸ್) ಮತ್ತು ಸಮಾಂಗತ್ವದ (ಸಿಮೆಟ್ರಿ) ಪರಿಣಾಮಗಳು ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ನಮನ ಪರಿಣಾಮಗಳು ಕಣಗಳ ಅಲೆಯಂಥ ಗುಣಗಳಿಂದ ಹುಟ್ಟುತ್ತವೆ ಮತ್ತು ಕಣಗಳು ಯಾವುದಾದರೂ ರೀತಿಯಲ್ಲಿ ಬಂಧಿತವಾದಾಗ ಕೆಲವು ನಿರ್ದಿಷ್ಟ ಶಕ್ತಿಮಟ್ಟಗಳನ್ನು ಮಾತ್ರ ಹೊಂದಿರುವಂತೆ ಮಾಡುತ್ತವೆ. ಸಮಾಂಗತ್ವದ ಪರಿಣಾಮಗಳಾದರೋ ಎಲ್ಲ ರೀತಿಯಲ್ಲೂ ಒಂದೇ ಇರುವ, ಅಂದರೆ ಸರ್ವಸಮವಾದ, ಕಣಗಳ ವ್ಯವಸ್ಥೆಗಳಲ್ಲಿ ಕಣಗಳ ಪರಸ್ಪರ ಗುರುತಿಸಲಾಗದಿರುವಿಕೆಯ ಪರಿಣಾಮವಾಗಿ ಜನಿಸುತ್ತವೆ;

ಈಗ ಯಾವುದೋ ಒಂದು ಪೆಟ್ಟಿಗೆಯಲ್ಲಿ ಬಂಧಿತವಾದ ಸರ್ವಸಮ ಕಣಗಳ ಆದರ್ಶ ಅನಿಲವೊಂದನ್ನು ಗಮನಿಸೋಣ. ಅನಿಲವನ್ನು ಆದರ್ಶವಾದುದು ಎಂದು ಪರಿಗಣಿಸಿರುವುದರಿಂದ ಅನಿಲದ ಯಾವುದೇ ಒಂದು ಕಣದ ಮೇಲೆ ಮಿಕ್ಕೆಲ್ಲ ಕಣಗಳಿಂದ ಯಾವ ರೀತಿಯ ಪ್ರಭಾವವೂ ಇರುವುದಿಲ್ಲ. ಇಂಥ ಒಂದು ಕಣದ ಶಕ್ತಿಮಟ್ಟಗಳನ್ನು ಪೆಟ್ಟಿಗೆಯೊಂದರಲ್ಲಿ ಬಂಧಿತವಾದ ಕಣವೊಂದರ ಶ್ರೇಡಿಂಗರ್ ಸಮೀಕರಣವನ್ನು ಬಿಡಿಸುವುದರ ಮೂಲಕ ನಿರ್ಧರಿಸಬಹುದು. (ನೋಡಿ–ಕ್ವಾಂಟಂ ಬಲವಿಜ್ಞಾನ.) ಹೀಗೆ ಕಂಡುಹಿಡಿದ ಶಕ್ತಿಮಟ್ಟಗಳು $\varepsilon_1, \varepsilon_2, \varepsilon_3...$, ಗಳಾಗಿಯೂ ಇವುಗಳಿಗೆ ಹೊಂದಿಕೊಂಡ ಒಂಟಿಕಣದ ಅಲೆ ಉತ್ಪನ್ನಗಳು $\varnothing_1, \varnothing_2, \varnothing_3$....... ಗಳಾಗಿಯೂ ಇರಲಿ. ಕಣಗಳು ಸ್ವತಂತ್ರವಾಗಿರುವುದರಿಂದ ಅನಿಲದ ಶಕ್ತಿಮಟ್ಟ ಒಂಟಿ ಕಣಗಳ ವಿವಿಧ ಶಕ್ತಿಮಟ್ಟಗಳ ಮೊತ್ತವಾಗಿರಬೇಕು. ಇಂಥ ಸಂದರ್ಭದಲ್ಲಿ ವ್ಯವಸ್ಥೆಯ (ಅಥವಾ ಅನಿಲದ) ಅಲೆ ಉತ್ಪನ್ನ ಒಂಟಿಕಣಗಳ ಅಲೆಉತ್ಪನ್ನಗಳ ವಿವಿಧ ಗುಣಲಬ್ಧಗಳಾಗಿರುತ್ತವೆಂದು ತೋರಿಸಬಹುದು. ಉದಾಹರಣೆಗೆ

$$\underbrace{\psi(1,2.........N) = \phi 1(1)\ \phi 1(2)....\ \phi 1(n_1)}_{n_1\ \text{ಪದಗಳು}} \times$$

$$\underbrace{\phi_2(n_1+1)\ \phi_2(n_1+2)..........\phi_2(n_1+n_2)\ \phi_3(n_1+n_2+1)\ ...}_{n_2\ \text{ಪದಗಳು}}$$

............ಇತ್ಯಾದಿ

.......(1)

ಅಂಥ ಒಂದು ವ್ಯವಸ್ಥೆಯ ಅಲೆಉತ್ಪನ್ನ. ಇಲ್ಲಿ ಆವರಣದಲ್ಲಿರುವ ಸಂಖ್ಯೆ ಕಣದ ಸಂಖ್ಯೆ ಹಾಗೂ ಕಣದ ಎಲ್ಲ ನಿರ್ದೇಶಕಗಳನ್ನೂ ಪ್ರತಿನಿಧಿಸುತ್ತದೆ. ಉದಾಹರಣೆಗೆ ಯಾವುದೋ ಸಂದರ್ಭದಲ್ಲಿ 2 ಎನ್ನುವುದು ಎರಡನೆಯ ಕಣದ ಆಕಾಶದಲ್ಲಿನ ನಿರ್ದೇಶಕಗಳನ್ನೂ (ಸ್ಪೇಶಿಯಲ್ ಕೋಆರ್ಡಿನೇಟ್ಸ್) ಕಣದ ಭ್ರಮಣ (ಸ್ಪಿನ್) ಪ್ರಾಚಲವನ್ನೂ ಪ್ರತಿನಿಧಿಸಬಹುದು. ಮೇಲೆ ಬರೆದಿರುವ $\psi$ ಉತ್ಪನ್ನದಿಂದ ಪ್ರತಿನಿಧಿಸಲ್ಪಟ್ಟ ಸ್ಥಿತಿಯಲ್ಲಿ $n_1$ ಕಣಗಳು $\phi_1$ ಎಂಬ ಒಂಟಿಕಣದ ಸ್ಥಿತಿಯಲ್ಲೂ $n_2$ ಕಣಗಳು $\phi_1$ ಎಂಬ ಒಂಟಿಕಣದ ಸ್ಥಿತಿಯಲ್ಲೂ . . . .ಮುಂತಾಗಿ ಇರುತ್ತವೆ. ಅನಿಲದಲ್ಲಿ ಒಟ್ಟು N ಕಣಗಳಿವೆ ಎಂದುಕೊಂಡರೆ

$$n_1 + n_2 + ......= N \qquad ......(2)$$

ಆಗಿರಬೇಕೆಂಬುದು ಸ್ವಯಂವೇದ್ಯ. $\phi_1, \phi_2$ . . . .ಗಳಿಗೆ ಹೊಂದಿಕೊಂಡ ಶಕ್ತಿಮಟ್ಟಗಳು $\varepsilon_1, \varepsilon_2$,.....ಆದ್ದರಿಂದ $\psi$ ಎಂಬ ವ್ಯವಸ್ಥೆಯ ಸ್ಥಿತಿಯಲ್ಲಿ $n_1$ ಕಣಗಳು $\varepsilon_1$ ಮಟ್ಟದಲ್ಲೂ $n_2$ ಕಣಗಳು $\varepsilon_2$ ಮಟ್ಟದಲ್ಲೂ ಮುಂತಾಗಿ ಇರುತ್ತವೆ ಎಂದರ್ಥವಾಗುತ್ತದೆ. ಅನಿಲದ ಒಟ್ಟು ಶಕ್ತಿ E ಆಗಿದ್ದರೆ ಸಹಜವಾಗಿಯೇ

$$\varepsilon_1 n_1 + \varepsilon_2 n_2 + ........ = E \qquad .......(3)$$

ಎಂಬುದು $\psi$, ಸ್ಥಿತಿಯಲ್ಲಿನ ಶಕ್ತಿಹಂಚಿಕೆ. ಈ N- ಕಣವ್ಯವಸ್ಥೆಯ ಅಲೆಉತ್ಪನ್ನ $\psi$ ಯನ್ನು ಬರೆಯುವಾಗ ಅಲೆಬಲವಿಜ್ಞಾನದ ನಮನ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ. ಈಗ ಸಮಾಂಗತ್ವದ ಪರಿಣಾಮಗಳನ್ನು ಪರಿಗಣಿಸೋಣ. ಕಣಗಳಿಗೆ 1, 2 . . . .ಮುಂತಾಗಿ ಹೆಸರುಗಳನ್ನು ಇಡುವುದರಲ್ಲಿ ಕಣ 1ನ್ನು ಕಣ 2 ರಿಂದ ಬೇರೆಯಾಗಿ ಗುರುತಿಸಬಹುದು ಎಂಬ ನಂಬಿಕೆ ಅಡಕವಾಗಿದೆ. ಆದರೆ ಕಣಗಳು ಸರ್ವಸಮವಾಗಿರುವುದರಿಂದ ಈ ರೀತಿಯ ನಾಮಕರಣ ಅರ್ಥವಿಲ್ಲದ್ದಾಗುತ್ತದೆ. ಆದ್ದರಿಂದ ಶಕ್ತಿಮಟ್ಟಗಳ ವಸತಿ ಸಂಖ್ಯೆಗಳಾದ (ಆಕ್ಯುಪೇಷನ್ ನಂಬರ್ಸ್) $n_1, n_2$ .....ಗಳನ್ನು ಬದಲಾಯಿಸದಂತೆ ಕಣಗಳನ್ನು $\phi_1, \phi_2$ . . . ಸ್ಥಿತಿಗಳಲ್ಲಿ ಯಾವುದೇ ರೀತಿಯಲ್ಲಿ ವಿನಿಮಯ ಮಾಡಿದರೂ (ಕಣಗಳು ಒಂದೇ ತೆರನಾಗಿರುವುದರಿಂದ) ಪ್ರಯೋಗಗಳಿಂದ ನಿರ್ಧರಿಸಬಹುದಾದ ವ್ಯವಸ್ಥೆಯ ಭೌತಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಬಾರದು. ಆದರೆ ಇಂಥ ಒಂದು ಕಣಗಳ ಕ್ರಮಯೋಜನೆಯಲ್ಲಿ (ಪರ್ಮ್ಯುಟೇಷನ್) $\psi$ ಉತ್ಪನ್ನ ಬದಲಾಯಿಸಬಹುದು. ಉದಾಹರಣೆಗೆ $T(r, s)$ ಅನ್ನುವುದು $r$ ಅನ್ನು $s$ ನ ಜಾಗದಲ್ಲೂ $s$ ನ್ನು $r$ ನ ಜಾಗದಲ್ಲೂ ಇಡುವ ಎರಡು ಪದಗಳ ಒಂದು ಕ್ರಮಯೋಜನೆಯ ಪರಿಕರ್ಮಿ(ಆಪರೇಟರ್ ) ಆಗಿದ್ದರೆ

$$T\ (r, s)\ \psi\ (1, 2...... , r,........,s,......,N) =$$
$$\psi\ (1, 2...... , r,.......,s,......,N) \qquad ...(4)$$

ಎಂದಾಗುತ್ತದೆ. ಇಲ್ಲಿ $\psi$ ಮತ್ತು $T\psi$ ಗಳು ಒಂದೇ ಆಗಿರಬೇಕಾಗಿಲ್ಲ. ಆದರೆ $\psi$ ಮತ್ತು $T\psi$ ಗಳು ಪ್ರಾಯೋಗಿಕ ಅಳತೆಗಳಲ್ಲಿ ಒಂದೇ ಫಲಿತಾಂಶಗಳನ್ನು ನೀಡಬೇಕು. ಆದ್ದರಿಂದ ಪ್ರಾಯೋಗಿಕವಾಗಿ ನಿರ್ಧರಿಸಲು ಸಾಧ್ಯವಾಗುವ $\psi^*\psi \equiv |\psi|^2$ ಎಂಬ ನೈಜ ಸಂಖ್ಯೆ $T\psi$ ಮತ್ತು $\psi$ ಉತ್ಪನ್ನಗಳಿಗೆ ಒಂದೇ ಆಗಿರಬೇಕು. ಹೀಗಾಗಿ $T\psi = \psi e^{i\alpha}$ ಎಂದು ಬರೆಯಲು ಸಾಧ್ಯವಾಗುತ್ತದೆ. ಇಲ್ಲಿ $\alpha$ ಎಂಬುದು ಒಂದು ನೈಜ ಸಂಖ್ಯೆಯಾಗಿರಬೇಕು. $T\psi$ ಯು $\psi$ ಯಲ್ಲಿ r ಮತ್ತು s ಗಳ ಪರಸ್ಪರ ವ್ಯತ್ಯಯದಿಂದ ಬರುವ ಉತ್ಪನ್ನವಾದ್ದರಿಂದ $T\psi$ ಯಲ್ಲಿ r,s ಗಳನ್ನು ಪುನಃ ವ್ಯತ್ಯಯಮಾಡಿದರೆ ಹಳೆಯ $\psi$ ಬರಬೇಕು. ಅಂದರೆ

$$T(T\psi) \equiv T^2\psi = \psi \qquad ..........(5)$$

ಆಗಬೇಕು. ಆದರೆ

$$T\ \psi = e^{i\alpha}\ \psi$$

ಆದ್ದರಿಂದ ನೇರವಾಗಿ $T(T\psi) = T(e^{i\alpha}\psi) = e^{i\alpha}\ (T\psi)$

$$= e^{2i\alpha}\ \psi\ ......(6)$$

ಎಂದು ತಿಳಿಯುತ್ತದೆ. ಈಗ (5) ಮತ್ತು (6)ರಿಂದ $e^{2ia} = 1$ ಅಥವಾ $e^{ia} = \pm 1$ ಎಂದು ತಿಳಿದು ಬರುತ್ತದೆ. ಆರೋಹಣ ಕ್ರಮದಲ್ಲಿರುವ 1,2, 3,.....N ಎಂಬ ಸಂಖ್ಯೆಗಳನ್ನು $P_1, P_2 . . . . P_n$ ಎಂದು ಬೇರೆ ಯಾವುದೋ ಕ್ರಮದಲ್ಲಿ ಬರೆಯುವ ಕ್ರಮಯೋಜನೆಯನ್ನು P ಎಂದು ಸೂಚಿಸೋಣ. ಈ ಕ್ರಮಯೋಜನೆಯನ್ನು ಹಲವು ಎರಡು ಪದಗಳ ಕ್ರಮಯೋಜನೆಗಳಾಗಿ (ಟ್ರಾನ್ಸ್‌ಪೊಸಿಷನ್ಸ್) ಅಪವರ್ತಿಸಬಹುದಾದ್ದರಿಂದ $P\psi = \pm\psi$ ಆಗಿರಬೇಕು ಎಂದು ತಿಳಿಯುತ್ತದೆ. $P\ \psi = +\psi$ ಎಂಬುದು ಎಲ್ಲ P ಗಳಿಗೂ ನಿಜವಾದರೆ $\psi$ ಯನ್ನು ಸಮಾಂಗೀಯ ಅಲೆ ಉತ್ಪನ್ನ ಎಂದೂ ಸರಿ–ಕ್ರಮಯೋಜನೆಗಳಿಗೆ (ಈವನ್ ಪರ್ಮ್ಯುಟೇಷನ್ಸ್) $P\psi = +\psi$ ಆಗಿಯೂ ಬೆಸ–ಕ್ರಮಯೋಜನೆಗಳಿಗೆ $P\psi = -\psi$ ಆಗಿಯೂ ವರ್ತಿಸುವ $\psi$ ಯನ್ನು ಪ್ರತಿಸಮಾಂಗೀಯ (ಆಂಟಿಸಿಮೆಟ್ರಿಕ್) ಅಲೆ ಉತ್ಪನ್ನ ಎಂದೂ ಕರೆಯುತ್ತೇವೆ. (ಒಂದು ಕ್ರಮಯೋಜನೆ P ಯನ್ನು ಎರಡು ಪದಗಳ ಕ್ರಮಯೋಜನೆಗಳಲ್ಲಿ ಅಪವರ್ತಿಸುವಾಗ ಅಪವರ್ತನಗಳು ಸರಿಸಂಖ್ಯೆಯಲ್ಲಿದ್ದರೆ P ಯನ್ನು ಸರಿ ಎಂದೂ ಬೆಸಸಂಖ್ಯೆಯಲ್ಲಿದ್ದರೆ P ಯನ್ನು ಬೆಸ ಎಂದೂ ಕರೆಯುತ್ತೇವೆ). ಕ್ರಮಯೋಜನೆಯ ಪರಿಕರ್ಮಿ P ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ ಪರಿಕರ್ಮಿ H ನೊಂದಿಗೆ ಪರಿವರ್ತಿಸುವುದರಿಂದ (ಕಮ್ಯೂಟ್ಸ್)

ಅಂದರೆ [P,H]=0 ಆದ್ದರಿಂದ ψನ ಸಮಾಂಗತ್ವ ಅಥವಾ ಪ್ರತಿಸಮಾಂಗತ್ವ ಕಾಲದೊಡನೆ ಬದಲಾಯಿಸುವುದಿಲ್ಲ.

ಪೂರ್ಣಾಂಕ ಭ್ರಮಣ ಉಳ್ಳ (ಭ್ರಮಣ = 0, 1, 2, 3, . . . .) ಕಣಗಳ ವ್ಯವಸ್ಥೆಯ ಅಲೆಉತ್ಪನ್ನಗಳು ಸಮಾಂಗೀಯವಾಗಿಯೂ ಅರ್ಧಬೆಸ ಪೂರ್ಣಾಂಕ ಭ್ರಮಣ ಉಳ್ಳ (ಭ್ರಮಣ = 1/2, 3/2, 5/2. . . .) ಕಣಗಳ ವ್ಯವಸ್ಥೆಯ ಅಲೆಉತ್ಪನ್ನಗಳು ಪ್ರತಿಸಮಾಂಗೀಯವಾಗಿಯೂ ಇರುತ್ತವೆಂದು ಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತದ ಸಹಾಯದಿಂದ ತೋರಿಸಬಹುದು. ಪೂರ್ಣಾಂಕ ಭ್ರಮಣ ಇರುವ ಕಣಗಳನ್ನು (ಭಾರತೀಯ ಭೌತವಿಜ್ಞಾನಿ ಸತ್ಯೇಂದ್ರನಾಥ್ ಬೋಸ್‌ರವರ ಗೌರವಾರ್ಥವಾಗಿ) ಬೋಸ್ ಕಣಗಳೆಂದೂ ಅರ್ಧ ಬೆಸಪೂರ್ಣಾಂಕ ಭ್ರಮಣ ಇರುವ ಕಣಗಳನ್ನು (ಇಟಾಲಿಯನ್ ಭೌತವಿಜ್ಞಾನಿ ಎನ್ರಿಕೋ ಫರ್ಮಿಯವರ ಗೌರವಾರ್ಥವಾಗಿ) ಫರ್ಮಿಕಣಗಳೆಂದೂ ಕರೆಯುತ್ತಾರೆ. ಫೋಟಾನ್, π–ಮೇಸಾನುಗಳು, ಸರಿ–ದ್ರವ್ಯರಾಶಿ ಸಂಖ್ಯೆಯ ಎಲ್ಲ ನೂಕ್ಲಿಯಸುಗಳು ಬೋಸ್ ಕಣಗಳಾದರೆ ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್ μ–ಮೇಸಾನುಗಳು ಮತ್ತು ಬೆಸ ದ್ರವ್ಯರಾಶಿ ಸಂಖ್ಯೆಯ ಎಲ ನ್ಯೂಕ್ಲಿಯಸುಗಳು ಫರ್ಮಿ ಕಣಗಳು.

ಮೇಲೆ ಹೇಳಿದ ವಿಷಯಗಳಿಂದ

$$\psi B = C\sum_P P\psi \qquad \text{.......(7)}$$

ಎಂಬ ಸಮಾಂಗೀಯ ಅಧ್ಯಾರೋಪಣ (ಸೂಪರ್‌ಪೊಸಿಷನ್) ಬೋಸ್ ವ್ಯವಸ್ಥೆಯೊಂದನ್ನು ಪ್ರತಿನಿಧಿಸುತ್ತದೆ ಎಂದೂ

$$\psi F = C'\sum_P e(P)P\psi \qquad \text{.......(8)}$$

ಎಂಬ ಪ್ರತಿಸಮಾಂಗೀಯ ಅಧ್ಯಾರೋಪಣ ಫರ್ಮಿವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆಂದೂ ತಿಳಿಯುತ್ತದೆ. ಇಲ್ಲಿ ಸಂಕಲನವನ್ನು ಸಾಧ್ಯವಾಗುವ ಎಲ್ಲ N ! ಕ್ರಮಯೋಜನೆಗಳ ಮೇಲೂ ವಿಸ್ತರಿಸಬೇಕು ಮತ್ತು ಸರಿ– P ಗಳಿಗೆ e(P) = +1 ಎಂದೂ ಬೆಸ– P ಗಳಿಗೆ e(P) =–1 ಎಂದೂ ತೆಗೆದುಕೊಳ್ಳಬೇಕು. C ಮತ್ತು C' ಎಂಬುವು ψ ಉತ್ಪನ್ನಗಳನ್ನು ಪ್ರಸಾಮಾನ್ಯೀಕರಿಸಲು (ನಾರ್ಮಲೈಸ್) ಉಪಯೋಗಿಸುವ ಸ್ಥಿರಾಂಕಗಳು. ψ Fನ್ನು

$$\psi_F = C' \begin{vmatrix} \phi k_1(1)\phi k_2(1)\cdots\cdots\phi k_N(1) \\ \phi k_1(2)\phi k_2(2)\cdots\cdots\phi k_N(2) \\ \cdots\cdots\cdots\cdots\cdots\cdots\cdots\cdots \\ \cdots\cdots\cdots\cdots\cdots\cdots\cdots\cdots \\ \phi k_1(N)\phi k_2(N)\cdots\cdots\phi k_N(N) \end{vmatrix} \qquad \text{.......(9)}$$

ಎಂದು ಒಂದು ನಿರ್ಧಾರಕದ ರೂಪದಲ್ಲೂ ಬರೆಯಬಹುದು. ಇದಕ್ಕೆ ಸ್ಲೇಟರ್ ನಿರ್ಧಾರಕ ಎಂದು ಹೆಸರು, ಈಗ $k_1, k_2$.......$k_n$ ಗಳಲ್ಲಿ ಯಾವುದಾದರೂ ಎರಡು ಸಂಖ್ಯೆಗಳು ಸಮವಾದರೂ ನಿರ್ಧಾರಕದ ಎರಡು ನೀಟಸಾಲುಗಳು(ಕಾಲಮ್ಸ್) ಒಂದೇ ಆಗಿ ψ F ಶೂನ್ಯವಾಗುತ್ತದೆ. ಇದರಿಂದ ಒಂದು ಒಂಟಿ ಕಣದ ಸ್ಥಿತಿ $\phi_k$ ಯಲ್ಲಿ ಒಂದಕ್ಕಿಂತ ಹೆಚ್ಚು ಫರ್ಮಿ ಕಣಗಳಿರುವುದು ಸಂಪೂರ್ಣವಾಗಿ ಅಸಂಭವ ಎಂದು ತಿಳಿಯುತ್ತದೆ. ಇದಕ್ಕೆ ಪೌಲಿ ಬಹಿಷ್ಕರಣ ತತ್ತ್ವ (ಪೌಲೀಸ್ ಎಕ್ಸ್‌ಕ್ಲೂಷನ್ ಪ್ರಿನ್ಸಿಪಲ್) ಎಂದು ಹೆಸರು. ಬೋಸ್ ಕಣಗಳ ವ್ಯವಸ್ಥೆಯ ಅಲೆಉತ್ಪನ್ನ ಸಮಾಂಗೀಯವಾದ್ದರಿಂದ ಈ ರೀತಿಯ ಯಾವ ಬಹಿಷ್ಕರಣ ತತ್ತ್ವವೂ ಬೋಸ್ ಕಣಗಳಿಗಿರುವುದಿಲ್ಲ. ಆದ್ದರಿಂದ ಒಂದು ಒಂಟಿ ಕಣದ ಸ್ಥಿತಿಯಲ್ಲಿ ಎಷ್ಟು ಬೋಸ್ ಕಣಗಳಾದರೂ ಇರಬಹುದು.

ಅನಿಲದ ಗಾತ್ರ V ಸಾಕಷ್ಟು ದೊಡ್ಡದಾಗಿದ್ದರೆ ಒಂಟಿಕಣದ ಶಕ್ತಿಮಟ್ಟಗಳು ಬಲು ಒತ್ತಾಗಿರುತ್ತವೆ. ಆದ್ದರಿಂದ ನಮ್ಮ ಚರ್ಚೆಯನ್ನು ಆದಷ್ಟು ಸರಳಗೊಳಿಸಲು ಈ ಶಕ್ತಿಮಟ್ಟಗಳನ್ನು ಹಲವು ಗುಂಪುಗಳಾಗಿ ಒಡೆಯುತ್ತೇವೆ. ಇಂಥ ಒಂದೊಂದು ಗುಂಪೂ ಒಂದು ಗೊತ್ತಾದ ಶಕ್ತಿಯ ಹರವಿನಲ್ಲಿನ (ಸ್ಪ್ರೆಡ್ ಆಫ್ ಎನರ್ಜಿ), ಸುಮಾರಾಗಿ ಒಂದೇ ಶಕ್ತಿಯುಳ್ಳ, ಹಲವಾರು ಶಕ್ತಿಮಟ್ಟಗಳನ್ನು ಒಳಗೊಂಡಿರುತ್ತದೆ. ಶಕ್ತಿಮಟ್ಟಗಳು ಬಹಳ ಒತ್ತಾಗಿರುವುದರಿಂದ ಇಂಥ ಪ್ರತಿಯೊಂದು ಗುಂಪಿನಲ್ಲಿರುವ ಶಕ್ತಿಮಟ್ಟಗಳ ಸಂಖ್ಯೆ ಹಾಗೂ ಗುಂಪಿನ ಮಟ್ಟಗಳ ಒಟ್ಟು ವಸತಿ ಸಂಖ್ಯೆ (ಅಥವಾ ಗುಂಪಿನ ವಸತಿ ಸಂಖ್ಯೆ) ಸಾಕಷ್ಟು ದೊಡ್ಡದಾಗಿರುವಂತೆಯೂ ಗುಂಪಿನ ಶಕ್ತಿಯ ಹರವು ಸಾಕಷ್ಟು ಚಿಕ್ಕದಾಗಿರುವಂತೆಯೂ ಪರಿಗಣಿಸಬಹುದು.




ಚಿತ್ರ–1 ಒಂಟಿ ಕಣದ ಶಕ್ತಿಮಟ್ಟಗಳನ್ನು ಗುಂಪುಗಳಾಗಿ ಒಡೆಯುವಿಕೆ

ಮೇಲಿನ ಪರಿಗಣನೆಗಳ ಸಹಾಯದಿಂದ *T* ನಿರಪೇಕ್ಷ ಉಷ್ಣತೆಯಲ್ಲಿ ಉಷ್ಣಸಮತೋಲದಲ್ಲಿರುವ ಆದರ್ಶ ಅನಿಲವೊಂದನ್ನು $\varepsilon_i$ ಶಕ್ತಿಯನ್ನು ಹೊಂದಿರುವ ಒಂದು ಒಂಟಿಕಣದ ಸ್ಥಿತಿಯ ಸರಾಸರಿ ವಸತಿ ಸಂಖ್ಯೆ $n_i$ ಬೋಸ್ ಅನಿಲಕ್ಕೆ

$$\bar{n}_i = \frac{1}{exp[(\varepsilon_i - \mu)/kT] - 1} \qquad \text{.......(10)}$$

ಆಗಿರುತ್ತದೆ ಎಂದೂ ಫರ್ಮಿ ಅನಿಲಕ್ಕೆ

$$\bar{n}_i = \frac{1}{exp[(\varepsilon_i - \mu)/kT] + 1} \qquad \text{.......(11)}$$

ಆಗಿರುತ್ತದೆ ಎಂದೂ ತೋರಿಸಬಹುದು. ಇಲ್ಲಿ k ಬೋಲ್ಟ್ಸ್‌ಮಾನ್ ಸ್ಥಿರಾಂಕ, μ ರಾಸಾಯನಿಕ ವಿಭವ (ಕೆಮಿಕಲ್ ಪೊಟೆನ್ಷಿಯಲ್) ಎಂಬ ಹೆಸರಿನ ನಿರಪೇಕ್ಷ ಉಷ್ಣತೆ T ಮತ್ತು ಒಟ್ಟು ಕಣಸಂಖ್ಯೆ N ಗಳನ್ನು ಅವಲಂಬಿಸಿದ ಒಂದು ಪ್ರಾಚಲ. ಬೋಸ್ ಅನಿಲದ ಸಮತೋಲ ಹಂಚಿಕೆಯಾದ (10)ನ್ನು ಬೋಸ್–ಐನ್‌ಸ್ಟೈನ್ ಹಂಚಿಕೆ (BE ) ಎಂದೂ ಫರ್ಮಿ ಅನಿಲದ ಸಮತೋಲ ಹಂಚಿಕೆಯಾದ (11)ನ್ನು ಫರ್ಮಿ–ಡಿರಾಕ್ (FD) ಹಂಚಿಕೆ ಎಂದೂ ಕರೆಯುತ್ತಾರೆ. ಈಗ $\bar{n}_1$ಗಳನ್ನೆಲ್ಲ ಕೂಡಿಸಿದರೆ ಕಣಗಳ ಒಟ್ಟು ಸಂಖ್ಯೆ N ಬರಬೇಕು. ಆದ್ದರಿಂದ

$$N = \sum_i \frac{1}{exp[(\varepsilon_i - \mu)/kT] \pm 1} \qquad \text{.......(13)}$$

ಆಗಿರಬೇಕು. ಇಲ್ಲಿ + ಚಿಹ್ನೆ FD ಹಂಚಿಕೆಗೂ – ಚಿಹ್ನೆ BE ಹಂಚಿಕೆಗೂ ಅನ್ವಯಿಸುತ್ತದೆ. ಈ ಸಮೀಕರಣದಿಂದ ತಾತ್ತ್ವಿಕವಾಗಿ μ ವನ್ನು ನಿರ್ಧರಿಸಬಹುದು. ಆದರೆ ಇಂಥ ಸಂಕಲನ ಕಠಿಣವಾದ್ದರಿಂದ ಇದನ್ನು ಒಂದು ಅನುಕಲಜದ (ಇಂಟಿಗ್ರಲ್) ರೂಪದಲ್ಲಿ ಬರೆಯುತ್ತೇವೆ. ಅನಿಲದ ಕಣಗಳು ಸ್ವತಂತ್ರವಾಗಿರುವುದರಿಂದಲೂ ಅನಿಲವನ್ನು ಬೇರೆ ಯಾವುದೇ ಹೊರಗಣ ಬಲಕ್ಷೇತ್ರದಲ್ಲಿ ಇರಿಸದಿರುವುದರಿಂದಲೂ ಕಣಗಳ ಶಕ್ತಿ ಬರಿಯ ಚಲನಶಕ್ತಿ ಆಗಿರಬೇಕು. ಈ ವಿಷಯವನ್ನು ಗಮನದಲ್ಲಿರಿಸಿಕೊಂಡರೆ ಭ್ರಮಣ s ಇರುವ ಕಣಗಳ ಅನಿಲವೊಂದರಲ್ಲಿ ε ನಿಂದ dε ನ ವರೆಗೆ ಇರುವ ಶಕ್ತಿಗಳನ್ನುಳ್ಳ ಒಂಟಿಕಣದ ಸ್ಥಿತಿಗಳ ಸಂಖ್ಯೆ,

$$\rho(\varepsilon)\,d\varepsilon = (2s+1)\frac{2\pi V}{h^3}(2m)^{3/2}\sqrt{\varepsilon \cdot d\varepsilon} \qquad \text{.......(12 a)}$$

ಎಂದು ತೋರಿಸಬಹುದು. ಇಲ್ಲಿ V ಅನಿಲದ ಗಾತ್ರ, h ಪ್ಲಾಂಕ್ ಸ್ಥಿರಾಂಕ ಮತ್ತು m ಕಣದ ದ್ರವ್ಯರಾಶಿ, ಈಗ $\bar{n}$ (ε)ρ(ε) dε ಎನ್ನುವುದು ε ನಿಂದ ε+dε ಯ ವರೆಗೆ ಇರುವ

ಶಕ್ತಿಗಳನ್ನು ಹೊಂದಿರುವ ಕಣಗಳ ಸಂಖ್ಯೆ ಆಗುತ್ತದೆ. ಸಮೀಕರಣ (10) ಮತ್ತು (11)ನ್ನು ಉಪಯೋಗಿಸಿದರೆ

$$N=\int_0^{\infty}\rho(\varepsilon)\,\bar{n}(\varepsilon)\,d\varepsilon=\frac{(2s+1)\,2\pi V(2m)^{3/2}}{h^3}\times\int_0^{\infty}\frac{\sqrt{\varepsilon}\quad d\,\varepsilon}{\exp\left[(\varepsilon-\mu)/kT\right]\pm1} \qquad \text{.......(12)}$$

ಎಂದು ಸಂಕಲನ (12)ನ್ನು ಒಂದು ಅನುಕಲಜದ ರೂಪದಲ್ಲಿ ಬರೆಯಬಹುದು. ಇಲ್ಲಿ + ಅನ್ನುವುದು FD ಹಂಚಿಕೆಗೂ–ಅನ್ನುವುದು ಬೋಸ್ ಹಂಚಿಕೆಗೂ ಅನ್ವಯಿಸುತ್ತದೆ). ಮೇಲೆ ಹೇಳಿದ BE ಮತ್ತು FD ಹಂಚಿಕೆಗಳಲ್ಲದೇ ಮೂರನೆಯ ಒಂದು ಹಂಚಿಕೆಯೂ ಕೆಲವು ಸಂದರ್ಭಗಳಲ್ಲಿ ಸಾಧ್ಯ. ಒಂದು ಬಹುಕಣವ್ಯವಸ್ಥೆಯಲ್ಲಿ ನಮನ ಪರಿಣಾಮಗಳೇ ಪ್ರಾಮುಖ್ಯವಾಗಿ, ಸಮಾಂಗತ್ವದ ಪರಿಣಾಮಗಳು ಗಣನೀಯವಲ್ಲವಾದಾಗ, ಅಥವಾ ಕಣಗಳನ್ನು ಬೇರೆ ಬೇರೆ ಎಂದು ಗುರುತಿಸಲು ಸಾಧನಗಳಿದ್ದಾಗ ಈ ಮೂರನೆಯ ಹಂಚಿಕೆ ಕಾಣಿಸಿಕೊಳ್ಳುತ್ತದೆ. ಮ್ಯಾಕ್ಸ್‌ವೆಲ್–ಬೋಲ್ಟ್ಸ್‌ಮ್ಯಾನ್ (MB) ಹಂಚಿಕೆಯೆಂದು ಕರೆಯುವ ಇದನ್ನು ಅಭಿಜಾತ ಸಮತೋಲ ಸಂಖ್ಯಾಕಲನೀಯ ಬಲವಿಜ್ಞಾನದ ತಿರುಳು ಎನ್ನಬಹುದು. ಈ ಹಂಚಿಕೆಯ ಪ್ರಕಾರ T ಉಷ್ಣತೆಯಲ್ಲಿ ಉಷ್ಣ ಸಮತೋಲದಲ್ಲಿರುವ ವ್ಯವಸ್ಥೆಯೊಂದರಲ್ಲಿ $\varepsilon_i$ ಶಕ್ತಿಯಿರುವ ಕಣಗಳ ಸರಾಸರಿ ಸಂಖ್ಯೆ

$$\bar{n}_i=\frac{1}{exp\left[(\varepsilon_i-\mu)/kT\right]} \qquad \text{.......(14)}$$

ಇಲ್ಲಿ ಉಪಯೋಗಿಸಿರುವ ಸಂಕೇತಗಳನ್ನು ಹಿಂದೆಯೇ ವಿವರಿಸಿದ್ದೇವೆ. ಸರ್ವಸಮವಾದ ಕಣಗಳನ್ನೂ ಕೆಲವು ಸಂದರ್ಭಗಳಲ್ಲಿ ಬೇರೆ ಬೇರೆ ಎಂದು ಗುರುತಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ ಸ್ಫಟಿಕೀಯ ಘನವಸ್ತುವಿನಲ್ಲಿನ ಪರಮಾಣುಗಳು ಅಥವಾ ಅಣುಗಳು ಒಂದೇ ತೆರನಾಗಿದ್ದು ಒಂದನ್ನು ಮತ್ತೊಂದರಿಂದ ಬೇರೆ ಎಂದು ಗುರುತಿಸಲು ಆಗದಿದ್ದರೂ ಅವು ಆಕ್ರಮಿಸಿರುವ ಜಾಲಕದ (ಲ್ಯಾಟ್ಟಿಸ್) ಬಿಂದುಗಳನ್ನು ಬೇರೆ ಬೇರೆ ಎಂದು ಗುರುತಿಸಲು ಸಾಧ್ಯ. ಹೀಗಾಗಿ ಸ್ಫಟಿಕ ಜಾಲಕದ ಬಿಂದುಗಳಲ್ಲಿ ಕುಳಿತಿರುವ ಒಂದೇ ತೆರನಾದ ಕಣಗಳನ್ನು ಕೂಡ ಪರಸ್ಪರ ಗುರುತಿಸಲು ಸಾಧ್ಯವಾಗುತ್ತದೆ. ಇಂಥ ಸಂದರ್ಭಗಳಲ್ಲಿ MB ಹಂಚಿಕೆ ಉಪಯೋಗಕ್ಕೆ ಬರುತ್ತದೆ.

ಈ ಹಂಚಿಕೆಗಳನ್ನು ಪಡೆಯುವಾಗ ಅಂದರೆ ಸಮೀಕರಣ (10,)(11) ಮತ್ತು(14)ನ್ನು ತರಿಸುವಲ್ಲಿ ವ್ಯವಸ್ಥೆಯ ಒತ್ತಾಗಿರುವ ಶಕ್ತಿಮಟ್ಟಗಳನ್ನು ವಿವಿಧ ಗುಂಪುಗಳಾಗಿ ಒಡೆದು ಪ್ರತಿಯೊಂದು ಗುಂಪಿನ ವಸತಿಸಂಖ್ಯೆಯೂ ಸಾಕಷ್ಟು ದೊಡ್ಡದಾದ ಸಂಖ್ಯೆ ಎಂಬ ನಂಬಿಕೆಯನ್ನು ಬಳಸಲಾಯಿತು. ಈ ರೀತಿಯ ಯಾವುದೇ ಪೂರ್ವಭಾವೀ ನಂಬಿಕೆಗಳ ಸಹಾಯವೂ ಇಲ್ಲದೆಯೇ ಸಂಖ್ಯಾಕಲನೀಯ ಬಲವಿಜ್ಞಾನದ ಗ್ರ್ಯಾಂಡ್ ಕ್ಯಾನನಿಕಲ್ ಸಮಷ್ಟಿಗಳ ಸೂಕ್ಷ್ಮ ನಾಜೂಕು (ಸಾಫಿಸ್ಟಿಕೇಟೆಡ್) ವಿಧಾನಗಳಿಂದ ಈ ಹಂಚಿಕೆಗಳನ್ನು ಪಡೆಯಬಹುದು.

ಸಮೀಕರಣ (14) ರಲ್ಲಿರುವ MB ಹಂಚಿಕೆ ಕ್ವಾಂಟಂ ಹಂಚಿಕೆಗಳಾದ FD ಮತ್ತು BE ಹಂಚಿಕೆಗಳ ವಿಶೇಷ ಸಂದರ್ಭವಾಗಿ ಬರುತ್ತದೆ. ಇದು ಹೊಂದಾಣಿಕೆಯ ನಿಯಮದ ಪರಿಮಿತಿಯಲ್ಲಿ ಕ್ವಾಂಟಂ ಸಿದ್ಧಾಂತದ ಫಲಿತಾಂಶಗಳು ಅಭಿಜಾತ ಫಲಿತಾಂಶಗಳನ್ನು ನೀಡಬೇಕು ಎಂಬ ಸಾಮಾನ್ಯ ನಿಯಮಕ್ಕೆ ಅನುಗುಣವಾಗಿದೆ. ಇದು ಹೇಗೆಂದು ಈಗ ನೋಡೋಣ. ಸಮೀಕರಣ (10) ಮತ್ತು (11)ರಲ್ಲಿ $e^{-}\mu/kt$ ಒಂದಕ್ಕಿಂತ ಬಹಳ ಹೆಚ್ಚಾದಾಗ ಅಂದರೆ $e^{-}{}^{-}\mu/kT >> 1$ಆದಾಗ, ಛೇದದಲ್ಲಿರುವ ± 1ನ್ನು ಅಗಣನೀಯವೆಂದು ಬಿಡಬಹುದು. ಹೀಗೆ ಮಾಡಿದಾಗ (10) ಮತ್ತು (11), (14)ನ್ನು $e^{+}\mu/kT$ ನೀಡುತ್ತದೆ. $e^{+}\mu/kT$ಯನ್ನು ಅಭಿಜಾತ ದೃಷ್ಟಿಯಲ್ಲಿ ವಿಕೃತಿಯ ಪ್ರಾಚಲ (ಡೀಜನರೆಸಿ ಪ್ಯರಾಮೀಟರ್) ಎನ್ನುತ್ತೇವೆ. ವಿಕೃತಿಯ ಪ್ರಾಚಲ ಒಂದಕ್ಕಿಂತ ಬಹಳ ಕಡಿಮೆ ಇರುವಾಗ ($e\mu/kT << 1$)

$$exp(\mu/kT)\approx\frac{Nh^3}{V\,(2\pi\ mkT)^{3/2}} \qquad \text{.......(15)}$$

ಎಂದು ತೋರಿಸಬಹುದು. ಇದರಿಂದ $e^{-}\mu/kT >> 1$ ಆಗಬೇಕಾದರೆ

$$\frac{Nh^3}{V\,(2\pi\ mkT)^{3/2}}<<1 \qquad \text{.......(16)}$$

ಎಂದಾಗಬೇಕಾಗುತ್ತದೆ. ಈ ಅಸಮೀಕರಣದಿಂದ

(a) ಅನಿಲದ ಸಾಂದ್ರತೆ N/Vಕಡಿಮೆಯಾದಾಗ,

(b) ಅನಿಲದ ಉಷ್ಣತೆ T ಬಹಳ ಹೆಚ್ಚಿದ್ದಾಗ,

(c) ಅನಿಲದ ಕಣಗಳ ದ್ರವ್ಯರಾಶಿ ಬಹಳ ಹೆಚ್ಚಿದ್ದಾಗ,

(d) ಅಥವಾ $h \to 0$ ಎನ್ನುವ ಅಭಿಜಾತ ಪರಿಮಿತಿ ಉಂಟಾದಾಗ ಈ ನಾಲ್ಕು ಸಂದರ್ಭಗಳಲ್ಲೂ FD ಮತ್ತು BE ಹಂಚಿಕೆಗಳು ತಮ್ಮ ಎಲ್ಲ ಕ್ವಾಂಟಂ ವೈಶಿಷ್ಟ್ಯಗಳನ್ನೂ ಕಳೆದುಕೊಂಡು ಅಭಿಜಾತ ಹಂಚಿಕೆಯಾದ MB ಹಂಚಿಕೆಯನ್ನು ಸಂಪೂರ್ಣವಾಗಿ ಹೋಲುತ್ತವೆ ಎಂದು ತಿಳಿಯುತ್ತದೆ. ವಿಕೃತಿಯ ಪ್ರಾಚಲ $e\mu/kT << 1$ ಆದಾಗ ಅನಿಲವನ್ನು ಅವಿಕೃತ (ನಾನ್‌ಡೀಜನರೇಟ್) ಎಂದೂ $c^{\mu/kT} \underset{\sim}{>} 1$ ಆದಾಗ ಅನಿಲವನ್ನು ವಿಕೃತ ಎಂದೂ ಹೇಳಬಹುದು.

ಅನಿಲಗಳು ಅವಿಕೃತವಾದಾಗ BE ಮತ್ತುFD ಹಂಚಿಕೆಗಳಿಗೆ ವಿಕೃತಿಯ ಪ್ರಾಚಲ [(15ರಲ್ಲಿ) ಸೂಚಿಸಿರುವಂತೆ] ಒಂದೇ ಆದರೂ ಅನಿಲಗಳು ಅವಿಕೃತವಾದಾಗ ಒಂದೇ ಇರುವುದಿಲ್ಲ. ಅನಿಲದ ಕಣಗಳ ಶಕ್ತಿ ಮಟ್ಟಗಳಲ್ಲಿ ಕನಿಷ್ಠ ಶಕ್ತಿಯುಳ್ಳ ಮಟ್ಟದ ಶಕ್ತಿಯನ್ನು ಶೂನ್ಯವೆಂದು ಪರಿಗಣಿಸಿ ಉಳಿದ ಶಕ್ತಿಮಟ್ಟಗಳನ್ನು ಪುನರ್ನಾಮಕರಣ ಮಾಡಲಾಗಿದೆ ಎಂದಿಟ್ಟುಕೊಳ್ಳೋಣ. ಈಗ ಯಾವುದೇ ಕ್ವಾಂಟಂ ಸ್ಥಿತಿಯ ಸರಾಸರಿ ವಸತಿ ಸಂಖ್ಯೆಯಾದ $\bar{n}_i$ ಧನಾತ್ಮಕವಾಗಿರಬೇಕೆಂಬುದನ್ನು ಗಮನದಲ್ಲಿರಿಸಿಕೊಂಡರೆ (ಅಂದರೆ $\bar{n}_i \geq 0$) ಬೋಸ್ ಅನಿಲಕ್ಕೆ ($e^{\mu/kT} \leq 1$) ಅಥವಾ $\mu \leq 0$ ಆಗಿರಬೇಕೆಂದು ಸಮೀಕರಣ (10)ರ ಅವಲೋಕನದಿಂದ ತಿಳಿಯುತ್ತದೆ. ಆದರೆ ಫರ್ಮಿ ಅನಿಲದ ವಿಕೃತಿಯ ಪ್ರಾಚಲದ ಮೇಲೆ ಇಂಥ ಯಾವ ನಿಬಂಧನೆಯೂ ಇರುವುದಿಲ್ಲ.

ಫೋಟಾನ್ ಅನಿಲ ಮತ್ತು ಪ್ಲಾಂಕ್ ನಿಯಮ: ಕಪ್ಪು ವಸ್ತುಗಳ ವಿದ್ಯುತ್ಕಾಂತೀಯ ವಿಸರಣಕ್ಕೆ ಸಂಬಂಧಿಸಿದ ಪ್ಲಾಂಕ್ ನಿಯಮಕ್ಕೆ ಚಾರಿತ್ರಿಕವಾಗಿ ಒಂದು ವಿಶಿಷ್ಟ ಸ್ಥಾನ ಉಂಟು. ಕಪ್ಪು ವಸ್ತುಗಳಿಂದ ವಿಸರಿತವಾದ ವಿದ್ಯುತ್ಕಾಂತ ಶಕ್ತಿ ವಿವಿಧ ಅಲೆಯುದ್ದಗಳಲ್ಲಿ ಹೇಗೆ ಹಂಚಿಕೆಯಾಗಿರುತ್ತದೆ ಎಂಬುದನ್ನು ವಿವರಿಸುವಲ್ಲಿ, ಆಗ ಪ್ರಚಲಿತವಿದ್ದ ಪರಿಕಲ್ಪನೆಗಳ ಹಾಗೂ ಅಭಿಜಾತ ವಿಧಾನಗಳ ಸೋಲು ಖಚಿತವಾಗಿ ತಿಳಿದು ಬೇರೆ ದಾರಿಗಾಣದಿದ್ದ ಸಂಧಿಕಾಲವೊಂದರಲ್ಲಿ (1900), ಮ್ಯಾಕ್ಸ್ ಪ್ಲಾಂಕ್ ತನ್ನ ಕ್ರಾಂತಿಕಾರಕ ಕ್ವಾಂಟಂ ಪರಿಕಲ್ಪನೆಯನ್ನು ಮುಂದಿಟ್ಟು ಕಪ್ಪು ವಸ್ತುವಿನ ವಿಸರಣದ ರೋಹಿತ ಹಂಚಿಕೆಯ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಿದ. ಇದರ ಪ್ರಕಾರ ಶಕ್ತಿಯ ವಿನಿಮಯ ಅಭಿಜಾತ ಭೌತಶಾಸ್ತ್ರದಲ್ಲಿ ನಂಬಿದ್ದಂತೆ ಅವಿಚ್ಛಿನ್ನವಾಗಿರುವುದಿಲ್ಲ. ಬದಲು ಕೆಲವು ಗೊತ್ತಾದ ಕಟ್ಟುಗಳಲ್ಲಿ (ಪ್ಯಾಕೆಟ್ಸ್) ಮಾತ್ರ ಸಾಧ್ಯವಾಗುತ್ತದೆ. ಉದಾಹರಣೆಗೆ v ಆವರ್ತಾಂಕದಲ್ಲಿ (ಫ್ರೀಕ್ವೆನ್ಸಿ) ಶಕ್ತಿಯ ವಿನಿಮಯ ಎಂಬ ಕಟ್ಟುಗಳಲ್ಲಿ ಮಾತ್ರ ಸಾಧ್ಯವೇ ಹೊರತು ¾hv, (5/9) hv..... ಮುಂತಾಗಿ ಸಾಧ್ಯವಿಲ್ಲ. ಶಕ್ತಿಯ ಈ ಕಟ್ಟುಗಳಿಗೆ ಫೋಟಾನುಗಳೆಂದು ಹೆಸರು. ಕಪ್ಪು ವಸ್ತುವಿನ ರಂಧ್ರವೊಂದರಲ್ಲಿನ ವಿದ್ಯುತ್ಕಾಂತೀಯ ವಿಸರಣವನ್ನು ವಿವಿಧ ಆವರ್ತಾಂಕಗಳ ಫೋಟಾನುಗಳನ್ನು ಹೊರಸೂಸುವ ಮತ್ತು ಹೀರಿಕೊಳ್ಳುವ ಆಂದೋಲಕಗಳ ವ್ಯವಸ್ಥೆಯೆಂದು ಪರಿಗಣಿಸಿ ಮ್ಯಾಕ್ಸ್‌ಪ್ಲಾಂಕ್ , ಈಗ ನಾವು ಪ್ಲಾಂಕ್ ನಿಯಮವೆಂದು ಕರೆಯುವ, ವಿಸರಣದ ರೋಹಿತ ಹಂಚಿಕೆಯನ್ನು ಪಡೆದ. ಇದರ ಪ್ರಕಾರ

$$dE(v)=\frac{8\pi\ Vh}{c^3}\left(\frac{v^3dv}{exp\left[hv/kT\right]-1}\right) \qquad \text{.......(17)}$$

ಎನ್ನುವುದು v ನಿಂದ v + dv ನ ವರೆಗಿನ ಆವರ್ತಾಂಕಗಳಿರುವ ವಿಸರಣ ಶಕ್ತಿಯಾಗಿರುತ್ತದೆ. ಇಲ್ಲಿ c ಎನ್ನುವುದು ನಿರ್ವಾತದಲ್ಲಿ ಬೆಳಕಿನ ವೇಗ; ಮತ್ತು V ಎನ್ನುವುದು ಕಪ್ಪು ವಸ್ತುವಿನ ರಂಧ್ರದ ಗಾತ್ರ. ಈ ಹಂಚಿಕೆ ಪ್ರಾಯೋಗಿಕವಾಗಿ ನಿರ್ಧರಿಸಿದ ಕಪ್ಪು ವಸ್ತುವಿನ ವಿಸರಣದ ರೋಹಿತದೊಡನೆ ಎಲ್ಲ v ಗಳಲ್ಲೂ ಬಹು ಚೆನ್ನಾಗಿ ಹೊಂದುತ್ತದೆ. ಈಗ $c = v\lambda$ ಎಂಬ ಸಂಬಂಧವನ್ನು ಉಪಯೋಗಿಸಿದರೆ

$$dE(\lambda)=8\pi\ Vhc\left(\frac{\lambda^{-5}d\ \lambda}{exp(hc/kT\ \lambda)-1}\right) \qquad \text{....(18)}$$

ಎಂದು ಅಲೆಯುದ್ದ λ ದಲ್ಲಿ ಪ್ಲಾಂಕ್ ನಿಯಮವನ್ನು ಬರೆಯಬಹುದು. ಹಲವಾರು ಉಷ್ಣತೆಗಳಲ್ಲಿ $\frac{I}{V}\frac{dE(\lambda)}{d\lambda}\equiv\delta(\lambda)$ ಅಲೆಯುದ್ದ λ ದೊಡನೆ ಹೇಗೆ ಬದಲಾಯಿಸುತ್ತದೆಂದು ಚಿತ್ರದಲ್ಲಿ ತೋರಿಸಲಾಗಿದೆ.




ಚಿತ್ರ–2 ಕಪ್ಪು ವಸ್ತುವಿನ ವಿಸರಣ ರೋಹಿತ

ಕಪ್ಪು ವಸ್ತುವಿನ ವಿಸರಣರೋಹಿತವನ್ನು ವಿವರಿಸಲೋಸುಗ ಐನ್‌ಸ್ಟೈನ್, 1905ರಲ್ಲಿ ರಂಧ್ರದಲ್ಲಿನ ವಿಸರಣವನ್ನು ಫೋಟಾನುಗಳ ಒಂದು ಅನಿಲವೆಂದು ಪರಿಗಣಿಸಿ ಈ ಫೋಟಾನುಗಳ ಅನಿಲಕ್ಕೆ MB ಹಂಚಿಕೆಯನ್ನು ಅಳವಡಿಸಿದ. ಆತ ಪಡೆದ ವಿಸರಣ ರೋಹಿತ ಪ್ಲಾಂಕ್ ನಿಯಮವನ್ನು v ಬಹಳ ಹೆಚ್ಚಿದ್ದಾಗ ಮಾತ್ರ ಹೋಲುತ್ತದೆ. 1924ರಲ್ಲಿ ಎಸ್.ಎನ್.ಬೋಸ್ ಫೋಟಾನ್ ಅನಿಲದ ಸಮತೋಲ ಹಂಚಿಕೆ MB ಹಂಚಿಕೆಯಲ್ಲ ಎಂದು ಪ್ರತಿಪಾದಿಸಿ ಈಗ ನಾವು BE ಹಂಚಿಕೆಯೆಂದು ಕರೆಯುವ ಹಂಚಿಕೆಯನ್ನು ಫೋಟಾನ್ ಅನಿಲಕ್ಕೆ ಮೊದಲ ಬಾರಿಗೆ ರೂಪಿಸಿ ಉಪಯೋಗಿಸಿದರು. ಈ ವಿಧಾನದಲ್ಲಿ ಕಪ್ಪು ವಸ್ತುವಿನ ರಂಧ್ರವೊಂದರಲ್ಲಿ T ಉಷ್ಣತೆಯಲ್ಲಿ ಉಷ್ಣಸಮತೋಲದಲ್ಲಿರುವ ವಿಸರಣೆಯನ್ನು ಶೂನ್ಯ ವಿರಾಮ ದ್ರವ್ಯರಾಶಿಯ (ಜ಼ೀರೋ ರೆಸ್ಟ್ ಮಾಸ್) ಬೋಸ್ ಕಣಗಳ ಅನಿಲವೆಂದು ಪರಿಗಣಿಸುತ್ತೇವೆ. ಪ್ರತಿಯೊಂದು ಫೋಟಾನಿಗೂ ಎರಡು ಧ್ರುವೀಕರಣ ಸ್ಥಿತಿಗಳಿವೆಯೆಂಬುದನ್ನು ಗಮನದಲ್ಲಿರಿಸಿಕೊಂಡು v ಆವರ್ತಾಂಕವಿರುವ (ಅಥವಾ E= hv ಶಕ್ತಿಮಟ್ಟದಲ್ಲಿನ) ಫೋಟಾನುಗಳನ್ನು ಸಮೀಕರಣ (10)ರ ಸಹಾಯದಿಂದ ಎಣಿಸುತ್ತೇವೆ. ಇಂಥ ಎಣಿಕೆ ಸರಿಯಾದ ಪ್ಲಾಂಕ್ ನಿಯಮವನ್ನು, ಅಂದರೆ (17)ನ್ನು ಮತ್ತಾವ ಹೊಸ ಅಭಿಗೃಹೀತಗಳ (ಅಸ್ಸಂಪ್ಷನ್) ಸಹಾಯವೂ ಇಲ್ಲದೆಯೇ, ನೀಡುತ್ತದೆ. ಕ್ವಾಂಟಂ ಸಿದ್ಧಾಂತದ ಜನನಕ್ಕೂ ಕ್ವಾಂಟಂ ಸಂಖ್ಯಾಕಲನ ಶಾಸ್ತ್ರದ BE ಹಂಚಿಕೆಯ ಹುಟ್ಟಿಗೂ ಕಪ್ಪು ವಸ್ತುಗಳ ವಿಸರಣರೋಹಿತದ ವಿವರಣೆಯ ಪ್ರಯತ್ನವೇ ಕಾರಣವಾಯಿತೆಂಬುದು ಗಮನಾರ್ಹವಾಗಿದೆ.

ಫೋನಾನುಗಳು ಮತ್ತು ಸ್ಫಟಿಕ ಜಾಲಕದ ಗ್ರಾಹ್ಯೋಷ್ಣ : ಫೋಟಾನುಗಳು ವಿದ್ಯುತ್ಕಾಂತೀಯ ಕ್ಷೇತ್ರದ ಕ್ವಾಂಟಮುಗಳಾದರೆ ಫೋನಾನುಗಳು ಸ್ಥೂಲಕಾಯವೊಂದಲರಲ್ಲಿ ಪ್ರಸರಿಸುವ ಶಬ್ದದ ಅಲೆಗಳ ಶಕ್ತಿಯ ಕ್ವಾಂಟಮುಗಳು. ಗಣಿತೀಯವಾಗಿ ವಿದ್ಯುತ್ಕಾಂತೀಯ ಕ್ಷೇತ್ರದ ಕ್ವಾಂಟೀಕರಣದಿಂದ ಫೋಟಾನುಗಳು ಜನಿಸುವಂತೆ ಸ್ಥೂಲಕಾಯದಲ್ಲಿನ ಶಬ್ದದ ಅಲೆಗಳ ಕ್ಷೇತ್ರದ ಕ್ವಾಂಟೀಕರಣದಿಂದ ಫೋನಾನುಗಳು ಜನಿಸುತ್ತವೆ.

ಘನವಸ್ತುವಿನಲ್ಲಿನ ಸ್ಫಟಿಕ ಜಾಲಕದ ಬಿಂದುಗಳಲ್ಲಿ ಕುಳಿತಿರುವ ಪ್ರತಿಯೊಂದು ಕಣವೂ ಒಂದು ಸರಳ ಸಂಗತ ಆಂದೋಲಕವೆಂದು (ಸಿಂಪಲ್ ಹಾರ್ಮಾನಿಕ್ ಆಸಿಲೇಟರ್) ಪರಿಗಣಿಸಿದರೆ ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ H ನ್ನು ಹಲವಾರು ಸಂಗತ ಅಂದೋಲಕಗಳ ಹ್ಯಾಮಿಲ್ಟೋನಿಯನುಗಳ ಮೊತ್ತವೆಂದು ಬರೆಯಬಹುದು. ಇಂಥ ಸ್ಥೂಲದೃಷ್ಟಿ ಘನವಸ್ತುವಿನ ಉಷ್ಣತೆ T ಬಹಳ ಕಡಿಮೆ ಇದ್ದಾಗ ಸರಿ ಹೊಂದಿದರೂ ಉಷ್ಣತೆ ಹೆಚ್ಚಿದಾಗ ಹುಟ್ಟುವ ಅಸಂಗತ (ಏನ್ ಹಾರ್ಮಾನಿಕ್) ಬಲಗಳಿಂದಾಗಿ ಸ್ಫಟಿಕ ಜಾಲಕ ಕರಗಲು ಪ್ರಾರಂಭಿಸಿದಾಗ ಸರಿಹೊಂದುವುದಿಲ್ಲ. ಆದ್ದರಿಂದ ಉಷ್ಣತೆ ಕಡಿಮೆ ಇದ್ದಾಗ ಮಾತ್ರ ಸ್ಫಟಿಕ ಜಾಲಕವನ್ನು ಆದರ್ಶ ಫೋನಾನುಗಳ ಒಂದು ಅನಿಲವೆಂದು ಭಾವಿಸಬಹುದು.

ಘನವಸ್ತುವಿನ ಪ್ರತಿಯೊಂದು ಪ್ರಸಾಮಾನ್ಯ (ನಾರ್ಮಲ್) ಆಂದೋಲನ ರೀತಿಗೂ ಒಂದೊಂದು ಫೋನಾನು ಹೊಂದಿಕೊಳ್ಳುತ್ತದೆ. ಘನವಸ್ತುವಿನಲ್ಲಿರುವ ಕಣಗಳ ಸಂಖ್ಯೆ N ಆಗಿದ್ದರೆ ವ್ಯವಸ್ಥೆಗೆ 3N ಪ್ರಸಾಮಾನ್ಯ ಆಂದೋಲನ ರೀತಿಗಳಿರುತ್ತವೆ. ಇವುಗಳಿಗೆ ಹೊಂದಿಕೊಂಡ ಫೋನಾನುಗಳ ಆವರ್ತಾಂಕಗಳು $\omega_1, \omega_2, \ldots\ldots \omega_{3N}$ ಆಗಿರಲಿ. (ಇಲ್ಲಿ $\omega = 2\pi V$ ಎಂದು ಬರೆದಿದ್ದೇವೆ). ಘನವಸ್ತುವಿನ ಡೀಬೈ ಮಾದರಿಯಲ್ಲಿ (ಮೋಡೆಲ್) ಘನವಸ್ತುವನ್ನು ಅವಿಚ್ಛಿನ್ನವಾದ ಒಂದು ಪುಟಿತ ಮಾಧ್ಯಮ (ಇಲಾಸ್ಟಿಕ್ ಮೀಡಿಯಂ) ಎಂದು ಪರಿಗಣಿಸಿ ಘನವಸ್ತುವಿನ ಪ್ರಸಾಮಾನ್ಯ ಆಂದೋಲನ ರೀತಿಗಳನ್ನು ಎಣಿಸುತ್ತೇವೆ. ಅಡ್ಡಲೆಯ (ಟ್ರಾನ್ಸ್‌ವರ್ಸ್ ವೇವ್) ಎರಡು ಧ್ರುವೀಕರಣ ಸ್ಥಿತಿಗಳೂ ನೀಳಲೆಯ (ಲ್ಯಾಂಜಿಟ್ಯೂಡಿನಲ್ ವೇವ್) ಒಂದು ರೀತಿಯೂ ಸೇರಿ ಘನವಸ್ತುವಿನಲ್ಲಿ ಪ್ರಸರಿಸುವ ಶಬ್ದದ ಅಲೆಗೆ ಮೂರು ಧ್ರುವೀಕರಣ ಸ್ಥಿತಿಗಳಿರುತ್ತವೆ ಎಂಬುದನ್ನು ನೆನಪಿನಲ್ಲಿರಿಸಿಕೊಂಡು $\omega$ ಮತ್ತು $\omega + d\omega$ ಗಳ ನಡುವಣ ಆವರ್ತಾಂಕಗಳಿರುವ ಪ್ರಸಾಮಾನ್ಯ ಆಂದೋಲನ ರೀತಿಗಳ ಸಂಖ್ಯೆ

$$f(\omega)d\omega = \frac{3V\omega^2 d\omega}{2\pi^2 u^3} \qquad \ldots\ldots.(19)$$

ಎಂದು ತೋರಿಸಬಹುದು. ಇಲ್ಲಿ V ಘನವಸ್ತುವಿನ ಗಾತ್ರ ಮತ್ತು u ಘನವಸ್ತುವಿನಲ್ಲಿ ಶಬ್ದದ ಸರಾಸರಿ ವೇಗ. ಆವರ್ತಾಂಕ $\omega$ ದ ಮೇಲಿನ ಪರಿಮಿತಿಯನ್ನು

$$\int_0^{\omega_m} f(\omega)\, d\omega = 3N \qquad \ldots\ldots.(20)$$

ಎಂಬುದರಿಂದ ನಿರ್ಧರಿಸಬಹುದು. ಇದರಿಂದ

$$\omega_m - u\left(\frac{2\pi^2 N}{V} -\right)^{\frac{1}{3}} \qquad \ldots\ldots.(21)$$

ಎಂದು ತಿಳಿಯುತ್ತದೆ. ಈಗ $k\theta = \hbar\,\omega_m$ ಎಂಬ ಶಕ್ತಿಯ ಸಮೀಕರಣದಿಂದ ಡೀಬೈ ಉಷ್ಣತೆಯೆಂಬ ಹೆಸರಿನ ಒಂದು ಸಂಧಿಸ್ಥ ಉಷ್ಣತೆಯನ್ನು ನಿರ್ಧರಿಸಬಹುದು. ಹೀಗೆ ಮಾಡಿದರೆ ಡೀಬೈ ಉಷ್ಣತೆ

$$\theta = \frac{\hbar\, u}{k}\left(\frac{2\pi^2 N}{V}\right)^{\frac{1}{3}} \qquad \ldots\ldots.(22)$$

ಎಂದು ತಿಳಿಯುತ್ತದೆ. ಫೋನಾನುಗಳ ಅನಿಲ T ಉಷ್ಣತೆಯಲ್ಲಿ ಉಷ್ಣ ಸಮತೋಲದಲ್ಲಿರುವಾಗ $\omega_i$ ಎಂಬ ಆವರ್ತಾಂಕವಿರುವ ಫೋನಾನುಗಳ ಸಂಖ್ಯೆಯನ್ನು ಎಣಿಸುವುದರ ಮೂಲಕ ಘನವಸ್ತುವಿನ ಗ್ರಾಹ್ಯೋಷ್ಣ $C_V$ ಯು $T >> \theta$ ಆದಾಗ

$$C_V = 3Nk\left[1 - \frac{1}{20}\left(\frac{\theta}{T}\right)^2 + \ldots\ldots\right] \qquad \ldots..(23)$$

ಎಂದೂ $T << \theta$ ಆದಾಗ

$$Cv \approx \frac{12Nk\pi^4}{5}\left(\frac{T}{\theta}\right)^3 \qquad \ldots..(24)$$

ಎಂದೂ ತೋರಿಸಬಹುದು. ಉಷ್ಣತೆ T ನಿರಪೇಕ್ಷ ಶೂನ್ಯವನ್ನು ಸಮೀಪಿಸಿದಂತೆ $C_V$ ಯು $T^3$ ರಂತೆ ಶೂನ್ಯವನ್ನು ಸಮೀಪಿಸುತ್ತದೆ. (ಚಿತ್ರದಲ್ಲಿ 3). ಇದು ಉಷ್ಣಗತಿ ವಿಜ್ಞಾನದ (ಥರ್ಮೋಡೈನಮಿಕ್ಸ್) ಮೂರನೆಯ ನಿಯಮಕ್ಕೆ ಅನುಗುಣವಾಗಿದೆ.




ಚಿತ್ರ–3 ಡೀಬೈ ಸಿದ್ಧಾಂತದ ಪ್ರಕಾರ ಒಂದು ಸ್ಫಟಿಕ ಜಾಲಕದ ಗ್ರಾಹ್ಯೋಷ್ಣ

ಉಷ್ಣತೆ T ಡೀಬೈ ಉಷ್ಣತೆ $\theta$ ಕ್ಕಿಂತ ಬಹಳ ಹೆಚ್ಚಾಗಿದ್ದರೆ $Cv \approx 3Nk$ ಎಂಬ ಅಭಿಜಾತ ಸಂಖ್ಯಾಕಲನಶಾಸ್ತ್ರದ ಫಲಿತಾಂಶ ಬರುತ್ತದೆ. ಬಹಳ ಘನವಸ್ತುಗಳಿಗೆ ಡೀಬೈ ಉಷ್ಣತೆ $\theta$ ಸುಮಾರು $200^0$K ಯಷ್ಟಿರುವುದರಿಂದ ಸಾಮಾನ್ಯವಾಗಿ ಕೋಣೆಯ

ಉಷ್ಣತೆಯಲ್ಲಿ (~300K)$C_V$ = 3Nk ಎಂಬ ಡ್ಯುಲಾಂಗ್–ಪೆಟಿಟ್ ನಿಯಮ ನಿಜವಾಗುತ್ತದೆ. ಉಷ್ಣತೆ ಅತಿ ಹೆಚ್ಚಾಗಿ ಸ್ಫಟಿಕ ಜಾಲಕದ ರಚನೆ ಮುರಿದು ಬಿದ್ದು ಘನವಸ್ತುಗಳು ಕರಗಲು ಉಪಕ್ರಮಿಸಿದಾಗ ನಾವು ಪರಿಗಣಿಸಿದ ಫೋನಾನುಗಳ ಆದರ್ಶ ಅನಿಲದ ಮಾದರಿ ಸರಿ ಹೊಂದುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪರಸ್ಪರ ಅಂತರಕ್ರಿಯೆಯುಳ್ಳ ಫೋನಾನುಗಳ ಅನಿಲವನ್ನು ಪರಿಗಣಿಸಬೇಕಾಗುತ್ತದೆ. ಸ್ವಾಭಾವಿಕವಾಗಿಯೇ ಇದು ತೊಡಕಿನ ಕೆಲಸ.

ಕಡಿಮೆ ಉಷ್ಣತೆಗಳಲ್ಲಿ ಘನವಸ್ತುವಿನ ವಿವರಣೆ ಆದರ್ಶ ಫೋನಾನುಗಳ ಅನಿಲದ ವಿವರಣೆಯನ್ನು ಹೋಲುತ್ತದೆ ಎಂದಾದರೆ ದ್ರವಗಳಿಗೂ ಇಂಥ ವಿವರಣೆ ಸಾಧ್ಯವೇ ಎಂಬ ಪ್ರಶ್ನೆ ಬರುತ್ತದೆ. ದ್ರವ್ಯದ (ಮ್ಯಾಟರ್) ಘನ ಮತ್ತು ಅನಿಲ ಪ್ರಾವಸ್ಥೆಗಳ (ಫೇಸ್ಸಸ್) ವಿಶ್ಲೇಷಣೆಗೆ ಶಿಷ್ಟವಿಧಾನಗಳಿದ್ದರೂ ವಸ್ತುವಿನ ದ್ರವ ಪ್ರಾವಸ್ಥೆಯ ವಿವರಣೆಗೆ ಇಂದೂ ಸರಿಯಾದ ಸಿದ್ಧಾಂತವಿಲ್ಲ. ಸಾಮಾನ್ಯವಾಗಿ ದ್ರವವನ್ನು ಪರಮಾಣುಗಳನ್ನು ಜಾಲಕದ ಬಿಂದುಗಳಲ್ಲಿ ಕಟ್ಟಿಹಿಡಿಯಲು ಅಸಮರ್ಥವಾದ, ತೀರ ದುರ್ಬಲವಾದ ಅಂತರಕ್ರಿಯೆಯುಳ್ಳ, ಮುರಿದುಬಿದ್ದ ಘನವಸ್ತು ಎಂದಾಗಲೀ ಆದರ್ಶದಿಂದ ತೀರ ದೂರಸರಿದ. ಪ್ರಬಲವಾದ ಅಂತರಕ್ರಿಯೆಯುಳ್ಳ ಒಂದು ಅನಿಲ ಎಂದಾಗಲೀ ಪರಿಗಣಿಸಿ ಸನ್ನಿಹಿತವಾದ (ಅಪ್ರಾಕ್ಸಿಮೇಟ್) ಗುಣಾತ್ಮಕ (ಕ್ವಾಲಿಟೇಟಿವ್) ವಿವರಣೆಯನ್ನು ಮಾತ್ರ ಕೊಡಲು ಸಾಧ್ಯ. ಮೊದಲನೆಯ ಸನ್ನಿಹಿತತೆಯನ್ನು ಅನುಸರಿಸಿದರೆ ಪರಸ್ಪರ ಅಂತರಕ್ರಿಯೆಯುಳ್ಳ ಫೋನಾನುಗಳನ್ನು ಪರಿಗಣಿಸಬೇಕಾಗುತ್ತದೆ. ದ್ರವಗಳಲ್ಲಿಯೂ ಶಬ್ದಪ್ರಸರಣ ಸಾಧ್ಯವಾದ್ದರಿಂದ ಫೋನಾನ್ ಉದ್ರೇಕ (ಎಗ್‌ಸೈಟೇಶನ್) ಸಾಧ್ಯ. ಆದರೆ ದ್ರವದ ಪ್ರಸಾಮಾನ್ಯ ಆಂದೋಲನ ರೀತಿಗಳನ್ನು ಬರಿಯ ಸಂಗತ ಕಂಪನಗಳೆಂದು ಪರಿಗಣಿಸಲು ಸಾಧ್ಯವಿಲ್ಲವಾದ್ದರಿಂದ ಜೊತೆಗೆ ಬೇರೆ ರೀತಿಯ ಉದ್ರೇಕಗಳಾದ ಸುಳಿ ಚಲನೆ (ವೋರ್ಟೆಕ್ಸ್‌ಮೋಷನ್) ದುರ್ದಮ್ಯ ಪ್ರವಾಹ (ಟರ್ಬ್ಯುಲೆಂಟ್ ಫ್ಲೋ) ಮುಂತಾದವುಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇಂಥ ಪರಿಗಣನೆಗಳು ಅನೇಕ ಹೊಸ ಪರಿಕಲ್ಪನೆಗಳಿಗೆ ದಾರಿ ಮಾಡಿಕೊಟ್ಟಿವೆ. ರೋಟಾನುಗಳ ಪರಿಕಲ್ಪನೆ ಇವುಗಳಲ್ಲೊಂದು.

ಸಂಪೂರ್ಣ ವಿಕೃತ ಬೋಸ್ ಅನಿಲ ಮತ್ತು ಬೋಸ್–ಐನ್‌ಸ್ಟೈನ್ ಸಂಘನನ: ಉಷ್ಣತೆ ನಿರಪೇಕ್ಷ ಶೂನ್ಯಕ್ಕೆ ಹತ್ತಿರ ಇರುವಾಗ ಬೋಸ್ ಅನಿಲದಲ್ಲಿ ಹೆಚ್ಚುಕಡಿಮೆ ಎಲ್ಲ ಕಣಗಳೂ ಕೆಳಗಿನ ಕೆಲವೇ ಶಕ್ತಿಮಟ್ಟಗಳಲ್ಲಿರುತ್ತವೆ. ಶೂನ್ಯ ಶಕ್ತಿಮಟ್ಟದಲ್ಲಿನ ಕಣಗಳ ಸರಾಸರಿ ಸಂಖ್ಯೆಯನ್ನು $\overline{n}_0$ಎಂದು ಸೂಚಿಸಿದರೆ ಸಮೀಕರಣ (10)ರಿಂದ

$$\overline{n}_0 = \frac{1}{\exp(-\mu/kT)-1} \quad .....(25)$$

ಎಂದು ತಿಳಿಯುತ್ತದೆ. ಈಗ μ ಶೂನ್ಯಗಾಮಿಯಾದಂತೆ ($\mu \to 0$) $n_0$ ಅನಂತಗಾಮಿಯಾಗುತ್ತದೆ.( $n_0 \to \infty$) ಅಂದರೆ ಎಲ್ಲ ಕಣಗಳೂ ε=0 ಮಟ್ಟಕ್ಕೆ ಇಳಿಯುತ್ತವೆ. ಈ ಸ್ಥಿತಿಯಲ್ಲಿನ ($\mu$ =0) ಬೋಸ್ ಅನಿಲವನ್ನು ಸಂಪೂರ್ಣ ವಿಕೃತ (ಕಂಪ್ಲೀಟ್ಲಿ ಡೀಜನರೇಟ್) ಬೋಸ್ ಅನಿಲವೆನ್ನುತ್ತೇವೆ.

ಸಮೀಕರಣ (12a)ಯಲ್ಲಿ (12) ರಲ್ಲಿರುವ ಸಂಕಲನವನ್ನು ಒಂದು ಅನುಕಲಜದ (ಇಂಟೆಗ್ರಲ್) ರೂಪದಲ್ಲಿ ಬರೆದಿದ್ದೇವೆ. ಆದರೆ ε=0 ಆದಾಗ ಅನುಕಲ್ಯ (ಇಂಟಿಗ್ರೆಂಡ್) ಸೊನ್ನೆಯಾಗುವುದರಿಂದ ಈ ಅನುಕಲಜಕ್ಕೆ ε=0 ಯಲ್ಲಿರುವ ಕಣಗಳಿಂದ ಯಾವ ಕೊಡುಗೆಯೂ ಇರುವುದಿಲ್ಲ. ಸಾಧಾರಣ ಉಷ್ಣತೆಗಳಲ್ಲಿ ε=0 ಯಲ್ಲಿರುವ ಕಣಗಳ ಸಂಖ್ಯೆ ಬಹಳ ಕಡಿಮೆ ಇರುವುದರಿಂದಲೂ *N* ಬಹಳ ದೊಡ್ಡ ಸಂಖ್ಯೆ (~ $10^{23}$) ಆಗಿರುವುದರಿಂದಲೂ ಈ ಅನುಕಲಜದ ಬೆಲೆಯನ್ನು *N* ಎಂದು ಬರೆಯುವುದರಲ್ಲಿ ಅಂಥ ಪ್ರಮಾದವೇನೂ ಆಗುವುದಿಲ್ಲ. ಆದರೆ ಉಷ್ಣತೆ ಬಹಳ ಕಡಿಮೆ ಇರುವಾಗ ε=0 ಯಲ್ಲಿನ ಕಣಗಳ ಸಂಖ್ಯೆಯಾದ $n_0$, *N* ನಲ್ಲಿ ಒಂದು ಗಣನೀಯ ಭಾಗವಾಗುವುದರಿಂದ ಸಮೀಕರಣ (12a) ಯಲ್ಲಿರುವ ಅನುಕಲಜದ ಬೆಲೆಯನ್ನು ε=0 ಮಟ್ಟವನ್ನು ಬಿಟ್ಟು ಉಳಿದ ಮಟ್ಟಗಳಲ್ಲಿನ ಕಣಗಳ ಸಂಖ್ಯೆಯೆಂದು ಪರಿಗಣಿಸಬೇಕಾಗುತ್ತದೆ. ε=0 ಯಿಂದ ಮೇಲಿರುವ ಮಟ್ಟಗಳಲ್ಲಿರುವ ಕಣಗಳ ಸಂಖ್ಯೆ *N'* ಆಗಿದ್ದರೆ

$$N' = \frac{2\pi v(2m)^{3/2}}{h^3}\int_0^\infty \frac{\sqrt{\varepsilon}.d\varepsilon}{\exp[(\varepsilon-\mu)/kT]-1} \quad ......(26)$$

ಎಂದಾಗುತ್ತದೆ. ಮುಂದೆ ನಾವು ಭ್ರಮಣ (ಸ್ಪಿನ್) ಶೂನ್ಯವಿರುವ (s=0) ಕಣಗಳನ್ನು ಮಾತ್ರ ಪರಿಗಣಿಸುವುದರಿಂದ ಸಮೀಕರಣ (12a)ಯಲ್ಲಿ s= 0 ಎಂದು ತೆಗೆದುಕೊಂಡು (26)ನ್ನು ಪಡೆದಿದ್ದೇವೆ. ಅನಿಲ ಸಂಪೂರ್ಣ ವಿಕೃತವಾದಾಗ N'ನ ಬೆಲೆಯನ್ನು ಕಂಡುಹಿಡಿಯಲು (26)ರಲ್ಲಿ μ = 0 ಎಂದು ಬರೆಯಬೇಕು. ಹೀಗೆ ಮಾಡಿದಾಗ ಫಲಿಸುವ ಅನುಕಲಜಕ್ಕೂ ರೀಮಾನ್ ಝೀಟ ಉತ್ಪನ್ನ ζ (3/2)ಕ್ಕೂ ಇರುವ ಸಂಬಂಧದಿಂದ

$$N' = \frac{2.612V}{h^3}(2\pi mkT)^{3/2} \quad ......(27)$$

ಎಂದಾಗುತ್ತದೆ. ಅಂದರೆ ಸಂಪೂರ್ಣ ವಿಕೃತ ಬೋಸ್ ಅನಿಲದಲ್ಲಿ ε=0 ಮಟ್ಟದಿಂದ ಮೇಲಿರುವ ಮಟ್ಟಗಳಲ್ಲಿನ ಕಣಗಳ ಸಂಖ್ಯೆ $T^{3/2}$ ರಂತೆ ವ್ಯತ್ಯಾಸ ಹೊಂದುವುದು ಎಂದು ತಿಳಿಯುತ್ತದೆ. ಈಗ ಎಲ್ಲ N ಕಣಗಳೂ ε=0 ಯಿಂದ ಮೇಲಿದ್ದರೆ ಅಂದರೆ N = N' ಆಗಿದ್ದರೆ ಉಷ್ಣತೆ

$$T \equiv T_B = \frac{h^2}{2\pi mk}\left(\frac{N}{2.612V}\right)^{2/3} \quad .......(28)$$

ಆಗಿರಬೇಕು. ಈ ಉಷ್ಣತೆ $T_B$ ಯನ್ನು ಒಂದು ಸಂಧಿಸ್ಥ ಉಷ್ಣತೆ ಎನ್ನಬಹುದು. ಈಗ (27) ಮತ್ತು (28)ನ್ನು ಉಪಯೋಗಿಸಿ

$$n_0 \equiv N - N' = N\left\{1-(T/T_B)^{3/2}\right\} \quad ..........(29)$$

ಎಂದು ಸುಲಭವಾಗಿ ತೋರಿಸಬಹುದು. ಈ ಸಮೀಕರಣವನ್ನು ಅನಿಲ ಸಂಪೂರ್ಣ ವಿಕೃತವಾಗಿದೆ ಎಂದು ಭಾವಿಸಿ ಪಡೆದಿರುವುದರಿಂದ ಇದನ್ನು $T<T_B$ ಗೆ ಮಾತ್ರ ಉಪಯೋಗಿಸಬೇಕು ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. $T<T_B$ ಆದಾಗ ಗಣನೀಯ ಪರಿಮಾಣದಲ್ಲಿ ಬೋಸ್ ಕಣಗಳು ε=0 ಮಟ್ಟದಲ್ಲಿ ಸಂದಣಿಸುತ್ತವೆ. ಬೋಸ್ ಕಣಗಳ ಒಂದೇ ಕ್ವಾಂಟಂ ಸ್ಥಿತಿಯಲ್ಲಿ (ε=0) ಸಂದಣಿಸುವ ಈ ಪ್ರಕ್ರಿಯೆಯನ್ನು ಬೋಸ್–ಐನ್‌ಸ್ಟೈನ್ ಸಂಘನನ (ಕಂಡೆನ್ಸೇಷನ್) ಎಂದೂ $T_B$ ಯನ್ನು ಸಂಘನನ ಉಷ್ಣತೆ ಎಂದೂ ಕರೆಯುತ್ತಾರೆ.

ಅನಿಲದ ಶಕ್ತಿ(ε=0 ಯಲ್ಲಿರುವ $\overline{n}_0$ ಕಣಗಳಿಂದ ಯಾವ ಕೊಡುಗೆಯೂ ಇಲ್ಲದಿರುವುದರಿಂದ ಅನಿಲದ ಒಟ್ಟು ಶಕ್ತಿ ε=0 ಮಟ್ಟದಿಂದ ಮೇಲಿರುವ *N'* ಕಣಗಳ ಶಕ್ತಿಯ ಮೊತ್ತವಾಗಿರಬೇಕು. ಆದ್ದರಿಂದ ಸಮೀಕರಣ (13)ರ ಸಹಾಯದಿಂದ (s=0 = μ ಆದ್ದರಿಂದ)

$$E = \int_0^\infty \varepsilon\rho(\varepsilon)\overline{n}(\varepsilon)d\varepsilon = \frac{2\pi V}{h^3}(2m)^{3/2}\int_0^\infty \frac{\varepsilon^{3/2}d\varepsilon}{\exp(\varepsilon/kT)-1} \quad ......(30)$$

ಎಂದು ಬರೆಯಬಹುದು. ಈ ಅನುಕಲಜ ರೀಮಾನ್ ಝೀಟ ಉತ್ಪನ್ನ ζ(5/2) ಕ್ಕೆ ಸಂಬಂಧಿಸಿದ ಅನುಕಲಜವಾದ್ದರಿಂದ

$$E = 0.77NkT(T/T_B)^{3/2} \quad .....(31)$$

ಎಂದು ತೋರಿಸಬಹುದು. ಇದರಿಂದ ವಿಕೃತ ಅನಿಲದ ಗ್ರಾಹ್ಯೋಷ್ಣ

$$C_V \equiv \left(\frac{\partial E}{\partial T}\right)_V = 1.925 \;\; Nk(T/T_B)^{3/2} = 1.925\,kN' \quad ......(32)$$

ಎಂದಾಗುತ್ತದೆ. ಅಂದರೆ ಸಂಪೂರ್ಣ ವಿಕೃತ ಬೋಸ್ ಅನಿಲದಲ್ಲಿ ಗ್ರಾಹ್ಯೋಷ್ಣ $T^{3/2}$ ರಂತೆ ವರ್ತಿಸುತ್ತದೆ ಎಂದು ತಿಳಿಯುತ್ತದೆ. ಫೋಟಾನ್ ಅಥವಾ ಫೋನಾನ್ ಅನಿಲಕ್ಕೆ ಉಷ್ಣತೆ ನಿರಪೇಕ್ಷ ಶೂನ್ಯಕ್ಕೆ ಹತ್ತಿರವಿರುವಾಗ ಗ್ರಾಹ್ಯೋಷ್ಣ $C_V$ ಯು $T^3$ ರಂತೆ ವರ್ತಿಸುತ್ತದೆ ಎಂಬುದನ್ನು ಇಲ್ಲಿ ಸ್ಮರಿಸಬೇಕು. ಚಿತ್ರದಲ್ಲಿ(4)ರಲ್ಲಿ ಬೋಸ್ ಅನಿಲದ ಗ್ರಾಹ್ಯೋಷ್ಣ ಉಷ್ಣತೆಯೊಡನೆ ಹೇಗೆ ವ್ಯತ್ಯಾಸವಾಗುತ್ತದೆ ಎಂಬುದನ್ನು ತೋರಿಸಿದೆ.




ಚಿತ್ರ–4 ಆದರ್ಶಬೋಸ್ ಅನಿಲವೊಂದರ ಗ್ರಾಹ್ಯೋಷ್ಣ

ಸಮೀಕರಣ (32)ರಲ್ಲಿರುವ ಗ್ರಾಹ್ಯೋಷ್ಣವನ್ನು ಉಪಯೋಗಿಸಿಕೊಂಡು

$$Cv = T\left(\frac{\partial S}{\partial T}\right)_V$$

ಎಂಬ ಉಷ್ಣಗತಿವಿಜ್ಞಾನದ ನಿಯಮವನ್ನು ಅನುಕಲಿಸುವುದರಿಂದ (ಇಂಟಿಗ್ರೇಟ್) ವಿಕೃತ ಬೋಸ್ ಅನಿಲದ ಎಂಟ್ರೊಪಿ

$$S = 1.283\ Nk\left(\frac{T}{T_B}\right)^{3/2} = 1.283kN' \quad .........(33)$$

ಎಂದು ತಿಳಿಯುತ್ತದೆ. ಇದರಿಂದ T = 0 ಆದಾಗ S =0 ಎಂದು ಉಷ್ಣಗತಿವಿಜ್ಞಾನದ ಮೂರನೆಯ ನಿಯಮಕ್ಕೆ ಅನುಗುಣವಾದ ಫಲಿತಾಂಶ ಬರುತ್ತದೆ. ಅಂದರೆ ಉಷ್ಣತೆ T = 0 ಆದಾಗ ಇರುವ ಸಂಘನಿತ ಬೋಸ್ ಅನಿಲದ ಎಂಟ್ರೊಪಿ ಶೂನ್ಯವಾಗಿರುತ್ತದೆ ಎಂದು ತಿಳಿಯುತ್ತದೆ. ಇನ್ನಾವುದೇ ಉಷ್ಣತೆಯಲ್ಲಿ ($T \neq 0$) ವಿಕೃತ ಬೋಸ್ ಅನಿಲವೊಂದರ ಗ್ರಾಹ್ಯೋಷ್ಣ $C_V$ ಮತ್ತು ಎಂಟ್ರೊಪಿ S ಎರಡೂ ಅನಿಲದ ಅಸಂಘನಿತ (ಅನ್ಕಂಡೆನ್ಸ್ಡ್) ಭಾಗ N' ಗೆ ಅನುಪಾತವಾಗಿರುವುದು ತುಂಬ ಗಮನಾರ್ಹವಾದ ವಿಷಯ. ಅನಿಲದ ಮುಕ್ತ ಶಕ್ತಿ (ಫ್ರೀ ಎನರ್ಜಿ)

$F = E - TS$ ಮತ್ತು ಒತ್ತಡ $P = -\left(\frac{\partial F}{\partial V}\right)_T$ ಎಂಬ ಸಂಬಂಧಗಳಿಂದ ಅನಿಲದ ಒತ್ತಡ

$$P = \frac{21.1m^{3/2}(kT)^{5/2}}{h^3}$$

ಎಂದು ತೋರಿಸಬಹುದು ಆದ್ದರಿಂದ $T < T_B$ ಆದಾಗ ಅನಿಲದ ಒತ್ತಡ ಅನಿಲದ ಗಾತ್ರವನ್ನು ಅವಲಂಬಿಸುವುದಿಲ್ಲ. ಇದಕ್ಕೆ ಶೂನ್ಯಸಂವೇಗವನ್ನು (ಮೊಮೆಂಟಂ ಜ಼ೀರೊ) ಹೊಂದಿರುವ ε=0 ಯಲ್ಲಿರುವ ಕಣಗಳಿಂದ ಅನಿಲದ ಒತ್ತಡಕ್ಕೆ ಯಾವ ಕೊಡುಗೆಯೂ ಇಲ್ಲದಿರುವುದೇ ಕಾರಣವಾಗಿದೆ. ಸಮೀಕರಣ (34)ರಲ್ಲಿ ಸೂಚಿತವಾಗಿರುವ ವರ್ತನೆ ಅನಾದರ್ಶ (ನಾನ್ ಐಡಿಯಲ್) ಅನಿಲವೊಂದರ ಸಂಘನನದ ಸ್ಥಿತಿಸಮೀಕರಣವನ್ನು ಹೋಲುವುದರಿಂದ ಬೋಸ್ ಕಣಗಳು ಒಂದೇ ಕ್ವಾಂಟಂ ಸ್ಥಿತಿಗೆ (ε=0) ನುಗ್ಗುವ ಪ್ರಕ್ರಿಯೆಗೆ ಸಂಘನನ ಎಂಬ ಹೆಸರು ಬರಲು ಕಾರಣವಾಗಿದೆ.

**ದ್ರವ ಹೀಲಿಯಂ**: ವಿಕೃತ ಬೋಸ್ ಅನಿಲವೊಂದನ್ನು ದ್ರವ ಹೀಲಿಯಮಿನ ವಿಚಿತ್ರ ವರ್ತನೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಹೇಗೆ ಉಪಯೋಗಿಸಬಹುದು ಎಂಬುದನ್ನು ತಿಳಿಯೋಣ. ಇಲ್ಲಿ ದ್ರವ ಪ್ರಾವಸ್ಥೆಯನ್ನು (ಲಿಕ್ವಿಡ್ ಫೇಸ್) ಆದರ್ಶದಿಂದ ದೂರ ಸರಿದ ಒಂದು ಅನಿಲವೆನ್ನುವ ಸನ್ನಿಹಿತತೆಯನ್ನು (ಅಪ್ರಾಕ್ಸಿಮೇಷನ್) ಪಯೋಗಿಸುತ್ತೇವೆ. ಹೀಲಿಯಂ ಅನೇಕ ರೀತಿಯಲ್ಲಿ ಅಸಾಮಾನ್ಯ ಧಾತು. ಭೂಮಿಯ ಮೇಲೆ ಹೀಲಿಯಮಿನ ಶೋಧಕ್ಕಿಂತ ಮೊದಲೇ ಸೂರ್ಯನಲ್ಲಿ ಅದರ ಇರುವಿಕೆಯನ್ನು ಸೂರ್ಯರೋಹಿತದ ವಿಶ್ಲೇಷಣೆಯಿಂದ ಕಂಡುಹಿಡಿಯಲಾಯಿತು. ನಿರಪೇಕ್ಷ ಶೂನ್ಯಕ್ಕೆ ಬಹು ಸಮೀಪದ ಉಷ್ಣತೆಗಳಲ್ಲಿಯೂ ಘನೀಭವಿಸದೆ ದ್ರವರೂಪದಲ್ಲಿಯೇ ಉಳಿಯುವ ವಸ್ತು ಹೀಲಿಯಂ ಒಂದೇ. ಇದು ತಟಸ್ಥ (ನ್ಯೂಟ್ರಲ್) ಧಾತುವಾದ್ದರಿಂದ ಇದರಲ್ಲಿನ ಪರಮಾಣುಗಳ ನಡುವಣ ರಾಸಾಯನಿಕ ಬಂಧನ (ಕೆಮಿಕಲ್ ಬೈಂಡಿಂಗ್) ಬಹಳ ದುರ್ಬಲವಾಗಿರುತ್ತದೆ. ಇದರಿಂದ ಹೀಲಿಯಂ ಪರಮಾಣುಗಳ ಗಣನೀಯ ಶೂನ್ಯ ಬಿಂದು ಶಕ್ತಿ ರಾಸಾಯನಿಕ ಬಂಧನವನ್ನು ಮೀರಿ ಹೀಲಿಯಂ ಅತಿ ಕಡಿಮೆ ಉಷ್ಣತೆಗಳಲ್ಲಿಯೂ ಘನೀಭವಿಸದಂತೆ ಮಾಡುತ್ತದೆ. ಈಗ ತಿಳಿದಿರುವ ಅಂಕಿ ಅಂಶಗಳ ಬಹಿರ್ವೇಶನದಿಂದ (ಎಕ್ಸ್‌ಟ್ರಾ ಪೋಲೇಶನ್) ಉಷ್ಣತೆಯ ನಿರಪೇಕ್ಷ ಶೂನ್ಯದಲ್ಲಿ ಕೂಡ ಹೀಲಿಯಂ ದ್ರವರೂಪದಲ್ಲಿಯೇ ಉಳಿಯಬಹುದೆಂದು ತಿಳಿದುಬರುತ್ತದೆ. ಹೀಲಿಯಂದ್ರವವನ್ನು ಘನೀಭವಿಸಲು ಕನಿಷ್ಠ 25 ವಾಯುಮಂಡಲಗಳ (ಅಟ್ಮಾಸ್ಫಿಯರ್ಸ್) ಒತ್ತಡವನ್ನು ಹೇರಬೇಕಾಗುತ್ತದೆ.

ಹೀಲಿಯಂ ಧಾತುವಿಗೆ $^4He$ ಮತ್ತು $^3He$ ಎಂಬ ಎರಡು ಸಮಸ್ಥಾನಿಗಳಿವೆ (ಐಸೊಟೋಪ್ಸ್). $^4He$ಯ ಭ್ರಮಣ ಸೊನ್ನೆಯಾದ್ದರಿಂದ $^4He$ ಯ ಪರಮಾಣುಗಳು ಬೋಸ್ ಕಣಗಳು. ಆದರೆ 5 ಮೂಲಕಣಗಳಿರುವ $^3He$ ಯ ಪರಮಾಣು ಫರ್ಮಿಕಣ. ಇದರಿಂದ $^4He$ ಮತ್ತು $^3He$ ಯ ಪರಮಾಣುಗಳ ಅನಿಲಗಳ ಕ್ವಾಂಟಂ ಹಂಚಿಕೆಗಳು ಕ್ರಮವಾಗಿ BE ಮತ್ತು FD ಹಂಚಿಕೆಗಳೆಂದು ತಿಳಿದು ಬರುತ್ತದೆ.

$^4He$ ಯ ಪರಮಾಣುಗಳ ದ್ರವ್ಯರಾಶಿ ಸಾಕಷ್ಟು ಕಡಿಮೆ ಇರುವುದರಿಂದಲೂ ಪರಮಾಣುಗಳ ಶೂನ್ಯ ಬಿಂದು ಕುಣಿತ (ಜ಼ೀರೊ ಪಾಯಿಂಟ್ ಜಿಗ್‌ಲಿಂಗ್) ಬಹಳ ಹೆಚ್ಚಿರುವುದರಿಂದಲೂ $^4He$ ಯ ಪರಮಾಣುಗಳ ಆದರ್ಶ ಬೋಸ್ ಅನಿಲವೊಂದನ್ನು $^4He$ ಯ ದ್ರವದ ಒಂದು ಮಾದರಿಯಾಗಿ ಪರಿಗಣಿಸಬಹುದು. $^4He$ ಯ ಬೋಸ್ ಅನಿಲಕ್ಕೆ $T_B = 3.14^\circ$ K ಆಗುತ್ತದೆ. ಇದೇ ಉಷ್ಣತೆ $T_B$ ಗೆ ಹತ್ತಿರದ ಉಷ್ಣತೆ $T\lambda$ = 2.19°K ಯಲ್ಲಿ $^4He$ ಯ ದ್ರವದಲ್ಲಿ ಒಂದು ಅಪೂರ್ವ ಪ್ರಾವಸ್ಥಾ ಬದಲಾವಣೆಯಾಗುತ್ತದೆ. ದ್ರವದಲ್ಲಿ ಆಗುತ್ತಿರುವ ಯಾವುದೋ ರೀತಿಯ ಪ್ರಾವಸ್ಥಾಬದಲಾವಣೆಯ ಸೂಚಕವಾಗಿ ದ್ರವದ ಗ್ರಾಹ್ಯೋಷ್ಣ Tλ ದಲ್ಲಿ ಅನಂತವಾಗುತ್ತದೆ. $^4He$ ಯ ದ್ರವದ ಗ್ರಾಹ್ಯೋಷ್ಣ ಮತ್ತು ಉಷ್ಣತೆಯ ನಕ್ಷೆಯ ರೂಪ Tλ ದ ಹತ್ತಿರ ಗ್ರೀಕ್ ಅಕ್ಷರ λ ವನ್ನು ಹೋಲುವುದರಿಂದ Tλ ವನ್ನು λ– ಬಿಂದು ಎಂದೂ ಈ ಪ್ರಾವಸ್ಥಾ ಬದಲಾವಣೆಯನ್ನು λ– ಬದಲಾವಣೆ ಎಂದೂ ಕರೆಯುತ್ತಾರೆ (ಚಿತ್ರ 5).




ಚಿತ್ರ–5 $^4He$ಯ ದ್ರವದ ಗ್ರಾಹ್ಯೋಷ್ಣ

$^4He$ ಯ λ– ಬದಲಾವಣೆಗೆ ಮೊದಲಿನ ಪ್ರಾವಸ್ಥೆಯನ್ನು (ಫೇಸ್) He I ಎಂದೂ ಅನಂತರದ ಪ್ರಾವಸ್ಥೆಯನ್ನು He II ಎಂದೂ ಕರೆಯುತ್ತಾರೆ. $^4He$ ಯ He II ಪ್ರಾವಸ್ಥೆಯಲ್ಲಿ ಅನೇಕ ವಿಚಿತ್ರವೆನಿಸುವ ವರ್ತನೆಗಳನ್ನು ಕಾಣುತ್ತೇವೆ. ಈ ಪ್ರಾವಸ್ಥೆಯಲ್ಲಿ ದ್ರವದ ಸ್ನಿಗ್ಧತೆ (ವಿಸ್ಕಾಸಿಟಿ) ಹೆಚ್ಚು ಕಡಿಮೆ ಸಂಪೂರ್ಣವಾಗಿ ಮಾಯವಾಗುವುದರಿಂದ He II ನ್ನು ಅತಿದ್ರವ (ಸೂಪರ್ ಫ್ಲೂಯಿಡ್) ಎನ್ನುತ್ತಾರೆ. $^4He$ ಯ ದ್ರವದ ವರ್ತನೆ ಗುಣಾತ್ಮಕವಾಗಿ ಆದರ್ಶಬೋಸ್ ಅನಿಲದ ವರ್ತನೆಯನ್ನು ಹೋಲುತ್ತದೆಂದು ಮೇಲಿನ ವಿಷಯಗಳಿಂದ ತಿಳಿಯುತ್ತದೆ. ಬೋಸ್ ಸಂಘನನ ಉಷ್ಣತೆ 3.14°K ಗೆ ಬಹು ಹತ್ತಿರದ ಉಷ್ಣತೆ 2.19°K ಯಲ್ಲಿ λ– ಬದಲಾವಣೆ ಆಗುವುದೂ ಫರ್ಮಿ ಕಣಗಳ ವ್ಯವಸ್ಥೆಯಾದ $^3He$ ಯ ದ್ರವದಲ್ಲಿ ಇಂಥ ಯಾವ λ– ಬದಲಾವಣೆ ಇಲ್ಲದಿರುವುದೂ λ– ಬದಲಾವಣೆ ಬೋಸ್ ಸಂಘನನಕ್ಕೆ ಸಂಬಂಧಿಸಿದ ಒಂದು ಪ್ರಕ್ರಿಯೆ ಎಂದು ಸೂಚಿಸುತ್ತವೆ. ಸಂಘನಿತ ಬೋಸ್ ಅನಿಲಕ್ಕೆ ಎಂಟ್ರೊಪಿ ಶೂನ್ಯವಾಗಿರುವುದು ಮತ್ತು ಸಂಘನಿತ ಭಾಗದಿಂದ ಅನಿಲದ ಗ್ರಾಹ್ಯೋಷ್ಣಕ್ಕೆ ಯಾವ ಕೊಡುಗೆಯೂ ಇಲ್ಲದಿರುವುದು ಇದೇ ಗುಣಗಳನ್ನು ಹೊಂದಿರುವ $^4He$ ಯ ಅತಿದ್ರವ ಘಟಕ ಸಂಘನಿತ ಬೋಸ್ ಅನಿಲವಿರಬೇಕು ಎಂದು ಅನುಮಾನಿಸಲು ಪ್ರೇರೇಪಿಸುತ್ತವೆ. ಇಂಥ ಪರಿಗಣನೆಗಳೇ 1934ರಲ್ಲಿ ಎಲ್. ಟಿಜ಼ಾ ತನ್ನ ಎರಡು ದ್ರವ ಸಿದ್ಧಾಂತವನ್ನು ಮಂಡಿಸಲು ಕಾರಣವಾಯಿತು ಎನ್ನಬಹುದು.




ಚಿತ್ರ–6 $^4He$ ಪ್ರಾವಸ್ಥೆಯ ಚಿತ್ರ

ದ್ರವವೊಂದನ್ನು ಇಲ್ಲಿ ಆದರ್ಶ ಅನಿಲವೆಂದು ಪರಿಗಣಿಸಿ ವಾದ ಮಾಡಿರುವುದರಿಂದ ಇಂಥ ಮಾದರಿಯೊಂದರಿಂದ ಪರಿಮಾಣಾತ್ಮಕ (ಕ್ವಾಂಟಿಟೇಟಿವ್) ಫಲಿತಾಂಶಗಳನ್ನು ಎದುರು ನೋಡುವುದು ಅರ್ಥವಿಲ್ಲದ್ದಾಗುತ್ತದೆ. ಉದಾಹರಣೆಗೆ $^4He$ ಯ ಅನಿಲ ಮತ್ತು ದ್ರವದ ಗ್ರಾಹ್ಯೋಷ್ಣ ನಕ್ಷೆಗಳು ಒಂದೇ ತೆರನಾಗಿಲ್ಲ (ಚಿತ್ರದಲ್ಲಿ 4 ಮತ್ತು ಚಿತ್ರ ದಲ್ಲಿ 5ನ್ನು ಹೋಲಿಸಿ) ಹಾಗೆಯೇ $T_C$ ಮತ್ತು Tλ ಗಳು ಒಂದೇ ಆಗಿಲ್ಲ ಎಂಬುದನ್ನು

ಗಮನಿಸಬಹುದು. $^4He$ ಯ ಅತಿದ್ರವ ಪ್ರಾವಸ್ಥೆಯ ವಿವರಣೆಯಲ್ಲಿ ಬೋಸ್ ಸಂಘನನಕ್ಕೆ ಒಂದು ಪ್ರಮುಖ ಪಾತ್ರವಿದೆ ಎಂಬುದರಲ್ಲಿ ಅನುಮಾನವಿಲ್ಲವಾದರೂ ಪರಮಾಣುಗಳ ಅಂತರಕ್ರಿಯೆಯನ್ನು ಒಳಗೊಂಡು ಪರಿಮಾಣಾತ್ಮಕ ವಿವರಣೆಯನ್ನು ನೀಡಬಲ್ಲ ಸಿದ್ಧಾಂತವನ್ನು ಇನ್ನೂ ರೂಪಿಸಬೇಕಾಗಿದೆಯಷ್ಟೆ.

ವಿಕೃತ ಫರ್ಮಿ ಅನಿಲ: ವಿಕೃತ ಫರ್ಮಿ ಅನಿಲದ ವರ್ತನೆ ಫರ್ಮಿಕಣಗಳು ಪಾಲಿಸುವ ಪೌಲಿ ಬಹಿಷ್ಕರಣ ನಿಯಮದಿಂದಾಗಿ ಬೋಸ್ ಅನಿಲವೊಂದರ ವರ್ತನೆಯಿಂದ ಸಂಪೂರ್ಣವಾಗಿ ಬೇರೆಯಾಗಿರುತ್ತದೆ. ಪೌಲಿ ನಿಯಮದ ಪ್ರಕಾರ ಒಂದು ಕ್ವಾಂಟಂ ಸ್ಥಿತಿಯಲ್ಲಿ ಅತಿ ಹೆಚ್ಚೆಂದರೆ ಒಂದು ಕಣವಿರಲು ಮಾತ್ರ ಸಾಧ್ಯವಾದ್ದರಿಂದ ಬೋಸ್ ಸಂಘನನದಂಥ ಪ್ರಕ್ರಿಯೆ ಫರ್ಮಿ ಅನಿಲದಲ್ಲಿ ಸಾಧ್ಯವಾಗುವುದಿಲ್ಲ.

ಉಷ್ಣತೆಯ ನಿರಪೇಕ್ಷ ಶೂನ್ಯದಲ್ಲಿರುವ (T=0) ಫರ್ಮಿ ಅನಿಲವನ್ನು ಸಂಪೂರ್ಣ ವಿಕೃತ ಫರ್ಮಿ ಅನಿಲ ಎನ್ನುತ್ತಾರೆ. ಉಷ್ಣತೆ T ಶೂನ್ಯವಾದಾದಲೂ ಫರ್ಮಿ ಅನಿಲದಲ್ಲಿ ಕಣಗಳಿಗೆ ಗಣನೀಯವಾದ ಸರಾಸರಿ ಶಕ್ತಿ ಇರುತ್ತದೆ. ಏಕೆಂದರೆ ಆಗ ಅನಿಲದ ಶಕ್ತಿ ಕನಿಷ್ಠವಾಗಿರಬೇಕು; ಆದ್ದರಿಂದ ಅತ್ಯಂತ ಕಡಿಮೆ ಶಕ್ತಿ ಇರುವ ($\varepsilon$=0) ಕ್ವಾಂಟಂ ಸ್ಥಿತಿಯಿಂದ ಸ್ಥಿತಿಗೆ ತಲಾ ಒಂದರಂತೆ ಫರ್ಮಿಕಣಗಳನ್ನು ತುಂಬುತ್ತ ಬಂದರೆ ಕಣಗಳ ಒಟ್ಟು ಸಂಖ್ಯೆ *N* ನಿಂದ ನಿರ್ಧರಿಸಲ್ಪಟ್ಟ ಯಾವುದೋ ತುದಿಯ ಸ್ಥಿತಿಯ ವರೆಗೆ ಕಣಗಳು ತುಂಬಿಕೊಳ್ಳುತ್ತವೆ. ಈ ತುದಿಯ ಕ್ವಾಂಟಂ ಸ್ಥಿತಿಯ ಶಕ್ತಿ $\varepsilon F$ ಆಗಿದ್ದರೆ $\varepsilon$=0 ಯಿಂದ $\varepsilon = \varepsilon F$ ನ ವರೆಗೆ ಇರುವ ಸ್ಥಿತಿಗಳ ಸಂಖ್ಯೆ *N* ಗೆ ಸಮವಾಗಿರಬೇಕು. ಈಗ ಸಮೀಕರಣ (13) ರಲ್ಲಿರುವ ಸ್ಥಿತಿಗಳ ಸಾಂದ್ರತೆಯನ್ನು ಉಪಯೋಗಿಸಿದರೆ

$$N = \int_0^{\varepsilon F} \rho(\varepsilon) d\varepsilon = \frac{(2s+1)4\pi V(2m\varepsilon F)^{3/2}}{3h^3} \qquad \text{........(35)}$$

ಎಂದು ತಿಳಿಯುತ್ತದೆ. ನಮ್ಮ ಆಸಕ್ತಿ ಭ್ರಮಣ ½ ಇರುವ ಕಣಗಳಲ್ಲಿ ಇರುವುದರಿಂದ s = ½ ಆದಾಗಿನ ಸಂದರ್ಭವನ್ನು ಮಾತ್ರ ಮುಂದೆ ಗಮನಿಸುತ್ತೇವೆ. ಆದ್ದರಿಂದ ಭ್ರಮಣ ½ ಇರುವ ಫರ್ಮಿ ಕಣಗಳಿಗೆ

$$\varepsilon F = \frac{h^2}{2m}\left(\frac{3N}{8\pi v}\right)^{2/3} \qquad \text{............(36)}$$

ಎಂದಾಗುತ್ತದೆ. ವಾಡಿಕೆಯಿಂದ $\varepsilon F$ ನ್ನು ಫರ್ಮಿ ಶಕ್ತಿ ಎನ್ನುತ್ತಾರೆ. T=0 ಯಲ್ಲಿ ಅನಿಲದ ಒಟ್ಟು ಶಕ್ತಿಯನ್ನು E(0) ಎಂದು ಬರೆದರೆ

$$E(0) = \int_0^{\varepsilon F} \varepsilon \rho(\varepsilon) d\varepsilon = \frac{3N}{5}\varepsilon F \qquad \text{........(37)}$$

ಎಂದಾಗುತ್ತದೆ. ಇದರಿಂದ ಕಣವೊಂದರ ಸರಾಸರಿ ಶಕ್ತಿ $< E(0) > \equiv \frac{E(0)}{N}$ ಫರ್ಮಿ ಶಕ್ತಿಯ 3/5 ರಷ್ಟು ಇರುತ್ತದೆ ಎಂದು ತಿಳಿಯುತ್ತದೆ. ಲೋಹದಲ್ಲಿನ ಎಲೆಕ್ಟ್ರಾನುಗಳಿಗೆ < E(0)> ಸುಮಾರು 2 ರಿಂದ 5 ಎಲೆಕ್ಟ್ರಾನ್ ವೋಲ್ಟುಗಳಷ್ಟಿರುತ್ತದೆ. ಅಂದರೆ ಕೋಣೆ ಉಷ್ಣತೆಗಳಲ್ಲಿನ kT ಗಿಂತ < E(0)> ಕೆಲವು ನೂರು ಪಟ್ಟು ಹೆಚ್ಚಾಗಿರುತ್ತದೆ. T =0 ಯಲ್ಲಿ

$$\bar{n}_i = \begin{cases} 1; \varepsilon < \mu(0) \\ 0; \varepsilon_1 > \mu(0) \end{cases} \qquad \text{..........(38)}$$

ಎಂದು ಸಮೀಕರಣ (11)ರ ಅವಲೋಕನದಿಂದ ತಿಳಿಯುತ್ತದೆ. ಇಲ್ಲಿ $\mu(0)$ ಎನ್ನುವುದು ರಾಸಾಯನಿಕ ವಿಭವ $\mu$ *(T) T* ಯ = 0 ಯಲ್ಲಿನ ಬೆಲೆ. ಇದರಿಂದ *T=0* ಯಲ್ಲಿ $\mu(0)$ ಗಿಂತ ಕಡಿಮೆ ಶಕ್ತಿಯ ಎಲ್ಲ ಕ್ವಾಂಟಂ ಸ್ಥಿತಿಗಳೂ ಕಣಭರಿತವಾಗಿವೆಯೆಂದೂ $\mu(0)$ಗಿಂತ ಹೆಚ್ಚಾದ ಶಕ್ತಿಯುಳ್ಳ ಎಲ್ಲ ಕ್ವಾಂಟಂ ಸ್ಥಿತಿಗಳೂ ಖಾಲಿ ಇವೆ ಎಂದೂ ತಿಳಿಯುತ್ತದೆ. ಅಂದರೆ *T=0* ಯಲ್ಲಿ

$$\mu(0) = \varepsilon F \qquad \text{......(39)}$$

ಎಂದಾಗುತ್ತದೆ. ಒಂದು ಕ್ವಾಂಟಂ ಸ್ಥಿತಿಯ ಸರಾಸರಿ ವಸತಿ ಸಂಖ್ಯೆಯಾದ $n_i$ ಸ್ಥಿತಿಯ ಶಕ್ತಿಯೊಡನೆ ಹೇಗೆ ವ್ಯತ್ಯಾಸವಾಗುತ್ತದೆಂದು ಚಿತ್ರದಲ್ಲಿ ತೋರಿಸಿದೆ.




ಚಿತ್ರ–7 ಒಂದು ಕ್ವಾಂಟಂ ಸ್ಥಿತಿಯ ಸರಾಸರಿ ವಸತಿ ಸಂಖ್ಯೆ ($T_1<T_2<T_3$)

$\varepsilon F$>0 ಆದ್ದರಿಂದ T= 0 ಆದಾಗ ರಾಸಾಯನಿಕ ವಿಭವ $\mu$ (0)>0 ಎಂದು ಮೇಲಿನಿಂದ ತಿಳಿಯುತ್ತದೆ. [ಇದಕ್ಕೆ ವಿರುದ್ಧವಾಗಿ ಬೋಸ್ ಅನಿಲವೊಂದಕ್ಕೆ $\mu(T) \le 0$ ಎಂಬುದನ್ನು ಇಲ್ಲಿ ಸ್ಮರಿಸಬೇಕು]. ಬೋಸ್ ಅನಿಲದಲ್ಲಿ $\mu$=0 ಆದಾಗ ಅನಿಲದ ಉಷ್ಣತೆ ಬೋಸ್ ಸಂಘನನ ಉಷ್ಣತೆ $T_B$ ಆಗಿರುತ್ತದೆ. ಫರ್ಮಿ ಅನಿಲಕ್ಕೂ ಇಂಥದೇ ಒಂದು ಸಂಧಿಸ್ಥ ಉಷ್ಣತೆ $T_F$ ನ್ನು ಕಂಡುಹಿಡಿಯಬಹುದು. ಸಮೀಕರಣ (12a) ಯಲ್ಲಿ S =½, $\mu = 0$ ಎಂದು ಬರೆದಾಗ ಸಿಕ್ಕುವ ಅನುಕಲಜವನ್ನು ಕಂಡುಹಿಡಿಯುವ ಮೂಲಕ

$$T_F = 1.428\, T_B = 0.9891\, \varepsilon F \qquad \text{......(40)}$$

ಎಂದು ತೋರಿಸಬಹುದು. ಫರ್ಮಿ ಅನಿಲದ ಉಷ್ಣತೆ T, $T_F$ ಗಿಂತ ಕಡಿಮೆ ಇದ್ದರೆ ಅನಿಲ ಅಲ್ಪ ಉಷ್ಣತೆಯಲ್ಲಿನ (ಲೋ ಟೆಂಪರೇಚರ್) ವರ್ತನೆಯನ್ನು ತೋರಿಸುತ್ತದೆ ಎನ್ನಬಹುದು. ಈ ದೃಷ್ಟಿಕೋನದಿಂದ ಬಿಳುಪಾಗಿ ಕಾದ ಲೋಹದಲ್ಲಿನ ಎಲೆಕ್ಟ್ರಾನುಗಳೂ ತಣ್ಣನೆಯ ಎಲೆಕ್ಟ್ರಾನುಗಳು.

$T \neq 0$ ಆದಾಗ *N* ಅನ್ನು ಸಮೀಕರಣ (12a) ಯಲ್ಲಿ s = ½ ಎಂದು ಬರೆದು ಕಂಡುಹಿಡಿಯಬೇಕು. ಅನಿಲ ತಣ್ಣಗಿರುವಾಗ ಅಂದರೆ $T<T_F$ ಆದಾಗ ಸಮೀಕರಣ (12a) ಯ ಸಹಾಯದಿಂದ ರಾಸಾಯನಿಕ ವಿಭವ $\mu(T)$

$$\mu(T) = \mu(0)\left\{1 - \frac{\pi^2}{12}\left(\frac{kT}{\mu(0)}\right)^2 + \text{.......}\right\} \qquad \text{...... (41)}$$

ಆಗಿರುತ್ತದೆ ಎಂದೂ ಅನಿಲದ ಒಟ್ಟು ಶಕ್ತಿ *E(T)*

$$E(T) = E(0)\left\{1 + \frac{5\pi^2}{12}\left(\frac{kT}{\mu(0)}\right)^2 + \text{............}\right\} \qquad \text{........(42)}$$

ಎಂದು ತೋರಿಸಬಹುದು. ಇದರಿಂದ ತಣ್ಣನೆಯ ಫರ್ಮಿ ಅನಿಲದ ಗ್ರಾಹ್ಯೋಷ್ಣ $C_V$

$$C_V = \frac{\pi^2 N}{2}\left(\frac{k^2 T}{\mu(0)}\right) \qquad \text{..........(43)}$$

ಎಂದು ತಿಳಿಯುತ್ತದೆ. ಸಾಂದ್ರತೆ $\left(\frac{N}{V}\right)$ ಮತ್ತು ಕಣಗಳ ದ್ರವ್ಯರಾಶಿ $m$ ಒಂದೇ ಇರುವ ಆದರ್ಶ ಬೋಸ್ ಮತ್ತು ಫರ್ಮಿ ಅನಿಲಗಳಲ್ಲಿ ವಿಕೃತಿಯ ಪ್ರಾಚಲ ಉಷ್ಣತೆಯೊಡನೆ ಹೇಗೆ ವ್ಯತ್ಯಾಸವಾಗುತ್ತದೆ ಎಂದು ಚಿತ್ರದಲ್ಲಿ ತೋರಿಸಲಾಗಿದೆ. ವಿಕೃತಿಯ ಪ್ರಾಚಲ e$\mu$ /$\kappa$T ಯ ಲಘುಗಣಕ (ಲಾಗರಿತಂ) $\mu$ /$\kappa$T ಯನ್ನು ಚಿತ್ರದಲ್ಲಿ ಅನಿಲದ ಉಷ್ಣತೆಗೆ ಸಂಬಂಧಿಸಿದ ($T/T_B$)ಯ ವಿರುದ್ಧ ಗುರುತಿಸಿದೆ.




ಚಿತ್ರ–8

ಲೋಹಗಳಲ್ಲಿನ ಎಲೆಕ್ಟ್ರಾನುಗಳು: ಲೋಹದ ಮುಕ್ತ ಎಲೆಕ್ಟ್ರಾನ್ ಮಾದರಿಯ ಸಹಾಯದಿಂದ ಲೋಹಗಳ ಹಲವಾರು ಗುಣಗಳನ್ನು ಅರ್ಥ ಮಾಡಿಕೊಳ್ಳಬಹುದು. ಲೋಹವೊಂದರ ಬಹಳ ಸರಳಗೊಳಿಸಿದ ಈ ಮಾದರಿಯಲ್ಲಿ ಲೋಹದ ಪರಮಾಣುಗಳಿಗೆ ಬಹಳ ದುರ್ಬಲವಾಗಿ ಬಂಧಿತವಾದ ವೇಲೆನ್ಸ್ ಎಲೆಕ್ಟ್ರಾನುಗಳು ಲೋಹದಲ್ಲೆಲ್ಲ ಮುಕ್ತವಾಗಿ

ಹರಿದಾಡಲು ಸಾಧ್ಯ ಎಂದು ಪರಿಗಣಿಸುತ್ತೇವೆ. ಲೋಹಗಳಲ್ಲಿನ ವೇಲೆನ್ಸ್ ಎಲೆಕ್ಟ್ರಾನುಗಳು ವಿದ್ಯುತ್ತನ್ನು ಹೊತ್ತೊಯ್ಯುವ ವಾಹಕಗಳಾಗಿದ್ದರಿಂದ ಈ ಎಲೆಕ್ಟ್ರಾನುಗಳನ್ನು ವಾಹಕ ಎಲೆಕ್ಟ್ರಾನುಗಳು ಎಂದೂ ಕರೆಯುತ್ತೇವೆ. ಧನವಿದ್ಯುದಾವಿಷ್ಟ ಅಯಾನುಗಳಿಗೂ ವಾಹಕ ಎಲೆಕ್ಟ್ರಾನುಗಳಿಗೂ ಇರುವ ಅಂತರಕ್ರಿಯೆಯನ್ನು ಮುಕ್ತ ಎಲೆಕ್ಟ್ರಾನ್ ಮಾದರಿಯಲ್ಲಿ ನಿರ್ಲಕ್ಷಿಸುತ್ತೇವೆ. ವಾಹಕ ಎಲೆಕ್ಟ್ರಾನುಗಳ ನಡುವಣ ವಿಕರ್ಷಣೆ + ಅಯಾನುಗಳೆಡೆಗಿನ ಆಕರ್ಷಣೆಯಿಂದ ಸಮತೋಲ ಹೊಂದಿ ಎಲೆಕ್ಟ್ರಾನುಗಳು ಹೆಚ್ಚು ಕಡಿಮೆ ಮುಕ್ತವಾಗಿರುತ್ತವೆ ಎಂಬ ಒಂದು ಸ್ಥೂಲ ದೃಷ್ಟಿಯನ್ನು ಬೇಕಾದರೆ ಇಟ್ಟುಕೊಳ್ಳಬಹುದು. ಒಟ್ಟಿನಲ್ಲಿ ಮುಕ್ತ ಎಲೆಕ್ಟ್ರಾನ್ ಮಾದರಿಯಲ್ಲಿ ನಾವು ಎಲೆಕ್ಟ್ರಾನುಗಳ ಒಂದು ಆದರ್ಶ ಫರ್ಮಿ ಅನಿಲವನ್ನು ಮಾತ್ರ ಗಮನಿಸುತ್ತೇವೆ ಎಂದು ಹೇಳಬಹುದು.

ಲೋಹಗಳ ಗುಣವಿಶೇಷಗಳನ್ನು ಮುಕ್ತ ಎಲೆಕ್ಟ್ರಾನುಗಳ ಕಡೆಯಿಂದ ವಿವರಿಸುವ ಪ್ರಯತ್ನಗಳ ಚರಿತ್ರೆ ಕ್ವಾಂಟಂ ಬಲವಿಜ್ಞಾನದ ಹುಟ್ಟಿಗಿಂತಲೂ ಹಳೆಯದು ಎನ್ನಬಹುದು. ಮುಕ್ತ ಎಲೆಕ್ಟ್ರಾನುಗಳ ಅಭಿಜಾತ ಸಿದ್ಧಾಂತ ವಿದ್ಯುದ್ವಾಹಕಗಳಲ್ಲಿ ಓಮ್ ನಿಯಮದ ರೂಪವನ್ನು ನಿರ್ಧರಿಸುವಲ್ಲಿ ಉಷ್ಣವಾಹಕತ್ವ (ಥರ್ಮಲ್ ಕಂಡಕ್ಟಿವಿಟಿ) ಮತ್ತು ವಿದ್ಯುದ್ವಾಹಕತ್ವಗಳ ಸಂಬಂಧವನ್ನು ಹೇಳುವಲ್ಲಿ ಸಫಲವಾದರೂ ವಾಹಕ ಎಲೆಕ್ಟ್ರಾನುಗಳ ಗ್ರಾಹ್ಯೋಷ್ಣ ಅನುಕಾಂತೀಯ ಗ್ರಾಹಕತ್ವ (ಪ್ಯಾರಾಮ್ಯಾಗ್ನೆಟಿಕ್ ಸಸೆಪ್ಟಿಬಿಲಿಟಿ) ಮುಂತಾದುವನ್ನು ವಿವರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗುತ್ತದೆ.

ಅಭಿಜಾತ ಸಂಖ್ಯಾಕಲನಶಾಸ್ತ್ರದಂತೆ ಒಂದು ಮುಕ್ತ ಎಲೆಕ್ಟ್ರಾನಿನ ಉಷ್ಣಶಕ್ತಿ 3kT/2 ಆಗುತ್ತದೆ. ಪರಮಾಣುಗಳು ತಲಾ ಒಂದರಂತೆ ಮುಕ್ತ ಎಲೆಕ್ಟ್ರಾನುಗಳನ್ನು ನೀಡಿದರೆ *N* ಪರಮಾಣುಗಳಿಂದ ಒಂದು ಲೋಹದ ತುಂಡಿನಲ್ಲಿ ವಾಹಕ ಎಲೆಕ್ಟ್ರಾನುಗಳ ಗ್ರಾಹ್ಯೋಷ್ಣ *3Nk/2* ಆಗಬೇಕಾಗುತ್ತದೆ. ಆದರೆ ಕೋಣೆ ಉಷ್ಣತೆಗಳಲ್ಲಿ ಪ್ರಯೋಗಗಳಿಂದ ಕಂಡುಹಿಡಿದ ಗ್ರಾಹ್ಯೋಷ್ಣ *3Nk/2* ರ 1/100 ಪಾಲಿಗಿಂತಲೂ ಕಡಿಮೆ ಇರುತ್ತದೆ. ವಿದ್ಯುದ್ವಹನ ಕ್ರಿಯೆಯಲ್ಲಿ ಚಲಿಸಲು ಸಂಪೂರ್ಣ ಮುಕ್ತವಾಗಿವೆಯೋ ಎಂಬಂತೆ ಭಾಗವಹಿಸುವ ವಾಹಕ ಎಲೆಕ್ಟ್ರಾನುಗಳು ಗ್ರಾಹ್ಯೋಷ್ಣಕ್ಕೆ ಮಾತ್ರ ಯಾವ ಕೊಡುಗೆಯನ್ನೂ ಏಕೆ ನೀಡುವುದಿಲ್ಲವೆಂಬುದು ಒಂದು ಸಮಸ್ಯೆಯಾಗಿ ಉಳಿದಿತ್ತು. ಈ ಸಮಸ್ಯೆಗೆ ಸರಿಯಾದ ಉತ್ತರ ಸಿಕ್ಕಿದ್ದು ಪೌಲಿ ತನ್ನ ಬಹಿಷ್ಕರಣ ತತ್ತ್ವವನ್ನು ಮಂಡಿಸಿದ ಬಳಿಕವೇ.

ಲೋಹದಲ್ಲಿನ ಪ್ರತಿಯೊಂದು ಪರಮಾಣುವೂ ಎಲೆಕ್ಟ್ರಾನ್ ಅನಿಲಕ್ಕೆ *Z* ಮುಕ್ತ ವೇಲೆನ್ಸ್ ಎಲೆಕ್ಟ್ರಾನುಗಳನ್ನು ನೀಡುತ್ತದೆ ಎಂದಾದರೆ ಒಂದು ಗ್ರಾಮ್ ಪರಮಾಣು (ಗ್ರಾಮ್ ಆಟಮ್) ಲೋಹದಲ್ಲಿ ಮುಕ್ತ ಎಲೆಕ್ಟ್ರಾನುಗಳ ಸಂಖ್ಯೆ $N_oZ$ ಆಗುತ್ತದೆ. ಇಲ್ಲಿ $N_o=6.023 \times 10^{23}$ ಎಂಬುದು ಅವಗಾಡ್ರೋ ಸಂಖ್ಯೆ. ಸಮೀಕರಣ (36)ರಿಂದ

$$\varepsilon F = 26\left(\frac{Z}{V_0}\right)^{2/3} eV \qquad .....(44)$$

ಎಂಬುದು ವಾಹಕ ಎಲೆಕ್ಟ್ರಾನುಗಳ ಫರ್ಮಿ ಶಕ್ತಿ ಎಂದುತಿಳಿಯುತ್ತದೆ. ಇಲ್ಲಿ $V_o$ ಲೋಹದ ಗ್ರಾಮ್ ಪರಮಾಣ್ವಕ ಗಾತ್ರ ; $V_o$ ಯ ಬೆಲೆ ಸುಮಾರಾಗಿ 10 ಘ.ಸೆಂ.ಮೀ ಎಂದಿಟ್ಟುಕೊಳ್ಳಬಹುದು. Z ಲೋಹದ ವೇಲೆನ್ಸಿಗೆ ಸ್ಥೂಲವಾಗಿ ಸಮವಾಗಿರುತ್ತದೆ ಎಂದು ಕಂಡುಬಂದಿದೆ. ಕ್ಷಾರ ಲೋಹಗಳಿಗೆ $Z \sim 1$ ಉಳಿದ ಲೋಹಗಳಿಗೆ zನ ಬೆಲೆಯ ನಿರ್ಧರಣ ಸ್ವಲ್ಪ ಕಷ್ಟ. ಸಮೀಕರಣ (40) ಹಾಗೂ (44) ರಿಂದ

$$T_F \approx 30 \times 10^4 \left(\frac{z}{v_o}\right)^{2/3^0} K. \qquad .....(45)$$

ಎಂದಾಗುತ್ತದೆ. ಅಂದರೆ $T_F \sim 30{,}000\,^\circ K$ ಆಗುವುದರಿಂದ ನಾವು ಪರಿಗಣಿಸುವ ಸಾಧಾರಣ ಉಷ್ಣತೆಗಳಲ್ಲಿ ($T << T_F$) ವಾಹಕ ಎಲೆಕ್ಟ್ರಾನ್ ಅನಿಲ ವಿಕೃತವಾಗಿರುತ್ತದೆ ಎಂದು ಹೇಳಬಹುದು. ಕೋಣೆ ಉಷ್ಣತೆಗಳಲ್ಲಿ ($T \sim 300\,^\circ K$) ವಾಹಕ ಎಲೆಕ್ಟ್ರಾನುಗಳು ಗ್ರಾಹ್ಯೋಷ್ಣಕ್ಕೆ ಏಕೆ ಗಣನೀಯ ಕೊಡುಗೆಯನ್ನು ನೀಡುವುದಿಲ್ಲವೆಂದು ಸಮೀಕರಣ (43)ನ್ನು ನೋಡಿದರೆ ಈಗ ತತ್ ಕ್ಷಣ ತಿಳಿಯುತ್ತದೆ.

ನಿರಪೇಕ್ಷ ಶೂನ್ಯಕ್ಕೆ ಸಮೀಪದ ಉಷ್ಣತೆಗಳಲ್ಲಿ ($T \sim 0$) ಸ್ಫಟಿಕ ಜಾಲಕದ ಹಾಗೂ ಎಲೆಕ್ಟ್ರಾನುಗಳಿಂದ ಬರುವ ಗ್ರಾಹ್ಯೋಷ್ಣವನ್ನು ಕೂಡಿಸಿದರೆ [ಸಮೀಕರಣ (24) ಮತ್ತು (43)ನ್ನು ನೋಡಿ]

$$C_V = \frac{12Nk\pi^4}{5}\left(\frac{T}{\theta}\right)^3 + \frac{\pi^2 N}{2}\left(\frac{k^2T}{\varepsilon F}\right) \qquad .....(46)$$

ಎಂದಾಗುತ್ತದೆ. ಆದ್ದರಿಂದ CV/T ಯನ್ನು $T^2$ ದ ವಿರುದ್ಧ ಗುರ್ತಿಸಿದರೆ ಒಂದು ಸರಳರೇಖೆ ಬರಬೇಕು. ಈ ನಿಯಮ ಸರಿಯೆಂದು ಸ್ಟ್ರಾನ್ಶಿಯಮಿನಂಥ ಲೋಹಗಳ ಅಲ್ಪ ಉಷ್ಣತೆಗಳಲ್ಲಿನ ಗ್ರಾಹ್ಯೋಷ್ಣದ ಪ್ರಾಯೋಗಿಕ ಅಳತೆಗಳು ತೋರಿಸಿಕೊಡುತ್ತವೆ.

ಲೋಹಗಳಲ್ಲಿನ ವಾಹಕ ಎಲೆಕ್ಟ್ರಾನುಗಳ ಅನಿಲ ಸಾಧಾರಣ ಉಷ್ಣತೆಗಳಲ್ಲಿ ಹೆಚ್ಚು ಕಡಿಮೆ ಸಂಪೂರ್ಣ ವಿಕೃತವಾಗಿರುವುದರಿಂದ ಲೋಹದಲ್ಲಿ ಎಲೆಕ್ಟ್ರಾನುಗಳ ವರ್ತನೆಯಿಂದ ಉದ್ಭವಿಸುವ ಭೌತಪರಿಣಾಮಗಳ ವಿವರಣೆಯಲ್ಲಿ FD ಹಂಚಿಕೆಯನ್ನೇ ಉಪಯೋಗಿಸಬೇಕಾಗುತ್ತದೆ. ಆಕಾಶದಲ್ಲಿ ಕಂಡುಬರುವ ಶ್ವೇತ ಕುಬ್ಜ ನಕ್ಷತ್ರಗಳ ಅಂತರಿಕ ರಚನೆಯನ್ನು ಅರ್ಥ ಮಾಡಿಕೊಳ್ಳುವಲ್ಲಿಯೂ FD ಹಂಚಿಕೆ ಉಪಯೋಗವಾಗುತ್ತದೆ.

ಇಲ್ಲಿನ ವರೆಗೆ ನಾವು ಅಂತರಕ್ರಿಯಾರಹಿತ ಆದರ್ಶ ಅನಿಲದಂಥ ಒಕ್ಕೂಟಗಳ ಸಂಖ್ಯಾಕಲನೀಯ ವಿವರಣೆಯನ್ನು ಕುರಿತು ಹೇಳಿದ್ದಾಯಿತು. ದುರ್ಬಲ ಅಂತರಕ್ರಿಯೆಯುಳ್ಳ ಭೌತವ್ಯವಸ್ಥೆಗಳ ವರ್ತನೆಗಳನ್ನು ಈ ಆದರ್ಶ ಮಾದರಿಗಳು ಸಾಕಷ್ಟು ಚೆನ್ನಾಗಿ ವಿವರಿಸಬಲ್ಲುವು ಎಂದು ಮೇಲಿನ ಉದಾಹರಣೆಗಳಿಂದ ತಿಳಿದುಬರುತ್ತದೆ. ಆದರೆ ನಮಗೆ ಆಸಕ್ತಿಯಿರುವ ಅನೇಕ ವ್ಯವಸ್ಥೆಗಳಲ್ಲಿ ಅಂತರಕ್ರಿಯೆಯನ್ನು ದುರ್ಬಲವೆಂದು ತಳ್ಳಿಹಾಕಲು ಸಾಧ್ಯವಾಗುವುದಿಲ್ಲ. ಇಂಥ ಕಡೆಕ್ವಾಂಟಂ ಸಂಖ್ಯಾಕಲನಶಾಸ್ತ್ರದ ಎನ್‌ಸೆಂಬಲ್ ವಿಧಾನಗಳು ಸಹಾಯಕ್ಕೆ ಬರುತ್ತವೆ. ಅಭಿಜಾತ ಸಂಖ್ಯಾಕಲನ ಶಾಸ್ತ್ರದ ಎನ್‌ಸೆಂಬಲ್ ಸಾಂದ್ರತೆಗಳ ಪಾತ್ರವನ್ನು ಇಲ್ಲಿ ಸಾಂದ್ರತೆಯ ಮಾತೃಕೆ (ಡೆನ್ಸಿಟಿ ಮ್ಯಾಟ್ರಿಕ್ಸ್) ವಹಿಸುತ್ತದೆ. ಅಂತರಕ್ರಿಯೆಯುಳ್ಳ ಭೌತವ್ಯವಸ್ಥೆಗಳ ಲಕ್ಷಣಗಳನ್ನು ಈ ಸಾಂದ್ರತೆಯ ಮಾತೃಕೆ ಸಂಪೂರ್ಣವಾಗಿ ನಿರ್ಧರಿಸುವುದರಿಂದ ಒಂದು ಉಷ್ಣತೆಯಲ್ಲಿ ಉಷ್ಣಸಮತೋಲದಲ್ಲಿರುವ ವ್ಯವಸ್ಥೆಯ ಸಾಂದ್ರತೆಯ ಮಾತೃಕೆಯನ್ನು ಕಂಡುಹಿಡಿಯುವುದರ ಮೂಲಕ ಅಂತರಕ್ರಿಯೆಯುಳ್ಳ ವ್ಯವಸ್ಥೆಗಳ ಸಮತೋಲನದಲ್ಲಿನ ವರ್ತನೆಯನ್ನು (ತಾತ್ತ್ವಿಕವಾಗಿ) ವಿವರಿಸಬಹುದು. (ಎ.ವಿ.ಜಿ.)

**ಕ್ವಾಂಟಂ ಸಂಖ್ಯೆಗಳು :** ಪರಮಾಣು ಇಲ್ಲವೇ ಅಣು ಇಲ್ಲವೇ ಯಾವುದೇ ಒಂದು ಮೂಲಕಣದ ಶಕ್ತಿ ಹಂತಗಳನ್ನು ಲಕ್ಷಣಿಸುವ ಪೂರ್ಣಾಂಕಗಳು ಅಥವಾ ಅರ್ಧ ಪೂರ್ಣಾಂಕಗಳು (ಕ್ವಾಂಟಂ ನಂಬರ್ಸ್). ಇವನ್ನು ಮೂಲಕಣಗಳ ಅಥವಾ ಅವನ್ನೊಳಗೊಂಡ ಒಂದು ವ್ಯವಸ್ಥೆಗೆ ಹೊಂದಿಸಬಹುದು. ದತ್ತ ವ್ಯವಸ್ಥೆಗೆ ಸಂಬಂಧಿಸಿದ ಅಲೆಸಮೀಕರಣವನ್ನು (ವೇವ್ ಇಕ್ವೇಷನ್) ಸಾಧಿಸಿ ಕ್ವಾಂಟಂ ಸಂಖ್ಯೆಗಳ ಮೌಲ್ಯಗಳನ್ನು ಪಡೆಯುತ್ತೇವೆ. ಉದಾಹರಣೆಗೆ ಗೊತ್ತಾದ ಒಂದು ದಿಶೆಯಲ್ಲಿ ಸಾಗುತ್ತಿರುವ ಒಂದು ಮೂಲಕಣದ ಕೋನಸಂವೇಗ (ಆಂಗ್ಯುಲರ್ ಮೊಮೆಂಟಂ) ಮತ್ತು ಯಾವುದಾದರೊಂದು ನೇರದಲ್ಲಿ ಅದರ ಘಟಕ ಸೀಮಿತ ಮೌಲ್ಯಗಳನ್ನು ಪಡೆಯುತ್ತವೆ. ಆದ್ದರಿಂದ ಈ ಮೌಲ್ಯಗಳು ಕ್ವಾಂಟೀಕೃತವಾಗಿವೆ (ಕ್ವಾಂಟೈಸ್ಡ್) ಎನ್ನುವೆವು. ಕಣ (ಅಥವಾ ವ್ಯವಸ್ಥೆ) ಪಡೆಯಬಹುದಾದ ಅನೇಕ ರೀತಿಯ ಕ್ವಾಂಟಂ ಸಂಖ್ಯೆಗಳನ್ನು $(h/2\pi)=\hbar$ ನ ಏಕಮಾನಗಳಲ್ಲಿ ವ್ಯಕ್ತಪಡಿಸುವುದು ವಾಡಿಕೆ. ಇಂಥ ಪ್ರತಿಯೊಂದಕ್ಕೂ ಕ್ವಾಂಟಂ ಏಕಮಾನವೆಂದು ಹೆಸರು.

ಪರಮಾಣ್ವಕ ವ್ಯವಸ್ಥೆಗಳಿಗೆ ಸಲ್ಲುವ ಪ್ರಮುಖ ಕ್ವಾಂಟಂ ಸಂಖ್ಯೆಗಳು ಈ ರೀತಿ ಇವೆ :

1. ಪ್ರಧಾನ ಕ್ವಾಂಟಂ ಸಂಖ್ಯೆ
2. ಕಕ್ಷಕ ಕ್ವಾಂಟಂ ಸಂಖ್ಯೆ (ಆರ್ಬಿಟಲ್ ಆರ್ ಅಜಿಮುತಲ್ ಕ್ವಾಂಟಂ ನಂಬರ್)
3. ಭ್ರಮಣ (ಸ್ಪಿನ್) ಕ್ವಾಂಟಂ ಸಂಖ್ಯೆ
4. ಸಂಪೂರ್ಣ ಕೋನಸಂವೇಗ ಕ್ವಾಂಟಂ ಸಂಖ್ಯೆ
5. ಕಾಂತ ಕ್ವಾಂಟಂ ಸಂಖ್ಯೆ

ಹೈಡ್ರೋಜನ್ ಪರಮಾಣು ಪಡೆಯಬಲ್ಲ ಶಕ್ತಿ ಹಂತಗಳನ್ನು ಗಣಿತೋಕ್ತಿಯಲ್ಲಿ ಬರೆದಾಗ ಪ್ರತಿಯೊಂದರ ಶಕ್ತಿಯೂ ($-1/n^2$) ಕ್ಕೆ ಸರಳಾನುಪಾತದಲ್ಲಿರುವುದೆಂದು ತಿಳಿಯುತ್ತದೆ. ಇಲ್ಲಿ nಗೆ ಪ್ರಧಾನ ಕ್ವಾಂಟಂ ಸಂಖ್ಯೆ ಎಂದು ಹೆಸರು. n = 1, 2,3..... ಎಂಬಿವೇ ಪೂರ್ಣಾಂಕಗಳು n ಗೆ ಸಾಧ್ಯವಾಗಬಹುದಾದ ಮೌಲ್ಯಗಳು. ಬೋರನ (**ನೋಡಿ– ಬೋರ್ ನೀಲ್ಸ್**) 1885–1962) ಮೂಲಸಿದ್ಧಾಂತದಲ್ಲಿ n ಎಂಬುದು ಆರೀಯ (ರೇಡಿಯಲ್) ಮತ್ತು ಕಕ್ಷಕ (ಅಥವಾ ಅಜಿಮುತಲ್) ಕ್ವಾಂಟಂ ಸಂಖ್ಯೆಗಳ ಮೊತ್ತವಾಗಿ ಕಂಡುಬಂದದ್ದರಿಂದ ಆಗ ಇದನ್ನು ಪೂರ್ಣ ಕ್ವಾಂಟಂ ಸಂಖ್ಯೆ ಎಂದು ಕರೆಯಲಾಯಿತು. ಕಕ್ಷಕ ಕ್ವಾಂಟಂ ಸಂಖ್ಯೆ l ಎಂಬುದು ಒಂದು ನಿರ್ದಿಷ್ಟ ಶಕ್ತಿ ಹಂತದಲ್ಲಿರುವ ಒಂಟಿ ಎಲೆಕ್ಟ್ರಾನಿನ ಕಕ್ಷೆಯ ಕೋನಸಂವೇಗವನ್ನು ತಿಳಿಸುವ ಕ್ವಾಂಟಂ ಸಂಖ್ಯೆ. ಎಲೆಕ್ಟ್ರಾನಿನ ಕೋನಸಂವೇಗವನ್ನು $\sqrt{l(l+1)}\,\hbar$ ಯಿಂದ ತಿಳಿಯಬಹುದು.ಶಕ್ತಿ ಹಂತದ ಪ್ರಧಾನ ಕ್ವಾಂಟಂ ಸಂಖ್ಯೆ n ಆದಾಗ l ಗೆ ಸಾಧ್ಯವಾಗುವ ಮೌಲ್ಯಗಳು 0, 1, 2. . . . (n-1) ಆಗಿರುವುವು. ಎರಡು ಅಥವಾ ಹೆಚ್ಚು ಎಲೆಕ್ಟ್ರಾನುಗಳು ಕಕ್ಷಕ ಕೋನಸಂವೇಗ L ನ್ನು ಪ್ರತಿಯೊಂದರ ಕೋನಸಂವೇಗವನ್ನು ತಿಳಿಸುವ l ಗಳನ್ನು ಕೂಡಿಸಿ ಕಂಡುಹಿಡಿಯುತ್ತೇವೆ. ಅಂದರೆ $L = \sum l$ ಈಗ l = 0, 1, 2. . . . . ಮೊದಲಾದ ಮೌಲ್ಯಗಳನ್ನು ಪಡೆದಿರುವ ಎಲೆಕ್ಟ್ರಾನುಗಳನ್ನು s,p, d.... . . . .ಎಲೆಕ್ಟ್ರಾನುಗಳೆಂದು ಸೂಚಿಸುವುದು ರೂಢಿ. ಹಾಗೆಯೇ L = 0, 1, 2 . . . . .ಎಂಬ ಕ್ವಾಂಟಂ ಸಂಖ್ಯೆಗಳಿಗೆ ಅನುಗುಣವಾಗಿ ಹೊಂದುವ ಪರಮಾಣು ಹಂತಗಳನ್ನು (ಅಟಾಮಿಕ್ ಲೆವೆಲ್ಸ್) S,P,D . . . . ಎಂದು

ಬರೆಯುವುದು ವಾಡಿಕೆ. ಹೀಗೆಯೇ s, ಎಂಬುದು ಪ್ರತಿಯೊಂದು ಎಲೆಕ್ಟ್ರಾನಿನ ಭ್ರಮಣ ಕ್ವಾಂಟಂ ಸಂಖ್ಯೆ (ಸ್ಪಿನ್ ಕ್ವಾಂಟಂ ನಂಬರ್) ಎನಿಸಿಕೊಳ್ಳುತ್ತದೆ. ಅಂದರೆ ಪ್ರತಿಯೊಂದು ಎಲೆಕ್ಟ್ರಾನಿನ ಭ್ರಮಣ ½ ಕ್ವಾಂಟಂ ಏಕಮಾನ. ಇದರಿಂದ ಅನೇಕ ಎಲೆಕ್ಟ್ರಾನುಗಳನ್ನು ಒಳಗೊಂಡಿರುವ ಪರಮಾಣ್ವಿಕ ವ್ಯವಸ್ಥೆಯ ಭ್ರಮಣ ಕ್ವಾಂಟಂ ಸಂಖ್ಯೆ

$$S = \sum s$$

ಆಗಿರುವುದು. ಆದ್ದರಿಂದ ಪ್ರತಿಯೊಂದು ಪರಮಾಣ್ವಿಕ ಶಕ್ತಿಹಂತವೂ (2S +1) ಭಾಗಗಳಾಗಿ ಒಡೆಯಬಲ್ಲುದು ಎಂಬುದನ್ನು ತಿಳಿಯುವೆವು.

ಪೂರ್ಣಕೋನಸಂವೇಗ ಎಷ್ಟೆಂದು ತಿಳಿಸುವ ಕ್ವಾಂಟಂ ಸಂಖ್ಯೆ J ಯನ್ನು LS ಯುಗ್ಮನದಲ್ಲಿ (ಕಪ್ಲಿಂಗ್) L ಮತ್ತು S ಸದಿಶಗಳ ಫಲಿತ ತಿಳಿಸುತ್ತದೆ. ಪರಮಾಣುವಿಗೆ LS ಯುಗ್ಮನ ಸೂಕ್ತವಾಗಲಿ ಇಲ್ಲದಿರಲಿ ಅದಕ್ಕೆ ಸಂಬಂಧಿಸಿದಂತೆ J ಯನ್ನು ನಿರೂಪಿಸಬಹುದು. ಒಂಟಿ ಎಲೆಕ್ಟ್ರಾನಿಗೆ ಅದನ್ನು ಸಣ್ಣ j ಯಿಂದ ಸೂಚಿಸುತ್ತಾರೆ.

ಪ್ರಯುಕ್ತ ವಿದ್ಯುತ್ ಅಥವಾ ಕಾಂತಕ್ಷೇತ್ರ ಈ ತೆರನಾದ ಒಂದು ನಿರ್ದಿಷ್ಟ ನೇರದಲ್ಲಿ ವಿಕ್ಷೇಪಿತವಾದ J ಯ ಘಟಕವನ್ನು ಕಾಂತ ಕ್ವಾಂಟಂ ಸಂಖ್ಯೆ M ಅಳೆಯುತ್ತದೆ. $M_L$, $M_S$, $m_l$, $m_s$ ಸಂಕೇತಗಳು ಅನುಕ್ರಮವಾಗಿ L,S, l, s ಗಳ ಕ್ವಾಂಟೀಕೃತ ಘಟಕಗಳನ್ನು ನಿರೂಪಿಸುತ್ತವೆ. ಯಾವುದೇ ಕಾಂತ ಕ್ವಾಂಟಂ ಸಂಖ್ಯೆ ನ ಏಕಮಾನಗಳಲ್ಲಿ ಅನುರೂಪವಾದ ಕೋನಸಂವೇಗದ ಘಟಕವನ್ನು ನಿಷ್ಕೃಷ್ಟವಾಗಿ ಕೊಡುತ್ತದೆ; ಮತ್ತು 2L+1,2S+1, 2l+1, 2s+1 ಸಂಖ್ಯೆಗಳು $M_L$, $M_S$, $m_l$, $m_s$ ಗಳು ಪಡೆಯಬಲ್ಲ ಶಕ್ತಿ ಹಂತಗಳೆಂದು ತಿಳಿದು ಬರುತ್ತದೆ.

ಅಣುಗಳ ಮತ್ತು ನ್ಯೂಕ್ಲಿಯಸುಗಳ ಶಕ್ತಿಹಂತಗಳ ವಿವರಣೆ ಮತ್ತು ಉನ್ನತ ಶಕ್ತಿ ಭೌತವಿಜ್ಞಾನದಲ್ಲಿ ಕಂಡುಬರುವ ಅನೇಕ ಮೂಲಕಣಗಳನ್ನು ಲಕ್ಷಣಿಸುವುದಕ್ಕೆ ಇತರ ಕ್ವಾಂಟಂ ಸಂಖ್ಯೆಗಳು ಅವಶ್ಯಕ.

ನ್ಯೂಕ್ಲಿಯಸ್ಸಿಗೆ ಅನ್ವಯಿಸುವ ಕ್ವಾಂಟಂ ಸಂಖ್ಯೆಗಳೆಂದರೆ ಒಟ್ಟು ಕೋನ ಸಂವೇಗ ಕ್ವಾಂಟಂ ಸಂಖ್ಯೆ ಮತ್ತು ಪ್ಯಾರಿಟಿ. ಕೋನಸಂವೇಗ ಕ್ವಾಂಟಂ ಸಂಖ್ಯೆಯನ್ನು ನ್ಯೂಕ್ಲಿಯರ್ ಭ್ರಮಣ *I* ಎಂದೂ ಕರೆಯುವರು. ಇದು ನಲ್ಲಿ ಕ್ವಾಂಟೀಕೃತಗೊಂಡಿದೆ. ಒಂದು ವ್ಯವಸ್ಥೆಯನ್ನು ವಿವರಿಸುವ ಉತ್ಪನ್ನದ ಅನುರೂಪತಾ ಗುಣವನ್ನು ಪ್ಯಾರಿಟಿ ತಿಳಿಸುತ್ತದೆ. ಇದರ ಬೆಲೆಗಳು +1 (ಸರಿ) ಅಥವಾ –1 (ಬೆಸ) ಆಗಿರುತ್ತವೆ.

ಮೇಲಿನ ಕ್ವಾಂಟಂ ಸಂಖ್ಯೆಗಳ ಜೊತೆಗೆ ಮೂಲಕಣಗಳಿಗೆ ಅನ್ವಯಿಸಿದಂತೆಯೂ ಅನೇಕ ಕ್ವಾಂಟಂ ಸಂಖ್ಯೆಗಳಿವೆ. ಪ್ರೋಟಾನು, ನ್ಯೂಟ್ರಾನು, ಮೆಸಾನು ಮತ್ತು ಹೈಪರಾನುಗಳೆಂಬ ಮೂಲಕಣಗಳು ಹೊಂದಿರುವ ಪರಸ್ಪರ ಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲು ಐಸೋಬಾರಿಕ್ ಭ್ರಮಣ *T* ಎಂಬ ಕ್ವಾಂಟಂ ಸಂಖ್ಯೆಯನ್ನು ಬಳಸುವರು. ಇದು ಒಂದು ಸದಿಶ. ಇದರ ಮೂರನೆಯ ಘಟಕವನ್ನು $T_3$ ಎಂದು ಬರೆಯುತ್ತೇವೆ. ಪ್ರೋಟಾನಿಗೆ $T_3$ = ½ ಮತ್ತು ನ್ಯೂಟ್ರಾನಿಗೆ $T_3$ = ½ ಕಣಗಳ ಮೇಲಿನ ವಿದ್ಯುದಾವೇಶವನ್ನು (ಎಲೆಕ್ಟ್ರಿಕ್ ಚಾರ್ಜ್) $Q_e$ ಎಂದು bredre (ಸಂಖ್ಯಾತ್ಮಕವಾಗಿ = 4.8X $10^{-10}$e.s.u) ಆಗ

$$Q = T_3 + \frac{B}{2} \qquad \text{...........(1)}$$

ಎಂಬ ಸಮೀಕರಣವನ್ನು ಬರೆಯಬಹುದು. B ಯೂ ಒಂದು ಕ್ವಾಂಟಂ ಸಂಖ್ಯೆ. ಇದನ್ನು ಬೇರಿಯನ್ ಸಂಖ್ಯೆ ಎಂದು ಕರೆಯುತ್ತೇವೆ. ಪ್ರೋಟಾನ್, ನ್ಯೂಟ್ರಾನ್ ಮತ್ತು ವಿವಿಧ ಹೈಪರಾನುಗಳನ್ನು ಬೇರಿಯಾನುಗಳೆಂದೂ ಪ್ರತಿಪ್ರೋಟಾನ್ (ಆಂಟಿಪ್ರೋಟಾನ್), ಪ್ರತಿನ್ಯೂಟ್ರಾನ್ ಮತ್ತು ಪ್ರತಿ ಹೈಪರಾನುಗಳನ್ನು ಪ್ರತಿಬೇರಿಯಾನುಗಳೆಂದೂ ಕರೆಯುತ್ತೇವೆ. (ಮೇಸಾನುಗಳಿಗೆ ಬೇರಿಯಾನ್ ಸಂಖ್ಯೆ 0 ಮತ್ತು ಪ್ರತಿಬೇರಿಯಾನುಗಳಿಗೆ B =-1 ಅಂದರೆ ಬೇರಿಯಾನುಗಳಿಗೆ B =+1 ಆಗಿರುವುದು). ಬೇರಿಯಾನುಗಳ ಸಂಖ್ಯೆಯಲ್ಲಿ ಪ್ರತಿಬೇರಿಯಾನುಗಳ ಸಂಖ್ಯೆಯನ್ನು ಕಳೆದರೆ ಬರುವುದೇ ಬೇರಿಯಾನ್ ಸಂಖ್ಯೆ B.

ಹೀಗೆಯೇ ಎಲೆಕ್ಟ್ರಾನ್, ಋಣ ಮ್ಯೂಯಾನ್ ಮತ್ತು ನ್ಯೂಟ್ರಿನೋಗಳನ್ನು ಲೆಪ್ಟಾನುಗಳೆಂದೂ ಈ ಕಣಗಳ ಪ್ರತಿಕಣಗಳಾದ ಪಾಸಿಟ್ರಾನ್, ಧನಮ್ಯೂಯಾನ್ ಮತ್ತು ಪ್ರತಿನ್ಯೂಟ್ರಿನೋಗಳನ್ನು ಪ್ರತಿಲೆಪ್ಟಾನುಗಳೆಂದೂ ಕರೆಯುತ್ತೇವೆ. ಲೆಪ್ಟಾನುಗಳ ಸಂಖ್ಯೆಯಿಂದ ಪ್ರತಿಲೆಪ್ಟಾನುಗಳ ಸಂಖ್ಯೆಯನ್ನು ಕಳೆದಾಗ ಬರುವ ಕ್ವಾಂಟಂ ಸಂಖ್ಯೆಗೆ ಲೆಪ್ಟಾನ್ ಸಂಖ್ಯೆ L ಎಂದು ಹೆಸರು. ಯಾವುದಾದರೂ ಕ್ರಿಯೆಯಲ್ಲಿ ಲೆಪ್ಟಾನ್ ಮತ್ತು ಬೇರಿಯಾನ್ ಸಂಖ್ಯೆಗಳು ನಿತ್ಯತ್ವ ನಿಯಮವನ್ನು ಪಾಲಿಸುತ್ತವೆ. ಆದ್ದರಿಂದಲೇ ದ್ರವ್ಯ ನಶಿಸಿಹೋಗದಿರುವುದು.

K–ಮೆಸಾನ್ ಮತ್ತು ವಿವಿಧ ಹೈಪರಾನುಗಳಲ್ಲಿರುವ ಪರಸ್ಪರ ಪ್ರತಿಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲು ವಿಚಿತ್ರ ಕ್ವಾಂಟಂ ಸಂಖ್ಯೆ (ಸ್ಟ್ರೇಂಜ್‌ನೆಸ್ ಕ್ವಾಂಟಂ ನಂಬರ್) S ನಿಂದ ಇವನ್ನು ಗುರುತಿಸುತ್ತಾರೆ. ಆಗ ಸಮೀಕರಣ (1)

$$Q = T_3 + \frac{B+S}{2}$$

ಎಂದಾಗುತ್ತದೆ. ಬೇರಿಯಾನುಗಳು ಮತ್ತು ಮೆಸಾನುಗಳು ಹೊಂದಿರುವ ಪ್ರಬಲ ಕ್ರಿಯೆಯಲ್ಲಿ S ಕ್ವಾಂಟಂ ಸಂಖ್ಯೆ ನಿತ್ಯತ್ವ ನಿಯಮವನ್ನು ಪಾಲಿಸುತ್ತದೆ. ಆದರೆ ದುರ್ಬಲ ಕ್ರಿಯೆಯಲ್ಲಿ S ನಿತ್ಯತ್ವ ನಿಯಮವನ್ನು ಪಾಲಿಸುತ್ತದೆ. ಆದರೆ ದುರ್ಬಲ ಕ್ರಿಯೆಯಲ್ಲಿ S ನಿತ್ಯತ್ವ ನಿಯಮ ಪಾಲಿಸಬೇಕಾಗಿಲ್ಲ. (ಪಿ.ವಿ.)

**ಕ್ವಾಂಟಂ ಸಿದ್ಧಾಂತ, ಅಸಾಪೇಕ್ಷಿಕ :** ದ್ರವ್ಯ ಮತ್ತು ವಿದ್ಯುತ್ಕಾಂತ ವಿಸರಣೆಗಳ ನಡುವಿನ ಅಂತರಕ್ರಿಯೆಗಳನ್ನು ವರ್ಣಿಸುವ ಆಧುನಿಕ ಸಿದ್ಧಾಂತ (ಕ್ವಾಂಟಂ ಥಿಯರಿ, ನಾನ್ ರಿಲೇಟಿವಿಸ್ಟಿಕ್) ಬೆಳಕಿಗೆ ಹೋಲಿಸಿದಂತೆ ನಿಧಾನವಾಗಿ ಚಲಿಸುತ್ತಿರುವ ಕಣಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ನ್ಯೂಕ್ಲಿಯರ್ ಕ್ರಿಯೆಗಳಲ್ಲಿ ಕಂಡುಬರುವ ಕಣಗಳ ನಾಶ ಅಥವಾ ಜನನಕ್ಕೆ ಇದು ಅನ್ವಯಿಸುವುದಿಲ್ಲ. ಅಭಿಜಾತ ಬಲವಿಜ್ಞಾನದಲ್ಲಿ (ಕ್ಲಾಸಿಕಲ್ ಮೆಕಾನಿಕ್ಸ್) ನ್ಯೂಟನ್ನನ ನಿಯಮಗಳು ಒಂದೇ ಒಂದು ಅರ್ಥವನ್ನು ಒದಗಿಸುವಂಥ ನಿಯಮಗಳಾಗಿರುತ್ತವೆ. ಅದೇ ರೀತಿಯಲ್ಲಿ ಕ್ವಾಂಟಂ ಸಿದ್ಧಾಂತದ ವಿಧಿವಿಹಿತ ರಚನೆಯಿಂದ ಕಣಗಳ ಚಲನೆಯನ್ನು ವಿವರಿಸುವಂಥ ಆಧಾರನಿಯಮಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಆದರೆ ಇಲ್ಲಿ ಬೆಳೆಸಿರುವ ತರ್ಕ ಸರಣಿ ಅತಿನಿಷ್ಠುರವಾಗಿಲ್ಲ. ಕ್ವಾಂಟಂ ಸಿದ್ಧಾಂತದೊಡನೆ ಪರಿಚಯವಿಲ್ಲದ ಓದುಗರು ಕ್ವಾಂಟಂ ಬಲವಿಜ್ಞಾನವೆಂಬ ಮತ್ತೊಂದು ಲೇಖನವನ್ನು ಮೊದಲು ಓದಿದರೆ ಒಳ್ಳೆಯದು. ಅಲ್ಲಿ ಅಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತದ ಲಕ್ಷಣಗಳನ್ನು (ಅಭಿಜಾತ ಭೌತ ವಿಜ್ಞಾನದ ದೃಷ್ಟಿಯಿಂದ) ಹೆಚ್ಚು ಗುಣಾತ್ಮಕವಾಗಿ ಚರ್ಚಿಸಲಾಗಿದೆ. ಅಭಿಜಾತ ಸಿದ್ಧಾಂತಗಳಲ್ಲಿ ವಿಜ್ಞಾನಿಗಳು ಬೆಳೆಸಿರುವ ವಿಷಯಗಳೆಲ್ಲವನ್ನೂ ನ್ಯಾಯಸಮ್ಮತವಾಗಿಯೂ ಯಾದೃಚ್ಛಿಕವಲ್ಲದ ರೀತಿಯಲ್ಲಿಯೂ ಬೆಳೆಸಲು ಸಾಧ್ಯ ಎಂಬುದನ್ನು ಸ್ಪಷ್ಟಪಡಿಸಲು ಈ ಲೇಖನಗಳು ಪ್ರಯತ್ನಿಸುತ್ತವೆ. ಸಿದ್ಧಾಂತವನ್ನು ಇಲ್ಲಿನ ಉಲ್ಲೇಖನಗಳಲ್ಲಿ ಸ್ಥೂಲವಾಗಿ ಕಾಣಿಸಿರುವಂತೆ ಅನೇಕ ವಿದ್ಯಮಾನಗಳಿಗೆ ಅನ್ವಯಿಸಬಹುದು; ಮತ್ತು ಮೇಲಿನ ಹೇಳಿಕೆ ಅಂಗೀಕಾರಾರ್ಹ ಎಂಬ ವಿಷಯ ಕ್ವಾಂಟಂ ಸಿದ್ಧಾಂತದಲ್ಲಿ ನಂಬಿಕೆಯನ್ನು ಉಂಟುಮಾಡುತ್ತದೆ.

ಅಲೆ ಉತ್ಪನ್ನ ಮತ್ತು ಸಂಭಾವ್ಯತಾ ಸಾಂದ್ರತೆ : ಪ್ರಯೋಗಗಳಲ್ಲಿ ದ್ರವ್ಯ ವ್ಯಕ್ತಪಡಿಸುವ ಅಲೆ ಲಕ್ಷಣಗಳು ಅಲೆ ಉತ್ಪನ್ನದೊಂದಿಗೆ (ವೇವ್ ಫಂಕ್ಷನ್) ಜೊತೆಗೂಡಿವೆ; ಈ ಉತ್ಪನ್ನ ಅಲೆಸಮೀಕರಣವನ್ನು ಪಾಲಿಸುತ್ತದೆ ಎಂಬುದು ಕ್ವಾಂಟಂ ಬಲವಿಜ್ಞಾನದ ಮೂಲಭೂತ ಅಭಿಪ್ರಾಯ. ಒಂದು ಅದಿಶ ಅಲೆ ಮೂರು ಆಯಾಮಗಳ ಆಕಾಶದಲ್ಲಿ ಸಾಧ್ಯವಾಗುವ ಸರಳತಮ ಅಲೆಯಾಗಿರುತ್ತದೆ. ಇದರಲ್ಲಿ ಅಲೆಪ್ರಕ್ಷುಬ್ಧತೆಯನ್ನು (ವೇವ್ ಡಿಸ್ಟರ್ಬನ್ಸ್) $\psi(x,y,z,t) \equiv \psi(r,t)$ ಎಂಬ ಒಂದೇ ಒಂದು ಉತ್ಪನದಿಂದ ಸಂಪೂರ್ಣವಾಗಿ ವಿವರಿಸುತ್ತೇವೆ. ಒಂದೇ ಒಂದು ಕಣವನ್ನು ಒಳಗೊಂಡ ಭೌತವ್ಯವಸ್ಥೆಯ ಪೂರ್ಣವಿವರಣೆಯನ್ನು $\psi(x,y,z,t)$ ಉತ್ಪನ್ನದಿಂದ ಮಾಡಬಹುದು ಎಂಬ ವಿಷಯವನ್ನು ಆಧಾರವಾಗಿ ಇಟ್ಟುಕೊಳ್ಳುತ್ತೇವೆ. ವಿಭವ *V(r)* ನಿಂದ ವಿವರಿಸಬಲ್ಲ ಬಲಕ್ಷೇತ್ರದಲ್ಲಿ ಚಲಿಸುತ್ತಿರುವ ಒಂಟಿಕಣ ಇಂಥ ಒಂದು ಸರಳಮವ್ಯವಸ್ಥೆಯನ್ನು ರೂಪಿಸುತ್ತದೆ. ಅಭಿಜಾತ ಸಿದ್ಧಾಂತದಲ್ಲಿ ಅಲೆತೀಕ್ಷ್ಣತೆಗೆ ಸರಳಾನುಪಾತದಲ್ಲಿರುವ $|\Psi(r,t)|^2$ ಮೌಲ್ಯ ಸಂಭಾವ್ಯತಾ ಸಾಂದ್ರತೆಯನ್ನು ಪ್ರತಿನಿಧಿಸುತ್ತದೆಂಬುದು ಆಧಾರಭೂತವಾದ ಮತ್ತೊಂದು ವಿಷಯ; ಅಂದರೆ $|\Psi(r,t)|^2 dr$ ಮೌಲ್ಯ t ಕ್ಷಣದಲ್ಲಿ ಆಕಾಶದ x ಮತ್ತು x + dx; y ಮತ್ತು y+dy; z ಮತ್ತು z+dz ಗಳ ನಡುವೆ ಇರುವ dxdydz $\frac{4}{8}$ dr ಗಾತ್ರದಲ್ಲಿ ಕಣ ಇರುವ ಸಂಭಾವ್ಯತೆಯನ್ನು ತಿಳಿಸುತ್ತದೆ ಎಂದು ಭಾವಿಸುತ್ತೇವೆ.

*l* ಕಣಗಳನ್ನೊಳಗೊಂಡ ವ್ಯವಸ್ಥೆಯೊಂದನ್ನು $\psi(r_1,r_2....r_l\ t)$ ಅಲೆಉತ್ಪನ್ನ ಸಂಪೂರ್ಣವಾಗಿ ವಿವರಿಸುತ್ತದೆ; ಹಾಗೆಯೆ $|\psi(r_1,r_2....r_l, t)|$ X $dr_1dr_2, \ldots .dr_l$ ಎಂಬುದರ ಮೌಲ್ಯ t ಕ್ಷಣದಲ್ಲಿ $dr_1=dx_1dy_1dz_1$ ಎಂಬ ಗಾತ್ರದಲ್ಲಿ 1ನೆಯ ಕಣವನ್ನೂ $dr_2=dx_2dy_2dz_2$ ಎಂಬ ಗಾತ್ರದಲ್ಲಿ 2ನೆಯ ಕಣವನ್ನೂ . . . .$dr_l = dx_l\ dy_l\ dz_l$ ಎಂಬ ಗಾತ್ರದಲ್ಲಿ *l* ನೆಯ ಕಣವನ್ನೂ ಏಕಕಾಲದಲ್ಲಿ ಕಂಡುಹಿಡಿಯುವ ಸಂಭಾವ್ಯತೆ ಎಂದು ತಿಳಿಯುತ್ತೇವೆ.

ಹೀಗೆ ಒಂಟಿ ಕಣಕ್ಕೆ ಸಂಬಂಧಿಸಿದ ಗಣಿತೋಕ್ತಿಗಳನ್ನು ಸಾರ್ವತ್ರೀಕರಿಸಿ *l* ಕಣಗಳನ್ನೊಳಗೊಂಡ ವ್ಯವಸ್ಥೆಯೊಂದಕ್ಕೆ ಸಲ್ಲುವ ಗಣಿತೋಕ್ತಿಗಳನ್ನು ಪಡೆಯುತ್ತೇವೆ. ಅಲ್ಲದೆ ಪ್ರತ್ಯೇಕಿಸಲು ಸಾಧ್ಯವಾಗುವ *l* ಕಣಗಳನ್ನೊಳಗೊಂಡ ವ್ಯವಸ್ಥೆಯಲ್ಲಿ j ನೆಯ ಕಣವನ್ನು r $\frac{4}{8}$ dxdydz ಎಂಬಲ್ಲಿ ಜಡಿ ಗಾತ್ರ ತುಣುಕಿನಲ್ಲಿ ಪತ್ತೆಹಚ್ಚುವ ಸಂಭಾವ್ಯತೆ $p_j(r)dr$ ಅನ್ನು

$$P_j(r)dr = dr\int\left\{dr_1\cdots dr_{j-1}\cdots dr_l\left|\Psi(r_1,\cdots r_j-_1,r,r_{j+1},\cdots r_l\right|^2\right\} \qquad \text{...... (1)}$$

ತಿಳಿಸುತ್ತದೆ. ಇಲ್ಲಿ $|\Psi(r_1........r_l|^2$ ಉತ್ಪನ್ನವನ್ನು 1 ರಿಂದ (j-1) ಮತ್ತು (j+1) ರಿಂದ l ವರೆಗೆ ಇರುವ ಕಣಗಳು ಪಡೆಯುವ ಎಲ್ಲ ಸ್ಥಾನಗಳ ಮೇಲೂ $r_j$ ಬದಲು r ಎಂದು ಬರೆದು ಅನುಕಲಿಸಲಾಗಿದೆ.

ಪ್ರಸಾಮಾನ್ಯೀಕರಣ (ನಾರ್ಮಲೈಸೇಷನ್) : **1**, 2, . . . . . *l* ವರೆಗಿರುವ ಕಣಗಳಲ್ಲಿ ಪ್ರತಿಯೊಂದೂ ಭೌತಾಕಾಶದಲ್ಲಿ (ಫಿಸಿಕಲ್ ಸ್ಪೇಸ್) ಯಾವುದಾದರೊಂದು ಸ್ಥಳದಲ್ಲಿ ಇರಬೇಕಾದ್ದರಿಂದ ಸಮೀಕರಣ (2)ರಲ್ಲಿ ಅನುಕಲಜದೊಳಗೆ ಕಾಣಿಸಿರುವ ಗಣಿತೋಕ್ತಿಯನ್ನು *l* ಕಣಗಳ ಎಲ್ಲ ಸ್ಥಾನಗಳ ಮೇಲೂ ಅನುಕಲಿಸಬೇಕೆಂಬುದನ್ನು ಸಮೀಕರಣ (1) ಅಪೇಕ್ಷಿಸುತ್ತದೆ. ಅಂದರೆ l ಕಣಗಳಲ್ಲಿ ಪ್ರತಿಯೊಂದೂ ಆಕಾಶದ ಯಾವುದೇ ಸ್ಥಾನದಲ್ಲಿರಬಹುದಾದ್ದರಿಂದ

$$\int dxP_j(r) = \int dr_1........dr_l|\Psi(r_1......r_l|^2 \qquad ......(2)$$

ಆಗಿರುತ್ತದೆ. ಕಣ ಆಕಾಶದಲ್ಲಿ ಎಲ್ಲಾದರೂ ಇರಲೇಬೇಕಾದ್ದರಿಂದ ಈ ಸಮೀಕರಣದ ಬಲಭಾಗ ವ್ಯಕ್ತಪಡಿಸುವ ಮೌಲ್ಯವನ್ನು 1 ಎಂದು ತೆಗೆದು ಕೊಳ್ಳುತ್ತೇವೆ; ಅಂದರೆ

$$\int dr_1....dr_l|\Psi(r_1,....r_l|^2 = 1 \qquad .....(3)$$

ಆದರೆ ಆಗ ψ ಉತ್ಪನ್ನ ಪ್ರಸಾಮಾನ್ಯೀಕೃತವಾಯಿತು ಎನ್ನುತ್ತೇವೆ. $\psi'(r_1.....r_l t)$ ಉತ್ಪನ್ನ

$$\int dr_1......dr_l|\Psi'|^2 = C \neq 1 \qquad .....(3a)$$

ಸಮೀಕರಣವನ್ನು ಸಫಲಗೊಳಿಸುವಂಥ ಮತ್ತೊಂದು ಉತ್ಪನ್ನ ಎಂದು ಭಾವಿಸಿದರೆ C ಅನಂತವಲ್ಲದಿದ್ದಾಗ ಅಂದರೆ ψ' ಉತ್ಪನ್ನದ ವರ್ಗವನ್ನು ಅನುಕಲಿಸಬಹುದು (ಕ್ವಾಡ್ರೆಟಿಕಲಿ ಇಂಟೆಗ್ರೆಬಲ್) ಎಂದು ಕೊಂಡಾಗ ψ' ಸ್ಪಷ್ಟಪಡಿಸುವ ಸಂಭಾವ್ಯತೆಗಳನ್ನು

$$\psi = C^{-\frac{1}{2}}\psi' \exp(in) \qquad ......(4)$$

ಸಮೀಕರಣದಿಂದ ತಿಳಿಯಬಹುದು. ಇದರಿಂದ ಪಡೆದ ಪ್ರಸಾಮಾನ್ಯೀಕೃತ ψ ಯನ್ನು ಸಮೀಕರಣ (1)ರಲ್ಲಿ ಉಪಯೋಗಿಸಿ Pj(r)dr ನ್ನು ಪಡೆಯುತ್ತೇವೆ. ಸಮೀಕರಣ (4)ರಲ್ಲಿ ψ ಅಲೆಯ ಪ್ರಾವಸ್ಥಾಂಕಕ್ಕೆ (ಫೇಸ್ ಫ್ಯಾಕ್ಟರ್) ಸಂಬಂಧಪಟ್ಟ exp (*i*n) ದಲ್ಲಿ n ಒಂದು ಯಾದೃಚ್ಛಿಕ ಆದರೆ ನೈಜ ಸಂಖ್ಯೆ. $\psi'(r_1.....r_l)$ ಉತ್ಪನ್ನದ ವರ್ಗವನ್ನು ಅನುಕಲಿಸಲು ಸಾಧ್ಯವಲ್ಲದಿದ್ದಾಗ (ನಾನ್‌ಕ್ವಾಡ್ರೇಟಿಕಲಿ ಇಂಟಿಗ್ರೇಬಲ್)Pj(r) ನಿಂದ ನಿರಪೇಕ್ಷ ಸಂಭಾವ್ಯತೆಗಳನ್ನು ತಿಳಿಯಲಾಗುವುದಿಲ್ಲ. ಆದಾಗ್ಯೂ $|\Psi|^2$ ಮೌಲ್ಯ 1. . . . l ಕಣಗಳನ್ನು $r_1.....r_l$ ಸ್ಥಾನಗಳಲ್ಲಿ ಕಂಡುಹಿಡಿಯುವ ಸಾಪೇಕ್ಷಿತ ಸಂಭಾವ್ಯತೆಗೆ ಅನ್ವಯಿಸುವ ಸೂಕ್ತವಾದ ಅಳತೆ ಒಂದನ್ನು ಒದಗಿಸುತ್ತದೆ.

ವಾಸ್ತವಿಕ ಭೌತವ್ಯವಸ್ಥೆಗಳನ್ನು ಪ್ರತಿನಿಧಿಸಬಲ್ಲ ಅಲೆಉತ್ಪನ್ನಗಳೊಡನೆ ಮಾತ್ರ ಆಸಕ್ತಿ ವಹಿಸುವುದು ಅಗತ್ಯ. ಭೌತವಾಗಿ ಸಾಧ್ಯವಾಗುವ ಅಲೆಉತ್ಪನ್ನ $\psi'(r_1.....r_l)$ ಎಂಬುದರ ವರ್ಗವನ್ನು ಅನುಕಲಿಸಬಹುದು; ಅಥವಾ ψ $r_1.....r_l$ ಗಳ 3l ಆಯಾಮಗಳ ಆಕಾಶದ ಅನಂತವನ್ನು ಸಮೀಪಿಸಿದಂತೆ ψ' ಉತ್ಪನ್ನ ಅತ್ಯಂತ ನಿಧಾನವಾಗಿ ಅದೃಶ್ಯವಾಗುತ್ತದೆ. ಇಲ್ಲವೇ ನಿರ್ದಿಷ್ಟ ಮೌಲ್ಯವೊಂದನ್ನು ಪಡೆದು ನಿಯತವಾಗುತ್ತದೆ. ಆದ್ದರಿಂದ ಮಾತ್ರ ಅದರ ವರ್ಗವನ್ನು ಅನುಕಲಿಸಲು ಸಾಧ್ಯವಿಲ್ಲ ಎಂದು ಭಾವಿಸುತ್ತೇವೆ. ಈ ಪಂಗಡಕ್ಕೆ ಸೇರದ ಅಲೆಉತ್ಪನ್ನಗಳನ್ನು ಬಿಟ್ಟುಬಿಡಲು ಒಪ್ಪಲಾಗುವ ಭೌತ ಮತ್ತು ಗಣಿತೀಯ ಕಾರಣಗಳನ್ನು ಕಂಡುಹಿಡಿಯಬಹುದು. ಎರಡನೆಯ ವರ್ಗಕ್ಕೆ ಸೇರಿರುವ ಒಂಟಿಕಣಕ್ಕೆ ಸಲ್ಲುವ ψ'(r) ಉತ್ಪನ್ನಗಳು ಅಭಿಜಾತ ಸಿದ್ಧಾಂತದಲ್ಲಿ ನಿರ್ಬಂಧಿತವಲ್ಲದ ವ್ಯವಸ್ಥೆಗೆ, ಉದಾಹರಣೆಗೆ, ಹೈಡ್ರೊಜನ್ ಪರಮಾಣುವಿನಿಂದ ಅಯಾನೀಕೃತವಾದ ಎಲೆಕ್ಟ್ರಾನಿಗೆ ಅನುರೂಪವಾದ ಉತ್ಪನ್ನಗಳಾಗಿರುತ್ತವೆ. ಈ ವ್ಯವಸ್ಥೆಗೆ

$$\Psi(r) = \infty^{-\frac{1}{2}}\Psi'(r) = 0 \qquad .....(4a)$$

ಎಂಬುದು ಸರಿಹೊಂದುತ್ತದೆ; ಯಾವುದೇ ಒಂದು ದತ್ತನಿರ್ದಿಷ್ಟ ಗಾತ್ರದ ಹೊರಗೆ ಈ ಅನಿರ್ಬಂಧಿತ ಕಣವನ್ನು ಖಂಡಿತವಾಗಿಯೂ ಪತ್ತೆ ಹಚ್ಚಬಹುದು ಎಂಬುದು ಸಮೀಕರಣ (4a)ಯ ಸಹಜವಾದ ವ್ಯಾಖ್ಯೆ ಆಗಿರುತ್ತದೆ. ಈ ತೆರನಾದ ψ'(r) ಉತ್ಪನ್ನ ಅತ್ಯಂತ ದೊಡ್ಡದಾದ ಗಾತ್ರವೊಂದರಲ್ಲಿ ಸ್ವತಂತ್ರವಾಗಿ ಚಲಿಸುತ್ತಿರುವ ಅಸಂಖ್ಯಾತ ಸರ್ವಸಮಕಣಗಳನ್ನು ಕೂಡ ಪ್ರತಿನಿಧಿಸಬಲ್ಲುದು. ಉದಾಹರಣೆಗೆ ಎಲೆಕ್ಟ್ರಾನ್ ತುಪಾಕಿಯೊಂದು ಸಂತತವಾಗಿ ವಿಸರ್ಜಿಸುತ್ತಿರುವ ಸ್ವತಂತ್ರ ಎಲೆಕ್ಟ್ರಾನುಗಳ ದೂಲವೊಂದನ್ನು ಈ ತೆರನಾದ ಉತ್ಪನ್ನದಿಂದ ಪ್ರತಿನಿಧಿಸಬಹುದು. ಈ ಸಂದರ್ಭದಲ್ಲಿ $|\Psi'(r)|^2$ ಉತ್ಪನ್ನ ಒಂದು ಎಲೆಕ್ಟ್ರಾನನ್ನು ಕಾಣುವ ಸಂಭಾವ್ಯತೆಯನ್ನು ಸತತವಾಗಿ ವಿವರಿಸುತ್ತದೆ; ಆದಾಗ್ಯೂ ಅದು r ಎಂಬ ಯಾವುದೇ ಬಿಂದುವಿನಲ್ಲಿ ಎಷ್ಟು ಎಲೆಕ್ಟ್ರಾನುಗಳಿವೆ ಎಂಬುದನ್ನು ತಿಳಿಸುವ ಒಂದು ಸಂಖ್ಯೆ ಎಂದು ಯೋಚಿಸಬಹುದು. ಈ ಸಂದರ್ಭದಲ್ಲಿ ಸಮೀಕರಣ (3a) ಯಲ್ಲಿ $(C = \infty)$ಆಕಾಶದ ಮೇಲೆಲ್ಲ ಇರುವ ಕಣಗಳ ಸಂಖ್ಯೆ ಅನಂತ ಎಂಬುದನ್ನು ಈ ಸಂಬಂಧ $(C = \infty)$ ಸೂಚಿಸುತ್ತದೆ ಎನ್ನಬಹುದು. ಈ ಪರಿಶೀಲನೆಗಳನ್ನು ಅನೇಕ ಕಣಗಳನ್ನೊಳಗೊಂಡ ವ್ಯವಸ್ಥೆಗಳಿಗೆ ಆದರೆ ವರ್ಗ ಅನುಕಲಿಸಲಾದ $\psi'(r_1,r_2....r_l)$ ಅಲೆ ಉತ್ಪನ್ನಗಳಿಗೆ ವಿಸ್ತರಿಸಬಹುದು.

ಭ್ರಮಣೆ (ಸ್ಪಿನ್): ಕಣವೆಂದರೆ ರಚನೆಯಿಲ್ಲದ ಒಂದು ವಸ್ತು ಮತ್ತು ಆಕಾಶದಲ್ಲಿ ಅದರ ಸ್ಥಾನ r ನ್ನು ತಿಳಿದಾಗ ಅದರ ಬಗ್ಗೆ ಎಲ್ಲವನ್ನು ತಿಳಿದಂತಾಯಿತು ಎಂಬ ಅಭಿಜಾತ ಭೌತವಿಜ್ಞಾನದಲ್ಲಿ ಬಳಸುವ ಪರಿಕಲ್ಪನೆಗಳು ಇದುವರೆಗೆ ಮಾಡಿರುವ ವಿವರಣೆಯಲ್ಲಿ ಅಡಕವಾಗಿದೆ. ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನುಗಳು ದೃಢವಾದ ದ್ರವ್ಯದಿಂದ ಆಗಿವೆ ಎಂದು ಭಾವಿಸಿದರೂ ಅವು ದ್ರವ್ಯದ ಮೂಲಭೂತ ಘಟಕಗಳಾದ್ದರಿಂದ ಅಭಿಜಾತ ಭೌತವಿಜ್ಞಾನದಲ್ಲಿ ಕಣಕ್ಕೆ ಅನ್ವಯಿಸುವ ಅಷ್ಟೇ ಗುಣಗಳನ್ನು ಭಾವಿಸುವುದು ಇಲ್ಲಿ ಸರಿಯಲ್ಲ; ಹಾಗೂ ಸಾಲುವುದಿಲ್ಲ. ವಿಶೇಷವಾಗಿ ಒಂದು ಎಲೆಕ್ಟ್ರಾನ್, ಪ್ರೋಟಾನ್ ಅಥವಾ ನ್ಯೂಟ್ರಾನನ್ನು ಸಂಪೂರ್ಣವಾಗಿ ψ(r, t) ಎಂಬ ಒಂದೇ ಒಂದು ಉತ್ಪನ್ನದಿಂದ ವರ್ಣಿಸಲು ಸಾಧ್ಯವಿಲ್ಲ. ಈ ಕಣಗಳ ಪ್ರತಿಯೊಂದಕ್ಕೂ $\psi_1$ (r, t) ಮತ್ತು $\psi_2$ (r, t) ಎಂಬ ಎರಡು ಉತ್ಪನ್ನಗಳು ಬೇಕಾಗುತ್ತದೆ. ಇವನ್ನು ψ (r, t) ಎಂಬ ಒಟ್ಟಿನಲ್ಲಿ ಎರಡು ಘಟಕಗಳನ್ನುಳ್ಳ ಅಲೆಉತ್ಪನ್ನದ ಘಟಕಗಳೆಂದು ಭಾವಿಸಬಹುದು. ಹೀಗೆ ಕ್ವಾಂಟಂ ವ್ಯವಸ್ಥೆಯ ವಿವರಣೆಗೆ ಬಹುಘಟಕ ಅಲೆಉತ್ಪನ್ನ ಬೇಕು ಎಂಬ ವಿಷಯವನ್ನು ಮೂಲಭೂತವಾದ ಪ್ರತಿಯೊಂದು ಕಣಕ್ಕೂ ಆಂತರಿಕ ಸ್ವಾತಂತ್ರ್ಯಾಂಕಗಳುಂಟು ಎಂದು ಅಭಿಜಾತ ಸಿದ್ಧಾಂತದಲ್ಲಿ ವ್ಯಾಖ್ಯಿಸಬಹುದು; ಅಂದರೆ ಕಣದ ಸ್ಥಾನದ ಅರಿವಿನಿಂದಲೇ ಅದರ ಲಕ್ಷಣಗಳೆಲ್ಲವನ್ನೂ ಸಂಗ್ರಹಿಸಲಾರೆವೆಂಬುದು ಅನುಗತವಾಗುತ್ತವೆ. ಪ್ರತಿಯೊಂದು ಕಣಕ್ಕೂ ಈ ಆಂತರಿಕ ಸ್ವಾತಂತ್ರ್ಯಾಂಕಗಳು ಅದರ ಆಂತರಿಕ ಕೋನಸಂವೇಗ ಅಥವಾ ಭ್ರಮಣೆ ಎಂದು ಕರೆಯುವುದರೊಡನೆ ಜೊತೆಗೂಡಿವೆ ಎಂದು ಸಾಧಿಸಿ ತೋರಿಸಬಹುದು.

ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನುಗಳಿಗೆ ಭ್ರಮಣೆ $\frac{1}{2}(h/2\pi)$ಆಗಿರುತ್ತದೆ. ಇಲ್ಲಿ h ಪ್ಲಾಂಕನ ಸ್ಥಿರಾಂಕ. $\hbar$ನ $\hbar(\hbar = h/2\pi)$ ಏಕಮಾನಗಳಲ್ಲಿ $\pm\frac{1}{2}$ ಮೌಲ್ಯಗಳು ಮಾತ್ರ ಭ್ರಮಣದ z–ಘಟಕ $s_z$ ಅಂಗೀಕರಿಸುವ ಮೌಲ್ಯಗಳಾಗಿರುತ್ತವೆ. ಹೀಗೆ ಭ್ರಮಣೆ ½ ಆಗಿರುವ ಒಂದೇ ಒಂದು ಕಣವನ್ನು ಉದಾಹರಣೆಗೆ ಎಲೆಕ್ಟ್ರಾನ್ ಒಂದನ್ನು ಕ್ವಾಂಟಂ ವ್ಯವಸ್ಥೆ ಒಳಗೊಂಡಿದ್ದರೆ ಆಗ $|\Psi_1(r,t)|^2$dr ಅನ್ನು dr ಗಾತ್ರ ತುಣುಕಿನಲ್ಲಿ $s_z = +\frac{1}{2}$ ಆಗಿರುವ ಎಲೆಕ್ಟ್ರಾನನ್ನು ಕಾಣುವ ಸಂಭಾವ್ಯತೆ ಎಂದು, ಹಾಗೆಯೇ $|\Psi_2(r,t)|^2$ ಎಂಬುದು $s_z = -\frac{1}{2}$ ಆಗಿರುವ ಎಲೆಕ್ಟ್ರಾನನ್ನು ಕಾಣುವ ಸಂಭಾವ್ಯತಾ ಸಾಂದ್ರತೆ ಎಂದು ವ್ಯಾಖ್ಯಿಸಬಹುದು. ಈ ಸಂದರ್ಭದಲ್ಲಿ ಪ್ರಸಾಮಾನ್ಯೀಕರಣ ನಿರ್ಬಂಧವನ್ನು

$$\int dr \left[|\Psi_1(r,t)|^2 + |\Psi_2(r,t)|^2\right] = 1 \qquad ...(5)$$

ಸಮೀಕರಣ ವ್ಯಕ್ತಪಡಿಸುತ್ತದೆ.

ಇಲ್ಲಿ ತಿಳಿಸುವುದೆಲ್ಲವನ್ನೂ ಅನೇಕ ಕಣಗಳನ್ನೊಳಗೊಂಡ ವ್ಯವಸ್ಥೆಗಳಿಗೆ ತತ್‌ಕ್ಷಣ ವಿಸ್ತರಿಸಬಹುದು. ಉದಾಹರಣೆಗೆ ಭ್ರಮಣೆ $\frac{1}{2}$ ಆಗಿರುವ *l* ಕಣಗಳನ್ನು ವ್ಯವಸ್ಥೆ ಒಳಗೊಂಡಿದ್ದರೆ ಅಲೆಉತ್ಪನ್ನ ψ ಒಟ್ಟಿನಲ್ಲಿ $2^l$, $\psi_j$ ಘಟಕಗಳನ್ನು ಪಡೆದಿರುತ್ತದೆ.

$$|\Psi_1(r_1......, r_l|^2$$

ಎಂಬುದು 1 ರಿಂದ *l* ವರೆಗಿರುವ ಕಣಗಳಲ್ಲಿ ಪ್ರತಿಯೊಂದರ ಭ್ರಮಣೆಯೂ $\pm^z$ ಅಕ್ಷದ ನೇರದಲ್ಲಿ ದಿಕ್ಸ್ಥಿತಿ ಇರುವಂತೆ ಕಂಡುಹಿಡಿಯುವ ಸಂಭಾವ್ಯತಾ ಸಾಂದ್ರತೆ ಆಗಿರುತ್ತದೆ; ಮತ್ತು ಪ್ರಸಾಮಾನ್ಯೀಕರಣ ನಿರ್ಬಂಧವನ್ನು

$$\sum_{j=1}^{j=2^l}\int dr_1.......dr_l|\Psi_j(r_1..........r_l)|^2 = 1 \qquad .....(6)$$

ಸಮೀಕರಣ ತಿಳಿಸುತ್ತದೆ. ಅಲೆ ಉತ್ಪನ್ನದ ವರ್ಗವನ್ನು ಅನುಕಲಿಸಲು ಸಾಧ್ಯವಾಗದ ಸಂದರ್ಭಗಳಿಗೆ ಮೇಲೆ ತಿಳಿಸಿದುದೆಲ್ಲವನ್ನೂ ಒಂದು ಕಣಕ್ಕೆ ಮಾಡಿದಂತೆ ಸೂಕ್ತ ಪರಿವರ್ತನೆಗಳನ್ನು ಮಾಡಿ ಸಮೀಕರಣಗಳನ್ನು ಪಡೆಯಬಹುದು. ಆದರೆ ಕಣಗಳನ್ನು ಒಂದರಿಂದ ಒಂದನ್ನು ಪ್ರತ್ಯೇಕಿಸಿ ತಿಳಿಯಲಾಗುವುದಿಲ್ಲ ಎಂದು ಸಂದರ್ಭದಲ್ಲಿ ಸೂತ್ರೀಕರಣದಲ್ಲಿ ಜಟಿಲತೆಗಳು ಉಂಟಾಗುತ್ತವೆ.

ಪರಿಕರ್ಮಿಗಳು (ಆಪರೇಟರ್ಸ್) : ಅಭಿಜಾತ ಬಲವಿಜ್ಞಾನದಲ್ಲಿ ಕಣದ ಸ್ಥಾನ ನಿರ್ದೇಶಕ ಮತ್ತು ಸಂವೇಗಗಳನ್ನು ತಿಳಿಸುವ r ಮತ್ತು p ಗಳು ಸಂಖ್ಯೆಗಳು. ಯಾವುದೇ ಒಂದು ಕ್ಷಣದಲ್ಲಿ ಇವುಗಳ ಮೌಲ್ಯಗಳನ್ನು ನಿರ್ದಿಷ್ಟವಾಗಿ ಹೇಳಬಹುದು. ಆದರೆ ಕ್ವಾಂಟಂ ಬಲವಿಜ್ಞಾನದಲ್ಲಿ r ಮತ್ತು p ಯ ಘಟಕಗಳು ರೇಖೀಯ ಪರಿಕರ್ಮಿಗಳಾಗಿರುತ್ತವೆ (ಲೀನಿಯರ್ ಆಪರೇಟರ್ಸ್). ಹಾಗೆಯೇ ನಿರ್ದೇಶಕ r ಮತ್ತು ಸಂವೇಗ p ಗಳ f(r,p) ಉತ್ಪನ್ನಗಳು ಕೂಡ ಪರಿಕರ್ಮಿಗಳೇ.

(i) ಕಣದ x–ನಿರ್ದೇಶಕಕ್ಕೆ ಅನುರೂಪವಾದ ಪರಿಕರ್ಮಿ *X* ಎಂದರೆ (ಇದನ್ನು *x* ನಿಂದ ಪ್ರತ್ಯೇಕಿಸಿ ತಿಳಿಯಲೋಸುಗ ಎದ್ದು ಕಾಣುವಂತೆ ಬರೆದಿರುತ್ತೇವೆ.) ಇದು ψ(*x*)ಉತ್ಪನ್ನವನ್ನು ಸುಮ್ಮನೆ ಗುಣಿಸುತ್ತದೆ; ಅಂದರೆ

$$X\psi(x) = x\psi(x) \qquad \ldots(7)$$

ಎಂದರ್ಥ.

(ii) ಆ ಕಣದ $x^-$ ನಿರ್ದೇಶಕದೊಡನೆ ವಿಹಿತ ಸಂಯುಗ್ಮವಾಗಿರುವ (ಕ್ಯಾನೊನಿಕಲಿ ಕಾಂಜ್ಯುಗೇಟ್) ಸಂವೇಗದ $x^-$ ಘಟಕಕ್ಕೆ $p_x$ ಗೆ ಅನುರೂಪವಾಗಿರುವ ಪರಿಕರ್ಮಿ

$$Px = \left(\frac{\hbar}{i}\right)\frac{\partial}{\partial x}$$ ಅಂದರೆ

$$Px\psi = \left(\frac{\hbar}{i}\right)\frac{\partial\psi}{\partial x} \qquad \ldots(8)$$

ಎಂದು ಭಾವಿಸುತ್ತೇವೆ. ಹೀಗೆ ದತ್ತ ಅಲೆಉತ್ಪನ್ನ ø ಮೇಲೆ A ಪರಿಕರ್ಮಿಯಿಂದ ಪಡೆದ $\psi'$ ಉತ್ಪನ್ನ ಅಂದರೆ

$$\psi' = A\psi$$

ಒಂದು ಹೊಸ ಅಲೆ ಉತ್ಪನ್ನವನ್ನು ಸೂಚಿಸುತ್ತದೆ. A,B,C ಗಳು ರೇಖೀಯ ಪರಿಕರ್ಮಿಗಳು ಮತ್ತು $\psi$, ξ ಗಳು ಯಾವುದೇ ಎರಡು ಉತ್ಪನ್ನಗಳು ಎಂದಾಗ

$$A(\psi+\xi) = A\psi + A\xi$$
$$(A+B)\psi = A\psi + B\psi \qquad \ldots(9)$$
$$AB\psi = A(B\psi)$$

ಸಮೀಕರಣಗಳು ಸರಿಹೊಂದುತ್ತವೆ. ಅಲ್ಲದೆ $\psi$ ಮತ್ತು $\xi$ ಉತ್ಪನ್ನಗಳು ಕೂಡಬಹುದು; ಅಥವಾ ಪರಸ್ಪರ ಸಮೀಕರಿಸಬಹುದು ಎಂದಾಗ ಅವೆರಡೂ ಸಮವಾದ ಘಟಕಸಂಖ್ಯೆಗಳನ್ನು ಪಡೆದಿರಬೇಕು; ಮತ್ತು ಅವು ಒಂದೇ ಆಕಾಶ ಮತ್ತು ಭ್ರಮಣ ನಿರ್ದೇಶಕಗಳನ್ನು ಅವಲಂಬಿಸಿರಬೇಕು. $\xi=\psi$ ಆದರೆ ಅವುಗಳ ಅನುರೂಪ ಘಟಕಗಳು ಪರಸ್ಪರ ಸಮ.

ಭ್ರಮಣೆಯನ್ನು ಅವಲಂಬಿಸದೇ ಇರುವ ಪರಿಕರ್ಮಿ ಅನೇಕ ಘಟಕಗಳನ್ನುಳ್ಳ ಅಲೆಉತ್ಪನ್ನದ ಪ್ರತಿಯೊಂದು ಘಟಕದ ಮೇಲೂ ಒಂದೇ ಪರಿಕರ್ಮಿವನ್ನು ನಡೆಸುತ್ತದೆ. ಉದಾಹರಣೆಗೆ

$$(Px\psi)_j = Px\psi x = \left(\frac{\hbar}{i}\right)\frac{\partial\psi j}{\partial x} \qquad \ldots(10)$$

ಆದರೆ ಭ್ರಮಣೆಯನ್ನು ಅವಲಂಬಿಸಿರುವ ಪರಿಕರ್ಮಿಗಳು ಹೆಚ್ಚು ಜಟಿಲತೆ ಉಳ್ಳವಾಗಿರುತ್ತವೆ. ಉದಾಹರಣೆಗೆ ಭ್ರಮಣೆ $\frac{1}{2}$ ಆಗಿರುವ ಒಂದೇ ಒಂದು ಕಣವನ್ನೊಳಗೊಂಡ ವ್ಯವಸ್ಥೆಯಲ್ಲಿ ಭ್ರಮಣ ಪರಿಕರ್ಮಿಯ $z^-$ ಘಟಕವನ್ನು $s_2$ ಅಂದರೆ $\psi'$ ನ ಘಟಕಗಳನ್ನು ಭ್ರಮಣದ ಚರ್ಚೆಯಲ್ಲಿ ತಿಳಿಸಿದ ಸಂಕೇತಗಳನ್ನು ಉಪಯೋಗಿಸಿ

$$\psi 1' = \tfrac{1}{2}\hbar\psi_1 \qquad \ldots(11)$$
$$\psi 2' = -\tfrac{1}{2}\hbar\psi_2$$

ಸಮೀಕರಣಗಳಿಂದ ಪಡೆಯುತ್ತೇವೆ. ಯಾವುದೇ ಉತ್ಪನ್ನ $\psi$ ಗೆ

$$A(B\psi) = B(A\psi)$$

ಆದರೆ A ಮತ್ತು B ಪರಿಕರ್ಮಿಗಳು ವ್ಯತ್ಯಯಿಸುತ್ತವೆ (ಕಮ್ಯೂಟ್) ಎನ್ನುತ್ತೇವೆ. ಆಗ

$$AB - BA = 0 \qquad \ldots(12)$$

ಮತ್ತು (AB – BA) ಪರಿಕರ್ಮಿಯನ್ನು A ಮತ್ತು Bಗಳ ವ್ಯತ್ಯಯಕಾರಿ (ಕಾಮ್ಯುಟೇಟರ್) ಎಂದು ಕರೆಯುತ್ತೇವೆ. A ಪರಿಕರ್ಮಿಯಲ್ಲಿ ಒಂದು ಘಾತ ಶ್ರೇಣಿಯಂತೆ ಬರೆಯಬಲ್ಲ ಯಾವುದೇ ಪರಿಕರ್ಮಿ f(A), A ಯೊಡನೆ ವ್ಯತ್ಯಯವಾಗಿರುತ್ತದೆ. ಸೂಚಿಸಲ್ಪಟ್ಟ ಪರಿಕರ್ಮಗಳನ್ನು ನಡೆಸಿ

$$(xP_x - P_x x)\psi = i\hbar\psi \qquad \ldots(13)$$

ಎಂದು ಪಡೆಯಬಹುದು. ಇದರಿಂದ ಒಂದು ಜೋಡಿ ಪರಿಕರ್ಮಿಗಳು ಅಗತ್ಯವಾಗಿ ವ್ಯತ್ಯಯವಾಗಿರಬೇಕಾಗಿಲ್ಲ ಎಂದು ತಿಳಿಯುತ್ತೇವೆ. $l$ ಕಣಗಳನ್ನು ಒಳಗೊಂಡ ವ್ಯವಸ್ಥೆಯೊಂದರಲ್ಲಿ $x_1, y_1, z_1 \ldots x_l, y_l, z_l$ ಕಣನಿರ್ದೇಶಕಗಳೆಲ್ಲ ಪರಸ್ಪರ ವ್ಯತ್ಯಯವಾಗಿರುತ್ತವೆ; ಹಾಗೆಯೇ $P_1 \ldots P_l$ ಸಂವೇಗ ನಿರ್ದೇಶಕಗಳೆಲ್ಲ ಪರಸ್ಪರ ವ್ಯತ್ಯಯವಾಗಿರುತ್ತವೆ. ಹಾಗೆಯೇ ಯಾವುದೇ ಕಣದ $x^-$ ನಿರ್ದೇಶಕ ಆ ಕಣದ $p_y$ ಮತ್ತು $p_z$ ಗಳೊಡನೆ ವ್ಯತ್ಯಯವಾಗಿರುತ್ತದೆ.

**ಹರ್ಮಿಷಿಯನ್ ಪರಿಕರ್ಮಿಗಳು :** $\xi(r_1 \ldots r_l)$, $\psi(r_1 \ldots r_l)$ ಎಂಬ ಉತ್ಪನ್ನಗಳು ವರ್ಗವನ್ನು ಅನುಕಲಿಸಲಾಗುವಂಥ ಎರಡು ಅಲೆಉತ್ಪನ್ನಗಳು ಎನ್ನೋಣ. ಈ ತೆರನಾದ ಯಾವುದೇ ಒಂದು ಜೋಡಿ ಉತ್ಪನ್ನಗಳಿಗೆ

$$\sum_J \int dr_1 \ldots\ldots dr_l \xi_j^* (A\Psi)_j = \sum_j \int dr_1 \ldots\ldots dr_l (A\xi)_j^* \Psi_j \qquad \ldots(14)$$

ಸಂಬಂಧ ಸಫಲವಾದರೆ $l$ ಕಣಗಳನ್ನೊಳಗೊಂಡ ದತ್ತವ್ಯವಸ್ಥೆಗೆ ಸಂಬಂಧಿಸಿದಂತೆ ಇಲ್ಲಿ ಬರೆದಿರುವ A ಪರಿಕರ್ಮಿಯನ್ನು ಹರ್ಮಿಷಿಯನ್ ಪರಿಕರ್ಮಿ ಎಂದು ಕರೆಯುತ್ತೇವೆ. ಸಮೀಕರಣ (14) ರಲ್ಲಿ ನಕ್ಷತ್ರ ಚಿಹ್ನೆ ಸಂಕೀರ್ಣ ಸಂಯುಗ್ಮವನ್ನೂ (ಕಾಂಪ್ಲೆಕ್ಸ್ ಕಾಂಜ್ಯುಗೇಟ್) ಸಂಕಲನ ಚಿಹ್ನೆ □ ವು $\xi$, $A\psi$, $A\xi$, $\psi$ ಉತ್ಪನ್ನಗಳಿಂದ ಅನುಕಲಿಸಿ ಬಂದದ್ದನ್ನು j ಘಟಕಗಳ ಮೇಲೆಲ್ಲ ಸಂಕಲಿಸಬೇಕೆಂಬುದನ್ನೂ ತಿಳಿಸುತ್ತವೆ. ಕಣ ನಿರ್ದೇಶಕಗಳನ್ನು ತಿಳಿಸುವ $x_1, y_1, z_1 \ldots x_l, y_l, z_l$ ಇವೇ ಮೊದಲಾದ ಪ್ರತಿಯೊಂದು ಪರಿಮಾಣಕವೂ ಹರ್ಮಿಷಿಯನ್ ಪರಿಕರ್ಮಿಯೇ ಸರಿ. ಹಾಗೆಯೇ $f(r_1 \ldots\ldots r_l)$ ಸುವರ್ತಿತ ಉತ್ಪನ್ನವೂ (ವೆಲ್‌ಬಿಹೇವ್ಡ್ ಫಂಕ್ಷನ್) ಹರ್ಮಿಷಿಯನ್ ಆಗಿರುತ್ತದೆ. ವರ್ಗಗಳನ್ನು ಅನುಕಲಿಸಬಹುದಾದ ಉತ್ಪನ್ನಗಳು ಅನಂತದೂರಗಳಲ್ಲಿ ಅದೃಶ್ಯವಾಗುತ್ತವೆ ಎಂಬುದನ್ನು ಜ್ಞಾಪಿಸಿಕೊಂಡು ಭಾಗಶಃ ಅನುಕಲಿಸಿದರೆ ಆಗ $P_1 \ldots\ldots P_l$ ಗಳ ಪ್ರತಿಯೊಂದು ಘಟಕವೂ ಹರ್ಮಿಷಿಯನ್ ಪರಿಕರ್ಮಿ ಎಂದು ತಿಳಿಯುತ್ತೇವೆ. ಉದಾಹರಣೆಗೆ ಭ್ರಮಣೆ ಇಲ್ಲದ ಏಕಾಯಾಮ ಸರಳ ಸಂದರ್ಭದಲ್ಲಿ

$$\int_{-\infty}^{\infty} dx\,\xi^* \frac{\hbar}{i}\frac{\partial\psi}{\partial x} = -\frac{\hbar}{i}\int_{-\infty}^{\infty} dx \frac{\partial\xi^*}{\partial x}\psi$$

$$= \int_{-\infty}^{\infty} dx \left(\frac{\hbar}{i}\frac{\partial\psi}{\partial x}\right)^* \psi \qquad \ldots(15)$$

ಸಂಬಂಧ ಸರಿಹೊಂದುತ್ತದೆ. ಇಲ್ಲಿ $\xi$ ಮತ್ತು $\psi$ ಉತ್ಪನ್ನಗಳು ಅವಿಚ್ಛಿನ್ನ ಎಂದು ಭಾವಿಸಲಾಗಿದೆ. ಹಾಗೆಯೇ $\xi$ ಮತ್ತು $\psi$ ಉತ್ಪನ್ನಗಳು ಅವಿಚ್ಛಿನ್ನವಾಗಿರುವುದರ ಜೊತೆಗೆ ಎಲ್ಲ ಬಿಂದುಗಳಲ್ಲಿಯೂ ಅವಿಚ್ಛಿನ್ನವಾಗಿರುವ ಪ್ರಥಮ ಅವಕಲಜಗಳನ್ನು ಪಡೆದಿದ್ದರೆ $p_x^2$ ಹರ್ಮಿಷಿಯನ್ ಪರಿಕರ್ಮಿ ಆಗಿರುತ್ತದೆ. A, B, C . . . .ಗಳು ಒಂದೊಂದೂ ಹರ್ಮಿಷಿಯನ್ ಪರಿಕರ್ಮಿಗಳಾದರೆ ಆಗ

$$\int \xi^* [(A\,B\,C \ldots\ldots\ldots)\Psi]$$
$$= \int [(\ldots\ldots\ldots CBA)\xi]^* \Psi \qquad \ldots(16)$$

ಸಂಬಂಧ ಸರಿಹೊಂದುತ್ತದೆ. ಇಲ್ಲಿ [ಸಮೀಕರಣ (16)ರಲ್ಲಿ ಅನುಕಲನದ ಚರ ಮತ್ತು ಘಟಕಗಳ ಮೇಲೆಲ್ಲ ಸಂಕಲಿಸಬೇಕು ಎಂಬುದನ್ನು ತಿಳಿಸಲು ಸೂಕ್ತವಾದ ಚಿಹ್ನೆಗಳನ್ನು ಕಾಣುವಂತೆ [ಸಮೀಕರಣ (15)ದಲ್ಲಿ ನಂತೆ] ಬಳಸಿಲ್ಲ.

A ಮತ್ತು B ಹರ್ಮಿಷಿಯನ್ ಆಗಿರುವಾಗ

(i) $\frac{1}{2}(AB + BA)$ ಪರಿಕರ್ಮಿ ಹರ್ಮಿಷಿಯನ್ ಆಗಿರುತ್ತದೆ; ಮತ್ತು

(ii) A ಮತ್ತು B ಗಳು ವ್ಯತ್ಯಯವಲ್ಲದಿದ್ದರೆ ಅಂದರೆ $AB \neq BA$ ಆದರೆ AB ಮತ್ತು BA ಪರಿಕರ್ಮಿಗಳು ಹರ್ಮಿಷಿಯನ್ ಪರಿಕರ್ಮಿಗಳಲ್ಲ. ಹೀಗೆಂದು ಸಮೀಕರಣ (16) ರಿಂದ ಅನುಗತವಾಗುತ್ತದೆ.

ಉದಾಹರಣೆಗೆ $x$, $p_x$ ಗಳು ಹರ್ಮಿಷಿಯನ್; ಆದರೆ $x\,p_x$ ಮತ್ತು $p_x x$ ಗಳು ಹರ್ಮಿಷಿಯನ್ ಅಲ್ಲ; ಆದರೆ $\frac{1}{2}(x\,p_x + p_x x)$ ಹರ್ಮಿಷಿಯನ್ ಆಗಿರುತ್ತದೆ. ಅಭಿಜಾತ ಭೌತವಿಜ್ಞಾನದ ದೃಷ್ಟಿಯಲ್ಲಿ $x\,p_x$, $p_x x$ ಮತ್ತು $\frac{1}{2}(x\,p_x + p_x x)$ ಗಳಿಗೆ ಯಾವ ವ್ಯತ್ಯಾಸವೂ ಇಲ್ಲ. ಸಮೀಕರಣ (16)ರಿಂದ ಅಭಿಜಾತ ಬಲವಿಜ್ಞಾನದಲ್ಲಿ ಬಳಸುವ $f(r_1 \ldots r_l, p_1 \ldots\ldots p_l)$ ಎಂಬ ಯಾವುದೇ ಗಣಿತೋಕ್ತಿಗೆ ಕ್ವಾಂಟಂ ಬಲವಿಜ್ಞಾನದಲ್ಲಿ ಸಲ್ಲುವ ಅನುರೂಪವಾದ ಗಣಿತೋಕ್ತಿಯನ್ನು ಕಂಡುಹಿಡಿಯಬಹುದು.

$l$ ಕಣಗಳನ್ನೊಳಗೊಂಡ ಕ್ವಾಂಟಂ ಬಲವೈಜ್ಞಾನಿಕ ವ್ಯವಸ್ಥೆಯ ಮೇಲೆ ವರ್ತಿಸುವ ಬಲಗಳು ನಿಷ್ಕೃಷ್ಟವಾಗಿ ಅಭಿಜಾತ ಬಲವಿಜ್ಞಾನದಂತೆಯೇ ಇವೆ ಎಂದು ಭಾವಿಸಿದರೆ ಕ್ವಾಂಟಂ ಬಲವಿಜ್ಞಾನದಲ್ಲಿ ಬಳಸಬೇಕಾದ ಶಕ್ತಿಪರಿಕರ್ಮಿ H ನ್ನು

$$H(r_1 \ldots\ldots r_l, p_1, \ldots\ldots p_l) = T + V$$
$$= \left(\frac{p1^2}{2m_1} + \ldots\ldots\ldots + \frac{pl^2}{2m_l}\right) + V(r_1, \ldots\ldots\ldots r_l) \qquad \ldots(17)$$

ಸಮೀಕರಣದಿಂದ ಪಡೆಯುತ್ತೇವೆ. ಇಲ್ಲಿ $V(r_1 \ldots\ldots r_l)$ ಎಂಬುದು ಕಣಗಳ ವ್ಯವಸ್ಥೆಗೆ ಅನ್ವಯಿಸುವ ವಿಭವಶಕ್ತಿಯೂ $m_i$ ಎಂಬುದು i ಕಣದ ದ್ರವ್ಯರಾಶಿಯೂ ಆಗಿವೆ. ಆದರೆ ಕ್ವಾಂಟಂ ಬಲವಿಜ್ಞಾನದಲ್ಲಿ ಅಭಿಜಾತವಲ್ಲದ ಬಲಗಳೂ (ನಾನ್‌ಕ್ಲಾಸಿಕಲ್ ಫೋರ್ಸಸ್) ಕಂಡು ಬರುವುದರಿಂದ ಇವುಗಳಿಗೆ ಸಲ್ಲುವ ವಿಭವಶಕ್ತಿ ಪರಿಕರ್ಮಿಗಳು $V(r_1 \ldots\ldots r_l)$ ಗಿಂತ ಜಟಿಲವಾದವು. ಉದಾಹರಣೆಗೆ ಎರಡು ನ್ಯೂಟ್ರಾನುಗಳ ನಡುವೆ ಇರುವ ಅಂತರಕ್ರಿಯೆ

ಆಕಾಶ ವಿನಿಮಯವನ್ನು (ಸ್ಪೇಸ್ ಎಕ್ಸ್‌ಚೇಂಜ್) ಒಳಗೊಂಡಿರುತ್ತದೆಂದು ನಂಬಲಾಗಿದೆ. ಈ ವಿಷಯವನ್ನು ಗಣನೆಗೆ ತೆಗೆದುಕೊಂಡು ವಿಭವ ಶಕ್ತಿ ಪರಿಕರ್ಮಿಯನ್ನು

$$V\psi_j(r_1,r_2) \equiv J(r_{12})P_{12}\psi_j(r_1,r_2)$$
$$= J(r_{12})P_{12}\psi_j(r_1,r_2) \qquad .....(18)$$

ವ್ಯಕ್ತಪಡಿಸಬೇಕು. ಇಲ್ಲಿ $J(r_{12})$ ಕಣಗಳ ನಡುವೆ ಇರುವ ದೂರ $r_{12}$ ನ್ನು ಅವಲಂಬಿಸಿರುವಂಥ ಸಾಮಾನ್ಯ ಉತ್ಪನ್ನವಾಗಿರುತ್ತದೆ. ಆದರೆ $p_{12}$ ಆಕಾಶ ವಿನಿಮಯ ಪರಿಕರ್ಮಿ ಆಗಿರುವುದಲ್ಲದೆ ψಯ ಪ್ರತಿಯೊಂದು ಘಟಕದಲ್ಲೂ 1 ಮತ್ತು 2 ಕಣಗಳ ಆಕಾಶನಿರ್ದೇಶಕಗಳನ್ನು ಅದಲು ಬದಲು ಮಾಡುತ್ತದೆ.

**ನೈಜ (ರಿಯಲ್) ಐಗೆನ್ ಮೌಲ್ಯಗಳು :** A ಎಂಬ ಒಂದು ಪರಿಕರ್ಮಿಗೆ a ಎಂಬುದು ಒಂದು ಸಂಖ್ಯೆ ಎಂದಾಗ

$$Au(a) = au(a) \qquad .......(19)$$

ಎಂಬ ಸಮೀಕರಣ ಸಫಲವಾದರೆ ಆಗ ಇದನ್ನು ಐಗೆನ್ ಮೌಲ್ಯ ಸಮೀಕರಣ ಎಂದು ಕರೆಯುತ್ತೇವೆ. ಹಾಗೆಯೇ a ಐಗೆನ್ ಮೌಲ್ಯ ಎನಿಸಿಕೊಳ್ಳುತ್ತದೆ. a ದ ಈ ಮೌಲ್ಯವನ್ನು ಪಡೆಯಲು ಸಮೀಕರಣ (19)ನ್ನು ಸಾಧಿಸಿದಾಗ u(a) ಅಲೆ ಉತ್ಪನ್ನ ಸೊನ್ನೆ ಆಗುವುದಿಲ್ಲ. ಹಾಗೆಯೇ ಶಕ್ತಿ ಪರಿಕರ್ಮಿ H ಗೆ ಸಲ್ಲುವ

$$Hu = Eu$$

ಎಂಬ ಸಮೀಕರಣ ಕ್ವಾಟಂ ಬಲವಿಜ್ಞಾನದಲ್ಲಿ ವಿಶೇಷ ಪ್ರಾಮುಖ್ಯವಿರುವ ಸಮೀಕರಣ. ಇದಕ್ಕೆ ಕಾಲ–ನಿರವಲಂಬಿತ ಶ್ರೇಡಿಂಗರ್ ಸಮೀಕರಣ ಎಂದು ಹೆಸರು. ಪ್ರಯೋಗದಲ್ಲಿ ಅಳತೆ ಮಾಡಿ ಪಡೆದ ಮೌಲ್ಯಗಳು ಯಾವಾಗಲೂ ನೈಜ ಸಂಖ್ಯೆಗಳು. ಅವುಗಳೊಡನೆ a ವನ್ನು ಐಕ್ಯಗೊಳಿಸುವುದರಿಂದ–

(i) a ಐಗೆನ್ ಮೌಲ್ಯಗಳೆಲ್ಲ ಸಂಕೀರ್ಣ ಸಂಖ್ಯೆಗಳಲ್ಲದೆ ನೈಜ ಸಂಖ್ಯೆಗಳಾಗಿರಬೇಕು; ಮತ್ತು

(ii) ಈ ಮೌಲ್ಯಗಳಿಗೆ ಅನುರೂಪನಾದ ಉತ್ಪನ್ನಗಳು ಸಂಪೂರ್ಣ ಗಣ (ಕಂಪ್ಲೀಟ್ ಸೆಟ್) ಎನ್ನುವ ಉತ್ಪನ್ನಗಳ ಗಣವೊಂದನ್ನು ರೂಪಿಸಬೇಕು.

A ಯ ಐಗೆನ್ ಮೌಲ್ಯ ಸಂಕೀರ್ಣವಾದರೆ A ಪರಿಕರ್ಮಿಯ ಬಗೆಗೆ ನಿಷ್ಕೃಷ್ಟವಾಗಿ ಮಾಡಿದ ಅಳತೆಯೊಂದರಿಂದ ಕಂಡುಬರುವ ಯಾವುದೇ ಮೌಲ್ಯವನ್ನು ಅದರಿಂದ (aದಿಂದ) ಪ್ರತಿನಿಧಿಸಲು ಸಾಧ್ಯವಿಲ್ಲ. ಎರಡು ನೈಜ ಸಂಖ್ಯೆಗಳನ್ನು ಜೊತೆಗೂಡಿಸಿ ಒಂದು ಸಮ್ಮಿಶ್ರ ಸಂಖ್ಯೆಯನ್ನು ಪಡೆಯಬಹುದೆಂಬುದು ಈ ಹೇಳಿಕೆಯಿಂದ ಸುಳ್ಳಾಗುವುದಿಲ್ಲ. ಉದಾಹರಣೆಗೆ ಸಮತಲದಲ್ಲಿ ಚಲಿಸುತ್ತಿರುವ ಕಣವೊಂದಕ್ಕೆ x,y ಎಂಬ ಎರಡು ನಿರ್ದೇಶಕಗಳನ್ನು ಪಡೆಯುತ್ತೇವೆ. ಆದರೆ ಈ ನೈಜ ಸಂಖ್ಯೆಗಳು xy¯ ಸಮತಲದಲ್ಲಿರುವ r = +xiy ಎಂಬ ಸಮ್ಮಿಶ್ರ ಸದಿಶವೊಂದನ್ನು ರೂಪಿಸುತ್ತವೆ.

A ಎಂಬ ಒಂದು ಹರ್ಮಿಷಿಯನ್ ಪರಿಕರ್ಮಿಗೆ ದೊರೆಯುವ $u(a_n)$ $u_n$ ಎಂಬ ವರ್ಗಗಳನ್ನು ಅನುಕಲಿಸಬಹುದಾದ ಐಗೆನ್ ಉತ್ಪನ್ನಗಳಿಗೆ ಸೇರಿದ $\alpha_n$ ಐಗೆನ್ ಮೌಲ್ಯಗಳೆಲ್ಲ ಅವಶ್ಯಕವಾಗಿ ನೈಜ ಎಂದು ಸಾಧಿಸಬಹುದು.

ಸಮೀಕರಣ (16)ರಲ್ಲಿ ಕಾಣಿಸಿರುವ ಸಂಕೇತದಲ್ಲಿ $\xi=\psi=u_n$ ಎಂದು ಬರೆದು ಸಮೀಕರಣ (19)ನ್ನು ಉಪಯೋಗಿಸಿದರೆ

$$\alpha_n \int u_n * u_n = \int u_n * (a_n\ u_n) = \int u_n * (Au_n)$$
$$= \int (Au_n) * u_n \qquad .....(20)$$
$$= \int (a_n\ u_n) * u_n = a_n * \int u_n * u_n$$

ಎಂದು ಪಡೆಯುತ್ತೇವೆ. ಇದು $(\acute{a}_n - \acute{a}_n^*)$ $\int u_n^* u_n = 0$ ಎಂದಾಗುತ್ತದೆ.

ಆದರೆ $\int u_n * u_n \neq 0$
$\therefore a_n = a_n *$

ಆದ್ದರಿಂದ ವೀಕ್ಷಣೀಯ ಪರಿಕರ್ಮಿಗಳೆಲ್ಲ (ಅಬ್ಸರ್ವೇಟರ್ಸ್ ಆಪರೇಟರ್ಸ್) ಹರ್ಮಿಷಿಯನ್ ಪರಿಕರ್ಮಿಗಳು ಮತ್ತು ವಿಲೋಮವಾಗಿ ಹರ್ಮಿಷಿಯನ್ ಪರಿಕರ್ಮಿಗಳು ಮತ್ತು ವಿಲೋಮವಾಗಿ ಹರ್ಮಿಷಿಯನ್ ಪರಿಕರ್ಮಿಗಳೊಂದೊಂದೂ ವೀಕ್ಷಣೀಯ ಪರಿಮಾಣಕಗಳನ್ನು ಪ್ರತಿನಿಧಿಸುತ್ತದೆ ಎಂದು ಭಾವಿಸಲಾಗುತ್ತದೆ. ಇಲ್ಲಿಂದ ಮುಂದೆ ಕ್ವಾಂಟಂ ಬಲವಿಜ್ಞಾನದಲ್ಲಿ ಬಳಸುವ ಪರಿಕರ್ಮಿಗಳೆಲ್ಲ ಹರ್ಮಿಷಿಯನ್ ಎಂದು ಭಾವಿಸುತ್ತೇವೆ. ಹ್ಯಾಮಿಲ್ಟೋನಿಯನ್ ಪರಿಕರ್ಮಿ $H = T + V$ ಗಳನ್ನೊಳಗೊಂಡ ಪರಿಕರ್ಮಿಯ ಪ್ರಮುಖ ವರ್ಗಕ್ಕೆ ಅತ್ಯಧಿಕ ವಿಚ್ಛಿನ್ನತೆಯುಳ್ಳ ವಿಭವಗಳ ವಿನಾ u ಮತ್ತು $\frac{\partial u}{\partial x}$ ಉತ್ಪನ್ನಗಳು ಅವಿಚ್ಛಿನ್ನವಾಗಿರಬೇಕು ಎಂಬ ಗಡಿನಿರ್ಬಂಧಗಳು (ಬೌಂಡರಿ ಕಂಡಿಷನ್ಸ್) u ಎಂಬ ವರ್ಗಗಳನ್ನು ಅನುಕಲಿಸಬಹುದಾದ (ಕ್ವಾಡ್ರೆಟಿಕಲಿ ಇಂಟೆಗ್ರೇಬಲ್) ಐಗೆನ್ ಉತ್ಪನ್ನಕ್ಕೆ ಸಮೀಕರಣ (19)ನ್ನು ಸಾಧಿಸಿ ಪಡೆದ ಐಗೆನ್ ಮೌಲ್ಯಗಳು ನೈಜವಾಗಿಯೇ ಇರುತ್ತವೆ.

ಲಂಬೀಯತೆ (ಅರ್ಥಾಗೊನಾಲಿಟಿ) : ವರ್ಗವನ್ನು ಅನುಕಲಿಸಲಾಗುವ ಐಗೆನ್ ಉತ್ಪನ್ನಗಳಿಗೆ ಅನುರೂಪವಾದ A ಪರಿಕರ್ಮಿಯ á ಐಗೆನ್ ಮೌಲ್ಯಗಳೆಲ್ಲ ಅನಂತ ಗಣವೊಂದನ್ನು ರೂಪಿಸುವಂಥವಾದರೂ ಅವು ಒಂದು ಗಣನೀಯ ಗಣವನ್ನು (ಡೆನ್ಯೂಮರೆಬಲ್ ಸೆಟ್) ರಚಿಸುತ್ತವೆ. ಆಗ ಆ ಗಣ A ಪರಿಕರ್ಮಿಯ ಪೃಥಕ್ಕಾದ ರೋಹಿತವೊಂದನ್ನು (ಡಿಸ್‌ಕ್ರೀಟ್ ಸ್ಪೆಕ್ಟ್ರಂ) ರೂಪಿಸುತ್ತವೆ ಎನ್ನುತ್ತೇವೆ. ಹಾಗೆಯೇ ವರ್ಗವನ್ನು ಅನುಕಲಿಸಲಾಗದೆಯೇ ಆದರೆ ಅಂಗೀಕೃತವಾದ ಐಗೆನ್ ಉತ್ಪನ್ನಗಳು ನೈಜ ಐಗೆನ್ ಮೌಲ್ಯಗಳ ಅವಿಚ್ಛಿನ್ನ ಗಣ ಒಂದಕ್ಕೆ ಅನುರೂಪವಾಗಿರುತ್ತವೆ. $u_1 .... u_d$ ಐಗೆನ್ ಉತ್ಪನ್ನಗಳಲ್ಲಿ ಯಾವುದಾದರೊಂದು ಅಥವಾ ಅದಕ್ಕಿಂತ ಸ್ವತಂತ್ರ ಐಗೆನ್ ಉತ್ಪನ್ನಗಳು ಒಂದೇ ಐಗೆನ್ ಮೌಲ್ಯವನ್ನು ಪಡೆದಿದ್ದರೆ ಆಗ ಆ ಮೌಲ್ಯ ವಿಕೃತವಾಯಿತು (ಡೀಜನರೇಟ್) ಮತ್ತು ವಿಕೃತಿಯ ದರ್ಜೆ $d \geq 2$ ಎನ್ನುತ್ತೇವೆ. ಆದರೆ ಯಾವುದೇ (d +1) ಐಗೆನ್ ಉತ್ಪನ್ನಗಳು ರೇಖೀಯವಾಗಿ ಅವಲಂಬಿತವಾಗಿರುತ್ತವೆ. ಅಂದರೆ $c_1, c_2 .....c_d$ ಸ್ಥಿರಾಂಕಗಳೆಲ್ಲ ಸೊನ್ನೆಯಾಗದಂತೆ

$$c_1\Psi_1 + c_2\Psi_2 \cdots\cdots + c_d\Psi_d = 0 \qquad .....(21)$$

ಎಂಬಲ್ಲಿ ಸಂಬಂಧವನ್ನು ಈ ಐಗೆನ್ ಉತ್ಪನ್ನಗಳಿಂದ ಪಡೆಯಬಹುದು. ಐಗೆನ್ ಮೌಲ್ಯಗಳು ಪೃಥಕ್ಕಾಗಿರುವಂಥವಾಗಲಿ ಅವಿಚ್ಛಿನ್ನವಾಗಿರುವಂಥವಾಗಲಿ ಅವು ವಿಕೃತವಾಗಿರಲು ಸಾಧ್ಯ; ೦ ಪರಿಕರ್ಮಿಯೊಡನೆ ಒಂದು ಅಥವಾ ಅದಕ್ಕಿಂತ ಹೆಚ್ಚಾದ ಪರಿಕರ್ಮಿಗಳು ವ್ಯತ್ಯಯವಾಗುವ ಸಂದರ್ಭಗಳಲ್ಲಿ ವಿಕೃತಿ (ಡೀಜನರೆಸಿ) ಸಾಮಾನ್ಯವಾಗಿ ಸಂಭವಿಸುತ್ತದೆ. ವಿಕೃತಿ ಇಲ್ಲದಿದ್ದಾಗ u(á ಐಗೆನ್ ಉತ್ಪನ್ನಗಳನ್ನೆಲ್ಲ ಏಕೈಕವಾಗಿ á ದಿಂದ ಸಂಕೇತಿಸಬಹುದು. ಅಲ್ಲದೆ ಅದನ್ನು

$$\sum_j \int dr_1......dr_l u_j * (a) u_j (a') = \delta_{aa'} \text{ ಅಥವಾ } \delta(a-a') \qquad .....(22)$$

ಸಮೀಕರಣವನ್ನು ಪಾಲಿಸುವಂತೆ ಆರಿಸಿಕೊಳ್ಳಬಹುದು. ಈ ಸಂಬಂಧವನ್ನು ಲಂಬೀಯ ಪ್ರಸಾಮಾನ್ಯ ಸಂಬಂಧ (ಆರ್ಥಾಗೊನಲ್ ನಾರ್ಮಲ್ ರಿಲೇಷನ್) ಎನ್ನುತ್ತೇವೆ. ಪ್ರಸಾಮಾನ್ಯೀಕರಣವನ್ನು ವ್ಯಕ್ತಪಡಿಸುವ ಸಮೀಕರಣ (6) ಕೂಡ ಇದರಲ್ಲಿ ಅಡಕವಾಗಿದೆ ಎಂಬುದನ್ನು ಎರಡನ್ನೂ ನೋಡಿ ತಿಳಿಯಬಹುದು. ಈ ಸಮೀಕರಣದ ಬಲ ಭಾಗದಲ್ಲಿರುವ $\delta_{aa'}$ ಮತ್ತು $\delta(a-a')$') ÷ಸಂಕೇತಗಳನ್ನು ಅನುಕ್ರಮವಾಗಿ ಕ್ರೋನೆಕರ್ ಡೆಲ್ಟ ಮತ್ತು ಡಿರಾಕ್ ಡೆಲ್ಟ ಎಂದು $a \neq a'$ ಕರೆಯುತ್ತಾರೆ. $\delta_{aa'} = 0; a = a'$ ಆದಾಗ $\delta_{aa'} = 1$ ಪರಿಕರ್ಮಿಯ ರೋಹಿತ ಪೃಥಕ್ಕಾದಾಗ ಕ್ರೋನೆಕರ್ ಡೆಲ್ಟವನ್ನು ಉಪಯೋಗಿಸುತ್ತೇವೆ. ಡಿರಾಕ್ ಡೆಲ್ಟ ಉತ್ಪನ್ನ (a-a') ವನ್ನು ರೋಹಿತ ಅವಿಚ್ಛಿನ್ನವಾಗಿರುವ ಸಂದರ್ಭಗಳಲ್ಲಿ ಬಳಸುತ್ತೇವೆ. ಇಲ್ಲಿಯೂ ಹಿಂದಿನಂತೆ (ಕ್ರೋನೆಕರ್ ಡೆಲ್ಟದಂತೆ)

$$a \neq a' \text{ ಆದಾಗ } \delta(a-a') = 0 \qquad .....(23)$$

$$\text{ಆದರೆ } \int_{-\infty}^{\infty} \delta(a-a')da = \int_{-\infty}^{\infty} da'\delta(a-a') = 1 \qquad ......(24)$$

$$\text{ಮತ್ತು } \int_{-\infty}^{\infty} daf(a)\delta(a-a') = \int_{-\infty}^{\infty} daf(a)\delta(a'-a) = f(a') \qquad .....(25)$$

ಆಗಿರುತ್ತವೆ. ಸಮೀಕರಣ (22) ಸರಿಹೊಂದುವಾಗ u(a) ಉತ್ಪನ್ನಗಳು a- ದರ್ಜೆಯಲ್ಲಿ ಪ್ರಸಾಮಾನ್ಯೀಕರಿಸಲ್ಪಟ್ಟಿವೆ ಎನ್ನುತ್ತೇವೆ. ವಾಸ್ತವವಾಗಿ $\delta$ (x) ಉತ್ಪನ್ನ x=0 ಯಲ್ಲಿ ಅತಿ ವಿಚಿತ್ರವಾಗಿರುತ್ತದೆ; ಮತ್ತು x ನ ಸರಿ ಉತ್ಪನ್ನವಾಗಿರುತ್ತವೆ (ಈವನ್ ಫಂಕ್ಷನ್), ಬೇರೆ ಬೇರೆ ಐಗೆನ್ ಮೌಲ್ಯಗಳಿಗೆ ಅನುರೂಪವಾಗಿರುವ ಐಗೆನ್ ಉತ್ಪನ್ನಗಳು ಪರಸ್ಪರ ಲಂಬೀಯ ಎಂಬುದನ್ನು ಸಮೀಕರಣ (22) ತಿಳಿಸುತ್ತದೆ. a ಪೃಥಕ್ಕಾಗಿದ್ದಾಗ ಈ ಹೇಳಿಕೆಯನ್ನು ಒಡನೆಯೇ ಸಾಧಿಸಬಹುದು. ಆದರೆ á ಮತ್ತು a' ಗಳೆರಡೂ ಅವಿಚ್ಛಿನ್ನ ರೋಹಿತದಲ್ಲಿದ್ದರೆ ಸಮೀಕರಣ (22) ರಲ್ಲಿ ಕಾಣಿಸಿರುವ ಅನುಕಲಜ ಅಭಿಸರಿಸುವುದಿಲ್ಲ; ಆದ್ದರಿಂದ ಅದು ವಾಸ್ತವವಾಗಿಯೂ ಅನುಕಲಜ ಅಭಿಸರಿಸುವುದಿಲ್ಲ; ಆದ್ದರಿಂದ ಅದು ವಾಸ್ತವವಾಗಿಯೂ ಅನುಕಲಜ ನಿರೂಪಣೆಯನ್ನು ಕೊಡುವುದಿಲ್ಲ. ಹೀಗೆ ಡಿರಾಕ್ ಡೆಲ್ಟ ಉತ್ಪನ್ನ ಪ್ರಧನವಾಗಿ ಒಂದು ಕ್ರಮೀಕೃತ ಯುಕ್ತಿ (ಫಾರ್ಮಲ್ ಡಿವೈಸ್)

ಆಗಿರುತ್ತದೆ. ಈ ಉತ್ಪನ್ನ ಉಪಯೋಗಿಸುವ ಕಡೆಗಳಲ್ಲೆಲ್ಲ ಅದರ ಅನುಕಲನವನ್ನು ಪರಿಗಣಿಸುವುದರಿಂದ ಸಮೀಕರಣ (22)ರ ಎಡಭಾಗ ಪರಿಣಾಮಕಾರಿಯಾಗಿ ಅಭಿಸರಿಸುವಂಥದಾಗಿರುತ್ತದೆ. ಕ್ವಾಂಟಂ ಸಿದ್ಧಾಂತದಲ್ಲಿ ಡಿರಾಕ್ ಡೆಲ್ಟ ಉತ್ಪನ್ನದ ಉಪಯುಕ್ತತೆಯನ್ನು ಗಣಿತೀಯ ನಿಷ್ಠುರತೆಯೊಡನೆ ಸಮರ್ಥಿಸುವುದು ಬಲುಕಷ್ಟ.

ಕೆಲವು ಅನ್ವಯಗಳು : ಹಿಂದೆ ತಿಳಿಸಿರುವ ಅಂಶಗಳನ್ನು ಕೆಲವು ಮಾದರಿ ಉದಾಹರಣೆಗಳಿಗೆ ಅನ್ವಯಿಸೋಣ.

ಭ್ರಮಣವಿಲ್ಲದೆ x- ನೇರದಲ್ಲಿ ಮಾತ್ರ ಚಲಿಸುತ್ತಿರುವ ಒಂದು ಸ್ವತಂತ್ರ ಕಣದ ಚಲನೆಯನ್ನು ಮಾಡಲು ವಿಮರ್ಶಿಸೋಣ. ಈ ತೆರನಾದ ಸರಳತಮ ವ್ಯವಸ್ಥೆಯೊಂದರಿಂದ ಪಡೆಯುವ ಫಲಿತಾಂಶಗಳನ್ನು ಹೆಚ್ಚು ಜಟಿಲತೆಯುಳ್ಳ ವ್ಯವಸ್ಥೆಗಳಿಗೆ ಅನ್ವಯಿಸಬಹುದಾದ್ದರಿಂದ ಹೀಗೆ ಮಾಡಲಾಗಿದೆ. ಈ ಸ್ವತಂತ್ರ ಕಣದ ಸಂವೇಗಕ್ಕೆ ಲಭಿಸುವ ಐಗೆನ್ ಮೌಲ್ಯಗಳನ್ನು ನಿರ್ಧರಿಸೋಣ.

ಕಣದ ಸಂವೇಗ ಪರಿಕರ್ಮಿ $Px = \frac{\hbar}{i}\frac{\partial}{\partial x}$ ಆಗಿರುವುದರಿಂದ ಐಗೆನ್ ಮೌಲ್ಯಗಳನ್ನು ತಿಳಿಸುವ ಸಮೀಕರಣ

$$Px^{u}(a) = \frac{\hbar}{i}\frac{\partial}{\partial x}u(a) = au(a) \qquad .....(26)$$

ಆಗಿರುತ್ತ,ದೆ. a ವನ್ನು h k ಎಂದು ಬರೆಯೋಣ. ಆಗ

$$\frac{\hbar}{i}\frac{\partial u(a)}{\partial x} = \hbar k u(a)$$

ಅಥವಾ $\frac{1}{i}\frac{\partial}{\partial x}u(a) = k\,u\,(a)$ .....(27)

ಸಮೀಕರಣ (27)ನ್ನು ಸಾಧಿಸಿದರೆ u(x,k) ಐಗೆನ್ ಉತ್ಪನ್ನಗಳು

u (x, k) = C (k) exp [i k x] .......(28)

ಎಂದು ತಿಳಿಯುತ್ತೇವೆ. ಇಲ್ಲಿ C (k) ಪ್ರಸಾಮಾನ್ಯೀಕರಿಸುವ ಸ್ಥಿರಾಂಕ k ಒಂದು ನೈಜ ಸಂಖ್ಯೆ ಆದಾಗ x ನ ಎಲ್ಲ ಮೌಲ್ಯಗಳಿಗೂ $(-\infty \le x \le \infty)$ಸಾಂತವಾಗಿರುತ್ತದೆ. ಆದ್ದರಿಂದ ಐಗೆನ್ ಉತ್ಪನ್ನಗಳ ರೋಹಿತ ಅವಿಚ್ಛಿನ್ನ ಮತ್ತು k ಗೆ $-\infty \le k \le \infty$ ಇರುವ ನೈಜ ಮೌಲ್ಯಗಳನ್ನೆಲ್ಲ ಒಳಗೊಂಡಿರುತ್ತದೆ. k ಯಲ್ಲಿ ಊಹ್ಯ ಭಾಗ ಇದ್ದರೆ ಅಂದರೆ

$$k = k_1 + ik_2, k_2 \ne 0$$

ಆಗಿದ್ದರೆ ಆಗ $x = \infty$ ಯಲ್ಲಾಗಲಿ $x = -\infty$ ಯಲ್ಲಾಗಲಿ

$u(x, k_1 + ik_2)$

ಅನಂತವಾಗಿರುವುದರಿಂದ ಅದು ಗ್ರಾಹ್ಯವಲ್ಲ. ಐಗೆನ್ ಉತ್ಪನ್ನ $|x| \ge a$ ಮೌಲ್ಯಗಳಿಗೆ ತತ್ಸಮಕವಾಗಿ (ಐಡೆಂಟಿಕಲಿ) ಸೊನ್ನೆ ಆದರೆ k ಸಮ್ಮಿಶ್ರ (ಕಾಂಪ್ಲೆಕ್ಸ್) ಆದಾಗ ಅದರ ವರ್ಗವನ್ನು ಅನುಕಲಿಸಲು ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಐಗೆನ್ ಉತ್ಪನ್ನ x = α ಯಲ್ಲಿ ವಿಚ್ಛಿನ್ನವಾಗಿರುತ್ತದೆ. ಆದರೆ C(k) = 0 ಆದ ಹೊರತು

C(k) exp [ikx] ≠ 0 .....(29)

ಹೀಗೆ u ಉತ್ಪನ್ನ ಅವಿಚ್ಛಿನ್ನವಾಗಿರಬೇಕು; ಮತ್ತು ಅಂಗೀಕಾರಾರ್ಹ ಎಂಬ ಕೋರಿಕೆಗಳು $p_x$ ಪರಿಕರ್ಮಿಯ ಐಗೆನ್ ಮೌಲ್ಯಗಳು ನೈಜ ಎಂಬುದನ್ನು ಸಮರ್ಥಿಸುತ್ತವೆ. ಅವಿಚ್ಛಿನ್ನ ರೋಹಿತಕ್ಕೆ ಬೇಕಾದಂತೆ u( x, k) ಉತ್ಪನ್ನಗಳು ವರ್ಗವನ್ನು ಅನುಕಲಿಸಲು ಸಾಧ್ಯವಾಗದವು. ಪ್ರತಿಯೊಂದು u( x, k) ಯೂ ಒಂದೇ ವೇಗದಿಂದ ಚಲಿಸುತ್ತಿರುವ ಕಣಗಳ ಒಂದು ದೂಲವನ್ನು ರೂಪಿಸುತ್ತದೆ ಎಂದು ಭಾವಿಸಬಹುದು. exp (i k x) ಉತ್ಪನ್ನ $\lambda = 2\pi / k$ ಅಲೆಯುದ್ದದೊಡನೆ ಅವಧಿಯುತವಾದ್ದರಿಂದ (ಪೀರಿಯಾಡಿಕ್) ಕಣಗಳನ್ನೊಳಗೊಂಡ ಆ ತೆರನಾದ ಒಂದು ದೂಲ ಅಲೆಲಕ್ಷಣಗಳನ್ನು ಪ್ರದರ್ಶಿಸುತ್ತದೆ. ವಾಸ್ತವವಾಗಿ ಡಿಬ್ರಾಯ್ ಸಂಬಂಧದ ಪ್ರಕಾರ $Px = \hbar k = h/\lambda$. ಈ ಹೊಂದಾಣಿಕೆ ತುಚ್ಛವಲ್ಲ. k ಅಳತೆಯಲ್ಲಿ ಐಗೆನ್ ಉತ್ಪನ್ನಗಳನ್ನು ಪ್ರಸಾಮಾನ್ಯೀಕರಿಸಿದರೆ

$$u(x,k) = \left(1\sqrt{2\pi}\right)\exp(ikx) \qquad .....(30)$$

ಎಂದು ಪಡೆಯುತ್ತೇವೆ. ಹಾಗೆಯೇ ಯಾವುದೇ ಎರಡು ಐಗೆನ್ ಉತ್ಪನ್ನಗಳಿಗೆ

$$\int_{-\infty}^{\infty} dxu^*(k)u(k') = \frac{1}{2\pi}\int_{-\infty}^{\infty} \exp i(k'-k)x\,dx$$
$$= \delta(k-k') \qquad .....(31)$$

ಸಮೀಕರಣ ಸರಿಹೊಂದುತ್ತದೆ.

ಈಗ ಚಲನೆಯಲ್ಲಿರುವ ಸ್ವತಂತ್ರಕಣಕ್ಕೆ ಚಲನಶಕ್ತಿ ಪರಿಕರ್ಮಿಯ ಐಗೆನ್ ಮೌಲ್ಯಗಳನ್ನು ನಿರ್ಧರಿಸೋಣ. ಇದನ್ನು $T_x$ ಎಂದು ಕರೆದರೆ

$$T_x = \frac{Px^2}{2m} \qquad (....)$$

ಆದ್ದರಿಂದ ಪರಿಕರ್ಮಿ

$$T_x = \frac{1}{2m}\left(\frac{\hbar}{i}\frac{\partial}{\partial x}\right)^2 \qquad .....(33)$$
$$= -\frac{\hbar^2}{2m}\frac{\partial^2}{\partial x^z}$$

ಆದ್ದರಿಂದ ಐಗೆನ್ ಮೌಲ್ಯಸಮೀಕರಣವನ್ನು

$$-\frac{\hbar^2}{2m}\frac{\partial^2}{\partial x^z}Eu \qquad .....(34)$$

ಎಂದು ಬರೆಯುತ್ತೇವೆ. ಇದನ್ನು ಸಾಧಿಸಿದರೆ ದೊರೆಯುವ ಉತ್ತರಗಳು

$$u_{\pm}(x,E) = C(E)\exp\left(\pm\frac{i}{\hbar}x\sqrt{2mE}\right) \qquad .....(35)$$

ಇಲ್ಲಿ $\sqrt{E}$ ಒಂದು ನೈಜಸಂಖ್ಯೆ ಆಗಿರಬೇಕು. ಹೀಗೆ ಐಗೆನ್ ಮೌಲ್ಯಗಳ ರೋಹಿತ ಅವಿಚ್ಛಿನ್ನವಾಗಿರುವುದಲ್ಲದೆ E=0 ಯಿಂದ $E = +\infty$ ವರೆಗೆ ಇರುವ ಮೌಲ್ಯಗಳನ್ನೆಲ್ಲ ಪಡೆಯುತ್ತದೆ. ಸಮೀಕರಣ (35) ರಿಂದ ದೊರೆತ ವರ್ಗಮೂಲ ಧನ ಚಿಹ್ನೆಯುಳ್ಳದ್ದಾಗಲಿ ಋಣಚಿಹ್ನೆಯುಳ್ಳದ್ದಾಗಲಿ ಆಗಿರಬಹುದು. ಹೀಗೆ Eಯ ಪ್ರತಿಯೊಂದು ಮೌಲ್ಯಕ್ಕೂ ಸಲ್ಲುವಂತೆ ಸ್ವತಂತ್ರವಾದ ಎರಡು ಐಗೆನ್ ಉತ್ಪನ್ನಗಳಿರುತ್ತವೆ. ಅಂದರೆ ರೋಹಿತ ವಿಕೃತಿ ಉಳ್ಳದ್ದಾಗಿರುತ್ತದೆ. ಈ ಉತ್ಪನ್ನಗಳನ್ನು u+(x,E) ಮತ್ತು u- (x,E) ಎಂದು ಕರೆಯಬಹುದು. ಇವನ್ನು E ಅಳತೆಯಲ್ಲಿ ಪ್ರಸಾಮಾನ್ಯೀಕರಿಸಿದರೆ

$$u_{\pm}(x,E) = \left(\frac{m}{2\hbar^2 E}\right)^{\frac{1}{2}}\exp\left(\pm\frac{i}{\hbar}x\sqrt{2mE}\right) \qquad .....(36)$$

ಎಂದು ಪಡೆಯುತ್ತೇವೆ. ಆದರೆ u + u- ಉತ್ಪನ್ನಗಳು ಪರಸ್ಪರ ಲಂಬೀಯವಾಗಿರುತ್ತದೆ. $k = \sqrt{2mE/h}$ ಎಂದು ಬರೆದು $-\infty \le k \le \infty$ ಅಂತರದಲ್ಲಿ ಬದಲಾಗುವ ಒಂದೇ ಒಂದು ಪ್ರಾಚಲ kಯಿಂದ ಐಗೆನ್ ಉತ್ಪನ್ನಗಳೆರಡನ್ನೂ u(x,k) ಎಂದು ವ್ಯಕ್ತಪಡಿಸಬಹುದು. ವಾಸ್ತವವಾಗಿ ಈ ಉತ್ಪನ್ನಗಳು $p_x$ ನ ಐಗೆನ್ ಉತ್ಪನ್ನಗಳು ಮಾತ್ರವೇ ಅಲ್ಲ $T_x$ ಪರಿಕರ್ಮಿಯ ಐಗೆನ್ ಉತ್ಪನ್ನಗಳೂ ಹೌದು. u(x,k) ಎಂಬ ಪ್ರತಿಯೊಂದು ಐಗೆನ್ ಉತ್ಪನ್ನವೂ $p_x$ ನ ಬೇರೆ ಐಗೆನ್ ಮೌಲ್ಯಕ್ಕೆ ಅನುರೂಪವಾಗಿರುತ್ತದೆ. ಆದರೆ u(x,k) ಮತ್ತು u(x,-k) ಐಗೆನ್ ಉತ್ಪನ್ನಗಳೆರಡೂ $T_x$ ನ ಒಂದೇ ಐಗೆನ್ ಮೌಲ್ಯಕ್ಕೆ ಅನುರೂಪವಾದ ಐಗೆನ್ ಉತ್ಪನ್ನಗಳಾಗಿರುತ್ತವೆ.

ಒಂದು ಸ್ವತಂತ್ರ ಕಣದ ಸಂವೇಗ $p_x$ ನ್ನು ಕರಾರುವಾಕ್ಕಾಗಿ ತಿಳಿದು ಅದರ ಶಕ್ತಿ Eಯನ್ನು ಕಂಡುಹಿಡಿಯಬಹುದು ಎಂಬುದು ಈ ಫಲಿತಾಂಶಗಳ ಭೌತ ವ್ಯಾಖ್ಯೆ. ಹಾಗೆಯೇ ಅಭಿಜಾತ ಬಲವಿಜ್ಞಾನದಲ್ಲಿ

$$E = \frac{Px^2}{2m} = \frac{(-Px)^2}{2m}$$

ಎಂದು ತಿಳಿದಂತೆ ಕ್ವಾಂಟಂ ಬಲವಿಜ್ಞಾನದಲ್ಲಿಯೂ ಅದೇ ಸಂಬಂಧವನ್ನು ಪಡೆದಿರುತ್ತೇವೆ.

$$dE = \left(\frac{\hbar^2 k}{m}\right)dk \qquad ......(37)$$

ಆದ್ದರಿಂದ ಸಮೀಕರಣ (30) ಮತ್ತು (36)ರಲ್ಲಿ ಕಾಣಿಸಿರುವ ಪ್ರಸಾಮಾನ್ಯೀಕರಣಾಂಶಗಳು ಬೇರೆ ಆಗಿರುತ್ತವೆ. ಸಮೀಕರಣ (35)ರಲ್ಲಿ ಕಾಣಿಸಿರುವ

$$u_{\pm}(x,E) = C(E)\exp\left(\pm\frac{i}{\hbar}x\sqrt{2mE}\right)$$

ಉತ್ಪನ್ನಗಳಿಂದ

$$u'+(x,E) = \frac{1}{\sqrt{2}}\left[u+(x,E0+u-(x,E)\right]$$
$$u'-(x,E) = \frac{1}{\sqrt{2}}\left[+(x,E)-u-(u,E)\right]$$

ಮತ್ತೆರಡು ಪ್ರಸಾಮಾನ್ಯೀಕರಿಸಿದ ಉತ್ಪನ್ನಗಳನ್ನು ಪಡೆಯಬಹುದು. ಇವು ಅನುಕ್ರಮವಾಗಿ

$$u'_{\pm}(x,E) = \left(\frac{2m}{h^2 E}\right)^{\frac{1}{2}}\cos\frac{x}{\hbar}\sqrt{2mE} \qquad ....(38)$$

$$u'_{-}(x,E)=\left(\frac{2m}{h^2E}\right)^{\frac{1}{4}}\mathrm{Sin}\,\frac{x}{\hbar}\sqrt{2mE} \quad .....(39)$$

ಆಗಿರುತ್ತವೆ.

**ಆದರ್ಶ ಶಕ್ತಿ ಪರಿಕರ್ಮಿ :** ಹಿಂದೆ ತಿಳಿಸಿದ A u(a)=au(a) ಎಂಬ ಐಗೆನ್ ಮೌಲ್ಯ ಸಮೀಕರಣವನ್ನು ಕಣದ ಶಕ್ತಿ ಪರಿಕರ್ಮಿ H ಗೆ ಅನ್ವಯಿಸಿದಂತೆ ಬರೆದಾಗ

$$Hu = (T+V)u = \left[-\frac{\hbar^2}{m}\frac{\partial^2}{\partial x^2}+V(x)\right]u = Eu \quad ...(39)$$

ಎಂದಾಗುತ್ತದೆ. ಇಲ್ಲಿ *V(x)* ಉತ್ಪನ್ನ ಎಲ್ಲೆಲ್ಲಿಯೂ ಸಾಫಾಗಿಯೂ ನಿರ್ದಿಷ್ಟವಾಗಿಯೂ $x=\pm\infty$ ಗಳಲ್ಲಿ ಸೊನ್ನೆಯನ್ನು ಸಮೀಪಿಸುವಂತಿರುವ ಉತ್ಪನ್ನ ಎಂದು ಭಾವಿಸಲಾಗಿದೆ. ಆದರೆ ಎಲ್ಲ ಸಂದರ್ಭಗಳಲ್ಲೂ ಈ ಲಕ್ಷಣವನ್ನು *V(x)* ಉತ್ಪನ್ನ ಪಡೆದಿರುವುದಿಲ್ಲ. *x* ವಿರುದ್ಧವಾಗಿ ಎಳೆದ ಈ ತೆರನಾದ *V (x)* ಉತ್ಪನ್ನದ ರೂಪವೇನೆಂಬುದನ್ನು ಚಿತ್ರ (1)ರಲ್ಲಿ ಕಾಣಿಸಲಾಗಿದೆ.

ಇಲ್ಲಿ *x* = ± a ಹತ್ತಿರ ಇರುವ ಪ್ರದೇಶದಲ್ಲಿ ಬಲವು ಆಕರ್ಷಣೆಯನ್ನೂ (ಋಣ ವಿಭವಶಕ್ತಿಯನ್ನೂ) x=0 ಹತ್ತಿರ ಬಲವು ವಿಕರ್ಷಣೆಯನ್ನೂ (ಧನವಿಭವಶಕ್ತಿಯನ್ನೂ)




ಚಿತ್ರ–1 ಪ್ರತಿಯೊಂದು ಕಡೆಯಲ್ಲೂ ಪೀನ–ಪರಿಹಾರಗಳು ಅಕ್ಷಕ್ಕೆ ಅನಂತ ಸ್ಪರ್ಶಕೀಯವಾಗಿವೆ

ಪಡೆದಿರುತ್ತದೆ. ಈ ಸಂದರ್ಭದಲ್ಲಿ x = ± a ಗಳಲ್ಲಿರುವ ಕನಿಷ್ಠ ವಿಭವ $V_0 < 0$ ಆಗಿರುತ್ತದೆ.

ಸಮೀಕರಣ (39) ನ್ನು

$$\frac{\partial^2 u}{\partial x^2} = Ku \quad .....(40)$$

$$K(x,E)=\left(\frac{2m}{\hbar^2}\right)[V(x)-E] \quad ..... (41)$$

ಎಂಬ ರೂಪದಲ್ಲಿ ಬರೆಯಬಹುದು. *K > 0* ಆದಾಗ $\frac{\partial^2 u}{\partial x^2}=\frac{\partial}{\partial x}\left(\frac{\partial u}{\partial x}\right)$ನ ಚಿಹ್ನೆ ಮತ್ತು u ನ ಚಿಹ್ನೆಗಳೆರಡೂ ಒಂದೇ ಎಂಬುದು ಸ್ಪಷ್ಟ. ಉದಾಹರಣೆಗೆ u>0 ಆಗಿದ್ದರೆ x ಹೆಚ್ಚಿದಂತೆ $\frac{\partial u}{\partial x}$ ಹೆಚ್ಚುತ್ತದೆ. ಅನ್ಯಥಾ *K(x, E)>0* ಆಗಿರುವ *x* ಬಿಂದುಗಳಲ್ಲೆಲ್ಲ ಸಮೀಕರಣ (40)ರ ಉತ್ತರಗಳು ಅಂದರೆ u(x,E) ಯು x– ಅಕ್ಷದ ಕಡೆಗೆ ಪೀನ (ಕಾನ್ವೆಕ್ಸ್) ಆಗಿರುತ್ತದೆ. K(x, E)<0 ಆಗಿರುವ ಸ್ಥಳಗಳಲ್ಲೆಲ್ಲ u(x,E) ಉತ್ಪನ್ನ x– ಅಕ್ಷದ ಕಡೆಗೆ ನಿಮ್ನ (ಕಾನ್‌ಕೇವ್) ಆಗಿರುತ್ತದೆ. V(x) ಉತ್ಪನ್ನ ಸಾಕಷ್ಟು ಶೀಘ್ರವಾಗಿ ಸೊನ್ನೆಗೆ ಕ್ಷಯಗೊಂಡರೆ E>0 ಆದಾಗ $K(\pm\infty,E)<0$. ಆದ್ದರಿಂದ $x=\pm\infty$ ಗಳಲ್ಲಿ ಸಮೀಕರಣ (39) ಉತ್ತರಗಳನ್ನು ಸಮೀಕರಣ (38) ಮತ್ತು (39)ರಲ್ಲಿ ಕಾಣಿಸಿರುವ ಆಂದೋಳಕ ಉತ್ಪನ್ನಗಳ (ಆಸಿಲ್ಲೇಟರಿ ಫಂಕ್ಷನ್ಸ್) ರೇಖೀಯ ಸಂಯೋಜನೆಗಳಿಂದ ಸನ್ನಿಹಿತವಾಗಿ ಪಡೆಯುತ್ತೇವೆ. ಆದರೆ E>0 ಆದಾಗ $K(\pm\infty,E)<0$. ಆದ್ದರಿಂದ $x=\pm\infty$ ಗಳಲ್ಲಿ ಸಮೀಕರಣ (39)ರ ಸನ್ನಿಹಿತವಾದ ಉತ್ತರವನ್ನು

$$u_1(x,E)=\exp\left[-x(2m|E|^{\frac{1}{2}}/\hbar\right]$$

$$u_2(x,E)=\exp\left[-x(2m|E|^{\frac{1}{2}}/\hbar\right]$$

ಉತ್ಪನ್ನಗಳ ರೇಖೀಯ ಸಂಯೋಜನೆಗಳಿಂದ ಪಡೆಯಬಹುದು. $u_1(x, E)$ ಉತ್ಪನ್ನ x = +∞ ಯಲ್ಲಿ ಅನಂತವಾಗುತ್ತದೆ. ಹಾಗೆಯೇ $\upsilon_2(x,E)$ ಯು ξ = –∞ ಯಲ್ಲಿ ಅನಂತವಾಗುತ್ತದೆ. ಹೀಗೆ E<0 ಮೌಲ್ಯಗಳಿಗೆ ಸಮೀಕರಣ (39)ಕ್ಕೆ ಅಂಗೀಕರಿಸುವ ಮೌಲ್ಯಗಳು $u_1$ ಉತ್ಪನ್ನ –∞ಯಲ್ಲಿ ವರ್ತಿಸುವಂತೆಯೂ $u_2$ ಉತ್ಪನ್ನ +∞ ಯಲ್ಲಿ ವರ್ತಿಸುವಂತೆಯೂ ಅಂದರೆ ಅವು x = +∞ ಮತ್ತು – ∞ ಯಲ್ಲಿ ಅನಂತಸ್ಪರ್ಶಕೀಯವಾಗಿರುವಂತೆ (ಅಸಿಂಪ್ಟಾಟಿಕ್) ಇರಬೇಕು. $V_0<E<0$ ಆದಾಗ ನಿಮ್ನ ಆಗಿರುವ ಜಾಗಗಳನ್ನು ಉತ್ತರ ಕೊಡುವಂತೆ xನ ಮೌಲ್ಯಗಳಿರುತ್ತವೆ. ಆದ್ದರಿಂದ (u ಮತ್ತು $\frac{\partial u}{\partial x}$ ಅವಿಚ್ಛಿನ್ನವಾಗಿರಬೇಕು ಎಂಬ ಗಡಿನಿರ್ಬಂಧಗಳನ್ನು ಸಫಲಗೊಳಿಸುವಂತೆ) G ಅಥವಾ L ತೆರನಾದ ವಕ್ರರೇಖೆಯಿಂದ ಈ ವಕ್ರರೇಖೆಗೆ ಸಾಫಾಗಿ ಪರಿವರ್ತನೆ ಸಾಧ್ಯವಾಗಬೇಕು. $E<V_0$ ಆದಾಗ ಸಮೀಕರಣ (39)ರ ಉತ್ತರಗಳು ಎಲ್ಲೆಲ್ಲಿಯೂ ಚಿತ್ರ (1)ರಲ್ಲಿ ಕಾಣಿಸಿರುವ E,G,L ಗಳಂತೆ ಪೀನ ಮತ್ತು x = ±∞ ಎರಡರಲ್ಲಿ ಎಲ್ಲಿಯೂ ಯಾವಾಗಲೂ ಅನಂತ ಸ್ಪರ್ಶಕೀಯವಾಗಿರುವುದಿಲ್ಲ.

(i) ಅವಿಚ್ಛಿನ್ನ ರೋಹಿತ o ≤ E ≤ ∞ ವರೆಗಿರುವ E ಯ ಎಲ್ಲ ಧನ ಮೌಲ್ಯಗಳನ್ನೂ ಪಡೆಯುತ್ತದೆ ಮತ್ತು ಆ ತೆರನಾದ ಪ್ರತಿಯೊಂದು E ಮೌಲ್ಯದಲ್ಲಿಯೂ ಎರಡು ಸ್ವತಂತ್ರ ಮತ್ತು (x=±∞ ಗಳಲ್ಲಿ ಆಂದೋಳಕವಾಗಿರುವ) ವರ್ಗಗಳನ್ನು ಅನುಕಲಿಸಲಾಗದ (ನಾನ್‌ಕ್ವಾಡ್ರೆಟಿಕಲ್ಲಿ ಇಂಟೆಗ್ರೇಬಲ್) ಐಗೆನ್ ಉತ್ಪನ್ನಗಳು ಚಲನಶಕ್ತಿಯ ಉದಾಹರಣೆಯಲ್ಲಿ ತಿಳಿಸಿದಂತೆ ಇರುತ್ತವೆ.

(ii) $E<V_0$ ಆಗಿರುವ ಐಗೆನ್ ಮೌಲ್ಯಗಳಾಗುವುದೂ ಇಲ್ಲ.

(iii) ವರ್ಗಗಳನ್ನು ಅನುಕಲಿಸಲಾಗುವ ಐಗೆನ್ ಉತ್ಪನ್ನಗಳಿಗೆ ಅನುರೂಪವಾಗಿರುವ ಭಿನ್ನ ಐಗೆನ್ ಮೌಲ್ಯಗಳು $V_0<E<0$ ವರೆಗೆ ಇರಬಹುದು; ಆದರೆ ಅಗತ್ಯವಾಗಿ ಹಾಗೆ ಇರಬೇಕಾಗಿಲ್ಲ. $E=E_1$ ಕ್ಕೆ ಕನಿಷ್ಠ ಐಗೆನ್ ಉತ್ಪನ್ನ ನಿಮ್ನತೆಯ ಕನಿಷ್ಠ ಪ್ರದೇಶವನ್ನು ಒಳಗೊಂಡಿರುತ್ತದೆ. ಆದ್ದರಿಂದ ಚಿತ್ರ (1)ರಲ್ಲಿ ಕಾಣಿಸಿರುವ F ಅನ್ನು G ಗೆ ಚಿತ್ರ (2)ರಲ್ಲಿ ಕಾಣಿಸಿರುವಂತೆ ಸೇರಿಸುತ್ತವೆ.




ಚಿತ್ರ–2 ಚಿತ್ರ 1ರ ವಿಭವದೊಡನೆ ಹ್ಯಾಮಿಲ್ಟೋನಿಯನಿನ ಎರಡು ಕನಿಷ್ಠ ಮೌಲ್ಯಗಳಿಗೆ ಸಲ್ಲುವ ಐಗೆನ್ ಉತ್ಪನ್ನ

$E = E_2 > E_1$ ಆದಾಗ ಯ ಮರು ಉತ್ಪನ್ನ ಮೌಲ್ಯಕ್ಕೆ ಅನುರೂಪವಾದ ಐಗೆನ್ ಉತ್ಪನ್ನ $u(x, E_2)$ ಒಂದು ನಿಸ್ಪಂದವನ್ನು (ನೋಡ್) (ಒಂದು ಸೊನ್ನೆಯನ್ನು) ಪಡೆದಿರುತ್ತದೆ; ಮತ್ತು x = ±∞ ಗಳಲ್ಲಿ $u(x, E_1)$ ಕ್ಕಿಂತ ನಿಧಾನವಾಗಿ ಕಡಿಮೆಯಾಗುತ್ತದೆ. ಅಲ್ಲದೆ F ಅನ್ನು L ಗೆ ಸೇರಿಸುತ್ತದೆ. $E_2 > E_1$ ಕ್ಕೆ ಅನುರೂಪವಾಗಿರುವ ಮರು ಉನ್ನತ ಐಗೆನ್ ಉತ್ಪನ್ನ ಎರಡು ನಿಸ್ಪಂದಗಳನ್ನು ಪಡೆದಿರುತ್ತದೆ ಮತ್ತು F ಅನ್ನು Gಗೆ ಸೇರಿಸುತ್ತದೆ.




ಚಿತ್ರ–3 x = ± a ಹತ್ತಿರ ಕಣಗಳನ್ನು ಕೂಡಿಹಾಕಲು ಸಾಧ್ಯವಾಗುವ γ (x) ವಿಭವ

ಚಿತ್ರ (3)ರಲ್ಲಿ $x = \pm\infty$ ನೆರೆಹೊರೆಯಲ್ಲಿರುವ ಕ್ಷಿತಿಜೀಯ ರೇಖೆಗಳು (ಹಾರಿಜ಼ಾಂಟಲ್ ಲೈನ್ಸ್) $E_1, E_2$ ಎಂಬ ಎರಡು ಕನಿಷ್ಠ ಐಗೆನ್ ಮೌಲ್ಯಗಳ ಶಕ್ತಿಹಂತಗಳನ್ನು ತೋರಿಸುತ್ತವೆ. $E=V_1$ ಆಗಿರುವ $x1, x2$ ಬಿಂದುಗಳು ಮತ್ತು $u(x, E_1)$ ರ ವಕ್ರತೆ ಎಲ್ಲಿ ಚಿಹ್ನೆಯನ್ನು ಬದಲಾಯಿಸುತ್ತದೆಯೋ (ಚಿತ್ರ 2) ಆ ಬಿಂದುಗಳು ಆಕರ್ಷಕ ವಿಭವಬಾವಿಯಲ್ಲಿ (ಅಟ್ರ್ಯಾಕ್ಟೀವ್ ಪೊಟೆನ್ಶಿಯಲ್ ವೆಲ್) $x=-a$ ಎಂಬಲ್ಲಿ ಸಂಪೂರ್ಣಶಕ್ತಿ $E_1$ ರೊಡನೆ ಆವರ್ತಿಸುತ್ತಿರುವ ಅಭಿಜಾತ ಕಣದ ತಿರುಗುಬಿಂದುಗಳಾಗಿ (ವೇಗ ಶೂನ್ಯವಾಗಿರುವ ಬಿಂದುಗಳಾಗಿ) ಇರುತ್ತವೆ. $E_1 < E < E_2$ ಕ್ಕೆ ಈ ವಕ್ರರೇಖೆ ಅನಂತದಲ್ಲಿ ಮಾಡುವಂತೆ $u(x,E)$ ಉತ್ತರ $x^-$ ಅಕ್ಷವನ್ನು ಹಾಯುತ್ತದೆ. ಆದರೆ $x=-\infty$ ಯಲ್ಲಿ ಋಣಾತ್ಮಕವಾಗಿ ಅನಂತವಾಗುತ್ತದೆ. ಏಕೆಂದರೆ L ಒಡನೆ ಸಾಫಾಗಿ ಸೇರಿಸುವಷ್ಟು ನಿಮ್ನ ಆಗಿರುವುದಿಲ್ಲ. ಹೀಗೆ ವರ್ಗವನ್ನು ಅನುಕಲಿಸಲಾಗುವ ಐಗೆನ್ ಉತ್ಪನ್ನಗಳಿಗೆ ಅನುರೂಪವಾದ ಐಗೆನ್ ಮೌಲ್ಯಗಳು ಹೇಗಿರಬೇಕು ಎಂಬ ಸಾಮಾನ್ಯವಾಗಿ ಪಡೆಯುವ ಫಲಿತಾಂಶವನ್ನು ಅರ್ಥಮಾಡಿಕೊಳ್ಳಬಹುದು.

ವಿಭವ ಪ್ರತಿಬಂಧಕ (ಪೊಟೆನ್ಶಿಯಲ್ ಬ್ಯಾರಿಯರ್): $x<0$ ಗೆ $V(x)=0$, $x>0$ ಗೆ $V(x)=V_1>0$ ಮತ್ತು $0<E<V_1$ ಆಗಿರುವಂತೆ ಇರುವ $V(x)$ ನೊಡನೆ ಸಮೀಕರಣ $Hu = (T_x + V)_u$

$$= \left[-\frac{\hbar^2}{m}\frac{\partial^2}{\partial x^2} + V(x)\right]u = Eu$$

ಎಂಬ ಸಮೀಕರಣವನ್ನು ಪರಿಗಣಿಸೋಣ. ಹಿಂದೆ ವಿವರಿಸಿರುವಂತೆ, $x=0$ ಯಲ್ಲಿ $V(x)$ ಅವಿಚ್ಛಿನ್ನವಾಗಿದ್ದರೂ υ ಮತ್ತು $\frac{\partial u}{\partial x}$ಗಳು ಎಲ್ಲೆಲ್ಲಿಯೂ ಅವಿಚ್ಛಿನ್ನವಾಗಿರಬೇಕು. $0<E<v_1$ ಕ್ಕೆ ಹಿಂದೆ ತಿಳಿಸಿರುವ ಸಮೀಕರಣ (26), (29) ಮತ್ತು (30)ನ್ನು ಜ್ಞಾಪಿಸಿಕೊಂಡರೆ ಸಮೀಕರಣ ಒಂದು ಮತ್ತು ಒಂದೇ ಒಂದು ಸ್ವತಂತ್ರ ಐಗೆನ್ ಉತ್ಪನ್ನವನ್ನು ಪಡೆದಿರಬೇಕು. ಇವು $x<0$ ಆದಾಗ

$$u(x,E) = \exp\left[ix(2mE)^{\frac{1}{2}}/\hbar\right]$$

$$+R\exp\left[-ix(2mE)^{\frac{1}{2}}/\hbar\right] \quad \text{....(42)}$$

$x>o$ ಆದಾಗ

$$u(x,E) = S\exp\left[-x(2m|E-V_1|)^{\frac{1}{2}}/\hbar\right] \quad \text{.....(43)}$$

ಉತ್ಪನ್ನಗಳಾಗಿರುತ್ತವೆ. ಇಲ್ಲಿ R ಮತ್ತು S ಗಳು ಸ್ಥಿರಾಂಕಗಳು. ಸಮೀಕರಣ (42)ರಲ್ಲಿ ಮೊದಲನೆಯ ಘಾತಾಂಕವನ್ನು (ಎಕ್ಸ್‌ಪೊನೆನ್ಶಿಯಲ್) ಅಭಿಜಾತ ಪ್ರತಿಬಂಧಕ ಅಥವಾ ತಿರುಗುಬಿಂದು $x=0$ ಕಡೆಗೆ $p_x = (2mE)^{½}$ ಸಂವೇಗದೊಡನೆ ಚಲಿಸುತ್ತಿರುವ ಕಣಗಳ ದೂಲ ಎಂದು ವ್ಯಾಖ್ಯಿಸುವುದು ರೂಢಿ ಮತ್ತು ನ್ಯಾಯ. ಸಮೀಕರಣ (42)ರಲ್ಲಿನ ಘಾತಾಂಕವನ್ನು ಅದು ಪ್ರತಿಫಲಿತ ದೂಲವನ್ನು ಪ್ರತಿನಿಧಿಸುತ್ತದೆ ಎನ್ನುತ್ತೇವೆ. ಪತನ (ಇನ್ಸಿಡೆಂಟ್) ಕಿರಣ ವೈಶಾಲ್ಯವನ್ನು (ಆಂಪ್ಲಿಟ್ಯೂಡ್) ಒಂದಕ್ಕೆ ಪ್ರಸಾಮಾನ್ಯೀಕರಿಸಿರುವುದರಿಂದ $|R|^2$ ಎಂಬುದು ಪ್ರತಿಬಂಧಕ ಪ್ರತಿಫಲನ ಗುಣಾಂಕವಾಗಿರಬೇಕು. $x=0$ ಯಲ್ಲಿ ಅವಿಚ್ಛಿನ್ನತೆಯನ್ನು ತೋರಿದಾಗ ಅಂದರೆ u ಮತ್ತು $\frac{\partial u}{\partial x}$ ಉತ್ಪನ್ನಗಳು $x=0$ ಯಲ್ಲಿ ಅವಿಚ್ಛಿನ್ನವಾಗಿರಬೇಕು ಎಂದು ಆಶಿಸಿದಾಗ

$$R = \frac{iE^{\frac{1}{2}} + (V_1 - E)^{\frac{1}{2}}}{iE^{\frac{1}{2}} - (V_1 - E)^{\frac{1}{2}}} \quad \text{........(44)}$$

$$S = \frac{2iE^{\frac{1}{2}}}{iE^{\frac{1}{2}} - (V_1 - E)^{\frac{1}{2}}} \quad \text{......(45)}$$

ಎಂದು ಪಡೆಯುತೇವೆ. ಈ ಸಮೀಕರಣಗಳಿಂದ ಅಭಿಜಾತ ಸ್ಥಿರಾಂಕದ ಪ್ರಕಾರ $E<V_1$ ಆದಾಗ $|R|^2 = 1$ ಆಗುವಂತೆ ಅದೇ ಮೌಲ್ಯವನ್ನು ಇದರಿಂದಲೂ ಪಡೆಯುತ್ತೇವೆ. ಚಿತ್ರ (4a)ಯಲ್ಲಿ ಐಗೆನ್ ಉತ್ಪನ್ನ $u(x, E)$ ಯನ್ನು ಚಿತ್ರಿಸಲಾಗಿದೆ. $x>0$ ಯಲ್ಲಿ $|u|^2 \neq 0$ ಆದ್ದರಿಂದ ಪ್ರತಿಬಂಧಕದ ಬಲಗಡೆಗೆ ಅಭಿಜಾತ ಸಿದ್ಧಾಂತದ ಪ್ರಕಾರ ಅಭೇದ್ಯವಾದ ಪ್ರವೇಶವನ್ನು ಕಣಗಳು ನುಗ್ಗುತ್ತವೆ. $x=+\infty$ ಯಲ್ಲಿ $|u|^2 = 0$ ಆಗಿರುವುದರಿಂದ ಕಣಗಳ ಕಟಕಟೆಗೆ ಹಿಂತಿರುಗಿಸಲ್ಪಡುತ್ತವೆ. ಇದು $|R|^2 = 1$ ರೊಡನೆ ಸಮಂಜಸವಾಗಿದೆ.




ಚಿತ್ರ–4 (a)ದಪ್ಪ ಅನಂತವಾಗಿರುವ ಪ್ರತಿಬಂಧಕದಿಂದ ಪ್ರತಿಫಲನ : (b) ದಪ್ಪ ನಿರ್ದಿಷ್ಟವಾಗಿರುವ ಪ್ರತಿಬಂಧಕದಿಂದ ಪ್ರತಿಫಲನ

ಈ ನುಗ್ಗುವಿಕೆ ರೀಫ್ರೇಕ್ಷಣಾಂಕ ಕಡಿಮೆಯಾಗಿರುವ ಮಾಧ್ಯಮದೊಳಕ್ಕೆ ನುಗ್ಗುವ ಬೆಳಕಿನ ಅಲೆಗೆ ಗಡಿ ಪದರದಲ್ಲಿ ಸಂಪೂರ್ಣ ಪ್ರತಿಫಲನ ಉಂಟಾಗಿ ನುಗ್ಗಿಬರುವುದನ್ನು ಹೋಲುತ್ತದೆ. ಆದ್ದರಿಂದ ಸಮೀಕರಣಗಳು (42),(43), (44), (45), ಕ್ವಾಂಟಂ ಸಿದ್ಧಾಂತದ ಸೂತ್ರೀಕರಣದಲ್ಲಿ ಅಡಕವಾಗಿರುವ ಅಲೆ–ಕಣದ್ವೈತೀಭಾವವನ್ನು ವ್ಯಕ್ತಪಡಿಸುತ್ತವೆ.

(4b)ಯಲ್ಲಿ ಕಾಣಿಸಿರುವ ನಿರ್ದಿಷ್ಟ ದಪ್ಪ α ಇರುವ ಪ್ರತಿಬಂಧಕಕ್ಕೆ ಪ್ರತಿಯೊಂದು $o<E<V_1$ ಎಂಬಲ್ಲಿಯೂ ಎರಡು ಉತ್ತರಗಳುಂಟು. ಎಡಗಡೆಯಿಂದ ಪತನವಾಗುವ ದೂಲದ $|T|^2$ ಗುಣಾಂಕ ಮತ್ತು $|R|^2$ ಗುಣಾಂಕಗಳೊಡನೆ ಎಡಗಡೆಯಿಂದ ಪತನವಾಗುವ ಕಿರಣದೂಲವನ್ನು ಪ್ರತಿನಿಧಿಸುವ ಉತ್ತರವನ್ನು ಕಂಡುಹಿಡಿದಾಗ $0<x<\alpha$ ಗೆ

$$u(x,E) = C\exp\left[-x(2m|E-V_1|)^{\frac{1}{2}}\hbar\right]$$

$$+D\exp\left[x(2m/E-V_1)^{\frac{1}{2}}/\hbar\right]$$

ಎಂದೂ $u>a$ ಆದಾಗ $u(x,E) = T\exp\left[ix(2mE)^{\frac{1}{2}}/\hbar\right]$

ಎಂದೂ ಪಡೆಯುತ್ತೇವೆ.

ಸಂಗತ ಆಂದೋಳಕ (ಹಾರ್ಮಾನಿಕ್ ಆಸಿಲೇಟರ್): ಅಭಿಜಾತ ಸಂಗತ ಆಂದೋಳಕಕ್ಕೆ ಸಲ್ಲುವ $V(x)$ ಉತ್ಪನ್ನ $\frac{1}{2}kx^2$ ಆಗಿರುತ್ತದೆ. ಇಲ್ಲಿ ಸಂಗತ ಆಂದೋಳಕದ ಸಮತೋಲ ಸ್ಥಾನ $x=0$ ಎಂಬಲ್ಲಿರುತ್ತದೆ. ಹಾಗೆಯೇ ಅಭಿಜಾತ ಆವರ್ತಾಂಕ v ವು $(2\pi)^{-1}\sqrt{k/m}$ ಆಗಿರುತ್ತದೆ. $V(x)$ ಉತ್ಪನ್ನವನ್ನು x ಎದುರು ಎಳೆದು ಸಂಗತ ಆಂದೋಳಕದ ವಿಭವ ಹೇಗಿರುತ್ತದೆಂಬುದನ್ನು ಚಿತ್ರ (5)ರಲ್ಲಿ ತೋರಿಸಲಾಗಿದೆ. $V(x)$ ಉತ್ಪನ್ನ $\pm\infty$ ಗಳಲ್ಲಿ ಅನಂತವಾಗುವುದರಿಂದ ಅವಿಚ್ಛಿನ್ನರೋಹಿತ ಉಂಟಾಗುವುದಿಲ್ಲ. ಆದರೆ ಭಿನ್ನವಾದ ಐಗೆನ್ ಮೌಲ್ಯಗಳ ಸಂಖ್ಯೆ ಅನಂತವಾಗಿರಬೇಕು. ಸಮಸ್ಯೆಗೆ ಸಲ್ಲುವ ಐಗೆನ್ ಮೌಲ್ಯ ಮತ್ತು ಐಗೆನ್ ಉತ್ಪನ್ನಗಳನ್ನು ಕಂಡುಹಿಡಿಯುಲು ಅನೇಕ ವಿಧಾನಗಳುಂಟು. ಯಾವುದಾದರೊಂದರಿಂದ ಐಗೆನ್ ಮೌಲ್ಯಗಳನ್ನು ಕಂಡುಹಿಡಿದಾಗ ಅವನ್ನು

$$E_n = \left(n + \tfrac{1}{2}\right)hv \quad \text{....(46)}$$

ಸಮೀಕರಣ ತಿಳಿಸುತ್ತದೆ.




ಚಿತ್ರ–5 ಸಂಗತ ಆಂದೋಳಕದ ವಿಧವ

ಇಲ್ಲಿ n = 0, 1, 2. . . . .ಪೂರ್ಣಾಂಕಗಳು. n = 0, 1, 2 ಎಂಬ ಮೂರು ಮೌಲ್ಯಗಳಿಗೆ ಸಲ್ಲುವ $u_0(\xi), u_1(\xi), u_2(\xi)$) ಉತ್ಪನ್ನಗಳನ್ನು ಚಿತ್ರ 6(a) , 6(b), 6(c),ಗಳಲ್ಲಿ ತೋರಿಸಿದ್ದೇವೆ.



ಚಿತ್ರ–6 (a) n = 0 ಆದಾಗ ಸಂಗತ ಆಂದೋಳಕ ಐಗೆನ್ ಉತ್ಪನ್ನ
(b) n = 1 ಆದಾಗ ಸಂಗತ ಆಂದೋಳಕ ಐಗೆನ್ ಉತ್ಪನ್ನ
(c) n = 2 ಆದಾಗ ಸಂಗತ ಆಂದೋಳಕ ಐಗೆನ್ ಉತ್ಪನ್ನ

n=10 ಆದಾಗ ಪಡೆಯುವ ಸಂಭಾವ್ಯತಾ ಸಾಂದ್ರತೆ $|u(\xi)|^2$ ವನ್ನು ಚಿತ್ರ (7) ರಲ್ಲಿ ಕಾಣಿಸಿದೆ. ಆ ಚಿತ್ರದಲ್ಲಿನ ಒಡೆದ ರೇಖೆ n=10 ಸ್ಥಿತಿಯಲ್ಲಿರುವ ಅಭಿಜಾತ ಅಂಧೋಳಕದ ಸಂಭಾವ್ಯತಾ ಸಾಂದ್ರತೆಯನ್ನು ತಿಳಿಸುತ್ತದೆ. ಅಭಿಜಾತ ಸಂಭಾವ್ಯತಾ ಸಾಂದ್ರತೆ ಮತ್ತು $|u_{10}(\xi)|^2$ ದ ಆಂದೋಳನಗಳ ಮೇಲೆ ಪಡೆದಿರುವ ಸರಾಸರಿಗಳ ನಡುವಣ ಹೊಂದಾಣಿಕೆ ಅಭಿಜಾತ ಕಣಬಲವಿಜ್ಞಾನ ಮತ್ತು ಕ್ವಾಂಟಂ ಸಿದ್ಧಾಂತದ ಇನ್ನೂ ಮೂಲಭೂತವಾದ ಅಲೆ–ಕಣದ್ವೈತಿಭಾವವನ್ನೊಳಗೊಂಡ ವ್ಯಾಖ್ಯೆಗಳ ನಡುವಣ ಸಂಬಂಧವನ್ನು ಉಲ್ಲೇಖಿಸುತ್ತದೆ.




ಚಿತ್ರ–7 x = 10 ಸ್ಥಿತಿಯಲ್ಲಿ ಸಂಗತ ಆಂದೋಳಕದ ಸಂಭಾವ್ಯತಾ ಸಾಂದ್ರತೆ

n ಹೆಚ್ಚಿದಂತೆ $|u_n(\xi)|^2$ದ ಆಂದೋಳನಗಳು ತ್ವರಿತಗೊಳ್ಳುತ್ತವೆ. ಆಗ ಅಭಿಜಾತ ಸಂಭಾವ್ಯತಾ ಸಾಂದ್ರತೆಯೊಡನೆ ಹೊಂದಾಣಿಕೆ ಹೆಚ್ಚುತ್ತದೆ. ಅನುರೂಪತಾ ತತ್ತ್ವದ ಪ್ರಕಾರ ಹೀಗಾಗುವುದೇ ಸರಿ. ಪೃಥಕ್ಕರಿಸಲ್ಪಟ್ಟ ಅಣು ಮತ್ತು ಘನವಸ್ತುಗಳಲ್ಲಿ ಕಂಪಿಸುತ್ತಿರುವ ಪರಮಾಣುಗಳ ಐಗೆನ್ ಮೌಲ್ಯ ಮತ್ತು ಐಗೆನ್ ಉತ್ಪನ್ನಗಳಿಗೆ ಒಳ್ಳೆಯ ಪ್ರಥಮ ಸನ್ನಿಹಿತತೆಯಾಗಿ ಈ ಸಂಗತ ಆಂದೋಳಕ ಫಲಿತಾಂಶಗಳಿರುತ್ತವೆ.

ಪರಿಕರ್ಮಿಗಳ ಸರಾಸರಿ ಅಥವಾ ನಿರೀಕ್ಷಿತ ಮೌಲ್ಯಗಳು: ಅಭಿಜಾತ ಬಲವಿಜ್ಞಾನದಲ್ಲಿ ಒಂದು ಕಣದ ಚಲನೆಯನ್ನು ನ್ಯೂಟನ್ನನ ನಿಯಮಗಳಿಂದ ವಿವರಿಸಲು ಸಾಧ್ಯವಾದರೂ ಯಾವುದೇ ವಸ್ತುವಿನಲ್ಲಿ ಅಸಂಖ್ಯಾತ ಕಣಗಳಿರುವುದರಿಂದ ಸಂಗ್ರಹಳಿಗೆ ಸಲ್ಲುವ ಸಂಖ್ಯಾಕಲನೀಯ ನಿಯಮಗಳಿಂದ ವಸ್ತುವಿನ ಸ್ಥೂಲ ಲಕ್ಷಣಗಳನ್ನು ವಿವರಿಸುವುದು ಅಗತ್ಯ. ಹೀಗೆ ಮಾಡಿದಾಗ ಅನೇಕ ಪ್ರಯೋಗಗಳನ್ನು ಮಾಡಿ ಪಡೆದ ಯಾವುದೇ ವೀಕ್ಷಿತಾಂಶದ ಸರಾಸರಿ ಮೌಲ್ಯಕ್ಕೂ ಸಿದ್ಧಾಂತದಿಂದ ಪಡೆದ ಮೌಲ್ಯಕ್ಕೂ ಕಂಡುಬಂದ ವ್ಯತ್ಯಾಸವನ್ನು ಕೂಲಂಕಷವಾಗಿ ತಿಳಿಯಲಾಗದ ಗುಪ್ತಪ್ರಾಚಲಗಳಿಂದ ಉಂಟಾಯಿತೆಂದು ಸಮಾಧಾನ ನೀಡುತ್ತೇವೆ. ಈ ಗುಪ್ತಪ್ರಾಚಲಗಳು ಕೊನೆಯ ಫಲಿತಾಂಶಗಳಲ್ಲಿ ಕಂಡುಬರುವುದಿಲ್ಲ. ಆದರೆ ಕ್ವಾಂಟಂ ಬಲವಿಜ್ಞಾನದಲ್ಲಿ ಕಣಗಳ ವರ್ತನೆಯನ್ನು ψ(r, t) ಉತ್ಪನ್ನ ವಿವರಿಸುತ್ತದೆ. ಕ್ವಾಂಟಂ ವ್ಯವಸ್ಥೆ ಒಂದೇ ಒಂದು ಕಣವನ್ನು ಒಳಗೊಂಡಿದ್ದರೂ ಉತ್ಪನ್ನ ಒಂದು ಸಕಂಭಾವ್ಯತಾ ಉತ್ಪನ್ನವಾಗಿರುತ್ತದೆ. ಹೀಗೆ ಕ್ವಾಂಟಂ ವ್ಯವಸ್ಥೆ ಒಂದೇ ಒಂದು ಕಣವನ್ನಾಗಲೀ ಅಸಂಖ್ಯಾತ ಕಣಗಳನ್ನಾಗಲೀ ಒಳಗೊಂಡಿದ್ದರೆ ಅದಕ್ಕೆ ಗಮನ ಕೊಡದಂತೆ ವೀಕ್ಷಿತಾಂಶದ ಮೌಲ್ಯಗಳು ಸರಾಸರಿ ಮೌಲ್ಯಗಳಿಂದ ಎಷ್ಟು ಪಲ್ಲಟವಾಗಿವೆ ಎಂಬುದನ್ನು ತತ್ತ್ವಶಃ ಕೂಡ ವಿವರಿಸಲು ಸಾಧ್ಯವಿಲ್ಲ ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ. ಕ್ವಾಂಟಂ ಬಲವಿಜ್ಞಾನದ ಸಂಖ್ಯಾಕಲನೀಯ ನಿಯಮಗಳಿಗೆ ಗುಪ್ತಪ್ರಾಚಲಗಳು ಆಧಾರಭೂತವಾಗಿರಲು ಸಾಧ್ಯವಿಲ್ಲ ಎಂಬುದನ್ನು ಫಾನ್‌ನ್ಯೂಮಾನ್ ಪ್ರದರ್ಶಿಸಿದ್ದಾನೆ. ಕ್ವಾಂಟಂ ಬಲವಿಜ್ಞಾನ ಸೂಕ್ಷ್ಮಕಣಗಳ ವರ್ತನೆಯನ್ನು ತಿಳಿಸುವ ಕೊನೆಯ ಸಿದ್ಧಾಂತ ಎಂದು ನಂಬಬಿದ್ದರೆ ಗುಪ್ತಪ್ರಾಚಲ ಮತ್ತು ಸಂಖ್ಯಾಕಲನೀಯ ನಿಯಮಗಳಿಗೆ ಏನೂ ಸಂಬಂಧವಿಲ್ಲ ಎಂಬ ಫಾನ್ ನೂಮಾನನ ಪ್ರಮೇಯವನ್ನು ಸರಿ ಎನ್ನಲಾಗುವುದಿಲ್ಲ. ಯಾವುದೇ ಕ್ಷಣದಲ್ಲಿ ಕ್ವಾಂಟಂ ವ್ಯವಸ್ಥೆಗೆ ಸಲ್ಲುವ ಯಾವುದೇ ವೀಕ್ಷಿತಾಂಶದ ಸರಾಸರಿ ಮೌಲ್ಯವನ್ನು

$$\overline{M} = \int \psi^*(r,t) M \psi(r,t) d^3x$$

ಎಂದು ವ್ಯಕ್ತಪಡಿಸಬಹುದು. ಇಲ್ಲಿ M ಎಂಬುದು ವೀಕ್ಷಿತಾಂಶಕ್ಕೆ ಸಲ್ಲುವ ಸೂಕ್ತವಾದ ಪರಿಕರ್ಮಿ. ಉದಾಹರಣೆ t ಕ್ಷಣದಲ್ಲಿ x ನೇರದಲ್ಲಿ ಚಲಿಸುತ್ತಿರುವ ಕಣದ ನಿರ್ದೇಶಕ ಮತ್ತು ಸಂವೇಗದ ಸರಾಸರಿ ಮೌಲ್ಯಗಳು ಮೇಲಿನ ಸೂತ್ರದಿಂದ ಅನುಕ್ರಮವಾಗಿ

$$< x > \equiv \overline{x} = \int \psi^*(r,t)\, x\, \psi(r,t) d^3x$$

$$< Px > \equiv \overline{P_x} = \int \psi^*(r,t) \frac{\hbar}{i}\frac{\partial}{\partial x}\psi(r,t) d^3x$$

ಆಗಿರುತ್ತವೆ.

ಅನಿಶ್ಚಿತತಾ ತತ್ತ್ವ (ಅನ್‌ಸರ್ಟನ್ಟಿ ಪ್ರಿನ್ಸಿಪಲ್) : A ವೀಕ್ಷಿತಾಂಶದ ಮೌಲ್ಯದಲ್ಲಿ ಹರವಿನ ಅಥವಾ ಅನಿಶ್ಚಿತತೆಯ ನಿಷ್ಕೃಷ್ಟವಾದ ಅಳತೆ $\Delta A$ ಯನ್ನು

$$(\Delta A)^2 = <(A - <A>)^2> = <A^2> - (<A>)^2 \qquad .......(47)$$

ಸಮೀಕರಣದಿಂದ ಬರೆಯುತ್ತೇವೆ. ಇಲ್ಲಿ $(\Delta A)^2$ ಎಂಬುದು A ವೀಕ್ಷಿತಾಂಶದ ಸರಾಸರಿ <A> ಯಿಂದ ಅದರ ಸರಾಸರಿ ವರ್ಗ ವಿಚಲನೆಯನ್ನು (ಡೀವಿಯೇಷನ್) ತಿಳಿಸುತ್ತದೆ. $A\psi = \alpha\psi$. ಅಂದರೆ $\psi$ ಉತ್ಪನ್ನ A ಪರಿಕರ್ಮಿಯ ಐಗೆನ್ ಉತ್ಪನ್ನವಾದಾಗ ಮತ್ತು ಆದಾಗ ಮಾತ್ರ $\Delta A = 0$ ಆ ಸಂದರ್ಭದಲ್ಲಿ $<A> = \alpha, <A^2> = \alpha^2$. A, B ಎಂಬ ಯಾವುದಾದರೂ ಎರಡು ವೀಕ್ಷಿತಾಂಶಗಳ ನಡುವೆ AB-BA=0 ಆದಾಗ $\Delta A$ ಮತ್ತು $\Delta B$ ಗಳು ಏಕಕಾಲದಲ್ಲಿ ಸೊನ್ನೆಯಾಗಬಹುದು. $AB - BA \neq 0$ ಆದರೆ A,B ಗಳನ್ನು

$$A' = A - <A>$$
$$B' = B - <B>$$

ಎಂದು ಬರೆದು ಇವುಗಳಿಂದ

$$(\Delta A)^2(\Delta B)^2 = \int (A'\psi)^*(A'\psi)\int (B'\psi)^*(B'\psi)$$
$$\geq \left|\int (A'\psi)^*(B'\psi)\right|^2$$
$$= \left|\int \psi^*(A'B'\psi)\right|^2 \qquad ......(48)$$

ಎಂದು ಪಡೆಯುತ್ತೇವೆ. ಆದರೆ

$$A'B' = \tfrac{1}{2}(A'B' - B'A') + \tfrac{1}{2}(A'B' + B'A')$$

ಆಗಿರುವುದರಿಂದ

$$(\Delta A)^2(\Delta B)^2 \geq \tfrac{1}{4}|<AB - BA>|^2 \qquad .....(49)$$

ಹೀಗೆ ಅನಿಶ್ಚಿತತಾ ತತ್ತ್ವದ ನಿಷ್ಠುರವಾದ ಕ್ವಾಂಟಂ ಸೈದ್ಧಾಂತಿಕ ನಿರೂಪಣೆಯನ್ನು ಪಡೆಯುತ್ತೇವೆ. A = x, B=$P_x$ ಆದಾಗ

$$(xp_x - p_x x)\psi = i\hbar\psi$$

ಆದ್ದರಿಂದ

$$(\Delta x)(\Delta p_x) \geq \hbar/2$$

ಎಂದು ಪಡೆಯುತ್ತೇವೆ. ಪರಿಕರ್ಮಿ ಕ್ರಮೀಕೃತತ್ವಕ್ಕೆ (ಆಪರೇಟರ್ ಫಾರ್ಮಲಿಸಂ) ಅಲೆ–ಕಣ ವ್ಯಾಖ್ಯೆಯ ದ್ವೈತೀಭಾವನೆಯ ಅವಶ್ಯಕತೆಯನ್ನು ಈ ಅನಿಶ್ಚಿತತಾ ತತ್ತ್ವ ಪುನಃ ಪ್ರದರ್ಶಿಸುತ್ತದೆ.

ಕಾಲಾವಲಂಬನೆ (ಟೈಂ ಡಿಪೆಂಡೆನ್ಸ್) : $t_0$ ಎಂಬ ಯಾವುದಾದರೊಂದು ಕ್ಷಣದಲ್ಲಿ ಕ್ವಾಂಟಂ ವ್ಯವಸ್ಥೆಯ ಮೇಲೆ ಮಾಡಿದ ವೀಕ್ಷಿತಾಂಶಗಳ ಮೌಲ್ಯಗಳು ಏನಿರಬೇಕು ಎಂಬುದನ್ನು $\psi(x, t_0)$ ಅಲೆಉತ್ಪನ್ನದ ಮೂಲಕ ತಿಳಿಯಬಹುದು ಎಂಬುದನ್ನು ಮೇಲೆ ವಿವರಿಸಿರುವ ಅಂಶಗಳು ತಿಳಿಸುತ್ತವೆ. ಆದರೆ t ಎಂಬ ಯಾವುದೇ ಮುಂದಿನ ಕ್ಷಣದಲ್ಲಿ ಅಳತೆ ಮಾಡಿದ ಫಲಿತಾಂಶಗಳ ಬಗ್ಗೆ ಭವಿಷ್ಯ ನುಡಿಯಲು $t_0$ ಯಿಂದ t ಗೆ $\psi(x, t)$ ಉತ್ಪನ್ನ ಕಾಲದಲ್ಲಿ ಹೇಗೆ ವಿಕಾಸವಾಗುತ್ತದೆ ಎಂಬುದನ್ನು ತಿಳಿಯುವುದು ಅಗತ್ಯ. ಈ ವಿಕಾಸವನ್ನು

$$H\psi = i\hbar\frac{\partial\psi}{t\partial} \qquad .... (50)$$

ಎಂಬ ಕಾಲಾವಲಂಬಿತ ಶ್ರೇಡಿಂಗರ್ ಸಮೀಕರಣ ನಿರ್ಧರಿಸುತ್ತದೆ ಎಂಬುದನ್ನು ಆಧಾರವಾಗಿ ತೆಗೆದುಕೊಳ್ಳುತ್ತೇವೆ. ಇಲ್ಲಿ ಊ ಹ್ಯಾಮಿಲ್ಟೋನಿಯನ್ ಪರಿಕರ್ಮಿಯೂ $\psi$, t ಯ ಅವಿಚ್ಛಿನ್ನ ಉತ್ಪನ್ನವೂ ಆಗಿವೆ. H ನ್ನು ಒಂದು ಸಂಖ್ಯೆ ಎಂದು ಭಾವಿಸಿದರೆ $H\psi = i\hbar\frac{\partial\psi}{\partial t}$ ಸಮೀಕರಣದ ಉತ್ತರವನ್ನು

$$\psi(t) = \exp\left[\frac{-iH(t - t_0)}{\hbar}\right]\psi(t_0) \qquad .....(51)$$

ಎಂದು ಬರೆಯಬಹುದು. H ಒಂದು ಪರಿಕರ್ಮಿ ಆಗಿರುವುದರಿಂದ

$$\exp\left[\frac{-iH(t - t_0)}{\hbar}\right]$$

ಎಂಬುದರ ವ್ಯಾಖ್ಯೆ

$$\exp\left[\frac{-iH(t - t_0)}{\hbar}\right] = I - i\frac{(t - t_0)}{\hbar}H + \frac{[-i(t - t_0)]^2}{2\hbar^2}H^2 \qquad .......(52)$$

ಆಗಿರುತ್ತದೆ. ಇಲ್ಲಿ I ಏಕಮಾನ ಪರಿಕರ್ಮಿ, ಅಂದರೆ $I\psi = \psi$ , ಈ ಪರಿಕರ್ಮಿ ವಿಧಾನಗಳನ್ನು ಕ್ವಾಂಟಂ ಸಿದ್ಧಾಂತದಲ್ಲಿ ವ್ಯಾಪಕವಾಗಿ ಬಳಸುತ್ತೇವೆ.

$$H\psi(t_0) = E\psi(t_0)$$

ಆದಾಗ ಅಂದರೆ $\psi(t_0)$ ಎಂಬುದು ಶಕ್ತಿ ಪರಿಕರ್ಮಿಯ ಒಂದು ಐಗೆನ್ ಉತ್ಪನ್ನವಾದಾಗ ಸಮೀಕರಣ (51) ರಿಂದ

$$\psi(t) = \psi(t_0)\exp\left[\frac{-iE(t - t_0)}{\hbar}\right]$$

ಆದ್ದರಿಂದ $|\psi(t)| = |\psi(t_0)|$

ಹಾಗೆಯೇ ವ್ಯವಸ್ಥೆ $\psi$ (t) ಎಂಬ ಒಂದು ಸ್ತಬ್ಧ ಸ್ಥಿತಿಯಲ್ಲಿ (ಸ್ಟೇಷನರಿ ಸ್ಟೇಟ್) ಇದ್ದಾಗ ೦ ಎಂಬ ಎಲ್ಲ ಪರಿಕರ್ಮಿಗಳ ನಿರೀಕ್ಷಿತ ಮೌಲ್ಯ <A> ಗಳೂ ಕಾಲ–ನಿರವಲಂಬಿತವಾಗಿರುತ್ತವೆ. ಕ್ವಾಂಟಂ ವ್ಯವಸ್ಥೆ ಒಂದು ಯಾದೃಚ್ಛಿಕ ಸ್ಥಿತಿಯಲ್ಲಿದ್ದಾಗ

$$\frac{d}{dt} < A > = \frac{I}{i\hbar} < (AH - HA) > \qquad .....(53)$$

ಎಂಬ ಸಮೀಕರಣ ಪಾಲಿತವಾಗುತ್ತದೆ. ಹೀಗೆ ಯಾವುದೇ ವೀಕ್ಷಿತಾಂಶದ ಸರಾಸರಿ ಮೌಲ್ಯ ಕಾಲದಲ್ಲಿ ಹೇಗೆ ಬದಲಾಗುತ್ತದೆಂಬುದನ್ನು ಈ ಸಮೀಕರಣದಿಂದ ತಿಳಿಯುತ್ತೇವೆ.

**ಅಚರತ್ವ (ಇನ್‌ವೇರಿಯನ್ಸ್)** : $H\psi - i\hbar\frac{\partial\psi}{\partial t}$ ಎಂಬ ಕಾಲಾವಲಂಬಿತ ಶ್ರೇಡಿಂಗರ್ ಸಮೀಕರಣವನ್ನು g- ಕ್ವಾಂಟಂ ಕಣಗಳನ್ನೊಳಗೊಂಡ ವ್ಯವಸ್ಥೆಗೆ ಸಂಬಂಧಿಸಿದಂತೆ ಬರೆದು ವಿಶ್ವದ ಮಿಕ್ಕ ಭಾಗದಿಂದ ವ್ಯವಸ್ಥೆ ಪ್ರತ್ಯೇಕಿಸಲ್ಪಟ್ಟಿದೆ ಎಂದು ಭಾವಿಸಿ ಸಮೀಕರಣ –

(i) ಸ್ಥಾನಾಂತರಕ್ಕೆ (ಟ್ರಾನ್ಸ್‌ಲೇಷನ್) ಸಂಬಂಧಿಸಿದಂತೆ ಅಚರವಾಗಿದೆ : ಅಂದರೆ ಸಮೀಕರಣ ನಿರ್ದೇಶಕಾಕ್ಷಗಳ ಮೂಲಬಿಂದುವನ್ನು ಅವಲಂಬಿಸಿಲ್ಲ;

(ii) ನಿರ್ದೇಶಕಾಕ್ಷಗಳ ವಿನ್ಯಾಸವನ್ನು ಅವಲಂಬಿಸಿಲ್ಲ : ಅಂದರೆ ಸಮೀಕರಣ ಆವರ್ತನ (ರೊಟೇಶನ್) ಅಚರತ್ವವನ್ನು ಪಡೆದಿದೆ.

(iii) ನಿರ್ದೇಶಕ ವ್ಯವಸ್ಥೆಯ ಎಡಗೈ–ವ್ಯವಸ್ಥೆಯನ್ನಾಗಲೀ ಬಲಗೈ–ವ್ಯವಸ್ಥೆಯನ್ನಾಗಲೀ ಅದರ ವಿವರಣೆಗೆ ಅನ್ವಯಿಸಬಹುದು; ಅಂದರೆ ಸಮೀಕರಣ ಪ್ರತಿಫಲನ (ರಿಫ್ಲೆಕ್ಷನ್) ಅಚರತ್ವವನ್ನು ಪಡೆದಿದೆ.–

ಎಂದು ಅತ್ಯಂತ ಸಾಮಾನ್ಯವಾದ ತರ್ಕಸರಣಿಯಿಂದ ಪ್ರತಿಸ್ಥಾಪಿಸಬಹುದು. ವ್ಯವಸ್ಥೆಯಲ್ಲಿರುವ ಕ್ವಾಂಟಂ ಕಣಗಳ ನಡುವೆ ಅಂತರಕ್ರಿಯೆಗಳಿಲ್ಲದಿದ್ದರೆ ಹ್ಯಾಮಿಲ್ಟೋನಿಯನ್ H ನ್ನು

$$H \equiv H_1 + H_2 + ......... \quad .....+ H_g$$

ಪ್ರತಿಯೊಂದು ಕಣಕ್ಕೂ ಸಂಬಂಧಿಸಿದಂತೆ ಪ್ರತ್ಯೇಕಿಸಿ ಬರೆಯಬಹುದು. ಆಗ ವ್ಯವಸ್ಥೆಯ ವರ್ತನೆಯನ್ನು ವಿವರಿಸುವ ಶ್ರೇಡಿಂಗರ್ ಸಮೀಕರಣವನ್ನು

$$(H_1 + H_2 + ......... \quad .....+ H_g)$$
$$[u_1(r_1, E_1, \alpha) ..............u_g(r_g, E_g, \alpha_g)]$$

= $(E_1 + E_2 + ....E_g)$ $[u_1(r_1, E_1, \alpha) ..............u_g(r_g, E_g, \alpha_g)]$ ಎಂದು ಬರೆಯಬಹುದು. ಇಲ್ಲಿ $u_1(r_1, E_1, \alpha) ..............u_g(r_g, E_g, \alpha_g)$ ಐಗೆನ್ ಉತ್ಪನ್ನಗಳು ಲಂಬೀಯ ಪ್ರಸಾಮಾನ್ಯವಾಗಿರುವ ಉತ್ಪನ್ನಗಳ ಗಣವೊಂದನ್ನು ಪ್ರತಿನಿಧಿಸುತ್ತವೆ. $H_1$ ಕಣ 1 ಕ್ಕೆ ಸಲ್ಲುವ ಹ್ಯಾಮಿಲ್ಟೋನಿಯನ್ ಪರಿಕರ್ಮಿಯೂ. . . . . $H_g$ ಕಣ g ಗೆ ಸಲ್ಲುವ ಹ್ಯಾಮಿಲ್ಟೋನಿಯನ್ ಪರಿಕರ್ಮಿಯೂ ಆಗಿರುತ್ತವೆ. ಹಾಗೆಯೇ $u_1(r_1, E_1, \alpha) ..............u_g(r_g, E_g, \alpha_g)$ ಗುಣಲಬ್ಧಗಳು $H = H_1 + H_2 + .....H_g$ ಯ ಐಗೆನ್ ಉತ್ಪನ್ನಗಳ ಸಂಪೂರ್ಣ ಲಂಬೀಯ ಪ್ರಸಾಮಾನ್ಯ ಗಣವಾಗಿರುತ್ತವೆ. ಹಾಗೆಯೇ H ನ ಶಕ್ತಿ ಹಂತಗಳನ್ನು ಕಣಗಳ ಪ್ರತ್ಯೇಕ ಶಕ್ತಿಹಂತಗಳಿಂದ ಪಡೆಯಬಹುದಾದ

$E = E_1 + E_2 + ..........+E_g$ ಮೌಲ್ಯಗಳು ತಿಳಿಸುತ್ತವೆ.

ಪ್ಯಾರಿಟಿ : $P^2\psi(r) = p\psi(-r) = \psi(r)$ ಆದ್ದರಿಂದ ಪ್ಯಾರಿಟಿ ಪರಿಕರ್ಮಿ $+^1$ ಮತ್ತು $-^1$ ಎಂಬ ಎರಡು ಐಗೆನ್ ಮೌಲ್ಯಗಳನ್ನು ಪಡೆದಿರುತ್ತದೆ. ಈ ಮೌಲ್ಯಗಳಿಗೆ

ಅನುರೂಪವಾದ ಉತ್ಪನ್ನಗಳು ಸರಿ (ಈವನ್) ಅಥವಾ ಬೆಸ(ಆಡ್) ಪ್ಯಾರಿಟಿ ಉಳ್ಳವು ಎನ್ನುತ್ತೇವೆ. ಒಂದು ಸಂಗತ ಆಂದೋಳಕದ ಹ್ಯಾಮಿಲ್ಟೋನಿಯನ್ $\frac{Px^2}{2m} - \frac{1}{2}kx^2$ಒಡನೆ ಪ್ಯಾರಿಟಿ ಪರಿಕರ್ಮಿ P ವ್ಯತ್ಯಯವಾಗಿರುತ್ತದೆ. ಅಂದರೆ $[P,H_X]=0$. ಸಂಗತ ಆಂದೋಳಕದ ಐಗೆನ್ ಮೌಲ್ಯಗಳು ಅವಿಕೃತ (ನಾನ್ ಡೀಜನರೇಟ್). ಆದ್ದರಿಂದ ಸಂಗತ ಆಂದೋಳಕಕ್ಕೆ ಸಲ್ಲುವ ಪ್ರತಿಯೊಂದು ಐಗೆನ್ ಉತ್ಪನ್ನವೂ ಸರಿ ಪ್ಯಾರಿಟಿಯನ್ನಾಗಲೀ ಬೆಸ ಪ್ಯಾರಿಟಿಯನ್ನಾಗಲೀ ಪಡೆದಿರುತ್ತದೆ. ಈ ವಿಷಯಗಳನ್ನು ಚಿತ್ರ (6)ರಿಂದ ತಿಳಿಯಬಹುದು.

ಪ್ಯಾಕೆಟಿನ ಕಾಲ ವಿಕಾಸ : ಒಂದು ಬಿಂದುವಿನ ಪಕ್ಕದಲ್ಲಿ ಸ್ಥಳೀಕೃತವಾಗಿರುವ (ಭ್ರಮಣವಿಲ್ಲದ) ಕಣ ಒಂದನ್ನು ಪ್ರತಿನಿಧಿಸುವ ಅಲೆಉತ್ಪನ್ನ $\psi$ ಯನ್ನು ಅಲೆಪ್ಯಾಕೆಟ್ ಎಂದು ಕರೆಯುತ್ತೇವೆ. ಕಣದ ಹ್ಯಾಮಿಲ್ಟೋನಿಯನ್

$H = \frac{p^2}{2m} + V(r)$ ಎಂದು ಭಾವಿಸಿ ಅದರ ಸರಾಸರಿ ಸ್ಥಾನ $< X >$ ಗೆ ಅನ್ವಯಿಸುವಂತೆ

$$\frac{d}{dt} < X > = \frac{I}{i\hbar} < XH - HX > = < \frac{px}{M} >$$

$$\frac{d^2}{dt^2} < X > = \frac{d}{dt} < \frac{px}{m} > = -\frac{I}{m} < \frac{\partial V}{\partial x} >$$

ಎಂಬ ಸಮೀಕರಣಗಳನ್ನು ಪಡೆಯಬಹುದು.

(i) ಪ್ಯಾಕೆಟ್ಟಿನ ಕೇಂದ್ರ ಸಂವೇಗದ ನಿರೀಕ್ಷಿತಮೌಲ್ಯ ತಿಳಿಸುವ ವೇಗದಿಂದ ಚಲಿಸುತ್ತದೆ.

(ii)ಪ್ಯಾಕೆಟ್ಟಿನ ಕೇಂದ್ರದ ವೇಗೋತ್ಕರ್ಷವನ್ನು ಅಭಿಜಾತ ಬಲ $\frac{\partial V}{\partial x}$ ನ ನಿರೀಕ್ಷಿತ ಮೌಲ್ಯದಿಂದ ತಿಳಿಯಬಹುದೆಂಬುದನ್ನು ಈ ಸಮೀಕರಣಗಳು ತಿಳಿಸುತ್ತವೆ.

ಹೀಗೆ ಈ ಸಮೀಕರಣಗಳು ಕ್ವಾಂಟಂ ಸಿದ್ಧಾಂತ ಮತ್ತು ಅಭಿಜಾತ ಸಿದ್ಧಾಂತಗಳ ನಡುವೆ ಇರುವ ಸಂವಾದಿತ್ವವನ್ನು (ಕರೆಸ್ಪಾಂಡೆನ್ಸ್) ಪ್ರತಿಸ್ಥಾಪಿಸುತ್ತವೆ; ಮತ್ತು ಪ್ಯಾಕೆಟ್ ಅದರ ಮಧ್ಯಸ್ಥಸ್ಥಾನದಿಂದ (ಮೀನ್ ಪೊಸಿಷನ್) ಎಷ್ಟು ಹರವಿದೆ ಎಂಬುದನ್ನು ಗಮನಿಸದಿದ್ದಾಗ ಅದು ಕಣದಂತೆ ಚಲಿಸುತ್ತದೆ ಎಂದು ಭಾವಿಸುವುದು ತಪ್ಪಲ್ಲ ಎಂದು ಈ ಸಮೀಕರಣಗಳು ತಿಳಿಸುತ್ತವೆ.

ಪ್ರತಿಯೊಂದು ಕಣವನ್ನೂ ಮಿಕ್ಕವಕ್ಕಿಂತ ಬೇರೆ ಎಂದು ತಿಳಿಯಲಾಗದುದು: g ಸರ್ವಸಮ ಕಣಗಳನ್ನೊಳಗೊಂಡ ಕ್ವಾಂಟಂ ವ್ಯವಸ್ಥೆಯಲ್ಲಿ ಒಂದು ಗೊತ್ತಾದ ಕಣವನ್ನು ಆಕಾಶದ dxdydz ಗಾತ್ರದಲ್ಲಿ ಕಂಡುಹಿಡಿಯುವ ಸಂಭಾವ್ಯತೆ

$$P_1+P_2+....P_g \qquad .........(54)$$

ಆಗಿರುತ್ತದೆ. ಇಲ್ಲಿ $P_1+P_2+....P_g$ಗಳು ಪ್ರತ್ಯೇಕಿಸಲಾಗುವ ಕಣಗಳ ಸಂಭಾವ್ಯತೆಗಳನ್ನು ತಿಳಿಸುತ್ತವೆ ಎಂದು ಭಾವಿಸಿ ಗಣಿತೋಕ್ತಿ (54)ನ್ನು ಬರೆಯಲಾಗಿದೆ. ಈ ಗಣಿತೋಕ್ತಿಯನ್ನು ಉಪಯೋಗಿಸಿ ಕ್ವಾಂಟಂ ವ್ಯವಸ್ಥೆಗೆ ಸಲ್ಲುವ ಸೂಕ್ತ ಅಲೆ ಉತ್ಪನ್ನಗಳಿಂದ ಪ್ರತಿಯೊಂದು ವೀಕ್ಷಿತಾಂಶದ ಸರಾಸರಿ ಮಾಲ್ಯ ಮತ್ತು ಅದು ಕಾಲದಲ್ಲಿ ಹೇಗೆ ಬದಲಾಯಿಸುತ್ತದೆ ಎಂಬುದನ್ನು ತಿಳಿಯಬೇಕು. ಕ್ರಮೀಕೃತತ್ವವನ್ನು ಈ ನಿಬಂಧನೆಗಳಿಗನುಸಾರವಾಗಿ ಬೆಳೆಸುವುದು ಕಷ್ಟವೇ ಸರಿ. **(ನೋಡಿ– ಕ್ವಾಂಟಂ–ಸಂಖ್ಯಾಕಲನವಿಜ್ಞಾನ)** (ಸಿ.ಕೆ.ವಿ.)

**ಕ್ವಾಂಟಂ ಸಿದ್ಧಾಂತ, ಸಾಪೇಕ್ಷಿಕ :** ಬೆಳಕಿನ ವೇಗ c ಅಥವಾ ಅದಕ್ಕೆ ಸನ್ನಿಹಿತವಾದ (ಅಪ್ರಾಕ್ಸಿಮೇಟ್) ವೇಗದಲ್ಲಿ ಚಲಿಸುತ್ತಿರುವ ಮತ್ತು ರೂಪದಲ್ಲಿ ಬದಲಾವಣೆ ಆಗದ ಕಣಗಳಿಗೆ ಅನ್ವಯಿಸುವಂತೆ ಬೆಳೆಸಿರುವ ಕ್ವಾಂಟಂ ಬಲವಿಜ್ಞಾನ (ರಿಲೆಟಿವಿಸ್ಟಿಕ್ ಕ್ವಾಂಟಂ ಥಿಯರಿ). ಇಂಥ ಕಣಗಳಿಗೆ ಸಾಪೇಕ್ಷಿಕ ಕಣಗಳು ಎಂದು ಹೆಸರು. ಕಣಗಳು ನಾಶ ಅಥವಾ ಜನನವಾಗುವುದನ್ನು ಗಮನಕ್ಕೆ ತೆಗೆದುಕೊಂಡು ಬೆಳೆಸಿರುವ ಕ್ವಾಂಟಂ ಸಿದ್ಧಾಂತಕ್ಕೆ ಕ್ವಾಂಟಂ ಕ್ಷೇತ್ರ ಸಿದ್ಧಾಂತ ಎಂದು ಹೆಸರು. ಆದರೆ ಸಿದ್ಧಾಂತವೆಂದರೆ ಕ್ವಾಂಟಂ ಕ್ಷೇತ್ರ ಸಿದ್ಧಾಂತ ಒಂದೇ ಎಂಬ ಭಾವನೆ ವಿಜ್ಞಾನಿಗಳಲ್ಲಿ ಇತೀಚೆಗೆ ಮೂಡಿರುತ್ತದೆ.

ಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತದ ಬೆಳವಣಿಗೆಯನ್ನು, ಬಳಕೆಯಲ್ಲಿ, ಒಂದೇ ಒಂದು ಸಾಪೇಕ್ಷಿಕ ಕಣಕ್ಕೆ ಅನ್ವಯಿಸಿದಂತೆ ಬೆಳೆಸುತ್ತಾರೆ. ಅಸಾಪೇಕ್ಷಿಕ ಕ್ವಾಂಟಂ ಬಲವಿಜ್ಞಾನದಲ್ಲಿ ಶ್ರೇಡಿಂಗರ್ ಸಮೀಕರಣವನ್ನು ಅನೇಕ ಕಣಗಳನ್ನು ಒಳಗೊಂಡ ವ್ಯವಸ್ಥೆಗಳಿಗೆ ಬೆಳೆಸಿದ್ದರೂ ವಿಶಿಷ್ಟ ಸಾಪೇಕ್ಷಿತಾ ಸಿದ್ಧಾಂತದ (ಸ್ಪೆಶಲ್ ಥಿಯರಿ ಆಫ್ ರಿಲೆಟಿವಿಟಿ) ದೃಷ್ಟಿಯಿಂದ ಅದನ್ನು ಸಾರ್ವತ್ರೀಕರಿಸಲು ಇನ್ನೂ ಸಾಧ್ಯವಾಗಿಲ್ಲ. ಕ್ವಾಂಟಂ ಬಲವಿಜ್ಞಾನ, ಅಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತ ಮತ್ತು ಸಾಪೇಕ್ಷಿಕಾ ಸಿದ್ಧಾಂತಗಳಲ್ಲಿ ವಿವರಿಸಿರುವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಸಿದ್ಧಾಂತವನ್ನು ಹೇಗೆ ಬೆಳೆಸಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು.

ಅಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತದಲ್ಲಿ ಶ್ರೇಡಿಂಗರ್ ಸಮೀಕರಣ ಬಹಳ ಮೂಲಭೂತವಾದ ಸಮೀಕರಣ. ಇದು ನಿರ್ದೇಶಕಾಕ್ಷಗಳ ಆವರ್ತನೆಗಳನ್ನು (ರೊಟೇಶನ್ಸ್) ಮತ್ತು ಪ್ರತಿಫಲನಗಳನ್ನು ಕುರಿತು ಅಚರ (ಇನ್‌ವೇರಿಯಂಟ್) ಆಗಿರಬೇಕೆಂಬುದು ಯಾವುದೇ ಭೌತಸಿದ್ಧಾಂತ ಪಾಲಿಸಬೇಕಾದ ಮೂಲಭೂತ ತತ್ವ. ಅಲ್ಲದೆ ವಿಶಿಷ್ಟ ಸಾಪೇಕ್ಷಿತಾ ಸಿದ್ಧಾಂತದ ದೃಷ್ಟಿಯಿಂದ ಶ್ರೇಡಿಂಗರ್ ಸಮೀಕರಣದಲ್ಲಿನ $\psi$ ಉತ್ಪನ್ನವನ್ನು ಲೊರೆಂಟ್ಸ್ ಪರಿವರ್ತನೆಗಳಿಗೆ ಒಳಪಡಿಸಿದಾಗ ಅದು ಅಚರವಾಗಿರಬೇಕು. ಆಗ ಅಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತ ಅತಿ ನಿಷ್ಕೃರವಾಗಿಯೂ ಸರಿಯಾಗಿಯೂ ಲೊರೆಂಟ್ಸ್–ಅಚರತೆಯುಳ್ಳ ಒಂದು ಸಿದ್ಧಾಂತದಿಂದ ಪ್ರಥಮ ಸನ್ನಿಹಿತತೆಯಲ್ಲಿ (ಫಸ್ಟ್ ಅಪ್ರಾಕ್ಸಿಮೇಶನ್) ಪಡೆದ ಒಂದು ಸಿದ್ಧಾಂತವಾಗಿರುತ್ತದೆ. ಕಣಗಳ ವೇಗಗಳು ಬೆಳಕಿನ ವೇಗವನ್ನು ಸಮೀಪಿಸಿದಂತೆ ಅಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತದಿಂದ ಪರಿಣಾಮಗಳು ಪ್ರಯೋಗ ಫಲಿತಾಂಶಗಳಿಂದ ದೂರ ಸರಿಯುವುದು ಹೆಚ್ಚು ಮನದಟ್ಟಾಗುತ್ತದೆ.

ಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತ. ಅಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತದಂತೆ, ಅಲೆ–ಕಣ ದ್ವೈತೀಭಾವವನ್ನು ಒಳಗೊಂಡಿರಬೇಕು. ಹಾಗೆಯೇ $t>0$ ಆಗಿರುವ ಯಾವುದೇ ಕ್ಷಣದಲ್ಲಿ $\psi(t)$ ಅಲೆ ಉತ್ಪನ್ನವನ್ನು $t=0$ ಕ್ಷಣದಲ್ಲಿರುವ ಮೌಲ್ಯದಿಂದ ನಿರ್ಧರಿಸಲು ಸಾಧ್ಯವಾಗಬೇಕು. ಅಸಾಪೇಕ್ಷಿಕ ಕ್ವಾಂಟಂ ಸಿದ್ಧಾಂತದಲ್ಲಿ ಈ ಗುಣಗಳನ್ನು

$$E\psi = H(p, r)\psi$$

ಅಥವಾ .....(1)

$$i\hbar\frac{\partial\psi}{\partial t} = H(p,r)\psi$$

ಶ್ರೇಡಿಂಗರ್ ಸಮೀಕರಣ ಪಡೆದಿರುತ್ತದೆ. ಈ ಸಿದ್ಧಾಂತದಲ್ಲಿ ಬೆಳೆಸುವ ಸಮೀಕರಣಕ್ಕೂ ಈ ಗುಣಗಳಿರಬೇಕೆಂದು ಆಶಿಸುವುದು ಸಹಜ. ಮೊದಲಿನ ಸಮೀಕರಣದಲ್ಲಿ ಕಣದ ಶಕ್ತಿಯನ್ನು ತಿಳಿಸುವ E ಯನ್ನು ಎರಡನೆಯದರಲ್ಲಿ ಅದರ ಪರಿಕರ್ಮಿ $i\hbar\frac{\partial}{\partial t}$ಯಿಂದ ಆದೇಶಿಸಿದ್ದೇವೆ.

ಸಾಪೇಕ್ಷಿಕ ಅಲೆ ಸಮೀಕರಣವೂ ಶ್ರೇಡಿಂಗರ್ ಸಮೀಕರಣದ ರೂಪವನ್ನು ಪಡೆದಿರಬೇಕು ಎಂಬ ಉದ್ದೇಶದಿಂದ ಸ್ವತಂತ್ರ ಕಣಕ್ಕೆ ಅನ್ವಯಿಸುವ ಸಮೀಕರಣವನ್ನು ಬೆಳೆಸುವಾಗ ಹ್ಯಾಮಿಲ್ಟೋನಿಯನ್ H ಅನ್ನು

$$H = (p^2c^2 + m_o^2c^4)^{\frac{1}{2}} \qquad ......(2)$$

ಎಂದು ಬರೆಯಬೇಕು. ಇಲ್ಲಿ p ಯನ್ನು ಕ್ವಾಂಟಂ ಬಲವಿಜ್ಞಾನದ ನಿಯಮದ ಪ್ರಕಾರ ಅದಕ್ಕೆ ಅನುರೂಪವಾದ–$\frac{\hbar}{i}\vec{\nabla}$ ಪರಿಕರ್ಮಿಯಿಂದ ಆದೇಶಿಸಬೇಕು; ಮತ್ತು ಸಮೀಕರಣ (2)ರಲ್ಲಿ ವರ್ಗಮೂಲವುಂಟು. ಆದರೆ ವರ್ಗಮೂಲವನ್ನು ತಿಳಿಸುವ ಪರಿಕರ್ಮಕ್ಕೆ ಕ್ವಾಂಟಂ ಬಲವಿಜ್ಞಾನದಲ್ಲಿ ಅರ್ಥವಿಲ್ಲ. ಈ ದೃಷ್ಟಿಯಿಂದ H ಪರಿಕರ್ಮಿಯನ್ನು p ಯ ಘಾತಗಳನ್ನೊಳಗೊಂಡಂತೆ ಶ್ರೇಣಿಯಲ್ಲಿ ವಿಸ್ತರಿಸಿದರೆ $\frac{\partial^2}{\partial x^2}\frac{\partial^3}{\partial x^3}$, ಇವೇ ಮೊದಲಾದ ಉನ್ನತ

ದರ್ಜೆಯ ಆಕಾಶ ಅವಕಲಜಗಳು (ಸ್ಪೇಶಿಯಲ್ ಡಿರೈವೆಟಿವ್ಸ್) ಶ್ರೇಣಿಯಲ್ಲಿ ಅನಂತವಾಗಿ ಉದ್ಭವಿಸುತ್ತವೆ. ಅಲ್ಲದೆ ಈ ವಿಧಾನದಿಂದ ಸನ್ನಿಹಿತವಾದ ಸಮೀಕರಣವನ್ನು ಪಡೆಯಬಹುದೇ ವಿನಾ ನಿಷ್ಕೃಷ್ಟವಾಗಿ ಸರಿಯಾಗಿರುವ ಸಮೀಕರಣವನ್ನು ಪಡೆಯಲಾಗುವುದಿಲ್ಲ.

**ಕ್ಲೈನ್–ಗೊರ್ಡಾನ್ ಸಮೀಕರಣ :** ಆದರೆ H ಪರಿಕರ್ಮಿಯನ್ನು ಅದಕ್ಕೇ ಮತ್ತೊಂದು ಸಲ ಅನ್ವಯಿಸಿ ಸಮೀಕರಣ (2)ರಲ್ಲಿನ ವರ್ಗಮೂಲವನ್ನು ತೊಡೆದುಹಾಕಬಹುದು. ಆಗ

$$H^2 = E^2 = p^2c^2 + m_0^2c^4 \qquad .......(3)$$

ಎಂದು ಪಡೆಯುತ್ತೇವೆ. ಆಗ ಆಶಿಸುವ ಅಲೆ ಸಮೀಕರಣವನ್ನು

$$E^2\psi = (p^2c^2 + m_0^2c^4)\psi \qquad ...........(4)$$

ಎಂದು ಬರೆಯಬಹುದು. ಇಲ್ಲಿ

$$E = i\hbar\frac{\partial}{\partial t}, P = \frac{\hbar \rightarrow}{i\nabla}$$

ಎಂದು ಆದೇಶಿಸಿ

$$\hbar^2 c^2\left(\nabla^2 - \frac{1}{c^2}\frac{\partial^2}{\partial t^2}\right)\psi = m_0^2 c^4 \psi \qquad . . .(5)$$

ಎಂಬ ಸಮೀಕರಣವನ್ನು ಪಡೆಯಬಹುದು. ಇದು ವಿರಾಮ ದ್ರವ್ಯರಾಶಿ (ರೆಸ್ಟ್‌ಮಾಸ್) $m_0$ ಆಗಿರುವ ಸಾಪೇಕ್ಷಿಕ ಮುಕ್ತ ಕಣಕ್ಕೆ (ರಿಲೆಟಿವಿಸ್ಟಿಕ್ ಫ್ರೀ ಪಾರ್ಟಿಕಲ್) ಅನ್ವಯಿಸುವ ಸಮೀಕರಣ. ಇದನ್ನು ಕ್ಲೈನ್ ಮತ್ತು ಗೋರ್ಡಾನ್ ಎಂಬವರು ಕಂಡುಹಿಡಿದಿದ್ದರಿಂದ ಇದಕ್ಕೆ ಕ್ಲೈನ್–ಗೋರ್ಡಾನ್ ಸಮೀಕರಣ ಎಂಬ ಹೆಸರು ಬಂದಿದೆ. ಯಾದೃಚ್ಛಿಕ ಭ್ರಮಣವುಳ್ಳ (ಸ್ಪಿನ್) ಯಾವುದೇ ಕಣಕ್ಕೆ ಸಮೀಕರಣ (4) ಲೊರೆಂಟ್ಸ್ ಅಚರತೆ ಉಳ್ಳದ್ದಾಗಿರುತ್ತದೆ. ಆದರೆ ಉಪಾಂಗ ನಿರ್ಬಂಧಗಳಿಲ್ಲದೆ (ಸಬ್‌ಸಿಡಿಯರಿ ಕಂಡಿಷನ್ಸ್) ಸಾಪೇಕ್ಷಿಕ ಕಣಗಳಿಗೆಲ್ಲ ಈ ಸಮೀಕರಣ ಸರಿಹೊಂದುವುದೇ ಎಂಬುದನ್ನು ವಿಜ್ಞಾನಿಗಳು ಇನ್ನೂ ತಿಳಿದಿಲ್ಲ.

ಅಲ್ಲದೆ ಸಮೀಕರಣ (3) ಅಥವಾ (4)ಗಳಲ್ಲಿ ಕಾಣಿಸಿರುವ ಐಗೆನ್ ಉತ್ಪನ್ನ $\psi$ ಅಲೆ ಉತ್ಪನ್ನದ ಗುಣಗಳನ್ನು $\partial$ ಪಡೆದಿರಲು ಕೆಲವು ತೊಡಕುಗಳುಂಟು. ಸಮೀಕರಣ (4)ರಲ್ಲಿ $\frac{\partial}{\partial t}$ ಪರಿಕರ್ಮಿ ಎರಡನೆಯ ದರ್ಜೆಯಲ್ಲಿ (ಸೆಕೆಂಡ್ ಆರ್ಡರ್) ಇರುವುದರಿಂದ ಕಣ ಚಲನೆಯಲ್ಲಿ ಅನುಭವಿಸುವ ಸ್ಥಾನಗಳನ್ನು ಅಲೆಉತ್ಪನ್ನದಿಂದ ನಿರ್ಧರಿಸುವಾಗ ಸಮೀಕರಣ ಒದಗಿಸುವ $\psi(r,0)$ ಮಾತ್ರವೇ ಅಲ್ಲ $\frac{\partial\psi}{\partial t}$ ಯನ್ನು ಕೂಡ ತಿಳಿದಿರಬೇಕು. ಅಲ್ಲದೆ ಕಣದ ಸಂಭಾವ್ಯತಾ ಸಾಂದ್ರತೆಯನ್ನು (ಪ್ರಾಬೆಬಿಲಿಟಿ ಡೆನ್ಸಿಟಿ) ತಿಳಿಸುವ $\rho_0$ ಯನ್ನು ಸಮೀಕರಣ (4) ರಿಂದ

$$po = \frac{i\hbar}{2m_0c^2}\left(\psi^*\frac{\partial\psi}{\partial t} - \frac{\partial\psi^*}{\partial t}\psi\right) \qquad \text{ಅಥವಾ}$$

$$p0\infty(\psi^* E\psi - \psi E\psi^*) \qquad .....(5)$$

ಎಂದು ಪಡೆಯುತ್ತೇವೆ. ಈ ಗಣಿತೋಕ್ತಿ ಖಚಿತ ಧನಾತ್ಮಕವಲ್ಲವಾದ್ದರಿಂದ (ಪಾಸಿಟಿವ್ ಡೆಫ್ಲಿನಿಟ್) ಇದು ಸಂಭಾವ್ಯತಾ ಸಾಂದ್ರತೆ ಆಗಿರಲು ಸಾಧ್ಯವಿಲ್ಲ. $\rho_0$ ಯನ್ನು ಏಕಮಾನ ವಿದ್ಯುದಾವೇಶ (ಎಲೆಕ್ಟ್ರಿಕ್ ಚಾರ್ಜ್) e ಯಿಂದ ಗುಣಿಸಿ ಬಂದದ್ದನ್ನು ಆವೇಶ ಸಾಂದ್ರತೆ (ಚಾರ್ಜ್ ಡೆನ್ಸಿಟಿ) ಎಂದು ಭಾವಿಸಬಹುದು. ಆಗ ಸೊನ್ನೆ ಭ್ರಮಣ e ಆವೇಶ, M ದ್ರವ್ಯರಾಶಿಗಳನ್ನುಳ್ಳ ಕ್ವಾಂಟಮುಗಳನ್ನು ಪಡೆದಿರುವ ಕ್ವಾಂಟಂ ಕ್ಷೇತ್ರದ ಒಂದು ಕ್ಷೇತ್ರ ಪರಿಕರ್ಮಿ $\Phi$ ಎಂಬ ಮಾತೃಕೆಯ (ಮ್ಯಾಟ್ರಿಕ್ಸ್) ಒಂದು ಧಾತು (ಎಲಿಮೆಂಟ್) ಎಂದು $\psi$ ಯನ್ನು ಪರಿಗಣಿಸಬೇಕಾಗುತ್ತದೆ. ಈ ವಿಷಯ ವಿದ್ಯುತ್ಕಾಂತ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಆದರೆ ಅದಕ್ಕೆ ಸಂಬಂಧಿಸಿದಂತೆ ಸಮೀಕರಣ (4)ನ್ನು ಬರೆದಾಗ

$$E \rightarrow E - e\phi,\ p \rightarrow p\text{-}eA$$

ಗಳಿಂದ ಆದೇಶಿಸಬೇಕು. ಇಲ್ಲಿ Ö(r,t) ಮತ್ತು A(r,t) ಗಳು ಅನುಕ್ರಮವಾಗಿ ವಿದ್ಯುತ್ಕಾಂತ ಕ್ಷೇತ್ರವನ್ನು ವರ್ಣಿಸುವ ಅದಿಶ ಮತ್ತು ಸದಿಶ ವಿಭವಗಳಾಗಿ (ಸ್ಕೇಲಾರ್ ಅಂಡ್ ವೆಕ್ಟಾರ್ ಪೊಟೆನ್ಶಿಯಲ್ಸ್) ಇರುತ್ತವೆ. ಈ ವಿಷಯಗಳಿಂದ ಸ್ಥಿರ ವಿದ್ಯುತ್ ಕ್ಷೇತ್ರದಲ್ಲಿ $\psi$ ನ ಐಗೆನ್ ಹಂತಗಳೇನೆಂದು ಸಮೀಕರಣ (4)ರಿಂದ ಪಡೆಯಬಹುದು. ಹೀಗೆ ಮಾಡಿ ಭ್ರಮಣವಿಲ್ಲದ ಆದರೆ ವಿದ್ಯುದಾವಿಷ್ಟವಾದ (ಎಲೆಕ್ಟ್ರಿಕಲಿ ಚಾರ್ಜ್‌ಡ್) ಕಣಕ್ಕೆ ಸಲ್ಲುವ ಶಕ್ತಿ ಹಂತಗಳನ್ನು ಪಡೆಯುತ್ತೇವೆ. ಉದಾಹರಣೆಗೆ ನ್ಯೂಕ್ಲಿಯರ್ ವಿದ್ಯುತ್ ಕ್ಷೇತ್ರದಲ್ಲಿ ಇರುವ $\pi$ ಮೇಸಾನ್ ಯಾವ ಯಾವ ಶಕ್ತಿಗಳನ್ನು ಪಡೆಯಬಹುದು ಎಂಬುದನ್ನು ಸನ್ನಿಹಿತವಾದ ಈ ವಿಧಾನದಿಂದ ತಿಳಿಯಬಹುದು.

ಡಿರಾಕ್ ಸಮೀಕರಣ : ಅಭಿಜಾತ ಸಾಪೇಕ್ಷಿಕ ಗತಿವಿಜ್ಞಾನ (ಕ್ಲ್ಯಾಸಿಕಲ್ ರಿಲೆಟಿವಿಸ್ಟಿಕ್ ಡೈನಮಿಕ್ಸ್) ಕ್ವಾಂಟಂ ವಿಜ್ಞಾನದಲ್ಲಿ ಬಳಸಬಲ್ಲ ಶಕ್ತಿ ಪರಿಕರ್ಮಿಗಳೆಲ್ಲವನ್ನೂ ತಿಳಿಸಿಲ್ಲ ಎಂದು ಭಾವಿಸಿ ಲೊರೆಂಟ್ಸ್–ಅಚರತೆಯನ್ನು ಹೊಂದಿ ಮುಕ್ತ ಕಣದ ಚಲನೆಯನ್ನು ವಿವರಿಸುವ

$$i\hbar\frac{\partial\psi}{\partial t} = \left[c(\vec{a},p) + \beta m_o c^2\right]\psi$$

$$E\psi = \left[c(\vec{a}.p) + \beta m_o c^2\right]\psi \qquad .....(6)$$

ಎಂಬ ಸಮೀಕರಣವನ್ನು ಪಿ.ಎ.ಎಂ.ಡಿರಾಕ್ ಎಂಬ ವಿಜ್ಞಾನಿ 1928ರಲ್ಲಿ ಪಡೆದ. ಆದ್ದರಿಂದ ಇದನ್ನು ಡಿರಾಕ್ ಸಮೀಕರಣ ಎಂದು ಕರೆಯುತ್ತಾರೆ. ಇಲ್ಲಿ $\beta$ ಮತ್ತು $\alpha$ ಗಳು

$i \neq j$ ಆದಾಗ $\alpha_i\,\alpha_j + \alpha_j\,\alpha_i = 0$

ಮತ್ತು $a\beta + \beta a = 0$, $\alpha_i^2 = 1$, $\beta^2 = 1$, I, j = 1,2,3.....(7) ಎಂಬ ಸಮೀಕರಣವನ್ನು ಪಾಲಿಸುತ್ತವೆ. ಇಲ್ಲಿ $\psi$ ಉತ್ಪನ್ನ ಸಾಪೇಕ್ಷಿಕ ಕಣಕ್ಕೆ ಭ್ರಮಣ ಉಂಟೆಂದು ತಿಳಿಸುವ ನಾಲ್ಕು ಘಟಕಗಳನ್ನೊಳಗೊಂಡ ಅಲೆಉತ್ಪನ್ನ. $\beta$ ಮತ್ತು $\alpha$ ಗಳು ಕಣದ ಭ್ರಮಣವನ್ನು ಮಾತ್ರ ಅವಲಂಬಿಸಿ ನಿರ್ದೇಶಕಗಳನ್ನು ಅವಲಂಬಿಸದೇ ಇರುವ ಪರಿಕರ್ಮಿಗಳಾಗಿರುತ್ತವೆ. ಅವನ್ನು ನಾಲ್ಕು ಅಡ್ಡ ಸಾಲುಗಳಿರುವ ವರ್ಗ ಮಾತೃಕೆಗಳಿಂದ (ಸ್ಕ್ವೇರ್ ಮ್ಯಾಟ್ರಿಸಸ್) ಪ್ರತಿನಿಧಿಸುವುದು ರೂಢಿ. ಹೀಗೆ ಮಾಡಿ ಪಡೆದ $\psi$ ಉತ್ಪನ್ನವನ್ನು ಡಿರಾಕ್ ಸ್ಪಿನಾರ್ ಎಂದು ಕರೆಯುತ್ತಾರೆ.

ಸಮೀಕರಣ (6)ನ್ನು ಮುಕ್ತ ಕಣಕ್ಕೆ E ಯ ಐಗೆನ್ ಮೌಲ್ಯಗಳನ್ನು ತಿಳಿಸುವ ಸಮೀಕರನ ಎಂದು ಭಾವಿಸಿ ಸಾಧಿಸಿದಾಗ H ಪರಿಕರ್ಮಿ 4 X 4 ಮಾತೃಕೆ ಆಗಿರುವುದುದರಿಂದ E ಗೆ ನಾಲ್ಕು ಐಗೆನ್ ಹಂತಗಳುಂಟು. ಇವುಗಳಲ್ಲಿ ಎರಡು ಮೌಲ್ಯಗಳು

$$E = +\left[(m_o c^2)^2 + p^2c^2\right]^{\frac{1}{2}} \qquad ..............(8)$$

ಎಂಬುದಕ್ಕೂ ಮಿಕ್ಕೆರಡು

$$E = -\left[(m_o c^2)^2 + p^2c^2\right]^{\frac{1}{2}} \qquad ..............(9)$$

ಎಂಬುದಕ್ಕೂ ಸಲ್ಲುತ್ತವೆ. ಧನಶಕ್ತಿ ಹಂತಗಳು ಎರಡು ಮತ್ತು ಋಣಶಕ್ತಿ ಹಂತಗಳು ಎರಡು ಎಂಬುದನ್ನು ಸಮೀಕರಣ (8), (9) ತಿಳಿಸುತ್ತವೆ. ಈ ಸಮೀಕರಣಗಳಿಂದ ಕಂಡುಬರುವ ವಿಷಯವನ್ನು $\hbar/2$ ಭ್ರಮಣವುಳ್ಳ ಕಣ ಪಡೆಯಬಲ್ಲ ಭ್ರಮಣ ಹಂತಗಳೊಡನೆ ಜೊತೆಗೂಡಿಸಬಹುದು. ಸ್ಟರ್ನ್–ಗೆರ್ಲಾಕ್ ಪ್ರಯೋಗದಿಂದ ಕಂಡುಬಂದ ವಿಷಯಗಳು ಈ ವ್ಯಾಖ್ಯೆಯನ್ನು ಸಮರ್ಥಿಸುತ್ತವೆ.

ವಾಸ್ತವವಾಗಿ $\vec{a}$ ವನ್ನು ಉಪಯೋಗಿಸಿ ಭ್ರಮಣ ಕೋನಸಂವೇಗವನ್ನು ತಿಳಿಸುವ ಪರಿಕರ್ಮಿಯನ್ನು (ಸ್ಪಿನ್ ಆಂಗ್ಯುಲರ್ ಮೊಮೆಂಟಂ ಆಪರೇಟರ್) ರಚಿಸಲು ಸಾಧ್ಯ. ಆಗ ಸಿದ್ಧಾಂತದಲ್ಲಿ ಕಂಡುಬಂದ ಋಣಶಕ್ತಿ ಹಂತಗಳು ತೊಡಕನ್ನು ಉಂಟು ಮಾಡುತ್ತವೆ. ಕಣ ಧನಶಕ್ತಿ ಹಂತದಲ್ಲಿದೆ ಎಂದು ಭಾವಿಸಿ ಸಿದ್ಧಾಂತವನ್ನು ಬೆಳೆಸಲು ಪ್ರಾರಂಭಿಸಿದರೂ ತತ್‌ಕ್ಷಣ ಪ್ರೋಟಾನುಗಳನ್ನು ವಿಸರ್ಜಿಸಿ ಋಣಶಕ್ತಿ ಹಂತಗಳಿಗೆ ಬೀಳುತ್ತವೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. $\psi$ ಉತ್ಪನ್ನ ವರ್ಣಿಸುವ ಕಣ ಪೌಲಿ ಬಹಿಷ್ಕರಣ ತತ್ತ್ವವನ್ನು (ಪೌಲೀಸ್ ಎಕ್ಸ್‌ಕ್ಲೂಷನ್ ಪ್ರಿನ್ಸಿಪಲ್) ಪಾಲಿಸುತ್ತದೆ ಮತ್ತು ಸಾಮಾನ್ಯವಾಗಿ ಋಣಶಕ್ತಿ ಹಂತಗಳೆಲ್ಲವೂ ತುಂಬಿರುತ್ತವೆ. ಅಂದರೆ ಅಲ್ಲಿ ಖಾಲಿಯಾಗಿರುವ ಸ್ಥಳವಿಲ್ಲ ಎಂದು ಭಾವಿಸಿ ಡಿರಾಕ್ ಈ ತೊಡಕಿಗೆ ಸಮಾಧಾನ ನೀಡಿರುತ್ತಾನೆ.

ಒಂದು ಗೊತ್ತಾದ ಸಂವೇಗ p ಯನ್ನು ಪಡೆದಿರುವ ಒಂಟಿ ಕಣಕ್ಕೆ ನಾಲ್ಕು ಶಕ್ತಿಹಂತಗಳೂ ಇನ್ನೂ ಇರುತ್ತವೆ. ಇವುಗಳಲ್ಲಿ ಎರಡು ಧನಶಕ್ತಿ ಉಳ್ಳವು; ಮಿಕ್ಕೆರಡು ಋಣಶಕ್ತಿಯುಳ್ಳ ಕಣಗಳನ್ನು ತೆಗೆದುಹಾಕುವುದರಿಂದ ಪಡೆದ ಶಕ್ತಿಹಂತಗಳು, ಕೊನೆಯ ಎರಡನ್ನು ರಂಧ್ರಶಕ್ತಿ ಹಂತಗಳು (ಹೋಲ್ ಎನರ್ಜಿ ಸ್ಟೇಟ್ಸ್) ಎಂದು ಕರೆಯುತ್ತಾರೆ. ಈ ರಂಧ್ರಗಳು ಧನಶಕ್ತಿಯನ್ನು ಪಡೆದು ದತ್ತ ಕಣದ ವಿದ್ಯುದಾವೇಶಕ್ಕೆ ವಿರುದ್ಧವಾದ ವಿದ್ಯುತ್ತನ್ನು ಪಡೆದಿರುತ್ತವೆ; ಅಂದರೆ ರಂಧ್ರ ವಾಸ್ತವವಾಗಿ ಪ್ರತಿಕಣವೇ (ಆಂಟಿಪಾರ್ಟಿಕಲ್) ಸರಿ. ದತ್ತಕಣ ಎಲೆಕ್ಟ್ರಾನ್ ಆಗಿದ್ದರೆ ಆಗ ರಂಧ್ರ ಪಾಸಿಟ್ರಾನ್ ಆಗಿರುತ್ತದೆ. ಆದರೆ ಇಲ್ಲಿ ಋಣಶಕ್ತಿ ಹಂತಗಳೆಲ್ಲ ತುಂಬಿವೆ ಎಂದು ಭಾವಿಸಿರುವುದರಿಂದ ಒಂದೇ ಒಂದು ಸಾಪೇಕ್ಷಿಕ ಕಣದ ಚಲನೆಯನ್ನು ಈ ಸಿದ್ಧಾಂತದಿಂದ ಬೆಳೆಸುತ್ತಿದ್ದೇವೆ ಎನ್ನುವುದು ಸರಿಯಲ್ಲ. ಆದ್ದರಿಂದ $\psi$ ಯನ್ನು ಕ್ಲೈನ್–ಗೋರ್ಡಾನ್ ಸಮೀಕರಣದಲ್ಲಿ ಭಾವಿಸಿದಂತೆ ಕ್ಷೇತ್ರ ಪರಿಕರ್ಮಿಯ ಮಾತೃಕೆಯಲ್ಲಿನ ಒಂದು ಧಾತು ಎಂದು ಪರಿಗಣಿಸಬೇಕು.

ಪಾಸಿಟ್ರಾನಿನ ರಂಧ್ರ ಸಿದ್ಧಾಂತ : ಡಿರಾಕ್ ಸಮೀಕರಣವನ್ನು ಒಂದು ಸ್ವತಂತ್ರ ಕಣಕ್ಕೆ ಅನ್ವಯಿಸಿದಾಗ $E \leq -mc^2$ ವ್ಯಕ್ತಪಡಿಸುವ ಋಣಶಕ್ತಿ ಹಂತಗಳು ಅವಿಚ್ಛಿನ್ನವಾಗಿರುತ್ತವೆ. ಅನೇಕ ಪ್ರಯೋಗಗಳಲ್ಲಿ ಬಳಸುವ ಎಲೆಕ್ಟ್ರಾನುಗಳು ಈ ಶಕ್ತಿ ಹಂತಗಳಿಗೆ ಸತತವಾಗಿ ಏಕೆ ಬೀಳುತ್ತಿರುವುದಿಲ್ಲ ಎಂಬುದನ್ನು ಡಿರಾಕ್ ಸಮೀಕರಣ ವಿವರಿಸಬೇಕಾದುದು ಅಗತ್ಯ. ಎಲೆಕ್ಟ್ರಾನುಗಳು ಪೌಲಿ ಬಹಿಷ್ಕರಣ ತತ್ತ್ವವನ್ನು ಪಾಲಿಸುತ್ತವೆ. ಋಣಶಕ್ತಿ ಹಂತಗಳಲ್ಲಿ ಸಾಧ್ಯವಾಗುವ ಸ್ಥಳಗಳನ್ನೆಲ್ಲ ಎಲೆಕ್ಟ್ರಾನುಗಳು ಆಗಲೇ ತುಂಬಿರುತ್ತವೆ ಎಂದು ಭಾವಿಸಿದರೆ ಅವಕ್ಕೆ ಮಿಕ್ಕ ಎಲೆಕ್ಟ್ರಾನುಗಳು ಏಕೆ ಓಡಿಬರುವುದಿಲ್ಲ ಎಂಬುದನ್ನು ತಿಳಿಯಬಹುದು. ಆದರೆ ಪರಮಾಣು $hf > 2m_0c^2$ ದಷ್ಟು ಶಕ್ತಿಯುಳ್ಳ ಫೋಟಾನ್ ಒಂದನ್ನು ಹೀರಿಕೊಂಡಾಗ ಋಣಶಕ್ತಿ ಹಂತದಲ್ಲಿರುವ ಎಲೆಕ್ಟ್ರಾನ್ ಒಂದು ಧನಶಕ್ತಿ ಹಂತಕ್ಕೆ ಏರುತ್ತದೆ. ಹೀಗಾಗುವುದರಿಂದ ಋಣಶಕ್ತಿ ಹಂತಗಳು ತುಂಬಿರುವ ಸಮುದ್ರದಲ್ಲಿ ಒಂದು ರಂಧ್ರ ಉಂಟಾಗುತ್ತದೆ. ಈ ರಂಧ್ರದ ಚಲನೆ ಮತ್ತು ಲಕ್ಷಣಗಳೆಲ್ಲವೂ ಧನ ವಿದ್ಯುತ್ತನ್ನು ಹೊತ್ತ ಎಲೆಕ್ಟ್ರಾನಿನಂತೆ ಇರುತ್ತದೆಂದು ಡಿರಾಕ್ ಸಮೀಕರಣದಿಂದ ತಿಳಿಯಬಹುದು. ಹೀಗೆ ಉಂಟಾದ ರಂಧ್ರವನ್ನು ಪಾಸಿಟಾನ್ ಎಂದು ಕರೆಯುತ್ತಾರೆ. ಹೀಗೆ ಪೌಲಿಯ ಬಹಿಷ್ಕರಣ ತತ್ವ ಮತ್ತು ಡಿರಾಕ್ ಸಮೀಕರಣಗಳಿಂದ ಪಾಸಿಟ್ರಾನ್–

ಎಲೆಕ್ಟ್ರಾನ್ ಜೊತೆ ಕಣಗಳು ಏಕಕಾಲದಲ್ಲಿ ಉತ್ಪನ್ನವಾಗುವುದನ್ನು ಅರ್ಥಮಾಡಿಕೊಳ್ಳಬಹುದು. ಈ ರೀತಿಯಲ್ಲಿ ಋಣಶಕ್ತಿ ಹಂತಗಳಲ್ಲಿ ಒಂದು ರಂಧ್ರ ಉಂಟಾದಾಗ ಧನಶಕ್ತಿ ಹಂತಗಳಲ್ಲಿರುವ ಒಂದು ಎಲೆಕ್ಟ್ರಾನ್ ಅಲ್ಲಿಗೆ ಬಿದ್ದು ರಂಧ್ರವನ್ನು ಮುಚ್ಚುತ್ತದೆ. ಆಗ ಈ ಶಕ್ತಿ ಹಂತಗಳ ವ್ಯತ್ಯಾಸಕ್ಕೆ ಸಮವಾದ ಅಂದರೆ $E > 2m_0c^2$ ದಷ್ಟು ಶಕ್ತಿಯುಳ್ಳ ಫೋಟಾನ್ ಒಂದು ಬಿಡುಗಡೆ ಆಗುತ್ತದೆ. ಹೀಗೆ ಪಾಸಿಟ್ರಾನ್–ಎಲೆಕ್ಟ್ರಾನ್ ಜೋಡಿ ನಾಶವಾದಾಗ ಪ್ರಯೋಗದಲ್ಲಿ ಕಂಡುಬರುವ ಫೋಟಾನಿನ ಜನನವನ್ನೂ ಅರ್ಥಮಾಡಿಕೊಳ್ಳಬಹುದು. ಕ್ವಾಂಟಂ ಕ್ಷೇತ್ರಸಿದ್ಧಾಂತದಲ್ಲಿ ಪಾಸಿಟ್ರಾನ್ ಜನನವನ್ನು ಈ ರಂಧ್ರ ಸಿದ್ಧಾಂತದಿಂದ ವಿವರಿಸುವುದಿಲ್ಲ.

ಡಿರಾಕ್ ಹ್ಯಾಮಿಲ್ಟೋನಿಯನ್ Hಗೆ ಗೋಳೀಯ ಸಮಾಂಗತ್ವವುಳ್ಳ (ಸ್ಫೆರಿಕಲಿ ಸಿಮೆಟ್ರಿಕ್) ವಿಭವ ಪರಿಕರ್ಮಿ (ಪೊಟೆನ್ಶಿಯಲ್ ಆಪರೇಟರ್) V(r) ನ್ನು ಕೂಡಿ ಸಮೀಕರಣದಲ್ಲಿ ಬರುವ ಅಲ್ಪವಾದ ಘಟಕಗಳನ್ನೆಲ್ಲ ತ್ಯಜಿಸಿದರೆ $\psi$ ಉತ್ಪನ್ನಕ್ಕೆ ಎರಡೇ ಎರಡು ಘಟಕಗಳುಳ್ಳ ಸಮೀಕರಣ ಫಲಿಸುತ್ತದೆ. ಇವುಗಳಿಂದ ಪರಮಾಣ್ವಕ ರೋಹಿತದಲ್ಲಿ ಶಕ್ತಿ ಹಂತಗಳು ಒಡೆಯುವುದಕ್ಕೆ ಕಾರಣವಾಗಿರುವ ಭ್ರಮಣ–ಕಕ್ಷೆಗಳ ಅಂತರಕ್ರಿಯೆಗೆ (ಸ್ಪಿನ್ ಆರ್ಬಿಟ್ ಇಂಟರ್ ಆಕ್ಷನ್) ವಿವರಣೆಯನ್ನು ಸೂಕ್ತವಾಗಿ ನೀಡಬಹುದು. ಸಮೀಕರಣದಲ್ಲಿ $V= -e^2/r$ ಮತ್ತು m ಎಂಬುದು ಕಣದ ದ್ರವ್ಯರಾಶಿ ಎಂದು ಭಾವಿಸಿ ಶಕ್ತಿಹಂತಗಳಿಗೆ ಸಲ್ಲುವ ಶಕ್ತಿಗಳನ್ನು ಲೆಕ್ಕ ಮಾಡಿ ತಿಳಿದರೆ ಪರಮಾಣ್ವಕ ಹೈಡ್ರೊಜನ್ನಿಗೆ ಪ್ರಾಯೋಗಿಕವಾಗಿ ದೊರೆಯುವ ಮೌಲ್ಯಗಳೊಡನೆ ಕ್ವಾಂಟಂ–ವಿದ್ಯುತ್ ಬಲವಿಜ್ಞಾನ ಮತ್ತು ನ್ಯೂಕ್ಲಿಯರ್ ತಿದ್ದುಪಡಿಗಳ ವಿನಾಐಕ್ಯವಾಗುತ್ತವೆ. ಹೊರಗಿನಿಂದ ಆರೋಪಿಸಿರುವ B ಎಂಬ ಕಾಂತಕ್ಷೇತ್ರ ಒಂದರಲ್ಲಿ ಎಲೆಕ್ಟ್ರಾನ್ ಇದೆ ಎಂದು ಭಾವಿಸಿದಾಗ ಅಸಾಪೇಕ್ಷಿಕ ಕ್ವಾಂಟಂ ಬಲವಿಜ್ಞಾನದಲ್ಲಿ ಮಾಡಿದಂತೆ ಡಿರಾಕ್ ಹ್ಯಾಮಿಲ್ಟೋನಿಯನ್ನಿನಲ್ಲಿ ಬರುವ p ಯನ್ನು $\left(p - \frac{e}{c}A\right)$ಯಿಂದ ಆದೇಶಿಸಬೇಕು. ಹೀಗೆ ಮಾಡಿ ಎರಡು ಘಟಕಗಳುಳ್ಳ ಸಮೀಕರಣವನ್ನು ಪಡೆದರೆ ಅದು e ಎಲೆಕ್ಟ್ರಾನಿನ ಭ್ರಮಣ ಮೇಲೆ ಹೊರಗಿನ ಕಾಂತಕ್ಷೇತ್ರದ ಪ್ರಭಾವವೆಷ್ಟು ಎಂದು ತಿಳಿಸುವ $-\frac{e}{mc}S.B$ ಎಂಬ ಪದವನ್ನು ಸಮೀಕರಣಕ್ಕೆ ಒದಗಿಸುತ್ತದೆ. ಹೀಗೆ ಡಿರಾಕ್ ಸಮೀಕರಣ ಎಲೆಕ್ಟ್ರಾನ್ (e/2mn) $\hbar$ಪರಿಮಾಣದಷ್ಟು ಕಾಂತತ್ವವುಳ್ಳ ಒಂದು ಕಣ ಎಂಬುದನ್ನು ನೇರವಾಗಿ ತಿಳಿಸುತ್ತದೆ. ಈ ಕಾರಣಗಳಿಂದ ಡಿರಾಕ್ ಸಮೀಕರಣ ಎಲೆಕ್ಟ್ರಾನಿನ ಚಲನೆಯೆಲ್ಲವನ್ನೂ ಸಂಪೂರ್ಣವಾಗಿ ವಿವರಿಸುತ್ತದೆ ಎಂದು ಭಾವಿಸುತ್ತಾರೆ. ನ್ಯೂಟ್ರಾನ್ ಮತ್ತು ಪ್ರೋಟಾನುಗಳ ಭ್ರಮಣ $\hbar/2$ ಆದರೂ ಅವುಗಳಿಗೆ ಡಿರಾಕ್ ಸಮೀಕರಣದಿಂದ ಸಿದ್ಧಿಸುವ ಕಾಂತತ್ವ ಭ್ರಮಣಾಂಕಗಳ (ಮೊಮೆಂಟ್ಸ್) ಮೌಲ್ಯಗಳು ಪ್ರಾಯೋಗಿಕ ಮೌಲ್ಯಗಳೊಡನೆ ಸರಿಹೊಂದುವುದಿಲ್ಲ. ಆದ್ದರಿಂದ ಅವುಗಳ ಚಲನೆಯನ್ನು ಡಿರಾಕ್ ಸಮೀಕರಣದಿಂದ ವಿವರಿಸುವುದು ಸರಿಯಲ್ಲ. ಆದರೆ $\mu$ ಮೇಸಾನಿಗೆ ಇರುವ ಕಾಂತತ್ವ ಭ್ರಮಣಾಂಕವನ್ನು ಡಿರಾಕ್ ಸಮೀಕರಣ ಸರಿಯಾಗಿ ತಿಳಿಸುತ್ತದೆ. ಆದ್ದರಿಂದ ಅದು ಡಿರಾಕ್ ಸಮೀಕರಣವನ್ನು ಪಾಲಿಸುತ್ತದೆ ಎಂದು ಭಾವಿಸಿ ಡಿರಾಕ್ ಸಮೀಕರಣದಿಂದ ಅದರ ಚಲನೆಯನ್ನು ದೋಷಗಳಿಲ್ಲದೆ ವಿವರಿಸಬಹುದು. ದ್ರವ್ಯರಾಶಿ ಇಲ್ಲದೇ ಭ್ರಮಣ $\hbar/2$ ಆಗಿರುವ ಕಣ ಒಂದಕ್ಕೆ ಡಿರಾಕ್ ಸಮೀಕರಣವನ್ನು ಅನ್ವಯಿಸಿದಾಗ ಸಮೀಕರಣದಲ್ಲಿ $\beta$ ಅದೃಶ್ಯವಾಗುತ್ತದೆ. ಆಗ ಸಮೀಕರಣ (7) ತಿಳಿಸುವುದೆಲ್ಲವನ್ನೂ $\alpha_i$ ಗಳು 2 X 2 ಮಾತೃಕೆಗಳು ಎಂದು ಭಾವಿಸಿ ವ್ಯಕ್ತಪಡಿಸಬಹುದು. ಹೀಗೆ ಮಾಡಿದಾಗ ಕಣ ಮತ್ತು ಅದರ ಪ್ರತಿಕಣಗಳೊಂದೊಂದಕ್ಕೂ ಒಂದೇ ಒಂದು ಭ್ರಮಣ ಹಂತ ಇರುತ್ತದೆ. ಆಗ ಕಣದ ಭ್ರಮಣ $\hbar/2$ಕ್ಕೆ ಸಮ; ಮತ್ತು ಕಣ (ಪ್ರತಿಕಣ) ಅದರ ಭ್ರಮಣವನ್ನು ಅದರ ಸಂವೇಗಕ್ಕೆ ಸಮಾಂತರವಾಗಿ (ಪ್ರತಿಸಮಾಂತರವಾಗಿ) ಪಡೆದಿರುತ್ತದೆ ಎಂದು ಸಮೀಕರಣದಿಂದ ಸಾಧಿಸಲು ಸಾಧ್ಯ. ನಿರ್ದೇಶಕ ವ್ಯವಸ್ಥೆಯನ್ನು ತಲೆಕೆಳಗು ಮಾಡಿದಾಗ (ಇನ್ವರ್ಟೆಡ್ ಸಿಸ್ಟಂ) ಮೇಲಿನ ಹೇಳಿಕೆಗಳು ವಿಪರ್ಯಯವಾಗುತ್ತವೆ. ಆದ್ದರಿಂದ ಎರಡು ಘಟಕಗಳನ್ನುಳ್ಳ ಡಿರಾಕ್ ಸಮೀಕರಣ ಆಕಾಶ ವಿಪರ್ಯಯಕ್ಕೆ (ಸ್ಪೇಸ್ ಇನ್ವರ್ಶನ್) ಸಂಬಂಧಿಸಿದಂತೆ ಅಚರವಾಗಿರುವುದಿಲ್ಲ. ಡಿರಾಕ್ ಸಮೀಕರಣದ ಈ ಮಿತರೂಪವನ್ನು (ಇಕನಾಮಿಕಲ್ ವರ್ಶನ್) ದ್ರವ್ಯರಾಶಿ ಇಲ್ಲದ ಮತ್ತು $\hbar/2$ ಭ್ರಮಣವನ್ನು ಪಡೆದಿರುವ $v_e$ ಮತ್ತು $v\mu$ ಕಣಗಳು ಪಾಲಿಸುತ್ತವೆ. ಭ್ರಮಣಕ್ಕಿಂತ ಹೆಚ್ಚಾಗಿರುವ ಕಣಗಳಿಗೂ ಅಲೆಸಮೀಕರಣಗಳನ್ನು ಕಂಡು ಹಿಡಿದಿರುತ್ತಾರೆ. ಉದಾಹರಣೆಗೆ ಮ್ಯಾಕ್ಸ್‌ವೆಲ್ ಸಮೀಕರಣಗಳು ಭ್ರಮಣ $\hbar/2$ ಆಗಿರುವ (ದ್ರವ್ಯರಾಶಿ ಇಲ್ಲದ) ಕಣಗಳಿಗೆ ಸಲ್ಲುವ ಸಮೀಕರಣಗಳಾಗಿರುತ್ತವೆ. ಭ್ರಮಣ ಹೆಚ್ಚಿದಂತೆ ಸಮೀಕರಣಗಳು ಕ್ಲಿಷ್ಟವಾಗುತ್ತವೆ. ಭ್ರಮಣ $\geq\hbar/2$ ಆದಾಗ ರಚನೆ ಇಲ್ಲದ (ಸ್ಟ್ರಕ್ಚರ್‌ಲೆಸ್) ಕಣಕ್ಕೆ ವಿದ್ಯುದ್ಕಾಂತ ಕ್ಷೇತ್ರದೊಡನೆ ಉಂಟಾಗುವ ಅಂತರಕ್ರಿಯೆ ಏಕೈಕವಾಗಿರುವುದಿಲ್ಲ. ಆದ್ದರಿಂದ ಕಣದ ಕಾಂತ ಭ್ರಮಣಾಂಕವನ್ನು ತಿಳಿಯಲಾಗುವುದಿಲ್ಲ. (ಸಿ.ಕೆ.ವಿ.)

**ಕ್ವಾಂಟೀಕರಣ:** ವೀಕ್ಷಿತಾಂಶಗಳು ಅವಿಚ್ಛಿನ್ನವಾಗಿ ಇರದೇ ಪೃಥಕ್ಕಾಗಿ ಇರುತ್ತವೆ ಎನ್ನುವ ಪರಿಕಲ್ಪನೆ (ಕ್ವಾಂಟೈಜೇಸ್ಷನ್). ಅಭಿಜಾತ ಭೌತವಿಜ್ಞಾನದ ಅಭಿಗೃಹೀತದ ಪ್ರಕಾರ ಒಂದು ಭೌತ ಪರಿಮಾಣ ಪಡೆಯಬಹುದಾದ ಬೆಲೆಗಳ ಮೇಲೆ ಯಾವುದೇ ತರಹದ ನಿರ್ಬಂಧವೂ ಇರುವುದಿಲ್ಲ. ಅದು ಬೇಕಾದ ಬೆಲೆಗಳನ್ನು ಅವಿಚ್ಛಿನ್ನವಾಗಿ ಪಡೆಯಲು ಸ್ವತಂತ್ರ, ಉದಾಹರಣೆಗೆ ಕಣವೊಂದರ ಸ್ಥಾನನಿರ್ದೇಶಕವಾಗಲೀ ಭ್ರಮಣ ಕೋನಸಂವೇಗ ನಿರ್ದೇಶಕವಾಗಲೀ ಲೋಲಕವೊಂದರಿಂದ ಹೊರಚೆಲ್ಲಲ್ಪಟ್ಟ ಶಕ್ತಿಯಾಗಲೀ ಅವಿಚ್ಛಿನ್ನ ಮತ್ತು ಅನಿರ್ಬಂಧಿತ ಬೆಲೆಗಳನ್ನು ಪಡೆದಿರುವುದು ಸಾಧ್ಯ. ಆದರೆ ಕ್ವಾಂಟಂ ಬಲವಿಜ್ಞಾನದ ತೀರ್ಮಾನಗಳ ಪ್ರಕಾರ ಇದು ಸಾಧ್ಯವಾಗದು. ಅಂದರೆ ವಸ್ತುಸ್ಥಿತಿಯನ್ನು ನಿರೂಪಿಸಲು ಉಪಯೋಗಿಸುವ ಯಾವುದೇ ಭೌತ ಪರಿಮಾಣ ಕೇವಲ ಕೆಲವು ಪೃಥಕ್ಕಾದ (ಡಿಸ್ಕ್ರೀಟ್) ಮತ್ತು ನಿರ್ದಿಷ್ಟವಾದ ಬೆಲೆಗಳನ್ನು ಪಡೆದಿರುವುದೇ ವಿನಾ ಅವಿಚ್ಛಿನ್ನ ಬೆಲೆಗಳನ್ನು ಪಡೆಯಲಾರದು. ಇಂಥ ಒಂದು ಪರಿಮಾಣ (ಎಂದರೆ ಪೃಥಕ್ಕಾದ ಹಾಗೂ ನಿರ್ದಿಷ್ಟವಾದ ಬೆಲೆಗಳನ್ನು ಮಾತ್ರ ಪಡೆಯಲು ಶಕ್ಯವಾದ ಪರಿಮಾಣ) ಕ್ವಾಂಟೀಕೃತವಾಗಿದೆ ಎನ್ನುತ್ತೇವೆ; ಈ ಪ್ರಕ್ರಿಯೆಗೆ ಕ್ವಾಂಟೀಕರಣ ಎಂದು ಹೆಸರು. ಕ್ವಾಂಟೀಕೃತ ಪರಿಮಾಣಗಳ ಅಸ್ತಿತ್ವ ಪ್ರಯೋಗಗಳಿಂದ ಸಂದೇಹಾತೀತವಾಗಿ ಸ್ಥಿರಪಟ್ಟಿದೆ. ಉದಾಹರಣೆಗೆ ಲೋಲಕ ಹೊರಸೂಸುವ ಅಥವಾ ಹೀರಿಕೊಳ್ಳುವ ಶಕ್ತಿಯ ಮೊತ್ತ (n h v ) ನ್ಯೂಕ್ಲಿಯಸಿನ ಸುತ್ತ ತಿರುಗುತ್ತಿರುವ ಎಲೆಕ್ಟ್ರಾನಿನ ಸ್ಥಿರಕಕ್ಷೆಗಳ ಶಕ್ತಿಮಟ್ಟಗಳ ಬೆಲೆಗಳು (ಭ್ರಮಣಕೋನ ಸಂವೇಗ, ಫಲಿತ ಸಂವೇಗ), ಕಾಂತಕ್ಷೇತ್ರದಲ್ಲಿ ಪರಮಾಣುಸ್ಥಿತಿಯನ್ನು ಸೂಚಿಸುವ ವಿವಿಧ ಪರಿಮಾಣಗಳು ಇತ್ಯಾದಿ. ಭೌತ ಪರಿಮಾಣವೊಂದು ಕ್ವಾಂಟೀಕರಣದ ನಿಯಮಗಳಿಗೆ ಒಳಪಟ್ಟು ಪಡೆಯಬಹುದಾದ ಬೆಲೆಗಳನ್ನು ನಿರ್ಧರಿಸುವುದು ಕ್ವಾಂಟಂ ಬಲವಿಜ್ಞಾನದ ಕಾರ್ಯ.

ಈ ರೀತಿ ಶಕ್ತಿ ಕ್ವಾಂಟೀಕೃತವಾಗಿ ಕ್ಲುಪ್ತಬೆಲೆಗಳನ್ನು ಮಾತ್ರ ಪಡೆದಿದೆ ಎಂಬುದನ್ನು (ಶಕ್ತಿಯ ಹೊರಸೂಸುವಿಕೆಯಲ್ಲಾಗಲೀ ಹೀರುವಿಕೆಯಲ್ಲಾಗಲೀ) ಮೊದಲಿಗೆ ಪ್ಲಾಂಕ್ ಎಂಬ ವಿಜ್ಞಾನಿ 1900ರಲ್ಲಿ ಸೂಚಿಸಿದ. 1905ರಲ್ಲಿ ಐನ್‌ಸ್ಟೈನ್ ದ್ಯುತಿವಿದ್ಯುತ್ ಪರಿಣಾಮವನ್ನು ವಿವರಿಸಲು ಶಕ್ತಿಯ ಕ್ವಾಂಟೀಕರಣದ ಭಾವನೆಯನ್ನು ಬಳಸಿಕೊಂಡಾಗ ಪ್ಲಾಂಕನ ಅಭಿಪ್ರಾಯ ಪುನಃ ಸ್ಪಷ್ಟೀಕರಿಸಲ್ಪಟ್ಟಿತು. ಬೆಳಕಿನ ಅಲೆಗಳಲ್ಲಿನ ಶಕ್ತಿ ಮತ್ತು ಕೋನಸಂವೇಗಗಳ ಕ್ವಾಂಟೀಕರಣಗಳನ್ನು ಕಾಂಪ್ಟನ್ ಪರಿಣಾಮ ಮತ್ತು ಸ್ಟರ್ನ್ ಹಾಗೂ ಗೆರ್‌ಲಾಕ್ ಅವರ ಪ್ರಯೋಗಗಳಿಂದ ಸ್ಥಿರಪಡಿಸಲಾಗಿದೆ.

ರೋಹಿತರೇಖೆಗಳ ಸೃಷ್ಟಿಯನ್ನು ಅರ್ಥಮಾಡಿಕೊಳ್ಳುವ ಪರಮಾಣುವಿನಲ್ಲಿರುವ ಎಲೆಕ್ಟ್ರಾನಿನ ವಿವಿಧ ಶಕ್ತಿಮಟ್ಟಗಳ ಕ್ವಾಂಟೀಕರಣ ಉಪಯುಕ್ತವಾಗಿದೆ. ಎಲೆಕ್ಟ್ರಾನ್ ಕೆಲವು ನಿರ್ದಿಷ್ಟ ಕಕ್ಷೆಗಳಲ್ಲಿ ನ್ಯೂಕ್ಲಿಯಸಿನ ಸುತ್ತ ಪರಿಭ್ರಮಿಸುವುದು. ಇಂಥ ಒಂದೊಂದು ಕಕ್ಷೆಯಲ್ಲಿಯ ಒಟ್ಟು ಶಕ್ತಿ ನಿರ್ದಿಷ್ಟ ಮೊತ್ತದ್ದಾಗಿರುವುದು. ಅದರ ಬೆಲೆ ಕಕ್ಷೆಗಳ ಕ್ರಮಾಂಕ n ಬೆಲೆಯನ್ನು ಅವಲಂಬಿಸಿ $(-1/n^2)$ ಕ್ಕೆ ಅನುಗುಣವಾಗಿರುವುದು. ಆದ್ದರಿಂದ ಯಾವುದಾದರೂ ಕಾರಣದಿಂದ ವಿವಿಧ ಶಕ್ತಿಮಟ್ಟಗಳ ನಡುವೆ ಒಂದು ಎಲೆಕ್ಟ್ರಾನಿನ ಸ್ಥಿತ್ಯಂತರವಾದಾಗ ಪರಮಾಣು ಕಳೆದುಕೊಳ್ಳುವ ಅಥವಾ ಪಡೆಯುವ ಶಕ್ತಿ ಒಂದು ನಿರ್ದಿಷ್ಟ ಮೊತ್ತದ್ದಾಗಿದ್ದು ಅದು ಗೊತ್ತಾದ ಆವರ್ತಾಂಕವುಳ್ಳ (ಫ್ರೀಕ್ವೆನ್ಸಿ) ಅಲೆಯ ರೂಪದಲ್ಲಿ ಹೊರಸೂಸಲ್ಪಡುವುದು ಅಥವಾ ಹೀರಿಕೊಳ್ಳಲ್ಪಡುವುದು. ಇದು ರೇಖಾರೋಹಿತದಲ್ಲಿ ಕೆಲವೊಮ್ಮೆ ಕೆಲವು ರೇಖೆಗಳು ಕಂಡುಬರುವುದಕ್ಕೂ ಕೆಲವೊಮ್ಮೆ ಕೆಲವು ಅದೃಶ್ಯವಾಗುವುದಕ್ಕೂ ಕಾರಣ. ಅಣು ಮತ್ತು ನ್ಯೂಕ್ಲಿಯಸ್ಸಿನಲ್ಲಿರುವ ವಿವಿಧ ಶಕ್ತಿಮಟ್ಟಗಳಿಗೂ ಅವುಗಳಿಂದಾಗುವ ರೋಹಿತಗಳಿಗೂ ಇದು ಅನ್ವಯಿಸುತ್ತದೆ.

ಅಣು, ಪರಮಾಣು ಅಥವಾ ನ್ಯೂಕ್ಲಿಯಸಿನಲ್ಲಿ ಇರಬಹುದಾದ ಎಲ್ಲ ಶಕ್ತಿಮಟ್ಟಗಳ ನಡುವೆ ಎಲೆಕ್ಟ್ರಾನಿನ ಸ್ಥಿತ್ಯಂತರ ಸಾಧ್ಯವಿಲ್ಲ. ಯಾವ ಸ್ಥಿತ್ಯಂತರಗಳು ನಿಷೇಧಿಸಲ್ಪಟ್ಟಿದ್ದು ಯಾವ ಯಾವ ಸ್ಥಿತ್ಯಂತರಗಳು ಸಾಧ್ಯವೆಂಬುದನ್ನು ಭ್ರಮಣ ಕೋನಸಂವೇಗದ ಅಥವಾ ಫಲಿತಕೋನಸಂವೇಗದ ಕ್ವಾಂಟೀಕರಣ ನಿರ್ಧರಿಸುತ್ತದೆ.

ಕೆಲವು ಪರಮಾಣುಗಳು ಕೆಲವು ಕ್ಷೇತ್ರಗಳಲ್ಲಿ ನಿರ್ಬಂಧಿತ ಕ್ಲುಪ್ತ ಬೆಲೆಗಳನ್ನೂ ಮತ್ತೆ ಕೆಲವು ಕ್ಷೇತ್ರಗಳಲ್ಲಿ ಅವಿಚ್ಛಿನ್ನ ಬೆಲೆಗಳನ್ನೂ ಪಡೆದಿರುವ ಸಾಧ್ಯತೆ ಉಂಟು. ಅಂದರೆ ಭೌತ ಪರಿಮಾಣವೊಂದು ನಿಯಂತ್ರಿಸಲ್ಪಟ್ಟ ಬೆಲೆಗಳನ್ನೇ ಎಲ್ಲ ಕ್ಷೇತ್ರಗಳಲ್ಲೂ ಪಡೆದಿರಬೇಕೆಂಬುದೇನೂ ಇಲ್ಲ. ಉದಾಹರಣೆಗೆ ನ್ಯೂಕ್ಲಿಯಸಿನ ಹತ್ತಿರದ ಎಲೆಕ್ಟ್ರಾನ್ ಸ್ಥಿರ ಕಕ್ಷೆಗಳ ಒಟ್ಟು ಶಕ್ತಿ ಋಣಚಿಹ್ನೆಯುಳ್ಳದ್ದಾಗಿದ್ದು ಎಲೆಕ್ಟ್ರಾನ್ ನ್ಯೂಕ್ಲಿಯಸಿನಿಂದ ಬಹುದೂರದಲ್ಲಿರುವಾಗ ಅದರ ಕಕ್ಷೆಯಲ್ಲಿನ ಶಕ್ತಿಮಟ್ಟ 0 ಆಗಿರಬೇಕಾಗುವುದು. ಇದಕ್ಕಿಂತಲೂ ಮೇಲಿನ ಶಕ್ತಿಮಟ್ಟಗಳ ಒಟ್ಟು ಶಕ್ತಿ ಧನಚಿಹ್ನೆಯುಳ್ಳದ್ದಾಗಿರವುದು. ಕೆಳಗಿನ ಶಕ್ತಿಮಟ್ಟಗಳು ಪಡೆದಿರುವ ಶಕ್ತಿಯ ಬೆಲೆಗಳು ಕ್ವಾಂಟೀಕೃತವಾಗಿದ್ದು ಇವುಗಳ ನಡುವಣ ಸ್ಥಿತ್ಯಂತರಗಳು ರೋಹಿತ ರೇಖೆಗಳ ಸೃಷ್ಟಿಗೆ ಕಾರಣವಾಗುತ್ತವೆ. ಮೇಲಿನ ಶಕ್ತಿಮಟ್ಟಗಳು ಅವಿಚ್ಛಿನ್ನ ಬೆಲೆಗಳನ್ನು ಪಡೆದಿರಲು ಸಾಧ್ಯ ಎಂಬುದನ್ನು ಪ್ರಯೋಗಗಳು ತೋರಿಸಿವೆ. ಇದೇ ರೇಖಾಶ್ರೇಣಿಯೊಂದರ ಗಡಿರೇಖೆಯನ್ನು ದಾಟಿದಾಗ ಕಂಡುಬರುವ ಬೆಳಕಿನ ಚದರಿಕೆಗೆ (ಸ್ಕ್ಯಾಟರಿಂಗ್) ಕಾರಣ ಎಂದು ತಿಳಿಯಬಹುದಾಗಿದೆ.

ಅಣುರೋಹಿತದಲ್ಲಿ ಕೂಡ ಬೆಳಕಿನ ಚದರಿಕೆಯನ್ನು ಕಾಣಬಹುದು. ಪರಮಾಣುಗಳು ಪ್ರತ್ಯೀಕಿಸಲ್ಪಡುವ ಶಕ್ತಿಮಟ್ಟಕ್ಕಿಂತ ಮೇಲಿನ ಶಕ್ತಿಮಟ್ಟಗಳು ಅವಿಚ್ಛಿನ್ನ ಬೆಲೆಗಳನ್ನುಳ್ಳವಾಗಿದ್ದು ರೋಹಿತದಲ್ಲಿನ ಬೆಳಕಿನ ಚದರಿಕೆಗೆ ಕಾರಣವಾಗುವುವು. ಇದಕ್ಕಿಂತ ಕೆಳಗಿನ ಶಕ್ತಿಮಟ್ಟಗಳಲ್ಲಿ ಪರಮಾಣುಗಳು ಕ್ವಾಂಟೀಕೃತವಾದ ಭ್ರಮಣೆ ಹಾಗೂ ಕಂಪನ ರೀತಿಯ ಎರಡು ಚಲನೆಗಳನ್ನು ಪಡೆದಿರುತ್ತವೆ. ಇವುಗಳಿಂದಾಗುವ ಶಕ್ತಿಯ ಉಪಮಟ್ಟಗಳ ನಡುವಣ ಸ್ಥಿತ್ಯಂತರಗಳು ರೇಖಾರೋಹಿತಕ್ಕೆ ಕಾರಣ. ಕೆಲವೊಮ್ಮೆ ಅಂಗೀಕೃತ ಶಕ್ತಿಮಟ್ಟಗಳು ನಿಯಂತ್ರಿಸಲ್ಪಟ್ಟ ಕ್ಲುಪ್ತಬೆಲೆಗಳನ್ನು ಪಡೆದಿದ್ದಾಗ್ಯೂ ಈ ಬೆಲೆಗಳು ಎಷ್ಟು ದಟ್ಟವಾಗಿ ಹರಡಿರುವುವೆಂದರೆ ಅವುಗಳ ಕ್ವಾಂಟೀಕರಣ ಗುಣಗಳನ್ನು ರೋಹಿತದ ಅಧ್ಯಯನದಿಂದಲೂ ಕಂಡುಹಿಡಿಯುವುದು ಸಾಧ್ಯವಾಗದಿರಬಹುದು.

ಶ್ರೋಡಿಂಗರನ ಅಲೆ ಸಮೀಕರಣದಲ್ಲಿ ಭೌತವ್ಯವಸ್ಥೆಯ ಸ್ಥಿತಿಯನ್ನು $\psi$ ಎಂಬ ಅಲೆಯುತ್ಪನ್ನದಿಂದ (ವೇವ್ ಫಂಕ್ಷನ್) ಸೂಚಿಸಲಾಗುವುದು. ಈ ಸಮೀಕರಣವನ್ನು ಪರಿಮಿತಿ ನಿಬಂಧನೆಗಳಿಗೆ ಅನುಗುಣವಾಗಿ ಬಿಡಿಸಿ $\psi$ ಯ ಬೆಲೆಗಳನ್ನು ಕಂಡುಹಿಡಿದಾಗ ಅವು ಕೆಲವು ನಿರ್ದಿಷ್ಟ ಬೆಲೆಗಳನ್ನು ಮಾತ್ರ ಪಡೆದಿರುವುದನ್ನು ಗಮನಿಸುತ್ತೇವೆ. ಇದೇ ರೀತಿ ಮುಂದುವರಿದು ಶಕ್ತಿ, ಸಂವೇಗ ಇತ್ಯಾದಿ ಪರಿಮಾಣಗಳ ಬೆಲೆಗಳನ್ನು ನಿರ್ಧರಿಸಿದರೆ ಅವುಗಳೂ ಕ್ವಾಂಟಂ ಸಿದ್ಧಾಂತದ ಪ್ರಕಾರ ಪಡೆಯುವ ನಿರ್ದಿಷ್ಟ ಬೆಲೆಗಳಂತೆಯೇ ಕ್ಲುಪ್ತಬೆಲೆಗಳನ್ನು ಮಾತ್ರ ಪಡೆದಿರುವುದು ಕಂಡುಬರುತ್ತದೆ. ಅಂದರೆ ಶ್ರೋಡಿಂಗರನ ಅಲೆ ಸಮೀಕರಣ ಕ್ವಾಂಟಂ ಸಿದ್ಧಾಂತಕ್ಕೆ ಸರಿಯಾದ ತಾತ್ತ್ವಿಕ ತಳಹದಿಯನ್ನು ಒದಗಿಸಿದೆ ಎನ್ನಬಹುದು.

ಕ್ವಾಂಟೀಕರಣ ಭಾವನೆಯನ್ನು ವಿದ್ಯುದಾವೇಶಕ್ಕೂ (ಎಲೆಕ್ಟ್ರಿಕ್ ಚಾರ್ಜ್) ಅಳವಡಿಸಬಹುದಾಗಿದೆ. ವಿದ್ಯುತ್ ಪ್ರವಾಹ ಅವಿಚ್ಛಿನ್ನವಾಗಿರದೆ ಅತ್ಯಂತ ಕನಿಷ್ಠ ಆವೇಶದ ಸಮಗ್ರ ಅಪವರ್ತ್ಯವಾಗಿರುವುದೆಂಬುದು ಪ್ರಯೋಗಗಳಿಂದ ತಿಳಿದುಬಂದಿದೆ. ಈ ಕನಿಷ್ಠ ಆವೇಶವನ್ನು e ಎಂದು ಸೂಚಿಸಿದರೆ ($e = 1.6021 \times 10^{-19}$ ಕೂಲಂಬ್) ಭೌತಿಕವಾಗಿ ಅಸ್ತಿತ್ವದಲ್ಲಿರುವ ಯಾವುದೇ ಆವೇಶ q ವನ್ನು ne ಎಂದು ಬರೆಯಬಹುದು. ಇಲ್ಲಿ n ಒಂದು ಪೂರ್ಣಾಂಕ.

ಹೀಗೆಯೇ ಕ್ವಾಂಟೀಕರಣ ಪರಿಕಲ್ಪನೆಯನ್ನು ದ್ರವ್ಯರಾಶಿ, ಆಕಾಶ ಮತ್ತು ಕಾಲ ಈ ಕ್ಷೇತ್ರಗಳಿಗೂ ವಿಸ್ತರಿಸಬಹುದೆಂಬ ಭಾವನೆ ವಿಜ್ಞಾನಿಗಳಲ್ಲಿ ಮೂಡಿಬಂದಿದೆ.

(ಜಿ.ಎಸ್.ಎಸ್.ಎಸ್.)

**ಕ್ವಾಟರ್ನರಿ :** ಭೂವಿಜ್ಞಾನ ಕಾಲಮಾನದಿಂದ ಈಗ ನಡೆಯುತ್ತಿರುವ ಯುಗ; ಸೀನೋಜ಼ೋಯಿಕ್ ಯುಗದ ಅತ್ಯಾಧುನಿಕ ವಿಭಾಗ; ಟರ್ಷಿಯರಿ ಯುಗ ಕೊನೆಗೊಂಡ ಬಳಿಕ ಪ್ರಾರಂಭವಾದ ಯುಗ; ಅಲ್ಲದೇ ಈ ಅವಧಿಯಲ್ಲಿ ಆದ ಸಮಸ್ತ ಭೂವೈಜ್ಞಾನಿಕ ನಿಕ್ಷೇಪಗಳ ಸಾಮೂಹಿಕ ಹೆಸರು. ಚತುರ್ಥಯುಗವೆಂದು ಅರ್ಥ. ಭಾರತದಲ್ಲಿ ಸಿವಾಲಿಕ್ ಪ್ರಸ್ತರಗಳು ಮತ್ತು ಸಿಂಧೂಗಂಗಾ ಬಯಲು ಈ ಯುಗಕ್ಕೆ ಸೇರಿದವು.

ಭೂಚರಿತ್ರೆಯಲ್ಲಿ ಕ್ವಾಟರ್ನರಿ ಬಹು ಮುಖ್ಯವಾದ ಯುಗ. ಕಾರಣ ಮಾನವನ ಉದಯವಾದದ್ದು ಈ ಯುಗದಲ್ಲಿ. ಕ್ವಾಟರ್ನರಿಯಲ್ಲಿ ಉತ್ತರಾರ್ಧ ಗೋಳದ ಬಹುಭಾಗ ದೊಡ್ಡ ಹಿಮನದಿಗಳಿಂದ ಆವೃತವಾಗಿ ಅಲ್ಲಿ ಅತಿಶೀತಲ ವಾಯುಗುಣವಿದ್ದುದರಿಂದ ಇದನ್ನು ಮಹಾ ಹಿಮಯುಗವೆಂದೂ ಕರೆಯುತ್ತಾರೆ. ಈ ಭೂಯುಗದ ಎರಡು ಕಲ್ಪಗಳು ಪ್ಲೀಸ್ಟೋಸೀನ್ ಮತ್ತು ಹೋಲೋಸೀನ್, ಪೂರ್ವಾರ್ಧ ಪ್ಲೀಸ್ಟೋಸೀನ್ ಕಲ್ಪವಾದರೆ ಉತ್ತರಾರ್ಧ ಹೋಲೊಸೀನ್ ಕಲ್ಪ. ಕ್ವಾಟರ್ನರಿಯ ಅವಧಿ ಸುಮಾರು 1 ದಶಲಕ್ಷ ವರ್ಷ ಪ್ರಾಚೀನದಿಂದ ಆಧುನಿಕ ಕಾಲದ ತನಕ ಇದೆ.

ಭೂಚರಿತ್ರೆಯಲ್ಲಿ ಕ್ವಾಟರ್ನರಿ ಎಂಬ ಹೆಸರನ್ನು ಮೊತ್ತಮೊದಲಿಗೆ ಡೆಸ್ನಾಯರ್ 1829ರಲ್ಲಿ ಬಳಕೆಗೆ ತಂದ. ಪ್ಯಾರಿಸ್ ಭೂ ಪ್ರದೇಶದಲ್ಲಿ ತೃತೀಯ ಯುಗದ ಶಿಲಾ ಪ್ರಸ್ತರಗಳ ಮೇಲೆ ಹರಡಿದ್ದ ಶಿಲೆಗಳನ್ನು ಚತುರ್ಥಯುಗದ ಪ್ರಸ್ತರಗಳೆಂದು ಕರೆಯಲಾಯಿತು. ಮುಂದೆ ರೆಬೂಲ್ ಈ ಯುಗದ ಅವಶೇಷಗಳನ್ನು ವಿಶೇಷ ರೀತಿಯಲ್ಲಿ ಅಭ್ಯಸಿಸಿ ಮೇಲಿನ ಹೆಸರನ್ನು ಸಮರ್ಥಿಸಿದ. ಆದರೂ ಈಚಿನ ಸಂಶೋಧನೆಗಳಿಂದ ಈ ನಾಮಕರಣ ಅಷ್ಟು ಸಮರ್ಪಕವಾಗಿಲ್ಲವೆಂದು ಕಂಡುಬಂದಿದೆ. ಕ್ವಾಟರ್ನರಿ ಯುಗದ ಮುಖ್ಯ ಶಿಲಾವರ್ಗಗಳೆಂದರೆ ಹಿಮನದಿಗಳ ಕಾರ್ಯಾಚರಣೆಯಿಂದಾದ ಡ್ರಿಫ್ಟ್, ಟಿಲ್ಲೈಟ್, ವಾರ್ವ್ ಜೇಡುಶಿಲೆಗಳು, ದೂಳು ಮುಂತಾದವು. ಇವೆಲ್ಲವೂ ಹಿಮನದಿ ಇದ್ದ ಪರಿಸರವನ್ನು ಸೂಚಿಸುತ್ತವೆ.

ಈ ಯುಗದಲ್ಲಾದ ಮುಖ್ಯ ಬದಲಾವಣೆಗಳನ್ನು ಸೂಕ್ಷ್ಮವಾಗಿ ಹೀಗೆ ವಿವರಿಸಬಹುದು. ಯುಗದ ಮೊದಲಲ್ಲೇ ವಿವಿಧ ಪ್ರಾಣಿಗಳಿಗೆ ಮತ್ತು ಸಸ್ಯಗಳಿಗೆ ಶರೀರ ರಚನೆಯಲ್ಲಿ ಶೀತ ವಾಯುಗುಣಕ್ಕೆ ಸರಿಹೊಂದುವ ಮಾರ್ಪಾಡುಗಳು ಆಗತೊಡಗಿದುವು. ಹವೆ ವಿಪರೀತ ಶೀತಲವಾಗಿ ಹಿಮಯುಗ ಕಾಲಿಕ್ಕಿತು. ಇದು ಇಡೀ ಯುಗದ ಉದ್ದಕ್ಕೂ ಏಕಪ್ರಕಾರವಾಗಿ ಹರಡಿರದೆ ಆಗಾಗ ಎಂದರೆ ಸುಮಾರು ನಾಲ್ಕು ಹಂತಗಳಲ್ಲಿ ಕಾಣಿಸಿಕೊಂಡಿತು. ಪ್ರತಿಯೊಂದು ಹಂತವನ್ನೂ ಹಿಮಯುಗವೆಂದೂ ಅವುಗಳ ನಡುವೆ ಇರುವ ಕಾಲವನ್ನು ಹಿಮಯುಗವಿಳಂಬ ಅಥವಾ ಅಂತರಹಿಮಯುಗವೆಂದೂ ಕರೆಯಲಾಗಿದೆ. ಹಿಮನದಿಗಳಿಂದ ಆವೃತವಾದ ಪ್ರದೇಶಗಳಲ್ಲಿ ಪ್ರಾಣಿಗಳು ಮತ್ತು ಸಸ್ಯಗಳು ಬಹು ವಿರಳವಾಗಿದ್ದುವು. ಹೀಗಾಗಿಯೇ ಹಿಮನದಿಯ ಶಿಲಾಪ್ರಸ್ತರಗಳಲ್ಲಿ ಫಾಸಿಲುಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಆದರೆ ಹಿಮನದಿಗಳ ಹೊರ ಆವರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಪ್ರಾಣಿಗಳು ಮತ್ತು ಸಸ್ಯಗಳಿದ್ದುವು. ಹಲವು ಬಾರಿ ಹವೆಯ ಬದಲಾವಣೆಯನ್ನು ಅನುಸರಿಸಿ ಪ್ರಾಣಿಗಳು ಅನುಕೂಲ ವಾತಾವರಣವಿರುವ ಕಡೆಗೆ ವಲಸೆ ಹೋಗುತ್ತಿದ್ದ ಸಂದರ್ಭಗಳೂ ಉಂಟು.

ಉತ್ತರಾರ್ಧಗೋಳದ ಕೆಲವು ಭೂಪ್ರದೇಶಗಳಲ್ಲಿ ಹಿಮನದಿಗಳ ಹೆಚ್ಚಿನ ತೂಕದ ಪರಿಣಾಮವಾದ ಒತ್ತಡದಿಂದ ಅವುಗಳ ನೆಲಮಟ್ಟದಲ್ಲಿ ಏರುಪೇರುಗಳಾಗಿವೆ. ತೂಕಕ್ಕೆ ಒಳಗಾದ ಪ್ರದೇಶ ಕೆಳಕ್ಕೆ ಕುಗ್ಗಿ ಇದನ್ನು ಸರಿದೂಗಿಸಲು ಅಕ್ಕಪಕ್ಕದ ಪ್ರದೇಶ ಮೇಲಕ್ಕೆ ಒಯ್ಯಲ್ಪಟ್ಟ ನಿದರ್ಶನಗಳು ಹಲವಾರಿವೆ. ಉದಾಹರಣೆಗೆ ಇಂಗ್ಲೆಂಡಿನ ಕರಾವಳಿಯಲ್ಲಿ ಸುಮಾರು 12' ಗಳಷ್ಟು ಮೇಲಕ್ಕೆ ಎತ್ತಲ್ಪಟ್ಟ ಹಿಮಯುಗದ ಮುಂಚಿನ ತೀರಪ್ರದೇಶವನ್ನು ಇಂದಿಗೂ ನೋಡಬಹುದು. ಇದೇ ರೀತಿ ಅತ್ಯಂತ ದೊಡ್ಡ ಹಿಮನದಿಗಳಿದ್ದ ಸ್ಕಾಟ್ಲೆಂಡ್ ಕಡೆಯ ಪಕ್ಕ 100' ಗಳಷ್ಟು ಕೆಳಕ್ಕೆ ಕುಸಿದಿರಬಹುದೆಂದು ಭಾವಿಸಲಾಗಿದೆ.

ಈ ಕಾಲದ ಪ್ರಾಣಿಗಳಲ್ಲಿ ಬಹುಮುಖ್ಯವಾದವು ಸ್ತನಿಗಳು. ಪ್ರಾಣಿಗಳನ್ನು ಈ ಕೆಳಗಿನಂತೆ ನಾಲ್ಕು ವರ್ಗಗಳನ್ನಾಗಿ ವಿಭಾಗಿಸಲಾಗಿದೆ. (1) ತಂಡ್ರಾ ವರ್ಗ–ಲೆಮ್ಮಿಂಗ್, ಶೀತವಲಯದ ಮೊಲ, ನರಿ, ಸಾರಂಗ ಮತ್ತು ಕಸ್ತೂರಿಮೃಗ; (2) ಸ್ಟೆಪ್ಪಿವರ್ಗ–ಜೆರೋಬ, ಮಾರ್ಮಾಟ್, ಕುದುರೆ ಮತ್ತು ಕತ್ತೆ; (3) ದಕ್ಷಿಣ ಖಂಡಗಳ ವರ್ಗ–ಖಡ್ಗಮೃಗ, ಗುಹಾಸಿಂಹ ಮತ್ತು ಗವಿಕತ್ತೆಕಿರುಬ; (4) ಗತವರ್ಗ–ಖಡ್ಗಮೃಗ, ಈಗಿನ ಆನೆಗಳ ಪೂರ್ವಜರಾದ ಎಲೆಫಾಸಿ ಅಂಟಿಕ್ವಸ್ ಮತ್ತು ಎಲಿಫಾಸ್ ಪ್ರೈಮಿಜಿನಿಯಸ್. ಹೀಗೆಯೇ ಸಸ್ಯಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. (1) ತಂಡ್ರಾಸಸ್ಯಗಳು–ಉನ್ನತ ಪರ್ವತಶ್ರೇಣಿಗಳು, ಮತ್ತು ಮೇರುಪ್ರದೇಶಗಳಲ್ಲಿಯ ಡ್ರೈಯಾಸ್ ಅಕ್ಟೊಪೆಟಾಲ, ಸ್ಯಾಲಿಕ್ಸ್ ಪೋಲಾರಿಸ್ ಮತ್ತು ಬೆಟುಲಾ; (2) ಸ್ಟೆಪ್ಪಿ ಸಸ್ಯವರ್ಗ–ಹುಲ್ಲು, ಪಾಚಿ, ದೇವದಾರು ಮತ್ತು ಬರ್ಚ್; (3) ವನಸಸ್ಯವರ್ಗ–ನಾರ್ವೆ, ಓಕ್ ಮತ್ತು ಬೀಚ್ ವೃಕ್ಷಗಳು.

ಇವುಗಳಷ್ಟೇ ಮುಖ್ಯವಾದ ಅವಶೇಷಗಳು ಆದಿಮಾನವನ ಫಾಸಿಲುಗಳು ಮತ್ತು ಅವನ ಶಿಲಾಉಪಕರಣಗಳು. ಇವುಗಳ ಅಭ್ಯಾಸದಿಂದ ಮಾನವನನ್ನು ಪಿಥಿಕ್ಯಾಂಥ್ರೋಪಸ್ ಇರೆಕ್ಟಸ್(ಕಪಿ ಮತ್ತು ಮಾನವನ ನಡುವಿನ ವಿಕಾಸಘಟ್ಟ), ಪಿಲ್ಟ್‌ಡೌನ್ ಮಾನವ, ಹಿಡೆಲ್ ಬರ್ಗ್ ಮಾನವ, ನಿಯಾಂಡರ್ಥೆಲ್ ಮಾನವ ಮತ್ತು ನವೀನ ಮಾನವ ಎಂಬುದಾಗಿ ವರ್ಗೀಕರಿಸಲಾಗಿದೆ. ಹೀಗೆಯೇ ಅವರ ಬೇಟೆಯ ಆಯುಧಗಳು ಮತ್ತು ಇತರ ಉಪಕರಣಗಳನ್ನು ಅನುಸರಿಸಿ ಶಿಲಾಯುಗ, ಕಂಚಿನಯುಗ, ಕಬ್ಬಿಣ ಯುಗ ಎಂದೂ ಹೆಸರಿಸಲಾಗಿದೆ. ಶಿಲಾಯುಗದಲ್ಲಿ ಇಯೊಲಿಥಿಕ್, ಪೇಲಿಯೋಲಿಥಿಕ್ ಮತ್ತು ನಿಯೋಲಿಥಿಕ್ ಎಂಬ ಮೂರು ಹಂತಗಳನ್ನು ಗುರುತಿಸಿದ್ದಾರೆ (ಆದಿಶಿಲಾಯುಗ, ಪ್ರಾಚೀನ ಶಿಲಾಯುಗ ಮತ್ತು ನವೀನ ಶಿಲಾಯುಗ). (ಬಿ.ವಿ.ಜಿ.)

**ಕ್ವಾಮಿ ಆವಾಜ಼್ :** ಲಖನೌದಿಂದ ಪ್ರಕಟವಾಗುವ ಉರ್ದು ದಿನಪತ್ರಿಕೆ. 1954ರಲ್ಲಿ ಪ್ರಾರಂಭವಾಯಿತು. ನ್ಯಾಷನಲ್ ಹೆರಲ್ಡ್ (ಇಂಗ್ಲಿಷ್) ಮತ್ತು ನವಜೀವನ (ಹಿಂದಿ) ದಿನಪತ್ರಿಕೆಗಳನ್ನು ಪ್ರಕಟಿಸುತ್ತಿರುವ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ ಸಂಸ್ಥೆಗೆ ಸೇರಿದೆ. ಆರಂಭದಿಂದಲೂ ಹಯಾತ್ ಉಲ್ಲಾ ಅನ್ಸಾರಿ ಇದರ ಸಂಪಾದಕ. ಈ ಪತ್ರಿಕೆಯ ಪ್ರಸಾರ ಸುಮಾರು 7000. ರಾಷ್ಟ್ರೀಯ ಧೋರಣೆಯುಳ್ಳ ಪತ್ರಿಕೆ. (ಎನ್.ಕೆ.)

**ಕ್ವಾರ್ಕುಗಳು :** ಭೌತವಿಜ್ಞಾನದಲ್ಲಿ ಹಲವಾರು ಮೂಲಕಣಗಳ (ಎಲಿಮೆಂಟರಿ ಪಾರ್ಟಿಕಲ್ಸ್) ಘಟಕಗಳು ಎಂದು ಭಾವಿಸಲಾಗಿರುವ ಸೂಕ್ಷ್ಮ ಕಣಗಳು. ಪ್ರಬಲ ನ್ಯೂಕ್ಲಿಯರ್ ಬಲದಿಂದ ಪರಸ್ಪರ ವರ್ತಿಸುವ ಎಲ್ಲ ಕಣಗಳ ಘಟಕಗಳಿವು. ಅಪ್, ಡೌನ್, ಚಾರ್ಮ್ಸ್ ಸ್ಟ್ರೇಂಜ್, ಟಾಪ್ ಮತ್ತು ಬಾಟಮ್ ಎಂಬ ಆರು ಕ್ವಾರ್ಕಗಳೂ ಅವುಗಳ ಪ್ರತಿ ಕ್ವಾರ್ಕುಗಳೂ ಇವೆ. ಇವುಗಳಿಗೆ ವಿವಿಧ ರಾಶಿಗಳಿದ್ದು ಇಲೆಕ್ಟ್ರಾನ್ ಆವೇಶ (ಋಣ ಅಥವಾ ಧನ) ಆವೇಶಗಳಿವೆ. ದ್ರವ್ಯದ ಮೂಲ ಘಟಕಗಳಲ್ಲಿ ಮತ್ತೊಂದು ಲೆಪ್ಟಾನ್ ಒಂದು.

ಪ್ರಯೋಗ ಪರಿಶೀಲನೆಗಳು : ಆಂಗ್ಲ ಭೌತವಿಜ್ಞಾನಿಗಳಾದ ಜಿ.ಡಿ.ರೋಚೆಸ್ಟರ್ ಮತ್ತು ಸಿ.ಸಿ.ಬಟ್ಲರ್ ಇವರು ಹೊಸ ವಿಧವಾದ ಒಂದು ಮೂಲಕಣದ ಮೊದಲ ಅಂಗಗಳನ್ನು ಆವಿಷ್ಕರಿಸಿದರು(1947). ಇವಕ್ಕೆ ಹೈಪರಾನುಗಳೆಂದು ಹೆಸರು. ನಾವು ಈಗ ಅರ್ಥ ಮಾಡಿಕೊಂಡಿರುವಂತೆ ಇವು ನ್ಯೂಟ್ರಾನ್ ಮತ್ತು ಪ್ರೋಟಾನುಗಳಿಗೆ ವ್ಯತ್ಯಾಸವಾಗುವಂಥ ಹೊಸತರಹದ ಆವೇಶವನ್ನು ಪಡೆದಿರುವುದಾಗಿ ತಿಳಿಯಬಹುದು. ಇದಕ್ಕೆ ಅತ್ಯಾವೇಶ (ಹೈಪರ್ ಚಾರ್ಜ್) ಎನ್ನುತ್ತೇವೆ. ಆವೇಶನಿತ್ಯತೆಯಂತೆಯೇ ಈ ಅತ್ಯಾವೇಶವೂ ನ್ಯೂಕ್ಲಿಯರ್ ಅಂತರಕ್ರಿಯೆಗಳಲ್ಲಿ ನಿತ್ಯತೆ ಪಡೆದಿರುತ್ತದೆ. (ಆದರೆ ಬೀಟ ಶಿಥಿಲತೆಯಂಥ ದುರ್ಬಲ ಅಂತರಕ್ರಿಯೆಗಳಲ್ಲಿ ಇದು ಸಾಧ್ಯವಾಗುವುದಿಲ್ಲ. ನ್ಯೂಕ್ಲಿಯರ್ ಬಲದ ಪ್ರಭಾವಕ್ಕೊಳಪಡುವ ಮೂಲಕಣಗಳು (ಹೈಡ್ರಾನುಗಳು) ನಿರ್ದಿಷ್ಟವಾದ ಆವೇಶವನ್ನೂ ಅತ್ಯಾವೇಶವನ್ನೂ ಪಡೆದಿರುತ್ತವೆ.

ಗೊತ್ತಿರುವ ಮೂಲಕಣಗಳನ್ನು ಅವುಗಳ ಆವೇಶ ಮತ್ತು ಅತ್ಯಾವೇಶಗಳ ಪ್ರಕಾರ ನಕ್ಷೆಯ ಮೇಲೆ ಗುರುತು ಮಾಡಿದಾಗ ಎಲ್ಲ ಹೈಡ್ರಾನುಗಳೂ ಒಂದು ವಿಶೇಷ ಮಾದರಿಗೆ ಒಳಪಡುತ್ತವೆಂದು ಎಂ.ಗೆಲ್‌ಮಾನ್ ಮತ್ತು ಕೆ.ನಿಷಿಜಿಮ ಎಂಬುವರು ಸಂಶೋಧನೆಗಳನ್ನು ನಡೆಸಿ ತೋರಿಸಿದರು. ಆವೇಶನಿರವಲಂಬಿ ತಂಡದ ಅಂಗವಾಗಿರುವ ಕಣಗಳು ಸಮತಲರೇಖೆಯ ಮೇಲಿರುವುವಲ್ಲದೆ ಚಿತ್ರದಲ್ಲಿ ತೋರಿಸಿರುವಂತೆ ಒಡೆದ ಲಂಬರೇಖೆಗೆ ಸಮಾಂಗವಾಗಿರುತ್ತವೆ. (ನಕ್ಷೆಯ ಮೇಲೆ $\pi^{+}, \pi^{0}$ ಮತ್ತು $\pi^{-}$ ಮೇಸಾನುಗಳ ಪರಸ್ಪರ




ಸ್ಥಾನಗಳನ್ನು ಗಮನಿಸಬೇಕು). ಹೀಗೆಯೇ ಇನ್ನೂ ಅನೇಕ ಕಣಗಳ ಗುಂಪುಗಳನ್ನು ಕಂಡುಹಿಡಿಯಲಾಯಿತು. ಈ ಗುಂಪುಗಳ ಅಂಗಗಳು ಆವೇಶ ಅತ್ಯಾವೇಶಗಳನ್ನು ಬಿಟ್ಟು ಮಿಕ್ಕೆಲ್ಲ ವಿಧದಲ್ಲಿಯೂ ಸಮಾನಾರ್ಥವಾಗಿರುತ್ತವೆ. ಚಿತ್ರದಲ್ಲಿ ವೃತ್ತಾಕಾರವಾಗಿ ತೋರಿಸಿರುವ ಕಣಗಳಲ್ಲಿ π' ಎಂಬ ಕಣ ಒಂಟಿ ತಂಡಕ್ಕೂ ಮಿಕ್ಕವು ಎಂಟು ಕಣಗಳ ತಂಡಕ್ಕೂ ಸೇರಿರುತ್ತವೆ.

ಕ್ವಾರ್ಕ್ ಮಾದರಿ : ಗೆಲ್‌ಮಾನ್ ಮತ್ತು ಜಿ.ಜ್ವೈಗ್ ಎಂಬುವರು, ಪ್ರಯೋಗಗಳಲ್ಲಿ ಪರಿಶೀಲಿಸಲ್ಪಟ್ಟ ಅಂಶಗಳನ್ನು, ಗೆಲ್‌ಮಾನ್–ನಿಷಿಜಿಮ ಸೂತ್ರದಂತೆಯೇ ಮತ್ತೊಂದು ವಿಧದಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯವೆಂದು ಸೂಚಿಸಿದರು(1963). ಈ ಹಿಂದೆ ಹೇಳಿದ ಕಣಗಳು ನಿಜವಾಗಿಯೂ ಮೂಲಕಣಗಳಾಗಿರದೆ ಬೇರೆ ವಿಶೇಷ ಗುಣಗಳುಳ್ಳ ಹಲವಾರು ನಿಜವಾದ ಮೂಲಕಣಗಳ ಸಂಕಲನ ಎಂದು ತೋರಿಸಿಕೊಟ್ಟರು. ಆವೇಶ ಜೋಡಿಗಳಾದ ನ್ಯೂಟ್ರಾನ್ ಮತ್ತು ಪ್ರೋಟಾನುಗಳಿಂದ ನ್ಯೂಕ್ಲಿಯಸ್ ಸಂಕಲಿತವಾಗಿದೆ ಎಂಬ ಅಂಶವನ್ನು ತಿಳಿದರೆ ನ್ಯೂಕ್ಲಿಯರ್ ಸ್ಥಿತಿಗಳಲ್ಲಿ ಕಂಡುಬರುವ ಸಮಾಂಗತ್ವಗಳನ್ನು ಹೇಗೆ ಸುಲಭವಾಗಿ ಅರ್ಥಮಾಡಿಕೊಳ್ಳಬಹುದೋ ಹಾಗೆಯೇ ಮೂಲಕಣಗಳಲ್ಲಿ ಕಂಡುಬರುವ ಸಮಾಂಗತ್ವವನ್ನು ಈ ಕಣಗಳು ಆವೇಶ–ಅತ್ಯಾವೇಶವುಳ್ಳ ಮೂರು (ನಿಜವಾಗಿಯೂ ಮೂಲಾಧಾರವಾದ) ಮೂಲಕಣಗಳಿಂದ ಸಂಕಲಿತ ಎಂದು ಭಾವಿಸಿದರೆ ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಈ ಕಾಲ್ಪನಿಕ ಮೂಲಕಣಗಳಿಗೆ ಕ್ವಾರ್ಕುಗಳು ಎಂದು ಗೆಲ್‌ಮಾನ್ ಹೆಸರಿಟ್ಟ. (1964) ಈ ಪದವನ್ನು ಜೇಮ್ಸ್ ಜಾಯ್ಸ್ ಬರೆದಿರುವ "ಫಿನೆಗನ್ಸ್ ವೇಕ್" ಎಂಬ ಪುಸ್ತಕದಲ್ಲಿ ಬರುವ 'ಮಸ್ಟರ್ ಮಾರ್ಕಿಗೆ ಮೂರು ಕ್ವಾರ್ಕುಗಳೇ?' ಎಂಬ ವಾಕ್ಸರಣಿಯಿಂದ ತೆಗೆದುಕೊಳ್ಳಲಾಗಿದೆ.

ಕ್ವಾರ್ಕ್ ಮಾದರಿಯಂತೆ ಮೇಸಾನು ಮತ್ತು ಬೇರಿಯಾನು ಎಂಬ ಎರಡು ವಿಧದ ಪ್ರಬಲ ಅಂತರಕ್ರಿಯೆಗೊಳಗಾಗುವ ಮೂಲಕಣಗಳು ಕ್ವಾರ್ಕುಗಳಿಂದ ಬೇರೆಬೇರೆ ರೀತಿಯಲ್ಲಿ ರಚಿತವಾಗಿವೆ. ಆವೇಶ ನಿತ್ಯತೆಯಂತೆಯೇ ಬೇರಿಯಾನುಗಳಿಗೂ ನಿತ್ಯತೆ ಉಂಟು. ಎಂದರೆ ಬೇರಿಯಾನ್ ಸಂಖ್ಯೆಯಲ್ಲಿ ಪ್ರತಿಬೇರಿಯಾನುಗಳ ಸಂಖ್ಯೆಯನ್ನು ಕಳೆದರೆ ಬರುವ ಸಂಖ್ಯೆ ಯಾವಾಗಲೂ ಒಂದೇ ಆಗಿರುತ್ತದೆ (ಬೇರಿಯಾನ್ ಸಂಖ್ಯಾನಿತ್ಯತೆ). ಕ್ವಾರ್ಕ್ ಮಾದರಿಯ ಪ್ರಕಾರ ಬೇರಿಯಾನುಗಳು ಮೂರು ಕ್ವಾರ್ಕುಗಳಿಂದ ಮಾಡಲ್ಪಟ್ಟಿವೆ. ಮೇಸಾನುಗಳಿಗೆ ನಿತ್ಯತೆ ಇರುವುದಿಲ್ಲ. ಅವನ್ನು ಪ್ರತಿಕ್ರಿಯೆಗಳಲ್ಲಿ ಸೃಷ್ಟಿಸಬಹುದು. ಇಲ್ಲವೇ ನಾಶಮಾಡಬಹುದು. ಮೇಸಾನುಗಳು ಒಂದು ಕ್ವಾರ್ಕ್ ಮತ್ತು ಒಂದು ಪ್ರತಿಕ್ವಾರ್ಕಿನಿಂದ ಸಂಕಲಿತವಾಗಿವೆ. ಮೂರು ಕ್ವಾರ್ಕುಗಳಲ್ಲಿ ಒಂದನ್ನೂ ಮೂರು ಪ್ರತಿಕ್ವಾರ್ಕುಗಳಲ್ಲಿ ಒಂದನ್ನೂ ಉಪಯೋಗಿಸಿ ರಚಿಸಬಹುದಾದ ಒಂಬತ್ತು ವಿವಿಧ ಸಂಯೋಗಗಳನ್ನು ಚಿತ್ರದಲ್ಲಿ ವೃತ್ತಾಕಾರವಾಗಿ ಗುರುತು ಮಾಡಿರುವ (ನಮಗೆ ಗೊತ್ತಿರುವ) ಮೇಸಾನುಗಳೆಂದು ಗ್ರಹಿಸಬಹುದು. ಮೂರು ಕ್ವಾರ್ಕುಗಳಿಂದ ಮಾಡಬಹುದಾದ 27 ವಿವಿಧ ಸಂಯೋಗಗಳು ನಮಗೆ ತಿಳಿದಿರುವ ಬೇರಿಯಾನುಗಳ ಸ್ಥಿತಿಗಳಿಗೆ ಅನುಗುಣವಾಗಿರುತ್ತವೆ.

1977ರಲ್ಲಿ ಪ್ರಬಲ ಅಂತರ್ವರ್ತನೆಗಳನ್ನು ವಿವರಿಸಲು ಕ್ವಾಂಟಂ ಕ್ರೊಮೆ, ಡೈನಮಿಕ್ಸ್ ಎಂಬ ಸಿದ್ಧಾಂತವನ್ನು ಮಂಡಿಸಲಾಯಿತು. ಇದರಲ್ಲಿ ಕ್ವಾರ್ಕ್‌ಗಳಿಗೆ 'ಕಲರ್' ಎಂಬ ಕ್ವಾಂಟಂ ಗುಣವನ್ನು ನೀಡಲಾಯಿತು. ಇದಕ್ಕೂ ನಿತ್ಯ ಜೀವನದಲ್ಲಿ ನಾವು ತಿಳಿಯುವ ಬಣ್ಣಗಳಿಗೂ ಯಾವುದೇ ಸಂಬಂಧವಿಲ್ಲ. ವಿದ್ಯುತ್ಕಾಂತ ಅಂತರ್ವರ್ತನೆಗಳಲ್ಲಿ ಆವೇಶವು ವಹಿಸುವ ಪಾತ್ರವನ್ನು ಪ್ರಬಲ ಅಂತರ್ವತನೆಗಳಲ್ಲಿ 'ಕಲರ್' ವಹಿಸುತ್ತದೆ. ಕಲರ್‌ನಿಂದಾಗಿ ಕ್ವಾರ್ಕ್‌ಗಳೊಳಗೆ ಗ್ಲುಆನ್‌ಗಳೆಂಬ ರಾಶಿರಹಿತ ಕಣಗಳ ವಿನಿಮಯವಾಗುತ್ತದೆ.

ಫರ್ಮಿ ನ್ಯಾಷನಲ್ ಅಕ್ಸೆಲರೇಟರ್ ಲ್ಯಾಟೇರೆಟಂ (ಅಮೆರಿಕ)ಯಲ್ಲಿ ವಿಜ್ಞಾನಿಗಳ ಎರಡು ತಂಡಗಳು 1995ರಲ್ಲಿ ಟಾಪ್ ಕ್ವಾರ್ಕ್‌ನ್ನು ಕಂಡುಕೊಂಡುದನ್ನು ವರದಿ ಮಾಡಿದರು. ಆದರೆ ಅಪ್ ಮತ್ತು ಡೌನ್ ಕ್ವಾರ್ಕ್‌ಗಳನ್ನು ಬಿಟ್ಟರೆ ಉಳಿದವು. ತೀರ ಅಸ್ಥಿರ ಪ್ರೋಟಾನ್‌ನಲ್ಲಿ ಎರಡು ಅಪ್‌ಕ್ವಾರ್ಕ್ ಮತ್ತು ಒಂದು ಡೌನ್ ಕ್ವಾರ್ಕ್ ಇವೆ. ನ್ಯೂಟ್ರಾನ್‌ನಲ್ಲಿ ಒಂದು ಅಪ್ ಕ್ವಾರ್ಕ್ ಮತ್ತು ಎರಡು ಡೌನ್ ಕ್ವಾರ್ಕ್‌ಗಳಿವೆ.

ಕ್ವಾರ್ಕ್‌ಗಳಷ್ಟೇ ಪ್ರಕೃತಿಯಲ್ಲಿರುವ ನಾಲ್ಕೂ ಮೂಲಭೂತ ಬಲಗಳ ಮೂಲಕ ವರ್ತಿಸುವ ಮೂಲಕಣಗಳು. (ಎನ್.ಜಿ.ಪಿ.)

**ಕ್ವಾರ್ಟ್‌ಜೈಟ್ :** ಒಂದು ರೂಪಾಂತರಿತ ಶಿಲೆ; ಬಹ್ವಂಶ ಅಥವಾ ಪೂರ್ಣವಾಗಿ ಕ್ವಾರ್ಟ್ಜನ್ನೇ ಒಳಗೊಂಡಿರುವುದು. ಇದರಲ್ಲಿ ರೇಕುಗಳಿರುವುದಿಲ್ಲ. ಕಣರಚನೆಯನ್ನು ಪ್ರದರ್ಶಿಸುತ್ತದೆ. ಇದರ ಉತ್ಪನ್ನ ಎರಡು ರೀತಿಗಳಲ್ಲಿ ಆಗಬಹುದು.

1. ಕಣ ಕಣಗಳ ನಡುವಣ ಅವಕಾಶಗಳಲ್ಲಿ ದ್ರಾವಣಗಳು ಹರಿದು ಅವುಗಳಿಂದ ಸಿಲಿಕ ನಿಕ್ಷೇಪಿತವಾಗಿ ಆ ಕಣಗಳನ್ನು ನಿಕಟವಾಗಿ ಬಂಧಿಸಿ ಒಂದು ಏಕರೀತಿಯ ಗಟ್ಟಿ ರೂಪಗೊಳ್ಳಬಹುದು.

2.ಅತ್ಯುಷ್ಣ ಹಾಗೂ ಸಂಮರ್ದ ಕಣಗಳ ಮೇಲೆ ಪ್ರಯುಕ್ತವಾದಾಗ ಅವು ವಿರೂಪಗೊಂಡು ಒಂದುಗೂಡಿ ಸಾಂದ್ರ ಮತ್ತು ಅಖಂಡವಾದ ಒಂದು ಮುದ್ದೆ ಆಗಬಹುದು. ಕೆಲವು ಸಂದರ್ಭಗಳಲ್ಲಿ ಮೂಲಕಣಗಳ ಗುರುತೇ ಸಿಕ್ಕದ ಹಾಗೆ ಶಿಲೆ ಘನವಾದ ಚಕಮಕಿ ಕಲ್ಲಿನ ರೂಪಕ್ಕೆ ತಿರುಗಿರಬಹುದು.

ಕ್ವಾರ್ಟ್‌ಜೈಟ್ ಬಂಡೆಯನ್ನು ಒಡೆದರೆ ಅದು ನುಣುಪಾದ ಮತ್ತು ಶಂಖವರ್ಣದ ಘಟಕಗಳಾಗಿ ವಿಭಾಗವಾಗುತ್ತದೆ. ಮೂಲಕಣಗಳಲ್ಲಿದ್ದ ಕಲ್ಮಷಗಳನ್ನು ಕ್ವಾರ್ಟ್‌ಜೈಟಿನಲ್ಲಿಯೂ ಕಾಣಬಹುದು. ಹೀಗಾಗಿ ಕ್ವಾರ್ಟ್‌ಜೈಟ್ ಶಿಲೆಯ ಬಣ್ಣ ಶುದ್ಧ ಬಿಳಿ ಬಣ್ಣದಿಂದ ತೊಡಗಿ ಬೂದು, ಕಂದು, ಕೆಂಪು ಮತ್ತು ಕೆಲವು ವೇಳೆ ಕಪ್ಪು ಬಣ್ಣದ ವರೆಗೆ ಯಾವುದೇ ಆಗಿರುವುದು ಸಾಧ್ಯ. ಭಾರತದ ಎಲ್ಲ ಶಿಲಾಸ್ತೋಮಗಳಲ್ಲೂ ಕ್ವಾರ್ಟ್‌ಜೈಟನ್ನು ಗುರುತಿಸಲಾಗಿದೆ. ಆದರೆ ಕಬ್ಬಿಣದ ಪಟ್ಟಿಗಳಿಂದ ಕೂಡಿದ ಕ್ವಾರ್ಟ್‌ಜೈಟುಗಳು (ಬ್ಯಾಂಡೆಡ್ ಫೆರ್ರೂಜಿನಸ್ ಕ್ವಾರ್ಟ್‌ಜೈಟ್ಸ್) ಮಾತ್ರ ಪೂರ್ವ ಕೇಂಬ್ರಿಯನ್ ಸ್ತೋಮಗಳಿಗೆ ಸೀಮಿತವಾಗಿವೆ. (ಎಸ್.ಬಿ.ಎಲ್.)

**ಕ್ವಾರ್ಟ್ಸ್ :** ಅತ್ಯಂತ ವಿಪುಲವಾಗಿ ದೊರೆಯುವ ಹಾಗೂ ವ್ಯಾಪಕವಾಗಿ ಹಬ್ಬಿರುವ ಖನಿಜ. ಬೆಣಚುಕಲ್ಲು ಪರ್ಯಾಯ ನಾಮ. ಇದು ಹರಳಿನ ಆಕೃತಿಯಲ್ಲಿರುವ ಸಿಲಿಕ. ಅನೇಕ ಶಿಲೆಗಳ ಅತಿಮುಖ್ಯವಾದ ಘಟಕವಿದು. ಅಗ್ನಿಶಿಲೆಗಳು ಮತ್ತು ರೂಪಾಂತರಿತಶಿಲೆಗಳು ಹಾಗೂ ಜಲಜಶಿಲೆಗಳಾದ ಮರಳುಶಿಲೆ ಮತ್ತು ಗ್ರಾವೆಲ್ಲುಗಳ ಪ್ರಮುಖ ಖನಿಜ ಕ್ವಾರ್ಟ್ಸ್. ರಾಸಾಯನಿಕವಾಗಿ ಇದು ಸಿಲಿಕಾನ್ ಡೈಆಕ್ಸೈಡ್ ($SiO_2$). ಅತ್ಯಲ್ಪ ಪರಿಮಾಣಗಳಲ್ಲಿ ಇದರೊಂದಿಗೆ ಸಂಯೋಗವಾಗಿರುವ ಇತರ ಆಕ್ಸೈಡುಗಳನ್ನು $TiO_2$ — 0.015%, $Fe_2O_3$ — 0.07%. FeO — 0.04%, MgO — 0.09%) ಬಿಟ್ಟರೆ ಕ್ವಾರ್ಟ್ಸ್ 98%ನ್ನೂ ಮಿಕ್ಕಿ $SiO_2$.ಇತರ ಆಕ್ಸೈಡುಗಳ ಮೊತ್ತ 1%— 1.5% ರಷ್ಟಿರಬಹುದು.

ಕ್ವಾರ್ಟ್ಸ್ ರಾಂಬೊಹಿಡ್ರಲ್ ಉಪಸಮೂಹದ ಟ್ರಿಗೊನಲ್ ಟ್ರಪೆಜೊಹಿಡ್ರಲ್ ವರ್ಗದಲ್ಲಿ ಸ್ಫಟೀಕೀಕರಿಸುತ್ತದೆ. ಇದರ ಜಾಲಕ (ಲ್ಯಾಟ್ಟಿಸ್) ಷಣ್ಮುಖಾಕೃತಿಯಲ್ಲಿದೆ. ಕ್ವಾರ್ಟ್ಸ್, ಟ್ರೆಡಿಮೈಟ್ ಮತ್ತು ಕ್ರಿಸ್ಟೊಬಲೈಟ್ ಈ ಈ ಮೂರು ಪ್ರಭೇದಗಳು ಸ್ಫಟಿಕಾಕೃತಿಯನ್ನು ತಳೆದಿದ್ದರೂ ಇವುಗಳ ರಚನೆ ಮಾತ್ರ ಬೇರೆ ಬೇರೆ. ರಚನೆಯಲ್ಲಿ ಚತುರ್ಮುಖಿಗಳಿದ್ದು ಪ್ರತಿ ಚತುರ್ಮುಖಿಯ ನಾಲ್ಕು ಮೂಲೆಗಳಲ್ಲಿ ಆಮ್ಲಜನಕವೂ ಕೇಂದ್ರದಲ್ಲಿ ಸಿಲಿಕಾನೂ ಇರುತ್ತವೆ. ಸಾಮಾನ್ಯ ಕ್ವಾಟ್ಸಿನಲ್ಲಿ $SiO_4$ ಚತುರ್ಮುಖಿ ಆಕಾರಗಳು ಬಲ– ಮತ್ತು ಎಡ– ಕೈ ಆವರ್ತವಾಗಿರುತ್ತವೆ. ಕ್ವಾರ್ಟ್ಸ್, ಟ್ರಿಡಿಮೈಟ್ ಮತ್ತು ಕ್ರಿಸ್ಟೊಬಲೈಟ್ ಹರಳುಗಳಲ್ಲಿ ಕನಿಷ್ಠ ಮತ್ತು ಗರಿಷ್ಠ ಉಷ್ಣದ ಪ್ರಭೇದಗಳಿವೆ. ಕ್ವಾರ್ಟ್ಸ್ ಸುಮಾರು 573° ಸೆಂ. ಕೆಳಗಿನ ಉಷ್ಣತೆಯಲ್ಲಿ ಸ್ಥಿರವಾಗಿರುತ್ತದೆ. ಇದಕ್ಕಿಂತ ಹೆಚ್ಚು ಕಾಯಿಸಿದರೆ ಅದು ವ್ಯತಿರಿಕ್ತವಾಗಿ ಗರಿಷ್ಠ ಉಷ್ಣದ ರೂಪವನ್ನು ಪಡೆಯುತ್ತದೆ. ಕನಿಷ್ಠ ಮತ್ತು ಗರಿಷ್ಠ ಉಷ್ಣದ ಪ್ರಭೇದಗಳಿಗೆ ಮತ್ತು ಹರಳುಗಳೆಂದು ಹೆಸರು.

ಕ್ವಾರ್ಟ್ಸ್ ಹರಳುಗಳ ಒಳರಚನೆಯನ್ನು ಎಕ್ಸ್‌ಕಿರಣಗಳಿಂದ ತಿಳಿಯಲಾಗಿದೆ. ಕ್ವಾರ್ಟ್ಸ್ ರಚನೆಯನ್ನು 1925ರಲ್ಲಿ ಬ್ರಾಗ್ ಮತ್ತು ಗಿಬ್ಸ್ ಕಂಡುಹಿಡಿದರು. ಅನಂತರ 1926ರಲ್ಲಿ

ಚಿತ್ರ 1 ಎಡಗಡೆಯದು ಕ್ವಾರ್ಟ್ಸ್ ಹರಳು (ಸ್ಫಟಿಕ) ಗುಚ್ಛ, ಬಲಗಡೆಯದು ರಾಕ್ ಕ್ರಿಸ್ಟಲ್ ಪ್ರಭೇದದ ಹರಳುಗಳು

ವೈಕಾಫ್ ಇದರ ಷಡ್ಭುಜೀಯ ಸಮಾಂಗತ್ವವನ್ನು ತಿಳಿಯಪಡಿಸಿದ. – ಕ್ವಾರ್ಟ್ಸ್ ರಚನೆಯನ್ನು ಟ್ರಿಗೊನಲ್ ಎಂದು ಗಿಬ್ಸ್ ನಿರ್ಧರಿಸಿದ (1926). ಪರಿಶುದ್ಧವಾದ ಕ್ವಾರ್ಟ್ಸ್



ಚಿತ್ರ 2 ಶಿಲಾಕುಳಿಯೊಂದರಲ್ಲಿನ ಕ್ವಾರ್ಟ್ಸ್ ಹರಳುಗಳು

ನಿರ್ವರ್ಣವಾಗಿರುವುದು. ಕಲ್ಮಷಗಳು ಸೇರಿದಾಗ ಇದು ಬಿಳಿ, ಬೂದು, ಹಳದಿ, ಕೆಂಪು, ಕಂದು ಮತ್ತು ಹೊಗೆಗಪ್ಪು ಬಣ್ಣಗಳನ್ನು ಪ್ರದರ್ಶಿಸುತ್ತದೆ. ಗಾಜಿನಂತೆ ಮತ್ತು ಕೆಲವು ವೇಳೆ ಗೋಂದಿನಂತೆ ಹೊಳೆಯುವುದುಂಟು. ಕ್ವಾರ್ಟ್ಸ್ ಬಲು ಗಡಸಾದ ಖನಿಜ. ಮೋಹ್ ಮಾನಕದಲ್ಲಿ ಇದರ ಕಾಠಿನ್ಯಾಂಕ 7. ಹೈಡ್ರೊಫ್ಲೂರಿಕ್ ಆಮ್ಲವನ್ನುಳಿದು ಮಿಕ್ಕ ಯಾವ ಆಮ್ಲವೂ ಕ್ವಾರ್ಟ್ಸನ್ನು ಕರಗಿಸಲಾರದು. ಇದರ ಸಾಪೇಕ್ಷ ಸಾಂದ್ರತೆ 2.65.

ನಿಸರ್ಗದಲ್ಲಿ ಕ್ವಾರ್ಟ್ಸ್ ಮುಖ್ಯವಾಗಿ ಈ ಮುಂದಿನ ರೂಪಗಳಲ್ಲಿ ದೊರೆಯುತ್ತದೆ: ರಾಕ್ ಕ್ರಿಸ್ಟಲ್ (ಸಾಮಾನ್ಯ ಹರಳಿನ ಕ್ವಾರ್ಟ್ಸ್). ಪದ್ಮರಾಗ ಮಣಿ (ಅಮೆಥಿಸ್ಟ್), ಗುಲಾಬಿ ಕ್ವಾರ್ಟ್ಸ್, ಹಳದಿ ಕ್ವಾರ್ಟ್ಸ್ ಅಥವಾಸಿಟ್ರೈನ್, ಸ್ಮೋಕಿ ಕ್ವಾರ್ಟ್ಸ್, ಆಗೇಟ್, ಓಪಾಲ್ ಇತ್ಯಾದಿ. ಸಾಧಾರಣವಾಗಿ ಕಾವು ನೀರಿನ ಸನ್ನಿವೇಶಗಳಲ್ಲಿ ಕ್ವಾರ್ಟ್ಸ್ ಉತ್ಪತ್ತಿಯಾಗುತ್ತದೆ. ಅದರಲ್ಲಿಯೂ ಪೆಗ್ಮಟೈಟ್ ಶಿಲೆಗಳ ಜನನದ ಕೊನೆಯ ಹಂತದಲ್ಲಿ ಶಿಲೆಯ ಕುಳಿ ಮತ್ತು ಬಿರುಕುಗಳಲ್ಲಿ ರೂಪುಗೊಳ್ಳುವುದು. ಉಷ್ಣ ಒತ್ತಡ ಮತ್ತು ಇತರ ರಾಸಾಯನಿಕ ಪರಿಸರಗಳನ್ನು ಆಧರಿಸಿ ಇದು ಯಾವ ಆಕಾರವನ್ನೂ ತಳೆಯಬಹುದು. ಕ್ವಾರ್ಟ್ಸನ್ನು ಕೃತಕ ರೀತಿಯಲ್ಲಿಯೂ ತಯಾರುಮಾಡುತ್ತಿದ್ದಾರೆ. ಈ ಕಾರ್ಯ ಒಂದು ಶತಮಾನಕ್ಕೂ ಹಿಂದೆಯೇ ರೂಢಿಯಲ್ಲಿತ್ತು. ಕೃತಕ ರೀತಿಯಲ್ಲಿ ತಯಾರಿಸಿದ ಕ್ವಾರ್ಟ್ಸ್ ಹರಳನ್ನು ರೇಡಿಯೋ ಸಿಗ್ನಲ್ ತರಂಗಗಳ ಹತೋಟಿಯಲ್ಲಿ ಉಪಯೋಗಿಸುತ್ತಾರೆ. ಇದು ಹೆಚ್ಚು ಕಾಠಿನ್ಯದಿಂದ ಕೂಡಿರುವ ಕಾರಣ



ಚಿತ್ರ 3 : ಪಟ್ಟಿಸ್ವರೂಪದ ಆಗೇಟಿನ ಎರಡು ಮಾದರಿಗಳು

ಇದನ್ನು ಘರ್ಷಕ ವಸ್ತುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದೇ ರೀತಿ ಗಾಜು, ಪಿಂಗಾಣಿ ಸಾಮಾನುಗಳ ತಯಾರಿಕೆಯಲ್ಲಿ ಮತ್ತು ಅದುರು ಪರಿಷ್ಕರಣದಲ್ಲಿ ಬಂಧಕವಾಗಿ (ಸಿಲಿಕಾಜೆಲ್), ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳಲ್ಲಿ (ಸಿಲಿಕಾನ್) ಹೆಚ್ಚು ಉಪಯೋಗದಲ್ಲಿದೆ. ಉತ್ತಮ ಬಣ್ಣದ ಪಾರದರ್ಶಕ ಹರಳುಗಳನ್ನು ಜವಾಹಿರಿಗಳಲ್ಲಿ ಉಪಯೋಗಿಸುವುದುಂಟು.

(ಎಂ.ಎನ್.ಎಂ.)

**ಕ್ವಾರ್ಟ್ಸ್ ಗಡಿಯಾರ :** ಕ್ವಾರ್ಟ್ಸ್ ಸ್ಫಟಿಕದ ಪೀಝೋ ವಿದ್ಯುತ್ ಗುಣವನ್ನು ಉಪಯೋಗಿಸುವ ಗಡಿಯಾರ. ಸಾಂಪ್ರದಾಯಿಕ ಗಡಿಯಾರದ ಕಾಲಮಾಪನನಿಷ್ಕೃಷ್ಟತೆ ಅದರ ರೋಮಸ್ಪ್ರಿಂಗನ್ನೊಳಗೊಂಡ ಚಕ್ರದ ಆಂದೋಲನಾವಧಿಯ ನಿಖರತೆಯನ್ನು ಅವಲಂಬಿಸಿದೆ. ಈ ಅವಧಿಯನ್ನು ನಿರ್ಧರಿಸುವ ಪ್ರಾಚಲಗಳೆಂದರೆ(ಪ್ಯರಾಮೀಟರ್ಸ್) ಸ್ಪ್ರಿಂಗಿನ ಕರ್ಷಣ, ಸ್ಪ್ರಿಂಗನ್ನು ಲಗತ್ತಿಸಿರುವ ಚಕ್ರದ ಆಕಾರ, ತೂಕ ಮತ್ತು ಈ ಚಕ್ರದಂಡ ಅನುಭವಿಸುವ ಘರ್ಷಣ(ಫ್ರಿಕ್ಷನ್). ಇವುಗಳ ಪೈಕಿ ಯಾವುದೇ ಅಥವಾ ಎಲ್ಲವೂ ವ್ಯತ್ಯಾಸವಾದಾಗ ಗಡಿಯಾರ ಸೂಚಿಸುವ ಕಾಲದಲ್ಲಿಯೂ ವ್ಯತ್ಯಾಸವಾಗುತ್ತದೆ. ಸಾಂಪ್ರದಾಯಿಕ ಗಡಿಯಾರದ ಗರಿಷ್ಠ ನಿಖರತೆ ದಿನಕ್ಕೆ ಸುಮಾರು ಒಂದು ಸೆಕೆಂಡು. ಕಾಲನಿಖರತೆಯನ್ನು ಇನ್ನೂ ಸ್ಫುಟಗೊಳಿಸಬೇಕಾದರೆ ಗಡಿಯಾರದಲ್ಲಿನ ಕಾಲನಿರ್ಧರಣೆಯ ಮೂಲ ವಿಭಾಗದ ನಿಖರತೆಯನ್ನು ಹೆಚ್ಚಿಸಬೇಕೆಂಬುದು ಸ್ಪಷ್ಟ. ಕ್ವಾರ್ಟ್ಸ್ ಗಡಿಯಾರದಲ್ಲಿ ಮಾಡುವುದು ಇದನ್ನೇ.

ಆಯಾಕಾರವಾಗಿ ಕೊಯ್ದ ಕ್ವಾರ್ಟ್ಸ್ ಸ್ಫಟಿಕದ ಎರಡು ಮುಖಗಳಿಗೆ ಲೋಹಲೇಪನ ಮಾಡಿ ಅವುಗಳಿಗೆ ಪರ್ಯಾಯ ವಿದ್ಯುತ್ ವೋಲ್ಟೇಜನ್ನು ಪ್ರಯುಕ್ತಿಸಿದರೆ(ಅಪ್ಲೈ) ಸ್ಫಟಿಕ ಆಂದೋಲಿಸುತ್ತದೆ. ಪರ್ಯಾಯ ವಿದ್ಯುತ್ ವೋಲ್ಟೇಜಿನ ಆವರ್ತಾಂಕ(ಫ್ರೀಕ್ವೆನ್ಸಿ) ಸ್ಫಟಿಕದ ನೈಜ ಆವರ್ತಾಂಕಕ್ಕೆ ಸಮವಾಗಿದ್ದರೆ ಅದು ಗರಿಷ್ಠ ಕಂಪನವೈಶಾಲ್ಯದಿಂದ (ಆಂಪ್ಲಿಟ್ಯೂಡ್) ಆಂದೋಲಿಸುತ್ತದೆ. ಇಂಥ ಸ್ಫಟಿಕವನ್ನೊಳಗೊಂಡ ಒಂದು ಎಲೆಕ್ಟ್ರಾನಿಕ್ ಆಂದೋಲಕವನ್ನು ರಚಿಸಿದರೆ ಅದರ ವಿದ್ಯುದಾಂದೋಲನಗಳ ಆವರ್ತಾಂಕ ಮತ್ತು ಸ್ಫಟಿಕದ ನೈಜ ಆವರ್ತಾಂಕ ಒಂದೇ ಆಗಿರುವುದು. ಈ ಆಂದೋಲನಗಳು ಬಹು ಸ್ಥಿರವಾಗಿರುತ್ತವೆ. ಸ್ಫಟಿಕವನ್ನು ಒಂದೇ ಉಷ್ಣತೆ ಮತ್ತು ಒತ್ತಡದಲ್ಲಿಟ್ಟರಂತೂ ಅದರ ಆವರ್ತಾಂಕ ದಿವಸವೊಂದರ ಹತ್ತುಲಕ್ಷದಲ್ಲಿ ಒಂದೆರಡು ಭಾಗಗಳಷ್ಟು ಮಾತ್ರ ವ್ಯತ್ಯಾಸವಾಗುತ್ತದೆ.

ಈ ಆಂದೋಲನಗಳನ್ನು ಎಲೆಕ್ಟ್ರಾನಿಕ್ ವಿಧಾನಗಳಿಂದ ಕಡಿಮೆ ಆವರ್ತಾಂಕಕ್ಕೆ ವಿಭಾಗಿಸುತ್ತಾರೆ. (ಉದಾಹರಣೆಗೆ 100 kHz ನಿಂದ 1 kHz). ಹೀಗೆ ವಿಭಾಗಿಸಿದ ಆಂದೋಲಿತ ವಿದ್ಯುತ್ ಒಂದು ಸಮಶ್ಚರ (ಸಿಂಕ್ರೋನಸ್) ಮೋಟಾರನ್ನು ತಿರುಗಿಸುವಂತೆ ಮಾಡುತ್ತದೆ. ಸಮಶ್ಚರ ಮೋಟಾರಿನ ತಿರುಗುವೇಗ (rps) ಪ್ರಯುಕ್ತ ಪರ್ಯಾಯ ವೋಲ್ಟೇಜಿನ ಆವರ್ತಾಂಕದಷ್ಟೇ ಇರುತ್ತದೆ. ಗಿಯರುಗಳ ಮೂಲಕ ಮೋಟಾರು ಗಡಿಯಾರದ ಮುಳ್ಳುಗಳನ್ನು ತಿರುಗಿಸುತ್ತದೆ.

ಕ್ವಾರ್ಟ್ಸ್ ಗಡಿಯಾರದ ನಿಖರತೆ ವರ್ಷಕ್ಕೆ ಸುಮಾರು 0.1 ಸೆಕೆಂಡು. (ಕೆ.ಜಿ.)

**ಕ್ವಾಲ ಲುಂಪುರ್ :** ಮಲೇಷ್ಯದ ರಾಜಧಾನಿ. ವಿಶ್ವವಿದ್ಯಾಲಯ ಮತ್ತು ವಾಣಿಜ್ಯ ಕೇಂದ್ರ. ಜನಸಂಖ್ಯೆ 1,297,526 (2000) ಪರ್ಯಾಯ ದ್ವೀಪದ ಪಶ್ಚಿಮ ತೀರದಿಂದ 40 ಕಿಮೀ ದೂರದಲ್ಲಿ ಕ್ಲಾಂಗ್ ಮತ್ತು ಗೊಂಬರ್ ನದಿಗಳ ಸಂಗಮಸ್ಥಳದಲ್ಲಿದೆ. ಬ್ರಿಟಿಷರು ಇಲ್ಲಿಗೆ ಮೊದಲ ಬಾರಿಗೆ ಬಂದಾಗ ಇದೊಂದು ಹಳ್ಳಿಯಾಗಿತ್ತು. ಇದರ ಸುತ್ತಣ ಪ್ರದೇಶದಲ್ಲಿ ಸತುವಿನ ಗಣಿಗಳು ಆರಂಭವಾದ (1857) ಮೇಲೆ ಇದು

ಬೆಳೆಯತೊಡಗಿತು. ರೈಲುಮಾರ್ಗಗಳು, ರಸ್ತೆ ನಿರ್ಮಾಣವಾಗಿ ಇದರ ಪ್ರಾಮುಖ್ಯ ಅಧಿಕವಾಯಿತು. ಸಿಂಗಾಪುರಕ್ಕೆ ವಾಯವ್ಯದಲ್ಲಿ 320 ಕಿಮೀ ದೂರದಲ್ಲಿರುವ ಈ ನಗರ ಸೆಲಾಂಗರ ರಾಜಧಾನಿಯಾಗಿದ್ದು, ಅನಂತರ, 1895ರಲ್ಲಿ ಮಲಯ ಸಂಯುಕ್ತ ರಾಜ್ಯದ ರಾಜಧಾನಿಯಾಯಿತು. ಕ್ವಾಲ ಲುಂಪುರದ ಬೆಳವಣಿಗೆಯ ವೇಗ ಅಧಿಕವಾದ್ದು. ಮಲಯ ಸ್ವತಂತ್ರವಾದ (1957) ಮೇಲೆ, ಅಲ್ಲಿ ನೂತನ ವಸತಿಗಳು ನಿರ್ಮಾಣಗೊಂಡುವು. ಸರ್ಕಾರದ ಮುಖ್ಯ ಕಚೇರಿಗಳು ಇರುವುದು ಸಂಗಮದ ಬಳಿಯಲ್ಲಿ.

ಕ್ವಾಲ ಲುಂಪುರದಲ್ಲಿರುವ ಪಾರ್ಲಿಮೆಂಟ್ ಭವನ

ಕ್ವಾಲ ಲುಂಪುರದಲ್ಲಿ ಎರಡು ಕೈಗಾರಿಕಾ ವಲಯಗಳಿವೆ. ಆಗ್ನೇಯದಲ್ಲಿರುವ ಸುಂಗೈ ಬೇಸೆಯಲ್ಲಿ ಲೋಹದ ಉದ್ಯಮವೂ ಉತ್ತರದಲ್ಲಿರುವ ಸೆಂತುರ್‌ನಲ್ಲಿ ಎಂಜಿನಿಯರಿಂಗ್ ಉದ್ಯಮವೂ ಬೆಳೆದಿವೆ. ಪೆಟಾಲಿಂಗ್ ಜಯ ಎಂಬ ಉಪನಗರ ಇರುವುದು ಉತ್ತರದಲ್ಲಿ–ಮುಖ್ಯನಗರಕ್ಕೆ 9.6 ಕಿಮೀ ದೂರದಲ್ಲಿ. ವನಸ್ಪತಿ ಮತ್ತು ಸಾಬೂನು ತಯಾರಿಕೆ, ಮದ್ಯೋತ್ಪಾದನೆ ಮುಂತಾದ ಕೈಗಾರಿಕೆಗಳು ಅಲ್ಲಿ ಬೆಳೆದಿವೆ. ಕ್ವಾಲ ಲುಂಪುರ್ ತವರ, ರಬ್ಬರುಗಳ ವ್ಯಾಪಾರಕೇಂದ್ರವಾಗಿದೆ. ಪೆಟ್ರೋನಾಸ್ ಟ್ವಿನ್‌ಟವರ್ಸ್‌ಗಳನ್ನು 1998ರಲ್ಲಿ ನಿರ್ಮಿಸಲಾಯಿತು. ಅಂದು ಅವು ಪ್ರಪಂಚದಲ್ಲೇ ಅತಿ ಎತ್ತರವಾದ ಕಟ್ಟಡಗಳಾಗಿದ್ದವು. *

**ಕ್ವಾಷಿಯೋರ್ಕರ್ :** ಮೆಕ್ಕೆಜೋಳವನ್ನು ಸೇವಿಸುವ ಮಕ್ಕಳಲ್ಲಿ ಆಹಾರ ನ್ಯೂನತೆಯಿಂದ ತಲೆದೋರುವ ಕಾಯಿಲೆ. ದಕ್ಷಿಣ ಆಫ್ರಿಕದಲ್ಲಿ ಸಾಮಾನ್ಯ. ಪ್ರೋಟೀನು ಮತ್ತು ವಿಟಮಿನ್ನುಗಳ ಅಂಶಗಳು ಆಹಾರದಲ್ಲಿ ಸಾಕಷ್ಟು ಇಲ್ಲದಾಗ ಈ ಕಾಯಿಲೆ ಬರುವುದೆಂದು ಸಂಶೋಧನೆಗಳಿಂದ ತಿಳಿದುಬಂದಿದೆ.

ಈ ರೋಗದ ಲಕ್ಷಣಗಳಲ್ಲಿ ಮುಖ್ಯವಾದ ಅಂಶಗಳಿವು :

1. ಎದೆ ಹಾಲು ಬಿಡಿಸಿದ ತರುವಾಯ ಕಂಡುಬರುವ ದೈಹಿಕ ಮತ್ತು ಮಾನಸಿಕ ಕ್ಷೀಣತೆ.

2. ಕೂದಲು ಮತ್ತು ಚರ್ಮದ ಬಣ್ಣದಲ್ಲಿ ಬದಲಾವಣೆ.

3. ಶರೀರದ ಊತ, ವಾಂತಿ, ಭೇದಿ ಮತ್ತು ಇತರ ಬದಲಾವಣೆಗಳು.

4. ಮಗುವಿನಲ್ಲಿ ಕಂಡುಬರುವ ಆಸಕ್ತಿಹೀನತೆ ಅಥವಾ ನಿರುತ್ಸಾಹ.

5. ಪರಿಹಾರ ಕ್ರಮಗಳನ್ನು ಉಪಯೋಗಿಸದಿದ್ದಾಗ ಉಂಟಾಗುವ ಇತರ ರೋಗಗಳು ಮತ್ತು ಕಡೆಗೆ ಸಾವು.

ಮಗು ತಾಯಿಯ ಹಾಲಿನಿಂದ ಬೆಳೆಯುವ ಮೊದಲ ಕೆಲವು ತಿಂಗಳುಗಳಲ್ಲಿ ಅದರ ಆರೋಗ್ಯ ಸಹಜವಾಗಿಯೇ ಇರುತ್ತದೆ. ಆದರೆ ತಾಯಿ ಹಾಲನ್ನು ಬಿಡಿಸಿ ಕೃತಕ ಹಾಲು ಮತ್ತು ಇತರ ಆಹಾರಗಳನ್ನು ಉಪಯೋಗಿಸಿದಾಗ ಈ ರೋಗದ ಚಿಹ್ನೆಗಳು ಕಾಣಿಸುವುವು. 4 ತಿಂಗಳಿಂದ 5 ವರ್ಷದ ವಯೋಮಿತಿಯಲ್ಲಿ ಸಂಭವಿಸಬಹುದಾದ ಈ ಕಾಯಿಲೆ ಶೇ.85 ರಷ್ಟು 7 ತಿಂಗಳಿನಿಂದ 3 ವರ್ಷದ ಮಕ್ಕಳಲ್ಲಿ ಕಂಡುಬರುತ್ತದೆ. ಹಸುವಿನ ಹಾಲನ್ನು ಉಪಯೋಗಿಸುವ ಮಕ್ಕಳಿಗೆ ಈ ಕಾಯಿಲೆ ಬರುವುದು ಅಪರೂಪ. ದೈಹಿಕಬೆಳವಣಿಗೆಯ ನ್ಯೂನತೆಯಿಂದ ತೂಕ ಕ್ರಮೇಣ ಕಡಿಮೆಯಾಗುವುದು. ಹೆಚ್ಚಾಗಿ ದೇಹದಲ್ಲಿ ಊತ ಕಂಡುಬಂದರೂ ತೂಕ ಕ್ರಮೇಣ ಕುಗ್ಗುವುದು ಒಂದು ಮುಖ್ಯವಾದ ಅಂಶ. ಮೂಳೆಗಳ ಮತ್ತು ಮಾಂಸಖಂಡಗಳ ಬೆಳವಣಿಗೆಗೂ ಕುಂದು ಉಂಟಾಗಿ ಅಕೃತಿಯೇ ಬದಲಾವಣೆಗೊಂಡು ಮಗು ಕೃಶವಾಗುವುದು. ಕಾಲುಗಳಲ್ಲಿ ಕಂಡುಬಂದ ಊತ ಕ್ರಮೇಣ ಮುಖ, ಕೈ ಮತ್ತು ಜನನಾಂಗಗಳಿಗೂ ಹರಡುವುದು. ಮೂತ್ರದ ಉತ್ಪಾದನೆ ಕಡಿಮೆಯಾಗಿ ಮೂತ್ರದಲ್ಲಿ ಅಲ್ಬುಮಿನ್ ಹೆಚ್ಚು ಪರಿಮಾಣದಲ್ಲಿ ಕಂಡುಬರುವುದು. ಕೂದಲಿನ ಮತ್ತು ಚರ್ಮದ ಸ್ವಾಭಾವಿಕವಾದ ಬಣ್ಣದ ತೇಲುವಿಕೆ ಅಥವಾ ಬದಲಾವಣೆ ಈ ರೋಗದ ಪ್ರಧಾನ ಲಕ್ಷಣ. ಕೂದಲಿನ ಗುಂಗುರು ಸ್ವಭಾವ ಬದಲಾಯಿಸಿ ಅದು ನೆಟ್ಟಗೂ ಒಣಗಿದಂತೆಯೂ ಕಾಣುವುದು; ಬೆಳ್ಳಗಾಗುವುದೂ ಉಂಟು. ಚರ್ಮ ಒಣಗುವುದು ಮತ್ತು ಬಿರುಕು ಬಿಡುವುದು ಸಾಮಾನ್ಯವಾಗಿ ಇರುತ್ತದೆ. ಅದು ಕಪ್ಪಾಗಿ, ಸಿಪ್ಪೆ ಸುಲಿಯುವುದೂ ಉಂಟು. ಕ್ರಮೇಣ ಬುದ್ಧಿಮಾಂದ್ಯ, ನಿರುತ್ಸಾಹ ಮತ್ತು ನಿಶ್ಶಕ್ತಿ ತಲೆದೋರಿ ನಿಲುಗಡೆಯಿಲ್ಲದೆ ಭೇದಿಯಿಂದ ಮಗು ದುರ್ಬಲವಾಗುತ್ತದೆ. ರಕ್ತಹೀನತೆಯೂ ವಿಶೇಷವಾಗಿ ಕಂಡುಬರುವುದು.

ರೋಗ ಬೇರೂರಿದ ಬಳಿಕ ಚಿಕಿತ್ಸೆ ಕಷ್ಟ.. ನಿಯತ ಪ್ರಮಾಣದಲ್ಲಿ ಬೆರೆಸಿದ ಪ್ರೋಟೀನ್ ಪದಾರ್ಥಗಳು ಮತ್ತು ವಿಟಮಿನ್ನುಗಳಿರುವ ಹಾಲನ್ನೂ ಮೈನೀರನ್ನು ಮೂತ್ರದ ಮೂಲಕ ವಿಸರ್ಜಿಸಲು ಉಪಯೋಗಿಸುವ ಮೂತ್ರೋತ್ತೇಜಕ ಔಷಧಿಗಳನ್ನೂ ತಿಂಗಳುಗಟ್ಟಲೆ ಉಪಯೋಗಿಸಬೇಕಾಗುತ್ತದೆ. (ಎ.ಜಿ.ಕೆಆರ್)

**ಕ್ವಿಂಟಿಲಿಯನ್ :** ಪ್ರಸಿದ್ಧ ರೋಮನ್ ಅಲಂಕಾರಶಾಸ್ತ್ರಜ್ಞ, ವಾಗ್ಮಿ ಕಲೆಯನ್ನು ಕುರಿತು ಲ್ಯಾಟಿನ್ ಭಾಷೆಯಲ್ಲಿ ಪ್ರಖ್ಯಾತವಾದ ಗ್ರಂಥವೊಂದನ್ನು ಬರೆದಿದ್ದಾನೆ. ಈತನ ಜನನ ಮರಣಗಳ ಸಂವತ್ಸರಗಳನ್ನು ಖಚಿತವಾಗಿ ಹೇಳಲಾಗದಿದ್ದರೂ ಪ್ರ.ಶ.ಸು. 35 – 100 ಈತನ ಜೀವಿತಕಾಲವೆಂದು ನಿಶ್ಚಿತವಾಗಿದೆ. ಸ್ಪೇನಿನ ಒಂದು ಸಣ್ಣ ಊರಿನಲ್ಲಿ ಹುಟ್ಟಿದನಾದರೂ ಬಾಲ್ಯದಲ್ಲೇ ಈತ ರೋಮ್ ನಗರಕ್ಕೆ ಬಂದ. ಅಲ್ಲಿ ಇವನ ತಂದೆ ವಾಗ್ಮಿಕಲೆಯ ಬೋಧಕನಾಗಿದ್ದ. ತನ್ನ ತಂದೆಯಿಂದಲ್ಲದೆ ಹಲವು ಉಪಾಧ್ಯಾಯರುಗಳಿಂದ ಇವನಿಗೆ ಅಲ್ಲಿ ವಿದ್ಯಾಭ್ಯಾಸ ದೊರೆಯಿತು. ವಕೀಲಿ ವೃತ್ತಿಗೆ ಸೇರಿಕೊಂಡನಾದರೂ ಅದರಲ್ಲಿ ಅಷ್ಟೇನೂ ಯಶಸ್ಸು ಗಳಿಸಲಿಲ್ಲ. ಜೊತೆಗೆ ವಾಗ್ಮಿಕಲೆಯನ್ನು ಹೇಳಿಕೊಡುವ ಕೆಲಸವನ್ನೂ ಮಾಡುತ್ತಿದ್ದ. 61ರಲ್ಲಿ ಗಾಲ್ಬ (ಪ್ರ.ಶ.ಪೂ.3–ಪ್ರ.ಶ.69) ಎಂಬಾತನ ಆಶ್ರಯ ಸಿಕ್ಕಿದಾಗ ಈತನ ಬಾಳಿನಲ್ಲಿ ದೊಡ್ಡ ಬದಲಾವಣೆ ಉಂಟಾಯಿತು. 61–68ರ ತನಕ ಗಾಲ್ಬನೊಡನೆ ಸ್ಪೇನಿನಲ್ಲಿದ್ದು ಹಿಂದಿರುಗಿದ. ಆ ಗಾಲ್ಬನೇ ಮುಂದೆ ಚಕ್ರವರ್ತಿ ಪದವಿಗೆ ಏರಿದ. 68ರಿಂದ ಸುಮಾರು 88ರವರೆಗೆ, ಎಂದರೆ ಇಪ್ಪತ್ತು ವರ್ಷ, ಕ್ವಿಂಟಿಲಿಯನ್ ಚಕ್ರವರ್ತಿಯಿಂದ ವೇತನ ಪಡೆದು ವಾಗ್ಮಿವಿದ್ಯೆಯ ಪ್ರಾಧ್ಯಾಪಕನಾಗಿ ಹೆಸರುವಾಸಿಯಾದ. ಹಾಗೆ ಸಂಬಳದ ಪ್ರಾಧ್ಯಾಪಕರಲ್ಲಿ ಇವನೇ ಮೊದಲಿಗ; ಕ್ರಮೇಣ ಆಸ್ತಿಪಾಸ್ತಿ ಸಂಪಾದಿಸಿ ಐಶ್ವರ್ಯವಂತನಾದ. ಅಧ್ಯಾಪಕ ವೃತ್ತಿಯಿಂದ ನಿವೃತ್ತವಾಗಿ, 89–91ರ ಅವಧಿಯಲ್ಲಿ ತನ್ನ ಮಹಾಗ್ರಂಥವಾದ ದಿ ಇನ್‌ಸ್ಟಿಟ್ಯೂಷಿಯೊ ಆರೆಟೋರಿಯಾ (ವಾಗ್ಮಿಯ ಶಿಕ್ಷಣ) ಎಂಬುದನ್ನು ಬರೆದು ಪೂರೈಸಿದ. ಮಗನಾದ ಗೆಟನಿಗೋಸ್ಕರ ಅದನ್ನು ರಚಿಸಿದನೆಂಬ ವದಂತಿಯಿದೆ. ಕ್ವಿಂಟಿಲಿಯನ್ ಮದುವೆಯಾದದ್ದು ಇಳಿವಯಸ್ಸಿನಲ್ಲಿ; ಹೆಂಡತಿ ತನ್ನ 18ನೆಯ ವಯಸ್ಸಿನಲ್ಲಿಯೇ ಮರಣಹೊಂದಿದಳು; ಹುಟ್ಟಿದ ಇಬ್ಬರು ಗಂಡುಮಕ್ಕಳೂ ಬೇಗ ಬೇಗ ಸತ್ತರು. ಚಕ್ರವರ್ತಿಯ ಅಪ್ಪಣೆಯಂತೆ ಮತ್ತೆ ಕೆಲವು ವರ್ಷ ರಾಜಪುತ್ರರಿಗೆ ಪಾಠ ಹೇಳಬೇಕಾಯಿತು, ಕ್ವಿಂಟಿಲಿಯನ್.

**ಇನ್‌ಸ್ಟಿಟ್ಯೂಷಿಯೊ ಆರೆಟೋರಿಯಾ:** ಹನ್ನೆರಡು ಅಧ್ಯಾಯಗಳುಳ್ಳ ಈ ಬೃಹದ್ ಗ್ರಂಥದಲ್ಲಿ ವಾಗ್ಮಿಕಲೆಯ ಸಮಗ್ರ ವಿವೇಚನೆ ಇದೆಯಲ್ಲದೆ ಅಂದಿನ ಹೆಸರಾಂತ ಲೇಖಕರ ಬಗ್ಗೆ ವಿಮರ್ಶೆಯೂ ಇದೆ. ವಾಗ್ಮಿಯ ಶಿಕ್ಷಣವೆಂದರೆ ನಾಗರಿಕ ಸಮಾಜದಲ್ಲಿ ಗಣ್ಯಸ್ಥಾನವನ್ನು ಪಡೆದು ವರ್ಚಸ್ಸಿನಿಂದ ಬಾಳುವ ಆಕಾಂಕ್ಷೆ ಯಾರಿಗುಂಟೊ ಆತನಿಗೆ ಆವಶ್ಯಕವಾದ ನಾನಾ ಮುಖದ ವಿದ್ಯಾಭ್ಯಾಸ, ಸಾರ್ಥಕ ವಾಗ್ಮಿತೆಗೆ ಭಾಷೆಯನ್ನು ದಕ್ಷತೆಯಿಂದ ಉಪಯೋಗಿಸುವ ಚಾತುರ್ಯವೊಂದೇ ಸಾಲದು. ಜೊತೆಗೆ ಚರಿತ್ರೆ, ತತ್ತ್ವಶಾಸ್ತ್ರ, ವಿಜ್ಞಾನ, ಸಾಹಿತ್ಯಗಳ ಪರಿಚಯವೂ ವಾಸ್ತವಿಕ ಜೀವನದ ಅನುಭವವೂ ಬೇಕು. ಅವೆಲ್ಲವನ್ನೂ ಗಳಿಸಿಕೊಂಡವನೇ ನಿಜವಾದ ವಾಗ್ಮಿ, ಸಿಸಿರೋನ ಕಾಲದಲ್ಲೇ ಈ ಬಗೆಯ ಅಭಿಪ್ರಾಯ ಕಂಡುಬಂತು. ಕ್ಷಿಪ್ರವಾಗಿ ಅದು ಹಬ್ಬಿ ಹರಡಿ, ರೋಮನರ ಮಾತೃಭೂಮಿಯಾದ ಇಟಲಿಯೊಂದರಲ್ಲೇ ಅಲ್ಲದೆ ಅವರು ಕಟ್ಟಿದ ಚಕ್ರಾಧಿಪತ್ಯದ ಭಾಗಗಳಾದ ಸ್ಪೇನ್, ಗಾಲ್, ಆಫ್ರಿಕಗಳಲ್ಲೂ ಪ್ರಚಾರಗೊಂಡು ಪ್ರಬಲ ಪ್ರಚೋದನೆಯನ್ನೊದಗಿಸಿತು. ಮೊದಮೊದಲು ಗ್ರೀಕ್ ಭಾಷೆಯ ಆಕರ್ಷಣೆ ಅತಿಯಾಗಿತ್ತು; ಆಮೇಲೆ ಲ್ಯಾಟಿನ್ ಅದನ್ನು ಹಿಂದಕ್ಕೆ ಹಾಕಿತು. ಸಿಸಿರೋನ ಮರಣದಿಂದ ಕ್ವಿಂಟಿಲಿಯನ್ ಪ್ರಬುದ್ಧನಾಗುವವರೆಗಿನ ಸುಮಾರು ನೂರು ವರ್ಷದ ಅಂತರದಲ್ಲಿ ಭಾಷಣ ಕಲೆ ಸರ್ವತೋಮುಖವಾಗಿ, ಸಮೃದ್ಧವಾಗಿ ಬೆಳೆಯಿತು. ಆದರೆ ಆ ಅಭಿವೃದ್ಧಿ ಉತ್ತಮ ಕಲೆಯ ಲಕ್ಷಣಗಳಿಂದ ಕೂಡಿ ತೃಪ್ತಿಕರವಾಗಿರಲಿಲ್ಲ; ಅಧಮ ಕಲೆಯ ಕಳಂಕಗಳಿಂದ ನಿಬಿಡವಾಗಿ ತೃಪ್ತಿಭಂಗ ಮಾಡುತ್ತಿತ್ತು. ಶಬ್ದಾಡಂಬರ, ಕ್ಲಿಷ್ಟಾರ್ಥ, ಸಂದಿಗ್ಧತೆ ದೂರಸಾದೃಶ್ಯ, ವಿಕಟಾಲಂಕಾರಗಳ ಕಲಬೆರಕೆ, ವೈಪರೀತ್ಯಗಳ ಸುರಿಮಳೆ–ಮುಂತಾದ ಆಭಾಸಗಳು ಆ ಕ್ಷೇತ್ರದಲ್ಲಿ ಗಲಭೆ ಗೈಯುತ್ತಿದ್ದುವು. ಭಾಷಣ ಅಥವಾ ಲೇಖನದ ಗದ್ಯವನ್ನು ಪದ್ಯಮಯವಾಗಿಸಬೇಕೆಂಬುದೇ ಎಲ್ಲರ ಹೆಬ್ಬಯಕೆಯಾಗಿತ್ತು. ಪದ್ಯ

ರೂಪಿತವಾಗಬೇಕಾದರೆ ಅದೊಂದೇ ಮಾರ್ಗವೆಂದು ಎಲ್ಲರ ನಂಬಿಕೆ. ಸಮಕಾಲೀನರ ಇಂಥ ಕೀಳು ಅಭಿರುಚಿಗೆ ಎದುರಾಗಿ ಕ್ವಿಂಟಿಲಿಯನ್ ಹೂಡಿದ ಸುದೀರ್ಘ ಆಕ್ಷೇಪಣೆಯೇ ಅವನ ಗ್ರಂಥದ ಉಗಮಕ್ಕೆ ಕಾರಣವಾಯಿತು.

ಬಹಳ ಹಿಂದೆ ಕೇಟೊ ಹೇಳಿದ 'ನಿಪುಣ ವಾಕ್ಕಿನ ಸತ್ಪುರುಷನೇ ವಾಗ್ಮಿ' ಎಂಬ ಸೂತ್ರವನ್ನು ಒಪ್ಪಿಕೊಂಡು ತನ್ನ ಗ್ರಂಥವನ್ನು ಆರಂಭಿಸುತ್ತಾನೆ, ಕ್ವಿಂಟಿಲಿಯನ್, ಸದ್ಗೃಹಸ್ಥನಾಗಬೇಕಾದರೆ ಸಮರ್ಪಕ ವಿದ್ಯಾಭ್ಯಾಸ ಅತ್ಯಗತ್ಯ; ಆ ವಿದ್ಯಾಭ್ಯಾಸ ಎಷ್ಟು ಮುಂಚೆ ಪ್ರಾರಂಭವಾದರೆ ಅಷ್ಟೂ ಒಳ್ಳೆಯದು, ಕ್ವಿಂಟಿಲಿಯನನ ಪುಸ್ತಕದ ಒಂದನೆಯ ಭಾಗವೆಲ್ಲ ವಿದ್ಯಾಭ್ಯಾಸಕ್ಕೆ ವಿನಿಯೋಗವಾಗಿದೆ. ಬಾಲ ಶಿಕ್ಷಣದ ಯಾವ ಅಂಗವನ್ನೂ ನಿಕೃಷ್ಟವೆಂದು ಅಲಕ್ಷಿಸಕೂಡದು. ವ್ಯಾಕರಣವೂ ಬೇಕು, ಸಂಗೀತವೂ ಬೇಕು. ಹೆಗ್ಗುರಿಯಾದ ಸಂಸ್ಕೃತಿಯನ್ನು ಉದಾರಾರ್ಥದಲ್ಲಿ ತೆಗೆದುಕೊಳ್ಳತಕ್ಕದ್ದು, ಪ್ರಯೋಜನಕ್ಕೆ ಬಾರದ ಜ್ಞಾನವಿಲ್ಲ, ವಿದ್ಯೆಯಿಲ್ಲ. ಖಚಿತವಾದ ಅಭಿಪ್ರಾಯ, ಗ್ರಹಿಕೆ, ತಪ್ಪಿಲ್ಲದ ನುಡಿಗಟ್ಟು ಇವನ್ನು ಕಲಿತರೇ ಸಿದ್ಧಿ. ಪದಗಳ ವ್ಯಾಮೋಹದಲ್ಲಿ, ಅಲಂಕಾರಗಳ ಗೊಂದಲದಲ್ಲಿ ಸಿಕ್ಕಿಕೊಂಡರೆ ಒಳಿತಲ್ಲ. ವ್ಯಾಕರಣದ ಒಂದು ಪ್ರಯೋಗವಾಗಲಿ ಅಲಂಕಾರದ ಒಂದು ಮರ್ಯಾದೆಯಾಗಲಿ ಅದನ್ನು ಬಿಡಿಸಿ ಒಡೆದು ಪ್ರತಿಯೊಂದು ಸಣ್ಣ ಅಂಶಕ್ಕೂ ಒಂದು ಪಾರಿಭಾಷಿಕ ನಾಮವನ್ನು ಹಚ್ಚುವುದು ಪ್ರಾಚೀನ ಗ್ರೀಕರಿಗೆ ಒಗ್ಗಿಬಂದ ಸಂಪ್ರದಾಯವಾಗಿತ್ತಷ್ಟೆ ಅದನ್ನು ಕ್ವಿಂಟಿಲಿಯನ್ ಮೆಚ್ಚಲಾರ. ಇವನ ಅಭಿಮತದಂತೆ, ಅಷ್ಟೆಲ್ಲ ಪ್ರಯಾಸಕ್ಕೆ ಯಾವ ಆಧಾರವೂ ಇಲ್ಲ. ಸಜ್ಜನರು ಒಪ್ಪಿಕೊಂಡಿರುವ ಜೀವನ ಕ್ರಮವೇ ಯುಕ್ತ ವಾಡಿಕೆಯಾಗಿರುವಂತೆ ಸುಶಿಕ್ಷಿತರು ಒಪ್ಪಿಕೊಂಡಿರುವ ಮಾತಿನ ವಿಧಾನವೇ ಇಲ್ಲಿ ಯುಕ್ತ ವಾಡಿಕೆ.

ಎಂದರೆ, ಪಾರಿಭಾಷಿಕವಾದ ಗೂಢವಿಚಾರಗಳು ಕ್ವಿಂಟಿಲಿಯನ್‌ಗೆ ಗೊತ್ತಿರಲಿಲ್ಲವೆಂದಲ್ಲ. ಈತನ ಗ್ರಂಥದ ಮುಂದಣ ಐದಾರು ಭಾಗ ಪೂರ್ತ ಭಾಷಣ ಶಾಲೆಗಳಿಗೂ ನ್ಯಾಯಾಸ್ಥಾನಗಳಿಗೂ ಸೇರಿದ ಸೂಕ್ಷ್ಮ ಸಂಕೀರ್ಣ ವಿಷಯಗಳ ಪ್ರಸ್ತಾಪವೇ ಹೆಚ್ಚಾಗಿ ಬರುತ್ತದೆ. ಅದೆಲ್ಲ ಬಹುಮಟ್ಟಿಗೆ ತಾತ್ಕಾಲಿಕವಾದದ್ದು, ಜಟಿಲವಾದದ್ದು. ನೀರಸವಾದದ್ದು. ಸಾಹಿತ್ಯಕ್ಕೂ ಸಾಹಿತ್ಯವಿಮರ್ಶೆಗೂ ಸಂಬಂಧಪಟ್ಟ ಚರ್ಚೆ ಅಲ್ಲಲ್ಲಿ ಸ್ವೀಕರಣೀಯವಾಗಿ ಬಂದು ಇಪ್ಪತ್ತನೆಯ ಶತಮಾನದತನಕ ಕ್ವಿಂಟಿಲಿಯನ್ ಉಪಯುಕ್ತನಾಗಬಲ್ಲನೆಂಬ ಭರವಸೆಯನ್ನು ನೀಡುತ್ತದೆ. ಎರಡನೆಯ ಭಾಗದಲ್ಲಿ ಬರುವ 'ಭಾಷಣದ ವಿರಚನೆಯನ್ನು ಅಧ್ಯಯನ ಮಾಡುವ ರೀತಿ' ಎಂಬುದೂ ಆರನೆಯ ಭಾಗದಲ್ಲಿ ಬರುವ 'ಬುದ್ಧಿಚಾತುರ್ಯ ಅಥವಾ ಹಾಸ್ಯ' ಎಂಬುದೂ ವಿವೇಕನ್ಯಾಯ ನಾವೀನ್ಯಗಳಿಂದ ಕಾಂತಿಗೊಂಡು ಹೊಗಳಲರ್ಹವಾಗಿವೆ.

ಎಂಟನೆಯ ಭಾಗದಲ್ಲಿ ಶೈಲಿಯ ಜಿಜ್ಞಾಸೆಯಿದೆ. ಇಲ್ಲಿಯ ಅನೇಕ ಸೂಚನೆಗಳು ಗಮನಾರ್ಹವಾಗಿವೆ. ಭಾವಾರ್ಥವನ್ನು ನಿರ್ಲಕ್ಷಿಸಿ ಶಬ್ದಕ್ಕೆ ವಿಶೇಷ ಗಮನವನ್ನು ಕೊಡಕೂಡದು. ಹಾಗೆಯೇ ಶಬ್ದವನ್ನು ಪೂರ್ಣ ನಿರ್ಲಕ್ಷಿಸಲೂ ಬಾರದು. ಬಳಕೆಯ ಪದಕೋಶವೇ ಒಳ್ಳೆಯದು. ವಾಕ್ಯಸರಣಿ ತಿಳಿಯಾಗಿರಬೇಕು. ಇಂಪಾಗಿರಬೇಕು. ರಚನೆಯಲ್ಲಿ ಯಾವುದು ಉಪಯುಕ್ತವಾಗಿದೆಯೋ ಅದೇ ಚೆಲುವೂ ಆಗಿರುತ್ತದೆ. ಯಾವುದೂ ಅತಿಯಾಗಕೂಡದು. ಹಿಂದಣ ಮಹಾವ್ಯಕ್ತಿಗಳಾದ ಅರಿಸ್ಟಾಟಲ್, ಸಿಸಿರೊಗಳು, 'ಆಲಿಸುವವರನ್ನು ಅಚ್ಚರಿಗೊಳಿಸಬೇಕು' ಎಂದು ಹೇಳಿದ್ದಾರೆ; ಆಗಬಹುದು. ಆದರೆ ಆಡುವುದೆಲ್ಲ ತರಪೇತಾದ ಅಭಿರುಚಿಗೆ ಒಪ್ಪಿಗೆಯಾಗಿರಬೇಕು, ಗಂಡಸುತನದಿಂದ ಕೂಡಿರಬೇಕು. ಸದುಕ್ತಿಯನ್ನು (ನೋಮ್) ಕುರಿತು ಕ್ವಿಂಟಿಲಿಯನ್ನನ ವ್ಯಾಖ್ಯಾನ ಹೀಗಿದೆ : 'ಈ ವಿಚಾರವಾಗಿ ಎರಡು ವಿರುದ್ಧ ಅಭಿಮತಗಳಿವೆ. ಕೆಲವರು ಸದುಕ್ತಿಗಳನ್ನು ಬಿಟ್ಟು ಬೇರೆ ಯಾವುದನ್ನೂ ಲಕ್ಷಿಸುವುದಿಲ್ಲ; ಕೆಲವರಿಗೆ ಅದು ಪೂರ್ತಿ ಹೊಲ್ಲ. ಎರಡರಲ್ಲಿ ಒಂದನ್ನೂ ನಾನು ಸಂಪೂರ್ಣವಾಗಿ ಒಪ್ಪಲಾರೆ. ಸೂಕ್ತಿಗಳು ತುಂಬ ಬಂದರೆ ಭಾವಕ್ಕೆ ತಡೆಯಾಗುತ್ತದೆ. ಪೈರಾಗಲಿ ಗಿಡಗಳಾಗಲಿ ಒತ್ತೊತ್ತಾಗಿ ಬೆಳೆದರೆ ಯಾವುದೂ ಸರಿಯಾದ ಎತ್ತರಕ್ಕೆ ಬೆಳೆಯುವುದಿಲ್ಲ. . .ಅಲ್ಲದೆ, ಶೈಲಿ ಪ್ರವಹಿಸದೆ ನಿಂತು ನಿಂತು ನಡೆಯುವಂತಾಗುತ್ತದೆ; ಒಂದೊಂದು ಸೂಕ್ತಿಯೂ ತಾನೇ ಪ್ರತ್ಯೇಕವಾಗಿ ನಿಲ್ಲುತ್ತದೆ.

ಅಲಂಕಾರಗಳ ವಿವರಣೆಗೆ ಮೀಸಲಾಗಿರುವ ಒಂಬತ್ತನೆಯ ಭಾಗದಲ್ಲಿ ಒಂದೆರಡು ಕಡೆ ವಾಕ್ಯಗಳು ಹಿತವಾದ ಅಭಿಪ್ರಾಯವನ್ನು ಹೊರಗೆಡಹುತ್ತವೆ. ಗದ್ಯಕ್ಕೂ ಕ್ರಮವಿರಬೇಕು. ಆದರೆ ಪದ್ಯದಂತೆ ಅದು ಪೂರ್ತಿ ಛಂದೋಬದ್ಧವಾಗಿರಬಾರದು. ಅಲ್ಲಿ ಇಲ್ಲಿ ನಿಯತ ಛಂದಸ್ಸು ಬಂದರೂ ಚಿಂತೆಯಿಲ್ಲ. ಆದರೆ ಅದು ಬೇಗ ಬೇಗ ಪುನರುಕ್ತವಾಗಕೂಡದು. ಪ್ರಬಂಧದ ಪದಧೋರಣೆಯನ್ನು ಒರೆಹಚ್ಚಿ ಪರೀಕ್ಷಿಸುವ ಸಾಧನ ಕಿವಿ. ಆ ವಿಧಾನದಿಂದ ಒಂದು ಸರಣಿ ಸರಿ ಇನ್ನೊಂದು ಅಲ್ಲ ಎಂದು ತೀರ್ಮಾನಿಸಬಹುದು. ಆದರೆ ಏತಕ್ಕೆ ಹಾಗೆ ಎಂಬುದನ್ನು ಸಕಾರಣವಾಗಿ ತಿಳಿಸುವುದು ಅಸಾಧ್ಯ.

ಹತ್ತನೆಯ ಭಾಗ ಅತ್ಯಂತ ಮುಖ್ಯವಾದುದು. ಅದರಲ್ಲಿ ಕ್ವಿಂಟಿಲಿಯನ್ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿದ್ದ ಸಾಹಿತ್ಯ ಚರಿತ್ರೆ ತತ್ವಶಾಸ್ತ್ರಗಳ ವೀಕ್ಷಣೆ ನಡೆಸಿದ್ದಾನೆ. ಆಗಾಗ ಪರಸ್ಪರ ತೋಲನ ಮಾಡಿದ್ದಾನೆ. ಒಟ್ಟಿನಲ್ಲಿ ಕ್ವಿಂಟಿಲಿಯನ್ ಸ್ವದೇಶಪ್ರೇಮಿ. ಕೆಲವು ಗ್ರೀಕ್ ಲೇಖಕರನ್ನು ಮುಕ್ತಕಂಠದಿಂದ ಹೊಗಳಿದರೂ ಅಷ್ಟೊಂದು ಪ್ರಶಂಸೆಗೆ ಅರ್ಹರಲ್ಲದ ರೋಮನರನ್ನೂ ಎತ್ತಿ ಹಿಡಿಯುತ್ತಾನೆ. ಕ್ವಿಂಟಿಲಿಯನ್ನನ ದೃಷ್ಟಿಯಲ್ಲಿ ಪ್ಲೇಟೋಗೆ ಸಿಸಿರೊ ಸಮ. ಥೂಸಿಡಿಡೀಸನಿಗೆ ಸ್ಯಾಲಸ್ಟ್ ಸಮ. ಅದು ಹೋಗಲಿ, ವಿಮರ್ಶೆಗೆ ಬಹಳ ಸಹಾಯಕವಾದ ಅನ್ಯೋನ್ಯ ತೋಲನವನ್ನು ಅನುಕರಿಸಿದ್ದಕ್ಕಾಗಿ ಕ್ವಿಂಟಲಿಯನ್ನನಿಗೆ ಗೌರವ ಸಲ್ಲಿಸಬೇಕು. ಈ ಭಾಗದಲ್ಲಿ ಹಲವು ಉತ್ಕೃಷ್ಟ ಸಲಹೆಗಳಿವೆ. ಬಹಳ ಚೆನ್ನಾಗಿ ಬರೆಯಬೇಕೆಂಬ ತವಕವಿರುವ ಕವಿಗಳಿಗೆ ಇಲ್ಲಿಯ ಒಂದು ಕಥೆ ಅಚ್ಚುಕಟ್ಟಾಗಿ ಹೊಂದುತ್ತದೆ. ಕ್ವಿಂಟಲಿಯನ್ನನ ಸ್ನೇಹಿತನೊಬ್ಬನಿಗೆ ತಕ್ಕ ಶೈಲಿಯ ವಿಚಾರವಾಗಿ ಆತಂಕ ಉಂಟಾಯಿತಂತೆ. ತನ್ನ ಸೋದರಮಾವನಾದ ಫ್ಲೋರಸ್ ಎಂಬ ವಿದ್ವಾಂಸನ ಬಳಿಗೆ ಹೋಗಿ ದುಃಖವನ್ನು ತೋಡಿಕೊಂಡನಂತೆ. ಉತ್ತರವಾಗಿ ಫ್ಲೋರಸ್ ಯುವಕನನ್ನು ಹೀಗೆ ಕೇಳಿದನಂತೆ-'ನೀನು ಬರೆಯಬಲ್ಲುದಾದುದಕ್ಕಿಂತಲೂ ಹೆಚ್ಚು ಚೆನ್ನಾಗಿ ಬರೆಯಬೇಕೆಂಬ ಆಶೆಯೆ ನಿನಗೆ?'

ಹನ್ನೊಂದನೆಯ ಭಾಗ ನ್ಯಾಯವೃತ್ತಿಗೆ ಸಂಬಂಧಿಸಿದೆಯಾಗಿ ಎಲ್ಲರಿಗೂ ಅದು ಹಿಡಿಸಲಾರದು. ಕೊನೆಯದಾದ ಹನ್ನೆರಡನೆಯ ಭಾಗದಲ್ಲಿ ಮತ್ತೆ ವಚನರೀತಿಯ ಪ್ರಸ್ತಾಪ ಬರುತ್ತದೆ. ಅಟ್ಟಿಕ್, ಏಷ್ಯಾಟಿಕ್, ರ್‍ಹೋಡಿಯನ್ ರೀತಿಗಳೆಂದು ಪ್ರಸಿದ್ಧವಾಗಿದ್ದ ಮೂರು ವರ್ಗಗಳನ್ನು ಇಲ್ಲಿ ಚರ್ಚಿಸಿ, ಅಟ್ಟಿಕ್ ಎಂಬುದನ್ನು ಅತ್ಯುತ್ಕೃಷ್ಟವೆಂದು ಒಪ್ಪಲಾಗಿದೆ. ಅದರಲ್ಲಿ ಹಲವು ಬಗೆಗಳಿವೆ. ಹಲವು ಉಪವರ್ಗಗಳಿವೆ-ಎಂದು ಹೇಳಲಾಗಿದೆ. ಆಮೇಲೆ, ಗ್ರೀಕ್, ಲ್ಯಾಟಿನ್ ನುಡಿಗಳನ್ನು ಹೋಲಿಸಿ ಎರಡರ ಸಾರಸತ್ವ ಯಾವುದು, ಶಕ್ತಿಸಾಮರ್ಥ್ಯವೇನು-ಇತ್ಯಾದಿ ಅಂಶಗಳನ್ನು ಪರಿಶೀಲಿಸಲಾಗಿದೆ. 'ಭಾಷೆ ಭಾಷೆಯಾಗಿ ನಮಗೆ ಬೆಂಬಲವೀಯುವುದು ಕಡಿಮೆಯಾದರೆ ವಿಷಯದಿಂದಲೂ ಕಲ್ಪನೆಯಿಂದಲೂ ಹೆಚ್ಚು ಬಲವನ್ನು ಪಡೆಯೋಣ.. . . .ಅವರಂತೆ ಬೆಡಗು ಬಿನ್ನಾಣವನ್ನು ನಾವು ತೋರಿಸಲಾರೆವು; ಅವರಿಗಿಂತ ಹೆಚ್ಚಾದ ಜೋರನ್ನೂ ಕಸುವನ್ನೂ ತೋರಿಸೋಣ. ನವುರು ಸೂಕ್ಷ್ಮತೆಯಲ್ಲಿ ನಮ್ಮನ್ನು ಅವರು ಸೋಲಿಸಿದರೆ ತೂಕದಲ್ಲಿ ಅವರನ್ನು ಜಯಿಸೋಣ . . . ಆಳವಿಲ್ಲದೆಡೆಯಲ್ಲಿ ಅವರು ನುಸುಳಿ ತೇಲಿ ಸಾಗಲಿ, ನನ್ನ ಯಾನಕ್ಕೆ ಆಳವಾದ ಸಮುದ್ರ ದೊರಕಲಿ-ಇದು ಕ್ವಿಂಟಿಲಿಯನ್ನನ ಅಂತಿನ ತೀರ್ಮಾನ.

ಸಾಹಿತ್ಯ ವಿಮರ್ಶೆ ಕ್ವಿಂಟಿಲಿಯನ್ನನ ನೇರ ಗುರಿಯಲ್ಲ ನಿಜ; ವಾಗ್ಮಿತೆಗೆ ನೆರವಾಗುವ ಪದಕೋಶ, ಅಲಂಕಾರ ಸಮೂಹ, ಜ್ಞಾನಾನುಭವ ಸಾಮಗ್ರಿಗಳ ಪ್ರತಿಪಾದನೆ-ಇವು ಈತನ ಮುಖ್ಯೋದ್ದೇಶ. ಆದರೂ ಇವನಲ್ಲಿ ವಿನಯ ಸೌಹಾರ್ಯ ಔದಾರ್ಯ ಪಕ್ವಬುದ್ಧಿ ಗಾಢಜ್ಞಾನಗಳು ತುಂಬಿದ್ದುವು; ಸರಳವಾಗಿ ಸುಗಮವಾಗಿ ಮಧುರವಾಗಿ ಬರೆಯುವ ಶಕ್ತಿ ಇವನಲ್ಲಿತ್ತು; ನಿದರ್ಶನಗಳ ಆಯ್ಕೆಯಲ್ಲೂ ಅಂಗಗಳ ವ್ಯಾಪ್ತಿಯನ್ನು ನಿಷ್ಕರ್ಷಿಸುವುದರಲ್ಲೂ ಗುರುವಿಗೆ ಸಹಜವಾದ ಯುಕ್ತಾಯುಕ್ತ ವಿವೇಚನೆ ಇವನನ್ನು ನಡೆಸಿಕೊಳ್ಳುತ್ತಿತ್ತು. ಹೀಗಾಗಿ ಈತ ವಿಮರ್ಶಕನೂ ಆಗಿದ್ದಾನೆ. (ಎಸ್.ವಿ.ಆರ್.)

**ಕ್ವಿನಾಲ್** : ಬೆಂಜೀನ್ ಆವರ್ತದಲ್ಲಿ ಎರಡು ಹೈಡ್ರಾಕ್ಸಿಪುಂಜಗಳು (OH) ಪ್ರತಿಸ್ಥಾಪನೆಯಾದಾಗ ದೊರೆಯುವ ಸಂಯುಕ್ತ. ಹೈಡ್ರೋ ಕ್ವಿನೋನ್ ಮತ್ತು ಪ್ಯಾರಾಡೈಹೈಡ್ರಾಕ್ಸಿ ಬೆಂಜೀನ್ ಪರ್ಯಾಯ ನಾಮಗಳು. ಇದರ ರಾಸಾಯನಿಕ ಸೂತ್ರ $O_6 H_4 (OH)_2$. ಇದು ಆರೋಮ್ಯಾಟಿಕ್ ಫೀನಾಲುಗಳ ವರ್ಗಕ್ಕೆ ಸೇರಿದ ವಸ್ತು. ಬಿಳಿಯ ಹರಳುಗಳ ರೂಪದಲ್ಲಿ ದೊರೆಯುತ್ತದೆ. ದ್ರವನ ಬಿಂದು $170^{o}$ ಸೆಂ. ನೀರಿನಲ್ಲಿ, ಮದ್ಯಸಾರದಲ್ಲಿ ಮತ್ತು ಈಥರಿನಲ್ಲಿ ವಿಲೀನವಾಗುತ್ತದೆ. ಔದ್ಯೋಗಿಕ ಪರಿಮಾಣದಲ್ಲಿ ಕ್ವಿನಾಲನ್ನು ಅನಿಲೀನಿನಿಂದ ಪಡೆಯಲಾಗುವುದು. ಅನಿಲೀನನ್ನು ಮ್ಯಾಂಗನೀಸ್ ಡೈಆಕ್ಸೈಡಿನಿಂದ ಉತ್ಕರ್ಷಿಸಿ ಉತ್ಪನ್ನವಾದ ಕ್ವಿನೋನನ್ನು ಅಪಕರ್ಷಿಸಿದಾಗ ಹೈಡ್ರೋಕ್ವಿನೋನ್ ದೊರೆಯುತ್ತದೆ.




ಅನಿಲೀನ್ ಕ್ವಿನೋನ್ ಕ್ವಿನಾಲ್

ಚಿತ್ರ-1

ಕ್ವಿನಾಲ್ ಔದ್ಯೋಗಿಕವಾಗಿ ಬಹಳ ಉಪಯುಕ್ತವಾದ ವಸ್ತು. ಫೋಟೋಗ್ರಫಿಯಲ್ಲಿ ಸ್ಫುಟಕಾರಿಯಾಗಿಯೂ (ಡೆವಲಪರ್) ವರ್ಣವಸ್ತುಗಳ ಮಧ್ಯವರ್ತಿ ವಸ್ತುವಾಗಿಯೂ ಉತ್ಕರ್ಷಣ ವಿರೋಧಿಯಾಗಿಯೂ ನಿರೋಧಕ ವಸ್ತುವಾಗಿಯೂ ಇದರ ಉಪಯೋಗ ಉಂಟು. ಅಲ್ಲದೆ ಔಷಧಿಗಳು ರಂಗು ಮತ್ತು ವಾರ್ನಿಷುಗಳ ತಯಾರಿಕೆಯಲ್ಲಿ ಹಾಗೂ ಮೋಟಾರಿನ ಇಂಧನ ಮತ್ತು ಎಣ್ಣೆಯಂತೆ ಮತ್ತು ಬಹ್ವಂಗೀಕರಣ ನಿರೋಧಕದಂತೆ ಕ್ವಿನಾಲ್ ಬಳಕೆಯಲ್ಲಿದೆ. (ಎಚ್.ಎಸ್.ಎಸ್.)

**ಕ್ವಿನೀನ್ :** ಸಿಂಕೋನ ಮರದ ಮುಖ್ಯ ಆಲ್ಕಲಾಯ್ಡ್. ಬಹು ಹಿಂದಿನಿಂದಲೂ ಪೆರುವಿನಲ್ಲಿ ಸಿಂಕೋನ ಮರದ ತೊಗಟೆಯ ಪುಡಿ, ಕಷಾಯಗಳನ್ನು ಜ್ವರಶಾಮಕಗಳಾಗಿ ಉಪಯೋಗಿಸಲಾಗುತ್ತಿತ್ತು. ಅಲ್ಲಿಯ ಮೂಲನಿವಾಸಿಗಳು ಸಿಂಕೋನ ತೊಗಟೆಯನ್ನು ಕ್ವಿನಾಕ್ವಿನಾ(ಅತ್ಯುತ್ತಮ ತೊಗಟೆ) ಎಂದು ಕರೆಯುತ್ತಿದ್ದುದೇ ಕ್ವಿನೀನ್ ಎಂಬ ಹೆಸರಿಗೆ ಮೂಲವೆಂದು ಕಂಡುಬರುತ್ತದೆ. 1630ರಲ್ಲಿ ಪೆರುವಿನಲ್ಲಿದ್ದ ಸ್ಪೇನಿನ ವೈಸರಾಯನ ಹೆಂಡತಿಯ ಮಲೇರಿಯ ಜ್ವರ ಈ ಕಷಾಯದ ಸೇವನೆಯಿಂದ ಗುಣವಾದಾಗಿನಿಂದ ಸಿಂಕೋನ ತೊಗಟೆಯ ಬಳಕೆ ಯೂರೋಪಿಗೆ ಹರಡಿತು. 1820ರಲ್ಲಿ ಪೆಲೆಟಿಯರ್ ಮತ್ತು ಕ್ಯಾವೆಂಟೌ ಎಂಬ ಇಬ್ಬರು ರಸಾಯನವಿಜ್ಞಾನಿಗಳು ಸಿಂಕೋನ ತೊಗಟೆಯಿಂದ ಕ್ವಿನೀನನ್ನು ಬೇರ್ಪಡಿಸಿ ಅದರ ಪರೀಕ್ಷೆಯನ್ನು ಆರಂಭಿಸಿದರು. ರಾಬೆ ಅದರ ರಚನಾ ಸೂತ್ರವನ್ನು ಬಹು ಹಿಂದೆಯೇ ಸರಿಯಾಗಿ ಊಹಿಸಿದರೂ 1944ರಲ್ಲಿ ಅದರ ಪ್ರಯೋಗಶಾಲಾ ಸಂಯೋಜನೆ ಪೂರ್ಣವಾದಾಗಲೇ ಈ ಊಹಾರಚನೆಗೆ ಸಮರ್ಥನೆ ದೊರೆತುದು.

ಸಿಂಕೋನ ವೃಕ್ಷದ ಬೇರು ಮತ್ತು ತೊಗಟೆಗಳಲ್ಲಿ ಕ್ವಿನೀನಿನೊಡನೆ ಕ್ವಿನಿಡಿನ್, ಸಿಂಕೋನಿನ್ ಮತು ಸಿಂಕೋನಿಡಿನ್ ಎಂಬ ಒಡನಾಡಿ ಆಲ್ಕಲಾಯ್ಡುಗಳಿವೆ. ತೊಗಟೆಯನ್ನು ಮರಗಳಿಂದ ಸಂಗ್ರಹಿಸಿ ಬಿಸಿಲು ಗಾಳಿ ಅಥವಾ ಆವಿಯೊಲೆಗಳಲ್ಲಿ ಒಣಗಿಸಲಾಗುತ್ತದೆ. ಒಣತೊಗಟೆಯನ್ನು ಪುಡಿಮಾಡಿ ಸುಟ್ಟ ಸುಣ್ಣ ಮತ್ತು ನೀರಿನೊಡನೆ ಬೆರೆಸಲಾಗುತ್ತದೆ. ಆಗ ತೊಗಟೆಯಲ್ಲಿಯ ಆಮ್ಲಗಳು ಮತ್ತು ಟ್ಯಾನಿಕ್ ಆಮ್ಲದ ಲವಣ ಮತ್ತು ಎಸ್ಟರುಗಳು ದ್ರಾವಣದಲ್ಲಿ ಲೀನವಾಗಿ ಆಲ್ಕಲಾಯ್ಡುಗಳು ಮಾತ್ರ ವಿಲೀನವಾಗದೇ ಉಳಿಯುತ್ತವೆ. ಬಳಿಕ ಯುಕ್ತ ದ್ರಾವಕಗಳನ್ನು ಉಪಯೋಗಿಸಿ ದ್ರಾವಕ ಸಂಸ್ಕರಣದಿಂದ (ಸಾಲ್ವೆಂಟ್ ಎಕ್ಸ್‌ಟ್ರೇಕ್ಷನ್) ಆಲ್ಕಲಾಯ್ಡುಗಳನ್ನು ಬೇರ್ಪಡಿಸಲಾಗುತ್ತದೆ. ದ್ರಾವಕದಲ್ಲಿ ಸಲ್ಫ್ಯೂರಿಕ್ ಆಮ್ಲದ ಅಂಶವಿದ್ದರೆ ಕ್ವಿನೀನ್ ಸಲ್ಫೇಟಿನ ದ್ರಾವಣ ದೊರೆಯುತ್ತದೆ. ಅದರಿಂದ ದೊರೆಯುವ ಕರಡು ಕ್ವಿನೀನ್ ಸಲ್ಫೇಟನ್ನು ಶುದ್ಧೀಕರಿಸಿ, ಶುದ್ಧ ಸಲ್ಫೇಟಿನ ನೀರಿನ ದ್ರಾವಣವನ್ನು ಪ್ರತ್ಯಾಮ್ಲದೊಡನೆ ವರ್ತಿಸಿದಾಗ ಕ್ವಿನೀನ್ ವರ್ಣರಹಿತ ಹಗುರ ಪುಡಿಯಾಗಿ ಶುದ್ಧರೂಪದಲ್ಲಿ ಹೊರ ಬರುತ್ತದೆ.

ಕ್ವಿನೀನಿನ ಒಂದು ಅಣು ಏಕಪ್ರತ್ಯಾಮ್ಲೀಯ (ಮೊನೊಬೇಸಿಕ್) ಆಮ್ಲವೊಂದರ ಎರಡು ಅಣುಗಳೊಡನೆ ಸಂಯೋಗಿಸಬಲ್ಲುದಾದ್ದರಿಂದ ಇದರಲ್ಲಿ ಎರಡು ಪ್ರತ್ಯಾಮ್ಲೀಯ ಪುಂಜಗಳು (ಬೇಸಿಕ್ ಗ್ರೂಪ್ಸ್) ಇವೆಯೆಂದು ಗೊತ್ತಾಗುವುದು. ಕ್ವಿನೀನಲ್ಲಿರುವ ಎರಡು ಸಾರಜನಕದ ಪರಮಾಣುಗಳೂ ತೃತೀಯಕ ವರ್ಗದ (ಟರ್ಷಿಯರಿ) ಅಮೈನ್ ರೂಪದಲ್ಲಿವೆಯೆಂಬುದು ಮುಂದಿನ ಪರೀಕ್ಷೆಗಳಿಂದ ತಿಳಿದುಬರುತ್ತದೆ. ಒಂದು ಹೈಡ್ರಾಕ್ಸಿಲ್ ಪುಂಜವೂ ಒಂದು ವೀನೈಲ್ ಪುಂಜವೂ ಇರುವುದು ಇತರ ನಿರ್ದಿಷ್ಟ ರಾಸಾಯನಿಕ ಕ್ರಿಯೆಗಳ ಉಪಯೋಗದಿಂದ ಕಂಡು ಬರುವುದು. ಇಷ್ಟು ಸಂಗತಿಗಳು ಗೊತ್ತಾದ ಬಳಿಕ ಅನೇಕ ವರ್ಷಗಳ ವರೆಗೆ ನಡೆದ ಶಿಥಿಲೀಕರಣಕ್ರಿಯೆಗಳ ಅಧ್ಯಯನದ ಪರಿಣಾಮವೇ ಕೆಳಗೆ ತೋರಿಸಿರುವ ರಚನಾಸೂತ್ರ.

ರಾಬರ್ಟ್ ವುಡ್‌ವರ್ಡ್ ಮತ್ತು ಫಾನ್ ಡೋರಿಂಗ್ ಅವರ ದೀರ್ಘಕಾಲದ ಪ್ರಯೋಗಗಳ ಪರಿಣಾಮವಾಗಿ 1944ರಲ್ಲಿ ಕ್ವಿನೀನ ಪ್ರಯೋಗಶಾಲಾ ಸಂಶ್ಲೇಷಣೆ ಪೂರ್ಣವಾಯಿತು. ಸಂಶ್ಲೇಷಿತ ಕ್ವಿನೀನ ನೈಸರ್ಗಿಕ ಕ್ವಿನೀನಿಗಿಂತಲೂ ಹೆಚ್ಚು ಬೆಲೆಯದಾದರೂ




ಚಿತ್ರ–2

ಈ ಸಂಶ್ಲೇಷಣೆಯಿಂದ ರಾಬೆಯ ಊಹಾರಚನೆಗೆ ಸಮರ್ಥನೆ ದೊರೆತಂತಾಯಿತು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕ್ವಿನೀನ್ ಅಣುವಿನಲ್ಲಿ ನಾಲ್ಕು ಅಸಮಾಂಗ(ಅಸಿಮೆಟ್ರಿಕ್) ಇಂಗಾಲ ಪರಮಾಣುಗಳಿರುವುದು(ಇವನ್ನು ರಚನಾ ಸೂತ್ರದಲ್ಲಿ ನಕ್ಷತ್ರ ಚಿಹ್ನೆಗಳಿಂದ ತೋರಿಸಿದೆ) ಕಂಡುಬರುತ್ತದೆ. ಈ ಪರಮಾಣುಗಳ ಸುತ್ತಲಿನ ಆಕಾಶರಚನೆ (ಸ್ಪೇಶಿಯಲ್ ಸ್ಟ್ರಕ್ಚರ್) ಒಂದು ನಿರ್ದಿಷ್ಟ ರೀತಿಯಲ್ಲೇ ಇರುವುದು ಆವಶ್ಯಕ. ಅಸಮಾಂಗ ಈ ಪರಮಾಣುಗಳನ್ನು ಒಳಗೊಂಡಿರುವ ಕ್ವಿನೀನಿಗೆ ದೃಗ್ಗಟುತ್ವ (ಆಪ್ಟಿಕಲ್ ಆಕ್ಟಿವಿಟಿ) ಉಂಟು. ಕ್ಲೋರೋಫಾರಂ ದ್ರಾವಣದಲ್ಲಿ ಶುದ್ಧ ಕ್ವಿನೀನಿನ ವಿಶಿಷ್ಟ ದೃಗಾವರ್ತನ (ಸ್ಪೆಸಿಫಿಕ್ ರೊಟೇಶನ್) 117$^{o}$. ಕ್ವಿನೀನ್ ಸಂಯುಕ್ತಕ್ಕೆ ಪ್ರತಿದೀಪ್ತಿ(ಫ್ಲೂರೆಸೆನ್ಸ್) ಇರುವುದು ಮಾತ್ರವಲ್ಲದೆ ಘರ್ಷಣ ಸಂದೀಪ್ತಿ (ಟ್ರೈಬೋಲ್ಯೂಮಿನಿಸೆನ್ಸ್) ಸಹ ಉಂಟು. ಆದರೆ ಈ ವಿಶಿಷ್ಟ ಶಕ್ತಿಗಳಿಂದ ಉಪಯೋಗವೇನೂ ಇದ್ದಂತಿಲ್ಲ. (ಕೆ.ಟಿ.ಎಸ್.)

ಕ್ವಿನೀನ್ ಮಲೇರಿಯ ಕ್ರಿಮಿಗಳ ಬೆಳವಣಿಗೆ ಮತ್ತು ಉತ್ಪತ್ತಿಯನ್ನು ನಿಲ್ಲಿಸುತ್ತದೆ. ಆ ಕ್ರಿಮಿಗಳ ಕೆಂಪುರಕ್ತಕಣಗಳೊಳಗೆ ಹೊಗುವುದನ್ನು ತಡೆಗಟ್ಟುವುದರ ಮೂಲಕ ಅವನ್ನು ಕ್ವಿನೀನು ನಾಶಪಡಿಸುತ್ತದೆ. ಆದರೆ ಈ ಕ್ವಾರದಿಂದ ಜೀವರಸವೂ ಸತ್ತುಹೋಗುತ್ತದೆ. ಜೀವಕಣಗಳ ಕಾರ್ಯಗಳು ಮೊದಲು ಪ್ರಚೋದನೆಯಾಗಿ ಆಮೇಲೆ ಕುಗ್ಗುತ್ತವೆ. ಶರೀರದಲ್ಲಿರುವ ಅನೇಕ ಅಜೈವಿಕ ಕಿಣ್ವಗಳ ಮೇಲೆ ಈ ಕ್ವಾರದ ಪ್ರಭಾವವಿದೆ. ಜಠರದ ಒಳಪೊರೆಯ ಉದ್ರೇಕದಿಂದ ಓಕರಿಕೆ, ವಾಂತಿ ಬರುತ್ತವೆ. ಐಚ್ಛಿಕ ಸ್ನಾಯು ಕಣಧಾತುಗಳ ಕೆಲಸವನ್ನು ಕ್ವಿನೀನು ಕೆರಳಿಸಿ ಕುಗ್ಗಿಸುತ್ತದೆ. ಇದರ ಪ್ರಭಾವ ಸೇವನೆ ಮಾಡಿದ 2-3 ಗಂಟೆಗಳಲ್ಲಿ ಉಂಟಾಗುತ್ತದೆ. ಜಠರರಸ ಉತ್ಪತ್ತಿ ಮಾಡಿ ಹಸಿವೆಯನ್ನುಂಟುವಾಡುತ್ತದೆ. ಗರ್ಭಪಾತಮಾಡಲು ಈ ಕ್ವಾರವನ್ನು ಹರಳೆಣ್ಣೆಯಲ್ಲಿ ಕೊಡುತ್ತಾರೆ.

ಕ್ವಿನೀನ್‌ನನ್ನು ಇತರೆ ಉದ್ದೇಶಗಳಿಗೂ ಬಳಸುತ್ತಾರೆ :

– ಕರುಳೇತರ ಅಮೀಬಾಗಳನ್ನು ಕೊಲ್ಲಲು (ಎಕ್ಸ್‌ಟ್ರಾ ಇನ್‌ಟಸ್‌ಟೈನಲ್ ಅಮೀಬಿಯಾಸಿಸ್)

– ಅಮೀಬಾಗಳಿಂದ ಕರುಳಿನ ಹೊರಗೆ ಉಂಟಾಗುವ ಉರಿಯೂತ :

– ಕೀಲುವಾತ (ರೊಮಟಾಯ್ಡ್ ಆರ್ಥೈಟಿಸ್)

– ಬಿಸಿಯಿಂದ ಉಂಟಾಗುವ ಚರ್ಮರೋಗ (ಫೋಟೋಸೆನ್ಸಿಟಿವ್ ಡರ್ಮಟೈಸಸ್ – ಫೋಟೋಜೆನಿಕ್ ರಿಯಾಕ್ಷನ್ಸ್)

– ಕುಷ್ಠರೋಗದಲ್ಲಿ ಇತರ ಔಷಧಿಗಳೊಂದಿಗೆ ಕ್ಲಿನೀನನ್ನು ಬಳಸುತ್ತಾರೆ.

– ಥಾಂಸಸ್ ವ್ಯಾಧಿಯಲ್ಲಿ ಸ್ನಾಯುಗಳ ಸಂಕೋಚನೆಗಳನ್ನು ಕ್ವಿನೀನು ಕಡಿಮೆ ಮಾಡುತ್ತದೆ. (ಎಸ್.ಕೆ.ಎಚ್.)

**ಕ್ವಿನೋನ್ :** ಕಾರ್ಬೊನಿಲ್ ಗುಂಪುಗಳ ಕಾರ್ಬನ್ ಪರಮಾಣುಗಳು ಉಂಗುರ ರಚನೆಯ ಭಾಗವಾಗಿರುವ ಆರೋಮ್ಯಾಟಿಕ್ ಡೈ ಕೀಟೋನುಗಳ ವರ್ಗದ ಸದಸ್ಯ. ಇಡೀ ಗುಂಪಿಗೇ ಕ್ವಿನೋನ್ ಎಂದು ಹೆಸರಿದೆ. ಆದರೆ ಹಲವಾರು ವೇಳೆ ಇದನ್ನು ನಿರ್ದಿಷ್ಟವಾದ p– ಬೆಂಜೋಕ್ವಿನೋನನ್ನು ಕುರಿತು ಮಾತ್ರ ಹೇಳುವುದುಂಟು. ಕ್ವಿನೋನುಗಳು ಬಣ್ಣವಿರುವ ವೃತ್ತಾಕಾರವುಳ್ಳ ಮತ್ತು ಎರಡು ಕಾರ್ಬೊನಿಲ್ ಗುಂಪುಗಳಿಂದ ಕೂಡಿದವು. ಆರು ಪರಮಾಣುಗಳುಳ್ಳ ಅತೃಪ್ತ ಚಕ್ರಾಕಾರ ಆರ್ಗ್ಯಾನಿಕ್ ಸಂಯುಕ್ತಗಳಲ್ಲಿರುವ ಎರಡು ಕಾರ್ಬೊನಿಲ್ ಗುಂಪುಗಳು ಒಂದಕ್ಕೊಂದು ತಾಗಿ ಇಲ್ಲವೇ ಒಂದು ವೀನೈಲ್ ಗುಂಪಿನಿಂದ (–C=C–) ಬೇರ್ಪಡಿಸಲ್ಪಟ್ಟಿರುತ್ತವೆ. ಎಲ್ಲ ಕ್ವಿನೋನುಗಳಿಗೂ ಈ ಪ್ರಧಾನ ಲಕ್ಷಣಗಳು ಉಂಟು. ಆದರೆ ಆಂಫಿನಾಫ್ತಾ ಕ್ವಿನೋನ್ ಇದಕ್ಕೆ ಅಪವಾದವಾಗಿದ್ದು ಇದರಲ್ಲಿ ಎರಡು ಕಾರ್ಬೊನಿಲ್ ಗುಂಪುಗಳು ಬೇರೆ ಬೇರೆ ವರ್ತುಲಗಳಲ್ಲಿ ಇರುತ್ತವೆ (ಚಿತ್ರ 1).




I            II            III

I. ಕಾರ್ಬೊನಿಲ್ ಗುಂಪುಗಳು ಒಂದಕ್ಕೊಂದು ತಾಗಿವೆ.
II. ಕಾರ್ಬೊನಿಲ್ ಗುಂಪುಗಳು ಒಂದು ವೀನೈಲ್ ಗುಂಪಿನಿಂದ ಬೇರ್ಪಟ್ಟಿವೆ.
III. ಕಾರ್ಬೊನಿಲ್ ಗುಂಪುಗಳು ಬೇರೆ ಬೇರೆ ವರ್ತುಲಗಳಲ್ಲಿವೆ.

ಕ್ವಿನೋನ್ ಪದ ಸಾಮಾನ್ಯವಾಗಿ ಪ್ಯಾರಾಬೆಂಜೋಕ್ವಿನೋನಿಗೆ ಸಂಬಂಧಿಸಿರುತ್ತದೆ. ಆದರೆ ಆರ್ಗ್ಯಾನಿಕ್ ಸಂಯುಕ್ತಗಳಿಗೆ ಕ್ವಿನೋನನ್ನು ಹೋಲುವಂಥ ಅಣುರಚನೆ ಇದ್ದರೆ ಅವನ್ನು ಕೂಡ ಕ್ವಿನೋನುಗಳು ಎಂದು ಪರಿಗಣಿಸುತ್ತೇವೆ.




ಎಲ್ಲ ಕ್ವಿನೋನುಗಳ ರಾಸಾಯನಿಕ ಗುಣಲಕ್ಷಣಗಳು ಪ್ಯಾರಾಬೆಂಜೋ಼ ಕ್ವಿನೋನಿನ ರಾಸಾಯನಿಕ ಗುಣಲಕ್ಷಣಗಳನ್ನು ಹೋಲುತ್ತವೆ. ಮತ್ತು ಎಲ್ಲ ಕ್ವಿನೋನುಗಳಿಗೆ ಕ್ವಿನೋನೈಡ್ ರಚನೆ ಇರುತ್ತದೆ. ಅಪಕರ್ಷಿಸಿದಾದ ಕ್ವಿನೋನುಗಳು ಕ್ವಿನಾಲುಗಳಾಗಿ ಪರಿವರ್ತನೆಗೊಳ್ಳುತ್ತವೆ. ಈ ಕ್ವಿನೋಲುಗಳಿಗೆ ಬೆಂಜಿನೈಡ್ ರಚನೆ ಇರುವುದು. (ಎಲ್.ಡಿ.ಎಂ.)

**ಕ್ವಿನೋಲಿನ್ :** ಬೆಂಜೀನ್ ಮತ್ತು ಪಿರಿಡಿನ್ ವೃತ್ತಗಳೆರಡೂ (ರಿಂಗ್ಸ್) ಒಂದು ನಿರ್ದಿಷ್ಟ ರೀತಿಯಲ್ಲಿ ಸೇರಿ ಆದ ದ್ವಿವೃತ್ತ ಸಂಯುಕ್ತ. ಇದನ್ನು 2, 3–




ಬೆಂಜೋಪಿರಿಡಿನ್ ಎಂದು ಕೂಡ ಕರೆಯಬಹುದು. ಮೊದಲ ಬಾರಿಗೆ ಈ ಸಂಯುಕ್ತವನ್ನು ಕಲ್ಲಿದ್ದಲ ತಾರೆಣ್ಣೆಯಿಂದ 1834ರಲ್ಲಿ ಬೇರ್ಪಡಿಸಲಾಯಿತು. ಇಂದಿಗೂ ಅದೇ ಇದರ ಮುಖ್ಯ ಆಕರ. ಕ್ವಿನೈನ್ ಗುಂಪಿಗೆ ಸೇರಿದ ಅಲ್ಕಲಾಯ್ಡುಗಳಲ್ಲಿ ಈ ಸಂಯುಕ್ತದ ಅಂಶವಿರುತ್ತದೆ.

ಕ್ವಿನೋಲಿನ್ ಮತ್ತು ಆದೇಶಿತ (ಸಬ್ಸ್ಟಿಟ್ಯೂಟೆಡ್) ಕ್ವಿನೋಲಿನುಗಳನ್ನು ತಯಾರಿಸಲು ಹಲವಾರು ವಿಧಾನಗಳಿವೆ. ಅವುಗಳಲ್ಲಿ ಗ್ಲಿಸರಿನ್, ಅಕ್ರೋಲಿನ್ ಮತ್ತು ಫಿನೈಲ್ ಹೈಡ್ರಜಿನ್ನುಗಳನ್ನು ಉಪಯೋಗಿಸುವ ಸ್ಕ್ರಾಪ್‍ನ ವಿಧಾನ ಮುಖ್ಯವಾದುದು. ಕ್ವಿನೋಲಿನ್ ಸಂಯುಕ್ತದಿಂದ ಹೆಚ್ಚಿನ ಉಪಯೋಗಗಳೇನೂ ಇಲ್ಲವಾದರೂ ಈ ಗುಂಪಿನ ಇತರ ಅನೇಕ ಸಂಯುಕ್ತಗಳನ್ನು ಔಷಧಿಗಳ ಉದ್ದಿಮೆಯಲ್ಲಿ ಬಹುವಾಗಿ ಉಪಯೋಗಿಸಲಾಗುತ್ತಿದೆ. ಇಂಥವುಗಳ ಪೈಕಿ 8–ಹೈಡ್ರಕ್ಸಿಕ್ವಿನೋಲಿನ್ ಮತ್ತು ಅದರ ವ್ಯುತ್ಪನ್ನಗಳು ಮುಖ್ಯವಾದವು. (ಕೆ.ಟಿ.ಎಸ್.)

**ಕ್ವಿಬೆಕ್ :** ಕೆನಡದ ಅತ್ಯಂತ ದೊಡ್ಡ ಪ್ರಾಂತ್ಯ. ನೈಋತ್ಯ ಮತ್ತು ಪಶ್ಚಿಮಗಳಲ್ಲಿ ಆಂಟೇರಿಯೋ ಪ್ರಾಂತ್ಯ, ಜೇಮ್ಸ್ ಕೊಲ್ಲಿ ಮತ್ತು ಹಡ್ಸನ್ ಕೊಲ್ಲಿ, ಉತ್ತರದಲ್ಲಿ ಹಡ್ಸನ್ ಜಲಸಂಧಿ ಮತ್ತು ಅಂಗೇವ ಕೊಲ್ಲಿ, ಪೂರ್ವದಲ್ಲಿ ಲ್ಯಾಬ್ರಡಾರ್ ತೀರ, ಸೇಂಟ್ ಲಾರೆನ್ಸ್ ಖಾರಿ, ದಕ್ಷಿಣದಲ್ಲಿ ಷಲುರ್ ಕೊಲ್ಲಿ, ನ್ಯೂ ಬ್ರನ್ಸ್‍ವಿಕ್ ಪ್ರಾಂತ್ಯ, ಅಮೆರಿಕ ಸಂಯುಕ್ತಸಂಸ್ಥಾನದ ಮೇನ್, ನ್ಯೂ ಹ್ಯಾಂಪ್‍ಷಿರ್, ವರ್ಮಾಂಟ್, ನ್ಯೂ ಯಾರ್ಕ್ ರಾಜ್ಯಗಳು ಮತ್ತು ಆಂಟೇರಿಯೋ ಪ್ರಾಂತ್ಯ–ಇವು ಕ್ವಿಬೆಕ್‍ನ ಮೇರೆಗಳು. ಉ.ಅ.$45^0$–$62^0$ 30' ಮತ್ತು ಪ.ರೇ.$79^0$ 30'–$57^0$ ನಡುವೆ ಇರುವ ಕ್ವಿಬೆಕ್‍ನ ವಿಸ್ತೀರ್ಣ 1542056 ಚಕಿಮೀ, ಜನಸಂಖ್ಯೆ 7687,068 (2006). ರಾಜಧಾನಿ ಕ್ವಿಬೆಕ್.

**ಭೌತಲಕ್ಷಣ:** ಕ್ವಿಬೆಕನ್ನು ಮೂರು ಸ್ವಾಭಾವಿಕ ವಿಭಾಗಗಳಾಗಿ ವಿಂಗಡಿಸಬಹುದು. ಕ್ವಿಬೆಕ್‍ನ ಶೇ. 90ಕ್ಕೂ ಹೆಚ್ಚು ಭಾಗ ಕೆನಡಿಯನ್ ಫಲಕಕ್ಕೆ ಸೇರಿದೆ. ಇದು ಪ್ರಸ್ಥಭೂಮಿಸದೃಶ ಪ್ರದೇಶ. ಇದು ಉತ್ತರಕ್ಕೆ ಇಳಿಜಾರಾಗಿದೆ. ಹಡ್ಸನ್ ಜಲಸಂಧಿಯ ಬಳಿ 300 ಮೀ ಆಳದ ಪ್ರಪಾತಗಳು ಸಂಭವಿಸಿವೆ. ವೃಕ್ಷರೇಖೆಯ ದಕ್ಷಿಣದಲ್ಲಿ ವಿಶಾಲ ಪ್ರದೇಶಗಳು ಹಿಮಾನಿಯುಗಕಾಲದ ಶೇಖರಣೆಗಳಿಂದ ಆವೃತವಾದವು. ಹಿಮದ ಶೇಖರಣೆಗಳು ಅಸಮವಾಗಿದ್ದುದರಿಂದಲೂ ಅದರಿಂದ ಸಂಭವಿಸಿದ ನಗ್ನೀಕರಣ ಕಾರ್ಯದಿಂದಾಗಿಯೂ ಕೆನಡಿಯನ್ ಫಲಕ ಪ್ರದೇಶಗಳಲ್ಲಿ ಹರಿಯುವ ನದಿಗಳು ಅನೇಕ ಸರೋವರಗಳಿಂದ ಕೂಡಿ ಅವುಗಳೊಳಕ್ಕೆ ರಭಸದಿಂದ ದುಮಿಕಿ ಜಲಪಾತಗಳನ್ನು ನಿರ್ಮಿಸಿವೆ. ದಕ್ಷಿಣ ಭಾಗದ ನದಿಗಳು ಹೆಚ್ಚು ಎತ್ತರದ ಪ್ರಸ್ಥಭೂಮಿಯಿಂದ ದಕ್ಷಿಣದ ಆಳದ ಕಮರಿಗಳೊಳಗೆ ದುಮುಕುತ್ತವೆ. ಇವುಗಳಲ್ಲಿ ಸ್ಯಾಗೆನೇ, ಸೇಂಟ್ ಮಾರಿಸ್, ಆಟ್ಟವ, ಬರ್ಸಿಮೀ, ಪೆರಿಬಾಂಕ, ಊಟಾರ್ಡ್ ಮತ್ತು ಮ್ಯಾನಿಕ್ವಾಗನ್ ನದಿಗಳು ಮುಖ್ಯವಾದವು. ಕೆನಡಿಯನ್ ಫಲಕ ಪ್ರದೇಶದಲ್ಲಿ ಚಿನ್ನ, ತಾಮ್ರ, ಸತು ಮುಂತಾದ ಖನಿಜನಿಕ್ಷೇಪಗಳಿವೆ. ಎರಡನೆಯ ಸ್ವಾಭಾವಿಕ ವಿಭಾಗ ಸೇಂಟ್ ಲಾರೆನ್ಸ್ ನದೀ ಬಯಲು. ಇದು ಕೆನಡಿಯನ್ ಫಲಕಕ್ಕಿಂತ ಭಿನ್ನವಾದ್ದು. ಇದರ ತಲಶಿಲೆಗಳು ಅವಸಾದಿ ಮೂಲದವು. ಸೇಂಟ್ ಲಾರೆನ್ಸ್ ಇಲ್ಲಿಯ ಮುಖ್ಯ ನದಿ. ಆಪಲೇಷಿಯನ್ ಪ್ರಸ್ಥಭೂಮಿ ಮೂರನೆಯ ಸ್ವಾಭಾವಿಕ ವಿಭಾಗ. ಈ ವಿಭಾಗಕ್ಕೆ ಸೇರಿರುವ ಗ್ಯಾಸ್ಪೇ ಪರ್ಯಾಯ ದ್ವೀಪದಲ್ಲಿರುವ ಷಿಕ್‍ಷಾಕ್ ಪರ್ವತದ ಝಾಕ್ ಕ್ಯಾರ್ಟೀ 126 ಮೀ ಕ್ವಿಬೆಕ್ ಪ್ರಾಂತ್ಯದ ಅತ್ಯುನ್ನತ ಶಿಖರ.

ಕ್ವಿಬೆಕ್ ನಗರದ ಒಂದು ದೃಶ್ಯ

**ವಾಯುಗುಣ:** ಕ್ವಿಬೆಕಿನದು ಖಂಡಾಂತರ ವಾಯುಗುಣ. ಉತ್ತರ ಕ್ವಿಬೆಕಿನ ಮಧ್ಯದಲ್ಲಿ ಬೇಸಗೆಯಿಂದ ಚಳಿಗಾಲಕ್ಕೆ ಉಷ್ಣತೆಯಲ್ಲಿ ಸುಮಾರು $21.1^o$ ಸೆ.ನಷ್ಟು ಅಂತರವಿರುತ್ತದೆ. ಮಾಂಟ್ರಿಯಾಲ್‍ನಲ್ಲಿ ಸರಾಸರಿ ಉಷ್ಣತೆ ಜನವರಿಯಲ್ಲಿ $-9.4^o$ ಸೆ. ; ಜುಲೈಯಲ್ಲಿ $21.1^o$ ಸೆ. ಸೇಂಟ್ ಲಾರೆನ್ಸ್ ಕೊಲ್ಲಿಯಲ್ಲಿ ಸಂಭವಿಸುವ ಕಡಿಮೆ ಒತ್ತಡದ ಆವರ್ತ ಮಾರುತಗಳಿಂದ ಪ್ರಾಂತ್ಯದ ದಕ್ಷಿಣ ಭಾಗದಲ್ಲಿ ಮಳೆಯಾಗುತ್ತದೆ. ವಾರ್ಷಿಕ ಮಳೆ ಉತ್ತರದಲ್ಲಿ 30 ಸೆಂಮೀ; ದಕ್ಷಿಣದ ಎಲ್ಲೆಯ ಬಳಿ 80 ಸೆಂಮೀಗೂ ಹೆಚ್ಚು. ಕ್ವಿಬೆಕ್ ನಗರದ ಹಿಂಬದಿಯಲ್ಲಿ ಇರುವ ಎತ್ತರದ ಪ್ರಸ್ಥಭೂಮಿಯಲ್ಲಿ ಇಡೀ ಖಂಡದಲ್ಲೇ ಅತ್ಯಧಿಕ ಹಿಮ ಬೀಳುತ್ತದೆ (240 ಸೆಂಮೀ).

**ಸಸ್ಯಗಳು, ಪ್ರಾಣಿಗಳು:** ವೃಕ್ಷರೇಖೆಯ ಉತ್ತರಕ್ಕೆ ಇರುವುದು ತಂಡ್ರ ಪ್ರದೇಶ. ಅದರಿಂದ ದಕ್ಷಿಣಕ್ಕೆ ಬಂದಂತೆ ಸ್ಪ್ರೂಸ್ ಮತ್ತು ತಂಡ್ರ ಮಿಶ್ರಣವೂ ಇನ್ನೂ ದಕ್ಷಿಣಕ್ಕೆ ಉಪಶೀತವಲಯದ ಶಿಲಾವಲ್ಕ ಮತ್ತು ಶಂಕುಧರ ವೃಕ್ಷಗಳೂ ಇವೆ. ಸೇಂಟ್ ಲಾರೆನ್ಸ್ ಮೈದಾನದಲ್ಲಿ ಮಿಶ್ರ ಕಾಡುಗಳುಂಟು. ಪೂರ್ವದ ಪ್ರದೇಶಗಳಲ್ಲೂ ಗ್ಯಾಸ್ಪೇ ಪರ್ಯಾಯದ್ವೀಪದಲ್ಲೂ ಗಟ್ಟಿ ಮರಗಳ ಮತ್ತು ಸಂಮಿಶ್ರ ಜಾತಿಯ ಸಸ್ಯಗಳ ಕಾಡುಗಳಿವೆ. ಕ್ವಿಬೆಕಿನಲ್ಲಿ ವನ್ಯಮೃಗಗಳು ಹೇರಳವಾಗಿ ಉಂಟು. ಕ್ಯಾರಿಬೂ, ಜಿಂಕೆ, ಬೀವರ್, ಮಿಂಕ್ ಮುಂತಾದ ಪ್ರಾಣಿಗಳೂ ಬಗೆಬಗೆಯ ಪಕ್ಷಿಗಳೂ ಟ್ರೌಟ್, ಚಾರ್ ಬ್ಯಾಸ್ ಪೈಕ್, ಪಿಕರೆಲ್ ಸ್ಯಾಲ್ಮನ್ ಮುಂತಾದ ಮೀನುಗಳೂ ಇವೆ. ಕ್ವಿಬೆಕಿನಲ್ಲಿರುವ ಪ್ರಾಂತೀಯ ವನಗಳ ಸಂಖ್ಯೆ ಆರು. ಫೋರ್ಟ್ ಚ್ಯಾಂಬ್ಲಿ, ಫೋರ್ಟ್‍ಲೆನಾಕ್ಸ್ ಇವು ಇತಿಹಾಸಪ್ರಾಮುಖ್ಯವುಳ್ಳ ರಾಷ್ಟ್ರೀಯ ವನಗಳು.



**ಆರ್ಥಿಕತೆ:** ಕ್ವಿಬೆಕ್ ಪ್ರಾಂತ್ಯದ ದಕ್ಷಿಣದಲ್ಲಿ ಜನಸಾಂದ್ರತೆ ಬೆಳೆಯುವುದಕ್ಕೆ ಇಲ್ಲಿಯ ನೆಲಬೇಸಾಯಕ್ಕೆ ಹೆಚ್ಚು ಅನುಕೂಲವಾಗಿರುವುದೇ ಕಾರಣ. ಸೇಂಟ್ ಲಾರೆನ್ಸ್ ತಗ್ಗಿನ ನೆಲ ಮತ್ತು ಕೆನಡಿಯನ್ ಫಲಕದ ಅಂಚಿನ ಪ್ರದೇಶಕ್ಕೆ ಕೃಷಿ ಸೀಮಿತವಾಗಿದೆ.

ಷವಿನಿಗ್ಯಾನ್ ನಗರದ ಒಂದು ನೋಟ

ಹೈನುಗಾರಿಕೆಯೂ ನಡೆಯುತ್ತದೆ. ಕ್ವಿಬೆಕ್‌ನ ಒಟ್ಟು ನೆಲದ ಶೇಕಡ 4ರಷ್ಟು ಮಾತ್ರ ಕೃಷಿಭೂಮಿಯಾಗಿದ್ದರೂ ವ್ಯವಸಾಯವೇ ಇಲ್ಲಿಯ ಮುಖ್ಯ ಕಸಬಾಗಿತ್ತು. ಒಂದನೆಯ ಮಹಾಯುದ್ಧದಿಂದೀಚೆಗೆ ಇಲ್ಲಿ ವ್ಯವಸಾಯದ ಯಾಂತ್ರೀಕರಣವಾಗಿ, ಎರಡನೆಯ ಮಹಾಯುದ್ಧದಿಂದೀಚೆಗೆ ಕೃಷಿ ಕ್ರಾಂತಿ ಸಂಭವಿಸಿತು. ಆದರೂ ಈಗ ಕೃಷಿಗಿಂತ ಕೈಗಾರಿಕೆ ಹೆಚ್ಚು ಮುಖ್ಯವಾಗಿದೆ. ಗೋಧಿ, ಓಟ್ಸ್, ಬಾರ್ಲಿ, ರೈ, ಬಟಾಣಿ, ತಿಂಗಳುಹುರುಳಿ, ಆಲೂಗೆಡ್ಡೆ, ಒಣಹುಲ್ಲು, ಹೊಗೆಸೊಪ್ಪು, ಸಕ್ಕರೆ ಬೀಟ್, ಹಣ್ಣುಗಳು ಇವು ಮುಖ್ಯ ಉತ್ಪನ್ನಗಳು.

ಕ್ವಿಬೆಕಿನ ಮೂರನೆಯ ಎರಡಕ್ಕಿಂತ ಹೆಚ್ಚು ಭಾಗ ಕಾಡಿನಿಂದ ಆವೃತವಾಗಿರುವುದರಿಂದ ಇಲ್ಲಿಯ ಅರಣ್ಯೋತ್ಪನ್ನಗಳು ವೈವಿಧ್ಯಪೂರಿತವಾಗಿದೆ. ಸ್ಪ್ರೂಸ್, ಫರ್ ಪೈನ್, ಹೆಮ್ಲಾಕ್, ದೇವದಾರು, ಮೇಪಲ್, ಎಲ್ಮ್, ಆಷ್, ಚೆರಿ, ಓಕ್ ಮುಂತಾದ ಮರಗಳುಂಟು. ತುಪ್ಪುಳುಗಾರಿಕೆ ಮೀನುಗಾರಿಕೆಗಳೂ ನಡೆಯುತ್ತವೆ.

ಕೈಗಾರಿಕೆಯಲ್ಲಿ ಕ್ವಿಬೆಕ್ ಪ್ರಾಂತ್ಯಕ್ಕೆ ಕೆನಡದಲ್ಲಿ ಎರಡನೆಯ ಸ್ಥಾನ ಲಭ್ಯವಾಗಿದೆ. ಕೆನಡದಲ್ಲಿ ತಯಾರಾಗುವ ಸರಕುಗಳ ಶೇ.30ರಷ್ಟು ಮೌಲ್ಯದ ಸರಕುಗಳು ಕ್ವಿಬೆಕಿನಲ್ಲಿ ಉತ್ಪಾದನೆಯಾಗುತ್ತವೆ. ಕೆನಡಿಯನ್ ಫಲಕದ ದಕ್ಷಿಣ ಭಾಗದಲ್ಲಿ ದುಮುಕುವ ನದಿಗಳಿಂದ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯೇ ಇಲ್ಲಿಯ ಕೈಗಾರಿಕೆಗಳಿಗೆ ಮುಖ್ಯ ಆಧಾರ. ಕೆನಡದ ಬೇರಾವ ಪ್ರಾಂತ್ಯದಲ್ಲೂ ಕ್ವಿಬೆಕಿನಲ್ಲಿ ಉತ್ಪಾದನೆಯಾಗುವಷ್ಟು ವಿದ್ಯುತ್ತಿನ ಉತ್ಪಾದನೆಯಾಗುವುದಿಲ್ಲ. ಪ್ರಾಂತ್ಯದ ಅರಣ್ಯ ಮತ್ತು ಖನಿಜಸಂಪತ್ತು ಮತ್ತು ಸೇಂಟ್ ಲಾರೆನ್ಸ ನೌಕಾ ಸಾರಿಗೆ ಸೌಲಭ್ಯ–ಇವೂ ಕೈಗಾರಿಕೆಯ ಬೆಳವಣಿಗೆಗೆ ಕಾರಣಗಳು. ಕೆನಡಿಯನ್ ಫಲಕದ ಅಂಚಿನಲ್ಲಿ ಹಲವಾರು ಕೈಗಾರಿಕಾ ನಗರಗಳು ಸ್ಥಾಪಿತವಾಗಿವೆ. ಮರ ಕೊಯ್ಯುವುದು, ಮರದ ತಿರುಳು ಮತ್ತು ಕಾಗದ ತಯಾರಿಕೆ, ನೌಕಾನಿರ್ಮಾಣ, ವಿಮಾನ ತಯಾರಿಕೆ, ರಾಸಾಯನಿಕಗಳು, ಹಿತ್ತಾಳೆ ತಾಮ್ರ ಉತ್ಪನ್ನಗಳು, ಅಣಿಕಟ್ಟು, ಪಾದರಕ್ಷೆ, ಔಷಧ ಮುಂತಾದ ಕೈಗಾರಿಕೆಗಳಿವೆ. ಗಣಿಗಾರಿಕೆಯಲ್ಲಿ ಕ್ವಿಬೆಕ್ ಪ್ರಾಂತ್ಯ ದೇಶದಲ್ಲಿ ಎರಡನೆಯ ಸ್ಥಾನ ಪಡೆದಿದೆ. ಕೆನಡದ ಗಣಿ ಉತ್ಪನ್ನದ 1/5 ಭಾಗ ಕ್ವಿಬೆಕಿನದು.

ಸೇಂಟ್ ಲಾರೆನ್ಸಿನಿಂದಾಗಿ ಕ್ವಿಬೆಕಿನ ಮುಖ್ಯ ಬಂದರುಗಳಿಗೆ ಸಾಗರ ಸಂಪರ್ಕ ಸಾಧ್ಯವಾಗಿದೆ. ಮಾಂಟ್ರಿಯಾಲ್ ರೈಲ್ವೆ, ಜಲ ಮತ್ತು ವಾಯುಮಾರ್ಗಗಳ ಮುಖ್ಯ ಸಂಧಿಸ್ಥಳ; ಮುಖ್ಯ ಕೈಗಾರಿಕಾ ಮತ್ತು ಬ್ಯಾಂಕಿಂಗ್ ಕೇಂದ್ರ, ಕೆನಡಿಯನ್ ನ್ಯಾಷನಲ್ ಮತ್ತು ಕೆನಡಿಯನ್ ಫೆಸಿಫಿಕ್ ರೈಲ್ವೆ ಮಾರ್ಗಗಳು ಕ್ವಿಬೆಕ್ ಪ್ರಾಂತ್ಯದ ಮೂಲಕ ಹಾದುಹೋಗುತ್ತವೆ. ಮರದ ತಿರುಳು ಮತ್ತು ಕಾಗದ ತಯಾರಿಕೆ ಸಂಸ್ಥೆಗಳಿಗೆ ಸೇರಿದ ರೈಲು ಮಾರ್ಗಗಳೂ ಉಂಟು.

ಕ್ವಿಬೆಕ್ ಪ್ರಾಂತ್ಯದ ರಾಜಧಾನಿ ಮತ್ತು ಅತ್ಯಂತ ಹಳೆಯ ನಗರ ಕ್ವಿಬೆಕ್. ಇದು ಸೇಂಟ್ ಲಾರೆನ್ಸ್‌ನ ಉತ್ತರ ದಡದ ಮೇಲೆ, ಸೇಂಟ್ ಚಾರಲ್ಸ್ ಕೂಡುವೆಡೆಯಲ್ಲಿ ಸ್ಥಾಪಿತವಾಗಿದೆ. ಕ್ವಿಬೆಕ್ ನಗರವನ್ನು ಮೇಲುನಗರ, ಕೆಳನಗರ ಎಂದು ವಿಭಾಗಿಸಬಹುದು. ಸೇಂಟ್ ಲಾರೆನ್ಸ್‌ನ ಎಡದಂಡೆಯಾಗಿರುವ ಎತ್ತರದ ಪ್ರಸ್ಥಭೂಮಿಯ ಉತ್ತರದ ಕೊನೆಯಲ್ಲಿ ಮೇಲುನಗರವನ್ನು ನಿರ್ಮಿಸಲಾಗಿದೆ. ಇದರ ಸುತ್ತಲೂ ಕೆಳನಗರವಿದೆ. ಕ್ವಿಬೆಕ್ ನಗರದ ವೈಶಿಷ್ಟ್ಯವೆಂದರೆ ಗೋಡೆಗಳ ನಡುವೆ ನಿರ್ಮಿತವಾಗಿರುವ ಭಾಗ. ಈ ಗೋಡೆಯನ್ನೂ ದುರ್ಗವನ್ನೂ 1823–32ರಲ್ಲಿ ಕಟ್ಟಲಾಯಿತು. ಕ್ವಿಬೆಕ್ ಬಹಳ ಕಾಲ ಕೆನಡದ ಅತ್ಯಂತ ಮುಖ್ಯ ಬಂದರಾಗಿತ್ತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಸೇಂಟ್ ಲಾರೆನ್ಸ್ ಪಾತ್ರವನ್ನು ಆಳ ಮಾಡಿದ ಮೇಲೆ ಮಾಂಟ್ರಿಯಾಲ್ ಮುಖ್ಯ ಬಂದರಾಯಿತು. ಕ್ವಿಬೆಕಿನಲ್ಲಿ ಅನೇಕ ಕೈಗಾರಿಕೆಗಳಿವೆ. ಕ್ವಿಬೆಕ್ ನಗರಪ್ರದೇಶದ ಜನಸಂಖ್ಯೆ 528595 (2006).

ಹಲ್, ಷವಿನಿಗ್ಯಾನ್, ಆರ್ವೈಡ, ಗ್ರೈನ್‌ಬಿ, ಷರ್‌ಬ್ರುಕ್, ಮೇಗಾನ್ ಇವು ಕ್ವಿಬೆಕಿನ ಇತರ ಕೆಲವು ಕೈಗಾರಿಕಾ ನಗರಗಳು. *(ಜೆ.ಇ.ಪಿ.)*

**ಕ್ವಿಬೆಕ್ ಇತಿಹಾಸ :** ಕ್ವಿಬೆಕ್ ಪ್ರದೇಶ ಮೊತ್ತಮೊದಲಿಗೆ ಬಿಳಿಯರ ಗಮನಕ್ಕೆ ಬಂದದ್ದು 1535ರಲ್ಲಿ. ಈಗ ಕ್ವಿಬೆಕ್ ನಗರ ಇರುವ ಸ್ಥಳದಲ್ಲಿ ಝಾಕ್ ಕಾರ್ಟ್ಯೇ ಎಂಬ ಫ್ರೆಂಚ್ ಅನ್ವೇಷಕನೊಬ್ಬ ಆಗ ಚಳಿಗಾಲವನ್ನು ಕಳೆದಿದ್ದ. ಮತ್ತೆ 1608ರಲ್ಲಿ ಸ್ಯಾಮ್ಯುಯೆಲ್ ಡ ಷಾಂಪ್ಲೇನ್ ಅಲ್ಲಿ ಒಂದು ವಸಾಹತನ್ನು ಸ್ಥಾಪಿಸಿದ. ಫ್ರಾನ್ಸಿನ ಸರಕಾರದ ಸನ್ನದು ಪಡೆದಿದ್ದ ಕೆಲವು ವ್ಯಾಪಾರ ಸಂಸ್ಥೆಗಳು ಆ ಪ್ರದೇಶದಲ್ಲಿ ಕಾರ್ಯನಿರತವಾಗಿದ್ದರೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆಯಲಿಲ್ಲ. ಜನಸಂಖ್ಯೆ ವಿರಳವಾಗಿತ್ತು. 1663ರಲ್ಲಿ ಆ ಪ್ರದೇಶದ ಆಡಳಿತ ಫ್ರಾನ್ಸಿನ ಕೇಂದ್ರ ಸರ್ಕಾರಕ್ಕೆ ಸೇರಿದಾಗ ವಸಾಹತು ನೀತಿಗೆ ಉತ್ತೇಜನ ಲಭ್ಯವಾಯಿತು. ಆದರೂ ಸರ್ಕಾರ ಆ ಪ್ರದೇಶಕ್ಕೆ ಹೆಚ್ಚಿನ ಗಮನಕೊಡಲಿಲ್ಲ. 14ನೆಯ ಲೂಯಿಯ ಮತ್ತು ಅವನ ದಕ್ಷ ಸಚಿವ ಝಾನ್ ಬ್ಯಾಟಿಸ್ಟ್ ಕಾಲ್ಬಾರನ ನೇತೃತ್ವದಲ್ಲಿ ಆ ಪ್ರದೇಶ ರೋಮನ್ ಕ್ಯಥೊಲಿಕ್ ಕೇಂದ್ರವೂ ಶ್ರೀಮಂತ ಜಮೀನ್ದಾರಿ ಪದ್ಧತಿಗೆ ಸೇರಿದ ಕೃಷಿಪ್ರಧಾನ ಪ್ರಾಂತ್ಯವೂ ಆಗಿ ಮುನ್ನಡೆಯಿತು.

ಕ್ವಿಬೆಕ್ ಪ್ರಾಂತ್ಯದಲ್ಲಿ ನೆಲಸಿದ ಜನ ಮಾತೃರಾಷ್ಟ್ರವಾದ ಫ್ರಾನ್ಸಿನ ನಿಷ್ಠಾವಂತ ಪ್ರಜೆಗಳಾಗಿದ್ದರು. ಫ್ರಾನ್ಸಿನ ಚಕ್ರವರ್ತಿಯಿಂದ ನೇಮಿತವಾದ ಗವರ್ನರ್ ಮತ್ತು ಆ ದೇಶದ ಚರ್ಚಿನ ಅಧಿಕಾರಿಗಳು ಸಮಾಜದ ಹಿತಾಸಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡಳಿತ ನಿರ್ವಹಿಸುತ್ತಿದ್ದರು. ಕ್ವಿಬೆಕ್‌ನ ಬಿಷಪ್ ಮತ್ತು ಜೆಸ್ಯುಯಿಟ್ ಪಾದ್ರಿಗಳು ತೀವ್ರವಾದ ಮತಪ್ರಚಾರ ಕಾರ್ಯ ನಡೆಸುತ್ತಿದ್ದರು. ಪ್ರಾಂತ್ಯದ ಸ್ವಯಮಾಡಳಿತದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರದ ವ್ಯಾಪಾರಿವರ್ಗದ ಆರ್ಥಿಕ ನೀತಿಗೆ ಪ್ರಾಮುಖ್ಯವಿದ್ದುದರಿಂದ ಸರ್ಕಾರದ ಆಡಳಿತಕ್ಕೆ ಅಡ್ಡಿಯುಂಟಾಗುತ್ತಿರಲಿಲ್ಲ. ನೆರೆಹೊರೆಯ ಪ್ರದೇಶಗಳಲ್ಲಿದ್ದ ಆದಿವಾಸಿ ಇಂಡಿಯನರಿಗೂ ಇಂಗ್ಲಿಷ್ ವಸಾಹತುಗಳ ಜನರಿಗೂ ಸತತವಾಗಿ ಕದನಗಳು ನಡೆಯುತ್ತಿದ್ದುದರಿಂದ ಶಾಂತಿಯಿರಲಿಲ್ಲ. ಇಷ್ಟಾದರೂ ಕ್ರಮೇಣ ಕ್ವಿಬೆಕಿನ ಫ್ರೆಂಚ್ ವಸಾಹತು ಬಲಗೊಳ್ಳುತ್ತಿತ್ತು. ಫ್ರಾನ್ಸ್-ಬ್ರಿಟನ್‌ಗಳ ನಡುವೆ ನಡೆದ ಯುದ್ಧದಲ್ಲಿ ಬ್ರಿಟಿಷ್ ದಳಪತಿ ಜೇಮ್ಸ್ ವುಲ್ಫ್ ಕ್ವಿಬೆಕನ್ನು ವಶಪಡಿಸಿಕೊಂಡ (1759). 1763ರ ಪ್ಯಾರಿಸ್ ಶಾಂತಿ ಸಂಧಾನದಿಂದಾಗಿ ಕ್ವಿಬೆಕ್ ಪ್ರಾಂತ್ಯ ಬ್ರಿಟನಿನ ವಶವಾಯಿತು. ಇಲ್ಲಿಯ ಪ್ರಜೆಗಳು ಬಹಳಮಟ್ಟಿಗೆ ಫ್ರೆಂಚರಾಗಿದ್ದುದರಿಂದ ಬ್ರಿಟಿಷರ ದೆಸೆಯಿಂದ ಜನಜೀವನ ಮತ್ತು ಸಾಮಾಜಿಕ ರಂಗಗಳಲ್ಲಿ ಮಹತ್ತ್ವದ ಬದಲಾವಣೆಗಳುಂಟಾದುವು. ವ್ಯಾಪಾರಕ್ಕೆ ಪ್ರಾಮುಖ್ಯ ನೀಡಿದ ಬ್ರಿಟಿಷ್ ವರ್ತಕರಿಗೂ ವ್ಯವಸಾಯವೇ ಮುಖ್ಯ ಕಸಬಾಗಿದ್ದ ಫ್ರೆಂಚ್ ರೈತವರ್ಗಕ್ಕೂ ನಡುವೆ ಸಂಪರ್ಕ ಏರ್ಪಡಲಿಲ್ಲ. ಫ್ರೆಂಚ್ ಭಾಷೆ, ಸಂಸ್ಕೃತಿ ಮತ್ತು ರೋಮನ್ ಕ್ಯಥೊಲಿಕ್ ಮತಗಳ ರಕ್ಷಣೆಗಾಗಿ ಅಂದಿನಿಂದ ಈಗಿನವರೆಗೂ ಎರಡು ಶತಮಾನಗಳ ಕಾಲ ಇದು ಹೋರಾಟ ನಡೆಸಿದೆ. ಮೊದಲಿಗೆ ತಮ್ಮ ಜೀವನರೀತಿ, ಸಂಸ್ಕೃತಿಗಳಿಗೆ ಪ್ರಾಧಾನ್ಯ ದೊರಕಿಸಿಕೊಳ್ಳಲು ಬ್ರಿಟಿಷರು ಪ್ರಯತ್ನಿಸಿದರಾದರೂ 1774ರ ಕ್ವಿಬೆಕ್ ಮಸೂದೆಯ ಪ್ರಕಾರ ಫ್ರೆಂಚ್ ಜನತೆಯ ಬೇಡಿಕೆಗಳಿಗೆ ಮಾನ್ಯತೆ ನೀಡಿದರು. ಆ ಸುಮಾರಿನಲ್ಲಿ ನಡೆದ ಅಮೆರಿಕ ಸ್ವಾತಂತ್ರ್ಯ ಯುದ್ಧ ಮತ್ತು ಫ್ರಾನ್ಸಿನ ಮಹಾಕ್ರಾಂತಿ ಕ್ವಿಬೆಕಿನ ಜನತೆಯ ಮೇಲೆ ಹೆಚ್ಚಿನ ಪ್ರಭಾವ ಬೀರಲಿಲ್ಲ.

ಪ್ರಾತಿನಿಧಿಕ ಸರ್ಕಾರ ಇವರಿಗೆ ದೊರಕಿದ್ದು ಕೂಡ ಒಂದು ಆಕಸ್ಮಿಕವೆಂದೇ ಹೇಳಬೇಕು. ಅಮೆರಿಕನ್ ಸ್ವಾತಂತ್ರ್ಯ ಯುದ್ಧದ ಕಾಲದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠಾವಂತರಾಗಿದ್ದು ಅನಂತರ ಬ್ರಿಟಿಷರ ಆಶ್ರಯದಲ್ಲಿ ಉಳಿಯುವ ಸಲುವಾಗಿ ಕ್ವಿಬೆಕ್ ಪ್ರದೇಶಕ್ಕೆ ಬಂದು ನೆಲಸಿದ ಜನ ಅದಕ್ಕಾಗಿ ಚಳವಳಿ ನಡೆಸಿದರು. ಅದರ ಫಲವಾಗಿ 1791ರ ಸಂವಿಧಾನ ಕಾಯಿದೆ ಸ್ವೀಕೃತವಾಗಿ, ಉತ್ತರ ಕೆನಡ (ಈಗಿನ ಆಂಟೇರಿಯೋ) ಮತ್ತು ದಕ್ಷಿಣ ಕೆನಡ (ಈಗಿನ ಕ್ವಿಬೆಕ್) ಎಂಬ ಎರಡು ಘಟಕಗಳು ಅಸ್ತಿತ್ವಕ್ಕೆ ಬಂದುವು. ಉತ್ತರದಲ್ಲಿ ಬ್ರಟಿಷ್ ವಸಾಹತುದಾರರೂ ದಕ್ಷಿಣದಲ್ಲಿ ಫ್ರೆಂಚ್ ಕೆನಡದ ಜನರೂ ಅಧಿಕ ಸಂಖ್ಯೆಯಲ್ಲಿದ್ದರು. ಉತ್ತರ ಕೆನಡಕ್ಕೊಂದು, ದಕ್ಷಿಣ ಕೆನಡಕ್ಕೊಂದು-ಹೀಗೆ ಎರಡು ವಿಧಾನಸಭೆಗಳ ಸ್ಥಾಪನೆಯಾಯಿತು. ದಕ್ಷಿಣ ಕೆನಡದ ವಿಧಾನಸಭೆಯಲ್ಲಿ ಮೊದಲಿಂದಲೂ ಫ್ರೆಂಚ್ ರೋಮನ್ ಕ್ಯಥೊಲಿಕರದೇ ಬಹುಮತವಿತ್ತು. ಅದು ತನ್ನದೇ ಆದ ದೃಷ್ಟಿಯನ್ನು ರೂಢಿಸಿಕೊಂಡಿತು. ಈ ಹೋರಾಟದಲ್ಲಿ ಫ್ರೆಂಚ್ ಕೆನಡದ ಮಧ್ಯಮವರ್ಗದ ಜನ ಪ್ರಾಧಾನ್ಯ ಗಳಿಸಿದರು. ಈ ವರ್ಗಕ್ಕೂ ಆಡಳಿತವರ್ಗಕ್ಕೂ ಸ್ವಲ್ಪಕಾಲ ಹೋರಾಟ ನಡೆಯುತ್ತಿತ್ತು. ಎರಡೂ ವಿಭಾಗಗಳಲ್ಲೂ 1837ರಲ್ಲಿ ಆಡಳಿತದ ವಿರುದ್ಧ ನಡೆದ ದಂಗೆ ಸಫಲವಾಗಲಿಲ್ಲ.

ಕ್ವಿಬೆಕಿನ ಜನತೆಯ ಸಮಸ್ಯೆಗಳನ್ನು ಪರಿಶೀಲಿಸಿದ ಗವರ್ನರ್ ಲಾರ್ಡ್ ಡರ್‌ಹ್ಯಾಮ್ ಈ ಸಮಸ್ಯೆಗಳ ಪರಿಹಾರಕ್ಕೆ ಎರಡು ಮಾರ್ಗಗಳನ್ನು ಸೂಚಿಸಿದ. ಉತ್ತರ ಮತ್ತು ದಕ್ಷಿಣ ಕೆನಡಗಳನ್ನು ಒಂದುಗೂಡಿಸಿ, ಫ್ರೆಂಚ್ ಮೂಲದ ನಿವಾಸಿಗಳನ್ನು ಅಲ್ಪಸಂಖ್ಯಾತರಾಗುವಂತೆ ಮಾಡಿ ಅವರಿಂದ ಬರುತ್ತಿದ್ದ ಆತಂಕಗಳನ್ನು ನಿವಾರಿಸುವುದು ಮತ್ತು ಹೊಸ ಒಕ್ಕೂಟಕ್ಕೆ ಜವಾಬ್ದಾರಿ ಸರ್ಕಾರ ನೀಡುವುದು-ಇವು ಆತನ ಸಲಹೆಗಳು. ಇವುಗಳ ಪ್ರಕಾರ ಎರಡು ಪ್ರದೇಶಗಳನ್ನೂ ಒಡನೆಯೇ ಒಂದು ಗೂಡಿಸಲಾಯಿತಾದರೂ ಜವಾಬ್ದಾರಿ ಸರ್ಕಾರವನ್ನು ಕೊಡಲಿಲ್ಲ. ಒಂದು ದಶಕದ ಹೋರಾಟದ ತರುವಾಯ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಜಾರಿಗೆ ತರಲಾಯಿತು. 1867ರಲ್ಲಿ ಬ್ರಿಟಿಷ್ ಉತ್ತರ ಅಮೆರಿಕದ ಉತ್ತರ ಕೆನಡ, ದಕ್ಷಿಣ ಕೆನಡ, ನೋವ ಸ್ಕೋಷ ಮತ್ತು ನ್ಯೂ ಬ್ರನ್ಸ್‌ವಿಕ್ ಪ್ರಾಂತ್ಯಗಳ ಒಕ್ಕೂಟ ರಚಿಸಲಾಯಿತು. ಈ ವ್ಯವಸ್ಥೆಯಿಂದ ಫ್ರೆಂಚ್ ಮೂಲದ ಕೆನಡದ ಜನತೆಗೆ ಒಂದು ಪ್ರಾಂತ್ಯದ ಮೇಲೆ ಹಿಡಿತ ಸಿಕ್ಕಿದಂತಾಯಿತು. ಕ್ವಿಬೆಕ್ ಪ್ರಾಂತ್ಯದಲ್ಲಿ ಅವರಿಗೆ ಬಹುಮತವಿದ್ದುದರಿಂದ ತಮ್ಮ ಸಂಸ್ಕೃತಿ, ಭಾಷೆ ಮತ್ತು ಮತೀಯ ಭಾವನೆಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ಇತರ ಪ್ರಾಂತ್ಯಗಳೊಂದಿಗೆ ತಮ್ಮ ದೇಶದ ವಿಸ್ತರಣ ಮತ್ತು ಅಧಿಕ ವ್ಯಾಪಾರ ಸೌಲಭ್ಯಗಳ ಬಗ್ಗೆಯೂ ಇವರು ಪ್ರಯತ್ನ ನಡೆಸಿದರು.

ಕಾಲಕ್ರಮದಲ್ಲಿ ಕ್ವಿಬೆಕ್ ಪ್ರಾಂತ್ಯ ತನ್ನ ವೈಶಿಷ್ಟ್ಯವನ್ನು ಬೆಳೆಸಿಕೊಂಡು ಉಳಿದೆಲ್ಲ ಪ್ರಾಂತ್ಯಗಳಿಗಿಂತಲೂ ಪ್ರಾಧಾನ್ಯ ಪಡೆಯಿತು. ವಿಲ್ಫ್ರಿಡ್ ಲಾರಿಯೇ 1869 – 1911ರ ತನಕ ಕೆನಡದ ಪ್ರಧಾನಿಯಾಗಿದ್ದ. 1948 – 1957ರ ತನಕ ಪ್ರಧಾನಿಯಾಗಿದ್ದ ಲೂಯಿ ಸಾನ್ ಲೊರಾನ್ ಕ್ವಿಬೆಕಿನವನು. ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳನ್ನಾಡುತ್ತಿದ್ದ ಜನರಲ್ಲಿ ಏರ್ಪಟ್ಟಿದ್ದ ಭಿನ್ನ ಮನೋಭಾವದಿಂದಾಗಿ ಫ್ರೆಂಚ್ ಮೂಲದ ಜನ ಕ್ವಿಬೆಕ್ ತಮ್ಮ ವಿಶಿಷ್ಟವಾದ ತಾಯ್ನಾಡೆಂದು ಭಾವಿಸುವಂತಾಯಿತು. ಶಿಕ್ಷಣ ಮಾಧ್ಯಮ, ಹೊರದೇಶಗಳಲ್ಲಿ ಬ್ರಿಟಿಷರು ನಡೆಸುತ್ತಿದ್ದ ಯುದ್ಧಗಳಲ್ಲಿ ಕೆನಡದ ಪಾತ್ರ-ಇವೆರಡು ವಿಷಯಗಳಲ್ಲಿ ಕ್ವಿಬೆಕಿನ ಜನರು ಸರ್ಕಾರದೊಂದಿಗೆ ಒಮ್ಮತ ಹೊಂದಿರಲಿಲ್ಲ. ದಕ್ಷಿಣ ಆಫ್ರಿಕದೊಂದಿಗೆ ಬ್ರಿಟಿಷರು ನಡೆಸುತ್ತಿದ್ದ ಯುದ್ಧದ ನೆರವಿಗೆ ಕೆನಡದ ಸ್ವಯಂಸೇವಕ ರಕ್ಷಣ ತಂಡವನ್ನು ಕಳುಹಿಸಿದ್ದರ ವಿರುದ್ಧ ಆಂದೋಳನವೆದ್ದಿತು. ಮತ್ತೆ ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಬ್ರಿಟಿಷರ ಪರವಾಗಿ ಸೈನ್ಯ ಕಳುಹಿಸಿದಾಗ ವಿರೋಧ ತೀವ್ರವಾಯಿತು. ಈ ರೀತಿ ಅನೇಕ ವಿಷಯಗಳಲ್ಲಿ ಕೆನಡ ದೇಶದಲ್ಲಿ ಕ್ವಿಬೆಕ್ ತನ್ನ ಪ್ರತ್ಯೇಕ ಧೋರಣೆಯನ್ನು ತೋರಿಸಿಕೊಂಡಿದೆ.

ಆದರೂ ಕ್ವಿಬೆಕ್ ಪ್ರಾಂತ್ಯದ ಪ್ರಗತಿಗೆ ಬೇರೆಯವರಿಂದ ದೊರೆತ ನೆರವು ಗಣನೀಯವಾದ್ದು. ಒಂದನೆಯ ಮಹಾಯುದ್ಧ ಮತ್ತು ಅನಂತರದ ಕಾಲದಲ್ಲಿ ಬ್ರಿಟಿಷರೂ ಅಮೆರಿಕ ಸಂಯುಕ್ತಸಂಸ್ಥಾನದವರೂ ಸ್ಥಾಪಿಸಿದ ಕೈಗಾರಿಕೆಗಳಿಂದ ಆ ತನಕ ಕೇವಲ ಕೃಷಿಪ್ರಧಾನವಾಗಿದ್ದ ಕ್ವಿಬೆಕ್ ಕೈಗಾರಿಕಾ ಪ್ರಗತಿ ಸಾಧಿಸಿತು. 20ನೆಯ ಶತಮಾನದ ಉತ್ತರಾರ್ಧದ ವೇಳೆಗೆ ದೊಡ್ಡ ಕೈಗಾರಿಕೋದ್ಯಮಗಳು ಬೆಳೆದು ಕ್ವಿಬೆಕ್ ಪ್ರಾಂತ್ಯದ ಆರ್ಥಿಕ ರೂಪವೇ ಮಾರ್ಪಾಟುಗೊಂಡಿತ್ತು. ಇದಕ್ಕೆ ಬ್ರಿಟಿಷರು ಬಹಳ ಮಟ್ಟಿಗೆ ಕಾರಣ; ಫ್ರೆಂಚ್ ಮೂಲದವರ ಪಾತ್ರ ಬಹಳ ಕಡಿಮೆ. ಆದರೆ ರಾಜಕೀಯ ಕ್ಷೇತ್ರದಲ್ಲಿ ಫ್ರೆಂಚ್ ಮೂಲದವರ ಪ್ರಾಬಲ್ಯವೇ ಅಧಿಕವಾಗಿತ್ತು. (ಸಿ.)

**ಕ್ವಿಲರ್ – ಕೂಚ್, ಆರ್ಥರ್ ಥಾಮಸ್ :** 1863–1944. ವಿದ್ವಾಂಸ, ಕಾದಂಬರಿಕಾರ. ಕಾರನ್‌ವಾಲಿನ ಬೊಡ್‌ಮಿನ್‌ನಲ್ಲಿ ಹುಟ್ಟಿದ. ನ್ಯೂಟನ್ ಆಬಟ್ ಕಾಲೇಜು, ಕ್ಲಿಫ್ಟನ್ ಕಾಲೇಜು ಮತ್ತು ಟ್ರಿನಿಟಿ ಕಾಲೇಜುಗಳಲ್ಲಿ ವ್ಯಾಸಂಗ ನಡೆಸಿದ. 1899ರಲ್ಲಿ ಲಂಡನಿಗೆ ತೆರಳಿ ಸ್ಪೀಕರ್ ಪತ್ರಿಕೆಯ ಸಂಪಾದಕನಾದ. 1910ರಲ್ಲಿ ಸರ್ ಪದವಿ ಪಡೆದ. ಏಳನೆಯ ಎಡ್ವರ್ಡ್‌ನಿಂದ ಕೇಂಬ್ರಿಜ್‌ನಲ್ಲಿ ಸ್ಥಾಪಿತವಾದ ಆಂಗ್ಲ ಸಾಹಿತ್ಯದ ಮುಖ್ಯಸ್ಥ ಹುದ್ದೆಗೆ 1912ರಲ್ಲಿ ನೇಮಕಗೊಂಡ. ಮೊದಲಿಗೆ ಈತ ಕ್ಯೂ ಎಂಬ ಕಾವ್ಯನಾಮದಿಂದ ಕಾದಂಬರಿಗಳನ್ನು ಬರೆದು ಸಾಕಷ್ಟು ಖ್ಯಾತಿಯನ್ನು ಗಳಿಸಿದ. ಈತನ ಕಾದಂಬರಿಗಳಲ್ಲಿ ಡೆಡ್‌ಮ್ಯಾನ್ಸ್ ರಾಕ್ (1887), ಟ್ರಾಯ್ ಟೌನ್ (1888), ದಿ ಸ್ಪ್ಲೆಂಡಿಡ್ ಸ್ಪರ್ (1889), ದಿ ಬ್ಲೂ ಪೆವಿಲಿಯನ್ಸ್ (1891), ದಿ ಡೆಲೆಕ್ಟಬಲ್ ಡಚಿ (1893), ದಿ ಷಿಪ್ ಆಫ್ ಸ್ಟಾರ್ಸ್ (1899), ಫೋರ್ಟ್ ಆಮಿಟಿ (1904), ನಿಕಿ ನಾನ್, ರಿಸರ್ವಿಸ್ಟ್ (1915)–ಇವು ಮುಖ್ಯವಾದವು. ಈತ ಅರ್ಧಕ್ಕೆ ಬಿಟ್ಟ ಕ್ಯಾಸಲ್ ಡಾಕ್ ಎಂಬ ಕಾದಂಬರಿಯನ್ನು ಡೆಫ್ನಿ ಡು ಮಾರಿಯ ಎಂಬ ಲೇಖಕಿ ಪೂರ್ಣಗೊಳಿಸಿದಳು. ಇದು 1962ರಲ್ಲಿ ಬೆಳಕು ಕಂಡಿತು. ವರ್ಸಸ್ ಅಂಡ್ ಪ್ಯಾರೊಡೀಸ್ (1893), ಪೊಯಮ್ಸ್ ಅಂಡ್ ಬ್ಯಾಲಡ್ಸ್ (1896), ದಿ ವರ್ಜಿಲ್ ಆಫ್ ವೀನಸ್ (1912)–ಇವು ಈತನ ಕವನ ಸಂಕಲನಗಳು. ಈತ ಬಹು ದೊಡ್ಡ ವಿಮರ್ಶಕ ಹಾಗೂ ಸ್ಫೂರ್ತಿದಾಯಕ ಅಧ್ಯಾಪಕನೆನಿಸಿಕೊಂಡಿದ್ದ. ಆನ್ ದಿ ಆರ್ಟ್ ಆಫ್ ರೈಟಿಂಗ್ (1916), ಆನ್ ದಿ ಆರ್ಟ್ ಆಫ್ ರೀಡಿಂಗ್ (1920), ಸ್ಟಡೀಸ್ ಇನ್ ಲಿಟರೇಚರ್ (ಮೂರು ಸಂಪುಟಗಳು 1918, 1922, 1929), ಷೇಕ್ಸ್‌ಪಿಯರ್ಸ್ ವರ್ಕ್‌ಮನ್‌ಷಿಪ್ (1918), ಚಾರಲ್ಸ್ ಡಿಕನ್ಸ್ ಅಂಡ್ ಅದರ್ ವಿಕ್ಟೋರಿಯನ್ಸ್ (1925)– ಈ ಗ್ರಂಥಗಳನ್ನು ಪ್ರಕಟಿಸಿ ಆಂಗ್ಲ ಸಾಹಿತ್ಯದ ತಿರುವನ್ನೇ ಈತ ಬದಲಿಸಿದ. ಈತ ಸಂಕಲಿಸಿದ ಆಕ್ಸ್‌ಫರ್ಡ್ ಬುಕ್ ಆಫ್ ಇಂಗ್ಲಿಷ್ ವರ್ಸ್ (1900), ಆಕ್ಸ್‌ಫರ್ಡ್ ಬುಕ್ ಆಫ್ ವಿಕ್ಟೋರಿಯನ್ ವರ್ಸ್ (1913), ಆಕ್ಸ್‌ಫರ್ಡ್ ಬುಕ್ ಆಫ್ ಬ್ಯಾಲಡ್ಸ್ (1910)–ಈ ಪುಸ್ತಕಗಳು ಬಹು ಜನಪ್ರಿಯವೆನಿಸಿವೆ. ಕೇಂಬ್ರಿಜ್‌ನ ಹೊಸ ಆವೃತ್ತಿಯ ಷೇಕ್ಸ್‌ಪಿಯರ್ ಮಹಾಸಂಪುಟಕ್ಕೆ ಈತ ಸಹಸಂಪಾದಕನಾಗಿದ್ದ. ಅಬರ್‌ಡೀನ್, ಎಡಿನ್‌ಬರೊ, ಬ್ರಿಸ್ಟಲ್ ಮುಂತಾದ ವಿಶ್ವವಿದ್ಯಾಲಯಗಳು ಈತನಿಗೆ ಗೌರವ ಪದವಿಯನ್ನು ನೀಡಿ ಸನ್ಮಾನಿಸಿವೆ. ನೌಕಾವಿಹಾರದಲ್ಲಿ ಮತ್ತು ದೋಣಿ ನಡೆಸುವುದರಲ್ಲಿ ಈತನಿಗೆ ಹೆಚ್ಚಿನ ಆಸಕ್ತಿ ಇತ್ತು.

(ಎಚ್.ವಿ.ಎಸ್.)

**ಕ್ವಿಸ್‌ಲಿಂಗ್, ವಿಡ್ಕುನ್ ಏಬ್ರಹಾಂ ಲಾರಿಟ್ಜ್ ಜಾನ್‌ಸನ್ :** 1887–1945. ನಾರ್ವೆ ದೇಶದ ರಾಜಕಾರಣಿ, ಫ್ಯಾಸಿಸ್ಟ್ ಪಂಥದವ. ದ್ರೋಹಿ ಎಂಬ ಶಬ್ದಕ್ಕೆ ಇವನ ಹೆಸರು ಪರ್ಯಾಯವಾಗಿ ಬಳಕೆಗೆ ಬಂದಿದೆ. ಜನನ ಫೈರ್ಸ್ ಡಾಲಿನಲ್ಲಿ. ಈತ ನಾರ್ವೆಯ ರಾಯಲ್ ಮಿಲಿಟರಿ ಅಕಾಡೆಮಿಯಲ್ಲಿ ವ್ಯಾಸಂಗಮಾಡಿ ಪದವೀಧರನಾದ (1911). 1929–33ರಲ್ಲಿ ರಾಜಕೀಯವನ್ನು ಪ್ರವೇಶಿಸಿ, ಕಮ್ಯೂನಿಸ್ಟ್‌ನ ಕಡು ವಿರೋಧಿಯೆಂದು ಹೆಸರು ಗಳಿಸಿದ. 1931–33ರ ಕಾಲದಲ್ಲಿ ಯುದ್ಧಮಂತ್ರಿಯಾಗಿದ್ದು, ಅದಕ್ಕೆ ರಾಜೀನಾಮೆ ಕೊಟ್ಟ ಅನಂತರ ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದ. ಆದರೆ ಈ ಪಕ್ಷ ಚುನಾವಣೆಯಲ್ಲಿ ಒಂದು ಸ್ಥಾನವನ್ನೂ ಗಳಿಸಲಿಲ್ಲ. ನಾಟ್ಸಿಗಳ ಬಗ್ಗೆ ಸ್ನೇಹ ತಳೆದಿದ್ದ ಈತ ಹಿಟ್ಲರನ್ನು ಸಂದರ್ಶಿಸಿದ್ದು 1939ರಲ್ಲಿ. 1940ರಲ್ಲಿ ಹಿಟ್ಲರ್ ನಾರ್ವೆಯ ಮೇಲೆ ನಡೆಸಿದ ಆಕ್ರಮಣದಲ್ಲಿ ಇವನು ನೆರವು ನೀಡಿದ. ಇವನು ಘೋಷಿಸಿದ ಹೊಸ ಸರ್ಕಾರವನ್ನು ಜನರು ದ್ವೇಷಿಸಿದ್ದರಿಂದ ಅದು ಒಂದು ವಾರವೂ ಉಳಿಯಲಿಲ್ಲ. ಇವನಿಗೆ ಸಾಕಷ್ಟು ಬೆಂಬಲವಿಲ್ಲದಿದ್ದರಿಂದ ಜರ್ಮನರು ಇವನನ್ನು ಅಧಿಕಾರದಿಂದ ಕಿತ್ತುಹಾಕಿದರು; ಆದರೂ ನಾರ್ವೆಯಲ್ಲಿ ಇವನ ಪಕ್ಷಕ್ಕೆ ಮಾತ್ರವೇ ಜರ್ಮನರು ಅವಕಾಶ ನೀಡಿದ್ದರು; ನೀಡಿದ್ದರು; 1942ರಲ್ಲಿ ಜರ್ಮನರು ಸ್ಥಾಪಿಸಿದ ಕೈಗೊಂಬೆ ಸರ್ಕಾರಕ್ಕೆ ಇವನನ್ನು ಸಚಿವಾಧ್ಯಕ್ಷನನ್ನಾಗಿ ಮಾಡಲಾಯಿತು. ನಾರ್ವೆಯ

ಚರ್ಚ್, ಶಾಲೆ ಮುಂತಾದವನ್ನೆಲ್ಲ ನಾಟ್ಸೀಕರಣ ಮಾಡಬೇಕೆಂಬ ಕ್ವಿಸ್‌ಲಿಂಗನ ಪ್ರಯತ್ನಕ್ಕೆ ತೀವ್ರ ವಿರೋಧವಿತ್ತು. ಈತ ಯೆಹೂದ್ಯರನ್ನು ಚಿತ್ರಹಿಂಸೆಗೆ ಗುರಿಪಡಿಸಿ ಕಾರಾಗೃಹ ಶಿಬಿರಗಳಲ್ಲಿ ಸುಮಾರು 1,000 ಮಂದಿಯನ್ನು ಸಾವಿಗೆ ಈಡುಮಾಡಿಸಿದ. 1945ರ ಮೇ ತಿಂಗಳಲ್ಲಿ ನಾರ್ವೆ ವಿಮೋಚನೆಗೊಂಡಿತು. ಕ್ವಿಸ್‌ಲಿಂಗ್ ದಸ್ತಗಿರಿಯಾದ. ಕೊಲೆ, ರಾಜದ್ರೋಹ ಮುಂತಾದ ಅನೇಕ ಅಪರಾಧಗಳಿಗಾಗಿ ಅವನನ್ನು ಮರಣ ದಂಡನೆಗೆ ಗುರಿಪಡಿಸಲಾಯಿತು. *

**ಕ್ವೀನ್ಸ್‌ಲೆಂಡ್ :** ಆಸ್ಟ್ರೇಲಿಯದ ಈಶಾನ್ಯ ಭಾಗದಲ್ಲಿರುವ ಒಂದು ರಾಜ್ಯ. 1,852,642 ಚಕಿಮೀ ವಿಸ್ತೀರ್ಣದಲ್ಲಿ 1/5 ಭಾಗದಷ್ಟಿದೆ. ಇದಕ್ಕೆ 5178 ಕಿಮೀ ಮೈಲಿಗಳ ಉದ್ದದ ಸಮುದ್ರ ಕಿನಾರೆಯಿದೆ. ನೈಋತ್ಯದಲ್ಲಿ ದಕ್ಷಿಣ ಆಸ್ಟ್ರೇಲಿಯ, ಪಶ್ಚಿಮದಲ್ಲಿ ನಾರ್ದರ್ನ್ ಟೆರಿಟೊರಿ, ಉತ್ತರದಲ್ಲಿ ಕಾರ್ಪೆಂಟೇರಿಯ ಖಾರಿ, ಈಶಾನ್ಯ ಮತ್ತು ಪೂರ್ವಗಳಲ್ಲಿ ಕಾರಲ್ ಸಮುದ್ರ ಮತ್ತು ಪೆಸಿಫಿಕ್ ಸಾಗರ, ದಕ್ಷಿಣದಲ್ಲಿ ನ್ಯೂ ಸೌತ್ ವೇಲ್ಸ್–ಇವು ಇದರ ಮೇರೆಗಳು. ಉತ್ತರ–ದಕ್ಷಿಣವಾಗಿ ಗರಿಷ್ಠ ಉದ್ದ 1981 ಕಿಮೀ. ಪೂರ್ವಪಶ್ಚಿಮವಾಗಿ ಗರಿಷ್ಠ ಅಗಲ 1512 ಕಿಮೀ ಬ್ರಿಸ್ಬೇನ್ ಇದರ ರಾಜಧಾನಿ. ಜನಸಂಖ್ಯೆ : 1820000 (2006). ಕ್ವೀನ್ಸ್‌ಲೆಂಡಿನ ಜನಸಂಖ್ಯೆ 4,164,590 (2006).

**ಭೌತಲಕ್ಷಣ:** ಈ ರಾಜ್ಯದ ಹೆಚ್ಚು ಭಾಗ ಮೈದಾನ. ಪರ್ವತ ಪ್ರದೇಶಗಳು ಕಡಿಮೆ. ಪೂರ್ವ ಮತ್ತು ವಾಯುವ್ಯ ಭಾಗಗಳು ಹೆಚ್ಚು ಎತ್ತರ. ದಕ್ಷಿಣದ ನ್ಯೂ ವಾಯವ್ಯ ಸೌತ್ ವೇಲ್ಸ್ ಎಲ್ಲೆಯಿಂದ ಉತ್ತರದ ಯಾರ್ಕ್ ಭೂಶಿರದವರೆಗೆ ಉದ್ದಕ್ಕೂ ಈಸ್ಟರ್ನ್ ಹೈಲ್ಯಾಂಡ್ಸ್ ಹಬ್ಬಿದೆ. ಇದರ ಅಂಚಿನಲ್ಲಿ ಅಸಂಖ್ಯಾತ ಮುರುಕಲು ಗುಡ್ಡಗಳುಂಟು. ಹುಲ್ಲುಗಾವಲಿನಿಂದ ಕೂಡಿ ಅಗಲವಾದ ಪಟ್ಟೆಯಂತಿರುವ ಈ ಪ್ರಸ್ಥಭೂಮಿ 303 ಮೀಗಿಂತ ಎತ್ತರವಾಗಿದೆ. ಬ್ರಿಸ್ಬೇನ್‌ಗೆ ಬೆಂಗಡೆಯಲ್ಲಿ 909 ಮೀ ಎತ್ತರವಿರುವ ಪ್ರದೇಶಗಳುಂಟು. ಕ್ವೀನ್ಸ್‌ಲೆಂಡ್ ರಾಜ್ಯದ ಅತ್ಯುನ್ನತ ಶಿಖರ ಇರುವುದು ಉತ್ತರದಲ್ಲಿ. ಬೆಲೆಂಡೆಂಕರ್ ಶ್ರೇಣಿಯ ಬಾರ್ಟ್ಲ್ ಫ್ರಿಯರ್ ಶಿಖರದ ಎತ್ತರ 1648 ಮೀ. ಈ ಶ್ರೇಣಿಯ ನಡುವೆ ಇರುವ ಆಥರ್ಟನ್ ಪ್ರಸ್ಥಭೂಮಿ ಫಲವತ್ತಾದ ನೆಲ. ತ್ರಿಕೋಣಾಕಾರವಾಗಿರುವ ಈ ಪ್ರಸ್ಥಭೂಮಿಯ ಎತ್ತರ 606 ಮೀ. ಇದೇ ಎತ್ತರವಿರುವ ಇನ್ನು ಮೂರು ಪ್ರಸ್ಥಭೂಮಿಗಳಿವೆ. ಅವು ಸಣ್ಣವು. ಅವುಗಳಲ್ಲೊಂದು ಮಕ್ಕೈ ಪಟ್ಟಣದ ಹಿಂಬದಿಯಲ್ಲಿದೆ. ಮತ್ತೊಂದು ಪ್ರಸ್ಥಭೂಮಿ ಇರುವುದು ದಕ್ಷಿಣದ ಒಳನಾಡಿನಲ್ಲಿ. ಡಾರ್ಲಿಂಗ್ ಡೌನ್ಸ್ ಮೂರನೆಯದು. ಒಳನಾಡಿನ ವಿಶಾಲ ಪಶ್ಚಿಮ ಬಯಲು ಸಾಮಾನ್ಯವಾಗಿ 151.5 ಮೀ ಎತ್ತರವಾಗಿದೆ. ಅತ್ಯಂತ ದಕ್ಷಿಣದಲ್ಲಿರುವ ಮ್ಯಾಕ್‌ಫರ್ಸನ್ ಪರ್ವತಶ್ರೇಣಿ ಮುಖ್ಯವಾದ್ದು.



ಕ್ವೀನ್ಸ್‌ಲೆಂಡಿನಲ್ಲಿ ಹಲವು ನದಿಗಳುಂಟು. ಆದರೆ ಅವು ನೌಕಾಯಾನಕ್ಕೆ ಉಪಯುಕ್ತವಾಗಿಲ್ಲ. ಪೆಸಿಫಿಕ್ ಸಾಗರವನ್ನು ಸೇರುವ ನದಿಗಳಲ್ಲಿ ಫಿಟ್ಸ್‌ರಾಯ್ ಮತ್ತು ಬರ್ಡೆಕಿನ್ ಮುಖ್ಯವಾದವು. ಇವುಗಳಲ್ಲಿ ಒಂದೊಂದಕ್ಕೂ 129500 ಚ.ಕಿಮೀಗೂ ಹೆಚ್ಚಿನ ಜಲಾನಯನ ಭೂಮಿ ಇದೆ. ಈಸ್ಟರ್ನ್ ಹೈಲ್ಯಾಂಡ್ಸಿನ ಬಳಿ ಗ್ರೇಟ್ ಡಿವೈಡ್ ಶ್ರೇಣಿಯ ಪಶ್ಚಿಮಕ್ಕಿರುವ ಭಾಗವೆಲ್ಲ ಆರ್ಟೀಸಿಯನ್ ತಗ್ಗುನೆಲ. ಪಶ್ಚಿಮಕ್ಕೆ ಹರಿಯುವ ನದಿಗಳು ಹೆಚ್ಚು ಉದ್ದವಾಗಿದ್ದರೂ ಅವುಗಳಲ್ಲಿ ವರ್ಷವೆಲ್ಲ ನೀರಿರುವುದಿಲ್ಲ.

ಟಾರೆಸ್ ಜಲಸಂಧಿಯಲ್ಲಿರುವ ದ್ವೀಪಗಳೂ ಪೂರ್ವತೀರದಲ್ಲಿ ಹಬ್ಬಿರುವ ಗ್ರೇಟ್ ಬ್ಯಾರಿಯರ್ ರೀಫಿನ ದ್ವೀಪಗಳೂ ಕ್ವೀನ್ಸ್‌ಲೆಂಡ್ ರಾಜ್ಯಕ್ಕೆ ಸೇರಿವೆ.

**ವಾಯುಗುಣ:** ಕ್ವೀನ್ಸ್‌ಲೆಂಡಿನಲ್ಲಿ ಮೂರು ಬಗೆಯ ವಾಯುಗುಣ ಪ್ರದೇಶಗಳುಂಟು. ಕರಾವಳಿ ಪ್ರದೇಶದ ಉಷ್ಣತೆ ಏಕರೀತಿಯದು. ಗಾಳಿ ತೇವದಿಂದ ಕೂಡಿರುತ್ತದೆ. ಮಳೆ 40–330 ಸೆಂಮೀ. ಕೇರ್ನ್ಸ್ ಮತ್ತು ಕಾರ್ಡ್‌ವೆಲ್ ನಡುವಣ ಕರಾವಳಿ ಜಿಲ್ಲೆ ಇಡೀ ಆಸ್ಟ್ರೇಲಿಯದಲ್ಲೇ ಅತ್ಯಧಿಕ ಮಳೆ ಪ್ರದೇಶ. ಕರಾವಳಿಯ ನೆರೆಯ ಒಳನಾಡಿನಲ್ಲಿ ಉಷ್ಣತೆ ಇನ್ನೂ ಹೆಚ್ಚು ವ್ಯತ್ಯಾಸವಾಗುತ್ತದೆ. ಮಳೆ ಬಲು ಕಡಿಮೆ. ಪಶ್ಚಿಮ ಮತ್ತು ನೈಋತ್ಯ ಪ್ರದೇಶಗಳಲ್ಲಿ 20 ಸೆಂಮೀ ಗಿಂತ ಕಡಿಮೆ ಮಳೆ. ಕ್ವೀನ್ಸ್‌ಲೆಂಡಿನಲ್ಲಿ ಅಧಿಕ ಮಳೆಯಾಗುವುದು ಬೇಸಗೆಯಲ್ಲಿ (ಡಿಸೆಂಬರ್–ಮಾರ್ಚ್).

**ಸಸ್ಯಗಳು, ಪ್ರಾಣಿಗಳು:** ಹೆಚ್ಚು ಮಳೆ ಬೀಳುವ ಜಿಲ್ಲೆಗಳಲ್ಲಿ ಮಳೆಗಾಡುಗಳುಂಟು. 120 ಸೆಂಮೀಗಿಂತ ಹೆಚ್ಚು ಮಳೆಯಾಗುವ ಪೂರ್ವ ಕರಾವಳಿಯಲ್ಲಿ ಇವು ಸಮೃದ್ಧವಾಗಿವೆ. ಪಶ್ಚಿಮಕ್ಕೆ ಹೋದಂತೆ ಎಲೆ ಉದುರುವ ಮರಗಳು ಕಾಣಸಿಗುತ್ತವೆ. 60 ಕಿಮೀಗಿಂತ ಕಡಿಮೆ ಮಳೆ ಬೀಳುವ ಪಶ್ಚಿಮ ನಾಡಿನಲ್ಲಿ ಅವೂ ಕಣ್ಮರೆಯಾಗುತ್ತವೆ. ರಾಜ್ಯದ ಪಶ್ಚಿಮದಂಚಿನ ಮರುಭೂಮಿಯ ಸನಿಹದಲ್ಲಿ ಕಾಣಬರುವುದು ವ್ಯಾಪಕವಾದ ಗೋಮಾಳ. ಪೂರ್ವದ ನದಿಗಳ ಅಳಿವೆಗಳ ಬಳಿಯೂ ಭರತದ ಮಣ್ಣಿನ ಪ್ರದೇಶಗಲ್ಲೂ–ಮುಖ್ಯವಾಗಿ ಉಷ್ಣವಲಯಕ್ಕೆ ಸೇರಿದ ಉತ್ತರಭಾಗದಲ್ಲಿ–ಗುಲ್ಮ ವೃಕ್ಷಗಳಿವೆ. ಕರಾವಳಿಯ ನೀಲಗಿರಿ ವೃಕ್ಷವೂ ಮಳೆಗಾಡಿನ ವೃಕ್ಷಗಳೂ ಚೌಬೀನೆಯ ದೃಷ್ಟಿಯಿಂದ ಉಪಯುಕ್ತವಾದಂಥವು.

ಕ್ವೀನ್ಸ್‌ಲೆಂಡಿನ ನೆಲಜೀವಿ ಸ್ತನಿಗಳಲ್ಲಿ ಕಾಂಗರೂವಿನಿಂದ ಇಲ್ಲಿಯವರೆಗೆ ಹಲವಾರು ಪ್ರಭೇದಗಳ ಪ್ರಾಣಿಗಳಿವೆ. ವಿನಾಶಕಾರಿ ಮಾಂಸಾಹಾರಿ ಪ್ರಾಣಿಗಳಿವೆ. ವಿನಾಶಕಾರಿ ಮಾಂಸಾಹಾರಿ ಪ್ರಾಣಿಗಳು ಕಡಿಮೆ. ಸ್ಥಳೀಯ ಬೆಕ್ಕುಗಳೇ ದೊಡ್ಡವು. ಓಪಾಸಂ, ಹೆಗ್ಗಣ, ಡಿಂಗೋ, ಬಾವಲಿಗಳು ಮತ್ತು ದಂಶಕಗಳು ಇತರ ಕೆಲವು ಪ್ರಾಣಿಗಳು. ಉತ್ತರ ಕ್ವೀನ್ಸ್‌ಲೆಂಡಿನಲ್ಲಿ 12½ ಅಡಿ ಉದ್ದದ ಹೆಬ್ಬಾವುಗಳುಂಟು. ಹಲ್ಲಿಗಳು ಸಾಮಾನ್ಯವಾಗಿ. ಈಮ್ಯೂ, ಕ್ಯಾಸೊವೆರಿ, ದಿವ್ಯಪಕ್ಷಿಗಳು ಮತ್ತು ಕುಂಜ ಪಕ್ಷಿಗಳು ಹೇರಳವಾಗುಂಟು. ಸಮುದ್ರದ ಮೀನುಗಳ ಪ್ರಭೇದಗಳೂ ಹಲವಾರು. ಗ್ರೇಟ್ ಬ್ಯಾರಿಯರ್ ರೀಫಿನ ಕಡಲ ಜೀವಿಗಳು ವೈವಿಧ್ಯಮಯವಾಗಿವೆ. ಮಕರ ಸಂಕ್ರಾಂತಿ ವೃತ್ತದ ಬಳಿಯ ದ್ವೀಪಗಳ ಪೈಕಿ ಒಂದಾದ ಹೆರಾನಿನಲ್ಲಿ ಸಮುದ್ರಜೀವಿ ವಿಜ್ಞಾನ ಸಂಶೋಧನ ಕೇಂದ್ರ ಸ್ಥಾಪಿತವಾಗಿದೆ. ಕ್ವೀನ್ಸ್‌ಲೆಂಡಿನ ವಿಶಿಷ್ಟ ಸಸ್ಯಗಳೂ ಪ್ರಾಣಿಗಳೂ ನಾಶವಾಗದಂತೆ ಅವನ್ನು ರಕ್ಷಿಸುವ ಸಲುವಾಗಿ 1,00,100 ಎಕರೆಗಳ ವನಗಳನ್ನು ಕಾಯ್ದಿರಿಸಲಾಗಿದೆ. ಇವುಗಳ ಪೈಕಿ 66,480 ಎಕರೆಗಳ ಕಾರ್ನಾರ್‌ವಾನ್ ರಾಷ್ಟ್ರೀಯ ವನ ಒಂದು ವಿಶಾಲ ಪರ್ವತ ಪ್ರದೇಶವನ್ನು ಆವರಿಸಿದೆ.

**ಶಿಕ್ಷಣ:** 1875–1964ರ ಶಿಕ್ಷಣ ಕಾನೂನಿನ ಪ್ರಕಾರ 15 ವರ್ಷಗಳ ವರೆಗೆ ಮಕ್ಕಳಿಗೆ ಉಚಿತ ಹಾಗು ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. ಕ್ವೀನ್ಸ್‌ಲೆಂಡ್ ವಿಶ್ವವಿದ್ಯಾಲಯ 1909ರಲ್ಲಿ ಸ್ಥಾಪಿತವಾಯಿತು. ಇದು ಈಗ ಸೇಂಟ್ ಲೂಸಿಯದಲ್ಲಿದೆ.

**ಆರ್ಥಿಕತೆ:** ಕ್ವೀನ್ಸ್‌ಲೆಂಡಿನಲ್ಲಿ ಹೇರಳವಾಗಿ ದನ, ಕುರಿಗಳನ್ನು ಸಾಕಲು ಅನುಕೂಲವಿದೆ. 1960ರ ದಶಕದ ಆದಿಭಾಗದಲ್ಲಿ ಇಲ್ಲಿ 2,25,00,000 ಕುರಿಗಳೂ 60,00,000 ದನಗಳೂ ಇದ್ದುವು. ಆಸ್ಟ್ರೇಲಿಯದಲ್ಲಿ ಉತ್ಪಾದನೆಯಾಗುವ ಮಾಂಸದಲ್ಲಿ ½ ಭಾಗವನ್ನು ಕ್ವೀನ್ಸ್‌ಲೆಂಡ್ ಉತ್ಪಾದಿಸುತ್ತದೆ. ಬ್ರಿಸ್ಬೇನ್, ಗ್ಲಾಡ್‌ಸ್ಟನ್, ರಾಕ್‌ಹ್ಯಾಂಪ್ಟನ್, ಬೋವೆನ್, ಟೌನ್ಸ್‌ವಿಲ್

ಮತ್ತು ಕೇರ್ನ್ಸ್ ಮಾಂಸನಿರ್ಯಾತ ಕೇಂದ್ರಗಳು. ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಹಾಲು ಮತ್ತು ಹೈನ ಉತ್ಪಾದನೆ ಹೆಚ್ಚು.

ಕರಾವಳಿಯಲ್ಲಿ ಕಬ್ಬು ಮುಖ್ಯ ಬೆಳೆ, ಆಸ್ಟ್ರೇಲಿಯದ ಒಟ್ಟು ಕಚ್ಚಾ ಸಕ್ಕರೆ ಉತ್ಪಾದನೆಯಲ್ಲಿ ಶೇ.95 ರಷ್ಟನ್ನು ಈ ರಾಜ್ಯ ಉತ್ಪಾದಿಸುತ್ತದೆ. ಮೆಕ್ಕೆಜೋಳ, ಗೋಧಿ, ಕಡಲೆಕಾಯಿ, ಹತ್ತಿ ಮತ್ತು ಹೊಗೆಸೊಪ್ಪು ಇತರ ಮುಖ್ಯ ಬೆಳೆಗಳು. ಪೈನಾಪಲ್, ಬಾಳೆ, ಕಿತ್ತಳೆ ಜಾತಿಯ ಹಣ್ಣುಗಳು, ಸೇಬು ಮತ್ತು ದ್ರಾಕ್ಷಿಗಳನ್ನೂ ಬೆಳೆಯುತ್ತಾರೆ. ಟೊಮಾಟೊ, ಆಲೂಗೆಡ್ಡೆ, ಕುಂಬಳಕಾಯಿ ಮುಖ್ಯ ತರಕಾರಿಗಳು.

ಕ್ವೀನ್ಸ್‌ಲೆಂಡಿನ ಮುಖ್ಯ ಖನಿಜಗಳಲ್ಲಿ ಕಲ್ಲಿದ್ದಲು ಒಂದು. ಇದು ಇಪ್ಸ್‌ವಿಚ್, ಬೊವೆನ್, ಕ್ಲೆರ್‌ಮಾಂಟ್ ಮತ್ತು ಮೇರಿಬರಗಳಲ್ಲಿ ಸಿಗುತ್ತದೆ. ಮೌಂಟ್ ಮಾರ್ಗನ್, ಕ್ರಾಕೌ, ಮೌಂಟ್ ಕೂಲಾನ್ ಮತ್ತು ಚಾರ್ಟರ್ಸ್ ಟವರ್ಸ್‌ಗಳಲ್ಲಿ ಚಿನ್ನ ತೆಗೆಯುತ್ತಾರೆ. ಇತರ ಖನಿಜಗಳು ಇವು: ಬೆಳ್ಳಿ (ಹರ್ಬರ್ಟನ್ ಮತ್ತು ಕ್ಲಾನ್‌ಕರಿ), ತಾಮ್ರ (ಕ್ಲಾನ್‌ಕರಿ ಮತ್ತು ಮೌಂಟ್ ಮಾರ್ಗನ್), ಸತು (ಹರ್ಬರ್ಟನ್), ಸೀಸ ಮತ್ತು ತವರ (ಮೌಂಟ್ ಈಸ).

ಎರಡನೆಯ ಮಹಾಯುದ್ಧದ ಅನಂತರ ಈ ರಾಜ್ಯ ಕೈಗಾರಿಕೆಯಲ್ಲಿ ಬಹಳ ಮುಂದುವರಿದಿದೆ. 1945ರ ಸುಮಾರಿನಲ್ಲಿ ಅಲ್ಲಿ 3,000 ಕಾರ್ಖಾನೆಗಳಿದ್ದುವು. 1960ರಲ್ಲಿ



ಬ್ರಿಸ್ಬೇನ್–ಕ್ವೀನ್ಸ್‌ಲೆಂಡಿನ ಒಂದು ಪ್ರಮುಖ

ಇವುಗಳ ಸಂಖ್ಯೆ 6,000ಕ್ಕೆ ಏರಿತು. ರಾಜ್ಯದ ಒಟ್ಟು ಉತ್ಪಾದನೆಯ ಅರ್ಧಭಾಗ ಬ್ರಿಸ್ಬೇನ್‌ನಲ್ಲಿ ಆಗುತ್ತದೆ. ಯಂತ್ರ, ಹಡಗು, ಮೋಟಾರು, ನೂಲು, ಟೈಲು, ರೈಲುಗಾಡಿ, ಸಕ್ಕರೆ ಇಲ್ಲಿಯ ಮುಖ್ಯ ಉತ್ಪನ್ನಗಳು. ಇಪ್ಸ್‌ವಿಚ್, ಮೇರಿಬರ, ರಾಕ್‌ಹ್ಯಾಂಪ್ಟನ್ ಮತ್ತು ಟೌನ್ಸ್‌ವಿಲೆ ಇತರ ಕೈಗಾರಿಕಾ ಕೇಂದ್ರಗಳು.



ಬ್ರಿಸ್ಬೇನ್ ಪಟ್ಟಣದ ಒಂದು ಭಾಗ

ಉಣ್ಣೆ, ಸಕ್ಕರೆ, ದನದ ಮಾಂಸ, ಟಿಟಾನಿಯಂ, ಸೀಸ, ತಾಮ್ರ ಮತ್ತು ಬೆಣ್ಣೆ ಇಲ್ಲಿಯ ಮುಖ್ಯ ರಫ್ತುಗಳು. ಮೋಟಾರು ಯಂತ್ರದ ಬಿಡಿಭಾಗಗಳು, ಕಬ್ಬಿಣದ ಸಾಮಾನು, ತೈಲ ಮುಖ್ಯ ಆಮದುಗಳು.

ಈ ರಾಜ್ಯದಲ್ಲಿ 10507 ಕಿಮೀಗಳಷ್ಟು ರೈಲುಮಾರ್ಗವಿದೆ. ಅಂತಾರಾಜ್ಯ ಮತ್ತು ವಿದೇಶಿ ವಿಮಾನಮಾರ್ಗ ವ್ಯವಸ್ಥೆಗಳೂ ಉಂಟು. ಬ್ರಿಸ್ಬೇನ್, ರಾಕ್ ಹ್ಯಾಂಪ್ಟನ್, ಗ್ಲಾಡ್‌ಸ್ಟನ್, ಮಕೈ ಮತ್ತು ಕೇರ್ನ್ಸ್ ಮುಖ್ಯ ಬಂದರುಗಳು. (ಎಂಎಎಚ್.)

**ಕ್ವೀನ್ಸ್‌ಲೆಂಡಿನ ಇತಿಹಾಸ :** ವಲಸೆಗಾರರು ಕ್ರಮಬದ್ಧವಾಗಿ ಆಕ್ರಮಿಸಿಕೊಂಡ ಆಸ್ಟ್ರೇಲಿಯನ್ ರಾಜ್ಯಗಳ ಪೈಕಿ ಕ್ವೀನ್ಸ್‌ಲೆಂಡ್ ಕೊನೆಯದು. ಡೂಫಿಹೆನ್ ಎಂಬ ಡಚ್ ಹಡಗು 1606ರಲ್ಲಿ ಕೀರ್‌ವೀರ್ ಭೂಶಿರದವರೆಗೆ ಬಂದಿತ್ತು. ಕಾರ್ಪೆಂಟೇರಿಯ ಖಾರಿಯ ತೀರಪ್ರದೇಶವನ್ನು ಪರಿಶೋಧಿಸಿದವನು ಟ್ಯಾಸ್‌ಮನ್. ಕುಕ್ 1770ರಲ್ಲಿ ಪೂರ್ವ ಕರಾವಳಿಯ ಉದ್ದಕ್ಕೂ ಯಾನ ಮಾಡಿ, ಈಗ ಕುಕ್‌ಟೌನ್ ಎನಿಸಿಕೊಂಡಿರುವ ಸ್ಥಳದಲ್ಲಿ ತನ್ನ ಹಡಗನ್ನು ನಿಲ್ಲಿಸಿದ್ದ. ಆದರೆ ವಾಸ್ತವವಾಗಿ ಕ್ವೀನ್ಸ್‌ಲೆಂಡನ್ನು ಕಂಡುಹಿಡಿದವನು ಆಕ್ಸ್ಲಿ. 1823ರಲ್ಲಿ ಆತ ದೇಶಭ್ರಷ್ಟರಾಗಿದ್ದ ಜನರ ಸಹಾಯದಿಂದ ಬ್ರಿಸ್‌ಬೇನ್ ನದಿಯನ್ನು ಪರಿಶೋಧಿಸಿ, ಅದಕ್ಕೆ ನಾಮಕರಣ ಮಾಡಿದ. ಅಪರಾಧಗಳಿಗಾಗಿ ಶಿಕ್ಷೆಗೆ ಒಳಗಾದವರ ವಸತಿಯನ್ನು ಬ್ರಿಸ್‌ಬೇನ್ ನದಿಯ ಮೇಲೆ ಸ್ಥಾಪಿಸಬಹುದೆಂಬ ಆತನ ಸೂಚನೆಯ ಮೇರೆಗೆ ಈ ಎಡೆಗೆ ಕೈದಿಗಳನ್ನು ಮೊತ್ತಮೊದಲಿಗೆ ರವಾನಿಸಿದ್ದು 1824ರಲ್ಲಿ. ಡಾರ್ಲಿಂಗ್ ಡೌನ್ಸ್‌ನ್ನು 1827ರಲ್ಲಿ ಅಲಾನ್ ಕನ್ನಿಂಗ್ ಹ್ಯಾಮ್ ಅನ್ವೇಷಣೆ ಮಾಡಿದ. 1842ರ ತನಕ ಕ್ವೀನ್ಸ್‌ಲೆಂಡ್ ಶಿಕ್ಷೆಗೊಳಗಾದ ಅಪರಾಧಿಗಳ ವಾಸದ ನೆಲೆಯಾಗಿತ್ತು. 1842ರ ಅನಂತರ ಯಾರು ಬೇಕಾದರೂ ಅಲ್ಲಿ ಹೋಗಿ ನೆಲಸುವ ಅವಕಾಶ ದೊರಕಿತು. ಮೊತ್ತಮೊದಲಿಗೆ ಕ್ವೀನ್ಸ್‌ಲೆಂಡಿನಲ್ಲಿ ಪಶುಪಾಲನೆಯ ವೃತ್ತಿಯನ್ನು ಪ್ರಾರಂಭಿಸಿದ್ದು 1840ರಲ್ಲಿ. ಮೇರಿ ನದಿಯ ಬಯಲಿನಲ್ಲಿ ಅನೇಕರು ನೆಲಸಿದರು. ಕ್ವೀನ್ಸ್‌ಲೆಂಡಿಗೆ ವಲಸೆಗಾರರನ್ನು ತಂದ ಮೊದಲನೆಯ ಹಡಗು ಆರ್ಟಿಮೀಸಿಯ. ಕ್ವೀನ್ಸ್‌ಲೆಂಡಿನ ಪರಿಶೋಧನೆಯ ಇತಿಹಾಸದಲ್ಲಿ ಪ್ರಸಿದ್ಧವಾದವನು ಲೀಕ್ ಹಾರ್ಟ್. ಈತ ಡಾಸನ್, ಕಾಮೆಟ್, ಮಕೆನ್‌ಜ಼ಿ ಮೊದಲಾದ ಅನೇಕ ನದಿಗಳನ್ನು ಪರಿಶೋಧಿಸಿದ. ಇನ್ನೊಬ್ಬ ಮುಖ್ಯ ಪರಿಶೋಧಕ ಥಾಮಸ್ ಮಿಚೆಲ್. ಈತ 1846–47ರಲ್ಲಿ ಮಾರನೋವ ಮತ್ತು ವಾರ್‍ರೆಗೋ ಜಿಲ್ಲೆಗಳನ್ನು ಸಂದರ್ಶಿಸಿದ. ನೆಲಸುವ ಹಕ್ಕಿಲ್ಲದ ಅನೇಕರು ಇಲ್ಲಿಗೆ ಬಂದು ರಾಕ್‌ಹ್ಯಾಂಪ್ಟನಿನ ಸುತ್ತಮುತ್ತ ನೆಲಸಿದರು. 1859ರಲ್ಲಿ ಈ ವಸಾಹತಿನ ಜನರು ನ್ಯೂ ಸೌತ್‌ವೇಲ್ಸ್‌ನಿಂದ ಬೇರ್ಪಡಲು ಚಳವಳಿ ಹೂಡಿ ಅಂತಿಮವಾಗಿ ಜಯ ಗಳಿಸಿ ತಮ್ಮ ವಸಾಹತಿಗೆ ಕ್ವೀನ್ಸ್‌ಲೆಂಡ್ ಎಂದು ಹೆಸರಿಟ್ಟರು. ಅದೇ ವರ್ಷ ಕ್ವೀನ್ಸ್‌ಲೆಂಡಿನಲ್ಲಿ ಪ್ರಜಾಸರ್ಕಾರ ಸ್ಥಾಪಿತವಾಯಿತು.

1860ರ ದಶಕದಲ್ಲಿ ಕ್ವೀನ್ಸ್‌ಲೆಂಡಿನ ಪಶ್ಚಿಮ ಪ್ರದೇಶಗಳಲ್ಲಿ ನೀರಿನ ವಸತಿಯಿದ್ದೆಡೆಗಳಲ್ಲೆಲ್ಲ ಜನರು ನೆಲಸಿದರು. 1869ರ ಪಾರ್ಲಿಮೆಂಟ್ ಕಾಯಿದೆಯಿಂದ ನೆಲಸಿಗರಿಗೆ ಹೆಚ್ಚಿನ ಪ್ರೋತ್ಸಾಹ ಲಭ್ಯವಾಯಿತು. ಮಾರುಕಟ್ಟೆಗಳು ದೂರದಲ್ಲಿದ್ದುದರಿಂದ ಮೊದಮೊದಲು ಪಶುಪಾಲನೆಯಿಂದ ಅನುಕೂಲವಿರಲಿಲ್ಲ. ಸಾರಿಗೆ ಖರ್ಚು ಅಧಿಕವಾಗಿತ್ತು. 1873ರ ಅನಂತರ ವಿಕ್ಟೋರಿಯದಲ್ಲಿ ಚಿನ್ನದ ಗಣಿಗಾರಿಕೆ ಬೆಳೆದಂತೆ ಕ್ವೀನ್ಸ್‌ಲೆಂಡಿನಲ್ಲಿ ಪಶುಪಾಲನೆಯ ವೃತ್ತಿ ಹೆಚ್ಚು ಲಾಭದಾಯಕವಾಗಿ ಪರಿಣಮಿಸಿತು. ಇಪ್ಸ್‌ವಿಚ್‌ನಿಂದ ಡಾಲ್ಬಿಗೂ ವಾರ್‌ವಿಕ್‌ಗೂ ರೈಲ್ವೆ ಸಂಚಾರ ಆರಂಭವಾದ್ದು 1870ರಲ್ಲಿ. ಬ್ರಿಸ್ಬೇನ್‌ನಿಂದ ಕೇರ್ನ್ಸ್ ವರೆಗೆ ರೈಲು ಮಾರ್ಗ ಸಂಪೂರ್ಣಗೊಂಡದ್ದು 1924ರಲ್ಲಿ.

ಜಾನ್ ಡನ್‌ಮೋರ್ ಲ್ಯಾಂಗ್ ಮೊತ್ತಮೊದಲಿಗೆ ರೈತರನ್ನು ಫಾರ್ಟಿಟ್ಯೂಡ್ ಎಂಬ ಹಡಗಿನಲ್ಲಿ 1849ರಲ್ಲಿ ಕರೆದುಕೊಂಡು ಬಂದ. ಇವರು ಮರಗಿಡಗಳನ್ನು ಕತ್ತರಿಸಿ ಭೂಮಿಯನ್ನು ಅಚ್ಚುಕಟ್ಟುಗೊಳಿಸಿ ಕೃಷಿಕಾರ್ಯವನ್ನು ಪ್ರಾರಂಭಿಸಿದರು. ದನಕರುಗಳು ಹೆಚ್ಚಿದುವು. ಗುಡಿಸಿಲುಗಳಿಗೆ ಬದಲಾಗಿ ರೈತರ ದೊಡ್ಡ ಮನೆಗಳು ನಿರ್ಮಿತವಾದುವು. 19ನೆಯ ಶತಮಾನದ ಕೊನೆಯ ಭಾಗದೊಳಗೆ ಸರ್ಕಾರ 10,00,000 ಪೌಂ. ವೆಚ್ಚಮಾಡಿ ಕಾಡುಗಳನ್ನು ಕಡಿಸಿ ಭೂಮಿಯನ್ನು ವ್ಯವಸಾಯಕ್ಕೆ ಸಿದ್ಧಗೊಳಿಸಿತು. ಪಶುಪಾಲನೆಗೆಂದು ಬಿಟ್ಟಿದ್ದ ಭೂಮಿಯ ಬಹುಭಾಗವನ್ನು 20ನೆಯ ಶತಮಾನದ ನಡುಗಾಲದ ವೇಳೆಗೆ ಕೃಷಿಗೆ ಉಪಯೋಗಿಸಿಕೊಂಡು ಕಬ್ಬು ಮತ್ತು ಗೋದಿಯನ್ನು ಬೆಳೆಯಲು ಪ್ರಾರಂಭಿಸಿದರು. ಕ್ವೀನ್ಸ್‌ಲೆಂಡಿನಲ್ಲಿ ಜನಸಂಖ್ಯೆ ಅಧಿಕವಾದಮೇಲೆ ಹೈನುಗಾರಿಕೆ ಅಭಿವೃದ್ಧಿ ಹೊಂದಿತು.

ಕ್ವೀನ್ಸ್‌ಲೆಂಡಿನ ಇಪ್ಸ್‌ವಿಚ್‌ನಲ್ಲಿ ಕಲ್ಲಿದ್ದಲು ಪತ್ತೆಯಾದ್ದು 1827ರಲ್ಲಿ. ಆದರೆ ಗಣಿಗಾರಿಕೆ ಆರಂಭವಾದ್ದು 1846ರಲ್ಲಿ. ಕ್ವೀನ್ಸ್‌ಲೆಂಡಿನಲ್ಲಿ ಚಿನ್ನ ಸಿಗುತ್ತದೆ ಎಂದು ತಿಳಿದಮೇಲೆ ಗಣಿಗಳು ಅಭಿವೃದ್ಧಿ ಹೊಂದುವುದಕ್ಕೆ ಅನುಕೂಲವಾಯಿತು. 1858–1873ರಲ್ಲಿ ಕ್ವೀನ್ಸ್‌ಲೆಂಡಿನ ಉತ್ತರ ಮತ್ತು ಪೂರ್ವಭಾಗಗಳಲ್ಲಿ ಅನೇಕ ಗಣಿಗಳು ಆರಂಭವಾದುವು. ತಾಮ್ರ, ಬೆಳ್ಳಿ, ಸತು ಮತ್ತು ಸೀಸ – ಇವು ಕ್ವೀನ್ಸ್‌ಲೆಂಡಿನಲ್ಲಿ ಪತ್ತೆಯಾದ ಇತರ ಖನಿಜಗಳು.

19ನೆಯ ಶತಮಾನದ ಕೊನೆಯಲ್ಲಿ ಕ್ವೀನ್ಸ್‌ಲೆಂಡಿನಲ್ಲಿ ಸಮಾಜವಾದಿ ಚಳವಳಿ ಆರಂಭವಾಯಿತು. ಆಸ್ಟ್ರೇಲಿಯದ ಪ್ರಥಮ ಕಾರ್ಮಿಕ ಸರ್ಕಾರ ಏರ್ಪಟ್ಟಿದ್ದು ಕ್ವೀನ್ಸ್‌ಲೆಂಡಿನಲ್ಲಿ–1899ರಲ್ಲಿ. ಕಾರ್ಮಿಕ ಸಂಘ ಚಳವಳಿಯ ಬೆಂಬಲ ಪಡೆದ ಕಾರ್ಮಿಕ ಪಕ್ಷದ ಸ್ಥಾನ ಕ್ರಮಕ್ರಮವಾಗಿ ಹೆಚ್ಚು ಭದ್ರವಾಯಿತು. ಒಂದನೆಯ ಮಹಾಯುದ್ಧಾನಂತರ ಕಾರ್ಮಿಕ ಪಕ್ಷ ಬಹುಕಾಲ ಅಧಿಕಾರದಲ್ಲಿತ್ತು. 1922ರಲ್ಲಿ ಅದು ಮೇಲ್ಮನೆಯನ್ನು ರದ್ದು ಮಾಡಿತು. ಆದರೆ ಆರಂಭಕಾಲದಲ್ಲಿ ಸರ್ಕಾರದಿಂದ ಆರಂಭವಾದ ಅನೇಕ ಉದ್ಯಮಗಳು ಖಾಸಗಿ ಆಡಳಿತಕ್ಕೆ ವರ್ಗವಾದುವು. ಪಕ್ಷದ ತೀವ್ರ ಸಮಾಜವಾದಿ ಧೋರಣೆ ಕ್ರಮಕ್ರಮವಾಗಿ

ಮೃದುವಾಯಿತು. ಕೃಷಿಕರೇ ನಿರ್ವಹಿಸುವ ಸ್ಥಳೀಯ ಸಹಕಾರಿ ಮಂಡಳಿಗಳನ್ನು ಸಂಘಟಿಸಿದ್ದು ಈ ಸರ್ಕಾರದ ಒಂದು ಮುಖ್ಯ ಸಾಧನೆ. (ಎಸ್‌ಎಚ್‌ಐ)

**ಕ್ವೆಟ್ಟ :** ಪಾಕಿಸ್ತಾನದ ಒಂದು ನಗರ: ಕ್ವೆಟ್ಟ–ಪಿಷಿನ್ ಜಿಲ್ಲೆಯ ಆಡಳಿತ ಕೇಂದ್ರ. ಹಿಂದೆ ಬಲೂಚಿಸ್ತಾನದ ಮುಖ್ಯ ಪಟ್ಟಣವಾಗಿತ್ತು. ಉ.ಅ.$30^{\circ}12^{1}$ ಮತ್ತು ಪೂ.ರೇ.$67^{\circ}$ $0^{\circ}$ಮೇಲಿದೆ. ಸಮುದ್ರ ಮಟ್ಟದಿಂದ 1667ಮೀ. ಎತ್ತರದ ಬಯಲಿನಲ್ಲಿ ಇದೆ. ಜನಸಂಖ್ಯೆ 759894 (2006). ಇದರ ಸುತ್ತಲೂ 3667 ಮೀ. ಎತ್ತರದ ಪರ್ವತಶ್ರೇಣಿಗಳುಂಟು. ವಾಯವ್ಯದಲ್ಲಿರುವ ಖೋಜಾಕ್ ಕಣಿವೆ ಮತ್ತು ಆಗ್ನೇಯದಲ್ಲಿರುವ ಬೋಲನ್ ಕಣಿವೆ ಇವೆರಡನ್ನೂ ಇಲ್ಲಿಂದ ನಿಯಂತ್ರಿಸಬಹುದಾದ್ದರಿಂದ ಕ್ವೆಟ್ಟದ ಮಹತ್ತ್ವ ಹೆಚ್ಚಿದೆ. ಕ್ವೆಟ್ಟದಲ್ಲಿ ಬೇಸಗೆಯಲ್ಲಿ ಹಗಲು ಸೆಕೆ ಹೆಚ್ಚು, ರಾತ್ರಿ ಚಳಿ ಹೆಚ್ಚು. ಚಳಿಗಾಲದಲ್ಲಿ ಉಷ್ಣತೆ–18° ಸೆಂ.ಗಿಂತ ಕೆಳಕ್ಕೆ ಇಳಿಯುವುದುಂಟು. ಸರಾಸರಿ ಮಳೆ 20 ಸೆಂ.ಮೀ. ಕ್ವೆಟ್ಟಕ್ಕೆ ಹತ್ತಿರದಲ್ಲಿ ಕಲ್ಲಿದ್ದಲು ಸಿಕ್ಕುತ್ತದೆ. ಕರೆಜ್ ಕಾಲುವೆಯ ನೀರಿನಿಂದ ಇದರ ಸುತ್ತ ವ್ಯವಸಾಯ ಸಾಗುತ್ತದೆ. ಈ ಪಟ್ಟಣದಲ್ಲಿ ಶಾಲೆ, ಆಸ್ಪತ್ರೆ, ಗ್ರಂಥಾಲಯ ಮುಂತಾದ ಸೌಕರ್ಯಗಳುಂಟು. ಇಲ್ಲಿ ಪಾಕಿಸ್ತಾನದ ಅತ್ಯಂತ ದೊಡ್ಡ ಸೈನ್ಯ ಠಾಣೆ ಮತ್ತು ಸೈನಿಕ ಶಿಕ್ಷಣಶಾಲೆ ಇವೆ. ಪಶ್ಚಿಮ ಆಫ್ಘಾನಿಸ್ತಾನ, ಪೂರ್ವ ಇರಾನ್‌ಒಂದಿಗೆ ಇಲ್ಲಿಂದ ವ್ಯಾಪಾರ ನಡೆಯುತ್ತದೆ. ಶುದ್ಧ ಮತ್ತು ಒಣಗಿದ ಹಣ್ಣುಗಳು, ವನೌಷಧಿಗಳು, ಹದಮಾಡಿದ ಚರ್ಮ–ಇವು ವ್ಯಾಪಾರ ಸರಕುಗಳು. ಆಫ್ಘಾನಿಸ್ತಾನ ಮತ್ತು ಇರಾನ್‌ಒಂದಿಗೂ ಪಶ್ಚಿಮ ಪಾಕಿಸ್ತಾನದ ಇತರ ಪಟ್ಟಣಗಳೊಂದಿಗೂ ರಸ್ತೆ–ರೈಲು ಸಂಪರ್ಕವಿದೆ.

1877ರಲ್ಲಿ ಈ ವಿಭಾಗ ಬ್ರಿಟಿಷ್ ಸತ್ತೆಗೆ ಒಳಪಟ್ಟಿತು. 1907ರಲ್ಲಿ ಕ್ವೆಟ್ಟದಲ್ಲಿ ಸೈನಿಕ ಶಿಕ್ಷಣಶಾಲೆ ಸ್ಥಾಪಿತವಾಯಿತು. 1935ರ ಮತ್ತು 1955ರ ಭೂಕಂಪನಗಳ ಪರಿಣಾಮವಾಗಿ ಕ್ವೆಟ್ಟ ತುಂಬ ನಷ್ಟಕ್ಕೊಳಗಾಗಿತ್ತು. ಪಾಕಿಸ್ತಾನದ ನಿರ್ಮಾಣವಾದ ಮೇಲೆ ಇದನ್ನು ಬೇಸಗೆ ನಿವಾಸಸ್ಥಾನವೆಂದು ಕರೆದುದರಿಂದ ಕ್ವೆಟ್ಟದ ಮಹತ್ತ್ವ ವಿಶೇಷವಾಗಿ ಅಧಿಕವಾಗಿದೆ. *

**ಕ್ವೇಕರ್ ಚಳವಳಿ :** ಹದಿನೇಳನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಜನ್ಮ ತಳೆದು, ಪ್ರಪಂಚದ ಅನೇಕ ಭಾಗಗಳಲ್ಲಿ ಕೆಲವು ಸದಸ್ಯರನ್ನು ಹೊಂದಿರುವ ಕ್ರೈಸ್ತ ಮಿತ್ರ ಸಮಾಜವೊಂದರ ಧಾರ್ಮಿಕ ಚಳವಳಿ. ಜಾರ್ಜ್ ಫಾಕ್ಸ್ (1624–91) ಇದರ ಸ್ಥಾಪಕ. ಮಿತ್ರ ಸಮಾಜದ ಸದಸ್ಯನನ್ನು ಕ್ವೇಕರ್ (ಸ್ನೇಹಿತ) ಎಂದು ಕರೆಯುತ್ತಾರಾದರೂ ಸಮಾಜದವರಾರೂ ಆ ಹೆಸರನ್ನು ತಮ್ಮ ಸದಸ್ಯರಿಗೆ ಬಳಸುವುದಿಲ್ಲ. ಬಹುಶಃ ಅದು ಬೇರೆಯವರು ಇಟ್ಟ ಹೆಸರಿರಬೇಕು. ಕ್ವೇಕರರ ನಂಬಿಕೆಯ ಪ್ರಕಾರ ದೈವಾನುಗ್ರಹ ಎಲ್ಲ ಸ್ತ್ರೀಪುರುಷರ ಮೇಲೂ ಇದ್ದು, ಪ್ರತಿಯೊಬ್ಬ ವ್ಯಕ್ತಿಯ ವೈಶಿಷ್ಟ್ಯಕ್ಕೆ ಕಾರಣವಾಗಿರುತ್ತದೆ. ಅವರವರ ನಂಬಿಕೆಗೆ ತಕ್ಕಂತೆ ಅನುಗ್ರಹವೂ ಪರಿಮಾಣದಲ್ಲಿ ವ್ಯತ್ಯಾಸ ಹೊಂದುತ್ತದೆ. ಸಮಾಜದಲ್ಲಿ ಪ್ರತಿಯೊಬ್ಬನ ವ್ಯಕ್ತಿತ್ವವೂ ಪವಿತ್ರ ಮತ್ತು ಪೂಜನೀಯ ಆಗಿರುತ್ತದೆ. ಪ್ರತಿಯೊಬ್ಬನೂ ತನ್ನ ಹೃದಯಮಂದಿರದಲ್ಲಿ ಪರಮಾತ್ಮನ ಪ್ರಕಾಶವನ್ನು ಕಂಡುಕೊಳ್ಳುವುದರಲ್ಲಿ ತನ್ನ ಹಿರಿಮೆಯನ್ನು ಗಳಿಸಿಕೊಳ್ಳುತ್ತಾನೆ. ಕ್ರಿಸ್ತನ ಕರುಣೆಯ ಬೆಳಕೇ ದೈವಜ್ಯೋತಿಯಾಗಿ ಹೃದಯಮಂದಿರದಲ್ಲಿ ಕಂಗೊಳಿಸುತ್ತದೆ – ಎಂಬುದು ಅವರ ಸಿದ್ಧಾಂತ ಈ ಜ್ಞಾನ ಜ್ಯೋತಿಯ ಅಸ್ತಿತ್ವಲಾಭ ಕ್ರೈಸ್ತೇತರರಲ್ಲೂ ಇರುತ್ತದೆಂದೂ ಅವರು ಭಾವಿಸುತ್ತಾರೆ.



ಜಾರ್ಜ್ ಫಾಕ್ಸ್

ಸಾಮಾನ್ಯವಾಗಿ, ಈ ಮಿತ್ರಸಂಘದ ಸದಸ್ಯರಿಗೆ ಯಾವುದೇ ರೀತಿಯ ಸಾಂಘಿಕ ನಿಯಮಾವಳಿಯೂ ಕಡ್ಡಾಯವಾಗಿ ಅನ್ವಯಿಸುವುದಿಲ್ಲ. ಆದರೂ 1887ರಲ್ಲಿ ಪ್ರಕಟಗೊಂಡ ರಿಚ್ಮಂಡನ ಶ್ರದ್ಧಾ ಘೋಷಣೆಯನ್ನು ತಾವಾಗಿಯೇ ತಮ್ಮ ವಾರ್ಷಿಕ ಸಭೆಗಳಲ್ಲಿ ಅಂಗೀಕರಿಸಿರುವುದನ್ನು ಕಾಣಬಹುದು. ಯಾವ ವಿಶಿಷ್ಟಮತೀಯ ಆಚಾರಕ್ಕೂ ಕಟ್ಟುಬೀಳದೆ ಕ್ರೈಸ್ತಾನುಭವದ ಹಿನ್ನೆಲೆಯಲ್ಲಿ ಜ್ಞಾನಜ್ಯೋತಿ ಸಾಕ್ಷಾತ್ಕಾರಕ್ಕೆ ಯತ್ನಿಸಿದವರೆಲ್ಲ ಈ ಪಂಥದ ಸದಸ್ಯವರ್ಗಕ್ಕೆ ಸೇರಬಹುದಾಗಿದೆ.

ಪ್ರತಿಯೊಬ್ಬನಿಗೂ ದೇವರು ಎಂದಾದರೊಮ್ಮೆ ಪ್ರತ್ಯಕ್ಷನಾಗಿ ಕಾಣಿಸಿಕೊಳ್ಳುತ್ತಾನೆ ಹಾಗೂ ಅವನೊಡನೆ ಸಂಭಾಷಿಸುತ್ತಾನೆ ಎಂದು ಇವರ ನಂಬಿಕೆ. ಆದ್ದರಿಂದ ಈ ಪಂಥದವರು ಪೂರ್ವಭಾವಿಕಾರ್ಯಕ್ರಮವಿಲ್ಲದೆ ಸಭೆ ಸೇರುತ್ತಾರೆ; ಮೌನ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುತ್ತಾರೆ. ಆಗ, ಆತ್ಮಪ್ರೇರಣೆಯಿಂದ, ಯಾರಾದರೊಬ್ಬರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾರೆ. ಇಲ್ಲವೆ ಪ್ರಾರ್ಥನೆ ಸಲ್ಲಿಸುತ್ತಾರೆ. ಒಮ್ಮೊಮ್ಮೆ ಸ್ವಯಂಸ್ಫೂರ್ತಿಯಿಂದ ಬೈಬಲ್ ವಾಚನವೂ ಆಗುವುದುಂಟು.

ಕ್ವೇಕರರು ಮದ್ಯಾದಿ ಪಾನೀಯಗಳಿಂದ ದೂರವಾಗಿ, ಭಗವಂತನ ಚಿಜ್ಜ್ಯೋತಿಯಲ್ಲಿ ಶ್ರದ್ಧೆ ನಂಬಿಕೆಗಳನ್ನು ಇಟ್ಟುಕೊಂಡಿದ್ದರೂ ಹಲವಾರು ರಾಜಕೀಯ ಕಾರಣಗಳಿಗಾಗಿ ಕೆಲವು ಮತೀಯ ವಿಧಾನಗಳನ್ನು ರೂಪಿಸಿಕೊಳ್ಳಬೇಕಾಯಿತು. ಇಡೀ ಮಾನವಜೀವಿತವನ್ನೇ ಪರಮ ಪವಿತ್ರವೆಂದು ನಂಬಿದ್ದರಿಂದ, ಕೆಲವು ಮಾತ್ರ ಪರಮ ಪವಿತ್ರವೆಂದು ಹೇಳಲು ಇವರು ಪ್ರಯತ್ನಿಸಲಿಲ್ಲ. ಆದಕಾರಣ ಪ್ರತ್ಯೇಕವಾಗಿ ಕ್ರಿಸ್ಮಸ್ ಆಚರಿಸುವುದಕ್ಕಾಗಲಿ ಭಾನುವಾರಕ್ಕೆ ವಿಶೇಷ ಮಹತ್ತ್ವ ನೀಡುವುದಕ್ಕಾಗಲಿ ಈ ವರ್ಗದವರು ಇಚ್ಛಿಸಲಿಲ್ಲ. ಪ್ರತಿದಿನವೂ ಪವಿತ್ರವೆಂದೂ ಪ್ರತಿಯೊಬ್ಬರಲ್ಲೂ ದೇವನಿದ್ದಾನೆಂದೂ ಇವರ ಮತ.

ಹೀಗೆ, ಸರ್ವವ್ಯಾಪಿ ಜೀವಜ್ಯೋತಿ ಪರಮಾತ್ಮ ತತ್ತ್ವದ ಅನುಸರಣೆಯ ಫಲವಾಗಿ ಧಾರ್ಮಿಕ ರಂಗದಲ್ಲಿ ಸ್ತ್ರೀ ಪುರುಷರಿಗೆ ಸಮಾನ ಸ್ಥಾನ ದೊರೆಯುವಂತೆ ಆಯಿತು. ಮಾಸಿಕ, ವಾರ್ಷಿಕ ಸಭೆಗಳನ್ನು ಕೂಡಿಸುವ ಪರಂಪರೆ ಬೆಳೆಯಿತು. ಸ್ವಇಚ್ಛೆಯಿಂದ ಸಭೆಗೆ ಜನ ಹಾಜರಿರುತ್ತಿದ್ದರು. ಈ ಸಭೆಗಳಲ್ಲಿ ದೇವತಾರಾಧನೆ ಚರ್ಚೆ, ತೀರ್ಮಾನಗಳು ನಡೆಯುತ್ತಿದ್ದುವು.

ಈ ಪಂಥದ ಮೊದಲಿಗನಾದ ಜಾರ್ಜ್‌ಫಾಕ್ಸ್ ತನಗಾದ ಆತ್ಮಸಾಕ್ಷಾತ್ಕಾರವನ್ನು ಜನತೆಗೆ ತಿಳಿಸಲು ಪ್ರಾರಂಭಿಸಿ ದೇವರ ಕರುಣೆ ಎಲ್ಲರ ಮೇಲೂ ಇದೆಯೆಂದೂ ಪ್ರತಿಯೊಬ್ಬನೂ ಆತ್ಮಪರಿಶೋಧನೆಯಲ್ಲಿ ದೈವಾನುಗ್ರಹಕ್ಕಾಗಿ ಪ್ರಯತ್ನಿಸಬೇಕೆಂದೂ ಬೋಧಿಸಿದ. ಈ ತತ್ತ್ವಸರಣಿ ಅನೇಕರ ಮನ ಸೆಳೆಯಿತು. ಬೈಬಲ್ ಗ್ರಂಥ ದೇವರಿಂದ ಸ್ಫೂರ್ತಿಗೊಂಡು ರೂಪಿತವಾಯಿತಾದರೂ ಪ್ರತಿಯೊಬ್ಬನೂ ಅದನ್ನು ತನ್ನ ಆತ್ಮ ಜ್ಯೋತಿ ನಿರ್ದೇಶನಕ್ಕನುಸಾರವಾಗಿ ವ್ಯಾಖ್ಯಾನಿಸಿಕೊಂಡು ಅರಿಯಬೇಕೆಂಬ ನಂಬಿಕೆ ಪ್ರಬಲಗೊಂಡಿತು. ಆರಾಧನಾ ಸ್ವಾತಂತ್ರ್ಯ, ಪ್ರಮಾಣವಚನ ಸ್ವೀಕಾರ ಸ್ವಾತಂತ್ರ್ಯ ಇತ್ಯಾದಿ ಕಾರಣಗಳಿಂದ 17ನೆಯ ಶತಮಾನದಲ್ಲಿ ಇವರು ಅಪಾರ ಕಷ್ಟನಷ್ಟಗಳಿಗೆ ಗುರಿಯಾದರು. 18ನೆಯ ಶತಮಾನದಲ್ಲಿ ರಾಜಕೀಯ ಘರ್ಷಣೆಗೂ ಒಳಗಾದರು. ಈ ಸಂಘದವರು ಸಮಾಜಸುಧಾರಣೆಗಾಗಿ ನಡೆಸಿದ ಹೋರಾಟ ಗಮನಾರ್ಹವಾದುದು. ಅಮೆರಿಕದಲ್ಲಿ ಇವರು ಗುಲಾಮಗಿರಿಯ ವಿರುದ್ಧವಾಗಿ ಹೆಣಗಿದರಲ್ಲದೆ ಮತಿವಿಕಲರ ಸೇವೆಗಾಗಿ ಶುಶ್ರೂಷಾಲಯಗಳನ್ನು ತೆರೆದರು. ಹೃದ್ಗತ ಭಗವಂತನ ಜ್ಯೋತಿಯನ್ನು ಎಲ್ಲರೂ ಕಂಡುಕೊಳ್ಳಲು ನೆರವಾಗುವಂತೆ ಪ್ರೇರೇಪಿಸುವುದೇ ಇವರ ಆಶಯವಾಯಿತು. ಕಾಲಕ್ರಮೇಣ, ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಈ ಚಳವಳಿಯ ವಿವಿಧ ಸೇವಾಪಂಥಗಳು ರೂಪುಗೊಂಡು ಕಾರ್ಮಿಕ ಕಲ್ಯಾಣ, ಸ್ತ್ರೀ ವಿದ್ಯಾಭ್ಯಾಸ, ಶಿಕ್ಷಣ ವ್ಯವಸ್ಥೆ ಮೊದಲಾದ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸತೊಡಗಿದುವು. ವಿಜ್ಞಾನ ಬೋಧನೆಗೂ ಪ್ರೋತ್ಸಾಹ ನೀಡಲಾಯಿತು. 20ನೆಯ ಶತಮಾನದಲ್ಲಿ ಕಲಾ ಕ್ಷೇತ್ರದಲ್ಲೂ ಇವರ ಪ್ರಭಾವ ಹೆಚ್ಚಿತು. ಪ್ರಪಂಚದ ನಾನಾ ಕಡೆ–ಭಾರತ, ಚೀನ, ಪೂರ್ವ ಆಫ್ರಿಕ, ಅಲಾಸ್ಕ, ಆಸ್ಟ್ರೇಲಿಯ, ನ್ಯೂಜೀಲೆಂಡ್–ಮೊದಲಾದ ಕಡೆಗಳಲ್ಲೆಲ್ಲ ಇವರ ಶಾಖೆಗಳು ಸ್ಥಾಪಿತವಾದುವು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜನತೆಗೆ ನೆರವು ನೀಡುವ ಪರಿಹಾರ ಕಾರ್ಯದಲ್ಲಿ ಈ ಸಂಸ್ಥೆ ಪ್ರಮುಖ ಪಾತ್ರ ವಹಿಸಿತು. ಅಂತಾರಾಷ್ಟ್ರೀಯ ಸಮ್ಮೇಳನ ಸೇರಿ ಪರಸ್ಪರ ಬಾಂಧವ್ಯವನ್ನು ಹೆಚ್ಚಿಸಿಕೊಂಡು, ವ್ಯಾಪಕವಾದ ಕಾರ್ಯಕ್ರಮಗಳ ಮೂಲಕ, ಇಂದು ಕ್ವೇಕರ್ ಚಳವಳಿ ಪ್ರಪಂಚ ವ್ಯಾಪಿಯಾಗಿದೆ. 1952ರ ಅಂತಾರಾಷ್ಟ್ರೀಯ ಕ್ವೇಕರರ ಮಹಾಧಿವೇಶನದ ವೇಳೆಗೆ ಈ ಪಂಥದ ಸದಸ್ಯರ ಅಂದಾಜಿನ ಅಂಕಿಅಂಶ ಹೀಗಿತ್ತು: ಆಫ್ರಿಕ–195ರ ಅಂತಾ 24,000, ಅಮೆರಿಕ–1,24,000, ಏಷ್ಯ–1,000 ಆಸ್ಟ್ರೇಲಿಯ ಮತ್ತು ನ್ಯೂಜೀಲೆಂಡ್–1,000, ಯೂರೋಪ್–24,000.

(ಎಚ್.ಆರ್.ಡಿ.)

**ಕ್ವೇಸಾರ್ :** ಖಚಿತವಾಗಿ ನಕ್ಷತ್ರವೆಂದಾಗಲಿ ಬ್ರಹ್ಮಾಂಡವೆಂದಾಗಲಿ (ಗ್ಯಾಲಾಕ್ಸಿ) ಗುರುತಿಸಲಾಗದ ಮತ್ತು ಅತಿ ಹೆಚ್ಚಿನ ವಿಸರಣಸಾಮರ್ಥ್ಯದಿಂದ ಕೂಡಿರುವ ರೇಡಿಯೋ ಆಕರ; ದೂರ 450-4,000 ದಶಲಕ್ಷ ಬೆಳಕಿನ ವರ್ಷಗಳವರೆಗೂ ಇರಬಹುದು. **QUASISTELLAR ;** (ಅರೆ ನಕ್ಷತ್ರ) ಎಂಬ ಇಂಗ್ಲಿಷ್ ಪದದಿಂದ QUASAR ಪದ ನಿಷ್ಪನ್ನವಾಗಿದೆ.

ಜಾನ್ ಹೇ ಎಂಬ ಖಗೋಳವಿಜ್ಞಾನಿ ಸಿಗ್ನಸ್ ನಕ್ಷತ್ರ ಪುಂಜದಲ್ಲಿ (ಸಿಗ್ನಸ್ ಕಾನ್ಸ್‌ಟೆಲೇಷನ್. ಇದರ ವ್ಯಾಪ್ತಿ ವಿಷುವದಂಶ 19 ಗಂ.5ಮಿ.–22ಗಂ. ಮತ್ತು ಘಂಟಾವೃತ್ತಾಂಶ $28^{0}$-$60^{0}$ಉ. ಆಕಾಶಗಂಗೆಯ ಮೇಲಿರುವ ಉತ್ತರಗೋಳೀಯ ಪುಂಜವಿದು) ಒಂದು ಶಕ್ತ್ಯಾಕರವನ್ನು ಗುರುತಿಸಿದ (1946). ಅದಕ್ಕೆ ಅವನು ರೇಡಿಯೋ ನಕ್ಷತ್ರವೆಂದು ಹೆಸರಿಟ್ಟ. 1950ರ ವೇಳೆಗೆ ಸುಮಾರು 100 ರೇಡಿಯೋ ನಕ್ಷತ್ರಗಳನ್ನು ಗುರುತಿಸಲಾಗಿತ್ತು. ಆದರೆ ಇವನ್ನು ಯಾವುದೇ ರೀತಿಯ ಗೊತ್ತಿದ್ದ ನಕ್ಷತ್ರಗಳೊಂದಿಗಾಗಲಿ ಇತರ ದೃಗ್ಗೋಚರ ಕಾಯಗಳೊಂದಿಗಾಗಲಿ ಸಮೀಕರಿಸಲು ಸಾಧ್ಯವಾಗಲಿಲ್ಲ. ಅಷ್ಟರ ಮಟ್ಟಿಗೆ ಇವು ವಿಚಿತ್ರವಸ್ತುಗಳಾಗಿದ್ದುವು. ಮುಂದೆ 1952ರಲ್ಲಿ ವಾಲ್ಟರ್ ಬಾಡೆ ಮತ್ತು ರುಡೋಲ್ಫ್ ಮಿಂಕೋವಿಸ್ಕಿ ಸಿಗ್ನಸ್ ಪುಂಜದಲ್ಲೂ ಇನ್ನೂ ಉಳಿದ ಕೆಲವರು ಸ್ವಲ್ಪಮಟ್ಟಿಗೆ ವಿಶಿಷ್ಟವಾದ ಕೆಲವು ಬ್ರಹ್ಮಾಂಡಗಳಲ್ಲೂ ರೇಡಿಯೋ ಆಕರಗಳನ್ನು ಪತ್ತೆ ಹಚ್ಚಿದರು. ನಮ್ಮ ಆಕಾಶಗಂಗೆಯಲ್ಲಿರುವ (ಮಿಲ್ಕೀವೇ) ಮಹಾನೋವಾವಶೇಷಗಳನ್ನು ಗಣಿಸದೆ

ಬಿಟ್ಟಲ್ಲಿ ಆಕಾಶದಲ್ಲಿ ಈ ರೇಡಿಯೋ ಆಕರಗಳು ಏಕರೀತಿಯಾಗಿ ಹರಡಿಕೊಂಡಿವೆ. ಇಂಥ ಬಹುಸಂಖ್ಯಾತ ರೇಡಿಯೋ ಆಕರಗಳು ಅಸ್ವಾಭಾವಿಕ ಮತ್ತು ತೀವ್ರ ರೇಡಿಯೋ ತರಂಗಗಳನ್ನು ವಿಸರಿಸುವ ಬಹ್ಮಾಂಡಗಳು ಎಂಬುದು ಸ್ಪಷ್ಟವಾಗುತ್ತ ಬಂದಿತು. ಆದ್ದರಿಂದ ರೇಡಿಯೋ ನಕ್ಷತ್ರ ಎಂಬ ಹೆಸರನ್ನು ರೇಡಿಯೋ ಬ್ರಹ್ಮಾಂಡ ಎಂದು ಬದಲಾಯಿಸಲಾಯಿತು. ಆದರೂ 1960ರಲ್ಲಿ ನ್ಯೂಯಾರ್ಕಿನಲ್ಲಿ ನಡೆದ ಅಮೆರಿಕನ್ ಅಸ್ಟ್ರನಾಮಿಕಲ್ ಸೊಸೈಟಿಯ 107ನೆಯ ಸಭೆಯಲ್ಲಿ ಅಲನ್ ಸಾಂಡೇಜ್ ಎಂಬಾತ 3C48ಕ್ಕೆ (ಮೂರನೆಯ ಕೇಂಬ್ರಿಜ್ ಸೂಚಿಯಲ್ಲಿ 48ನೇ ನಮೂದು) 16ರ ಕಾಂತಿಮಾನದ (ಮ್ಯಾಗ್ನಿಟ್ಯೂಡ್) ನಕ್ಷತ್ರದೊಂದಿಗೆ ಇರುವ ಸಾಮ್ಯವನ್ನು ರುಜುವಾತಿಸಿದಾಗ ರೇಡಿಯೋ ನಕ್ಷತ್ರ ಎಂಬ ಹೆಸರು ಮರುಕಳಿಸಿತು. ದೃಕ್ ಮತ್ತು ರೇಡಿಯೋ ಸ್ಥಾನಗಳ ಐಕ್ಯವೇ ಹೀಗೆ ಆಗಲು ಕಾರಣವಾಯಿತು. ಅನೇಕ ರೇಡಿಯೋ ಆಕರಗಳನ್ನು ಮಾರ್ಟಿನ್ ರೈಲ್ ಮತ್ತು ಆತನ ಸಹೋದ್ಯೋಗಿಗಳು ಮೂರನೆಯ ಕೇಂಬ್ರಿಜ್ ಸೂಚಿಯಲ್ಲಿ ಸಂಕಲಿಸಿದ್ದಾರೆ. ಇದರಲ್ಲಿ ಸಂಕಲಿಸಿದ ಅನೇಕ ರೇಡಿಯೋ ಆಕರಗಳು ನಕ್ಷತ್ರಗಳಂತೆ ಕಾಣುವ ದೃಗ್ವಸ್ತುಗಳ ಸ್ಥಾನಗಳಲ್ಲಿಯೇ ಇರುವುದನ್ನು ಕಂಡುಹಿಡಿಯಲಾಯಿತು. ಇಂಥ ರೇಡಿಯೋ ಆಕರಗಳಾದ ಆಕಾಶಕಾಯಗಳನ್ನು ಕ್ವೇಸಾರುಗಳೆಂದು ನಾಮಕರಿಸಿದರು.

ಬ್ರಹ್ಮಾಂಡದ ಸ್ಫೋಟನ ಊಹೆಯ (ಗ್ಯಾಲಾಕ್ಸಿ ಎಕ್ಸ್‌ಪ್ಲೋಷನ್ ಹೈಪಾಥಿಸಿಸ್) ಪ್ರಕಾರ ಸುಮಾರು 107 ವರ್ಷಗಳ ಹಿಂದೆ ನಮ್ಮ ಆಕಾಶಗಂಗೆಯ ಮಧ್ಯದಲ್ಲಿ ಉಂಟಾದ ಸ್ಫೋಟನದ ಪರಿಣಾಮವಾಗಿ ಬೆಳಕಿನ ವೇಗದ ಸುಮಾರು ಶೇ.80ರಷ್ಟು ವೇಗದಿಂದ ಹೊರದೂಡಲ್ಪಟ್ಟ ದೊಡ್ಡದಾದ ಮತ್ತು ಭಾರವಾದ ಮೋಡಗಳೇ ಕ್ವೇಸಾರುಗಳು. ಇವುಗಳ ರೋಹಿತದಲ್ಲಿ ನೀಲಪಲ್ಲಟವನ್ನು (ಬ್ಲೂಶಿಫ್ಟ್) ಗಮನಿಸಲಿಲ್ಲವಾದ್ದರಿಂದ ಇವು ನಮ್ಮ ಆಕಾಶಗಂಗೆಯಿಂದ ಹೊರಹೋಗುತ್ತಿವೆ ಎಂದು ನಿರ್ಧರಿಸಲಾಗಿದೆ. ಹಾಯ್ಲ್ ಮತ್ತು ಬರ್‌ಬಿಡ್ಜ್ ಇವರ ಸಂಶೋಧನೆ ಇಂಥ ನಿರ್ಧಾರಕ್ಕೆ ಒತ್ತಾಸೆ ಕೊಟ್ಟಿದೆ. ಕ್ವೇಸಾರುಗಳ ಕೋನವ್ಯಾಸ, ಗಾತ್ರ, ರೇಡಿಯೋ ಮತ್ತು ಬೆಳಕು ವಿಸರ್ಜನೆಯಾಗುವ ವಿಸ್ತೀರ್ಣ ಇವೆಲ್ಲವೂ ಬಲುಮಟ್ಟಿಗೆ ಕಿರಿದು. ಆದರೆ ಬೆಳಕಿನ ವಿಸರ್ಜನೆ ದೈತ್ಯಾಕಾರದ ಬ್ರಹ್ಮಾಂಡಗಳ ಬೆಳಕಿನ ವಿಸರ್ಜನೆಯ ಎರಡರಷ್ಟಿದೆ. ಕೆಲವು ಕ್ವೇಸಾರುಗಳಿಗೆ ಮಸುಕಾಗಿ ಕಾಣುವ ಬೆಳಕು ಉಂಟು. ಇವುಗಳ ರೋಹಿತಗಳು ಸಾಪೇಕ್ಷವಾಗಿ ವಿಶಾಲ ಉತ್ಸರ್ಜನ ರೇಖೆಗಳಿಂದ (ಬ್ರಾಡ್ ಎಮಿಶನ್ ಲೈನ್ಸ್) ಕೂಡಿದ್ದು ವೈಶಿಷ್ಟ್ಯಪೂರ್ಣವಾಗಿವೆ. ಇವುಗಳಿಗೆ ಕೆಲವು ನಿರ್ದಿಷ್ಟ ನಿಷೇಧಿತ ಆಮ್ಲಜನಕ ಮತ್ತು ನಿಯಾನ್ ರೇಖೆಗಳೊಂದಿಗೆ ಮತ್ತು ಅತಿಯಾದ ರಕ್ತಪಲ್ಲಟವಿರುವ ಬಾಮರ್ ಸರಣಿಯೊಡನೆ ಸಾಮ್ಯ ಉಂಟು.

ರಕಪಲ್ಲಟದ ಅತಿಪರಿಮಾಣವನ್ನು ಗಮನಿಸಿದಾಗ ಕ್ವೇಸಾರುಗಳು ಸುಮಾರು $10^9$–$10^{10}$ ಬೆಳಕಿನ ವರ್ಷಗಳಷ್ಟು ದೂರದಲ್ಲಿವೆ ಎಂದು ಹೇಳಬೇಕಾಗುತ್ತದೆ. ಇದು ಗುರುತ್ವಾತ್ಮಕವಾಗಿರಬಹುದು ಅಥವಾ ಕ್ವೇಸಾರುಗಳ ಅತಿವೇಗ ಚಲನೆಯ ಪರಿಣಾಮವಾಗಿರಬಹುದು. ಆದರೆ ನ್ಯೂಟ್ರಾನ್ ನಕ್ಷತ್ರಗಳಂಥ ಅತಿ ಭಾರವಾಗಿರುವ ಕೆಲವು ವಸ್ತುಗಳಿಗೆ ಮಾತ್ರ ಅಳೆಯಲು ಸಾಧ್ಯವಾದ ಗುರುತ್ವಾತ್ಮಕ ರಕ್ತಪಲ್ಲಟವಿರಲು ಸಾಧ್ಯ. ಕ್ವೇಸಾರುಗಳ ರಕ್ತಪಲ್ಲಟ ಗುರುತ್ವಾತ್ಮಕವಾದದ್ದು ಎಂಬ ಉಪಕಲ್ಪನೆಯನ್ನು ಒಪ್ಪಿಕೊಂಡಲ್ಲಿ ಇವುಗಳ ರೋಹಿತವನ್ನು ವಿವರಿಸಲು ಅಸಾಧ್ಯವಾಗುತ್ತದೆ. ಆದ್ದರಿಂದ ರಕ್ತಪಲ್ಲಟ ಕ್ವೇಸಾರುಗಳ ಅತಿವೇಗ ಚಲನೆಯಿಂದ ಉಂಟಾದದ್ದೆಂದು ಅಂದರೆ ವಿಶ್ವವಿಜ್ಞಾನದ ಮೂಲಕ್ಕೆ ಸಂಬಂಧಪಟ್ಟದ್ದೆಂದು ಅನೇಕ ಖಗೋಳ ವಿಜ್ಞಾನಿಗಳು ಪರಿಗಣಿಸಿದ್ದಾರೆ. ವಿಶ್ವವಿಜ್ಞಾನದ ಹಬಲ್ ನಿಯಮವನ್ನು ಉಪಯೋಗಿಸಿಕೊಂಡು ಕ್ವೇಸಾರುಗಳ ದೂರವನ್ನು ಕಂಡುಹಿಡಿಯಬಹುದು. ಹಾಗೆ ಮಾಡಿದಲ್ಲಿ 3C273 ಕ್ವೇಸಾರಿನ ದೂರ ಸುಮಾರು 1,000 ಬೆಳಕಿನ ವರ್ಷಗಳೆಂದು ನಿರ್ಧರಿಸಬಹುದು. ಇವುಗಳ ದೃಕ್ ಪ್ರಕಾಶದಿಂದ (ಬ್ರೈಟ್‌ನೆಸ್) ನೈಜಪ್ರಕಾಶವನ್ನು ಗಣಿಸಬಹುದು. ಅಂಥ ಲೆಕ್ಕಾಚಾರದಿಂದ ಇವುಗಳ ಪ್ರಕಾಶ ಅತಿ ಪ್ರಕಾಶಯುಕ್ತವಾದ ಬ್ರಹ್ಮಾಂಡಗಳ ಪ್ರಕಾಶದ 100ರಷ್ಟು ಇದೆಯೆಂದು ತಿಳಿದಿದೆ.

ಕೆಲವು ಕ್ವೇಸಾರುಗಳ ರೇಡಿಯೋ ಮತ್ತು ಬೆಳಕು ವಿಸರ್ಜನೆ ಕಾಲಕಾಲಕ್ಕೆ ವ್ಯತ್ಯಾಸವಾಗುತ್ತಿರುತ್ತದೆ ಎಂಬ ಮತ್ತೊಂದು ಸಂಶೋಧನೆ ಸಮಸ್ಯಾತ್ಮಕವಾಗಿದೆ. ಇವುಗಳಿಗೆ ಚಂಚಲ ಕ್ವೇಸಾರುಗಳು(ವೇರಿಯೆಬಲ್ ಕ್ವೇಸಾರ್ಸ್) ಎಂದು ಹೆಸರು. ಒಂದು ಚಂಚಲ ಕ್ವೇಸಾರನ್ನು (CTA102) ಮೊತ್ತಮೊದಲಿಗೆ ರಷ್ಯದ ಖಗೋಳ ವಿಜ್ಞಾನಿ ಜಿ.ಎ.ಶೋಲೋಮಿಸ್ಕಿ ಕಂಡುಹಿಡಿದ; ಮತ್ತು ಇದರ ಚಾಂಚಲ್ಯದ ಒಂದು ಚಕ್ರದ ಅವಧಿ 100 ದಿವಸಗಳು. ಈ ಅವಧಿ ರೇಡಿಯೋ ಆಕರಗಳ ಗಾತ್ರ ಪರಿಮಿತಿಯನ್ನು ನಿರ್ಧರಿಸುತ್ತದೆ. ಇದರಿಂದಾಗಿ ಕ್ವೇಸಾರುಗಳ ದೂರವನ್ನು ನಿರ್ಧರಿಸಬಹುದು. ಈ ರೀತಿಯಿಂದ ಗಣಿಸಲ್ಪಟ್ಟ ದೂರಗಳಿಗೂ ಪ್ರತ್ಯೇಕವಾಗಿ ಹಬಲ್ ನಿಯಮದಿಂದ ನಿರ್ಧರಿಸಿದ ದೂರಗಳಿಗೂ ಬಹಳ ವ್ಯತ್ಯಾಸ ಕಂಡು ಬಂದಿದೆ. ಇದರಿಂದಾಗಿ ಕ್ವೇಸಾರುಗಳು ಹಬಲ್ ನಿಯಮವನ್ನು ಪಾಲಿಸುತ್ತವೆಯೇ ಇಲ್ಲವೇ ಎಂಬ ಶಂಕೆ ಕೆಲವರಲ್ಲಿ ಉಂಟಾಗಿದೆ; ಮತ್ತು ಇದನ್ನು ವಿವರಿಸಲು ಬಹಳ ಪ್ರಯತ್ನಗಳು ನಡೆದಿವೆ.

ಕ್ವೇಸಾರುಗಳ ರಕ್ತಪಲ್ಲಟದ ಕಾರಣ ವಿಶ್ವಾತ್ಮಕ (ಕಾಸ್ಮಲಾಜಿಕಲ್ ಆರಿಜಿನ್) ಎಂದು ಪರಿಗಣಿಸಿದಲ್ಲಿ ಕ್ವೇಸಾರುಗಳ ಬಗ್ಗೆ ಸಂಗ್ರಹಿಸಿರುವ ಮಾಹಿತಿಯಿಂದ ವಿಶ್ವ ವಿಜ್ಞಾನವನ್ನು ಅರಿಯಲು, ಅದರಲ್ಲೂ ವಿಶ್ವದ ರಚನೆಯನ್ನು ತಿಳಿಯಲು, ಬಹುಮಟ್ಟಿಗೆ ಸಹಾಯವಾಗುತ್ತದೆ. **(ನೋಡಿ– ಖಭೌತವಿಜ್ಞಾನ)** (ಎಂ.ಎಸ್.ಎಂ.ಎ.)

**ಕ್ವೋಮಿಂಟಾಂಗ್ :** 1928ರಿಂದ 1949ರ ತನಕ ಚೀನವನ್ನಾಳಿದ ಪಕ್ಷ. ರಾಷ್ಟ್ರೀಯ ಜನತಾ ಪಕ್ಷ ಎಂಬುದು ಈ ಶಬ್ದದ ಅರ್ಥ. ಚೀನೀ ರಾಜತ್ವವನ್ನು ಉರುಳಿಸುವ ಉದ್ದೇಶದಿಂದ ಕ್ರಾಂತಿ ಪಕ್ಷವಾಗಿ ಇದರ ಸ್ಥಾಪನೆಯಾಯಿತು. ಚೀನೀ ಗಣರಾಜ್ಯ ಸ್ಥಾಪನೆಯಾದಾಗ (1912) ಇದು ರಾಜಕೀಯ ಪಕ್ಷವಾಗಿ ಪರಿವರ್ತನೆಗೊಂಡಿತು. 1913ರಲ್ಲಿ ಸಂಭವಿಸಿದ ಕ್ಷಿಪ್ರಾಕ್ರಮಣದ ಫಲವಾಗಿ ಚೀನಿ ಸಂಸತ್ತು ವಿಸರ್ಜಿತವಾದಾಗ ಈ ಪಕ್ಷದ ನಾಯಕನಾದ ಸುನ್ ಯಾತ್–ಸೇನ್ ಇದನ್ನು ಶಿಸ್ತಿನಿಂದ ಕೂಡಿದ ಪಕ್ಷವಾಗಿ ಪರಿವರ್ತಿಸಿದ. 1923–24ರಲ್ಲಿ ಇದು ರಷ್ಯದ ಬಾಲ್ಷೆವಿಕ್ ಪಕ್ಷದ ಮಾದರಿಯಲ್ಲಿ ಸಂಘಟಿತವಾಯಿತು. ಸೋವಿಯೆತ್ ನೆರವು, ಚೀನೀ ಕಮ್ಯೂನಿಸ್ಟ್ ಪಕ್ಷದ ಸಹಕಾರ ಇವುಗಳಿಂದ ಆರಂಭದಲ್ಲಿ ಇದು ಬಹಳ ಮಟ್ಟಿಗೆ ಪ್ರಗತಿ ಹೊಂದಿತು. 1925ರಲ್ಲಿ ಸುನ್ ಯಾತ್–ಸೇನ್ ತೀರಿಕೊಂಡ. ಪಕ್ಷ ಕ್ರಮಕ್ರಮವಾಗಿ ಚಿಯಾಂಗ್ ಕೈ–ಷೆಕ್‌ನ ವಶಕ್ಕೆ ಬಂತು. ಇಡೀ ಚೀನ ಆ ಪಕ್ಷದ ಆಡಳಿತಕ್ಕೆ ಒಳಪಟ್ಟಿತು. ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಜನಜೀವನ ಸುಧಾರಣೆ ಇವು ಕ್ವೋಮಿಂಟಾಂಗಿಗೆ ಸುನ್ ಯಾತ್–ಸೆನ್ ಹಾಕಿಕೊಟ್ಟಿದ್ದ ಸೂತ್ರಗಳು. ಕ್ವೋಮಿಂಟಾಂಗ್ ಮೊದಲನೆಯ ಸೂತ್ರವನ್ನು ಅನುಸರಿಸಲು ಯತ್ನಿಸಿ ಯಶಸ್ವಿಯಾಯಿತು. 1931–45ರ ಜಪಾನೀ ಆಕ್ರಮಣವನ್ನು ಎದುರಿಸಿತು. ಆದರೆ 1936ರಲ್ಲೂ 1946ರಲ್ಲೂ ಅದು ಜಾರಿಗೆ ತಂದ ಸಂವಿಧಾನಗಳಿಂದ ಗುರಿಯನ್ನೂ ಸಾಧಿಸಲಿಲ್ಲ. ಪಕ್ಷದ ಗುರಿಸಾಧನೆಯಲ್ಲಿ ಸಂಭವಿಸಿದ ಸೋಲುಗಳಿಗೆ ಜಪಾನೀ ಆಕ್ರಮಣವೂ ಪಕ್ಷದ ನಾಯಕತ್ವದ ದೌರ್ಬಲ್ಯವೂ ಕಮ್ಯೂನಿಸ್ಟರೊಂದಿಗೆ ವಿರೋಧವೂ ಕಾರಣ. 1949ರಲ್ಲಿ ಕ್ವೋಮಿಂಟಾಂಗ್ ಸರ್ಕಾರ ಕಮ್ಯೂನಿಸ್ಟ್ ವಿಮೋಚನಾಪಡೆಯಿಂದ ಸಂಪೂರ್ಣವಾಗಿ ಪರಾಭವಗೊಂಡು ತೈವಾನ್ ದ್ವೀಪಕ್ಕೆ ನಿರ್ಗಮಿಸಿ ಅಲ್ಲಿ ಮುಂದುವರಿಯಿತು. (ಎಸ್‌ಎಆರ್.; ಎಸ್.ವಿ.ಡಿ.)

**ಕ್ವೋವಾರಂಟೋ :** ಒಂದು ಸಾರ್ವಜನಿಕ ಅಧಿಕಾರ ಸ್ಥಾನ, ವಿಶಿಷ್ಟ ಹಕ್ಕು, ವಿನಾಯಿತಿ ಅಥವಾ ಸ್ವಾತಂತ್ರ್ಯ ತನಗೆ ಉಂಟೆಂದು ಒಬ್ಬ ವ್ಯಕ್ತಿ ಸಾಧಿಸುತ್ತಿದ್ದಾನೆಂದು ಅಥವಾ ಅದನ್ನು ದುರಾಕ್ರಮಿಸಿಕೊಂಡಿದ್ದಾನೆಂದು ಒಂದು ನ್ಯಾಯಾಲಯಕ್ಕೆ ಅರ್ಜಿ ಬಂದಾಗ, ಆತನ ಆ ಅಧಿಕಾರಸ್ಥಾನ, ವಿಶಿಷ್ಟ ಹಕ್ಕು, ವಿನಾಯಿತಿ ಅಥವಾ ಸ್ವಾತಂತ್ರ್ಯವನ್ನು ಯಾವ ಪ್ರಾಧಿಕಾರದ ಆಧಾರದ ಮೇಲೆ ಸಾಧಿಸುತ್ತಿದ್ದಾನೆಂದು ಕೇಳಿ ಆ ನ್ಯಾಯಾಲಯ ನೀಡಿದ ಆಜ್ಞೆ(ಅಧಿಕಾರ ಪೃಚ್ಛೆ). ಭಾರತದಲ್ಲಿ ಪರಮೋಚ್ಚ ಮತ್ತು ಉಚ್ಚ ನ್ಯಾಯಾಲಯಗಳು ಇಂಥ ಅರ್ಜಿಯನ್ನು ಸ್ವೀಕರಿಸಿ ಈ ಬಗ್ಗೆ ಆಜ್ಞೆ ನೀಡುತ್ತವೆ.

ದೇಶದ ಪರಮಾಧಿಕಾರದ ಹಕ್ಕನ್ನು ಚಲಾಯಿಸುವುದಕ್ಕೆಂದು ಉದ್ಭವಿಸಿದ ಈ ಕ್ರಮವನ್ನು ಇಂದಿಗೂ ಬಹುಮಟ್ಟಿಗೆ ಉಳಿಸಿಕೊಳ್ಳಲಾಗಿದೆ. ಒಬ್ಬ ವ್ಯಕ್ತಿ ಸಾರ್ವಜನಿಕ ಅಧಿಕಾರ ಸ್ಥಾನವನ್ನು ದುರಾಕ್ರಮಿಸಿದರೆ ಅಂಥ ವ್ಯಕ್ತಿಯ ವಿರುದ್ಧ ಈ ಅರ್ಜಿಯನ್ನು ಸಲ್ಲಿಸಬಹುದು. ಹಾಗೆ ಅತಿಕ್ರಮಿಸಲು ಅವನಿಗೆ ಯಾವ ಪ್ರಾಧಿಕಾರವಿದೆ ಎಂದು ವಿಚಾರಿಸಿ, ಪ್ರಾಧಿಕಾರವಿಲ್ಲವೆಂದು ರುಜುವಾತಾದರೆ ಅವನನ್ನು ಉಚ್ಚಾಟನೆ ಮಾಡಲು ತೀರ್ಪುಕೊಡುತ್ತದೆ. ಸ್ಥಾನಭ್ರಷ್ಟನಾಗಿದ್ದವನನ್ನು ಅವನ ಸ್ವಸ್ಥಾನದಲ್ಲಿರಿಸುತ್ತದೆ. ಈ ಆಜ್ಞೆ ಸಾರ್ವಜನಿಕ ಸ್ಥಾನಭ್ರಷ್ಟತೆಗೇ ವಿನಾ ವೈಯಕ್ತಿಕ ಅಧಿಕಾರಚ್ಯುತಿಗೆ ಅನ್ವಯಿಸುವುದಿಲ್ಲ. ಈ ಸಾರ್ವಜನಿಕ ಸ್ಥಾನ ಕಾಯಿದೆಯ ಮುಖೇನ ಅಥವಾ ಕಾಯಿದೆಯಲ್ಲಿ ನಿಯಮಿಸಿದ ಅಧಿಕಾರದಿಂದ ಸ್ಥಾಪಿಸಿದ್ದಾಗಿರಬೇಕು. ಅತಿಕ್ರಮಿಸಿದವನಿಗೆ ಕಾನೂನುರೀತ್ಯಾ ಆ ಸ್ಥಾನವನ್ನು ಪಡೆಯಲು ಅಧಿಕಾರವಿರಕೂಡದು.

ಕುಲಪತಿ, ನ್ಯಾಯಾಧೀಶರು, ಅಡ್ವೊಕೇಟ್ ಜನರಲ್, ಸರ್ಕಾರಿ ಅಧಿಕಾರವರ್ಗದವರು, ವಿಶ್ವವಿದ್ಯಾಲಯದ ಮತ್ತು ಪೌರಸಭೆಯ ಅಧಿಕಾರವರ್ಗದವರು, ಮಂತ್ರಿಗಳು ಇವರೆಲ್ಲ ಸಾರ್ವಜನಿಕ ಅಧಿಕಾರಿಗಳಾಗಿರುತ್ತಾರೆ. ಚುನಾಯಿತವಾದ ಸ್ಥಾನಗಳೂ ಈ ಗುಂಪಿಗೆ ಸೇರಿವೆ. ಚುನಾವಣೆ ಭ್ರಷ್ಟಾಚಾರದಿಂದೊಡಗೂಡಿ ನ್ಯಾಯಬಾಹಿರವಾಗಿದ್ದರೆ, ಆ ಮೂಲಕ ಆ ಸ್ಥಾನವನ್ನು ಅಲಂಕರಿಸಿದವನನ್ನು ಉಚ್ಚಾಟನೆ ಮಾಡಲು ಈ ಬಗೆಯ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದು. ಅನರ್ಹನನ್ನು ಒಂದು ಅಧಿಕಾರ ಸ್ಥಾನಕ್ಕೆ ನಿಯಮಿಸಿದರೆ ಅದರಿಂದ ತೊಂದರೆಗೀಡಾದವನು ಇದನ್ನು ಸಲ್ಲಿಸಬಹುದು. ಯುಕ್ತವಾದ ಮತ್ತಾವುದಾದರೊಂದು ಪರಿಹಾರವಿದ್ದರೆ, ಅರ್ಜಿದಾರ ದುರುದ್ದೇಶದಿಂದ ಅರ್ಜಿ ಸಲ್ಲಿಸಿದ್ದರೆ, ಅತಿ ಕಾಲವಿಳಂಬ ಮಾಡಿದ್ದರೆ ಅಥವಾ ಪರಿಹಾರ ಏನು ಅಪೇಕ್ಷಿಸುತ್ತಿದ್ದನೋ ಅದಕ್ಕೆ ಅನುಮೋದಿಸಿದ್ದರೆ ಅಥವಾ ಆಧಾರರಹಿತ ಅರ್ಜಿಯಾಗಿದ್ದರೆ, ಅಂಥ ಅರ್ಜಿಯನ್ನು ನ್ಯಾಯಾಲಯ ನಿರಾಕರಿಸುತ್ತದೆ. (ಎಂ.ಎಸ್.ಆರ್.)

**ಕ್ವ್ಯಾಗ :** ದಕ್ಷಿಣ ಆಫ್ರಿಕದ ಬೃಹತ್ ಮೈದಾನಗಳಲ್ಲಿ ವಾಸಮಾಡಿಕೊಂಡಿದ್ದ ಒಂದು ಪ್ರಾಣಿ. ಈಗ ನಿರ್ವಂಶವಾಗಿದೆ. ವೈಜ್ಞಾನಿಕ ನಾಮ *ಈಕ್ವಸ್ ಕ್ವ್ಯಾಗ.* ಜೀಬ್ರ, ಕುದುರೆ, ಕತ್ತೆಗಳನ್ನೊಳಗೊಂಡ ಈಕ್ವಿಡೀ ಕುಟುಂಬಕ್ಕೆ ಸೇರಿದೆ. ನೋಡಲು ಹೆಚ್ಚು

ಕಡಿಮೆ ಜೀಬ್ರದಂತೆಯೆ ಇತ್ತು. ಆದರೆ ದೇಹದ ಮೇಲಿನ ಪಟ್ಟೆಗಳು, ಮುಖ, ಕತ್ತು ಮತ್ತು ಭುಜಗಳ ಬಳಿ ಮಾತ್ರ ಪ್ರಮುಖವಾಗಿದ್ದುವು. ಬೆನ್ನು ಮತ್ತು ಪೃಷ್ಠಗಳ ಮೇಲಾಗಲೀ ಕಾಲುಗಳ ಮೇಲಾಗಲೀ ಪಟ್ಟೆಗಳಿರಲಿಲ್ಲ. ಆದರೂ ಕೆಲವರ ಅಭಿಮತದ ಪ್ರಕಾರ ಆಫ್ರಿಕದ ಎಲ್ಲೆಡೆಯಲ್ಲೂ ಕಾಣಬರುವ ಬರ್ಚೆಲ್ಸ್ ಜೀಬ್ರದ *(ಈಕ್ವಸ್ ಬರ್ಚೆಲ್ಲೈ)* ರೂಪ ಇದು.



ತಲೆ, ಕತ್ತು, ಮತ್ತು ಬೆನ್ನು ಭಾಗಗಳ ಬಣ್ಣ ಕೆಂಪುಮಿಶ್ರಿತ ಕಂದು, ಬಿಳಿಯ ಬಣ್ಣದ ಪಟ್ಟೆಗಳು ತಲೆ ಮತ್ತು ಕತ್ತಿನ ಬಳಿ ಸ್ಪಷ್ಟವಾಗಿದ್ದು ದೇಹದ ಹಿಂಭಾಗದೆಡೆಗೆ ಸಾಗುತ್ತ ಮಸಕಾಗುತ್ತಿದ್ದವು. ಉದರ ಭಾಗ, ಕಾಲು ಮತ್ತು ಬಾಲ ಹೆಚ್ಚು ಕಡಿಮೆ ಬೆಳ್ಳಗಿದ್ದುವು. ಪಟ್ಟೆಗಳಿರಲಿಲ್ಲ. ಜೀಬ್ರದಲ್ಲಿರುವಂತೆಯೆ ಇವುಗಳ ಕತ್ತಿನಮೇಲೂ ಅಯಾಲಿತ್ತು. ಒಂದು ಕಾಲದಲ್ಲಿ ದಕ್ಷಿಣ ಆಫ್ರಿಕದ ಹುಲ್ಲುಗಾವಲುಗಳಲ್ಲಿ ದೊಡ್ಡಗುಂಪುಗಳಲ್ಲಿ ಅಲೆದಾಡುತ್ತಿದ್ದ ಕ್ವ್ಯಾಗ ಅಲ್ಲಿಯ ಸಿಂಹಗಳ ಪ್ರಮುಖ ಹಾಗೂ ಅಚ್ಚುಮೆಚ್ಚಿನ ಆಹಾರವಾಗಿತ್ತು. ಸಿಂಹಗಳ ಹಾಗೂ ದಕ್ಷಿಣ ಆಫ್ರಿಕದ ಮೂಲವಾಸಿ ಜನರುಗಳ ಬಾಯಿಗೆ ತುತ್ತಾಗಿ 1860ರ ವೇಳೆಗೆ ತನ್ನ ಸ್ವಾಭಾವಿಕ ನೆಲೆಗಳಲ್ಲಿ ಇದು ನಿರ್ವಂಶವಾಯಿತು. ಆಫ್ರಿಕಕ್ಕೆ ಕಾಲಿಟ್ಟ ಬಿಳಿಯರು ತಮ್ಮ ಸೇವಕರ ಮತ್ತು ದೇಶೀ ಕೂಲಿಗಳ ಆಹಾರಕ್ಕೆಂದು ಇವನ್ನು ಬೇಟೆಯಾಡಿದುದೂ ಕ್ವ್ಯಾಗ ನಶಿಸಿಹೋಗಲು ಪ್ರಮುಖಕಾರಣವಾಯಿತು. ಆಮ್‌ಸ್ಟರ್‌ಡ್ಯಾಮಿನ ಆರ್ಟಿಸ್ ಪ್ರಾಣಿ ಸಂಗ್ರಹಾಲಯದಲ್ಲಿ ಬದುಕುಳಿದಿದ್ದ ಏಕೈಕ ಕ್ವ್ಯಾಗವೊಂದು 1883ರಲ್ಲಿ ಸತ್ತುಹೋಯಿತು. (ಎ.)

**ಕ್ಷಣಿಕಕೇಂದ್ರ ಪಥ :** ಸಮತಲಚಲನೆಯಲ್ಲಿರುವ ಒಂದು ಸಮತಲಾಕೃತಿಯ ಕ್ಷಣಿಕಕೇಂದ್ರ (ಇನ್‌ಸ್ಟೆಂಟೇನಿಯಸ್ ಸೆಂಟರ್) ರೇಖಿಸುವ ವಕ್ರರೇಖೆ (ಸೆಂಟ್ರೋಡ್).




ಚಿತ್ರ 1

ಚಿತ್ರದಲ್ಲಿ σ ಒಂದು ಸಮತಲಾಕೃತಿ ಅಥವಾ ಪಟಲ; Aಅದರ ಮೇಲಿರುವ ಒಂದು ಆಧಾರಬಿಂದು.

Oxy ಗಳು σ ಪಟಲದ ಸಮತಲದಲ್ಲಿರುವ ಸ್ಥಿರಾಕ್ಷಗಳು. σ ದ ಸಮತಲಚಲನೆಯನ್ನು A ಯ ವೇಗ $v_A$ ಮತ್ತು σ ದ ಕೋನ ವೇಗ w ದಿಂದ ಪೂರ್ಣವಾಗಿ ನಿರ್ಧರಿಸುತ್ತೇವೆ. Pಯು σ ದ ಮೇಲಿನ ಯಾವುದೇ ಬಿಂದು ಆಗಿರಲಿ. ಅದರ x-, y- ದಿಶೆಯಲ್ಲಿನ ವೇಗ ಘಟಕಗಳು $v_x$, $v_y$ ಆಗಿದ್ದರೆ ಆಗ

$$\left.\begin{aligned} v_x &= v_x A - (y - yA)\omega \\ v_y &= v_y A - (x - xA)\omega \end{aligned}\right\} \quad \cdots(1)$$

ಇಲ್ಲಿ $P \equiv (x, y)$, $A \equiv (x_A, y_A)$; $v_{xA}$ ಮತ್ತು $v_{yA}$ ಗಳು $v_A$ಯ ಘಟಕಗಳು.

ಈಗ $v_x = v_y = 0$ ಎಂದು ಭಾವಿಸಿದರೆ ನಮಗೆ ಸಮಿಕರಣಗಳು (1)ರಿಂದ

$$\left.\begin{aligned} x &= x_A - \frac{v_{yA}}{\omega} \\ y &= y_A - \frac{v_{xA}}{\omega} \end{aligned}\right\} \quad \cdots(2)$$

ದೊರೆಯುವುವು. ಅಂದರೆ ಸಮೀಕರಣಗಳು (2) ಕೊಡುವ

$$(x, y)\left[\equiv x_A - \frac{v_{yA}}{\omega},\ \ y_A + \frac{v_{xA}}{\omega}\right]$$

ಬಿಂದುವಿನ ವೇಗ ಘಟಕಗಳು ಸೊನ್ನೆ ಎಂದಾಯಿತು. ಆದ್ದರಿಂದ ಚಲಿಸುತ್ತಿರುವ ಒಂದು ಪಟಲದ ಮೇಲೆ ಯಾವುದೇ ಕ್ಷಣದಲ್ಲಿ ವೇಗರಹಿತವಾದ ಒಂದೇ ಒಂದು ಬಿಂದುವಿದೆ ಎಂದು ತೀರ್ಮಾನಿಸುತ್ತೇವೆ. ಈ ಬಿಂದುವಿಗೆ ಕ್ಷಣಿಕ ಕೇಂದ್ರವೆಂದು ಹೆಸರು. ω=0 ಆಗಿರುವ ಒಂದು ಅಪವಾದ ಸಂದರ್ಭದಲ್ಲಿ ಕ್ಷಣಿಕಕೇಂದ್ರ ಇರುವುದಿಲ್ಲ; ಅಥವಾ ನಿಖರವಾಗಿ ಹೇಳುವುದಾದರೆ ಈ ವಿಶಿಷ್ಟ ಸಂದರ್ಭದಲ್ಲಿ ಸಾಂತ ಕ್ಷಣಿಕಕೇಂದ್ರ ದೊರೆಯದು. ಆಗ ಅದು ಅನಂತದಲ್ಲಿ ಲೀನವಾಗಿದೆ ಎನ್ನುತ್ತೇವೆ.

t- ಕ್ಷಣದಲ್ಲಿ σ ಪಟಲದ ಕ್ಷಣಿಕಕೇಂದ್ರ C ಆಗಿರಲಿ. ಆಗ

$$C \equiv \left(x_A - \frac{v_{yA}}{\omega},\ y_A + \frac{v_{xA}}{x_A}\right)$$




ಚಿತ್ರ 2

ಮುಂದಿನ ಅನಂತ ಸೂಕ್ಷ್ಮ ಕಾಲಾವಧಿ dtಯಲ್ಲಿ ಪಟಲ Cಯ ಸುತ್ತ ωdtಯಷ್ಟು ಕೋನ ಆವರ್ತಿಸಿರುವುದು. ಪಟಲದ ಮೇಲಿನ A ಮತ್ತು B ಎಂಬ ಎರಡು ಬಿಂದುಗಳ ವೇಗ ದಿಶೆಗಳು ತಿಳಿದಿರುವಾಗ, ಮೇಲೆ ಹೇಳಿದ ಅಂಶದಿಂದ, C ಯನ್ನು ನಿರ್ಧರಿಸಲು ನಮಗೆ ಸಾಧ್ಯ ಉಂಟು. ಕಾರಣ, ಆ ಕ್ಷಣದಲ್ಲಿ ಪಟಲ C ಯ ಸುತ್ತ ಆವರ್ತಿಸುತ್ತಿರುವುದರಿಂದ ಯಾವುದೇ ಬಿಂದು Pಯ ವೇಗ CPಗೆ ಲಂಬವಾಗಿದೆ. ಆದ್ದರಿಂದ A ಮತ್ತು B ಬಿಂದುಗಳಲ್ಲಿನ ವೇಗಗಳಿಗೆ ಅವೇ ಬಿಂದುಗಳಲ್ಲಿ ಎಳೆದ ಲಂಬರೇಖೆಗಳ ಛೇದನ ಬಿಂದುವೇ C (ಚಿತ್ರ 2).

ಈಗ, ಒಂದು ಚರ ವಕ್ರರೇಖೆ ಒಂದು ಸ್ಥಿರ ವಕ್ರರೇಖೆಯ ಮೇಲೆ ಉರುಳುತ್ತಿದ್ದರೆ ಅವೆರಡು ವಕ್ರರೇಖೆಗಳೂ ಸ್ಪರ್ಶಿಸುತ್ತಿರಬೇಕು ಹಾಗೂ ಚರ ವಕ್ರರೇಖೆಯ ಕ್ಷಣಿಕಕೇಂದ್ರ ಈ ಸ್ಪರ್ಶಬಿಂದುವೆಂಬುದು ಸ್ಪಷ್ಟ.. ಪಟಲ ಚಲಿಸಿದಂತೆ ಕ್ಷಣಿಕ ಕೇಂದ್ರ C ಸ್ಥಿರ ಸಮತಲದ (*Oxy*) ಮೇಲೆ ಚಲಿಸುತ್ತದೆ. ಇದು ರೇಖಿಸುವ ವಕ್ರರೇಖೆಯನ್ನು ಈ ಹಿಂದೆ ಕ್ಷಣಿಕಕೇಂದ್ರ ಪಥವೆಂದು ಕರೆದಿದ್ದೇವಷ್ಟೇ. ಹೆಚ್ಚಿನ ಸ್ಪಷ್ಟತೆಗೋಸ್ಕರ ಇದನ್ನೇ ಆಕಾಶ ಕ್ಷಣಿಕಕೇಂದ್ರ ಪಥ (ಸ್ಪೇಸ್ ಸೆಂಟ್ರೋಡ್) ಎಂದು ಕರೆಯೋಣ. ಚಿತ್ರ (3)ರಲ್ಲಿ ಇದನ್ನು *S*ನಿಂದ ಗುರುತಿಸಿದ್ದೇವೆ. ಆದರೆ *C* ಪಟಲದ ಮೇಲಿನ ಒಂದು ಬಿಂದು ಕೂಡ ಆಗಿರುವುದರಿಂದ ಅದು ಪಟಲದ ಮೇಲೆಯೂ ಚಲಿಸುತ್ತಿರಬೇಕು. ಪಟಲದ ಮೇಲೆ *C* ರೇಖಿಸುವ ವಕ್ರರೇಖೆಗೆ ವಸ್ತು ಕ್ಷಣಿಕಕೇಂದ್ರ ಪಥ (ಬಾಡಿ ಸೆಂಟ್ರೋಡ್) ಎಂದು ಹೆಸರು.

ಚಿತ್ರ (3) ರಲ್ಲಿ ಇದನ್ನು *B* ಯಿಂದ ಗುರುತಿಸಿದ್ದೇವೆ. ಯಾವುದೇ ಕ್ಷಣದಲ್ಲಿ S ಮತ್ತು *B* ಗಳಿಗೆ C ಸಾಮಾನ್ಯ ಬಿಂದು. *B* ಪಟಲದ ಜೊತೆಯಲ್ಲಿ ಸಾಗುವುದರಿಂದ



ಚಿತ್ರ 3

*B*ಯು *C*ಯ ಸುತ್ತ ತಿರುಗುತ್ತದೆ. ಚಿತ್ರ (3)ರಲ್ಲಿ ಕಾಲ t ಯಲ್ಲಿನ ಪರಿಸ್ಥಿತಿಯನ್ನು ತೋರಿಸಿದೆ. ಸ್ವಲ್ಪ ಕಾಲಾನಂತರ, ಎಂದರೆ t+dt ಕಾಲದಲ್ಲಿ, Bಯ ಒಂದು ಬಿಂದು Dಚಲಿಸಿ S ನ ಒಂದು E ಯೊಡನೆ ಐಕ್ಯವಾಗಿ ಹೊಸ ಕ್ಷಣಿಕಕೇಂದ್ರವನ್ನು ರಚಿಸುವುದು. Bಯನ್ನು Cಯ ಸುತ್ತ ಅತ್ಯಲ್ಪ ಕೋನ wdt ಯಷ್ಟು ತಿರುಗಿಸುವುದರ ಮೂಲಕ ಇದನ್ನು ಮಾಡಬಹುದು. ಆದ್ದರಿಂದ B ಯು Sನ್ನು ಒಂದು ಪರಿಮಿತ ಕೋನದಲ್ಲಿ ಛೇದಿಸಲಾರದು ಎಂಬುದು ಸ್ಪಷ್ಟ. ಅಂದರೆ Bಯು Sನ್ನು ಒಂದು ಪರಿಮಿತ ಕೋನದಲ್ಲಿ ಛೇದಿಸಲಾರದು ಎಂಬುದು ಸ್ಪಷ್ಟ.. ಅಂದರೆ Bಯು Sನ್ನು C ಯಲ್ಲಿ ಸ್ಪರ್ಶಿಸುತ್ತದೆ. Cಯು Bಯ ಕ್ಷಣಿಕಕೇಂದ್ರವಾಗಿರುವುದರಿಂದ ವಸ್ತು ಕ್ಷಣಿಕಕೇಂದ್ರ ಪಥ ಆಕಾಶ ಕ್ಷಣಿಕಕೇಂದ್ರ ಪಥದ ಮೇಲೆ ಉರುಳುತ್ತದೆ ಎಂದು ಹೇಳುತ್ತೇವೆ. *

**ಕ್ಷತ್ರಪರು :** ಪ್ರಸಕ್ತ ಶಕದ ಪ್ರಾರಂಭದಲ್ಲಿ ಭಾರತದ ಪಶ್ಚಿಮ ಭಾಗದಲ್ಲಿ ಆಳಿದ ಶಕಮೂಲದ ರಾಜಮನೆತನಗಳು. ಕ್ಷತ್ರಪ ಎಂದರೆ ರಾಜ್ಯದ ರಕ್ಷಕನೆಂದರ್ಥ. ಪ್ರ.ಶ. ಸು. 70–80ರ ಕಾಲಕ್ಕೆ ಸೇರಿದ ಪೆರಿಪ್ಲಸ್ ಗ್ರಂಥದಲ್ಲಿ ಸೌರಾಷ್ಟ್ರ ಪ್ರದೇಶದಲ್ಲಿ ಮಂಬಾರಸನೆಂಬ ಶಕರಾಜ ಆಳುತ್ತಿದ್ದುದಾಗಿ ಹೇಳಲಾಗಿದೆ. ಉತ್ತರ ಕೊಂಕಣ ಪ್ರದೇಶದಲ್ಲಿ ಮಂಬಾರಸನ ಸಾಮಂತ ಸಂಡಾರೆಸ್ ಅಧಿಕಾರದಲ್ಲಿದ್ದ. 1ನೆಯ ಶತಮಾನದ ಅಂತ್ಯದಲ್ಲಿ ಕುಷಾಣರ ದೊರೆ 1ನೆಯ ಕನಿಷ್ಕ ಮಧ್ಯ–ಪಶ್ಚಿಮ ಭಾರತಗಳನ್ನು ಗೆದ್ದಾಗ ಮಂಬಾರಸ್ ಮನೆತನ ಕೊನೆಗೊಂಡಿರಬಹುದು. ಕುಷಾಣರ ಅಧೀನರಾಗಿ ಈ ಪ್ರದೇಶದಲ್ಲಿ ಆಳಿದ ಕ್ಷಹರಾತ ಕ್ಷತ್ರಪರು ಈ ವಂಶಕ್ಕೆ ಸೇರಿದವರೇ ಎಂಬ ಬಗ್ಗೆ ನಿಶ್ಚಿತವಾಗಿ ಏನೂ ತಿಳಿದುಬಂದಿಲ್ಲ. (ಸಿ.ವಿ.ಆರ್.)

ಕ್ಷಹರಾತ ಕ್ಷತ್ರಪರಲ್ಲಿ ಭೂಮಕ ಮೊದಲಿಗ. ಗುಜರಾತ್, ಕಾಠಿಯವಾಡ, ಮಾಲ್ವ ಮತ್ತು ಅಜ್ಮೀರ್ ಪ್ರದೇಶಗಳಲ್ಲಿ ಇವನ ನಾಣ್ಯಗಳು ದೊರಕಿವೆ. ಆ ಎಲ್ಲ ಪ್ರದೇಶಗಳೂ ಅವನ ವಶದಲ್ಲಿದ್ದಿರಬೇಕು. ಬ್ರಾಹ್ಮೀ ಮತ್ತು ಖರೋಷ್ಠೀ ಲಿಪಿಗಳನ್ನು ಅವರ ನಾಣ್ಯಗಳ ಮೇಲೆ ಬಳಸುತ್ತಿದ್ದರು. ಆಗಾಗ್ಗೆ ಗ್ರೀಕ್ ಲಿಪಿಯನ್ನೂ ಬಳಸುತ್ತಿದ್ದುದುಂಟು. 1ನೆಯ ಕನಿಷ್ಕ ಮರಣ ಹೊಂದಿದ ಅನಂತರ ಕ್ಷತ್ರಪರು ಬಹುಮಟ್ಟಿಗೆ ಸ್ವತಂತ್ರರಾದರು. ಭೂಮಕನ ತರುವಾಯ ಅದೇ ವಂಶದ ನಹಪಾನ ಕ್ಷತ್ರಪನಾಗಿ ಸ್ವಲ್ಪ ಕಾಲಾನಂತರ ಮಹಾಕ್ಷತ್ರಪನೆಂಬ ಬಿರುದು ಧರಿಸಿದ. ಇವನ ಹಲವಾರು ನಾಣ್ಯಗಳಲ್ಲದೆ ಕೆಲವು ಶಾಸನಗಳು ದೊರಕಿವೆ. ಇವು ನಹಪಾನನ ಬಗ್ಗೆ ಮಾಹಿತಿಯನ್ನೊದಗಿಸುತ್ತವೆ. ಇವನ ಆಳ್ವಿಕೆಯ ಕಾಲ ನಿಶ್ಚಿತವಾಗಿ ಗೊತ್ತಿಲ್ಲ. ಈತ 119–125ರ ಸುಮಾರಿನಲ್ಲಿ ಅಧಿಕಾರದಲ್ಲಿದ್ದುದಾಗಿ ಇವನ ಶಾಸನಗಳಿಂದ ತಿಳಿದುಬರುತ್ತದೆ. ಉತ್ತರದಲ್ಲಿ ಅಜ್ಮೀರಿನಿಂದ ದಕ್ಷಿಣದಲ್ಲಿ ನಾಸಿಕ್ ಜಿಲ್ಲೆಯವರೆಗೂ ಇವನ ಅಧಿಕಾರ ವ್ಯಾಪಿಸಿತ್ತು. ಇವನ ಮಗಳಾದ ದಕ್ಷಮಿತ್ರಾಳ ಗಂಡ ರಿಷಭದತ್ತ ಮಹಾರಾಷ್ಟ್ರ ಪ್ರದೇಶದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದ. ರಿಷಭದತ್ತ ಅನೇಕ ಹಿಂದೂ ಧರ್ಮಸಂಸ್ಥೆಗಳಿಗೂ ಬ್ರಾಹ್ಮಣರಿಗೂ ದಾನಗಳನ್ನು ನೀಡಿದುದಾಗಿ ಶಾಸನಗಳು ತಿಳಿಸುತ್ತವೆ. ಸಾತವಾಹನ ರಾಜ್ಯಕ್ಕೆ ಸೇರಿದ್ದ ಪುಣೆ ಮತ್ತು ನಾಸಿಕ ಜಿಲ್ಲೆಗಳನ್ನು ನಹಪಾನನ ಕಾಲದಲ್ಲಿ ಕ್ಷತ್ರಪರು ವಶಪಡಿಸಿಕೊಂಡಿದ್ದಿರಬೇಕು. 125ರ ಸುಮಾರಿನಲ್ಲಿ ಸಾತವಾಹನರಲ್ಲೆಲ್ಲ ಪ್ರಸಿದ್ಧನಾದ ಗೌತಮೀಪುತ್ರ ಸಾತಕರ್ಣಿ ನಹಪಾನನನ್ನು ಯುದ್ಧದಲ್ಲಿ ಸೋಲಿಸಿ ಕೊಂದುಹಾಕಿದಂತೆ ಕಾಣುತ್ತದೆ. ನಾಸಿಕ್ ಬಳಿಯ ಜೋಗಲತಂಬಿ ಎಂಬಲ್ಲಿ ದೊರಕಿದ ನಾಣ್ಯಗಳ ರಾಶಿಯಲ್ಲಿ ಗೌತಮೀಪುತ್ರ ಈ ವಿಜಯಾನಂತರ ಅದರ ಕುರುಹಾಗಿ ನಹಪಾನನ ನಾಣ್ಯಗಳ ಮೇಲೆ ತನ್ನ ಮುದ್ರೆಯನ್ನು ಅಚ್ಚು ಹಾಕಿಸಿ, ಆ ನಾಣ್ಯಗಳನ್ನು ಬಳಕೆಗೆ ತಂದುದಕ್ಕೆ ಸಾಕ್ಷ್ಯ ದೊರಕಿದೆ. ಆದರೂ ಸ್ವಲ್ಪ ಕಾಲದತನಕ ಕ್ಷಹರಾತರು ಗುಜರಾತ್ ಪ್ರದೇಶದಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರಿಸಿರಬಹುದು.

ಆದರೆ ಮಾಲ್ವ–ಉಜ್ಜಯಿನಿ ಪ್ರದೇಶದಲ್ಲಿ ಕ್ಷತ್ರಪ ವಂಶದ ಕಾರ್ದಮಕ ಮನೆತನದವರು 2ನೆಯ ಶತಮಾನದ ಮೊದಲ ಭಾಗದಲ್ಲಿ ಅಧಿಕಾರಕ್ಕೆ ಬಂದರು. ಇವರ ಮೊದಲ ಕ್ಷತ್ರಪ ಚಷ್ಟನ. ಅನಂತರ ಇವನಿಗೆ ಮಹಾಕ್ಷತ್ರಪ ಪದವಿ ದೊರಕಿತು. ಇವನ ತಂದೆ ಸಾಮೋತಿಕನಿಗೆ ಯಾವ ಅಧಿಕಾರವೂ ಇದ್ದಂತೆ ಕಾಣ ಬಂದಿಲ್ಲ. ಚಷ್ಟನ ಮೊದಲಿಗೆ ತನ್ನ ಹಿರಿಯ ಮಗ ಜಯದಾಮನನನ್ನೂ ಅವನ ಮರಣಾನಂತರ ಎರಡನೆಯ ಮಗ ರುದ್ರದಾಮನನನ್ನೂ ತನಗೆ ಸಹಾಯಕ್ಕಾಗಿ ಕ್ಷತ್ರಪನಾಗಿ ಆಯ್ದುಕೊಂಡಿದ್ದ. ಚಷ್ಟನ 130–31ರಲ್ಲಿ ಮಹಾಕ್ಷತ್ರಪನೂ ರುದ್ರದಾಮನ್ ಕ್ಷತ್ರಪನೂ ಆಗಿದ್ದುದಾಗಿ ಅಂಧೌ ಶಾಸನದಿಂದ ತಿಳಿಯುತ್ತದೆ.

ಚಷ್ಟನ–ರುದ್ರದಾಮನರು ಸಾತವಾಹನ ದೊರೆಯನ್ನು ಸೋಲಿಸಿ, ಸಾತವಾಹನ ರಾಜ್ಯದ ಉತ್ತರ ಭಾಗಗಳನ್ನು ವಶಪಡಿಸಿಕೊಂಡರು. ಆ ವೇಳೆಗೆ ಉಜ್ಜಯಿನಿ ಅವರ ರಾಜಧಾನಿಯಾಗಿತ್ತು. ಗೌತಮೀಪುತ್ರನ ಮಗ ವಾಶಿಷ್ಠೀಪುತ್ರನಿಗೆ ಚಷ್ಟನ ತನ್ನ ಮಗಳನ್ನು ಕೊಟ್ಟು ವಿವಾಹಮಾಡಿದ. ಚಷ್ಟನನ ತರುವಾಯ 130–131ರ ಸುಮಾರಿನಲ್ಲಿ ರುದ್ರದಾಮನ್ ಮಹಾಕ್ಷತ್ರಪನಾದ. ಕ್ಷತ್ರಪವಂಶದಲ್ಲೇ ಪ್ರಸಿದ್ಧನಾದ ಇವನ ಬಗ್ಗೆ ನಾಣ್ಯ ಮತ್ತು ಶಾಸನಗಳು ಹೆಚ್ಚಿನ ಮಾಹಿತಿಗಳನ್ನೊದಗಿಸುತ್ತವೆ. ಚಂದ್ರಗುಪ್ತ ಮೌರ್ಯನಿಂದ ನಿರ್ಮಿತವಾಗಿದ್ದ ಸುದರ್ಶನ ತಟಾಕ ಒಡೆದುಹೋದಾಗ, ರುದ್ರದಾಮನ್ ಪ್ರಜೆಗಳ ಮೇಲೆ ಹೆಚ್ಚಿನ ತೆರಿಗೆಗಳನ್ನು ವಿಧಿಸದೆ ತನ್ನ ಬೊಕ್ಕಸದ ಹಣದಿಂದ ರಿಪೇರಿ ಮಾಡಿಸಿದುದಾಗಿ 150–151ರ ಗಿರ್ನಾರಿನ ಸಂಸ್ಕೃತ ಶಾಸನ ತಿಳಿಸುತ್ತದೆ. ಇವನು ಪಂಜಾಬಿನಿಂದ ಪುಣೆಯವರೆಗೆ ಪಶ್ಚಿಮ ಭಾರತವನ್ನೆಲ್ಲ ಗೆದ್ದುದಲ್ಲದೆ ದಕ್ಷಿಣಾಪಥೇಶ್ವರನಾದ ಸಾತಕರ್ಣಿಯನ್ನು ಸಂಪೂರ್ಣವಾಗಿ ಸೋಲಿಸಿದುದಾಗಿ ಹೇಳಿಕೊಂಡಿದ್ದಾನೆ. ರಣಪರಾಕ್ರಮಿಯಾಗಿದ್ದುದಲ್ಲದೆ ಸಂಸ್ಕೃತ ಸಾಹಿತ್ಯಕ್ಕೆ ಆಶ್ರಯದಾತನೂ ಆಗಿದ್ದು ಸ್ವತಃ ಗದ್ಯಪದ್ಯ ಕೃತಿಗಳನ್ನು ರಚಿಸಿದುದಾಗಿ ತಿಳಿದು ಬರುತ್ತದೆ.

ರುದ್ರದಾಮನನ ಅನಂತರ ಕೆಲವು ದುರ್ಬಲ ಕ್ಷತ್ರಪರು ಅಧಿಕಾರಕ್ಕೆ ಬಂದರೂ ಕ್ಷತ್ರಪರ ಪ್ರಾಬಲ್ಯ ಕ್ಷೀಣಗೊಂಡಿತು. ಇವರಲ್ಲಿ 1ನೆಯ ರುದ್ರಸಿಂಹ (ಸು.180–197) ಪ್ರಮುಖನಾಗಿದ್ದ. ಈ ವಂಶದ ಕೊನೆಯ ಕ್ಷತ್ರಪನಾದ ವಿಶ್ವಸೇನನ (293–305) ಬಗ್ಗೆ ಹೆಚ್ಚಿನ ವಿವರಗಳು ದೊರಕಿಲ್ಲ. ಪರ್ಷಿಯದ ಸಸ್ಸೇನಿಯನ್ ಪ್ರಭುಗಳಿಂದ ಇವರ ಆಡಳಿತ ಕೊನೆಗೊಂಡಿರಬಹುದು. 304–305ರಲ್ಲಿದ್ದ ಕ್ಷತ್ರಪ 2ನೆಯ ರುದ್ರಸಿಂಹನ ಬಗ್ಗೆ ಮಾಹಿತಿಗಳು ದೊರಕಿದರೂ ಅವನು ಚಷ್ಟನನ ವಂಶಸ್ಥನೆಂದು ಹೇಳಲು ಆಧಾರಗಳಿಲ್ಲ. ಕ್ರಮೇಣ ಕ್ಷತ್ರಪರು ದುರ್ಬಲರಾಗಿ ಅವರ ಪ್ರದೇಶವೆಲ್ಲ ಗುಪ್ತ ಸಾಮ್ರಾಜ್ಯದಲ್ಲಿ ಸೇರಿಹೋಯಿತು.

ಕ್ಷತ್ರಪರು ಪರಕೀಯರಾದರೂ ಭಾರತದ ರಾಜಕೀಯದಲ್ಲಿ ಬೆರೆತು ಭಾರತೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡು ಅದರಲ್ಲೇ ಲೀನವಾದರು. *

**ಕ್ಷತ್ರಪರ ನಾಣ್ಯಗಳು:** ಕ್ಷತ್ರಪರ ನಾಣ್ಯಗಳಲ್ಲಿ ಬೆಳ್ಳಿಯವೇ ಪ್ರಧಾನವಾಗಿದ್ದರೂ ಕೆಲವು ರಾಜರು ಮಿಶ್ರಲೋಹದ ನಾಣ್ಯಗಳನ್ನೂ ಹಾಕಿಸಿದ್ದಾರೆ. ಇವಲ್ಲದೆ ತಾಮ್ರದ ಕೆಲವು ನಾಣ್ಯಗಳೂ ಸೀಸದ ನಾಣ್ಯಗಳೂ ದೊರೆತಿವೆ.

ಇವರ ಕಾರ್ಷಪಣಗಳೆಂಬ ಬೆಳ್ಳಿ ನಾಣ್ಯಗಳು ತೂಕ, ರಚನೆ, ಆಕಾರ ಎಲ್ಲದರಲ್ಲಿಯೂ ಇಂಡೋಗ್ರೀಕರ ದ್ರಮ್ಮಗಳನ್ನೇ ಹೋಲುತ್ತವೆ. ಅಲ್ಲದೆ ನಾಣ್ಯದ ಮುಂಭಾಗದಲ್ಲಿ ರಾಜನ ತಲೆಯ ಪಡಿಯಚ್ಚು ಹಾಕಿಸುವ ಪದ್ಧತಿಯನ್ನು ಕ್ಷತ್ರಪರು ರೋಮನರ ದೀನಾರಗಳನ್ನು ನೋಡಿ ಅನುಸರಿಸಿರಬಹುದು. ನಾಣ್ಯದ ಹಿಂಭಾದಲ್ಲಿ ನಹಪಾಣನ ಕಾಲದಲ್ಲಿ ಬಾಣ, ಚಕ್ರ, ವಜ್ರಾಯುಧಗಳಿದ್ದುವು. ಚಷ್ಟನನ ಕಾಲದಲ್ಲಿ ಬಾಲಚಂದ್ರ ಮತ್ತು ಸೂರ್ಯ ಅಥವಾ ನಕ್ಷತ್ರಗಳೂ ಅನಂತರ ಇವುಗಳ ನಡುವೆ ಬರುವಂತೆ ಚೈತ್ಯವೂ ಇದ್ದುವು. ರಾಜನ ಮತ್ತು ಆತನ ತಂದೆಯ ಹೆಸರುಗಳನ್ನು ತಿಳಿಸುವ ಅಂಕನ ಮೊದಲು ಬ್ರಾಹ್ಮಿ, ಖರೋಷ್ಠಿ ಮತ್ತು ಗ್ರೀಕ್–ರೋಮನ್ ಲಿಪಿಗಳಲ್ಲಿರುತ್ತಿದ್ದುವು. ಕ್ರಮೇಣ ಖರೋಷ್ಠಿ ಲಿಪಿ ಬಿಟ್ಟು ಹೋಗಿ ಬ್ರಾಹ್ಮಿಯೊಂದೇ ಉಳಿದುಕೊಂಡಿತು; ಮುಂಭಾಗದಲ್ಲಿ ರಾಜನ ತಲೆಯ ಸುತ್ತಲೂ ಇರುತ್ತಿದ್ದ ಗ್ರೀಕ್–ರೋಮನ್ ಲಿಪಿ ಅರ್ಥವಿಲ್ಲದ ಬರಿಯ ಅಲಂಕಾರವಾಗಿ ಉಳಿದುಕೊಂಡಿತು. ನಾಣ್ಯಗಳಲ್ಲಿ ಕಾಲವನ್ನು ಕೊಟ್ಟಿರುವುದರಿಂದಲೂ ರಾಜನ ಮತ್ತು ಆತನ ತಂದೆಯ ಹೆಸರುಗಳು ಇರುವುದರಿಂದಲೂ ಕ್ಷತ್ರಪರಾಜರ ಪರಂಪರೆಯನ್ನೂ ಪ್ರತಿಯೊಬ್ಬ ರಾಜನ ಆಳ್ವಿಕೆಯ ಕಾಲವನ್ನೂ ನಿಖರವಾಗಿ ಗೊತ್ತುಪಡಿಸಲು ಸಾಧ್ಯವಾಗಿದೆ.

ಮಿಶ್ರಲೋಹದ ನಾಣ್ಯಗಳು ಮಾಳವ ಪ್ರಾಂತ್ಯದಲ್ಲಿ ಉಪಯೋಗದಲ್ಲಿದ್ದಂತೆ ಕಂಡು ಬರುತ್ತದೆ. ಈ ನಾಣ್ಯಗಳ ಹಿಂಭಾಗದಲ್ಲಿ ಬೆಳ್ಳಿ ನಾಣ್ಯಗಳಲ್ಲಿರುವಂತೆ ಚೈತ್ಯ, ಚಂದ್ರ, ಸೂರ್ಯರೂ ಬ್ರಾಹ್ಮಿ ಲಿಪಿಯ ಅಂಕನವೂ ಇದ್ದರೂ ಮುಂಭಾಗದಲ್ಲಿ ರಾಜನ ತಲೆಯ ಬದಲು ಗೂಳಿಯೋ ಆನೆಯೋ ಇರುತ್ತದೆ. (ಎಂ.ಎಚ್.)

**ಕ್ಷಮಾದಾನ :** ರಾಜಕೀಯ ಮೊದಲಾದ ಯಾವುದೇ ರೀತಿಯ ಅಪರಾಧಗಳಿಗೆ ನ್ಯಾಯಾಲಯಗಳು ಶಿಕ್ಷೆ ವಿಧಿಸಿದಾಗ ರಾಷ್ಟ್ರದ ಸರ್ವೋಚ್ಚ ಅಧಿಕಾರಿ ಶಿಕ್ಷೆಯನ್ನು ರದ್ದುಪಡಿಸುವ ಕ್ರಮ(ಆಮ್ನೆಸ್ಟಿ). ಪ್ರಪಂಚದ ರಾಷ್ಟ್ರಗಳಲ್ಲಿ ಬಹುತೇಕ ರಾಷ್ಟ್ರಗಳು ಸ್ವತಂತ್ರವಾದ ಮತ್ತು ಪರಮಾಧಿಕಾರವುಳ್ಳ ರಾಷ್ಟ್ರಗಳಾಗಿವೆ. ಆಂತರಿಕ ಮತ್ತು ವಿದೇಶಾಂಗ ವ್ಯವಹಾರ

ರಾಷ್ಟ್ರಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದೆ. ರಾಜ್ಯದೊಳಗಿರುವ ಸಂಘಸಂಸ್ಥೆಗಳೂ ಜನರೂ ಒಳಪಟ್ಟಿರುವುದು. ಸರ್ಕಾರದ ಪರಮಾಧಿಕಾರಕ್ಕೆ ಆದ್ದರಿಂದ ರಾಷ್ಟ್ರದ ಮೂಲಶಾಸನವಾದ ಸಂವಿಧಾನವನ್ನೂ ಪ್ರಾದೇಶಿಕ ಸಮಗ್ರತೆಯನ್ನೂ ಪರಮಾಧಿಕಾರವನ್ನೂ ಪ್ರಶ್ನಿಸುವ ಅಧಿಕಾರ ಯಾರಿಗೂ ಇರುವುದಿಲ್ಲ ಯಾರಾದರೂ ಆಕ್ರಮವಾದ ವಿಧಾನಗಳಿಂದ ರಾಷ್ಟ್ರದ ಅಸ್ತಿತ್ವಕ್ಕೆ ಧಕ್ಕೆಯುಂಟು ಮಾಡುವ ಪ್ರಯತ್ನ ಮಾಡಿದರೆ, ಆ ಪ್ರಯತ್ನವನ್ನು ವಿಫಲಗೊಳಿಸಿ ರಾಷ್ಟ್ರವ್ಯವಸ್ಥೆಯನ್ನು ಕಾಪಾಡುವ ಅಧಿಕಾರ ಪರಮಾಧಿಕಾರದ ವ್ಯಾಪ್ತಿಗೆ ಸೇರಿದೆ. ಆದ್ದರಿಂದ ರಾಷ್ಟ್ರವಿದ್ರೋಹ ಕಾರ್ಯಗಳು, ಸಶಸ್ತ್ರದಂಗೆಗಳು, ಅಂತರ್ಯುದ್ಧಗಳು ಇತ್ಯಾದಿ ಕಾರ್ಯಚಟುವಟಿಕೆಗಳನ್ನು ದಮನಮಾಡುವ ಅಧಿಕಾರ ರಾಷ್ಟ್ರಕ್ಕಿದೆ. ಈ ಕಾರ್ಯಗಳಲ್ಲಿ ತೊಡಗಿದವರನ್ನು ಶಿಕ್ಷಿಸುವ ಅಧಿಕಾರವೂ ರಾಷ್ಟ್ರಕ್ಕಿದೆ. ಈ ವಿಧವಾದ ಅಪರಾಧಗಳನ್ನು ರಾಜಕೀಯ ಅಪರಾಧಗಳೆಂದು ಪರಿಗಣಿಸಲಾಗಿದೆ.

ರಾಷ್ಟ್ರವಿದ್ರೋಹಕಾರಿ ಕೃತ್ಯಗಳಿಂದ ಉಂಟಾದ ಅಶಾಂತಿಯನ್ನು ಉಪಶಮನ ಮಾಡುವುದಕ್ಕಾಗಿ, ಜನರಲ್ಲಿ ಉಂಟಾದ ದ್ವೇಷೋದ್ರೇಕ ಭಾವನೆಗಳನ್ನು ಹೋಗಲಾಡಿಸುವುದಕ್ಕಾಗಿ, ಯಥಾಸ್ಥಿತಿಯನ್ನು ಪುನಃ ಸ್ಥಾಪಿಸುವುದಕ್ಕಾಗಿ, ರಾಜಕೀಯ ಅಪರಾಧಗಳಲ್ಲಿ ತೊಡಗಿದ್ದವರು ಎಸಗಿದ ಪೂರ್ವಾಪರಾಧಗಳನ್ನು ಮರೆಸುವುದಕ್ಕಾಗಿ ಮತ್ತು ಜನರೆಲ್ಲರೂ ಪುನಃ ಅನ್ಯೋನ್ಯ ಸಂಬಂಧದಿಂದ ಜೀವಿಸುವಂತೆ ಮಾಡುವ ಸಲುವಾಗಿ ಅಪರಾಧಿಗಳಿಗೆ ಕ್ಷಮಾದಾನ ನೀಡುವುದೂ ಉಂಟು. ಇತರ ಬಗೆಯ ಅಪರಾಧಿಗಳಿಗೂ ಕೆಲವೊಮ್ಮೆ ಕ್ಷಮಾದಾನ ನೀಡಲಾಗುತ್ತದೆ. ಕ್ಷಮಾದಾನದ ಮೂಲಕ ಅಪರಾಧಿಯ ಮನಸ್ಸನ್ನು ಪರಿವರ್ತನೆ ಮಾಡಬಹುದು. ಈ ಅಂಶವನ್ನು ಸಮರ್ಥಿಸುವುದಕ್ಕೆ ಈ ಕೆಳಗಿನ ನಿದರ್ಶನಗಳನ್ನು ಕೊಡಬಹುದು :

ಇಂಗ್ಲೆಂಡಿನ ದೊರೆಯಾಗಿದ್ದ 2ನೆಯ ಚಾರ್ಲ್ಸ್ ತನ್ನ ತಂದೆಯನ್ನು ವಧೆ ಮಾಡಿದವರು ಮತ್ತು ಇತರ ಕೆಲವರನ್ನು ಬಿಟ್ಟು, ಆ ಘಟನೆಯಲ್ಲಿ ಭಾಗವಹಿಸಿದ ಉಳಿದವರಿಗೆಲ್ಲ ಸು.1660ರಲ್ಲಿ ಕ್ಷಮಾದಾನ ನೀಡಿದ. ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಆಂಡ್ರ್ಯೂ ಜಾನ್‌ಸನ್, ಸಂಯುಕ್ತವ್ಯವಸ್ಥೆಯ ವಿರುದ್ಧ ಬಂಡಾಯವೆದ್ದಿದ್ದ ಸಹಾಪರಾಧಿಗಳಿಗೆ ಸಂಯುಕ್ತಸಂಸ್ಥಾನ ಸಂವಿಧಾನಕ್ಕೆ ನಿಷ್ಠೆಯಿಂದ ನಡೆದುಕೊಳ್ಳುವ ಪ್ರಮಾಣವಚನದ ಆಧಾರದ ಮೇಲೆ 1865ರಲ್ಲಿ ಕ್ಷಮಾದಾನ ನೀಡಿದ. ಪಾಕಿಸ್ತಾನದ ಮಾಜಿ ಅಧ್ಯಕ್ಷ ಅಯೂಬ್ ಖಾನನ ವಿರುದ್ಧ ಬಂಡಾಯವೆದ್ದು ಅಧಿಕಾರದ ಬದಲಾವಣೆಗೆ ಕಾರಣರಾದ ರಾಜಕಾರಣಿಗಳಿಗೆ ಅಧ್ಯಕ್ಷ ಯಹ್ಯಾಖಾನ್ ಕ್ಷಮಾದಾನ ನೀಡಿದ್ದ. ನಾಗಾ ಮತ್ತು ಮಿಜೋ ದಂಗೆಕೋರರಿಗೆ ಭಾರತ ಸರ್ಕಾರ ಕ್ಷಮಾದಾನ ನೀಡಿತು.

ಯುದ್ಧಕಾಲದಲ್ಲಿ ಪರರಾಷ್ಟ್ರಗಳೊಡನೆ ಸೇರಿಕೊಂಡು ಶತ್ರುಗಳಿಗೆ ಸಹಾಯ ಮತ್ತು ಸಹಕಾರ ನೀಡುವ ನಾಗರಿಕರು ಮತ್ತು ಶರಣಾರ್ಥಿಗಳಾದ ಸಶಸ್ತ್ರದಳಗಳವರಿಗೆ ಕ್ಷಮಾದಾನ ನೀಡುವುದಕ್ಕೆ ಸಂಬಂಧಿಸಿದ ಉಪವಿಧಿಗಳು ಸಾಮಾನ್ಯವಾಗಿ ಎಲ್ಲ ಶಾಂತಿ ಒಪ್ಪಂದಗಳಲ್ಲೂ ಇರುವುದುಂಟು. 20ನೆಯ ಶತಮಾನದಲ್ಲಿ ನಡೆದ ಎರಡು ಮಹಾಯುದ್ಧಗಳ ಅನಂತರ ರಾಷ್ಟ್ರಗಳು ಸಹಿ ಹಾಕಿದ ಶಾಂತಿ ಒಪ್ಪಂದಗಳಲ್ಲಿ ಈ ರೀತಿಯ ಉಪವಿಧಿಗಳು ಕಾಣಬರುವುದಿಲ್ಲ. ಎರಡು ಅಥವಾ ಅನೇಕ ರಾಷ್ಟ್ರಗಳು ಸೇರಿ ಮಾಡಿಕೊಂಡ ಒಪ್ಪಂದಗಳ ಮೂಲಕ ಈ ರೀತಿಯ ಕ್ಷಮಾದಾನವನ್ನು ನೀಡಲಾಗುತ್ತಿತ್ತು ಎಂಬುದಕ್ಕೆ ಈ ಕೆಳಕಂಡ ನಿದರ್ಶನಗಳನ್ನು ಕೊಡಬಹುದು:

ಪ್ರ.ಶ.ಪೂ. 404ರಲ್ಲಿ 30 ಜನ ನಿರಂಕುಶಾಧಿಕಾರಿಗಳ ದಬ್ಬಾಳಿಕೆಯನ್ನು ಸದೆಬಡಿದ ಅನಂತರ ಆಥೆನ್ಸ್‌ನ ಥ್ರ್ಯಾಸಿಬ್ಯೂಲಸ್ ಆ ಮೂವತ್ತು ಜನರನ್ನು ಬಿಟ್ಟು ಉಳಿದವರಿಗೆಲ್ಲ ಕ್ಷಮಾದಾನ ನೀಡಿದ. ರೋಮನ್ ಚಕ್ರಾಧಿಪತ್ಯದ ಕಾಲದಲ್ಲೂ ಕ್ಷಮಾದಾನ ನೀಡುವುದಕ್ಕೆ ಪೋಷಕವಾದ ಕಾನೂನು ತತ್ತ್ವಗಳಿದ್ದುವು. ಆಧುನಿಕ ಯುಗದಲ್ಲಿ 1815ರ ವಿಯೆನ್ನ ಒಪ್ಪಂದದ ವಿಧಿಗಳಿಂದಾಗಿ ಪೋಲಿಷ್ ಮತ್ತು ಸ್ವೀಡಿಷ್ ಜನರಿಗೆ ಕ್ಷಮಾದಾನ ದೊರೆಯಿತು. 1871ರ ಫ್ರಾಂಕ್‌ಫರ್ಟ್ ಒಪ್ಪಂದದ ವಿಧಿಗಳಿಂದಾಗಿ ಜರ್ಮನಿಗೆ ಫ್ರಾನ್ಸ್ ವರ್ಗಾಯಿಸಿದ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರಿಗೆ ಕ್ಷಮಾದಾನ ದೊರೆಯಿತು. 1878ರಲ್ಲಿ ರಷ್ಯ ಮತ್ತು ತುರ್ಕಿ ಮಾಡಿಕೊಂಡ ಸ್ಯಾನ್‌ಸ್ಟಿಫ್ಯಾನೋ ಒಪ್ಪಂದದ ನಿಯಮಗಳಿಂದಾಗಿ ಸಹ ಯುದ್ಧದಲ್ಲಿ ರಷ್ಯದ ಪರವಾಗಿದ್ದ ತುರ್ಕಿ ಜನರಿಗೆ ಕ್ಷಮಾದಾನ ದೊರೆಯಿತು. 1902ರ ಬೋಯರ್ ಒಪ್ಪಂದದಲ್ಲಿ ದಕ್ಷಿಣ ಆಫ್ರಿಕದಲ್ಲಿ ಬೋಯರ್ ಜನರಿಗೆ ಕ್ಷಮಾದಾನ ನೀಡುವುದಕ್ಕೆ ಸಂಬಂಧಿಸಿದ ಉಪವಿಧಿಗಳಿದ್ದುವು. ಭಾರತದಲ್ಲಿ ಪ್ರಮುಖವಾಗಿ ಇಸ್ಲಾಂ ಭಯೋತ್ಪಾದನಾ ಸಂಘಟನೆಯಿಂದ ಮತ್ತು ನಕ್ಸಲ್ ಚಳವಳಿಯಿಂದ ಹೊರಬಂದು ಶರಣಾದವರಿಗೆ ಕ್ಷಮಾದಾನ ನೀಡಲಾಗಿದೆ.

ದ್ವೇಷೋದ್ರೇಕ ಭಾವನೆಗಳನ್ನು ಉಪಶಮನಮಾಡಿ, ಅಪರಾಧಿಗಳ ಪುನಃ ಪರಿವರ್ತನೆ ಮಾಡುವುದರ ಮೂಲಕ ದೇಶದಲ್ಲಿ ಅಥವಾ ದೇಶಗಳಲ್ಲಿ ಮಾಮೂಲು ಸ್ಥಿತಿಯನ್ನು ಏರ್ಪಡಿಸುವುದಕ್ಕೋಸ್ಕರ ಕ್ಷಮಾದಾನವನ್ನು ನೀಡುವ ಸಂಪ್ರದಾಯ ಎಲ್ಲ ರಾಷ್ಟ್ರಗಳಲ್ಲೂ ಆಚರಣೆಯಲ್ಲಿದೆ. (ಎಂ.ಬಿ.ಆರ್‌ಯು.)

**ಕ್ಷಯ : ನೋಡಿ – ಸಂವತ್ಸರಗಳು**

**ಕ್ಷಯ[2] :** ಮೈಕೋಬ್ಯಾಕ್ಟೀರಿಯಂ ಟ್ಯೂಬರ್‌ಕಲ್ ಎಂಬ ದಂಡಾಣುವಿನಿಂದ ಬರುವ ಸೋಂಕು ಕಾಯಿಲೆ (ಟ್ಯೂಬರ್‌ಕ್ಯುಲೋಸಿಸ್). ಇದು ಆನುವಂಶೀಯ ರೋಗವಲ್ಲ. ರಾಬರ್ಟ್‌ಕಾಕ್ ಎಂಬಾತ (**ನೋಡಿ– ಕಾಕ್–ರಾಬರ್ಟ್**) ಕ್ಷಯದ ದಂಡಾಣುಜೀವಿಯನ್ನು ಮೊದಲು ಆವಿಷ್ಕರಿಸಿದವ (1882). ಇದರ ಉದ್ದ 2 μ ಮತ್ತು ಅಗಲ 0.5 μ. ಇದನ್ನು ಸಾಧಾರಣ ಬಣ್ಣಗಳಿಂದ ಸುಲಭವಾಗಿ ಅಭಿರಂಜಿಸಲು (ಸ್ಟೇನ್) ಸಾಧ್ಯವಿಲ್ಲ. ಆದರೆ ಒಂದು ಸಾರಿ ಇದು ಅಭಿರಂಜಿತವಾದರೆ ಇದನ್ನು ಸಾರ ಆಮ್ಲ ಅಥವಾ ಮದ್ಯಸಾರದಿಂದ ಅಳಿಸುವುದು ಸಾಧ್ಯವಿಲ್ಲ. ಆದ್ದರಿಂದ ಕ್ಷಯದ ದಂಡಾಣು ಆಮ್ಲ ಹಾಗೂ ಮದ್ಯಸಾರಕ್ಕೆ ಗಾಢವಾದುದು(ಫಾಸ್ಟ್) ಎನ್ನುತ್ತಾರೆ. ಅಭಿರಂಜಿಸುವ ವಿಧಾನಕ್ಕೆ ಜೈಲ್ ನೀಲ್‌ಸನ್ನನ ಕ್ರಮ ಎಂದು ಹೆಸರು. ಈ ರೀತಿಯಲ್ಲಿ ಅಭಿರಂಜಿಸಿದಾಗ ಸೂಕ್ಷ್ಮದರ್ಶಕದಲ್ಲಿ ಕ್ಷಯದ ದಂಡಾಣುಗಳು ಅನೇಕ ಚುಕ್ಕೆಗಳಿರುವ ಗುಲಾಬಿ ಬಣ್ಣದ ಕಡ್ಡಿಗಳಂತೆ ಕಾಣುತ್ತವೆ. ಇದೇ ರೀತಿ ಹೊರತೋರಿಕೆಗೆ ಕಾಣಬರುವ ಹಲವಾರು ದಂಡಾಣುಜೀವಿಗಳಿವೆ. ಅವುಗಳಲ್ಲಿ ಕೆಲವು ಮನುಷ್ಯನಿಗೆ ರೋಗಕಾರಕವಾದವು ಮತ್ತೆ ಕೆಲವು ರೋಗಕಾರಕವಲ್ಲದವು. ಅಭಿರಂಜನ ವಿಧಾನ, ಬೆಳೆಯುವ ವಿಧಾನ ಹಸು, ಹಕ್ಕಿಗಳು, ಮೊಲಗಳು ಮತ್ತು ಗಿನಿಯಿಲಿಗಳಿಗೆ ಸೋಂಕು ಉಂಟುಮಾಡುವ ರೀತಿ – ಮುಂತಾದವುಗಳಿಂದ ಈ ದಂಡಾಣುಗಳನ್ನು ಪ್ರತ್ಯೇಕಿಸಿ ತಿಳಿಯುವುದು ಸಾಧ್ಯ. ರೋಗಕಾರಕ ದಂಡಾಣುಗಳಲ್ಲೂ ಹಲವಾರು ಬಗೆಗಳಿವೆ. ಅವುಗಳಲ್ಲಿ ಕೆಲವು ಮನುಷ್ಯನಿಗೆ ಮತ್ತೆ ಹಲವು ಜಾನುವಾರು ಹಾಗೂ ಹಕ್ಕಿಗಳಿಗೆ ಸೋಂಕನ್ನು ಉಂಟುಮಾಡುತ್ತವೆ. ಮನುಷ್ಯನಿಗೆ ಸೋಂಕು ಉಂಟು ಮಾಡುವುದರಲ್ಲಿ ಮಾನವಪ್ರರೂಪ ಎಂಬ ಹೆಸರಿನ ದಂಡಾಣು ಪ್ರಧಾನವಾದದ್ದು. ಅನಂತರದ್ದು ಜಾನುವಾರು ಪ್ರರೂಪ ಮತ್ತು ಕಡೆಯದು ಪಕ್ಷಿ ಹಾಗೂ ಜಲಚರ ಪ್ರರೂಪ. (ವೈ.ಆರ್.)

ಮಾನವ ಕ್ಷಯರೋಗವನ್ನು ಸಾವಿರಾರು ವರ್ಷಗಳಿಂದ ಬಲ್ಲ. 5,000 ವರ್ಷಗಳ ಹಿಂದಿನವಾದ ಈಜಿಪ್ಟಿನಲ್ಲಿಯ ರಕ್ಷಿಸಲ್ಪಟ್ಟ ಮೃತದೇಹಗಳು ತಪ್ಪುತಿಳಿವಳಿಕೆಗೆ ಅವಕಾಶವಿಲ್ಲದಂತೆ ಕ್ಷಯರೋಗದ ಚಿಹ್ನೆಗಳನ್ನು ತೋರಿಸಿವೆ. ಚೀನ ದೇಶದ ಪ್ರಾಚೀನ ಸಾಹಿತ್ಯದಲ್ಲಿ ಕ್ಷಯರೋಗವನ್ನು ನಿಕಟವಾಗಿ ಹೋಲುವ ಲಾವೋಪಿಂಗ್ ಎಂಬ ಫುಪ್ಪುಸರೋಗವನ್ನು ವಿವರಿಸಲಾಗಿದೆ. 2,000 ವರ್ಷಗಳಿಗೂ ಹಿಂದಿನದಾದ ಋಗ್ವೇದದಲ್ಲಿ ಕ್ಷಯ ಚಿಕಿತ್ಸೆಗೆ ಸಂಬಂಧಿಸಿದಂತೆ ಒಂದು ಮಂತ್ರ ನಿವೇದಿತವಾಗಿದೆ. ನಮ್ಮ ಪ್ರಾಚೀನ ಆಯುರ್ವೇದ ಶಸ್ತ್ರಚಿಕಿತ್ಸಕ ಸುಶ್ರುತ ಈ ರೋಗವನ್ನು ವಿವರಿಸಿದ್ದನಲ್ಲದೆ ಅದನ್ನು ಚಿಕಿತ್ಸೆಮಾಡುವುದು ಬಹು ಕಷ್ಟವೆಂಬುದನ್ನು ಗಮನಿಸಿದ್ದ ಕೂಡ. ಗ್ರೀಕರು ಈ ರೋಗಕ್ಕೆ ಥೈಸಿಸ್ ಎಂಬ



ಚಿತ್ರ 1 ಟ್ಯೂಬರ್‌ಕಲ್ ಬ್ಯಾಸಿಲೈ ಕ್ಷಯರೋಗಾಣುಗಳು – ಮೈಕ್ರೊಸ್ಕೋಪಿನಲ್ಲಿ ನೋಡಿದಾಗ

ಶಬ್ದವನ್ನು ಉಪಯೋಗಿಸಿದ್ದರು. ಆದರೆ ಅರ್ವಾಚೀನ ವೈದ್ಯದ ಜನಕನಾದ ಹಿಪೊಕ್ರೆಟಸ್ ಅತಿಯಾಗಿ ದೇಹವನ್ನು ಶೋಷಿಸುವ ಯಾವುದೇ ರೋಗವನ್ನೂ ಥೈಸಿಸ್ ಎಂದೇ ಗುರುತಿಸಿದ. 1650ರಲ್ಲಿ ಸಿಲ್ವಿಯಸ್ ಥೈಸಿಸ್ಸಿನಿಂದ ಮೃತರಾದವರ ಫುಪ್ಪುಸಗಳಲ್ಲಿ ಗಡಸಾದ ಸಣ್ಣಗಂಟುಗಳನ್ನು ಗಮನಿಸಿ ಅವನ್ನು ಟ್ಯೂಬರ್‌ಕಲುಗಳೆಂದು ಕರೆದ. ಕ್ರಮೇಣ ಈ ರೋಗಕ್ಕೆ ಟ್ಯೂಬರ್‌ಕ್ಯುಲೋಸಿಸ್ (ಕ್ಷಯ) ಎಂದು ಹೆಸರಾಯಿತು. ಅನಂತರ ವರ್‌ಕಾ

ಮತ್ತು ವಿಲ್ಲೆಮಿನ್ ಎಂಬವರು ಕ್ಷಯರೋಗ ಪ್ರಾಣಿಯಿಂದ ಪ್ರಾಣಿಗೂ ಮನುಷ್ಯನಿಂದ ಪ್ರಾಣಿಗೂ ಒಯ್ಯಲ್ಪಡಬಹುದೆಂಬುದನ್ನು ತೋರಿಸಿ ಇದರ ಸಾಂಕ್ರಾಮಿಕ ಸ್ವಭಾವವನ್ನು ದೃಢಪಡಿಸಿದರು.

ಪ್ರಗತಿಹೊಂದುತ್ತಿರುವ ಬಹುಸಂಖ್ಯೆಯ ಬಡದೇಶಗಳ ಒಂದು ಮಹತ್ತರವಾದ ಸಾರ್ವಜನಿಕ ಆರೋಗ್ಯದ ಪ್ರಶ್ನೆ ಕ್ಷಯರೋಗವೆಂದು ಇಂದು ಪರಿಗಣಿಸಲ್ಪಟ್ಟಿದೆ. ಆರ್ಥಿಕವಾಗಿ ಹೆಚ್ಚು ಮುಂದುವರಿದಿರುವ ಪಾಶ್ಚಾತ್ಯ ದೇಶಗಳು ಹೆಚ್ಚು ಒಳ್ಳೆಯ ಪರಿಸ್ಥಿತಿಯಲ್ಲಿದ್ದರೂ ಯಾವ ದೇಶದಲ್ಲೂ ಇನ್ನೂ ಕ್ಷಯರೋಗವನ್ನು ನಿರ್ಮೂಲ ಮಾಡುವುದಿರಲಿ ಹತೋಟಿಯಲ್ಲಿಡುವುದಕ್ಕೂ ಆಗಿಲ್ಲ. ಈಚಿನ ದಶಕಗಳಲ್ಲಿ ಗೋಚರಿಸಿರುವ ಹೆಚ್‌ಐವಿ ಸೋಂಕು ಏಡ್ಸ್ ಕಾಯಿಲೆಯಿಂದಾಗಿ ದೇಹದ ಪ್ರತಿರೋಧಕ ಶಕ್ತಿಗೆ ಭಂಗ ಉಂಟಾಗುವುದರಿಂದಾಗಿ ಅವರಲ್ಲಿ ಕ್ಷಯ ರೋಗದ ಬೆಳವಣಿಗೆಗೆ ವಿಶೇಷವಾಗಿ




ಚಿತ್ರ 2 ಕ್ಷಯರೋಗ ಪೀಡಿತನ ಪುಪ್ಪುಸಗಳಿಗೆ ಸಂಬಂಧಿಸಿದಂತೆ ಕಂಡುಬರುವ: ಬದಲಾವಣೆಗಳು A–ಬಲಪುಪ್ಪುಸದಲ್ಲಿ ಡೊಗರು; B– ರಕ್ತನಾಳಗಳ ಕೊರೆತದಿಂದ ಉಗುಳಿನಲ್ಲಿ ರಕ್ತ; C–ಪುಪ್ಪುಸಗಳ ಬಹುಭಾಗ ನಾಶವಾಗಿ ಉಸಿರಾಟದಲ್ಲಿ ತೇಕುವಿಕೆ ಉಂಟಾಗುವಿಕೆ.

ಗೋಚರಿಸತೊಡಗಿದೆ. ಈ ಸಂಖ್ಯಾ ಬೆಳವಣಿಗೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹೊರತಾಗಿಲ್ಲ. ಪ್ರಪಂಚದಲ್ಲೆಲ್ಲ ಸುಮಾರು ಎರಡು ಕೋಟಿ ಜನರು ತೀವ್ರವಾದ ಕ್ಷಯದಿಂದ ನರಳುತ್ತಿದ್ದಾರೆಂದೂ ಅವರಲ್ಲಿ 10–25 ಲಕ್ಷ ಜನರು ಪ್ರತಿವರ್ಷವೂ ಸಾಯುತ್ತಿದ್ದಾರೆಂದೂ ಅಂದಾಜು ಮಾಡಲಾಗಿದೆ. ಭಾರತ ಒಂದರಲ್ಲೇ ಸುಮಾರು 80 ಲಕ್ಷ ಕ್ಷಯರೋಗಿಗಳಿದ್ದು 20 ಲಕ್ಷ ಜನ ಸೋಂಕುಂಟುಮಾಡಬಲ್ಲವರಾಗಿದ್ದಾರೆ. ಪ್ರತಿ ವರ್ಷ 20 ಲಕ್ಷ ಜನ ಕ್ಷಯ ರೋಗ ಹೊಂದುತ್ತಿದ್ದಾರೆ.

ಕ್ಷಯರೋಗಾಣು: ಕ್ಷಯರೋಗ ಅನೇಕ ವರ್ಷಗಳ ಪರ್ಯಂತ ದೀರ್ಘಕಾಲಿಕವಾಗಿ ವ್ಯಾಪಿಸುವ ಸಾಂಕ್ರಾಮಿಕ ರೋಗ. ಈ ರೋಗ ಟ್ಯೂಬರ್‌ಕಲ್ ಬ್ಯಾಸಿಲಸ್ ಅಥವಾ ಮೈಕ್ರೋಬ್ಯಾಕ್ಟೀರಿಯಂ ಟ್ಯೂಬರ್‌ಕಲ್ (ಕ್ಷಯರೋಗಾಣು) ಎಂಬ ದಂಡಾಣುವಿನಿಂದ ಉಂಟಾಗುತ್ತದೆ ಎಂದು ಈಗಾಗಲೇ ಹೇಳಿದೆ. ಇದು ಎಷ್ಟು ಸೂಕ್ಷ್ಮವಾಗಿದೆ ಎಂದರೆ ಅದನ್ನು ಆಯಾತಾಕಾರದ ಗಾಜಿನ ಚೂರಿನ ಮೇಲೆ ಅಭಿರಂಜಿಸಿ ಪ್ರಬಲವಾದ ಸೂಕ್ಷ್ಮದರ್ಶಕದ ಮೂಲಕ ನೋಡಿದರೆ ಮಾತ್ರ ಗೋಚರಿಸುವಂತಿದೆ. ಕ್ಷಯರೋಗದ ಸಾಂಕ್ರಾಮಿಕ ಸ್ವಭಾವ ಬಹುಮುಂಚೆಯೇ ತಿಳಿದುಬಂದಿದ್ದರೂ ಅದರ ಕರ್ತೃವನ್ನು ಸೂಕ್ಷ್ಮದರ್ಶಕದ ಉಪಜ್ಞೆಯಾದ ಮೇಲೆಯೇ ತಿಳಿಯಲಾಯಿತು. ಮಾನವರಲ್ಲಿ ರೋಗವನ್ನು ಉಂಟುಮಾಡುವ ಕ್ಷಯದಂಡಾಣುಗಳಲ್ಲಿ ಪ್ರಧಾನವಾಗಿ ಮೂರು ಪ್ರರೂಪಗಳಿವೆ–ಮಾನವ ಸಂಬಂಧವಾದದ್ದು, ಪಶುಸಂಬಂಧವಾದದ್ದು ಮತ್ತು ಪಕ್ಷಿಸಂಬಂಧವಾದದ್ದು. ಪಶುಸಂಬಂಧ ಪ್ರರೂಪ ಪ್ರಧಾನವಾಗಿ ಪಶುಗಳಲ್ಲೂ ಪಕ್ಷಿಸಂಬಂಧವಾದದ್ದು ಪಕ್ಷಿಗಳಲ್ಲೂ ರೋಗವನ್ನು ಉಂಟುಮಾಡುತ್ತದೆ. ಮಿಕ್ಕ ಬೇರೆ ವಿಧಗಳ ದಂಡಾಣುಗಳು ಪ್ರಮುಖವಲ್ಲದವು. ಅವನ್ನು ಅನೇಕ ವೇಳೆ ಅಲಾಕ್ಷಣಿಕ ಮೈಕ್ರೋಬ್ಯಾಕ್ಟೀರಿಯಗಳೆಂದು ಕರೆಯುವುದುಂಟು.

ಕ್ಷಯರೋಗಾಣುಗಳು ಮಾನವನ ಅಥವಾ ಪ್ರಾಣಿಗಳ ದೇಹದಲ್ಲಿ ಮಾತ್ರ ಇಲ್ಲವೇ ಪ್ರಯೋಗಶಾಲೆಯಲ್ಲಿ ವಿಶಿಷ್ಟ ಪೌಷ್ಟಿಕಾಂಶಗಳನ್ನೊಳಗೊಂಡ ಮಾಧ್ಯಮ ವಸ್ತುಗಳಲ್ಲಿ ಮಾತ್ರ ವೃದ್ಧಿಸಿ ಏಳಿಗೆ ಹೊಂದುತ್ತವೆ. ಹೊರ ವಾತಾವರಣದಲ್ಲಿ ಏಗಲಾರವಾದರೂ ಕೊಳಚೆ ಪ್ರದೇಶದ ಕತ್ತಲು ಮತ್ತು ಶೈತ್ಯ ತುಂಬಿದ ಮನೆಗಳಲ್ಲಿ ಅವು ವಾರಗಟ್ಟಲೆ, ತಿಂಗಳುಗಟ್ಟಲೆ ಜೀವಂತವಾಗಿರುವಷ್ಟು ಕಷ್ಟಸಹಿಷ್ಣುಗಳಾಗಿರುತ್ತವೆ. ಬಿಸಿಲು, ಅತಿನೇರಿಳೆ ಕಿರಣಗಳು ಮತ್ತು ಕುದಿಸುವಿಕೆ ಅವನ್ನು ಬೇಗ ಕೊಲ್ಲುತ್ತವೆ. ಕ್ರಿಮಿನಾಶಕಗಳಾದರೋ ಅವನ್ನು ನಾಶಮಾಡಲು ಕೆಲವು ಗಂಟೆಗಳನ್ನೇ ತೆಗೆದುಕೊಳ್ಳುತ್ತವೆ.

ಸೋಂಕು : ಕ್ಷಯ ದಂಡಾಣು ದೇಹದ ಒಳಹೊಗುವುದಕ್ಕೆ ಸೋಂಕು ಎಂದು ಹೆಸರು. ಕ್ಷಯರೋಗಿ ಕೆಮ್ಮಿದಾಗ ಮತ್ತು ಸೀನಿದಾಗ ಹೊರಹೊರಡಿಸುವ ಸಣ್ಣ ಕಫದ ತುಂತುರುಗಳನ್ನು ಇನ್ನೊಬ್ಬ ಉಚ್ಛ್ವಸಿಸುವುದರ ಮೂಲಕ ಪ್ರಧಾನವಾಗಿ ಈ ರೋಗಾಣುಗಳು ದೇಹದ ಒಳಹೋಗುತ್ತವೆ. ಇದನ್ನು ಬಿಟ್ಟರೆ ಸೋಂಕು ಹರಡುವಿಕೆಯ ಮುಂದಿನ ಸಾಮಾನ್ಯ ವಿಧಾನ ಜಠರ ಮತ್ತು ಕರುಳಿನ ಮೂಲಕ. ಅಂದರೆ ಆರೋಗ್ಯವಾಗಿರುವ ವ್ಯಕ್ತಿ ಕ್ಷಯರೋಗಿಯ ಸಂಪರ್ಕದಿಂದ ಕಲುಷಿತವಾದ ಆಹಾರವನ್ನು ಸೇವಿಸಿದಾಗ ಉಂಟಾಗುವುದು. ಅಪೂರ್ವವಾಗಿ ರೋಗಾಣುಗಳು ಚರ್ಮದ ಕೊಯ್ತ ಮತ್ತು ಗಾಯಗಳು, ಟಾನ್ಸಿಲ್, ಕಣ್ಣುಗುಡ್ಡೆಯ ಮೇಲುಪೊರೆ, ಜನನೇಂದ್ರಿಯಗಳು ಮುಂತಾದವುಗಳ ಮೂಲಕವೂ ದೇಹದ ಒಳಹೋಗಬಹುದು.

ಕಫವೇ ಅತಿ ಸಾಮಾನ್ಯವಾಗಿ ಸೋಂಕಿನ ಮೂಲವಾಗಿರುವುದರಿಂದ ಜನ ಸಿಕ್ಕಿದ ಕಡೆ ಉಗುಳುವುದನ್ನು ನಿಷೇಧಿಸುವ ಆರೋಗ್ಯಮಾರ್ಗಗಳೂ ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರದಿಂದ ಬಾಯನ್ನು ಮುಚ್ಚಿಕೊಳ್ಳುವುದೂ ಬಲು ಮುಖ್ಯ. ಒಂದು ಘನ ಸೆಂಟಿಮೀಟರ್ ಕಫದಲ್ಲಿ 10 ಲಕ್ಷಕ್ಕಿಂತಲೂ ಹೆಚ್ಚು ರೋಗಾಣುಗಳು ಇರಬಹುದು ಮತ್ತು ಒಂದು ಸಣ್ಣ ತುಂತುರಿನಲ್ಲಿ ಸಹ ನೂರಾರು ಇರಬಹುದು. ರೋಗಿ ಕೆಮ್ಮುತ್ತಿರುವ ಅಥವಾ ಸೀನುತ್ತಿರುವ ನೇರ ಪಥದಲ್ಲೇ ಇರುವ ಆರೋಗ್ಯವಾದ ವ್ಯಕ್ತಿಯ ಶ್ವಾಸಮಾರ್ಗ ಮತ್ತು ಫುಪ್ಪುಸಗಳಿಗೆ ನೇರವಾಗಿ ರೋಗಾಣುಗಳಿರುವ ತುಂತುರುಗಳು ಸಾಮಾನ್ಯವಾಗಿ ಹೋಗುತ್ತವೆ. ಇದಕ್ಕಿಂತ ವಿರಳವಾಗಿ ಇನ್ನೂ ದೊಡ್ಡ ಗಾತ್ರದ ಕಫದ ತುಂತುರುಗಳು ನೆಲದ ಮೇಲೆ ಬಿದ್ದು ಒಣಗಿ, ಬೇಕಾಬಿಟ್ಟಿ ಕಸಗುಡಿಸಿ ದೂಳು ಹೊಡೆದಾಗ, ದೂಳಿನ ಕಣಗಳಾಗಿ ಮೇಲೇಳುತ್ತವೆ. ರೋಗಿಗಳಿರುವ ಮನೆಗಳಲ್ಲಿ ಇಂಥ ದೂಳು ಉಚ್ಛ್ವಸಿಸಲ್ಪಡಬಹುದು ಮತ್ತು ಬಳಸು ಮಾರ್ಗದಿಂದ ಸೋಂಕನ್ನು ಉಂಟುಮಾಡಬಹುದು. ತಾತ್ತ್ವಿಕವಾಗಿ ಮಾನವ ದೇಹದ ಯಾವ ಭಾಗವೂ ಈ ರೋಗದಿಂದ ಮುಕ್ತವಲ್ಲ. ಆದರೂ ಫುಪ್ಪುಸಕ್ಷಯ (ಸಾಧಾರಣಕ್ಷಯ) ಮಾನವರಲ್ಲಿ ಒಟ್ಟು ಕ್ಷಯರೋಗದ ಶೇ.90ಕ್ಕೂ ಹೆಚ್ಚಾಗಿದೆಯೆಂದು ಗಣಿಸಬಹುದಾಗಿದೆ.

ಸ್ವಾಭಾವಿಕ ವರ್ಣನೆ : ಸೋಂಕುಂಟಾದ ಕೂಡಲೇ ಒಳಹೋಗುವ ಈ ಅಪಾಯಕರ ಅತಿಕ್ರಮಿಯ ವಿರುದ್ಧ ದೇಹವೇನೂ ಪ್ರಬಲವಾದ ಪ್ರತಿಕ್ರಿಯೆಯನ್ನು ತೋರಿಸುವುದಿಲ್ಲ. ರೋಗಾಣುಗಳು ವರ್ಧಿಸಿ ನೂರಾರಾಗಿ ಬೆಳೆಯುತ್ತವೆ ಮತ್ತು ಅನೇಕ ವೇಳೆ ದೇಹದ ನಾನಾ ಭಾಗಗಳಿಗೆ ತಮ್ಮನ್ನು ಸಲೀಸಾಗಿ ಒಯ್ಯುವಂಥ ರಕ್ತಕಣಗಳ (ದೈತ್ಯಕಣಗಳು) ಒಳಹೋಗುತ್ತವೆ. ಆದರೆ ಸೋಂಕುಂಟಾದ 6–8 ವಾರಗಳ ಮೇಲೆ ರೋಗಾಣುಗಳು ದೇಹದ ಯಾವ ಅಂಗಗಳಲ್ಲಿದ್ದರೂ ದೇಹ ಅವನ್ನು ಅಲ್ಲಲ್ಲೆ ನಿರ್ಬಂಧಿಸುವುದರಲ್ಲಿ ಸಫಲವಾಗುತ್ತದೆ. ಅದೇ ಕಾಲದಲ್ಲಿ ರೋಗಾಣುಗಳು ದೇಹದ ಜೀವಾಣುಗಳನ್ನು ನಾಶಮಾಡಲು ಪ್ರಾರಂಭಿಸಿ ಅಲ್ಲಿ ಒಂದು ವಿಶಿಷ್ಟ ಮಾದರಿಯ ರೋಗಸೂಚಕ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆ. ಈ ಪ್ರತಿಕ್ರಿಯೆಯ ಸ್ಥಳದ ಮಧ್ಯಭಾಗದಲ್ಲಿ ಕೆಲವು ಮೃತಜೀವಾಣುಗಳೂ ಬಹುಬೇಗ ವೃದ್ಧಿಯಾಗುತ್ತಿರುವ ಕ್ಷಯ ರೋಗಾಣುಗಳೂ ಪರಸ್ಪರ ಬೆರಕೆಯಾಗಿದ್ದು ಸುತ್ತಲೂ ಊತಗೊಂಡ ಒಂದು ವಲಯ ಇರುತ್ತದೆ. ಈ ಕ್ಷೇತ್ರದ ಲಸಿಕೆ ಗ್ರಂಥಿ ಗಳಲೆ ಕಟ್ಟಿಕೊಂಡು ನೋವುಂಟು ಮಾಡುವುದಿದೆ. ಊತಗೊಂಡ ಭಾಗ ಮತ್ತು ಗಳಲೆ ಇವು ಎರಡೂ ಕೂಡಿ ಪ್ರಾಥಮಿಕ ಲಕ್ಷಣ ಆಗಿರುತ್ತವೆ. ಈ ಸಮಯದಲ್ಲಿ ವ್ಯಕ್ತಿ ಇನ್ನೇನೂ ರೋಗಲಕ್ಷಣಗಳನ್ನು ತೋರಿಸದೆ ಇರಬಹುದು. ಇಲ್ಲವೇ ಕೆಲವು ದಿನ ಸ್ವಲ್ಪ ಜ್ವರ ಇತ್ಯಾದಿಗಳು ಮಾತ್ರ ಇರಬಹುದು. ಕ್ಷಯಪೀಡಿತರಾದ ಬಹುವ್ಯಕ್ತಿಗಳಲ್ಲಿ ಈ ಪ್ರಾಥಮಿಕ ಲಕ್ಷಣ ಸ್ವಲ್ಪಕಾಲವಾದ ಮೇಲೆ ತಾನಾಗಿಯೇ ಗುಣವಾಗುತ್ತದೆ. ಕೆಲವರಲ್ಲಿ ಅದು ಹರಡುತ್ತಲೇ ಇರುತ್ತದೆ ಮತ್ತು ರೋಗಿಗೆ ಗುಣಮುಖನಾಗಲು ಚಿಕಿತ್ಸೆ ಅಗತ್ಯ. ಇಲ್ಲದಿದ್ದರೆ ಆತ ಮೃತನಾಗುತ್ತಾನೆ. ಇದು ರೋಗಾಣುಗಳು ಅಗಾಧ ಮೊತ್ತದಲ್ಲಿರುವುದರಿಂದಲೂ ವ್ಯಕ್ತಿಯ ರೋಗ ನಿರೋಧಕಶಕ್ತಿ ಕಡಿಮೆಯಾಗಿರು ವುದರಿಂದಲೂ ಅಥವಾ ಎರಡರಿಂದಲೂ ಉಂಟಾಗುವ ಸ್ಥಿತಿ ಎಂದು ಹೇಳಲಾಗಿದೆ. ಗುಣಮುಖರಾದವರಲ್ಲಿ ಕ್ಷಯರೋಗಾಣುಗಳು ಕೂಡಲೇ ಸಾಯುವುದಿಲ್ಲ. ದೇಹದ ಜೀವಾಣುಗಳ ನಡುವೆ ಅವು ವೃದ್ಧಿಯಾಗದೆ ಜೀವಂತವಾಗಿರುವ ಕಿಂಚಿತ್ಸೂಚನೆಯೂ ಇಲ್ಲದೆ ಬಹುಕಾಲ ಇರಬಹುದು. ಹಲವಾರು ವರ್ಷಗಳ ಅನಂತರ ವ್ಯಕ್ತಿ ದೈಹಿಕ ಘರ್ಷಣೆಗೆ ಒಳಪಟ್ಟಾಗಲೋ ಆರೋಗ್ಯ ಸ್ಥಿತಿ ಕೆಳಮಟ್ಟಕ್ಕೆ ಇಳಿದಾಗಲೋ ಮೇಲಿಂದಮೇಲೆ ಅಗಾಧ ಮೊತ್ತದಲ್ಲಿ ಸೋಂಕುಗಳನ್ನು ಹೊಸತಾಗಿ ಪಡೆದಾಗಲೋ ಈ ರೋಗಾಣುಗಳು ಪುನಃ ವೃದ್ಧಿಯಾಗುವುದಕ್ಕೆ ಪ್ರಾರಂಭಿಸಿ ಊತ ಮೊದಲಾದುವು ಎಲ್ಲ ತಿರುಗಿ ಕಾಣಿಸಿಕೊಳ್ಳುತ್ತವೆ. ಜೀವಾಣುಗಳ ನಾಶ ಫುಪ್ಪುಸದಲ್ಲಿ ಡೊಗರನ್ನು ಉಂಟುಮಾಡಲು ಕಾರಣವಾಗಬಹುದು. ರಕ್ತನಾಳಗಳ ಕೊರೆತದಿಂದ ಕಫದಲ್ಲಿ ರಕ್ತ ಬೀಳಬಹುದು ಇಲ್ಲವೆ ಫುಪ್ಪುಸಕ್ರಿಯೆಯ ನಾಶದಿಂದಾಗಿ ಉಸಿರು ಹತ್ತಿ ಹತ್ತಿ ಬರುವಂತೆ ತೋರಬಹುದು. ಈ ಸಲ ರೋಗಿ ಕ್ಷಯರೋಗದ ಮೇಲೆ ಬಲವಾದ ದಾಳಿಯನ್ನು ಮಾಡಲಾರನಾದ್ದರಿಂದ ಪರಿಣಾಮಕಾರಿಯಾದ ಚಿಕಿತ್ಸೆ ಮಾಡದೇ ಇದ್ದರೆ ರೋಗ ಹೆಚ್ಚುಹೆಚ್ಚಾಗಿ ಹಬ್ಬುವುದಕ್ಕೆ ಪ್ರಾರಂಭಿಸುತ್ತದೆ.

ಸೋಂಕು ಮತ್ತು ಪ್ರಾಥಮಿಕ ಲಕ್ಷಣದ ಉತ್ಪನ್ನ ಸಾಧಾರಣವಾಗಿ ಬಾಲ್ಯದಲ್ಲಿ ಕಂಡುಬರುತ್ತವೆ. ಈ ಪ್ರಾಯ ರೋಗ ತಾನಾಗಿಯೇ ಗುಣವಾಗುವ ರೋಗ ಘಟ್ಟವಾಗಿರುವುದರಿಂದ ಬಹುಮಕ್ಕಳು ಚಿಕಿತ್ಸೆ ಇಲ್ಲದೆಯೇ ಗುಣಮುಖರಾಗುತ್ತಾರೆ. ಆ ಮೇಲಿನ ವಯಸ್ಕರ ಕ್ಷಯ ಸಾಮಾನ್ಯವಾಗಿ 35 ವರ್ಷ ವಯಸ್ಸಾದ ಮೇಲೆ ಕಂಡುಬರುತ್ತದೆ. ಇದೂ ತಾನಾಗಿಯೇ ಗುಣಮುಖವಾಗಬಹುದು. ಆದರೆ ಸಾಮಾನ್ಯವಾಗಿ ಗುಣವಾಗುವುದಕ್ಕೆ ಚುರುಕಾದ ಚಿಕಿತ್ಸೆ ಬೇಕಾಗುತ್ತದೆ. ರೋಗದ ಈ ಘಟ್ಟದಲ್ಲಿ ರೋಗಿಗಳು ಬೇರೆ ಬೇರೆ ಆರೋಗ್ಯವಂತ ವ್ಯಕ್ತಿಗಳಿಗೆ ಸೋಂಕು ಅಂಟಿಸುವರು; ಮತ್ತು ರೋಗಿ ಮೃತಿಹೊಂದುವುದಕ್ಕೆ (ಅಥವಾ ಗುಣವಾಗುವುದಕ್ಕೆ) ಮುಂಚೆ ಸರಾಸರಿ ಐದು ಆರೋಗ್ಯವಂತ ವ್ಯಕ್ತಿಗಳಿಗೆ ಸೋಂಕು ಅಂಟಿಸಬಹುದೆಂದು ಅಂದಾಜು ಮಾಡಲಾಗಿದೆ. ಚಿಕಿತ್ಸೆಯಾದ ಮೇಲೆ ಅಂಥವರು ಸಮಾಜದಲ್ಲಿ ಪುನಃ ಉಪಯುಕ್ತ ವ್ಯಕ್ತಿಗಳಾಗಬೇಕಾಗಿದ್ದರೆ ಅವರಲ್ಲಿರುವವರಿಗೆ ಪುನಃಶಿಕ್ಷಣದ ಅಗತ್ಯ ಇರುವುದು. ಚಿಕಿತ್ಸೆಗೊಂಡ ಎಲ್ಲ ರೋಗಿಗಳೂ ರೋಗ ಮರುಕಳಿಸದಂತೆ ನೋಡಿಕೊಳ್ಳಲು ಚಿಕಿತ್ಸಾ ನಂತರ ಕ್ರಮಗಳಿಗೆ ಒಳಪಡುವುದು ಅಗತ್ಯ. ಜೀವನದ ವಿವಿಧ ಘಟ್ಟಗಳಲ್ಲಿ ಕ್ಷಯರೋಗದ ಸ್ವಾಭಾವಿಕ ವಿಕಸನವೂ ರೋಗವೂ ಪ್ರಬಲಿಸದಂತೆ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಇಲ್ಲಿ ಸೂಚ್ಯವಾಗಿ ಬರೆದಿದೆ.

ಸೋಂಕು ಉಂಟಾಗುವುದಕ್ಕೆ ಪೂರ್ವಭಾವಿ ಕಾಲದಲ್ಲಿ ಅದನ್ನು ಉಂಟುಮಾಡುವ ಘಟಕವಾಗಿ ಕ್ಷಯ ದಂಡಾಣು, ಆತಿಥೇಯನಾಗಿ ಮಾನವ, ಸೋಂಕು ಉಂಟಾಗುವ ಸನ್ನಿವೇಶ ಇವು ಮೂರರ ನಡುವೆ ಪರಸ್ಪರ ಪ್ರತಿಕ್ರಿಯೆ ಉಂಟಾಗುತ್ತದೆ. ಆದ್ದರಿಂದ ಉತ್ತಮವಾದ ಮನೆ, ಪರಿಶುದ್ಧವಾದ ಆವರಣ, ಉತ್ತಮ ಪೌಷ್ಟಿಕಾಂಶಗಳು, ಆರೋಗ್ಯ ಶಿಕ್ಷಣ, ವೈಯಕ್ತಿಕ ಆರೋಗ್ಯಜ್ಞಾನ, ಬಿ.ಸಿ.ಜಿ.ಯಿಂದ ಕೃತಕ ನಿರೋಧ ಶಕ್ತಿಯ ಉತ್ಪತ್ತಿ ಇವು ಭವಿಷ್ಯದಲ್ಲಿ ರೋಗವನ್ನು ಕಡಿಮೆ ಮಾಡಬಲ್ಲುವು. ಪ್ರಾರಂಭದ ರೋಗಸೂಚಕ ಪ್ರತಿಕ್ರಿಯೆಯ ಘಟ್ಟದಲ್ಲಿ ಸಾಮೂಹಿಕ ಸಮೀಕ್ಷೆಯಿಂದ ಕ್ಷಿಪ್ರ ರೋಗ ನಿದಾನ ಮತ್ತು ಪ್ರಾರಂಭ ದೆಸೆಯಲ್ಲಿ ಚಿಕಿತ್ಸೆ ಇವು ಮುಖ್ಯವಾಗಿವೆ. ಪರಿಣಾಮಕಾರಿಯಾದ ಕ್ಷಯರೋಗ ನಿರೋಧಕ ಔಷಧಗಳಿಂದ (ರಾಸಾಯನಿಕರೀತಿ ರೋಗವನ್ನು ತಡೆಗಟ್ಟುವಿಕೆ) ರೋಗವನ್ನು ತಡೆಗಟ್ಟುವುದು ಸಾಧ್ಯ. ಕ್ಷಯರೋಗಲಕ್ಷಣಗಳು ಕಣ್ಣಿಗೆ ಕಾಣಿಸುವ ಘಟ್ಟದಲ್ಲಿ ವ್ಯಕ್ತಿಗಳಿಗೆ ಅವರಿರುವೆಡೆಯಲ್ಲಿ ಮತ್ತು ಇತರ ರೀತಿ ಅನುಕೂಲವಾಗಿರುವಂತೆ ಒದಗಿಸಬಹುದಾದ ರೋಗನಿದಾನ ಮತ್ತು ಚಿಕಿತ್ಸಾಸೌಕರ್ಯಗಳ ಮೇಲೆ ಅವಲಂಬನೆಯೇ ಬಹುವಾಗಿದೆ.

ಸಾಂಕ್ರಾಮಿಕ ಸ್ವಭಾವವಿಜ್ಞಾನ : ಟ್ಯೂಬರ್‌ಕ್ಯುಲಿನ್ ಪರೀಕ್ಷೆಯಿಂದ ಒಬ್ಬನಿಗೆ ಕ್ಷಯ ದಂಡಾಣು ಸೋಂಕು ಉಂಟಾಗಿದೆಯೇ ಇಲ್ಲವೇ ಎಂಬುದನ್ನು ಕಂಡುಕೊಳ್ಳಬಹುದು. ವ್ಯಕ್ತಿಯ ಪ್ರಕೋಷ್ಠದ ಚರ್ಮದ ಪದರಗಳೊಳಗೆ ಪಿಚಕಾರಿ ಸೂಜಿಗಳಿಂದ (ಕ್ಷಯ ರೋಗಾಣುಗಳಿಂದ ತಯಾರಿಸಿದ) ಪಿ.ಪಿ.ಡಿ. ಎಂಬ ದ್ರಾವಣವನ್ನು ಚುಚ್ಚಿ ಸೇರಿಸಿ ಈ ಪರೀಕ್ಷೆಯನ್ನು ಮಾಡಲಾಗುತ್ತದೆ. ದೊಡ್ಡದಾದ ಜನ ಪಂಗಡಗಳನ್ನು ಈ ರೀತಿ ಪರೀಕ್ಷಿಸಿದಾಗ ಭಾರತದಲ್ಲಿ ಎಲ್ಲ ವಯಸ್ಸಿನವರೂ ಸೇರಿ ಶೇ.38 ಮಂದಿ ಸೋಂಕು ಉಂಟಾದವರೆಂದು ಕಂಡುಬಂದಿದೆ. ಪಶ್ಚಿಮದ ಬಹಳ ದೇಶಗಳಲ್ಲಿ ಸೋಂಕಿನ ಪ್ರಮಾಣ ಶೇ.15 ಅಥವಾ ಕಡಿಮೆ ಇದೆ. ಸೋಂಕಿನ ಪ್ರಮಾಣ ಲಿಂಗ ವಯಸ್ಸುಗಳ ಪ್ರಕಾರ ಬದಲಾಗುವುದು ತಿಳಿದಿದೆ (ಚಿತ್ರ 3).




ಚಿತ್ರ 3 ಜನಸಮುದಾಯದಲ್ಲಿ ಕ್ಷಯರೋಗ ಪರಿಮಾಣವನ್ನು ಸೂಚಿಸುವ ನಕ್ಷೆ

ಅತ್ಯಂತ ಕಡಿಮೆ ಪ್ರಮಾಣದ ಸೋಂಕು ಶಿಶುಗಳಲ್ಲಿದ್ದು, ಶಾಲಾಮಕ್ಕಳು ಮತ್ತು ಯೌವನಸ್ಥರಲ್ಲಿ ಶೀಘ್ರವಾಗಿ ಹೆಚ್ಚಾಗುತ್ತ 35 ವರ್ಷ ಮತ್ತು ಮೇಲ್ಪಟ್ಟವರಲ್ಲಿ ಶೇ.60 ಇರುತ್ತದೆ. ಪುರುಷರಿಗಿಂತ ಸ್ತ್ರೀಯರಲ್ಲಿ ಕಡಿಮೆ ಸೋಂಕು ಇರುವುದು. ಅದೃಷ್ಟವಶಾತ್ ಸೋಂಕು ಉಂಟಾದ ಪ್ರತಿವ್ಯಕ್ತಿಯಲ್ಲಿಯೂ ರೋಗ ಪ್ರಬಲಿಸುವುದಿಲ್ಲ. ಜನತೆಯ ಶೇ.38 ಸೋಂಕುಳ್ಳ ವ್ಯಕ್ತಿಗಳಿಗೆ ಹೋಲಿಸಿದರೆ ಕೇವಲ ಶೇ.2 ಪುಪ್ಪುಸದಲ್ಲಿ ತೀವ್ರ ಕ್ಷಯರೋಗದ ಎಕ್ಸ್ ಕಿರಣದ ಸಾಕ್ಷ್ಯವನ್ನು ಹೊಂದಿರುತ್ತಾರೆ ಮತ್ತು ಶೇ.0.4ರಷ್ಟರ ಕಫದಲ್ಲಿ ಮಾತ್ರ ಕ್ಷಯದಂಡಾಣುಗಳು ಇರುತ್ತವೆ. ಭಾರತದಲ್ಲಿ (ಮತ್ತು ಇದರಂತೆಯೇ ಇರುವ ಮಿಕ್ಕ ದೇಶಗಳಲ್ಲಿ) ಕ್ಷಯರೋಗ ಚಿಕ್ಕವರಿಗಿಂತ ವಯಸ್ಕರಲ್ಲೂ ಸ್ತ್ರೀಯರಿಗಿಂತ ಪುರುಷರಲ್ಲೂ ಹೆಚ್ಚು ವ್ಯಾಪಕವಾಗಿದೆ ಎನ್ನುವುದನ್ನು ಚಿತ್ರ (4) ತೋರಿಸುತ್ತದೆ. ಈ ದೃಷ್ಟಿಯಿಂದ ಹಿಂದೆ ಜನಪ್ರಿಯವಾಗಿದ್ದ ಶಾಲಾ ಕಾಲೇಜು ಹುಡುಗರ ಎಕ್ಸ್‌ಕಿರಣ ಸಮೀಕ್ಷೆಯನ್ನು ಈಗ ವಿರಳವಾಗಿ ನಡೆಸಲಾಗುತ್ತಿದೆ.

**ಕ್ಷಯರೋಗದ ಸ್ವಾಭಾವಿಕ ವರ್ಣನೆ**

| | ಪ್ರಾಥಮಿಕ ಪ್ರತಿಬಂಧನ | | ದ್ವಿತೀಯಕ ಪ್ರತಿಬಂಧನ | | ತೃತೀಯಕ ಪ್ರತಿಬಂಧನ |
|---|---|---|---|---|---|

ಜನನ → ಸಾಂಕ್ರಾಮಿಕಪೂರ್ವ ಅವಧಿ → ರೋಗಲಕ್ಷಣಗಳು ತೋರದಿರುವ ಅವಧಿ → ರೋಗಲಕ್ಷಣಗಳು ತೋರುವ ಅವಧಿ → ರೋಗ ಉಲ್ಬಣಗೊಂಡ ಅವಧಿ → ಸಾವು

| | | | | |
|---|---|---|---|---|
| ಯೋಗ್ಯ ಪರಿಸರ | ಶೀಘ್ರ ರೋಗನಿದಾನ | ನಿಷ್ಕೃಷ್ಟ ರೋಗನಿದಾನ | ಆಸ್ಪತ್ರೀಕರಣ | ಗುಣವಾದ ಬಳಿಕ ಪುನಃ ಸಾವು |
| ಪೌಷ್ಟಿಕ ಆಹಾರ | ರೋಗವನ್ನು ಕುರಿತ ಸರ್ವೇಕ್ಷಣೆ | ಪರಿಣಾಮಕಾರೀ ಶುಶ್ರೂಷೆ | ದೀರ್ಘಕಾಲ ಯೋಗ್ಯ ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸೆ | |
| ಆರೋಗ್ಯ ಜ್ಞಾನ | ಶೀಘ್ರ ಶುಶ್ರೂಷೆ | ಅನುಸರಣೆ | | |
| ವೈಯಕ್ತಿಕ ಶುಚಿತ್ವ | ರೋಗಪ್ರತಿಬಂಧಕವಾಗಿ ಔಷಧಿಗಳ ಸೇವನೆ | | ಅನುಸರಣೆ | |
| ಬಿ.ಸಿ.ಜಿ ಚುಚ್ಚುಮದ್ದು | | | | |

1957–58ನೆಯ ಸಾಲಿನಲ್ಲಿ ಭಾರತ ವೈದ್ಯಕೀಯ ಸಂಶೋಧನ ಮಂಡಲಿ ಈ ದೇಶದಲ್ಲಿ ಕ್ಷಯರೋಗ ಸಮಸ್ಯೆಯ ಗಾತ್ರವನ್ನು ಅರಿಯಲು ಒಂದು ರಾಷ್ಟ್ರೀಯ ಸರ್ವೇಕ್ಷಣವನ್ನು ನಡೆಸಿತು. ಮೇಲೆ ತಿಳಿಸಿರುವ ಪ್ರಮಾಣ ಅಂಶಗಳಲ್ಲದೆ ಹೊರಪಟ್ಟ ಇನ್ನೊಂದು ಸ್ವಾರಸ್ಯ ವಿಷಯವೆಂದರೆ ಕ್ಷಯರೋಗ ಅವಶ್ಯವಾಗಿ ಪಟ್ಟಣಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಲ್ಲಿ ಮಾತ್ರ ಕಂಡುಬರುವ ರೋಗವಲ್ಲವೆಂಬುದು. ಈ ರೋಗ ಹಳ್ಳಿಗಾಡಿನ ಜನರಲ್ಲಿ ಕೂಡ ಅಷ್ಟೇ ವ್ಯಾಪಕವಾಗಿದೆ. ಬಡವರಷ್ಟೇ ಪ್ರಾಯಶಃ ಐಶ್ವರ್ಯವಂತರೂ ಈ ರೋಗದಿಂದ ನರಳುತ್ತಾರೆ.




ಚಿತ್ರ 4 ಉಗುಳಿನಲ್ಲಿ ಕ್ಷಯಾಣು ವ್ಯಾಪ್ತಿಯನ್ನು ಸೂಚಿಸುವ ನಕ್ಷೆ

ಆದರೆ ಭಾರತದಲ್ಲಿ ಹೆಚ್ಚು ಬಡವರಿರುವುದರಿಂದ ಕ್ಷಯರೋಗಿಗಳಲ್ಲೂ ಬಡವರೇ ಹೆಚ್ಚಾಗಿ ಇರುತ್ತಾರೆ. ಈ ವಿಚಾರಗಳೆಲ್ಲ ಮುಂಚಿನ ಕೆಲವು ನಂಬಿಕೆಗಳ ಕಾರಣದಿಂದಾಗಿ ಆಶ್ಚರ್ಯ ಸಂಗತಿಗಳಾಗಿ ಕಂಡುಬಂದಿವೆ. ಭಾರತದಲ್ಲಿ ದೇಶದ ಶೇ.80 ಜನ ಹಳ್ಳಿಗಾಡಿನಲ್ಲಿ ವಾಸಿಸುವುದರಿಂದ ಕ್ಷಯರೋಗ ಸಮಸ್ಯೆ ಇಲ್ಲಿ ಬಹುವಾಗಿ ಹಳ್ಳಿಗಾಡಿನ ಸಮಸ್ಯೆಯೇ ಎಂಬುದು ಇತ್ತೀಚೆಗೆ ಮಾತ್ರ ಸ್ಪಷ್ಟವಾಗಿದೆ.

ಪರಿಣಾಮಕಾರಿ ಚಿಕಿತ್ಸೆ ಇಲ್ಲದೆ ವಯಸ್ಕರ ಕ್ಷಯ ಮುಂದುವರಿದರೆ ರೋಗಿ ಸಾಮಾನ್ಯವಾಗಿ ಮೃತ ಹೊಂದುತ್ತಾನೆ. ಮುಖ್ಯವಾಗಿ ಈ ಕಾರಣದಿಂದಾಗಿ ಪರಿಣಾಮಕಾರಿಯಾದ ಚಿಕಿತ್ಸೆ ಇಲ್ಲದಿದ್ದ ಕಾಲದಲ್ಲಿ ಕ್ಷಯಕ್ಕೆ ಶ್ವೇತಮಾರಿ ಎಂಬ ಅಡ್ಡಹೆಸರು ಬಂದಿತು. ಆಗಿನ ಕಾಲದಲ್ಲಿ ಲೋಕದಲ್ಲಿ ಬಹುದೇಶಗಳಲ್ಲಿ ಕ್ಷಯದಿಂದಾದ ಸಾವಿನ ಮೊತ್ತ ಬಹು ಹೆಚ್ಚಾಗಿದ್ದು ಕ್ರಮೇಣ ಅದು ಕಡಿಮೆ ಆಗುತ್ತ ಬಂದದ್ದು, ಈಗ ಏಡ್ಸ್ ರೋಗದೊಟ್ಟಿಗೆ ಮತ್ತೆ ಪ್ರಜ್ವಲಿಸತೊಡಗಿದೆ. ಭಾರತದಲ್ಲಿ ಹಳ್ಳಿಗಾಡು ಪ್ರದೇಶಗಳಲ್ಲಿ ಒಳ್ಳೆಯ ರೋಗನಿದಾನ ಕ್ರಮಗಳಿಲ್ಲದಿರುವುದರಿಂದ ಮರಣಪ್ರಮಾಣದ ಖಚಿತ ಅಂಕಿ ಅಂಶಗಳು ದೊರಕುವುದಿಲ್ಲ. ಆದರೆ ಒಂದು ಅಂದಾಜಿನಂತೆ ಪ್ರತಿ ದಿನ 20000ಜನ ಕ್ಷಯ ಸೋಂಕು ಪಡೆದು ಅದರಲ್ಲಿ 5000 ಜನ ಕ್ಷಯ ರೋಗ ಹೊಂದುತ್ತಾರೆ ಮತ್ತು 1000 ಸಂಖ್ಯೆಯಲ್ಲಿ ಸಾಯುತ್ತಾರೆ.

ಅನುಭಾವಿಕ ರೋಗಲಕ್ಷಣಗಳು : ರೋಗದ ಕಾರಣದಿಂದ ರೋಗಿ ಅನುಭವಿಸಿ ವಿವರಿಸುವ ಲಕ್ಷಣಗಳಿವು. ಕ್ಷಯರೋಗ ಬಹುವಿಧವಾದ ಅನುಭಾವಿಕ ಲಕ್ಷಣಗಳನ್ನು (ಸಿಂಪ್ಟಮ್ಸ್) ಉಂಟುಮಾಡಬಹುದು. ಮತ್ತೆ ಕೆಲವು ಕಾಲ ಯಾವ ಅನುಭಾವಿಕ ಲಕ್ಷಣಗಳೂ ಇಲ್ಲದಿರಬಹುದು. ಫುಪ್ಫುಸದ ಕ್ಷಯವೆಂದು ಸೂಚಿಸುವ ಅನುಭಾವಿಕ ಲಕ್ಷಣಗಳಲ್ಲಿ ಎರಡು ವಾರಗಳಿಗಿಂತಲೂ ಹೆಚ್ಚಾಗಿ ಕೆಮ್ಮು, ನಾಲ್ಕು ವಾರಗಳಿಗಿಂತಲೂ ಹೆಚ್ಚು ಕಾಲದ ಜ್ವರ, ಉಗುಳಿನಲ್ಲಿ ರಕ್ತ ಮತ್ತು ಎದೆನೋವುಗಳು ಮುಖ್ಯವಾದವು. ಇತರ ರೋಗಗಳಲ್ಲಿಯಂತೆ ಕ್ಷಯರೋಗದಲ್ಲಿ ಕಾಣಬರುವ ಸಾಮಾನ್ಯ ಅನುಭಾವಿಕ ಲಕ್ಷಣಗಳೆಂದರೆ ಹಸಿವಿಲ್ಲದಿರುವಿಕೆ, ಶರೀರದ ತೂಕ ಕಡಿಮೆಯಾಗುವುದು, ಉಸಿರು ಹತ್ತಿಹತ್ತಿಬರುವುದು ಇತ್ಯಾದಿ. ಜನರು ತಾವಾಗಿಯೇ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವಂತೆ ಮಾಡುವುದೇ ಈ ಅನುಭಾವಿಕ ಲಕ್ಷಣಗಳ ಜ್ಞಾನದ ಪ್ರಾಮುಖ್ಯ.

**ರೋಗನಿದಾನ :** ಈಚಿನ ಬೆಳೆವಣಿಗೆಗಳು ಈ ಕಾರ್ಯವನ್ನು ಮೊದಲಿಗಿಂತ ಬಹು ಸುಲಭವಾಗಿ ಮಾಡಿರುವ ಫಲವಾಗಿ ತಜ್ಞನೇ ಮಾತ್ರವಲ್ಲದೆ ಯಾವ ವೈದ್ಯನಾದರೂ ರೋಗನಿದಾನವನ್ನು ಮಾಡಬಹುದು. ರೋಗನಿದಾನ ಸಾಮಾನ್ಯವಾಗಿ ಈ ಕೆಳಗಿನ ಅಂಶಗಳ ಮೇಲೆ ನಿಂತಿದೆ:

1. ಅನುಭಾವಿಕ ಲಕ್ಷಣಗಳ ವಿವರ. ಕೆಲವು ವೇಳೆ ಕುಟುಂಬದ ಚರಿತ್ರೆ, ಕ್ಷಯರೋಗಿಯೊಡನೆ ಕಂಡಹಾಗೆಯೇ ಇದ್ದ ಸಂಪರ್ಕ ಇವು ಸಹಾಯಕವಾಗಿರುತ್ತವೆ.

2.ಎದೆಯ (ಅಥವಾ ಮೂಳೆಯ) ಎಕ್ಸ್–ಕಿರಣ ಪರೀಕ್ಷೆ. ಎಕ್ಸ್‌ಕಿರಣ ಪಟಲದಲ್ಲಿ ಅದೇ ರೀತಿಯ ಛಾಯೆ ಇನ್ನೂ ಅನೇಕ ಎದೆಸಂಬಂಧವಾದ ರೋಗಗಳಲ್ಲಿ ಕಂಡು ಬರುವುದರಿಂದ ಇದು ಸೂಚಕವಾದ ರೋಗನಿದಾನವನ್ನು ಮಾತ್ರ ಒದಗಿಸುತ್ತದೆ.

3.ಸೂಕ್ಷ್ಮದರ್ಶಕದ ಸಹಾಯದಿಂದ ಕಫ ಪರೀಕ್ಷೆ, ವ್ರಣದ ಕೀವು ಪರೀಕ್ಷೆ ಇಲ್ಲವೆ ಜಠರವನ್ನು ತೊಳೆದ ನೀರಿನ ಪರೀಕ್ಷೆ ಕ್ಷಯರೋಗಾಣುವನ್ನು ವ್ಯಕ್ತಪಡಿಸಿ ಅಂತಿಮ ರೋಗನಿದಾನವನ್ನು ಒದಗಿಸುತ್ತದೆ. ಸೂಕ್ಷ್ಮದರ್ಶಕ ಪರೀಕ್ಷೆ ನಕಾರಾತ್ಮಕವಾಗಿದ್ದರೆ ಕಫದಲ್ಲಿಯ ರೋಗಾಣುಗಳನ್ನು ಪ್ರಯೋಗಶಾಲೆಯಲ್ಲಿ ಬಿತ್ತಿ ಬೆಳೆಸುವುದು ಅಗತ್ಯವಾಗಬಹುದು, ಇಲ್ಲವೇ ಪಾಲಿಮರೇಸ್ ಚೇನ್ ರಿಯಾಕ್ಷನ್ನನ್ನು ಬಳಸಿ ವೇಗ ಗತಿಯಲ್ಲಿ ಕ್ಷಯ ರೋಗಾಣುವಿನ ಇರುವಿಕೆಯನ್ನು ಪತ್ತೆ ಮಾಡಬಹುದು.

ಕಫ ನಕಾರಾತ್ಮಕ ಲಕ್ಷಣವುಳ್ಳದ್ದಾಗಿ ಎಲ್ಲ ಕ್ಷಯರೋಗಿಗಳಲ್ಲೂ ಇಲ್ಲದೆ ಇರಬಹುದು. ಆದರೆ ಅಂಥವರೇ ಸಮಾಜಕ್ಕೆ ಅತ್ಯಂತ ಅಪಾಯಕಾರಿಗಳು. ಆದ್ದರಿಂದ ವೈದ್ಯ ಅನೇಕ ಕಡೆಗಳಿಂದ ವಿಷಯಗಳನ್ನು ಸಂಗ್ರಹಿಸುವುದೇ ಅಲ್ಲದೆ ಕೆಲವು ವೇಳೆ ಸ್ವಲ್ಪ ಕಾಲ ಕಳೆದ ಅನಂತರ ನಿಶ್ಚಿತವಾದ ರೋಗನಿದಾನವನ್ನು ಮಾಡಲು ಪುನಃ ಪರೀಕ್ಷೆಗಳನ್ನು ಮಾಡಬೇಕು.

**ಚಿಕಿತ್ಸೆ :** ಕ್ಷಯರೋಗಿಗಳಿಗೆ ಈಚೆಗೆ ಕ್ಷಯರೋಗ ಪ್ರತಿರೋಧ ಔಷಧಿಗಳಿಂದಲೇ ಪ್ರಧಾನವಾಗಿ ಚಿಕಿತ್ಸೆ ಮಾಡಲಾಗುತ್ತಿದೆ ಮತ್ತು ಇತರ ವಿಧವಾದ ಚಿಕಿತ್ಸೆಗಳು ವಿರಳವಾಗಿವೆ. ಈ ಔಷಧಿಗಳು ಬಹು ಪರಿಣಾಮಕಾರಿಗಳು, ದುಬಾರಿಯಾಗಿಲ್ಲ ಮತ್ತು ಕ್ಷೇಮಕರವಾಗಿವೆ. ಈಚಿನ ಸಂಶೋಧನೆಯೂ ಚಿಕಿತ್ಸೆಯ ವಿಷಯವಾದ ಅನೇಕ ಹಳೆಯ ತತ್ತ್ವಗಳನ್ನು ಪೂರ್ತಿಯಾಗಿ ಬದಲಾಯಿಸಿಬಿಟ್ಟಿದೆ. ಚಿಕಿತ್ಸೆಯ ಸಾಮಾನ್ಯ ನಿಯಮಗಳನ್ನು ಮುಂದೆ ಕೊಟ್ಟಿದೆ:

1. ಆಸ್ಪತ್ರೆಯ ದಾಖಲಾತಿ ಅತ್ಯಗತ್ಯವೇನಲ್ಲ. ಬಹಳವಾಗಿ ನರಳುತ್ತಿರುವ ರೋಗಿಗಳನ್ನು ಮತ್ತು ಶಸ್ತ್ರಚಿಕಿತ್ಸೆ ಆಗಬೇಕಾದವರನ್ನು ಮಾತ್ರ ಆಸ್ಪತ್ರೆಗೆ ಸೇರಿಸಬೇಕಾಗುತ್ತದೆ.

2. ಹಾಸುಗೆಯ ಮೇಲೆ ಯಾವಾಗಲೂ ಮಲಗಿರುವುದು ಅಥವಾ ಕೆಲಸಕ್ಕೆ ಗೈರುಹಾಜರಿಯಾಗುವುದು ಕೂಡ ಅವಶ್ಯವಿಲ್ಲ.

3. ರೋಗಿಗಳು ಕ್ಷಯರೋಗಚಿಕಿತ್ಸಾ ಕೇಂದ್ರದ ಸಂಚಾರಿ ವ್ಯವಸ್ಥೆಯಿಂದ ಚಿಕಿತ್ಸೆಯನ್ನು ಪಡೆಯುತ್ತ ಕುಟುಂಬದವರೊಡನೆ ಇದ್ದು ಕೆಲಸ ಮಾಡಿಕೊಂಡಿರಬಹುದು.

4.ರೋಗಿಯ ಕುಟುಂಬದ ಇತರ ವ್ಯಕ್ತಿಗಳಿಗೆ ಮತ್ತು ಸಹಚರರಿಗೆ (ಸ್ಪರ್ಶಿಗಳು) ಸೋಂಕು ಅಂಟಬಹುದಾದ ಭೀತಿ ಬಹು ಕಡಿಮೆ ಅಂಶದಲ್ಲಿರುತ್ತದೆ. ಏಕೆಂದರೆ ಯುಕ್ತ ಚಿಕಿತ್ಸೆಯಿಂದ ರೋಗಿಯ ಕಫ ಬಹುಬೇಗ ರೋಗಾಣು ವಿಮುಕ್ತವಾಗುತ್ತದೆ.

5. ದುಬಾರಿಯ ಪೌಷ್ಟಿಕ ಆಹಾರ, ಒಳ್ಳೆಯ ಗಾಳಿ, ಶುಶ್ರೂಷೆ ಇತ್ಯಾದಿಗಳ ಅಗತ್ಯವೇ ಇಲ್ಲವೆನ್ನುವಷ್ಟು ಮಟ್ಟಿಗೆ ಈ ಪ್ರಬಲವಾದ ಕ್ಷಯರೋಗ ಪ್ರತಿರೋಧ ಔಷಧಿಗಳಿಂದ ಒದಗುವ ಚಿಕಿತ್ಸೆ ಪರಿಣಾಮಕಾರಿಯಾಗಿದೆ. ದುಬಾರಿಯ ಪೌಷ್ಟಿಕ ಆಹಾರಗಳನ್ನು ಕೊಳ್ಳಲು ಶಕ್ತರಾದವರು ತೆಗೆದುಕೊಳ್ಳಬಹುದು.

6.ಕ್ರಿಮಿನಾಶಕಗಳಿರುವ ಪೀಕದಾನಿಗಳಲ್ಲೆ ಕಫವನ್ನು ಉಗುಳುವುದು, ಕರವಸ್ತ್ರವನ್ನು ಬಾಯಿಗೆ ಅಡ್ಡವಾಗಿಟ್ಟುಕೊಂಡು ಕೆಮ್ಮುವುದು ತಮಗೆಂದೇ ನಿಗದಿಯಾಗಿರುವ ಪಾತ್ರೆ ಪಡಿಗ ಉಪಯೋಗಿಸುವುದು–ಇವನ್ನೆಲ್ಲ ಹೇಳಿಕೊಡಬಹುದಾದರೂ ಅವು ಕಾರ್ಯತಃ ಸಾಧ್ಯವಾಗದಿದ್ದಾಗ ಹೆಚ್ಚಿನ ಬಲವಂತದ ಅಗತ್ಯವಿಲ್ಲ. ಈಚಿನ ರಾಸಾಯನಿಕ ಚಿಕಿತ್ಸೆ ಸರಿಯಾಗಿ ಉಪಯೋಗಿಸಿದರೆ, ತಾತ್ತ್ವಿಕವಾಗಿ ನೂರಕ್ಕೆ ನೂರು ಭಾಗ ಸಫಲತೆಯನ್ನು ಖಚಿತವಾಗಿ ಉಂಟುಮಾಡುತ್ತದೆ; ಅಲ್ಲದೆ ರೋಗಿಗಳನ್ನು ಸೋಂಕಿಲ್ಲದವರನ್ನಾಗಿ ಮಾಡಿ ರೋಗ ಹೆಚ್ಚು ಹರಡುವುದನ್ನು ನಿಲ್ಲಿಸಿ ಇದು ರೋಗದ ಸಾಮಾಜಿಕ ಹತೋಟಿ ಕ್ರಮದಲ್ಲಿ ಮಾರ್ಮಿಕವಾದ ಪಾತ್ರವನ್ನು ವಹಿಸುತ್ತದೆ.

ಕ್ಷಯರೋಗ ಪ್ರತಿರೋಧ ಔಷಧಿಗಳಲ್ಲಿ ಪ್ರಮುಖವಾದವು ಐಸೋನಿಯಾಸಿಡ್ (INH), ರಿಫಾಂಪೈಸಿನ್, ಪೈರಜಿನೆಮೈಡ್, ಇಥಾಂಬುಟಾಲ್ ಹಾಗೂ ಸ್ಟ್ರೆಪ್ಟೋಮೈಸಿನ್ (SM), ಪೈರಸಿನಮೈಡ್ ರಾಸಾಯನಿಕ ಚಿಕಿತ್ಸೆಯ ಮುಖ್ಯ ಅಂಶಗಳನ್ನು ಮುಂದೆ ಕೊಟ್ಟಿದೆ:

1. ಔಷಧ ಪ್ರಯೋಗ ರೋಗಿ ಅನುಭವಿಸುತ್ತಿರುವ ನಮೂನೆಯ ರೋಗಕ್ಕೆ ತಕ್ಕಂತಿರಬೇಕು.

2.ಔಷಧಿಯನ್ನು ನಿಶ್ಚಿತ ಪರಿಮಾಣದಲ್ಲಿ ನಿರಂತರವಾಗಿ ಕ್ಲುಪ್ತವಾಗಿ ತೆಗೆದುಕೊಳ್ಳಬೇಕು.

3. ನಿರಂತರ ಚಿಕಿತ್ಸೆಯ ಕಾಲ ಕಡೆಯಪಕ್ಷ ಆರು ತಿಂಗಳು, ಕೆಲವೊಮ್ಮೆ ಆ ಮಿತಿಯನ್ನು ಮೀರಿ ಮತ್ತೆ ಮೂರು ತಿಂಗಳು ಮುಂದುವರಿಯಬಹುದು.

4.ವಕ್ರಲಕ್ಷಣಗಳೇನಾದರೂ ಕಂಡುಬಂದರೆ ಔಷಧಸೇವನೆಯನ್ನು ನಿಲ್ಲಿಸದೆ ವೈದ್ಯನಿಗೆ ತತ್‌ಕ್ಷಣವೇ ಇದರ ಮಾಹಿತಿ ಕೊಡಬೇಕು.

ಔಷಧಿಗೆ ಪ್ರತಿರೋಧ : ಕ್ಷಯರೋಗಪ್ರತಿರೋಧ ಔಷಧಿಗಳ ಬೇಕಾಬಿಟ್ಟಿ ಉಪಯೋಗದಿಂದ ರೋಗಾಣುಗಳು ಈ ಔಷಧಿಗಳಿಗೆ ಪ್ರತಿರೋಧ ಸಾಮರ್ಥ್ಯವನ್ನು ಪಡೆಯಬಹುದು. ಔಷಧಿಗೆ ಪ್ರತಿರೋಧ ಉದ್ಭವಿಸಿತೆಂದರೆ ರಾಸಾಯನಿಕ ಚಿಕಿತ್ಸೆ ವಿಫಲವಾದಂತೆಯೇ. ಇದು ಒಂದು ದುರ್ಘಟನೆ. ಏಕೆಂದರೆ ಶಸ್ತ್ರಚಿಕಿತ್ಸೆ ಅಥವಾ ದುಬಾರಿ ಬೆಲೆಯ ಮತ್ತು ಅಷ್ಟು ಕ್ಷೇಮಕರವಲ್ಲದ ವಿಶಿಷ್ಟ ಔಷಧಿಗಳಿಂದ ಜಟಿಲವಾದ ಚಿಕಿತ್ಸೆ ಅವಶ್ಯವಾಗಬಹುದುದಲ್ಲದೆ ಆಗ ಅಂತಿಮ ಫಲ ಅಷ್ಟು ಒಳ್ಳೆಯದಾಗದಿರಬಹುದು. ಈ ರೀತಿಯ ಔಷಧಿ ಪ್ರತಿರೋಧ (ಆರ್ಜಿತ ಪ್ರತಿರೋಧ) ಉಂಟಾಗುವುದನ್ನು ಸಾಧ್ಯವಾದ

ಮಟ್ಟಿಗೆ ತಪ್ಪಿಸಬೇಕು. ಔಷಧಪ್ರತಿರೋಧವನ್ನುಳ್ಳ ರೋಗಿಗಳು ಚಿಕಿತ್ಸೆಯಿಂದ ವಿಫಲರಾಗುವರೇ ಅಲ್ಲದೆ ಇನ್ನೂ ಒಂದು ಅಪಾಯಸ್ಥಿತಿಯನ್ನು ಉಂಟುಮಾಡುತ್ತಾರೆ. ಇವರು ತಮ್ಮ ಸ್ಪರ್ಶಿಗಳಿಗೆ ಇಂಥ ಔಷಧಪ್ರತಿರೋಧ ರೋಗಾಣುಗಳ ಸೋಂಕನ್ನು ಉಂಟುಮಾಡುತ್ತಾರೆ. ಅದರ ಫಲವಾಗಿ ಅವರಲ್ಲಿ ಆಮೇಲೆ ರೋಗ ಕಂಡುಬಂದಲ್ಲಿ ಅವರಿಗೆ ರಾಸಾಯನಿಕ ಔಷಧ ಪ್ರಯೋಗದಿಂದ ಪ್ರಯೋಜನವೇ ಇರುವುದಿಲ್ಲ.

**ರೋಗವನ್ನು ತಡೆಗಟ್ಟುವಿಕೆ :** ಕ್ಷಯರೋಗವನ್ನು ತಡೆಗಟ್ಟಲು ಮುಖ್ಯ ಸಾಧನ ಬಿ.ಸಿ.ಜಿ. ಚುಚ್ಚುಮದ್ದು. ನೈಸರ್ಗಿಕವಾಗಿ ಹಾನಿಕರ (ಪ್ರಬಲ) ಕ್ಷಯ ರೋಗಾಣುಗಳಿಂದ ಯಾರಿಗೆ ಸೋಂಕು ಉಂಟಾಗಿಲ್ಲವೋ ಅಂಥವರಿಗೆಲ್ಲ ಕೃತಕವಾಗಿ ಅವರ ದೇಹದೊಳಕ್ಕೆ ನಿರ್ದಿಷ್ಟ ಪರಿಣಾಮದಲ್ಲಿ ನಿರುಪದ್ರವಿಗಳಾದ (ಬಲಹೀನ) ಪಶುಸಂಬಂಧ ರೋಗಾಣುಗಳನ್ನು ಸೇರಿಸಿ ಅವರಿಗೆ ಸೋಂಕು ಉಂಟುಮಾಡುವುದೇ ಬಿ.ಸಿ.ಜಿ. ಚುಚ್ಚುಮದ್ದಿನ ಉದ್ದೇಶ. ಪ್ರಾಥಮಿಕ ರೋಗಲಕ್ಷಣ ಕಂಡುಬಂದು ಇವರ ದೇಹ ಆ ಮೇಲಿನ ಪ್ರಬಲ ಕ್ಷಯರೋಗಾಣುಗಳ ಸೋಂಕಿನಿಂದ ರಕ್ಷಣೆ ಹೊಂದುತ್ತದೆ. ಹೀಗೆ ಒದಗಿಸುವ ರಕ್ಷಣೆ ಶೇ.80 ರಷ್ಟು. ಇದು ನೂರಕ್ಕೆ ನೂರರಷ್ಟಿರುವುದಿಲ್ಲ. ಬಿ.ಸಿ.ಜಿ. ಲಸಿಕೆ ಬ್ಯಾಸಿಲಸ್ ಕಾಲ್‍ಮೆಟ್‍ಗ್ಯುಯೆರಿನ್ ಎಂಬ ಮಾದರಿಯ ಜೀವಂತವಾದ ಕ್ಷಯರೋಗಾಣುಗಳ ಕದಡು. ಈ ರೋಗಾಣುವನ್ನು ಫ್ರೆಂಚ್ ರೋಗಾಣುವಿಜ್ಞಾನಿ ಆಲ್ಬರ್ಟ್ ಕಾಲ್ಮೆಟ್ ಮತ್ತು ಪಶುವೈದ್ಯ ಕ್ಯಾಮಿಲ್ ಗ್ವೆರಿನ್ ಎಂಬವರು ಒಂದು ಪ್ರಬಲವಾದ ಪಶುಸಂಬಂಧ ಕ್ಷಯರೋಗಾಣು ಪಂಗಡದಿಂದ ಸಾರೀಕರಿಸಿದರು. ಇದನ್ನು 13 ವರ್ಷಗಳ ಕಾಲ ಪ್ರಯೋಗಶಾಲೆಯಲ್ಲಿ ಪದೇ ಪದೇ ಕೃತಕ ಮಾಧ್ಯಮದಲ್ಲಿ ಬಿತ್ತಿ ಬೆಳೆಸಿದಾಗ ಅವು ಬಲಹೀನವಾಗಿ ಪಶುಗಳಲ್ಲಿ ಆಗಲಿ ಮಾನವರಲ್ಲಿ ಆಗಲಿ ತೀವ್ರ ಕ್ಷಯರೋಗವನ್ನು ಉಂಟುಮಾಡಲು ಪೂರ್ಣವಾಗಿ ಅಶಕ್ತವಾಗಿರುವುದು ತಿಳಿಯಿತು. ವೈಲ್‍ಹಾಲ್ ಎಂಬಾತ 1921ರಲ್ಲಿ ಮೊತ್ತಮೊದಲಿಗೆ ಬಿಸಿಜಿ ಲಸಿಕೆಯನ್ನು ಬಾಯಿ ಮುಖಾಂತರ ಪ್ರಯೋಗಿಸಿದ. ಹೈಂಬೆಕ್ ಎಂಬಾತ 1926ರಲ್ಲಿ ನಾರ್ವೆಯಲ್ಲಿ ವಿದ್ಯಾರ್ಥಿ–ದಾದಿಯರಿಗೆ ವ್ಯವಸ್ಥಿತವಾಗಿ ಬಿ.ಸಿ.ಜಿ.ಯನ್ನು ಕೊಡಲು ಪ್ರಾರಂಭಿಸಿದ. 1940ರಲ್ಲಿ ದ್ರವರೂಪದ ಲಸಿಕೆಯನ್ನು ಘನೀಕರಿಸುವ(ಅತಿ ಶೈತ್ಯದಿಂದ ನಿರ್ಜಲೀಕರಿಸಿ ಘನೀಕರಿಸುವಿಕೆ) ಪ್ರಯತ್ನ ಸಫಲವಾಯಿತು. ಭಾರತದಲ್ಲಿ ಬಿ.ಸಿ.ಜಿ. ಚುಚ್ಚುಮದ್ದು ಕ್ರಮವನ್ನು ಪ್ರಾಯೋಗಿಕವಾಗಿ 1948ರಲ್ಲಿ ತೆಗೆದುಕೊಳ್ಳಲಾಯಿತು; ಮತ್ತು ಅದೇ ವರ್ಷ ಚೆನ್ನೈನ ಗಿಂಡಿಯಲ್ಲಿ ಬಿ.ಸಿ.ಜಿ. ಲಸಿಕೆ ತಯಾರಿಕೆಯ ಪ್ರಯೋಗಶಾಲೆಯನ್ನು ಸ್ಥಾಪಿಸಲಾಯಿತು. ದೇಶದಲ್ಲೆಲ್ಲ ಬಿ.ಸಿ.ಜಿ. ಪ್ರಚಾರ ಪ್ರಾರಂಭವಾದದ್ದು 1951ರಲ್ಲಿ. ಕ್ರಮೇಣ ಎಲ್ಲ ರಾಜ್ಯಗಳೂ ಅದರಲ್ಲಿ ಪಾಲುಗೊಳ್ಳಲು ಆರಂಭವಾಗಿ ಆಗಿನಿಂದ ಪ್ರಚಾರ ನಡೆಯುತ್ತಲೇ ಇದೆ.

0.1 ಮಿ.ಲೀ.ನಷ್ಟು ದ್ರವವನ್ನು ತೋಳಿನ ಚರ್ಮದೊಳಕ್ಕೆ ವಿಶೇಷರೀತಿಯ ಪಿಚಕಾರಿಯ ಮೂಲಕ ಒಳಹೊಗಿಸುವುದು ಸಾಮಾನ್ಯವಾಗಿ ಬಿ.ಸಿ.ಜಿ. ಲಸಿಕೆಯನ್ನು ಕೊಡುವ ವಿಧಾನ. ಪ್ರಯೋಗಶಾಲೆಯಿಂದ ಬಿ.ಸಿ.ಜಿ. ಲಸಿಕೆ ಕಂದು ಬಣ್ಣದ ಕುಪ್ಪಿಗಳಲ್ಲಿ (ಬೆಳಕಿನಿಂದ ರಕ್ಷಿಸುವುದಕ್ಕಾಗಿ) ಸರಬರಾಜಾಗುತ್ತದೆ ಮತ್ತು ತಯಾರಿಸಿದ ದಿವಸದಿಂದ 2 ವಾರಗಳೊಳಗೆ ಇದನ್ನು ಉಪಯೋಗಿಸಬೇಕಾಗಿದೆ. ಉಷ್ಣದಿಂದ ರಕ್ಷಿಸಲು ಲಸಿಕೆಯನ್ನು 4° ಸೆಂ.ನಲ್ಲಿ ಶೇಖರಣೆ ಮಾಡಬೇಕು. ಬೆಳಕು ಉಷ್ಣಗಳಿಂದ ರಕ್ಷಣೆಗೊಳ್ಳದಿದ್ದರೆ ಲಸಿಕೆ ನಿಷ್ಪ್ರಯೋಜಕವಾಗುತ್ತದೆ.

ಭಾರತದಲ್ಲಿ ಬಿ.ಸಿ.ಜಿ.ಯನ್ನು ನವಜಾತ ಶಿಶುವಿಗೆ ಕ್ಷಯದ ವಿರುದ್ಧ ರಕ್ಷಣೆ ನೀಡುವ ಲಸಿಕೆಯನ್ನು ಕೂಡಲೇ ಕೊಡಲಾಗುತ್ತದೆ. ಬಿ.ಸಿ.ಜಿ. ಚುಚ್ಚುಮದ್ದಿನಿಂದಾಗುವ ಜಟಿಲತೆಗಳು ಅಪರೂಪ ಮತ್ತು ಕಡಿಮೆ. ಜಟಿಲತೆಗಳೆಂದು ಕರೆಸಿಕೊಳ್ಳುವ ಬಹುಪಾಲು ವ್ರಣ ಗಳಲೆಕಟ್ಟಿಕೊಳ್ಳುವುದು ಇತ್ಯಾದಿಗಳು ನಿರೀಕ್ಷಿಸಬಹುದಾದ ಪ್ರತಿಕ್ರಿಯೆಗಳು ಮಾತ್ರವೇ ಆಗಿವೆ. ಮಗುವಿಗೆ ಏಕಕಾಲದಲ್ಲಿ ಕ್ಷಯರೋಗದ ವಿರುದ್ಧ ಲಸಿಕೆ ಹಾಕುವುದರಿಂದ ಏನೂ ಹಾನಿ ಇಲ್ಲ. ಹಾಗಾಗಿ ಅದನ್ನು ಜನ್ಮ ತಳೆದ ಅನಂತರ ಮಗುವಿಗೆ ಕೊಡುವ ಲಸಿಕೆಯಾಗಿದೆ. (ಡಿ.ಆರ್.ಎನ್.)

**ಕ್ಷಯರೋಗದ ಹತೋಟಿ :** ಕ್ಷಯರೋಗದ ಹತೋಟಿ ಸಮಾಜಕ್ಕೆ ಒಂದು ಸಾರ್ವಜನಿಕ ಪ್ರಶ್ನೆಯಾಗಿ ನಿಲ್ಲಬೇಕು ಮತ್ತು ವರ್ಷದಿಂದ ವರ್ಷಕ್ಕೆ ರೋಗದ ಪ್ರಾಬಲ್ಯ ಇಳಿಮುಖವಾಗಬೇಕು. ವಿಶ್ವ ಆರೋಗ್ಯ ಸಂಸ್ಥೆ 1964ರಲ್ಲಿ ಹತೋಟಿಯ ಮಟ್ಟ ಅಂದರೆ 14 ವರ್ಷದ ಬಾಲಕರಲ್ಲಿ ಶೇ.1ಕ್ಕಿಂತ ಹೆಚ್ಚಿನಲ್ಲದೆ ಸೋಂಕು ಕಂಡ ಕಾಲ ಎಂದು ಸಾರಿದೆ. 1900ನೆಯ ಇಸವಿಯ ಅನಂತರ ಬಹುದೇಶಗಳಲ್ಲಿ ಜೀವನದ ಮಟ್ಟ ಮತ್ತು ಪರಿಸರಗಳು ಗಣನೀಯವಾಗಿ ಉತ್ತಮಗೊಂಡಿದ್ದು ಕ್ಷಯರೋಗ ಪ್ರಶ್ನೆಯ ಬಾಹುಳ್ಯವನ್ನು ಕಡಿಮೆ ಮಾಡಿತು. ಅದೀಗ ಮತ್ತೆ ಗೋಚರಿಸುತ್ತಿರುವುದು ಏಡ್ಸ್ ಕಾಯಿಲೆ ವ್ಯಾಪಕತೆಯಿಂದ ಆದರೆ ಶೀಘ್ರತರವಾದ ಇಳಿಮುಖ 1945ರ ಅನಂತರ ರಾಸಾಯನಿಕ ಔಷಧ ಪ್ರಯೋಗವನ್ನು ಅನುಸರಿಸುವಾಗಿನಿಂದ ಕಂಡುಬಂದಿದೆ. ಬಹುಸಾಂಖ್ಯಿಕವಾಗಿ ರೋಗಿಗಳನ್ನು ಔಷಧಿಗಳಿಂದ ಚಿಕಿತ್ಸಿಸಿದಾಗ ಆ ರೋಗಿಗಳು ಗುಣಮುಖರಾಗುವರಲ್ಲದೆ ಸೋಂಕು ಹರಡುವುದೂ ನಿಲ್ಲುತ್ತದೆ. ಹೀಗೆ ಒಂದು ಚಿಕಿತ್ಸಾಕ್ರಮ ಫಲಕಾರಿಯಾದ ರೋಗವನ್ನು ತಡೆಗಟ್ಟುವ ವಿಧಾನವಾಗಿ ಎರಡು ರೀತಿಯ ಅನುಕೂಲ ಉಳ್ಳದ್ದಾಗಿದೆ. ಜನರಲ್ಲಿ ಕ್ಷಯರೋಗ ನಿಯಂತ್ರಿಸಲು ಒಂದು ಯೋಜನೆ ಬಹು ಅಗತ್ಯ. ಇಂಥ ಯೋಜನೆ ತಾಂತ್ರಿಕ ವಿಷಯಗಳ ಮೇಲೆಯೇ ಪೂರ್ಣವಾಗಿ ಅವಲಂಬಿಸಿಲ್ಲ. ಜನ ಹಣ ಮತ್ತು ಸಲಕರಣೆಗಳ ರೂಪದಲ್ಲಿ ಮೂಲಸಾಮಗ್ರಿಗಳ ಲಭ್ಯತೆ ಮತ್ತು ಒಪ್ಪಿಗೆ ನೀಡಿದ ರಾಷ್ಟ್ರೀಯ ಅಗತ್ಯಗಳ ಪ್ರಾಧಾನ್ಯಗಳನ್ನು ಮುಖ್ಯವಾಗಿ ಇಲ್ಲಿ ಗಣಿಸಬೇಕು. ಬೆಂಗಳೂರಿನ ರಾಷ್ಟ್ರೀಯ ಕ್ಷಯರೋಗ ಸಂಸ್ಥೆ (NTI) ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಗಮನದಲ್ಲಿರಿಸಿಕೊಂಡು 1961ರಲ್ಲಿ ಈಗಿನ ರಾಷ್ಟ್ರೀಯ ಕ್ಷಯರೋಗ ಹತೋಟಿ (NTP) ಕಾರ್ಯಕ್ರಮಕ್ಕೆ ತಳಹದಿಯಾಗಿರುವ ಜಿಲ್ಲಾ ಮಟ್ಟದ ಕ್ಷಯರೋಗ ಕಾರ್ಯಕ್ರಮವನ್ನು (DTP) ರೂಪಿಸಿತು. ಡಿ.ಟಿ.ಪಿ.ಯ ಮೂಲಭೂತ ಉದ್ದೇಶಗಳು ಹೀಗಿವೆ:

1. ಸಮುದಾಯದಲ್ಲಿ ಸೋಂಕು ತಗಲಬಹುದಾದ ಬಹುಪಾಲು ವ್ಯಕ್ತಿಗಳಿಗೆ ಫಲಕಾರಿಯಾಗಿ ಬಿ.ಸಿ.ಜಿ. ಚುಚ್ಚುಮದ್ದು ಹಾಕುವುದು.

2. ಆರೋಗ್ಯ ಸಂಸ್ಥೆಗಳಿಗೆ ಬರುವ ಜನರಲ್ಲಿ ಅನುಭಾವಿಕ ಸೂಚನೆಗಳಿರುವ ಕ್ಷಯರೋಗಿಗಳನ್ನು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಗುರುತಿಸಿ ಅವರಿಗೆ ಫಲಕಾರಿಯಾದ ಚಿಕಿತ್ಸೆ ಮಾಡುವುದು.

3.ಹಾಗೆ ಮಾಡುವಾಗ ರೋಗವನ್ನು ಪ್ರಸಾರ ಮಾಡುವ ಸಕರಾತ್ಮಕ ಕಫವಿರುವ ರೋಗಿಗಳಿಗೆ ಪ್ರಾಧಾನ್ಯ ಕೊಡುವುದು.

4.ಈ ಎಲ್ಲ ಕ್ರಮಗಳನ್ನೂ ಆ ವಲಯದ ಆರೋಗ್ಯ ಸಂಸ್ಥೆಗಳೆಲ್ಲವೂ ಸಾಮಾನ್ಯ ಆರೋಗ್ಯ ಸೇವೆಯ ಒಂದು ಮೂಲಭೂತ ಅಂಶದಂತೆಯೇ ಭಾವಿಸಿ ನಡೆಸುವುದು.

ಈ ಉದ್ದೇಶಗಳನ್ನು ಪೂರೈಸಲು ಒಂದು ಜಿಲ್ಲಾ ಕ್ಷಯರೋಗ ಕೇಂದ್ರವನ್ನು (DTC) ಎಕ್ಸ್–ಕಿರಣ ಮತ್ತು ಸೂಕ್ಷ್ಮದರ್ಶಕದ ಅನುಕೂಲದ ಲಭ್ಯತೆ ಇರುವ ಜಿಲ್ಲೆಯ ಮುಖ್ಯ ಸ್ಥಳದಲ್ಲಿ ಸ್ಥಾಪಿಸಬೇಕು. ಒಂದು ಬಿ.ಸಿ.ಜಿ. ತಂಡವನ್ನು ನೇಮಿಸಬೇಕು. ಇಲ್ಲಿಂದ ಎನ್.ಟಿ.ಐ.ನಲ್ಲಿ ತರಬೇತಿ ಹೊಂದಿರುವ ಸೂಚಕ ಕಾರ್ಯಕ್ರಮದ ನಿರತರು ಜಿಲ್ಲೆಯಲ್ಲೆಲ್ಲ ಕಾರ್ಯಕ್ರಮವನ್ನು ರೂಪಿಸಬೇಕು. ತಾಲ್ಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸ್ಥಳೀಯ ಹಣದಿಂದ ನಡೆಸಲ್ಪಡುವ ಆಸ್ಪತ್ರೆಗಳು ಮುಂತಾದ ದೂರದ ಆರೋಗ್ಯ ಸಂಸ್ಥೆಗಳು ಸೂಕ್ಷ್ಮದರ್ಶಕದ ಸಹಾಯದಿಂದಾಗಲಿ ಹತ್ತಿರವಿರುವ ಹೆಚ್ಚಿನ ಅನುಕೂಲಗಳಿದ್ದ ಸಂಸ್ಥೆಗಳಿಗೆ ಕಳುಹಿಸಿಯಾಗಲಿ ತಾವೇ ಸ್ವತಃ ರೋಗನಿದಾನವನ್ನು ಮಾಡಬಹುದು. ರೋಗನಿದಾನ ಸಾಧ್ಯವಿರಲಿ, ಇಲ್ಲದಿರಲಿ ಎಲ್ಲ ಆರೋಗ್ಯ ಸಂಸ್ಥೆಗಳಲ್ಲೂ ಚಿಕಿತ್ಸೆ ಲಭಿಸುತ್ತದೆ.



ಚಿತ್ರ 5 ಜಿಲ್ಲೆಯಲ್ಲಿ ಕ್ಷಯರೋಗ ನಿರ್ಮೂಲನ ಕಾರ್ಯಕ್ರಮದ ಒಂದು ಮಾದರಿ

ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮವನ್ನು 1992ರಲ್ಲಿ ಪರಿಷ್ಕರಿಸಲಾಯಿತು. ಅದರನ್ವಯ ಇಂದು ಆರು ತಿಂಗಳು ಕಾಲದ ಕ್ಷಯ ರೋಗದ ಚಿಕಿತ್ಸೆಯನ್ನು ವೈದ್ಯ ನಿರೀಕ್ಷಣೆಯಡಿ ಕೊಟ್ಟು ರೋಗವನ್ನು ಹತೋಟಿಗೆ ತಂದು ಅದರ ಹರಡುವಿಕೆಗೆ ತಡೆ ಹಾಕಲಾಗುತ್ತಿದೆ. ಚಿಕಿತ್ಸೆಯನ್ನು ನೇರವಾಗಿ ವೀಕ್ಷಿಸುವುದರಿಂದ ಅದಕ್ಕೆ ಡಾಟ್ಸ್ ಚಿಕಿತ್ಸೆಯೆಂಬ ಹೆಸರು ಬಂದಿದೆ. ಅದರನ್ವಯ ಹೊಸದಾಗಿ ಗುರುತಿಸಲ್ಪಟ್ಟ ಕ್ಷಯಾಣು ಇರುವ ರೋಗಿ ಮೊದಲೆರಡು ತಿಂಗಳು ತೀವ್ರತರ ಚಿಕಿತ್ಸಾ ವಿಧಾನವನ್ನು

ಅನುಸರಿಸಿ ಐಸೋನಿಯಜಿಡ್, ರಿಫಾಮೈಸಿನ್, ಪೈರಜನಮೈಡ್ ಮತ್ತು ಇಥಾಂಬುಟಾಲ್ ಪಡೆಯುತ್ತಾನೆ. ಅನಂತರ ನಾಲ್ಕು ತಿಂಗಳು ಐಸೋನಿಯಜಿಡ್ ಮತ್ತು ರಿಫಾಮೈಸಿನ್ ಮುಂದುವರಿಸುತ್ತಾನೆ. ರೋಗ ಮರುಕಳಿಸಿದರೆ ಇಲ್ಲವೇ ಚಿಕಿತ್ಸೆ ಅಯಶಸ್ವಿಯಾಗಿದ್ದರೆ ಮೂರು ತಿಂಗಳು ತೀವ್ರತರ ಚಿಕಿತ್ಸೆ ಅನಂತರ ಐದು ತಿಂಗಳು ಚಿಕಿತ್ಸೆ ಮುಂದುವರಿಸಲಾಗುತ್ತದೆ. ಅದರಲ್ಲಿ ಮೊದಲ ಎರಡು ತಿಂಗಳು ಸ್ಟ್ರೆಪ್ಟೋಮೈಸಿನ್ ಜೊತೆಯಲ್ಲಿ ಕೊಡಲಾಗುತ್ತದೆ. ಮುಂದಿನ ಐದು ತಿಂಗಳು ಚಿಕಿತ್ಸೆಯಲ್ಲಿ ಐಸೋನಿಯಜಿಡ್, ರಿಫಾಮೈಸಿನ್ ಜೊತೆ ಇಥಾಂಬುಟಾಲ್ ಸೇರಿಸಿ ಕೊಡಲಾಗುವುದು. ಕಫದಲ್ಲಿ ಕ್ಷಯಾಣು ಇಲ್ಲದಿರುವ ಮತ್ತು ಶ್ವಾಸಕೋಶದ ಹೊರಗೆ ಕ್ಷಯ ರೋಗವಿದ್ದವರ ಚಿಕಿತ್ಸೆಯಲ್ಲಿ ಮೊದಲೆರಡು ತಿಂಗಳು ಐಸೋನಿಯಜಿಡ್, ರಿಫಾಮೈಸಿನ್ ಮತ್ತು ಪೈರಜಿನಮೈಡ್ ಕೊಟ್ಟು, ಉಳಿದ ನಾಲ್ಕು ತಿಂಗಳು ಐಸೋನಿಯಜಿಡ್ ಮತ್ತು ರಿಫಾಮೈಸಿನ್ ಮಾತ್ರ ಕೊಡಲಾಗುತ್ತದೆ.

(ವೈ.ಆರ್)

**ಕ್ಷಯಮಾಸ :** ಎರಡು ಅನುಕ್ರಮ ಅಮಾವಾಸ್ಯೆಗಳ ನಡುವೆ ಎರಡು ಸೌರ ಸಂಕ್ರಮಣಗಳು ಬರುವ ಚಾಂದ್ರಮಾಸ. ಜ್ಯೋತಿಶ್ಶಾಸ್ತ್ರದಲ್ಲಿ ತಿಳಿಸಿರುವಂತೆ ಸೂರ್ಯನ ಮಂದೋಚ್ಚ ಮಿಥುನರಾಶಿಯಲ್ಲಿರುವಾಗ ಕಾರ್ತಿಕ ಮೊದಲು ಮೂರು ತಿಂಗಳ ಮಧ್ಯದಲ್ಲಿದು ಬರುತ್ತದೆ. ಶುಕ್ಲಪಕ್ಷಪಾಡ್ಯದಿಂದ ಪ್ರಾರಂಭವಾಗಿ ಮುಂದಿನ ಅಮಾವಾಸ್ಯೆ ಮುಗಿಯುವ ತನಕದ ಅವಧಿ ಒಂದು ಚಾಂದ್ರಮಾಸ. ಇದರಲ್ಲಿ ಶುದ್ಧ, ಅಧಿಕ, ಕ್ಷಯ ಎಂದು ಮೂರು ವಿಧ. ಚಾಂದ್ರಮಾಸ ಮಧ್ಯದಲ್ಲಿ ಸೌರ ಸಂಕ್ರಮಣವಿದ್ದರೆ ಅದು ಶುದ್ಧ ಮಾಸ; ಸೌರ ಸಂಕ್ರಮಣವಿಲ್ಲದಿರುವುದು ಅಧಿಕಮಾಸ; ಎರಡು ಸಂಕ್ರಮಣಗಳಿರುವುದು ಕ್ಷಯ ಮಾಸ. ಚೈತ್ರದಿಂದ ಪ್ರಾರಂಭವಾಗಿ ಫಾಲ್ಗುಣ ಪೂರ್ತಿ ಇರುವ ಹನ್ನೆರಡು ಮಾಸಗಳು ಶುದ್ಧ ಚಾಂದ್ರಮಾಸಗಳು. ಮೂರು ವರ್ಷಗಳಿಗೆ ಒಂದು ಸಲ ಹನ್ನೆರಡು ತಿಂಗಳುಗಳಲ್ಲಿ ಒಂದೇ ಹೆಸರಿನ ಎರಡು ತಿಂಗಳು ಬಂದು ವರ್ಷದಲ್ಲಿ ಒಟ್ಟು ಹದಿಮೂರು ತಿಂಗಳುಗಳಾಗುತ್ತವೆ. ಆಗ ಒಂದೇ ಹೆಸರಿನ ಆ ಎರಡು ತಿಂಗಳುಗಳಲ್ಲಿ ಮೊದಲನೆಯದು ಅಧಿಕ ಮಾಸವಾಗುತ್ತದೆ. ಅಧಿಕ ಮಾಸ 29ರಿಂದ 36ತಿಂಗಳುಗಳ ಮಧ್ಯೆ ಒಮ್ಮೆ ಬರುತ್ತದೆ. ಇದರಂತೆ ಐದು ವರ್ಷಗಳಿಗೆ ಎರಡು ಅಧಿಕಮಾಸಗಳು ಬರುತ್ತವೆ. ಕ್ಷಯಮಾಸ 19ರಿಂದ 141 ವರ್ಷಗಳ ನಡುವೆ ಒಮ್ಮೆ ಸಂಭವಿಸುತ್ತದೆ. 1963ನೆಯ ಡಿಸೆಂಬರ್ ಮಾಹೆಯಲ್ಲಿ ಮಾರ್ಗಶಿರಮಾಸ ಕ್ಷಯವಾಗಿತ್ತು. ಇದಕ್ಕೆ 141 ವರ್ಷಗಳ ಹಿಂದಿನ ಚಿತ್ರಭಾನು ಸಂವತ್ಸರದಲ್ಲಿ ಕ್ಷಯಮಾಸ ಬಂದಿತ್ತು. ತರುವಾಯದ 19 ವರ್ಷಗಳಲ್ಲಿ ಬರುವ ಸಂಭವವಿದೆ. ಈ ಕ್ಷಯಮಾಸ ಬಂದಾಗ ಇದಕ್ಕೆ ಹಿಂದೆ ಒಂದು ಅಧಿಕ ಮಾಸವೂ ಮುಂದೆ ಬಂದು ಅಧಿಕ ಮಾಸವೂ ಬರುತ್ತವೆ. ಎರಡು ಅಧಿಕ ಮಾಸಗಳೂ ಒಂದೇ ಸಂವತ್ಸರದಲ್ಲಿ ಬರಬಹುದು. ಇಲ್ಲದೆ ಎರಡನೆಯ ಅಧಿಕಮಾಸ ಮುಂದಿನ ಸಂವತ್ಸರದ ಆರಂಭದಲ್ಲಿ ಬರಬಹುದು. ಕ್ಷಯಮಾಸವನ್ನು ದ್ವಿಸಂಕ್ರಾಂತಿ ಮಾಸ, ಮಲಮಾಸ, ಮಲಿಮ್ಲುಚಮಾಸ, ಅಂಹಸ್ಪತಿ ಎಂಬ ಹೆಸರುಗಳಿಂದಲೂ ಕರೆಯುವುದುಂಟು. ಕ್ಷಯಮಾಸ ಸಂಭವವನ್ನು ಭಾಸ್ಕರಾಚಾರ್ಯರು ಸಿದ್ಧಾಂತ ಶಿರೋಮಣಿ ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

ಈ ಕ್ಷಯಮಾಸ ಒಂದೇ ಚಾಂದ್ರಮಾನ ಮಾಸವಾದರೂ ಇದಕ್ಕೆ ಎರಡು ಚಾಂದ್ರಮಾನ ಮಾಸಗಳ ಲಕ್ಷಣ ಸರಿಹೊಂದುವುದರಿಂದ ಇದರಲ್ಲಿ ಎರಡು ಮಾಸಗಳು ಅಡಕವಾಗಿವೆ. ಎರಡು ಚಾಂದ್ರಮಾನಮಾಸಗಳ ಕರ್ತವ್ಯಗಳನ್ನು ಈ ಒಂದರಲ್ಲೇ ಮಾಡಬೇಕು. ಸ್ಮೃತಿಸಂಗ್ರಹದಲ್ಲೂ ಕಾರಕಗೃಹ್ಯದಲ್ಲೂ ತಿಳಿಸಿರುವಂತೆ ಈ ಕ್ಷಯಮಾಸದಲ್ಲಿ ನಿತ್ಯ ನೈಮಿತ್ತಿಕ ಕಾರ್ಯಗಳನ್ನು ಮಾತ್ರ ಮಾಡಬೇಕು. ಮಂಗಳಕಾರ್ಯಗಳನ್ನು ಮಾಡಬಾರದು.

ಕ್ಷಯಮಾಸದಲ್ಲಿ ಜನನವಾಗಲೀ ಮರಣವಾಗಲೀ ಸಂಭವಿಸಿದರೆ ತಿಥಿಯ ಮೊದಲನೆಯ ಅರ್ಧಭಾಗದಲ್ಲಿ ಆದುದನ್ನು ಮೊದಲನೆಯ ತಿಂಗಳಿನಲ್ಲಿ ಆದಂತೆಯೂ ಎರಡನೆಯ ಅರ್ಧದಲ್ಲಿ ಆದುದನ್ನು ಎರಡನೆಯ ತಿಂಗಳಿನಲ್ಲಿ ಆದಂತೆಯೂ ಗೊತ್ತು ಮಾಡಿ ಮುಂದಿನ ವರ್ಷಗಳಲ್ಲಿ ನಡೆಸಬೇಕಾದ ತಿಥಿ ಮತ್ತು ಹುಟ್ಟಿದ ಹಬ್ಬದ ದಿನಗಳನ್ನು ನಿಷ್ಕರ್ಷಿಸಬೇಕು. ಉದಾಹರಣೆಗೆ 1963ನೆಯ ಶೋಭಕೃತ್ ವರ್ಷದಲ್ಲಿ ಮಾರ್ಗಶಿರ ಮತ್ತು ಪುಷ್ಯ ಎಂಬ ಎರಡು ಹೆಸರುಗಳಿಂದ ಕರೆದು ಅದರಲ್ಲೇ ಆ ಎರಡು ತಿಂಗಳಿನ ಕರ್ತವ್ಯವಾಗಿದೆ. ಪುಷ್ಯಮಾಸವನ್ನೇ ಮಾರ್ಗಶಿರ ಮತ್ತು ಪುಷ್ಯ ಎಂಬ ಎರಡು ಹೆಸರುಗಳಿಂದ ಕರೆದು ಅದರಲ್ಲೇ ಆ ಎರಡು ತಿಂಗಳಿನ ಕರ್ತವ್ಯಗಳನ್ನು ನಿರ್ವಹಿಸಬೇಕು. ಇದರಲ್ಲಿ ತಿಥಿಯ ಪೂರ್ವಾರ್ಧ ಮಾರ್ಗಶಿರ ಮಾಸಕ್ಕೆ ಸೇರಿದ್ದು ಉತ್ತರಾರ್ಧ ಪುಷ್ಯ ಮಾಸಕ್ಕೆ ಸೇರಿದ್ದು.

ಈ ಕ್ಷಯಮಾಸಕ್ಕೆ ಹಿಂದೆ ಅಶ್ವಯುಜ ಮಾಸ ಅಧಿಕವಾಗಿ ಬಂದಿದೆ. ಮುಂದಿನ ಕ್ರೋಧಿ ಸಂವತ್ಸರದ ಚೈತ್ರಮಾಸವೂ ಅಧಿಕವಾಗಿ ಬಂದಿದೆ. ಹೀಗೆ ಕ್ಷಯಮಾಸಕ್ಕೆ ಮೊದಲೂ ಅನಂತರವೂ ಅಧಿಕಮಾಸ ಬರುತ್ತದೆ. ಎರಡು ಅಧಿಕ ಮಾಸಗಳೂ ಒಂದೇ ವರ್ಷಮಧ್ಯದಲ್ಲಿ ಬಂದಾಗ ಒಂದು ಮಾಸ ನಿಜವಾದ ಅಧಿಕಮಾಸವಾಗಿ ಒಂದೇ ಹೆಸರಿನ ಎರಡು ಚಾಂದ್ರಮಾಸಗಳಿರುತ್ತವೆ. ಮತ್ತೊಂದರ ಎರಡು ತಿಂಗಳುಗಳಿರದೆ ಒಂದೇ ತಿಂಗಳಿರುತ್ತದೆ. ಎರಡನೆಯ ಮಾಸ ಕ್ಷಯವಾಗುತ್ತದೆ.

(ಎಸ್.ಎನ್.ಕೆ.)

**ಕ್ಷಯಾಣುಸಾರ :** ಕ್ಷಯ ದಂಡಾಣುಜೀವಿಯ ಪ್ರೋಟೀನಿನ ಅಂಶಕ್ಕೆ ಒಬ್ಬ ವ್ಯಕ್ತಿಯ ಅಂಗಾಂಶ ಸಂವೇದನೆ (ಸೆನ್ಸಿಟಿವಿಟಿ) ತೋರ್ಪಡಿಸುವುದೋ ಇಲ್ಲವೋ ಎನ್ನುವುದನ್ನು ಕಂಡುಕೊಳ್ಳಲು ರೋಗನಿದಾನದ ಚರ್ಮ ಪರೀಕ್ಷೆಗಳಲ್ಲಿ ಬಳಸುವ ಕ್ಷಯ ದಂಡಾಣುಜೀವಿಗಳ ಸಾರ (ಟ್ಯೂಬರ್‌ಕ್ಯುಲಿನ್). ರೋಗ ಹೊಮ್ಮಿರಲಿ ಇಲ್ಲದಿರಲಿ ಕ್ಷಯಾಣುಗಳಿಂದ ಮುಂಚೆಯೇ ಸೋಂಕಾಗಿದ್ದರೆ ಅಂಗಾಂಶಗಳು ಕ್ಷಯಾಣುವಿನ ಪ್ರೋಟೀನಿಗೆ ಸಂವೇದನೀಯವಾಗಿರುವುದೇ ಇದರ ಆಧಾರ. ಮುಂದೋಳಿನ ಮುಂಭಾಗದ ಚರ್ಮದೊಳಕ್ಕೆ ಕ್ಷಯಸಾರವನ್ನು ಚುಚ್ಚಿ ಹೊಗಿಸುವುದರಿಂದ ಇದನ್ನು ಕಂಡುಹಿಡಿಯಬಹುದು. ಹೀಗೆ ಚುಚ್ಚಿದಾಗ ಸ್ಥಳೀಯ ಪ್ರತಿಕ್ರಿಯೆ, ಸಾರ್ವತ್ರಿಕ (ಅಂದರೆ ಇಡೀ ದೇಹಕ್ಕೆ ಅನ್ವಯಿಸುವಂತೆ) ಪ್ರತಿಕ್ರಿಯೆಯ ಸಮೇತ ಅಥವಾ ಇಂಥ ಪ್ರತಿಕ್ರಿಯೆ ಇಲ್ಲದೇ ಕಂಡುಬರಬಹುದು. ಇದು ಧನಾತ್ಮಕ ಪ್ರತಿಕ್ರಿಯೆ. ಇದರ ಅರ್ಥ ಅಂಗಾಂಶಗಳು ಸಂವೇದನೀಯವಾಗಿದೆ ಎಂದು. ಇಂಥ ಯಾವ ಪ್ರತಿಕ್ರಿಯೆಯೂ ಕಂಡುಬರದಿದ್ದರೆ (ಋಣಾತ್ಮಕ ಸನ್ನಿವೇಶ) ಸಂವೇದನೆ ಇಲ್ಲ ಎಂದು ಅರ್ಥವಾಗುವುದು. ಆ ವ್ಯಕ್ತಿಗೆ ಸಾಮಾನ್ಯವಾಗಿ ಹಿಂದೆಂದೂ ಕ್ಷಯ ದಂಡಾಣುಜೀವಿ ತಾಗಿರುವುದಿಲ್ಲ ಎಂದು ತರ್ಕಿಸಬಹುದು.

ಕ್ಷಯಾಣುಸಾರವನ್ನು ಮೊದಲಿಗೆ ತಯಾರಿಸಿದವ ರಾಬರ್ಟ್‌ಕಾಕ್. ಗ್ಲಿಸರಾಲ್ ರಸವನ್ನು ಇವನು ದ್ರವ ಪೋಷಕ ಮಾಧ್ಯಮವಾಗಿ ಉಪಯೋಗಿಸಿಕೊಂಡ. ಆರು ವಾರಗಳ ಕಾಲ ಕ್ಷಯದ ದಂಡಾಣುಗಳನ್ನು ಈ ಮಾಧ್ಯಮದಲ್ಲಿ ಕಾಕ್ ಬೆಳೆಸಿ (ಈಗ ಇದಕ್ಕೆ ಕಾಕ್‌ನ ಹಳೆಯ ಕ್ಷಯಸಾರ ಎಂದು ಹೆಸರಾಗಿದೆ). ಮುಂದೆ ಶೇ. 50ರಷ್ಟು ಗ್ಲಿಸರಾಲಿನಲ್ಲಿ ದಂಡಾಣುಗಳನ್ನು ಅರೆದು (ಆತನ ಹೆಸರಿನ) ಹೊಸ ಕ್ಷಯಸಾರವನ್ನು ತಯಾರಿಸಿದ. ದಂಡಾಣುಗಳನ್ನು ಬೆಳೆಸಲು ಬಳಸಿದ ಪೋಷಕ ಮಾಧ್ಯಮಗಳ ಅಂಶಗಳಿಂದ ಬಂದ ಬೇಡದ ಪ್ರೋಟೀನುಗಳೂ ಇಂಥ ಕಚ್ಚಾ ಸಾರಗಳಲ್ಲಿ ಇದ್ದೇ ಇರುತ್ತವೆ. ಚರ್ಮ ಪರೀಕ್ಷೆಗಳಲ್ಲಿ ವಿಶಿಷ್ಟವಲ್ಲದ ಪ್ರತಿಕ್ರಿಯೆಗಳನ್ನು ಉಂಟುಮಾಡಿಸುವ ಇಂಥ ಅನಾವಶ್ಯಕ ವಸ್ತುಗಳನ್ನು ಪೂರ್ತಿ ಕಳೆಯಲು ಹಲವಾರು ಬಗೆಯ ಪರಿಷ್ಕರಣ ವಿಧಾನಗಳಿವೆ. ಕ್ಷಯ ದಂಡಾಣುವಿನಿಂದ ನಿರ್ದಿಷ್ಟವಾದ ಶುದ್ಧ ಪ್ರೋಟೀನನ್ನು ಬೇರೆಯಾಗಿ ಸಾರೀಕರಿಸಲಾಗಿದೆ. ಇದಕ್ಕೆ ಶುದ್ಧೀಕೃತ ಪ್ರೋಟೀನ್ ಉತ್ಪನ್ನವೆಂದು ಹೆಸರು. ಇದು ರಚನೆಯಲ್ಲಿ ಹೆಚ್ಚು ಸ್ಥಿರವಾದದ್ದು. ಇದನ್ನು ಬಳಸಿದಾಗ ವಿಶಿಷ್ಟವಲ್ಲದ ಪ್ರತಿಕ್ರಿಯೆಗಳಾದವು. ಹಾಗಾಗಿ ಈ ಉತ್ಪನ್ನ ಹೆಚ್ಚು ಪ್ರಿಯವಾಗಿದೆ. (ಕೆ.ವಿ.ಜಿ)

**ಕ್ಷಾಮ :** ಯಾವುದೇ ಪದಾರ್ಥದ ತೀವ್ರ ಅಭಾವವನ್ನು ಆ ಪದಾರ್ಥದ ಕ್ಷಾಮವೆಂದು ಹೇಳುವ ವಾಡಿಕೆಯಿದೆಯಾದರೂ ಹೆಚ್ಚು ಸಂಖ್ಯೆಯ ಜನರು ಹಸಿವು–ಉಪವಾಸಗಳಿಗೆ ಒಳಗಾಗುವ ಮಟ್ಟಿಗೆ ಸಾರ್ವಜನಿಕವಾಗಿ ಸಂಭವಿಸುವ ಆಹಾರಾಭಾವವೇ ಕ್ಷಾಮ (ಫ್ಯಾಮಿನ್).

**ಇತಿಹಾಸ:** ಕ್ಷಾಮದ ಇತಿಹಾಸ ಬಲು ದೊಡ್ಡದು. ಪ್ರಾಚೀನ ಈಜಿಪ್ಟಿನಲ್ಲಿ ಫೇರೋಗಳ ಕಾಲದಲ್ಲಿ ಕ್ಷಾಮ ಸಂಭವಿಸಿದ್ದ ಬಗ್ಗೆ ಬೈಬಲಿನಲ್ಲಿ ಉಲ್ಲೇಖವಿದೆ. ಪ್ರ.ಶ.ಪೂ.436ರಲ್ಲಿ ರೋಮಿನಲ್ಲಿ ಕ್ಷಾಮ ಸಂಭವಿಸಿದಾಗ ಹಸಿವನ್ನು ತಡೆಯಲಾರದೆ ಸಾವಿರಾರು ಮಂದಿ ಟೈಬರ್ ನದಿಯೊಳಕ್ಕೆ ಹಾರಿಕೊಂಡರೆಂದು ಹೇಳಲಾಗಿದೆ. ಪ್ರ.ಶ.ಪೂ.42ರಲ್ಲಿ ಈಜಿಪ್ಟಿನಲ್ಲಿ ಸಂಭವಿಸಿದ ಕ್ಷಾಮವೂ ಭೀಕರವಾದ್ದು. ಅಲ್ಲಿ ಪ್ರ.ಶ.1064–72 ರಲ್ಲಿ ಹಬ್ಬಿದ ಕ್ಷಾಮ ಏಳು ವರ್ಷಗಳ ಬರವೆಂದು ಹೆಸರಾಗಿದೆ. ಇಂಗ್ಲೆಂಡೂ ಸೇರಿದಂತೆ ಯೂರೋಪಿನ ಇತಿಹಾಸದಲ್ಲೂ ಕ್ಷಾಮಗಳು ಅನೇಕ ಸಾರಿ ಸಂಭವಿಸಿದ ಬಗ್ಗೆ ದಾಖಲೆಗಳುಂಟು. 1005ರಲ್ಲಿ ಇಂಗ್ಲೆಂಡಿಗೆ ಬರ ಬಂದಿತ್ತು. ಹನ್ನೊಂದು ವರ್ಷಗಳ ಅನಂತರ (1016) ಇಡೀ ಯೂರೋಪಿನಲ್ಲಿ ಕ್ಷಾಮ ಸಂಭವಿಸಿತ್ತು. 1586ರಲ್ಲಿ ಇಂಗ್ಲೆಂಡಿನಲ್ಲಿ ಉಂಟಾದ ಕ್ಷಾಮದ ಫಲವಾಗಿ ಅಲ್ಲಿ ಬಡವರಿಗೆ ಸಾರ್ವಜನಿಕ ಪರಿಹಾರ ನೀಡುವ ಕಾನೂನು (ಪೂರ್ ಲಾ) ಜಾರಿಗೆ ಬಂತು. ಐರ್ಲೆಂಡಿನಲ್ಲಿ ಜನಸಾಮಾನ್ಯರ ಜೀವನಾಧಾರವಾದ ಆಲೂಗೆಡ್ಡೆಯ ಫಸಲಿಗೆ ಹಾನಿಯೊದಗಿ ಸಂಭವಿಸಿದ ಕ್ಷಾಮ (1846–47) ಆ ದೇಶದ ಇತಿಹಾಸದಲ್ಲಿ ಆಲೂಗೆಡ್ಡೆಯ ಕ್ಷಾಮವೆಂದೇ ಹೆಸರಾಗಿದೆ. ಅದರ ಪರಿಹಾರಕ್ಕಾಗಿ ಬ್ರಿಟಿಷ್ ಪಾರ್ಲಿಮೆಂಟು 1,00,00,000 ಪೌಂಡುಗಳಷ್ಟು ಪರಿಹಾರಧನವನ್ನು ಮಂಜೂರು ಮಾಡಿತ್ತು. 1877–78ರಲ್ಲೂ 1887–89ರಲ್ಲೂ ಮತ್ತೆ 1916ರಲ್ಲೂ ಚೀನದಲ್ಲಿ ಸಂಭವಿಸಿದ ಕ್ಷಾಮಗಳೂ ಬಹು ಭೀಕರವಾದವು. 1877–78ರ ಉತ್ತರ ಚೀನದ ಕ್ಷಾಮದಲ್ಲಿ 95,00,000 ಜನ ಸಾವಿಗೆ ಈಡಾದರೆಂದು ಹೇಳಲಾಗಿದೆ. ರಷ್ಯದಲ್ಲಿ 1891–92ರಲ್ಲೂ ಸೋವಿಯೆತ್ ದೇಶದಲ್ಲಿ 1921 ಮತ್ತು 1932–33ರಲ್ಲೂ ಕ್ಷಾಮಗಳು ಸಂಭವಿಸಿದ್ದುವು. ಅತ್ಯಂತ ಇತ್ತೀಚಿನ ಕ್ಷಾಮವೆಂದರೆ 1960–61ರಲ್ಲಿ ಕಾಂಗೋದಲ್ಲಿ ಸಂಭವಿಸಿದ್ದು. ವಿಶ್ವಸಂಸ್ಥೆಯ ತ್ವರಿತ ಪರಿಹಾರ ಕಾರ್ಯದಿಂದಾಗಿ ಇದರ ಅನಾಹುತ ತಪ್ಪಿತು.

ಭಾರತದ ಇತಿಹಾಸದಲ್ಲಿ ಹಲವಾರು ಕ್ಷಾಮಗಳ ಉಲ್ಲೇಖವಿದೆ. 1148–59 ರಲ್ಲಿ ಹನ್ನೊಂದು ವರ್ಷಗಳ ಕಾಲ ಉಗ್ರಕ್ಷಾಮವಿತ್ತು. 1344–45ರಲ್ಲಿ ಕ್ಷಾಮ ಉಂಟಾಗಿದ್ದಾಗ

ಆಗಿನ ಮೊಗಲ್ ಚಕ್ರವರ್ತಿಗೆ ಕೂಡ ತನ್ನ ಅರಮನೆಗೆ ಅಗತ್ಯವಾದ ಸಾಮಗ್ರಿಗಳನ್ನು ಪಡೆಯಲು ಸಾಧ್ಯವಾಗಿರಲಿಲ್ಲವಂತೆ. ಮಹಾಕ್ಷಾಮವೆಂದು ಅದು ಹೆಸರಾಗಿದೆ. ಅನಂತರ 1396–1407ರಲ್ಲಿ 12 ವರ್ಷಗಳ ಕಾಲ ಏಕಪ್ರಕಾರವಾಗಿ ಮುಂದುವರಿದ ಕ್ಷಾಮಕ್ಕೆ ಲಕ್ಷಾಂತರ ಜನ ಬಲಿಯಾದರು. ಅದನ್ನು ದುರ್ಗಾದೇವಿ ಬರವೆಂದು ಜನ ಕರೆದಿದ್ದಾರೆ. 1661ರಲ್ಲಿ ಕ್ಷಾಮ ಸಂಭವಿಸಿತೆಂದು ಹೇಳಲಾಗಿದೆ. ಆಗ ಎರಡು ವರ್ಷಗಳ ಕಾಲ ಮಳೆಯೇ ಬೀಳಲಿಲ್ಲವಂತೆ. 1769–70ರಲ್ಲಿ ಬಂಗಾಳದಲ್ಲಿ ಸಂಭವಿಸಿದ ಮಹಾಕ್ಷಾಮಕ್ಕೆ ಒಂದು ಕೋಟಿ ಜನ ಬಲಿಯಾದರು. 1783ರಲ್ಲಿ ವಾರಾಣಸಿ ಪ್ರಾಂತ್ಯದ ಪೂರ್ವದ ತುದಿಯಿಂದ ಲಾಹೋರ್ ಮತ್ತು ಜಮ್ಮು ವರೆಗೆ ಬರ ಹಬ್ಬಿತ್ತು. ಹದಿನೆಂಟನೆಯ ಶತಮಾನದ ಕೊನೆಯ ದಶಕದಲ್ಲಿ (1790–92) ಸಂಭವಿಸಿದ ಕ್ಷಾಮ ತಲೆಬುರುಡೆಯ ಬರವೆಂದು ಹೆಸರಾಗಿದೆ. ಆಗ ಶವಸಂಸ್ಕಾರ ಮಾಡಲು ಕೂಡ ಅಸಾಧ್ಯವೆನಿಸುವಷ್ಟು ಸಂಖ್ಯೆಯಲ್ಲಿ ಜನ ಸತ್ತರು. ವಾಯವ್ಯ ಪ್ರಾಂತ್ಯದಲ್ಲಿ (ಈಗಿನ ಉತ್ತರ ಪ್ರದೇಶ) 8,00,000 ಮಂದಿ ಕ್ಷಾಮಕ್ಕೆ ಆಹುತಿಯಾದರು (1838). ಅನಂತರ ಸಂಭವಿಸಿದ ಕೆಲವು ಮುಖ್ಯ ಕ್ಷಾಮಗಳು ಇವು: ವಾಯವ್ಯ ಭಾರತದಲ್ಲಿ (1861); ಬಂಗಾಲ ಒರಿಸ್ಸಗಳಲ್ಲಿ (1866: ಸತ್ತವರು 10,00,000); ರಾಜಪುಟಾಣದಲ್ಲಿ (1869: ಸಾವುಗಳು 15,00,000); ಮುಂಬಯಿ, ಮದ್ರಾಸು, ಮೈಸೂರು ಪ್ರದೇಶಗಳಲ್ಲಿ (1876–78: ಮರಣಸಂಖ್ಯೆ 95,00,000) ಇಡೀ ಭಾರತದ ಅನೇಕ ಭಾಗಗಳಲ್ಲಿ (1897 ಮತ್ತು 1899ರಲ್ಲಿ ಕ್ಷಾಮದಲ್ಲಿ 10,00,000 ಮಂದಿ ಸತ್ತರು). ಎರಡನೆಯ ಮಹಾಯುದ್ಧ ಕಾಲದಲ್ಲಿ (1943) ಬಂಗಾಳದಲ್ಲಿ ಸಂಭವಿಸಿದ ಕ್ಷಾಮದಿಂದ ಕನಿಷ್ಠ 15,00,000 ಮಂದಿ ಸತ್ತಿರಬೇಕು. ಯುದ್ಧನಿರತ ಬ್ರಿಟಿಷ್ ಸರ್ಕಾರದ ಬೇಜವಾಬ್ದಾರಿ ನೀತಿಯಿಂದಾಗಿ ಈ ಕ್ಷಾಮ ತಲೆದೋರಿತೆಂಬುದು ಸಿದ್ಧವಾಗಿದೆ. ಅಲ್ಲಿ ಅಭಾವ ಪರಿಸ್ಥಿತಿ ತಲೆದೋರಿದ ಮೇಲೂ ಹಲವಾರು ವಾರಗಳ ಕಾಲ ಸರಬರಾಯಿಯ ಕಡೆಗೆ ಸರ್ಕಾರ ಗಮನ ಕೊಡಲಿಲ್ಲ. ಧಾನ್ಯ ಬೆಲೆಗಳು ವಿಪರೀತವಾಗಿ ಏರಿ, ಸಾಮಾನ್ಯರಿಗೆ ಆಹಾರ ಅಲಭ್ಯವಾಗಿ, ಲಕ್ಷಾಂತರ ಮಂದಿ ಹೊಟ್ಟೆಗಿಲ್ಲದೆ ಹಳ್ಳಿಗಳಿಂದ ಕಲ್ಕತ್ತಕ್ಕೆ ಸಾಗಿ ಬಂದು, ರಸ್ತೆಗಳ ಬದಿಗಳಲ್ಲಿ ಸಾಲುಸಾಲಾಗಿ ಸಾಯಲಾರಂಭಿಸಿದಾಗ ಸರ್ಕಾರ ಕಣ್ಣು ತೆರೆಯಿತು. ಆದರೆ ಆ ವೇಳೆಗೆ ಪರಿಸ್ಥಿತಿ ಕೈಮೀರಿ ಹೋಗಿತ್ತು.

**ಕಾರಣಗಳು:** ಕ್ಷಾಮಗಳಿಗೆ ಮುಖ್ಯವಾದ ಕಾರಣಗಳು ನಾಲ್ಕು: 1 ನೀರಿನ ಅಭಾವದಿಂದ ವ್ಯಾಪಕವಾಗಿ ಫಸಲು ನಷ್ಟವಾಗಿ ಅಭಾವ ಸಂಭವಿಸುತ್ತದೆ. ಉಷ್ಣವಲಯದ ನಾಡುಗಳಲ್ಲಿ ಅನಾವೃಷ್ಟಿಯ ಪರಿಣಾಮ ಸಾಮಾನ್ಯವಾಗಿ ತೀವ್ರವಾದದ್ದು. ಈ ಪ್ರದೇಶಗಳಲ್ಲಿ ನೀರಿನ ಸಂಗ್ರಹ, ಹಾಳತವಾದ ಬಳಕೆ–ಇದಕ್ಕೆ ಹೆಚ್ಚಿನ ಪ್ರಾಧಾನ್ಯ. ಮಳೆಯನ್ನೇ ನೇರವಾಗಿ ಅವಲಂಬಿಸುವುದನ್ನು ನೀರಾವರಿಯಿಂದಾಗಿ ಭಾಗಶಃ ನಿವಾರಿಸಲಾಗಿದೆ. ಆದರೆ ಮಳೆ ಸಂಪೂರ್ಣವಾಗಿ ಬಾರದೆಯೇ ಹೋದಾಗ ಬೇಸಾಯಕ್ಕೆ ತೊಂದರೆಯಾಗುವುದು ಸಾಮಾನ್ಯ.

2 ಸಮಶೀತೋಷ್ಣ ವಲಯದ ನಾಡುಗಳಲ್ಲಿ ನೀರಿನ ಅಭಾವದಿಂದ ಕ್ಷಾಮ ಒದಗುವುದು ಬಹಳ ವಿರಳ. ಯುದ್ಧ, ದಂಗೆ, ಫಸಲಿನ ಲೂಟಿ ಇವು ಯೂರೋಪಿನಲ್ಲಿ ಸಂಭವಿಸಿದ ಕ್ಷಾಮಗಳಿಗೆ ಮುಖ್ಯ ಕಾರಣಗಳು. 16, 17ನೆಯ ಶತಮಾನಗಳಲ್ಲಿ ನಡೆದ ಮತೀಯ ಯುದ್ಧಗಳ ಫಲವಾಗಿ ಅಲ್ಲಿ ಕ್ಷಾಮಗಳು ಪದೇಪದೇ ಒದಗಿದುವು. 20ನೆಯ ಶತಮಾನದಲ್ಲಿ ಅತಿಯಾದ ಫಸಲು ನಷ್ಟವಾಗುವಂಥ ದೀರ್ಘ ಯುದ್ಧಗಳು ಜರುಗಿಲ್ಲ. ಕೈಗಾರಿಕಾ ಪ್ರದೇಶಗಳಲ್ಲಿ ಆಹಾರ ಸರಬರಾಯಿಗೆ ಸುಸೂತ್ರ ಸಾರಿಗೆ ವ್ಯವಸ್ಥೆ ಅತ್ಯಗತ್ಯ. ಇದಕ್ಕೆ ಅಡಚಣೆ ಒದಗಿದಾಗ ಕ್ಷಾಮ ತಲೆದೋರಿರುವುದುಂಟು. ಕೆಲವು ವೇಳೆಗಳಲ್ಲಿ ಒಂದು ಜನಾಂಗವನ್ನು ಅದರ ನೆಲೆಯಿಂದ ಕದಲಿಸಿ ಹೊರದೂಡಲು ಕೃತಕವಾಗಿ ಕ್ಷಾಮ ಪರಿಸ್ಥಿತಿಯನ್ನುಂಟುಮಾಡಿದ್ದುಂಟು. ಎರಡನೆಯ ಮಹಾಯುದ್ಧ ಪೂರ್ವದ ಜರ್ಮನಿಯ ನಾಟ್ಸಿಗಳು ಯೆಹೂದ್ಯರನ್ನು ಹೊರಗಟ್ಟಲು ಈ ಕ್ರಮ ಅನುಸರಿಸಿದ್ದರು.

3 ರೋಗಗಳಿಂದಲೂ ಕೀಟಗಳಿಂದಲೂ ಬೆಳೆಗೆ ಹಾನಿಯೊದಗಿದಾಗ ಕ್ಷಾಮ ಸಂಭವಿಸಬಹುದು. 19ನೆಯ ಶತಮಾನದಲ್ಲಿ ಐರ್ಲೆಂಡಿನಲ್ಲಿ ಆಲೂಗೆಡ್ಡೆಯ ಬೆಳೆಗೆ ವ್ಯಾಪಕವಾಗಿ ಬೂಷ್ಟು ರೋಗ ತಗಲಿ ಬೆಳೆ ಕೆಟ್ಟು ಕ್ಷಾಮ ಬಂದಿತ್ತು. ಈ ಕಾಲದಲ್ಲಿ 20–30 ಲಕ್ಷ ಮಂದಿ ಸತ್ತರು. ಅನೇಕರು ಅಮೆರಿಕಕ್ಕೆ ವಲಸೆ ಹೋದರು. ಎಲ್ಲೆಲ್ಲಿ ಜನರು ಒಂದೇ ಬೆಳೆಯನ್ನು ಹೆಚ್ಚಾಗಿ ಅವಲಂಬಿಸಿರುತ್ತಾರೋ ಅಲ್ಲೆಲ್ಲ ಈ ಬಗೆಯ ಕ್ಷಾಮದ ಅಪಾಯವುಂಟು. ಇಂಥೆಡೆಗಳಲ್ಲಿ ಸತತವಾದ ವೀಕ್ಷಣೆ ಮತ್ತು ನಿವಾರಣಾ ಕ್ರಮಗಳು ಅತ್ಯಗತ್ಯ.

4 ನೈಸರ್ಗಿಕ ಅನಾಹುತಗಳಿಂದಲೂ ಕ್ಷಾಮ ಉಂಟಾಗುತ್ತದೆ. ಭೂಕಂಪ, ಪ್ರವಾಹ–ಇವು ಎರಡು ಉದಾಹರಣೆಗಳು. ಇವುಗಳಿಂದ ಆಹಾರ ದಾಸ್ತಾನಿಗೆ ನಷ್ಟ ತಟ್ಟಬಹುದು. ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಗಬಹುದು.

**ಪರಿಹಾರ:** ಉಷ್ಣವಲಯದ ನಾಡುಗಳಲ್ಲಿ ನೀರಿನ ಸಂಗ್ರಹ ಮತ್ತು ವಿತರಣೆಯ ಸಂಯೋಜಿತ ವ್ಯವಸ್ಥೆಯಿಂದ ಕ್ಷಾಮವನ್ನು ಬಹಳ ಮಟ್ಟಿಗೆ ತಡೆಗಟ್ಟಲು ಸಾಧ್ಯ. ರಾಜಕೀಯ, ಆರ್ಥಿಕ ಸ್ಥಿರತೆಯಿಂದ ಮಾನವಕೃತ ಕ್ಷಾಮಗಳು ಸಂಭವಿಸದಂತೆ ನೋಡಿಕೊಳ್ಳಬಹುದು. ನೈಸರ್ಗಿಕ ಅನಾಹುತಗಳ ಮೇಲೆ ಮಾನವ ಇದುವರೆಗೂ ಹತೋಟಿ ಹೊಂದಲು ಸಾಧ್ಯವಾಗಿಲ್ಲ. ಭಾರತದಲ್ಲಿ ಕ್ಷಾಮಪರಿಸ್ಥಿತಿಯನ್ನು ಎದುರಿಸುವ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಅನುಭವ ಬಂದಿದೆ. ಭಾರತದ ಅನೇಕ ಕ್ಷಾಮಗಳು ಸ್ಥಳೀಯ. ಅಕ್ಕಪಕ್ಕದ ಪ್ರದೇಶಗಳಿಂದಲೂ ಹೊರದೇಶಗಳಿಂದಲೂ ಶೀಘ್ರವಾಗಿ ಆಹಾರಸಾಮಗ್ರಿ ತರಲು ಈಚೆಗೆ ಸಾರಿಗೆ ವ್ಯವಸ್ಥೆ ಸಹಾಯಕವಾಗಿದೆ. 19ನೆಯ ಶತಮಾನದ ನಡುಗಾಲದಲ್ಲಿ ರೈಲ್ವೆಯ ನಿರ್ಮಾಣವಾದಾಗ ಭಾರತದಲ್ಲಿ ಕ್ಷಾಮದ ತೀವ್ರತೆ ಬಹುವಾಗಿ ತಗ್ಗಿತು. ಕ್ಷಾಮ ಪ್ರದೇಶದಲ್ಲಿ ವ್ಯಾಪಕವಾಗಿ ಕಾಮಗಾರಿ ಕಾರ್ಯಗಳನ್ನು ಜಾರಿಗೆ ತಂದು ಮತ್ತು ಇತರ ವಿಧಾನಗಳಿಂದ ಜನರಲ್ಲಿ ಹಣ ಹಂಚಿ, ಅದರಿಂದ ಅವರು ಆಹಾರ ಕೊಳ್ಳಲು ಸಾಧ್ಯವಾಗುವಂತೆ ಧಾನ್ಯ ಸರಬರಾಯಿಯ ಕ್ರಮ ಕೈಗೊಂಡು ಅಭಾವ ಪರಿಸ್ಥಿತಿಯನ್ನು ನಿವಾರಿಸಲು ಸಾಧ್ಯವಾಗಿದೆ. ಈಗಲೂ ಭಾರತದಲ್ಲಿ ಆಗಿಂದಾಗ್ಗೆ ಕ್ಷಾಮ ಪರಿಸ್ಥಿತಿ ಉದ್ಭವಿಸುವುದಾದರೂ ಉಪವಾಸದಿಂದ ಜನ ಸಾಯುವುದು ಅಪರೂಪ.

ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಸಂಭವಿಸಬಹುದಾಗಿದ್ದ ಕ್ಷಾಮವನ್ನು ತಡೆಗಟ್ಟುವ ಉದ್ದೇಶದಿಂದ ವಿಶ್ವಸಂಸ್ಥೆಯ ಪರಿಹಾರ ಮತ್ತು ಪುನರ್ವಸತಿ ವ್ಯವಸ್ಥೆ ಸ್ಥಾಪಿತವಾಗಿತ್ತು. ಯುದ್ಧದಿಂದ ಹಾನಿಗೆ ಈಡಾದ ದೇಶಗಳಿಗೆ ಇದು ತ್ವರೆಯಾಗಿ ನೆರವು ಒದಗಿಸಿತು. ಕ್ಷಾಮ ತಲೆದೋರದಂಥ ಸುವ್ಯವಸ್ಥೆಯ ಸ್ಥಾಪನೆಗಾಗಿ ಆಹಾರ ಮತ್ತು ಕೃಷಿ ಸಂಸ್ಥೆ ದುಡಿಯುತ್ತಿದೆ. ಕಾಂಗೋದ ಅಂತರ್ಯುದ್ಧದಿಂದಾಗಿ 1960ರಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿತ್ತು. ಆಗ ವಿಶ್ವಸಂಸ್ಥೆ ಸಕಾಲದಲ್ಲಿ ನಿರಾಶ್ರಿತರಿಗೆ ಪರಿಹಾರ ದೊರಕಿಸಿಕೊಟ್ಟಿತು. 1971ರಲ್ಲಿ ಬಾಂಗ್ಲಾದೇಶದ ಮೇಲೆ ಪಾಕಿಸ್ತಾನ್ ಸರ್ಕಾರ ನಡೆಸಿದ ದೌರ್ಜನ್ಯದಿಂದಾಗಿ ಸುಮಾರು ಒಂದು ಕೋಟಿ ನಿರಾಶ್ರಿತರು ಭಾರತಕ್ಕೆ ಬಂದರು. ಬಾಂಗ್ಲಾದೇಶದಲ್ಲೂ ಅಭಾವ ಪರಿಸ್ಥಿತಿ ಏರ್ಪಟ್ಟಿತು. ಭಾರತ ಸರ್ಕಾರದ ಅಕಾಲಿಕ ಕ್ರಮದಿಂದಾಗಿ ಮತ್ತು ವಿಶ್ವಸಂಸ್ಥೆಯ ನಿರಾಶ್ರಿತ ಪರಿಹಾರ ಕಾರ್ಯದಿಂದಾಗಿ ಪರಿಸ್ಥಿತಿ ತೀರ ಹದಗೆಡದಂತೆ ತಡೆಯುವುದು ಸಾಧ್ಯವಾಯಿತು.

**ಕ್ಷಾಮದ ಪರಿಣಾಮಗಳು:** ಅಭಾವ ಪರಿಸ್ಥಿತಿಯ ಕಾಲದಲ್ಲಿ ಸಂಭವಿಸುವ ಮರಣಗಳು ಕ್ಷಾಮದ ನೇರ ಫಲ ಹೌದೇ ಅಲ್ಲವೇ ಎಂಬುದು ಆಗಾಗ್ಗೆ ಭಾರತದಲ್ಲಿ ವಾದಕ್ಕೆ ಒಳಗಾಗಿರುವ ವಿಚಾರ. ತಲಾ 1,600 ಕೆಲೊರಿಗಳಷ್ಟು ಮಾತ್ರ ಆಹಾರ ಲಭ್ಯವಿದ್ದಾಗ ಜನರ ಮೇಲಾಗುವ ಪರಿಣಾಮವೇನೆಂಬುದನ್ನು ಪರಿಶೀಲಿಸಲಾಗಿದೆ. ಆರಂಭದಲ್ಲಿ ಅವರು ಶೀಘ್ರವಾಗಿ ತೂಕ ಕಳೆದುಕೊಳ್ಳುತ್ತಾರೆ. ಎರಡು–ಮೂರು ತಿಂಗಳುಗಳಲ್ಲಿ ಶೇ.25 ರಷ್ಟು ತೂಕ ಇಳಿಯಬಹುದು. ಆ ಮಟ್ಟದಲ್ಲಿ ಸಮತೋಲ ಏರ್ಪಟ್ಟು, ಅನಂತರವೂ ಅನೇಕ ತಿಂಗಳುಗಳ ಕಾಲ ಬದುಕುವುದು ಸಾಧ್ಯ. ವೈದ್ಯ ಮತ್ತು ನೈರ್ಮಲ್ಯ ಇದ್ದ ಪಕ್ಷದಲ್ಲಿ ಪ್ರಸಾಮಾನ್ಯ ಮಟ್ಟಕ್ಕಿಂತ ಹೆಚ್ಚಾಗಿ ಸಾವಿನ ದರ ಇರುವುದಿಲ್ಲ. ಕೆಲೊರಿಗಳ ಅಂಶ ಇನ್ನೂ ಕಡಿಮೆಯಾದರೆ ತೂಕ ಬೇಗ ಇಳಿದು ಉಪವಾಸ ಮರಣಗಳ ಸಂಖ್ಯೆ ಹೆಚ್ಚುತ್ತದೆ. ಹೆಂಗಸರಿಗೆ, ಮಕ್ಕಳಿಗೆ, ಕಡಿಮೆ ಗಾತ್ರದವರಿಗೆ ಧಾರಣ ಶಕ್ತಿ ಸ್ವಲ್ಪ ಹೆಚ್ಚು. ಉಪವಾಸ ಮಾಡುತ್ತಿರುವಾಗ ಶಕ್ತಿಯನ್ನು ಉಳಿಸಿಕೊಳ್ಳಲು ದೇಹ ಸೂಕ್ತ ಹೊಂದಾವಣೆ ಮಾಡಿಕೊಳ್ಳುತ್ತದೆ. ತೂಕ ಕಡಿಮೆಯಾದಾಗ ಅಂಗಾಂಶಗಳ ಕ್ರಿಯಾಶೀಲತೆ ಕಡಿಮೆಯಾಗುತ್ತದೆ. ಅನಾವಶ್ಯಕವೆನಿಸಿದ ಸ್ನಾಯುಚಲನೆ ನಿಲ್ಲುವಂತೆ ಜಡತೆ ತಲೆದೋರುತ್ತದೆ. ಆಹಾರಬೇಕೆಂಬ ತವಕ ಹೆಚ್ಚುತ್ತದೆ. ನೈತಿಕಮಟ್ಟ ಇಳಿಯುವುದುಂಟು. ಕ್ಷಾಮ ಕಾಲದಲ್ಲಿ ಕೊಲೆ, ನರಭಕ್ಷಣಗಳಾಗಿರುವ ವರದಿಗಳಿವೆ. ಜಲೋದರ, ಅತಿಭೇದಿ ಸಾಮಾನ್ಯ. ಇವು ಮರಣಕಾರಕ. ನಾಡಿಯ ಮಿಡಿತ ನಿಧಾನವಾಗುತ್ತದೆ. ರಕ್ತದ ಒತ್ತಡ ತಗ್ಗುತ್ತದೆ. ವಾಸಿಯಾಗದ ಮಟ್ಟಿಗೆ ಹೃದಯ ಕ್ಷೀಣಿಸಬಹುದು. ರಕ್ತಕ್ಷಯ ಸಾಮಾನ್ಯ ಆದರೆ ಇದು ಸಾಮಾನ್ಯವಾಗಿ ತೀವ್ರವಾಗುವುದಿಲ್ಲ. ಸ್ತ್ರೀಪುರುಷರಲ್ಲಿ ಕಾಮ ಪ್ರೇರಣೆ ಕಡಿಮೆಯಾಗುತ್ತದೆ. ಕಾಲರಾ, ಮಲೇರಿಯ, ಹೇನಿನಿಂದ ಹಬ್ಬುವ ಟೈಫಸ್‌ಜ್ವರ, ಉರಿಶೀತ, ಕ್ಷಯ ಮುಂತಾದ ಸಾಂಕ್ರಾಮಿಕ ರೋಗಗಳು ಹಬ್ಬಿ ಅನೇಕರನ್ನು ಆಹುತಿ ತೆಗೆದುಕೊಳ್ಳುತ್ತವೆ. ಕೃಷಿಪ್ರಧಾನವಾದ ಸಮಾಜಗಳಲ್ಲಿ ಹಳ್ಳಿಗಳಲ್ಲಿ ಕುಟುಂಬ ಜೀವನ ಛಿದ್ರವಾಗುತ್ತದೆ. ಹಲವರು ಮನೆ ತೊರೆದು ಆಹಾರಕ್ಕಾಗಿ ಬೆಂತರನಂತೆ ಅಲೆದಾಡುತ್ತಾರೆ. ಅನೀತಿ, ಅಪರಾಧ ಹೆಚ್ಚಬಹುದು. (ಎಚ್.ಸಿ.ಕೆ.)

**ಕ್ಷಾರ :** ಒಂದು ಲೋಹದ, ಅದರಲ್ಲೂ ಕ್ಷಾರಲೋಹಗಳಲ್ಲೊಂದರ ದ್ರಾವ್ಯ ಹೈಡ್ರಾಕ್ಸೈಡ್ (ಆಲ್ಕಲಿ). ಸಾಮಾನ್ಯವಾಗಿ ಅಧಿಕ ಪ್ರತ್ಯಾಮ್ಲೀಯ ಗುಣಗಳಿರುವ ಯಾವುದೇ ಸಂಯುಕ್ತವನ್ನು ಕ್ಷಾರವೆಂದು ಕರೆಯುವುದಿದೆ. ಕ್ಷಾರಪದಾರ್ಥಗಳು ದ್ರಾವಣರೂಪದಲ್ಲಿರುವಾಗ ಕೆಂಪು ಲಿಟ್‌ಮಸ್‌ನ ಬಣ್ಣವನ್ನು ನೀಲಿ ಬಣ್ಣಕ್ಕೆ ತಿರುಗಿಸುತ್ತವೆ. ಇದು ಕ್ಷಾರದ್ರಾವಣಗಳ ವಿಶಿಷ್ಟ ಗುಣ. ಕ್ಷಾರದ್ರಾವಣವೊಂದು ಆಮ್ಲದೊಡನೆ ವರ್ತಿಸಿದಾಗ ಆಮ್ಲ ತಟಸ್ಥ ಹೊಂದಿ ಲವಣ ಮತ್ತು ನೀರು ಉತ್ಪತ್ತಿಯಾಗುತ್ತವೆ. ಆಮ್ಲವನ್ನು ತಟಸ್ಥಗೊಳಿಸುವ ಗುಣವಿರುವ ಇಲ್ಲವೆ ದ್ರಾವ್ಯ ಸಾಬೂನು (ಸೋಪ್) ಮತ್ತು ಕೊಬ್ಬಿನ ಆಮ್ಲಗಳನ್ನು ಕೊಡುವಂಥ ಕಾಸ್ಟಿಕ್ ಹೈಡ್ರಾಕ್ಸೈಡ್ ಎಂಬುದಾಗಿ ಹಿಂದೆ ಕ್ಷಾರದ ವ್ಯಾಖ್ಯೆ ಮಾಡಲಾಗಿತ್ತು. ಕೈಗಾರಿಕಾರಂಗದಲ್ಲಿ ಹೇಳುವುದಾದರೆ, ನೈಸರ್ಗಿಕ ನಿಕ್ಷೇಪಗಳಿಂದ ದೊರೆತ ಇಲ್ಲವೆ ಲವಣ ಮತ್ತು ಸಲ್ಫ್ಯೂರಿಕ್ ಆಮ್ಲವೋ ಇಲ್ಲವೇ ಅಮೋನಿಯಂ ಬೈಕಾರ್ಬೊನೇಟನ್ನು

ಉಪಯೋಗಿಸಿ ತಯಾರಿಸಿದ ಸೋಡ ಆಷ್ ರೂಪದ ಸೋಡಿಯಂ ಕಾರ್ಬೋನೇಟನ್ನು ಕ್ಷಾರವೆಂದು ಹೇಳಲಾಗುತ್ತದೆ.

ಕ್ಷಾರಗಳನ್ನು ಸಾಮಾನ್ಯವಾಗಿ ಸಾರ ಮತ್ತು ಸಾರರಿಕ್ತ ಕ್ಷಾರಗಳೆಂದು ವಿಂಗಡಿಸಲಾಗಿದೆ. ಬೇರಿಯಂ, ಕ್ಯಾಲ್ಸಿಯಂ, ಮೆಗ್ನೀಸಿಯಂ ಮುಂತಾದ ಹೈಡ್ರಾಕ್ಸೈಡುಗಳು, ಕಾರ್ಬೋನೇಟ್ ಮತ್ತು ಆಕ್ಸೈಡುಗಳು (ದ್ರಾವಣ ರೂಪದಲ್ಲಿ) ಸಾರರಿಕ್ತ ಕ್ಷಾರಕ್ಕೆ ಉದಾಹರಣೆಗಳು. ಸೋಡಿಯಂ ಹೈಡ್ರಾಕ್ಸೈಡ್ ಸಾರಕ್ಷಾರಕ್ಕೆ ಒಂದು ಉದಾಹರಣೆ. ಕ್ಷಾರಗಳು ನೀರಿನಲ್ಲಿ ವಿಲೀನವಾಗುತ್ತವೆ. ಬಣ್ಣ ಮಾಸಲು. ಸಾರಕ್ಷಾರ ದ್ರಾವಣ ಚರ್ಮದ ಮೇಲೆ ಬಿದ್ದರೆ ಚರ್ಮ ಸುಟ್ಟುಹೋಗುವುದು. ಕ್ಷಾರ ದ್ರಾವಣವನ್ನು ವಿದ್ಯುದ್ವಿಭಜಿಸಿದಾಗ ಲೋಹ ಹೊರಬರುತ್ತದೆ. ಪೊಟಾಷ್, ಕಾಸ್ಟಿಕ್ ಸೋಡ, ಪೊಟ್ಯಾಸಿಯಂ ಹೈಡ್ರಾಕ್ಸೈಡ್, ವಾಟರ್ ಗ್ಲಾಸ್, ಸೋಡಾದ ಬೈಕಾರ್ಬೋನೇಟ್ ಇವು ಕೆಲವು ಕ್ಷಾರ ಉತ್ಪನ್ನಗಳು. ಗಾಜು, ಸಾಬೂನು, ರಾಸಾಯನಿಕ ವಸ್ತುಗಳು, ಪೆಟ್ರೋಲಿಯಂ ಉದ್ಯಮ, ಕಾಗದ, ರೇಯಾನ್ ಮತ್ತು ಇತರ ಕೃತಕ ಬಟ್ಟೆಗಳು ಈ ಮುಂತಾದ ಕ್ಷೇತ್ರಗಳಲ್ಲಿ ಕ್ಷಾರದ ಬಳಕೆ ಉಂಟು. (ಎನ್.ಎಸ್.ಎಸ್.ಪಿ.)

**ಕ್ಷಾರ ಕೈಗಾರಿಕೆ :** ಸಾಮಾನ್ಯವಾಗಿ ಸೋಡಿಯಂ ಕಾರ್ಬೋನೇಟ್ (ಸೋಡಾ ಆಷ್), ಸೋಡಿಯಂ ಬೈಕಾರ್ಬೋನೇಟ್, ಸೋಡಿಯಂ ಹೈಡ್ರಾಕ್ಸೈಡ್ (ಕಾಸ್ಟಿಕ್ ಸೋಡ), ಪೊಟ್ಯಾಸಿಯಂ ಕಾರ್ಬೋನೇಟ್ (ಪೊಟಾಷ್) ಮತ್ತು ಪೊಟ್ಯಾಸಿಯಂ ಹೈಡ್ರಾಕ್ಸೈಡ್ (ಕಾಸ್ಟಿಕ್ ಪೊಟಾಷ್) ಸಂಯುಕ್ತಗಳ ತಯಾರಿಕೆ (ಆಲ್ಕಲಿ ಇಂಡಸ್ಟ್ರಿ). ಈ ಕ್ಷಾರ ಸಂಯುಕ್ತಗಳು ಗಾಜು, ಸಾಬೂನು, ಕಾಗದ, ವಸ್ತ್ರಗಳು, ಕೃತಕ ಗೊಬ್ಬರಗಳು, ವಿವಿಧ ರಾಸಾಯನಿಕಗಳೇ ಮೊದಲಾದ ಅನೇಕ ಸಾಮಗ್ರಿಗಳ ತಯಾರಿಕೆಗಳಿಗೆ ಅತ್ಯಾವಶ್ಯಕ.

**ಸೋಡಿಯಂ ಕಾರ್ಬೋನೇಟ್ $Na_2CO_3$:** ಜನಸಾಮಾನ್ಯರಿಗೆ ವಸ್ತ್ರಶುದ್ಧಿಯ ಸೋಡ (ವಾಷಿಂಗ್ ಸೋಡ) ಎಂದು ಪರಿಚಿತವಾಗಿರುವ ಸೋಡಿಯಂ ಕಾರ್ಬೋನೇಟ್ ಲವಣ ಸ್ವಲ್ಪಮಟ್ಟಿಗೆ ಪ್ರಕೃತಿಯಲ್ಲಿ ದೊರೆಯುತ್ತದೆ. ಬತ್ತಿದ ಅನೇಕ ಸರೋವರಗಳ ತಳಭಾಗದಲ್ಲಿ ಮತ್ತು ಹಲವು ಸರೋವರಗಳ ಕ್ಷಾರೀಯ ಜಲಗಳಲ್ಲಿ ಸೋಡಿಯಂ ಕಾರ್ಬೋನೇಟ್ ಲವಣ ಸೋಡಿಯಂ ಕ್ಲೋರೈಡ್ ಮತ್ತು ಸಲ್ಫೇಟುಗಳೊಡನೆ ದೊರೆಯುತ್ತದೆ. ಕೃತಕ ತಯಾರಿಕೆಯ ವಿಧಾನಗಳನ್ನು ಕಂಡು ಹಿಡಿಯುವ ಮೊದಲು ಬಳಕೆಗೆ ಬೇಕಾದ ಎಲ್ಲ ಸೋಡಿಯಂ ಕಾರ್ಬೋನೇಟನ್ನೂ ಪ್ರಕೃತಿಯಿಂದಲೇ ಪಡೆಯಬೇಕಾಗಿತ್ತು. ಆದರೆ ಇಂದು ಪ್ರಕೃತಿದತ್ತ ಸೋಡಿಯಂ ಕಾರ್ಬೋನೇಟ್ ಬೇಡಿಕೆಯ ಶೇ. 4ರಷ್ಟನ್ನು ಮಾತ್ರ ಪೂರೈಸಬಲ್ಲುದು.

ಸೋಡ ಆಷ್ ಅಥವಾ ಸೋಡಿಯಂ ಕಾರ್ಬೋನೇಟ್ ತಯಾರಿಕಾರಂಗದಲ್ಲಿ ಲೆಬ್ಲಾಂಕ್ ಮತ್ತು ಸಾಲ್ವೇ ಅಥವಾ ಅಮೋನಿಯ-ಸೋಡ ವಿಧಾನಗಳು ಪ್ರಮುಖವಾದವು. ಇವೆರಡರಲ್ಲಿ ಲೆಬ್ಲಾಂಕ್ ವಿಧಾನ ಹಳೆಯದಾಗಿದ್ದು ಈಗ ಎಲ್ಲಿಯೂ ಉಪಯೋಗಿಸಲಾಗುತ್ತಿಲ್ಲವಾದ್ದರಿಂದ ಅದಕ್ಕೆ ಕೇವಲ ಚಾರಿತ್ರಿಕ ಮೌಲ್ಯ ಮಾತ್ರ ಉಂಟಷ್ಟೆ.

18ನೆಯ ಶತಮಾನದಲ್ಲಿ ಸೋಡಿಯಂ ಕಾರ್ಬೋನೇಟ್ ಕೊರತೆ ಹೆಚ್ಚಾದಾಗ ಈ ಸಂಯುಕ್ತವನ್ನು ಕೃತಕವಾಗಿ ತಯಾರಿಸಲು ಯುಕ್ತ ವಿಧಾನವೊಂದನ್ನು ನೀಡಿದವರಿಗೆ ಬಹುಮಾನ ಕೊಡುವುದಾಗಿ ಫ್ರೆಂಚ್ ಅಕಾಡಮಿ ಆಫ್ ಸೈನ್ಸಸ್ ಪ್ರಕಟಿಸಿತು. ನಿಕೊಲಾಸ್ ಲೆಬ್ಲಾಂಕ್ 1775ರಲ್ಲಿ ಯೋಜನೆಯೊಂದನ್ನು ಅಕಾಡಮಿಗೆ ಸಲ್ಲಿಸಿ ಆ ಬಹುಮಾನವನ್ನು ಪಡೆದ. ಮುಂದಿನ ಕೆಲವೇ ವರ್ಷಗಳಲ್ಲಿ ಈ ವಿಧಾನವನ್ನು ಉಪಯೋಗಿಸಿ ಸೋಡಿಯಂ ಕಾರ್ಬೋನೇಟಿನ ವಾಣಿಜ್ಯಗಾತ್ರದ ಉತ್ಪಾದನೆಯೂ ಆರಂಭವಾಯಿತು. ಈ ವಿಧಾನದ ಮುಖ್ಯ ಮೂಲಸಾಮಗ್ರಿಗಳು ಸೋಡಿಯಂ ಕ್ಲೋರೈಡ್ ಅಂದರೆ ಉಪ್ಪು, ಸಲ್ಫ್ಯೂರಿಕ್ ಆಮ್ಲ, ಕಲ್ಲಿದ್ದಲು ಮತ್ತು ಸುಣ್ಣ ಕಲ್ಲುಗಳು. ಇವೆಲ್ಲವೂ ಅಗ್ಗ ದರದಲ್ಲಿ ಲಭಿಸುತ್ತಿದ್ದುವು. ಈ ಕೈಗಾರಿಕೆಯ ಸಹೋತ್ಪನ್ನ ಹೈಡ್ರೋಕ್ಲೋರಿಕ್ ಆಮ್ಲ. ಲೆಬ್ಲಾಂಕ್ ವಿಧಾನವನ್ನು ಉಪಯೋಗಿಸುತ್ತಿದ್ದ ಅನೇಕ ಕಾರ್ಖಾನೆಗಳು ಪಿರೈಟ್ ಅದುರಿನಿಂದ ಸಲ್ಫ್ಯೂರಿಕ್ ಆಮ್ಲವನ್ನೂ ತಯಾರಿಸುತ್ತಿದ್ದುದರಿಂದ ಆರ್ಥಿಕವಾಗಿ ಈ ವಿಧಾನ ಉತ್ತಮವಾಗಿಯೇ ಇತ್ತು. ಆದರೆ ಇದರ ಕೊರತೆ ಎಂದರೆ ದೊರೆತ ಸೋಡಿಯಂ ಕಾರ್ಬೋನೇಟ್ ಲವಣ ಸಾಕಷ್ಟು ಪರಿಶುದ್ಧವಾಗಿರುತ್ತಿರಲಿಲ್ಲ. ಈ ಕಾರಣದಿಂದ ಲೆಬ್ಲಾಂಕ್ ವಿಧಾನ ಕ್ರಮೇಣ ಕಣ್ಮರೆಯಾಯಿತು. ಹೆಚ್ಚು ಪರಿಶುದ್ಧವಾದ ಉತ್ಪನ್ನವನ್ನು ನೀಡಬಲ್ಲ ಸಾಲ್ವೇ ವಿಧಾನ 1865ರಲ್ಲಿ ಬಳಕೆಗೆ ಬಂದು 20ನೆಯ ಶತಮಾನದ ವೇಳೆಗೆ ಲೆಬ್ಲಾಂಕ್ ವಿಧಾನವನ್ನು ಪೂರ್ಣವಾಗಿ ತಳ್ಳಿಹಾಕಿಬಿಟ್ಟಿತು.

ಸಾಲ್ವೇ ಅಥವಾ ಅಮೋನಿಯ-ಸೋಡ ವಿಧಾನದಲ್ಲಿ ಉಪಯೋಗಿಸಲಾಗುವ ಕ್ರಿಯೆಗಳೆಲ್ಲವೂ ಬಲು ಮೊದಲೇ ಪರಿಚಿತವಾಗಿದ್ದರೂ ಅವುಗಳ ಉಪಯುಕ್ತತೆಯನ್ನು ಅರ್ನೆಸ್ಟ್ ಸಾಲ್ವೇ 1861ರಲ್ಲಿ ಕಂಡುಕೊಂಡು ಹೊಸವಿಧಾನದ ರೂಪರೇಖೆಗಳನ್ನು ಸಿದ್ಧಪಡಿಸಿ 1863ರಲ್ಲಿ ಬೆಲ್ಜಿಯಮಿನಲ್ಲಿ ಕಾರ್ಖಾನೆಯೊಂದನ್ನು ಸ್ಥಾಪಿಸಿದ. ಉತ್ಪಾದನೆ ಆರಂಭವಾದದ್ದು 1865ರಿಂದ. ಸಾಲ್ವೇ ಆರಂಭಿಸಿದ ಕಾರ್ಖಾನೆ ಇಂದಿಗೂ ಬೆಲ್ಜಿಯಮಿನಲ್ಲಿ ನಡೆಯುತ್ತಿದೆ. ವೈಜ್ಞಾನಿಕ ಪ್ರಗತಿಗೆ ಅನುಗುಣವಾಗಿ ಸಾಲ್ವೇ ವಿಧಾನದಲ್ಲಿ ಇಂದಿಗೂ ಯುಕ್ತ ಮಾರ್ಪಾಡುಗಳಾಗುತ್ತಲೇ ಇರುವುದರಿಂದ ಈ ವಿಧಾನ ಬೇರಾವ ವಿಧಾನಕ್ಕೂ ದಾರಿ ಕೊಡದೆ ಏಕೈಕ ವಿಧಾನವಾಗಿ ಉಳಿಯಲು ಸಾಧ್ಯವಾಗಿದೆ. ಉಪ್ಪು ಮತ್ತು ಸುಣ್ಣಕಲ್ಲು ಈ ವಿಧಾನದ ಕಚ್ಚಾ ಪದಾರ್ಥಗಳು. ಅಮೋನಿಯ ಅನಿಲವನ್ನು ಉಪಯೋಗಿಸಿದರೂ ಅದು ಪುನಃ ಹಿಂತಿರುಗಿ ದೊರೆಯುತ್ತದೆ. ಪೂರ್ಣವಿಧಿ ಉತ್ತಮನಿಯಂತ್ರಣಕ್ಕೆ ಒಳಗಾಗಿದ್ದರೆ ಅಮೋನಿಯ ನಷ್ಟವಾಗುವುದು ಅತ್ಯಲ್ಪ. ಈ ವಿಧಾನದ ಒಟ್ಟು ಕ್ರಿಯೆಯನ್ನು ಮುಂದಿನ ಸಮೀಕರಣದಿಂದ ಲಘುವಾಗಿ ನಿರೂಪಿಸಬಹುದಾದರೂ ಸಂಪೂರ್ಣ ವಿಧಿ ಅನೇಕ ಕ್ರಿಯೆಗಳ ಸಂಕೀರ್ಣ ಸಮ್ಮಿಳನ

$$CaCO_3 + 2NaCl \rightarrow Na_2CO_3 + CaCl_2$$

ಕ್ಯಾಲ್ಸಿಯಂ ಕ್ಲೋರೈಡ್ ಲವಣ ಇಲ್ಲಿ ದೊರೆಯುವ ಸಹೋತ್ಪನ್ನ.

ಸಾಲ್ವೇ ವಿಧಾನ ವಿವಿಧ ಹಂತಗಳಲ್ಲಿ ಕ್ರಮಬದ್ಧವಾಗಿ ನಡೆಯಬೇಕು. ಆದ್ದರಿಂದ ಪ್ರತಿಯೊಂದು ಹಂತದಲ್ಲಿಯ ಉತ್ಪಾದನೆ, ವೇಗ ಮೊದಲಾದವು ಉಳಿದ ಹಂತಗಳನ್ನು ಅವಲಂಬಿಸಿರುತ್ತವೆ. ಈ ಕೈಗಾರಿಕೆಯ ಸಹೋತ್ಪನ್ನವಾದ ಕ್ಯಾಲ್ಸಿಯಂ ಕ್ಲೋರೈಡನ್ನು ರೆಫ್ರಿಜರೇಷನ್ ದ್ರಾವಣಗಳಲ್ಲಿ, ಹಲವು ಸಿಮೆಂಟ್ ತಯಾರಿಕೆಗಳಲ್ಲಿ ಮತ್ತು ಅನಿಲಗಳಲ್ಲಿಯ ತೇವವನ್ನು ನಿವಾರಿಸಲು ಉಪಯೋಗಿಸಲಾಗುತ್ತಿದ್ದರೂ ಉತ್ಪಾದನೆಯಾದ ಎಲ್ಲ ಕ್ಯಾಲ್ಸಿಯಂ ಕ್ಲೋರೈಡಿಗೂ ಬೇಡಿಕೆಯಿಲ್ಲ. ಆದ್ದರಿಂದ ಇದು ಬಲುಮಟ್ಟಿಗೆ ನಿರುಪಯೋಗಿ ಸಹೋತ್ಪನ್ನ. ವಿವಿಧ ಹಂತಗಳಲ್ಲಿ ದೊರೆಯುವ, ಶುದ್ಧ ರಾಸಾಯನಿಕಗಳನ್ನು ನೀಡಲಾಗದ ಸಂಕೀರ್ಣ ಕ್ಷಾರೀಯ ಮಣ್ಣನ್ನು ಪುನಃ ಸುಡಲಾಗುತ್ತದೆ. ಆಗ ದೊರೆಯುವ ಇಂಗಾಲದ ಡೈಆಕ್ಸೈಡನ್ನು ಸಿಲಿಂಡರುಗಳಲ್ಲಿ ತುಂಬಿ ಅಥವಾ ಘನೀಕರಿಸಿ ಬರ್ಫವಾಗಿ ಮಾಡುತ್ತಾರೆ. ಇಂಗಾಲದ ಡೈಆಕ್ಸೈಡನ್ನು ಅಗ್ನಿಶಾಮಕಗಳಲ್ಲಿಯೂ ಆಹಾರ ಪದಾರ್ಥಗಳನ್ನು ಶೀತ ವಾತಾವರಣದಲ್ಲಿಡುವುದಕ್ಕೂ ಕಾರ್ಬೋನೇಟೆಡ್ ಪಾನೀಯಗಳ ತಯಾರಿಕೆಯಲ್ಲಿಯೂ ಉಪಯೋಗಿಸಲಾಗುತ್ತದೆ.

ಸೋಡ ಆಷಿನ ಉತ್ಪಾದನೆಯ ಅಧಿಕಾಂಶ ಗಾಜಿನ ತಯಾರಿಕೆಯಲ್ಲಿ ವಿನಿಯೋಗವಾಗುತ್ತದೆ. ಸೋಡಿಯಂ ಲವಣಗಳು ಮತ್ತು ಇತರ ರಾಸಾಯನಿಕಗಳ ತಯಾರಿಕೆಗಾಗಿಯೂ ಸೋಡ ಆಷ್ ಅಧಿಕ ಮೊತ್ತದಲ್ಲಿ ಬೇಕು. ಸೋಡಿಯಂ ಕಾರ್ಬೋನೇಟನ್ನು ಉಪಯೋಗಿಸುವ ಮತ್ತುಳಿದ ಮುಖ್ಯ ಉದ್ಯಮಗಳೆಂದರೆ ಸಾಬೂನು, ಮಾರ್ಜಕಗಳು, ಕಾಗದ, ವಸ್ತ್ರಗಳ ಮತ್ತು ಜಲ, ತೈಲ ಶುದ್ಧೀಕರಣ ಉದ್ಯಮಗಳು. ಉತ್ಪಾದನೆಯ ಎಷ್ಟು ಭಾಗವನ್ನು ಯಾವ ಉದ್ಯಮ ಬಳಸುತ್ತದೆಂಬುದನ್ನು ಸ್ಥೂಲವಾಗಿ ಮುಂದೆ ಬರೆದಿದೆ:

| | | |
|---|---|---|
| ಗಾಜು | . . . | ಶೇ.35-40 |
| ಸೋಡಿಯಂ ಲವಣಗಳು ಮತ್ತು ಇತರ ರಾಸಾಯನಿಕಗಳು | . . . | ಶೇ.30-35 |
| ಸಾಬೂನು | . . . | ಶೇ.10 |
| ಮಾರ್ಜಕಗಳು | . . . | ಶೇ.7 |
| ಕಾಗದ | . . . | ಶೇ.5 |
| ವಸ್ತ್ರೋದ್ಯಮ | . . . | ಶೇ.2.5 |
| ಜಲಶುದ್ಧೀಕರಣ | . . . | ಶೇ.2 |
| ತೈಲಶುದ್ಧೀಕರಣ | . . . | ಶೇ.0.5 |
| ಇತರ ಉದ್ಯಮಗಳು | . . . | ಶೇ.6 |

ಭಾರತದಲ್ಲಿ ಸೋಡ ಆಷನ್ನು ತಯಾರಿಸುವ ಅನೇಕ ಕಾರ್ಖಾನೆಗಳಿವೆ. ಧ್ರಂಗಾಧ್ರ ಮತ್ತು ಟಾಟಾ ಕೆಮಿಕಲ್ಸ್ ಕಂಪನಿಗಳು ಸುಮಾರು 30-35 ವರ್ಷಗಳಿಂದಲೂ ಈ ಉದ್ಯಮವನ್ನು ನಡೆಸಿಕೊಂಡು ಬಂದಿವೆ. ಸುಮಾರು ಇಪ್ಪತ್ತು ವರ್ಷಗಳಿಂದ ನಮ್ಮ ಬಳಕೆ ಮತ್ತು ಉತ್ಪಾದನೆಗಳೆರಡೂ ಹೆಚ್ಚುತ್ತ ಬಂದಿದ್ದು ಮೂರನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಭಾರತದ ವಾರ್ಷಿಕ ಉತ್ಪಾದನೆ 1,48,000 ಟನ್ನುಗಳಿಂದ 3,60,000 ಟನ್ನುಗಳಿಗೆ ಏರಿತು. ಆದರೂ ಆ ಸಮಯದಲ್ಲಿ ಬಳಕೆಗೆ ಬೇಕಾದ ಅಲ್ಪ ಅಂಶವನ್ನು ಆಮದು ಮಾಡಿಕೊಳ್ಳಬೇಕಾಯಿತು. ಈಚಿನ ಕೆಲವು ವರ್ಷಗಳಿಂದ ಸೋಡ ಆಷ್ ಆಮದನ್ನು ಪೂರ್ಣವಾಗಿ ನಿಲ್ಲಿಸಲಾಗಿದೆ.

**ಸೋಡಿಯಂ ಬೈಕಾರ್ಬೋನೇಟ್, $NaHCO_3$:** ಅಡುಗೆ ಸೋಡ ಎಂದು ಪರಿಚಿತವಾಗಿರುವ ಸೋಡಿಯಂ ಬೈಕಾರ್ಬೋನೇಟ್ ಸಾಲ್ವೇ ವಿಧಾನದಲ್ಲಿ ಮುಖ್ಯ ಮಧ್ಯವರ್ತಿ (ಇಂಟರ್ಮೀಡಿಯೇಟ್). ಆದರೆ ಮಧ್ಯವರ್ತಿಯಾಗಿ ದೊರೆಯುವ ಬೈಕಾರ್ಬೋನೇಟಿನಲ್ಲಿ ಸೋಡಿಯಂ ಕಾರ್ಬೋನೇಟ್ (ಸುಮಾರು ಶೇ.7) ಅಮೋನಿಯಂ ಬೈಕಾರ್ಬೋನೇಟ್ (ಸುಮಾರು ಶೇ.3.5) ಮತ್ತು ಇನ್ನು ಹಲವು ಸಂಯುಕ್ತಗಳೂ ಅಲ್ಪ ಅಂಶಗಳಲ್ಲಿ ಬೆರೆತಿದ್ದು ಕೇವಲ ಶೇ.85ರಷ್ಟು ಮಾತ್ರ ಶುದ್ಧವಾಗಿರುವುದರಿಂದ ನೇರವಾದ ಬಳಕೆಗೆ ಯೋಗ್ಯವಾಗಿರುವುದಿಲ್ಲ. ಆದ್ದರಿಂದ ಸಂತೃಪ್ತ ಸೋಡಿಯಂ ಕಾರ್ಬೋನೇಟ್ ದ್ರಾವಣದ ಮೂಲಕ ಇಂಗಾಲದ ಡೈಆಕ್ಸೈಡನ್ನು ಹಾಯಿಸಿ ಸೋಡಿಯಂ ಬೈಕಾರ್ಬೋನೇಟನ್ನು ತಯಾರಿಸಲಾಗುತ್ತದೆ.

$$Na_2CO_3 + H_2O + CO_2 \rightarrow 2NaHCO_3 \downarrow$$

ಅದ್ರಾವ್ಯ ವಸ್ತುವಾಗಿ ಒತ್ತರಿಸುವ (ಪ್ರೆಸಿಪಿಟೇಟ್) ಸೋಡಿಯಂ ಬೈಕಾರ್ಬೊನೇಟನ್ನು ಸರಳ ಶೋಧಕ ಅಥವಾ ಕೇಂದ್ರಾಪಗಮನ ಶೋಧಕ ಉಪಕರಣಗಳನ್ನು ಉಪಯೋಗಿಸಿ ಬೇರ್ಪಡಿಸಿ ಬಹು ಜಾಗರೂಕತೆಯಿಂದ ಬಿಸಿ ಹವೆಯಲ್ಲಿ ಅನಾರ್ದ್ರಗೊಳಿಸಲಾಗುತ್ತದೆ. ಈ ಲವಣವನ್ನು ತಯಾರಿಸಲು ಪ್ರತ್ಯೇಕ ಮತ್ತು ವಿಶಿಷ್ಟ ಉಪಕರಣಗಳು ಯಾವುವೂ ಬೇಕಾಗಿಲ್ಲದುದರಿಂದ ಎಲ್ಲ ಸೋಡಿಯಂ ಕಾರ್ಬೊನೇಟ್ ತಯಾರಕರೂ ಬೈಕಾರ್ಬೊನೇಟನ್ನು ಕೂಡ ತಯಾರಿಸುತ್ತಾರೆ. ಈ ಲವಣದ ಉತ್ಪಾದನೆಯ ಅಧಿಕಾಂಶವನ್ನು ಕಾರ್ಬೊನೇಟೆಡ್ ಪಾನೀಯಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. ಉತ್ಪಾದನೆಯ ಉಳಿದ ಅಂಶದಲ್ಲಿ ಬಹು ಹಿರಿಯ ಭಾಗ ಅಗ್ನಿಶಾಮಕಗಳಲ್ಲಿ, ಅಡುಗೆಯ ಸೋಡಪುಡಿಯಾಗಿ ಮತ್ತು ಬುದ್ಬುದಿಸುವ ಲವಣದ (ಎಫರ್‌ವೆಸೆಂಟ್ ಸಾಲ್ಟ್) ತಯಾರಿಕೆಗಾಗಿ ವೆಚ್ಚವಾಗುತ್ತದೆ. ಅಲ್ಪ ಭಾಗ ಔಷಧೀಯ ಉದ್ಯಮದಲ್ಲಿ ವಿನಿಯೋಗವಾಗುವುದು.

**ಸೋಡಿಯಂ ಹೈಡ್ರಾಕ್ಸೈಡ್, NaOH:** ವಾಣಿಜ್ಯ ಅಥವಾ ಔದ್ಯಮಿಕ ರಾಸಾಯನಿಕಗಳಲ್ಲಿ ಇದು ಅಧಿಕ ಗಾತ್ರದಲ್ಲಿ ಉತ್ಪಾದಿಸಲಾಗುತ್ತಿರುವ ಒಂದು ಲವಣ. ಇತರ ರಾಸಾಯನಿಕ ಸಂಯುಕ್ತಗಳ ತಯಾರಿಕೆ, ವರ್ಣೋದ್ಯಮ, ಸ್ಫೋಟಕೋದ್ಯಮಗಳೇ ಮೊದಲಾದ ಅನೇಕ ಹಿರಿಯ ಉದ್ಯಮಗಳಲ್ಲಿ ಸೋಡಿಯಂ ಹೈಡ್ರಾಕ್ಸೈಡನ್ನು ಅಧಿಕ ಪರಿಮಾಣದಲ್ಲಿ ಉಪಯೋಗಿಸಲಾಗುತ್ತದೆ. ಸೋಡಿಯಂ ಹೈಡ್ರಾಕ್ಸೈಡ್ ಅಥವಾ ಕಾಸ್ಟಿಕ್ ಸೋಡದ ತಯಾರಿಕೆಯಲ್ಲಿ ಎರಡು ವಿಧಾನಗಳು ಉಂಟು. ಮೊದಲನೆಯ ವಿಧಾನದಲ್ಲಿ ಸೋಡ ಆಷ್ ಮತ್ತು ಎರಡನೆಯದರಲ್ಲಿ ಸೋಡಿಯಂ ಕ್ಲೋರೈಡ್ ಅಥವಾ ಉಪ್ಪು ಮೂಲ ಸಾಮಗ್ರಿಗಳು. ಎರಡು ವಿಧಾನಗಳಲ್ಲಿಯೂ ಹಲವು ಬಗೆಯ ಆರ್ಥಿಕ ಅನುಕೂಲತೆಗಳಿರುವುದರಿಂದ ಎರಡೂ ಈಗ ಬಳಕೆಯಲ್ಲಿವೆ.

ಕಾಸ್ಟಿಕ್ ಸೋಡವನ್ನು ಅಧಿಕ ಗಾತ್ರದಲ್ಲಿ ಉಪಯೋಗಿಸುವ ಉದ್ಯಮಗಳಲ್ಲಿ ಅಗ್ರಸ್ಥಾನ ರೇಯಾನ್ ಉದ್ಯಮಕ್ಕೆ ಸಲ್ಲುತ್ತದೆ. ಸೋಡಿಯಂ ರಾಸಾಯನಿಕ ಮತ್ತು ಸಾಬೂನು ಉದ್ಯಮಗಳದ್ದು ಅನಂತರದ ಸ್ಥಾನ. ಇಷ್ಟೇ ಅಲ್ಲದೆ ಸಾವಯವ ಸಂಯುಕ್ತಗಳ ತಯಾರಿಕೆ, ವಸ್ತ್ರೋದ್ಯಮ, ವರ್ಣೋದ್ಯಮ, ಕಾಗದ, ಚರ್ಮ, ಗಾಜು, ರಬ್ಬರ್, ಸ್ಫೋಟಕಗಳೇ ಮೊದಲಾದ ಅನೇಕ ಉದ್ಯಮಗಳಲ್ಲಿಯೂ ಪೆಟ್ರೋಲಿಯಂ ಮತ್ತು ಇತರ ತೈಲಗಳ ಶುದ್ಧೀಕರಣದಲ್ಲಿಯೂ ಸಾಕಷ್ಟು ಪರಿಮಾಣದಲ್ಲಿ ಇದರ ಉಪಯೋಗ ಉಂಟು.

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಕಾಸ್ಟಿಕ್ ಸೋಡದ ತಯಾರಿಕೆ ಮತ್ತು ಬಳಕೆಗಳು ಹೆಚ್ಚುತ್ತ ಬಂದಿವೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ವಾರ್ಷಿಕ ಉತ್ಪಾದನೆ 99,000 ಟನ್ನುಗಳಿಂದ 2,18,000 ಟನ್ನುಗಳಿಗೇರಿತು.

ಪೊಟ್ಯಾಸಿಯಂ ಕಾರ್ಬೊನೇಟ್ ($K_2CO_3$) ಮತ್ತು ಪೊಟ್ಯಾಸಿಯಂ ಹೈಡ್ರಾಕ್ಸೈಡ್ (KOH): ಸಸ್ಯಗಳ ಬೂದಿಯಲ್ಲಿ ಒಂದು ಮುಖ್ಯ ಭಾಗ ಪೊಟ್ಯಾಷ್ ಅಥವಾ ಪೊಟ್ಯಾಸಿಯಂ ಕಾರ್ಬೊನೇಟ್. ಪೊಟ್ಯಾಷ್ ಅಂಶ ಹೆಚ್ಚು ಇರುವ ಹಲವು ಬೂದಿಗಳನ್ನು ಮುಂದೆ ಉದಾಹರಿಸಿದೆ:

| | | |
|---|---|---|
| ಸೂರ್ಯಕಾಂತಿ ಗಿಡದ ಬೂದಿ | : | ಶೇ.53-69 |
| ಸೇವಂತಿಗೆ ಗಿಡದ ಬೂದಿ | : | ಶೇ.35-36.5 |
| ಬಾಳೆಯ ಗಿಡದ ಬೂದಿ | : | ಶೇ.67-94 |
| ಎಳೆಯ ಬಿದಿರಿನ ಬೂದಿ | : | ಶೇ.47-48.5 |

ಪೊಟ್ಯಾಷ್ ತಯಾರಿಕೆ ಸೋಡ ಆಷ್ ತಯಾರಿಕೆಯನ್ನು ಹೋಲುತ್ತದೆ ಪೊಟ್ಯಾಸಿಯಂ ಕ್ಲೋರೈಡ್ ಅಥವಾ ಪೊಟ್ಯಾಸಿಯಂ ಸಲ್ಫೇಟಿನಿಂದ ಆರಂಭಿಸಿ ಸಾಲ್ವೇ ವಿಧಾನವನ್ನು ಉಪಯೋಗಿಸಿ ಪೊಟ್ಯಾಸಿಯಂ ಕಾರ್ಬೊನೇಟನ್ನು ತಯಾರಿಸಲಾಗುತ್ತದೆ. ಇಲ್ಲಿ ತೋರಿಸಿರುವ ಸಮೀಕರಣಗಳು ಸಂಕ್ಷಿಪ್ತವಾಗಿ ಒಟ್ಟು ಕ್ರಿಯೆಗಳನ್ನು ನಿರ್ದೇಶಿಸುತ್ತವೆ.

$$KCl + CO_2 + NH_3 + H_2O \rightarrow KHCO_3 + NH_4Cl$$ ಅಥವಾ

$$K_2SO_4 + 2CO_2 + 2NH_3 + 2H_2O \rightarrow 2KHCO_3 + (NH_4)_2SO_4$$

$$2KHCO_3 \rightarrow K_2CO_3 + H_2O + CO_2 \uparrow$$

ಪೊಟ್ಯಾಸಿಯಂ ಕಾರ್ಬೊನೇಟನ್ನು ಇತರ ಪೊಟ್ಯಾಸಿಯಂ ಲವಣಗಳ ತಯಾರಿಕೆಯಲ್ಲಿಯೂ ವಿಶಿಷ್ಟ ದರ್ಜೆಯ ಗಾಜುಗಳನ್ನು ತಯಾರಿಸುವುದಕ್ಕೂ ಉಪಯೋಗಿಸಲಾಗುತ್ತದೆ. ಪೊಟ್ಯಾಸಿಯಂ ಹೈಡ್ರಾಕ್ಸೈಡನ್ನು ಪೊಟ್ಯಾಸಿಯಂ ಕ್ಲೋರೈಡ್ ದ್ರಾವಣದ ವಿದ್ಯುದ್ವಿಶ್ಲೇಷಣದಿಂದಾಗಲಿ ಪೊಟ್ಯಾಸಿಯಂ ಕಾರ್ಬೊನೇಟನ್ನು ತಣಿಸಿದ ಸುಣ್ಣದ ತಿಳಿಯೊಡನೆ ವರ್ತಿಸುವುದರಿಂದಾಗಲಿ ತಯಾರಿಸಬಹುದು. ಮುಂದಿನ ಸಮೀಕರಣಗಳು ತಯಾರಿಕೆಯ ರಾಸಾಯನಿಕ ಕ್ರಿಯೆಗಳನ್ನು ನಿರೂಪಿಸುತ್ತವೆ:

$$KCl + H_2O \rightarrow KOH + \tfrac{1}{2} H_2 \uparrow + \tfrac{1}{2} Cl_2 \uparrow$$

$$K_2CO_3 + Ca(OH)_2 \; 2KOH + CaCO_3$$

ವಿಶಿಷ್ಟ ರೀತಿಯ ಮೃದು ಸಾಬೂನುಗಳನ್ನು ತಯಾರಿಸಲು ಸೋಡಿಯಂ ಹೈಡ್ರಾಕ್ಸೈಡಿಗೆ ಬದಲಾಗಿ ಪೊಟ್ಯಾಸಿಯಂ ಹೈಡ್ರಾಕ್ಸೈಡನ್ನು ಉಪಯೋಗಿಸಲಾಗುತ್ತದೆ.

(ಕೆ.ಟಿ.ಎಸ್)

**ಕ್ಷಾರಸಸ್ಯಗಳು :** ಲವಣಯುಕ್ತ ಮಣ್ಣಿನಲ್ಲಿ (ಸಮುದ್ರತೀರ ಮುಂತಾದೆಡೆ) ಬೆಳೆಯುವಂಥ ವಿಶಿಷ್ಟ ಬಗೆಯ ಸಸ್ಯಗಳು (ಹ್ಯಾಲೊಫೈಟ್ಸ್). ಉಪ್ಪು ಹೆಚ್ಚಾಗಿರುವ ಇಂಥ ಮಣ್ಣಿನಲ್ಲಿ ನೀರು ಇದ್ದರೂ ಅದನ್ನು ಸಸ್ಯಗಳು ಸುಲಭವಾಗಿ ಹೀರಿಕೊಳ್ಳಲಾರವು. ಆದೆ ನೀರಿಲ್ಲದೆ ಅವು ಬದುಕಲಾರವು. ಆದ್ದರಿಂದ ಅವುಗಳ ದೇಹದ ಒಳ ಹಾಗೂ ಹೊರ ರಚನೆಗಳಲ್ಲಿ ಹಲವಾರು ರೀತಿಯ ಮಾರ್ಪಾಡುಗಳುಂಟಾಗಿ ಈ ಸಸ್ಯಗಳು ರಚನಾ ವೈವಿಧ್ಯವನ್ನು ಪ್ರದರ್ಶಿಸುತ್ತವೆ. ಸಾಮಾನ್ಯವಾಗಿ ಕ್ಷಾರಸಸ್ಯಗಳು ಏಕವಾರ್ಷಿಕ ಬಗೆಯವು. ಹೆಚ್ಚಿನವುಗಳಲ್ಲಿ ದಪ್ಪನೆಯ ಹಾಗೂ ಮೆತು ತಿರುಳಿನ ಎಲೆ ಮತ್ತು ಕಾಂಡಗಳಿವೆ. ತಾವು ಕಷ್ಟಪಟ್ಟು ಹೀರಿಕೊಂಡ ನೀರನ್ನೆಲ್ಲ ಆದಷ್ಟು ಜಾಗರೂಕತೆಯಿಂದ ಬಳಸಿಕೊಳ್ಳುವ ಸಲುವಾಗಿ ನೀರನ್ನು ಸಂಗ್ರಹಿಸುತ್ತವೆ. ಇದರಿಂದಾಗಿ ಈ ಸಸ್ಯಗಳು ರಸಭರಿತವಾಗಿರುತ್ತವೆ. ಉದಾಹರಣೆಗೆ ಸ್ಯಾಲಿಕಾರ್ನಿಯ, ಸಾಲ್ಸೊಲ, ಇತ್ಯಾದಿ. ಇವುಗಳ ಜೀವಕೋಶಗಳ ನಡುವಣ ಅವಕಾಶ ಬಲು ಚಿಕ್ಕದು. ಹೆಚ್ಚಿನ ಪ್ರಮಾಣದಲ್ಲಿ ಲೋಳೆ ಅಂಗಾಂಶಗಳನ್ನು ಪಡೆದಿವೆ. ಸಸ್ಯದೇಹದ ಮೇಲೆಲ್ಲ ಮೇಣದ ಇಲ್ಲವೇ ಕೂದಲುಗಳ ಹೊದಿಕೆಯುಂಟು. ಇದರಿಂದ ಎಲೆಗಳಿಂದ ಕಾಂಡದಿಂದ ಆಗುವ ಬಾಷ್ಪವಿಸರ್ಜನೆಯನ್ನು ತಡೆಯಬಹುದಾಗಿದೆ. ಎಲೆಗಳು ಗಾತ್ರದಲ್ಲಿ ಬಲು ಚಿಕ್ಕವು. ತಂತಿಯಂತೆಯೊ ಚಮಚದಂತೆಯೂ ಇರಬಹುದು. ಕೆಲವೊಮ್ಮೆ ಹುರುಪೆಗಳವುತೆ ಮಾರ್ಪಾಡಾಗಿರುವುದುಂಟು. ಕೆಲವು ಪ್ರಭೇದಗಳಲ್ಲಿ ಎಲೆಗಳೇ ಇರುವುದಿಲ್ಲ. ಕಾಂಡವೂ ಅಷ್ಟೆ, ಹಲವಾರು ವಿಧಗಳಲ್ಲಿ ಮಾರ್ಪಾಡಾಗಿರುತ್ತವೆ. ಬಹುಪಾಲು ಬಗೆಗಳಲ್ಲಿ ಕಾಂಡ ಭೂಮಿಗೆ ಸಮಾಂತರವಾಗಿ ಬಾಗಿದಂತಿರುತ್ತದೆ. ಇವೆಲ್ಲ ಮಾರ್ಪಾಡುಗಳು ಬಾಷ್ಪವಿಸರ್ಜನೆಯನ್ನು ಕಡಿಮೆ ಮಾಡಲು ಸಹಕಾರಿಯಾಗಿವೆ.

ಕ್ಷಾರಸಸ್ಯಗಳನ್ನು ಅವು ಬೆಳೆಯುವ ನೆಲೆಯನ್ನವಲಂಬಿಸಿ ಹಲವಾರು ವಿಧಗಳಾಗಿ ವಿಂಗಡಿಸಲಾಗಿದೆ. 1 ಕಲ್ಲುಗಳ ಮೇಲೆ ಬೆಳೆಯುವಂಥವು (ಲಿಥೊಫೈಲಸ್ ಹ್ಯಾಲೊ ಫೈಟ್ಸ್), 2 ಮರಳಿನಲ್ಲಿ ಬೆಳೆಯುವ ಕ್ಷಾರಸಸ್ಯಗಳು (ಸಾಮೊಫೈಲಸ್ ಹ್ಯಾಲೊ ಫೈಟ್ಸ್), 3 ಲವಣಮಿಶ್ರಿತ ಗೋಡು ಮಣ್ಣಿನಲ್ಲಿ ಬೆಳೆಯುವಂಥವು (ಪೆಲೆಫೈಲಸ್ ಹ್ಯಾಲೊಫೈಟ್ಸ್) ಮತ್ತು 4 ಮ್ಯಾಂಗ್ರೋವ್ ಬಗೆಯವು. ಇವುಗಳಲ್ಲೆಲ್ಲ ಮ್ಯಾಗ್ರೋವ್ ಬಗೆಯವು ಸ್ವಾರಸ್ಯಪೂರ್ಣವಾದವು. ಇವು ಸಮುದ್ರ ತೀರದಲ್ಲಿ ಮರಗಳ ರೂಪದಲ್ಲಿ ಬೆಳೆಯುತ್ತವೆ. ಇವುಗಳಲ್ಲಿ ಕೆಲವು ಕವಲು ಬೇರುಗಳು ಭೂಮಿಯ ಮೇಲೆ ಹೊರಟು ಮೇಲ್ಮುಖವಾಗಿ ಬೆಳೆದುಕೊಳ್ಳುತ್ತವೆ. ಈ ಬೇರುಗಳ ಮೇಲೆ ಸಣ್ಣ ರಂಧ್ರಗಳಿದ್ದು ಇವು ಸಸ್ಯದ ಉಸಿರಾಡುವಿಕೆಯಲ್ಲಿ ಸಹಾಯ ಮಾಡುತ್ತವೆ. ಇವಕ್ಕೆ ನ್ಯುಮ್ಯಾಟೋಫೋರುಗಳೆಂದು ಹೆಸರು. ಮ್ಯಾಂಗ್ರೋವ್ ಸಸ್ಯಗಳಲ್ಲಿ ಫಲ ಮರದಿಂದ ಕಳಚಿ ಬೀಳುವ ಮೊದಲೇ ಅದರಲ್ಲಿನ ಬೀಜ ಮೊಳೆತು ದಪ್ಪವಾದ ಪ್ರಥಮ ಮೂಲ ಭಾಗ ಹೊರಬಂದಿರುತ್ತದೆ. ಇದರ ತೂಕ ಅಧಿಕವಾಗುವುದರಿಂದ ಫಲ ಮರದಿಂದ ಕಳಚಿಬಿದ್ದು ಕೆಳಗಿನ ಮೆದುವಾದ ಮಣ್ಣಿನಲ್ಲಿ ಭದ್ರವಾಗಿ ಸಿಕ್ಕಿಕೊಂಡು ಮತ್ತೊಂದು ಗಿಡವಾಗಿ ಮೊಳೆಯುತ್ತದೆ. ಈ ರೀತಿಯ ಬೀಜ ಮೊಳೆಯುವಿಕೆಯನ್ನು ವೈವಿಪರಿ ಎಂದು ಕರೆಯಲಾಗುತ್ತದೆ. ಮ್ಯಾಂಗ್ರೋವ್ ಬಗೆಯ ಕ್ಷಾರಸಸ್ಯಗಳಿಗೆ ಬ್ರುಗ್ವೀರ, ಸೀರಿಯಾಪ್ಸ್, ಅವಿಸಿನಿಯ, ರೈಜಾಫೋರ, ಏಜಿಸಿರಾಸ್ ಮುಂತಾದುವು ಮುಖ್ಯ ಉದಾಹರಣೆಗಳು. ಬಂಗಾಳದಲ್ಲಿನ ಸುಂದರ್ಬನಗಳಲ್ಲಿ ಇವು ಕಾಣದೊರೆಯುತ್ತವೆ. (ಬಿ.ಪಿ.)

**ಕ್ಷಾರೂಪಿಗಳು : ನೋಡಿ – ಆಲ್ಕಲಾಯ್ಡ್‌ಗಳು**

**ಕ್ಷಿತಿಜ :** ಭೂಮಿಯೂ ಆಕಾಶವೂ ಸಂಧಿಸುವಂತೆ ಕಾಣುವ ಮಹಾವೃತ್ತ (ಹೊರೈಜನ್). ಹಾರಿಜ, ದಿಗಂತ ಪರ್ಯಾಯ ನಾಮಗಳು. ಇದು ವೀಕ್ಷಕನ ಸ್ಥಾನವನ್ನು ಅವಲಂಬಿಸಿ ಬದಲಾಗುತ್ತದೆ. ಒಬ್ಬ ವೀಕ್ಷಕನಿಗೆ ಆತನ ಕ್ಷಿತಿಜದಿಂದ ಮೇಲುಗಡೆಗೆ ಇರುವ ಎಲ್ಲ ಆಕಾಶಕಾಯಗಳೂ ಕಾಣಬಲ್ಲುವು; ಅದರಿಂದ ಕೆಳಗೆ ಇರುವ ಯಾವ ಆಕಾಶಕಾಯವೂ ಕಾಣಿಸಲಾರದು. ಹೀಗೆ ಯಾವುದೇ ಒಂದು ಕ್ಷಣದಲ್ಲಿ ಕಾಣಬಲ್ಲ ಮತ್ತು ಕಾಣಲಾಗದ ಆಕಾಶಕಾಯಗಳನ್ನು ಪ್ರತ್ಯೇಕಿಸುವ ಗಡಿ ಗೆರೆಯೇ ಕ್ಷಿತಿಜ.




ಚಿತ್ರದಲ್ಲಿ $p$ ಭೂಮಿ; $E$ ಅದರ ಕೇಂದ್ರ. $A$ ಭೂಮಿಯ ಮೇಲೆ ನಿಂತಿರುವ ಒಬ್ಬ ವೀಕ್ಷಕ. $EA$ ರೇಖೆ ಖಗೋಳವನ್ನು (ಎಂದರೆ ನಮಗೆ ಗೋಳ ರೂಪವಾಗಿ ತೋರುವ ಆಕಾಶವನ್ನು

ಸಂಧಿಸುವ ಬಿಂದು *Z*. ಇದು ವೀಕ್ಷಕನ ಊರ್ಧ್ವಬಿಂದು. *A*ಯಲ್ಲಿ ಭೂಗೋಳಕ್ಕೆ ಒಂದು ಸ್ಪರ್ಶ ಸಮತಲವನ್ನು ರಚಿಸಿದರೆ *(LAM)* ಅದು ಖಗೋಳವನ್ನು ಒಂದು ವೃತ್ತದಲ್ಲಿ ಛೇದಿಸುವುದು. ಇದೇ *A*ಯಲ್ಲಿರುವ ವೀಕ್ಷಕನ ಕ್ಷಿತಿಜ. ಇದರ ತಲ *EAZ*ಗೆ ಲಂಬವಾಗಿದೆ.

ಖಗೋಳದ ಮಹಾಗಾತ್ರದೊಡನೆ ಹೋಲಿಸುವಾಗ ಸಮಗ್ರ ಭೂಮಿಯೇ ಒಂದು ಪರಮಾಣು ಗಾತ್ರವನ್ನು ಪಡೆಯುತ್ತದೆ. ಆದ್ದರಿಂದ ಆಕಾಶಕಾಯಗಳ ಚಲನೆ ಮೊದಲಾದ ವಿದ್ಯಮಾನಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸುವಾಗ ವೀಕ್ಷಕನೂ ಭೂಕೇಂದ್ರವೂ ಖಗೋಳಕೇಂದ್ರದಲ್ಲಿ ಐಕ್ಯವಾಗಿರುವುವು ಎಂದು ಭಾವಿಸುತ್ತೇವೆ. (ವಾಸ್ತವಾನುಭವವೂ ಇದೇ ತಾನೇ).




ಆದ್ದರಿಂದ ಸ್ಥೂಲವಾಗಿ ವೀಕ್ಷಕನೇ ಖಗೋಳದ ಕೇಂದ್ರ ಎಂದು ಅಂಗೀಕರಿಸುವೆವು; ವೀಕ್ಷಕನನ್ನು *(A)* ಅವನ ಊರ್ಧ್ವ ಬಿಂದುವಿಗೆ *(Z)* ಜೋಡಿಸುವ ರೇಖೆಗೆ *(AZ)* ಲಂಬವಾಗಿ ವೀಕ್ಷಕನ *(A)* ಮೂಲಕ ಎಳೆದ ಸಮತಲ ಆತನ ಕ್ಷಿತಿಜತಲ ಎಂದು ವ್ಯಾಖ್ಯಿಸುತ್ತೇವೆ. ಈ ತಲ ಖಗೋಳವನ್ನು ಛೇದಿಸುವ ಮಹಾವೃತ್ತ (π) ವೀಕ್ಷಕನ ಕ್ಷಿತಿಜವಾಗುತ್ತದೆ. ಕ್ಷಿತಿಜ ಖಗೋಳವನ್ನು ಎರಡು ಸಮಭಾಗಗಳಾಗಿ ವಿಭಾಗಿಸುತ್ತದೆ: I, II. ಯಾವುದೇ ಕ್ಷಣದಲ್ಲಿ I ಭಾಗದಲ್ಲಿರುವ ಆಕಾಶಕಾಯಗಳು ವೀಕ್ಷಕನಿಗೆ ಕಾಣುವುದಿಲ್ಲ; II ಭಾಗದಲ್ಲಿರುವ ಆಕಾಶಕಾಯಗಳನ್ನು ಆತ ಕಾಣಬಹುದು. **(ನೋಡಿ– ಖಗೋಳ)**

(ಸಿ.ಎನ್.ಎಸ್.)

**ಕ್ಷಿಪಣಿ :** ಮಾನವಚಾಲಕರಿಲ್ಲದೆಯೇ ಚಲಿಸುವಂತೆ ನಿಯೋಜಿತವಾದ ವಿಮಾನ, ರಾಕೆಟ್, ಗ್ಲೈಡರ್ ಮುಂತಾದ ವಿಶೇಷ ಸಾಧನಗಳಿಂದ ಉದ್ದೇಶಿತ ನೆಲೆಗಳಿಗೆ ಸ್ಫೋಟಕಾಸ್ತ್ರಗಳನ್ನು ಒಯ್ದು ಸಿಡಿಸುವ ಅಸ್ತ್ರ (ಮಿಸೈಲ್). ಅಸ್ತ್ರಗಳ ಬದಲು ವೈಜ್ಞಾನಿಕ ಉಪಕರಣಗಳನ್ನು ಅಂತರಿಕ್ಷದಲ್ಲಿ ನಿರ್ದಿಷ್ಟ ಸ್ಥಾನಗಳಿಗೆ ಮುಟ್ಟಿಸಬಲ್ಲ ಸದೃಶ ಸ್ವಯಂಕಾರ್ಯ ವಿಧಾನದ ಇತ್ತೀಚಿನ ವ್ಯವಸ್ಥೆಗಳು ಕ್ಷಿಪಣಿಗಳ ಸಂಸ್ಕರಿತ ಮಾರ್ಪಾಡುಗಳಾಗಿ ರೂಪಿತವಾಗಿವೆ. ಕ್ಷಿಪಣಿಯನ್ನು ಹಾರಿಸಿಬಿಡುವ ಪ್ರಕ್ಷೇಪಣಸ್ಥಾನ ಹಾಗೂ ಅದು ಮುಟ್ಟಬೇಕಾಗಿರುವ ಗುರಿ ಇವೆರಡೂ ಭೂ ಮೇಲ್ಮೈಯ ನಿಶ್ಚಲ ನೆಲೆಗಳಾಗಿರಬಹುದು; ಅಥವಾ ಅವುಗಳಲ್ಲಿ ಒಂದು ಇಲ್ಲವೆ ಎರಡೂ ಸಾಗರ, ವಾಯುಮಂಡಲ ಅಥವಾ ಅಂತರಿಕ್ಷದಲ್ಲಿ ಸಂಚರಿಸುತ್ತಿರುವ ಸಮರವಾಹನಗಳಾಗಿರಬಹುದು. ಇಂಥ ಬೇರೆ ಬೇರೆ ಸಂದರ್ಭಗಳಿಗೆ ಅನುಗುಣವಾಗಿ ಬೇರೆ ಬೇರೆ ರೀತಿಯ ಕ್ಷಿಪಣಿಗಳನ್ನು ಪ್ರಯೋಗಿಸಬೇಕಾಗುವುದು. ಪ್ರಕ್ಷೇಪಣಸ್ಥಾನ ಮತ್ತು ಗುರಿ ಎರಡೂ ಭೂ ಮೇಲ್ಮೈಯ ನೆಲೆಗಳಾದಾಗ ಅವುಗಳ ನಡುವೆ ಸಹಸ್ರಾರು ಕಿಮೀ.ಗಳಷ್ಟು ಅಂತರವಿರಬಹುದು. ಉದಾಹರಣೆಗೆ ಗುರುತ್ವಾನುಚರ ಮಧ್ಯಮಾಂತರ ಕ್ಷಿಪಣಿಗಳು (IRBM–ಇಂಟರ್ಮೀಡಿಯೆಟ್ ರೇಂಜ್ ಬಲಿಸ್ಟಿಕ್ ಮಿಸೈಲ್ಸ್) ಸುಮಾರು 2,000-8,000 ಕಿ.ಮೀ. ಅಂತರಗಳನ್ನೂ ಗುರುತ್ವಾನುಚರ ಖಂಡಾಂತರ ಕ್ಷಿಪಣಿಗಳು (ICBM–ಇಂಟರ್‌ಕಾಂಟಿನೆಂಟಲ್ ಬಲಿಸ್ಟಿಕ್ ಮಿಸೈಲ್ಸ್) 8,000-20,000 ಕಿಮೀ. ಅಂತರಗಳನ್ನೂ ಒಂದು ಗಂಟೆಗಿಂತ ಕಡಿಮೆ ಅವಧಿಯಲ್ಲಿ ಕ್ರಮಿಸಬಲ್ಲವು. ಇವು ಸಾಮಾನ್ಯವಾಗಿ ಪರಮಾಣು ಬಾಂಬು ಹೈಡ್ರೋಜನ್ ಬಾಂಬುಗಳ ಮಾದರಿಯ ನ್ಯೂಕ್ಲಿಯರ್ ಸ್ಫೋಟಕಾಸ್ತ್ರಗಳನ್ನು (ನ್ಯೂಕ್ಲಿಯರ್ ವಾರ್‌ಹೆಡ್) ಹೊತ್ತು ಸಾಗುತ್ತವೆ. ಇಂಥ ಅಸ್ತ್ರಗಳ ವಿಧ್ವಂಸಕ ಪರಿಣಾಮಗಳು ಸಾಕಷ್ಟು ದೂರವ್ಯಾಪಕವಾದ ಕಾರಣ ಕ್ಷಿಪಣಿ ಮುಟ್ಟುವ ಗುರಿಯಲ್ಲಿ ತುಸು ದೋಷ ಸಂಭವಿಸಿದಾಗ್ಯೂ ಹೆಚ್ಚು ಚಿಂತಿಸುವ ಅಗತ್ಯವಿರದು ಎಂಬ ಎಣಿಕೆ ಈ ನ್ಯೂಕ್ಲಿಯರ್ ಅಸ್ತ್ರಗಳ ಆಯ್ಕೆಗೆ ಹಿನ್ನೆಲೆಯಾಗಿದೆ. ಹತ್ತಿರದ ಗುರಿಗಳಿಗೆ ಹಾರುವ ಕ್ಷಿಪಣಿಗಳಾದರೋ ಸಾಧಾರಣವಾಗಿ ರಾಸಾಯನಿಕ ಅಸ್ತ್ರಗಳಿಂದ ಸಜ್ಜಿತವಾಗಿರುತ್ತವೆ. ಕ್ಷಿಪಣಿಗಳನ್ನು ಮಾರ್ಗಮಧ್ಯೆ ಸಂಘಟ್ಟಿಸಿ ನಾಶಪಡಿಸುವಂತೆ ಉದ್ದೇಶಿಸಲಾದ ಕ್ಷಿಪಣಿನಿರೋಧಕ ಕ್ಷಿಪಣಿಗಳೂ (ಆ್ಯಂಟಿಮಿಸೈಲ್ ಮಿಸೈಲ್ಸ್) ನಿಯೋಜಿತವಾಗಿವೆ.

**ಕ್ಷಿಪಣಿಗಳ ಚಾಲಕ ವ್ಯವಸ್ಥೆಗಳು (ಪ್ರೊಪಲ್ಷನ್ ಸಿಸ್ಟಮ್ಸ್):** ಕ್ಷಿಪಣಿ ಚಲಿಸುವ ಮಾಧ್ಯಮಕ್ಕೆ (ವಾಯುಮಂಡಲ, ಜಲರಾಶಿ ಇಲ್ಲವೆ ನಿರ್ವಾತ ಅಂತರಿಕ್ಷ) ಅನುಗುಣವಾಗಿ ಅದರ ಚಾಲಕಯಂತ್ರವನ್ನು ನಿಯೋಜಿಸಬೇಕಾಗುವುದು. ಮಾನವಚಾಲಿತ ವಿಮಾನಗಳಿಂದ ಬಿಡುಗಡೆಯಾದ ಬಳಿಕ ಮೆಲ್ಲನೆ ಕೆಳಕ್ಕೆ ಇಳಿಯುತ್ತ ಬರುವ ಗ್ಲೈಡರು ಬಾಂಬುಗಳ ಚಾಲನೆ ಅವುಗಳ ಪ್ರಾರಂಭಿಕ ಚಲನಶಕ್ತಿಯಿಂದಲೂ(ಕೈನೆಟಿಕ್ ಎನರ್ಜಿ) ಭೂಗುರುತ್ವ ವಿಭವಶಕ್ತಿಯಿಂದಲೂ (ಗ್ರ್ಯಾವಿಟೇಷನಲ್ ಪೊಟೆನ್ಷಿಯಲ್ ಎನರ್ಜಿ) ಆಗುವುದರಿಂದ ಈ ಬಗೆಯ ಸರಳ ಕ್ಷಿಪಣಿಗಳಿಗೆ ಪ್ರತ್ಯೇಕ ಚಾಲಕ ಯಂತ್ರಗಳ ಅಗತ್ಯವಿರುವುದಿಲ್ಲ. ಇಂಥ ವಿರಳ ಅಪವಾದಗಳನ್ನುಳಿದರೆ ಇತರ ಎಲ್ಲ ಕ್ಷಿಪಣಿಗಳ ಚಾಲನೆಗಾಗಿ ಇಂದು ಜೆಟ್ ಯಂತ್ರಗಳನ್ನಾಗಲಿ ರಾಕೆಟ್ ಯಂತ್ರಗಳನ್ನಾಗಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ವಾಯುಮಂಡಲದ ಇಲ್ಲವೇ ಜಲರಾಶಿಗಳ ಮೂಲಕ ಚಲಿಸುವ ಕ್ಷಿಪಣಿಗಳು ಈ ದ್ರವ್ಯರಾಶಿಗಳ ಪ್ರತಿರೋಧವನ್ನು ಸತತವಾಗಿ ಎದುರಿಸುತ್ತ ಮುನ್ಸಾಗಬೇಕು. ತತ್ಫಲವಾಗಿ ಕ್ಷಿಪಣಿಗಳ ಚಾಲಕಯಂತ್ರಗಳು ಹೆಚ್ಚು ಕಡಿಮೆ ಅವುಗಳ ಚಲನೆಯ ಅವಧಿಪೂರ್ತಿಯೂ ಕೆಲಸ ಮಾಡುತ್ತಲೇ ಇರಬೇಕಾಗುವುದು. ಆದರೆ ನಿರ್ವಾತ ಅಂತರಿಕ್ಷದ ಮುಖಾಂತರ ಕ್ಷಿಪಣಿಯೊಂದು ಹಾದುಹೋಗುವ ಪಕ್ಷದಲ್ಲಿ ಅಷ್ಟು ಸಮಯ ಅದು ಯಾವ ದ್ರವ್ಯದ ಪ್ರತಿರೋಧಕ್ಕೂ ಗುರಿಯಾಗುವುದಿಲ್ಲ. ಆದಕಾರಣ ಆ ಸಮಯದಲ್ಲಿ ಕ್ಷಿಪಣಿಗೆ ಜೀವಂತ ಚಾಲಕಯಂತ್ರಗಳು ಅನಾವಶ್ಯಕವಾಗುತ್ತವೆ. ಗುರುತ್ವಾನುಚರ ಖಂಡಾಂತರ ಕ್ಷಿಪಣಿಗಳು (ICBM) ತಮ್ಮ ಅರ್ಧ ಮುಕ್ಕಾಲು ಗಂಟೆಯಷ್ಟು ಯಾನಕಾಲದ ಬಹುತೇಕ ಭಾಗವನ್ನೆಲ್ಲ ಅಂತರಿಕ್ಷದಲ್ಲೇ ಕಳೆಯುತ್ತವೆ. ಇಂಥ ಕ್ಷಿಪಣಿಗಳ ಚಾಲಕಯಂತ್ರಗಳು ಕೆಲಸಮಾಡುವುದು ಅವುಗಳ ಯಾನಕಾಲದ ಮೊದಲ ಐದು ಹತ್ತು ಮಿನಿಟುಗಳ ವರೆಗೆ ಮಾತ್ರವೇ.

ಕ್ಷಿಪಣಿಯೊಂದರ ವೇಗ ಬದಲಾವಣೆಯಾಗುವ ವಿದ್ಯಮಾನಕ್ಕೆ ಕ್ಷಿಪಣಿಯ ವೇಗೋತ್ಕರ್ಷ (ಆಕ್ಸಲರೇಷನ್) ಎಂದು ಹೆಸರು. ನಿಶ್ಚಲವಾಗಿದ್ದ ಕ್ಷಿಪಣಿ ಚಲಿಸಲಾರಂಭಿಸುವುದು, ಒಂದು ದಿಕ್ಕಿನಲ್ಲಿ ಸಾಗುತ್ತಿದ್ದ ಕ್ಷಿಪಣಿ ಬೇರೊಂದು ದಿಕ್ಕಿನಲ್ಲಿ ಹಾರಲು ಉಪಕ್ರಮಿಸುವುದು, ಒಂದು ವೇಗದಿಂದ ಸಂಚರಿಸುತ್ತಿದ್ದ ಕ್ಷಿಪಣಿ ಅದಕ್ಕಿಂತ ಹೆಚ್ಚಾದ ಅಥವಾ ಕಡಿಮೆಯಾದ ಬೇರೊಂದು ವೇಗದಿಂದ ಸಂಚರಿಸತೊಡಗುವುದು– ಇವೆಲ್ಲವೂ ವೇಗೋತ್ಕರ್ಷಗಳೇ. ಕ್ಷಿಪಣಿಗಳು ವೇಗೋತ್ಕರ್ಷಿತವಾಗಬೇಕಾದರೆ ಅವುಗಳ ಮೇಲೆ ಬಲಗಳ ಪ್ರಯೋಗವಾಗಲೇಬೇಕು. ಇವನ್ನು ಸೃಷ್ಟಿಸುವುದು ಚಾಲಕಯಂತ್ರಗಳ ಕರ್ತವ್ಯ. ಜೊತೆಗೆ ಕ್ಷಿಪಣಿಗಳು ವಾಯುಮಂಡಲದ ಇಲ್ಲವೆ ಜಲರಾಶಿಯ ಮುಖಾಂತರ ಸಂಚರಿಸುವಾಗ ಆ ಮಾಧ್ಯಮಗಳ ಪ್ರತಿರೋಧದಿಂದ ಸಂಭವಿಸುವ ವೇಗನಷ್ಟವನ್ನು ಅವಿಚ್ಛಿನ್ನವಾಗಿ ತುಂಬುತ್ತ ಹೋಗುವುದಕ್ಕೂ ಚಾಲಕಯಂತ್ರಗಳ ಬಲ ಅವಶ್ಯವಾಗುವುದು. ಕ್ಷಿಪಣಿಗಳಿಗೆ ಅವುಗಳ ಚಾಲಕಯಂತ್ರಗಳು ಒದಗಿಸುವ ಬಲಕ್ಕೆ ನೂಕುಬಲ(ಥ್ರಸ್ಟ್) ಎಂದು ಹೆಸರು. ನಿಸರ್ಗದಲ್ಲಿ ಪದಾರ್ಥಗಳ ಕೈವಾಡವಿಲ್ಲದೆ ಯಾವೊಂದು ಬಲವೂ ಜನಿಸದು ; ಮತ್ತು ಪದಾರ್ಥಗಳ ಕೈವಾಡವಿರುವಾಗಲೂ ಯಾವೊಂದು ಬಲವೂ ಒಂಟಿಯಾಗಿ ಜನಿಸದು. ನ್ಯೂಟನ್ನನ ತೃತೀಯ ಚಲನನಿಯಮವೆಂಬ ಹೆಸರಿನ ಈ ನಿರ್ಬಂಧಕ್ಕೆ ಚಾಲಕಯಂತ್ರಗಳ ನೂಕುಬಲ ಅಪವಾದವೇನಲ್ಲ. ಅಂದಮೇಲೆ ಎಲ್ಲ ಸಂದರ್ಭಗಳಲ್ಲೂ ನೂಕುಬಲಕ್ಕೆ ಜನಕದ್ರವ್ಯವೊಂದಿರಲೇಬೇಕು, ಹಾಗೂ ನೂಕುಬಲದೊಂದಿಗೆ ಏಕಕಾಲಿಕವಾಗಿ ಮತ್ತೊಂದು ಅವಳಿಬಲದ ಸೃಷ್ಟಿ ಕೂಡ ಆಗಿರಬೇಕು. ವಿರುದ್ಧ ದಿಸೆಗಳಲ್ಲಿ ವರ್ತಿಸುವ ಈ ನೂಕುಬಲ ಮತ್ತು ಅವಳಿ ಬಲಗಳು ಪರಿಮಾಣತಃ ಸಮವಾಗಿರುತ್ತವೆ. ನೂಕುಬಲಕ್ಕೆ ಕ್ಷಿಪಣಿ ಗುರಿಯಾದರೆ ವಿಮುಖ ಅವಳಿಬಲಕ್ಕೆ ಆ ನೂಕುಬಲದ ಜನಕದ್ರವ್ಯ ಗುರಿಯಾಗುತ್ತದೆ. ಆದಕಾರಣ ಕ್ಷಿಪಣಿ ಮತ್ತು ಅದರ ನೂಕುಬಲ ಜನಕದ್ರವ್ಯ ಸದಾ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ವೇಗೋತ್ಕರ್ಷಿತವಾಗುತ್ತಲಿರಬೇಕೇ ಹೊರತು ಅವೆರಡನ್ನೂ ಒಂದಕ್ಕೊಂದಕ್ಕೆ ಬಂಧಿಸಿಡುವುದು ಸಾಧ್ಯವಾಗದ ಮಾತು. ಈ ವಿಶ್ಲೇಷಣೆ ರಾಕೆಟ್‌ಚಾಲಿತ ಕ್ಷಿಪಣಿಗಳಿಗೆ ಮಾತ್ರವೇ ಅಲ್ಲದೆ ಎಲ್ಲ ಬಗೆಯ ಯಂತ್ರಚಾಲಿತ ಸಾರಿಗೆ ವ್ಯವಸ್ಥೆಗಳಿಗೂ ಅನ್ವಯವಾಗುವಂಥದು (ತೃತೀಯ ಚಲನನಿಯಮದೊಂದಿಗೆ ಇತರ ಚಾಲಕಯಂತ್ರಗಳ ಸಂಬಂಧಕ್ಕಿಂತ ರಾಕೆಟ್‌ಯಂತ್ರಗಳ ಸಂಬಂಧ ಹೆಚ್ಚು ನಿಕಟವೆಂಬ ವಾಡಿಕೆಯ ಕಲ್ಪನೆ ಅವಿಮರ್ಶಾತ್ಮಕವಾದುದು. ಮೇಲಾಗಿ ತೃತೀಯ ನಿಯಮವನ್ನು ಚಾಲಕವ್ಯವಸ್ಥೆಗಳ ಆಧಾರತತ್ತ್ವ ಎಂದು ಬಣ್ಣಿಸುವ ಬದಲು ಆ ವ್ಯವಸ್ಥೆಗಳ ಕಾರ್ಯವಿಧಾನವನ್ನು ನಿಯಂತ್ರಿಸುವ ಒಂದು ಕಟ್ಟುನಿಟ್ಟಿನ ಅಂಕೆ ಎಂದು ಪರಿಗಣಿಸುವುದು ಹೆಚ್ಚು ಯುಕ್ತ).

ಯಂತ್ರವೊಂದಕ್ಕೆ ನೂಕುಬಲವನ್ನು ಒದಗಿಸುವ ಜನಕದ್ರವ್ಯ ಆ ಯಂತ್ರದ ಹೊರಗಿನ ಪರಿಸರದಲ್ಲಿ ದೊರೆಯಬಹುದು, ಇಲ್ಲವೆ ಯಂತ್ರದೊಳಗೇ ಶೇಖರವಾಗಿರಬಹುದು, ಇಲ್ಲವೆ ಭಾಗಶಃ ಯಂತ್ರದೊಳಗೆ ಶೇಖರವಾಗಿಯೂ ಭಾಗಶಃ ಪರಿಸರದಲ್ಲಿ ನೆಲೆಯಾಗಿಯೂ ಇರಬಹುದು. ಈ ಮೂರು ರೀತಿಯ ಸನ್ನಿವೇಶಗಳನ್ನು ಸಾಧಾರಣ ಸೋದಕ (ಪ್ರೊಪೆಲ್ಲರ್) ವಿಮಾನ, ರಾಕೆಟ್‌ವಾಹನ ಮತ್ತು ಜೆಟ್ ವಿಮಾನಗಳು ನಿದರ್ಶಿಸುತ್ತವೆ. ಸೋದಕ ವಿಮಾನದ ಚಾಲಕದ್ರವ್ಯ (ಪೆಟ್ರೋಲ್) ಅದರ ಚಾಲನೆಗೆ ಅವಶ್ಯವಾದ ಶಕ್ತಿಯನ್ನು ಒದಗಿಸುತ್ತದೆಯೇ ವಿನಾ ನೂಕುಬಲವನ್ನಲ್ಲ. ಈ ಸಂದರ್ಭದಲ್ಲಿ ನೂಕುಬಲದ ಜನಕದ್ರವ್ಯ ನಿಜಕ್ಕೂ ವಿಮಾನದ ಹೊರಗಿನ ಪರಿಸರದ ವಾಯುರಾಶಿ. ರಾಕೆಟ್ ವಾಹನದ ಪ್ರಸಂಗದಲ್ಲಾದರೋ ಚಾಲಕಶಕ್ತಿಯ ಉತ್ಪಾದಕ ಪದಾರ್ಥವೇ ನೂಕುಬಲದ ಜನಕದ್ರವ್ಯವೂ ಆಗಿ ಕೆಲಸಮಾಡುತ್ತದೆ ; ಹಾಗೂ ಈ ಉಭಯಕ್ರಿಯಾ ಸಾಮಗ್ರಿ ಅಷ್ಟೂ ಚಾಲಕದ್ರವ್ಯಗಳ ರೂಪದಲ್ಲಿ ಯಂತ್ರದೊಳಗೇ ಶೇಖರವಾಗಿರುತ್ತದೆ. ಜೆಟ್‌ವಿಮಾನದ ನಿದರ್ಶನದಲ್ಲಿ ಯಂತ್ರದೊಳಗೆ ಶೇಖರವಾಗಿರುವ

ಇಂಧನವನ್ನೂ (ಫ್ಯೂಯೆಲ್) ಬಾಹ್ಯಪರಿಸರದಿಂದ ದೊರೆಯುವ ಆಕ್ಸಿಜನ್‌ಪೂರಿತ ವಾಯುವನ್ನೂ ಒಟ್ಟಾಗಿ ಸೇರಿಸಿ ಉರಿಸಿದಾಗ ಉತ್ಪನ್ನವಾಗುವ ಅನಿಲರಾಶಿ ನೂಕುಬಲದ ಜನಕದ್ರವ್ಯವಾಗುವುದು. ವಾಯುಪರಿಸರವನ್ನು ಅವಲಂಬಿಸುವ ಸೋದಕ ವಿಮಾನ, ಜೆಟ್‌ವಿಮಾನಗಳಿಗೆ ನಿರ್ವಾತ ಅಂತರಿಕ್ಷದಲ್ಲಿ ಎಳ್ಳಷ್ಟು ನೂಕುಬಲವೂ ಒದಗಿಬರಲು ಸಾಧ್ಯವಿಲ್ಲವೆಂಬುದು ಸುಸ್ಪಷ್ಟ. ಆದರೆ ಪರಿಸರಸ್ವತಂತ್ರ ರಾಕೆಟುಗಳ ನೂಕುಬಲ ಅಂತರಿಕ್ಷದಲ್ಲಿ ಇನ್ನೂ ವರ್ಧಿಸುವುದೇ ವಿನಾ ಕುಗ್ಗುವುದಿಲ್ಲ.

ಸೋದಕ ವಿಮಾನಯಂತ್ರಗಳ ರಚನೆ ತೀರ ಜಟಿಲವೂ ಅವುಗಳ ವೇಗ ತೀರ ಮಂದವೂ ಆಗಿರುವುದರಿಂದ ಕ್ಷಿಪಣಿಗಳ ಚಾಲನೆಗೆ ಅವನ್ನು ಬಿಟ್ಟು ಜೆಟ್ ಹಾಗೂ ರಾಕೆಟ್‌ಯಂತ್ರಗಳನ್ನು ಮಾತ್ರ ಆಯ್ಕೆ ಮಾಡಿರುತ್ತಾರೆ. ಇಂಥ ಕೆಲವು ಕ್ಷಿಪಣಿ ಚಾಲಕಯಂತ್ರಗಳ ನಕ್ಷಾಚಿತ್ರಣವನ್ನು ನಿದರ್ಶನಾತ್ಮಕವಾಗಿ ಚಿತ್ರದಲ್ಲಿ ಕಾಣಿಸಲಾಗಿದೆ.




ಚಿತ್ರ 1 ಟರ್ಬೋಜೆಟ್ ಯಂತ್ರದ ನಕ್ಷೆ

ಶಬ್ದಾತೀತವೇಗದ (ಸೂಪರ್‌ಸಾನಿಕ್) ಟರ್ಬೋಜೆಟ್ ಯಂತ್ರದಲ್ಲಿ (ಚಿತ್ರ 1) ವಾತಾವರಣದಿಂದ ಪ್ರವೇಶಿಸುವ ವಾಯುವನ್ನು ಒಳದಾರಿಯ ಹರವಣಿಗೆ (ಇನ್ಲೆಟ್ ಡಿಫ್ಯೂಸರ್) ಹಾಗೂ ತಿರುಗುವ ಒತ್ತಣಿಗೆಗಳು (ಕಂಪ್ರೆಸರ್) ತೀವ್ರವಾಗಿ ಸಂಮರ್ದಿಸಿ ದಹನಕೋಷ್ಠಕ್ಕೆ (ಕಂಬಸ್ಚನ್ ಛೇಂಬರ್) ಬಿಡುತ್ತವೆ. ದಹನಕೋಷ್ಠದಲ್ಲಿ ಅಂತಃಕ್ಷೇಪಿಸಲಾಗುವ(ಇಂಜೆಕ್ಟ್) ಸೀಮೆ ಎಣ್ಣೆಯಂಥ ಇಂಧನವನ್ನು ಆ ವಾಯು ಉರಿಸಿ ಅತ್ಯುಚ್ಚ ಒತ್ತಡದ ತಾಪಮಯ ನಿಷ್ಕಾಸಾನಿಲಗಳನ್ನು (ಎಕ್ಸಾಸ್ಟ್‌ಗ್ಯಾಸಸ್) ಉತ್ಪಾದಿಸುವುದು. ಈ ನಿಷ್ಕಾಸಾನಿಲಗಳು ಅವುಗಳ ಒತ್ತಡದ ಪ್ರಭಾವದಿಂದ ಯಂತ್ರಕ್ಕೆ ನೂಕುಬಲವನ್ನು ಒದಗಿಸಿ ಅವಳಿಬಲದ ಹಿಮ್ಮುಖ ವೇಗೋತ್ಕರ್ಷಕ್ಕೆ ಈಡಾಗುತ್ತವೆ. ಹೀಗೆ ಅವು ನಿಷ್ಕಾಸಿಸುವಾಗ ಮಾರ್ಗಮಧ್ಯೆ ಒಂದು ತಿರುಬಾನಿಯನ್ನು (ಟರ್ಬೈನ್) ಸಹ ತಿರುಗಿಸಿಕೊಡುತ್ತವೆ. ಮುಂಚೆ ಹೇಳಿದ ಒತ್ತಣಿಗೆಯನ್ನು ಚೇತನಗೊಳಿಸುವ ಸಾಧನ ಈ ತಿರುಬಾನಿಯೇ. [ಟರ್ಬೋಫ್ಯಾನ್ ಎಂಬ ಹೆಸರಿನ ಇನ್ನೊಂದು ಬಗೆಯ ಜೆಟ್ ಯಂತ್ರದಲ್ಲಿ ವಾತಾವರಣದಿಂದ ಪ್ರವೇಶಿಸುವ ವಾಯುವಿನ ಒಂದಷ್ಟು ಭಾಗವನ್ನು ಮಾತ್ರ ದಹನಕೋಷ್ಠಕ್ಕೂ ಉಳಿದ ಭಾಗವನ್ನು ಪ್ರತ್ಯೇಕಹಾದಿಯ ಮುಖಾಂತರ ನೇರವಾಗಿ ನಿಷ್ಕಾಸನಳಿಕೆಗೂ ಕೊಂಡೊಯ್ಯುವ ಏರ್ಪಾಡಿರುತ್ತದೆ]. ಇನ್ನು ತಿರುಬಾನಿಯಿಂದಾಚೆ ಇರುವ ಉತ್ತರದಹಕದೊಳಗೆ (ಆಫ್ಟರ್ ಬರ್ನರ್) ನಿಷ್ಕಾಸಾನಿಲಗಳ ಜೊತೆ ಮತ್ತೆ ತುಸು ಇಂಧನವನ್ನು ಸಿಂಪಡಿಸಿ ಉರಿಸುವುದರಿಂದ (ಇದಕ್ಕೆ ಅವಶ್ಯವಿರುವಷ್ಟು ಆಕ್ಸಿಜನ್ ಆ ನಿಷ್ಕಾಸಾನಿಲಗಳಲ್ಲಿ ಉಳಿದುಕೊಂಡಿರಬೇಕು)




ಚಿತ್ರ 2 ರ್‍ಯಾಮ್‌ಜೆಟ್ ಯಂತ್ರದ ನಕ್ಷೆ

ಯಂತ್ರದ ನೂಕುಬಲವನ್ನು ಮತ್ತಷ್ಟು ವರ್ಧಿಸಲು ಸಾಧ್ಯವಾಗುವುದು. ಕೊನೆಯಲ್ಲಿ ನಿಷ್ಕಾಸಾನಿಲಗಳು ಮೊದಲು ಇಕ್ಕಟ್ಟಾಗುತ್ತ ಹೋಗಿ ಅನಂತರ ವಿಶಾಲವಾಗುವ ನಳಿಕೆಯೊಂದರ ಮುಖಾಂತರ ಹೊರಕ್ಕೆ ಧಾವಿಸುತ್ತವೆ. ಇಂಥ ನಳಿಕೆಗೆ ದಲಾವಲ್ ನಿಷ್ಕಾಸನಳಿಕೆ ಎಂದು ಹೆಸರು. ಇದರ ರಚನಾವಿನ್ಯಾಸ ಯಂತ್ರಕ್ಕೆ ಗರಿಷ್ಠ ನೂಕುಬಲವನ್ನು ನೀಡಲು ಸಹಕಾರಿಯಾಗುವುದು. ಯಂತ್ರ ಸಮರ್ಪಕವಾಗಿ ಕೆಲಸಮಾಡುವಾಗ ಯಂತ್ರಕ್ಕೆ ಸಾಪೇಕ್ಷವಾಗಿ ನಿಷ್ಕಾಸಾನಿಲಗಳು ದಲಾವಲ್ ನಳಿಕೆಯ ಕಂಠದವರೆಗೆ ಸ್ಥಳೀಯ ಶಬ್ದವೇಗಕ್ಕಿಂತ ಕಡಿಮೆ ವೇಗದಿಂದಲೂ ಕಂಠದಾಚೆ ಸ್ಥಳೀಯ ಶಬ್ದವೇಗಕ್ಕಿಂತ ಹೆಚ್ಚು ವೇಗದಿಂದಲೂ ಚಲಿಸುತ್ತವೆ. ಜೆಟ್‌ಯಂತ್ರಗಳ ಇನ್ನೊಂದು ಮಾದರಿ ರ್‍ಯಾಮ್ ಜೆಟ್ (ಚಿತ್ರ 2). ಇದರ ಯಂತ್ರದ ಕಾರ್ಯವಿಧಾನವೂ ಟರ್ಬೋಜೆಟ್ಟಿನದರಂತೆಯೇ ಇರುವುದು. ಆದರೆ ರ್‍ಯಾಮ್‌ಜೆಟ್ಟಿನ ಹಾರಾಟವೇಗ ಟರ್ಬೋಜೆಟ್‌ನದಕ್ಕಿಂತ ಬಲು ಅಧಿಕವಾದ ಕಾರಣ ವಾತಾವರಣದಿಂದ ಪ್ರವೇಶಿಸುವ ವಾಯುವನ್ನು ಅವಶ್ಯ ಪ್ರಮಾಣದಲ್ಲಿ ಸಂಮರ್ದಿಸಲು ರ್‍ಯಾಮ್ ಜೆಟ್ ಯಂತ್ರದಲ್ಲಿ ಬರಿಯ ಹರವಣಿಗೆಯೊಂದೇ (ಇನ್ಲೆಟ್ ಡಿಫ್ಯೂಸರ್) ಸಾಕಾಗುವುದು. ತತ್ಫಲವಾಗಿ ಪ್ರತ್ಯೇಕ ಒತ್ತಣಿಗೆ, ತಿರುಬಾನಿ, ಉತ್ತರ ದಹಕಗಳಿಲ್ಲದ ರ್‍ಯಾಮ್ ಜೆಟ್ಟಿನ ಆಂತರಿಕ ರಚನೆ ಬಲು ಸರಳ. ಆದರೆ ನಿಶ್ಚಲಸ್ಥಿತಿಯಲ್ಲಿರುವ ಈ ಯಂತ್ರ ನೂಕುಬಲವನ್ನು ಉತ್ಪಾದಿಸುವುದಕ್ಕೆ ಅಸಮರ್ಥವಾಗುತ್ತದೆ. ಆದ್ದರಿಂದ ಆದಿಯಲ್ಲಿ ರಾಕೆಟ್ ಅಥವಾ




ಚಿತ್ರ 3 ಘನ ದ್ರವ್ಯಚಾಲಿತ ರಾಕೆಟ್‌ಯಂತ್ರದ ನಕ್ಷೆ : (a) ಯಂತ್ರದ ರಚನೆಯ ಅಡ್ಡನೋಟ, (b) ದಹನ ಕೋಷ್ಠದೊಳಗೆ ಚಾಲಕದ್ರವ್ಯವನ್ನು ಎರಕಹೊಯ್ದಿರುವ ನಮೂನೆ

ಟರ್ಬೋಜೆಟ್‌ನಂಥ ಇತರ ಯಂತ್ರಗಳ ನೆರವಿನಿಂದ ಕ್ಷಿಪಣಿಯನ್ನು ಸೆಕೆಂಡಿಗೆ ಸುಮಾರು ಮುಕ್ಕಾಲು ಕಿಮೀ. ವೇಗಕ್ಕೆ ಕೊಂಡೊಯ್ದು ಬಳಿಕ ಮಾತ್ರ ಅದರ ಚಲನೆಯ ಜವಾಬ್ದಾರಿಯನ್ನು ರ್‍ಯಾಮ್‌ಜೆಟ್ ಯಂತ್ರಕ್ಕೆ ವರ್ಗಾಯಿಸಲು ಸಾಧ್ಯವಾಗುವುದು.




ಚಿತ್ರ 4 ದ್ರವದ್ರವ್ಯಚಾಲಿತ ರಕೆಟ್ ಯಂತ್ರದ ನಕ್ಷೆ

ಘನದ್ರವ್ಯಚಾಲಿತ ರಾಸಾಯನಿಕ ರಾಕೆಟ್‌ಯಂತ್ರದಲ್ಲಿ (ಚಿತ್ರ 3) ನೈಟ್ರೊಸೆಲ್ಯುಲೋಸ್–ನೈಟ್ರೊಗ್ಲಿಸರೀನ್ ಸಮ್ಮಿಶ್ರಣ, ಅಮೋನಿಯಂ ಪರ್‌ಕ್ಲೋರೇಟ್–ರಬ್ಬರ್ ಮಿಶ್ರಣ ಮುಂತಾದ ಘನರೂಪದ ಚಾಲಕದ್ರವ್ಯಗಳನ್ನು ದಹನಕೋಷ್ಠದೊಳಗೇ

(ಸಾಮಾನ್ಯವಾಗಿ ಎರಕಹೊಯ್ದು) ಶೇಖರಿಸಿಟ್ಟಿರುತ್ತಾರೆ. ಉರಿಯಲು ಅವಶ್ಯವಾದ ಆಕ್ಸಿಜನ್ನನ್ನೂ ಈ ದ್ರವ್ಯಗಳು ಒಳಗೊಂಡಿರುವುದರಿಂದ ಇವುಗಳ ದಹನಕ್ಕೆ ವಾಯುಮಂಡಲದ ಪರಿಸರ ಬೇಕಿಲ್ಲ. ವಿದ್ಯುತ್‌ಪ್ರಚೋದಿತ ಜ್ವಾಲಕದಿಂದ (ಇಗ್ನೈಟರ್–ತೀವ್ರ ದಹನಶೀಲ ರಾಸಾಯನಿಕ ದ್ರವ್ಯದಲ್ಲಿ ಹುದುಗಿರುವ ವಿದ್ಯುತ್ ಫ್ಯೂಸ್) ಇವಕ್ಕೆ ಬೆಂಕಿ ಹೊತ್ತಿಸಿದಾಗ ಅತ್ಯುಚ್ಚ ಒತ್ತಡದಲ್ಲಿ ಉತ್ಪನ್ನವಾಗುವ ನಿಷ್ಕಾಸಾನಿಲಗಳು ವ್ಯವಸ್ಥೆಗೆ ನೂಕುಬಲವನ್ನು ನೀಡಿ ದಲಾವಲ್ ನಳಿಕೆಯ ಮೂಲಕ ಹೊರಬರುತ್ತದೆ. ದ್ರವದ್ರವ್ಯಚಾಲಿತ ರಾಸಾಯನಿಕ ರಾಕೆಟ್‌ಯಂತ್ರದ ರಚನೆ (ಚಿತ್ರ 4) ಘನದ್ರವ್ಯದ್ದಕ್ಕಿಂತ ತುಸು ಹೆಚ್ಚು ಸಂಕೀರ್ಣ. ಇದರಲ್ಲಿ ಇಂಧನತೊಟ್ಟಿಯೊಳಗೆ ಶೇಖರವಾಗಿರುವ ಸೀಮೆ ಎಣ್ಣೆ ಅಥವಾ ದ್ರವ ಹೈಡ್ರೊಜನ್ನಿನಂಥ ದಹ್ಯ ಸಾಮಗ್ರಿ ಮತ್ತು ಆಕ್ಸಿಜನ್ ತೊಟ್ಟಿಯೊಳಗೆ ಶೇಖರ ವಾಗಿರುವ ದ್ರವ ಆಕ್ಸಿಜನ್ ಎರಡೂ ಪ್ರತ್ಯೇಕ ಕೊಳವೆಗಳ ಮೂಲಕ ದಹನಕೋಷ್ಠಕ್ಕೆ ಪ್ರವಹಿಸಿ ಬಂದು ಅಲ್ಲಿ ಬೆಂಕಿ ಹೊತ್ತಿಕೊಂಡು ಉರಿಯುತ್ತವೆ. ಎಂದಿನಂತೆ ನೂಕುಬಲ ಒದಗಿಬರುವುದು ಉತ್ಪನ್ನ ಅನಿಲಗಳ ಒತ್ತಡದ ಪ್ರಭಾವದಿಂದ. ಆ ಅನಿಲಗಳು ದಲಾವಲ್ ನಳಿಕೆಯ ಮಾರ್ಗವಾಗಿ ನಿಷ್ಕಾಸಿಸುತ್ತವೆ. ಇವೆರಡು ವರ್ಗದ ರಾಕೆಟ್ಟುಗಳಲ್ಲದೆ ಮಿಶ್ರವರ್ಗದ (ಹೈಬ್ರಿಡ್) ರಾಸಾಯನಿಕ ರಾಕೆಟ್ಟುಗಳೂ ನ್ಯೂಕ್ಲಿಯರ್ ರಾಕೆಟ್ಟುಗಳೂ ಈ ಸಂದರ್ಭದಲ್ಲಿ ಉಲ್ಲೇಖಾರ್ಹ. ಮಿಶ್ರವರ್ಗದ ರಾಕೆಟ್ಟು ಒಂದು ಚಾಲಕದ್ರವ್ಯವನ್ನು (ಉದಾಹರಣೆಗೆ ಆಕ್ಸಿಜನ್ ಸರಬರಾಜು ಮಾಡುವ ಹೈಡ್ರೊಜನ್ ಪರಾಕ್ಸೈಡ್) ದ್ರವಸ್ಥಿತಿಯಲ್ಲೂ ಇನ್ನೊಂದು ಚಾಲಕದ್ರವ್ಯವನ್ನು (ಉದಾಹರಣೆಗೆ ಪಾಲಿ ಎಥಿಲೀನಿನಂಥ ಪ್ಲ್ಯಾಸ್ಟಿಕ್ ಇಂಧನ) ಘನಸ್ಥಿತಿಯಲ್ಲೂ ಒಳಗೊಳ್ಳುವಂತೆ ರಚಿತವಾದ ಯಂತ್ರ. ಇವೆರಡು ದ್ರವ್ಯಗಳು ಎಂದಿನಂತೆ ಉರಿದು ನೂಕುಬಲ ವನ್ನು ಸೃಷ್ಟಿಸುವ ನಿಷ್ಕಾಸಾನಿಲ ರಾಶಿಯನ್ನು ಉತ್ಪತ್ತಿಮಾಡುತ್ತವೆ. ನ್ಯೂಕ್ಲಿಯರ್ ರಾಕೆಟ್ಟಿನಲ್ಲಿ ಯಂತ್ರದ ಅಂಗವಾಗಿ ಸಜ್ಜುಗೊಳಿಸಿರುವ ಅತ್ಯುಚ್ಚ ಉಷ್ಣತೆಯ ನ್ಯೂಕ್ಲಿಯರ್ ರಿಯಾಕ್ಟರಿನ ಮುಖಾಂತರ ಇರುವ ಒಂದೇ ಚಾಲಕದ್ರವ್ಯವನ್ನು (ಉದಾಹರಣೆಗೆ ದ್ರವ ಅಮೋನಿಯ) ಹಾಯಿಸಿದಾಗ ದಹನವಿಲ್ಲದೆಯೇ ಅದು ಬಲವಾಗಿ ಕಾದು ಅಧಿಕ ಒತ್ತಡದ ನಿಷ್ಕಾಸಾನಿಲರಾಶಿಯಾಗಿ ಪರಿವರ್ತಿತವಾಗುವುದು.

ಇದೇ ತತ್ತ್ವವನ್ನು ಅನುಸರಿಸಿ ನ್ಯೂಕ್ಲಿಯರ್ ರ‍್ಯಾಮ್ ಜೆಟ್‌ಗಳಲ್ಲಿ ವಾತಾವರಣದಿಂದ ಪ್ರವೇಶಿಸುವ ವಾಯುವನ್ನು ಸಹದಹನವಿಲ್ಲದೆ ನ್ಯೂಕ್ಲಿಯರ್ ರಿಯಾಕ್ಟರುಗಳಿಂದ ನೇರವಾಗಿ ಕಾಯಿಸಿ ನಿಷ್ಕಾಸಿಸುವ ಸಾಧ್ಯತೆ ಇದೆ. ಗುರುತ್ವಾನುಚರ ಖಂಡಾಂತರ ಕ್ಷಿಪಣಿಗಳ ಚಾಲನೆಗೆ ಕೇವಲ ಒಂದೇ ರಾಕೆಟ್ ಯಂತ್ರವನ್ನು ಬಳಸುವ ಬದಲು ಎರಡು ಅಥವಾ ಮೂರು ರಾಕೆಟ್ಟುಗಳನ್ನು ಹಂತಹಂತವಾಗಿ ಪ್ರಯೋಗಿಸಿ ಚಾಲಕ ದ್ರವ್ಯಗಳು ತೀರಿ ನಿಷ್ಕ್ರಿಯವಾದ ಹಂತಗಳನ್ನು ಚಾಲಕ ವ್ಯವಸ್ಥೆಯಿಂದ ಕಳಚಿ ವಿಸರ್ಜಿಸಬೇಕಾಗುವುದು. ಹೀಗೆ ಮಾಡಿದಾಗ ಇಂಥ ಕ್ಷಿಪಣಿಗಳಿಗೆ ಅಗತ್ಯವಾದ ಸೆಕೆಂಡಿಗೆ ಏಳೆಂಟು ಕಿಮೀ. ವೇಗ ಪ್ರಾಪ್ತವಾಗಲು ಸಾಧ್ಯವಾಗುತ್ತದೆ.

ನಾವು ಪರಿಶೀಲಿಸಿರುವಂಥ ಕೆಲವು ಕ್ಷಿಪಣಿಯಂತ್ರಗಳ ಕಾರ್ಯಶೀಲತೆಯನ್ನು ಪ್ರತಿನಿಧಿಸುವ ಸರಿಸುಮಾರು ಅಂಕಿಅಂಶಗಳನ್ನು ಮುಂದಿನ ಯಾದಿಯಲ್ಲಿ ಬರೆದಿದೆ.

ಕ್ಷಿಪಣಿ ಚಾಲಕಯಂತ್ರಗಳು ಮೇಲೆ ಸೂಚಿಸಿರುವಂಥ ಪ್ರಧಾನ ನೂಕುಬಲದ ಜನಕವ್ಯವಸ್ಥೆಗಳಷ್ಟನ್ನೇ ಅಲ್ಲದೆ ಚಾಲಕದ್ರವ್ಯಗಳು ಹರಿಯುವ ದರ ಮುಂತಾದ ಆಂತರಿಕ ವಿದ್ಯಮಾನಗಳನ್ನು ಹಾರಾಟದ ಪರಿಸ್ಥಿತಿಗಳಿಗೆ ಅನುಗುಣವಾಗಿ ನಿಯಂತ್ರಿಸುವ ಸ್ವಯಂಕ್ರಿಯಾ ವ್ಯವಸ್ಥೆಗಳನ್ನೂ ಹಾರಾಟದ ಭದ್ರತೆಯನ್ನು ಕಾಪಾಡುವ ವಿಶೇಷ ಸಾಧನಗಳನ್ನೂ ಒಳಗೊಂಡಿರಬೇಕು. ಕ್ಷಿತಿಜೀಯ (ಹಾರಿಸಾಂಟಲ್) ದಿಸೆಯಲ್ಲಿ ಮಾತ್ರವೇ ನೂಕುಬಲ ಏರ್ಪಟ್ಟಿರುವ ಸಂದರ್ಭಗಳಲ್ಲಿ ಹಾರಾಟದ ಎತ್ತರ ಕುಸಿದುಹೋಗದಂತೆ ತಡೆಯಲು ಕ್ಷಿಪಣಿಗೆ ರೆಕ್ಕೆಯಾಕಾರದ ಯುಕ್ತ ವಿನ್ಯಾಸ ಅವಶ್ಯವಾಗುತ್ತದೆ. ಈ ಬಗೆಯ ಆಕಾರಗಳ ಉಪಯೋಗ ವಾಯುಮಂಡಲದ ವ್ಯಾಪ್ತಿಯೊಳಗೆ ಮಾತ್ರ. ಕ್ಷಿಪಣಿಯ ಶರೀರಕ್ಕೆ ಸಾಪೇಕ್ಷವಾಗಿ ನಿರ್ಧರಿತವಾದ ರೋಲ್, ಪಿಚ್ ಮತ್ತು ಯಾ ಎಂಬ ಹೆಸರುಗಳ ಅನ್ಯೋನ್ಯ ಲಂಬಾಕ್ಷಗಳು(ಚಿತ್ರ 5) ಭೂಮಿಗೆ ಇಲ್ಲವೆ ನಕ್ಷತ್ರಗಳಿಗೆ ಸಾಪೇಕ್ಷವಾಗಿ ಯಾವ ಯಾವ ದಿಕ್ಕುಗಳಲ್ಲಿ ನಿಂತಿವೆ ಎಂಬ ಮಾಹಿತಿಯಿಂದ ನಿರ್ದೇಶವಾಗುವ ಪರಿಸ್ಥಿತಿಗೆ ಚರಕ್ಷಿಪಣಿಯ ನಿಲವು (ಆ್ಯಟಿಟ್ಯೂಡ್ ಓರಿಯೆಂಟೇಷನ್) ಎಂದು ಹೆಸರು.

| ಯಂತ್ರ | ಅನುಕೂಲತಮ (ಆಪ್ಟಿಮಲ್) ಕ್ಷಿಪಣ ಚಾಲಕವೇಗ (ಸೆಕೆಂಡಿಗೆ ಕಿಮೀ.) | ಹಾರಾಟದ ಅನುಕೂಲತಮ ಎತ್ತರ (ಕಿಮೀ.) | ನೂಕುಬಲ (ಪ್ರಾತಿನಿಧ್ಯಾತ್ಮಕ ಸಂಖ್ಯೆ) (ಕಿಲೋ ನ್ಯೂಟನ್ನುಗಳು) | ವಾಯುಮಂಡಲದಲ್ಲಿ 1 ಕಿಲೋ ನ್ಯೂಟನ್ ನೂಕುಬಲವನ್ನು 1 ಸೆಕೆಂಡ್ ಕಾಲ ಉತ್ಪಾದಿಸಲು ವೆಚ್ಚವಾಗುವ ಚಾಲಕ ದ್ರವ್ಯದ ತೂಕ (ಗ್ರಾಮುಗಳು) |
|---|---|---|---|---|
| ಶಬ್ದಾತೀತ ಟರ್ಬೋಜೆಟ್ | 0.7 | 17 | 30 | 65 (ಸೀಮೆ ಎಣ್ಣೆ ಪೆಟ್ರೋಲ್ ಮಿಶ್ರಣ) |
| ರ‍್ಯಾಮ್ ಜೆಟ್ | 1.0–2.0 | 23 | 10 | 60 ( „ ) |
| ರಾಸಾಯನಿಕ ರಾಕೆಟ್ | ನಿಯತವೇಗದ ಚಾಲನಕ್ಕಿಂತ ಅವಿಚ್ಛಿನ್ನ ವೇಗವರ್ಧನೆಗಾಗಿ ಬಳಕೆ ಹೆಚ್ಚು. ಒಂದು ಹಂತದ ಯಂತ್ರ ಉತ್ಪಾದಿಸಬಲ್ಲ ಗರಿಷ್ಠ ಅಂತಿಮ ವೇಗ ಸುಮಾರು 2.5; ಎರಡು ಹಂತದ್ದರ ಉತ್ಪಾದನೆ ಸುಮಾರು 8. | ಎತ್ತರಕ್ಕೆ ಮಿತಿ ಇಲ್ಲ | 1 ರಿಂದ ಕೆಲವು ದಶ ಸಹಸ್ರಗಳ ವರೆಗೆ | {100 (ಪ್ಲಾಸ್ಟಿಕ್ ಇಂಧನ)<br>400 (ಅಮೋನಿಯಂ ಪರ್‌ಕ್ಲೋರೇಟ್)<br><br>{140 (ಈಥೈಲ್ ಆಲ್ಕೊಹಾಲ್)<br>240 (ಆಕ್ಸಿಜನ್)<br>45 (ನೀರು) (ಈ ಸಂಯೋಜನೆ ಜರ್ಮನ್ V–2 ಕ್ಷಿಪಣಿಯಲ್ಲಿ ಬಳಕೆಯಾಗಿತ್ತು.<br><br>{120 (ಸೀಮೆ ಎಣ್ಣೆ)<br>270 (ಆಕ್ಸಿಜನ್) (ಚಾಂದ್ರಯಾನದ ಸ್ಯಾಟರ್ನ್ ರಾಕೆಟ್ಟಿನ ಪ್ರಥಮ ಹಂತದಲ್ಲಿ ಬಳಕೆ)<br><br>{45 (ಹೈಡ್ರೊಜನ್)<br>235 (ಆಕ್ಸಿಜನ್) (ಸ್ಯಾಟರ್ನ್ ರಾಕೆಟ್ಟಿನ ಇತರ ಹಂತಗಳಲ್ಲಿ ಬಳಕೆ) |

(ಸೂಚನೆ: x ಕಿಲೋನ್ಯೂಟನ್ ನೂಕುಬಲದಿಂದ ಚಾಲಿತವಾಗುವ y ಟನ್ ತೂಕದ ಒಂದು ವಾಹನ z ಕಿಲೋನ್ಯೂಟನ್ನಿನಷ್ಟು ಪ್ರತಿರೋಧಕ್ಕೆ ಈಡಾಗಿದ್ದರೆ ಅದರ ವೇಗ ಒಂದೊಂದು ಸೆಕೆಂಡಿನಲ್ಲೂ (x-z)/y ಮೀಟರುಗಳಷ್ಟು ವರ್ಧಿತವಾಗುತ್ತ ಹೋಗುವುದು. ನಿಯತ ವೇಗದ ಚಾಲನೆಗೆ x=y ಆಗಬೇಕು. ಭೂಮೇಲ್ಮೈಯ ಬಳಿ ಸುಮಾರು 102 ಕೆಜಿ. ತೂಕವನ್ನು ಎತ್ತಿಹಿಡಿಯಲು ಪ್ರಯೋಗಿಸಬೇಕಾಗುವ ಬಲ 1 ಕಿಲೋನ್ಯೂಟನ್ನಿಗೆ ಸಮವಾಗುತ್ತದೆ. ಆದ್ದರಿಂದ ಕ್ಷಿಪಣಿತೂಕದ ಪ್ರತಿ 102 ಕೆಜಿ. ಅಂಶಕ್ಕೂ ಅನುಪಾತೀಯವಾಗಿ 1 ಕಿಲೋನ್ಯೂಟನ್ನಿಗಿಂತ ಅಧಿಕವಾದ ಊರ್ಧ್ವಾಭಿಮುಖ ನೂಕುಬಲ ಉತ್ಪನ್ನವಾಗದಿದ್ದಲ್ಲಿ ಭೂಮೇಲ್ಮೈಯಿಂದ ಕ್ಷಪಣಿ ಮೇಲಕ್ಕೇರುವುದೇ ಇಲ್ಲ).

ವಾಯುಮಂಡಲದೊಳಗಿನ ಹಾರಾಟದಲ್ಲಿ ಕ್ಷಿಪಣಿಯ ನಿಲವನ್ನು ನಿಯಂತ್ರಿಸುವ/ಭದ್ರಪಡಿಸುವ (ಕಂಟ್ರೋಲ್/ಸ್ಟೆಬಿಲೈಸೇಷನ್) ಸಲುವಾಗಿ ಬಾಗುವ ರೆಕ್ಕೆ, ಚುಕ್ಕಾಣಿಗಳಂಥ (ಫ್ಲ್ಯಾಪ್ಸ್, ರಡರ್ಸ್) ವಾಯುಚಲನಾವಲಂಬೀ (ಏರೋಡೈನಮಿಕ್) ಸಾಧನಗಳನ್ನೇ ಬಳಸಬಹುದು. ಆದರೆ ಅಂತರಿಕ್ಷದಲ್ಲಿ ಈ ಕೆಲಸದ ನಿರ್ವಹಣೆಯನ್ನು ಪ್ರಧಾನ ನೂಕುಬಲಜನಕ ನಿಷ್ಕಾಸಾನಿಲಗಳ ನಿರ್ಗಮ ಮಾರ್ಗವನ್ನು ಅತ್ತಿತ್ತ ಬಾಗಿಸುವ ಕೀಲಕ(ವೇನ್)




ಚಿತ್ರ 5 ಕ್ಷಿಪಣಿಯ ಪ್ರಧಾನ ಅಕ್ಷಗಳು

ಇಲ್ಲವೆ ಉಂಗುರಗಳಿಗಾಗಲಿ (ರಿಂಗ್ ಜೆಟೀವೇಟರ್), ಯುಕ್ತ ಯೋಜನೆಯ ಮೇರೆಗೆ ಅಳವಡಿಸಿರುವ ಪ್ರತ್ಯೇಕ ಕಿರು ರಾಕೆಟ್ಟುಗಳಿಗಾಗಲಿ, ಅಗತ್ಯ ಅಕ್ಷಗಳ ಮೇಲೆ ತಿರುಗಿಸಬಹುದಾದ ಆಂತರಿಕ ರೋಟರುಗಳಿಗಾಗಲಿ ಒಪ್ಪಿಸಬೇಕಾಗುವುದು. ಕೆಲವು ವೇಳೆ ಅಂತರಿಕ್ಷದಲ್ಲಿ ಸಂಚರಿಸುವ ಕ್ಷಿಪಣಿಗೆ ಸರಿಯಾದ ದಿಸೆಯಲ್ಲಿ ಭ್ರಮಣೆಯನ್ನು (ಸ್ಪಿನ್) ಆರೋಪಿಸಿ ಆ ಒಂದು ದಿಸೆಯಲ್ಲಿ ಅದರ ನಿಲವನ್ನು ಭದ್ರಗೊಳಿಸಬಹುದು. ಚಾಲಕದ್ರವ್ಯಗಳ ಸರಬರಾಜು ದರ, ನೂಕುಬಲದ ದಿಕ್ಕು ಹಾರಾಟದ ಎತ್ತರ, ವಾಹನದ ನಿಲವು ಮುಂತಾದ ಪರಿಸ್ಥಿತಿಗಳನ್ನು ವ್ಯವಸ್ಥೆಗೊಳಿಸುವ (ಇಲ್ಲವೆ ಬದಲಿಸುವ) ಸಾಧನಗಳಿಗೆ ನಿಯಂತ್ರಕಗಳು (ಕಂಟ್ರೋಲ್ಸ್) ಎಂದು ಇನ್ನು ಮುಂದೆ ಕರೆಯುತ್ತೇವೆ. ಕಾರಿನ ಚುಕ್ಕಾಣಿಚಕ್ರ (ಸ್ಟಿಯರಿಂಗ್ ವೀಲ್), ವೇಗವರ್ಧಕ (ಆಕ್ಸಲರೇಟರ್) ಮುಂತಾದವಕ್ಕೆ ಸದೃಶವಾದ ಯಾಂತ್ರಿಕಸಾಧನ ಎಂಬ ಸಂಕುಚಿತ ಅರ್ಥದಲ್ಲಿ ಮಾತ್ರ ನಿಯಂತ್ರಕ ಎನ್ನುವ ಪದ ಪ್ರಯೋಗವನ್ನು ಮಾಡಲು ಈ ಲೇಖನದಲ್ಲಿ ಉದ್ದೇಶಿಸಲಾಗಿದೆ. ಕಾರು ನಡೆಸುವವರು ಅಂಥ ಸಾಧನಗಳನ್ನು ಕ್ರಿಯೋನ್ಮುಖಗೊಳಿಸಲು ಅವರ ಕೈಕಾಲುಗಳನ್ನು ಬಳಸಿಕೊಳ್ಳುತ್ತಾರಷ್ಟೆ. ನಿಯಂತ್ರಕಗಳನ್ನು ಚೇತನಗೊಳಿಸಲು ಕ್ಷಿಪಣಿಗಳಲ್ಲಿ ಸಹ ಕೈಕಾಲುಗಳಿಗೆ ಸದೃಶವಾದ (ಆದರೆ ನಿರ್ಜೀವ) ಅಂಗಗಳಿರುತ್ತವೆ. ಈ ಚೇತನಕಾರಿ ಅಂಗಗಳಿಗೆ ಸರ್ವೋಪ್ರವರ್ತಕಗಳು (ಸರ್ವೋ ಆಕ್ಚ್ಯುಯೇಟರ್ಸ್) ಎಂದು ಹೆಸರು. ನಿಯಂತ್ರಕಗಳು ಮತ್ತು ಅವುಗಳ ಸರ್ವೋಪ್ರವರ್ತಕಗಳಷ್ಟೇ ಅಲ್ಲದೆ ಹಾರಾಟದ ಅವಧಿಯಲ್ಲಿ ವಾಸ್ತವವಾಗಿ ಲಭ್ಯವಾಗುವ ವೇಗ, ಎತ್ತರ, ವೇಗೋತ್ಕರ್ಷ, ನಿಲುವು ಬದಲಾವಣೆ, ಗುರಿಸಾಮೀಪ್ಯ, ಬಾಹ್ಯ ರೇಡಿಯೋ ಮಾರ್ಗದರ್ಶನ ಮುಂತಾದ ಮಾಹಿತಿಗಳನ್ನು ಗ್ರಹಿಸಬಲ್ಲ ಸಂವೇದಕಗಳೂ (ಸೆನ್ಸರ್ಸ್) ಅನೇಕ ಆಧುನಿಕ ಕ್ಷಿಪಣಿಗಳಲ್ಲಿ ಅಡಕವಾಗಿರುತ್ತವೆ.

ಕ್ಷಿಪಣಿಗಳ ಮಾರ್ಗದರ್ಶನ (ಗೈಡನ್ಸ್) ರೇಡಿಯೋ ವಿಧಾನ : ಕ್ಷಿಪಣಿಗಳಲ್ಲಿ ಮಾರ್ಗದರ್ಶನರಹಿತ ಅನ್‌ಗೈಡೆಡ್ ಕ್ಷಿಪಣಿಗಳು ಮತ್ತು ಮಾರ್ಗದರ್ಶಿತ ಗೈಡೆಡ್ ಕ್ಷಿಪಣಿಗಳು ಎಂದು ಎರಡು ಬಗೆ. ಮಾರ್ಗದರ್ಶನರಹಿತ ಕ್ಷಿಪಣಿಗಳು ಹಾರಿಬಿಟ್ಟ ಬಳಿಕ ಪರಿಸರದ ಪರಿಸ್ಥಿತಿಗಳ ಹಿಡಿತಕ್ಕೆ ಪೂರ್ಣವಾಗಿ ಸಿಲುಕಿ ಆ ಪರಿಸ್ಥಿತಿಗಳಿಗೆ ಅನುಗುಣವಾಗಿ ಚಲಿಸುತ್ತವೆ. ಗುರಿಯನ್ನು ಮುಟ್ಟುವ ಮಾರ್ಗದಿಂದ ಅವು ಪಲ್ಲಟಗೊಂಡಲ್ಲಿ ಯಾರೇನೂ ಮಾಡುವಂತಿರುವುದಿಲ್ಲ. ಆದರೆ ಮಾರ್ಗದರ್ಶಿತ ಕ್ಷಿಪಣಿಗಳು ಪರಿಸರ, ಯಾದೃಚ್ಛಿಕ ಕಾರಣಗಳು ಹಾಗೂ ಚರಗುರಿಗಳ ಮಾರ್ಗ ಬದಲಾವಣೆಗಳ ಎದುರು ಇಷ್ಟೊಂದು ನಿಸ್ಸಹಾಯಕವಲ್ಲ. ಹಾರಿಸಿದ ತರುವಾಯ ಕೂಡ ಅವು ಸ್ವಲ್ಪಮಟ್ಟಿಗಾದರೂ ಮಾನವಬುದ್ಧಿಶಕ್ತಿಯ ಪ್ರತ್ಯಕ್ಷ ಅಥವಾ ಪರೋಕ್ಷ ನಿರ್ದೇಶನಕ್ಕೆ ಒಳಪಟ್ಟಿರುತ್ತವೆ. ಆದ್ದರಿಂದ ಅವು ಗುರಿಮುಟ್ಟುವ ಸಂಭಾವ್ಯತೆ ಬಲು ಅಧಿಕ. ಮಾರ್ಗದರ್ಶನ ವ್ಯವಸ್ಥೆಗಳು ನಾಲ್ಕು ಮುಖ್ಯ ಅಂಗಗಳನ್ನು ಒಳಗೊಳ್ಳುತ್ತವೆ: ಗಣಕಯಂತ್ರ, (ಕಂಪ್ಯೂಟರ್) ಹಾಗೂ ಹಿಂದಿನ ವಿಭಾಗದ ಅಂತ್ಯದಲ್ಲಿ ಉಲ್ಲೇಖಿಸಿರುವ ನಿಯಂತ್ರಕಗಳು. ಸರ್ವೋಪ್ರವರ್ತಕಗಳು ಮತ್ತು ಸಂವೇದಕಗಳು. ಇವುಗಳ ಪೈಕಿ ನಿಯಂತ್ರಕಗಳೂ ಸರ್ವೋಪ್ರವರ್ತಕಗಳೂ ಅವಶ್ಯವಾಗಿ ಕ್ಷಿಪಣಿಯಲ್ಲೇ ಸರ್ವತ್ರ ಅಳವಡಿಸಿರಬೇಕಾದ ಸಾಧನಗಳು. ಎಲ್ಲ ಸಂವೇದಕಗಳು ಮತ್ತು ಗಣಕಯಂತ್ರವನ್ನು ಕೂಡ ಕ್ಷಿಪಣಿಯಲ್ಲೇ ಒಳಗೊಳ್ಳುವ ವ್ಯವಸ್ಥೆಗಳನ್ನು ಸ್ವಯಂಪೂರ್ಣ(ಸೆಲ್ಫ್–ಕಂಟೇನ್ಡ್) ಮಾರ್ಗದರ್ಶನ ವ್ಯವಸ್ಥೆಗಳು ಎಂದು ಕರೆಯಬಹುದು. ಇವುಗಳಿಂದ ಭಿನ್ನವಾದ ರೇಡಿಯೋ ಆದೇಶಕ ಮಾರ್ಗದರ್ಶನ ವ್ಯವಸ್ಥೆಯಲ್ಲಿ (ರೇಡಿಯೋ ಕಮಾಂಡ್ ಗೈಡೆನ್ಸ್ ಸಿಸ್ಟಮ್ಸ್) ಕೆಲವಷ್ಟು ಸಂವೇದಕಗಳೂ ಗಣಕಯಂತ್ರವೂ ಕ್ಷಿಪಣಿಗೆ ದೂರವಿರುವ ಬೇರೆ ಒಂದು ವಾಹನದಲ್ಲಾಗಲಿ ಭೂ ಮೇಲ್ಮೈಯಲ್ಲಾಗಲಿ ಸ್ಥಾಪಿತವಾಗಿರುತ್ತವೆ. ಕ್ಷಿಪಣಿಯ (ಹಾಗೂ ಗುರಿ ಚರವಿರುವುದಿದ್ದರೆ ಅಂಥ ಗುರಿಯ) ಸ್ಥಾನ ವೇಗ ಮತ್ತು ನಿಲವುಗಳನ್ನು ಲೆಕ್ಕಹಾಕಲು ಅವಶ್ಯವಿರುವ ಮಾಹಿತಿಗಳನ್ನು ಗ್ರಹಿಸುವುದೇ ಸಂವೇದಕಗಳ ಕೆಲಸ. ಗಣಕಯಂತ್ರದ ಕೆಲಸಗಳು ಮೂರು : ಸಂವೇದಕಗಳಿಂದ ಒದಗಿಬರುವ ದತ್ತಾಂಶಗಳಿಂದ ಸ್ಥಾನಾದಿಗಳನ್ನು ನಿರ್ಧರಿಸುವುದು ; ಕ್ಷಿಪಣಿ ಅನುಸರಿಸಬೇಕಾದ ಹಾರಾಟಮಾರ್ಗ ಪೂರ್ವ ನಿರ್ಧರಿತವಾಗಿದ್ದಲ್ಲಿ(ಪ್ರೀಸೆಟ್) ಆ ಮಾರ್ಗವನ್ನು ನೆನಪಿಟ್ಟುಕೊಳ್ಳುವುದು, ಹಾಗಿಲ್ಲದಿದ್ದರೆ ವರ್ತಮಾನಪರಿಸ್ಥಿತಿಯಲ್ಲಿ ಕ್ಷಿಪಣಿಗೆ ಗುರಿಮುಟ್ಟಿಸುವ ಅನುಕೂಲತಮ ಮಾರ್ಗವನ್ನು ಲೆಕ್ಕಾಚಾರ ಮಾಡುವುದು ; ಕೊನೆಯದಾಗಿ ಪೂರ್ವನಿರ್ಧರಿತ ಇಲ್ಲವೆ ಲೆಕ್ಕಾಚಾರ ಮಾಡಿದ ಮಾರ್ಗವನ್ನು ಅನುಸರಿಸಲು ಕ್ಷಿಪಣಿಯೊಳಗಿನ ನಿಯಂತ್ರಕಗಳು ಯಾವ ಯಾವ ದಿಸೆಗಳಲ್ಲಿ ಎಷ್ಟೆಷ್ಟು ಮಟ್ಟಿಗೆ ಕ್ರಿಯೋನ್ಮುಖವಾಗಬೇಕೆಂಬ ಆದೇಶಗಳನ್ನು(ಕಮಾಂಡ್ಸ್) ಸೃಷ್ಟಿಸಿಕೊಡುವುದು. ಇನ್ನು ಸರ್ವೋಪ್ರವರ್ತಕಗಳ ಕೆಲಸ ಗಣಕಯಂತ್ರದ ಆದೇಶಗಳಂತೆ ನಿಯಂತ್ರಕಗಳನ್ನು ಚೇತನಗೊಳಿಸುತ್ತ ಹೋಗುವುದು ಮಾತ್ರ. ಮಾರ್ಗದರ್ಶನಾವಧಿ ಪೂರ್ತ ಅವಿಚ್ಛಿನ್ನವಾಗಿ ನಡೆಯುವ ಈ ಕ್ರಿಯೆಗಳ ಪ್ರಗತಿಯನ್ನು ನಾವು ಹೀಗೆ ಚಿತ್ರಿಸಬಹುದು:




ರೇಡಿಯೋ–ರೇಡಾರ್ ಆದೇಶಿತ ಮಾರ್ಗದರ್ಶನ ವಿಧಾನದಲ್ಲಿ ಕ್ಷಿಪಣಿಗೂ ಅದರಿಂದ ದೂರದಲ್ಲಿರುವ ಗಣಕಯಂತ್ರ ಸಂವೇದಕಗಳಿಗೂ ಸಂಪರ್ಕ ಕಲ್ಪಿಸಲು ವಿದ್ಯುತ್ಕಾಂತ (ರೇಡಿಯೋ) ತರಂಗಗಳನ್ನು ಬಳಸುತ್ತಾರೆ. ನಕ್ಷಾಚಿತ್ರಣದಲ್ಲಿ (ಚಿತ್ರ 6) ಉದಾಹರಿಸಿರುವ ಇಂಥ ಒಂದು ವ್ಯವಸ್ಥೆಯಲ್ಲಿ ಕ್ಷಿಪಣಿಯ ಮತ್ತು ಅದರ ಗುರಿಯ ಸ್ಥಾನಗಳನ್ನು ಭೂಮೇಲ್ಮೈಯಲ್ಲಿರುವ ಎರಡು ರೇಡಾರುಗಳು ಗ್ರಹಿಸಿ ಅವಕ್ಕೆ ಲಭ್ಯವಾಗುವ ಮಾಹಿತಿಗಳನ್ನು ಹತ್ತಿರದ ಗಣಕಯಂತ್ರಕ್ಕೆ ಸರಬರಾಜು ಮಾಡುತ್ತವೆ. ಗಣಕಯಂತ್ರ ಸೃಷ್ಟಿಸುವ ಆದೇಶಗಳನ್ನು (ಇವು ಒಂದು ಸಾಂಕೇತಿಕ ಭಾಷೆಯಲ್ಲಿರುತ್ತವೆ) ಕ್ಷಿಪಣಿಯೆಡೆಗೆ ಆದೇಶಕ ರೇಡಿಯೋ ಸಂಪರ್ಕಕಾರಿ(ಕಮಾಂಡ್ ಲಿಂಕ್ ರೇಡಿಯೋ) ರವಾನಿಸುತ್ತದೆ. ಕ್ಷಿಪಣಿಯ ರೇಡಿಯೋಗ್ರಾಹಿ(ರಿಸೀವರ್) ಈ ಆದೇಶಗಳನ್ನು ಸ್ವೀಕರಿಸಿ ವಿಸಂಕೇತಕವೊಂದಕ್ಕೆ (ಡಿಕೋಡರ್) ಸರಬರಾಜು ಮಾಡುವುದು. ಒಂದೊಂದು ಆದೇಶವೂ ಯಾವ ನಿರ್ದಿಷ್ಟ ನಿಯಂತ್ರಕಕ್ಕೆ ಸಂಬಂಧಿಸಿದ್ದೆಂದು ಗುರುತಿಸಿ ಅದನ್ನು ಆ ನಿಯಂತ್ರಕ ಸರ್ವೋಪ್ರವರ್ತಕದ ಮೇಲೆಯೇ ಅನುರೂಪವಾದ ಒಂದು ವಿದ್ಯುತ್ಪ್ರವಾಹ ಸಂಯೋಜನೆಯ ರೂಪದಲ್ಲಿ ಪ್ರಯೋಗಿಸುವುದು ವಿಸಂಕೇತಕ ನಿರ್ವಹಿಸುವ ಕೆಲಸ.




ಚಿತ್ರ 6 ರೇಡಿಯೋ–ರೆಡಾರ್ ಆದೇಶಕ ಮಾರ್ಗದರ್ಶನ ವಿಧಾನ

ಉದಾಹರಣೆಗೆ ಕ್ಷಿಪಣಿಯನ್ನು ಅದರ ಯಾ ಅಕ್ಷದ ಮೇಲೆ $20^0$ ತಿರುಗಿಸಬೇಕೆಂಬ ಸಾಂಕೇತಿಕ ಆದೇಶ ಹಲವಾರು ಇತರ ಆದೇಶಗಳ ನಡುವೆ ರೇಡಿಯೋಗ್ರಾಹಿಗೆ ತಲುಪಿದಲ್ಲಿ ವಿಸಂಕೇತಕ ಆ ಕೋನಕ್ಕೆ ಅನುಗುಣವಾದ ವಿದ್ಯುತ್ಪ್ರವಾಹಗಳ ಒಂದು ಸಂಯೋಜನೆಯನ್ನು

ಯಾ ಅಕ್ಷಕ್ಕೆ ಸಂಬಂಧಿಸಿದ ಸರ್ವೋಪ್ರವರ್ತಕಕ್ಕೆ ಕಳುಹಿಸಿಕೊಡುತ್ತದೆಯೇ ವಿನಾ ಪಿಚ್ ಮತ್ತು ರೋಲ್ ಅಕ್ಷಗಳಿಗೆ ಸಂಬಂಧಪಟ್ಟವಕ್ಕಾಗಲಿ ಚಾಲಕದ್ರವ್ಯಗಳ ಹರಿವಿಗೆ ಸಂಬಂಧಪಟ್ಟವಕ್ಕಾಗಲಿ ಅಲ್ಲ. ಇನ್ನು ಮುಂದಕ್ಕೆ ಆ ಸರ್ವೋಪ್ರವರ್ತಕ ಕ್ಷಿಪಣಿಯನ್ನು




ಚಿತ್ರ 7 ಸರ್ವೋಪ್ರವರ್ತಕಗಳ ತತ್ತ್ವಕ್ಕೆ ಒಂದು ಸರಳೀಕೃತ ನಿದರ್ಶನ. ನಿಶ್ಚಲ a, b ಸುರುಳಿಗಳಲ್ಲಿ ಮಾಹಿತಿಧಾರಿ ಪ್ರಾಥಮಿಕ ಪರ್ಯಾಯ ವಿದ್ಯುತ್ಪ್ರವಾಹಗಳೂ ಚರ c ಸುರುಳಿಯಲ್ಲಿ ಪ್ರೇರಿತ ದ್ವಿತೀಯಕ ಪ್ರವಾಹವೂ ಹರಿಯುತ್ತವೆ.

ಯಾ ಅಕ್ಷದ ಮೇಲೆ ತಿರುಗಿಸಬಲ್ಲ ನಿಯಂತ್ರಕ ವ್ಯವಸ್ಥೆಯನ್ನು ಚೇತನಗೊಳಿಸಿ ಸ್ವೀಕೃತ ಆದೇಶವನ್ನು ಯಥಾವತ್ತಾಗಿ ಪಾಲಿಸಿಕೊಡುವುದು. ಈಗ ಸರ್ವೋಪ್ರವರ್ತಕಗಳ ಚಮತ್ಕಾರಿಕ ಕ್ರಿಯಾವಿಧಾನದ ಬಗ್ಗೆ ಒಂದು ಸ್ಥೂಲಕಲ್ಪನೆಯನ್ನು ಗಳಿಸುವ ಸಲುವಾಗಿ ಸರಳೀಕೃತ ನಿದರ್ಶನವೊಂದನ್ನು ಪರಿಶೀಲಿಸಬಹುದು. ದಹನಕೋಷ್ಠಕ್ಕೆ ಸೀಮೆಎಣ್ಣೆಯನ್ನು ಯಾವುದೇ ಒಂದು ನಿರ್ದಿಷ್ಟ ದರದಲ್ಲಿ ಹರಿಯುವಂತೆ ವ್ಯವಸ್ಥೆಗೊಳಿಸಬೇಕಾಗಿದೆಯೆಂದು ಭಾವಿಸಿ. ಇದಕ್ಕಾಗಿ ಸೀಮೆಎಣ್ಣೆಯ ಹರಿವುಕವಾಟವನ್ನು ಯಾವುದೇ ಒಂದು ನಿರ್ದಿಷ್ಟ ಕೋನದಲ್ಲಿ ತಿರುಗಿಸಿಡಬೇಕಾಗಬಹುದು. ವಾಸ್ತವಿಕ ಹರಿವುಕವಾಟಗಳ ಯಾಂತ್ರಿಕ ಸಂಕೀರ್ಣತೆಗಳನ್ನೆಲ್ಲ ಉಪೇಕ್ಷಿಸಿ ನಮ್ಮ ಕಾಲ್ಪನಿಕ ಕವಾಟವನ್ನು A, B ಎಂಬೆರಡು ಅಂತ್ಯಸ್ಥಾನಗಳ ನಡುವೆ ಸುಮಾರು 120$^{\circ}$ ಕೋನದಷ್ಟು ಮಾತ್ರ ತಿರುಗಬಲ್ಲ ಕೇವಲ ಒಂದು ನಲ್ಲಿಯ ತಿರುಪಿನಂತೆ ಚಿತ್ರಿಸಿಕೊಳ್ಳೋಣ (ಚಿತ್ರ 7). ಈ ತಿರುಪನ್ನು ಪ್ರವರ್ತಿಸುವುದಕ್ಕಾಗಿ ಅದರ ತಿರುಗುದಂಡದ (ಷ್ಯಾಫ್ಟ್) ಮೇಲೆ ವಿದ್ಯುತ್ ಮೋಟರೊಂದರ ರೋಟರನ್ನು ಜೋಡಿಸಬಹುದಷ್ಟೆ. ಸರ್ವೋಪ್ರವರ್ತಕ ವ್ಯವಸ್ಥೆ ರೂಪುಗೊಳ್ಳಲು ಈ ರೋಟರಷ್ಟೇ ಸಾಲದು; ಅದರೊಂದಿಗೇ ತಿರುಗುವ C ಎಂಬ ಒಂದು ತಂತಿಯ ಸುರುಳಿಯೂ ನಿಶ್ಚಲ ಸ್ಥಾನಗಳಲ್ಲಿ ಬಂಧಿತವಾಗಿರುವ a ಮತ್ತು b ಎಂಬ ಮತ್ತೆರಡು ಸುರುಳಿಗಳೂ ಆವಶ್ಯಕ. ನಲ್ಲಿ ತಿರುಪು A ಯಿಂದ B ವರೆಗೆ ಚಲಿಸಿದಂತೆಲ್ಲ C ಸುರುಳಿ a ಬಳಿಯಿಂದ b ಬಳಿಯ ವರೆಗೆ ಚಲಿಸುವುದು. a, b, c ಗಳ ಸಂಕಲನಕ್ಕೆ ಒಂದು ಸಿಂಕ್ರೋನಿಯಂತ್ರಣ ಪರಿವರ್ತಕ (ಸಿಂಕ್ರೋ ಕಂಟ್ರೋಲ್ ಟ್ರಾನ್ಸ್‌ಫಾರ್ಮರ್) ಎಂದು ಹೆಸರು. ಈ ಸುರುಳಿಗಳ ಪೈಕಿ ಕವಾಟದ ತಿರುಗುದಂಡ ಯಾವ ನಿರ್ದಿಷ್ಟ ಸ್ಥಾನದಲ್ಲಿ ನಿಲ್ಲಬೇಕೆಂಬ ಮಾಹಿತಿಯನ್ನು b ಮತ್ತು c ಗಳು ಅವುಗಳಲ್ಲಿ ಏರ್ಪಡಿಸಲಾಗಿರುವ ಯುಕ್ತ ಪರ್ಯಾಯ ವಿದ್ಯುತ್ಪ್ರವಾಹಗಳ(ಆಲ್ಟರ್ನೇಟಿಂಗ್ ಕರೆಂಟ್ಸ್) ರೂಪದಲ್ಲಿ ಒಳಗೊಂಡಿರುತ್ತವೆ. ಇವೆರಡು ಮಾಹಿತಿಧಾರಿ ವಿದ್ಯುತ್ಪ್ರವಾಹಗಳೇ ಸಿಂಕ್ರೋ ನಿಯಂತ್ರಣ ಪರಿವರ್ತಕದ ಪ್ರಾಥಮಿಕ ಪ್ರವಾಹಗಳು (ಪ್ರೈಮರಿ ಕರೆಂಟ್ಸ್). [ಮಾಹಿತಿಯ ಅಭಿವ್ಯಕ್ತಿ ಫಲಿಸುವುದು ಪ್ರಾಥಮಿಕ ಪ್ರವಾಹಗಳ ಅನ್ಯೋನ್ಯ ಪ್ರಮಾಣದಿಂದ (ರೇಷಿಯೋ) ಮಾತ್ರ ; ಅವುಗಳ ಬಿಡಿಬಿಡಿ ಪರಿಮಾಣಗಳು (ಮ್ಯಾಗ್ನಿಟ್ಯೂಡ್ಸ್) ಮುಖ್ಯವಲ್ಲ.] ಈ ಪ್ರಾಥಮಿಕ ಪ್ರವಾಹಗಳು C ಸುರುಳಿಯ ಮುಖಾಂತರ ಪ್ರೇರಿತ ದ್ವಿತೀಯಕ ವಿದ್ಯುತ್ಪ್ರವಾಹಗಳನ್ನು (ಇಂಡ್ಯೂಸ್ಡ್ ಸೆಕೆಂಡರಿ ಕರೆಂಟ್ಸ್) ಏಕಕಾಲಿಕವಾಗಿ ಹರಿಸತೊಡಗುವುವು. ಆದರೆ ಹೀಗೆ ಪ್ರೇರಿತವಾಗುವ ಪ್ರವಾಹಗಳು ಪರಸ್ಪರ ವಿರುದ್ಧ ದಿಸೆಗಳಲ್ಲಿರುವುದರಿಂದ ಅವುಗಳ ವ್ಯತ್ಯಾಸ ಮಾತ್ರ ಪ್ರಬಲ ಶಕ್ತಿವರ್ಧಕದ ಮಾರ್ಗವಾಗಿ (ಆ್ಯಂಪ್ಲಿಫೈಯರ್) ವಿದ್ಯುತ್‌ಮೋಟರಿಗೆ ಹರಿದು ಅದನ್ನೂ ಅದಕ್ಕೆ ಜೋಡಿಸಿರುವ ಕವಾಟದ ದಂಡವನ್ನೂ ತಿರುಗಿಸಬಲ್ಲುದು. ಕವಾಟದ ದಂಡ ತಿರುಗಿದಾಗ ಅದಕ್ಕೆ ಬಂಧಿತವಾಗಿರುವ C ಸುರುಳಿಯೂ ಚಲಿಸುತ್ತದೆ. C ಸುರುಳಿ ಹಾಗೆ ಚಲಿಸಿ ಯಾವುದೋ ಒಂದು ಸ್ಥಾನಕ್ಕೆ ಬಂದಾಗ a, b ಗಳಿಂದ ಅದರಲ್ಲಿ ಪ್ರೇರಿತವಾಗುವ ವಿದ್ಯುತ್ಪ್ರವಾಹಗಳು ಒಂದಕ್ಕೊಂದು ಸಮವಾಗಿ ರದ್ದುಗೊಂಡುಬಿಡುವುವು. ಆಗ ವಿದ್ಯುತ್ಪ್ರವಾಹಗಳು ಸರಬರಾಜು ನಿಂತು ಮೋಟರು ನಿಷ್ಕ್ರಿಯವಾಗುವುದು. ಇನ್ನು ಮುಂದಕ್ಕೆ ಕವಾಟದ ದಂಡ ತಿರುಗದು. a, b ಗಳಲ್ಲಿ ಏರ್ಪಡಿಸಿದ್ದ ಪ್ರಾಥಮಿಕ ವಿದ್ಯುತ್ಪ್ರವಾಹಗಳ ಪ್ರಮಾಣ ಯುಕ್ತವಾಗಿದ್ದರೆ ನಮಗೆ ಬೇಕಾದ ನಿರ್ದಿಷ್ಟ ಸ್ಥಾನದಲ್ಲೇ ಆ ದಂಡ ಸಮತೋಲಸ್ಥಿತಿಗೆ ಬಂದು ಸೀಮೆಎಣ್ಣೆಯ ಹರಿವನ್ನು ಅಪೇಕ್ಷಿತ ದರದಲ್ಲಿ ವ್ಯವಸ್ಥೆಗೊಳಿಸುವುದು. ನಿಯಂತ್ರಕ ದಂಡಗಳನ್ನು 360$^{0}$ ಗಿಂತ ಅಧಿಕವಾದ ಕೋನಗಳ ಮೂಲಕ (ಅಂದರೆ ಪೂರ್ಣಸುತ್ತುಗಳು) ತಿರುಗಿಸಬೇಕಾದಲ್ಲಿ a, b ಗಳಂಥ ಎರಡೇ ನಿಶ್ಚಲಸುರುಳಿಗಳ ಬದಲು 120$^{0}$ ಕೋನಾಂತರಗಳಲ್ಲಿ ಅಳವಡಿಸಿರುವ ಮೂರು ನಿಶ್ಚಲಸುರುಳಿಗಳನ್ನುಳ್ಳ ಸಿಂಕ್ರೋನಿಯಂತ್ರಣ ಪರಿವರ್ತಕಗಳನ್ನು ಬಳಸಬಹುದು. ನಮ್ಮ ಸರಳ ಉದಾಹರಣೆಯಲ್ಲಿ ಸರ್ವೋಮೋಟರನ್ನು ತಿರುಗುವಂತೆ ಪ್ರಚೋದಿಸುವ C ಸುರುಳಿಯ ಮೇಲೆ ಆ ಮೋಟರು ಫಲಿತ ಚಲನೆಯನ್ನೇ ಪುನರಾರೋಪಿಸುತ್ತದೆ. ಇಲ್ಲಿ C ಸುರುಳಿ ಮತ್ತು ಮೋಟರು ಒಂದು ಸರಳ ಮರುಸರಬರಾಜು ಸಂವೃತ ಸಂಪರ್ಕದ (ಫೀಡ್ ಬ್ಯಾಕ್ ಲೂಪ್) ಎರಡೇ ಕೊಂಡಿಗಳಾಗಿವೆ. ನಿಖರ ಸರ್ವೋಪ್ರವರ್ತಕ ಕ್ರಿಯೆಗೆ ಮರುಸರಬರಾಜು ತತ್ತ್ವವೇ ಆಧಾರ. ಕ್ಷಿಪಣಿಯ ಸರ್ವೋಪ್ರವರ್ತಕ ವ್ಯವಸ್ಥೆಗಳ ಕ್ರಿಯಾವಿಧಾನದಲ್ಲಿ ಪಾತ್ರವಹಿಸುವ ಸಂಕೀರ್ಣತರ ಮರುಸರಬರಾಜು ಪರಿಸಂಪರ್ಕಗಳು ಎರಡಕ್ಕಿಂತ ಹೆಚ್ಚು ಕೊಂಡಿಗಳನ್ನು ಒಳಗೊಳ್ಳುತ್ತವೆ ಮತ್ತು ಆ ಕೊಂಡಿಗಳ ಪೈಕಿ ಕೆಲವು ಕ್ಷಿಪಣಿಯಲ್ಲೂ ಕೆಲವು ಭೂಮೇಲ್ಮೈಯಲ್ಲೂ ಇರುತ್ತವೆ.

ರೇಡಿಯೋ–ರೇಡಾರ್ ಆದೇಶಕ ಮಾರ್ಗದರ್ಶನದ ಗಣಕಯಂತ್ರ ಹಾಗೂ ರೇಡಾರ್ ಸಂವೇದಕಗಳು ಭೂಮೇಲ್ಮೈಯ ಬದಲು ಕೆಲವು ವೇಳೆ ಹಾರುವ ವಿಮಾನದಲ್ಲಿ ಸ್ಥಾಪಿತವಾಗಿರುತ್ತವೆ. ಇಂಥ ವಿಶೇಷ ಉಪಕರಣಗಳಿಂದ ಸಜ್ಜಿತವಾದ ವಿಮಾನ ಚರಗುರಿಗೆ ಸಾಕಷ್ಟು ಹತ್ತಿರ ಸಾಗಿ ಅಲ್ಲಿಂದ ಮುಂದಕ್ಕೆ ಕ್ಷಿಪಣಿಯನ್ನು ಹಾರಿಬಿಡುವ ನೆಲೆಯಾಗಿಯೂ ಉಪಯುಕ್ತವಾಗುವುದು. ಯಾವುದೇ ಬಗೆಯ ರೇಡಿಯೋ ಆದೇಶಕ ಮಾರ್ಗದರ್ಶನವಾದರೂ ಕ್ಷಿಪಣಿಯ ಹೊರಗಡೆ ಉದ್ಭವಿಸುವ ಮಾಹಿತಿ ಪೂರ್ಣ ವಿದ್ಯುತ್ಕಾಂತ ತರಂಗಗಳ ಸಮರ್ಪಕ ಗ್ರಹಣೆಯನ್ನು ಅವಲಂಬಿಸಿರುವುದರಿಂದ ಯುದ್ಧದಲ್ಲಿ ಶತ್ರುವಿಮಾನಗಳು ಬೇಕೆಂದೇ ರೇಡಿಯೋ ಗದ್ದಲವನ್ನು ಉಂಟುಮಾಡಿ (ಜ್ಯಾಮಿಂಗ್) ರೇಡಿಯೋ ಮಾರ್ಗದರ್ಶಕ ವ್ಯವಸ್ಥೆಗಳ ಯಶಸ್ಸಿಗೆ ಧಕ್ಕೆ ತರಲು ಪ್ರಯತ್ನಿಸಬಹುದು. ಆದರೂ ಕ್ಷಿಪಣಿಯನ್ನು ಗಣಕಯಂತ್ರ ಮತ್ತು ರೇಡಾರುಗಳ ಹೊರೆಯಿಂದ ವಿಮುಕ್ತಗೊಳಿಸಿರುವುದು ರೇಡಿಯೋ–ರೇಡಾರ್ ಆದೇಶಕ ವಿಧಾನದ ಒಂದು ಭಾರಿ ಸಲ್ಲಕ್ಷಣವೆಂಬುದನ್ನು ಮರೆಯುವಂತಿಲ್ಲ. ಆಧುನಿಕ ರೇಡಿಯೋ ಪ್ರೇಷಕ ಮತ್ತು ಗ್ರಾಹಿಗಳ ನಿಯೋಜನೆಯಲ್ಲಿ ಹೊರಗಡೆಯ ಅಡಚಣೆಗಳನ್ನು ಸಾಧ್ಯವಾದ ಮಟ್ಟಿಗೆ ವಿರೋಧಿಸುವ ಕ್ರಮಗಳೂ ಅನುಷ್ಠಾನಕ್ಕೆ ಬಂದಿವೆ. ಅಂತರಿಕ್ಷ ವೈಜ್ಞಾನಿಕ ಕಾರ್ಯಕ್ರಮಗಳ ವಿರುದ್ಧವಾಗಿಯಂತೂ ರೇಡಿಯೋ ಗದ್ದಲವನ್ನೆಬ್ಬಿಸುವ ಆಸಕ್ತಿ ಯಾರಿಗೂ ಇಲ್ಲದಿರುವುದರಿಂದ ಶಾಂತಿಯುತ ಅಂತರಿಕ್ಷವಾಹನಗಳ ಮಾರ್ಗದರ್ಶನಕ್ಕೆ ರೇಡಿಯೋ ಆದೇಶಕವಿಧಾನ ಅತಿ ಪ್ರಶಸ್ತವಾದುದು. ಗುರುತ್ವಾನುಚರ ಖಂಡಾಂತರ ಕ್ಷಿಪಣಿಗಳ (ICBM) ಮಾರ್ಗದರ್ಶನ ಅವನ್ನು ಉಡಾವಣೆ ಮಾಡಿದ ಕೆಲ ಮಿನಿಟುಗಳಿಗೆ ಮಾತ್ರ ಸೀಮಿತವಾದ ಕಾರಣ (ಅಷ್ಟು ಕಾಲ ಅವು ಶತ್ರುನೆಲೆಯಿಂದ ಬಹು ದೂರವೇ ಇರುತ್ತವೆ) ಈ ಸಂಬಂಧದಲ್ಲೂ ರೇಡಿಯೋ ವಿಧಾನ ಸಾಕಷ್ಟು ಉಪಯುಕ್ತವಾಗಬಲ್ಲುದು. ಭೂಮಿಯಿಂದ ಅತಿ ದೂರ ಸರಿಯದೆ ಇರುವ ವಾಹನಗಳನ್ನು ಮಾತ್ರ (ಚಾಂದ್ರನೌಕೆಗಳನ್ನಲ್ಲ) ಪರಿಶೀಲಿಸಿದಾಗ ಒಂದೇ ನೆಲೆಯ ರೇಡಿಯೋ–ರೇಡಾರ್ ಮಾರ್ಗದರ್ಶನದ ವ್ಯಾಪ್ತಿ ಅಲ್ಪವೇ ಸರಿ. ಕ್ಷಿಪಣಿಗೂ ಅದನ್ನು ಗುರುತಿಸುವ ರೇಡಾರಿಗೂ ನಡುವೆ ಭೂಮಿಯ ವಕ್ರತೆ ಅಡ್ಡವಾಗುವುದೇ ಇದಕ್ಕೆ ಕಾರಣ.

ಎಲ್ಲ ಸಂವೇದಕಗಳನ್ನೂ ಗಣಕಯಂತ್ರವನ್ನೂ ಕ್ಷಿಪಣಿಯಲ್ಲೇ ಇರಿಸುವ ಸ್ವಯಂಪೂರ್ಣ ಮಾರ್ಗದರ್ಶನ ವ್ಯವಸ್ಥೆಗಳು ಅಲ್ಪವ್ಯಾಪ್ತಿಯವಿರಬಹುದು(ಷಾರ್ಟ್ ರೇಂಜ್). ಇಲ್ಲವೆ ದೂರ ವ್ಯಾಪ್ತಿಯವಿರಬಹುದು(ಲಾಂಗ್ ರೇಂಜ್). ಅಲ್ಪ ವ್ಯಾಪ್ತಿಯ ವ್ಯವಸ್ಥೆಗಳು ಸಾಧಾರಣವಾಗಿ ಸಮೀಪದಲ್ಲಿ ಸಂಚರಿಸುತ್ತಿರುವ ಶತ್ರು ವಿಮಾನಗಳನ್ನು ಅರಸಿಕೊಂಡು ಹೋಗಿ ನಾಶಪಡಿಸಲು, ಕ್ಷಿಪಣಿಗಳಿಗೆ ನೆರವಾಗುತ್ತವೆ. ಈ ಬಗೆಯ ಮಾರ್ಗದರ್ಶನಕ್ಕೆ ಹೋಮಿಂಗ್ ಮಾರ್ಗದರ್ಶನ (ಹೋಮಿಂಗ್ ಗೈಡೆನ್ಸ್) ಎಂದು ಹೆಸರು. ಚಿತ್ರ (6)ರ ವ್ಯವಸ್ಥೆಯಲ್ಲಿ ಕ್ಷಿಪಣಿ ಸಂವೇದಕ ರೇಡಾರ್, ಆದೇಶಕ ರೇಡಿಯೋ ಸಂಪರ್ಕಕಾರಿ ಮತ್ತು ಕ್ಷಿಪಣಿಯ ರೇಡಿಯೋಗ್ರಾಹಿಗಳನ್ನು ತೆಗೆದುಹಾಕಿ ಗಣಕಯಂತ್ರವನ್ನೂ ಗುರಿಸಂವೇದಕ ರೇಡಾರನ್ನೂ ಭೂಮೇಲ್ಮೈಯಿಂದ ಕ್ಷಿಪಣಿಯ ಒಳಗಡೆ ವರ್ಗಾಯಿಸಿದಾಗ ಸಕ್ರಿಯ (ಆಕ್ಟಿವ್) ರೇಡಾರ್ ಹೋಮಿಂಗ್ ವಿಧಾನವೆಂಬ ಹೆಸರಿನ ಸ್ವಯಂಪೂರ್ಣ ಮಾರ್ಗದರ್ಶನ ವ್ಯವಸ್ಥೆ ಫಲಿಸುತ್ತದೆ. ಜಲ ಮಾಧ್ಯಮದಲ್ಲಿ ಕೆಲಸಮಾಡಬಲ್ಲ ಇಂಥದೇ ವ್ಯವಸ್ಥೆಗಳಲ್ಲಿ ವಿದ್ಯುತ್ಕಾಂತ ರೇಡಾರಿನ ಬದಲು ಶ್ರವಣಾತೀತ ಧ್ವನಿತರಂಗಗಳನ್ನು ಬಳಸುವ ಸದೃಶ ಉಪಕರಣ ಸೋನಾರನ್ನು ಅಳವಡಿಸಬಹುದು. ಮತ್ತೆ ಕೆಲವು ವೇಳೆ ವಿಮಾನನಾಶಕ ಕ್ಷಿಪಣಿಗಳಲ್ಲಿ ರೇಡಾರಿಗೆ ಬದಲಾಗಿ ವಿಮಾನಯಂತ್ರಗಳೇ ಪ್ರಸರಿಸುವ ಉಷ್ಣರಶ್ಮಿಗಳನ್ನು ಗುರುತಿಸುವ ಉಷ್ಣಸಂವೇದಕ ಉಪಕರಣಗಳನ್ನು ಸ್ಥಾಪಿಸಿರುವುದುಂಟು. ಈ ಬಗೆಯ ಮಾರ್ಗದರ್ಶನವನ್ನು ಉಷ್ಣಕಿರಣಾವಲಂಬಿ ಅಕ್ರಿಯ ಹೋಮಿಂಗ್ (ಪ್ಯಾಸಿವ್ ಇನ್‌ಫ್ರಾರೆಡ್ ಹೋಮಿಂಗ್)

ಎಂದು ಕರೆಯುತ್ತಾರೆ. ಇನ್ನೊಂದು ರೀತಿಯ ಮಾರ್ಗದರ್ಶನದಲ್ಲಿ ಒಂದು ಭೂಮ್ಯಾಧಾರಿತ ರೇಡಾರ್ ಶತ್ರು ವಿಮಾನದೆಡೆಗೆ ವಿದ್ಯುತ್ಕಾಂತ ಕಿರಣಗಳನ್ನು ಸತತವಾಗಿ ಗುರಿಯಿಟ್ಟು ಕಳುಹಿಸುತ್ತಿರುತ್ತದೆ. ಮತ್ತು ಕ್ಷಿಪಣಿಯಲ್ಲಿ ಈ ರೇಡಾರ್ ಕಿರಣಗಳನ್ನು ಗುರುತಿಸುವ ಸಂವೇದಕವೂ ಸಂವೇದಿತ ಕಿರಣಗಳ ಹಾದಿಯನ್ನು ಬಿಟ್ಟು ಕದಲದಂತೆ ಕ್ಷಿಪಣಿಯನ್ನು ನಿರ್ಬಂಧಿಸುವ ವ್ಯವಸ್ಥೆಗಳೂ ಇರುತ್ತವೆ. ಇಂಥ ಕಿರಣಾರೋಹಿ (ಬೀಮ್‌ರೈಡರ್) ಮಾರ್ಗದರ್ಶನ ಬಾಹ್ಯರೇಡಾರನ್ನು ಅವಲಂಬಿಸುವ ಕಾರಣ ನೂರಕ್ಕೆ ನೂರುಪಾಲು ಸ್ವಯಂಪೂರ್ಣವಿಲ್ಲ.

**ಕ್ಷಿಪಣಿಗಳ ಮಾರ್ಗದರ್ಶನ. ಜಡತಾ ವಿಧಾನ:** ದೂರವ್ಯಾಪ್ತಿಯ ಸ್ವಯಂಪೂರ್ಣ ಮಾರ್ಗದರ್ಶನ ವಿಧಾನಗಳಲ್ಲೆಲ್ಲ ಜಡತಾ ಮಾರ್ಗದರ್ಶನವೆಂಬುದಕ್ಕೆ (ಇನರ್ಷಿಯಲ್ ಗೈಡೆನ್ಸ್) ಅತಿ ಹೆಚ್ಚಿನ ಪ್ರಾಮುಖ್ಯವಿದೆ. ನಿಜಕ್ಕೂ ಜಡತಾ ವಿಧಾನದ ಕೆಲ ತಾತ್ತ್ವಿಕ ಅಂಶಗಳು [ಮುಖ್ಯವಾಗಿ ಕ್ಷಿಪಣಿಯ ನಿಲವು ಭದ್ರತೆಗೆ (ಆ್ಯಟಿಟ್ಯೂಡ್ ಸ್ಟೆಬಿಲಿಟಿ) ಸಂಬಂಧಿಸಿದಂಥವು] ಹಿಂದೆ ಪ್ರಸ್ತಾವಿಸಿರುವ ಇತರ ವ್ಯವಸ್ಥೆಗಳಲ್ಲೂ ಬೆರಕೆಯಾಗದೆ ಇಲ್ಲ. ಆಧುನಿಕ ನಗರವೊಂದರ ವ್ಯಾಪ್ತಿಯೊಳಗಡೆ ಬೀದಿ ದೀಪಗಳ ಪ್ರಖರ ಕಾಂತಿಯಲ್ಲಿ ರಸ್ತೆ, ಚೌಕಗಳ ಹೆಸರುಗಳನ್ನು ಓದುತ್ತ ದಾರಿಹುಡುಕುವ ವ್ಯವಸ್ಥೆ ರೇಡಿಯೋ–ರೇಡಾರ್ ಆದೇಶಕ ಮಾರ್ಗದರ್ಶನಕ್ಕೆ ಸದೃಶ. ರಾತ್ರಿ ವೇಳೆ ದೀಪಗಳಿಲ್ಲದ ಹಳ್ಳಿಗಾಡಿನಲ್ಲಿ ಕೈಯಲ್ಲಿ ಪಂಜು ಹಿಡಿದು ದಾರಿ ಕಾಣುವ ವ್ಯವಸ್ಥೆ ಸಕ್ರಿಯ ರೇಡಾರ್ ಹೋಮಿಂಗ್ ವಿಧಾನವನ್ನು ನೆನಪು ಮಾಡುವಂಥದು. ಕೈಪಂಜೂ ಇಲ್ಲದೆ ಅದೇ ಹಳ್ಳಿಗಾಡಿನಲ್ಲಿ ದೂರದಲ್ಲೆಲ್ಲೋ ಮಿನುಗುವ ಹಣತೆಯನ್ನು ಅರಸಿಕೊಂಡು ಸಾಗುವ ಹವಣಿಕೆ ಅಕ್ರಿಯ ಹೋಮಿಂಗನ್ನು ಹೋಲುತ್ತದೆ. ಪಂಜು ಹಣತೆಗಳಾವುವೂ ದೊರಕದ ಕಗ್ಗತ್ತಲ ಮರುಭೂಮಿಯಲ್ಲಿ ಇಟ್ಟದ್ದು ಎಷ್ಟು ಹೆಜ್ಜೆ, ಎಡಕ್ಕೆ ತಿರುಗಿದ್ದು ಎಷ್ಟು ಕೋನ, ಬಲಕ್ಕೆ ತಿರುಗಿದ್ದು ಎಷ್ಟು ಕೋನ ಎಂಬ ಮಾಹಿತಿಗಳಷ್ಟನ್ನೇ ನೆನಪಿಟ್ಟು ಲೆಕ್ಕಮಾಡುತ್ತ ಗುರಿಮುಟ್ಟುವ ಸಾಹಸವಾದರೋ ಈಗ ನಾವು ವರ್ಣಿಸಲಿರುವ ಜಡತಾಮಾರ್ಗದರ್ಶನಕ್ಕೆ ಒಳ್ಳೆಯ ಉಪಮಾನವಾಗುವುದು. (ಈ ವಿಧಾನದಿಂದ ಭೂಮೇಲ್ಮೈಯಲ್ಲಿರುವ ನಿಶ್ಚಲಗುರಿಗಳನ್ನು ತಲುಪಬಹುದೇ ವಿನಾ ಚರ ಗುರಿಗಳನ್ನಲ್ಲ.) ಚಿತ್ರ (8) ರಲ್ಲಿ ಸೂಚಿಸಿರುವ ಜೈರೋದರ್ಶಕ (ಜೈರೋಸ್ಕೋಪ್) ಎಂಬ ಯಾಂತ್ರಿಕ ಸಾಧನ ಜಡತಾಮಾರ್ಗದರ್ಶನ ವ್ಯವಸ್ಥೆಗಳ ಪ್ರಧಾನ ಅಂಗ. ಇದರಲ್ಲಿ ವಿದ್ಯುತ್ ಮೋಟರೊಂದು (ಚಿತ್ರದಲ್ಲಿಲ್ಲ) ಸಾಕಷ್ಟು ತೂಕವಿರುವ ಜೈರೋಚಕ್ರವನ್ನು ವೇಗವಾಗಿ ತಿರುಗಿಸುತ್ತ ಇರುತ್ತದೆ. ಹೀಗೆ ವೇಗವಾಗಿ ಸುತ್ತುವ ಚಿತ್ರಗಳು ಅವುಗಳ ನಿಲವನ್ನು (ಓರಿಯಂಟೇಷನ್) ಬದಲಿಸಲು ಯತ್ನಿಸುವ ಬಲಗಳನ್ನು ಬಹುಮಟ್ಟಿಗೆ ವಿರೋಧಿಸಿ ತಮ್ಮ ಅಕ್ಷಗಳನ್ನು ಹೆಚ್ಚು ಕಡಿಮೆ ಒಂದೇ ನಿಯತ ದಿಸೆಯಲ್ಲಿ ಉಳಿಸಿಕೊಳ್ಳಬಲ್ಲವು. ಜೈರೋಚಕ್ರದ ದಂಡಾಕ್ಷ HHಗೆ ಆಸರೆಯಿತ್ತಿರುವ G ಚೌಕಟ್ಟು ಸಹ ಮತ್ತೊಂದು ತಿರುಗುದಂಡ KK ಗೆ ಬಂಧಿತವಾಗಿದ್ದು ಅದರೊಂದಿಗೆ ಸುತ್ತಬಲ್ಲದು. ಇಂಥ ತಿರುಗುಚೌಕಟ್ಟುಗಳಿಗೆ ಜಿಂಬಲುಗಳೆಂದು ಹೆಸರು. KK ದಂಡ HHಗೆ ಲಂಬವಾಗಿದೆ, ಮತ್ತು ಅದಕ್ಕೆ ಒಂದು ಸಿಂಕ್ರೋ ನಿಯಂತ್ರಣ ಪರಿವರ್ತಕ (a, b, c) ಲಗತ್ತಾಗಿದೆ. ಇವಿಷ್ಟು ಅಂಗಗಳ ಸಂಕಲನಕ್ಕೆ ಜೈರೋದರ್ಶಕ ಎಂದು ಹೆಸರು. ಚಿತ್ರ (8) ಈ ಜೈರೋದರ್ಶಕದ ಒಂದು ಚಮತ್ಕಾರಿಕ ಉಪಯೋಗವನ್ನು ಸಹ ಒಳಗೊಂಡಿದೆ. ಜಿಂಬಲು G ಚಿತ್ರದಲ್ಲಿ ತೋರಿಸಿರುವ ನಿಲವಿನಲ್ಲಿರುವಾಗ ಸಿಂಕ್ರೋನಿಯಂತ್ರಣ ಪರಿವರ್ತಕದ ನಿವ್ವಳ ಪ್ರೇರಿತ ವಿದ್ಯುತ್ಪ್ರವಾಹಶೂನ್ಯವೆಂದು ಭಾವಿಸಿ. ಆದರೆ ಆ ಜಿಂಬಲ್ ಬೇರೆಡೆ ತಿರುಗಿದಾಗ ಜೊತೆಯಲ್ಲಿ ಪರಿವರ್ತಕದ ಚರಸುರುಳಿ cಯೂ ಪಲ್ಲಟಗೊಂಡು ಅದರಲ್ಲಿ ಅಶೂನ್ಯ ನಿವ್ವಳ ವಿದ್ಯುತ್ಪ್ರವಾಹ ಪ್ರೇರಿತವಾಗುವುದು. ಜೈರೋದರ್ಶಕದ ಜಗಲಿಗೆ ಬಂಧಿತವಾಗಿರುವ JJ ದಂಡ KK ಮತ್ತು HHಗಳೆರಡಕ್ಕೂ ಲಂಬವಾಗಿದೆ. ಈ ಮೂರು ದಂಡಗಳ ಅಕ್ಷಗಳಿಗೆ ಕ್ರಮವಾಗಿ ವ್ಯಾವರ್ತಕಾಕ್ಷ (ಟಾರ್ಕ್ ಆಕ್ಸಿಸ್), ಅಯನಾಕ್ಷ (ಪ್ರಿಸೆಷನ್ ಆ್ಯಕ್ಸಿಸ್) ಮತ್ತು ಭ್ರಮಣಾಕ್ಷ (ಸ್ಪಿನ್ ಆ್ಯಕ್ಸಿಸ್) ಎಂಬ ಹೆಸರುಗಳಿವೆ. ಇನ್ನು ಸ್ನಿಗ್ಧರೋಧಕ ವ್ಯವಸ್ಥೆ (ವಿಸ್ಕಸ್ ಡ್ಯಾಂಪಿಂಗ್ ಡಿವೈಸ್) ಎಂದು ಚಿತ್ರದಲ್ಲಿ ಸೂಚಿಸಿರುವ ಏರ್ಪಾಡಿನ ಉದ್ದೇಶ ಅಯನಾಕ್ಷದಂಡ KK ಯ ಮೇಲೆ ಅದರ ತಿರುಗುವೇಗಕ್ಕೆ ಅನುಪಾತೀಯವಾದ (ಪ್ರಪೋರ್ಷನಲ್) ಸತ್ತ್ವಯುತ ಹಿಮ್ಮುಖ ಬಲಯುಗ್ಮವನ್ನು (ಕಪಲ್; ಟಾರ್ಕ್; ವ್ಯಾವರ್ತನೆ) ಸತತವಾಗಿ ಪ್ರಯೋಗಿಸುವುದು ಮಾತ್ರ. [ಉದಾಹರಣೆಗೆ ಈ ವ್ಯವಸ್ಥೆ ಒಂದು ಸ್ನಿಗ್ಧದ್ರವವನ್ನಾಗಲಿ, ವಿದ್ಯುದ್ವಾಹಕ–ಅಯಸ್ಕಾಂತಕ್ಷೇತ್ರಗಳ ಜೋಡಣೆಯನ್ನಾಗಲಿ ಬಳಸಿಕೊಳ್ಳಬಹುದು. ಸ್ನಿಗ್ಧರೋಧಕ ಸಮೇತವಾದ ಜಿರೋದರ್ಶಕಗಳಿಗೆ ದರಸಮಾಸಕ ಜಿರೋಗಳೆಂದು (ರೇಟ್ ಇಂಟೆಗ್ರೇಟಿಂಗ್ ಜೈರೋಸ್) ಹೆಸರು. ಇವಲ್ಲದೆ ಬೇರೆ ವಿಧದ ಜೈರೋಗಳೂ ಇರುತ್ತವೆ]. ಈಗ ಜಿರೋದರ್ಶಕದ ಕಾರ್ಯವನ್ನು ತಿಳಿಯಲು ವ್ಯಾವರ್ತಕಾಕ್ಷದ ಮೇಲೆ ಕ್ಷಿಪಣಿ ಹೊರಳುವುದರ ಪರಿಣಾಮವಾಗಿ ದರ್ಶಕ ಜಗಲಿಯೂ ಅದೇ ಅಕ್ಷದ ಮೇಲೆ ಹೊರಳಿ ಅದರ JJ ದಂಡ ಒಂದು ಅಲ್ಪಕೋನ θ ದಷ್ಟು ತಿರುಗಿ ನಿಲ್ಲುತ್ತದೆಂದು ಭಾವಿಸಿ. ಈ ಪ್ರಚೋದನೆಗೆ ಅನುಕ್ರಿಯೆಯೊಂದು ಸೋಜಿಗವೆನಿಸುವಂತೆ ಲಂಬನೇರದಲ್ಲಿರುವ KK ದಂಡದಲ್ಲಿ ಕಂಡುಬರುವುದು. ಆ ದಂಡ θ ಕ್ಕಿಂತ ಭಾರಿ ಅಧಿಕವಾದ ಕೋನದ ಮೂಲಕ ತಿರುಗುತ್ತದೆ. KK ದಂಡದ ತಿರುಗುವಿಕೆಗೆ ಅಯನಭ್ರಮಣೆ (ಪ್ರಿಸೆಷನ್) ಎಂದು ಹೆಸರು. ಸ್ನಿಗ್ಧರೋಧಕ ವ್ಯವಸ್ಥೆಯಿಲ್ಲದಿದ್ದರೆ ಅಯನಭ್ರಮಣೆಯ ಕೋನವೇಗ (ಆದಿಯಲ್ಲಿ) θಕ್ಕೆ ಅನುಪಾತೀಯವಾಗಿರುತ್ತಿತ್ತು. ರೋಧಕ ವ್ಯವಸ್ಥೆ ಇರುವಾಗ KK ಯ ತಿರುಗುವಿಕೆ ಶೀಘ್ರವಾಗಿ ನಿಲುಗಡೆಗೆ ಬಂದು ಅದರ ಒಟ್ಟು ಕೋನಪಲ್ಲಟ φ



ಚಿತ್ರ 8 ದರಸಮಾಸಕ ಜಿರೋದರ್ಶಕದಿಂದ ಜಗಲಿಯ ಸ್ಥಿರೀಕರಣ. ಜಿರೋಚಕ್ರವನ್ನು ತಿರುಗಿಸುವ ವಿದ್ಯುತ್ ಮೋಟರನ್ನು ಇಲ್ಲಿ ತೋರಿಸಿಲ್ಲ. ಸುರುಳಿ a, bಗಳು ದರ್ಶಕಜಗಲಿಗೂ c ಸುರುಳಿ KK ದಂಡಕ್ಕೂ ಬಂಧಿತವಾಗಿರುತ್ತವೆ. a, b, cಗಳ ಸಂಕಲನ ಈ ವ್ಯವಸ್ಥೆಯ ಸಿಂಕ್ರೋನಿಯಂತ್ರಣ ಪರಿವರ್ತಕ. ವ್ಯಾವರ್ತಕ ಸರ್ವೋಮೋಟರು ದರ್ಶಕ ಜಗಲಿಯಿಂದ ಸ್ವತಂತ್ರವಾದ ಬೇರೆ ಆಧಾರದ ಮೇಲೆ ನಿಂತಿರುತ್ತದೆ. ಆ ಸ್ವತಂತ್ರ ಆಧಾರಕ್ಕೆ JJ ದಂಡ ತಿರುಗುವ ಆಸರೆಗಳನ್ನೂ (ಬ್ಯಾರಿಂಗುಗಳು–ಅವನ್ನು ಈ ಚಿತ್ರದಲ್ಲಿ ತೋರಿಸಿಲ್ಲ)

ಮಾತ್ರ θಕ್ಕೆ ಅನುಪಾತೀಯವಾಗಿರುತ್ತಿತ್ತು. ಈ φ ಪಲ್ಲಟದಿಂದ ಸಿಂಕ್ರೋನಿಯಂತ್ರಣ ಪರಿವರ್ತಕದ C ಸುರುಳಿಯಲ್ಲಿ ವಿದ್ಯುತ್ಪ್ರವಾಹ ಪ್ರೇರಿತವಾಗುವುದು. ಇದೇ ಜಿರೋದರ್ಶಕದ ಕ್ರಿಯೆ. ಚಿತ್ರ (8)ರ ವ್ಯವಸ್ಥೆಯಲ್ಲಿ ಸುರುಳಿಯ ವಿದ್ಯುತ್ಪ್ರವಾಹ ಶಕ್ತಿವರ್ಧಕದ ಮಾರ್ಗವಾಗಿ ಜಗಲಿಯ ವಿವ್ಯಾವರ್ತಕ ಸರ್ವೋಮೋಟರಿಗೆ ಸರಬರಾಜಾಗಿ ಆ ಮೋಟರನ್ನೂ ಅದರ ಮೂಲಕ ಜಗಲಿಯ JJ ದಂಡವನ್ನೂ (θ ಕ್ಕೆ ವ್ಯತಿರಿಕ್ತವಾದ ದಿಸೆಯಲ್ಲಿ) ತಿರುಗಿಸುವಂತೆ ಏರ್ಪಡಿಸಲಾಗಿದೆ. ಈ ಮರುಸರಬರಾಜು ಸಂವೃತ ಸಂಪರ್ಕದಿಂದ (ಫೀಡ್‌ಬ್ಯಾಕ್ ಲೂಪ್) ದರ್ಶಕ ಜಗಲಿ ಮುಂಚೆ ಇದ್ದ ನಿಲವಿಗೇ ಹಿಂತಿರುಗುವುದಲ್ಲದೆ ಅಯನಭ್ರಮಣೆಯ ಪ್ರಚೋದನೆಯೂ ಅಂತ್ಯಗೊಂಡು KK ದಂಡ ಕೂಡ ಅದರ ಸಮತೋಲಸ್ಥಾನಕ್ಕೆ ಮರಳುವುದು. ಹೀಗಾದಾಗ ಮೋಟರನ್ನು ತಿರುಗಿಸುತ್ತಿದ್ದ C ಸುರುಳಿಯ ಪ್ರೇರಿತ ವಿದ್ಯುತ್ಪ್ರವಾಹ ಮತ್ತೆ ಶೂನ್ಯವಾಗುವುದರಿಂದ ಇನ್ನೊಮ್ಮೆ ಕ್ಷಿಪಣಿ ಹೊರಳುವ ತನಕ ವ್ಯವಸ್ಥೆಯಲ್ಲಿ ಯಾವ ಬದಲಾವಣೆಗಳೂ ಸಂಭವಿಸುವುದಿಲ್ಲ. ಅಲ್ಲಿಗೆ ವ್ಯಾವರ್ತಕಾಕ್ಷದ ಸುತ್ತ ವರ್ತಿಸತೊಡಗಬಹುದಾದ ಬಲಯುಗ್ಮಗಳನ್ನು ನಿಖರವಾಗಿ ವಿರೋಧಿಸುತ್ತ ಚಿತ್ರ (8)ರ ಜಗಲಿ ಮತ್ತು ಅದಕ್ಕೆ ಜೋಡಿಸಿರಬಹುದಾದ, ಸಾಧನೋಪಕರಣಗಳು ಒಂದೇ ನಿರ್ದಿಷ್ಟ ನಿಲವಿನಲ್ಲಿ ಸ್ಥಿರೀಕೃತವಾಗುತ್ತವೆಂದಾಯಿತು. [ಜಗಲಿ ಮತ್ತು ಅದಕ್ಕೆ ಬಂಧಿತವಾಗಿರುವ ಎಲ್ಲ ವ್ಯವಸ್ಥೆಗಳ ಸಮಗ್ರ ದ್ರವ್ಯರಾಶಿಕೇಂದ್ರದ (ಸೆಂಟರ್ ಆಫ್ ಮಾಸ್) ಮೂಲಕ ಹಾದುಹೋಗುವ ಅನುಕೂಲತಮಸ್ಥಾನದಲ್ಲಿ JJ ದಂಡವನ್ನು ಅಳವಡಿಸಬೇಕು.]

ಕ್ಷಿಪಣಿ ಹಾರುವಾಗ ಸದಾ ಒಂದು ಅಕ್ಷದ ಮೇಲೆ ಮಾತ್ರವೇ ಹೊರಳಬೇಕೆಂಬ ನಿಯಮವೇನಿಲ್ಲ. ಅದು ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ಅಕ್ಷಗಳ ಮೇಲೆ ಹೊರಳಿದರೂ ಕ್ಷಿಪಣಿಯ ಹೊರಗಿನ ಜಡತಾಂತರಿಕ್ಷಕ್ಕೆ (ಇನರ್ಷಿಯಲ್ ಸ್ಪೇಸ್) ಸಾಪೇಕ್ಷವಾಗಿ ಸ್ಥಿರೀಕೃತ ನಿಲವಿನಲ್ಲೇ ಉಳಿಯಬಲ್ಲ ಜಗಲಿಯ ನಿಯೋಜನೆಯನ್ನು ಚಿತ್ರ (9) ರಲ್ಲಿ ಕಾಣಿಸಲಾಗಿದೆ. ಈ ವ್ಯವಸ್ಥೆಯ ಜಗಲಿಗೆ X, Y, Z, ಎಂಬ ಮೂರು ಜಿರೋದರ್ಶಕಗಳು ಬಂಧಿತವಾಗಿವೆ. ಇವುಗಳ ಜಿಂಬಲುಗಳನ್ನೂ ಇತರ ರಚನಾಭಾಗಗಳನ್ನೂ ಚಿತ್ರದಲ್ಲಿ ತೋರಿಸಿಲ್ಲ. ಪ್ರಧಾನ ಅಕ್ಷಗಳನ್ನು ಮಾತ್ರ ವ್ಯಾ (= ವ್ಯಾವರ್ತಕಾಕ್ಷ), ಭ್ರ (=ಭ್ರಮಣಾಕ್ಷ) ಮತ್ತು ಅ (= ಅಯನಾಕ್ಷ) ಎಂಬ ಸಂಕೇತಗಳಿಂದ ಸೂಚಿಸಲಾಗಿದೆ. ಸ್ಥಿರೀಕರಿಸಬೇಕಾದ ಜಗಲಿ G1, G2, G3, G4 ಎಂಬ ನಾಲ್ಕು ದೊಡ್ಡ ಜಿಂಬಲುಗಳ ಆಸರೆಯಲ್ಲಿ ಕ್ಷಿಪಣಿಗೆ ಸಾಪೇಕ್ಷವಾಗಿ ಯಾವ ನಿಲವನ್ನು ಬೇಕಾದರೂ ತಳೆದು ನಿಲ್ಲುವಂತೆ ವ್ಯವಸ್ಥಿತವಾಗಿದೆ. (ಇದಕ್ಕಾಗಿ ಎರಡು ಜಿಂಬಲುಗಳೇ ಸಾಕಾದರೂ ಉಳಿದೆರಡು ಜಿಂಬಲುಗಳು ಮುಂದೆ ತಿಳಿಸುವ ಬೇರೆ ಉದ್ದೇಶಕ್ಕಾಗಿ ಅವಶ್ಯವಾಗುವುವು.) ಈಗ x, y, z ಗಳಲ್ಲಿ ಅಳವಡಿಸಿರುವ (ಚಿತ್ರದಲ್ಲಿ ತೋರಿಸಿಲ್ಲ.) ಸಿಂಕ್ರೋನಿಯಂತ್ರಣ ಪರಿವರ್ತಕಗಳ ಉತ್ಪಾದನೆಗಳು x, y, z ಆಗಿಯೂ ಜಗಲಿಯ ಚಿತ್ರಿತ ಮೇಲ್ಮೈ ಮತ್ತು

G1ರ ತಲ, G1ರ ತಲ ಮತ್ತು G2ರ ತಲ ಇವುಗಳ ನಡುವಿನ ಕೋನಗಳು a,β ಆಗಿಯೂ ಇದ್ದರೆ G1 ಜಿಂಬಲಿಗೆ ಸಾಪೇಕ್ಷವಾಗಿ XYZ-XYZ ದಂಡವನ್ನು (x + ysin a cot β + zcosacot β) ಸಂಯೋಜನೆಯಿಂದಲೂ G2 ಜಿಂಬಲಿಗೆ ಸಾಪೇಕ್ಷವಾಗಿ ZY-ZY ದಂಡವನ್ನು (z sin a- y cos a) ದಿಂದಲೂ G3 ಕ್ಕೆ ಸಾಪೇಕ್ಷವಾಗಿ YZ-YZ ದಂಡವನ್ನು (y sin a cosec β + z cos a cosec β) ದಿಂದಲೂ ಸರ್ವೋಪ್ರವರ್ತಿಸಿ ತಿರುಗಿಸುತ್ತ ಹೋದರೆ ಜಗಲಿ ಜಡತಾಂತರಿಕ್ಷದಲ್ಲಿ ಸ್ಥಿರೀಕೃತವಾಗುತ್ತದೆ. (ಇಂಥ ಸ್ಥಿರೀಕೃತ ಜಗಲಿಗೆ ನಾಟಿದ ಬಾಣವೊಂದು ಉತ್ತರ ಮೇರುವಿನ ಬಳಿ ಭೂಮ್ಯಭಿಮುಖವಾಗಿದ್ದರೆ




ಚಿತ್ರ 9 ಜಡತಾಂತರಿಕ್ಷದಲ್ಲಿ ಜಗಲಿಯ ಸಾರ್ವತ್ರಿಕ ಸ್ಥಿರೀಕರಣ (– ಜಗಲಿಗೆ ಬಂಧಿತವಾದ ಜಿರೋದರ್ಶಕಗಳು. ವ್ಯಾ,ಭ್ರ, ಅ–ಜಿರೋಗಳ ವ್ಯಾವರ್ತಕ, ಭ್ರಮಣ ಮತ್ತು ಅಯನ ಅಕ್ಷಗಳು)

ಜಗಲಿ ದಕ್ಷಿಣ ಮೇರುವಿಗೆ ಹೋಗುವ ವೇಳೆಗೆ ಅದೇ ಬಾಣ ಆಕಾಶಾಭಿಮುಖವಾಗುವುದು ; ಆದಾಗ್ಯೂ ಜಗಲಿಯ ನಿಲವು ನಿಯಂತ್ರಕ ಸಾಧನಗಳ ದೃಷ್ಟಿಮಾತ್ರ ಕ್ಷಿಪಣಿಯ ಆಂತರಿಕ ವಿದ್ಯಮಾನಗಳ ಕಡೆ ಇರುತ್ತದೆಯೇ ವಿನಾ ಆಕಾಶದತ್ತ ಆಗಲಿ, ಭೂಮಿಯೆಡೆ ಆಗಲಿ ಅಲ್ಲ.) ಆದರೆ ಇಲ್ಲಿ β ಕೋನ ಕಿರಿದಾದಂತೆ ಉಲ್ಲೇಖಿತ ಗಣಿತೋಕ್ತಿಗಳ ಪೈಕಿ ಎರಡು ಹಿಡಿತಕ್ಕೆ ಸಿಗದಷ್ಟು ಅಗಾಧವಾಗಿ ಪರಿಣಮಿಸಿ ನಿಲವು ನಿಯಂತ್ರಣಕ್ಕೆ ಧಕ್ಕೆಯುಂಟಾಗುವುದು. ಈ ಸಮಸ್ಯೆಯನ್ನು G3, G4 ಜಿಂಬಲುಗಳು ಪರಿಹರಿಸುತ್ತವೆ. ಇವುಗಳ W ಮತ್ತು V ದಂಡಗಳನ್ನು ಯುಕ್ತವಾಗಿ ತಿರುಗಿಸುತ್ತಿದ್ದರೆ β ಕೋನ ಸದಾ 90° ಯ ನೆರೆಯಲ್ಲೇ ಉಳಿಯುವುದು ; ಆ ಕೋನವನ್ನು ಸಂವೇದಿಸುವ ಯಾವುದಾದರೊಂದು ವಿದ್ಯುದ್ವ್ಯವಸ್ಥೆ ಈ W, V ಗಳನ್ನು ಪ್ರವರ್ತಿಸಬಲ್ಲದು.

ಈಗ ಸ್ಥಿರೀಕೃತ ಜಗಲಿಗೂ (ಸ್ಟೆಬಿಲೈಸ್ಡ್ ಪ್ಲ್ಯಾಟ್‌ಫಾರಂ) ಜಿಂಬಲುಗಳಿಗೂ ಕ್ಷಿಪಣಿಯ ಗೋಡೆಗೂ ಇರುವ ಪರಸ್ಪರ ಕೋನಾಂತರಗಳಿಂದ ಕ್ಷಿಪಣಿಯ ನಿಲವು ನಿರ್ಧರಿತವಾಗುವುದು. ಈ ಕೋನಗಳನ್ನು ಸಂವೇದಿಸಿ ಕ್ರಿಯೋನ್ಮುಖವಾಗುವ ಸರ್ವೋಪ್ರವರ್ತಕಗಳಿಂದ ಕ್ಷಿಪಣಿಯ ನಿಲವು ನಿಯಂತ್ರಕಗಳನ್ನು ಅಪೇಕ್ಷಿತ ರೀತಿಯಲ್ಲಿ ಚೇತನಗೊಳಿಸಬಹುದು. ತತ್ಫಲವಾಗಿ ಕ್ಷಿಪಣಿಯ ರೋಲ್, ಪಿಚ್ ಮತ್ತು ಯಾ ಅಕ್ಷಗಳು (ಚಿತ್ರ 5) ಜಡತಾಂತರಿಕ್ಷದಲ್ಲಿ ಇಚ್ಛೆಪಟ್ಟ ದಿಕ್ಕುಗಳಿಗೆ ತಿರುಗಿ ನಿಲ್ಲುತ್ತವೆ. ಈ ಅಕ್ಷದಿಸೆಗಳನ್ನು ಬೇಕಾದ ಸಮಯದಲ್ಲಿ ಬದಲಾಯಿಸಬಹುದು, ಇಲ್ಲವೆ ಸ್ಥಿರಗೊಳಿಸಿ ಇಡಬಹುದು. ಇಂಥ ನಿಲವು ನಿಯಂತ್ರಣ ಜಡತಾ ಮಾರ್ಗದರ್ಶನದ (ಹಾಗೂ ಇತರ ಎಲ್ಲ ಮಾರ್ಗದರ್ಶನ ವಿಧಾನಗಳ) ಪ್ರಥಮ ಅಂಶ. ಇದಷ್ಟೇ ಅಲ್ಲದೆ ಕ್ಷಿಪಣಿ ಅದರ ಸ್ಥಾನವನ್ನು ಗುರುತಿಸಿಕೊಂಡು ಸತತವಾಗಿ ಗುರಿಯೆಡೆಗೆ ಸಾಗುವಂತೆ ಏರ್ಪಡಿಸುವುದೂ ಅವಶ್ಯವಷ್ಟೆ ಜಡತಾ ವಿಧಾನದಲ್ಲಿ ಸ್ಥಾನಸಂವೇದನೆ ವೇಗಸಂವೇದನೆಯಿಂದಲೂ ವೇಗಸಂವೇದನೆ ವೇಗೋತ್ಕರ್ಷ ಸಂವೇದನೆಯಿಂದಲೂ ನೆರವೇರುತ್ತವೆ. ವೇಗೋತ್ಕರ್ಷದ ಸಂವೇದನೆಗಾಗಿ ಅನೇಕ ಬಗೆಯ ವೇಗೋತ್ಕರ್ಷಮಾಪಕಗಳು ನಿಯೋಜಿತವಾಗಿವೆ. ಅವುಗಳ ಪೈಕಿ ಲೋಲಕೀಯ ಸಮಾಸಕ ಜಿರೋವೇಗೋತ್ಕರ್ಷಮಾಪಿ (ಪೆಂಡ್ಯುಲಸ್ ಇಂಟೆಗ್ರೇಟಿಂಗ್ ಜಿರೋ ಆಕ್ಸಲರೋಮೀಟರ್) ಎಂಬುದನ್ನು ಚಿತ್ರ (10) ರಲ್ಲಿ ತೋರಿಸಿದೆ. ಈ ಉಪಕರಣದ ಸಂಸ್ಥಾಪನೆ ಮೇಲೆ ವಿವರಿಸಿದಂಥ ಸ್ಥಿರೀಕೃತ ಜಗಲಿಯೊಂದರ ಮೇಲೆ ಆಗಬೇಕೇ ವಿನಾ ಅನಿರ್ದಿಷ್ಟ ನಿವೇಶನಗಳಲ್ಲಲ್ಲ. ರಚನೆಯಲ್ಲಿ ಇದು ಬಹುಮಟ್ಟಿಗೆ ಚಿತ್ರ (8)ರ ಜಿರೋನಿಯಂತ್ರಿತ ಸ್ಥಿರೀಕರಣ ವ್ಯವಸ್ಥೆಯನ್ನೇ ಹೋಲುತ್ತದಾದರೂ ಈಗಿನ ಜಿರೋವೇಗೋತ್ಕರ್ಷಮಾಪಿಯ ಜಿಂಬಲಿಗೆ ಒಂದು ತೋಲಭ್ರಂಶಕವನ್ನೂ (ಅನ್‌ಬ್ಯಾಲನ್ಸ್)




ಚಿತ್ರ 10 ಲೋಲಕೀಯ ಸಮಾಸಕ ಜಿರೋವೇಗತ್ಕರ್ಷಮಾಪಿಯ ತತ್ತ್ವ. ಸುರುಳಿ a,b ಗಳು ಮಾಪಕಜಗಲಿಗೂ c ಸುರುಳಿ KK ದಂಡಕ್ಕೂ ಬಂಧಿತವಾಗಿರುತ್ತವೆ. a, b, cಗಳ ಸಂಕಲನ ಒಂದು ಸಿಂಕ್ರೋ ನಿಯಂತ್ರಣ ಪರಿವರ್ತಕವಾಗಿರುವುದು. ವ್ಯಾವರ್ತಕ ಸರ್ವೋಮೋಟರನ್ನು ಸ್ಥಿರೀಕೃತ ಜಗಲಿಯೊಂದರ (ಚಿತ್ರ 9) ಮೇಲೆ ಸ್ಥಾಪಿಸಿರಬೇಕು. ಅದೇ ಸ್ಥಿರೀಕೃತ ಜಗಲಿಗೆ JJ ದಂಡ ತಿರುಗುವ ಆಸರೆಗಳನ್ನೂ (ಬೇರಿಂಗುಗಳು–ಇವನ್ನು ಚಿತ್ರದಲ್ಲಿ ತೋರಿಸಿಲ್ಲ) ಬಂಧಿಸಿರಬೇಕು; ಕ್ಷಿಪಣಿ ವೇಗೋತ್ಕರ್ಷಿತವಾದಂತೆ JJ ದಂಡದೊಂದಿಗೆ ಇಡೀ ಮಾಪಕ ಜಗಲಿಯೇ ತಿರುಗುತ್ತ ಹೋಗುವುದು.

ಅನುಬಂಧಿಸಲಾಗಿದೆ. ಇದರಿಂದ ಚಿತ್ರಸೂಚಿತ ದಿಸೆಯಲ್ಲಿ ಕ್ಷಿಪಣಿಗೆ ರೇಖೀಯ ವೇಗೋತ್ಕರ್ಷ ಪ್ರಾಪ್ತವಾದ ಕೂಡಲೇ ತೋಲಭ್ರಂಶಕ ಬಲಯುಗ್ಮವೊಂದು (ಇಂಬ್ಯಾಲನ್ಸ್ ಟಾರ್ಕ್) ಜಿಂಬಲುದಂಡ KK ಯ ಮೇಲೆ (ಅಂದರೆ ಅಯನಾಕ್ಷದ ಸುತ್ತ) ವರ್ತಿಸತೊಡಗುವುದು. ಈ ಬಲಯುಗ್ಮದಿಂದ ಸಂಭವಿಸುವ KK ದಂಡದ ಕೋನ ಪಲ್ಲಟವನ್ನು ಸಿಂಕ್ರೋನಿಯಂತ್ರಣ ಪರಿವರ್ತಕ ಸಂವೇದಿಸುತ್ತದೆ ಮತ್ತು ಅದಕ್ಕೆ ವಿರುದ್ಧ ದಿಸೆಯಲ್ಲಿ ಅಯನ ಪಲ್ಲಟಕಾರಿಯಾದ ಮತ್ತೊಂದು ಸಮಪರಿಮಾಣದ ಬಲಯುಗ್ಮ ಸೃಷ್ಟಿಯಾಗುವಂತೆ ಮಾಪಕಜಗಲಿಯ ದಂಡ JJಯನ್ನು ಒಂದು ವ್ಯಾವರ್ತಕ ಸರ್ವೋಮೋಟರಿನ ಸಹಾಯದಿಂದ ತಿರುಗಿಸುತ್ತದೆ. ಈಗ ಅಯನಪಲ್ಲಟಕಾರಿ ಬಲಯುಗ್ಮ JJ ದಂಡದ (ಹಾಗೂ ತತ್ಫಲವಾಗಿ ಮೋಟರಿನ) ತಿರುಗುವೇಗಕ್ಕೂ ಅದಕ್ಕೆ ಸಮವಾದ ತೋಲಭ್ರಂಶಕ ಬಲಯುಗ್ಮ ಕ್ಷಿಪಣಿಯ ರೇಖೀಯ ವೇಗೋತ್ಕರ್ಷಕ್ಕೂ ಅನುಪಾತೀಯವಾದ್ದರಿಂದ ಮೋಟರಿನ ತಿರುಗು ವೇಗ ಕ್ಷಿಪಣಿಯ ವೇಗೋತ್ಕರ್ಷದ ಒಂದು ಅನುಪಾತೀಯ ಮಾಪಾಂಕವಾಗುತ್ತದೆ. ಅಷ್ಟೇ ಅಲ್ಲದೆ ಯಾವುದೇ ನಿರ್ದಿಷ್ಟ ಕ್ಷಣದವರೆಗೆ ಆ ಮೋಟರು ತಿರುಗಿರುವ ಒಟ್ಟು ಕೋನ (ಅಂದರೆ ಸುತ್ತುಗಳ ಸಂಖ್ಯೆ) ಆ ಕ್ಷಣದಲ್ಲಿ ಕ್ಷಿಪಣಿ ಹಾರುತ್ತಿರುವ ವೇಗವನ್ನು ಅನುಪಾತೀಯ ಮಾನದಲ್ಲಿ ಸೂಚಿಸುವುದು. ಹೀಗೆ ನಿರ್ಧರಿತವಾದ ವೇಗವನ್ನು ಕಾಲಕ್ಕೆ ಸಾಪೇಕ್ಷವಾಗಿ ಅನುಕಲಿಸಿದರೆ (ಟೈಂ ಇಂಟೆಗ್ರೇಷನ್) ಕ್ಷಿಪಣಿ ಕ್ರಮಿಸಿರುವ ದೂರ ಸಹ ಗೊತ್ತಾಗುವುದು. ಈ ಕೊನೆಯ ಲೆಕ್ಕಾಚಾರವನ್ನು ನಿರ್ವಹಿಸಬಲ್ಲ ಅನೇಕ ಬಗೆಯ ವಿದ್ಯುದ್ಯಾಂತ್ರಿಕ ಸ್ವಯಂ ಕ್ರಿಯಾ ಅನುಕಲನಕಾರಿಗಳು ಬಳಕೆಯಲ್ಲಿವೆ.

ಇದುವರೆಗೆ ಪ್ರಸ್ತಾವಿಸಿರುವ ವೇಗೋತ್ಕರ್ಷ, ವೇಗ ಮತ್ತು ಕ್ರಮಿತ ದೂರ ಎಲ್ಲವೂ ಒಂದು ಜಿರೋವೇಗೋತ್ಕರ್ಷಮಾಪಿಯ ವ್ಯಾವರ್ತಕ ದಂಡ JJಯ ದಿಕ್ಕೊಂದಕ್ಕೆ ಮಾತ್ರ ಸಂಬಂಧಿಸಿದವು. ಈ ನೇರಕ್ಕೆ ಲಂಬವಾಗಿರುವ ಮತ್ತೆರಡು ದಿಸೆಗಳಲ್ಲಿಯ ವೇಗೋತ್ಕರ್ಷಾದಿಗಳನ್ನು ನಿಷ್ಕರ್ಷಿಸಲು ಇನ್ನೂ ಎರಡು ವೇಗೋತ್ಕರ್ಷಮಾಪಿಗಳು ಅವಶ್ಯವಾಗುತ್ತವೆ. ಮೂರು ವೇಗೋತ್ಕರ್ಷಮಾಪಿಗಳೂ ಒಟ್ಟಾಗಿ ಸರಬರಾಜು ಮಾಡುವ ಮಾಹಿತಿಗಳಿಂದ ಜಡತಾಂತರಿಕ್ಷದಲ್ಲಿ ಕ್ಷಣ ಕ್ಷಣಕ್ಕೂ ಬದಲಾಗುವ ಕ್ಷಿಪಣಿಯ ಸ್ಥಾನಗಳು ಪತ್ತೆಯಾಗಿ ಕ್ಷಿಪಣಿ ಸಾಗಿರುವ ಮಾರ್ಗರೇಖೆ ಪ್ರಕಾಶಕ್ಕೆ ಬರುವುದು. ಈ ವಾಸ್ತವಿಕ ಚಲನೆಗೂ ಕ್ಷಿಪಣಿಯ ಗಣಕಯಂತ್ರದ ಸ್ಮೃತಿ ವ್ಯವಸ್ಥೆಯಲ್ಲಿ ಶೇಖರವಾಗಿರುವ ಪೂರ್ವನಿಶ್ಚಿತ ಸಂಚಾರಯೋಜನೆಗೂ ಇರಬಹುದಾದ ಅಲ್ಪವ್ಯತ್ಯಾಸಗಳನ್ನು ಆ ಗಣಕಯಂತ್ರ ಅವಿಚ್ಛಿನ್ನವಾಗಿ ಗುರುತಿಸುತ್ತಲಿದ್ದು ನಿಶ್ಚಿತ ಮಾರ್ಗಕ್ಕೆ ಕ್ಷಿಪಣಿಯನ್ನು ತಿರುಗಿಸಲು ಅವಶ್ಯವಾದ ಆದೇಶಗಳನ್ನು ಸೃಷ್ಟಿಸಿಕೊಡಬಲ್ಲುದು. ಇದು ಜಡತಾಮಾರ್ಗದರ್ಶನ ವಿಧಾನದ ಸ್ಥೂಲ ಪರಿಚಯ.

ರಚನಾದೋಷಗಳ ಫಲವಾಗಿ ಜಿರೊದರ್ಶಕಗಳಿಂದ ಸ್ಥಿರೀಕೃತವಾದ ಜಗಲಿಗಳು ಕಾಲ ಸರಿದಂತೆ ನಿಶ್ಚಿತ ನಿಲುವಿನಿಂದ ಕದಲಿಹೋಗುವ ಸಂಭವವಿರುವುದರಿಂದ ಅನೇಕ ಕ್ಷಿಪಣಿಗಳು ಶುದ್ಧ ಜಡತಾಮಾರ್ಗದರ್ಶನದೊಂದಿಗೆ ಆಗಿಂದಾಗ್ಗೆ ಸೂರ್ಯ, ನಕ್ಷತ್ರ, ಭೂಕ್ಷಿತಿಜ ಮುಂತಾದವುಗಳಿಗೆ ಅನುಗುಣವಾಗಿ ಜಗಲಿಗಳ ನಿಲುವನ್ನು ಪರಿಷ್ಕರಿಸುವ ವ್ಯವಸ್ಥೆಗಳನ್ನೂ ಒಳಗೊಂಡಿರುತ್ತವೆ.

ಕೆಲಕ್ಷಿಪಣಿಗಳು ಅವುಗಳ ಅಡಿಯಲ್ಲಿರುವ (ರೇಡಾರ್ ಸಂವೇದಿತ) ಭೂ ಪ್ರದೇಶಗಳ ಆಕಾರಕ್ಕೂ ಉದ್ದೇಶಿತ ಮಾರ್ಗದಲ್ಲಿ ಸಿಗುವ ಭೂಪ್ರದೇಶಗಳ ನಕಾಶೆಗೂ (ಮ್ಯಾಪ್) ಗರಿಷ್ಠ ಹೊಂದಿಕೆಯಾಗುವಂತೆ ಸಂಚರಿಸಿ ಗುರಿಮುಟ್ಟುತ್ತವೆ. ಅನೇಕ ಇಂಥ ಮಾರ್ಗದರ್ಶನ ತಂತ್ರಗಳನ್ನು ಜಡತಾವಿಧಾನದೊಂದಿಗೆ ಮಿಶ್ರಗೊಳಿಸಬಹುದು. ಜಡತಾಮಾರ್ಗದರ್ಶಿತ ಕ್ಷಿಪಣಿಗಳನ್ನು ರೇಡಿಯೋ ಗದ್ದಲವೇ ಮುಂತಾದ ದೂರನಿಯಂತ್ರಕ ಕಾರ್ಯಕ್ರಮಗಳಿಂದ ದಾರಿತಪ್ಪಿಸಲು ಸಾಧ್ಯವಾಗುವುದಿಲ್ಲ.

ಮಧ್ಯಮಾಂತರ ಮತ್ತು ಖಂಡಾಂತರ ಕ್ಷಿಪಣಿಗಳು ಮತ್ತು ಅವುಗಳ ವಿರುದ್ಧ ಕಾರ್ಯಕ್ರಮಗಳು: ಸಹಸ್ರಾರು ಇಲ್ಲವೆ ಹತ್ತು ಹದಿನೆಂಟು ಸಹಸ್ರ ಕಿಲೋ ಮೀಟರುಗಳ ವ್ಯಾಪ್ತಿಯ ಮಧ್ಯಮಾಂತರ ಮತ್ತು ಖಂಡಾಂತರ ಕ್ಷಿಪಣಿಗಳು ವಾಯುಮಂಡಲದ ಮಾಧ್ಯಮದಲ್ಲಾಗಲಿ ನಿರ್ವಾತ ಅಂತರಿಕ್ಷದಲ್ಲಾಗಲಿ ಚಲಿಸುತ್ತವೆ. ಪೂರ್ಣ ದೂರವಾಯುಮಂಡಲದಲ್ಲಿ ಹಾರುವ ಕ್ಷಿಪಣಿಗಳು (ಕ್ರೂಸ್ ಮಿಸೈಲ್ಸ್) ಶಬ್ದಾತೀತ ಟರ್ಬೋಜೆಟ್ ಅಥವಾ ರ್‍ಯಾಮ್‌ಜೆಟ್ ಯಂತ್ರಗಳನ್ನು ಬಳಸಿಕೊಂಡು ಹೆಚ್ಚುಕಡಿಮೆ ನಿಯತವೇಗದಿಂದ ಸಂಚರಿಸುತ್ತವೆ. ಇವುಗಳ ಮಾರ್ಗದರ್ಶನಕ್ಕೆ ಜಡತಾವಿಧಾನ ಶ್ರೇಷ್ಠವಾದುದು. ಜೊತೆಗೆ ಸೂರ್ಯ ಅಥವಾ ನಕ್ಷತ್ರ ಅಥವಾ ಭೂಕ್ಷಿತಿಜ ಸಂವೇದಕಗಳನ್ನೂ ಇವು ಒಳಗೊಳ್ಳಬಹುದು. ಈ ಕ್ಷಿಪಣಿಗಳ ಆಗಮನವನ್ನು ದೂರದಿಂದ ರೇಡಾರ್ ವ್ಯವಸ್ಥೆಗಳು ಪತ್ತೆಹಚ್ಚಿ ರಕ್ಷಣಾ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಮುನ್ನೆಚ್ಚರಿಕೆ ನೀಡಬಲ್ಲವು. ಏಕಕಾಲಿಕವಾಗಿ ದಾಳಿಗೆ ತುತ್ತಾಗಲಿರುವ ರಾಷ್ಟ್ರದ ವಿಮಾನಗಳು ಮುಂದೆ ಹಾರಿಹೋಗಿ ಹತ್ತಿರಕ್ಕೆ ಬರುತ್ತಿರುವ ಕ್ಷಿಪಣಿಗಳ ವಿರುದ್ಧ ರಾಕೆಟ್‌ಚಾಲಿತ ಕ್ಷಿಪಣಿನಾಶಕ ಕ್ಷಿಪಣಿಗಳನ್ನು ಪ್ರಯೋಗಿಸಲೂ ಸಾಧ್ಯವಾಗಬಹುದು.




ಚಿತ್ರ 11 (a) ಗುರುತ್ವಾನುಚರ ಖಂಡಾಂತರ ಕ್ಷಿಪಣಿಯ ವರ್ಣನೆ. ಕ್ಷಿಪಣಿ ಹಾಗೂ ಅದರ ಚಾಲಕ ವ್ಯವಸ್ಥೆಯ ನಕ್ಷೆಯನ್ನು ಇಲ್ಲಿ ತೋರಿಸಿದೆ.

ಗುರುತ್ವಾನುಚರ (ಬಲಿಸ್ಟಿಕ್) ಕ್ಷಿಪಣಿಗಳು ದೂರಗಾಮಿ ಕ್ಷಿಪಣಿಗಳ ಇನ್ನೊಂದು ವರ್ಗ. ಇವುಗಳ ಯಾನದ ಬಹುಭಾಗವೆಲ್ಲ ನಿರ್ವಾತ ಅಂತರಿಕ್ಷದಲ್ಲಿ ಸಾಗುವುದು. ಇಂಥ ಕ್ಷಿಪಣಿಗಳಿಗೆ ರಾಕೆಟ್‌ಚಾಲಕ ವ್ಯವಸ್ಥೆ ಆವಶ್ಯವಾಗುತ್ತದೆ. ದಟ್ಟ ವಾಯುಮಂಡಲದಾಚೆಗೆ ಗುರುತ್ವಾನುಚರ ಕ್ಷಿಪಣಿಯನ್ನು ಎತ್ತಿ ಸಾಗಿಸಿ ಅಪೇಕ್ಷಿತ ದಿಕ್ಕಿನಲ್ಲಿ ಸಾಕಷ್ಟು ವೇಗದಿಂದ ಅದನ್ನು ಬಿಡುಗಡೆ ಮಾಡುವುದೇ ರಾಕೆಟ್ ವ್ಯವಸ್ಥೆಯ ಕೆಲಸ. ಈ ಕೆಲಸ ನಡೆಯುವಷ್ಟು ಕಾಲಾವಧಿಗೆ (ಕೆಲ ಮಿನಿಟುಗಳು ಮಾತ್ರ) ಸತ್ತ್ವಾವಧಿ (ಪವರ್ಡ್ ಫೇಸ್) ಎಂದು ಹೆಸರು. ಸತ್ತ್ವಾವಧಿಯ ಅಂತ್ಯದಲ್ಲಿ ಕ್ಷಿಪಣಿಯಿಂದ ರಾಕೆಟ್ ವ್ಯವಸ್ಥೆಯ ಬಹುಭಾಗ ಕಳಚಿಹೋಗುತ್ತದೆ. ಆ ತರುವಾಯ ಕ್ಷಿಪಣಿಯ ಚಲನ ಗುರುತ್ವಾನುಚರ (ಫ್ರೀ ಫ್ಲೈಟ್, ಗ್ರ್ಯಾವಿಟಿ ಫ್ಲೈಟ್) ಎಂದೆನಿಸಿಕೊಳ್ಳುವುದು. ಗುರುತ್ವಾನುಚರ ಚಲನಾವಧಿಯಲ್ಲಿ ಕ್ಷಿಪಣಿ ಸಾಮಾನ್ಯವಾಗಿ ಯಾವ ಸಕ್ರಿಯ ಮಾರ್ಗದರ್ಶಕನಕ್ಕೂ ಒಳಪಟ್ಟಿರುವುದಿಲ್ಲ. ನಿರ್ವಾತ ಅಂತರಿಕ್ಷದಲ್ಲಿ ಗುರುತ್ವಾನುಚರ ಚಲನೆ ತುಂಬ ಕ್ರಮಬದ್ಧವಾದ್ದರಿಂದ ಅದಕ್ಕೆ ಮಾರ್ಗದರ್ಶನದ ಅಗತ್ಯವಿಲ್ಲ. ಸತ್ತ್ವಾವಧಿಯಲ್ಲಿ ಮಾತ್ರ ಗುರುತ್ವಾನುಚರ ಕ್ಷಿಪಣಿಗಳಿಗೆ ಜಡತಾವಿಧಾನದಿಂದಾಗಲಿ ಹಲವಾರು ಭೂನಿಯಂತ್ರಣ ಕೇಂದ್ರಗಳಿಂದ ನಿರ್ದೇಶಿತವಾಗುವ ರೇಡಿಯೋ–ರೇಡಾರ್ ವಿಧಾನದಿಂದಾಗಲಿ ಮಾರ್ಗದರ್ಶನ ನೀಡಲಾಗುವುದು. 8,000 ಕಿ.ಮೀ.ಗೂ ಹೆಚ್ಚು ವ್ಯಾಪ್ತಿಯ ಗುರುತ್ವಾನುಚರ ಖಂಡಾಂತರ ಕ್ಷಿಪಣಿಗಳು (ICBM) ಎರಡು–ಮೂರು ಹಂತಗಳ ರಾಕೆಟ್ ಚಾಲಕ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತವೆ. ಇಂಥದೊಂದು ಕ್ಷಿಪಣಿಯ ಹಾರಾಟವನ್ನು ಪಕ್ಕದಲ್ಲಿ ಚಿತ್ರಿಸಲಾಗಿದೆ. (ಚಿತ್ರ 11) ಆದಿಯಲ್ಲಿ ಊರ್ಧ್ವಾಭಿಮುಖವಾಗಿ ಉಡಾಯಿಸಿದ ರಾಕೆಟ್–ಕ್ಷಿಪಣಿ ವ್ಯವಸ್ಥೆಯನ್ನು p ಬಳಿ ಅದರ ಪಿಚ್ ಅಕ್ಷದ ಮೇಲೆ ತುಸು ಹೊರಳಿಸಲಾಗುವುದು. Q ಬಳಿ ಚಾಲಕದ್ರವ್ಯಗಳು ತೀರಿಹೋದ ಪ್ರಥಮ ಹಂತದ ರಾಕೆಟ್‌ಯಂತ್ರ (ಬೂಸ್ಟರ್ ರಾಕೆಟ್) ಕಳಚಿಬೀಳಲಾರಂಭಿಸುವುದು. ಅಂತೆಯೇ R ಬಳಿ ದ್ವಿತೀಯ ಹಂತದ ಯಂತ್ರವೂ (ಸಸ್ಟೇನರ್ ರಾಕೆಟ್) ಕಳಚಿ ಹೋಗುವುದು. ಈ ವೇಳೆಗೆ ನಿರ್ವಾತ ಅಂತರಿಕ್ಷದಲ್ಲಿ ಸಂಚರಿಸತೊಡಗಿರುವ ಕ್ಷಿಪಣಿ ಅದರ ಗುರಿ ಮುಟ್ಟಲು ಆವಶ್ಯವಾಗುವಷ್ಟು ವೇಗದಲ್ಲಿ ಬಹುಪಾಲನ್ನೆಲ್ಲ ಗಳಿಸಿಕೊಂಡಿರು ತ್ತದೆ. ಇನ್ನುಳಿದ ಅಲ್ಪವೇಗ ನ್ಯೂನತೆಯನ್ನು ನಿಖರವಾಗಿ ಸರಿಪಡಿಸಲು ಕ್ಷಿಪಣಿಯಲ್ಲೇ ಅಳವಡಿಸಿರುವ ವರ್ನಿಯರ್ ರಾಕೆಟ್ ಎಂಬ ಕಿರುಯಂತ್ರವನ್ನು ಅಗತ್ಯವಿರುವಷ್ಟು ಕಾಲ ಮಾತ್ರ (ಕೆಲ ಕ್ಷಣಗಳು) ಕೆಲಸ ಮಾಡಿಸಿ S ಬಳಿ ನಿಲ್ಲಿಸಲಾಗುವುದು.




ಚಿತ್ರ 11 (b) ಕ್ಷಿಪಣಿಯ ಚಲನೆ

ಇನ್ನು ಮುಂದಕ್ಕೆ ಕ್ಷಿಪಣಿ ಗುರುತ್ವಾನುಚರ ಚಲನೆಯಲ್ಲಿ ತೊಡಗುತ್ತದೆ. ಒಂದು ವೇಳೆ ಚಿತ್ರದಲ್ಲಿ ಚುಕ್ಕೆಗಳಿಂದ ಸೂಚಿಸಿರುವ ಗಾತ್ರಕ್ಕೆ ಭೂಮಿ ಸಂಕುಚಿಸಿದ್ದರೆ ಕ್ಷಿಪಣಿ ಒಂದು ಭೂಉಪಗ್ರಹವಾಗಿ ಪರಿಣಮಿಸಿ ಕಾಲ್ಪನಿಕ ಭೂಮಿಯ ಸುತ್ತ ನಿರಂತರ ಪರಿಕ್ರಮಿಸುತ್ತಿತ್ತು. ಆದರೆ ವಾಸ್ತವಿಕ ಭೂಮಿ ಅಷ್ಟು ಚಿಕ್ಕದಲ್ಲವಾದ್ದರಿಂದ ಕ್ಷಿಪಣಿ T ಎಂದು ಸೂಚಿಸಿರುವ ನಿರ್ದಿಷ್ಟ ಗುರಿಯ ಬಳಿ ಭೂಮೇಲ್ಮೈಗೆ ಮರಳಿ ಬಂದು ಯುಕ್ತ

ಫ್ಯೂಸ್ ವ್ಯವಸ್ಥೆಯ ಪ್ರಚೋದನೆಯಿಂದ ಆಸ್ಫೋಟಿಸುವುದು. Tಗೆ ಆಗಮಿಸುವ ಮುನ್ನ ವಾಯುಮಂಡಲವನ್ನು ಮತ್ತೆ ಅದು Qಬಳಿ ಸೆಕೆಂಡಿಗೆ ಆರೆಂಟು ಕಿಮೀ. ವೇಗದಿಂದ ಪ್ರವೇಶಿಸಿರುತ್ತದೆ. ಇಷ್ಟು ಅಪಾರವೇಗದ ಚಲನೆಗೆ ವಾಯುರಾಶಿ ಒಡ್ಡುವ ಪ್ರತಿರೋಧದಿಂದಾಗಿ ಕ್ಷಿಪಣಿ ಸುಟ್ಟು ನಾಶವಾಗದೆ ಇರುವಂತೆ ಅದರ ಮರುಪ್ರವೇಶ ನಾಸಿಕ ಶಂಕು (ರೀ ಎಂಟ್ರಿನೋಸ್ ಕೋನ್) ನಿಯೋಜಿತವಾಗಿರುತ್ತದೆ. ಆದರೆ ಈ ನಿಯೋಜನೆಯ ಯಶಸ್ಸಿಗೆ ನಾಸಿಕ ಶಂಕು ಸರಿಯಾದ ಕೋನದಲ್ಲೇ ವಾಯುಮಂಡಲವನ್ನು ಪ್ರವೇಶಿಸಬೇಕಾಗುವುದು. ಇದಕ್ಕಾಗಿ ಆ ಕೋನಕ್ಕೆ ಅನುರೂಪವಾದ ರೋಲ್ ಅಕ್ಷದ ನಿಲುವನ್ನೂ ಆ ನಿಲುವನ್ನು ಭದ್ರಪಡಿಸಬಲ್ಲ ರೋಲ್ ಅಕ್ಷದ ಸುತ್ತಲ ಭ್ರಮಣಚಲನೆಯನ್ನೂ ಕ್ಷಿಪಣಿಗೆ S ಬಳಿಯೇ ಆರೋಪಿಸುತ್ತಾರೆ.

ಪ್ರಚಂಡ ವೇಗದಿಂದ ಧಾವಿಸುವ ಗುರುತ್ವಾನುಚರ ಕ್ಷಿಪಣಿಗಳ ವಿರುದ್ಧ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು ಸುಲಭವಲ್ಲ. ಉಷ್ಣಸಂವೇದಕಗಳಿಂದ ಸಜ್ಜಿತವಾಗಿರುವ ಕೆಲ ಮಿಲಿಟರಿ ಭೂಉಪಗ್ರಹಗಳು ಭೂ ಮೇಲ್ಮೈಯಿಂದ ಉಡಾಯಿಸಿದ ರಾಕೆಟ್‌ಯಂತ್ರಗಳ ಬೆಂಕಿಯ ಉಷ್ಣಕಿರಣಗಳನ್ನು ಹತ್ತಾರು ಸಹಸ್ರ ಕಿಮೀ. ದೂರದಿಂದಲೇ ಪತ್ತೆಮಾಡಿ ಗುರುತ್ವಾನುಚರ ಖಂಡಾಂತರ ಕ್ಷಿಪಣಿಗಳ ದಾಳಿ ಸಂಭವದ ಅರ್ಧ ಮುಕ್ಕಾಲು ಗಂಟೆಗಳಷ್ಟು ಮುನ್ನೆಚ್ಚರಿಕೆ ನೀಡಬಲ್ಲವು. ಆದರೆ ಪತ್ತೆಯಾದ ರಾಕೆಟ್‌ಯಂತ್ರ ನಿಜಕ್ಕೂ ಸಮರಕ್ಷಿಪಣಿಯ ಚಾಲಕವೋ ಇಲ್ಲವೆ ಶಾಂತಿಯುತ ಅಂತರಿಕ್ಷ ನೌಕೆಯ ಚಾಲಕವೋ ಎಂಬ ಸಂದೇಹ ಇತ್ಯರ್ಥವಾಗಲು ಚಾಲಿತವಾಹನದ ಗುರುತ್ವಾನುಚರ ಮಾರ್ಗರೇಖೆಯ ಲೆಕ್ಕಾಚಾರ ಅವಶ್ಯವಾಗುವುದು. ಇದಕ್ಕೆ ಮತ್ತಷ್ಟು ಕಾಲ ಹಿಡಿಸುತ್ತದೆ. ಅಲ್ಲದೆ ಮಾರ್ಗರೇಖೆಯಿಂದ ರಹಸ್ಯ ಬಯಲಾಗದ ರೀತಿಯಲ್ಲಿ ಶಾಂತಿಯುತ ಭೂಉಪಗ್ರಹದಂತೆಯೇ ಕಕ್ಷೆಯಲ್ಲಿ ಚಲಿಸಿ ಬಂದು ಕೊನೆಗೆ ಸಮರಕ್ಷಿಪಣಿಯಾಗಿ ಗುರಿಗೆ ಎರಗುವ ಆಂಶಿಕ ಕಕ್ಷಾಚರ ಕ್ಷಿಪಣಿ (ಫ್ರ್ಯಾಕ್ಷನಲ್ ಆರ್ಬಿಟಿಂಗ್ ಮಿಸೈಲ್) ಕೂಡ ನಿಯೋಜನೆಗೆ ಮೀರಿದ ಪರಿಕಲ್ಪನೆಯೇನಲ್ಲ. ರೇಡಾರುಗಳಿಂದ ಅಂತರಿಕ್ಷ ಸಂಚಾರಿ ವಾಹನ ನಿಜಕ್ಕೂ ವಿಧ್ವಂಸಕ ಕ್ಷಿಪಣಿ ಎಂದು ಖಚಿತವಾಗುವ ವೇಳೆಗೆ ರಕ್ಷಣಕಾರ್ಯಕ್ರಮಗಳ ಏರ್ಪಾಡಿಗೆ ಕೇವಲ ಹತ್ತು ಹದಿನೈದು ಮಿನಿಟುಗಳು ಉಳಿದರೆ ಹೆಚ್ಚು. ಬಳಿಕ ದಾಳಿ ಮಾಡಲು ಬರುತ್ತಿರುವ ಕ್ಷಿಪಣಿಯ ವಿರುದ್ಧ ಕ್ಷಿಪಣಿನಾಶಕ ಕ್ಷಿಪಣಿಗಳನ್ನು ಪ್ರಯೋಗಿಸಲು ಪ್ರಯತ್ನಿಸಬಹುದು. ಇಂಥ ಯೋಜನೆಗಳನ್ನು ಕಾರ್ಯಗತ ಮಾಡುವ ಸಲುವಾಗಿ ಪ್ರಬಲ ರಾಷ್ಟ್ರಗಳು ಗಣಕಯಂತ್ರಗಳಿಂದ ನಿಯಂತ್ರಿತವಾದ ಸ್ವಯಂಕ್ರಿಯಾ ವ್ಯವಸ್ಥೆಗಳನ್ನು ಸಿದ್ಧಪಡಿಸಿಟ್ಟುಕೊಂಡಿವೆ. ಆದಾಗ್ಯೂ ನ್ಯೂಕ್ಲಿಯರ್ ಮಾರಕಾಸ್ತ್ರಗಳನ್ನು ಹೊತ್ತು ಸೆಕೆಂಡಿಗೆ 8 ಕಿಮೀ. ವೇಗದಿಂದ ಧಾವಿಸುವ ಕ್ಷಿಪಣಿಗಳ ವಿರುದ್ಧ ಸಮರ್ಪಕ ರಕ್ಷಣೆ ಸಂಶಯಾಸ್ಪದವೆಂದು ಎಲ್ಲರೂ ಬಲ್ಲರು. ಯುದ್ಧೋದ್ಯಮಿಗಳಿಗೂ ಇದು ತಿಳಿದ ವಿಚಾರವಾದ್ದರಿಂದ ಅವರು ರಕ್ಷಣಾಕಾರ್ಯಕ್ರಮಗಳಿಗಿಂತ ತುಸು ಹೆಚ್ಚು ಆದ್ಯತೆಯನ್ನು ಪ್ರತೀಕಾರಕ್ರಮಗಳಿಗೆ ನೀಡಿರುವಂತಿದೆ. ಈ ಸಂಬಂಧದಲ್ಲಿ ತಪ್ಪು ಎಣಿಕೆಯ ಫಲವಾಗಿ ಕೈಗೊಳ್ಳಬಹುದಾದ ಅನ್ಯಾಯ ಪ್ರತೀಕಾರದಿಂದ ಸಂಭವಿಸುವ ಘೋರ ಪರಿಣಾಮಗಳನ್ನು ಊಹಿಸುವುದೂ ಕಷ್ಟ.. ಒಟ್ಟಿನಲ್ಲಿ ಪ್ರಪಂಚದ ನೂರಾರು ಕೋಟಿ ನಿರಪರಾಧಿ ಜನರು ಐಕಮತ್ಯವಿಲ್ಲದೆ ಹೆಚ್ಚೆಂದರೆ ಕೆಲವೇ ಲಕ್ಷಮಂದಿ ಪ್ರಧಾನ ಯುದ್ಧೋದ್ಯಮಿಗಳ ಅಂಕೆಗೆ ಸಿಲುಕಿ ನಿಸ್ಸಹಾಯಕರಾಗಿ ನರಳುತ್ತಿರುವ ವಿಪರ್ಯಾಸ ಶೋಚನೀಯ. ಸಮರಕ್ಷಿಪಣಿಗಳ ವಿರುದ್ಧ ಶಾಶ್ವತ ರಕ್ಷಣೆ ದೊರಕುವುದು ಯುದ್ಧೋದ್ಯಮದ ನಿರ್ಮೂಲನದಿಂದಲೇ ವಿನಾ ಕ್ಷಿಪಣಿನಾಶಕ ಕ್ಷಿಪಣಿಗಳಿಂದಲ್ಲ.

**ಐತಿಹಾಸಿಕ ಟಿಪ್ಪಣಿ:** ರಾಕೆಟ್ಟು ಕ್ಷಿಪಣಿಗಳ ಇತಿಹಾಸಕಾರ ವಿಲ್ಲಿ ಲೇ ಪ್ರಕಾರ ಪೆಟ್ಲುಪ್ಪು, ಗಂಧಕ, ಇದ್ದಲುಪುಡಿಗಳಿಂದ ಚಾಲಿತವಾಗುವ ರಾಕೆಟ್ಟುಗಳನ್ನು (ಬಾಣಬಿರುಸುಗಳು) ಮೊತ್ತಮೊದಲು ಸುಮಾರು 1220ರಲ್ಲಿ ಚೀನೀಯರು ಕಂಡುಹಿಡಿದರು. ಕೆಲವೇ ದಶಕಗಳಲ್ಲಿ ಈ ಕ್ಷಿಪಣಿಗಳ ಪರಿಚಯ ಪ್ರಪಂಚದ ಇತರ ಭಾಗಗಳಿಗೂ ವ್ಯಾಪಿಸಿ, 13-14ನೆಯ ಶತಮಾನಗಳಲ್ಲಿ ಯುರೋಪಿನ ಸೈನಿಕರು ಅವನ್ನು ಶತ್ರುನೆಲೆಗಳಿಗೆ ಅಗ್ನಿಸ್ಪರ್ಶಿಸುವ ಸಾಧನವಾಗಿ ಬಳಸತೊಡಗಿದರು. 18ನೆಯ ಶತಮಾನದ ವೇಳೆಗೆ ಯುದ್ಧ ಕಾರ್ಯಾಚರಣೆಯಲ್ಲಿ ರಾಕೆಟ್ ಕ್ಷಿಪಣಿಗಳು ಫಿರಂಗಿ ಗುಂಡುಗಳಷ್ಟು ಪರಿಣಾಮಕಾರಿಯಲ್ಲವೆಂಬ ಅಭಿಪ್ರಾಯ ಸೈನಿಕವಲಯಗಳಲ್ಲಿ ಮೂಡಿಬಂದಿತ್ತು. ಆದರೆ ಆ ಶತಮಾನದ ಕೊನೆಯಲ್ಲಿ ಕರ್ನಾಟಕ ಹಿಂದಿನ ಮೈಸೂರು ರಾಜ್ಯದ ಹೈದರ್ ಆಲಿ ನಡೆಸಿದ ರಾಕೆಟ್ಟುಗಳ ಫಲಪ್ರದ ಪ್ರಯೋಗದಿಂದ ಬ್ರಿಟಿಷ್ ಸೇನೆ ಬಲವಾದ ಪೆಟ್ಟುತಿಂದು ಮೂರು ಸಲ ಸೋಲಬೇಕಾಗಿ ಬಂದಿತು. ಹೈದರ್ ಆಲಿಯ ರಾಕೆಟ್ಟುಗಳಿಗೆ ಸು. 1 ಕಿಮೀ. ದೂರ ಹಾರುವ ಸಾಮರ್ಥ್ಯವಿತ್ತು. ಇವುಗಳ ಯಶಸ್ಸಿನ ಸುದ್ದಿಯನ್ನು ಕೇಳಿತಿಳಿದ ವಿಲಿಯಂ ಕಾಂಗ್ರೀವ್ ಎಂಬ ಇಂಗ್ಲೆಂಡಿನ ರಾಯಲ್ ಆರ್ಟಿಲರಿ ಕ್ಯಾಪ್ಟನ್ನನೊಬ್ಬ ರಾಕೆಟ್ ರಚನೆಯ ಬಗ್ಗೆ ಹೊಸದಾಗಿ ಸಂಶೋಧನೆಗಳನ್ನು ಕೈಗೊಂಡು ಬ್ರಿಟಿಷ್ ಸೇನೆಯ ಉಪಯೋಗಕ್ಕಾಗಿ 2-3 ಕಿಮೀ ದೂರ ಹಾರಬಲ್ಲ ಅಗ್ನಿಸ್ಪರ್ಶಕ ರಾಕೆಟ್ಟುಗಳನ್ನು ತಯಾರಿಸಿದ. 1807ರಲ್ಲಿ ಸು. 25,000 ಕಾಂಗ್ರೀವ್ ರಾಕೆಟುಗಳಿಂದ ಕೋಪನ್‌ಹೇಗನ್ ನಗರದ ಬಹುಭಾಗವನ್ನೆಲ್ಲ ಬ್ರಿಟಿಷ್ ಪಡೆಗಳು ಭಸ್ಮಗೊಳಿಸಿದುವು. ಇಂಥ ಹಳೆಯ ಕಾಲದ ರಾಕೆಟ್ಟುಗಳಿಗೆ ಬಂಧಿಸಿರುತ್ತಿದ್ದ ಉದ್ದನೆಯ ಕೋಲುಗಳು ಹಾರುವಾಗ ಅವಕ್ಕೆ ನಿಲವು ಭದ್ರತೆಯನ್ನು ನೀಡುತ್ತಿದ್ದರು. ಕೆಲ ದಶಕಗಳ ಬಳಿಕ ಬಾಗಿದ ತಗಡುಗಳನ್ನು ಜೋಡಿಸಿರುವ ತಿರುಗು ವ್ಯವಸ್ಥೆಯನ್ನು ನಿಷ್ಕಾಸಾನಿಲಗಳ ಹಾದಿಯಲ್ಲಿ ಅಳವಡಿಸಿ ರಾಕೆಟ್ಟಿನ ಹಾರಾಟಕ್ಕೆ ಭದ್ರತೆ ನೀಡುವ ಪರ್ಯಾಯ ಪದ್ಧತಿ ಅಮೆರಿಕದ ವಿಲಿಯಂ ಹೇಲ್ ಎಂಬಾತನಿಂದ ಸಲುವಳಿಗೆ ಬಂದಿತು. ಈ ಪದ್ಧತಿಯಲ್ಲಿ ರಾಕೆಟ್ ಅದರ ರೋಲ್ ಅಕ್ಷದ ಸುತ್ತ ಗಿರಗಿರನೆ ತಿರುಗತೊಡಗಿ ಆ ಅಕ್ಷದ ದಿಕ್ಕು ಸ್ಥಿರೀಕೃತವಾಗುತ್ತದೆ.

19ನೆಯ ಶತಮಾನದ ಮಿಲಿಟರಿ ರಾಕೆಟ್ಟುಗಳು 1-1.5 ಮೀಟರಿಗಿಂತ ಉದ್ದವಾಗಿಯಾಗಲಿ 20-25 ಕೆ.ಜಿ.ಗಳಿಗಿಂತ ತೂಕವಾಗಿಯಾಗಲಿ ಇರುತ್ತಿರಲಿಲ್ಲ. ದೈತ್ಯಗಾತ್ರ ತೂಕಗಳ ಆಧುನಿಕ ರಾಕೆಟ್ಟುಗಳೆಲ್ಲ ಎರಡನೆಯ ಮಹಾಯುದ್ಧದ ಕಾಲದಲ್ಲಿ ಮತ್ತು ಅದಕ್ಕಿಂತ ಮುಖ್ಯವಾಗಿ ಆ ಯುದ್ಧದ ತರುವಾಯ ರಚಿತವಾದವು. 1944ರಲ್ಲಿ ಲಂಡನ್ ನಗರವನ್ನು ದಾಳಿಮಾಡಿದ ಜರ್ಮನಿಯ V-2 ಕ್ಷಿಪಣಿಗಳನ್ನು ದೈತ್ಯರಾಕೆಟ್ಟುಗಳ ಸಂತತಿಯ ಮೂಲ ಪ್ರತಿನಿಧಿಯೆಂದು ಇತಿಹಾಸಕಾರರು ಸಾಮಾನ್ಯವಾಗಿ ಪರಿಗಣಿಸುತ್ತಾರೆ. ಇವನ್ನು ಖ್ಯಾತ ರಾಕೆಟ್ ತಂತ್ರಜ್ಞ ವರ್ನರ್ ಫಾನ್ ಬ್ರಾನ್‌ನ ನಿರ್ದೇಶನದಲ್ಲಿ ಬಾಲ್ಟಿಕ್ ತೀರಪ್ರದೇಶದ ಪ್ಯಾನಮುಂಡ ಎಂಬೆಡೆ ನಿಯೋಜಿಸಿ ರಚಿಸಲಾಗಿತ್ತು. ಸುಮಾರು 14 ಮೀಟರ್ ಎತ್ತರವಿದ್ದ V-2 ಕ್ಷಿಪಣಿ ದ್ರವ ಆಕ್ಸಿಜನ್ ಮತ್ತು ಆಲ್ಕೊಹಾಲ್ ಚಾಲಕದ್ರವ್ಯಗಳ ಸಮೇತ 13 ಟನ್ ತೂಗುತ್ತಿತ್ತು. ಅದರ ಗರಿಷ್ಠ ಕ್ಷಿತಿಜೀಯ ವ್ಯಾಪ್ತಿ (ಹಾರಿಸಾಂಟಲ್ ರೇಂಜ್) 300 ಕಿಮೀ; ಗರಿಷ್ಠ ವಿಭವಾತ್ಮಕ ಊರ್ಧ್ವವ್ಯಾಪ್ತಿ (ಪೊಟೆನ್ಷಿಯಲ್ ಆಲ್ಟಿಟ್ಯೂಡ್) 150 ಕಿಮೀ; ಗರಿಷ್ಠವೇಗ ಸೆಕೆಂಡಿಗೆ 0.9 ಕಿಮೀ; ಒಯ್ಯುವ ಸ್ಫೋಟಕಾಸ್ತ್ರದ ತೂಕ 1 ಟನ್ ಸ್ಫೋಟಕಾಸ್ತ್ರಗಳನ್ನು ಹೊತ್ತು ಮಾನವಚಾಲಕರಿಲ್ಲದೆ ವಾಯುಮಂಡಲದಲ್ಲಿ ಹಾರಬಲ್ಲ ವಿಮಾನಮಾದರಿ ಕ್ಷಿಪಣಿಗಳು ಎರಡನೆಯ ಮಹಾಯುದ್ಧದ ಕಾಲದಲ್ಲಿ ಮೊದಲಬಾರಿಗೆ ನಿರ್ಮಾಣವಾದವು. ಜರ್ಮನರ V-1 ಕ್ಷಿಪಣಿ ಆ ಬಗೆಯದು. ಈ V-1ನ್ನು ಟರ್ಬೋಜೆಟ್ ರ‍್ಯಾಮ್‌ಜೆಟ್ಟುಗಳಷ್ಟು ದಕ್ಷವಲ್ಲದ ಪಲ್ಸ್‌ಜೆಟ್ ಎಂಬ ಹೆಸರಿನ ಒಂದು ಚಾಲಕಯಂತ್ರ (ಶಬ್ದಕ್ಕಿಂತ ಕಡಿಮೆ ವೇಗದಲ್ಲಿ) ನಡೆಸುತ್ತಿತ್ತು.

ಯುದ್ಧಾನಂತರ ಅಮೆರಿಕದಲ್ಲಿ ನಿರ್ಮಿತವಾಗಿರುವ ಜ್ಯೂಪಿಟರ್, ಥೋರ್, ಅಟ್ಲಾಸ್, ಟೈಟನ್ ಮುಂತಾದ ರಾಕೆಟ್‌ಚಾಲಿತ ಕ್ಷಿಪಣಿಗಳೂ ಸೋವಿಯತ್ ಒಕ್ಕೂಟದ ಅನುರೂಪ ವ್ಯವಸ್ಥೆಗಳೂ V-2 ಕ್ಕಿಂತ ತುಂಬ ದೊಡ್ಡವು. ಹಂತಗಳಲ್ಲಿ ಕೆಲಸಮಾಡಿದಾಗ ಇವು ಯುಕ್ತ ತೂಕದ ವಾಹನಗಳನ್ನು ಭೂಉಪಗ್ರಹಗಳಾಗಿ ಕಕ್ಷೆಯಲ್ಲಿ ಚಿಮ್ಮಿಬಿಡಬಲ್ಲವು. ಅಥವಾ ಚಂದ್ರಾದಿ ಆಕಾಶಕಾಯಗಳೆಡೆ ಕಳುಹಿಸಬಲ್ಲವು. ಅಟ್ಲಾಸ್ ರಾಕೆಟ್ ವ್ಯವಸ್ಥೆಯ ತೂಕ (ಚಾಲಕ ದ್ರವ್ಯಗಳ ಸಮೇತ) 120 ಟನ್(ಅದರಲ್ಲಿ ಏಕಕಾಲಿಕವಾಗಿ ಕೆಲಸ ಮಾಡುವ ಮೂರು ಯಂತ್ರಗಳುಂಟು), ಅದರ ಎತ್ತರ 25 ಮೀಟರುಗಳು. ಮಾನವಯಾತ್ರಿಕರನ್ನು ಬೇರೆ ಗ್ರಹೋಪಗ್ರಹಗಳಿಗೆ ಒಯ್ದು ಬಳಿಕ ಭೂಮಿಗೆ ಹಿಂತಿರುಗಿಸುವ ರಾಕೆಟ್ಟುಗಳು ಇನ್ನೂ ಹಲವಾರು ಪಟ್ಟು ದೊಡ್ಡವಿರಬೇಕಾಗುವುದು. ಮೊತ್ತಮೊದಲ ಬಾರಿಗೆ ಮಾನವನನ್ನು ಚಂದ್ರಲೋಕಕ್ಕೆ ಕೊಂಡೊಯ್ದ ಸ್ಯಾಟರ್ನ್–ಅಪೋಲೊ ವ್ಯವಸ್ಥೆಯ ತೂಕ ಯಾನದ ಪ್ರಾರಂಭದಲ್ಲಿ (ಚಾಲಕ ದ್ರವ್ಯಗಳೂ ಸೇರಿದಂತೆ) 2,900 ಟನ್ನುಗಳಿಷ್ಟಿದ್ದಿತು; ಅದರ ಎತ್ತರ 110 ಮೀಟರುಗಳು; ಏಕಕಾಲಿಕವಾಗಿ ಕೆಲಸಮಾಡುವ ಐದು ಯಂತ್ರಗಳನ್ನುಳ್ಳ ಈ ಹಂತದ ತೂಕ 2,270 ಟನ್ (ದ್ರವ ಆಕ್ಸಿಜನ್: ಸೀಮೆಎಣ್ಣೆ: ಯಂತ್ರಗಳ ಕಟ್ಟಡ 1480:660:130). ಮಂಗಳಗ್ರಹದ ಪ್ರವಾಸಕ್ಕೆ ಸ್ಯಾಟರ್ನ್–ಅಪೋಲೊವಿನ ಐದರಷ್ಟು ತೂಕದ ಚಾಲಕವ್ಯವಸ್ಥೆ ಅವಶ್ಯವಾಗುವುದು. ಇಂಥ ಬೃಹದ್ವ್ಯವಸ್ಥೆಗಳನ್ನೆಲ್ಲ ನಿರ್ಮಿಸಿ ಅವುಗಳ ಯಾನಕ್ಕೆ ಅದ್ಭುತ ನಿಖರತೆಯ ಮಾರ್ಗದರ್ಶನ ನೀಡುವ ಕೌಶಲ ಮಾನವನಿಗೆ ಇಂದು ಸಿದ್ಧಿಸಿದೆ. ಆದ್ದರಿಂದ ಎರಡನೆಯ ಮಹಾಯುದ್ಧದಿಂದೀಚೆಗೆ ಆತ ನಡೆದು ಬಂದಿರುವ ದಾರಿ ಬಲು ದೀರ್ಘವೇ ಆಗಿರುವುದು ಸುಸ್ಪಷ್ಟ. ಕಾಂಗ್ರೀವ್ ಅಗ್ನಿಸ್ಪರ್ಶಕಗಳಿಂದ V-2 ವರೆಗಿನ ಪಯಣ ಕೋಲಾಹಲಕಾರಿಯೆನಿಸಿದರೆ V-2 ರಿಂದ ಸ್ಯಾಟರ್ನ್ ವರೆಗಿನದು ಒಂದು ಮಹಾಪವಾಡ. ಇವೆರಡರ ವ್ಯತ್ಯಾಸ ಪರಿಮಾಣಕ್ಕಷ್ಟೇ ಸೀಮಿತವಾಗುವುದಾದರೆ ಅದು ಮಾನದ ಸ್ವಸಮಾಧಿಯತ್ತ ಧಾವಿಸುತ್ತಿರುವ ಘೋರ ವೇಗೋತ್ಕರ್ಷದ ಅಳತೆಯೂ ಆದೀತು. ಆದರೆ ಮಾರಕ ಉದ್ದೇಶಗಳ ಬದಲು ಮೂಲದಿಂದಲೇ ಪೂರ್ಣ ಭಿನ್ನ ದಿಸೆಯ ವೈಜ್ಞಾನಿಕ ಅನ್ವೇಷಣೆಗಾಗಿ ಸ್ಯಾಟರ್ನ್ ವ್ಯವಸ್ಥೆ ನಿಯೋಜಿತವಾದದ್ದು ಒಂದು ಆಶಾದಾಯಕ ಚಿಹ್ನೆ. ಯುದ್ಧೋದ್ಯಮದ ವಿರುದ್ಧ ಗಳಿಕೆಯಾಗಿರುವ ಈ ಕಿರುವಿಜಯವನ್ನು ಮುಂದಕ್ಕೆ ಇನ್ನೂ ಬಲಪಡಿಸಿ ಶಾಶ್ವತೀಕರಿಸುವುದು ಆಧುನಿಕ ಮಾನವನ ಮೇಲಿರುವ ಹೊಣೆ.

(ಎಸ್.ಆರ್.ಎಂ)

**ಕ್ಷಿಪ್ರಾಕ್ರಮಣ :** ಪ್ರಸಕ್ತ ಸರ್ಕಾರವೊಂದನ್ನು ಉರುಳಿಸಿ ಅಧಿಕಾರವನ್ನು ಆಕ್ರಮಿಸಿಕೊಳ್ಳುವ ಉದ್ದೇಶದಿಂದ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಕೈಗೊಳ್ಳುವ ಹಠಾತ್ ಬಲಪ್ರಯೋಗ (ಕೂ ಡೆಟಾ). ಜಾರಿಯಲ್ಲಿರುವ ಕಾನೂನಿನ ಅಥವಾ ಸಂವಿಧಾನದ

ನಿಯಮಗಳನ್ನು ಉಲ್ಲಂಘಿಸಿ ನಡೆಸುವ ಈ ಕಾರ್ಯಾಚರಣೆ ಹೆಚ್ಚು ಹಿಂಸಾತ್ಮಕವಾಗಿರುವುದಿಲ್ಲ. ಇತಿಹಾಸದಲ್ಲಿ ಕ್ಷಿಪ್ರಾಕ್ರಮಣ ಪ್ರಸಂಗಗಳು ಹೇರಳವಾಗಿ ಸಿಗುತ್ತವೆ. 1799ರ ನವೆಂಬರ್ 9ರಂದು ನೆಪೋಲಿಯನನ ನೇತೃತ್ವದಲ್ಲಿ ಫ್ರಾನ್ಸಿನಲ್ಲಿ ನಡೆದ ಆಕ್ರಮಣ ಒಂದು ಪ್ರಸಿದ್ಧ ಉದಾಹರಣೆ. ಫ್ರಾನ್ಸಿನ ದ್ವಿತೀಯ ಗಣರಾಜ್ಯ ಸಭೆಯನ್ನು ವಿಸರ್ಜಿಸಲು 1851ರ ಡಿಸೆಂಬರ್ 2ರಂದು ಲೂಯಿ ನೆಪೋಲಿಯನ್ ಕೈಗೊಂಡ ಕ್ರಮ ಇನ್ನೊಂದು. ಆಲಿವರ್ ಕ್ರಾಮ್ವೆಲನಿಂದ ಇಂಗ್ಲೆಂಡಿನ ಪಾರ್ಲಿಮೆಂಟ್ ವಿಸರ್ಜನೆ (20, ಏಪ್ರಿಲ್, 1653), ಮುಸೊಲೀನಿಯ ನೇತೃತ್ವದಲ್ಲಿ ಫ್ಯಾಸಿಸ್ಟರಿಂದ ರೋಂ ಆಕ್ರಮಣ (27, ಅಕ್ಟೋಬರ್, 1922), ಹಿಟ್ಲರನ ಕೈವಾಡದಿಂದ ಬರ್ಲಿನಿನಲ್ಲಿ ನಾಟ್ಸಿ ದಾಂದಲೆ (ಮಾರ್ಚ್ 1933) ಫ್ರಾನ್ಸಿನ ಮೂರನೆಯ ಗಣರಾಜ್ಯವನ್ನು ವಿಸರ್ಜಿಸಿ ಮಾರ್ಷಲ್ ಪೆಟೇನ ಅಧ್ಯಕ್ಷತೆಯಲ್ಲಿ ಜರ್ಮನ್ ಕೈಗೊಂಬೆ ಸರ್ಕಾರ ಸ್ಥಾಪನೆ (ಜುಲೈ 1940)–ಇವೆಲ್ಲವೂ ವಿಶಾಲಾರ್ಥದಲ್ಲಿ ಕ್ಷಿಪ್ರಾಕ್ರಮಣಗಳೇ. ಸರ್ಕಾರದ ಮುಖ್ಯರನ್ನು ಕಿತ್ತುಹಾಕಿ ಬೇರೆಯವರು ಅಲ್ಲಿ ಕೂರುವುದು ಕ್ಷಿಪ್ರಾಕ್ರಮಣದ ಸೀಮಿತ ಅರ್ಥ. ಕ್ರಾಂತಿಗೂ ಕ್ಷಿಪ್ರಾಕ್ರಮಣಕ್ಕೂ ಮೂಲಭೂತವಾದ ವ್ಯತ್ಯಾಸಗಳಿವೆ. ಕ್ರಾಂತಿಯಂತೆ ಇದರಲ್ಲಿ ಸಾಮಾಜಿಕ ಆರ್ಥಿಕ ಧೋರಣೆಗಳು ಮೂಲತಃ ವ್ಯತ್ಯಾಸವಾಗುವುದಿಲ್ಲ. ವರ್ಗಗಳ ನಡುವೆ ಅಥವಾ ಗುಂಪುಗಳ ನಡುವೆ ಅಧಿಕಾರದ ವ್ಯಾಪಕವಾದ ಪುನರ್‌ಹಂಚಿಕೆಯಾಗುವುದಿಲ್ಲ. ಮಧ್ಯ ಮತ್ತು ದಕ್ಷಿಣ ಅಮೆರಿಕ, ಪಶ್ಚಿಮಏಷ್ಯ, ಆಫ್ರಿಕ ಮುಂತಾದ ಪ್ರದೇಶಗಳ ಹಲವು ರಾಜ್ಯಗಳಲ್ಲೂ ಪಾಕಿಸ್ತಾನ, ಮ್ಯಾನ್ಮಾರ್, ಇಂಡೋನೇಷ್ಯ ಮುಂತಾದ ದೇಶಗಳಲ್ಲೂ ಎರಡನೆಯ ಮಹಾಯುದ್ಧದಿಂದ ಈಚೆಗೆ ಕ್ಷಿಪ್ರಾಕ್ರಮಣಗಳು ಜರುಗಿವೆ. (ಕೆ.ಎಂ.ಪಿ.)

**ಕ್ಷೀಣತೆ :** ಪ್ರಾಣಿಗಳಲ್ಲಿ ಕೆಲವು ಅವಯವಗಳು ಅಥವಾ ಅಂಗಾಂಗಗಳು ನಶಿಸಿಹೋಗಿರುವ ಸ್ಥಿತಿ (ಡಿಜೆನೆರೇಷನ್). ಇದನ್ನು ಅಕಶೇರುಕ ಹಾಗೂ ಕಶೇರುಕಗಳೆರಡರಲ್ಲೂ ಕಾಣಬಹುದು. ಪ್ರಾಣಿಗಳ ಜೀವನಕ್ರಮವನ್ನು ಅವಲಂಬಿಸಿ ಅನೇಕ ರೀತಿಯ ಕ್ಷೀಣತೆಗಳನ್ನು ಕಾಣಬಹುದು. ಸ್ವತಂತ್ರ್ಯ ಜೀವಿಗಳಲ್ಲಿ ಒಂದು ರೀತಿಯಾದರೆ ಪರಾವಲಂಬಿಗಳಲ್ಲಿ ಮತ್ತೊಂದು ರೀತಿಯ ನಶಿಸುವಿಕೆಯನ್ನು ಕಾಣಬಹುದು. ಕೆಲವು ಪರಾವಲಂಬಿಗಳು ಆತಿಥೇಯ ಪ್ರಾಣಿಗಳಿಗೆ ಎಷ್ಟು ಹೊಂದಿಕೊಂಡಿವೆ ಎಂದರೆ ಅವಿಲ್ಲದೆ ಜೀವಿಸಲಾರವು. ಈ ಹೊಂದಾಣಿಕೆಯಿಂದಾಗಿ ಪರಾವಲಂಬಿಗಳಲ್ಲಿ ಕೆಲವು ವಿಶೇಷ ಮಾರ್ಪಾಡುಗಳು ಕಂಡುಬಂದರೂ ಹಲವು ಅಂಗಾಂಗಗಳು ಕ್ಷೀಣಿಸಿರಬಹುದು ಅಥವಾ ನಶಿಸಿಹೋಗಿರಬಹುದು. ಪರಾವಲಂಬಿಗಳಲ್ಲದ ಪ್ರಾಣಿಗಳಲ್ಲಿ ವಿವಿಧರೀತಿಯ ಕ್ಷೀಣತೆಯನ್ನು ಕಾಣಬಹುದು. ಕ್ಷೀಣತೆ ಯಾವುದೇ ಒಂದು ಅಂಗಕ್ಕೆ ಸೀಮಿತವಾಗಿಲ್ಲ. ಚಲನಾಂಗಗಳ ಕ್ಷೀಣತೆಯನ್ನು ತೆಗೆದುಕೊಂಡರೆ, ಪ್ರೋಟೊಜೋವ ಗುಂಪಿನಲ್ಲೇ ಅನೇಕ ರೀತಿಯನ್ನು ಕಾಣಬಹುದು. ಮಲೇರಿಯ ರೋಗವನ್ನು ಉಂಟುಮಾಡುವ ಪ್ಲಾಸ್ಮೋಡಿಯಮ್‌ನಲ್ಲಿ ಯಾವ ರೀತಿಯ ಚಲನಾಂಗವೂ ಇಲ್ಲ. ಪರಾವಲಂಬಿಗಳಾದ ಇವುಗಳಲ್ಲಿ ಆತಿಥೇಯ ಪ್ರಾಣಿಯ ರಕ್ತವೇ ಇವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುತ್ತದೆ. ಜಂತುಹುಳುಗಳಲ್ಲೂ ಚಲನಾಂಗಗಳಿಲ್ಲ; ಅಲ್ಲದೆ ಇವುಗಳಲ್ಲಿ ಜ್ಞಾನೇಂದ್ರಿಯಗಳೂ ಬಹುಮಟ್ಟಿಗೆ ಕುಂಠಿತವಾಗಿವೆ. ಲಾಡಿಹುಳುಗಳಲ್ಲಿ ಜನನಾಂಗಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಅಂಗಗಳು ಸಂಪೂರ್ಣ ನಾಶವಾಗಿವೆ. ಅನ್ನನಾಳದ ಸುಳಿವೇ ಇಲ್ಲ; ಕಶೇರುಕದ ಕರುಳಿನಲ್ಲಿ ವಾಸಿಸುವ ಇವು ಚರ್ಮದ ಮೂಲಕ ಆಹಾರ ಹೀರಿಕೊಳ್ಳುವುವು.

ಸಂಧಿಪದಿಗಳಲ್ಲಿ ಕಠಿಣಚರ್ಮಿಗಳಲ್ಲಿ ಲರ್ನಿಯ ಮತ್ತು ಸ್ಯಾಕ್ಯುಲೈನ ಮುಂತಾದುವನ್ನು ಉದಹರಿಸಬಹುದು. ಗಂಡು ಲರ್ನಿಯ ಸ್ವೇಚ್ಛಾಚಾರಿ. ಆದರೆ ಹೆಣ್ಣು ಲರ್ನಿಯ ಮಾತ್ರ ಪ್ರೌಢಾವಸ್ಥೆಯಲ್ಲಿ ಪರಾವಲಂಬಿ. ಡಿಂಬಾವಸ್ಥೆಯಲ್ಲಿ ಇದಕ್ಕೆ ಎಲ್ಲ ಉಪಾಂಗಗಳಿದ್ದರೂ ಬೆಳೆಯುತ್ತ ಪ್ರೌಢಾವಸ್ಥೆಗೆ ಬರುವ ವೇಳೆಗೆ ಹಲವು ಉಪಾಂಗಗಳು ನಶಿಸಿ ಮತ್ತೆ ಕೆಲವು ರೂಪಾಂತರ ಹೊಂದಿ ಮೀನಿನ ದೇಹಕ್ಕೆ ಅಂಟಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಮಾರ್ಪಾಡಾಗುತ್ತವೆ. ಏಡಿಯ ಮೇಲೆ ಪರಾವಲಂಬಿಯಾಗಿರುವ ಸ್ಯಾಕ್ಯುಲೈನದಲ್ಲಿ ಡಿಂಬಾವಸ್ಥೆಯ ಅನಂತರ ಪರಾವಲಂಬಿ ಜೀವನ ಆರಂಭವಾಗುತ್ತದೆ. ಇದರ ಡಿಂಬ ಏಡಿಯ ಹೊಟ್ಟೆಗೆ ಅಂಟಿಕೊಂಡು ತನ್ನ ಉಪಾಂಗಗಳನ್ನೂ ಹೊಟ್ಟೆಯ ಭಾಗವನ್ನೂ ಕಳೆದುಕೊಂಡು ದೇಹದ ಮಿಕ್ಕ ಭಾಗದಿಂದ ಏಡಿಯ ಹೊಟ್ಟೆಯ ಮೇಲೆ ಬೆಳೆಯತೊಡಗುತ್ತದೆ. ಕ್ರಮೇಣ ಬೆಳೆದು ಬೂಷ್ಟಿನ ಮುದ್ದೆಯ ಹಾಗೆ ಆಗುತ್ತದೆ. ಸ್ಯಾಕ್ಯುಲೈನದ ದೇಹದ ತಳಭಾಗದಿಂದ ಬೇರುಗಳ ರೂಪದ ರಚನೆಗಳು ಹೊರಟು ಏಡಿಯ ಅಂಗಾಂಗಗಳನ್ನು ಹೊಕ್ಕುತ್ತವೆ, ಇವುಗಳಿಂದ ಸ್ಯಾಕ್ಯುಲೈನ ಆಹಾರ ಪೂರೈಕೆಯಾಗುತ್ತದೆ.

ಕಶೇರುಕಗಳಲ್ಲಿ ಕಾಣಬರುವ ಕ್ಷೀಣತೆ ಬೇರೆ ರೀತಿಯದು. ಇವುಗಳಲ್ಲಿ ಮಿದುಳು, ಜ್ಞಾನೇಂದ್ರಿಯಗಳು, ಕೈಕಾಲುಗಳು, ಹಲ್ಲುಗಳು ಮುಂತಾದವು ಕ್ಷೀಣವಾಗಿರಬಹುದು. ಆಳವಾದ ಸಮುದ್ರದಲ್ಲಿ ವಾಸಿಸುವ ಕೆಲವು ಮೀನುಗಳಲ್ಲಿ ಇಡೀ ದೇಹವೇ ಕ್ಷೀಣಿಸಿ ದುರ್ಬಲವಾಗಿರುತ್ತದೆ. ಮತ್ತೆ ಕೆಲವಲ್ಲಿ ಕಣ್ಣುಗಳು ವಿಪರೀತ ಚಿಕ್ಕವಾಗಿರಬಹುದು ಇಲ್ಲವೆ ಪೂರ್ಣ ನಾಶವಾಗಿರಬಹುದು. ಜಲಾಂತರ್ಗುಹೆಗಳಲ್ಲಿ ವಾಸಿಸುವ ಕೆಲವು ಮೀನುಗಳು ಅರೆ ಇಲ್ಲವೆ ಪೂರ್ಣ ಕುರುಡಾಗಿರಬಹುದು. ಗ್ರೋನಿಯಸ್ ಎಂಬ ಮೀನು ಅರೆಗುರುಡಾದರೆ, ಆಂಬ್ಲಿಯೋಪ್ಸಿಸ್ ಎಂಬುದು ಪೂರ್ಣ ಕುರುಡು. ಕೋಲೋಗ್ನ್ಯಾಸ್ಟರ್ ಮೀನಿನಲ್ಲಿ ಕಣ್ಣುಗಳಿದ್ದರೂ ಅವಕ್ಕೆ ದೃಷ್ಟಿ ಸಾಮರ್ಥ್ಯವಿಲ್ಲ. ದ್ವಿಚರಿಗಳಲ್ಲಿ ಯೂರೊಡೀಲ್ ಗುಂಪಿನ ಕೆಲವು ಪ್ರಭೇದಗಳಲ್ಲೂ ಈ ರೀತಿಯ ಕ್ಷೀಣತೆಯನ್ನು ಕಾಣಬಹುದು. ಗುಹೆಗಳಲ್ಲಿ ವಾಸಿಸುವ ಟಿಫ್ಲೊಟ್ರೈಟಾನ್‌ನಲ್ಲಿ ಡಿಂಬಾವಸ್ಥೆಯಲ್ಲಿ ಚೆನ್ನಾಗಿರುವ ಕಣ್ಣುಗಳು ಪ್ರೌಢಾವಸ್ಥೆಗೆ ಬರುವ ವೇಳೆಗೆ ರೆಪ್ಪೆಗಳೆರಡೂ ಕೂಡಿಕೊಂಡು ಕುರುಡಾಗಿಬಿಡುತ್ತವೆ. ಇದರ ಜೊತೆಗೆ ಕಣ್ಣಿನ ಒಳರಚನೆಯೂ ಮಾರ್ಪಡುತ್ತದೆ. ಟಿಫ್ಲೊಮೋಲ್ಗೆಯ ಡಿಂಬಾವಸ್ಥೆಯಲ್ಲೇ ದುರ್ಬಲ ಕಣ್ಣುಗಳಿವೆ. ಇದರಲ್ಲಿ ಕಣ್ಣಿನ ಮಾಂಸಖಂಡಗಳೇ ಇಲ್ಲ. ಇದರಿಂದಾಗಿ ಕಣ್ಣು ಚರ್ಮದಿಂದ ಯಾವಾಗಲೂ ಮುಚ್ಚಿಕೊಂಡಿರುತ್ತವೆ. ಗುಹೆಗಳಲ್ಲಿ ವಾಸಿಸುವ ಪ್ರೋಟಿಯಸ್ ಎಂಬ ದ್ವಿಚರಿಯಲ್ಲಿ ಸಹ ಕಣ್ಣಿನ ಕ್ಷೀಣತೆಯನ್ನು ಗಮನಿಸಬಹುದು. ಬೆಳಕಿಲ್ಲದ ಸ್ಥಳಗಳಲ್ಲೇ ಇದು ವಾಸಿಸುವುದರಿಂದ ಇದರ ಕಣ್ಣುಗಳು ಕ್ರಮೇಣ ಕ್ಷೀಣಿಸಿವೆ ಎಂದು ವಿಕಾಸವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ಸ್ತನಿಗಳಲ್ಲೂ ಅನೇಕ ರೀತಿಯ ಕ್ಷೀಣತೆಗಳಿವೆ. ಸಾಧಾರಣವಾಗಿ ಎಲ್ಲ ಸ್ತನಿಗಳಲ್ಲೂ ಹಲ್ಲುಗಳಿವೆ. ಆದರೆ ಇರುವೆಯನ್ನು ತಿನ್ನುವ ಸ್ತನಿಗಳಲ್ಲಿ ಹಲ್ಲುಗಳು ದುರ್ಬಲವಾಗಿವೆ ಅಥವಾ ಸಂಪೂರ್ಣ ನಾಶಗೊಂಡಿವೆ. ತಿಮಿಂಗಿಲಗಳಲ್ಲಿಯೂ ಹಲ್ಲುಗಳ ದುರ್ಬಲತೆಯಿದೆ. ಒಂದು ಬಗೆಯ ತಿಮಿಂಗಿಲಗಳಲ್ಲಿ ಹಲ್ಲುಗಳಿದ್ದರೂ ಅವುಗಳ ರಚನೆಯ ಮಾದರಿ ಸ್ತನಿಯಲ್ಲಿದ್ದ ಹಾಗಿಲ್ಲ. ಇನ್ನೊಂದು ಗುಂಪಿನ ತಿಮಿಂಗಲಗಳಲ್ಲಿ ಹಲ್ಲುಗಳೇ ಇಲ್ಲ. ಬದಲಾಗಿ ಬೇರೆ ರೀತಿಯ ರಚನೆಗಳಿವೆ. ಆದ್ದರಿಂದ ಈ ಗುಂಪಿನ ತಿಮಿಂಗಿಲಗಳು ಮೀನು ಮುಂತಾದ ಪ್ರಾಣಿಗಳನ್ನು ತಿನ್ನಲಾರವು. ಕೂದಲಿನಲ್ಲೂ ಕ್ಷೀಣತೆಯನ್ನು ಕಾಣಬಹುದು. ಸ್ತನಿಗಳ ದೇಹ ಕೂದಲಿನಿಂದ ಕೂಡಿದೆ. ಇದು ಸ್ತನಿಗಳ ಮುಖ್ಯ ಲಕ್ಷಣಗಳಲ್ಲೊಂದು. ಆದರೆ ತಿಮಿಂಗಿಲಗಳಲ್ಲಿ ಕೆಳತುಟಿಯ ಮೇಲೆ ಬಿಟ್ಟು ದೇಹದ ಉಳಿದ ಭಾಗಗಳಲ್ಲೆಲ್ಲೂ ಕೂದಲುಗಳಿಲ್ಲ. (ಎನ್.ವಿ.ಎ.)

**ಕ್ಷೀರಸಮುದ್ರ :** ಪುರಾಣೋಕ್ತವಾದ ಸಪ್ತ ಸಮುದ್ರಗಳಲ್ಲಿ ಒಂದು. ಲವಣ, ಇಕ್ಷು, ಸುರಾ (ಮದ್ಯ) ಸರ್ಪಿಸ್ (ತುಪ್ಪ), ದಧಿ, ಜಲ ಇವೇ ಉಳಿದ ಆರು ಸಮುದ್ರಗಳು. ಕ್ಷೀರ ಸಮುದ್ರದ ವಿಸ್ತೀರ್ಣ ಆರು ಲಕ್ಷ ಯೋಜನಗಳೆನ್ನಲಾಗಿದೆ. ಈ ಸಮುದ್ರದಲ್ಲಿ ನಡೆದ ಅಮೃತಮಥನದ ವಿಚಾರ ರಾಮಾಯಣ, ಭಾರತ, ಭಾಗವತ, ಪದ್ಮಪುರಾಣಾದಿಗಳಲ್ಲಿ ಬಂದಿದೆ. ಆ ವೃತ್ತಾಂತ ಹೀಗಿದೆ :

ಒಮ್ಮೆ ದುರ್ವಾಸಮುನಿ ಇಂದ್ರನನ್ನು ಕಾಣಲು ಅಮರಾವತಿಯ ಕಡೆಗೆ ಹೊರಟಾಗ, ಇದಿರಿಗೇ ಬಂದ ಇಂದ್ರ ಮುನಿಯನ್ನು ಕಂಡೂ ಕಾಣದಂತೆ ಇದ್ದುದನ್ನು ಗಮನಿಸಿ ಸಿಟ್ಟಿಗೆದ್ದ ಮುನಿ ಆತನ ಸಕಲ ಐಶ್ವರ್ಯವೂ ನಾಶವಾಗಲೆಂದು ಶಾಪಕೊಟ್ಟ ಇಂಥ ಸಮಯ ನಿರೀಕ್ಷೆಯಲ್ಲಿದ್ದ ದೈತ್ಯರು ಇಂದ್ರಲೋಕವನ್ನು ನಾಶಪಡಿಸಿ ದೇವತೆಗಳಿಗೆಲ್ಲ ತೊಂದರೆ ಕೊಡಲು ಉಪಕ್ರಮಿಸಿದರು. ಕಳೆಗುಂದಿದ ದೇವತೆಗಳು ವಿಷ್ಣುವನ್ನು ಮೊರೆಹೊಕ್ಕರು. ಆಗ ವಿಷ್ಣು ದೇವತೆಗಳನ್ನು ಸಮಾಧಾನಪಡಿಸಿ ರಾಕ್ಷಸರೊಂದಿಗೆ ಸಮುದ್ರಮಥನ ಮಾಡಿದಲ್ಲಿ ಶುಭವಾಗುವುದೆಂದು ಸೂಚಿಸಿದ. ಅದರಂತೆ ದೇವತೆಗಳು ಉಪಾಯದಿಂದ ದೈತ್ಯರನ್ನು ಒಲಿಸಿಕೊಂಡು ಪಾಲ್ಗಡಲನ್ನು ಕಡೆದು ಅಮೃತವನ್ನು ಸಂಪಾದಿಸಿಕೊಂಡು ಇಬ್ಬರೂ ಸುಖವಾಗಿ ಬಾಳುವ ಯೋಜನೆಯನ್ನು ಹಾಕಿದರು. ಸ್ವಭಾವದಿಂದ ಅಲ್ಪ ತೃಪ್ತರಾದ ದಾನವರು ದೇವತೆಗಳ ಮಾತನ್ನು ನಂಬಿ ಮಂದರ ಪರ್ವತವನ್ನು ಕಡೆಗೋಲಾಗಿಯೂ ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಅಮೃತಕ್ಕಾಗಿ ಸಮುದ್ರವನ್ನು ಮಥಿಸಲು ಆರಂಭಿಸಿದರು ಕುಸಿಯುತ್ತಿದ್ದ ಪರ್ವತವನ್ನು ಕೂರ್ಮಾವತಾರಿಯಾದ ವಿಷ್ಣು ಬೆನ್ನ ಮೇಲೆ ಹೊತ್ತನಾಗಿ ಮಂಥನ ಸುಸೂತ್ರವಾಗಿ ನಡೆಯಿತು. ಕಡೆತ ಮುಂದುವರಿದಂತೆ ವಾಸುಕಿಯ ವದನದಿಂದ ವಿಷ ಉಕ್ಕಿ ಹರಿಯತೊಡಗಿತು. ವಿಷಜ್ವಾಲೆಗೆ ಕಂಗೆಟ್ಟ ದೇವದಾನವರು ಶಿವನನ್ನು ಮೊರೆಹೊಕ್ಕರು. ಶಿವ ಆ ವಿಷವನ್ನು ಪಾನ ಮಾಡಿ ವಿಷಕಂಠನಾದ. ಅನಂತರ ಸಮುದ್ರದಿಂದ ಕಾಮಧೇನು, ಉಚ್ಚೈಃಶ್ರವಸ್ಸು, ಐರಾವತ, ಕೌಸ್ತುಭಮಣಿ, ಚಂದ್ರ, ಲಕ್ಷ್ಮಿ, ಅಪ್ಸರ ಸ್ತ್ರೀಯರು ಹುಟ್ಟಿ ಬಂದರು. ಕೊನೆಯಲ್ಲಿ ಧನ್ವಂತರಿ ಒಂದು ಕೈಲಿ ಅಮೃತವನ್ನೂ ಮತ್ತೊಂದು ಕೈಲಿ ಅಳಲೆಕಾಯನ್ನೂ ಹಿಡಿದು ಬಂದ. ಧನ್ವಂತರಿಯ ಕೈಲಿದ್ದ ಅಮೃತಕಳಶವನ್ನು ದಾನವರು ಅಪಹರಿಸಿದರು. ಆದರೆ ವಿಷ್ಣು ಮೋಹಿನಿ ರೂಪದಿಂದ ಅಮೃತವನ್ನು ಪಡೆದ. (ಜಿ.ಎಚ್.)

**ಕ್ಷೀರಸ್ಫಟಿಕ :** ಸಿಲಿಕದ ನೈಸರ್ಗಿಕ ಜಲಯೋಜಿತ (ಹೈಡ್ರೇಟೆಡ್) ರೂಪ (ಓಪಲ್). ಇದು ಸಿಲಿಕಸಂಯುಕ್ತ ಖನಿಜಗಳಲ್ಲಿ ಅತ್ಯಂತ ಅಮೂಲ್ಯವಾದದ್ದು. ಕ್ಷೀರಸ್ಫಟಿಕಗಳಲ್ಲಿ ಹಲವಾರು ಬಗೆಗಳಿವೆ. ಗಾಜಿನಂತೆ ಪಾರದರ್ಶಕವಾಗಿರುವ ಹೈಯಲೈಟ್ ಉತ್ತಮ ದರ್ಜೆಯದು. ವರ್ಣವೈವಿಧ್ಯವನ್ನು ಬಿಂಬಿಸುವ ಜಲಕ್ಷೀರ ಸ್ಫಟಿಕಗಳಿಗೆ ಅಗ್ನಿಕ್ಷೀರಸ್ಫಟಿಕಗಳೆನ್ನುತ್ತಾರೆ. ನಿಕಲ್ ಲೋಹಾಂಶದಿಂದ ಕೂಡಿದ್ದಲ್ಲಿ ಹರಳುಗಳು ಹಸಿರುವರ್ಣ ಪಡೆಯುವುವು. ಪ್ರಕೃತಿಯಲ್ಲಿ ಮರ ಶಿಲೀಕರಣವಾಗಿ ಮಾರ್ಪಾಡಾಗಬಹುದು.

ಹೀಗೆ ಕ್ಷೀರಸ್ಫಟಿಕದಿಂದ ಶಿಲೀಕರಣವಾಗಿದ್ದಲ್ಲಿ ಅದನ್ನು ಮರಕ್ಷೀರಸ್ಫಟಿಕ (ವುಡ್ ಓಪಲ್) ಎನ್ನುವರು. ಹೈಡ್ರೊಫೇನ್ ಎಂಬ ಬಗೆ ನೀರಿನಲ್ಲಿಟ್ಟಾಗ ಪಾರದರ್ಶಕವಾಗುವುದಲ್ಲದೆ ವರ್ಣವೈವಿಧ್ಯವನ್ನು ಕೂಡ ಪ್ರದರ್ಶಿಸುತ್ತದೆ. ಕ್ಯಾಚೊಲಾಂಗ್ ಎಂಬ ನಮೂನೆಯ ಕ್ಷೀರಸ್ಫಟಿಕ ಮುತ್ತಿನಂತೆ ಹೊಳೆಯುತ್ತದೆ. ಅಪಾರದರ್ಶಕ ಅಚ್ಚ ಬಿಳಿಯ, ಹಳದಿಯ ಹಾಗೂ ಹಸಿರು ವರ್ಣದ ಕ್ಷೀರಸ್ಫಟಿಕಗಳನ್ನು ಅಮೃತ ಸ್ಫಟಿಕಗಳೆಂದು (ಮಿಲ್ಕಿ ಓಪಲ್) ಕರೆಯುತ್ತಾರೆ. ಇವಲ್ಲದೆ ಮಿಣಗುವ ಚುಕ್ಕೆಗಳಿಂದ ಕೂಡಿರುವ ಕಪ್ಪು ಕ್ಷೀರ ಸ್ಫಟಿಕಗಳೂ ಉಂಟು.

ಮೊದಲಿಗೆ ಕ್ಷೀರಸ್ಫಟಿಕವನ್ನು ರೂಪರಹಿತವೆಂದು ಪರಿಗಣಿಸಿದ್ದರು. ಎಕ್ಸ್‌ಕಿರಣ ವಿಭಜನೆಯ ಆಧಾರದ ಮೇಲೆ ಅದರ ಅಂತರ ಸ್ತರರಚನೆಯಲ್ಲಿ ಆಲ್ಫ–ಕ್ರಿಸ್ಟಬೊಲೈಟ್ ಮತ್ತು ಬೀಟ–ಕ್ರಿಸ್ಟಬೊಲೈಟ್ (ಬೆಣಚು ಕಲ್ಲಿನ ಬಹುರೂಪತ್ವ) ಇರುವಿಕೆಯನ್ನು ಪತ್ತೆ ಹಚ್ಚಿದ್ದಾರೆ. ಅಮೂಲ್ಯ ರತ್ನಗಳಲ್ಲಿ ಇರಬಹುದಾದ ವಿಶೇಷ ಗುಣಗಳಂತೆ ವರ್ಣವೈವಿಧ್ಯ ವರ್ಣಸ್ಫುರಣ ಹಾಗೂ ವರ್ಣಮಿಣಿಕೆಗಳನ್ನು ಕ್ಷೀರಸ್ಫಟಿಕದಲ್ಲೂ ಕಾಣಬಹುದು.

ಬೆಣಚು ಕಲ್ಲಿನ ವರ್ಗಕ್ಕೆ ಸೇರಿದ ಖನಿಜಗಳಲ್ಲಿ ಕೇವಲ ಸಿಲಿಕಾಂಶ ಮಾತ್ರವಿರುತ್ತದೆ. ಆದರೆ ಕ್ಷೀರಸ್ಫಟಿಕದಲ್ಲಿ ಆದರೆ ಕ್ಷೀರಸ್ಫಟಿಕದಲ್ಲಿ ಸಿಲಿಕಾಂಶದ ಜೊತೆಗೆ ಜಲಾಂಶವೂ ಸಂಯೋಜಿತವಾಗಿರುವುದು. ಜಲಾಂಶ ಶೇ.1-2 ಇರುವುದಾದರೂ ಉತ್ತಮ ದರ್ಜೆಯ ಕ್ಷೀರಸ್ಫಟಿಕಗಳಲ್ಲಿ ಶೇ.6-10ರ ವರೆಗೂ ಇರುವುದು. ಕ್ಷೀರ ಸ್ಫಟಿಕದಲ್ಲಿ ಪ್ರಧಾನವಾಗಿ ಕಾಣುವ ವರ್ಣಸ್ಫುರಣಕ್ಕೂ ಅದರಲ್ಲಿ ಸಂಯೋಜಿತವಾಗಿರುವ ಜಲಾಂಶಕ್ಕೂ ಒಂದು ವಿಧದಲ್ಲಿ ನಿಕಟ ಸಂಬಂಧ ಉಂಟು. ಕ್ಷೀರಸ್ಫಟಿಕವನ್ನು ಒಣ ಹವೆಯಲ್ಲಿ ಇಟ್ಟಾಗ ಅದು ತನ್ನ ಜಲಾಂಶವನ್ನು ಕಳೆದುಕೊಳ್ಳುವುದರ ಜೊತೆಗೆ ವರ್ಣಸ್ಫುರಣವನ್ನು ಕೂಡ ಕಳೆದುಕೊಳ್ಳುತ್ತದೆ. ಹಾಗೆಯೇ ಅದನ್ನು ಸ್ವಲ್ಪಕಾಲ ನೀರಿನಲ್ಲಾಗಲಿ ಹಸಿಯ ಆಲೂಗಡ್ಡೆಯಲ್ಲಾಗಲಿ ಇಟ್ಟಾಗ ತನ್ನ ಎಂದಿನ ವರ್ಣ ಸ್ಫುರಣತೆಯನ್ನು ಮತ್ತೆ ಪಡೆಯುತ್ತದೆ.

ಕ್ಷೀರಸ್ಫಟಿಕವನ್ನು ಅಗ್ನಿಶಿಲೆಗಳಲ್ಲಿ ಇರುವ ಕುಳಿಗಳಲ್ಲಿಯೂ ಸಣ್ಣ ಬಿರುಕುಗಳಲ್ಲಿಯೂ ವಿಶೇಷವಾಗಿ ಕಾಣಬಹುದು. ಅವು ತೆಳುವಾದಪದರಗಳಾಗಿಯೋ ಸಣ್ಣ ಸಣ್ಣ ಗುಂಡಾಕೃತಿಯ ಹರಳುಗಳಾಗಿಯೋ ಅಥವಾ ಉದ್ದನೆಯ ಸ್ಟಾಲಗ್ ಮೈಟುಗಳಾಗಿಯೋ ಸಿಕ್ಕುತ್ತವೆ. ಕ್ಷೀರಸ್ಫಟಿಕದ ಪ್ರಮುಖ ನಿಕ್ಷೇಪಗಳು ಚೆಕೋಸ್ಲೇವಿಯದಲ್ಲಿದ್ದು ಈಗ ಮುಗಿಯುತ್ತ ಬಂದಿವೆ. ಪ್ರಸ್ತುತ ಕ್ಷೀರಸ್ಫಟಿಕದ ನಿಕ್ಷೇಪಗಳು ಮೆಕ್ಸಿಕೋ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿವೆ. ಭಾರತದಲ್ಲಿ ಅಸ್ಸಾಂ, ಮಧ್ಯ ಪ್ರದೇಶ, ಒರಿಸ್ಸ, ರಾಜಸ್ಥಾನ, ಕಾಶ್ಮೀರ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಸಿಕ್ಕುತ್ತದೆ. ಕರ್ನಾಟಕ ರಾಜ್ಯದ ಚನ್ನರಾಯ ಪಟ್ಟಣದ ಹತ್ತಿರವೂ ಕ್ಷೀರಸ್ಫಟಿಕ ಅಲ್ಪಮೊತ್ತದಲ್ಲಿ ದೊರೆಯುತ್ತದೆ. ಭಾರತದಲ್ಲಿ ದೊರೆಯುವ ಕ್ಷೀರಸ್ಫಟಿಕಗಳು ಕೆಲವು ಅಪಾರದರ್ಶಕವಾದರೆ ಮತ್ತೆ ಕೆಲವು ಪಾರದರ್ಶಕ. ಇವುಗಳ ಬಣ್ಣ ಹಾಲು ಬಿಳಿ, ಹಳದಿ ಅಥವಾ ಕಂದು. ಅಪರೂಪವಾಗಿ ಕೆಲವು ಕಡೆ ನೀಲಿಮಿಶ್ರಿತ ಬಿಳುಪು ಹರಳುಗಳು ಕೂಡ ದೊರೆಯುವುದುಂಟು. (ಎಂ.ಎನ್.ವಿ.)

**ಕ್ಷುದ್ರಕ** : ಅಲೆಕ್ಸಾಂಡರನ ದಂಡಯಾತ್ರೆಯ ಕಾಲದಲ್ಲಿ ಪಂಜಾಬಿನಲ್ಲಿದ್ದ ಸಣ್ಣ ಜನಪದಗಳಲ್ಲೊಂದು. ಈ ಜನಪದವನ್ನು ಗ್ರೀಕರು ಆಕ್ಸಿಡ್ರಾಕಾಯ್ ಎಂದು ಕರೆದಿದ್ದಾರೆ. ಪಂಜಾಬಿನ ಮಾಂಟ್ಗೊಮರಿ ಜಿಲ್ಲೆಯಲ್ಲಿದ್ದ ಇವರ ವಿಷಯವಾಗಿ ಮಹಾಭಾರತದಲ್ಲಿ ಉಲ್ಲೇಖವಿದೆ. ಇವರು ಮತ್ತು ನೆರೆಯ ಮಾಳವರು 'ಆಯುಧ ಜೀವಿನ್' ಅಥವಾ ಯುದ್ಧವೇ ಕಸಬಾಗಿ ಉಳ್ಳವರು ಎಂದು ವರ್ಣಿತರಾಗಿದ್ದಾರೆ. ಬೀಯಾಸ್ ನದೀಪ್ರಾಂತ್ಯದಿಂದ ಅಲೆಕ್ಸಾಂಡರ್ ಹಿಂದಿರುಗಿದ ಮೇಲೆ ಜೀಲಂ ಮತ್ತು ಚಿನಾಬ್ ನದೀಸಂಗಮ ಪ್ರದೇಶಕ್ಕೆ ಬಂದಾಗ, ಕ್ಷುದ್ರಕರ ಮತ್ತು ಮಾಳವರ ನೇತೃತ್ವದಲ್ಲಿ ಆ ಪ್ರಾಂತ್ಯದ ಸಣ್ಣ ರಾಜ್ಯಗಳೆಲ್ಲ ಒಂದುಗೂಡಿ ಅವನ ಸೈನ್ಯವನ್ನೆದುರಿಸಿದುವು. ಪ್ರತಿಯೊಂದು ನಗರವೂ ಪ್ರತಿಭಟನೆಯ ಕೇಂದ್ರವಾಯಿತು. ಭಾರತೀಯ ಸೈನ್ಯದಲ್ಲಿ 90,000 ಕಾಲಾಳುಗಳೂ 10,000 ಅಶ್ವಾರೋಹಿಗಳೂ 900 ರಥಗಳೂ ಇದ್ದುವೆಂದು ತಿಳಿದುಬಂದಿದೆ. ಶಸ್ತ್ರಸಜ್ಜಿತರಾಗಿ ಎದುರುಬಿದ್ದ 5,000 ಬ್ರಾಹ್ಮಣರ ಪಡೆಯೊಂದನ್ನೂ ಅಲೆಕ್ಸಾಂಡರ್ ಎದುರಿಸಬೇಕಾಯಿತು. ಆದರೂ ಅಲೆಕ್ಸಾಂಡರನಿಗೇ ಜಯ ದೊರಕಿತು. ಹಿಂದೆಂದೂ ಕಾಣದಿದ್ದ ಇಂಥ ಉಗ್ರ ಪ್ರತಿಭಟನೆಯಿಂದ ಗಾಯಗೊಂಡು ಕುಪಿತನಾಗಿದ್ದ ಅಲೆಕ್ಸಾಂಡರ್ ಶತ್ರುಪಡೆಗಳಲ್ಲಿ ಉಳಿದಿದ್ದವರನ್ನೆಲ್ಲ ಕೊಲ್ಲಲು ಸೈನಿಕರಿಗೆ ಅನುಮತಿ ಕೊಟ್ಟ. ಕೊನೆಗೆ ಮಾಳವರೊಂದಿಗೆ ಕ್ಷುದ್ರಕರೂ ಶರಣಾಗಬೇಕಾಯಿತು. ಅಲೆಕ್ಸಾಂಡರನಿಗೆ ಸೋತ ಕ್ಷುದ್ರಕರು ಅನೇಕ ಯುದ್ಧ ರಥಗಳನ್ನೂ ಕುದುರೆಗಳನ್ನೂ ಉಕ್ಕು ಮತ್ತು ನಾರುಡುಗೆಗಳನ್ನೂ ಕಾಣಿಕೆಯಾಗಿ ಅರ್ಪಿಸಿದರು. ಅಲೆಕ್ಸಾಂಡರನೊಂದಿಗೆ ಬಂದಿದ್ದ ಗ್ರೀಕ್ ಬರೆಹಗಾರರು ಇವರ ದೇಶಾಭಿಮಾನ, ಕಾರ್ಯದಕ್ಷತೆ, ತೀಕ್ಷ್ಣಮತಿ ಮತ್ತು ತತ್ತ್ವಜ್ಞಾನಗಳನ್ನು ಪ್ರಶಂಸಿಸಿದ್ದಾರೆ. ಕ್ಷುದ್ರಕರೇ ಮೊದಲಾದ ಗಣರಾಜ್ಯಜನರ ರಣಶೌರ್ಯವನ್ನು ಕಂಡ ಗ್ರೀಕ್ ಸೈನಿಕರು ಸ್ವದೇಶಕ್ಕೆ ಮರಳುವ ಹಠ ಹಿಡಿದದ್ದರಿಂದ ಅಲೆಕ್ಸಾಂಡರ್ ತನ್ನ ದಂಡಯಾತ್ರೆಯನ್ನು ಕೊನೆಗೊಳಿಸಿ ಹಿಂದಿರುಗಬೇಕಾಯಿತು. (ಸಿ.ವಿ.ಆರ್.; ಜೆ.ಆರ್.ಆರ್.)

**ಕ್ಷುದ್ರಗ್ರಹಗಳು** : ಮಂಗಳಗ್ರಹದ ಕಕ್ಷೆಗೂ ಗುರುಗ್ರಹದ ಕಕ್ಷೆಗೂ ನಡುವೆ ಒಂದು ವಿಶಾಲವಾದ ಪಟ್ಟಿಯಂಥ ಕಕ್ಷೆಯ ಮೇಲೆ ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಅಸಂಖ್ಯಾತ ಆಕಾಶಕಾಯಗಳು (ಆಸ್ಟಿರಾಯಿಡ್ಸ್; ಮೈನರ್ ಪ್ಲಾನೆಟ್ಸ್). ಸೌರವ್ಯೂಹದ ಇತರ ಸದಸ್ಯರಂತೆ (ಉದಾಹರಣೆಗೆ ಭೂಮಿ, ಚಂದ್ರ ಇತ್ಯಾದಿ) ಕ್ಷುದ್ರಗ್ರಹಗಳು ಸಹ ಜಡವಸ್ತುಗಳೇ (ನಕ್ಷತ್ರಗಳಲ್ಲ ಎನ್ನುವ ಅರ್ಥದಲ್ಲಿ).

ಮಂಗಳ ಮತ್ತು ಗುರುಕಕ್ಷೆಗಳ ನಡುವೆ ಒಂದು ಗ್ರಹ ಸೂರ್ಯನನ್ನು ಪರಿಭ್ರಮಿಸುತ್ತಿರಬಹುದು ಎಂಬ ಊಹೆಯನ್ನು ಮೊದಲು ಮಂಡಿಸಿದವ ಯೋಹಾನ್ ಕೆಪ್ಲರ್ (1571-1630). ಅಂದು ತಿಳಿದಿದ್ದ ಗ್ರಹಗಳು ಕೇವಲ ಆರು–ಬುಧ, ಶುಕ್ರ, ಭೂಮಿ, ಮಂಗಳ, ಗುರು ಮತ್ತು ಶನಿ. 1766ರಲ್ಲಿ ವಿಟ್ಟೆನ್‌ಬರ್ಗಿನ ಟಿಶಿಯಸ್ ಎಂಬಾತ ಈ ಗ್ರಹಗಳ ಸರಾಸರಿ ಸೌರದೂರಗಳನ್ನು ಸನ್ನಿಹಿತವಾಗಿ ಸೂಚಿಸುವ ಒಂದು ಅನುಭವಜನ್ಯ ನಿಯಮವನ್ನು ಪ್ರತಿಪಾದಿಸಿದ. ಇದನ್ನು ಗ್ರಹಿಸಿ ಬೆಳಕಿಗೆ ತಂದವ ಬರ್ಲಿನ್ ವೀಕ್ಷಣಾಲಯದ ನಿರ್ದೇಶಕನಾಗಿದ್ದ ಜೆ.ಇ. ಬೋಡ್ (1747-1826). ಇವನು ಟಿಶಿಯಸಿನ ನಿಯಮವನ್ನು ಪ್ರಸಿದ್ಧಿಸಿ (1772) ಅದರಲ್ಲಿರುವ ಖಾಲಿ ಜಾಗವನ್ನು ಭರ್ತಿಮಾಡುವ ಒಂದು ಗ್ರಹ ಸೌರವ್ಯೂಹದಲ್ಲಿರಬೇಕೆಂದು ಸೂಚಿಸಿದ. ಈ ಕಾರಣದಿಂದ ಟಿಶಿಯಸ್ ನಿಯಮಕ್ಕೆ ಬೋಡ್ ನಿಯಮವೆಂಬ (ಸರಿಯಲ್ಲದ) ಹೆಸರು ರೂಢಿಗೆ ಬಂದು ಉಳಿದು ಕೊಂಡಿದೆ. ಟಿಶಿಯಸ್ ನಿಯಮಾನುಸಾರ ಗ್ರಹದೂರಗಳ ಯಾದಿಯ ರಚನೆಯನ್ನು ಈ ಕೆಳಗಿನ ಹಂತಗಳಲ್ಲಿ ಮಾಡಬೇಕು.

1ನೆಯ ಹಂತ: 0, 3, 6, 12, 24, 48, 96, 192, 384, 768,........ಈ ಗುಣೋತ್ತರ ಶ್ರೇಣಿಯನ್ನು ಬರೆಯಬೇಕು.

2ನೆಯ ಹಂತ: ಇದರ ಪ್ರತಿಯೊಂದು ಪದಕ್ಕೂ 4ನ್ನು ಕೂಡಿಸಿ ಮೊತ್ತವನ್ನು 10ರಿಂದ ಭಾಗಿಸಬೇಕು. ಈಗ ದೊರೆಯುವ ಶ್ರೇಣಿ 0.4, 0.7, 1, 0, 1.6, 2.8, 5.2, 10.0, 19.6, 38.8, 77.2, .....

3ನೆಯ ಹಂತ: ಗ್ರಹಗಳ ಸರಾಸರಿ ಸೌರದೂರಗಳನ್ನು ಖಗೋಳಮಾನಗಳಲ್ಲಿ (1.ಖ.ಮಾ.93,000,000 ಮೈಲುಗಳು ಸುಮಾರಾಗಿ: ಇದು ಸೂರ್ಯ–ಭೂಮಿ ಸರಾಸರಿ ದೂರ) ಬರೆದು ಅವುಗಳ ಎದುರು 2ನೆಯ ಹಂತದ ಶ್ರೇಣಿಯ ಪದಗಳನ್ನು ಯುಕ್ತವಾಗಿ ಅಳವಡಿಸಬೇಕು. ಆಗ ಈ ಕೆಳಗಿನ ಕೋಷ್ಟಕ ದೊರೆಯುತ್ತದೆ.

| ಗ್ರಹದ ಹೆಸರು | ಸೂರ್ಯ–ಗ್ರಹ ದೂರ (ಖ. ಮಾ. ಗಳಲ್ಲಿ) | ಹೊಂದಿಸಿದ ಟಿಶಿಯಸ್ ಶ್ರೇಣಿಯ ಸಂಖ್ಯೆ |
|---|---|---|
| ಬುಧ | 0.387 | 0.4 |
| ಶುಕ್ರ | 0.723 | 0.7 |
| ಭೂಮಿ | 1.000 | 1.0 |
| ಮಂಗಳ | 1.524 | 1.6 |
| . . . | . . . | 2.8 |
| ಗುರು | 5.203 | 5.2 |
| ಶನಿ | 9.539 | 10.0 |
| ಯುರೇನಸ್ | 19.191 | 19.6 |
| ನೆಪ್ಚೂನ್ | 30.071 | 38.8 |
| ಪ್ಲೂಟೋ | 39.518 | 77.2 |

(ಶನಿಯ ಆಚೆ ಗ್ರಹಗಳು ಬೋಡ್‌ನ ಕಾಲದಲ್ಲಿ ತಿಳಿದಿರಲಿಲ್ಲ)

ಗ್ರಹಗಳ ವಾಸ್ತವಿಕ ದೂರಗಳಿಗೂ ಟಿಶಿಯಸ್ ಶ್ರೇಣಿಯ ಸಂಖ್ಯೆಗಳಿಗೂ ಇರುವ ಸರಿಸುಮಾರು ಹೊಂದಾಣಿಕೆ ಆಕಸ್ಮಿಕವಾಗಿರಲಾರದು ಎಂಬುದನ್ನು ಬುಧದಿಂದ ತೊಡಗಿ ಶನಿಯ ವರೆಗಿನ ಸಂಖ್ಯೆಗಳು ಸ್ಪಷ್ಟಪಡಿಸುತ್ತವೆ. ಆದ್ದರಿಂದ ಸೂರ್ಯನಿಂದ ಸುಮಾರು 2.8 ಖ.ಮಾ. ದೂರದಲ್ಲಿ(ಮೇಲಿನ ಕೋಷ್ಟಕದಲ್ಲಿನ ಖಾಲಿಸ್ಥಳ) ಒಂದು ಗ್ರಹ ಇರುವುದು ಸಹಜ, ಅದರ ಶೋಧ ನಡೆಯಬೇಕು ಎಂದು ಬೋಡ್ ಸೂಚಿಸಿದ. ಇಂಥ ಗ್ರಹದ ಗಾತ್ರ ಇತರ ಗ್ರಹಗಳ ಗಾತ್ರಗಳಿಗಿಂತ ತೀರ ಭಿನ್ನವಾಗಿರಲಾರದೆಂಬ ಊಹೆಗೆ ಪ್ರತ್ಯಕ್ಷ ಪುರಾವೆ ದೊರೆಯಲಿಲ್ಲ–ಅದು ಮಂಗಳದಂತೆಯೋ ಗುರುವಿನಂತೆಯೋ ಕಣ್ಣಿಗೆ ಕಾಣುವುದೇ ಪುರಾವೆಯಷ್ಟೆ.

1781ರಲ್ಲಿ ಯುರೇನಸ್ ಗ್ರಹದ (**ನೋಡಿ– ಯುರೇನಸ್**) ಶೋಧವಾಯಿತು.(ಇದು ದೃಗ್ಗೋಚರಗ್ರಹವಲ್ಲ). ಇದರ ಕಕ್ಷಾಧಾತುಗಳ ಗಣನೆ ಮಾಡಿ ಸೂರ್ಯನಿಂದ ಈ ಗ್ರಹದ ಸರಾಸರಿದೂರ 19,191 ಖ.ಮಾ. ಎಂದು ತಿಳಿದರು. ಈ ವಾಸ್ತವಿಕ ದೂರ ಟಿಶಿಯಸ್ ಶ್ರೇಣಿಯ ಅನುರೂಪ ಬೆಲೆಗೆ (19.6) ಸರಿಸುಮಾರಾಗಿ ಹೊಂದಿದೆ ಎಂಬುದನ್ನು ಗಮನಿಸಿದಾಗ ಶ್ರೇಣಿಯ ಖಾಲಿಸ್ಥಳಕ್ಕೆ (2.8) ಅಧಿಕ ಮಹತ್ತ್ವ ಬಂದಿತು.

ಸಿಸಿಲಿ ದೇಶದ ಖಗೋಳಜ್ಞ ಜುಸೆಪೀ ಪ್ಯಾಟ್ಸಿ (1746–1826) ಎಂಬಾತ ಆಕಾಶದ ವೃಷಭರಾಶಿವಲಯವನ್ನು ಚಿತ್ರಿಸುವುದರಲ್ಲಿ ಮಗ್ನನಾಗಿದ್ದ. 1801ರ ಜನವರಿ 1ರಂದು (19ನೆಯ ಶತಮಾನದ ಪ್ರಥಮರಾತ್ರಿ) ಆ ವರೆಗೆ ಗುರುತಿಸದಿದ್ದ, ಒಂದು ಹೊಸ ನಕ್ಷತ್ರವನ್ನು ಅವನು ಗಮನಿಸಿದ. ಇದರಿಂದ ಕುತೂಹಲಾವಿಷ್ಟನಾಗಿ ಪ್ಯಾಟ್ಸಿ ಮುಂದಿನ ಎರಡು ರಾತ್ರಿಗಳ ಕಾಲವೂ ಎಡೆಬಿಡದೆ ಈ ನಕ್ಷತ್ರದ ಸ್ಥಾನವನ್ನು ಅವಲೋಕಿಸಿದಾಗ ಅದು ಬದಲಾಗಿದ್ದುದನ್ನು ಕಂಡ. ನಕ್ಷತ್ರಗಳ ಸಾಪೇಕ್ಷಸ್ಥಾನಗಳು




ಚಿತ್ರ 1 ಕ್ಷುದ್ರಗ್ರಹಗಳೆರಡರ ಜಾಡನ್ನು ಬಾಣದ ಗುರುತಿನಿಂದ ತೋರಿಸಿದೆ

ಬದಲಾಗಲು ಯುಗಯುಗಗಳೇ ಬೇಕು. ಆದ್ದರಿಂದ ಈ ಹೊಸನಕ್ಷತ್ರ ನಿಜನಕ್ಷತ್ರವಲ್ಲ. ಸೌರವ್ಯೂಹದ ಒಂದು ವಸ್ತುವಾಗಿರಬೇಕು ಎಂದು ಪ್ಯಾಟ್ಸಿ ತರ್ಕಿಸಿ ಅದು ಪ್ರಾಯಶಃ ಒಂದು ಧೂಮಕೇತು ಇರಬಹುದು ಎಂದು ಅಂದಾಜು ಮಾಡಿದ. ಆದರೆ ಈ ಕಾಯದ ವರ್ತನೆ ಬಲುವಿಚಿತ್ರವಾಗಿತ್ತು–ಜನವರಿ 14ರಂದು ಅದು ತನ್ನ ದಿಶೆಯನ್ನು ಬದಲಾಯಿಸಿತು. ಆ ವರೆಗೆ ಸ್ಥಿರನಕ್ಷತ್ರಗಳ ಹಿನ್ನೆಲೆಯಲ್ಲಿ ಪಶ್ಚಿಮ–ಪೂರ್ವ ದಿಶೆಯ ಚಲನೆಯನ್ನು ಪ್ರದರ್ಶಿಸುತ್ತಿದ್ದ ಈ ಆಗಂತುಕ ಕಾಯ ಜನವರಿ 14ರ ತರುವಾಯ ಪೂರ್ವ–ಪಶ್ಚಿಮ ದಿಶೆಯ ಚಲನೆಯನ್ನು ಪ್ರದರ್ಶಿಸಲು ತೊಡಗಿತು. ಉಚ್ಚಗ್ರಹಗಳು (ಎಂದರೆ ಸೂರ್ಯ–ಭೂಮಿ ಅಂತರದಿಂದ ಹೊರಗೆ ಕಕ್ಷೆಗಳಿರುವ ಗ್ರಹಗಳು. ಮಂಗಳ, ಗುರು, ಶನಿ ಇತ್ಯಾದಿ; ಬುಧ ಮತ್ತು ಶುಕ್ರ ನೀಚ ಗ್ರಹಗಳು) ವಿಶಿಷ್ಟವಾಗಿ ಪ್ರದರ್ಶಿಸುವ ವಕ್ರಚಲನೆಯ(ರಿಟ್ರೊಗ್ರೇಡ್ ಮೋಷನ್) ನಿದರ್ಶನವಿದು. ಮುಂದೆ ಫೆಬ್ರುವರಿ 11ರ ವರೆಗೂ ಪ್ಯಾಟ್ಸಿ ಈ ನೂತನ ವಿಸ್ಮಯಕರ ಆಕಾಶಕಾಯವನ್ನು ವೀಕ್ಷಿಸುತ್ತ ತನ್ನ ವರದಿಗಳನ್ನು ಪಟ್ಟಿಮಾಡುತ್ತಿದ್ದ. ಆದರೆ ಅನಾರೋಗ್ಯನಿಮಿತ್ತ ಇದನ್ನು ಮುಂದುವರಿಸಲು ಅವನಿಗೆ ಆಗಲಿಲ್ಲ. ಅಂದಿನ ದಿನಗಳಲ್ಲಿ ಅನುಸರಿಸುತ್ತಿದ್ದ ವೀಕ್ಷಣಕ್ರಮ ದೈಹಿಕವಾಗಿಯೂ ಮಾನಸಿಕವಾಗಿಯೂ ಬಲು ಪ್ರಯಾಸಕರವಾದದ್ದು. ದೂರದರ್ಶಕವನ್ನು ಆಕಾಶದ ನಿಶ್ಚಿತ ವಲಯಗಳಿಗೆ ನಾಭಿಸಿ ಅಲ್ಲಿ ಕಾಣುವ ನಕ್ಷತ್ರ ಚಿತ್ರದ ತಯಾರಿಕೆ; ಇದನ್ನು ಆ ಮೊದಲೇ ತಯಾರಿಸಿ ಶಿಷ್ಟೀಕರಿಸಲ್ಪಟ್ಟಿದ್ದ ನಕ್ಷತ್ರಪಟದೊಡನೆ ಹೋಲಿಸುವುದು; ಹೀಗೆ ಮಾಡಿದಾಗ ಕಂಡುಬರುವ ವ್ಯತ್ಯಾಸವೇನಾದರೂ ಇದ್ದರೆ ಅದರ ಮೇಲೆ ಲಕ್ಷ್ಯವನ್ನು ಸಾಂದ್ರೀಕರಿಸಿ ಅಭ್ಯಾಸದ ಮುಂದುವರಿಸಿಕೆ. ಪ್ಯಾಟ್ಸಿ ಮಾಡಿದ್ದು ಇದೇ ಕಾರ್ಯವನ್ನು. ಆದರೆ ತನ್ನ ವೀಕ್ಷಿತಾಂಶಗಳಿಗೆ ಗಣಿತವನ್ನು ಅನ್ವಯಿಸಿ ಒಂದು ಖಚಿತ ನಿರ್ಧಾರವನ್ನು ತಳೆಯುವುದು ಅವನಿಗೆ ಆಗಲಿಲ್ಲ. ಇದೊಂದು ಹೊಸಗ್ರಹವೆಂದೂ ಇದರ ವರ್ಷ(ಸೂರ್ಯನಿಗೆ ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ) ಸುಮಾರು 4 ಭೂಮಿವರ್ಷಗಳೆಂದೂ ಪ್ಯಾಟ್ಸಿ ಅಂದಾಜು ಮಾಡಿದ್ದ. ಈ ಗ್ರಹಕ್ಕೆ ಸಿರಿಸ್ ಎಂದು ಅವನೇ ಹೆಸರಿಟ್ಟದ್ದು. ಪ್ಯಾಟ್ಸಿ ತನ್ನ ಸಮಗ್ರ ವರದಿಯನ್ನೂ ಬೋಡ್‌ನಿಗೆ ಆಗಲೇ (ಜನವರಿ) ಬರೆದು ಕಳಿಸಿದ (ಇಟಲಿ ದೇಶದಿಂದ ಜರ್ಮನಿ ದೇಶಕ್ಕೆ). ಇದು ಬೋಡ್‌ನ ಹಸ್ತ ಸೇರಿದ್ದು ಮಾತ್ರ ಮಾರ್ಚ್ 20ರ ಸುಮಾರಿಗೆ. ಆ ವೇಳೆಗೆ ಈ ಆಗಂತುಕ ಕಾಯ ಸೂರ್ಯನಿಗೆ ತೀರ ಸಮೀಪವಾಗಿದ್ದು ಇದರ ವೀಕ್ಷಣೆ ಅಸಾಧ್ಯವಾಗಿತ್ತು.

ರಾಜಗಣಿತಜ್ಞನೆಂದು ಹೆಸರು ಪಡೆದ ಗೌಸನ (**(ನೋಡಿ– ಗೌಸ್,ಯೋಹಾನ್ ಕಾರ್ಲ್ ಫ್ರೀಡರಿಚ್**). 1777–1855) ಲಕ್ಷ್ಯವನ್ನು ಆಗಂತುಕ ಕಾಯದ ಜಾರಿಕೆಯ ಚಲನೆ ವಿಶೇಷವಾಗಿ ಆಕರ್ಷಿಸಿತು. ಈಗ ನಡೆಯಬೇಕಾದ ಕೆಲಸಗಳು ಪ್ರಧಾನವಾಗಿ ಮೂರು: ಕಾಯದ ವೀಕ್ಷಿತಾಂಶಗಳ ಯಾದಿ ತಯಾರಿಕೆ; ಈ ಅಂಶಗಳಿಗೆ ಗಣಿತಸೂತ್ರಗಳನ್ನು ಅನ್ವಯಿಸಿ ಕಾಯದ ಕಕ್ಷೆಯ ಹಾಗೂ ವರ್ತನೆಯ ಸೈದ್ಧಾಂತಿಕ ತೀರ್ಮಾನ; ಈ ತೀರ್ಮಾನವನ್ನು ಅದೇ ಕಾಯಕ್ಕೆ ಅನ್ವಯಿಸಿ ಅದರ ಭವಿಷ್ಯ ಸ್ಥಾನ ನಿರ್ಣಯ (ಅಂದರೆ ಎಲ್ಲಿ ಯಾವಾಗ ಇರುವುದು ಇವೇ ಮುಂತಾದ ನಿರ್ಣಯ). ಪ್ಯಾಟ್ಸಿಯ ವೀಕ್ಷಣೆಗಳಿಂದ ತನಗೆ ದೊರೆತ ವೀಕ್ಷಣಾಂಶಗಳ ಆಧಾರದ ಮೇಲೆ ನ್ಯೂಟನ್ ಸೂತ್ರಗಳ ಚೌಕಟ್ಟಿನಲ್ಲಿ ಗೌಸ್ ಗ್ರಹಗಳ ಕಕ್ಷೆಗಳನ್ನು ನಿರ್ಧರಿಸುವ ನವಗಣಿತ ವಿಧಾನವನ್ನೇ ರೂಪಿಸಿದ. ಇದರ ಪ್ರಕಾರ ಸಿರಿಸ್ ಗ್ರಹದ ಜಾತಕವನ್ನು ಬರೆದು ಅದರ ಭವಿಷ್ಯವನ್ನು ಖಚಿತವಾಗಿ ಹೇಳಿದ. ಮುಂದೆ ವೀಕ್ಷಣೆ ಇದನ್ನು ಸ್ಥಿರೀಕರಿಸಿತು. ಆ ತರುವಾಯ ಶೋಧಿಸಲಾದ ಇತರ ಮೂರು ಗ್ರಹಗಳು ಸಹ ಗೌಸ್ ಗಣಿತವಿಧಾನದ ಪ್ರಾಯೋಗಿಕ ಕೌಶಲವನ್ನು ಸಮರ್ಥಿಸಿದುವು. ಇವೆಲ್ಲ ಗ್ರಹಗಳೂ ಟಿಶಿಯಸ್ ಶ್ರೇಣಿಯ ಖಾಲಿಸ್ಥಳವನ್ನು ಸೇರಿದಾಗ ಖಗೋಳಾನ್ವೇಷಕರಿಗೆ ಮೂಡಿದ ಸಮಸ್ಯೆ ಹೊಸತೇ–ಒಂದನ್ನು ಅರಸಿದಾಗ ಎರಡು ದೊರೆತವು; ಮುಂದೆ ಇದು ಮೂರಾಯಿತು; ಹಾಗಾದರೆ ಇದೇ ವಲಯದಲ್ಲಿ ಇನ್ನೂ ಹಲವಾರು ಗ್ರಹಗಳು ಇರಬಹುದೇ ಎಂಬುದು ಅದರ ಪ್ರಶ್ನೆ. ಉದ್ದೇಶಪೂರ್ವಕ ಶೋಧ ಮುಂದುವರಿದುದರ ಪರಿಣಾಮವಾಗಿ ಆವಿಷ್ಕರಣಗೊಂಡ ಕ್ಷುದ್ರಗ್ರಹಗಳ ವಿವರ ಹೀಗಿದೆ:

| ಆವಿಷ್ಕರಣ ಕ್ರಮಸಂಖ್ಯೆ | ಕ್ಷುದ್ರಗ್ರಹದ ಹೆಸರು | ಆವಿಷ್ಕರಣದ ವರ್ಷ |
|---|---|---|
| 1 | ಸಿರಿಸ್ | ಜನವರಿ 1801 |
| 2 | ಪಲ್ಲಾಸ್ | ಮಾರ್ಚ್ 1802 |
| 3 | ಜೂನೋ | 1804 |
| 4 | ವೆಸ್ಟ್ | 1807 |

ಐದನೆಯದರ ಶೋಧವಾದದ್ದು 1845ರಲ್ಲಿ. 1890ರ ವೇಳೆಗೆ 300ಕ್ಕೂ ಮಿಕ್ಕಿ ಭಿನ್ನ ಕ್ಷುದ್ರಗ್ರಹಗಳನ್ನು ಆವಿಷ್ಕರಿಸಲಾಗಿತ್ತು. ಇಂದಿನ (2004) ವರೆಗೆ ಸುಮಾರು 60,000 ಕ್ಷುದ್ರಗ್ರಹಗಳ ಒಂದು ಯಾದಿಯೇ ಸಿದ್ಧವಾಗಿದೆ. ಅವುಗಳ ಪೈಕಿ 1,500 ಕ್ಷುದ್ರಗ್ರಹಗಳ ಕಕ್ಷೆಗಳ ಖಚಿತ ನಿರ್ಧಾರವನ್ನು 1940ರ ವೇಳೆಗೆ ಮಾಡಲಾಗಿತ್ತು. ಇದು ಹೇಗೂ ಇರಲಿ–ಈ ವಸ್ತುಗಳ ಅನ್ವೇಷಣೆ ಇಂದು ಅಷ್ಟೇನೂ ಕುತೂಹಲಕಾರೀ ಹವ್ಯಾಸವಾಗಿ ಉಳಿದಿಲ್ಲ.

**ಗಾತ್ರ:** ನಾಲ್ಕು ಪ್ರಕಾಶತಮ, ಪ್ರಾಯಶಃ ಅತಿದೊಡ್ಡ, ಕ್ಷುದ್ರಗ್ರಹಗಳ ವ್ಯಾಸಗಳು ಹೀಗಿವೆ: ಸಿರಿಸ್ 785 ಕಿ.ಮೀ. (488 ಮೈ.); ಪಲ್ಲಾಸ್ 489 ಕಿಮೀ. (304 ಮೈ.); ವೆಸ್ಟ 399 ಕಿಮೀ. (248 ಮೈ.); ಜೂನೋ 190 ಕಿಮೀ. (118 ಮೈ.). ಇನ್ನೂ ದೊಡ್ಡ ಗಾತ್ರದವು ಇಲ್ಲವೆಂದು ಖಚಿತವಾಗಿ ಹೇಳುವಂತಿಲ್ಲ. ಆದರೆ ಇದುವರೆಗೆ ನಿರ್ಧಾರವಾದ ಗಾತ್ರಗಳು ಮೇಲಿನವು.

**ದ್ರವ್ಯರಾಶಿ:** ಕ್ಷುದ್ರಗ್ರಹಗಳ ಸಮಗ್ರ ದ್ರವ್ಯರಾಶಿ ಖಚಿತವಾಗಿ ತಿಳಿದಿಲ್ಲ. ಅದು ಸುಮಾರಾಗಿ ಚಂದ್ರನ 1/20ರಷ್ಟು ಅಥವಾ ಭೂಮಿಯ 1/1600ರಷ್ಟು ಇರಬಹುದೆಂದು ಅಂದಾಜು. ಈ ದೃಷ್ಟಿಯಲ್ಲಿ ಕ್ಷುದ್ರಗ್ರಹಗಳೆಲ್ಲವನ್ನು ಒಂದುಗೂಡಿಸಿ ಒಂದೇ ಗ್ರಹವನ್ನಾಗಿ ಮಾಡಿದರೂ ಅದೊಂದು ಪ್ರಥಮ ದರ್ಜೆಯ ಗ್ರಹವಾಗಲಾರದು. ಆದ್ದರಿಂದ ಸೌರವ್ಯೂಹದ ರಚನೆಯ ಕಾಲದಲ್ಲೇ ಭೂಮಿ, ಮಂಗಳ ಇವೇ ಮೊದಲಾದ ಗ್ರಹಗಳ ಗಾತ್ರದಲ್ಲೇ ಒಂದು ಗ್ರಹ ಮಂಗಳ ಹಾಗೂ ಗುರು ಕಕ್ಷೆಗಳ ನಡುವೆಯೂ ರಚಿತವಾಗಿದ್ದು ಮುಂದೆ ಅದೇ ಒಡೆದುಹೋಗಿ ಕ್ಷುದ್ರ ಗ್ರಹಗಳಾದುವೆನ್ನುವ ಊಹೆಗೆ ಸರಿಯಾದ ಸಮರ್ಥನೆ ದೊರೆಯುವುದಿಲ್ಲ. ಸೌರವ್ಯೂಹದ ರಚನೆಯ ಕಾಲದ ಅವಶೇಷಗಳೇ ಈ ಭಿನ್ನ ಆಕಾರಗಳ ದ್ರವ್ಯರಾಶಿಗಳ ತುಣುಕುಗಳ ಸಮುದಾಯವಾಗಿರಬೇಕು ಎಂದು ನಂಬಲಾಗಿದೆ.

**ಕಕ್ಷೆಗಳು:** ಎಲ್ಲ ಕ್ಷುದ್ರಗ್ರಹಗಳೂ ಸೂರ್ಯನ ಸುತ್ತ ಇತರ ಗ್ರಹಗಳಂತೆಯೇ(ಪಶ್ಚಿಮದಿಂದ ಪೂರ್ವಕ್ಕೆ) ಪರಿಭ್ರಮಿಸುತ್ತವೆ. ಇವುಗಳಲ್ಲಿ ಹೆಚ್ಚಿನವು ಸುಮಾರಾಗಿ ಭೂಕಕ್ಷೆಯ(ಎಂದರೆ ಕ್ರಾಂತಿವೃತ್ತದ) ತಲದ ಮೇಲೆಯೇ ಇವೆ. ಕ್ರಾಂತಿ ವೃತ್ತಕ್ಕೆ ಕ್ಷುದ್ರಗ್ರಹಗಳ ಕಕ್ಷೆಗಳ ಸರಾಸರಿ ಬಾಗು 9.5°. ಸುಮಾರು 12 ಕ್ಷುದ್ರಗ್ರಹಗಳ ಕಕ್ಷೆಗಳ ಬಾಗು 25°ಗಿಂತಲೂ ಹೆಚ್ಚು. ಬೆಟೂಲಿಯ ಎಂಬ ಹೆಸರಿನ ಕ್ಷುದ್ರಗ್ರಹದ ಕಕ್ಷೆ ಕ್ರಾಂತಿವೃತ್ತಕ್ಕೆ 52°ಗಳಷ್ಟು ವಾಲಿಕೊಂಡಿದೆ. ಹೆಚ್ಚಿನ ಕ್ಷುದ್ರಗ್ರಹಗಳ ಕಕ್ಷೆಗಳ ಅರ್ಧದೀರ್ಘಾಕ್ಷಗಳು(ಸೆಮಿಮೇಜರ್ ಏಕ್ಸಸ್) 2.3–3.3 ಖ.ಮಾ. ವ್ಯಾಪ್ತಿಯಲ್ಲಿವೆ. ಈ ಗ್ರಹಗಳ ನಾಕ್ಷತ್ರಿಕ ವರ್ಷಗಳು (ಸ್ಥಿರನಕ್ಷತ್ರಗಳನ್ನು ಕುರಿತು ಸೂರ್ಯನ ಸುತ್ತ ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ) 3.5–6 ವರ್ಷಗಳು. ಇಕಾರಸ್ (ನೋಡಿ) ಕ್ಷುದ್ರಗ್ರಹದ ಕಕ್ಷೆ ಅತ್ಯಂತ ಕಿರಿದು. ಇದರ ಅರ್ಧದೀರ್ಘಾಕ್ಷ 1.0777 ಖ.ಮಾ. ಅಲ್ಲದೇ ಈ ಕಕ್ಷೆಯ ಉತ್ಕೇಂದ್ರತೆಯೂ (ಗೊತ್ತಿರುವ ಕಕ್ಷೆಗಳ ಪೈಕಿ) ಗರಿಷ್ಠವಾಗಿದೆ (0.83). ಸೂರ್ಯ ನೀಚ ಬಿಂದುವಿಗೆ (ಪೆರಿಹೀಲಿಯನ್) ಇಕಾರಸ್ ಬಂದಾಗ

ಸೂರ್ಯನಿಂದ ಇದರ ದೂರ ಕೇವಲ 17,000,000 ಮೈಲುಗಳು. ಸೌರವ್ಯೂಹದಲ್ಲಿ ಬುಧ ಸೂರ್ಯನಿಗೆ ಸಮೀಪತಮ ಗ್ರಹ. ಇದರ ಕಕ್ಷೆಯನ್ನು ಸಹ ಅಡ್ಡದಾಟಿ ಸೂರ್ಯನಿಗೆ ಬುಧನಿಗಿಂತ ಸಮೀಪವಾಗಿ ಹಾದುಹೋಗುವ ಏಕೈಕ ಗ್ರಹವೆಂದರೆ ಇಕಾರಸ್



ಚಿತ್ರ 2 ಕೆಥೊಲಿಕ್ ಚರ್ಚ್, ದಂಡು, ತಿರುವನಂತಪುರ

(ಧೂಮಕೇತುಗಳೂ ಉಲ್ಕೆಗಳೂ ಅಪವಾದ). ಹಿಲ್ಡಗೊ ಎಂಬ ಹೆಸರಿನ ಕ್ಷುದ್ರಗ್ರಹದ ಕಕ್ಷೆ ಅತ್ಯಂತ ದೊಡ್ಡದು. ದೀರ್ಘಾಕ್ಷ 5.79 ಖ.ಮಾ. ಮತ್ತು ಉತ್ಕೇಂದ್ರತೆ 0.66. ಸೂರೋಚ್ಚ ಬಿಂದುವಿಗೆ (ಆಫ್-ಹೀಲಿಯನ್) ಈ ಗ್ರಹ ಬಂದಾಗ ಇದು ಗುರುಗ್ರಹದ ಕಕ್ಷೆಯನ್ನೂ ದಾಟಿ ಸೂರ್ಯನಿಂದ ದೂರವಾಗಿರುತ್ತದೆ.

ಕ್ಷುದ್ರಗ್ರಹಗಳ ಕಕ್ಷೆಗಳ ಈ ವೈಚಿತ್ರ್ಯಗಳಿಂದಾಗಿ ಕೆಲವು ಗ್ರಹಗಳು ಅಪರೂಪವಾಗಿ ಭೂಮಿಗೆ ಅತಿ ಸಮೀಪ ಬರುವುದು ಉಂಟು. 1932ರಲ್ಲಿ ಅಪೋಲೋ, 1936ರಲ್ಲಿ ಅಡೋನಿಸ್, 1937ರಲ್ಲಿ ಹರ್ಮಿಸ್ ಭೂಮಿಗೆ 3,000,000 ಮೈಲುಗಳಷ್ಟು ಹತ್ತಿರ ಬಂದು ಹೋದುವು. 1968ರಲ್ಲಿ ಇಕಾರಸ್ 4,000,000 ಮೈಲುಗಳಷ್ಟು ಸಮೀಪವೂ 1969ರಲ್ಲಿ ಇನ್ನೊಂದು 6,000,000 ಮೈಲುಗಳಷ್ಟು ಸಮೀಪವೂ ಬಂದಿದುವು. ಮುಂದೆಂದಾದರೂ ಭೂಮಿಗೂ ಒಂದು ಗಣನೀಯ ಗಾತ್ರದ ಕ್ಷುದ್ರ ಗ್ರಹಕ್ಕೂ ಡಿಕ್ಕಿ ಸಂಭವಿಸಬಹುದು. ಇಂಥ ಘಟನೆಯನ್ನು ಅಸಂಭಾವ್ಯ ಎನ್ನಲುಬಾರದು. ಅಗಣನೀಯ ಗಾತ್ರದ ಕ್ಷುದ್ರಗ್ರಹಗಳು ಭೂಮಿಯ ಗುರುತ್ವವಲಯವನ್ನು ಪ್ರವೇಶಿಸಿದೊಡನೆ ಭೂತಲದೆಡೆಗೆ ಆಕರ್ಷಿಸಲ್ಪಟ್ಟು ಆಗ ವಾಯುಮಂಡಲದೊಡನೆ ಒದಗುವ ಘರ್ಷಣೆಯಿಂದ ಕಾದು ಉರಿದು ಬೂದಿಯಾಗಿ ನಾಶವಾಗಿ ಹೋಗುತ್ತವೆ. ಉಲ್ಕೆಗಳ ಮೂಲವನ್ನು ಕ್ಷುದ್ರಗ್ರಹಗಳಲ್ಲಿ ಕಾಣುವುದುಂಟು. ಇಂತಹ ಕ್ಷುದ್ರಗ್ರಹಗಳಿಗೆ ನಿಯರ್ ಅರ್ತ್ ಆಸ್ಟೆರ್ಯಾಡ್ಸ್ ಎಂಬ ಹೆಸರಿದೆ.

**ಕರ್ಕ್‌ವುಡ್ ತೆರಪುಗಳು:** ಕ್ಷುದ್ರಗ್ರಹಗಳ ಕಕ್ಷೆಗಳ ವಿತರಣೆಯಲ್ಲಿ ಒಂದು ಕುತೂಹಲಕಾರೀ ಅಂಶವುಂಟು. ಈ ಕಕ್ಷೆಗಳು ಕೆಲವು ಕಡೆ ಬಲು ನಿಬಿಡವಾಗಿ ಸೇರಿಕೊಂಡಿವೆ; ಇನ್ನು ಕೆಲವು ಕಡೆ ವಿರಳವಾಗಿ ಹರಡಿಹೋಗಿವೆ. ಇದರಿಂದಾಗಿ ಕಕ್ಷೆಗಳ ಗುಂಪುಗಳ ನಡುವೆ ತೆರಪು(ಗ್ಯಾಪ್) ತಲೆದೋರಿದೆ. ಶನಿಗ್ರಹದ ಬಳೆಗಳಲ್ಲಿ ಕಂಡುಬರುವಂಥ ದೃಶ್ಯವಿದು. ಡೇನಿಯಲ್ ಕರ್ಕ್‌ವುಡ್ ಎಂಬಾತ 1866ರಲ್ಲಿ ಈ ತೆರಪುಗಳ ಅಸ್ತಿತ್ವಕ್ಕೆ ವಿವರಣೆ ನೀಡಿದ. ಹೀಗಾಗಿ ಕರ್ಕ್‌ವುಡ್ ತೆರಪುಗಳೆಂದೇ ಇವುಗಳಿಗೆ ಹೆಸರು ಬಂದಿದೆ. ಗುರುಗ್ರಹ ಕ್ಷುದ್ರಗ್ರಹಗಳ ಮೇಲೆ ಬೀರುವ ಗುರುತ್ವಾಕರ್ಷಣೆಯ ಪರಿಣಾಮವಾಗಿ ಈ ತೆರಪುಗಳು ತಲೆದೋರಿವೆ ಎಂದು ಕರ್ಕ್‌ವುಡ್ ವಿವರಿಸಿದ. ಉದಾಹರಣೆಗೆ ಸೂರ್ಯನಿಂದ ಗುರುವಿನ ದೂರದ ಸುಮಾರು 5/8 ರಷ್ಟು ದೂರದಲ್ಲಿರುವ ಒಂದು ಕ್ಷುದ್ರಗ್ರಹದ ಅವಧಿ (ಎಂದರೆ ವರ್ಷ) ಗುರುವಿನ ಅವಧಿಯ ಅರ್ಧದಷ್ಟು ಇರುವುದು. ಆದ್ದರಿಂದ ಕ್ಷುದ್ರಗ್ರಹ ಸೂರ್ಯನ ಸುತ್ತ ಪ್ರತಿ ಎರಡು ಸಲ ಪರಿಭ್ರಮಿಸುವಾಗ ಒಂದು ಸಲ ಗುರುವಿನ ಸಮೀಪ ಬರುವುದು. ಮತ್ತು ಗುರುವಿನ ಪ್ರಬಲ ಆಕರ್ಷಣೆಗೆ ಒಳಗಾಗುವುದು. ಇಂಥ ವಿದ್ಯಮಾನದ ಒಂದೇ ದಿಶೆಯ ಪುನರಾವರ್ತನೆಯ ಪರಿಣಾಮವಾಗಿ ಆ ಕ್ಷುದ್ರಗ್ರಹ ತನ್ನ ಸ್ಥಾನದಿಂದ ಹೊರಗೆ ಚಲಿಸಿ ಅದು ಇರಬೇಕಾಗಿದ್ದಲ್ಲಿ ತೆರಪು ಉಂಟಾಗುತ್ತದೆ. ಗುರು ಗ್ರಹದ ವರ್ಷದ 1/3, 2/5, 3/5 ಮುಂತಾದ ಅವಧಿಗಳಿರುವ ಕ್ಷುದ್ರಗ್ರಹಗಳಿರುವಲ್ಲೆಲ್ಲ ಕರ್ಕ್‌ವುಡ್ ತೆರಪುಗಳಾಗಿವೆ.

**ಟ್ರೋಜನ್ ಕ್ಷುದ್ರಗ್ರಹಗಳು :** ತ್ರಿಕಾಯ ಸಮಸ್ಯೆಗೆ (ಪ್ರಾಬ್ಲೆಮ್ ಆಫ್ ತ್ರೀ ಬಾಡಿಸ್) **(ನೋಡಿ- ತ್ರಿಕಾಯ ಸಮಸ್ಯೆ)** 1772ರಲ್ಲಿ ಜೋಸೆಫ್ ಲೂಯಿ ಲ್ಯಾಗ್ರಾಂಜ್ ಎಂಬಾತ ಒಂದು ನಿರ್ದಿಷ್ಟ ಪರಿಹಾರವನ್ನು ಸೂಚಿಸಿದ. ಇದರ ಪ್ರಕಾರ ಯಾವುದೇ ಕಕ್ಷೆಯ ಮೇಲೆ ಎರಡು ನಿರ್ದಿಷ್ಟ ಬಿಂದುಗಳಿರಬೇಕು, ಅಲ್ಲಿ ಅಥವಾ ಅವುಗಳ ಸಮೀಪ ಯಾವುದೇ ಕ್ಷುದ್ರಗ್ರಹ ಬಂದುದಾದರೆ ಅಲ್ಲೇ ಅನಿರ್ದಿಷ್ಟ ಕಾಲದ ವರೆಗೆ ಇರಬೇಕು



ಚಿತ್ರ 3 ಮಂಗಳ ಮತ್ತು ಗುರುಗ್ರಹಗಳ ಕಕ್ಷೆಗಳ ನಡುವೆ ಇರುವ ಕ್ಷುದ್ರಗ್ರಹಗಳ ಕಕ್ಷಾ ವಿವರಣೆ

ಎಂಬುದಾಗಿ ತಿಳಿಯಿತು. ಸೂರ್ಯನೂ ಗುರುವೂ ಗುರುಕಕ್ಷೆಯ ಮೇಲೆ ಸಮಭುಜತ್ರಿಭುಜವನ್ನು ರಚಿಸುವ ಎರಡು ಬಿಂದುಗಳೇ ಇವು. ಈ ಬಿಂದುಗಳಲ್ಲಿರಬಹುದಾದ ಕ್ಷುದ್ರಗ್ರಹಗಳು ಗುರುಕಕ್ಷೆಯ ಮೇಲೆ ಸೂರ್ಯನ ಸುತ್ತ ಗುರುವಿನ ಅವಧಿಯನ್ನೇ ನಿರಂತರವಾಗಿ ಪರಿಭ್ರಮಿಸುತ್ತಿರುವುದರಿಂದ ಗುರು-ಸೂರ್ಯ ಸಾಪೇಕ್ಷವಾಗಿ ಇವುಗಳ ಸ್ಥಾನ ಬದಲಾಗುವುದಿಲ್ಲ. ಇಂಥ ಗ್ರಹಗಳ ಅಸ್ತಿತ್ವವನ್ನು ಕುರಿತು ನಡೆಸಿದ ವೀಕ್ಷಣೆಗಳ ಫಲವಾಗಿ 1906ರಿಂದ 1908ರ ಅವಧಿಯಲ್ಲಿ 4 ಕ್ಷುದ್ರಗ್ರಹಗಳನ್ನು ಶೋಧಿಸಲಾಯಿತು. ಈಗ ಸಾವಿರಗಟ್ಟಲೆ ಇವೆ ಎಂದು ತಿಳಿದು ಬಂದಿದೆ. ಗ್ರೀಕ್ ಪುರಾಣಗಳ ವೀರರಾದ ಟ್ರೋಜನ್ನರ ಹೆಸರುಗಳಿಂದ ಈ ಕಾರ್ಯಗಳನ್ನು ಟ್ರೋಜನ್ ಕ್ಷುದ್ರಗ್ರಹಗಳೆಂದು ಕರೆದಿದ್ದಾರೆ.

ಸೌರವ್ಯೂಹದ ಉಗಮ, ವಿಕಾಸನಗಳನ್ನು ಚರ್ಚಿಸುವಾಗ, ಸೌರವ್ಯೂಹದ ಪ್ರಾಚಲಗಳ ಮತ್ತು ಸ್ಥಿರಾಂಕಗಳ ನಿರ್ಧಾರವನ್ನು ಮಾಡುವಾಗ, ಸೌರವ್ಯೂಹದ ವೈಚಿತ್ರ್ಯವನ್ನು ಮತ್ತು ವೈಶಿಷ್ಟ್ಯವನ್ನು ಅಭ್ಯಸಿಸುವಾಗ ಕ್ಷುದ್ರಗ್ರಹಗಳ ಪಾತ್ರ ಮಹತ್ತ್ವಪೂರ್ಣವಾದದ್ದು.

**(ಸಿ.ಎನ್.ಎಸ್.)**

**ಕ್ಷೇತ್ರಕಾರ್ಯ :** ಜನರನ್ನು, ಅವರ ಆರ್ಥಿಕ ಸಾಮಾಜಿಕ ವ್ಯವಸ್ಥೆಗಳನ್ನು, ಸಂಸ್ಕೃತಿಯನ್ನು ಕುರಿತಂತೆ ಅವರ ಸಹಜ ನೆಲೆಯಲ್ಲಿ ನಡೆಸುವ ಅಧ್ಯಯನ (ಫೀಲ್ಡ್ ವರ್ಕ್). ಸಮಾಜದ ಅಖಂಡ ದೃಷ್ಟಿಯನ್ನು ಪಡೆಯುವ ಉದ್ದೇಶದಿಂದ ನಡೆಸುವ ಸಮಾಜ ವೀಕ್ಷಣೆ, ಅಂತರಂಗವನ್ನರಿಯುವ ಪ್ರಯತ್ನ. ಮಾನವ ಜೀವಿಯನ್ನು ಪರೀಕ್ಷೆಗೆ ಒಡ್ಡುವ ಜೀವವಿಜ್ಞಾನಿಯಂತೆ ಸಮಾಜವಿಜ್ಞಾನಿ ಸಮಾಜವನ್ನು ವೀಕ್ಷಣೆಗೆ ಒಳಪಡಿಸುತ್ತಾನೆ. ಸಮಾಜವೇ ಅವನಿಗೆ ಅಣಿಯಾಗಿ ಒದಗಿಬರುವ ಪ್ರಯೋಗಾಲಯ.

ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು ಬಹಳ ಮಟ್ಟಿಗೂ ಸಮಾಜ ಶಾಸ್ತ್ರಜ್ಞರು ಸ್ವಲ್ಪ ಮಟ್ಟಿಗೂ ಕ್ಷೇತ್ರಾಧ್ಯಯನ ಮಾರ್ಗವನ್ನು ಹಿಂದಿನಿಂದಲೂ ಅನುಸರಿಸುತ್ತ ಬಂದಿದ್ದಾರೆ. ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಸಮಾಜವಿಜ್ಞಾನ ಕ್ಷೇತ್ರಗಳಲ್ಲೂ ಇದು ಹೆಚ್ಚಾಗಿ ಅನುಷ್ಠಾನಕ್ಕೆ ಬರುತ್ತಿದೆ. ಕ್ಷೇತ್ರಕಾರ್ಯದ ಇತಿಹಾಸ, ಅದು ತಂದೊಡ್ಡುವ ಸಮಸ್ಯೆಗಳು, ಅದನ್ನು ಅನುಸರಿಸುವ ವಿಧಾನ–ಈ ವಿಚಾರಗಳಲ್ಲಿ ಮಾನವಶಾಸ್ತ್ರಕ್ಕೂ ಸಮಾಜಶಾಸ್ತ್ರವೇ ಮುಂತಾದ ಶಾಸ್ತ್ರಗಳಿಗೂ ವ್ಯತ್ಯಾಸವುಂಟು. ಆದರೆ ಈಚೆಗೆ ಈ ವ್ಯತ್ಯಾಸ ಕಡಿಮೆಯಾಗುತ್ತಿದೆ.

ಸಮಾಜಶಾಸ್ತ್ರಗಳ ಅಧ್ಯಯನದಲ್ಲಿ ಗಣಿತವಿಜ್ಞಾನ ಮತ್ತು ಸಂಖ್ಯಾಕಲನಶಾಸ್ತ್ರಗಳ ಉಪಯೋಗ ಹೆಚ್ಚಾಗುತ್ತಿದೆ. ವಿಷಯ ಸಂಗ್ರಹಣ ವಿಧಾನದಲ್ಲಿಯೂ ಹಲವು ಮಾರ್ಪಾಡುಗಳಾಗಿವೆ. ಸಮೀಕ್ಷೆ ಹಾಗೂ ಕ್ಷೇತ್ರ ಅಧ್ಯಯನಗಳು ವಿಷಯ ಸಂಗ್ರಹಣೆಯಲ್ಲಿ ಪ್ರಾಮುಖ್ಯ ಗಳಿಸುತ್ತಿವೆ. ಏಕೆಂದರೆ ಅನೇಕ ಲೇಖಕರು ಬರೆದ ಗ್ರಂಥಗಳಿಂದ ಮತ್ತು ಲೇಖನಗಳಿಂದ ಕೂಡಿದ ಗ್ರಂಥಾಲಯಗಳು ಅನುಷಂಗಿಕ ಸಾಮಗ್ರಿಯನ್ನು ಮಾತ್ರ ಒದಗಿಸುತ್ತವೆ. ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳು ಸಂಶೋಧಕರಿಗೆ ಮೂಲ ಸಾಮಗ್ರಿಯನ್ನೊದಗಿಸಿ ಸಂಶೋಧನೆಗೆ ಒಳಗಾದ ಮುನ್ಸೂಚನೆ, ಸಾರ್ವದೇಶಿಕ ಹಾಗೂ ಸಾರ್ವಕಾಲಿಕ ನಿಯಮಗಳ ರಚನೆ ಇವು ಸಾಧ್ಯವಾಗಿರುವುದು ಸಮೀಕ್ಷೆ ಮತ್ತು ಕ್ಷೇತ್ರ ಕಾರ್ಯಗಳಿಂದ.

ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳು ವೈಜ್ಞಾನಿಕ ಅನುಸಂಧಾನದ ಮುಖ್ಯ ವಿಧಾನಗಳಾಗಿವೆ. ಇವು ಆಧಾರಕಲ್ಪನೆಗಳ ಸತ್ಯಾಸತ್ಯತೆಗಳನ್ನು ಪರೀಕ್ಷಿಸುವುದಕ್ಕೂ ಸಾಮಾಜಿಕ ನಡೆವಳಿಕೆಗಳನ್ನು ಸಂಖ್ಯಾಕಲನಶಾಸ್ತ್ರೀಯ ಅನುಸಂಧಾನದ ಮೂಲಕ ವಿವೇಚಿಸುವುದಕ್ಕೂ ಅನುವಾಗಿ ಒದಗಿಬರುತ್ತದೆ. ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳ ನಡುವೆ ಕೆಲವು ತಾಂತ್ರಿಕ ವ್ಯತ್ಯಾಸಗಳುಂಟು. ಸಮೀಕ್ಷೆಯ ವಿಧಾನದಲ್ಲಿ ಕ್ಷೇತ್ರ ಬಹು ವ್ಯಾಪಕವಾದ್ದು. ತನ್ನ ಅಧ್ಯಯನಕ್ಷೇತ್ರಕ್ಕೊಳಪಡದ ಇತರ ಭಾಗಗಳನ್ನು ಅದು ಪ್ರತಿನಿಧಿಸುತ್ತದೆ. ಕ್ಷೇತ್ರ ಅಧ್ಯಯನಕ್ಕೆ ಪ್ರಾತಿನಿಧಿಕತೆಯಿಲ್ಲ. ಬದಲಾಗಿ, ಅದು ಒಂದು ನಿರ್ದಿಷ್ಟ ಕ್ಷೇತ್ರದ ಬಗ್ಗೆ ಆಳವಾದ ಅಧ್ಯಯನ ಮಾಡುವ ವಿಧಾನ. ಈ ವಿಧಾನದ ಅನುಸರಣೆಯಿಂದ ವ್ಯಕ್ತಿಶಃ ಸಂದರ್ಶನ ಮತ್ತು ಸಂಶೋಧನಕ್ಕೆ ಒಳಪಟ್ಟ ಸಮಸ್ಯೆಯ ಪರಿಪೂರ್ಣ ವಿವೇಚನೆ ಸಾಧ್ಯವಾಗುತ್ತವೆ.

ಕ್ಷೇತ್ರಕಾರ್ಯದಲ್ಲಿ ನಾಲ್ಕು ಹಂತಗಳುಂಟು: 1 ಪೂರ್ವಭಾವಿ ಯೋಜನೆ, 2 ರೂಪರೇಖೆಯ ಅಂತಿಮ ರಚನೆ, 3 ಕ್ಷೇತ್ರಕಾರ್ಯಾಚರಣೆ ಮತ್ತು 4 ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ.

**1 ಪೂರ್ವಭಾವಿ ಯೋಜನೆ:** ಕ್ಷೇತ್ರ ಅಧ್ಯಯನಕ್ಕೆ ಇಳಿಯುವವನು ತಾನು ಮಾಡಬೇಕಾಗಿರುವ ಅಧ್ಯಯನದ ಬಗ್ಗೆ ಒಂದು ಪೂರ್ವಭಾವಿ ಯೋಜನೆಯನ್ನು ರಚಿಸುವುದು ಬಹಳ ಸಹಾಯಕವಾಗುತ್ತದೆ. ಕ್ಷೇತ್ರ ಅಧ್ಯಯನದ ವ್ಯಾಪ್ತಿ, ಉದ್ದೇಶಗಳು, ಅದಕ್ಕೆ ಬೇಕಾಗುವ ಸಮಯ, ಹಣಕಾಸು ಮತ್ತು ಸಿಬ್ಬಂದಿ–ಇವೇ ಮುಂತಾದವುಗಳ ಬಗ್ಗೆ ತಾತ್ಕಾಲಿಕ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಯೋಜನೆಯನ್ನು ವಿಶ್ವಾಸಾರ್ಹ ಆಧಾರಗಳ ಸಹಾಯದಿಂದ ರೂಪಿಸಲು ಸಾಧ್ಯವಿಲ್ಲದುದರಿಂದ ಕ್ಷೇತ್ರಕಾರ್ಯನಿರತ ವ್ಯಕ್ತಿಗಳು ಯಾವ ಪಕ್ಷಪಾತವೂ ಇಲ್ಲದೆ ವಾಸ್ತವ ಸಂಗತಿಯ ಕಡೆ ಗಮನ ಹರಿಸುವುದು ಮುಖ್ಯ ಕರ್ತವ್ಯ. ಅಧ್ಯಯನದ ಉದ್ದೇಶಗಳೇನೆಂಬ ದೃಷ್ಟಿಯಿಂದ ಕ್ಷೇತ್ರದ ಆಯ್ಕೆ ಮಾಡಿಕೊಳ್ಳಬೇಕು.

**2 ರೂಪರೇಖೆಯ ಅಂತಿಮ ರಚನೆ:** ಆರಿಸಿದ ಕ್ಷೇತ್ರದಲ್ಲಿ ಪೂರ್ವಭಾವಿ ಯೋಜನೆಗೆ ಅನುಸಾರವಾಗಿ ಅಧ್ಯಯನವನ್ನು ಮುಂದುವರಿಸಿದಂತೆ ಲಭ್ಯವಾಗುವ ನಂಬಲರ್ಹ ಆಧಾರಗಳಿಗೆ ಅನುಗುಣವಾಗಿ ಬಲವಾದ ಪೂರ್ವಭಾವಿ ಯೋಜನೆಯೇ ರೂಪರೇಖೆ. ಕ್ಷೇತ್ರ ಅಧ್ಯಯನದ ವ್ಯಾಪ್ತಿ, ಉದ್ದೇಶಗಳು, ಅಧ್ಯಯನಕ್ಕೆ ಬೇಕಾಗುವ ಹಣಕಾಸು, ಸಿಬ್ಬಂದಿ, ಕ್ಷೇತ್ರಕಾರ್ಯದ ವೇಳಾಪಟ್ಟಿ, ಇವೇ ಮುಂತಾದವು ಸ್ಪಷ್ಟವಾಗಿ ನಿರೂಪಿತವಾಗುತ್ತವೆ. ನಮಗೆ ಏನು ಬೇಕು, ನಾವು ಏನನ್ನು ನಿರೀಕ್ಷಿಸಬಹುದು ಮತ್ತು ನಾವು ಯಾವ ರೀತಿ ಕಾರ್ಯನಿರತರಾಗಬೇಕು ಎಂಬುದು ಖಚಿತವಾಗುತ್ತದೆ.

**3 ಕ್ಷೇತ್ರ ಕಾರ್ಯಾಚರಣೆ:** ಕ್ಷೇತ್ರ ಅಧ್ಯಯನವನ್ನು ನಡೆಸುವ ಸಂದರ್ಭದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಬಿಡಿಸುವುದು ಮೂರನೆಯ ಹಂತದ ಒಂದು ಹೆಜ್ಜೆಯಾಗಿದೆ. ಸಾಮಾನ್ಯವಾಗಿ ಈ ಸಮಸ್ಯೆಗಳು ಅನುಸಂಧಾನ ಅಥವಾ ವಿಷಯ ಸಂಗ್ರಹಣೆಯ ವಿಧಾನಗಳಿಗೆ ಸಂಬಂಧಪಟ್ಟಿರುತ್ತವೆ. ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂಲ ವಿಷಯವನ್ನು ಸಂಗ್ರಹಿಸುವಾಗ ಕೆಳಗೆ ಕೊಟ್ಟಿರುವ ವಿಧಾನಗಳನ್ನು ಸಾಮಾನ್ಯವಾಗಿ ಅನುಸರಿಸಲಾಗುತ್ತದೆ. 1 ವೈಯಕ್ತಿಕ ಸಂದರ್ಶನ ವಿಧಾನ, 2 ಅನುಸೂಚಿ ವಿಧಾನ, 3 ಪ್ರಶ್ನಾವಳಿ ವಿಧಾನ.

ಕ್ಷೇತ್ರ ವಿಷಯವನ್ನು ಸಂಗ್ರಹಿಸಲು ವೈಯಕ್ತಿಕ ಸಂದರ್ಶನ ಒಂದು ಕ್ರಮಬದ್ಧ ವಿಧಾನ. ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟ ಜನರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ವಿಷಯವನ್ನು ಸಂಗ್ರಹಿಸುವುದರಿಂದ ಅನೇಕ ವಾಸ್ತವಾಂಶಗಳು ಬೆಳಕಿಗೆ ಬರುತ್ತವೆ. ಉದಾಹರಣೆಗೆ: ಆರ್ಥಿಕ ಯೋಜನೆ ಮತ್ತು ಇತರ ಅಭಿವೃದ್ಧಿ ಪ್ರಯತ್ನಗಳ ಬಗ್ಗೆ ಜನರ ಮನೋಭಾವವನ್ನು ಸ್ಪಷ್ಟವಾಗಿ ತಿಳಿಯಬಹುದು. ಮೇಲಾಗಿ, ವೈಯಕ್ತಿಕ ಸಂದರ್ಶನ ನಡೆಸುವುದರಿಂದ ಒಂದು ಕ್ಷೇತ್ರದ ಆರ್ಥಿಕ ಸ್ಥಿತಿಗಳ ಮತ್ತು ಇತರ ಅಂಶಗಳ–ಇವು ಪ್ರಾಕೃತಿಕ, ಸಾಮಾಜಿಕ ಅಥವಾ ಆರ್ಥಿಕ ಅಂಶಗಳಾಗಿರಬಹುದು–ನಡುವೆ ಸಂಬಂಧ ಕಲ್ಪಿಸಬಹುದು. ಜನರ ಮನೋಭಾವಕ್ಕೆ ಅನುಗುಣವಾಗಿ ಕೇಳಿದ ಪ್ರಶ್ನೆಗಳಿಂದ ದೊರಕುವ ವಿಷಯ ವಿಶ್ವಾಸಾರ್ಹವಾದ್ದು. ಇದರಿಂದ ಲಭ್ಯವಾಗುವ ಸ್ವಂತ ಅನುಭವದ ಸಹಾಯದಿಂದ ಕಲ್ಪನೆಗಳ ಸತ್ಯಾಸತ್ಯತೆಗಳನ್ನು ಪರೀಕ್ಷಿಸುವುದು ಸುಲಭವಾಗುತ್ತದೆ.

ವೈಯಕ್ತಿಕ ಸಂದರ್ಶನದ ಜೊತೆಗೇ ಅನುಸೂಚಿಗಳನ್ನು ರಚಿಸಿ ಅವುಗಳ ಸಹಾಯವನ್ನು ಪಡೆಯುವುದು ಸಾಮಾನ್ಯವಾಗಿ ರೂಢಿಯಲ್ಲಿದೆ. ಅನುಸೂಚಿಗಳು ಸಂದರ್ಶನಕಾರ್ಯವನ್ನು ಒಂದು ಪರಿಮಿತಿಗೆ ಒಳಪಡಿಸಿ, ವಿಷಯ ಸಂಗ್ರಹಣೆಯಿಂದ ಕ್ಷೇತ್ರ ಅಧ್ಯಯನದ ಉದ್ದೇಶಗಳು ಪೂರೈಸಲು ನೆರವಾಗುತ್ತವೆ. ಸಂದರ್ಶನದಿಂದ ದೊರಕುವ ಮಾಹಿತಿಗಳನ್ನು ಅನುಸೂಚಿಗಳಲ್ಲಿ ಗುರುತು ಮಾಡಿಕೊಳ್ಳುವುದರಿಂದ ಅನಂತರ ವಿಶ್ಲೇಷಣೆ ಕಷ್ಟವಾಗದು.

ಕ್ಷೇತ್ರದ ಜನರಿಗೆ ಅಂಚೆಯ ಮೂಲಕ ಪ್ರಶ್ನಾವಳಿಗಳನ್ನು ಕಳುಹಿಸಿ ವಿಷಯ ಸಂಗ್ರಹಿಸುವುದು ಮತ್ತೊಂದು ವಿಧಾನ. ಅಧ್ಯಯನ ನಡೆಸಬೇಕಾದ ಕ್ಷೇತ್ರ ವಿಸ್ತೃತವಾಗಿದ್ದು, ಅಲ್ಲಿಯ ಜನರು ಸುಶಿಕ್ಷಿತರೆಂದು ಕಂಡುಬಂದಾಗ ಈ ವಿಧಾನವನ್ನು ಅನುಸರಿಸಲಾಗುತ್ತದೆ. ಸ್ಪಷ್ಟ ರೀತಿಯಲ್ಲಿ ರಚಿಸಲಾದ ಪ್ರಶ್ನಾವಳಿಗಳಿಂದ ಸಮರ್ಪಕವಾಗಿ ವಿಷಯ ಸಂಗ್ರಹಿಸಬಹುದು ಮತ್ತು ಶ್ರಮ, ಕಾಲ ಮತ್ತು ಹಣ ವ್ಯಯಗಳನ್ನೂ ಕಡಿಮೆ ಮಾಡಬಹುದು.

**4 ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ:** ಇವು ಕ್ಷೇತ್ರ ಅಧ್ಯಯನದ ಅಂತಿಮ ಹಂತ. ದೊರಕಿರುವ ವಿವರಗಳನ್ನೆಲ್ಲ ವಿಶ್ಲೇಷಿಸುವುದರಿಂದ ಮುಂದಿರುವ ಸಮಸ್ಯೆಗಳನ್ನು ಬಿಡಿಸಿದಂತಾಗುತ್ತದೆ. ಇಲ್ಲವೆ ಆಧಾರಕಲ್ಪನೆಗಳನ್ನು ಪರೀಕ್ಷಿಸಿದಂತಾಗುತ್ತದೆ. ವಿಷಯ ವಿಶ್ಲೇಷಣೆ ಮತ್ತು ನಿರೂಪಣೆಯಲ್ಲಿ ಸಂಖ್ಯಾಕಲನಶಾಸ್ತ್ರದ ಸಹಾಯದಿಂದ ಹೆಚ್ಚು ನಿಖರತೆಯನ್ನು ಪಡೆಯಬಹುದು. ತತ್ಪರಿಣಾಮವಾಗಿ, ಕ್ಷೇತ್ರ ಅಧ್ಯಯನದ ಮುಖ್ಯ ಉದ್ದೇಶದ ಸಾಧನೆಯಾದಂತಾಗುತ್ತದೆ.

ಕ್ಷೇತ್ರ ಅಧ್ಯಯನದ ಕೆಲವು ಮಿತಿಗಳು: ಕ್ಷೇತ್ರ ಅಧ್ಯಯನದಲ್ಲಿ ಕೆಲವು ಮಿತಿಗಳಿವೆ. ಇವು ಸಾಮಾನ್ಯವಾಗಿ ವಿಷಯ ಸಂಗ್ರಹಣ ವಿಧಾನಗಳಲ್ಲಿ ಉಂಟಾಗುವ ಕೆಲವು ನ್ಯೂನತೆಗಳಿಂದ ಉದ್ಭವಿಸುವಂಥವು. ಸಂದರ್ಶಕರು ಕ್ಷೇತ್ರದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳದಿರುವುದು, ಕ್ಷೇತ್ರದ ಜನರ ಮನೋಭಾವವನ್ನನುಸರಿಸಿ ಪ್ರಶ್ನೆಗಳನ್ನು ಕೇಳದಿರುವುದು, ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡದಿರುವುದು ಮುಂತಾದವು ವೈಯಕ್ತಿಕ ಸಂದರ್ಶನ ವಿಧಾನವನ್ನು ವಿಫಲಗೊಳಿಸುತ್ತವೆ. ಇಂಥ ಸನ್ನಿವೇಶದಲ್ಲಿ ಸಂಗ್ರಹಿಸುವ ಮಾಹಿತಿಗಳಂತೂ ಸಂಶಯಾಸ್ಪದವಾಗಿರುತ್ತವೆ. ಅಸಮರ್ಪಕ ರೀತಿಯಲ್ಲಿ ರಚಿಸಲಾದ ಅನುಸೂಚಿಗಳು ಸಂದರ್ಶಕರನ್ನು ತಪ್ಪುದಾರಿಗೆ ಎಳೆದು ಇಡೀ ಕ್ಷೇತ್ರ ಅಧ್ಯಯನವನ್ನೇ ನಿಷ್ಪ್ರಯೋಜನಗೊಳಿಸುತ್ತವೆ. ಇದೇ ರೀತಿ, ಸ್ಥಳೀಯ ಭಾಷೆ, ಸರಳತೆ ಹಾಗೂ ಸ್ಪಷ್ಟತೆಗೆ ಗಮನ ಕೊಡದೆ, ಪ್ರಾಮುಖ್ಯಕ್ಕೆ ತಕ್ಕಂತೆ ಪ್ರಶ್ನೆಗಳನ್ನು ಜೋಡಿಸದೆ ಮತ್ತು ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸದೆ ರಚಿಸಲಾಗುವ ಪ್ರಶ್ನಾವಳಿಗಳು ಕ್ಷೇತ್ರ ಅಧ್ಯಯನವನ್ನು ಫಲಪ್ರದಗೊಳಿಸಲಾರವು. ಕ್ಷೇತ್ರ ಕಾರ್ಯನಿರತರ ಆಲಸ್ಯ ಹಾಗೂ ಜಡತಾ ಮನೋಭಾವ, ಪಕ್ಷಪಾತ ಧೋರಣೆ, ಅಸಮರ್ಪಕ ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ ಮುಂತಾದವು ಕ್ಷೇತ್ರ ಅಧ್ಯಯನವನ್ನು ನಿಷ್ಪ್ರಯೋಜಕವನ್ನಾಗಿ ಮಾಡುತ್ತವೆ.

ಕ್ಷೇತ್ರ ಅಧ್ಯಯನದಲ್ಲಿ ಮೇಲೆ ಹೇಳಿರುವ ಮಿತಿಗಳಿದ್ದಾಗ್ಯೂ ಸಂಶೋಧನ ಕಾರ್ಯದಲ್ಲಿ ಅದನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಲಾಗುತ್ತಿದೆ. ಕ್ಷೇತ್ರ ಅಧ್ಯಯನದಿಂದ ಅನೇಕ ಪ್ರಯೋಜನಗಳು ಲಭ್ಯವಾಗುತ್ತವೆ. ಮೇಲೆ ಹೇಳಿದ ಮಿತಿಗಳು ಅನಿವಾರ್ಯವೇನಲ್ಲ. ಕುಶಲರಾದ ಹಾಗೂ ತರಬೇತು ಪಡೆದ ವ್ಯಕ್ತಿಗಳನ್ನು ಸಂದರ್ಶಕರನ್ನಾಗಿ ನೇಮಿಸುವುದರಿಂದಲೂ ಅನುಸೂಚಿ ಮತ್ತು ಪ್ರಶ್ನಾವಳಿಗಳನ್ನು ಜಾಣ್ಮೆಯಿಂದ ರಚಿಸುವುದರಿಂದಲೂ ಕ್ಷೇತ್ರಕಾರ್ಯನಿರತರು ನಿಷ್ಪಕ್ಷಪಾತ ಧೋರಣೆಯನ್ನು ತಳೆಯುವುದರಿಂದಲೂ ಮೇಲಿನ ಮಿತಿಗಳನ್ನು ನಿವಾರಿಸಿ ಕ್ಷೇತ್ರ ಅಧ್ಯಯನವನ್ನು ಯಶಸ್ವಿಗೊಳಿಸಬಹುದು. ಯಶಸ್ವೀ ಕಾರ್ಯಾಚರಣೆಯಿಂದ ಸಂಶೋಧನ ಕ್ಷೇತ್ರದಲ್ಲಿ ಕ್ಷೇತ್ರ ಅಧ್ಯಯನದ ಮಹತ್ತ್ವ ಅಧಿಕಗೊಂಡಿರುವುದಲ್ಲದೆ ಸಾಮಾಜಿಕ ಶಾಸ್ತ್ರಗಳ ಅಭಿವೃದ್ಧಿಯನ್ನು ಸಾಧಿಸಲು ನೆರವಾಗಿವೆ.

(ಜಿ.ಟಿ.ಎಚ್.; ಎಂ.ವಿ.ಜಿ.)

ಜಾನಪದ, ಸಮಾಜಶಾಸ್ತ್ರ ಹಾಗೂ ಭಾಷಾವಿಜ್ಞಾನ ವಿಭಾಗಗಳಲ್ಲಿ ಕ್ಷೇತ್ರಕಾರ್ಯ ಪರಿಚಯಕ್ಕೆ. **(ನೋಡಿ– ಕ್ಷೇತ್ರಕಾರ್ಯ (ಜಾನಪದ), ಕ್ಷೇತ್ರಕಾರ್ಯ (ಭಾಷಾವಿಜ್ಞಾನ), ಕ್ಷೇತ್ರಕಾರ್ಯ (ಸಮಾಜಶಾಸ್ತ್ರದಲ್ಲಿ).**

**ಕ್ಷೇತ್ರಕಾರ್ಯ (ಜಾನಪದ) :** ಸ್ಥಳಕ್ಕೇ ಹೋಗಿ ಜಾನಪದ ಮೂಲವಸ್ತುಗಳನ್ನು ವ್ಯವಸ್ಥಿತ ವಿಧಾನಗಳ ಮೂಲಕ ಸಂಗ್ರಹಿಸುವ ಕೆಲಸ ಹೇಗೆ ಇರಬೇಕೆಂಬ ಬಗ್ಗೆ ಮುಖ್ಯ ವಿವರಗಳನ್ನು ಇಲ್ಲಿ ಕೊಡಲಾಗಿದೆ[ಫೀಲ್ಡ್ ವರ್ಕ್ (ಫೋಕ್‌ಲೋರ್)]. ಕ್ಷೇತ್ರಕಾರ್ಯ ಜಾನಪದಕ್ಕೇ ಮೀಸಲಾದ ವಿಧಾನವೇನಲ್ಲ. ಇದನ್ನು ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾವಿಜ್ಞಾನ, ಸಂಸ್ಕೃತಿ ಅಧ್ಯಯನ ಮುಂತಾದ ಕ್ಷೇತ್ರಗಳಲ್ಲಿ ಆಗಲೆ ಬಳಸುತ್ತಿದ್ದಾರೆ. ಇದರಿಂದಾಗಿ ಎಲ್ಲ ಶಾಸ್ತ್ರಗಳಿಗೂ ಹೊಂದಬಲ್ಲ ಕ್ಷೇತ್ರಕಾರ್ಯದ ನಿಯಮಗಳು ಕೆಲವಿವೆ(**ನೋಡಿ– ಕ್ಷೇತ್ರಕಾರ್ಯ**). ಅವುಗಳ ಜೊತೆಗೆ ಜಾನಪದಕ್ಕೇ ಸಂಬಂಧಿಸಿದಂತೆ ವಿಶಿಷ್ಟವಾದ ನಿಯಮಗಳೂ ಕೆಲವಿವೆ. ಅವನ್ನು ಇಲ್ಲಿ ಪರಿಶೀಲಿಸಲಾಗಿದೆ. ನೇರವಾದ ಕ್ಷೇತ್ರಪರಿವೀಕ್ಷಣೆಯಿಂದ ಸಂಗ್ರಹಿಸಿದುದನ್ನು ಯಾವುದಾದರೂ ರೂಪದಲ್ಲಿ ಪ್ರಕಟಪಡಿಸುವುದೇ ಕ್ಷೇತ್ರಕಾರ್ಯದ ಉದ್ದೇಶವಾದ್ದರಿಂದ ಜಾನಪದ ಅಧ್ಯಯನಕ್ಕೆಲ್ಲ ಇಂಥ ಸಂಗ್ರಹಕಾರ್ಯವೇ ಮೊದಲ ಹಂತ. ಸಂಗ್ರಹ, ಸಂಪಾದನೆ, ವಿಶ್ಲೇಷಣೆಗಳು ಜಾನಪದ ವಿದ್ವಾಂಸರ ಗುರಿಗಳು. ಸ್ಟಿತ್ ಥಾಂಸನ್ ಹೇಳುವ ಹಾಗೆ, ಜಾನಪದ ಅಧ್ಯಯನವೆಲ್ಲದರ ಸಾರವೆಂದರೆ– ಸಂಗ್ರಹಿತವಾಗಿರುವುದನ್ನು ಸಂಗ್ರಹಿಸುವುದು ಮತ್ತು ಅದನ್ನು ಅರಿತುಕೊಳ್ಳಲು ಪ್ರಯತ್ನಿಸುವುದು. ಜನತೆಯ ಜೀವನಾನುಭವ ಈಗಾಗಲೆ ಜಾನಪದದಲ್ಲಿ ಹರಳುಗೊಂಡಿರುತ್ತದಾಗಿ, ಅದನ್ನು ಮತ್ತೆ ಒಂದು ಕಡೆ ಸಂಗ್ರಹಿಸಿ ಅಧ್ಯಯನ ಮಾಡಬೇಕೆಂಬುದೇ ಇದರ ಅರ್ಥ. ಇದೆಲ್ಲವೂ ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಜಾನಪದ ಅಧ್ಯಯನಕ್ಕೆ ಕ್ಷೇತ್ರಕಾರ್ಯ ತುಂಬ ಆವಶ್ಯವಾದುದು. ಜಾನಪದ ವಿದ್ವಾಂಸ ಕ್ಷೇತ್ರಕಾರ್ಯದ ಅಪಾರ ಅನುಭವ ಪಡೆದವನಾಗಿರಬೇಕು; ಶ್ರೇಷ್ಠ ಸಂಗ್ರಹಕಾರನೂ ಸಂಗ್ರಹಿಸಲಿರುವ ಸಂಸ್ಕೃತಿಯ ವಿಸ್ತಾರ ಜ್ಞಾನವನ್ನು ಪಡೆದ ವಿದ್ವಾಂಸನೂ ಆಗಿರಬೇಕು. ಇನ್ನೊಂದು ವಿಷಯವೆಂದರೆ, ಸಂಗ್ರಹಿಸಿರುವುದರ ಮೇಲೆಯೇ ನಿರ್ಣಾಯಕ ವಿಚಾರಗಳನ್ನು ಮುಂದೆ ಕೈಗೊಳ್ಳಬೇಕಾಗಿರುವುದರಿಂದ ಆ ಕೆಲಸ ತುಂಬ ಜವಾಬ್ದಾರಿಯುತವಾಗಿ ನಡೆಯಬೇಕಾಗುತ್ತದೆ.

ಪೂರ್ವಸಿದ್ಧತೆ, ಕ್ಷೇತ್ರಕಾರ್ಯ ಮತ್ತು ವಿಶ್ಲೇಷಣೆಗಳು ಸಂಶೋಧನೆಯ ಮೂರು ಹಂತಗಳು. ಪೂರ್ವಸಿದ್ಧತೆಯ ಮೊದಲ ಹೆಜ್ಜೆಯೆಂದರೆ, ಮೂಲವಸ್ತುವಿನ ಬಗೆಗಿನ ಸ್ಪಷ್ಟನೆ. ಅಂದರೆ ಕಾರ್ಯಕರ್ತ ಗೀತೆ. ಕಥೆ, ಗಾದೆ, ಒಗಟು, ಕಲೆಗಳು, ನಂಬಿಕೆ, ಪದ್ಧತಿ ಮೊದಲಾದ ಜಾನಪದ ಮೂಲವಸ್ತುಗಳಲ್ಲಿ ಯಾವುದರ ಮೇಲೆ ತನಗೆ ಇಷ್ಟವಿದೆಯೋ ಅದನ್ನು ಆರಿಸಿಕೊಳ್ಳಬೇಕಾದುದು. ಉದಾಹರಣೆಗೆ, ಜನಪದ ಕಲೆಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದು, ಗೀತೆಯ ಬಗ್ಗೆಯೋ ಕಥೆಯ ಬಗ್ಗೆಯೊ ಆಸಕ್ತಿಯಿರದಿದ್ದರೆ, ಆಗ ಕಲೆಗಳಷ್ಟು ಉಳಿದವುಗಳು ಯಶಸ್ವಿಯಾಗುವುದಿಲ್ಲ. ನಮ್ಮ ದೃಷ್ಟಿ ಯಾವುದಾದರೂ ಒಂದು ಕ್ಷೇತ್ರಕ್ಕೆ ಕೇಂದ್ರೀಕೃತವಾದರೆ ಕೆಲಸ ಸಮರ್ಪಕವೂ ನಿರ್ದುಷ್ಟವೂ ಆಗುತ್ತದೆ ಆದರೆ, ಹಾಡುವ ಹಾಗೂ ಹೇಳುವ ಸಂಪ್ರದಾಯಗಳು ಬಹುಬೇಗ ನಷ್ಟವಾಗಿ ಬಿಡುವ ಹೆದರಿಕೆಯಿರುವುದರಿಂದ ಸಂಗ್ರಹಕಾರ್ಯ ಯಾವ ಒಂದು ನಿರ್ದಿಷ್ಟ ಕ್ಷೇತ್ರಕ್ಕೇ ಸೇರಿರಬಹುದಾದರೂ ಉಳಿದ ಕ್ಷೇತ್ರಗಳ ಕಡೆಗೂ ಗಮನವಿರಬೇಕಾದುದು ಅಗತ್ಯವೆನಿಸುತ್ತದೆ.

ಪೂರ್ವಭಾವಿಸಿದ್ಧತೆಯ ಮುಂದಿನ ಹೆಜ್ಜೆ, ಜಾನಪದ ಮೂಲ ವಸ್ತುವನ್ನು ಚಾರಿತ್ರಿಕ, ಸಮಾಜ ಶಾಸ್ತ್ರೀಯ, ಮಾನವಶಾಸ್ತ್ರೀಯ, ಭಾಷಾ ಶಾಸ್ತ್ರೀಯ, ಮನೋವಿಜ್ಞಾನ–ಮೊದಲಾದ ವಿವಿಧ ದೃಷ್ಟಿಗಳಿಂದ ನೋಡಬೇಕಾದುದು. ಉದಾಹರಣೆಗೆ, ಐತಿಹ್ಯವನ್ನು ಚಾರಿತ್ರಿಕ ಅಧ್ಯಯನಕ್ಕೆ ಎತ್ತಿಕೊಂಡಾಗ, ಅವನ್ನು ಹಾಗೆಯೇ ಸಂಗ್ರಹಿಸುವುದರ ಜೊತೆಗೆ ಚಾರಿತ್ರಿಕ ಸಂಗತಿಗಳು, ಚಾರಿತ್ರಿಕ ಪುರುಷರ ಹೆಸರುಗಳು ಮತ್ತು ಘಟನೆಗಳು ಇತ್ಯಾದಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಇದಕ್ಕೂ ಉಳಿದ ಪ್ರಕಾರಗಳಿಗೂ ಸಂಬಂಧವಿದ್ದ ಪಕ್ಷದಲ್ಲಿ, ಆಗ ಅವನ್ನು ಕುರಿತ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಜಾನಪದ ಅಧ್ಯಯನದಲ್ಲಿ ವಿವರಣಾತ್ಮಕ, ತೌಲನಿಕ ಮತ್ತು ರಾಚನಿಕ ಜಾನಪದಗಳೆಂದು ಮೂರು ವಿಧಗಳಿರುವುದರಿಂದ ಸಂಗ್ರಹಕಾರ ಅವುಗಳ ಬಗ್ಗೆಯೂ ನಿಶ್ಚಿತ ಜ್ಞಾನವನ್ನು ಹೊಂದಿರಬೇಕಾಗುತ್ತದೆ.

ಪೂರ್ವಸಿದ್ಧತೆಯ ಮೂರನೆಯ ಹೆಜ್ಜೆಯೆಂದರೆ, ಸಂಗ್ರಹಿಸಬೇಕಾಗಿರುವ ಪ್ರದೇಶದ ಆಯ್ಕೆ. ಎಲ್ಲ ಪ್ರದೇಶಗಳಲ್ಲಿಯೂ ಎಲ್ಲ ಕಾರ್ಯಕರ್ತರೂ ಯಶಸ್ವಿಯಾಗಲಾರರಾದ್ದರಿಂದ, ಕೆಲಸಗಾರ ತನ್ನ ಅನುಕೂಲಕ್ಕೆ ಹೊಂದುವ ನಿರ್ದಿಷ್ಟ ಪ್ರದೇಶವನ್ನು ಆಯ್ದುಕೊಳ್ಳುವುದು ಉತ್ತಮ. ಪ್ರದೇಶ ಗೊತ್ತಿರುವ ವ್ಯಕ್ತಿಗೆ ಸಂಗ್ರಹ ಕಾರ್ಯ ಸುಲಭವಾಗುವಂತೆ, ಅಪರಿಚಿತನಿಗೆ ಸುಲಭವಾಗುವುದಿಲ್ಲ. ಆ ಪ್ರದೇಶದ ಜನರ ಆಚಾರವಿಚಾರ, ಜೀವನರೀತಿ, ಪದ್ಧತಿ, ಗೀತಸಂಪ್ರದಾಯ ಮೊದಲಾದವುಗಳ ಪರಿಚಯವಿರುವವನಾದರೆ ಕಾರ್ಯ ಸುಗಮವಾಗುತ್ತದೆ. ಇನ್ನೊಂದು ವಿಷಯವೆಂದರೆ ಜಾನಪದವನ್ನು ಪ್ರಾದೇಶಿಕವಾಗಿ ನೋಡಬೇಕಾದುದು. ಪ್ರಾದೇಶಿಕ ವಿವಿಧತೆ ಹಾಗೂ ಪ್ರಾದೇಶಿಕ ಏಕತೆಗಳು–ಜಾನಪದದಲ್ಲಿ ಎರಡು ಮುಖ್ಯ ವಿಷಯಗಳು. ಜಾನಪದ ಹರಿದು ಬಂದಿರುವುದು ಪ್ರಾದೇಶಿಕ ಉಪಭಾಷೆಗಳ ಮೂಲಕವಾಗಿಯೇ, ಆದ್ದರಿಂದ ಸಂಗ್ರಹಕಾರ, ಆಯಾ ಪ್ರದೇಶದ ಉಪಭಾಷೆಗಳನ್ನು ತಿಳಿದು ಕೊಂಡಿರಬೇಕಾದದ್ದು ಅಗತ್ಯ.

ಪ್ರದೇಶವೊಂದನ್ನು ಆಯ್ದುಕೊಂಡ ಮೇಲೆ, ಅದರ ಹಿನ್ನೆಲೆಯನ್ನೊಮ್ಮೆ ತಿಳಿದಿರಬೇಕಾಗುತ್ತದೆ. ಅಂದರೆ ಜನತೆಯ ಸ್ವಭಾವವನ್ನು ತಿಳಿಯಲು ನೆರವಾಗುವ ವಿಷಯಗಳ ಸಂಗ್ರಹವೇ ಇದು. ಆ ಪ್ರದೇಶದ ಸ್ಥಳೀಯ ಚರಿತ್ರೆ, ಭೌಗೋಳಿಕ ಸಾಮಾಜಿಕ ಪರಿಸ್ಥಿತಿಗಳು ಮೊದಲಾದವನ್ನು ಗಮನಕ್ಕೆ ತಂದು ಕೊಳ್ಳಬೇಕು. ಸಂಗ್ರಹಕಾರ ಹೊರಗಿನವನಾದರಂತೂ ಪೂರ್ವಸಿದ್ಧತೆ ಮಾಡಿಕೊಳ್ಳಲು ತುಂಬ ಪ್ರಯತ್ನ ಪಡಬೇಕಾಗುತ್ತದೆ. ಇಂಥ ಸಮಯದಲ್ಲಿ ವೃದ್ಧ ಜನರನ್ನು ಭೇಟಿ ಮಾಡುವುದರಿಂದಲೋ ಸ್ಥಳೀಯ ಗೆಜೆಟಿಯರುಗಳನ್ನು ನೋಡುವುದರಿಂದಲೋ ವಿಷಯವನ್ನು ತಿಳಿದುಕೊಳ್ಳಬೇಕಾಗುತ್ತದೆ.

ಮುಂದಿನ ಕಾರ್ಯವೆಂದರೆ ಸಂಗ್ರಹ ಕ್ರಮವೊಂದನ್ನು ಸಿದ್ಧಪಡಿಸಿಕೊಳ್ಳುವುದು. ಇದಿಲ್ಲದೆ ಹೋದರೆ, ವಿಸ್ತಾರ ಜಾನಪದದ ಮುಂದೆ ಭೀತನಾಗಿ ಸಂಗ್ರಹಕಾರ ಬರಿಗೈಲಿ ವಾಪಸಾಗುವ ಸಾಧ್ಯತೆಯಿದೆ. ಸಂಗ್ರಹಕ್ರಮ ಅಧ್ಯಯನದ ವಿಷಯ ಮತ್ತು ವರ್ಗವನ್ನು ಅವಲಂಬಿಸಿರುತ್ತದೆ. ಈಗ ಸಂಗ್ರಹ ರೀತಿಯ ಕೆಲವು ನಿರ್ದೇಶನಗಳನ್ನು ನೋಡಬಹುದು. ಇವನ್ನು ತ್ರಿಲೋಚನ ಪಾಂಡೆಯವರು ಹೀಗೆ ಪಟ್ಟಿ ಮಾಡಿದ್ದಾರೆ:

1. ಎಲ್ಲ ಮೂಲಗಳ ಸ್ವರೂಪಲಕ್ಷಣ, ಸಂದರ್ಶಿಸಿದ ವ್ಯಕ್ತಿಯ ಹಿನ್ನೆಲೆ ಮತ್ತು ವಯಸ್ಸು ಇವುಗಳನ್ನು ಕಾಲ, ಸ್ಥಳ ಮತ್ತು ದಿನಾಂಕಗಳೊಡನೆ ದಾಖಲೆ ಮಾಡಿಕೊಳ್ಳಬೇಕು. ಪ್ರತಿವಕ್ತನ (ಸೂಚಕ) ಹೆಸರು, ವಿಳಾಸ ಮತ್ತು ವೃತ್ತಿಗಳು–ಇವು ಸಂಗ್ರಹಿತ ವಸ್ತುವಿನ ವಿಶ್ವಾಸಾರ್ಹತೆಯನ್ನು ಸಮರ್ಥಿಸುವುದರಲ್ಲಿ ಸಹಾಯ ಮಾಡುತ್ತವೆ.

2.ನಿರ್ದಿಷ್ಟ ಜಾನಪದ ವಿಷಯದ ಶಿರೋನಾಮೆಯನ್ನು ಕಥೆ ಹೇಳುವ ಪ್ರಮುಖ ಸಂದರ್ಭದೊಡನೆ (ಇದ್ದರೆ) ಗುರುತಿಸಬೇಕು.

3. ಜಾನಪದ ವಿಷಯ ಆಯಾ ಕೋಮಿನ ಸ್ತ್ರೀಪುರುಷರಲ್ಲಿ ಯಾರಲ್ಲಿ ಹೆಚ್ಚು ಪ್ರಚಲಿತವಾಗಿದೆ ಎಂಬುದನ್ನು ಗಮನಿಸಬೇಕು. ಇದಲ್ಲದೆ ಅದು ಗುಂಪು ವಿಷಯವೇ ಅಥವಾ ಏಕವಿಷಯವೇ ಎಂಬುದೂ ಸ್ಪಷ್ಟಗೊಳ್ಳಬೇಕು.

4. ಅದೇನಾದರೂ ಗ್ರಂಥ ವಿಷಯವಾದರೆ, ಅದರ ಲೇಖಕನ ಹೆಸರು ಮತ್ತು ರಚನೆಯಾದ ಕಾಲಗಳನ್ನು ಗುರುತಿಸಿಕೊಳ್ಳಬೇಕು.

5. ಜಾನಪದದ ಎಲ್ಲ ವಿಷಯಗಳ ಪ್ರಾರಂಭದಲ್ಲೂ ಸಂಕ್ಷಿಪ್ತ ಪೀಠಿಕೆಗಳಿದ್ದರೆ ಮೂಲವಸ್ತುವಿನ ವರ್ಗೀಕರಣ ಸುಗಮವಾಗುತ್ತದೆ.

6.ಪ್ರಧಾನ ವಿಷಯದ ಜೊತೆಗೆ ಯಾವುದಾದರೂ ಬೇರೆ ವಿಷಯಗಳನ್ನು (ದಂತ ಕಥೆಗಳು, ಇತ್ಯಾದಿ) ಹೇಳಿದ್ದರೆ ಅವನ್ನೂ ಗುರುತಿಸಿಕೊಳ್ಳಬೇಕು.

7. ಜನಪದ ಸಂಗೀತದ ಭಿನ್ನ ಉಪಕರಣಗಳ ಹೆಸರುಗಳನ್ನು ಗುರುತು ಹಾಕಿಕೊಳ್ಳಬೇಕು. ಗೀತೆ ಇತ್ಯಾದಿಗಳಿಗೆ ಏನಾದರೂ ಹಿಮ್ಮೇಳದ ಅಗತ್ಯವಿಲ್ಲದಿದ್ದರೆ ಇಲ್ಲವೆನ್ನುವುದನ್ನೂ ಗುರುತಿಸಬೇಕು.

8. ವಿಷಯದ ಭಾಷೆಯಲ್ಲಿ ವ್ಯತ್ಯಾಸ ಮಾಡಲಾಗದು. ವಿಷಯದ ಪದಗಳು, ಜಾಣ್ನುಡಿಗಳನ್ನು ಇದ್ದಹಾಗೆಯೇ ಉಳಿಸಬೇಕು.

9. ಸಂದರ್ಶಿಸುವ ಜನರೊಡನೆ ಸ್ನೇಹದಿಂದ ವರ್ತಿಸುವುದು ಯಾವಾಗಲೂ ಅನುಕೂಲಕರ ಫಲಿತಾಂಶಗಳನ್ನು ತರುತ್ತದೆ.

ಸಂಗ್ರಹಕಾರನಿಗೆ ಕೆಲವು ಅತ್ಯಗತ್ಯ ಸಾಧನಗಳು ಬೇಕಾಗುತ್ತವೆ. ಅವುಗಳಲ್ಲಿ ಟೇಪ್ ರೆಕಾರ್ಡರ್ ಮೊದಲ ಸಂಗ್ರಹ ವೈಜ್ಞಾನಿಕವಾಗಿರಲು ಇದು ಅತ್ಯಂತ ಆವಶ್ಯಕ. ಇದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬಹುದಾದ ಗಾತ್ರದಲ್ಲಿ ಸಿಗುತ್ತದೆ. ಇದನ್ನು ಬಳಸುವುದರಿಂದ ನಮ್ಮ ಶ್ರಮವನ್ನು ಕಡಿಮೆ ಮಾಡಿಕೊಳ್ಳಬಹುದು ಮತ್ತು ಪ್ರತಿವಕ್ತನ ಹತ್ತಿರ ಎದುರಿಸಬೇಕಾಗಿರುವ ಎಷ್ಟೋ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು. ಸಂಗ್ರಹಕ್ಕೆ ತೆಗೆದುಕೊಂಡು ಹೋಗಬೇಕಾದ ಮತ್ತೊಂದು ಸಾಧನ ಕ್ಯಾಮರಾ. ಪ್ರತಿವಕ್ತನ ಚಿತ್ರ ಅಥವಾ ಸಂಗ್ರಹ ಮಾಡುವಾಗಿನ ದೃಶ್ಯವನ್ನು ಚಿತ್ರಿಸಿಕೊಳ್ಳುವುದಕ್ಕೆ ಇದು ಬೇಕಾಗುವುದುಂಟು. ಜನಪದ ಕಲೆಗಳ ಸಂಗ್ರಹದಲ್ಲಂತೂ ಇದರ ಅಗತ್ಯ ಬಹಳವಿದೆ.

ಕಾರ್ಯಕರ್ತ ಸಿದ್ಧಪಡಿಸಿಕೊಳ್ಳಬೇಕಾದ ಪೂರ್ವಸಿದ್ಧ ಪ್ರಶ್ನಾವಳಿಯಲ್ಲಿ ವಿಧಗಳಿವೆ: ಕ್ಷೇತ್ರಕಾರ್ಯದ ಪೂರ್ವಸಿದ್ಧತೆಗೆ ಸಂಬಂಧಿಸಿದುದು ಒಂದು; ಪ್ರತಿವಕ್ತನಿಗೆ ಸಂಬಂಧಿಸಿದುದು ಮತ್ತೊಂದು. ಮೊದಲನೆಯದಕ್ಕಿಂತ ಎರಡನೆಯದು ಭಿನ್ನವಾಗಿರುತ್ತದೆಯಲ್ಲದೆ ಸಂಗ್ರಹಕಾರ್ಯ ಅದರ ಮೇಲೇ ರೂಪಿತವಾಗಬೇಕಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಸಿದ್ಧಪಡಿಸಿಕೊಂಡಿರುವ ಪ್ರಶ್ನಾವಳಿ ಅನ್ವಯಿಸದೇ ಹೋಗಬಹುದು. ಇಂಥ ಕಡೆಗಳಲ್ಲಿ ಹಳೆಯದಕ್ಕೆ ಇನ್ನೂ ಕೆಲವು ವಿಷಯಗಳನ್ನು ಸೇರಿಸಬೇಕಾಗುತ್ತದೆ. ಇದಲ್ಲದೆ ಅಧ್ಯಯನ ಹೆಚ್ಚಾಗಿ ನಡೆದಿರದ ಗಿರಿಜನ ಸಮಾಜಗಳಿಗಾಗಿ ಹೊಸ ಪ್ರಶ್ನಾವಳಿಯನ್ನೇ ರೂಪಿಸಬೇಕಾಗಿ ಬರಬಹುದು. ಆದ್ದರಿಂದ, ಕ್ಷೇತ್ರಕಾರ್ಯವನ್ನು ಒಂದೇ ರೀತಿಯ ಪ್ರಶ್ನಾವಳಿಯ ಆಧಾರದ ಮೇಲೆ ನಿರ್ವಹಿಸಲು ಸಾಧ್ಯವಾಗುವುದಿಲ್ಲ.

ಸಂಗ್ರಹ ಕಾರ್ಯದಲ್ಲಿ ವಿವೃತ ಪದ್ಧತಿ ಮತ್ತು ಸಂವೃತ ಪದ್ಧತಿ ಎಂಬುದಾಗಿ ಎರಡು ರೀತಿಗಳಿವೆ. ಪತ್ರವ್ಯವಹಾರದ ಮೂಲಕ ವಿಷಯಗಳನ್ನು ಸಂಗ್ರಹಿಸುವುದು ವಿವೃತ ಪದ್ಧತಿ; ಜನರನ್ನು ನೇರವಾಗಿ ಸಂಧಿಸಿ ಮೂಲವಸ್ತುವನ್ನು ಸಂಗ್ರಹಿಸುವುದು ಸಂವೃತ ಪದ್ಧತಿ. ಸಂಶೋಧನೆಯ ವಿಷಯಕ್ಕೆ ಅನುಗುಣವಾಗಿ ಕ್ಷೇತ್ರಕಾರ್ಯದ ವಿಧಾನಗಳು ವ್ಯತ್ಯಾಸವಾಗುತ್ತವೆ. ಕ್ಷೇತ್ರಕಾರ್ಯದಲ್ಲಿ ಪ್ರೀತಿ ವಿಶ್ವಾಸವಿಲ್ಲದಿದ್ದ ಪಕ್ಷದಲ್ಲಿ ಕ್ಷೇತ್ರಾಭ್ಯಾಸಕ್ಕೆ ಕಾರ್ಯಕರ್ತ ಒಪ್ಪಿಕೊಳ್ಳಬಾರದು. ಕ್ಷೇತ್ರಕಾರ್ಯಕ್ಕೆ ಒಬ್ಬನೇ ಹೋದರೆ ಅದೊಂದು ವೈಯಕ್ತಿಕ ಚಟುವಟಿಕೆಯಾಗುತ್ತದೆ; ಆಗ ಅದು ಅವನ ಬುದ್ಧಿವಂತಿಕೆ ಮತ್ತು ಜಾಣ್ಮೆಯನ್ನು ಅವಲಂಬಿಸಿರುತ್ತದೆ. ನಾಲ್ಕು ಜನ ಸೇರಿ ಹೊರಟಾಗ ದೊಡ್ಡ ಯೋಜನೆಯನ್ನೇ ಹಾಕಬೇಕಾಗುತ್ತದೆ. ಸಂಗ್ರಹಕಾರ ಹಳ್ಳಿಗರ ಜೀವನದಲ್ಲಿ ಬೆರೆತುಹೋಗಬೇಕಾದುದು ಗಮನದಲ್ಲಿರಿಸಬೇಕಾದ ಒಂದು ಸಂಗತಿ. ಪುರಾತನ ಸಮಾಜಗಳಿಗೆ ಹೋದಾಗಲಂತು ತುಂಬ ಎಚ್ಚರಿಕೆಯಿಂದಿರಬೇಕಾಗುತ್ತದೆ. ಸಂಶೋಧಕರು ತಮಗೆ ಕೆಟ್ಟದ್ದನ್ನು ಮಾಡುವುದಕ್ಕೆ ಬಂದಿರುವರೆಂದು ಜನ ತಿಳಿದುಕೊಂಡರೆ ಯಾವ ಸಹಕಾರವೂ ಅವರಿಂದ ಸಿಗದೆ ಹೋಗಬಹುದು. ಸಂಗ್ರಹಕಾರನಿಗಿರಬೇಕಾದ ಮತ್ತೊಂದು ಗುಣ ಸಹನೆ. ಎಷ್ಟೋ ಸಾರಿ ಆತ ಬೆಳಗ್ಗೆಯಿಂದ ಸಾಯಂಕಾಲದವರೆವಿಗೂ ಕಾಯಬೇಕಾಗಿ ಬರಬಹುದು. ಮೊದಮೊದಲು ನಿರೀಕ್ಷಿಸಿದಂತೆ ಕಾರ್ಯ ಸುಗಮವಾಗಿ ಆಗದಿರಬಹುದು. ಕೆಲವು ವೇಳೆ ಕೆಲಸ ಆಗದೇ ಹೋಗುವುದೂ ಉಂಟು. ಇಂಥ ಸಮಯಗಳಲ್ಲಿ ಸಂಗ್ರಹಕಾರ ಬಹು ಜಾಣ್ಮೆಯಿಂದ ವರ್ತಿಸಬೇಕಾಗುತ್ತದೆ.

ಇಷ್ಟೆಲ್ಲ ಸಿದ್ಧತೆಯೊಡನೆ ಬಂದ ಸಂಗ್ರಹಕಾರರು ಸ್ಥಳೀಯ ಪಂಚಾಯಿತಿಗಳು, ಪುರೋಹಿತರು, ಸಾಮಾಜಿಕ ಮುಂದಾಳುಗಳು, ಸಾಂಸ್ಕೃತಿಕ ಹಾಗೂ ರಾಜಕೀಯ ಸಂಸ್ಥೆಗಳು ಮೊದಲಾದವುಗಳ ಸಂಪರ್ಕ ಬೆಳೆಸಿಕೊಂಡರೆ, ಕ್ಷೇತ್ರಕಾರ್ಯಕ್ಕೆ ದಾರಿ ಸುಲಭವಾದಂತಾಗುತ್ತದೆ. ಸರಿಯಾದ ಪ್ರತಿವಕ್ತ ಸಿಕ್ಕಿದರೆ ಅರ್ಧ ಕೆಲಸ ಆದಂತೆಯೇ. ಕೆಲವು ಸಾರಿ ಅನಿರೀಕ್ಷಿತವಾಗಿ ಕೆಲವು ವ್ಯಕ್ತಿಗಳು ಸಂಪರ್ಕ ರಾಯಭಾರಿಗಳಾಗಿ ಕೆಲಸ ಮಾಡಲು ಬರುವುದುಂಟು. ಅಂಥವರಲ್ಲಿ ಪ್ರತಿಯೊಬ್ಬನನ್ನೂ ಎಚ್ಚರಿಕೆಯಿಂದ ಗಮನಿಸುವುದು ಒಳ್ಳೆಯದು.

ಸಂಗ್ರಹಕಾರನಿಗೆ ಪ್ರತಿವಕ್ತ ಸಿಕ್ಕಿದಾಗ, ಜಾನಪದ ನಿನಗೆ ಗೊತ್ತೆ, ಯಾವುದಾದರೂ ಜಾನಪದವನ್ನು ಬಲ್ಲ ಯಾರಾದರೂ ನಿನಗೆ ಗೊತ್ತೆ–ಮೊದಲಾದ ಪ್ರಶ್ನೆಗಳನ್ನು ಕೇಳುವುದು ಅಸಂಗತವಾಗುತ್ತದೆ. ಕಾರಣ, ಪ್ರತಿವಕ್ತನಿಗೆ ತಾನು ತಿಳಿದುಕೊಂಡಿರುವ ಜಾನಪದದ ಬಗ್ಗೆ ಪ್ರಜ್ಞೆ ಇರುವುದಿಲ್ಲ. ಆದ್ದರಿಂದ ಗೀತೆಯನ್ನೂ ಕಥೆಯನ್ನೂ ಕುರಿತ ನಿರ್ದಿಷ್ಟ ಪ್ರಶ್ನೆಗಳನ್ನು ಕೇಳುವುದು ಉಚಿತವೆಂದು ತೋರುತ್ತದೆ. ಇದಲ್ಲದೆ ಪ್ರತಿವಕ್ತನಿಗೆ ಗೌರವಪೂರ್ಣ ಪುರಸ್ಕಾರ, ಶ್ಲಾಘನೆಗಳನ್ನು ನೀಡಬೇಕಾಗುತ್ತದೆ. ಜಾನಪದವನ್ನು ಸಂಗ್ರಹಿಸುವ ಉದ್ದೇಶವನ್ನು ಅವನಿಗೆ ಹೇಳಬೇಕಾಗುತ್ತದೆ. ಅವನ ಹೆಸರನ್ನು ಜೊತೆಯಲ್ಲಿ ಪ್ರಕಟಿಸುತ್ತೇವೆಂದು ಅದು ರಾಷ್ಟ್ರೀಯ ವ್ಯಾಪ್ತಿಯ ಪ್ರಸಿದ್ಧಿಯನ್ನು ಪಡೆದುಕೊಳ್ಳುತ್ತದೆಂದೂ ಅವನು ಹೇಳಿಕೊಟ್ಟ ಗೀತೆ, ಕಥೆ, ಐತಿಹ್ಯ ಮೊದಲಾದವನ್ನು ವಿದ್ವಾಂಸರು ಅಧ್ಯಯನ ಮಾಡುತ್ತಾರೆಂದೂ ತಿಳಿಸಬೇಕಾಗುತ್ತದೆ. ಇದೆಲ್ಲವನ್ನೂ ಕೇಳಿದರೆ ಅವನಿಗೆ ಒಂದು ರೀತಿಯ ಹೆಮ್ಮೆ ಉಂಟಾಗುತ್ತದೆ. ಸಂಗ್ರಹಕಾರ್ಯ ಸುಲಭವಾಗಲು ಇದೂ ಒಂದು ಮುಖ್ಯ ಸಲಕರಣೆಯಾಗುತ್ತದೆ.

ಸಂಗ್ರಹಕಾರ ಪ್ರತಿವಕ್ತನ ಬಗ್ಗೆ ಕೆಲಮಟ್ಟಿಗಾದರೂ ತಿಳಿದುಕೊಳ್ಳದೆ, ವಿಶ್ವಾಸವನ್ನು ಖಚಿತಪಡಿಸಿಕೊಳ್ಳದೆ, ಅವನು ಹೇಳುವುದನ್ನು ಬರೆದುಕೊಳ್ಳಲು ಪ್ರಾರಂಭಿಸಬಾರದು. ಸಂಗ್ರಹಿಸುವಾಗ ಪದಗಳೊ ನುಡಿಗಟ್ಟುಗಳೊ ಅರ್ಥವಾಗದೆ ಹೋದರೆ, ತಪ್ಪು ಕಲ್ಪನೆಗೆ ಎಡೆಕೊಡುವಂತಿದ್ದರೆ, ಅವನ್ನು ಮತ್ತೆ ಅವನಿಂದ ವಿಚಾರಿಸಿ ದಾಖಲಿಸಿಕೊಳ್ಳಬೇಕು. ಸಿಕ್ಕಿದ್ದೆಲ್ಲವನ್ನೂ ಸಂಗ್ರಹಿಸಿ ಮನೆಗೆ ಬಂದ ಮೇಲೆ ಅನುಕ್ರಮವಾಗಿ ಜೋಡಿಸಿಕೊಂಡರಾಯಿತು ಎಂಬ ಸಿದ್ಧಸೂತ್ರವೊಂದಿದೆ. ಸಂಗ್ರಹ ಕಾರ್ಯಕ್ಕೆ ಆಗತಾನೆ ಪ್ರವೇಶ ಮಾಡುವವರಿಗೆ ಇದು ಸರಿಯೆನಿಸಿದರೂ ಪ್ರತಿಭಾವಂತನಿಗೆ ಇದು ಕೇವಲ ಕಾಲವ್ಯಯ ಎನಿಸುತ್ತದೆ. ಇದಲ್ಲದೆ, ಅಶ್ಲೀಲವಿಷಯ ಬಂದಾಗ ಸಂಗ್ರಹಕಾರ ತುಂಬ ಎಚ್ಚರಿಕೆಯಿಂದ ನಿರ್ವಹಿಸಬೇಕಾಗುತ್ತದೆ.

ಸಂಗ್ರಾಹಕ ತಾನು ಕೇಳಿದ್ದನ್ನು ಮಾತ್ರ ಸಂಗ್ರಹಿಸಿಕೊಳ್ಳಬೇಕು. ಆ ಮೂಲಕ ಸಂಗ್ರಹಕ್ಕೆ ಪ್ರಾಮಾಣಿಕನಾಗಿರಬೇಕು. ಹೀಗೆ ಸಂಗ್ರಹಿಸುವಾಗ ಪ್ರತಿವಕ್ತನನ್ನು ಕುರಿತು ಇದೇನು, ಅದೇನು, ಇದರ ಬಗ್ಗೆ ನಿನಗೇನು ಗೊತ್ತು ಎಂದು ಮೊದಲಾದ ಪ್ರಶ್ನೆಗಳನ್ನು ಕೇಳಬೇಕು. ಹೀಗೆ ಕೇಳಿದಾಗಲೂ ವಿಷಯ ಸ್ಪಷ್ಟವಾಗದೆ ಉಳಿದರೆ ಸಂಗ್ರಾಹಕ ಆಗ ಸ್ಥೂಲ ವಸ್ತುವಿನ ಸಹಾಯವನ್ನು ಅವಲಂಬಿಸಬೇಕಾಗುತ್ತದೆ. ಯಾವುದಾದರೂ ವಸ್ತುವಿನ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಆ ವಸ್ತುವನ್ನು ತೋರಿಸುವುದರ ಮೂಲಕವೋ ಅದಕ್ಕೆ ಸಂವಾದಿ ವಸ್ತುವನ್ನು ನೆನಪಿಸಿ ಕೊಡುವುದರ ಮೂಲಕವೋ ಮೂಲವಸ್ತುವಿನ ವಿಚಾರವನ್ನು ಸಂಗ್ರಹಿಸಬೇಕಾಗುತ್ತದೆ.

ಜಾನಪದ ಮೂಲವಸ್ತುವನ್ನು ಬರೆದುಕೊಂಡು ಅಥವಾ ಟೇಪ್‌ರೆಕಾರ್ಡ್ ಮಾಡಿಕೊಂಡು ಸಂಗ್ರಹಿಸಬಹುದು. ಎರಡನೆಯದು ಹೆಚ್ಚು ವೈಜ್ಞಾನಿಕ. ಕೆಲವರು ರಿಕಾರ್ಡ್‌ರಿಗೆ ಮುಖ ಕೊಡಲು ನಾಚಬಹುದು. ಇಂಥ ಸಮಯಗಳಲ್ಲಿ ಸಂಗ್ರಾಹಕನಿಗೆ ತಾಳ್ಮೆಯಿರಬೇಕು. ರೆಕಾರ್ಡಿನ ಸಾಧನಗಳನ್ನು ಪರಿಚಯಿಸುತ್ತ, ರೆಕಾರ್ಡ್ ಮಾಡಿರುವ ಭಾಗಗಳನ್ನು ಹಾಕಿ ರಂಜಿಸಿ, ಯಂತ್ರದ ಬಗ್ಗೆ ಮಾತಾಡುತ್ತ, ಆಸಕ್ತಿಯನ್ನು ಕೆರಳಿಸುತ್ತ, ಪ್ರತಿವಕ್ತನಲ್ಲಿರುವ ನಾಚಿಕೆಯನ್ನೂ ಹೆದರಿಕೆಯನ್ನೂ ಹೋಗಲಾಡಿಸಬಹುದು. ಆಮೇಲೆ ಸಂಗ್ರಹ ಸುಲಭವಾಗುತ್ತದೆ. ಸಂಗ್ರಹಕಾರ ಮೂಲವಸ್ತುವನ್ನು ರೆಕಾರ್ಡ್ ಮಾಡಿಕೊಳ್ಳುವುದರ ಜೊತೆಯಲ್ಲಿ ಭಿನ್ನ ಮತಾಚರಣೆಗಳು, ಋತುಮಾನಗಳು, ಹಬ್ಬಗಳು ಮೊದಲಾದವನ್ನೂ ಸಂಗ್ರಹಿಸಬೇಕಾಗುತ್ತದೆ. ಜಾತ್ರೆಗಳ, ಪದ್ಧತಿಗಳ, ನಡಾವಳಿಗಳ ಪ್ರಾತಿನಿಧಿಕ ಲಕ್ಷಣಗಳ ಅನ್ವೇಷಣೆ ಅಗತ್ಯವಾಗಬಹುದು. ಗ್ರಾಮದ ಗಮನಾರ್ಹ ವ್ಯಕ್ತಿಗಳ ಹಾಗೂ ಆಗಿ ಹೋದವರ ಜೀವನ ಚರಿತ್ರೆಗೆ ಸಂಬಂಧಿಸಿದ ಕಥೆ ಮುಂತಾದ ವಿಷಯಗಳನ್ನು, ಸಾಮಾನ್ಯ ಜನರ ಜೀವನ ರೀತಿಗಳನ್ನು, ಮತ್ತು ತಾವು ಸಂಧಿಸಿದ ಗಮನಾರ್ಹ ವ್ಯಕ್ತಿಗಳನ್ನು ಕುರಿತು ವೃದ್ಧ ಸ್ತ್ರೀಪುರುಷರು ಹೇಳುವ ಸ್ಮರಣೆಗಳನ್ನು ಸಂಗ್ರಹಿಸಬೇಕಾದದ್ದು ಅಗತ್ಯ. ಅನೇಕ ವೇಳೆ ಚಾರಿತ್ರಿಕ ಸ್ಮೃತಿಗಳು ಜಾನಪದ ವೇಷಧರಿಸಿ ಬಂದುಬಿಡುವುದುಂಟು. ಸಂಗ್ರಾಹಕ ಜಾನಪದಕ್ಕೂ ಸ್ಥಳೀಯ ಇತಿಹಾಸಕ್ಕೂ ಗೊಂದಲವುಂಟಾಗದಂತೆ ನೋಡಿಕೊಳ್ಳಬೇಕು.

ಸಂಗ್ರಹಕಾರ ಕೇವಲ ಗೀತೆ, ಕಥೆ ಮೊದಲಾದವುಗಳೊಡನೆ ಮಾತೃಕೆಯನ್ನೂ ಸಂಗ್ರಹಿಸಬೇಕಾಗುತ್ತದೆ. ಜನಪದ ಸಂಸ್ಕೃತಿಯ ಪ್ರತಿಯೊಂದು ಅಂಶವೂ ಅದರ ಮಾತೃಕೆಯಿಂದ ವ್ಯವಸ್ಥಿತವಾಗುತ್ತದೆ; ಅದರಿಂದ ಬೆಳೆಯುತ್ತಿರುತ್ತದೆ. ಇದಲ್ಲದೆ ಪ್ರತಿ ವಾಚಿಕ ವಿಷಯವೂ ಸಾಂಸ್ಕೃತಿಕ ಮಾತೃಕೆಯಿಂದ ಪೋಷಿತವಾಗಿರುವುದಲ್ಲದೆ, ನೆರೆಹೊರೆಯ ಪ್ರದೇಶದಿಂದಲೂ ಪ್ರಭಾವಿತವಾಗಿರುವ ಸಾಧ್ಯತೆಯಿರುತ್ತದೆ. ಸಂಗ್ರಹಕಾರ ಈ ಪ್ರಭಾವಗಳನ್ನು ಸ್ವೀಕರಣಗಳನ್ನು ಕಂಡುಹಿಡಿಯಲು ತನ್ನ ಪ್ರದೇಶವನ್ನು ನೆರೆಹೊರೆಯನ್ನು ಚೆನ್ನಾಗಿ ಅರಿತಿರಬೇಕಾಗುತ್ತದೆ. ಮಾತೃಕೆಯನ್ನು ಸಂಗ್ರಹಿಸುವಾಗ ಪ್ರತಿವಕ್ತನನ್ನು, ಈ ಕಥೆ ಗೀತೆ ನಿನಗೆ ಏನು ಅರ್ಥಕೊಡುತ್ತದೆ, ಯಾತಕ್ಕಾಗಿ ನೀನು ಈ ಗೀತೆಯನ್ನು ಹಾಡುತ್ತೀಯೆ, ಈ ಕಥೆಯಲ್ಲಿ ಈ ಪಾತ್ರ ಹೀಗೆ ಏಕೆ ವರ್ತಿಸುತ್ತದೆ–ಎಂದು ಮುಂತಾದ ಪ್ರಶ್ನೆಗಳನ್ನು ಕೇಳುವುದರ ಮೂಲಕ ಅವನಿಂದ ವಿವರಣೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಇದಲ್ಲದೆ ಪ್ರತಿ ಕಥೆ ಅಥವಾ ಗೀತೆಯಲ್ಲಿ ಹಲವಾರು ಪ್ರತಿವಕ್ತರಿಂದ ಬೇರೆ ಬೇರೆ ಕಾಲಗಳಲ್ಲಿ ರೆಕಾರ್ಡ್ ಮಾಡಿಕೊಳ್ಳಬೇಕು. ಪಠ್ಯದ ವ್ಯತ್ಯಯಗಳನ್ನು ಗುರುತಿಸುವಾಗ ಇದು ನೆರವಾಗುತ್ತದೆ.

ಸಂಗ್ರಹಕಾರ ಹಾಡುಗಾರರನ್ನು ಕಥಾವಕ್ತೃಗಳನ್ನು ಕಲೆ ಹಾಕಬೇಕು. ಎಲ್ಲ ಸಂಸ್ಕೃತಿಗಳಲ್ಲೂ ಇಂಥ ಜನರು ಸಿಗುತ್ತಾರೆ. ಕೆಲವರಿಗೆ ಹಾಡುವುದು, ಹೇಳುವುದು ಚೆನ್ನಾಗಿ ಬರದಿದ್ದರೂ ಜನಪದ ಸಂಸ್ಕೃತಿಯನ್ನು ಕುರಿತು ಕೆಲವು ವಿಷಯಗಳನ್ನು ತಿಳಿಸಬಲ್ಲವರಾಗಿರುತ್ತಾರೆ. ಪ್ರತಿ ಸಮಾಜದಲ್ಲೂ ಸಿಕ್ಕುವ ವೃತ್ತಿಕಲಾವಿದರಿಂದಲೂ ಎಷ್ಟೋ ಉಪಯುಕ್ತ ವಿಷಯಗಳು ದೊರಕುತ್ತವೆ.

ಸಾಮಾನ್ಯವಾಗಿ ಪ್ರತಿವಕ್ತರನ್ನು, ಅವರು ಇವನ್ನು ಎಲ್ಲಿ ಪಡೆದರು, ಅವುಗಳಿಗೇಕೆ ಅಂಟಿಕೊಂಡಿದ್ದಾರೆ, ಅದು ಅವರ ಕೌಟುಂಬಿಕ ಸಂಪ್ರದಾಯವೇನಾದರೂ ಆಗಿದೆಯೇ ಯಾವುದನ್ನಾದರೂ ಬುದ್ಧಿಪೂರ್ವಕವಾಗಿ ವ್ಯತ್ಯಾಸ ಮಾಡಿಕೊಳ್ಳುತ್ತಾರೆಯೇ–ಮುಂತಾದ ಪ್ರಶ್ನೆಗಳನ್ನು ಹಾಕಿ ವಿಷಯಗಳನ್ನು ಸಂಗ್ರಹಿಸಬೇಕಾಗುತ್ತದೆ. ಇದಲ್ಲದೆ ಸಂಗ್ರಹಕಾರರು ಪ್ರತಿವಕ್ತರ ಜೀವನ ವಿಷಯಗಳನ್ನು ಬರೆದಿಟ್ಟುಕೊಳ್ಳಬೇಕಾಗುತ್ತದೆ. ಅವರ ಜೀವನ ಕ್ರಮ, ಕಾರ್ಯ ಸಾಧನೆಯ ಚರಿತ್ರೆ, ಕಲೆಯ ಬಗ್ಗೆ ಅವರ ವಿಮರ್ಶೆ ಇವೆಲ್ಲ ಜಾನಪದ ವಿಶ್ಲೇಷಣೆಗೆ ಸಹಾಯ ಮಾಡುತ್ತವೆ. ಜಾನಪದವನ್ನು ಹೀಗೆ ಸಂಗ್ರಹಿಸಿಕೊಂಡು ಬಂದಮೇಲೆ ಕಥೆ, ಐತಿಹ್ಯ, ಗೀತೆ, ಪುರಾಣ ಇತ್ಯಾದಿ ವಿವಿಧ ಮೂಲವಸ್ತುಗಳ ರೀತಿರೂಪಗಳನ್ನು ಗುರುತಿಸಬೇಕು. ಇದಾದ ಮೇಲೆ ವಿಶೇಷ ಕಾರ್ಡೊಂದರಲ್ಲಿ ವರ್ಗೀಕರಣ ಮತ್ತು ಸೂಚಿಗಳ ತಯಾರಿಕೆಯಾಗಬೇಕಾಗುತ್ತದೆ. ಸಂಗ್ರಹಿತ ಮೂಲವಸ್ತುಗಳನ್ನು ಆಕಾರಾದಿಯಾಗಿ ಸೂಚಿಸಲು ಐದು ಸೂಚಿ ನಿರ್ದೇಶನ ಕಾರ್ಡುಗಳು ಬೇಕಾಗುತ್ತವೆ. ಸಂಗ್ರಾಹಕರು, ಉಗಮ ಹೊಂದಿದ ಸಮಾಜ ಅಥವಾ ಕೋಮು ಮತ್ತು ದೇಶಗಳು, ಕಥೆಯೊಳಗೆ ಬರುವ ನಾಯಕರು, ಪ್ರತಿವಕ್ತರು, ಭಾಷೆ–ಈ ವಸ್ತುಸೂಚಿಗಳನ್ನು ವರ್ಗಸೂಚಿ ಮತ್ತು ಆಶಯಸೂಚಿಗಳೆಂಬುದಾಗಿ ಎರಡು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು.

ಜಾನಪದವೂ ಮಾನವಶಾಸ್ತ್ರ, ಸಮಾಜಶಾಸ್ತ್ರ ಇತಿಹಾಸ, ಮನೋವಿಜ್ಞಾನ, ಭಾಷಾಶಾಸ್ತ್ರ ಮೊದಲಾದುವುಗಳಂತೆ ಪ್ರಾಮಾಣಿಕ ವಿಜ್ಞಾನವಾದುದರಿಂದ, ಪರಂಪರಾಗತವಾದ ವಾಙ್ಮಯವನ್ನು ಅರ್ಥೈಸಲು ಸೈದ್ಧಾಂತಿಕ ಪ್ರಸ್ತಾಪ ಕೂಡ ಬೇಕಾಗುತ್ತದೆಂದು ತೋರುತ್ತದೆ. ಇದಕ್ಕಾಗಿ ಸಂಶೋಧಕನಿಗೆ ಪೂರ್ವ ಶಿಕ್ಷಣ ಬೇಕಾಗುತ್ತದೆ. ಇದರಲ್ಲಿ ಪುಸ್ತಕ ಭಂಡಾರ ಸಾಧನಗಳು ಮತ್ತು ಆಧಾರ ಗ್ರಂಥಗಳನ್ನು ಉಪಯೋಗಿಸಿಕೊಳ್ಳುವುದು, ವ್ಯವಸ್ಥಿತ ಕ್ಷೇತ್ರ ಸಂಗ್ರಹದ ಉಸ್ತುವಾರಿ, ವಿಶಾಲವಾದ ಓದು ಹಾಗೂ ಆಲೋಚನೆ ಮತ್ತು ಸಂಶೋಧನೆಯಲ್ಲಿ ಉದಯವಾದ ಸಮಸ್ಯೆಗಳಿಗೆ ವಿವೇಕದ ಪ್ರಸ್ತಾಪ–ಇವುಗಳೆಲ್ಲ ಒಳಗೊಂಡಿರುತ್ತವೆ.

ಜಾನಪದ ಕ್ಷೇತ್ರಕಾರ್ಯ ಯಾವುದೋ ಒಂದು ಹಂತದಲ್ಲಿ ಭಾಷೆಯ ಬಗೆಗಿನ ವಿವೇಚನೆಗೂ ನೆರವಾಗುತ್ತದಾದ್ದರಿಂದ ಜಾನಪದ ಸಂಶೋಧಕ ಭಾಷಾವಿಜ್ಞಾನದ ಕ್ಷೇತ್ರಕಾರ್ಯದ ಬಗೆಗೂ ಸ್ವಲ್ಪ ತಿಳಿದಿರುವುದು ಒಳ್ಳೆಯದು. **ನೋಡಿ–ಕ್ಷೇತ್ರಕಾರ್ಯ(ಭಾಷಾವಿಜ್ಞಾನ)**

(ಆರ್.ಜ.)

**ಕ್ಷೇತ್ರಕಾರ್ಯ (ಭಾಷಾವಿಜ್ಞಾನ) :** ಲಿಪಿ ಇಲ್ಲದ ಭಾಷೆಗಳ ವೈಜ್ಞಾನಿಕ ಅಧ್ಯಯನ ಮತ್ತು ವಿಶ್ಲೇಷಣೆಗೆ ಯೋಗ್ಯವಾದ ಸಾಮಗ್ರಿಯನ್ನು ಸ್ಥಳಕ್ಕೇ ಹೋಗಿ ಸಂಗ್ರಹಿಸುವ ಕ್ರಮವನ್ನು ಇಲ್ಲಿ ಪರಿಶೀಲಿಸಲಾಗಿದೆ [ಫೀಲ್ಡ್ ವರ್ಕ್ (ಲಿಂಗ್ವಿಸ್ಟಿಕ್). ಭಾಷೆಯ ಅಧ್ಯಯನ ಕಾರ್ಯ ಬಹು ಹಿಂದಿನಿಂದಲೂ ನಡೆದು ಬಂದಿರುವುದೇನೋ ನಿಜ. ವ್ಯಾಕರಣಶಾಸ್ತ್ರದಿಂದ ಹುಟ್ಟಿಕೊಂಡ ಭಾಷಾವಿಜ್ಞಾನ ಕವಲೊಡೆದು ನಾನಾ ಶಾಖೆಗಳಾಗಿ ಬೆಳೆದು ಬೆಳಕಿಗೆ ಬರುತ್ತಿದೆ. ಹಿಂದೆ ಭಾಷಾಧ್ಯಯನ ಭಾಷೆಯ ಐತಿಹಾಸಿಕ ಹಾಗೂ ತುಲನಾತ್ಮಕ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿತ್ತು. ಅಲ್ಲದೆ ಭಾಷಾವಿಜ್ಞಾನ ತನ್ನ ಪರಿಶೀಲನೆಗಾಗಿ ಆರಿಸಿಕೊಳ್ಳುತ್ತಿದ್ದ ಭಾಷೆ ಅಂದಿನ ಸಾಹಿತ್ಯಭಾಷೆ, ಅಂದು ಪ್ರಚಲಿತವಾಗಿದ್ದ ಶಿಷ್ಟಭಾಷೆ, ಅಂದಿನ ನಗರ ಜೀವಿಗಳು ವ್ಯಾವಹಾರಿಕವಾಗಿ ಬಳಸುತ್ತಿದ್ದ ನಾಗರಿಕ ಭಾಷೆ, ಅಷ್ಟೆ. 20ನೆಯ ಶತಮಾನದ ಮೊದಲ ಹಂತದಲ್ಲಿ ಇದಕ್ಕೊಂದು ಹೊಸ ತಿರುವು ಬಂದು ವಿವರಣಾತ್ಮಕ ಭಾಷಾವಿಜ್ಞಾನ ಬೆಳಕು ಕಂಡಿತು. ಅಂದಿನಿಂದ ಲಿಖಿತ ಮತ್ತು ಅಲಿಖಿತ ಭಾಷೆಗಳ ಶುದ್ಧ ವೈಜ್ಞಾನಿಕ ಅಧ್ಯಯನ ಆರಂಭಗೊಂಡಿತು. ವಿವರಣಾತ್ಮಕ ಭಾಷಾವಿಜ್ಞಾನ ಹೀಗೆ ಆಧುನಿಕ ಭಾಷಾವಿಜ್ಞಾನದ ಉದಯಕ್ಕೆ ಮಾತ್ರವಲ್ಲದೆ ಭಾಷಾವಿಜ್ಞಾನ ಕ್ಷೇತ್ರ ಮತ್ತಷ್ಟು ವಿಪುಲವಾಗಿ ಬೆಳೆದು ವಿಶಾಲಗೊಳ್ಳುವುದಕ್ಕೆ ದಾರಿ ಮಾಡಿಕೊಟ್ಟಿತು. ಅಲ್ಲದೆ, ಐತಿಹಾಸಿಕ ಮತ್ತು ತುಲನಾತ್ಮಕ ಭಾಷಾ ಅಧ್ಯಯನ ಕ್ರಮ ಸಾಕಷ್ಟು ವೈಜ್ಞಾನಿಕವಾಗಿ ಬೆಳೆಯಲು ತುಂಬ ಸಹಾಯಕಾರಿಯಾಯಿತು. ಬೆಟ್ಟಗುಡ್ಡಗಳಲ್ಲಿ ವಾಸಿಸುವ ಜನರ ಲಿಪಿ ಇಲ್ಲದ ಭಾಷೆಗಳು, ಗ್ರಾಮೀಣ ಹಾಗೂ ನಾಗರಿಕ ಜನರ ಆಡುನುಡಿಗಳು, ಕುರುಬ, ಕುಂಬಾರ, ಅಗಸ, ರೈತ ದರ್ಜಿ–ಹೀಗೆ ವೃತ್ತಿನಿರತ ಜನರ ಭಾಷಾವೈಖರಿಗಳು–ಇವನ್ನು ನೇರವಾಗಿ ಆಯಾ ಜನರಿಂದಲೇ ಸಂಗ್ರಹಿಸಿ ವಿಶ್ಲೇಷಿಸುವ ಕೆಲಸ ಕ್ರಮೇಣ ಭಾಷಾ ಶಾಸ್ತ್ರಿಗಳನ್ನು ಆಕರ್ಷಿಸಿತು. ಈ ದಿಕ್ಕಿನಲ್ಲಿ ನಾಇಡಾ, ಕ್ರೋಬರ್, ಗ್ಲೀಸನ್, ಸ್ವಾಡಿಷ್, ಬ್ಲೂಮ್‍ಫೀಲ್ಡ್, ಹ್ಯಾರಿಸ್ ಹಿಲ್, ಲಾನ್ಸ್‍ಬರಿ, ಸೇನಗುಪ್ತ ಮುಂತಾದ ಅನೇಕ ಭಾಷಾವಿಜ್ಞಾನಿಗಳು ಸಾಕಷ್ಟು ಕೆಲಸ ನಡೆಸಿ, ಭಾಷೆಯ ಶುದ್ಧ ಸಾಮಗ್ರಿಯನ್ನು ಸಂಗ್ರಹಿಸುವ ವಿಧಾನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಅವನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯಕ್ಕೆ ಅಗತ್ಯವಾದ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಭಾಷಾ ಸಾಮಗ್ರಿಯನ್ನು ಸಂಗ್ರಹಿಸುವ ಸಂಶೋಧಕ ಆ ಭಾಷೆಯನ್ನು ಮಾತೃ ಭಾಷೆಯನ್ನಾಗುಳ್ಳ ಕೆಲವರನ್ನು ತಾನಿದ್ದಲ್ಲಿಗೇ ಬರಮಾಡಿಕೊಂಡು ವಿಷಯ ಸಂಗ್ರಹಣೆ ಮಾಡಬಹುದು. ಆದರದು ಸಮರ್ಪಕವಾಗದು. ಆ ಜನ ಇದ್ದಲ್ಲಿಗೇ ತಾನು ಹೋಗಿ ಅವರೊಡನಿದ್ದು ಅವರ ಮಾತುಕತೆ, ಆಚಾರವಿಚಾರ, ಜೀವನಕ್ರಮ, ನಂಬಿಕೆ ದ್ವೇಷಗಳು, ಮತಧರ್ಮ ವಿಚಾರಗಳು, ಹಬ್ಬಹರಿದಿನಗಳು, ಆಟಪಾಟಗಳು, ವಿನೋದಗಳು, ಹಾಡು ಕುಣಿತಗಳು, ಸಂಗೀತ ನಾಟಕಗಳು–ಇವೆಲ್ಲವನ್ನೂ ಗಮನಿಸುತ್ತ ಇವೆಲ್ಲವುಗಳ ಆಸ್ತಿಭಾರವಾಗಿರುವ ಅವರ ಭಾಷೆಯನ್ನು ಅಧ್ಯಯನ ಮಾಡುವುದೇ ಸರಿಯಾದ ಕ್ರಮ.

ಇಲ್ಲಿ ಭಾಷಾಸಂಶೋಧಕನ ಪಾತ್ರ ಮುಖ್ಯವಾದುದು. ಪ್ರಜ್ಞಾಶೀಲ, ಬುದ್ಧಿಶಾಲಿ, ವಿಚಾರಶೀಲ, ಶ್ರದ್ಧಾಳು ಹಾಗೂ ಪ್ರಾಮಾಣಿಕನಾದ ಸಂಶೋಧಕ ಮಾತ್ರ ಕ್ಷೇತ್ರಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬಲ್ಲ. ಸ್ಥಳದಲ್ಲಿಯೇ ಇದ್ದುಕೊಂಡು ಆ ಜನರ ಸಹಾಯ ಸಂಪರ್ಕದಿಂದ ಅವರ ಭಾಷೆಯ ವಿವಿಧ ವಿಚಾರಗಳನ್ನು ವಿಭಿನ್ನ ವಾತಾವರಣಗಳಲ್ಲಿ ವೀಕ್ಷಿಸಿ ಯಾವ ತೊಂದರೆಯೂ ಇಲ್ಲದೆ ಪಡೆಯುವಷ್ಟು ಆತ ನಿಷ್ಠಾವಂತ ಹಾಗೂ ಶ್ರಮಜೀವಿಯಾದ ವ್ಯಕ್ತಿಯಾಗಿರಬೇಕಾಗುತ್ತದೆ. ಭಾಷೆಗೂ ಜೀವನಕ್ಕೂ ನಿಕಟ ಸಂಬಂಧವಿದೆಯಾಗಿ ಭಾಷಾಧ್ಯಯನ ಮಾಡುವವನಿಗೆ ಸಮಗ್ರ ಜೀವನದ ಸೂಕ್ಷ್ಮ ಪರಿಚಯ ಇರಬೇಕಾಗುತ್ತದೆ.

ಭಾಷಾಸಾಮಗ್ರಿಯನ್ನು ಮುಖ್ಯವಾಗಿ ಮೂರು ವಿಧಾನಗಳಲ್ಲಿ ಸಂಗ್ರಹಿಸಲಾಗುತ್ತದೆ. ಯಾವ ಒಂದು ಭಾಷೆಯ ಸಾಮಗ್ರಿಯನ್ನು ಸಂಗ್ರಹಿಸಲು ಪ್ರತಿವಕ್ತ (ಸೂಚಕ) ಹಾಗೂ ಸಂಶೋಧಕ ಮಧ್ಯೆ ತಮ್ಮ ತಮ್ಮ ಮಾತೃಭಾಷೆಗಳಲ್ಲದೆ ಬೇರಾವ ಭಾಷಾ ಮಾಧ್ಯಮವೂ ಇಲ್ಲದಿದ್ದಲ್ಲಿ ಅಂಥ ಮಾರ್ಗವನ್ನು ಏಕಭಾಷಿಕ ಪದ್ಧತಿ ಎಂದು ಕರೆದಿದ್ದಾರೆ. ಈ ವಿಧಾನದಲ್ಲಿ ಸಂಗ್ರಹಕಾರ್ಯ ಸ್ವಲ್ಪ ಕಷ್ಟಸಾಧ್ಯ. ಅಂಥ ಸಂದರ್ಭಗಳಲ್ಲಿ ಸಂಶೋಧಕ ತುಂಬ ಚತುರನಾಗಿ ವಿಚಾರಶೀಲನಾಗಿ ಪ್ರಾಮಾಣಿಕನಾಗಿ ನಡೆದುಕೊಳ್ಳುವುದರ ಜೊತೆಗೆ ಚಿತ್ರಗಳನ್ನು ಉಪಯೋಗಿಸಿಕೊಂಡು ಸಾಮಗ್ರಿ ಪಡೆಯಬಹುದು. ಕೆಲವು ವೇಳೆ ತನ್ನ ಮುಂದೆ ಕಂಡ ವಸ್ತುಗಳ ಹೆಸರುಗಳನ್ನು ಅವುಗಳ ಕ್ರಿಯೆಗಳನ್ನು ಪ್ರತಿವಕ್ತನಿಗೆ ಪ್ರತ್ಯಕ್ಷವಾಗಿ ತೋರಿಸಿ ಸಾಮಗ್ರಿಯನ್ನು ಪಡೆಯಬಹುದು. ಚಿತ್ರಗಳನ್ನು ಉಪಯೋಗಿಸಿಕೊಂಡು ಭಾಷಾಸಾಮಗ್ರಿಯನ್ನು ಸಂಗ್ರಹಿಸುವುದು ಭಾಷಾವಿಜ್ಞಾನದಲ್ಲಿ ತುಂಬ ರೂಢಿಯಲ್ಲಿದೆ. ಈ ವಿಧಾನವನ್ನು ಚಿತ್ರಪದ್ಧತಿ ಎಂದು ಕರೆಯಲಾಗಿದೆ. ಈ ವಿಧಾನವೂ ಸಾಕಷ್ಟು ಸಮರ್ಪಕವಾದುದಲ್ಲ. ಪ್ರತಿವಕ್ತ ಹಾಗೂ ಸಂಶೋಧಕರ ಮಧ್ಯೆ ತಮ್ಮ ತಮ್ಮ ಮಾತೃಭಾಷೆಗಳ ಜೊತೆಗೆ ಬೇರೊಂದು ಭಾಷಾಮಾಧ್ಯಮವೂ ಇದ್ದಲ್ಲಿ ಅಂಥ ವಿಧಾನವನ್ನು ದ್ವಿಭಾಷಿಕಪದ್ಧತಿ ಎನ್ನುತ್ತೇವೆ. ಒಂದಕ್ಕಿಂತ ಹೆಚ್ಚು ಭಾಷೆಗಳ ಮಾಧ್ಯಮವಿದ್ದಾಗ ಅಂಥ ವಿಧಾನವನ್ನು ಬಹುಭಾಷಿಕಪದ್ಧತಿ ಎನ್ನುತ್ತೇವೆ. ಈ ಎರಡು ವಿಧಾನಗಳೂ ಏಕಭಾಷಿಕ ವಿಧಾನಕ್ಕಿಂತ ಉತ್ತಮ. ಏಕಭಾಷಿಕ ಪದ್ಧತಿ ಮೊದಮೊದಲು ಕ್ಲಿಷ್ಟಕರವಾಗಿ ಕಂಡರೂ ಕ್ರಮೇಣ ಇದರಿಂದ ಅನುಕೂಲಗಳು ಹೆಚ್ಚು. ಈ ದಿಕ್ಕಿನಲ್ಲಿ ಅನೇಕ ಈ ದಿಶೆಯಲ್ಲಿ ನಡೆದಿರುವಷ್ಟು ಸಂಶೋಧನ ಕಾರ್ಯ ಹಾಗೂ ಪ್ರಕಟನೆ ಭಾಷಾ ವಿಜ್ಞಾನದ ಮತ್ತಾವ ವಿಚಾರದ ಬಗ್ಗೆಯೂ ನಡೆದಿಲ್ಲವೆನ್ನಬಹುದು.

ಮೊತ್ತಮೊದಲು ಯುರೋಪಿನ ಕ್ರೈಸ್ತಧರ್ಮ ಪ್ರಚಾರಕರು ತಮ್ಮ ಧರ್ಮ ಪ್ರಚಾರಕ್ಕಾಗಿ ಕ್ಷೇತ್ರಕಾರ್ಯದ ಈ ಮಾರ್ಗವನ್ನನುಸರಿಸಿದರು. ದೇಶೀಯ ಭಾಷೆಗಳ ಜ್ಞಾನವನ್ನು ಸಂಪಾದಿಸಿಕೊಂಡು ಆ ಜನರ ಸಂಪರ್ಕವನ್ನು ಆ ಭಾಷಾಮಾಧ್ಯಮದಿಂದಲೇ ಪಡೆದುಕೊಳ್ಳಲು ಅವರು ಮಾಡಿದ ಸಾಹಸ ಸ್ತುತ್ಯರ್ಹವಾದುದು. ಈ ಬಗ್ಗೆ ಬಂದಿರುವ ಅನುಭವ ಭಾಷಾಕಲಿಕೆ ಮತ್ತು ಅಧ್ಯಯನಕ್ಕೆ ಮಾತ್ರವಲ್ಲದೆ ಇತರ ಶಾಸ್ತ್ರಗಳ ಶುದ್ಧ ವೈಜ್ಞಾನಿಕ ಅಧ್ಯಯನಕ್ಕೂ ದಾರಿ ಮಾಡಿಕೊಟ್ಟಿದೆ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ.

ಅಲಿಖಿತ ಭಾಷಾಸಾಮಗ್ರಿಯನ್ನು ಪಡೆಯಲು ಆ ಭಾಷೆಯನ್ನು ತನ್ನ ಮಾತೃಭಾಷೆಯನ್ನಾಗುಳ್ಳ ಪ್ರತಿವಕ್ತ ಸಹಾಯ ಸಹಕಾರ ಬೇಕಾಗುತ್ತದೆ. ಆತ ಅತಿ ಚತುರನೂ ಪ್ರಾಮಾಣಿಕನೂ ನಿಷ್ಠಾವಂತನೂ ವಾಚಾಳಿಯೂ ಆಗಿದ್ದರೊಳ್ಳೆಯದು. ಹಾಗಲ್ಲದೆ ಆತ ಮಿತಭಾಷಿಯೂ ಸಂಕೋಚಪ್ರವೃತ್ತಿಯವನೂ ಏಕಾಂತಪ್ರಿಯನೂ ತುಂಬ ಗಂಭೀರವ್ಯಕ್ತಿಯೂ ಆಗಿಬಿಟ್ಟರೆ ಅವನಿಂದ ಸುಲಭವಾಗಿ ಉದ್ದಿಷ್ಟ ಸಾಮಗ್ರಿಯನ್ನು ಪಡೆಯಲಾಗುವುದಿಲ್ಲ. ಆತ ಯಾವಾಗಲೂ ಸಹಕರಿಸಬಲ್ಲವನೂ ಸ್ನೇಹಪರನೂ ಹಸನ್ಮುಖಿಯೂ ಉತ್ಸಾಹಿಯೂ ಆಗಿದ್ದರೆ ಒಳ್ಳೆಯದು. ಕೆಲವು ಪ್ರತಿವಕ್ತರಲ್ಲಿ ಆತ್ಮಪ್ರತಿಷ್ಠೆ, ಸಿಡುಕುತನ, ಹಟಮಾರಿತನ, ಬುದ್ಧಿಭ್ರಮಣೆ, ಪಾಂಡಿತ್ಯಗರ್ವ, ಮುಂಗೋಪ ಹಮ್ಮು ಇತ್ಯಾದಿ ಓರೆಕೋರೆಗಳು ಇರಬಹುದು. ಅಂಥ ದುರ್ಗುಣಗಳಿಂದ ದೂರವಿರುವ ವ್ಯಕ್ತಿಯನ್ನೇ ಪ್ರತಿವಕ್ತನನ್ನಾಗಿ ಆರಿಸಿಕೊಳ್ಳುವುದು ಯುಕ್ತ. ಕೆಲವು ವೇಳೆ ವ್ಯಕ್ತಿಯ ಕಿವಿ, ಎದೆ, ಬಾಯಿ, ಹಲ್ಲು ಮತ್ತು ಗಲ್ಲಗಳಲ್ಲಿ ಗಾಯಗಳಿದ್ದು ಉಚ್ಚರಿತ ಸಾಮಗ್ರಿ ಶುದ್ಧವಾಗಿರದೆ ಹೋಗುವುದು ಸಾಧ್ಯ. ಈ ಎಲ್ಲವನ್ನೂ ಗಮನಿಸಿ ಸರಿಯಾದ ಪ್ರತಿವಕ್ತನನ್ನು ಆರಿಸುವುದು ಅಗತ್ಯ. ಜೊತೆಗೆ ಪ್ರತಿವಕ್ತನ ವಿದ್ಯೆ, ಕಸಬು, ವಯಸ್ಸು, ಸ್ವಭಾವ, ಜಾತಿ, ಆಚಾರ–ವ್ಯವಹಾರ ಇತರ ಭಾಷಾಜ್ಞಾನ ಇತ್ಯಾದಿಗಳನ್ನು ಗಮನಿಸದೆ ವಿಧಿ ಇಲ್ಲ. ಆರಿಸಿಕೊಂಡ ಪ್ರತಿವಕ್ತ ಆ ಭಾಷೆಯಲ್ಲಿ ಸಾಕಷ್ಟು ಅನುಭವಸ್ಥನಾಗಿರಬೇಕು. ಸಾಕಷ್ಟು ಅನುಭವಸ್ಥನೆನಿಸಿ ಕೊಳ್ಳಬೇಕಾದರೆ ವಯಸ್ಸು ಇಪ್ಪತ್ತೈದಕ್ಕಿಂತ ಹೆಚ್ಚಿರಬೇಕು. ಕಡಿಮೆ ವಯಸ್ಸಿನ ಪ್ರತಿವಕ್ತರಲ್ಲಿ ಆ ಭಾಷೆಯ ಜ್ಞಾನ ಸಾಕಷ್ಟು ಇಲ್ಲದೆ ಇರಲು ಸಾಧ್ಯ. ಮತ್ತೆ ಆರಿಸಿಕೊಂಡ ಪ್ರತಿವಕ್ತನ ವಯಸ್ಸು ಐವತ್ತಕ್ಕಿಂತ ಹೆಚ್ಚಿರಬಾರದು. ಹೆಚ್ಚಿದ್ದರೆ ಸ್ಪಷ್ಟ ಉಚ್ಚಾರಣೆ ಇಲ್ಲದೆ ಹೋಗಬಹುದು. ಕೆಲವು ವೇಳೆ, ಶಿಕ್ಷಣ, ಸಂಸ್ಕೃತಿ, ಜಾತಿ, ಕಸಬು ಇತರ ಭಾಷಾಪ್ರಭಾವ–ಇವುಗಳಿಂದಾಗಿ ಪ್ರತಿವಕ್ತರ ಭಾಷೆಯಲ್ಲಿ ಸಾಕಷ್ಟು ವ್ಯತ್ಯಾಸ ಕಾಣಿಸಿಕೊಳ್ಳಬಹುದು. ಅಂಥ ಸಂದರ್ಭದಲ್ಲಿ ಶಿಕ್ಷಿತವರ್ಗಕ್ಕಿಂತ ಆಶಿಕ್ಷಿತವರ್ಗದಿಂದಲೇ ಪ್ರತಿವಕ್ತರನ್ನು ಆಯುವುದು ಒಳ್ಳೆಯದು. ಒಂದೇ ಕಸಬು, ಸಂಸ್ಕೃತಿಯ ಜನರಾದರೆ ಉತ್ತಮ. ಒಂದೇ ಜಾತಿಯ, ಒಂದೇ ಸ್ಥಳದ ವಿವಿಧ ಕಸಬಿನ ಜನರ ಭಾಷೆಯಲ್ಲಿಯೂ ವಿಭಿನ್ನ ಕಾರಣಗಳಿಂದ ವ್ಯತ್ಯಾಸ ಇದ್ದೇ ಇರುತ್ತದೆ. ಅಂಥ ವೈಯಕ್ತಿಕ ವ್ಯತ್ಯಾಸ ಸಾಮಾನ್ಯ ಭಾಷೆಯಲ್ಲಿ ವ್ಯತ್ಯಾಸಗಳು ಪ್ರಧಾನವಾಗಿದ್ದಲ್ಲಿ ಸಂಶೋಧಕ ಅವನ್ನು ಕಡೆಗಣಿಸುವಂತಿಲ್ಲವಾದ ಕಾರಣ ಪ್ರತಿವಕ್ತನ ಹೆಸರು, ಜಾತಿ, ಕಸಬು, ಆಚಾರ–ವ್ಯವಹಾರ, ಸಂಸ್ಕೃತಿ–ಇತ್ಯಾದಿಗಳ ಬಗ್ಗೆ ಒಂದು ಪುಟ್ಟ ಇತಿಹಾಸವನ್ನೇ ತಯಾರಿಸಿಟ್ಟುಕೊಳ್ಳಬೇಕಾಗುತ್ತದೆ. ಅದೂ ಅಲ್ಲದೆ, ಅಂಥಹವರಿಂದ ಪಡೆದ ಸಾಮಗ್ರಿಯನ್ನು ಕೂಡ ಬೇರೆಬೇರೆಯಾಗಿ ಬರೆದಿಟ್ಟುಕೊಳ್ಳಬೇಕಾಗುತ್ತದೆ. ಅಂಥ ಸಾಮಗ್ರಿ ತುಲನಾತ್ಮಕ ಅಧ್ಯಯನಕ್ಕೆ ತುಂಬ ನೆರವಾಗುವುದರಲ್ಲಿ ಸಂದೇಹವಿಲ್ಲ.

ಭಾಷಾಸಂಶೋಧಕ ಕ್ಷೇತ್ರಕಾರ್ಯದಲ್ಲಿ ನಾನಾರೀತಿಯ ಕಷ್ಟನಷ್ಟಗಳನ್ನು ಎದುರಿಸಬೇಕಾಗುತ್ತದೆ. ಪ್ರತಿವಕ್ತನನ್ನು ಆರಿಸುವಾಗ, ಪ್ರತಿವಕ್ತನೊಡನೆ ವ್ಯವಹರಿಸುವಾಗ, ಭಾಷಾಸಾಮಗ್ರಿಯನ್ನು ಸಂಗ್ರಹಿಸಿ ಬರೆದುಕೊಳ್ಳುವಾಗ–ಹೀಗೆ ಇನ್ನೂ ಅನೇಕ ಸಂದರ್ಭಗಳಲ್ಲಿ ಅನೇಕ ತೊಡಕುಗಳು ಬರಬಹುದು. ಕ್ಷೇತ್ರಕಾರ್ಯವನ್ನು ಆರಂಭಿಸುವ ಮೊದಲು ಆ ಭಾಷಾ ಕ್ಷೇತ್ರದ ಭೌಗೋಳಿಕ ವ್ಯಾಪ್ತಿ ಮತ್ತು ಅದರ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯಬೇಕಾಗುತ್ತದೆ. ಕ್ಷೇತ್ರಕಾರ್ಯಕ್ಕೆ ಅಗತ್ಯವಾಗಿ ಬೇಕಾಗಬಹುದಾದ ಪ್ರಶ್ನಾವಳಿ, ಟೇಪ್‍ರೆಕಾರ್ಡರ್, ಬ್ಯಾಟರಿ, ರೇಡಿಯೊ, ಫ್ಲಾಸ್ಕ್, ಟಾರ್ಚ್, ಗಡಿಯಾರ, ಪೆನ್ನು, ಪೆನ್ಸಿಲ್ಲು, ಮಸಿ, ಕಾಗದ, ಬರಿಹಾಳೆಯ ಪುಸ್ತಕಗಳು, ದಿನಚರಿ, ವಿವಿಧ ನಕ್ಷೆ ಮತ್ತು ಚಿತ್ರಗಳನ್ನು ಸಿದ್ಧಪಡಿಸಿಕೊಳ್ಳುವುದು ಅನಂತರದ ಕೆಲಸ. ಏಕೆಂದರೆ ಕ್ಷೇತ್ರಕಾರ್ಯ ಕೈಗೊಂಡ ಮೇಲೆ ಕ್ಷೇತ್ರದಲ್ಲಿ ಯಾವ ವಸ್ತುವಿನ ತೊಂದರೆಯೂ ಇರಬಾರದು ಸಾಧ್ಯವಾದರೆ ಆ ಜನರ ಜೀವನ, ಆಚಾರ–ವ್ಯವಹಾರ, ಸಂಸ್ಕೃತಿ, ಕಲೆ, ಸಾಹಿತ್ಯ ಇತ್ಯಾದಿಗಳ ಕಡೆಯೂ ಗಮನ

ಹರಿಸಿಯೇ ಕ್ಷೇತ್ರಕಾರ್ಯ ಆರಂಭಿಸುವುದು ಉತ್ತಮ. ಭಾಷಾಸಂಶೋಧಕನಲ್ಲಿ ಜಾನಪದ ಸಂಶೋಧಕನ ಅನೇಕ ಲಕ್ಷಣಗಳು ಇರಬೇಕಾಗುತ್ತದೆ. **(ನೋಡಿ– ಕ್ಷೇತ್ರಕಾರ್ಯ– (ಜಾನಪದ))** ಚತುರ, ಪ್ರಜ್ಞಾಶೀಲ, ವಾಚಾಳಿ, ಪ್ರಾಮಾಣಿಕ, ಬುದ್ಧಿಶಾಲಿ, ಶ್ರಮಜೀವಿ, ನಿಷ್ಠಾವಂತ ಎನಿಸಿಕೊಂಡವ ಉತ್ತಮ ಸಂಶೋಧಕನಾಗಬಲ್ಲ. ಭಾಷಾ ಪ್ರತಿವಕ್ತರೊಡನೆ ವ್ಯವಹರಿಸುವಾಗಲಂತೂ ಈತ ಹಸನ್ಮುಖದಿಂದ, ಸ್ನೇಹವಿಶ್ವಾಸದಿಂದ ನಡೆದುಕೊಳ್ಳುವುದಲ್ಲದೆ ಅವನ ಮನೆ, ಮಠ, ಉಡಿಗೆತೊಡಿಗೆ, ಆಚಾರವ್ಯವಹಾರ, ಜನಜೀವನ ಎಷ್ಟೇ ಕೀಳುಮಟ್ಟದ್ದಾಗಿದ್ದರೂ ಅವನ್ನು ಮರೆತು, ಅವನಿಗೆ ಅಡಿಗಡಿಗೆ ಪ್ರೋತ್ಸಾಹ ನೀಡುತ್ತ ಅತಿ ಚುರುಕಾಗಿ ಕಾರ್ಯಸಾಧನೆ ಮಾಡಬೇಕಾಗುತ್ತದೆ. ಪ್ರತಿವಕ್ತ ಮತ್ತು ಸಂಶೋಧಕರ ಮಧ್ಯೆ ಯಾವ ತಪ್ಪುಗ್ರಹಿಕೆಗೂ ಅವಕಾಶವಾಗಬಾರದು. ಅನಾವಶ್ಯಕವಾದ ಯಾವ ಚರ್ಚೆಗೂ ಆಸ್ಪದವಿಲ್ಲದಂತೆ ನೋಡಿಕೊಳ್ಳಬೇಕು. ಯಾವ ಪ್ರತಿವಕ್ತನನ್ನೇ ಆಗಲಿ ದಿನಕ್ಕೆ ಎರಡು ಅಥವಾ ಮೂರು ಗಂಟೆಗಿಂತ ಹೆಚ್ಚು ಉಪಯೋಗಿಸಿಕೊಳ್ಳಬಾರದು. ಮಧ್ಯೆ ಮಧ್ಯೆ ಉಪಾಹಾರ, ವಿಶ್ರಾಂತಿ, ಸಂಗೀತ, ಕಾಫಿ ಇತ್ಯಾದಿಗಳಿಗೆ ಅವಕಾಶ ನೀಡುತ್ತಿರಬೇಕು. ಪ್ರತಿವಕ್ತನಿಗೆ ಯಾವ ವಿಧದಲ್ಲಿಯೂ ಬೇಸರವಾಗದಂತೆ ನೋಡಿಕೊಳ್ಳುವುದು ಇವೆಲ್ಲದರ ಉದ್ದೇಶ. ಎಲ್ಲಕ್ಕಿಂತ ಹೆಚ್ಚಾಗಿ ಸಂಶೋಧಕನಿಗೆ ಭಾಷಾವಿಜ್ಞಾನದ ಜ್ಞಾನ ಅದರಲ್ಲೂ ಧ್ವನಿವಿಜ್ಞಾನದ ಜ್ಞಾನ ಅತ್ಯಗತ್ಯ. ಪ್ರತಿವಕ್ತರ ಬಾಯಿಂದ ಹೊರಬಿದ್ದ ಪದ, ವಾಕ್ಯಗಳಲ್ಲಿನ ಧ್ವನಿಯನ್ನು ಅತಿಸೂಕ್ಷ್ಮವಾಗಿ ಗ್ರಹಿಸುವ ಶಕ್ತಿ ಪಡೆದಿದ್ದು ಉಚ್ಚರಿತ ಧ್ವನಿಯ ಸ್ಥಾನ, ಸ್ವರೂಪ, ಇತ್ಯಾದಿಗಳನ್ನು ವೈಜ್ಞಾನಿಕವಾಗಿ ನಿರ್ಧರಿಸಿ ಅಂತರರಾಷ್ಟ್ರೀಯ ಧ್ವನಿಚಿಹ್ನೆಯನ್ನು ಬಳಸಿ ಸ್ಪಷ್ಟವಾಗಿ ಬರೆದುಕೊಳ್ಳುವಷ್ಟು ಸಮರ್ಥನಾಗಿರಬೇಕು, ಸಂಶೋಧಕ. ಧ್ವನಿ ಸಂಬಂಧಿ ಅನುನಾಸಿಕತೆ, ಮಾತ್ರಾಕಾಲ, ಅಲ್ಪ ಪ್ರಾಣ, ಮಹಾಪ್ರಾಣ, ಸ್ವರಲಹರಿ, ಸ್ವರಾಘಾತ (ಪಿಚ್), ಬಲಾಘಾತ (ಸ್ಟ್ರೆಸ್), ಸಮಾಸ, ಸಂಧಿ, ಧ್ವನಿಯ ಕಠಿಣತೆ, ಶಿಥಿಲತೆ ಇತ್ಯಾದಿಗಳನ್ನು ಸೂಕ್ಷ್ಮವಾಗಿ ನಿರ್ಧರಿಸುವಷ್ಟು ಜ್ಞಾನ ಭಾಷಾಸಂಶೋಧಕನಿಗೆ ಅಗತ್ಯ. ಅದಿಲ್ಲದಿದ್ದಲ್ಲಿ ಪ್ರಾಮಾಣಿಕ ಭಾಷಾಸಾಮಗ್ರಿಯ ಸಂಗ್ರಹ ಬಹಳ ಕಷ್ಟಕರವಾಗುತ್ತದೆ. ಅಂತರರಾಷ್ಟ್ರೀಯ ಧ್ವನಿಚಿಹ್ನೆಯನ್ನು ಬಳಸುವುದು ಭಾಷಾವಿಜ್ಞಾನದಲ್ಲಿ ರೂಢಿ. ಅಲಿಖಿತ ಭಾಷಾಸಾಮಗ್ರಿಯನ್ನು ಸಂಗ್ರಹಿಸುವಾಗ ಬರೆದುಕೊಳ್ಳಲು ಈ ಧ್ವನಿಲಿಪಿಯನ್ನು ಬಿಟ್ಟರೆ ಸದ್ಯಕ್ಕೆ ಮತ್ತಾವ ಲಿಪಿಯೂ ಸೂಕ್ತವಲ್ಲ. ಇಂಥ ಲಿಪಿಯ ಬಳಕೆಯಲ್ಲಿಯೂ ಕೆಲವು ಕುಂದುಕೊರತೆಗಳು ಇಲ್ಲದಿಲ್ಲ. ಕೆಲವು ವೇಳೆ ಅಂತರರಾಷ್ಟ್ರೀಯ ಧ್ವನಿಮಾಲೆಯಲ್ಲಿ ಇಲ್ಲದ ಕೆಲವು ಧ್ವನಿಗಳು ಕೆಲವು ಭಾಷೆಯಲ್ಲಿ ಕಂಡು ಬರುವ ಸಂಭವವೂ ಉಂಟು. ಅಂಥ ಸಂದರ್ಭದಲ್ಲಿ ವಿಶೇಷ ಚಿಹ್ನೆಗಳನ್ನು ಬಳಸಿ ಅವನ್ನು ಸುಲಭವಾಗಿ ಪತ್ತೆಹಚ್ಚುವಂತೆ ಬರೆದುಕೊಳ್ಳ ಬೇಕಾಗುವುದು. ಒಂದು ವೇಳೆ ಪ್ರತಿವಕ್ತರ ಉಚ್ಚಾರಣೆ ಅತಿವೇಗವಾಗಿದ್ದಲ್ಲಿ ಟೇಪ್‌ರೆಕಾರ್ಡರನ್ನು ಬಳಸಬಹುದು. ಕ್ಷೇತ್ರಕಾರ್ಯದಲ್ಲಿ ಅತಿ ವೈಜ್ಞಾನಿಕವಾಗಿ ಸಾಮಗ್ರಿಯನ್ನು ಪಡೆಯಲು ಟೇಪ್‌ರೆಕಾರ್ಡರ್ ಉತ್ತಮ ಸಾಧನವೆನಿಸಿಕೊಂಡಿದೆ. ಕತೆ, ಗಾದೆ, ಗೀತೆ ಮತ್ತು ಒಗಟುಗಳನ್ನು ಪ್ರತಿವಕ್ತರಿಂದ ಕೇಳಿ ನೇರವಾಗಿ ಬರೆದುಕೊಳ್ಳುವುದು ಸ್ವಲ್ಪ ಕ್ಲಿಷ್ಟವಾದುದರಿಂದ ಟೇಪ್‌ರೆಕಾರ್ಡರ್ ಬಳಕೆ ಒಳ್ಳೆಯದು. ಇಲ್ಲಿ ಧ್ವನಿಸಂಬಂಧಿ ಸ್ವರಲಹರಿ, ಸ್ವರಾಘಾತ, ಸಂಗಮ ಇತ್ಯಾದಿ ವಿಚಾರಗಳು ಬಿಟ್ಟುಹೋಗುವುವೆಂಬ ಭಯವಿರುವುದಿಲ್ಲ. ಸಾಮಗ್ರಿಯನ್ನು ಸಂಗ್ರಹಿಸುವಾಗ ಆಯಾ ಭಾಷೆಯ ಜಾಯಮಾನಕ್ಕೆ ತಕ್ಕ ಪ್ರಶ್ನಾವಳಿಗಳನ್ನು ತಯಾರಿಸಿಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಪ್ರಶ್ನಾವಳಿ ಸರಳವಾಗಿದ್ದು ಭಾಷೆಯ ಪೂರ್ಣ ಸಾಮಗ್ರಿಯನ್ನು ಸಂಗ್ರಹಿಸಲು ನೆರವಾಗುವಂತಿರಬೇಕು. ಕ್ಷೇತ್ರಕಾರ್ಯದಲ್ಲಿ ಪ್ರಾಯೋಗಿಕವಾಗಿ ಎಷ್ಟೋ ಹೊಸ ಹೊಸ ವಿಚಾರಗಳು ತಿಳಿದುಬರುತ್ತವೆ. ಅಂಥ ವಿಚಾರಗಳನ್ನು ಪ್ರಶ್ನಾವಳಿಗೆ ಸೇರಿಸಬೇಕಾಗಬಹುದು. ಕ್ಲಿಷ್ಟಕರವಾದ, ಅರ್ಥವಾಗದ, ಅಪೂರ್ವ ಪದಗಳಿಗೆ ಇಲ್ಲಿ ಸ್ಥಾನವೇ ಇಲ್ಲ. ಕೆಲವು ವೇಳೆ ಪ್ರಶ್ನಾವಳಿಗೆ ಬದಲು ಚಿತ್ರ ಮತ್ತು ನಕ್ಷೆಗಳನ್ನು ಉಪಯೋಗಿಸಬೇಕಾಗುವುದು. ಕತೆ, ಗಾದೆ, ಗೀತೆ ಮತ್ತು ಒಗಟುಗಳನ್ನು ಸಂಗ್ರಹಿಸುವಾಗ ಯಾವ ಪ್ರಶ್ನಾವಳಿಯ ಅವಶ್ಯಕತೆಯೂ ಕಂಡುಬರುವುದಿಲ್ಲ. ಪ್ರಶ್ನಾವಳಿಯಲ್ಲಿ ದಿನಚರಿಯ ಮಾಮೂಲಿ ವಸ್ತುಗಳ ಹೆಸರುಗಳು, ವ್ಯಾಕರಣ ಸಂಬಂಧಿ ನಾಮಪದ, ಕ್ರಿಯಾಪದ, ಸರ್ವನಾಮ, ಕ್ರಿಯಾವಿಶೇಷಣ, ಗುಣವಾಚಕ, ಸಂಖ್ಯಾವಾಚಕ ಹಾಗೂ ಲಿಂಗವಚನ, ವಿಭಕ್ತಿ, ಕಾಲ, ವಿಧಿ, ಕರ್ಮಣಿ ಮತ್ತು ಕರ್ತರಿ ಪ್ರಯೋಗಗಳು ಕ್ರಮವಾಗಿ ಸೂಚಿತವಾಗಿರಬೇಕು. ಇತ್ತೀಚೆಗೆ ಇಂಗ್ಲೆಂಡ್, ರಷ್ಯ ಮತ್ತು ಅಮೆರಿಕ ಮುಂತಾದ ದೇಶಗಳ ಭಾಷಾವಿಜ್ಞಾನಿಗಳು ಯಾವ ಪ್ರಶ್ನಾವಳಿಯನ್ನೂ ಬಳಸದೆ ಕತೆ, ಗಾದೆ ಮತ್ತು ಗೀತೆಗಳನ್ನು ವಿಶೇಷವಾಗಿ ಸಂಗ್ರಹಿಸಿ ಆ ಭಾಷೆಯನ್ನು ಆಧುನಿಕ ಭಾಷಾವಿಜ್ಞಾನದ ತತ್ತ್ವಗಳ ಆಧಾರದ ಮೇಲೆ ವಿಶ್ಲೇಷಿಸಿ ತುಂಬ ವೈಜ್ಞಾನಿಕ ರೀತಿಯಲ್ಲಿ ಗ್ರಂಥ ಹಾಗೂ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. **(ಕೆ.ಕೆ.ಜಿ.)**

**ಕ್ಷೇತ್ರಕಾರ್ಯ (ಸಮಾಜಶಾಸ್ತ್ರ) :** ಕ್ಷೇತ್ರಕಾರ್ಯ ವೈಜ್ಞಾನಿಕವೂ ಉಪಯುಕ್ತವೂ ಪ್ರಾಮಾಣಿಕವೂ ಆಗಬೇಕಾದರೆ ಯಾವ ಯಾವ ವಿಧಾನಗಳನ್ನು ಬಳಸಬೇಕು ಎಂಬ ವಿಷಯವನ್ನು ಕ್ಷೇತ್ರಕಾರ್ಯ ಎಂಬ ಲೇಖನದಲ್ಲಿ ವಿವರಿಸಿದೆ. ಇಲ್ಲಿ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ ಅದು ಹೇಗಿರಬೇಕು ಎಂಬ ವಿಷಯವನ್ನು ಮಾತ್ರ ಪ್ರಸ್ತಾಪಿಸಲಾಗುತ್ತದೆ.

ಸಮಾಜಶಾಸ್ತ್ರದ ಕ್ಷೇತ್ರ ಬಹಳ ವಿಶಾಲವಾದುದು. ಈ ಶಾಸ್ತ್ರ ಇಡೀ ಜನತೆಯ ಜೀವನವಿಶ್ಲೇಷಣೆಗೆ ಸಂಬಂಧಪಟ್ಟಿದೆಯಾಗಿ ಇದರ ವ್ಯಾಪ್ತಿಗೆ ಬಾರದ ವಿಷಯವೇ ಇಲ್ಲವೆನ್ನಬಹುದು. ಒಂದು ಭಾಗದ ಜನ ಹಿಂದಿನಿಂದಲೂ ಆರ್ಥಿಕವಾಗಿ ಪ್ರಗತಿ ಹೊಂದಿರಲು ಕಾರಣಗಳೇನು? ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುವ ಜನರ ಉದ್ದೇಶಗಳೇನು? ರಾಜಕೀಯದಿಂದ ಜನಜೀವನದ ಮೇಲೆ ಆಗಿರುವ ಪರಿಣಾಮಗಳೇನು? ಕುಟುಂಬ ನಿಯಂತ್ರಣಕ್ಕೂ ವಿದ್ಯಾಮಟ್ಟಕ್ಕೂ ಸಂಬಂಧವಿದೆಯೇ? ಕುಡಿತಕ್ಕೂ ಕೊಲೆ ಸುಲಿಗೆಗಳಿಗೂ ಏನು ಸಂಬಂಧ? ದೈಹಿಕ ದೌರ್ಬಲ್ಯಕ್ಕೂ ಇಂದಿನ ವಿದ್ಯಾಭ್ಯಾಸ ಕ್ರಮಕ್ಕೂ ಏನಾದರೂ ಸಂಬಂಧವಿದೆಯೇ? ಆದಿವಾಸಿಗಳ ಜೀವನದಿಂದ ನಾವು ಕಲಿಯಬಹುದಾದ ಪಾಠಗಳಾವುವು? ವಿದ್ಯಾರ್ಥಿವರ್ಗದ ಮೇಲೆ ಹಶೀಶ್ ಮೊದಲಾದವುಗಳ ಪರಿಣಾಮ ಎಷ್ಟು ಆಗಿದೆ? ವೃತ್ತಿಯಿಂದ ವೃತ್ತಿಗೆ ಹಾರುವ ಮನೋಧರ್ಮದ ಹಿನ್ನೆಲೆಯೇನು? ಜನಸಂಖ್ಯೆಯ ಹೆಚ್ಚಳಕ್ಕೂ ಆಹಾರ ಪದಾರ್ಥಗಳ ತಯಾರಿಕೆಗೂ ಏನಾದರೂ ಸಂಬಂಧವಿದೆಯೇ? ಹೀಗೆ ನೂರಾರು ಸಾಮಾಜಿಕ ಸಮಸ್ಯೆಗಳು ನಮ್ಮೆದುರಿಗೆ ಇವೆ. ಇವಕ್ಕೆ ಅಗತ್ಯವಾದ ಮಾಹಿತಿಗಳು ದೇಶದೇಶಕ್ಕೆ ವ್ಯತ್ಯಾಸವಾಗುತ್ತವೆ. ಅಲ್ಲದೆ ಕಾಲಕಾಲಕ್ಕೆ ಇವುಗಳ ಉತ್ತರಗಳೂ ವ್ಯತ್ಯಾಸವಾಗುತ್ತ ಹೋಗುತ್ತವೆ. ಒಂದೊಂದು ಸಮಸ್ಯೆಯೂ ಹತ್ತಾರು ಪ್ರಭಾವಗಳಿಂದಾಗಿ ಸಂಕೀರ್ಣವೂ ಜಟಿಲವೂ ಆಗಿರುತ್ತದಾಗಿ ಅದರ ವಿಶ್ಲೇಷಣೆಯಲ್ಲಿ ಸೂಕ್ಷ್ಮಪರಿಶೀಲನೆ, ತಾಳ್ಮೆ, ಶುದ್ಧತರ್ಕ, ಸಮಂಜಸ ನಿರ್ಧಾರಗಳು ಅಗತ್ಯವಾಗುತ್ತವೆ.

ಹೀಗಿರುವುದರಿಂದ ಕ್ಷೇತ್ರಕಾರ್ಯ ನಡೆಸಬೇಕೆಂದಿರುವವರು ಮೊದಲು ತಮ್ಮ ಸಮಸ್ಯೆ ಏನು, ಅದನ್ನು ಯಾವ ಕಾಲಕ್ಕೆ ಯಾವ ದೇಶಕ್ಕೆ ಮಿತಿಗೊಳಿಸಿಕೊಳ್ಳಬೇಕು. ಅದರ ನಿರ್ವಹಣೆಗೆ ಬೇಕಾಗಬಹುದಾದ ಅನ್ವೇಷಕರ ಸಂಖ್ಯೆ ಎಷ್ಟು, ಅತ್ಯಗತ್ಯವಾದ ಸಲಕರಣೆಗಳೇನು, ಸಿದ್ಧಪಡಿಸಿಕೊಳ್ಳಬೇಕಾದ ಪ್ರಶ್ನಾವಳಿ ಇತ್ಯಾದಿಗಳು ಹೇಗಿರಬೇಕು– ಎಂಬ ಎಲ್ಲ ವಿವರಗಳನ್ನೂ ಪೂರ್ವಭಾವಿಯಾಗಿ ಸಿದ್ಧಪಡಿಸಿಕೊಳ್ಳಬೇಕು.

ಹಿಂದೆ ಥಾಮರ್ಸ ರಾಬರ್ಟ್‌ಮ್ಯಾಲ್ಥಸ್ (1776–1834) ಎಂಬಾತ ಒಂದು ಸಾಮಾಜಿಕ ಸಿದ್ಧಾಂತವನ್ನು ಪ್ರತಿಪಾದಿಸಿದ. ಜನಸಂಖ್ಯೆ ಜ್ಯಾಮಿತೀಯವಾಗಿ ಏರುತ್ತಿದ್ದು ಆಹಾರಪದಾರ್ಥಗಳ ತಯಾರಿಕೆಗೆ ಅಂಕಗಣಿತೀಯವಾಗಿ ಮಾತ್ರ ಮುಂದುವರಿಯುತ್ತಿರುವುದರಿಂದ ಲೋಕದ ಬಡತನವನ್ನು ನಿವಾರಿಸಲಾಗುವುದಿಲ್ಲ ಎನ್ನುವುದು ಆತ ಕಂಡ ಸತ್ಯ. ಅಂದಿಗೂ ಇಂದಿಗೂ ಇದು ಸತ್ಯವಾಗಿ ಉಳಿದಿದೆಯಾದರೂ ವಿಜ್ಞಾನದ ಪ್ರಗತಿಯಿಂದ ಈ ಸತ್ಯವನ್ನು ಸುಳ್ಳಾಗಿಸಲು ಸಾಧ್ಯವೆ ಎಂಬ ಪ್ರಶ್ನೆ ಇಂದಿಗೂ ಇದ್ದೇ ಇದೆ. ಅನೇಕ ಸಾಮಾಜಿಕ ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವಾಗಿ ಅವುಗಳ ಇತಿಮಿತಿಯ ಕಡೆಗೆ ಸಂಶೋಧಕನ ದೃಷ್ಟಿ ಇರಬೇಕಾದುದು ಅತ್ಯಗತ್ಯ ಎಂಬುದನ್ನು ಶ್ರುತಪಡಿಸಲು ಮೇಲಿನದನ್ನು ಉದಾಹರಿಸಲಾಯಿತು.

ಕ್ಷೇತ್ರ ಪರಿಮಿತಿಯ ಪ್ರಶ್ನೆ ಬಂದಾಗ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಕೆಲಸ ಕಾರ್ಯಗಳನ್ನು ಪರಿಶೀಲಿಸಬಹುದು. ಈ ಸಂಸ್ಥೆ ಒಂದೊಂದು ಕೆಲಸಕ್ಕಾಗಿ ಬೆಂಗಳೂರು ನಗರವನ್ನು ಮಾತ್ರ ಆರಿಸಿಕೊಂಡು ಅಲ್ಲಿನ ಒಂದೊಂದು ಮೊಹಲ್ಲವನ್ನೂ ವಿವರವಾಗಿ ಕಂಡು ಅಂಕಿಅಂಶಗಳನ್ನು ಸಂಗ್ರಹಿಸಿ, ಜನರನ್ನು ಸಂದರ್ಶಿಸಿ, ಕೇಳಿ ಸಂಗ್ರಹಿಸಿದ ಮಾಹಿತಿಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ತನ್ನ ಅನೇಕ ವರದಿಗಳನ್ನು ಪ್ರಕಟಪಡಿಸಿದೆ. ಸಮಾಜಶಾಸ್ತ್ರದ ದೃಷ್ಟಿಯಿಂದ ಕಾರ್ಯಕ್ಷೇತ್ರ ಹೇಗಿರಬೇಕೆಂಬುದಕ್ಕೆ ಈ ಸಂಸ್ಥೆಯ ಕೆಲಸಕಾರ್ಯಗಳು ಮಾದರಿಯಾಗಿವೆ.

ವೈಯಕ್ತಿಕ ಕ್ಷೇತ್ರಪರಿಶೀಲನೆ ಬಹು ಮುಖ್ಯವಾದುದು. ಇಂಗ್ಲೆಂಡ್ ಮತ್ತು ಯುರೋಪಿನಿಂದ ವಿವಿಧ ಕ್ಷೇತ್ರಗಳಿಗೆ ವಲಸೆ ಹೋದ ಪಾದ್ರಿಗಳಂತೆ ಸಂಶೋಧಕ ತನ್ನ ಕ್ಷೇತ್ರಕ್ಕೆ ಪ್ರವೇಶಿಸಿ ಅಲ್ಲಿಯೇ ನೆಲಸಿ, ಆ ಜನರ ಆಚಾರವಿಚಾರಗಳನ್ನು ಕಣ್ಣಾರಕಂಡು ಪರೀಕ್ಷಿಸಿ ಮಾಹಿತಿ ಸಂಗ್ರಹಿಸುವುದು ಬಹು ಉತ್ತಮವಾದ ಕ್ರಮ. ಆದಿವಾಸಿಗಳ ಮಾತು ಬಂದಾಗಲಂತೂ ಇದು ತೀರ ಅಗತ್ಯ. ಲಿವಿಂಗ್‌ಸ್ಟನ್ ಆಫ್ರಿಕನರ ನಡುವೆ ಸೇರಿ ಹೋಗಿ ಅವರ ಹಿತೈಷಿಯಾಗಿದ್ದು ಅವರ ನಡುವೆ ಸತ್ತನಲ್ಲವೆ? ವೆರಿಯರ್ ಎಲ್ವಿನ್ ಭಾರತದ ಅನೇಕ ಆದಿವಾಸಿ ತಾಂಡ್ಯಗಳ ನಡುವೆ ಇದ್ದು ಅಮೂಲ್ಯವಾದ ಅನೇಕ ಸಂಶೋಧನೆಗಳನ್ನು ಮಾಡಿದುದು ಇತಿಹಾಸ ಪ್ರಸಿದ್ಧವಾಗಿದೆ**(ನೋಡಿ– ಎಲ್ವಿನ್,– ವೆರಿಯರ್)**. ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು, ಪರಿಕರ, ಪರಿಜನರೊಂದಿಗೆ ಕ್ಷೇತ್ರದಲ್ಲಿ ಧುಮುಕುವುದು ಇಂದಿಗೂ ಅತ್ಯುತ್ತಮ ಮಾರ್ಗ.

ಇದಲ್ಲದೆ, ಆಯ್ದ ಜನರನ್ನು ಸಂದರ್ಶಿಸಿ ಮಾಹಿತಿ ಪಡೆಯುವುದು, ಅಂಚೆಯ ಮೂಲಕ ಮಾಹಿತಿ ತರಿಸಿಕೊಳ್ಳುವುದು, ಮಾದರಿಗಾಗಿ ಕೆಲವೇ ವಿಷಯಗಳನ್ನು ಪರಿಶೀಲಿಸುವುದು–ಮುಂತಾದ ಕ್ಷೇತ್ರಕಾರ್ಯ ವಿಧಾನಗಳೂ ಬಳಕೆಯಲ್ಲಿವೆ. ಆಲ್‌ಫ್ರೆಡ್

ಚಾರಲ್ಸ್ ಕಿನ್ಸೆ (1894–1956) ಎಂಬ ಅಮೆರಿಕದ ಪ್ರಾಣಿವಿಜ್ಞಾನಿ ಮಾನವನ ಲೈಂಗಿಕ ಜೀವನದ ಬಗ್ಗೆ ನಡೆಸಿರುವ ಸಂಶೋಧನೆಗಳನ್ನು ಇಲ್ಲಿ ನೆನೆಯಬಹುದು. 18,500 ಜನರನ್ನು ವೈಯಕ್ತಿಕವಾಗಿ ಭೇಟಿಮಾಡಿ ಈತ ವಿಷಯಗಳನ್ನು ಸಂಗ್ರಹಿಸಿ ಸೆಕ್ಷುಯಲ್ ಬಿಹೇವಿಯರ್ ಇನ್ ದಿ ಹ್ಯೂಮನ್ ಮೇಲ್ (1948) ಮತ್ತು ಸೆಕ್ಷುಯಲ್ ಬಿಹೇವಿಯರ್ ಇನ್ ದಿ ಹ್ಯೂಮನ್ ಫೀಮೇಲ್ (1953) ಎಂಬೆರಡು ಗ್ರಂಥಗಳನ್ನು ಬರೆದಿದ್ದಾನೆ. ಎಷ್ಟು ಜಾಣ್ಮೆಯಿಂದ, ಅದೆಷ್ಟು ಸೂಕ್ಷ್ಮವಾಗಿ ವಿಷಯ ಸಂಗ್ರಹಣೆ ಮಾಡಿದ್ದರೂ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಬಹು ತೊಂದರೆಯಾಯಿತೆಂದೂ ಮಾನವನ ಲೈಂಗಿಕ ಜೀವನದಲ್ಲಿ ಖಚಿತವಾದ ವೈವಿಧ್ಯ ಇನ್ನೂ ಕಂಡುಬರುತ್ತದೆಂದೂ ಆತ ಹೇಳಿದ್ದಾನೆ. ಸಾಮಾಜಿಕ ಸಮಸ್ಯೆಗಳ ಬಗ್ಗೆ ಕ್ಷೇತ್ರಕಾರ್ಯ ನಡೆಸುವುದು ಎಷ್ಟು ಕಠಿಣವಾದ ಕೆಲಸ ಎಂಬುದು ಇದರಿಂದ ಗೊತ್ತಾಗುತ್ತದೆ. ಅಮೆರಿಕದ ಆದಿವಾಸಿ ಜನರ ಬಗ್ಗೆ ಬಹುಮುಖ ಸಂಶೋಧನೆಗಳನ್ನು ನಡೆಸಿದ ಕ್ರೋಬರ್ ಕ್ಷೇತ್ರಕಾರ್ಯ ಮಾಡಬೇಕೆನ್ನುವವರಿಗೆ ಹಿರಿಯ ಮಾದರಿಯಾಗಿದ್ದಾನೆ. ಆತ ಬಳಸಿದ ಅನೇಕ ವಿಧಾನಗಳು ಇಂದಿಗೂ ಬಳಕೆಯಲ್ಲಿವೆ **(ನೋಡಿ– ಕ್ರೋಬರ್,–ಆಲ್‌ಫ್ರೆಡ್–ಲೂಯಿಸ್)**.

ಒಂದೇ ವಿಷಯದ ಪರಿಶೀಲನೆಯಲ್ಲಿ ಒಂದಕ್ಕಿಂತ ಹೆಚ್ಚಿನ ವಿಧಾನಗಳನ್ನು ಬಳಸಿಕೊಳ್ಳುವುದು ಉತ್ತಮ. ಹಾಗೆ ಮಾಡಿದಲ್ಲಿ ನಾವು ಕೈಗೊಳ್ಳುವ ನಿರ್ಧಾರಗಳು ಹೆಚ್ಚು ಖಚಿತವೂ ನಿರ್ದುಷ್ಟವೂ ಆಗುತ್ತವೆ. (ಕೆ.ಎನ್.ವಿ.)

**ಕ್ಷೇತ್ರ ಕೌಶಲ :** ಪರಿಸರವನ್ನು ಸ್ವಂತ ಬಲಗಳ ಸೌಕರ್ಯಕ್ಕಾಗಿ ಬಳಸಿಕೊಳ್ಳುವ ಸಮರತಂತ್ರ (ಫೀಲ್ಡ್ ಕ್ರ್ಯಾಫ್ಟ್). ಈ ತಂತ್ರದ ಪ್ರಕಾರ ಒಬ್ಬ ನುರಿತ ಸೈನಿಕ ತನ್ನ ಆಸುಪಾಸಿನ ನೆಲದ ಪೂರ್ಣ ಮಾಹಿತಿಗಳನ್ನು ಸಮರದೃಷ್ಟಿಕೋನದಿಂದ ಗ್ರಹಿಸಿ ಅವನ್ನು ಯುಕ್ತವೇಳೆಯಲ್ಲಿ ಸ್ವಂತ ಲಾಭಕ್ಕೂ ಶತ್ರುನಾಶಕ್ಕೂ ಬಳಸಿಕೊಳ್ಳಲು ಸಮರ್ಥನಾಗಿರಬೇಕು ಮಾತ್ರವಲ್ಲ, ಆ ಮಾಹಿತಿಗಳನ್ನು ಪೂರ್ವನಿಯೋಜಿತ ಕ್ರಮದಲ್ಲಿ ತನ್ನ ನಾಯಕನಿಗೆ ವರದಿ ಮಾಡಲು ಕೂಡ ಪರಿಣತನಾಗಿರಬೇಕು. ಪರಿಸರದ ಮೇಲಿನ ಪ್ರಭುತ್ವ ಸಾಧಿಸಿದರೆ ಅರ್ಧಯುದ್ಧವನ್ನು ಗೆದ್ದಂತೆಯೇ, ಶತ್ರುವಿನ ಬುದ್ಧಿವಂತಿಕೆಯನ್ನು ಎಂದೂ ಕಡೆಗಣಿಸಬೇಡ, ನಿನ್ನ ಬುದ್ಧಿವಂತಿಕೆಯನ್ನು ಎಂದೂ ಲಂಬಿಸಬೇಡ, ಒಂದೊಂದು ನೈಸರ್ಗಿಕ ಅಡಚಣೆಯಲ್ಲಿಯೂ ಒಂದೊಂದು ರಕ್ಷಣಾ ಸಾಧನವನ್ನು ಗುರುತಿಸು–ಇವೇ ಮುಂತಾದವು ಅನೇಕ ವರ್ಷಗಳ ಯುದ್ಧಾನುಭವಗಳಿಂದ ಸುವಿದಿತವಾಗಿರುವ ಪಾಠಗಳು.

ವಸ್ತುಗಳು ಏಕೆ ಕಾಣುತ್ತವೆ ಎನ್ನುವ ಮೊದಲ ಪಾಠವನ್ನು ಸೈನಿಕನಿಗೆ ಕ್ಷೇತ್ರ ಕೌಶಲದಲ್ಲಿ ಕಲಿಸುತ್ತಾರೆ. ಈತ ಶತ್ರುವನ್ನು ನೋಡಿ ಗುರುತು ಹಿಡಿಯುವುದು ಸಾಧ್ಯವಾಗಬೇಕು ಆದರೆ ಈತನ ಇರವು ಶತ್ರುವಿಗೆ ತಿಳಿಯಬಾರದು–ಈ ಸೂತ್ರವನ್ನು ಲಕ್ಷ್ಯದಲ್ಲಿಟ್ಟುಕೊಂಡು ಮೇಲಿನ ಪ್ರಶ್ನೆಗೆ ಪ್ರಾಯೋಗಿಕ ಉತ್ತರಗಳನ್ನು ಆ ಪಾಠದಲ್ಲಿ ನೀಡುತ್ತಾರೆ. ಉದಾಹರಣೆಗೆ ಚಲನೆ, ಹೊಳೆಯುವ ವಸ್ತುಗಳು, ನೆರಳು, ಬಾನಗಡಿರೇಖೆ ದಾಟುವಾಗಿನ ಪರಿಸ್ಥಿತಿ, ಪರಿಸರಕ್ಕೆ ಹೊಂದದ ಮಹಾಗಾತ್ರಗಳು, ಕ್ರಮಬದ್ಧವಾದ ರಚನೆಗಳು ಇವು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುವುದರಿಂದ ಸೈನಿಕ ಈ ದೃಷ್ಟಿಯಿಂದ ತನ್ನ ಸಮರತಂತ್ರವನ್ನು ರೂಪಿಸಿಕೊಳ್ಳಬೇಕು.

ದೂರ ಮತ್ತು ದಿಕ್ಕಿನ ಅಂದಾಜು ಕ್ಷೇತ್ರ ಕೌಶಲದ ಇನ್ನೊಂದು ಮುಖ್ಯಪಾಠ. ಅಂತಿಮವಾಗಿ ಅಗ್ನ್ಯಾಯುಧಗಳ ಬಳಕೆಯಿಂದ ಶತ್ರುವನ್ನು ಕೊಲ್ಲುವುದೇ ಯುದ್ಧದ ಉದ್ದೇಶ. ಈ ಆಯುಧಗಳ ಬಳಕೆ ಅತಿ ನಿಷ್ಕೃಷ್ಟವಾಗಬೇಕಾದರೆ (ಹಾಗಾಗದಿದ್ದರೆ ವೃಥಾ ಅಗ್ನಿಸಾಮರ್ಥ್ಯ ವ್ಯರ್ಥವಾಗುವುದೊಂದೇ ಅಲ್ಲ, ಶತ್ರುವಿಗೆ ನಮ್ಮ ಸುಳಿವು ಹಾಗೂ ಯೋಜನೆ ತಿಳಿದು ಆತನಿಗೆ ಮೇಲುಗೈ ಪ್ರಾಪ್ತವಾಗಲೂಬಹುದು) ಗುರಿ ಹೊಡೆಯಬೇಕಾದ ತಾವಿನ ದೂರ ಹಾಗೂ ದಿಕ್ಕು ನಿಖರವಾಗಿ ತಿಳಿದಿರಬೇಕು. ರಣರಂಗದಲ್ಲಿ ಇವನ್ನು ಪ್ರತ್ಯಕ್ಷವಾಗಿ ಅಳೆದು ನಿರ್ಧರಿಸಲು ಸಾಧ್ಯವಿಲ್ಲವಷ್ಟೆ.. ಇಂಥಲ್ಲಿ ಕ್ಷೇತ್ರ ಕೌಶಲದ ಶಿಕ್ಷಣ ಪಡೆದ ಒಬ್ಬ ನುರಿತ ಸೈನಿಕ ಶೇ. 10 ದೋಷದ ವ್ಯಾಪ್ತಿಯಲ್ಲಿ ದೂರವನ್ನೂ ದಿಕ್ಕನ್ನೂ ಸರಿಯಾಗಿ ಹೇಳಬಲ್ಲ.

ಕ್ಷೇತ್ರ ಸ್ವರೂಪ ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವುದು ಮಾತ್ರವಲ್ಲ, ಒಂದೇ ಸ್ಥಳದಲ್ಲಿ ಬೆಳಕಿನ ಬದಲಾವಣೆಯನ್ನು ಅನುಸರಿಸಿ ಭಿನ್ನರೂಪಗಳನ್ನು ಸಹ ಪ್ರದರ್ಶಿಸುತ್ತಿರುವುದು. ಇಂಥಲ್ಲಿ ಸ್ವಂತ ಜಯಸಾಧಿಸಲು ಹಾಗೂ ಶತ್ರುನಾಶಮಾಡಲು ಸೈನಿಕನಿಗೆ ಕ್ಷೇತ್ರ ಕೌಶಲದ ವಿಪುಲ ಪರಿಜ್ಞಾನ ಆವಶ್ಯಕ. *

**ಕ್ಷೇತ್ರಗಣಿತ :** ಉದ್ದ ವಿಸ್ತೀರ್ಣ ಮತ್ತು ಘನಗಾತ್ರಗಳನ್ನು ಅಳೆಯುವ ವಿಧಾನಗಳಿಗೆ ಸಂಬಂಧಿಸಿದ ಗಣಿತಶಾಖೆ (ಮೆನ್‌ಸ್ಯುರೇಷನ್). ಆಕೃತಿಗಳು ಒಂದು, ಎರಡು ಅಥವಾ ಮೂರು ಆಯಾಮಗಳಲ್ಲಿ (ಡೈಮೆನ್ಷನ್ಸ್) ಇರುತ್ತವೆ. ಸರಳರೇಖೆ, ವಕ್ರರೇಖೆಯ ಕಂಸ ಮುಂತಾದುವು ಒಂದು ಆಯಾಮದ ಆಕೃತಿಗಳು. ಇವುಗಳಿಗೆ ಉದ್ದ ಮಾತ್ರ ಉಂಟಷ್ಟೆ. ತ್ರಿಭುಜ, ಆಯ, ಬಹುಭುಜ (ಪಾಲಿಗನ್), ದೀರ್ಘವೃತ್ತ ಮುಂತಾದವು ಎರಡು ಆಯಾಮಗಳ ಆಕೃತಿಗಳು. ಇವನ್ನು ರಚಿಸುವ ಸಂವೃತ (ವಕ್ರ) ರೇಖೆಯ ಉದ್ದವನ್ನು ಪಡೆದರೆ ಅದು ಆಯಾ ಆಕೃತಿಯ ಸುತ್ತಳತೆ ಎನ್ನಿಸುವುದು. ಇನ್ನು ಈ ಆಕೃತಿಗಳು ಒಳಗೊಳ್ಳುವ ಪ್ರದೇಶದ ಸಲೆಯನ್ನು ಅಳೆದರೆ ಅದು ಆಯಾ ಆಕೃತಿಯ ವಿಸ್ತೀರ್ಣ ಎನ್ನಿಸುವುದು. ಗೋಳ, ಸಿಲಿಂಡರ್, ದೀರ್ಘವೃತ್ತಕಲ್ಪ ಮುಂತಾದುವು ಮೂರು ಆಯಾಮಗಳ ಆಕೃತಿಗಳು. ಇವುಗಳಿಗೆ ಮೇಲ್ಮೈ ವಿಸ್ತೀರ್ಣ ಉಂಟು. ಅಲ್ಲದೇ ಇವು ಒಳಗೊಳ್ಳುವ ಪ್ರದೇಶದ ಘನ ಗಾತ್ರವೂ ಉಂಟು. ದತ್ತ ಆಕೃತಿಗಳ ಉದ್ದ, ವಿಸ್ತೀರ್ಣ, ಘನಗಾತ್ರಗಳನ್ನು ಆಯಾಆಕೃತಿಗಳ ಕೆಲವು ವಿವರಗಳು ತಿಳಿದಿರುವಾಗ ಗಣಿತಶಾಸ್ತ್ರದ ಅನ್ವಯದಿಂದ ಗಣನೆ ಮಾಡಬಹುದು. ಉದಾಹರಣೆಗೆ $a, b, c$ ಭುಜಗಳಿರುವ ತ್ರಿಭುಜದ ವಿಸ್ತೀರ್ಣ $\sqrt{s(s-a)(s-b)(s-c)}$. ತ್ರಿಜ್ಯ $r$ ಇರುವ ವೃತ್ತದ ಪರಿಧಿ $2\pi r$ ಮತ್ತು ವಿಸ್ತೀರ್ಣ $\pi r^2$. ತ್ರಿಜ್ಯ $r$ ಇರುವ ಗೋಳದ ಮೇಲ್ಮೈ ವಿಸ್ತೀರ್ಣ $4\pi r^2$, ಘನಗಾತ್ರ $\frac{3}{4}\pi r^3$. ಈ ಸೂತ್ರಗಳನ್ನು ಗಣಿತ ವಿಧಾನಗಳಿಂದ ಪಡೆಯಲಾಗಿದೆ; ಮಾತ್ರವಲ್ಲ ಇವುಗಳಿಗೆ ನಿಖರವಾದ ಸಾಧನೆಗಳನ್ನು ಸಹ ನೀಡಲಾಗಿದೆ. ಇನ್ನಷ್ಟು ಮುಂದುವರಿದ ಹಂತಗಳಲ್ಲಿ ಅನುಕಲನ ವಿಧಾನ (ಇಂಟೆಗ್ರೇಷನ್ ಮೆಥಡ್), ಸಂಖ್ಯಾನುಕಲನ ವಿಧಾನ (ನ್ಯೂಮರಿಕಲ್ ಇಂಟೆಗ್ರೇಷನ್ ಮೆಥಡ್), ಸನ್ನಿಹಿತತೆಯ ವಿಧಾನ (ಅಪ್ರಾಕ್ಸಿಮೇಷನ್ ಮೆಥಡ್) ಇವೇ ಮುಂತಾದವನ್ನು ಬಳಸಿ ದತ್ತ ಆಕೃತಿಗಳ ಪರಿಮಾಣಗಳನ್ನು ಕಂಡುಹಿಡಿಯಬಹುದು. (ಬಿ.ಬಿ.ಬಿ.)

**ಕ್ಷೇತ್ರಜ್ಞ :** ಪದ(ಹಾಡು) ರಚನೆಯ ಮೂಲಪುರುಷನೆಂದು ಬಹಳ ಪ್ರಸಿದ್ಧನಾಗಿರುವ ಸಂಗೀತಶಾಸ್ತ್ರಕೋವಿದ. ವೆಂಕಟಮಖಿಯ (ಹದಿನೇಳನೆಯ ಶತಮಾನ) ಸಮಕಾಲೀನನೆಂದು ನಂಬಲಾಗಿದೆ. ಪದರಚನಕಾರರಲ್ಲಿ ಮೊದಲಿಗನಾಗಿ 4,200ಕ್ಕೂ ಹೆಚ್ಚಿನ ಪದಗಳನ್ನು ರಚಿಸಿರುವ ಈತನ ಜೀವನ ಚರಿತ್ರೆಯ ವಿಷಯವಾಗಿ ಖಚಿತವಾದ ವಿಷಯಗಳು ತಿಳಿದುಬಂದಿಲ್ಲ. ಕೆಲವು ಪಂಡಿತರು ಈತ ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಗೆ ಸೇರಿದ ಘಂಟಸಾಲ ಬಳಿಯಿರುವ ಮುವ್ವಪುರಿಗೆ ಸೇರಿದವನೆಂತಲೂ ಮತ್ತೆ ಕೆಲವರು ಚಿತ್ತೂರು ಜಿಲ್ಲೆಗೆ ಸೇರಿದ ಚಂದ್ರಗಿರಿ ಬಳಿಯಿರುವ ಮುವ್ವಪುರಿ ಎಂಬ ಹಳ್ಳಿಗೆ ಸೇರಿದವನೆಂತಲೂ ಅಭಿಪ್ರಾಯಪಟ್ಟಿದ್ದಾರೆ. ತೈಲಿಂಗ್ಯಬ್ರಾಹ್ಮಣ ಪಂಗಡಕ್ಕೆ ಸೇರಿದವನಾದ ಈತ ಬಾಲ್ಯದಲ್ಲೇ ಸಂಗೀತ ಸಾಹಿತ್ಯಗಳೆರಡರಲ್ಲೂ ಪಾಂಡಿತ್ಯವನ್ನು ಸಂಪಾದಿಸಿ, ಒಬ್ಬ ಮಹಾತ್ಮನಿಂದ ಗೋಪಾಲ ಮೂಲಮಂತ್ರೋಪದೇಶವನ್ನು ಪಡೆದ. ಇಷ್ಟದೈವವಾದ ಗೋಪಾಲನನ್ನು ಭಕ್ತಿಯಿಂದ ಆರಾಧಿಸಿ ಆತನ ಅನುಗ್ರಹಕ್ಕೆ ಪಾತ್ರನಾಗಿ ದರ್ಶನಭಾಗ್ಯವನ್ನು ಪಡೆದ ತಕ್ಷಣವೇ ಈತನಲ್ಲಿ ಕವಿತ್ವಶಕ್ತಿಯುಂಟಾಯಿತಾಗಿ ಈತ ಶ್ರೀಪತಿ ಸುತುಬಾರಿಕಿ ನೇನೋಲೇಕ ನಿನುವೇಡಿತೆ ಎಂಬ ಪದವನ್ನು ಆನಂದಭೈರವಿ ರಾಗದಲ್ಲಿ ರಚಿಸಿದನೆಂದು ತಿಳಿಯಬರುತ್ತದೆ.

ಕ್ಷೇತ್ರಜ್ಞನ ಮೊದಲಿನ ಹೆಸರು ವರದಯ್ಯ. ಕಂಚಿ, ಮಧುರೆ, ರಾಮೇಶ್ವರ ಮುಂತಾದ ಅನೇಕ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ ಅಲ್ಲಿರುವ ದೇವತಾ ಮೂರ್ತಿಗಳನ್ನು ವರ್ಣಿಸಿ ಸ್ತುತಿಸಿ ಹಾಡಿದುದರಿಂದಲೇ ಈತನನ್ನು ಕ್ಷೇತ್ರಜ್ಞ, ಕ್ಷೇತ್ರಯ್ಯ ಎಂಬ ಹೆಸರುಗಳಿಂದ ಕರೆಯುವುದು ರೂಢಿಗೆ ಬಂತು. 1625–30 ಹಾಗೂ 1670–75ರಲ್ಲಿ ಈತ ಅನೇಕ ರಾಜಾಸ್ಥಾನಗಳಿಗೆ ಭೇಟಿಯಿತ್ತು ತನ್ನ ರಚನೆಗಳನ್ನು ಅಲ್ಲಿಯ ರಾಜರುಗಳ ಮುಂದೆ ಹಾಡಿ ಅವರ ಗೌರವಾದರಗಳಿಗೆ ಪಾತ್ರನಾದ. ತಂಜಾವೂರು, ಮಧುರೆ, ಗೋಲ್ಕೊಂಡ ಮುಂತಾದ ಸಂಸ್ಥಾನಾಧಿಪತಿಗಳಿಂದ ಗೌರವಿಸಲ್ಪಟ್ಟ ಸಂದರ್ಭದಲ್ಲಿ ತಾನು ರಚಿಸಿರತಕ್ಕ ಪದಗಳ ಸಂಖ್ಯೆ ಎಷ್ಟೆಂಬುದನ್ನು ವೇಡುಕತೋ ನಡಚುಕೊನ್ನ ವಿಟರಾಯುಡೇ ಎಂಬ ಪದದಲ್ಲಿ ನಿರೂಪಿಸಿದ್ದಾನೆ. ತಂಜಾವೂರಿನ ವಿಜಯರಾಘವ ನಾಯಕನ ಕಾಲದಲ್ಲಿ ಆತನ ಅನುಜ್ಞೆಯ ಮೇರೆಗೆ ರಾಜಾಂಕಿತದಲ್ಲಿ ಈತ ಐದು ಪದಗಳನ್ನು ರಚಿಸಿದ್ದಾನೆ. ಅವು ವಿಜಯರಾಘವ ಪಂಚರತ್ನ ಮತ್ತು ಮುವ್ವ ಗೋಪಾಲ ಪಂಚರತ್ನ ಎಂಬ ಎರಡು ಹೆಸರಿನಿಂದ ಪ್ರಸಿದ್ಧವಾಗಿವೆ.

ರಸಿಕಾಗ್ರೇಸರನಾದ ವಿಜಯರಾಘವ ಭೂಪಾಲ ಕ್ಷೇತ್ರಜ್ಞನನ್ನು ಆದರಿಸಿ ಗೌರವಿಸಿದುದಕ್ಕಾಗಿ ಅಸೂಯೆಗೊಂಡ ಆಸ್ಥಾನ ಪಂಡಿತರನೇಕರು ಇದೇಮಿ? ಏರಾ, ರಾರಾ, ಪೋರಾ–ಎಂದು ಏಕವಚನದಲ್ಲಿ ಸಂಬೋಧಿಸುವ ಕ್ಷೇತ್ರಜ್ಞನ ಮೇಲೆ ರಾಜನಿಗಿಷ್ಟು ಮೋಹವೆ? ಎಂದು ಟೀಕಿಸಿದರು. ಆ ಮಾತನ್ನು ಕ್ಷೇತ್ರಜ್ಞನಿಗೆ ತಿಳಿಸಲು, ಅವರು ಹೇಳುವುದು ಸರಿಯಾಗಿಯೇ ಇದೆಯೆಂದು ಕ್ಷೇತ್ರಜ್ಞ ವಿನಯದಿಂದ ಒಪ್ಪಿಕೊಂಡ. ಕೆಲವು ಕಾಲದ ಅನಂತರ ವದರಕಪೋವೆ ಎಂಬ ಕಾಂಭೋಜಿ ರಾಗದ ಪದವೊಂದರ ಪಲ್ಲವಿ ಅನುಪಲ್ಲವಿ ಮತ್ತು ಎರಡು ಚರಣಗಳನ್ನು ರಚಿಸಿ, ತಾನು ಯಾತ್ರೆ ಮುಗಿಸಿಕೊಂಡು ಬರುವ ವೇಳೆಗೆ ಪಂಡಿತರು ಮುಂದಿನ ಅರ್ಧಭಾಗವನ್ನು ಪೂರ್ಣಗೊಳಿಸಲು ಹೇಳಿ ಯಾತ್ರೆ ಹೊರಟ. ಪಂಡಿತರಿಗೆ ಇದೊಂದು ಸತ್ತ್ವಪರೀಕ್ಷೆಯ ಸಂದರ್ಭವಾಯಿತು. ಆ ಪದವನ್ನು ಪೂರ್ಣಮಾಡಲು ತಮ್ಮ ಪಾಂಡಿತ್ಯ ಸಾಲದೆ ಅವರು ಚಿಂತೆಗೀಡಾದರು. ಯಾತ್ರೆಯಿಂದ ಹಿಂದಿರುಗಿದ ಕ್ಷೇತ್ರಜ್ಞನ ಸಮಕ್ಷಮದಲ್ಲಿ ಅವರು ತಮ್ಮ ಸೋಲನ್ನೊಪ್ಪಿಕೊಂಡರು. ತತ್‌ಕ್ಷಣವೇ ಕ್ಷೇತ್ರಜ್ಞ ಆ ಪದವನ್ನು ಪೂರೈಸಲಾಗಿ ಅವರು ಆತನ ಪ್ರತಿಭೆಗೆ ಮಾರುಹೋಗಿ ನೀನು ಸಾಕ್ಷಾತ್ ಗೋಪಾಲನೇ ಎಂದು ಹೊಗಳಿದರು.

ಜಯದೇವ ಮತ್ತು ನಾರಾಯಣ ತೀರ್ಥರಂತೆ ಕ್ಷೇತ್ರಜ್ಞ ಮಧುರಭಕ್ತಿಯ ಪಂಥಕ್ಕೆ ಸೇರಿದವ. ಈತನ ಪದಗಳಲ್ಲಿ ಮಧುರಭಕ್ತಿಯೇ ಮುಖ್ಯ ವಿಷಯ. ಪದಗಳ ಸಾಹಿತ್ಯ

ಹೊರನೋಟಕ್ಕೆ ಶೃಂಗಾರಪ್ರಧಾನವಾಗಿ ಕಂಡರೂ ಅವುಗಳ ಮುಖ್ಯೋದ್ದೇಶ ಜೀವಾತ್ಮ ಪರಮಾತ್ಮನಲ್ಲಿ ಐಕ್ಯವಾಗಲು ಹಂಬಲಿಸುವುದೇ ಆಗಿರುತ್ತದೆ.

ಕ್ಷೇತ್ರಜ್ಞ ತನ್ನ ಪದಗಳಿಗೆ ಪ್ರಮುಖವಾಗಿ ಕೃಷ್ಣನನ್ನೇ ನಾಯಕನನ್ನಾಗಿ ಆರಿಸಿಕೊಂಡಿದ್ದರೂ ಅನೇಕ ಕಡೆ ಕಂಚಿ ವರದ, ಚೆಲ್ವಲಿಂಗ ಮುಂತಾದ ದೇವರನ್ನೂ ಕುರಿತು ಪದರಚನೆ ಮಾಡಿದ್ದಾನೆ. ವ್ಯಾಕರಣ ಪಂಡಿತನಾದರೂ ತನ್ನ ರಚನೆಗಳಲ್ಲೀತ ತೆಲುಗಿನ ಗ್ರಾಮ್ಯ ಪದಗಳನ್ನು ವಿಶೇಷವಾಗಿ ಉಪಯೋಗಿಸಿದ್ದಾನೆ. ನಾಯಕ, ನಾಯಕಿಯರ ಮನೋಭಾವವನ್ನು ತಿಳಿಯಪಡಿಸಲು ಗ್ರಾಮ್ಯ ಪದಗಳೇ ಯುಕ್ತವೆಂದು ಈತನ ಅಭಿಪ್ರಾಯವಿದ್ದಿರಬಹುದೆಂದು ಊಹಿಸಬಹುದು. ತನ್ನ ಪದಗಳಲ್ಲಿ ನಾಯಕಿಯ ಸ್ಥಾನದಲ್ಲಿ ತಾನೇ ನಿಂತು ನಾಯಕ–ನಾಯಕೀ ಭಾವವನ್ನು ನಿರೂಪಿಸಿರುವುದೊಂದು ಇಲ್ಲಿಯ ಸ್ವಾರಸ್ಯ. ಈತನ ಪದಗಳು ಕೈಶಿಕೀ ರೀತಿಯಿಂದ ಕೂಡಿದ್ದು ಮಾಧುರ್ಯ ಭರಿತವಾಗಿವೆಯಲ್ಲದೆ ಭಾವಭರಿತವೂ ಅರ್ಥಪೂರ್ಣವೂ ಆಗಿ ಸಂದರ್ಭೋಚಿತವಾಗಿ ರಸವನ್ನು ಹರಿಯಿಸಿ ಸಹೃದಯವನ್ನು ತಣಿಸುತ್ತವೆ. ಪ್ರತಿಯೊಂದು ಪದವನ್ನೂ ಪಲ್ಲವಿ ಅನುಪಲ್ಲವಿ ಮತ್ತು 3 ಅಥವಾ 4 ಚರಣಗಳಿದ್ದು ಪಲ್ಲವಿ ಅನುಪಲ್ಲವಿ ಭಾಗಗಳು 4 ಅಥವಾ 8 ಪಾದಗಳಿಂದಲೂ ಚರಣದ ಭಾಗಗಳು ಎಂಟು ಅಥವಾ ಹದಿನಾರು ಪಾದಗಳಿಂದಲೂ ಕೂಡಿದ್ದು ಕಡೆಯದು ಮುದ್ರಾಚರಣವಾಗಿರುತ್ತದೆ. ಸಾಮಾನ್ಯವಾಗಿ ಅನುಪಲ್ಲವಿಯನ್ನು ಮೊದಲು ಹಾಡಿ ಅನಂತರ ಪಲ್ಲವಿ ಮತ್ತು ಚರಣದ ಭಾಗಗಳನ್ನು ಹಾಡುವುದು ರೂಢಿಯಲ್ಲಿದೆ. ಒಂದೇ ಧಾತು ಕೆಲವೆಡೆಗಳಲ್ಲಿ ಪುನರಾವರ್ತಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಇದು ಪದಗಳಲ್ಲಿ ಕಂಡುಬರುವ ಇನ್ನೊಂದು ವಿಶೇಷ.

ಕ್ಷೇತ್ರಜ್ಞನ ಪದರಚನೆಗಳಿಗೆ ಸರಿದೂಗುವ ಗೇಯ ಕವಿತ್ವವನ್ನು ಇದೇ ಧಾಟಿಯಲ್ಲಿ ಈತನ ಕಾಲಕ್ಕೆ ಹಿಂದೆಯಾಗಲೀ ಮುಂದೆಯಾಗಲೀ ಯಾರೂ ರಚಿಸಿಲ್ಲವೆಂದು ಹೇಳಲಾಗಿದೆ. ಈತನ ಪದಗಳಲ್ಲಿ ಕುಹಕ, ವ್ಯಂಗ್ಯ, ವಿರಹ ಮುಂತಾದ ಅನೇಕ ಅಲಂಕಾರಗಳನ್ನು ಕಾಣುತ್ತೇವೆ. ಕವಿ ಇಲ್ಲಿ ತಾನು ತನ್ನ ಅಂತಃಚಕ್ಷುವಿನಿಂದ ಕಂಡು ಅನುಭವಿಸಿದ ಚಿತ್ರಗಳನ್ನು ಸುಮಧುರವಾದ ತೆಲುಗು ಭಾಷೆಯಲ್ಲಿ ಸಂಗೀತಕ್ಕಳವಡಿಸಿ ಅದರ ಪೂರ್ಣ ಚಿತ್ರಣವನ್ನು ತನ್ನ ಪದದ ಮೂಲಕ ನೀಡುತ್ತ ಶ್ರೋತೃವೃಂದವನ್ನು ಬೇರೊಂದು ಪ್ರಪಂಚಕ್ಕೆ ಸೆಳೆದೊಯ್ಯುತ್ತಾನೆ. ಪದದಲ್ಲಿಯ ರಾಗಭಾವಗಳು ಶ್ರೇಷ್ಠವಾಗಿದ್ದು ಸಾಹಿತ್ಯಭಾಗವನ್ನು ಸುಂದರವಾಗಿ ನಿರೂಪಿಸುತ್ತವೆ. ಘಂಟಾ, ನವರೋಜ್ ಮುಂತಾದ ರಾಗಗಳ ಕಲ್ಪನೆ ಸಿಗುವುದು ಕ್ಷೇತ್ರಜ್ಞನ ಪದಗಳಲ್ಲೇ. ರಾಗಚರಿತ್ರೆಯ ಬಗ್ಗೆ ಆಸಕ್ತಿಯುಳ್ಳವರು ರಾಗಲಕ್ಷಣವನ್ನು ತಿಳಿಯುವಾಗ ಈತನ ಪದಗಳಲ್ಲಿ ಕೆಲವು ಅಪರೂಪ ಸಂಚಾರಗಳನ್ನು ಗಮನಿಸಬಹುದು. ಕಾಂಭೋಜಿ, ಬೇಗಡೆ, ಭೈರವಿ, ಕಲ್ಯಾಣಿ ರಾಗಗಳಲ್ಲಿ ರಚಿತವಾಗಿರುವ ಪದಗಳಲ್ಲಾದರೋ ರಾಗಭಾವ ತುಂಬಿತುಳುಕಾಡುತ್ತದೆ. ಈತನ ಪದಗಳಲ್ಲಿ ಮುವ್ವಗೋಪಾಲ, ಮವ್ವಗೋಪಾಲ ಎಂಬೆರಡು ಅಂಕಿತಗಳನ್ನು ಕಾಣಬಹುದು. ಕೆಲವು ಪದಗಳಲ್ಲಿ ಗೋಪಾಲ ಎಂಬ ಅಂಕಿತವಷ್ಟೇ ಕಂಡುಬರುತ್ತದೆ.

ಕ್ಷೇತ್ರಜ್ಞನ ಪದಗಳ ಪೈಕಿ ಉಪಲಬ್ಧವಾಗಿರುವುದು 332 ಮಾತ್ರವೇ. ಅವುಗಳಲ್ಲಿ ಹೆಚ್ಚು ಪರಿಚಿತವಾಗಿರುವುವು ಸುಮಾರು 128. ಕೈಬರೆಹದ ಪ್ರತಿಯಲ್ಲಿ ಪ್ರತಿಯೊಂದು ಪದದ ಮೊದಲಿಗೂ ಆ ಪದ ಯಾವ ಸಂದರ್ಭಕ್ಕಾಗಿ ರಚಿತವಾದುದು, ಅದನ್ನು ಹೇಳುವ ನಾಯಕ ಅಥವಾ ನಾಯಕಿ ಆ ಪದವನ್ನು ಹಾಡುವಾಗ್ಗೆ ಯಾವ ಮನೋಭಾವವುಳ್ಳವರಾಗಿರಬೇಕು ಎಂಬ ವಿವರಣೆಗಳಿವೆ. ಅಭಿನಯದಲ್ಲೂ ಬಳಸುವುದರಿಂದ ಇವನ್ನು ವಿಳಂಬಗತಿಯಲ್ಲಿ ಹಾಡುವುದು ರೂಢಿಯಲ್ಲಿದೆ. ಹಾಗೆ ವಿಳಂಬ ಗತಿಯಲ್ಲಿ ಹಾಡಬೇಕಾದ ರಚನಾಪ್ರಕಾರವಾದುದರಿಂದಲೇ ಇವು ಕಷ್ಟಸಾಧ್ಯವೆನಿಸಿ, ಸಂಗೀತದಲ್ಲಿ ಸಂಪೂರ್ಣ ಪರಿಶ್ರಮವಿದ್ದು ರಾಗ ತಾಳಗಳ ಮೇಲೆ ಹತೋಟಿಯಿರುವ ವಿದ್ವಾಂಸರು ಮಾತ್ರವೇ ಹಾಡಲು ತಕ್ಕವಾಗಿವೆ.

ಪದವೆಂದರೆ ನಾಯಕ ನಾಯಕೀ ಭಾವವುಳ್ಳದ್ದಾಗಿ, ಮಧುರಭಕ್ತಿಯಿಂದ ರಚಿಸಿರತಕ್ಕ ಸಂಗೀತದ ರಚನಾಪ್ರಕಾರವೊಂದು–ಎಂಬ ಅಭಿಪ್ರಾಯ ಕ್ಷೇತ್ರಜ್ಞನ ಕಾಲದಿಂದೀಚೆಗೆ ಬಂದಿರುವ ಅರ್ಥ. ಇವಕ್ಕೂ ಮುಂಚೆ ಪದ ಎಂಬುದು ದಾಸರ ಪದಗಳಲ್ಲಿ ಸೂಚಿಸಲಾಗುತ್ತಿತ್ತು. ಈಗ್ಗೆ ಕೆಲವು ಶತಮಾನಗಳ ಹಿಂದೆ ಸಂಗೀತ ಕಚೇರಿಗಳಲ್ಲಿ ಪದಾಂತೇ ಸಂಗೀತಂ ಎಂಬ ಹೇಳಿಕೆಯಿದ್ದು ಕ್ಷೇತ್ರಜ್ಞನ ಪದವನ್ನು ಹಾಡದೆ ಅಥವಾ ನುಡಿಸದೆ ಕಚೇರಿ ಮುಕ್ತಾಯಗೊಳ್ಳುತ್ತಿರಲಿಲ್ಲ. ಕ್ಷೇತ್ರಜ್ಞನಾದರೋ ತನ್ನ ರಚನೆಗಳಿಗೆ ತಿರುಪತಿಯಲ್ಲಿದ್ದ ತಾಳ್ಳಪಾಕಂ ಅನ್ನಮಾಚಾರ್ಯರ ಶೃಂಗಾರ ಸಂಕೀರ್ತನೆಗಳಿಂದ ಸ್ಫೂರ್ತಿ ಪಡೆದಿರುವಂತೆ ತೋರುತ್ತದೆ. ಈತನ ಪದಗಳ ಸಂಗೀತಸಿರಿಯಿಂದ ಪ್ರಭಾವಿತರಾಗಿ ಅನಂತರದ ವಾಗ್ಗೇಯಕಾರರನೇಕರು ಕರ್ನಾಟಕ ಸಂಗೀತದ ಸಂಪದ್ಭಂಡಾರವನ್ನೇ ನಿರ್ಮಿಸಿದ್ದಾರೆ.

(ವಿ.ಆರ್.ಆರ್.)

**ಕ್ಷೇತ್ರ, ಬೀಜಗಣಿತೀಯ :** ಕೆಲವು ಸುಪರಿಚಿತ ಗುಣಧರ್ಮಗಳಿರುವ ಸಂಕಲನ, ಗುಣಾಕಾರ, ವ್ಯವಕಲನ ಮತ್ತು ಭಾಗಾಹಾರ ವಿಧಿಗಳನ್ನು ಒಳಗೊಂಡ ಯಾವುದೇ ಗಣಿತೀಯ ಧಾತುಗಳ ವ್ಯವಸ್ಥೆ (ಆಲ್ಜಿಬ್ರೈಕ್‌ಫೀಲ್ಡ್). ಕ್ಷೇತ್ರನಿರ್ಮಾಪಕ ಗಣಿತೀಯ ಧಾತುಗಳಿಗೆ ಪರಿಮೇಯುಗಳೇ (ರಾಷನಲ್ಸ್) ಮೂಲ ನಿದರ್ಶನ. $p$ ಯಾವುದಾದರೊಂದು ಪೂರ್ಣಾಂಕವೂ (ಧನ ಇಲ್ಲವೆ ಋಣ ಇಲ್ಲವೆ ಸೊನ್ನೆ) $q$ ಸೊನ್ನೆಯಿಂದ ಭಿನ್ನವಾದ ಯಾವುದಾದರೊಂದು ಪೂರ್ಣಾಂಕವೂ ಆದಲ್ಲಿ $p/q$ ಎಂಬುದು ಪರಿಮೇಯಗಳ ಸಾರ್ವತ್ರಿಕ ರೂಪ. $x\equiv p/q$, $y\equiv r/s$ ಗಳು ಇಂಥ ಯಾವುದೇ ಎರಡು ಪರಿಮೇಯಗಳಾಗಿರಲಿ, ಅವನ್ನು ಕೂಡಿ ಮತ್ತೆ ಪರಿಮೇಯವೇ ಆಗುವ $x+y\equiv(ps+rq)/(qs)$ ಎಂಬ ಒಂದು ಮೊತ್ತವನ್ನೂ ಅವನ್ನು ಗುಣಿಸಿ $x.y\equiv(pr)/(qs)$ ಎಂಬ ಒಂದು ಪರಿಮೇಯ ಗುಣಲಬ್ಧವನ್ನೂ ಅವುಗಳಲ್ಲಿ ಎರಡನೆಯದನ್ನು ಮೊದಲನೆಯದರಿಂದ ಕಳೆದು $x-y\equiv(ps-rq)/(qs)$ ಎಂಬ ಒಂದು ಪರಿಮೇಯ ಶೇಷವನ್ನೂ ಗೊತ್ತುಮಾಡಬಹುದು. $x$ ಮತ್ತು $y$ ಗಳನ್ನು ಯಾವ ಸಂದರ್ಭದಲ್ಲಿ ಸಮ($\sim$) ಎಂದು ಪರಿಗಣಿಸಬೇಕು ಎಂಬ ಬಗ್ಗೆ ಈ ವಿಶಿಷ್ಟ ಮಾರ್ಗದರ್ಶಕ ವ್ಯಾಖ್ಯೆಯಿದೆ: $(ps-rq)$ ಪೂರ್ಣಾಂಕ ಸೊನ್ನೆಯಾದಲ್ಲಿ $x\sim y$. ಅವನ್ನು ಯಾವಾಗ ಅಸಮ ($\nsim$) ಎಂದು ಪರಿಗಣಿಸಬೇಕು ಎಂಬ ಬಗ್ಗೆಯೂ ವಿಶಿಷ್ಟ ಮಾರ್ಗದರ್ಶನವಿದೆ: $(ps-rq)$ ಪೂರ್ಣಾಂಕ ಸೊನ್ನೆಯಿಂದ ಭಿನ್ನವಾದಲ್ಲಿ $x\nsim y$. ಕೊನೆಯದಾಗಿ $y\nsim(y-y)$ ಆಗಿರುವುದಾದರೆ ($r$ ಪೂರ್ಣಾಂಕ ಸೊನ್ನೆಯಿಂದ ಭಿನ್ನವಾಗಿರಬೇಕೆಂಬುದಷ್ಟೇ ಈ ನಿಬಂಧನೆಯ ಸಾರಾಂಶ) $y$ನಿಂದ $x$ನ್ನು ಭಾಗಿಸಿ $(x\div y)\equiv(ps/qr)$ ಎಂಬ ಒಂದು ಪರಿಮೇಯ ಭಾಗಲಬ್ಧವನ್ನು ಸಹ ಲೆಕ್ಕಾಚಾರ ಮಾಡಿಡಲು ಸಾಧ್ಯವಾಗುವುದು. [ಸೂಚನೆ: ಪ್ರಸಕ್ತ ಲೇಖನದಲ್ಲಿ $a\equiv b$ ಎಂದು ಬರೆದಾಗ ಈ ಮೂರು ಅರ್ಥಗಳ ಪೈಕಿ ಸಂದರ್ಭೋಚಿತವಾದುದನ್ನು ಗ್ರಹಿಸಬೇಕು (1) $a$ಯ ವ್ಯಾಖ್ಯೆ (ಡೆಫಿನಿಷನ್) $b$ ಆಗಿದೆ; (2) $b$ (ಯಿಂದ ಸೂಚಿತವಾದ) ಗಣಿತೀಯ ಸಂಕೇತಕ್ಕೆ ಪರ್ಯಾಯವಾಗಿ $a$ ಎಂದೂ ನಾಮಕರಣ ಮಾಡಲಿದ್ದೇವೆ; (3) $a$ (ಯಿಂದ ಸೂಚಿತವಾದ) ಗಣಿತೀಯ ಸಂಕೇತವೂ $b$ (ಯಿಂದ ಸೂಚಿತವಾದ) ಗಣಿತೀಯ ಸಂಕೇತವೂ ಒಂದೇ ಆಕಾರವುಳ್ಳವು. ಉದಾಹರಣೆಗೆ $x\equiv ½$ ಆದಾಗ $(x+x)\equiv(½)+(½)\equiv(1 X 2)+(1 X 2)/(2 X2)\equiv 4/4$ ಹೇಳಿಕೆಯಲ್ಲಿ ಕಾಣಿಸಿಕೊಂಡಿರುವ ನಾಲ್ಕು $\equiv$ ಚಿಹ್ನೆಗಳ ಪೈಕಿ ಮೊದಲನೆಯದರ ಅರ್ಥ (3) ರಲ್ಲಿನಂತೆ ಮತ್ತು ಮೂರನೆಯದರ ಅರ್ಥ (1) ರಲ್ಲಿನಂತೆ. ನಾವು ನೀಡಿರುವ ಸಂಕಲನದ ವ್ಯಾಖ್ಯೆಯಂತೆ $(½)+(½)\equiv(4/4)$ ಎನ್ನುವುದು ಸರಿಯೇ ವಿನಾ $(½)+(½)\equiv(1/1)$ ಎಂಬುದಲ್ಲ. 4/4 ಕ್ಕೂ 1/1 ಕ್ಕೂ ಆಕಾರ ಭೇದವಿರುವುದರಿಂದ $4/4\equiv 1/1$ ಎನ್ನಲಾಗದು. ಆದರೆ ನಾವು ನೀಡಿರುವ ಸಮತೆಯ ($\sim$)ವ್ಯಾಖ್ಯೆಯಂತೆ $(½)+(½)\sim(4/4)$ ಹಾಗೂ $(½)+(½)\sim(1/1)$ ಎಂಬುವೆರಡೂ ಸರಿ; $4/4\sim$(‘1/1), ಏಕೆಂದರೆ $(4 X 1 - 1 X 4)\equiv 0$. ನಮ್ಮ $\equiv$ ಮತ್ತು $\sim$ ಚಿಹ್ನೆಗಳೆರಡರ ಅರ್ಥದಲ್ಲೂ ಗಣಿತ ಸಾಹಿತ್ಯಾದ್ಯಂತ ಸಾಮಾನ್ಯವಾಗಿ ಬಳಕೆಯಲ್ಲಿರುವ $\equiv$ ಚಿಹ್ನೆಯ ಪ್ರಯೋಗವನ್ನು ಈ ಲೇಖನದ ಮಟ್ಟಿಗೆ ಕೈಬಿಡುತ್ತೇವೆ.] ಪರಿಮೇಯಗಳ ಸಂಬಂಧದಲ್ಲಿ ಧಾತುಗಳ ಸಮತೆ ಅಸಮತೆಗಳನ್ನು ಕುರಿತು ಚಿಂತನೆಗಳೂ ಅವುಗಳ ಸಂಕಲನ, ಗುಣಾಕಾರ, ವ್ಯವಕಲನ, ಭಾಗಾಕಾರ ಪರಿಕರ್ಮಗಳೂ ಕೆಳಗೆ ನಮೂದಿಸಿರುವ ಹದಿನೈದು ನಿಯಮಗಳಿಗೆ ಬದ್ಧವಾಗಿರುತ್ತವೆಂಬುದು ಸುವೇದ್ಯ.

[A] ಸಾಮಾನ್ಯ ನಿಯಮಗಳು. [A1] ಸಮತೆ ಅಸಮತೆಗಳ ವಿಸಂಧಿ (ಎಕ್ಸ್‌ಕ್ಲೂಷನ್). $x\sim y$ ಆದಾಗ $x\nsim y$ ಆದಾಗ $x\sim y$ ಆಗಕೂಡದು.

[A2] ಅಸಮಧಾತುಗಳ ಅಸ್ತಿತ್ವ.. $x\nsim y$ ಆಗುವಂತೆ $x, y$ ಗಳನ್ನು ನಿರ್ಧರಿಸಲು ಶಕ್ಯ;

[A3] ಸಮತಾ ಸಮಾಂಗತೆ (ಸಿಮೆಟ್ರಿ). $x\sim y$ ಆದಾಗ $y\sim x$.

[A4] ಅಸಮತಾ ಸಮಾಂಗತೆ. $x\nsim y$ ಆದಾಗ $y\nsim x$.

[A5] ಸಮತಾ ಪ್ರವಹನಶೀಲತೆ (ಟ್ರ್ಯಾನ್ಸಿಟಿವಿಟಿ).

$w\sim x$ ಮತ್ತು $x\sim y$ ಆದಾಗ $w\sim y$

[A6] ಸಮಧಾತುಗಳ ಆದೇಶಶೀಲತೆ (ಸಬ್ಸಿಟಿಟ್ಯೂಟೆಬಿಲಿಟಿ). $x\sim x$;

$y\sim y'$ ಆದಾಗ $(x+y)\sim(x'+y')$, $(x,y)\sim(x',y')$, $(x-y)\sim(x'-y')$; ಅಲ್ಲದೆ $x\sim x'$, $y\sim y'$, $x\nsim y$ ಆದಾಗ $x'\nsim y'$ ಮತ್ತು $x\sim x'$, $y\sim y'$, $y\nsim(y-y)$ ಆದಾಗ $(x\div y)\sim(x'\div y')$

[A7] ಅಸಮತೆಗಳ ವ್ಯವಕಲನ ಪರಿವರ್ತನೆ. $v\sim w$, $x\nsim y$ ಆದಾಗ $(x-v)\nsim(y-w)$ ಮತ್ತು $(v-x)\nsim(w-y)$

[A8] ಅಸಮತೆಗಳ ಭಾಗಾಕಾರ ಪರಿವರ್ತನೆ. $v\sim w$, $v\nsim(v-v)$, $x\nsim y$ ಆದಾಗ $(x\div v)\nsim(y\div w)$; ಮತ್ತು $v\sim w$, $v\nsim(v-v)$, $x\nsim y$, $x\nsim(x-x)$, $y\nsim(y-y)$ ಆದಾಗ $(v\div x)\nsim(w\div y)$

[B] ವಿಶೇಷ ನಿಯಮಗಳು. [B1] ಸಂಕಲನದ ವ್ಯತ್ಯಯ ನಿಯಮ (ಕಾಮ್ಯೂಟೆಟಿವ್ ಲಾ). $(x+y)\sim(y+x)$

[B2] ಗುಣಾಕಾರದ ವ್ಯತ್ಯಯ ನಿಯಮ. (x,y)~(y,x)

[B3] ಸಂಕಲನದ ಸಾಹಚರ್ಯ ನಿಯಮ (ಅಸೋಸಿಯೇಟಿವ್ ಲಾ).

( (w+x)+y)~(w+(x+y) )

[B4] ಗುಣಾಕಾರದ ಸಾಹಚರ್ಯ ನಿಯಮ. ((w,x).y) ~(w.(x.y)

[B5] ವಿತರಣ ನಿಯಮ (ಡಿಸ್ಟ್ರಿಬ್ಯೂಟಿವ್ ಲಾ). (w.(x+y)) ~((w.x)+(w.xy))

[B6] ವ್ಯವಕಲನ ನಿಯಮ. ((x-y)+y) ~x

[B7] ಭಾಗಾಹಾರ ನಿಯಮ. y $\nsim$ (y-y) ಆದಾಗ ((x $\div$ y). y)~ x

ಗಣಿತವಿಜ್ಞಾನ ಬೆಳೆದಂತೆ ಪರಿಮೇಯಗಳಲ್ಲದೆ ಇನ್ನೂ ಅನೇಕ ಹೊಸ ಬಗೆಯ ಧಾತುಗಳ ನಿರ್ಮಾಣವಾಗಿ ಅಂಥ ನವಧಾತುಗಳ ಪೈಕಿ ಕೆಲವಷ್ಟನ್ನು ಕುರಿತಂತೆ ಸಹ ಇದೇ ಹದಿನೈದು ನಿಯಮಗಳನ್ನು ಪರಿಪಾಲಿಸುವಂಥ ಸಮತೆ ಅಸಮತೆಗಳ ಚಿಂತನೆಗಳನ್ನೂ ಸಂಕಲನ, ಗುಣಾಕಾರ, ವ್ಯವಕಲನ, ಭಾಗಾಹಾರ ಪರಿಕರ್ಮಗಳನ್ನೂ ರೂಪಿಸಲು ಶಕ್ಯವಾಗುತ್ತವೆಂಬ ಸ್ವಾರಸ್ಯಕರ ಸಂಗತಿ ಪ್ರಕಾಶಕ್ಕೆ ಬರತೊಡಗಿತು. ಈ ಬಗೆಯ ವ್ಯವಸ್ಥೀಕರಣಕ್ಕೆ ಒಗ್ಗಿ ಬರುವ ಬೇರೆ ಬೇರೆ ಧಾತುವರ್ಗಗಳನ್ನು ಕುರಿತು ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನ ನಡೆಸುವ ಬದಲು ಅವೆಲ್ಲ ವರ್ಗಗಳನ್ನು ಒಟ್ಟಾಗಿ ವೀಕ್ಷಿಸಿ ಅವುಗಳ ರಚನಾ ವೈಖರಿಯ ಮೇಲೆ ಮೇಲಿನ ನಿಯಮಗಳು ಬೀರಿರುವ ಸಮಗ್ರ ಪ್ರಭಾವವನ್ನು ಗುರುತಿಸುವುದೇ ಕ್ಷೇತ್ರ ಸಿದ್ಧಾಂತದ ಉದ್ದೇಶ. ಮೇಲಿನ ಹದಿನೈದು ನಿಯಮಗಳನ್ನು ಕ್ಷೇತ್ರ ಸಿದ್ಧಾಂತದ ಅದ್ಯುಕ್ತಿಗಳು (ಆಕ್ಸಿಯಮ್ಸ್) ಎಂದೂ ಕರೆಯುವುದುಂಟು.

ಕ್ಷೇತ್ರ ವ್ಯಾಖ್ಯೆ ಮತ್ತು ಕೆಲವು ಉದಾಹರಣೆಗಳು: ಯಾವುದೇ ಗಣಿತೀಯ ಧಾತುಗಳ ವರ್ಗವೊಂದಕ್ಕೆ ಸಂಬಂಧಿಸಿದಂತೆ ಮೇಲಿನ ಹದಿನೈದು ನಿಯಮಗಳನ್ನು ಅನುಸರಿಸುವ ಎಂಥವಾದರೂ ನಾಲ್ಕು ಲೆಕ್ಕಾಚಾರ ವಿಧಿಗಳನ್ನೂ (+,.,–, $\div$) ಸಮತೆ ಅಸಮತೆಗಳ ಪರಿಕಲ್ಪನೆಗಳನ್ನೂ ($\sim$, $\nsim$) ನಿಯೋಜಿಸಿದಲ್ಲಿ ಆ ಧಾತುಗಳ ವ್ಯವಸ್ಥೆ ಒಂದು ಕ್ಷೇತ್ರ (ಫೀಲ್ಡ್) ಎಂದೆನಿಸಿಕೊಳ್ಳುವುದು. ಒಂದು ಕ್ಷೇತ್ರದ ಧಾತುಗಳೆರಡರ ಮೊತ್ತ, ಗುಣಲಬ್ಧ, ಶೇಷ ಗುಣಲಬ್ಧಗಳು ಮತ್ತೆ ಅದೇ ಕ್ಷೇತ್ರಕ್ಕೆ ಸೇರಿದ ಬೇಕೇ ವಿನಾ ಆ ಕ್ಷೇತ್ರಕ್ಕೆ ಹೊರತಾದ ಧಾತಗಳಾಗಿರಬಹುದು. ನಿತ್ಯವ್ಯವಹಾರದ ಸಮತೆ ಅಸಮತೆಗಳ ಅಭಿಪ್ರಾಯಗಳೂ ನಿತ್ಯವ್ಯವಹಾರದ ಸಂಕಲನ. ಗುಣಾಕಾರ, ವ್ಯವಕಲನ ಭಾಗಾಹಾರ ಪರಿಕರ್ಮಗಳೂ ಸುಪರಿಚಿತ ಪರಿಮೇಯಗಳನ್ನು ಒಂದು ಕ್ಷೇತ್ರವಾಗಿ ವ್ಯವಸ್ಥೆಗೊಳಿಸಿವೆ. ಈ ಕ್ಷೇತ್ರವನ್ನು $\Phi_0$ ಎಂಬ ಸಂಕೇತದಿಂದ ಸೂಚಿಸೋಣ. ನಿತ್ಯವ್ಯವಹಾರದ ಈ $\Phi_0$ ಯ ಸಮತೆ ಅಸಮತೆಗಳಿಗೆ ಕೆಳಗೆ ನಿರೂಪಿಸಿರುವ ಮೂರು ಗಮನಾರ್ಹ ಲಕ್ಷಣಗಳು ಸಹ ಇರುತ್ತವೆಂಬುದು ಸುಸ್ಪಷ್ಟ:

[C] ಶಿಷ್ಟತೆಯ ನಿಯಮಗಳು. [CI] x $\sim$ y ಅಲ್ಲದಿರುವಾಗಲೆಲ್ಲ x $\nsim$ y ಆಗಿಯೇ ತಿರುವುದು;

[C2] x$\nsim$y ಅಲ್ಲದಿರುವಾಗಲೆಲ್ಲ x ~y ಆಗಿಯೇ ತೀರುವುದು;

[C3] ಎಲ್ಲ x,y ಗಳಿಗೂ x~y ಆಗುವುದು ಅಥವಾ x$\nsim$y ಆಗುವುದು.

[A1]-[A8] ಮತ್ತು [B1]-[B7] ಗಳ ಜೊತೆಗೆ [C1]-[C3] ನಿಯಮಗಳಿಗೂ ಬದ್ಧವಾಗಿರುವ ಗಣಿತೀಯ ಧಾತುಗಳ ವ್ಯವಸ್ಥೆಗಳನ್ನು ಈ ಲೇಖನದಲ್ಲಿ ಶಿಷ್ಟಕ್ಷೇತ್ರಗಳು (ಸ್ಟ್ಯಾಂಡರ್ಡ್ ಫೀಲ್ಡ್) ಎಂದು ಕರೆಯಲಾಗುವುದು. ಅಲ್ಲಿಗೆ $\Phi_0$ ಒಂದು ಶಿಷ್ಟ ಕ್ಷೇತ್ರವಯಿತು. ಅಭಿಜಾತ ಗಣಿತಶಾಸ್ತ್ರದಲ್ಲಿ (ಕ್ಲ್ಯಾಸಿಕಲ್ ಮ್ಯಾಥೆಮ್ಯಾಟಿಕ್ಸ್) ಕ್ಷೇತ್ರಗಳೆಂದು ಅಂಗೀಕರಿಸುವುದು ಶಿಷ್ಟಕ್ಷೇತ್ರಗಳನ್ನು ಮಾತ್ರವೇ. ಈಗ ನಾವು ಪರಿಮೇಯಗಳನ್ನೇ ಉಪಯೋಗಿಸಿಕೊಂಡು $\Phi_0$ ಯಿಂದ ಭಿನ್ನವಾಗುವ ಕೆಲವು ಇತರ ಸರಳ ಕ್ಷೇತ್ರಗಳನ್ನು ರಚಿಸಿ ಪ್ರದರ್ಶಿಸುತ್ತೇವೆ. (ಅವುಗಳಲ್ಲಿ ಕೆಲವು ಶಿಷ್ಟವೂ ಕೆಲವು ಶಿಷ್ಟವಲ್ಲದವೂ ಆಗಿರುತ್ತವೆ.) k ಎಂಬುದು 2 ಅಥವಾ 2ಕ್ಕಿಂತ ಅಧಿಕವಾದ ಒಂದು ಪೂರ್ಣಾಂಕವಾಗಿರಲಿ. $\Phi_0$ ಕ್ಷೇತ್ರದಲ್ಲಿ ಪ್ರಚಲಿತವಿರುವ ಸಂಕಲನ, ಗುಣಾಕಾರ ವ್ಯವಕಲನ ಮತ್ತು ಭಾಗಾಹಾರ ವಿಧಿಗಳನ್ನು ಇದ್ದಂತೆಯೇ ಉಳಿಸಿಕೊಂಡು ಅದರ ಸಮತೆ ಅಸಮತೆಗಳನ್ನು ಮಾತ್ರ ಹೀಗೆ ಮಾರ್ಪಡಿಸೋಣ; k ಮತ್ತು (ps-rq) ಎಂಬೆರಡು ಪೂರ್ಣಾಂಕಗಳ ಮಹತ್ತಮ ಸಾಮಾನ್ಯ ಅಪವರ್ತನ (ಮ.ಸಾ.ಅ) ಮತ್ತೆ k ಆದಲ್ಲಿ (p/q) ~ (r/s) ಎಂದು ತಿಳಿಯಬೇಕು; ಅವುಗಳ ಮ.ಸಾ.ಅ. 1 ಆದಲ್ಲಿ (p/q) $\nsim$ (r/s) ಎಂದು ತಿಳಿಯಬೇಕು. ಈ ಬದಲಾವಣೆಯ ಕಾರಣ $\Phi_0$ ಕ್ಷೇತ್ರದಿಂದ ಫಲಿಸುವ ನವವ್ಯವಸ್ಥೆಯನ್ನು $\Psi_k$ ಎಂದು ಕರೆಯೋಣ. $\Psi_k$ ಗೆ ಕ್ಷೇತ್ರವಾಗುವ ಅರ್ಹತೆ ಇಲ್ಲವೆಂಬುದನ್ನು ಮನಗಾಣುವುದು ಸುಲಭ. k ಗೂ (kXk-kX1) ಕ್ಕೂ ಮ.ಸಾ.ಅ k ಆಗಿರುವುದರಿಂದ $\Psi_k$ ಯಲ್ಲಿ (k/1) ~ (1/k) ಹಾಗೂ (k/k)□ (1/k) ಆದಾಗ್ಯೂ k ಗೂ (kXk-1X1)ಕ್ಕೂ ಮ.ಸಾ.ಅ k ಆಗಲು ಸಾಧ್ಯವಿಲ್ಲದ ಕಾರನ ಈ $\Psi_k$ ಯಲ್ಲಿ (k/1) ~(1/k) ಎಂದು ಸಮರ್ಥಿಸಲು ಶಕ್ಯವಿಲ್ಲ. ಅಂದಮೇಲೆ $\Psi_k$ ವ್ಯವಸ್ಥೆ ಸಮತಾ ಪ್ರವಹನ ಶೀಲತೆಯ [A5] ನಿಯಮವನ್ನು ಪಾಲಿಸುವುದಿಲ್ಲವೆಂದಾಯಿತು. $\Psi_k$ ಕ್ಷೇತ್ರವಾಗುವುದಕ್ಕೆ ಅಡ್ಡಿಪಡಿಸುವ ಈ ತೊಡಕನ್ನು ನಿವಾರಿಸುವ ಸಲುವಾಗಿ k ಗೂ q ಗೂ ಮ.ಸಾ.ಅ 1 ಆಗುವಂಥ p/q ಗಳನ್ನು ಮಾತ್ರವೇ $\Psi_k$ ಯಿಂದ ಆಯ್ದುಕೊಂಡು ಅದರ ಒಂದು ಉಪವ್ಯವಸ್ಥೆ $\Phi_k$ ಯನ್ನು ರೂಪಿಸೋಣ. ಹೀಗೆ ರಚಿಸಿದ $\Phi_k$ ಯು [A1]-[A8], [B1]-[B7] ನಿಯಮಗಳೆಲ್ಲವನ್ನೂ ಚಾಚೂ ತಪ್ಪದೆ ಪರಿಪಾಲಿಸುತ್ತವೆಂದು ತೋರಿಸಬಹುದು. ಆದ್ದರಿಂದ $\Phi_k$ ಒಂದು ಕ್ಷೇತ್ರವಾಗಿ ಪರಿಣಮಿಸಿತು. p/q ಎಂಬುದು ಈ $\Phi_k$ ಕ್ಷೇತ್ರದ ಯಾವುದಾದರೂ ಧಾತುವಾಗಿರಲಿ. k ಗೂ q ಗೂ ಮ.ಸಾ,ಅ. 1 ಆದಕಾರಣ mq $\equiv$ nk+1 ಆಗುವಂತೆ ಎರಡು ಪೂರ್ಣಾಂಕ m ಮತ್ತು n ಗಳನ್ನು ಗೊತ್ತುಮಾಡಲು ಶಕ್ಯವಾಗುತ್ತದೆ. mp ಯನ್ನು k ಯಿಂದ ಭಾಗಿಸಿದಾಗ j ಎಂಬ ಪೂರ್ಣಾಂಕ ಭಾಗಲಬ್ಧವೂ t ಎಂಬ ಶೇಷವೂ ಫಲಿಸಲಿ (t = 0, 1, 2, .... k – 1). ಆಗ mp $\equiv$ kj + t. ಆದ್ದರಿಂದ p × 1 – t × q $\equiv$ p – q (mp – kj) $\equiv$ p + kgj – pmq $\equiv$ p + kgj – p (nk + 1) $\equiv$ k (qj – pn ಗೂ $\equiv$ k ಗೂ ಮ.ಸಾ.ಅ f ಆಗುವುದು. ತತ್ಫಲವಾಗಿ (p / q) ~ (t / 1). ಅಲ್ಲಿಗೆ $\Phi_k$ ಯ ಪ್ರತಿಯೊಂದು ಧಾತುವೂ $0/1, 1/1, 2/1, ......, (k-1)/1$ ಎಂಬ k ಧಾತುಗಳ ಪೈಕಿ ಒಂದಲ್ಲ ಒಂದಕ್ಕೆ ಸಮವಾಗಿರುತ್ತದೆ (~) ಎಂದಾಯಿತು. ಅಂದಮೇಲೆ $\Phi_k$ ಯಲ್ಲಿ ಒಂದಕ್ಕೊಂದಕ್ಕೆ ಸಮವಾಗದೆ ಇರಬಹುದಾದ ಧಾತುಗಳ ಒಟ್ಟು ಸಂಖ್ಯೆ ಸಾಂತ (ಫೈನೈಟ್). ಇಂಥ ಕ್ಷೇತ್ರಗಳಿಗೆ ಸಾಂತಕ್ಷೇತ್ರಗಳು (ಫೈನೈಟ್ ಫೀಲ್ಡ್ಸ್) ಎಂದು ಹೆಸರು. ತದ್ವಿರುದ್ಧವಾಗಿ ನಿತ್ಯಜೀವನದ $\Phi_0$ ಕ್ಷೇತ್ರವಾದರೋ ಒಂದಕ್ಕೊಂದು ಸಮವಾಗದೆ ಇರುವ ಅನಂತ ಸಂಖ್ಯೆಯಷ್ಟೇ ಧಾತುಗಳನ್ನು ಒಳಗೊಂಡಿದೆ. ನಮ್ಮ k ಪೂರ್ಣಾಕ 4,6,8,9,10,12,14,15,16,....ಇಂಥ ವಿಭಾಜ್ಯಗಳ (ಕಾಂಪೊಸೈಟ್ಸ್) ಪೈಕಿ ಒಂದಾದಾಗ kಗೂ (ps-rq)ಗೂ ಮ.ಸಾ,ಅ. 1 ಮತ್ತು kಗಳೆರಡರಿಂದಲೂ ಭಿನ್ನವಾಗಬಹುದು. ಅಂಥ ಸನ್ನಿವೇಶದಲ್ಲಿ (p / q) $\nsim$ (r / s) ಎಂದು ಪರಿಗಣಿಸುವಂತೆಯೂ ಇರುವುದಿಲ್ಲ. (p / q) ~ (r / s) ಎಂದು ಪರಿಗಣಿಸುವಂತೆಯೂ ಇರುವುದಿಲ್ಲ. ಅಂದಮೇಲೆ k ವಿಭಾಜ್ಯವಾದಾಗ ಸಮ ಅಸಮಗಳೆರಡೂ ಆಗಿರದ ಧಾತುದ್ವಯಗಳು $\Phi_k$ ಕ್ಷೇತ್ರದಲ್ಲಿರುತ್ತವೆ ಎಂದಾಯಿತು. (ಉದಾಹರಣೆಗೆ $\Phi_{10}$ ರಲ್ಲಿ (6 / 1) ~ (1 / 1) ಎಂದು ಹೇಳುವುದೂ ತಪ್ಪು), (6 / 1) $\nsim$(1 / 1) ಎಂದು ಹೇಳುವುದೂ ತಪ್ಪು.) ಈ ಕಾರಣದಿಂದ k ವಿಭಾಜ್ಯವಾದಾಗ $\Phi_k$ ಕ್ಷೇತ್ರ ಒಂದು ಶಿಷ್ಟಕ್ಷೇತ್ರವಾಗುವುದಿಲ್ಲ. (ಅಭಿಜಾತ ಗಣಿತಜ್ಞರು $\Phi_4, \Phi_6, \Phi_8, \Phi_9, \Phi_{10}$ ಮುಂತಾದ ವ್ಯವಸ್ಥೆಗಳನ್ನು ವಲಯಗಳೆಂದು (ರಿಂಗ್ಸ್) ಪರಿಗಣಿಸುತ್ತಾರೆಯೇ ವಿನಾ ಕ್ಷೇತ್ರಗಳೆಂದಲ್ಲ). ಆದರೆ k ಒಂದು ಅವಿಭಾಜ್ಯ ಪೂರ್ಣಾಂಕವಾದಾಗ (ಪ್ರೈಮ್ ಇಂಟಿಜರ್ ; 2, 3, 5, 7, 11, 13, 17, 19...... ಇಂಥವುಗಳಲ್ಲೊಂದು) k ಗೂ (ps-rq) ಗೂ ಮ.ಸಾ.ಅ 1 ಮತ್ತು kಗಳ ಪೈಕಿ ಒಂದಲ್ಲ ಒಂದು ಆಗಲೇಬೇಕಾಗುವ ಕಾರಣ $\Phi_k$ ಯ ಸಮತೆ ಅಸಮತೆಗಳು [C1], [C2], [C3], ನಿಯಮಗಳಿಗೂ ಬದ್ಧವಿದ್ದು $\Phi_k$ ಯನ್ನು ಅಭಿಜಾತ ಗಣಿತವಿಜ್ಞಾನದಲ್ಲೂ ಸ್ವೀಕೃತವಾಗುವ ಒಂದು ಶಿಷ್ಟಕ್ಷೇತ್ರವನ್ನಾಗಿ ವ್ಯವಸ್ಥೆಗೊಳಿಸುತ್ತವೆ.

$\Phi_k$ ಕ್ಷೇತ್ರಗಳ ಉದಾಹರಣೆಯಿಂದ (k=2, 3, 4, 5, 6,….) ಎಲ್ಲ ಕ್ಷೇತ್ರಗಳಲ್ಲೂ ಸಮತೆ ಅಸಮತೆಗಳಿಗೆ $\Phi_0$ ಯಲ್ಲಿನ ನಿತ್ಯವ್ಯಾವಹಾರಿಕ ಅರ್ಥಛಾಯೆ ಇರಬೇಕಾಗಿಲ್ಲವೆಂಬ ಅಂಶ ಸ್ಪಷ್ಟವಾಗಿರಬೇಕು. ಆದಾಗ್ಯೂ $\Phi_k$ ಕ್ಷೇತ್ರಗಳಿಗೂ $\Phi_0$ ಕ್ಷೇತ್ರಕ್ಕೂ ಕೆಳಗಿನ ಎರಡು ಲಕ್ಷಣಗಳನ್ನು ಕುರಿತಂತೆ ಸಾದೃಶ್ಯವಿದೆ.

[D] ನಿರ್ಧರಣೀಯತೆಯ (ಡಿಸೈಡೆಬಿಲಿಟಿ) ನಿಯಮಗಳು: [D1] x,y ಗಳು $\Phi_0$ ಅಥವಾ $\Phi_k$ ಕ್ಷೇತ್ರವೊಂದರ ಯಾವುದೇ ಎರಡು ಧಾತುಗಳಾಗಿರಲಿ. x ~ y ಹೌದೋ ಅಲ್ಲವೋ ಎಂಬ ಪ್ರಶ್ನೆಯನ್ನು ಯಾವ ರೀತಿಯ ಬುದ್ಧಿವಂತಿಕೆಯನ್ನೂ ಉಪಯೋಗಿಸದೆ ಕೇವಲ ಆಲ್ಗಾರಿತಂ (**ನೋಡಿ– ಆಲ್ಗಾರಿತಂ**) ವಿಧಾನಗಳಿಂದಲೇ ಇತ್ಯರ್ಥ ಪಡಿಸಬಹುದು.

[D2] x $\nsim$ y ಹೌದೋ ಅಲ್ಲವೋ ಎಂಬ ಪ್ರಶ್ನೆಯ ವಿಚಾರವೂ ಅಷ್ಟೆ. ನಿಜಕ್ಕೂ $\Phi_0, \Phi_2, \Phi_3, \Phi_5, \Phi_7, \Phi_{11}$ ಮುಂತಾದ ವ್ಯವಸ್ಥೆಗಳು ಶಿಷ್ಟತೆಯ [C1], [C2], [C3], ನಿಯಮಗಳನ್ನು ಪರಿಪಾಲಿಸಿಯೇ ಪಾಲಿಸುತ್ತವೆಂಬ ದೃಢ ಆಶ್ವಾಸನೆ ನಮಗೆ ದೊರಕುವುದಾದರೂ ಅವಕ್ಕೆ ಈ [D1], [D2] ಲಕ್ಷಣಗಳಿರುವುದರಿಂದಲೇ. ತದ್ವಿರುದ್ಧವಾಗಿ ನೈಜಸಂಖ್ಯೆಗಳೆಂಬ ಹೆಸರಿನ (ರಿಯಲ್ ನಂಬರ್ಸ್) ಗಣಿತೀಯ ಧಾತುಗಳ ವ್ಯವಸ್ಥೆಯಲ್ಲಿ (ಇನ್ನು ಮುಂದೆ ಈ ವ್ಯವಸ್ಥೆಯನ್ನು R ಎಂಬ ಸಂಕೇತದಿಂದ ಸೂಚಿಸೋಣ) x ~ y ಹೌದೋ ಅಲ್ಲವೋ x $\nsim$ y ಹೌದೋ ಅಲ್ಲವೋ ಎಂಬ ಪ್ರಶ್ನೆಗಳನ್ನು ಎಲ್ಲ ಸಂದರ್ಭಗಳಲ್ಲೂ ಇತ್ಯರ್ಥ ಪಡಿಸಬಲ್ಲ ಆಲ್ಗಾರಿತಂಗಳನ್ನು ನಿಯೋಜಿಸುವುದು ಅಸಾಧ್ಯ. Rನ್ನು ಕುರಿತಂತೆ ಈ ಪ್ರಶ್ನೆಯನ್ನು ಉತ್ತರಿಸಲು ಬೇರೆ ಬೇರೆ ಬಿಡಿ ಪ್ರಸಂಗಗಳಲ್ಲಿ (ಇಂಡಿವಿಡ್ಯುವಲ್ ಕೇಸಸ್) ಬೇರೆ ಬೇರೆ ರೀತಿಯ ತಂತ್ರಗಳನ್ನು ಜಾಣ್ಮೆಯಿಂದ ಬಳಸಿಕೊಳ್ಳಲು ಪ್ರಯತ್ನಿಸಬೇಕಾಗುವುದು. ಆದರೆ ಎಲ್ಲ ಸಮಯಗಳಲ್ಲೂ ಜಾಣ್ಮೆಯ ಪ್ರಯತ್ನಗಳು ಫಲಿಸಿಯೇ ತೀರಬೇಕೆಂಬ ನೈಸರ್ಗಿಕ ಆಶ್ವಾಸನೆ ಇಲ್ಲದಿರುವುದರಿಂದ

ರಚನಾತ್ಮಕ ಗಣಿತಶಾಸ್ತ್ರದಲ್ಲಿ (ಕನ್ಸ್‌ಟ್ರಕ್ಟಿವ್ ಮ್ಯಾಥ್‌ಮ್ಯಾಟಿಕ್ಸ್) R ವ್ಯವಸ್ಥೆಗೆ [C1], [C2], [C3], ಲಕ್ಷಣಗಳುಂಟೆಂಬ ಗ್ರಹಿಕೆಯನ್ನು ಪರಿತ್ಯಜಿಸದೆ ಬೇರೆ ಮಾರ್ಗವಿಲ್ಲ. ಮುಂಚಿನ [A1], [A2], [B1]-[B7] ನಿಯಮಗಳನ್ನಾದರೋ R ಚಾಚೂ ತಪ್ಪದೆ ಪರಿಪಾಲಿಸುತ್ತದೆ. ಈ ಕಾರಣದಿಂದ ರಚನಾತ್ಮಕವಾದಿ ದೃಷ್ಟಿಕೋನದ ಪ್ರಕಾರ R ಶಿಷ್ಟವೆಂದು ಸಮರ್ಥಿತವಾಗದೆ ಇರುವ ಒಂದು ಕ್ಷೇತ್ರ. ಆಗಲೇ ತಿಳಿಸಿರುವಂತೆ ಅಭಿಜಾತ ಗಣಿತಶಾಸ್ತ್ರದಲ್ಲಿ ಸಹ R ಒಂದು ಕ್ಷೇತ್ರವೆಂದು ಅಂಗೀಕೃತವಾಗಿದೆ; Rನ್ನು ಕುರಿತಂತೆ [C1], [C2], [C3], ಗಳನ್ನು ಚಿಂತನಾತೀತನಾದ ಆದ್ಯುಕ್ತಿಗಳು ಎಂಬುದಾಗಿ ಒಮ್ಮಿಂದೊಮ್ಮೆಗೇ ಪರಿಗ್ರಹಿಸುವ ಕ್ರಮದಿಂದ ಅಭಿಜಾತ ಗಣಿತಜ್ಞರು ಶಿಷ್ಟತೆಯ ಸಂಬಂಧದ ತೊಡಕನ್ನು ನಿವಾರಿಸಲು ಯತ್ನಿಸಿದ್ದಾರೆ. ಈ ಕ್ರಮದಿಂದ ಇದುವರೆಗೆ ತೀವ್ರ ಅಸಾಂಗತ್ಯಗಳಾವುವೂ (ಇನ್‌ಕನ್ಸಿಸ್ಟೆನ್ಸೀಸ್) ಉದ್ಭವಿಸದಿರುವುದೇ ಅದರ ಮೂಲಭೂತ ಸಾಧುತ್ವಕ್ಕೆ ಸಾಕ್ಷಿ ಎಂದು ಅವರು ಅಭಿಪ್ರಾಯ ಪಡುತ್ತಾರೆ.

$\Phi_0, \Phi_2, \Phi_3, \Phi_4, \Phi_5, \Phi_6$ ಮುಂತಾದ ಕ್ಷೇತ್ರಗಳಲ್ಲೆಲ್ಲ ಧಾತುಗಳ ರೂಪ ಒಂದೇ ಆಗಿದೆ: p/q (p,q ಪೂರ್ಣಾಂಕಗಳು); ಇವೆಲ್ಲ ಕ್ಷೇತ್ರಗಳ ಸಂಕಲನ, ಗುಣಾಕಾರ, ವ್ಯವಕಲನ, ಭಾಗಾಹಾರ ವಿಧಿಗಳ ಸ್ವರೂಪ ಕೂಡ ಒಂದೇ.

$$(p/q)+(r/s) \equiv (ps+rq)/qs; (p/q).(r/s) \equiv (pr)/(qs);$$
$$p(q)-(r/s) \equiv (ps-rq)/(qs); (p/q \div (r/s) \equiv (ps)/(qr)$$

ಆದ ಮಾತ್ರಕ್ಕೆ ಇತರ ಕ್ಷೇತ್ರಗಳ ಧಾತುಗಳೂ ಲೆಕ್ಕಾಚಾರಗಳೂ ಇದೇ ಮಾದರಿಯಲ್ಲಿರಬೇಕೆಂದು ನಿರೀಕ್ಷಿಸಬಾರದು. ಈ ಸಂದರ್ಭದಲ್ಲಿ ಕಂಡುಬರಬಹುದಾದ ಭಿನ್ನತೆಗಳಿಗೆ ಒಂದು ಸರಳ ನಿದರ್ಶನವಾಗಿ ನಾವು ಯಾವುದಾದರೂ ನಾಲ್ಕೇ ನಾಲ್ಕು ಗುರುತುಗಳನ್ನು ಉಪಯೋಗಿಸಿಕೊಂಡು ಕ್ಷೇತ್ರವೊಂದನ್ನು ರಚಿಸುತ್ತೇವೆ. ಆ ಗುರುತುಗಳು O, I, G, H ಆಗಿರಲಿ. ಇದನ್ನು ಕುರಿತಂತೆ $(\sim)$ ಎಂದರೆ ಆಕಾರ ಸಾದೃಶ್ಯ ಎಂದೂ ಅಸಮತೆ $(\nsim)$ ಎಂದರೆ ಆಕಾರಭೇದ ಎಂದೂ ವ್ಯಾಖ್ಯಿಸೋಣ. ಉದಾಹರಣೆಗೆ $0 \sim 0 \sim 0$ (ಎಲ್ಲಕ್ಕೂ ಒಂದೇ ಆಕಾರವಿದೆ); $0 \nsim I$, $0 \nsim H$, $I \nsim H$ (ಆಕಾರಗಳು ಭಿನ್ನ.) (ಈ ಪರಿಕಲ್ಪನೆ ಪ್ರಮೇಯಗಳ $\Phi_0$ ಕ್ಷೇತ್ರಕ್ಕೆ ಸರಿಹೊಂದುವುದಿಲ್ಲ ಎಂಬ ಅಂಶವನ್ನು ಗಮನಿಸಿ; 1/2 ಮತ್ತು 3/6 ಎಂಬ ಸಂಕೇತಗಳಿಗೆ ಅಪಾರವಾದ ಆಕಾರ ಭೇದವಿದ್ದಾಗೂ ಯಲ್ಲಿ ಇನ್ನು ಈ O, I, G, H ಗುರುತುಗಳ ಸಂಕಲನಾದಿ ಲೆಕ್ಕಾಚಾರಗಳನ್ನು ಕೆಳಗಿನ ಕೋಷ್ಟಕಗಳ ಮುಖಾಂತರ ವ್ಯಾಖ್ಯಿಸುತ್ತೇವೆ:

**ಸಂಕಲನ ಹಾಗೂ ವ್ಯವಕಲನ ಕೋಷ್ಟಕ**

ಉದಾಹರಣೆ : I + G ≡ I – G ≡ H, ಏಕೆಂದರೆ I ಈ ಅಡ್ಡಸಾಲು ಮತ್ತು G ನೀಟಸಾಲು ಸಂಧಿಸುವೆಡೆ H ಉಂಟು

**ಗುಣಾಕಾರ ಕೋಷ್ಟಕ**

ಉದಾಹರಣೆ : G,H = I, ಏಕೆಂದರೆ G ಅಡ್ಡಸಾಲು ಮತ್ತು H ನೀಟ ಸಂಧಿಸುವೆಡೆ I

| + ಅಥವಾ − | O | I | G | H |
|---|---|---|---|---|
| O | O | I | G | H |
| I | I | O | H | G |
| G | G | H | O | I |
| H | H | G | I | O |

ಉಂಟು

**ಭಾಗಾಹಾರ ಕೋಷ್ಟಕ**

ಉದಾಹರಣೆ : I ÷ H = G, ಏಕೆಂದರೆ I ಅಡ್ಡ ಮತ್ತು H ನೀಟ ಸಂಧಿಸುವೆಡೆ G ಉಂಟು

| | O | I | G | H |
|---|---|---|---|---|
| O | O | O | O | O |
| I | O | I | G | H |
| G | O | G | H | I |
| H | O | H | I | G |

ಹೀಗೆ ರಚಿತವಾದ O, I, G, H ಗಳ ವ್ಯವಸ್ಥೆಯಲ್ಲಿ ಸಂಕಲನಾದಿ ಲೆಕ್ಕಾಚಾರಗಳೆಂದರೆ ಆಯಾ ಕೋಷ್ಟಕಗಳನ್ನು ನೋಡಿಕೊಂಡು ಉತ್ತರ ಬರೆಯುವುದಷ್ಟೇ ಅಷ್ಟೆ. ($\Phi_0, \Phi_2$ ಮುಂತಾದ ಕ್ಷೇತ್ರಗಳಲ್ಲಿ ಪರಿಶೀಲಿಸಬೇಕಾಗಿ

| ÷ | I | G | H |
|---|---|---|---|
| I | I | H | G |
| G | G | I | H |
| H | H | G | I |

ಬರುವ ಸಂಕೇತಗಳಿಗೆ ಮಿತಿಯೇ ಇಲ್ಲವಾದ್ದರಿಂದ ಅವುಗಳ ಲೆಕ್ಕಾಚಾರವನ್ನು ಈ ಬಗೆಯ ಕೋಷ್ಟಕಗಳಿಂದ ವ್ಯಾಖ್ಯಿಸುವುದು ಅಸಾಧ್ಯ. ಆ ಲೆಕ್ಕಾಚಾರಗಳಿಗೂ ಕೋಷ್ಟಕಗಳಿವೆ. ಆದರೆ ಮಾತ್ರ ಆ ಕೋಷ್ಟಕಗಳ ವ್ಯಾಪ್ತಿ ಅನಂತ ಎಂಬ ಕಲ್ಪನೆ ಶುದ್ಧ ಮಿಥ್ಯೆ). ಈಗ ನಮ್ಮ ನಾಲ್ಕು ಗುರುತುಗಳ ಸಮತೆ ಅಸಮತೆಗಳೂ ಕೋಷ್ಟಕಾಧಾರಿತ ಗಣನ ಪರಿಕರ್ಮಗಳೂ $[A1]-[A8]$, $[B1]-[B7]$, $[C1]-[C3]$ ನಿಯಮಗಳೆಲ್ಲಕ್ಕೂ ಬದ್ಧವಾಗಿವೆಯೆಂದು ತಾಳೆ ನೋಡುವುದು. ಕಷ್ಟವೇನಿಲ್ಲ. ಆದ್ದರಿಂದ O, I, G, H ಗಳ ವ್ಯವಸ್ಥೆ ಒಂದು ಶಿಷ್ಟಕ್ಷೇತ್ರವಾಯಿತು. ಈ ಕ್ಷೇತ್ರವನ್ನು OIGH ಎಂಬ ಸಂಕೇತದಿಂದ ಸೂಚಿಸೋಣ. ಅಲ್ಲದೆ ಮೇಲಿನ ಕೋಷ್ಟಕಗಳಲ್ಲಿ G ಮತ್ತು H ಅಡ್ಡಸಾಲು ನೀಟಸಾಲುಗಳನ್ನು ಅಳಿಸಿಬಿಟ್ಟರೆ ಉಳಿಯುವ ಭಾಗಗಳಿಂದ ಕೇವಲ O ಮತ್ತು I ಎರಡು ಗುರುತುಗಳೇ ಮತ್ತೂ ಒಂದು ಕ್ಷೇತ್ರವನ್ನು ರಚಿಸುತ್ತವೆಂಬ ಅಂಶ ಬೆಳಕಿಗೆ ಬರುವುದು. ಆ O, I ಗಳ OI ಕ್ಷೇತ್ರವನ್ನು ಎಂಬುದಾಗಿ ಸೂಚಿಸೋಣ. OIGH ಕ್ಷೇತ್ರಕ್ಕೆ IO ಒಂದು ಉಪಕ್ಷೇತ್ರ (ಸಬ್ ಫೀಲ್ಡ್); OI ಕ್ಷೇತ್ರಕ್ಕೆ OIGH ಒಂದು ವಿಸ್ತರಣ ಕ್ಷೇತ್ರ (ಎಕ್ಸ್‌ಟೆನ್ಷನ್ ಫೀಲ್ಡ್). ಎರಡು ಕ್ಷೇತ್ರ X ಮತ್ತು $\overline{X}$ ಗಳ ಪೈಕಿ X ಎಂಬುದು $\overline{X}$ ನ ಒಂದು ಉಪಕ್ಷೇತ್ರ (ಅಥವಾ $\overline{X}$ ಎಂಬುದು X ನ ಒಂದು ವಿಸ್ತರಣ ಕ್ಷೇತ್ರ) ಎಂಬುದಾಗಿ ವರ್ಣಿಸಿದಾಗ:

[E1] X ನಲ್ಲಿರುವ ಧಾತುಗಳೆಲ್ಲವೂ $\overline{X}$ ನಲ್ಲೂ ಇವೆ ಎಂದೂ;

[E2] ಆ ಧಾತುಗಳ ಪೈಕಿ ಯಾವುದೇ ಎರಡು X ನಲ್ಲಿ ಸಮವಾದಾಗ $(\sim)$

$\bar{X}$ನಲ್ಲೂ ಸಮವಾಗುತ್ತವೆ ಎಂದೂ;

[E3] ಆ ಧಾತುಗಳ ಪೈಕಿ ಯಾವುದೇ ಎರಡು Xನಲ್ಲಿ ಅಸಮವಾದಾಗ ($\not\sim$) $\bar{X}$ನಲ್ಲೂ ಅಸಮವಾಗುತ್ತವೆ ಎಂದೂ;

[E4] ಅವಷ್ಟು ಧಾತುಗಳನ್ನು ಕುರಿತಂತೆ Xನ ಹಾಗೂ $\bar{X}$ನ ಸಂಕಲನ, ಗುಣಾಕಾರ, ವ್ಯವಕಲನ ಮತ್ತು ಭಾಗಾಹಾರ ವಿಧಿಗಳು ನೀಡುವ ಅನುರೂಪ ಫಲಗಳು ಪರಸ್ಪರ ಸಮವಾಗಿರುತ್ತವೆ (~) ಎಂದೂ ಗ್ರಹಿಸಬೇಕು.

X ಕ್ಷೇತ್ರ $\bar{X}$ನ ಉಪಕ್ಷೇತ್ರವಾದರೆ $X \subset \bar{X}$ ಎಂದು ಬರೆಯುತ್ತೇವೆ. $X \subset \bar{X}$ ಆಗಿರುವಾಗ $x$ ಎಂಬುದು $\bar{X}$ನ ಯಾವುದೇ ಧಾತುವಾದರೂ Xನಲ್ಲಿ x~x ಆಗುವಂತೆ X ಕ್ಷೇತ್ರಕ್ಕೆ ಸೇರಿದ ಒಂದು ಧಾತು xನ್ನು ಗೊತ್ತು ಮಾಡಿ ಕೊಡುವ ಯಾವುದಾದರೊಂದು ಲೆಕ್ಕಾಚಾರ ಮಾರ್ಗವಿದ್ದರೆ X ಕ್ಷೇತ್ರ $\bar{X}$ನ ಒಂದು ಅಸಮುಚಿತ ಉಪಕ್ಷೇತ್ರ (ಇಂಪ್ರಾಪರ್ ಸಬ್‌ಫೀಲ್ಡ್) ಎಂದೆನಿಸಿಕೊಳ್ಳುವುದು; ಆಗ $X \underset{\sim}{\subset} \bar{X}$ ಎಂದು ಬರೆಯುತ್ತೇವೆ. ಪ್ರತಿಯೊಂದು ಕ್ಷೇತ್ರವೂ ಅದರದೇ ಒಂದು ಅಸಮುಚಿತ ಉಪಕ್ಷೇತ್ರ: $X \underset{\sim}{\subset} \bar{X}$. ಮೇಲಿನ OI ಕ್ಷೇತ್ರ, OIGH ಒಂದು ಉಪಕ್ಷೇತ್ರವೇ ವಿನಾ ಅಸಮುಚಿತ ಉಪಕ್ಷೇತ್ರವಲ್ಲ. $x \subset \bar{X}$ ಆದಾಗಲೆಲ್ಲ $X \underset{\sim}{\subset} \bar{X}$ ಕೂಡ ಆಗಬೇಕಾಗುವಂಥ $\bar{X}$ ಕ್ಷೇತ್ರಗಳಿಗೆ ಮೂಲಕ್ಷೇತ್ರಗಳು (ಪ್ರೈಮ್ ಫೀಲ್ಡ್ಸ್) ಎಂದು ಹೆಸರು. O I G H ಈ ಬಗೆಯ ಮೂಲಕ್ಷೇತ್ರವಲ್ಲ. ಆದರೆ OI, $\Phi_0, \Phi_2, \Phi_3, \Phi_4, \Phi_5, \Phi_6$ .......ಇವೆಲ್ಲವೂ ಮೂಲಕ್ಷೇತ್ರಗಳಾಗುತ್ತವೆ. OI ಗೂ $\Phi_2$ಕ್ಕೂ ಒಂದು ರೀತಿಯ ನಿಕಟ ಬಾಂಧವ್ಯವಿದೆಯೆಂದು ಮುಂದೆ ಮನಗಾಣುತ್ತೇವೆ.

ಶೂನ್ಯ ಸಾಮ್ಯಕ, ರದ್ದುಪಡಿ ನಿಯಮಗಳು, ಕ್ಷೇತ್ರ ಲಕ್ಷಣಾಂಕ ಮತ್ತು ಪ್ರತಿಬಿಂಬನ: ಅನಿರ್ದಿಷ್ಟ ಕ್ಷೇತ್ರವೊಂದಕ್ಕೆ ಸಂಬಂಧಿಸಿದ ಸಮತೆ, ಅಸಮತೆಗಳ ಹಾಗೂ ಸಂಕಲವಾದಿ ಲೆಕ್ಕಾಚಾರಗಳ ನೈಜಸ್ವರೂಪಕ್ಕೂ ಈ ಪದಗಳ ಬಗ್ಗೆ ಕೇವಲ ನಿತ್ಯ ವ್ಯವಹಾರದ ಆಯಕಟ್ಟಿನಲ್ಲಿ ಮೂಡಿಬಂದಿರುವ ಅರ್ಥಛಾಯೆಗಳಿಗೂ ಸಾಮರಸ್ಯವಿರಬೇಕಾಗಿಲ್ಲದ ಕಾರಣ ಕ್ಷೇತ್ರ ಸಿದ್ಧಾಂತದ ತರ್ಕಸರಣಿಗೆ ನಾವು ಪ್ರಾರಂಭದಲ್ಲಿ ನಮೂದಿಸಿದ ಹದಿನೈದು (ಶಿಷ್ಟಕ್ಷೇತ್ರಗಳನ್ನು ಕುರಿತಂತೆ ಹದಿನೆಂಟು) ನಿಯಮಗಳು ಆಸರೆಯಾಗಬೇಕೇ ವಿನಾ ಪದಗಳ ನಿತ್ಯ ವ್ಯಾವಹಾರಿಕ ಅರ್ಥಗಳಲ್ಲ. ಉದಾಹರಣೆಗೆ ಅರ್ಧದಲ್ಲಿ ಅರ್ಧವನ್ನು ಕಳೆದಾಗ ಏನೂ ಉಳಿಯುವುದಿಲ್ಲ. ಮುಕ್ಕಾಲರಲ್ಲಿ ಮುಕ್ಕಾಲನ್ನು ಕಳೆದಾಗಲೂ ಏನೂ ಉಳಿಯುವುದಿಲ್ಲ. ಆದ್ದರಿಂದ $\left(\frac{1}{2}\right)-\left(\frac{1}{2}\right)$ ಮತ್ತು $\left(\frac{3}{4}\right)-\left(\frac{3}{4}\right)$ ಒಂದಕ್ಕೊಂದು ಸಮವಾಗಿರಬೇಕು (~) ಎಂಬ ಚಿಂತನೆ ನಿತ್ಯವ್ಯವಹಾರದಲ್ಲಿ ಸ್ವಾಗತಾರ್ಹ. ಆದರೆ a,b ಗಳು ಒಂದು ಅನಿರ್ದಿಷ್ಟ ಕ್ಷೇತ್ರ Xನ ಧಾತುಗಳಾದಾಗ $(a-a) \sim (b-b)$ ಎಂಬ ಸಮತೆಯನ್ನು ಶ್ರುತಪಡಿಸಲು ಈ ಚಿಂತನಕ್ರಮಸಲ್ಲದು. ಏಕೆಂದರೆ Xನಲ್ಲಿ ಸಮತೆಯ (~) ಹಾಗೂ ವ್ಯವಕಲನದ (-) ಅರ್ಥ ಸ್ವರೂಪಗಳೇ ಬೇರೆಯಾಗಿರಬಹುದು. ಅಂಥ ಸಾರ್ವತ್ರಿಕ ಸನ್ನಿವೇಶದಲ್ಲೂ $(a-a) \sim (b-b)$ ಆಗುತ್ತದೆಂಬ ಸರಳ ಕ್ಷೇತ್ರ ಸೈದ್ಧಾಂತಿಕ ಪ್ರಮೇಯದ ವಿಶ್ವಾಸಾರ್ಹ ಸಮರ್ಥನೆ ಕೆಳಗೆ ಸೂಚಿಸಿರುವಂತೆ ಇರಬೇಕಾಗುವುದು. x ಎಂಬುದು ಕ್ಷೇತ್ರ Xನ ಯಾವುದಾದರೊಂದು ಧಾತುವಾಗಿರಲಿ. (ಈ ಅಭಿಪ್ರಾಯವನ್ನು ನಾವು $x \in X$ ಎಂದು ಬರೆದು ವ್ಯಕ್ತಪಡಿಸುತ್ತೇವೆ). ಆಗ ವ್ಯವಕಲನ ನಿಯಮ [B6]ರ ಪ್ರಕಾರ $(x-a)+a \sim x$ ಅಥವಾ $x \sim (x-a)+a$ (ಸಮತಾ ಸಮಾಂಗತೆ), [A3]). ಆದ್ದರಿಂದ

$x + (a-a) \sim [(x-a) + a] + (a-a)$ (ಆದೇಶ ಶೀಲತೆ, [A6])

$\sim (x-a) + [a + (a-a)]$ (ಸಾಹಚರ್ಯ, [B3])

$\sim (x-a) + [a-a) + a)]$ (ವ್ಯತ್ಯಯ, [B1])

$\sim (x-a) + a$ (ವ್ಯವಕಲನ, [B6])

$\sim x$ (ವ್ಯವಕಲನ, [B6])

ಅಥವಾ

$x + (a-a) \sim x$ (ಪ್ರವಹನ, [A5])

ಇದೇ ಪ್ರಕಾರ $y \in X$ ಆದಾಗಲೆಲ್ಲ (ಅಂದರೆ y ಸಹ Xನ ಯಾವುದಾದರೊಂದು ಧಾತುವಾದಲ್ಲಿ) $y \sim (b-b)+y)$ ಎಂದು ಸಾಧಿಸಬಹುದು. ಈ ಎರಡನೆಯ ಸಮತೆಯಲ್ಲಿ $y \equiv (a-a)$ ಎಂಬ ವಿಶೇಷ ಬೆಲೆಯನ್ನೂ ನಾವು ಸಾಧಿಸಿರುವ ಮೊದಲನೆಯ ಸಮತೆಯಲ್ಲಿ $x \equiv (b-b)$ ಎಂಬ ವಿಶೇಷ ಬೆಲೆಯನ್ನು ಆದೇಶಿಸಿದರೆ $(a-a) \sim (b-b) + (a-a)$, $(b-b) + (a-a) \sim (b-b)$ ಎಂದು ತಿಳಿದು ಬರುವುದು. ಎಂತಲೇ ಸಮತಾ ಪ್ರವಹನಶೀಲತೆಯ [A5] ನಿಯಮದಿಂದ ಸಾರ್ವತ್ರಿಕವಾಗಿ

$$(a-a) \sim (b-b)$$

ಎಂದು ಸ್ಥಾಪಿತವಾಗುತ್ತದೆ $(a \in X, b \in X)$. ಈ $(a-a), (b-b)$ ಮಾದರಿಯ ಶೇಷಗಳ ಪೈಕಿ ಯಾವುದಾದರೂ ಒಂದನ್ನು X ಕ್ಷೇತ್ರದ ಶೂನ್ಯ ಅಥವಾ ಸೊನ್ನೆ (ಜ಼ೀರೋ) ಎಂದು ಕರೆದು 0 ಎಂಬ ಸಂಕೇತದಿಂದ ಸೂಚಿಸುತ್ತೇವೆ $(0 \in X)$ ಪರಿಮೇಯಗಳ $\Phi_k$ ಕ್ಷೇತ್ರಗಳಲ್ಲಿ $0 \equiv 0/1; O\,I\,G\,H$ ಮತ್ತು OI ಕ್ಷೇತ್ರಗಳಲ್ಲಿ $0 \equiv 0$. ಎಲ್ಲ ಕ್ಷೇತ್ರಗಳಲ್ಲೂ 0ಗೆ ಏನೂ ಇಲ್ಲದಿರುವುದು ಎಂಬ ಅರ್ಥಛಾಯೆ ಇರಬೇಕಾದುದಿಲ್ಲ. ಮೇಲೆ ಸಾಧಿಸಿರುವ $x + (a-a) \sim x$ ಎಂಬ ಸಮತೆಯಿಂದ ಪ್ರತಿಯೊಂದು ಕ್ಷೇತ್ರಧಾತು xಗೂ

$x + 0 \sim x$ ($\sim 0 + x$ ಕೂಡ) ಆಗಬೇಕೆಂದು ಗೊತ್ತಾಗುವುದು. ಇದು 0ಯ ಒಂದು ವಿಶಿಷ್ಟ ಗುಣಧರ್ಮ. (0-x) ಶೇಷಕ್ಕೆ ಋಣೀಕೃತ (ನೆಗೆಟಿವ್ ಎಂದು ಹೆಸರು; ಅದನ್ನು ಕೇವಲ (-x) ಎಂಬ ಹ್ರಸ್ವತರ ಸಂಕೇತದಿಂದ ಸೂಚಿಸುವ ರೂಢಿ ಉಂಟು. $(-x) + \equiv (0-x) + x \sim 0$ ಎಂಬುದನ್ನು ಗಮನಿಸಬೇಕು (ವ್ಯವಕಲನ ನಿಯಮ [B6], $w + x \sim w + y$ ಆದಾಗಲೆಲ್ಲ $x \sim y$ ಸಹ ಆಗಿಯೇ ತೀರುತ್ತದೆ ಎಂಬ ಆಶ್ವಾಸನೆಗೆ ರದ್ದುಪಡಿ ನಿಯಮ (ಕ್ಯಾನ್ಸಲೇಷನ್ ಲಾ) ಎಂದು ಹೆಸರು. ಇದನ್ನು ಸಮರ್ಥಿಸಲು ಸಮಧಾತು $(w+x)$, $(w+y)$ ಗಳೆರಡಕ್ಕೂ (-w) ವನ್ನು ಕೂಡಿ ಸಾಹಚರ್ಯ ನಿಯಮ [B 3] ನ್ನು ಪ್ರಯೋಗಿಸಿದರಾಯಿತು. ಕ್ಷೇತ್ರಧಾತುಗಳನ್ನು ಕುರಿತಂತೆ ಕೆಳಗಿನ ಸಾರ್ವತ್ರಿಕ ಸೂತ್ರಗಳೂ ಗಮನಾರ್ಹ:

$(y-x) \sim y + (-x); -(-x) \sim x; x.0 \sim 0;$

$y.(-x) \sim -(y.x); (-y), (-x) \sim y.x$

ಅರ್ಥಛಾಯೆಗಳ ಗೊಡವೆಗೆ ಹೋಗದೆ ಮೊದಲಲ್ಲಿ ಉಲ್ಲೇಖಿಸಿದ ಹದಿನೈದು ನಿಯಮಗಳ ಆಧಾರದಿಂದಲೇ ಇವೆಲ್ಲವನ್ನೂ ಸಾಧಿಸಬಹುದು. ಈಗ ಪ್ರಧಾನತಃ ಅಸಮ ಧಾತುಗಳ ಅಸ್ತಿತ್ವ ನಿಯಮ [A 2]ರ ಫಲವಾಗಿ 0ಗೆ ಅಸಮವಾದ ($\not\sim$) ಒಂದಾದರೂ ಕ್ಷೇತ್ರಧಾತುವಿರಲೇಬೇಕಾಗುವುದು. ಈ ಅಂಶವನ್ನು ಗಮನಿಸಿದ ಬಳಿಕ $(a-a) \sim (b-b)$ ಸೂತ್ರವನ್ನು ಸಮರ್ಥಿಸಿದ ಮಾರ್ಗದಲ್ಲೇ $a \not\sim 0, b \not\sim 0$ ಆದಾಗಲೆಲ್ಲ $(a \div a) \sim (b \div b)$ ಆಗುತ್ತವೆಂದು ಶ್ರುತಪಡಿಸಬಹುದು. ನಾವು $(a \div a), (b \div b)$ ಮಾದರಿಯ ಭಾಗಲಬ್ಧಗಳ ಪೈಕಿ $(a \not\sim 0, b \not\sim 0)$ ಯಾವುದಾರೂ ಒಂದಕ್ಕೆ ಸಾಮ್ಯಕ (ಐಡೆಂಟಿಟಿ) ಎಂದು ನಾಮಕರಣ ಮಾಡಿ ಅದನ್ನು I ಎಂಬ ಸಂಕೇತದಿಂದ ಸೂಚಿಸುತ್ತೇವೆ. (ಪರಿಮೇಯಗಳ $\Phi_k$ ಕ್ಷೇತ್ರಗಳಲ್ಲೆಲ್ಲ $I \equiv 1/1; O\,I\,G\,H$ ಮತ್ತು OI ಕ್ಷೇತ್ರಗಳಲ್ಲಿ $I \equiv 1$). ಪ್ರತಿಯೊಂದು ಕ್ಷೇತ್ರಧಾತು xಗೂ $x.I \sim x \sim I.x$ ಆಗುವುದು. $x \not\sim 0$ ಆದಾಗ xನ ವ್ಯುತ್ಕ್ರಮ (ರೆಸಿಪ್ರೋಕಲ್) ಎಂದು ಕರೆಯಲಾಗುವ $(I \div x)$ ಎಂಬ ಭಾಗಲಬ್ಧವನ್ನು $x^{-1}$ ಎಂದೂ ಸೂಚಿಸುವ ರೂಢಿ ಉಂಟು. $w \not\sim 0$ ಮತ್ತು $w.x \sim w.y$ ಆದಾಗಲೆಲ್ಲ $x \sim y$ ಕೂಡ ಆಗುತ್ತದೆಂಬ ಆಶ್ವಾಸನೆ ಸುಲಭ ಸಮರ್ಥನೀಯ. ಇದಕ್ಕೆ ಗುಣಾಕಾರ ಸಂಬಂಧದ ರದ್ದು ಪಡಿ ನಿಯಮ ಎಂದು ಹೆಸರು. $w \not\sim 0$ ಮತ್ತು $w.x \sim 0$ ಆದಲ್ಲಿ $x \not\sim 0$ ಆಗಲೇಬೇಕೆಂಬುದು ಈ ನಿಯಮದ ಒಂದು ಸರಳ ಅನುಮಿತ. $w \not\sim 0$, $w.x \sim 0$ ಆಗುವುದಾದರೆ xಗೆ ಶೂನ್ಯಭಾಜಕ (ಜ಼ೀರೋ ಡಿವೈಸರ್) ಎಂಬ ಹೆಸರು ಸಲ್ಲತ್ತದೆ. ಅಂದ ಮೇಲೆ ಯಾವ ಕ್ಷೇತ್ರದಲ್ಲೂ ಶೂನ್ಯಾಸಮ ಶೂನ್ಯ ಭಾಜಕಗಳಿರುವುದಿಲ್ಲ ವೆಂದಾಯಿತು $w \not\sim 0$ ಆದಾಗ $w.(0 \div w) \sim (0 \div w)$. $w \sim 0$([B2] ಹಾಗೂ [B7] ನಿಯಮಗಳು). ಆದ್ದರಿಂದ $(0 \div w) \sim 0$ ಎಂದು ಸಿದ್ಧಪಡುತ್ತದೆ. $w \not\sim 0$ ಆದ್ದರಿಂದ $(w \div w) \not\sim (0 \div w)$, (ನಿಯಮ [A8]). ಇದರಿಂದ ಪ್ರತಿಯೊಂದು ಕ್ಷೇತ್ರದಲ್ಲೂ $I \div 0$ ಎಂದು ಸ್ಥಾಪಿತವಾಗುವುದು. ಕೊನೆಯದಾಗಿ $x \not\sim 0$ ಆದಾಗ ಈ ಮುಂದಿನ ಸೂತ್ರಗಳ ಸ್ಥಾಪನೆಯೂ ಸುಲಭದ ಕೆಲಸವೇ;

$$(y \div x) \sim y, (I \div x); (I \div (I \div x)) \sim (x^{-1})^{-1}) \sim x$$

x ಯಾವುದಾದರೂ ಕ್ಷೇತ್ರಧಾತುವಾದಲ್ಲಿ x+x ಮತ್ತು x,x ಗಳನ್ನು ಅನುಕ್ರಮವಾಗಿ 2x ಮತ್ತು $x^2$ ಎಂಬುದಾಗಿ ಬರೆಯುತ್ತೇವೆ. ಮತ್ತೆ 2x + x ಹಾಗೂ $x^2.x$ ಗಳನ್ನು ಅನುಕ್ರಮವಾಗಿ 3x ಹಾಗೂ $x^3$ ಎಂಬುದಾಗಿ ಸೂಚಿಸುತ್ತೇವೆ. ಇದೇ ಪ್ರಕಾರ ಮುಂದುವರಿದು n ಯಾವುದೇ ಧನ ಪೂರ್ಣಾಂಕವಾದಾಗ ಕೂಡ nx ಅಪವರ್ತ್ಯಕ್ಕೂ (ಮಲ್ಟಿಪ್ಲ್) $x^n$ ಘಾತಕ್ಕೂ (ಪವರ್) ಅರ್ಥ ಕಲ್ಪಿಸಬಹುದು. ಸುಸ್ಪಷ್ಟವಾಗಿ

$nx \equiv x + x + x + \cdots\cdots\cdots\cdots$ ($n$ ಪದಗಳ ವರೆಗೆ);

$x^n \equiv x.x.x.\cdots\cdots\cdots\cdots$ (n ಅಪವರ್ತನಗಳ ವರೆಗೆ).

(ಇಲ್ಲಿ ಆವರಣಚಿಹ್ನೆಗಳನ್ನು ಕೈಬಿಟ್ಟಿದ್ದಾಗ್ಯೂ [B3], [B4] ಸಾಹಚರ್ಯ ನಿಯಮಗಳ ಅಂಕೆಯಿರುವುದರಿಂದ ಸಂದಿಗ್ಧತೆ ಉದ್ಭವಿಸಬಹುದು). $n \equiv 1$ ಆದಾಗಲೂ ಇವೆರಡು ವ್ಯಾಖ್ಯೆಗಳು ಮಾನ್ಯವೇ. n ಸೊನ್ನೆಯಾದಾಗ $nx \equiv 0x \equiv 0$ ಎಂದು ವ್ಯಾಖ್ಯಿಸುತ್ತೇವೆ. ಇನ್ನು $n \equiv -m$ ಒಂದು ಋಣ ಪೂರ್ಣಾಂಕವಾದಾಗ $nx \equiv -mx \equiv -(mx)$ ಎಂಬ ಅರ್ಥವನ್ನು nx ಸಂಕೇತಕ್ಕೆ ಆರೋಪಿಸುತ್ತೇವೆ. ಸದೃಶರೀತಿಯಲ್ಲಿ, ಅಂದರೆ $x \not\sim 0$ ಆಗಿರುವ ಸಂದರ್ಭದಲ್ಲಿ ಮಾತ್ರ, $x^0 \equiv I$ ಹಾಗೂ $x^{-m} \equiv (I \div x^m)$ ಎಂದೂ ಅಂಗೀಕರಿಸುತ್ತೇವೆ. x,y ಗಳು ಕ್ಷೇತ್ರದೊಳಗಿನ ಯಾವುದಾದರೂ ಎರಡೂ ಧಾತುಗಳೂ p,q ಗಳು ಯಾವುದಾದರೂ ಎರಡು ಪೂರ್ಣಾಂಕಗಳೂ ಆದಲ್ಲಿ.

$(p+q)x \sim px + qx; p(qx) \sim (pq)x; (px).(qy) \sim (pq)(x.y);$

$x(p+q) \sim x^p.x^p; (x^p)^q \sim x^{pq}; (x.y)^p \sim x^p.y^p$

ಎಂದೆಲ್ಲ ಸಮರ್ಥಿಸಬಹುದು. ಅಲ್ಲದೆ $x \sim y$ ಆದಾಗಲೆಲ್ಲ $nx \sim ny$ ಹಾಗೂ $x^n \sim y^n$ ಆಗುತ್ತವೆ. [ಇಂಥ ಸೂತ್ರಗಳಲ್ಲಿ ಸೊನ್ನೆ ಇಲ್ಲವೆ ಋಣ ಘಾತ ಸೂಚಿಗಳು (ಪವರ್ ಇಂಡಿಸೀಸ್) ಕಾಣಿಸಿಕೊಂಡಾಗ $x \nsim 0, y \nsim 0$ ಆಗಿರುವುದು ಅಗತ್ಯ].

0 ಮತ್ತು I ಗಳು ಎಂದಿನಂತೆ ಯಾವುದಾದರೊಂದು ಕ್ಷೇತ್ರ ನ ಶೂನ್ಯ ಮತ್ತು ಸಾಮ್ಯಕಗಳಾಗಿರಲಿ. $nI \sim 0$ ಸಮತ್ವಕ್ಕೆ ಸರಿಹೊಂದುವ ಪ್ರತಿಯೊಂದು ಪೂರ್ಣಾಂಕ nನ್ನೂ Xನ ಒಂದು ಶೂನ್ಯಕ (ಅನ್ನಿಹಿಲೇಟರ್) ಎಂದು ಕರೆಯೋಣ. ಎಲ್ಲ ಕ್ಷೇತ್ರಗಳಿಗೂ ಕೊನೆಯ ಪಕ್ಷ ಒಂದಾದರೂ ಶೂನ್ಯಕವಿದ್ದೇ ಇರುತ್ತದೆ: $n \equiv 0$. ಈ 0ಯ ವಿನಾ ಬೇರಾವ ಶೂನ್ಯಕಗಳೂ Xಕ್ಷೇತ್ರಕ್ಕೆ ಇಲ್ಲದೆ ಹೋದಲ್ಲಿ Xನ ಲಕ್ಷಣಾಂಕವನ್ನು (ಕ್ಯಾರೆಕ್ಟರಿಸ್ಟಿಕ್) 0 ಎಂಬುದಾಗಿ ವ್ಯಾಖ್ಯಿಸುತ್ತೇವೆ. ಉದಾಹರಣೆಗೆ ನಿತ್ಯವ್ಯವಹಾರದ ಪರಿಮೇಯಗಳ $\Phi_0$ ಕ್ಷೇತ್ರದ ಲಕ್ಷಣಾಂಕ 0. n ಪೂರ್ಣಾಂಕ X ಕ್ಷೇತ್ರದ ಒಂದು ಶೂನ್ಯಕವಾದಲ್ಲಿ (-n) ಪೂರ್ಣಾಂಕ ಕೂಡ X ಕ್ಷೇತ್ರಕ್ಕೆ ಒಂದು ಶೂನ್ಯಕವೇ ಆಗುತ್ತದೆ: $nI \sim 0$ ಆದಾಗ $(-n) I \sim 0$. X ಕ್ಷೇತ್ರಕ್ಕೆ 0 ಯಿಂದ ಭಿನ್ನವಾದ ಶೂನ್ಯಕಗಳನ್ನು ಗೊತ್ತುಮಾಡಲು ಸಾಧ್ಯವಾಗುವ ಪಕ್ಷದಲ್ಲಿ Xನ ಲಕ್ಷಣಾಂಕವನ್ನು ಆ ಕ್ಷೇತ್ರದ ಧನಶೂನ್ಯಕಗಳ ಪೈಕಿ ಕನಿಷ್ಠವಾದದ್ದು ಎಂದು ವ್ಯಾಖ್ಯಿಸುತ್ತೇವೆ. $\Phi_k$ ಕ್ಷೇತ್ರದ ಲಕ್ಷಣಾಂಕ k; OIGH ಮತ್ತು OI ಕ್ಷೇತ್ರಗಳದ್ದು 2. ಅಭಿಜಾತ ಗಣಿತಶಾಸ್ತ್ರದ ಪ್ರಕಾರ ಪ್ರತಿಯೊಂದು ಕ್ಷೇತ್ರಕ್ಕೂ ಒಂದು ನಿರ್ದಿಷ್ಟ ಲಕ್ಷಣಾಂಕವಿರಲೇಬೇಕು; ಮತ್ತು ಆ ಲಕ್ಷಣಾಂಕ 0 ಆಗಿರದಿದ್ದಲ್ಲಿ ಒಂದು ಅವಿಭಾಜ್ಯ ಧನಪೂರ್ಣಾಂಕವಾಗಿರಬೇಕು. ರಚನಾತ್ಮಕ ಗಣಿತ ಶಾಸ್ತ್ರದಲ್ಲಾದರೋ ಕೇವಲ ಶಿಷ್ಟಕ್ಷೇತ್ರಗಳನ್ನೇ ಕುರಿತಂತೆ ಸಹ ಲಕ್ಷಣಾಂಕಗಳ ಅಸ್ತಿತ್ವವನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಶಿಷ್ಟ ಕ್ಷೇತ್ರವೊಂದಕ್ಕೆ ಲಕ್ಷಣಾಂಕವಿರುವುದಾದರೆ ಅದು ಒಂದು ಅವಿಭಾಜ್ಯ ಧನಪೂರ್ಣಾಂಕವಾಗಿರಬೇಕೆಂದು ಮಾತ್ರ ಅಲ್ಲಿ ಸಾಧಿಸಲು ಶಕ್ಯ.

n ಎಂಬುದು ಕ್ಷೇತ್ರ Xನ ಯಾವುದಾದರೊಂದು ಶೂನ್ಯಕವಾಗಿರಲಿ. ಲಕ್ಷಣಾಂಕವೂ ಶೂನ್ಯಕಗಳ ಒಂದು ವಿಶೇಷ ಪ್ರಸಂಗ ಮಾತ್ರ). ಆಗ $x \in X$ ಆದಲ್ಲಿ $nx \sim n(I.x) \sim (nI).x \sim 0.x \sim 0$ ಆಗುತ್ತದೆ. ಈಗ $\bar{X}$ ಎಂಬುದು Xನ ಯಾವುದಾದರೂ ಒಂದು ಉಪ ಇಲ್ಲವೆ ವಿಸ್ತರಣ ಕ್ಷೇತ್ರವಾದಲ್ಲಿ $\bar{X}$ ಮತ್ತು Xಗಳ ಶೂನ್ಯಗಳು ಹಾಗೂ ಸಾಮ್ಯಕಗಳು (ಎರಡು ಕ್ಷೇತ್ರಗಳ ಪೈಕಿ ದೊಡ್ಡದರಲ್ಲಿ) ಸಮವಾಗಿರುತ್ತದೆಂದು ಸುಲಭವಾಗಿ ತೋರಿಸಬಹುದು. ಆದ್ದರಿಂದ $\bar{X}$ನ ಶೂನ್ಯ ಮತ್ತು ಸಾಮ್ಯಕಗಳು $\bar{O}$ ಮತ್ತು $\bar{I}$ ಆದಲ್ಲಿ $\bar{x} \in \bar{X}$ ಆದಾಗಲೆಲ್ಲ $n\bar{x} \sim n(\bar{I}\bar{x}) \sim n(\bar{I}.\bar{x}) \sim (n\bar{I}).\ \bar{x} \sim 0.\bar{x} \sim 0\bar{x} \sim \bar{0}$ ಎಂದಾಗುತ್ತದೆ. ಅಂದಮೇಲೆ ಕ್ಷೇತ್ರವೊಂದರ ಯಾವುದೇ ಶೂನ್ಯಕ (n) ಆ ಕ್ಷೇತ್ರದ ಸಮಸ್ತ ಉಪ ಹಾಗೂ ವಿಸ್ತರಣ ಕ್ಷೇತ್ರಗಳೆಲ್ಲಕ್ಕೂ ಮತ್ತೆ ಶೂನ್ಯಕವೇ ಆಗುತ್ತದೆಂದಾಯಿತು. ಇದರಿಂದ ಒಂದು ಕ್ಷೇತ್ರಕ್ಕೆ ಲಕ್ಷಣಾಂಕವಿರುವುದಾದರೆ ಆ ಕ್ಷೇತ್ರದ ಉಪ ಮತ್ತು ವಿಸ್ತರಣ ಕ್ಷೇತ್ರಗಳೆಲ್ಲಕ್ಕೂ ಅದೇ ಲಕ್ಷಣಾಂಕವಿರುತ್ತದೆಂದು ತೀರ್ಮಾನಿಸಬಹುದು.

ಮುಂದಿನ ಪರಿಕಲ್ಪನೆಗಳನ್ನು ನಿದರ್ಶಿಸುವ ಸಲುವಾಗಿ $\bar{\Phi}_0$ ಎಂಬ ಮತ್ತೂ ಒಂದು ಕ್ಷೇತ್ರವನ್ನು ರಚಿಸುತ್ತೇವೆ. $\bar{\Phi}_0$ಯ ಧಾತುಗಳೂ p/q ರೂಪದ ಪರಿಮೇಯಗಳೇ ಆಗಿರಲಿ (p, q ಪೂರ್ಣಾಂಕಗಳು, q ಸೊನ್ನೆಯಿಂದ ಭಿನ್ನ) $\bar{\Phi}_0$ಯ ಸಮತೆ ಅಸಮತೆಗಳೂ ಸಂಕಲನ ವ್ಯವಕಲನಗಳೂ ನಿತ್ಯವ್ಯವಹಾರದ $\bar{\Phi}_0$ ಯಲ್ಲಿನಂತೆಯೇ ಇರಲಿ. ಆದರೆ $\bar{\Phi}_0$ಯ ಗುಣಾಕಾರ ಮತ್ತು ಭಾಗಾಹಾರಗಳ ವಿಧಿಗಳನ್ನು ಮಾತ್ರ ಈ ರೀತಿ ಮಾರ್ಪಡಿಸಬೇಕು: $(p/q).(r/s) \equiv (pr)/(2qs); (p/q) \div (r/s) \equiv (2ps)/(qr)$. ಹೀಗೆ ರಚಿಸಿದ $\bar{\Phi}_0$ ವ್ಯವಸ್ಥೆ ಕ್ಷೇತ್ರವಾಗಿದೆಯೆಂದು ಸುಲಭವಾಗಿ ತಾಳೆ ನೋಡಬಹುದು. $\bar{\Phi}_0$ಯ ಶೂನ್ಯ 0/1, ಅದರ ಸಾಮ್ಯಕ 2/1. ಈಗ X ಮತ್ತು $\bar{X}$ ಗಳು ಯಾವುದಾದರೂ ಎರಡು ಕ್ಷೇತ್ರಗಳಾಗಿರಲಿ. Xನ ಪ್ರತಿಯೊಂದು ಧಾತು xಗೂ ಅನುರೂಪವಾಗಿ $\bar{X}$ನ ಒಂದು ನಿಶ್ಚಿತ ಧಾತು f(x) ನ್ನು ಗೊತ್ತು ಮಾಡಿಕೊಡುವ ಯಾವುದೇ ಲೆಕ್ಕಾಚಾರ ವಿಧಿ f ಗೆ $X \to \bar{X}$ ಸಂಬಂಧಕ (ರಿಲೇಷನ್) ಎಂದು ಹೆಸರು ಸಲ್ಲುತ್ತದೆ. ಉದಾಹರಣೆಗಾಗಿ $\Phi_0$ಯನ್ನು X ಎಂದೂ $\bar{\Phi}_0$ ಯನ್ನು $\bar{X}$ ಎಂದೂ ಪರಿಗಣಿಸಿ

$f_1(p/q) \equiv p/q; f_2(p/q) \equiv (p^2+1)/q^2; f_3(p/q) \equiv (p/q^2)/(2q);$

$f_4(p/q) \equiv p^2/q^2; f_5(p/q) \equiv p^3/q^3;$

$f_6(p/q)$ [q ಧನಪೂರ್ಣಾಂಕವಾದಾಗ] $(2p+1)/2^q$,
[q ಋಣಪೂರ್ಣಾಂಕವಾದಾಗ] $(1-2p)/2^{-q}$

$f_7(p/q) \equiv$ [p ಯು qಯಿಂದ ನಿಶ್ಶೇಷವಾಗಿ ಭಾಗವಾಗದೆ ಇರುವಾಗ] 2p/q,
[p ಯು qನಿಂದ ನಿಶ್ಶೇಷವಾಗಿ ಭಾಗವಾದಾಗ] p/q;

$f_8(p/q)=$ [p ಬೆಸಪೂರ್ಣಾಂಕವಾದಾಗ, ಇಲ್ಲವೆ pಯು qನಿಂದ ನಿಶ್ಶೇಷವಾಗಿ ಭಾಗವಾಗದೆ ಇರುವಾಗ] p/2q
[p ಒಂದು ಸರಿಪೂರ್ಣಾಂಕವಾಗಿಯೂ pಯು qನಿಂದ ನಿಶ್ಶೇಷವಾಗಿ ಭಾಗವಾಗುವಂತೆಯೂ ಇದ್ದಾಗ] p/q

$f_9(p/q) \equiv 2p/q$

ಎಂಬುದಾಗಿ ವ್ಯಾಖ್ಯಿಸಿದರೆ $f_1, f_2, .....f_9$ ಲೆಕ್ಕಾಚಾರ ವಿಧಿಗಳು $\Phi_0 \to \bar{\Phi}_0$ ಸಂಬಂಧಕಗಳಿಗೆ ಒಂಬತ್ತು ನಿದರ್ಶನಗಳಾಗುತ್ತವೆ. f ಒಂದು $X \to \bar{X}$ ಸಂಬಂಧಕವಾದಾಗ ಕೆಲವು ವೇಳೆ ಇದೀಗ ತಿಳಿಸಲಿರುವ ನಿಬಂಧನೆಯೊಂದಕ್ಕೆ ಸರಿಹೊಂದುವಂತೆ g ಎಂಬ ಒಂದು ಅನುರೂಪ $\bar{X} \to X$ ಸಂಬಂಧಕವನ್ನು ರೂಪಿಸಲು ಸಾಧ್ಯವಾಗಬಹುದು. ಹಾಗಿದ್ದಲ್ಲಿ g ಯನ್ನು f ನ ಒಂದು ವ್ಯಸ್ತ (ಇನ್ವರ್ಸ್) ಎಂದು ಕರೆಯುತ್ತೇವೆ. $\bar{x} \in \bar{X}$ ಆದಾಗಲೆಲ್ಲ $\bar{X}$ ಕ್ಷೇತ್ರದಲ್ಲಿ $f(g(x)) \sim x$ ಆಗಬೇಕೆಂಬುದೇ ಈ ವ್ಯಸ್ತ g ಪರಿಪಾಲಿಸಬೇಕಾದ ನಿಬಂಧನೆ. ವ್ಯಸ್ತಗಳನ್ನು ಗೊತ್ತು ಮಾಡಲು ಶಕ್ತವಾಗುವಂಥ $X \to \bar{X}$ ಸಂಬಂಧಕಗಳು $X \to \bar{X}$ ಪರಿಕ್ಷೇಪಿ ಸಂಬಂಧಕಗಳು (ಸರ್ಜೆಕ್ಟಿವ್ ರಿಲೇಷನ್ಸ್) ಎಂದೆನಿಸಿಕೊಳ್ಳುತ್ತವೆ. ಮೇಲಿನ ಒಂಬತ್ತು ನಿದರ್ಶನಗಳಲ್ಲಿ $f_1, f_3, f_7, f_8, f_9$ ಇವು $\Phi_0 \to \bar{\Phi}_0$ ಪರಿಕ್ಷೇಪಿ ಸಂಬಂಧಕಗಳು; ಇವುಗಳ ಅನುರೂಪ ವ್ಯಸ್ತ g ಗಳನ್ನು ಕೆಳಗೆ ಪ್ರದರ್ಶಿಸಲಾಗಿದೆ:

$g_1(p/q) \equiv p/q; g_3(p/q) \equiv (2p-q^2)/q; g_7(p/q) \equiv f_8(p/q)$

$g_8(p/q) \equiv f_7(p/q); g_9(p/q) \equiv p(2q)$

[ಈ g ಗಳೆಲ್ಲ ವಿರುದ್ಧ ದಿಶೆಯ $\bar{\Phi}_0 \to \Phi_0$ ಸಂಬಂಧಕಗಳು. $f(g(x)) \sim x$) ಆದಾಗ್ಯೂ $g(f(x)) \sim x$ ಆಗಬೇಕಾಗಿಲ್ಲವೆಂಬುದನ್ನು $f_3, g_3$ ಗಳ ನಿದರ್ಶನದಿಂದ ಮನಗಾಣಬಹುದು). ಮತ್ತೆ ಈಗ f ಯಾವುದಾದರೊಂದು $X \to \bar{X}$ ಸಂಬಂಧಕವಾಗಿರಲಿ. ಕೆಲವು ಸಂದರ್ಭಗಳಲ್ಲಿ $x \in X, y \in X$ ಮತ್ತು X ಕ್ಷೇತ್ರದಲ್ಲಿ $x \sim y$ ಆದಾಗಲೆಲ್ಲ $\bar{X}$ ಕ್ಷೇತ್ರದಲ್ಲಿ $f(x) \sim f(y)$ ಆಗುವುದುಂಟು. ಆಗ f ಸಂಬಂಧಕ ಸಮತೆಯನ್ನು ಸಂರಕ್ಷಿಸುತ್ತದೆ (ಪ್ರಿಸರ್ವ್ಸ್ ಈಕ್ವಾಲಿಟಿ) ಎಂದು ಹೇಳುತ್ತೇವೆ. ಅಂತೆಯೇ $x \in X, y \in X$ ಮತ್ತು X ಕ್ಷೇತ್ರದಲ್ಲಿ $x \nsim y$ ಆದಾಗಲೆಲ್ಲ $\bar{X}$ ಕ್ಷೇತ್ರದಲ್ಲಿ $f(x) \nsim f(y)$ ಆಗುವುದಾದರೆ f ಅಸಮತೆಯನ್ನು ಸಂರಕ್ಷಿಸುವ ಸಂಬಂಧಕ ಎಂದೆನಿಸಿಕೊಳ್ಳುವುದು. X ನಲ್ಲಿ $w \sim (x+y)$ ಆದಾಗಲೆಲ್ಲ $\bar{X}$ನಲ್ಲಿ $f(w) \sim f(x) + f(y)$ ಆಗುವ ಪಕ್ಷಕ್ಕೆ f ಸಂಕಲನವನ್ನು ಸಂರಕ್ಷಿಸುತ್ತದೆ. ಗುಣಾಕಾರ ಮತ್ತಿತರ ಲೆಕ್ಕಾಚಾರಗಳ ಸಂರಕ್ಷಕ ಸಂಬಂಧಕಗಳನ್ನೂ ಸದೃಶ ರೀತಿಯಲ್ಲಿ ವ್ಯಾಖ್ಯಿಸಬಹುದು. ಮತ್ತೆ ಕೆಲವು ವೇಳೆ $x \in X, y \in X$ ಮತ್ತು $\bar{X}$ ಕ್ಷೇತ್ರದಲ್ಲಿ $f(x) \sim f(y)$ ಆದಾಗಲೆಲ್ಲ Xನಲ್ಲಿ $x \sim y$ ಆಗಬಹುದು. ಹಾಗಾದಲ್ಲಿ f ಸಮತೆಯನ್ನು ಪ್ರತಿಸಂರಕ್ಷಿಸುತ್ತದೆ (ಕಾಂಟ್ರಾಪ್ರಿಸರ್ವ್ಸ್ ಈಕ್ವಾಲಿಟಿ) ಎಂದು ಹೇಳುತ್ತೇವೆ. ಕೊನೆಯದಾಗಿ ಅಸಮತಾ ಪ್ರತಿಸಂರಕ್ಷಣೆಯ ಅಭಿಪ್ರಾಯವನ್ನು ಸದೃಶ ಮಾರ್ಗದಲ್ಲಿ ನಿರೂಪಿಸುವುದು ಕಷ್ಟವೇನಲ್ಲ. ಮೇಲೆ ನಮೂದಿಸಿರುವ ಒಂಬತ್ತು $\Phi_0 \to \Phi_0$ ಸಂಬಂಧಕಗಳ ಪೈಕಿ.

ಸಮತಾ ಸಂರಕ್ಷಕ ಹಾಗೂ ಅಸಮತಾ ಪ್ರತಿಸಂರಕ್ಷಕವಾಗಿರುವಂಥವು: $f_1, f_4, f_5, f_7, f_9$;

ಅಸಮತಾ ಸಂರಕ್ಷಕ ಹಾಗೂ ಸಮತಾ ಪ್ರತಿಸಂರಕ್ಷಕವಾಗಿರುವಂಥವು: $f_1, f_5, f_6, f_8, f_9$;

ಸಂಕಲನ ಮತ್ತು ವ್ಯವಕಲನ ಸಂರಕ್ಷಕವಾಗಿರುವಂಥವು: $f_1, f_9$;

ಗುಣಾಕಾರ ಮತ್ತು ವ್ಯವಕಲನ ಸಂರಕ್ಷಕವಾಗಿರುವಂಥವು: $f_9$;

ಇವಾವುದೂ ಅಲ್ಲದವು: $f_2, f_3$;

ಸಮತಾ ಸಂರಕ್ಷಕವಾಗಿರುವ $X \to \bar{X}$ ಸಂಬಂಧಕಗಳಿಗೆ $X \to \bar{X}$ ಉತ್ಪನ್ನಗಳು [ಅಥವಾ ಬಿಂಬನಗಳು (ಫಂಕ್ಷನ್ಸ್/ಮ್ಯಾಪಿಂಗ್)] ಎಂದು ಹೆಸರು. $X \to \bar{X}$ ಉತ್ಪನ್ನವೊಂದು $X \to \bar{X}$ ಪರಿಕ್ಷೇಪಿಯೂ ಆಗಿದ್ದಲ್ಲಿ ಅದು $X \to \bar{X}$ ಪರಿಕ್ಷೇಪನ (ಸರ್ಜೆಕ್ಷನ್/ಆನ್‌ಟು ಮ್ಯಾಪಿಂಗ್) ಎಂದೆನಿಸಿಕೊಳ್ಳುವುದು. ಸಮತಾ ಪ್ರತಿ ಸಂರಕ್ಷಕವಾಗಿರುವ $X \to \bar{X}$ ಉತ್ಪನ್ನಗಳೇ $X \to \bar{X}$ ಅಂತಃಕ್ಷೇಪನಗಳು (ಇಂಜೆಕ್ಷನ್ಸ್/ಒನ್ ಟು ಒನ್ ಇಂಟು ಮ್ಯಾಪಿಂಗ್ಸ್). ಏಕಕಾಲದಲ್ಲಿ $X \to \bar{X}$ ಪರಿಕ್ಷೇಪನ ಹಾಗೂ $X \to \bar{X}$ ಅಂತಃಕ್ಷೇಪನ ಎರಡೂ ಆಗಿರುವ ಉತ್ಪನ್ನಗಳನ್ನು $X \to \bar{X}$ ಉಭಯಕ್ಷೇಪನಗಳು (ಬೈಜೆಕ್ಷನ್ಸ್/ ಒನ್ ಟು ಒನ್ ಆನ್ ಟು ಮ್ಯಾಪಿಂಗ್ಸ್) ಎಂದು ಕರೆಯುತ್ತೇವೆ. f ಒಂದು $X \to \bar{X}$ ಉಭಯಕ್ಷೇಪನವಾದರೆ ಅದರ ವ್ಯಸ್ತ g ಸಹ ಒಂದು $\bar{X} \to X$ ಉಭಯಕ್ಷೇಪನವಾಗುತ್ತದೆ. ಅಸಮತೆಗಳ ಬಗ್ಗೆ ಕೂಡ ಸಂರಕ್ಷಕ ಮತ್ತು ಪ್ರತಿಸಂರಕ್ಷಕವಾಗಿರುವ ಉಭಯಕ್ಷೇಪನಗಳನ್ನು ಪ್ರಬಲ ಉಭಯಕ್ಷೇಪನಗಳೆಂದು (ಸ್ಟ್ರಾಂಗ್ ಬೈಜೆಕ್ಷನ್ಸ್) ಕರೆಯಬಹುದು. $X \to \bar{X}$ ಪ್ರಬಲ ಉಭಯಕ್ಷೇಪಗಳ ವ್ಯಸ್ತಗಳು $\bar{X} \to X$ ಪ್ರಬಲ ಉಭಯಕ್ಷೇಪನಗಳಾಗುತ್ತವೆ. ಸಂಕಲನ ಮತ್ತು ಗುಣಾಕಾರಗಳನ್ನೂ ಸಂರಕ್ಷಿಸುವಂಥ $X \to \bar{X}$ ಪ್ರಬಲ ಉಭಯ ಕ್ಷೇಪನಗಳಿಗೆ $X \to \bar{X}$ ಪ್ರತಿಬಿಂಬನಗಳು (ಐಸೊಮಾರ್ಫಿಸಮ್ಸ್) ಎಂದು ಹೆಸರು. ಅಂಥ ಉತ್ಪನ್ನಗಳ ವ್ಯಸ್ತಗಳು $\bar{X} \to X$ ಪ್ರತಿಬಿಂಬನಗಳಾಗುತ್ತವೆ. ಪ್ರತಿಬಿಂಬನಗಳು ತಾವೇ ತಾವಾಗಿ ವ್ಯವಕಲನ ಮತ್ತು ಭಾಗಾಹಾರಗಳನ್ನೂ ಸಂರಕ್ಷಿಸುತ್ತವೆಂದು ಸಾಧಿಸಬಹುದು. f ಒಂದು $X \to \bar{X}$ ಪ್ರತಿಬಿಂಬನ, O, I ಗಳು Xನ ಶೂನ್ಯ ಮತ್ತು ಸಾಮ್ಯಕ, $\bar{O}, \bar{I}$ ಗಳು $\bar{X}$ನ ಶೂನ್ಯ ಮತ್ತು ಸಾಮ್ಯಕ ಆದಾಗ $\bar{X}$ನಲ್ಲಿ $f(O) \sim \bar{O}, f(I) \sim \bar{I}$ ಆಗುವುವು. ಮೇಲೆ ನಮೂದಿಸಿರುವ ಸಂಬಂಧಕಗಳ ಪೈಕಿ $f_9$ ಎಂಬುದು $\Phi_0 \to \bar{\Phi}_0$ ಪ್ರತಿಬಿಂಬನವೂ $g_9$ ಎಂಬುದು $\bar{\Phi}_0 \to \Phi_0$ ಪ್ರತಿಬಿಂಬವೂ ಆಗಿವೆ. ಉಳಿದವಾವೂ ಪ್ರತಿಬಿಂಬನಗಳಲ್ಲ, ಯಾವುದೇ

ಎರಡು ದತ್ತ ಕ್ಷೇತ್ರಗಳ ನಡುವೆ ಪ್ರತಿಬಿಂಬನಗಳನ್ನು ರೂಪಿಸಲು ಶಕ್ಯವಾಗುವುದೆಂದು ಭಾವಿಸಲಾಗದು. ಉದಾಹರಣೆಗೆ $\Phi_0$ ಮತ್ತು $\Phi_2$ಗಳ ನಡುವೆ ಯಾವ ಪ್ರತಿಬಿಂಬನವೂ (ಅಷ್ಟೇ ಏಕೆ, ಯಾವ ಉಭಯಕ್ಷೇಪನವೂ) ಇರಲು ಸಾಧ್ಯವಿಲ್ಲ. ನಿಜಕ್ಕೂ ಎರಡು ಕ್ಷೇತ್ರಗಳ ನಡುವೆ ಪ್ರತಿಬಿಂಬನವಿದ್ದಲ್ಲಿ ಅವೆರಡಕ್ಕೂ ಒಂದೇ ರೀತಿಯ ಗಣಿತೀಯರಚನೆ ಇದೆ ಎಂದು ಅರ್ಥವಾಗುವುದು. ಭಿನ್ನ ಕ್ಷೇತ್ರಗಳ ರಚನೆ ವೈವಿಧ್ಯಮಯವಾಗಿರಬಹುದೆಂದು ನಾವಾಗಲೇ ಅರಿತಿದ್ದೇವೆ. ಯಾವುದಾದರೊಂದು $X \to \overline{X}$ ಪ್ರತಿಬಿಂಬನವನ್ನು ರೂಪಿಸಲು ಸಾಧ್ಯವಾಗುವ ಪಕ್ಷದಲ್ಲಿ Xಮತ್ತು $\overline{X}$ ಕ್ಷೇತ್ರಗಳನ್ನು ಪ್ರತಿಬಿಂಬಕ ಬಿಂಬಗಳು (ಐಸೊಮಾರ್ಫಿಕ್ ಇಮೇಜಸ್) ಎಂಬುದಾಗಿ ವರ್ಣಿಸುತ್ತೇವೆ. ಅಲ್ಲಿಗೆ $\Phi_0$ ಮತ್ತು $\bar{\Phi}_0$ ಒಂದಕ್ಕೊಂದು ಪ್ರತಿಬಿಂಬಗಳು ಎಂದಾಯಿತು. ಈಗ ಹಿಂದೆ ಪ್ರಸ್ತಾವಿಸಿದ OI (ಇದರ ಧಾತುಗಳು O ಮತ್ತು I ಎಂಬೆರಡೇ ಅಕ್ಷರಗಳು) ಮತ್ತು $\Phi_2$ (ಇದರ ಧಾತುಗ ರೂಪ p/q; p ಯಾವುದಾದರೂ ಪೂರ್ಣಾಂಕ, q ಯಾವುದಾದರೂ ಬೆಸಪೂರ್ಣಾಂಕ) ಕ್ಷೇತ್ರಗಳನ್ನು ಕುರಿತಂತೆ ಒಂದು $OI \to \Phi_2$ ಸಂಬಂಧಕ ಹಾಗೂ ಒಂದು $\Phi_2 \to OI$ ಸಂಬಂಧಕ gಗಳನ್ನು ಕೆಳಗಿನಂತೆ ವ್ಯಾಖ್ಯಿಸೋಣ:

$f(O) \equiv 2/1, f(I) \equiv 1/1;$

| | | |
|---|---|---|
| g(p/q) ≡ | [p ಬೆಸಪೂರ್ಣಾಂಕವಾದಾಗ] | . . . I |
| | [p ಸರಿಪೂರ್ಣಾಂಕವಾದಾಗ] | . . . O |

ಈ f ಮತ್ತು g ಪರಸ್ಪರ ಪವ್ಯಸ್ತಗಳಾದ ಪ್ರತಿಬಿಂಬನಗಳೆಂದು ಸುಲಭವಾಗಿ ಮನಗಾಣಬಹುದು. ಅಂದಮೇಲೆ OI ಮತ್ತು $\Phi_2$ ಕ್ಷೇತ್ರಗಳು ಪ್ರತಿಬಿಂಬಕ ಬಿಂಬಗಳು. ಇವೆರಡು ಕ್ಷೇತ್ರಗಳ ವಿಚಾರವಾಗಿ ಈ ಹಿಂದೆ ಮುನ್ಸೂಚನೆ ನೀಡಿದ್ದ ನಿಕಟ ಬಾಂಧವ್ಯ ಇದೇ.

ಬಹುಪದಿಗಳು, ಶಿಷ್ಟಕ್ಷೇತ್ರಗಳ ವಿಸ್ತರಣೆಗಳು: X ಒಂದು ಕ್ಷೇತ್ರವಾಗಿರಲಿ ಮತ್ತು X ಎಂಬುದು ಈ ಕ್ಷೇತ್ರದ ಯಾವೊಂದು ಧಾತುವಿನ ಅಂಗವೂ ಅಗಿರದ ಒಂದು ಪ್ರತ್ಯೇಕ ಚಿಹ್ನೆಯಾಗಿರಲಿ. X ಕ್ಷೇತ್ರದ ಧಾತುಗಳನ್ನೂ ನವಚಿಹ್ನೆ Xನ್ನೂ ಬಳಸಿಕೊಂಡು ಕೆಳಗೆ ಪ್ರದರ್ಶಿಸಿರುವ ರೂಪದಹೊಸ ಗಣಿತೀಯ ಧಾತುಗಳನ್ನು ನಾವು ನಿರ್ಮಿಸಬಹುದು:

$$P \equiv p_o + p_1.X + p_2.X^2 + p_3.X^3 +,...............+ p_m.X^m$$

(ಇಲ್ಲಿ m ಒಂದು ಪೂರ್ಣಾಂಕ: $m \geq 0$ ಮತ್ತು $p_0, p_1, p_2, p_3, .....p_m$ ಎಲ್ಲವೂ $\in X$). $P$ ಯಂಥ ಗಣಿತೀಯ ಧಾತುಗಳಿಗೆ ಬಹುಪದಿಗಳೂ (ಪಾಲಿನೋಮಿಯಲ್ಸ್) ಎಂದು ಹೆಸರು. $p_0, .....p_m$ಗಳನ್ನು ಈ P ಯ ಸಹಗುಣಕಗಳು (ಕೊಎಫಿಷೆಂಟ್ಸ್) ಎಂದು ಕರೆಯುತ್ತೇವೆ. ಮೇಲಿನ $m \equiv 0$ ಆದಾಗ ನಾವು $P \equiv p_0$ ಎಂದು ಪರಿಗಣಿಸುತ್ತೇವೆ. $p_0 \in X$ ಆದ್ದರಿಂದ X ಕ್ಷೇತ್ರದ ಬಿಡಿಬಿಡಿ ಧಾತುಗಳು ಸಹ ಬಹುಪದಿಗಳ ವಿಶೇಷ ಪ್ರಸಂಗಗಳೇ ಎಂದಾಯಿತು. ಶೂನ್ಯಕ್ಕೆ ಸಮವಾಗಿರುವಂಥ (~) ಸಹಗುಣಕಗಳನ್ನು ಮಾತ್ರವೇ ಒಳಗೊಳ್ಳುವ ಬಹುಪದಿಗಳು ಶೂನ್ಯ ಬಹುಪದಿಗಳೆನಿಸಿಕೊಳ್ಳುತ್ತವೆ. Pಯಲ್ಲಿರುವ ಪ್ರತಿಯೊಂದು x ಚಿಹ್ನೆಯ ಸ್ಥಾನದಲ್ಲೂ X ಕ್ಷೇತ್ರಕ್ಕೆ ಸೇರಿದ ಯಾವುದಾದರೊಂದು ನಿಶ್ಚಿತ ಧಾತು ನ್ನು ಆದೇಶಿಸಿದಾಗ ಫಲಿಸುವ

$$p_0 + p_1.x + p_2.x^2 + ......+ p_m.x^m$$

ಮತ್ತೇ Xಗೇ ಸೇರಿದ ಒಂದು ಹಳೆಯ ಧಾತುವಾಗುತ್ತದೆ ಎಂಬುದು ಸುಸ್ಪಷ್ಟ. ಈ ಧಾತುವಿಗೆ Pಬಹುಪದಿಯ x-ಬೆಲೆ ಎಂದು ನಾಮಕರಣ ಮಾಡಿ P(x) ಎಂಬ ಸಂಕೇತದಿಂದ ಸೂಚಿಸುತ್ತೇವೆ. ಅಂದಮೇಲೆ ನಮ್ಮ ನವಸೃಷ್ಟಿಯಾದ ಬಹುಪದಿಗಳನ್ನು X⟶X ಉತ್ಪನ್ನಗಳೆಂದು ಪರಿಗಣಿಸಬಹುದೆಂದಾಯಿತು. ಆದರೆ ಬಹುಪದಿಗಳ ಬೀಜಗಣಿತದಲ್ಲಿ ಈ ಅರ್ಥಾರೋಪಣೆ ಎಷ್ಟು ಮುಖ್ಯವೋ ಮೇಲೆ ಪ್ರದರ್ಶಿಸಿರುವ ಬಹುಪದಿಗಳ ರೂಪವೂ ಅಷ್ಟೇ ಮುಖ್ಯವದ ಕಾರಣ ಬಹುಪದಿಗಳನ್ನು ಕೇವಲ ಉತ್ಪನ್ನಗಳೆಂದಷ್ಟೇ ಬಗೆಯಲಾಗದು. Xನ ಶೂನ್ಯವನ್ನು ಎಂದಿನಂತೆ 0 ಸಂಕೇತದಿಂದ ಸೂಚಿಸೋಣ $P(x) \sim 0$ ಆದಲ್ಲಿ xನ್ನು P ಬಹುಪದಿಯ ಮೂಲ (ಜ಼ೀರೋ/ರೂಟ್) ಎಂದು ಕರೆಯುತ್ತೇವೆ. ಉದಾಹರಣೆಗೆ OI ಹಾಗೂ OIGH ಕ್ಷೇತ್ರಗಳಲ್ಲಿ I ಯು I + O.x-Ix$^2$ ಬಹುಪದಿಯ ಮೂಲವಾಗುತ್ತದೆ; ಮತ್ತು OI ಯ (ಇಮೇಜ್) ಬಿಂಬ $\phi_2$ ರಲ್ಲಿ (1/1) ಧಾತು $(1/1 + (O/1)x. + (1/1)x^2$ ಬಹುಪದಿಯ ಮೂಲ ವಾಗುತ್ತದೆ. ನಿತ್ಯವ್ಯವಹಾರದ $\Phi_0$ ಯಲ್ಲಾದರೋ $(1/1 + (O/1)x. + (1/1)x^2$ಕ್ಕೆ ಯಾವ ಮೂಲವೂ ಇಲ್ಲ. OIGH ಕ್ಷೇತ್ರದಲ್ಲಿ $I + I.x + I.x^2$ ಬಹುಪದಿಗೆ ಎರಡು ಮೂಲಗಳಿವೆ. O ಮತ್ತು H; OI ಕ್ಷೇತ್ರದಲ್ಲಿ ಇದೇ ಬಹುಪದಿಗೆ ಯಾವ ಮೂಲವೂ ಇಲ್ಲ. ಈಗ OIGH ಕ್ಷೇತ್ರ OIಯ ಒಂದು ವಿಸ್ತರಣಕ್ಷೇತ್ರ ಎಂಬ ಸಂಗತಿಯನ್ನು ನೆನೆದಲ್ಲಿ ಒಂದು ಬಹುಪದಿ Kಗೆ ದತ್ತ ಕ್ಷೇತ್ರ Xನಲ್ಲಿ ಮೂಲಗಳಿಲ್ಲದಿದ್ದಾಗ್ಯೂ ಆ Kಯ ಮೂಲಗಳು ಅಸ್ತಿತ್ವಕ್ಕೆ ಬರುವಂತೆ Xನ್ನು ಬೇರೆ ಒಂದು ಕ್ಷೇತ್ರ $\overline{X}$ ಆಗಿ ಕೆಲವು ವೇಳೆ ವಿಸ್ತರಿಸಲು ಶಕ್ಯವಾಗಬಹುದೆಂದು ನಮಗೆ ಮನವರಿಕೆಯಾಗುವುದು. ದತ್ತ X ಒಂದು ಶಿಷ್ಟ (ನಿರ್ಧರಣೀಯ) ಕ್ಷೇತ್ರವಾದ ಪಕ್ಷದಲ್ಲಿ ಈ ಶಕ್ಯತೆ ನಿಜಕ್ಕೂ ಸಾರ್ವತ್ರಿಕ. ಆಗ ಶಾಲಾ ಬೀಜಗಣಿತದಲ್ಲಿ ಪರಿಪಾಠವಾಗಿರುವ ಮೇರೆಗೆ ಪ್ರತಿಯೊಂದು ಅಶೂನ್ಯ ಬಹುಪದಿಗೂ ಒಂದು ನಿರ್ದಿಷ್ಟ ಡಿಗ್ರಿಯನ್ನು ಗೊತ್ತುಮಾಡಿ ಯಾವುದೇ ಎರಡು ದತ್ತ ಬಹುಪದಿಗಳ ಮ.ಸಾ.ಅ.ವನ್ನು ಕಂಡುಹಿಡಿಯಲು ಸಾಧ್ಯವಾಗುವುದು. [ಮೇಲಿನ Pಯ ಸಹಗುಣಕಗಳಲ್ಲಿ $p \nsim 0$ ಮತ್ತು $p_{n+2} \sim p_{n+2} \sim p_m \sim 0$ ಆಗುವುದಾದರೆ n ಪೂರ್ಣಾಂಕ Pಯ ಡಿಗ್ರಿ ಎನಿಸಿಕೊಳ್ಳುವುದು P ಮತ್ತು K ಎಂಬೆರಡು ಬಹುಪದಿಗಳ ಮ.ಸಾ.ಅ. Q ಆದಲ್ಲಿ (i) A' ಮತ್ತು B' ಗಳು ಯಾವ ಎರಡು ಬಹುಪದಿಗಳಾದಾಗ್ಯೂ $A'.P + B'K + C'.Q \equiv$ ಒಂದು ಶೂನ್ಯ ಬಹುಪದಿ ಆಗುವಂತೆ ಒಂದು ಬಹುಪದಿ C' ನ್ನು ಕಂಡುಹಿಡಿಯಬಹುದು; ಮತ್ತು (ii) A.P+B.K+Q ≡ (ಒಂದು ಶೂನ್ಯ ಬಹುಪದಿ) ಆಗುವಂತೆ ಬಹುಪದಿ A ಮತ್ತು B ಗಳನ್ನು ಕಂಡುಹಿಡಿಯಬಹುದು]. X ಶಿಷ್ಟ (ನಿರ್ಧರಣೀಯ) ಕ್ಷೇತ್ರವೆಂದೂ K ಅದರ ಧಾತುಗಳನ್ನು ಸಹಗುಣಕಗಳನ್ನಾಗಿ ಒಳಗೊಳ್ಳುವ ಒಂದು ನಿಶ್ಚಿತ ಬಹುಪದಿಯೆಂದೂ ಭಾವಿಸೋಣ. Kಯ ಡಿಗ್ರಿ 1 ಅಥವಾ ಹೆಚ್ಚು ಆಗಿರಲಿ. P ಮತ್ತು Q ಇವು X ನ ಧಾತುಗಳನ್ನು ಸಹಗುಣಕಗಳನ್ನಾಗಿ ಒಳಗೊಳ್ಳುವ ಯಾವುದೇ ಎರಡು ಬಹುಪದಿಗಳಾದರೂ ಮತ್ತೆ ಬಹುಪದಿಗಳೇ ಆಗುವ (P+Q), (P,Q) ಮತ್ತು (P-Q) ಇವನ್ನು ಶಾಲಾ ಬೀಜಗಣಿತದ ವಿಧಿಗಳ ಪ್ರಕಾರ ವ್ಯಾಖ್ಯಿಸಬಹುದಷ್ಟೆ ಇನ್ನು (P-Q) ಮತ್ತು K ಇವುಗಳ ಮ.ಸಾ.ಅ. K ಆದಾಗಲೆಲ್ಲ $P \sim Q$ ಎಂದೂ ಅವುಗಳ ಮ.ಸಾ.ಅ. I (ಸಾಮ್ಯಕ) ಆದಾಗಲೆಲ್ಲ $P \nsim Q$ ಎಂದೂ ಬರೆಯಲಾರಂಭಿಸೋಣ. ಕೊನೆಯದಾಗಿ $Q \nsim O$ ಆದ ಪಕ್ಷಕ್ಕೆ [ಆಗ (Q-O) ಮತ್ತು Kಗಳ ಮ.ಸಾ.ಅ. I ಆಗುತ್ತದಷ್ಟೆ] $A.(Q - O) + B.K + I \equiv$ (ಒಂದು ಶೂನ್ಯ ಬಹುಪದಿ) ಆಗುವಂತೆ A,B ಗಳನ್ನು ನಿರ್ಧರಿಸಿ $(P \div Q) \equiv -P.A$ ಎಂದು ವ್ಯಾಖ್ಯಿಸೋಣ. ಹೀಗೆ ವ್ಯಾಖ್ಯಿತವಾದ $+, ., -, \sim, \nsim$ ಮತ್ತು $\div$ ಪರಿಕಲ್ಪನೆಗಳಿಗೆ ಸಾಪೇಕ್ಷವಾದ ಎಲ್ಲ ಬಹುಪದಿಗಳ ವ್ಯವಸ್ಥೆ ಒಂದು ಕ್ಷೇತ್ರವಾಗುತ್ತದೆ. ಈ ಕ್ಷೇತ್ರವನ್ನು $X_K$ ಎಂದು ಕರೆಯೋಣ. $X_K$ ಮೊದಲಿನ X ಕ್ಷೇತ್ರದ ಒಂದು ವಿಸ್ತರಣಕ್ಷೇತ್ರ ಎಂದು ಮನಗಾಣುವುದು ಸುಲಭ. Kಗೆ Xನಲ್ಲಿ ಮೂಲಗಳಿರಲಿ ಇಲ್ಲದಿರಲಿ ಈ ವಿಸ್ತರಣ ಕ್ಷೇಸತ್ರ $X_K$ ಯಲ್ಲಂತೂ ಅದಕ್ಕೆ (O+I.x) ಎಂಬ ಮೂಲವಿದ್ದೇ ಇರುತ್ತದೆ. Xನಲ್ಲಿ K ಬಹುಪದಿಗೆ ಯಾವ ಮೂಲವೂ ಇಲ್ಲದಿದ್ದಲ್ಲಿ $X_K$ ಕೂಡ ಒಂದು ಶಿಷ್ಟ ಕ್ಷೇತ್ರವೇ ಆಗುವುದು. Xನಲ್ಲಾಗಲೇ Kಗೆ ಒಂದಲ್ಲ ಒಂದು ಮೂಲವಿರುವುದಾದರೆ $X_K$ ಒಂದು ಶಿಷ್ಟವಲ್ಲದ ಕ್ಷೇತ್ರವಾಗುತ್ತದೆ. ದತ್ತ Xನ್ನು $X_K$ ಯಾಗಿ ವಿಸ್ತರಿಸಲು ನಾವು ಅನುಸರಿಸುವ ಮಾರ್ಗಕ್ಕೆ ಬೀಜಗಣಿತೀಯ ವಿಸ್ತರಣೆ (ಆಲ್ಜಿಬ್ರೈಕ್ ಎಕ್ಸ್‌ಟೆನ್ಷನ್) ಎಂದು ಹೆಸರು. ನೈಜಸಂಖ್ಯೆಗಳ ಕ್ಷೇತ್ರದಿಂದ (ಆಗಲೇ ತಿಳಿಸಿರುವಂತೆ ಅಭಿಜಾತ ಗಣಿತದಲ್ಲಿ ಹೆಚ್ಚು ಕಡಿಮೆ ಯಾದೃಚ್ಛಿಕವಾಗಿ ಇದನ್ನು ಶಿಷ್ಟವೆಂದು ಪರಿಗಣಿಸಲಾಗುವುದು) ಸಮ್ಮಿಶ್ರ ಸಂಖ್ಯೆಗಳ (ಕಾಂಪ್ಲೆಕ್ಸ್ ನಂಬರ್ಸ್) ಕ್ಷೇತ್ರವನ್ನು ವ್ಯುತ್ಪಾದಿಸುವ ಸಲುವಾಗಿ ಈ ಮಾರ್ಗವನ್ನು ಮೊದಲಿಗೆ ಬಳಕೆಗೆ ತಂದ ಗಣಿತಜ್ಞ ಎ.ಎಲ್. ಕೋಷಿ (1789–1857). ಬೀಜಗಣಿತೀಯ ವಿಸ್ತರಣೆ ಬಹುಪದಿಗಳಿಗೆ ಮೂಲಗಳನ್ನು ಸೃಷ್ಟಿಸಲು ಒದಗಿಬರುವ ಒಂದು ವಿಶಿಷ್ಟ ತಂತ್ರ. ಇದಕ್ಕೆ ಬದಲಾಗಿ P, Q ಬಹುಪದಿಗಳನ್ನು P/Q ರೂಪದ ಪರಿಮೇಯೋತ್ಪನ್ನಗಳಾಗಿ (ರ್‍ಯಾಷನಲ್ ಎಕ್ಸ್‌ಪ್ರೆಷನ್ಸ್) ಸಂಯೋಜಿಸಿಕೊಂಡು ಅಂಥ ಪರಿಮೇಯೋತ್ಪನ್ನಗಳನ್ನು ಹೆಚ್ಚು ಕಡಿಮೆ ನಿತ್ಯವ್ಯವಹಾರದ ಪರಿಮೇಯಗಳ $\Phi_0$ ಕ್ಷೇತ್ರದ ಮಾದರಿಯಲ್ಲಿ ಮತ್ತೆ ಒಂದು ಕ್ಷೇತ್ರವನ್ನಾಗಿ ರೂಢಿಸಲು ಸಾಧ್ಯವುಂಟು. ಆ ಪ್ರಕಾರ ದೊರೆಯುವ ಕ್ಷೇತ್ರವನ್ನು X* ಎಂದು ಸೂಚಿಸಿದಲ್ಲಿ X* ವನ್ನೂ Xನ ಒಂದು ವಿಸ್ತರಣೆಯೆಂದು ಪರಿಗಣಿಸಬಹುದು. X* ದ ಧಾತು (O+I.x)/I ಆದರೋ Xನ ಧಾತುಗಳನ್ನು ಸಹಗುಣಕಗಳನ್ನಾಗಿ ಒಳಗೊಳ್ಳುವ ಧನ ಡಿಗ್ರಿಯ ಯಾವೊಂದು ಬಹುಪದಿಗೂ ಮೂಲವಾಗುವುದೇ ಇಲ್ಲ. ಈ ಕಾರಣದಿಂದ ದತ್ತ Xಗೆ ಸಾಪೇಕ್ಷವಾಗಿ ಆ (O+I.x)/I ಯನ್ನು ಒಂದು ಬೀಜಗಣಿತಾತೀತ ಧಾತು (ಟ್ರಾನ್ಸೆಂಡೆಂಟಲ್ ಎಲಿಮೆಂಟ್) ಎಂದೂ ವಿಸ್ತರಣ ಕ್ಷೇತ್ರ X* ವನ್ನು ಒಂದು ಬೀಜಗಣಿತಾತೀತ ವಿಸ್ತರಣೆ ಎಂದೂ ವರ್ಣಿಸುತ್ತೇವೆ. (ಎಸ್.ಆರ್.ಎಂ.)

**ಕ್ಷೇತ್ರ ಮತ್ತು ವಲಯ:** ಒಂದು ಗಣದ ಸೆಟ್) ಧಾತುಗಳ (ಎಲಿಮೆಂಟ್ಸ್) ಮೇಲೆ ಸಂಕಲನ (+) ಮತ್ತು ಗುಣಾಕಾರ (.) ಎಂಬ ಎರಡು ಪರಿಕರ್ಮಗಳನ್ನು ಮಾಡಲು ಸಾಧ್ಯವೆಂದು ಭಾವಿಸೋಣ. ಈ ಪರಿಕರ್ಮಗಳು (ಆಪರೇಷನ್ಸ್) ಸಾಮಾನ್ಯ ಅಂಕಗಣಿತದಲ್ಲಿ ಬಳಕೆಯಲ್ಲಿರುವ ಪರಿಕರ್ಮಗಳೇ ಆಗಬೇಕಾಗಿಲ್ಲ; ಬದಲು ನಿರ್ದಿಷ್ಟವಾಗಿ ವ್ಯಾಖ್ಯಿಸಬಹುದಾದ ಯಾವುದೇ ಪರಿಕರ್ಮಗಳಾಗಿರಬಹುದು. ಗಣದ ಧಾತುಗಳಾದ a,b,c,….. ಮುಂತಾದವು ಈ ಕೆಳಗಿನ ನಿಯಮಗಳನ್ನು ಪರಿಪಾಲಿಸಲಿ. ಗಣವನ್ನು R ಎಂದು ಕರೆಯೋಣ.

1. $a, b \in R$ ಆದರೆ a+b ಸಹ $\in R$
2. a+b = b+a
3. a + (b+c) = (a+b) + c
4. ಯಾವುದೇ $a \in R$ಗೆ a+0=a ಆಗುವಂತೆ 0 ಎಂಬ ಒಂದು ಧಾತು ಉಂಟು. ಈ ಧಾತುವನ್ನು ಸೊನ್ನೆ ಎಂದು ಕರೆಯಬಹುದು.
5. ಯಾವುದೇ $a \in R$ಗೆ a+x=0 ಆಗುವಂತೆ ಮತ್ತೊಂದು $x \in R$ ಧಾತು ಉಂಟು. xನ್ನು -aಎಂದು ಬರೆಯುತ್ತೇವೆ.

6. $a,b \in R$ ಆದರೆ a,b ಸಹ $\in R$. ಇದನ್ನು ಇನ್ನು ಮುಂದೆ ab ಎಂದು ಬರೆಯುವೆವು.

7. a (bc) = (ab) c

8. a(a+c) = ab+ac

9. (b+c) a = ba +ca

ಈ ಒಂಭತ್ತು ನಿಯಮಗಳನ್ನು ಪಾಲಿಸತಕ್ಕ ಗಣಕ್ಕೆ ವಲಯ (ರಿಂಗ್) ಎಂದು ಹೆಸರು. ಮೊದಲನೆಯ ಐದು ನಿಯಮಗಳಿಂದ ವಲಯ ಸಂಕಲನ ಗ್ರೂಪ್ (ಅಡಿಷನ್ ಗ್ರೂಪ್0 ಆಗುತ್ತದೆ) **(ನೋಡಿ– ಗ್ರೂಪ್–ಸಿದ್ಧಾಂತ)**

ಮೇಲಣ ನಿಯಮಗಳ ಜೊತೆಗೆ ಗಣದ ಧಾತುಗಳು ಇನ್ನೂ ಕೆಲವು ನಿಯಮಗಳನ್ನು ಪಾಲಿಸಲಿ.

10. ab = ba

11. ಯಾವುದೇ $a \in R$ಗೆ a.1=a ಆಗುವಂತೆ ಒಂದು ಧಾತು 1 ಇರಲಿ. ಈ ಧಾತುವನ್ನು ಗುಣಾಕಾರದ ಏಕ ಎನ್ನುವೆವು.

12 $ca = cb, c \neq 0$ ಆದರೆ a = b

ಈ ಹನ್ನೆರಡು ನಿಯಮಗಳನ್ನು ಪಾಲಿಸುವ ಗಣ ಒಂದು ಪೂರ್ಣಾಂಕ ಪ್ರಾಂತ (ಇಂಟೆಗ್ರಲ್ ಡೊಮೇನ್). ಇವುಗಳ ಜೊತೆಗೆ ಕೆಳಗಿನ ಇನ್ನೂ ಒಂದು ನಿಯಮವನ್ನು ಪಾಲಿಸುವ ಗಣಕ್ಕೆ ಕ್ಷೇತ್ರ (ಫೀಲ್ಡ್) ಎಂದು ಹೆಸರು.

13. $a \neq 0$ ಆಗಿರುವ ಯಾವುದೇ ಧಾತುವಿಗೆ xa = ax = 1 ಆಗುವಂತೆ ಒಂದು ZÀVÀx ಉಂಟು, x ನ್ನು $a^{-1}$ ಎಂದು ಬರೆದು ಇದನ್ನು aಯ ವ್ಯಸ್ತ ಎನ್ನುತ್ತೇವೆ.

ಕ್ಷೇತ್ರಕ್ಕಿಂತ ವಲಯ ವಿಸ್ತಾರವೆಂಬುದೂ ಪ್ರತಿಯೊಂದು ಕ್ಷೇತ್ರವೂ ಒಂದು ವಲಯವೆಂಬುದೂ ಸ್ಪಷ್ಟ. ವಲಯ 10ನೆಯ ನಿಯಮವನ್ನೂ ಪಾಲಿಸಿದರೆ ಅದು ಪರಿವರ್ತಕ ವಲಯ (ಕಾಮ್ಯುಟೇಟಿವ್ ರಿಂಗ್) ಎನ್ನಿಸಿಕೊಳ್ಳುತ್ತದೆ. ವಲಯದಲ್ಲಿ ಗುಣಾಕಾರದ ಏಕವಿರಬಹುದು, ಇಲ್ಲದಿರಬಹುದು.

ಉದಾಹರಣೆಗಳು: 1 ಅಂಕಗಣಿತದ +,.. ಕ್ರಿಯೆಗಳಿಗೆ ಪೂರ್ಣಾಂಕಗಳ ಗಣ ಪರಿವರ್ತಕವಲಯ. ಇದರಲ್ಲಿ 1 ಧಾತುವೂ ಉಂಟು.

2. ಸರಿ ಪೂರ್ಣಾಂಕಗಳ (ಈವನ್ ಇಂಟಿಜರ್ಸ್) ಗಣವೂ ಪರಿವರ್ತಕವಲಯ. ಇದರಲ್ಲಿ ಏಕ ಧಾತು ಇಲ್ಲ

3. ನೈಜ ಸಂಖ್ಯಾಗಣವೂ (ರಿಯಲ್ ನಂಬರ್ ಸೆಟ್) ಸಂಕೀರ್ಣ ಸಂಖ್ಯಾ ಗಣವೂ ವಲಯಗಳು. ಇವು ಕ್ಷೇತ್ರಗಳೂ ಹೌದು.

4. n ಸಾಲುಗಳುಳ್ಳ ಚೌಕ ಮಾತೃಕೆಗಳ (ಸ್ಕ್ವೇರ್ ಮ್ಯಾಟ್ರಿಸಸ್) ಗಣ ಅಪರಿವರ್ತಕ (ನಾನ್‌ಕಾಮ್ಯುಟೇಟಿವ್) ವಲಯ.

5. a,b,n ಪೂರ್ಣಾಂಕಗಳು. (a-b) ಯನ್ನು n ಶೇಷರಹಿತವಾಗಿ ಭಾಗಿಸುವುದಾದರೆ $a \equiv b \pmod{n}$ ಎಂದು ಬರೆಯುತ್ತೇವೆ. nನ್ನು ಕುರಿತು a,b ಸಮಶೇಷ (ಕಾಂಗ್ರುಯೆಂಟ್) ಎಂದು ಓದಬಹುದು. (a ಕಾಂಗ್ರುಯೆಂಟ್ ಟು b ಮಾಡ್ಯುಲೋ)

$a \equiv b \bmod n, a' \equiv b' \bmod n$ ಆಗಿದ್ದರೆ $a + a' \equiv b + b'$ ಮತ್ತು $aa' \equiv bb'$. ಈ ಭಾಷೆಯಲ್ಲಿ, ಯಾವುದೇ ಪೂರ್ಣಾಂಕ 0,1,2,...., (n-1) ಗಳಲ್ಲಿ ಒಂದಕ್ಕೆ ಸಮ. ಈ n ಪೂರ್ಣಾಂಕಗಳುಳ್ಳ ಗಣವನ್ನು $J_n$ ಎಂದು ಕರೆದರೆ $J_n$ ಒಂದು ವಲಯ. n ಮೂಲ ಸಂಖ್ಯೆಯಾದರೆ (ಪ್ರೈಮ್ ನಂಬರ್) $J_n$ ಪೂರ್ಣಾಂಕ ಪ್ರಾಂತವಾಗುತ್ತದೆ.

6. ನೈಜ ಸಂಖ್ಯೆಗಳಿಂದ ರಚಿಸಬಹುದಾದ ಬಹುಪದಿಗಳ (ಪಾಲಿನೋಮಿಯಲ್ಸ್) ಗಣ ಪೂರ್ಣಾಂಕಪ್ರಾಂತ. ಎರಡು ಬಹುಪದಿಗಳಿಂದ ಉತ್ಪನ್ನವಾಗುವ p(x)/q(x) ಬೀಜೋಕ್ತಿಯನ್ನು ಭಿನ್ನರಾಶಿ ಎಂದು ಕರೆದರೆ ಭಿನ್ನರಾಶಿಗಳ ಗಣ ಕ್ಷೇತ್ರ.

R ವಲಯದ ಒಂದು ಉಪಗಣ S ಆಗಿರಲಿ. $a,b \in S$ ಆದಾಗ $a-b \in S$ $ab \in S$ ಆಗಿದ್ದರೆ Sನ್ನು Rನ ಉಪವಲಯ (ಸಬ್‌ರಿಂಗ್) ಎನ್ನುತ್ತೇವೆ.

R ಕ್ಷೇತ್ರವಾಗಿದ್ದು S ಅದರ ಉಪಗಣವಾಗಿರಲಿ. R ನಲ್ಲಿರುವ ಮತ್ತು 1 ಧಾತುಗಳು Sನಲ್ಲೂ ಇದ್ದು $a,b \in S$ ಆದಾಗ a+b ಮತ್ತು ab ಸಹ $\in S$ ಆಗಿ $a \in S (a \neq 0)$ ಆದಾಗ $a^{-1}$ ಸಹ $\in S$ ಆಗಿದ್ದರೆ Sನ್ನು Rನ ಉಪಕ್ಷೇತ್ರ (ಸಬ್‌ಫೀಲ್ಡ್) ಎನ್ನುತ್ತೇವೆ. ಉದಾಹರಣೆಗೆ ಸರಿ ಪೂರ್ಣಾಂಕಗಳ ಗಣ ಪೂರ್ಣಾಂಕ ವಲಯದ ಉಪವಲಯ a,b ಪರಿಮೇಯ ಸಂಖ್ಯೆಗಳಾದರೆ $a+b\sqrt{2}$ ಎಂಬ ರೂಪದ ಸಂಖ್ಯೆಗಳ ಗಣ ನೈಜ ಸಂಖ್ಯಾ ಕ್ಷೇತ್ರದ ಉಪಕ್ಷೇತ್ರ. ಏಕೀಕ್ರಮಣ (ಹೋಮೋಮಾರ್ಫಿಸಂ): A ಮತ್ತು A' ಎಂಬ ಎರಡು ವಲಯಗಳಲ್ಲಿ ಪ್ರತಿ $a \in A$ಗೂ ಕೆಳಗಿನ ಕಾರಣಗಳಿರುವಂತೆ $aH \in A'$ ಧಾತು ಇರಲಿ.

(i) ಪ್ರತಿ aಗೂ ಒಂದು ನಿರ್ದಿಷ್ಟವಾದ aH ಇರುತ್ತದೆ.

(ii) A'ನ ಪ್ರತಿಯೊಂದು ಧಾತು a', Aಯ ಒಂದು ಧಾತುವಿಗಾದರೂ ಛಾಯೆ, ಎಂದರೆ a'=aH, ಆಗುವಂತೆ ಒಂದು ಅಥವಾ ಹೆಚ್ಚು aಗಳು ಇರಬಹುದು.

(iii) (a+b)H=aH+bH,(ab)H=(aH)(bH)

ಹೀಗಿದ್ದರೆ a→aH ಎಂಬ ಸಂವಾದಿತ್ವವನ್ನು (ಕರೆಸ್ಪಾಂಡೆನ್ಸ್) A'ಮೇಲೆ Aಯ ಏಕೀಕ್ರಮಣ ಎನ್ನುತ್ತೇವೆ. ಏಕೀಕ್ರಮಣ ಸಂಕಲನ ಗುಣಾಕಾರಗಳನ್ನು ಪಾಲಿಸತಕ್ಕ ಬಹು–ಏಕ ಸಂವಾದಿತ್ವ, ಸುಲಭ ಉದಾಹರಣೆಯಾಗಿ ಪೂರ್ಣಾಂಕಗಣ Jಯ ಯಾವುದೇ ಪೂರ್ಣಾಂಕ $J_n$ [ಮೇಲೆ ಉದಾಹರಣೆ (5)] ಗಣದ ಒಂದು ಸಂಖ್ಯೆಗೆ ಹೊಂದಿಕೊಳ್ಳುತ್ತದೆ. ಈ ಸಂವಾದಿತ್ವ $J_n$ ಮೇಲೆ Jಯ ಏಕೀಕ್ರಮಣ. 0,1,2………….(n-1) ಗಳಲ್ಲಿ r ಒಂದಾದರೆ $\lambda n + r$ ಎಂಬ ಎಲ್ಲ ಪೂರ್ಣಾಂಕಗಳ ಛಾಯೆಯೂ r ಆಗುತ್ತದೆ. ಇಲ್ಲಿ ಯಾವುದೇ ಪೂರ್ಣಾಂಕ. ಮೊದಲನೆಯ ಗಣದ ಎರಡು ಧಾತುಗಳಾದ a,b ಗಳ ಛಾಯೆ ಒಂದೇ ಆಗಲು (a-b)H=0' ಆಗಬೇಕು. ಇಲ್ಲಿ 0' ಎಂಬುದು ಎರಡನೆಯ ಗಣದ ಶೂನ್ಯ ಧಾತು.

ಮೇಲಣ ವ್ಯಾಖ್ಯೆಯಲ್ಲಿ ಬಹು–ಏಕತ್ವ ಏಕ–ಏಕತ್ವವಾಗಿದ್ದರೆ ಏಕೀಕ್ರಮಣ ಪ್ರತಿಬಿಂಬನ (ಐಸೊಮಾರ್ಫಿಸಂ) ಆಗುತ್ತಿತ್ತು. ಈ ಭಾವನೆಯಿಂದ ಮತ್ತೊಂದು ಮುಖ್ಯ ಭಾವನೆ ಮೂಡುತ್ತದೆ.

ಆದರ್ಶಗಲು (ಐಡಿಯಲ್ಸ್) : C ಎಂಬುದು Aವಲಯದ ಒಂದು ಉಪಗಣ.

(i) $c_1, c_2 \in C$ ಆದರೆ ಸಹ $c_1 - c_2$ ಸಹ $\in C$

(ii) $c \in C, a \in A$ ಆದರೆ ac ಮತ್ತು ca ಎರಡೂ $\in C$. ಈ ಗುಣಗಳಿರುವ Cಯನ್ನು Aವಲಯದಲ್ಲಿ ಆದರ್ಶ ಎನ್ನುತ್ತೇವೆ. ಪ್ರತಿಯೊಂದು ಆದರ್ಶವೂ ವಲಯದ ಉಪವಲಯ: ಆದರೆ ಉಪವಲಯಗಳೆಲ್ಲವೂ ಆದರ್ಶವಾಗಿರಬೇಕಾಗಿಲ್ಲ. ಉದಾಹರಣೆಯಾಗಿ ಪರಿಮೇಯ ಸಂಖ್ಯೆಗಳ ವಲಯ Qನಲ್ಲಿ ಪೂರ್ಣಾಂಕಗಳ ಗಣ I ಒಂದು ಉಪವಲಯ. ಆದರೆ ಇದು ಆದರ್ಶವಲ್ಲ. ಹೇಗೆಂದರೆ $\frac{1}{2} \in Q, 1 \in I;$ ಆದರೆ $\frac{1}{2}.1 \notin I;$

A ಯ ಯಾವುದೇ ಏಕೀಕ್ರಮಣ H ನಲ್ಲಿ ಸೊನ್ನೆಯನ್ನು ಛಾಯೆಯಾಗುಳ್ಳ ಧಾತುಗಳ ಗಣ Aಯಲ್ಲಿ ಒಂದು ಆದರ್ಶವಾಗಿರುತ್ತದೆ. ಈಗ A ಎಂಬುದು ಏಕಧಾತು ಇರುವ ಪರಿವರ್ತಕ ವಲಯವಾಗಿರಲಿ. $a \in A$ ಆದರೆ, (ra), r ಯಾವುದೇ ಪೂರ್ಣಾಂಕ ಎಂಬ ಗಣ Aಯ ಒಂದು ಆದರ್ಶ, ಇದನ್ನು aಯಿಂದ ಉಂಟಾದ ಪ್ರಧಾನ ಆದರ್ಶ (ಪ್ರಿನ್ಸಿಪಲ್ ಐಡಿಯಲ್) ಎನ್ನುವೆವು. aಯನ್ನು ಒಳಗೊಂಡ Aಯ ಅತಿಹ್ರಸ್ವ ಆದರ್ಶವಿದು. ಪ್ರತಿಯೊಂದು ಆದರ್ಶವೂ ಪ್ರಧಾನ ಆದರ್ಶವಾದರೆ ವಲಯವನ್ನು ಪ್ರಧಾನ ಆದರ್ಶವಲಯ (ಪ್ರಿನ್ಸಿಪಲ್ ಐಡಿಯಲ್ ರಿಂಗ್) ಎನ್ನುತ್ತೇವೆ. ಪೂರ್ಣಾಂಕಗಳ ವಲಯ ಇದಕ್ಕೆ ಉದಾಹರಣೆ.

**ಕ್ಷೇತ್ರದ ಗುಣಗಳು:** F ಕ್ಷೇತ್ರದ ಯಾವುದೇ ಧಾತುಗಳು a,b ಆಗಿದ್ದರೆ $a \neq 0, ax = b$ ಆಗುವಂತೆ $x \in F$ ಒಂದೇ ಧಾತುವಿರುತ್ತದೆ. xನ್ನು b/a ಅಥವಾ $\frac{b}{a}$ ಎಂದು ಬರೆದು aಯನ್ನು bಯಿಂದ ಭಾಗಿಸಿ ಬಂದ ಸಂಖ್ಯೆ ಎನ್ನುತ್ತೇವೆ. ಎಂದರೆ ಕ್ಷೇತ್ರದ ಯಾವುದೇ ಧಾತುವನ್ನು ಅಶೂನ್ಯವಲ್ಲದ ಯಾವುದೇ ಧಾತುವಿನಿಂದ ಒಂದೇ ಒಂದು ರೀತಿಯಲ್ಲಿ ಭಾಗಿಸಬಹುದು. ಅನುಮಿತಗಳಾಗಿ ಕೆಳಗಿನ ಪ್ರಮೇಯಗಳು ದೊರೆಯುತ್ತವೆ.

(i) $\frac{a}{b} = \frac{c}{a}$ ಆದರೆ ಮತ್ತು ಆದಾಗ ಮಾತ್ರ ad = bc,

(ii) $\frac{a}{b} + \frac{d}{c} = \frac{ad + bc}{bd}$

(iii) $\left(\frac{a}{b}\right)\left(\frac{c}{d}\right) = \frac{ac}{bd}$

(iv) $\left(\frac{a}{b}\right)\left(\frac{b}{a}\right) = 1, b \neq 0, d \neq 0$ ಕಡೆಯದಕ್ಕೆ ಕೂಡ. $a \neq 0$

ಪೂರ್ಣಾಂಕ ಪ್ರಾಂತದ ಗಣಗಳ ಸಂಖ್ಯೆ ಸಾಂತ (ಫೈನೈಟ್) ಆಗಿದ್ದರೆ ಅದು ಕ್ಷೇತ್ರವಾಗುತ್ತದೆ. ಉದಾಹರಣೆಯಾಗಿ n ಮೂಲ ಸಂಖ್ಯೆಯಾದರೆ $J_n$ ಒಂದು ಕ್ಷೇತ್ರ.

(ಸಿ.ಎನ್.ಎಸ್.; ಪಿ.ಎಸ್.ಕೆ.ಆರ್.)

**ಕ್ಷೇತ್ರಸಿಂಹ :** 14ನೆಯ ಶತಮಾನದ ಉತ್ತರಾರ್ಧದಲ್ಲಿ ಮೇವಾಡವನ್ನು ಆಳಿದ ಗುಹಿಲವಂಶದ ಒಬ್ಬ ಅರಸು **(ನೋಡಿ– ಗುಹಿಲರು)**. ಕ್ಷೇತ್ರಸಿಂಹ ತನ್ನ ತಂದೆ ರಾಣಾ ಹಮೀರನ ಜೊತೆಗೆ ಮೇವಾಡವನ್ನು ಮುಸಲ್ಮಾನರ ಕೈಯಿಂದ ಬಿಡಿಸಿ ಪುನಃ

ರಜಪೂತ ರಾಜ್ಯವನ್ನು ಸ್ಥಾಪಿಸಿದನೆಂದು ಪ್ರಸಿದ್ಧನಾಗಿದ್ದಾನೆ. ಅಲ್ಲಾವುದ್ದೀನ್ ಖಿಲ್ಜಿ ರಾಜಸ್ಥಾನದ ರಣಥಂಬೋರ್ ಸಂಸ್ಥಾನವನ್ನು ಗೆದ್ದು ತನ್ನ ಸೋದರ ಉಲುಘ್‌ಖಾನನನ್ನು ಅಧಿಕಾರಿಯನ್ನಾಗಿ ನೇಮಿಸಿ ಮೇವಾಡದ ಮೇಲೆ ದಾಳಿ ಮಾಡಿದ. ಅವನು ಮೇವಾಡವನ್ನು ಆಳುತ್ತಿದ್ದ ರಾಣಾ ರತನ್‌ಸಿಂಗನ ಪತ್ನಿ ಪದ್ಮಿನಿಗಾಗಿಯೋ ರಾಜ್ಯದ ಎಲ್ಲೆಯನ್ನು ವಿಸ್ತರಿಸುವ ಉದ್ದೇಶದಿಂದಲೋ ಮೇವಾಡವನ್ನು ಆಕ್ರಮಿಸಿದ. ಈ ವಿಷಯದ ಬಗ್ಗೆ ಇತಿಹಾಸಜ್ಞರಲ್ಲಿ ಏಕಾಭಿಪ್ರಾಯವಿಲ್ಲ. ಈ ದಾಳಿ ಪದ್ಮಿನಿಗೋಸ್ಕರ ಜರುಗಿರಬಹುದು ಎಂಬುದು ಜೇಮ್ಸ್ ಟಾಡ್, ಈಶ್ವರೀ ಪ್ರಸಾದ ಮೊದಲಾದವರ ಅಭಿಪ್ರಾಯ. ರಾಜಸ್ಥಾನದಲ್ಲಿ ಪ್ರಚಲಿತವಿರುವ ಸಾಂಪ್ರದಾಯಿಕವಾದ ಖಯಾತ ಎಂಬ ಜನಪದ ಗೀತೆಗಳೂ ಪರ್ಷಿಯನ್ ಇತಿಹಾಸಕಾರನಾದ ಫೆರಿಷ್ತನ ಬರೆಹವೂ ಇದಕ್ಕೆ ಆಧಾರ. ಆದರೆ ಫೆರಿಷ್ತ ಈ ವಿಷಯವನ್ನು 16ನೆಯ ಶತಮಾನದಲ್ಲಿದ್ದ ಮಲ್ಲಿಕ್ ಮಹಮ್ಮದ್ ಜಯಸ್ಸಿ ಎಂಬುವನ ಪದ್ಮಾವತ್ ಎಂಬ ಕೃತಿಯಿಂದೆತ್ತಿಕೊಂಡಿರುವುದರಿಂದ ಅವನ ಈ ಅಭಿಪ್ರಾಯವನ್ನು ನಂಬಲು ಸಾಧ್ಯವಿಲ್ಲವೆಂಬುದು ಗೌರೀಶಂಕರ ಓಜ್ಹಾನ ಅಭಿಪ್ರಾಯವಾಗಿದೆ. ಅಲ್ಲಾವುದ್ದೀನನ ದಾಳಿಯ ಉದ್ದೇಶವೇನೇ ಇದ್ದಿರಲಿ, ಮೇವಾಡ ಸಂಸ್ಥಾನ ರಜಪೂತ ರಾಣರ ಕೈತಪ್ಪಿ ಮುಸಲ್ಮಾನರ ವಶವಾಯಿತು. ಮೇವಾಡದ ರಾಜಧಾನಿ ಚಿತ್ತೂರು(ಚಿತೋಡಗಡ) ಸೋಮವಾರ ಹಿಜರಿ ವರ್ಷ 203 ಮೋಹರ್‌ರಮ್ 11ರಂದು (ಆಗಸ್ಟ್ 26, 1303) ಅಲ್ಲಾವುದ್ದೀನನ ಕೈಸೇರಿತೆಂದು ಅಮೀರ್ ಖುಸ್ರು ಬರೆದಿದ್ದಾನೆ. ಅವನು ಆ ನಗರದ ಹೆಸರನ್ನು ಖಿಜ್ರರಾಬಾದ್ ಎಂದು ಬದಲಾಯಿಸಿ ಮೇವಾಡ ಸಂಸ್ಥಾನದ ಆಡಳಿತವನ್ನು ತನ್ನ ಮಗ ಖಿಜ್ರ್‌ಖಾನನಿಗೆ ವಹಿಸಿಕೊಟ್ಟ. ರಜಪೂತರ ಸತತ ಒತ್ತಾಯ, ಬಂಡಾಯ ಮುಂತಾದವುಗಳಿಂದಾಗಿ ಅಲ್ಲಾವುದ್ದೀನ್ ಆ ಸಂಸ್ಥಾನದ ಆಡಳಿತವನ್ನು ಖಿಜ್ರರ್‌ಖಾನನಿಂದ ತೆಗೆದುಕೊಂಡು ಸೋನ್‌ಗೀರ್ ವಂಶದ ಮಾಲದೇವನಿಗೆ ವಹಿಸಿಕೊಟ್ಟಂತೆ ತಿಳಿದುಬರುತ್ತದೆ. ಇವನೂ ಮುಸಲ್ಮಾನರ ಪಕ್ಷಕಾರನಾಗಿದ್ದುದರಿಂದ ಮೇವಾಡ ಸಂಸ್ಥಾನ ವಾಸ್ತವವಾಗಿ ಮುಸಲ್ಮಾನರ ಆಳ್ವಿಕೆಗೆ ಒಳಗಾಗಿತ್ತು. ರಾಣಾ ಹಮೀರನೂ ಕ್ಷೇತ್ರಸಿಂಹನೂ ಸಮಯ ಸಾಧಿಸಿ ಅದನ್ನು ಪುನಃ ಗೆದ್ದುಕೊಂಡರು. ಕ್ಷೇತ್ರಸಿಂಹ ಸು.1364ರಲ್ಲಿ ಹಮೀರನ ಮರಣಾನಂತರ ಪಟ್ಟಕ್ಕೆ ಬಂದ. ಸು.1382ರಲ್ಲಿ ಜ್ಞಾತಿ ಯುದ್ಧವೊಂದರಲ್ಲಿ ಈತ ಮರಣಹೊಂದಿದನೆಂದು ತಿಳಿದುಬರುತ್ತದೆ.

(ಎಸ್.ಎಸ್.ಜೆ.ಎ.)

**ಕ್ಷೇತ್ರ ಸಿದ್ಧಾಂತಗಳು** : ಭೌತ ಪರಿಮಾಣಗಳು(ಉದಾಹರಣೆಗೆ ವೇಗ, ಬಲ, ಉಷ್ಣತೆ, ವಿದ್ಯುತ್ತು ಇತ್ಯಾದಿ) ಇರುವ ಮಾಧ್ಯಮದ ಗುಣಗಳ ಅಧ್ಯಯನ ಮಾಡುವ ಸಿದ್ಧಾಂತಗಳು(ಫೀಲ್ಡ್ ಥಿಯೋರಿಸ್). ಭೌತವಿಜ್ಞಾನದಲ್ಲಿ ಸಾಂತತ್ಯಕವೊಂದರ(ಕಂಟಿನ್ಯೂವಂ) ಎಲ್ಲ ಭಾಗಗಳಲ್ಲಿಯೂ ಯಾವುದಾದರೂ ಪರಿಸ್ಥಿತಿಯ ಅವಿಚ್ಛಿನ್ನ ವಿತರಣೆಗೆ ಕ್ಷೇತ್ರ(ಫೀಲ್ಡ್) ಎಂಬ ಪದವನ್ನು ಕೊಡುತ್ತಾರೆ. ಉದ್ದೇಶಪೂರ್ವಕವಾಗಿಯೇ ಇಲ್ಲಿ ಪರಿಸ್ಥಿತಿ ಎಂಬ ಅಸ್ಪಷ್ಟವಾದ ಉಕ್ತಿಯನ್ನು ಉಪಯೋಗಿಸಿದೆ. ಏಕೆಂದರೆ ಸಮಸ್ಯೆಗೆ ಸಂಬಂಧಪಟ್ಟಂತೆ ಯಾವುದರ ವಿತರಣೆಯಿಂದ ಕ್ಷೇತ್ರ ರೂಪಿತವಾಗುವುದೋ ಅಂತಹುದರ ಪರಿಮಾಣದ ನಿಷ್ಕೃಷ್ಟವಾದ ಸ್ವಭಾವ ವ್ಯತ್ಯಾಸವಾಗುತ್ತದೆ.

ಆಕಾಶದ(ಸ್ಪೇಸ್) ಪ್ರತಿಯೊಂದು ಬಿಂದುವಿನಲ್ಲಿಯೂ ಪರಿಸ್ಥಿತಿ ಸಾಕಷ್ಟು ಮಟ್ಟಿಗೆ ಒಂದು ಸರಳ ಸಂಖ್ಯೆಯಿಂದ ವಿವರಿಸಲ್ಪಟ್ಟರೆ (ಅಂದರೆ ಒಂದು ಅದಿಶದಿಂದ) ಆಗ ಅದಿಶ ಕ್ಷೇತ್ರವೆಂಬ(ಸ್ಕೇಲಾರ್ ಫೀಲ್ಡ್) ಹೆಸರಿನ ಕ್ಷೇತ್ರ ದೊರೆಯುತ್ತದೆ. ಉಷ್ಣತೆ ಈ ರೀತಿಯ ಒಂದು ಪರಿಸ್ಥಿತಿ. ಆದ್ದರಿಂದ ಆಕಾಶದ ಪೂರ್ತ ಉಷ್ಣತೆಯ ವಿತರಣೆ ಅದಿಶ ಕ್ಷೇತ್ರಕ್ಕೆ ಒಂದು ಭೌತ ಉದಾಹರಣೆ, ಅನೇಕ ಸಂದರ್ಭಗಳಲ್ಲಿ ಆಕಾಶದ ಪ್ರತಿಯೊಂದು ಬಿಂದುವಿನಲ್ಲಿಯೂ ಈ ವ್ಯವಸ್ಥೆಗೆ ಒಂದು ಪರಿಮಾಣವಲ್ಲದೆ ದಿಕ್ಕೂ ಇರುತ್ತದೆ. ಇದನ್ನು ಪ್ರತಿನಿಧಿಸಲು ಒಂದು ಬಾಣ ಗುರುತು ಅಥವಾ ಸದಿಶ(ವೆಕ್ಟರ್) ಬೇಕಾಗುತ್ತದೆ. ಅಂಥ ಕ್ಷೇತ್ರಕ್ಕೆ ಸದಿಶ ಕ್ಷೇತ್ರವೆಂದು(ವೆಕ್ಟರ್ ಫೀಲ್ಡ್) ಹೆಸರು. ಬಲಗಳ ಕ್ಷೇತ್ರ ಅಥವಾ ಚಲಿಸುತ್ತಿರುವ ದ್ರವದ ಪ್ರತಿಯೊಂದು ಬಿಂದುವಿನಲ್ಲಿಯೂ ಇರುವ ತಾತ್ಕ್ಷಣಿಕ ವೇಗ(ಇನ್ಸ್ ಟೆಂಟೇನಿಯಸ್ ವೆಲಾಸಿಟಿ) ಇವುಗಳೆಲ್ಲ ಸದಿಶ ಕ್ಷೇತ್ರಗಳ ಚಿತ್ರಗಳು. ಈ ಪರಿಸ್ಥಿತಿ ಪ್ರತಿಯೊಂದು ಬಿಂದುವಿನಲ್ಲಿಯೂ ಟೆನ್ಸರಿನಿಂದ ವರ್ಣಿಸಲ್ಪಟ್ಟರೆ ನಮಗೆ ಟೆನ್ಸರ್ ಕ್ಷೇತ್ರ ದೊರೆಯುತ್ತದೆ. ಪುಟಿತ ಮಾಧ್ಯಮದಲ್ಲಿ(ಇಲಾಸ್ಟಿಕ್ ಮೀಡಿಯಂ) ಒತ್ತಾಯಗಳ(ಸ್ಟ್ರೆಸ್ಸಸ್) ವಿತರಣೆ ಹಾಗೂ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದ ನಾಲ್ಕು ಆಯಾಮಗಳ ಆಕಾಶ-ಕಾಲದಲ್ಲಿ(ಸ್ಪೇಸ್-ಟೈಂ) ಗುರುತ್ವೀಯ ಕ್ಷೇತ್ರ ಇವು ಈ ರೀತಿಯವು. ಈ ಕ್ಷೇತ್ರಗಳ ಸ್ವಭಾವ ಹೇಗೆಯೇ ಇರಲಿ, ಪರಿಸ್ಥಿತಿಯ ವಿತರಣೆ ಸ್ಥಿರವಾಗಿದ್ದರೆ ಅದಕ್ಕೆ ಸ್ಥಿರ ಕ್ಷೇತ್ರವೆಂದೂ ವ್ಯತ್ಯಾಸವಾಗುತ್ತಿದ್ದರೆ ಅಸ್ಥಿರ ಕ್ಷೇತ್ರವೆಂದೂ ಕರೆಯುತ್ತೇವೆ. ಇವೇ ಅಲ್ಲದೆ ಬಿರುಗಾಳಿಯಲ್ಲಿ ಮರಳಿನ ಪ್ರತಿಯೊಂದು ಕಣದ ವೇಗ ಸದಿಶಗಳಿಂದ ನಿರೂಪಿತವಾದ ಕ್ಷೇತ್ರದಂಥ ಪೃಥಕ್(ಡಿಸ್‌ಕ್ರೀಟ್) ಕ್ಷೇತ್ರವನ್ನೂ ಪರ್ಯಾಲೋಚಿಸಬಹುದು. ಈ ರೀತಿಯ ಕ್ಷೇತ್ರದಲ್ಲಿ ಮರಳು ಕಣವಿರುವ ಪ್ರತಿಯೊಂದು ಬಿಂದುವಿನಲ್ಲಿಯೂ ಆ ಕಣದಲ್ಲಿ ಕಣದ ವೇಗವನ್ನು ಸ್ಪಷ್ಟಪಡಿಸುವ ವೇಗ ಸದಿಶವೊಂದು ಇರುತ್ತದಲ್ಲದೆ ಮರಳು ಕಣಗಳಿಲ್ಲದಿರುವ ಬಿಂದುಗಳಲ್ಲಿ ಸದಿಶಗಳಿರುವುದಿಲ್ಲ. ಆದರೆ ಈ ರೀತಿಯ ಪೃಥಕ್ ಕ್ಷೇತ್ರಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದು ಬಹಳ ಅಪರೂಪವೆಂದು ಒತ್ತಿ ಹೇಳಬೇಕು. ಕ್ಷೇತ್ರವನ್ನು ಕುರಿತು ಮಾತನಾಡುವಾಗ ಸಾಮಾನ್ಯವಾಗಿ ಅದು ಅವಿಚ್ಛಿನ್ನವೆಂದೇ ಭಾವಿಸಿಕೊಳ್ಳಲಾಗುವುದು.

ಯಾವುದರ ಅವಿಚ್ಛಿನ್ನ ವಿತರಣೆ ಕ್ಷೇತ್ರವನ್ನು ಉಂಟುಮಾಡುವುದೋ ಆ ಭೌತ ಸ್ಥಿತಿ ಒಂದು ಸನ್ನಿವೇಶದಿಂದ ಮತ್ತೊಂದರಲ್ಲಿ ವ್ಯತ್ಯಾಸವಾಗುವುದು. ಕೆಲವು ಸಂದರ್ಭಗಳಲ್ಲಿ ಅದನ್ನು ಬಲ, ವೇಗ, ವೇಗೋತ್ಕರ್ಷ, ವಿಸ್ಥಾಪನೆ(ಡಿಸ್‌ಪ್ಲೇಸ್ ಮೆಂಟ್) ವಿಕೃತಿ ಅಥವಾ ಒತ್ತಾಯ ಈ ರೀತಿಯ ಬಲವೈಜ್ಞಾನಿಕ ಸಂವರ್ಗಗಳ(ಮೆಕ್ಯಾನಿಕಲ್ ಗ್ರೂಪ್ಸ್) ಮೂಲಕ ವ್ಯಾಖ್ಯಿಸಬಹುದು. ಆಗ ಆ ಕ್ಷೇತ್ರಬಲವೈಜ್ಞಾನಿಕ ಸ್ವಭಾವದ್ದಾಗುತ್ತದೆ. ಕೆಲವು ವೇಳೆ ಈ ಪರಿಸ್ಥಿತಿಯನ್ನು ಬಲವೈಜ್ಞಾನಿಕ ಸಂವರ್ಗಗಳು ವಿವರಿಸಲಾರವು. ಇಂಥ ಸಂದರ್ಭದಲ್ಲಿ ಆ ಕ್ಷೇತ್ರ ಬಲವೈಜ್ಞಾನಿಕವಲ್ಲ.

ಈಗ ಕ್ಷೇತ್ರ ಸಿದ್ಧಾಂತವೆಂದರೇನು ಎಂದು ವಿಚಾರ ಮಾಡೋಣ. ಆಕಾಶವನ್ನು ಈಥರ್ ಆವರಿಸಿರುವುದೆಂದು ಕೆಲವು ಸಂದರ್ಭಗಳಲ್ಲಿ ಭಾವಿಸಿಕೊಂಡು ಆ ಈಥರಿನ ಗುಣಲಕ್ಷಣಗಳ ಅಧ್ಯಯನವೇ ಕ್ಷೇತ್ರ ಸಿದ್ಧಾಂತವೆಂದು ಭಾವಿಸಿದ್ದುದಿತ್ತು. ಪೂರ್ವ ಕಾಲದಲ್ಲಿ ಈಥರನ್ನು ವಸ್ತುಗಳ ಅನೇಕ ಗುಣಲಕ್ಷಣಗಳುಳ್ಳ ಪುಟಿತ ಮಾಧ್ಯಮವೆಂದು ಭಾವಿಸಿಕೊಳ್ಳಲಾಗಿತ್ತು. ಆದ್ದರಿಂದ ಕ್ಷೇತ್ರಸಿದ್ಧಾಂತ ಪುಟಿತ ಸಿದ್ಧಾಂತದಂತೆ ಅವಿಚ್ಛಿನ್ನ ರೀತಿಯ ಬಲವೈಜ್ಞಾನಿಕ ಸಿದ್ಧಾಂತದಿಂದ ಮೂಲಭೂತವಾಗಿ ಏನೂ ವ್ಯತ್ಯಾಸ ಹೊಂದಿಲ್ಲವೆಂದು ತೋರ್ಪಟ್ಟಿತು. ಆದರೆ ಆಧುನಿಕ ದೃಷ್ಟಿಯಲ್ಲಿ ಈ ಎರಡು ಸಿದ್ಧಾಂತಗಳೂ ಪರಸ್ಪರ ಭಿನ್ನವಾಗಿವೆ. ಏಕೆಂದರೆ ಈಗ ಈಥರಿಗೆ ಬಲವೈಜ್ಞಾನಿಕ ಗುಣಗಳೇನೂ ಇಲ್ಲವೆಂದು ಭಾವಿಸಲಾಗಿದೆ. ಹೀಗಾಗಿ ಪುಟಿತ ಗುಣಗಳುಳ್ಳ ವಸ್ತುವನ್ನು ಆವರಿಸಿರುವ ಬಲವೈಜ್ಞಾನಿಕ ಒತ್ತಾಯಗಳಿರುವ ಕ್ಷೇತ್ರದಿಂದ ಈಥರ್ ತೀಕ್ಷ್ಣವಾಗಿ ವ್ಯತ್ಯಾಸವಾಗಿದೆ.

ಈಥರಿನಿಂದ ಸಮಸ್ತ ಬಲವೈಜ್ಞಾನಿಕ ಗುಣಗಳನ್ನೂ ಹಿಂತೆಗೆದುಕೊಂಡದ್ದರಿಂದ ಕೆಲವು ಭೌತವಿಜ್ಞಾನಿಗಳು ಶೂನ್ಯ ಪ್ರದೇಶಕ್ಕೆ ಈಥರ್ ಇನ್ನೊಂದು ಹೆಸರು ಎಂದು ಭಾವಿಸಿಕೊಳ್ಳುತ್ತಾರೆ. ಈ ಭಾವನೆಯ ಪ್ರಕಾರ ಈಥರಿನ ಕ್ಷೇತ್ರವೆಂದರೆ ದಿಕ್ಕಿನ (ಅಥವಾ ಆಕಾಶ-ಕಾಲಗಳ) ಗುಣವಿಶೇಷಗಳು. ಹೀಗಾಗಿ ಅದು ಆಕಾಶಕ್ಷೇತ್ರವಾದ್ದರಿಂದ ಆಕಾಶ ಕೂಡ ನಿಷ್ಕ್ರಿಯದ ಶೂನ್ಯ ಪ್ರದೇಶವಲ್ಲ, ಅದು ಸಕ್ರಿಯಾಕಾರಕವೆಂದು (ಆಕ್ಟಿವ್ ಏಜೆಂಟ್) ಭಾವಿಸಿಕೊಳ್ಳಬೇಕು.

ಪ್ರಕೃತದಲ್ಲಿ ಕ್ಷೇತ್ರ ಸಿದ್ಧಾಂತಗಳು ಅವಿಚ್ಛಿನ್ನ ರೀತಿಯ ಬಲವೈಜ್ಞಾನಿಕ ಸಿದ್ಧಾಂತಗಳಿಂದ ವ್ಯತ್ಯಸ್ತವಾಗಿವೆಯೆಂದು ಜ್ಞಾಪಕದಲ್ಲಿಟ್ಟಿರಬೇಕು. ಏಕೆಂದರೆ ಅವು ಬಲವೈಜ್ಞಾನಿಕ ಸಂವರ್ಗಗಳನ್ನೇನನ್ನೂ ಒಳಗೊಂಡಿರುವುದಿಲ್ಲ. ಹಾಗೂ ವಿಚ್ಛಿನ್ನ ಕ್ಷೇತ್ರಗಳ(ಅನಿಲಗಳ ಅಣುಗತಿ ಸಿದ್ಧಾಂತದಂಥ) ಬಲವೈಜ್ಞಾನಿಕ ಸಿದ್ಧಾಂತಗಳಿಂದ ಇನ್ನೂ ಹೆಚ್ಚು ಪಾಲು ವ್ಯತ್ಯಾಸ ಹೊಂದಿರುತ್ತವೆ; ಏಕೆಂದರೆ ಕ್ಷೇತ್ರದ ಅವಿಚ್ಛಿನ್ನತೆ ಮತ್ತು ಪರಮಾಣು ರೀತ್ಯ ವೀಕ್ಷಿಸಲ್ಪಟ್ಟ ವಸ್ತುವಿನ ಪೃಥಕ್ ಸ್ಥಿತಿ ಇವೆರಡರ ನಡುವೆ ಇರುವ ಇನ್ನೂ ಹೆಚ್ಚಿನ ಭೇದ ಎದ್ದು ಕಾಣುತ್ತದೆ.

ಕ್ಷೇತ್ರ ಸಿದ್ಧಾಂತಗಳು ಸಾಪೇಕ್ಷವಾಗಿ ಇತ್ತೀಚೆಗೆ ಕಾಣಿಸಿಕೊಂಡುದಕ್ಕೆ ಅನೇಕ ಕಾರಣಗಳುಂಟು. ಮೊದಲನೆಯವಾಗಿ ಕ್ಷೇತ್ರಗಳು ಅವಿಚ್ಛಿನ್ನವಾಗಿರುವುದರಿಂದ ಗಣಿತ ಸೂತ್ರಗಳಿಗೆ ಆಂಶಿಕ ಅವಕಲ ಸಮೀಕರಣಗಳ (ಪಾರ್ಶಿಯಲ್ ಡಿಫರೆನ್ಶಿಯಲ್ ಇಕ್ವೇಶನ್ಸ್) ಪ್ರವೇಶ ಅಗತ್ಯ. ಆದ ಕಾರಣ ಕ್ಷೇತ್ರ ಸಿದ್ಧಾಂತಗಳನ್ನು (ಹಾಗೂ ಅವಿಚ್ಛಿನ್ನ ರೂಪದ ಬಲವೈಜ್ಞಾನಿಕ ಸಿದ್ಧಾಂತಗಳನ್ನು) ಆಂಶಿಕ ಅವಕಲ ಸಮೀಕರಣ ಗುಣಧರ್ಮಗಳು ಮನದಟ್ಟಾಗುವ ಕಾಲದ ತನಕ ಅಂದರೆ ಹತ್ತೊಂಬತ್ತನೆಯ ಶತಮಾನದ ಆದಿಭಾಗದ ತನಕ ನಿರ್ಮಾಣ ಮಾಡಲು ಆಗುತ್ತಲೇ ಇರಲಿಲ್ಲ. ಶುದ್ಧ ಗಣಿತದ ಎಡರುಗಳನ್ನು ನಿಭಾಯಿಸಿಕೊಂಡು ಭೌತ ವ್ಯವಸ್ಥೆಯ ಅವಿಚ್ಛಿನ್ನ ವಿತರಣೆಯನ್ನು ಗಣಿತರೂಪವಾಗಿ ವ್ಯಾಸಂಗ ಮಾಡಲು ಸಾಧ್ಯವಾದರೂ ಕ್ಷೇತ್ರ ಸಿದ್ಧಾಂತಗಳು ಭೌತವಿಜ್ಞಾನಿಗಳಿಗೆ ತತ್ ಕ್ಷಣವೇ ಹೊಳೆಯಲಿಲ್ಲ. ಇದಕ್ಕೆ ಕಾರಣ ಇಷ್ಟೆ : ಅವಿಚ್ಛಿನ್ನ ವಿತರಣೆಯ ಮೊದಲ ರೂಪ ಭೌತವಿಜ್ಞಾನಿಗಳ ಗಮನಕ್ಕೆ ಬಂದದ್ದು ಪುಟಿತ ಮಾಧ್ಯಮದಲ್ಲಿ ಒತ್ತಾಯದ ಅವಿಚ್ಛಿನ್ನ ವಿತರಣೆ. ಈ ಒತ್ತಾಯಗಳು ಸ್ಪಷ್ಟವಾಗಿ ಬಲವೈಜ್ಞಾನಿಕ ಪರಿಮಾಣಗಳು. ಮ್ಯಾಕ್ಸ್‌ವೆಲ್ ವಿದ್ಯುತ್ಕಾಂತ ಕ್ಷೇತ್ರವನ್ನು ಆವಿಷ್ಕರಿಸಿದ ಬಳಿಕವೇ ಭೌತವಿಜ್ಞಾನಿಗಳು, ನವೀನ ಅಬಲವೈಜ್ಞಾನಿಕ(ನಾನ್ ಮೆಕಾನಿಕಲ್) ಭೌತ ಅಸ್ತಿತ್ವ ಗೋಚರವಾಯಿತೆಂದು ಭಾವಿಸಿಕೊಂಡರು. ಮ್ಯಾಕ್ಸ್‌ವೆಲ್ಲನ ಸಂಶೋಧನೆಗಳು ಇನ್ನೂ ಮುಂಚಿನ ದಿವಸಗಳಲ್ಲಿ ಪ್ರಕಟವಾಗಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ವಿದ್ಯುತ್ ಸಂಶೋಧನೆಗಳನ್ನು ಆರಂಭಿಸಿದ ವಿಜ್ಞಾನಿಗಳ ಅನೇಕ ಪ್ರಾಯೋಗಿಕ ಮತ್ತು ತಾರ್ಕಿಕ ಫಲಿತಾಂಶಗಳಿಂದ ಮ್ಯಾಕ್ಸ್‌ವೆಲ್

ಮಾರ್ಗದರ್ಶನ ಪಡೆದ. ಹೀಗಾಗಿ ಪ್ರಾಯೋಗಿಕ ಮತ್ತು ಗಣಿತ ಸ್ವರೂಪಗಳ ಬೆಳೆವಣಿಗೆ ತಡವಾದದ್ದರಿಂದ ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಕ್ಷೇತ್ರ ಸಿದ್ಧಾಂತ ಅಭಿವೃದ್ಧಿಯಾಗಲಿಲ್ಲ.

ಹಾಗಿದ್ದ ಪಕ್ಷದಲ್ಲಿ ಗುರುತ್ವ ಕ್ಷೇತ್ರದ ಸಂಬಂಧವಾಗಿ ಕ್ಷೇತ್ರ ಸಿದ್ಧಾಂತವನ್ನು ಏಕೆ ವೃದ್ಧಿಪಡಿಸಲಿಲ್ಲ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಗುರುತ್ವ ಕ್ಷೇತ್ರ ಎಂಬ ನಾಮಧೇಯವೇ ಆ ಕ್ಷೇತ್ರದ ಅಸ್ತಿತ್ವದಲ್ಲಿ ನಂಬಿಕೆ ಇತ್ತೆಂದು ಸೂಚಿತವಾಗುತ್ತದೆ. ವಾಸ್ತವವಾಗಿ ಐನ್‌ಸ್ಟೈನನಿಗೆ ಮುಂಚೆ ಗುರುತ್ವಕ್ಷೇತ್ರವೆಂದರೆ ಆಕಾಶ ಅಥವಾ ಈಥರಿನ ಒಂದು ಸ್ಥಿತಿ ಎಂಬ ಸಲಹೆಯೆಂದು ಅರ್ಥವಾಗುತ್ತಿರಲಿಲ್ಲ. ಪದಾರ್ಥದ ಸುತ್ತ ಗುರುತ್ವಕ್ಷೇತ್ರದ ವಿಷಯವಾಗಿ ಭೌತವಿಜ್ಞಾನಿಗಳು ಮಾತನಾಡಿದಾಗ ಅವರು ವಸ್ತುವಿನ ಸುತ್ತ ಇರುವ ಬಲವೈಜ್ಞಾನಿಕ (ಮೆಕ್ಯಾನಿಕಲ್) ಬಲದ ವಿಷಯವೆಂದು ಅರ್ಥಮಾಡುತ್ತಿದ್ದರು. ವಸ್ತುವಿನ ಸುತ್ತಲೂ ಇರುವ ಆಕಾಶ ಜಡವಾಗಿದ್ದು ಕ್ಷೇತ್ರದೊಂದಿಗೆ ನೇರ ಸಂಬಂಧ ಹೊಂದಿಲ್ಲವೆಂದು ಭಾವಿಸಿಕೊಂಡಿದ್ದರು. ಈ ಕಾರಣದಿಂದ ನ್ಯೂಟನ್ನನ ಗುರುತ್ವಾಕರ್ಷಣೆಯ ಸಿದ್ಧಾಂತ ಕ್ಷೇತ್ರಸಿದ್ಧಾಂತವಲ್ಲ. ಕ್ಷೇತ್ರಸಿದ್ಧಾಂತದ ವೈಶಿಷ್ಟ್ಯಗಳನ್ನು ಪರ್ಯಾಲೋಚಿಸುವಾಗ ಈ ವಿಷಯಗಳು ಇನ್ನೂ ಉತ್ತಮವಾಗಿ ಅರ್ಥವಾಗುತ್ತವೆ.

ಸೂರ್ಯನಂಥ ಸ್ಥೂಲವಸ್ತುವೊಂದು ಫಕ್ಕನೆ ಅಸ್ತಿತ್ವಕ್ಕೆ ಬಂತೆಂದು ಭಾವಿಸೋಣ. ಅದರ ಸಮೀಪದಲ್ಲಿರುವ ಒಂದು ಗ್ರಹ ಗುರುತ್ವಾಕರ್ಷಣೆಗೆ ಒಳಪಡುತ್ತದೆ. ಸೂರ್ಯನ ಗುರುತ್ವೀಯ ಬಲ ಗ್ರಹಕ್ಕೆ ಯಾವ ರೀತಿಯಲ್ಲಿ ಪ್ರೇಷಿತವಾಯಿತೆಂದು ವಿಚಾರ ಮಾಡೋಣ. ಸೂರ್ಯ ಫಕ್ಕನೆ ಅಸ್ತಿತ್ವಕ್ಕೆ ಬಂದಾಗ ಅದರ ಸುತ್ತಲೂ ಇರುವ ಆಕಾಶ (ಅಥವಾ ಅದನ್ನು ತುಂಬಿರುವ ಮಾಧ್ಯಮ) ವಿಕ್ಷೋಭೆಗೊಳ್ಳುತ್ತದೆ ಎಂದು ಭಾವಿಸಬಹುದು. ಈ ವಿಕ್ಷೋಭೆ ಗೋಳೀಯ ಅಲೆಗಳ ರೂಪದಲ್ಲಿ ಮುಂದುವರಿದು ಗ್ರಹವನ್ನು ತಲಪುತ್ತದೆ. ಆ ಕ್ಷಣದಲ್ಲಿ ಆಕರ್ಷಣ ಬಲ ಗ್ರಹದ ಮೇಲೆ ಪ್ರಕಟಿತವಾಗುವುದು. ಈ ರೀತಿಯಾಗಿ ಕ್ರಿಯೆ ವಸ್ತುವನ್ನು ಮಾಧ್ಯಮದ ಮೂಲಕ ತಲಪುವುದಕ್ಕೆ ಸಂಪರ್ಕ ಕ್ರಿಯೆ(ಕಾಂಟ್ಯಾಕ್ಟ್ ಏಕ್ಷನ್) ಎಂದು ಹೆಸರು. ಮಾಧ್ಯಮದಲ್ಲಿ ಆಧರಿತವಾದ ವಿಕ್ಷೋಭೆಯ ನಿಷ್ಕೃಷ್ಟ ಸ್ವಭಾವವನ್ನು ಕುರಿತು ಪ್ರಕೃತ ವಿಮರ್ಶೆಯಲ್ಲಿ ವಿಚಾರ ಮಾಡಬೇಕಾಗಿಲ್ಲ. ಅದು ಬಲವೈಜ್ಞಾನಿಕ ಸಂಕುಂಚನ ಅಥವಾ ಬೇರೆ ರೀತಿಯದಾಗಿರಬಹುದು. ಆದ್ದರಿಂದ ಈ ವಿಕ್ಷೋಭೆಯನ್ನು ಗುರುತ್ವೀಯ ಪರಿಸ್ಥಿತಿ(ಗ್ರ್ಯಾವಿಟೇಷನಲ್ ಕಂಡಿಷನ್) ಎಂಬ ಅಸ್ಪಷ್ಟ ಹೆಸರಿನಿಂದ ಸೂಚಿಸಬಹುದು. ಈ ಪರಿಸ್ಥತಿಯ ತೀಕ್ಷ್ಣತೆ ಸೂರ್ಯನ ಸುತ್ತ ಇರುವ ಪ್ರದೇಶದಲ್ಲಿ ಸ್ಥಳದಿಂದ ಸ್ಥಳಕ್ಕೆ ಬದಲಾವಣೆಯಾಗುತ್ತ ಹೋಗುವುದು. ಈ ಪರಿಸ್ಥಿತಿಯ ವಿತರಣೆಯೇ ಕ್ಷೇತ್ರವೆಂದು ನಾವು ಕರೆಯುವುದನ್ನು ನಿರೂಪಿಸುತ್ತದೆ. ಈ ದೃಷ್ಟಿಯಿಂದ ಗುರುತ್ವದ ಕ್ಷೇತ್ರಕ್ಕೆ ವಿವರಣೆಯನ್ನು ಕೊಟ್ಟಂತಾಗುವುದು. ಏಕೆಂದರೆ ಸೂರ್ಯ ನೇರವಾಗಿ ಗ್ರಹದ ಮೇಲೆ ಕ್ರಿಯೆ ನಡೆಸುವುದಿಲ್ಲ. ಅದು ಈಥರಿನ ಪರಿಸ್ಥಿತಿಯಲ್ಲಿ ವ್ಯತ್ಯಾಸವನ್ನು ಉತ್ಪನ್ನ ಮಾಡುತ್ತದೆ. ಈ ವ್ಯತ್ಯಾಸವೇ ಗುರುತ್ವಕ್ಷೇತ್ರದ ಆಕರ್ಷಣೆಯಾಗಿ ತೋರಿ ಬರುತ್ತದೆ. ಹೀಗಾಗಿ ಈಥರ್ ಅಥವಾ ಸೂರ್ಯನ ಸುತ್ತ ಇರುವ ಆಕಾಶ ಈ ಘಟನೆಯಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತದೆ. ಈ ರೀತಿ ಕ್ಷೇತ್ರಕ್ಕೆ ವಿವರಣೆಯನ್ನು ಕೊಡುವುದರಿಂದ ಸೂರ್ಯ ಅಸ್ತಿತ್ವಕ್ಕೆ ಬಂದ ಕ್ಷಣದಿಂದ ಗ್ರಹ ಗುರುತ್ವಾಕರ್ಷಣೆಯನ್ನು ಅನುಭವಿಸುವ ಕ್ಷಣದ ವರೆಗೆ ಒಂದು ನಿರ್ದಿಷ್ಟವಾದ ಕಾಲ ಬೇಕೆಂಬುದು ಗೊತ್ತಾಗುತ್ತದೆ. ಗುರುತ್ವವೆಂದರೆ ಕ್ಷೇತ್ರದ ಪ್ರಕಟಣೆಯೆಂದು ಭಾವಿಸಿಕೊಳ್ಳಲು ಪ್ರಯತ್ನಗಳು ನಡೆದವು ಹಾಗೂ ಈ ಪರಿಸ್ಥಿತಿಯನ್ನು ನಿದರ್ಶಿಸಲು ಪ್ರಯೋಗಗಳನ್ನೂ ಮಾಡಲಾಯಿತು. ಆದರೆ ಈ ರೀತಿಯ ಬಲವೈಜ್ಞಾನಿಕ ವ್ಯಾಖ್ಯಾನಗಳನ್ನು ಶೀಘ್ರದಲ್ಲಿ ತ್ಯಜಿಸಲಾಯಿತು. ಗುರುತ್ವಾಕರ್ಷಣೆಯ ಸಮಸ್ಯೆಯನ್ನು ಬೇರೊಂದು ರೀತಿಯಲ್ಲಿ ನೋಡಬಹುದು. ಗ್ರಹದಮೇಲೆ ಸೂರ್ಯನ ಕ್ರಿಯೆ ನೇರವಾಗಿ ಉಂಟಾಗಿ ಮಾಧ್ಯಮ ತಟಸ್ಥವಾಗಿದ್ದು ಈ ಘಟನೆಯಲ್ಲಿ ಪಾತ್ರವೇನನ್ನೂ ವಹಿಸುವುದಿಲ್ಲವೆಂದು ಭಾವಿಸಿಕೊಳ್ಳಬಹುದು. ಈ ರೀತಿ ವ್ಯಾಖ್ಯಾನ ಮಾಡಿದರೆ ಕ್ರಿಯೆಯ ಪ್ರೇಷಣ ತತ್ ಕ್ಷಣದಲ್ಲಿ ಆಗುವುದೆಂದೂ ಆದ್ದರಿಂದ ಸೂರ್‍ಯನ ಅಸ್ತಿತ್ವವಾದೊಡನೆಯೇ ಗುರುತ್ವಾಕರ್ಷಣೆ ಸಂಭವಿಸುವುದೆಂದೂ ಕಲ್ಪಿಸಿಕೊಳ್ಳಬೇಕಾಗುತ್ತದೆ. ಇದೇ ದೂರಕ್ರಿಯೆ ಎಂಬ ಪರಿಕಲ್ಪನೆ. ಈ ಕಲ್ಪನೆ ಕ್ಷೇತ್ರಸಿದ್ಧಾಂತಕ್ಕೆ ವಿರೋಧವಾಗಿದೆ.

ಲಸಾಜ್ಞ್ ಎಂಬಾತ ಬೇರೆ ರೀತಿಯ ವ್ಯಾಖ್ಯಾನವನ್ನು ಮಂಡಿಸಿದ: ಆಕಾಶದಲ್ಲಿ ಎಲ್ಲ ದಿಕ್ಕುಗಳಲ್ಲೂ ಚಲಿಸುತ್ತಿರುವ ಕಣಗಳ ಸತತ ತಾಡನಗಳಿಂದ ಗುರುತ್ವಾಕರ್ಷಣೆ ಉಂಟಾಗುತ್ತದೆ; ಎರಡು ವಸ್ತುಗಳು ವಾಸ್ತವವಾಗಿ ಜಡವಾಗಿಯೇ ಇರುತ್ತವೆ; ಇವು ಒಂದನ್ನೊಂದನ್ನು ಮರೆಮಾಡುವುದರಿಂದ ಕಣಗಳ ತಾಡನದ ಪರಿಣಾಮ ಗುರುತ್ವಾಕರ್ಷಣೆಯಾಗುವುದು ಎಂಬುದು ಲಸಾಜ್ಞನ ವಾದ. ಇದನ್ನು ವಿಮರ್ಶೆ ಮಾಡಿದ ಮೇಲೆ ಅದು ಅಸ್ವೀಕೃತವೆಂದು ತಿರಸ್ಕರಿಸಲಾಯಿತು.

ದೂರಕ್ರಿಯೆ ಮತ್ತು ಸಂಪರ್ಕಕ್ರಿಯೆ ಈ ಎರಡು ಪರಿಕಲ್ಪನೆಗಳಲ್ಲಿ ಯಾವುದು ಸರಿಯಾದದ್ದು ಎನ್ನುವುದನ್ನು ಪ್ರಾಯೋಗಿಕ ಫಲಿತಾಂಶಗಳಿಂದ ನಿರ್ಧರಿಸುವುದು ಅಷ್ಟೇನೂ ಸುಲಭವಲ್ಲ. ಅತಿ ಹೆಚ್ಚು ದ್ರವ್ಯರಾಶಿಯಿರುವ ವಸ್ತುವನ್ನು ಫಕ್ಕನೆ ತಂದು(ಅಥವಾ ಅದನ್ನು ನಿರ್ನಾಮಮಾಡಿ) ದೂರದ ಬಿಂದುವಿನಲ್ಲಿ ಗುರುತ್ವಬಲ ಪ್ರಕಟಿತವಾಗುವುದಕ್ಕೆ(ಅಥವಾ ನಿಂತು ಹೋಗುವುದಕ್ಕೆ) ತೆಗೆದುಕೊಳ್ಳುವ ಕಾಲವನ್ನು ಅಳೆಯುವುದು ಪ್ರಾಯೋಗಿಕವಾಗಿ ಸಾಧ್ಯವಾಗುವುದಿಲ್ಲ. ನ್ಯೂಟನ್ನನ ಗುರುತ್ವಾಕರ್ಷಣೆಯ ಸಿದ್ಧಾಂತವನ್ನು ಪ್ರಯೋಗ ಮಾಡುವಾಗ ದೂರಕ್ರಿಯೆಯ ತರ್ಕವನ್ನು ಉಪಯೋಗಿಸಿಕೊಳ್ಳಲಾಯಿತು. ಗ್ರಹಗಳ ಚಲನೆಯ ಅಂಕಿಅಂಶಗಳನ್ನು ಉಪಯೋಗಿಸಿಕೊಂಡು ಲಾಪ್ಲಾಸ್ ಈ ತರ್ಕಕ್ಕೆ ಬೆಂಬಲ ನೀಡಿದ. ಆ ಕಾಲದಲ್ಲಿ ಗುರುತ್ವಾಕರ್ಷಣೆಗೆ ಕ್ಷೇತ್ರ ಸಿದ್ಧಾಂತವನ್ನು ಅಭಿವೃದ್ಧಿಪಡಿಸುವುದು ವೃಥಾ ಶ್ರಮವೆಂದು ವಿಜ್ಞಾನಿಗಳ ಅಭಿಪ್ರಾಯವಾಗಿತ್ತು.

ವಿದ್ಯುತ್ಕಾಂತ ಘಟನೆಗಳ ಅಧ್ಯಯನದಲ್ಲಿ ಗುರುತ್ವಾಕರ್ಷಣದ ವಿದ್ಯಮಾನದಂತೆಯೇ ದೂರಕ್ರಿಯೆ ಮತ್ತು ಕ್ಷೇತ್ರಸಿದ್ಧಾಂತ ಇವೆರಡರಲ್ಲಿ ಯಾವುದನ್ನು ಸ್ವೀಕರಿಸಬೇಕೆಂಬ ಸಮಸ್ಯೆ ತಲೆದೋರಿತು. ನ್ಯೂಟನ್ನನ ವ್ಯಸ್ತವರ್ಗದ(ಇನ್ವರ್ಸ್‌ಸ್ಕ್ವೇರ್) ನಿಯಮದಂತೆಯೇ ಆವೇಶಗಳ(ಚಾರ್ಜಸ್) ನಡುವಣ ಬಲವೂ ಇರುತ್ತದೆಂದು ಕೂಲಂಬ್ ಸ್ಥಾಪಿಸಿದ. ಇದೇ ನಿಯಮ ಕಾಂತ ಧ್ರುವಗಳಿಗೂ ಅನ್ವಯಿಸುತ್ತದೆ. ಗುರುತ್ವಾಕರ್ಷಣ ನಿಯಮದಂತೆ ಇದ್ದುದರಿಂದಲೋ ಅಥವಾ ಕ್ಷೇತ್ರಸಿದ್ಧಾಂತ ಅಭಿವೃದ್ಧಿಸಲ್ಪಡದೆ ಇದ್ದುದರಿಂದಲೋ ವಿದ್ಯುತ್ಕಾಂತ ಘಟನೆಗಳಿಗೆ ಸಂಬಂಧಿಸಿದಂತೆ ಕೂಡ ದೂರಕ್ರಿಯೆಯ ವಾದಕ್ಕೇ ಮನ್ನಣೆ ದೊರಕಿತು. ವಿದ್ಯುತ್ ಪ್ರವಾಹಗಳೆರಡರ ನಡುವಿನ ಕ್ರಿಯೆ ಮತ್ತು ವಿದ್ಯುತ್ ಪ್ರವಾಹ, ಕಾಂತ ಇವುಗಳ ನಡುವಿನ ಕ್ರಿಯೆ ಇದೇ ರೀತಿಯ ನಿಯಮವನ್ನು ಪಾಲಿಸುತ್ತವೆಂದು ಅಭಿಪ್ರಾಯ ಪಡಲಾಯಿತು.

ಒಂದು ನೇರವಾದ ತಂತಿಯ ಮೂಲಕ ವಿದ್ಯುತ್ ಪ್ರವಹಿಸುತ್ತದೆಂದು ಭಾವಿಸೋಣ. ಆಗ ವಿದ್ಯುತ್ ಪ್ರವಾಹದ ಹತ್ತಿರ ಇಟ್ಟಿರುವ ಕಾಂತಸೂಜಿಯ ಮೇಲೆ ಒಂದು ಬಲಪ್ರಯೋಗವಾಗುವುದೆಂದೂ ಸೂಜಿ ವಿದ್ಯುತ್ ಪ್ರವಹಿಸುವ ದಿಕ್ಕಿಗೆ ಅಡ್ಡವಾಗಿ ವಿಶ್ರಾಂತಿಗೆ ಬರುವುದೆಂದೂ ಗೊತ್ತಾಗಿದೆ. ನಾವು ಕ್ಷೇತ್ರ ಸಿದ್ಧಾಂತವನ್ನು ಒಪ್ಪಿಕೊಂಡರೆ ಸೂಜಿಯ ಮೇಲೆ ಅದನ್ನು ಪಲ್ಲಟಿಸುವ ಬಲಪ್ರಯೋಗವಾಗುತ್ತಿದೆಯೆಂದೂ ಈ ಬಲ ವಿದ್ಯುತ್ ಪ್ರವಾಹ ಹರಿಯುವುದಕ್ಕೆ ಪ್ರಾರಂಭವಾದ ಸ್ವಲ್ಪ ಕಾಲದ ಅನಂತರ ಪ್ರಯೋಗವಾಗುತ್ತದೆಂದೂ ಭಾವಿಸಿಕೊಳ್ಳಬೇಕಾಗುತ್ತದೆ. ಇದೇ ರೀತಿ ವಿದ್ಯುತ್ ಪ್ರವಾಹವನ್ನು ನಿಲ್ಲಿಸಿದಾಗಲೂ ಸೂಜಿಯಲ್ಲಿಯ ಪಲ್ಲಟ ತತ್‌ಕ್ಷಣವೇ ತೆಗೆದು ಹಾಕಲ್ಪಡದೆ ಕೊಂಚ ಕಾಲದ ಬಳಿಕ ಸೂಜಿ ಪೂರ್ವಸ್ಥಿತಿಗೆ ಬರುತ್ತದೆ. ಈ ಪ್ರಕ್ಷೋಭೆ ಅಥವಾ ಕ್ಷೇತ್ರ ಅಕಾಶದಲ್ಲಿ ಹರಡಿಕೊಳ್ಳುತ್ತ ಹೋಗಿ ಮುಂದೆ ಹೋದಂತೆಲ್ಲ ಅದರ ತೀಕ್ಷ್ಣತೆ ಕಡಿಮೆಯಾಗುತ್ತ ಬರುತ್ತದೆಂದು ಹೇಳಿದ ಹಾಗಾಯಿತು. ವಿದ್ಯುತ್ಕಾಂತ ಕ್ಷೇತ್ರದ ಸಿದ್ಧಾಂತ ಜಯಗಳಿಸಬೇಕಾದರೆ ಅದು ಹಿಂದೆ ಹೇಳಿರುವ ನಿರ್ಣಯಗಳಿಗೆ ಒಪ್ಪಾಗಿರಬೇಕು. ಅಲ್ಲಿಯವರೆಗೆ ಗೊತ್ತಾಗಿದ್ದ ಅನುಭವಸಿದ್ಧ ನಿಯಮಗಳನ್ನು ಗಣನೆಗೆ ತೆಗೆದುಕೊಂಡು ಸ್ವಂತವಾದ ಪರಿಕಲ್ಪನೆಗಳನ್ನು ಇವುಗಳಿಗೆ ಸೇರಿಸಿ ಪ್ರಸಿದ್ಧವಾಗಿರುವ ವಿದ್ಯುತ್ಕಾಂತ ಕ್ಷೇತ್ರ ಸಮೀಕರಣಗಳನ್ನು ಮ್ಯಾಕ್ಸ್‌ವೆಲ್ ನಿರೂಪಿಸಿದ.

ಮ್ಯಾಕ್ಸ್‌ವೆಲ್ಲನ ಸಿದ್ಧಾಂತದಲ್ಲಿ ಆಕಾಶದ ಪ್ರತಿಯೊಂದು ಬಿಂದುವಿನಲ್ಲಿಯೂ ಈಥರಿನ ಪರಿಸ್ಥಿತಿ ಎರಡು ಪರಿಮಾಣಗಳಿಂದ ನಿರ್ಧರಿಸಲ್ಪಡುತ್ತದೆ: ವಿದ್ಯುತ್ ತೀಕ್ಷ್ಣತೆ (ಒಂದು ಸದಿಶ) ಮತ್ತು ಕಾಂತ ತೀಕ್ಷ್ಣತೆ (ಒಂದು ಟೆನ್ಸರ್). ಯಾವ ಕ್ಷಣದಲ್ಲಿಯೇ ಆಗಲಿ ಈ ಎರಡು ಪರಿಮಾಣಗಳ ವಿತರಣೆ ಅನುಕ್ರಮವಾಗಿ ವಿದ್ಯುತ್ ಮತ್ತು ಕಾಂತ ಕ್ಷೇತ್ರಗಳನ್ನು ನಿರ್ಧರಿಸುತ್ತದೆ. ಈ ಎರಡು ಕ್ಷೇತ್ರಗಳ ನಡುವೆ ಪರಸ್ಪರ ಸಂಬಂಧವಿದ್ದೇ ಇರುತ್ತದೆ. ಏಕೆಂದರೆ ಒಂದು ವ್ಯತ್ಯಾಸವಾದರೆ ಮತ್ತೊಂದು ವ್ಯತ್ಯಾಸವಾಗಲೇಬೇಕು. ವಿತರಣೆ ಮತ್ತು ವ್ಯತ್ಯಾಸ ಇವುಗಳಿಂದ ಈ ಎರಡು ಕ್ಷೇತ್ರಗಳ ನಡುವಣ ಸಂಬಂಧಗಳನ್ನು ಮ್ಯಾಕ್ಸ್‌ವೆಲ್ಲನ ಸಮೀಕರಣಗಳು ಉಲ್ಲೇಖಿಸುತ್ತದೆ. ಆದ್ದರಿಂದ ವಿದ್ಯುತ್ಕಾಂತ ಕ್ಷೇತ್ರದಲ್ಲಿಯ ವ್ಯತ್ಯಾಸಗಳನ್ನು ನಿಯಂತ್ರಿಸುವ ಗಣಿತ ನಿಯಮಗಳನ್ನು ಈ ಸಮೀಕರಣಗಳು ತಿಳಿಸುತ್ತವೆಂದು ಹೇಳಬಹುದು. ಎಲ್ಲರಿಗೂ ಸುಪರಿಚಿವಾಗಿರುವಂತೆ ಮ್ಯಾಕ್ಸ್‌ವೆಲ್ ಸಿದ್ಧಾಂತದ ನೇರ ಪರಿಣಾಮವೇನೆಂದರೆ ವಿದ್ಯುತ್ಕಾಂತ ವಿಕ್ಷೋಭೆ ಶೂನ್ಯ ಪ್ರದೇಶದಲ್ಲಿ ಬೆಳಕಿನ ವೇಗದಿಂದ ಚಲಿಸುತ್ತಿರಬೇಕು. ಈ ಮುಖ್ಯವಾದ ಮುನ್ಸೂಚನೆಯನ್ನು ಹರ್ಟ್ಸ್ ಎಂಬಾತ ಪ್ರಯೋಗಗಳಿಗೆ ಗುರಿಪಡಿಸಿ ಅದು ಕರಾರುವಾಕ್ಕಾಗಿದೆಯೆಂದು ಸ್ಥಿರಪಡಿಸಿ ವಿಜ್ಞಾನಿಗಳೆಲ್ಲರೂ ಒಪ್ಪಿಗೆ ಸೂಚಿಸುವಂತೆ ಮಾಡಿದ.

ವಿದ್ಯುತ್ಕಾಂತ ಕ್ಷೇತ್ರ ಇರುವಾಗ ಈಥರಿನ ಪರಿಸ್ಥಿತಿ ಮತ್ತು ಪುಟಿತ ಘನವನ್ನು ವಿರೂಪಕ್ಕೆ ಒಳಪಟ್ಟಾಗ ಇರುವ ಪರಿಸ್ಥಿತಿ ಇವೆರಡರ ನಡುವೆ ಹೆಚ್ಚು ಸಾದೃಶ್ಯ ಉಂಟು. ಒಂದು ರೇಖೀಯ ತಂತಿಯಲ್ಲಿ ವಿದ್ಯುತ್ ಪ್ರವಾಹವನ್ನು ಅತ್ತಿತ್ತ ಹರಿಯುವಂತೆ ಮಾಡಿದಾಗ ಉತ್ಪನ್ನವಾಗುವ ಕ್ಷೇತ್ರದಲ್ಲೂ ಅಲೆಗಳು ಉದ್ಭವಿಸುತ್ತವೆ. ಈ ಸಂದರ್ಭದಲ್ಲಿ ಸಾದೃಶ್ಯ ಇನ್ನೂ ಹೆಚ್ಚು ವಿಸ್ಮಯಕರ. ಆದರೆ ಈ ಸಾದೃಶ್ಯ ತೋರಿಕೆಗೆ ಮಾತ್ರ. ಒಳಹೊಕ್ಕು ವಿಚಾರ ಮಾಡಿದರೆ ಬಲವೈಜ್ಞಾನಿಕ ವ್ಯಾಖ್ಯಾನ ಹೆಚ್ಚು ಗೊಂದಲಕಾರಿ ಮತ್ತು ಅನೇಕ ವೇಳೆ ಪರಸ್ಪರ ವಿರುದ್ಧವಾಗಿ ಕಾಣಬರುತ್ತದೆ. ಆದ್ದರಿಂದ ಕ್ಷೇತ್ರಕ್ಕೆ ಬಲವೈಜ್ಞಾನಿಕ ವ್ಯಾಖ್ಯಾನವನ್ನು

ಕೊಡುವ ಪ್ರಥಮ ಪ್ರಯತ್ನಗಳನ್ನು ಮ್ಯಾಕ್ಸ್‌ವೆಲ್ ಕೈಬಿಟ್ಟ. ಇದಕ್ಕೆ ಬದಲಾಗಿ ಅವನ ಕ್ಷೇತ್ರ ಸಿದ್ಧಾಂತ ಆಧುನಿಕ ಅರ್ಥ ಕೊಡುವ ರೂಪವನ್ನು ತಾಳಿತು. ಕ್ಷೇತ್ರದಲ್ಲಿ ಈಥರಿನ ಪರಿಸ್ಥಿತಿ ಒಂದು ಭೌತ ರೂಪದ್ದು. ಇದನ್ನು ಬಲವೈಜ್ಞಾನಿಕ ಸ್ಥಾನಮಾನಗಳಿಂದ ವ್ಯಾಖ್ಯಿಸುವುದು ಸಾಧ್ಯವಾಗಲಿಲ್ಲ. ಆದ್ದರಿಂದ ಭೌತವಿಜ್ಞಾನಿಗಳು ವಿದ್ಯುತ್ಕಾಂತ ಕ್ಷೇತ್ರವನ್ನು ಒಂದು ಹೊಸ ಮಾದರಿಯ ಭೌತ ವಸ್ತು ಸ್ಥಿತಿಯೆಂದು ಭಾವಿಸಿಕೊಂಡರು.

ಲೋರೆಂಟ್ಸ್‌ನ ವಿದ್ಯುತ್ಕಾಂತ ಸಿದ್ಧಾಂತದಲ್ಲಿ ಈ ಅಬಲವೈಜ್ಞಾನಿಕ ಧೋರಣೆಯನ್ನು ಒತ್ತಿ ಹೇಳಿದ್ದಲ್ಲದೆ ಆ ತತ್ತ್ವದ ಪ್ರಕಾರ ಎಲ್ಲ ಬಲವೈಜ್ಞಾನಿಕ ವ್ಯಾಖ್ಯಾಗಳೂ ತ್ಯಜಿಸಲ್ಪಟ್ಟವು. ಲೋರೆಂಟ್ಸ್ ಪರಿಕಲ್ಪನೆಯ ಈಥರ್ ಗಡಸು ಮತ್ತು ವಿರೂಪಗೊಳಿಸಲಾಗದ್ದು. ಆದ್ದರಿಂದ ಪೂರ್ಣ ವಿಶ್ರಾಂತಿಯಲ್ಲಿರುವ ನಿರ್ದೇಶಕ ಚೌಕಟ್ಟನ್ನು ಸ್ಪಷ್ಟ ಮಾಡಲು ಅದನ್ನು ಬಳಸಲಾಯಿತು. ಹೀಗಾದ್ದರಿಂದ ಲೋರೆಂಟ್ಸ್‌ನ ಈಥರ್ ಎಂಬುದು ನ್ಯೂಟನ್ನನ ನಿರಪೇಕ್ಷ ಆಕಾಶದ ಪರ್ಯಾಯ ಶಬ್ದವೆಂದಂತಾಯಿತು. ಈಥರಿಗೆ ಈ ಗುಣಗಳನ್ನು ಆರೋಪಿಸಿದರೆ, ಸ್ಥಾನಪಲ್ಲಟಗಳಿಂದಾಗಲಿ ಒತ್ತಾಯದಂಥ ನಮಗೆ ಪರಿಚಿತವಾಗಿರುವ ಬೇರೆ ಇನ್ನಾವುದಾದರೊಂದು ವ್ಯತ್ಯಾಸದಿಂದಾಗಲಿ, ಕ್ಷೇತ್ರ ಉತ್ಪನ್ನವಾಗುವುದೆಂಬ ಪರಿಕಲ್ಪನೆಯನ್ನು ಬಿಡಬೇಕಾಗುತ್ತದೆ. ವಸ್ತುಗಳಿಂದ ಮುಕ್ತವಾಗಿರುವ ಪ್ರದೇಶವನ್ನು ನಾವು ಪರ್ಯಾಲೋಚಿಸುತ್ತಿದ್ದರೆ ಕ್ಷೇತ್ರವೊಂದನ್ನೇ ಭೌತ ಅಸ್ತಿತ್ವವೆಂಬುದಾಗಿ ಪರಿಗಣಿಸಬೇಕು. ಆದರೆ ಅನೇಕ ಸಂದರ್ಭಗಳಲ್ಲಿ ವಸ್ತು ಮತ್ತು ಸಾಮಾನ್ಯ ವಿದ್ಯುತ್ ಪ್ರವಾಹಗಳಿರಬಹುದು. ಉತ್ತೇಜಿತ ಕಣಗಳ(ಎಗ್ಸೈಟೆಡ್ ಪಾರ್ಟಿಕಲ್ಸ್) ಚಲನೆಯಿಂದ ವಿದ್ಯುತ್ ಉತ್ಪನ್ನವಾಗುವುದೆಂದೂ ವಸ್ತುಗಳೆಲ್ಲ ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳಿಂದ ಮಾಡಲ್ಪಟ್ಟಿವೆಯೆಂದೂ ಲೋರೆಂಟ್ಸ್ ಭಾವಿಸಿಕೊಂಡಿದ್ದ. ಎಲ್ಲ ಅರ್ಥದಲ್ಲೂ ಎಲೆಕ್ಟ್ರಾನುಗಳೂ ವಸ್ತುಪದಾರ್ಥಗಳೇ. ಏಕೆಂದರೆ ಅವಕ್ಕೂ ದ್ರವ್ಯರಾಶಿ ಇದೆಯಲ್ಲಾ ಅವುಗಳ ಚಲನೆ ಬಲವಿಜ್ಞಾನದ(ಮೆಕಾನಿಕ್ಸ್) ಸಾಮಾನ್ಯ ನಿಬಂಧನೆಗಳಿಗೆ ಒಳಪಟ್ಟಿದೆ. ವಿದ್ಯುತ್ ಎಂಬ ಪದ ಕ್ಷೇತ್ರಕ್ಕಿಂತ ಎಲೆಕ್ಟ್ರಾನುಗಳಿಗೆ ಅನ್ವಯವಾಗುತ್ತದೆ. ತಂತಿಯಲ್ಲಿ ವಿದ್ಯುತ್ ಪ್ರವಾಹ ಎಲೆಕ್ಟ್ರಾನುಗಳ ನೂಕುನುಗ್ಗಲಿನಿಂದ ಉಂಟಾಗುವುದು. ಆದ್ದರಿಂದ ವಿದ್ಯುತ್ ಪ್ರವಾಹ ಕ್ಷೇತ್ರ ಮತ್ತು ಅದರ ವ್ಯತ್ಯಾಸಗಳಿಂದ ಬಹಳ ಮಟ್ಟಿಗೆ ಭಿನ್ನವಾದ್ದು. ಹೀಗಾಗಿ ಲೊರೆಂಟ್ಸನ ಸಿದ್ಧಾಂತ ದ್ವೈತಪರಿಕಲ್ಪನೆಯನ್ನು ಮುಂದಿಡುತ್ತದೆ: ಒಂದು ಕಡೆ ಸ್ವಯಂ ಅಸ್ತಿತ್ವದಲ್ಲಿರುವ ಭೌತ ಪರಿಮಾಣುಗಳಿಂದ ನಿರ್ದೇಶಿತವಾದ ಅವಿಚ್ಛಿನ್ನ ಅಬಲವೈಜ್ಞಾನಿಕ ಕ್ಷೇತ್ರ ಉಂಟು; ಮತ್ತೊಂದು ಕಡೆ ಎಲೆಕ್ಟ್ರಾನ್, ಪ್ರೋಟಾನ್ ಮುಂತಾದ ವಸ್ತುಗಳಿದ್ದು ಅವುಗಳ ಚಲನೆಗಳು ಬಲವೈಜ್ಞಾನಿಕ ನಿಯಮಗಳಿಗೆ ಬದ್ಧವಾಗಿವೆ. ಕ್ಷೇತ್ರ ಮತ್ತು ಎಲೆಕ್ಟ್ರಾನುಗಳು ಸಂಪೂರ್ಣವಾಗಿ ಸ್ವತಂತ್ರವಾಗಿಲ್ಲ. ಏಕೆಂದರೆ ಎಲೆಕ್ಟ್ರಾನುಗಳ ಇರುವಿಕೆ ಮತ್ತು ಅವುಗಳ ಚಲನೆ ಇವೆಲ್ಲ ಕ್ಷೇತ್ರದ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ. ಇದಕ್ಕೆ ಪ್ರತಿಯಾಗಿ ಕ್ಷೇತ್ರ ಅಬಲವೈಜ್ಞಾನಿಕವಾಗಿದ್ದರೂ ಎಲೆಕ್ಟ್ರಾನುಗಳ ಮೇಲೆ ಬಲಪ್ರಯೋಗಮಾಡುತ್ತದೆ. ಕ್ಷೇತ್ರದಿಂದ ಪ್ರಯೋಗವಾದ ಈ ಬಲಕ್ಕೆ ಪಾಂಡರೋಮೋಟಿವ್ ಎಂದು ಹೆಸರು. ಆದ್ದರಿಂದ ಈ ಬಲ ಕ್ಷೇತ್ರ ಮತ್ತು ಬಲವೈಜ್ಞಾನಿಕ ಎಲೆಕ್ಟ್ರಾನುಗಳನ್ನು ಸೇರಿಸುವ ಕೊಂಡಿಯಂತೆ ಇದೆ.

ಏಕತಾರೂಪಕ್ಕೆ ವಾಲಿದ್ದ ಅನೇಕರಿಗೆ ಲೊರೆಂಟ್ಸ್ ಸಿದ್ಧಾಂತದ ಈ ರೀತಿಯ ದ್ವೈತಪರಿಕಲ್ಪನೆ ರುಚಿಸಲಿಲ್ಲ. ಬಲವೈಜ್ಞಾನಿಕ ಮತ್ತು ವಿದ್ಯುತ್ಕಾಂತ ಕ್ರಮಗಳಲ್ಲಿ ಮಿಲನವನ್ನುಂಟು ಮಾಡಲು ಪ್ರಯತ್ನಗಳು ನಡೆದುವು. ಪ್ರಾರಂಭದಲ್ಲಿ ಮಾಡಿದ ರೀತಿಯ ಪ್ರಯತ್ನಗಳಲ್ಲಿ ಕ್ಷೇತ್ರಪರಿಮಾಣಗಳು ಮೂಲಭೂತವಾದವೆಂದೂ ವೈಜ್ಞಾನಿಕವಾದವು ಇವುಗಳ ವ್ಯುತ್ಪನ್ನಗಳೆಂದೂ ಅಭಿಪ್ರಾಯಪಡಲಾಯಿತು. ಈ ರಿತಿಯ ಕಾರ್ಯಕ್ರಮದಲ್ಲಿ ಎಲೆಕ್ಟ್ರಾನ್ ಮತ್ತು ಪ್ರೋಟಾನ್ ಕಣಗಳು ಕ್ಷೇತ್ರ ಪರಿಮಾಣಗಳಿಂದಲೇ ನಿರ್ಮಿತವಾದವುಗಳು. ಅಲ್ಲದೆ ಸಾಮಾನ್ಯವಾಗಿ ಬಲವೈಜ್ಞಾನಿಕನಿಯಮಗಳೆಲ್ಲ ವಿದ್ಯುತ್ಕಾಂತ ನಿಯಮಗಳಿಂದ ಉತ್ಪನ್ನಗಳಾದಂಥವು. ಎಲ್ಲ ಸಂವರ್ಗಗಳನ್ನೂ ಅಬಲ ವೈಜ್ಞಾನಿಕ ಕ್ಷೇತ್ರ ಪರಿಮಾಣಗಳ ಮೂಲಕ ವ್ಯಾಖ್ಯಿಸುವ ಸಿದ್ಧಾಂತಕ್ಕೆ ಶುದ್ಧ ಕ್ಷೇತ್ರ ಸಿದ್ಧಾಂತವೆಂದು (ಪ್ಯೂರ್ ಫೀಲ್ಡ್ ಥಿಯರಿ) ಹೆಸರು. ಹೀಗೆ ಲೊರೆಂಟ್ಸ್‌ನ ದ್ವೈತ ಕ್ಷೇತ್ರ ಸಿದ್ಧಾಂತವನ್ನು ಶುದ್ಧ ಕ್ಷೇತ್ರಸಿದ್ಧಾಂತಕ್ಕೆ ಪರಿವರ್ತಿಸಲು ಪ್ರಯತ್ನಗಳು ನಡೆದವು.

ಈ ರೀತಿ ಪ್ರಯತ್ನಗಳನ್ನು ನಡೆಸಿದವರಲ್ಲಿ ಅಬ್ರಹಾಂ ಮೊದಲನೆಯವ. ದ್ರವ್ಯ ರಾಶಿಯ ಬಲವೈಜ್ಞಾನಿಕ ಸೂತ್ರ ಲಕ್ಷಣದ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿ ಎಲೆಕ್ಟ್ರಾನ್ ಒಂದು ಗಡಸು ರಚನೆ ಪಡೆದಿದ್ದು ಚಲಿಸುತ್ತಿರುವಾಗ ಅದರ ದ್ರವ್ಯರಾಶಿಯನ್ನು ಕ್ಷೇತ್ರ ಪರಿಮಾಣಗಳಿಂದ ಅಂದಾಜುಮಾಡಬಹುದೆಂದು ತೋರಿಸಿದ ಈ ದೃಷ್ಟಿಯಲ್ಲಿ ದ್ರವ್ಯರಾಶಿ ಮೂಲಭೂತವಾಗಿ ವಿದ್ಯುತ್ಕಾಂತದ ಪ್ರಕಟಿತರೂಪ. ಕ್ಷೇತ್ರದ ಮೂಲಕ ಎಲೆಕ್ಟ್ರಾನಿನ ಚಲನೆಯಿಂದ ದ್ರವ್ಯರಾಶಿ ಉತ್ಪತ್ತಿಯಾಗುವುದು ವಿರಾಮದಲ್ಲಿರುವ ಎಲೆಕ್ಟ್ರಾನಿಗೆ ದ್ರವ್ಯರಾಶಿ ಇರಕೂಡದು. ಲೊರೆಂಟ್ಸ್ ಕೂಡ ಇದಕ್ಕೆ ಭಿನ್ನವಾದ ಹಾದಿಯಿಂದ ತರ್ಕವನ್ನು ಮುಂದುವರಿಸಿದ. ವಿದ್ಯುತ್ ಗತಿ ವಿಜ್ಞಾನದ ಕೆಲವು ಪ್ರಯೋಗಗಳಿಗೆ ಸಂಬಂಧಿಸಿದ ಕಾರಣಗಳಿಂದ ಈಥರ್ ಮೂಲಕ ಚಲಿಸುತ್ತಿರುವ ವಸ್ತುಗಳಿಗೆ ಫಿಟ್ಸ್ ಜೆರಾಲ್ಡ್ ಎಂಬಾತ ಸಂಕುಂಚನ (ಕಂಟ್ರ್ಯಾಕ್ಷನ್) ಇರಬೇಕೆಂದು ಭಾವಿಸಿಕೊಂಡ. ಹೀಗಾದ ಪಕ್ಷದಲ್ಲಿ ವಿರಾಮದಲ್ಲಿರುವ ಎಲೆಕ್ಟ್ರಾನ್ ಗೋಳಾಕಾರದಲ್ಲಿದ್ದರೆ ಅದು ಚಲಿಸುತ್ತಿರುವಾಗ ಅಂಡಾಕಾರವನ್ನು ತಾಳಬೇಕು. ಇದಕ್ಕೆ ಸಂಕುಚಿಸಲ್ಪಡುವ ಎಲೆಕ್ಟ್ರಾನ್ ಭಾವನೆ ಎಂದು ಹೆಸರು. ಈ ರೀತಿ ಸಂಕುಚಿಸಲ್ಪಟ್ಟ ಎಲೆಕ್ಟ್ರಾನಿನ ದ್ರವ್ಯರಾಶಿಯ ಸಮಸ್ಯೆಯನ್ನು ಪರಿಶೀಲಿಸಿದಾಗ ದ್ರವ್ಯರಾಶಿಯ ಕೊಂಚ ಭಾಗ ಸ್ವಭಾವದಲ್ಲಿ ವಿದ್ಯುತ್ಕಾಂತೀಯವಾಗಿದ್ದರೂ ಉಳಿದ ಭಾಗವನ್ನು ಕ್ಷೇತ್ರದ ಪದಗಳ ಮೂಲಕ ವ್ಯಾಖ್ಯಾನ ಮಾಡಲು ಸಾಧ್ಯವಾಗಲಿಲ್ಲ. ಬಲವೈಜ್ಞಾನಿಕ ದ್ರವ್ಯರಾಶಿಯ ಅಂಶ ಉಳಿಯುವುದು ಅನಿವಾರ್ಯವಾಯಿತು.

ಪರಸ್ಪರ ವಿರುದ್ಧವಾದ ಈ ಎರಡು ಸಿದ್ಧಾಂತಗಳಲ್ಲಿ ಯಾವುದು ಸರಿಯಾದ್ದೆಂದು ತೀರ್ಮಾನಿಸಲು ಪ್ರಯೋಗಗಳನ್ನು ನಡೆಸಲಾಯಿತು. ಆ ಕಾಲಕ್ಕೆ ಅತ್ಯಂತ ಸಮಂಜಸವಾದದ್ದು ಬುಷೆರರ್ ಮಾಡಿದ ಪ್ರಯೋಗಗಳಿಂದ ಬಂದ ಫಲಿತಾಂಶಗಳು. ಇವು ಲೊರೆಂಟ್ಸನ ಮುನ್ಸೂಚನೆಗಳಿಗೆ ಅನುಕೂಲವಾದ್ದರಿಂದ ಅಬ್ರಹಾಂನ ಶುದ್ಧ ಕ್ಷೇತ್ರವನ್ನು ಬಿಟ್ಟು ಲೊರೆಂಟ್ಸನ ದ್ವೈತಸಿದ್ಧಾಂತಕ್ಕೆ ಹಿಂದಿರುಗಬೇಕಾಯಿತು. ಈ ಸಿದ್ಧಾಂತಕ್ಕೂ ಐನ್‌ಸ್ಟೈನನ ಸಾಪೇಕ್ಷತಾಸಿದ್ಧಾಂತಕ್ಕೂ ಇರುವ ಸಂಬಂಧವನ್ನು ಪರಿಶೀಲಿಸೋಣ.

ಚರವಸ್ತುಗಳ ಹಾಗೂ ಚರಕ್ಷೇತ್ರಗಳ ವಿದ್ಯುದ್ಗತಿವಿಜ್ಞಾನದ (ಎಲೆಕ್ಟ್ರೋಡೈನಮಿಕ್ಸ್) ಪರಿಶೀಲನೆಯಿಂದ ಲೊರೆಂಟ್ಸ್ ರೂಪದ ಹಾಗೂ ಐನ್ ಸ್ಟೈನ್ ರೂಪದ ಸಾಪೇಕ್ಷತಾ ಸಿದ್ಧಾಂತದ ಉದಯವಾಯಿತು. ಲೊರೆಂಟ್ಸ್ ಮತ್ತು ಐನ್‌ಸ್ಟೈನರಿಬ್ಬರೂ ಫಿಟ್ಸ್ ಜೆರಾಲ್ಡ್ ಸಂಕುಂಚನ ತತ್ತ್ವವನ್ನು ಸೇರಿಸಿಕೊಂಡರೂ ಲೊರೆಂಟ್ಸನ ಎಲೆಕ್ಟ್ರಾನ್ ಕ್ಷೇತ್ರಸಿದ್ಧಾಂತ ಪ್ರಾಯೋಗಿಕ ಫಲಿತಾಂಶಗಳನ್ನು ಸಮರ್ಥಿಸಲಾರದೆ ಹೋಯಿತು. ಸಿದ್ಧಾಂತ ಮತ್ತು ಪ್ರಯೋಗ ಇವೆರಡೂ ಸಮಂಜಸವಾಗಲು ಅಕಾಶ ಕಾಲ ಇವೆರಡರ ನಡುವೆ ಕ್ರಾಂತಿಕಾರಕವಾದ ಸಂಬಂಧಗಳನ್ನು ಲೊರೆಂಟ್ಸ್ ಕಲ್ಪಿಸಿಕೊಳ್ಳಬೇಕಾಯಿತು. ಇವೇ ಸುಪ್ರಸಿದ್ಧವಾದ ಲೊರೆಂಟ್ಸ್ ಪರಿವರ್ತನೆಗಳು. ಇವು ಫಿಟ್ಸ್ ಜೆರಾಲ್ಡ್ ಸಂಕುಂಚನವನ್ನು ಒಳಗೊಂಡಿವೆ. ಈ ಪರಿವರ್ತನೆಗಳನ್ನು ಕ್ರಮೀಕೃತವೆಂದೂ (ಫಾರ್ಮಲ್) ಭೌತವಿಜ್ಞಾನದ ಆಕಾಶ ಮತ್ತು ಕಾಲಗಳ ಮೇಲೆ ಇವುಗಳಿಗೇನೂ ಸಂಬಂಧವಿಲ್ಲವೆಂದೂ ಲೊರೆಂಟ್ಸ್ ಭಾವಿಸಿಕೊಂಡ.

ಮಾರನೆಯ ವರ್ಷ ಐನ್‌ಸ್ಟೈನ್ ಹೆಚ್ಚು ಕ್ರಾಂತಿಕಾರೀ ಮಾರ್ಗವನ್ನು ಹಿಡಿದು ಲೊರೆಂಟ್ಸ್ ಪರಿವರ್ತನೆಗಳು ಭೌತ ಆಕಾಶ ಮತ್ತು ಕಾಲಗಳ ನಡುವೆ ಸಂಬಂಧಗಳನ್ನು ಸೂಚಿಸುತ್ತವೆಂದು ವಾದಿಸಿದ. ಈ ರೀತಿಯ ಅಡ್ಡದಾರಿ ಹಿಡಿದ ಕಾಲದಿಂದ ವಿಶಿಷ್ಟ ಸಾಪೇಕ್ಷತಾ ಸಿದ್ಧಾಂತ ಪ್ರಾರಂಭವಾಯಿತು. ಲೊರೆಂಟ್ಸನಿಂದ ಎಲ್ಲ ಬಲ ವೈಜ್ಞಾನಿಕ ಗುಣಗಳನ್ನು ಕಳೆದುಕೊಂಡ ಈಥರಿಗೆ ವೇಗವನ್ನು ಅಳೆಯಬಲ್ಲ ನಿರ್ದೇಶಕ ಚೌಕಟ್ಟನ್ನು ಸ್ಪಷ್ಟಮಾಡುವ ಸಾಮರ್ಥ್ಯ ಕೂಡ ಇಲ್ಲದಂತಾಯಿತು. ಈ ಹೊಸ ದೃಷ್ಟಿಗೆ ಮಿಂಕೊವಿಸ್ಕಿ ಸಂಶೋಧನೆಗಳಿಂದ ಅತ್ಯಧಿಕ ಉತ್ತೇಜನ ದೊರೆಯಿತು. ಐನ್‌ಸ್ಟೈನ್ ವಾದ ಸರಿಯಾಗಿದ್ದ ಪಕ್ಷದಲ್ಲಿ ಆಕಾಶ ಮತ್ತು ಕಾಲ ಬೇರೆ ಬೇರೆಯಾಗಿರುವ ಈ ಸುಪರಿಚಿತ ಪ್ರಪಂಚವಾಗಲಾರದು. ಅದಕ್ಕೆ ಬದಲು ಯೂಕ್ಲಿಡಿಗೆ ಸಂಬಂಧಿಸಿದ ವಿಚಿತ್ರ ನಾಲ್ಕು ಆಯಾಮಗಳ ಪ್ರಪಂಚವಾಗಿರಬೇಕೆಂದು ಮಿಂಕೊವಿಸ್ಕಿ ತೋರಿಸಿದ. ಈ ಪ್ರಪಂಚಕ್ಕೆ ಆಕಾಶ–ಕಾಲ ಪ್ರಪಂಚವೆಂದು ಈಗ ಹೆಸರು.

ಆಕಾಶ–ಕಾಲವನ್ನು ಪರಿಚಯ ಮಾಡಿಸಿದ ಮೇಲೆ ಅಭಿಜಾತ ವಿಜ್ಞಾನದ ಮೂರು ಆಯಾಮಗಳ ಆಕಾಶ ಮತ್ತು ಭಿನ್ನವಾದ ಕಾಲ ಇವುಗಳಿಂದ ಪ್ರತಿನಿಧಿಸಲ್ಪಟ್ಟ ಭೌತವಿಜ್ಞಾನದ ಪರಿಮಾಣಗಳು ಈಗ ಹೊಸ ಪ್ರಪಂಚದ ನಾಲ್ಕು ಆಯಾಮಗಳ ಪರಿಮಾಣಗಳಲ್ಲಿ ಉಕ್ತವಾಗಬೇಕು. ಹೀಗಾಗಿ ಭೌತವಿಜ್ಞಾನ ಪರಿಮಾಣಗಳೆಲ್ಲ ನಾಲ್ಕು ಆಯಾನುಗಳ ಅಂಗಗಳಾಗಿ ಗೋಚರವಾದವು. ಆಕಾಶ ಮತ್ತು ಕಾಲ, ಸಂವೇಗ ಮತ್ತು ಶಕ್ತಿ, ಬಲ ಮತ್ತು ಕಾರ್ಯ, ವಿದ್ಯುತ್ ಪ್ರವಾಹ ಮತ್ತು ಆವೇಶ ಇವುಗಳಿಗೆ ಎಲ್ಲ ನಾಲ್ಕು ಆಯಾಮಗಳ ಪ್ರಪಂಚದಲ್ಲಿ ನಿತ್ಯತ್ವಕ್ಕೆ ಒಂದೇ ನಿಯಮ ಸಾಕಾಗುತ್ತದೆ. ಮ್ಯಾಕ್ಸ್‌ವೆಲ್ಲನ ಮೂರು ಆಯಾಮಗಳ ನಾಲ್ಕು ಸಮೀಕರಣಗಳು ನಾಲ್ಕು ಆಯಾಮಗಳಲ್ಲಿ ಎರಡು ಸಮೀಕರಣಗಳಿಗೆ ಇಳಿಯುತ್ತವೆ.

ವಿಶಿಷ್ಟ ಸಾಪೇಕ್ಷತಾ ಸಿದ್ಧಾಂತದಲ್ಲಿ ಮಿಂಕೊವಿಸ್ಕಿಯ ಆಕಾಶ–ಕಾಲವನ್ನು ಚಪ್ಪಟೆಯಾಗಿ (ಬಾಗಿಕೊಂಡಿಲ್ಲದ) ಗಡಸು ಮತ್ತು ವಿರೂಪಗೊಳಿಸಲಾಗದ ಗುಣಗಳನ್ನುಳ್ಳದೆಂದು ಭಾವಿಸಿಕೊಳ್ಳಲಾಗಿತ್ತು. ಅಂದರೆ ಅದು ನ್ಯೂಟನ್ನನ ನಿರಪೇಕ್ಷ ಅಕಾಶದ ನಾಲ್ಕು ಆಯಾಮಗಳ ಪ್ರತಿರೂಪ. ಈ ಆಕಾಶದಲ್ಲಿ ಒಂದು ಕಣ ವಿರಾಮದಲ್ಲಿದ್ದರೆ ಅಥವಾ ಏಕರೀತಿಯ ಚಲನೆಯಲ್ಲಿದ್ದರೆ ಅದನ್ನು ಒಂದು ನೇರ ಪ್ರಪಂಚರೇಖೆ (ವರ್ಲ್ಡ್ ಲೈನ್) ಗುರುತಿಸುತ್ತದೆ. ಒಂದು ನೇರ ಪ್ರಪಂಚರೇಖೆಯನ್ನು ಮತ್ತೊಂದರಿಂದ ಬೇರೆಯಾಗಿ ಗುರುತಿಸಲು ಸಾಧ್ಯವಾಗದೆ ಇರುವ ಕಾರಣದಿಂದ ಏಕರೀತಿಯ ಚಲನೆಯನ್ನು ಗುರುತುಹಚ್ಚಲು ಶಕ್ಯವಾಗುವುದಿಲ್ಲ. ವಸ್ತುವಿಗೆ ವೇಗೋತ್ಕರ್ಷವಿದ್ದರೆ ಪ್ರಪಂಚರೇಖೆ ಬಾಗಿರುತ್ತದೆ, ಆದ್ದರಿಂದ ಇದನ್ನು ಗುರುತಿಸಬಹುದು. ವಿಶಿಷ್ಟಸಾಪೇಕ್ಷತಾಸಿದ್ಧಾಂತ ಕೂಡ ಲೊರೆಂಟ್ಸ್ ಸಿದ್ಧಾಂತದಂತೆ ದ್ವೈತ ಭಾವವುಳ್ಳದ್ದು.

ಏಕೆಂದರೆ ಪದಾರ್ಥ ಮತ್ತು ಎಲೆಕ್ಟ್ರಾನುಗಳನ್ನು ಕ್ಷೇತ್ರದ ಪರಿಮಾಣಗಳಲ್ಲಿ ವ್ಯಾಖ್ಯಿಸುವುದು ಇನ್ನೂ ಕಗ್ಗಂಟಾಗಿಯೇ ಉಳಿದಿದೆ.

ವಿಶಿಷ್ಟಸಿದ್ಧಾಂತ ಗುರುತ್ವಾಕರ್ಷಣೆಯ ಮೇಲೂ ಸ್ವಲ್ಪ ಬೆಳಕನ್ನು ಚೆಲ್ಲಿದೆ. ಮಿಂಕೊವಿಸ್ಕಿಯ ಆಕಾಶ-ಕಾಲದ ಶೂನ್ಯಪ್ರದೇಶದಲ್ಲಿ ಬೆಳಕಿನ ವೇಗಕ್ಕಿಂತ ಹೆಚ್ಚು ವೇಗವನ್ನು ಪಡೆಯಲು ಸಾಧ್ಯವೇ ಇಲ್ಲ. ಆದ್ದರಿಂದ ಯಾವ ಭೌತಕ್ರಿಯೆಯೇ ಆಗಲಿ ಬೆಳಕಿನ ವೇಗಕ್ಕಿಂತ ಹೆಚ್ಚುವೇಗದಲ್ಲಿ ಪ್ರೇಷಿತವಾಗಲು ಸಾಧ್ಯವಾಗುವುದಿಲ್ಲ. ಈ ಸಿದ್ಧಾಂತದ ಪ್ರಕಾರ ದೂರಕ್ರಿಯೆ ಗುರುತ್ವಾಕರ್ಷಣ ಸಂಬಂಧದಲ್ಲಿ ಕೂಡ ಸಂಭವಿಸಲು ಸಾಧ್ಯವಿಲ್ಲವೆಂದು ತೋರುತ್ತದೆ. ಲೊರೆಂಟ್ಸನ ಅಚರತೆಗೆ(ಇನ್ ವೇರಿಯನ್ಸ್) ಇರುವ ನಿರ್ಬಂಧ ಎಲ್ಲ ಸ್ವಾಭಾವಿಕ ನಿಯಮಗಳ ರೂಪವನ್ನು ಮಿತಿಗೊಳಿಸುವುದರಿಂದ ಗುರುತ್ವಾಕರ್ಷಣೆಯ ಯಥಾರ್ಥವಾದ ನಿಯಮಕ್ಕೆ ಸುಳುವು ಕೊಡುತ್ತದೆ. ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತದಲ್ಲಿ ಐನ್‌ಸ್ಟೈನ್ ಬೇರೆ ರೀತಿಯಲ್ಲಿ ವಿಮರ್ಶೆ ನಡೆಸಿದ. ಗಡಸಾದ ಚಪ್ಪಟೆ ಆಕಾಶ-ಕಾಲ ಪ್ರಪಂಚವೆಂದು ಪ್ರಾರಂಭದಲ್ಲಿ ಭಾವಿಸಿಕೊಂಡದ್ದನ್ನು ತ್ಯಜಿಸಿ ಅದಕ್ಕೆ ಬದಲು ಆಕಾಶ-ಕಾಲ ಪ್ರಪಂಚ ಸಾಮಾನ್ಯವಾಗಿ ಚಪ್ಪಟೆಯಾಗಿದ್ದರೂ ವಸ್ತುವಿನ ಅಕ್ಕಪಕ್ಕದಲ್ಲಿ ಬಾಗಿಕೊಂಡಿರುತ್ತದೆಂದು ತರ್ಕಿಸಿದ. ಈ ಬಾಗುವಿಕೆಯೇ ಗುರುತ್ವಕ್ಷೇತ್ರಕ್ಕೆ ಕಾರಣವೆಂದು ಸಾಮಾನ್ಯ ಅರ್ಥದಲ್ಲಿ ಹೇಳಬಹುದು. ವಿದ್ಯುತ್ಕಾಂತ ಕ್ಷೇತ್ರಕ್ಕೆ ಪ್ರತಿಯಾಗಿ ಗುರುತ್ವಕ್ಷೇತ್ರಕ್ಕೆ ಜ್ಯಾಮಿತೀಯ ವ್ಯಾಖ್ಯಾನ ಸಿಕ್ಕಿದಂತಾಯಿತು. ಐನ್‌ಸ್ಟೈನನ ನಾಲ್ಕು ಆಯಾಮಗಳ ಆಕಾಶ ಕಾಲ ಕ್ಷೇತ್ರಕ್ಕೆ ಮೆಟ್ರಿಕಲ್ ಕ್ಷೇತ್ರ ಅಥವಾ ಮಾರ್ಗದರ್ಶಿ ಕ್ಷೇತ್ರ ಎಂದು ಹೆಸರು.

ಐನ್‌ಸ್ಟೈನನ ಸುಪ್ರಸಿದ್ಧವಾದ ಕ್ಷೇತ್ರ ಸಮೀಕರಣಗಳು ಆಕಾಶ-ಕಾಲ ಧರಿಸಬಹುದಾದ ವ್ಯತ್ಯಸ್ತ (ಅಥವಾ ಸ್ಥಿರ) ರಚನೆಯ ಸಾರ್ವತ್ರಿಕ ನಿಯಮವನ್ನು ಉಲ್ಲೇಖಿಸುತ್ತವೆ. ಸಾಮಾನ್ಯವಾದ ಆಕಾಶ ಮತ್ತು ಕಾಲದ ಮಾತಿನಲ್ಲಿ ಹೇಳುವುದಾದರೆ ಈ ಸಮೀಕರಣಗಳು ಗುರುತ್ವ ಕ್ಷೇತ್ರದಲ್ಲಿಯ ವ್ಯತ್ಯಾಸಗಳು ಮತ್ತು ಒಪ್ಪಿಗೆ ಯಾಗುವ ವಿನಿಮಯಗಳನ್ನು ನಿಯಂತ್ರಿಸುವ ನಿಯಮಗಳನ್ನು ಒಳಗೊಂಡಿದೆ. ಹೀಗಾಗುವುದರಿಂದ ಐನ್‌ಸ್ಟೈನನ ಗುರುತ್ವೀಯ ಸಮೀಕರಣಗಳು ವಿದ್ಯುತ್ಕಾಂತ ಕ್ಷೇತ್ರದ ಮ್ಯಾಕ್ಸ್‌ವೆಲ್ ಸಮೀಕರಣಗಳಿಗೆ ಸದೃಶವಾಗಿವೆ.

**ಏಕೀಕೃತ ಕ್ಷೇತ್ರ ಸಿದ್ಧಾಂತ (ಯೂನಿಫೈಡ್ ಫೀಲ್ಡ್ ಥಿಯೊರಿ):** ಏಕೀಕೃತ ಚೌಕಟ್ಟು ಒಂದರಲ್ಲೇ ಗುರುತ್ವಾಕರ್ಷಣ ಕ್ಷೇತ್ರ ಮತ್ತು ವಿದ್ಯುತ್ಕಾಂತ ಕ್ಷೇತ್ರಗಳ ಸಿದ್ಧಾಂತಗಳನ್ನು ಉಲ್ಲೇಖಿಸಲು ಪ್ರಯತ್ನಿಸುವ ಸಿದ್ಧಾಂತದ ಹೆಸರಿದು. ಈ ಪದವನ್ನು ಐನ್‌ಸ್ಟೈನನ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತವನ್ನು ಗುರುತ್ವಾಕರ್ಷಣೆ ಮತ್ತು ಅಭಿಜಾತ ವಿದ್ಯುತ್ಕಾಂತ ಸಿದ್ಧಾಂತಗಳಿಗೆ ಅನ್ವಯಿಸುವಂತೆ ಮಾಡಿದ ಪ್ರಯತ್ನಗಳಿಗೆ ಸಂಕುಚಿತವಾದ ಅರ್ಥದಲ್ಲೂ ಸಾಮಾನ್ಯವಾಗಿ ಉಪಯೋಗಿಸುವುದುಂಟು.

1916ರಲ್ಲಿ ಪ್ರಕಟಿತವಾದ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ ಗಣಿತೀಯವಾಗಿ ಬಲು ಸೊಗಸಾದ ರಚನೆ; ಅದು ಗುರುತ್ವಾಕರ್ಷಣೆಯ ಜ್ಯಾಮಿತೀಯ ವ್ಯಾಖ್ಯಾನವಾಗಿ ಪ್ರಾಯೋಗಿಕ ಜಯಗಳಿಸಿತು. ಪರೀಕ್ಷೆಗೆ ಒಳಪಟ್ಟ ವಸ್ತುಗಳು ಚಲಿಸುವ ಸಾರ್ವತ್ರಿಕ ನೇರರೇಖೆಗಳನ್ನು ಅಥವಾ ಭೂಕ್ಷೇತ್ರ ರೇಖೆಗಳನ್ನು (ಜಿಯೋಡೆಸಿಕ್ಸ್) ಒಳಗೊಂಡಿರುವ ನಾಲ್ಕು ಆಯಾಮಗಳ ಆಕಾಶ-ಕಾಲಗಳ ಘಟಕಗಳ ವಿರೂಪದಿಂದ ಗುರುತ್ವಾಕರ್ಷಣ ಬಲ ಉತ್ಪನ್ನವಾಗುವುದೆಂದು ಸಾರ್ವತ್ರಿಕ ಸಾಪೇಕ್ಷತಾವಾದ ವಿವರಿಸಿತು. ಮೂರು ಆಯಾಮಗಳ ಆಕಾಶಕ್ಕೆ ಈ ಪಥಗಳ ವಿಕ್ಷೇಪವೇ (ಪ್ರೊಜೆಕ್ಷನ್) ನಮಗೆ ಪರಿಚಿತವಾಗಿರುವ ಸ್ವತಂತ್ರವಾಗಿ ಬೀಳುತ್ತಿರುವ ವಸ್ತುಗಳ ವಿಕ್ಷೇಪಪಥ (ಟ್ರ್ಯಾಜೆಕ್ಟರಿ). ಅಭಿಜಾತ ಭೌತವಿಜ್ಞಾನದ ಎರಡನೆಯ ಸಾರ್ವತ್ರಿಕ ಬಲ ಅಂದರೆ ವಿದ್ಯುತ್ಕಾಂತ ಕ್ಷೇತ್ರ ಜ್ಯಾಮಿತೀಯ ಭಾವವೆಂದು ಅಭಿಜಾತ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ವಿವರಣೆ ನೀಡುವುದಿಲ್ಲ. ಹೀಗಾಗಿ ವಿದ್ಯುತ್ಕಾಂತ ಕ್ಷೇತ್ರ ಮತ್ತು ಆವಿಷ್ಟ ಕಣಗಳೊಡನೆ ಅನ್ಯೋನ್ಯಕ್ರಿಯೆ ಇವನ್ನೆಲ್ಲ ಒಳಗೊಂಡಿರುವಂತೆ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತದ ಜ್ಯಾಮಿತೀಯ ರಚನೆಯನ್ನು ವಿಸ್ತಾರ ಮಾಡಲು ಅನೇಕ ಪ್ರಯತ್ನಗಳು ನಡೆದಿವೆ.

ಅಂಥ ಯಾವ ಪ್ರಯತ್ನವೇ ಆಗಲಿ ಮೂಲಭೂತವಾದ ಮೂರು ಎಡರುಗಳನ್ನು ಪರಿಹರಿಸಬೇಕು. ಮೊದಲನೆಯದಾಗಿ ಗುರುತ್ವಾಕರ್ಷಣೆಯ ಕ್ಷೇತ್ರ ಸಮಾಂಗ (ಸಿಮೆಟ್ರಿಕ್) ಮೆಟ್ರಿಕ್ ಟೆನ್ಸರಿನ ಹತ್ತು ಸ್ವತಂತ್ರ ಘಟಕಗಳಿಂದ ವರ್ಣಿತವಾಗಿದೆ. ಅಭಿಜಾತ ವಿದ್ಯುತ್ಕಾಂತತ್ವವಾದರೋ ನಾಲ್ಕು ಘಟಕಗಳುಳ್ಳ ಸದಿಶ ವಿಭವದ ಮೇಲೆ ಆಧರಿತವಾಗಿದೆ. ಹೀಗಾಗಿ ಏಕೀಕೃತ ಸಿದ್ಧಾಂತಕ್ಕೆ ಕಡೇಪಕ್ಷ ಹದಿನಾಲ್ಕು ಜ್ಯಾಮಿತೀಯ ಘಟಕಗಳನ್ನು ಹವಣಿಸಬೇಕು. ಎರಡನೆಯದಾಗಿ ಗುರುತ್ವ ಕ್ಷೇತ್ರದಲ್ಲಿ ಪದಾರ್ಥದ ಜಡತ್ವ ಹಾಗೂ ಗುರುತ್ವ ದ್ರವ್ಯರಾಶಿಗಳು ಒಂದೇ ಆಗಿರುವುದರಿಂದಲೂ ವಿದ್ಯುತ್ಕಾಂತ ಕ್ಷೇತ್ರದಲ್ಲಿ ಪರೀಕ್ಷೆಗೆ ಗುರಿಯಾಗಿರುವ ವಸ್ತು, ಅದರ ಆವೇಶ (ಚಾರ್ಜ್) ಮತ್ತು ದ್ರವ್ಯರಾಶಿ ಇವೆರಡರ ಪರಿಮಾಣದ ಮೇಲೆ ಬಹುಮಟ್ಟಿಗೆ ಆಧರಿತವಾಗಿರುವುದರಿಂದಲೂ ಗುರುತ್ವ ಸಿದ್ಧಾಂತಕ್ಕೆ ಮಾತ್ರ ಜ್ಯಾಮಿತೀಯ ವ್ಯಾಖ್ಯಾನವನ್ನು ಕೊಡಲು ಪ್ರಯತ್ನಿಸುವುದು ಸ್ವಾಭಾವಿಕ. ಮೂರನೆಯದಾಗಿ ವಿದ್ಯುತ್ಕಾಂತ ಹಾಗೂ ಗುರುತ್ವ ಕ್ಷೇತ್ರಗಳಲ್ಲಿಯ ಲಾಕ್ಷಣಿಕ ಶಕ್ತಿಗಳಲ್ಲಿರುವ ಅತಿಹೆಚ್ಚಾದ ವ್ಯತ್ಯಾಸಕ್ಕೆ ಸಮಜಾಯಿಷಿ ಕೊಡಬೇಕು. ಉದಾಹರಣೆಗೆ, ಎರಡು ಸ್ವತಂತ್ರ ಎಲೆಕ್ಟ್ರಾನುಗಳ ನಡುವಣ ವಿದ್ಯುತ್ಕಾಂತ ಮತ್ತು ಗುರುತ್ವ ಶಕ್ತಿಗಳಿಗಿರುವ ಸನ್ನಿಹಿತ ಪ್ರಮಾಣ $4 \times 10^{42}$ ರಷ್ಟು ದೊಡ್ಡಸಂಖ್ಯೆ.

ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ ಮತ್ತು ಅಭಿಜಾತ ವಿದ್ಯುತ್ಕಾಂತವಿಜ್ಞಾನ ಇವೆರಡೂ ತಮ್ಮ ಮೂಲರೂಪಗಳಲ್ಲಿ ಸಂಪೂರ್ಣವಾಗಿ ಅನುರೂಪವುಳ್ಳವು ಅಲ್ಲದೆ ಹೊಂದಿಕೊಂಡು ಇರಬಲ್ಲವು ಎಂಬುದನ್ನು ಗಮನಿಸಬೇಕು. ಅಷ್ಟೇ ಅಲ್ಲದೆ ಸ್ಥೂಲಮಟ್ಟದಲ್ಲಿ(ಮ್ಯಾಕ್ರೋಸ್ಕೋಪಿಕ್ ಲೆವೆಲ್) ಯಾವುದೊಂದು ಸಿದ್ಧಾಂತದ ವಿರುದ್ಧವಾಗಿಯೂ ಪ್ರಾಯೋಗಿಕವಾದ ಪುರಾವೆ ಇಲ್ಲ. ಆದ್ದರಿಂದ ಈ ಎರಡು ಬಲಗಳನ್ನು ಒಂದೇ ತಾರ್ಕಿಕ ಚೌಕಟ್ಟಿನಲ್ಲಿ ವ್ಯಾಖ್ಯಾನಮಾಡಲು ಉಂಟಾಗುವ ಪ್ರೇರಣೆ ಗಣಿತಾತ್ಮಕವಾದ ಸೊಗಸು ಮತ್ತು ಸರಳತೆಗಳೇ ವಿನಾ ಪ್ರಾಯೋಗಿಕ ಫಲಿತಾಂಶಗಳನ್ನು ಮುನ್ಸೂಚಿಸುವುದಕ್ಕೆ ಈ ಎರಡು ಸಿದ್ಧಾಂತಗಳೊಂದರ ಅದಕ್ಷತೆಯೇ ಆಗಲಿ ಅನನ್ವಯವೇ ಆಗಲಿ ಕಾರಣವಲ್ಲ.

**ಅಭಿಜಾತ ಪ್ರಯತ್ನಗಳು:** ಏಕೀಕೃತ ಕ್ಷೇತ್ರಸಿದ್ಧಾಂತಕ್ಕೆ ಪ್ರಥಮ ಮತ್ತು ಗಣಿತರೀತ್ಯ ಹೆಚ್ಚು ಕುತೂಹಲಕಾರಿಯಾದ ಪ್ರಯತ್ನ 1918ರಲ್ಲಿ ಹರ್ಮನ್ ವೇಲ್ ಎಂಬಾತನಿಂದ ಮಾಡಲ್ಪಟ್ಟಿತು. ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದಲ್ಲಿ ಉಪಯೋಗಿಸಿದ ಅವಕಲ ಜ್ಯಾಮಿತಿಯನ್ನು ವಿದ್ಯುತ್ಕಾಂತ ಸದಿಶ ವಿಭವದೊಡನೆ ಸಂಗುಣಿತವಾಗುವ ಹಾಗೆ ಸಮಂಜಸವಾದ ನಾಲ್ಕು ಹೊಸ ಪರಿಮಾಣಗಳನ್ನು ಪರಿಚಯ ಮಾಡಿಸಲು ಸಾಧ್ಯವಾಗುವಂತೆ ಈತ ಸಾರ್ವತ್ರೀಕರಿಸಿದ. ಈ ನಾಲ್ಕು ಪರಿಮಾಣಗಳು ವಿದ್ಯುತ್ಕಾಂತ ಸದಿಶ ವಿಭವಕ್ಕೆ ಅನುಪಾತದಲ್ಲಿರುತ್ತವೆಂದು ಭಾವಿಸಿಕೊಂಡ. ಈ ಪರಿಕಲ್ಪನೆಗಳು ವಿದ್ಯುತ್ಕಾಂತ ಕ್ಷೇತ್ರವನ್ನೊಳಗೊಂಡಿರುವ ಸ್ವಾರಸ್ಯವಾದ ಗಣಿತ ರಚನೆಗೆ ಕೊಂಡೊಯ್ದರೂ ಐನ್ ಸ್ಟೈನ್ ಇವನ್ನು ಕುರಿತು ಗಂಭೀರವಾದ ಆಕ್ಷೇಪಣೆಗಳನ್ನು ಎತ್ತಿದ. ವೇಲ್ ನ ತರ್ಕದ ಪ್ರಕಾರ ಪರಮಾಣ್ವಿಕ ಘಟನೆಗಳು ಪ್ರತಿಯೊಂದು ಪರಮಾಣುವಿನ ಹಿಂದಿನ ಚರಿತ್ರೆಯನ್ನು ಅವಲಂಬಿಸಿವೆ ಎಂಬ ಧ್ವನಿ ಬರುತ್ತದೆ. ಇದನ್ನು ಪ್ರಯೋಗದೊಂದಿಗೆ ಸಮನ್ವಯಿಸುವುದು ಕಷ್ಟವೇ ಸರಿ. ಈ ತೊಂದರೆಯಿಂದಲೂ ಇದು ಮುನ್ಸೂಚನೆಯನ್ನು ಕೊಡಲು ಅಸಮರ್ಥವಾದದ್ದರಿಂದಲೂ ಈ ಸಿದ್ಧಾಂತ ವೇಲ್ ನಿಂದಲೇ ಆಮೇಲೆ ತ್ಯಜಿಸಲ್ಪಟ್ಟಿತು.

ಬೇರೆ ರೀತಿಯ ಸ್ವಾರಸ್ಯವಾದ ಮಾರ್ಗವೊಂದು ಕಲೂಸ್ಸನಿಂದ ಮಂಡಿಸಲ್ಪಟ್ಟಿತು-ಆಯಾಮ ಸಂಖ್ಯೆಯನ್ನು ಐದಕ್ಕೆ ಹೆಚ್ಚಿಸುವುದು ಈತನ ತರ್ಕದ ಸಾರ-ಗುರುತ್ವ ಮತ್ತು ವಿದ್ಯುತ್ಕಾಂತ ಕ್ಷೇತ್ರಗಳನ್ನು ಅನುಗೊಳಿಸಲು ಸಾಕಾಗುವಷ್ಟಕ್ಕಿಂತ ಈ ಐದು ಘಟಕಗಳಲ್ಲಿ ಒಂದು ಘಟಕ ಹೆಚ್ಚಾಗುತ್ತದೆ. ಸಾಧಾರಣ ಆಕಾಶ-ಕಾಲದ ನಾಲ್ಕು ಆಯಾಮಗಳ ಸ್ವಭಾವವನ್ನು ಹಿಂದಕ್ಕೆ ಪಡೆಯಲು ಮೆಟ್ರಿಕ್ ಟೆನ್ಸರನ್ನು ಕೃತಕವೆಂದು ತೋರುವ ಪ್ರತಿಬಂಧಗಳಿಗೆ (ಕನ್ಸ್‌ಟ್ರೇಂಟ್ಸ್) ಗುರಿಪಡಿಸಲಾಯಿತು. ಅದು ಐದನೆಯ ನಿರ್ದೇಶಕದಿಂದ ವಿಮುಕ್ತವಾಗಿದೆಯೆಂದು ಭಾವಿಸಿಕೊಂಡಿದ್ದಲ್ಲದೆ ಐದನೆಯ ಕರ್ಣದ ಘಟಕದ ಮೌಲ್ಯ ಒಂದು ಎಂದೂ ತೆಗೆದುಕೊಳ್ಳಲಾಯಿತು. ಅಂದಮೇಲೆ ಗೋಚರವಾಗುವ ನಾಲ್ಕು ಆಯಾಮಗಳ ಪ್ರಪಂಚ ಐದು ಆಯಾಮಗಳ ಬಹುರೂಪದ ವಿಕ್ಷೇಪ ಎಂದು ಭಾವಿಸಿಕೊಳ್ಳಲಾಯಿತು. ಗಣಿತ ರೂಪದಲ್ಲಿ ಇದು ಸ್ವಲ್ಪಮಟ್ಟಿಗೆ ಸುಂದರವಾಗಿ ಕಂಡರೂ ಕಲೂಸ್ಸನ ಸಿದ್ಧಾಂತ ಮತ್ತು ಅದರ ಅನೇಕ ವಿಸ್ತರಣಗಳು ಯಾವ ರೀತಿಯಲ್ಲಾದರೂ ಹೊಸ ಮುನ್ಸೂಚನೆಗಳನ್ನು ಕೊಡುವುದರಲ್ಲಿ ವಿಫಲವಾಗಿವೆ. ಆದ್ದರಿಂದ ತಾರ್ಕಿಕ ಭೌತವಿಜ್ಞಾನದ ಮುಖ್ಯ ಪ್ರವಾಹದಲ್ಲಿ ಇವೆಲ್ಲ ಉಪೇಕ್ಷಿಸಲ್ಪಟ್ಟಿವೆ.

ತನ್ನ ಜೀವನದ ಕೊನೆಯ ವರ್ಷಗಳಲ್ಲಿ ಐನ್‌ಸ್ಟೈನ್ ನಾಲ್ಕು ಆಯಾಮಗಳ ಅಸಮಾಂಗ ಮೆಟ್ರಿಕ್ ಟೆನ್ಸರುಗಳನ್ನು ಪರಿಶೀಲಿಸುವುದರಲ್ಲಿ ಅತ್ಯಂತ ಶ್ರದ್ಧೆವಹಿಸಿದ್ದ. ಈ ವಿಧದ ಟೆನ್ಸರಿಗೆ ಹದಿನಾರು ಘಟಕಗಳುಂಟು. ಐನ್‌ಸ್ಟೈನ್ ಪ್ರತಿಪಾದಿಸಿ ಆರಂಭಿಸಿದ ಈ ಸಿದ್ಧಾಂತದ ಜ್ಯಾಮಿತೀಯ ರೂಪರೇಖೆಗಳನ್ನು ಹ್ಲಾವಟಿ ಅಭಿವೃದ್ಧಿಸಿದ್ದಾನೆ. ಆದರೆ ಮೂಲಭೂತವಾದ ಭೌತ ಸಮಸ್ಯೆಗಳು ಐನ್‌ಸ್ಟೈನ್ ಕಾಲವಾಗುವ ಸಮಯದವರೆಗೂ ಸಾಧಿಸಲಾಗಲಿಲ್ಲ, ಅಲ್ಲದೆ ಈ ಸಮಸ್ಯೆಗಳು ಈಗಲೂ ಹಾಗೇ ಉಳಿದಿದೆ.

**ಜ್ಯಾಮಿತೀಯ ಗತಿವಿಜ್ಞಾನ (ಜ್ಯೊಮೆಟ್ರೊಡೈನಮಿಕ್ಸ್):** ಅಭಿಜಾತ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ಅಥವಾ ಅಭಿಜಾತ ವಿದ್ಯುತ್ಕಾಂತ, ಗುರುತ್ವಾಕರ್ಷಣೆ ಮತ್ತು ವಿದ್ಯುತ್ಕಾಂತ ಸಿದ್ಧಾಂತ ಇವೆರಡನ್ನೂ ಒಟ್ಟುಗೂಡಿಸುವುದರಲ್ಲಿ ಮಾಡಿದ ಸಾಧನೆಯಂತೆ ಪೂರ್ವದಲ್ಲಿ ನಡೆಸಿದ ಮತ್ತಾವ ಪ್ರಯತ್ನವೂ ಜಯಗಳಿಸಲಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಜೆ.ಎ. ವ್ಹೀಲರ್ ಮತ್ತು ಸಿ. ಡಬ್ಲ್ಯು. ಮಿಸ್ನರ್ ಇತ್ತೀಚೆಗೆ ಮಾಡಿದ ಪ್ರಯತ್ನಗಳು ಅಷ್ಟೇನೂ ಹೆಚ್ಚು ಪರಿಣಾಮಕಾರಿಯಾಗುತ್ತವೆಂದು ಭಾವಿಸಿಕೊಳ್ಳದಿದ್ದರೂ ಅವು ಸ್ವಾರಸ್ಯವಾದ ಫಲಿತಾಂಶಗಳನ್ನು ಸಾಧಿಸಿವೆ. ಗುರುತ್ವಾಕರ್ಷಣೆ ಮತ್ತು ವಿದ್ಯುತ್ಕಾಂತತ್ವಗಳಿಗೆ ಸಿದ್ಧಾಂತವನ್ನು ಪುನಃ ನಿರೂಪಿಸುವುದಕ್ಕೆ ಬದಲಾಗಿ ವ್ಹೀಲರ್

ಮತ್ತು ಮಿಸ್ನರ್ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ ಮತ್ತು ಆವೇಶಗಳಿಲ್ಲದಿದ್ದಾಗ ಅಭಿಜಾತ ವಿದ್ಯುತ್ಕಾಂತತ್ವದ ಮೂಲ ಸಮೀಕರಣಗಳನ್ನು ಹಾಗೆಯೇ ಇಟ್ಟುಕೊಂಡು ಅದರಿಂದ ಉದ್ಭವಿಸುವ ಗಣಿತಾತ್ಮಕ ಪರಿಣಾಮಗಳನ್ನು ತನಿಖೆ ಮಾಡಿದರು. ಗುರುತ್ವ ಮತ್ತು ವಿದ್ಯುತ್ಕಾಂತ ಸಿದ್ಧಂತಗಳೆರೆಡು ಎರಡನೆಯ ದರ್ಜೆಯ ಅವಕಲ ಸಮೀಕರಣಗಳನ್ನೊಳಗೊಂಡಿವೆ. ಜ್ಯಾಮಿತೀಕರಣವೆಂಬ ಗಣಿತೀಯ ವ್ಯವಹಾರದಿಂದ ಎರಡನೆಯ ದರ್ಜೆಯ ಸಮೀಕರಣಗಳ ಎರಡು ತಂಡಗಳನ್ನು ವಿದ್ಯುತ್ಕಾಂತಕ್ಷೇತ್ರ ಸ್ಪಷ್ಟವಾಗಿ ಕಾಣಿಸಿಕೊಳ್ಳದ ನಾಲ್ಕನೆಯ ದರ್ಜೆಯ ಅವಕಲ ಸಮೀಕರಣದ ಒಂದು ಸಮುಚ್ಚಯವನ್ನಾಗಿ ಒಟ್ಟುಗೂಡಿಸಬಹುದು. ಆದಾಗ್ಯೂ ವಿದ್ಯುತ್ಕಾಂತಕ್ಷೇತ್ರದೊಂದಿಗೆ ಸಂಗುಣಿತವಾಗಿರುವ ಶಕ್ತಿ ಮತ್ತು ಅವೇಗ ಇವೆರಡರ ಸಾಂದ್ರತೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಮೆಟ್ರಿಕ್ ಸಾಕಷ್ಟು ಸಮಾಚಾರವನ್ನು ಕೊಡಬಲ್ಲದು. ಅಂದಮೇಲೆ ಶಕ್ತಿಸಾಂದ್ರತೆಯಿಂದ ಉತ್ಪನ್ನವಾದ ಗುರುತ್ವಕ್ಷೇತ್ರದಿಂದ ವಿದ್ಯುತ್ಕಾಂತ ಕ್ಷೇತ್ರ ಸಂಪೂರ್ಣವಾಗಿ ನಿರ್ದೇಶಿಸಲ್ಪಡುತ್ತದೆಂದು ಭಾವಿಸಬಹುದು. ಈ ಸೂತ್ರೀಕರಣದಲ್ಲಿ ಹೊಸ ಸಮೀಕರಣಗಳನ್ನಾಗಲಿ ಭೌತ ಪರಿಕಲ್ಪನೆಗಳನ್ನಾಗಲಿ ಪ್ರವೇಶ ಮಾಡಿಸದೆ ಇರುವುದರಿಂದ ಇದಕ್ಕೆ 'ಆಗಲೇ' ಏಕೀಕೃತ ಕ್ಷೇತ್ರಸಿದ್ಧಾಂತ (ಆಲ್‌ರೆಡಿ ಯೂನಿಫೈಡ್ ಫೀಲ್ಡ್ ಥಿಯರಿ) ಎಂದು ಹೆಸರು ಬಂದಿದೆ.

ಮೇಲೆ ತಿಳಿಸಿದಂತೆ, ಆಗಲೇ ಏಕೀಕೃತ ಕ್ಷೇತ್ರ ಸಿದ್ಧಾಂತ, ಆವೇಶಗಳು ಕಾರ್ಯಕಾರಣ ಸಂಬಂಧದಿಂದ ಉತ್ಪನ್ನವಾಗುತ್ತವೆಂಬುದನ್ನು ಒಪ್ಪುವುದಿಲ್ಲ. ಆದ್ದರಿಂದ ಆವೇಶಗಳ ನಡುವೆ ಇರುವ ಅತಿ ಹೆಚ್ಚು ವಿದ್ಯುತ್ಕಾಂತ ಬಲದೊಂದಿಗೆ ಸಂಗುಣಿತವಾದ ತೊಡಕನ್ನು ಲಕ್ಷ್ಯಕ್ಕೆ ತರುವುದಿಲ್ಲ. ಹೀಗಾಗಿ ಸಿದ್ಧಾಂತಕ್ಕೆ ಅವೇಶವನ್ನು ಪುನಃ ಪರಿಚಯ ಮಾಡಿಕೊಡುವುದು ಸಮಸ್ಯೆಯಾಗುತ್ತದೆ. ಏಕೆಂದರೆ ಆವೇಶ ಇಲ್ಲದ ಪ್ರಪಂಚ ಅಷ್ಟೇನೂ ಸ್ವಾರಸ್ಯವಾಗಿರುವುದಿಲ್ಲ. ಆಕಾಶ-ಕಾಲದ ಹಲವು ಘಟಕಗಳನ್ನು ನಾನಾವಿಧಗಳಲ್ಲಿ ಸಂಯೋಜಿಸಿ ಆಕಾಶದ ಒಂದು ಪ್ರದೇಶವನ್ನು ವಿದ್ಯುತ್ ಕ್ಷೇತ್ರ ರೇಖೆಗಳು ಪ್ರವೇಶಿಸಿ ಅದೃಶ್ಯವಾದಂತೆ ತೋರಿ ಪುನಃ ಇನ್ನೊಂದು ಪ್ರದೇಶದಲ್ಲಿ ಕಾಣಿಸಿಕೊಳ್ಳುವುದು ಸಾಧ್ಯವಾಗುವಂತೆ ಮಾಡಿ ಈ ಸಮಸ್ಯೆಗೆ ಪರಿಹಾರ ತೋರಿಸಬಹುದು. ಹಲವು ಘಟಕಗಳ ಈ ರಚನೆಗೆ ವರ್ಣನಾತ್ಮಕವಾಗಿ ಕ್ರಿಮಿರಂಧ್ರವೆಂದು (ವರ್ಮ್‌ಹೋಲ್) ಹೇಳುವುದುಂಟು. ಇದನ್ನು ಎರಡು ಆಯಾಮದ ಚಿತ್ರದಲ್ಲಿ ತೋರಿಸಿದೆ.



ಕ್ರಿಮಿರಂಧ್ರದ ಒಂದು ತುದಿ ಕ್ಷೇತ್ರರೇಖೆಗಳು ಪ್ರವೇಶಿಸುವ ಪ್ರದೇಶವಾದ್ದರಿಂದ ಅದು ಋಣ ಅವೇಶದ್ದಾಗಿ ತೋರಿಬರುತ್ತದೆ, ಇನ್ನೊಂದು ತುದಿಯಿಂದ ರೇಖೆಗಳು ಹೊರಬರುತ್ತಿರುವುದರಿಂದ ಅದು ಧನ ಆವೇಶದ್ದಾಗಿ ಕಾಣಬರುತ್ತದೆ; ಹೀಗಾಗಿ ಒಂದೇ ಒಂದು ಆವೇಶ ಹಾಜರಿಲ್ಲದಿದ್ದರೂ ಆವೇಶದ ಪರಿಣಾಮಗಳನ್ನು ಪಡೆಯಲಾಗಿದೆಯಲ್ಲದೆ ವಿದ್ಯುತ್ ಕ್ಷೇತ್ರದ ರೇಖೆಗಳೂ ಅವಿಚ್ಛಿನ್ನವಾಗಿವೆ.

ನಾನಾ ವಿಧಗಳಲ್ಲಿ ಸಂಯೋಜಿಸಿರುವ ಪ್ರದೇಶದಲ್ಲಿ ಆಗಲೇ ಏಕೀಕೃತ ಕ್ಷೇತ್ರ ಸಿದ್ಧಾಂತ ಜ್ಯಾಮಿತೀಯನ್ನು ಮಾತ್ರ ಒಳಗೊಂಡಿದೆಯಾದ್ದರಿಂದ ಇದರ ಯೋಜಕರು ಇದಕ್ಕೆ ಜ್ಯಾಮಿತೀಯ ಗತಿವಿಜ್ಞಾನವೆಂದು ಸೂಚಿಸುತ್ತಾರೆ. ಅದಕ್ಕೆ ಸ್ವಭಾವಸಿದ್ಧವಾದ ಗಣಿತಾತ್ಮಕವಾದ ತೊಂದರೆಗಳಿರುವುದರಿಂದ ಅದರ ಮುನ್ನಡೆ ಅತ್ಯಂತ ನಿಧಾನವಾಗಿದೆ. ಈ ಸಿದ್ಧಾಂತದಿಂದ ಕಟ್ಟುನಿಟ್ಟಾದ ಮುನ್ಸೂಚನೆಯನ್ನು ಮಾಡುವುದಕ್ಕಿಂತ ಮುಂಚೆ ಕ್ರಿಮಿರಂಧ್ರದ ತುದಿಗಳ ಚಲನೆ ಇತ್ಯಾದಿ ಸಮಸ್ಯೆಗಳನ್ನು ಸಾಧಿಸಬೇಕು.

**ಕ್ವಾಂಟಂ ಸಿದ್ಧಾಂತ:** ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದ ಮುಂಚಿನ ದಿನಗಳಲ್ಲಿ ಅಂದರೆ 1914ರಿಂದ ಸುಮಾರು 1925ರ ತನಕ ಏಕೀಕೃತ ಕ್ಷೇತ್ರಸಿದ್ಧಾಂತಗಳ ವಿಷಯದಲ್ಲಿ ಹೆಚ್ಚು ಆಸಕ್ತಿ ಮತ್ತು ಚಟುವಟಿಕೆಗಳು ಇದ್ದುವು. 1925ರಲ್ಲಿ ಶ್ರೇಡಿಂಗರ್ ಮತ್ತು ಹೈಸನ್ ಬರ್ಗರವರಿಂದ ಕ್ವಾಂಟಂ ಬಲವಿಜ್ಞಾನದ ಆವಿಷ್ಕಾರವಾಯಿತು. ಇದು ವಿಜ್ಞಾನಿಗಳ ಆಸಕ್ತಿಯನ್ನು ಪರಮಾಣು ಪ್ರಪಂಚಕ್ಕೆ ಒಯ್ಯಲು ಸಮರ್ಥವಾಯಿತು. ಹೀಗಾಗಿ ಅಭಿಜಾತ ಏಕೀಕೃತ ಕ್ಷೇತ್ರಸಿದ್ಧಾಂತವನ್ನು ನಿರ್ಮಿಸಲು ಇದ್ದ ಪ್ರೇರಣೆಯ ಹೆಚ್ಚು ಭಾಗ ಅತ್ಯಂತ ಸಣ್ಣವಸ್ತುಗಳ ಪ್ರಪಂಚದ ಹೊಸ ದೃಶ್ಯಗಳಿಗೆ ದಾರಿಮಾಡಿಕೊಟ್ಟಿತು. ಈ ಸಂದರ್ಭದಲ್ಲಿ ಪ್ರಪಂಚದ ಕ್ವಾಂಟಂ ಸ್ವಭಾವವನ್ನು ಗಣನೆಗೆ ತೆಗೆದುಕೊಳ್ಳದೆ ಉಪಯುಕ್ತ ಮತ್ತು ಸಂಗತವಾದ ಯಾವ ಏಕೀಕೃತ ಕ್ಷೇತ್ರಸಿದ್ಧಾಂತವೂ ಸಾಧ್ಯವಿಲ್ಲವೆಂಬುದು ಅನೇಕ ಭೌತವಿಜ್ಞಾನಿಗಳಿಗೆ ಮನವರಿಕೆಯಾಗಿದೆ. ಒಂದಾನೊಂದು ಕಾಲದಲ್ಲಿ ಕಲೂಸ ಮಂಡಿಸಿದ ಐದು ಆಯಾಮಗಳಂಥ ಪರಿಕಲ್ಪನೆಗಳಲ್ಲಿ ಕ್ವಾಂಟಂ ಪರಿಮಾಣಗಳನ್ನೂ ಒಳಸೇರಿಸಲು ಸಾಧ್ಯವಾಗಬಹುದೆಂದು ಐನ್‌ಸ್ಟೈನ್ ನಂಬಿದ್ದ. ಆದರೆ ಈ ನಿರೀಕ್ಷೆ ಬಹುಕಾಲದ ತನಕ ಉಳಿಯಲಿಲ್ಲ. ಇದೇ ರೀತಿ 1927ರಲ್ಲಿ ನೀಲ್ಸ್ ಬೋರನ ಪೂರ್ವಕಾಲದ ಕ್ವಾಂಟಂ ವಾದವನ್ನು ಮೇಲಿನ ವಾದದೊಂದಿಗೆ ಸಂಬಂಧಿಸುವಂತೆ ಎಫ್. ಲಂಡನ್ ಪ್ರಯತ್ನಿಸಿದ. ಇದಕ್ಕೂ ಯಶಸ್ಸು ದೊರೆಯಲಿಲ್ಲ. ಇತ್ತೀಚೆಗೆ ಜ್ಯಾಮಿತೀಯ ಗತಿ ವಿಜ್ಞಾನವಾದವನ್ನು ಬೆಂಬಲಿಸುವರು ಆ ವಾದವನ್ನು ಕ್ವಾಂಟೀಕರಿಸಲು ಪ್ರಯತ್ನಿಸಿದ್ದಾರೆ. ಇದಕ್ಕೆ ದೊರೆತಿರುವ ಜಯ ಅತ್ಯಲ್ಪ.

ಸ್ಥೂಲಮಟ್ಟದ ಮತ್ತು ಅಲ್ಪಮಟ್ಟದ (ಮ್ಯಾಕ್ರೋಸ್ಕೋಪಿಕ್ ಅಂಡ್ ಮೈಕ್ರೋಸ್ಕೋಪಿಕ್) ಘಟನೆಗಳ ಪ್ರಪಂಚಗಳ ನಡುವೆ ನಿಕಟವಾದ ಹೊಂದಾಣಿಕೆಯನ್ನು ಪ್ರಕೃತಿ ಪಾಲಿಸುತ್ತದೆಂದು ತೋರುತ್ತದೆ. ಹೀಗಾಗಿ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದಿಂದ ವರ್ಣಿತವಾದ ಸ್ಥೂಲಗಾತ್ರದ ನಡವಳಿಕೆ ಕ್ವಾಂಟಂ ಬಲವಿಜ್ಞಾನದಿಂದ ವಿವರಿಸಲ್ಪಟ್ಟ ಅಲ್ಪಗಾತ್ರದ ನಡವಳಿಕೆ ಹಾಗೂ ಸರ್ವವ್ಯಾಪಿಯಾದ ವಿದ್ಯುತ್ಕಾಂತ ಬಲ ಇವುಗಳೆಲ್ಲದರ ಆಳವಾದ ಅಭ್ಯಾಸಕ್ಕೆ ಅಭಿಜಾತ ಏಕೀಕೃತ ಕ್ಷೇತ್ರಸಿದ್ಧಾಂತಗಳ ಮೂಲಗುರಿಯಿಂದ ಇನ್ನೂ ಮುಂದುವರಿಯುವ ಆಕಾಶಕಾಲದ ಪರಿಕಲ್ಪನೆಗಳ ಪೂರ್ಣ ಪರಿಷ್ಕರಣೆ ಅತ್ಯಾವಶ್ಯಕ **(ನೋಡಿ- ಕ್ವಾಂಟಂ-ಕ್ಷೇತ್ರ-ಸಿದ್ಧಾಂತ)**.

**ಗುರುತ್ವಾಕರ್ಷಣೀಯ ಅಲೆಗಳು:** ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತವನ್ನು ಸೂತ್ರೀಕರಿಸಿದ ಕ್ಷಿಪ್ರದಲ್ಲಿಯೇ ಐನ್‌ಸ್ಟೈನ್ ಗುರುತ್ವಾಕರ್ಷಣೀಯ ಅಲೆಗಳು ಅಥವಾ ಗುರುತ್ವೀಯ ವಿಸರಣೆ ಇವನ್ನು ಮುನ್ಸೂಚಿಸಿದ್ದ. ಗುರುತ್ವಾಕರ್ಷಣೀಯ ಕಲೆಯೆಂದರೆ ಬೆಳಕಿನ ವೇಗದಲ್ಲಿ ಚಲಿಸುತ್ತಿರುವ ಗುರುತ್ವಾಕರ್ಷಣೀಯ ಕ್ಷೇತ್ರ(ಅಥವಾ ಆಕಾಶ-ಕಾಲದ ಬಾಗುವಿಕೆಯ ಸಂಚಲನ). ಇದು ತಾನು ಚಲಿಸುತ್ತಿರುವ ದಾರಿಯಲ್ಲಿ ಅಡ್ಡಬಂದ ದ್ರವ್ಯರಾಶಿಗಳ ಮೇಲೆ ಬಲಗಳನ್ನು ಪ್ರಯೋಗ ಮಾಡುತ್ತದೆ. ಯಾವುದೋ ಪದಾರ್ಥದ ವಿತರಣೆಯಲ್ಲುಂಟಾದ ವ್ಯತ್ಯಾಸದಿಂದ ಗುರುತ್ವಾಕರ್ಷಣೀಯ ಅಲೆ ಉತ್ಪನ್ನವಾಗುತ್ತದೆ. ಇದು ಚಲಿಸುತ್ತಿರುವ ಆವೇಶಗಳ ಸಮೂಹವೊಂದರಿಂದ ಉತ್ಪನ್ನವಾಗುವ ವಿದ್ಯುತ್ಕಾಂತ ಅಲೆಗಳಿಗೆ ಸದೃಶವಾದುದು. ಆದರೆ ಈ ರೀತಿ ಹೋಲಿಕೆ ಮಾಡುವಾಗ ಅವುಗಳ ಪರಿಮಾಣಗಳ ವ್ಯತ್ಯಾಸಗಳನ್ನು ಒತ್ತಿ ಹೇಳಬೇಕು. ಉದಾಹರಣೆಗೆ, ಪ್ರೋಟಾನ್ ಮತ್ತು ಎಲೆಕ್ಟ್ರಾನುಗಳ ನಡುವಣ ಗುರುತ್ವಾಕರ್ಷಣ ಕ್ರಿಯೆ, ಸ್ಥಿರವಿದ್ಯುತ್ ಅನ್ಯೋನ್ಯಕ್ರಿಯೆಗಿಂತ ಸುಮಾರು $5\times10^{-40}$ರ ಗುಣಕದಷ್ಟು ಮಂದ. (ಗುರುತ್ವಾಕರ್ಷಣೀಯ ಮತ್ತು ವಿದ್ಯುತ್ಕಾಂತೀಯ ಘಟನೆಗಳನ್ನು ಒಂದುಗೂಡಿಸುವ ಪ್ರಯತ್ನ ಸಫಲವಾಗದಿರುವುದಕ್ಕೆ ಇದೂ ಒಂದು ಕಾರಣವೆಂದು ಹಿಂದೆಯೇ ತಿಳಿಸಿದೆ.) ಗುರುತ್ವಾಕರ್ಷಣೀಯ ವಿಸರಣೆ ಮತ್ತು ಪದಾರ್ಥಗಳ ನಡುವೆ ಸಾಪೇಕ್ಷವಾಗಿ ದುರ್ಬಲ ಅನ್ಯೋನ್ಯ ಕ್ರಿಯೆ ಇದ್ದರೂ ಈ ವಿಸರಣೆಯ ಅಳತೆಯನ್ನು ಯಥಾರ್ಥವಾಗಿ ಮಾಡಲು ಸಾಧ್ಯವಾಗಿದೆ. ಜೋಸೆಫ್ ವೆಬರ್ ಮತ್ತು ಆತನ ಸಹೋದ್ಯೋಗಿಗಳು ಈ ಕಾರ್ಯವನ್ನು ತೃಪ್ತಿಕರವಾಗಿ ನಡೆಸಿದ್ದಾರೆ.

ಗುರುತ್ವಾಕರ್ಷಣೀಯ ವಿಸರಣೆಯಿಂದ ನಿರೀಕ್ಷಿಸಬಹುದಾದ ಪರಿಮಾಣಗಳನ್ನು ಮುಂದೆ ಹೇಳುವ ಉದಾಹರಣೆ ಚಿತ್ರೀಕರಿಸುತ್ತದೆ. ಸೂರ್ಯನ ಸುತ್ತ ಭೂಮಿ ಕಕ್ಷೆಯಲ್ಲಿ ಚಲಿಸುತ್ತಿರುವಾಗ 0.001 ವಾಟ್ ಶಕ್ತಿಯಷ್ಟನ್ನು ಉತ್ಸರ್ಜಿಸಬೇಕು. ಕಕ್ಷೆಯಲ್ಲಿ ಚಲಿಸುತ್ತಿರುವಾಗ ಭೂಮಿಯ ಚಲನ ಶಕ್ತಿಯಿಂದ ಈ ಶಕ್ತಿಯನ್ನು ಪಡೆಯಿತೆಂದು ಭಾವಿಸಿಕೊಂಡರೆ ಇದರ ಪರಿಣಾಮವಾಗಿ ಶತಕೋಟಿ ವರ್ಷಗಳಲ್ಲಿ ಭೂಮಿಸೆಂಟಿಮೀಟರಿನ ಹತ್ತು ಲಕ್ಷ ಪಾಲಿನಷ್ಟು ಸೂರ್ಯನ ಕಡೆಗೆ ಬೀಳಬೇಕು; ಮತ್ತೊಂದು ಉದಾಹರಣೆ: ಸಮದ್ರವ್ಯರಾಶಿಯುಳ್ಳ ನಕ್ಷತ್ರಗಳ ಜೋಡಿಯೊಂದು ಒಂದರ ಸುತ್ತ ಮತ್ತೊಂದು ವೃತ್ತಾಕಾರದ ಕಕ್ಷೆಗಳಲ್ಲಿ ಸಾಪೇಕ್ಷವೇಗ vಯಿಂದ ಚಲಿಸುತ್ತಿರುವುವೆಂದು ಭಾವಿಸೋಣ. ಈ ಜೋಡಿ 128V10/5Gc5 ದರದಂತೆ ಗುರುತ್ವಾಕರ್ಷಣೀಯ ಶಕ್ತಿಯನ್ನು ವಿಸರಿಸುತ್ತದೆ. ಸಾಮಾನ್ಯ ಯಮಳನಕ್ಷತ್ರಗಳಿಗೆ ಈ ಸೂತ್ರ ಆಶ್ಚರ್ಯಕರವಾದ ಪರಿಣಾಮಗಳನ್ನು ಕೊಡುವುದಿಲ್ಲ. ಆದರೆ ಸೂರ್ಯನಷ್ಟೇ ದ್ರವ್ಯರಾಶಿ ಇರುವ 109 ಸೆಂಮೀ. ಅಂತರವಿರುವ ಕಾರಣದಿಂದ 100 ಸೆ. ಪರಿಭ್ರಮಣಾವಧಿ ಇರುವ ಎರಡು ಶ್ವೇತ ಕುಬ್ಜ ನಕ್ಷತ್ರಗಳಿಗೆ ಈ ದರ $2\times10^{37}$ಅರ್ಗ್/ಸೆ. ಆಗುತ್ತದೆ. ಇದು ಸೂರ್ಯನ ಕಾಂತಿಯ (ಲ್ಯೂಮಿನಾಸಿಟಿ) ಸುಮಾರು 5,000ದಷ್ಟು. ಸಮೀಪದಲ್ಲಿರುವ ನ್ಯೂಟ್ರಾನ್ ನಕ್ಷತ್ರಯುಗ್ಮವೊಂದರಿಂದ (ಈ ತರಹದ ನಕ್ಷತ್ರಗಳಿದ್ದರೆ) ವಿಸರಣೆ ಇನ್ನೂ ಹೆಚ್ಚು ತೀಕ್ಷಣವುಳ್ಳದ್ದಾಗುವುದು. ತೀಕ್ಷ್ಣ ವಿಸರಣದ ಇನ್ನೊಂದು ಆಕರ ಶೀಘ್ರದಲ್ಲಿಯೇ ಕುಸಿದು ಬೀಳುವ ಸಂದರ್ಭದಲ್ಲಿರುವ ಮಹಾನೋವ ನಕ್ಷತ್ರವಾಗಬಹುದು.

ಗುರುತ್ವಾಕರ್ಷಣೀಯ ವಿಸರಣೆಗೆ ಕ್ವಾಂಟಂ ಸಿದ್ಧಾಂತವನ್ನು ಡಿರಾಕ್ ಅಣಿಮಾಡಿದ; ಗುರುತ್ವಾಕರ್ಷಣೀಯ ಕ್ಷೇತ್ರದ ಕ್ವಾಂಟಂ ಎಂದು ಭಾವಿಸಿಕೊಳ್ಳಬಹುದಾದ ಗ್ರಾವಿಟಾನ್ **(ನೋಡಿ- ಗ್ರ್ಯಾವಿಟಾನ್)** ಎಂಬ ಕಣವನ್ನು ತರ್ಕದಿಂದ ವ್ಯುತ್ಪತ್ತಿಸಿದ. ಐನ್‌ಸ್ಟೈನನ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದ ಪ್ರಕಾರ ವೇಗೋತ್ಕರ್ಷಗೊಂಡ ದ್ರವ್ಯರಾಶಿ (ಅಥವಾ ಶಕ್ತಿಯ ಇತರ ರೀತಿಯ ವಿನ್ಯಾಸ), ವೇಗೋತ್ಕರ್ಷಗೊಂಡ ಅವೇಶಗಳು ವಿದ್ಯುತ್ಕಾಂತ ಅಲೆಗಳನ್ನು ಉತ್ಸರ್ಜಿಸುವಂತೆ ಗುರುತ್ವಾಕರ್ಷಣೀಯ ಅಲೆಗಳನ್ನು ಉತ್ಸರ್ಜಿಸಬೇಕು. ಕ್ವಾಂಟಂ ಕ್ಷೇತ್ರ ಸಿದ್ಧಾಂತದಂತೆ ಈ ರೀತಿಯ ವಿಸರಣ ಕೇತ್ರವೂ ಕ್ವಾಂಟೀಕರಿಸಲ್ಪಡಬೇಕು. ಅಂದಮೇಲೆ ಪ್ರಕಾಶದ ಶಕ್ತಿ ಭಿನ್ನ ಭಿನ್ನವಾದ ಕ್ವಾಂಟಮುಗಳಂತೆ ಅಂದರೆ ಫೋಟಾನುಗಳಂತೆ ಕಾಣಿಸಿಕೊಳ್ಳುವಂತೆ ಈ ಕ್ಷೇತ್ರದ ಶಕ್ತಿ ಗ್ರಾವಿಟಾನುಗಳೆಂದು ಕರೆಯಲ್ಪಡುವ ವಿಭಿನ್ನವಾದ ಕ್ವಾಂಟಮುಗಳಂತೆ ಗೋಚರವಾಗಬೇಕು. ಆದರೆ ವಸ್ತುಗಳು ಗುರುತ್ವಾಕರ್ಷಣೀಯ ಕ್ಷೇತ್ರದೊಂದಿಗೆ ಅತಿ ದುರ್ಬಲವಾಗಿ ಜೋಡಣೆಯಾಗಿವೆ. ಆದ್ದರಿಂದ ಹಿಂದೆಯೇ ತಿಳಿಸಿದಂತೆ ಗುರುತ್ವಾಕರ್ಷಣೀಯ ಉತ್ಸರ್ಜನೆ ಮತ್ತು ಅವಶೋಷಣೆ ಅತ್ಯಲ್ಪ. ಇವನ್ನು ನಿಷ್ಕೃಷ್ಟವಾಗಿ ಅಳೆಯುವುದೂ ಸುಲಭ ಕೆಲಸವಲ್ಲ. ಈ ವಿರಸಣೆಯನ್ನು ಅಳೆಯಲು ಚಂದ್ರನ ಮೇಲೆ ಸೂಕ್ಷ್ಮ ಯಂತ್ರಗಳನ್ನಿಡುವ ಪ್ರಯತ್ನಗಳು ನಡೆದಿವೆ. ಏಕೆಂದರೆ ಭೂಮಿಯ ಮೇಲಿರುವಂತೆ ಚಂದ್ರನ ಮೇಲೆ ಭೂಕಂಪ, ಅಲೆಗಳು, ಗಾಳಿ ಇತ್ಯಾದಿಯಾದ ವಿಕ್ಷೋಭೆಗಳಿರುವುದಿಲ್ಲ.

ಕಡೆಯದಾಗಿ ಶ್ರೇಡಿಂಗರ್ ಸಮೀಕರಣ ಹಾಗೂ ಡಿರಾಕ್ ಸಮೀಕರಣ ಇವೆರಡನ್ನೂ ಕ್ವಾಂಟೀಕರಣಕ್ಕೆ ಒಳಪಟ್ಟ ಅಭಿಜಾತ ಕ್ಷೇತ್ರ ಸಮೀಕರಣಗಳನ್ನು ಕುರಿತು ಪ್ರಸ್ತಾವಿಸಬಹುದು. ಹೀಗೆ ಮಾಡಿದಾಗ ಎಲೆಕ್ಟ್ರಾನುಗಳ ಅನೇಕ ಕಣಗಳ ಅಸಾಪೇಕ್ಷೀಯ ಸಿದ್ಧಾಂತ ದೊರೆಯುತ್ತದೆ. ಫೇನ್‌ಮನ್ ರೇಖಾಚಿತ್ರಗಳೊಂದಿಗೆ ಈ ತರ್ಕ ಘನಪದಾರ್ಥಗಳಲ್ಲಿ ಎಲೆಕ್ಟ್ರಾನುಗಳ ಗುಣವಿಶೇಷಗಳನ್ನೂ ಮುಖ್ಯವಾಗಿ ಎಲೆಕ್ಟ್ರಾನುಗಳ ಸಮೂಹ ದೋಲನಗಳಲ್ಲಿ (ಪ್ಲಾಸ್ಮದೋಲನಗಳು) ಮತ್ತು ಅತಿವಾಹಕತ್ವದ ಗ್ರಾಹ್ಯವೆನಿಸಿರುವ ಆಧುನಿಕ ಸಿದ್ಧಾಂತದಲ್ಲಿ ಸಾರ್ಥಕವಾಗಿ ಪ್ರಯೋಗಿಸಲ್ಪಟ್ಟಿವೆ. ಕ್ವಾಂಟಂ ವಿದ್ಯುತ್ ಗತಿಶಾಸ್ತ್ರದೊಂದಿಗೆ ಈ ವ್ಯಾಸಂಗಗಳಿಗೆ ಭೌತ ಘಟನೆಗಳಿಗೆ ಕ್ವಾಂಟಂ ಕ್ಷೇತ್ರಸಿದ್ಧಾಂತದ ಮೂಲಕ ವಿವರಣೆಗಳನ್ನು ಯಶಸ್ವಿಯಾಗಿ ಕೊಡಲು ಈ ಹೊತ್ತಿನ ತನಕ ಸಾಧ್ಯವಾಗಿದೆ. (ಎ.ಪಿ.)

**ಕ್ಷೇತ್ರಸ್ವರೂಪ ಸರ್ವೇಕ್ಷಣ ಮತ್ತು ಚಿತ್ರಣ :** ಭೂಮೇಲ್ಮೈಯಲ್ಲಿಯ ವಿವಿಧ ಲಕ್ಷಣಗಳನ್ನೂ ವಿನ್ಯಾಸಗಳನ್ನೂ ಅಳೆದು ಅವನ್ನು ಪೂರ್ವವ್ಯಾಖ್ಯಿತ ಮಾನಕ ಹಾಗೂ ಸಂಕೇತಗಳ ಅನುಸಾರ ಕಾಗದದ ಮೇಲೆ ಚಿತ್ರಿಸುವ ಕ್ರಿಯೆ (ಟೋಪೊಗ್ರಾಫಿಕಲ್ ಸರ್ವೇಯಿಂಗ್ ಅಂಡ್ ಮ್ಯಾಪಿಂಗ್). ಪ್ರಕೃತಿದತ್ತ ನದಿ, ಕಣಿವೆ, ಕಾಡು, ಪರ್ವತ, ಸಾಗರ ಇವೇ ಮೊದಲಾದವೂ ಮಾನವನಿರ್ಮಿತ ನಗರ, ಗ್ರಾಮ, ಸೇತುವೆ, ಸುರಂಗ, ರಸ್ತೆ ಇವೇ ಮೊದಲಾದವೂ ಭೂಮೇಲ್ಮೈಯಲ್ಲಿಯ ವಿವಿಧ ಲಕ್ಷಣಗಳು. ಇವು ಒಂದಕ್ಕೊಂದು ಸಾಪೇಕ್ಷವಾಗಿ ಹೀಗೆ ಇವೆ–ಉದಾಹರಣೆಗೆ ನದಿಯ ಓಟದ ದಿಕ್ಕು, ನಗರದ ಸ್ಥಾನ ಇತ್ಯಾದಿ–ಎನ್ನುವುದೇ ಅವುಗಳ ವಿನ್ಯಾಸ. ಲಕ್ಷಣಗಳೂ ವಿನ್ಯಾಸಗಳೂ ಒಟ್ಟಾಗಿ ಕ್ಷೇತ್ರಸ್ವರೂಪ ಎನಿಸಿಕೊಳ್ಳುತ್ತವೆ.

ಕ್ಷೇತ್ರಸ್ವರೂಪ ವಿವರಣೆ ಭೂಮಿಗೇ ಸೀಮಿತವಲ್ಲ. ಸಾಗರತಳದ ಕ್ಷೇತ್ರಸ್ವರೂಪವನ್ನು ಇತ್ತೀಚೆಗೆ ಹೆಚ್ಚು ಆಸಕ್ತಿಯಿಂದ ಮೋಜಣಿ ನಡೆಸುತ್ತಿದ್ದಾರೆ. ಇದರಿಂದ ಸಮುದ್ರತಳದಲ್ಲಿ ಭೂಮಿಯ ಮೇಲ್ತೊಗಟೆಯಲ್ಲಿರುವಂತೆಯೇ ಏರು ತಗ್ಗುಗಳು, ಸ್ತರಭಂಗ(ಫಾಲ್ಟ್), ಪ್ರಸ್ಥಭೂಮಿ, ಕಣಿವೆ, ಅಗ್ನಿಪರ್ವತದ ದಿಬ್ಬಗಳು ಇತ್ಯಾದಿ ಇವೆ ಎಂದು ತಿಳಿದುಬಂದಿದೆ. ಚಂದ್ರನ ಕ್ಷೇತ್ರ ಸ್ವರೂಪವನ್ನು ಸಹ ಈಚೆಗೆ ವರ್ಣಿಸಲು ಸಾಧ್ಯವಾಗಿದೆ.

ನಿಸರ್ಗದ ಹಾಗೂ ಜೀವಿಗಳ ಪ್ರಭಾವಕ್ಕೆ ಸದಾ ಒಳಪಟ್ಟುಕೊಂಡಿರುವ ಭೂಮಿಯ ಮೇಲಿನ ಯಾವುದೇ ಕ್ಷೇತ್ರಸ್ವರೂಪ ಶಾಶ್ವತವಲ್ಲ. ಈ ರೀತಿಯ ಬದಲಾವಣೆಗಳನ್ನು ಕ್ರಮೇಣವಾದ ಹಂತಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ ನದಿಯ ಕ್ಷೇತ್ರ ಸ್ವರೂಪ ಚರಿತ್ರೆಯನ್ನು ಮೂರು ಹಂತಗಳಲ್ಲಿ ಕಾಣಬಹುದು.

**1 ಬಾಲ್ಯ–ತಾರುಣ್ಯಾವಸ್ಥೆ:** ಮಳೆಹನಿಗೂಡಿ ಝರಿಯಾಗಿ ಇಳಿಜಾರಿನಲ್ಲಿ ಹರಿದು ಕಣಿವೆಯನ್ನು ತೋಡಿ ರಭಸದಿಂದ ಭೋರ್ಗರೆವ ಶಕ್ತಿಯುತ ನದಿ ಕುಪ್ಪಳಿಸಿ ಜಲಪಾತಗಳಾಗಿ ಮೈದಾನ ಸೇರುವವರೆಗೆ.

**2 ಪ್ರೌಢಾವಸ್ಥೆ:** ಮೆಕ್ಕಲನ್ನು ಹೊತ್ತುತಂದ ನದಿ ನಿಕ್ಷೇಪಿಸುವುದು ಹಾಗೂ ಅಂಕುಡೊಂಕಾಗಿ ವೇಗವಿಲ್ಲದೆ ಬದಿಯನ್ನು ಕೊರೆಯುತ್ತ ಸಾಗುವುದು.

**3 ವೃದ್ಧಾಪ್ಯ:** ಶಕ್ತಿಯನ್ನು ಕಳೆದುಕೊಂಡು ಹಲವಾರು ಕವಲುಗಳಾಗಿ ಕ್ರಮೇಣ ಸಾಗರದಲ್ಲಿ ಐಕ್ಯ.

ಎಲ್ಲ ಭೂವ್ಯಾಪಾರಗಳೂ ತಂತಮ್ಮ ಚಕ್ರಗಳನ್ನು(ಸೈಕಲ್ಸ್) ಹಂತ ಹಂತವಾಗಿ ಪೂರೈಸುತ್ತವೆ. ಇವು ಪುನರಾವೃತ್ತಿ ಆಗುತ್ತಲೇ ಇರುವುವು. ಪ್ರಕೃತಿಯಲ್ಲಿ ಹಲವಾರು ಆವೃತ್ತಿಗಳುಂಟು. ನದಿಯ ಆವೃತ್ತಿ, ನೀರ್ಗಲ್ಲ ಆವೃತ್ತಿ, ಸಮುದ್ರದ ಶಿಥಿಲೀಕರಣ ಆವೃತ್ತಿ, ಮರಳ್ಗಾಡಿನ ಶಿಥಿಲೀಕರಣ ಆವೃತ್ತಿ, ಇತ್ಯಾದಿ ಈ ಎಲ್ಲ ಆವೃತ್ತಿಗಳಿಗೆ ಮಿತಿಯುಂಟು. ಯಾವ ನದಿಯೇ ಆಗಲಿ ಸಮುದ್ರಮಟ್ಟಕ್ಕಿಂತ ಕೆಲವು ಅಡಿ ಕೆಳಕ್ಕೆ ಕಣಿವೆಯನ್ನು ಕೊರೆಯಲಾರದು. ಕಾರಣ ನೀರು ಹರಿಯಲು ಸ್ವಲ್ಪವಾದರೂ ಇಳಿಜಾರು ಇರಲೇಬೇಕು. ಒಂದು ಆವೃತ್ತಿಯಲ್ಲಿ ಮತ್ತೊಂದು ಸೇರಿದರೆ ಆಗ ಕ್ಷೇತ್ರಸ್ವರೂಪದಲ್ಲಿ ಅನನುರೂಪತೆ ಉಂಟಾಗುತ್ತದೆ. ಉದಾಹರಣೆಗೆ ನೀರ್ಗಲ್ಲ ಮುರುಕಲು ಗುಪ್ಪೆಯಲ್ಲಿ ನದೀಬಯಲು, ಕಣಿವೆ, ಇಲ್ಲವೆ ಮರಳುದಿಬ್ಬಗಳ ಇರುವಿಕೆ. ಈ ಅನನುರೂಪತೆ ಭೂಕಾಲಸೂಚಿಯ ಒಂದು ನಿರ್ದಿಷ್ಟ ಕಲ್ಪದ್ದಿರಬಹುದು. ಹಿಮಾಲಯ ಪರ್ವತ ತನ್ನ ಇಂದಿನ ಕ್ಷೇತ್ರ ಸ್ವರೂಪ ತಳೆಯಲು ಕ್ರಿಟೇಷಿಯಸ್ ಕಲ್ಪದಿಂದ ಪ್ಲೀಸ್ಟೋಸೀನ್ ಕಲ್ಪದ ವರೆಗೆ ಟೆತಿಸ್ ಮಹಾಕಂದರದಲ್ಲಿ ಸಂಚಯನಗೊಂಡ ಮಡ್ಡಿ ನಾಲ್ಕು ಹಂತಗಳಲ್ಲಿ ಮೇಲೊತ್ತಲ್ಪಟ್ಟಿದೆ.

ಶುಷ್ಕ ಮತ್ತು ಅರೆಶುಷ್ಕ ಚಕ್ರಗಳಿಗೆ ನದೀಚಕ್ರಗಳಿಗಿಂತ ಹೆಚ್ಚಿನ ವೈಪರೀತ್ಯ ಉಂಟು. ಮುಖ್ಯವಾಗಿ ನೀರು ಬಸಿತಕ್ಕಿಂತ ಆವಿಯಾಗುವುದು ಹೆಚ್ಚಾದ್ದರಿಂದ ಹಾಗೂ ವರ್ಷವಿಡೀ ನೀರಿರುವ ನದಿಗಳು ಇಲ್ಲದ್ದರಿಂದ ಕೊಚ್ಚಿಹೋಗುವ ಮತ್ತು ಕೊರೆಯುವ




ಚಿತ್ರ–1–ಮತ್ತು–2




ಚಿತ್ರ 3

ಜಲ್ಲಿ ಹಾಕಿದ ರಸ್ತೆ : ಹೆದ್ದಾರಿ, ಸಾಧಾರಣ ದಾರಿ, ಕಿಮೀ. ಕಲ್ಲುಗಳಿರುವ ದಾರಿ

ಜಲ್ಲಿ ಹಾಕದ ರಸ್ತೆ : ಹೆದ್ದಾರಿ, ಸಾಧಾರಣ ದಾರಿ, ಕಿಮೀ. ಕಲ್ಲುಗಳಿರುವ ದಾರಿ

ಗಾಡಿದಾರಿ, ಕಾಲುದಾರಿ

ನದೀಪಾತ್ರದಲ್ಲಿ ದಾರಿ, ರೈಲುಹಾದಿಯನ್ನು ಅಡ್ಡಹಾಯುವ ಸ್ಥಳ (ಲೆವೆಲ್ ಕ್ರಾಸಿಂಗ್)

ಸೇತುವೆಗಳು : ಕಮಾನು ಸಮೇತ, ಕಮಾನು ರಹಿತ, ಪಾಲ ಹಾಯ್ಗಡೆ

ಹೊಳೆ, ಸರಿಸುಮಾರಾಗಿ ನೀರು ಹರಿವ ದಾರಿ, ಕಾಲುವೆ

ನದೀದಡಗಳು : ಇಳಿಜಾರಾದ, 10'.20' ಆಳವಾದ, 20'ಗಿಂತಲೂ ಆಳವಾದ

ನದೀಪಾತ್ರಗಳು : ಬತ್ತಿದ, ಕಿರು ತೊರೆ ಹರಿಯುವ, ನಡುಗುಡ್ಡ ಮತ್ತು ಕಲ್ಲುಗಳು

ಬಾವಿಗಳು : ಕಲ್ಲು ಕಟ್ಟಿರುವ, ಕಲ್ಲು ಕಟ್ಟದ, ಚಿಲುಮೆ ಕೆರೆಗಳು : ಹರಿಯುವ ಬತ್ತಿದ

ತೊರೆ : ಹರಿಯುವ, ಬತ್ತಿದ, ಚೌಗು, ಜೊಂಡುಗಳು

ಏರಿಗಳು : ರಸ್ತೆಯ ಅಥವಾ ರೈಲು ರಸ್ತೆಯ, ಕತ್ತರಿಸಿದ ಸುರಂಗ

ಶಿಥಿಲ ಭೂಮಿ : ಶಿಬಿರ ಸ್ಥಳ, ಹಂಬಿನ ತೋಟಗಳು

ರೈಲುದಾರಿ : ಬ್ರಾಡ್‌ಗೇಜ್, ಬ್ರಾಡ್‌ಗೇಜ್ ನಿಲ್ದಾಣ ಸಮೇತ, ರಚನೆಯಲ್ಲಿರುವ ಬ್ರಾಡ್‌ಗೇಜ್, ಇತರ ಗೇಜುಗಳು, ರಚನೆಯಲ್ಲಿರುವ ರೈಲುದಾರಿ

ಟೆಲಿಗ್ರಾಫ್ ಲೈನ್

ಸರ್ಕ್ಯೂಟ್ ಮನೆ, ಪ್ರವಾಸಿ ಮಂದಿರ, ವಿಶ್ರಾಂತಿಗೃಹ

ಪೋಲೀಸ್ ಠಾಣೆ, ಅಂಚೆ ಕಛೇರಿ, ತಂತಿ ಕಛೇರಿ, ಅಂಚೆ ಮತ್ತು ತಂತಿ ಕಛೇರಿ

ಅರಣ್ಯಗಳು : ಕಾಯ್ದಿರಿಸಿದ, ರಾಜ್ಯ, ರಕ್ಷಿತ

ಹಳ್ಳಿಗಳು : ತೆರೆದ, ಮುಚ್ಚಿದ, ಪಾಳುಬಿದ್ದ, ನಿರ್ಜನ, ಪ್ರಾಚೀನ ಸ್ಮಾರಕಗಳು

ಗುಡಿಸಲುಗಳು : ಶಾಶ್ವತ, ಹಂಗಾಮಿ, ಕೋಟೆ, ಗೋಪುರ, ಸತ್ರ

ಇಗರ್ಜಿ, ಮಸೀದಿ, ದೇವಾಲಯ, ಪಗೋಡ, ಈದ್ಗಾ, ಗೋರಿ

ಕಟ್ಟೆಗಳು : ಗಾರೆಕೆಲಸದ, ಮಣ್ಣಿನ, ಕೋಡಿ

ದೀಪಸ್ತಂಭ, ಹಗುರ ಹಡಗು, ಲಂಗರು ಸ್ಥಳ

ಹುಲ್ಲು : ಎತ್ತರ, ಕುರುಚಲು, ಬೆತ್ತ, ಬಿದಿರು, ಬಾಳೆ

ತಾಳೆ ಮರಗಳು : ಅಡಿಕೆ, ತಾಟಿನುಂಗು, ಇತರೆ

ಸಮೋನ್ನತಿ ರೇಖೆಗಳು ಪ್ರಪಾತ, ಮರಳು ದಿಬ್ಬಗಳು

ಗಡಿರೇಖೆ : ಅಂತಾರಾಷ್ಟ್ರೀಯ

ಅಂತರರಾಜ್ಯ (ಗುರುತು ಮಾಡಿದ)

ಅಂತರರಾಜ್ಯ (ಗುರುತು ಮಾಡದ)

ಜಿಲ್ಲೆ ಅಥವಾ ಬುಡಕಟ್ಟಿನ

ತಾಲ್ಲೂಕು ಇತ್ಯಾದಿ

ಗೋರಿಗಳು, ಎಣ್ಣೆಬಾವಿ, ಗಣಿ, ಯುದ್ಧರಂಗ (ಇಸವಿ ಸಹಿತ)

ತ್ರಿಕೋಣೀಯ ಔನ್ನತ್ಯಗಳು

ಬೆಂಚ್ ಗುರುತುಗಳು




ಕಾರ್ಯಗಳು ಕಡಿಮೆ. ಈ ಚಕ್ರಗಳಲ್ಲಿ ಯಾಂತ್ರಿಕವಾಗಿ ನಡೆವ ಶಿಥಿಲೀಕರಣಕ್ಕಿಂತ ರಾಸಾಯನಿಕ ಶಿಥಿಲೀಕರಣವೇ ಹೆಚ್ಚು. ಸಂಪೂರ್ಣ ಇಲ್ಲವೆ ಅರೆಶುಷ್ಕ ವಾತಾವರಣ ವ್ಯತ್ಯಾಸ ತಿಳಿದಿದ್ದರೆ ಆ ಚಕ್ರಗಳ ಕ್ಷೇತ್ರಸ್ವರೂಪವನ್ನು ವಿವರಿಸಬಹುದು. ಅಲ್ಲಿಯ ಸಸ್ಯವರ್ಗ ಮತ್ತು ಅಪರೂಪವಾಗಿ ಬರುವ ಚಂಡಮಾರುತ ಮತ್ತು ಮಳೆಯಿಂದ ಕ್ಷೇತ್ರಸ್ವರೂಪದಲ್ಲಿ ವ್ಯತ್ಯಾಸ ಆಗುತ್ತದೆ. ಉದಾಹರಣೆಗೆ ಭಾರತದ ಥಾರ್ ಮರುಭೂಮಿಯಂಥ ಅಪೂರ್ಣ ಮರಳುಗಾಡು ಮತ್ತು ಒಣ ಸ್ಟೆಪ್ಪೀಸ್ ಹುಲ್ಲುಗಾವಲು, ಸಹರ ಮರುಭೂಮಿ ಅಂಚು, ಆಫ್ರಿಕದ ನೈಋತ್ಯದ ಪ್ರಸ್ಥಭೂಮಿ ಕಲಹರಿ ಮರುಭೂಮಿಯ ಕೆಲವು ಭಾಗಗಳು ಇತ್ಯಾದಿ. ಈ ಚಕ್ರದಲ್ಲಿ ಸಾಮಾನ್ಯವಾಗಿ ಬರುವ ಕ್ಷೇತ್ರಸ್ವರೂಪವೆಂದರೆ ಓಯೆಸಿಸ್ ಹಾಗೂ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಮೆಕ್ಸಿಕೋಗಳಲ್ಲಿ ಬಾಲ್ಸನ್ ಎಂದು ಕರೆಯುವ ಪರ್ವತಗಳಿಂದ ಸುತ್ತುವರಿದಿರುವ ಮರಳುಗಾಡು. ಬಾಲ್ಸನ್ ಕೇಂದ್ರದ ಸಮತಟ್ಟಾದ ಸ್ಥಳಕ್ಕೆ ಪ್ಲಯಾ ಕೆರೆ ಎಂದು ಹೆಸರು. ಕೆಲವು ವೇಳೆ ಪ್ಲಯಾಗಳಲ್ಲಿ ನೀರು ಆವಿಯಾಗಿ ಲವಣಲೇಪಕಗಳು ಅಲ್ಕಲಿ ಪ್ಲ್ಯಾಟ್ಸ್ ಆಗುತ್ತದೆ. ಪ್ಲಯಾದಲ್ಲಿ ಉಪ್ಪಿನ ಅಂಶ ಹೆಚ್ಚಿದಂತೆಲ್ಲ ಉಪ್ಪಿನ ಹಳ್ಳ ಆಗುತ್ತದೆ. ಗಾಳಿ ಚಕ್ರದಲ್ಲಿ ಮರಳುದಿಬ್ಬ ಮತ್ತು ಲೋಯಸ್ ನಿಕ್ಷೇಪಗಳ ಕ್ಷೇತ್ರಸ್ವರೂಪವಿರುತ್ತದೆ. ಗಾಳಿಯ ಉಜ್ಜುವಿಕೆಯಿಂದ ತಳಭಾಗ ಬೇಗ ಸವೆದು ಮೇಲ್ಭಾಗ ಗಡುಸಾಗಿ ಬಂಡೆಯಿಂದ ಕೂಡಿ ನಿಂತಿರುವ ಸ್ವರೂಪವಾಗಬಹುದು. ಇದನ್ನು ಗುಪ್ಪಟೆಕಲ್ಲು (ಪೆಡೆಸ್ಟಲ್ ರಾಕ್) ಎನ್ನುತ್ತಾರೆ. ಸುಣ್ಣಕಲ್ಲಿನ ಪ್ರದೇಶದಲ್ಲಿ ಅಂತರ್ಗುಹೆಗಳು ಸ್ಟಾಲೆಕ್‌ಟೈಟ್, ಸ್ಟಾಲೆಗ್‌ಮೈಟ್, ಸುಣ್ಣಕಲ್ಲು, ತೊಂಗಲು, ಪ್ರಾಕೃತಿಕ ಸುರಂಗಗಳುಳ್ಳ ಕ್ಷೇತ್ರಸ್ವರೂಪವಿರುತ್ತದೆ. ಇವೆಲ್ಲವೂ ಸುಣ್ಣಶಿಲೆಯನ್ನು ಆಮ್ಲಯುತ ಅಂತರ್ಜಲ ಕರಗಿಸುವುದರಿಂದ ಆಗುವ ಕ್ಷೇತ್ರಸ್ವರೂಪಗಳು. ಹಿಮನದಿ ಪ್ರದೇಶದಲ್ಲಿ v ಆಕಾರದ ಕಣಿವೆಗಳು ಮತ್ತು ಮುರುಕಲು ಗುಪ್ಪೆಗಳುಳ್ಳ ಕ್ಷೇತ್ರ ಸ್ವರೂಪವಿರುತ್ತದೆ. ಕರಾವಳಿ ಪ್ರದೇಶದಲ್ಲಿ ಪ್ರಪಾತಗಳು, ಸಮುದ್ರ ಸವೆತದಿಂದಾದ ಸಮತಟ್ಟು ಪ್ರದೇಶ, ಮರಳು ಬದಿಗಳು ಇರುವ ಕ್ಷೇತ್ರಸ್ವರೂಪ ಇರುವುದು. ಅಗ್ನಿಪರ್ವತ ಪ್ರದೇಶದಲ್ಲಿ ಕ್ಷೇತ್ರಸ್ವರೂಪ ಸಾಮಾನ್ಯವಾಗಿ ಬೋಗುಣಿಯಾಕಾರದ ಗುಳಿಗಳು (ಕ್ರೇಟರ್ಸ್), ಮೊನಚಾದ ದಿಬ್ಬಗಳು ಹಾಗೂ ಲಾವರಸದ ಪ್ರವಾಹಗಳು. ಅವು ಮಟ್ಟಸತುದಿ ಪರ್ವತಗಳಾಗಿ ಕಾಣುತ್ತವೆ. ಉದಾಹರಣೆಗೆ ಮುಂಬಯಿ, ಪೂನ, ಗುಲ್ಬರ್ಗ ಮತ್ತು ಬೆಳಗಾಂ ಪ್ರದೇಶಗಳಲ್ಲಿ ಇಂಥ ಬೆಟ್ಟಗಳನ್ನು ಕಾಣಬಹುದು

**ಸರ್ವೇಕ್ಷಣ ವಿಧಾನ:** ನೆಲ ಸರ್ವೇಕ್ಷಣ (ಗ್ರೌಂಡ್ ಸರ್ವೇಯಿಂಗ್) ಮತ್ತು ಅಂತರಿಕ್ಷ ಸರ್ವೇಕ್ಷಣ (ಏರಿಯಲ್ ಸರ್ವೇಯಿಂಗ್) ಎನ್ನುವ ಎರಡು ವಿಧಾನಗಳುಂಟು. ಇವುಗಳಲ್ಲಿ ಯಾವುದನ್ನು ಆಯಬೇಕು ಎನ್ನುವುದು ಅಂತಿಮವಾಗಿ ಅರ್ಥಿಕ ಪ್ರಶ್ನೆ ಆಗುತ್ತದೆ.

**ಚಿತ್ರಣ :** ಕ್ಷೇತ್ರನಕ್ಷೆ ಎಂದರೆ ಭೂಪಟವನ್ನು ತಯಾರಿಸಲು ಹಲವು ನಿಯಮಗಳನ್ನು ಅನುಸರಿಸಬೇಕು. ಮೊದಲನೆಯದು, ಯುಕ್ತ ಮಾನಕದ ಆಯ್ಕೆ. ಭೂಮಿಯ ಎಷ್ಟು ಪ್ರದೇಶವನ್ನು ಪಟದ ಎಷ್ಟು ವಿಸ್ತೀರ್ಣದಲ್ಲಿ ಸಂಕುಚಿಸಿ

ಅಳವಡಿಸಬೇಕು ಎನ್ನುವ ಅಂಶವನ್ನು ಇದು ಅವಲಂಬಿಸಿದೆ. ಇದರೊಂದಿಗೆ ಪಟದ ಗಾತ್ರ ಉಪಯೋಗಕ್ಕೆ ಅನನುಕೂಲವಾಗುವಷ್ಟು ದೊಡ್ಡದಾಗಿ ಇರಬಾರದು. ಒಂದು ದತ್ತ ಪಟದಲ್ಲಿ (ಪಟದ ವಿಸ್ತೀರ್ಣ ಸ್ಥಿರ) ಮಾನಕದ ಪ್ರಮಾಣಮೌಲ್ಯ ಕಿರಿದಾದಷ್ಟೂ ನೆಲದ ಅಧಿಕಾಂಶವನ್ನು ಅಲ್ಲಿ ಚಿತ್ರಿಸುವುದು ಸಾಧ್ಯ. ಆದರೆ ಇಂಥಲ್ಲಿ ಸಹಜವಾಗಿ ವಿವರಗಳು ಕಡಿಮೆ ಆಗುತ್ತವೆ. ಅದೇ ಪಟದಲ್ಲಿ ಮಾನಕದ ಪ್ರಮಾಣ ಮೌಲ್ಯ ಹಿರಿದಾದಷ್ಟೂ ಚಿತ್ರಣಗೊಳ್ಳುವ ನೆಲದ ಅಂಶಕಡಿಮೆ. ಆದರೆ ಇಲ್ಲಿ ವಿವರಗಳು ಸಹಜವಾಗಿ ಹೆಚ್ಚಾಗಿ ಇರುವುವು. ಉದಾಹರಣೆಗೆ 1"=1 ಮೈಲಿ (1 : 63,360) ಪಟದಲ್ಲಿ ದೊರೆಯುವ ನೆಲದ ವಿಸ್ತೀರ್ಣಕ್ಕಿಂತ ಹೆಚ್ಚು ವಿಸ್ತೀರ್ಣ 1"=4 ಮೈಲಿ (1 : 2,53,440) ಮಾನಕದ ಪಟದಲ್ಲಿ ಪಡೆಯಬಹುದು. ಆದರೆ ಮೊದಲನೆಯದರಲ್ಲಿ ದೊರೆಯುವ ವಿವರಗಳು ಎರಡನೆಯದರಲ್ಲಿ ದೊರೆಯುವವುಗಳಿಗಿಂತ ಅಧಿಕ.

ಎರಡನೆಯದು, ಸಮೋನ್ನತಿ ರೇಖೆಗಳು. ಮೂರು ಆಯಾಮಗಳ ಭೂಮಿಯನ್ನು ಎರಡು ಆಯಾಮಗಳ ಪಟದ ಮೇಲೆ ಪೋರ್ದಿಸುವಾಗ ಏರು ತಗ್ಗುಗಳನ್ನು ಅಳವಡಿಸಲು ಬಳಸುವ ತಂತ್ರ ಸಮೋನ್ನತಿ ರೇಖೆಗಳ ಚಿತ್ರಣ. ಸಮುದ್ರಮಟ್ಟದಿಂದ ದತ್ತ ಸಮೋನ್ನತಿಗಳಲ್ಲಿರುವ ಬಿಂದುಗಳನ್ನು ಜೋಡಿಸುವ ವಕ್ರರೇಖೆ ಸಮೋನ್ನತಿರೇಖೆ. ಉದಾಹರಣೆಗೆ ಒಂದು ಬೆಟ್ಟವಿದೆ. ಇದರ ಮೈಮೇಲೆ 50' ಅಂತರಗಳಲ್ಲಿ ಸಮೋನ್ನತಿ ರೇಖೆಗಳನ್ನು ಎಳೆದು ಇವೆಲ್ಲವನ್ನೂ ಬೆಟ್ಟದ ಬುಡದ ಮೂಲಕ ಸಾಗುವ ಸಮತಲದ ಮೇಲೆ ಲಂಬವಿಕ್ಷೇಪಣ ಮಾಡಿದರೆ ಚಿತ್ರ (2)ರಂಥ ಆಕೃತಿ ದೊರೆಯುತ್ತದೆ. ಒಂದು ಭೂಪಟದಲ್ಲಿ ಕಾಣುವುದು ಚಿತ್ರ (2)ರಲ್ಲಿರುವಂಥ ಆಕೃತಿಗಳು. 1000 ಎಂದು ಅಂಕಿತವಾಗಿರುವ ರೇಖೆ ಸಮುದ್ರಮಟ್ಟದಿಂದ ಅಷ್ಟು ಎತ್ತರದಲ್ಲಿರುವ ಪ್ರದೇಶಗಳನ್ನು ಒಳಗೊಂಡಿದೆ ಎಂದು ಇದರ ಅರ್ಥ. ವಿಲೋಮವಾಗಿ ಪಟದಲ್ಲಿ ಯಾವ ಪ್ರದೇಶದ ಮೂಲಕ ಈ ರೇಖೆ ಸಾಗುವುದೋ ಆ ಪ್ರದೇಶದ ಎತ್ತರ 1000' ಎಂದು ಅರ್ಥ. ಸಮೋನ್ನತಿ ರೇಖೆಗಳಿಂದ ನೆಲದ ಏರು ತಗ್ಗುಗಳನ್ನು ಚಿತ್ರಿಸುವ ವಿಧಾನವನ್ನು ಚಿತ್ರ (3)ರಲ್ಲಿ ತೋರಿಸಿದೆ. ಭೂಪಟದಲ್ಲಿ ಸಮೋನ್ನತಿ ರೇಖೆಗಳನ್ನು ಸಾಮಾನ್ಯವಾಗಿ ಕಂದುಬಣ್ಣದ ವಕ್ರರೇಖೆಗಳಿಂದ ಗುರುತಿಸಿರುತ್ತಾರೆ. ಅಲ್ಲದೇ ಸಮೋನ್ನತಿ ರೇಖಾಂತರವನ್ನು (ಉದಾಹರಣೆಗೆ 50' ಎಂದು) ಸ್ಪಷ್ಟವಾಗಿ ನಮೂದಿಸಿರುತ್ತಾರೆ.

ಮೂರನೆಯದು, ಸಾಂಪ್ರದಾಯಿಕ ಚಿಹ್ನೆಗಳು (ಕನ್‌ವೆನ್ಷನಲ್ ಸೈನ್ಸ್). ಕೆಲವು ಪ್ರಸಿದ್ಧ ಚಿಹ್ನೆಗಳನ್ನೂ ಅವುಗಳ ವಿವರಣೆಗಳನ್ನೂ ಚಿತ್ರ (4)ರಲ್ಲಿ ತೋರಿಸಿದೆ. ಭೂಪಟದ ಕೆಳಭಾಗದಲ್ಲಿ ಇಕ್ಕೆಡೆಗಳಲ್ಲೂ ಸಾಂಪ್ರದಾಯಿಕ ಚಿಹ್ನೆಗಳ ಯಾದಿಯನ್ನು ಮುದ್ರಿಸುವುದು ವಾಡಿಕೆ. ಇವುಗಳ ನಡುವಿನ ಪ್ರದೇಶದಲ್ಲಿ ಮಾನಕವನ್ನೂ ಸಮೋನ್ನತಿ ರೇಖೆಗಳ ವಿವರಣೆಗಳನ್ನೂ ಪಟಕ್ಕೆ ಸಂಬಂಧಿಸಿದ ಇತರ ವಿವರಗಳನ್ನೂ ಬರೆದಿರುತ್ತಾರೆ.

ನಾಲ್ಕನೆಯದು, ಭೂಪಟಕ್ಕೆ ಜಾಲವನ್ನು (ಗ್ರಿಡ್) ಅಳವಡಿಸುವುದು. ದಕ್ಷಿಣೋತ್ತರ ಹಾಗೂ ಪಶ್ಚಿಮಪೂರ್ವ ದಿಕ್ಕುಗಳಲ್ಲಿ ಸಾಗುವ ಊರ್ಧ್ವ ಮತ್ತು ಕ್ಷಿತಿಜೀಯ ಸರಳ



ಚಿತ್ರ 5

ರೇಖೆಗಳಿಗೆ ಜಾಲರೇಖೆಗಳೆಂದು (ಗ್ರಿಡ್ ಲೈನ್ಸ್) ಹೆಸರು. ಭೂಗೋಳದ ಮೇಲಿ ಮೇಲಿನ ರೇಖಾಂಶ, ಅಕ್ಷಾಂಶವೃತ್ತಗಳಿಗೆ ಸಂವಾದಿಯಾಗಿ ದೊರೆಯುವ ಸರಳ ಸಮಾಂತರ ರೇಖೆಗಳಿವು. ಇವನ್ನು ಗುರುತಿಸಲು ಯುಕ್ತ ಸಂಖ್ಯೆಗಳನ್ನು ಅಳವಡಿಸಲಾಗುತ್ತದೆ. ಈ ಸಂಖ್ಯೆಗಳ ನೆರವಿನಿಂದ ಪಟದ ಮೇಲಿನ ಒಂದು ಬಿಂದುವನ್ನು ಏಕೈಕವಾಗಿ ಬೊಟ್ಟು ಮಾಡಿ ತೋರಿಸಬಹುದು. ವಿಲೋಮವಾಗಿ ಪಟದ ಮೇಲಿನ ಒಂದು ಬಿಂದುವಿನ ಜಾಲಸಂಖ್ಯೆಯನ್ನು ಏಕೈಕವಾಗಿ ನಿರ್ಧರಿಸಬಹುದು. ಚಿತ್ರ (5)ರಲ್ಲಿಯ A ಬಿಂದುವಿನ ಜಾಲಸಂಖ್ಯೆ 463225; ಜಾಲಸಂಖ್ಯೆ 480230 ಇರುವ ಬಿಂದು B.

**ಉಪಯೋಗಗಳು:** ಖನಿಜಾನ್ವೇಷಣೆ, ಅಂತರ್ಜಲಾನ್ವೇಷಣೆ, ಮಿಲಿಟರಿ ಕಾರ್ಯಾಚರಣೆಗಳು, ಭೌಗೋಳಿಕ ವಿದ್ಯಮಾನಗಳ ತಿಳಿವಳಿಕೆ, ಅಂತಾರಾಷ್ಟ್ರೀಯ ಸಮಸ್ಯೆಗಳ ಪರಿಹಾರ, ಇತಿಹಾಸದ ವೈಜ್ಞಾನಿಕ ನಿರೂಪಣೆ ಇವೇ ಮುಂತಾದ ಮಾನವ ಕ್ರಿಯೆಗಳಲ್ಲಿ ಕ್ಷೇತ್ರ ಸ್ವರೂಪ ಜ್ಞಾನದ ಉಪಯೋಗ ಉಂಟು.

ಭೂಮೇಲ್ಮೈ ಪರಿಶೀಲನೆಯಿಂದ ಗಣಿಗಳನ್ನು ಪತ್ತೆ ಹಚ್ಚುಹುದೆಂಬುದನ್ನು ಮೆಕೆನ್ಸ್ಟ್ರಿ ಎಂಬಾತ ನಿರೂಪಿಸಿದ್ದಾನೆ (1948). ಗಣೀವಿಜ್ಞಾನದಲ್ಲಿ ಖನಿಜನಿಕ್ಷೇಪ ಪತ್ತೆಹಚ್ಚಲು ಮೂರು ಮುಖ್ಯ ಮಾರ್ಗದರ್ಶೀ ಕ್ಷೇತ್ರ ಸ್ವರೂಪಗಳನ್ನು ಉಪಯೋಗಿಸಬಹುದು.

1. ಕೆಲವು ಖನಿಜನಿಕ್ಷೇಪಗಳು ವಿಶಿಷ್ಟವಾದ ಕ್ಷೇತ್ರ ಸ್ವರೂಪಗಳನ್ನು ಪ್ರದರ್ಶಿಸುತ್ತವೆ.
2. ಭೂರಚನೆಯ ವಿನ್ಯಾಸವನ್ನು ಕುರುಹಾಗಿಟ್ಟುಕೊಂಡು ಖನಿಜ ಶೇಖರಣೆ ಆಗುವುದಕ್ಕೆ ಕ್ಷೇತ್ರಸ್ವರೂಪ ಅನುವು ಮಾಡಿಕೊಡುತ್ತದೆ.
3. ಕ್ಷೇತ್ರಸ್ವರೂಪದ ಗತಚರಿತ್ರೆಯಿಂದ ಯಾವ ಖನಿಜ ಎಂಥ ಭೌತ ಆವರಣದಲ್ಲಿ ಶೇಖರಗೊಂಡಿತು ಅಥವಾ ಸಮೃದ್ಧವಾಯಿತು ಎಂಬುದನ್ನು ತಿಳಿಯಬಹುದು.

ಶೇಷ ಖನಿಜಗಳು (ರೆಸಿಡ್ಯೂವಲ್ ಮಿನರಲ್ಸ್) ಹೆಚ್ಚಾಗಿ ಕ್ಷೇತ್ರ ಸ್ವರೂಪ ರಚನಾವಿನ್ಯಾಸದ ಬಿರುಕು, ಸ್ತರಭಂಗ ಮತ್ತು ಬ್ರೆಕ್ಸಿಯ ವಲಯವನ್ನು ಅನುಸರಿಸಿವೆ. ಉದಾಹರಣೆಗೆ ಮೆಕ್ಸಿಕೊದಲ್ಲಿಯ ಬ್ರೋಕನ್ ಹಿಲ್‌ನ ಸೀಸ ಮತ್ತು ತವರ ನಿಕ್ಷೇಪಗಳು. ಕ್ಷೇತ್ರಸ್ವರೂಪ ಕಬ್ಬಿಣದ ಅದುರನ್ನು ಪತ್ತೆ ಹಚ್ಚಲು ಸಹಕಾರಿ. ಉದಾಹರಣೆಗೆ ಲೇಕ್ ಸುಪೀರಿಯರ್ ಪ್ರಾಂತ್ಯದಲ್ಲಿ ಕಬ್ಬಿಣದ ಅದುರು ಬೆಟ್ಟ ಗುಡ್ಡಗಳಾಗಿ ವಿಶಿಷ್ಟ ಸಸ್ಯವರ್ಗದಿಂದ ಕೂಡಿದೆ. ಕರ್ನಾಟಕದ ರಾಜ್ಯದ ಕೆಮ್ಮಣ್ಣು ಗುಂಡಿ, ಕುದುರೆಮುಖದ ಕಬ್ಬಿಣದ ಅದುರು ವಲಯಗಳಲ್ಲಿ ವಿಶಿಷ್ಟವಾದ ಕ್ಷೇತ್ರ ಸ್ವರೂಪ ಉಂಟು.

ಪುರಾತನ ಅಥವಾ ಇಂದಿನ ಶಿಥಿಲೀಕರಣ ಚಕ್ರದಲ್ಲಿ ಕೆಲವು ಲಾಭದಾಯಕ ಖನಿಜಗಳು ಮುಖ್ಯವಾಗಿ ಶಿಥಿಲೀಕರಣದ ಶೇಷ (ವೆದರ್ಡ್ ರೆಸಿಡ್ಯೂ). ಇವನ್ನು ಪತ್ತೆಹಚ್ಚಲು ಕ್ಷೇತ್ರಸ್ವರೂಪ ಬಲು ಮುಖ್ಯ. ಉದಾಹರಣೆಗೆ ಅಲ್ಯೂಮಿನಿಯಂ ಅದುರಾದ ಬಾಕ್ಸೈಟು. ಲೈಮ್‌ಸ್ಟೋನ್ ಮತ್ತು ಡೋಲಮೈಟ್ ಶಿಲೆಗಳಲ್ಲಿರುವ ಕರಗದ ಅಲ್ಯೂಮಿನಿಯಂ ಖನಿಜಾಂಶ ಹಾಗೇ ಶೇಷವಾಗಿ(ಎಂದರೆ ಗಸಿಯಾಗಿ) ಉಳಿಯುವುದು. ಇದಕ್ಕೆ ನಿದರ್ಶನವಾಗಿ ಅರ್‌ಕಾನ್‌ಸಾಸಿನ ಬಾಕ್ಸೈಟುಗಳು ಸವೆದಿರುವ ಮೇಲ್ಮೈಯ ಮೇಲೆ ಶೇಷನಿಕ್ಷೇಪಗಳಾಗಿ ದೊರೆತಿವೆ. ಅಗ್ನಿಶಿಲೆಗಳ ಶಿಥಿಲೀಕರಣದಿಂದ ಬಾಕ್ಸೈಟು ಉತ್ಪತ್ತಿಯಾಗುತ್ತದೆ. ಈ ರೀತಿಯ ಮೂಲ ಇನ್ನೂ ಅಸ್ಪಷ್ಟವಾಗಿದೆ. ಆದರೂ ಬೆಳಗಾಂ ಜಿಲ್ಲೆಯಲ್ಲಿ ದೊರೆಯುತ್ತಿರುವ ಬಾಕ್ಸೈಟು ಬೆಸಾಲ್ಟ್ ಎಂಬ ಅಗ್ನಿಶಿಲೆಯೊಂದಿಗೆ ಇದೆ. ಜೇಡುಶಿಲೆ ಈ ಶಿಥಿಲೀಕರಣದಿಂದಾದ ಒಂದು ರೂಪ. ಅದರ ನಿಕ್ಷೇಪಕ್ಕೂ ಕ್ಷೇತ್ರಸ್ವರೂಪ ಮುಖ್ಯ. ಮ್ಯಾಂಗನೀಸ್ ನಿಕ್ಷೇಪಗಳು ಪೆನಿಪ್ಲೇನುಗಳೊಂದಿಗೆ ಇರುತ್ತವೆ. ಈ ನಿಕ್ಷೇಪಗಳ ಜೊತೆಗೆ ಕೋಬಾಲ್ಟ್ ಸಹ ಇರುವುದು. ಇಂಥ ಶೇಷ ನಿಕ್ಷೇಪಗಳಾದ ನಿಕಲ್ ಸಿಲಿಕೇಟುಗಳು ಹರವಿದ ಹಾಸಿಗೆಯಂತೆ ದೊರೆಯುತ್ತವೆ.

ಜಾಲಿತ ನಿಕ್ಷೇಪಗಳನ್ನು ಖಚಿತವಾಗಿ ಪತ್ತೆಹಚ್ಚಲು ಕ್ಷೇತ್ರಸ್ವರೂಪವೇ ಮುಖ್ಯ. ಕಾರಣ ಇಂಥ ನಿಕ್ಷೇಪಗಳು ಸಾಮಾನ್ಯವಾಗಿ ಶೇಷರೂಪದ ಮೆಕ್ಕಲಿನೊಂದಿಗೆ ಕರಾವಳಿಯ ಮರಳು ಇಲ್ಲವೆ ದೂಳಿನೊಂದಿಗೆ ಮತ್ತು ನೀರ್ಗಲ್ಲ ಮುರುಕಲುಗುಪ್ಪೆಗಳಲ್ಲಿ ದೊರೆಯುತ್ತದೆ. ಇವುಗಳಲ್ಲೆಲ್ಲ ಚಿನ್ನ ಮುಖ್ಯವಾಗಿ ಜಾಲಿತ ನಿಕ್ಷೇಪವಾಗಿ ಸಿಕ್ಕುವುದು. ಉದಾಹರಣೆಗೆ ಕ್ಯಾಲಿಫೋರ್ನಿಯ, ಆಸ್ಟ್ರೇಲಿಯ, ನ್ಯೂಜೀಲೆಂಡ್ ಮತ್ತು ಕರ್ನಾಟಕ ರಾಜ್ಯದ ಕೆಲವೆಡೆ ಇಂಥ ಜಾಲಿತ ನಿಕ್ಷೇಪಗಳು ದೊರೆತಿವೆ. ಮಲಯದ ಸತು ಒಂದು ಮೆಕ್ಕಲು ನಿಕ್ಷೇಪ. ಪ್ರಪಂಚದ 1/3 ಭಾಗ ಪ್ಲಾಟಿನಂ ಖನಿಜ ಮೆಕ್ಕಲು ಜಾಲಿತ ನಿಕ್ಷೇಪಗಳಾಗಿ ದೊರೆಯುತ್ತವೆ. ಉದಾಹರಣೆ ಭಾರತದ ವಿಂಧ್ಯನ್ ಶಿಲಾ ಸಮುದಾಯದಲ್ಲಿರುವ ಸಮರಿಪೆಂಟಿಶಿಲೆಗಳಲ್ಲಿ ಮತ್ತು ಪನ್ನಾ ಪ್ರದೇಶದಲ್ಲಿ ವಜ್ರ ದೊರೆಯುವುದು. ಜಾಲಿತ ನಿಕ್ಷೇಪಗಳಲ್ಲಿ ಅವುಗಳಿಗೆ ವಿಶಿಷ್ಟವಾದ ಕ್ಷೇತ್ರ ಸ್ವರೂಪ ಉಂಟು. **(ಟಿ.ಪಿ.ಎಸ್‌ಎಚ್.)**

**ಕ್ಷೇಮೇಂದ್ರ :** ಕಾಶ್ಮೀರದ ಕವಿಗಳಲ್ಲಿ ಅಗ್ರಗಣ್ಯನೆನಿಸಿರುವ ಈತ ಬಹು ವಿದ್ಯಾಪಾರಂಗತನಾಗಿದ್ದು ಸಂಸ್ಕೃತ ಸಾಹಿತ್ಯದ ವಿಭಿನ್ನ ಕ್ಷೇತ್ರಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಈತನ ಕಾಲ ಸುಮಾರು 990 ರಿಂದ 1070 ಎನ್ನಲಾಗಿದೆ. ವಿದ್ಯಾವಿವೃತ್ತಿಯನ್ನು (ಪ್ರತ್ಯಭಿಜ್ಞಾ ವಿವೃತಿ ವಿಮರ್ಶಿನಿ) ರಚಿಸಿದ ಅಭಿನವಗುಪ್ತನಲ್ಲಿ ತಾನು ಸಾಹಿತ್ಯ ಶಾಸ್ತ್ರವನ್ನು ಕಲಿತುದಾಗಿ ತನ್ನ ಬೃಹತ್ಕಥಾಮಂಜರಿಯಲ್ಲಿ ಹೇಳಿಕೊಂಡಿದ್ದಾನೆ. ಅಭಿನವಗುಪ್ತ ಪ್ರತ್ಯಭಿಜ್ಞಾದರ್ಶನ ವ್ಯಾಖ್ಯಾನ ಬರೆದುದು 1014ರಲ್ಲಿ.

ಈ ಆಧಾರದ ಮೇಲೆ ಕ್ಷೇಮೇಂದ್ರ ಸುಮಾರು 990ರಲ್ಲಿ ಹುಟ್ಟಿದವನಾಗಿರಬೇಕೆಂದು ಭಾವಿಸಲಾಗಿದೆ. ಕಾಶ್ಮೀರದಲ್ಲಿ ಆಳಿದ ರಾಜಾ ಅನಂತರ (1028–63) ಆಸ್ಥಾನದಲ್ಲಿ ತಾನು ಕವಿಯಾಗಿದ್ದುದಾಗಿಯೂ ತನ್ನ ಹಲವಾರು ಕೃತಿಗಳ ಸಮಾಪ್ತಿವಾಕ್ಯಗಳಲ್ಲಿ ಈತನೇ ಹೇಳಿಕೊಂಡಿರುವುದಲ್ಲದೆ ಬೃಹತ್ಕಥಾಮಂಜರಿ ಸಮಯಮಾತೃಕಾ ಮತ್ತು ದಶಾವತಾರ ಚರಿತಗಳಲ್ಲಿ ತಾನು ಅವನ್ನು ರಚಿಸಿದ ಕಾಲವನ್ನೂ ಬರೆದಿಟ್ಟಿದ್ದಾನೆ. ಅದರಂತೆ ಈಗ ಉಪಲಬ್ಧವಾಗಿರುವ ಕೃತಿಗಳಲ್ಲಿ ಬೃಹತ್ಕಥಾಮಂಜರಿ (1037) ಮೊದಮೊದಲು ರಚಿತವಾದುದೆಂದು ದಶಾವತಾರಚರಿತ (1066) ಕೊನೆಯಲ್ಲಿ ರಚಿತವಾದುದೆಂದೂ ಹೇಳಬೇಕು. ಆದ್ದರಿಂದ ಕ್ಷೇಮೇಂದ್ರ ಸುಮಾರು 1070 ರ ವೇಳೆಗೆ ಕಾಲವಾದನೆಂದು ನಂಬಲಾಗಿದೆ.

ದಶಾವತಾರಚರಿತ, ರಾಮಾಯಣಮಂಜರಿ, ಕವಿಕಂಠಾಭರಣಗಳಲ್ಲಿ ಕ್ಷೇಮೇಂದ್ರನೇ ಹೇಳಿಕೊಂಡಿರುವಂತೆ ಇವನ ತಂದೆ ಪ್ರಕಾಶೇಂದ್ರ, ತಾತ ಸಿಂಧು, ಸಹೋದರ ಚಕ್ರಪಾಲ. ಕ್ಷೇಮೇಂದ್ರನ ಮಗ ಸೋಮೇಂದ್ರ ತನ್ನ ತಂದೆ ರಚಿಸಿದ್ದ ಅವದಾನ ಕಲ್ಪತೆಗೆ 108ನೆಯ ಪಲ್ಲವವನ್ನು ಬರೆದು ಸೇರಿಸಿ ಉಪೋದ್ಘಾತದಲ್ಲಿ ತನ್ನ ವಂಶ ವೃಕ್ಷವನ್ನು ಈ ರೀತಿ ಕೊಟ್ಟಿದ್ದಾನೆ.

(ಭೋಗೇಂದ್ರ ರಾಜಾ ಜಯಾಪೀಡನ ಮಂತ್ರಿ)
|
ನರೇಂದ್ರ
|
ಸಿಂಧು
|
ಪ್ರಕಾಶೇಂದ್ರ
|
ಕ್ಷೇಮೇಂದ್ರ — ಚಕ್ರಪಾಲ

ತನ್ನ ತಂದೆ ಪ್ರಕಾಶೇಂದ್ರ ತುಂಬ ದಾನಶೀಲನೆಂದೂ ಅವನ ಮನೆ ಅನ್ನಸತ್ರವೇ ಆಗಿತ್ತೆಂದೂ ಆತ ದೇವದ್ವಿಜಮಠಾದಿಗಳಿಗಾಗಿ ಕೋಟಿಗಟ್ಟಲೆ ಹಣವನ್ನು ನೀಡುತ್ತಿದ್ದುದಾಗಿಯೂ ಆತ ಶೈವನಾಗಿದ್ದು ಅನೇಕ ಶಿವಬಿಂಬಗಳನ್ನು ಶಿವಾಲಯಗಳಲ್ಲಿ ಪ್ರತಿಷ್ಠಿಸಿದುದಲ್ಲದೆ ಅಂಥ ಒಂದು ಬಿಂಬವನ್ನು ಪೂಜಿಸಿ ಅದನ್ನೇ ತಬ್ಬಿಕೊಂಡು ಪ್ರಾಣ ನೀಗಿದುದಾಗಿಯೂ ಬೃಹತ್ಕಥಾಮಂಜರಿಯಲ್ಲಿ ಕ್ಷೇಮೇಂದ್ರನೇ ಹೇಳಿದ್ದಾನೆ. ಇದರಿಂದ ಕ್ಷೇಮೇಂದ್ರನೂ ಜನ್ಮತಃ ಶೈವನೆಂದಂತಾಯಿತು. ಇವನ ಗುರುವಾದ ಅಭಿನವಗುಪ್ತನಂತೂ ಶೈವನೇ. ಆತ ವಾಸವಾಗಿದ್ದುದೂ ಶೈವಮಂಡಲದಲ್ಲೇ. ಹೀಗಿದ್ದರೂ ಕಾಲಕ್ರಮದಲ್ಲಿ ಆತ ವೈಷ್ಣವನಾದ. ಇದಕ್ಕೆ ಕಾರಣ ಪರಮ ಭಾಗವತನಾಗಿದ್ದ ಸೋಮಪಾದನ ಅನುಗ್ರಹವೇ ಎಂದು ಕ್ಷೇಮೇಂದ್ರನೇ ತನ್ನ ಬೃಹತ್ ಕಥಾಮಂಜರಿಯಲ್ಲಿ ಹೇಳಿಕೊಂಡಿದ್ದಾನೆ. 'ತಸ್ಯಾತ್ಮಜಃ ಸರ್ವಮನೀಷಿ ಶಿಷ್ಯಃ ಶ್ರೀವ್ಯಾಸದಾಸಾಪರಪುಣ್ಯನಾಮಾ' ಎಂಬಲ್ಲಿ ಕ್ಷೇಮೇಂದ್ರ ತಾನು ಸರ್ವಮನೀಷಿಯ ಶಿಷ್ಯನೆಂದೂ ತನಗೆ ವ್ಯಾಸದಾಸ ಎಂಬ ಮತ್ತೊಂದು ಪುಣ್ಯಕರವಾದ ಹೆಸರಿತ್ತೆಂದು ತಿಳಿಸಿರುವುದರಿಂದ ಈ ಸರ್ವಮನೀಷಿಯೇ ಸೋಮಪಾದಾಚಾರ್ಯನಿರಬೇಕೆಂದೂ ಕ್ಷೇಮೇಂದ್ರ ವೈಷ್ಣವನಾದ ಮೇಲೆ (ಭಾರತಮಂಜರಿಯನ್ನು ರಚಿಸಿ?) ವ್ಯಾಸದಾಸನೆಂಬ ಹೆಸರನ್ನು ಪಡೆದಿರಬೇಕೆಂದೂ ಭಾವಿಸಲವಕಾಶವಿದೆ.

(ವ್ಯಾಸದಾಸ) ಕ್ಷೇಮೇಂದ್ರನಿಂದ ರಚಿತವಾದುವೆಂದು ಈ ವರೆಗೆ ತಿಳಿದು ಬಂದಿರುವ ಗ್ರಂಥಗಳು 35. ಆ ಪೈಕಿ ಉಪಲಬ್ಧವಾಗಿರುವುವು 19. ಅವನ್ನು ಹೀಗೆ ವಿಂಗಡಿಸಬಹುದು: (ಅ) ಮೂರು ಮಂಜರಿಗಳು–ರಾಮಾಯಣ ಮಂಜರಿ, ಭಾರತಮಂಜರಿ, ಬೃಹತ್ಕಥಾಮಂಜರಿ. (ಆ) ಎರಡು ಮಹಾಕಾವ್ಯಗಳು–ದಶಾವತಾರಚರಿತ, ಅವದಾನಕಲ್ಪಲತಾ. (ಇ) ಎಂಟು ಉಪದೇಶಾತ್ಮಕ ಕಾವ್ಯಗಳು–ಕಲಾವಿಲಾಸ, ಸಮಯ ಮಾತೃಕಾ, ಚಾರುಚರ್ಯಾಶತಕ, ಸೇವ್ಯಸೇವಕೋಪದೇಶ, ದರ್ಪದಳನ, ದೇಶೋಪದೇಶ, ನರ್ಮಮಾಲಾ, ಚತುರ್ವರ್ಗ ಸಂಗ್ರಹ. (ಈ) ಸಾಹಿತ್ಯ ಶಾಸ್ತ್ರದ ಎರಡು ಕೃತಿಗಳು–ಕವಿಕಂಠಾಭರಣ, ಔಚಿತ್ಯವಿಚಾರಚರ್ಚಾ (ಉ) ನಾಲ್ಕು ಸಂಕೀರ್ಣ ಕೃತಿಗಳು–ಸುವೃತ್ತತಿಲಕ, ಲೋಕಪ್ರಕಾಶಕೋಶ, ನೀತಿಕಲ್ಪತರು, ವ್ಯಾಸಾಷ್ಟಕ. ಅನುಪಲಬ್ಧ ಕೃತಿಗಳ ವಿವರ ಹೀಗಿದೆ: (ಅ) ಕವಿಕಂಠಾಭರಣದಲ್ಲಿ ಉದಾಹೃತವಾಗಿರುವ ಏಳು ಕೃತಿಗಳು–ಶಶಿವಂಶ ಮಹಾಕಾವ್ಯ, ಪದ್ಯ ಕಾದಂಬರೀ, ಅಮೃತತರಂಗಮಹಾಕಾವ್ಯ, ಲಾವಣ್ಯವತೀ, ಕನಕಜಾನಕೀ, ಮುಕ್ತಾವಳೀ, ಚಿತ್ರಭಾರತ ನಾಟಕ. (ಆ) ಔಚಿತ್ಯವಿಚಾರಚರ್ಚೆಯಲ್ಲಿ ಉದಾಹೃತವಾಗಿರುವ ಏಳು ಕೃತಿಗಳು–ಮುನಿಮತ ಮೀಮಾಂಸಾ, ನೀತಿಲತಾ, ವಿನಯವಲ್ಲೀ, ಅವಸರಸಾರ, ಲಲಿತ ರತ್ನಮಾಲಾ, ಕವಿಕರ್ಣಿಕಾ, ವಾತ್ಸ್ಯಾಯನ ಸೂತ್ರಸಾರ. (ಇ) ಸುವೃತ್ತ ತಿಲಕದಲ್ಲಿ ಉದಾಹೃತವಾಗಿರುವ ಒಂದು ಕೃತಿ–ಪವನಪಂಚಾಶಿಕಾ. (ಈ) ಕಲ್ಹಣನ ರಾಜತರಂಗಿಣಿಯಲ್ಲಿ ಕ್ಷೇಮೇಂದ್ರ ರಚಿತವೆಂದು ಉಕ್ತವಾಗಿರುವ ಒಂದು ಕೃತಿ–ನೃಪಾವಳೀ (ರಾಜಾವಳೀ).

ಕ್ಷೇಮೇಂದ್ರನ ಮೂರು ಮಂಜರಿಗಳೂ ಸುಪ್ರಸಿದ್ಧವಾಗಿವೆ. ಸುವಿಸ್ತಾರವಾದ ರಾಮಾಯಣ ಮಹಾಭಾರತಗಳನ್ನು, ಮೂಲದಲ್ಲಿರುವ ಯಾವ ಘಟನೆಯನ್ನೇ ಆಗಲಿ ಉಪಾಖ್ಯಾನವನ್ನೇ ಆಗಲಿ ಬಿಡದಂತೆ, ಪದ್ಯಾತ್ಮಕವಾಗಿಯೇ ಸಂಗ್ರಹಿಸಿರುವುದು ಈ ಮಂಜರಿಗಳ ವೈಶಿಷ್ಟ್ಯ. ಇದರಿಂದ ಆ ಮೂಲಗ್ರಂಥಗಳು ಕ್ಷೇಮೇಂದ್ರನ ಕಾಲದಲ್ಲಿ ಯಾವ ಸ್ವರೂಪದಲ್ಲಿದ್ದುವೆಂಬುದನ್ನು ತಿಳಿಯಲವಕಾಶವಾಗಿದೆ. ಬೃಹತ್ಕಥಾಮಂಜರಿ (1037) ಗುಣಾಢ್ಯನ ಬೃಹತ್ಕಥೆಯ ಸಂಗ್ರಹರೂಪ. ಇದರಲ್ಲಿ 19 ಲಂಬಕಗಳಿವೆ. ಇದರ ಮೊದಲ ಐದು ಲಂಬಕಗಳೂ ಸೋಮದೇವನ ಕಥಾಸರಿತ್ಸಾಗರದ ಕ್ರಮದಲ್ಲೇ ಇದ್ದರೂ ಅಲ್ಲಿಂದ ಮುಂದಕ್ಕೆ ಲಂಬಕಗಳ ಅನುಪೂರ್ವಿ, ವಿಷಯ ಮುಂತಾದವುಗಳಲ್ಲಿ ಗಣನೀಯವಾದ ವ್ಯತ್ಯಾಸಗಳಿರುವುದರಿಂದ ಇಬ್ಬರೂ ಮೂಲ ಬೃಹತ್ಕಥೆಯನ್ನೇ ಸಂಗ್ರಹಿಸಿದ್ದಾರೆಂದು ಹೇಳಲಾಗದು.

ದಶಾವತಾರಚರಿತ ವಿಷ್ಣುವಿನ ಹತ್ತು ಅವತಾರಗಳ ಕಥೆಯನ್ನು ವಸ್ತುವಾಗಿ ಉಳ್ಳ ಹತ್ತು ಸರ್ಗಗಳ ಮಹಾಕಾವ್ಯ. ಒಂದೊಂದು ಅವತಾರದ ಕಥೆಗೂ ಇದರ ಒಂದೊಂದು ಸರ್ಗ ಮೀಸಲಾಗಿದೆ. ರಾಮಾವತಾರದ ನಿರೂಪಣೆಯಲ್ಲಿ ಕವಿಯ ಸ್ವತಂತ್ರ ಕಲ್ಪನೆ ಮನೋಹರವಾಗಿ ಮೂಡಿಬಂದಿದೆ. ವರ್ಣನೆಗಳೂ ಸುಂದರವಾಗಿವೆ. ಬುದ್ಧನನ್ನು ವಿಷ್ಣುವಿನೊಂಬತ್ತನೆಯ ಅವತಾರವೆಂದು ಹೇಳಿರುವ ಗ್ರಂಥಗಳಲ್ಲಿ, ಈಗ ತಿಳಿದಿರುವಂತೆ, ಇದೇ ಅತ್ಯಂತ ಪ್ರಾಚೀನವಾದುದು. ಇಲ್ಲಿ ಬರುವ ಬುದ್ಧನ ಕಥೆ ಬೌದ್ಧಗ್ರಂಥಗಳಲ್ಲಿರುವಂತೆಯೇ ಇದೆ. ಈ ಕಾವ್ಯ 1066ರಲ್ಲಿ ತ್ರಿಪುರೇಶ ಪರ್ವತದ ಮೇಲೆ ರಚಿತವಾಯಿತು.

ಅವದಾನಕಲ್ಪಲತೆಗೆ (1052) ಬೌದ್ಧಾವದಾನ ಕಲ್ಪಲತಾ ಎಂಬ ಹೆಸರೂ ಇದೆ. ಇದರಲ್ಲಿ ಕ್ಷೇಮೇಂದ್ರನಿಂದ ರಚಿತವಾದ 107 ಪಲ್ಲವಗಳೂ ಒಟ್ಟು ಸಂಖ್ಯೆ ಶುಭಕರವಾಗಬೇಕೆಂದು ಇವನ ಮಗ ಸೋಮೇಂದ್ರ ರಚಿಸಿದ ಮತ್ತೊಂದು ಪಲ್ಲವವೂ ಸೇರಿ ಒಟ್ಟು 108 ಪಲ್ಲವಗಳಿವೆ. ಇದರ ವಸ್ತು ಜಾತಕ ಕಥೆಗಳು. ಈ ಕೃತಿಯನ್ನು ಕ್ಷೇಮೇಂದ್ರ ತನ್ನ ಪರಮಮಿತ್ರನಾದ ನಕ್ಕನ ಅಪೇಕ್ಷೆಯಂತೆ ರಚಿಸಲಾರಂಭಿಸಿ ಮೂರು ಅವದಾನಗಳನ್ನು ಮಾತ್ರ ಬರೆದು ನಿಲ್ಲಿಸಿಬಿಟ್ಟುದಾಗಿಯೂ ಆಗ ಬುದ್ಧನೇ ಸ್ವಪ್ನದಲ್ಲಿ ಇವನಿಗೆ ಕಾಣಿಸಿಕೊಂಡು ಎಲ್ಲ ಅವದಾನಗಳನ್ನೂ ಬರೆಯುವಂತೆ ಸೂಚಿಸಿದುದಾಗಿಯೂ ಅದಕ್ಕೆ ಸರಿಯಾಗಿ ಬೌದ್ಧ ಧರ್ಮ ವಿಷಯಗಳಲ್ಲಿ ನಿಷ್ಣಾತನಾದ ಆಚಾರ್ಯ ವೀರಭದ್ರನ ಸಹಕಾರವೂ ಒದಗಿ ಬಂದಿತೆಂದೂ ಸೂರ್ಯಶ್ರೀ ಎಂಬಾತ ಬರೆವಣಿಗೆಯ ಕೆಲಸಕ್ಕೆ ನೆರವಾದನೆಂದೂ ಸೋಮೇಂದ್ರನ ಉಪೋದ್ಘಾತದಿಂದ ತಿಳಿದು ಬರುತ್ತದೆ. 1202ರಲ್ಲಿ ಇದನ್ನು ಶಾಕ್ಯಶ್ರೀ ಎಂಬ ಕಾಶ್ಮೀರದ ಪಂಡಿತ ಕುನ್–ಡೋ–ಋಗ್ಯಲ್–ಮ್ ತ್ಸಾನ್ ಎಂಬ ಟಿಬೆಟ್ಟಿನ ಲಾಮಾಗೆ ಕೊಟ್ಟ. ಅದನ್ನು 70 ವರ್ಷಗಳ ಬಳಿಕ ಸೋನ್ ಟಾನ್ ಲೋ ಚಾಮ ಎಂಬಾತ ಟಿಬೆಟನ್ ಭಾಷೆಗೆ ಪರಿವರ್ತಿಸಿದ. ಮೂಲಗ್ರಂಥದ ಮೊದಲ 40 ಅಧ್ಯಾಯಗಳು ಕಾಲಕ್ರಮದಲ್ಲಿ ಲುಪ್ತವಾಗಿ ಹೋದುವು. ಉಪಲಬ್ಧವಾಗಿರುವ ಭಾಗದ ಮಾತೃಕೆಯೊಂದರಲ್ಲಿ ಪೂರ್ವಾರ್ಧಂ ಕುತ್ರಚಿತ್ ನ ಪ್ರಾಪ್ತಂ ಎಂದು ಬರೆದಿದೆ. ಈಗ ಆ ಪೂರ್ವಾರ್ಧದ ಸ್ವರೂಪವನ್ನು ಅದರ ಟಿಬೆಟನ್ ಭಾಷೆಯ ಅನುವಾದದಿಂದಲೇ ತಿಳಿಯಬೇಕಾಗಿದೆ.

ಕ್ಷೇಮೇಂದ್ರನ ಉಪದೇಶಾತ್ಮಕ ಕಾವ್ಯಗಳೆಲ್ಲವೂ ಅತ್ಯುತ್ತಮವಾಗಿವೆ. ಹತ್ತು ಸರ್ಗಗಳ ಇವನ ಕಲಾವಿಲಾಸದಲ್ಲಿ ಗೌಡದೇಶೀಯರ ವಂಚನೆಯೂ (ಬಂಗಾಳಿ ವಿದ್ಯೆ) ಮೂಲದೇವನ ವಿಚಾರವೂ ಕಾಯಸ್ಥರ (ಕರಣಿಕ) ದುರ್ಮಾರ್ಗತನವು ಮೋಹಡಂಭ ಕಾಮ ಮುಂತಾದವುಗಳ ದುರ್ಲಕ್ಷಣಗಳೂ ಹೃದಯಂಗಮವಾಗಿ ಚಿತ್ರಿತವಾಗಿವೆ. ಸಮಯಮಾತೃಕೆ ಎಂಬ ಕೃತಿ ವೇಶ್ಯೆಯರು ಪುರುಷರನ್ನು ಆಕರ್ಷಿಸುವ ರೀತಿಗಳು, ವೇಶ್ಯಾಗೃಹಗಳಲ್ಲಿ ನಡೆಯುವ ಹೀನ ಕಾರ್ಯಗಳು, ವೇಶ್ಯಾಪ್ರಿಯರ 80 ಬಗೆಗಳು, ಧನಹೀನನನ್ನು ವೇಶ್ಯೆಯರು ದೂರೀಕರಿಸುವ 23 ದಾರಿಗಳು–ಮುಂತಾದವನ್ನು ಕಲಾವತೀ ಎಂಬ ನಾಯಿಕೆಯ ಕಥೆಯ ಮೂಲಕ ಸ್ವಾರಸ್ಯವಾಗಿ ಎಂಟು ಅಧ್ಯಾಯಗಳಲ್ಲಿ ವರ್ಣಿಸುತ್ತದೆ. ಇದರಲ್ಲಿ ವಿದೇಶೀಯರ ಕೆಲವು ವೇಷ ಭಾಷೆ ಆಚಾರ ವ್ಯವಹಾರಗಳು ಚಿತ್ರಿತವಾಗಿವೆ. ಚಾರುಚರ್ಯಾಶತಕ ಅನುಷ್ಟುಪ್ ಶ್ಲೋಕಗಳಲ್ಲಿ ರಚಿತವಾದ ನೀತಿ ಗ್ರಂಥ. ಇದರ ಪ್ರತಿಯೊಂದು ಶ್ಲೋಕವೂ ಪೂರ್ವಾರ್ಧದಲ್ಲಿ ನೀತಿಯೊಂದನ್ನು ಉಲ್ಲೇಖಿಸಿ ಉತ್ತರಾರ್ಧದಲ್ಲಿ ರಾಮಾಯಣ ಭಾರತಾದಿಗಳಿಂದ ಆರಿಸಿದ ಉದಾಹರಣೆಯನ್ನು ನೀಡುತ್ತದೆ. ಈ ಶತಕದಿಂದ ಸ್ಫೂರ್ತಿಗೊಂಡೇ ದ್ಯಾದ್ವಿವೇದ (1494) ತನ್ನ ನೀತಿಮಂಜರಿಯನ್ನು ರಚಿಸಿದ. ಜಲ್ಹಣನ (1150) ಮುಗ್ಧೋಪದೇಶದಲ್ಲಿ ಕ್ಷೇಮೇಂದ್ರನ ಚಾರುಚರ್ಯ ಮತ್ತು ಸಮಯಮಾತೃಕೆಗಳ

ಪ್ರಭಾವವನ್ನು ಕಾಣಬಹುದು. ಸೇವ್ಯಸೇವಕೋಪದೇಶ 61 ಶ್ಲೋಕಗಳಲ್ಲಿ ಸೇವ್ಯರಾದ ಅಧಿಕಾರಿಗಳ ಉಚ್ಛೃಂಖಲ ವರ್ತನವನ್ನೂ ಸೇವಕರ ಕಷ್ಟಕಾರ್ಪಣ್ಯಗಳನ್ನೂ ದಾಕ್ಷಿಣಾತ್ಯರ ನಟನೆ, ಕಿರಾತರ ದರ್ಪ ಮುಂತಾದುವನ್ನೂ ಯಥಾವತ್ತಾಗಿ ನಿರೂಪಿಸುತ್ತದೆ. ದರ್ಪದಳನವೆಂಬುದು ವಿಚಾರಗಳೆಂಬ ಏಳು ಅಧ್ಯಾಯಗಳ ಕಾವ್ಯ. ದರ್ಪಕ್ಕೆ ಕಾರಣಗಳಾದ ಕುಲ ಧನ ರೂಪ ಮುಂತಾದುವನ್ನು ಇಲ್ಲಿಯ ಅಧ್ಯಾಯಗಳು ಪ್ರತ್ಯೇಕವಾಗಿ ವಿವರಿಸಿ ಅವುಗಳ ಅನ್ವರ್ಥಕಾರಿತ್ವವನ್ನು ದೃಷ್ಟಾಂತ ರೂಪವಾದ ಒಂದೊಂದು ಕಥೆಯ ಮೂಲಕ ನಿರೂಪಿಸುತ್ತವೆ. ಇದರಲ್ಲಿ ನೀತಿ ವಾಕ್ಯಗಳೂ ಗಾದೆಗಳೂ ಹೇರಳವಾಗಿವೆ. ದೇಶೋಪದೇಶ ಆ ಕಾಲದ ದುಷ್ಟಪದ್ಧತಿಗಳನ್ನೂ ದುರ್ಜನ ಲೋಭಿ ವೇಶ್ಯ ವಿಟ ಮುಂತಾದವರನ್ನೂ ಉಪದೇಶಗಳೆಂಬ ಎಂಟು ಪ್ರಕರಣಗಳಲ್ಲಿ ಹಾಸ್ಯಾತ್ಮಕವಾಗಿ ಚಿತ್ರಿಸುತ್ತದೆ. ಇದು ಕಲಾವಿಲಾಸಕ್ಕಿಂತ ಮೊದಲೇ ರಚಿತವಾಗಿರಬೇಕು. ನರ್ಮಮಾಲಾದಲ್ಲಿ ಪರಿಹಾಸಗಳೆಂಬ ಮೂರು ವಿಭಾಗಗಳಿವೆ. ಇವುಗಳಲ್ಲಿ ಕಾಯಸ್ಥನ (ಕರಣಿಕ) ದೌರ್ಜನ್ಯವನ್ನು ಗೇಲಿ ಮಾಡಲಾಗಿದೆ; ಅವನನ್ನು 'ದಿವಿರ' ನೆಂದೂ ದೈತ್ಯರ ಮನೆವಾರ್ತೆಯ ಅವತಾರವೆಂದೂ ವರ್ಣಿಸಿ, ಅವನ ಲಂಚಕೋರತನವೇ ಮುಂತಾದ ದುಃಸ್ವಭಾವಗಳನ್ನೂ ತತ್ಫಲವಾದ ಅವನ ದುರಂತವನ್ನೂ ಮನಮುಟ್ಟುವಂತೆ ಚಿತ್ರಿಸಲಾಗಿದೆ. ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಚತುರ್ವರ್ಗ ಸಂಗ್ರಹ ಪರಿಣಾಮಕಾರಿಯಾಗಿ ವಿವರಿಸುತ್ತದೆ.

ಕವಿಕಂಠಾಭರಣ ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಇದರಲ್ಲಿ ಕವಿತ್ವಪ್ರಾಪ್ತಿ, ಕವಿತ್ವಶಿಕ್ಷಣ, ಕವಿತ್ವಚಮತ್ಕಾರ, ಗುಣದೋಷ ವಿಭಾಗ ಪರಿಚಯ ಪ್ರಾಪ್ತಿ–ಎಂಬುದಾಗಿ ಐದು ಪ್ರಕರಣಗಳಿವೆ. ಕವಿತ್ವಪ್ರಾಪ್ತಿಗೆ ಮನುಷ್ಯಪ್ರಯತ್ನ, ದೈವಾನುಗ್ರಹ ಎರಡೂ ಆವಶ್ಯಕವೆಂಬುದು ಕ್ಷೇಮೇಂದ್ರನ ಅಭಿಪ್ರಾಯ. ಈತ ಕವಿಗಳನ್ನು ಛಾಯೋಪಜೀವಿ, ಪದಕೋಪಜೀವಿ, ಪಾದೋಪಜೀವಿ, ಸಕಲೋಪಜೀವಿ, ಭುವನೋಪಜೀವಿ ಎಂದು ಐದು ಬಗೆಯಾಗಿ ವಿಂಗಡಿಸಿ ಕವಿಗೆ ಇರಲೇಬೇಕಾದ ಅನೇಕ ವಿಷಯಗಳ ಪಾಂಡಿತ್ಯವನ್ನು ಪ್ರಸ್ತಾವಿಸಿದ್ದಾನೆ. ಕವಿತ್ವಚಮತ್ಕಾರದಲ್ಲಿ ಅವಿಚಾರ್ಯಮಾಣ ರಮಣೀಯತೆ, ವಿಚಾರ್ಯಮಾಣ ರಮಣೀಯತೆ, ಸಮಸ್ತಸೂಕ್ತವ್ಯಾಪಿ, ಸೂಕ್ತ್ಯೈಕದೇಶದೃಶ್ಯ, ಶಬ್ದಗತ, ಅರ್ಥಗತ, ಶಬ್ದಾರ್ಥಗತ, ಅಲಂಕಾರಗತ, ರಸಗತ, ಪ್ರಖ್ಯಾತ ವ್ಯಕ್ತಿಗತ–ಎಂಬ ಹತ್ತು ವಿಧಗಳನ್ನು ಉಲ್ಲೇಖಿಸಿ ತನ್ನ ಶಶಿವಂಶ ಮಹಾಕಾವ್ಯ, ಪದ್ಯಕಾದಂಬರೀ ಮುಂತಾದ ಕೃತಿಗಳಲ್ಲಿ ಬರುವ ಶ್ಲೋಕಗಳ ಉದಾಹರಣೆಗಳೊಡನೆ ಪ್ರತಿಪಾದಿಸಿದ್ದಾನೆ. ಕಾವ್ಯದಲ್ಲಿ ಶಬ್ದಾರ್ಥಗಳ ಕಾಲುಷ್ಯದಿಂದಲೇ ದೋಷಗಳುಂಟಾಗುವುದೆಂದೂ ಕಾವ್ಯಗಳು ಸಗುಣ, ನಿರ್ಗುಣ, ಸದೋಷ, ನಿರ್ದೋಷ, ಸುಗುಣದೋಷಗಳೆಂದು ಐದು ಬಗೆಯಾಗಿವೆಯೆಂದೂ ಗುಣದೋಷ ವಿಭಾಗದಲ್ಲಿ ಕ್ಷೇಮೇಂದ್ರ ನಿರೂಪಿಸಿದ್ದಾನೆ. ಕೊನೆಯ ಪ್ರಕರಣದಲ್ಲಿ ತರ್ಕ, ವ್ಯಾಕರಣ, ಭರತಶಾಸ್ತ್ರ, ವತ್ಸ್ಯಾಯನಶಾಸ್ತ್ರ, ರಾಮಾಯಣ, ಭಾರತ, ಮೋಕ್ಷವಿದ್ಯೆ, ರತ್ನಪರೀಕ್ಷೆ, ವೈದ್ಯ, ಜ್ಯೋತಿಷ, ಧಾತುವಾದ, ಧನುರ್ವೇದ, ಗಜತುರಗಪುರುಷ ಲಕ್ಷಣ, ಇಂದ್ರಜಾಲ, ದ್ಯೂತ–ಮುಂತಾದ ಅನೇಕಾನೇಕ ವಿದ್ಯೆಗಳ ಪರಿಚಯ ಕವಿಗೆ ಇದ್ದೇ ತೀರಬೇಕೆಂದು ಸೋದಾಹರಣವಾಗಿ ಪ್ರತಿಪಾದಿಸಿದ್ದಾನೆ. ಅನೇಕ ಕವಿಗಳ ಶ್ಲೋಕಗಳು ಕವಿಕಂಠಾಭರಣದಲ್ಲಿ ಉದಾಹೃತವಾಗಿರುವುದು ಆ ಕವಿಗಳ ಕಾಲ ನಿರ್ಣಯಕ್ಕೆ ಸಹಾಯಕವಾಗಿದೆ.

ಔಚಿತ್ಯವಿಚಾರಚರ್ಚೆಯಲ್ಲಿ ಕ್ಷೇಮೇಂದ್ರ 'ಔಚಿತ್ಯಂ ರಸಸಿದ್ಧಸ್ಯ ಸ್ಥಿರಂ ಕಾವ್ಯಸ್ಯ ಜೀವಿತಂ' ಎಂಬ ಔಚಿತ್ಯ ಸಂಪ್ರದಾಯವನ್ನು ನಿಷ್ಕೃಷ್ಟವಾಗಿ ಪ್ರತಿಪಾದಿಸಿದ್ದಾನೆ. ಕಾವ್ಯಕ್ಕೆ ಉತ್ಕರ್ಷವುಂಟಾಗುವುದು ಅದರಲ್ಲಿಯ ಪದ, ವಾಕ್ಯ, ಅರ್ಥ, ಗುಣ, ಅಲಂಕಾರ, ರಸ ಮುಂತಾದವುಗಳಲ್ಲೆಲ್ಲ ಇರುವ ಔಚಿತ್ಯದಿಂದಲೇ ಎಂದು ಸಮರ್ಥಿಸಿ ಪ್ರಸಿದ್ಧ ಕವಿಗಳ ಪ್ರಯೋಗಗಳಲ್ಲೂ ಈತ ದೋಷಗಳನ್ನು ತೋರಿಸಿದ್ದಾನೆ. ಉದಾಹರಣೆಗಳನ್ನು ತನ್ನ ಮತ್ತು ಇತರರ ಕೃತಿಗಳಿಂದ ಆರಿಸಿಕೊಟ್ಟಿದ್ದಾನೆ. ಔಚಿತ್ಯ ಸಂಪ್ರದಾಯಕ್ಕೆ ಸಿದ್ಧಾಂತಸ್ವರೂಪವನ್ನು ಕೊಟ್ಟ ಕೀರ್ತಿ ಕ್ಷೇಮೇಂದ್ರನಿಗೆ ಮೀಸಲು. ಕುಂತೇಶ್ವರದೌತ್ಯವೆಂಬುದು ಕಾಳಿದಾಸ ವಿರಚಿತವೆಂದು ಈ ಗ್ರಂಥದಲ್ಲಿ ಹೇಳಿದೆ.

ಸುವೃತ್ತತಿಲಕ ಛಂದಃಶಾಸ್ತ್ರದ ಗ್ರಂಥ. ಇದರಲ್ಲಿ ವಿನ್ಯಾಸಗಳೆಂಬ ಮೂರು ಪ್ರಕರಣಗಳಿವೆ. ಮೊದಲನೆಯದರಲ್ಲಿ 24 ವೃತ್ತಗಳ ಸೋದಾಹರಣ ಲಕ್ಷಣಗಳು ಎರಡನೆಯದರಲ್ಲಿ ಗುಣದೋಷ ವರ್ಣನವೂ ಮೂರನೆಯದರಲ್ಲಿ ವೃತ್ತಗಳ ಪ್ರಯೋಜನವೂ ವಿವರಿಸಲ್ಪಟ್ಟಿವೆ. ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ವೃತ್ತವನ್ನು ಬಳಸಬೇಕೆಂದು ನಿರೂಪಿಸಿರುವ ಛಂದಃಶಾಸ್ತ್ರಗ್ರಂಥ ಇದೊಂದೇ.

ಲೋಕಪ್ರಕಾಶಕೋಶ ಇತರ ಕೋಶಗಳಂತೆಯೇ ಇದ್ದರೂ ನಿತ್ಯವ್ಯವಹಾರದ ಹುಂಡಿ, ಕಾಯಸ್ಥ ಮುಂತಾದ ಅನೇಕ ಶಬ್ದಗಳೂ ಕಾಶ್ಮೀರಿ ಅಧಿಕಾರಿಸ್ಥಾನಗಳು ವಿವರಗಳೂ ಕಾಶ್ಮೀರದ ಪರಗಣ ವಿಭಾಗಗಳೂ ಬಂದಿರುವುದು ಇದರ ವೈಶಿಷ್ಟ್ಯ ಇದರ ಮಾತೃಕೆಗಳು ಅಸಮಗ್ರ ಸ್ಥಿತಿಯಲ್ಲಿರುವುದರಿಂದ ಇದು ಇನ್ನೂ ಮುದ್ರಿತವಾಗಿಲ್ಲ. ನೀತಿಕಲ್ಪತರು ವ್ಯಾಸನ ರಾಜನೀತಿಯ ವ್ಯಾಖ್ಯಾನ ರೂಪವಾಗಿದೆ. ವ್ಯಾಸಾಷ್ಟಕ ಮಹಾಭಾರತದ ಕರ್ತೃವಾದ ವ್ಯಾಸಮಹರ್ಷಿಗಳ ಮೇಲೆ ರಚಿತವಾದ ಎಂಟು ಶ್ಲೋಕಗಳ ಸ್ತೋತ್ರ. ಇದನ್ನು ಭಾರತ ಮಂಜರಿಯ ಅನುಬಂಧವೆಂದು ಪರಿಗಣಿಸಬಹುದು. **(ನೋಡಿ– ಬೃಹತ್ಕಥೆ)**.

**(ಎಸ್.ಆರ್‌ಎಎನ್.)**

**ಖ** ಕನ್ನಡ ವರ್ಣಮಾಲೆಯಲ್ಲಿನ ಕ ವರ್ಗದಲ್ಲಿ ಎರಡನೆಯದು. ಮಹಾಪ್ರಾಣಾಕ್ಷರ. ಇದರ ಅತ್ಯಂತ ಪ್ರಾಚೀನ ಸ್ವರೂಪವನ್ನು ಮೌರ್ಯರ ಕಾಲದ ಬ್ರಾಹ್ಮೀ ಶಾಸನಗಳಲ್ಲಿ ಕಾಣಬಹುದು. ಅಶೋಕನ ಶಾಸನಗಳಲ್ಲಿ ಇದು ಪ್ರಶ್ನಾರ್ಥಕ ಚಿಹ್ನೆಯಂತಿತ್ತು. ಅನಂತರದ ಶಾತವಾಹನ ಕಾಲದಲ್ಲಿ ಕೆಳಗಿನ ಬಿಂದುವಿನ ಬದಲು ಒಂದು ಸಣ್ಣ ಅಡ್ಡರೇಖೆ ಬಂದು ಸೇರಿತು. ಕದಂಬರ ಕಾಲದಲ್ಲಿ ಮೇಲಿನ ಕೊಂಡಿ ಸಣ್ಣದಾದುದು ಮಾತ್ರವಲ್ಲದೆ ಪೇಟಿಕಾಶಿರದ ತಲೆಕಟ್ಟು ಪ್ರಮುಖವಾಯಿತು. ಬಾದಾಮಿಯ ಚಾಳುಕ್ಯರ ಕಾಲಕ್ಕೆ ಈ ರೂಪದಲ್ಲಿ ಸ್ವಲ್ಪ ಬದಲಾವಣೆಗಳಾದವು. ಅಕ್ಷರ ಅಗಲವಾಯಿತು. ರಾಷ್ಟ್ರಕೂಟರ ಕಾಲಕ್ಕಾಗಲೆ ಇದಕ್ಕೆ ಈಗಿನ ರೂಪ ಬರತೊಡಗಿತ್ತು. ಅಲ್ಲಿಂದ ಮುಂದೆ ಅದೇ ರೂಪ ಸ್ಥಿರವಾಗಿ, ಅಕ್ಷರ ಇನ್ನೂ ದುಂಡಗಾಗಿ ಕಲ್ಯಾಣದ ಚಾಳುಕ್ಯರ ಮತ್ತು ವಿಜಯನಗರ ಕಾಲಗಳಲ್ಲಿಯೂ ಅನಂತರದ ಕಾಲಗಳಲ್ಲಿಯೂ ನಡೆದು ಬರುತ್ತಿರುವುದನ್ನು ಗುರುತಿಸಬಹುದಾಗಿದೆ.



ಅಶೋಕ ಪ್ರ.ಶ.ಪೂ. ೩ನೆಯ ಶತಮಾನ

ಸಾತವಾಹನ ಪ್ರ.ಶ. ೨ನೆಯ ಶತಮಾನ

ಕದಂಬ ಪ್ರ.ಶ. ೫ನೆಯ ಶತಮಾನ

ಗಂಗ ಪ್ರ.ಶ. ೬ನೆಯ ಶತಮಾನ

ಬಾದಾಮಿ ಚಳುಕ್ಯ ಪ್ರ.ಶ. ೬ನೆಯ ಶತಮಾನ

ರಾಷ್ಟ್ರಕೂಟ ಪ್ರ.ಶ. ೯ನೆಯ ಶತಮಾನ

ಕಲ್ಯಾಣಿಚಾಳುಕ್ಯ ಪ್ರ.ಶ. ೧೧ನೆಯ ಶತಮಾನ

ಕಳಚೂರಿ, ಹೊಯ್ಸಳ ಮತ್ತು ಸೇವುಣ ಪ್ರ.ಶ. ೧೩ನೆಯ ಶತಮಾನ

ವಿಜಯನಗರ ಪ್ರ.ಶ. ೧೫ನೆಯ ಶತಮಾನ

ಮೈಸೂರು ಅರಸರು ಪ್ರ.ಶ. ೧೮ನೆಯ ಶತಮಾನ

ಈ ಅಕ್ಷರ ಕಂಠ್ಯ ಅಘೋಷ ಸ್ಪರ್ಶ ಮಹಾಪ್ರಾಣ ಧ್ವನಿಯನ್ನು ಸೂಚಿಸುತ್ತದೆ.

(ಎ.ವಿ.ಎನ್.)

**ಖಂಡಕಾವ್ಯ :** ಮಹಾಕಾವ್ಯಕ್ಕೆ ಹೇಳಿರುವ ಲಕ್ಷಣಗಳಲ್ಲಿ ಕೆಲವು ಮಾತ್ರ ಇರುವ ಪದ್ಯಕಾವ್ಯಕ್ಕೆ ಈ ಹೆಸರಿದೆ. ಈಗ ಖಂಡಕಾವ್ಯಗಳೆಂದು ಪರಿಗಣಿತವಾಗಿರುವ ಸಂಸ್ಕೃತಕಾವ್ಯಗಳನ್ನು ಪರಿಶೀಲಿಸಿದರೆ ಅವು ಕೆಲವು ಸನ್ನಿವೇಶ ವಿಶೇಷಗಳಲ್ಲಿ ಕವಿಗುಂಟಾದ ರಸಮಯ ಅನುಭವವನ್ನೋ ಅಥವಾ ಆಗ ಕವಿಯಲ್ಲಿ ತಾನಾಗಿ ಮೂಡಿ ಬಂದ ಭಾವಗಳನ್ನೋ ಪ್ರಕಟಪಡಿಸುವ, ಲಿರಿಕ್ ಪೋಯಮ್ ಎಂದು ಇಂಗ್ಲಿಷಿನಲ್ಲಿ ಸಿದ್ಧವಾಗಿರುವ ಕಾವ್ಯರೂಪಗಳೇ ಆಗಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಭಾವಗೀತಾತ್ಮಕ ಖಂಡಕಾವ್ಯಗಳಲ್ಲಿ ಭಕ್ತಿಪ್ರಧಾನವಾದ ಶೃಂಗಾರಪ್ರಧಾನವಾದ ಎರಡು ಬಗೆಗಳಿವೆ. ಭಕ್ತಿಪ್ರಧಾನವಾದ ಭಾವಗೀತೆಗಳನ್ನು ಋಗ್ವೇದ, ರಾಮಾಯಣ, ಭಾರತ ಮುಂತಾದವುಗಳಲ್ಲೂ ಅನಂತರ ಕಾಲದ ಭಗವತ್ ಸ್ತೋತ್ರಗಳಲ್ಲೂ ವಿಶೇಷವಾಗಿ ಕಾಣಬಹುದು. ಶೃಂಗಾರ ಪ್ರಧಾನವಾದುವು ಮುಕ್ತಕಗಳಾಗಿಯೂ ಸರ್ಗಾತ್ಮಕ ಪದ್ಯಕಾವ್ಯಗಳಾಗಿಯೂ ಹೇರಳವಾಗಿವೆ. ಇವುಗಳಲ್ಲಿ ಶೃಂಗಾರಮಯ ಸನ್ನಿವೇಶಗಳೂ ಹಾವಭಾವಗಳ ವರ್ಣನೆಯೂ ಪ್ರಮುಖವಾಗಿದ್ದರೂ ಪ್ರಕೃತಿಸೌಂದರ್ಯ ಚಿತ್ರಣ ಅವುಗಳೊಡನೆ ಹೆಣೆದುಕೊಂಡಿರುತ್ತದೆ. ಈಗ ಉಪಲಬ್ಧವಾಗಿರುವ ಈ ಬಗೆಯ ಕಾವ್ಯಗಳಲ್ಲಿ ಕಾಳಿದಾಸನ ಎರಡು ಸರ್ಗಗಳುಳ್ಳ ಮೇಘದೂತ ಅತ್ಯಂತ ಪ್ರಾಚೀನವಷ್ಟೇ ಅಲ್ಲದೆ ಉತ್ತಮವಾದುದೂ ಹೌದು. ಅದೇ ಕವಿಯ ಋತುಸಂಹಾರ, ಬಿಲ್ಹಣನ ಚೋರಪಂಚಾಶಿಕೆ, ಭರ್ತೃಹರಿಯ ಶೃಂಗಾರಶತಕ, ಅಮರು ಕವಿಯ ಅಮರುಶತಕ, ವೇದಾಂತ ದೇಶಿಕರ ಹಂಸಸಂದೇಶ, ಜಯದೇವನ ಗೀತಗೋವಿಂದ ಇವು ಇತರ ಕೆಲವು ಉಲ್ಲೇಖನೀಯ ಖಂಡಕಾವ್ಯಗಳು. ಸಂಸ್ಕೃತದಲ್ಲಿ ಹೇರಳವಾಗಿರುವ ನೀತಿಬೋಧಕ ಕಾವ್ಯಗಳೂ ಖಂಡಕಾವ್ಯಗಳೇ.

ಕನ್ನಡದಲ್ಲಿ ಬೇಂದ್ರೆಯವರ ಸಖೀಗೀತವನ್ನೂ ಎಸ್.ವಿ. ಪರಮೇಶ್ವರಭಟ್ಟರ ಇಂದ್ರಚಾಪದಲ್ಲಿಯ ಆತ್ಮಕಥಾರೂಪದ ಮೊದಲ 300 ಸಾಂಗತ್ಯಗಳ ಕಂತನ್ನೂ ಖಂಡಕಾವ್ಯಗಳೆನ್ನಬಹುದು.

(ಎಸ್.ಆರ್.ಎ.ಎನ್.)

**ಖಂಡಗಳ ಅಲೆತ :** ಭೂಖಂಡಗಳು ಸಾಪೇಕ್ಷವಾಗಿ ಚಲಿಸುತ್ತಿವೆ ಎಂಬ ಪರಿಕಲ್ಪನೆ (ಕಾಂಟಿನೆಂಟಲ್ ಡ್ರಿಫ್ಟ್). ಭೂಗ್ರಹದ ನಕ್ಷೆಯನ್ನು ಒಮ್ಮೆ ಸೂಕ್ಷ್ಮವಾಗಿ ಅವಲೋಕಿಸಿದರೆ ಅಲ್ಲಿ ನೆಲಭಾಗ ಮತ್ತು ಜಲಭಾಗ ಎಂಬ ಎರಡು ವಿಭಾಗಗಳು ಎದ್ದುಕಾಣುತ್ತವೆ. ನೆಲಭಾಗವನ್ನು ಭೌತ ಮತ್ತು ಇತರ ಅನೇಕ ಕಾರಣಗಳಿಗಾಗಿ ಆರು ಪ್ರಮುಖ ಖಂಡಗಳಾಗಿ ವಿಭಾಗಿಸಿದ್ದಾರೆ. ಇವೇ ಏಷ್ಯ, ಯುರೋಪ್, ಆಫ್ರಿಕ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಮತ್ತು ಅಂಟಾರ್ಕ್‌ಟಿಕ ಎಂಬ ಏಳು ಭೂಖಂಡಗಳು. ಭೂಗ್ರಹದ ಹೊರಮೈಯ ಒಟ್ಟು ವಿಸ್ತೀರ್ಣದ ಸು. ಮೂರನೆಯ ಒಂದು ಭಾಗದಷ್ಟು ಮಾತ್ರ ಖಂಡಗಳ ವ್ಯಾಪ್ತಿ; ಅವುಗಳ ದ್ರವ್ಯರಾಶಿಯೂ ಅಷ್ಟೇ, ಭೂಗ್ರಹದ ದ್ರವ್ಯರಾಶಿಯ ಮೂರನೆಯ ಒಂದು ಭಾಗದಷ್ಟು. ಆದ್ದರಿಂದ ವಿಸ್ತಾರವಾದ ನೀರಿನ ರಾಶಿಯ ಮೇಲೆ ಅಲ್ಲಿ ಇಲ್ಲಿ ಯಾದೃಚ್ಛಿಕವಾಗಿ ತೇಲುತ್ತಿರುವ ನೆಲಭಾಗಗಳೇ ಖಂಡಗಳು ಎಂದು ತರ್ಕಿಸಬಹುದು. ಹೀಗೆ ತೇಲುತ್ತಿರುವ ಖಂಡಗಳಿಗೆ ನೀರಿನ ಮೇಲೆ ತೇಲಬಿಟ್ಟಿರುವ ಹಲವಾರು ಮರದ ದಿಮ್ಮಿಗಳು ಅಲೆತದಿಂದ ಕಾಲಾಂತರದಲ್ಲಿ ದೂರ ದೂರ ಆಗುವಂತೆ, ಅಲೆತವಿರಬಹುದೇ ಎಂಬ ಸಂದೇಹ ಬಹು ಕಾಲದಿಂದ ವಿಜ್ಞಾನಿಗಳಲ್ಲಿ ಇತ್ತು. ಇಂಥ ಒಂದು ವೈಜ್ಞಾನಿಕ ಸಂದೇಹವನ್ನು ಮುಂದಿಟ್ಟವನು 17ನೆಯ ಶತಮಾನದ ಇಂಗ್ಲಿಷ್ ರಾಜಕಾರಣಿ ಹಾಗೂ ತತ್ತ್ವಜ್ಞಾನಿ ಸರ್ ಫ್ರಾನ್ಸಿಸ್ ಬೇಕನ್. ಇವನು ಅಮೆರಿಕ ಮತ್ತು ಆಫ್ರಿಕ ಖಂಡಗಳ ಅಂಚಿನ ಭಾಗಗಳನ್ನು ಪರಿಶೀಲಿಸಿ ಅವೆಷ್ಟು ಚೆನ್ನಾಗಿ ಪರಸ್ಪರ ಪೂರಕವಾಗಿ ಹೊಂದಿಕೊಳ್ಳುತ್ತವೆ. ಆದ್ದರಿಂದ ಇವೆರಡು ಖಂಡಗಳೂ ಒಂದಾನೊಂದು ಕಾಲದಲ್ಲಿ ಪರಸ್ಪರ ಒಂದು ಗೂಡಿದ್ದಿರಲೇಬೇಕು ಎಂಬ ಒಂದು ಊಹೆಯನ್ನು ಮಾಡಿದ್ದ. ಆ ತರುವಾಯ ಅನೇಕರು ಖಂಡಗಳ ಅಲೆತದ ವಿಷಯವನ್ನು ವೈಜ್ಞಾನಿಕ ಸಾಕ್ಷ್ಯಾಧಾರಗಳ ಸಮೇತ ಚರ್ಚಿಸಿ ವಿವಿಧ ವಿವರಣೆಗಳನ್ನೂ ವಾದಗಳನ್ನೂ ಮಂಡಿಸಿದ್ದಾರೆ. ಉದಾಹರಣೆಗೆ ಶಿಲೆಗಳ ರಚನಾಕ್ರಮ, ಕಾಂತಗುಣಗಳು, ಪ್ರಸ್ತರಗಳಲ್ಲಿ ಹುದುಗಿರುವ ಫಾಸಿಲುಗಳು ಇವೇ ಅತಿಮುಖ್ಯವಾದ ಸಾಕ್ಷ್ಯಾಧಾರಗಳು. ಇಂದಿನ ವಿವಿಧ ಭೂಖಂಡಗಳು ಹಿಂದೆ ಅಖಂಡವಾಗಿಯೇ ಇದ್ದು, ಕ್ರಮೇಣ ಒಡೆದು ಬೇರ್ಪಟ್ಟು, ಅಲೆದಾಡಿ ಇಂದಿನ ತಮ್ಮ ಸ್ಥಾನಗಳಿಗೆ ತಲಪುವವರೆಗೂ ಅವುಗಳಲ್ಲುಂಟಾದ ಬದಲಾವಣೆಗಳು ಮತ್ತು ಸುಧಾರಣೆಗಳು ಹಾಗೂ ಅಕ್ಷಾಂಶ ರೇಖಾಂಶಗಳಲ್ಲಾದ ಬದಲಾವಣೆಗಳಷ್ಟೇ ಅಲ್ಲದೆ ಮೇರುಗಳ ಅಲೆತವನ್ನು ಕುರಿತ ಅಧ್ಯಯನವೂ ನಡೆದಿದೆ.

**ಭೂಮಿಯ ಮೇಲ್ಮೈಲಕ್ಷಣಗಳು:** ಭೂಖಂಡಗಳು ತ್ರಿಕೋನಾಕಾರದಲ್ಲಿವೆ ಮತ್ತು ಅವು ಉತ್ತರದ ಕಡೆಗೆ ಬಹು ವಿಶಾಲವಾಗಿಯೂ ದಕ್ಷಿಣದ ಕಡೆಗೆ ಬಹು ಕಿರಿದಾಗಿಯೂ ಇವೆ. ಅಂಥ ಕಿರಿದಾದ ಭೂಭಾಗಗಳು ಭೂಶಿರಗಳಲ್ಲೋ ದ್ವೀಪಗಳಲ್ಲೋ ದ್ವೀಪಸ್ತೋಮಗಳಲ್ಲೋ ಅಂತ್ಯಗೊಳ್ಳುತ್ತವೆ. ಉದಾಹರಣೆಗೆ ಆಫ್ರಿಕದ ದಕ್ಷಿಣಭಾಗ ಗುಡ್ ಹೋಪ್ ಭೂಶಿರ ಮತ್ತು ಮಡಗಾಸ್ಕರ್ ದ್ವೀಪಗಳಲ್ಲಿ ಅಂತ್ಯಗೊಳ್ಳುತ್ತದೆ. ದಕ್ಷಿಣ ಅಮೆರಿಕದ ಕಿರಿದಾದ ಭೂಭಾಗದಿಂದ ಹಾರ್ನ್ ಭೂಶಿರ ಹಾಗೂ ಟಿಯೆರ ಡೆಲ್ ಫ್ಯೂಯೇಗೋ ಎಂಬ ದ್ವೀಪಸ್ತೋಮದ ರಚನೆಯಾಗಿದೆ. ಭಾರತ ಪರ್ಯಾಯದ್ವೀಪದ ದಕ್ಷಿಣಭಾಗ ಕನ್ಯಾಕುಮಾರಿ ಭೂಶಿರ ಮತ್ತು ಶ್ರೀಲಂಕ ದ್ವೀಪದಲ್ಲಿ ಅಂತ್ಯಗೊಂಡಿದೆ. ಆದರೆ ಆಸ್ಟ್ರೇಲಿಯದ ದಕ್ಷಿಣಭಾಗ ಮಾತ್ರ ವಿಶಾಲವಾದ ಕರಾವಳಿ ಪ್ರದೇಶವನ್ನೊಳಗೊಂಡಿದ್ದು ಟಾಸ್ಮೇನಿಯ ದ್ವೀಪದಲ್ಲಿ ಅಂತ್ಯಗೊಳ್ಳುತ್ತದೆ. ಸಾಗರಗಳು ಹೀಗಲ್ಲ. ಅವು ದಕ್ಷಿಣದ ಕಡೆಗೆ ಬಹು ವಿಶಾಲವಾಗಿಯೂ ಪೂರ್ವದ ಕಡೆಗೆ ಬಹುಕಿರಿದಾಗಿಯೂ ಇವೆ. ಖಂಡಗಳಂತೆ ಇವು ಕೂಡ ತ್ರಿಕೋನಾಕಾರವನ್ನೇ ತಳೆದಿರುವುದು ಗಮನಾರ್ಹ. ಸಾಗರಗಳು ಬಹುಪಾಲು ಭೂಭಾಗವನ್ನು ಆವರಿಸಿವೆ. ಸಾಗರಗಳಲ್ಲಿ ಪರಸ್ಪರ ಸಂಪರ್ಕ ಉಂಟು. ಆದರೆ ಭೂಖಂಡಗಳಲ್ಲಿ ಅಂಥ ಸಂಪರ್ಕಗಳಿಲ್ಲದೆ ಅವು ದೂರದೂರದಲ್ಲೇ ಉಳಿದಿವೆ. ಇಲ್ಲಿ ಕಂಡುಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಭೂಖಂಡಗಳು ಮತ್ತು ಸಾಗರಗಳು ಭೂಗೋಳದ ಎರಡೂ ಪಾರ್ಶ್ವಗಳಲ್ಲಿ ಎದುರುಬದುರಾಗಿವೆ. ಉದಾಹರಣೆಗೆ ಅಂಟಾರ್ಕ್‌ಟಿಕ ಖಂಡ ಆರ್ಕ್‌ಟಿಕ್ ಸಾಗರಕ್ಕೆದುರಾಗಿದೆ. ಉತ್ತರ ಅಮೆರಿಕ ಹಿಂದು ಸಾಗರಕ್ಕೆದುರಾಗಿಯೂ ಯುರೋಪು ಪೆಸಿಫಿಕ್ ಸಾಗರಕ್ಕೆದುರಾಗಿಯೂ ಸೈಬೀರಿಯ ಅಟ್ಲಾಂಟಿಕ್ ಸಾಗರಕ್ಕೆದುರಾಗಿಯೂ ಇವೆ.

**ಚತುಷ್ಫಲಕಸಿದ್ಧಾಂತ:** ಹೀಗೆ ವಿಶಿಷ್ಟ ಆಕಾರ ಮತ್ತು ಗುಣ ಲಕ್ಷಣಗಳನ್ನುಳ್ಳ ಭೂ ಮತ್ತು ಜಲಭಾಗಗಳಿಂದ ಕೂಡಿರುವ ಭೂಗೋಳವನ್ನು ವಿಜ್ಞಾನಿಗಳು ಒಂದು ಚತುಷ್ಫಲಕಕ್ಕೆ (ಟೆಟ್ರಹೆಡ್ರನ್) ಹೋಲಿಸಿದ್ದಾರೆ. ಇದನ್ನು ವಿವರಿಸಲು ಲೋತಿಯನ್ ಗ್ರೀನ್ ಎಂಬಾತ ಪ್ರತಿಪಾದಿಸಿದ ಚತುಷ್ಫಲಕ ಸಿದ್ಧಾಂತ ಪ್ರಾಯಶಃ ಮೊದಲನೆಯದು. ಇದರ ಪ್ರಕಾರ ಭೂಸೃಷ್ಟಿಯ ಬಳಿಕ ಅದು ನಿಧಾನವಾಗಿ ಮತ್ತು ಕ್ರಮವಾಗಿ ತಣ್ಣಗಾಗಲಾರಂಭಿಸಿತು. ಅದರ ಹೊರಭಾಗ ಒಳಭಾಗಕ್ಕಿಂತಲೂ ಹೆಚ್ಚು ತಣ್ಣಗಾದ ಕಾರಣ ಹೊರಭಾಗ ಮತ್ತೂ ತಣ್ಣಗಾಗುವ ಸ್ಥಿತಿಯಲ್ಲಿರಲಿಲ್ಲ. ಆದರೆ ಒಳಭಾಗ ಮಾತ್ರ ಇನ್ನೂ ತಣ್ಣಗಾಗುತ್ತಲೇ ಮುಂದುವರಿಯಿತು. ಅಂಥ ಪರಿಸ್ಥಿತಿಯಲ್ಲಿ ಭೂಗೋಳ ಗುರುತ್ವದ ಅಧೀನಕ್ಕೊಳಗಾಗಿರಲಿಲ್ಲ. ಕ್ರಮೇಣ ನಡೆಸಿದ ಹಲವಾರು ಪ್ರಯೋಗಗಳ ಆಧಾರದ ಮೇಲೆ ಗ್ರೀನ್ ತನ್ನ ಹಿಂದಿನ ಅಭಿಪ್ರಾಯಗಳನ್ನು ಪುನರ್ವಿಮರ್ಶಿಸುತ್ತ ಕುಸಿಯುತ್ತಿದ್ದ ಗೋಲದಿಂದ ಚತುಷ್ಫಲಕಾಕಾರದ ಬೆಳವಣಿಗೆ ಆಗಿರುವುದು ಸಾಧ್ಯ ಎಂಬುದಾಗಿ ಅಭಿಪ್ರಾಯಪಟ್ಟ. ಭೂಮಿ ಇಂಥ ಆಕಾರಕ್ಕೆ ರೂಪಾಂತರ ಹೊಂದುವಾಗ ಅದರಲ್ಲುಂಟಾದ ಸಂಕೋಚನದ ಬಗೆಗೆ ವಿಜ್ಞಾನಿಗಳು ಹಲವಾರು ರೀತಿಯಲ್ಲಿ ಊಹಿಸಿದ್ದಾರೆ. ಚತುಷ್ಫಲಕ ಸಿದ್ಧಾಂತದ ಪ್ರಕಾರ ಚತುಷ್ಫಲಕಾಕಾರದಲ್ಲಿರುವ ಭೂಮಿಯಲ್ಲಿ ನಾಲ್ಕು ಸಮಬಾಹು ತ್ರಿಭುಜಗಳಿವೆ, ನಾಲ್ಕು ಘನ ಕೋನಗಳಿವೆ; ಈ ತ್ರಿಭುಜಗಳ ಮುಖಗಳಲ್ಲಿ ಪೆಸಿಫಿಕ್, ಅಟ್ಲಾಂಟಿಕ್, ಹಿಂದೂ ಮತ್ತು ಆರ್ಕ್‌ಟಿಕ್ ಸಾಗರಗಳಿವೆ; ಮತ್ತು ಅದರ ಘನ ಕೋನಗಳಲ್ಲಿ ವಿವಿಧ ಭೂಖಂಡಗಳಿವೆ.

**ತೀರಗಳ ಆಕಾರ ಮತ್ತು ಹೋಲಿಕೆಗಳು :** ಪ್ರಪಂಚದ ಭೂಪಟವನ್ನು ನೋಡಿದಾಗ ಒಂದು ಪ್ರಮುಖವಾದ ಅಂಶ ನಮ್ಮ ಗಮನ ಸೆಳೆಯುತ್ತದೆ. ಅದೆಂದರೆ ಅಟ್ಲಾಂಟಿಕ್

ಸಾಗರದ ಎರಡೂ ಪಾರ್ಶ್ವಗಳಲ್ಲಿರುವ ದಕ್ಷಿಣ ಅಮೆರಿಕದ ಪೂರ್ವತೀರಕ್ಕೂ ಆಫ್ರಿಕದ ದಕ್ಷಿಣತೀರಕ್ಕೂ ಆಕಾರದಲ್ಲಿ ಎದ್ದು ಕಾಣುವ ಹೋಲಿಕೆಗಳು. ಅಂಥ ಸುಸ್ಪಷ್ಟವಾದ ಹೋಲಿಕೆಗಳ ಆಧಾರದ ಮೇಲೆ ಹಿಂದೆ ಆ ಎರಡೂ ಭೂಭಾಗಗಳು ಒಂದಾಗಿಯೇ ಇದ್ದು ಯಾವುದೊ ಒಂದು ಬೃಹತ್ ಭೂಖಂಡದೊಂದಿಗೆ ಕತ್ತರಿಸಿದ ವಿವಿಧ ಆಕಾರಗಳುಳ್ಳ ಕಾಗದದ ಚೂರುಗಳನ್ನು ಒಂದಾಗಿ ಸೇರಿಸಿದಂತೆ (ಜಿಗ್ ಸಾ ಪಸಲ್) ಕೂಡಿಕೊಂಡಿದ್ದು ಕಾಲಕ್ರಮದಲ್ಲಿ ಪರಸ್ಪರ ಬೇರ್ಪಟ್ಟಿರಬೇಕೆಂದು ತರ್ಕಿಸಬೇಕಾಗುತ್ತದೆ.

ಚಿತ್ರ 1 ದಕ್ಷಿಣ ಅಮೆರಿಕ ಮತ್ತು ಆಫ್ರಿಕ ಖಂಡ ತೀರಗಳ ಆಕಾರಗಳನ್ನೂ ಅವುಗಳಿಗಿರುವ ಹೋಲಿಕೆಯನ್ನು ಚಿತ್ರದಲ್ಲಿ ತೋರಿಸಿದೆ

ಅಂಟೋನಿಯೊ ಸ್ನಿಡರ್ ಎಂಬಾತ 1858ರಲ್ಲಿ ಪ್ರಕಟಿಸಿದ ನಕ್ಷೆಯೊಂದರಲ್ಲಿ ದಕ್ಷಿಣ ಅಮೆರಿಕ ಮತ್ತು ಆಫ್ರಿಕಗಳ ತೀರಗಳ ಆಕಾರಗಳನ್ನು ಕುರಿತು ವಿಶೇಷವಾಗಿ ಪ್ರಸ್ತಾಪಿಸಿದ. ಅದಲ್ಲದೆ ಉತ್ತರ ಮತ್ತು ದಕ್ಷಿಣ ಅಮೆರಿಕಗಳು ಆಫ್ರಿಕ ಮತ್ತು ಯುರೇಷ್ಯ (ಯುರೋಪ್ ಮತ್ತು ಏಷ್ಯ) ಭೂಖಂಡಗಳು ಮೂಲತಃ ಒಂದು ಬೃಹತ್ ಭೂಖಂಡವೊಂದರಲ್ಲಿ ಅಡಕವಾಗಿದ್ದುವು ಎಂಬ ಅಂಶವನ್ನೂ ವಿವರಿಸಲು ಯತ್ನಿಸಿದ. ಆತ ಮತ್ತಷ್ಟು ಮುಂದುವರಿದು ಉತ್ತರಾರ್ಧಗೋಳದುದ್ದಕ್ಕೂ ರಚಿತವಾಗಿದ್ದ ಕಲ್ಲಿದ್ದಲು ನಿಕ್ಷೇಪಗಳಲ್ಲಿ ದೊರೆತ ಸಸ್ಯಗಳಿರುವ ಹೋಲಿಕೆಗಳನ್ನು ಕೂಡ ವಿವರಿಸಿದ್ದ. ಆಸ್ಟ್ರಿಯದ ಭೂವಿಜ್ಞಾನಿ ಎಡ್ವರ್ಡ್ ಸೂಯೆಸ್ (1831–1941) ಎಂಬಾತ ಲಾರೇಶಿಯದ ದಕ್ಷಿಣದ ಗಡಿ ಇಂಡೋ ಆಫ್ರಿಕದ ಕಡೆಗೆ ಮಡಿಕೆಗಳಾಗಿ ಸಾಲುಸಾಲಾಗಿ ಮುಂದುವರಿಯುತ್ತಿವೆ ಎಂದು ವರ್ಣಿಸಿದ. ಅಲ್ಲದೆ ದಕ್ಷಿಣ ಅಮೆರಿಕ ಮತ್ತು ಆಫ್ರಿಕದ ಭೂರಚನೆಯಲ್ಲಿ ಅತಿ ನಿಕಟವಾದ ಸಂಬಂಧಗಳಿರುವುದನ್ನು ಗುರುತಿಸಿದ. ಅಷ್ಟೇ ಅಲ್ಲದೆ ಇಡೀ ದಕ್ಷಿಣಾರ್ಧಗೋಲದ ಭೂಭಾಗಗಳನ್ನೆಲ್ಲ ಅಂದರೆ ದಕ್ಷಿಣ ಅಮೆರಿಕ, ಆಫ್ರಿಕ, ಭಾರತ, ಆಸ್ಟ್ರೇಲಿಯ, ಅಂಟಾರ್ಕ್‌ಟಿಕ ಇತ್ಯಾದಿಗಳನ್ನೆಲ್ಲ ಒಂದುಗೂಡಿಸಿದರೆ ಅದೊಂದು ಬೃಹತ್ ಭೂಖಂಡವಾಗುವುದೆಂದು ಹೇಳಿ ಅದನ್ನು ಗೊಂಡ್ವಾನವೆಂದು ಕರೆದ (ಗೊಂಡ್ವಾನ ಎಂಬ ಹೆಸರು ಭಾರತದ ಮಧ್ಯಪ್ರದೇಶದಲ್ಲಿ ವಾಸಿಸುವ ಗೊಂಡ ಎಂಬ ಗುಡ್ಡಗಾಡಿನ ಜನರ ಹೆಸರು). ಎಫ್.ಬಿ. ಟೇಲರ್ ಎಂಬ ಅಮೆರಿಕದ ವಿಜ್ಞಾನಿ ಖಂಡಗಳ ಅಲೆತವನ್ನು ಕುರಿತು ಸ್ವತಂತ್ರವಾಗಿ ವಿಚಾರಮಾಡಲಾರಂಭಿಸಿದ (1908). ಈತನ ಪ್ರಕಾರ ಮೂಲತಃ ಉತ್ತರಾರ್ಧಗೋಲದಲ್ಲಿ ಎರಡು ಪ್ಲಾಸ್ಟಿಕ್ ಸದೃಶ ಭೂಭಾಗಗಳಿದ್ದುವು. ಕ್ರಮೇಣ ಅವು ಮೇರುವಿನಿಂದ ಸಮಭಾಜಕವೃತ್ತದ ಕಡೆಗೆ ಹೆಚ್ಚು ಕಡಿಮೆ ಎಲ್ಲ ದಿಕ್ಕಿಗೂ ಚದರಲಾರಂಭಿಸಿದವು. ಭೂಮಿಯಿಂದ ಚಂದ್ರ ತೀರ ವಿಳಂಬವಾಗಿ ಪ್ರತ್ಯೇಕಗೊಂಡನೆಂದು ಟೇಲರ್ ಅಭಿಪ್ರಾಯಪಟ್ಟ. ಈತ ಸಹ ದಕ್ಷಿಣ ಅಮೆರಿಕ ಮತ್ತು ಆಫ್ರಿಕದ ತೀರಗಳಲ್ಲಿ ಕಂಡುಬರುವ ಸುಸ್ಪಷ್ಟವಾದ ಹೋಲಿಕೆಗಳನ್ನು ಗುರುತಿಸಿದ್ದ. ಅಲ್ಲದೆ ಅವುಗಳ ನಡುವೆ 900 – 1200 ಮೀ.ಗಳಷ್ಟು ಎತ್ತರವಿದ್ದು ಸುದೀರ್ಘವಾಗಿ ಚಾಚಿನಿಂತಿರುವ ಡಾಲ್ಫಿನ್ ಏಣಿನ (ರಿಡ್ಜ್) ವಕ್ರತೆ ಅದರ ಪೂರ್ವ–ಪಶ್ಚಿಮ ಕರಾವಳಿಗಳನ್ನು ಅನುಸರಿಸಿರುವುದನ್ನೂ ಪತ್ತೆಮಾಡಿದ. ಇದು ಭೂಖಂಡಗಳ ಮಾರ್ಗಚ್ಯುತಿಯಿಂದಾದುದೆಂದೂ ಅವುಗಳ ಪೈಕಿ ಒಂದು ಪೂರ್ವಕ್ಕೂ ಮತ್ತೊಂದು ಪಶ್ಚಿಮಕ್ಕೂ ಚಲಿಸಿದ ಕಾರಣ ಬ್ರಜಿಲ್ ಪಶ್ಚಿಮ ಆಫ್ರಿಕದಿಂದ ಪ್ರತ್ಯೇಕಗೊಂಡ ಬಳಿಕ ಕಂಡುಬರುವ ಅವಶೇಷವೆಂಬುದಾಗಿಯೂ ಅಭಿಪ್ರಾಯಪಟ್ಟ. ಜರ್ಮನಿಯ ಪವನವಿಜ್ಞಾನಿ ಆಲ್‌ಫ್ರೆಡ್ ವೆಗ್‌ನರ್ (1880–1930) ಸು. 1912ರಲ್ಲಿ ಖಂಡಗಳ ಅಲೆತದ ಸಮಸ್ಯೆಯನ್ನು ಕುರಿತು ಕೂಲಂಕಷವಾದ ಅಧ್ಯಯನ ನಡೆಸಿ ತನ್ನ ಸಮಸ್ತ ಅಭಿಪ್ರಾಯಗಳನ್ನೂ ಒಂದು ಸಿದ್ಧಾಂತದ ರೂಪದಲ್ಲಿ ಪ್ರತಿಪಾದಿಸಿದ. ವೆಗ್‌ನರನ ಅಲೆತ ಸಿದ್ಧಾಂತ ಅಂದಿನ ವೈಜ್ಞಾನಿಕ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿತು. ಅನೇಕ ವಿಜ್ಞಾನಿಗಳು, ಅದರಲ್ಲೂ ಬಹುಮುಖ್ಯವಾಗಿ ಉತ್ತರಾರ್ಧಗೋಲದ ವಿಜ್ಞಾನಿಗಳು, ಇವನ ಅಭಿಪ್ರಾಯಗಳನ್ನು ಕಟುವಾಗಿ ಟೀಕಿಸಿದರು. ಆದರೆ ಇಂದು ವಿಜ್ಞಾನಿಗಳಿಗೆ ಲಭ್ಯವಾಗಿರುವ ಅನೇಕ ಉಪಯುಕ್ತವಾದ ವೈಜ್ಞಾನಿಕ ಮಾಹಿತಿಗಳು ವೆಗ್‌ನರನ ಅಂದಿನ ಅಭಿಪ್ರಾಯಗಳನ್ನು ಬಲವಾಗಿ ಸಮರ್ಥಿಸುತ್ತವೆ.

**ವೆಗ್‌ನರನ ಅಲೆತಸಿದ್ಧಾಂತ :** ಮೊತ್ತಮೊದಲು ಅಂದರೆ ಸುಮಾರು ಎರಡು ಸಾವಿರ ಮಿಲಿಯನ್ ವರ್ಷಗಳಿಗೂ ಮುಂಚೆ ಪಾಂಗೇ ಎಂಬ ಬೃಹತ್ ಭೂಭಾಗವಿತ್ತು (ಪಾಂಗೇ ಎಂಬ ಗ್ರೀಕ್ ಪದದ ಅರ್ಥ ಸಮಸ್ತ ನೆಲ). ಅದೇ ಕಾಲಕ್ಕೆ ಇಂದಿನ ಪೆಸಿಫಿಕ್ ಸಾಗರದ ಮೂಲವಾದ ಅಥವಾ ಪೂರ್ವಜ ಮಹಾ ಸಾಗರವೂ ಇತ್ತು. ಅದರ ಹೆಸರು ಪ್ಯಾಂತಾಲಾಸ್ಸಾ. ಕ್ರಮೇಣ ಈ ಪಾಂಗೇ ಇಬ್ಭಾಗವಾಗಿ ಅದರಿಂದ ಮತ್ತೆರಡು ಬೃಹತ್ ಭೂಖಂಡಗಳಾದುವು. ಅವುಗಳ ಪೈಕಿ ಒಂದು ಉತ್ತರಾರ್ಧಗೋಲಕ್ಕೂ ಮತ್ತೊಂದು ದಕ್ಷಿಣಾರ್ಧಗೋಲಕ್ಕೂ ಸರಿದು ಹೋದವು. ಈ ಎರಡು ಭೂಖಂಡಗಳ ನಡುವೆ ಇಂದಿನ ಮೆಡಿಟರೇನಿಯನ್ ಸಮುದ್ರದ ಮೂಲವಾದ ಟೆತಿಸ್ ಎಂಬ ದೊಡ್ಡ ಸಮುದ್ರವಿತ್ತು. ಇಂದಿನ ಉತ್ತರ ಅಮೆರಿಕ, ಏಷ್ಯದ ಬಹುಭಾಗ ಮತ್ತು ಯೂರೋಪ್‌ಗಳನ್ನೊಳಗೊಂಡು ಉತ್ತರಾರ್ಧಗೋಲದಲ್ಲಿದ್ದ ಬೃಹತ್ ಭೂಖಂಡಕ್ಕೆ ಲಾರೇಶಿಯ ಎಂದು ಹೆಸರು. ದಕ್ಷಿಣ ಅಮೆರಿಕ, ಆಫ್ರಿಕ, ಅರೇಬಿಯ, ಮಡಗಾಸ್ಕರ್, ಭಾರತ, ಆಸ್ಟ್ರೇಲಿಯ ಮತ್ತು ಅಂಟಾರ್ಕ್‌ಟಿಕಗಳನ್ನೊಳಗೊಂಡು ದಕ್ಷಿಣಾರ್ಧಗೋಲದಲ್ಲಿದ್ದ ಬೃಹತ್ ಭೂಖಂಡಕ್ಕೆ ಗೊಂಡ್ವಾನವೆಂದೂ ವೆಗ್‌ನರ್ ಹೆಸರಿಸಿದ. ಅನಂತರ ಮಧ್ಯಜೀವಿಯುಗದಲ್ಲಿ ಈ ಲಾರೇಶಿಯ ಮತ್ತು ಗೊಂಡ್ವಾನ ಭೂಖಂಡಗಳು ಒಡೆದು ಅವುಗಳಿಂದ ಇಂದಿನ ವಿವಿಧ ಖಂಡಗಳ ರಚನೆಯಾಯಿತು. ತರುವಾಯ ಉತ್ತರ ಮತ್ತು ದಕ್ಷಿಣ ಅಮೆರಿಕಗಳನ್ನು ಬೇರ್ಪಡಿಸುವ ಜಲಭಾಗವಾಗಿ ಅಟ್ಲಾಂಟಿಕ್ ಸಾಗರದ ರಚನೆಯಾಯಿತು. ಅಂಟಾರ್ಕ್‌ಟಿಕ ಮತ್ತು




ಚಿತ್ರ 2 ವೆಗ್‌ನೆರ್ ರೂಪಿಸಿದ ಭೂಖಂಡಗಳ ವಿವಿಧ ನಕ್ಷೆಗಳು : ಬೇರೆ ಬೇರೆ ಭೂಕಾಲಮಾನಗಳಲ್ಲಿ ಬೇರೆ ಬೇರೆ ಅವಧಿಗಳಲ್ಲಿ ಖಂಡಗಳ ಅಲೆತ ಮತ್ತು ವಿತರಣೆಯನ್ನು ಚಿತ್ರದಲ್ಲಿ ತೋರಿಸಿದೆ. ಎ: 300 ಮಿಲಿಯನ್ ವರ್ಷಗಳ ಹಿಂದೆ (ಕಾರ್ಬಾನಿಫೆರಸ್ ಕಲ್ಪದ ಕೊನೆಯ ಅವಧಿ. ಬಿ : 60 ಮಿಲಿಯನ್ ವರ್ಷಗಳ ಹಿಂದೆ (ಇಯೋನೀಸ್ ಕಲ್ಪ); ಸಿ : 2 ಮಿಲಿಯನ್ ವರ್ಷಗಳ ಹಿಂದೆ (ಪ್ಲಿಸ್ಟೋಸೀಸ್ ಕಲ್ಪದ ಆದಿಭಾಗ)

ಆಸ್ಟ್ರೇಲಿಯ ಖಂಡಗಳ ನಡುವೆ ಹಿಂದೂ ಮಹಾಸಾಗರ ಪ್ರವೇಶಿಸಿತು. ಅಟ್ಲಾಂಟಿಕ್ ಸಾಗರದ ಏಣನ್ನು ಅನಂತರ ಪ್ರತ್ಯೇಕಗೊಂಡ ದಕ್ಷಿಣ ಅಮೆರಿಕ ಮತ್ತು ಆಫ್ರಿಕಗಳ ನಡುವಣ ಸಂಪರ್ಕ ಅವಶೇಷವೆಂದು ಭಾವಿಸಲಾಯಿತು. ವೆಗ್‌ನರ್ ತರ್ಕದ ಪ್ರಕಾರ ಹಗುರವಾದ ಅಲ್ಯುಮಿನಿಯಂ ಸಿಲಿಕೇಟುಗಳಿಂದ ರಚಿತವಾದ ಖಂಡಗಳಿಗೆ ಸಯಾಲ್(SHAL) ಎಂಬ ಹೆಸರು. ಅದರಂತೆ ಅವುಗಳ ತಳಭಾಗದಲ್ಲಿ ಅಧಿಕಸಾಂದ್ರತೆಯ ದ್ರವರೂಪಿ ಪದರವಿದ್ದು ಅದು ಸಿಲಿಕೇಟ್ ಮತ್ತು ಭಾರವಾದ ಮೆಗ್ನಿಷಿಯಂ (SIMA) ಖನಿಜಗಳಿಂದ ರಚಿತವಾದ ಕಾರಣ ಅದಕ್ಕೆ (ಕೆಳಭಾಗದ ಪದರ) ಸೈಮಾ ಎಂದು ಹೆಸರು. ಆದ್ದರಿಂದ ಭೂಖಂಡಗಳು ಎಂದರೆ ಸಯಾಲುಗಳು, ನೀರಿನ ಮೇಲೆ ತೇಲಾಡುವ ಬರ್ಫಗಳಂತೆ, ಸೈಮಾ ಸಾಗರದ ಮೇಲೆ ತೇಲಾಡಲು ಸಾಧ್ಯ. ಭೂಖಂಡಗಳು ಪ್ರತ್ಯೇಕಗೊಂಡು ಚಲಿಸಿದ ವಿವಿಧ ಕಾಲಗಳು ಮತ್ತು ಹಂತಗಳನ್ನು ತನ್ನ ನಕ್ಷೆಗಳಲ್ಲಿ ವೆಗ್‌ನರ್ ಗುರುತಿಸಿದ್ದಾನಲ್ಲದೆ ಭೂಖಂಡಗಳ ಮಾರ್ಗಚ್ಯುತಿಯ ಬಗ್ಗೆ ಟೇಲರ್ ಮಂಡಿಸಿದ ವಾದಗಳನ್ನು ಮತ್ತಷ್ಟು ವಿವರಿಸಿದ್ದಾನೆ. ದಕ್ಷಿಣ ಅಮೆರಿಕ ಮತ್ತು ಆಫ್ರಿಕಗಳ ತೀರಗಳಲ್ಲಿ ಕಂಡುಬಂದ ಸ್ಪಷ್ಟವಾದ ಹೋಲಿಕೆಗಳನ್ನು ಕ್ರಮವಾಗಿ ಪರಿಶೀಲಿಸಿದ್ದಾನೆ. ಅಲ್ಲದೆ ಆಫ್ರಿಕ, ಅರೇಬಿಯ, ಮಡಗಾಸ್ಕರ್, ಗ್ರೀನ್‌ಲೆಂಡ್, ಲ್ಯಾಬ್ರಡಾರುಗಳ ತೀರಗಳ ಸಮರೂಪತೆಗಳನ್ನು ವಿವರವಾಗಿ ಮಂಡಿಸಿದ್ದಾನೆ. ದಕ್ಷಿಣ ಅಮೆರಿಕ, ಆಫ್ರಿಕ, ಭಾರತ ಮತ್ತು ಟಾಸ್ಮೇನಿಯ ಇವುಗಳ ತ್ರಿಕೋಣಾಕಾರವನ್ನು ಗಮನಿಸಿದರೆ ಅವೆಲ್ಲವೂ ಗೊಂಡ್ವಾನ ಭೂಭಾಗಗಳಾಗಿದ್ದು ದಕ್ಷಿಣ ಮೇರುವಿನಿಂದ ಕಂಡುಬರುವ ಬಿರುಕುಗಳ ಸಾಲುಗಳಲ್ಲಿ ತುಂಡಾಗಿ ಅನಂತರ ಸಮಭಾಜಕ ವೃತ್ತದ ಕಡೆಗೆ ಚಲಿಸಬಹುದೆಂದು ಅವನ ಅಭಿಪ್ರಾಯ. ಅನಂತರ ಆತ ಅಟ್ಲಾಂಟಿಕ್ ಸಾಗರದ ಪೂರ್ವ ಮತ್ತು ಪಶ್ಚಿಮತೀರಗಳಲ್ಲಿರುವ ಹೋಲಿಕೆಗಳು ಮತ್ತು ವ್ಯತ್ಯಾಸಗಳನ್ನು ಗಮನಿಸಿದ. ಅಮೆರಿಕಗಳ ಪಶ್ಚಿಮ ಪಾರ್ಶ್ವಗಳ ಪರ್ವತಶ್ರೇಣಿಗಳು ತೀರಗಳಿಗೆ ಸಮಾಂತರವಾಗಿ ಚಾಚಿನಿಂತಿವೆ. ಪೂರ್ವತೀರಗಳು ಈ ತೀರಗಳಿಗೆ ಓರೆಯಾಗಿ ಬಾಗಿಕೊಂಡಿವೆ. ಪಶ್ಚಿಮ ಭಾರತದಲ್ಲೂ ಹಾರ್ನ್ ಭೂಶಿರದ ದಕ್ಷಿಣಕ್ಕೂ ದ್ವೀಪಸ್ತೋಮಗಳಿವೆ. ಏಷ್ಯದ ಪೂರ್ವ ತೀರದುದ್ದಕ್ಕೂ ಭೂವೈಜ್ಞಾನಿಕ ಮತ್ತು ಭೌಗೋಲಿಕ ಲಕ್ಷಣಗಳಲ್ಲಿ ಸಾಮ್ಯವುಳ್ಳ ದೀಪಮಾಲಿಕೆಗಳಿವೆ. ಪೆಸಿಫಿಕ್ ಸಾಗರದ




ಚಿತ್ರ 3 ಅನೇಕ ದಶಲಕ್ಷ ವರ್ಷಗಳ ಹಿಂದೆ ಗೊಂಡ್ವಾನ ಎಂಬ ದಕ್ಷಿಣಾರ್ಧ ಗೋಳದ ಭೂಖಂಡದಲ್ಲಿ ಅಡಕವಾಗಿದ್ದು ಕ್ರಮೇಣ ಚದರಿ ಹೋದ ವಿವಿಧ ಭೂಖಂಡಗಳು

ಮಧ್ಯೆಯಿರುವ ದ್ವೀಪ ಮಾಲಿಕೆಗಳು ಆಕಾರದಲ್ಲಿ ಸಮಾಂತರ ರೇಖೆಯಲ್ಲಿವೆ. ಮಾರ್ಷಲ್, ಹವಾಯ್ ಮುಂತಾದ ದ್ವೀಪಗಳು ಪಶ್ಚಿಮ ವಾಯವ್ಯ ಮುಖ್ಯರೇಖೆಗಳಿಗೆ ಹೊಂದಿಕೊಂಡಿವೆ. ಆಕಾರ ಮತ್ತು ವಿನ್ಯಾಸಗಳಿಗೆ ಸಂಬಂಧಿಸಿದ ಈ ವಿಚಿತ್ರ ಅಂಶಗಳೊಂದಿಗೆ ವೆಗ್‌ನರ್ ಅಟ್ಲಾಂಟಿಕ್ ಸಾಗರದ ಪೂರ್ವ ಮತ್ತು ಪಶ್ಚಿಮ ಖಂಡಗಳ ಭೂರಚನೆಯಲ್ಲಿ ಅನೇಕ ಸುಸ್ಪಷ್ಟವಾದ ಹೋಲಿಕೆಗಳಿರುವುದನ್ನು ಗುರುತಿಸಿದ್ದಾನೆ. ತನ್ನ ಸಿದ್ಧಾಂತವನ್ನು ಸಮರ್ಥಿಸಲು ಆತ ಅನೇಕ ವಿಧವಾದ ವೈಜ್ಞಾನಿಕ ವಿವರಗಳನ್ನು ಸಂಗ್ರಹಿಸಿದ. ಅವುಗಳ ಪೈಕಿ ಪರ್ಮೋಕಾರ್ಬಾನಿಫೆರಸ್ ಕಾಲದ ಹಿಮನದಿಗಳ ಕಾರ್ಯಗಳ ಬಗ್ಗೆ ಆತ ನೀಡಿದ ವಿವರಣೆ ಮುಖ್ಯವಾದದ್ದು. ಇಂದು ಈ ಕಾರ್ಯಗಳನ್ನು ಮುಖ್ಯವಾಗಿ ಮೇರುಪ್ರದೇಶಗಳಲ್ಲಿ ಮತ್ತು ಉನ್ನತಪರ್ವತಗಳ ಮೇಲೆ ಮಾತ್ರ ಕಾಣಬಹುದಾಗಿದೆ. ಪರ್ಮೋಕಾರ್ಬಾನಿಫೆರಸ್ ಕಾಲದಲ್ಲಿ ವ್ಯಾಪಕವಾದ ಹಿಮದ ಮುಸುಕೊಂದು ದಕ್ಷಿಣ ಅಮೆರಿಕ, ದಕ್ಷಿಣ ಭಾರತದ ಕೆಲವು ಭಾಗಗಳು ಹಾಗೂ ಅಂಟಾರ್ಕ್‌ಟಿಕ ಖಂಡಗಳನ್ನು ಸಂಪೂರ್ಣವಾಗಿ ಆವರಿಸಿಬಿಟ್ಟಿದ್ದಿತು. ಇಂದು ಅಂಟಾರ್ಕ್‌ಟಿಕವೊಂದನ್ನುಳಿದು ಬೇರೆಲ್ಲೂ ಯಾವೊಂದು ರೀತಿಯ ನೀರ್ಗಲ್ಲು ಕ್ರಿಯೆ ಕಾಣಸಿಗುವುದಿಲ್ಲ.

ಭೂ ಇತಿಹಾಸದ ಅತಿ ಹಿಂದಿನಿಂದಲೂ ಖಂಡಗಳು ಅಲೆಯುತ್ತ ಬಂದಿರುವುದು ತಿಳಿದಿದೆ. ಏಷ್ಯದ ಭೂಭಾಗ ಸಹ ನಿಧಾನವಾಗಿ ಪಶ್ಚಿಮಾಭಿಮುಖವಾಗಿ ಸರಿಯುತ್ತ ಬಂದಿರುವುದು ಕಂಡುಬಂದಿದೆ. ಈ ಭೂಚಲನೆಯಿಂದಾಗಿ ಪೂರ್ವತೀರದ ಸಣ್ಣ ಪುಟ್ಟ ಭಾಗಗಳು ಆಗಾಗ ಮುಖ್ಯ ಭೂಭಾಗದಿಂದ ಪ್ರತ್ಯೇಕಗೊಂಡು ಹಿಂದೆ ಉಳಿದಿವೆ. ಅಂಥ ಭೂಭಾಗಗಳು ಇಂದು ಪೆಸಿಫಿಕ್ ಸಾಗರದ ಮತ್ತು ಏಷ್ಯದ ದ್ವೀಪಸ್ತೋಮಗಳು. ದಕ್ಷಿಣ ಮೇರುವಿನಲ್ಲಿದ್ದ ಗೊಂಡ್ವಾನದಿಂದ ಕಾಲಕ್ರಮದಲ್ಲಿ ದಕ್ಷಿಣ ಅಮೆರಿಕ, ಆಫ್ರಿಕ, ಭಾರತ, ಆಸ್ಟ್ರೇಲಿಯ ಮತ್ತು ಮಡಗಾಸ್ಕರ್ ಹಾಗೂ ಅಂಟಾರ್ಕ್‌ಟಿಕಗಳ ರಚನೆಯಾಯಿತು. ಈ ಭೂಭಾಗಗಳು ಸಮಭಾಜಕವೃತ್ತದ ಕಡೆಗೆ ಚಲಿಸಿದುವು. ದಕ್ಷಿಣ ಅಮೆರಿಕ ಅತಿವೇಗವಾಗಿ ಚಲಿಸಿದ ಕಾರಣ ಮಧ್ಯಜೀವಿ ಯುಗದಲ್ಲಿ ಅಟ್ಲಾಂಟಿಕ್ ಸಾಗರದ ಉಗಮವಾಯಿತು. ಲಾರೇಶಿಯದಿಂದ ಉತ್ತರ ಅಮೆರಿಕ ಬೇರೆಯಾಗಿ ನೈರುತ್ಯಕ್ಕೆ ಚಲಿಸುತ್ತ ನಡುವೆಯೇ ಗ್ರೀನ್‌ಲೆಂಡನ್ನು ಬಿಟ್ಟಿತು. ಉತ್ತರ ದಕ್ಷಿಣ ಅಮೆರಿಕಗಳು ಇತರ ಖಂಡಗಳಿಗಿಂತಲೂ ಅತಿ ವೇಗವಾಗಿ ಚಲಿಸಿದುದರಿಂದ ಈ ಭೂಖಂಡಗಳ ಮುಂದೊತ್ತುಗಳಿಂದ ರಾಕಿ ಮತ್ತು ಆಂಡೀಸ್ ಪರ್ವತ ಪಂಕ್ತಿಗಳ ರಚನೆಯಾಯಿತು. ಪೂರ್ವ ಅಂಚುಗಳಿಂದ ಪ್ರತ್ಯೇಕಗೊಂಡ ದ್ವೀಪಗಳು ಪಶ್ಚಿಮ ಭಾರತ ಮತ್ತು ಹಾರ್ನ್ ಭೂಶಿರದ ಆಗ್ನೇಯ ದ್ವೀಪಗಳಾದುವು. ಆಫ್ರಿಕ ಪಶ್ಚಿಮದ ಕಡೆಗೆ ಚಲಿಸುತ್ತ ಮುಂದುವರಿಯಿತು. ಆಗ ಮಡಗಾಸ್ಕರ್ ಹಿಂದೆಯೇ ಉಳಿಯಿತಲ್ಲದೆ ಕ್ರಮಕ್ರಮವಾಗಿ ಸ್ವಲ್ಪ ಉತ್ತರಕ್ಕೆ ಚಲಿಸಿತು. ಇದರಂತೆ ಭಾರತ ಉಪಖಂಡ ಸಹ ಶ್ರೀಲಂಕಾ ದ್ವೀಪವನ್ನು ಕಳಚಿಕೊಂಡಿತು. ಸಮಭಾಜಕ ವೃತ್ತದ ಕಡೆಗೆ ಚಲಿಸುತ್ತಿದ್ದ ಲಾರೇಶಿಯದ ಭಾಗವಾದ ಅಂಗಾರ ಪ್ರದೇಶ ಆಫ್ರಿಕ, ಭಾರತ ಮತ್ತು ಆಸ್ಟ್ರೇಲಿಯಗಳೊಂದಿಗೆ ಘರ್ಷಿಸಿದ ಪರಿಣಾಮವಾಗಿ ಅವೆರಡರ ನಡುವೆಯಿದ್ದ ಟೆತಿಸ್ ಸಮುದ್ರದ ಸಂಚಯನಗಳು ಬಲವಾದ ಒತ್ತಡಗಳಿಗೊಳಗಾಗಿ ಮೇಲಕ್ಕೊತ್ತಲ್ಪಟ್ಟು ಅದರಿಂದ ಇಂದಿನ ಉತ್ತುಂಗ ಶಿಖರಗಳಾದ ಆಲ್ಪ್ಸ್ ಮತ್ತು ಹಿಮಾಲಯಗಳ ರಚನೆಯಾಯಿತು. ಇದಲ್ಲದೆ ಅಂಗಾರ ಪ್ರದೇಶ ಭಾರತ ಉಪಖಂಡದ ಮೇಲೆಯೇ ಸವಾರಿಮಾಡಿದ ಕಾರಣದಿಂದ ಅತ್ಯಂತ ಎತ್ತರವಾದ ಟಿಬೆಟ್ ಪ್ರಸ್ಥಭೂಮಿಯ ರಚನೆ ಸಾಧ್ಯವಾಯಿತೆಂದು ಇತರ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

ವೆಗ್‌ನರ್ ಪ್ರತಿಪಾದಿಸಿದ ಅಲೆತ ಸಿದ್ಧಾಂತವನ್ನು ಸ್ವಾಗತಿಸಿ ಬೆಂಬಲಿಸಿದವರಲ್ಲಿ ದಕ್ಷಿಣ ಆಫ್ರಿಕದ ವಿಖ್ಯಾತ ಭೂವಿಜ್ಞಾನಿ ಅಲೆಗ್ಸಾಂಡರ್ ಡ್ಯೂಟಾಯಿಟ್ ಪ್ರಮುಖನಾದವ. ಈತ ಖಂಡಗಳ ಅಲೆತವನ್ನು ಸಮರ್ಥಿಸುವ ಅನೇಕ ವಿಧವಾದ ಸಾಕ್ಷ್ಯಾಧಾರಗಳನ್ನು ಅನೇಕ ವರ್ಷಗಳ ಕಾಲ, ಅತಿಮುಖ್ಯವಾಗಿ ಗೊಂಡ್ವಾನ ಭೂಖಂಡಗಳಲ್ಲಿ, ಸಂಗ್ರಹಿಸಿದ್ದಾನೆ. ಅಟ್ಲಾಂಟಿಕ್ ಸಾಗರದ ಎರಡೂ ಬದಿಗಳಲ್ಲಿರುವ ಪ್ರಸ್ತರಗಳು, ಫಾಸಿಲುಗಳು, ಪ್ರಾಚೀನ ಹವಾಗುಣಗಳು ಮತ್ತು ಭೂಚಲನೆ ಇತ್ಯಾದಿಗಳನ್ನೂ ಸು. 200 ಮಿಲಿಯನ್ ವರ್ಷಗಳಿಗೂ ಹಿಂದಿನ ಹಿಮಯುಗದಲ್ಲಿ ಯಥೇಚ್ಛವಾಗಿ ಹರಡಿದ್ದ ನೀರ್ಗಲ್ಲುನದಿಗಳ ಪ್ರವಾಹಗಳ ಬಗೆಗೆ ಇಂದು ಲಭ್ಯವಾಗಿರುವ ಅನೇಕ ವಿಧವಾದ ಸಾಕ್ಷ್ಯಾಧಾರಗಳನ್ನೂ ಕುರಿತು ವಿವರಿಸಿದ್ದಾನೆ. ಡ್ಯೂಟಾಯಿಟ್ ತಾನು ಗುರುತಿಸಿದ ಅನೇಕ ತೆರನಾದ ಹೋಲಿಕೆಗಳನ್ನು 'ನಮ್ಮ ಅಲೆದಾಡುವ ಭೂಖಂಡಗಳು' ಎಂಬ ತನ್ನ ಪುಸ್ತಕದಲ್ಲಿ ಅತಿಸ್ವಾರಸ್ಯವಾಗಿ ನಿರೂಪಿಸಿದ್ದಾನೆ. ಡ್ಯೂಟಾಯಿಟನ ಕನಿಷ್ಠ ಅಂದಾಜಿನ ಪ್ರಕಾರ ಮೂಲತಃ ದಕ್ಷಿಣ ಅಮೆರಿಕ ಮತ್ತು ಆಫ್ರಿಕ ತೀರಗಳು ಕೇವಲ 40 ಕಿಮೀ ಅಂತರದಲ್ಲಿದ್ದುವು. 1961ರಲ್ಲಿ ಎಚ್.ಮಾರ್ಟಿನ್ ಎಂಬಾತ ಡ್ಯೂಟಾಯಿಟ್ಟನ ಅಭಿಪ್ರಾಯಗಳನ್ನು ಪುನಃ ಪರಿಶೀಲಿಸಿದ. ಸೈಲೂರಿಯನ್ ಯುಗದಿಂದ




ಚಿತ್ರ 4 ಅಲೆಗ್ಸಾಂಡರ್ ಡ್ಯೂಟಾಯಿಟ್ ನಿರೂಪಿಸಿದ ಗೊಂಡ್ವಾನ ಭೂಖಂಡಗಳ ಚಿತ್ರ. ಇದರಲ್ಲಿ ಪರ್ಮೋಕಾರ್ಬಾನಿಫೆರಸ್ ಹಿಮ ಪ್ರವಾಹಗಳ ವಿತರಣೆಯನ್ನು ತೋರಿಸಿದೆ. ದಕ್ಷಿಣ ಅಮೆರಿಕವನ್ನು ದಪ್ಪರೇಖೆಯಿಂದ ತೋರಿಸಲಾಗಿದ್ದು, ವಿರುದ್ಧ ತೀರಗಳ ಸಮಾಂತರವನ್ನು ಉಳಿಸಿಕೊಳ್ಳಲಾಗಿದೆ.

ಹಿಡಿದು ಕ್ರಿಟೇಷಸ್ ಯುಗದ ವರೆಗೂ ಪದರ ಶಿಲೆಗಳು ಮತ್ತು ಇನ್ನೂ ಅನೇಕ ವಿಧವಾದ ಅಗ್ನಿಶಿಲೆಗಳಲ್ಲಿ ಕ್ರಮವಾಗಿ ಹೋಲಿಕೆಗಳು ಸ್ಪಷ್ಟಗೊಳ್ಳುತ್ತ ಹೋಗಿರುವುದನ್ನು

ಗಮನಿಸಿದ. (ಇತ್ತೀಚೆಗೆ ಕ್ಯಾಲಿಫೋರ್ನಿಯ ಇನ್ಸ್‌ಟಿಟ್ಯೂಟಿನ ಭೂವಿಜ್ಞಾನ ಇಲಾಖೆಯ ಗಿಲ್ಬರ್ಟ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಭೂವಿಜ್ಞಾನ ಇಲಾಖೆಯ ಹ್ಯಾಲಮ್ ಎಂಬವರು ಗಣಕಯಂತ್ರಗಳ ನೆರವಿನಿಂದ 500 ಫ್ಯಾದಂಗಳ ಕೆಳಗೆ ಗೊಂಡ್ವಾನ ಭೂಖಂಡಗಳಲ್ಲಿ ಅತ್ಯಂತ ಸಮರ್ಪಕವಾದ ಜ್ಯಾಮಿತೀಯ ಜೋಡಣೆಗಳಿರುವುದನ್ನು ಕಂಡುಹಿಡಿದಿದ್ದಾರೆ.)

**ನೀರ್ಗಲ್ಲು ನಿಕ್ಷೇಪಗಳು:** ಗೊಂಡ್ವಾನ ಭೂಖಂಡಗಳ ಅಸ್ತಿತ್ವದ ಬಗೆಗೆ ಲಭ್ಯವಾಗಿರುವ ಅನೇಕ ಸಾಕ್ಷ್ಯಾಧಾರಗಳ ಪೈಕಿ ಅವುಗಳಲ್ಲಿ ಕಂಡುಬರುವ ನೀರ್ಗಲ್ಲು ನಿಕ್ಷೇಪಗಳು ಬಹು ಮುಖ್ಯವಾಗಿವೆ. ಭೌಗೋಳಿಕವಾಗಿ ಈ ಭೂಖಂಡಗಳು ಪರಸ್ಪರ ದೂರ ದೂರದಲ್ಲಿದ್ದರೂ ಅವುಗಳೆಲ್ಲೆಲ್ಲ ಒಂದೇ ವಿಧವಾದ ನೀರ್ಗಲ್ಲು ನಿಕ್ಷೇಪಗಳಿವೆ. ಆದ್ದರಿಂದ ಈ ಭೂಭಾಗಗಳೆಲ್ಲವೂ ಹಿಂದೆ ಒಂದು ಬೃಹತ್ ಭೂಖಂಡವೊಂದರಲ್ಲಿ ಅಡಕವಾಗಿದ್ದು ಕಾಲಕ್ರಮದಲ್ಲಿ ಪ್ರತ್ಯೇಕಗೊಂಡು ದೂರದೂರಕ್ಕೆ ಸರಿದಿರಬೇಕೆಂಬ ತೀರ್ಮಾನಕ್ಕೆ ಬರಲಾಗಿದೆ. ಪ್ರಾಚೀನ ಜೀವಿಯುಗದ ಕೊನೆಯಲ್ಲಿ ದಕ್ಷಿಣ ಅಮೆರಿಕ, ಆಫ್ರಿಕ, ಫಾಕ್ ದ್ವೀಪಗಳು, ಭಾರತ, ಆಸ್ಟ್ರೇಲಿಯ ಮತ್ತು ಆಫ್ರಿಕದ ನೈಋತ್ಯ ಭಾಗಗಳಲ್ಲಿ ಆದ ನೀರ್ಗಲ್ಲಿನ ನಿಕ್ಷೇಪಗಳು ಅತಿದಪ್ಪವಾಗಿವೆ. ಒಮ್ಮೆ ಅಲ್ಲಿದ್ದ ಹಿಮದ ಹಾಳೆಗಳೆಲ್ಲವೂ ಇಂದು ಕಣ್ಮರೆಯಾಗಿವೆ.

**ಪ್ರಾಚೀನ ಉಪ್ಪು ನಿಕ್ಷೇಪಗಳು ಮತ್ತು ಹವಳಗಳು :** ಸಮುದ್ರದ ನೀರು ಆವಿಯಾಗುವುದರ ಮೂಲಕ ಕೆಲವು ಕಡೆಗಳಲ್ಲಿ ಉಪ್ಪು ಮತ್ತು ಜಿಪ್ಸಂ ಮುಂತಾದ ಲವಣಗಳ ನಿಕ್ಷೇಪಗಳಾಗಿವೆ. ಇದರಿಂದ ಆ ಪ್ರದೇಶಗಳಲ್ಲಿ ಹಿಂದೆ ಉಷ್ಣಪೂರಿತ ಮತ್ತು ಶುಷ್ಕವಾತಾವರಣ ಇದ್ದುದು ಸ್ಪಷ್ಟವಾಗುತ್ತದೆ. ಇಂದಿನ ಉಷ್ಣ ಮತ್ತು ಶುಷ್ಕ ವಲಯಗಳು ಸಮಭಾಜಕವೃತ್ತಕ್ಕೆ ಸುಮಾರು $23^{O}/30^{1}$ ಉತ್ತರಕ್ಕೂ ದಕ್ಷಿಣಕ್ಕೂ ಕೇಂದ್ರೀಕೃತವಾಗಿವೆ. ಉತ್ತರಾರ್ಧಗೋಲದಲ್ಲಿದ್ದ ಉಪ್ಪಿನ ವಲಯಗಳು ಆರ್ಡೋವಿಸಿಯನ್ ಮತ್ತು ಸೈಲೂರಿಯನ್ ಯುಗಗಳಲ್ಲಿ ಮೇರುಗಳ ಸಮೀಪದಿಂದ ಮರುಭೂಮಿಯಿರುವ ವಲಯಗಳಿಗೆ ಸ್ಥಳಾಂತರಗೊಂಡಿರುವುದು ಕಂಡುಬಂದಿದೆ. ಮೇರುಗಳ ಮತ್ತು ಭೂಖಂಡಗಳ ಸಾಪೇಕ್ಷ ಚಲನೆಗಳನ್ನು ಇಂದಿನ ಪರಿಸ್ಥಿತಿಗಳೊಂದಿಗೆ ಹೊಂದಿಸಲು ಇದರಿಂದ ಸಾಧ್ಯವಾಗುತ್ತದೆ. ಭೌಗೋಳಿಕವಾಗಿ ಬದಲಾದ ಹವಾಗುಣಗಳಿಗೆ ಹವಳಗಳು ಸೂಚಕವಾಗಿವೆ. ಇಂದು ಅವು ಬೆಚ್ಚನೆಯ, ಉಷ್ಣತೆ $25^{O}$ ಸೆಂ.ಗೆ ಕಡಿಮೆಯಿಲ್ಲದ, ಶುದ್ಧವಾದ ಸಮುದ್ರದ ನೀರಿಗೆ ಮಾತ್ರ ಸೀಮಿತಗೊಂಡಿವೆ; ಅಂದರೆ ಸಮಭಾಜಕವೃತ್ತದ ಸುಮಾರು $23^{O}$ $30^{1}$ ಉತ್ತರ ಮತ್ತು ದಕ್ಷಿಣಕ್ಕೆ ದಿಬ್ಬಗಳನ್ನು ರಚಿಸುವ ಈ ಸೂಕ್ಷ್ಮಜೀವಿಗಳು ಮಧ್ಯಜೀವಿಯುಗದ ತಮ್ಮ ಹಂಚಿಕೆಯ ಅರ್ಧದಷ್ಟನ್ನು ಕೂಡ ಇಂದು ಸಮೀಪಿಸಲಾಗಿಲ್ಲವೆಂಬುದು ಅವುಗಳ ಬಗೆಗೆ ನಡೆಸಿದ ಅಧ್ಯಯನದಿಂದ ಕಂಡುಬರುತ್ತದೆ.

**ಸಸ್ಯಗಳು ಮತ್ತು ಉರಗಗಳು :** ಗೊಂಡ್ವಾನದಿಂದ ಹಿಮದ ಹಾಳೆಗಳು ಕಣ್ಮರೆಯಾದ ಸ್ವಲ್ಪಕಾಲದಲ್ಲೇ ನೆಲದ ಮೇಲೆ ಪ್ರಪ್ರಥಮವಾಗಿ ಸಸ್ಯಗಳ ಗುಂಪೊಂದು ಕಾಣಿಸಿಕೊಂಡಿತು. ಈ ಸಸ್ಯವರ್ಗಕ್ಕೆ ಗ್ಲಾಸಾಪ್ಟರಿಸ್ ಎಂದು ಹೆಸರು. ಇದು ಗೊಂಡ್ವಾನದ ಎಲ್ಲ ಖಂಡಗಳಲ್ಲಿಯೂ ಪತ್ತೆಯಾಗಿದೆ. ಅಲ್ಲದೆ ಇದನ್ನು ಸುಮಾರು 60 ವರ್ಷಗಳ ಹಿಂದೆಯೇ ದಕ್ಷಿಣ ಮೇರುವಿನಿಂದ ಸು. 480 ಕಿಮೀ. ದೂರದಲ್ಲಿದ್ದ ಕಲ್ಲಿದ್ದಲು ನಿಕ್ಷೇಪಗಳಲ್ಲಿ ಸ್ಕಾಟ್ ಮತ್ತು ಅವನ ಸಂಗಡಿಗರು ಪತ್ತೆಮಾಡಿದ್ದರು. ಈ ಸಸ್ಯಗಳು ವಿಶಾಲವಾದ ಜಲಭಾಗಗಳಿಂದ ಪ್ರತ್ಯೇಕಿಸಲ್ಪಟ್ಟಿದ್ದರೂ ಅವು ಎಲ್ಲ ವಿಧದಲ್ಲಿ ಒಂದೇ ರೀತಿಯಲ್ಲಿದ್ದು ಭೂಖಂಡಗಳ ಅಲೆತವನ್ನು ಸಮರ್ಥಿಸುವ ಪ್ರಬಲ ಸಾಕ್ಷ್ಯಗಳಾಗಿವೆ. ಗ್ಲಾಸಾಪ್ಟರಿಸ್ ಹಂಚಿಕೆಯಾಗಿರುವ ವಿವಿಧ ಭೂಭಾಗಗಳೆಲ್ಲವೂ ಹಿಂದೆ ಒಂದೇ ಒಂದು ಬೃಹತ್ ಭೂಖಂಡವೊಂದರಲ್ಲಿ ಅಡಕವಾಗಿದ್ದು ಕ್ರಮೇಣ ಆ ಭಾಗಗಳು ಪ್ರತ್ಯೇಕಗೊಂಡು ದೂರದೂರಕ್ಕೆ ಸರಿದುವು. ಇದರಿಂದ ಅವುಗಳ ವಿತರಣೆಯನ್ನು ಸುಲಭವಾಗಿ ವಿವರಿಸಬಹುದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಮಧ್ಯಜೀವಿಯುಗವನ್ನು ಉರಗಗಳ ಯುಗವೆಂದು ಕೂಡ ಕರೆದಿದ್ದಾರೆ. ಈ ಕಲ್ಪದಲ್ಲಿ ಅಸ್ತಿತ್ವದಲ್ಲಿದ್ದ ಗೊಂಡ್ವಾನ ಭೂಖಂಡದ ಬಗ್ಗೆ ಲಭ್ಯವಾಗಿರುವ ಅನೇಕ ವಿಧವಾದ ಸಾಕ್ಷ್ಯಾಧಾರಗಳ ಪೈಕಿ ಉರಗಗಳು ಅತಿ ಮುಖ್ಯವಾದವು. ಫಾನ್ ಹೂಯೆನ್ ಎಂಬ ವಿಜ್ಞಾನಿಯ ಅಭಿಪ್ರಾಯದಲ್ಲಿ ಭಾರತದಲ್ಲಿ ಜೀವಿಸಿದ್ದ ಡೈನೋಸಾರಸುಗಳಿಗೂ ಮಡಗಾಸ್ಕರ್, ಬ್ರಜಿಲ್, ಉರುಗ್ವೆ ಮತ್ತು ಆರ್ಜೆಂಟೀನದಲ್ಲಿ ಜೀವಿಸುತ್ತಿದ್ದ ಡೈನೋಸಾರಸುಗಳಿಗೂ ಅತಿ ನಿಕಟವಾದ ಸಂಬಂಧಗಳಿವೆ. ನೀರಿನಲ್ಲೇ ಜೀವಿಸುತ್ತ ಮೀನುಗಳನ್ನು ತಿನ್ನುತ್ತಿದ್ದ ಮೀಸೋಸಾರಸ್ ಎಂಬ ಸಣ್ಣ ಉರಗದ ಅವಶೇಷಗಳು ದಕ್ಷಿಣ ಅಮೆರಿಕ ಮತ್ತು ಆಫ್ರಿಕದ ಸರೋವರ ಸಂಚಯನಗಳಲ್ಲಿ ಪತ್ತೆಯಾಗಿವೆ. ಈ ಸ್ಥಳಗಳ ಹೊರತಾಗಿ ಬೇರೆಲ್ಲೂ ಇಂಥ ಅವಶೇಷಗಳು ಪತ್ತೆಯಾಗಿಲ್ಲದಿರುವುದು ಒಂದು ವಿಶೇಷದ ಸಂಗತಿ. ಈ ಮೀಸೋಸಾರಸ್ ಅಟ್ಲಾಂಟಿಕ್ ಸಾಗರದಂಥ ವಿಶಾಲವಾದ ಜಲಭಾಗವನ್ನು ಈಜಿಹೋಗಿರಬಹುದಾದ ಸಾಧ್ಯತೆಗಳು ತೀರ ಕಡಿಮೆಯೆಂದೂ ದಕ್ಷಿಣ ಅಮೆರಿಕ ಮತ್ತು ಆಫ್ರಿಕಗಳು ಹಿಂದೆ ಒಂದಾಗಿಯೇ ಇದ್ದುದಕ್ಕೆ ಈ ಮೀಸೋಸಾರಸ್ಸೇ ಸಾಕ್ಷಿಯೆಂದೂ ವಿಜ್ಞಾನಿಗಳ ಅಭಿಪ್ರಾಯ. ಇದಷ್ಟೇ ಅಲ್ಲದೆ ಥೀಲೋಡಾಂಟ್ ಎಂಬ ಮತ್ಸ್ಯದ ಅವಶೇಷಗಳು ಕೆಲವು ಸೈಲೂರಿಯನ್ ಮತ್ತು ಡಿವೋನಿಯನ್ (ಸು. 425–390 ಮಿಲಿಯನ್ ವರ್ಷಗಳ ಹಿಂದೆ) ಶಿಲೆಗಳಲ್ಲಿ ಸಿಕ್ಕಿವೆ. ಭೂಖಂಡಗಳ ಅಲೆತವನ್ನು ಕುರಿತು ಅಧ್ಯಯನ ನಡೆಸುತ್ತಿರುವ ಭೂವಿಜ್ಞಾನಿಗಳಿಗೆ ಸಿಕ್ಕಿರುವ ಅತಿ ಹಿಂದಿನ ಕೆಲವು ಮತ್ಸ್ಯಗಳು ಅಲೆತದ ಕಾಲದ ಬಗ್ಗೆಯೂ ಸುಳುವು ನೀಡಿವೆ.

**ಗೊಂಡ್ವಾನ ಶಿಲೆಗಳು :** ಭಾರತದ ಜಲಜ ಶಿಲೆಗಳಿಗೂ ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸ್, ಕ್ವೀನ್ಸ್‌ಲೆಂಡ್ ಮತ್ತು ಟಾಸ್ಮೇನಿಯದ ಜಲಜಶಿಲೆಗಳಿಗೂ ನಡುವೆ ಸ್ಪಷ್ಟವಾದ ಹೋಲಿಕೆಗಳಿವೆ. ಇವುಗಳ ಪೈಕಿ ಪೆಂಟೆಶಿಲೆ, ಮರಳುಶಿಲೆ ಮತ್ತು ಅನೇಕ ವಿಧವಾದ ಸುಣ್ಣಶಿಲೆಗಳಿವೆ. ಇದಲ್ಲದೆ ಲೆಪಿಡೋಡೆಂಡ್ರಾನ್, ಸಿಜಿಲೇರಿಯ ಮುಂತಾದ ಸಸ್ಯಾವಶೇಷಗಳೂ ಅನೇಕ ವಿಧದ ಅಕಶೇರುಕಗಳೂ ಅಲ್ಲಿ ದೊರೆತಿವೆ. ಆಸ್ಟ್ರೇಲಿಯದ ಕಲ್ಲಿದ್ದಲು ನಿಕ್ಷೇಪಗಳಲ್ಲಿ ಭಾರತದ ಬಿಹಾರ್ ಮತ್ತು ಉತ್ತರ ಪ್ರದೇಶಗಳಲ್ಲಿ ಸಿಗುವ ಗಂಗಮಾಪ್ಟರೀಸ್ ಮತ್ತು ಗ್ಲಾಸಾಪ್ಟರಿಸ್ ಸಸ್ಯಾವಶೇಷಗಳು ದೊರೆತಿವೆ. ಆಸ್ಟ್ರೇಲಿಯದಲ್ಲಿ ಸಿಗುವ ಕೇಂಬ್ರಿಯನ್ ಯುಗಕ್ಕೂ ಹಿಂದಿನ ಕಬ್ಬಿಣದ ಅದುರುಗಳು ಭಾರತದ ಸಿಂಗ್‌ಭೂಮ್ ಮತ್ತು ಬಸ್ತಾರ್‌ಗಳಲ್ಲಿ ದೊರಕಿವೆ. ಇವು 2,000–2,200 ಮಿಲಿಯನ್ ವರ್ಷಗಳಿಗೂ ಹಿಂದಿನವು. ಇದಲ್ಲದೆ ಪಶ್ಚಿಮ ಆಸ್ಟ್ರೇಲಿಯದ ಕಾಲ್ಗೂರ್ಲಿಯಲ್ಲಿಯೂ ಭಾರತದ ಕೋಲಾರದಲ್ಲಿಯೂ ಚಿನ್ನದ ನಿಕ್ಷೇಪಗಳುಳ್ಳ ಶಿಲೆಗಳು ಸರಿಸಮವಾಗಿರುವುದು ಕಂಡುಬಂದಿದೆ. ಸು. 2,400 ಮಿಲಿಯನ್ ವರ್ಷಗಳ ಹಿಂದೆ ಈ ಎರಡೂ ಭೂಖಂಡಗಳಲ್ಲಿ ಚಿನ್ನದ ನಿಕ್ಷೇಪಗಳ ರಚನೆಯಾಯಿತೆಂದು ತಿಳಿದುಬಂದಿದೆ. ಅಲೆಗ್ಸಾಂಡರ್ ಡ್ಯೂಟಾಯಿಟ್ ಭಾರತ ಮತ್ತು ಆಫ್ರಿಕ ಖಂಡಗಳ ನಡುವೆ ಹಿಂದೆ ಇದ್ದ ಸಂಪರ್ಕವನ್ನು ಗುರುತಿಸಿದ್ದಾನೆ. ಈ ಎರಡೂ ಭೂಭಾಗಗಳಲ್ಲಿ ಪತ್ತೆಯಾಗಿರುವ ಒಂದೇ ರೀತಿಯ ಜಲಜಶಿಲೆಗಳು ಪಳೆಯುಳಿಕೆಗಳು, ಅಲ್ಲಿಯ ಭೂಚಲನೆಗಳು ಮತ್ತು ಅಗ್ನಿಪರ್ವತಗಳ ಚಟುವಟಿಕೆಗಳು ಅವುಗಳ ನಿಕಟ ಸಂಪರ್ಕಕ್ಕೆ ಸಾಕ್ಷಿಯಾಗಿವೆ.

**ಶಿಲಾಶ್ರೇಣಿ :** ಕೇಂಬ್ರಿಯನ್ ಯುಗಕ್ಕೂ ಮುಂಚಿನ ಶಿಲೆಗಳು ಅತ್ಯಂತ ಕೆಳಗಿವೆ. ಕೆಲವೆಡೆ ನೀರ್ಗಲ್ಲು ಪ್ರವಾಹಕ್ಕೊಳಗಾದ ಗೀರುಗಳುಳ್ಳ ಶಿಲೆಗಳೂ ಇವೆ. ಇವುಗಳ ಮೇಲೆ ನೀರ್ಗಲ್ಲು ಸಂಚಯನಗಳಿವೆ. ಇನ್ನೂ ಮೇಲ್ಭಾಗದಲ್ಲಿ ಭೂಸಂಚಯನಗಳಾದ ಮರಳುಶಿಲೆ, ಜೇಡುಶಿಲೆಗಳು ಕಲ್ಲಿದ್ದಲು ನಿಕ್ಷೇಪಗಳನ್ನೊಳಗೊಂಡಿವೆ. ಇವಕ್ಕೂ ಮೇಲೆ ಮರುಭೂಮಿಯಲ್ಲಿ ರಚಿತವಾದ ಮರಳುಶಿಲೆಗಳು ಕಂಡುಬರುತ್ತವೆ. ಅವುಗಳ ಕೆಳಗೆ ಅಥವಾ ಮಧ್ಯಭಾಗದಲ್ಲಿ ಲಾವಾ ಹರವುಗಳಿವೆ. ಭಾರತದಲ್ಲಿ ಗೊಂಡ್ವಾನ ಗುಂಪಿನ ಶಿಲೆಗಳೆಂದು ಕರೆಯಲಾಗಿರುವ ಈ ಶಿಲಾ ಶ್ರೇಣಿಯ ದಪ್ಪ ಸು. 6100 ಮೀ. ಇದೇ ಮಾದರಿಯ ಶಿಲೆಗಳಿಗೆ ಆಫ್ರಿಕದಲ್ಲಿ ಕಾರೂ ಸಮುದಾಯದ ಶಿಲೆಗಳೆಂದು ಹೆಸರು. ಈ ಶಿಲಾಶ್ರೇಣಿಯ ದಪ್ಪ ಸು. 10,660 ಮೀ. ಮಡಗಾಸ್ಕರಿನ ಕೆಲವು ಶಿಲೆಗಳು, ಪೂರ್ವ ಆಫ್ರಿಕದ ಶಿಲೆಗಳು ಮತ್ತು ಗುಜರಾತಿನ ಕಚ್ ಶಿಲೆಗಳು ಇವುಗಳ ನಡುವೆ ಹೋಲಿಕೆಗಳಿವೆ. ಇದಲ್ಲದೆ ಒಂದು ಕಡೆ ಕೀನ್ಯ ಮತ್ತು ಮಡಗಾಸ್ಕರಿಗೂ ನಡುವೆ ಮತ್ತೊಂದು ಕಡೆ ಮಡಗಾಸ್ಕರ್ ಮತ್ತು ಕಚ್‌ಗೂ ನಡುವೆ ಹಿಂದೆ ಒಂದು ನಿರ್ದಿಷ್ಟವಾದ ಸಮುದ್ರ ಸಂಪರ್ಕವಿದ್ದುದಕ್ಕೆ ಸಾಕ್ಷ್ಯ ದೊರೆತಿದೆ. ಇಲ್ಲಿಯೂ ಅನೇಕ ವಿಧವಾದ ಅಕಶೇರುಕಗಳು ದೊರೆತಿವೆ. ಆಫ್ರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳಲ್ಲಿ ದೊರೆಯುವ ಜಲಜ ಶಿಲೆಗಳು ಆಳವಲ್ಲದ ನೀರಿನ ಸಂಚಯನಗಳಾಗಿವೆ. ಈ ಶಿಲೆಗಳು ಮತ್ತು ಅವುಗಳ ಫಾಸಿಲುಗಳಲ್ಲಿ ಒಂದೇ ರೀತಿಯ ಹೋಲಿಕೆಗಳಿವೆ: ಇಲ್ಲಿಯ ಪಳೆಯುಳಿಕೆ ಕಲ್ಲಿದ್ದಲು ನಿಕ್ಷೇಪಗಳಲ್ಲಿ ಸಿಗುವ ಗ್ಲಾಸಾಪ್ಟರಿಸ್ ಸಸ್ಯಾವಶೇಷಗಳು ಈ ಭೂಖಂಡಗಳಿಗಿದ್ದ ಹಿಂದಿನ ಸಂಪರ್ಕಗಳಿಗೆ ಸಾಕ್ಷಿಯೆನಿಸಿವೆ. (ಮೂಲತಃ ಈ ಭೂಖಂಡಗಳ ತೀರಗಳ ಅಂತರ ಸುಮಾರು 40 ಕಿಮೀ. ಗಳಷ್ಟಿದ್ದಿರಬೇಕೆಂದು ಡ್ಯೂಟಾಯಿಟ್ ಒಂದು ಕನಿಷ್ಠ ಅಂದಾಜು ಮಾಡಿದ್ದಾನೆ.) ಹಿಮದ ಹಾಳೆಗಳು ಆಫ್ರಿಕದಿಂದ ದಕ್ಷಿಣ ಅಮೆರಿಕದ ಕಡೆಗೆ ಚಲಿಸಿರುವುದನ್ನು ತೋರುವ ಅನೇಕ ಕುರುಹುಗಳು ಕಂಡುಬಂದಿವೆ. ದಕ್ಷಿಣ ಅಮೆರಿಕದ ಬ್ರಜಿಲಿನ ಉಬ್ಬು ಭಾಗದೊಂದಿಗೆ ಪಶ್ಚಿಮ ಆಫ್ರಿಕದ ಗಿನಿಕಂದರ ಒಂದೇ ಕಾಗದದ ಎರಡು ಸಿಕ್ಕಾಪಟ್ಟೆ ಕತ್ತರಿಸಿದ ಭಾಗಗಳು ಪರಸ್ಪರ ಸೇರುವಂತೆ ಕೂಡಿಕೊಳ್ಳುತ್ತವೆ.

ಅಂಟಾರ್ಕ್‌ಟಿಕ ಇಂದು ಒಂದು ನಿರ್ಜೀವ ಭೂಖಂಡವೆನ್ನಬಹುದು. ಹಲವಾರು ವರ್ಷಗಳಿಂದಲೂ ಇದು ಅಗಾಧವಾದ ಹಿಮದ ಹೊದಿಕೆಯಿಂದ ಮುಚ್ಚಿಹೋಗಿದೆ. ಸುಮಾರು ನೂರು ವರ್ಷಗಳಿಂದೀಚೆಗೆ ಇಲ್ಲಿ ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸುತ್ತ ಬರಲಾಗಿದೆ. ಅಂಟಾರ್ಕ್‌ಟಿಕದಲ್ಲಿ ಕೆಲವು ಕಲ್ಲಿದ್ದಲು ನಿಕ್ಷೇಪಗಳಿವೆ. ಅದರಲ್ಲಿ ಭಾರತದ ಗೊಂಡ್ವಾನ ಕಲ್ಲಿದ್ದಲು ನಿಕ್ಷೇಪಗಳಲ್ಲಿ ಸಿಗುವಂಥ ಗ್ಲಾಸಾಪ್ಟ ರೀಸ್ ಸಸ್ಯಾವಶೇಷಗಳು ಸಿಕ್ಕಿವೆ. ಅಲ್ಲದೆ ಅನೇಕ ವಿಧವಾದ ಅಕಶೇರುಕಗಳೂ ದೊರೆತಿವೆ. ಶಿಲೆಗಳ ಪೈಕಿ ಪೆಂಟೆಶಿಲೆ, ಜೇಡುಶಿಲೆ ಮತ್ತು ಸುಣ್ಣಶಿಲೆಗಳು ಮುಖ್ಯವಾಗಿವೆ. ಇದರಿಂದ ಅಂಟಾರ್ಕ್‌ಟಿಕ ಹಿಂದೆ ಇನ್ನೂ ಉತ್ತರಕ್ಕಿದ್ದು ಅಂದರೆ ಜೀವಿಗಳ ಬದುಕಿಗೆ ಅನುಕೂಲವಾಗಿದ್ದ ಅಕ್ಷಾಂಶಗಳಲ್ಲಿದ್ದು ಕ್ರಮೇಣ ಇಂದಿನ ಸ್ಥಾನಕ್ಕೆ ಬಂದು ನಿಂತಿರಬೇಕೆಂದು ತರ್ಕಿಸಲಾಗಿದೆ. ಓಹಾಯೊ

ಸ್ಟೇಟ್ ವಿಜ್ಞಾನಿಗಳ ತಂಡವೊಂದು ದಕ್ಷಿಣ ಮೇರುವಿಗೆ ಸು. 500 ಕಿಮೀ ದೂರದಲ್ಲಿ 200 ಮಿಲಿಯನ್ ವರ್ಷಗಳ ಹಿಂದೆ ಜೀವಿಸಿದ್ದ ಟ್ರೈಯಾಸಿಕ್ ಕಾಲದ ಲಿಸ್ಟ್ರೋಸಾರಸ್ ಎಂಬ ದ್ವಿಚರ ಜೀವಿಯ ತಲೆಬುರುಡೆಯನ್ನು ಪತ್ತೆಮಾಡಿತು. ಹಿಂದೆ ಈ ಪ್ರಾಣಿ ದಕ್ಷಿಣ ಅಮೆರಿಕ ಮತ್ತು ಏಷ್ಯದ ಕೆಲವು ಭಾಗಗಳಲ್ಲಿ ಜೀವಿಸಿತ್ತೆಂದು ತಿಳಿದುಬಂದಿದೆ. ಭೂವಿಜ್ಞಾನಿಗಳ ಅಭಿಪ್ರಾಯದಲ್ಲಿ ಇದೊಂದು ಸೂಚಿ ಪಳೆಯುಳಿಕೆ (ಇಂಡೆಕ್ಸ್ ಫಾಸಿಲ್). ಇದು ದೊರೆತ ನಿವೇಶನದಲ್ಲಿಯೇ ಇನ್ನೂ ಅನೇಕ ಬಗೆಯ ಪ್ರಾಣಿಗಳ ಅವಶೇಷಗಳೂ ದೊರೆತವು.

**ಪ್ರಾಕ್ಕಾಂತತ್ವ (ಪೇಲಿಯೋ ಮ್ಯಾಗ್ನೆಟಿಸಂ) :** ಸು. 1950ರಿಂದೀಚೆಗೆ ಕಾಂತತ್ವದ ಬಗ್ಗೆ ಬ್ಲ್ಯಾಕೆಟ್ ಮತ್ತು ರಂಕಾರ್ನ್ ಮುಂತಾದವರು ವಿಶೇಷವಾಗಿ ಅಧ್ಯಯನ ನಡೆಸಿದ್ದಾರೆ. ಭೂಖಂಡಗಳ ಅಲೆತದ ಸಮಸ್ಯೆಗೆ ಇದರಿಂದ ಪರಿಹಾರ ಸೂಚಿಸಲು ಸಾಧ್ಯವಾಗಿದೆ. ಇಂದು ಪ್ರಪಂಚದಲ್ಲಿ ಹಂಚಿಕೆಯಾಗಿರುವ ಕಬ್ಬಿಣದ ನಿಕ್ಷೇಪಗಳಿಂದ ಹಿಂದಿನ ಕಾಂತಧ್ರುವಗಳಿದ್ದ ಸ್ಥಾನಗಳನ್ನು ನಿರ್ಧರಿಸಬಹುದು. ಇಂದಿನ ಕಾಂತಧ್ರುವಗಳ ಸ್ಥಾನಗಳಿಂದ ಅವುಗಳ ಹಿಂದಿನ ಸ್ಥಾನಗಳನ್ನು ಅರಿಯಲು ಸಾಧ್ಯವೆನಿಸಿದೆ. ಮೇರುಗಳೇ ಭ್ರಮಣಗೊಂಡುದರಿಂದ ಸಮಭಾಜಕ ವೃತ್ತದ ವಲಯಗಳಲ್ಲಿ ಬದಲಾವಣೆಯುಂಟಾಯಿತು. ಅಲ್ಲದೆ ಪ್ರಪಂಚದ ವಿವಿಧ ಭಾಗಗಳ ಹವಾಗುಣಗಳಲ್ಲಿ ಗಣನೀಯವಾದ ಬದಲಾವಣೆಗಳಾದುವು. ಭೂ ಇತಿಹಾಸವನ್ನು ಅರಿಯಲು ಪ್ರಾಚೀನ ಪಳೆಯುಳಿಕೆಗಳು ಸಹಕಾರಿಯಾಗಿವೆ. ಭೂಮಿಯ ಕಾಂತತ್ವದ ಇತಿಹಾಸವನ್ನು ತಿಳಿಯಲು ಕಾಂತತ್ವವಿರುವ ಪಳೆಯುಳಿಕೆಗಳು ಸಹಾಯಕಗಳು. ಸ್ತರಗಳಲ್ಲಿ ಅಡಗಿರುವ ಕಬ್ಬಿಣದ ಖನಿಜಗಳು ಮತ್ತು ಅವು ಘನೀಕರಿಸಿದ ಕಾಲ ಮತ್ತು ಪರಿಸ್ಥಿತಿಗಳನ್ನು ಈ ಪಳೆಯುಳಿಕೆಗಳು ಸೂಚಿಸುತ್ತವೆ. ಡೆಕ್ಕನ್ ಪ್ರಸ್ಥಭೂಮಿಯ ಲಾವಾಹರವುಗಳ ಪ್ರಾಕ್ಕಾಂತತ್ವದ ಅಧ್ಯಯನದಿಂದ ಕೆಲವು ಅಂಶಗಳು ತಿಳಿದುವು. ಸುಲಭವಾಗಿ ಹೋಲಿಸಲು ಮುಂಬಯಿ ಅಕ್ಷಾಂಶವನ್ನು ಆಧಾರವಾಗಿ ಇಟ್ಟುಕೊಂಡರೆ ಕ್ರಿಟೇಷಸ್ ಯುಗದ ಅಂತ್ಯದಿಂದ ಇಯೋಸೀನ್ ಯುಗದ ಪ್ರಾರಂಭದವರೆಗೂ ಭಾರತ 37° ದಕ್ಷಿಣದಿಂದ 13° ದಕ್ಷಿಣಕ್ಕೆ ಲಾವಾ ಹರವುಗಳ ರಚನೆಯ ಕಾಲದಲ್ಲಿ ಉತ್ತರಾಭಿಮುಖವಾಗಿ ಚಲಿಸಿತೆಂದು ತಿಳಿದು ಬಂದಿದೆ. ಕ್ರಿಟೇಷಸ್ ಯುಗದ ಅಂತ್ಯದಿಂದ ಭಾರತ ಉತ್ತರಕ್ಕೆ ಚಲಿಸಿ ಮುಂಬಯಿಯನ್ನು ಅದರ ಇಂದಿನ ಅಕ್ಷಾಂಶ 19° ಉತ್ತರಕ್ಕೆ ತಂದು ನಿಲ್ಲಿಸಿದೆ. ಅಂದರೆ ಅದು ತನ್ನ ಸ್ಥಾನದಲ್ಲಿ ಸುಮಾರು 56°ಗಳಷ್ಟು ಪಲ್ಲಟಗೊಂಡಿತು. ಅಂದರೆ 70 ಮಿಲಿಯನ್ ವರ್ಷಗಳ ಅವಧಿಯಲ್ಲಿ ಒಂದು ವರ್ಷಕ್ಕೆ ಸರಾಸರಿ 7 ಸೆಂಮೀ. ಗಳಷ್ಟು ಚಲಿಸಿದಂತಾಯಿತು. (ಮೂಲತಃ ಭಾರತ ಇಂದಿನ ಅಂಟಾರ್ಕ್‍ಟಿಕಕ್ಕೆ ಲಗತ್ತಾಗಿದ್ದು ಕ್ರಮೇಣ ಉತ್ತರಕ್ಕೆ ಚಲಿಸಲಾರಂಭಿಸಿತು.)

1967ರಲ್ಲಿ ಬ್ರಜಿಲಿನ ಪುರಾತನ ಶಿಲೆಗಳಲ್ಲಿ ಪ್ರಮುಖ ಸ್ತರಭಂಗವೊಂದನ್ನು ಗುರುತಿಸಲಾಯಿತು. ಅದರ ಜಾಡು ಆಫ್ರಿಕದ ನೈಋತ್ಯ ತೀರದವರೆಗೂ ಮುಂದುವರಿದಿದ್ದುದು ವಿಜ್ಞಾನಿಗಳ ಗಮನಕ್ಕೆ ಬಂದಿತು. ಇದರಿಂದ ಆಫ್ರಿಕದ ಮತ್ತು ದಕ್ಷಿಣ ಅಮೆರಿಕದ ನಡುವೆ ಹಿಂದೆ ಇದ್ದ ನಿಕಟ ಸಂಪರ್ಕದ ಬಗೆಗೆ ವಿಜ್ಞಾನಿಗಳು ತಳೆದಿದ್ದ ಅಭಿಪ್ರಾಯಗಳಿಗೆ ಪುಷ್ಟಿ ದೊರೆತಂತಾಯಿತು.

ಭೂಖಂಡಗಳ ಅಲೆತವನ್ನು ಕುರಿತು ವ್ಯಕ್ತಪಡಿಸಲಾಗಿರುವ ಅಭಿಪ್ರಾಯಗಳು ಎಷ್ಟೇ ಸಮರ್ಪಕವಾಗಿ ಕಂಡುಬಂದರೂ ವೆಗ್‍ನರ್ ವಿವರಿಸಿದಂತೆ ಇಡೀ ಪಾಂಗೀ ಒಡೆದು ಅದರಿಂದ ಭೂಖಂಡಗಳ ಪ್ರತ್ಯೇಕಗೊಳ್ಳುವಿಕೆ ಹಾಗೂ ಅವುಗಳ ಅಲೆತಗಳಿಗೆ ಪ್ರೇರಕವಾದ ಶಕ್ತಿ ಯಾವುದು ಎಂಬುದೇ ಅತಿ ಮುಖ್ಯವಾದ ಪ್ರಶ್ನೆ.

ಇಲ್ಲಿ ಒಂದೆರಡು ಸಾಧ್ಯತೆಗಳನ್ನು ಪರಿಶೀಲಿಸಬಹುದು. ಭೂಗರ್ಭದಲ್ಲಿ ಅಗಾಧವಾದ ಉಷ್ಣ ಇರುವುದು ತಿಳಿದಿದೆ. ಇದರಿಂದ ಅಲ್ಲಿಯ ಘನವಸ್ತುಗಳು ಕೂಡ ಕರಗಿ ನೀರಾಗುತ್ತವೆ. ಇದಕ್ಕೆ ಶಿಲಾರಸವೆಂದು ಹೆಸರು. ಈ ಶಿಲಾರಸದಲ್ಲಿ ಉತ್ಪತ್ತಿಯಾದ ಉಷ್ಣೋದಕ ಪ್ರವಾಹಗಳು ಮತ್ತು ಅಲೆಗಳ ಸೆಳೆತಗಳು ಪಾಂಗೀಯನ್ನು ಬಿರಿದು ಅದರ ಭಾಗಗಳು ದೂರ ದೂರಕ್ಕೆ ಸರಿಯುವಂತೆ ಮಾಡುವ ಪ್ರೇರಕ ಶಕ್ತಿಯಾಯಿತೆಂದು ಜಾನ್ ಜಾಲಿ ಎಂಬ ವಿಜ್ಞಾನಿ ಅಭಿಪ್ರಾಯಪಡುತ್ತಾನೆ. ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ವಿಜ್ಞಾನಿ ಹ್ಯಾರಿ ಹೆಸ್ ಎಂಬಾತ ಹೀಗೆ ಅಭಿಪ್ರಾಯಪಟ್ಟಿದ್ದಾನೆ. ಭೂಮಿಯ ಕವಚ ನಿಜಕ್ಕೂ ಒಂದು ವಿದ್ಯುತ್ ವಿಸರಣ ವ್ಯವಸ್ಥೆಯಂತಿದೆ. ಈ ಭೂಗರ್ಭದಲ್ಲಿ ವಿಕಿರಣಪಟು ಧಾತುಗಳಿಂದ ಉತ್ಪತ್ತಿಯಾಗುವ ಅಪಾರ ಉಷ್ಣ ಅಲ್ಲಿರುವ ಘನವಸ್ತುಗಳನ್ನು ಕರಗಿಸಿ ದ್ರವರೂಪಕ್ಕೆ ಪರಿವರ್ತಿಸುತ್ತದೆ. ಈ ದ್ರವವಸ್ತುವಾದ ಮ್ಯಾಗ್ಮ ಅಲ್ಲಿಂದ ನಿಧಾನವಾಗಿ ಮೇಲೇರುತ್ತ ಅದಕ್ಕಿಂತಲೂ ಸ್ವಲ್ಪ ಕಡಿಮೆ ದ್ರವರೂಪದ ಭೂಕವಚದ ಮೂಲಕ ಉಕ್ಕಿ ಹೊರಬರುತ್ತದೆ. ಇದರಿಂದ ಸಾಗರಮಧ್ಯದ ಏಣುಗಳಿಗೆ ಹರಿದುಬರುವ ಲಾವಗಳಲ್ಲಿ ಕಾದ ನೀರಿನ ವಲಯಗಳು ಉತ್ಪತ್ತಿಯಾಗುತ್ತವೆ. ಚಲಿಸುವ ಶಿಲಾಗೋಳ ಅದರ ಮಡ್ಡಿಗಳ ಸಮೇತ ಭೂಮಿಯೊಳಕ್ಕೆ ಕುಸಿದು ಭಾರಿ ಪ್ರಮಾಣದ ಕಂದಕಗಳನ್ನು ನಿರ್ಮಿಸುತ್ತದೆ. ಅಂಥ ಕಂದಕಗಳು ತೀರಗಳಿಗೆ ಅತಿದೂರದಲ್ಲಿರುತ್ತವೆ. ಹೆಸ್‍ನ ಪ್ರಕಾರ ಇಡೀ ಸಾಗರದ ತಳವೇ ಒಂದು ದೈತ್ಯಾಕಾರದ ಸಾಗುಪಟ್ಟಿಯಂತೆ (ಕನ್ವೇಯರ್ ಬೆಲ್ಟ್) ಚಲಿಸುತ್ತ ತಳಭಾಗದಿಂದ ದೊಡ್ಡ ದೊಡ್ಡ ಭೂಭಾಗಗಳನ್ನು ಮೇಲಕ್ಕೆತ್ತುತ್ತ ದೂರದೂರಕ್ಕೆ ಚದರಿಸಿತು. ಕೇಂಬ್ರಿಜ್ ವಿಶ್ವವಿದ್ಯಾಲಯದ ಎಫ್.ಜೆ.ವೈನ್ ಎಂಬಾತ ಸಾಗರ ಮಧ್ಯದ ಏಣುಗಳ ಲಾವ ಹರವುಗಳಿಂದ ಕಬ್ಬಿಣದ ಖನಿಜಗಳನ್ನು ಸಂಗ್ರಹಿಸಿ ಲಾವ ಘನೀಕರಿಸುವಾಗ ಇದ್ದ ಭೂಕಾಂತಕ್ಷೇತ್ರವನ್ನು ಅವುಗಳಿಂದ ನಿರ್ಧರಿಸಲು ಯತ್ನಿಸಿದ. ಪಟ್ಟಿಯಾಕಾರದ ಸಮುದ್ರತಳಗಳು ಅನುಕ್ರಮವಾಗಿ ಏಣುಗಳಿಂದ ಚದರುತ್ತ ಹೋಗಿರುವುದು ಕಂಡುಬಂದಿತು. ಇದನ್ನು ಪರೀಕ್ಷಿಸಲು ಭೂಕಂಪವಿಜ್ಞಾನಿಗಳು ಕೂಡಲೇ ಕೆಲವು ಪ್ರಯೋಗಗಳನ್ನು ನಡೆಸಿದರು. ಅದರಿಂದ ಸಮುದ್ರದ ಏಣುಗಳಿಂದ ಮೇಲೇರುವುದೂ ಮತ್ತೆ ಪುನಃ ಕಲ್ಲಿನ ಭಾರಿ ಕಂದಕಗಳ ಮೂಲಕ ಕುಸಿಯುವುದೂ ಕಂಡುಬಂದಿತು. ಇತರ ಕಡೆಗಿಂತಲೂ ಈ ಸ್ಥಳದಲ್ಲೇ ಅಧಿಕವಾಗಿ ಭೂಕಂಪನಗಳಾಗುವುದೇ ಇದಕ್ಕೆ ಕಾರಣವೆಂದು ತರ್ಕಿಸಿದರು. ಅವರ ಶೋಧನೆಗಳು ಈ ವಾದವನ್ನು ಸಮರ್ಥಿಸಿದವು. ಗ್ಲೋಮರ್ ಚಾಲೆಂಜರ್ ಎಂಬ ಅಮೆರಿಕದ ನೌಕೆ ಸಮುದ್ರದ ತಳದಲ್ಲಿ ಸು. 135 ರಂಧ್ರಗಳನ್ನು ಕೊರೆದು ಮಣ್ಣು, ಕಲ್ಲುಗಳ ಮಾದರಿಗಳನ್ನು ಸಂಗ್ರಹಿಸಿತು. ಸಾಗರಮಧ್ಯದ ಏಣುಗಳಿಂದ ದೂರ ದೂರಕ್ಕೆ ಕೊರೆದುಕೊಂಡು ಹೋದಂತೆಲ್ಲ ಅತಿ ಪ್ರಾಚೀನ ಶಿಲೆಗಳ ಮಾದರಿಗಳು ಕಂಡುಬಂದವು. ಭೂಭೌತವಿಜ್ಞಾನಿಗಳ ಪ್ರಕಾರ ಶಿಲಾಗೋಳದ ಸಾಗುಪಟ್ಟಿ ವ್ಯವಸ್ಥೆಯಲ್ಲಿ ಆರು ಪ್ರತ್ಯೇಕವಾದ ಫಲಕಗಳಿದ್ದು ಅವು ಭೂಕವಚದ ಮೇಲೆ ಚಲಿಸುತ್ತವೆ. ಅವು ಪರಸ್ಪರ ಒಂದನ್ನೊಂದು ಸಂಘರ್ಷಿಸಿದಾಗ ಪರ್ವತಗಳನ್ನು ನಿರ್ಮಿಸಬಲ್ಲವು.

ಇವಿಷ್ಟು ಭೂಖಂಡಗಳ ಅಲೆತವನ್ನು ಕುರಿತು ವ್ಯಕ್ತಪಡಿಸಲಾಗಿರುವ ಅಭಿಪ್ರಾಯಗಳ ಸಾರಾಂಶ. ಇಂದಿಗೂ ಖಂಡಗಳು ವರ್ಷಕ್ಕೆ ಸರಾಸರಿ ಎರಡು ಅಂಗುಲಗಳಂತೆ ಅಲೆಯುತ್ತಲೇ ಇವೆ. ಮತ್ತು ಅವುಗಳ ಚಲನೆ ಕಡಿಮೆಯಾಗುವ ಚಿಹ್ನೆಗಳೇ ಇಲ್ಲವೆಂಬುದಾಗಿ ಭೂವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. (ಎಂ.ಎಸ್.ಪಿ.)

**ಖಂಡಗಳು ಮತ್ತು ಖಂಡರೂಪಣೆ :** ಭೂಗೋಳದ ಹೊರಚಿಪ್ಪಿನ ಉಬ್ಬಾದ ಭಾಗವೇ ಭೂಖಂಡ (ಕಾಂಟಿನೆಂಟ್). ಇದು ಸಹಸ್ರಾರು ಮಿಲಿಯನ್ ಚದರ ಕಿಲೋಮೀಟರುಗಳಷ್ಟು ವಿಶಾಲವಾಗಿದ್ದು ತೀರದ ಸಮುದ್ರ ಮಟ್ಟದಿಂದ ಸಾಕಷ್ಟು ಎತ್ತರವನ್ನೂ ಮುಟ್ಟಿರುತ್ತದೆ. ಸಮೀಪದಲ್ಲಿರುವ ದ್ವೀಪಗಳನ್ನೂ ಖಂಡದ ಭಾಗಗಳೆಂದೇ ಪರಿಗಣಿಸಬೇಕು. ಉದಾಹರಣೆಗೆ ಶ್ರೀಲಂಕ. ಗ್ರೀನ್‍ಲೆಂಡ್ ಮತ್ತು ಬ್ರಿಟಿಷ್ ದ್ವೀಪಗಳು ಅವುಗಳಿಗೆ ಸಮೀಪದಲ್ಲಿರುವ ಖಂಡಗಳಿಗೆ ಸೇರಿದ ಪ್ರದೇಶಗಳು. ಭೂವಿಜ್ಞಾನದ ದೃಷ್ಟಿಯಲ್ಲಿ ಹೇಳುವುದಾದರೆ ಆರು ಪ್ರಮುಖ ಭೂಖಂಡಗಳಿವೆ. ಯೂರೇಷಿಯ, ಆಫ್ರಿಕ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಮತ್ತು ಅಂಟಾರ್ಕ್‍ಟಿಕ. ಭಾರತ ಯೂರೇಷಿಯ ಖಂಡದ ಒಂದು ಭಾಗ. ಭೂಖಂಡ ಮತ್ತು ಅದರ ಪಕ್ಕದಲ್ಲಿರುವ ಸಾಗರ ಇವುಗಳ ಗಡಿರೇಖೆ ಖಂಡದ ತೀರದಿಂದ ಸಮುದ್ರದತ್ತ ಬಹುದೂರದ ವರೆಗೆ ಒಮ್ಮೊಮ್ಮೆ ನೂರಾರು ಕಿಮೀಗಳ ದೂರದಲ್ಲಿರುತ್ತವೆ. ಸಮುದ್ರದಲ್ಲಿ ವ್ಯಾಪಿಸಿರುವ ಖಂಡದ ಇಳಿಜಾರಾದ ಚಾಚುಪ್ರದೇಶ ಹಠಾತ್ತನೆ ಬಹು ಆಳಕ್ಕೆ ಸರಿಯುವ ಪ್ರದೇಶವೇ ಗಡಿರೇಖೆ. ಈ ಆಳ ಒಂದೇ ಸಮವಾಗಿರದೆ ಕೆಲವು ಕಡೆ ಹತ್ತಾರು ಫ್ಯಾದಂಗಳಷ್ಟು (1 ಫ್ಯಾದಂ–20') ಮತ್ತೆ ಹಲವೆಡೆ ನೂರಾರು ಫ್ಯಾದಂಗಳಷ್ಟಿರುವುದು ಕಂಡುಬಂದಿವೆ.

ಎಲ್ಲ ಭೂಖಂಡಗಳಲ್ಲೂ ಸರಿಸುಮಾರಾಗಿ ಒಂದೇ ಬಗೆಯ ವಿನ್ಯಾಸವನ್ನು ಗುರುತಿಸಲು ಸಾಧ್ಯವೆನಿಸಿದ್ದರೂ ಅವುಗಳ ಲಕ್ಷಣಗಳಲ್ಲಿ ಹಲವಾರು ವೈವಿಧ್ಯಗಳನ್ನು ಕಾಣಬಹುದು. ಪ್ರತಿ ಖಂಡಭಾಗದಲ್ಲೂ ಪ್ರೀ ಕೇಂಬ್ರಿಯನ್ ಶಿಲೆಗಳಿಂದಾದ ಅಡಿಪಾಯ ಉಂಟು. ಈ ಅಡಿಪಾಯದ ಶಿಲಾಸಮೂಹದಲ್ಲಿ ರೂಪಾಂತರ ಹೊಂದಿದ ಜಲಜ ಹಾಗೂ ಜ್ವಾಲಾಮುಖಿಜ ಶಿಲೆಗಳು ಪ್ರಧಾನವೆನಿಸಿದ್ದರೂ ಹಲವಾರು ಅಗ್ನಿಶಿಲೆಗಳನ್ನು, ಅದರಲ್ಲೂ ಮುಖ್ಯವಾಗಿ ಗ್ರ್ಯಾನೈಟನ್ನು, ಗುರುತಿಸಬಹುದು. ಮೊದಲಿಗೆ ಈ ಅಂತಸ್ಥ ಶಿಲೆಗಳು ನೆಲಮಟ್ಟದಿಂದ ಆಳದಲ್ಲಿ ರೂಪುಗೊಂಡಿದ್ದು ಕ್ರಮೇಣ ಅವನ್ನು ಮುಚ್ಚಿ ಮರೆಮಾಡಿದ್ದ ಭೂಕವಚದ ಸವೆತದಿಂದ ನಮಗೀಗ ಗೋಚರವಾಗಿವೆ. ತದನಂತರ ಹಲವಾರು ಪ್ರದೇಶಗಳಲ್ಲಿ ಇವುಗಳ ಮೇಲೆ, ಒಮ್ಮೊಮ್ಮೆ ಸವೆದ ಗ್ರ್ಯಾನೈಟುಗಳ ಮೇಲೆ, ಪೇಲಿಯೋಜ಼ೋಯಿಕ್ ಮತ್ತು ಮೀಸೋಜ಼ೋಯಿಕ್ ಯುಗಗಳ ಸಮುದ್ರೀಯ ಸುಣ್ಣಶಿಲೆ, ಜೇಡುಶಿಲೆ ಹಾಗೂ ಮರುಳುಶಿಲೆಗಳ ಸ್ತರ ಶ್ರೇಣಿಗಳು ನಿಕ್ಷೇಪಗೊಂಡವು. ಹೀಗಿದ್ದೂ ಪ್ರತಿಭೂಖಂಡದಲ್ಲೂ ಯಾವುದಾದರೊಂದು ಪ್ರದೇಶದಲ್ಲಿ ಅಡಿಪಾಯದ ಶಿಲೆಗಳನ್ನು ವೀಕ್ಷಿಸಲು ಸಾಧ್ಯವಾಗಿದೆ. ಭಾರತದ ಅದರಲ್ಲೂ ಕರ್ನಾಟಕ ರಾಜ್ಯದ ಆರ್ಕೀಯನ್ ಶಿಲಾಸ್ತೋಮ ಮತ್ತು ಉತ್ತರ ಅಮೆರಿಕದ ಕೆನೆಡಿಯನ್ ಶಾಶ್ವತ ಭೂಖಂಡಕ್ಕೆ ಸೇರಿದ ಆರ್ಕೀಯನ್ ಶಿಲಾಸ್ತೋಮಗಳು ಇದಕ್ಕೆ ಅತ್ಯುತ್ತಮ ಉದಾಹರಣೆಗಳು. ಕೆಲವು ಪ್ರದೇಶಗಳಲ್ಲಿ ಈ ಹಿಂದೆ ತಿಳಿಸಿರುವಂತೆ ಜಲಜಶಿಲೆಗಳ ಪ್ರಸ್ತರಗಳಿಂದಾದ ಪ್ರಸ್ಥಭೂಮಿಗಳಿಂದ ಇವು ಮುಚ್ಚಿಹೋಗಿವೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಮಿಸಿಸಿಪಿ ನದಿ ಹರಿಯುವ ವಿಶಾಲ ತಗ್ಗುಪ್ರದೇಶ ಈ ಬಗೆಯದು. ಅನೇಕ ಭೂಖಂಡಗಳಲ್ಲಿ ಮಟ್ಟಸವಾದ ಜಲಜಶಿಲಾಸ್ತರಗಳು ಭೂಚಟುವಟಿಕೆಗಳಿಗೆ ಒಳಗಾಗಿ ವಿಪರೀತವಾಗಿ ಮಡಿಕೆಬಿದ್ದು ಬೃಹತ್ ಪರ್ವತ ಸ್ತೋಮಗಳಿಗೆ ಕಾರಣವೆನಿಸಿವೆ. ಈ ಪರ್ವತಶ್ರೇಣಿಗಳಲ್ಲಿ ಹಲವಾರು ಕಡೆ ಸ್ತರಭಂಗಗಳನ್ನು ಗುರುತಿಸಲಾಗಿದ್ದು ಅಲ್ಲೆಲ್ಲ ಶಿಲಾಸ್ತರಗಳು ಮೇಲಕ್ಕೂ ಕೆಳಕ್ಕೂ ಜಾರಿವೆ.

ಪ್ರತಿ ಖಂಡದ ಅಡಿಯಲ್ಲೂ ಕಡಿಮೆ ಸಾಂದ್ರತೆಯ ಗ್ರ್ಯಾನೈಟುಗಳೇ ಅಧಿಕವಾಗಿರುವುದನ್ನು ಭೂಕಂಪನಗಳ ಪ್ರಸಾರದಿಂದ ಗುರುತಿಸಲಾಗಿದೆ. ಸಾಗರ ಭಾಗಗಳಲ್ಲಿ ಈ ಕಂಪನಗಳ ಪ್ರಸಾರ ಹೆಚ್ಚು ವೇಗವಾಗಿರುವ ಕಾರಣ ಅವುಗಳ ಅಡಿಯಲ್ಲಿ ಹೆಚ್ಚು ಸಾಂದ್ರತೆಯಿಂದ ಕೂಡಿದ ಬೆಸಾಲ್ಟ್ ಶಿಲೆ ಇರುವುದೆಂದು ಭಾವಿಸಲಾಗಿದೆ. ಅಲ್ಲದೆ ಖಂಡಭಾಗದ ಗ್ರ್ಯಾನೈಟ್ ಹೊರಚಿಪ್ಪು ಸಾಗರಭಾಗದ ಹೊರಚಿಪ್ಪಿಗಿಂತ ಹೆಚ್ಚು ಮಂದವಾಗಿದೆಯೆಂದೂ ನಿರ್ಧರಿಸಲಾಗಿದೆ.

ಸು. 4,000,000,000 ವರ್ಷಗಳ ಹಿಂದೆ ಜನಿಸಿರಬಹುದಾದ ಭೂಗ್ರಹ ಹಲವಾರು ಭೌತ ಹಾಗೂ ರಾಸಾಯನಿಕ ಕ್ರಿಯೆಗಳಿಗೆ ಒಳಗಾಗುವುದರ ಮೂಲಕ ತಿರುಳು, ಹೊದಿಕೆ, ಚಿಪ್ಪು, ಜಲ ಹಾಗೂ ವಾಯುಮಂಡಲಗಳಾಗಿ ರೂಪುಗೊಂಡ ಕಾಲದಲ್ಲೇ ಭೂಖಂಡಗಳು ನಿರ್ದಿಷ್ಟ ರೂಪವನ್ನು ತಳೆದವು. ಆಗ ತಳೆದ ರೂಪ ಭೂಕಾಲಮಾನದುದ್ದಕ್ಕೂ ಏಕರೀತಿಯಾಗಿರಲಿಲ್ಲ. ಈ ಖಂಡರೂಪಣೆ ಕೆಲವು ಭೂಯುಗಗಳಲ್ಲಿ ತೀವ್ರಗತಿಯಲ್ಲೂ ಮತ್ತೆ ಕೆಲವು ವೇಳೆ ಬಹು ಮಂದಗತಿಯಲ್ಲೂ ಉಂಟಾದ ದಾಖಲೆಗಳಿವೆ. ಪ್ರಸಕ್ತ ದೊರೆತಿರುವ ದಾಖಲೆಗಳ ಆಧಾರದ ಮೇಲೆ ಸು. 2,700,000,000 ವರ್ಷಗಳ ಹಿಂದೆಯೇ ಖಂಡಗಳು ಸಾಕಷ್ಟು ದೊಡ್ಡವಾಗಿದ್ದವು. ಇವುಗಳ ರೂಪಣೆಗೆ ಸಂಬಂಧಿಸಿದಂತೆ ಸುಮಾರು ಆರು ಪ್ರಧಾನ ಘಟ್ಟಗಳನ್ನು ಊಹಿಸಲಾಗಿದೆ. ಇವುಗಳಿಗೆಲ್ಲ ವಿಕಿರಣಪಟುತ್ವದಿಂದ (ರೇಡಿಯೊ ಆಕ್ಟಿವಿಟಿ) ಉಂಟಾಗುವ ಉಷ್ಣದ ಶೇಖರಣೆ ಆ ಮೂಲಕ ಉಂಟಾಗುವ ಪೂರ್ಣವಾದ ಅಥವಾ ಭಾಗಶಃ ತಲೆದೋರುವ ಭೂತಿರುಳು ಹಾಗೂ ಹೊದಿಕೆಯ ದ್ರವೀಕರಣ ಇವೇ ಮೂಲ. ಆಳದಲ್ಲಿ ಹೀಗೆ ಜನಿಸಿದ ಮ್ಯಾಗ್ಮ ಅಥವಾ ಮಾತೃಶಿಲಾದ್ರವ ಮೇಲ್ಭಾಗಕ್ಕೆ ಪ್ರವಹಿಸುವುದು ಸ್ವಾಭಾವಿಕ. ಪ್ರವಹಿಸುವಾಗ ಅದರಲ್ಲಿ ಉಂಟಾಗುವ ಭೌತ ಹಾಗೂ ರಾಸಾಯನಿಕ ಬದಲಾವಣೆಗಳ ಕಾರಣ ಸಂಯೋಜನೆಯಲ್ಲೂ ಸಾಕಷ್ಟು ಬದಲಾವಣೆಗಳುಂಟಾಗಿ ವಿವಿಧ ಶಿಲೆಗಳ ಉತ್ಪತ್ತಿಯನ್ನು ಕಾಣಬಹುದು. ಒಮ್ಮೊಮ್ಮೆ ಸಾಕಷ್ಟು ಒತ್ತಡವಿದ್ದು ಅನುಕೂಲಕರವಾದ ಸನ್ನಿವೇಶದಲ್ಲಿ ಮ್ಯಾಗ್ಮ ಹೊರಚಿಪ್ಪಿನ ದ್ವಾರಗಳ ಮೂಲಕ ಹೊರಚಿಮ್ಮಿ ಪ್ರವಹಿಸುತ್ತದೆ. ಆಳದಿಂದ ಮೇಲುಮೇಲಕ್ಕೆ ಏರುತ್ತಿರುವಾಗ ಮ್ಯಾಗ್ಮ ಹಾಗೂ ಅದರ ಅಕ್ಕಪಕ್ಕದಲ್ಲಿರುವ ಮತ್ತು ಅದರ ಉಷ್ಣದಿಂದಲೇ ಕರಗಿ ಮೆತ್ತಗಾದ ಭೂಭಾಗಗಳು, ಮುಖ್ಯವಾಗಿ ಶಿಲೆಗಳು, ಕೋಶ ಸ್ವರೂಪಗಳನ್ನು ತಳೆದು ನೆಲಮಟ್ಟವನ್ನು ಮುಟ್ಟಿ ಅಲ್ಲಿದ್ದ ಖಂಡಭಾಗಗಳನ್ನೂ ಸಾಗರ ಭಾಗಗಳನ್ನೂ ತಮ್ಮೊಡನೆ ಬೇರೆಡೆಗೆ ಒಯ್ಯುತ್ತವೆ. ಗ್ರಾನಿಟಿಕ್ ಸಂಯೋಜನೆಯಿಂದ ಕೂಡಿದ ಮ್ಯಾಗ್ಮಗಳು ಹೊರಬರುವ ಭೂಭಾಗಗಳು ಅಂಕುಡೊಂಕಾಗಿರುವುವಲ್ಲದೆ ಮಂದವಾದ ಜಲಜಶಿಲಾಶ್ರೇಣಿಗಳಿಂದಾದ ಅಸ್ಥಿರ ಪ್ರದೇಶಗಳಾಗಿವೆ. ಇವೇ ಭೂ ಅಭಿನತಿಗಳು (ಜಿಯೋಸಿಂಕ್ಲೈನ್ಸ್). ಭೂಖಂಡಗಳಲ್ಲಿ ಈ ಬಗೆಯ ಹಲವಾರು ಬೃಹತ್ ಇಳುಕಲುಗಳಿದ್ದು ಅವನ್ನು ಅಗ್ನಿಶಿಲೆಗಳೂ ಅವುಗಳಿಗೆ ಸಂಬಂಧಿಸಿದ ರೂಪಾಂತರ ಕ್ರಿಯೆಗಳೂ ಬೆಸೆದಿರುವುದುಂಟು. ಇದೇ ರೀತಿ ಸಾಗರ ತಳದಲ್ಲಿರುವ ಏಣುಗಳು (ರಿಡ್ಜಸ್) ಮತ್ತು ದಿಬ್ಬಗಳ (ರೈಸಸ್) ಮೂಲಕ ಬೆಸಾಲ್ಟಿಕ್ ಮ್ಯಾಗ್ಮ ಹೊರಬಂದು ಎರಡೂ ಕಡೆಯೂ ಹರಡುತ್ತ ಹೋಗುತ್ತದೆ. ಅಲ್ಲದೆ ಈ ಬೆಸಾಲ್ಟಿಕ್ ಶಿಲಾಪ್ರವಾಹ ಭೂ ಖಂಡಗಳ ಹೊರ ಅಂಚುಗಳಲ್ಲಿ ಮತ್ತು ದ್ವೀಪಸ್ತೋಮಗಳ ಇಳುಕಲುಗಳಲ್ಲಿ ಕುಸಿಯುತ್ತದೆ. ಹೀಗಾಗುವುದರಿಂದ ಖಂಡಗಳ ಬೆಳವಣಿಗೆ ಹಾಗೂ ಅಲೆತಗಳುಂಟಾಗುತ್ತವೆ.

ಖಂಡಗಳು ಭೂಗೋಳದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ಮೂರರಲ್ಲಿ ಒಂದರಷ್ಟು ಮತ್ತು ಒಟ್ಟು ದ್ರವ್ಯರಾಶಿಯಲ್ಲಿ 0.3ಕ್ಕಿಂತ ಕಡಿಮೆಯಷ್ಟು ಎಂದು ನಿರ್ಧರಿಸಲಾಗಿದೆ. ಕೆಲವು ಭೂಶಕ್ತಿಗಳ ಪ್ರಭಾವದಿಂದ ಹಲವೆಡೆ ಮಟ್ಟಸವಾಗಿ ಹರಡಿದ್ದ ಜಲಜಶಿಲಾಸ್ತರಗಳು ಸವೆದು ಅಡಿಯಲ್ಲಿದ್ದ ಶಿಲೆ ಗೋಚರವಾಗಿದೆ. ಹೀಗೆ ಹೊರಗೆ ಕಂಡಿರುವ ಶಿಲೆಯಲ್ಲಿ ಬಹುಭಾಗ ಅಂದರೆ ನೂರಕ್ಕೆ 30ರಿಂದ 90ರಷ್ಟು ಗ್ರ್ಯಾನಿಟಿಕ್ ಸಂಯೋಜನೆಯನ್ನು ತಳೆದಿರುತ್ತದೆ. ಈ ಸಂಯೋಜನೆಯನ್ನೇ ಕಡೆಯ ಪಕ್ಷ 12ರಿಂದ 15 ಕಿಮೀ. ಆಳದವರೆಗೂ ಗುರುತಿಸಲು ಸಾಧ್ಯವಾಗಿದೆ. ಆದರೂ ಅನೇಕ ಭೂಖಂಡಗಳು ಕಾಲುಭಾಗದಿಂದ ಅರ್ಧಭಾಗದ ವರೆಗೆ ವಿವಿಧ ಜಲಜಶಿಲೆಗಳು ಹಾಗೂ ಮಣ್ಣಿನ ಹೊರಗವಚದಿಂದ ಕೂಡಿರುತ್ತವೆ. ಹಲವು ಪ್ರದೇಶಗಳಲ್ಲಿ ಹೀಗಿರದೆ ಸು. $2\times10^5$ ಚದರ ಕಿಮೀ ಗಾತ್ರದ ಬೃಹತ್ ಭೂಭಾಗಗಳ ಕ್ವಾರ್ಟ್ಸೈಟ್, ಬೆಸಾಲ್ಟ್, ಕಾರ್ಬೋನೇಟ್ ಶಿಲೆ, ಅನಾರ್ಥಸೈಟ್ ಹೀಗೆ ನಾನಾ ರೀತಿಯ ಶಿಲೆಗಳಿಂದ ಕೂಡಿದ್ದು ಅವುಗಳ ಪರಸ್ಪರ ಸಂಬಂಧಗಳನ್ನು ವಿವರಿಸುವುದಂತೂ ಬಹು ಕ್ಲಿಷ್ಟ.

ಖಂಡಗಳ 12–15 ಕಿಮೀ ಆಳದ ಭಾಗಗಳಲ್ಲಿ ಮಧ್ಯವರ್ತಿ ಹಾಗೂ ಬೆಸಾಲ್ಟಿಕ್ ಸಂಯೋಜನೆಯ ವಿವಿಧ ಶಿಲೆಗಳಿದ್ದು ಅವುಗಳ ಸಾಂದ್ರತೆ ಗ್ರ್ಯಾನೈಟಿಗಿಂತ ಅಧಿಕವಾಗಿದೆ ಎಂದು ಊಹೆ. ಭೂಕಂಪನಗಳ ಪ್ರಸಾರ ಹಾಗೂ ಶಿಲೆಗಳ ಪುಟಿತತೆಯ ಗುಣಗಳನ್ನು ಕುರಿತ ಪ್ರಯೋಗಗಳೇ ಇದಕ್ಕೆ ಆಧಾರ. ಭೂಭಾಗದಲ್ಲಿರುವ ವಿವಿಧ ಶಿಲೆಗಳನ್ನೂ ಅವು ಹರಡಿರುವ ರೀತಿಯನ್ನೂ ಹೀಗೆ (ಚಿತ್ರ 1 ರಲ್ಲಿ ತೋರಿಸಿರುವಂತೆ) ಕಲ್ಪಿಸಿಕೊಂಡಿದ್ದಾರೆ. ಭೂಖಂಡಗಳ ಹೊರ ಚಿಪ್ಪಿನ ತಳ ಬಹುಮಟ್ಟಿಗೆ ರೂಪಾಂತರಿತ ಬೆಸಾಲ್ಟಿನಿಂದಾದುದೆಂದು ಊಹಿಸಿದ್ದರೂ ಅದರೊಡನೆ ಅಗ್ನಿ ಶಿಲೆಗಳೂ ಇತರ ರೂಪಾಂತರಿತ ಶಿಲೆಗಳೂ ಇರಲು ಸಾಧ್ಯ.

ಹೊರಚಾಚಿರುವ ಖಂಡಗಳೂ 2,000 ಮೀಟರುಗಳಿಗಿಂತ ಕಡಿಮೆ ಆಳದ ಜಲಭಾಗದಿಂದ ಆವೃತವಾಗಿರುವ ಭೂಚಿಪ್ಪಿನ ಮಂದವೂ ಏಕರೀತಿಯಾಗಿರದೆ 20–60 ಕಿಮೀಗಳ ವರೆಗಿರುವುದಾದರೂ ಅದರ ಸರಾಸರಿ ಮಂದ ಸು. 35ಕಿಮೀಗಳೆಂದು ಧಾರಾಳವಾಗಿ ಹೇಳಬಹುದು. ಈ ಮಂದ ಸಹಜವಾಗಿ ಆ ಭೂಪ್ರದೇಶದ ಮೇಲ್ಮೈ ಲಕ್ಷಣದಲ್ಲಿ ಪ್ರತಿಬಿಂಬಿತವಾಗಿರುವುದನ್ನು ಕಾಣಲು ಸಾಧ್ಯ. ಖಂಡಪ್ರದೇಶಗಳ ಭೂಅಭಿನತಿಗಳ ಹಾಗೂ ಭೂಮಧ್ಯ ಸಮುದ್ರಗಳ ಚಿಪ್ಪು ಸಾಮಾನ್ಯವಾಗಿ ತೆಳುವಾಗಿರುತ್ತದೆ. ಅಲ್ಲದೆ ವಯಸ್ಸಿನಲ್ಲಿ ಕಿರಿಯವೆನಿಸಿದ ಪರ್ವತಶ್ರೇಣಿಗಳಾದ ಹಿಮಾಲಯ, ಸಿಯೆರ ನೆವ್ಯಾಡ ಮತ್ತು ಆಂಡೀಸ್ ಮುಂತಾದವು ತಮ್ಮ ತಳಗಳನ್ನು (ಬೇರುಗಳನ್ನು) ಭೂಗೋಳದ ಬಹು ಆಳದವರೆಗೆ ಅಂದರೆ ಹೊದಿಕೆಯ (ಮ್ಯಾಂಟಲ್) ತನಕವೂ ಮುಟ್ಟಿಸಿವೆ.



ಚಿತ್ರ 1 ಭೂಮಿಯ ಚಿಪ್ಪಿನ ನೇರಕೊಯ್ತ

ಭೂಮಿಯ ಆಳದಲ್ಲಿ ಪುಟಿತತ್ವ ತರಂಗಗಳ ಪ್ರವಾಹವೇಗ ಹಠಾತ್ತನೆ ಏರುಪೇರುಗಳನ್ನು ತೋರುತ್ತದೆ. ಈ ಆಧಾರದ ಮೇಲೆ ಚಿಪ್ಪಿನ (ಕ್ರಸ್ಟ್) ತಳವನ್ನು ಗುರುತಿಸಬಹುದು. ಇದನ್ನು ಮೊತ್ತಮೊದಲು ಖ್ಯಾತ ಭೂಭೌತವಿಜ್ಞಾನಿ ಮೋಹೋರೊವಿಚಿಕ್ ಗುರುತಿಸಿದ. ಹೀಗಾಗಿ ಈ ಸೀಮಾರೇಖೆಯನ್ನು ಮೋಹೋವಿಚ್ಛಿನ್ನತೆ ಅಥವಾ ಮೋಹೋರೇಖೆ ಅಥವಾ ಮೋಹೋ ಎಂದು ಹೆಸರಿಸಿದ್ದಾರೆ. ಈ ರೇಖೆಯ ಮೇಲ್ಭಾಗದಲ್ಲಿ (ಅಂದರೆ ಚಿಪ್ಪಿನ ವಲಯದಲ್ಲಿ) $V_t$ ರೇಖಾಂಶದ ಮತ್ತು $V_S$ (ತುಯ್ತುದ) ತರಂಗ ಪ್ರವಾಹವೇಗ ಅನುಕ್ರಮವಾಗಿ ಪ್ರತಿ ಸೆಕೆಂಡಿಗೆ 7 ಮತ್ತು 3.5 ಕಿಮೀ. ಗಳಿದ್ದು ತಳಭಾಗದಲ್ಲಿ ಅಂದರೆ ಹೊದಿಕೆಯ ಪ್ರದೇಶದಲ್ಲಿ 8 ಮತ್ತು 4.5 ಕಿಮೀ.ಗಳಷ್ಟಿರುತ್ತದೆ. ಹೀಗೆ ಪ್ರವಾಹವೇಗ ಹಠಾತ್ತನೆ ಹೆಚ್ಚುವುದರ ಆಧಾರದ ಮೇಲೆ ಹೊದಿಕೆಯ ವಲಯದ ವಸ್ತು ಹೆಚ್ಚು ಭಾರವಾಗಿದ್ದು ಅಲ್ಲಿ ಮೆಗ್ನೀಷಿಯಂ ಸಿಲಿಕೇಟುಗಳಿಂದಾದ ಶಿಲೆಗಳಿವೆ ಎಂದು ಊಹಿಸಿದ್ದಾರೆ. ಈ ಬಗೆಯ ಅತಿಮ್ಯಾಫಿಕ್ (ಅಲ್ಟ್ರಾಮ್ಯಾಫಿಕ್) ಶಿಲೆಗಳಲ್ಲಿ ಪೆರಿಡೊಟೈಟುಗಳು ಹೇರಳವಾಗಿದ್ದು ಆ ವಲಯದ ಬಹು ಭಾಗವನ್ನು ಆವರಿಸಿವೆ.

ಭೂಖಂಡಗಳ ಮತ್ತು ಸಾಗರಭಾಗಗಳ ಹೊರ ಚಿಪ್ಪುಗಳ ಹಾಗೂ ಅವುಗಳ ತಳದ ಹೊದಿಕೆಯ ನಡುವಣ ಗಡಿಪ್ರದೇಶ ಕೇವಲ ಭೂಕಂಪವಿಚ್ಛಿನ್ನ ಜಾಡಾಗಿರದೆ ಸಮತೋಲದ ಮಟ್ಟವೂ (ಲೆವೆಲ್ ಆಫ್ ಕಾಂಪೆನ್ಸೇಷನ್) ಆಗಿದೆ. ಹೊದಿಕೆಯ ಮೇಲೆ ಚಿಪ್ಪು ಒಂದು ತೆರನಾದ ಸಮತೋಲ ಸ್ಥಿತಿಯಲ್ಲಿದ್ದು ತೇಲುತ್ತಿರುವ ಹಾಗೆ ಭಾವಿಸಲಾಗಿದೆ–ನೀರಿನಲ್ಲಿ ನೀರ್ಗಲ್ಲಿನ ಛಿದ್ರಗಳು ತೇಲುವಂತೆ. ಚಿಪ್ಪು ಮಂದವಾಗಿರುವೆಡೆ ಅಂದರೆ ಖಂಡಭಾಗಗಳು ಕಡಿಮೆ ಸಾಂದ್ರತೆಯನ್ನುಳ್ಳಲ್ಲಿ (ಸು. 2.65) ಅದು ಗ್ರ್ಯಾನೈಟ್ ಮತ್ತು ಜಲಜಶಿಲಾಸ್ತರಗಳಿಂದ ಕೂಡಿವೆ. ಅಲ್ಲದೆ ಹೆಚ್ಚಿನ ಸವೆತಕ್ಕೂ ಒಳಗಾಗಿದೆ. ಆದರೆ ಸಾಗರಭಾಗಗಳ ಚಿಪ್ಪು ತೆಳುವಾಗಿದ್ದು ಅಧಿಕಸಾಂದ್ರತೆಯ (ಸು. 2.90) ಬೆಸಾಲ್ಟ್ ಮೊದಲಾದ ಶಿಲೆಗಳಿಂದಾಗಿದೆ. ಈ ಬಗೆಯ ಏರು ತಗ್ಗುಗಳು ಸಮತೋಲವನ್ನು ಪರಸ್ಪರ ಏರ್ಪಡಿಸಿಕೊಂಡಿವೆ ಎನ್ನಲೂ ಬಹುದು. ಈ ಸಮತೋಲ ಆಗಾಗ ಏರು ಪೇರಾಗುವುದುಂಟು. ಇದರ ನಿಮಿತ್ತ ತೀವ್ರ ಭೂಚಟುವಟಿಕೆಗಳೂ ತಲೆದೋರಬಹುದು. ಹೀಗಾದ ಸಮಯದಲ್ಲಿ ಅಲ್ಲಿದ್ದ ಪರ್ವತಗಳು ಹಾಗೂ ಪ್ರಸ್ಥಭೂಮಿಗಳು ಮೇಲುಮೇಲಕ್ಕೆ ಏರುವುದರ ಮೂಲಕ ಸಮತೋಲದ ಏರುಪೇರು ಸರಿದೂಗುತ್ತದೆ. ಕೆಲವೆಡೆ ಖಂಡಭಾಗಗಳು

8 ಕಿಮೀ ಎತ್ತರವನ್ನು ಮುಟ್ಟಿರುವುದನ್ನೂ ಕಾಣಲು ಸಾಧ್ಯ. ಈ ಕ್ರಿಯೆಗಳಿಂದ ಖಂಡಗಳು ತಮ್ಮ ಅಡಿಭಾಗಗಳಲ್ಲಿ ಹಾಗೂ ಅಕ್ಕಪಕ್ಕಗಳಲ್ಲಿ ಹೆಚ್ಚು ಹೆಚ್ಚು ಶಿಲಾವಸ್ತುವನ್ನು ಪಡೆಯುವುದರ ಮೂಲಕ ಬೆಳೆಯುತ್ತಿವೆ ಎನ್ನಲಾಗಿದೆ. ಭಾರತದ ಹಿಮಾಲಯ ಶ್ರೇಣಿ ಇದಕ್ಕೆ ಅತ್ಯುತ್ತಮ ಉದಾಹರಣೆ. ಇದರ ಬೆಳವಣಿಗೆಯಿಂದಾಗಿ ಸಮೀಪದ ಗಂಗಾಬಯಲು ಪ್ರದೇಶ ಹಾಗೂ ಅಸ್ಸಾಂ, ಕಾಶ್ಮೀರ ಮುಂತಾದೆಡೆಗಳಲ್ಲಿ ಭೂಕಂಪಗಳು ಆಗಾಗ ತಲೆದೋರುತ್ತಿವೆ.

ಭೂಖಂಡಗಳು ಕಡೆಯಪಕ್ಷ 3.5 ಇಯಾನುಗಳ (1 ಇಯಾನ್–$10^9$ ವರ್ಷಗಳು) ಹಿಂದೆ ರೂಪುಗೊಂಡುವೆಂದು ಭಾವಿಸಲಾಗಿದೆ. ಆ ವೇಳೆಯಲ್ಲಿ ಬಲುಮಟ್ಟಿಗೆ ಇಂದಿನ ಭೂಸ್ವರೂಪ (ನೆಲಜಲಹಂಚಿಕೆ ಇತ್ಯಾದಿ) ಉಂಟಾಯಿತು; ದ್ವೀಪಸ್ತೋಮ ಚಾಪಗಳು, ಸಮುದ್ರ ಇಳುಕಲುಗಳು, ಸಾಗರೀಯ ಚಿಪ್ಪು, ಉಬ್ಬುಗಳು ಹಾಗೂ ಏಣುಗಳೂ ರೂಪುಗೊಂಡವು. ಖಂಡರೂಪಣೆಯಲ್ಲಿ ಇವು ವಿಶಿಷ್ಟ ಪಾತ್ರವನ್ನು ವಹಿಸುವ ಕಾರಣ ಇವನ್ನು ಸ್ಥೂಲವಾಗಿ ವಿವರಿಸಲಾಗಿದೆ.



ಚಿತ್ರ 2 ಭೂಚಿಪ್ಪಿನ ಮುಖ್ಯ ಲಕ್ಷಣಗಳು CN–ಅತ್ಯಂತ ಪುರಾತನ ಖಂಡ ಬೀಜ, S–ಈ ಖಂಡ ಬೀಜದ ಸರಿಧಾವ್ಯ ವಿಸ್ತರಣೆಗಳು, A–ದ್ವೀಪಾಚಾಪಗಳು, RM–0,2 ಇಯಾನ್ ವಯಸ್ಸಿನ ಪರ್ವತಶ್ರೇಣಿಗಳು. FN–ಬಿರಿತದ ಜಾಡುಗಳು

**ಸಾಗರೀಯ ಚಿಪ್ಪು:** ಭೂಗೋಳದ ಅರ್ಧಭಾಗವನ್ನೂ ಮೀರಿಸಿ ವ್ಯಾಪಿಸಿರುವ ಈ ಹೊರಚಿಪ್ಪು ಕೇವಲ 5–7 ಕಿಮೀ ಮಂದವಾಗಿದ್ದು 4,000 ಮೀಟರುಗಳನ್ನು ಮೀರಿದ ನೀರಿನ ಆಳದಲ್ಲಿದೆ. ಇದು ಬಲುಮಟ್ಟಿಗೆ ವಿವಿಧ ರೂಪಾಂತರಗಳಿಗೆ ಒಳಗಾಗಿರುವ ಬೆಸಾಲ್ಟ್ ಮತ್ತು ಕೊಂಚಮಟ್ಟಿಗೆ ಜಲೀಕರಣಗೊಂಡ ಪೆರಿಡೊಟೈಟಿನಿಂದ (ಸರ್ಪೆಂಟೀಸ್) ಆದುದು. ಬೆಸಾಲ್ಟ್ ಮೇಲೆ ಇದಕ್ಕಿಂತ ಕಿರಿಯ ವಯಸ್ಸಿನರಾಡಿ ಹಾಗೂ ಸುಣ್ಣಯುಕ್ತ ನುಸಿಮಣ್ಣು (ಕೆಲ್ಕೇರಿಯಸ್ ಊಸ್ಸ್) ತೆಳುವಾಗಿ ಹರಡಿದೆ. ಈ ಹೊದಿಕೆಯ ಮಂದ ಸು. 1 ಕಿಮೀ. ಹಲವೆಡೆ ಸಮುದ್ರಾಂತರ್ಗತ ಲಾವಾಗಳು ಮತ್ತು ಭಗ್ನಾವಶೇಷಪ್ರವಾಹಗಳು ಹೆಣೆದುಕೊಂಡಿರುವುದನ್ನು ಗುರುತಿಸಲಾಗಿದೆ.

**ಏಣುಗಳು ಮತ್ತು ಉಬ್ಬುಗಳು:** ಇವು ಬಲು ವಿಶಾಲವಾದ ಸಮುದ್ರಾಂತರ್ಗತ ಪರ್ವತಶ್ರೇಣಿಗಳು. ಇವುಗಳಲ್ಲಿ ಅಲ್ಲಲ್ಲೇ ಅಸಂಖ್ಯಾತ ಜ್ವಾಲಾಮುಖಿಗಳಿವೆ. ಭೂಗೋಳವನ್ನೇ ಸುತ್ತುವರಿದಿರುವ ಈ ಶ್ರೇಣಿ ಬಹುಮಟ್ಟಿಗೆ ಸಾಗರಗಳ ಮಧ್ಯಭಾಗದಲ್ಲಿದ್ದು ಸು. 60,000 ಕಿಮೀ ದೂರದ ತನಕ ವ್ಯಾಪಿಸಿದೆ. ಈ ವರ್ಗದ ಪೆಸಿಫಿಕ್ ಸಾಗರದ ಪೂರ್ವಪೆಸಿಫಿಕ್ ಉಬ್ಬು ಕೇಂದ್ರ ಮತ್ತು ಉತ್ತರ ಅಮೆರಿಕದ ಪಶ್ಚಿಮ ಏಣಿನೊಡನೆ ಸೇರಿಕೊಳ್ಳುತ್ತದೆ. ಇದೇ ರೀತಿ ಉತ್ತರ ಅಮೆರಿಕದ ಪಶ್ಚಿಮಭಾಗದ ಬೇಸಿನ್ ಮತ್ತು ರೇಂಜ್ ಪ್ರದೇಶಗಳು ಬಹುಶಃ ಖಂಡದ ತಳಭಾಗದಲ್ಲಿ ಉತ್ತರದತ್ತ ವ್ಯಾಪಿಸಿರುವ ಉಬ್ಬಿನೊಡನೆ ನಿಕಟಸಂಬಂಧವನ್ನು ತಳೆದಿವೆ.

**ದ್ವೀಪಸ್ತೋಮ ಚಾಪಗಳು:** ಇವು ಹಾಗೂ ಕೆಲವು ಭೂಖಂಡ ತೀರಪ್ರದೇಶಗಳು ಸಾಗರಗಳ ಹಾಗೂ ಖಂಡಗಳ ಹೊರಚಿಪ್ಪುಗಳ ಮಧ್ಯವರ್ತಿಲಕ್ಷಣಗಳನ್ನು ತಳೆದಿವೆ. ಜಪಾನಿನ ಉತ್ತರಕ್ಕಿರುವ ಕ್ಯುರೈಲ್ ದ್ವೀಪಸ್ತೋಮ ಹಾಗೂ ಅಲಾಸ್ಕಾದ ನೈರುತ್ಯಕ್ಕಿರುವ ಅಲ್ಯೂಷಿಯನ್ ದ್ವೀಪಸ್ತೋಮಗಳನ್ನು ವಿಶಿಷ್ಟ ರೀತಿಯಲ್ಲಿ ಮಂದಗಟ್ಟಿರುವ ಸಾಗರೀಯ ಚಿಪ್ಪಿನ ಬಿರಿತಗಳಲ್ಲಿರುವ ಜ್ವಾಲಮುಖಿ ಸ್ತೋಮಗಳೆಂದು ಪರಿಗಣಿಸಲಾಗಿದೆ. ಇವುಗಳ ಜಾಡು ಕ್ರಮೇಣ ಭಾಗಶಃ ಅಥವಾ ಪೂರ್ಣ ವಿಕಾಸಗೊಂಡ ದ್ವೀಪಸ್ತೋಮಚಾಪಗಳಾದ ಕಾಮಚಾಟ್ಕಾ ಹಾಗೂ ನೈರುತ್ಯ ಅಲಾಸ್ಕದ ಪೂರ್ವ ಅಲ್ಯೂಷಿಯನ್ನ ಜಾಡುಗಳೊಡನೆ ವಿಲೀನಗೊಳ್ಳುತ್ತದೆ. ಇವು ಹಾಗೂ ಇನ್ನಿತರ ಅರ್ಧಚಂದ್ರಾಕೃತಿಯ ಜ್ವಾಲಾಮುಖಿ ಜಾಡುಗಳು ಭೂಖಂಡಗಳೊಳಗೆ ಅಥವಾ ಅವುಗಳ ಹೊರ ಅಂಚುಗಳಲ್ಲಿರುವ ಕಿರಿಯ ಪರ್ವತಶ್ರೇಣಿಗಳೊಡನೆ ಐಕ್ಯ ಹೊಂದುತ್ತವೆ. ಕೆನಡದ ಕೋಸ್ಟ್ ರೇಂಜ್, ದಕ್ಷಿಣ ಅಮೆರಿಕದ ಆಂಡಿಸ್, ಅಂಟಾರ್ಕ್‌ಟಿಕ, ನ್ಯೂಜೀಲೆಂಡ್, ಆಸ್ಟ್ರೇಲಿಯ, ಇಂಡೋನೇಷ್ಯಗಳ ಪರ್ವತಮಯ ತೀರಪ್ರದೇಶಗಳು ಹಾಗೂ ಭಾರತದ ಹಿಮಾಲಯ ಪರ್ವತಶ್ರೇಣಿಗಳು ಇದಕ್ಕೆ ಉತ್ತಮ ಉದಾಹರಣೆಗಳು.

ಖಂಡಗಳ ಬೆಳವಣಿಗೆಯ ದೃಷ್ಟಿಯಿಂದ ವೀಕ್ಷಿಸುವುದಾದರೆ ದ್ವೀಪಸ್ತೋಮ ಚಾಪಗಳು ವಿಶಿಷ್ಟ ಪ್ರಾಮುಖ್ಯ ಪಡೆದಿದ್ದು ಅವುಗಳ ಬೆಳವಣಿಗೆಯಲ್ಲಿ ಒಂದು ವಿಶಿಷ್ಟ ಹಂತವನ್ನೂ ಸೂಚಿಸುತ್ತವೆ. ಭೂಚಿಪ್ಪಿನೊಡನೆ ಹೋಲಿಸಿದಲ್ಲಿ ಇವು ಮಂದ ಹಾಗೂ ವಯಸ್ಸಿನಲ್ಲಿ ಮಧ್ಯವರ್ತಿಲಕ್ಷಣಗಳನ್ನು ಪಡೆದಿರುವುದೇ ಅಲ್ಲದೆ ಸಾಗರೀಯ ಹಾಗೂ ಭೂಖಂಡಭಾಗಗಳ ಚಿಪ್ಪುಗಳಲ್ಲಿರುವ ಶಿಲೆಗಳಿಂದಲೂ ಕೂಡಿವೆ. ಉದಾಹರಣೆಗೆ ಇವುಗಳಲ್ಲಿರುವ ಆಂಡಿಸೈಟ್ ಹಾಗೂ ಗ್ರೇವಾಕ್ ಮರಳುಶಿಲೆಗಳನ್ನು ಸಾಗರೀಯ ಅಥವಾ ಖಂಡಪ್ರದೇಶಗಳ ವಿಶಿಷ್ಟ ಲಕ್ಷಣಗಳೆನ್ನಲಾಗುವುದಿಲ್ಲ.

ಅನೇಕ ದ್ವೀಪಸ್ತೋಮ ಚಾಪಗಳಲ್ಲಿ ಮತ್ತು ಪೆಸಿಫಿಕ್ ಸಾಗರವನ್ನು ಸುತ್ತುವರಿದಿರುವ ಭೂತೀರ ಪ್ರದೇಶಗಳಲ್ಲಿ ಇದೇ ರೀತಿಯ ಮಧ್ಯವರ್ತಿ ಲಕ್ಷಣಗಳನ್ನು ಗುರುತಿಸಲಾಗಿದೆ. ಬಹುಶಃ ಇವು ಭೂಖಂಡಗಳ ಸಾಗರೀಕರಣವನ್ನೋ ಸಾಗರ ಭಾಗಗಳ ಖಂಡೀಕರಣವನ್ನೋ ಸೂಚಿಸುತ್ತವೆ. ಒಟ್ಟಿನಲ್ಲಿ ಈ ಎರಡೂ ಕ್ರಿಯೆಗಳು ಭೂಚಿಪ್ಪಿನ ರೂಪಣೆಯಲ್ಲಿ ಅರ್ಥಾತ್ ಖಂಡರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಖಂಡಪ್ರದೇಶಗಳಲ್ಲಿ ಅಂತರ್ಗತವಾಗಿರುವ ಸಾಗರೀಯ ಚಿಪ್ಪಿನ ಛಿದ್ರಭಾಗಗಳ ಹಾಗೂ ದ್ವೀಪಸ್ತೋಮಚಾಪಗಳ ಆಧಾರದ ಮೇಲೆ ಸಾಗರ ಭಾಗಗಳನ್ನು ಉಪಯೋಗಿಸಿಕೊಂಡೇ ಭೂಖಂಡಗಳು ಬೆಳೆಯುತ್ತಿವೆ ಎಂದು ಧಾರಾಳವಾಗಿ ಹೇಳಬಹುದು. ಇವೆಲ್ಲಕ್ಕೂ ಸದಾ ವಿಕಾಸಗೊಳ್ಳುತ್ತಿರುವ ಭೂಮಿಯ ಹೊದಿಕೆಯೇ ಮೂಲ.

ಸಮುದ್ರತಳದ ಹರಡುವಿಕೆಯೂ ಈ ದಿಸೆಯಲ್ಲಿ ಒಂದು ಮುಖ್ಯಕ್ರಿಯೆ. ಸಾಗರತಳಗಳಲ್ಲಿ ಜಲಜಶಿಲಾನಿಕ್ಷೇಪಗಳ ಕೊರತೆ ಹಾಗೂ ಹಳೆಯ ಅಂದರೆ 150,000,000 ವರ್ಷಗಳಿಗಿಂತ ಹೆಚ್ಚು ವಯಸ್ಸಾದ ಸಾಗರೀಯ ಶಿಲೆಗಳು ಇಲ್ಲದಿರುವಿಕೆ ಇವು ಪ್ರಸಕ್ತ ಸಾಗರಭಾಗಗಳ ಹೊರಚಿಪ್ಪು ಭೂ ಚರಿತ್ರೆಯ ಇತ್ತೀಚಿನ ಯುಗಗಳಲ್ಲಿ ರೂಪುಗೊಂಡಿತೆಂದು ಸೂಚಿಸುತ್ತವೆ. ಸಾಗರತಳದ ಕಾಂತ ಅಸಾಂಗತ್ಯಗಳು (ಮ್ಯಾಗ್ನೆಟಿಕ್ ಅನಾಮಲೀಸ್) ನಿರ್ದಿಷ್ಟ ಜಾಡುಗಳಿಗೆ ಸೀಮಿತವಾಗಿದ್ದು ಸಾಗರ ಮಧ್ಯದ ಬೃಹತ್ ಏಣುಗಳಿಗೆ ಸಮಾಂತರವಾಗಿವೆ. ಇವುಗಳಲ್ಲಿರುವ ಬಿರುಕುಗಳ ಮೂಲಕ ಬೆಸಾಲ್ಟ್ ಮಹಾಪ್ರವಾಹಗಳು ಹೊರ ಹೊಮ್ಮುತ್ತಿರುವುದನ್ನೂ ಗುರುತಿಸಿದ್ದಾರೆ. ಸು. ಪ್ರತಿ 500,000 – 2,000,000 ವರ್ಷಗಳಿಗೊಮ್ಮೆ ಭೂಗ್ರಹದ ಕಾಂತದ್ವಿಧ್ರುವ (ಮ್ಯಾಗ್ನೆಟಿಕ್ ಡೈಪೋಲ್) ತಿರುವುಮುರುವಾಗುತ್ತದೆ. ಹೀಗಾದುದನ್ನು ಒಂದು ರೀತಿಯಲ್ಲಿ ಹೊರಹೊಮ್ಮುತ್ತಿರುವ ಬೆಸಾಲ್ಟುಗಳ ಕಾಂತ ಲಕ್ಷಣಗಳು ವ್ಯಕ್ತಪಡಿಸುತ್ತದೆ. ಏಣುಗಳ ಎರಡು ಕಡೆಯೂ ಕಾಂತ ಮಾದರಿಗಳು ಏಕರೀತಿಯಾಗಿದ್ದು ಬೃಹತ್ ಜಾಡುಗಳಲ್ಲಿವೆ. ಏಣಿನಿಂದ ದೂರ ಸರಿದಂತೆ ಬೆಸಾಲ್ಟುಗಳು ವಯಸ್ಸಿನಲ್ಲೂ ಹೆಚ್ಚುವ ಕಾರಣ ಸಮುದ್ರತಳಗಳು ಏಣಿನ ಎರಡೂ ದಿಕ್ಕುಗಳಲ್ಲಿ ಹರಡುತ್ತಿವೆ. ಎಂದು ಭಾವಿಸಲಾಗಿದೆ. ಹೀಗೆ ಇವು ಭೂಖಂಡಗಳತ್ತ ಸರಿಯಲು ಭೂಹೊದಿಕೆಯಲ್ಲಿರುವ ನಯನಕೋಶಗಳು (ಕನ್ವೆಕ್ಟಿವ್ ಸೆಲ್ಸ್) ಸಹಾಯಕವಾಗಿವೆ. ಇಂದಿಗೂ ಹೀಗೆ ಖಂಡಭಾಗಗಳನ್ನು ಸೇರಿದ ಸಾಗರಜನ್ಯ ಬೆಸಾಲ್ಟುಗಳನ್ನು ಗುರುತಿಸಬಹುದು. ಇವುಗಳ ಸರಿತದ ವೇಗ ವರ್ಷವೊಂದಕ್ಕೆ 0.2 – 10 ಸೆಂಮೀ.ಗಳು. ಖಂಡಗಳ ಅಲೆತ ಇದಕ್ಕೆ ಪೂರಕವಾದ ಕ್ರಿಯೆಯಾಗಿದೆ.

ಅಸ್ಥಿರ ಭೂಪ್ರದೇಶಗಳಲ್ಲಿ ಕಂಡುಬರುವ ಮಡಿಕೆಬಿದ್ದ ಶಿಲಾಶ್ರೇಣಿಗಳು ಭೂಕಂಪಗಳು, ತೀವ್ರಸವೆತ, ತರ ನಿಕ್ಷೇಪಣೆ ಹಾಗೂ ಜ್ವಾಲಾಮುಖಿಗಳು ಅಲ್ಲಿ ಭೂ ಅಭಿನತಿಗಳ ಇರುವಿಕೆಯನ್ನು ಸಾರಿಹೇಳುತ್ತವೆ. ಈ ಇಳುಕಲುಗಳಲ್ಲಿ ಶೇಖರವಾದ ಜಲಜಶಿಲಾಸ್ತರಗಳೊಳಕ್ಕೆ ಅಡಿಯಿಂದ ಗ್ರ್ಯಾನಿಟಿಕ್ ಬ್ಯಾತೊಲಿತುಗಳು ನುಗ್ಗಿ ಅವನ್ನು ವಿವಿಧ ರೀತಿಯಲ್ಲಿ ಮಡಿಸಿ ಪರ್ವತಪಂಕ್ತಿಗಳೋಪಾದಿಯಲ್ಲಿ ಮೇಲಕ್ಕೆ ಎಸೆಯುತ್ತವೆ. ಇದೇ ಪರ್ವತಜನ್ಯಕ್ರಿಯೆ. ಪರ್ವತಗಳು ಖಂಡಭಾಗಗಳಲ್ಲಿ ಎದ್ದುಕಾಣುವ ಸ್ವರೂಪಗಳು. ಈ ಪರ್ವತಜನ್ಯಕ್ರಿಯೆಗೂ ಭೂ ಅಭಿನತಿಗೂ ನಿಕಟ ಸಂಬಂಧವಿದ್ದು ಇವೆರಡೂ ಖಂಡರೂಪಣೆಯಲ್ಲಿ ತಮ್ಮದೇ ಆದ ವಿಶಿಷ್ಟ ಪಾತ್ರ ವಹಿಸಿವೆ. ಭೂಗೋಳದ ಹಲವಾರು ಕಡೆ ಇವುಗಳ ಕ್ರಿಯೆ ನಿರ್ದಿಷ್ಟ ಕಾಲಗಳಲ್ಲಿ ನಡೆದಿರುವುದು ಗೋಚರವಾಗಿದೆ. ಕ್ರಿಯೆ ನಡೆದ ಕಾಲವನ್ನು ಆ ಪ್ರದೇಶದ ಮಡಿಕೆ ಬಿದ್ದಿರುವ ಶಿಲೆಗಳಲ್ಲಿ ಹುದುಗಿರುವ ಗ್ರ್ಯಾನೈಟಿನ ಖನಿಜಗಳ ವಯಸ್ಸನ್ನು ಅಳತೆ ಮಾಡುವುದರ ಮೂಲಕ ನಿರ್ಧರಿಸಬಹುದು. ಈ ಬೃಹತ್ ಚಟುವಟಿಕೆಗಳು ಭೂಖಂಡಗಳ ಬೆಳವಣಿಗೆಗೆ ಅತ್ಯಂತ ಸಹಾಯವೆಂಬುದನ್ನು ಒತ್ತಿ ಹೇಳಬಹುದು. ಅಲ್ಲದೆ ಕ್ರಿಯೆ ನಡೆಯುವಾಗ ಆ ಪ್ರದೇಶದ ಅಕ್ಕಪಕ್ಕದ ಸಾಗರ ಹಾಗೂ

ಖಂಡಭಾಗಗಳಲ್ಲಿರುವ ಶಿಲೆಗಳು ತೀವ್ರ ದರ್ಜೆಯ ಬೃಹತ್ ರೂಪಾಂತರಣಕ್ಕೆ ಒಳಗಾಗುತ್ತವೆ. ಒಮ್ಮೊಮ್ಮೆ ಮನರ್ದ್ರವೀಕರಣಕ್ಕೂ ಒಳಗಾಗಬಹುದು. ಹೀಗಾಗಿ ಹೊದಿಕೆಯ ವಲಯದಿಂದ ಹೊರಬರುತ್ತಿರುವ ವಸ್ತುವಿನೊಡನೆ ಬೆರೆತು ಹೋಗಿ ಭೂಭಾಗಗಳು, ಖಂಡ ತೀರಪ್ರದೇಶಗಳ ಹಾಗೂ ಖಂಡಗಳಿಗೆ ಮೆತ್ತಿಕೊಂಡಂತಿರುವ ದ್ವೀಪಸ್ತೋಮ ಚಾಪಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಪ್ರಸಕ್ತ ಖಂಡಭಾಗಗಳ ಮೂಲದ್ರವ್ಯ ಅಂದರೆ ನ್ಯೂಕ್ಲಿಯಸುಗಳನ್ನು ಗುರುತಿಸಲಾಗಿದೆ. ಸು. 2.5–3.5 ಇಯಾನ್ ವರ್ಷಗಳಷ್ಟು ಹಳೆಯದಾದ ಈ ನ್ಯೂಕ್ಲಿಯಸುಗಳನ್ನು ಸಾಗರೀಯ ಚಿಪ್ಪಿನ ವಲಯ ಹಾಗೂ ದ್ವೀಪಸ್ತೋಮಚಾಪಗಳಲ್ಲಿ ಕಾಣಬಹುದು. ಖಂಡಗಳು ಈ ನ್ಯೂಕ್ಲಿಯಸಿನಿಂದ ಪ್ರಾರಂಭಗೊಂಡ ವಿವಿಧ ಭೂಚಟುವಟಿಕೆಗಳ ಕಾರಣ ಬೆಳೆದು ವಿಸ್ತರಿಸಿ ಪ್ರಸಕ್ತ ಸ್ವರೂಪವನ್ನು ತಳೆದಿವೆ. ಈಗ ಕಾಣುತ್ತಿರುವ ಅಲ್ಯೂಷಿಯನ್ ಪರ್ವತಶ್ರೇಣಿಗಳ ಹಾಗೂ ಆಗ್ನೇಯ ಅಲಾಸ್ಕದ ಭೂಭಾಗಗಳು ಅವುಗಳ ನೈರುತ್ಯದಿಕ್ಕಿನಲ್ಲಿ ಪೆಸಿಫಿಕ್ ಸಾಗರದಲ್ಲಿರುವ ಅಲ್ಯೂಷಿಯನ್ ಜ್ವಾಲಾಮುಖಿಗಳಿಂದ ವಿಕಾಸಗೊಂಡುವೆಂದು ಊಹಿಸಿಲಾಗಿದೆ. ಹೀಗೆಯೇ ಇಂದಿನ ಭೂಖಂಡಗಳು ಬೆಸಾಲ್ಟಿಕ್ ಹಾಗೂ ಅತಿಮ್ಯಾಫಿಕ್ ಸಾಗರೀಯ ಚಿಪ್ಪು ಮತ್ತು ಪೆರಿಡೊಟಿಟಿಕ್ ಹೊದಿಕೆಯ ವಲಯದಿಂದ ಬೆಳೆದು ಬಂದುವೆಂದು ಅಭಿಪ್ರಾಯ.

ಉತ್ತರ ಅಮೆರಿಕ, ಆಸ್ಟ್ರೇಲಿಯ ಮತ್ತು ಅಂಟಾರ್ಟಿಕ ಖಂಡಗಳ ವಿವಿಧ ಶಿಲೆಗಳ ಹರವನ್ನು ಸೂಚಿಸುವ ನಕ್ಷೆಗಳನ್ನು ತಯಾರಿಸಿದ್ದಾರೆ. ಇವು ಖಂಡಗಳ ಬೆಳವಣಿಗೆಯನ್ನು ಅರಿಯಲು ಬಲು ಸಹಾಯಕವಾಗಿವೆ. ಉತ್ತರ ಅಮೆರಿಕದ ಶಿಲಾಹರವಿನ ನಕ್ಷೆಯನ್ನು (ಚಿತ್ರ 3) ವೀಕ್ಷಿಸಿದಲ್ಲಿ ವಿವಿಧ ಶಿಲೆಗಳು ತಮ್ಮ ವಯೋಗತಿಗನುಗುಣವಾಗಿ ಒಂದು ನಿರ್ದಿಷ್ಟಕ್ರಮದಲ್ಲಿ ಹಾಗೂ ದಿಕ್ಕಿನಲ್ಲಿ ವ್ಯತ್ಯಾಸಗೊಳ್ಳುವುದು ಸ್ಪಷ್ಟವಾಗಿ ಕಾಣುತ್ತದೆ. ಅತ್ಯಂತ ಹಳೆಯ ಶಿಲೆಗಳು ಕೇಂದ್ರ ಭಾಗದಲ್ಲಿದ್ದು ಆ ಭಾಗವನ್ನು ಖಂಡದ ಮೂಲದ್ರವ್ಯ ಅಥವಾ ನ್ಯೂಕ್ಲಿಯಸ್ ಎನ್ನಬಹುದು. ಉತ್ತರ ಅಮೆರಿಕದ ಕೇಂದ್ರ ಭಾಗದ ಶಿಲೆಗಳು ಆ ಭಾಗದ




ಚಿತ್ರ 3 ಉತ್ತರ ಅಮೆರಿಕದ ಮುಖ್ಯ ಶಿಲಾಜಾಡುಗಳು. ಅತ್ಯಂತ ಪುರಾತನ ಶಿಲಾಪ್ರಾಂತ್ಯಗಳು (ಖಂಡ ಬೀಜಗಳು) ಕಿರಿಯ ಶಿಲಾಪ್ರಾಂತ್ಯಗಳಿಂದ ಆವೃತವಾಗಿವೆ. ಸಂಖ್ಯೆಗಳು ಶಿಲೆಗಳ ವಯಸ್ಸನ್ನು ಸೂಚಿಸುತ್ತದೆ.

ಹೊರ ಅಂಚಿನಲ್ಲಿರುವ ಶಿಲೆಗಳಿಗಿಂತ ವಯಸ್ಸಿನಲ್ಲಿ ಐದರಷ್ಟು ಪೆಸಿಫಿಕ್ ತೀರದ ಶಿಲೆಗಳಿಗಿಂತ ಹತ್ತರಷ್ಟೂ ಹಳೆಯವೆನಿಸಿವೆ. ಇದೇ ರೀತಿ ಕೇಂದ್ರ ಏಷ್ಯ, ಪಶ್ಚಿಮ ಆಸ್ಟ್ರೇಲಿಯ, ಅಂಟಾರ್ಟಿಕದ ತಳಭಾಗಗಳೂ ಆಯಾ ಭೂಖಂಡಗಳ ನ್ಯೂಕ್ಲಿಯಸುಗಳೆನಿಸಿವೆ.

ಖಂಡಗಳ ಕೇಂದ್ರ ಭಾಗಗಳಲ್ಲಿರುವ ಶಿಲೆಗಳು ಅತ್ಯಂತ ಹಳೆಯವೆನಿಸಿದ್ದು ಸಾಗರತಳಗಳು, ದ್ವೀಪಸ್ತೋಮ ಚಾಪಗಳು ಮತ್ತು ಖಂಡದ ತೀರಪ್ರದೇಶದ ಶಿಲೆಗಳನ್ನೇ ಹೋಲುತ್ತವೆ. ರೂಪುಗೊಂಡು ನೂರಾರು ಮಿಲಿಯನ್ ವರ್ಷಗಳಾದ ಮೇಲೆ ಇವನ್ನೂ ಭೇದಿಸಿ ನುಗ್ಗಿದ ಗ್ರ್ಯಾನಿಟಿಕ್ ಅಂತಸ್ಸರಣ ಸಮುದಾಯಗಳಲ್ಲಿ ಇವು ಸಿಕ್ಕಿಬಿದ್ದು ಪ್ರಸಕ್ತ ಭೂಖಂಡಗಳ ನ್ಯೂಕ್ಲಿಯಸುಗಳೆನಿಸಿವೆ. ಕಾಲಕ್ರಮೇಣ ಇವುಗಳ ಸುತ್ತ ಇತರ ಶಿಲೆಗಳು ಸೇರುತ್ತ ಖಂಡ ವಿಸ್ತಾರಗೊಳ್ಳುತ್ತ ಹೋಯಿತು. ಹೀಗೆ ಸೇರಿದ ಜಲಜಶಿಲಾಸ್ತರಗಳನ್ನೂ ಶಿಥಿಲಗೊಂಡ ಗ್ರ್ಯಾನೈಟುಗಳನ್ನೂ ಇಂದಿಗೂ ಗುರುತಿಸಬಹುದು.

ಪ್ರಮುಖವಾದ ಭೂ ಅಭಿನತಿ: ಪರ್ವತಜನ್ಯ ಚಕ್ರಗಳು (ಸೈಕಲ್ಸ್) ಹಲವಾರಿದ್ದು ಅವನ್ನು ವಿವಿಧ ಭೂಯುಗಗಳಲ್ಲಿ ಗುರುತಿಸಲಾಗಿದೆ. ಇವು ಅನೇಕ ವೇಳೆ ಹಲವಾರು ಜಲಜಶಿಲಾ–ಜ್ವಾಲಾಮುಖೀಯ ಉಪಚಕ್ರಗಳಿಂದ ಕೂಡಿರುವುದುಂಟು. ಪ್ರತಿ ಚಕ್ರದ ಶಿಲಾಶ್ರೇಣಿಗಳು ಆ ಕಾಲದ ಹೊರಚಿಪ್ಪಿನ ಸ್ವರೂಪ ಹಾಗೂ ಸ್ಥಿರತೆಯನ್ನೂ ಅಡಿಯಲ್ಲಿದ್ದ ಹೊದಿಕೆಯ ಸ್ವರೂಪವನ್ನೂ ಒಂದು ರೀತಿಯಲ್ಲಿ ಪ್ರತಿಬಿಂಬಿಸುತ್ತವೆನ್ನಬಹುದು.

ಭೂಮಿಯ ಹೊರಚಿಪ್ಪಿನ ಶಿಲೆಗಳಲ್ಲಿ ಅತ್ಯಂತ ಪುರಾತನವೆನಿಸಿದ್ದು ಉತ್ತಮ ರೀತಿಯಲ್ಲಿ ಕಾಪಾಡಲಾಗಿರುವ ಭೂ ಇತಿಹಾಸದ ಅದರಲ್ಲೂ ಖಂಡರೂಪಣೆಗೆ ಸಂಬಂಧಿಸಿದ ದಾಖಲೆಯನ್ನು ರೊಡೇಷಿಯ–ದಕ್ಷಿಣಾಫ್ರಿಕ ಶಾಶ್ವತಖಂಡದ (ಶೀಲ್ಡ್) ಪೂರ್ವ ಟ್ರಾನ್ಸ್‌ವಾಲಿನಲ್ಲಿ ಗುರುತಿಸಿದ್ದಾರೆ. ಈ ಪ್ರದೇಶವನ್ನು ಬ್ಯಾರ್ಬರ್ಟನ್ ಪರ್ವತವೆಂದು ಹೆಸರಿಸಲಾಗಿದೆ. ಇಲ್ಲಿನ ಶಿಲೆಗಳಲ್ಲಿ ಅತ್ಯಂತ ಪುರಾತನವಾದುದು ಸುಮಾರು 3.2 ಇಯಾನ್ ವರ್ಷ ವಯಸ್ಸಿನ ಬೆಸಾಲ್ಟ್ ಹಾಗೂ ಪೆರಿಡೊಟೈಟ್ ಲಾವಾಗಳು ಹಾಗೂ ಸಿಲ್‌ಗಳು. ಇವೆರಡೂ ಸ್ವಾಸಿಲ್ಯಾಂಡ್ ಶ್ರೇಣಿಯ ತಳಪಾಯದ ಜ್ವಾಲಾಮುಖಿಯ ಹಾಗೂ ಜಲಜಶಿಲಾ ಶ್ರೇಣಿಯ ಅಡಿಯಲ್ಲಿರುವ ಶಿಲೆಗಳಾಗಿದ್ದು ಇಡೀ ಶ್ರೇಣಿ ಗ್ರ್ಯಾನಿಟಿಕ್ ಅಂತಸ್ಸರಣಗಳ ನಡುವೆ ಸಿಕ್ಕಿಬಿದ್ದಿದೆ. ಲಾವಸ್ತರಗಳಲ್ಲಿ ಜಲಾವರಣ ಸನ್ನಿವೇಶದಲ್ಲಿ ರೂಪುಗೊಳ್ಳುವ ದಿಂಬು ಲಾವಾ (ಪಿಲ್ಲೋ ಲಾವಾ) ಮುಂತಾದ ಕೆಲವು ವಿಶಿಷ್ಟ ರಚನೆಗಳಿವೆ. ಇಲ್ಲಿನ ಬೆಸಾಲ್ಟಿಕ್ ಲಾವಾಗಳ ಸಂಯೋಜನೆ ಪ್ರಸಕ್ತಸಾಗರತಳಗಳಿಂದ ಹೊರಹೊಮ್ಮುತ್ತಿರುವ ಲಾವಾಗಳಂತಿದೆ. ಈ ಲಾವಾಗಳ ಮೇಲೆ ಆಂಡಿಸಿಟಿಕ್ ಮತ್ತು ಡೇಸಿಟಿಕ್ ಟಫ್‌ಗಳ ಛಿದ್ರಕಣಗಳಿಂದಾದ ಹಾಗೂ ಜ್ವಾಲಾಮುಖಿ ಸ್ಫೋಟಕ ವಸ್ತುಕಣಗಳ ಸಂಗ್ರಹಣೆಯಿಂದಾದ ಶಿಲಾಸ್ತರಗಳಿವೆ. ಅನಂತರ ಇವುಗಳ ಮೇಲೆ ಅನುಕ್ರಮವಾಗಿ ಇದೇ ಬಗೆಯ ಹಲವಾರು ಶಿಲಾಶ್ರೇಣಿಗಳಿದ್ದು ಅವುಗಳ ನಡುವೆ ಟಫ್, ಚೆರ್ಟ್ ಹಾಗೂ ಕಾರ್ಬೊನೇಟ್ ಶಿಲೆಗಳ ತೆಳುವಾದ ಸ್ತರಗಳನ್ನು ಅಲ್ಲಲ್ಲೆ ಕಾಣಬಹುದು. ಶ್ರೇಣಿಯ ಮೇಲ್ಭಾಗಗಳಿಗೆ ಹೋದಂತೆ ಪೆರಿಡೊಟೈಟ್ ಮೊತ್ತ ಒಮ್ಮೆಗೇ ಕಡಿಮೆಯಾಗುತ್ತ ಕಡೆಕಡೆಗೆ ಇಲ್ಲವೆನಿಸುತ್ತದೆ. ಇದರ ಬದಲು ಆಂಡಿಸಿಟಿಕ್ ಮತ್ತು ಡೇಸಿಟಿಕ್ ಲಾವಾಗಳ ಮೊತ್ತ ಹೆಚ್ಚುತ್ತ ಹೋಗುತ್ತದೆ. ಅಲ್ಲದೆ ಇದರ ಜತೆಗೆ ಟಫ್ ಹಾಗೂ ಇಂಗಾಲಯುಕ್ತ (ಕಾರ್ಬೊನೇಷಸ್) ಜೇಡುಶಿಲಾಚೆರ್ಟ್, ಸುಣ್ಣಶಿಲೆ, ಡಾಲೊಮೈಟ್ ಮತ್ತು ಜ್ವಾಲಾಮುಖಿಜ ಅಗ್ಲಾಮರೇಟುಗಳ ಮೊತ್ತವೂ ಅಧಿಕಗೊಳ್ಳುತ್ತದೆ. ಅಲ್ಲದೆ ಬೆಸಾಲ್ಟ್ ಹಾಗೂ ಗ್ರ್ಯಾನೈಟುಗಳ ಮಧ್ಯವರ್ತಿ ಎನಿಸಿದ ಗ್ರ್ಯಾನೊಡಯೊಟೈಟಿನ ಸಿಲ್, ಡೈಕ್ ಹಾಗೂ ಗುಮ್ಮಟಾಕಾರದ ಅಂತಸ್ಸರಣಗಳೂ ಇವೆ. ಪುರಾತನ ಶಾಶ್ವತ ಖಂಡಗಳಲ್ಲಿ ಹೇರಳವಾಗಿ ಕಂಡುಬರುವ ಗ್ರ್ಯಾನಿಟಿಕ್ ವರ್ಗದ ಶಿಲೆ ಗ್ರ್ಯಾನೊಡಯರೈಟ್ ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳುವುದು ಸೂಕ್ತ.

ಶ್ರೇಣಿಯ ಶಿಲಾಸ್ತರಗಳ ವಯಸ್ಸು ಕಡಿಮೆಯಾದಂತೆ ಅವುಗಳ ಫೆಲ್ಸಿಕ್ ಸಂಯೋಜನೆ ಹೆಚ್ಚುತ್ತ ಹೋಗುವುದನ್ನು ಗುರುತಿಸಬಹುದು. ಅಂದರೆ ಶಿಲಾ ಶ್ರೇಣಿಗಳು ಹಾಗೂ ಭೂಚಕ್ರಗಳಲ್ಲುಂಟಾಗುವ ಈ ಬಗೆಯ ಬದಲಾವಣೆಗಳು ಸಾಗರೀಯ ಹೊರಚಿಪ್ಪು ಅನುಕ್ರಮವಾಗಿ ವಿಕಾಸಗೊಂಡ ದ್ವೀಪಸ್ತೋಮ ಚಾಪವಾಗಿ ಕಟ್ಟಕಡೆಗೆ ಖಂಡಗಳ ಹೊರಚಿಪ್ಪಾಗಿ ಮಾರ್ಪಟ್ಟ ರೀತಿಯನ್ನು ಸೂಚಿಸುತ್ತವೆ.

ಸ್ವಾಸಿಲ್ಯಾಂಡ್ ಶ್ರೇಣಿಯ ಮೇಲ್ಭಾಗದಲ್ಲಿ ಕಾಣುವ ಶಿಥಿಲೀಕರಣ, ಸವೆತ ಹಾಗೂ ತರನಿಕ್ಷೇಪಣ ಕಾರ್ಯಗಳ ಅನುಕ್ರಮ ಚಕ್ರಗಳು ಅಡಿಯ ಶಿಲೆಗಳನ್ನು ಮೀರಿದ ರೀತಿಯಲ್ಲಿ ವ್ಯತ್ಯಾಸಗೊಂಡ ತರಗಳ ಸಾರೀಕರಣದಿಂದಾದುವೆಂದು ಭಾವಿಸಲಾಗಿದೆ. ಅಂದರೆ ಭೂಸವೆತ ಸಾಕಷ್ಟು ದೀರ್ಘಕಾಲ ನಡೆದು ತರಗಳ ವಿಂಗಡಣೆ ಉತ್ತಮ ರೀತಿಯಲ್ಲಿ ಆಯಿತೆಂದು ತಿಳಿಯಬಹುದು. ಈ ಕಾರಣದಿಂದಲೇ ಜೇಡುಶಿಲೆಗಳು ಹಾಗೂ ಜೇಡು ಮಿಶ್ರಿತ ಮರಳು ಶಿಲಾಸ್ತರಗಳ ಮೇಲೆ ಕ್ವಾರ್ಟ್ಜೈಟ್ ಶಿಲೆಗಳು ನಿಕ್ಷೇಪಗೊಂಡಿವೆ. ಇವುಗಳ ಬೆಳವಣಿಗೆಗೆ ಅಗತ್ಯವಾದ ತರಗಳು ದೀರ್ಘಕಾಲ ನಡೆದ ಶಿಥಿಲೀಕರಣದಿಂದಲೂ ಸ್ಥಿರಭೂಖಂಡಗಳ ಗ್ರ್ಯಾನಿಟಿಕ್ ಶಿಲೆಗಳ ಸವೆತದಿಂದಲೂ ಉತ್ಪನ್ನವಾದವು. ಈ ತರಗಳು ಭೂಖಂಡಗಳ ಅಂಚುಗಳು, ಸಾಕಷ್ಟು ಹಳೆಯದಾದ ಚಾಪಾಕಾರದ ಪ್ರದೇಶಗಳು, ಅಲ್ಲಿದ್ದ ಇಳುಕಲುಗಳು ಹಾಗೂ ಜಲಾಶಯಗಳಲ್ಲಿ ಸಂಚಿತಗೊಂಡು ಶಿಲಾಸ್ತರಗಳಾಗಿ ಕ್ರಮೇಣ ಮಾರ್ಪಟ್ಟವು. ಇವನ್ನು ಆವರಿಸಿರುವ ಗ್ರ್ಯಾನಿಟಿಕ್ ಅಂತಸ್ಸರಣಗಳು ಸು. 3.1–3.2 ಇಯಾನ್ ವರ್ಷಗಳ

ಹಿಂದೆ ಉಚ್ಚ್ರಾಯ ಸ್ಥಿತಿಯನ್ನು ಮುಟ್ಟಿದ್ದವು. ಬಹುಶಃ ಈ ಸಮಯದಲ್ಲಿ ಸ್ವಾಸಿಲ್ಯಾಂಡ್ ಶ್ರೇಣಿ ಹಲವಾರು ಕಡೆ ಮಡಿಕೆ ಬಿದ್ದು ಸ್ತರಭಂಗಗಳಿಗೂ ಒಳಗಾಗಿ ಇಂದಿನ ನಿಡಿದಾದ ಹಾಗೂ ಮಡಿಕೆ ಬಿದ್ದಿರುವ ಸ್ವರೂಪವನ್ನು ಪಡೆಯಿತು. ಈ ಸಮಯದಲ್ಲಿ ಪರ್ವತಜನ್ಯೋತ್ತರಕಾಲದ ಮತ್ತು ಕ್ವಾರ್ಟ್ಸ್ ಹಾಗೂ ಕೆ–ಫೆಲ್ಡ್‌ಸ್ಪಾರುಗಳಿಂದ ಕೂಡಿರುವ ಗ್ರ್ಯಾನೈಟುಗಳು ಸತತವಾಗಿ ಹೊರಬರುತ್ತಲೇ ಇದ್ದು ಆ ವೇಳೆಗಾಗಲೇ ನಿರ್ಮಾಣವಾಗಿದ್ದ ಗ್ರ್ಯಾನಿಟಿಕ್ ಚಿಪ್ಪಿನ ಮಂದವನ್ನು ಹೆಚ್ಚಿಸಿದುವು. ಈ ರೀತಿಯಲ್ಲೂ ಖಂಡ ಬೆಳವಣಿಗೆಯಾಯಿತು. ಇದು ಸು. 2.5 ಇಯಾನ್ ವರ್ಷಗಳ ಹಿಂದೆಯೂ ನಡೆದ ದಾಖಲೆಗಳಿವೆ.

ಸ್ವಾಸಿಲ್ಯಾಂಡ್ ಶ್ರೇಣಿಯ ಉತ್ತರ–ದಕ್ಷಿಣಗಳತ್ತ ಇದೇ ಬಗೆಯ ಹಲವಾರು ಸಾಗರೀಯ ಹಾಗೂ ದ್ವೀಪಸ್ತೋಮಚಾಪಗಳ ಶಿಲಾಶ್ರೇಣಿಗಳಿದ್ದು ಅವನ್ನು ಗ್ರೀನ್ ಸ್ಟೋನ್ ವಲಯಗಳೆನ್ನಲಾಗಿದೆ. ಇವು ಸ್ವಾಸಿಲ್ಯಾಂಡ್ ಶ್ರೇಣಿಗೆ ಸಮಾಂತರವಾಗಿದ್ದು ಬಹುಶಃ ಅದರೊಡನೆ ಸಾಕಷ್ಟು ಒಂದುಗೂಡಲೂ ಬಹುದು. ಈ ಶಿಲೆಗಳು ಕೂಡ ಆಳದಿಂದ ಮೇಲಕ್ಕೆ ಬರುತ್ತಿದ್ದ ಗ್ರ್ಯಾನೈಟ್ ಅಂತಸ್ಸರಣಗಳಿಂದ ಆವೃತವಾಗಿವೆ. ಕ್ರಮೇಣ ಇವು ಸವೆತಕ್ಕೆ ಒಳಗಾದ ಕಾರಣ ಹಲವಾರು ಕಿಮೀ ಮಂದದ ಭೂಚಿಪ್ಪು ಈಗ ಇಲ್ಲವಾಗಿದೆ. ಖಂಡಭಾಗಗಳಲ್ಲಿ ಸ್ವಾಸಿಲ್ಯಾಂಡ್ ಶ್ರೇಣಿಯ ಹಾಗೂ ಇತರ ಆಫ್ರಿಕನ್ ಗ್ರೀನ್ ಸ್ಟೋನ್ ವಲಯಗಳ ಕ್ಲಿಷ್ಟವಾದ ಅವನತಿ (ಸಿಂಕ್ಲೈನ್) ಮಡಿಕೆಗಳ ಕೆಳಚಾಚುಗಳನ್ನು ಗ್ರ್ಯಾನೈಟ್ ಶಿಲಾಸಮೂಹಗಳ ನಡುವೆ ಇಂದಿಗೂ ಗುರುತಿಸಬಹುದು. ಒಟ್ಟಿನಲ್ಲಿ ಇದು ಅತ್ಯಂತ ಪುರಾತನ ಭೂಖಂಡಗಳು ರಚಿತವಾದ ರೀತಿಯನ್ನು ಸೂಚಿಸುವ ಉತ್ತಮ ಉದಾಹರಣೆಯಾಗಿದೆ. ಇದನ್ನೇ ಹೋಲುವ ಖಂಡಪ್ರದೇಶಗಳು ಉತ್ತರ ಅಮೆರಿಕ, ಆಸ್ಟ್ರೇಲಿಯ ಮತ್ತು ಭಾರತ ದೇಶಗಳಲ್ಲೂ ಇವೆ. ಈ ದೇಶಗಳ ಗ್ರೀನ್‌ಸ್ಟೋನ್–ಗ್ರ್ಯಾನೈಟ್ ಪ್ರಾಂತಗಳಲ್ಲಿ ಸ್ತರಭಂಗಕ್ಕೊಳಗಾಗಿರುವ ಬಹು ಅವನತಿ ಮಡಿಕೆಗಳ (ಸಿಂಕ್ಲಿನೋರಿಯ) ಸಮೂಹಗಳಿದ್ದು ಅವನ್ನೇ ಬೃಹದಾಕಾರದ ಗ್ರ್ಯಾನೈಟ್ ಮತ್ತು ಗ್ರ್ಯಾನಿಟಿಕ್ ನೈಸ್‌ಗಳು ಆವರಿಸಿವೆ. ಇಲ್ಲಿಯ ಭೂಖಂಡ ನ್ಯೂಕ್ಲಿಯಸುಗಳಲ್ಲಿ ಗ್ರೀನ್‌ಸ್ಟೋನ್ ಜಾಡುಗಳು ಪರಸ್ಪರ ಸಮಾಂತರವಾಗಿದ್ದು ಗ್ರ್ಯಾನೈಟುಗಳೊಡನೆ ಸರಿಸುಮಾರು 1:4 ಪ್ರಮಾಣದಲ್ಲಿವೆ. ಈ ಖಂಡಪ್ರದೇಶಗಳಲ್ಲೂ ಸ್ವಾಸಿಲ್ಯಾಂಡಿನಲ್ಲಿರುವಂತ ಭೂಖಂಡಗಳ ಬೆಳವಣಿಗೆಯ ವಿವಿಧ ಘಟ್ಟಗಳನ್ನು ಹಾಗೂ ಪುನರಾವರ್ತನೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಇವು ಸಹ ಸು. 2.5 ಇಯಾನ್ ವರ್ಷಗಳಷ್ಟು ಹಿಂದಿನವು. ಅಂದರೆ ಈ ಖಂಡಗಳ ರೂಪಣೆಯೂ ಅಷ್ಟೇ ಪುರಾತನವಾದುದು.

(ಬಿ.ವಿ.ಜಿ.)

**ಖಂಡಗಿರಿ :** ಒರಿಸ್ಸ ರಾಜ್ಯದಲ್ಲಿ ಭುವನೇಶ್ವರದಿಂದ ವಾಯವ್ಯಕ್ಕೆ 9 ಕಿಮೀ ದೂರದಲ್ಲಿರುವ ಒಂದು ಸಣ್ಣ ಗುಡ್ಡ (ಉ.ಅ. 20° 16'; ಪೂ.ರೇ. 85° 47'). ಮರಳು ಶಿಲೆಗಳಿಂದಾದ ಈ ಗುಡ್ಡದಲ್ಲಿ ಕೊರೆಯಲಾಗಿರುವ ಜೈನವಿಹಾರಗಳು ಪ್ರಾಚೀನ ಕಾಲದಿಂದಲೂ ಜೈನರಿಗೆ ಪವಿತ್ರವಾದವು. ಇಲ್ಲಿಯ ಕೆಲವು ಗುಹೆಗಳನ್ನು ಬಿಟ್ಟರೆ ಉಳಿದ ಎಲ್ಲ ಗುಹೆಗಳೂ ಪ್ರಸಕ್ತ ಶಕದ ಪ್ರಾರಂಭಕ್ಕೆ ಸೇರಿದವು. ಈ ಗುಡ್ಡ ಚಿಕ್ಕದಾದ್ದರಿಂದ ಇಲ್ಲಿಯ ವಿಹಾರಗಳು ಪಶ್ಚಿಮ ಘಟ್ಟಗಳಲ್ಲಿ ಕೊರೆಯಲಾಗಿರುವ ವಿಹಾರಗಳಷ್ಟು ವಿಶಾಲವಾಗಿಲ್ಲ. ಇವುಗಳ ರಚನಾಕ್ರಮ ಅತ್ಯಂತ ಸರಳವಾಗಿದೆ. ಸಾಮಾನ್ಯವಾಗಿ ಒಂದು ಸಣ್ಣ ಕೋಣೆಯಿದ್ದು ಅದರ ಮುಂಭಾಗದಲ್ಲಿ ಸ್ತಂಭಗಳುಳ್ಳ ಒಂದು ಕೈಸಾಲೆ ಇರುತ್ತದೆ.

ಖಂಡಗಿರಿಯಲ್ಲಿರುವ ಗುಹೆಗಳ (ಗುಂಫಾ) ಸಂಖ್ಯೆ ಸುಮಾರು ಹತ್ತು. ಇವುಗಳ ಪೈಕಿ ಅನಂತಗುಂಫಾ ಮುಖ್ಯವಾದ್ದು. ಇದು ಪ್ರ.ಶ. ಒಂದನೆಯ ಶತಮಾನಕ್ಕೆ ಸೇರಿದ್ದು. ಇತರ ಗುಹೆಗಳಂತೆ ಇದು ಕೂಡ ಅತ್ಯಂತ ಸರಳವಾಗಿದ್ದರೂ ಇಲ್ಲಿಯ ಮತೀಯ ಹಾಗೂ ಆಲಂಕಾರಿಕ ಶಿಲ್ಪಗಳು ಸಾಂಚಿಯ ಶಿಲ್ಪಗಳನ್ನು ಹೋಲುವುದು ಇದರ ವೈಶಿಷ್ಟ್ಯ. ಕೈಸಾಲೆಯ ಗೋಡೆಯ ಮೇಲೆ ಸಾಲಾಗಿ ಕಡೆದಿರುವ ಕಟಕಟೆಗಳು, ನಡುನಡುವೆ ಕಮಲದ ಹೂವುಗಳು, ಬಾಗಿಲ ಕಮಾನುಗಳ ಮೇಲಿರುವ ತ್ರಿರತ್ನ ಚಿಹ್ನೆಗಳು, ಬಾಲವನ್ನು ಹೆಣೆದುಕೊಂಡಿರುವ ನಾಗಗಳು, ಕೈಯಲ್ಲಿರುವ ಪಾತ್ರೆಯಿಂದ ಹೂವನ್ನು ಸುರಿಯುತ್ತ ಹಾರುತ್ತಿರುವ ವಿದ್ಯಾಧರರು, ಕಂಬದ ಮೇಲೆ ತಲೆಕೆಳಗಾಗಿ ಇಟ್ಟಿರುವ ಕಮಲಗಳು, ಸುಂದರ ಶಿಲ್ಪಗಳುಳ್ಳ ಬೋದಿಗೆಗಳು, ಇಷ್ಟಲ್ಲದೆ ಅನೇಕ ಗಿಡಮರಗಳ ಮತ್ತು ಪ್ರಾಣಿಗಳ ಶಿಲ್ಪಗಳು ಮಧ್ಯಭಾರತದ ಶುಂಗರ ಕಾಲದ ಸ್ತೂಪಗಳ ಮತ್ತು ವಿಹಾರಗಳ ಶಿಲ್ಪಗಳನ್ನು ಹೋಲುತ್ತವೆ. ಇದೇ ಶೈಲಿಯ ಬೋದಿಗೆಗಳು ಮತ್ತು ಅದರ ಮೇಲೆ ಕಡೆದಿರುವ ಶಿಲ್ಪಗಳು ಆರು ಶತಮಾನಗಳ ಅನಂತರ ಬಿಜಾಪುರ ಜಿಲ್ಲೆಯ ಬಾದಾಮಿಯಲ್ಲಿ ಕಂಡುಬರುವುದು ಗಮನಾರ್ಹ. ಈ ಗುಹೆಯ ಬಾಗಿಲುಗಳ ಚೌಕಟ್ಟಿನ ಮೇಲುಭಾಗದಲ್ಲಿ ಕೆತ್ತಿರುವ, ಕಮಲಾಸೀನಳಾದ ಲಕ್ಷ್ಮಿ, ರಥಾರೂಢನಾದ ಸೂರ್ಯ ಇವನ್ನು ವಿಶೇಷವಾಗಿ ಗಮನಿಸಬೇಕು. ಖಂಡಗಿರಿಯ ಜೈನರ ಈ ನಿರ್ಮಾಣಗಳು ವಾಸ್ತುಶಿಲ್ಪದ ದೃಷ್ಟಿಯಲ್ಲಿ ಅಷ್ಟೊಂದು ಶ್ರೇಷ್ಠ ಸ್ಥಾನವನ್ನು ಗಳಿಸದಿದ್ದರೂ ಅವು ತಮ್ಮದೇ ಆದ ಒಂದು ಸ್ಥಳೀಯ ರೀತಿಯನ್ನು ಪ್ರತಿನಿಧಿಸುತ್ತವೆ. (ಎಂ.ಎಸ್.ಕೆ.ಎಂ.)

**ಖಂಡವ್ಯಾಪಿ ತರಗತಿ :** ಒಬ್ಬ ಉಪಾಧ್ಯಾಯ ಒಂದು ಕಡೆ ಮಾಡುವ ಪಾಠವೊಂದನ್ನು ವಿಶಾಲ ಭೂಪ್ರದೇಶದಲ್ಲಿರುವ ಸಹಸ್ರಾರು ಶಾಲೆಗಳಲ್ಲಿನ ಒಂದು ನಿರ್ದಿಷ್ಟ ತರಗತಿಯ ವಿದ್ಯಾರ್ಥಿಗಳೆಲ್ಲ ಏಕಕಾಲದಲ್ಲಿ ಕಲಿಯಬಹುದಾದ ರೀತಿಯಲ್ಲಿ ಸಾಮೂಹಿಕ ಶಿಕ್ಷಣಕ್ಕಾಗಿ ಮಾಡಿರುವ ಒಂದು ಪ್ರಸಾರವ್ಯವಸ್ಥೆ. ಈ ಕಾರ್ಯಕ್ರಮಕ್ಕೆ ಉಪಗ್ರಹ ಬೋಧನಾತ್ಮಕ ಟೆಲಿವಿಷನ್ ಪ್ರಯೋಗ (ಸ್ಯಾಟಲೈಟ್ ಇನ್ಸ್ಟ್ರಕ್ಷನಲ್ ಟೆಲಿವಿಷನ್ ಎಕ್ಸ್ ಪೆರಿಮೆಂಟ್=ಎಸ್.ಐ.ಟಿ.ಇ) ಎಂದು ಹೆಸರು. ನುರಿತ ಅಧ್ಯಾಪಕರ ಸೇವೆ ಎಲ್ಲ ಶಾಲೆಗಳಿಗೂ ದೊರಕುವಂತೆ ಮಾಡುವುದೇ ಇಂಥ ವ್ಯವಸ್ಥೆಯ ಉದ್ದೇಶ. ಸಾಮಾನ್ಯವಾಗಿ ಪಾಠವನ್ನು ಭೂಮಿಯಮೇಲಿನ ಟೆಲಿವಿಷನ್ ವ್ಯವಸ್ಥೆಯ ಪ್ರೇಷಕ ಮೊದಲು ಪ್ರಸಾರಮಾಡುತ್ತದೆ. ಕೂಡಲೆ ಆ ಪ್ರದೇಶದ ಮೇಲೆ ಸುತ್ತುತ್ತಿರುವ ಸಂಪರ್ಕ ಉಪಗ್ರಹದಲ್ಲಿ ಅಳವಡಿಸಿರುವ ಗ್ರಾಹಕ ಅದನ್ನು ಗ್ರಹಿಸಿ ತನ್ನ ಪ್ರೇಷಕದ ಮೂಲಕ ಪುನಃ ಪ್ರಸಾರ ಮಾಡುತ್ತದೆ. ಇಂಥ ಕಾರ್ಯಕ್ರಮದ ವಿಷಯ ಮೊದಲೇ ತಿಳಿದಿರುತ್ತದಾಗಿ ದೇಶದ ಎಲ್ಲ ಶಾಲೆಗಳಲ್ಲಿನ ಸಂಬಂಧಪಟ್ಟ ವಿದ್ಯಾರ್ಥಿಗಳೆಲ್ಲ ಆಯಾಶಾಲೆಯಲ್ಲಿ ಸೇರಿ ಪಾಠದಲ್ಲಿ ಭಾಗವಹಿಸುವರು. ಅಲ್ಲಿ ವ್ಯವಸ್ಥೆಗೊಳಿಸಿರುವ ಟೆಲಿವಿಷನ್ ಗ್ರಾಹಕ ಯಂತ್ರಗಳು ಆ ಪಾಠವನ್ನು, ಅಲ್ಲಲ್ಲಿ ಭೂಮಿಯ ಮೇಲೆ ಸ್ಥಾಪಿಸಿರುವ ಮರುಪ್ರಸಾರ ಕೇಂದ್ರಗಳ ಮೂಲಕವೂ ನೇರವಾಗಿ ಉಪಗ್ರಹದ ಮೂಲಕವೂ ಗ್ರಹಿಸಿ ಪ್ರಸಾರ ಮಾಡುತ್ತವೆ. ಇಂಥ ಬೋಧನ ಸೌಲಭ್ಯ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಆಗಲೆ ಆರಂಭವಾಗಿದೆ.

ಟೆಲಿವಿಷನ್ ಶಾಲಾಪ್ರಸಾರ ಕಾರ್ಯಕ್ರಮ ಈಗಾಗಲೆ ಪ್ರಚಾರಕ್ಕೆ ಬಂದಿದ್ದರೂ ಅದು ಕೇವಲ ಹತ್ತಿರದಲ್ಲಿರುವ ಶಾಲೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಸಂಪರ್ಕ ಉಪಗ್ರಹದ ಸಹಾಯದಿಂದ ಅದೇ ಕಾರ್ಯಕ್ರಮವನ್ನು ವಿಶಾಲ ಭೂಪ್ರದೇಶದಲ್ಲಿ ಹರಡಿರುವ ಶಾಲೆಗಳಿಗೆಲ್ಲ ಮುಟ್ಟಿಸಲು ಸಾಧ್ಯವಾಗುತ್ತದೆ. ಒಬ್ಬ ಅಧ್ಯಾಪಕನ ಪಾಠವನ್ನು ಲಕ್ಷಾಂತರ ವಿದ್ಯಾರ್ಥಿಗಳು ಕೇಳಿ, ನೋಡಿ ಕಲಿಯಲು ಇದರಿಂದ ಅವಕಾಶವಾಗುತ್ತದೆ. ಅಧ್ಯಾಪಕರ, ಅದರಲ್ಲೂ ವಿಜ್ಞಾನ, ಗಣಿತ ಮುಂತಾದ ವಿಷಯಗಳ ಅಧ್ಯಾಪಕರ ಅಭಾವವನ್ನು ನಿವಾರಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಇರತಕ್ಕ ಅಧ್ಯಾಪಕರಲ್ಲೆ ಅತ್ಯಂತ ದಕ್ಷರಾದವರನ್ನು ಆರಿಸಿಕೊಂಡು ಪಾಠ ಮಾಡಿಸಿ ಪ್ರಸಾರ ಮಾಡುವುದರಿಂದ ಇಡೀ ದೇಶದ ಆ ತರಗತಿಯ ವಿದ್ಯಾರ್ಥಿಸಮೂಹಕ್ಕೆ ಅವರ ದಕ್ಷ ಬೋಧನೆಯ ಸೌಲಭ್ಯವನ್ನು ದೊರೆಕಿಸಿಕೊಡಬಹುದು. ಶಿಕ್ಷಣ ಕಾರ್ಯದಲ್ಲಿ ಇಂಥ ತಾಂತ್ರಿಕ ವ್ಯವಸ್ಥೆಯ ಬಳಕೆಯಿಂದ ವಿದ್ಯಾರ್ಥಿಗಳಲ್ಲೂ ಅಧ್ಯಾಪಕರಲ್ಲೂ ಕಾಲನಿಷ್ಠೆ, ಎಚ್ಚರಿಕೆ, ಅವಧಾನದ ಕ್ರೇಂದ್ರೀಕರಣ ಇವೇ ಮುಂತಾದ ಒಳ್ಳೆಯ ಅಭ್ಯಾಸಗಳನ್ನು ಬೆಳೆಸಬಹುದು.

ಖಂಡವ್ಯಾಪಿ ತರಗತಿಯಲ್ಲಿ ಟೆಲಿವಿಷನ್ ಸೌಲಭ್ಯ ಇರುತ್ತದಾಗಿ ವಿದ್ಯಾರ್ಥಿಗಳು ಉಪಾಧ್ಯಾಯರು ಮಾಡುವ ಪಾಠಪ್ರವಚನವನ್ನು ಕೇಳುವುದರ ಜೊತೆಗೆ ಎಲ್ಲವನ್ನೂ ಕಣ್ಣಾರ ನೋಡಬಹುದು. ಎಂದರೆ ಅವರ ಬೋಧನೆಯನ್ನು ಕೇಳುವುದರ ಜೊತೆಗೆ ಉಪಾಧ್ಯಾಯರನ್ನೂ ಅವರು ಪ್ರದರ್ಶಿಸುವ ಉಪಕರಣಾದಿಗಳನ್ನೂ ನಿದರ್ಶಿಸುವ ಪ್ರಯೋಗಗಳನ್ನೂ ನೋಡಬಹುದು. ಕೆಲವು ದುಬಾರಿ ಬೆಲೆಯ ಉಪಕರಣಗಳನ್ನು ಬಳಸಿಕೊಂಡು ಪರಿಣಾಮಕಾರಿಯಾಗುವಂತೆ ಪಾಠ ಮಾಡಬಹುದಾದ ಅವಕಾಶವಿರುವ ಶಾಲೆಯೊಂದರ ಪಾಠಸೌಲಭ್ಯವನ್ನು ಅಂಥ ಯಾವ ಅವಕಾಶವೂ ಇಲ್ಲದ ಇತರ ಶಾಲೆಗಳಿಗೆ ದೊರಕಿಸುವುದು ಇಂಥ ವ್ಯವಸ್ಥೆಯಿಂದ ಸಾಧ್ಯ. ಒಂದೇ ಮಾತೃಭಾಷೆಯನ್ನುಳ್ಳ ವಿಶಾಲ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಪ್ರಾದೇಶಿಕ ವೈಪರೀತ್ಯಗಳನ್ನು ಇಂಥ ಕಾರ್ಯಕ್ರಮದ ಮೂಲಕ ಕಡಿಮೆ ಮಾಡಿ ಭಾಷೆಯ ಬಳಕೆಯಲ್ಲಿ ಏಕರೂಪವನ್ನು ಸಾಧಿಸಲು ಅವಕಾಶವಿದೆ. ಅನ್ಯಭಾಷಾ ಬೋಧನೆಯಲ್ಲೂ ಉಚ್ಚಾರಣೆ, ಪ್ರಯೋಗ ಮುಂತಾದ ಅಂಶಗಳನ್ನು ಸ್ಪಷ್ಟವಾಗಿಯೂ ಶಾಸ್ತ್ರೀಯವಾಗಿಯೂ ಬೋಧಿಸಬಲ್ಲ ಅಧ್ಯಾಪಕರ ಸೇವೆಯನ್ನು ಬಳಸಿಕೊಂಡಲ್ಲಿ ಆ ಭಾಷೆಯಲ್ಲೂ ಏಕರೂಪವನ್ನು ಸಾಧಿಸಬಹುದು.

ಹಲವಾರು ಭಾಷೆಗಳಿರುವ ಭಾರತದಂಥ ಉಪಖಂಡದಲ್ಲಿ ಒಂದೊಂದು ರಾಜ್ಯವೂ ತನ್ನದೇ ಆದ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಬಹುದು. ವಿಶಾಲ ಭೂ ಪ್ರದೇಶದಲ್ಲೆಲ್ಲ ಒಂದೇ ಶಿಕ್ಷಣ ಮಾಧ್ಯಮವನ್ನು ಬಳಸುವ ಅಮೇರಿಕದ ಸಂಯುಕ್ತ ಸಂಸ್ಥಾನದಂಥ ಭೂಪ್ರದೇಶಗಳಲ್ಲಿ ಇದು ಇನ್ನೂ ಹೆಚ್ಚು ಲಾಭದಾಯಕವಾದ ಕಾರ್ಯಕ್ರಮವಾಗಬಲ್ಲುದು.

(ಎನ್.ಎಸ್.ವಿ.)

**ಖಂಡಾಂತರ ವಾಯುಗುಣ ಪ್ರದೇಶ (ಮಧ್ಯ ಅಕ್ಷಾಂಶ) :** ಸಮಶೀತೋಷ್ಣವಲಯದಲ್ಲಿ, ದೊಡ್ಡ ಭೂಭಾಗಗಳ ನಡುವೆ ಹಬ್ಬಿರುವ ಸ್ವಾಭಾವಿಕ ಪ್ರದೇಶ. ಇದು ಸಮುದ್ರದ ಪ್ರಭಾವದಿಂದ ದೂರವಿರುವುದರಿಂದ ಉಷ್ಣತೆಯ ವೈಪರೀತ್ಯಗಳು ಕಾಣಬರುತ್ತವೆ. ಉತ್ತರ ಅಮೆರಿಕದ ಪ್ರೇರಿಗಳು (ಹುಲ್ಲುಗಾಡು) ಈ ಪ್ರದೇಶಕ್ಕೆ ಮಾದರಿಯಾದ್ದರಿಂದ ಇದಕ್ಕೆ ಪ್ರೇರಿ ಪ್ರರೂಪವೆಂಬ ಹೆಸರೂ ಉಂಟು. ಉತ್ತರ ಅಮೆರಿಕದ

ಮಧ್ಯಭಾಗ, ರಷ್ಯ ಮತ್ತು ಸೈಬೀರಿಯಗಳ ನಡುಭಾಗ ಮಂಗೋಲಿಯ ಮತ್ತು ಮಂಚೂರಿಯ ಇವು ಉತ್ತರಾರ್ಧ ಗೋಳದಲ್ಲೂ ಅರ್ಜೆಂಟೀನದ ಉತ್ತರ ಭಾಗ, ದಕ್ಷಿಣ ಆಫ್ರಿಕದ ಪೂರ್ವ ಮಧ್ಯಭಾಗ, ಆಸ್ಟ್ರೇಲಿಯದ ಮರ್ರೆ – ಡಾರ್ಲಿಂಗ್ ನದೀಕಣಿವೆ ಭಾಗ–ಇವು ದಕ್ಷಿಣಾರ್ಧ ಗೋಳದಲ್ಲೂ ಸ್ಥೂಲವಾಗಿ ಈ ವಾಯುಗುಣ ಪ್ರದೇಶಕ್ಕೆ ಸೇರಿವೆ.

ಖಂಡಾಂತರ ವಾಯುಗುಣ ಪ್ರದೇಶದ ಉಷ್ಣತೆಯ ಅಂತರ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಉತ್ತರಾರ್ಧಗೋಳದಲ್ಲಿ ಸಾಮಾನ್ಯವಾಗಿ ಪಶ್ಚಿಮದಿಂದ ಪೂರ್ವಕ್ಕೆ ಸಾಗಿದಂತೆ ಬೇಸಗೆಯೂ ಚಳಿಗಾಲವೂ ತೀವ್ರತರವಾಗುತ್ತವೆ. ದಕ್ಷಿಣಾರ್ಧಗೋಳದಲ್ಲಿ ಖಂಡಗಳು ಹೆಚ್ಚು ಕಿರಿದಾಗಿರುವುದರಿಂದ ಖಂಡಾಂತರ ವಾಯುಗುಣದ ವೈಪರೀತ್ಯಗಳು ಕಾಣುವುದಿಲ್ಲ. ದಕ್ಷಿಣ ಅಮೆರಿಕದ ಪಾಂಪಾಸ್ ಪ್ರದೇಶದ ಮೇಲೆ ಪಶ್ಚಿಮದಿಂದ ಬೀಸುವ ಗಾಳಿಗೆ ಆಂಡೀಸ್ ತಡೆಯೊಡ್ಡುವುದರಿಂದ ಇಲ್ಲಿಯ ವಾಯುಗುಣ ಉತ್ತರಾರ್ಧಗೋಳದ



ಮಧ್ಯ ಅಕ್ಷಾಂಶ ಹುಲ್ಲುಗಾಡು ಪ್ರದೇಶ

ಖಂಡಾಂತರ ಪ್ರದೇಶಗಳ ವಾಯುಗುಣವನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ದಕ್ಷಿಣ ಆಫ್ರಿಕ ಪ್ರಸ್ಥಭೂಮಿ ಪ್ರದೇಶದಲ್ಲಿ ಉಷ್ಣತೆ ಸಾಮಾನ್ಯವಾಗಿ ಹೆಚ್ಚು. ಹಿಮ ಬೀಳುವುದು ಅಪರೂಪ. ಆಸ್ಟ್ರೇಲಿಯದ ಮರ್ರೆ – ಡಾರ್ಲಿಂಗ್ ನದೀಪ್ರದೇಶದಲ್ಲಿ ಉಷ್ಣತೆ ಸಾಮಾನ್ಯವಾಗಿ ಅಧಿಕವಾಗಿರುವುದಾದರೂ ಬೇಸಗೆ–ಚಳಿಗಾಲದ ಉಷ್ಣತೆಯ ಅಂತರವೂ ಅಧಿಕವೇ.

ಖಂಡಾಂತರ ವಾಯುಗುಣ ಪ್ರದೇಶದ ಪ್ರರೂಪಿ ಸ್ಥಳಗಳಲ್ಲಿ ಮಳೆಯ ಮೊತ್ತ 25 – 76 ಸೆಂಮೀ. ವರೆಗೆ ವ್ಯತ್ಯಾಸವಾಗುತ್ತದೆ. ಈ ಪ್ರದೇಶದಲ್ಲಿ ಪೂರ್ವಬೇಸಗೆಯಲ್ಲಿ ಬೀಳುವ ಮಳೆಯಿಂದಾಗಿ ಹುಲ್ಲು ಸಮೃದ್ಧಿಯಾಗಿ ಬೆಳೆಯುತ್ತದೆ. ಬೇಸಗೆ ಹೆಚ್ಚು ಚುರುಕಾದಾಗ ಮತ್ತು ಚಳಿಯ ತೀವ್ರತೆಯ ಕಾಲದಲ್ಲಿ ಹುಲ್ಲು ಒಣಗುತ್ತದೆ. ಉತ್ತರಾರ್ಧಗೋಳದ ಚಳಿಪ್ರದೇಶಗಳಲ್ಲಿ ಚಳಿಗಾಲದಲ್ಲಿ ಹಿಮರೂಪದಲ್ಲಿ ಸಂಭವಿಸುವ ಅವಪತನದಿಂದಾಗಿ ಹೆಚ್ಚು ತೇವ ಒದಗಿಬರುತ್ತದೆ.

ಖಂಡಾಂತರ ವಾಯುಗುಣ ಪ್ರದೇಶದ ನೆಲ ಸಾಮಾನ್ಯವಾಗಿ ಕಪ್ಪು ಮಣ್ಣಿನಿಂದ ಕೂಡಿದ್ದು ಫಲವತ್ತಾಗಿರುತ್ತದೆ. ಈ ಪ್ರದೇಶದ ಸ್ವಾಭಾವಿಕ ಸಸ್ಯಜೀವನ ವಿಶಿಷ್ಟವಾದ್ದು. ಇಲ್ಲಿ ವ್ಯಾಪಕವಾಗಿ ಬೆಳೆಯುವ ಸಸ್ಯ ಹುಲ್ಲು. ಎಷ್ಟು ದೂರ ಕಣ್ಣು ಹಾಯಿಸಿದರೂ ಒಂದಾದರೂ ಮರ ಕಾಣಸಿಗುವುದಿಲ್ಲ. ಉತ್ತರಾರ್ಧಗೋಳದಲ್ಲಿರುವ ಈ ಪ್ರದೇಶದ ಉತ್ತರ ಭಾಗವನ್ನು ಚಳಿಗಾಲದಲ್ಲಿ ಸಾಮಾನ್ಯವಾಗಿ ಹಿಮ ಮುಸುಕಿರುತ್ತದೆ. ದಕ್ಷಿಣಾರ್ಧಗೋಳದಲ್ಲಿ ಹಿಮ ಅಪರೂಪ. ಆಸ್ಟ್ರೇಲಿಯದ ಹುಲ್ಲುಗಾಡುಗಳಲ್ಲಿ ಅಲ್ಲಲ್ಲಿ ನೀಲಗಿರಿ ಮರಗಳೂ ಪೊದೆಗಳೂ ಇರುತ್ತವೆ. ಕೆನಡ ಮತ್ತು ಸಂಯುಕ್ತ ಸಂಸ್ಥಾನಗಳ ಹುಲ್ಲುಗಾಡುಗಳನ್ನು ಪ್ರೇರೀಸ್ ಎಂದೂ ರಷ್ಯ, ಸೈಬೀರಿಯಾಗಳಲ್ಲಿ ಸ್ಟೆಪ್ ಎಂದೂ ಅರ್ಜೆಂಟೀನದಲ್ಲಿಯ ಹುಲ್ಲುಗಾಡುಗಳನ್ನು ಪಾಂಪಾಸ್ ಎಂದೂ ಕರೆಯುತ್ತಾರೆ.

ಇಲ್ಲಿಯ ಸಸ್ಯಾಹಾರಿ ಪ್ರಾಣಿಗಳಿಗೆ ಸಾಮಾನ್ಯವಾಗಿ ಹುಲ್ಲೇ ಆಹಾರ. ಅದನ್ನು ಗಬಗಬನೆ ತಿಂದು ಅನಂತರ ನಿಧಾನವಾಗಿ ಮೆಲಕು ಹಾಕುವುದು ಇವುಗಳ ಕ್ರಮ. ಇವು ವೇಗವಾಗಿ ಓಡಬಲ್ಲಂಥವು. ಕಾಡುಕುದುರೆ ಕಾಡುಕತ್ತೆಗಳು ಈ ಗುಂಪಿನ ಪ್ರರೂಪಿ ಪ್ರಾಣಿಗಳು. ಕಾಡುಕತ್ತೆ ಸು. 64 ಕಿಮೀ. ವೇಗದಲ್ಲಿ 16–19 ಕಿಮೀ ದೂರ ಓಡಬಲ್ಲುದು. ಸಸ್ಯಾಹಾರಿ ಪ್ರಾಣಿಗಳನ್ನು ತಿಂದು ಬದುಕುವ ಮೃಗಗಳೂ ಇಲ್ಲಿ ಉಂಟು.

ಹುಲ್ಲುಗಾಡುಗಳ ಆದಿಮ ಮಾನವ ಹುಲ್ಲುಗಾಡುಗಳಲ್ಲಿ ಜೀವನ ವನ್ನಾರಂಭಿಸಿದಾಗ ಮಾಂಸಾಹಾರಿಯಾಗಿದ್ದ. ಅವನು ಆಗ ಮುಖ್ಯವಾಗಿ ಬೇಟೆಗಾರ. ನಾಗರಿಕತೆಯ ಎರಡನೆಯ ಹಂತದಲ್ಲಿ ಮತ್ತೆ ಅವನು ಪಶುಪಾಲಕನಾದ. ಹೊಸ ಹೊಸ ಮೇವಿನ ಸ್ಥಳಗಳನ್ನರಸುತ್ತ ಅವನು ಪ್ರಾಣಿಗಳ ಮಂದೆಯೊಂದಿಗೆ ಅಲೆದಾಡುತ್ತಿದ್ದ. ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ ಮತ್ತು ಅರ್ಜೆಂಟೀನಗಳ ಹುಲ್ಲುನೆಲಗಳಲ್ಲಿ ಇಂದಿಗೂ ಕುರಿ ಸಾಕುವುದು ಒಂದು ಮುಖ್ಯ ಕಸಬು. ಹುಲ್ಲು ಬೆಳೆಯುವಲ್ಲೆಲ್ಲ ಆತ ಈ ಧಾನ್ಯಗಳನ್ನು ಬೆಳೆಯತೊಡಗಿದ್ದಾನೆ. ಈ ಪ್ರದೇಶಗಳು ಈಗ ಪ್ರಪಂಚದ ಧಾನ್ಯದ ಕಣಜಗಳೆನಿಸಿವೆ. ಗೋದಿ ಮುಖ್ಯ ಧಾನ್ಯ. ಬಾರ್ಲಿ, ಓಟ್ಸ್ ಮತ್ತು ರೈ ಇತರ ಧಾನ್ಯಗಳು. ದಕ್ಷಿಣ ಆಫ್ರಿಕದಲ್ಲಿ ಮಾತ್ರ ಮೆಕ್ಕೆಜೋಳದ್ದು ಪ್ರಥಮಸ್ಥಾನ. ಏಷ್ಯದ ಭಾಗದಲ್ಲಿರುವ ಪ್ರದೇಶ ಇನ್ನೂ ಸಂಪೂರ್ಣವಾಗಿ ಕೃಷಿಗೆ ಒಳಪಟ್ಟಿಲ್ಲ. ಉಳಿದ ಭಾಗಗಳಲ್ಲೆಲ್ಲ ವ್ಯಾಪಕವಾಗಿ ಬೇಸಾಯ ನಡೆಯುತ್ತಿದೆ. (ಎಂ.ಎಸ್.)

**ಖಂಡಾವರಣ ವಲಯ ಮತ್ತು ಇಳುಕಲು :** ಭೂಖಂಡದ ಸುತ್ತ ಅಲಗವಾಗಿಯೂ ತುಸು ಇಳಿಜಾರಾಗಿಯೂ ಹೆಚ್ಚು ಕಡಿಮೆ ಉತ್ತಳ ನೀರಿನಲ್ಲಿ ಸಮುದ್ರದೊಳಗೆ ಚಾಚಿಕೊಂಡಿರುವ ನೆಲದ ಅಂಚು ಖಂಡಾವರಣ ವಲಯ (ಕಾಂಟಿನೆಂಟಲ್ ಶೆಲ್ಫ್). ಈ ವಲಯದ ಅಂಚಿನಲ್ಲಿ ಇಳಿಜಾರು ತೀವ್ರವಾಗಿ ಏರಲು ಆರಂಭವಾಗುವುದು. ಇಂಥ ಅಂಚಿನಿಂದ ತೊಡಗಿ ಸಮುದ್ರದ ಮಹಾ ಆಳಗಳವರೆಗೆ ಹರಡಿರುವ ನೆಲ ಇಳುಕಲು (ಸ್ಲೋಪ್). ಖಂಡಾವರಣ ವಲಯ ಮತ್ತು ಇಳುಕಲಿಗೆ ಒಟ್ಟಾಗಿ ಖಂಡವೇದಿಕೆ (ಕಾಂಟಿನೆಂಟಲ್ ಟೆರೇಸ್) ಎಂದು ಹೆಸರು. ಆದ್ದರಿಂದ ಖಂಡ ವೇದಿಕೆ ಎಂಬುದು ಕಡಲ ಕಿನಾರೆ ಅಂಚಿನಿಂದ ತೊಡಗಿ ಕಡಲೊಳಗೆ ಸು. 4 ಕಿಮೀ. ಆಳದವರೆಗೂ ಮುಳುಗಿರುವ ಪ್ರದೇಶ. ಖಂಡಾವರಣ ವಲಯದ ವ್ಯಾಪ್ತಿ ಜಲಗೋಳದ ಸು. ಶೇ. 8.3 ಇದು ಸಾಮಾನ್ಯವಾಗಿ ಕರಾವಳಿಗೆ ಸುಮಾಂತರವಾಗಿರುವುದಾದರೂ ಕೆಲವೆಡೆಗಳಲ್ಲಿ ಕರಾವಳಿಯಿಂದ ದೂರಸರಿದು ಹೋದಂತಿರುವುದೂ ಉಂಟು. ಖಂಡಗಳ ಸ್ಥಾನಪಲ್ಲಟದಿಂದ ನೆಲದ ಅಂಚಿನ ಪ್ರದೇಶ ನೀರಿನಲ್ಲಿ ಮುಳುಗಿಹೋದುದರಿಂದಲೂ ನದಿಗಳು ತಮ್ಮಲ್ಲಿ ಒಯ್ದು ತಂದ ಶಿಲಾ ಕಳಪೆ ಸಮುದ್ರ ತಳವನ್ನು ಮುಚ್ಚಿಕೊಂಡಿರುವುದರಿಂದಲೂ ಖಂಡಾವರಣ ವಲಯಗಳು ನಿರ್ಮಾಣವಾದವು. ಈ ಭಾಗದಲ್ಲಿ ಸಮುದ್ರದ ಅಲೆಗಳೂ ಕಾರ್ಯವೆಸಗುವವು. ಆದ್ದರಿಂದ ಖಂಡಾವರಣ ವಲಯದಲ್ಲಿ ಏರುತಗ್ಗುಗಳೂ ಹಳ್ಳದಿನ್ನೆಗಳೂ ಉಂಟಾಗುತ್ತವೆ. ಕೆಲವು ಖಂಡಾವರಣಗಳ ಹೊರಭಾಗದಲ್ಲಿ ಆಳ ಕಡಿಮೆ ಇರುವ ತಟಗಳು ಇವೆ. ಖಂಡಾವರಣವಲಯ ಖನಿಜ ಸಂಪತ್ತಿನ, ಮುಖ್ಯವಾಗಿ ಕಲ್ಲೆಣ್ಣೆಯ



ಖಂಡಾವರಣ ವಲಯವನ್ನು ಸೂಚಿಸುವ ಚಿತ್ರ

ನೆಲೆಯಾಗಿದೆ ಎಂದು ಗೊತ್ತು ಹಚ್ಚಿರುವರು. ಈಗಾಗಲೇ ಉತ್ತರ ಅಮೆರಿಕದ ಕ್ಯಾಲಿಫೋರ್ನಿಯ ಮತ್ತು ಟೆಕ್ಸಾಸುಗಳ ಈ ವಲಯಭಾಗದಲ್ಲಿ ಕಲ್ಲೆಣ್ಣೆಯನ್ನು ಹೊರತೆಗೆಯಲಾಗುತ್ತಿದೆ. ಬಹುಶಃ ಭವಿಷ್ಯದ ಕಲ್ಲೆಣ್ಣೆ ಉತ್ಪನ್ನದ ಹೆಚ್ಚಿನ ಅಂಶ ಖಂಡಾವರಣವಲಯದಿಂದಲೇ ದೊರಕಬಹುದೆಂದು ಊಹೆ. (ಎಂ.ವಿ.)

**ಖಂಡಾಳಾ :** ಪುಣೆ ಜಿಲ್ಲೆಯಲ್ಲಿ ಭೋರ್‌ಘಟ್ಟದ ಮಧ್ಯದಲ್ಲಿ ಇರುವ ಒಂದು ಊರು. ಪುಣೆ–ಮುಂಬಯಿ ರೈಲುಮಾರ್ಗದಲ್ಲಿಯ ಒಂದು ಜಂಕ್ಷನ್. ಪುಣೆಯಿಂದ 67 ಕಿಮೀ. ದೂರದಲ್ಲಿದೆ. ಸಮುದ್ರಮಟ್ಟದಿಂದ (616 ಮೀ.) ಎತ್ತರದಲ್ಲಿದೆ. ಹೊಸ ಊರಿನ ಪಶ್ಚಿಮದ ಗುಡ್ಡಗಳಲ್ಲಿ ಒಂದು ದೊಡ್ಡ ಕೆರೆ ಇದೆ. ಇಲ್ಲಿಯ ವಾಯುಗುಣ ಹಿತಕರವಾದ್ದರಿಂದ ಇದೊಂದು ಆರೋಗ್ಯಕೇಂದ್ರ, ವಿಶ್ರಾಂತಿಧಾಮ. ಇಲ್ಲಿ ತಂಗುವ

ರೋಗಿಗಳಿಗಾಗಿ ಪಾರ್ಸಿ ಮತ್ತು ಹಿಂದೂ ಶ್ರೀಮಂತರು ಚಿಕ್ಕ ಮನೆಗಳನ್ನೂ ಧರ್ಮಶಾಲೆಗಳನ್ನೂ ಕಟ್ಟಿಸಿದ್ದಾರೆ. ರೋಗಿ–ಸೈನಿಕರಿಗಾಗಿ ಇಲ್ಲೊಂದು ರುಗ್ಣಾಲಯವಿದೆ. ರೈಲ್ವೆ ಮತ್ತು ಲೋಕೋಪಯೋಗಿ ಇಲಾಖೆಗಳ ಕಚೇರಿಗಳು, ಸೈನಿಕ ಮತ್ತು ಪೊಲೀಸ್ ಶಿಕ್ಷಣ ಕೇಂದ್ರಗಳು ಇಲ್ಲಿ ಸ್ಥಾಪಿತವಾಗಿವೆ. ಇಲ್ಲಿರುವ–ವೆಲಿಂಗ್ಟನ್ ಡ್ಯೂಕನ ಮೂಗಿನಂತೆ ಕಾಣುವ–ಪರ್ವತ ಭಾಗವೊಂದಕ್ಕೆ ಡ್ಯೂಕ್ಸ್ ನೋಸ್ ಎಂದೇ ಹೆಸರು. ಅಲ್ಲಿ ನಿಂತು ನೋಡಿದರೆ ಕಾಣುವ ನಿಸರ್ಗ ಸೌಂದರ್ಯ ಮನತಣಿಸುತ್ತದೆ. ಈ ಊರಿನ ಬಳಿಯಲ್ಲಿ ಮುಂಬಯಿಯ ಕಡೆಗೆ ಹೋಗುವ ರೈಲು ಪಶ್ಚಿಮ ಘಟ್ಟವನ್ನೇ ಬಗಿದು ಹೋಗುತ್ತಿರುವಂತೆ ಭಾಸವಾಗುತ್ತದೆ. ಪುಣೆ–ಮುಂಬಯಿ ರೈಲುಮಾರ್ಗದಲ್ಲಿರುವ 26 ಸುರಂಗಮಾರ್ಗಗಳಲ್ಲಿ ಇದೇ ಮೊದಲನೆಯದು; ಮತ್ತು ಪಶ್ಚಿಮಘಟ್ಟಗಳ ಸುರಂಗಮಾರ್ಗಗಳ ಪೈಕಿ ಅತ್ಯಂತ ಉದ್ದವಾದ್ದು. *ಖಂಡಾಳಾ*–*ಕರ್ಜತ್* ರೈಲುಮಾರ್ಗದ ನಿರ್ಮಾಣಕಾರ್ಯ 1856ರಲ್ಲಿ ಪ್ರಾರಂಭವಾಗಿ 1863ರಲ್ಲಿ ಮುಕ್ತಾಯಗೊಂಡಿತು. ಖಂಡಾಳದ ಹತ್ತಿರ ಒಂದು ಕಡೆ ರೈಲುಮಾರ್ಗವನ್ನು ಮುಂದುವರಿಸಲು ಸಾಧ್ಯವಾಗದೆ ಬೇರೆ ಮಾರ್ಗವನ್ನು ಯೋಜಿಸಿ ನಿರ್ಮಿಸಲಾಯಿತು. *

**ಖಂಡಿಗೆ ಮೀನು :** *ಅಕ್ಯಾಂತೋಟೆರಿಜಿಯೈ* ವರ್ಗದ *ಟ್ರ್ಯಾಕಿನಿಡೀ* ಕುಟುಂಬಕ್ಕೆ ಸೇರಿದ ಒಂದು ಜಾತಿಯ ಸಮುದ್ರವಾಸಿ ಅಸ್ಥಿಮೀನು. ಕೆಂಪು ಸಮುದ್ರದಿಂದ ಹಿಡಿದು ಹಿಂದೂ ಮಹಾಸಾಗರದ ಮೂಲಕ ಚೀನ ಸಮುದ್ರದವರೆಗೂ ಹಬ್ಬಿರುವ ತೀರ ಪ್ರದೇಶಗಳಲ್ಲಿ ವ್ಯಾಪಿಸಿದೆ. ಕಾಣೆ ಮೀನು ಪರ್ಯಾಯನಾಮ. ವೈಜ್ಞಾನಿಕ ನಾಮ *ಸಿಲೇಗೊ*. ಇದರಲ್ಲಿ ಸು. 8 ಪ್ರಭೇದಗಳಿವೆ. ಮುಖ್ಯವಾದವು *ಸಿಹಾಮ, ಡಾಮಿನ* ಮತ್ತು *ಮ್ಯಾಕ್ಯುಲೇಟ* ಎಂಬ ಮೂರು ಪ್ರಭೇದಗಳು. ಎಲ್ಲ ಪ್ರಭೇದಗಳೂ ಸು. 30 ಸೆಂಮೀ. ಉದ್ದಕ್ಕೆ ಬೆಳೆಯುತ್ತವೆ. ದೇಹದ ಬಣ್ಣ ಆಲಿವ್ ಹಸುರಿನಿಂದ ಬೂದಿಮಿಶ್ರಿತ ಹಳದಿ ವರೆಗೆ ವ್ಯತ್ಯಾಸವಾಗುತ್ತದೆ. ಶಂಕುವಿನಾಕಾರದ ತಲೆ, ಚೆನ್ನಾಗಿ ರೂಪುಗೊಂಡಿರುವ ಶ್ಲೇಷ್ಮೋತ್ಪಾದಕ ವ್ಯವಸ್ಥೆ, ವೋಮರ್ ಮೂಳೆಯ ಮೇಲೂ ಹಲ್ಲುಗಳಿರುವುದು, ಚಿಕ್ಕ ಬಾಯಿ, ಅಗಲವಾದ ಕಿವಿರು ರಂಧ್ರಗಳು, ಗರಗಸದಂತಿರುವ ಕಿವಿರು ಮುಚ್ಚಳದ ಮುಂದಿನ ಮೂಳೆ (ಪ್ರೀ ಒಪರ್ಕಲ್), ಟೀನಾಯಿಡ್ ಹುರುಪೆಗಳು, ಬೆನ್ನಿನಲ್ಲಿ 2 ಈಜುರೆಕ್ಕೆಗಳು–ಇವು ಖಂಡಿಗೆ ಮೀನಿನ ಕೆಲವು ಮುಖ್ಯ ಲಕ್ಷಣಗಳು. ಎಲ್ಲ ಮೀನುಗಳಲ್ಲಿರುವಂತೆಯೇ ಇದರಲ್ಲೂ ಕಣ್ಣುಗಳು ತಲೆಯ ಇಕ್ಕೆಡೆಗಳಲ್ಲಿರುವುದು ಸಾಮಾನ್ಯವಾದರೂ ಕೆಲವು ಬಗೆಗಳಲ್ಲಿ ತಲೆಯ ಮೇಲ್ಭಾಗಕ್ಕೆ ಸರಿದಿರುವುದುಂಟು.

ಖಂಡಿಗೆ ಮೀನು ಉತ್ತಮ ಬಗೆಯ ಆಹಾರ ಮೀನೆಂದು ಪ್ರಸಿದ್ಧವಾಗಿದೆ.

(ಬಿ.ಎಚ್.ಎಂ.)

**ಖಂಡೇಯ :** ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ತಾಲ್ಲೂಕಿನಲ್ಲಿರುವ ಪ್ರಾಚೀನ ಗ್ರಾಮ. ಭದ್ರಾನದಿಯ ಬಲದಂಡೆಯಲ್ಲಿದೆ. ಕಸಬಕ್ಕೆ ಈಶಾನ್ಯದಲ್ಲಿ 8 ಕಿಮೀ. ದೂರದಲ್ಲಿ ಭದ್ರಾನದಿ ತಿರುವು ಪಡೆದು ಆನೆ ಬಿದ್ದ ಹಳ್ಳವನ್ನು ಕೂಡುತ್ತದೆ. ಈಗ ಪಾಳು ಬಿದ್ದಿದ್ದರೂ ಹಿಂದೆ ಈ ಗ್ರಾಮ ಒಂದು ದೊಡ್ಡ ಊರಾಗಿತ್ತೆನ್ನಲಾಗಿದೆ. ಬಹು ಹಿಂದಿನ ಕಾಲದ ಅನೇಕ ದೇವಾಲಯಗಳಿಲ್ಲಿವೆ; ಮುಖ್ಯವಾದುದು ಮಾರ್ಕಂಡೇಶ್ವರ ದೇವಾಲಯ. ಹೊಯ್ಸಳ ಮತ್ತು ವಿಜಯನಗರ ಅರಸರ ಕಾಲದ ಶಿಲಾಶಾಸನಗಳನ್ನಿಲ್ಲಿ ಕಾಣಬಹುದು. ಈ ಊರು ಮಾರ್ಕಂಡ(ಮೃಕಂಡು) ಋಷಿಯ ತಪೋವನವಾಗಿತ್ತೆಂದು ಹೇಳಲಾಗಿದೆ. ಈತನ ಪ್ರಸಿದ್ಧ ಪುತ್ರನಾದ ಮಾರ್ಕಂಡೇಯ(**ನೋಡಿ– ಮಾರ್ಕಂಡೇಯ**) ಶಿವಸ್ಸಾನಿಧ್ಯವನ್ನು ಪಡೆದುದು ಇಲ್ಲಿಯೇ ಎನ್ನಲಾಗಿದೆ. ಮಾರ್ಕಂಡೇಯನ ಬದಲು ತನ್ನನ್ನು ಒಪ್ಪಿಸಿದ ಜನಾರ್ದನನ ಮತ್ತು ಕೃಪೆಗೈದ ಮೃತ್ಯುಂಜಯನ ದೇವಾಲಯಗಳು ಇಲ್ಲಿವೆ. *ಖಾಂಡೇಯ* ಎಂಬುದು ಮಾರ್ಕಂಡೇಯ ಎಂಬುದರ ಸಂಕ್ಷಿಪ್ತ ರೂಪವಿರಬಹುದು. ಬಳಕೆಯಲ್ಲಿ ಇದನ್ನು ಖಾಂಡ್ಯ ಎನ್ನುವರು.

ಹಳ್ಳಿಯ ಸಮೀಪದಲ್ಲಿ ಹರಿಯುವ ಭದ್ರಾನದಿಯ ನೀರಿನ ರಭಸದಿಂದಾಗಿ ನದೀ ಪಾತ್ರದ ಕರೀಕಲ್ಲು ನೆಲದಲ್ಲಿ ಉಂಟಾಗಿರುವ ಆಳುದ್ದನೆಯ ನುಣುಪಾದ ಗುಣಿಗಳು ಪ್ರೇಕ್ಷಣೀಯವಾಗಿವೆ. *

**ಖಂಡೇರಾವ್ :** ಮೈಸೂರು ಸಂಸ್ಥಾನದ ಆಡಳಿತ ಸೂತ್ರ ಹೈದರನ ವಶವಾಗುವುದನ್ನು ತಪ್ಪಿಸಿ ಅದನ್ನು ರಾಜಮನೆತನದಲ್ಲಿ ಉಳಿಸಲು ಶ್ರಮಿಸಿ ಈ ಯತ್ನದಲ್ಲೇ ಪ್ರಾಣಾರ್ಪಣೆ ಮಾಡಿದ ಒಬ್ಬ ರಾಜಭಕ್ತ. 18ನೆಯ ಶತಮಾನದ ಮಧ್ಯಭಾಗದಲ್ಲಿ ಮೈಸೂರು ರಾಜ್ಯದಲ್ಲಿ 7ನೆಯ ಚಾಮರಾಜ ಒಡೆಯನ ಮರಣಾನಂತರ ದಳವಾಯಿಗಳು ಪ್ರಾಬಲ್ಯಕ್ಕೆ ಬಂದರು. ಕೇವಲ 5 ವರ್ಷಗಳ ವಯಸ್ಸಿನ ಚಿಕ್ಕ ಕೃಷ್ಣರಾಜನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ದಳವಾಯಿ ನಂಜರಾಜಯ್ಯ ಆಡಳಿತ ಸೂತ್ರವನ್ನು ತಾನೇ ವಹಿಸಿದ್ದ. ನಂಜರಾಜಯ್ಯ ಪದಚ್ಯುತನಾಗುವುದಕ್ಕೆ ಕೆಲವು ವರ್ಷಗಳ ಹಿಂದೆ ಖಂಡೇರಾವ್ ಮತ್ತು ಹೈದರ್ ಪ್ರಸಿದ್ಧಿಗೆ ಬಂದರು. ಅವರಿಬ್ಬರೂ ಪ್ರಾರಂಭದಲ್ಲಿ ಪರಸ್ಪರ ಮೈತ್ರಿಯಿಂದಿದ್ದರು. 1756ರಲ್ಲಿ ಹೈದರ್ ದಳವಾಯಿಗಳ ನೇರ ಆಡಳಿತಕ್ಕೊಳಪಡದ ಕೆಲವು ಪ್ರದೇಶಗಳ ಆಡಳಿತವನ್ನು ಖಂಡೇರಾಯನಿಗೆ ದೊರಕಿಸಿಕೊಟ್ಟಿದ್ದ. ನಂಜರಾಜಯ್ಯ ಅಧಿಕಾರ ತ್ಯಜಿಸಿದ ಮೇಲೆ ಖಂಡೇರಾವ್ ಪ್ರಧಾನಿಯಾಗಿ ನೇಮಕಗೊಂಡಿದ್ದ. ಹೈದರ್ ಶೀಘ್ರವಾಗಿ ಆಡಳಿತದಲ್ಲಿ ತನ್ನ ಪ್ರಭಾವವನ್ನು ಸ್ಥಾಪಿಸಿದ. ಹೈದರ್ ಪ್ರಾಬಲ್ಯಕ್ಕೆ ಬರುತ್ತಿದ್ದುದನ್ನು ಗಮನಿಸಿದ ಖಂಡೇರಾವ್ ಅರಮನೆಯ ಪಕ್ಷಕ್ಕೆ ಮರಾಠರ ನೆರವು ದೊರಕುವಂತೆ ಏರ್ಪಡಿಸಿ ಹೈದರನನ್ನು ಎದುರಿಸಲು ಸಿದ್ಧತೆ ಮಾಡಿಕೊಂಡ. 1759ರ ಆಗಸ್ಟಿನಲ್ಲಿ ಹೈದರ್ ಆರ್ಕಾಟಿನಿಂದ ಮಿತಸೈನ್ಯದೊಡನೆ ಶ್ರೀರಂಗಪಟ್ಟಣಕ್ಕೆ ಬಂದಾಗ ಖಂಡೇರಾವ್ ಧೈರ್ಯದಿಂದ ತನ್ನ ಸೈನ್ಯದ ಮುಖಂಡತ್ವ ವಹಿಸಿ ಹೈದರನ ಸೈನ್ಯವನ್ನು ಬಗ್ಗುಬಡಿದ. ಹೈದರ್ ಶ್ರೀರಂಗಪಟ್ಟಣದಿಂದ ತಲೆತಪ್ಪಿಸಿಕೊಂಡು ಓಡಿಹೋದ. ಅವನ ಹೆಂಡತಿ ಮಕ್ಕಳನ್ನು ಖಂಡೇರಾವ್ ಅತ್ಯಂತ ಗೌರವದಿಂದ ನಡೆಸಿಕೊಂಡು ಅವರ ರಕ್ಷಣೆಗೆ ಯುಕ್ತ ಏರ್ಪಾಟು ಮಾಡಿದ.

1760ರಲ್ಲಿ ಫ್ರೆಂಚ್ ದಳವೊಂದರ ಸಹಾಯದಿಂದ ಖಂಡೇರಾಯನನ್ನು ಸೋಲಿಸಿ ತನ್ನ ಅಧಿಕಾರವನ್ನು ಸ್ಥಾಪಿಸಲು ಹೈದರ್ ಶ್ರೀರಂಗಪಟ್ಟಣದತ್ತ ಮುಂದುವರಿದ. ಆದರೆ ಖಂಡೇರಾವ್ ಸೈನ್ಯಸಮೇತನಾಗಿ ಹೊರಟು ನಂಜನಗೂಡಿನ ಸಮೀಪದಲ್ಲಿ ಹೈದರನ ಸೈನ್ಯವನ್ನು ಎದುರಿಸಿ ಹೋರಾಡಿ ಅವನನ್ನು ಸಂಪೂರ್ಣವಾಗಿ ಸೋಲಿಸಿದ. ಹೈದರ್ ಹರದನಹಳ್ಳಿಯ ಕಡೆಗೆ ಓಡಿಹೋದ.

ಖಂಡೇರಾಯನನ್ನು ಸೋಲಿಸುವುದು ಅಸಾಧ್ಯವೆಂದು ತಿಳಿದ ಹೈದರ್ ಮತ್ತೊಂದು ತಂತ್ರ ಹೂಡಿದ. ಗೌರವನಿಮಿತ್ತವಾಗಿ ಸರ್ವಾಧಿಕಾರಿ ಎಂಬ ಬಿರುದನ್ನೂ ಚಿಕ್ಕ ಯೋಧಪಡೆಯೊಂದನ್ನೂ ಹೊಂದಿ ಕೊಣನೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದ ನಂಜರಾಜಯ್ಯನ ಬಳಿಗೆ ಹೈದರ್ ಗೋಪ್ಯವಾಗಿ ಹೋಗಿ ಅವನ ಪಾದಕ್ಕೆ ನಮಸ್ಕರಿಸಿ, ಕ್ಷಮಾಯಾಚನೆ ಬೇಡಿ ತನ್ನ ಹಿಂದಿನ ಸೇವಕನನ್ನು ಕಾಪಾಡಬೇಕೆಂದು ದೈನ್ಯದಿಂದ ಬೇಡಿದ. ನಂಜರಾಜಯ್ಯ ಅವನಲ್ಲಿ ಕನಿಕರ ತಳೆದು ತನ್ನ ಬಲವನ್ನೆಲ್ಲ ಕೂಡಿಸಿ ಹೈದರನಿಗೆ ಕೊಟ್ಟು ತನ್ನ ಹೆಸರನ್ನು ಉಪಯೋಗಿಸಿಕೊಳ್ಳುವಂತೆ ಅನುಮತಿ ನೀಡಿದ. ತನ್ನ ಬಲವನ್ನು ವೃದ್ಧಿಪಡಿಸಿಕೊಂಡು ಶ್ರೀರಂಗಪಟ್ಟಣವನ್ನು ಮುತ್ತಬೇಕೆಂಬ ಹೈದರನ ಹವಣಿಕೆಯನ್ನು ತಿಳಿದು ಖಂಡೇರಾವ್ ಹೈದರನನ್ನು ಕಟ್ಟೆಮಳುವಾಡಿಯ ಬಳಿ ಪುನಃ ಸೋಲಿಸಿದ. ತೀಕ್ಷ್ಣ ಮತಿಯಾದ ಹೈದರ್ ಖಂಡೇರಾಯನನ್ನು ಸೋಲಿಸಲು ಮತ್ತೊಂದು ತಂತ್ರ ಹೂಡಿದ. ಖಂಡೇರಾಯನ ದಳಪತಿಗಳು ಅವನನ್ನು ಹೈದರನಿಗೆ ಒಪ್ಪಿಸುವಂತೆ ನಂಜರಾಜಯ್ಯನ ಸಹಿಯಿದ್ದ ಕರಪತ್ರಗಳನ್ನು ಸೃಷ್ಟಿ ಮಾಡಿ ಅವು ಖಂಡೇರಾಯನ ಕೈಗೆ ಸಿಗುವಂತೆ ಮಾಡಿದ. ಹೈದರನ ಕುತಂತ್ರವನ್ನರಿಯದ ಖಂಡೇರಾವ್ ಅವನ್ನು ನಿಜವೆಂದೇ ನಂಬಿ ಎದೆಗುಂದಿ ಶ್ರೀರಂಗಪಟ್ಟಣಕ್ಕೆ ಧಾವಿಸಿದ. ಅವನ ಸೈನಿಕರು ಹತಾಶರಾದರು. ತನ್ನ ಸಂಚು ಫಲಿಸಿದ್ದನ್ನರಿತ ಹೈದರ್ 1761ರ ಮೇ ತಿಂಗಳಲ್ಲಿ ಶ್ರೀರಂಗಪಟ್ಟಣದ ಬಳಿ ಬೀಡು ಬಿಟ್ಟು ಒಂದು ವಾರ ಕಾಲ ಸಂಧಾನ ನಡೆಸುವವನಂತೆ ನಟಿಸಿ ಕೊನೆಗೆ ಹಠಾತ್ತನೆ ನದಿಯನ್ನು ದಾಟಿ ಪಟ್ಟಣವನ್ನು ಪ್ರವೇಶಿಸಿ ವಿಜಯ ಘೋಷಿಸಿದ. ಈ ಘಟನೆಯಿಂದ ರಾಜ ತತ್ತರಿಸಿಹೋದ. ಖಂಡೇರಾಯನನ್ನು ತನಗೆ ಒಪ್ಪಿಸುವಂತೆಯೂ ತಾನು ಅವನನ್ನು ಗಿಳಿಯಂತೆ ಸಾಕುವುದಾಗಿಯೂ ಹೈದರ್ ದೊರೆಗೆ ನಿರೂಪ ಕಳಿಸಿದ. ಸೆರೆ ಸಿಕ್ಕಿದ ಖಂಡೇರಾಯನನ್ನು ಹೈದರ್ ಕಬ್ಬಿಣದ ಪಂಜರದಲ್ಲಿಟ್ಟು, ಆಹಾರವಾಗಿ ಹಾಲು ಅನ್ನ ನೀಡುವಂತೆ ಏರ್ಪಾಟು ಮಾಡಿದ. ಖಂಡೇರಾವ್ ಈ ಸ್ಥಿತಿಯಲ್ಲಿ ಹಲವು ದಿವಸಗಳ ಕಾಲ ಬದುಕಿದ್ದು ಕೊನೆಯುಸಿರೆಳೆದ.

ಖಂಡೇರಾವ್ ಪರಾಕ್ರಮಿಯಾದ ಯೋಧನಾಗಿದ್ದ. ಅವನಿಗೆ ರಾಜಮನೆತನದಲ್ಲಿ ವಿಶೇಷವಾದ ಮಮತೆ, ಭಕ್ತಿ ಇದ್ದುವು. ಅವನು ಬುದ್ಧಿವಂತನಾಗಿದ್ದರೂ ತಂತ್ರದಲ್ಲಿ ಹೈದರನಿಗೆ ಸಾಟಿಯಾಗಿರಲಿಲ್ಲ. ರಾಜಮನೆತನವನ್ನು ಆಪತ್ತಿನಿಂದ ಪಾರುಮಾಡಲು ನಿಷ್ಠೆಯಿಂದ ಶ್ರಮಿಸಿ ಆ ಧ್ಯೇಯ ಸಾಧನೆಗಾಗಿಯೆ ಅವನು ಪ್ರಾಣಾರ್ಪಣೆ ಮಾಡಿದ.

(ಜಿ.ಆರ್.ಆರ್.)

**ಖಂಡೇರಾವ್, ಜೆ.ಎಸ್. :** (1940–. ಜಗದೇವಪ್ಪ, ಶಂಕರಪ್ಪ ಖಂಡೇರಾವ್ ಅವರು ಗುಲ್ಬರ್ಗದಲ್ಲಿ 1940 ಅಕ್ಟೋಬರ್ ಒಂದರಂದು ಜನಿಸಿದರು. ಆ ವೇಳೆಗಾಗಲೇ ಗುಲ್ಬರ್ಗ ಶಾಹರವೂ ಸೇರಿದಂತೆ ಜಿಲ್ಲೆಯಾದ್ಯಂತ, ಶಾಂತಲಿಂಗಪ್ಪ ಪಾಟೀಲ, ಶಂಕರರಾವ್ ಅಳಂದಕರ, ಎಂ.ಡಿ.ಭೋಸಲೆ, ಎಸ್.ಎಂ.ಪಂಡಿತ್, ವಿ.ಎಸ್.ಭಂಕೂರ್‌ಕರ್ ಮುಂತಾದ ಕಲಾದಿಗ್ಗಜರು ತಮ್ಮ ಕೃತಿಗಳಿಂದ ಹೆಸರುವಾಸಿಯಾಗಿದ್ದರು. ಜಿಲ್ಲೆಗೆ ಹೈದರಾಬಾದ್ ಹತ್ತಿರವಾಗಿದ್ದರಿಂದ ಕೆಲವು ಕಲಾವಿದರು ಅಲ್ಲಿಯೂ ಹೆಸರು ಮಾಡಿದ್ದರು. ಮನೆಮನೆಯಲ್ಲಿಯೂ ಎಂಬಂತೆ ಯಾರಾದರೊಬ್ಬರ ಕಲಾಕೃತಿ ಒಂದಾದರೂ ಭಾವಚಿತ್ರ–ಇರುತ್ತಿದ್ದು ಚಿತ್ರಕಲೆಯ ಬಗ್ಗೆ ಜನರಿಗೆ ಪರಿಚಯವಿದ್ದು, ಅದರಿಂದಲೂ ಪ್ರಸಿದ್ಧಿ ಪಡೆಯುವಿಕೆ, ಜೀವನ ನಿರ್ವಹಣೆ ಮಾಡಬಹುದಾದುದರ ಬಗ್ಗೆ ಸಾಮಾನ್ಯರಲ್ಲಿ ನಂಬಿಕೆ ಬಂದಿತ್ತು. ಶಂಕರರಾಯರು ನೂತನ ವಿದ್ಯಾಶಾಲೆಯ ಅಂಗಳದಲ್ಲಿ ಕಲಾಶಾಲೆಯೊಂದನ್ನು ತೆರೆದಿದ್ದರು. ಹೀಗಾಗಿದ್ದರೂ ಖಂಡೇರಾಯರು ಸ್ವಲ್ಪ

ಪರಿಶ್ರಮದಿಂದಲೇ ಚಿತ್ರಕಲೆಯಲ್ಲಿ ಭವಿಷ್ಯವನ್ನು ತೊಡಗಿಸಿಕೊಂಡರು. ಶಾಲೆಯ ದಿನಗಳಲ್ಲೇ ಹೈದರಾಬಾದ್‌ನಿಂದ ಲೋಯರ್ ಡ್ರಾಯಿಂಗ್, ಸೊಲ್ಲಾಪುರದಿಂದ ಇಂಟರ್ ಮೀಡಿಯಟ್ ಗ್ರೇಡ್ ಪರೀಕ್ಷೆಗಳನ್ನೂ ಮುಂದೆ ಮುಂಬಯಿಯಲ್ಲಿ ಎಲಿಮೆಂಟರಿ ಪೆಯಿಂಟಿಂಗ್ ಪರೀಕ್ಷೆಯನ್ನು ಪೂರೈಸಿದರು. ಪ್ರೌಢಶಾಲಾಭ್ಯಾಸದ ಅನಂತರ ಮುಂಬಯಿಯ ಜೆ.ಜೆ.ಕಲಾಶಾಲೆಯಲ್ಲಿ ಕಲಾ ಡಿಪ್ಲೊಮಾ ಅಭ್ಯಸಿಸಿದರಾದರೂ ತಾಂತ್ರಿಕ ತೊಂದರೆಯಿಂದಾಗಿ ನೂತನ ಕಲಾಮಂದಿರದಿಂದ ಅದೇ ಜೆ.ಜೆ. ಕಲಾಶಾಲೆಯ ಪರೀಕ್ಷೆ ತೆಗೆದುಕೊಂಡು ಡಿಪ್ಲೊಮಾ ಪದವಿ ಪಡೆದರು (1963). ಅನಂತರ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕ ಪದವಿ ಸಹ ಪಡೆದರು (1975).

ಈ ವೇಳೆಗೆ ಶಂಕರರಾಯರ ಕಲಾಮಂದಿರ ಸ್ಥಗಿತವಾಗಿದ್ದು ಅಲ್ಲಿ ಒಂದು ಕಲಾ ಶಾಲೆಯ ಅಗತ್ಯವಿದ್ದುದರಿಂದ 1965ರಲ್ಲಿ ಗುಲ್ಬರ್ಗದಲ್ಲಿ 'ಆದರ್ಶ ಕಲಾ ಶಾಲೆ' (ಐಡಿಯಲ್ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಟ್) ಆರಂಭಿಸಿದರು. ಜಿಲ್ಲೆಯ ಅನೇಕ 'ಪ್ರಥಮ'ಗಳಂತೆ ಶರಣಬಸವೇಶ್ವರ ಕಾಲೇಜಿನಲ್ಲಿ ರಾಜ್ಯಕ್ಕೆ ಪ್ರಥಮವಾಗಿ ಸ್ನಾತಕ ಪದವಿಗೆ ಚಿತ್ರಕಲೆಯನ್ನು ಒಂದು ವಿಷಯವಾಗಿ ಅಭ್ಯಸಿಸುವ ಅವಕಾಶವಾಗಿದ್ದು ಖಂಡೇರಾಯರೇ ಅಲ್ಲಿ ಬೋಧಕರಾಗಿ ನೇಮಕವಾದರು. ಎರಡೂ ಶಾಲೆಗಳನ್ನು ಏಕಕಾಲದಲ್ಲಿ ನಿರ್ವಹಿಸಲು ಸಾಧ್ಯವಿಲ್ಲವಾಗಿ ಆದರ್ಶಕಲಾ ಶಾಲೆಯನ್ನು ತಮ್ಮ ಪ್ರಥಮ ಶಿಷ್ಯ ವಿ.ಜಿ.ಅಂದಾನಿಯವರಿಗೆ ಹಸ್ತಾಂತರಿಸಿದರು. ಇಂದು ಆ ಶಾಲೆ, ಕಾಲೇಜಾಗಿ, ಸ್ನಾತಕೋತ್ತರ ಕೇಂದ್ರವಾಗಿ ಬೆಳೆದಿದೆ. ಮುಂದೆ ಶರಣ ಬಸವೇಶ್ವರ ಕಾಲೇಜಿನಲ್ಲಿ ಚಿತ್ರಕಲೆಯನ್ನೇ ಎಲ್ಲ ವಿಷಯಗಳಾಗಿ ಅಭ್ಯಸಿಸಿ ಸ್ನಾತಕ ಪದವಿ ಪಡೆಯಬಹುದಾದ ಸೌಲಭ್ಯ ಒದಗಿ ಬಂದು ಸ್ನಾತಕೋತ್ತರ ಪದವಿಗೂ ಅವಕಾಶವಾಯಿತು. ಕಾಲೇಜಿನ ಈ ಶಾಖಾ ವಿಭಾಗಗಳಿಗೆ ಮುಖ್ಯಸ್ಥರಾಗಿ, ನಿರ್ದೇಶಕರಾಗಿ, ಪೂರ್ಣಾವಧಿ ಕಾರ್ಯ ನಿರ್ವಹಿಸಿ 1998ರಲ್ಲಿ ನಿವೃತ್ತರಾದರೂ ಇನ್ನೂ ಕಾಲೇಜಿನೊಂದಿಗೆ ಸಂಬಂಧ ಮುಂದುವರಿದಿದೆ. ರಾಜಧಾನಿಯಿಂದ ದೂರದ ಜಿಲ್ಲಾ ಕೇಂದ್ರದಲ್ಲಿ ಚಿತ್ರಕಲೆಯದೇ ಆದ ಎರಡು ಸ್ನಾತಕೋತ್ತರ ಕೇಂದ್ರ ರಾಜ್ಯಕ್ಕೇ ಪ್ರಥಮವಾಗಿ ಆರಂಭವಾಗಿ ಕ್ರಿಯಾಶೀಲವಾಗಿ ಮುಂದುವರಿದಿರುವುದರಲ್ಲಿ ಖಂಡೇರಾಯರ ಪರಿಶ್ರಮ, ದೂರದೃಷ್ಟಿ, ಕಲಾಪರ ಕಾಳಜಿಗಳನ್ನು ಕಾಣಬಹುದು. ಕಲಾ ಕಾಲೇಜಿನಲ್ಲಿ ರಾಜ್ಯ, ಅಂತರರಾಜ್ಯಗಳ ಖ್ಯಾತ ಕಲಾವಿದರುಗಳಲ್ಲದೆ ಅಂತರ ರಾಷ್ಟ್ರೀಯ ಕಲಾವಿದರೂ, ಉಪನ್ಯಾಸ, ಪ್ರಾತ್ಯಕ್ಷಿಕೆ ನೀಡಿ, ಶಿಬಿರ ನಡೆಸಿ ವಿಶ್ವಮಾನ್ಯವಾಗಿದೆ. ಕಲಾ ಕಾಲೇಜಿನಿಂದ ಅನೇಕ ಯುವ ಪ್ರತಿಭೆಗಳು ಹೊರಬಂದಿದ್ದು ಆ ಪ್ರತಿಭಾವಂತರು ರಾಜ್ಯಾದ್ಯಂತ ಕ್ರಿಯಾಶೀಲರಾಗಿದ್ದಾರೆ.

ಖಂಡೇರಾಯರ ಕೃತಿಗಳಲ್ಲಿ ಪ್ರಭಾವ ದಟ್ಟವಾಗಿ ಕಾಣಬಹುದು. ಅಸ್ಪಷ್ಟ ಆಕೃತಿಗಳು, ಬಣ್ಣದ ಬರೆಹಗಳು, ಇಡೀ ಫಲಕದ ನಿರ್ವಹಣೆಯಲ್ಲಿ ಆಳಕ್ಕಿಂತ ವಿಸ್ತಾರದ ಅನುಭವ ತರುವುದು. ಭಾವಚಿತ್ರ, ಪ್ರಕೃತಿ ದೃಶ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿದರೂ ಸ್ಟಿಲ್‌ಲೈಫ್ ಸಹ ರಚಿಸಿದ್ದಾರೆ. ಸಂಯೋಜಿತ ಚಿತ್ರಗಳನ್ನು ಹೆಚ್ಚಿಗೆ ರಚಿಸಿದಂತಿಲ್ಲ. ಖಂಡೇರಾಯರು ಒಂದು ನಿಶ್ಚಿತ ಅವಧಿಯಲ್ಲಿ ನಿಶ್ಚಿತ ಶೈಲಿ ಅಥವ ವಸ್ತು ಇರಿಸಿ ಅನೇಕ ಕೃತಿಗಳನ್ನು ರಚಿಸುವ ಪದ್ಧತಿಯನ್ನು ಅನುಸರಿಸಿದಂತಹವರು. ಶಾಲೆ ಕಾಲೇಜುಗಳಲ್ಲಿ ಭಾವಚಿತ್ರ ರಚನೆಯ ಪ್ರಾತ್ಯಕ್ಷಿಕೆಯ ವೇಳೆಯಲ್ಲಿ ರಚಿಸಿದ ಕೃತಿಗಳ ಸಂಗ್ರಹವೂ ಇದ್ದು ಅದರಲ್ಲಿ ಕಡುಪಾದ ಬಣ್ಣಗಳು, ದಪ್ಪದಾದ ಹೊರ ರೇಖೆಗಳು ಕಾಣಬಹುದು. ಪ್ರಕೃತಿ ದೃಶ್ಯ ಖಂಡೇರಾಯರ ಅಭಿವ್ಯಕ್ತಿ ಮಾಧ್ಯಮದಲ್ಲಿ ಮುಖ್ಯವಾದುದಾಯಿತು. ಉಳಿದವರಂತೆ ಐತಿಹಾಸಿಕ ಸ್ಮಾರಕಗಳ ಪ್ರಕೃತಿ ದೃಶ್ಯಗಳನ್ನು ಭಾವಮುದ್ರಾ ತಂತ್ರದಲ್ಲಿ ರಚಿಸುತ್ತಿದ್ದು ಅವುಗಳನ್ನು ಸರಳೀಕರಿಸಿದರು. ಒಣಹಾಕಿದ ಬಣ್ಣ ಬಣ್ಣದ ಬಟ್ಟೆಗಳು ಅವುಗಳೊಂದಿಗೆ ಸಪೂರಾದ ಉದ್ದನೆಯ ಒಂದೆರಡೇ ವ್ಯಕ್ತಿಗಳು, ಹಿನ್ನೆಲೆಗೆ ಹಳದಿ ಅಥವ ಕಿತ್ತಳೆಯ ಉಜ್ವಲ ಬಣ್ಣಗಳು ಕಂಡು ಬಂದವು. ಇಲ್ಲಿ ಯಾವುದೇ ಆಕಾರಗಳಿಗೆ ಹೊರ ರೇಖೆಯಿಲ್ಲದೆ ಬಣ್ಣಗಳ ಹರಹುಗಳಿಂದಲೇ ನಿರ್ವಹಿಸಿದ್ದರು. ಫಲಕದ ಮೇಲೆ ಆಕಾರಗಳೆಲ್ಲ ನವಿರಾಗಿ ಸಾಪಾಟಾಗಿ ಆಕಾರದ ಅಂಚುಗಳು ಹಿನ್ನೆಲೆಗೆ ಐಕ್ಯವಾಗಿರುವಂತೆ ಕಂಡು ಬರುತ್ತದೆಯಾದರೂ ಆಕಾರಗಳನ್ನು ಗುರುತಿಸುವಂತಿದ್ದವು. ಅನಂತರದ ಸರಣಿ ಬಂಡೆಗಳು, ಅವೂ ಸಹ ಫಲಕದ ಮೇಲೆ ಅಲ್ಲಲ್ಲಿ ಅನಿಶ್ಚಿತವಾದ ಕ್ರಮದಲ್ಲಿ ಬಣ್ಣದ ಹರಹುಗಳಂತೆ ಇರಿಸಿರುವಂತಹ ರಚನೆಗಳಾಗಿದ್ದುವು. ಇವು ಈಗಾಗಲೇ ಅಮೂರ್ತತೆಯ ಕಡೆಗೆ ವಾಲಿದ್ದವು. ಮುಂದಿನ ಕೃತಿಗಳು ಖಂಡೇರಾಯರಿಗಷ್ಟೇ ಸಾಧ್ಯವೆಂಬಂತಿದ್ದ 'ಕಿಟಕಿಯ ಗಾಜು' ಗಳ ಸರಣಿ ಚಿತ್ರಗಳು. ಹಿಂದಿನ ಕೃತಿಗಳ ಮುಂದುವರಿದ ರೂಪಗಳಂತೆ ಇಡೀ ಫಲಕವನ್ನು ಹಲವಾರು ಅಂಕಣಗಳಾಗಿ ರೂಪಿಸಿಕೊಳ್ಳುವಿಕೆ, ತೆಳುವಾದ ಬಣ್ಣ ಹಚ್ಚುವಿಕೆ, ಕೆಲವೇ ಬಣ್ಣಗಳಲ್ಲಿ ಪೂರೈಸುವಿಕೆ. ಒಣಕುಂಚದಿಂದ (ಡ್ರೈ ಬ್ರಷ್) ಎಳೆಎಳೆಯಾಗಿ ಬಣ್ಣದ ಹರಹುಗಳು ಇದ್ದಂತೆ ರಚಿಸುವಿಕೆ, ಒಡೆದ ಗಾಜಿನ ಹಿಂದಿನ ನೋಟದಂತೆ ಅಥವ ಅಲ್ಲಲ್ಲಿ ಹರಿದ ತೆಳುವಾದ ಕಾಗದ ಹಚ್ಚಿ ಅಸ್ಪಷ್ಟತೆ ತರುವಿಕೆ ಇತ್ಯಾದಿಗಳಿಂದ ತಮ್ಮದೇ ಆದ ಶೈಲಿಯನ್ನು ಕಂಡುಕೊಂಡರು. ಪುಟ್ಟ ಅಳತೆಯಿಂದ ಹಿಡಿದು ಬೃಹದಾಕಾರವಾಗಿ ನೂರಾರು ಪ್ರಯೋಗ ಮಾಡಿದರು. ಹಾಗೂ ಮುಂದುವರಿಸುತ್ತಿರುವರು.

ಖಂಡೇರಾಯರು 1980ರಲ್ಲಿ ಗುಲಬರ್ಗದಲ್ಲಿ 'ಕಲಾಪ್ರಗತಿ' ಎಂಬ ಹೆಸರಿನಲ್ಲಿ ಕಲಾತಂಡ ಆರಂಭಿಸಿ ಹಲವಾರು ವರ್ಷಗಳು ಅಧ್ಯಕ್ಷರಾಗಿದ್ದು ಕಲಾಪ್ರದರ್ಶನಗಳನ್ನು ಏರ್ಪಡಿಸಿದ್ದರು. ಕಲಾಯಾತ್ರೆ, ಕಲಾಮೇಳಗಳಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ವೈಯುಕ್ತಿಕವಾಗಿ ಖಂಡೇರಾಯರು ಗುಲಬರ್ಗ, ಬೆಂಗಳೂರು, ಧಾರವಾಡ, ಬೀದರ್, ಹೈದರಾಬಾದ್‌ಗಳಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ರಾಜ್ಯ ಲಲಿತ ಕಲಾ ಅಕಾಡಮಿಗೆ 1968ರಿಂದ 83ರ ಅವಧಿಯಲ್ಲಿ ಹಲವಾರು ಬಾರಿ ಹಾಗೂ ಮೈಸೂರು ದಸರಾ ವಸ್ತುಪ್ರದರ್ಶನ, ಚೆನ್ನೈನ ಪ್ರಾದೇಶಿಕ ಕಲಾ ಕೇಂದ್ರ, ಬೆಂಗಳೂರಿನ ಚಿತ್ರಕಲಾ ಪರಿಷತ್, ಮುಂಬೈಯ ಆರ್ಟ್ಸ್ ಸೊಸೈಟಿ, ಕೋಲ್ಕತ್ತಾದ ಫೈನ್ ಆರ್ಟ್ಸ್ ಸೊಸೈಟಿ ಇವೆ ಮುಂತಾದ ಅನೇಕ ಸಂಸ್ಥೆಗಳು ಏರ್ಪಡಿಸಿದ ಸಾಮೂಹಿಕ ಕಲಾಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. 1991ರಲ್ಲಿ ದೆಹಲಿಯಲ್ಲಿ ನಡೆದ ಏಳನೆಯ ಅಂತಾರರಾಷ್ಟ್ರೀಯ ಟ್ರಿನಾಲೆಯ ಭಾರತೀಯ ಕಲಾವಿದರ ಕೃತಿಗಳ ಪ್ರದರ್ಶನ ವಿಭಾಗಕ್ಕೆ ಕರ್ನಾಟಕದಿಂದ ಆಹ್ವಾನಿತರಾಗಿದ್ದ ಏಕೈಕ ಕಲಾವಿದರಿವರು. ಅಂತೆಯೇ 1992ರ ಭೂಪಾಲ್ ಕಲಾ ಭವನದ ಬೈನಾಲೆಯಲ್ಲಿ, 1985ರ ಬೆಂಗಳೂರಿನ ಸಾರ್ಕ್ ಸಂದರ್ಭದ ಪ್ರದರ್ಶನದಲ್ಲಿ ಆಹ್ವಾನಿತರಾದ ಕಲಾವಿದರು., ಶ್ರೀಯುತರು ರಚಿಸಿದ ಕಿತ್ತೂರು ರಾಣಿ ಚೆನ್ನಮ್ಮ ಚಿತ್ರಕ್ಕೆ ಯುನೆಸ್ಕೊ ದವರು ಮೆಚ್ಚುಗೆಯ ಪತ್ರ ನೀಡಿ ಗೌರವಿಸಿದರು.

ದೆಹಲಿಯಲ್ಲಿ 1990ರಲ್ಲಿ ಅಂತಾರಾಷ್ಟ್ರೀಯ ವಿಮಾನ ಪ್ರಾಧಿಕಾರ ಏರ್ಪಡಿಸಿದ್ದ ನೆಹರು ಕುರಿತ ಕೃತಿ ರಚನೆಯಲ್ಲಿ ಬಹುಮಾನಗಳಿಸಿದರು. 1997ರಲ್ಲಿ ರಾಜ್ಯಪ್ರಶಸ್ತಿ ಹಾಗೂ ಜಿ.ಎಸ್.ಶೆಣೈ ಪ್ರಶಸ್ತಿಗಳಿಗೆ ಭಾಜನರಾದರು.

ಖಂಡೇರಾಯರು ರಾಜ್ಯ ಲಲಿತಕಲಾ ಅಕಾಡಮಿಗೆ ಒಂದು ಅವಧಿಗೆ (1985–87) ಸದಸ್ಯರಾಗಿದ್ದು ಅಕಾಡಮಿಯಿಂದ 1988ರಲ್ಲಿ ರಾಜ್ಯ ಪ್ರಶಸ್ತಿ ಪಡೆದರು. 2002ರಲ್ಲಿ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ದೊರೆಯಿತು.

ಖಂಡೇರಾಯರ ಕೃತಿಗಳು ಗುಲಬರ್ಗ, ಬೀದರ್, ರಾಯಚೂರು, ಬೆಂಗಳೂರು, ಧಾರವಾಡ, ಹೈದರಾಬಾದ್, ಮುಂಬಯಿ, ಪೂನಾ, ಝಾನ್ಸಿ ಮುಂತಾದೆಡೆಗಳು ಖಾಸಗಿ ಸಂಗ್ರಹಾಲಯಗಳಲ್ಲಿ ಹಾಗೂ ಲಲಿತ ಕಲಾ ಅಕಾಡಮಿ, ವೆಂಕಟಪ್ಪ ಚಿತ್ರಶಾಲೆ, ರಾಮನ್ ಇನ್‌ಸ್ಟಿಟ್ಯೂಟ್, ದೆಹಲಿಯ ಆಧುನಿಕ ರಾಷ್ಟ್ರೀಯ ಕಲಾ ಗ್ಯಾಲರಿ, ಅಮೆರಿಕಾದ ಅಲಂಬಾ ವಸ್ತು ಸಂಗ್ರಹಾಲಯ ಇತ್ಯಾದಿ ಕಡೆಗಳಲ್ಲಿ ಸಂಗ್ರಹವಾಗಿವೆ. *

**ಖಖೊಂದ :** ಉತ್ತರ ಪ್ರದೇಶದ ಗೋರಖಪುರ ರೈಲು ನಿಲ್ದಾಣದಿಂದ 62 ಕಿಮೀ.ಗಳ ದೂರದಲ್ಲಿರುವ ನೋನಖಾರ ರೈಲು ನಿಲ್ದಾಣಕ್ಕೆ 5 ಕಿಮೀ. ದೂರದಲ್ಲಿದೆ. ಇದನ್ನು ಪ್ರಾಚೀನ ಕಿಷ್ಕಿಂದೆ ಎಂದೂ, ಇದು ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಜನ್ಮಭೂಮಿ ಎಂದೂ ಹೇಳಲಾಗಿದೆ. ಇಲ್ಲಿಯ ದೇವಾಲಯದಲ್ಲಿ ಈ ತೀರ್ಥಂಕರನ ಮೂರ್ತಿ ಇದೆ. (ಬಿ.ಜ.)

**ಖಗೋಳ :** ಆಕಾಶಕಾಯಗಳು ಉತ್ಸರ್ಜಿಸಿದ ಬೆಳಕು ಮತ್ತಿತರ ವಿದ್ಯುತ್ಕಾಂತ ಅಲೆಗಳು ನಿರ್ದಿಷ್ಟ ವೀಕ್ಷಕನೊಬ್ಬನ ಬಳಿಗೆ ಆಗಮಿಸುವ ದಿಕ್ಕುಗಳನ್ನು ಸೂಚಿಸುವುದಕ್ಕಾಗಿ ಉಪಜ್ಞಿಸಿರುವ ಒಂದು ಕಾಲ್ಪನಿಕ ಗೋಳ(ಸೆಲೆಸ್ಟಿಯಲ್ ಸ್ಫಿಯರ್). ಇದನ್ನು ತೀರ ಅಧಿಕವಲ್ಲದ ಯಾವುದಾದರೊಂದು ಯಾದೃಚ್ಛಿಕ ತ್ರಿಜ್ಯದಿಂದ ವೀಕ್ಷಕನು ಕೇಂದ್ರವಾಗಿರುವಂತೆ ಆತನ ಸುತ್ತ ರಚಿಸಲಾಗಿದೆಯೆಂದು ಭಾವಿಸುತ್ತೇವೆ. ವೀಕ್ಷಕನ ಸ್ಥಾನ ವಿಶ್ವದೊಳಗೆ ಎಲ್ಲಿ ಬೇಕಾದರೂ ಇರಬಹುದು; ಭೂಮೇಲ್ಮೈಯಲ್ಲಿರುವುದಂತೂ ಸಾಮಾನ್ಯ ಅನುಭವ. ಅಲ್ಲದೆ ವಿಶಿಷ್ಟ ಗಣಿತೀಯ ಲೆಕ್ಕಾಚಾರಗಳ ಸಲುವಾಗಿ ಆತನ ಸ್ಥಾನವನ್ನು ಅನೇಕ ವೇಳೆ ಭೂಮಿಯ ಕೇಂದ್ರದಲ್ಲಿಯೋ (ಭೂಕೇಂದ್ರೀಯ ಖಗೋಳ, ಜಿಯೊಸೆಂಟ್ರಿಕ್ ಸೆಲೆಸ್ಟಿಯಲ್ ಸ್ಫಿಯರ್) ಸೂರ್ಯಕೇಂದ್ರದಲ್ಲಿಯೋ (ಸೂರ್ಯಕೇಂದ್ರೀಯ ಖಗೋಳ, ಹೀಲಿಯೊ ಸೆಂಟ್ರಿಕ್ ಸೆಲೆಸ್ಟಿಯಲ್ ಸ್ಫಿಯರ್) ಕಲ್ಪನಿಕವಾಗಿ ಆಯುವುದುಂಟು. ಚಿತ್ರ (1)ರಲ್ಲಿ o ಇಂಥ ಯಾವುದೇ ವೀಕ್ಷಕಸ್ಥಾನವನ್ನೂ σ ಅದರ ಸುತ್ತ ರಚಿಸಿದ ಸಾಕಷ್ಟು ಅಲ್ಪ ತ್ರಿಜ್ಯದ ಖಗೋಳವನ್ನೂ ಸೂಚಿಸಲಿ. ಆಕಾಶಕಾಯಗಳಿಗೂ ವೀಕ್ಷಕನಿಗೂ ನಡುವೆ ಇರುವ ಅಂತರವನ್ನು ಸಾಮಾನ್ಯವಾಗಿ ನಿರ್ವಾತ (ವ್ಯಾಕ್ಯುಮ್) ಎಂದೇ ಪರಿಗಣಿಸುತ್ತೇವೆ; ಅದ್ದರಿಂದ ವೀಕ್ಷಕನ ಸುತ್ತ ಒಂದುವೇಳೆ ವಾಯುಮಂಡಲದಂಥ ವಸ್ತುಮಾಧ್ಯಮವೊಂದು ವ್ಯಾಪಿಸಿದ್ದಲ್ಲಿ ಅದರ ರಿಫ್ರೇಕ್ಷಣ (ರಿಫ್ರ್ಯಾಕ್ಷನ್) ಪರಿಣಾಮಗಳನ್ನು ಯುಕ್ತ ತಿದ್ದುಪಡಿಗಳ ಮೂಲಕ ಪೂರ್ಣಭಾವಿಯಾಗಿಯೇ ರದ್ದುಗೊಳಿಸಿರಬೇಕಾಗುತ್ತದೆ. ಈಗ a, b ಎನ್ನುವ ದೂರದ ಎರಡು ಆಕಾಶಕಾಯಗಳಿಂದ ಹೊರಟ ಬೆಳಕಿನ ಕಿರಣಗಳು ಅನುಕ್ರಮವಾಗಿ α, β ಮಾರ್ಗಗಳ ಅನುಸಾರ ಪ್ರಸರಿಸಿಬಂದು ಕಾಲ್ಪನಿಕ σ ಗೋಳವನ್ನು A, B ಗಳಲ್ಲಿ ಭೇದಿಸಿ o ನಲ್ಲಿರುವ ವೀಕ್ಷಕನನ್ನು ಪ್ರಸಕ್ತ ಕ್ಷಣದಲ್ಲಿ ಏಕಕಾಲೀಯವಾಗಿ ತಲುಪಲಿ. ಆಗ, ಆ ವೀಕ್ಷಕನಿಗೆ ಸಾಪೇಕ್ಷವಾಗಿ, A ಬಿಂದು ಆಕಾಶಕಾಯ α ಯ ಪ್ರಸಕ್ತಕಾಲಿಕ ಖಗೋಳೀಯ ಸ್ಥಾನ ಎಂದೆನಿಸಿಕೊಳ್ಳುವುದು; ಅಂತೆಯೇ ಆತನಿಗೆ ಸಾಪೇಕ್ಷವಾಗಿ B ಬಿಂದು ಕಾಯ bಯ ಪ್ರಸಕ್ತಕಾಲಿಕ ಖಗೋಳೀಯ ಸ್ಥಾನ. ಅಲ್ಪ ದೂರಗಳನ್ನು ಕ್ರಮಿಸುವಾಗ ಬೆಳಕಿನ ಕಿರಣಗಳು ಯೂಕ್ಲಿಡಿಯನ್ ಸರಳರೇಖೆಗಳಲ್ಲಿ ಪ್ರಸರಿಸುವುದರಿಂದ ಹಾಗೂ σ ಖಗೋಳದ ತ್ರಿಜ್ಯ ಅಲ್ಪವಾಗಿರುವುದರಿಂದ, α, β ಮಾರ್ಗರೇಖೆಗಳ AO, BO ಖಂಡಗಳನ್ನು ಯೂಕ್ಲಿಡಿಯನ್ ಸರಳರೇಖೆಗಳೆಂದೇ

ಪರಿಗಣಿಸಬಹುದು. ಇದರಿಂದ ಯೂಕ್ಲಿಡಿಯನ್ ಜ್ಯಾಮಿತಿಯ ಅರ್ಥಛಾಯೆಯಲ್ಲಿ a ಮತ್ತು b ಕಾಯಗಳ ಬೆಳಕಿನ ಕಿರಣಗಳು ವೀಕ್ಷಕನನ್ನು ಮುಟ್ಟುವ ದಿಸೆಗಳು $\vec{AB}$ ಮತ್ತು $\vec{BO}$ ಎಂದು ಹೇಳಲು ಸಾಧ್ಯವಾಗುವುದು. ಈ $\vec{AO}$, $\vec{BO}$ ದಿಸೆಗಳನ್ನು



ಚಿತ್ರ–1

ಸೂಚಿಸುವುದಕ್ಕಾಗಿ ನಾವು ಖಗೋಳದ ಮೇಲಿರುವ A, B ಬಿಂದುಗಳನ್ನು ಬಳಸಿಕೊಳ್ಳುತ್ತೇವೆ. ಅಂದ ಮೇಲೆ A ಎನ್ನುವುದು $\vec{AO}$ವಿನ ಹ್ರಸ್ವರೂಪ (ಅಬ್ರೀವಿಯೇಷನ್), B ಎನ್ನವುದು $\vec{BO}$ವಿನ ಹ್ರಸ್ವರೂಪ. ಅಂತೆಯೇ ಖಗೋಳದ ಮೇಲಿರುವ ಯಾವುದೇ X ಬಿಂದು ನಿರ್ದಿಷ್ಟ $\vec{XO}$ ದಿಕ್ಕಿನ ಸೂಚಕವಾಗುತ್ತದೆ. ಈ ವಿವರಣೆಯಿಂದ ಖಗೋಳೀಯ ಸ್ಥಾನಗಳ ಪರಿಕಲ್ಪನೆ ಕೇವಲ ಒಂದು ಸೌಕರ್ಯಪೂರ್ಣ ದಿಕ್ಸೂಚಕ ವ್ಯವಸ್ಥೆ ಎಂಬ ಅಂಶ ಸ್ಪಷ್ಟವಾಗುವುದು.

ಖಗೋಳ ಸಾಕಷ್ಟು ಕಿರಿದಾಗಿರುವ ಕಾರಣ ಅದರ ವ್ಯಾಪ್ತಿಯೊಳಗೆ ಯೂಕ್ಲಿಡಿಯನ್ ಜ್ಯಾಮಿತಿಯ ಗಣನ ವಿಧಿಗಳು ಸಿಂಧುವಾಗಬಲ್ಲವು. ಆದರೆ ಇಡೀ ವಿಶ್ವಾದ್ಯಂತವೂ ಇದೇ ಗಣನ ವಿಧಿಗಳು ಸಿಂಧುವಾಗಬೇಕೆಂಬ ಆಶ್ವಾಸನೆಯೇನೂ ಇಲ್ಲ. ಉದಾಹರಣೆಗೆ ಒಟ್ಟು ವಿಶ್ವದಲ್ಲಿ ಯೂಕ್ಲಿಡಿಯನ್ ಸರಳರೇಖೆಗಳೇ ಇಲ್ಲವಾಗಬಹುದು. ಚಿತ್ರ (1)ರಲ್ಲಿ ಬೆಳಕಿನ α, β ಮಾರ್ಗರೇಖೆಗಳನ್ನು ಬಾಗಿರುವಂತೆ ಎಳೆಯುವುದರ ಮೂಲಕ ಈ ಸಂಭವ ಪರಿಸ್ಥಿತಿಯನ್ನು ವ್ಯಕ್ತಪಡಿಸಲಾಗಿದೆ. ಈಗ ಮತ್ತೆ a, b ಕಾಯಗಳನ್ನೂ ಅವುಗಳ ಪ್ರಸಕ್ತಕಾಲಿಕ ಖಗೋಳೀಯ ಸ್ಥಾನಗಳಾದ A, B ಬಿಂದುಗಳನ್ನೂ ಪರಿಶೀಲಿಸಿ. ಕಾಯಗಳಿಂದ ವೀಕ್ಷಕನೆಡೆಗೆ ಪ್ರಸಕ್ತ ಕ್ಷಣದಲ್ಲಿ ಪಾತವಾಗುತ್ತಿರುವ ಬೆಳಕಿನ ಕಿರಣಗಳ ದಿಕ್ಕುಗಳನ್ನು ಪ್ರತಿನಿಧಿಸುವ ಖಗೋಳದ ಮೇಲಣ A, B ಸ್ಥಾನಗಳು ನಿಜಕ್ಕೂ ಏಕಕಾಲೀಯವೇ. ಆದರೆ ಈ ಏಕಕಾಲೀಯತೆ (ಸೈಮಲ್ಟೇನೈಟಿ) ಕಾಯಗಳ ಮೂಲ a, b ಸ್ಥಾನಗಳಿಗೆ ಅನ್ವಯಿಸುವುದಿಲ್ಲವೆಂಬ ಅಂಶ ಗಮನಾರ್ಹ. ಉದಾಹರಣೆಗೆ a ಆಂಡ್ರೊಮೀಡ ನಕ್ಷತ್ರಪುಂಜದ (ಕಾನ್ಸ್ಟೆಲೇಷನ್) M31 ಬ್ರಹ್ಮಾಂಡವೂ (ಗ್ಯಾಲಾಕ್ಸಿ) b ಹೈಡ್ರಾ ನಕ್ಷತ್ರಪುಂಜದ ಬ್ರಹ್ಮಾಂಡ ಪರಿವಾರವೂ ಆಗಿರಲಿ. ಇಂದಿನ ಅಂದಾಜುಗಳ ಪ್ರಕಾರ ಭೂಮಿಯ ಮೇಲಿರುವ ವೀಕ್ಷಕನಿಗೂ ಇವೆರಡು ಆಕಾಶಕಾಯಗಳಿಗೂ ಅನುಕ್ರಮವಾಗಿ 2 ಮಿಲಿಯನ್ ಮತ್ತು 1,000 ಮಿಲಿಯನ್ ಬೆಳಕಿನ ವರ್ಷಗಳಷ್ಟು ಅಂತರವಿದೆ. ಆದ್ದರಿಂದ ಚಿತ್ರ (1)ರ ವೀಕ್ಷಕ (0) ಭೂನಿವಾಸಿಯಾದಲ್ಲಿ ಅದರಲ್ಲಿಯ a ಬಿಂದು ಎರಡು ಮಿಲಿಯನ್ ವರ್ಷಗಳ ಹಿಂದೆ ಆಂಡ್ರೊಮೀಡದ ಬ್ರಹ್ಮಾಂಡ ಇದ್ದ ಸ್ಥಳವನ್ನೂ b ಬಿಂದು 1,000 ಮಿಲಿಯನ್ ವರ್ಷಗಳಷ್ಟು ಹಿಂದೆ ಹೈಡ್ರಾಬ್ರಹ್ಮಾಂಡಪರಿವಾರವಿದ್ದ ಸ್ಥಳವನ್ನೂ ನಿರ್ದೇಶಿಸುತ್ತವೆ ಎಂದು ಬಗೆಯಬೇಕು. ಈ ಪರಿಶೀಲನೆಯಿಂದ ಆಕಾಶಕಾಯಗಳ ಖಗೋಳೀಯ ಹಾಗೂ ವಾಸ್ತವಿಕ ಸ್ಥಾನಗಳ ಸಂಬಂಧ ನಿಜಕ್ಕೂ ಎಷ್ಟೊಂದು ಜಟಿಲವಿರಬಹುದೆಂದು ಅರಿವು ಮೂಡದೆ ಇರದು. ಕಾಯಗಳ ಖಗೋಳೀಯ ಸ್ಥಾನಗಳನ್ನು ಮಾತ್ರವೇ ಕುರಿತ ಅಧ್ಯಯನಕ್ಕೆ ಗೋಳೀಯ ಖಗೋಳವಿಜ್ಞಾನ (ಸ್ಫೆರಿಕಲ್ ಅಸ್ಟ್ರಾನಮಿ) ಎಂದು ಹೆಸರು. ಇದರಲ್ಲಿ ವೀಕ್ಷಕನ ಖಗೋಳದ ಮೇಲಿರುವ A, B ಗಳಂಥ ದಿಶಾಸೂಚಕ ಬಿಂದುಗಳ ಚಲನೆಯನ್ನು ಅಭ್ಯಸಿಸಲಾಗುವುದು. ವಿಶ್ವದಲ್ಲಿ ಜರುಗುವ ಭೌತಪ್ರಕ್ರಿಯೆಗಳನ್ನು ನೇರವಾಗಿ ವಿವೇಚಿಸುವ ಭೌತ ಖಗೋಳವಿಜ್ಞಾನದಲ್ಲಿಯಾದರೋ (ಫಿಸಿಕಲ್ ಅಸ್ಟ್ರಾನಮಿ) a, b ಗಳಂಥ ಮೂಲ ಕಾಯಗಳ ಬಗ್ಗೆಯೇ ಅಧ್ಯಯನ ನಡೆಸಬೇಕಾಗುತ್ತದೆ.

ಭೂಮಿಯ ಮೇಲ್ಮೈಯ ಮೇಲೆ ನಿಂತು ನೀಲಾಕಾಶವನ್ನು ನೋಡುವ ವೀಕ್ಷಕನಿಗೆ ಆ ಆಕಾಶ ಹೆಚ್ಚುಕಡಿಮೆ ಅರ್ಧಗೋಳಾಕಾರವಾಗಿ ತನ್ನ ಮೇಲೆ ಕವಿಚಿಕೊಂಡಿರುವಂತೆ ಭಾಸವಾಗುತ್ತದೆ. ರಾತ್ರಿವೇಳೆ ಕಪ್ಪಾಗುವ ಇದೇ ಆಕಾಶಕ್ಕೆ ಚಂದ್ರ ನಕ್ಷತ್ರಗಳು ಅಂಟಿಕೊಂಡಿರುವಂತೆಯೂ ಅನ್ನಿಸುತ್ತದೆ. ಪ್ರಾಚೀನ ಖಗೋಳತಜ್ಞರಿಗೆ ಮೂಲತಃ ಖಗೋಳದ ಪರಿಕಲ್ಪನೆಯನ್ನು ನೀಡಿದ ದೃಶ್ಯಗಳಾದರೂ ಇವೇ. ಆ ವಿಜ್ಞಾನಿಗಳ ಪಾಲಿಗೆ ನಕ್ಷತ್ರಾದಿಗಳನ್ನು ಹೊತ್ತ ಆಕಾಶವೇ ಖಗೋಳವಾಯಿತು. ಅದರ ತ್ರಿಜ್ಯ ಅನಂತರವೇ ಇರಬೇಕೆಂದು ಅವರು ತರ್ಕಿಸಿದರು. ಇಂದಾದರೋ ಆಕಾಶಕಾಯ ಗಳನ್ನು ಹೊತ್ತಿರುವಂಥ ಗೋಳ ಯಾವುದೂ ಇಲ್ಲವೆಂಬ ಅಂಶ ಎಲ್ಲರಿಗೂ ಸ್ಪಷ್ಟವಾಗಿದೆ. ಭೂಮೇಲ್ಮೈಯಲ್ಲಿನ ವೀಕ್ಷಕನಿಗೆ ಗೋಚರಿಸುವ ನೀಲಾಕಾಶ ನಿಜಕ್ಕೂ ಆತನನ್ನು ಆವರಿಸಿರುವ ವಾಯುಮಂಡಲವಲ್ಲದೆ ಬೇರೇನೂ ಅಲ್ಲ.

ಚಿತ್ರ (2)ರಲ್ಲಿ ತೋರಿಸಿರುವಂತೆ ಅದು ಗೋಳದ ಒಂದು ಹ್ರಸ್ವಖಂಡವೇ (ಮೈನರ್ ಸೆಗ್‌ಮೆಂಟ್) ಹೊರತು ಅರ್ಧಗೋಳವಲ್ಲ. ವಿಶಾಲವಾದ ಬಯಲಿನಲ್ಲೋ ಸಮುದ್ರದ ದಂಡೆಯಲ್ಲೋ ನಿಂತು ಆಕಾಶವನ್ನು ವೀಕ್ಷಿಸುವಾತನ ಅನುಭವ ಈ ವಿಚಾರವನ್ನು ಪೂರ್ಣವಾಗಿ ಪುರಸ್ಕರಿಸುತ್ತದೆ ಕೂಡ. (ಹುಟ್ಟುವಾಗ ಹಿರಿದಾಗಿರುವ ಚಂದ್ರಬಿಂಬ ನೆತ್ತಿಯ ಮೇಲೆ ಬಂದಾಗ ಕಿರಿದಾಗುವಂತೆ ಕಾಣುವ ದೃಗ್ಭ್ರಾಂತಿಗೂ ತೋರ್ಕೆ ಆಕಾಶ ಗೋಳದ ಹ್ರಸ್ವ ಖಂಡವಾಗಿರುವುದೇ ಕಾರಣ). ಇವೆಲ್ಲ ಪರಿಶೀಲನೆಗಳ ಫಲ ವಾಗಿ ಖಗೋಳವನ್ನು ತೋರ್ಕೆ ಆಕಾಶ ದೊಂದಿಗೆ ಏಕೀಕರಿಸುವ ಪರಿಪಾಠವನ್ನು ನಾವು ಇಂದು ವರ್ಜಿಸಿ ಈ ಲೇಖನದ ಮೊದಲಲ್ಲಿ ನೀಡಿರುವ ಆಧುನಿಕ ವ್ಯಾಖ್ಯೆಯನ್ನು ಅಂಗೀಕರಿಸುತ್ತೇವೆ.



ಚಿತ್ರ2 O–ವೀಕ್ಷಕನ ಸ್ಥಾನ ಗೀಟು ಮಾಡಿರುವ ಭಾಗ ವೀಕ್ಷಕನಿಗೆ ಆಕಾಶವೆಂದು ಭಾಸವಾಗುವ ವಾಯುಮಂಡಲದ ಅಂಶ

ಖಗೋಳದ ಮೇಲಿನ ವೃತ್ತಗಳು ಮತ್ತು ಅವುಗಳ ಧ್ರುವಗಳು: ಖಗೋಳದ (σ) ವ್ಯಾಪ್ತಿಯೊಳಗೆ ಯೂಕ್ಲಿಡಿಯನ್ ಜ್ಯಾಮಿತಿ ಅನ್ವಯಾರ್ಹವಷ್ಟೆ. ಆದ್ದರಿಂದ ಅದರೊಳಗಡೆ ವೀಕ್ಷಕನನ್ನು (O) ಶೃಂಗವಾಗಿಟ್ಟುಕೊಂಡು ಯಾವುದಾದರೂ ಲಂಬ ವೃತ್ತೀಯ ಶಂಕುವೊಂದನ್ನು (ರೈಟ್ ಸರ್ಕ್ಯುಲರ್ ಕೋನ್) ರಚಿಸಲು ಸಾಧ್ಯ (ಚಿತ್ರ3).

ಹಾಗೆ ರಚಿಸಿದ ಶಂಕು ಖಗೋಳವನ್ನು ಒಂದು ವೃತ್ತದಲ್ಲಿ (p) ಛೇದಿಸುತ್ತದೆ. ಪ್ರತಿ ಯೊಂದು ಈ ಬಗೆಯ ವೃತ್ತವೂ ಖಗೋಳದ ಮೇಲಿನ ಒಂದು ಅಲ್ಪವೃತ್ತ (ಸ್ಮಾಲ್ ಸರ್ಕಲ್) ಎಂದೆನಿಸಿ ಕೊಳ್ಳುತ್ತದೆ. ರಚಿಸಿದ ಶಂಕುವಿನ ಅಕ್ಷವಾದರೋ (ಆಕ್ಸಿಸ್) ಖಗೋಳವನ್ನು ಎರಡು ವ್ಯಾಸೀಯ ವಿರುದ್ಧ ಬಿಂದುಗಳಲ್ಲಿ ಛೇದಿಸುತ್ತದೆ : ಈ ಬಿಂದುದ್ವಯುಗಳಿಗೆ ವ್ಯಾಖ್ಯಿತ ಅಲ್ಪವೃತ್ತದ ಧ್ರುವಗಳು(ಪೋಲ್ಸ್) ಎಂದು ಹೆಸರು. ಚಿತ್ರ (3)ರಲ್ಲಿ P ಮತ್ತು P' ಬಿಂದುಗಳು p ಅಲ್ಪವೃತ್ತದ ಧ್ರುವಗಳು. ಈಗ p ವೃತ್ತದ ನೇರ ಪರಿಕ್ರಮಣ ದಿಸೆಗಳನ್ನು ಎರಡು ಭಿನ್ನ ರೀತಿಗಳಲ್ಲಿ ಆರೋಪಿಸಲು ಸಾಧ್ಯವುಂಟೆಂಬ ಸಂಗತಿ ಚಿತ್ರ (4) ಮತ್ತು ಚಿತ್ರ (5)ರ ಬಾಣಗಳಿಂದ ಸ್ಪಷ್ಟವಾಗುವುದು. ಚಿತ್ರ (4)ರ ಪರಿಕ್ರಮಣ ದಿಸೆ P ಯಿಂದ ನೋಡಿದಾಗ ಅಪ್ರದಕ್ಷಿಣವಾಗಿಯೂ P' ನಿಂದ ನೋಡಿದಾಗ ಪ್ರದಕ್ಷಿಣವಾಗಿಯೂ ಗೋಚರಿಸುತ್ತದೆ. ಚಿತ್ರ (5)ರಲ್ಲಾದರೋ ಪರಿಸ್ಥಿತಿ ಅದಲುಬದಲಾಗಿದೆ. ಪರಿಕ್ರಮಣ ದಿಸೆ ಅಪ್ರದಕ್ಷಿಣವಾಗಿ ಕಾಣುವ ಧ್ರುವಕ್ಕೆ ಧನ ಧ್ರುವ ವೆಂದೂ ಪ್ರದಕ್ಷಿಣವಾಗಿ ಕಾಣುವ ಧ್ರುವಕ್ಕೆ ಋಣ ಧ್ರುವವೆಂದೂ ಹೆಸರು. p ವೃತ್ತಕ್ಕೆ ಚಿತ್ರ (4)ರಲ್ಲಿ P ಧನಧ್ರುವ, P' ಋಣ ಧ್ರುವ; ಚಿತ್ರ (5)ರಲ್ಲಿ P' ಧನಧ್ರುವ P ಋಣ ಧ್ರುವ.



ಚಿತ್ರ 3 O–ವೀಕ್ಷಕ P–ಅಲ್ಪವೃತ್ತ ; C-ಅದರ ಕೇಂದ್ರ

ಅಲ್ಪವೃತ್ತಗಳನ್ನು ವ್ಯಾಖ್ಯಿಸುವ ಶಂಕುಗಳ ಶೃಂಗಾರ್ಧಕೋನಗಳು (ಸೆಮಿವರ್ಟಿಕಲ್ ಆ್ಯಂಗಲ್ಸ್) 0° ಯಿಂದ ಹಿಡಿದು 90° ವರೆಗೆ ಯಾವ ಪರಿಮಾಣದವು ಬೇಕಾದರೂ ಆಗಿರ ಬಹುದು. ಶೃಂಗಾರ್ಧ ಕೋನ ನಿಖರವಾಗಿ 90° ಆದಾಗ ಶಂಕು ನಿಜಕ್ಕೂ ಒಂದು ಸಮತಲವಾಗಿ (ಪ್ಲೇನ್) ಹರಡಿಕೊಳ್ಳುತ್ತದೆ (ಚಿತ್ರ 6). ಈ ವಿಶೇಷ ಸಂದರ್ಭದಲ್ಲಿ ಫಲಿಸುವ ಅಲ್ಪವೃತ್ತಗಳನ್ನು ಮಹಾವೃತ್ತಗಳು (ಗ್ರೇಟ್ ಸರ್ಕಲ್ಸ್) ಎಂದು ಕರೆಯುತ್ತೇವೆ. ವೀಕ್ಷಕನ ಮೂಲಕ ಹಾದು ಹೋಗುವ ಯಾವುದೇ ಸಮತಲ ಆತನ ಖಗೋಳವನ್ನು ಛೇದಿಸುವ ವೃತ್ತ ಒಂದು ಮಹಾವೃತ್ತ ವಾಗುತ್ತದೆ ; ಹಾಗೂ ಒಂದೊಂದು ಮಹಾ ವೃತ್ತವೂ ವೀಕ್ಷಕನ ಮೂಲಕ ಹಾದು ಹೋಗುವ ಒಂದೊಂದು ಸಮತಲವನ್ನು ಪ್ರತಿನಿಧಿಸುತ್ತದೆ. ಖಗೋಳದ ಕೇಂದ್ರವೇ ಪ್ರತಿಯೊಂದು ಮಹಾವೃತ್ತದ ಕೇಂದ್ರ ಕೂಡ ; ಎರಡೂ ವೀಕ್ಷಕನಲ್ಲಿ ಐಕ್ಯವಾಗುತ್ತವೆ. ಮಹಾವೃತ್ತಗಳಲ್ಲದೆ ಇರುವ ಅಲ್ಪವೃತ್ತಗಳ ಕೇಂದ್ರಗಳು ಮಾತ್ರ ಖಗೋಳ ಕೇಂದ್ರದಿಂದ ಭಿನ್ನವಾಗಿರುತ್ತವೆ. ಈಗ P ಮತ್ತು P' ಖಗೋಳದ ಮೇಲಿರುವ ಯಾವುದಾದರೂ ಎರಡು ವ್ಯಾಸೀಯ ವಿರುದ್ಧ ಬಿಂದುಗಳಾದರೆ ಇವು ಧ್ರುವಗಳಾಗಿರುವಂತೆ ಒಂದೇ ಒಂದು ಮಹಾವೃತ್ತವನ್ನು ಎಳೆಯಲು ಸಾಧ್ಯ ; ಮತ್ತು ಇವುಗಳ ಪೈಕಿ P ಧನ ಧ್ರುವವಾಗುವಂತೆ ಆ ಮಹಾವೃತ್ತದ ನೇರ ಏಕೈಕ ಪರಿಕ್ರಮಣ ದಿಸೆಯನ್ನು ಗುರುತಿಸ ಬಹುದು (ಚಿತ್ರ 6). ಕೊನೆಯದಾಗಿ ಖಗೋಳದ ಮೇಲಿನ ಯಾವುದೇ ಎರಡು ಬಿಂದು A, B ಗಳನ್ನು ಒಂದು ಮಹಾವೃತ್ತದ ಚಾಪದಿಂದ ಸೇರಿಸಬಹುದು.



ಚಿತ್ರ 4



ಚಿತ್ರ 5

A, Bಗಳು ವ್ಯಾಸೀಯ ವಿರುದ್ಧವಾದಲ್ಲಿ (ಚಿತ್ರ 7a)ಅವನ್ನು ಸೇರಿಸುವ ಮಹಾವೃತ್ತ ಚಾಪಗಳು ಅನಂತ ಸಂಖ್ಯೆಯಷ್ಟಿರುತ್ತವೆ ಹಾಗೂ ಅವೆಲ್ಲವೂ ಅರ್ಧಮಹಾ ವೃತ್ತಗಳಾಗಿರುತ್ತವೆ. A, B ವ್ಯಾಸೀಯ ವಿರುದ್ಧವಲ್ಲದೆ ಇರುವ ಸಂದರ್ಭದಲ್ಲಿ (ಚಿತ್ರ 7b) ಅವನ್ನು ಏಕೈಕ ಮಹಾವೃತ್ತದ ಎರಡು ಪೂರಕಚಾಪಗಳು ಮಾತ್ರ ಸೇರಿಸಬಲ್ಲವು; ಮತ್ತು ಇವುಗಳ ಪೈಕಿ ಹ್ರಸ್ವತರವಾದುದಕ್ಕೆ AB ಚಾಪ ಎಂಬ ಹೆಸರು ಸಲ್ಲುತ್ತದೆ.

ಖಗೋಳ ಕೇವಲ ಕಾಲ್ಪನಿಕ ವಾದ್ದರಿಂದ AB ಚಾಪ ನಿಜಕ್ಕೂ AOB ಕೋನವನ್ನು (0 ವೀಕ್ಷಕ) ಪ್ರತಿನಿಧಿಸುವ ಒಂದು ವ್ಯವಸ್ಥೆ ಮಾತ್ರ. ಈ ಕಾರಣದಿಂದ AB ಚಾಪ(ದ ಅಳತೆ) = AOB ಕೋನ (ದ ಅಳತೆ) ಎಂದು ಸಾರ್ವತ್ರಿಕವಾಗಿ ವ್ಯಾಖ್ಯಿಸುತ್ತೇವೆ. A, B ಗಳು ವ್ಯಾಸೀಯ ವಿರುದ್ಧ ವಾದಾಗ AB ಚಾಪ =180°. A ಒಂದು ಮಹಾವೃತ್ತದ ಮೇಲಿನ ಯಾವುದಾದರೊಂದು ಬಿಂದುವೂ P, P' ಆ ಮಹಾವೃತ್ತದ ಧ್ರುವಗಳೂ ಆದಲ್ಲಿ AP ಚಾಪ = $AP^1$ ಚಾಪ = 90° (ಚಿತ್ರ 8).



ಚಿತ್ರ 6 O–ವೀಕ್ಷಕ P–ಒಂದು ಮಹಾವೃತ್ತ

**ಭೂಮೇಲ್ಮೈನಿವಾಸಿಗಳ ಖಗೋಳ :** ಈಗ ವೀಕ್ಷಕ (0) ಭೂಮೇಲ್ಮೈಯಲ್ಲಿರುತ್ತಾನೆಂದು ಭಾವಿಸೋಣ. ಈ ಸಂದರ್ಭದಲ್ಲಿ ಆತನನ್ನು ಭೂಮಿಯ ಗುರುತ್ವಕ್ಷೇತ್ರ ಆವರಿಸಿರುತ್ತದಷ್ಟೆ. ಆ ಗುರುತ್ವದ ದಿಸೆ $\vec{Zo}$ ಆಗುವಂತೆ ವೀಕ್ಷಕನ ಖಗೋಳದ ಮೇಲೆ Z ಬಿಂದುವನ್ನು ಗುರುತಿಸ ಬಹುದು (ಚಿತ್ರ 9). Zಗೆ ವೀಕ್ಷಕನ ಖಮಧ್ಯ (ಝುನಿತ್) ಎಂದು ಹೆಸರು; ಇದು ವೀಕ್ಷಕನ ನೆತ್ತಿಯ ಮೇಲಿರುವ ಖಗೋಳ ಬಿಂದು. Zಗೆ ವ್ಯಾಸೀಯ ವಿರುದ್ಧವಾಗಿರುವ $Z^1$ ಬಿಂದುವಾದರೋ ವೀಕ್ಷಕನ ಅಧೋಬಿಂದು (ನೇಡಿರ್) ಎನಿಸಿಕೊಳ್ಳುತ್ತದೆ. Z ಮತ್ತು Z'ಗಳು ಧ್ರುವಗಳಾಗಿರುವ ಮಹಾವೃತ್ತವೇ ವೀಕ್ಷಕನ ಕ್ಷಿತಿಜ (ಹೊರೈಸನ್) (i); ಚಿತ್ರದಲ್ಲಿ Z ಧನಧ್ರುವ ವಾಗುವಂತೆ iಯ ನೇರ ಒಂದು ಪರಿಕ್ರಮಣ ದಿಸೆಯನ್ನು ಗುರುತಿಸ ಲಾಗಿದೆ.



ಚಿತ್ರ 7 (a) A ಮತ್ತು Bಗಳನ್ನು ಸೇರಿಸುವ ಅರ್ಧ ಮಹಾವೃತ್ತಗಳ ಸಂಖ್ಯೆ ಅನಂತ;



ಚಿತ್ರ 8

ಭೂಮಿ ಒಂದು ಅಕ್ಷದ ಸುತ್ತ ದೈನಂದಿನ ಆವರ್ತನೆಯಲ್ಲಿ (ಡೈಯರ್ನಲ್ ರೊಟೇಷನ್) ತೊಡಗಿರುವುದು ಸರಿಯಷ್ಟೆ ತತ್ಪರಿಣಾಮ ವಾಗಿ

ಭೂಮಿಗೆ ಬಂಧಿತವಾಗಿರುವ (0) ವೀಕ್ಷಕನೂ ಅವನ ಮುಖಾಂತರ ಹಾದುಹೋಗುವ ಸಮಾಂತರ ಅಕ್ಷ p' Opಯ ಸುತ್ತ ತಿರುಗುತ್ತಲಿರುತ್ತಾನೆ (ಚಿತ್ರ 10).



ಚಿತ್ರ 9

ವೀಕ್ಷಕನ ಖಗೋಳವನ್ನು ಈ ಅಕ್ಷ ಛೇದಿಸುವ p,p' ಬಿಂದುಗಳಿಗೆ ಖಗೋಳೀಯ ಧ್ರುವಗಳು (ಸೆಲೆಸ್ಟಿಯಲ್ ಪೋಲ್ಸ್) ಎಂದೂ p,p' ಗಳನ್ನು ಧ್ರುವಗಳಾಗಿ ಉಳ್ಳ ಮಹಾವೃತ್ತ wq eq' ಗೆ ಖಗೋಳೀಯ ವಿಷುವದ್ವೃತ್ತ (ಸೆಲೆಸ್ಟಿಯಲ್ ಈಕ್ವೇಟರ್) (p) ಎಂದೂ ಹೆಸರು. ವೀಕ್ಷಕನು ಭೂಮಿಯೊಂದಿಗೆ ಆವರ್ತಿಸುತ್ತಿರುವುದಾಗಿ ಇದುವರೆಗೆ ವರ್ಣಿಸಿದ್ದಾಗ್ಯೂ ತನ್ನದೇ ತಿರುಗುವಿಕೆಯ ಬಗ್ಗೆ ಆತನಿಗೆ ಅರಿವಿರುವುದೇ ಇಲ್ಲ. ತತ್ಫಲವಾಗಿ ನಕ್ಷತ್ರಗಳಂಥ ಸ್ವತಂತ್ರ ಸ್ಥಿರಕಾಯಗಳ



ಚಿತ್ರ 10 ρ–ಮಹಾವೃತ್ತ ವಿಷುವದ್ವೃತ್ತ, p–ಉತ್ತರ ಧ್ರುವ, p'–ದಕ್ಷಿಣ ಧ್ರುವ

ಖಗೋಳೀಯ ಸ್ಥಾನಗಳು p ಮತ್ತು $p^1$ ಗಳನ್ನು ಧ್ರುವಗಳಾಗಿ ಉಳ್ಳ ಬೇರೆ ಬೇರೆ ಅಲ್ಪವೃತ್ತಗಳ ಮಾರ್ಗವಾಗಿ ದಿನಕ್ಕೊಮ್ಮೆ ಪರಿಕ್ರಮಿಸುತ್ತಿರುವಂತೆ ಆತನಿಗೆ ತೋರುವುದು: ಮತ್ತು ಈ ತೋರ್ಕೆಯ ಪರಿಕ್ರಮಣ ದಿಸೆಗೆ ಅನುರೂಪವಾಗಿ $p^1$ ಆ ವೃತ್ತಗಳ ಋಣ ಧ್ರುವವೂ $p^1$ ಧನ ಧ್ರುವವೂ ಆಗುತ್ತವೆ. p ಯನ್ನು ಉತ್ತರಧ್ರುವ ಎಂದೂ $p^1$ ಯನ್ನು ದಕ್ಷಿಣಧ್ರುವ ಎಂದೂ ಕರೆಯುತ್ತೇವೆ. ನಕ್ಷತ್ರಾದಿ ಕಾಯಗಳ ಖಗೋಳೀಯ ಸ್ಥಾನಗಳಿಗೆ ಈಗ ವಿವರಿಸಿರುವ ಪ್ರಕಾರ ಪ್ರಾಪ್ತವಾಗುವ ತೋರ್ಕೆಯ ಪರಿಕ್ರಮಣ ಚಲನೆಗೆ ದೈನಂದಿನ ಚಲನೆ ಎಂದು ಹೆಸರು. ವಿಷುವದ್ವೃತ್ತದ ನೇರ ಪರಿಕ್ರಮಿಸುವ ಯಾವುದೇ ಖಗೋಳೀಯ ಕಾಯ ಸ್ಥಾನ eಯಲ್ಲಿ ಕ್ಷಿತಿಜದ ಕೆಳಗಡೆ ಯಿಂದ ಮೇಲುಗಡೆಗೆ ಏರುತ್ತದೆ (ಹುಟ್ಟುವಿಕೆ ಅಥವಾ ಉದಯ), wನಲ್ಲಿ ಕ್ಷಿತಿಜದ ಮೇಲುಗಡೆಯಿಂದ ಕೆಳಗಡೆಗೆ ಇಳಿಯುತ್ತದೆ (ಮುಳುಗುವಿಕೆ ಅಥವಾ ಅಸ್ತಮಾನ). (e)ಯೇ ವೀಕ್ಷಕನ ಪೂರ್ವಬಿಂದು, w ಆತನ ಪಶ್ಚಿಮಬಿಂದು. ಖಗೋಳೀಯ ಉತ್ತರ ಹಾಗೂ ದಕ್ಷಿಣ ಧ್ರುವಗಳನ್ನು (p, $p^1$) ಸೇರಿಸುವ ಅರ್ಧ ಮಹಾವೃತ್ತಗಳಿಗೆ ಘಂಟಾ ವೃತ್ತಗಳು ಅಥವಾ ಆಹ್ನಿಕ ವೃತ್ತಗಳು (ಅವರ್ ಸರ್ಕಲ್ಸ್/ಮೆರಿಡಿಯನ್ಸ್) ಎಂದು ಹೆಸರು. ಖಮಧ್ಯದ (z) ಮುಖಾಂತರ ಹಾದುಹೋಗುವ (ಏಕೈಕ) pzp' ಅಹ್ನಿಕ ವೃತ್ತವೇ ವೀಕ್ಷಕನ ಮಧ್ಯಾಹ್ನ ವೃತ್ತ (ಅಬ್‌ಸರ್ವರ್ಸ್ ಮೆರಿಡಿಯನ್). ಈ $pzp^1$ನ್ನು ಪೂರ್ಣ ಗೊಳಿಸಿದಾಗ ಫಲಿಸುವ $pzp^1z^1p$ ಎಂಬ ಮಹಾವೃತ್ತ (ಇದನ್ನು ಪೂರ್ಣ ಮಧ್ಯಾಹ್ನ ವೃತ್ತ ಎಂದು ಕರೆಯಬಹುದು) ವೀಕ್ಷಕನ ಕ್ಷಿತಿಜವನ್ನು n ಮತ್ತು $n^1$ ಗಳಲ್ಲಿ ಛೇದಿಸಲಿ. ಇವೆರಡು ಛೇದನಗಳ ಪೈಕಿ ಉತ್ತರ ಧ್ರುವಕ್ಕೆ ಸಮೀಪವಾಗಿರುವ nಗೆ ವೀಕ್ಷಕನ ಉತ್ತರ ಬಿಂದು ಎಂದೂ ದಕ್ಷಿಣ ಧ್ರುವಕ್ಕೆ ಸಮೀಪವಾಗಿರುವ n'ಗೆ ವೀಕ್ಷಕನ ದಕ್ಷಿಣ ಬಿಂದು ಎಂದೂ ಹೆಸರು. np ಚಾಪವೇ (=ನಮ್ಮ ವ್ಯಾಖ್ಯೆಯಂತೆ ಕೋನ nop ವೀಕ್ಷಕನ ಧ್ರುವೋನ್ನತಿ (ಪೋಲಾರ್ ಆಲ್ಟಿಟ್ಯೂಡ್); ಭೂಮೇಲ್ಮೈಯ ಮೇಲಿನ ವೀಕ್ಷಕ ಸ್ಥಾನದ ಅಕ್ಷಾಂಶಕ್ಕೆ ಇದು ಸಮವಾಗಿರುತ್ತದೆಂದು ತೋರಿಸಬಹುದು. ಕೊನೆಯದಾಗಿ ವಿಷುವದ್ವೃತ್ತ ಮತ್ತು ಪೂರ್ಣ ಮಧ್ಯಾಹ್ನ ವೃತ್ತಗಳ



ಚಿತ್ರ 11 ξ–ಕ್ಷಿತಿಜ, ρ–ವಿಷುವದ್ವೃತ್ತ, a,b,c,d-ಒಂದು ಕಾಯದ ದೈನಂದಿನ ಪಥ

ಛೇದನಗಳು q,q' ಆದಲ್ಲಿ

$qe = qw = q'e = q'w = ne = nw = n'e = n'w = 90^{O}$ q ಬಿಂದುವಿಗೆ ಘಂಟಾಮೂಲ ಎಂಬುದಾಗಿ ನಾಮಕರಣ ಮಾಡುತ್ತೇವೆ. ಭೂಮೇಲ್ಮೈ ನಿವಾಸಿಗಳ ಖಗೋಳದಲ್ಲಿ Z, Z', p, $p^1$,e, w, n, $n^1$, q, $q^1$ ಇವೆಲ್ಲವೂ ಸ್ಥಿರ ಬಿಂದುಗಳು; ನಕ್ಷತ್ರಾದಿ ಆಕಾಶಕಾಯಗಳ ಖಗೋಳೀಯ ಸ್ಥಾನಗಳು ಮಾತ್ರ ಚರ.



ಚಿತ್ರ 12

**ಭೂಕೇಂದ್ರೀಯ ಖಗೋಳ :** ಭೂಮಿಯ ಕೇಂದ್ರದಲ್ಲಿರುವ ಕಾಲ್ಪನಿಕ ವೀಕ್ಷಕನೇ (C) ಈ ಪರಿಕಲ್ಪನೆಗೆ ಮೂಲಾಧಾರ. ಭೂಕೇಂದ್ರದಲ್ಲಿದ್ದಾಗ್ಯೂ ಈ ವೀಕ್ಷಕ 1 ಭೂಮಿಯ ದೈನಂದಿನ ಆವರ್ತನೆಯಲ್ಲಿ (ರೊಟೇಷನ್) ಪಾಲ್ಗೊಳ್ಳುವುದಿಲ್ಲ ಎಂಬುದಾಗಿ ಭಾವಿಸುತ್ತೇವೆ. ಆದ್ದರಿಂದ ಈತನ ಖಗೋಳದಲ್ಲಿ ನಕ್ಷತ್ರಗಳಂಥ ಸ್ಥಿರಕಾಯಗಳ ಖಗೋಳೀಯ ಸ್ಥಾನಗಳು ಹೆಚ್ಚು ಕಡಿಮೆ ನಿಶ್ಚಲವಾಗಿಯೇ ಇದ್ದು ಬಿಡುತ್ತವೆ. ಭೂಮೇಲ್ಮೈಯ ನಿವೇಶನಗಳಾದರೋ ಭೂಮಿಯ ಅಕ್ಷದ ಸುತ್ತ ಪರಿಕ್ರಮಿಸುವುದರಿಂದ ಅವು ಖಗೋಳೀಯ ಸ್ಥಾನಗಳು ಮಾತ್ರ ನಿರ್ದಿಷ್ಟ ಬಿಂದುಗಳೆರಡನ್ನು ಧ್ರುವಗಳನ್ನಾಗಿ ಉಳ್ಳ ಬೇರೆ ಬೇರೆ ಅಲ್ಪ ವೃತ್ತಗಳ ಮಾರ್ಗದಲ್ಲಿ ಪರಿಕ್ರಮಿಸುತ್ತವೆ. ಭೂಮಿಯ ಅಕ್ಷದ ದಿಶೆಯನ್ನು ಸೂಚಿಸುವ ಖಗೋಳೀಯ ಸ್ಥಾನಗಳೇ ಇವೆರಡು ಧ್ರುವಬಿಂದುಗಳು (P, $P^1$ ; ಚಿತ್ರ 12) Pಯಿಂದ ನೋಡಿದಾಗ ಭೂಮೇಲ್ಮೈಯ ನಿವೇಶನಗಳ ಪರಿಕ್ರಮಣ ಅಪ್ರದಕ್ಷಿಣವಾಗಿ ಗೋಚರಿಸುತ್ತದೆ ; ಈ Pಗೆ ಭೂಕೇಂದ್ರೀಯ ಖಗೋಳದ ಉತ್ತರ ಧ್ರುವ ಎಂದು ಹೆಸರು. ಇನ್ನುಳಿದ $P^1$ ಅದರ ದಕ್ಷಿಣ ಧ್ರುವ. P, $P^1$ ಧ್ರುವಗಳಾಗಿರುವ ಮಹಾವೃತ್ತ $Q^1$ P Q $P^1$ ಭೂಕೇಂದ್ರೀಯ ಖಗೋಳದ ವಿಷುವದ್ವೃತ್ತ.

ಭೂಮಿ ತನ್ನ ಅಕ್ಷದ ಸುತ್ತ ಆವರ್ತಿಸುವುದಷ್ಟೇ ಅಲ್ಲದೆ ಸೂರ್ಯನ ಸುತ್ತ ವರ್ಷಕ್ಕೊಮ್ಮೆ ಪರಿಭ್ರಮಿ ಸುತ್ತಲೂ ಇರುತ್ತದೆ. ಈ ವಾರ್ಷಿಕ ಪರಿಭ್ರಮಣೆ ಯಲ್ಲಿ

ಭೂಕೇಂದ್ರೀಯ ವೀಕ್ಷಕ ಪಾಲ್ಗೊಳ್ಳುತ್ತಾನೆ. ತತ್ಫಲವಾಗಿ ಆತನಿಗೆ ಸೂರ್ಯನ ಖಗೋಳೀಯ ಸ್ಥಾನಗಳು ಒಂದು ನಿರ್ದಿಷ್ಟ ಮಹಾವೃತ್ತದ ಮಾರ್ಗವಾಗಿ ವರ್ಷಕ್ಕೊಮ್ಮೆ ಪರಿಕ್ರಮಿಸುವಂತೆ ತೋರುವುವು. ಆ ಮಹಾವೃತ್ತಕ್ಕೆ ಕ್ರಾಂತಿವೃತ್ತ (ಎಕ್ಲಿಪ್ಟಿಕ್) ಎಂದು ಹೆಸರು.

ಇನ್ನು ಉತ್ತರ ಮತ್ತು ದಕ್ಷಿಣ ಧ್ರುವ ಬಿಂದುಗಳನ್ನು p, p[1] ಧ್ರುವಗಳಾಗಿ ಉಳ್ಳ ಮಹಾವೃತ್ತವಾದರೂ ಎಂದಿನಂತೆ ವಿಷುವದ್ವೃತ್ತ ಎನ್ನಿಸಿಕೊಳ್ಳುವುದು. ಕ್ರಾಂತಿವೃತ್ತ ಮತ್ತು ವಿಷುವದ್ವೃತ್ತಗಳು ಮೇಷ ಬಿಂದು (γ) ಹಾಗೂ ತುಲಾಬಿಂದು ಗಳಲ್ಲಿ (Ω) ಭೇದಿಸುತ್ತವೆ. ಸೂರ್ಯನ ಖಗೋಳೀಯ ಸ್ಥಾನ ಅದರ ವಾರ್ಷಿಕ ಸಂಚಾರದಲ್ಲಿ ಮೇಷ ಬಿಂದುವಿನ (γ) ಬಳಿ ವಿಷುವದ್ವೃತ್ತವನ್ನು ಅದರ ದಕ್ಷಿಣದಿಂದ ಉತ್ತರದೆಡೆಗೆ ದಾಟುವುದು ; ತುಲಾ ಬಿಂದುವಿನ (Ω) ಬಳಿ ಪರಿಸ್ಥಿತಿ ಅದಲು ಬದಲಾಗುವುದು. ವಿಷುವದ್ವೃತ್ತಕ್ಕೂ ಕ್ರಾಂತಿವೃತ್ತಕ್ಕೂ ನಡುವೆ ಸುಮಾರು 23° 27[1] ಗಳಷ್ಟು ಕೋನಾಂತರವಿದೆ (ಇದು ಅವುಗಳ ಸಮತಲಗಳ ನಡುವೆ ಇರುವ ಕೋನ).




ಚಿತ್ರ 13 cγc'Ω–ಮಹಾವೃತ್ತ, (η) ಕಾಂತಿವೃತ್ತ, ಇದರ ಮೇಲೆ ಸೂರ್ಯನ ತೋರ್ಕೆ ವಾರ್ಷಿಕ ಚಲನೆಯ ದಿಶೆಯನ್ನು ಬಾಣ ಚಿಹ್ನೆಯಿಂದ ತೋರಿಸಿದೆ. k,k'ಗಳು ಕ್ರಾಂತಿ ವೃತ್ತದ ಧ್ರುವಗಳು

ಭೂಕೇಂದ್ರೀಯ ಖಗೋಳದ ಮೇಲೆ ಖಮಧ್ಯವಾಗಲಿ ಅಧೋಬಿಂದುವಾಗಲೀ ಇರುವುದಿಲ್ಲ ; ಅಲ್ಲಿ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಬಿಂದುಗಳು ಕೂಡ ಇರವು. ಮೊದಲೇ ತಿಳಿಸಿರುವಂತೆ ಭೂಕೇಂದ್ರೀಯ ವೀಕ್ಷಕನಿಗೆ ನಕ್ಷತ್ರಗಳು ಬಹುಮಟ್ಟಿಗೆ ನಿಶ್ಚಲವಾಗಿರುವಂತೆ ಕಾಣಿಸುತ್ತವೆ ; ಸೂರ್ಯ ಮತ್ತು ಗ್ರಹಗಳ ಸ್ಥಾನಗಳಿಗೆ ಮಾತ್ರ ಆತನ ಖಗೋಳದ ಮೇಲೆ ಗಣನೀಯ ಚಲನೆ ಇರುತ್ತದೆ.

**ಸೂರ್ಯಕೇಂದ್ರೀಯ ಖಗೋಳ :** ಈ ಖಗೋಳದ ಕೇಂದ್ರ ಸೂರ್ಯನ ಕೇಂದ್ರದೊಂದಿಗೆ ಐಕ್ಯವಾಗಿರುತ್ತದೆ. ಅಲ್ಲಿರುವ ವೀಕ್ಷಕನಿಗೂ ಆವರ್ತನ ಚಲನೆಯಿಲ್ಲ ಎಂಬುದಾಗಿ ಭಾವಿಸುತ್ತೇವೆ. ಆದ್ದರಿಂದ ಆತನ ಖಗೋಳದಲ್ಲಿ ಸಹ ನಕ್ಷತ್ರಗಳ ಖಗೋಳೀಯ ಸ್ಥಾನಗಳು ಬಹುಮಟ್ಟಿಗೆ ನಿಶ್ಚಲವಾಗಿ ರುತ್ತವೆ. ಭೂಮಿ ಮತ್ತಿತರ ಗ್ರಹಗಳ ಖಗೋಳೀಯ ಸ್ಥಾನಗಳು ಮಾತ್ರ ಸೂರ್ಯ ಕೇಂದ್ರೀಯ ಖಗೋಳದ ಮೇಲೆ ನಿರ್ದಿಷ್ಟ ಮಹಾವೃತ್ತಗಳಲ್ಲಿ ಪರಿಕ್ರಮಿಸುತ್ತಿರುತ್ತವೆ. ಭೂಮಿಯ ಪರಿಕ್ರಮಣವೃತ್ತಕ್ಕೆ ಕ್ರಾಂತಿವೃತ್ತ ಎಂದು ಹೆಸರು. ಭೂಕೇಂದ್ರೀಯ ಖಗೋಳದ ಮೇಲೆ ಗ್ರಹಸ್ಥಾನಗಳ ಸಂಚಾರ ಸದಾ ಒಂದೇ ದಿಕ್ಕಿನಲ್ಲಿ ರುವುದಿಲ್ಲ ; ಸೂರ್ಯ ಕೇಂದ್ರೀಯ ಖಗೋಳದಲ್ಲಾದರೋ ಎಲ್ಲ ಗ್ರಹಸ್ಥಾನಗಳೂ ಸದಾ ಒಂದೇ ದಿಶೆಯಲ್ಲಿ ಚಲಿಸುತ್ತವೆ. ಸೂರ್ಯ ಮತ್ತಿತರ ಹತ್ತಿರದ ನಕ್ಷತ್ರಗಳು ಒಂದು ನಿರ್ದಿಷ್ಟ




ಚಿತ್ರ 14 ಬ್ರಹ್ಮಾಂಡೀಯ ವಿಷುವದ್ವೃತ್ತ (η). ಇದರ ಕೇಂದ್ರ ಸೂರ್ಯ, A–ಈ ವಿಷುವದ್ವೃತ್ತದ ಮೇಲಿನ ಒಂದು ಬಿಂದು

ಸ್ಥಳೀಯ ಪರಿವಾರವಾಗಿ ಗುಂಪುಗೂಡಿವೆ. ಈ ಪರಿವಾರಕ್ಕೆ ಆಕಾಶಗಂಗೆ(ಮಿಲ್ಕೀ ವೇ) ಎಂದು ಹೆಸರು. ಸೂರ್ಯ ಹೆಚ್ಚು ಕಡಿಮೆ ಆಕಾಶಗಂಗೆಯ ಮಧ್ಯ ತಲದಲ್ಲಿ ಉಂಟು. ಆದ್ದರಿಂದ ಸೂರ್ಯಕೇಂದ್ರೀಯ ಖಗೋಳವನ್ನು ಆಕಾಶಗಂಗೆಯ ಮಧ್ಯತಲ ಒಂದು ಮಹಾವೃತ್ತದಲ್ಲಿ ಭೇದಿಸುವುದು ; ಮತ್ತು ಆ ಮಹಾವೃತ್ತದ ಇಕ್ಕೆಡೆಗಳಲ್ಲಿ ಆಕಾಶಗಂಗೆಯ ನಕ್ಷತ್ರಸ್ಥಾನಗಳು ಅತಿ ನಿಬಿಡವಾಗಿ ಆಕ್ರಮಿಸಿರುತ್ತವೆ. ಸೂರ್ಯಕೇಂದ್ರೀಯ ಖಗೋಳದ ಮೇಲಿರುವ ಈ ಮಹಾವೃತ್ತಕ್ಕೆ ಬ್ರಹ್ಮಾಂಡೀಯ ವಿಷುವದ್ವೃತ್ತ n (ಗ್ಯಾಲಾಕ್ಟಿಕ್ ಈಕ್ವೇಟರ್) ಎಂದು ಹೆಸರು (ಚಿತ್ರ 14). ಸೂರ್ಯ ಆಕಾಶಗಂಗೆಯ ಮಧ್ಯತಲದಲ್ಲಿದ್ದಾಗ್ಯೂ ಅದರ ಕೇಂದ್ರದಿಂದ ಬಹಳಷ್ಟು ದೂರದಲ್ಲೇ ಇದೆ. ಆಕಾಶಗಂಗೆಯ ಕೇಂದ್ರಸ್ಥಾನವನ್ನು ಸೂರ್ಯಕೇಂದ್ರೀಯ ಖಗೋಳದ ಮೇಲೆ ಗುರುತಿಸಿದಲ್ಲಿ ಸ್ವಾಭಾವಿಕವಾಗಿಯೇ ಅದು ಚಿತ್ರದಲ್ಲಿ ತೋರಿಸಿರುವಂತೆ ಬ್ರಹ್ಮಾಂಡೀಯ ವಿಷುವದ್ವೃತ್ತದ ಮೇಲೆ ಬರುತ್ತದೆ.

**ಖಗೋಳೀಯ ನಿರ್ದೇಶಕ ವ್ಯವಸ್ಥೆಗಳು :** ಒಂದು ಖಗೋಳದ ಮೇಲಿನ ಬಿಂದುಗಳ ಸ್ಥಾನಗಳನ್ನು ಯುಕ್ತ ಸಂಖ್ಯಾ ನಿರ್ದೇಶಕಗಳ ಮೂಲಕ ಸೂಚಿಸುವ ವಿಧಾನವನ್ನು ಕುರಿತು ಈಗ ವಿವೇಚಿಸೋಣ. s ಎಂಬುದು ಖಗೋಳದ ಮೇಲಿನ ಯಾವುದಾದರೊಂದು ನಿರ್ದಿಷ್ಟ ಮಹಾವೃತ್ತವಾಗಿರಲಿ ; ಮತ್ತು ಅದಕ್ಕೆ ಒಂದು ನಿರ್ದಿಷ್ಟ ಪರಿಕ್ರಮಣ ದಿಶೆ ಆರೋಪಿತ ವಾಗಿರಲಿ (ಚಿತ್ರ 15). ಈ ವೃತ್ತವನ್ನು ಪ್ರಾಥಮಿಕ (ಪ್ರೈಮರಿ) ಎಂದು ಕರೆಯುತ್ತೇವೆ; ಮತ್ತು ಅದರ ಮೇಲೆ c ಎಂಬೊಂದು ಸ್ಥಿರ ಮೂಲಬಿಂದುವೊಂದನ್ನು (ಆರಿಜಿನ್) ಗುರುತಿಸುತ್ತೇವೆ. ಪ್ರಾಥಮಿಕ ಮಹಾವೃತ್ತದ ಧನಧ್ರುವ A ಋಣ ಧ್ರುವ A[1]; ಇವೆರಡು ಧ್ರುವಗಳನ್ನು ಸೇರಿಸುವ ಅರ್ಧ ಮಹಾವೃತ್ತಗಳು ದ್ವಿತೀಯಕಗಳು (ಸೆಕೆಂಡರೀಸ್) ಎಂದು ಎನಿಸಿಕೊಳ್ಳುತ್ತವೆ. ಈಗ ಖಗೋಳದ ಮೇಲಿ ರುವ ಯಾವುದಾದ ರೊಂದು ಬಿಂದು B ಆಗಿರಲಿ. Bಯ ಮೂಲಕ ಹಾದುಹೋಗುವ ABA[1] ದ್ವಿತೀಯಕಕ್ಕೆ Bಯ ದ್ವಿತೀಯಕ ಎಂದು ಹೆಸರು. ಇದು ಪ್ರಾಥಮಿಕವನ್ನು Dಯಲ್ಲಿ ಭೇದಿಸಲಿ. B ಬಿಂದುವಿನ ಸ್ಥಾನವನ್ನು ಸೂಚಿಸಲು AB ಮತ್ತು CD ಚಾಪಗಳು ಉಪಯುಕ್ತವಾಗುತ್ತವೆ. AB ಚಾಪಕ್ಕೆ Bಯ ಸಹಾಕ್ಷಾಂಶ (ಕೊಲ್ಯಾಟಿಟ್ಯೂಡ್) ಎಂದೂ CD ಚಾಪಕ್ಕೆ Bಯ ರೇಖಾಂಶ (ಲಾಂಜಿಟ್ಯೂಡ್) ಎಂದೂ ನಾಮಕರಣ ಮಾಡುತ್ತೇವೆ. ಸಹಾಕ್ಷಾಂಶದ ವ್ಯಾಪ್ತಿ (ರೇಂಜ್) 0° ಯಿಂದ ತೊಡಗಿ 180°ಗಳ ವರೆಗಿದೆ. ರೇಖಾಂಶದ ವ್ಯಾಪ್ತಿ 0° ಯಿಂದ ತೊಡಗಿ 360°ಗಳ ವರೆಗಿದೆ. ಇದನ್ನು C ಯಿಂದ D ವರೆಗೆ ಬಾಣದ ದಿಶೆಯಲ್ಲಿ ಅಳೆಯಬೇಕು. ಸಹಾಕ್ಷಾಂಶ ಮತ್ತು ರೇಖಾಂಶಗಳ ವಾಹಿತಿ B ಬಿಂದುವಿನ ಸ್ಥಾನವನ್ನು ಸಂಪೂರ್ಣವಾಗಿ ನಿರ್ದೇಶಿಸುತ್ತದೆ. ಈ ಕಾರಣದಿಂದ ಅವೆರಡು ಪರಿಮಾಣಗಳನ್ನು B ಯ ನಿರ್ದೇಶಕಗಳು ಎಂದು ಕರೆಯುತ್ತೇವೆ. (ಈಗ ವರ್ಣಿಸಿರುವ ನಿರ್ದೇಶಕ ವ್ಯವಸ್ಥೆಯನ್ನು ಸಮತಲಗಳ ಸಂಬಂಧದಲ್ಲಿ ಬಳಸಲಾಗುವ ಕಾರ್ಟೀಸಿಯನ್ ನಿರ್ದೇಶಕ ವ್ಯವಸ್ಥೆಯೊಡನೆ ಹೋಲಿಸಬಹುದು. ಇಲ್ಲಿಯ ಪ್ರಾಥಮಿಕ ಅಲ್ಲಿಯ x–ಅಕ್ಷಕ್ಕೆ ಸಂವಾದಿ; c




ಚಿತ್ರ 15

ಮೇಲೆ ವಿವರಿಸಿರುವ ಸಾರ್ವತ್ರಿಕ ತತ್ತ್ವವನ್ನು ವಿವಿಧ ಖಗೋಳಗಳನ್ನು ಕುರಿತು ಹಲವಾರು ರೀತಿಗಳಲ್ಲಿ ಅನ್ವಯಿಸಲಾಗಿದೆ. ಇಂದು ರೂಢಿಯಲ್ಲಿರುವ ವಿಶಿಷ್ಟ ನಿರ್ದೇಶಕ 1ವ್ಯವಸ್ಥೆಗಳ ವಿವರಗಳನ್ನು ಯಾದಿಯಲ್ಲಿ ನೀಡಲಾಗಿದೆ.

| ಕ್ರಮ ಸಂಖ್ಯೆ | ವ್ಯವಸ್ಥೆಯ ಹೆಸರು | ಅನ್ವಯವಾಗುವ ಖಗೋಳ | ಪ್ರಾಥಮಿಕ ಮಹಾವೃತ್ತ | ಮೂಲ ಬಿಂದು | ಧ್ರುವಗಳು | ಅಕ್ಷಾಂಶದ ಹೆಸರು | ರೇಖಾಂಶದ ಹೆಸರು | ಷರಾ |
|---|---|---|---|---|---|---|---|---|
| (1) | ಕ್ಷಿತಿಜಾಂಶ ಮತ್ತು ಉನ್ನತಿ (ಅಜಿಮತ್ ಅಂಡ್ ಆಲ್ಟಿ ಟ್ಯೂಡ್) | ಭೂಮೇಲ್ಮೈ ನಿವಾಸಿಗಳ ಖಗೋಳ | ಕ್ಷಿತಿಜ | ಉತ್ತರ ಅಥವಾ ದಕ್ಷಿಣ ಬಿಂದು | ಖಮಧ್ಯ(+) ಅಧೋ ಬಿಂದು (–) | ಉನ್ನತಿ | ಕ್ಷಿತಿಜಾಂಶ | – |
| (2) | ಘಂಟಾಕೋನ ಘಂಟಾ ವೃತ್ತಾಂಶ (ಅವರ್ ಆ್ಯಂಗಲ್ ಅಂಡ್ | ಭೂಮೇಲ್ಮೈ ನಿವಾಸಿಗಳ ಖಗೋಳ ಡೆಕ್ಲಿನೇಷನ್) | ವಿಷುವ ದ್ವೃತ್ತ | ಘಂಟಾ ಮೂಲ (ಚಿತ್ರ 11 | ಖಗೋಳೀಯ ಧ್ರುವಗಳು ಚಿತ್ರ 11 ರಲ್ಲಿ ರಲ್ಲಿರುವ q) | ಘಂಟಾ ವೃತ್ತಾಂಶ ರುವ p, p[1]) | ಘಂಟಾ ಕೋನ | ಘಂಟಾ ವೃತ್ತಾಂಶವನ್ನು ಅಳೆಯುವಾಗ ಉತ್ತರ ಧ್ರುವಧನಾತ್ಮಕ. ಕೋನವನ್ನು ಅಳೆಯುವಾಗ ದಕ್ಷಿಣ ಧ್ರುವಧನಾತ್ಮಕ ಸಾಧಾರಣವಾಗಿ ಘಂಟಾ ಕೋನವನ್ನು ಡಿಗ್ರಿಗಳಲ್ಲಿ ಅಳೆಯುವ ಬದಲು ಗಂಟೆ, ಮಿನಿಟುಗಳಲ್ಲಿ ಅಳೆಯುವುದು ವಾಡಿಕೆ 1 ಗಂ. = 15$^{\circ}$ 1$^{\circ}$ = 4 ಮಿ. |
| (3) | ವಿಷುವದಂಶ ಮತ್ತು ಘಂಟಾ ವೃತ್ತಾಂಶ (ರೈಟ್ ಅಸೆನ್ಷನ್ ಅಂಡ್ ಡೆಕ್ಲಿನೇಷನ್) | ಭೂ ಕೇಂದ್ರೀಯ ಖಗೋಳ | ವಿಷುವ ದ್ವೃತ್ತ | ಮೇಷ ಬಿಂದು ($\gamma$) | ಖಗೋಳೀಯ ಧ್ರುವಗಳು ಉತ್ತರ(+) ದಕ್ಷಿಣ(–) | ಘಂಟಾ ವೃತ್ತಾಂಶ | ವಿಷುವದಂಶ | – |
| (4) | ಖಗೋಳೀಯ ರೇಖಾಂಶ ಮತ್ತು ಖಗೋಳೀಯ ಅಕ್ಷಾಂಶ (ಸೆಲೆಸ್ಟಿಯಲ್ ಲಾಂಜಿಟ್ಯೂಡ್ ಅಂಡ್ ಸೆಲೆಸ್ಟಿಯಲ್ ಲ್ಯಾಟಿಟ್ಯೂಡ್) | ಭೂ ಕೇಂದ್ರೀಯ ಖಗೋಳ | ಕ್ರಾಂತಿ ವೃತ್ತ | ಮೇಷ ಬಿಂದು($\gamma$) | ಕ್ರಾಂತಿ ವೃತ್ತ ಧ್ರುವಗಳು (ಚಿತ್ರ 13 ರಲ್ಲಿರುವ k, k') | ಖಗೋಳೀಯ ಅಕ್ಷಾಂಶ | ಖಗೋಳೀಯ ಅಕ್ಷಾಂಶ | – |
| (5) | ಬ್ರಹ್ಮಾಂಡೀಯ ರೇಖಾಂಶ ಮತ್ತು ಕೇಂದ್ರೀಯ ಬ್ರಹ್ಮಾಂಡೀಯ ಅಕ್ಷಾಂಶ (ಗ್ಯಾಲಾಕ್ಟಿಕ್ ಲಾಂಜಿಟ್ಯೂಡ್ ಅಂಡ್ ಗ್ಯಾಲಾಕ್ಟಿಕ್ ಲ್ಯಾಟಿಟ್ಯೂಡ್) | ಪ್ರಧಾನವಾಗಿ ಸೂರ್ಯ ಕೇಂದ್ರೀಯ ಖಗೋಳ | ಬ್ರಹ್ಮಾಂ ಡೀಯ ವಿಷುವ ದ್ವೃತ್ತ | ಆಕಾಶ ಗಂಗೆ ಯ ಕೇಂದ್ರ (ಚಿತ್ರ 14 ರಲ್ಲಿರುವ A) | ಬ್ರಹ್ಮಾಂ ಡೀಯ ಧ್ರುವಗಳು | ಬ್ರಹ್ಮಾಂ ಡೀಯ ಅಕ್ಷಾಂಶ | ಬ್ರಹ್ಮಾಂ ಡೀಯ ರೇಖಾಂಶ | – |

ಬಿಂದು ಅಲ್ಲಿಯ ಮೂಲಬಿಂದುವಿಗೆ ಸಂವಾದಿ; ಆದರೆ ಸಮತಲಗಳಲ್ಲಿ ಧ್ರುವಗಳಿಗೆ ಅಸ್ತಿತ್ವವಿಲ್ಲ.) ಅನೇಕ ವೇಳೆ ಸಹಾಕ್ಷಾಂಶದ (AB ಚಾಪ) ಬದಲು ಅದರ ಲಂಬಕೋನ ಪೂರಕವನ್ನು (BD ಚಾಪ) Bಯ ಒಂದು ನಿರ್ದೇಶಕವಾಗಿ ಅಂಗೀಕರಿಸುವುದುಂಟು. ಸಹಾಕ್ಷಾಂಶದ ಲಂಬಕೋನಪೂರಕಕ್ಕೆ ಅಕ್ಷಾಂಶ (ಲ್ಯಾಟಿಟ್ಯೂಡ್) ಎಂದು ಹೆಸರು. ಇದರ ವ್ಯಾಪ್ತಿ –90$^{\circ}$ಗಳಿಂದ +90$^{\circ}$ಗಳವರೆಗೆ.

**ಖಗೋಳ ಪರಿವರ್ತನೆಗಳು :** ಒಬ್ಬ ವೀಕ್ಷಕನ ಖಗೋಳದ ವಿವರಗಳಿಂದ ಮತ್ತೊಬ್ಬ ವೀಕ್ಷಕನ ಖಗೋಳದ ವಿವರಗಳನ್ನು ಗೊತ್ತುಮಾಡುವುದೇ ಖಗೋಳ ಪರಿವರ್ತನೆಯ ಸಮಸ್ಯೆ. ಆಕಾಶಕಾಯಗಳು ನಿರಂತರ ಚರ ಸ್ಥಿತಿಯಲ್ಲಿರುವುದರಿಂದ ಇಬ್ಬರು ವೀಕ್ಷಕರ ಖಗೋಳಗಳು ಯಾವ ಯಾವ ಕಾಲಗಳಿಗೆ ಸಂಬಂಧಿಸಿದವು ಎಂಬ ಮಾಹಿತಿ ಈ ಸಮಸ್ಯೆಯ ಪರಿಹಾರಕ್ಕೆ ಅತ್ಯಗತ್ಯ. ಸಾಧಾರಣವಾಗಿ ಎರಡೂ ಖಗೋಳಗಳು ಏಕಕಾಲೀಯವಾಗಿರಬೇಕೆಂಬ ನಿಬಂಧನೆಯನ್ನು ಹಾಕಿಕೊಳ್ಳುತ್ತೇವೆ. ಈ ನಿಬಂಧನೆ ಸಿಂಧುವಾಗಬೇಕಾದರೆ ನಾವು ಪರಿಶೀಲಿಸುವ ವೀಕ್ಷಕರು ಪರಸ್ಪರ ಸಮೀಪದಲ್ಲಿರುವುದು ಅನಿವಾರ್ಯ. (ಸಾಪೇಕ್ಷತಾ ಸಿದ್ಧಾಂತದಂತೆ ದೂರ ಏಕಕಲೀಯತೆ (ಡಿಸ್ಟೆಂಟ್ ಸೈಮಲ್ಟೇನಿಟಿ) ನಿಷ್ಕೃಷ್ಟ ವ್ಯಾಖ್ಯೆಗೆ ಒಳಪಡದ ಒಂದು ದೋಷಯುಕ್ತ ಪರಿಕಲ್ಪನೆ) ಅಲ್ಲದೆ ಅವರೀರ್ವರ ಖಗೋಳಗಳ ಮೇಲೆ ಅತಿ ದೂರದ ಆಕಾಶಕಾಯಗಳ ಸ್ಥಾನಗಳನ್ನು ಮಾತ್ರ ಪರಿಶೀಲಿಸುವುದು ಸೌಲಭ್ಯಕರ. (ಅಂಥ ಕಾಯಗಳಿಂದ ಹೊರಟ ಬೆಳಕಿನ ಕಿರಣಗಳು ಈರ್ವರು ವೀಕ್ಷಕರನ್ನು ಮುಟ್ಟಲು ಸರಿ ಸುಮಾರು ಒಂದೇ ಅವಧಿಯನ್ನು ತೆಗೆದುಕೊಂಡಿರುತ್ತದೆ; ಹತ್ತಿರದ ಕಾಯಗಳನ್ನು ಪರಿಶೀಲಿಸಿದಲ್ಲಿ ಅವುಗಳ ಬೆಳಕಿನ ಕಿರಣಗಳಿಗೆ ಒಬ್ಬ ವೀಕ್ಷಕನನ್ನು ಮುಟ್ಟಲು ಕಡಿಮೆ ಅವಧಿಯೂ ಮತ್ತೊಬ್ಬನನ್ನು ಮುಟ್ಟಲು ಹೆಚ್ಚು ಅವಧಿಯೂ ಹಿಡಿಸಿ ತೊಡಕುಗಳು ಉದ್ಭವಿಸುತ್ತವೆ.) ಇವೆರಡು ಪರಿಮಿತಿಗಳ ಚೌಕಟ್ಟಿನಲ್ಲಿ ಖಗೋಳ ಪರಿವರ್ತನೆಯ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಹುದು. ಈ ಸಂಬಂಧದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುವ ಅಂಶಗಳು ಎರಡು. ಮೊದಲನೆಯದು, ಇಬ್ಬರು ವೀಕ್ಷಕರು ಒಂದೇ ಕಾಯವನ್ನು ನೋಡುವಾಗ ಅವರ ದೃಷ್ಟಿ ರೇಖೆಗಳ ನಡುವೆ ಉಂಟಾಗುವ ಕೋನ ವ್ಯತ್ಯಾಸ. ಇದಕ್ಕೆ ದೃಗಂತರ (ಪ್ಯಾರಲ್ಲೆಕ್ಸ್) ಎಂದು ಹೆಸರು. ಎರಡನೆಯದು, ವೀಕ್ಷಕರು ಬೇರೆಬೇರೆ ವೇಗದಿಂದ ಚಲಿಸುತ್ತಿದ್ದಲ್ಲಿ ಅವರನ್ನು ತಲಪುವ ಬೆಳಕಿನ ಕಿರಣಗಳ ದಿಸೆಗಳು ಆ ವೇಗಕ್ಕೆ ಅನುಗುಣವಾಗಿ ಮಾರ್ಪಡುತ್ತವೆ ಎಂಬ ತಿಳಿವಳಿಕೆ. ಈ ಎರಡನೆಯ ವಿದ್ಯಮಾನಕ್ಕೆ ಬೆಳಕಿನ ವಿಪಥನ (ಅಬರ್‍ರೇಷನ್) ಎಂದು ಹೆಸರು. **(ನೋಡಿ– ಗೋಳತ್ರಿಕೋಣಮಿತಿ; ವಿಪಥನ, ದೃಗಂತರ)** (ಎಸ್.ಆರ್.ಎಂ.)

**ಖಗೋಳ ಕೋಷ್ಟಕ :** ನಮಗೆ ಪರಿಚಿತವಾಗಿರುವ ಹಲವಾರು ಆಕಾಶಕಾಯಗಳು ಅಂದರೆ ಸೂರ್ಯ, ಚಂದ್ರ, ಗ್ರಹ ಮತ್ತು ಕೆಲವು ನಕ್ಷತ್ರಗಳ ಸ್ಥಾನಗಳನ್ನು ಗೊತ್ತಾದ ವೇಳೆಗಳಿಗೆ ತಿಳಿಸುವ ಸಂಖ್ಯಾಕೋಷ್ಟಕ (ಎಫಿಮೆರಿಸ್). ಒಂದು ಆಕಾಶಕಾಯದ ಅಕ್ಷಾಂಶ, ರೇಖಾಂಶ, ವಿಷುವದಂಶ, ಘಂಟಾವೃತ್ತಾಂಶ ಮೊದಲಾದವುಗಳೇ ಅಲ್ಲದೆ ಒಂದು ವಾಂಛಿತ ಕ್ಷಣದಲ್ಲಿ ಸೂರ್ಯ, ಚಂದ್ರ, ಗ್ರಹಗಳು, ನಕ್ಷತ್ರಗಳು, ಜ್ಞಾತಧೂಮಕೇತುಗಳು ಯಾವ ಸ್ಥಾನಗಳಲ್ಲಿರುತ್ತವೆ, ಹೇಗೆ ಸಂಚರಿಸುತ್ತವೆ, ಅವುಗಳ ವೇಗಗಳೆಷ್ಟು, ಪರಿಭ್ರಮಣ ಕಾಲವೆಷ್ಟು, ಅವುಗಳ ಪರಸ್ಪರ ಸ್ಥಾನಪಲ್ಲಟಗಳಿಂದುಂಟಾಗುವ ಗ್ರಹಣಗಳು ಯಾವಾಗ ಆಗುತ್ತವೆ–ಈ ಎಲ್ಲ ವಿಷಯಗಳು ಖಗೋಳಕೋಷ್ಟಕದಲ್ಲಿ ದೊರೆಯುವುದು. ಈ

ಮಾಹಿತಿಗಳು ನೌಕಾಯಾತ್ರಿಗೆ ಬಹು ಅಗತ್ಯ. ಅಲ್ಲದೆ ಖಗೋಳಶಾಸ್ತ್ರಜ್ಞರಿಗೆ ಆಕಾಶಕಾಯಗಳ ಬಗ್ಗೆ ಸಂಶೋಧನೆ ನಡೆಸಲು ಮತ್ತು ದೂರದರ್ಶಕದಿಂದ ವೀಕ್ಷಿಸಲು ಅವುಗಳ ಸ್ಥಾನಗಳಲ್ಲದೆ ಅವು ಸಂಚರಿಸುವ ಪಥಗಳು ಮತ್ತು ಆ ಪಥಗಳ ಸಮೀಕರಣಗಳು ಇವೆಲ್ಲವೂ ಅಗತ್ಯ. ಇಂಥ ಒಂದು ಖಗೋಳಕೋಷ್ಟಕವನ್ನು ಸಿದ್ಧಪಡಿಸುವ ಕಾರ್ಯ ಮೊತ್ತಮೊದಲು ಜೆ. ಪಿಕಾರ್ಡ್ ಎಂಬಾತನ ನಿರ್ದೇಶನದಲ್ಲಿ 1679ರಲ್ಲಿ ಫ್ರಾನ್ಸಿನ ಪ್ಯಾರಿಸಿನಲ್ಲಿ ಪ್ರಾರಂಭವಾಯಿತು. ಬೇಡಿಕೆ ಹೆಚ್ಚಾದಂತೆ ಇಂಗ್ಲೆಂಡಿನ ಗ್ರೀನ್‌ವಿಚ್–ವೀಕ್ಷಣಾಲಯ 1766ರಲ್ಲಿ ನಾಟಿಕಲ್ ಆಲ್ಮನಕ್ ಎಂಬ ಹೆಸರಿನಿಂದ ಖಗೋಳಕೋಷ್ಟಕದ ಪ್ರಕಟಣೆಯಲ್ಲಿ ತೊಡಗಿತು. ಇದರಲ್ಲಿ ಪ್ರತಿ ಮಧ್ಯಾಹ್ನ ಮತ್ತು ಮಧ್ಯರಾತ್ರಿಯಲ್ಲಿ ಚಂದ್ರನ ಸ್ಥಾನವನ್ನು ಲೆಕ್ಕಮಾಡಿ ಕೊಡಲಾಗಿತ್ತು. ಈ ಕೆಲಸವನ್ನು ಬಹು ಯಶಸ್ವಿಯಾಗಿ ಮ್ಯಾಸ್ಕಲೈನ್ ಎಂಬಾತ ನಡೆಸಿಕೊಂಡು ಬಂದ. 1811ರಲ್ಲಿ ಆತನ ಮರಣಾನಂತರ ನಾಟಿಕಲ್ ಆಲ್ಮನಕ್ ತನ್ನ ಕೀರ್ತಿಗೆ ಕಳಂಕ ತರುವ ತಪ್ಪು ಅಂಶಗಳನ್ನು ಪ್ರಕಟಿಸಿದ ಕಾರಣದಿಂದ ಈ ಕಾರ್ಯವನ್ನು ನಡೆಸಲು ಇಂಗ್ಲೆಂಡ್ ಸರ್ಕಾರ ಒಂದು ಪುನಾರಚಿತ ಸಮಿತಿಯನ್ನೇ ನೇಮಿಸಿತು. ಅದರ ಆಶ್ರಯದಲ್ಲಿ ಖಗೋಳಕೋಷ್ಟಕಗಳ ರಚನೆ ಪುನಃ ಪ್ರಾರಂಭವಾಗಿ 1923ರ ತನಕ ನಡೆದುಕೊಂಡು ಬಂದು ಆ ವರ್ಷ ಮತ್ತಷ್ಟು ಪ್ರಗತಿ ಸಾಧಿಸಿತು. ಇದೇ ರೀತಿಯ ಖಗೋಳಕೋಷ್ಟಕ ಜರ್ಮನಿಯ ಬರ್ಲಿನಿನಲ್ಲಿ ಜೆ. ಇ. ಬೋಡ್ ಎಂಬಾತನ ನೇತೃತ್ವದಲ್ಲಿ ರೂಪುಗೊಂಡಿತು 1744. ಆದರೆ ಇದು 1959ರಲ್ಲಿ ನಿಂತುಹೋಯಿತು. ಸ್ಪೇನಿನಲ್ಲಿ 1827ರಲ್ಲಿ ಮೊದಲ ಸಂಚಿಕೆ ಪ್ರಕಟವಾಯಿತು. ಎಲ್ಲಕ್ಕಿಂತ ಹೆಚ್ಚು ಪ್ರಗತಿ ಸಾಧಿಸಿರುವ ಅಮೆರಿಕನ್ ಎಫಿಮೆರಿಸ್ ಮತ್ತು ನಾಟಿಕಲ್ ಆಲ್ಮನಕ್ 1852ರಲ್ಲಿ ವಾಷಿಂಗ್ಟನ್ ನಗರದಲ್ಲಿ ಪ್ರಾರಂಭವಾಯಿತು. ಡೇವಿಸ್ ಮತ್ತು ಸೈಮನ್ ಎಂಬವರು ಸಂಪಾದಕರಾಗಿದ್ದು ಈ ಕೋಷ್ಟಕ ಬಹು ಜನಪ್ರಿಯವೆಂದು ಪ್ರಸಿದ್ದವಾಗಿದೆ. ರಷ್ಯದಲ್ಲಿ ಖಗೋಳಕೋಷ್ಟಕ ಪ್ರಾರಂಭವಾದದ್ದು 1925ರಲ್ಲಿ.

ಅಂತೂ ಖಗೋಳಕೋಷ್ಟಕದ ಆವಶ್ಯಕತೆ ದಿನದಿನಕ್ಕೂ ಬೆಳೆಯಿತು. ಮೊದಲನೆಯ ಮಹಾಯುದ್ಧದಲ್ಲಿ ನೌಕಾಯಾನಕ್ಕೆ ಸಂಬಂಧಿಸಿದಂತೆ ವಿಧವಿಧವಾದ ವಿಷಯಗಳನ್ನೊಳಗೊಂಡ ಕೋಷ್ಟಕಗಳು ಪ್ರಕಟವಾದವು. ನೌಕಾಯಾತ್ರಿಗಳಿಗೆ ಅನ್ವಯವಾಗುವಂಥ ಒಂದು ವಿಶೇಷ ಸಂಚಿಕೆಯೇ 1914ರಲ್ಲಿ ಪ್ರಕಟವಾಯಿತು. ಆಕಾಶಯಾನಕ್ಕೆ ಮತ್ತು ವಿಮಾನ ಸಂಚಾರಕ್ಕೆ ಸಂಬಂಧಿಸಿದ ಅಂಶಗಳು 1914ರಿಂದ ಹೆಚ್ಚುಹೆಚ್ಚಾಗಿ ಪ್ರಕಟವಾಗತೊಡಗಿದವು. ಒಂದು ವಿಮಾನದ ಸ್ಥಾನವನ್ನು ಕಂಡುಹಿಡಿಯಲು ಸೂರ್ಯ, ಚಂದ್ರ ಮತ್ತು ಗ್ರಹಗಳಲ್ಲದೆ ಕೆಲವು ನಿರ್ದಿಷ್ಟ ನಕ್ಷತ್ರಗಳ ಕೋಷ್ಟಕಗಳು ಹೆಚ್ಚು ನೆರವಾದವು. ಖಗೋಳಕೋಷ್ಟಕಗಳ ಪ್ರಾಮುಖ್ಯ ಹೆಚ್ಚಿದಂತೆ ಅಂತಾರಾಷ್ಟ್ರೀಯ ಸಹಕಾರ ಕ್ರಮ ಕೈಗೊಳ್ಳುವ ಉದ್ದೇಶದಿಂದ 1896ರಲ್ಲಿ ಒಂದು ಸಮ್ಮೇಳನ ನಡೆಯಿತು. ಇದರಲ್ಲಿ ಖಗೋಳವಿಜ್ಞಾನದ ಕೆಲವೊಂದು ಸ್ಥಿರಾಂಕಗಳ ಬಗ್ಗೆ ಚರ್ಚೆಯಾಗಿ ಹಲವಾರು ಒಪ್ಪಂದಗಳು ಸಾಧ್ಯವಾದುವು. ಇವುಗಳ ಮೇರೆಗೆ ಎಲ್ಲ ಖಗೋಳಕೋಷ್ಟಕಗಳು ಒಂದೇ ಬಗೆಯ ಮಾಹಿತಿಗಳನ್ನು ತಯಾರುಮಾಡುವುದು ವ್ಯರ್ಥಕಾಲಕ್ಷೇಪವೆಂದರಿತು ಬೇರೆ ಬೇರೆ ರಾಷ್ಟ್ರಗಳು ವಿವಿಧ ಭಾಗಗಳನ್ನು ಹಂಚಿಕೊಂಡು ಮಾಹಿತಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದೆಂದು ತೀರ್ಮಾನಿಸಲಾಯಿತು. ಒಂದು ಖಗೋಳಕೋಷ್ಟಕವನ್ನು ತಯಾರಿಸುವ ಕೆಲಸ ಸುದೀರ್ಘವಾದುದ್ದು. ಗಣನೆಗಳನ್ನು ಸುಲಭಗೊಳಿಸಲು ಇಂದು ಗಣಕ ಯಂತ್ರಗಳ ನೆರವನ್ನು ಪಡೆಯಲಾಗುತ್ತದೆ. ಬ್ರೌನ್ ಖಗೋಳಕೋಷ್ಟಕದಲ್ಲಿ ಚಂದ್ರನಿಗೆ ಸಂಬಂಧಿಸಿದ(1,400) ಬೇರೆ ಬೇರೆ ವಿಷಯಗಳು ಪ್ರಕಟವಾಗುತ್ತಿವೆ. ಚಂದ್ರನ ನಿರ್ದಿಷ್ಟ ಸ್ಥಾನವನ್ನು ಗುರ್ತಿಸಲು 180 ಕೋಷ್ಟಕಗಳನ್ನು ಬಳಸಬೇಕಾಗುತ್ತದೆ ಎಂದರೆ ಕೋಷ್ಟಕಗಳ ಅಗತ್ಯ ಎಷ್ಟಿರಬಹುದೆಂಬುದನ್ನು ಊಹಿಸಬಹುದು.

ಕೆಲವು ಆಕಾಶಕಾಯಗಳ ಚಲನವಲನಗಳನ್ನು ನೋಡಿಕೊಂಡು ಸಂಚರಿಸುವ ನಾವಿಕರಿಗೂ ಆಕಾಶವಿಜ್ಞಾನಿಗಳಿಗೂ ಧೂಮಕೇತು, ಗ್ರಹಣ ಮುಂತಾದ ಹಲವು ಆಕಾಶವಿಶೇಷಗಳನ್ನು ಪೂರ್ವಭಾವಿಯಾಗಿ ಲೆಕ್ಕಮಾಡಿ ತಿಳಿಯಲು ಪ್ರಯತ್ನಿಸುವ ಗಣಿತಜ್ಞರಿಗೂ ಖಗೋಳಕೋಷ್ಟಕಗಳು ಉಪಯೋಗವಾಗುತ್ತವೆ. ಆಕಾಶಕಾಯಗಳ ಸ್ಥಾನಗಳನ್ನು ನಿಶ್ಚಿತವಾಗಿ ಅರಿಯಲು ಸುಮಾರು 1960ರ ತನಕ ಗ್ರೀನ್‌ವಿಚ್ ಮಾಧ್ಯಕಾಲವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದ್ದಿತು. ಇದಕ್ಕೆ ವಿಶ್ವಕಾಲ(ಯೂನಿವರ್ಸಲ್ ಟೈಂ) ಎಂದು ಹೆಸರು. ಈ ಕಾಲ ಭೂಮಿ ತನ್ನ ಅಕ್ಷದ ಮೇಲೆ ಒಮ್ಮೆ ಆವರ್ತಿಸುವ ಅವಧಿಗೆ ಅನುಗುಣವಾಗತ್ತದೆ. ಆದರೆ ಭೂಾವ್ಯಾವರ್ತನ ಕಾಲ ಏಕರೀತಿಯಾಗಿರುವುದಿಲ್ಲವೆಂದು ಇತ್ತೀಚಿಗೆ ಖಚಿತವಾಗಿದೆ. ಈ ಕಾರಣದಿಂದ ಇದನ್ನು ಆಧಾರವಾಗಿಟ್ಟುಕೊಳ್ಳದೆ ಎಫಿಮೆರಿಸ್ ಕಾಲ ಎಂಬ ಮತ್ತೊಂದು ಗುಣಕಕಾಲವನ್ನು ಪರಿಗಣಿಸಬೇಕೆಂದು 1955ರಲ್ಲಿ ಡಬ್ಲಿನ್ ಎಂಬಲ್ಲಿ ನಡೆದ ಅಂತಾರಾಷ್ಟ್ರೀಯ ಖಗೋಳ ವಿಜ್ಞಾನ ಸಭೆ ಸೂಚಿಸಿ ಈ ಕಾಲವನ್ನು ಅನುಸರಿಸಿ ಖಗೋಳಕೋಷ್ಟಕಗಳನ್ನು 1960ರಿಂದ ಪ್ರಕಟಿಸಬೇಕೆಂದು ನಿರ್ಧರಿಸಿತು.

ಖಗೋಳಕೋಷ್ಟಕ ಕಾಲವನ್ನು(ಎಫಿಮೆರಿಸ್ ಟೈಂ) ಅನೇಕ ವರ್ಷಗಳ ಪರ್ಯಂತ ಭೂಮ್ಯಾವರ್ತನ ಕಾಲಗಳನ್ನು ಲೆಕ್ಕ ಮಾಡಿ ಗಣಿತಶಾಸ್ತ್ರ ರೀತಿಯಾಗಿ ನಿರ್ಧರಿಸುತ್ತಾರೆ. ಹೀಗಾಗಿ ಇದು ಯಾವೊಂದು ವರ್ಷದ ಆವರ್ತನ(ರೊಟೇಷನ್) ಅವಧಿಗೂ ಅನುಗುಣವಾಗಿರುವುದಿಲ್ಲ. ಅಲ್ಲದೆ ಇದನ್ನು ಮುಂಚಿತವಾಗಿಯೇ ಗೊತ್ತುಪಡಿಸುವುದಕ್ಕಾಗುವುದಿಲ್ಲ. ಗ್ರೀನ್‌ವಿಚ್ ಮಾಧ್ಯಕಾಲಕ್ಕೂ ಖಗೋಳಕೋಷ್ಟಕ ಕಾಲಕ್ಕೂ 1963ರಲ್ಲಿ 35 ಸೆಕೆಂಡುಗಳ ವ್ಯತ್ಯಾಸವಿತ್ತು. ಇದನ್ನು ಅನುಸರಿಸಿ ಈಗ ಕೋಷ್ಟಕಗಳನ್ನು ತಯಾರಿಸುತ್ತಿದ್ದಾರೆ. ಕೋಷ್ಟಕಕಾಲಕ್ಕೆ ಅನುಗುಣವಾಗಿ ಕೋಷ್ಟಕ ಮಧ್ಯಾಹ್ನರೇಖೆ (ಎಫಿಮೆರಿಸ್ ಮೆರಿಡಿಯನ್) ಎಂಬುದನ್ನು ಪರಿಗಣಿಸಲಾಗಿದೆ. ಭಾರತದಲ್ಲಿ 1957ರಿಂದಲೂ ಈ ಕೋಷ್ಟಕಗಳನ್ನು ಪ್ರಕಟಿಸುತ್ತಿದ್ದಾರೆ. ಇದಕ್ಕೆ ಇಂಡಿಯನ್ ಎಫಿಮೆರಿಸ್ ಅಂಡ್ ನಾಟಿಕಲ್ ಆಲ್ಮನಕ್ ಎಂದು ಹೆಸರು. ಇದು ಭಾರತೀಯ ಪಂಚಾಂಗಗಳನ್ನು ಸಿದ್ಧಗೊಳಿಸುವುದಕ್ಕೆ ಬೇಕಾದ ಕೆಲವು ವಿಶಿಷ್ಟ ವಿವರಗಳನ್ನು ಕೂಡ ಒದಗಿಸುತ್ತದೆ.

**ಭಾರತೀಯ ಕ್ರಮ** : ಪ್ರತಿಯೊಬ್ಬ ಭಾರತೀಯನ ದಿನಚರಿಯೂ ಒಂದಲ್ಲ ಒಂದು ವಿಧದಲ್ಲಿ ತಿಳಿದೋ ತಿಳಿಯದೆಯೋ ಖಗೋಳಕೋಷ್ಟಕಗಳನ್ನು ಅವಲಂಬಿಸಿದೆ. ಇತಿಹಾಸತಜ್ಞರ ಮತ್ತು ಸಂಶೋಧಕರ ದೃಷ್ಟಿಗೆ ನಿಲುಕದ ದಿನಗಳಿಂದಲೂ ಇಲ್ಲಿಯ ಜನ ಖಗೋಳಕೋಷ್ಟಕವನ್ನು ಬಳಸುತ್ತಿದ್ದಾರೆ. ಗ್ರಹ ವಿಜ್ಞಾನ ಭಾರತಕ್ಕೆ ಗ್ರೀಕರ ಕೊಡುಗೆ ಎಂದು ಹಲವಾರು ದೊಡ್ಡ ವಿದ್ವಾಂಸರು ತಪ್ಪು ಅಭಿಪ್ರಾಯಕ್ಕೆ ಬಂದಿದ್ದಾರೆ. ಇದು ಹೇಗೂ ಇರಲಿ. ಭಾರತೀಯ ಸಂಪ್ರದಾಯದ ಪ್ರಕಾರ ಕ್ರಾಂತಿವೃತ್ತದ ಎರಡೂ ಕಡೆ ಸೇರಿದ ಖಗೋಳ ಪಟ್ಟಿಗೆ ಭಚಕ್ರ(ಝೋಡಿಯಕ್) ಎಂದು ಹೆಸರು. ಇದನ್ನು 27 ಸಮಭಾಗ ಮಾಡಿದರೆ ಪ್ರತಿಭಾಗಕ್ಕೂ ಒಂದು ನಕ್ಷತ್ರ ಎಂದು ಹೆಸರು. ಅಶ್ವಿನಿ, ಭರಣಿ ಇತ್ಯಾದಿಗಳೇ ಈ ನಕ್ಷತ್ರಗಳು. ಒಂದು ನಕ್ಷತ್ರದ ವ್ಯಾಪ್ತಿಯನ್ನು 4 ಭಾಗ ಮಾಡಿದರೆ ಪ್ರತಿಭಾಗಕ್ಕೂ ಒಂದು ಪಾದವೆಂದು ಹೆಸರು. ಭಚಕ್ರವನ್ನು 12 ಸಮಭಾಗ ಮಾಡಿ ಪ್ರತಿಯೊಂದಕ್ಕೂ ಒಂದು ರಾಶಿ ಎಂದು ಕರೆಯುತ್ತಾರೆ. ಮೇಷ, ವೃಷಭ ಇತ್ಯಾದಿ 12 ರಾಶಿಗಳು. ಒಂದು ರಾಶಿಯಲ್ಲಿ (21/4) ನಕ್ಷತ್ರಗಳಿವೆ. ಮೇಷದಲ್ಲಿ, ಅಶ್ವಿನಿ 4 ಭಾಗ, ಭರಣಿ 4, ಕೃತ್ತಿಕಾ 1 ಇತ್ಯಾದಿ. ಖಗೋಳದಲ್ಲಿ ಚಂದ್ರ ಯಾವ ನಕ್ಷತ್ರದ ಯಾವ ಪಾದದಲ್ಲಿರುವುದೋ ಅದಕ್ಕೆ ದಿನ ಅಥವಾ ನಿತ್ಯನಕ್ಷತ್ರ ಎಂದು ಹೆಸರು. ಹಾಗೆಯೇ ಸೂರ್ಯ ಇರುವ ನಕ್ಷತ್ರಕ್ಕೆ ಮಹಾನಕ್ಷತ್ರ ಅಥವಾ ಮಳೆಯ ನಕ್ಷತ್ರ ಎಂದು ಹೆಸರು. ಚಂದ್ರನೂ ಸೂರ್ಯನೂ ಒಟ್ಟಾಗಿ ಸಂಚರಿಸುವ ದಿನ ಅಮಾವಾಸ್ಯೆ. ಅಂದಿನಿಂದ ಕ್ರಮವಾಗಿ ಪಾಡ್ಯ, ಬಿದಿಗೆ ಮೊದಲಾದವು ತಿಥಿ ಎನಿಸಿಕೊಳ್ಳುತ್ತವೆ(**ನೋಡಿ– ಪಂಚಾಂಗ**). ಜಾತಕ ಬರೆಯುವ ಪದ್ಧತಿ ಬಹಳ ಹಿಂದಿನಿಂದಲೂ ಬಂದಿದೆ. ಜಾತಕದಲ್ಲಿ ಕುಂಡಲಿಯ ಭಾಗ ಒಂದು ವೈಜ್ಞಾನಿಕ ದಾಖಲೆ. ಅದರಲ್ಲಿ ಉಕ್ತವಾಗುವ ಫಲಗಳು ವೈಜ್ಞಾನಿಕವೇ ಎಂಬುದು ಚರ್ಚೆಗೊಳಗಾದ ವಿಷಯ. ಏನೇ ಇರಲಿ, ಕುಂಡಲಿಗೆ ಖಗೋಳಕೋಷ್ಟಕ ಅತ್ಯಾವಶ್ಯಕ. ಭಚಕ್ರದಲ್ಲಿ ಇಷ್ಟು ಸಮಯಕ್ಕೆ ಸರಿಯಾಗಿ ಉದಯಿಸುವ (ಪೂರ್ವದಿಕ್ಕಿನಲ್ಲಿ ಕಾಣಿಸಿಕೊಳ್ಳುವ) ನಕ್ಷತ್ರಕ್ಕೆ (ರಾಶಿಗೆ) ಆ ಸಮಯದ ಲಗ್ನ ಎಂದು ಹೆಸರು. ಯಾವುದೇ ಕೆಲಸ ಮಾಡಲು ಮುಹೂರ್ತವನ್ನು ಸಾಧಿಸುವ ಪದ್ಧತಿ ಭಾರತದಲ್ಲಿ ವೇದಗಳ ಕಾಲದಿಂದಲೂ ಬಂದಿದೆ. ಇಂಥ ಲಗ್ನವನ್ನೂ ತಿಥಿ, ನಕ್ಷತ್ರ, ಮಾಸ, ಸಂವತ್ಸರ ಮತ್ತು ಗ್ರಹಗಳ ರಾಶಿಸ್ಥಾನಗಳನ್ನೂ ಗಣನೆ ಮಾಡಲು ಆರ್ಯಭಟನಿಗಿಂತ ಹಿಂದಕ್ಕೆ ಅನೇಕ ಶತಮಾನಗಳ ಕಾಲ ಭಾರತದಲ್ಲಿ ಕೋಷ್ಟಕಗಳ ಬಳಕೆ ದೃಗ್ಗಣಿತದ ಆಧಾರದ ಮೇಲೆ ನಡೆಯುತ್ತಿತ್ತು. ಬಲ್ಲವರು ಪ್ರತಿದಿನ ಸೂರ್ಯ, ಚಂದ್ರ, ಗ್ರಹಗಳ ಸ್ಥಾನಗಳನ್ನು ನಕ್ಷತ್ರಗಳಿಗೆ ಸಾಪೇಕ್ಷವಾಗಿ ಗುರ್ತಿಸುತ್ತಿದ್ದರು. ಹಾಗೆ ಗುರ್ತಿಸುವುದು ಕರಾರುವಕ್ಕಾಗಿರಲೇಬೇಕಷ್ಟೆ. ಇಂಥ ಶ್ರಮಸಾಧ್ಯ ನಿರ್ಣಯದ ಕಾರ್ಯವನ್ನು ದೂರೀಕರಿಸುವ ಪ್ರಯತ್ನ ಆರ್ಯಭಟನಿಂದ ಪ್ರಾರಂಭವಾಯಿತು. ಅಂದಿನಿಂದ ಲೆಕ್ಕಾಚಾರ ಪ್ರಾರಂಭವಾಗಿ ದಿನಮಾನ, ಸೂರ್ಯೋದಯ ಕಾಲ, ತಿಥಿ ನಕ್ಷತ್ರ, ಮೊದಲಾದ ಎಲ್ಲ ಮಾಹಿತಿಗಳನ್ನೊಳಗೊಂಡ ಖಗೋಳ ಕೋಷ್ಟಕಗಳು(ಪಂಚಾಂಗಗಳು) ಭಾರತದ ಅನೇಕ ಭಾಗಗಳಲ್ಲಿ ಪ್ರಕಟವಾಗುತ್ತಿವೆ. ಈ ಮಾಹಿತಿಗಳಲ್ಲಿ ಕೆಲವುಗಳ ಬಗ್ಗೆ ಇಂದಿಗೂ ವಾದವಿವಾದಗಳು, ಸಮ್ಮೇಳನಗಳು ನಡೆಯುತ್ತಲೇ ಇವೆ. ಒಂದು ಬಹುಮುಖ್ಯ ವಿಷಯವೆಂದರೆ ಭಾರತದಲ್ಲಿ ಯಾವುದೇ ಒಂದು ಘಟನೆಯ ಪುನರಾವರ್ತನೆಯ ಮುಹೂರ್ತ ನಿರ್ಧರಿಸಲು ಬಳಸುವ ಮಾರ್ಗ ಪರಿಪೂರ್ಣ ವೈಜ್ಞಾನಿಕ. ಉದಾಹರಣೆಗೆ ಗಣೇಶನ ಚತುರ್ಥಿಯನ್ನು ಆಚರಿಸುವ ದಿನ ಭೂಮಿ ಚಂದ್ರ ಮತ್ತು ಸೂರ್ಯ ಸಾಪೇಕ್ಷವಾಗಿ ಒಂದೇ ಸ್ಥಾನದಲ್ಲಿರುತ್ತವೆ. ಎಂದರೆ ಘಟನೆಗೆ ಸೂರ್ಯಚಂದ್ರರಿಬ್ಬರೂ ಸಾಕ್ಷಿಗಳು. ಗ್ರಿಗೋರಿಯನ್ ಪದ್ಧತಿಯಲ್ಲಿರುವ ಬಹು ದೊಡ್ಡ ದೋಷ ಇಂಥ ಹೊಂದಾಣಿಕೆಯ ಅಭಾವ. ಉದಾಹರಣೆಗೆ ಗ್ರಿಗೋರಿಯನ್ ಪದ್ಧತಿಯ ಪ್ರಕಾರ ಗಾಂಧಿ ಜಯಂತಿಯನ್ನು ಪ್ರತಿವರ್ಷ ಅಕ್ಟೋಬರ್ 2ರಂದು ಆಚರಿಸಬೇಕು. ಆ ದಿನ ಒಂದು ವರ್ಷ ಅಮಾವಾಸ್ಯೆ ಮತ್ತೊಂದು ವರ್ಷ ಪೌರ್ಣಮಿ ಆಗಿರಬಹುದು. ಎಂದರೆ ಘಟನೆಗೂ ಭೂಮಿಯ ನಿಕಟವರ್ತಿಯಾದ ಚಂದ್ರನಿಗೂ ಸಂಬಂಧವೇ ಇಲ್ಲವೆಂದ ಹಾಗಾಯಿತು.

(ಬಿ.ವಿ.ಎಸ್.; ಕೆ.ಎಂಎಎನ್.)

**ಖಗೋಳ ಜೀವವಿಜ್ಞಾನ :** ವಿಶ್ವದಲ್ಲಿ ಜೀವಿಗಳ ಉಗಮ, ವಿಕಾಸ, ಹಂಚಿಕೆ, ಭವಿಷ್ಯ ಕುರಿತಂತೆ ಅಧ್ಯಯನ ಮಾಡುವ ವಿಜ್ಞಾನ ವಿಭಾಗ (ಬಯೊ ಅಸ್ಟ್ರಾನಮಿ). ಇದನ್ನು ಅರಿಯಲು ಜೀವಿಗಳ ಮತ್ತು ಅವು ಬದುಕುಳಿಯಲು ಬೇಕಾದ ಪರಿಸರದ ಬಗ್ಗೆ ಸ್ಪಷ್ಟ ತಿಳಿವಿರಬೇಕಾಗುತ್ತದೆ. ಭೂಮಿಗಿಂತ ಭಿನ್ನವಾದ ಜೀವಗೋಳ ಅನ್ಯಕಾಯಗಳಲ್ಲಿದೆಯೆ ಎಂದು ಕೂಲಂಕಷವಾಗಿ ಸಂಶೋಧನೆ ಮಾಡಲು ಈ ಹಿನ್ನಲೆ ಅತ್ಯವಶ್ಯ ಸಹಜವಾಗಿ ಇಂಥ ಅಧ್ಯಯನ ಬಹು ವ್ಯಾಪಕವಾದದ್ದು, ಸೌರವ್ಯೂಹದಾಚೆಗೆ ಜೀವಿಸಲು ಯೋಗ್ಯವಾದ ಪರಿಸರವಿದೆಯೆ ಎಂಬುದರ ಬಗೆಗೆ ಪ್ರಾಥಮಿಕ ತಿಳಿವನ್ನು ಪಡೆಯಲು ಮಂಗಳ ಗ್ರಹದ ಶೋಧ ಕಳೆದ ಶತಮಾನದಲ್ಲಿ ಪ್ರಮುಖ ಗುರಿಯಾಯಿತು. ಈ ಕುರಿತು ಖಗೋಳಜೀವವಿಜ್ಞಾನಿಗಳು ಅನ್ಯ ಕಾಯಗಳ ಪರಿಸರವನ್ನು ಕೃತಕವಾಗಿ ಪ್ರಯೋಗಾಲಯದಲ್ಲೇ ಸೃಷ್ಟಿಸಿ ಅಧ್ಯಯನವನ್ನು ಮುಂದುವರಿಸಿದ್ದಾರೆ. ಜೀವಿಗಳು ಭವಿಷ್ಯದಲ್ಲಿ ಹೇಗೆ ತಮ್ಮ ಉಳಿವನ್ನು ಸಮರ್ಥಿಸಿಕೊಳ್ಳುತ್ತವೆಂಬುದರ ಬಗ್ಗೆಯೂ ಈ ಅಧ್ಯಯನ ಒತ್ತು ಕೊಡುತ್ತದೆ. ಖಗೋಳಜೀವವಿಜ್ಞಾನ ಸರ್ವತಂತ್ರ ಸ್ವತಂತ್ರ ವಿಭಾಗವಲ್ಲ. ಇದನ್ನು ಬೆಂಬತ್ತಲು ಸಮಕಾಲೀನ ವಿಜ್ಞಾನಗಳ ಬೇರೆ ಬೇರೆ ಪ್ರಕಾರಗಳಲ್ಲಾಗಿರುವ ಶೋಧವನ್ನು ಯುಕ್ತವಾಗಿ ಬಳಸಿಕೊಳ್ಳಬೇಕಾಗುತ್ತದೆ. ಆನ್ವಯಿಕ ಜೀವವಿಜ್ಞಾನ, ಜೀವಿಪರಿಸ್ಥಿತಿ ವಿಜ್ಞಾನ, ಗ್ರಹಾಧ್ಯಯನ, ಖಗೋಳವಿಜ್ಞಾನ, ಮಾಹಿತಿ ವಿಜ್ಞಾನ, ವ್ಯೋಮಶೋಧನಾತಂತ್ರವಿದ್ಯೆ ಮುಂತಾದ ಆಧುನಿಕ ವಿಜ್ಞಾನಗಳ ಅನೇಕ ಪರಿಶೋಧನೆಗಳೇ ಖಗೋಳ ಜೀವವಿಜ್ಞಾನದ ಹೂರಣ. ಇದೊಂದು ಅಂತರ್‌ಶಾಸ್ತ್ರೀಯ ವಿಜ್ಞಾನ (ಇಂಟರ್‌ಡಿಸಿಪ್ಲಿನರಿ ಸೈನ್ಸ್) ಭೂಮಿಯನ್ನೇ ಜೀವಿಗಳ ತವರು ಎಂಬ ಈಗಿನ ಪರಿಕಲ್ಪನೆಗೆ ಹೊಸ ಭಾಷ್ಯ ಬರೆಯಲು ಹೊರಟಿರುವ ಚಿಂತನೆ.

ಖಗೋಳಜೀವವಿಜ್ಞಾನದ ರೂಪರೇಖೆ–ಗುರಿ ಹೇಗಿರಬೇಕೆಂದು ಅಮೆರಿಕದ ನಾಸಾ ಸಂಸ್ಥೆ (ನ್ಯಾಷನಲ್ ಏರೋನಾಟಿಕಲ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್) ನೀಲನಕ್ಷೆ ತಯಾರಿಸಿದೆ. ಅದನ್ನು ಹೇಗೆ ಅಭಿವೃದ್ಧಿಪಡಿಸಿ ಸಂಶೋಧನೆಗೆ ತೊಡಗಬೇಕೆಂಬ ಮಾರ್ಗದರ್ಶನವನ್ನು ಈ ಕುರಿತು ಅಧ್ಯಯನ ಮಾಡ ಹೊರಟ ಸಂಸ್ಥೆಗಳಿಗೆ ನೀಡಿದೆ. ನಾಸಾದ 200 ವಿಜ್ಞಾನಿ–ತಂತ್ರವಿದರು ಈ ಶೋಧನೆಯಲ್ಲಿ ಗಂಭೀರವಾಗಿ ತೊಡಗಿದ್ದಾರೆ. ಈ ಅಧ್ಯಯನ ಸ್ಥೂಲವಾಗಿ ನಾಲ್ಕು ಪ್ರಶ್ನೆಗಳಿಗೆ ದೊರಕಿಸಿಕೊಳ್ಳುವ ಯೋಜನೆಯನ್ನು ಆದ್ಯತೆಯ ಮೇರೆ ಎತ್ತಿಕೊಂಡಿದೆ– 1. ಜೀವ ಉಗಮವಾದದ್ದು ಹೇಗೆ? 2. ವಿಕಾಸ ಎತ್ತ ಸಾಗಿದೆ? 3. ಭೂಮ್ಯತೀತ ಜೀವಿಗಳಿವೆಯೆ? ಇದ್ದರೆ ಎಲ್ಲಿ? ಭೂಮಿಯಲ್ಲಿಯ ಜೀವಿ ಸಂಕುಲದ ಭವಿಷ್ಯವೇನು?

ಖಗೋಳಜೀವವಿಜ್ಞಾನದ ಅಧ್ಯಯನ ಸಫಲವಾಗಬೇಕಾದರೆ ಕೆಲವೊಂದು ನಿರ್ಣಾಯಕ ಅಂಶಗಳಿವೆ. ಇವನ್ನು ಈ ವಿಭಾಗದ ಮೂಲ ತತ್ತ್ವಗಳೆಂದೇ ವ್ಯಾಖ್ಯಾನಿಸಲಾಗಿದೆ.

- ಇದು ಮೂಲತಃ ವಿವಿಧ ಶಿಸ್ತುಗಳ ಅಧ್ಯಯನವನ್ನು ಒಳಗೊಂಡಿರುವ ವಿಭಾಗ. ಇಲ್ಲಿ ಉತ್ತಮ ಫಲಿತಾಂಶ ಬರಲು ಈ ವಿವಿಧ ಶಿಸ್ತುಗಳ ನಡುವೆ ಸಮನ್ವಯ ಸಾಧಿಸುವುದು ಅಗತ್ಯ ಖಗೋಳಜೀವವಿಜ್ಞಾನದ ಬೆನ್ನೆಲುಬು ವ್ಯೋಮ ಶೋಧ.
- ಈ ವಿಭಾಗ ಬೆಳೆದು ಅನ್ಯ ಕಾಯಗಳ ಶೋಧನೆ – ವಿಶೇಷವಾಗಿ ಗ್ರಹೋಪಗ್ರಹಗಳ ತಪಶೀಲು ಪರಿಶೋಧನೆಯೇ ಆದ್ಯ ಬಂಡವಾಳವಾಗುತ್ತದೆ. ಅಲ್ಲಿಂದ ತರುವ ನಮೂನೆಗಳು ಯಾವ ಬಗೆಯಲ್ಲೂ ಕಲುಷಿತವಾಗದಂತೆ ಕಟ್ಟೆಚ್ಚರ ವಹಿಸಬೇಕಾಗುತ್ತದೆ. ಅದಕ್ಕಾಗಿ ಒಂದು ನೀತಿ ಸಂಹಿತೆಯನ್ನೇ ಅನುಸರಿಸಬೇಕಾಗುವುದು ವಿಜ್ಞಾನದ ಮೇಲಿನ ನಂಬಿಕೆಯ ದೃಷ್ಟಿಯಿಂದ ಅತ್ಯಗತ್ಯ–ಅನಿವಾರ್ಯ.
- ಈ ವಿಭಾಗವನ್ನು ಬೆಂಬತ್ತುವ ವಿಜ್ಞಾನಿಗಳಿಗೆ ಸಾಮಾಜಿಕ ಹೊಣೆಗಾರಿಕೆಯೂ ಇರಬೇಕು. ಹೊಸ ಶೋಧಗಳು ಭೂಮಿಯ ಮೇಲಿನ ಜೀವಕೋಟಿಗೆ ಯಾವ ಬಗೆಯಲ್ಲೂ ಬಾಧಕವಾಗದಂತೆ ನಿರ್ದಿಷ್ಟ ಕಾರ್ಯೋನ್ಮುಖ ಯೋಜನೆಗಳನ್ನು ರೂಪಿಸಬೇಕು.
- ಇಲ್ಲಿಯ ಅಧ್ಯಯನದ ಪ್ರಗತಿ ಮುಂದಿನ ಪೀಳಿಗೆಗೆ, ವಿಶೇಷವಾಗಿ ಸಂಶೋಧಕರಿಗೆ, ದಾರಿದೀಪವಾಗಬೇಕು. ಅದೊಂದು ವಿದ್ಯಾಭ್ಯಾಸದ ಅಂಗವಾಗಿ ಬದುಕಿಗೆ ಹೊಸ ವ್ಯಾಖ್ಯೆ ಸಿಕ್ಕುವಂತಾಗಬೇಕು.

ನಕ್ಷತ್ರ ಮತ್ತು ಧೂಮಕೇತುಗಳ ರೋಹಿತದಿಂದ ಜೈವಿಕ ವಸ್ತುವನ್ನು ಪತ್ತೆ ಹಚ್ಚುವ ಪ್ರಯತ್ನ ಈಗ ಹೆಚ್ಚಿನ ಕುತೂಹಲ ಮೂಡಿಸಿದೆ. ಹಯಶಿರ (ಹಾರ್ಸ್‌ಹೆಡ್) ನೀಹಾರಿಕೆಯ ಅಂತರನಾಕ್ಷತ್ರಿಕ ದ್ರವ್ಯದ ಗೋಚರ ಬೆಳಕಿನ ರೋಹಿತ ಮೊದಲಿನಿಂದಲೂ ಖಗೋಳವಿಜ್ಞಾನಿಗಳನ್ನು ಆಕರ್ಷಿಸಿತ್ತು. ಈಗಾಗಲೇ ಪ್ರಯೋಗಾಲಯದಲ್ಲಿ ವಿಶ್ಲೇಷಿಸಿದ ಜೈವಿಕ ವಸ್ತುಗಳ ರೋಹಿತವನ್ನು ಅದರೊಂದಿಗೆ ತಾಳೆ ಹಾಕಿ ನೋಡಬಹುದು. ಚಂದ್ರಶೇಖರ್ (1910–95), ವಿಕ್ರಮಸಿಂಘೆ ಮತ್ತು ಫ್ರೆಡ್ ಹಾಯ್ಲ್ (1915–2001) ಅವರು ಅಂತರ ನಾಕ್ಷತ್ರಿಕ ದೂಳು ಹಾಗೂ ಧೂಮಕೇತುಗಳ ದೂಳಿನಲ್ಲಿ ಜೈವಿಕ ವಸ್ತುಗಳಿರುವುದಾಗಿ 1984ರಿಂದಲೂ ವಾದಿಸುತ್ತಲೇ ಬಂದಿದ್ದಾರೆ. ಅತಿರಕ್ತ ವ್ಯಾಪ್ತಿಯ ಸಮೀಪದಲ್ಲಿ ಸಂಕೀರ್ಣ ಹೈಡ್ರೊಕಾರ್ಬನ್‌ಗಳ ಅಸ್ತಿತ್ವವನ್ನು ನಿಸ್ಸಂಶಯವಾಗಿ ಗುರುತಿಸಬಹುದೆಂಬುದು ಅವರ ಅಭಿಮತ. ಇದನ್ನು ಖಚಿತಪಡಿಸಿಕೊಳ್ಳಲು ಯೂರೋಪಿಯನ್ ಸ್ಪೇಸ್ ಏಜೆನ್ಸಿ (ಇ.ಎಸ್.ಎ) ಉಡಾಯಿಸಿರುವ ಅತಿರಕ್ತ ಶೋಧನೌಕೆ ಈಗಾಗಲೇ ಮಾಹಿತಿ ಸಂಗ್ರಹಿಸತೊಡಗಿದೆ. ಅಷ್ಟೇ ಅಲ್ಲ ರೇಡಿಯೊ, ಗೋಚರಬೆಳಕು ಮತ್ತು ಅತಿನೇರಳೆಕಿರಣಗಳ ವ್ಯಾಪ್ತಿಯಲ್ಲೂ ಜೈವ ರಾಸಾಯನಿಕ ವಸ್ತುಗಳ ಬಗ್ಗೆ ಖಚಿತ ಮಾಹಿತಿ ಪಡೆಯಬಹುದು.

1986ರಲ್ಲಿ ಹ್ಯಾಲಿ ಧೂಮಕೇತು ಕುರಿತು ಕೈಗೊಂಡ ವ್ಯಾಪಕ ಶೋಧ ಧೂಮಕೇತು ಅಧ್ಯಯನದ ಬಗ್ಗೆ ಹೊಸ ಅಧ್ಯಾಯವನ್ನೇ ತೆರೆಯಿತು. ಧೂಮಕೇತುವೆಂದರೆ ಕೊಳಕು ಹಿಮ ಮುದ್ದೆ ಎಂದಷ್ಟೇ ಈಗ ವ್ಯಾಖ್ಯಾನಿಸುವಂತಿಲ್ಲ. ನಿರ್ದಿಷ್ಟ ಜಾಗಗಳಿಂದ ಈ ಧೂಮಕೇತು ಹೊರಸೂಸುತ್ತಿದ್ದ ಅನಿಲದಲ್ಲಿ ಕಾರ್ಬನ್ ಕಣಗಳಿರುವುದು ಪತ್ತೆಯಾಗಿದೆ. ರೋಹಿತ ವಿಶ್ಲೇಷಣೆಯಿಂದ ದಯಾಳ್, ವಿಕ್ರಮ ಸಿಂಘೆ ಮತ್ತು ಡೇವಿಡ್ ಅಲೆನ್ ಇದನ್ನು ಆಂಗ್ಲೊಆಸ್ಟ್ರೇಲಿಯನ್ ದೂರದರ್ಶಕ ಅಧ್ಯಯನದಿಂದ ಖಚಿತಪಡಿಸಿದ್ದಾರೆ. ಭೂಮಿಯ ಆದಿಮ ಚರಿತ್ರೆಯಲ್ಲಿ ಈ ಬಗೆಯ ಧೂಮಕೇತುಗಳೇ ಜೀವ ಬೀಜಗಳ ವಾಹಕಗಳಾಗಿರಬೇಕೆಂಬ ಊಹೆಗೆ ಇದರಿಂದ ಮತ್ತಷ್ಟು ಬೆಂಬಲ ಸಿಕ್ಕಿದಂತಾಗಿದೆ. ಇಂಗ್ಲೆಂಡಿನ ಕಾರ್ಡಿಫ್ ವಿಶ್ವವಿದ್ಯಾಲಯ ಖಗೋಳ ಜೀವವಿಜ್ಞಾನದ ಒಂದು ವಿಭಾಗವನ್ನು ತೆರೆದಿದೆ. ಧೂಮಕೇತುಗಳಿಂದ ಪ್ರತಿವರ್ಷವೂ 100 ಟನ್ನು ದೂಳು ಭೂಮಿಗೆ ರವಾನೆಯಾಗುತ್ತದೆಯೆಂದು ಅಂದಾಜು. 1960ರಲ್ಲಿ ನಾಸಾ ಸಂಸ್ಥೆ ಬಲೂನ್ ಹಾರಿಸಿ ಸ್ತರಗೋಳದಿಂದ ಪಡೆದ ನಮೂನೆಗಳಲ್ಲಿ ಸೂಕ್ಷ್ಮಜೀವಿಗಳಿದ್ದುದಾಗಿ ವರದಿಯಾಗಿದೆ. ಆ ಎತ್ತರದಲ್ಲೂ ನಮೂನೆಗಳು ಕಲುಷಿತಗೊಳ್ಳುವ ಸಾಧ್ಯತೆಯಿರುವುದರಿಂದ ಈ ಫಲಿತಾಂಶವನ್ನು ಆಗ ವಿಜ್ಞಾನಿಗಳು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

ಜಯಂತ್ ವಿ. ನಾರ್ಲಿಕರ್ ಮತ್ತು ಅವರ ತಂಡ ಹೈದರಾಬಾದಿನ ಟಾಟಾ ಇನ್‌ಸ್ಟಿಟ್ಯೂಟ್ ಬಲೂನ್ ಕೇಂದ್ರದಿಂದ ಕೈಗೊಂಡ ಸ್ತರಗೋಳದ ಅಧ್ಯಯನದಲ್ಲಿ ಹೊಸ ನಮೂನೆಯ ಬ್ಯಾಕ್ಟೀರಿಯಗಳು ಆ ಗೋಳದಲ್ಲಿರುವುದು ಪತ್ತೆಯಾಗಿದೆ.

ಸೂಕ್ಷ್ಮಜೀವಿಗಳ ಅಧ್ಯಯನಕ್ಕೆ, ಆಧುನಿಕ ಜೆನಿಟಿಕ್ ಎಂಜಿನಿಯರಿಂಗ್ ತಂತ್ರ ವಿದ್ಯೆಯ ದೃಷ್ಟಿಯಿಂದ, ಹೊಸ ಚೈತನ್ಯ ಒದಗಿದೆ. 'ಬಯೊಲ್ಯೂಮಿನಿಸೆಂಟ್ ಮಾರ್ಕರ್' ಎಂಬ ಹೊಸ ಬಗೆಯ ತಂತ್ರವನ್ನು ಟೋನಿ ಕ್ಯಾಂಪ್‌ಬೆಲ್ ಅಭಿವೃದ್ಧಿಪಡಿಸಿದ್ದಾರೆ. ಬಾಹ್ಯಾಕಾಶದಿಂದ ಸಂಗ್ರಹಿಸಿದ ಮಾದರಿಗಳಲ್ಲಿ ಯಾವ ಬಗೆಯ ಜೀವ ರಾಸಾಯನಿಕ ಪ್ರಕ್ರಿಯೆ ನಡೆಯುತ್ತದೆನ್ನುವುದನ್ನು ಅಭ್ಯಸಿಸಲು ಇದು ಅನುಕೂಲಕರ. **(ಟಿ.ಆರ್.ಅನಂತರಾಮು)**

**ಖಗೋಳ ದೂರಮಾನಗಳು ಮತ್ತು ದೂರಮಾಪನ :** ಖಗೋಳದಲ್ಲಿಯ ಅಗಾಧ ದೂರಗಳನ್ನು ಅಳೆಯಲು ಬಳಸುವ ವಿವಿಧ ಮಾನದಂಡಗಳು ಹಾಗೂ ಆ ದೂರಗಳನ್ನು ಅಳೆಯುವ ವಿಧಾನಗಳು (ಅಸ್ಟ್ರಾನಾಮಿಕಲ್ ಡಿಸ್ಟೆನ್ಸ್ ಯೂನಿಟ್ಸ್ ಅಂಡ್ ಡಿಸ್ಟೆನ್ಸ್ ಮೆಶರ್‌ಮೆಂಟ್).

**ದೂರಮಾನಗಳು :** ಮೂರು ಮುಖ್ಯ ಮಾನದಂಡಗಳಿವೆ. ಖಗೋಳಮಾನ ಬೆಳಕಿನ ವರ್ಷ ಮತ್ತು ಪಾರ್ಸೆಕ್.

**1) ಖಗೋಳಮಾನ:** ಸೌರವ್ಯೂಹದಲ್ಲಿ ಆಕಾಶಕಾಯಗಳ ದೂರಗಳನ್ನು ಅಳೆಯಲು ಉಪಯೋಗಿಸುವ ಮಾನದಂಡ (ಅಸ್ಟ್ರಾನಾಮಿಕಲ್ ಯೂನಿಟ್). ಸೂರ್ಯ–ಭೂಮಿ ಸರಾಸರಿ ದೂರವನ್ನು (1) ಖಗೋಳಮಾನವನ್ನಾಗಿ(ಖ.ಮಾ.) ಅಂಗೀಕರಿಸಲಾಗಿದೆ. ಇದರ ಸನ್ನಿಹಿತ ಬೆಲೆ 149.598,500 ಕಿಮೀ. (±500) ಕಿಮೀ. ಸೌರವ್ಯೂಹದಲ್ಲಿ ಸೂರ್ಯ–ಗ್ರಹ ದೂರಗಳ ಸರಾಸರಿ ದೂರಗಳು ಖ.ಮಾ.ದಲ್ಲಿ ಈ ಕೆಳಗಿನಂತಿವೆ :

| | | | |
|---|---|---|---|
| ಬುಧ | 0.39 | ಗುರು | 5.2 |
| ಶುಕ್ರ | 0.72 | ಶನಿ | 9.5 |
| ಭೂಮಿ | 1.00 | ಯುರೇನಸ್ | 19.2 |
| ಮಂಗಳ | 1.52 | ನೆಪ್ಚೂನ್ | 30.0 |
| ಕ್ಷುದ್ರಗ್ರಹಗಳು | 2.70 | ಪ್ಲೂಟೋ | 39.5 |

**(2) ಬೆಳಕಿನ ವರ್ಷ (ಜ್ಯೋತಿರ್ವರ್ಷ) :** ಸೆಕೆಂಡಿಗೆ ಸರಿಸುಮಾರು 186,282 ಮೈಲುಗಳನ್ನು ಕ್ರಮಿಸುವ ಬೆಳಕು (ಇದು ಸ್ಥಿರವೇಗ) ಒಂದು ವರ್ಷಕಾಲದಲ್ಲಿ ಗಮಿಸುವ ದೂರ (ಲೈಟ್–ಇಯರ್). ಇದರ ಪ್ರಕಾರ ಸೂರ್ಯ ಭೂಮಿಯಿಂದ ಸುಮಾರು 8 ಬೆಳಕಿನ ಮಿನಿಟುಗಳಷ್ಟು ದೂರದಲ್ಲಿ ಉಂಟು. ಭೂಮಿಗೆ ಸಮೀಪತಮ ನಕ್ಷತ್ರದ ದೂರ ಸುಮಾರು 4.3 ಬೆ.ವ.

(1) ಬೆ.ವ. = (ಸುಮಾರು) 5.88 ದಶಲಕ್ಷ ದಶಲಕ್ಷ ಮೈಲುಗಳು.

(3) ಪಾರ್ಸೆಕ್ : ದಿಗ್ವ್ಯತ್ಯಾಸ (ಪ್ಯಾರಲ್ಯಾಕ್ಸ್) 1 ಕೋನ–ಸೆಕೆಂಡ್ ಇರುವ ನಕ್ಷತ್ರದ ದೂರ(ಪ್ಯಾರಲಾಕ್ಸ್–ಸೆಕೆಂಡ್ ಸಂಯುಕ್ತ ಪದದ ಸಂಕ್ಷೇಪ ರೂಪ ಪಾರ್ಸೆಕ್). ಭೂಕಕ್ಷೆಯ ತ್ರಿಜ್ಯ ಒಂದು ನಕ್ಷತ್ರದಲ್ಲಿ ಉಂಟುಮಾಡುವ ಕೋನಕ್ಕೆ ಆ ನಕ್ಷತ್ರದ ದಿಗ್ವ್ಯತ್ಯಾಸ ಎಂದು ಹೆಸರು. ಕೆಳಗಿನ ಕೋಷ್ಟಕ ದಿಗ್ವ್ಯತ್ಯಾಸ–ಪಾರ್ಸೆಕ್ ಸಂಬಂಧವನ್ನು ತೋರಿಸುತ್ತದೆ.

| 1/ದಿಗ್ವ್ಯತ್ಯಾಸ (ಕೋನ ಸೆಕೆಂಡಿನಲ್ಲಿ | ಭೂಮಿಯಿಂದ ನಕ್ಷತ್ರದ ದೂರ (ಪಾರ್ಸ್‌ಕುಗಳಲ್ಲಿ) |
|---|---|
| 1 | 1 |
| 0.5 | 2 |
| 0.1 | 10 |
| 0.01 | 100 |
| 0.001 | 1000 |
| 0.0001 | 10000 |
| p | 1/p |

ನಕ್ಷತ್ರಗಳ ದೂರ ಏರಿದಂತೆ ಅವುಗಳ ದಿಗ್ವ್ಯತ್ಯಾಸ ತಗ್ಗುತ್ತದೆ ಮತ್ತು ಪಾರ್ಸೆಕ್ ಏರುತ್ತದೆ.

(1) ಪಾರ್ಸೆಕ್ = (ಸುಮಾರು) (19.16) ದಶಲಕ್ಷ ದಶಲಕ್ಷ ಮೈಲುಗಳು
= (ಸುಮಾರು) (3.26) ಬೆ.ವ.

ದೂರಮಾಪನ : ಕೆಲವು ಮುಖ್ಯ ವಿಧಾನಗಳನ್ನು ಇಲ್ಲಿ ವಿವರಿಸಿದೆ.

(1) ತ್ರಿಭುಜನ ವಿಧಾನ (ಟ್ರ್ಯಾಂಗ್ಯುಲೇಷನ್ ಮೆಥಡ್) : ಸಾಮಾನ್ಯವಾಗಿ ಚಂದ್ರನಂಥ ಸಮೀಪ ಆಕಾಶಕಾಯಗಳ ದೂರಗಳನ್ನು ಈ ವಿಧಾನದಿಂದ ಅಳತೆ ಮಾಡುತ್ತಾರೆ. A ಮತ್ತು B ಭೂಮಿಯ ಮೇಲಿನ ಒಂದೇ ರೇಖಾಂಶದಲ್ಲಿರುವ ಇಬ್ಬರು ವೀಕ್ಷಕರು. ಇವರ ಅಂತರ ಎಷ್ಟು ಹೆಚ್ಚಾಗಿದ್ದರೆ ದೊರೆಯುವ ಉತ್ತರ ಅಷ್ಟು ನಿಖರವಾಗಿರುವುದು. Z




ಚಿತ್ರ 1

ಬಿಂದು A ಯ ಖಮಧ್ಯ. Z' ಬಿಂದು Bಯ ಖಮಧ್ಯ. ಚಂದ್ರ ಇವರೀರ್ವರಿಗೂ ಸಾಮಾನ್ಯವಾದ ಮಧ್ಯಾಹ್ನರೇಖೆಯನ್ನು ಅಡ್ಡ ಹಾಯುವಾಗ ಚಂದ್ರನ ಖಮಧ್ಯದೂರಗಳನ್ನು ಇಬ್ಬರೂ ತಮಗೆ ಕಂಡಂತೆ ಅಳೆಯುತ್ತಾರೆ. ಎಂದರೆ ∠ZAM (α=ಆಗಿರಲಿ) ಮತ್ತು ∠Z'BM (=β ಆಗಿರಲಿ) ತಿಳಿದಂತಾಯಿತು. AB ಕಂಸದ ಉದ್ದ ತಿಳಿದಿರುವುದರಿಂದ ∠AEB ಯನ್ನು ಗಣಿಸಬಹುದು (= θ ಆಗಿರಲಿ). ಆದ್ದರಿಂದ ∠AMB ಯನ್ನು ಸಹ ಗಣಿಸಬಹುದು. (=α+β–θ). ಈಗ ಚಂದ್ರನಲ್ಲಿ (M) ನಿಂತು ಭೂಮಿಯ ಬಿಂಬವನ್ನು




ಚಿತ್ರ 2

ನೋಡುವ ಕಾಲ್ಪನಿಕ ವೀಕ್ಷಕನಿಗೆ ಈ ಬಿಂಬದ ತೋರ್ಕೆ ತ್ರಿಜ್ಯದ ಬೆಲೆ ಎಷ್ಟೆಂದು ಗಣಿಸುವುದು ಬಹು ಸುಲಭ. ಇದರ ಬೆಲೆ 57' 3" ಇದಕ್ಕೆ ಚಂದ್ರನ ದಿಗ್ವ್ಯತ್ಯಾಸ ಎಂದು ಹೆಸರು. ಆದ್ದರಿಂದ ಚಂದ್ರನಲ್ಲಿರುವ ವೀಕ್ಷಕನಿಗೆ ಭೂಮಿಬಿಂಬ ಸುಮಾರು (2°) ಕೋನವ್ಯಾಸವುಳ್ಳದ್ದಾಗಿ ಕಾಣುವುದು. ಈ ಕೆಳಗಿನ ಕೋಷ್ಟಕ ಕೋನಗಳಿಗೂ ದೂರಗಳಿಗೂ ಇರುವ ಸಂಬಂಧವನ್ನು ಕೊಡುತ್ತದೆ. ಇಲ್ಲಿ ನಾವು ಯಾವ ವಸ್ತುವಿನ ಕೋನವ್ಯಾಸವನ್ನು ಅಳತೆ ಮಾಡುವೆವೋ ಅದರ ಗಾತ್ರವನ್ನು ದೂರದ ಏಕಮಾನವಾಗಿ ಆಯ್ದಿದ್ದೇವೆ.

| | |
|---|---|
| 1° | ಸಂವಾದಿಯಾದ ದೂರ 57 |
| 30' | ಸಂವಾದಿಯಾದ ದೂರ 114 |
| 6' | ಸಂವಾದಿಯಾದ ದೂರ 573 |
| 1' | ಸಂವಾದಿಯಾದ ದೂರ 3,438 |
| 30" | ಸಂವಾದಿಯಾದ ದೂರ 6,875 |
| 20" | ಸಂವಾದಿಯಾದ ದೂರ 10,313 |
| 10" | ಸಂವಾದಿಯಾದ ದೂರ 20,626 |
| 1" | ಸಂವಾದಿಯಾದ ದೂರ 2,06,265 |

ಉದಾಹರಣೆಗೆ 5' 3" ಎತ್ತರದ ಒಬ್ಬ ಮನುಷ್ಯನನ್ನು ಆತನ ಎತ್ತರದ 57ರಷ್ಟು ದೂರದಿಂದ (= 100 ಗಜಗಳು) ನೋಡಿದಾಗ ಅವನ ಕೋನೆತ್ತರ 1° ಎಂದು ಕಾಣುತ್ತದೆ. ಮೇಲಿನ ಕೋಷ್ಟಕದ ರೀತ್ಯ ಚಂದ್ರ–ಭೂಮಿ ಅಂತರ ಭೂಮಿಗಾತ್ರದ (ಅಂದರೆ ವ್ಯಾಸದ) 30ರಷ್ಟು ಇರಬೇಕೆಂದಾಯಿತು.

**(2) ದಿಗ್ವ್ಯತ್ಯಾಸ ವಿಧಾನ (ಪ್ಯಾರಲ್ಯಾಕ್ಸ್ ಮೆಥಡ್) :** ಇದು ತ್ರಿಭುಜನ ವಿಧಾನದ ವಿಸ್ತರಣೆ. ನಕ್ಷತ್ರಗಳು ನಮ್ಮಿಂದ ಅತಿದೂರದಲ್ಲಿವೆ. ಆದ್ದರಿಂದ ಭೂಮಿಯ ಮೇಲಿನ ಎಷ್ಟೇದೂರದ (ಇದರ ಗರಿಷ್ಠ ಬೆಲೆ ಭೂಮಿಯ ವ್ಯಾಸವಷ್ಟೆ) ಎರಡು ಸ್ಥಳಗಳಿಂದ ಒಂದು ನಕ್ಷತ್ರವನ್ನು ವೀಕ್ಷಿಸಿದರೂ ಅದರ ದಿಕ್ಕುಗಳು ಒಂದೇ ಆಗಿ (ಎಂದರೆ ಇಬ್ಬರು ವೀಕ್ಷಕರನ್ನು ನಕ್ಷತ್ರಕ್ಕೆ ಜೋಡಿಸುವ ರೇಖೆಗಳು ಪರಸ್ಪರ ಸಮಾಂತರವಾಗಿ) ತೋರುವುವು. ಆದ್ದರಿಂದ ನಕ್ಷತ್ರಗಳನ್ನು ಕುರಿತಂತೆ ತ್ರಿಭುಜನ ವಿಧಾನ ವಿಫಲವಾಗದಿರಬೇಕಾದರೆ




ಚಿತ್ರ 3

ಆಧಾರರೇಖೆಯನ್ನು (AB) ಲಂಬಿಸುವುದೊಂದೇ ಉಪಾಯ. ಇದಕ್ಕೆ ಭೂಮಿಯ ಕಕ್ಷೆಯ ವ್ಯಾಸವನ್ನೇ ಆಧಾರ ರೇಖೆಯಾಗಿ ಆಯುವುದು ಸಾಧ್ಯ ಉಂಟು. ಭೂಮಿ Aಗೆ ಬಂದಾಗ (ಜನವರಿ) σ ನಕ್ಷತ್ರವಲಯದ ಫೋಟೋಗ್ರಾಫನ್ನು ತೆಗೆಯುತ್ತಾರೆ. ಆರು ತಿಂಗಳ ತರುವಾಯ ಭೂಮಿ ವ್ಯಾಸೀಯವಿರುದ್ಧ ಬಿಂದು Bಗೆ ಬಂದಿರುತ್ತದೆ. ಆಗ (ಜುಲೈ) ಪುನಃ σ ನಕ್ಷತ್ರ ವಲಯದ ಫೋಟೋಗ್ರಾಫನ್ನು ತೆಗೆಯುತ್ತಾರೆ. ಇವೆರಡೂ ಫೋಟೋಗ್ರಾಫುಗಳನ್ನು ಒಂದರ ಮೇಲೊಂದು ಪ್ರತಿಷ್ಠಾಪಿಸಿದಾಗ ಅತಿದೂರದ ನಕ್ಷತ್ರಗಳು ಒಂದಿಷ್ಟೂ ಸ್ಥಾನಪಲ್ಲಟವಾಗಿರುವುದಿಲ್ಲ ಎಂದು ತಿಳಿಯುತ್ತದೆ. ಆದರೆ ಸಾಪೇಕ್ಷವಾಗಿ ಸಮೀಪನಕ್ಷತ್ರಗಳು (ಉದಾಹರಣೆಗೆ σ) ಸ್ಥಾನಪಲ್ಲಟಗೊಂಡಿರುತ್ತವೆ. ಈ ಪಲ್ಲಟನದ ಪರಿಮಾಣದಿಂದ ∠AσBಯನ್ನು ಗಣಿಸಬಹುದು. ಈಗ ABಯ ಉದ್ದ ಸರಿಸುಮಾರು (186,000,000) ಮೈಲುಗಳು. ಆದ್ದರಿಂದ σ ನಕ್ಷತ್ರದ ದೂರವನ್ನು ಗಣಿಸುವುದು ಸಾಧ್ಯ. ∠ASσಕ್ಕೆ (ಎಂದರೆ ಭೂಕಕ್ಷೆಯ ತ್ರಿಜ್ಯನಕ್ಷತ್ರದಲ್ಲಿ ಉಂಟುಮಾಡುವ ಕೋನಕ್ಕೆ) σ ನಕ್ಷತ್ರದ ದಿಗ್ವ್ಯತ್ಯಾಸ ಎಂದು ಹೆಸರು.

ನಕ್ಷತ್ರಗಳ ದಿಗ್ವ್ಯತ್ಯಾಸಗಳು ಕೋನ ಸೆಕೆಂಡಿನ ಭಿನ್ನರಾಶಿಗಳಲ್ಲಿ ಇವೆಯೇ ವಿನಾ ಡಿಗ್ರಿ, ಕೋನ ಮಿನಿಟ್ ಅಥವಾ ಪೂರ್ಣಾಂಕ ಕೋನ ಸೆಕೆಂಡುಗಳಲ್ಲಿ ಅಲ್ಲ. (1) ಕೋನ ಸೆಕೆಂಡ್ ದಿಗ್ವ್ಯತ್ಯಾಸವಿರುವ, ಎಂದರೆ ಭೂಮಿವ್ಯಾಸದ 2,06,265ರಷ್ಟು ದೂರದಲ್ಲಿರುವ, ಎಂದರೆ ಪಾರ್ಸೆಕ್ ದೂರದಲ್ಲಿರುವ ಯಾವ ನಕ್ಷತ್ರವೂ ಇಲ್ಲ. ಅತೀ ಸಮೀಪದ ನಕ್ಷತ್ರದ ದೂರ (1.32) ಪಾರ್ಸೆಕ್. ಸುಮಾರು 100 ಪಾರ್ಸೆಕುಗಳಷ್ಟು ದೂರದ ವರೆಗೆ ಇರುವ ನಕ್ಷತ್ರಗಳ ದೂರಗಳನ್ನು ದಿಗ್ವ್ಯತ್ಯಾಸ ವಿಧಾನದಿಂದ ಅಳೆಯಬಹುದು. ದಿಗ್ವ್ಯತ್ಯಾಸ ಶೂನ್ಯವಾಗಿಯೇ ತೋರುವ ನಕ್ಷತ್ರಗಳು ವಿಪುಲವಾಗಿವೆ.

**(3) ಗುರುತ್ವಾಕರ್ಷಣ ವಿಧಾನ :** ಸೌರವ್ಯೂಹದ ಒಳಗಿನ ಕಾಯಗಳಿಗೆ ಇದನ್ನು ಅನ್ವಯಿಸಬಹುದು. ಕೆಪ್ಲರನ ಮೂರನೆಯ ನಿಯಮಾನುಸಾರ ಪ್ರತಿಯೊಂದು ಗ್ರಹದ

ಪರಿಭ್ರಮಣಾವಧಿಯ (T) ವರ್ಗ ಅದರ ಸರಾಸರಿ ಸೂರ್ಯ ದೂರದ (a) ಘನಕ್ಕೆ ಸರಳಾನುಪಾತವಾಗಿರುತ್ತದೆ. $T^2 \propto a^3$. ಈಗ ಗ್ರಹಗಳ ಪರಿಭ್ರಮಣಾವಧಿಗಳು (T) ನಿಖರವಾಗಿ ತಿಳಿದಿವೆ. ಆದ್ದರಿಂದ ಅವುಗಳ ಸರಾಸರಿ ಸೂರ್ಯ ದೂರಗಳನ್ನು (a) ಮೇಲಿನ ನಿಯಮಾನುಸಾರ ಗಣಿಸಬಹುದು. ಯಮಳ ನಕ್ಷತ್ರಗಳ (ಬೈನರಿ ಸ್ಟಾರ್ಸ್) ಅಂತರವನ್ನು ಅಳೆಯುವಲ್ಲೂ ಈ ತತ್ತ್ವವನ್ನು ಬಳಸಬಹುದು.

**(4) ಅವಧಿ–ಕಾಂತಿ ನಿಯಮವಿಧಾನ (ಪೀರಿಯಡ್–ಲ್ಯೂಮಿನಾಸಿಟಿ ಲಾ) :** ಚಂಚಲ ನಕ್ಷತ್ರಗಳ (ವೇರಿಯಬಲ್ ಸ್ಟಾರ್ಸ್) ಅವಧಿಕಾಲಗಳು (ಪೀರಿಯಾಡಿಕ್ ಟೈಮ್ಸ್) ಹೆಚ್ಚಿದಂತೆ ಅವುಗಳ ಕಾಂತಿಗಳೂ ಒಂದು ನಿರ್ದಿಷ್ಟ ನಿಯಮಾನುಸಾರ ಹೆಚ್ಚುತ್ತವೆಂದು ತಿಳಿದಿದೆ. ವಿಶ್ವದಲ್ಲಿರುವ ಎಲ್ಲ ಸೇಫೀಯಡ್ ಚಂಚಲ ನಕ್ಷತ್ರಗಳಿಗೂ (ನೋಡಿ–ಸೇಫೀಯಡ್ ಚಂಚಲ ನಕ್ಷತ್ರಗಳು) ಈ ನಿಯಮ ಅನ್ವಯವಾಗುವುದು ಈಗ ಇಂಥ ಚಂಚಲ ನಕ್ಷತ್ರವೊಂದರ ಅವಧಿಕಾಲವನ್ನು ನಿಖರವಾಗಿ ಗೊತ್ತುಮಾಡಿದರೆ ಅವಧಿ–ಕಾಂತಿನಿಯಮದಿಂದ ಆ ನಕ್ಷತ್ರದ ನಿರಪೇಕ್ಷ ಕಾಂತಿಮಾನ (ಅಬ್ಸೊಲ್ಯೂಟ್ ಮ್ಯಾಗ್ನಿಟ್ಯೂಡ್) ತಿಳಿಯುತ್ತದೆ. ತೋರ್ಕೆ ಕಾಂತಿಮಾನವನ್ನು (ಅಪೇರೆಂಟ್ ಮ್ಯಾಗ್ನಿಟ್ಯೂಡ್) ಅಳೆದು ತಿಳಿಯಬಹುದಾದ್ದರಿಂದ ನಕ್ಷತ್ರದೂರದ ಗಣನೆ ಸಾಧ್ಯವಾಗುವುದು. ಚಂಚಲ ನಕ್ಷತ್ರಗಳಿಗೆ ಮಾತ್ರ ಈ ನಿಯಮ ಅನ್ವಯವಾಗುವುದಾದರೂ ಇಂಥ ನಕ್ಷತ್ರಗಳಿಲ್ಲದೆ ನಕ್ಷತ್ರಗುಚ್ಛಗಳೇ (ಸ್ಟಾರ್ ಕ್ಲಸ್ಟರ್ಸ್) ಇಲ್ಲ. ಆದ್ದರಿಂದ ಒಂದು ನಕ್ಷತ್ರದ ದೂರ ನಿರ್ಣಯವಾದೊಡನೆ ಅದು ಇರುವ ಗುಚ್ಛದ ದೂರನಿರ್ಣಯ ಸಿದ್ಧಿಸಿತೆಂದೇ ಭಾವಿಸಬೇಕು. ಬಳಿಕ ಆ ನಕ್ಷತ್ರಗುಚ್ಛದ ಕೋನವ್ಯಾಸವನ್ನು ಗಣಿಸಬಹುದು. ಈ ವಿಧಾನದಿಂದ ಸುಮಾರು (10) ಲಕ್ಷ ಬೆ.ವ.ಗಳಷ್ಟು ದೂರದಲ್ಲಿರುವ ನಕ್ಷತ್ರಗಳ ದೂರವನ್ನು ನಿರ್ಣಯಿಸಬಹುದು.

ಒಂದು ನಕ್ಷತ್ರವನ್ನು ನಮ್ಮಿಂದ (10) ಪಾರ್ಸೆಕ್ ದೂರದಲ್ಲಿಟ್ಟಾಗ ಅದು ದರ್ಶಿಸುವ ಕಾಂತಿಮಾನಕ್ಕೆ ಆ ನಕ್ಷತ್ರದ ನಿರಪೇಕ್ಷ ಕಾಂತಿಮಾನ (ಅಬ್ಸೊಲ್ಯೂಟ್ ಮ್ಯಾಗ್ನಿಟ್ಯೂಡ್) ಎಂದು ಹೆಸರು. ಆ ನಕ್ಷತ್ರ ಅದರ ನೈಜಸ್ಥಾನದಿಂದ ಪ್ರದರ್ಶಿಸುವ ಕಾಂತಿಮಾನ ಅದರ ತೋರ್ಕೆ ಕಾಂತಿಮಾನ (ಅಪೇರೆಂಟ್ ಮ್ಯಾಗ್ನಿಟ್ಯೂಡ್) ಈಗ ಒಂದು ನಕ್ಷತ್ರದ ದಿಗ್ವ್ಯತ್ಯಾಸ p ಕೋನ ಸೆಕೆಂಡುಗಳು, ದೂರ D ಪಾರ್ಸೆಕುಗಳು, ನಿರಪೇಕ್ಷ ಕಾಂತಿಮಾನ M ಮತ್ತು ತೋರ್ಕೆ ಕಾಂತಿಮಾನ m ಆಗಿದ್ದರೆ ಆಗ

$$M = m + 5 - 5 \log D$$

ಎಂಬ ಸಂಬಂಧ ಅವನ್ನು ಬಂಧಿಸುತ್ತದೆ. ಅಲ್ಲದೆ $D = 1/P$. ಆದ್ದರಿಂದ

$$M = m + 5 + 5 \log p$$

ನಕ್ಷತ್ರಗಳ ನಿರಪೇಕ್ಷ ಹಾಗೂ ತೋರ್ಕೆ ಕಾಂತಿಮಾನಗಳನ್ನು (M, m) ಗಣಿಸಿ ಮೇಲಿನ ಸಮೀಕರಣದಲ್ಲಿ ಆದೇಶಿಸಿದರೆ pಯ ಬೆಲೆಯನ್ನು ನಿಗಮಿಸಬಹುದು. ಈ ವಿಧಾನದಿಂದಲೂ ನಕ್ಷತ್ರಗಳ ದೂರಗಳ ಗಣನೆ ಸಾಧ್ಯ. ಸುಮಾರು 70,00,000 ನಕ್ಷತ್ರಗಳ ದೂರಗಳನ್ನು ಈ ವಿಧಾನದಿಂದ ಗಣಿಸಿದ್ದಾರೆ.

**(5) ರಕ್ತಪಲ್ಲಟ ಮತ್ತು ನೀಲಪಲ್ಲಟ ವಿಧಾನ (ರೆಡ್ ಷಿಫ್ಟ್ ಅಂಡ್ ಬ್ಲೂ ಷಿಫ್ಟ್ ಮೆಥಡ್) :** ಇಲ್ಲಿ ಉಪಯೋಗಿಸುವ ತತ್ತ್ವಕ್ಕೆ ಡಾಪ್ಲರ್ ಪರಿಣಾಮ (ನೋಡಿ–) ಎಂದು ಹೆಸರು. ಪ್ರತಿಯೊಂದು ನಕ್ಷತ್ರದ ರೋಹಿತದಲ್ಲಿಯೂ(ಸ್ಪೆಕ್ಟ್ರಂ) ಹಲವಾರು ನೀಟ ಗೆರೆಗಳಿರುತ್ತವೆ. ಇವು ಆ ನಕ್ಷತ್ರದಲ್ಲಿರುವ ರಾಸಾಯನಿಕ ಧಾತುಗಳ ಸೂಚಕಗಳು. ನಕ್ಷತ್ರದ ರೋಹಿತದಲ್ಲಿ ಈ ನೀಟಗೆರೆಗಳ ಸ್ಥಾನಪಲ್ಲಟವಾಗಿರುವುದನ್ನು ಸೂಕ್ಷ್ಮಾವಲೋಕನದಿಂದ ತಿಳಿಯಬಹುದು. ಇಂಥ ಸ್ಥಾನಪಲ್ಲಟ ರೋಹಿತಗಳು ಕೆಂಪು ಕೊನೆಯೆಡೆಗೆ ಆಗಿದ್ದರೆ ಅದಕ್ಕೆ ರಕ್ತಪಲ್ಲಟವೆಂದೂ ನೇರಿಳೆ (ನೀಲ) ಕೊನೆಯೆಡೆಗೆ ಆಗಿದ್ದರೆ ಅದಕ್ಕೆ ನೀಲಪಲ್ಲಟವೆಂದೂ ಹೆಸರು. ಈಗ ಡಾಪ್ಲರ್ ಪರಿಣಾಮ ವಿವರಿಸುವ ಪ್ರಕಾರ ರಕ್ತಪಲ್ಲಟ ನಕ್ಷತ್ರದ ದೂರಸಾಗುವಿಕೆಯನ್ನೂ ನೀಲು ಪಲ್ಲಟ ಸಮೀಪಬರುವಿಕೆಯನ್ನೂ ಸೂಚಿಸುತ್ತವೆ. ಪಲ್ಲಟಗಳ ಪರಿಮಾಣಗಳನ್ನು ನಿಖರವಾಗಿ ಅಳೆದು ನಕ್ಷತ್ರದ ವೇಗವನ್ನು ಗಣಿಸಬಹುದು. ನಕ್ಷತ್ರಗಳ ಚಲನ ವೇಗಕ್ಕೂ (ರೋಹಿತದ ರೇಖೆಗಳ ಸ್ಥಾನಪಲ್ಲಟದಿಂದ ತಿಳಿಯುತ್ತದೆ.) ದೂರಕ್ಕೂ ಸಂಬಂಧ ಉಂಟು–ನಮ್ಮಿಂದ ಪ್ರತಿ ಒಂದು ಕೋಟಿ ಬೆಳಕಿನ ವರ್ಷದಷ್ಟು ದೂರದ ಏರಿಕೆಗೆ ನಕ್ಷತ್ರದ ವೇಗ ಸೆಕೆಂಡೊಂದರ ಸುಮಾರು 1,000 ಮೈಲು ಹೆಚ್ಚುತ್ತದೆ. ಆದರೆ ಈ ದೂರ–ವೇಗ ನಿಯಮ ಅತ್ಯಂತ ನಿಖರವಾದದ್ದೇನೂ ಅಲ್ಲ.

ಒಂದು ನಕ್ಷತ್ರದ ರೋಹಿತದಲ್ಲಿ ಯಾವ ವಿಧದ ಸ್ಥಾನಪಲ್ಲಟವೂ (ನೀಲಪಲ್ಲಟವಾಗಲಿ ರಕ್ತ ಪಲ್ಲಟವಾಗಲಿ) ಇಲ್ಲದಿದ್ದರೆ ಆ ನಕ್ಷತ್ರ ನಮಗೆ ಸಾಪೇಕ್ಷವಾಗಿ ನಿಶ್ಚಲವಾಗಿದೆಯೆಂಬ ನಿರ್ಧಾರಕ್ಕೆ ಬರುವುದು ಸರಿಯಲ್ಲ. ಕಾರಣ ಇಂಥ ನಕ್ಷತ್ರವೊಂದು ನಮ್ಮ ದೃಷ್ಟಿರೇಖೆಗೆ ಲಂಬವಾಗಿ ಚಲಿಸುತ್ತಿದ್ದರೆ ರೋಹಿತ ವಿಧಾನದಿಂದ ಅದರ ವೇಗವನ್ನು ಗಣಿಸಲು ಬರುವುದಿಲ್ಲ.

**(6) ಸಂಖ್ಯಾಕಲನೀಯ ವಿಧಾನ (ಸ್ಟ್ಯಾಟಿಸ್ಟಿಕಲ್ ಮೆಥಡ್) :** ಮೇಲೆ ವಿವರಿಸಿದ ಎಲ್ಲ ವಿಧಾನಗಳಿಂದ ತಿಳಿಯಬಹುದಾದ ಗರಿಷ್ಠ ದೂರಕ್ಕಿಂತಲೂ ಆಚೆಗೆ ಸಹ ನಕ್ಷತ್ರಗಳಿವೆ. ಇಂಥವುಗಳ ಬಿಡಿ ದೂರಗಳನ್ನು ಅಂದಾಜು ಮಾಡುವುದು ವ್ಯಾವಹಾರಿಕವಾಗಿ ಸಾಧ್ಯವಾಗುವುದಿಲ್ಲ. ಅಲ್ಲಿರುವ ಬ್ರಹ್ಮಾಂಡಗಳ, ನೆಬ್ಯುಲಗಳ, ನಕ್ಷತ್ರ ಸಮುದಾಯಗಳ ದೂರಗಳನ್ನು ಸಂಖ್ಯಾಕಲನೀಯ ವಿಧಾನದಿಂದ ಅಂದಾಜು ಮಾಡುತ್ತಾರೆ.

ಸೂಪರ್ ನೋವಾ ಮತ್ತು ನೋವಾಗಳ ಬೆಳಕನ್ನು ಅಳೆದು ದೂರದ ಗ್ಯಾಲಕ್ಸಿಗಳ ದೂರ ಅಳತೆ ಮಾಡುತ್ತಾರೆ. ಅತಿ ದೂರದ ಗ್ಯಾಲಕ್ಸಿಗಳ ದೂರವನ್ನು ಹಬಲ್ ನಿಯಮದಿಂದ ಲೆಕ್ಕ ಮಾಡಬಹುದು. ದೂರದ ಗ್ಯಾಲಕ್ಸಿಗಳ ವೇಗವೂ ಹೆಚ್ಚು ಎಂದು ಹಬಲ್ ನಿಯಮ ತೋರಿಸುತ್ತದೆ. ವೇಗವನ್ನು ಡಾಪ್ಲರ್ ಪಲ್ಲಟದಿಂದ ಅಳೆದು, ಈ ನಿಯಮ ಬಳಸಿ ದೂರ ಕಂಡುಹಿಡಿಯಬಹುದು. *

**ಖಗೋಳವಿಜ್ಞಾನ :** ವಿಶ್ವದ ಇತರ ಭಾಗಗಳಿಂದ ಭೂಮಿಯೆಡೆಗೆ ಬರುವ ವಿಸರಣೆಯನ್ನು ಭೂಮಿಯ ಪರಿಸರದಲ್ಲಿ ವೀಕ್ಷಿಸಿ ಅರ್ಥವಿಸುವ ವಿಜ್ಞಾನ (ಆಸ್ಟ್ರಾನಮಿ). ಭೂಮಿಯಿಂದ ಹೊರಗಿರುವ ಭೌತವಿಶ್ವಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳೂ ಖಗೋಳವಿಜ್ಞಾನದ ಅಧ್ಯಯನದಲ್ಲಿ ಅಡಕವಾಗಿವೆ. ಇತಿಹಾಸಪೂರ್ವದ ಅಸ್ಪಷ್ಟ ದಿವಸಗಳಲ್ಲೂ ಈ ವಿಜ್ಞಾನ ಬಳಕೆಯಲ್ಲಿತ್ತು ಎಂಬುದನ್ನು ಲಕ್ಷಿಸಿ ಇದನ್ನು ವಿಜ್ಞಾನಗಳ ತಾಯಿ ಎಂದು ಕರೆಯುವುದುಂಟು.

ಭೂಮಿಗೆ ವಿಶ್ವದ ಇತರ ಭಾಗಗಳಿಂದ ಮಾಹಿತಿ ಒದಗುವುದು ವಿದ್ಯುತ್ಕಾಂತ ವಿಸರಣೆಯ (ಎಲೆಕ್ಟ್ರೊ ಮ್ಯಾಗ್ನೆಟಿಕ್ ರೇಡಿಯೇಷನ್) ಸಂಪರ್ಕದಿಂದ. ಉದಾಹರಣೆಗೆ ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಳ ಅಸ್ತಿತ್ವ ನಮಗೆ ತಿಳಿಯುವುದು ಪ್ರಧಾನವಾಗಿ ಅವುಗಳಿಂದ ನಮ್ಮೆಡೆಗೆ ಬರುವ ಬೆಳಕಿನಿಂದ. ಒಂದು ನಕ್ಷತ್ರ ವಿಸರಿಸುವ ವಿದ್ಯುತ್ಕಾಂತ ವಿಸರಣೆಯಲ್ಲಿ ಬೆಳಕು ಕಿರಿದಾದ ಒಂದು ಅಂಶ ಮಾತ್ರ–ಇದನ್ನು ದೃಗ್ಗೋಚರ ವಿಭಾಗ ಎನ್ನುತ್ತೇವೆ. ಇನ್ನು ದೃಗ್ಗೋಚರ ವಿಭಾಗವೂ ಆ ವಿಸರಣೆಯಲ್ಲಿ ಉಂಟು. ಅಂದಮೇಲೆ ಕಾಣುವ ನಕ್ಷತ್ರಗಳು ಮಾತ್ರವಲ್ಲದೆ, ಕಾಣದಿರುವ ನಕ್ಷತ್ರಗಳು ಸಹ ಇವೆ ಎಂದಾಯಿತು. ವಿದ್ಯುತ್ಕಾಂತ ವಿಸರಣೆಯಲ್ಲಿ ಈ ಎರಡು ವಿಭಾಗಗಳು ಏರ್ಪಡುವುದು ಮನುಷ್ಯನ ನೇತ್ರೇಂದ್ರಿಯದ ರಚನೆಯ ವೈಶಿಷ್ಟ್ಯದಿಂದಲೇ ಹೊರತು ಬೇರಾವ ಕಾರಣದಿಂದಲೂ ಅಲ್ಲ. ಹೀಗಾಗಿ ಖಗೋಳವಿಜ್ಞಾನದಲ್ಲಿ ಎರಡು ಸಹಜ ವಿಭಾಗಗಳು ಏರ್ಪಟ್ಟಿವೆ–ದೃಗ್ಗೋಚರ ಖಗೋಳವಿಜ್ಞಾನ ಮತ್ತು ದೃಗ್ಗೋಚರ ಖಗೋಳವಿಜ್ಞಾನ. ಪ್ರಕೃತ ಲೇಖನ ದೃಗ್ಗೋಚರ ಖಗೋಳವಿಜ್ಞಾನವನ್ನು ಕುರಿತು ಮಾತ್ರ. ದೃಗ್ಗೋಚರ ವಿಭಾಗವನ್ನು ಕುರಿತ ವಿವರಗಳನ್ನು ತಿಳಿಯಲು

**(ನೋಡಿ– ಎಕ್ಸ್‌ಕಿರಣ ಖಗೋಳವಿಜ್ಞಾನ ; ಖಭೌತವಿಜ್ಞಾನ ; ಗ್ಯಾಮಕಿರಣ ಖಗೋಳವಿಜ್ಞಾನ ; ರೇಡಿಯೊ ಖಗೋಳವಿಜ್ಞಾನ)**

ಈ ಲೇಖನವನ್ನು ನಾಲ್ಕು ಪ್ರಧಾನ ಶೀರ್ಷಿಕೆಯಲ್ಲಿ ಚರ್ಚಿಸಲಾಗಿದೆ:

(1) ಪ್ರಾಚೀನ ಖಗೋಳವಿಜ್ಞಾನ

(2) ಖಗೋಳವಿಜ್ಞಾನದಲ್ಲಿ ಕ್ರಾಂತಿ

(3) ಆಧುನಿಕ ಖಗೋಳವಿಜ್ಞಾನ

(4) ವಿಸ್ತರಿಸುತ್ತಿರುವ ವಿಶ್ವ

**(1) ಪ್ರಾಚೀನ ಖಗೋಳವಿಜ್ಞಾನ :** ಪ್ರಾಚೀನ ಮಾನವನಿಗೆ ದೈನಂದಿನ ಜೀವನದ ಹೋರಾಟದಲ್ಲಿ ತತ್ತ್ವಗಳನ್ನಾಗಲೀ ಸಿದ್ಧಾಂತಗಳನ್ನಾಗಲೀ ಕುರಿತು ಚಿಂತಿಸಲು ಆವಶ್ಯಕವಾದ ವಿರಾಮವೂ ಇರಲಿಲ್ಲ. ಪರಿಸರದ ಪ್ರತಿಬಲಗಳ ವಿರುದ್ಧ ಜೀವನನಿರ್ವಹಣೆ ಅವನ ಪ್ರಧಾನ ಸಮಸ್ಯೆ. ಆದರೆ ಇಂಥದಲ್ಲಿಯೂ ಅನಿವಾರ್ಯವಾಗಿ ಆಕಾಶದ ವಿದ್ಯಮಾನಗಳ ಕಡೆಗೆ ಲಕ್ಷ್ಯಹರಿಸಬೇಕಾಯಿತು. ಇದೊಂದು ಬೌದ್ಧಿಕ ಕುತೂಹಲದ ಅಂಗವಾಗಿ ಅಲ್ಲ. ಜೀವನಯಾಪನೆಯ ಆವಶ್ಯಕತೆಯಾಗಿ. ಋತುಗಳ ಕ್ರಮಬದ್ಧ ಪುನರಾವರ್ತನೆ, ರಾತ್ರಿ ಆಕಾಶದ ವೈಭವಪೂರ್ಣ ಪೂರ್ವ–ಪಶ್ಚಿಮ ಮುನ್ನಡೆ, ಚಂದ್ರನ ಆಟಗಳು, ಸೂರ್ಯನ ಸಾರ್ವಭೌಮತ್ವ, ಹಗಲು ರಾತ್ರಿಗಳ ನಿರಂತರ ಬದಲಾವಣೆ ಇವೇ ಮನುಷ್ಯ ಗಮನಿಸಿದ ಖಗೋಳವಿಜ್ಞಾನದ ಮೊದಲ ಪಾಠಗಳು. ಆದರೆ ಇದು ನಡೆದದ್ದು ಎಂದು, ಯಾವ ಜನ ವರ್ಗದಲ್ಲಿ ಎಂಬುದು ಪ್ರಾಯಶಃ ಎಂದೆಂದೂ ನಮಗೆ ತಿಳಿಯಲಾರದು. ಆಕಾಶದ ವಿದ್ಯಮಾನಗಳಿಗೂ ತನ್ನ ಜೀವನದ ಆಗುಹೋಗುಗಳಿಗೂ ಏನೋ ಒಂದು ಸಂಬಂಧವಿದ್ದುದು ಪ್ರಾಚೀನ ಮನುಷ್ಯನಿಗೆ ಮನವರಿಕೆಯಾದದ್ದೇ ತಡ ಆಕಾಶವನ್ನು ಕುರಿತ ಅಸಂಖ್ಯಾತ ನಂಬಿಕೆಗಳು, ಕಥೆಗಳು, ಕಲ್ಪನೆಗಳು ಹುಟ್ಟಿಕೊಂಡು ಅವೆಲ್ಲವೂ ಅಂದಿನ ಸಂಸ್ಕೃತಿಯ ಅಖಂಡಭಾಗಗಳಾದುವು. ಗ್ರಹಣಕಾಲದಲ್ಲಿ ಚಂದ್ರನನ್ನೊ ಸೂರ್ಯನನ್ನೊ ರಾಕ್ಷಸರು ನುಂಗುತ್ತಿದ್ದರೆಂದೂ ಇದರಿಂದ ಮನುಷ್ಯನಿಗೆ ಅಪಾರ ಹಾನಿ ಸಂಭವನೀಯವಾದ್ದರಿಂದ ಆ ರಾಕ್ಷಸರನ್ನು ಹೆದರಿಸಿ ಹೊಡೆದೋಡಿಸಿ ಪೂರ್ವಸ್ಥಿತಿಯನ್ನು ಸ್ಥಾಪಿಸುವುದು ಅಗತ್ಯವೆಂದು ಆ ಜನ ನಂಬಿ ಆಚರಿಸುತ್ತಿದ್ದುದು ತಿಳಿದಿದೆ.

ಉಪಲಬ್ಧವಾಗಿರುವ ದಾಖಲೆಗಳ ಆಧಾರದಿಂದ ಶಾಸ್ತ್ರೀಯವಾಗಿ ಪ್ರಾಚೀನ ಖಗೋಳವಿಜ್ಞಾನದ ಚರಿತ್ರೆಯನ್ನು ಬರೆಯುವ ಪ್ರಯತ್ನ ಪ್ರಸಕ್ತ ಶತಮಾನದಲ್ಲಿ ಮಾಡಲಾಗಿದೆ. ಇದರ ಸೂಕ್ಷ್ಮಾವಲೋಕನೆಯನ್ನು ಮುಂದಿನ ಉಪಶೀರ್ಷಿಕೆಗಳಲ್ಲಿ ಮಾಡಲಾಗಿದೆ.

ದೆಹಲಿಯಲ್ಲಿರುವ ಜಂತರ್-ಮಂತರ್ ಭಾರತದ ಪ್ರಾಚೀನ ವೀಕ್ಷಣಾಲಯ

**(1) ಮೆಸೊಪೊಟೇಮಿಯ :** ಯುಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ಕಣಿವೆಯಲ್ಲಿ(ಈಗಿನ ಇರಾಕ್) ಇದ್ದ ಜನ ಪ್ರಾಚೀನ ಖಗೋಳವಿಜ್ಞಾನದ ವಿಷಯದಲ್ಲಿ ಹೆಚ್ಚಿನ ಜ್ಞಾನ ಸಂಪಾದಿಸಿದ್ದರೆಂದು ನಂಬಲಾಗಿದೆ. ಬ್ಯಾಬಿಲೋನಿಯನ್, ಅಸ್ಸಿರಿಯನ್ ಮತ್ತು ಕಾಲ್ಡೀಯನ್ ಜನರೂ ಇವರಿಗಿಂತ ಮೊದಲು ಸುಮೇರಿಯನ್ನರೂ ಇಲ್ಲಿ ಆಗಿ ಹೋದವರು. ಆದ್ದರಿಂದ ಈ ಜ್ಞಾನದಲ್ಲಿ ಇವರೆಲ್ಲರ ಕೊಡುಗೆಯೂ ಸೇರಿದೆ. ಇವರ ಕಾಲ ಪ್ರ.ಶ. ಪೂ. ಸು. 3000. ಬ್ಯಾಬಿಲೋನಿಯನರ ಕಲ್ಪನೆಯಲ್ಲಿ ವಿಶ್ವಬೋರಲಿಟ್ಟ ಬೋಗುಣಿ. ಆಕಾಶ ಇದರ ಚಾವಣಿ, ಬಿಲ್ಲೆಯ ಆಕಾರದ ಭೂಮಿ ಇದರ ಕೇಂದ್ರ. ಭೂಮಿಯ ಸುತ್ತ ಸಮುದ್ರ ಆವರಿಸಿಕೊಂಡಿದೆ. ಆರಂಭದಲ್ಲಿ ಎಲ್ಲೆಲ್ಲೂ ನೀರಿನ ರಾಶಿ ಇತ್ತು. ಅದರಿಂದ ನೆಲ ಹೊರಗೆ ಬಂದದ್ದು ಅತಿಮಾನುಷ ಶಕ್ತಿಗಳಿಂದ. ಮಹಾಪ್ರಳಯದ ವರದಿಯೂ ಮುಂದೊಂದು ದಿವಸ ನೆಲವೆಲ್ಲ ನೀರಿನ ಅಡಿ ಮುಳುಗಡೆ ಆಗಲಿರುವ ಮಹಾಪ್ರಳಯದ ಉಲ್ಲೇಖವೂ ದೊರೆತಿವೆ. ಆಕಾಶಕಾಯಗಳು ಇಂಥ ವಿಶ್ವದ ಅಂಚಿನಲ್ಲಿ ಮೂಡಿ ಆಕಾಶದಲ್ಲಿ ಸಂಚರಿಸಿ ಇನ್ನೊಂದು ಅಂಚಿನಲ್ಲಿ ಮುಳುಗುತ್ತಿದ್ದುವು. ನಕ್ಷತ್ರ ಚಿತ್ರಗಳು ಸ್ಥಿರವಾಗಿದ್ದರೂ ಏಳು ಕಾಯಗಳು ಮಾತ್ರ ತಮ್ಮ ಪ್ರಾಮುಖ್ಯವನ್ನು ತೋರ್ಪಡಿಸಲೋ ಎಂಬಂತೆ ನಕ್ಷತ್ರಗಳ ನಡುವೆ ಚಲಿಸುತ್ತಿದ್ದವು. ಇವು ಭೂಮಿಯಿಂದ ಏರುತ್ತಿರುವ ದೂರಗಳಲ್ಲಿ ಅನುಕ್ರಮವಾಗಿ ಚಂದ್ರ, ಬುಧ, ಶುಕ್ರ, ಸೂರ್ಯ, ಮಂಗಳ, ಗುರು ಮತ್ತು ಶನಿ. ದೇವರ ಪ್ರತ್ಯಕ್ಷರೂಪಗಳಿವು, ಮನುಷ್ಯರನ್ನು ಮತ್ತು ಭೂಮಿಯನ್ನು ಕುರಿತು ದೇವರ ಅಭಿಪ್ರಾಯವೇನು ಎಂಬುದನ್ನು ಈ ಏಳು ಕಾಯಗಳ ಚಲನೆಯಿಂದ

ಜಂತರ್ ಮಂತರ್ ವೀಕ್ಷಣಾಲಯದ ಇನ್ನೊಂದು ದೃಶ್ಯ

ವ್ಯಕ್ತವಾಗುತ್ತದೆ ಎಂದು ಆ ಜನ ನಂಬಿದ್ದರು. ಇವುಗಳ ಸಮಸ್ತ ವಿವರಗಳನ್ನೂ ಗ್ರಹಿಸಿ ಅರ್ಥವಿಸಿ ದೇವರ ಇಷ್ಟಾನಿಷ್ಟಗಳನ್ನು ಜನರಿಗೆ ತಿಳಿಸಬೇಕಾದದ್ದು ಪುರೋಹಿತರ ಕರ್ತವ್ಯವಾಗಿತ್ತು. ಮೆಸಪೊಟೇಮಿಯದ ಸ್ವಚ್ಛಾಕಾಶದ ವೀಕ್ಷಣೆ ಪುರೋಹಿತವರ್ಗದವರ ವೃತ್ತಿಯಾಗಿ ಬೆಳೆಯಿತು. ನಕ್ಷತ್ರಪುಂಜಗಳ ಪರಿಚಯ ಬೆಳೆದದ್ದು ಇಂಥ ವೀಕ್ಷಣೆಯ ಪರಿಣಾಮವಾಗಿ. ಅದರಲ್ಲೂ ಮುಖ್ಯವಾಗಿ ರಾಶಿಚಕ್ರವನ್ನು ರೂಪಿಸುವ ನಕ್ಷತ್ರರಾಶಿಗಳು, ಉತ್ತರಧ್ರುವ ನಕ್ಷತ್ರ ಮತ್ತು ಅದರ ಸಮೀಪದ ಕೆಲವು ಗಮನಾರ್ಹ ಪುಂಜಗಳು ವಿಶಿಷ್ಟ ವ್ಯಕ್ತಿತ್ವ ಪಡೆದು ಜನ ಜೀವನದ ಅವಿಭಾಜ್ಯ ಘಟಕಗಳಾದುವು. ನಕ್ಷತ್ರಪುಂಜಗಳ ಪರಿಚಯ ಇನ್ನೂ ಒಂದು ಕಾರಣದಿಂದ ಆವಶ್ಯವಾಯಿತು. ಮರಳುಗಾಡುಗಳ ಮಹಾವ್ಯಾಪ್ತಿಯಲ್ಲಿಯೂ ಸಮುದ್ರದ ಜಲರಾಶಿಯಲ್ಲಿಯೂ ಸಾಗುತ್ತಿದ್ದ ಪಯಣಿಗರಿಗೆ ದಿಕ್ಕು ಹಾಗೂ ಕಾಲವನ್ನು ಸೂಚಿಸಲು ಇದ್ದ ಒಂದೇ ನೈಸರ್ಗಿಕ ಸಹಾಯವೆಂದರೆ ಆಕಾಶದ ನಕ್ಷತ್ರ ಚಿತ್ರಗಳು. ಪ್ರ.ಶ. ಪೂ. 3000ದಷ್ಟು ಹಿಂದೆಯೇ ಮೆಸೆಪೊಟೇಮಿಯದ ಜನ ರಾಶಿಚಕ್ರದ ಕೆಲವು ಪ್ರಮುಖರಾಶಿಗಳನ್ನು ಗುರುತಿಸಿ ಹೆಸರಿಸಿದ್ದರೆಂದು ನಂಬಲಾಗಿದೆ. ಉದಾಹರಣೆಗೆ ಸಿಂಹರಾಶಿ. ಸೂರ್ಯ ಈ ರಾಶಿಯಲ್ಲಿದ್ದಾಗ ಜನ ಸಹಿಸಲಾಗದ ಬಿಸಿಲ ಝಳದಿಂದ ತಪಿಸುತ್ತಿದ್ದುದರಿಂದ ಸಿಂಹರಾಶಿ ಎಂಬ ಹೆಸರು ಬಂದಿರಬಹುದು. ಹೀಗೆ ನಿಸರ್ಗದ ಕೆಲವು ಸನ್ನಿವೇಶಗಳನ್ನೂ-ಉದಾಹರಣೆಗೆ ಕುರಿಗಳು ಸಾಮೂಹಿಕವಾಗಿ ಈಯುವ ಋತು (ಮೇಷ), ಕೆರೆ ತೊರೆಗಳಲ್ಲಿ ಮೀನುಗಳು ಅಧಿಕವಾಗಿ ತೋರುವ ಋತು (ಮೀನ), ಮಳೆ ಬೆಳೆಗಳ ಏರಿಳಿತಗಳನ್ನು ಪ್ರತಿನಿಧಿಸುವ ಋತುಗಳು ಇವೇ ಮುಂತಾದವು-ಆಕಾಶದಲ್ಲಿ ಸೂರ್ಯ-ನಕ್ಷತ್ರರಾಶಿ ಸ್ಥಾನಸಂಬಂಧವನ್ನೂ ಲಕ್ಷಿಸಿ ರಾಶಿಚಕ್ರಕ್ಕೆ ಖಚಿತಸ್ಥಾನ ನಿರ್ಧರಣೆ ಮಾಡಿದರು ಮತ್ತು ಅದನ್ನು ರೂಪಿಸುವ ನಕ್ಷತ್ರ ಚಿತ್ರಗಳಿಗೆ ನಿರ್ದಿಷ್ಟ ಹೆಸರುಗಳನ್ನು ನೀಡಿದರು. ಬ್ಯಾಬಿಲೋನಿಯನ್ನರು ಇದನ್ನು ಸಾಧಿಸಿದವರೆಂದು ಪ್ರತೀತಿ. ಇಷ್ಟೇ ಅಲ್ಲ. ವಿಷುವದ್ಬಿಂದುಗಳ ಹಿಂಚಲನೆಯನ್ನು, ಎಂದರೆ ಅಯನಾಂಶವನ್ನು (ಪ್ರಿಸೆಷ್ಷನ್ ಆಫ್ ದಿ ಈಕ್ವಿನಾಕ್ಸಸ್) ಸಹ ಈ ಜನರು ಗುರುತಿಸಿದ್ದರು. **(ನೋಡಿ- ಅಯನಾಂಶ)**

**(ii) ಈಜಿಪ್ಟ್ :** ಇಲ್ಲಿಯೂ ನಾಗರಿಕತೆಯ ಆರಂಭವಾದದ್ದು ಮೆಸೊಪೊಟೇಮಿಯದ ನಾಗರಿಕತೆಯ ಆರಂಭದ ಸರಿಸುಮಾರಿಗೇ. ಈ ಜನರ ಪ್ರಧಾನ ಕೊಡುಗೆ ಎಂದರೆ ಸೌರವರ್ಷದ ಉದ್ದದ ನಿರ್ಣಯ. ಮುಂಬೆಳಗಿನ ಮುನ್ನ ಲುಬ್ಧಕ (ಸಿರಿಯಸ್) ನಕ್ಷತ್ರ ಮೊದಲಬಾರಿಗೆ ಕಾಣಿಸುವ ದಿವಸದಿಂದ ತೊಡಗಿ ಪುನಃ ಆ ಘಟನೆ ಸಂಭವಿಸುವವರೆಗಿನ ಅವಧಿ(365) ದಿವಸಗಳ ಒಂದು ಸ್ಥಿರ ಅವಧಿ ಎಂದು ಅವರು ಮೊದಲು ಗಣಿಸಿದರು. ಬಳಿಕ ಇದು (365.25) ದಿವಸಗಳಿಗೆ ಹೆಚ್ಚುಸಮವಾಗಿದೆಯೆಂದು ಕಂಡುಕೊಂಡರು (ಇಂದಿನ ಬೆಲೆ 365.2422 ದಿವಸಗಳು). ಈ ವೈಜ್ಞಾನಿಕ ಕೊಡುಗೆ ಒಂದನ್ನು ಬಿಟ್ಟರೆ ಬಾಕಿ ಯಾವ ವಿಚಾರಗಳಲ್ಲೂ ಪ್ರಾಚೀನ ಈಜಿಪ್ಷಿಯನ್ನರ ಸಿದ್ಧಿಸಾಧನೆ ಗಮನಾರ್ಹವಲ್ಲ.

**(iii) ಗ್ರೀಸ್ ಮತ್ತು ಅಲೆಗ್ಸಾಂಡ್ರಿಯ :** ಆಕಾಶದ ವಿದ್ಯಮಾನಗಳನ್ನು ಕುರಿತು ಪ್ರಾಚೀನ ಗ್ರೀಕರ ಪರಿಕಲ್ಪನೆಗಳು ಹೆಚ್ಚು ಶಾಸ್ತ್ರೀಯವಾಗಿದ್ದುವು. ಪೈಥಾಗೊರನ್ನಿಂದ (ಪ್ರ.ಶ. ಪೂ. 6ನೆಯ ಶತಮಾನ) ತೊಡಗಿ ಅರಿಸ್ಟಾಟಲ್ (ಪ್ರ.ಶ. ಪೂ. 384-322)ತನಕ ಬೆಳೆದುಬಂದ ಭಾವನೆಗಳಲ್ಲಿ ಕೆಲವಂತೂ ಅತ್ಯಾಧುನಿಕವಾಗಿವೆ. ಭೂಮಿ ಗೋಳಾಕಾರವಾಗಿದೆ ಎಂದು ಅವರು ಸಾಧಿಸಿದ್ದರು. ಅರಿಸ್ಟಾಟಲನ ಪ್ರಕಾರ ಭೂಮಿ ಸ್ಥಿರವಾಗಿದೆ ಎಂದಿತ್ತು. ಆದರೆ ಇತರ ಅನೇಕ ಚಿಂತನಕಾರರು ಭೂಮಿಗೆ ಚಲನೆ ಉಂಟೆಂದು ಭಾವಿಸಿದ್ದರು. ಸಾಮೋಸಿನ ಆರಿಸ್ಟಾರ್ಕಸ್ ಎಂಬಾತ (ಪ್ರ.ಶ. ಪೂ. 3ನೆಯ ಶತಮಾನ) ಭೂಮಿಗೆ ಎರಡು ವಿಧವಾದ ಚಲನೆಗಳಿವೆ-ತನ್ನ ಅಕ್ಷದ ಸುತ್ತ ಆವರ್ತನೆ ಮತ್ತು ಸೂರ್ಯನ ಸುತ್ತ ಪರಿಭ್ರಮಣೆ-ಎಂದು ಸೂಚಿಸಿದ್ದ. ಅಲ್ಲದೆ ಸೌರವ್ಯೂಹದ ಇಂದಿನ ಚಿತ್ರವನ್ನೇ ರಚಿಸಿದ್ದ. ಆದರೆ ಇಂಥ ಕ್ರಾಂತಿಕಾರೀ ಪರಿಕಲ್ಪನೆಗಳನ್ನು ಸ್ವೀಕರಿಸುವ ಮಾನಸಿಕ ಸ್ಥಿತಿಯಲ್ಲಿ ಸಮಕಾಲೀನ ವಿಜ್ಞಾನ ಇರಲಿಲ್ಲ. ಅದೇ ಸುಮಾರಿಗೆ ಎರಟಾಸ್ಥನೀಸ್ **(ನೋಡಿ- ಎರಟಾಸ್ಥೆನೀಸ್)** ಎಂಬಾತ ಬಲುಸರಳವೂ ನಿಷ್ಕೃಷ್ಟವೂ ಆದ ವಿಧಾನದಿಂದ ಭೂಮಿಯ ಪರಿಧಿಯನ್ನು ಖಚಿತವಾಗಿ ನಿರ್ಧರಿಸಿದ. ಗ್ರೀಕರ ಆಕಾಶಜ್ಞಾನ ವರ್ಧಿಸಿದಂತೆ ಅವರು ತಮಗೆ ಕಂಡ ಆಕಾಶ ವಿದ್ಯಮಾನಗಳಿಗೆ ಖಚಿತವಾದ ಒಂದು ಜ್ಯಾಮಿತೀಯ ಪ್ರತಿರೂಪದ ನಿರ್ಮಾಣದ ಕಡೆಗೆ ಲಕ್ಷ್ಯಹರಿಸಿದರು. ಇದರ ಫಲವಾಗಿ ಆಕಾಶವೆಂದರೆ ಖಾಲಿ ಅರ್ಧಗೋಳ ; ಅದರ ಕೇಂದ್ರದಲ್ಲಿ ಭೂಮಿ. ಭೂಮಿಯಲ್ಲಿ ಆಧಾರಿತವಾಗಿರುವ ಒಂದು ಅಕ್ಷ ಆಕಾಶವನ್ನು ಎತ್ತಿಹಿಡಿದಿದೆ ಮತ್ತು ಆಕಾಶವನ್ನು ನಿಯತದರದಿಂದ ಪೂರ್ವ-ಪಶ್ಚಿಮ ಆವರ್ತನೆಗೆ ಪ್ರೇರಿಸುತ್ತದೆ; ಆಕಾಶದ ಒಳಮುಚ್ಚಿಗೆಗೆ ಅಂಟಿಸಲಾಗಿರುವ ನಕ್ಷತ್ರ ಮುಂತಾದವು ಆಕಾಶದ ಆವರ್ತನ ಚಲನೆಯ ಪರಿಣಾಮವಾಗಿ ಪೂರ್ವ-ಪಶ್ಚಿಮ ದಿಶೆಯ ಸಂಚಾರ ಮಾಡುತ್ತವೆ ಎಂದು ಮುಂತಾಗಿ ತೀರ್ಮಾನಿಸಿದರು. ಸ್ಥಿರನಕ್ಷತ್ರ ಚಿತ್ರಗಳ ಚಲನೆಗೆ ಅನ್ವಯವಾಗುವಂತೆ ಇದೇನೋ ಸಮರ್ಪಕ ವಿವರಣೆ ನೀಡಬಹುದು. ಆದರೆ ಸೂರ್ಯ, ಚಂದ್ರ ಹಾಗೂ ಐದು ಗ್ರಹಗಳ ಅಕ್ರಮ ಚಲನೆಗೆ ಪ್ರತ್ಯೇಕ ವಿವರಣೆ ಕೊಡುವುದು ಅಗತ್ಯ ಎನ್ನಿಸಿತು. ಇಂಥ ವಿವರಣೆ ಭವಿಷ್ಯವನ್ನು-ಎಂದರೆ ಎಂದು, ಯಾವ ಗ್ರಹ, ಎಲ್ಲಿರುತ್ತದೆ, ಗ್ರಹಣ ಎಂದು ಸಂಭವಿಸುವುದು ಇತ್ಯಾದಿ-ಕರಾರುವಾಕ್ಕಾಗಿ ನುಡಿಯುವ ಪರೀಕ್ಷೆಯಲ್ಲಿ ಉತ್ತೀರ್ಣವಾಗಬೇಕಾದುದ್ದು ಅನಿವಾರ್ಯ. ಪ್ರ.ಶ. ಪೂ. 4ನೆಯ ಶತಮಾನದಲ್ಲಿ ಯೂಡೋಕ್ಸಸ್ ಎಂಬಾತ ಒಂದು ಪರಿಹಾರ ಸೂಚಿಸಿದ. ಇದು ಬಹಳ ಜಟಿಲವಾದ ಪರಿಹಾರ. ಅಲ್ಲದೆ ಇದು ಪರಿಹರಿಸಿದ ಸಮಸ್ಯೆಗಿಂತಲೂ ಸೃಷ್ಟಿಸಿದ ಹೊಸ ಸಮಸ್ಯೆಗಳು ಜಟಿಲತರವಾಗಿದ್ದುವು. ಮುಂದೆ ಪರ್ಗಾದ ಅಪೊಲ್ಲೋನಿಯಸ್ (ಪ್ರ.ಶ. ಪೂ. 3ನೆಯ ಶತಮಾನ) ಸೂಚಿಸಿದ ಪರಿಷ್ಕೃತ ವಿಧಾನವನ್ನು ಹಿಪ್ಪಾರ್ಕಸ್ (ಪ್ರ.ಶ. ಪೂ. 2ನೆಯ ಶತಮಾನ) ಅನುಸರಿಸಿದ.

ಅದುವರೆಗೆ ಸಂಗೃಹೀತವಾಗಿದ್ದ ಆಕಾಶವೀಕ್ಷಣೆಯ ವರದಿಗಳನ್ನು ಆಧರಿಸಿ ಸೂರ್ಯ, ಚಂದ್ರ, ಗ್ರಹಗಳ ಚಲನೆಗೆ ಅರ್ಥ ನೀಡಲು ಈತ ಪ್ರಯತ್ನಿಸಿದ. ಆದರೆ ಲಭ್ಯಮಾಹಿತಿಗಳು ಅಸಂಪೂರ್ಣ ಮಾತ್ರವಲ್ಲ, ಅಸಮರ್ಪಕ ಕೂಡ ಎಂದು ತಿಳಿದುದರಿಂದ




ಚಿತ್ರ 1 ಗೋಳೀಯ ವಿಶ್ವದ ಒಂದು ಪ್ರಾಚೀನ ಕಲ್ಪನೆ; 1 ನಕ್ಷತ್ರಗೋಳ, 2 ಮಂಗಳ ಗೋಳ, 3. ಶನಿಗೋಳ, 4. ಗುರುಗೋಳ, 5. ಸೂರ್ಯಗೋಳ, 6. ಬುಧಗೋಳ, 7. ಶುಕ್ರಗೋಳ, 8. ಚಂದ್ರಗೋಳ, 9. ಭೂಗೋಳ

ತಾನೇ ಆಕಾಶಕಾಯಗಳ ಕ್ರಮಬದ್ಧ ವೀಕ್ಷಣೆಗಳನ್ನು ಆರಂಭಿಸಿ ಯುಕ್ತ ದತ್ತಾಂಶಗಳ ಸಂಗ್ರಹಣೆಯಲ್ಲಿ ತೊಡಗಿದ. ಇವೆಲ್ಲವನ್ನೂ ಬಳಸಿಕೊಂಡು ಮುಂದೆ ಟಾಲೆಮಿ (ಪ್ರ.ಶ.ಪೂ. 2ನೆಯ ಶತಮಾನ) ಸೌರವ್ಯೂಹವನ್ನು ಕುರಿತ ಒಂದು ಅರ್ಥಪೂರ್ಣ ನಿರೂಪಣೆಯನ್ನು ಮಂಡಿಸಿದ (**ನೋಡಿ– ಆಲ್ಮಾಜೆಸ್ಟ್**). ಟಾಲೆಮಿ ವ್ಯವಸ್ಥೆಯೆಂದೇ ಇದರ ಹೆಸರು. ಇದರ ಪ್ರಕಾರ ಭೂಮಿಯೇ ವಿಶ್ವದ ಕೇಂದ್ರ (ಅಂದಿನ ವಿಶ್ವವೆಂದರೆ ಬಲುಮಟ್ಟಿಗೆ ಸೌರವ್ಯೂಹ ಮಾತ್ರ); ಸೂರ್ಯ, ಚಂದ್ರ ಹಾಗೂ ಗ್ರಹಗಳ ತೋರ್ಕೆಯ ದೈನಂದಿನ ಚಲನೆಗಳು ವಾಸ್ತವ ಚಲನೆಗಳೇ; ಸ್ಥಿರಭೂಮಿಯ ಸುತ್ತ ಚಂದ್ರ, ಬುಧ, ಶುಕ್ರ, ಸೂರ್ಯ, ಮಂಗಳ, ಗುರು ಹಾಗೂ ಶನಿ ವೃತ್ತಕಕ್ಷೆಗಳಲ್ಲಿ ಪೂರ್ವ–ಪಶ್ಚಿಮ ದಿಶೆಯಲ್ಲಿ ಸಂಚರಿಸುತ್ತವೆ; ನಕ್ಷತ್ರಗಳು ಶನಿಯಿಂದಲೂ ಆಚೆಗಿದ್ದು ಭೂಮಿಯ ಸುತ್ತ ಪರಿಭ್ರಮಿಸುತ್ತಿರುತ್ತವೆ. ಆಕಾಶಕಾಯಗಳ ಇತರ ವೀಕ್ಷಿತ ಚಲನೆಗಳನ್ನು (ಉದಾಹರಣೆಗೆ ಸೂರ್ಯ ಚಂದ್ರರು




ಚಿತ್ರ 2 ಟಾಲೆಮಿಯ ಸೌರವ್ಯೂಹದ ಕಲ್ಪನೆ

ದಿವಸದಿಂದ ದಿವಸಕ್ಕೆ ನಿರಂತರವಾಗಿ ಪಶ್ಚಿಮ–ಪೂರ್ವ ದಿಶೆಯಲ್ಲಿ ಸಂಚರಿಸುತ್ತವೆ; ಗ್ರಹಗಳಿಗೆ ಪಶ್ಚಿಮ–ಪೂರ್ವ, ಪೂರ್ವ–ಪಶ್ಚಿಮ ದಿಶೆಗಳ ಚಲನೆಗಳಿರುವುದು ಮಾತ್ರವಲ್ಲ, ಹಲವೇಳೆ ಅವು ಸ್ತಬ್ಧವಾಗಿರುವುದೂ ಉಂಟು) ವಿವರಿಸಲು ಅಧಿಚಕ್ರದ (**ನೋಡಿ– ಅಧಿಚಕ್ರ**) ಪರಿಕಲ್ಪನೆಯನ್ನು ಟಾಲೆಮಿ ಮುಂದಿಟ್ಟ. ಇದರ ಸಾರಾಂಶವಿಷ್ಟೆ : ಒಂದೊಂದು ಕಾಯವೂ ಒಂದು ಚಿಕ್ಕವೃತ್ತದ ಕಕ್ಷೆಯ ಮೇಲೆ ಸಂಚರಿಸುತ್ತಿರುವಂತೆಯೇ ಆ ವೃತ್ತದ ಕೇಂದ್ರ ಭೂಮಿಕೇಂದ್ರವಾಗಿರುವ ಒಂದು ದೊಡ್ಡವೃತ್ತದ ಪರಿಧಿಯ ಮೇಲೆ ಸಂಚರಿಸುತ್ತಿರುತ್ತದೆ. ಆರಂಭದಲ್ಲಿ ಈ ವಿವರಣೆ ಸಮರ್ಪಕವಾಗಿ ಏನೋ ತೋರಿತ್ತು. ಆದರೆ ವೀಕ್ಷಿತಾಂಶಗಳು ಹೆಚ್ಚು ಹೆಚ್ಚು ದೊರೆತಂತೆ ಆಕಾಶದಲ್ಲಿ ಕಂಡುಬಂದ ಪೂರ್ಣವಿದ್ಯಮಾನಗಳಿಗೆ ಟಾಲೆಮಿ ವ್ಯವಸ್ಥೆ ಅರ್ಥ ನೀಡುವುದರಲ್ಲಿ ಕುಂಟಿತು. ಪ್ರತಿಯೊಂದು ಸಲವೂ ತಲೆದೋರಿದ ವಿಚಲನೆಗೆ ಹೊಸ ಒಂದು ತಿದ್ದುಪಡಿಯನ್ನು ನೀಡಿ ಟಾಲೆಮಿ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋದ. ಮುಂದೆ ಕೊಪರ್ನಿಕಸ್(1473–1543) ಸೂರ್ಯಕೇಂದ್ರವಾದವನ್ನು ಮಂಡಿಸುವ ತನಕ (**ನೋಡಿ– ಕೊಪರ್ನಿಕಸ್ ಸಿದ್ಧಾಂತ**) ಟಾಲೆಮಿ ಸಿದ್ಧಾಂತ (ಭೂಕೇಂದ್ರವಾದ) ಅದರ ಹಲವಾರು ತಿದ್ದುಪಡಿಗಳ ಸಮೇತ ಅಸ್ತಿತ್ವದಲ್ಲಿತ್ತು. ಕೊಪರ್ನಿಕಸನಾದರೂ ಅಧಿಚಕ್ರಗಳ ಪರಿಕಲ್ಪನೆಯನ್ನು ತೊರೆಯಲು ಸಮರ್ಥನಾಗಲಿಲ್ಲ. ಅದು ನಡೆದದ್ದು ಕೆಪ್ಲರ್‌ನಿಂದ (1571–1630). (**ನೋಡಿ– ಕೆಪ್ಲರ್, ಯೋಹಾನ್ ; ಕೆಪ್ಲರನ ನಿಯಮಗಳು**)

ಪ್ರಾಚೀನ ಖಗೋಳವಿಜ್ಞಾನದ ಜೊತೆಗೇ ಹುಟ್ಟಿ ಬೆಳೆದದ್ದು ಫಲಜ್ಯೋತಿಷ (ಅಸ್ಟ್ರಾಲಜಿ). ಆಕಾಶಕಾಯಗಳ ಚಲನವಲನಗಳನ್ನೂ ಮನುಷ್ಯರ ನಡೆವಳಿಕೆಗಳನ್ನೂ ಗಮನಿಸಿ ಇವುಗಳ ನಡುವೆ ಹೊಂದಾಣಿಕೆ ಏರ್ಪಡಿಸುವ ದಿಶೆಯಲ್ಲಿ ಇದರ ವಿಕಾಸವಾಗಿರಬಹುದು. ಮುಂದೆ, ಆಕಾಶಕಾಯಗಳ ವರ್ತನೆಯ ಭವಿಷ್ಯವನ್ನು ಗಣನೆಗಳ ಆಧಾರದಿಂದ ನುಡಿಯುವುದು ಸಾಧ್ಯವಾದಾಗ ವ್ಯಕ್ತಿಗಳ ಮೇಲೆ ಅಂಥ ವರ್ತನೆಯ ಪರಿಣಾಮಗಳನ್ನು ಮುನ್ನುಡಿಯುವ ಹವ್ಯಾಸ ರೂಢಿಗೆ ಬಂದಿರಬಹುದು. ಇದು ಹೇಗೆಯೇ ಇರಲಿ, ಫಲಜ್ಯೋತಿಷ್ಯದ ಉಗಮ ಆಕಾಶಕಾಯಗಳ ನೇರ ವೀಕ್ಷಣೆ ಮತ್ತು ಅಭ್ಯಾಸಗಳಲ್ಲಿ ಎಂಬುದು ನಿಸ್ಸಂದೇಹ. ಆದರೆ ಶತಮಾನಗಳು ಸಂದಂತೆ ಫಲ ಜ್ಯೋತಿಷ ಸ್ವತಂತ್ರ ಅಸ್ತಿತ್ವ ಪಡೆದಂತೆ ಆಕಾಶಕಾಯಗಳ ವೀಕ್ಷಣೆ ಅಭ್ಯಾಸಗಳು ದೂರವಾದವು. ಇದು ಒಂದು ಬೌದ್ಧಿಕಕ್ರಿಯೆ, ಅನೇಕ ವೇಳೆ ಚಮತ್ಕಾರ, ಎನ್ನುವಂತೆ ಬೆಳೆಯಿತು. ಮಧ್ಯಯುಗದಲ್ಲಿ (ಪ್ರ.ಶ. ಸು. 500–1500ಅವಧಿ) ಫಲಜ್ಯೋತಿಷದ ಪ್ರಭಾವ ಹೆಚ್ಚಾಗಿ ಖಗೋಳವಿಜ್ಞಾನದ ಬೆಳವಣಿಗೆ ಕುಂಠಿತವಾಯಿತು. ಜನ ಮಟ್ಟಸಸ್ಥಿರ ಭೂಮಿಯಮೇಲೆ ನಿಶ್ಚಿಂತೆಯಿಂದ ಬಾಳುತ್ತಿದ್ದರು. ವಿಶ್ವಕೇಂದ್ರ ಭೂಮಿ ಎನ್ನುವ ವಿಚಾರದಲ್ಲಿ ಅವರಿಗೆ ಯಾವ ಸಂದೇಹವೂ ಇರಲಿಲ್ಲ.

ಮಧ್ಯಯುಗದ ಕೊನೆಯ ದಿನಗಳು ಬಂದಂತೆ, ಮುಂದುವರಿದಿದ್ದ ಬೇರೆ ಬೇರೆ ರಾಜ್ಯಗಳಿಗೆ ವಿದ್ವಾಂಸರ ವಲಸೆ ವಿನಿಮಯ ಕ್ರಮೇಣ ಹೆಚ್ಚಾಗುತ್ತಿದ್ದವು. ಅದೇ ವೇಳೆ ಭಾರತೀಯ ದಾಶಮಿಕ ಸಂಖ್ಯಾಮಾನ ಪದ್ಧತಿ ಅರ‍್ಯಾಬಿಕ್ ಸಂಖ್ಯೆಗಳು ಇಲ್ಲವೆ ಅರ‍್ಯಾಬಿಕ್ ಸಂಖ್ಯಾಮಾನಪದ್ಧತಿ ಎಂಬ ಹೊಸ ಹೆಸರಿನಿಂದ ಯೂರೋಪ್ ರಾಷ್ಟ್ರಗಳಲ್ಲಿ ಹಬ್ಬಿದುವು. ಆಲ್ಮಾಜೆಸ್ಟ್ ಮತ್ತು ಇತರ ಖಗೋಳವಿಜ್ಞಾನಸಂಬಂಧವಾದ ಗ್ರಂಥಗಳು ಮೂಲ ಅರ‍್ಯಾಬಿಕ್ ಭಾಷೆಯಿಂದ ಯುರೋಪಿನ ಭಾಷೆಗಳಿಗೆ ಆಯಾ ದೇಶಗಳ ರಾಜರ ಪ್ರೇರಣೆ ಪ್ರೋತ್ಸಾಹಗಳಿಂದ ಅನುವಾದಿಸಲ್ಪಟ್ಟವು. ಹೀಗಾಗಿ ಆಕಾಶವನ್ನು ಕುರಿತ ಆಸಕ್ತಿ ಪುನಃ ಕುದುರಿತು. ಕ್ಯಾಸ್ಟೈಲಿನ ಹತ್ತನೆಯ ಆಲ್ಫಾನ್ಸೊ ರಾಜ ಪಂಡಿತರ ಮಂಡಲಿಯನ್ನೇ ನೇಮಕಮಾಡಿ ಗ್ರಹಸ್ಥಾನಗಳನ್ನು ಮುನ್ನುಡಿಯಲು ನೆರವಾಗುವಂಥ ಕೋಷ್ಟಕಗಳ ರಚನೆಗೆ ಪ್ರೇರಣೆ ನೀಡಿದ. ಇವು ಆಲ್ಫಾನ್ಸೈನ್ ಕೋಷ್ಟಕಗಳೆಂದೇ ಪ್ರಸಿದ್ಧವಾಗಿವೆ (ಪ್ರ.ಶ. ಸು. 1270). ಈ ವೇಳೆಗೆ ಟಾಲೆಮಿ ವ್ಯವಸ್ಥೆ ಅಸಂಖ್ಯಾತ ತಿದ್ದುಪಡಿಗಳ ಒಂದು ಮಹಾಗೊಂದಲವೇ ಆಗಿಹೋಗಿತ್ತು. ವಾಸ್ತವಿಕತೆಗೂ ಸಿದ್ಧಾಂತಕ್ಕೂ ತಾಳೆ ಬೀಳದಿದ್ದಾಗ ಪ್ರತಿಸಲವೂ ಸಿದ್ಧಾಂತಕ್ಕೆ ಒತ್ತುಗಂಬಗಳನ್ನು ಕೊಟ್ಟು ತೇಪೆಗಳನ್ನು ಹೊಲಿದು ಸದ್ಯಕ್ಕೆ ಸಾಂಗತ್ಯವನ್ನು ಸಾಧಿಸಿಕೊಳ್ಳುತ್ತಿದ್ದರೇ ವಿನಾ ಸಿದ್ಧಾಂತವನ್ನೇ ಆಮೂಲಾಗ್ರ ತ್ಯಜಿಸುವ ಅಥವಾ ವಿಮರ್ಶಿಸುವ ಯೋಚನೆ ಮಾಡಲಿಲ್ಲ. ಆ ಪಕ್ವ ಕಾಲ ಕೊಪರ್ನಿಕಸ್ ಬರುವತನಕ ಕಾಯಬೇಕಾಗಿತ್ತು. ಒಂದೊಂದು ಗ್ರಹದ ಚಲನೆಯನ್ನೂ ಮುನ್ನುಡಿಯಲು 40–60 ಜಟಿಲ ಅಧಿಚಕ್ರಗಳು ಅವುಗಳಿಗೆ ಸಂಬಂಧಿಸಿದ ಜಟಿಲ ಗಣನೆಗಳು ಬೇಕಾಗುತ್ತಿದ್ದವು. ಈ ಸಂಕೀರ್ಣ ಜಾಲವನ್ನು ಗಮನಿಸಿದ ಆಲ್ಫಾನ್ಸೋ ರಾಜ ತಾನೇನಾದರೂ ಸೃಷ್ಟಿಕಾಲದಲ್ಲಿ ಇದ್ದುದಾಗಿದ್ದರೆ ಭಗವಂತನಿಗೆ ಸರಿಯಾದ ಹಿತೋಕ್ತಿ ನೀಡುತ್ತಿದ್ದೇನೆಂದು ಉದ್ಗರಿಸಿದುದಾಗಿ ವದಂತಿ. ಅಂದರೆ ಪ್ರಪಂಚ ಇಷ್ಟೊಂದು ಸಂಕೀರ್ಣವಾಗಿರಲಾರದು ಎಂದು ಅವನ ಅಂತರ್ವಾಣಿ ಮಿಡಿಯುತ್ತಿತ್ತು.

**(2) ಖಗೋಳವಿಜ್ಞಾನದಲ್ಲಿ ಕ್ರಾಂತಿ :** 16ನೆಯ ಶತಮಾನದ ತರುಣದಲ್ಲಿ ವಿಜ್ಞಾನ, ಅದರಂತೆಯೇ ಖಗೋಳವಿಜ್ಞಾನ, ಒಂದು ಕ್ರಾಂತಿಯ ಅಂಚಿನಲ್ಲಿ ನಿಂತಿತ್ತು. ಯೂರೋಪಿನ ಜನ ಆಗ ಹೆಚ್ಚೆಚ್ಚು ಸಾಹಸಪ್ರಿಯರಾಗುತ್ತಿದ್ದರು. ಕೊಲಂಬಸ್ ನಡೆಸಿದ ನವಪ್ರಪಂಚದ ಅನ್ವೇಷಣೆ ಚಿಂತನಕಾರರ ಮುಂದೆ ಹೊಸ ಸವಾಲುಗಳನ್ನು ಒಡ್ಡಿತು: ಹಾಗಾದರೆ ಭೂಮಿ ಚಪ್ಪಟೆ ಆಗಿಲ್ಲ, ಪಶ್ಚಿಮಾಭಿಮುಖವಾಗಿ ತೇಲಿದಾತ ಭೂಮಿಯ ಅಂಚನ್ನು ತಲುಪಿ ಅಲ್ಲಿಂದ ಕೆಳಗೆ ಪಾತಾಳಕ್ಕೆ ಬಿದ್ದುಹೋಗುವುದಿಲ್ಲ ಎಂದು ಖಾತ್ರಿಯಾಯಿತು. 15 ನೆಯ ಶತಮಾನದ ಮಧ್ಯಭಾಗದಲ್ಲಿ ಯೋಹಾನ್ ಗುಟೆನ್‌ಬರ್ಗ್ ಯಾಂತ್ರಿಕ ಮುದ್ರಣ ವಿಧಾನವನ್ನು ಉಪಜ್ಞಿಸಿದ. ಇದರಿಂದ ಗ್ರಂಥಗಳ ಮುದ್ರಣಕ್ಕೂ ಜ್ಞಾನವಿನಿಮಯಕ್ಕೂ ಹೊಸ ಸಂವೇಗ ಲಭಿಸಿತು.

ಖಗೋಳವಿಜ್ಞಾನದಲ್ಲಿ ಕ್ರಾಂತಿಯನ್ನು ಉಂಟುಮಾಡಿ ಅದರ ಇತಿಹಾಸಕ್ಕೆ ಹೊಸ ತಿರುವನ್ನೂ ಆಯಾಮವನ್ನೂ ನೀಡಿದ ಪ್ರಾರಂಭಕಾರರಲ್ಲಿ ಮುಖ್ಯರು ಕೊಪರ್ನಿಕಸ್

(1473–1543), ಟೈಕೊ ಬ್ರಾಹೆ (1546–1601), ಗೆಲಿಲಿಯೊ (1564–1642), ಕೆಪ್ಲರ್ (1571–1630) ಮತ್ತು ನ್ಯೂಟನ್ (1642–1727). ಇವರ ಕೊಡುಗೆಗಳ ವಿವರಗಳನ್ನು ಆಯಾ ವ್ಯಕ್ತಿಗಳ ಜೀವನ ಚಿತ್ರಗಳನ್ನು ಬರೆದಿರುವ ಲೇಖನಗಳಲ್ಲಿ ನೋಡಬಹುದು; ವಿಜ್ಞಾನವೂ ಧಾರ್ಮಿಕ ವಿಧಿಗಳೂ ನಿಕಟವಾಗಿ ಹೊಂದಿಕೊಂಡು ಎರಡನೆಯದರ ಅನುಯಾಯಿಯಾಗಿ ಮೊದಲಿನದು ಇದ್ದ ಕಾಲದಲ್ಲಿ ಭೂಮಿಕೇಂದ್ರವಾದದ ವಿರುದ್ಧ ಕನಸಿನಲ್ಲಿ ಚಿಂತಿಸುವುದು ಕೂಡ ಅಪರಾಧವಾಗಿತ್ತು. ಅಂಥ ದಿವಸಗಳಲ್ಲಿ ಧರ್ಮಶಾಸ್ತ್ರ ಏನೇ ಹೇಳಲಿ ಲಭ್ಯ ಪುರಾವೆಗಳ ಭಾರ ತಡೆಯಲಾಗದೆ ಕುಸಿಯುತ್ತಿದ್ದ ಟಾಲೆಮಿ ವ್ಯವಸ್ಥೆಗೆ ಮಂಗಳ ಹಾಡಿದವ ಕೊಪರ್ನಿಕಸ್. ಸೂರ್ಯಕೇಂದ್ರವಾದದ ಸ್ಥಾಪಕನಿವ. ಆದರೆ ಇವನು ಇದನ್ನು ಧೈರ್ಯವಾಗಿ ಪ್ರಚುರ ಮಾಡಲಾರದೆ ಧೃತಿಗುಂದಿ ಅಸುನೀಗಬೇಕಾಯಿತು. ಇವನಿಂದ ಮುಂದಿನ ಹೆಜ್ಜೆಯನ್ನು ಇಟ್ಟವ ಟೈಕೊಬ್ರಾಹೆ. ಆಕಾಶಕಾಯಗಳ ವಿಚಾರ ಶತಮಾನಗಳ ಕಾಲದಿಂದ ಸಂಗೃಹೀತವಾಗಿದ್ದ ಮಾಹಿತಿಗಳನ್ನು ಕಲೆಹಾಕಿದ. ಮತ್ತು ತನ್ನದೇ ಆದ ಕ್ರಮದಲ್ಲಿ ವ್ಯವಸ್ಥಿತವಾಗಿ, ಒಂದು ಆಧುನಿಕ ವೀಕ್ಷಣಮಂದಿರದಲ್ಲಿ ಕಾರ್ಯ ನಡೆಯುವ ರೀತಿಯಲ್ಲಿ, ದತ್ತಾಶಗಳ ಸಂಗ್ರಹಣೆಯಲ್ಲಿ ಉದ್ಯುಕ್ತನಾದ. ಆಕಾಶಕಾಯಗಳ ವೀಕ್ಷಣೆಯಲ್ಲೇ ಮುಳುಗಿ ಹೋಗಿದ್ದ ಟೈಕೊಬ್ರಾಹೆಗೆ ಆ ವರದಿಗಳ ಗೊಂಡಾರಣ್ಯದಿಂದ ಗ್ರಹಗಳ ಚಲನೆಗಳನ್ನು ಕುರಿತ ಗಣಿತ ಸೂತ್ರಗಳನ್ನು ಸಾರೀಕರಿಸಲು ಬೇಕಾದ ವ್ಯವಧಾನವೂ ಇರಲಿಲ್ಲ ; ಗಣಿತ ಜ್ಞಾನವೂ ಇರಲಿಲ್ಲ. ಇವನದು ಕ್ಷೇತ್ರಕಾರ್ಯ. ಅದರಿಂದ ಮುಂದಿನ ಮಟ್ಟದ ಬೌದ್ಧಿಕ ಸೂತ್ರೀಕರಣ ಮಾಡಲು ಅದೇ ಕಾಲದಲ್ಲಿ ಒದಗಿಬಂದಾತ ಕೆಪ್ಲರ್. ಕೆಪ್ಲರನ ನಿಯಮಗಳು (**ನೋಡಿ– ಕೆಪ್ಲರನ ನಿಯಮಗಳು**) ಎಂದು ಪ್ರಸಿದ್ಧವಾಗಿರುವ ಮೂರು ಸಂಗತ ನಿರೂಪಣೆಗಳು ತತ್‌ಕ್ಷಣ ಸೌರವ್ಯೂಹವನ್ನು ಒಂದು ಸುಂದರ ಜ್ಯಾಮಿತೀಯ ಪ್ರರೂಪದಲ್ಲಿ ನೆಲೆನಿಲ್ಲಿಸಿದುವು; ಅವು ಸೌರವ್ಯೂಹಕ್ಕೆ ಸುಭದ್ರವಾದ ಗಣಿತೀಯ ಚೌಕಟ್ಟನ್ನು ಒದಗಿಸಿದುವು. ಆಲ್ಫಾನ್ಸೋ ಹೇಳಿದ ಕೊಂಕು ನುಡಿಗೆ ಇಲ್ಲಿ ಸರಿಯಾದ ಉತ್ತರ ದೊರೆಯಿತು. ಸೌರವ್ಯೂಹ ಸರಳ ರಚನೆಯೇ; ಆದರೆ ಅದನ್ನು ಅರಿಯಲು ಮಾತ್ರ ಅಜ್ಞಾನ, ಮೂಢನಂಬಿಕೆಗಳು, ಮತಾಂಧತೆ ಮುಂತಾದ ಗೊಂಡಾರಣ್ಯಗಳ ಅಪಾಯಗಳನ್ನು ಮಾನವ ಎದುರಿಸಿ ಉತ್ತರಿಸಿ ಎತ್ತರ ಏರಬೇಕಾಯಿತಷ್ಟೆ. ಅದುವರೆಗೆ ಕೇವಲ ವಿವರಣಾತ್ಮಕ ಶಾಸ್ತ್ರವೆಂದು ದ್ವಿತೀಯಕ ಅಂತಸ್ತನ್ನು ಪಡೆದಿದ್ದ (ಗಣಿತ, ವೈದ್ಯ ಮುಂತಾದವು ಪ್ರಾಥಮಿಕ ಅಂತಸ್ತನ್ನು ಪಡೆದಿದ್ದುವು) ಖಗೋಳವಿಜ್ಞಾನಕ್ಕೆ ನಿಖರ ವಿಜ್ಞಾನವೆಂಬ ಪ್ರಾಥಮಿಕ ಅಂತಸ್ತನ್ನು ಒದಗಿಸಿದವ ಕೆಪ್ಲರ್. ಆಧುನಿಕ ಗಣಿತೀಯ ಖಗೋಳವಿಜ್ಞಾನದ ಪ್ರವರ್ತಕ ಕೆಪ್ಲರ್. ಗೆಲಿಲಿಯೊ ಮತ್ತು ಕೆಪ್ಲರ್ ಸರಿಸುಮಾರಾಗಿ ಸಮಕಾಲೀನರು. ಕೆಪ್ಲರ್ ಪ್ರಸಿದ್ಧಿಗೆ ಬರುವ ಮೊದಲೇ ಗೆಲಿಲಿಯೊ ಖ್ಯಾತನಾಮನಾಗಿದ್ದ. ಖಗೋಳವಿಜ್ಞಾನದ ಕ್ರಾಂತಿಕಾರೀ



ಚಿತ್ರ 3 ಸೌರವ್ಯೂಹದ ಚಿತ್ರ : ನೆಪ್ಚೂನ್ ಮತ್ತು ಪ್ಲೂಟೋ ಗ್ರಹಗಳ ಸೂರ್ಯನ ಸುತ್ತಲಿನ ಕಕ್ಷೆಗಳನ್ನು ಒಳಚಿತ್ರದಲ್ಲಿ ತೋರಿಸಿದೆ

ಪರಿವರ್ತನೆಗೆ ಗೆಲಿಲಿಯೊ ನೀಡಿದ ಟೆಲಿಸ್ಕೋಪ್ ಉಪಕರಣದ ಕೊಡುಗೆ ಮಹತ್ತರವಾದದ್ದು. 1610 ನೆಯ ಇಸವಿ ಮನುಷ್ಯನ ಕಣ್ಣುಗಳ ಎದುರು ಹೊಸ ವಿಸ್ತೃತ ಆಕಾಶವನ್ನು ಅನಾವರಣಗೊಳಿಸಿತು. ಅದುವರೆಗೆ ತನ್ನ ಕಣ್ಣುಗಳ ಪರಿಮಿತಿಯನ್ನು ಅವಲಂಬಿಸಿ ಆಕಾಶಕಾಯಗಳ ವೀಕ್ಷಣೆ ಮಾಡುತ್ತಿದ್ದ ಮಾನವನಿಗೆ ಆ ವರ್ಷ ಬಳಕೆಗೆ ಬಂದ ಗೆಲಿಲಿಯೊನ ಟೆಲಿಸ್ಕೋಪ್ ಹೊಸ ಬೆಳಕನ್ನೂ ಹೊಸ ವಿಸ್ತಾರವನ್ನೂ ಎದುರಿಟ್ಟಿತು. ಶುಕ್ರಗ್ರಹದ ಕಾಂತಿಯಲ್ಲಿ ಏರಿಳಿತಗಳನ್ನು ಕಂಡು ಗುರುತಿಸಿದ್ದರೂ ಅದರ ಆಕಾರ ಸದಾ ಗುಂಡಗೆ ಎಂದು ನಂಬಲಾಗಿತ್ತು. ಆದರೆ ಟೆಲಿಸ್ಕೋಪ್ ಗೆಲಿಲಿಯೊನ ಎದುರಿಟ್ಟ ದೃಶ್ಯವೇ ಬೇರೆ. ಶುಕ್ರ ಸಹ ಚಂದ್ರನಂತೆ ಕಲೆಗಳನ್ನು(ಫೇಸಸ್) ಪ್ರದರ್ಶಿಸುತ್ತದೆ ಎಂದು ತಿಳಿಯಿತು. ಅಂದರೆ ಚೌತಿ ಶುಕ್ರ ದಶಮಿಶುಕ್ರ (ಅದೇ ರೀತಿ ಬುಧ ಕೂಡ) ಇತ್ಯಾದಿ ದೃಶ್ಯಗಳು ಅಪೂರ್ವವಲ್ಲ ಎಂದು ವೇದ್ಯವಾಯಿತು. ಇದು ಟಾಲೆಮಿ ತೀರ್ಮಾನಗಳಿಗೆ ತೀರ ವಿರುದ್ಧವಾಗಿದ್ದುವು. ಗುರುಗ್ರಹದ ನಾಲ್ಕು ಉಪಗ್ರಹಗಳನ್ನು (ಎಂದರೆ ಗುರುವಿನ ಚಂದ್ರರನ್ನು) ಮೊದಲು ನೋಡಿದ್ದು ಗೆಲಿಲಿಯೊ. ಆಕಾಶಗಂಗೆಯನ್ನು ಟೆಲಿಸ್ಕೋಪಿನಿಂದ ನೋಡಿ ಆ ಬೆಳಕಿನ ಹೊನಲು ಅಸಂಖ್ಯಾತ ನಿಬಿಡನಕ್ಷತ್ರಗಳಿಂದ ಆಗಿದೆ ಎಂದು ತಿಳಿದಾಗ ನೂತನ ವಿಸ್ಮಯ ಲೋಕವೊಂದು, ಅದರಿಂದ ಒಂದು ಹೊಸಸವಾಲು ಕೂಡಾ ಮಾನವನ ಎದುರು ತೆರೆದಂತಾಯಿತು. ಹೀಗೆ ಕೊಪರ್ನಿಕಸ್‌ನಿಂದ ತೊಡಗಿ ಕೆಪ್ಲರ್, ಗೆಲಿಲಿಯೊ ವರೆಗೆ ಖಗೋಳವಿಜ್ಞಾನ ತೀವ್ರವಾದ ಆಂತರಿಕ ಆಂದೋಲನ ಕ್ಷೋಭೆಗಳಿಗೆ ಈಡಾಗಿ ತನ್ನ ವೈಜ್ಞಾನಿಕ ನೆಲೆಯನ್ನು ಭದ್ರಗೊಳಿಸಿಕೊಂಡಿತು. ಆದರೆ ಇವೆಲ್ಲವುಗಳ ಪರಿಣಾಮವಾಗಿ ತಲೆದೋರಿದ್ದು ಎಂದಿಗಿಂತ ತೀವ್ರವಾಗಿ ಇದು ಹೀಗೇಕೆ ಎಂಬ ಪ್ರಶ್ನೆ. ಸೂರ್ಯನ ಸುತ್ತಲೂ ಗ್ರಹಗಳು ಪರಿಭ್ರಮಿಸುವಂತೆ ವಿಧಿಸುವ ಬಲ ಯಾವುದು? ಸೌರವ್ಯೂಹವನ್ನೂ ನಕ್ಷತ್ರಲೋಕವನ್ನೂ ಬಂಧಿಸಿರುವ ಬಲ ಯಾವುದು? ಈ ಮೂಲಭೂತ ಪ್ರಶ್ನೆಗಳಿಗೆ ಉತ್ತರವಿತ್ತವ ನ್ಯೂಟನ್. ಈತ ಆವಿಷ್ಕರಿಸಿದ ವಿಶ್ವಗುರುತ್ವಾಕರ್ಷಣ ನಿಯಮ(ಯೂನಿವರ್ಸಲ್ ಲಾ ಆಫ್ ಗ್ರಾವಿಟೇಷನ್) ವಿಶ್ವಕ್ಕೆ ಗಣಿತೀಯವಾಗಿ ಸರಳ ಸಂಗತ ವಿವರಣೆ ನೀಡುವುದರಲ್ಲಿ ಯಶಸ್ವಿಯಾಯಿತು. ಗುರುತ್ವಾಕರ್ಷಣ ಬಲದ ಪರಿಣಾಮವಾಗಿ ಸೌರವ್ಯೂಹ ನಿಂತಿದೆ, ಸೂರ್ಯನ ಸುತ್ತ ಗ್ರಹಗಳು (ಕೆಪ್ಲರನ ನಿಯಮಾನುಸಾರ) ಪರಿಭ್ರಮಿಸುತ್ತವೆ, ಅದೇ ಪ್ರಕಾರ ಚಂದ್ರ ಭೂಮಿಯ ಸುತ್ತ ಪರಿಭ್ರಮಿಸುತ್ತಿದೆ ಎಂದು ಮುಂತಾಗಿ ವಿವರಿಸುವುದು ಸಾಧ್ಯವಾಯಿತು. ಅಲ್ಲದೇ ಗ್ರಹ, ಉಪಗ್ರಹ, ಧೂಮಕೇತು ಮುಂತಾದವುಗಳ ಚಲನೆಗಳನ್ನು ಕುರಿತು ನಿಖರವಾಗಿ ಭವಿಷ್ಯವನ್ನು ಹೇಳುವುದು ಮತ್ತು ಹಾಗೆ ಹೇಳಿದ್ದನ್ನು ತಾಳೆನೋಡಿ ಸ್ಥಿರೀಕರಿಸುವುದು ಸುಲಭವಾಯಿತು.

**ಖಗೋಳಬಲವಿಜ್ಞಾನ:** ಖಗೋಳವನ್ನೂ ಖಗೋಳೀಯ ಕಾಯಗಳನ್ನು ಗಣಿತೀಯವಾಗಿ ವಿವರಿಸುವ ವಿಜ್ಞಾನಕ್ಕೆ ಈ ಹೆಸರುಂಟು(ಸೆಲೆಸ್ಟಿಯಲ್ ಮೆಕ್ಯಾನಿಕ್ಸ್). ಇದರ ಆಧಾರಸೂತ್ರ ನ್ಯೂಟನ್ನನ ವಿಶ್ವಗುರುತ್ವಾಕರ್ಷಣ ನಿಯಮ. ಇದರ ನಿಗಮನಗಳಾಗಿ(ಡಿಡಕ್ಷನ್) ಕೆಪ್ಲರನ ನಿಯಮಗಳು ಉದ್ಭವಿಸುತ್ತವೆ. ಇವುಗಳ ಅನ್ವಯದಿಂದ ಖಗೋಳೀಯ ಕಾಯಗಳ ಚಲನೆಯನ್ನು ಕುರಿತ ಗಣಿತವನ್ನು ಬೆಳೆಸಿದ್ದಾರೆ. ಮುಂದೆ ಈ ಗಣಿತ ಕಾಲಾನುಕಾಲಕ್ಕೆ ಪರಿಷ್ಕರಣಗೊಂಡು ಖಗೋಳದ ಸೂಕ್ಷ್ಮ ವಿವರಣೆಗಳನ್ನು ಸಹ ಅರ್ಥವಿಸಲು ಸಮರ್ಥವಾಯಿತು. ಗಣಿತದ ಜೊತೆಯಲ್ಲೇ ಹೆಜ್ಜೆ ಇಟ್ಟು ಖಗೋಳವಿಜ್ಞಾನದ ಅಭ್ಯುದಯಕ್ಕೆ ಕೊಡುಗೆ ನೀಡಿದ್ದು ನಾನಾ ವಿಧದ ಪರಿಷ್ಕೃತ ವೀಕ್ಷಣ ಸಾಧನಗಳು ಮತ್ತು ವಿಧಾನಗಳು–ಟೆಲಿಸ್ಕೋಪುಗಳು, ಫೋಟೋಗ್ರಾಫಿ ತಂತ್ರಗಳು, ಸಂಕ್ರಾಂತಿ ಉಪಕರಣ (ಟ್ರಾನ್ಸಿಟ್ ಇನ್ಸ್ಟ್ರುಮೆಂಟ್) ರೋಹಿತಗಳು ಇತ್ಯಾದಿ.

**3. ಆಧುನಿಕ ಖಗೋಳವಿಜ್ಞಾನ:** ಆಧುನಿಕ ಖಗೋಳವಿಜ್ಞಾನ ಖಚಿತವಾಗಿ ಆರಂಭವಾದದ್ದು ನ್ಯೂಟನ್ನಿನ ಕಾಲದಿಂದ. ಇದರ ಅಡಿಪಾಯವನ್ನು ಹಾಕಿದವ ಕೊಪರ್ನಿಕಸ್; ವೇದಿಕೆಯನ್ನು ನಿರ್ಮಿಸಿದವರು ಮುಖ್ಯವಾಗಿ ಗೆಲಿಲಿಯೊ ಹಾಗೂ ಕೆಪ್ಲರ್. ಆಧುನಿಕ ಸಿದ್ಧಾಂತದ ಪ್ರಕಾರ ಸೌರವ್ಯೂಹ ಹಾಗೂ ವಿಶ್ವದ ಚಿತ್ರ ಹೇಗಿದೆಯೆಂಬುದನ್ನು ಮುಂದೆ ಸಂಕ್ಷೇಪವಾಗಿ ಬರೆದಿದೆ.

**(1) ಸೌರವ್ಯೂಹ** : ಸೂರ್ಯ ಒಂದು ನಕ್ಷತ್ರ. ಇದು ಪ್ರಬಲ ಶಕ್ತಿಯ ಆಕರ. ಸೂರ್ಯ, ಸೂರ್ಯ ನಿಯಂತ್ರಿಸುವ ಒಂಬತ್ತು ಗ್ರಹಗಳು, ಅವುಗಳಲ್ಲಿ ಹಲವು ಗ್ರಹಗಳ ಉಪಗ್ರಹಗಳು, ಉಲ್ಕೆಗಳು, ಧೂಮಕೇತುಗಳು ಇವೆಲ್ಲವುಗಳ ಒಟ್ಟು ಹೆಸರು ಸೌರವ್ಯೂಹ(ಸೋಲಾರ್ ಸಿಸ್ಟಂ). ಸೂರ್ಯನಿಂದ ಏರುವ ದೂರಗಳಲ್ಲಿ ಈ ಗ್ರಹಗಳು (ಈಗ ಖಚಿತವಾಗಿರುವಂತೆ) ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್, ನೆಪ್ಚೂನ್ ಮತ್ತು ಪ್ಲೂಟೋ. ಮಂಗಳ ಮತ್ತು ಗುರು ಕಕ್ಷೆಗಳ ನಡುವೆ ಕ್ಷುದ್ರಗ್ರಹಗಳು (**ನೋಡಿ– ಕ್ಷುದ್ರಗ್ರಹಗಳು**) ಇವೆ. ಗ್ರಹಗಳಿಗೆ ಇರುವ ಉಪಗ್ರಹಗಳ ವಿವರಗಳು ಹೀಗಿವೆ: ಭೂಮಿ–1 ಮಂಗಳ–2, ಗುರು–61, ಶನಿ–31, ಯುರೇನಸ್–21, ನೆಪ್ಚೂನ್–11. ಶನಿಗ್ರಹಕ್ಕೆ ಬಳೆಗಳೆಂಬ ವಿಶಿಷ್ಟ ರಚನೆಗಳು ಸಹ ಉಂಟು. ಗ್ರಹಗಳು ಸೂರ್ಯನ ಸುತ್ತ, ಉಪಗ್ರಹಗಳು ತಮ್ಮ ಮಾತೃಗ್ರಹಗಳ ಸುತ್ತ, ಕೆಪ್ಲರನ ನಿಯಮಾನುಸಾರ ಪರಿಭ್ರಮಿಸುತ್ತವೆ. ಉಪಗ್ರಹಗಳಲ್ಲಿರುವ ಗ್ರಹಗಳು ಆ ಉಪಗ್ರಹಗಳ ಸಮೇತ ಸೂರ್ಯನ ಸುತ್ತ ಪರಿಭ್ರಮಣೆಯನ್ನು ಮಾಡುವವು. ಸೌರವ್ಯೂಹದ ಎಲ್ಲ ಗ್ರಹೋಪಗ್ರಹಗಳಿಗೂ ಎರಡು ವಿಧವಾದ ಚಲನೆಗಳಿವೆ: ಒಂದು, ಅಕ್ಷದ ಸುತ್ತ ಆವರ್ತನೆ; ಎರಡು, ಮಾತೃಕಾಯದ (ಗ್ರಹಕ್ಕೆ ಮಾತೃಕಾಯ ಸೂರ್ಯ; ಉಪಗ್ರಹಕ್ಕೆ ಮಾತೃಕಾಯ ಗ್ರಹ) ಸುತ್ತ ಪರಿಭ್ರಮಣೆ. ಈ ಚಲನೆಗಳು ಏಕಕಾಲದಲ್ಲಿ ಗೊತ್ತಾದ (ಎಂದರೆ ಗಣಿತನಿಯಮಾನುಸಾರ ಗಣಿಸಬಹುದಾದ) ದರದಲ್ಲಿ ನಡೆಯುತ್ತವೆ. ಧೂಮಕೇತುಗಳು ಸಹ ಸೌರವ್ಯೂಹದ ಸದಸ್ಯ ಕಾಯಗಳೇ. ಇವು ಸೂರ್ಯನ ಸಮೀಪ ಬರುವ ತನಕ ಅದೃಶ್ಯವಾಗಿದ್ದು ಯವುದೋ ಒಂದು ಮಿತಿಯ ಒಳಗೆ ಬಂದಾಗ ಹಠಾತ್ತಾಗಿ ಕಾಣಿಸಿಕೊಂಡು ಸೂರ್ಯನನ್ನು

ಬಳಸಿ ಹಿಂತಿರುಗಿ ಪುನಃ ಅದೃಶ್ಯವಾಗುತ್ತವೆ. ಕೆಲವು ಧೂಮಕೇತುಗಳು ನಿಯತಕಾಲಿಕ. ಇನ್ನು ಕೆಲವು ಒಂದೇ ಸಲ ಕಾಣಿಸಿಕೊಳ್ಳುವುದುಂಟು. ಉಲ್ಕೆಗಳು, ಜನಪ್ರಿಯ ಭಾಷೆಯಲ್ಲಿ ಬೀಳುವ ನಕ್ಷತ್ರಗಳು. ಇವು ಸೌರವ್ಯೂಹದಲ್ಲಿ ಯಾದೃಚ್ಛಿಕವಾಗಿ ಸಂಚರಿಸುವ ಹಿರಿ ಕಿರಿ ಕಾಯಗಳು. ಭೂಮಿಯ ಗುರುತ್ವಾಕರ್ಷಣ ವಲಯವನ್ನು ಪ್ರವೇಶಿಸಿದಾಗ ಭೂತಳದೆಡೆಗೆ



ಚಿತ್ರ 4 ಸೌರವ್ಯೂಹದ ಗ್ರಹಗಳ ಸಾಪೇಕ್ಷಾಗ್ರಗಳು (ಚಿತ್ರದಲ್ಲಿ ಪ್ಲೂಟೋ ಗ್ರಹವನ್ನು ಕಾಣಿಸಿಲ್ಲ)

ಸೆಳೆಯಲ್ಪಡುತ್ತವೆ. ಆಗ ವಾಯುಮಂಡಲಕ್ಕೂ ಉಲ್ಕೆಗಳಿಗೂ ಒದಗುವ ಘರ್ಷಣೆಯ ಪರಿಣಾಮವಾಗಿ ಉಷ್ಣ ಜನಿಸಿ ಇವು ಉರಿದು ಹೋಗುತ್ತವೆ. ಒಂದು ಉಲ್ಕೆ ನಮಗೆ ಗೋಚರವಾಗುವುದು ಅದರ ಪಥದ ಉರಿಯುವ ಅಂಶದಲ್ಲಿ ಮಾತ್ರ (**ನೋಡಿ – ಉಲ್ಕೆ**).

**(ii) ಆಕಾಶಗಂಗೆ :** ಚಂದ್ರರಹಿತ ರಾತ್ರಿಯ ಸ್ವಚ್ಛಾಕಾಶದಲ್ಲಿ, ದಕ್ಷಿಣೋತ್ತರ ದಿಶೆಯಲ್ಲಿ ಹಬ್ಬಿದಂತೆ, ತೋರುವ ಬೆಳಕಿನ ಮಂದ ಹೊನಲು (ಮಿಲ್ಕೀವೇ). ಇದರ ದಾರಿಯಲ್ಲಿರುವ ಕೆಲವು ನಕ್ಷತ್ರಪುಂಜಗಳು ಇವು : ಲಘುಶ್ವಾನ, ಮಹಾವ್ಯಾಧ, ಮಿಥುನ, ವೃಷಭ, ಆರಿಗಾ, ಪರ್ಸಿಯಸ್, ಕೆಸ್ಸಿಯೋಪಿಯ, ಆಂಡ್ರೊಮೀಡ, ಸಿಫಿಯಸ್, ಅಕ್ವಿಲಾ, ಧನು, ವೃಶ್ಚಿಕ, ಸೆಂಟಾರಸ್, ತ್ರಿಶಂಕು ಇತ್ಯಾದಿ. ದಕ್ಷಿಣದಿಂದ ಉತ್ತರಕ್ಕೆ ಆಕಾಶವನ್ನು ಬಳಸಿರುವ ಈ ಹಾಲ ಹೊಳೆಯಲ್ಲಿ (ಕ್ಷೀರಪಥ) ಬಗೆಗಣ್ಣು ವಿಷ್ಣುಪಾದೋದ್ಭವೆ ದೇವಗಂಗೆಯನ್ನು ಕಂಡಿತು. ಉತ್ತರದ ಹಿಮವತ್ಪರ್ವತದ ಕಡೆಗೆ ಅದು ವ್ಯಾಪಿಸಿದೆ. ಅಲ್ಲಿ ಅದು ಭೂಮಿಗೆ ಹರನ ಜಡೆಯಿಂದ ಇಳಿದಿದೆ ಎಂದು ಸಹ ಕಲ್ಪನೆ ಕಂಡಿದೆ. ಹಿಮವತ್ಪರ್ವತದ ಬಣ್ಣವೂ ಬಿಳಿ. ಲಕ್ಷೋಪಲಕ್ಷ ನಕ್ಷತ್ರಗಳಿಂದಲೂ ಅಂತರನಕ್ಷತ್ರ ದೂಳು ಮತ್ತು ದೂಳಿನ ಮೋಡಗಳಿಂದಲೂ ಕೂಡಿರುವ ಮಹಾ ಒಂದು ಕಾರ್ಯಾಗಾರ ಆಕಾಶಗಂಗೆ. ನಮ್ಮ ಆಕಾಶಗಂಗೆಯ ಹೊರವಲಯದ ತೀರಾ ಸಾಮಾನ್ಯ ದರ್ಜೆಯ ಸದಸ್ಯ ಸೂರ್ಯ.

**(iii) ನಕ್ಷತ್ರಗಳು :** ಇವೆಲ್ಲವೂ ಉರಿಯುತ್ತಿರುವ ಅನಿಲರಾಶಿಗಳು. ದ್ರವ್ಯ ಇವುಗಳಲ್ಲಿ ಅತ್ಯಂತ ಉದ್ರಿಕ್ತಸ್ಥಿತಿಯಲ್ಲಿ ಇರುವುದು. ನಕ್ಷತ್ರದ ಕಾವು ಏರಿದಂತೆ ಈ ಉದ್ರಿಕ್ತಸ್ಥಿತಿ ಏರಿ ದ್ರವ್ಯ ತನ್ನ ಚತುರ್ಥ ಸ್ಥಿತಿಯಾದ (ಮೊದಲ ಮೂರು ಸ್ಥಿತಿಗಳು ಘನ, ದ್ರವ, ಅನಿಲ) ಪ್ಲಾಸ್ಮಾಸ್ಥಿತಿಯನ್ನೈದಿರುವುದು. ನಕ್ಷತ್ರಗಳ ಸಾಲಿನಲ್ಲಿ ನಮ್ಮ ಸೂರ್ಯ ತೀರಾ ಸಾಮಾನ್ಯವಾದ ಮಧ್ಯಮ ದರ್ಜೆಯ ನಕ್ಷತ್ರ. ನಕ್ಷತ್ರಗಳನ್ನು ಕಾಣುವ ನಕ್ಷತ್ರಗಳು, ಕಾಣದ ನಕ್ಷತ್ರಗಳು ಎಂಬ ಎರಡು ಗುಂಪುಗಳಾಗಿ ವಿಭಾಗಿಸಬಹುದು. ಎಂದರೆ, ಮೊದಲಿನವು ವಿದ್ಯುತ್ಕಾಂತ ರೋಹಿತದ ಕಾಣುವ ಭಾಗವನ್ನು ಸಹ ವಿಸರಿಸುತ್ತವೆ. ಎರಡನೆಯವು ಕಾಣದ ಭಾಗವನ್ನು ಮಾತ್ರ ವಿಸರಿಸುತ್ತವೆ. ಎರಡನೆಯ ಗುಂಪಿನಲ್ಲಿ ರೇಡಿಯೋ ನಕ್ಷತ್ರಗಳೂ (**ನೋಡಿ– ರೇಡಿಯೊ ಖಗೋಳವಿಜ್ಞಾನ**) ಎಕ್ಸ್‌ಕಿರಣ, ಗ್ಯಾಮ, ನ್ಯೂಟ್ರಿನೋ ಮುಂತಾದ ನಕ್ಷತ್ರಗಳು ಸೇರಿವೆ. ವಾಸ್ತವಿಕವಾಗಿ ವಿಶ್ವದ ಮಹಾಶೂನ್ಯದಲ್ಲಿ ನಕ್ಷತ್ರಗಳು ಅತಿ ವಿರಳವಾಗಿ ಹರಡಿ ಹಂಚಿಹೋಗಿರುವ ವಿದ್ಯುತ್ಕಾಂತ ಶಕ್ತಿಯ ಆಕರಗಳು. ಪ್ರತಿಯೊಂದಕ್ಕೂ (ನಮ್ಮ ಸೂರ್ಯನನ್ನು ಒಳಗೊಂಡಂತೆ) ಚಲನೆ ಉಂಟು. ಆದರೆ ವಿಶ್ವದ ಅನಂತಸೂಕ್ಷ್ಮ ಅಂಶವಾದ ಭೂಮಿಯ ಮೇಲೆ ನಿಂತು ನೋಡುವ ನಮ್ಮ ದೃಷ್ಟಿಯಿಂದ ನಕ್ಷತ್ರಗಳು ಅಚಲವಾಗಿ ತೋರುತ್ತವೆ. ಅವು ತೋರ್ಕೆಯ ಖಗೋಳದ ಮೇಲೆ ಸ್ಥಿರಚಿತ್ರಗಳಾಗಿ ವಿಕ್ಷೇಪಗೊಂಡಂತೆ ಭಾಸವಾಗುತ್ತವೆ. ಈ ಚಿತ್ರಗಳು ಸಾಪೇಕ್ಷವಾಗಿ ಸ್ಥಿರವಾಗಿರುವಂತೆ ಅನ್ನಿಸುತ್ತವೆ. ಹಲವಾರು ಶತಮಾನಗಳು ಉರುಳುವಾಗ ಮಾತ್ರ ನಕ್ಷತ್ರ ಚಿತ್ರಗಳಲ್ಲಿಯೂ ಅವುಗಳ ಸಾಪೇಕ್ಷ ಸ್ಥಾನಗಳಲ್ಲಿಯೂ ಸೂಕ್ಷ್ಮ ಬದಲಾವಣೆಯನ್ನು ಗುರುತಿಸಬಹುದಷ್ಟೆ (**ನೋಡಿ– ನಕ್ಷತ್ರ–ಲೋಕ**).

**(iv) ನೆಬ್ಯುಲ :** ನೀಹಾರಿಕೆ ಎಂದೂ ಕರೆಯುವುದುಂಟು. ಬರಿಗಣ್ಣಿನಿಂದ ನೋಡುವಾಗ ಇಲ್ಲವೇ ಟೆಲಿಸ್ಕೋಪಿನಿಂದ ವೀಕ್ಷಿಸುವಾಗ ಕಾಣುವ ಮೋಡದಂಥ ಅಸ್ಪಷ್ಟ ಹಾಗೂ ಅಚಲ ರಚನೆಗಳೇ ನೆಬ್ಯುಲಗಳು. ಆಂಡ್ರೊಮೀಡದ ಮಹಾನೆಬ್ಯುಲ, ಮಹಾವ್ಯಾಧದ ನೆಬ್ಯುಲ ಮುಂತಾದವು ಸುಪ್ರಸಿದ್ಧವಾದವು. ನೆಬ್ಯುಲಗಳು ನಕ್ಷತ್ರಗಳ ಜನ್ಮಸ್ಥಾನಗಳಾಗಿರಬಹುದು ಎಂದು ವಿಜ್ಞಾನಿಗಳು ಊಹಿಸಿದ್ದಾರೆ.

**(v) ಬ್ರಹ್ಮಾಂಡಗಳು :** ನಮ್ಮ ಆಕಾಶಗಂಗೆಯಂಥ ಇತರ ನಕ್ಷತ್ರ ವ್ಯವಸ್ಥೆಗಳು(ಗ್ಯಾಲಾಕ್ಸಿಸ್). ಇಂಥ ಒಂದೊಂದು ಬ್ರಹ್ಮಾಂಡವೂ, ಆಕಾಶಗಂಗೆಯಂತೆ ಲೆಕ್ಕಮಾಡಿ ಪೂರೈಸದಷ್ಟು ನಕ್ಷತ್ರಗಳ, ನೆಬ್ಯುಲಗಳ ಮತ್ತು ಇತರ ಕಾಯಗಳ ಸಮುದಾಯಗಳು. ಪ್ರತಿಯೊಂದು ವ್ಯವಸ್ಥೆಯೂ ಗುರುತ್ವಾಕರ್ಷಣಬಲದ ಒಂದು ದುರ್ಬಲ ಹಿಡಿತದಿಂದ ಒಂದುಗೂಡಿಕೊಂಡು ಸಮಗ್ರವಾದ ಚಿತ್ರವನ್ನು ಪ್ರದರ್ಶಿಸುತ್ತದೆ ಎಂದು ನಂಬಲಾಗಿದೆ. ಒಂದೊಂದು ಬ್ರಹ್ಮಾಂಡಕ್ಕೂ ಅದರ ಬಿಡಿಕಾಯಗಳ ಚಲನೆಗಳ ಜೊತೆಗೆ, ಸಾಮೂಹಿಕ ಚಲನೆ ಕೂಡ ಉಂಟು.

**4. ವಿಸ್ತರಿಸುತ್ತಿರುವ ವಿಶ್ವ :** ಭೂಮಿಯೇ ವಿಶ್ವಕೇಂದ್ರವಾಗಿದ್ದ ಪ್ರಾಚೀನ ಯುಗದಿಂದ ವಿಶ್ವಕ್ಕೆ ಕೇಂದ್ರವಿದೆಯೇ, ವಿಶ್ವದ ವ್ಯಾಪ್ತಿ ಎಷ್ಟು, ವಿಶ್ವ ಎಂದರೇನು ಎಂಬ ಮೂಲಭೂತ ಸಂದೇಹಗಳನ್ನು ಎತ್ತಿರುವ ಆಧುನಿಕ ಯುಗದವರೆಗೆ ಖಗೋಳವಿಜ್ಞಾನ ನಡೆದು ಬಂದಿರುವ ಹಾದಿಯ ಸಿಂಹಾವಲೋಕನ ಬಲು ರಮ್ಯ. ಇಂದು ವಿಶ್ವವೆಂದರೆ ಬ್ರಹ್ಮಾಂಡಗಳ ಸಮುದಾಯ. ಇದರ ವ್ಯಾಪ್ತಿ ನಮ್ಮ ಎಲ್ಲ ವೀಕ್ಷಣೆಗಳ ಪರಿಮಿತಿಯನ್ನು ಮೀರಿ ಆಕಾಶದಲ್ಲಿ ಕಾಲದಲ್ಲಿ ವಿಸ್ತರಿಸಿಹೋಗಿದೆ. ಇದರ ಬಹ್ವಂಶ ಶೂನ್ಯವಾಗಿಯೇ ಉಳಿದಿದೆ. ಈ ವಿಶ್ವ ನಿರಂತರವಾಗಿ ವಿಸ್ತರಿಸುತ್ತಿದೆ ಎಂದು ಒಂದು ವಾದ ಉಂಟು. ಇನ್ನೊಂದು ವಾದ ಇದು ಸ್ಥಿರಸ್ಥಿತಿಯಲ್ಲಿಯೇ ಇರುವುದು, ಇಲ್ಲಿ ನಿರಂತರ ಸೃಷ್ಟಿ ನಡೆದೇ ಇದೆ ಎನ್ನುತ್ತದೆ. ಮೂರನೆಯ ವಾದದ ಪ್ರಕಾರ ಇಂದು ವಿಸ್ತರಿಸುತ್ತಿರುವ ವಿಶ್ವ ಯಾವುದೋ ಒಂದು ಪರಿಮಿತಿಯನ್ನು ತಲುಪಿದ ಬಳಿಕ ಸಂಕುಚಿಸಲು ತೊಡಗಿ ಕೊನೆಗೆ ಒಂದು ಸಾಂದ್ರ ಅಖಂಡ ದ್ರವ್ಯ ರಾಶಿ ಆಗುತ್ತದೆ ಎನ್ನುವುದು. ಲಭಿಸಿದ ಮಾಹಿತಿಗಳ ಆಧಾರದ ಮೇಲೆ ಮಂಡಿಸಿರುವ ಊಹೆಗಳಿವು (**ನೋಡಿ– ಕ್ವೇಸಾರುಗಳು, ಪಲ್ಸಾರುಗಳು**). (ಎಫ್.ಜಿ.ಎನ್.)

**ಖಗೋಳ ಸರ್ವೇಕ್ಷಣ :** ಭೂಗೋಳದ ಮೇಲಿನ ಯಾವುದಾದರೊಂದು ಸ್ಥಳದ ನೈಜ ಸ್ಥಾನವನ್ನು (ಅಬ್ಸೊಲ್ಯೂಟ್ ಪೊಸಿಷನ್) ಅದರ ಅಕ್ಷಾಂಶ ರೇಖಾಂಶಗಳಿಂದ ನಿಗದಿಸುವಾಗ, ಆ ಸ್ಥಳದ ಯಾಮ್ಯೋತ್ತರವನ್ನು (ಮೆರಿಡಿಯನ್, ಮಧ್ಯಾಹ್ನರೇಖೆ) ನಿರ್ಧರಿಸುವಾಗ, ಅಕ್ಷಾಂಶ ರೇಖಾಂಶಗಳಿಗೆ ಅನುಸಾರವಾಗಿ ಗೊತ್ತುಮಾಡಲ್ಪಟ್ಟಿರುವ ಅಂತಾರಾಷ್ಟ್ರೀಯ ಎಲ್ಲೆಯನ್ನು ನೆಲದ ಮೇಲೆ ಖಚಿತವಾಗಿ ಗುರುತಿಸಬೇಕಾದಾಗ ಇತ್ಯಾದಿ ಸಂದರ್ಭಗಳಲ್ಲಿ ಆಕಾಶಕಾಯಗಳ ನೆರವಿನಿಂದ ನಡೆಸುವ ಸರ್ವೇಕ್ಷಣ (ಅಸ್ಟ್ರಾನಾಮಿಕಲ್ ಸರ್ವೆ). ಈ ಕ್ರಮದಲ್ಲಿ ಬೃಹದಾಕಾರದ ಖಗೋಳದ ಕೇಂದ್ರದಲ್ಲಿ ಭೂಗೋಳ ಸ್ಥಿರವಾಗಿರುವಂತೆಯೂ ಆಕಾಶ ಕಾಯಗಳು ಖಗೋಳದ ಒಳಮೈಯಲ್ಲಿ ಕ್ರಮವಾಗಿ ಸ್ಥಿರವೇಗದಿಂದ ಚಲಿಸುತ್ತಿರುವಂತೆಯೂ ಪರಿಗಣಿಸುತ್ತೇವೆ. ಭೂಗೋಳದ ಮೇಲೆಯೂ ಯಾಮ್ಯೋತ್ತರ ರೇಖೆಗಳನ್ನು ರಚಿಸಬಹುದು. ಭೂಗೋಳದ ಯಾವುದಾದರೊಂದು ನಿಗದಿಯಾದ ಯಾಮ್ಯೋತ್ತರಕ್ಕೆ ಅನುಸಾರವಾದ ಖಗೋಳರೇಖೆಯನ್ನು ಆಧಾರವಾಗಿಟ್ಟುಕೊಂಡು ಆ ರೇಖೆಗೂ ಮಿಕ್ಕ ಎಲ್ಲ ಆಕಾಶಕಾಯಗಳ ಯಾಮ್ಯೋತ್ತರಗಳಿಗೂ ಇರುವ ಕಾಲಪ್ರಮಾಣದ ಅಂತರಗಳ ಪಟ್ಟಿಯೇ ಆಲ್ಮನಾಕ್ (ಪಂಚಾಂಗ). ಭೂಗೋಳದ ಒಂದು ಸ್ಥಾನದ ಮೇಲೆ ಪ್ರತಿಷ್ಠಿತವಾಗಿರುವ ಥಿಯೊಡೊಲೈಟಿನ ದೂರದರ್ಶಕ ಕೊಳವೆಯ ಅಕ್ಷವನ್ನು ಆ ಸ್ಥಳದ ಯಾಮ್ಯೋತ್ತರಕ್ಕೆ ಅನುಸಾರವಾಗಿಟ್ಟುಕೊಂಡು ಕೊಳವೆಯ ಮೂಲಕ ವೀಕ್ಷಿಸಿ ಯಾವುದಾದರೊಂದು ಆಕಾಶಕಾಯ ಆ ಸ್ಥಳದ ಯಾಮ್ಯೋತ್ತರವನ್ನು ದಾಟುವ ಕಾಲವನ್ನು ಖಚಿತವಾಗಿ ಗೊತ್ತುಮಾಡಬಹುದು. ಅದೇ ಕಾಯ ಮೇಲೆ ಹೇಳಿದ ಆಧಾರ

ಯಾಮ್ಯೋತ್ತರವನ್ನು ಎಷ್ಟು ಹೊತ್ತಿಗೆ ದಾಟಲಿದೆ ಅಥವಾ ದಾಟಿದೆ ಎಂಬ ಅಂಶವನ್ನು ಆಲ್ಮನಾಕ್‌ನಿಂದ ತಿಳಿದುಕೊಂಡರೆ ಈ ಎರಡು ಘಟನೆಗಳ ಕಾಲಾಂತರವನ್ನು ನಿರ್ಧರಿಸಬಹುದು. ಇದನ್ನು ಕೋಣಾಂತರಕ್ಕೆ ರೂಪಾಂತರಿಸಿ ಆ ಸ್ಥಾನದ ಯಾಮ್ಯೋತ್ತರವನ್ನು ಗೊತ್ತುಮಾಡಬಹುದು. (ಕೆ.ಎಸ್.ಕೆ.)

**ಖಗೋಳೀಯ ಉಪಕರಣಗಳು :** ಖಗೋಳ ವೀಕ್ಷಣೆಗಳನ್ನು ಮತ್ತು ದತ್ತಾಂಶ ಸಂಗ್ರಹಣೆಗಳನ್ನು ಮಾಡಲು ನೆರವಾಗುವ ವಿವಿಧ ಹತ್ಯಾರುಗಳು (ಅಸ್ಟ್ರನಾಮಿಕಲ್ ಇನ್ಸ್ಟ್ರುಮೆಂಟ್ಸ್). ಭೌತ, ರಾಸಾಯನ, ಸಸ್ಯ, ಪ್ರಾಣಿ ಇವೇ ಮುಂತಾದ ವಿಜ್ಞಾನ ವಿಭಾಗಗಳಲ್ಲಿ ಜ್ಞಾನವರ್ಧನೆ ಆಗುವ ವಿವಿಧ ಹಂತಗಳಲ್ಲಿ ಪ್ರಯೋಗಮಂದಿರದ ಉದ್ದಿಷ್ಟ ಪ್ರಯೋಗಗಳೂ ಸೇರಿವೆ. ನೈಸರ್ಗಿಕ ಸನ್ನಿವೇಶವೊಂದನ್ನು (ಉದಾಹರಣೆಗೆ ನಿಸರ್ಗದಲ್ಲಿ ತೋರುವ ಮಿಂಚನ್ನು ಅನುಕರಿಸಿ ಪ್ರಯೋಗಮಂದಿರದಲ್ಲಿ ವಿದ್ಯುಚ್ಚಾಪವನ್ನು ನಿರ್ಮಿಸುವುದು) ಸಮರ್ಪಕ ಉಪಕರಣಗಳ ನೆರವಿನಿಂದ ಉಂಟುಮಾಡಿ ಆ ವಿದ್ಯಮಾನವನ್ನು ಸವಿವರವಾಗಿ ಅಭ್ಯಸಿಸುವುದು ಸಾಧ್ಯ. ಇಂಥ ಸೌಕರ್ಯವಿರುವ ವಿಜ್ಞಾನ ವಿಭಾಗಗಳನ್ನು ಪ್ರಾಯೋಗಿಕ ವಿಜ್ಞಾನಗಳು (ಎಕ್ಸ್‌ಪೆರಿಮೆಂಟಲ್ ಸೈನ್ಸಸ್) ಎಂದು ಕರೆಯುತ್ತೇವೆ. ಖಗೋಳವಿಜ್ಞಾನ ಹೀಗಲ್ಲ. ಇಲ್ಲಿ ವಿಶ್ವವನ್ನು ಪ್ರತಿನಿಧಿಸುವ ಅಥವಾ ವಿಶ್ವದ ಪ್ರಮುಖ ಲಕ್ಷಣಗಳನ್ನು ಪ್ರತಿನಿಧಿಸುವ ಪ್ರಯೋಗಮಂದಿರದ ಪ್ರತಿಕೃತಿಯೊಂದನ್ನು (ಲ್ಯಾಬೊರೇಟರಿ ಮಾಡೆಲ್) ನಿರ್ಮಿಸುವುದು ಸಾಧ್ಯವಾಗದು. ಅಲ್ಲದೇ ವಿಶ್ವದಲ್ಲಿ ಎಲ್ಲಿಗೆ ಬೇಕಾದರೆ ಅಲ್ಲಿಗೆ ಹೋಗಿ ವಿವರಗಳನ್ನು ಅಳೆದೋ ತಿಳಿದೋ ಬರುವುದು ಕೂಡ ಸಾಧ್ಯವಾಗದು. ಆದ್ದರಿಂದ ಖಗೋಳವಿಜ್ಞಾನದಲ್ಲಿ ಜ್ಞಾನವರ್ಧನೆಯ ಬಹ್ವಂಶ ವೀಕ್ಷಣೆಗಳ ಆಧಾರದಿಂದಲೇ ಆಗಬೇಕು. ಖಚಿತವಾಗಿ ಹೇಳುವುದಾದರೆ, ವಿಶ್ವದ ಪ್ರಸಕ್ತ ಪರಿಸ್ಥಿತಿಯನ್ನೂ ವರ್ತನೆಯನ್ನೂ ಅವುಗಳ ಮೇಲೆ ಯಾವ ವಿಧವಾದ ಹತೋಟಿಯೂ ಇಲ್ಲದೇ, ವಿಶ್ವದ ಒಂದು ಅಂಶವಾದ ಭೂಮಿಯಿಂದ ವೀಕ್ಷಿಸಿ, ವಿಶ್ವದ ವಿದ್ಯಮಾನಗಳನ್ನು ಅರ್ಥವಿಸುವ ವಿಜ್ಞಾನ ವಿಭಾಗ ಖಗೋಳವಿಜ್ಞಾನ. ಆದ್ದರಿಂದ ಈ ವಿಜ್ಞಾನದಲ್ಲಿ ಉಪಕರಣಗಳ ಸ್ಥಾನ ವಿಶಿಷ್ಟವಾದದ್ದು. ಇಂಥ ಉಪಕರಣಗಳ ನೆರವಿನಿಂದ ಆಕಾಶಕಾಯಗಳನ್ನು ಅಭ್ಯಸಿಸುವ ಮಂದಿರಗಳಿಗೆ ವೀಕ್ಷಣಾಲಯಗಳೆಂದು (ಅಬ್ಸರ್ವೇಟರೀಸ್) ಹೆಸರು.

ಯಾವುದೇ ದೃಗ್ಗೋಚರ ಆಕಾಶಕಾಯವನ್ನು ಕುರಿತಂತೆ ನಾಲ್ಕು ಸಂಗತಿಗಳನ್ನು ಮಾತ್ರ ವೀಕ್ಷಿಸಿ ತಿಳಿಯಬಹುದು: ಕಾಯದ ಪ್ರಕೃತಸ್ಥಾನ ಮತ್ತು ಕಾಲದೊಡನೆ ಈ ಸ್ಥಾನದ ಬದಲಾವಣೆ; ಅದರ ಮೇಲ್ಮೈ ಲಕ್ಷಣಗಳು ; ಅದರ ಪ್ರಕಾಶ (ಬ್ರೈಟ್‌ನೆಸ್); ಮತ್ತು ಆ ಕಾಯದಿಂದ ಬರುವ ಬೆಳಕಿನ ಬಣ್ಣ. (ಒಂದು ಆಕಾಶಕಾಯ ತನ್ನ ಮೇಲ್ಮೈಯ ಏಕಮಾನ ಸಲೆಯಿಂದ ಒಂದು ನಿರ್ದಿಷ್ಟ ದಿಶೆಯಲ್ಲಿ ಉತ್ಸರ್ಜಿಸುವ ಕ್ಯಾಂಡಲ್ ಸಾಮರ್ಥ್ಯವನ್ನು ಅದರ ಪ್ರಕಾಶ ಎಂದು ಕರೆಯುತ್ತೇವೆ. ವ್ಯವಹಾರದಲ್ಲಿ ಒಂದು ಕಾಯದಿಂದ ನಮಗೆ ಲಭಿಸುವ ಬೆಳಕಿನ ಪರಿಮಾಣವನ್ನು ಅವಲಂಬಿಸಿ ಅದರ ಪ್ರಕಾಶ ಉಂಟು. ಶಕ್ತಿಯ ಅಲೆಯುದ್ದಗಳಲ್ಲಿ ನಮಗೆ ಲಭಿಸುವ ಬೆಳಕಿನ ಪರಿಮಾಣದ ಮೇಲೆ ಕಾಯದ ಬಣ್ಣ ಅವಲಂಬಿಸಿದೆ.) ಇವೆಲ್ಲ ಮಾಹಿತಿಗಳನ್ನೂ ಬರಿಗಣ್ಣಿನಿಂದ ಪಡೆಯಬಹುದಾದರೂ ಇಂಥ ವೀಕ್ಷಣೆಯ ವ್ಯಾಪ್ತಿ ಬಲು ಕಿರಿದು. ಸ್ಥಿರನಕ್ಷತ್ರಗಳನ್ನು ಕುರಿತು ಒಂದು ಗ್ರಹದ ಸ್ಥಾನವನ್ನೂ ಅದರಲ್ಲಿ ಉಂಟಾಗುವ ಕೋನ ವ್ಯತ್ಯಾಸವನ್ನೂ ಖಚಿತವಾಗಿ ಕಣ್ಣಂದಾಜಿನಿಂದ ಹೇಳಲು ಸಾಧ್ಯವಾಗದು. ಚಂದ್ರನನ್ನುಳಿದು ಮಿಕ್ಕಾವ ಕಾಯಗಳ ಸ್ಥೂಲ ಮೇಲ್ಮೈ ಲಕ್ಷಣಗಳನ್ನೂ ಕಣ್ಣು ಗುರುತಿಸುವುದು ಅಸಾಧ್ಯ. ನಕ್ಷತ್ರಗಳ ಪ್ರಕಾಶ ಹಾಗೂ ಬಣ್ಣಗಳನ್ನು ಕುರಿತು ವೈಜ್ಞಾನಿಕ ವಿಶ್ಲೇಷಣೆ ನಡೆಸಲು ಕಣ್ಣಂದಾಜು ಸಾಕಾಗುವುದಿಲ್ಲ. ಆದ್ದರಿಂದ ಇಲ್ಲೆಲ್ಲ ಖಚಿತತೆಯ ದೃಷ್ಟಿಯಿಂದ ಶಾಸ್ತ್ರವನ್ನು ಸಮರ್ಥವಾಗಿ ಬೆಳೆಸುವ ದೃಷ್ಟಿಯಿಂದ ಖಗೋಳೀಯ ಉಪಕರಣಗಳ ನೆರವು ತೀರ ಅಗತ್ಯ. ಟೆಲಿಸ್ಕೋಪ್, ಅಂದರೆ ದೂರದರ್ಶಕ, ಇಂಥ ಉಪಕರಣಗಳಲ್ಲಿ ಮೊದಲಿನದು. **ನೋಡಿ– ಟೆಲಿಸ್ಕೋಪ್**



ಆಕಾಶಕಾಯಗಳ ಉನ್ನತಿಯನ್ನು ಅಳೆಯಲು 16ನೆಯ ಶತಮಾನದಲ್ಲಿ ಬಳಸುತ್ತಿದ್ದ ಕ್ವಾಡ್ರೆಂಟ್ ಉಪಕರಣ

**ದೃಕ್ ಟೆಲಿಸ್ಕೋಪುಗಳು:** ದೂರದ ವಸ್ತುವಿನ ಬಿಂಬವನ್ನು ಲಂಬಿಸಿ ರೂಪಿಸಲು ಬಳಸುವ ಉಪಕರಣಗಳು (ಆಪ್ಟಿಕಲ್ ಟೆಲಿಸ್ಕೋಪ್ಸ್). ಇಂಥ ಒಂದು ಟೆಲಿಸ್ಕೋಪ್, ನಮ್ಮ ಬರಿಕಣ್ಣುಗಳು ಸಂಗ್ರಹಿಸುವುದಕ್ಕಿಂತ ಅದೆಷ್ಟೊ ಹೆಚ್ಚಿನ ಮೊತ್ತದ ಬೆಳಕನ್ನು ಕಲೆಹಾಕಿ, ಕಣ್ಣುಗಳು ನೋಡಿ ತಿಳಿಯಬಹುದಾದಷ್ಟು ಇಲ್ಲವೇ ಫೋಟೋ ತೆಗೆಯಲು ಅನುಕೂಲವಾಗುವಷ್ಟು ಇಲ್ಲವೇ ಬೇರೆ ಯಾವುದೋ ವಿಧದಲ್ಲಿ ಅಳತೆ ಮಾಡಲು ಸಾಧ್ಯವಾಗುವಷ್ಟು, ಕಿರಿಯ ಜಾಗಕ್ಕೆ ಕೇಂದ್ರೀಕರಿಸುತ್ತವೆ. ದೃಕ್ ಟೆಲಿಸ್ಕೋಪುಗಳಲ್ಲಿ ಮೂಲಭೂತವಾಗಿ ಎರಡು ಪ್ರರೂಪಗಳಿವೆ (ಟೈಪ್ಸ್): ರಿಫ್ರೇಕ್ಷಣ (ರಿಫ್ರ್ಯಾಕ್ಟಿಂಗ್) ಪ್ರರೂಪ ಅಂದರೆ ಲೆನ್ಸ್ ಪ್ರರೂಪದ ಟೆಲಿಸ್ಕೋಪ್, ಪ್ರತಿಫಲನ (ರಿಫ್ಲೆಕ್ಟಿಂಗ್) ಪ್ರರೂಪ ಅಂದರೆ ಕನ್ನಡಿ ಪ್ರರೂಪದ ಟೆಲಿಸ್ಕೋಪ್. ರಿಫ್ರೇಕ್ಷಣ ಟೆಲಿಸ್ಕೋಪಿನಲ್ಲಿ ಪೀನಮಸೂರ (ಕಾನ್ವೆಕ್ಸ್ ಲೆನ್ಸ್) ಪ್ರಧಾನ ಭಾಗ. ಒಂದು ನಕ್ಷತ್ರದಿಂದ ಮಸೂರದ ಎದುರುಮುಖದ ಮೇಲೆ ಬೀಳುವ ಬೆಳಕಿನ ಕಿರಣ ರಿಫ್ರೇಕ್ಷಣಗೊಂಡು ಹಿಂದಿನ ಮುಖದ ಮೂಲಕ ಹೊರಸಾಗುತ್ತದೆ. ಇಂಥ ಎಲ್ಲ ಕಿರಣಗಳೂ ಒಂದು ನಿರ್ದಿಷ್ಟ ಬಿಂದುವಿನಲ್ಲಿ ಸಂಗಮಿಸುತ್ತವೆ. ಈ ಬಿಂದುವಿಗೆ ಮಸೂರದ ನಾಭಿ (ಫೋಕಸ್) ಎಂದು ಹೆಸರು. ಹೀಗೆ ನಾಭಿಯಲ್ಲಿ ಕೇಂದ್ರೀಕೃತವಾದ ಬೆಳಕನ್ನು ಇನ್ನೊಂದು ಕಿರಿಯ ಮಸೂರದ ಮೂಲಕ ವೀಕ್ಷಕ ಪರೀಕ್ಷಿಸುತ್ತಾನೆ. ಈ ನೇತ್ರಮಸೂರ (ಐ ಪೀಸ್) ನಾಭಿಯಲ್ಲಿರುವ ಬೆಳಕಿನ ಬಿಂಬವನ್ನು ಲಂಬಿಸುವುದರಿಂದ ವೀಕ್ಷಕನಿಗೆ ಆಕಾಶಕಾಯದ ನೋಟ ಒದಗುವುದು. ಪ್ರತಿಫಲನ ಟೆಲಿಸ್ಕೋಪ್ ಕಾರ್ಯನಿರ್ವಹಿಸುವ ರೀತಿ ಬೇರೆ. ವಕ್ರತಲವಿರುವ ಕನ್ನಡಿ ಇಲ್ಲಿಯ ಪ್ರಧಾನ ಭಾಗ. ಇದಕ್ಕೆ ಪರವಲಯ ಆಕಾರ ಉಂಟು. ಈ ಪರವಲಯದ ಒಳಭಾಗ ಪ್ರತಿಫಲಿಸುವ ಕನ್ನಡಿ (ಇದೊಂದು ನಿಮ್ನ ಕನ್ನಡಿ–ಕಾನ್‌ಕೇವ್ ಮಿರ್‍ರ್). ಉದ್ದವಾದ ಕೊಳವೆಯ ತಲದಲ್ಲಿ ಈ ಕನ್ನಡಿಯನ್ನು ಅಳವಡಿಸಿರುತ್ತಾರೆ. ಕೊಳವೆಯ ಮೂಲಕ ಬರುವ ನಕ್ಷತ್ರದ ಬೆಳಕಿನ ಕಿರಣಗಳು ನಿಮ್ನಕನ್ನಡಿಯ ಮೇಲೆ ಬಿದ್ದಾಗ ಅವು ಪ್ರತಿಫಲಿಸಲ್ಪಟ್ಟು ಕನ್ನಡಿಯ ಎದುರು (ಅಂದರೆ ಬೆಳಕು ಬಂದಿರುವ ಕಡೆ) ಒಂದು ಬಿಂದುವಿನಲ್ಲಿ ಸಂಗಮಿಸುತ್ತವೆ. ಸಂಗಮ ಬಿಂದು ಪರವಲಯದ ನಾಭಿ. ಈ ನಾಭಿಯಲ್ಲಿ ರೂಪುಗೊಳ್ಳುವ ನಕ್ಷತ್ರದ ಬಿಂಬವನ್ನು ನೇರವಾಗಿ ನೋಡುವುದು ಸಾಧ್ಯವಾಗದು. ಆದ್ದರಿಂದ ಇದಕ್ಕೆ ಬೇಕಾದ ಅಳವಡಿಕೆಯನ್ನು ಮಾಡಿಕೊಂಡು ನೇತ್ರ ಮಸೂರದ ನೆರವಿನಿಂದ ಆ ಬಿಂಬವನ್ನು ಲಂಬಿಸಿ ನೋಡಬಹುದು. (ಇಂಥ ಅಳವಡಿಕೆಯ ವಿಧಾನವನ್ನು ಅನುಸರಿಸಿ ಎರಡುವಿಧದ ಟೆಲಿಸ್ಕೋಪುಗಳಿವೆ.)



ಮೌಂಟ್ ವಿಲ್ಸನ್ ವೀಕ್ಷಣಾಲಯದಲ್ಲಿನ 100 ವ್ಯಾಸದ ಹೂಕರ್ ಟೆಲೆಸ್ಕೋಪ್

ಯಾವುದೇ ಟೆಲಿಸ್ಕೋಪಿನ ಲಂಬನ ಸಾಮರ್ಥ್ಯ, ಅದರ ಉಪಯುಕ್ತತೆ, ಅಂತಿಮವಾಗಿ ಅದರ ಮಸೂರದ ಇಲ್ಲವೇ ಕನ್ನಡಿಯ ಗಾತ್ರವನ್ನು ಅವಲಂಬಿಸಿದೆ. ಬೃಹದ್ಗಾತ್ರದ ಮಸೂರದ ರಚನೆ ತಾಂತ್ರಿಕವಾಗಿ ಜಟಿಲ. ಇನ್ನು ಅದನ್ನು ಯುಕ್ತ ಸ್ಥಾನದಲ್ಲಿ ಅಳವಡಿಸಿ ಉಪಯೋಗಿಸುವುದು ಬಲು ಸೂಕ್ಷ್ಮಕ್ರಿಯೆ. ಕನ್ನಡಿಯ ರಚನೆಯಾಗಲೀ ಅಳವಡಿಕೆಯಾಗಲೀ ಇಂಥ ತೊಂದರೆಗಳನ್ನು ಎದುರೊಡ್ಡುವುದಿಲ್ಲ. ಹೀಗಾಗಿ ಬೃಹದ್ಗಾತ್ರದ ಟೆಲಿಸ್ಕೋಪುಗಳೆಲ್ಲವೂ ಪ್ರತಿಫಲನ ಪ್ರರೂಪದವೇ. ಇವುಗಳಲ್ಲಿ ಹೆಸರಿಸಬೇಕಾದವು ಮೌಂಟ್

ಪಲೋಮರಿನ 200–ಇಂಚ್ ಹೇಲ್ ಟೆಲಿಸ್ಕೋಪ್, ಮೌಂಟ್ ಹ್ಯಾಮಿಲ್ಟನ್ನಿನ ಲಿಕ್ ವೀಕ್ಷಣಾಲಯದಲ್ಲಿರುವ 120–ಇಂಚ್ ಟೆಲಿಸ್ಕೋಪ್ ಮತ್ತು ಮೌಂಟ್ ವಿಲ್ಸನ್ನಿನಲ್ಲಿರುವ 100–ಇಂಚ್ ಹೂಕರ್ ಟೆಲಿಸ್ಕೋಪ್. ರಿಫ್ರೇಕ್ಷಣ ಪ್ರರೂಪದ ಟೆಲಿಸ್ಕೋಪುಗಳಲ್ಲಿ ಅತ್ಯಂತ ದೊಡ್ಡದು ಯರ್ಕ್ಸ್ ವೀಕ್ಷಣಾಲಯದಲ್ಲಿರುವ 40–ಇಂಚ್ ಮಸೂರ. (ಟೆಲಿಸ್ಕೋಪಿನ ಗಾತ್ರ ಎನ್ನುವಾಗ ಅದರ ಕನ್ನಡಿಯ ಅಥವಾ ಮಸೂರದ ವ್ಯಾಸವನ್ನು ಉಲ್ಲೇಖಿಸುವುದು ವಾಡಿಕೆ.)

ಖಗೋಳ ವೀಕ್ಷಕನಿಗೆ ಟೆಲಿಸ್ಕೋಪಿನ ಉಪಯೋಗ ನಾಲ್ಕು ಬಗೆಯದು. ಮೊದಲನೆಯದು, ಗುರಿ ಹಿಡಿಯುವಿಕೆಯಲ್ಲಿ ನಿಖರತೆ. ಅಂದರೆ ಯಾವ ದಿಕ್ಕಿಗೆ ಬೇಕೋ ಅದಕ್ಕೆ ಮಾತ್ರ ನಿಷ್ಕೃಷ್ಟವಾಗಿ ಟೆಲಿಸ್ಕೋಪನ್ನು ಗುರಿ ಹಿಡಿಯಬಹುದು ಮತ್ತು ಗುರಿ ಹಿಡಿದಿರುವ ದಿಕ್ಕನ್ನು ನಿಷ್ಕೃಷ್ಟವಾಗಿ ಅಳತೆ ಮಾಡಿ ತಿಳಿಯಬಹುದು.



$200^0$ ವ್ಯಾಸದ ಹೇಲ್ ಟೆಲಿಸ್ಕೋಪ್

ಎರಡನೆಯದು, ಲಂಬನ ಸಾಮರ್ಥ್ಯ (ಮ್ಯಾಗ್ನಿಫೈಯಿಂಗ್ ಪವರ್). ದೂರದ ಮತ್ತು ಚಿಕ್ಕದಾದ ಕಾಯಗಳನ್ನು ಟೆಲಿಸ್ಕೋಪ್ ದೊಡ್ಡದಾಗಿ ಹಿಗ್ಗಿಸಿ ವೀಕ್ಷಣೆಗೆ ಅನುಕೂಲವಾಗುವಂತೆ ವಿಕ್ಷೇಪಿಸುತ್ತದೆ. ಮೂರನೆಯದು, ಬೆಳಕನ್ನು ಸಂಗ್ರಹಿಸುವ ಸಾಮರ್ಥ್ಯ. ಮಸಕಾದ ಒಂದು ಕಾಯದಿಂದ ಪಾತವಾಗುವ ಬೆಳಕಿನ ಕ್ಷೀಣ ಅಲೆಗಳೆಲ್ಲವನ್ನು ಟೆಲಿಸ್ಕೋಪ್ ಒಂದುಗೂಡಿಸಿ ಕೇಂದ್ರೀಕರಿಸುವುದರಿಂದ ವೀಕ್ಷಕನಿಗೆ ಆ ಕಾಯವನ್ನು ಹೆಚ್ಚು ಸ್ಪಷ್ಟವಾಗಿ ನೋಡಲು ಸಾಧ್ಯವಾಗುತ್ತದೆ. ನಾಲ್ಕನೆಯದು, ಟೆಲಿಸ್ಕೋಪಿನ ವಿಘಟನ ಸಾಮರ್ಥ್ಯ (ರಿಸಾಲ್ವಿಂಗ್ ಪವರ್). ದೂರದ ನಕ್ಷತ್ರಗಳು ಬರಿಗಣ್ಣಿಗೆ ಒಂದರ ಒತ್ತಿಗೆ ಇನ್ನೊಂದು ಇರುವಂತೆ ಅಖಂಡವಾಗಿ ತೋರಬಹುದು. ನಕ್ಷತ್ರಗಳ ಪ್ರತ್ಯೇಕತ್ವ ಬರಿಗಣ್ಣಿಗೆ ಸ್ಪಷ್ಟವಾಗುವುದಿಲ್ಲ. ಇಂಥಲ್ಲಿ ಒಂದೊಂದು ಬಿಡಿನಕ್ಷತ್ರವನ್ನು ನಿರ್ದಿಷ್ಟವಾಗಿ ತೋರಿಸುವ ಸಾಮರ್ಥ್ಯ ಟೆಲಿಸ್ಕೋಪಿಗಿದೆ. ಇವೆಲ್ಲ ಉಪಯೋಗಗಳನ್ನೂ ಲಕ್ಷಿಸಿ ಟೆಲಿಸ್ಕೋಪಿನ ಒಂದೊಂದು ಬಿಡಿಭಾಗವನ್ನೂ ಪರಿಷ್ಕರಿಸಿ ಅತ್ಯಧಿಕ ಉಪಯುಕ್ತತೆಯನ್ನು ಪಡೆಯುವುದು ಸಾಧ್ಯ.

ಟೆಲಿಸ್ಕೋಪುಗಳ ಗಾತ್ರ ದೊಡ್ಡದಾದಂತೆ ಅವನ್ನು ದೃಗ್ವೀಕ್ಷಣೆಗೆ ಉಪಯೋಗಿಸುವುದು ಕಷ್ಟವಾಗುತ್ತದೆ. ಅನೇಕ ವೇಳೆ ಕಣ್ಣು ನಿರಪೇಕ್ಷಚಿತ್ರವನ್ನು ಕೊಡಲು ವಿಫಲವಾಗುವುದೂ ಒಂದು ಕಾರಣ. ಇಂಥಲ್ಲಿ ಟೆಲಿಸ್ಕೋಪುಗಳಿಗೆ ಫೋಟೋಗ್ರಾಫ್ ತಂತ್ರಗಳನ್ನು ಅಳವಡಿಸಿ ಆಕಾಶದ ಬೇಕಾದ ವಲಯದ ಅಥವಾ ಕಾಯದ ಫೋಟೋಗ್ರಾಫ್ ಪಡೆಯುವ ಏರ್ಪಾಡು ಸಹ ಉಂಟು. ಒಂದು ನಿರ್ದಿಷ್ಟ ಕಾಯದೆಡೆಗೆ ಬಹುಕಾಲ ಟೆಲಿಸ್ಕೋಪ್ ಗುರಿ ಹಿಡಿದುಕೊಂಡೇ ಇರಬೇಕಾದರೆ ಅಂಥ ಟೆಲಿಸ್ಕೋಪಿಗೆ ಭೂಮ್ಯಾವರ್ತನೆಯನ್ನು ರದ್ದುಗೊಳಿಸುವ ಪ್ರತ್ಯಾವರ್ತನೆಯನ್ನು ನೀಡಬೇಕಾಗುತ್ತದೆ. ಈ ಏರ್ಪಾಡು ಕೂಡ ಉಂಟು. ಇಂಥ ಒಂದು ಟೆಲಿಸ್ಕೋಪ್ ಒಂದು ನಿರ್ದಿಷ್ಟ ಕಾಯವನ್ನು ಅದು ಮೂಡಿ ಮುಳುಗುವವರೆಗೂ ಅನುಸರಿಸಿ ಅದರ ಫೋಟೋವರದಿಯನ್ನು ಸಲ್ಲಿಸಬಲ್ಲುದು.

ಟೆಲಿಸ್ಕೋಪುಗಳಿಗೆ ಫೋಟೋಮೀಟರುಗಳನ್ನು ಲಗತ್ತಿಸಿ ನಕ್ಷತ್ರದಿಂದ ಪಾತವಾಗುವ ಬೆಳಕಿನ ತೀವ್ರತೆಯನ್ನು (ಇಂಟೆನ್ಸಿಟಿ) ಅಳತೆಮಾಡುವುದು ಸಾಧ್ಯ. ಫೋಟೋಮೀಟರ್ ಎಂಬುದು ತತ್ತ್ವಶಃ ಒಂದು ದ್ಯುತಿವೈದ್ಯುತಕೋಶ (ಫೋಟೋ–ಎಲೆಕ್ಟ್ರಿಕ್‌ಸೆಲ್). ನಕ್ಷತ್ರದಿಂದ ಬಂದ ಬೆಳಕಿನ ಕಿರಣ ಈ ಕೋಶದ ಮೇಲೆ ಪಾತವಾದಾಗ ಸೂಕ್ಷ್ಮ ವಿದ್ಯುತ್ಪ್ರವಾಹ ಉತ್ಪಾದನೆಯಾಗುತ್ತದೆ. ಇದರ ಮೊತ್ತವನ್ನು ಫೋಟೋಮೀಟರ್ ಅಳತೆ ಮಾಡಬಲ್ಲದು. ತನ್ಮೂಲಕ ಪಾತವಾದ ಬೆಳಕಿನ ತೀವ್ರತೆಯನ್ನು ಗಣಿಸಬಹುದು. ಟೆಲಿಸ್ಕೋಪಿಗೆ ರೋಹಿತಲೇಖಿ (ಸ್ಪೆಕ್ಟ್ರೋಗ್ರಾಫ್) ಎಂಬ ಇನ್ನೊಂದು ಉಪಕರಣವನ್ನು ಲಗತ್ತಿಸಿ ಒಂದು ನಕ್ಷತ್ರರೋಹಿತದ (ಸ್ಪೆಕ್ಟ್ರಂ) ಫೋಟೋಗ್ರಾಫನ್ನು ಪಡೆಯಬಹುದು. ರೋಹಿತದ ಅಭ್ಯಾಸ ನಕ್ಷತ್ರದ ವಿಚಾರದಲ್ಲಿ ವಿಶೇಷ ಹಾಗೂ ಅಪೂರ್ವ ಮಾಹಿತಿಗಳನ್ನು ಒದಗಿಸಬಲ್ಲದು.

**ನೋಡಿ– ರೋಹಿತ**



ಟ್ರ್ಯಾನ್ಸಿಟ್ ಉಪಕರಣ

**ದೃಗ್ಗೋಚರ ವಿಸರಣಾಕರಗಳು:** ಒಂದು ಆಕಾಶ ಕಾಯವೆಂದರೆ ವಿವಿಧ ಅಲೆಯುದ್ದಗಳ ವಿದ್ಯುತ್ಕಾಂತ ಅಲೆಗಳನ್ನು ವಿಸರಿಸುವ ಕೇಂದ್ರ; ಎಂದರೆ ಇದೊಂದು ವಿದ್ಯುತ್ಕಾಂತ ರೋಹಿತವನ್ನೇ ಪ್ರದರ್ಶಿಸುತ್ತದೆ. ಈ ರೋಹಿತದಲ್ಲಿ ಎರಡು ಸ್ಪಷ್ಟ ಭಾಗಗಳಿವೆ–ದೃಗ್ಗೋಚರ ಭಾಗ, ದೃಗ್ಗೋಚರ ಭಾಗ. ಇವುಗಳ ಪೈಕಿ ದೃಗ್ಗೋಚರ ಭಾಗದ ಅಗಲ ಬಲುಕಿರಿದು: ಕೆಂಪುಬಣ್ಣದಿಂದ ತೊಡಗಿ ನೇರಿಳೆ ಬಣ್ಣದ ವರೆಗಿನ ಭಾಗ. ದೃಗಗೋಚರ ಭಾಗದ ವ್ಯಾಪ್ತಿಯಾದರೋ ಕೆಂಪಿನಿಂದ ಎಡಕ್ಕೂ (ಅತಿರಕ್ತ ಭಾಗ) ನೇರಿಳೆಯಿಂದ ಬಲಕ್ಕೂ (ಅತಿನೇರಿಳೆ ಭಾಗ) ವಿಶಾಲವಾಗಿ ಹರಡಿಹೋಗಿದೆ. ಕೆಂಪಿನಿಂದ ಎಡಕ್ಕೆ ಅಲೆಯುದ್ದಗಳು ದೀರ್ಘವಾಗುತ್ತ ಹೋಗುತ್ತವೆ, ನೇರಿಳೆಯಿಂದ ಬಲಕ್ಕೆ ಅಲೆಯುದ್ದಗಳು ಹ್ರಸ್ವವಾಗುತ್ತ ಹೋಗುತ್ತವೆ. ಅಂದ ಮೇಲೆ ನಾವು ಕಣ್ಣುಗಳಿಂದ ನೋಡುವುದು ಆಕಾಶದ ಬಲುಚಿಕ್ಕ ಅಂಶವನ್ನು ಮಾತ್ರ ಎಂಬುದು ಸ್ಪಷ್ಟ ಆಕಾಶದ ಅತಿರಕ್ತ ಹಾಗೂ ಅತಿ ನೇರಿಳೆ ವಿಸರಣಾಕರಗಳ ಚಿತ್ರ ಪಡೆಯಲು ಈ ವಿಸರಣೆಗಳನ್ನು ಗ್ರಹಿಸಬಲ್ಲ ಸಮರ್ಪಕ ಉಪಕರಣಗಳು ಅವಶ್ಯ.

**ರೇಡಿಯೋ ಟೆಲಿಸ್ಕೋಪುಗಳು :** ಇವು ಆಕಾಶದಿಂದ ಭೂಮಿಗೆ ಬರುವ ರೇಡಿಯೋ ಅಲೆಗಳನ್ನು ಸಂಗ್ರಹಿಸಿ, ನಾಭಿಸಿ (ಫೋಕಸ್) ವಿಸರಣಾಕರವನ್ನು



ಅಪಲೇಷಿಯನ್ ಪರ್ವತದ ಮೇಲಿರುವ ಗ್ರೀನ್ ಬ್ಯಾಂಕ್ ರೇಡಿಯೋ ಟೆಲಿಸ್ಕೋಪ್

ಶಾಸ್ತ್ರೀಯವಾಗಿ ಅಭ್ಯಸಿಸಲು ನೆರವಾಗುತ್ತವೆ. ಈ ಕ್ರಿಯೆ ದೃಕ್‌ಟೆಲಿಸ್ಕೋಪ್ ಬೆಳಕಿನ ಕಿರಣಗಳನ್ನು ನಾಭಿಸುವ ಕ್ರಿಯೆಯಂತೆಯೇ ಉಂಟು–ಅಲ್ಲಿ ಬೆಳಕಿನ ಕಿರಣಗಳು ಇಲ್ಲಿ



ಮೌಂಟ್ ಪಲೋಮರಿನ ವೀಕ್ಷಣಾಲಯದಲ್ಲಿರುವ $48^0$ ವ್ಯಾಸದ ಷ್ಮಿಟ್

ರೇಡಿಯೋ ಅಲೆಗಳು. ರೇಡಿಯೋ ಟೆಲಿಸ್ಕೋಪುಗಳ ನೆರವಿನಿಂದ ವಿಶ್ವದ ರೇಡಿಯೊ ಚಿತ್ರವನ್ನು ರಚಿಸುವುದು ಸಾಧ್ಯವಾಗಿದೆ. ಪರವಲಯಾಕಾರದ ಪ್ರತಿಫಲನಕಾರಿ ಈ ಉಪಕರಣದ ಪ್ರಮುಖ ಭಾಗ. ದೊಡ್ಡ ಕುಕ್ಕೆಯನ್ನೊ ಬೋಗುಣಿಯನ್ನೊ ಆಕಾಶದೆಡೆಗೆ ಮುಖಮಾಡಿ ಹಿಡಿದಿರುವಂತೆ ಇದು ಕಾಣುತ್ತದೆ. ಪ್ರಪಂಚದ ಅತಿ ದೊಡ್ಡ ರೇಡಿಯೊ ಟೆಲಿಸ್ಕೋಪ್ ಇಂಗ್ಲೆಂಡಿನ ಜೋಡ್ರೆಲ್ ಬ್ಯಾಂಕಿನಲ್ಲಿದೆ. ಇದರ ಪರವಲಯಾಕಾರದ ಪ್ರತಿಫಲನಕಾರಿಯ ವ್ಯಾಸ 250'.

**ಆಕಾಶ ತಂತ್ರಗಳು:** ಒಂದು ಆಕಾಶಕಾಯದಿಂದ ವಿಸರಿತವಾಗುವ ಅತಿನೇರಿಳೆ ಕಿರಣಗಳು ಭೂಮಿತಲವನ್ನು ತಲುಪುವುದಿಲ್ಲ. ವಾಯುಮಂಡಲದ ಓಝೋನ್ ಕವಚ ಈ ಕಿರಣಗಳನ್ನು ತಡೆಹಿಡಿಯುತ್ತದೆ. ಆದ್ದರಿಂದ ವಿಶ್ವದ ಅತಿನೇರಿಳೆ ಚಿತ್ರ ಪಡೆಯಲು ಓಝೋನ್ ಕವಚವನ್ನು ಉತ್ತರಿಸಿ ಹೋಗಿ ಅಲ್ಲಿ ಸಮರ್ಪಕ ಉಪಕರಣಗಳ ನೆರವನ್ನು ಪಡೆಯುವುದು ಅನಿವಾರ್ಯ. ಸ್ಟ್ರ್ಯಾಟೊಸ್ಕೋಪ್ ಟೆಲಿಸ್ಕೋಪುಗಳು, ಕಕ್ಷಿಸುವ ಸೌರವೀಕ್ಷಣಾಲಯಗಳು (ಆರ್ಬೈಟಿಂಗ್ ಸೋಲಾರ್ ಅಬ್ಸರ್ವೇಟರಿಸ್, (OSO), ಕಕ್ಷಿಸುವ



ಆರ್ಮೇನಿಯದ ಬ್ಯೆರೂಕನ್ ವೀಕ್ಷಣಾಲಯದಲ್ಲಿರುವ ಬೃಹತ್ ರಿಫ್ರೇಕ್ಷಣ ಟೆಲಿಸ್ಕೋಪ್

ಖಗೋಳೀಯ ವೀಕ್ಷಣಾಲಯಗಳು OAO ಇವೇ ಮುಂತಾದ ನೂತನ ತಂತ್ರಗಳು ಹಾಗೂ ಉಪಕರಣಗಳು ವಿಶ್ವದ ಅತಿನೇರಳೆ ಚಿತ್ರವನ್ನು ಪಡೆಯಲು ನೆರವಾಗುತ್ತವೆ. **(ನೋಡಿ– ಎಕ್ಸ್‌ಕಿರಣ, ಖಗೋಳ)** (ಎಫ್.ಜಿ.ಎಸ್.)

**ಖಜಾನೆ :** ಸಂಪತ್ತಿನ ಸಂಗ್ರಹಾಲಯ ; ಸರ್ಕಾರಕ್ಕೆ ಹಣ ಪಾವತಿಯಾಗುವ, ಮತ್ತು ಅದು ಪಾವತಿ ಮಾಡುವ ಸ್ಥಳ; ಸರ್ಕಾರದ ಹಣಕಾಸಿನ ವ್ಯವಹಾರಗಳ ಕಾರ್ಯಭಾರ ಹೊತ್ತ ಇಲಾಖೆ (ಟ್ರೆಷರಿ). ಖಜಾನೆ ಇಲಾಖೆಯ ಕಾರ್ಯಕ್ರಮ ಬೇರೆಬೇರೆ ರಾಷ್ಟ್ರಗಳಲ್ಲಿ ಬೇರೆಬೇರೆಯಾಗಿದೆ. ಇಂಗ್ಲೆಂಡಿನ ಸಾರ್ವಜನಿಕ ಹಣಕಾಸಿನ ಆಡಳಿತ ಖಜಾನೆ ಇಲಾಖೆಯನ್ನು ಆಧರಿಸಿದೆ. ಇಂಗ್ಲೆಂಡಿನ ಪ್ರಧಾನಮಂತ್ರಿಯನ್ನು ಖಜಾನೆಯ ಪ್ರಥಮ ಲಾರ್ಡ್ ಎಂದು ಕರೆಯಲಾಗುತ್ತದೆಯಾದರೂ ವಿತ್ತ ಸಚಿವ (ಚಾನ್ಸೆಲರ್ ಆಫ್ ದಿ ಎಕ್ಸ್‌ಚೆಕರ್) ಇದರ ರಾಜಕೀಯ ಅಧಿಪತಿಯಾಗಿರುತ್ತಾನೆ.

**ಇಂಗ್ಲೆಂಡಿನಲ್ಲಿ:** ಇಂಗ್ಲೆಂಡಿನ ಖಜಾನೆ ಆಡಳಿತ ಪದ್ಧತಿಯ ಮುಖ್ಯ ಲಕ್ಷಣವೆಂದರೆ, ಹಣಕಾಸಿನ ವಹಿವಾಟಿಗೆಲ್ಲ ಖಜಾನೆ ಕೇಂದ್ರಸ್ಥಾನವಾಗಿದೆ. ಖಜಾನೆಗೆ ತಿಳಿಯದೆ, ಇದರ ಅನುಮತಿಯನ್ನು ಪಡೆಯದೆ ಹಣಕಾಸಿಗೆ ಸಂಬಂಧಿಸಿದ ಯಾವ ಆಡಳಿತ ಕಾರ್ಯವೂ ನಡೆಯುವಂತಿಲ್ಲ. ಇದರಿಂದಾಗಿ ಖಜಾನೆಯ ಆಡಳಿತ ಇಡೀ ರಾಷ್ಟ್ರಕ್ಕೆ ವ್ಯಾಪಿಸಿರುತ್ತದೆ. ಸರ್ಕಾರ ಕೈಗೊಳ್ಳುವ ಯಾವುದೇ ಹಣಕಾಸು ಕಾರ್ಯಗಳ ಮೇಲೆ ಖಜಾನೆಯ ನಿಯಂತ್ರಣ ಇರುತ್ತದೆ. ಇಂಗ್ಲೆಂಡಿನ ವಾರ್ಷಿಕ ಆಯವ್ಯಯದ ತಯಾರಿಕೆ, ಸರಕಾರದ ಹಣವನ್ನು ನಿಯಮಕ್ಕನುಸಾರವಾಗಿ ಉಪಯೋಗಿಸುವುದು, ರಾಷ್ಟ್ರಕ್ಕೆ ವಿವಿಧ ಮೂಲಗಳಿಂದ ಬರುವ ಆದಾಯವನ್ನು ರಕ್ಷಿಸುವುದು ಇವು ಖಜಾನೆ ನಿರ್ವಹಿಸುವ ಮುಖ್ಯ ಕರ್ತವ್ಯಗಳು. ವಿತ್ತಸಚಿವ ಆಯವ್ಯಯ ತಯಾರಿಸುವಾಗ ಖಜಾನೆಯ ನೆರವನ್ನು ಪಡೆದುಕೊಳ್ಳಲೇಬೇಕಾಗುತ್ತದೆ. ಸರ್ಕಾರದ ವಿವಿಧ ಇಲಾಖೆಗಳು ಹಣಕಾಸಿನ ಮುಂಗಡ ಪತ್ರಗಳನ್ನು ತಯಾರಿಸುವಾಗ ಖಜಾನೆಯ ಪರಿಶೀಲನೆ, ಸಲಹೆಗಳಿಗೆ

ಬದ್ಧರಾಗಬೇಕಾಗುತ್ತದೆ. ಸರ್ಕಾರದ ಆಡಳಿತ ನೀತಿಗೆ ಅನುಗುಣವಾಗಿ ಆಯವ್ಯಯವನ್ನು ಪರಿಷ್ಕರಿಸುತ್ತದೆ.

ಪ್ರತಿಯೊಂದು ಆಡಳಿತ ವಿಭಾಗಕ್ಕೂ ಅಧಿಕೃತವಾಗಿ ಎಷ್ಟು ಹಣ ಖರ್ಚುಮಾಡಬಹುದೆಂಬುದರ ಬಗ್ಗೆ ಮಂಜೂರಾತಿ ದೊರಕಿದ್ದರೂ ಇಂಗ್ಲೆಂಡಿನ ಹಣಕಾಸು ಆಡಳಿತ ವ್ಯವಸ್ಥೆಯಲ್ಲಿ ಶಾಖೆಗಳು ತಮಗೆ ಇಷ್ಟಬಂದ ರೀತಿಯಲ್ಲಿ ಹಣವನ್ನು ಖರ್ಚು ಮಾಡುವಂತಿಲ್ಲ. ತಮಗೆ ಹಣಕಾಸು ಕಾಯಿದೆಯ ಮೂಲಕ ನಿರ್ಧರಿಸಲಾದ ಹಣವನ್ನು ಇಲಾಖೆಗಳು ಖಜಾನೆಯಿಂದ ಪಡೆದುಕೊಳ್ಳುವುದು ಸಾಧ್ಯವಿಲ್ಲ. ಬದಲಿಗೆ ತಮಗೆ ಹಣ ಬೇಕಾದಾಗ, ತಾವು ಮಾಡುತ್ತಿರುವ ಕಾರ್ಯಗಳ ಸರಿಯಾದ ವಿವರಣೆಯನ್ನು ಖಜಾನೆಗೆ ತಿಳಿಸಬೇಕು. ಖಜಾನೆಯ ಅಧಿಕಾರಿಗೆ ಈ ವಿವರಣೆ ಸೂಕ್ತವೆಂದು ಕಂಡುಬಂದರೆ ಮಾತ್ರ ನಿರ್ದಿಷ್ಟ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತದೆ. ಖಜಾನೆಯ ಈ ನಿಯಂತ್ರಣ ವ್ಯವಸ್ಥೆಯನ್ನು ಇಂಗ್ಲೆಂಡಿನ ಹಣಕಾಸು ಆಡಳಿತ ವೈಶಿಷ್ಟ್ಯವೆಂದು ಹೇಳಬಹುದು. ಈ ಕ್ರಮದಿಂದಾಗಿ ಇಂಗ್ಲೆಂಡಿನಲ್ಲಿ ತುರ್ತು ಮತ್ತು ಅನಧಿಕೃತ ವೆಚ್ಚಗಳಿಗೆ ಅವಕಾಶ ತೀರ ಕಡಿಮೆ. ಪ್ರತಿಯೊಂದು ಇಲಾಖೆಯ ವೆಚ್ಚದ ಮೇಲೂ ಖಜಾನೆಯ ತೀವ್ರವಾದ ಹದ್ದುಬಸ್ತಿದ್ದು ಇಲಾಖೆಯ ಪ್ರತಿಯೊಂದು ವೆಚ್ಚ ಬಾಬ್ತು ಖಜಾನೆಗೆ ತಿಳಿದಿರುತ್ತದೆ. ಇದರಿಂದಾಗಿ ಇಲಾಖೆಗಳ ಪುನರ್ರಚನೆ, ಹೊಸಹೊಸ ಇಲಾಖೆಗಳ ಸ್ಥಾಪನೆ, ಹೊಸ ಉದ್ಯೋಗ ಸೃಷ್ಟಿ, ವೇತನ, ಬಡ್ತಿ, ಇವೆಲ್ಲ ಆರ್ಥಿಕ ವಿಷಯಗಳ ಮೇಲೂ ಖಜಾನೆಯ ಪರೋಕ್ಷ ನಿಯಂತ್ರಣ ಇದ್ದೇ ಇರುತ್ತದೆ.

**ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ** : ಅಮೆರಿಕ ಸಂಯುಕ್ತಸಂಸ್ಥಾನದ ಖಜಾನೆ ವ್ಯವಸ್ಥೆ ಇಂಗ್ಲೆಂಡಿನದಕ್ಕಿಂತ ಭಿನ್ನವಾದ್ದು. ಇದು ವಿಕೇಂದ್ರೀಕೃತ ಪದ್ಧತಿಯನ್ನನುಸರಿಸುತ್ತದೆ. ರಾಜ್ಯ ಖಜಾನೆಗಳು ಮುಖ್ಯವಾಗಿ ಲೆಕ್ಕಪತ್ರವನ್ನಿಡುವ ಯಾಂತ್ರಿಕ ಕ್ರಿಯೆಗಳನ್ನು ಅನುಸರಿಸುತ್ತವೆ. ಆದರೆ ಫೆಡರಲ್ ಸರ್ಕಾರದ ಖಜಾನೆಯ ಕಾರ್ಯವ್ಯಾಪ್ತಿ ದೊಡ್ಡದು. ಇದು ಹಣಕಾಸು ನೀತಿಯನ್ನು ರೂಪಿಸುತ್ತದೆ. ಅದನ್ನು ನಿರ್ಧರಿಸುವುದು, ತೆರಿಗೆ ವಿಷಯಗಳಲ್ಲಿ ರಾಷ್ಟ್ರಾಧ್ಯಕ್ಷನಿಗೆ ಸಲಹೆ ನೀಡುವುದು ಮುಂತಾದ ಮುಖ್ಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಖಜಾನೆ ವ್ಯವಸ್ಥೆಯಲ್ಲಿ ಫೆಡರಲ್ ಸರ್ಕಾರದ ಖಜಾನೆಯೇ ಕೇಂದ್ರ. ರಾಜ್ಯ ಮಟ್ಟದ ಖಜಾನೆಗಳು ಮತ್ತು ಸರ್ಕಾರದಿಂದ ಅಧಿಕೃತವಾಗಿ ಘೋಷಿತವಾದ ಹಣಕಾಸು ಸಂಸ್ಥೆಗಳು ಖಜಾನೆಯ ಕಾರ್ಯವನ್ನು ನಿರ್ವಹಿಸುತ್ತವೆ.

ಅಮೆರಿಕ ಸಂಯುಕ್ತಸಂಸ್ಥಾನದ ಖಜಾನೆ ಇಲಾಖೆಯನ್ನು 1789ರ ಸೆಪ್ಟೆಂಬರ್ 2ರ ಕಾಯಿದೆಯೊಂದರ ಮೂಲಕ ಸ್ಥಾಪಿಸಲಾಯಿತು. ಫೆಡರಲ್ ಖಜಾನೆ ಇಲಾಖೆಗೆ ರಾಷ್ಟ್ರದ ಇಡೀ ಹಣಕಾಸು ವಿಭಾಗದ ಮೇಲೆ ಹತೋಟಿ ಇರುತ್ತದೆ. ಇದರ ಮುಖ್ಯಸ್ಥ ಖಜಾನೆ ಕಾರ್ಯದರ್ಶಿ. ಇವನ ಮುಖ್ಯ ಕರ್ತವ್ಯಗಳು ಸರ್ಕಾರಕ್ಕೆ ಬರುವ ಆದಾಯವನ್ನು ಉತ್ತಮಪಡಿಸುವ ಯೋಜನೆಗಳನ್ನು ತಯಾರಿಸುವುದು ಮತ್ತು ಸರ್ಕಾರದ ವರಮಾನದ ಮೇಲ್ವಿಚಾರಣೆ ನೋಡಿಕೊಳ್ಳುವುದು. ಇವನು ಸರ್ಕಾರದಿಂದ ಪಾವತಿಯಾಗಬೇಕಾದ ಹಣದ ವಿತರಣೆಗೆ ಅಗತ್ಯ ನಿರ್ದೇಶಗಳನ್ನು ನೀಡುವ ಕಾರ್ಯವನ್ನಲ್ಲದೆ, ಸರ್ಕಾರಕ್ಕೆ ಬರಬಹುದಾದ ಮುಂದಿನ ವರ್ಷದ ಆದಾಯ ಮತ್ತು ವೆಚ್ಚದ ಮುಂಗಡ ಯೋಜನೆಯನ್ನು ಕಾಂಗ್ರೆಸ್‌ಗೆ ತಯಾರಿಸಿಕೊಡುವ ಕಾರ್ಯವನ್ನು ನಿರ್ವಹಿಸುತ್ತಾನೆ. ಖಜಾನೆ ವಿಭಾಗದೊಳಗೆ ಅನೇಕ ಮುಖ್ಯ ಶಾಖೆಗಳು ಮತ್ತು ಬ್ಯೂರೋಗಳು ಹಣಕಾಸಿನ ನಿರ್ದಿಷ್ಟ ಕೆಲಸಕಾರ್ಯಗಳನ್ನು ನಿರ್ವಹಿಸುತ್ತವೆ.

ಅಮೆರಿಕದಲ್ಲಿ ತೆರಿಗೆಗಳು, ಅಂಚೆ ಕಛೇರಿ ಆದಾಯ, ಸಾರ್ವಜನಿಕ ಆಸ್ತಿ ಮಾರಾಟದಿಂದ ಬರುವ ಆದಾಯ, ಇವನ್ನು ಖಜಾನೆ ಅಥವಾ ಉಪಖಜಾನೆ ಅಥವಾ ಅಧಿಕೃತ ಮಾಧ್ಯಮಸಂಸ್ಥೆಗೆ ಸಂದಾಯ ಮಾಡಲೇಬೇಕು. ಖಜಾನೆಯಿಂದ ನ್ಯಾಯಬದ್ಧವಾದ ಸಂದಾಯ ಆಜ್ಞೆಯ ಆಧಾರದ ಮೇಲಲ್ಲದೆ ಯಾವ ಹಣವನ್ನೂ ಪಾವತಿ ಮಾಡುವಂತಿಲ್ಲ. ನ್ಯಾಯಬದ್ಧ ಅನುಮತಿ ದೊರೆತ ಅನಂತರ, ಖಜಾನೆಯ ಕಾರ್ಯದರ್ಶಿ ಪಾವತಿ ಮಾಡಬೇಕಾದ ಹಣವನ್ನು ಸಂಬಂಧಪಟ್ಟ ವಿಭಾಗದ ವಶಕ್ಕೆ ಸಲ್ಲಿಸುತ್ತಾನೆ.

**ಭಾರತದಲ್ಲಿ** : ಭಾರತದ ಖಜಾನೆ ವ್ಯವಸ್ಥೆ ಇಂಗ್ಲೆಂಡ್, ಅಮೆರಿಕಗಳ ಖಜಾನೆ ವ್ಯವಸ್ಥೆಗಳಿಗಿಂತ ತೀವ್ರವಾಗಿ ಭಿನ್ನವಾದದ್ದು. ಇಂಗ್ಲೆಂಡಿನಲ್ಲಿ ಒಂದೇ ಖಜಾನೆ ಇದ್ದು ಅದು ರಾಷ್ಟ್ರದ ಹಣಸಂಚಿ ಎನ್ನಿಸಿಕೊಳ್ಳುತ್ತದೆ. ಆದರೆ ಭಾರತದಲ್ಲಿ ಹೀಗೆ ಕೇಂದ್ರೀಕೃತವಾದ ಒಂದೇ ಖಜಾನೆ ಹಣಕಾಸಿನ ಆಡಳಿತ ನಡೆಸುವುದಿಲ್ಲ. ಭಾರತದಲ್ಲಿ ಅಮೆರಿಕದಲ್ಲಿರುವಂತೆ ವಿಕೇಂದ್ರೀಕೃತ ಖಜಾನೆ ವ್ಯವಸ್ಥೆ ಇದೆ. ಭಾರತದ ಪ್ರತಿಯೊಂದು ರಾಜ್ಯದಲ್ಲೂ ಖಜಾನೆ ಕಾರ್ಯಕ್ರಮ ವ್ಯಾಪಕವಾಗಿ ನಡೆಯುತ್ತದೆ. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ಖಜಾನೆ ಇದ್ದು, ಇದಕ್ಕೆ ಅನೇಕ ಉಪ ಖಜಾನೆಗಳು ಅಧೀನವಾಗಿರುತ್ತವೆ. ಇಷ್ಟೇ ಅಲ್ಲದೆ ಸ್ಟೇಟ್ ಬ್ಯಾಂಕುಗಳು ಸಹ ಖಜಾನೆ ಕಾರ್ಯವನ್ನು ಭಾಗಶಃ ನಿರ್ವಹಿಸುತ್ತವೆ. ಖಜಾನೆಗಳು ಮತ್ತು ಸ್ಟೇಟ್ ಬ್ಯಾಂಕುಗಳು ಮತ್ತು ಅವುಗಳ ಶಾಖೆಗಳು ಸರ್ಕಾರದ ವಿತ್ತ ಅಧಿಕಾರಿಗಳ ಆಜ್ಞೆಗಳಿಗನುಗುಣವಾಗಿ ಹಣಕಾಸು ಆಡಳಿತ ನಿರ್ವಹಿಸುತ್ತವೆ. ಖಜಾನೆಗಳು, ಉಪಖಜಾನೆಗಳು, ಸ್ಟೇಟ್ ಬ್ಯಾಂಕುಗಳು ಮತ್ತು ಅವುಗಳ ಶಾಖೆಗಳು ಭಾರತದ ಹಣಕಾಸು ಆಡಳಿತದ ನರಮಂಡಲ.

ಪ್ರತಿಯೊಂದು ರಾಜ್ಯ ಖಜಾನೆ ವ್ಯವಸ್ಥೆಗೂ ನಿರ್ದಿಷ್ಟವಾದ ಖಜಾನೆ ನಿಯಮಗಳುಂಟು. ಹಣ ಪಾವತಿ, ಹಣ ಸಂದಾಯ, ಹಣ ಸಂರಕ್ಷಣೆ ಮತ್ತು ಲೆಕ್ಕ ಪತ್ರಗಳ ವಿಷಯದಲ್ಲಿ ಈ ನಿಯಮಗಳನ್ನು ಪ್ರತಿಯೊಂದು ಖಜಾನೆಯೂ ಅನುಸರಿಸಬೇಕು. ಖಜಾನೆಯ ಆಂತರಿಕ ಆಡಳಿತ ಮುಖ್ಯಾಧಿಕಾರಿ ಜಿಲ್ಲಾ ಖಜಾನಾಧಿಕಾರಿ. ಈತ ಖಜಾನೆಯ ಎಲ್ಲ ಆಡಳಿತಕ್ಕೂ ಬಾಧ್ಯ. ಖಜಾನೆಯ ಪ್ರತಿಯೊಂದು ಪಾವತಿಗೂ ಈತನೇ ಜವಾಬ್ದಾರ. ಆದರೆ ಇವನಿಗೆ ಸ್ವತಂತ್ರವಾಗಿ ಪಾವತಿಗಳಿಗೆ ಆಜ್ಞೆ ನೀಡುವ ಅಧಿಕಾರವಿರುವುದಿಲ್ಲ. ಖಜಾನೆಯ ನಿಯಮಗಳಿಗನುಗುಣವಾಗಿ ಮಾತ್ರ ಈತ ಪಾವತಿಗಳನ್ನು ಮಾಡಬಲ್ಲ. ಇವನು ಖಜಾನೆಯ ದೈನಂದಿನ ಲೆಕ್ಕಗಳನ್ನು ನೋಡುವುದು, ಪಾವತಿಗಳು ಮತ್ತು ನಗದು ಲೆಕ್ಕಗಳನ್ನು ಮಹಾಲೇಖಪಾಲನಿಗೆ (ಅಕೌಂಟೆಂಟ್ ಜನರಲ್) ಕಳುಹಿಸುವುದು– ಈ ಕಾರ್ಯವನ್ನು ನಿರ್ವಹಿಸುತ್ತಾನೆ. ತಪ್ಪು ಪಾವತಿಗಳಿಗೆ ಖಜಾನಾಧಿಕಾರಿಯೇ ಸಂಪೂರ್ಣವಾಗಿ ಜವಾಬ್ದಾರ. ಬ್ಯಾಂಕುಗಳು ಖಜಾನೆಯ ಕೆಲಸ ಮಾಡುವ ಕಡೆಗಳಲ್ಲಿ ಖಜಾನೆ ಹಣ ಸ್ವೀಕರಿಸುವುದಿಲ್ಲ, ಪಾವತಿ ಮಾಡುವುದಿಲ್ಲ. ಹೀಗಿರುವಾಗ ಹಣ ಸಂರಕ್ಷಣೆಯ ಜವಾಬ್ದಾರಿ ಜಿಲ್ಲಾ ಖಜಾನೆಗೆ ಇರುವುದಿಲ್ಲ.

ಖಜಾನೆಗೆ ಪಾವತಿಗಳನ್ನು ದ್ವಿಪ್ರತಿ ಚಲನ್‌ಗಳ ಮೂಲಕ ಮಾಡಲಾಗುತ್ತದೆ. ಬ್ಯಾಂಕುಗಳು ಖಜಾನೆಯ ಕೆಲಸ ಮಾಡುವೆಡೆಗಳಲ್ಲಿ, ಬ್ಯಾಂಕುಗಳಲ್ಲಿ ಚಲನ್ ಮೂಲಕ ಖಜಾನೆಗೆ ಹಣ ಸಂದಾಯ ಮಾಡಲಾಗುತ್ತದೆ. ಎಲ್ಲ ಲೆಕ್ಕಗಳಿಗೂ ಸರಿಯಾಗಿ ಹಣ ಪಾವತಿಯಾಗುತ್ತಿದೆಯೇ ಎಂಬುದನ್ನು ನೋಡಿಕೊಳ್ಳುವುದು ಜಿಲ್ಲಾ ಖಜಾನಾಧಿಕಾರಿಯ ಕೆಲಸವಲ್ಲ. ಇದು ಆಯಾ ಇಲಾಖೆಯ ಕರ್ತವ್ಯವಾಗಿರುತ್ತದೆ. ಕ್ರಮಬದ್ಧವಾಗಿ ಪಾವತಿಯಾಗಿದೆಯೇ ಇಲ್ಲವೇ ಎಂಬುದನ್ನು ಖಜಾನಾಧಿಕಾರಿ ನೋಡಿಕೊಳ್ಳುತ್ತಾನೆ. ಖಜಾನೆಗೆ ಸಂದಾಯವಾಗುವ ಹಣ ಸರ್ಕಾರದ ಆದಾಯದ ಒಟ್ಟು ನಿಧಿಯೊಳಕ್ಕೆ ಸೇರಿಹೋಗುತ್ತದೆ ; ಮತ್ತು ಸರ್ಕಾರದ ಅಗತ್ಯಗಳನ್ನು ಪೂರೈಸುವುದಕ್ಕೆ ಒದಗಿ ಬರುತ್ತದೆ. ಬೇರೆಬೇರೆ ಲೆಕ್ಕಗಳಿಗೆ ಹಣ ಜಮವಾದರೂ ಅದು ಸರ್ಕಾರದ ನಿಧಿಯೊಳಕ್ಕೆ ಸೇರಿಹೋಗುತ್ತದೆಯೇ ಹೊರತು ಇಂಥ ನಿರ್ದಿಷ್ಟ ಇಲಾಖೆಗೆ ಸೇರಿದ ಹಣ ಎಂದು ಖಜಾನೆಯಲ್ಲಿ ಬೇರ್ಪಡುವುದಿಲ್ಲ. ಪ್ರತಿ ಇಲಾಖೆಗೂ ಪ್ರತ್ಯೇಕ ಶಿಲ್ಕು ಲೆಕ್ಕವನ್ನಿಡಬೇಕಾಗಿಲ್ಲದ್ದು ಈ ವಿಧಾನದ ಅನುಕೂಲ.

ಖಜಾನೆಯಿಂದ ಆಗುವ ಹಣ ಪಾವತಿಗಳು ಅಂತಿಮ ಪಾವತಿಗಳ ಸ್ವರೂಪದಲ್ಲಿರುತ್ತವೆ ಅಥವಾ ಮುಂಗಡಗಳಾಗಿರುತ್ತವೆ. ಕೇಂದ್ರ ಸರ್ಕಾರದ ಪರವಾಗಿ ಅಥವಾ ರಾಜ್ಯ ಸರ್ಕಾರದ ಪರವಾಗಿ ಇಂಥ ಪಾವತಿಗಳನ್ನು ಮಾಡಲಾಗುತ್ತದೆ. ಖಜಾನೆ ಸರ್ಕಾರದ ಪರವಾಗಿ ಇಲಾಖೆಗಳಿಗೆ ಮಾಡುವ ಪಾವತಿಗಳು ಬಹಳ ಸರಳ ಸ್ವರೂಪವಾಗಿರುತ್ತದೆ. ಮಹಾಲೇಖಪಾಲನ ಆದೇಶದ ಮೇರೆಗೆ ತಮಗೆ ಸಂದಾಯವಾಗಬೇಕಾಗಿರುವ ಮೊತ್ತದ ಬಿಲ್ಲನ್ನು ಇಲಾಖೆಗಳು ಖಜಾನೆಗೆ ಒಪ್ಪಿಸುತ್ತವೆ. ಅಕೌಂಟೆಂಟ್ ಜನರಲ್ ಈ ಇಲಾಖೆಗೆ ಎಷ್ಟು ಹಣ ಬಜೆಟ್‌ನಲ್ಲಿ ಸಂದಾಯವಾಗಬೇಕೆಂದಿದೆಯೋ ಅಷ್ಟು ಹಣದ ಪಾವತಿಗೆ ಆದೇಶ ನೀಡುತ್ತಾನೆ. ಖಜಾನೆಗಳು ಈ ಆದೇಶವನ್ನನುಸರಿಸಿ ಇಲಾಖೆಗಳ ಬಜೆಟನ್ನು ಆದರಿಸುತ್ತವೆ. ಈ ಬಜೆಟಿನ ಮಿತಿ ಮೀರದಂತೆ ಮಹಾಲೇಖಪಾಲ ಮತ್ತು ಲೆಕ್ಕಶೋಧನ (ಆಡಿಟ್) ನಿಯಂತ್ರಣಾಧಿಕಾರಿಗಳು ಎಚ್ಚರಿಕೆ ವಹಿಸುತ್ತಾರೆ. ಸೈನ್ಯ, ರೈಲ್ವೆ, ಅರಣ್ಯ, ಅಂಚೆ ಮತ್ತು ತಂತಿ ಇವು ತಮ್ಮ ಎಲ್ಲ ಹಣಕಾಸು ಪಾವತಿ ಮತ್ತು ಸಂದಾಯ ಕಾರ್ಯಗಳನ್ನೂ ಖಜಾನೆಗಳ ಮೂಲಕವೇ ನಿರ್ವಹಿಸಬೇಕು.

ರಾಜ್ಯದ ವಿವಿಧ ಭಾಗಗಳಲ್ಲಿರುವ ಉಪ ಖಜಾನೆಗಳು ಜಿಲ್ಲಾ ಖಜಾನೆಗೆ ಅಧೀನವಾಗಿರುತ್ತವೆ. ಅವುಗಳ ಕಾರ್ಯರೀತಿಯೂ ಜಿಲ್ಲಾ ಖಜಾನೆಯಂತೆಯೇ ಇರುತ್ತದೆ. ಅವು ದೈನಂದಿನ ಹಾಗೂ ಮಾಸಿಕ ಲೆಕ್ಕಗಳನ್ನು ತಪ್ಪದೆ ಕ್ರಮಬದ್ಧವಾಗಿ ಜಿಲ್ಲಾ ಖಜಾನಾಧಿಕಾರಿಗೆ ಒಪ್ಪಿಸಬೇಕು. ಎಲ್ಲ ಉಪಖಜಾನೆಗಳ ನಿಯಂತ್ರಣ ಜಿಲ್ಲಾ ಖಜಾನಾಧಿಕಾರಿಗೆ ಸೇರಿದ್ದು. ಜಿಲ್ಲಾ ಖಜಾನೆಯ ಲೆಕ್ಕಪತ್ರಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ರಾಜ್ಯದ ಮಹಾಲೇಖಪಾಲ ನೋಡಿಕೊಳ್ಳುತ್ತಾನೆ. ಭಾರತದ ಪ್ರತಿಯೊಂದು ರಾಜ್ಯದಲ್ಲೂ ಖಜಾನೆಯ ಸ್ವರೂಪ ಒಂದೇ ರೀತಿಯಾಗಿದ್ದರೂ ಆಂತರಿಕ ಲೆಕ್ಕ ನಿರ್ವಹಣೆಯಲ್ಲಿ ಹಲವು ಮಾರ್ಪಾಡುಗಳಿವೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇಂದ್ರೀಯ ಖಜಾನೆಗಳುಂಟು. ಅವು ಕೇಂದ್ರ ಸರ್ಕಾರದ ಹಣಕಾಸು ಇಲಾಖೆಗೆ ಅಧೀನವಾಗಿರುತ್ತವೆ. ಕೇಂದ್ರೀಕೃತ ಖಜಾನೆ ವ್ಯವಸ್ಥೆಗೆ ಇಂಗ್ಲೆಂಡ್ ಹೇಗೆ ಮಾದರಿಯಾಗಿದೆಯೋ ಹಾಗೆ ವಿಕೇಂದ್ರೀಕೃತ ಖಜಾನೆ ವ್ಯವಸ್ಥೆಗೆ ಭಾರತ ಮಾದರಿಯಾಗಿದೆ. (ಸಿ.ಕೆ.ಆರ್.)

**ಖಜಾನೆ ಠೇವಣಿ ರಸೀತಿ** : ಎರಡನೆಯ ಮಹಾಯುದ್ಧದ ಕಾಲದಲ್ಲಿ ಇಂಗ್ಲೆಂಡಿನ ಸರ್ಕಾರ ವಾಣಿಜ್ಯ ಬ್ಯಾಂಕುಗಳಿಂದ ಪಡೆದುಕೊಂಡ ಕಡ್ಡಾಯದ ಸಾಲಕ್ಕೆ ಪ್ರತಿಯಾಗಿ ನೀಡುತ್ತಿದ್ದ ರಸೀತಿ (ಟ್ರೆಷರಿ ಡಿಪಾಸಿಟ್ ರೆಸಿಟ್). ಇದನ್ನು ಪ್ರಥಮವಾಗಿ ನೀಡಲಾದ್ದು 1940ರ ಜುಲೈ ತಿಂಗಳಲ್ಲಿ. ಖಜಾನೆ ಠೇವಣಿ ರಸೀತಿಗಳ ಹಣದ ಮೇಲೆ ನೀಡುತ್ತಿದ್ದ ಬಡ್ಡಿ 1½%. ಇವು ಐದು, ಆರು ಮತ್ತು ಏಳು ತಿಂಗಳುಗಳ

ಅವಧಿಯವುಗಳಾಗಿದ್ದುವು. ಇವನ್ನು ಹಣ ಮಾರುಕಟ್ಟೆಯಲ್ಲಿ ವಿಕ್ರಯ ಮಾಡುವಂತಿರಲಿಲ್ಲ; ಅಥವಾ ನಗದು ರೂಪಕ್ಕೆ ಪರಿವರ್ತಿಸಲು ಬರುವಂತಿರಲಿಲ್ಲ. ಅಂಥ ರಸೀತಿಗಳನ್ನು ಅವಧಿಗೆ ಮೊದಲೇ ನಗದಿಗೆ ಮುರಿಸಲು ಇದ್ದ ಒಂದೇ ಒಂದು ಸಾಧ್ಯತೆಯೆಂದರೆ, ಇಂಗ್ಲೆಂಡಿನ ಬ್ಯಾಂಕಿನಲ್ಲಿ ವಟಾಯಿಸುವುದು. ಆದರೆ ಹೀಗೆ ಮಾಡುವಾಗ ಇಂಗ್ಲೆಂಡಿನ ಬ್ಯಾಂಕು ತನ್ನ ಅಧಿಕೃತ ದರವನ್ನು (ಬ್ಯಾಂಕು ದರ) ವಿಧಿಸುತ್ತಿದ್ದುದರಿಂದ ಬ್ಯಾಂಕುಗಳಿಗೆ ನಷ್ಟವಾಗುತ್ತಿತ್ತು. ಆದ್ದರಿಂದ ಇವು ಕರೆ ಹಣ, ವಟಾಯಿಸಿದ ಹುಂಡಿ ಮುಂತಾದವಕ್ಕಿಂತ ಕಡಿಮೆ ದ್ರವತ್ವವುಳ್ಳ ಪ್ರತಿಭೂತಿಗಳೆಂದು (ಸೆಕ್ಯೂರಿಟೀಸ್) ಬ್ಯಾಂಕುಗಳು ಭಾವಿಸುತ್ತಿದ್ದುವು. ಕಡಿಮೆ ಬಡ್ಡಿ ದರದಿಂದಾಗಿ ಇವು ಲಾಭಪ್ರದವೂ ಆಗಿರಲಿಲ್ಲ. ಇವು ಕೇವಲ ಯುದ್ಧಕಾಲದಲ್ಲಿ ಹಣ ಎತ್ತುವ ಸಾಧನವಾಗಿದ್ದುವು. 1945ರಲ್ಲಿ ಖಜಾನೆ ಠೇವಣಿ ರಸೀತಿಗಳ ಮೊತ್ತ 180 ಕೋಟಿ ಪೌಂ. ಆಗಿತ್ತು. ಅನಂತರ ಅವುಗಳ ಸ್ಥಾನದಲ್ಲಿ ಕ್ರಮಕ್ರಮವಾಗಿ ಖಜಾನೆ ಹುಂಡಿ **(ನೋಡಿ– ಖಜಾನೆ ಹುಂಡಿ)** ಗಳು ಬಂದವು. ಇವು ಅದೃಶ್ಯವಾಗುವುದೆಂದು ತಿಳಿದಾಗ ಬ್ಯಾಂಕುಗಳು ಆ ತೀರ್ಮಾನವನ್ನು ಸ್ವಾಗತಿಸಿದುವು. 1956ರಲ್ಲಿ ಇವನ್ನು ಪುನಃ ಜಾರಿಗೆ ತರುವ ವಿಚಾರವನ್ನು ಪರಿಶೀಲಿಸಲಾಯಿತಾದರೂ ಆ ಸೂಚನೆಯನ್ನು ತಳ್ಳಿಹಾಕಲಾಯಿತು. ಬ್ರಿಟನ್ನಿನ ಹಣ ವ್ಯವಸ್ಥೆಯ ಬಗ್ಗೆ 1959ರಲ್ಲಿ ಸಲ್ಲಿಸಲಾದ ರ್‍ಯಾಡ್ ಕ್ಲಿಫ್ ಸಮಿತಿಯ ವರದಿಯಲ್ಲೂ ಇವನ್ನು ಮತ್ತೆ ಜಾರಿಗೆ ತರಬೇಕೆಂದು ಹೇಳಿಲ್ಲ. (ಸಿ.ಸಿ.ಪಿ.)

**ಖಜಾನೆ ಹುಂಡಿ :** ಸರ್ಕಾರದ ಅಲ್ಪಾವಧಿ ಋಣಪತ್ರ; ಸಾಮಾನ್ಯವಾಗಿ ಒಂದು ವರ್ಷದೊಳಗಿನ ವಾಯಿದೆಯುಳ್ಳದ್ದು (ಟ್ರೆಷರಿ ಬಿಲ್). ಇದೊಂದು ಸರ್ಕಾರಿ ವಚನಪತ್ರ. ಸರ್ಕಾರ ಪಡೆದುಕೊಂಡ ಠೇವಣಿಗೆ ಪ್ರತಿಯಾಗಿ ಇದನ್ನು ಕೊಡಲಾಗುತ್ತದೆ. ಠೇವಣಿ ನೀಡಿದವನ – ಎಂದರೆ ಧನಿಯ–ಹೆಸರನ್ನು ಬರೆಯಲು ಹುಂಡಿಯಲ್ಲಿ ಸ್ಥಳ ಬಿಡಲಾಗಿರುತ್ತದೆ. ಅದರಲ್ಲಿ ಅವನ ಹೆಸರನ್ನು ಕಾಣಿಸಿರದಿದ್ದರೆ ಅದರ ಮೊಬಲಗನ್ನು ಹುಂಡಿಯ ವಾಹಕನಿಗೆ (ಬೇರರ್) ಕೊಡಲಾಗುವುದು. ಮಾರುಕಟ್ಟೆಯಲ್ಲಿ ವ್ಯವಹರಿಸಲಾಗುವ ಖಜಾನೆ ಹುಂಡಿಗಳು ಬಹುತೇಕ ವಾಹಕ ಪತ್ರಗಳು. ಸಾಮಾನ್ಯ ಹುಂಡಿಗೂ ಖಜಾನೆ ಹುಂಡಿಗೂ ವ್ಯತ್ಯಾಸವುಂಟು. ಇದು ಸರ್ಕಾರದ ವಚನಪತ್ರವಾದ್ದರಿಂದ ಇದಕ್ಕೆ ಇತರರ ಭರವಸೆ ಅನಗತ್ಯ; ಇದರ ಹಿಂದೆ ಸಹಿಮಾಡುವವರಿಂದ ಇದರ ಪ್ರತ್ಯಯ (ಕ್ರೆಡಿಟ್) ಹೆಚ್ಚುವುದಿಲ್ಲ.

ಖಜಾನೆ ಹುಂಡಿಯ ಉಗಮವಾದ್ದು ಇಂಗ್ಲೆಂಡಿನಲ್ಲಿ–1877ರಲ್ಲಿ. ವಾಲ್ಟರ್ ಬೇಜ್‌ಹಟ್ ಇದರ ಜನಕ. ಸರ್ಕಾರಕ್ಕೆ ಸ್ವಲ್ಪ ಹಣ ಬೇಕಾಗಿದೆಯೆಂದೂ ಸರ್ಕಾರದ ಚಲ ಋಣವನ್ನು ಅಧಿಕಗೊಳಿಸಿ ಹಣ ಪಡೆಯುವ ಉಪಾಯ ಸೂಚಿಸಬೇಕೆಂದೂ ವಾಲ್ಟರ್ ಬೇಜ್‌ಹಟನಿಗೆ ಇಂಗ್ಲೆಂಡಿನ ಅರ್ಥಸಚಿವ ಕೇಳಿಕೊಂಡಾಗ ಆತ ಖಜಾನೆ ಹುಂಡಿ ವಿಧಾನವನ್ನು ಸೂಚಿಸಿದನಂತೆ. ಇಂಗ್ಲೆಂಡಿಗೆ ಇಡೀ ವಿಶ್ವದಲ್ಲೇ ಅತ್ಯಧಿಕ ಪ್ರತ್ಯಯ ಇರುವುದರಿಂದ ಅದರ ಪರಮಾವಧಿ ಪ್ರಯೋಜನ ಪಡೆಯಲು ಸರ್ಕಾರ ಪ್ರಯತ್ನಿಸಬೇಕೆಂದು ಹೇಳಿದ. ವಾಣಿಜ್ಯ ಹುಂಡಿಯನ್ನೇ ಸಾಧ್ಯವಾದಮಟ್ಟಿಗೆ ಹೋಲುವಂಥ, ಎಂದರೆ ವಟ್ಟಕ್ಕೆ ನೀಡಬಹುದಾಂಥ, ನಿಶ್ಚಿತ ಕಾಲದಲ್ಲಿ ವಾಯಿದೆ ತುಂಬುವಂಥ ಪ್ರತಿಭೂತಿಯನ್ನು ಸಾರ್ವಜನಿಕರಿಗೆ ನೀಡಬಹುದೆಂಬುದು ಅವನ ಸಲಹೆ. ಅಂದಿನಿಂದ ಖಜಾನೆ ಹುಂಡಿಗಳು ಸರ್ಕಾರದ ಒಂದು ಮುಖ್ಯ ಹಣ ಎತ್ತುವ ಸಾಧನವಾಗಿವೆ. ಇತರ ದೇಶಗಳಲ್ಲೂ ಇವು ಜನ ಪ್ರಿಯತೆ ಗಳಿಸಿವೆ.

ಖಜಾನೆ ಹುಂಡಿಗಳ ಮೂಲಕ ಹಣ ಪಡೆಯಬೇಕೆಂದು ಸರ್ಕಾರ ಇಚ್ಛಿಸಿದಾಗ ಅವುಗಳ ಬಗ್ಗೆ ನಮೂದನೆ (ಟೆಂಡರ್) ಕರೆದು ಸರ್ಕಾರಿ ಪ್ರಕಟನೆ ಹೊರಬೀಳುತ್ತದೆ. ಹುಂಡಿಗಳ ಮೇಲೆ ಬಡ್ಡಿ ಇರುವುದಿಲ್ಲ. ಆದ್ದರಿಂದ ಅವನ್ನು ಕೊಳ್ಳಬಯಸುವವರು ಯಾವ ವಟ್ಟದ ದರದಲ್ಲಿ ಕೊಳ್ಳಲಿಚ್ಛಿಸುವರೆಂಬುದರ ಬಗ್ಗೆ ನಮೂದನೆ ಸಲ್ಲಿಸುತ್ತಾರೆ. ಹುಂಡಿಯ ಹಣದ ಪಾವತಿ ಯಾವಾಗ ಆಗಬೇಕೆಂಬುದನ್ನು ನಮೂದಕರೇ ಸೂಚಿಸುತ್ತಾರೆ. ಪ್ರತಿವಾರವೂ ಬರುವ ನಮೂದನೆಗಳಿಗೆ ಅನುಗುಣವಾಗಿ ಪ್ರತಿ ಮುಂದಿನ ವಾರವೂ ಹುಂಡಿಗಳನ್ನು ನೀಡಲಾಗುತ್ತದೆ.

ಖಜಾನೆ ಹುಂಡಿಯಿಂದ ಅನೇಕ ಅನುಕೂಲಗಳುಂಟು. ದೀರ್ಘಾವಧಿ ಸಾಲಕ್ಕಿಂತ ಇದು ಸಾಮಾನ್ಯವಾಗಿ ಹೆಚ್ಚು ಅಗ್ಗ. ನಮೂದಕನ ಹಣ ಭದ್ರವಾಗಿರುವುದರಿಂದ, ಅದು ಶೀಘ್ರವಾಗಿ ವಾಪಸು ಬರುವುದರಿಂದ ಖಚಿತ ಕಡಿಮೆ ದರದಲ್ಲಿ ಅದನ್ನು ಅವನು ಸರ್ಕಾರಕ್ಕೆ ಸಲ್ಲಿಸಲೊಪ್ಪುತ್ತಾನೆ. ದ್ರವತ್ವ ಇವರ ಒಂದು ಮುಖ್ಯ ಗುಣ. ಬ್ಯಾಂಕುಗಳಿಗೂ ಇದು ಆಕರ್ಷಕವಾದ ಪ್ರತಿಭೂತಿ, ಏಕೆಂದರೆ ಇದನ್ನು ಕ್ರಯಿಸುವುದೂ ವಿಕ್ರಯಿಸುವುದೂ ಸುಲಭ. ವಾಣಿಜ್ಯ ಬ್ಯಾಂಕುಗಳು ತಮ್ಮಲ್ಲಿರುವ ಹೆಚ್ಚುವರಿ ಹಣವನ್ನು ಖಜಾನೆ ಹುಂಡಿಗಳಲ್ಲಿ ತೊಡಗಿಸುತ್ತವೆ. ಅಲ್ಪಾವಧಿಯ, ಭದ್ರವಾದ, ವಟ್ಟ ಸಂಪಾದನೆ ಮಾಡುವ, ಜರೂರು ಸಂದರ್ಭದಲ್ಲಿ ಕೇಂದ್ರೀಯ ಬ್ಯಾಂಕಿನಲ್ಲಿ ಸುಲಭವಾಗಿ ಮರುವಟಾಯಿಸಬಹುದಾದ ಖಜಾನೆ ಹುಂಡಿಗಳು ವಾಣಿಜ್ಯ ಬ್ಯಾಂಕಿನ ದೃಷ್ಟಿಯಲ್ಲಿ ಸಾಮಾನ್ಯ ವ್ಯಾಪಾರ ಹುಂಡಿಗಳ ಎಲ್ಲ ಅನುಕೂಲಗಳನ್ನು, ಜೊತೆಗೆ ಕೆಲವು ಅಧಿಕ ಅನುಕೂಲಗಳನ್ನು ಪಡೆದಿವೆ. (ಸಿ.ಸಿ.ಪಿ.)

**ಖಜುರಾಹೊ :** ಮಧ್ಯ ಪ್ರದೇಶ ರಾಜ್ಯದಲ್ಲಿ ಬುಂದೇಲ್‌ಖಂಡದಲ್ಲಿರುವ ಪ್ರಸಿದ್ಧ ದೇವಾಲಯಗಳ ಕ್ಷೇತ್ರ. ಮಧ್ಯಯುಗದಲ್ಲಿ ಈ ಪ್ರದೇಶದಲ್ಲಿ ಆಳಿದ ಚಂದೇಲ ರಾಜರ ಆಶ್ರಯದಲ್ಲಿ 950–1050ರ ಮಧ್ಯದ ಒಂದು ಶತಮಾನದ ಕಾಲದಲ್ಲಿ ಇಲ್ಲಿ ಸುಮಾರು ಮೂವತ್ತು ದೇವಾಲಯಗಳು ನಿರ್ಮಿತವಾದುವು. ಶೈವ, ವೈಷ್ಣವ ಮತ್ತು ಜೈನ ಧರ್ಮೀಯವಾದ ಈ ಮಂದಿರಗಳು ಆಗಿನ ರಾಜರ ಮತ್ತು ಜನತೆಯ ಸರ್ವಧರ್ಮ ಸಮನ್ವಯ ಭಾವನೆಗಳ ಪ್ರತೀಕಗಳಾಗಿವೆ.

ನದಿಯ ದಡದಲ್ಲಿ ಎತ್ತರವಾದ ಜಗತಿಗಳ ಮೇಲೆ ಒಂದೊಂದು ಪ್ರತ್ಯೇಕವಾಗಿ ನಿಂತಿರುವ ಈ ದೇವಾಲಯಗಳ ರಚನೆಯಲ್ಲಿ ಯಾವುದೇ ಬಗೆಯ ವ್ಯವಸ್ಥಾಬದ್ಧ ಯೋಜನೆಯೂ ಕಂಡುಬರುವುದಿಲ್ಲ. ಸಣ್ಣವಾದರೂ ಎತ್ತರವಾದ ವಿಶಾಲ ಜಗತಿಯ ಮೇಲೆ ನಿಂತಿರುವ ಈ ಮಂದಿರಗಳು ಸ್ವಯಂಪೂರ್ಣವಾದ ಉತ್ತಮ ವಾಸ್ತುಕೃತಿಗಳಾಗಿವೆ. ಶಿಲುಬೆಯಾಕಾರದ ಜಗತಿಯ ಮೇಲೆ ಮೂರು ಭಾಗಗಳಲ್ಲಿ ನಿರ್ಮಿತವಾಗಿವೆ. ಗರ್ಭಗೃಹ, ಮಂಟಪ ಮತ್ತು ಅರ್ಧಮಂಟಪಗಳೇ ಈ ಭಾಗಗಳು. ಕೆಲವು ಮಂದಿರಗಳಲ್ಲಿ ಗರ್ಭಗೃಹಕ್ಕೆ ಸೇರಿದಂತೆ ಅಂತರಾಳ, ಮುಂಭಾಗದಲ್ಲಿ ಮಹಾಮಂಟಪ ಮತ್ತು ಪ್ರದಕ್ಷಿಣಮಾರ್ಗಗಳೂ ಇವೆ. ಎತ್ತರವಾದ ಜಗತಿಯ ಮೇಲೆ ತಳಭಾಗದ ಅಂತಸ್ತು, ಗೋಡೆಗಳು, ಬಾಗಿಲು ಕಿಟಕಿಗಳು, ಮೇಲ್ಭಾಗದ ಉನ್ನತವಾದ ಶಿಖರಗಳು ಈ ದೇವಾಲಯಗಳ ಮುಖ್ಯ ಅಂಗಗಳಾಗಿದ್ದು ಕಟ್ಟಡದ ಔನ್ನತ್ಯವನ್ನು ಎತ್ತಿತೋರುತ್ತವೆ. ಹೊರಗೋಡೆಗಳ ಮೇಲಿನ ಅಲಂಕರಣ ಕೆತ್ತನೆಗಳು ಕಟ್ಟಡಗಳ ಭವ್ಯತೆಯನ್ನು ಹೆಚ್ಚಿಸುತ್ತವೆ. ಆನಂದಮಯ ತೃಪ್ತ ಜೀವನದ ಭಾವವನ್ನು ಬೀರುತ್ತಿರುವ




ಖಜುರಾಹೊ ಪ್ರದೇಶ : 1 ಘೋಪ್ರ, 2. ಚಿತ್ರಗುಪ್ತ, 3. ವಿಶ್ವನಾಥ, 4 ದೇವಿ ಜಗದಂಬಾ, 5. ಕಂದರ್ಯ ಮಹಾದೇವ್, 6. ಲಕ್ಷ್ಮಣ್, 7. ಮಾತಂಗೇಶ್ವರ್, 8. ವಸ್ತುಸಂಗ್ರಹಾಲಯ, 9. ಶಿವಸಾಗರ, 10 ಚೌನ್‌ಸತ್ ಯೋಗಿನಿ, 11. ಪಾಳು ದೇಗುಲಗಳು, 12. ನಿನೋರ ತಾಲ್, 13. ವಾಮನ, 14. ಬ್ರಹ್ಮ, 15. ಜಾವರಿ, 16. ಖಜರಾಹೊ, 17. ಆದಿನಾಥ, 18. ಪಾರ್ಶ್ವನಾಥ, 19. ದೂಲದೇವ, 20. ಪಾಳು ದೇಗುಲಗಳು, 21. ಚತುರ್ಭುಜ A–ಲಾಲ್‌ಗಾಂವ್‌ಗೆ B–ರಾಜ್ ನಗರಕ್ಕೆ, C–ಚತ್ರಾಯ್‌ಗೆ, D–ಬೇಣಿಗಾನಿಗೆ, E–ರಾಜ್‌ಘರ್‌ಗೆ, R ಖುದಾರ್ ನದಿ

ಮಾನವರ ಮತ್ತು ಸುಂದರ ದೇವತೆಗಳ ಶಿಲ್ಪಗಳು ನೂರಾರು ಸಂಖ್ಯೆಯಲ್ಲಿ ಅಲಂಕರಣ ಕಾರ್ಯದಲ್ಲಿ ಯೋಜಿತವಾಗಿವೆ. ಇವೆಲ್ಲದರಿಂದ ಇಡೀ ಕಟ್ಟಡವೇ ಜೀವಂತವಾಗಿರುವಂತೆ ಭಾಸವಾಗುತ್ತದೆ. ಮುಂಭಾಗದಿಂದ ಮೆಟ್ಟಿಲುಮೆಟ್ಟಿಲಾಗಿ ಕಟ್ಟಡದ ಶಿಖರ ಅತ್ಯಂತ ಉನ್ನತ ಭಾಗವಾಗಿದ್ದು ದೇವಾಲಯದ ಪ್ರಾಶಸ್ತ್ಯವನ್ನು

ಹೆಚ್ಚಿಸುವಂತೆ ಕಾಣುತ್ತದೆ. ಖಜುರಾಹೊ ದೇವಾಲಯಗಳ ಶಿಖರಗಳು ಬಹಳ ಸುಂದರವಾಗಿವೆ; ಕಟ್ಟಡದ ಎಲ್ಲ ಭಾಗಗಳಿಗೂ ಕೇಂದ್ರಬಿಂದುಗಳಾಗಿವೆ. ಕೇಂದ್ರಶಿಖರದ ಸುತ್ತ ಇರುವ ಸಣ್ಣಸಣ್ಣ ಶಿಖರಗಳು ಅದರ ಭವ್ಯತೆಯನ್ನು ಹೆಚ್ಚಿಸಿವೆ.

ದೇವಸ್ಥಾನದಲ್ಲಿಯ ಚತುರ್ಭುಜ ವಿಷ್ಣು

ದೇವಾಲಯದ ಒಳಭಾಗವನ್ನು ಮತೀಯ ಕಾರ್ಯಗಳಿಗೆ ಹೊಂದುವಂತೆ, ಸ್ಥಳಪರಿಮಿತಿಯನ್ನು ಗಮನದಲ್ಲಿಟ್ಟುಕೊಂಡು ಯೋಜಿಸಲಾಗಿದೆ. ಕಟ್ಟಡಕ್ಕೆ ಒಂದೇ ಪ್ರವೇಶ ಮಾರ್ಗವಿದ್ದು ಮೆಟ್ಟಿಲುಗಳ ಸರಣಿಯ ಮೂಲಕ ಒಳಹೊಗಬೇಕು. ಈ ರೀತಿ ಅರ್ಧಮಂಟಪಕ್ಕೆ ಪ್ರವೇಶಮಾಡಿ ಕಂಬಗಳಿಂದ ಕೂಡಿದ ಮಂಟಪದೊಳಕ್ಕೆ ಹೋದಾಗ ಅಂತರಾಳದ ಮುಂದೆ ನಿಲ್ಲಬೇಕು. ಅದರ ಮುಂದಿನ ಭಾಗವೇ ಗರ್ಭಗೃಹ. ದೇವಾಲಯದ ಒಂದು ಪಾರ್ಶ್ವದಲ್ಲಿ, ಸಾಮಾನ್ಯವಾಗಿ ಎಡಪಾರ್ಶ್ವದಲ್ಲಿ, ಮಹಾಮಂಟಪ ಮತ್ತು ಗರ್ಭಗೃಹದ ಸುತ್ತ ಪ್ರದಕ್ಷಿಣಮಾರ್ಗ ಇವೆ. ದೇವಾಲಯದ ಒಳಭಾಗದಲ್ಲೂ ಅನೇಕ ಶಿಲ್ಪಗಳು ಅದರ ಅಲಂಕರಣವನ್ನು ಹೆಚ್ಚಿಸುತ್ತವೆ. ಆ ಶಿಲ್ಪಗಳಲ್ಲಿ ಕುಬ್ಜ ಸುಂದರ ಸ್ತ್ರೀ ವಿಗ್ರಹಗಳು ಗಮನಾರ್ಹವಾಗಿವೆ. ಅದರಲ್ಲೂ ಬೋದಿಗೆಗಳ ಮೇಲಿನ ಸೂರುಗಳಲ್ಲಿರುವ ವಿಗ್ರಹಗಳು ಮತ್ತು ಕುಸುರಿ ಕೆಲಸ ಕಲಾ ಐಸಿರಿಯ, ಕಲೆಗಾರನ ಮಹೋನ್ನತಿಯ ಸಾಕ್ಷಿಗಳಾಗಿವೆ. ಮಧ್ಯದ ಮಂಟಪದ ಚಾವಣಿಯಲ್ಲಿರುವ ಭುವನೇಶ್ವರಿ ಖಜುರಾಹೊ ದೇವಾಲಯಗಳ ಅತ್ಯುತ್ಕೃಷ್ಟವಾದ ಕೆತ್ತನೆಗಳಿಂದ ಕೂಡಿದೆ. ಜ್ಯಾಮಿತೀಯ ಆಕಾರದ ವೃತ್ತ, ಅರ್ಧವೃತ್ತ ಮತ್ತು ರೇಖಾವಿನ್ಯಾಸಗಳಿಂದ ಅತ್ಯಂತ ನಯನಮನೋಹರವಾದ ಅಲಂಕರಣವನ್ನು, ಶಿಲ್ಪಗಳನ್ನು ಕಲ್ಲಿನಲ್ಲಿ ಬಿಡಿಸಿದ್ದಾರೆ.

ಇಲ್ಲಿಯ ದೇವಾಲಯಗಳಲ್ಲಿ ಮುಖ್ಯವಾದ ವಾಯವ್ಯ ಭಾಗದ ಸಮೂಹದಲ್ಲಿ ಶೈವ ವೈಷ್ಣವ ಮಂದಿರಗಳಿವೆ. ಇವುಗಳಲ್ಲಿ ಕಂದರ್ಯ ಮಹಾದೇವ್ ಭಾರತದ ಅತಿಸುಂದರ ದೇಗುಲಗಳಲ್ಲೊಂದು. ಬೇಲೂರು, ಹಳೆಯಬೀಡುಗಳಲ್ಲಿರುವಂತೆ ಎತ್ತರವಾದ ಜಗಲಿಯ ಮೇಲೆ ಇದನ್ನು ಕಟ್ಟಲಾಗಿದೆ. 33 ಮೀ ಉದ್ದ 18 ಮೀ ಅಗಲ ಮತ್ತು ಭೂಮಿಯ ಮೇಲಿನಿಂದ 34.8 ಮೀ ಎತ್ತರ ಅಥವಾ ಜಗತಿಯಿಂದ 26.4 ಮೀ ಇರುವ ತಳಹದಿಯ ಮೇಲೆ ನಿರ್ಮಿತವಾಗಿದೆ. ಆಕಾರದಲ್ಲಿ ಅಷ್ಟು ಬೃಹತ್ತಾಗಿಲ್ಲದಿದ್ದರೂ ಒಂದು ಘನವಾಗಿ, ಎತ್ತರದಿಂದ ಎತ್ತರಕ್ಕೆ, ಒಂದನ್ನೊಂದು ಮೀರಿ ಏರುತ್ತಿರುವ ಶಿಖರಗಳಿಂದ ಕೊನೆಗೆ ಏಕಮೇವಾದ್ವಿತೀಯವಾಗಿ ನಿಮಿರಿನಿಂತ ಗಿರಿಶೃಂಗದಂಥ ಗರ್ಭಾಂಕಣದ ಶಿಖರದ ಔನ್ನತ್ಯ ಪ್ರೇಕ್ಷಕರ ಹೃನ್ಮನಗಳನ್ನು ತನ್ನೆಡೆಗೆ ಸೆಳೆಯುತ್ತದೆ. ಕಲೆಯ ದೃಷ್ಟಿಯಿಂದ ಭುವನೇಶ್ವರದ

ಜೈನ ದೇಗುಲಗಳು : ಶಾಂತಿನಾಥ್, ಪಾರ್ಶ್ವನಾಥ್ ಮತ್ತು ಆದಿನಾಥ್

ದೇವಾಲಯಗಳು ಆಕರ್ಷಣೀಯವಾಗಿದ್ದರೆ, ಮಹಾದೇವ ದೇವಾಲಯ ಬೇಲೂರಿನ ಚನ್ನಕೇಶವ ದೇವಾಲಯದಂತೆ ಒಳಗೂ ಹೊರಗೂ ಮನೋಹರವಾಗಿದೆ. ಅಷ್ಟದಿಕ್ಪಾಲಕರು, ಅಪ್ಸರೆಯರು, ಸುರಸುಂದರಿಯರು, ವಿದ್ಯಾಧರೆಯರು ಇತ್ಯಾದಿ ವಿವಿಧ ಭಂಗಿಭಾವಗಳ ರಮಣೀಯ ಶಿಲಾಕೃತಿಗಳು ಇಲ್ಲಿ ಗುಂಪುಗೂಡಿವೆ. ಇಲ್ಲಿಯ ಕಲಾಸಂಪತ್ತು, ಭಾವಪ್ರೇರಕಶಕ್ತಿ



ಕಂದರ್ಯ ಮಹಾದೇವ್ ದೇವಸ್ಥಾನ : ಮುಂಭಾಗದ ನೋಟ, ಪೂರ್ವಪಾರ್ಶ್ವದಿಂದ

ಅತ್ಯದ್ಭುತವಾದುದೆಂದು ಕಲಾವಿಮರ್ಶಕರ ಅಭಿಪ್ರಾಯ. ಈ ಗುಂಪಿನ ವೈಷ್ಣವ ದೇವಾಲಯಗಳಲ್ಲಿ ಚತುರ್ಭುಜ ವಿಷ್ಣುಮಂದಿರ 25.5 ಮೀ ಉದ್ದ ಮತ್ತು 13.2 ಮೀ ಅಗಲವಾಗಿದೆ. ಪಂಚಾಯತನ ಪದ್ಧತಿಯಲ್ಲಿ ನಿರ್ಮಿತವಾಗಿರುವ ಈ ಮಂದಿರಗಳಲ್ಲಿ ಐದು ಗರ್ಭಗೃಹಗಳಿವೆ. ಈ ಹಿಂದೂ ದೇವಾಲಯಗಳ ಮಾದರಿಯಲ್ಲೇ ನಿರ್ಮಿತವಾದ

ಆರು ಜೈನ ದೇವಾಲಯಗಳು ಆಗ್ನೇಯ ಭಾಗದಲ್ಲಿದೆ. ಇವುಗಳ ಹೊರಗೋಡೆಗಳ ಮೇಲೆ ತೋರಣಗಳು, ಸ್ತಂಭಿಕೆಗಳು ಮುಂತಾದ ವಾಸ್ತುಕೃತಿಗಳ ಅಲಂಕರಣವಿಲ್ಲದೆ ಅವು ಸರಳವಾಗಿವೆ. ಅವುಗಳ ಸ್ಥಾನದಲ್ಲಿ ಜೋಡಿಸಲಾಗಿರುವ ಮೂರ್ತಿಗಳಿಂದಾಗಿ ಈ ಗೋಡೆಗಳಿಗೆ ವಿಶೇಷ ಶೋಭೆ ಪ್ರಾಪ್ತವಾಗಿದೆ. ಈ ಜೈನ ಮಂದಿರಗಳಲ್ಲಿ ಮುಖ್ಯವಾದ ಜಿನನಾಥನ ಬಸದಿ 8 ಮೀ ಉದ್ದ ಮತ್ತು 9 ಮೀ ಅಗಲವಾದ್ದು.

ಈ ಗುಂಪಿನ ಪಕ್ಕದಲ್ಲಿರುವ ಪಾಳಾದ ಜೈನಮಂದಿರವೊಂದು ಗಮನಾರ್ಹವಾದ್ದು. ಘಂಟೈ ಮಂದಿರವೆಂದು ಹೆಸರಾದ ಈ ಮಂದಿರ ಪೂರ್ಣವಾಗಿದ್ದಾಗ ಆ ರೀತಿಯ ಕಟ್ಟಡಗಳಲ್ಲಿ ಮಕುಟಪ್ರಾಯವಾಗಿತ್ತೆಂದು ಹೇಳಬಹುದು. ಈಗ ಉಳಿದಿರುವ ಭಾಗಗಳಲ್ಲಿರುವ, ಉತ್ತಮ ಕೈಚಳಕ ತೋರುವ ಕಂಬಗಳು, ಭವ್ಯ ಕೆತ್ತನೆಗಳಿರುವ ಪ್ರವೇಶದ್ವಾರ ನೋಟಕರ ಕಣ್ಮನಗಳನ್ನು ತಣಿಸುತ್ತವೆ. ಈ ಪರಿಸರದಲ್ಲಿರುವ ಮತ್ತೆ ಕೆಲವು ಮಂದಿರಗಳೂ ಉತ್ತಮ ಕಲಾವಂತಿಕೆಯಿಂದ ಕೂಡಿವೆ; ಕೆಲವು ಪಾಳು ಬಿದ್ದಿವೆ. ಒಟ್ಟಿನಲ್ಲಿ ಖಜುರಾಹೊದ ದೇವಾಲಯಗಳು ಭಾರತೀಯ ವಾಸ್ತುಕಲೆಯ ಮಹೋನ್ನತ ಘಟ್ಟವನ್ನು ರೂಪಿಸುವ ಉತ್ತಮ ನಿದರ್ಶನಗಳ ಸಾಲಿನಲ್ಲಿ ಸೇರುತ್ತವೆಂದು ನಿಸ್ಸಂದೇಹವಾಗಿ ಹೇಳಬಹುದು. ಭಾರತೀಯ ಶಿಲ್ಪಕಲೆಯ ಪರಾಕಾಷ್ಠೆಯ ಉತ್ತಮ ನಿದರ್ಶನಗಳಲ್ಲಿ ಖಜುರಾಹೊದ ಶಿಲ್ಪಗಳೂ ಸೇರುತ್ತವೆ. ಹಂತಹಂತವಾಗಿ ಕೆತ್ತಲಾದ ನಗ್ನ ಅಪ್ಸರೆಯರ ಅಸಾಧಾರಣ ಸುಂದರ ಶಿಲ್ಪಗಳು ನೋಟಕರ ಚಿತ್ತವನ್ನು ತಮ್ಮಲ್ಲಿ ಸೆರೆಹಿಡಿಯುತ್ತವೆ. ಸುಂದರ ಸ್ತ್ರೀಯರ ದೇಹಗಳಲ್ಲಿ ತುಂಬಿ ತುಳುಕುವ ವಿವಿಧ ಶೃಂಗಾರ ಪ್ರಧಾನ ಭಾವಭಂಗಿಗಳು, ಪುರುಷರ ಚಿತ್ತವನ್ನು ಕ್ಷೋಭೆಗೊಳಿಸುವ ರಸಮಯ ಸನ್ನಿವೇಶಗಳು ಪ್ರೇಕ್ಷಕರ ಒಂದೊಂದು ನೋಟಕ್ಕೂ ಹೊಸಹೊಸ ಭಾವನೆಗಳನ್ನು ಸೂಚಿಸುತ್ತವೆ. ಮಧ್ಯಯುಗೀನ ಭಾರತೀಯ ಶಿಲ್ಪಿಗಳು ತಮ್ಮ ಅತಿಮಾನುಷ ಕಲಾವಂತಿಕೆಯನ್ನು ಖಜುರಾಹೊ ಮಂದಿರಗಳಲ್ಲಿ ಪ್ರದರ್ಶಿಸಿ ಪ್ರಪಂಚದ ಕಲಾ ಇತಿಹಾಸದಲ್ಲಿ ಅಮರರಾಗಿದ್ದಾರೆ. (ಸಿ.ಜಿ.ಪಿ.)

**ಖಡಕವಾಸ್ಲಾ ಕಟ್ಟೆ :** ಪುಣೆ ನಗರದ ನೈರುತ್ಯಕ್ಕೆ 17.7 ಕಿಮೀ. ದೂರದಲ್ಲಿರುವ ಖಡಕವಾಸ್ಲಾ ಹಳ್ಳಿಯ ಹತ್ತಿರ ಮುಠಾ ನದಿಗೆ ಕಟ್ಟಿದ ಕಟ್ಟೆ. ಉದ್ದ 1460 ಮೀ. ಎತ್ತರ 51 ಮೀ. ಇದನ್ನು 1879ರಲ್ಲಿ ಕಟ್ಟಲಾಯಿತು. ಇದರಿಂದ ಇಲ್ಲಿ ಒಂದು ದೊಡ್ಡಜಲಾಶಯ ನಿರ್ಮಾಣವಾಗಿದೆ. ಅಲ್ಲಿಂದ ಎರಡು ಮುಖ್ಯ ಕಾಲುವೆಗಳನ್ನು ತೆಗೆದಿದ್ದಾರೆ. ಮೊದಲನೆಯದು ಹಡಪಸರದಿಂದ ಪಾಟಸ್ ಪರ್ಯಂತ ಮತ್ತು ಎರಡನೆಯದು ಕೋಥರೂಡದಿಂದ ಖಡಕೀ ವರೆಗೆ ಸಾಗುತ್ತವೆ.

ಖಡಕವಾಸ್ಲಾ ಕಟ್ಟೆಗೆ ಪಶ್ಚಿಮದಲ್ಲಿ ಘಟ್ಟಪ್ರದೇಶದಲ್ಲಿ ಮಳೆ ಹೇರಳವಾಗಿ ಬೀಳುತ್ತದೆ; ಈ ನೀರು ಉಪಯೋಗವಾಗದೆ ಹರಿದುಹೋಗುತ್ತಿದ್ದುದನ್ನು ತಪ್ಪಿಸಿ ಇದನ್ನು ಉಪಯುಕ್ತವಾಗಿ ಬಳಸಿಕೊಳ್ಳುವ ಉದ್ದೇಶದಿಂದಲೂ ಈ ಕಟ್ಟೆಯನ್ನು ಹೆಚ್ಚು ದೃಢಪಡಿಸಲೂ ಕ್ಷೇತ್ರವನ್ನು ವಿಸ್ತಾರಮಾಡಲೂ ಯೋಚಿಸಿ ಪಶ್ಚಿಮ ದಿಕ್ಕಿನಲ್ಲಿರುವ ಅಂಬಿ ನದಿಗೆ ಪಾನಶೇತ್ ಎಂಬಲ್ಲಿ ಒಂದು ಮಣ್ಣಿನ ಕಟ್ಟೆಯನ್ನು ನಿರ್ಮಿಸಲಾಗುತ್ತಿತ್ತು. ಆ ಕಟ್ಟೆ ಮುಕ್ತಾಯದ ಘಟ್ಟದಲ್ಲಿದ್ದಾಗ ಬಿದ್ದ ಅತಿಶಯ ಮಳೆಯಿಂದಾಗಿ ಅದು ತೇಲಿಹೋಗಿ, ಪ್ರವಾಹದ ರಭಸದಿಂದಾಗಿ ಖಡಕವಾಸ್ಲಾ ಕಟ್ಟೆಯೂ ಒಡೆದು ಹೋಯಿತು. ಈ ದುರ್ಘಟನೆ 1969ರ ಜುಲೈ 12 ರಂದು ಸಂಭವಿಸಿತು.

ಪುನಃ ಪಾನಶೇತ್ ಕಟ್ಟೆಯನ್ನು ಕಟ್ಟಿ ಮುಗಿಸಲಾಗಿದೆಯಲ್ಲದೆ, ಖಡಕವಾಸ್ಲಾ ಕಟ್ಟೆಯ ದುರಸ್ತಿಯೂ ಆಗಿದೆ. ಈ ಕಟ್ಟೆಯ ಒಂದು ಪಕ್ಕದಲ್ಲಿ ಕೇಂದ್ರ ಜಲ ಮತ್ತು ಶಕ್ತಿ ಸಂಶೋಧನ ಕೇಂದ್ರವಿದೆ. ಇದು ಈ ಕ್ಷೇತ್ರದಲ್ಲಿ ಏಷ್ಯದಲ್ಲೇ ಅತ್ಯಂತ ದೊಡ್ಡದಾದ ಮತ್ತು ಮಹತ್ತ್ವದ ಸಂಶೋಧನ ಕೇಂದ್ರ. ಕಟ್ಟೆಯ ಇನ್ನೊಂದು ಪಕ್ಕದಲ್ಲಿ ರಾಷ್ಟ್ರೀಯ ರಕ್ಷಣ ಅಕಾಡಮಿ ಎಂಬ ಸೈನಿಕ ಶಿಕ್ಷಣ ಮಹಾವಿದ್ಯಾಲಯವಿದೆ. *

**ಖಡಕೀ :** ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯ ಹವೇಲೀ ತಾಲ್ಲೂಕಿನಲ್ಲಿರುವ ಒಂದು ಸ್ಥಳ. ಉ.ಅ.18°36' ಮತ್ತು ಪೂ.ರೇ. 73° 54' ಮೇಲೆ ಪುಣೆಗೆ ವಾಯವ್ಯದಲ್ಲಿ 6.4 ಕಿಮೀ ದೂರದಲ್ಲಿದೆ. ಪುಣೆಯ ಕಾರ್ಪೊರೇಷನಿನ ಕಕ್ಷೆಯಲ್ಲಿ ಸಮಾವಿಷ್ಟವಾಗಿರುವ ಇದರ ಜನಸಂಖ್ಯೆ 80191 (2001) ಇದೊಂದು ಸೈನಿಕಠಾಣೆ. ಇಲ್ಲಿ ಯುದ್ಧ ಸಾಮಗ್ರಿಗಳ ಮತ್ತು ತುಪಾಕಿ ಗುಂಡುಗಳನ್ನು ತಯಾರಿಸುವ, ಕೇಂದ್ರಸರ್ಕಾರದ ರಕ್ಷಣಶಾಖೆಯ ಕಾರ್ಖಾನೆ ಇದೆ. ಇದಲ್ಲದೆ ಕಿರ್ಲೋಸ್ಕರ್ ಆಯಿಲ್ ಎಂಜಿನ್ಸ್ ಲಿ. ಮತ್ತು ಸ್ವಸ್ತಿಕ್ ರಬ್ಬರ್ ಪ್ರಾಡಕ್ಟ್ಸ್ ಲಿ. ಮುಂತಾದ ಕಾರ್ಖಾನೆಗಳೂ ಇವಕ್ಕೆ ಸಹಾಯಕವಾಗಿ ಇತರ ಕಾರ್ಖಾನೆಗಳೂ ಇವೆ. ಇಲ್ಲೂ ಇದರ ಸುತ್ತಮುತ್ತಲೂ ಖಡಕೀ ಶಿಕ್ಷಣ ಸಂಘದವರು ನಡೆಸುವ ಅನೇಕ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿವೆ. ಮುಂಬೈ–ಪುಣೆ ರೈಲು ಮಾರ್ಗದಲ್ಲಿ ಖಡಕೀ ಒಂದು ಪ್ರಮುಖ ನಿಲ್ದಾಣ. ಖಡಕೀಯಲ್ಲಿ 1817ರ ನವೆಂಬರ್ 5ರಂದು ಇಂಗ್ಲಿಷರಿಗೂ ಪೇಶ್ವೆಗಳಿಗೂ ಕದನ ನಡೆಯಿತು. *

**ಖಡಿಯ :** ಭಾರತದ ಭಾಷಾ ಪರಿವಾರಗಳಲ್ಲೊಂದಾದ ಮುಂಡವರ್ಗಕ್ಕೆ ಸೇರಿದ ಒಂದು ಭಾಷೆ. ಇಂದಿಗೂ ಇದು ಕೇವಲ ಆಡುನುಡಿಯಾಗಿ ಉಳಿದಿದೆ. ಈ ಭಾಷೆಯನ್ನು ಆಡುವವರು ಬಹುಮಟ್ಟಿಗೆ ಬೇಸಾಯವನ್ನು ಅವಲಂಬಿಸಿರುವರು. ಉತ್ತರ ಭಾರತದ ಬಿಹಾರ ಪ್ರಾಂತ್ಯದ ಛೋಟಾನಾಗಪುರದ ಜಿಲ್ಲೆಯ ರಾಂಚಿಯ ಸುತ್ತಮುತ್ತ ಇವರು ಹೇರಳವಾಗಿ ಕಂಡುಬರುತ್ತಾರೆ. ಸು. 1,60,000 ಜನ ಭಾಷೆಯನ್ನು ಆಡುತ್ತಿರಬಹುದೆಂದು ಅಂದಾಜು ಮಾಡಲಾಗಿದೆ. ಈ ಜನರ ಅಕ್ಕಪಕ್ಕಗಳಲ್ಲಿ ಆರ್ಯಭಾಷಾವರ್ಗದ ಭಾಷೆಗಳ ಪ್ರಾಬಲ್ಯವಿರುವುದರಿಂದ ಅವುಗಳ ಪ್ರಭಾವ ಇದರ ಮೇಲೆ ಆಗಿ ದಿನದಿನಕ್ಕೂ ಇದರ ರೂಪದಲ್ಲಿ ಮಾರ್ಪಾಡುಗಳಾಗುತ್ತಿವೆಯೆಂದು ಭಾಷಾ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಈ ಭಾಷೆಯಲ್ಲಿ ಧೆಲ್ಕಿ ಖಡಿಯ ಮತ್ತು ದುಧ್ ಖಡಿಯ ಎಂಬ ಎರಡು ಪ್ರಭೇದಗಳಿರುವುದಾಗಿ ತಿಳಿದು ಬರುತ್ತದೆ. ಇತ್ತೀಚೆಗೆ ಎಚ್. ಎಸ್. ಬಿಳಿಗಿಯವರು ಈ ಭಾಷೆಯನ್ನು ಆಧುನಿಕ ಭಾಷಾವಿಜ್ಞಾನಕ್ಕನುಗುಣವಾಗಿ ವ್ಯಾಸಂಗ ಮಾಡಿದ್ದಾರೆ.

ಇದರ ಸ್ವರೂಪವನ್ನು ಕುರಿತು ಕೆಲವು ಮುಖ್ಯಾಂಶಗಳನ್ನು ಇಲ್ಲಿ ಹೇಳಬಹುದು.

(1) ಖಡಿಯ ಭಾಷೆಯ ಸ್ವರಗಳಲ್ಲಿ ಹ್ರಸ್ವದೀರ್ಘಗಳೆಂಬ ಭೇದಗಳಿಲ್ಲ. ಅವು ಸ್ವನ ಪ್ರಭೇದಗಳಾಗಿ ಕಂಡುಬರುತ್ತವೆಯೇ ವಿನಾ ಪ್ರತ್ಯೇಕ ವರ್ಣಗಳಾಗಿ ತೋರಿ ಬರುವುದಿಲ್ಲ.

(2) ವ್ಯಂಜನಗಳಲ್ಲಿ ಕ ಚ ಟ ತ ಪ ವರ್ಗಗಳಲ್ಲಿ ಅಘೋಷ, ಘೋಷಗಳು, ಅಲ್ಪಪ್ರಾಣ, ಮಹಾಪ್ರಾಣಗಳಿರುವುದಲ್ಲದೆ, ಕ್ ಚ್ ಟ್ ಮತ್ತು ಪ್ ಎಂಬ ಮತ್ತೊಂದು ವರ್ಣವರ್ಗ ಉಚ್ಚಾರಣಾ ವೈಪರೀತ್ಯದಿಂದ ಮುಂಡವರ್ಗಕ್ಕೆ ವಿಶಿಷ್ಟವೆನ್ನಿಸಿ ತೋರಿ ಬರುತ್ತದೆ. ಅನುನಾಸಿಕವರ್ಗದಲ್ಲಿ ಣ ಕಾರಕ್ಕೆ ಪ್ರತ್ಯೇಕವಾದ ಅಸ್ತಿತ್ವವಿಲ್ಲ. ಅದು ನಕಾರದ ಒಂದು ಸ್ವನಪ್ರಭೇದವಾಗಿ ಪ್ರಯೋಗವಾಗುತ್ತದೆ.

(3) ಆಕೃತಿಮಾಗಳಲ್ಲಿ ನಾಮಪದಗಳು, ಕ್ರಿಯಾಪದಗಳು, ಸ್ಥಾನನಿರ್ದೇಶಕಗಳು, ಕ್ರಿಯಾವಿಶೇಷಣಗಳು, ಆಶ್ಚರ್ಯಸೂಚಕಗಳು, ಸಂಖ್ಯಾವಾಚಕಗಳು, ಸಮುಚ್ಚಯಗಳು ಮೊದಲಾದವು ಕಂಡುಬರುತ್ತವೆ. ಆಕೃತಿಮಾಗಳು ರೂಪ ಪಡೆಯುವಲ್ಲಿ ಉಪಸರ್ಗ, ಅಂತಃಸರ್ಗ, ಅಂತ್ಯಸರ್ಗ, ದ್ವಿತ್ವ, ಆಂತರಿಕ ಪರಿವರ್ತನೆ ಮೊದಲಾದವು ಕಂಡುಬರುತ್ತವೆ. ಆದರೂ ಆಕೃತಿಮಾಗಳಲ್ಲಿ ರೂಪ ಪರಿವರ್ತನೆ ಬಹಳ ವಿರಳವೆನ್ನಬಹುದು.

ಖಡಿಯ ಭಾಷೆಯಲ್ಲಿ ಬಳಕೆಯಾಗುವ ವಾಕ್ಯಗಳನ್ನು ಮುಖ್ಯವಾಗಿ ಪ್ರಧಾನವೆಂದೂ ಉಪಪ್ರಧಾನವೆಂದೂ ಎರಡು ಗುಂಪುಗಳನ್ನಾಗಿ ವರ್ಗೀಕರಿಸಬಹುದು. ಪ್ರಧಾನವರ್ಗಕ್ಕೆ ಸೇರಿದ ವಾಕ್ಯರಚನೆಯಲ್ಲಿ ಒಂದು ಮುಖ್ಯವಾದ ವಾಕ್ಯಖಂಡ ನಿಯತವಾಗಿ ಬರುತ್ತದೆ. ಅಲ್ಲದೆ, ಸರಳ, ಮಿಶ್ರ ಮತ್ತು ಸಂಯುಕ್ತ ವಿಧಾನಗಳೂ ತೋರಿಬರುತ್ತವೆ. ಮುಖ್ಯವಾದ ವಾಕ್ಯಖಂಡ ಉಪಪ್ರಧಾನ ವಾಕ್ಯರಚನೆಯಲ್ಲಿ ಕಂಡುಬರುವುದಿಲ್ಲ. (ವಿ.ಜಿ.)

**ಖಡೀಬೋಲಿ :** ದೆಹಲಿ, ಮೀರತ್ ಮೊದಲಾದ ಕಡೆ ಬಳಕೆಯಲ್ಲಿರುವ ಗ್ರಾಮೀಣ ನುಡಿ. ಗ್ರಿಯರ್ಸನ್ ಇದನ್ನು ವರ್ನಾಕ್ಯುಲರ್ ಹಿಂದಿ ಎಂದು ಕರೆದರೆ ಸುನೀತಿಕುಮಾರ ಚಟರ್ಜಿ ಜನಪದೀಯ ಹಿಂದೂಸ್ತಾನಿ ಎಂದು ಕರೆದಿದ್ದಾರೆ. ಈ ಖಡೀ ಬೋಲಿಯೇ ಶಿಷ್ಟ ಹಿಂದೀ, ಉರ್ದು ಮತ್ತು ಹಿಂದೂಸ್ತಾನಿಯ ಮೂಲಾಧಾರ ಭಾಷೆಯಾಗಿದೆ. ದಿನಬಳಕೆಯ ಶಬ್ದಗಳ ಜೊತೆಗೆ ಸರಳ ಉರ್ದು ಶಬ್ದಗಳಿಂದ ಕೂಡಿದಾಗ ಇದು ಹಿಂದೂಸ್ತಾನಿ ಎನ್ನಿಸಿಕೊಂಡರೆ, ಸಂಸ್ಕೃತಶಬ್ದದ ಒಲವು ಹೆಚ್ಚಾದಾಗ ಹಿಂದೀ ಎನ್ನಿಸಿಕೊಳ್ಳುತ್ತದೆ. ಅರಬ್ಬೀ ಪಾರಸೀ ಶಬ್ದಗಳ ಬಾಹುಳ್ಯವಿದ್ದಾಗ ಇದೇ ಉರ್ದುವಾಗುತ್ತದೆ.

ಖಡೀಬೋಲಿ ಶಬ್ದ ಅಷ್ಟೇನೂ ಹಳೆಯದಲ್ಲ. ಇದರ ಆರಂಭಿಕ ಅರ್ಥ, ಹೆಸರು, ರೂಪ, ಪ್ರಯೋಗ, ವಿಕಾಸ ಮೊದಲಾದವುಗಳ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. 1803ರ ಸರಿಸುಮಾರಿನಲ್ಲಿ ಖಡೀ ಬೋಲಿ ಎಂಬ ಮಾತಿನ ಪ್ರಯೋಗ ಬರೆವಣಿಗೆಯಲ್ಲಿ ಕಂಡುಬರುತ್ತದೆ. ಆಧುನಿಕ ಯುಗದಲ್ಲಿ ಇದನ್ನು ಮೊದಲಿಗೆ ಸಾಹಿತ್ಯ ರೂಪದಲ್ಲಿ ಬಳಸಿದವರಲ್ಲಿ ಲಲ್ಲೂ ಲಾಲ್, ಗಿಲ್‍ಕ್ರೈಸ್ಟ್ , ಹಾಗೂ ಸದಲ್ ಮಿಶ್ರರ ಹೆಸರು ಉಲ್ಲೇಖನಾರ್ಹ.

ಖಡೀ (ಬರೀ) ಎಂದರೆ ವಿಶುದ್ಧ, ಅಪ್ಪಟ–ಎಂದರೆ ಅರಬ್ಬಿ ಪಾರಸೀ ಶಬ್ದರಹಿತವಾದ್ದು ಎಂದು ಅರ್ಥೈಸುವವರು ಖಡೀ ಬೋಲಿಯನ್ನು ಉರ್ದುವಿಗೆ ಹೋಲಿಸಿಕೊಂಡು ತಮ್ಮ ವಾದವನ್ನು ಮಂಡಿಸಿದ್ದಾರೆ. ಹಿಂದೀ ಸಾಹಿತ್ಯದ ಪ್ರಪ್ರಥಮ ಇತಿಹಾಸ ಬರೆದ ಫ್ರೆಂಚ್ ಲೇಖಕ ಗಾಸಾಂದ ತಾಸಿ ಇದನ್ನು ಶುದ್ಧ ಭಾಷೆ ಎಂದರೆ ಹಿಂದೀ ವ್ಯಾಕರಣವನ್ನು ಬರೆದ ಕೈಲಾಸ (1875) ಅಚ್ಚನುಡಿ ಎನ್ನುತ್ತಾನೆ. ಸುಧಾಕರ ದ್ವಿವೇದಿಯ ಅಭಿಪ್ರಾಯವೂ ಇದೇ. ಚಂದ್ರಬಲಿ, ಪಾಂಡೇಯ ಮೊದಲಾದ ವಿದ್ವಾಂಸರೂ ಇದನ್ನೇ ಅನುಮೋದಿಸಿದ್ದಾರೆ. ಎರಡನೆಯ ತಂಡದ ಪ್ರಕಾರ ಖಡೀ ಎಂದರೆ ನಿಂತಿರುವ ಇಲ್ಲದೆ ಎದ್ದ ಎಂದು ಅರ್ಥ. ರಾಜಸ್ಥಾನೀ, ಗುಜರಾತಿ, ಬ್ರಜ ಮೊದಲಾದವು ಪಡೀ ಬೋಲಿಗಳಾದರೆ (ಬಿದ್ದ ಭಾಷೆ) ಸೈನ್ಯ ಹಾಗೂ ಸಮಾಜದ ಬಳಕೆಯಲ್ಲುಳಿದ ಮೀರತ್ತಿನ ಭಾಷೆ ಎದ್ದ ಭಾಷೆ (ಖಡೀ ಬೋಲಿ) ಎಂದು ಚಂದ್ರಧರ ಶರ್ಮ ಗುಲೇರಿ ಎಂಬ ವಿದ್ವಾಂಸರ ಮತ. ಸುನೀತಿಕುಮಾರ ಚಟರ್ಜಿಯವರೂ ಇದೇ ವಾದವನ್ನು ಸಮರ್ಥಿಸಿದ್ದಾರೆ.

ವ್ರಜ ಭಾಷೆಗಿಂತ ಇದು ಕರ್ಕಶವಾದ್ದರಿಂದ ಇಲ್ಲಿನ ಖಡೀ ಶಬ್ದಕ್ಕೆ ಕಠಿಣ ಕರ್ಕಶ ಎಂಬ ಅರ್ಥವಿದೆಯೆಂದು ಧೀರೇಂದ್ರವರ್ಮ, ಕಾಮತಾಪ್ರಸಾದ ಗುರು ಮೊದಲಾದವರ ವಾದ.

ಮತ್ತೆ ಕೆಲವರು ಖಡೀ ಎಂದರೆ ಸುಸ್ಥಿರ, ಸುಪ್ರಚಲಿತ, ಸುಸಂಸ್ಕೃತ ಅಥವಾ ಶಿಷ್ಟ ಎಂದು ಅರ್ಥಮಾಡಿದ್ದಾರೆ. ಇದಕ್ಕೆ ವಿರುದ್ಧವಾಗಿ ಅಬ್ದುಲ್ ಹಕ್ ಅವರು ಖಡೀ ಬೋಲಿ ಎಂದರೆ ಅಸಂಸ್ಕೃತ ಅನಾಗರಿಕ ಆಡುನುಡಿ ಎಂದು ಪ್ರತಿಪಾದಿಸಿದ್ದಾರೆ. ಹೀಗೆಯೆ ಇದನ್ನು ಹೊಸಭಾಷೆ, ಕೃತಕಭಾಷೆ ಎಂದು ಮುಂತಾಗಿ ವ್ಯಾಖ್ಯಾನ ಮಾಡುವ ವಿದ್ವಾಂಸರೂ ಇದ್ದಾರೆ.

ಖಡೀಬೋಲಿ ಮೊದಲು ಎಲ್ಲಿ ಬಳಕೆಯಲ್ಲಿತ್ತು ಎಂಬ ಪ್ರಶ್ನೆಯೂ ಉಂಟು. ಪ್ರಾಚೀನ ಕುರುಜನಪದದಲ್ಲಿ ಬಳಕೆಯಲ್ಲಿತ್ತೆಂದು ಹೇಳಿ ಇದನ್ನು ಕೌರವೀ ಎಂದು ಕೆಲವರು ಕರೆದಿದ್ದಾರೆ. ಇದು ಮೀರಠ್‌ನ ನೆರೆಹೊರೆಯ ಭಾಷೆ ಎಂದು ಗ್ರಿಯರ್ಸನ್, ಚಟರ್ಜಿ, ಧೀರೇಂದ್ರವರ್ಮ, ಶ್ಯಾಮಸುಂದರದಾಸ್ ಮೊದಲಾದವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇದು ಕುರುಪ್ರದೇಶದಲ್ಲಿ ಪ್ರಚಲಿತವಾಗಿದ್ದ ಅಪಭ್ರಂಶದಿಂದ ಹುಟ್ಟಿಕೊಂಡಿತು ಎನ್ನುವುದು ಅವೈಜ್ಞಾನಿಕ ಎಂದು ಮಾತಾಬದಲ್ ಜಾಯಸ್‌ವಾಲರ ವಾದ. ಅವರ ಪ್ರಕಾರ ಖಡೀಬೋಲಿ ವಸ್ತುತಃ ಪೂರ್ವೀ ಪಂಜಾಬ್, ದೆಹಲಿ ಮತ್ತು ಪಶ್ಚಿಮೀ ಉತ್ತರಪ್ರದೇಶದ ಆಡುನುಡಿಗಳ ಮಿಶ್ರಣದ ಪರಿನಿಷ್ಠಿತರೂಪ.

ಉತ್ಪತ್ತಿಯ ದೃಷ್ಟಿಯಿಂದ ಶೌರಸೇನೀ ಅಪಭ್ರಂಶ ಇಲ್ಲವೆ ಅದರ ಸಂಕ್ರಮಣಾವಸ್ಥೆಯ ರೂಪವಾದ ಶೌರಸೇನೀ ಅವಹಟ್ಟದಿಂದ ಖಡೀಬೋಲಿ ಜನಿಸಿತೆಂದು ಸದ್ಯಕ್ಕೆ ಹೇಳಬಹುದು.

ಖಡೀಬೋಲಿ ಈ ಕೆಳಕಂಡ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಬಳಕೆಯಲ್ಲಿದೆ. ಮೀರಠ್, ಬಿಜನೌರ್, ಮುಜಫ್ಫರ್ ನಗರ, ಸಹಾರನಪುರ, ಡೆಹರಾಡೂನಿನ ಬಯಲು ಪ್ರದೇಶ, ಅಂಬಾಲ ಕಾಲಸಿಯಾ, ಪಟಿಯಾಲಾದ ಪೂರ್ವಭಾಗ, ರಾಮಪುರ ಮತ್ತು ಮುರಾದಾಬಾದ್, ಬಾಂಗರೂ, ಜಾಟಕೀ ಇಲ್ಲವೆ ಹರಿಯಾಣಿ ಒಂದು ರೀತಿಯಲ್ಲಿ ಪಂಜಾಬ್ ಮತ್ತು ರಾಜಸ್ಥಾನೀ ಮಿಶ್ರಿತ ಖಡೀ ಬೋಲಿ. ಇದು ದೆಹಲಿ, ಕರನಾಲ್, ಹಿಸಾರ್, ಪಟಿಯಾಲಾ, ನಾಭಾ ಮೊದಲಾದ ಕಡೆ ಬಳಕೆಯಲ್ಲಿದೆ. ಖಡೀಬೋಲಿ ಕ್ಷೇತ್ರದ ಎಲ್ಲೆಕಟ್ಟು ಈ ರೀತಿ ಇದೆ. ಪೂರ್ವಕ್ಕೆ ವ್ರಜಭಾಷೆ, ಆಗ್ನೇಯದಲ್ಲಿ ಮೇವರಿ ನೈಋತ್ಯದಲ್ಲಿ ಪಶ್ಚಿಮೀ ರಾಜಸ್ಥಾನೀ, ಪಶ್ಚಿಮದಲ್ಲಿ ಪೂರ್ವೀ ಪಂಜಾಬಿ ಮತ್ತು ಉತ್ತರದಲ್ಲಿ ಪಹಾಡಿ ಬೋಲಿ ಅಥವಾ ಗುಡ್ಡಗಾಡಿನ ಆಡುನುಡಿಗಳು. ಖಡೀ ಬೋಲಿಯ ಎರಡು ಪ್ರಮುಖ ಭೇದಗಳೆಂದರೆ ಪೂರ್ವೀ ಖಡೀಬೋಲಿ ಹಾಗೂ ಪಶ್ಚಿಮೀ ಖಡೀಬೋಲಿ.

ಖಡೀಬೋಲಿಯಲ್ಲಿ ಬಳಕೆಯಲ್ಲಿರುವ ಶಬ್ದರೂಪಗಳ ಮೂಲ ಪ್ರಾಕೃತದ ಕಾಲದಲ್ಲೇ ಕಣ್ಣಿಗೆ ಬೀಳುತ್ತದೆ. ಅಪಭ್ರಂಶಕಾಲದಲ್ಲಿ ಅದು ಸ್ಪಷ್ಟವಾಗಿ ಮೈದೋರುತ್ತದೆ. ಉದಾಹರಣೆಗೆ ಹಮ್, ಹಮಾರೀ, ತೂ, ಜೋ, ಹೋ, ಕೈಸ್, ಜೈಸ್ ಮೊದಲಾದ ರೂಪಗಳು ಅಪಭ್ರಂಶದ ಅಂತಿಮ ಕಾಲದಲ್ಲಿ ಗೋಚರವಾಗುತ್ತವೆ. ಆದರೆ ಅವುಗಳ ಪ್ರಯೋಗ ಪರಿಮಿತವಾಗಿತ್ತು. ಸಂಧಿಕಾಲದ ಅವಹಟ್ಟದ ಗ್ರಂಥಗಳಲ್ಲಿ ಖಡೀ ಬೋಲಿಯ ಹಲವು ರೂಪಗಳನ್ನು ಕಾಣಬಹುದು.

ಖಡೀಬೋಲಿಯನ್ನು ದೇವನಾಗರೀ ಲಿಪಿಯಲ್ಲೇ ಬರೆಯುತ್ತಾರೆ.

ಸಾಹಿತ್ಯದಲ್ಲಿ ಖಡೀ ಬೋಲಿಯ ಪ್ರಥಮ ಪ್ರಯೋಗವನ್ನು ಗೋರಖ್‌ನಾಥ ಅಮೀರ್ ಖುಸ್ರೂ, ಬಾಬಾ ಫರೀದ್ ಶೇರ್‌ಗಾಂಜೀ ಮೊದಲಾದವರಲ್ಲಿ ಕಾಣಬಹುದು. ಭೋಲಾನಾಥ ತಿವಾರಿ ಖಡೀ ಬೋಲಿಯ ಉಗಮ ಪ್ರ.ಶ.1000ದ ಸರಿಸುಮಾರಿನಲ್ಲಿ ಆಯಿತೆಂದೂ ಇದರ ಇತಿಹಾಸವನ್ನು ಆದಿಕಾಲ (1000–1500) ಮಧ್ಯಕಾಲ (1500–1800) ಆಧುನಿಕ ಕಾಲ (1800 ರಿಂದ ಈಚೆ) ಎಂದೂ ಹೇಳಿದ್ದಾರೆ. ಪ್ರಾಚೀನತೆಯ ಬಗೆಗೆ ಇಲ್ಲಿ ಹೇಳಿರುವ ಮಾತನ್ನು ಒಪ್ಪಲು ಸಾಕಷ್ಟು ಆಧಾರಗಳು ದೊರಕವು. ಮುಸಲ್ಮಾನರು ಈ ಬೋಲಿಗೆ ಅಂತರ ಪ್ರಾಂತೀಯ ರೂಪವಿತ್ತರು.

ಈ ಬೋಲಿಯಲ್ಲಿ ಕೆಲವು ಜನಪದಗೀತೆಗಳೂ ದೊರೆಯುತ್ತವೆ. ಹಿಂದೀಸಾಹಿತ್ಯದ ಆಧುನಿಕ ಕಾಲದ ಆರಂಭವೇ ಖಡೀ ಬೋಲಿಯ ವಿಶೇಷ ಉನ್ನತಿಯಿಂದ ಆಯಿತು. ಮುದ್ರಣಾಲಯ, ವೃತ್ತಪತ್ರಿಕೆ, ವಿಜ್ಞಾನ ಮೊದಲಾದವುಗಳ ಆವಿರ್ಭಾವದಿಂದಾಗಿ ಗದ್ಯದಲ್ಲಿ ಇದು ವಿಶೇಷವಾಗಿ ಬಳಕೆಗೊಂಡಿತು. 19ನೆಯ ಶತಕದ ತರುವಾಯ ಪಂ. ಮಹಾವೀರ ಪ್ರಸಾದ ದ್ವಿವೇದಿಯವರ ಸತತ ಪ್ರಯತ್ನದಿಂದಾಗಿ ಹಿಂದೀ ಎಂದರೆ ಖಡೀ ಬೋಲಿ ಎನ್ನುವಂತಾಗಿ ಪದ್ಯದ ಮೇಲೂ ಇದರ ಏಕಾಧಿಪತ್ಯ ಸ್ಥಾಪಿತವಾಗಿ ಬ್ರಜಭಾಷೆ ಹಿಂದೆ ಸರಿಯಿತು. ಇಂದು ಇದರ ಸಾಹಿತ್ಯ ವಿಪುಲವಾಗಿ ಬೆಳೆದಿದೆ, ಬೆಳೆಯುತ್ತಿದೆ.

(ಎಂ.ಎಸ್.ಕೆಆರ್.)

**ಖಡ್ಗ :** ಖಡ್ಗವೆಂಬುದು ಕತ್ತಿಗೆ ಇರುವ ಇನ್ನೊಂದು ಹೆಸರು. ಫಾಯಿಲ್, ಏಪೇ ಮತ್ತು ಕೊಂಕುಕತ್ತಿಗಳ ವಿವರಗಳಿಗೂ ಕತ್ತಿವರಸೆಯ ವಿಷಯಕ್ಕೂ **ನೋಡಿ– ಕತ್ತಿವರಸೆ.**

*

**ಖಡ್ಗ ಜೀರುಂಡೆಗಳು :** ಸ್ಕರಾಬಿಡೀ ಕುಟುಂಬದ ಡೈನಾಸ್ಟಿನೀ ಉಪ ಕುಟುಂಬಕ್ಕೆ ಸೇರಿದ ಕೀಟಗಳು. ತಲೆಯಮೇಲೆ ಕೊಂಬಿನಂಥ ಅಂಗವಿರುವುದರಿಂದ ಇವಕ್ಕೆ ಈ ಹೆಸರಿದೆ. ಇವುಗಳಲ್ಲಿ ಆಕರ್ಷಕವಾದ ರೈನಾಸರಸ್ ಜೀರುಂಡೆ, ಒಂದು ಕೊಂಬಿನ ಜೀರುಂಡೆ ಮತ್ತು ಆನೆ ಜೀರುಂಡೆ ಎಂಬ ಮೂರು ವಿಧಗಳುಂಟು.

ಸಾಮಾನ್ಯವಾಗಿ ಇವುಗಳ ಬಣ್ಣ ಕಪ್ಪು. ರಾತ್ರಿ ಅಥವಾ ಸಾಯಂಕಾಲ ಮಾತ್ರ ಹೊರಬರುವುದರಿಂದ ಹಗಲಲ್ಲಿ ಕಾಣಿಸಿಕೊಳ್ಳುವುದು ಅಪರೂಪ. ಗಂಡು ಮತ್ತು ಹೆಣ್ಣು ಜೀರುಂಡೆಗಳಲ್ಲಿ ವ್ಯತ್ಯಾಸವಿದೆ. ಗಂಡುಗಳ ತಲೆಯಮೇಲೆ ಸ್ವಲ್ಪ ಬಾಗಿದ ಕೊಂಬಿರುತ್ತದೆ. ಕೆಲವು ಪ್ರಭೇದಗಳಲ್ಲಿ ಕೊಂಬಿನ ಅಂಚಿನಲ್ಲಿ ಮುಳ್ಳಿನಂಥ ರಚನೆಯಿರುತ್ತದೆ. ಇನ್ನು ಕೆಲವು ಕೊಂಬು ಇಬ್ಬಾಗವಾಗಿ ಇರುತ್ತದೆ.

ಡೈನಾಸ್ಟಿನೀ ಗುಂಪಿನ ಬಹುಪಾಲು ಕೀಟಗಳು ಉಷ್ಣವಲಯವಾಸಿಗಳು. ಉತ್ತರ ಅಮೆರಿಕದ ಪೂರ್ವ ಮತ್ತು ಪಶ್ಚಿಮಾರ್ಧ ಪ್ರಾಂತ್ಯಗಳಲ್ಲಿ ಕೆಲವು ಪ್ರಭೇದಗಳಿವೆ. ಇಲ್ಲಿ ವಾಸಿಸುವ ಡೈನಾಸ್ಟಿಸ್ ಟೈಟಸ್ ಎಂಬ ಪ್ರಭೇದದಲ್ಲಿ ಒಂದು ಕೊಂಬಿದೆ. ಕೊಂಬಿನ ಉದ್ದ 2"–2.5". ಟೆಕ್ಸಸ್ ಪ್ರದೇಶದಲ್ಲಿ ಸ್ಟ್ರಾಟೆಗಸ್ ಜಾತಿಯ ಆನೆ ಜೀರುಂಡೆಗಳಿವೆ. ಇವುಗಳಲ್ಲಿ ಕಾಣುವ ಮೂರು ಕೊಂಬುಗಳು ತಲೆಯ ಮೇಲಿರದೆ ಪ್ರೋನೋಟಂ ಎಂಬ ಭಾಗದ ಮೇಲಿರುತ್ತದೆ. ಒಂದೊಂದು ಕೊಂಬೂ 1.5"–2" ಉದ್ದಕ್ಕೆ ಬೆಳೆಯುತ್ತದೆ. ಸ್ಕೈಲೊರಿಕ್ಟಸ್ ಸ್ಯಾಟಿರಸ್ ಎಂಬುದು ಸುಮಾರು ಒಂದು ಅಂಗುಲಕ್ಕಿಂತ ಸ್ವಲ್ಪ ಹೆಚ್ಚು ಉದ್ದದ ಗಾಢ ಕಂದುಬಣ್ಣದ ಜೀರುಂಡೆ. ಗಂಡುಗಳಲ್ಲಿ ಗಡುಸಾದ ಹಾಗೂ ನೆಟ್ಟಗಿರುವ ಒಂದು ಕೊಂಬಿದೆ. ಆದರೆ ಹೆಣ್ಣಿನಲ್ಲಿ ಕೊಂಬು ಗುಬಟಿನ ಹಾಗಿದೆ. ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುವ ಒರಿಕ್ಟಿಸ್ ರೈನಾಸರಸ್ ಎಂಬ ಹೆಸರಿನ ಜೀರುಂಡೆಯಲ್ಲಿ ಗಂಡು ಹೆಣ್ಣುಗಳೆರಡರಲ್ಲೂ ಕೊಂಬಿದೆ. ಆದರೆ ಹೆಣ್ಣಿನ ಕೊಂಬು ಚಿಕ್ಕದು.

ಖಡ್ಗ ಜೀರುಂಡೆಗಳ ಜೀವನ ಕ್ರಮದ ಬಗೆಗೆ ಸಂಶೋಧನೆಗಳು ನಡೆಯುತ್ತಿವೆ.



ಮರದ ಕಾಂಡಗಳಲ್ಲಿ, ಗೊಬ್ಬರ ಮತ್ತು ಕೊಳೆಯುವ ಎಲೆಗಳ ರಾಶಿಯಲ್ಲಿ ಇವುಗಳ ಡಿಂಬಗಳನ್ನು ಕಾಣಬಹುದು.

ಖಡ್ಗ ಜೀರುಂಡೆಗಳು ಕೆಲವು ಬೆಳೆಗಳಿಗೆ ಬಹಳ ಅಪಾಯಕಾರಿಗಳು. ಸ್ಕೈಲೊರಿಕ್ಟಸ್ ಸ್ಯಾಟಿರಸಿನ ಡಿಂಬಗಳು ಕೆಲವು ಜಾತಿ ಮರಗಳ ಬೇರುಗಳನ್ನು ತಿಂದು ಜೀವಿಸುತ್ತವೆ. ಇನ್ನು ಕೆಲವು ಪ್ರಭೇದಗಳು ಕಬ್ಬು ಮತ್ತು ಬತ್ತದ ಬೇರುಗಳನ್ನು ತಿಂದು ಬೆಳೆಯನ್ನು ನಾಶಪಡಿಸುತ್ತವೆ. *ಒರಿಕ್ಟಿಸ್ ರೈನಾಸರಸ್* ಪ್ರಭೇದದ ವಿಚಾರ ಸ್ವಲ್ಪ ಹೆಚ್ಚಿಗೆ ತಿಳಿದಿದೆ. ಭಾರತದಲ್ಲಿ ಇದು ಒಂದು ಮುಖ್ಯವಾದ ತೆಂಗಿನಪಿಡುಗು ಎನಿಸಿದೆ. ಅಲ್ಲದೆ ಅಡಕೆ ಮುಂತಾದ ಇತರ ಮರಗಳಿಗೂ ಮಾರಕವಾಗಿದೆ. ಇದರ ದೇಹದ ಉದ್ದ 1.5", ಅಗಲ 0.75". ಆರೋಗ್ಯವಂತ ತೆಂಗುಗಳ ಸುಳಿಯನ್ನು ಕೊರೆದು ಸೀಬು ಸುತ್ತಿಕೊಂಡಿರುವ ಗರಿಗಳ ರಸವನ್ನು ಹೀರಿಕೊಂಡು ಜೀವಿಸುತ್ತದೆ. ಇದರ ಚಟುವಟಿಕೆ ಸಾಯಂಕಾಲದ ಮೇಲೆ ಪ್ರಾರಂಭವಾಗುತ್ತದೆ. ಇದು ಸ್ವತಃ ಸುಳಿಗರಿಗಳನ್ನು ತಿಂದು ನಾಶಪಡಿಸುವುದಲ್ಲದೆ ಸೊಂಡಿಲು ಜೀರುಂಡೆಗಳು ವಾಸಿಸಲು ಅನುಕೂಲ ಮಾಡಿಕೊಡುತ್ತದೆ. ಇದರ ಹಾವಳಿಯಿಂದ ತೆಂಗಿನ ಸುಳಿಗರಿಗಳು ಸಣ್ಣವಾಗಿ ಮರದ ಬೆಳವಣಿಗೆ ಕುಗ್ಗುತ್ತದೆ. ಇದರಿಂದ ಇಳುವರಿಯೂ ಕಡಿಮೆಯಾಗುತ್ತದೆ.

ಒಂದು ಹೆಣ್ಣು ಕೀಟ ಸು. 60 ಮೊಟ್ಟೆಗಳನ್ನು ಕೊಳೆಯುವ ಎಲೆಗಳ ಮಧ್ಯೆ ಇಲ್ಲವೇ ಸಗಣಿ, ಮರದ ಹೊಟ್ಟು ಮುಂತಾದವುಗಳಲ್ಲಿ ಇಡುತ್ತದೆ. ಮೊಟ್ಟೆಯೊಡೆದು ಮರಿಯಾಗಲು 10–12 ದಿನಗಳು ಬೇಕು. ಡಿಂಬಾವಸ್ಥೆಯ ಅವಧಿ 70–200 ದಿನಗಳು. (ದಕ್ಷಿಣ ಭಾರತದಲ್ಲಿ ಇದು ಬೇಸಗೆ ಕಾಲದಲ್ಲಿ 100 ದಿನಗಳು ಚಳಿಗಾಲದಲ್ಲಿ 120–140 ದಿನಗಳು ಇರುತ್ತದೆ). ಕೋಶಾವಸ್ಥೆಯನ್ನು ಸೇರುವ 7–10 ದಿನಗಳ ಮುಂಚೆಯೇ ಡಿಂಬಗಳ ಚಟುವಟಿಕೆ ಕಡಿಮೆಯಾಗುತ್ತದೆ. ಕೋಶಾವಸ್ಥೆಯ ಅವಧಿ ಸು. 21 ದಿನಗಳು. ಹೀಗೆ ಮೊಟ್ಟೆಯ ಹಂತದಿಂದ ಜೀರುಂಡೆಯಾಗುವವರೆಗೆ 4–9 ತಿಂಗಳು ಬೇಕು, ವಯಸ್ಕ ಜೀರುಂಡೆ 10 ತಿಂಗಳು ಬದುಕಿರುತ್ತದೆ. (ಎನ್.ವಿ.ಎ.)

**ಖಡ್ಗಬಾಲ ಮೀನು :** ಸಿಪ್ರಿನೊಡಾಂಟೀ ಗುಂಪಿನ ಪೋಸಿಲಿಡೀ ಕುಟುಂಬಕ್ಕೆ ಸೇರಿದ ಸಿಹಿನೀರು ಮೀನು. ಇದರ ಶಾಸ್ತ್ರೀಯನಾಮ ಕ್ಸಿಫೋಫೊರಸ್ *ಹೆಲೇರಿ.* ಗಪ್ಪಿ, ಪ್ಲಾಟಿ ಮೀನು ಮತ್ತು ಮೋಲಿಗಳು ಇದಕ್ಕೆ ಹತ್ತಿರ ಸಂಬಂಧಿಗಳು. ಇದು ಅತ್ಯಂತ ಜನಪ್ರಿಯ ಅಕ್ವೇರಿಯಂ ಮೀನು.

ಕತ್ತಿಯಂತಿರುವ ಬಾಲ ಈ ಮೀನಿನ ವಿಶೇಷ ಗುಣ. ಇದು ಪ್ರಾಯಕ್ಕೆ ಬಂದ ಗಂಡುಮೀನಿನಲ್ಲಿ ಕಂಡುಬರುತ್ತದೆ. ಬಾಲದ ರೆಕ್ಕೆಯ ಕೆಳಭಾಗ ನೀಳವಾಗಿ ಬೆಳೆದು ಅದರ ತುದಿ ಮೊನಚಾಗಿ ಖಡ್ಗವನ್ನು ಹೋಲುವುದರಿಂದ ಈ ಮೀನಿಗೆ ಈ ಹೆಸರು. ಮೀನು ಸುಮಾರು 15 ಸೆಂ.ಮೀ. ವರೆಗೂ ಬೆಳೆಯುತ್ತದೆ. ಬಾಲ ದೇಹದ ಅರ್ಧದಷ್ಟಿದೆ. ಈ ಬಾಲದ ಉಪಯೋಗವೇನೆಂದು ಸರಿಯಾಗಿ ತಿಳಿದಿಲ್ಲ. ಪ್ರಣಯ ಕೇಳಿ ಸಂದರ್ಭದಲ್ಲಿ ಗಂಡು ಇದನ್ನು ಪ್ರದರ್ಶಿಸುವುದೆಂಬ ಅಭಿಪ್ರಾಯವಿದೆ. ಈ ಪ್ರದರ್ಶನದಿಂದ ಹೆಣ್ಣು ಉದ್ರೇಕಗೊಳ್ಳುವುದೋ ಅಥವಾ ಮರುಳುಗೊಳ್ಳುವುದೋ ತಿಳಿಯದು.

ಖಡ್ಗಬಾಲ ಮೀನು ಮೆಕ್ಸಿಕೋದ ಮೂಲವಾಸಿ. ಇಲ್ಲಿಂದ 1909ರಲ್ಲಿ ಮೊದಲ ಬಾರಿಗೆ ಇದನ್ನು ಜರ್ಮನಿಗೆ ತರಲಾಯಿತು. ಇದಕ್ಕೆ ಎರಡು ವರ್ಷಗಳ ಮುನ್ನ ಪ್ಲಾಟಿ ಮೀನನ್ನು ತರಲಾಗಿತ್ತು. ಈ ಎರಡು ಪ್ರಭೇದಗಳ ಮೀನುಗಳನ್ನೂ ಅಡ್ಡ ಹಾಯಿಸಿ ಅನೇಕ ಅಂದವಾದ ಬಣ್ಣಬಣ್ಣದ ಮಿಶ್ರತಳಿಗಳನ್ನು ಪಡೆಯಲಾಯಿತು. ಈಗಿರುವ ಎಲ್ಲ ಕೆಂಪು ಪ್ಲಾಟಿ ಮೀನುಗಳು ಮತ್ತು ಖಡ್ಗ ಬಾಲದ ಮೀನುಗಳು ಅಡ್ಡ ಹಾಯ್ಕೆಯಿಂದ ಹುಟ್ಟಿದ ಮಿಶ್ರತಳಿಗಳು. ಸೋಜಿಗದ ಸಂಗತಿಯೆಂದರೆ ಸಾಮಾನ್ಯ ಬಗೆಯ ಪ್ಲಾಟಿ ಮೀನುಗಳು ಮತ್ತು ಖಡ್ಗ ಬಾಲ ಮೀನುಗಳೆರಡೂ ಮೆಕ್ಸಿಕೋದಲ್ಲಿ ಒಂದೇ ಕೊಳ ಅಥವಾ ಹೊಳೆಯಲ್ಲಿದ್ದರೂ ಅವುಗಳಲ್ಲಿ ತಳಿ ಸಂಕರಣ ಇಲ್ಲ. ಆದರೆ ಜಲಚರ ಪ್ರಾಣಿ ಸಂಗ್ರಹಾಲಯದ ನೀರಿನಲ್ಲಿ ಮಾತ್ರ ತಳಿಸಂಕರ ಕ್ರಿಯೆ ನಡೆಯುತ್ತದೆ.

ಖಡ್ಗ ಬಾಲ ಮೀನುಗಳು ಹಾಂಡುರಾಸ್, ಬ್ರಿಟಿಷ್ ಹಾಂಡುರಾಸ್, ಗ್ವಾಟೆ ಮಾಲ ಮತ್ತು ದಕ್ಷಿಣ ಮೆಕ್ಸಿಕೋದಲ್ಲಿ (ಯುಕಟಾನ್ ಬಿಟ್ಟು) ಸಾಮಾನ್ಯವಾಗಿ ಕಂಡುಬರುತ್ತವೆ.

ಇವು ಸಾಮಾನ್ಯವಾಗಿ ಪ್ಲಾಟಿ ಮೀನುಗಳಿಗಿಂತ ಎತ್ತರ ಪ್ರದೇಶ ಮತ್ತು ತಂಪು ನೀರನ್ನು ಇಚ್ಛಿಸುತ್ತವೆ.

ಪ್ಲಾಟಿ ಮೀನು ಮತ್ತು ಖಡ್ಗ ಬಾಲದ ಮೀನುಗಳ ಕೆಲವು ಅಡ್ಡತಳಿಗಳು ಸಾಮಾನ್ಯವಾಗಿ ಕರಿ ಏಡಿಗಂತಿ ರೋಗಕ್ಕೆ (ಬ್ಲ್ಯಾಕ್ ಕ್ಯಾನ್ಸರ್) ಸುಲಭವಾಗಿ ತುತ್ತಾಗುತ್ತವೆ. ಇದಕ್ಕೆ ಕಾರಣವನ್ನು ಕಂಡುಹಿಡಿಯಲು ಕೆಲವು ವೈದ್ಯಕೀಯ ಸಂಶೋಧನಾಲಯಗಳ ತಳಿಶಾಸ್ತ್ರ ಪ್ರಯೋಗಾಲಯಗಳಲ್ಲಿ ಸಂಶೋಧನೆ ನಡೆಯುತ್ತಿದೆ. (ಎಸ್.ವಿ.ಎ.)

**ಖಡ್ಗಮೃಗ :** ಆಫ್ರಿಕ ಮತ್ತು ಏಷ್ಯ ಖಂಡಗಳ ಉಷ್ಣ ಹಾಗೂ ಉಪೋಷ್ಣವಲಯಗಳ ಮೂಲವಾಸಿಯಾದ ಒಂದು ಬೃಹದ್ಗಾತ್ರದ ಸ್ತನಿ. ಘೇಂಡಾಮೃಗ ಪರ್ಯಾಯನಾಮ. ಮ್ಯಾಮೇಲಿಯ ವರ್ಗದ ಪೆರಿಸೊಡ್ಯಾಕ್ಟಿಲ ಗಣದಲ್ಲಿಯ ರೈನೊಸೆರಾಟಿಡೀ ಕುಟುಂಬಕ್ಕೆ ಸೇರಿದೆ. ಬೆಸಸಂಖ್ಯೆಯ ಬೆರಳುಗಳುಳ್ಳ ಗೊರಸುಗಳು ಮತ್ತು ಮೂತಿಯ ಮೇಲೆ ಒಂದು ಅಥವಾ ಎರಡು ಕೊಂಬುಗಳಿರುವುದು ಈ ಪ್ರಾಣಿಯ ವಿಶಿಷ್ಟ ಲಕ್ಷಣಗಳು. ಪೆರಿಸೊಡ್ಯಾಕ್ಟಿಲ ಗಣಕ್ಕೆ ಸೇರಿದ ಕುದುರೆ, ಜೀಬ್ರ, ಟಾಪಿರ್ ಪ್ರಾಣಿಗಳಿಗೆ ಹತ್ತಿರದ ಸಂಬಂಧಿ ಇದು. ಇವಕ್ಕೂ ಖಡ್ಗಮೃಗಕ್ಕೂ ಬೆಸಸಂಖ್ಯೆಯ ಬೆರಳುಗಳ ಲಕ್ಷಣದಲ್ಲಿ ಪರಸ್ಪರ ಸಾಮ್ಯವಿದೆ.

ಖಡ್ಗಮೃಗಗಳಲ್ಲಿ ಒಟ್ಟು 4 ಜಾತಿಗಳಿಗೆ ಸೇರಿದ 5 ಪ್ರಭೇದಗಳಿವೆ. ಆಫ್ರಿಕದ (ಉಗಾಂಡ, ಕಾಂಗೊ, ಝೂಲೂ ಲ್ಯಾಂಡ್, ಕೀನ್ಯ) ಸವಾನ ಹುಲ್ಲುಗಾಡುಗಳಲ್ಲಿ ಮತ್ತು ದಟ್ಟ ಕಾಡುಗಳಲ್ಲಿ ಡೈಸೆರಾಸ್ ಬೈಕಾರ್ನಿಸ್ (ಕರಿ ಖಡ್ಗಮೃಗ) ಮತ್ತು ಸೆರಟೋತೀರಿಯಂ ಸೈಮಸ್ (ಬಿಳಿ ಖಡ್ಗಮೃಗ) ಪ್ರಭೇದಗಳೂ ಭಾರತದ ಅಸ್ಸಾಮಿನ ಕಾಡುಗಳಲ್ಲಿ ರೈನಾಸರಾಸ್ ಯೂನಿಕಾರ್ನಿಸ್ ಪ್ರಭೇದವೂ ಜಾವದಲ್ಲಿ ರೈನಾಸರಾಸ್ ಸೋಂಡೇಕಸ್ ಪ್ರಭೇದವೂ ಸುಮಾತ್ರದಲ್ಲಿ ಡೈಡರ್ಮೊಸೆರಾಸ್ (ಡೈಸೆರಾರೈನಸ್) ಸುಮಾತ್ರೆನ್ಸಿಸ್ ಪ್ರಭೇದವೂ ಕಾಣದೊರೆಯುತ್ತವೆ.

ಖಡ್ಗಮೃಗದ ದೇಹ ಬಲು ಸ್ಥೂಲ (ಪೂರ್ಣ ಬೆಳೆದ ಗಂಡು ಖಡ್ಗಮೃಗದ ಉದ್ದ ಸುಮಾರು 2–4.2 ಮೀ., ಎತ್ತರ ಸುಮಾರು 1–2 ಮೀ. ತೂಕ 1–3.5 ಮೆಟ್ರಿಕ್ ಟನ್ನುಗಳು). ಆನೆಯನ್ನು ಬಿಟ್ಟರೆ ಆಫ್ರಿಕದ ಸೆರಟೋತೀರಿಯಮ್ ಸೈಮಸ್ ಪ್ರಭೇದವೇ ಬಲು ದೊಡ್ಡ ಭೂವಾಸಿ ಪ್ರಾಣಿಯೆನ್ನಲಾಗಿದೆ. ಹೆಣ್ಣು ಗಂಡಿಗಿಂತ ಚಿಕ್ಕದು. ಚರ್ಮ ಬಹಳ ದಪ್ಪ ಹಾಗೂ ಗಡುಸು. ಆಫ್ರಿಕದ ಪ್ರಭೇದಗಳಲ್ಲಿ ಚರ್ಮ ನಯವಾಗಿದೆ. ಆದರೆ ಭಾರತ ಹಾಗೂ ಜಾವದಲ್ಲಿಯ ಖಡ್ಗಮೃಗಗಳ ಚರ್ಮ ಕತ್ತು ಹಾಗೂ ಕಾಲುಗಳ ಬಳಿ ಮಡಿಚಿಕೊಂಡಿದ್ದು ಒಂದು ಬಗೆಯ ಯುದ್ಧ ಕವಚದಂತೆ ಕಾಣುತ್ತದೆ. ಕಿವಿಯ ಅಂಚು, ಬಾಲದ ತುದಿ ಇವನ್ನು ಬಿಟ್ಟರೆ ದೇಹದ ಮೇಲೆ ಎಲ್ಲೂ ಕೂದಲುಗಳಿಲ್ಲ. ದೇಹದ ಬಣ್ಣ ಬೂದಿ ಇಲ್ಲವೆ ಕಂದು. ಆಫ್ರಿಕದ ಡೈಸೆರಾಸ್ ಪ್ರಭೇದವನ್ನು ಕರಿ ಖಡ್ಗಮೃಗವೆಂದೂ ಸೆರಟೊ ತೀರಿಯಂ ಪ್ರಭೇದವನ್ನು ಬಿಳಿ ಖಡ್ಗಮೃಗವೆಂದೂ ಕರೆಯುವುದು ವಾಡಿಕೆಯಲ್ಲಿದೆಯಾದರೂ ಅವು ವಾಸ್ತವವಾಗಿ ಶುದ್ಧ ಕಪ್ಪು, ಶುದ್ಧ ಬಿಳಿ ಬಣ್ಣದವಲ್ಲ. ಬಿಳಿ ಬಗೆಯದರ ಮೈ ಬಣ್ಣ ಬೇರೆ ಬಗೆಗಳಿಗೆ ಹೋಲಿಸಿದರೆ ಕೊಂಚ ತಿಳಿಯಾಗಿದೆ ಅಷ್ಟೆ. ಖಡ್ಗಮೃಗಗಳ ದೇಹದ ಮೇಲೆ ಅಲ್ಲಲ್ಲೆ ಗುಬುಟುಗಳಿರುವುದೂ ಉಂಟು. ಮೈಗಾತ್ರಕ್ಕೆ ಹೋಲಿಸಿದರೆ ಕಾಲುಗಳು ಬಲುಚಿಕ್ಕವು; ಕಂಬದಂತಿವೆ. ಮುಂಗಾಲು ಮತ್ತು ಹಿಂಗಾಲುಗಳಲ್ಲಿ ತಲಾ ಮೂರು ಬೆರಳುಗಳಿವೆ. ಒಂದೊಂದು ಬೆರಳಲ್ಲೂ ಪರಸ್ಪರ ಬಿಡಿಬಿಡಿಯಾದ ಗೊರಸುಗಳಿವೆ. ಖಡ್ಗಮೃಗದ ಕತ್ತು ಚಿಕ್ಕದು. ತಲೆ ಭಾರಿಯಾಗಿದೆ. ಮೇಲ್ಮುಖವಾಗಿ ಕೊಂಚ ಬಾಗಿದಂತಿರುವ ಮೂತಿಯ ಮೇಲೆ ಕೊಂಬುಗಳಿವೆ. ಆಫ್ರಿಕದಲ್ಲಿ ಮತ್ತು ಸುಮಾತ್ರದಲ್ಲಿ ವಾಸಿಸುವ ಖಡ್ಗಮೃಗಗಳಲ್ಲಿ ಒಂದರ ಹಿಂದೊಂದು ಇರುವ 2 ಕೊಂಬುಗಳೂ

ಆಫ್ರಿಕದ ಖಡ್ಗಮೃಗ

ಭಾರತ ಹಾಗೂ ಜಾವದಲ್ಲಿರುವ ಪ್ರಭೇದಗಳಲ್ಲಿ ಒಂದೇ ಒಂದು ಕೊಂಬೂ ಇದೆ. ಕೊಂಬುಗಳಿಗೂ ತಲೆಬುರುಡೆಯ ಮೂಳೆಗಳಿಗೂ ಯಾವುದೇ ಸಂಬಂಧವಿಲ್ಲ. ಮೂತಿಯ ಮೇಲಿನ ಕೆಲವು ವಿಶೇಷ ಬಗೆಯ ಕೂದಲುಗಳು ಒತ್ತಾಗಿ ಹೆಣೆದುಕೊಂಡು, ಬಿರುಸುಗೊಂಡು ಉಂಟಾದ ರಚನೆಗಳಿವು. ಇದರಿಂದಾಗಿ ಖಡ್ಗಮೃಗದ ಕೊಂಬುಗಳು ಬೇರೆ ಪ್ರಾಣಿಗಳ (ದನ, ಜಿಂಕೆ, ಜಿರಾಫೆ ಇತ್ಯಾದಿ) ಕೊಂಬುಗಳಿಂದ ಭಿನ್ನರೀತಿಯಾಗಿವೆ. ಭಾರತದಲ್ಲಿ ಖಡ್ಗಮೃಗ ತನ್ನ ಕೊಂಬನ್ನು ಯಾವುದಾದರೂ ಗಟ್ಟಿಯಾದ ತಲಕ್ಕೆ ಮಸೆದು ಚಪ್ಪಟೆ ಮಾಡಿಕೊಳ್ಳುವುದುಂಟು. ಆಫ್ರಿಕದಲ್ಲಿಯ ಪ್ರಭೇದಗಳು ಈ ರೀತಿ ಮಾಡುವುದಿಲ್ಲವಾಗಿ ಕೊಂಬುಗಳು ಚೂಪಾಗಿಯೇ ಇರುತ್ತವೆ. ಆಫ್ರಿಕದ ಪ್ರಭೇದಗಳಲ್ಲಿ ಮುಂದಿನದು ಹೆಚ್ಚು ಉದ್ದವಾಗಿರುತ್ತವೆ. ಕೆಲವು ಮೃಗಗಳಲ್ಲಿ ಸು. 1.5 ಮೀ. ಉದ್ದವಿರುವುದುಂಟು. ಖಡ್ಗ ಮೃಗ ಆಕ್ರಮಣಕ್ಕೆ ಮತ್ತು ತನ್ನ ರಕ್ಷಣೆಗೆ ಕೊಂಬನ್ನು ಆಯುಧವನ್ನಾಗಿ ಬಳಸುತ್ತದೆ. ರೈನಾಸೆರಾಸ್ ಮತ್ತು ಡೈಸರಾಸ್ ಪ್ರಭೇದಗಳಲ್ಲಿ ಮೇಲ್ತುಟಿ ಕೊಂಚ ಮುಂದಕ್ಕೆ ಚಾಚಿದಂತಿದ್ದು ಅದಕ್ಕೆ ಆಹಾರವನ್ನು ಹಿಡಿದುಕೊಳ್ಳುವ ಸಾಮರ್ಥ್ಯವುಂಟು. ಉಳಿದ ಪ್ರಭೇದಗಳಲ್ಲಿ ಮೇಲ್ತುಟಿ ಮೊಂಡಾಗಿದೆ. ತಲೆಯ ಇಕ್ಕೆಲಗಳಲ್ಲಿ ಪುಟ್ಟ ಗಾತ್ರದ ಕಣ್ಣುಗಳಿವೆ. ಕಿವಿಗಳು ಚಿಕ್ಕವು. ಕಿವಿಗಳ ತುದಿಯಲ್ಲಿ ಕೂದಲುಗಳ ಕುಚ್ಚಿದೆ.

ಖಡ್ಗಮೃಗ ಸಾಮಾನ್ಯವಾಗಿ ಒಂಟಿಯಾಗಿಯೇ ವಾಸಿಸುತ್ತದೆ. ಸಂತಾನವೃದ್ಧಿಯ ಕಾಲದಲ್ಲಿ ಮಾತ್ರ ಹೆಣ್ಣು ಮತ್ತು ಗಂಡು ಪ್ರಾಣಿಗಳು ಜೊತೆಜೊತೆಯಾಗಿಯೇ ಓಡಾಡುತ್ತವೆ. ಖಡ್ಗಮೃಗಗಳು ನಿಶಾಚರಿಗಳು. ಸಂಜೆಯಿಂದ ಮುಂಜಾವಿನ ವರೆಗೂ ಆಹಾರಾನ್ವೇಷಣೆಯಲ್ಲಿ ತೊಡಗಿದ್ದು ಹಗಲೆಲ್ಲ ಯಾವುದಾದರೂ ವಿವಿಕ್ತ ಸ್ಥಳದಲ್ಲಿ ಅಡಗಿರುತ್ತವೆ. ಬಲು ಒತ್ತುಕಟ್ಟಾದ ಪೊದೆಗಳಲ್ಲಿ ಅವಿತಿಟ್ಟುಕೊಂಡಿದ್ದು ನಿದ್ದೆ ಮಾಡುವುದೇ ರೂಢಿ. ನಿಂತುಕೊಂಡು ಇಲ್ಲವೆ ನೆಲದ ಮೇಲೆ ಒರಗಿ ನಿದ್ದೆ ಮಾಡುತ್ತವೆ. ಬಿಸಿಲಿನ ತಾಪ ಹೆಚ್ಚಾದಾಗ ಕೆಸರು ನೀರಿನಲ್ಲಿ ಹೊರಳಾಡುತ್ತ, ನದಿಗಳಲ್ಲಿ ಈಜುತ್ತ ಕಾಲಕಳೆಯುವುದೆಂದರೆ ಇವಕ್ಕೆ ಬಲು ಅಚ್ಚುಮೆಚ್ಚು. ಎಲ್ಲ ಬಗೆಯ ಖಡ್ಗಮೃಗಗಳೂ ಸಂಪೂರ್ಣ ಸಸ್ಯಹಾರಿಗಳು. ಸೆರಟೋತೀರಿಯಂ ಜಾತಿಯ ಖಡ್ಗ ಮೃಗಗಳು ಹುಲ್ಲು ಮೇಯುತ್ತವೆ. ಉಳಿದವು ಗಿಡಮರಗಳ ಎಳೆಚಿಗುರನ್ನೂ ಮೊಗ್ಗುಗಳನ್ನೂ ಮೆಲ್ಲುತ್ತವೆ. ಖಡ್ಗಮೃಗಗಳು ಬಲು ಸ್ಥೂಲ ಗಾತ್ರದವಾದರೂ ಚೆನ್ನಾಗಿ, ವೇಗವಾಗಿ (ಗಂಟೆಗೆ ಸು. 45 ಕಿಮೀ. ವೇಗದಲ್ಲಿ) ಓಡಬಲ್ಲವು. ಓಟ ಕುದುರೆಯ ನಾಗಾಲೋಟವನ್ನು ಹೋಲುತ್ತದೆ. ಖಡ್ಗಮೃಗದ ದೃಷ್ಟಿಶಕ್ತಿ ಬಲುಮಂದ. ಆದರೆ ಘ್ರಾಣಶಕ್ತಿ ಹಾಗೂ ಶ್ರವಣಶಕ್ತಿಗಳು ಬಹಳ ಚುರುಕಾಗಿವೆ. ಖಡ್ಗಮೃಗಗಳಿಗೆ ಮನುಷ್ಯನನ್ನು ಬಿಟ್ಟರೆ ಬೇರಾವ ಶತ್ರುಗಳೇ ಇಲ್ಲ ಎಂದು ಹೇಳಬಹುದು. ಆಫ್ರಿಕದ ಕಪ್ಪು ಖಡ್ಗಮೃಗವನ್ನು ಬಿಟ್ಟರೆ ಉಳಿದವೆಲ್ಲ ಸಾಧುಸ್ವಭಾವದವು. ಅಂಜುಕುಳಿಗಳೆಂದರೂ ತಪ್ಪಿಲ್ಲ. ಆದರೆ ಶತ್ರುಗಳಿಂದಾವೃತವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಗದಾಗ ಬಲು ಕ್ರೂರವಾಗಿ ಹೋರಾಡಬಲ್ಲುವು. ರಭಸದಿಂದ ಶತ್ರುಗಳ ಮೇಲೆ ನುಗ್ಗಿ ಕೊಂಬಿನಿಂದ ಇಲ್ಲವೆ ಹಲ್ಲುಗಳಿಂದ ತಿವಿಯುತ್ತವೆ.

ನೀರಿನ ಆಸರೆಗಳ ಸಮೀಪದ ಪ್ರದೇಶಗಳಲ್ಲೆ ಖಡ್ಗಮೃಗಗಳ ವಾಸ. ಸಾಮಾನ್ಯವಾಗಿ ದಟ್ಟ ಪೊದೆಗಳ ನಡುವೆ ಸುರಂಗದ ರೀತಿಯ ದಾರಿ ಮಾಡಿಕೊಂಡು ತಾವು ಆಹಾರವನ್ನು

ಮೇಯುವ ಸ್ಥಳಗಳಿಂದ ನೀರಿನ ನೆಲೆಗಳಿಗೆ ಹೋಗಿಬರುತ್ತವೆ. ಸಾಧಾರಣವಾಗಿ ಒಂದೊಂದು ಖಡ್ಗಮೃಗವೂ ಒಂದು ನಿರ್ದಿಷ್ಟ ಪ್ರದೇಶವನ್ನು ಆರಿಸಿಕೊಂಡು ಅದರ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿಕೊಳ್ಳುತ್ತದೆ. ಆ ಪ್ರದೇಶದ ಎಲ್ಲೆಕಟ್ಟನ್ನು ಗುರುತಿಸುವುದಕ್ಕಾಗಿ ಎಂಬಂತೆ ಅಲ್ಲಲ್ಲಿ ಲದ್ದಿ ಇಲ್ಲವೆ ಮೂತ್ರ ವಿಸರ್ಜನೆ ಮಾಡುತ್ತದೆ.

ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಮತ್ತು ಹೆಣ್ಣು ಖಡ್ಗ ಮೃಗಗಳು ಜೊತೆಗೂಡಿ ವಾಸಿಸತೊಡಗುತ್ತವೆ. ಸು. 4 ತಿಂಗಳು ಕಾಲ ಹೀಗೆ ಜೊತೆಯಾಗಿರುವುದುಂಟು. ದೀರ್ಘಾವಧಿಯ ಗರ್ಭಧಾರಣೆಯ ಕಾಲದ ಅನಂತರ ಸೂಲಿಗೆ ಒಂದೇ ಒಂದು ಮರಿ ಹುಟ್ಟುತ್ತದೆ. ಗರ್ಭಧಾರಣೆಯ ಅವಧಿ ಯೂನಿಕಾರ್ನಿಸ್ ಪ್ರಭೇದದಲ್ಲಿ 19 ತಿಂಗಳು, ಸೋಂಡೇಕಸ್ ಪ್ರಭೇದದಲ್ಲಿ 17 ತಿಂಗಳು, ಸುಮಾತ್ರದ ಖಡ್ಗಮೃಗದಲ್ಲಿ 7–8 ತಿಂಗಳು, ಆಫ್ರಿಕದ ಬೈಕಾರ್ನಿಸ್ ಹಾಗೂ ಸೆರಟೊತೀರಿಯಂ ಪ್ರಭೇದದಲ್ಲಿ 18 ತಿಂಗಳು–ಹೀಗೆ ಬೇರೆಬೇರೆಯಾಗಿದೆ.

ಮರಿ ಹುಟ್ಟಿದ ಕೆಲವೇ ಗಂಟೆಗಳಲ್ಲಿ ಚುರುಕಾಗಿ ಓಡಾಡತೊಡಗುತ್ತದೆ. ಮರಿಯಲ್ಲಿ ಕೊಂಬುಗಳು ಚೆನ್ನಾಗಿ ರೂಪುಗೊಂಡಿರುವುದಿಲ್ಲ. ತಾಯಿಗೆ ಮತ್ತೊಂದು ಮರಿ ಹುಟ್ಟುವವರೆಗೂ ತಾಯಿಯೊಂದಿಗೆ ಇದ್ದು ಅನಂತರ ಬೇರೆಯಾಗಿ ಒಂಟಿ ಜೀವನ ಆರಂಭಿಸುತ್ತದೆ. ಮರಿ ಸುಮಾರು ನಾಲ್ಕು – ಐದು ವರ್ಷಗಳಲ್ಲಿ ಲೈಂಗಿಕ ಪ್ರಬುದ್ಧಕ್ಕೆ ತಲಪುತ್ತದೆ. ಖಡ್ಗಮೃಗದ ಆಯುಸ್ಸು ಸುಮಾರು 50 ವರ್ಷಗಳು.

ಖಡ್ಗಮೃಗಗಳನ್ನು ಬಹು ಹಿಂದಿನಿಂದಲೂ ಮಾನವ ಬೇಟೆಯಾಡುತ್ತ ಬಂದಿದ್ದಾನೆ. ಆಫ್ರಿಕದ ಕೆಲವು ಬುಡಕಟ್ಟುಗಳಲ್ಲಿ ಇದರ ಮಾಂಸ ಬಹಳ ರುಚಿಕಟ್ಟಾದ ಆಹಾರವೆನಿಸಿದೆ. ಇದರ ಯಕೃತ್ತಂತೂ ಬಹಳ ಅಚ್ಚುಮೆಚ್ಚಿನ ಖಾದ್ಯ. ಇದರ ಒರಟಾದ ಚರ್ಮದಿಂದ ಚಾವಟಿ ಮುಂತಾದವನ್ನು ಮಾಡುವುದಿದೆ. ಅಲ್ಲದೆ ಸೋಮಾಲಿಯದ ನಿವಾಸಿಗಳು ಇದರ

ಭಾರತದ ಖಡ್ಗಮೃಗಗಳು

ಚರ್ಮದಿಂದ ಗುರಾಣಿಗಳನ್ನು ತಯಾರಿಸುತ್ತಾರೆ. ಖಡ್ಗಮೃಗಗಳ ಕೊಂಬಿಗೆ ಕಾಮೋತ್ತೇಜಕ ಗುಣ ಇದೆ ಎಂದು ಚೀನದಲ್ಲಿ ನಂಬಲಾಗಿದೆ. ಅಲ್ಲದೆ ವಿಷಾಪಹಾರಿ ಗುಣವೂ ಇದಕ್ಕಿದೆಯೆನ್ನಲಾಗಿದೆ. ಇವೆಲ್ಲ ಕಾರಣಗಳಿಂದಾಗಿ ಇದರ ಬೇಟೆ ನಿರ್ಭಾದಿತವಾಗಿ ಸಾಗುತ್ತಿದ್ದು ಇವು ನಿರ್ವಂಶವಾಗುವ ಸ್ಥಿತಿಯಲ್ಲಿವೆ. ಆದ್ದರಿಂದ ಆಯಾ ದೇಶಗಳ ಸರ್ಕಾರಗಳು ಖಡ್ಗಮೃಗಗಳ ಬೇಟೆಯನ್ನು ಕಾನೂನಿನ ಮೂಲಕ ನಿಷೇಧಿಸಿವೆ. (ಎ.)

**ಖದೀಜಾ :** ಪೈಗಂಬರ್ ಮಹಮ್ಮದರ ಮೊದಲನೆಯ ಹೆಂಡತಿ. ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬೆಳೆದವಳು. ಮಹಮ್ಮದರ ಕೈ ಹಿಡಿಯುವ ಮೊದಲು ಈಕೆಗೆ ಎರಡು ಸಲ ವಿವಾಹವಾಗಿತ್ತಲ್ಲದೆ ಮೂರು ಮಕ್ಕಳಿದ್ದವು. ತಮ್ಮ ದೊಡ್ಡಪ್ಪನ ಶಿಫಾರಸಿನ ಮೇರೆಗೆ ಮಹಮ್ಮದ್ ಪೈಗಂಬರ್ ತಮ್ಮ ತಾರುಣ್ಯದಲ್ಲಿ ಖದೀಜೆಯ ಬಳಿ ನೌಕರಿಗೆ ಸೇರಿ ಬಸ್ರಾ, ದಮಾಸ್ಕಸ್, ಅಲೆಪ್ಪೊ ನಗರಗಳಿಗೆ ವ್ಯಾಪಾರನಿಮಿತ್ತವಾಗಿ ಹೋಗಿಬರುತ್ತಿದ್ದ ಸಮಯದಲ್ಲಿ ಖದೀಜೆಗೆ ಅವರಲ್ಲಿ ಪ್ರೀತಿವಿಶ್ವಾಸಗಳು ಅಂಕುರಿಸಿದುವಾಗಿ ಅವರನ್ನೇ ಲಗ್ನವಾದಳು. ಮದುವೆಯಾದಾಗ ಪೈಗಂಬರರಿಗೆ 25 ವರ್ಷ ವಯಸ್ಸಾದರೆ ಖದೀಜೆಗೆ 40 ವರ್ಷ ವಯಸ್ಸಾಗಿತ್ತು. ಅನಂತರ 25 ವರ್ಷಗಳ ಪರ್ಯಂತ ಈಕೆ ಮಹಮ್ಮದನಿಗೆ ಸಲಹೆಗಾರಳೂ ಆಧಾರಳೂ ಆಗಿದ್ದಳು. ಮಹಮ್ಮದನಿಂದ ಈಕೆಗೆ ಇಬ್ಬರು ಗಂಡು ಮಕ್ಕಳು ಮತ್ತು ನಾಲ್ಕು ಹೆಣ್ಣು ಮಕ್ಕಳು ಹುಟ್ಟಿದರು. ಹೆಣ್ಣು ಮಕ್ಕಳಲ್ಲಿ ಫಾತಿಮಾ ಎನ್ನುವವಳನ್ನು ಸಯ್ಯದ್ ಎಂಬ ಮನೆತನದ ಹಜರತ್ ಅಲಿ ಎಂಬುವವರಿಗೆ ಲಗ್ನಮಾಡಿಕೊಟ್ಟರು. ಖುತ್‌ಬಾ (ಧಾರ್ಮಿಕ ಆದೇಶ) ಓದುವುದು ಸಯ್ಯದ್ ಮನೆತನದ ಗೌರವಗಳಲ್ಲೊಂದು. ಖದೀಜಾಳೇ ಮಹಮ್ಮದ್ ಪೈಗಂಬರರ ಹೊಸ ಧರ್ಮದ ಮೊದಲನೆಯ ಅನುಯಾಯಿ. ಈಕೆ ಇರುವವರೆಗೂ ಪೈಗಂಬರರು ಬೇರೆ ಮದುವೆಯಾಗಲಿಲ್ಲ. ಅನಂತರ ಅನೇಕ ಬಾರಿ ಲಗ್ನವಾದರಾದರೂ ಖದೀಜಾ ಮರಣಹೊಂದಿದ ಎಷ್ಟೋ ದಿನದ ತನಕ ಆಕೆಯ ನೆನಪು ಅವರ ಮನಸ್ಸಿನಿಂದ ಮಾಸಿಹೋಗಲಿಲ್ಲವೆನ್ನಲಾಗಿದೆ.

ಪ್ರ.ಶ. 619ರ ಆಗಸ್ಟ್ ತಿಂಗಳಲ್ಲಿ–ಅಂದರೆ ಹಿಜರಿ ಶಕೆ ಪ್ರಾರಂಭವಾಗುವ ಮೂರು ವರ್ಷ ಮುಂಚೆ–ಖದೀಜಾ ಮಕ್ಕಾದಲ್ಲಿ ಮರಣ ಹೊಂದಿದಳು. ಈಕೆಯ ಗೋರಿ ಈಗಲೂ ಮಕ್ಕಾದಲ್ಲಿದೆ. ಅದರ ಮೇಲೆ ಕ್ಯೂಫಿಕ್ ಲಿಪಿಯಲ್ಲಿ ಸುರತ್ ಅಲ್–ಕರಮೀ ಎನ್ನುವ ಕುರಾನಿನ ಭಾಗವನ್ನು ಕೆತ್ತಲಾಗಿದೆ.

ಖದೀಜಾ ತನ್ನ ಗಂಡನನ್ನು ದೇವರ ಪ್ರೇಷಿತ ಪ್ರತಿನಿಧಿ ಎಂದು ನಂಬಿದ್ದಳಲ್ಲದೆ ಮಹಮ್ಮದ್ ಪೈಗಂಬರರ ಉಪದೇಶಗಳಲ್ಲಿ ವಿಶ್ವಾಸವಿಟ್ಟು ಅವರ ಸಂಚಾರ ಕಾಲದಲ್ಲಿ ಆ ಉಪದೇಶಗಳ ಸಮರ್ಥನೆ ಮಾಡುತ್ತಿದ್ದಳು. *

**ಖನಕ :** ವಿದುರನ ಆಪ್ತಮಿತ್ರ. ದುರ್ಯೋಧನ ವಾರಣಾವತದಲ್ಲಿ ಪಾಂಡವರಿಗಾಗಿ ಅರಗಿನ ಮನೆಯನ್ನು ಕಟ್ಟಿಸುವಾಗ ಅದರ ಮೇಲ್ವಿಚಾರಣೆಯನ್ನು ಈತನಿಗೆ ಒಪ್ಪಿಸಿದ್ದ. ಖನಕ ವಿದುರನ ಸೂಚನೆಯ ಮೇರೆಗೆ ಅಲ್ಲಿ ಒಂದು ಸುರಂಗ ಮಾರ್ಗವನ್ನು ಏರ್ಪಡಿಸಿದ. ಪಾಂಡವರು ಹಸ್ತಿನಾವತಿಯಿಂದ ವಾರಣಾವತಕ್ಕೆ ಬಂದಾಗ ಈ ವಿಚಾರವನ್ನು ವಿದುರ ಭೀಮನಿಗೆ ರಹಸ್ಯವಾಗಿ ತಿಳಿಸಿದ. ಮುಂದೆ ಅರಮನೆಗೆ ಬೆಂಕಿಬಿದ್ದಾಗ ಭೀಮಾದಿಗಳು ಗುಪ್ತಮಾರ್ಗದಿಂದ ಪಾರಾಗಲು ಇದರಿಂದ ಅನುಕೂಲವಾಯಿತು. *

**ಖನಿಜ :** ನೈಸರ್ಗಿಕವಾಗಿ ಲಭಿಸುವ ಮತ್ತು ನಿರ್ದಿಷ್ಟವಾದ ರಾಸಾಯನಿಕ ಸೂತ್ರವಿರುವ ಒಂದು ಪದಾರ್ಥ (ಮಿನರಲ್). ಅನುಕೂಲ ಸನ್ನಿವೇಶದಲ್ಲಿ ಮಾತೃಶಿಲಾ ದ್ರವದಿಂದ ರೂಪುಗೊಂಡಾಗ ಖನಿಜ ಉತ್ತಮ ಆಕಾರವನ್ನು ತಳೆಯುತ್ತದೆ. ಇದೇ ಹರಳು. ಈ ಹೊರಾಕೃತಿಗೆ ಮುಖ್ಯ ಕಾರಣ ಉತ್ತಮ ರೀತಿಯ ಒಳ ಅಣುರಚನೆ. ಹಲವಾರು ಬಾರಿ ಒತ್ತಡ ಮತ್ತು ಉಷ್ಣತೆಯಲ್ಲಿಯ ಏರುಪೇರುಗಳಿಂದ ಇದು ಬಿಡಿ ಹರಳುಗಳಾಗಿ ರೂಪುಗೊಳ್ಳದೆ ಸಣ್ಣ ಕಣಗಳೋಪಾದಿಯಲ್ಲಿರುವ ಹರಳುಗಳು ಗುಚ್ಛವಾಗಿಯೂ ಸಿಕ್ಕುವುದುಂಟು. ಇವುಗಳಿಗೆ ಯಾವ ತೆರನಾದ ನಿರ್ದಿಷ್ಟ ಆಕಾರವೂ ಇರುವುದಿಲ್ಲ. ಹೀಗಿದ್ದರೂ ಭೌತ ಬೆಳಕಿನ ಪ್ರಸರಣೆಗೂ ಭೌತ ಗುಣಗಳಿಗೂ ಸಂಬಂಧಿಸಿದಂತೆ ಖನಿಜದ ಲಕ್ಷಣಗಳಿಂದ ಅದರ ಸ್ಫಟಿಕ ರೀತಿಯನ್ನು ಸುಲಭವಾಗಿ ಗುರುತಿಸಬಹುದು. ಖನಿಜಗಳು ಮಾತೃಶಿಲಾದ್ರವದ ಆರುವಿಕೆಯಿಂದ ರೂಪುಗೊಳ್ಳುವಾಗ ಅನೇಕ ವ್ಯತ್ಯಾಸಗಳು ತಲೆದೋರಬಹುದು. ದ್ರವ ಬೇಗನೆ ಆರಿ ತಣ್ಣಗಾದಲ್ಲಿ ರೂಪುಗೊಳ್ಳುತ್ತಿರುವ ಖನಿಜಗಳು ಹರಳುಗಳಾಗಿ ಮಾರ್ಪಡಲು ಅಗತ್ಯವಾದ ಕಾಲ ದೊರೆಯದೆ ಕಣಗಳಾಗಿಯೋ ಮುದ್ದೆಗಳಾಗಿಯೋ ಕಾಣಬರುತ್ತವೆ. ಹೀಗೆಯೇ ಮಾತೃಶಿಲಾದ್ರವ ಬಹು ಜಿಗುಟಾಗಿದ್ದಲ್ಲಿ ಅಣುಗಳು ಸುಲಭವಾಗಿ ಪ್ರವಹಿಸಲು ತಡೆಯುಂಟಾಗಿ ಹೆಚ್ಚಿನ ಮೊತ್ತದಲ್ಲಿ ಹರಳುಗಳು ಉಂಟಾಗುವುದಿಲ್ಲ. ಹಲವು ಸಂದರ್ಭಗಳಲ್ಲಿ ರಾಸಾಯನಿಕ ಸಂಯೋಜನೆಯಲ್ಲೂ ಅಲ್ಪಸ್ವಲ್ಪ ಏರುಪೇರುಗಳು ಕಂಡುಬರಬಹುದು. ಆದರೂ ಖನಿಜದ ಒಳರಚನೆಯಲ್ಲಿ ಯಾವ ಬಗೆಯ ತೀವ್ರ ವ್ಯತ್ಯಾಸಗಳು ಕಂಡುಬರಲಾರವು, ಉದಾಹರಣೆಗೆ ಸ್ಫಾಲರೈಟ್ ಎಂಬ ಖನಿಜದ ರಾಸಾಯನಿಕ ಸಂಯೋಜನೆ ಝಿಂಕ್‌ಸಲ್ಫೈಡ್. ಅಂದರೆ ಸತು ಗಂಧಕದ ಅಣುಗಳು ನಿರ್ದಿಷ್ಟವಾದ ರೀತಿಯಲ್ಲಿ ಗುಂಪುಮಾಡಿ ಸ್ಫಾಲರೈಟ್ ಹರಳುಗಳಾಗುತ್ತವೆ. ಕೆಲವು ವೇಳೆ ಅಲ್ಪಸ್ವಲ್ಪ ಮೊತ್ತದಲ್ಲಿ ಸತುವಿನ ಅಣುಗಳನ್ನು ಕಬ್ಬಿಣದ ಅಣುಗಳು ಸ್ಥಾನಪಲ್ಲಟಗೊಳಿಸಿ ಖನಿಜದ ಚೌಕಟ್ಟಿನಲ್ಲಿ ಅವುಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತವೆ. ಹೀಗಿದ್ದರೂ ಖನಿಜದ ಒಟ್ಟಾರೆ ಗುಣಗಳಲ್ಲಿ ಯಾವ ತರಹದ ಹೆಚ್ಚಿನ ಬದಲಾವಣೆಗಳೂ ಕಂಡು ಬರುವುದಿಲ್ಲ.

ಖನಿಜ ಸ್ವರೂಪ: ವಿವಿಧ ಮೂಲಧಾತುಗಳ ರಾಸಾಯನಿಕ ಸಂಯೋಗವೇ ಖನಿಜ. ಅನುಕೂಲಕರವಾದ ಉಷ್ಣ ಮತ್ತು ಒತ್ತಡಗಳಿರುವ ಸನ್ನಿವೇಶದಲ್ಲಿ ಈ ಸಂಯೋಗವಾದಾಗ ಖನಿಜಾಣುಗಳು ನಿರ್ದಿಷ್ಟವಾದ ರೀತಿಯಲ್ಲಿ ಶೇಖರವಾಗುತ್ತವೆ. ಹೀಗಾಗುವುದರಿಂದ ಖನಿಜದ ಹೊರ ಆಕೃತಿ ಚೆನ್ನಾಗಿ ರೂಪಿತವಾಗಿ ಸುಂದರವಾದ ಹರಳುಗಳು ಮೈದೋರುತ್ತವೆ. ಆದರೆ ಪ್ರಕೃತಿಯಲ್ಲಿ ಉಷ್ಣ ಮತ್ತು ಒತ್ತಡಗಳ ಅನುಕೂಲಕರವಾದ ಪರಿಸರ ಕಂಡು ಬರುವುದೇ ಅಪರೂಪ. ಹೀಗಾಗಿ ಖನಿಜಗಳ ಉತ್ತಮ ಹರಳುಗಳು ಸಿಗುವುದು ಬಹು ವಿರಳ. ಅನೇಕ ವೇಳೆ ಅವುಗಳ ಆಕೃತಿಯಲ್ಲಿ ವ್ಯತ್ಯಾಸಗಳುಂಟಾಗಿ ಅವುಗಳ ನೈಜ ಸ್ವರೂಪವೇ ಬದಲಾವಣೆಯಾದಂತೆ ತೋರಿಬರುತ್ತದೆ. ಕೆಲವು ಖನಿಜಗಳಿಗೂ ಈ ಬಗೆಯ ಮಾರ್ಪಾಡುಗಳಿಗೂ ಒಂದು ಬಗೆಯ ನಂಟುತನವಿರುವುದನ್ನು ಕಾಣಬಹುದು. ಬರೈಟ್ ಎಂಬ ಖನಿಜದಲ್ಲಿ ಪರಸ್ಪರ ಎದುರುಬದುರಾಗಿರುವ ಮುಖಗಳಲ್ಲಿ ಒಂದು ಜೊತೆ ಮುಖಗಳು ವಿಪರೀತವಾಗಿ ಬೆಳೆದು ಇಡೀ ಖನಿಜ ಫಲಕಾಕೃತಿಯನ್ನು ತಳೆಯುತ್ತದೆ. ಹಲವು ಸಾರಿ ಬೆರಿಲ್ ಮತ್ತು ಟೂರ್ಮಲೀನ್ ಖನಿಜಗಳಂತೆ ಯಾವುದಾದರೂ ಒಂದು ಅಕ್ಷದ ಉದ್ದಕ್ಕೂ ಹರಳು ಶೀಘ್ರಗತಿಯಲ್ಲಿ ಬೆಳೆದು ಖನಿಜ ತನ್ನ ನೈಜಾಕೃತಿಗೆ ಬದಲಾಗಿ ಸ್ತಂಭಾಕೃತಿಯನ್ನು ತಳೆಯುವುದೂ ಉಂಟು. ಹಲವು ಖನಿಜಗಳ ಸ್ವರೂಪವನ್ನು ಹೀಗೆ ವಿಪರೀತವಾಗಿ ಬೆಳೆದಿರುವ ಹರಳಿನ ಮುಖಗಳನ್ನು ಅನುಸರಿಸಿ ವಿವರಿಸಬಹುದು. ಲವಣ (ಹ್ಯಾಲೈಟ್)

ಮತ್ತು ಫ್ಲೂರ್‌ಸ್ಪಾರ್ ಖನಿಜಗಳಲ್ಲಿ ಚಚ್ಚೌಕವಾದ ಆಕೃತಿ ಬಹು ಚೆನ್ನಾಗಿ ಕಂಡುಬರುವುದರಿಂದ ಅವುಗಳ ಸ್ವರೂಪವನ್ನು ಚಚ್ಚೌಕ ಸ್ವರೂಪವೆಂದೂ ಅದೇ ರೀತಿ ವಜ್ರ ಮತ್ತು ಮ್ಯಾಗ್ನೆಟೈಟುಗಳ ಸ್ವರೂಪವನ್ನು ಅಷ್ಟಮುಖ ಸ್ವರೂಪವೆಂದೂ ಕ್ಯಾಲ್ಸೈಟ್ ಮತ್ತು ಡಾಲೊಮೈಟುಗಳ ಆಕೃತಿಯನ್ನು ರಾಂಬೊಹೀಡ್ರಲ್ ಸ್ವರೂಪವೆಂದೂ ಶುದ್ಧ ರೂಪದ ಗಂಧಕ ಹರಳುಗಳ ಆಕೃತಿಯನ್ನು ಪಿರಮಿಡಲ್ ಸ್ವರೂಪವೆಂದೂ ವರ್ಣಿಸಲಾಗಿದೆ.

ಅನೇಕ ಖನಿಜಗಳು ಬಿಡಿ ಹರಳುಗಳಾಗಿ ರೂಪುಗೊಳ್ಳುವುದರ ಬದಲು ಅಸ್ಪಷ್ಟಾಕೃತಿಯ ಹರಳುಗಳ ಗುಚ್ಛಗಳಾಗಿ ರೂಪಿತವಾಗುತ್ತವೆ. ಅನೇಕ ಬಾರಿ ಈ ತೆರನಾದ ಕ್ರೋಡೀಕರಣ ಹಲವಾರು ವಿಶೇಷ ರೀತಿಯ ಸ್ವರೂಪಗಳನ್ನೇ ಉಂಟು ಮಾಡಬಹುದು. ಇವುಗಳಲ್ಲಿ ಮುಖ್ಯವಾದವು: 1 ನಾರಿನ ಸ್ವರೂಪ–ಕಲ್ನಾರು, ಸ್ಯಾಟಿನ್ ಸ್ಪಾರ್ ಮೊದಲಾದ ಖನಿಜಗಳು ಸೂಕ್ಷ್ಮವಾದ ನಾರು ಅಥವಾ ನೂಲಿನ ಎಳೆಗಳಂತೆ ಕಂಡು ಬರುತ್ತವೆ. ನೀಳವಾದ ಸ್ತಂಭಾಕೃತಿ ಹಾರ್ನ್‌ಬ್ಲೆಂಡ್ ಖನಿಜದಲ್ಲಿ ಉತ್ತಮವಾಗಿ ರೂಪಿತವಾಗಿದೆ. 2 ಅಲಗು ಸ್ವರೂಪ–ಚಾಕುವಿನ ಅಲಗಿನ ಆಕಾರವನ್ನು ಟಾಲ್ಕ್ ಮೊದಲಾದ ಖನಿಜಗಳು ತಳೆಯುತ್ತವೆ. ಖನಿಜದ ತೆಳುವಾದ ಅಲಗುಗಳು ಪದರಗಳಂತೆ ಒಂದರ ಮೇಲೊಂದು ಒಟ್ಟುಗೂಡಿದ್ದು ಖನಿಜಕ್ಕೆ ಒಂದು ಬಗೆಯ ವಿಶಿಷ್ಟ ಸ್ವರೂಪ ಬರುತ್ತದೆ. 3 ಕಣಸ್ವರೂಪ–ವಿವಿಧ ಗಾತ್ರದ ಕಣಗಳ ಒಟ್ಟುಗೂಡುವಿಕೆಯಿಂದ ಉಂಟಾದ ಹೊರ ರೂಪ. ಇದು ಸುಣ್ಣಶಿಲೆಗೆ ಸಂಬಂಧಿಸಿದ ಖನಿಜಗಳಲ್ಲಿ ಬಹು ಚೆನ್ನಾಗಿ ಸ್ಫುಟಗೊಂಡಿರುತ್ತದೆ. 4 ಮಿಥ್ಯಾರೂಪ ಹಲವು ಸಂದರ್ಭಗಳಲ್ಲಿ ಚಿತ್ರವಿಚಿತ್ರವಾದವುಗಳನ್ನೂ ಕಾಣಬಹುದು. ಕಬ್ಬಿಣದ ಮುಖ್ಯ ಅದುರಾದ ಹಿಮಟೈಟ್ ಎಂಬ ಖನಿಜ ಮಾತ್ರ ಪಿಂಡಾಕೃತಿಯನ್ನು ತಳೆಯುತ್ತದೆ. ಹಲವು ವೇಳೆ ಇದೇ ಖನಿಜ ದ್ರಾಕ್ಷಿ ಹಣ್ಣುಗಳ ಗೊಂಚಲಿನಾಕಾರವನ್ನೂ ತಳೆಯುವುದುಂಟು. ಡಾಲೊಮೈಟ್ ಸಹ ಈ ಸ್ವರೂಪವನ್ನು ಆಗಾಗ ತಳೆಯುವುದಿದೆ.

ಮ್ಯಾಲಕೈಟ್ ಎಂಬ ತಾಮ್ರದ ಅದಿರಿನ ಖನಿಜ ದುಂಡನೆಯ ಗುಮ್ಮಟದ ಆಕಾರವನ್ನು ತೋರುತ್ತದೆ. ಇದನ್ನು ಸ್ತನಾಕೃತಿಯೆಂದೂ ಕರೆಯುವುದುಂಟು. ಮ್ಯಾಂಗನೀಸಿನ ದ್ರಾವಣ ಶಿಲೆಗಳ ಸೀಳು ಮತ್ತು ಬಿರುಕುಗಳಲ್ಲಿ ಪ್ರವಹಿಸಿ ಮ್ಯಾಂಗನೀಸ್ ಆಕ್ಸೈಡ್ ಆಗಿ ಪರಿವರ್ತಿತವಾಗುತ್ತದೆ. ಅಲ್ಲದೆ ಮರದ ಕೊಂಬೆ ರೆಂಬೆಗಳೋಪಾದಿಯ ವೃಕ್ಷಾಕೃತಿಯನ್ನಾಗಲಿ ಪಾಚಿಯಂತಿರುವ ಆಕಾರವನ್ನಾಗಲಿ ಪಡೆಯುತ್ತದೆ. ಕ್ಯಾಲ್ಸೈಟ್, ಪೈರಿಟಿಸ್, ಹಿಮಟೈಟ್ ಮತ್ತು ಸಿಲಿಕ (ಚೆರ್ಟ) ಇವೇ ಮುಂತಾದ ಖನಿಜಗಳು ದುಂಡನೆಯ ಸಣ್ಣ ಸಣ್ಣ ಕಣಗಳೋಪಾದಿಯಲ್ಲಿದ್ದು ತಮ್ಮ ಶೇಖರಣೆಯಿಂದ ಊಲಿಟಿಕ್ ಎಂಬ ವಿಶಿಷ್ಟ ಸ್ವರೂಪವನ್ನು ಪಡೆಯುತ್ತವೆ.

ಸೂಜಿಯಂತೆ ನೀಳವಾಗಿರುವ ಖನಿಜಗಳು ಕೇಂದ್ರವೊಂದರಿಂದ ನಾನಾ ದಿಕ್ಕಿಗೆ ಪ್ರಸರಿಸಿ ಮಿನುಗುವ ನಕ್ಷತ್ರಗಳನ್ನು ಹೋಲುವುದರಿಂದ ಇದನ್ನು ನಕ್ಷತ್ರಾಕಾರವೆಂದು ಕರೆಯಲಾಗಿದೆ. ವೇಪಿಲೈಟ್ ಎಂಬ ಖನಿಜದ ಸ್ವರೂಪ ಇದಕ್ಕೆ ಅತ್ಯುತ್ತಮ ಉದಾಹರಣೆ. ಈ ಖನಿಜಗಳು ಶುದ್ಧ ರೂಪದ ತಾಮ್ರ ಮತ್ತು ಬೆಳ್ಳಿ ತಂತಿಗಳಂತೆಯೋ ಸೂಕ್ಷ್ಮ ಕೊಳವೆಗಳಂತೆಯೋ ಕಂಡುಬರುತ್ತವೆ. ಇವು ನೇರವಾಗಿ ಅಥವಾ ತುಸು ಬಾಗಿರುತ್ತವೆ. ಇಂಥ ರೂಪಕ್ಕೆ ತಂತುರೂಪ ಎಂದು ಹೆಸರು. ಕ್ಯಾಲ್ಸೈಟ್ ಮತ್ತು ಮ್ಯಾಂಗನೀಸಿನ ಪ್ರಮುಖ ಅದಿರಾದ ಸೈಲೊಮೆಲೀನ್ ಅನೇಕ ವೇಳೆ ಗೊಂಚಲು ಗೊಂಚಲಾಗಿರುತ್ತವೆ. ಅರ್ಯಾಗೊನೈಟ್ ಎಂಬ ಖನಿಜ ಹವಳಗಳನ್ನು ಹೋಲುವ ಸ್ವರೂಪವನ್ನು ಪಡೆಯುವುದುಂಟು.



ಖನಿಜಗಳ ಭಿನ್ನರೂಪಗಳು : 1. ದ್ರಾಕ್ಷಿಹಣ್ಣುಗಳ ಗೊಂಚಲಿನಾಕಾರದ ಹಿಮಟೈಟ್ ಖನಿಜ, 2. ಊಲಿಟಿಕ್ ಕ್ಯಾಲ್ಸೈಟ್, 3. ನಕ್ಷತ್ರಾಕಾರದ ವೇಪಿಲೈಟ್, 4. ತೊಂಗಲಿನಾಕಾರದ ಸೈಲೊಮೆಲೀನ್, 5. ಹವಳವನ್ನು ಹೋಲುವ ಅರ್ಯಾಗೊನೈಟ್

**ಖನಿಜ ಕಾಠಿಣ್ಯ:** ಖನಿಜಗಳ ಮೂಲ ಗುಣಗಳಲ್ಲಿ ಕಾಠಿಣ್ಯವೂ (ಹಾರ್ಡ್‌ನೆಸ್) ಒಂದು. ಒಂದು ಖನಿಜವನ್ನೊ ಅದರ ನಯವಾದ ಭಾಗವನ್ನೊ ಉಜ್ಜಿದಾಗ ಅಥವಾ ಗೀರಿದಾಗ ಅಥವಾ ಗೀರಲುಪ್ರಯತ್ನಿಸಿದಾಗ ತೋರಿಬರುವ ಖನಿಜದ ಪ್ರತಿಕ್ರಿಯೆಯನ್ನು ಕಾಠಿಣ್ಯವೆಂದು ವಿವರಿಸಬಹುದು. ಸಾಮಾನ್ಯವಾಗಿ ಖನಿಜವನ್ನು ಉಗುರು, ತಾಮ್ರದ ನಾಣ್ಯ,ಚಾಕುವಿನ ಅಲಗು ಅಥವಾ ಇನ್ನೊಂದು ಖನಿಜದಿಂದ ಗೀರಿ ಅದರ ಕಾಠಿಣ್ಯವನ್ನು ನಿರ್ಧರಿಸಬಹುದು. ಈ ಬಗೆಯ ನಿರ್ಧಾರದಲ್ಲಿ ಖನಿಜಗಳ ಸಾಪೇಕ್ಷ ಮೌಲ್ಯಗಳ ಅರಿವಾಗುತ್ತದೆ. ಅವುಗಳ ನಿರ್ದಿಷ್ಟ ಕಾಠಿಣ್ಯಗೊತ್ತಾಗಲಾರದು. ಇದನ್ನು ನಿರ್ಧರಿಸಲು ಮ್ಹೋ ಎಂಬ ಖನಿಜ ವಿಜ್ಞಾನಿ ತಯಾರಿಸಿರುವ ಕಾಠಿಣ್ಯ ಕ್ರಮವನ್ನು ಅನುಸರಿಸುತ್ತೇವೆ. ಇದಕ್ಕೆ ಮ್ಹೋನ ಕಾಠಿಣ್ಯದ ಅಳತೆ ಪಟ್ಟಿ ಎಂದು ಹೆಸರು. ಈ ಅನುಕ್ರಮಣಿಕೆಯಲ್ಲಿ ಹತ್ತು ಖನಿಜಗಳನ್ನು ಅವುಗಳ ಕಾಠಿಣ್ಯಕ್ಕೆ ಅನುಗುಣವಾಗಿ ಜೋಡಿಸಲಾಗಿದೆ: 1.ಟಾಲ್ಕ್, 2. ಜಿಪ್ಸಂ, 3. ಕ್ಯಾಲ್ಸೈಟ್, 4. ಫ್ಲೂರ್‌ಸ್ಪಾರ್, 5. ಅಪಟೈಟ್, 6. ಫೆಲ್‌ಸ್ಪಾರ್, 7. ಕ್ವಾರ್ಟ್ಸ್, 8. ಟೋಪಾಸ್, 9. ಕೊರಂಡಂ, 10. ವಜ್ರ. ಈ ಪಟ್ಟಿಯಲ್ಲಿ ಖನಿಜಗಳ ಕಾಠಿಣ್ಯ ಅನುಕ್ರಮವಾಗಿ ಟಾಲ್ಕ್‌ನಿಂದ ವಜ್ರದತ್ತ ಹೆಚ್ಚುತ್ತ ಹೋಗುತ್ತದೆ. ಇದರಂತೆ ಟಾಲ್ಕ್‌ನ ಕಾಠಿಣ್ಯ ಒಂದು ಎಂದೂ ವಜ್ರದ ಕಾಠಿಣ್ಯ ಹತ್ತು ಎಂದೂ ಪರಿಗಣಿಸಲಾಗಿದೆ. ಟಾಲ್ಕನ್ನು ಸುಲಭವಾಗಿ ಉಗುರಿನಿಂದ ಗೀರಬಹುದು. ಅಂದರೆ ಹೀಗೆ ಗೀರಲು ಸಾಧ್ಯವಾಗುವ ಖನಿಜಗಳ ಕಾಠಿಣ್ಯ 2 ಎಂದು ಭಾವಿಸಲಾಗಿದೆ. ವಜ್ರವೇ ಅತ್ಯಂತ ಹೆಚ್ಚಿನ ಕಾಠಿಣ್ಯ ಉಳ್ಳದ್ದು. ಅದನ್ನು ಗೀರಲು ಮತ್ತೊಂದು ವಜ್ರವೇ ಬೇಕು. ಪಟ್ಟಿಯಲ್ಲಿಯ ಮೇಲಿನ ಖನಿಜಗಳನ್ನು ಕೆಳಗಿನ ಖನಿಜಗಳಿಂದ ಗೀರಲು ಸಾಧ್ಯ. ಜಿಪ್ಸಮನ್ನು (2) ಒಂದು ಖನಿಜ ಗೀರುತ್ತದೆ, ಆದರೆ ಕ್ಯಾಲ್ಸೈಟಿನಿಂದ (3) ಗೀರಿಸಿಕೊಳ್ಳುತ್ತದೆ ಎಂದು ಭಾವಿಸೋಣ. ಆಗ ಅದರ ಸ್ಥಾನ 2 ಮತ್ತು 3ರ ನಡುವೆ ಉಂಟು; ಅದರ ಕಾಠಿಣ್ಯ 2.5 ಎಂದು ಹೇಳಬಹುದು. ಸಾಮಾನ್ಯವಾಗಿ ಅಂದಾಜಿನ ಮೇಲೆ ಖನಿಜಗಳ ಕಾಠಿಣ್ಯವನ್ನು ನಿರ್ಧರಿಸಲಾಗುವುದು. ಸು. 2.5ರ ತನಕ ಕಾಠಿಣ್ಯ ವಿರುವ ಖನಿಜಗಳನ್ನು ಉಗುರಿನಿಂದ ಗೀರಬಹುದು. ಹೀಗೆಯೇ ತಾಮ್ರದ ಕಾಠಿಣ್ಯ 3. ಚಾಕುವಿನ ಅಲಗು 5.5, ಗಾಜು 5.5 ಮತ್ತು ಉಕ್ಕಿನ ಅರ 6.5.

ಕಾಠಿಣ್ಯಾಂಕಗಳು ಖನಿಜಗಳ ಕಾಠಿಣ್ಯದಲ್ಲಿರುವ ತಾರತಮ್ಯವನ್ನು ಸೂಚಿಸುತ್ತ ಹೀಗೆಯೇ ವಿನಾ ಒಂದು ಖನಿಜದ ಶುದ್ಧ ಕಾಠಿಣ್ಯವನ್ನು ಎಂದಿಗೂ ಸೂಚಿಸುವುದಿಲ್ಲ. ಹೀಗೆಯೇ 10ನೆಯ ಸ್ಥಾನದ ವಜ್ರ ಕಾಠಿಣ್ಯ 1ನೆಯ ಸ್ಥಾನದ

ಟಾಲ್ಕ್‌ಗಿಂತ ಹತ್ತರಷ್ಟು ಹೆಚ್ಚಾದುದು ಎಂದು ಭಾವಿಸಬಾರದು. ಪಟ್ಟಿಯಲ್ಲಿನ ಖನಿಜಗಳ ಪರಸ್ಪರ ಅಂತರ ಏಕರೀತಿಯದಾಗಿರಬೇಕಾಗಿಲ್ಲ. ಒಟ್ಟಿನಲ್ಲಿ ಇದೊಂದು ಅಂದಾಜಿನ ಮೇಲೆ ಕಾಠಿಣ್ಯವನ್ನು ನಿರ್ಧರಿಸುವ ಕ್ರಮ ಎನ್ನಬಹುದು. ಕಾಠಿಣ್ಯವನ್ನು ನಿಖರವಾಗಿ ನಿರ್ಧರಿಸಲು ಸ್ಕ್ಲೀರೋಮೀಟರ್ ಎಂಬ ಸಾಧನವನ್ನು ಉಪಯೋಗಿಸಬೇಕಾಗುತ್ತದೆ. ಕಾಠಿಣ್ಯವನ್ನು ಅಳೆಯಬೇಕಾದ ಖನಿಜದ ನಯವಾದ ಭಾಗ ಉಪಕರಣದ ಮೊನಚಾದ ಉಕ್ಕಿನ ಸೂಜಿಯನ್ನು ತಾಗುವಂತೆ ಇಡಬೇಕು. ಅನಂತರ ಇದಕ್ಕೆ ತೂಗುಬಿಟ್ಟಿರುವ ತಟ್ಟೆಯಲ್ಲಿ ತೂಕದ ಬಟ್ಟುಗಳನ್ನಿಡಬೇಕು. ಸರಿಯಾದ ತೂಕ ಸೇರಿದಾಗ ಆ ಭಾರಕ್ಕೆ ತಟ್ಟೆ ಜಗ್ಗಿದಂತಾಗಿ ಉಕ್ಕಿನ ಮೊನೆ ಖನಿಜದ ಮೇಲೆ ನಿರ್ದಿಷ್ಟವಾದ ರೀತಿಯಲ್ಲಿ ಗೀರುತ್ತದೆ. ಇದನ್ನು ಅನುಸರಿಸಿ ಕಾಠಿಣ್ಯವನ್ನು ನಿರ್ಧರಿಸಬಹುದು. ಹೆಸರಾಂತ ಖನಿಜ ವಿಜ್ಞಾನಿಗಳಾದ ಷ್ಯಾಫ್, ರೋಸಿವಾಲ್ ಮತ್ತು ಜ್ಯಾಗರ್ ಈ ವಿಧಾನವನ್ನು ಅನುಸರಿಸಿ ಅನೇಕ ಖನಿಜಗಳ ಶುದ್ಧ ಕಾಠಿಣ್ಯವನ್ನು ನಿಖರವಾಗಿ ನಿರ್ಧರಿಸಿದ್ದಾರೆ. ಈ ಬಗೆಯ ಸಂಶೋಧನೆಗಳಿಂದ ಟೋಪಾಸ್ (8) ಮತ್ತು ಕೊರಂಡಮುಗಳ (9) ನಡುವಿನ ಅಂತರ ಟೋಪಾಸ್ (8) ಮತ್ತು ಕ್ವಾರ್ಟ್ಸ್‌ಗಳ (7) ಅಂತರಕ್ಕೂ ಹೆಚ್ಚಿನದೆಂದು ಅಭಿಪ್ರಾಯ ಪಡಲಾಗಿದೆ.

ಖನಿಜಗಳ ಕಾಠಿಣ್ಯ ಅವುಗಳ ರಾಸಾಯನಿಕ ಸಂಯೋಜನೆಗೆ ಅನುಗುಣವಾಗಿರುತ್ತದೆ. ಸಾಮಾನ್ಯವಾಗಿ ಸಿಲಿಕೇಟ್ ಆಕ್ಸೈಡುಗಳು ಹೆಚ್ಚು ಕಠಿಣವಾಗಿಯೂ ಹೈಡ್ರಾಕ್ಸೈಡುಗಳು ಮಿದುವಾಗಿಯೂ ಇರುತ್ತವೆ. ಇದೇ ಅಲ್ಲದೆ ಕಾಠಿಣ್ಯ ಖನಿಜದ ಒಳ ಅಣುರಚನೆಯನ್ನೂ ಅವಲಂಬಿಸಿರುತ್ತದೆ. ಈ ಅಣು ಚೌಕಟ್ಟಿನಲ್ಲಿ ಅಣುಗಳು ದೂರವಿದ್ದಲ್ಲಿ ಆ ಖನಿಜದ ಕಾಠಿಣ್ಯ ಕಡಿಮೆ; ಹತ್ತಿರವಿದ್ದಲ್ಲಿ ಕಾಠಿಣ್ಯವೂ ಹೆಚ್ಚು.. ಇವೇ ಅಲ್ಲದೆ ಖನಿಜದ ಹರಳುಗಳಲ್ಲಿ ಅಕ್ಷವನ್ನು ಅನುಸರಿಸಿ ಕಾಠಿಣ್ಯ ಉಂಟು. ಇದಕ್ಕೆ ಕಯನೈಟ್ ಅತ್ಯುತ್ತಮ ಉದಾಹರಣೆ. ಈ ಖನಿಜವನ್ನು ಚಾಕುವಿನಿಂದ ಉದ್ದಕ್ಕೂ ಅಷ್ಟು ಶ್ರಮವಿಲ್ಲದೆ ಗೀರಬಹುದು. ಆದರೆ ಅಡ್ಡಲಾಗಿ ಗೀರಲು ಯತ್ನಿಸಿದಾಗ ಅದು ಅಷ್ಟು ಸುಲಭವಲ್ಲ. (ಎಂ.ಎಸ್.ಎಸ್.)

**ಖನಿಜ ತೈಲ :** ಖನಿಜಮೂಲದ ಮತ್ತು ತೈಲಗಳಿಗೆ ವಿಧಿಸಲಾಗಿರುವ ಶ್ಯಾನತ್ವದ (ವಿಸ್ಕಾಸಿಟಿ) ಪರಿಮಿತಿಗಳ ಒಳಗೆ ಇರುವ ದ್ರವ (ಮಿನರಲ್ ಆಯಿಲ್). ಖನಿಜತೈಲಗಳಲ್ಲಿ ಪ್ರಧಾನವಾದದ್ದು ಪೆಟ್ರೋಲಿಯಂ. ಆಧುನಿಕ ಉದ್ಯೋಗ, ವಾಹನ ಮತ್ತು ಯುದ್ಧ ಸಾಧನ ಸಲಕರಣೆಗಳು ಮುಖ್ಯವಾಗಿ ಪೆಟ್ರೋಲಿಯಮಿನ ಮೇಲೆ ಅವಲಂಬಿಸಿವೆ. ಇದು ದ್ರವರೂಪದಲ್ಲಿರುವುದರಿಂದ ಇದನ್ನು ಭೂಮಿಯಿಂದ ತುಂಬ ಅಗ್ಗವಾಗಿ ಪಡೆಯಬಹುದು.

**ರಾಸಾಯನಿಕ ಸಂಯೋಜನೆ :** ರಚನೆಯಲ್ಲಿ ಪೆಟ್ರೋಲಿಯಂ ಅಲ್ಪ ಮೊತ್ತದಲ್ಲಿ ಆಕ್ಸಿಜನ್, ನೈಟ್ರೊಜನ್ ಮತ್ತು ಸ್ವಲ್ಪ ಗಂಧಕ ಬೆರೆತಿರುವ ಒಂದು ಹೈಡ್ರೊಕಾರ್ಬನ್. ಹೈಡ್ರೊಕಾರ್ಬನ್ ಶ್ರೇಣಿಯ ಅಸಂಖ್ಯಾತ ಸದಸ್ಯರುಗಳಿಗೆ ವಿಧವಿಧವಾದ ರಾಸಾಯನಿಕ ಮತ್ತು ಭೌತಗುಣಗಳು ಇವೆ. ಸಾಮಾನ್ಯ ಉಷ್ಣತಾಮಾನಗಳಲ್ಲಿ ಕೆಲವು ಅನಿಲ ರೂಪದಲ್ಲೂ ಕೆಲವು ದ್ರವರೂಪದಲ್ಲೂ ಇದ್ದರೆ ಮತ್ತೆ ಕೆಲವು ಮೇಣದಂತಿರುತ್ತವೆ. ಯಾವ ಎರಡು ತೈಲಗಳೂ ಒಂದರಂತೆ ಒಂದಿರುವುದಿಲ್ಲ.

**ಆಕರ :** ಜಲಜಶಿಲೆಗಳು ಪೆಟ್ರೋಲಿಯಮಿನ ಪ್ರಧಾನ ಆಕರಗಳು. ಮರಳುಗಳು, ಮರಳುಕಲ್ಲುಗಳು, ಕಂಗ್ಲಾಮಿರೇಟುಗಳು, ಡೋಲೊಮೈಟುಗಳು ಮತ್ತು ಅಪೂರ್ವವಾಗಿ ಬಿರುಕುಗಳಿಂದ ಕೂಡಿದ ಶೇಲುಗಳು ವಾಣಿಜ್ಯಕ್ಕೆ ಅರ್ಹವಾದ ಬಾವಿಗಳ ತೈಲಾಕರ ಶಿಲೆಗಳು. ಸಾಗರದ ಪದರಗಳೂ ಜತೆಗೆ ಅವುಗಳಿಗೆ ಸಂಬಂಧಪಟ್ಟ ಭೂಖಂಡಗಳ ಅಧಃಸ್ಥಳಗಳೂ ತೈಲೋತ್ಪಾದನೆಗೆ ಮುಖ್ಯ ಕ್ಷೇತ್ರಗಳಾಗಿವೆ. ಕೇಂಬ್ರಿಯನ್ ಯುಗದಿಂದ ಪ್ಲಿಯೋಸೀನ್ ಯುಗದವರೆಗಿನ ಎಲ್ಲ ಅವಧಿಗಳಲ್ಲೂ ಪೆಟ್ರೋಲಿಯಂ ಸಿಕ್ಕುತ್ತದೆ. ಟರ್ಷಿಯರಿ ಯುಗದ ಶಿಲೆಗಳಲ್ಲಿ ಇದರ ಪರಿಮಾಣ ಅತ್ಯಧಿಕವಾಗಿದೆ. ಪೆಟ್ರೋಲಿಯಂ ಉದ್ಭವಿಸಿದ್ದು ಜೀವಿಗಳಿಂದ ಎಂದು ಈಗ ಎಲ್ಲರೂ ಒಪ್ಪುತ್ತಾರೆ. ಸಂಕ್ಷೇಪವಾಗಿ ಹೇಳುವುದಾದರೆ ಸಮುದ್ರದ ಮಣ್ಣುಗಳಲ್ಲಿ ಹೂತುಹೋದ ಜೀವಿ ವಸ್ತುಗಳು ರಾಸಾಯನಿಕ ಪರಿವರ್ತನೆಯನ್ನು ಹೊಂದಿ ಪ್ರಾಕೃತಿಕ ಹೈಡ್ರೊಕಾರ್ಬನ್ನುಗಳಾಗುತ್ತವೆ. ತರುವಾಯ ಇವು ಸರಂಧ್ರ ಶಿಲೆಗಳೆಡೆಗೆ ಚಲಿಸಿ ಅಲ್ಲಿ ಶೇಖರಗೊಂಡು ವಾಣಿಜ್ಯಾರ್ಹ ತೈಲಕೂಪಗಳಾಗಿ ಪರಿಣಮಿಸುತ್ತವೆ. ಸಂಘಟನೆ (ಕಾಂಪೇಕ್ಷನ್), ಲೋಮನಾಳತ್ವ (ಕ್ಯಾಪಿಲ್ಲಾರಿಟಿ), ಉತ್ಪ್ಲವನತೆ (ಬಾಯನ್ಸಿ), ಗುರುತ್ವ ಮತ್ತು ಪ್ರವಾಹಗಳು ಮೊದಲಾದ ಕ್ರಿಯೆಗಳು ಒಂದುಗೂಡಿ ಈ ಚಲನೆ ಏರ್ಪಡುವ ಹಾಗೆ ತೋರುತ್ತದೆ. ಅಭಿನತಿಕ ಶಿಲಾಮಡಿಕೆಗಳು (ಸಿಂಕ್ಲೈನಲ್ ಫೋಲ್ಡ್ಸ್), ಸ್ತರ ಭಂಗ ಪಾಶಗಳು, ಲವಣಗುಮ್ಮಟಗಳು, ಬಿರುಕಿನ ಬೆಣೆಗಳು, ಹೆಣಿಗೆ ಟ್ರ್ಯಾಪುಗಳು ಮತ್ತು ಇವುಗಳ ವಿವಿಧ ಜೋಡಣೆಗಳಲ್ಲಿ ತೈಲ ಸಂಗ್ರಹವಾಗಬಹುದು.

ಜಲಜ ಶಿಲೆಗಳಲ್ಲಿ ತೈಲ ಅಷ್ಟು ಆಳವಿಲ್ಲದ ಜಾಗಗಳಿಂದ ಹಿಡಿದು (ಎಂದರೆ ಸುಮಾರು 1213.33ಮೀ. ಆಳ) ಸುಮಾರು 6067ಮೀ.–9100ಮೀ. ವರೆಗಿನ ಸ್ಥಳಗಳಲ್ಲಿ ನೆಲೆಗೊಂಡಿವೆ. ಕೊರೆಯುವ ತಂತ್ರಗಳಲ್ಲಿ ಸಾಕಷ್ಟು ಸುಧಾರಣೆ ಆಗಿರುವುದರಿಂದ ಅಧಿಕಾಧಿಕವಾದ ಆಳಗಳಿಗೆ ಇಳಿದು ಗುರಿಮುಟ್ಟುವುದು ಈಗ ಸಾಧ್ಯವಾಗಿದೆ. ತೈಲ ಸಾಮಾನ್ಯವಾಗಿ ಒಳತಳದಲ್ಲಿ ಸ್ವಲ್ಪ ಒತ್ತಡಕ್ಕೆ ಒಳಪಟ್ಟು ಇರುತ್ತದೆ. ಈ ಒತ್ತಡವೇ ಎಣ್ಣೆಯನ್ನು ಬಾವಿಗೂ ಬಾವಿಯಿಂದ ಮೇಲಕ್ಕೂ ಚಿಮ್ಮಿಬರುವಂತೆ ಮಾಡುತ್ತದೆ. ತೈಲಾಕರದ ಒತ್ತಡಕ್ಕೆ ತೈಲಕ್ಷೇತ್ರದಲ್ಲಿಯ ವಿಲೀನಾನಿಲ, ಜಲಸ್ಥಿತಿ ಮೂಲ (ಹೈಡ್ರೋಸ್ಟ್ಯಾಟಿಕ್ ಹೆಡ್), ಪಟಲವಿರೂಪಣ (ಡಯಾಸ್ಟ್ರಾಫಿಸಂ), ಉಷ್ಣತಾ ಓಟ (ಟೆಂಪರೇಚರ್ ಗ್ರೇಡಿಯಂಟ್), ದ್ರವಗತಿಕ ಪರಿಸ್ಥಿತಿಗಳು ಮತ್ತು ಖನಿಜ ಪರಿವರ್ತನೆಗಳು ಕಾರಣಗಳು.

ಎಣ್ಣೆಬಾವಿಗಳನ್ನು ಪತ್ತೆಮಾಡುವ ಕೆಲಸ ಮೇಲುತಳ ಮತ್ತು ಒಳತಳಗಳ ಭೂವಿಜ್ಞಾನವಿಧಾನಗಳಿಂದ ಸಾಮಾನ್ಯವಾಗಿ ಜರಗಿಸಲ್ಪಡುತ್ತದೆ ಮತ್ತು ಆವೃತ ಕ್ಷೇತ್ರಗಳಲ್ಲಿ ಭೂಭೌತ ಸರ್ವೇಕ್ಷಣಗಳಿಂದ ಈ ಕಾರ್ಯ ಜರಗುತ್ತದೆ.

**ಪ್ರಪಂಚದ ತೈಲನಿಧಿಗಳು :** ಅಂಕಿ ಅಂಶಗಳು ತಿಳಿಸುವ ಹಾಗೆ 1950ರಲ್ಲಿ ಮೂರು ಶತಕೋಟಿ ಬ್ಯಾರೆಲ್ಲುಗಳಷ್ಟು ಎಣ್ಣೆಯ ಉತ್ಪಾದನೆ ಆಗಿದೆ. ಅಧಿಕ ಸಂಖ್ಯೆಯಲ್ಲಿ ತೈಲಕ್ಷೇತ್ರಗಳನ್ನು ಅದರಲ್ಲೂ ಮುಖ್ಯವಾಗಿ ಮಧ್ಯಪ್ರಾಚ್ಯದಲ್ಲಿ ಕಂಡು ಹಿಡಿಯುತ್ತಿರುವ ಹಾಗೆಲ್ಲ ಈ ಉತ್ಪಾದನ ಪರಿಮಾಣ ಕ್ರಮೇಣ ಏರುತ್ತಲೇ ಇದೆ.

**ಉಪಯೋಗಗಳು :** ಸಾಮರ್ಥ್ಯದ (ಪವರ್) ಉತ್ಪಾದನೆಯಲ್ಲಿ ಶಕ್ತಿಯ ಮೂಲವಾಗಿಯೂ ಸ್ನೇಹಕ ದ್ರವ್ಯವಾಗಿಯೂ (ಲ್ಯೂಬ್ರಿಕೆಂಟ್) ಖನಿಜತೈಲಗಳ ಮುಖ್ಯ ಉಪಯೋಗ ಉಂಟು. ಮಾನವ ಬಳಸುತ್ತಿರುವ ಪೆಟ್ರೋಲಿಯಮಿನ ಮೊತ್ತದ ಶೇ.90 ಭಾಗದಷ್ಟು ಈ ಎರಡು ಉಪಯೋಗಗಳಾಗಿ ವ್ಯಯವಾಗುತ್ತಿದೆ. ಕಚ್ಚಾತೈಲಗಳ ಶುದ್ಧೀಕರಣ ಪ್ರಕ್ರಿಯೆ ಹಲವಾರು ಗೌಣೋತ್ಪನ್ನಗಳಿಗೆ ದಾರಿಮಾಡಿ ಕೊಡುತ್ತದೆ. ಇವುಗಳಲ್ಲಿ ವಿಧವಿಧವಾದ ರಾಸಾಯನಿಕ ವಸ್ತುಗಳು, ಔಷಧಿಗಳು, ದ್ರಾವಕಗಳು (ಸಾಲ್ವೆಂಟ್ಸ್), ರಾಳಗಳು, ಬಣ್ಣಗಳು, ಸ್ಫೋಟಕಗಳು, ಪೂತಿನಾಶಕಗಳು, ರಬ್ಬರ್, ಸುಗಂಧಗಳು ಇತ್ಯಾದಿಗಳು ಸೇರಿವೆ.

(ಸಿ.ಜಿ.)

**ಖನಿಜ ನಿಕ್ಷೇಪಗಳು :** ಶಿಲೆಯಲ್ಲಿ ಸಾಕಷ್ಟು ಮೊತ್ತದಲ್ಲಿ ಉಪಯುಕ್ತ ಖನಿಜವಿದ್ದು ಹೆಚ್ಚು ಶ್ರಮವಿಲ್ಲದೆ ಅದನ್ನು ಒಪ್ಪವಾಡಿ ಪಡೆಯಲು ಸಾಧ್ಯವಾಗುವ ಸಂಚಯನಗಳು(ಮಿನರಲ್ ಡಿಪಾಸಿಟ್ಸ್). ಇಂಥ ಖನಿಜ ಲೋಹ ಖನಿಜವಾಗಿಯೋ ಅಲೋಹ ಖನಿಜವಾಗಿಯೋ ಇರಬಹುದು. ಪ್ರಕೃತಿಯಲ್ಲಿ ಉಂಟಾಗುವ ಕೆಲವು ಚಟುವಟಿಕೆಗಳಿಂದ ಅನುಕೂಲಕರವಾದ ಸನ್ನಿವೇಶವುಂಟಾಗಿ ಶಿಲೆಯಲ್ಲಿಯ ಖನಿಜ ಸಾರೀಕರಣಗೊಂಡು ಲಾಭದಾಯಕವಾದ ನಿಕ್ಷೇಪವೆನಿಸುತ್ತದೆ. ಈ ಕ್ರಿಯೆ ರಾಸಾಯನಿಕ ಇಲ್ಲವೇ ಭೌತ ಇಲ್ಲವೇ ಯಾಂತ್ರಿಕ ರೀತಿಯದಾಗಿರಬಹುದು. ಅಲ್ಲದೆ ಶಿಲೆಯ ಜನನ ಕಾಲದಲ್ಲೋ ಬಳಿಕವೋ ಈ ಬಗೆಯ ಕಾರ್ಯಾಚರಣೆಗಳು ತಲೆದೋರಬಹುದು. ಹೀಗೆ ನಿಕ್ಷೇಪಗಳು ಜನಿಸಿದ ಕಾಲ ಮತ್ತು ರೀತಿಗೆ ಅನುಗುಣವಾಗಿ ಅವನ್ನು ಸಹಜನ್ಯ (ಸಿಂಜೆನೆಟಿಕ್) ನಿಕ್ಷೇಪಗಳೆಂದೂ ಅನುಜನ್ಯ (ಎಪಿಜೆನೆಟಿಕ್) ನಿಕ್ಷೇಪಗಳೆಂದೂ ವರ್ಗೀಕರಿಸಲಾಗಿದೆ. ಖನಿಜವೂ ಅದು ಹುದುಗಿರುವ ಶಿಲೆಯೂ ಒಂದೇ ಮೂಲದಿಂದ ಜನಿಸಿದಾಗ ಆ ಖನಿಜಕ್ಕೆ ಸಹಜನ್ಯ ನಿಕ್ಷೇಪ ಎಂದು ಹೆಸರು. ಹೀಗಿರದೆ ಶಿಲೆ ಜನಿಸಿ ರೂಪುಗೊಂಡ ಸಾಕಷ್ಟು ಕಾಲದ ಬಳಿಕ ಖನಿಜ ನಿಕ್ಷೇಪ ಉಂಟಾಗಿದ್ದಲ್ಲಿ ಅದಕ್ಕೆ ಅನುಜನ್ಯ ನಿಕ್ಷೇಪವೆಂದು ಹೆಸರು. ಮಾತ್ರ ಶಿಲಾದ್ರವದ ಸ್ಫಟಿಕೀಕರಣದಿಂದಾದ ಖನಿಜ ಸಂಕೀರ್ಣಗಳು, ಅಗ್ನಿಶಿಲೆಗಳಲ್ಲಿರುವ ಪೆಗ್ಮಟೈಟ್ ಸ್ವರೂಪಗಳು, ಪವನ (ಎಲೂವಿಯಲ್) ನಿಕ್ಷೇಪಗಳು, ಮೆಕ್ಕಲು ನಿಕ್ಷೇಪಗಳು, ಶೇಷ ನಿಕ್ಷೇಪಗಳು, ಇಮರು ನಿಕ್ಷೇಪಗಳು ಮುಂತಾದವನ್ನು ಮೊದಲ ವರ್ಗದಲ್ಲೂ ಕಾವು ನೀರಿನಿಂದಾದ ಎಳೆಗಳು, ಕಾಯಾಂತರ ನಿಕ್ಷೇಪಗಳು, ಸಂಸ್ಪರ್ಶ ರೂಪಾಂತರ ನಿಕ್ಷೇಪಗಳು, ಹಲವು ಪೆಗ್ಮಟೈಟ್ ಡೈಕ್ ಮತ್ತು ಸಿಲ್ ಮುಂತಾದವನ್ನು ಎರಡನೆಯ ವರ್ಗದಲ್ಲೂ ಅಳವಡಿಸಲಾಗಿದೆ. ಆದರೆ ಕೆಲವು ನಿಕ್ಷೇಪಗಳ ಅದರಲ್ಲೂ ಹೆಚ್ಚಿನ ರೂಪಾಂತರಕ್ಕೆ ಒಳಗಾಗಿರುವ ಖನಿಜ ನಿಕ್ಷೇಪಗಳ ಮೂಲ ಸ್ವರೂಪವನ್ನು ಪತ್ತೆ ಮಾಡುವುದು ಬಹು ಕಷ್ಟ. ಈಚಿನ ವರ್ಷಗಳಲ್ಲಿ ಈ ನಿಕ್ಷೇಪಗಳಲ್ಲಿ ಹುದುಗಿರುವ ಐಸೊಟೋಪುಗಳ ಪರಿಮಾಣಗಳನ್ನು ನಿರ್ಧರಿಸುವುದರ ಮೂಲಕ ಅವುಗಳ ಜನನ ಸಮಸ್ಯೆಗಳನ್ನು ಅರಿಯುವ ಪ್ರಯತ್ನಗಳು ನಡೆದಿವೆ.

ಖನಿಜ ನಿಕ್ಷೇಪಗಳು ತಳೆದಿರುವ ಸ್ವರೂಪಗಳು ಹಲವಾರು. ಇವು ಬಹುಮಟ್ಟಿಗೆ ಶಿಲೆಗಳ ರಚನೆ ಹಾಗೂ ರಾಸಾಯನಿಕ ಸಂಯೋಜನೆಗಳಿಂದ ಪ್ರಭಾವಿಗೊಂಡಿರುತ್ತವೆ. ನಿಕ್ಷೇಪಗಳಿಗೂ ನಾಡಶಿಲೆಗಳಿಗೂ ಇರುವ ಸಂಬಂಧವನ್ನು ಆಧರಿಸಿ ಮೂರು ಪ್ರಮುಖ ರೀತಿಯ ಸ್ವರೂಪಗಳನ್ನು ಗುರುತಿಸಲಾಗಿದೆ. ಇವೇ ಸಂಗತ(ಕನ್ಕಾರ್ಡೆಂಟ್), ಅಸಂಗತ(ಡಿಸ್ಕಾರ್ಡೆಂಟ್) ಮತ್ತು ಸಂಸ್ಪರ್ಶ(ಕಾಂಟ್ಯಾಕ್ಟ್) ಸ್ವರೂಪಗಳು. ಸಂಗತ ಸ್ವರೂಪಗಳು ಸಾಮಾನ್ಯವಾಗಿ ನಾಡಶಿಲೆಯ ರಚನೆಯನ್ನು ಅನುಸರಿಸಿರುತ್ತವೆ. ಇವುಗಳಲ್ಲಿ ಮುಖ್ಯವಾದವು ಬೃಹತ್ ಫಲಕಗಳು, ಸ್ತರೀಸ್ವರೂಪದ ಸಿರಗಳು ಹಾಗೂ ಎಳೆಗಳು, ಕುದುರೆ ಜೀನಿನಾಕಾರದ ಸ್ವರೂಪಗಳು, ಮಸೂರಾಕಾರ ಮತ್ತು ತಟ್ಟೆಯಂತೆ ಚಪ್ಪಟೆಯಾಗಿರುವ ನಿಕ್ಷೇಪಗಳು. ಅಸಂಗತ ಸ್ವರೂಪಗಳು ನಾಡ ಶಿಲೆಯ ರಚನೆಯನ್ನು ಅಡ್ಡಹಾಯುತ್ತವೆ. ಎಳೆಗಳು, ನಳಿಕೆಗಳು, ಸಿರಗಳು ಇವುಗಳಲ್ಲಿ ಮುಖ್ಯವಾದವು. ಸಂಸ್ಪರ್ಶ ಸ್ವರೂಪಗಳಲ್ಲಿ ಫಲಕಗಳು, ಸ್ತರಗಳು ಹಾಗೂ ಮಟ್ಟಸವಾದ ಮಸೂರಾಕಾರದ ಸ್ವರೂಪಗಳನ್ನು ಗುರುತಿಸಬಹುದು.

ಖನಿಜನಿಕ್ಷೇಪಗಳ ಉತ್ಪತ್ತಿಯಲ್ಲಿ ಸಹ ನಾಡಶಿಲೆಗಳ ರಚನೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಖನಿಜಗಳ ಸಾರೀಕರಣದಲ್ಲಂತೂ ಇವುಗಳ ಪ್ರಭಾವವನ್ನು ಕಡೆಗಣಿಸುವಂತಿಲ್ಲ. ಕಾಯಾಂತರದಿಂದುಂಟಾಗುವ ನಿಕ್ಷೇಪಗಳಲ್ಲಿ ಜನ್ಮದಾತ ಶಿಲೆಯ ರಚನೆ ಬಹು ಪ್ರಧಾನವಾದ ಅಂಶ. ಖನಿಜದ್ರವಗಳ ಪ್ರವಿಸುವಿಕೆ ಇದನ್ನೇ ಅವಲಂಬಿಸಿದೆ. ಈ ಕಾರಣದಿಂದ ಶಿಲಾಬಿರುಕುಗಳು, ಸೀಳುಗಳು, ಕುಳಿಗಳು, ಸ್ತರ ಭಂಗಗಳು, ಅಂತರಸ್ತರ ಜಾಡುಗಳು, ಮಡಿಕೆಗಳು ಈ ಬಗೆಯ ಶಿಲಾರಚನೆಗಳಲ್ಲಿ ಉತ್ತಮ ನಿಕ್ಷೇಪಗಳನ್ನು ಕಾಣಬಹುದು.

ಮಾತೃ ಶಿಲಾದ್ರವ ಎಲ್ಲ ಖನಿಜಗಳಿಗೂ ಮೂಲ. ಇದರಲ್ಲಿ ಅಡಕವಾಗಿರುವ ಖನಿಜಾಂಶಗಳು ಶಿಲಾದ್ರವ ಆರಿ ತಣ್ಣಗಾಗುತ್ತಿರುವ ವಿವಿಧ ಹಂತಗಳಲ್ಲಿ ಬೇರ್ಪಟ್ಟು ಸೂಕ್ತ ಸ್ಥಳಗಳಲ್ಲಿ ಶೇಖರಗೊಂಡು ನಿಕ್ಷೇಪಗಳೆನಿಸುತ್ತವೆ. ಭೂಮಿಯ ಹೊರಚಿಪ್ಪಿನಲ್ಲಿರುವ ವಿವಿಧ ಖನಿಜಗಳ ಸರಾಸರಿ ಮೊತ್ತದೊಡನೆ ನಿಕ್ಷೇಪದಲ್ಲಿರುವ ಖನಿಜಗಳ ಮೊತ್ತವನ್ನು ಹೋಲಿಸಿದಲ್ಲಿ ಸಾರೀಕರಣ ಕ್ರಿಯೆಯ ಮಟ್ಟವನ್ನು ಊಹಿಸಬಹುದು.

ಸಾರೀಕರಣ ಕ್ರಿಯೆಯಲ್ಲಿ ಮಾತೃಶಿಲಾದ್ರವದ ವ್ಯತ್ಯಾಸಾತ್ಮಕ ಕ್ರಿಯೆ ಹಾಗೂ ಅನಿಲ ಕಾರ್ಯಚರಣೆ ಬಹು ಪ್ರಧಾನವಾದವು. ಅನಿಲಗಳು ಮಾತೃ ದ್ರವದಲ್ಲಿರುವ ಲೋಹಾಂಶಗಳನ್ನು ತಮ್ಮೊಡನೆ ಹೊತ್ತು ಹೊರತೆಗೆದು ಅಕ್ಕಪಕ್ಕದ ಶಿಲೆಗಳಲ್ಲಿ ಶೇಖರಿಸುತ್ತವೆ. ಅಲ್ಪ ಸಿಲಿಕಾಂಶದಿಂದ ಕೂಡಿರುವ ಅತಿಬೇಸಿಕ್ ಮತ್ತು ಬೇಸಿಕ್ ಶಿಲಾದ್ರವಗಳು ಸ್ಫಟಿಕೀಕರಣಗೊಂಡಾಗ ಲೋಹಸಂಬಂಧವಾದ ಆಕ್ಸೈಡುಗಳು ಮತ್ತು ಸಲ್ಫೈಡುಗಳು ಅವುಗಳಿಂದ ಬೇರ್ಪಟ್ಟು ಗುರುತ್ವಾಕರ್ಷಣೆಗೊಳಗಾಗಿ ಪದರುಗಳಾಗಿಯೋ ವಿಶಿಷ್ಟ ಆಕಾರವಿಲ್ಲದ ಮುದ್ದೆಗಳಾಗಿಯೋ ಶಿಲೆಯ ನಾನಾ ಭಾಗಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅನೇಕ ಶಿಲಾ ಸ್ವರೂಪಗಳಲ್ಲಿ ಕಾಣಬರುವ ನಿಕಲ್, ತಾಮ್ರ, ಪ್ಲಾಟಿನಂ, ಟೈಟಾನಿಫೆರಸ್ ಮ್ಯಾಗ್ನಟೈಟ್ ಮತ್ತು ಕ್ರೋಮೈಟ್ ಪದರಗಳು, ಸ್ತರಗಳು ಹೀಗೆ ಉಂಟಾದ ನಿಕ್ಷೇಪಗಳು. ಅನೇಕ ತಾಮ್ರ–ನಿಕಲ್–ಕಬ್ಬಿಣ ಸಲ್ಫೈಡುಗಳ ಬೃಹತ್ ನಿಕ್ಷೇಪಗಳ ಜನನ ಬೇಸಿಕ್ ಅಗ್ನಿ ಶಿಲೆಗಳೊಡನೆ ನಿಕಟ ಸಂಬಂಧವನ್ನು ಹೊಂದಿರುತ್ತದೆ. ಅಧಿಕ ಸಿಲಿಕಾಂಶದ ಹಾಗೂ ಕ್ಷಾರೀಯ ಶಿಲಾದ್ರವಗಳ ಆರುವಿಕೆ ಮುಂದುವರಿದಂತೆ ಹೆಚ್ಚು ಹೆಚ್ಚು ಖನಿಜದ ಹರಳುಗಳು ಹೊರ ಬಂದು ಶೇಷದ್ರವಗಳಲ್ಲಿ $CO_2$, B, Fl, Cl, $H_2O$ ಮತ್ತು S ಮೊದಲಾದ ರಾಸಾಯನಿಕ ವಸ್ತುಗಳ ಪ್ರಮಾಣವೂ ಹೆಚ್ಚುತ್ತ ಹೋಗುತ್ತದೆ. ಇವನ್ನು ಖನಿಜಕಾರಕಗಳೆಂದು (ಮಿನರಲೈಸರ್ಸ್) ಹೆಸರಿಸಲಾಗಿದೆ. ಕೆಲವು ಅಗ್ನಿಶಿಲೆಗಳಲ್ಲಿ ಈ ತೆರನಾದ ಖನಿಜಕಾರಕಗಳು ಅಧಿಕ ಮೊತ್ತದಲ್ಲಿರುವ ಪೆಗ್ಮಟೈಟ್ ಸಿರಗಳು ಹಾಗೂ ಮಜ್ಜೆಗಳಿಂದ ಕೂಡಿರುವ ಜಾಡುಗಳನ್ನೇ ನೋಡಬಹುದು. ಮತ್ತೆ ಕೆಲವು ವೇಳೆ ಸಾಕಷ್ಟು ನೀರು ನೀರಾಗಿರುವ ಪೆಗ್ಮಟೈಟ್ ದ್ರವ ಅಕ್ಕಪಕ್ಕದ ನಾಡಶಿಲೆಗಳಲ್ಲಿ ಸುಲಭವಾಗಿ ಪ್ರವಹಿಸಿ ಮಸೂರಾಕಾರದ ಡೈಕ್ ಮತ್ತು ಸಿಲ್‌ಗಳನ್ನು ರೂಪಿಸುತ್ತದೆ. ಲಿಥಿಯಂ, ಟ್ಯಾಂಟಲಂ, ಬೆರಿಲಿಯಂ, ಸೀಸಿಯಂ, ಯುರೇನಿಯಂ ಮುಂತಾದ ಅಣು ಖನಿಜಗಳು, ಮೈಕ(ಅಭ್ರಕ), ಟೂರ್ಮಲೀನ್, ರತ್ನಪಡಿ ಖನಿಜಗಳು, ಪೊಟ್ಯಾಸಿಯಂ ಫೆಲ್ಡ್‌ಸ್ಪಾರ್(ಸುದ್ದೆಮಣ್ಣಿನ ಮೂಲ) ಮತ್ತು ಕೆಲವು ಅಪರೂಪ ಖನಿಜಗಳ ಭಂಡಾರಗಳೇ ಹೀಗುಂಟಾಗುವ ಪೆಗ್ಮಟೈಟುಗಳು.

ಮಧ್ಯವರ್ತಿ ಹಾಗೂ ಮಿತಸಿಲಿಕಾಂಶದಿಂದ ಕೂಡಿದ ಶಿಲಾದ್ರವಗಳು ಸ್ಫಟಿಕೀಕರಣಗೊಳ್ಳುವ ಸಮಯದಲ್ಲಿ ಖನಿಜಪೂರಿತ ದ್ರವಗಳು ಮಾತೃದ್ರವದ ಕುಹರದಿಂದ ಆಗಾಗ ಅಥವಾ ನಿರಂತರವಾಗಿ ಹೊರ ಹೊಮ್ಮುತ್ತಿರುವ ಸಂದರ್ಭಗಳಲ್ಲಿ ತಲೆದೋರುವ ಖನಿಜೀಕರಣ ಕ್ರಿಯೆಯ (ಮಿನರಲೈಸೇಷನ್) ಸ್ವರೂಪ ಮತ್ತೊಂದು ತೆರನಾದುದು. ಈ ವೇಳೆಗಾಗಲೇ ರೂಪುಗೊಂಡಿರುವ ಶಿಲಾಸ್ವರೂಪದ ಹೊರವಲಯ ಹಾಗೂ ಅದರ ಸುತ್ತಮುತ್ತಲ ನಾಡಶಿಲೆಗಳಲ್ಲಿರುವ ರಂಧ್ರ, ಬಿರುಕು, ಸೀಳು, ಸ್ತರಭಂಗ ಜಾಡುಗಳಲ್ಲಿ ಮಾತೃದ್ರವದಿಂದ ಹೊರಹೊಮ್ಮುವ ಖನಿಜಪೂರಿತ ದ್ರವಗಳು ಪ್ರವಿಸಿ ಕ್ರಮೇಣ ಕಡಿಮೆ ಒತ್ತಡವಿರುವ ಸ್ತರಗಳತ್ತ ಪ್ರವಹಿಸುತ್ತವೆ. ಈ ಬಗೆಯ ಕಾವುನೀರಿನ(ಹೈಡ್ರೊಥರ್ಮಲ್) ಘಟಕಗಳಿಂದ ಪ್ರಕ್ಷೇಪಿತ ಹೊಂದುವ ಅಮೂಲ್ಯ ಖನಿಜಗಳ ಶೇಖರಣೆ ಇತರ ಸನ್ನಿವೇಶ ಲಕ್ಷಣಗಳನ್ನೂ ಅವಲಂಬಿಸಿದೆ. ದ್ರವಗಳಲ್ಲಿ ಇರಬಹುದಾದ ಸರಳವಾದ ಒತ್ತಡ–ಉಷ್ಣ ಸನ್ನಿವೇಶಗಳು ಹಾಗೂ ಅವು ಪ್ರವಹಿಸುವ ಶಿಲಾದ್ವಾರಗಳ ಭಿತ್ತಿಶಿಲೆಗಳೊಡನೆ ಅವುಗಳ ಕ್ಲಿಷ್ಟ ರೀತಿಯ ಪ್ರತಿಕ್ರಿಯೆಗಳು ಖನಿಜ ನಿಕ್ಷೇಪಗಳ ಜನನದಲ್ಲಿ ಬಹು ಮುಖ್ಯವೆನಿಸಿವೆ. ಹೀಗೆಯೇ ಬೃಹತ್ ರೂಪಾಂತರ ಕ್ರಿಯೆ ನಡೆಯುತ್ತಿರುವ ಸಮಯದಲ್ಲಿ ತಲೆದೋರಬಹುದಾದ ಅಸಮತೋಲನಗಳು ಶಿಲೆಗಳಲ್ಲಿರುವ ಮಿತಸ್ಥಾಯಿ ಖನಿಜಗಳನ್ನು ವಿಮುಕ್ತಗೊಳಿಸುತ್ತವೆ. ಹೀಗೆ ಹೊರಬಿದ್ದ ಖನಿಜಾಂಶಗಳು ಶಿಲೆಯಲ್ಲಿ ಹುದುಗಿರುವ ದ್ರವದೊಡನೆ ವಿಲೀನಗೊಂಡು ಯುಕ್ತ ಸನ್ನಿವೇಶಗಳಲ್ಲಿ ಪ್ರಕ್ಷೇಪಿತಗೊಂಡು ಖನಿಜ ನಿಕ್ಷೇಪಗಳಿಗೆ ಕಾರಣವೆನಿಸಬಹುದು. ಈ ಬಗೆಯ ದ್ರವಗಳನ್ನು ಮೂಲದ್ರವದಿಂದ ಹೊಮ್ಮುವ ಕಾವುನೀರಿನ ದ್ರವಗಳೊಡನೆ ಬೇರ್ಪಡಿಸಲು ಸಾಧ್ಯವಿಲ್ಲ.

ಕಾವುನೀರಿನಿಂದ ಉಂಟಾಗುವ ನಿಕ್ಷೇಪಗಳಲ್ಲಿರುವ ಭಾರ ಲೋಹಗಳ ಜನನದ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಎಷ್ಟರಮಟ್ಟಿಗೆ ಇವು ಮಾತೃದ್ರವ ಮೂಲವಾದವು ಅಥವಾ ಯಾವ ಮೊತ್ತದಲ್ಲಿ ಅಕ್ಕಪಕ್ಕ ಶಿಲೆಗಳೊಡನೆ ನಡೆದ ಕಾರ್ಯಾಚರಣೆ ಯಿಂದುಂಟಾದವು ಎಂಬೀ ಅಂಶಗಳನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಕೆಲವು ಖನಿಜ ನಿಕ್ಷೇಪಗಳಿಗೂ ಅವು ಸಾಮಾನ್ಯವಾಗಿ ಹುದುಗಿರುವ ನಾಡಶಿಲೆಗಳ ಭಿತ್ತಿಗಳಿಗೂ ಇರುವ ನಿಕಟ ಸಂಬಂಧದ ಆಧಾರದ ಮೇಲೆ ಮೂಲಸ್ತರ (ಸೋರ್ಸ್ ಬೆಡ್) ತತ್ತ್ವವನ್ನು ಪ್ರತಿಪಾದಿಸಲಾಗಿದೆ. ಹಸಿರು ಶಿಲೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಕ್ವಾರ್ಟ್ಸ್–ಕಾರ್ಬೊನೇಟ್–ಚಾಲ್ಕೊಸೈಟ್–ಬೋರ್ನೈಟ್ ಎಳೆಗಳು ಇದಕ್ಕೆ ಉತ್ತಮ ಉದಾಹರಣೆ. ಬೆಸಾಲ್ಟ್ ಲಾವಸ್ತರಗಳ ರೂಪಾಂತರಕ್ಕೂ ಇವುಗಳ ಜನನಕ್ಕೂ ನಿಕಟ ಸಂಬಂಧವನ್ನು ಕಲ್ಪಿಸಲಾಗಿದೆ. ಹೀಗೆಯೇ ಬೆಸಾಲ್ಟ್–ಆಂಡಿಸೈಟ್ ಲಾವಗಳಿಗೆ ಸಂಬಂಧಿಸಿದ ಹಾಗೆ ಕ್ವಾರ್ಟ್ಸ್–ಪೈರೈಟ್–ಪಿರ್ಹೊಟೈಟ್–ಚಾಲ್ಕೊಪೈರೈಟ್ –ಆರ್ಸಿನೊಪೈರೈಟ್– ಚಿನ್ನ ಈ ಖನಿಜಗಳ ಎಳೆಗಳು ಜನಿಸಿರಬಹುದು.

ವಿವಿಧ ಖನಿಜಗಳ ಸ್ಥಿರತೆ ಮತ್ತು ಖನಿಜ ಸಮೂಹಗಳ ಆಧಾರದ ಮೇಲೆ ಉಂಟಾಗಿರುವ ಖನಿಜ ವಲಯಗಳು ಒಂದು ಬಗೆಯ ಆದರೆ ಅಷ್ಟು ನಿಖರವಲ್ಲದ ಭೂ ಉಷ್ಣಮಾಪಿಗಳು(ಜಿಯಲಾಜಿಕಲ್ ಥರ್ಮೋಮೀಟರ್ಸ್) ಎನಿಸಿವೆ. ಇವು ಕಾವುನೀರಿನಿಂದಾದ ನಿಕ್ಷೇಪಗಳ ಜನನಕ್ಕೆ ಸಂಬಂಧಿಸಿದ ಉಷ್ಣತೆ ಹಾಗೂ ಒತ್ತಡಗಳನ್ನು ಸೂಚಿಸುತ್ತವೆ. ಅಂತಸ್ಸರಣಗಳ ಅಕ್ಕಪಕ್ಕದ ಭಿತ್ತಿ ಶಿಲಾವಲಯಗಳು ಹಾಗೂ ಅವುಗಳಿಗೆ ಅತ್ಯಂತ ಸಮೀಪವಾಗಿರುವ ನಾಡಶಿಲೆಗಳಲ್ಲಿ ಅಧಿಕ ಉಷ್ಣತೆಯಿಂದಾಗುವ ಲಕ್ಷಣಗಳನ್ನು ನಿರ್ದಿಷ್ಟವಾಗಿ ಗುರುತಿಸಬಹುದು. ಈ ಕಾರಣದಿಂದಲೇ ಅಧಿಕ ಉಷ್ಣತೆಯ ಕ್ವಾರ್ಟ್ಸ್ ಪ್ರಭೇದದ ಎಳೆಗಳನ್ನು ನಾಡಶಿಲೆಯ ಬಿರುಕುಗಳಲ್ಲಿ ನೋಡಲು ಸಾಧ್ಯ. ಅಲ್ಲದೆ ಅಕ್ಕಪಕ್ಕದ ಶಿಲೆಗಳಲ್ಲಿ ಗ್ರೀಸೇನೀಕರಣದ ಪ್ರಭಾವವನ್ನು ಕೂಡ ಸುಲಭವಾಗಿ ಗುರುತಿಸಬಹುದು. ಈ ಕ್ರಿಯೆಯಿಂದಾದ ಫೆಲ್ಡ್‌ಸ್ಪಾರುಗಳು ಅಭ್ರಕ, ಟೋಪಾಸ್, ಕ್ಯಾಸಿಟರೈಟ್, ಷೀಲೈಟ್, ವುಲ್ಫ್ರಮೈಟ್, ಬೆರಿಲ್ ಮಾಲಿಬ್ಡನೈಟ್, ಬಿಸ್ಮತ್ ಮತ್ತು ಬಿಸ್ಮತಿನೈಟ್ ಮೊದಲಾದ ಖನಿಜ ಸಮೂಗಳು ಕಾಣಬರುವುದು ಬಹು ಸಾಮಾನ್ಯ.

ಅನೇಕ ಸಂದರ್ಭಗಳಲ್ಲಿ ಸಂಸ್ಪರ್ಶ ರೂಪಾಂತರ ಹಾಗೂ ಖನಿಜೀಕರಣ ಕ್ರಿಯೆ ಅನುಕ್ರಮವಾಗಿ ತಲೆದೋರಿ ಏಕರೀತಿಯ ಬದಲಾವಣೆಗಳಿಗೆ ಕಾರಣವಾಗಿವೆ. ಇವು ತಲೆದೋರುವ ಪ್ರದೇಶಗಳಲ್ಲಿ ಸುಣ್ಣ ಶಿಲೆಯಿದ್ದಲ್ಲಿ ಟ್ಯಾಕ್ಟೈಟುಗಳು ಮತ್ತು ಕರಕುಗಂತಿಗಳಿರುತ್ತವೆ. ಅಲ್ಲದೆ ಖನಿಜ ನಿಕ್ಷೇಪಗಳ ಹೊರವಲಯದುದ್ದಕ್ಕೂ ನಾಡಶಿಲೆಗಳು ವಿವಿಧ ದರ್ಜೆಯ ಕಾಯಾಂತರಕ್ಕೆ ಒಳಗಾಗಿರುತ್ತವೆ. ಈ ಸಂಸ್ಪರ್ಶ ಜಾಡಿನಲ್ಲಿ ನಾಡಶಿಲಾಛಿದ್ರಗಳಿಂದ ಕೂಡಿದ ಖನಿಜದ ಎಳೆಗಳಿಂದ ಹಿಡಿದು ಯಾವ ಬಗೆಯ ಮೂಲ ನಾಮಾವಶೇಷವೂ ಇರದಂತೆ ಸಂಪೂರ್ಣವಾಗಿ ಕಾಯಾಂತರಗೊಂಡಿರುವ ನಾಡಶಿಲಾ ಸ್ವರೂಪಗಳಿರುತ್ತವೆ.

ಅಗ್ನಿಶಿಲಾ ಸ್ವರೂಪದಿಂದ ದೂರ ಸರಿದಂತೆ ಕಾವು ನೀರಿನಿಂದಾದ ಖನಿಜದ ಎಳೆಗಳಲ್ಲೂ ಕಾಯಾಂತರಗೊಂಡಿರುವ ಶಿಲಾಭಾಗಗಳ ಖನಿಜ ಸಮೂಹಗಳಲ್ಲೂ ಕ್ರಮೇಣ ಕ್ಷೀಣಿಸುವ ಒತ್ತಡ ಉಷ್ಣಗಳಿಗೆ ಅನುಗುಣವಾದ ಬದಲಾವಣೆಗಳನ್ನು ಗುರುತಿಸಬಹುದು. ಮಿತೋಷ್ಣ ಸನ್ನಿವೇಶದಲ್ಲಿ ಉಂಟಾದ ಖನಿಜಕ್ಷೇಪಗಳಲ್ಲಿ ಸಲ್ಫೈಡುಗಳು ಸಲ್ಫಾರ್ಸಿನೈಡುಗಳು ಮತ್ತು ಟೆಲ್ಯುರೈಡುಗಳಿದ್ದು ಅವನ್ನು ಮಿತೋಷ್ಣ(ಮೀಸೊಥರ್ಮಲ್) ನಿಕ್ಷೇಪಗಳು ಎಂದು ಕರೆಯಲಾಗಿದೆ. ಕಡಿಮೆ ಉಷ್ಣ ಸನ್ನಿವೇಶದಲ್ಲಿ ಕಾವುನೀರಿನಿಂದಾಗುವ (ಎಪಿಥರ್ಮಲ್) ಕನಿಷ್ಠ ಉಷ್ಣ ನಿಕ್ಷೇಪಗಳಲ್ಲಿ ಆರ್ಸೆನಿಕ್, ಆಂಟಿಮೊನಿ ಹಾಗೂ ಮರ್ಕ್ಯುರಿ ಸಲ್ಫೈಡ್ ಖನಿಜಗಳನ್ನು ಗುರುತಿಸಬಹುದು. ಕೆಲವು ಅನುಕೂಲಕರವಾದ ಸನ್ನಿವೇಶಗಳಲ್ಲಿ ಖನಿಜಪೂರಿತ ದ್ರವಗಳು ಬಿಸಿನೀರಿನ ಚಿಲುಮೆಗಳಂತೆ ಹೊರ ಹೊಮ್ಮಲೂಬಹುದು. ಆಗ ಚಿಲುಮೆಯ ಸುತ್ತ ಖನಿಜ ನಿಕ್ಷೇಪಗಳನ್ನು ನೋಡಬಹುದು. ಇವೇ ಟ್ಯೂಫ ನಿಕ್ಷೇಪಗಳು. ಲಾವ ಪ್ರವಾಹಗಳಿಂದಲೂ ಗಂಧಕವೇ ಮೊದಲಾದ ಬಾಷ್ಪೀಕಾರಕ ಖನಿಜಗಳು ಹೊರಹೊಮ್ಮೀ ಯುಕ್ತ ಸ್ಥಳಗಳಲ್ಲಿ ಶೇಖರಗೊಂಡು ಉಪಯುಕ್ತ ಖನಿಜ ನಿಕ್ಷೇಪಗಳೆನಿಸಿವೆ.

ಅತ್ಯಂತ ಸರಳವಾದವೇ ಶೇಷನಿಕ್ಷೇಪಗಳು. ಇವು ರೂಪುಗೊಂಡ ರೀತಿ ಮೂಲ ನಿಕ್ಷೇಪಗಳಂತೆ ಕ್ಲಿಷ್ಟವಲ್ಲ. ಮಾತೃಶಿಲೆ ಶಿಥಿಲಗೊಂಡಾಗ ಅದರಲ್ಲಿಯ ಖನಿಜಗಳು ನುಚ್ಚುನೂರಾಗಿ ಕಣಗಳ ಅಥವಾ ದೂಳಿನ ರೂಪದಲ್ಲಿ ಹೊರ ಬರುತ್ತವೆ. ಹೀಗೆ ಬೇರ್ಪಟ್ಟ ಖನಿಜಾಂಶಗಳನ್ನು ಬೀಸುವ ಗಾಳಿ ಅಥವಾ ಹರಿವ ನೀರು ಹೊತ್ತು ದೂರ ಸಾಗಿಸುತ್ತವೆ. ಆದರೆ ಈ ಕ್ರಿಯೆಯನ್ನು ಮೆಟ್ಟಿ ಅಲ್ಲೇ ಉಳಿಯುವ ಖನಿಜ ಕಣಗಳು ಕ್ರಮೇಣ ಶೇಖರಗೊಂಡು ಉತ್ತಮ ನಿಕ್ಷೇಪವಾಗುತ್ತವೆ.

ಚಿನ್ನ, ವಜ್ರ, ಕೆಂಪು, ಪಚ್ಚೆ ಮೊದಲಾದ ಅಮೂಲ್ಯ ಖನಿಜಗಳೂ ಕ್ರೋಮೈಟ್ ಮುಂತಾದ ಉಪಯುಕ್ತ ಖನಿಜಗಳೂ ಈ ಬಗೆಯ ನಿಕ್ಷೇಪಗಳಲ್ಲಿರುವುದು ಕಂಡು ಬಂದಿದೆ. ಕೆಲವು ವೇಳೆ ಜೋರಾಗಿ ಬೀಸುವ ಗಾಳಿಯೋ ವೇಗವಾಗಿ ಪ್ರವಹಿಸುವ ನೀರೋ ಈ ಖನಿಜಗಳನ್ನು ಬೇರೆಡೆಗೆ ಸಾಗಿಸಿ ನದಿ, ಸರೋವರ, ಸಮುದ್ರಗಳ ಕರೆಗಳಲ್ಲೋ ತಳದಲ್ಲೋ ಶೇಖರಿಸಿ ಉಪಯುಕ್ತ ನಿಕ್ಷೇಪಗಳನ್ನು ರೂಪಿಸುವುದೂ ಉಂಟು. ಇವೇ ಮೆಕ್ಕಲು ಅಥವಾ ಗರಸು ನಿಕ್ಷೇಪಗಳು. ಜಲಾಶಯಗಳ ಅಲೆಗಳು ಸಹ ಖನಿಜ

ಸಾರೀಕರಣದಲ್ಲಿ ಸಹಕರಿಸುವುದುಂಟು. ಒಟ್ಟಿನಲ್ಲಿ ಪ್ರಕೃತಿ ನಮಗಾಗಿ ಇವನ್ನು ಜಾಲಿಸಿ ಒಪ್ಪ ಮಾಡಿ ಸಿದ್ಧಪಡಿಸಿರುತ್ತದೆ. ಹೀಗೆ ಉಂಟಾದ ಚಿನ್ನ, ಪ್ಲಾಟಿನಂ, ಜಿರ್ಕಾನ್, ರೂಟೈಲ್, ಇಲ್ಮೆನೈಟ್, ಮಾನಜೈಟ್ ನಿಕ್ಷೇಪಗಳನ್ನು ಪ್ರಪಂಚದ ಹಲವಾರು ಪ್ರದೇಶಗಳಲ್ಲಿ ಕಾಣಬಹುದು. ಕೇರಳದ ಸಮುದ್ರದ ಕರಾವಳಿಯಲ್ಲಿರುವ ಅತ್ಯುತ್ತಮ ಮಾನಜೈಟ್ ಮರಳು ನಿಕ್ಷೇಪಗಳು ಈ ವರ್ಗಕ್ಕೊಂದು ಉತ್ತಮ ಉದಾಹರಣೆ. ಒಮ್ಮೊಮ್ಮೆ ಗಾಳಿ ಸಹ ಇದೇ ರೀತಿಯ ನಿಕ್ಷೇಪಗಳಿಗೆ ಕಾರಣವಾಗುವುದುಂಟು. ಅವುಗಳಿಗೆ ಪವನ ನಿಕ್ಷೇಪಗಳೆಂದು ಹೆಸರು. ಉಷ್ಣವಲಯದ ಪ್ರದೇಶಗಳಲ್ಲಿ ಅಧಿಕ ತೇವಾಂಶದಿಂದ ಕೂಡಿದ ವಾಯುವಿನ ಕಾರ್ಯಾಚರಣೆಯಿಂದ ಶಿಲೆಗಳಲ್ಲಿಯ ಅಲ್ಯುಮಿನಂ, ಕಬ್ಬಿಣ, ನಿಕಲ್, ಮ್ಯಾಂಗನೀಸ್, ಕೋಬಾಲ್ಟ್ ಮುಂತಾದ ಖನಿಜಗಳು ರಾಸಾಯನಿಕ ಕ್ರಿಯೆಗಳಿಗೆ ಒಳಗಾಗಿ ಕರಗದ ಹೈಡ್ರಾಕ್ಸೈಡುಗಳಾಗಿ ಮಾರ್ಪಡುತ್ತವೆ. ಇದರೊಡನೆ ಸುಲಭವಾಗಿ ಕರಗುವ ಕ್ವಾರ್ಟ್ಜ್ ಯಗಳು, ಸಿಲಿಕ, ಮುಂತಾದುವು ಶಿಲೆಯಿಂದ ಹರಿದು ಹೊರಬರುವ ಕಾರಣ ಅಲ್ಲೇ ಉಳಿಯುವ ಹೈಡ್ರಾಕ್ಸೈಡ್ ಖನಿಜಗಳ ನಿಕ್ಷೇಪ ರೂಪುಗೊಳ್ಳುತ್ತದೆ. ಕರ್ನಾಟಕದ ಪಶ್ಚಿಮ ಕರಾವಳಿ, ತಮಿಳು ನಾಡಿನ ನೀಲಗಿರಿ, ಸೇಲಂ ಮುಂತಾದ ಪ್ರದೇಶಗಳಲ್ಲಿರುವ ಬಾಕ್ಸೈಟ್ ಮತ್ತು ಲ್ಯಾಟರೈಟ್ ನಿಕ್ಷೇಪಗಳು ಈ ವರ್ಗದವು. ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿಯ ಬಾಕ್ಸೈಟ್ ನಿಕ್ಷೇಪಗಳಂತೂ ಅಲ್ಯುಮಿನಂನ ಅತ್ಯುತ್ತಮ ನಿಕ್ಷೇಪಗಳೆನಿಸಿವೆ.

ಕೆಲವು ಸಂದರ್ಭಗಳಲ್ಲಿ ಶಿಲೆಗಳು ಸವೆತಕ್ಕೊಳಗಾದಾಗ ಅವುಗಳಲ್ಲಿರುವ ಹಲವು ಖನಿಜಗಳು ರಾಸಾಯನಿಕವಾಗಿ ಶಿಥಿಲಗೊಂಡು ನೀರಿನಲ್ಲಿ ವಿಲೀನಗೊಳ್ಳುತ್ತವೆ. ಈ ನೀರು ಯುಕ್ತ ಸ್ಥಳಗಳಲ್ಲಿ ಶೇಖರವಾಗಿ ಮುಂದೆ ಹವಾಗುಣದಲ್ಲಾಗುವ ವ್ಯತ್ಯಾಸಗಳಿಂದ ಉಷ್ಣ ಹೆಚ್ಚಿದಾಗ ನೀರೆಲ್ಲವೂ ಇಂಗಿ ಖನಿಜ ನಿಕ್ಷೇಪಗಳುಂಟಾಗುತ್ತವೆ. ಲವಣ ನಿಕ್ಷೇಪಗಳ ಜನನ ಈ ರೀತಿಯದು. ಅನೇಕ ವೇಳೆ ಇವುಗಳಲ್ಲಿ ಸ್ತರಸ್ವರೂಪವನ್ನು ಗುರುತಿಸಬಹುದು. ಲವಣ, ಜಿಪ್ಸಂ, ಅನ್‌ಹೈಡ್ರೈಟ್ ಮುಂತಾದ ಬೃಹತ್ ನಿಕ್ಷೇಪಗಳನ್ನು ಚಿಲಿ, ಜರ್ಮನಿ ಹಾಗೂ ಭಾರತದ ಉಪಖಂಡದ ಹಿಮಾಲಯ ಶ್ರೇಣಿಯ ಸಾಲ್ಟ್‌ರೇಂಜ್ ಪ್ರದೇಶದಲ್ಲಿ ಕಾಣಬಹುದು. ಮರುಭೂಮಿಗಳ ಪ್ಲಾಯಾ ಸರೋವರಗಳಲೂ ಇಂಗಿ ಈ ತೆರನಾದ ಲವಣ ನಿಕ್ಷೇಪಗಳುಂಟಾಗಿವೆ. ಲವಣಗಳಲ್ಲಿ ಕೆಲವು ಮತ್ತೆ ಕರಗಿ ಕ್ರಮೇಣ ದ್ರಾವಣಗಳು ಇಂಗಿ ಹೋಗಿ ಖನಿಜ ನಿಕ್ಷೇಪಗಳಾಗಿರುವುದೂ ಉಂಟು. ಪೊಟ್ಯಾಷ್ ಲವಣಗಳ, ಬೋರೇಟುಗಳ ಹಾಗೂ ನೈಟ್ರೇಟುಗಳ ನಿಕ್ಷೇಪಗಳು ಈ ಗುಂಪಿನವು. ಸೂಕ್ಷ್ಮ ಸಮುದ್ರಜೀವಿಗಳಾದ ಫೊರಾಮಿನಿಫೆರ, ಸ್ಪಾಂಜುಗಳು, ಮೃದ್ವಂಗಿಗಳು ನೀರಿನಲ್ಲಿ ಕರಗಿರುವ ಸುಣ್ಣ, ಸಿಲಿಕ ಮುಂತಾದ ಖನಿಜಾಂಶಗಳನ್ನು ಹೀರಿ ತಮ್ಮ ಚಿಪ್ಪುಗಳನ್ನೋ ಶರೀರದ ಕೆಲವು ಅಂಗಗಳನ್ನೋ ನಿರ್ಮಿಸಿಕೊಳ್ಳುತ್ತವೆ. ಈ ಜೀವಿಗಳ ಮರಣೋತ್ತರ ಗಟ್ಟಿಯಾದ ಭಾಗಗಳು ಶೇಖರಗೊಂಡು ಉತ್ತಮ ಖನಿಜನಿಕ್ಷೇಪಗಳಾಗುತ್ತವೆ. ಹೀಗೆಯೇ ಬ್ಯಾಕ್ಟೀರಿಯಗಳ ಚಟುವಟಿಕೆಯಿಂದ ಉತ್ತಮ ಹಾಗೂ ಬೃಹತ್ ಕಬ್ಬಿಣ ಖನಿಜದ ನಿಕ್ಷೇಪಗಳುಂಟಾಗಿವೆ. ಲವಣ ಗುಮ್ಮಟಗಳೊಡನೆ ಕಂಡುಬರುವ ಗಂಧಕ ನಿಕ್ಷೇಪಗಳಿಗೆ ಸಹ ಬ್ಯಾಕ್ಟೀರಿಯಗಳೇ ಮೂಲ. ಇವು ಜಿಪ್ಸಂ ಮತ್ತು ಅನ್‌ಹೈಡ್ರೈಟುಗಳಲ್ಲಿರುವ ಗಂಧಕಾಂಶವನ್ನು ಹೀರಿ ಹೊರತೆಗೆದು ಖನಿಜ ನಿಕ್ಷೇಪಗಳನ್ನು ರೂಪಿಸಿವೆ.

ಅಂತರ್ಜಲ(ಗ್ರೌಂಡ್ ವಾಟರ್) ಸಹ ಖನಿಜ ನಿಕ್ಷೇಪಗಳ ಉತ್ಪತ್ತಿಯಲ್ಲಿ ತನ್ನದೇ ಆದ ಪಾತ್ರವನ್ನು ವಹಿಸಿದೆ. ಇದು ಶಿಲೆಗಳ ಮೂಲಕ ಹರಿಯುವಾಗ ಸುಲಭವಾಗಿ ಕರಗಬಲ್ಲ ಖನಿಜಗಳನ್ನು ತನ್ನೊಡನೆ ಹೊತ್ತು ಹರಿದು, ಅನುಕೂಲಕರವಾದ ಮತ್ತೊಂದೆಡೆ ಅವನ್ನು ಪ್ರಕ್ಷೇಪಿಸುತ್ತದೆ. ಅಮೆರಿಕದ ಕಾಲರಾಡೋ ಪ್ರಸ್ಥಭೂಮಿಯಲ್ಲಿರುವ ಯುರೇನಿಯಂ–ವೆನೇಡಿಯಂ ನಿಕ್ಷೇಪಗಳು ಇದಕ್ಕೆ ಅತ್ಯುತ್ತಮ ಉದಾಹರಣೆ. ಬಹುಶಃ ಅಂತರ್ಜಲ ಈ ಪ್ರದೇಶದ ಜ್ವಾಲಾಮುಖಿಜ ಬೂದಿ ಮತ್ತು ಶಿಲಾಸ್ತರಗಳ ಮೂಲಕ ಪ್ರವಹಿಸಿದಾಗ ಅಲ್ಲಿ ಅಡಕವಾಗಿದ್ದ ಯುರೇನಿಯಂ–ವೆನೇಡಿಯಂ ಖನಿಜಾಂಶಗಳನ್ನು ಹೊರದೂಡಿ ತನ್ನಲ್ಲೇ ಕರಗಿಸಿಕೊಂಡು ಮುಂದೆ ಮರಳುಶಿಲೆ, ಕದಂಬಶಿಲೆಗಳ ಮೂಲಕ ಹರಿಯುವಾಗ ಇಂಗಾಲೀಕರಣಗೊಂಡಿರುವ ಸಸ್ಯಾವಶೇಷಗಳಿಂದ ತಡೆಯುಂಟಾದ ಸಂದರ್ಭಗಳಲ್ಲಿ ವಿಲೀನ ಯುರೇನಿಯಂ–ವೆನೇಡಿಯಂ ಖನಿಜಗಳನ್ನು ಮತ್ತೆ ಪ್ರಕ್ಷೇಪಿಸಿ ಆ ಮೂಲಕ ನಿಕ್ಷೇಪಗಳುಂಟಾದುವೆಂದು ತಜ್ಞರ ಅಭಿಪ್ರಾಯ. ಮಿಸಿಸಿಪಿ ಕಣಿವೆ ಮಾದರಿಯ ಸೀಸ ಮತ್ತು ಸತುವಿನ ನಿಕ್ಷೇಪಗಳು ಸಹ ಅಂತರ್ಜಲದ ಕಾರ್ಯಾಚರಣೆಯಿಂದಾದವು. ಜಲಜಶಿಲಾ ಸ್ತರಗಳಲ್ಲಿದ್ದ ಈ ಲೋಹಾಂಶಗಳು ಅಂತರ್ಜಲದೊಡನೆ ಸ್ರವಿಸಿ ಹೊರ ಬಂದು ಕ್ರಮೇಣ ಸುಣ್ಣಶಿಲೆಗಳ ಮೂಲಕ ಹರಿದಾಗ ಅವನ್ನು ಅಲ್ಲಲ್ಲೇ ಕಾಯಾಂತರಕ್ಕೆ ಒಳಪಡಿಸಿ ನಿಕ್ಷೇಪಗಳುಂಟಾದುವು. ಅಂತೂ ಈ ತೆರನಾದ ನಿಕ್ಷೇಪಗಳು ಅಗ್ನಿಶಿಲಾ ಜನ್ಯವಲ್ಲವೆಂಬುದು ಗಮನಾರ್ಹವಾದ ಅಂಶ.

ಶಿಲೆಗಳು ರೂಪಾಂತರ ಹೊಂದುವಾಗ ಅವುಗಳ ಖನಿಜಗಳೂ ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ತಮ್ಮ ಸಂಯೋಜನೆ ಮತ್ತ ಸ್ವರೂಪಗಳಲ್ಲಿ ತಕ್ಕ ಮಾರ್ಪಾಡುಗಳನ್ನು ತಳೆಯುತ್ತವೆ. ಇದರಿಂದಲೇ ಸಸ್ಯಾಗಾರ ಕ್ರಮೇಣ ಲಿಗ್ನೈಟ್, ಬಿಟುಮಿನಸ್ ಕಲ್ಲಿದ್ದಲು, ಆಂಥ್ರಸೈಟ್ ಮತ್ತು ಕಟ್ಟಕಡೆಗೆ ಗ್ರ್ಯಾಫೈಟ್ ನಿಕ್ಷೇಪವಾಗಿ ರೂಪಾಂತರಗೊಳ್ಳುತ್ತದೆ. ದಕ್ಷಿಣ ಆಫ್ರಿಕದ ಪ್ರಸಿದ್ಧ ವಿಟ್‌ವಾಟರ್ಸ್ ರ್‍ಯಾಂಡ್ ಚಿನ್ನದ ನಿಕ್ಷೇಪಗಳು ಹಾಗೂ ಕೆನಡದ ಬ್ಲೈಂಡ್ ನದಿ ಪ್ರದೇಶದ ಯುರೇನಿಯಂ ನಿಕ್ಷೇಪಗಳು ಮೊದಲಿಗೆ ಮೆಕ್ಕಲ ನಿಕ್ಷೇಪಗಳಾಗಿದ್ದು ರೂಪಾಂತರಗೊಂಡ ಕಾರಣ ತಮ್ಮ ಪ್ರಸಕ್ತ ಸ್ವರೂಪವನ್ನು ತಳೆದಿವೆ. ಹೀಗೆಯೇ ಜೇಡುಶಿಲೆಗಳ ರೂಪಾಂತರದಿಂದ ಗಾರ್ನೆಟ್, ಕೊರಂಡಂ, ಕಯನೈಟ್, ಸಿಲಿಮನೈಟ್ ಮುಂತಾದ ಅತ್ಯಂತ ಉಪಯುಕ್ತ ಖನಿಜಗಳ ನಿಕ್ಷೇಪಗಳು ರೂಪುಗೊಳ್ಳುತ್ತವೆ. ಕಬ್ಬಿಣಾಂಶದ ಜಲಜಶಿಲೆಗಳು ರೂಪಾಂತರ ಹೊಂದಿ ಅತ್ಯುತ್ತಮ ಮ್ಯಾಗ್ನಟೈಟ್ ನಿಕ್ಷೇಪಗಳಾಗಿವೆ.

ಸಲ್ಫೈಡ್ ಖನಿಜಗಳಿಂದಾದ ಶಿಲೆಗಳು ಭೂಸವೆತಕ್ಕೆ ಒಳಗಾದಾಗ ಕ್ಷಯಿಸಿ ಅಥವಾ ವಿಭಿನ್ನಗೊಂಡು ಅವುಗಳ ಕೆಲವು ಘಟಕಗಳು ಸಾರೀಕರಣ ಹೊಂದಿ ಉತ್ತಮ ಆನುಷಂಗಿಕ ಖನಿಜಗಳ ನಿಕ್ಷೇಪಗಳಿಗೆ ಕಾರಣವಾಗಿವೆ. ಶಿಲೆಯ ಮೇಲ್ಮಟ್ಟ ಹಾಗೂ ಉತ್ಕರ್ಷಣ ವಲಯದಲ್ಲಿ (ಆಕ್ಸಿಡೈಸ್ಡ್ ಝೋನ್) ಸಲ್ಫೈಡ್ ಖನಿಜಗಳ ಶೈಥಿಲ್ಯದಿಂದ ಹೊರಬಿದ್ದ ಖನಿಜಾಂಶಗಳನ್ನು ಹರಿಯುವ ನೀರು ಸ್ಥಳಾಂತರಿಸುತ್ತದೆ. ಆದರೆ ಕರಗದ ಆಕ್ಸೈಡ್, ಕಾರ್ಬೊನೇಟ್ ಹಾಗೂ ಸಲ್ಫೇಟ್ ಖನಿಜಗಳು ತುಕ್ಕು ಹಿಡಿದು ಕಬ್ಬಿಣ–ಮ್ಯಾಂಗನೀಸುಗಳಿಂದ ಮಲಿನಗೊಂಡಿರುವ ಗೊಸಾನುಗಳಲ್ಲೆ ಉಳಿಯುತ್ತವೆ. ನಿಕ್ಷೇಪದ ಈ ಟೊಪ್ಪಿಗೆ ವಲಯದಲ್ಲಿ ಉತ್ಕರ್ಷಣಗೊಂಡಿರುವ ವರ್ಣಮಯ ತಾಮ್ರ, ನಿಕಲ್, ಕೊಬಾಲ್ಟ್ ಮತ್ತು ಯುರೇನಿಯಂ ಖನಿಜಗಳನ್ನು ಗುರುತಿಸಬಹುದು. ಹಲವು ವೇಳೆ ಈ ಶೇಷ ನಿಕ್ಷೇಪಗಳಲ್ಲಿ ಚಿನ್ನ, ಬೆಳ್ಳಿ ಮತ್ತು ಮ್ಯಾಂಗನೀಸ್ ಖನಿಜಗಳು ಸಾಕಷ್ಟು ಮೊತ್ತದಲ್ಲಿರುತ್ತವೆ. ಉತ್ಕರ್ಷಣ ವಲಯದಿಂದ ಹೊರದೂಡಲ್ಪಟ್ಟ ಭಾರ ಲೋಹ ಖನಿಜಗಳು ಜಲಮಟ್ಟದ ಸಮೀಪದಲ್ಲಿರುವ ಅಪಕರ್ಷಣ ವಲಯದಲ್ಲಿ (ರಿಡಕ್ಷನ್ ಝೋನ್) ಪ್ರಕ್ಷೇಪಿತಗೊಂಡು ಉತ್ತಮ ಆನುಷಂಗಿಕ ನಿಕ್ಷೇಪಗಳಾಗಿವೆ. ಮೂಲಶಿಲೆಯಲ್ಲಿ ಚದರಿಹೋಗಿ ಅನುಪಯುಕ್ತವೆನಿಸಿದ್ದ ಕೆಲವು ಖನಿಜಗಳು ಈ ತೆರನಾದ ಸಾರೀಕರಣದಿಂದ ಉತ್ತಮ ನಿಕ್ಷೇಪಗಳಾಗಿ ಮಾರ್ಪಟ್ಟಿವೆ. (ಬಿ.ವಿ.ಜಿ.)

**ಖನಿಜಪೂರಕಗಳು** : ಖನಿಜದ ಗುಣಗಳನ್ನು ಯುಕ್ತ ರೀತಿಯಲ್ಲಿ ಮಾರ್ಪಡಿಸುವ ಸಾಮರ್ಥ್ಯವಿರುವ ಆದರೆ ತಾವೇ ಯಾವ ವಿಧವಾದ ಬದಲಾವಣೆಗಳಿಗೂ ಒಳಗಾಗದ ಪದಾರ್ಥಗಳು(ಮಿನರಲ್ ಫಿಲ್ಲರ್ಸ್). ಇವನ್ನು ಖನಿಜದ ಯಾವುದಾದರೂ ಒಂದು ನಿರ್ದಿಷ್ಟ ಗುಣವನ್ನು ಉತ್ತಮಪಡಿಸಲು ಉಪಯೋಗಿಸುತ್ತಾರೆ. ಹಲವು ವೇಳೆ ಖನಿಜದಿಂದ ತಯಾರಿಸಿದ ಉತ್ಪನ್ನದ ಬೆಲೆಯನ್ನು ಸಾಕಷ್ಟು ತಗ್ಗಿಸಲು ಇವನ್ನು ಬಳಸಲಾಗುವುದು. ಖನಿಜಪೂರಕಗಳ ಉಪಯೋಗಗಳಲ್ಲಿ ಮುಖ್ಯವಾದುದು ಪ್ರಧಾನ ಖನಿಜದ ಹಲವು ಗುಣಗಳಾದ ಬಣ್ಣ, ರಚನೆ, ಹೊಳಪು ಇತ್ಯಾದಿಗಳನ್ನು ಉತ್ತಮಗೊಳಿಸುವುದೇ ಆಗಿದೆ. ಹಲವು ಬಾರಿ ಮುಖ್ಯ ಖನಿಜದ ಭೌತಗುಣಗಳಾದ ಶ್ಯಾನತ್ವ (ಜಿಗುಟು), ಕಾಠಿಣ್ಯ, ಉಷ್ಣನಿರೋಧಕ ಸಾಮರ್ಥ್ಯ, ಘರ್ಷಕ ಸಾಮರ್ಥ್ಯ ಇವನ್ನು ಉತ್ತಮ ಪಡಿಸಿ ಯುಕ್ತ ಕೈಗಾರಿಕೆಯಲ್ಲಿ ಅಳವಡಿಸಿಕೊಳ್ಳಲು ಪೂರಕಗಳ ಉಪಯೋಗ ಉಂಟು. ಅಲ್ಲದೆ ಅವು ಇತರ ವಸ್ತುಗಳೊಡನೆ ಸಂಯೋಗವಾಗುವ ಶಕ್ತಿ ಮತ್ತು ಅವುಗಳ ಮೃದು ಚಾಲನಶಕ್ತಿ ಮುಂತಾದ ಗುಣಗಳನ್ನೂ ಉತ್ತಮಪಡಿಸಬಹುದು. ಹೀಗೆ ಕೈಗಾರಿಕಾ ಖನಿಜಗಳಲ್ಲಿಯ ಕುಂದುಗಳನ್ನು ಉತ್ತಮ ಪಡಿಸಲು ಮತ್ತು ಅವನ್ನು ಉಪಯೋಗಿಸುವ ಕೈಗಾರಿಕೆಗಳ ವೆಚ್ಚವನ್ನು ಅದಷ್ಟು ಇಳಿಸಲು ಖನಿಜಪೂರಕಗಳನ್ನು ಬಳಸಲಾಗುತ್ತಿದೆ.

ವಿವಿಧ ಕೈಗಾರಿಕೆಗಳಲ್ಲಿ ಬಳಕೆಯಲ್ಲಿರುವ ಖನಿಜಪೂರಕಗಳ ನಿರ್ದಿಷ್ಟ ಗುಣಗಳನ್ನು ವ್ಯಾಪಾರದ ಗುಟ್ಟೆಂದು ಕಾದಿಡಲಾಗಿದೆ. ಹೀಗಿದ್ದರೂ ಕಣದ ಗಾತ್ರ ಅಥವಾ ನಯ ಅತ್ಯಂತ ಮುಖ್ಯವಾದ ಗುಣವೆಂದು ಭಾವಿಸಲಾಗಿದೆ. ಇದನ್ನು ಅನುಸರಿಸಿಯೇ ಖನಿಜಪೂರಕಗಳ ಕೈಗಾರಿಕಾ ವ್ಯಾಪ್ತಿಯನ್ನು ನಿರ್ಧರಿಸಲಾಗುವುದು. ಕಣಗಳ ಗಾತ್ರ ಬಹು ಸೂಕ್ಷ್ಮವಾಗಿದ್ದು 1/8" ನಿಂದ ಹಿಡಿದು ಒಂದು ಮೈಕ್ರಾನ್ ಅಥವಾ ಅದಕ್ಕೂ ಕಡಿಮೆ ಇರುತ್ತದೆ. ಜರಡಿಯಲ್ಲಿಯ (ಇವು ಹಾದು ಹೋಗುವ) ರಂಧ್ರಗಳ ಸಂಖ್ಯೆಗೆ ಅನುಗುಣವಾಗಿ 100 ಮೆಷ್‌ನಿಂದ 325 ಮೆಷ್ ವರೆಗೆ ಹೆಸರಿಡಲಾಗುವುದು. ಕಣಗಳು ಗಾತ್ರದಲ್ಲಿ ಒಂದು ಮೈಕ್ರಾನಿಗೂ ಕಡಿಮೆಯಿದ್ದಲ್ಲಿ ಅವುಗಳ ನಯವನ್ನು ಕಣಸಂಖ್ಯೆ ಗಾತ್ರವನ್ನು ಸೂಚಿಸುವ ರೇಖಾ ಚಿತ್ರಗಳ ಮೂಲಕ ವಿವರಿಸಬಹುದು.

**ಉಪಯೋಗಗಳು :** ಕೈಗಾರಿಕಾ ವಸ್ತುಗಳಾದ ಕಾಗದ, ರಬ್ಬರ್, ದ್ರವ ವರ್ಣ, ಬಟ್ಟೆ, ಸುಗಂಧ ವಸ್ತುಗಳು ಮುಂತಾದವುಗಳ ತಯಾರಿಕೆಯಲ್ಲಿ ಖನಿಜಪೂರಕಗಳನ್ನು ಬಹುವಾಗಿ ಬಳಸಲಾಗುತ್ತಿದೆ. ಇವುಗಳಿಗೆ ಅಪಾರ ದರ್ಶಕತೆ, ಹೊಳಪು, ರಾಸಾಯನಿಕ ಕ್ರಿಯೆಗಳನ್ನು ಮತ್ತು ವಾಯುಗುಣದಲ್ಲಿಯ ಬದಲಾವಣೆಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ಇತ್ಯಾದಿ ಉಪಯುಕ್ತ ಗುಣಗಳನ್ನು ಕೊಡಲು ಖನಿಜಪೂರಕಗಳ ಬಳಕೆ ಆವಶ್ಯಕ. ಹೀಗೆ ಮಾಡುವುದರಿಂದ ಉತ್ಪನ್ನದ ಗುಣದಲ್ಲಿ ಯಾವ ವ್ಯತ್ಯಾಸಗಳೂ ಆಗುವುದಿಲ್ಲ.

ರಾಸಾಯನಿಕ ಗೊಬ್ಬರಗಳ ತಯಾರಿಕೆಯಲ್ಲಿ ಇವು ಬಹು ಮುಖ್ಯ. ಏಕೆಂದರೆ ರಾಸಾಯನಿಕ ವಸ್ತುಗಳನ್ನು ಪೂರಕಗಳೊಡನೆ ಬೆರಸದೆ ಹಾಗೆಯೇ ಗೊಬ್ಬರವಾಗಿ ಉಪಯೋಗಿಸಿದಲ್ಲಿ ಅವು ಸಸ್ಯಗಳ ಪುಷ್ಟ ಬೆಳವಣಿಗೆಗೆ ಸಹಾಯಕವಾಗುವುದರ ಬದಲು ತಮ್ಮ ತೀವ್ರ ರಾಸಾಯನಿಕ ಗುಣದಿಂದ ಅವುಗಳಿಗೆ ಮಾರಕವಾಗುವುವು.

ಇದನ್ನು ತಡೆಗಟ್ಟಲು ಅಂದರೆ ರಾಸಾಯನಿಕಗಳ ತೀವ್ರತೆಯನ್ನು ಕಡಿಮೆ ಮಾಡಲು ಒಂದು ಜಡವಸ್ತು ಬಹು ಅಗತ್ಯ. ಇದನ್ನು ರಾಸಾಯನಿಕ ವಸ್ತುವಿನೊಡನೆ ಉಪಯುಕ್ತ ಪರಿಮಾಣದಲ್ಲಿ ಬೆರೆಸಿದಲ್ಲಿ ನಮಗೆ ಉತ್ತಮ ರಾಸಾಯನಿಕ ಗೊಬ್ಬರ ದೊರೆಯುತ್ತದೆ. ಅಲ್ಲದೆ ಕೃತಕ ಗೊಬ್ಬರದ ರಾಸಾಯನಿಕ ವಸ್ತು ಹೆಪ್ಪುಗಟ್ಟುವುದು ಮತ್ತಿತರ ತೊಂದರೆಗಳು ಕಂಡುಬರಲಾರವು. ಈ ದೃಷ್ಟಿಯಿಂದ ನಯವಾದ ಮರಳು, ಸುಣ್ಣ ಶಿಲೆ, ಡಾಲೊಮೈಟ್ ಮತ್ತು ಜಿಪ್ಸಂ ಅಧಿಕ ಮೊತ್ತದಲ್ಲಿ ಉಪಯೋಗದಲ್ಲಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಮರಳು ಮತ್ತು ಜಡ ಸಿಲಿಕೇಟ್ ಖನಿಜಗಳ ಬಳಕೆ ಅಷ್ಟಾಗಿ ಕಂಡುಬರುತ್ತಿಲ್ಲ. ಕ್ರಿಮಿನಾಶಕಗಳ ತಯಾರಿಕೆಯಲ್ಲೂ ಖನಿಜಪೂರಕಗಳನ್ನು ಅಧಿಕ ಮೊತ್ತದಲ್ಲಿ ಬಳಸಲಾಗುತ್ತಿದೆ. ಕ್ರಿಮಿನಾಶಕದ ರಾಸಾಯನಿಕ ಧಾತುವನ್ನು ಖನಿಜಪೂರಕದೊಡನೆ ಸರಿಯಾದ ಪರಿಮಾಣದಲ್ಲಿ ಬೆರೆಸದೆ ಹಾಗೆಯೇ ಬಳಸಿದಲ್ಲಿ ಅದು ಅಪಾಯಕಾರಿ ಅಲ್ಲದೆ ಹೆಚ್ಚಿನ ಭಾಗ ವ್ಯರ್ಥವಾಗುತ್ತದೆ. ಅದೇ ಅಲ್ಲದೆ ಖನಿಜಪೂರಕದ ಮತ್ತೊಂದು ಪಾತ್ರವೂ ಉಂಟು. ಅಂದರೆ ರೋಗ ಹಿಡಿದ ಪೈರು ಪಚ್ಚೆ ಮತ್ತು ಗಿಡಮರಗಳಿಗೆ ಕ್ರಿಮಿನಾಶಕ ವಸ್ತುವನ್ನು ಸಿಂಪಡಿಸಿದಾಗ ಅದು ದೂಳಿನಂತೆ ಉದುರಿ ಹೋಗದೆ, ಸಸ್ಯ ಭಾಗಗಳಿಗೆ ಮೆತ್ತಿಕೊಂಡಿರಬೇಕು. ಈ ರೀತಿಯ ಅಂಟಿಕೊಳ್ಳುವ ಗುಣ ಬಹು ಮುಖ್ಯ. ಅಲ್ಲದೆ ಕ್ರಿಮಿನಾಶಕದ ಮಾರಕಗುಣವನ್ನೂ ವೃದ್ಧಿಪಡಿಸುವಂತಿರಬೇಕು. ಜೇಡಿಮಣ್ಣು, ಬಳಪದ ಕಲ್ಲು, ಫುಲ್ಲರ್ಸ್ ಮಣ್ಣು, ಡಯಾಟಮೈಟ್, ಜಿಪ್ಸಂ, ಸುಣ್ಣ ಶಿಲೆ, ಪೈರೊಫಿಲ್ಲೈಟ್ ಇವನ್ನು ಸಾಮಾನ್ಯವಾಗಿ ಕ್ರಿಮಿನಾಶಕಗಳ ತಯಾರಿಕೆಯಲ್ಲಿ ಖನಿಜಪೂರಕಗಳಂತೆ ಉಪಯೋಗಿಸುತ್ತಾರೆ.

ರಬ್ಬರ್ ಟೈರುಗಳ ತಯಾರಿಕೆಯಲ್ಲಿ ಇಂಗಾಲ ಮತ್ತು ಸಿಲಿಕಗಳನ್ನು ಖನಿಜಪೂರಕಗಳಾಗಿ ಉಪಯೋಗಿಸುತ್ತಾರೆ. ಇವನ್ನು ರಬ್ಬರಿನೊಡನೆ ಬೆರೆಸುವುದರಿಂದ ಟೈರಿನ ಬಾಳಿಕೆ ಬಹುಮಟ್ಟಿಗೆ ಉತ್ತಮಗೊಳ್ಳುತ್ತದೆ. ಇಲ್ಲಿ ಪೂರಕ ವಸ್ತು ಸಾರರಿಕ್ತಕಾರಿ(ಡೈಲ್ಯೂಯೆಂಟ್) ಮತ್ತು ಹರಡುವ ಕಾರಕವಾಗಿ ಕಾರ್ಯ ನಿರ್ವಹಿಸುತ್ತದೆ. ಇಂಗಾಲವಂತೂ ಬಹು ಮುಖ್ಯವಾದ ಭದ್ರಪಡಿಸುವ ಕಾರಕವಾಗಿ ರಬ್ಬರಿನ ಕರ್ಷಣ ಸಾಮರ್ಥ್ಯವನ್ನು (ಟೆನ್ಸೈಲ್ ಸ್ಟ್ರೆಂಕ್ತ್) ಉತ್ತಮಪಡಿಸುವುದರ ಜೊತೆಗೆ ಅದು ಹೆಚ್ಚುಕಾಲ ಬಾಳಿಕೆ ಬರುವಂತೆ ಮಾಡುತ್ತದೆ. ಕೆಲವು ಉತ್ಪನ್ನಗಳಿಗೆ ಸೊಗಸಾದ ಬಿಳಿಯ ಬಣ್ಣವನ್ನು ಕೊಡಲು ಜೇಡಿಮಣ್ಣು, ಬಳಪದ ಕಲ್ಲು, ಬೆರೈಟ್ ಸ್ಲೇಟಿನ ಪುಡಿ, ಡಯಾಟಮೈಟ್, ಮೈಕ, ಕಲ್ನಾರು, ಮತ್ತು ಡಾಲಮೈಟುಗಳನ್ನು ಜಡಪೂರಕಗಳನ್ನಾಗಿ ಉಪಯೋಗಿಸುತ್ತಾರೆ. ಇವುಗಳ ಉಪಯೋಗದಿಂದ ತಯಾರಿಕಾ ವಿಧಾನವನ್ನೂ ಉತ್ಪನ್ನದ ಕೆಲವು ಗುಣಗಳನ್ನೂ ಉತ್ತಮಪಡಿಸಬಹುದು. ಅಲ್ಲದೆ ತಯಾರಿಕೆಯ ವೆಚ್ಚವನ್ನು ಕೂಡ ಕಡಿಮೆ ಮಾಡಬಹುದು.

ಇತ್ತೀಚೆಗೆ ಖನಿಜಪೂರಕಗಳನ್ನು ಪ್ಲಾಸ್ಟಿಕ್ ಮತ್ತು ಎರಕದ ಕೈಗಾರಿಕೆಗಳಲ್ಲೂ ಉಪಯೋಗಿಸುತ್ತಾರೆ. ಇವು ಎರಕ ಕುಗ್ಗುವುದನ್ನು ಮತ್ತು ನೀರಿನ ಸಂಪರ್ಕದಿಂದಾಗುವ ಬದಲಾವಣೆಗಳನ್ನು ತಡೆಯುವ ಸಾಮರ್ಥ್ಯವನ್ನು ಕೊಡುತ್ತವೆ. ಉಷ್ಣನಿರೋಧಕ ಕಾರಕಗಳ ತಯಾರಿಕೆಯಲ್ಲಿ ಕಲ್ನಾರನ್ನೂ ವಿದ್ಯುದುಪಕರಣಗಳಿಗಾಗಿ ಮೈಕವನ್ನು ಉತ್ಪನ್ನದ ಹೊರಮೈ ಆಕರ್ಷಕವಾಗುವಂತೆ ಮಾಡಲು ಡಯಾಟಮೈಟನ್ನೂ ಖನಿಜಪೂರಕಗಳಾಗಿ ಉಪಯೋಗಿಸಲಾಗುತ್ತಿದೆ. ಇವೇ ಅಲ್ಲದೆ ಪ್ಲಾಸ್ಟಿಕ್ ಕೈಗಾರಿಕೆಯಲ್ಲಿ ಜೇಡಿಮಣ್ಣು, ಜಿಪ್ಸಂ, ಬೆರೈಟ್, ಸ್ಲೇಟ್ ಮತ್ತು ಸ್ಫಟಿಕದ ಹರಳುಗಳನ್ನೂ ಬಳಸುತ್ತಾರೆ. ಬಟ್ಟೆಗಳ ತಯಾರಿಕೆಯಲ್ಲಂತೂ ಖನಿಜಪೂರಕಗಳು ಬೇಕೇ ಬೇಕು. ಗಂಜಿ ಅಥವಾ ಡೆಕ್ಸ್‌ಟ್ರಿನುಗಳ ಜೊತೆಯಲ್ಲಿ ಜೇಡಿಮಣ್ಣು, ಬೆರೈಟ್, ಬಳಪದ ಕಲ್ಲು, ಜಿಪ್ಸಂ ಮುಂತಾದ ಪೂರಕ ವಸ್ತುಗಳು ಉಪಯೋಗದಲ್ಲಿವೆ. ತಯಾರಾದ ಬಟ್ಟೆಯ ನೂಲಿನ ಎಳೆಗಳ ನಡುವಿನ ಸಂದುಗಳನ್ನು ಮುಚ್ಚಲು ಮತ್ತು ಬಟ್ಟೆಗೆ ನಯ ಮತ್ತು ಹೊಳಪನ್ನು ಉಂಟುಮಾಡಲು ಇವು ಬೇಕು. ಈ ದೃಷ್ಟಿಯಿಂದ ಸುದ್ದೆಮಣ್ಣು ಮತ್ತು ಸೀಮೆಸುಣ್ಣವನ್ನು ಯಥೇಚ್ಛವಾಗಿ ಬಳಸುತ್ತಾರೆ. ಇವೇ ಅಲ್ಲದೆ ಟಾಲ್ಕ್, ಜಿಪ್ಸಂ ಮತ್ತು ಬೆರೈಟುಗಳನ್ನೂ ಉಪಯೋಗಿಸುವುದುಂಟು.

ಈ ಬಗೆಯ ಪ್ರಮುಖ ಉಪಯೋಗಗಳಲ್ಲದೆ ಖನಿಜಪೂರಕಗಳಿಗೆ ಹಲವಾರು ಸಣ್ಣ ಪುಟ್ಟ ಉಪಯೋಗಗಳೂ ಇವೆ. ಉದಾಹರಣೆಗೆ ಜೇಡಿಮಣ್ಣು, ಬಳಪದಕಲ್ಲು, ಬೆಂಟೊನೈಟ್, ಡಯಾಟಮೈಟ್ ಮುಂತಾದ ಖನಿಜಗಳ ನಯವಾದ ದೂಳು ಎರಕ ಹೊಯ್ದು ತಯಾರಿಸುವ ಉತ್ಪನ್ನಗಳಿಗೆ ಬಹು ಮುಖ್ಯ. ಅಚ್ಚುಗಳ ಮೇಲೆ ಈ ಪೂರಕಗಳ ದೂಳನ್ನು ಸಿಂಪಡಿಸಿದಲ್ಲಿ ಅವು ಹೆಚ್ಚು ಬಲಯುತವಾಗುತ್ತವೆ. ಕೆಲವು ಕೈಗಾರಿಕೆಗಳಲ್ಲಿ ಗ್ರಾಫೈಟ್ ಮತ್ತು ಬಳಪದ ಕಲ್ಲನ್ನು ಮೃದು ಚಾಲಕಗಳನ್ನಾಗಿ ಮತ್ತು ಅಂಟಿಕೊಳ್ಳುವಂಥ ಕಾರಕಗಳಾಗಿ ಉಪಯೋಗಿಸುತ್ತಾರೆ. ಇವೇ ಅಲ್ಲದೆ ಚರ್ಮ ಹದಮಾಡುವಿಕೆ, ಸಿಮೆಂಟು ತಯಾರಿಕೆ ಮತ್ತು ನಿತ್ಯಬಳಕೆಯ ವಸ್ತುಗಳಾದ ಮಸಿ, ಟೂತ್‌ಪೇಸ್ಟ್ ತಯಾರಿಕೆಗಳಲ್ಲೂ ಖನಿಜಪೂರಕಗಳು ಅಗತ್ಯ. (ಎಂ.ಎಸ್.ಎಸ್.)

**ಖನಿಜವರ್ಣದ್ರವ್ಯಗಳು :** ಕೆಲವು ಖನಿಜಗಳು ನೈಸರ್ಗಿಕ ಬಲಗಳ ಪ್ರಭಾವಕ್ಕೊಳಗಾಗಿ ಶಿಥಿಲಗೊಂಡು ತನ್ಮೂಲಕ ಉಂಟಾಗುವ ರಾಸಾಯನಿಕ ಬದಲಾವಣೆಗಳಿಂದ ಮನೋಹರ ಬಣ್ಣಗಳನ್ನು ತಳೆದಾಗ ಅವನ್ನು ಈ ಹೆಸರಿನಿಂದ ಕರೆಯುತ್ತೇವೆ (ಮಿನರಲ್ ಪಿಗ್‌ಮೆಂಟ್ಸ್). ದ್ರವ್ಯಬಣ್ಣಗಳು ಮತ್ತು ಬಣ್ಣದ ಸಿಮೆಂಟಿನ ತಯಾರಿಕೆಯಲ್ಲಿ ಇವು ಅತ್ಯಾವಶ್ಯಕ. ಕಬ್ಬಿಣದ ಅದುರುಗಳಾದ ಹಿಮಟೈಟ್ ಮತ್ತು ಲೈಮೊನೈಟ್ ಬಹು ಪ್ರಮುಖ ನೈಸರ್ಗಿಕ ವರ್ಣದ್ರವ್ಯಗಳು. ಇವನ್ನು ಬಣ್ಣದ ಮಣ್ಣು, ಬಣ್ಣದ ದೂಳು, ಕಾವಿ ಈ ಮುಂತಾಗಿ ಕರೆಯುವುದುಂಟು. ಬಣ್ಣಕ್ಕೆ ಮೂಲಕಾರಣವಾದ ಕಬ್ಬಿಣ ಆಕ್ಸೈಡಿನ ಪರಿಮಾಣ ಏಕರೀತಿಯಾಗಿರದೆ ನೂರಕ್ಕೆ ಇಪ್ಪತ್ತರಿಂದ ಎಪ್ಪತ್ತರ ವರೆಗೂ ಇರುತ್ತದೆ. ಖನಿಜದ ಬಣ್ಣ ಊರಿಕೆ (ಸ್ಟೇನಿಂಗ್ ಪವರ್), ಹೊಳಪು ಮತ್ತು ಕಣಗಳ ಸೂಕ್ಷ್ಮತೆ ಇವೇ ಖನಿಜವರ್ಣದ್ರವ್ಯದ ಗುಣಮಟ್ಟ ಹಾಗೂ ಮೌಲ್ಯಮಾಪನದಲ್ಲಿ ಗಮನಿಸಬೇಕಾದ ಅಂಶಗಳು.

ನೈಸರ್ಗಿಕ ಬಣ್ಣಗಳ ಬಳಕೆ ಇತಿಹಾಸ ಪೂರ್ವಯುಗದ ಮಾನವನಿಗೂ ತಿಳಿದಿತ್ತೆಂದು ಹೇಳಲು ಸಾಕಷ್ಟು ಆಧಾರಗಳಿವೆ. ಕ್ರೊಮ್ಯಾಗ್ನನ್ ಯುಗದ ಗುಹೆಗಳ ಭಿತ್ತಿಗಳ ಮೇಲೆ ನಿರ್ಮಿತವಾಗಿರುವ ಪ್ರಜ್ವಲಿಸುವ ಬಣ್ಣದ ಚಿತ್ರಗಳೇ ಇದಕ್ಕೆ ಸಾಕ್ಷಿ. ಪುರಾತನ ಗ್ರೀಕ್ ಕುಂಭಕಲೆಯಲ್ಲೂ ಈಜಿಪ್ಟಿನ ಶಿಲ್ಪದ ಅಲಂಕಾರಪಟ್ಟಿಗಳಲ್ಲೂ ಮನೋಹರ ಬಣ್ಣಗಳ ಬಳಕೆಯನ್ನು ಗುರುತಿಸಬಹುದು. ನಮ್ಮ ದೇಶದ ಪುರಾತನ ಆರ್ಯರ ಸಿಂಧೂ ಸಂಸ್ಕೃತಿಯ ಗೊಂಬೆಗಳು, ಮಡಕೆಯ ಚೂರುಗಳ ಮೇಲಿರುವ ಬಣ್ಣ ಬಣ್ಣ ಚಿತ್ರಗಳು ಇವುಗಳಿಗೆಲ್ಲ ನೈಜಬಣ್ಣಗಳನ್ನು ಬಳಸಲಾಗಿದೆ. ಅಮೆರಿಕದ ಪುರಾತನ ರೆಡ್ ಇಂಡಿಯನ್ ಬುಡಕಟ್ಟಿನವರು ವರ್ಣದ್ರವ್ಯಗಳಿಂದ ಅಲಂಕಾರ ಮಾಡಿಕೊಳ್ಳುತ್ತಿದ್ದರು. ಗ್ರಾಮೀಣ ಕರಕುಶಲವಸ್ತುಗಳ ಬೆಡಗಿಗೆ ಇಂದಿಗೂ ಈ ಬಣ್ಣಗಳೇ ಮೂಲಾಧಾರ. ಇಂದಿನ ಕೈಗಾರಿಕಾ ಯುಗದಲ್ಲಿ ಸಹ ಕೃತಕವಾಗಿ ತಯಾರಿಸಿರುವ ಬಣ್ಣಗಳಿಗಿಂತ ಇವು ಬೆಲೆಯಲ್ಲಿ ಅಗ್ಗ ಹಾಗೂ ಯಥೇಚ್ಛವಾಗಿ ದೊರೆಯುವ ಕಾರಣ ಮಾರುಕಟ್ಟೆಯಲ್ಲಿ ಇಂದಿಗೂ ಇವುಗಳದೇ ಅಗ್ರಸ್ಥಾನ.

ಬಣ್ಣವನ್ನು ಅನುಸರಿಸಿ ಖನಿಜವರ್ಣದ್ರವ್ಯಗಳನ್ನು ಕಾವಿ (ರೆಡ್ ಓಕರ್), ಹಳದಿ ದೂಳು, ಹಸಿರು ದೂಳು, ಸಿಯೆನ್ನ, ಅಂಬರ್ ಮುಂತಾಗಿ ಹೆಸರಿಸಲಾಗಿದೆ. ಕಾವಿಯನ್ನು ಹಿಂದಿಯಲ್ಲಿ ಗೇರು ಎಂದು ಕರೆಯುತ್ತಾರೆ. ಕಾವಿ ಅಥವಾ ಕೆಂದೂಳು ಮುಖ್ಯವಾಗಿ ಹಿಮಟೈಟ್ ಮತ್ತು ಕಬ್ಬಿಣಾಂಶದಿಂದ ಕೂಡಿದ ಮುರುಕಲ್ಲಿನ ಶೈಥಿಲ್ಯದಿಂದ ಉಂಟಾಗುತ್ತದೆ. ಅದರಲ್ಲಿ ಸುಮಾರು ಶೇ.70 ರಷ್ಟು $Fe_2O_3$ ಇರುವುದು. ಕಾವಿಯಲ್ಲಿ ಇತರ ಹಲವಾರು ವಿಧಗಳಿವೆ. (1) ಪರ್ಷಿಯನ್ ಕೆಂಪು ಅಥವಾ ಕ್ರಿಂಸನ್ ಕೆಂಪು: ಇದರಲ್ಲಿ $Fe_2O_3$ ಸುಮಾರು ಶೇ.65–70 ರಷ್ಟಿದೆ. ಈ ವರ್ಣದ್ರವ್ಯ ಪರ್ಷಿಯನ್ ಕೊಲ್ಲಿಯ ಅರ್ಮುಸ್ ದ್ವೀಪದಲ್ಲಿ ದೊರೆಯುತ್ತದೆ. (2) ಸ್ಪ್ಯಾನಿಷ್ ಕೆಂಪು: ಇದು ಪರಿಶುದ್ಧವಾದ ಹಾಗೂ ಮೃದುವಾದ ಹಿಮಟೈಟ್. ಇದರಲ್ಲಿ ಶೇ.80–90 ರಷ್ಟು $Fe_2O_3$ ಉಂಟು. ಇದಕ್ಕೆ ಸ್ಪೇನ್ ದೇಶವೇ ತವರು. (3) ಬೋಲ್ ಅಥವಾ ರೆಡ್ಸ್: ಇದು ಕೆಂಪು, ಹಳದಿ ಹಾಗೂ ಕಂದು ಛಾಯೆಯ ಜೇಡಿಮಣ್ಣಿನಂತಿರುತ್ತದೆ. ಇದರಲ್ಲಿ ಶೇ.5–15 ರಷ್ಟು $Fe_2O_3$ ಉಂಟು ಬಹುಮಟ್ಟಿಗೆ ಭಾರತದ ದಖ್ಖನ್ ಪ್ರಸ್ಥಭೂಮಿಯ ಹಲವಾರು ಕಡೆ ಇದರ ನಿಕ್ಷೇಪಗಳಿವೆ.

ಕಂದು ಛಾಯೆಯ ಹಳದಿ ಬಣ್ಣದ ಕಾವಿಯೇ ಸಿಯೆನ್ನ. ಇದರಲ್ಲಿ ಸುಮಾರು ಶೇ.60 ರಷ್ಟು $Fe_2O_3$ ಮತ್ತು ಅಲ್ಪಸ್ವಲ್ಪ ಮ್ಯಾಂಗನೀಸ್ ಆಕ್ಸೈಡ್ ಸಹ ಉಂಟು. ಇಟಲಿಯ ಸಿಯೆನ್ನ ಬಳಿ ಇದರ ಬೃಹತ್ ನಿಕ್ಷೇಪವಿರುವ ಕಾರಣ ಆ ಹೆಸರೇ ವರ್ಣದ್ರವ್ಯಕ್ಕೂ ಅಂಟಿತು. ಕೆಲವು ಬಾರಿ ಇದನ್ನು ಸುಟ್ಟು ಬಳಸುವುದೂ ಇದೆ. ಹೀಗೆ ಮಾಡಿದಾಗ ಇದು ಕಂದು ಮಿಶ್ರಿತ ಕೆಂಪು ಬಣ್ಣವನ್ನು ತಳೆಯುತ್ತದೆ. ಹೀಗೆಯೇ ಇಟಲಿಯ ಕೇಂದ್ರ ಪ್ರದೇಶದಲ್ಲಿ ದೊರೆಯುವ ಆ್ಯಂಬರಿಗೆ ಹಸಿರು ಛಾಯೆಯ ಕಂದುಬಣ್ಣ ಉಂಟು. ಇದರಲ್ಲಿ ಸುಮಾರು ಶೇ.45 ರಷ್ಟು $Fe_2O_3$ ಹಾಗೂ ಶೇ.15 ರಷ್ಟು $MnO_2$ ರಾಸಾಯನಿಕ ಧಾತುಗಳಿರುತ್ತವೆ. ಸೈಪ್ರಸ್ ದ್ವೀಪದಲ್ಲಿ ಅತ್ಯುತ್ತಮ ಆ್ಯಂಬರ್ ದೊರೆಯುತ್ತದೆ. ಮಾರುಕಟ್ಟೆಯಲ್ಲಿ ಇದನ್ನು ಟರ್ಕಿಷ್ ಆ್ಯಂಬರ್ ಎನ್ನುತ್ತಾರೆ. ಅಮೆರಿಕ ಸಂಯುಕ್ತ ಸಂಸ್ಥಾನದ ಪೆನ್‌ಸಿಲ್ವೇನಿಯ ಕಾವಿಗೆ ಬಹು ಹೆಸರುವಾಸಿ. ಈ ವರ್ಣದ್ರವ್ಯಕ್ಕೆ ಮನೋಹರವಾದ ಲೋಹದ ಹೊಳಪು ಉಂಟು. ಇದಕ್ಕೆ ಮೆಟ್ಯಾಲಿಕ್ ಬ್ರೌನ್ ಎಂದು ಹೆಸರು. ವರ್ಜಿನಿಯ, ಮಿನೆಸೋಟ, ಜಾರ್ಜಿಯ, ಕ್ಯಾಲಿಫೋರ್ನಿಯ ಮತ್ತು ನ್ಯೂಯಾರ್ಕ್ ಪ್ರಾಂತ್ಯಗಳಲ್ಲೂ ಕಾವಿಯ ಉತ್ತಮ ನಿಕ್ಷೇಪಗಳಿವೆ.

ಅಚ್ಚ ಕಪ್ಪಾದ ಮ್ಯಾಗ್ನಟೈಟ್, ಗ್ರಾಫೈಟ್ ಹಾಗೂ ಕೆಲವು ಇಂಗಾಲಯುಕ್ತ ಸ್ಲೇಟುಗಳನ್ನು ವರ್ಣದ್ರವ್ಯಗಳಾಗಿ ಬಳಸುವುದುಂಟು. ಇವುಗಳಲ್ಲೆಲ್ಲ ಅತಿಹೆಚ್ಚಿನ ಬಳಕೆಯಲ್ಲಿರುವುದೆಂದರೆ ಸುಮಾರು ಶೇ.94–95 ರಷ್ಟು $Fe_2O_3$ ಅಂಶವಿರುವ ಮ್ಯಾಗ್ನಟೈಟ್ ಎಂದು ಧಾರಾಳವಾಗಿ ಹೇಳಬಹುದು. ಇದನ್ನು ಬಹುಮಟ್ಟಿಗೆ ಲೋಹಮೂಲ ಬಣ್ಣವಾಗಿ (ಮೆಟಲ್ ಪ್ರೈಮರ್) ಬಳಸುತ್ತಾರೆ. ಕಪ್ಪಾದ ಈ

ವರ್ಣದ್ರವ್ಯಗಳಿಗೆ ಮೂಲವಾದ ಖನಿಜಗಳು ಬವೇರಿಯ, ಸ್ಪೇನ್ ಮತ್ತು ಇಟಲಿಯಲ್ಲಿ ದೊರೆಯುತ್ತವೆ. ಮ್ಯಾಂಗನೀಸ್ ಖನಿಜಗಳಾದ ಪೈರೊಲೂಸೈಟ್, ಹೌಸ್ಮನೈಟ್ ಹಾಗೂ ಕಲ್ಲಿದ್ದಲನ್ನು ಕಪ್ಪು ಬಣ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ.

ಹಸಿರು ವರ್ಣದ್ರವ್ಯಗಳಲ್ಲಿ ಟೆರೆವರ್ಟ್, ಹಸಿರು ದೂಳು, ವೆರೋನ ಹಸಿರು, ಸೆಲಡಾನ್ ಹಸಿರು ಹೀಗೆ ಹಲವಾರು ಬಗೆಗಳಿವೆ. ಸಂಯೋಜನೆಯಲ್ಲಿ ಏಕರೀತಿಯಾಗಿರದಿದ್ದರೂ ಇವು ಮುಖ್ಯವಾಗಿ ಆಲ್ಕಲಿ ಮತ್ತು ಮೆಗ್ನೀಸಿಯಂ ಸಿಲಿಕೇಟುಗಳ ಹಾಗೂ ಫೆರ್ರಸ್ ಸಿಲಿಕೇಟುಗಳ ಮಿಶ್ರಣವಾಗಿವೆ. ರಾಸಾಯನಿಕ ಸಂಯೋಜನೆಯನ್ನು ಅನುಸರಿಸಿ ತಿಳಿ ನೀಲಿ ಹಸಿರು, ಸೇಬು ಹಸಿರು, ಹಿಪ್ಪೆ ಹಸಿರು, ಹಸಿರು ಮಿಶ್ರಿತ ಕಪ್ಪು ಹೀಗೆ ವಿವಿಧ ಛಾಯೆಗಳನ್ನು ಕಾಣಬಹುದು. ಇವು ಬೊಹಿಮಿಯ ಮತ್ತು ಇಟಲಿ ದೇಶಗಳಲ್ಲಿ ಬೆಸಾಲ್ಟಿಕ್ ಟಫ್‌ಗಳ ಶೈಥಿಲ್ಯದಿಂದ ಉಂಟಾಗಿವೆ.

ಈ ಖನಿಜವರ್ಣದ್ರವ್ಯಗಳ ಗಣಿಗಾರಿಕೆ ಅಷ್ಟು ಕಷ್ಟವಲ್ಲ. ಸರಳವಾದ ತೆರೆಗಣಿಗಳಿಂದ (ಓಪನ್ ಮೈನ್ಸ್) ಇವು ದೊರೆಯುತ್ತವೆ. ಒಮ್ಮೊಮ್ಮೆ ಮಾತ್ರ ಸುರಂಗಗಳನ್ನು ಕೊರೆಯ ಬೇಕಾದೀತು. ಗಣಿಗಳಿಂದ ಹೊರತೆಗೆದ ಖನಿಜಗಳನ್ನು ಬೀಸು ಯಂತ್ರಗಳ ಸಹಾಯದಿಂದ ನಯವಾದ ದೂಳನ್ನಾಗಿ ಮಾಡುತ್ತಾರೆ. ನೀರಿನಲ್ಲಿ ಕದಡಿ ಯಾಂತ್ರಿಕವಾಗಿ ಕಡೆದು ಜಾಲಿಸಿ ಕಶ್ಮಲಗಳನ್ನು ಬೇರ್ಪಡಿಸುತ್ತಾರೆ. ಹೀಗೆ ದೊರೆತ ಕೆಸರನ್ನು ಒಣಗಿಸಿ ಬಂದ ದೂಳನ್ನು ವಾರ್ನಿಷ್, ಕುಸುಮೆ ಎಣ್ಣೆ ಮುಂತಾದವುಗಳೊಡನೆ ನಿರ್ದಿಷ್ಟ ಪ್ರಮಾಣಗಳಲ್ಲಿ ಬೆರೆಸಿ ದ್ರವಬಣ್ಣಗಳನ್ನು ತಯಾರಿಸುತ್ತಾರೆ.

ಭಾರತದಲ್ಲಿ ಖನಿಜ ವರ್ಣದ್ರವ್ಯಗಳ ಬೃಹತ್ ನಿಕ್ಷೇಪಗಳಿವೆ. ಇಲ್ಲಿ ಅವುಗಳ ಬಳಕೆ ಸಾಕಷ್ಟಿದೆ; ಅಲ್ಲದೆ ನೆರೆಯ ರಾಷ್ಟ್ರಗಳಿಗೂ ಅಲ್ಪಸ್ವಲ್ಪ ರಫ್ತು ಮಾಡಲಾಗುತ್ತಿದೆ. ಭಾರತದಲ್ಲಿ ದೊರೆಯುವ ವರ್ಣದ್ರವ್ಯಗಳ ಗುಣಮಟ್ಟವನ್ನು ಉತ್ತಮ ಪಡಿಸಲು ಪರ್ಷಿಯದಿಂದ ವಾರ್ಷಿಕವಾಗಿ 1,500 ಟನ್‌ಗಳಿಗೂ ಹೆಚ್ಚು ರೆಡ್‌ಆಕ್ಸೈಡನ್ನು ಆಮದು ಮಾಡಲಾಗುತ್ತಿದೆ. ವರ್ಣದ್ರವ್ಯ ಖನಿಜಗಳು ಮುಖ್ಯವಾಗಿ ಮೈಸೂರು, ಆಂಧ್ರಪ್ರದೇಶ. ರಾಜಸ್ಥಾನ್, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶಗಳಲ್ಲಿ ದೊರೆಯುತ್ತವೆ. ಮಧ್ಯಪ್ರದೇಶದ ಸಾತ್ನ ಜಿಲ್ಲೆಯ ಜೈತ್ವಾರ್ ಪ್ರದೇಶದಲ್ಲಿ ಅತ್ಯುತ್ತಮ ಕೆಂಪು ಕಾವಿ ಮತ್ತು ಹಳದಿ ದೂಳಿನ ನಿಕ್ಷೇಪಗಳಿವೆ. ಸಾಂಭಾರ್ ಬೆಟ್ಟಗಳು, ಕುಲ್ಕೇರಿಯ, ಗಂಜಾವೂ ಮತ್ತು ಕ್ವೈಲಿಯಗಳಲ್ಲಿ ಹಳದಿ ದೂಳು ದೊರೆಯುತ್ತದೆ. ಗ್ವಾಲಿಯರ್ ಸುತ್ತಮುತ್ತ ಸಾಮಾನ್ಯ ದರ್ಜೆಯ ಕಾವಿ ದೂಳಿನ ನಿಕ್ಷೇಪಗಳಿವೆ. ಬೇಹತ್, ಸುಮಾಲಿ ಮತ್ತು ರಂಗವಾನ್‌ಗಳ ಬಳಿ ಹಲವಾರು ಗಣಿಗಳನ್ನು ನೋಡಬಹುದು. ಬೆಳಗಾವಿ, ಬಳ್ಳಾರಿ, ಧಾರವಾಡ, ಉತ್ತರಕನ್ನಡ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾವಿಯ ಉತ್ತಮ ನಿಕ್ಷೇಪಗಳಿವೆ. ಇವುಗಳಿಗೆ ಮೂಲ ದಖನ್ ಶಿಲಾಸ್ತರಗಳು ಹಾಗೂ ಕಬ್ಬಿಣ ನಿಕ್ಷೇಪಗಳು.

**ಖನಿಜವರ್ಣದ್ರವ್ಯಗಳ ಸಂಯೋಜನೆ**

| ನೈಜ ವರ್ಣದ್ರವ್ಯಗಳು:<br>ಸುಟ್ಟ ವರ್ಣದ್ರವ್ಯಗಳು: | ಹಳದಿ, ಹಳದಿಮಿಶ್ರಿತ ಕಂದು<br>ಕೆಂಪು–ಕಂದು, ಕಿತ್ತಳೆಪಾಟಲ | ಕಡು ಕಂದು<br>– ಕಪ್ಪು. |
|---|---|---|
| ದೂಳುಗಳು | ಸಿಯೆನ್ನಗಳು | ಅಂಬರುಗಳು |
| $Fe_2O_3$ | $Fe_2O_3$ | $Fe_2O_3$ |
| ಶೇ.17 - 60 | ಶೇ.25 - 75 | ಶೇ.37 - 60 |
| $SiO_2$ | $MnO_2$ಅಲ್ಪ | $MnO_2$ |
| ಶೇ.35 - 50 | | ಶೇ.11 - 23 |
| $Al_2O_3$ | $SiO_2$ | $SiO_2$ |
| ಶೇ.10 - 40 | ಶೇ.10 - 35 | ಶೇ.16 - 35 |
| | $Al_2O_3$ | $Al_2O_3$ |
| | ಶೇ.10 - 20 | ಶೇ.3- 13 |
| ದಹನ ನಷ್ಟ | ದಹನ ನಷ್ಟ | ದಹನ ನಷ್ಟ |
| ಶೇ.10 - 12 | ಶೇ.15 - 20 | ಶೇ.10 - 15 |

**ಉಪಯೋಗಗಳು:** ಕಬ್ಬಿಣದ ಖನಿಜವರ್ಣದ್ರವ್ಯಗಳನ್ನು ದ್ರವಬಣ್ಣಗಳು, ಮರಮುಟ್ಟು ಮತ್ತು ಕಾಗದಗಳಿಗೆ ಬಣ್ಣ ಕಟ್ಟುವಿಕೆ, ಎಣ್ಣೆಬಟ್ಟೆ, ಲಿನೋಲಿಯಂ, ಬಣ್ಣದ ಸಿಮೆಂಟುಗಳು, ಪ್ಲಾಸ್ಟರ್, ರಬ್ಬರ್, ಪ್ಲಾಸ್ಟಿಕ್, ಹಾಸುಗಲ್ಲು, ಕೃತಕ ಚರ್ಮದ ತಯಾರಿಕೆಗಳಲ್ಲಿ ಹೆಚ್ಚಿಗೆ ಬಳಸಲಾಗುತ್ತಿದೆ. ಸಿಯೆನ್ನ ಮತ್ತು ಆ್ಯಂಬರುಗಳನ್ನು ಮರ ಮತ್ತು ಕಾಗದಗಳಿಗೆ ಬಣ್ಣ ಕಟ್ಟಲು ಉಪಯೋಗಿಸುತ್ತಾರೆ. (ಬಿ.ವಿ.ಜಿ.)

**ಖನಿಜವಿಜ್ಞಾನ :** ಖನಿಜಗಳ ಸ್ಫಟಿಕವಿಜ್ಞಾನ, ಭೌತ ಹಾಗೂ ರಾಸಾಯನಿಕ ಗುಣಗಳ ವರ್ಗೀಕರಣ, ಅನ್ವೇಷಣೆ ಇವೇ ಮುಂತಾದವನ್ನು ವಿವೇಚಿಸುವ ವಿಜ್ಞಾನ ವಿಭಾಗ (ಮಿನರಾಲಜಿ). ಖನಿಜಗಳ ಜೊತೆಗೆ ಆಕಾಶದಿಂದ ಭೂಮಿಯ ಮೇಲೆ ಆಗಾಗ ಬೀಳುವ ಉಲ್ಕೆಗಳನ್ನು ಸಹ ಈ ಕ್ಷೇತ್ರದಲ್ಲಿ ವಿವೇಚಿಸಲಾಗುತ್ತದೆ. ಇನಾರ್ಗ್ಯಾನಿಕ್ ಕ್ರಿಯೆಗಳಿಂದ ಉಂಟಾಗುವ ವಸ್ತು ಖನಿಜ. ಇದಕ್ಕೆ ಒಂದು ನಿರ್ದಿಷ್ಟವಾದ ರಾಸಾಯನಿಕ ಸಂಯೋಜನೆ ವಸ್ತು ಉಂಟು. ಪ್ರಕೃತಿಯಲ್ಲಿ ಅನುಕೂಲಕರವಾದ ವಾತಾವರಣದಲ್ಲಿ ಖನಿಜಗಳು ಉಂಟಾದಲ್ಲಿ ಇವುಗಳಿಗೆ ಒಂದು ನಿಖರವಾದ ಒಳ ಅಣುರಚನೆಯೂ ಇರುವುದು. ಈ ಕಾರಣದಿಂದಲೇ ಅನೇಕ ಖನಿಜಗಳು ಹರಳುಗಳಾಗಿ ಕಾಣಿಸಿಕೊಳ್ಳುತ್ತವೆ. ಅಲ್ಲದೆ ಅವುಗಳಲ್ಲಿ ಕಂಡುಬರುವ ಹಲವಾರು ಭೌತ ಗುಣಗಳಿಗೂ ಈ ಅಣುರಚನೆಯೇ ಕಾರಣ. ಇವೆಲ್ಲಕ್ಕೂ ಮಿಗಿಲಾಗಿ ಮುಖ್ಯ ಲಕ್ಷಣವೆಂದರೆ ಖನಿಜವನ್ನು ಉಂಟುಮಾಡುವ ಮೂಲಧಾತುಗಳ ಸಂಪೂರ್ಣ ಸಮ್ಮಿಳನ. ಆದ್ದರಿಂದಲೇ ಖನಿಜಗಳನ್ನು ಕೆಲವು ರಾಸಾಯನಿಕ ಸಂಕೇತಗಳಿಂದ ಗುರುತಿಸಲಾಗಿದೆ.

19ನೆಯ ಶತಮಾನದ ಆದಿಭಾಗದವರೆಗೂ ಖನಿಜವಿಜ್ಞಾನದ ವೈಜ್ಞಾನಿಕ ಬೆಳವಣಿಗೆ ಕಂಡುಬರುವುದಿಲ್ಲ. ಆ ವೇಳೆಗೆ ಸುಪ್ರಸಿದ್ಧ ವಿಜ್ಞಾನಿ ಜವಾಯ್ ಸ್ಫಟಿಕವಿಜ್ಞಾನದ ಮೂಲಭೂತ ತತ್ತ್ವಗಳನ್ನು ಪ್ರತಿಪಾದಿಸಿ ಖನಿಜವಿಜ್ಞಾನಕ್ಕೆ ಒಂದು ಹೊಸ ಆಯಾಮ ನೀಡಿದ. ಅಲ್ಲದೇ ಅದೇ ಸುಮಾರಿಗೆ ರಸಾಯನ ವಿಜ್ಞಾನದಲ್ಲಿ ಒಂದು ಹೊಸ ಸ್ಪಂದನ ತಲೆದೋರಿತ್ತು. ಹೀಗಾಗಿ ರಾಸಾಯನಿಕ ಸಂಯೋಜನೆ ಮತ್ತು ಅವುಗಳ ಬಾಹ್ಯರೂಪ ಬಹು ಪ್ರಮುಖವಾದ ಅಂಶಗಳೆಂದೂ ಇತರ ಗುಣಗಳು ಅನೇಕ ಬಾರಿ ಅಲ್ಪಸ್ವಲ್ಪ ಬದಲಾವಣೆಗಳನ್ನು ತೋರಿಸಬಹುದೆಂದೂ ಅಭಿಪ್ರಾಯಪಡಲಾಯಿತು.

ಇತ್ತೀಚಿನ ವರ್ಷಗಳಲ್ಲಿ ಖನಿಜಗಳಿಗೆ ಪ್ರಕಾಶ ವಿಜ್ಞಾನದ (ಆಪ್ಟಿಕ್ಸ್) ಹೊಸ ಹೊಸ ತಂತ್ರಗಳನ್ನು ಪ್ರಯೋಗಿಸಿ ಖನಿಜಕರಣ ಎಷ್ಟೇ ಸೂಕ್ಷ್ಮವಾಗಿದ್ದರೂ ಸೂಕ್ಷ್ಮದರ್ಶಿಯ ಸಹಾಯದಿಂದ ಅದರ ನಿರ್ದಿಷ್ಟ ಗುಣಗಳನ್ನು ನಿರ್ಧರಿಸಲು ಸಾಧ್ಯವಾಗಿದೆ. ಈಗ ಖನಿಜಗಳ ಅಧ್ಯಯನದಲ್ಲಿ ಅವುಗಳ ಭೌತ ಲಕ್ಷಣಗಳು ಮತ್ತು ರಾಸಾಯನಿಕ ಸಂಯೋಜನೆಯ ಜೊತೆಗೆ ಅವುಗಳ ಸ್ಫಟಿಕ ರೂಪ, ಪ್ರಕಾಶವಿಜ್ಞಾನಕ್ಕೆ ಸಂಬಂಧಿಸಿದ ಗುಣಗಳು, ಅವುಗಳ ಅಣು ಗಾತ್ರ ಮತ್ತು ರಚನಾವೈವಿಧ್ಯಗಳನ್ನು ಕೂಡ ನಿರ್ಧರಿಸಲಾಗುತ್ತದೆ.

ಖನಿಜವಿಜ್ಞಾನ ವಿಭಾಗದ ವ್ಯಾಪ್ತಿಯನ್ನು ಮುಂದಿನ ನಾಲ್ಕು ಶೀರ್ಷಿಕೆಗಳಲ್ಲಿ ಚರ್ಚಿಸಬಹುದು.

1. ಸ್ಫಟಿಕವಿಜ್ಞಾನ : ಇದು ಮುಖ್ಯವಾಗಿ ಖನಿಜಗಳ ಆಕೃತಿ ಅಥವಾ ಹೊರ ರೂಪಕ್ಕೆ ಸಂಬಂಧಿಸಿದ್ದು. ಖನಿಜದ ಸ್ಫಟಿಕಾಕೃತಿ ಅದರ ಒಳರಚನೆಯನ್ನು ಅವಲಂಬಿಸಿದೆ. ಹಲವು ಖನಿಜಗಳಂತೂ ತಮ್ಮದೇ ಆದ ಒಂದು ವಿಶಿಷ್ಟ ರೀತಿಯ ಆಕಾರವನ್ನು ಎಂಥ ಸಂದರ್ಭಗಳಲ್ಲಾದರೂ ಪಡೆಯುತ್ತದೆ. ಸ್ಫಟಿಕಾಕೃತಿಗೂ ಖನಿಜಕ್ಕೂ ಹೆಚ್ಚಿನ ನಂಟುತನ ಉಂಟು. ಹೊರ ಆಕಾರವನ್ನು ಆಧರಿಸಿ ಇಂಥದೇ ಖನಿಜವೆಂದು ಹೆಚ್ಚು ಕಷ್ಟವಿಲ್ಲದೆ ಗುರುತಿಸಬಹುದು. ಈ ದೃಷ್ಟಿಯಿಂದ ಖನಿಜ ವಿಜ್ಞಾನದಲ್ಲಿ ಸೂಜಿಯಂಥ, ನಕ್ಷತ್ರದಂಥ, ನೂಲಿನಂಥ, ಸ್ತಂಭಾಕೃತಿಯ ಅಲಗಿನಂಥ, ಪಟ್ಟಿಯಂಥ ಅನೇಕ ಆಕಾರಗಳನ್ನು ನೋಡಿ ಹೆಸರಿಸಬಹುದು.

2. ಸ್ಫಟಿಕಗಳ ಒಳರಚನೆ: ಖನಿಜಗಳ ಅಣುರಚನೆಯನ್ನು ಎಕ್ಸ್ ಕಿರಣಗಳ ಸಹಾಯದಿಂದ ಸುಲಭವಾಗಿ ನಿರ್ಧರಿಸಬಹುದು. ಈಚಿನ ವರ್ಷಗಳಲ್ಲಿ ಇದು ಹೆಚ್ಚಿನ ಪ್ರಾಮುಖ್ಯವನ್ನು ಪಡೆದಿದೆ. ಖನಿಜಶಾಸ್ತ್ರದಲ್ಲಿ ಎಕ್ಸ್‌ಕಿರಣಗಳ ಬಳಕೆಯನ್ನು ಲಾವೆ ಎಂಬಾತ ಮೊದಲ ಬಾರಿಗೆ ಜಾರಿಗೆ ತಂದ. ಇದರಿಂದ ಖನಿಜಗಳ ಒಳರಚನೆಯೇ ಅಲ್ಲದೆ ಆ ರಚನೆಯ ಚೌಕಟ್ಟಿನಲ್ಲಿ ವಿವಿಧ ಅಣುಗಳಿರುವ ಸ್ಥಾನಗಳನ್ನು ಸಹ ಗುರುತಿಸಬಹುದು. ಒಂದು ಸಣ್ಣ ಪ್ರನಾಳದಲ್ಲಿರುವ ಖನಿಜದ ಪುಡಿಯ ಮೇಲೆ ಎಕ್ಸ್‌ಕಿರಣಗಳನ್ನು ಹಾಯಿಸಿ ಛಾಯಾಚಿತ್ರವನ್ನು ತೆಗೆದಲ್ಲಿ ಅಣು ಚೌಕಟ್ಟು ಸ್ಪಷ್ಟಗೊಳ್ಳುತ್ತದೆ.

3. ಭೌತ ಖನಿಜವಿಜ್ಞಾನ: ಇದರಲ್ಲಿ ಮುಖ್ಯವಾಗಿ ಖನಿಜಗಳ ಭೌತ ಲಕ್ಷಣಗಳನ್ನು ವಿವೇಚಿಸಲಾಗುವುದು. ಖನಿಜಗಳ ಕಾಠಿಣ್ಯ, ಸಾಂದ್ರತೆ, ಬಣ್ಣ, ಒರೆ, ಸೀಳುಗಳು, ಬಿರಿತಗಳು ಮತ್ತು ವಿದ್ಯುತ್ತು ಹಾಗೂ ಕಾಂತದ ಪ್ರಭಾವಕ್ಕೆ ಒಳಗಾದಾಗ ಉಂಟಾಗುವ ಗುಣಗಳು ಇವೇ ಮುಖ್ಯವಾದವು. ಇವು ಕೂಡ ವಿವಿಧ ಖನಿಜಗಳನ್ನು ಗುರುತಿಸಲು ಬಹು ಸಹಾಯಕವಾಗಿದೆ.

4. ರಾಸಾಯನಿಕ ಖನಿಜವಿಜ್ಞಾನ: ಖನಿಜಗಳ ರಾಸಾಯನಿಕ ಸಂಯೋಜನೆಯನ್ನು ಅವುಗಳ ಒಂದು ಬಹುಮುಖ್ಯ ಗುಣವೆಂದು ಪರಿಗಣಿಸಬಹುದು. ಕೆಲವು ಪ್ರಯೋಗಗಳಿಂದ ಖನಿಜಗಳ ನಿಜಸ್ವರೂಪವನ್ನು ಅಷ್ಟು ಕಷ್ಟವಿಲ್ಲದೆ ಗುರುತಿಸಬಹುದು. ಇವುಗಳಲ್ಲಿ ಊದುಕೊಳವೆ ಮತ್ತು ಸೂಕ್ಷ್ಮ ರಾಸಾಯನಿಕ ಪ್ರಯೋಗಗಳು ಬಲು ಪ್ರಯೋಜನಕಾರಿ. ಆದರೆ ಒಂದು ಖನಿಜದ ಸಂಪೂರ್ಣ ಲಕ್ಷಣಗಳನ್ನು ಅರಿಯಬೇಕಾದರೆ ಆ ಖನಿಜದ ವಿವಿಧಾಂಶಗಳನ್ನು ರಾಸಾಯನಿಕ ವಿಶ್ಲೇಷಣೆಯಿಂದ ನಿರ್ಧರಿಸಬಹುದು. ಈಚಿನ ವರ್ಷಗಳಲ್ಲಿ ಇದು ಹೆಚ್ಚಿನ ಪ್ರಾಮುಖ್ಯವನ್ನು ಪಡೆದಿದೆ.

ಆಕರ ಮತ್ತು ಉತ್ಪತ್ತಿ: ಖನಿಜಗಳು ಶಿಲೆಗಳ ಬಿರುಕುಗಳಲ್ಲಿ ಮತ್ತು ಕುಳಿಗಳಲ್ಲಿ ದೊರೆಯುತ್ತವೆ. ಅಲ್ಲದೆ ಶಿಲೆಗಳ ಮುಖ್ಯ ಅಂಶಗಳೇ ಖನಿಜಗಳೆಂದು ಈಗಾಗಲೇ ವಿವರಿಸಲಾಗಿದೆ. ಅನೇಕ ಖನಿಜಗಳು ಮಾತೃಶಿಲಾದ್ರವ (ಮಾಗ್ಮ), ಅಲ್ಲಿರುವ ಮೂಲಜಲ

(ಮಾಗ್ಮ್ಯಾಟಿಕ್ ವಾಟರ್) ಅಥವಾ ಅಂತರ್ಜಲ (ಗ್ರೌಂಡ್‌ವಾಟರ್) ಇವುಗಳಿಂದ ರೂಪಗೊಳ್ಳುತ್ತವೆ. ಮಾತೃಶಿಲಾದ್ರವ ಮತ್ತು ಲಾವಗಳಿಂದ ಹೊರಬರುವ ಖನಿಜಾಂಶಯುಕ್ತ ಅನಿಲಗಳಿಂದ ಕೂಡ ಹಲವು ಖನಿಜಗಳು ತಲೆದೋರುತ್ತವೆ. ಈ ಕಾರಣದಿಂದಲೇ ಅಗ್ನಿಪರ್ವತಗಳು ಬಿಸಿನೀರಿನ ಚಿಲುಮೆಗಳು ಮತ್ತು ಗೇಸರುಗಳು ಇವುಗಳ ಸಮೀಪದಲ್ಲಿ ಸಾಮಾನ್ಯವಾಗಿ ಖನಿಜಗಳನ್ನು ನೋಡಬಹುದು. ಪ್ರಯೋಗಶಾಲೆಯಲ್ಲಿ ಖನಿಜಗಳ ಸಂಯೋಜನೆಯಲ್ಲಿ ಕಂಡು ಬರುವ ಮೂಲತತ್ತ್ವಗಳು ಪ್ರಕೃತಿಯಲ್ಲಿ ಪ್ರಭಾವಬೀರಿ ಖನಿಜೋತ್ಪತ್ತಿಗೆ ಮುಖ್ಯ ಕಾರಣವಾಗಿವೆ. ಬಹುಶಃ ಒತ್ತಡ, ಉಷ್ಣ ಮತ್ತು ಕಾಲಪರಿಮಿತಿ ಇವುಗಳಲ್ಲಿ ಈ ಎರಡು ಕಾರ್ಯರಂಗಗಳಿಗೂ ಅಷ್ಟು ಹೆಚ್ಚಿನ ಸಾಮ್ಯ ಇರದು.

ಉಪಯೋಗಗಳು: ಎಲ್ಲ ಲೋಹಗಳಿಗೂ ಮೂಲ ಖನಿಜಗಳು. ಇವನ್ನು ಸರಿಯಾದ ರೀತಿಯಲ್ಲಿ ಒಪ್ಪ ಮಾಡಿದಾಗ ಲೋಹಗಳುಂಟಾಗುತ್ತವೆ. ಅನೇಕ ರಾಸಾಯನಿಕ ಮತ್ತು ಇತರ ಕೈಗಾರಿಕೆಗಳಿಗೆ ಅಗತ್ಯವಾದ ಮೂಲವಸ್ತುಗಳು ಖನಿಜಗಳೇ. ಸಸ್ಯ ಸಂಬಂಧವಾದ ಮತ್ತು ಪ್ರಾಣಿಸಂಬಂಧವಾದ ವಸ್ತುಗಳ ಉತ್ಪತ್ತಿಯಲ್ಲಿ ಕೂಡ ಪಾತ್ರ ಪ್ರಮುಖವಾದುದು. **(ನೋಡಿ– ಖನಿಜಾನ್ವೇಷಣೆ)** (ಎಸ್.ಕೆ.ವಿ.)

**ಖನಿಜಾನ್ವೇಷಣೆ :** ಖನಿಜನಿಕ್ಷೇಪಗಳನ್ನು ಲಾಭದಾಯಕವಾದ ಮತ್ತು ಉಪಯುಕ್ತವಾದ ರೀತಿಯಲ್ಲಿ ರೂಢಿಸಿಕೊಳ್ಳುವ ಬಗೆಗೆ ಸಂಬಂಧಿಸಿದ ವಿವರವಾದ ಅಧ್ಯಯನ (ಮಿನರಲ್ ಪ್ರಾಸ್ಪೆಕ್ಟಿಂಗ್). ಅಂದರೆ ಒಂದು ಪ್ರದೇಶ ಅಥವಾ ನಿಕ್ಷೇಪದಲ್ಲಿ ಸಿಗುವ ಖನಿಜವನ್ನು ಯಾವ ರೀತಿಯಲ್ಲಿ ರೂಢಿಸಲು ಸಾಧ್ಯ ಅಥವಾ ಅದು ಸಾಧ್ಯವಿಲ್ಲವೇ ಎಂಬುದನ್ನು ತಿಳಿದುಕೊಳ್ಳಬೇಕು. ಭೂಶೋಧನೆ ಮತ್ತು ಖನಿಜಾನ್ವೇಷಣೆ ಈ ಎರಡು ವಿಧಾನಗಳು ತತ್ತ್ವಶಃ ಬೇರೆಯಾಗಿದ್ದರೂ ಅವನ್ನು ನಿರ್ದಿಷ್ಟವಾಗಿ ಬೇರ್ಪಡಿಸುವುದು ಕೊಂಚ ಕಷ್ಟವೇ. ಬಹುಮಟ್ಟಿಗೆ ಒಂದು ಮತ್ತೊಂದರೊಡನೆ ವಿಲೀನಗೊಳ್ಳುತ್ತದೆ.

ಖನಿಜಾನ್ವೇಷಣೆಯ ಪ್ರಚೋದನೆಗೆ ಮೂಲವಾದ ಮೂರು ಮುಖ್ಯ ಕುರುಹುಗಳೆಂದರೆ (1) ನೆಲದ ಮೇಲೆ ತಾವಾಗಿ ಎದ್ದು ಕಾಣಿಸಿಕೊಳ್ಳುವ ಖನಿಜದ ಅದುರುಗಳು. (2) ಅನುಕೂಲಕರವಾದ ಭೂ ಸನ್ನಿವೇಶ ಮತ್ತು (3) ಒಂದು ಪ್ರದೇಶದಲ್ಲಿ ನಡೆದಿರುವ ಪುರಾತನ ಗಣಿ ಕೆಲಸದ ಅವಶೇಷ ಅಥವಾ ಕುರುಹುಗಳು. ಇವುಗಳಲ್ಲೆಲ್ಲ ಅತಿ ಮುಖ್ಯವಾದದ್ದು ಅನುಕೂಲಕರವಾದ ಭೂ ಸನ್ನಿವೇಶ.

ಖನಿಜಾನ್ವೇಷಣೆಗೆ ಸಹಾಯಕವಾಗುವ ಭೂ ವೈಜ್ಞಾನಿಕ ಅಂಶಗಳು: ಖನಿಜ ನಿಕ್ಷೇಪದ ಆಕಾರ, ಗಾತ್ರ, ವಿಸ್ತರಣೆ, ಹುದುಗಿರುವ ಜಾಡು ಮತ್ತು ಅದರಲ್ಲಿ ದೊರೆಯುವ ಖನಿಜಾಂಶ ಇವೆಲ್ಲವೂ ಅದರ ಅನ್ವೇಷಣೆಗೆ ಬಹುಮುಖ್ಯ. ನಿಕ್ಷೇಪವಿರುವ ಪ್ರದೇಶದ ನಿಖರವಾದ ಭೂ ಲಕ್ಷಣವನ್ನು ತಿಳಿದಲ್ಲಿ ಅನ್ವೇಷಣೆಗೂ ಹೆಚ್ಚಿನ ಸಹಾಯವಾದೀತು. ಕೆಲವು ಸಂದರ್ಭಗಳಲ್ಲಿ ಭೂ ಶೋಧನೆ ನಿಖರವಾದ ಅಂಶಗಳನ್ನು ಒದಗಿಸದ ಕಾರಣ ಅನ್ವೇಷಣೆಗೆ ಹೆಚ್ಚಿನ ಸಹಾಯವಾಗಲಾರದು. ನಿಕ್ಷೇಪ ಉಂಟಾದ ರೀತಿಯಿಂದ ಅದರ ಆಕಾರ, ಗಾತ್ರ ಮತ್ತು ಅದು ಇರುವ ಸನ್ನಿವೇಶವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ತನ್ಮೂಲಕ ಆ ನಿಕ್ಷೇಪದಲ್ಲಿ ದೊರೆಯುವ ಖನಿಜದ ಮೊತ್ತ ಮತ್ತು ಅದನ್ನು ಹೊರತೆಗೆದು ಒಪ್ಪಮಾಡುವುದು ಲಾಭದಾಯಕವೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬಹುದು. ನಿಕ್ಷೇಪ ಉಂಟಾದಮೇಲೆ ಅದರ ಹೊರಮೈಯಲ್ಲಿ ಉಂಟಾಗುವ ಬದಲಾವಣೆಗಳು ಅನೇಕ ವೇಳೆ ಆಳದಲ್ಲಿ ಹುದುಗಿರುವ ಮುಖ್ಯ ನಿಕ್ಷೇಪದ ಗಾತ್ರ, ಆಕಾರ ಇವೇ ಮುಂತಾದ ಅಂಶಗಳನ್ನು ಊಹಿಸಲು ಬಹು ಸಹಾಯಕವಾಗಿರುತ್ತವೆ. ಖನಿಜ ನಿಕ್ಷೇಪಗಳು ಭೂಮಿಯ ಚಟುವಟಿಕೆಗಳಿಗೆ ಗುರಿಯಾದಾಗ ರೂಪಾಂತರಗೊಳ್ಳಬಹುದು ಮತ್ತು ಕೆಲವು ಸಂದರ್ಭಗಳಲ್ಲಿ ಮಡಿಕೆ ಬೀಳಬಹುದು. ಇಲ್ಲವೆ ಅವುಗಳ ಹರವಿನಲ್ಲಿ ಸ್ತರಭಂಗ ಉಂಟಾಗಿ ಅವ್ಯವಸ್ಥೆ ತಲೆದೋರಲೂಬಹುದು. ಹೀಗಾಗುವುದರಿಂದ ಖನಿಜಾನ್ವೇಷಣೆಯಲ್ಲಿ ಕೆಲವು ಕ್ಲಿಷ್ಟ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಆದರೆ ನುರಿತ ಭೂಶೋಧಕನಿಗೆ ಇವು ಖನಿಜ ಅನ್ವೇಷಣೆಯಲ್ಲಿ ಅಷ್ಟು ತೊಂದರೆಯನ್ನು ಒಡ್ಡಲಾರವು.

ಅನ್ವೇಷಣೆಯ ವಿಧಾನಗಳು: ಇವನ್ನು ಮೂರು ಗುಂಪಾಗಿ ವಿಂಗಡಿಸಬಹುದು. (1) ಭೂ ವೈಜ್ಞಾನಿಕ ವಿಧಾನಗಳು, (2) ಭೂ ರಾಸಾಯನಿಕ ವಿಧಾನಗಳು ಮತ್ತು (3) ಭೂ ಭೌತ ವಿಧಾನಗಳು.

**1. ಭೂ ವೈಜ್ಞಾನಿಕ ವಿಧಾನಗಳು:** ಒಂದು ಪ್ರದೇಶದಲ್ಲಿ ಹರಡಿರುವ ತೇಲಿಕೆ ಅದುರನ್ನು ಗುರುತಿಸುವುದು, ಆ ಪ್ರದೇಶದ ಮಣ್ಣನ್ನೋ ಮರಳನ್ನೋ ನುರುಜನ್ನೋ ಜಾಲಿಸಿ ಅದರಿಂದ ಅದುರನ್ನು ಗುರುತಿಸುವುದು, ತೋಡಗತೆಯಿಂದ ಒಳಹುದುಗಿರುವ ಅದುರನ್ನು ಹೊರತೆಗೆಯುವುದು, ಹೆಚ್ಚಿನ ಆಳಕ್ಕೆ ರಂಧ್ರ ಕೊರೆದು ಅದುರನ್ನು ಪತ್ತೆ ಹಚ್ಚುವುದು ಇವೇ ಮುಂತಾದವು ಇಲ್ಲಿ ಅನುಸರಿಸುವ ವಿಧಾನಗಳು.

ತೇಲಿಕೆ ಅದುರನ್ನು ಗುರುತಿಸುವುದು: ಅದುರು ಹುದುಗಿರುವ ಶಿಲೆ ಶಿಥಿಲಗೊಂಡ ಮೇಲೆ ಅದಿರಿನ ಚೂರುಗಳನ್ನು ಬೀಸುವ ಗಾಳಿಯೋ ಹರಿಯುವ ನೀರೋ ದೂರ ಸಾಗಿಸಿಕೊಂಡು ಹೋಗಿ ಅನುಕೂಲ ಸನ್ನಿವೇಶವಿರುವ ಕಡೆ ಶೇಖರಿಸುತ್ತದೆ. ಹೀಗಾಗಿ ಅನ್ವೇಷಕನಿಗೆ ಬೆಟ್ಟದ ಇಳಿಜಾರಿನಲ್ಲೋ ನದಿಯ ಪಾತ್ರದಲ್ಲೋ ಅದುರಿನ ಚೂರುಗಳು ದೊರೆತು ಆ ಜಾಡನ್ನೇ ಅನುಸರಿಸಿ ಹೋದಲ್ಲಿ ಅದುರಿನ ಮೂಲವನ್ನು ಹೆಚ್ಚು ಶ್ರಮವಿಲ್ಲದೆ ಪತ್ತೆ ಹಚ್ಚಬಹುದು. ಈ ಚೂರುಗಳ ಆಕಾರ ಮತ್ತು ಗಾತ್ರ ಸಮೃದ್ಧಿಗಳನ್ನು ಅನುಸರಿಸಿ ಅವು ಮೂಲನಿಕ್ಷೇಪದಿಂದ ಎಷ್ಟು ದೂರ ಸರಿದಿವೆ ಎಂಬುದನ್ನೂ ನಿರ್ಧರಿಸಬಹುದು. ಖನಿಜ ಗಡಸಾಗಿದ್ದಲ್ಲಿ ಇದು ಉತ್ತಮ ವಿಧಾನ. ಇಲ್ಲವಾದಲ್ಲಿ ಮೂಲದಿಂದ ಪ್ರವಹಿಸುವ ದಾರಿಯಲ್ಲೇ ಒಡೆದು ಚೂರಾಗಿ ಯಾವ ಉಪಯೋಗವೂ ಆಗಲಾರದು. ಚಿನ್ನ, ಪ್ಲಾಟಿನಂ ಮುಂತಾದ ಅನರ್ಘ್ಯ ಲೋಹಗಳಿದ್ದಲ್ಲಿ ಜಾಲಿಸುವುದರ ಮೂಲ ಪ್ಲವನ (ಗ್ರೇಡಿಯಂಟ್) ನಿಕ್ಷೇಪದ ಮೊತ್ತ ಮತ್ತು ಮೌಲ್ಯವನ್ನು ನಿರ್ಧರಿಸಬಹುದು.

ತೋಡಗತೆಯ ವಿಧಾನ: ಭೂಮಟ್ಟದಿಂದ ಹೆಚ್ಚಿನ ಆಳದಲ್ಲಿ ಹುದುಗಿರುವ ಖನಿಜಗಳ ಅನ್ವೇಷಣೆಗೆ ಇದು ಉತ್ಕೃಷ್ಟವಾದದ್ದು. ಹುದುಗಿರುವ ಆಳ ಹೆಚ್ಚೆಂದರೆ 2ಮೀ–2.12ಮೀ. ಮೀರಿರಬಾರದು. ಅಲ್ಲದೆ ಖನಿಜನಿಕ್ಷೇಪ ಬಹು ಗಡುಸಾಗಿರಲೂಬಾರದು. ಅಗಳುಗಳನ್ನು ನಿಕ್ಷೇಪದ ಹರವಿಗೆ ಲಂಬವಾಗಿ ತೋಡಬೇಕು. ಇವು ಅಷ್ಟು ಅಗಲವಾಗಿ ಯಾಗಲೀ ಬಹು ಆಳವಾಗಿಯಾಗಲೀ ಇರಬಾರದು. ಮೇಲ್ಭಾಗ ದಲ್ಲಿ ಹೆಚ್ಚು ಅಗಲವಾಗಿಯೂ (457 ಮಿ.ಮೀ. – 366ಮಿ.ಮೀ.) ಇದ್ದು ಸುಮಾರು 0.61ಮೀ.–0.76ಮೀ. ಯಷ್ಟು ಆಳವಾಗಿರಬೇಕು. ನಿಕ್ಷೇಪ ಹೆಚ್ಚು ಶಿಥಿಲಗೊಂಡಲ್ಲಿ ಅಗಳಿನ ಆಳವನ್ನು ತಕ್ಕ ಮಟ್ಟಿಗೆ ಹೆಚ್ಚಿಸಬಹುದು.

ಪರೀಕ್ಷಾ ಗುಳಿಗಳನ್ನು (ಟ್ರಯಲ್ ಪಿಟ್ಸ್) ಮೆಕ್ಕಲು ಪ್ರದೇಶಗಳಲ್ಲಿ ತೋಡಬೇಕು. ಸಾಮಾನ್ಯವಾಗಿ ಇವುಗಳ ಆಳ ಅಗಳಿನ ಆಳಕ್ಕಿಂತಲೂ ಹೆಚ್ಚು. ಸುಮಾರು 30ಮೀ. ತಳದಲ್ಲಿ ಕಿರಿದಾಗಿಯೂ 12–14 ಇದ್ದು ಆಳದವರೆಗೂ ಇವನ್ನು ತೋಡಬಹುದು. ನಿಕ್ಷೇಪಗಳು ಬೃಹದಾಕಾರವಾಗಿದ್ದಲ್ಲಿ ಈ ಬಗೆಯ ತೋಡುಗುಳಿಗಳ ಉಪಯುಕ್ತತೆ



ಚಿತ್ರ 1 ಖನಿಜಾನ್ವೇಷಣೆಗೆ ತೆಗೆಯುವ ಅಗಳು

ಹೆಚ್ಚು. ಗುಳಿಗಳು ಗುಂಡಾಗಿ ಇಲ್ಲವೇ ಆಯಾಕಾರವಾಗಿ ಇರಬಹುದು. ವೃತ್ತಾಕಾರವಾಗಿದ್ದಲ್ಲಿ ವ್ಯಾಸ 762ಮಿ.ಮೀ–914ಮಿ.ಮೀ. ಗಳಷ್ಟೂ ಆಯಾಕಾರವಾಗಿದ್ದಲ್ಲಿ 1524ಮಿ.ಮೀ–121948ಮಿ.ಮೀ. ಗಳಷ್ಟೂ ಇರುತ್ತದೆ. ಖನಿಜಾನ್ವೇಷಣೆಗೆ ಸಾಮಾನ್ಯವಾಗಿ ಆಯಾಕಾರದ ಗುಳಿಗಳೇ ಉತ್ತಮ.

**ಬೈರಿಗೆ ಕೊರೆಯುವ ವಿಧಾನ :** ಖನಿಜಕ್ಷೇಪ ಹೆಚ್ಚಿನ ಆಳದಲ್ಲಿ ಹುದುಗಿದ್ದಾಗ ಮತ್ತು ಇತರ ವಿಧಾನಗಳು ಅನುಪಯುಕ್ತವೆನಿಸಿದಾಗ ಇದೇ ಅತ್ಯುತ್ತಮ ವಿಧಾನ. ಎಷ್ಟು ಆಳಕ್ಕೆ ಬೇಕಾದರೂ ರಂಧ್ರ ಕೊರೆದು ಶಿಲೆಯನ್ನು ಹೊರತೆಗೆದು ಪರೀಕ್ಷಿಸಬಹುದು. ಆ ಮೂಲಕ ವಿವರವಾದ ಅಧ್ಯಯನ ನಡೆಸಿ ನಿಕ್ಷೇಪ ಹುದುಗಿರುವ ಆಳ, ಅದರೊಡನಿರುವ ವಿವಿಧ ಶಿಲೆಗಳು, ಅದುರಿನ ಗುಣ, ಅದರಲ್ಲಿರುವ ಲೋಹ ಮೊತ್ತ ಇವನ್ನೆಲ್ಲ ನಿರ್ಧರಿಸಬಹುದು. ಲೋಹಖನಿಜಾನ್ವೇಷಣೆಯಲ್ಲಿ ಡೈಮಂಡ್ ಮತ್ತು ಚರ್ನ್ ಎಂಬ ವಿಶೇಷ ರೀತಿಯ ಬೈರಿಗೆಗಳನ್ನು ಉಪಯೋಗಿಸುತ್ತಾರೆ. ಹ್ಯಾಮರ್ ಬೈರಿಗೆಗಳನ್ನು ನಿಕ್ಷೇಪಗಳ ಇಕ್ಕೆಲಗಳ ವಿಶೇಷ ಪರೀಕ್ಷೆಗೆ ಉಪಯೋಗಿಸುವರು. ತೈಲಾನ್ವೇಷಣೆಯಲ್ಲಿ

ರೋಟರಿ ಬೈರಿಗೆಗಳನ್ನೂ ಪೊಳ್ಳು ಪೊಳ್ಳಾದ ನಿಕ್ಷೇಪಗಳಿದ್ದಲ್ಲಿ ವಾಷ್ ಬೋರಿಂಗ್ ಬೈರಿಗೆಗಳನ್ನೂ ಉಪಯೋಗಿಸುತ್ತಾರೆ. ಹಲವು ಸಂದರ್ಭಗಳಲ್ಲಿ ಈ ಬಗೆಯ ನಿಕ್ಷೇಪಗಳ ಅನ್ವೇಷಣೆಯಲ್ಲಿ ಹ್ಯಾಂಡ್ ಆಗರ್ಸ್ ಎಂಬ ನೆಲಬೈರಿಗೆಯನ್ನು ಉಪಯೋಗಿಸಬಹುದು. ಮೆಕ್ಕಲು ನಿಕ್ಷೇಪಗಳಲ್ಲಿ ಅನ್ವೇಷಣೆ ನಡೆಸುವಾಗ ಎಂಪೈರ್ ಟೈಪ್ ಎಂಬ ಬೈರಿಗೆ ಉತ್ತಮವಾದುದು.

**2. ಭೂ ರಾಸಾಯನಿಕ ವಿಧಾನ :** ವಿಸ್ತಾರವಾದ ಪ್ರದೇಶದಲ್ಲಿ ಖನಿಜ ಹರಡಿರುವಾಗ ಈ ವಿಧಾನ ಹೆಚ್ಚು ಉಪಯುಕ್ತವಾದುದು. ನಿಕ್ಷೇಪದಲ್ಲಿ ಒಂದೇ ಒಂದು ಮೂಲವಸ್ತುವಾಗಲೀ ಖನಿಜವಾಗಲೀ ಹೆಚ್ಚಿನ ಮೊತ್ತದಲ್ಲಿ ಕೇಂದ್ರೀಕೃತವಾಗಿರುವ ಕಾರಣ ಅದನ್ನು ಒಂದು ತೆರನಾದ ಅಸಂಗತಿ ಎಂದು ಪರಿಗಣಿಸಲಾಗುತ್ತದೆ. ಇದೇ ಭೂ ರಾಸಾಯನಿಕ ಅಸಂಗತಿ ಅಥವಾ ವ್ಯತಿಕ್ರಮ. ಖನಿಜನಿಕ್ಷೇಪ ಭೂಮಿಯ ಸವೆತ ಮತ್ತು ಶಿಥಿಲಕರಣಕ್ಕೆ ಒಳಗಾಗಿ ಅದರಲ್ಲಿ ಹುದುಗಿದ್ದ ಮೂಲವಸ್ತು ಕ್ರಮೇಣ ಅಕ್ಕಪಕ್ಕದ ಶಿಲೆಗಳಲ್ಲೂ ಭೂಭಾಗಗಳಲ್ಲೂ ಪ್ರಸರಿಸುತ್ತದೆ. ಕೆಲವು ವೇಳೆ ನಿಕ್ಷೇಪದ ಮೇಲಿರುವ ನೆಲಭಾಗ ಮತ್ತು ಅದನ್ನು ಆವರಿಸಿರುವ ನೀರು ಮತ್ತು ಸಸ್ಯವರ್ಗಗಳಲ್ಲಿ ಸಹ ಈ ಮೂಲವಸ್ತು ಪ್ರವಹಿಸಿ ನಿರ್ದಿಷ್ಟ ರೀತಿಯ ಪ್ರಸಾರ ರೂಪಿಕೆಗಳನ್ನು ಉಂಟುಮಾಡುತ್ತದೆ. ಭೂ ರಾಸಾಯನಿಕ ಅಸಂಗತಿಗಳನ್ನು ಮತ್ತು ಪ್ರಸಾರ ರೂಪಿಕೆಗಳನ್ನು ಗುರುತಿಸಲು ಖನಿಜಗಳ ರಾಸಾಯನಿಕ ಗುಣಗಳಿಗೆ ಅನುಸಾರವಾಗಿ ಕ್ರಮಬದ್ಧ ಸಂಶೋಧನೆಗಳನ್ನು ನಡೆಸಬೇಕಾಗುವುದು. ಈ ಬಗೆಯ ಕಾರ್ಯಕ್ರಮಕ್ಕೆ ಅತ್ಯಂತ ಎಚ್ಚರಿಕೆಯಿಂದ ನಿಕ್ಷೇಪದ ಮಾದರಿಗಳನ್ನು ಅಲ್ಲಲ್ಲೇ ಶೇಖರಿಸಬೇಕು. ಅವೆಲ್ಲವನ್ನೂ ರಾಸಾಯನಿಕ ಪರೀಕ್ಷೆಗಳಿಗೆ ಒಳಪಡಿಸಬೇಕು. ಈ ಬಗೆಯ ಶೋಧನೆಯನ್ನು ಇಡೀ ಪ್ರಾಂತ್ಯಕ್ಕೆ ಅಥವಾ ಖನಿಜನಿಕ್ಷೇಪ ಹುದುಗಿರುವ ಭೂಭಾಗಕ್ಕೆ ಅನ್ವಯಿಸಿದಾಗ ಖನಿಜ ಯಾವ ರೀತಿಯಲ್ಲಿ ಆ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಶೇಖರವಾಗಿದೆ ಎಂಬುದರ ಅರಿವುಂಟಾಗುತ್ತದೆ. ಇಷ್ಟೇ ಅಲ್ಲದೆ, ಅದು ದೊರೆಯುವ ಸನ್ನಿವೇಶ, ಭೂಭಾಗದ ಗುಣಗಳು ಮುಂತಾದವನ್ನೆಲ್ಲ ಗ್ರಹಿಸಬಹುದು. ಒಂದು ಭೂ ರಾಸಾಯನಿಕ ಅಸಂಗತಿಯನ್ನಾಗಲೀ ಅದರ




ಚಿತ್ರ 2 ಶಿಲೆ ಮತ್ತು ಮಣ್ಣಿನಲ್ಲಿರುವ ನಿಕ್ಕಲ್ ಅಂಶವನ್ನು ರಾಸಾಯನಿಕ ವಿಧಾನದಿಂದ ನಿರ್ಧರಿಸಿದ (ಸ್ಥಳ: ನೌಗೆ, ಟಾಂಗನೀಕ)

ಅಧ್ಯಯನದಿಂದ ತೋರಿಬರುವ ಪ್ರಸಾರ ರೂಪಿಕೆಯನ್ನಾಗಲೀ ಗುರುತಿಸಲು ಆ ಭೂ ಸನ್ನಿವೇಶದಲ್ಲಿ ದೊರೆಯುವ ಯಾವುದಾದರೂ ಒಂದು ಖನಿಜ ಅಥವಾ ಮೂಲಧಾತುವಿನ ಮೊತ್ತವನ್ನು ಮೊದಲು ನಿರ್ಧರಿಸಬೇಕು. ಇದಕ್ಕಾಗಿ ಅಲ್ಲಿ ದೊರೆಯುವ ಖನಿಜ ಅಥವಾ ಶಿಲೆಯ ಹರವಿನ ನಾನಾ ಭಾಗಗಳಿಂದ ಮಾದರಿಗಳನ್ನು ಶೇಖರಿಸಿ ಅವನ್ನು ರಾಸಾಯನಿಕವಾಗಿ ವಿಭಜಿಸಿ ಪರೀಕ್ಷಿಸಬೇಕು. ಹಲವಾರು ಸಂದರ್ಭಗಳಲ್ಲಿ ಈ ಬಗೆಯ ಅಧ್ಯಯನಗಳಿಂದ ದೊರೆತ ಫಲಿತಾಂಶಗಳು ಇಡೀ ಪ್ರದೇಶದಲ್ಲೆಲ್ಲ ಚದರಿ ಹೋಗಿ ಯಾವ ನಿರ್ದಿಷ್ಟ ಅಭಿಪ್ರಾಯವೂ ಕಾಣದಿರಬಹುದು. ಆದರೆ ಅನೇಕ ಸಂದರ್ಭಗಳಲ್ಲಿ ಅವು ಒಂದು ನಿರ್ದಿಷ್ಟವಾದ ಜಾಡಿನಲ್ಲಿ ಅಡಕವಾಗಿರುತ್ತದೆ. ಇವುಗಳ ಸಹಾಯದಿಂದ ಆ ಪ್ರದೇಶದಲ್ಲಿ ಖನಿಜ ಎಷ್ಟು ಹೇರಳವಾದ ಮೊತ್ತದಲ್ಲಿ ದೊರೆಯುತ್ತದೆಂಬ ಅಂಶವನ್ನು ನಿರ್ಧರಿಸಬಹುದು. ಖನಿಜ ಅಥವಾ ಶಿಲಾ ಮಾದರಿಗಳಲ್ಲಿ ಸುಮಾರು ಎರಡರಷ್ಟು ಕಡಿಮೆ ಮೊತ್ತ ಕಂಡು ಬಂದರೆ ಅವನ್ನು ಅಸಂಗತಿ ಅಥವಾ ವ್ಯತಿಕ್ರಮಗಳೆಂದು ಪರಿಗಣಿಸಲಾಗುವುದು. ಈ ಅಂಶಗಳನ್ನೆಲ್ಲ ಒಟ್ಟುಗೂಡಿಸಿದಾಗ ಒಂದು ನಿರ್ದಿಷ್ಟ ರೂಪಿಕೆ ಕಂಡು ಬರುತ್ತದೆ. ಇದು ಖನಿಜ ನಿಕ್ಷೇಪದ ಉತ್ಪತ್ತಿಗೆ ಸಹ ಕಾರಣವಾಗಿರಬಹುದು.

ಮುಖ್ಯ ಭೂ ರಾಸಾಯನಿಕ ವ್ಯೂಹದಲ್ಲಿ ಶಿಲೆಗಳು ಮತ್ತು ಖನಿಜಗಳು ಸ್ತರೀಕರಣ, ರೂಪಾಂತರೀಕರಣ, ಶಿಥಿಲೀಕರಣ ಮುಂತಾದ ಭೂ ಚಟುವಟಿಕೆಗಳಿಗೆ ಒಳಗಾದಾಗ ನಾನಾ ರೀತಿಯಲ್ಲಿ ತಮ್ಮ ಆಕಾರದಲ್ಲೂ ಸಂಯೋಜನೆಯಲ್ಲೂ ಬದಲಾವಣೆ ಹೊಂದುತ್ತವೆ. ಹೀಗಾಗುವಾಗ ಖನಿಜದ ಪ್ರತಿಮೂಲಧಾತುವೂ ಅದರ ರಾಸಾಯನಿಕ ಮತ್ತು ಭೌತಿಕ ಗುಣಗಳಿಗನುಸಾರವಾಗಿ ಭೂ ಭಾಗದ ಯಾವುದಾದರೂ ಒಂದು ಪ್ರದೇಶದಲ್ಲಿ ಕೇಂದ್ರೀಕೃತವಾಗುತ್ತದೆ ಅಥವಾ ನಿರ್ದಿಷ್ಟ ರೀತಿಯಲ್ಲಿ ಚದರಿ ಹೋಗುತ್ತದೆ. ಏಕರೂಪ ಗುಣಗಳನ್ನುಳ್ಳ ಮೂಲಧಾತುಗಳು ಒಂದೇ ತೆರನಾದ ಕೇಂದ್ರೀಕರಣ ಅಥವಾ ಚದರಿಕೆಗೆ ಒಳಗಾಗುತ್ತವೆ. ಭೂತಲದಿಂದ ಆಳಕ್ಕೆ ಹೋದಂತೆಲ್ಲ ಉಷ್ಣ, ಒತ್ತಡ ಮುಂತಾದವು ಹೆಚ್ಚುತ್ತ ಹೋಗುತ್ತವೆ. ಈ ಕಾರಣದಿಂದ ಮೂಲಧಾತುಗಳ ಸಾರೀಕರಣವಾಗಲೀ ಚದರಿಕೆಯಾಗಲೀ ಒಂದೇ ತೆರನಾಗಿರಲು ಸಾಧ್ಯವಿಲ್ಲ. ಆಳದಲ್ಲಿ ಏಕರೂಪ ಸಾರೀಕರಣ ಅಥವಾ ಚದರಿಕೆಯನ್ನು ತೋರುವ ಖನಿಜಗಳು ನೆಲದ ಮೇಲೆ ಅದೇ ಬಗೆಯ ಏಕರೂಪತೆಯನ್ನು ತೋರಿಸಲಾರವು. ಇದಕ್ಕೆ ಉತ್ತಮ ಉದಾಹರಣೆ ಸೀಸ ಮತ್ತು ಸತು. ಇವು ಅನೇಕ ಖನಿಜನಿಕ್ಷೇಪಗಳಲ್ಲಿ ಒಟ್ಟಿಗೆ ದೊರೆಯುತ್ತವೆ. ಆದರೆ ಭೂ ಮೇಲ್ಭಾಗದಲ್ಲಿಯ ನಿಕ್ಷೇಪಗಳಲ್ಲಿ ಈ ಎರಡೂ ಖನಿಜಗಳೂ ಒಟ್ಟಿಗಿರುವುದಿಲ್ಲ. ಸೀಸ ಮೂಲಶಿಲೆಗೆ ಸಮೀಪವಾಗಿಯೂ ಸತು ಮೂಲದಿಂದ ಬಹುದೂರದ ವರೆಗೂ ಹರಡಿರುತ್ತದೆ. ಭೂ ರಾಸಾಯನಿಕ ಅಸಂಗತಿಗಳನ್ನು ಮೂಲ ಮತ್ತು ಆನುಷಂಗಿಕ ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. ಮೂಲಶಿಲೆಯಲ್ಲಿ ಖನಿಜ ಕೇಂದ್ರೀಕರಣ ಶಿಲೆಯೊಡನೆಯೇ ಉಂಟಾಗಿದ್ದಲ್ಲಿ ಅದನ್ನು ಮೂಲ ಭೂ ರಾಸಾಯನಿಕ ಅಸಂಗತಿ ಎಂದೂ ಶಿಲೆ ಉಂಟಾದ ಬಹುಕಾಲದ ಮೇಲೆ ಸಾರೀಕರಣವಾಗಿದ್ದಲ್ಲಿ ಅದನ್ನು ಆನುಷಂಗಿಕ ಭೂರಾಸಾಯನಿಕ ಅಸಂಗತಿ ಎಂದೂ ವಿವರಿಸಬಹುದು. ಖನಿಜ ಹುದುಗಿದ್ದ ಮೂಲಶಿಲೆ ಮತ್ತು ಶಿಥಿಲಗೊಂಡ ಶಿಲೆಯಲ್ಲಿ ಕಂಡುಬರುವ ರಾಸಾಯನಿಕ ಮತ್ತು ಖನಿಜ ವೈವಿಧ್ಯಗಳನ್ನು ಪ್ರಸಾರಮಾದರಿಗಳೆಂದು ಪರಿಗಣಿಸಲಾಗಿದೆ. ಖನಿಜೋತ್ಪತ್ತಿ ವಲಯಗಳು, ಪ್ರಸಾರಮಂಡಲಗಳು ಮತ್ತು ಮೂಲಧಾತುವಿನ ನಷ್ಟದಿಂದ ತಲೆದೋರಿದ ಪರಿವೇಷಗಳು ವಿಲಕ್ಷಣವಾದ ಮೂಲವಾದರಿಗಳನ್ನು ಉಂಟುಮಾಡುತ್ತವೆ. ಖನಿಜೋತ್ಪತ್ತಿ ವಲಯಗಳನ್ನು ಭೂಮಿಯ ಹೊರಚಿಪ್ಪಿನಲ್ಲಿ ಕೆಲವು ಧಾತುಗಳನ್ನು ಅತಿ ಹೆಚ್ಚಿನ ಮೊತ್ತದಲ್ಲಿ ಪಡೆದಿರುವ ಭೂಭಾಗಗಳೆಂದು ಪರಿಗಣಿಸಲಾಗಿದೆ. ಈ ಬಗೆಯ ಭೂಭಾಗಗಳನ್ನು ಆ ಪ್ರದೇಶದಲ್ಲಿರುವ ಶಿಲೆಗಳು ಮತ್ತು ಖನಿಜಗಳಲ್ಲಿ ತೋರಿಬರುವ ಪ್ರಾದೇಶಿಕ ಪ್ರಸಾರ ಮಾದರಿಗಳಿಂದ ಸುಲಭವಾಗಿ ಗುರುತಿಸಬಹುದು. ಇವುಗಳ ಉತ್ಪತ್ತಿಗೆ ಆ ಭೂಭಾಗದ ಅದುರಿನ ಉತ್ಪತ್ತಿಯೊಡನೆ ನಿಕಟಸಂಬಂಧ ಉಂಟು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಸತುವಿನ ಅದುರು ಪ್ರಾಂತದಲ್ಲಿ ಕಂಡುಬರುವ ವಿಶೇಷಾಂಶ. ಇಲ್ಲಿಯ ಪೆಗ್ಮಟೈಟ್ ಶಿಲೆಗಳಲ್ಲಿ ಸಾಮಾನ್ಯವಾಗಿ ಹೆಚ್ಚಿನ ಮೊತ್ತದಲ್ಲಿ ಸತುವಿನ ಅಂಶವೂ ಚಿನ್ನದ ಅದಿರು ಪ್ರಾಂತಗಳಲ್ಲಿಯ ಅಗ್ನಿಶಿಲೆಗಳಲ್ಲಿ ಹೆಚ್ಚಿನ ಮೊತ್ತದಲ್ಲಿ ಚಿನ್ನದ ಅಂಶವೂ ಕಂಡುಬರುತ್ತವೆ. ಖನಿಜ ಕೇಂದ್ರೀಕೃತವಾದ ಮುಖ್ಯ ವಲಯಕ್ಕೆ ಹೊಂದಿಕೊಂಡಿರುವ ಶಿಲಾ ಜಾಡುಗಳಲ್ಲಿ ಅದಿರಿನ ಖನಿಜಾಂಶ ಪ್ರಸಾರವಾಗುವುದರಿಂದ ಪ್ರಸಾರ ಪರಿವೇಷಗಳು ತಲೆದೋರುತ್ತವೆ. ಈ ಪ್ರಸಾರಕಾರ್ಯ ಕಾರ್ಯಾಂತರದ ಮೂಲಕ ಅಥವಾ ನಾಡ ಶಿಲೆಯ ಸೂಕ್ಷ್ಮಬಿರುಕುಗಳಲ್ಲಿ ಅದುರಿನ ಅಂಶ ಶೇಖರವಾಗುವುದರ ಮೂಲಕ ಉಂಟಾಗುತ್ತದೆ. ಬಹುಮಟ್ಟಿಗೆ ಈ ಬಗೆಯ ಪರಿವೇಷಗಳು ಖನಿಜನಿಕ್ಷೇಪಕ್ಕೆ ಬಹುಸಮೀಪದಲ್ಲಿರುತ್ತವೆ. ಆದರೆ ಮೂಲಧಾತು ನಷ್ಟವಾಗುವ ಪರಿವೇಷಗಳು ಖನಿಜನಿಕ್ಷೇಪದಿಂದ ಬಹು ದೂರ ಸರಿದಿರುತ್ತವೆ. ಇವು ಸಾಮಾನ್ಯವಾಗಿ ಭೂ ಚಲನೆಗೆ ಒಳಗಾದ ಪ್ರದೇಶಗಳಲ್ಲಿ ಅಂದರೆ ಬಿರಿತ, ಸ್ತರಭಂಗ ಇವುಗಳಿಗೊಳಗಾದ ಪ್ರದೇಶಗಳಲ್ಲಿ ಮೂಲ ನಿಕ್ಷೇಪದಿಂದ ಬಹುದೂರದವರೆಗೆ (ಸುಮಾರು 500'ಗಳ ವರೆಗೂ) ಕಂಡುಬಂದಿದೆ.

ಆನುಷಂಗಿಕ ಪ್ರಸಾರಮಾದರಿಗಳು ಖನಿಜ ಹುದುಗಿರುವ ಭೂಭಾಗಗಳು ಶಿಥಿಲೀಕರಣಕ್ಕೊಳಗಾದ ಪ್ರದೇಶಗಳಲ್ಲಿ ಮೈದೋರುತ್ತವೆ. ಶಿಥಿಲೀಕರಣದಿಂದ ಶಿಲೆಯಲ್ಲಿಯ ಖನಿಜ ಮತ್ತು ಮೂಲಧಾತುಗಳು ಹೊರಬರುವುದರಿಂದ ಅವುಗಳಲ್ಲಿ ಒಂದು ಬಗೆಯ ಪುನರ್ವಿಂಗಡಣೆ ಉಂಟಾಗಿ ಇಂಥ ಪ್ರಸಾರ ಮಾದರಿಗಳು ತಲೆದೋರುತ್ತವೆ. ಇವುಗಳ ವಿಸ್ತಾರ ಮತ್ತು ಹರಡುವಿಕೆ ಮೂಲಧಾತುಗಳ ಪ್ರಸಾರಶಕ್ತಿ ಮತ್ತು ವೇಗವನ್ನು ಅವಲಂಬಿಸಿವೆ. ಈ ವೇಗಕ್ಕೆ ಅನುಗುಣವಾಗಿ ಒಂದು ಕ್ರಮಪಟ್ಟಿಯನ್ನೇ ತಯಾರಿಸಲಾಗಿದೆ; (1) ಕಬ್ಬಿಣ, (2) ಅರ್ಸೆನಿಕ್, (3) ಸೀಸ, (4) ಚಿನ್ನ, (5) ತಾಮ್ರ, (6) ಕೊಬಾಲ್ಟ್, (7) ಸತು ಮತ್ತು (8) ಬೆಳ್ಳಿ, ಅಂದರೆ ಕಬ್ಬಿಣಕ್ಕೆ ಗರಿಷ್ಠ ಪ್ರಸಾರವೇಗವೂ

ಬೆಳ್ಳಿಗೆ ಕನಿಷ್ಠ ಪ್ರಸಾರವೇಗವೂ ಇದ್ದಂತಾಯಿತು. ವೇಗಪರಿಮಿತಿ ಅನೇಕ ವೇಳೆ ಸುತ್ತಲಿನ ಸನ್ನಿವೇಶವನ್ನು ಕೂಡ ಅವಲಂಬಿಸಿದೆ. ಆಮ್ಲೀಯ ಸನ್ನಿವೇಶದಲ್ಲೂ ಸಲ್ಫೈಡ್ ಖನಿಜ ಪ್ರದೇಶದಲ್ಲೂ ಮೇಲೆ ಕಾಣಿಸಿದ ಕ್ರಮಪಟ್ಟಿಗೆ ಅನುಗುಣವಾಗಿ ಖನಿಜಗಳಲ್ಲಿ ಪ್ರಸಾರವೇಗ ಪರಿಮಿತಿ ಇರುತ್ತದೆ. ಆದರೆ ಆಲ್ಕಲೈನ್, ಕ್ಲೋರೈಡ್ ಅಥವಾ ಕಾರ್ಬೊನೇಟ್ ಸನ್ನಿವೇಶಗಳಲ್ಲಿ ಈ ತೆರನಾದ ವೇಗ ಪರಿಮಿತಿ ಇರುವುದಿಲ್ಲ. ಅಲ್ಲದೆ ಈ ಬಗೆಯ ಸನ್ನಿವೇಶದಲ್ಲಿ ತಾಮ್ರ ಮತ್ತು ಬೆಳ್ಳಿಯ ವಿದ್ಯುದ್ವಾಹಿ ಕಣಗಳ ಪ್ರಸಾರವೇಗ ಬಹುಮಟ್ಟಿಗೆ ಕುಂಠಿತವಾಗುತ್ತದೆ.

**ಭೂ ರಾಸಾಯನಿಕ ಶೋಧನೆ :** ಅಧ್ಯಯನ ಮಾಡುವ ವಸ್ತುವಿಗೆ ಅನುಗುಣವಾಗಿ ಮೃತ್ತಿಕಾ ಸಮೀಕ್ಷಣ, ಸ್ತರ ಸಮೀಕ್ಷಣ, ಜಲ ಸಮೀಕ್ಷಣ ಮತ್ತು ಸಸ್ಯ ಸಮೀಕ್ಷಣ ಎಂದು ಮುಂತಾಗಿ ಕರೆಯಲಾಗಿದೆ. ಮೃತ್ತಿಕಾ ಸಮೀಕ್ಷಣದಲ್ಲಿ ಅನುಕೂಲವಾದ ಜಾಡನ್ನು ಮೊದಲು ಆರಿಸಿ ಆ ಜಾಡಿನುದ್ದಕ್ಕೂ ಮಣ್ಣಿನ ಮಾದರಿಗಳನ್ನು ಅಲ್ಲಲ್ಲೆ ಸಂಗ್ರಹಿಸಬೇಕು. ಹೀಗೆಯೇ ಜಲ ಸಮೀಕ್ಷಣದಲ್ಲಿ ಹರಿಯುವ ನೀರು ಅಥವಾ ಅಂತರ್ಜಲವನ್ನು ಒಂದು ಭೂ ಭಾಗದ ನಾನಾ ಕಡೆಗಳಿಂದ ಸಂಗ್ರಹಿಸಬೇಕು. ನೀರಿನಲ್ಲಿ ಕರಗಿ ಅಡಕವಾಗಿರುವ ಖನಿಜಾಂಶಗಳನ್ನು ಪತ್ತೆ ಹಚ್ಚಲು ಈ ಬಗೆಯ ಶೋಧನೆ ಅತ್ಯುತ್ತಮವಾದುದು. ಹೀಗೆ ಸಂಗ್ರಹಿಸಿದ ಮಣ್ಣು, ಜಲ, ಶಿಲೆ, ಸಸ್ಯವರ್ಗ ಇವುಗಳ ಮಾದರಿಗಳನ್ನು ರಾಸಾಯನಿಕವಾಗಿ ವಿಭಜಿಸಬೇಕು. ಅತ್ಯಾಧುನಿಕ ರಾಸಾಯನಿಕ ವಿಧಾನಗಳಿಂದ ಕ್ಯಲೋರಿಮೆಟ್ರಿ, ಕ್ರೊಮಟಾಗ್ರಫಿ, ಪೊಲಾರೋಗ್ರಫಿ ಮತ್ತು ರೋಹಿತಲೇಖಿ (ಸ್ಪೆಕ್ಟ್ರಾಸ್ಕೊಪಿ) ಇವನ್ನು ಈ ಬಗೆಯ ಸಂಶೋಧನೆಯಲ್ಲಿ ಬಳಸಬಹುದು.

**3. ಭೂಭೌತ ಶೋಧನೆ :** ಭೂಮಿಯ ಹೊರ ಚಿಪ್ಪಿನಲ್ಲಿರುವ ಶಿಲೆಗಳು ತಮ್ಮ ಸಾಂದ್ರತೆ, ಕಾಂತತೆ, ಕಾಠಿಣ್ಯ ಮತ್ತು ಸಂಕೋಚ್ಯತೆಗಳಲ್ಲಿ ಒಂದೇ ಸಮವಾಗಿರದೆ ಏರುಪೇರುಗಳನ್ನು ತೋರಿಸುತ್ತವೆ. ಸುಧಾರಿತ ಯಂತ್ರೋಪಕರಣಗಳ ಸಹಾಯದಿಂದ ಇವುಗಳಲ್ಲಿ ಹಲವಾರು ಏರುಪೇರುಗಳನ್ನು ಅಳೆದು ನಿರ್ಧರಿಸಬಹುದು. ಹೀಗೆ ದೊರೆತ ಅಂಕಿಅಂಶಗಳನ್ನು ಉಪಯೋಗಿಸಿಕೊಂಡು ಭೂಮಿಯ ಒಳಗೆ ಹುದುಗಿರುವ ಶಿಲಾ ಸಮೂಹದ ಹಲವಾರು ಗುಣಗಳನ್ನೂ ಅವುಗಳ ವಿನ್ಯಾಸವನ್ನೂ ಊಹಿಸಬಹುದು. ಹೀಗೆ ಖನಿಜಗಳ ಭೂಭೌತ ತತ್ತ್ವಗಳನ್ನು ಅಳವಡಿಸಿಕೊಂಡಿರುವ ಶೋಧನೆಯೇ ಭೂಭೌತ ಶೋಧನೆ ಅಥವಾ ಭೂಭೌತ ಖನಿಜಾನ್ವೇಷಣೆ. ಈ ಬಗೆಯ ಅನ್ವೇಷಣೆಗೆ ಒಳಗಾದ ಭೂಭಾಗದಲ್ಲಿರುವ ಶಿಲೆಗಳ ಭೌತ ಗುಣಗಳಲ್ಲಿ ಕಂಡುಬರುವ ಗಮನಾರ್ಹವಾದ ವ್ಯತ್ಯಾಸಗಳು ಅಸಂಗತಿಗಳೆನಿಸಿಕೊಳ್ಳುತ್ತವೆ. ಭೂಭೌತ ಖನಿಜಾನ್ವೇಷಣೆಯಲ್ಲಿ ಮುಖ್ಯವಾದ ನಾಲ್ಕು ವಿಧಾನಗಳಿವೆ : (1) ಕಾಂತತ್ವ ವಿಧಾನ, (2) ವಿದ್ಯುದ್ವಿಧಾನ, (3) ಭೂ ಕಂಪನ ವಿಧಾನ ಮತ್ತು (4) ಗುರುತ್ವಾಕರ್ಷಣ ವಿಧಾನ.

ಇವುಗಳಲ್ಲಿ ಕಾಂತತ್ವ ವಿಧಾನ ಮತ್ತು ವಿದ್ಯುದ್ವಿಧಾನಗಳು ಲೋಹ ಖನಿಜಗಳ ಅನ್ವೇಷಣೆಯಲ್ಲಿ ಬಹು ಉಪಯುಕ್ತವಾದುವು. ಹಾಗೆಯೇ ಗುರುತ್ವಾಕರ್ಷಣ ವಿಧಾನಗಳು ಪೆಟ್ರೋಲಿಯಂ ಅನ್ವೇಷಣೆಯಲ್ಲಿ ಬಹು ಉಪಯುಕ್ತವಾದುದು. ಹೀಗೆಯೇ ಪರಮಾಣ್ವಕ ಖನಿಜಗಳ ಅನ್ವೇಷಣೆಯಲ್ಲಿ ಮತ್ತೊಂದು ಹೊಸವಿಧಾನವನ್ನೆ ಬಳಸಲಾಗಿದೆ. ಇದರಂತೆ ಖನಿಜಗಳ ವಿಕಿರಣ ಪಟುತ್ವವನ್ನು ಅಳೆದು ತನ್ಮೂಲಕ ಖನಿಜ ನಿಕ್ಷೇಪಗಳನ್ನು ಪತ್ತೆಮಾಡಲಾಗುವುದು.

**1 ಕಾಂತತ್ವ ವಿಧಾನ:** ಕೆಲವು ಖನಿಜಗಳಿಗೆ–ಉದಾಹರಣೆಗೆ ಮ್ಯಾಗ್ನಟೈಟ್ ಪಿರ್ಹೊಟೈಟ್ ಮತ್ತು ಇಲ್ಮೆನೈಟ್–ಅತಿ ಹೆಚ್ಚಿನ ಕಾಂತತ್ವ ಉಂಟು. ಇವು ಹೆಚ್ಚಿನ ಮೊತ್ತದಲ್ಲಿರುವ ಶಿಲೆಗಳು. ಈ ಕಾರಣದಿಂದ ಕಾಂತತ್ವವನ್ನು ಹೆಚ್ಚಿನ ಮೊತ್ತದಲ್ಲಿ ಪ್ರದರ್ಶಿಸುತ್ತವೆ. ಹೀಗಾಗಿ ಖನಿಜಗಳಿಗಾಗಿ ಶೋಧನೆ ನಡೆಸುತ್ತಿರುವ ಪ್ರದೇಶದ ಕಾಂತಕ್ಷೇತ್ರವನ್ನು ಸರಿಯಾಗಿ ನಿರ್ಧರಿಸಿ ಗುರುತಿಸಿದಲ್ಲಿ ಅಲ್ಲಿ ಹುದುಗಿರುವ ಖನಿಜ ನಿಕ್ಷೇಪವನ್ನು ಸುಲಭವಾಗಿ ಪತ್ತೆಮಾಡಬಹುದು. ಈ ಶೋಧನೆಗೆ ಸಾಮಾನ್ಯವಾಗಿ ಅತಿ ಸರಳವಾದ ರೀತಿಯಲ್ಲಿ ರಚಿತವಾಗಿರುವ ನತಿಸೂಜಿ (ಡಿಪ್ ನೀಡ್ಲ್) ಮತ್ತು ಹೆಚ್ಚು ಕ್ಲಿಷ್ಟಕರವಾದ ರೀತಿಯಲ್ಲಿ ರಚಿತವಾಗಿರುವ ಕಾಂತತ್ವಮಾಪಿ(ಮ್ಯಾಗ್ನೆಟೊಮೀಟರ್) ಅಥವಾ ವೇರಿಯೋ ಮೀಟರ್ ಎಂಬ ಕಾಂತತ್ವಮಾಪಕ ಯಂತ್ರೋಪಕರಣಗಳನ್ನು ಬಳಸಲಾಗುವುದು. ಇವುಗಳ ಸಹಾಯದಿಂದ ಖನಿಜಗಳ ಕಾಂತತ್ವವನ್ನು ಅಳತೆಮಾಡಿ ನಿರ್ಧರಿಸಬಹುದು. ಹೀಗೆ ದೊರೆತ ಅಂಕಿ ಅಂಶಗಳನ್ನು ಉಪಯೋಗಿಸಿಕೊಂಡು ಒಂದು ಪ್ರದೇಶದ ಕಾಂತತ್ವ ನಕ್ಷೆಗಳನ್ನು ರಚಿಸಲಾಗುವುದು. ಇವುಗಳಲ್ಲಿಯ ಸಮಕಾಂತತ್ವ ರೇಖೆಗಳ ಸಹಾಯದಿಂದ ಖನಿಜ ನಿಕ್ಷೇಪದ ಅಕ್ಷರೇಖೆಯನ್ನೂ ಅದು ಹುದುಗಿರುವ ಆಳವನ್ನೂ ನಿರ್ದೇಶಿಸಬಹುದು. ಪ್ರತಿದಿನವೂ ಭೂಮಿಯ ಕ್ಷೇತ್ರದಲ್ಲಿ ಆಗುವ ವ್ಯತ್ಯಾಸಗಳನ್ನು ಮತ್ತು ಆಗಾಗ ಕಂಡು ಬರುವ ಬಿರುಗಾಳಿಗಳನ್ನು ಅನುಸರಿಸಿ ಹಲವಾರು ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡಲಾಗುವುದು. ಈಗ ಈ ಬಗೆಯ ಶೋಧನೆಗಳನ್ನು ಬಹು ತೀವ್ರಗತಿಯಲ್ಲಿ ನಡೆಸಲಾಗುತ್ತಿದೆ. ಇದಕ್ಕಾಗಿ ವಿಮಾನದಲ್ಲಿ ಅಳವಡಿಸಿರುವ ಒಂದು ವಿಶೇಷ ಕಾಂತತ್ವ ಮಾಪಿಯನ್ನು ಬಳಸುತ್ತಾರೆ. ಶೋಧನೆ ನಡೆಸುವ ಕ್ಷೇತ್ರದ ಮೇಲಿನ ನಿರ್ದಿಷ್ಟ ಜಾಡುಗಳಲ್ಲಿ ಇಂಥ ವಿಮಾನ ಹಾರಾಡಿ ಆ ಮೂಲಕ ಆ ಪ್ರದೇಶದ ಕಾಂತತ್ವ ನಕ್ಷೆಗಳನ್ನು ತಯಾರಿಸಲು ಅಂಕಿ ಅಂಶಗಳನ್ನು ಒದಗಿಸುತ್ತದೆ. ಇವುಗಳ ಅಧ್ಯಯನದಿಂದ ಆ ಪ್ರದೇಶದಲ್ಲಿಯ ಖನಿಜ ನಿಕ್ಷೇಪಗಳನ್ನು ಗುರುತಿಸಲು ಸಾಧ್ಯವಾಗುವುದು.




ಚಿತ್ರ 3 ಕಾಂತ ವಿಧಾನದಿಂದ ಖನಿಜ ನಿಕ್ಷೇಪಗಳನ್ನು ಕಂಡುಹಿಡಿಯುವ ರೀತಿ

**2 ವಿದ್ಯುತ್ ವಿಧಾನಗಳು:** ಶಿಲೆಗಳಲ್ಲಿ ವಿದ್ಯುದ್ವಾಹಕತ್ವ ಮತ್ತು ವಿದ್ಯುನ್ನಿರೋಧಕತ್ವ ಒಂದೇ ತೆರನಾಗಿರದೆ ಒಂದರಿಂದ ಮತ್ತೊಂದಕ್ಕೆ ವ್ಯತ್ಯಾಸಗೊಳ್ಳುತ್ತವೆ. ಶಿಲೆಯ ಅಂತರ್ಗತ ಗುಣಗಳೇ ಅಲ್ಲದೆ ಅವು ಭೂಮಿಯಲ್ಲಿ ಹುದುಗಿರುವ ಆಳವೂ ಇದಕ್ಕೆ ಕಾರಣ. ಸಾಮಾನ್ಯ ಶಿಲೆಗಳಾದ ಗ್ರಾನೈಟ್, ನೈಸ್ ಮತ್ತು ಪಾರ್ಫಿರಿಗಳಿಗಿಂತ ಲೋಹ ಖನಿಜಗಳಿಗೂ ಅದಿರುಗಳಿಗೂ ಹೆಚ್ಚಿನ ಮೊತ್ತದ ವಿದ್ಯುದ್ವಾಹಕ ಶಕ್ತಿ ಉಂಟು. ಸಾಮಾನ್ಯವಾಗಿ ಸಲ್ಫೈಡ್ ಅದುರುಗಳು ಅತ್ಯುತ್ತಮ ವಿದ್ಯುದ್ವಾಹಕಗಳು ಮತ್ತು ಇವುಗಳ ನಿರೋಧಕ ಶಕ್ತಿ ಅತ್ಯಂತ ಕನಿಷ್ಠ ಮಟ್ಟದ್ದು. ಆದರೆ ಈ ವರ್ಗದ ಸ್ಫಾಲರೈಟ್ ಎಂಬ ಸತುವಿನ ಅದಿರು ಮಾತ್ರ ಹೀಗಿರದೆ ಉತ್ತಮ ಬಗೆಯ ವಿದ್ಯುದ್ವಾಹಕವೆನಿಸಿಲ್ಲ. ವಿದ್ಯುದ್ವಾಹಕ ಶಕ್ತಿಯಲ್ಲಿ ಲೋಹ ಖನಿಜಗಳಿಗೂ ಅವು ಹುದುಗಿರುವ ಅಥವಾ ಅವುಗಳ ಅಕ್ಕಪಕ್ಕದಲ್ಲಿರುವ ಶಿಲೆಗಳಿಗೂ ಇರುವ ಹೆಚ್ಚಿನ ವ್ಯತ್ಯಾಸಗಳ ಆಧಾರದ ಮೇಲೆ ವಿದ್ಯುದ್ವಿಧಾನಗಳನ್ನು ರೂಪಿಸಲಾಗಿದೆ. ಕನಿಷ್ಠ ದರ್ಜೆಯ ವಿದ್ಯುನ್ನಿರೋಧಕ ಶಕ್ತಿಯ ಸಹಾಯದಿಂದ ಚಾಲ್ಕೊಪೈರೈಟ್, ಗೆಲೀನಾ ಮತ್ತು ಪೈರೈಟ್ ಖನಿಜ ನಿಕ್ಷೇಪಗಳನ್ನು ಪತ್ತೆಮಾಡಬಹುದು. ಈ ಅನ್ವೇಷಣೆಯಲ್ಲಿ ವಿದ್ಯುಚ್ಛಕ್ತಿಯನ್ನು ಕೃತಕ ರೀತಿಯಲ್ಲಿ ನೆಲದೊಳಗೆ ಪ್ರವಹಿಸಲಾಗುವುದು. ಆಗ ಆ ಶಕ್ತಿಯ ಅಲೆಗಳು ಅಲ್ಲಿರುವ ವಸ್ತುಗಳ ಮೂಲಕ ವಿವಿಧ ಪರಿಮಾಣಗಳಲ್ಲಿ ಪ್ರವಹಿಸುತ್ತವೆ. ಈ ಪ್ರವಾಹ ವೇಗವನ್ನು ಯುಕ್ತ ಯಂತ್ರಗಳ ಮೂಲಕ ಅಳೆದು ಗುರುತಿಸಲಾಗುತ್ತದೆ. ಪ್ರವಾಹ ವೇಗ ಒಂದೇ ತೆರನಾಗಿರದೆ ಖನಿಜದಿಂದ ಖನಿಜಕ್ಕೂ ಶಿಲೆಯಿಂದ ಶಿಲೆಗೂ ವ್ಯತ್ಯಾಸಗೊಳ್ಳುತ್ತವೆಂಬುದನ್ನು ಮರೆಯಬಾರದು. ಈ ಬಗೆಯ ಪ್ರಯೋಗಗಳಲ್ಲಿ ಭೂಮಿ ಯಾವ ಬಗೆಯ ಅಡಚಣೆಯನ್ನೂ ಒಡ್ಡುವುದಿಲ್ಲ. ಆದರೆ ದಸಿಗಳ ಸಮೀಪದಲ್ಲಿ ಮಾತ್ರ ಹೆಚ್ಚಿನ ನಿರೋಧವಿರುತ್ತದೆ. ಒಟ್ಟಿನಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಿದ ರೀತಿಯನ್ನು ಅನುಸರಿಸಿ ಉತ್ತಮ ವಾಹಕತ್ವ ಕಂಡುಬಂದ ಸ್ಥಳಗಳನ್ನು, ಕೇಂದ್ರಗಳನ್ನು ಮತ್ತು ಜಾಡನ್ನು ಆ ಭೂಭಾಗದ ನಕ್ಷೆಯ ಮೇಲೆ ನಿರ್ದೇಶಿಸಲಾಗುವುದು. ಸಲ್ಫೈಡ್ ಅದುರಿರುವ ಪ್ರದೇಶದಲ್ಲಿ ರಾಸಾಯನಿಕ ಬದಲಾವಣೆಗಳು ಸತತವಾಗಿ ಆಗುತ್ತಲೇ ಇರುತ್ತವೆ. ಖನಿಜಗಳಲ್ಲಿಯ ಬಿರುಕುಗಳಲ್ಲಿ ನೀರು ಜಿನುಗಿದಾಗ ಸಲ್ಫೈಡಿಗೂ ನೀರಿಗೂ ಪರಸ್ಪರ ಸಂಪರ್ಕವುಂಟಾಗಿ ರಾಸಾಯನಿಕ ಕ್ರಿಯೆ ನಡೆದು ಸಲ್ಫೈಡ್ ಅಂಶ ಆಮ್ಲೀಕರಣಕ್ಕೊಳಗಾಗುತ್ತದೆ. ಈ ತೆರನಾದ ರಾಸಾಯನಿಕ ಕ್ರಿಯೆ ವಿದ್ಯುದಲೆಗಳನ್ನು ಪ್ರಚೋದಿಸುತ್ತದೆ.

ಹೀಗೆ ಉಂಟಾದ ನೈಸರ್ಗಿಕ ವಿದ್ಯುತ್ಪ್ರವಾಹಗಳನ್ನು ಯಂತ್ರಗಳ ಮೂಲಕ ಗುರುತಿಸುವುದೇ ಅಲ್ಲದೆ ಆ ಅಂಶಗಳ ಆಧಾರದ ಮೇಲೆ ಹುದುಗಿರುವ ಸಲ್ಫೈಡ್ ಮುಂತಾದ ಖನಿಜ ನಿಕ್ಷೇಪಗಳನ್ನು ಗುರುತಿಸುವುದು ಕೂಡ ಸಾಧ್ಯ. ಇಂಥ ವಿದ್ಯುತ್ಪ್ರವಾಹಗಳನ್ನು ಭೂಮಿಯಲ್ಲಿ ಇತರ ರೀತಿಯಲ್ಲಿ ಉಂಟಾಗುವ ವಿದ್ಯುತ್ಪ್ರವಾಹಗಳಿಂದ ಬೇರ್ಪಡಿಸಬಹುದು. ಇವುಗಳ ಪ್ರವಾಹ ವೇಗ ಅತ್ಯಂತ ಹೆಚ್ಚಿನ ಮಟ್ಟದಲ್ಲಿರುತ್ತದೆ. ಸಲ್ಫೈಡ್ ಅದಿರಿನ ನಿಕ್ಷೇಪಗಳನ್ನು ವಿದ್ಯುತ್ ಕಾಂತವಿಧಾನಗಳಿಂದ ಕೂಡ ಗುರುತಿಸಬಹುದು. ಪರ್ಯಾಯ ವಿದ್ಯುಚ್ಛಕ್ತಿಯನ್ನು ಖನಿಜ ನಿಕ್ಷೇಪವಿರುವ ಭೂಭಾಗದೊಳಕ್ಕೆ ಕಳುಹಿಸಲಾಗುವುದು. ಅದು ಸುತ್ತ ಮುತ್ತಲ

ಪ್ರದೇಶದಲ್ಲೆಲ್ಲ ವಿದ್ಯುದಲೆಗಳನ್ನು ಪ್ರವಹಿಸುತ್ತದೆ. ಹೀಗಾಗುವುದರಿಂದ ವಿದ್ಯುಚ್ಛಕ್ತಿ ನಾನಾಬಗೆಯ ಶಿಲೆಗಳ ಮೂಲಕವೂ ಖನಿಜಗಳ ಮೂಲಕವೂ ವಿವಿಧ ರೀತಿಯಲ್ಲಿ ಮತ್ತು ವಿವಿಧ ಮೊತ್ತದಲ್ಲಿ ಪ್ರವಹಿಸಿ ಅದಕ್ಕಾಗಿ ಸಿದ್ಧಪಡಿಸಿರುವ ಯಂತ್ರೋಪಕರಣಗಳಲ್ಲಿ ತನ್ನ ಪ್ರಯಾಣ ವೇಗವನ್ನು ಸೂಚಿಸುತ್ತದೆ. ಈ ಅಂಶಗಳನ್ನು ಉಪಯೋಗಿಸಿಕೊಂಡು ನೆಲದಲ್ಲಿ ಹುದುಗಿರುವ ಖನಿಜನಿಕ್ಷೇಪವನ್ನು ಗುರುತಿಸಬಹುದು. ಇದಕ್ಕೆ ಪ್ರಚೋದನ ವಿಧಾನವೆಂದು ಹೆಸರು. ಈಚಿನ ವರ್ಷಗಳಲ್ಲಿ ಈ ವಿಧಾನವನ್ನು ವಿಮಾನಗಳ ಮೂಲಕ ನಡೆಸುವ ವಿದ್ಯುತ್ಕಾಂತ ಅನ್ವೇಷಣೆಗಳಲ್ಲಿ ಬಳಸಲಾಗಿದೆ. ಹೆಲಿಕಾಪ್ಟರಿನಲ್ಲಿ ಪ್ರೇಷಣ ಸುರುಳಿಯೊಂದನ್ನು ವೃತ್ತಾಕಾರದಲ್ಲಿ ಒಯ್ದು ಖನಿಜದಿಂದ ಹೊರಬರುವ ವಿದ್ಯುಚ್ಛಕ್ತಿಯ ತೀವ್ರತೆಯನ್ನು ಅಳೆದು ನಿರ್ಧರಿಸಲಾಗುವುದು. ಈ ಬಗೆಯ ತೀವ್ರತೆ ಖನಿಜದಿಂದ ಖನಿಜಕ್ಕೆ, ಶಿಲೆಯಿಂದ ಶಿಲೆಗೆ ವ್ಯತ್ಯಾಸ ಹೊಂದುತ್ತದೆಂಬುದನ್ನು ಮರೆಯಬಾರದು.

**3. ಭೂಕಂಪನ ವಿಧಾನ:** ಖನಿಜನಿಕ್ಷೇಪಕ್ಕಾಗಿ ಅನ್ವೇಷಣೆ ನಡೆಸುವ ಭೂಭಾಗದಲ್ಲಿ ಸ್ಫೋಟನವನ್ನುಂಟುಮಾಡಿ ಆಗ ಉಂಟಾದ ಕಂಪನಗಳು ಸುತ್ತಮುತ್ತಲ ಶಿಲಾವರ್ಗಗಳಲ್ಲಿ ಹಾದುಹೋಗುವಂತೆ ಮಾಡಲಾಗುವುದು. ಈ ಕಂಪನಗಳು ವಿವಿಧ ಶಿಲೆಗಳಲ್ಲಿ ಒಂದೇ ವೇಗದಲ್ಲಿ ಪ್ರವಹಿಸುವುದಿಲ್ಲ. ಪ್ರವಾಹ ವೇಗ ಒಂದು ಶಿಲೆಯಿಂದ ಮತ್ತೊಂದು ಶಿಲೆಗೆ ವ್ಯತ್ಯಾಸಗೊಳ್ಳುತ್ತದೆ. ಅಲೆಗಳು ಕೇಂದ್ರದಿಂದ ನೇರವಾಗಿ ಪ್ರವಹಿಸದೆ ವಕ್ರಮಾರ್ಗದಲ್ಲಿ ಹಾದು ನೆಲದ ಮೇಲಿರುವ ಭೂಕಂಪಲೇಖಿಯಲ್ಲಿ(ಸೀಸ್ಮೋಗ್ರಾಫ್) ತಮ್ಮ ಪ್ರವಾಹ ವೇಗವನ್ನು ಸೂಚಿಸುತ್ತವೆ. ಸ್ಫೋಟನೆಯುಂಟಾದ ನಿರ್ದಿಷ್ಟ ಕಾಲಯಂತ್ರಕ್ಕೆ ಲಗತ್ತಾಗಿರುವ ಸದಾ ಚಲಿಸುತ್ತಿರುವ ಚಿಕ್ಕ ಪೀಪಾಯಿಯ (ಡ್ರಂ) ಮೇಲಿನ ಫೋಟೋಗ್ರಾಫಿಕ್ ಕಾಗದದ ಮೇಲೆ ಗುರುತಿಸಲ್ಪಡುವುದು. ಹೀಗೆ ಯಂತ್ರವನ್ನು ಮೊದಲ ಕಂಪನ



ಚಿತ್ರ 4 ಭೂಕಂಪ ವಿಧಾನದಿಂದ ನೆಲದೊಳಗಿನ ಶಿಲಾರಚನೆಯನ್ನು ಕಂಡುಹಿಡಿಯುವ ವಿಧಾನ

ಮುಟ್ಟಿದ ಕಾಲವೂ ಗುರುತಿಸಲ್ಪಡುತ್ತದೆ. ಇವುಗಳ ಸಹಾಯದಿಂದ ಖನಿಜನಿಕ್ಷೇಪ ನೆಲದೊಳಗೆ ಹುದುಗಿರುವ ಸ್ಥಳವನ್ನೂ ಅದರ ಗಾತ್ರ ಮತ್ತು ಆಕಾರಗಳನ್ನೂ ನಿರ್ಧರಿಸಬಹುದು. ಈ ವಿಧಾನದ ಮೂಲತತ್ತ್ವವನ್ನು ಚಿತ್ರ (4)ರಲ್ಲಿ ಕಾಣಬಹುದು. ಇವುಗಳಲ್ಲಿ ಪ್ರತಿಫಲನ ವಿಧಾನ ಮತ್ತು ರಿಫ್ರೇಕ್ಷಣ ವಿಧಾನ ಎಂದು ಎರಡು ಬಗೆ. ಪ್ರತಿಫಲನ ವಿಧಾನವನ್ನು ಬಹುಮಟ್ಟಿಗೆ ಪೆಟ್ರೋಲಿಯಂ ಅನ್ವೇಷಣೆಯಲ್ಲಿ ಬಳಸಲಾಗುತ್ತಿದೆ. ಅಲ್ಲದೆ ನೆಲದೊಳಗಿನ ರಚನೆಯನ್ನು ನಿರ್ಧರಿಸಲು ಸಹ ಈ ವಿಧಾನ ಹೆಚ್ಚು ಉಪಯೋಗಕರವಾದುದು. ರಿಫ್ರೇಕ್ಷಣ ವಿಧಾನ ನೆಲಭಾಗದಲ್ಲಿಯ ಶಿಲಾಪದರಗಳ ಮಂದವನ್ನು ಅಳತೆ ಮಾಡುವುದರಲ್ಲೂ ಸಾಗರಗಳ ಆಳದ ನಿರ್ಧಾರದಲ್ಲೂ ಶೀತವಲಯದಲ್ಲಿರುವ ನೀರ್ಗಲ್ಲಿನ ಹಾಳೆಗಳ ಹರವು ಮತ್ತು ಮಂದವನ್ನು ಗೊತ್ತುಪಡಿಸುವುದಕ್ಕೂ ಬಹು ಉಪಯುಕ್ತವಾದುದು.

**4. ಗುರುತ್ವಾಕರ್ಷಣ ವಿಧಾನ:** ಭೂಮಿಯ ವಿವಿಧ ಭಾಗಗಳಲ್ಲಿ ಗುರುತ್ವ ಬಲವನ್ನು ಅಳತೆ ಮಾಡಿದಲ್ಲಿ ಹಲವಾರು ಏರುಪೇರುಗಳು ಕಂಡುಬರುತ್ತವೆ. ಇವು ಮುಖ್ಯವಾಗಿ ಅಕ್ಷಾಂಶವನ್ನೂ ಭೂಮಿಯ ಮೇಲ್ಮೈ ಲಕ್ಷಣವನ್ನೂ ನೆಲಭಾಗದ ಸಂಯೋಜನೆಯನ್ನೂ ಅನುಸರಿಸಿವೆ. ಇದೇ ಅಲ್ಲದೆ ಭೂಭಾಗದ ಉತ್ತಳ ಪ್ರದೇಶಗಳಲ್ಲಿ ಹುದುಗಿರುವ ವಿವಿಧ




ಚಿತ್ರ 5 ಭೂಭಾಗದಲ್ಲಿ ಹುದುಗಿರುವ ನಿಕ್ಷೇಪಗಳನ್ನು ಗುರುತ್ವಾಕರ್ಷಣ ವಿಧಾನದಿಂದ ಗುರುತಿಸುವ ರೀತಿ

ಸಾಂದ್ರತೆಯುಳ್ಳ ಶಿಲೆಗಳ ಹರವಿನಲ್ಲಿಯ ಏರುಪೇರುಗಳಿಂದ ಸಹ ಗುರುತ್ವ ಬಲದಲ್ಲಿ ವ್ಯತ್ಯಾಸಗಳು ತೋರಿಬರುತ್ತವೆ. ಈ ಅಂಶಗಳನ್ನು ಉಪಯೋಗಿಸಿಕೊಂಡು ನೆಲದಲ್ಲಿ ಹುದುಗಿರುವ ಶಿಲೆಗಳಿಗೆ ಸಂಬಂಧಿಸಿದ ಅಂಶಗಳನ್ನೂ ಅವು ಹರಡಿರುವ ರೀತಿಯನ್ನೂ ಗ್ರಹಿಸಲು ಸಾಧ್ಯ. ಶಿಲೆಗಳು ಮಡಿಕೆ ಬಿದ್ದಾಗ ಹೆಚ್ಚು ಸಾಂದ್ರತೆಯನ್ನು ಪಡೆದಿರುವ ಶಿಲೆಗಳು ಮೇಲಕ್ಕೆ ಒಯ್ಯಲ್ಪಡುವುದೂ ಉಂಟು. ಅಂತೆಯೇ ಹಗುರವಾದ (ಕಡಿಮೆ ಸಾಂದ್ರತೆಯುಳ್ಳ) ಶಿಲೆಗಳು ಹೆಚ್ಚಿನ ಆಳಕ್ಕೆ ನೂಕಲ್ಪಡುತ್ತವೆ. ಲವಣಗುಮ್ಮಟ (ಸಾಲ್ಟ್ ಡೋಂ) ಅಥವಾ ಜ್ವಾಲಾಮುಖಿ ಅಡಚಣೆಗಳಿರುವ (ವಾಲ್ಕ್ಯಾನಿಕ್ ಪ್ಲಗ್ಸ್) ಪ್ರದೇಶಗಳಲ್ಲಿ ಸಹ ಗುರುತ್ವ ಬಲದಲ್ಲಿ ಏರುಪೇರುಗಳನ್ನು ಕಾಣಬಹುದು. ಶಿಲಾಪ್ರಸ್ತರಗಳಲ್ಲಿ ಬಿರುಕಾಗಲೀ ಭಂಗವಾಗಲೀ ಉಂಟಾದಾಗ ಆ ಸನ್ನಿವೇಶದಲ್ಲಿ ವಿವಿಧ ಸಾಂದ್ರತೆಗಳ ಶಿಲೆಗಳು ಒಂದರ ಪಕ್ಕಕ್ಕೊಂದು ಸರಿದು ನಿಲ್ಲುತ್ತದೆ. ಗುರುತ್ವಮಾಪಿ ಇಲ್ಲವೇ ಗ್ರ್ಯಾವಿಮೀಟರ್ ಮೊದಲಾದ ಉಪಕರಣಗಳ ಸಹಾಯದಿಂದ ಒಂದು ಭೂಭಾಗದ ನಿರ್ದಿಷ್ಟ ಕೇಂದ್ರಗಳಲ್ಲಿ ಗುರುತ್ವ ಬಲವನ್ನು ಅಳೆಯಲಾಗುವುದು. ಈ ಅಂಕಿ-ಅಂಶಗಳನ್ನು ಉಪಯೋಗಿಸಿಕೊಂಡು ಆ ಪ್ರದೇಶಕ್ಕೆ ಸಂಬಂಧಿಸಿದಂತೆ ನಕ್ಷೆಗಳನ್ನು ತಯಾರಿಸಲಾಗುವುದು. ಇವುಗಳ ಅಧ್ಯಯನದಿಂದ ಆ ಭೂಭಾಗದಲ್ಲಿ ಹುದುಗಿರುವ ಖನಿಜ ನಿಕ್ಷೇಪಗಳ ವಿಷಯವಾಗಿ ಹೆಚ್ಚು ಅಂಶಗಳನ್ನು ಗ್ರಹಿಸಲಾಗುವುದು. ಗುರುತ್ವ ಬಲವನ್ನು ಮಿಲಿಗಾಲುಗಳಲ್ಲಿ ವಿವರಿಸಲಾಗುವುದು. ಒಂದು ಮಿಲಿಗಾಲ್ ಅಂದರೆ ಭೂಮಿಯ ಸಾಮಾನ್ಯ ಗುರುತ್ವ ಬಲದ ಮಿಲಿಯನ್ ವಿಭಾಗಗಳಲ್ಲಿ ಒಂದಂಶ.

ಭೂಶೋಧನೆಗಳಿಗೆ ಸಂಬಂಧಿಸಿದ ಗುರುತ್ವ ಅಸಂಗತಿಗಳು ಸಾಮಾನ್ಯವಾಗಿ ಗಾತ್ರದಲ್ಲಿ 10 ಮಿಲಿಗಾಲುಗಳಿಗಿಂತ ಹೆಚ್ಚಾಗಿರಲಾರದು.

**ಪರಮಾಣ್ವಕ ಖನಿಜಗಳು:** ವಿಕಿರಣಪಟು ಖನಿಜಗಳು ಆಲ್ಫ, ಬೀಟ ಮತ್ತು ಗ್ಯಾಮ ಕಿರಣಗಳನ್ನು ಹೊರಸೂಸುತ್ತವೆ. ಇವುಗಳಲ್ಲಿ ಗ್ಯಾಮ ಕಿರಣಗಳು ಪರಮಾಣ್ವಕ ಖನಿಜ ಇರುವುದೆಂಬುದನ್ನು ಪತ್ತೆ ಹಚ್ಚಲು ಬಹು ಉತ್ತಮ ಸಾಧನ. ಇವುಗಳ ಸಹಾಯದಿಂದ ಶಿಲೆಯಲ್ಲಿ ಹುದುಗಿರುವ ಖನಿಜವನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಈ ಬಗೆಯ ಅನ್ವೇಷಣೆಯಲ್ಲಿ ಬಳಸುವ ಆಧುನಿಕ ಯಂತ್ರೋಪಕರಣಗಳಲ್ಲಿ ಅತಿ ಸೂಕ್ಷ್ಮಸಾಧನಗಳಾದ ವಿದ್ಯುದ್ವಾಹಿಕಣ ಪರಿವರ್ತನ ಕೋಶ, ಗೀಗರ್ ಮುಲ್ಲರ್ ಗುಣಕ ಮುಂತಾದವು ಅಡಕವಾಗಿದ್ದು, ಗ್ಯಾಮ ಕಿರಣಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿದೆ. ಈ ಪ್ರಯೋಗಗಳನ್ನು ನೆಲದ ಮೇಲಾಗಲೀ, ನೀರಿನಲ್ಲಾಗಲೀ, ಭೂರಂಧ್ರಗಳಲ್ಲಾಗಲೀ ಪ್ರಯೋಗ ಶಾಲೆಯಲ್ಲೇ ಶಿಲೆ ಅಥವಾ ಮಣ್ಣಿನ ಮಾದರಿಗಳ ಮೇಲಾಗಲೀ ಪ್ರಯೋಗಿಸಬಹುದು.

ಒಟ್ಟಿನಲ್ಲಿ ಭೂಭೌತವಿಜ್ಞಾನದ ಅನ್ವೇಷಣಾ ವಿಧಾನಗಳು ಗಣಿಗಳನ್ನು ರೂಢಿಸುವುದರಲ್ಲಿ, ಖನಿಜ ನಿಕ್ಷೇಪಗಳು ಹುದುಗಿರುವ ಸ್ಥಳವನ್ನು ನಿರ್ದೇಶಿಸುವುದರಲ್ಲಿ ಭೂಮಿಯ ಒಳಗಿನ ಶಿಲಾವಿನ್ಯಾಸವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ, ವಿವಿಧ ಶಿಲಾ ನಿಕ್ಷೇಪಗಳಿಗಿರುವ ಸಂಬಂಧವನ್ನು ಗುರುತಿಸುವುದರಲ್ಲಿ ಬಹು ಉಪಯುಕ್ತವಾದ ಪಾತ್ರವನ್ನು ವಹಿಸುತ್ತವೆ. ಹೀಗೆ ಖನಿಜಾನ್ವೇಷಣ ಒಂದು ದೇಶದ ಹಿರಣ್ಯಗರ್ಭವನ್ನು ರೂಢಿಸಿಕೊಳ್ಳುವುದರಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಅನ್ವೇಷಣ ಮಾರ್ಗಗಳನ್ನು ಆಧುನಿಕವಾಗಿ ಸುಧಾರಿಸಿದ ಹೊರತು ಆಳದಲ್ಲಿ ಹುದುಗಿರುವ ಪ್ರಕೃತಿಯ ಅತುಲೈಶ್ವರ್ಯ ನಮಗೆ ದಕ್ಕಲಾರದು. (ಎಮ್.ಎಸ್.ಎಸ್.)

**ಖನಿನೇತ್ರ :** ಒಬ್ಬ ರಾಜ. ಸೂರ್ಯವಂಶದ ಇಕ್ಷ್ವಾಕು ಸಂತತಿಯ ವಿವಿಂತನ ಮಗ. ಒಮ್ಮೆ ಪುತ್ರಪ್ರಾಪ್ತಿಗಾಗಿ ಪಿತೃದೇವತೆಗಳಿಗೆ ಮಾಂಸಾಹಾರದಿಂದ ಶ್ರಾದ್ಧ ಮಾಡಲು ಯೋಚಿಸಿ ಮಾಂಸವನ್ನು ತರಲು ಅರಣ್ಯಕ್ಕೆ ಹೋದ. ಅಲ್ಲಿ ಒಂದು ಜಿಂಕೆ ಈತನ ಮುಂದೆ ನಿಂತು 'ನನಗೆ ಮಕ್ಕಳಿಲ್ಲ ಈ ದುಃಖವನ್ನು ಸಹಿಸಲಾರೆ, ನನ್ನನ್ನು ಕೊಲ್ಲು' ಎಂದಿತು. ಮತ್ತೊಂದು ಜಿಂಕೆ ಬಂದು 'ನನಗೆ ಅಪಾರ ಮಕ್ಕಳಿವೆ, ಎಲ್ಲಿ ಯಾವಾಗ ಅವನ್ನು ಕ್ರೂರ ಜಂತುಗಳು ಹಿಡಿಯುವುವೋ ಎಂದು ಹೆದರುತ್ತಿದ್ದೇನೆ, ನನ್ನನ್ನು ಕೊಲ್ಲು' ಎಂದಿತು. ಹೀಗೆ ಜಿಂಕೆಗಳ ಆ ಮಾತುಗಳನ್ನು ಕೇಳಿ ಅವನ್ನು ಕೊಲ್ಲಲಾರದೆ ಹಿಂತಿರುಗಿ, ತಪಸ್ಸು ಮಾಡಿ ಮಕ್ಕಳನ್ನು ಪಡೆದ. ಪ್ರಜಾನುರಾಗವನ್ನು ಕಳೆದುಕೊಂಡ ಖನಿನೇತ್ರನನ್ನು ಪ್ರಜೆಗಳು ಗಾದಿಯಿಂದಿಳಿಸಿ ಅವನ ಮಗನಾದ ಕರಂದಮನಿಗೆ ಪಟ್ಟಗಟ್ಟಿದರು. ಇವನ ವಿಚಾರ ಮಾರ್ಕಂಡೇಯ ಪುರಾಣದಲ್ಲಿದೆ. *

**ಖನ್ವಾ ಕದನ :** ಆಗ್ರದ ಪಶ್ಚಿಮಕ್ಕೆ ಇರುವ ಖನ್ವಾ ಎಂಬ ಹಳ್ಳಿಯ ಬಳಿ 1527ರಲ್ಲಿ ಮೊಗಲ್ ರಾಜ್ಯಸ್ಥಾಪಕ ಬಾಬರನಿಗೂ ರಜಪೂತ ವೀರ ರಾಣಾಸಂಗ್ರಾಮಸಿಂಹನಿಗೂ ನಡುವೆ ನಡೆದ ಘೋರಸಂಗ್ರಾಮ. ಹಿಂದೂಸ್ಥಾನದ ಮೇಲೆ ನಡೆಸಿದ ಮೊದಲ ಕದನದಲ್ಲಿ ದೆಹಲಿಯ ಸುಲ್ತಾನ ಇಬ್ರಾಹಿಂ ಲೋದಿಯನ್ನು ಸೋಲಿಸಿ ಅನಂತರ ಆಗ್ರ ಬಳಿ ನೆಲಸಿದ ಬಾಬರ್ ತನ್ನ ಅಧಿಕಾರವನ್ನು ನೆಲೆಗೊಳಿಸಲು ರಜಪೂತರನ್ನೆದುರಿಸಬೇಕಾಯಿತು. ಮಾರ್ವಾಡ, ಅಂಬರ್, ಗ್ವಾಲಿಯರ್, ಅಜ್ಮೀರ್, ಚಾಂದೇರಿ ರಾಜ್ಯಗಳ ಸೈನ್ಯಗಳ ನಾಯಕತ್ವ ವಹಿಸಿದ ಸಂಗ್ರಾಮಸಿಂಹನ ಅಪಾರ ಸೈನ್ಯ ಬಾಬರನ ಸೈನ್ಯವನ್ನೆದುರಿಸಿತು. ಹಿಂದೂಸ್ಥಾನದಲ್ಲಿ ತನ್ನ ಅಳಿವು–ಉಳಿವಿನ ಪ್ರಶ್ನೆಯನ್ನು ನಿರ್ಣಯಿಸುವ ಸಂಗ್ರಾಮವಿದೆಂದು ತಿಳಿದುಕೊಂಡ ಬಾಬರ್ ತನ್ನ ಸೈನಿಕರಿಗೆ ಇದು ಧರ್ಮಯುದ್ಧವೆಂದು ಹೇಳಿ ಪ್ರಾಣದ ಹಂಗು ತೊರೆದು ಹೋರಾಡುವಂತೆ ಕುರಾನಿನ ಮೇಲೆ ಆಣೆಯಿಟ್ಟು ಹುರಿದುಂಬಿಸಿದ. ಮೊಗಲ್ ಸೈನ್ಯಕ್ಕೆ ಜಯ ದೊರಕಿತು. ಉತ್ತರ ಭಾರತದಲ್ಲಿ ಮೊಗಲ್ ಅಧಿಕಾರ ಸ್ಥಿರವಾಯಿತು. ಯುದ್ಧರಂಗದಿಂದ ಸ್ನೇಹಿತರ ಸಹಾಯದಿಂದ ತಪ್ಪಿಸಿಕೊಂಡ ರಾಣಾ ಸಂಗ್ರಾಮಸಿಂಹ ಎರಡು ವರ್ಷಗಳ ತರುವಾಯ ಮೃತನಾದ. (ಎಚ್.ಆರ್.ಡಿ.)

**ಖಪ್ರಜೀರುಂಡೆ :** ಇನ್‌ಸೆಕ್ಟ ವರ್ಗದ ಕೋಲಿಯಾಪ್ಟರ ಗಣದ ಡರ್ಮಸ್ಟಿಡೀ ಕುಟುಂಬಕ್ಕೆ ಸೇರಿದ ಕೀಟ. ವೈಜ್ಞಾನಿಕ ಹೆಸರು *ಟ್ರೋಗೊಡರ್ಮ ಗ್ರನೇರಿಯಮ್*. ಭಾರತದ ಧಾನ್ಯಾಗಾರಗಳಲ್ಲಿ ಕಾಣಿಸಿಕೊಳ್ಳುವ ಮುಖ್ಯ ಕೀಟ ಭಾರತದ ಎಲ್ಲ ಪ್ರದೇಶಗಳಲ್ಲಿ ಇದೆಯಾದರೂ ಕಡಲತೀರ ಪ್ರದೇಶಗಳಿಗೆ ಹೋಲಿಸಿದರೆ ಒಳನಾಡಿನಲ್ಲಿ ಇದರ ಹಾವಳಿ ಹೆಚ್ಚು. ಇದರ ವಿಚಿತ್ರ ಲಕ್ಷಣವೆಂದರೆ ಬೇರೆ ಬಗೆಯ ಜೀರುಂಡೆಗಳಂತಲ್ಲದೆ ಇದರ ಪ್ರೌಢಾವಸ್ಥೆಯಲ್ಲಿ ಇವು ನಿರಪಾಯಕಾರಿ. ಡಿಂಬ ಮಾತ್ರ ಧಾನ್ಯವನ್ನು ನಾಶಪಡಿಸುತ್ತದೆ. ಪ್ರೌಢಾವಸ್ಥೆಯ ಜೀರುಂಡೆ ಅಂಡಾಕಾರದ ಮತ್ತು ಕೆಂಪು ಮಿಶ್ರಿತ ಕಂದುಬಣ್ಣದ ಇಲ್ಲವೆ ಕಪ್ಪುಬಣ್ಣದ ಕೀಟ. ರೆಕ್ಕೆಗಳ ಮೇಲೆ ಮಸುಕಾದ ಗುರುತುಗಳಿವೆ. ಹೆಣ್ಣುಜೀರುಂಡೆ ಗಂಡಿಗಿಂತ ದೊಡ್ಡದು; ಸುಮಾರು 2.5 ಮಿ.ಮೀ. ಉದ್ದ ಇರುತ್ತದೆ. ಖಪ್ರ ಜೀರುಂಡೆ ಸುಮಾರು 125 ಮೊಟ್ಟೆಗಳನ್ನಿಡುತ್ತದೆ. ಇವು ಒಡೆದು ಬಹುರೋಮಮಯವಾದ ಡಿಂಬಗಳು ಹೊರಬರುತ್ತವೆ. ಡಿಂಬಗಳ ಕೂದಲಿನ ಬಣ್ಣ ಕಂದು. ಕೂದಲುಗಳು ದೇಹದ ಮೇಲೆಲ್ಲ ಅಲ್ಲಲ್ಲಿ ಕುಚ್ಚುಗಟ್ಟಿರುತ್ತವಲ್ಲದೆ ದೇಹದ ಹಿಂತುದಿಯಲ್ಲಿ ಒಂದು ರೀತಿಯ ಬಾಲದಂತಹ ಅಂಗವನ್ನು ಹೊಂದಿದೆ. ಕಾಲಕಾಲಕ್ಕೆ ಡಿಂಬಗಳು ಪೊರೆ ಕಳಚುತ್ತವೆ. ಹೀಗೆ ತ್ಯಜಿಸಲ್ಪಟ್ಟ ಪೊರೆಗಳಿಂದ ಜೀರುಂಡೆಯನ್ನು ಪತ್ತೆ ಹಚ್ಚಬಹುದು. ಅಲ್ಲದೆ ಇವುಗಳ ಸಂಖ್ಯೆ ಹೆಚ್ಚಾದಾಗ ಡಿಂಬಗಳು ಉಗ್ರಾಣಗಳ ಗೋಡೆಯ ಮೇಲೆ ಹರಿದುಹೋಗುವುದನ್ನು ಗಮನಿಸಬಹುದು. ಡಿಂಬಗಳು ಯಾವ ಬಗೆಯ ಕೀಟನಾಶಕಕ್ಕಾಗಲಿ, ಹೆಚ್ಚಿನ ಉಷ್ಣತೆ ಆರ್ದ್ರತೆಗಳಿಗಾಗಲೀ ಬಗ್ಗುವುದಿಲ್ಲ. ಅಲ್ಲದೆ ಹಲವಾರು ತಿಂಗಳುಗಳು ಆಹಾರವಿಲ್ಲದೆ ಇರಬಲ್ಲವು. ಹೀಗಾಗಿ ಇವುಗಳ ನಿವಾರಣೆ ಕಷ್ಟಸಾಧ್ಯ. ಆದರೆ ಡಿಂಬಾವಸ್ಥೆಯಿಂದ ಕೋಶಾವಸ್ಥೆಯನ್ನು ಸೇರುವ ಸಮಯದಲ್ಲಿ ಇವುಗಳ ನಿರೋಧಶಕ್ತಿ ಅಳಿದು ಹೋಗುತ್ತದೆ. ಈ ಹಂತದಲ್ಲಿ ಇವನ್ನು ನಿವಾರಿಸಬಹುದು. 1–3 ವಾರಗಳ ಕೋಶಾವಸ್ಥೆಯ ಅನಂತರ ಡಿಂಬಗಳು ಪ್ರೌಢ ಜೀರುಂಡೆಗಳಾಗುತ್ತವೆ. ಡಿಂಬಗಳು ಧಾನ್ಯಗಳ ಮೊಳಕೆ ಭಾಗವನ್ನು ತಿನ್ನುವುದೇ ಹೆಚ್ಚು. ಆದ್ದರಿಂದ ಧಾನ್ಯದ ಆಹಾರಾಂಶವೇನೂ ಕಡಿಮೆಯಾಗದಾದರೂ ಕಾಳು ಬಿತ್ತುವುದಕ್ಕೆ ಅನುಪಯುಕ್ತವಾಗುತ್ತದೆ. ಬೇರೆ ಜೀರುಂಡೆಗಳಿಗೆ ಹೋಲಿಸಿದರೆ ಖಪ್ರಜೀರುಂಡೆಯ ಹತೋಟಿ ಕಷ್ಟವಾದರೂ ಉಗ್ರಾಣದಲ್ಲಿಯ ಆಕ್ಸಿಜನ್ ಪ್ರಮಾಣವನ್ನು ಕಡಿಮೆ ಮಾಡುವುದರಿಂದ ಇದನ್ನು ನಾಶಪಡಿಸಬಹುದು. (ಡಿ.ಎಸ್.)

**ಖಭೌತವಿಜ್ಞಾನ :** ವಿಶ್ವದಲ್ಲಿ ಜರಗುವ ಭೌತಕ್ರಿಯೆಗಳನ್ನು ಭೌತವಿಜ್ಞಾನದ ನಿಯಮಗಳ ನೆರವಿನಿಂದ ಅಭ್ಯಸಿಸಿ ವಿವರಿಸುವ ವಿಜ್ಞಾನ (ಆಸ್ಟ್ರೋಫಿಸಿಕ್ಸ್). ಅಭಿಜಾತ ಖಗೋಳವಿಜ್ಞಾನವಾದರೋ ಆಕಾಶಕಾಯಗಳ ಸ್ಥಾನ, ಚಲನೆ, ದೂರ, ರೂಪ, ಗಾತ್ರ ಮತ್ತು ದ್ರವ್ಯರಾಶಿಗಳನ್ನು ಕುರಿತ ಅಭ್ಯಾಸ. ಆದರೆ ಇವೆರಡೂ ಪರಸ್ಪರಾವಲಂಬಿಗಳಾಗಿರುವುದರಿಂದ ಖಭೌತವಿಜ್ಞಾನ ಮತ್ತು ಖಗೋಳವಿಜ್ಞಾನಗಳ ನಡುವಿನ ವ್ಯತ್ಯಾಸ ತೀರ ಮಸಕಾಗಿದೆ. ಆಕಾಶಕಾಯಗಳು ಉತ್ಸರ್ಜಿಸುವ ವಿವರಣೆಯ ಲಕ್ಷಣಗಳನ್ನು ಅರಿಯುವುದು ವೀಕ್ಷಣ ಖಭೌತವಿಜ್ಞಾನದ ವ್ಯಾಪ್ತಿ. ವಿಜ್ಞಾನಗಳಲ್ಲಿರುವಂಥ ನಿಯಂತ್ರಿತ ಪ್ರಾಯೋಗಿಕರಣದ ನಿರ್ಣಾಯಕ ಸೌಕರ್ಯ ಇತರ ಖಭೌತವಿಜ್ಞಾನಕ್ಕೆ ಇಲ್ಲ. ನಕ್ಷತ್ರಗಳೇ ಮೊದಲಾದ ನೈಜ ಆಕಾಶಕಾಯಗಳನ್ನು ಅನುಕರಿಸುವಂಥ ಮಾದರಿಗಳನ್ನು ರಚಿಸಿ ಅವು ವೀಕ್ಷಿತವರದಿಗಳನ್ನು ಅತ್ಯುತ್ತಮವಾಗಿ ಪ್ರತಿನಿಧಿಸುವವರೆಗೂ ಅವನ್ನು ಪರಿಷ್ಕರಿಸುವುದರ ಮೂಲಕ ಸೈದ್ಧಾಂತಿಕ ಖಭೌತವಿಜ್ಞಾನಿಗಳು ಈ ತೊಡಕನ್ನು ಎದುರಿಸುತ್ತಿದ್ದಾರೆ.

ಖಭೌತವಿಜ್ಞಾನದ ವ್ಯಾಪ್ತಿ ಬಲು ವಿಶಾಲವಾಗಿದೆ. ಇದನ್ನು ಈ ಮುಂದಿನ ಯೋಜನೆಯ ಅನುಸಾರ ಅಭ್ಯಸಿಸಬಹುದು:

1 ವೀಕ್ಷಣಖಭೌತವಿಜ್ಞಾನ

2 ಸೂರ್ಯ ಮತ್ತು ಸೌರವ್ಯೂಹ

3 ನಾಕ್ಷತ್ರಿಕ ವಾಯುಮಂಡಲ

4 ನಕ್ಷತ್ರಗಳ ಸ್ವರೂಪ ಮತ್ತು ವಿಕಾಸ

5 ಅಂತರನಾಕ್ಷತ್ರಿಕ ಮಾಧ್ಯಮ

6 ಪಲ್ಸಾರುಗಳು

7 ಬ್ರಹ್ಮಾಂಡಗಳು (ಗ್ಯಾಲಕ್ಸೀಸ್)

8 ಅರೆನಕ್ಷತ್ರ ಕಾಯಗಳು (ಕ್ವೇಸಿ ಸ್ಟೆಲ್ಲಾರ್ ಅಬ್ಜೆಕ್ಟ್ಸ್)

**1 ವೀಕ್ಷಣ ಖಭೌತವಿಜ್ಞಾನ:** ರಾತ್ರಿಯ ಆಕಾಶದಲ್ಲಿ ಕಾಣುವ ನಕ್ಷತ್ರಗಳ ಅಥವಾ ನಕ್ಷತ್ರಸದೃಶ ವಸ್ತುಗಳ ಸಂಖ್ಯೆ ಅಗಣನೀಯವಾಗಿದೆ. ಬರಿಗಣ್ಣಿನಿಂದ ಒಬ್ಬ ಮನುಷ್ಯ ಸುಮಾರು 5,000 ನಕ್ಷತ್ರಗಳನ್ನು ನೋಡಬಲ್ಲ; ಆದರೆ ಒಮ್ಮೆಗೆ ಸುಮಾರು 2,000 ಮಾತ್ರ. ಬೈನಾಕ್ಯುಲರ್ ಇಲ್ಲವೆ ಟೆಲಿಸ್ಕೋಪಿನ ನೆರವಿನಿಂದ ಅದೆಷ್ಟೋ ಹೆಚ್ಚು ಸಂಖ್ಯೆಯ ನಕ್ಷತ್ರಗಳನ್ನು ನೋಡಬಹುದು. ಟೆಲಿಸ್ಕೋಪಿನ ಲಂಬನ ಸಾಮರ್ಥ್ಯವನ್ನು ಅವಲಂಬಿಸಿ ಈ ಸಂಖ್ಯೆ ಇದೆ. ನಕ್ಷತ್ರಗಳನ್ನೂ ಇತರ ಆಕಾಶಕಾಯಗಳನ್ನೂ ಕಾಣುವುದು ಅವುಗಳಿಂದ ವಿಸರಿತವಾಗಿ ನಮ್ಮೆಡೆಗೆ ಬರುವ ಬೆಳಕಿನ ಮೂಲಕ. ಈ ಬೆಳಕು ವಾಸ್ತವಿಕವಾಗಿ ವಿದ್ಯುತ್ಕಾಂತರೋಹಿತದ ಬಲು ಕಿರಿಯ ಅಂಶಮಾತ್ರ. ಸಮಗ್ರ ವಿದ್ಯುತ್ಕಾಂತ ರೋಹಿತ ರೇಡಿಯೋ ಅಲೆಗಳು, ಸೂಕ್ಷ್ಮ ಅಲೆಗಳು, ಅತಿರಕ್ತ ಕಿರಣಗಳು, ದೃಗ್ಗೋಚರ ಬೆಳಕು, ಅತಿನೇರಿಳೆ ಕಿರಣಗಳು, ಎಕ್ಸ್‌ಕಿರಣಗಳು ಹಾಗೂ ಗ್ಯಾಮ ಕಿರಣಗಳು–ಇವನ್ನು ಒಳಗೊಂಡಿದೆ. ವಿಸರಣೆಯ ಈ ಒಂದೊಂದೂ ಪ್ರರೂಪಗಳ ನಡುವಿನ ವ್ಯತ್ಯಾಸ ಇರುವುದು ಅವುಗಳ ಅಲೆಯುದ್ದದಲ್ಲಿ (ವೇವ್‌ಲೆಂತ್). ರೇಡಿಯೋ ಅಲೆಗಳ ಅಲೆಯುದ್ದ ದೃಗ್ಗೋಚರ ಬೆಳಕಿನ ಅಲೆಯುದ್ದಕ್ಕಿಂತ ಹೆಚ್ಚು ಇದೆ. ಬೆಳಕಿನ ಅಲೆಯುದ್ದವಾದರೋ ಎಕ್ಸ್‌ಕಿರಣಗಳ ಅಲೆಯುದ್ದಕ್ಕಿಂತ ಹೆಚ್ಚು. ಬೇರೆ ಬೇರೆ ತರಹದ ಶೋಧಕಗಳನ್ನು (ಡಿಟೆಕ್ಟರ್ಸ್) ಉಪಯೋಗಿಸಿ ಸಮಗ್ರ ವಿದ್ಯುತ್ಕಾಂತರೋಹಿತದ ಉದ್ದಕ್ಕೂ ವಿಸರಣೆಯನ್ನು ಗುರುತಿಸಬಹುದು. ಆದರೆ ಅತಿರಕ್ತ, ಅತಿನೇರಿಳೆ, ಎಕ್ಸ್ ಮತ್ತು ಗ್ಯಾಮ ಕಿರಣಗಳನ್ನು ಭೂವಾಯುಮಂಡಲ ಅವಶೋಷಿಸುವುದರಿಂದ (ಅಬ್‌ಸಾರ್ಪ್‌ಷನ್) ಇವನ್ನು ಕುರಿತ ವೀಕ್ಷಣೆಗಳನ್ನು ನೆಲದಲ್ಲಿ ನಿಂತು ಮಾಡಲಾಗುವುದಿಲ್ಲ.

ನೆಲಮಟ್ಟದಿಂದ ಅದೆಷ್ಟೋ ಎತ್ತರದಲ್ಲಿ ಮಾಡಬೇಕಾಗುತ್ತದೆ. ಇದಕ್ಕಾಗಿ ಬಲೂನುಗಳನ್ನೋ ಕ್ಷಿಪಣಿಗಳನದನೋ ಕೃತಕ ಉಪಗ್ರಹಗಳನ್ನೋ ಬಳಸುತ್ತಾರೆ. ಆಕಾಶವನ್ನು ದೃಗ್ಗೋಚರ ಬೆಳಕಿನ ಮೂಲಕ ನೋಡಿ ನಾವು ಚಿತ್ರಿಸಿಕೊಂಡಿರುವ ಕಾಯಗಳ ವಿತರಣೆ ಅತಿನೇರಿಳೆ ಅಥವಾ ಅತಿರಕ್ತ ವಿಸರಣೆಯ ಮೂಲಕ ನೋಡುವಾಗ ಗಮನಾರ್ಹವಾಗಿ ವ್ಯತ್ಯಾಸಗೊಂಡಿರುವುದು

ನಾವು ವೀಕ್ಷಿಸುವ ನಕ್ಷತ್ರಗಳು ಅವುಗಳ ಪ್ರಕಾಶದಲ್ಲಿ (ಬ್ರೈಟ್‌ನೆಸ್) ಭಿನ್ನವಾಗಿವೆ. ಇದರ ಕಾರಣ ಎರಡು–ಕೆಲವು ನಕ್ಷತ್ರಗಳು ಇತರ ನಕ್ಷತ್ರಗಳಿಗಿಂತ ಸಹಜವಾಗಿ ಅಧಿಕ ಪ್ರಕಾಶಯುತವಾಗಿವೆ; ಇನ್ನು ಕೆಲವು ನಕ್ಷತ್ರಗಳು ಇತರ ನಕ್ಷತ್ರಗಳಿಗಿಂತ ನಮಗೆ ತೀರ ಸಮೀಪದಲ್ಲಿವೆ. ಕೆಲವು ನಕ್ಷತ್ರಗಳು ಮಸಕಾಗಿಯೋ (ಮತ್ತು ಕೆಂಪಾಗಿ ಕೂಡ) ಕಾಣಬಹುದು. ಅವುಗಳ ಬೆಳಕಿನ ಒಂದಂಶವನ್ನು ವೀಕ್ಷಕನಿಗೂ ನಕ್ಷತ್ರಕ್ಕೂ ನಡುವಿನ ದ್ರವ್ಯ ಹೀರಿಕೊಳ್ಳುವುದೇ ಇದರ ಕಾರಣ. ನಮ್ಮ ಅತಿ ಸಮೀಪದ ನಕ್ಷತ್ರವಾದ ಸೂರ್ಯನ ಕಾಂತಿ (ಲ್ಯೂಮಿನಾಸಿಟಿ, ಅಂದರೆ ಏಕಮಾನಕಾಲದಲ್ಲಿ ಉತ್ಸರ್ಜಿಸಿದ ಸಮಗ್ರಶಕ್ತಿ) ಒಂದು ಏಕಮಾನವೆಂದು ಭಾವಿಸಿದರೆ ಆಗ ಸೂರ್ಯನಿಗಿಂತ ಕೋಟ್ಯಂತರ ಪಟ್ಟು ಪ್ರಕಾಶದ ಹಾಗೂ ಕೋಟ್ಯಂತರ ಪಟ್ಟು ಮಸಕಿನ ನಕ್ಷತ್ರಗಳಿವೆ ಎನ್ನಬಹುದು. ನಾವು ವೀಕ್ಷಿಸುತ್ತಿರುವ ಒಂದು ನಕ್ಷತ್ರದ ವಿಸರಣೆ ಸ್ಥಿರವಾಗಿರಬಹುದು ಅಥವಾ ಬದಲಾಗುತ್ತಿರಬಹುದು. ವಿಸರಣೆಯಲ್ಲಿಯ ಬದಲಾವಣೆ ಅವಧಿಯುತ (ಪೀರಿಯಾಡಿಕ್), ಯಾದೃಚ್ಛಿಕ ಅಥವಾ ಹಠಾತ್ ಆಗಿರಬಹುದು. ಇವುಗಳ ಪರಿಶೀಲನೆಯಿಂದ ಸೂಚಿತವಾಗುವ ಅಂಶಗಳಿವು: (1) ಒಂದು ನಕ್ಷತ್ರ ನೈಜ ಚಂಚಲ (ಇನ್‌ಟ್ರಿನ್ಸಿಕ್ ವೇರಿಯೆಬಲ್) ಅಥವಾ ಸ್ಪಂದಿಸುವ (ಪಲ್ಸೇಟಿಂಗ್) ನಕ್ಷತ್ರವಾಗಿರಬಹುದು, (2) ಈ ನಕ್ಷತ್ರ ಒಂದು ಯಮಳ ನಕ್ಷತ್ರ ವ್ಯವಸ್ಥೆಯ (ಡಬಲ್ ಸ್ಟಾರ್ ಸಿಸ್ಟಂ)–ಅಲ್ಲಿ ಒಂದು ನಕ್ಷತ್ರ ಇನ್ನೊಂದು ನಕ್ಷತ್ರ ಸುತ್ತ ಚಲಿಸುತ್ತಿರುವುದು–ಸದಸ್ಯನಾಗಿದ್ದು ಆ ವ್ಯವಸ್ಥೆಯ ಜ್ಯಾಮಿತೀಯ ಪರಿಣಾಮ ನಮಗೆ ವೇದ್ಯವಾಗುವುದಾಗಿರಬಹುದು. (3) ಇದು ನಕ್ಷತ್ರದ ವಿಕಾಸದ ಇತಿಹಾಸದಲ್ಲಿ ಒಂದು ವಿಶಿಷ್ಟ ಹಂತವನ್ನು ತೋರಿಸುತ್ತಿರಬಹುದು. ಉದಾಹರಣೆಗೆ ಅತಿನೋವ. (4) ಇದು ನಕ್ಷತ್ರದ ಮೇಲ್ಮೈ ಮೇಲೆ ಆಗುತ್ತಿರುವ ಕ್ಷಣಿಕ ವಿದ್ಯಮಾನಗಳ ಪರಿಣಾಮವಾಗಿ ನಮಗೆ ಕಾಣುವ ನೋಟವಾಗಿರಬಹುದು. ಉದಾಹರಣೆಗೆ ಜ್ವಾಲೆಗಳು ಇತ್ಯಾದಿ.

ನಕ್ಷತ್ರಗಳ ಬಣ್ಣಗಳು ಬೇರೆ ಬೇರೆಯಾಗಿ ಕಾಣಿಸುತ್ತವೆ. ಕೆಲವು ಅತಿನೀಲ, ಕೆಲವು ಅರಿಸಿನ, ಕೆಲವು ಕೆಂಪು. ಇದರ ಕಾರಣ ನಕ್ಷತ್ರಗಳ ಮೇಲ್ಮೈ ಉಷ್ಣತೆಗಳಲ್ಲಿರುವ ಅಸಮತೆ. ನೀಲ ನಕ್ಷತ್ರಗಳು ಅರಿಸಿನ ನಕ್ಷತ್ರಗಳಿಗಿಂತಲೂ ಹೆಚ್ಚು ಬಿಸಿ. ಅರಸಿನ ನಕ್ಷತ್ರಗಳು ಕೆಂಪುನಕ್ಷತ್ರಗಳಿಗಿಂತ ಹೆಚ್ಚು ಬಿಸಿ. ಒಂದು ನಕ್ಷತ್ರದಿಂದ ಬರುವ ವಿಸರಣೆಯ ರೋಹಿತದ [ಅಲೆಯುದ್ದದೊಡನೆ ಅಭಿವಾಹದ (ಫ್ಲಕ್ಸ್) ಬದಲಾವಣೆಯನ್ನು ರೋಹಿತ ಕೊಡುತ್ತದೆ] ಪರಿಶೀಲನೆಯಿಂದ ಹೆಚ್ಚು ಮಾಹಿತಿಗಳನ್ನು ಪಡೆಯಬಹುದು. ಅಧಿಕ ಸಂಖ್ಯೆಯ ನಮನಗಳಿಂದ (ಡಿಪ್ಸ್) ಅಥವಾ; ಅವಶೋಷಣರೇಖೆಗಳಿಂದ (ಅಬ್‌ಸಾರ್ಪ್‌ಷನ್ ಲೈನ್ಸ್) ಮತ್ತು ಹಲವು ವೇಳೆ ಕೆಲವೇ ಉತ್ಸರ್ಜನ ರೇಖೆಗಳಿಂದ (ಎಮಿಷನ್ ಲೈನ್ಸ್) ಮುಸುಕಲ್ಪಟ್ಟಿರುವ ಒಂದು ಅವಿಚ್ಛಿನ್ನ ವಿಸರಣೆಯನ್ನು ರೋಹಿತ ಪ್ರದರ್ಶಿಸುತ್ತದೆ. ಈ ಅವಿಚ್ಛಿನ್ನ ವಿಸರಣೆಯ ಶಿಖರ ವಿಸರಣಕಾಯದ ಪರಿಣಾಮಕಾರೀ ಉಷ್ಣತೆಯನ್ನು (ಎಫೆಕ್ಟಿವ್ ಟೆಂಪರೇಚರ್) [ಒಂದು ನಕ್ಷತ್ರ ತನ್ನ ಏಕಮಾನ ಸಲೆಗೆ



ಚಿತ್ರ 1 ರೋಹಿತಶ್ರೇಣಿಯ ನಕ್ಷತ್ರಗಳ ಬೇರೆ ಬೇರೆ ಸ್ಥಳಗಳಲ್ಲಿ ವಿವಿಧ ಅವಶೋಷಣ ರೇಖೆಗಳ ಸಾಪೇಕ್ಷ ತೀವ್ರತೆಗಳು

ಕೊಡುವಷ್ಟೇ ಶಕ್ತಿಯನ್ನು ಕೊಡುವ ಒಂದು ಕಪ್ಪುಕಾಯದ (ಬ್ಲ್ಯಾಕ್ ಬಾಡಿ), ಉಷ್ಣತೆ, Teff] ತಿಳಿಸುತ್ತದೆ; ಮತ್ತು ರೇಖೆಗಳು ತಾವು ಉದ್ಭವಿಸುವ ಪ್ರದೇಶದ ಒತ್ತಡ ಹಾಗೂ ಉಷ್ಣತೆ ಅಲ್ಲದೆ ಧಾತುಗಳ ವಿಪುಲತೆಗಳನ್ನು ಕುರಿತು ಸಹ ತಿಳಿಸುತ್ತವೆ. ಅಧಿಕ ಸಂಖ್ಯೆಯ ನಕ್ಷತ್ರಗಳ ರೋಹಿತಗಳನ್ನು ನಾವು ತೆಗೆದುಕೊಂಡದ್ದಾದರೆ ಅವುಗಳಲ್ಲಿ ಹೆಚ್ಚಿನವನ್ನು ಕೇವಲ ಕೆಲವೇ ಗುಂಪುಗಳಿಗೆ ನಿಗದಿ ಮಾಡಬಹುದೆಂದು ನೋಡಬಹುದು. ಈ ಗುಂಪುಗಳನ್ನು ಅನುಕ್ರಮವಾಗಿ O, B, A, F, G, K, M ಎಂಬುದಾಗಿ ಹೆಸರಿಸಿದೆ. ಇದೊಂದು ಉಷ್ಣತಾ ವರ್ಗೀಕರಣ. ಇಲ್ಲಿ O ಉಷ್ಣತಮ ನಕ್ಷತ್ರವನ್ನೂ (ಇದರ ಪರಿಣಾಮಕಾರೀ ಉಷ್ಣತೆ ಸುಮಾರು 50,000° ಸೆಂ.ನಷ್ಟಿದೆ) M ಶೀತತಮ ನಕ್ಷತ್ರವನ್ನೂ (ಇದರ ಪರಿಣಾಮಕಾರೀ ಉಷ್ಣತೆ ಸುಮಾರು 2000° ಸೆಂ. ನಷ್ಟಿದೆ) ಸೂಚಿಸುತ್ತವೆ. ರೋಹಿತಲಕ್ಷಣಗಳ ತೋರಿಕೆಯನ್ನು ಆಧರಿಸಿ ಈ ವರ್ಗೀಕರಣವನ್ನು ಮಾಡಿದೆ. ಉದಾಹರಣೆಗೆ, A ರೋಹಿತ ಪ್ರರೂಪದ (ಸ್ಪೆಕ್ಟ್ರಲ್ ಟೈಪ್) ನಕ್ಷತ್ರಗಳ ಸುತ್ತ ಪರಮಾಣ್ವಕ ಜಲಜನಕದ (ಅಟಾಮಿಕ್ ಹೈಡ್ರೋಜನ್) ಅವಶೋಷಣ ರೇಖೆಗಳ ಸಾಮರ್ಥ್ಯ ಗರಿಷ್ಠ; ಆದರೆ ಆಣ್ವಕ ಪಟ್ಟಿಗಳು (ಮಾಲೆಕ್ಯುಲರ್ ಬ್ಯಾಂಡ್ಸ್) M ಪ್ರರೂಪದ ನಕ್ಷತ್ರಗಳಲ್ಲಿ ಬಲಿಷ್ಠತಮ. ಕಾಂತಿಯನ್ನು (ಅಥವಾ ಏಕಮಾನ ಕಾಲದಲ್ಲಿ ಉತ್ಸರ್ಜನೆಯಾದ ಸಮಗ್ರ ಶಕ್ತಿಯನ್ನು) ಉಷ್ಣತೆಯ ಅಥವಾ ರೋಹಿತವರ್ಗದ ಒಂದು ಉತ್ಪನ್ನವಾಗಿ (ಫಂಕ್ಷನ್) ಚಿತ್ರಿಸಿದ ಪಕ್ಷದಲ್ಲಿ ಬಹುತೇಕ ನಕ್ಷತ್ರಗಳು ಚಿತ್ರದ ಮೇಲು ಎಡ ಭಾಗದಿಂದ ಕೆಳ ಬಲ ಭಾಗದವರೆಗೆ ಒಂದು ಶ್ರೇಣಿಯಲ್ಲಿ ಬರುತ್ತವೆ. ಈ ಪಟ್ಟಿಗೆ ಪ್ರಧಾನಶ್ರೇಣಿ ಇಲ್ಲವೇ ಕುಬ್ಜ ಶೇಣಿ (ಡ್ವಾರ್ಫ್ ಸೀಕ್ವೆನ್ಸ್) ಎಂದು ಹೆಸರು. ಇದನ್ನು ಹರ್ಟ್ಸ್‌ಪ್ರುಂಗ್–ರಸ್ಸೆಲ್ ಅಥವಾ ಸಂಕ್ಷೇಪವಾಗಿ ಎಚ್–ಆರ್ ಚಿತ್ರ ಎಂದು ಕರೆಯುತ್ತೇವೆ. ಪ್ರಧಾನ ಶ್ರೇಣಿ ಒಂದೇ ಅಲ್ಲ: ದೈತ್ಯ (ಜಯಂಟ್ಸ್) ಹಾಗೂ ಅತಿದೈತ್ಯ (ಸೂಪರ್ ಜಯಂಟ್ಸ್) ನಕ್ಷತ್ರಗಳೂ ಇವೆ. ಇವುಗಳ ತ್ರಿಜ್ಯಗಳು ಅದೇ ರೋಹಿತ ಪ್ರರೂಪದ ಕುಬ್ಜ ನಕ್ಷತ್ರಗಳ ತ್ರಿಜ್ಯಗಳಿಗಿಂತ ಅವೆಷ್ಟೋ ದೊಡ್ಡವು. ದೈತ್ಯಗಳು ಪ್ರಧಾನ ಶ್ರೇಣಿಯಿಂದ ಮೇಲೆ ಇವೆ. ಶ್ವೇತ ಕುಬ್ಜಗಳಾದರೋ (ವೈಟ್ ಡ್ವಾರ್ಫ್ಸ್) ವಿಕಾಸದ ಅಂತಿಮ ಘಟ್ಟದಲ್ಲಿರುವ ಹಾಗೂ ಅತಿ ಸಂಕುಚನಗೊಂಡ ನಕ್ಷತ್ರಗಳು. ಇವು ಪ್ರಧಾನ ಶ್ರೇಣಿಯಿಂದ ಕೆಳಗೆ ಇವೆ. ದತ್ತ ಎಚ್–ಆರ್ ಚಿತ್ರವೊಂದರಲ್ಲಿರುವ ಎಲ್ಲ ನಕ್ಷತ್ರಗಳಲ್ಲೂ ಸಾಪೇಕ್ಷವಾಗಿ ಧಾತುಗಳ ವಿಪುಲತೆಗಳು ಒಂದೇ ಆಗಿವೆ ಎಂದು ಭಾವಿಸಿದರೆ ಆಗ ನಕ್ಷತ್ರಗಳ ಮೂರು ಆಯಾಮಗಳ


ಚಿತ್ರ 2 ನಕ್ಷತ್ರರೋಹಿತಗಳ ಪ್ರಧಾನ ಪ್ರರೂಪಗಳು

ಈ ವರ್ಗೀಕರಣವನ್ನು (ತ್ರೀ–ಡೈಮೆನ್ಷನಲ್ ಕ್ಲಾಸಿಫಿಕೇಷನ್) ಗುಣಾತ್ಮಕವಾಗಿ ಎಂ.ಎನ್. ಸಹಾರ ಅವರ ಚಿರಪರಿಚಿತ ಅಯಾನೀಕರಣ ಸಮೀಕರಣದಿಂದ ತಿಳಿದುಕೊಳ್ಳಬಹುದು. ಅಯಾನೀಕರಣದ ಪ್ರಮಾಣ (ಡಿಗ್ರಿ) ಉಷ್ಣತೆಯ ಏರಿಕೆ ಹಾಗೂ ಒತ್ತಡದ ಇಳಿಕೆಯೊಡನೆ ಏರುವುದೆಂದು ಈ ಸಮೀಕರಣ ನಮಗೆ ತೋರಿಸುತ್ತದೆ. O ಮತ್ತು B ನಕ್ಷತ್ರಗಳ ರೋಹಿತಗಳಲ್ಲಿ ತೀವ್ರ ಅಯಾನೀಕೃತ ರೇಖೆಗಳು ಏಕೆ ಇವೆಯೆಂಬುದನ್ನೂ ಆದರೆ G ನಕ್ಷತ್ರಗಳ ರೋಹಿತಗಳಲ್ಲಿ ತಟಸ್ಥ ಪರಮಾಣ್ವಕ ರೇಖೆಗಳು ಮಾತ್ರ ಏಕೆ ಪ್ರಧಾನವಾಗಿವೆಯೆಂಬುದನ್ನೂ ಅಲ್ಲದೆ ಒಂದೇ ರೋಹಿತ ಮಾದರಿಯಲ್ಲಿಯ ಅತಿದೈತ್ಯ ನಕ್ಷತ್ರಗಳು ಕುಬ್ಜನಕ್ಷತ್ರಗಳಿಗಿಂತ ಶೀತಲವಾಗಿ ಏಕೆ ಇವೆಯೆಂಬುದನ್ನೂ ಇದರಿಂದ ತಿಳಿದುಕೊಳ್ಳಬಹುದು.

ಸಾಮಾನ್ಯ ನಕ್ಷತ್ರಗಳಿಗಿಂತ ತೀರ ಭಿನ್ನವಾದ ಅಥವಾ ವಿಶಿಷ್ಟ ಧಾತುವಿಪುಲತೆಗಳಿರುವ ನಕ್ಷತ್ರಗಳ ಒಂದು ಪುಟ್ಟ ಗುಂಪು ಉಂಟು. ಉದಾಹರಣೆಗೆ ಇಂಗಾಲ ನಕ್ಷತ್ರಗಳು. ಇವು K ಮತ್ತು M ನಕ್ಷತ್ರಗಳನ್ನು ಬಲು ಮಟ್ಟಿಗೆ ಹೋಲುವುವಾದರೂ ಇಂಗಾಲ ಹಾಗೂ ವಿರಳಭಸ್ಮ ಧಾತುಗಳ (ರೇರ್ ಅರ್ಥ್ ಎಲಿಮೆಂಟ್ಸ್) ಸಾಪೇಕ್ಷ ವಿಪುಲತೆ

ಇಂಗಾಲ ನಕ್ಷತ್ರಗಳಲ್ಲಿ K ಮತ್ತು M ನಕ್ಷತ್ರಗಳಿಗಿಂತ ಅತಿ ಹೆಚ್ಚಾಗಿದೆ. ರೇಖೆಗಳ ಸಾಮರ್ಥ್ಯ ಧಾತುಗಳ ಸಾಪೇಕ್ಷ ವಿಪುಲತೆಯಲ್ಲಿಯ ಬದಲಾವಣೆಗೆ ಸುಳುಹುಗಳನ್ನು ಕೊಡುತ್ತದೆ.

ಬಹುತೇಕ ನಕ್ಷತ್ರಗಳು ಅವಶೋಷಣ ರೇಖೆಗಳನ್ನು ಪ್ರಧಾನವಾಗಿ ಪ್ರದರ್ಶಿಸುತ್ತವೆ. ಆದರೆ ಉತ್ಸರ್ಜನ ರೇಖೆಗಳನ್ನು ಕೂಡ ತೋರ್ಪಡಿಸುವಂಥ ನಕ್ಷತ್ರಗಳ ಪ್ರರೂಪಗಳು ಬೇಕಾದಷ್ಟಿವೆ. ಉತ್ಸರ್ಜನ ರೇಖೆಗಳು ಉದ್ಭವಿಸುವಲ್ಲಿಯ ಅನಿಲ ಹೆಚ್ಚು ಕಡಿಮೆ ಪಾರದರ್ಶಕವಾಗಿದೆ ಮತ್ತು ಅಲ್ಲಿಯ ದ್ರವ್ಯ ಉಷ್ಣಗತೀಯ ಸಮತೋಲನದಲ್ಲಿಲ್ಲ ಎನ್ನುವುದಕ್ಕೆ ಇವು ಉತ್ತಮ ಸೂಚನೆಗಳು. ಅವಶೋಷಣ ಹಾಗೂ ಉತ್ಸರ್ಜನ ರೇಖೆಗಳು ಪರಿಪೂರ್ಣ ನಿಶಿತವಾಗಿಲ್ಲ. ಬದಲು ಅವುಗಳಿಗೆ ಒಂದು ರೇಖಾಕೃತಿ



ಚಿತ್ರ 3 ಎಚ್–ಆರ್ ಚಿತ್ರ

(ಪ್ರೊಫೈಲ್) ಉಂಟು. ಇದರ ಶಿಖರ (ಪೀಕ್) ಮಧ್ಯದಲ್ಲಿದ್ದು ತೀವ್ರತೆ ಉಭಯಪಾರ್ಶ್ವಗಳಲ್ಲೂ ತಗ್ಗುತ್ತ ಹೋಗುವುದು. ಮೂಲದಲ್ಲಿರುವ ಬೇರೆ ಬೇರೆ ಅಗಲಮಾಡುವ ತಂತ್ರ ವಿನ್ಯಾಸಗಳನ್ನು (ಬ್ರಾಡನಿಂಗ್ ಮೆಕಾನಿಸಮ್ಸ್) ಅಥವಾ ನಿಖರವಾಗಿ ಪ್ಲಾಸ್ಮಾದ ಸ್ಥಿತಿಯನ್ನು ಕುರಿತು ರೇಖಾಕೃತಿಗಳ ಆಕಾರ ತಿಳಿಸುತ್ತದೆ. ಇದರಿಂದ ನಕ್ಷತ್ರದ ಆವರ್ತನೆ ಸೂಚಿತವಾಗಬಹುದು; ಅಲ್ಲದೇ ಇದು ನಕ್ಷತ್ರದ ಮೇಲ್ಮೈಯಲ್ಲಿನ ಕಾಂತಕ್ಷೇತ್ರದ ಸಾಮರ್ಥ್ಯವನ್ನು ಸೂಚಿಸಬಹುದು.

ನಕ್ಷತ್ರ ವಾಯುಮಂಡಲದ (ಅಟ್ಮಾಸ್ಫಿಯರ್) ಬೇರೆ ಬೇರೆ ಆಳಗಳಲ್ಲಿ ಬೇರೆ ಬೇರೆ ರೇಖೆಗಳು ರೂಪಿಸಲ್ಪಡುತ್ತವೆ. ಆದ್ದರಿಂದ ಅವು ಉಷ್ಣತೆಯ ಮತ್ತು ಒತ್ತಡದ ಬದಲಾವಣೆಗೆ ಸುಳುಹುಗಳನ್ನು ಆಳದ ಒಂದು ಉತ್ಪನ್ನವಾಗಿ ಕೊಡುತ್ತವೆ. ಪ್ರಯೋಗ ಮಂದಿರದ ಒಂದು ರೋಹಿತದ ರೇಖೆಗಳೊಡನೆ ಹೋಲಿಸುವಾಗ ಬಹುತೇಕ ರೇಖೆಗಳ ಸ್ಥಾನಪಲ್ಲಟವಾಗಿರುತ್ತದೆ. ಈ ಪಲ್ಲಟ ಆರೀಯವೇಗವನ್ನು (ರೇಡಿಯಲ್ ವೆಲಾಸಿಟಿ) ಕೊಡುವುದು. ಇದಕ್ಕೆ ಹಲವಾರು ಬಗೆಯ ಕಾರಣಗಳಿರಬಹುದು. ವಿಸರಿಸುತ್ತಿರುವ ವ್ಯವಸ್ಥೆಗೆ (ರೇಡಿಯೇಟಿಂಗ್ ಸಿಸ್ಟಂ) ದೃಷ್ಟಿರೇಖೆಯಲ್ಲಿ ಇರುವ ಚಲನೆಯನ್ನು ಆರೀಯವೇಗ ಸೂಚಿಸುತ್ತದೆ. ಅದು ಯಮಳ ವ್ಯವಸ್ಥೆಯಲ್ಲಿಯ (ಬೈನರಿ ಸಿಸ್ಟಂ) ಒಂದು ನಕ್ಷತ್ರದ ಚಲನೆಯ ಪರಿಣಾಮ ಆಗಿರಬಹುದು; ಅಥವಾ ನೈಜ ಚಂಚಲ ನಕ್ಷತ್ರ (ಇನ್‌ಟ್ರಿನ್ಸಿಕ್ ವೇರಿಯೆಬಲ್ ಸ್ಟಾರ್) ಒಂದರ (ಉದಾಹರಣೆಗೆ ಸೆಫೀಯಡುಗಳು) ಸ್ಪಂದನವಾಗಿರಬಹುದು; ಅಥವಾ ದೀರ್ಘಾವಧಿಯ ಚಂಚಲಗಳಾಗಿರಬಹುದು; ಅಥವಾ ವೀಕ್ಷಕನಿಗೆ ಸಾಪೇಕ್ಷವಾಗಿ ಆಕಾಶದಲ್ಲಿ ನಕ್ಷತ್ರದ ಚಲನೆ ಆಗಿರಬಹುದು.

ಚಲನೆಯ ದಿಶೆಗೆ ಲಂಬವಾಗಿರುವ ಒಂದು ಸಮತಲದಲ್ಲಿ ವಿದ್ಯುತ್ಕಾಂತ ವಿಸರಣೆ ಕಂಪಿಸುತ್ತದೆ. ಸಾಧಾರಣ ಬೆಳಕಿನಲ್ಲಿ ಈ ಕಂಪನದಿಶೆ ಯಾದೃಚ್ಛಿಕವಾಗಿ ವಿತರಣೆಗೊಂಡಿರುವುದು. ಅದಕ್ಕೆ ಅಧ್ರುವೀಕೃತ (ಅನ್‌ಪೋಲರೈಸ್ಡ್) ಬೆಳಕೆಂದು ಹೆಸರು. ಆದರೆ ವಿಸರಣೆಗೆ ಕಂಪನದಿಶೆಯಲ್ಲಿ ಒಂದು ಸ್ಪಷ್ಟ ಒಲವು ಇದ್ದರೆ ಆಗ ಅದು ಧ್ರುವೀಕೃತ ಬೆಳಕು ಎಂದೆನ್ನಿಸುತ್ತದೆ. ಆಕಾಶಕಾಯಗಳಿಂದ ಪಡೆದ ವಿಸರಣೆಯ ಧ್ರುವೀಕರಣ ವಿಸರಣೆಯನ್ನು ಉತ್ಸರ್ಜಿಸುವ ಕ್ರಿಯಾವಿನ್ಯಾಸದ ಮೇಲೂ ಬೆಳಕನ್ನು (ಮೆಕಾನಿಸಂ


ಚಿತ್ರ 4 ಸೂರ್ಯನ ಮೇಲ್ಮೈಯ ಕಪ್ಪು ಕಲೆಗಳು (1957ರ ಸೆಪ್ಟೆಂಬರ್ 15ರಂದು ತೆಗೆದ ಚಿತ್ರ)

ಆಫ್ ದಿ ಎಮಿಷನ್ ಆಫ್ ರೇಡಿಯೇಷನ್) ಕಾಂತಕ್ಷೇತ್ರಗಳ ಅಸ್ತಿತ್ವದ ಮೇಲೂ ಬೆಳಕನ್ನು ಬೀರುತ್ತದೆ.

**ಸೂರ್ಯ ಹಾಗೂ ಸೌರವ್ಯೂಹ :** ಸೂರ್ಯ ಭೂಮಿಗೆ ಸಮೀಪತಮ ನಕ್ಷತ್ರ. ಆದ್ದರಿಂದ ಇದರ ಪಾತ್ರ (ನಮ್ಮ ದೃಷ್ಟಿಯಿಂದ) ಏಕೈಕ. ಆಕಾಶದಲ್ಲಿರುವ ಕೋಟ್ಯಂತರ ನಕ್ಷತ್ರಗಳ ಪೈಕಿ ಸೂರ್ಯನನ್ನು ಕುರಿತ ಅಭ್ಯಾಸವನ್ನು ಸಾದೃಶ್ಯಾತೀತವಾದ ನಿಖರತೆಯಿಂದಲೂ ವಿವರಸಹಿತವಾಗಿಯೂ ಮಾಡಬಹುದಾದ್ದರಿಂದ ಖಭೌತವಿಜ್ಞಾನದಲ್ಲಿ ಸೂರ್ಯನ ಅಂತಸ್ತು ವಿಶಿಷ್ಟವಾದದ್ದು.

ನಾವು ಕಾಣುವ ನಕ್ಷತ್ರ ಕೋಟಿಗಳಲ್ಲಿ ಸೂರ್ಯ ತೀರ ಸಾಧಾರಣಮಟ್ಟದ ನಕ್ಷತ್ರ, ಅದರ ದ್ರವ್ಯರಾಶಿ $2X10^{33}$ ಕೆ.ಜಿ., ತ್ರಿಜ್ಯ 6,96,000 ಕಿ.ಮೀ. ಸೂರ್ಯ ಅದರ ಮೇಲ್ಮೈಯ ಪ್ರತಿ ಚದರ ಸೆಂಟಿಮೀಟರಿನಿಂದ ಸುಮಾರು 8 ಅಶ್ವಸಾಮರ್ಥ್ಯದ ದರದಲ್ಲಿ ವಿಸರಿಸುತ್ತದೆ. ಸೂರ್ಯನ ಪರಿಣಾಮಕಾರೀ ಉಷ್ಣತೆ ಸುಮಾರು $5,800^{\circ}$ ಕೆ. ಅಥವಾ ಸುಮಾರು $5,500^{\circ}$ ಸೆಂ. ಅದರ ರೋಹಿತವರ್ಗ G2V. ಸರಾಸರಿ ಸಾಂದ್ರತೆ ನೀರಿನ ಸಾಂದ್ರತೆಯ ಸುಮಾರು 1.5ರಷ್ಟು. ಸೂರ್ಯ ತನ್ನ ಅಕ್ಷದ ಸುತ್ತಲೂ–ಘನ ವಸ್ತುವಿನಂತಲ್ಲದಿದ್ದರೂ–ಆವರ್ತಿಸುತ್ತಿದೆ. ಆವರ್ತನಾವಧಿ ಮಧ್ಯ ಅಕ್ಷಾಂಶಗಳಲ್ಲಿ ಸುಮಾರು 27 ದಿವಸಗಳು. ಸೂರ್ಯನ ಸಾರ್ವತ್ರಿಕ ಕಾಂತ ಕ್ಷೇತ್ರ ಸುಮಾರು 1 ಗೌಸ್. ಸೌರಕಲೆಯೊಂದರ ಸಮೀಪ ಇದು ಹಲವಾರು ಸಾವಿರ ಗೌಸುಗಳೇ ಆಗಬಹುದು.

ನೇರವಾಗಿ ವೀಕ್ಷಿಸಿದಾಗ ಸೂರ್ಯಬಿಂಬ ಪರಿಪೂರ್ಣ ಕಡಿದಾದ ಅಂಚನ್ನು ಪ್ರದರ್ಶಿಸುತ್ತದೆ. ಅದರೆ ಪೂರ್ಣಗ್ರಹಣದ ವೇಳೆ ಈ ಬಿಂಬವನ್ನು ಚಂದ್ರ ಮರೆ ಮಾಡಿದಾಗ ಸೂರ್ಯನ ಸುತ್ತಲೂ ಒಂದು ಬಾಹ್ಯ ವಾಯುಮಂಡಲವಿರುವುದು ಗೊತ್ತಾಗುತ್ತದೆ. ಇದರ ದಪ್ಪ ಸುಮಾರು 10,000ಕಿ.ಮೀ. ವರ್ಣಗೋಳ (ಕ್ರೋಮೋಸ್ಫಿಯರ್) ಎಂದು ಇದರ ಹೆಸರು. ಇದಕ್ಕಿಂತ ಅನೇಕ ಪಾಲು ತೆಳುವಾದ ಮತ್ತು ಅತಿವಿಸ್ತಾರವಾದ ಒಂದು ಕವಚ ದಶಲಕ್ಷದಷ್ಟು ಕಿಲೋಮೀಟರುಗಳ ದರ್ಜೆಯ ದೂರಕ್ಕೆ ವ್ಯಾಪಿಸಿದೆ. ಇದರ ಹೆಸರು ಮುಕುಟ (ಕರೋನ). ಕಡಿದಾದ ಗಡಿಯ ಸುತ್ತ ಇರುವ ವಾಯುಮಂಡಲದ ಹೆಸರು ದ್ಯುತಿಗೋಳ (ಫೋಟೋಸ್ಫಿಯರ್). ಸೂರ್ಯಬಿಂಬ ತನ್ನ ಕೇಂದ್ರದಲ್ಲಿ ಅತ್ಯಂತ ಪ್ರಕಾಶಮಾನವಾಗಿದೆ. ಅಂಚಿನೆಡೆಗೆ ಸಾಗಿದಂತೆ ವಿಸರಣೆಯ ತೀವ್ರತೆ ತಗ್ಗುತ್ತದೆ. ಅಂಚಿನ ಸಮೀಪದಲ್ಲಿ ತಗ್ಗುವಿಕೆ ಅತಿ

ತೀವ್ರ. ಈ ವಿಚಲನೆಯ ಹೆಸರು ಕೇಂದ್ರದಿಂದ ಅಂಚಿಗೆ ಕಪ್ಪಾಗುವಿಕೆ ಅಥವಾ ಸರಳವಾಗಿ ಅಂಚು ಕಪ್ಪಾಗುವಿಕೆ (ಲಿಂಬ್ ಡಾರ್ಕನಿಂಗ್). ಅಂಚಿಗಿಂತಲೂ ಅಧಿಕ



ಚಿತ್ರ 5 ಸೂರ್ಯನ ಪೂರ್ಣಗ್ರಹಣಕಾಲದಲ್ಲಿ ಕಾಣುವ ಸೌರಮಕುಟ. ಕಪ್ಪುಕಲೆಗಳು ಕನಿಷ್ಠ ಸಂಖ್ಯೆಯಲ್ಲಿದ್ದಾಗ ಸೌರಮಕುಟದ ರೂಪವನ್ನು ಎಡಗಡೆಯ ಚಿತ್ರದಲ್ಲೂ ಅವು ಗರಿಷ್ಠ ಸಂಖ್ಯೆಯಲ್ಲಿದ್ದಾಗ ಸೌರಮಕುಟದ ರೂಪವನ್ನು ಬಲಗಡೆಯ ಚಿತ್ರದಲ್ಲೂ ಕಾಣಬಹುದು.

ಉಷ್ಣತೆಗಳಲ್ಲಿರುವ ಆಳದ ಪದರಗಳಿಂದ ಕೇಂದ್ರದಲ್ಲಿಯ ವಿಸರಣೆ ಬರುವುದೇ ಇದರ ಕಾರಣ. ಅಂಚಿನಲ್ಲಿಯ ವಿಸರಣೆಯಾದರೋ ಕಡಿಮೆ ಉಷ್ಣತೆಗಳ ಫಲ. ಉಳಿದ ನಕ್ಷತ್ರಗಳ ಪೈಕಿ ಹೆಚ್ಚಿನವುಗಳಿಂದ ಬರುವ ಒಟ್ಟು ಅಭಿವಾಹ (ಟೋಟಲ್ ಫ್ಲಕ್ಸ್) ಸಮಗ್ರ ಮೇಲ್ಮೈಗೆ ಸಮನ್ವಯಗೊಂಡಿರುವುದರಿಂದ ಅವುಗಳ ಅಂಚು ಕಪ್ಪಾಗುವಿಕೆಯನ್ನು ನೋಡುವುದು ಸಾಧ್ಯವಾಗದು.

ಅಲೆಯುದ್ದಕ್ಕೆ ಅನುಗುಣವಾಗಿ ಅಭಿವಾಹದ ವಿಚಲನೆಯನ್ನು ಅಳೆದಾಗ ಒಂದು ರೇಖಾರೋಹಿತ (ಲೈನ್ ಸ್ಪೆಕ್ಟ್ರಂ) ಲಭಿಸುತ್ತದೆ. ಸೌರದ್ಯುತಿಗೋಳ ಅನಿಲ ಸ್ಥಿತಿಯಲ್ಲಿ ಉಂಟೆಂದು ಇದು ಸ್ಥಾಪಿಸುವುದು. ಧಾತುಗಳ ವಿಪುಲತೆಗಳನ್ನು ಕುರಿತು ಹೇಳುವುದಾದರೆ ಸೂರ್ಯ ಸಾಧಾರಣ ದರ್ಜೆಯ ಒಂದು ನಕ್ಷತ್ರ ಎಂದು ರೋಹಿತದಿಂದ ವೇದ್ಯವಾಗುತ್ತದೆ.

ಸೂರ್ಯನ ಒಂದು ಉತ್ತಮ ಛಾಯಾಚಿತ್ರವನ್ನು ನೋಡಿದರೆ ಅದರಲ್ಲಿ ಸ್ವಲ್ಪ ಮಟ್ಟಿಗೆ ಕಪ್ಪಾದ ಹಿನ್ನೆಲೆಯಲ್ಲಿ ಸೂಕ್ಷ್ಮ ಕಣಗಳಂಥ ಅಥವಾ ಹರಳುಗಳಂಥ ಆಕಾರಗಳು ಕಂಡುಬರುತ್ತವೆ. ಈ ಕಣೀಭವನದಲ್ಲಿ (ಗ್ರಾನ್ಯುಲೇಷನ್) ಕ್ರಮರಹಿತವಾದ. ಹಲವಾರು ವೇಳೆ ಷಡ್ಭುಜಾಕೃತಿಯ, ಬಿಳಿಯ ಮಚ್ಚೆಗಳಿರುವುವು. ಸೂರ್ಯನ ಬಾಹ್ಯ ಪದರಗಳಲ್ಲಿ ಅತಿ ಕ್ಷೋಭೆಯ ಪರಿಸ್ಥಿತಿಗಳಿವೆಯೆಂದು ಇವುಗಳಿಂದ ತಿಳಿಯುತ್ತದೆ. ಕಣಗಳ ಸರಾಸರಿ ಆಯುಸ್ಸು ಸುಮಾರು 3 ಮಿನಿಟುಗಳು. ಸೌರ ಮೇಲ್ಮೈ ಇತರ ಹಲವಾರು ಅಲ್ಪಕಾಲೀನ ವಿದ್ಯಮಾನಗಳನ್ನು ಸಹ ಪ್ರದರ್ಶಿಸುತ್ತದೆ. ಇವುಗಳಿಗೆ ಒಟ್ಟಾಗಿ ಸೌರ ಚಟುವಟಿಕೆಗಳು ಎಂದು ಹೆಸರು. ಇವುಗಳಲ್ಲಿ ಮುಖ್ಯವಾದದ್ದು ಕಪ್ಪು ಕಲೆಗಳು. ಸೌರ ಕಲೆಗಳು (ಸನ್ ಸ್ಪಾಟ್ಸ್) ಎಂದು ಇವನ್ನು ಕರೆಯುತ್ತೇವೆ. ಇವು ಸೂರ್ಯನಬಿಂಬದ ಮೇಲೆ ಪದೇ ಪದೇ ಕಾಣಿಸಿಕೊಳ್ಳುವುದುಂಟು. ಆಗೆಲ್ಲ ಇವು ಸಾಮಾನ್ಯವಾಗಿ ಗುಂಪುಗಳಲ್ಲಿ ಇರುತ್ತವೆ. ಆವರ್ತಾಂಕ ಮತ್ತು ವಿತರಣೆಯಲ್ಲಿ (ಫ್ರೀಕ್ವೆನ್ಸಿ ಅಂಡ್ ಡಿಸ್ಟ್ರಿಬ್ಯೂಷನ್) ಸೌರಕಲೆಗಳು ಹನ್ನೊಂದುವರೆ ವರ್ಷಗಳ ಚಕ್ರವನ್ನು ಅನುಸರಿಸುತ್ತವೆ. ಕಾಂತಕ್ಷೇತ್ರದ ದಿಶೆಯನ್ನು ಸಹ ಪರಿಗಣಿಸಿದಾಗ ಈ ಚಕ್ರದ ಅವಧಿ ಸುಮಾರು ಇಪ್ಪತ್ತಮೂರು ವರ್ಷಗಳು. ಸೌರಕಲೆಗಳ ಪರಿಣಾಮಕಾರೀ ಉಷ್ಣತೆ ಸುಮಾರು $4{,}500^{\circ}$ ಕೆ. ಅಥವಾ ಸುಮಾರು $4{,}200^{\circ}$ ಸೆಂ. ವಿಸ್ತಾರವಾದ ಕಲೆಗಳ ಕಾಂತಕ್ಷೇತ್ರ 4,000 ಗೌಸಿನಷ್ಟು ಅಧಿಕವೂ ಆಗಿರಬಹುದು.

ಸೌರ ಚಟುವಟಿಕೆಗಳ ಇತರ ಕೆಲವು ನಿದರ್ಶನಗಳೆಂದರೆ ಉದ್ರೇಕಗಳು (ಫ್ಲೇರ್ಸ್) ಮತ್ತು ಜ್ವಾಲೋನ್ನತಿಗಳು (ಪ್ರಾಮಿನೆನ್ಸ್). ಸೂರ್ಯನ ಹೊರ ಮೈಮೇಲಿನ ಚಿಕ್ಕ ಪ್ರದೇಶಗಳು ಅಲ್ಪಕಾಲ ಮಾತ್ರ ತೋರುವ ಅತಿ ಪ್ರಕಾಶತೆಗಳು ಉದ್ರೇಕಗಳು. ಇವು ಸೌರಕಲೆಗಳ ಸಮೀಪ ಇರುತ್ತವೆ. ಜ್ವಾಲೋನ್ನತಿಗಳು ಹತ್ತಾರು ಅಥವಾ ನೂರಾರು ಸಾವಿರ ಕಿಲೋಮೀಟರುಗಳಷ್ಟು ಎತ್ತರಕ್ಕೆ ಸೂರ್ಯನ ಮೇಲ್ಮೈಯಿಂದ ನೆಗೆಯುವ ಅಥವಾ ಆಕಾಶದಲ್ಲಿ ತೇಲಾಡುತ್ತಿರುವ ಅನಿಲದ ಮೋಡಗಳು. ವರ್ಣಗೋಳ ಅಥವಾ ಬಾಹ್ಯ ವಾಯುಮಂಡಲ ದ್ಯುತಿಗೋಳದ ಒತ್ತಿಗೆ ಮೇಲೆ ಇದೆ. ಸುಮಾರು 14,000 ಕಿಮೀ. ದಪ್ಪವಿರುವ ಅನಿಲದ ತೆಳು ಪದರವಿದು. ಇದು ಎಷ್ಟು ತೆಳುವಾಗಿದೆ ಎಂದರೆ ದ್ಯುತಿಗೋಳದ ಅವಿಚ್ಛಿನ್ನ ವಿಸರಣೆ ಮೂಲತಃ ಒಂದಿಷ್ಟೂ ಬದಲಾಯಿಸಲ್ಪಡದೇ ಇದನ್ನು ಹಾದುಹೋಗುವುದು. ಆದರೆ ಸೂರ್ಯನ ಒಂದು ಪೂರ್ಣ ಗ್ರಹಣದಲ್ಲಿ ಇನ್ನೊಂದು ಉತ್ಸರ್ಜನ ರೋಹಿತವನ್ನು (ಎಮಿಷನ್ ಸ್ಪೆಕ್ಟ್ರಂ) ಇದು ಕೊಟ್ಟಿದೆ. ವರ್ಣಗೋಳದಲ್ಲಿಯ ಪರಿಸ್ಥಿತಿ ಸ್ಥಳೀಯ ಉಷ್ಣಗತೀಯ ಸಮತೋಲಕ್ಕಿಂತ ತೀರ ಭಿನ್ನವಾಗಿದೆ. ಉಷ್ಣಸಮತೋಲಕ್ಕೆ ಬೇಕಾಗುವ ವೇಗಕ್ಕಿಂತ ಗಮನಾರ್ಹವಾಗಿ ಹೆಚ್ಚಿನ ವೇಗಗಳಿಂದ ಇಲ್ಲಿಯ ಅನಿಲ ಕ್ಷೋಭೆಗೊಂಡಿರುವಂತೆ ಅನ್ನಿಸುವುದು. ಸೂರ್ಯನ ಅತಿಹೊರಗಿನ ವಲಯವಾದ ಮುಕುಟ ಸೌರ ತ್ರಿಜ್ಯಕ್ಕಿಂತಲೂ ಅಧಿಕ ದೂರಗಳಿಗೆ ವ್ಯಾಪಿಸಿದೆ. ಇದು ಬಲು ವಿರಳೀಕೃತ ವಾಯುಮಂಡಲ. ಆದರೂ ಇದು ಅತ್ಯಂತ ಕ್ಷೋಭೆಯಿಂದ ಕೂಡಿದೆ. ವೇಗಗಳನ್ನು ಪರಿಶೀಲಿಸುವಾಗ ಇಲ್ಲಿಯ ಉಷ್ಣತೆ ಒಂದು ದಶಲಕ್ಷ ಡಿಗ್ರಿಗಳಲ್ಲಿ ಉಷ್ಣ ಸಮತೋಲದಲ್ಲಿರಬಹುದೆಂದು ಅನ್ನಿಸುತ್ತದೆ. ಇದನ್ನು ವೀಕ್ಷಿಸಲು ಬಲು ಯೋಗ್ಯ ಅವಕಾಶ ಪೂರ್ಣಸೂರ್ಯಗ್ರಹಣಕಾಲ. ಸೂರ್ಯಬಿಂಬವನ್ನು ಮುಚ್ಚುವಂಥ ಕೆಲವು ವಿಶಿಷ್ಟ ಉಪಕರಣಗಳ (ಕರೋನಾಗ್ರಾಫ್) ನೆರವಿನಿಂದ ಇದನ್ನು ನೋಡುವುದು ಸಾಧ್ಯ. ಮುಕುಟೋತ್ಸರ್ಜನ ರೇಖೆಗಳು (ಕರೋನಲ್ ಎಮಿಷನ್ ಲೈನ್ಸ್) 8–15 ಎಲೆಕ್ಟ್ರಾನುಗಳನ್ನು ಕಳೆದುಕೊಂಡಂಥ ಅತ್ಯಯಾನೀಕೃತ ಪರಮಾಣುಗಳಿಂದ ಉದ್ಭವಿಸುತ್ತವೆ. ಮುಕುಟ ಕಿರಣಗಳು (ರೇಸ್) ಮತ್ತು ಜ್ಯೋತಿಕೇತುಗಳು ("ಸ್ಟ್ರೀಮರ್ಸ್") ಇವುಗಳಿಂದ ಕೂಡಿದ ಒಂದು ಸಂಯುಕ್ತ ಜಟಿಲ ರಚನೆ. ಇದು ಸಾಮಾನ್ಯವಾಗಿ ಸೌರಚಕ್ರದೊಡನೆ ಬದಲಾಗುತ್ತದೆ.

ಸೂರ್ಯನ ವಯಸ್ಸು ಸುಮಾರು $5 \times 10^{9}$ ವರ್ಷಗಳು. ಅದು ಇನ್ನೂ ಅಷ್ಟೇ ವರ್ಷಗಳ ಕಾಲ ಉಳಿದಿರಬಲ್ಲುದು. ಸೌರಶಕ್ತಿಯ ಪ್ರಧಾನ ಆಕರ ನಾಲ್ಕು ಹೈಡ್ರೋಜನ್ ಪರಮಾಣುಗಳು ಸಮ್ಮಿಳನಗೊಂಡು ಒಂದು ಹೀಲಿಯಂ ಪರಮಾಣುವಾದಾಗ ತಲೆದೋರುವ ದ್ರವ್ಯರಾಶಿಲೋಪ ಶಕ್ತಿರೂಪ ಪಡೆಯುವುದರಲ್ಲಿದೆ. ಇದನ್ನು ವಿವರಿಸುವ ಸುಪ್ರಸಿದ್ಧ ಐನ್‌ಸ್ಟೈನ್ ಸಮೀಕರಣದ ನಿರೂಪಣೆ ಈ ಪ್ರಕಾರ ಉಂಟು :

$$\text{ಶಕ್ತಿ} = \text{ದ್ರವ್ಯರಾಶಿ} \times (\text{ಬೆಳಕಿನ ವೇಗ})^{2}$$

3 **ನಾಕ್ಷತ್ರಿಕ ವಾಯುಮಂಡಲ:** ನಾವು ವೀಕ್ಷಿಸುವ ಬಹುಪಾಲು ನಕ್ಷತ್ರಗಳು ಅದೆಷ್ಟು ಬಿಸಿಯಾಗಿವೆ ಎಂದರೆ ಅವು ಪೂರ್ಣ ಅನಿಲ ರೂಪದಲ್ಲೇ ಇವೆ. ಈ ಕಾರಣದಿಂದ ನಕ್ಷತ್ರಗಳ ಅತಿ ಹೊರಗಿನ ಪದರಗಳು ಹೆಚ್ಚು ಕಡಿಮೆ ಪಾರದರ್ಶಕ. ಹೀಗಾಗಿ ವಿಸರಿತ ಶಕ್ತಿ ವಿಶೇಷವಾಗಿ ಮಾರ್ಪಾಡಾಗದೆ ಹೊರಕ್ಕೆ ಬಿಡುಗಡೆಗೊಳ್ಳುವುದು. ಆಳಕ್ಕೆ ಒಳನುಗ್ಗಿದಂತೆ ಉಷ್ಣತೆ ಮತ್ತು ಒತ್ತಡಗಳೊಡನೆ ಸಾಂದ್ರತೆ ಏರುತ್ತದೆ; ಮುಂದೆ ದ್ಯುತಿಗೋಳವನ್ನು ಪ್ರವೇಶಿಸಿದಾಗ ಅಲ್ಲಿಯ ಅನಿಲಗಳು ಅಪಾರದರ್ಶಕವಾಗಿದ್ದು ಅವು ವಿಸರಣೆಯ ಮುಕ್ತ ವಹನಕ್ಕೆ ತಡೆ ಒಡ್ಡುತ್ತವೆ. ಈ ಹೊರಗಿನ ಪದರಗಳಿಗೆ ನಾಕ್ಷತ್ರಿಕ ವಾಯುಮಂಡಲವೆಂದು ಹೆಸರು. ಇದು ನಮಗೆ ನೇರ ವೀಕ್ಷಣೆಗೆ ಸಿಕ್ಕುತ್ತದೆ. ಒಂದು ನಕ್ಷತ್ರದಿಂದ ಉತ್ಸರ್ಜನೆಯಾಗುವ ಎಲ್ಲ ಶಕ್ತಿಯೂ ಅದರ ವಾಯುಮಂಡಲದ ಮೂಲಕ ಬರುವುದರಿಂದ ಆ ನಕ್ಷತ್ರದ ರಚನೆ, ಅದರ ಹೊರಮೈ, ಅದರಲ್ಲಿಯ ಧಾತುಗಳ ವಿಪುಲತೆಗಳು ಮತ್ತು ಇತರ ಹಲವಾರು ಗುಣಗಳನ್ನು ತಿಳಿಯಲು ಅದರ ವಾಯುಮಂಡಲದ ತೃಪ್ತಿಕರ ಮಾಹಿತಿ ಅವಶ್ಯ. ಉದಾಹರಣೆಗೆ ಉಷ್ಣತೆ, ಒತ್ತಡ, ಆಳದೊಡನೆ ಅಪಾರದರ್ಶಕತೆ ಇವೇ ಮುಂತಾದ ಭೌತ ಪ್ರಾಚಲಗಳಲ್ಲಿಯ ವಿಚಲನೆಯ ಜ್ಞಾನ ಬೇಕು. ಒಂದು ನಕ್ಷತ್ರದ ಶಕ್ತಿ ನಷ್ಟದ ಒಟ್ಟು ದರ ನಿರ್ಧಾರವಾಗುವುದು ಅದರ ಕೇಂದ್ರದ ಸಮೀಪ ಜರುಗುತ್ತಿರುವ ಪ್ರಕ್ರಿಯೆಗಳಿಂದ. ಆದರೆ ಉತ್ಸರ್ಜಿತ ವಿಸರಣೆಯ ಲಕ್ಷಣ ವಾಯುಮಂಡಲದ ಪರಿಸ್ಥಿತಿಗಳಿಂದ ಪ್ರಭಾವಿತವಾಗಿರುತ್ತದೆ. ನಕ್ಷತ್ರದ ತ್ರಿಜ್ಯಕ್ಕೆ ಲಂಬವಾಗಿರುವ ಸಮತಲಗಳಿಂದ ಸ್ತರೀಕರಿಸಲ್ಪಟ್ಟ ವಾಯುಮಂಡಲದಲ್ಲಿ (ಸಮತಲ–

ಸಮಾಂತರ ವಾಯುಮಂಡಲ) ಶಕ್ತಿಯ ನಿವ್ವಳ ಒಟ್ಟು ಅಭಿವಾಹ ಅಥವಾ ಪರಿಣಾಮಕಾರೀ ಉಷ್ಣತೆ (Teff), ಗುರುತ್ವದ ಪರಿಣಾಮವಾದ ವೇಗೋತ್ಕರ್ಷ (g) ಮತ್ತು ಭಿನ್ನ ಧಾತುಗಳ ಸಾಪೇಕ್ಷ ವಿಪುಲತೆ ($A_i$) ಇವು ವಾಯುಮಂಡಲದಲ್ಲಿಯ ಬೇರೆ ಬೇರೆ ಆಳಗಳಲ್ಲಿ ಉಷ್ಣತೆ (T) ಮತ್ತು ಒತ್ತಡ (P) ಮುಂತಾದ ಭೌತ ಪ್ರಾಚಲಗಳನ್ನು ತಿಳಿಯಲು ಸಾಕು. ಸಾಮಾನ್ಯವಾಗಿ ವಾಯುಮಂಡಲದಲ್ಲಿ ಶಕ್ತಿಯ ಆಕರಗಳಾಗಲಿ ಅಭಿಗಮಗಳಾಗಲಿ (ಸಿಂಕ್ಸ್) ಇಲ್ಲವೆಂದು ಭಾವಿಸುತ್ತೇವೆ. ಇದರಿಂದಾಗಿ ಬೇರೆ ಬೇರೆ ಆಳಗಳಲ್ಲಿ ಎಲ್ಲ ಅಲೆಯುದ್ದಗಳಲ್ಲೂ ಸಂಕಲಿಸಿದಾಗ ಒಂದು ಸ್ಥಿರ ಅಭಿವಾಹ ಏರ್ಪಡುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ ಶಕ್ತಿಯ ಒಂದು ಅಂಶ ವಿಸರಣೆಯಾಗಿಯೂ ಇನ್ನೊಂದು ಅಂಶ ದ್ರವ್ಯರಾಶಿ ಚಲನೆಯಾಗಿಯೂ (ಉಷ್ಣನಯನ) ಸಾಗಬಹುದು. ಇಂಥ ಒಂದು ಸಂದರ್ಭದಲ್ಲಿ ವಿಸರಣ ಹಾಗೂ ನಯನ ಅಭಿವಾಹಗಳ ಮೊತ್ತ ಆಳದೊಡನೆ ಸ್ಥಿರವಾಗಿ ಇರುತ್ತದೆ. ಹೊರಬರುವ ವಿಸರಣೆಯ ರೋಹಿತವನ್ನು ಮುನ್ನುಡಿಯಲು ವಾಯುಮಂಡಲದ ಈ ತರಹದ ಪ್ರತಿಕೃತಿಯನ್ನು (ಮಾಡೆಲ್) ಉಪಯೋಗಿಸುವೆವು. ಮುಂದೆ ಈ ವಿಸರಣೆಯನ್ನು ವೀಕ್ಷಣೆಗಳೊಂದಿಗೆ ಹೋಲಿಸುತ್ತೇವೆ. ಸಾಮಾನ್ಯವಾಗಿ ಹೇಳುವುದಾದರೆ ಗಣನೆಯಿಂದ ಉದ್ಭವಿಸುವ ರೋಹಿತವೂ ವೀಕ್ಷಿತ ರೋಹಿತವೂ ಒಂದೇ ಆಗಿರುವುದಿಲ್ಲ. ಇಂಥ ಒಂದು ಸಂದರ್ಭದಲ್ಲಿ ಪ್ರತಿಕೃತಿಯನ್ನು ಯುಕ್ತ ಮಾರ್ಪಾಡುಗಳ ಸಮೇತ, ಗಣಿಸಿದ ಹಾಗೂ ವೀಕ್ಷಿತ ರೋಹಿತಗಳ ನಡುವೆ ಯೋಗ್ಯ ಹೊಂದಾಣಿಕೆ ಏರ್ಪಡುವವರೆಗೆ ಪುನರ್ಗಣನೆ ಮಾಡಲಾಗುವುದು. ಈ ಮಾರ್ಪಾಡುಗಳು ನಾವು ಅಂಗೀಕರಿಸಿಕೊಂಡಿರುವ ಪ್ರಾಚಲಗಳಲ್ಲಿ ಇರಬಹುದು ಅಥವಾ ಅಭಿಗೃಹೀತಗಳಲ್ಲಿ ಇರಬಹುದು ಅಥವಾ ಇವೆರಡರಲ್ಲೂ ಇರಬಹುದು.

ವಾಯುಮಂಡಲ ಸ್ಥೂಲಯಾಂತ್ರಿಕ ಸಮತೋಲ ಸ್ಥಿತಿಯಲ್ಲಿದ್ದರೆ (ಸ್ಟೇಟ್ ಆಫ್ ಮ್ಯಾಕ್ರೋಸ್ಕೋಪಿಕ್ ಮೆಕ್ಯಾನಿಕಲ್ ಈಕ್ವಿಲಿಬ್ರಿಯಂ) ಆಳದೊಂದಿಗೆ ಒತ್ತಡ ವಿಚಲನೆಯನ್ನು ಜಲಸ್ಥಿತಿಸಮತೋಲದ ಸಮೀಕರಣ ಕೊಡುತ್ತದೆ. ಈ ಸಮೀಕರಣದ ಅಭಿಗೃಹೀತದ ಪ್ರಕಾರ ಪ್ರತಿಯೊಂದು ಬಿಂದುವಿನಲ್ಲೂ ಹೊರಗಡೆಗೆ ನಿರ್ದೇಶಿತ ಒತ್ತಡ ಗುರುತ್ವದ ಪರಿಣಾಮವಾದ ಒಳಸೆಳೆತದಿಂದ ಅಲ್ಲಿಂದಲ್ಲಿಗೆ ಸರಿ ತೂಗಿಸಲ್ಪಟ್ಟಿರುವುದು ಎಂದಿದೆ. ಶಕ್ತಿಯ ಸಾಗಣೆ ಫೋಟಾನ್ ವಿಸರಣೆಯಿಂದ (ವಿಸರಣ ಸಮತೋಲ) ಅಥವಾ ದ್ರವ್ಯರಾಶಿಚಲನೆಯಿಂದಲೇ(ನಯನ ಸಮತೋಲ) ಅಥವಾ ಇವೆರಡರ ಸಂಯೋಗದಿಂದಲೇ ಎಂಬುದರ ಮೇಲೆ ಆಳದೊಂದಿಗೆ ಉಷ್ಣತೆಯ ವಿಚಲನೆ ಅವಲಂಬಿಸಿದೆ. ವಿಸರಣ ಸಮತೋಲವಿರುವಲ್ಲಿ ವಿಸರಣ ವರ್ಗಾವಣೆಯ ಸಮೀಕರಣವನ್ನು ಬಳಸುತ್ತೇವೆ. ದ್ರವ್ಯ ಮತ್ತು ವಿಸರಣೆಗಳ ನಡುವಿನ ಅಂತರಕ್ರಿಯೆಯಿಂದ ವಿಸರಣೆಯ ತೀವ್ರತೆಯಲ್ಲಾಗುವ ಬದಲಾವಣೆಯನ್ನು ಈ ಸಮೀಕರಣ ದ್ರವ್ಯದ ಅವಶೋಷಣ ಹಾಗೂ ಉತ್ಸರ್ಜನ ಗುಣಗಳ ಮೂಲಕ ಗಣನೆಗೆ ತೆಗೆದುಕೊಳ್ಳುತ್ತದೆ. ನಯನ ಕ್ರಮಕ್ಕೆ ನಯನಧಾತುವಿನ ದ್ರವ್ಯರಾಶಿ ಚಲನೆಯಲ್ಲಿ ಶಕ್ತಿ ಅವಶೋಷಣೆ ಇಲ್ಲದ ಅಥವಾ ಶಕ್ತಿ ನಷ್ಟ ಏನೂ ಆಗದೆ ಉಷ್ಣಾಪಾರಕ (ಏಡಿಯಾಬೆಟಿಕ್) ಪರಿಸ್ಥಿತಿ ನಯನ ಪ್ರದೇಶವನ್ನು ಸರಿ ಸುಮಾರಾಗಿ ಚೆನ್ನಾಗಿ ಸೂಚಿಸುತ್ತದೆ. ನಯನದ ಪ್ರಾರಂಭ ತೊಡಗಿದ್ದು ನಯನ ಕ್ರಮದಿಂದ ಶಕ್ತಿಯ ಸಾಗಣೆ ಬಲು ದಕ್ಷವಾಗಿಲ್ಲದ ಪರಿಸ್ಥಿತಿಯಲ್ಲಿ ವಿಸರಣಕ್ರಮ ಮತ್ತು ನಯನಕ್ರಮದ ನಡುವಿನ ಒಂದು ವಿಧದ ಸರಾಸರಿ, ಆಳದೊಡನೆ ಆಗುವ ಉಷ್ಣತಾ ವಿಚಲನೆಯನ್ನು ಕೊಡುತ್ತದೆ. ಈ ಒತ್ತಡ ಹಾಗೂ ಉಷ್ಣತಾ ಸ್ತರೀಕರಣದ (ಟೆಂಪರೇಚರ್ ಸ್ಟ್ರಾಟಿಫಿಕೇಷನ್) ಗಣನೆಗೆ ಮೇಲಿನ ಎರಡು ಸಮೀಕರಣಗಳಲ್ಲದೆ ಎರಡು ಸಹಾಯಕ ಸಮೀಕರಣಗಳು ಸಹ ಬೇಕಾಗುತ್ತವೆ. ಒಂದು ಸ್ಥಿತಿ ಸಮೀಕರಣ. ಇದು [ಒಂದು ದತ್ತ ಧಾತು ವಿಪುಲತೆ $A_i$ ಯಲ್ಲಿ] ಉಷ್ಣತೆ, ಒತ್ತಡ ಮತ್ತು ಸಾಂದ್ರತೆಗಳ ನಡುವಿನ ಪರಸ್ಪರ ಸಂಬಂಧವನ್ನು ತಿಳಿಸುತ್ತದೆ. ಇಂಥ ಸಂಬಂಧ ಒಂದು ಸಲ ಗೊತ್ತಾದಾಗ ಸ್ಥಿರ ಒತ್ತಡದಲ್ಲಿ ಗ್ರಾಹ್ಯೋಷ್ಣ (ಸ್ಪೆಸಿಫಿಕ್ ಹೀಟ್) ಮುಂತಾದ ಇತರ ಉಷ್ಣಗತೀಯ ಪರಿಣಾಮಗಳನ್ನು ಸುಲಭವಾಗಿ ಗಣಿಸಬಹುದು. ಇನ್ನೊಂದು ಸಹಾಯಕ ಸಮೀಕರಣ ಒಂದು ದತ್ತ ಅಲೆಯುದ್ದಕ್ಕೆ ಅವಶೋಷಣ ಗುಣಾಂಕವನ್ನು (ಅಬ್‌ಸಾರ್ಪ್‌ಷನ್ ಕೋಎಫಿಷಂಟ್) ಎರಡು ಉಷ್ಣ ಗತೀಯ ಚರಗಳ–ಉದಾಹರಣೆಗೆ ಒತ್ತಡ ಮತ್ತು ಉಷ್ಣತೆ–ಹಾಗೂ ಸಾಪೇಕ್ಷ ಧಾತು ವಿಪುಲತೆಗಳ (ರಿಲೇಟಿವ್ ಎಲಿಮೆಂಟಲ್ ಅಬಂಡೆನ್ಸ್‌ಸ್) ಉತ್ಪನ್ನವಾಗಿ ಕೊಡುತ್ತದೆ. ಅವಶೋಷಣ ಗುಣಾಂಕ ದ್ರವ್ಯದೊಡನೆ ವಿಸರಣೆಯ ಅಂತರಕ್ರಿಯೆಯ ಒಂದು ಮಾಪನ. ಇದು ವಿಸರಣೆಯ ಸ್ವಭಾವ ಮತ್ತು ಪ್ರವಹನವನ್ನು (ನೇಚರ್ ಅಂಡ್ ಫ್ಲೋ ಆಫ್ ರೇಡಿಯೇಷನ್) ನಿಯಂತ್ರಿಸುತ್ತದೆ. ಅವಶೋಷಣ ಗುಣಾಂಕದ ವ್ಯಸ್ತ (ಇನ್ವರ್ಸ್) ಫೋಟಾನಿನ ಮಾಧ್ಯ ಮುಕ್ತಪಥವನ್ನು (ಮೀನ್ ಫ್ರೀಪಾತ್) ಕುರಿತು ಸ್ವಲ್ಪ ಮಾಹಿತಿಯನ್ನು ಕೊಡುತ್ತದೆ. ಮಾದರಿ ವಾಯುಮಂಡಲವನ್ನು ಗಣಿಸುವಲ್ಲಿ ಅಲೆಯುದ್ದದ ಮೇಲೆ ಅವಲಂಬಿಸಿರದ ಅವಶೋಷಣ ಗುಣಾಂಕವನ್ನು ಉಪಯೋಗಿಸಿದ್ದೇ ಆದರೆ ವಾಯುಮಂಡಲದ ಮಬ್ಬುಮಾದರಿ (ಗ್ರೇ ಮಾಡೆಲ್) ಎಂದು ನಾವು ಕರೆಯುವ ಒಂದು ಮಾದರಿ ದೊರೆಯುತ್ತದೆ. ಅಲೆಯುದ್ದದ ಮೇಲೆ ಅವಲಂಬಿಸಿರುವ ಅವಶೋಷಣ ಗುಣಾಂಕವನ್ನು ಉಪಯೋಗಿಸಿದಾಗ ಮಬ್ಬಿಲ್ಲದ (ನಾನ್‌ಗ್ರೇ) ವಾಯುಮಂಡಲ ಮಾದರಿ ಫಲಿಸುತ್ತದೆ.

ವಿಸರಣೆಯನ್ನು ಅವಲೋಕಿಸಿಕೊಳ್ಳುವ ಘನಗಾತ್ರದ ಒಂದು ತುಣುಕು ವಿಸರಣೆಯನ್ನು ಉತ್ಸರ್ಜಿಸುತ್ತದೆ ಕೂಡ. ಏಕಮಾನ ಘನಗಾತ್ರಕ್ಕೆ ಉತ್ಸರ್ಜನ ಗುಣಾಂಕ ಮತ್ತು ಅವಶೋಷಣ ಗುಣಾಂಕಗಳ ನಡುವಿನ ನಿಷ್ಪತ್ತಿಗೆ ಆಕರ ಉತ್ಪನ್ನ (ಸೋರ್ಸ್ ಫಂಕ್ಷನ್) ಎಂದು ಹೆಸರು. ಇದೊಂದು ಬಲು ಮುಖ್ಯ ಪರಿಮಾಣ. ಏಕೆಂದರೆ ಘನಗಾತ್ರದ ಆ ತುಣುಕಿನಲ್ಲಿರುವ ಅನಿಲದ ಸ್ಥಿತಿಯನ್ನು ಇದು ನಿರೂಪಿಸುತ್ತದೆ. ಉಷ್ಣಗತೀಯ ಸಮತೋಲದಲ್ಲಿ ಬೇರೆ ಬೇರೆ ಸ್ವಾತಂತ್ರ್ಯಾಂಕಗಳ (ಡಿಗ್ರೀಸ್ ಆಫ್ ಫ್ರೀಡಂ) ನಡುವೆ ಒಟ್ಟು ಶಕ್ತಿಯ ಸಂಪೂರ್ಣ ಸಮವಿಭಾಗ ಸಂಭವಿಸುತ್ತದೆ. ಅರ್ಥಾತ್ ಇಂಥ ಒಂದು ಉಷ್ಣಗತೀಯ ವ್ಯವಸ್ಥೆಯಲ್ಲಿ ಒಂದೊಂದು ಪ್ರಕ್ರಿಯೆಗೂ ಅದರ ನಿಷ್ಕೃಷ್ಟ ವ್ಯಸ್ತ ಉಂಟು. ಇಷ್ಟೂ ಅಲ್ಲದೆ ಯಾವುದೇ ಅನಿಲ ಘನಗಾತ್ರದ ತುಣುಕಿನಲ್ಲಿಯ ಪರಿಸ್ಥಿತಿಗಳನ್ನು ಸ್ಥಳೀಯ ಪ್ರಾಚಲಗಳಿಂದ ನಿರ್ದಿಷ್ಟಗೊಳಿಸಬಹುದಾದರೆ ಆಗ ನಮಗೆ ಸ್ಥಳೀಯ ಉಷ್ಣಗತೀಯ ಸಮತೋಲ (ಲೋಕಲ್ ಥರ್ಮೊಡೈನಮಿಕಲ್ ಈಕ್ವಿಲಿಬ್ರಿಯಂ; LTE) ನಿರ್ಬಂಧ ಲಭಿಸುತ್ತದೆ. LTE ಯಲ್ಲಿ ಆಕರ ಪ್ಲಾಂಕ್ ಉತ್ಪನ್ನವಾಗುತ್ತವೆ. ಇದು ಒಂದು ಕಪ್ಪು ವಸ್ತುವಿಗೆ (ಬ್ಲ್ಯಾಕ್ ಬಾಡಿ) ತೀವ್ರತೆಯ ವಿತರಣೆಯನ್ನು ಉಷ್ಣತೆ ಮತ್ತು ಅಲೆಯುದ್ದದ ಉತ್ಪನ್ನವಾಗಿ ಕೊಡುತ್ತದೆ. LTE ಯನ್ನು ಅಭಿಗ್ರಹಿಸುವುದರಿಂದ ಮಾದರಿ ವಾಯುಮಂಡಲದ ಗಣನೆ ಬಹುಮಟ್ಟಿಗೆ ಸರಳವಾಗುತ್ತದೆ. non-LTE ಯು ಸಾರ್ವತ್ರಿಕ ಸಂದರ್ಭದಲ್ಲಾದರೋ ವಾಯುಮಂಡಲದಲ್ಲಿಯ ಯಾವುದೇ ಆಳದಲ್ಲಿ ಆಕರ ಉತ್ಪನ್ನ ಇಡೀ ವಾಯುಮಂಡಲವನ್ನು ಅವಲಂಬಿಸಿರುವುದು.

ಮಾದರಿಯ ವಾಯುಮಂಡಲಗಳನ್ನು ರಚಿಸುವಲ್ಲಿಯ ಉದ್ದೇಶಗಳಲ್ಲಿ ಒಂದು ಎಂದರೆ ವೀಕ್ಷಣೆ ಮಾಡಿದ ರೋಹಿತಗಳನ್ನು ಬಳಸಿಕೊಂಡು ನಕ್ಷತ್ರಗಳ ವಾಯುಮಂಡಲಗಳಲ್ಲಿ ಇರುವ ಧಾತುಗಳ ಸಾಪೇಕ್ಷ ಪರಿಮಾಣಗಳನ್ನು ಕಂಡು ಹಿಡಿಯುವುದು. ಆದರೆ ಇಂಥ ಒಂದು ಮಾದರಿಯನ್ನು ಗಣಿಸುವ ಮೊದಲು ಸಾಪೇಕ್ಷ ಧಾತು ವಿಪುಲತೆಗಳು ಬೇಕಾಗುತ್ತವೆ. ಈ ಹಿಂದೆ ಹೇಳಿರುವಂತೆ ಇದೊಂದು ಪುನರಾವೃತ್ತಿ ವಿಧಾನ: ಎಂದರೆ, ಕೆಲವು ವಿಪುಲತೆಗಳನ್ನು ಕಲ್ಪಿಸಿಕೊಂಡು ಮಾದರಿ ವಾಯುಮಂಡಲವೊಂದನ್ನು ರಚಿಸಿ ವಿಪುಲತೆಗಳ ಸರಿಪಡಿಸಿದ ಬೆಲೆಗಳನ್ನು ನಿರ್ಧರಿಸುತ್ತೇವೆ; ಕಲ್ಪಿಸಿಕೊಂಡ ಹಾಗೂ ಗಣಿಸಿದ ವಿಪುಲತೆಗಳ ನಡುವೆ ತಕ್ಕಮಟ್ಟಿನ ಹೊಂದಾಣಿಕೆ ಬರುವವರೆಗೂ ಈ ಚಕ್ರವನ್ನು ಪುನರಾವರ್ತಿಸುತ್ತೇವೆ. ಇಂಥ ಮಾದರಿ ಗಣನೆಗಳ ಪರಿಣಾಮವಾಗಿ ಬಹುತೇಕ ನಕ್ಷತ್ರಗಳ ವಾಯುಮಂಡಲಗಳಲ್ಲಿ ಹೈಡ್ರೊಜನ್ ಅತ್ಯಂತ ವಿಪುಲವಾದ ಧಾತು ಎಂದೂ ಅದರ ತರುವಾಯದ ಸ್ಥಾನ ಹೀಲಿಯಂ (ಇದು ಹೈಡ್ರೋಜನ್ನಿನ 10%ರಷ್ಟು ವಿಪುಲವಾಗಿದೆ) ಧಾತುವಿನದೆಂದೂ ಇತರ ಧಾತುಗಳ ಸಂಖ್ಯೆ ಬೇಕಾದಷ್ಟು ಇದ್ದರೂ ಅವುಗಳ ಅಂಶ ಗೌಣವೆಂದೂ ತಿಳಿಯುತ್ತದೆ. ಕೇವಲ ಕೆಲವೇ ಸಂಖ್ಯೆಯ ನಕ್ಷತ್ರಗಳಲ್ಲಿ ತೀರ ಭಿನ್ನವಾದ ಸಾಪೇಕ್ಷ ಧಾತು ವಿಪುಲತೆಗಳಿವೆ. ಸೂರ್ಯನಿಗಿಂತ ಅತಿ ಹೆಚ್ಚು ಬಿಸಿಯಾದ ವಾಯುಮಂಡಲಗಳಿರುವ ನಕ್ಷತ್ರಗಳು ಸಾಮಾನ್ಯವಾಗಿ ವಿರಸರಣ ಸಮತೋಲದಲ್ಲಿರುವುದನ್ನು ಕಾಣಲಾಗಿದೆ. ಆದರೆ ಸೂರ್ಯನಂಥ ಮತ್ತು ಅದಕ್ಕಿಂತ ತಣ್ಣಗಿನ ನಕ್ಷತ್ರಗಳಿಗೆ ಒಂದು ಉಷ್ಣನಯನ ವಲಯ (ಕನ್ವೆಕ್ಟಿವ್ ಝೋನ್) ಮತ್ತು ಅದರ ಮೇಲೆ ವಿಸರಣ ಸಮತೋಲದಲ್ಲಿರುವ ಪದರಗಳು ಇದ್ದೇ ಇರುತ್ತವೆ. ಸಮತಲ ಸಮಾಂತರ ವಾಯುಮಂಡಲಗಳ ಮಾದರಿಗಳು ದೈತ್ಯ ಹಾಗೂ ಅತಿದೈತ್ಯ ನಕ್ಷತ್ರಗಳ ಅತಿ ವಿಸ್ತೃತ ವಾಯುಮಂಡಲಕ್ಕೆ ಒಳ್ಳೆಯ ನಿದರ್ಶನಗಳಲ್ಲ. ಈ ಸಂದರ್ಭದಲ್ಲಿ ನಕ್ಷತ್ರ ಗೋಳಾಕಾರದಲ್ಲಿದೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುವುದು. ಇದಕ್ಕೆ ಒಂದು ನಿರ್ದಿಷ್ಟ ತ್ರಿಜ್ಯದ ಒಳಗೆ ಅಡಕವಾಗಿರುವ ದ್ರವ್ಯರಾಶಿಯನ್ನು ಕೊಡುವ ಮೂರನೆಯ ಒಂದು ಸಮೀಕರಣದ ಪರಿಶೀಲನೆ ಅಗತ್ಯ. ವಾಯುಮಂಡಲದ ಒಂದು ಗೋಳಮಾದರಿಯನ್ನು ದ್ರವ್ಯರಾಶಿ ತ್ರಿಜ್ಯ, ಕಾಂತಿ ಅಥವಾ ನಕ್ಷತ್ರದ ಪರಿಣಾಮಕಾರಿ ಉಷ್ಣತೆ ಮತ್ತು ಸಾಪೇಕ್ಷಧಾತು ವಿಪುಲತೆಗಳಿಂದ ವ್ಯಾಖ್ಯಿಸಲಾಗಿದೆ. ಪ್ರಕೃತದಲ್ಲಿ ವಾಯುಮಂಡಲದ ಉತ್ತಮವಾದ ಗೋಳಮಾದರಿಗಳ ರಚನೆಯ ಹಾದಿಯಲ್ಲಿ ಬೇಕಾದಷ್ಟು ಪ್ರಯತ್ನ ಮುಂದುವರಿದಿದೆ. ವಾಯುಮಂಡಲಗಳನ್ನು ಅವು ನೀಡುವ ಮಾಹಿತಿಯ ಸಂಪತ್ತಿಗೋಸ್ಕರ ಮಾತ್ರವಲ್ಲ ನಕ್ಷತ್ರಗಳ ಆಂತರಿಕ ಮಾದರಿಗಳಿಗೆ ಅವು ನೀಡುವ ಗಡಿನಿರ್ಬಂಧಗಳಿಗಾಗಿ ಕೂಡ ಅಭ್ಯಸಿಸುತ್ತೇವೆ.

4 **ನಕ್ಷತ್ರಗಳ ಸ್ವರೂಪ ಮತ್ತು ವಿಕಾಸ:** ನಕ್ಷತ್ರಗಳು ಪ್ರತಿ ಸೆಕೆಂಡಿನಲ್ಲೂ ಅಗಾಧ ಮೊತ್ತದ ಶಕ್ತಿಯನ್ನು ಉತ್ಸರ್ಜಿಸುತ್ತವೆ. ಇದರಿಂದಾಗಿ ಒಂದು ನಕ್ಷತ್ರದ ಸ್ವರೂಪದಲ್ಲಿ ಬದಲಾವಣೆಗಳು ತೀವ್ರಗತಿಯಿಂದ ಆಗುತ್ತಿರಬೇಕು ಎಂದು ನಾವು ನಿರೀಕ್ಷಿಸಬಹುದು.

ಆದರೆ ಇದು ನಿಜವಲ್ಲ. ವಾಸ್ತವಿಕವಾಗಿ ನಕ್ಷತ್ರಗಳಲ್ಲಿ ಗಮನಾರ್ಹ ಬದಲಾವಣೆ ಕಂಡು ಬರಲು ಕೋಟ್ಯಂತರ ವರ್ಷಗಳೇ ಬೇಕು. ಇದು ಹೀಗಲ್ಲದಿದ್ದರೆ ಮತ್ತು ನಮ್ಮ ಸೂರ್ಯ ಅತಿವೇಗದಿಂದ ವಿಕಸಿಸುತ್ತಿದ್ದರೆ ಈ ವೇಳೆಗೆ ಭೂಮಿ ಮನುಷ್ಯವಾಸಕ್ಕೆ ಅಸಹನೀಯವಾಗುತ್ತಿತ್ತು. ವಿಶ್ವದ ಮೂಲಘಟಕ ನಕ್ಷತ್ರ. ಆದ್ದರಿಂದ ವಿಶ್ವದ ಸ್ವಭಾವವನ್ನು ತಿಳಿಯುವಲ್ಲಿ ನಕ್ಷತ್ರದ ವಿಕಾಸ ಪ್ರಧಾನ ಪಾತ್ರ ವಹಿಸುತ್ತದೆ. ಸಂಕ್ಷೇಪವಾಗಿ ಹೇಳುವುದಾದರೆ ಈ ವಿಕಾಸ ಧಾತುಗಳ ಸಂಶ್ಲೇಷಣೆಯ ವಿಚಾರ ತಿಳಿಸುತ್ತದೆ. ಇದರಿಂದಾಗಿ ಕೆಲವು ವರ್ಗದ ನಕ್ಷತ್ರಗಳ ವಿಚಿತ್ರ ವಿಪುಲತೆಗಳು ನಕ್ಷತ್ರದ ಪ್ರಾಯ ಮತ್ತು ಗುಚ್ಛಗಳ (ಕ್ಲಸ್ಟರ್ಸ್) ಹಾಗೂ ಬ್ರಹ್ಮಾಂಡಗಳ (ಗ್ಯಾಲಕ್ಸೀಸ್) ವಿಕಾಸ ಇವನ್ನು ವಿವರಿಸಲು ಸಹಾಯವಾಗುತ್ತದೆ. ವಿಕಾಸದ ಅಭ್ಯಾಸ ನಕ್ಷತ್ರದ ರಚನೆಯನ್ನು ಅವಲಂಬಿಸಿದೆ. ಇದರ ಅಭ್ಯಾಸ–ವಾಯುಮಂಡಲದ ಅಭ್ಯಾಸದಂತೆ–ಉಷ್ಣತೆ ಒತ್ತಡ ಮತ್ತು ಇತರ ಚರಗಳಲ್ಲಿಯ ಬದಲಾವಣೆಯನ್ನು ನಕ್ಷತ್ರ ಕೇಂದ್ರದಿಂದ ಆರೀಯ ದೂರದ ಒಂದು ಉತ್ಪನ್ನವಾಗಿ (ನಕ್ಷತ್ರದ ಆಕಾರ ಗೋಳವೆಂದು ಭಾವಿಸಿಕೊಂಡರೆ) ಕೊಡುತ್ತದೆ. ನಕ್ಷತ್ರದಿಂದ ಶಕ್ತಿನಷ್ಟ ಅವಿಚ್ಛಿನ್ನವಾಗಿ ಆಗುವುದರ ಹಾಗೂ ನಕ್ಷತ್ರದ ಸ್ಥಿತಿ ಅರೆಸ್ಥಿರವಾಗಿರುವುದರ ಹಿನ್ನೆಲೆಯಲ್ಲಿರುವ ಭೌತ ಪ್ರಕ್ರಿಯೆಗಳನ್ನು ಕಂಡು ಹಿಡಿಯಲು ಮೇಲಿನ ತೀರ್ಮಾನಗಳು ಸಹಾಯಕವಾಗುತ್ತವೆ.

ದ್ರವ್ಯರಾಶಿ (M), ತ್ರಿಜ್ಯ (R) ಮತ್ತು ಕಾಂತಿ (L) ಅಥವಾ ಪರಿಣಾಮಕಾರೀ ಉಷ್ಣತೆ (Teff) ಇವು ಒಂದು ದತ್ತ ನಕ್ಷತ್ರಕ್ಕೆ ಒಂದು ದತ್ತಮುಹೂರ್ತದಲ್ಲಿ ಅಥವಾ ಕಾಲದಲ್ಲಿ ರಾಸಾಯನಿಕ ಸ್ವರೂಪವನ್ನು ($A_i$) ಒಳಗೊಂಡಂತೆ ಮೂಲಭೂತ ಪರಿಮಾಣಗಳು. ಉತ್ಪಾತ (ಕೃತಾಸ್ಟ್ರಫಿ) ಪ್ರಕ್ರಿಯೆಗಳೇನಾದರೂ ಇಲ್ಲದಿದ್ದರೆ ಅಥವಾ ದ್ರವ್ಯರಾಶಿ ಬೇರೆ ಯಾವುದಾದರೂ ರೂಪದಲ್ಲಿ ಉಚ್ಚಾಟಿಸಲ್ಪಡದಿದ್ದರೆ ವಿಕಾಸದಲ್ಲಿ ನಕ್ಷತ್ರ ಮುಂದುವರಿದಂತೆ ಅದರ ದ್ರವ್ಯರಾಶಿ ಹೆಚ್ಚುಕಡಿಮೆ ಸ್ಥಿರವಾಗಿಯೇ ಉಳಿದಿದ್ದು R, L ಮತ್ತು $A_i$ಗಳಲ್ಲಿ ಬದಲಾವಣೆಗೊಳ್ಳುತ್ತಿರುತ್ತದೆ.

ಒಂದು ನಕ್ಷತ್ರದ ಸ್ವರೂಪ ನಾಲ್ಕು ಮೂಲಭೂತ ಸಮೀಕರಣಗಳಿಂದ ನಿರ್ಧರಿಸಲ್ಪಡುತ್ತದೆ–ಜಲಸ್ಥಿತಿ ಸಮತೋಲದ ಸಮೀಕರಣ, ಶಕ್ತಿ ಸಾಗಣೆಯ ಸಮೀಕರಣ, ದ್ರವ್ಯರಾಶಿಯ ಅವಿಚ್ಛಿನ್ನತೆಯ ಸಮೀಕರಣ (ವಾಯುಮಂಡಲದ ಸಂದರ್ಭದಂತೆ) ಮತ್ತು ಉಷ್ಣಸಮತೋಲದ ನಾಲ್ಕನೆಯ ಸಮೀಕರಣ. ಇವುಗಳೊಂದಿಗೆ ಮೂರು ಸಹಾಯಕ ಸಮೀಕರಣಗಳೂ ಬೇಕು–ವಾಯುಮಂಡಲದ ಸಂದರ್ಭದಲ್ಲಿಯಂತೆ ಸ್ಥಿತಿಸಮೀಕರಣ ಮತ್ತು ಅಪಾರದರ್ಶಕತೆಗೆ ಸಮೀಕರಣಗಳು; ಮತ್ತು ಶಕ್ತಿ ಉತ್ಪಾದನೆಯನ್ನು ಉಷ್ಣತೆ, ಸಾಂದ್ರತೆ ಮತ್ತು ರಾಸಾಯನಿಕ ಸಂಯೋಜನೆಯ ಉತ್ಪನ್ನವಾಗಿ ಕೊಡುವ ಸಮೀಕರಣ. ನಕ್ಷತ್ರ ಕೇಂದ್ರದಲ್ಲಿ ದ್ರವ್ಯರಾಶಿ ಹಾಗೂ ಕಾಂತಿ ಶೂನ್ಯವಾಗುವುದೆಂದೂ ಸರಿಯಾದ ವಾಯುಮಂಡಲಕ್ಕೆ ಹೊರ ಗಡಿಯೊಂದಿರುವುದೆಂದೂ ನಿರ್ಬಂಧಗಳನ್ನು ವಿಧಿಸಿಕೊಂಡು ಈ ಸ್ವರೂಪ ಸಮೀಕರಣಗಳನ್ನು ಬಿಡಿಸಿ ಒಂದು ಮಾದರಿಯನ್ನು ಪಡೆಯಬಹುದು.

ಸಾಧಾರಣವಾಗಿ, ಮಾದರಿಗಳನ್ನು ಗಣಿಸುವಾಗ ನಕ್ಷತ್ರ ಜಲಸ್ಥಿತೀಯ ಹಾಗೂ ಉಷ್ಣ ಸಮತೋಲದಲ್ಲಿದ್ದರೆ, ಅದು ಅನಾವರ್ತನೀಯ (ನಾನ್ ರೋಟೇಟಿಂಗ್) ಹಾಗೂ ಅಕಾಂತೀಯ (ನಾನ್ ಮ್ಯಾಗ್ನೆಟಿಕ್) ಎಂಬುದಾಗಿ ಭಾವಿಸುತ್ತೇವೆ. ಆದರೆ ವಿಕಾಸದ ಕೆಲವು ಘಟ್ಟಗಳಲ್ಲಿ ಈ ಸರಳವಾದ ಕಲ್ಪನೆಗಳು ನಿಜಸ್ಥಿತಿಗೆ ತುಂಬ ದೂರವಾಗಬಹುದು; ಮತ್ತು ಕೆಲವು ಪ್ರರೂಪಗಳ ನಕ್ಷತ್ರಗಳಿಗೆ ಮತ್ತು ಕೆಲವು ಮುಹೂರ್ತಗಳಲ್ಲಿ ನೈಜಸ್ಥಿತಿಯಿಂದ ತುಂಬ ದೂರವಾಗದಿರಬೇಕಾದರೆ ಮೇಲಿನ ಕೆಲವೊಂದು ಅಭಿಗೃಹೀತಗಳು ಇರದಂಥ ಮಾದರಿಗಳನ್ನು ರಚಿಸಬೇಕಾಗುತ್ತದೆ. ಉದಾಹರಣೆಗೆ ಸೂರ್ಯನನ್ನೇ ತೆಗೆದುಕೊಂಡರೆ ಜಲಸ್ಥಿತೀಯ ಸಮತೋಲ ಶೇ.1 ರಷ್ಟು ವಿಚಲನೆಗೊಂಡರೆ ತ್ರಿಜ್ಯದಲ್ಲಿ ಸುಮಾರು ಶೇ.10ರಷ್ಟು ಬದಲಾವಣೆ ಸುಮಾರು ಒಂದು ಗಂಟೆಯಲ್ಲೇ ಆಗುತ್ತದೆ. ಇಂಥ ಬದಲಾವಣೆಗಳನ್ನು ಗಮನಿಸುವುದು ತೀರ ಅಪರೂಪವಾದ್ದರಿಂದ ಜಲಸ್ಥಿತೀಯ ಸಮತೋಲದ ಅಭಿಗೃಹೀತ ಸಮರ್ಪಕವಾದದ್ದು. ಆದರೆ ಅಂತರನಾಕ್ಷತ್ರಿಕ ಮೇಘದಿಂದ ಒಂದು ನಕ್ಷತ್ರ ರೂಪಗೊಳ್ಳುತ್ತಿರುವ ಘಟ್ಟದಲ್ಲಿ ಅಥವಾ ಮಹಾನೋವ ಆಸ್ಫೋಟನೆಯನ್ನು ಪರಿಶೀಲಿಸುವಲ್ಲಿ ಜಲಸ್ಥಿತೀಯ ಸಮತೋಲದ ಅಭಿಗೃಹೀತವನ್ನು ಕೈಬಿಡುವುದು ಬಲುಮುಖ್ಯ.

ಸೂರ್ಯನಂಥ ಒಂದು ನಕ್ಷತ್ರದಲ್ಲಿ ಕೇಂದ್ರ ಉಷ್ಣತೆ ಸುಮಾರು $10^{7}$°ಕೆ. ಕೇಂದ್ರ ಒತ್ತಡ ಸುಮಾರು $10^{9}$ ವಾಯುಮಂಡಲಗಳೂ ಮತ್ತು ಕೇಂದ್ರ ಸಾಂದ್ರತೆ ಸುಮಾರು $10^{2}$ ಗ್ರಾಂ./ಸೆಂಮೀ.$^{3}$ ಆದರೆ ಕೇಂದ್ರ ಉಷ್ಣತೆಗಳು $10^{9}$°ಕೆಯಷ್ಟು ಅಧಿಕವಾಗಿರುವ ನಕ್ಷತ್ರಗಳೂ ಕೇಂದ್ರ ಸಾಂದ್ರತೆಗಳೂ $10^{16}$ ಗ್ರಾಂ./ಸೆಂಮೀ$^{3}$. ದರ್ಜೆಯಲ್ಲಿರುವ (ಆರ್ಡರ್), ನಕ್ಷತ್ರಗಳೂ ಇರಬಹುದು.

ಸಾಧಾರಣವಾಗಿ ಸ್ಥಿತಿಸಮೀಕರಣವನ್ನು ಪರಿಶೀಲಿಸುವಾಗ ಪರಿಪೂರ್ಣ ಅನಿಲದ (ಪರ್ಫೆಕ್ಟ್ ಗ್ಯಾಸ್) ನಿಯಮ ಸಿಂಧುವೆಂದು ಊಹಿಸಿಕೊಳ್ಳುತ್ತೇವೆ. ಆದರೆ ಬಿಸಿ ನಕ್ಷತ್ರಗಳಲ್ಲಿ ವಿಸರಣ ಒತ್ತಡ ಬಲುಮುಖ್ಯ. ಅತಿ ಸಂಘನಿಸಿದ್ದು (ವೆರಿ ಕಂಡೆನ್ಸ್‌ಡ್) ಶ್ವೇತಕುಬ್ಜಗಳಂತೆ ಅಥವಾ ನ್ಯೂಟ್ರಾನ್ ನಕ್ಷತ್ರಗಳಂತೆ ಕೇಂದ್ರ ಸಾಂದ್ರತೆಗಳು ಅತ್ಯಧಿಕವಾಗಿರುವ ವಸ್ತುಗಳಲ್ಲಿ ವಿಕೃತ (ಡೀಜನರೇಟ್) ಅನಿಲಕ್ಕೆ ಅನ್ವಯಿಸುವ ಸ್ಥಿತಿಸಮೀಕರಣ ಸಮರ್ಪಕವಾದದ್ದು. ಪರಮಾಣು ಪ್ರಕ್ರಿಯೆಗಳ ಪರಂಪರೆಯೇ ನಕ್ಷತ್ರಗರ್ಭದಲ್ಲಿಯ ಅಪಾರದರ್ಶಕತೆಯ ಕಾರಣ; ಇದರಲ್ಲಿ ಹಲವಾರು ಧಾತುಗಳು ಅಯಾನೀಕರಣದ ಹಾಗೂ ಉತ್ತೇಜನದ (ಎಗ್ಸೈಟೇಷನ್) ಬೇರೆ ಬೇರೆ ಘಟ್ಟಗಳಲ್ಲಿರುತ್ತವೆ. ಉನ್ನತ ಸಾಂದ್ರತೆಗಳಲ್ಲಿ ದ್ರವ್ಯ ವಿಕೃತವಾಗಿರುವಾಗ ಎಲೆಕ್ಟ್ರಾನ್ ವಹನ (ಕಂಡಕ್ಷನ್) ಸಹ ಮುಖ್ಯವಾಗುತ್ತದೆ. ಜಲಸ್ಥಿತೀಯ ಸಮತೋಲ ಒಂದು ಸ್ಥಿರ ನಕ್ಷತ್ರವನ್ನು ಸಾಧ್ಯಗೊಳಿಸಲು ಸಾಲದು. ಆದ್ದರಿಂದ ಉಷ್ಣಸಮತೋಲವನ್ನು ಸಹ ಪರಿಗಣಿಸಬೇಕು. ಶಕ್ತಿಯನ್ನು ನಕ್ಷತ್ರ ಅವಿಚ್ಛಿನ್ನವಾಗಿ ಉತ್ಸರ್ಜಿಸಿದಾಗ ನಾವು ನಿರೀಕ್ಷಿಸುವುದು ಗತೀಯ ಸಮತೋಲವನ್ನು. ನಕ್ಷತ್ರ ಸಂಕೋಚಗೊಂಡಂತೆ ಬಿಡುಗಡೆಗೊಂಡಂಥ ಗುರುತ್ವಶಕ್ತಿಯಲ್ಲಿ ಅರ್ಧದಷ್ಟು ಹೊರಮೈಯ್ಯಿಂದ ವಿಸರಣೆಯಾಗಿ ನಷ್ಟವಾಗಿಹೋಗುತ್ತದೆ. ಉಳಿದ ಅರ್ಧ ನಕ್ಷತ್ರದ ಉಷ್ಣಶಕ್ತಿಯನ್ನು ಹೆಚ್ಚಿಸುವಲ್ಲಿ ವ್ಯಯವಾಗುತ್ತದೆ. ಶಕ್ತಿಯ ಈ ಸಂಚಯನ ಸೂರ್ಯನಂಥ ಒಂದು ನಕ್ಷತ್ರಕ್ಕೆ $10^{7}$ ದರ್ಜೆಯಷ್ಟು ವರ್ಷಗಳಲ್ಲಿ ಖರ್ಚಾಗಿ ಹೋಗುತ್ತದೆ. ಭೂಮಿಯ ವಯಸ್ಸಿಗೆ ಸಾಪೇಕ್ಷವಾಗಿ ಈ ಕಾಲ ತೀರ ಕಿರಿಯದಾಗಿರುವುದರಿಂದ ನಕ್ಷತ್ರದ ಸಮಗ್ರ ಜೀವನದಲ್ಲಿ ಆಗುವ ಹೊರಮೈ ನಷ್ಟಗಳನ್ನು ಭರ್ತಿಮಾಡಲು ಗುರುತ್ವ ಹಾಗೂ ಉಷ್ಣ ಶಕ್ತಿಗಳು ಸಾಲವು; ಆದರೆ ಇವು ನಕ್ಷತ್ರ ವಿಕಾಸದ ಚರಿತ್ರೆಯ ಕೆಲವು ಘಟ್ಟಗಳಲ್ಲಿ ನಿರ್ಣಾಯಕ ಪಾತ್ರಗಳನ್ನು ವಹಿಸಬಹುದು. ನ್ಯೂಕ್ಲಿಯರ್ ಪ್ರಕ್ರಿಯೆಗಳು ದ್ರವ್ಯರಾಶಿಯನ್ನು ಶಕ್ತಿಯಾಗಿ (ಐನ್‌ಸ್ಟೈನ್ ಸಮೀಕರಣಾನುಸಾರ) ಪರಿವರ್ತಿಸುವುದರ ಮೂಲಕ ಶಕ್ತಿಯನ್ನು ಬಿಡುಗಡೆ ಮಾಡುತ್ತವೆ. ಸೂರ್ಯನಂಥ ಒಂದು ನಕ್ಷತ್ರದಲ್ಲಿ ಅದರ ದ್ರವ್ಯರಾಶಿಯ ಕೇವಲ ಶೇ.10ರಷ್ಟು ಮಾತ್ರ ಹೈಡ್ರೊಜನ್ನಿನಿಂದ ಹೀಲಿಯಂ ಆಗಿ ಪರಿವರ್ತಿಸಲ್ಪಟ್ಟರೆ–ಇದರಲ್ಲಿ ಒಂದು ಗ್ರಾಮಿಗೆ 0.008 ಗ್ರಾಂ. ಸಮಾನದಷ್ಟು ಶಕ್ತಿ ಬಿಡುಗಡೆ ಆಗುವುದು–ಆಗ ಸೂರ್ಯ ಈಗಿನ ದರದಲ್ಲಿಯೇ ಅವಿಚ್ಛಿನ್ನವಾಗಿ ವಿಸರಣೆಯನ್ನು ಸುಮಾರು $10^{10}$ ವರ್ಷಗಳ ಕಾಲ ಉತ್ಸರ್ಜಿಸಬಲ್ಲುದು. ಈ ಕಾಲಮಾನ ಸಾಕಷ್ಟು ದೊಡ್ಡದು.

ನ್ಯೂಕ್ಲಿಯರ್ ಶಕ್ತಿಯ ಪ್ರಧಾನ ಆಕರ, ಈಗಾಗಲೇ ಹೇಳಿದಂತೆ, ಹೈಡ್ರೊಜನ್ ಹೀಲಿಯಂ ಆಗಿ ಪರಿವರ್ತನೆಗೊಳ್ಳುವ ಕ್ರಿಯೆ. ಇದು ನಡೆಯುವುದು ಕೇಂದ್ರ ಉಷ್ಣತೆ ಕೆಲವು ದಶಲಕ್ಷ ಡಿಗ್ರಿಗಳಿಗಿಂತ ಹೆಚ್ಚಾಗಿರುವಾಗ ಮಾತ್ರ. ನಕ್ಷತ್ರದ ಕೇಂದ್ರಭಾಗದಲ್ಲಿ ಹೈಡ್ರೊಜನ್ ಖಾಲಿಯಾದಾಗ ನಕ್ಷತ್ರ ಸಂಕುಚಿಸುತ್ತದೆ. ಆಗ ಉಷ್ಣತೆ ಏರುತ್ತದೆ ಮತ್ತು ಹೀಲಿಯಂ ದಹನ ಪ್ರಾರಂಭವಾಗುತ್ತದೆ. ಇದರಿಂದ ಇಂಗಾಲ ಮತ್ತು ಇತರ ಧಾತುಗಳು ಉಂಟಾಗುವುವು. ನಕ್ಷತ್ರ ಕೇಂದ್ರದ ತಿರುಳಿನಲ್ಲಿ ಹೀಲಿಯಂ ಖಾಲಿಯಾದ ಬಳಿಕ ಪುನಃ ಸಂಕೋಚ ಕ್ರಿಯೆ ಸಂಭವಿಸಿ ಅದರಿಂದ ಉಷ್ಣತೆ ಏರುತ್ತದೆ; ಮತ್ತು ಆಗ ಇನ್ನೂ ಭಾರದ ಧಾತುಗಳು ದಹಿಸುತ್ತವೆ.

ಹೈಡ್ರೊಜನ್ ದಹನದ ಘಟ್ಟದಲ್ಲಿ ಮಹಾಗಾತ್ರದ ಬಿಸಿ ನಕ್ಷತ್ರಗಳ ಮಾದರಿಗಳಿಗೆ ಒಂದು ನಯನ ತಿರುಳು (ಕನ್ವೆಕ್ಟಿವ್ ಕೋರ್) ಮತ್ತು ವಿಸರಣ ಹೊರಕವಚ (ರೇಡಿಯೇಟಿವ್ ಎನ್ವಲಪ್) ಇರುತ್ತವೆ. ಇವುಗಳಿಗೆ ಕೌಲಿಂಗ್ ಪ್ರರೂಪ ಮಾದರಿ (ಕೌಲಿಂಗ್ ಟೈಪ್ ಮಾಡೆಲ್) ಎಂದು ಹೆಸರು. ಬದಲಾಗಿ, ಕಡಿಮೆ ದ್ರವ್ಯರಾಶಿಯ ಶೀತಲ ನಕ್ಷತ್ರಗಳನ್ನು ಆಸ್ಟರ್ ಬ್ರೋಕ್ ಪ್ರರೂಪ ಮಾದರಿಗಳಿಂದ ವಿವರಿಸುತ್ತೇವೆ. ಇವುಗಳಲ್ಲಿ ಒಂದು ವಿಸರಣ ತಿರುಳು ಮತ್ತು ನಯನ ಹೊರ ಕವಚಗಳಿದ್ದು ಇದರ ಮೇಲೆ ವಿಸರಣ ವಾಯುಮಂಡಲ ಇರುವುದು. ಇವುಗಳ ಪೈಕಿ ಕೆಲವು ನಕ್ಷತ್ರಗಳು ಹೊರಗಿನ ವಿಸರಣ ವಾಯುಮಂಡಲವನ್ನುಳಿದು ಇತರೆಡೆಗಳಲ್ಲಿ ಪೂರ್ಣ ನಯನೀಯ (ಫುಲ್ಲಿ ಕನ್ವೆಕ್ಟಿವ್) ಇರಬಹುದು.

ಅಂತರನಾಕ್ಷತ್ರಿಕ ಮೇಘಗಳಿಂದ ನಕ್ಷತ್ರಗಳು ರೂಪಿಸಲ್ಪಡುತ್ತವೆ. ಸಾಧಾರಣವಾಗಿ ಒಂಟಿ ಮೇಘವೊಂದರಿಂದ ಬಹುನಕ್ಷತ್ರಗಳ ಉತ್ಪಾದನೆ ಆಗುವುದು. ಒಮ್ಮೆ ಇಂಥ ಆದ್ಯನಕ್ಷತ್ರ ರೂಪಗೊಂಡ ಬಳಿಕ ಅದು ಸಂಕುಚಿಸುತ್ತದೆ. ಕಾರಣ ಅದರಲ್ಲಿಯ ಒಳಮುಖವಾದ ಗುರುತ್ವಬಲದೊಂದಿಗೆ ಹೋಲಿಸುವಾಗ ಹೊರಮುಖ ಒತ್ತಡ ಗಮನಾರ್ಹವಲ್ಲ. ಈ ಸಂಕುಚನದಲ್ಲಿ ಪರಿಣಾಮಕಾರೀ ಉಷ್ಣತೆ ಸ್ಥಿರವಾಗಿದ್ದು ಕಾಂತಿ ಕಡಿಮೆಯಾಗುತ್ತ ಹೋಗುತ್ತದೆ. ಒಳ ಪ್ರದೇಶಗಳು ಹೊರ ಪ್ರದೇಶಗಳಿಗಿಂತ ತ್ವರಿತವಾಗಿ ಸಂಕುಚಿಸುವುದರಿಂದ ಕೇಂದ್ರ ಒತ್ತಡ ಗುರುತ್ವಾಕರ್ಷಣೆಯನ್ನು ಮೀರಿದಾಗ ಆದ್ಯನಕ್ಷತ್ರ ಒಂದು ಪುಟನೆಗೆತವನ್ನೂ (ಬೌನ್ಸ್) ಅನುಭವಿಸುತ್ತದೆ. ಈ ಹಂತದಲ್ಲಿ ಉಷ್ಣತೆ ಹಾಗೂ ಕಾಂತಿ ಹೆಚ್ಚುತ್ತವೆ ಮತ್ತು ನಕ್ಷತ್ರವನ್ನು ಪ್ರಧಾನಶ್ರೇಣಿ (ಮೇನ್ ಸೀಕ್ವೆನ್ಸ್) ಎಂಬ ಹೆಸರಿನ ಹಂತದೆಡೆಗೆ ಒಯ್ಯಲ್ಪಡುತ್ತದೆ. ಸಂಕುಚಿಸುತ್ತಿರುವ ಈ ಹಂತದಲ್ಲಿ ಇಡೀ ನಕ್ಷತ್ರ ಉಷ್ಣಾಪಾರ ಅಥವಾ ನಯನ ಸಮತೋಲದಲ್ಲಿರುವುದು ಮತ್ತು ಮೇಲ್ಮೈ ಉಷ್ಣತೆ ಹೆಚ್ಚು ಕಡಿಮೆ ಸ್ಥಿರವಾಗಿದ್ದು ಸಂಕುಚನ ಮುಂದುವರಿದಂತೆ ಕಾಂತಿ ಕುಂಠಿತವಾಗುತ್ತದೆ.

ನಕ್ಷತ್ರದ ದ್ರವ್ಯರಾಶಿ ಸೌರದ್ರವ್ಯರಾಶಿಯ ಸುಮಾರು ಹತ್ತರಲ್ಲಿ ಒಂದು ಭಾಗ ಅಥವಾ ಕಡಿಮೆ ಇದ್ದರೆ ಕೇಂದ್ರ ಉಷ್ಣತೆ ನ್ಯೂಕ್ಲಿಯರ್ ದಹನಕ್ಕೆ ಬೇಕಾಗುವಷ್ಟು ಎತ್ತರ ಮಟ್ಟಕ್ಕೆ ಎಂದೂ ಏರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಕ್ಷತ್ರ ಪ್ರಧಾನ ಶ್ರೇಣಿಯನ್ನು ತಲಪುವ ಮೊದಲೇ ಕೃಷ್ಣಕುಬ್ಜ ಘಟ್ಟಕ್ಕೆ ತಣ್ಣಗಾಗಿ ಹೋಗುತ್ತದೆ. ಭಾರವಾದ ನಕ್ಷತ್ರಗಳಿಗಾದರೋ ಕೇಂದ್ರ ಉಷ್ಣತೆ ನ್ಯೂಕ್ಲಿಯರ್ ಶಕ್ತಿ ಉತ್ಪಾದನೆಗೆ ಬೇಕಾಗುವಷ್ಟು ಹೆಚ್ಚಾಗಬಹುದು. ಸೌರದ್ರವ್ಯರಾಶಿಯ 15ರಷ್ಟು ದ್ರವ್ಯರಾಶಿಯ ನಕ್ಷತ್ರ ಸುಮಾರು $5X10^4$ ವರ್ಷಗಳಲ್ಲಿ ಪ್ರಧಾನ ಶ್ರೇಣಿಯನ್ನು ತಲುಪಿದರ ಸೌರದ್ರವ್ಯರಾಶಿಯಷ್ಟು ದ್ರವ್ಯರಾಶಿ ಇರುವ ನಕ್ಷತ್ರ ಸುಮಾರು $5x10^7$ ವರ್ಷಗಳಲ್ಲಿ ಇದನ್ನು ತಲಪುತ್ತದೆ. ತಮ್ಮ ಜೀವಿತಕಾಲದ ಹೆಚ್ಚಿನ ಅಂಶವನ್ನು ನಕ್ಷತ್ರಗಳು ಪ್ರಧಾನಶ್ರೇಣಿಯಲ್ಲಿಯೇ ಕಳೆಯುತ್ತವೆ. ಇಲ್ಲೇ ಹೈಡ್ರೊಜನ್ನಿನ ಹೆಚ್ಚಿನ ಅಂಶದ ದಹನ ನಡೆಯುತ್ತದೆ. 15–ಸೌರ ದ್ರವ್ಯರಾಶಿ ಇರುವ ನಕ್ಷತ್ರ ಪ್ರಧಾನ ಶ್ರೇಣಿಯಲ್ಲಿ $5X10^6$ ವರ್ಷಗಳನ್ನು ಕಳೆದರೆ 1- ಸೌರ ದ್ರವ್ಯರಾಶಿ $10^{10}$ ವರ್ಷಗಳನ್ನು ಅಲ್ಲಿ ಕಳೆಯುತ್ತದೆ.

ಹೆಚ್ಚಿನ ಹೈಡ್ರೊಜನ್ ಕೇಂದ್ರದ ತಿರುಳಿನಲ್ಲಿ ದಹಿಸಿ ಹೀಲಿಯಂ ಆಗುವುದರಿಂದ ನಕ್ಷತ್ರ ಪ್ರಧಾನಶ್ರೇಣಿಯಿಂದ ವಿಕಾಸಗೊಳ್ಳುತ್ತದೆ. ತಿರುಳು ಸಂಕುಚಿಸುತ್ತದೆ. ಇದರಿಂದಾಗಿ ಹೊರಪದರಗಳೂ ಉಬ್ಬುತ್ತವೆ. ಸೌರದ್ರವ್ಯರಾಶಿಯ ಮೂರರಷ್ಟಕ್ಕಿಂತ ಹೆಚ್ಚಿನ ದ್ರವ್ಯರಾಶಿ ಇರುವ ನಕ್ಷತ್ರಗಳಲ್ಲಿ ಒಂದು ನಕ್ಷತ್ರ, ಕಾಂತಿ – ಎದುರು–ಪರಿಣಾಮಕಾರೀ ಉಷ್ಣತೆ ಆಕೃತಿಯಲ್ಲಿ ಅಥವಾ ಹರ್ಟ್ಸ್‌ಸ್ಪ್ರಂಗ್ ರಸ್ಸಲ್ ಆಕೃತಿಯಲ್ಲಿ, ಬಹುಕವಲುಗಳ ಹಾದಿ ಹಿಡಿಯುತ್ತದೆ. ಈ ಹಾದಿಯ ವಲಯ ಚಂಚಲ ನಕ್ಷತ್ರಗಳ ನಿವಾಸ. ಸೌರದ್ರವ್ಯರಾಶಿಯ ಮೂರರಷ್ಟಕ್ಕಿಂತ ಕಡಿಮೆ ದ್ರವ್ಯರಾಶಿ ಇರುವ ನಕ್ಷತ್ರಗಳಿಗೆ ಹೀಲಿಯಂ ದಹನ ಅತ್ಯಾಸ್ಫೋಟನಕಾರಿ ಆಗಿ ಮಹಾನೋವಗಳ ಉಗಮಕ್ಕೆ ಕಾರಣವಾಗಬಹುದು.

ಹೊರಗಿನ ಪದರ ವಿಕಸನಗೊಂಡಂತೆ ಪರಿಣಾಮಕಾರೀ ಉಷ್ಣತೆ ತಗ್ಗುತ್ತದೆ. ಆಗ ಆ ನಕ್ಷತ್ರ ಒಂದು ರಕ್ತದೈತ್ಯ ಅಥವಾ ಅತಿದೈತ್ಯ ನಕ್ಷತ್ರವಾಗುತ್ತದೆ. ಈ ಹಂತದಿಂದ ನಕ್ಷತ್ರ ಅದರ ಅಂತಿಮ ಹಂತಕ್ಕೆ ಹೋಗುವುದು. ಇದು ಒಂದು ಶ್ವೇತ ಕುಬ್ಜವಾಗಬಹುದು. ಇಲ್ಲವೇ ನ್ಯೂಟ್ರಾನ್ ನಕ್ಷತ್ರವಾಗಬಹುದು ಇಲ್ಲವೇ ದಿವಾಳಿಯಾದ ಒಂದು ನಕ್ಷತ್ರವಾಗಬಹುದು. ಈ ನಕ್ಷತ್ರದಿಂದ ಏನೂ ವಿಸರಣೆ ಹೊರಗೆಬರುವುದಿಲ್ಲ. ಈ ಅಂತಿಮ ಹಂತಗಳ ಪೈಕಿ ಯಾವುದಕ್ಕೆ ಒಂದು ನಕ್ಷತ್ರ ತಲಪುತ್ತದೆ ಎಂಬುದು ಈಗಲೂ ಒಂದು ತೆರೆದಿಟ್ಟ ಪ್ರಶ್ನೆಯೇ ಆಗಿದೆ.

**5 ಅಂತರನಾಕ್ಷತ್ರಿಕ ಮಾಧ್ಯಮ:** ನಮ್ಮ ಬ್ರಹ್ಮಾಂಡದಲ್ಲಿ ನಕ್ಷತ್ರಗಳ ನಡುವಿನ ಆಕಾಶ ಪೂರ್ತಿ ಖಾಲಿ ಅಲ್ಲ. ಇದರಲ್ಲಿ ದೂಳಿನ ಹುಡಿಗಳು, ಅನಿಲ ಮೇಘಗಳು ಮತ್ತು ಶಕ್ತಿಪೂರಿತ ಕಣಗಳು (ವಿಶ್ವಕಿರಣಗಳೆಂದು ಸಾಮಾನ್ಯವಾಗಿ ಹೆಸರಿದೆ) ಇವೆ. ನಕ್ಷತ್ರಗಳಿಂದ ಬರುವ ಬೆಳಕನ್ನು ಅವಶೋಷಿಸುವ ಹಾಗೂ ಚದರಿಸುವ ಕಣಗಳ ಇರವು ಆಕಾಶಗಂಗೆಯಲ್ಲಿಯ ಕಪ್ಪುಮಚ್ಚೆಗಳಿಂದ ಸ್ಪಷ್ಟವಾಗುವುದು. ದೂಳಿನ ಹುಡಿಗಳು ಮುಖ್ಯವಾಗಿ ನಮ್ಮ ಬ್ರಹ್ಮಾಂಡದ ಬಿಲ್ಲೆಗೆ ಸೀಮಿತವಾಗಿವೆ. ಈ ಬಿಲ್ಲೆಯ ಪೂರ್ತಿ ದೂಳು ತೆಳುವಾಗಿ ಪಸರಿಸಿದೆ. ಆದರೆ ಇದು ಅಲ್ಲಲ್ಲಿ ಮಚ್ಚೆಗಳಂತೆ ಹರಡಿರುವ ಸಾಂದ್ರ ಮೇಘಗಳಂತೆ ಉಂಟು. ಇಂಥ ಸಾಂದ್ರ ಮೇಘಗಳನ್ನು ಬ್ರಹ್ಮಾಂಡದ ಉಜ್ಜ್ವಲ ವಲಯಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ತೆಳುವಾಗಿ ಹರಡಿದ ದೂಳಿನ ಪದರವನ್ನು ಕಡಿಮೆ ಅಲೆಯುದ್ದದ ಬೆಳಕಿನ(ನೇರಿಳೆ ಬೆಳಕು) ಅವಶೋಷಣೆಯನ್ನು ಗಮನಿಸಿ ಪತ್ತೆಹಚ್ಚಬಹುದು; ಆದರೆ ದೀರ್ಘ ಅಲೆಯುದ್ದವಿರುವ ಬೆಳಕು (ಕೆಂಪು) ಈ ಪದರವನ್ನು ಹಾದು ಹೋಗುತ್ತದೆ. ಅವಶೋಷಿಸಲ್ಪಟ್ಟ ಕಿರಿ ಅಲೆಯುದ್ದದ ಬೆಳಕು ಹೆಚ್ಚು ಉದ್ದದ ಅಲೆಯುದ್ದಗಳಲ್ಲಿ ಪುನರುತ್ಸರ್ಜನೆಗೊಳ್ಳುತ್ತದೆ. ನಕ್ಷತ್ರಗಳ ಬೆಳಕಿನ ಉತ್ಸರ್ಜನೆಯನ್ನು ಅವುಗಳ ರೋಹಿತಗಳಿಂದ ನಿಗಮಿಸಬಹುದು. ಆಗ, ಕೆಲವು ನಕ್ಷತ್ರಗಳು ಅವು ಇರಬೇಕಾದುದಕ್ಕಿಂತ ಕೆಂಪಗಾಗಿ ತೋರುತ್ತವೆ. ಈ ಕೆಂಪಾಗುವಿಕೆ ಆ ನಕ್ಷತ್ರದ ಬೆಳಕಿನ ಹಾದಿಯಲ್ಲಿರುವ ದೂಳಿನ ಪರಿಮಾಣದ ಒಂದು ಮಾನ. ದೂಳು ಬೆಳಕನ್ನು ಧ್ರುವೀಕರಿಸುತ್ತದೆ ಕೂಡ. ಈ ಧ್ರುವೀಕರಣವೂ ಏಕಮಾನ ಘನಗಾತ್ರಕ್ಕೆ ಇರುವ ದೂಳಿನ ಮೊತ್ತದ ಒಂದು ಮಾನವನ್ನು ನೀಡುವುದಲ್ಲದೆ ಆ ದೂಳಿನ ಕಣಗಳ ಸ್ವಭಾವಕ್ಕೆ ಒಂದು ಸುಳುಹನ್ನು ಕೂಡ ಒದಗಿಸುತ್ತದೆ. ಇಂಥ ಸುಳುಹುಗಳು ಈ ದೂಳು ಹಿಮಗಟ್ಟಿದ ಅಲೋಹವಸ್ತುಗಳ ಭಿನ್ನಗಾತ್ರದ ಕಣಗಳ ಮಿಶ್ರಣ ಎಂದು ಸೂಚಿಸುತ್ತವೆ. ಬೆಳಕಿನ ಅವಶೋಷಣೆ ಗಾತ್ರದಲ್ಲಿ ಸುಮಾರು ಒಂದು ಮಿಲಿ ಮೀಟರಿನ ಸಾವಿರದಲ್ಲಿ ಒಂದು ಭಾಗ ಗಾತ್ರವಿರುವ ಕಣಗಳಿಂದ ಆಗುತ್ತದೆ. ದೂಳಿನ ಕಣಗಳು ಆಕಾರದಲ್ಲಿ ಉದ್ದುದ್ದವಾಗಿರುವಂತೆಯೂ ಹೆಚ್ಚು ಕಡಿಮೆ ಸಾಲಾಗಿರುವಂತೆಯೂ ತೋರುತ್ತವೆ. ಸಾಲಾಗಿರುವಿಕೆಯ ಕಾರಣ ಪ್ರಾಯಶಃ ಅಂತರನಾಕ್ಷತ್ರಿಕ ಆಕಾಶದಲ್ಲಿರುವ ಕಾಂತಕ್ಷೇತ್ರಗಳು. ಒಂದು ನೂರು ಬಿಲಿಯನ್ ಘನ ಸೆಂಟಿಮೀಟರುಗಳಲ್ಲಿ ಒಂದು ದೂಳಿನ ಕಣ ಉಂಟು.

ಅಂತರನಾಕ್ಷತ್ರಿಕ ಆಕಾಶದಲ್ಲಿ ಅನಿಲ ಕೂಡ ಉಂಟು. ಇದರಲ್ಲಿ ಹೆಚ್ಚಿನ ಅಂಶ ಹೈಡ್ರೊಜನ್. ಆಕಾಶದ ಒಂದು ಘನ ಸೆಂಟಿಮೀಟರಿನಲ್ಲಿ ಹೈಡ್ರೊಜನ್ನಿನ ಒಂದು ಪರಮಾಣು ಉಂಟು. ದೂಳಿನ ಕಣಗಳಿಗಿಂತ ಅನಿಲ ನೂರುಪಾಲು ಹೆಚ್ಚು ಸಾಂದ್ರವಾಗಿದ್ದರೂ ಅದು ಅತಿ ಪಾರದರ್ಶಕವಾಗಿದೆ. ಇದರ ಇರವನ್ನು ಉಜ್ಜ್ವಲ ನಕ್ಷತ್ರಗಳಿಂದ ಬರುವ ಬೆಳಕಿನ ಪ್ರತಿಫಲನ ಹಾಗೂ ನಕ್ಷತ್ರದ ಬೆಳಕಿನ ಅವಶೋಷಣಗಳು ಸ್ಪಷ್ಟಪಡಿಸುತ್ತವೆ. ನಕ್ಷತ್ರಗಳ ರೋಹಿತಗಳಲ್ಲಿಯ ಕಪ್ಪು ರೇಖೆಗಳು ಈ ಅವಶೋಷಣೆಯನ್ನು ತಿಳಿಸುತ್ತವೆ. ಹೈಡ್ರೊಜನ್ ಅನಿಲ ಅಂತರನಾಕ್ಷತ್ರಿಕ ಆಕಾಶದಲ್ಲಿ ಸರ್ವತ್ರ ಪಸರಿಸಿರುವುದರ ಜೊತೆಗೆ ಸಾಂದ್ರತೆಗಳು $10^3$ ಅಥವಾ $10^4$ ಪರಮಾಣುಗಳು/ಸೆಂಮೀ.$^3$ ಇರುವಂಥ ಮೇಘಗಳಲ್ಲೂ ವ್ಯಾಪಿಸಿರುವುದು ಉಂಟು. ಇಂಥ ಮೇಘಗಳಲ್ಲಿ ಕೆಲವು ತಣ್ಣಗಿವೆ. ಇವುಗಳಿಗೆ H I ವಲಯಗಳೆಂದು ಹೆಸರು. ಇವನ್ನು ಛಾಯಾಚಿತ್ರದ ಮೂಲಕ ನೋಡಲು ಸಾಧ್ಯವಿಲ್ಲ. ಆದರೆ ಅವು ಉತ್ಸರ್ಜಿಸುವ ರೇಡಿಯೋ ವಿಸರಣೆಯಿಂದ ಪ್ರಕಟವಾಗುವುವು. ಬಿಸಿ ಅನಿಲ ಮೇಘಗಳಿಗೆ H II ವಲಯ ಎಂದು ಹೆಸರು. ಸಾಮಾನ್ಯವಾಗಿ ಇವು ಒಂದು ಬಿಸಿ ನಕ್ಷತ್ರವನ್ನು ಸುತ್ತುವರಿದಿರುತ್ತವೆ; ಮತ್ತು ಕೇಂದ್ರ ನಕ್ಷತ್ರದ ವಿಸರಣೆ ನೆರವಿನಿಂದ ಎಲೆಕ್ಟ್ರಾನುಗಳು ಅವುಗಳ ನ್ಯೂಕ್ಲಿಯಸುಗಳಿಂದ ಬೇರ್ಪಡಿಸಲ್ಪಟ್ಟಿವೆ. ತೆಳುವಾಗಿ ಪಸರಿಕೊಂಡಿರುವ ಅಂತರನಾಕ್ಷತ್ರಿಕ ಅನಿಲದ ದ್ರವ್ಯರಾಶಿಯಲ್ಲಿ 96%-99% ಹೈಡ್ರೊಜನ್ ಪರಮಾಣುವೇ ಉಂಟು. ಇದಲ್ಲದೆ ಅದರಲ್ಲಿ ಹೀಲಿಯಂ ಮತ್ತು ಇತರ ಧಾತುಗಳೂ ಇವೆ. ಸಯನೋಜನ್ನಿನಂಥ ಅಣುಗಳ ಇರವನ್ನು ಕೂಡ ಪತ್ತೆಹಚ್ಚಲಾಗಿದೆ. ಈಚೆಗಿನ ರೇಡಿಯೋ ವೀಕ್ಷಣೆಗಳು ಫಾರ್ಮಾಲ್ಡಿಹೈಡಿನಂಥ ಅತಿ ಜಟಿಲ ಆರ್ಗ್ಯಾನಿಕ್ ಅಣುಗಳ ಇರವನ್ನು ಸ್ಥಿರಪಡಿಸಿವೆ. ಈ ಅಣುಗಳ ಉಗಮ ಹಾಗೂ ರೂಪಣಗಳನ್ನು ಅರ್ಥವಿಸಲು ಇನ್ನೂ ಸಾಧ್ಯವಾಗಿಲ್ಲ. ಜೀವದ ಉಗಮಕ್ಕೆ ಕೀಲಿ ಇವುಗಳಲ್ಲಿರಬಹುದು.

ಅವಿಷ್ಟ ಶಕ್ತಿಯುತ ಕಣಗಳ (ಚಾರ್ಜ್‌ಡ್ ಎನರ್ಜೆಟಿಕ್ ಪಾರ್ಟಿಕಲ್ಸ್) ಅಸ್ತಿತ್ವವನ್ನು ಕಾಸ್ಮಿಕ್ ಕಿರಣಗಳೆಂದು ಇವುಗಳ ಹೆಸರು) ನಿಗಮಿಸುವುದು, ಮೊದಲಾಗಿ, ಭೂಮಿಯ ಸಮೀಪ ಅವನ್ನು ನಾವು ವೀಕ್ಷಿಸುವುದರಿಂದ ಮತ್ತು ಎರಡನೆಯದಾಗಿ, ಅವು ಹೊರಹಾಕುವ ವಿಸರಣೆಯ ವೀಕ್ಷಣೆಯಿಂದ. (ಕಾಸ್ಮಿಕ್ ಕಿರಣಗಳಲ್ಲಿ ಪ್ರಧಾನವಾಗಿ ಹೈಡ್ರೊಜನ್ ಮತ್ತು ಹೀಲಿಯಂ ನ್ಯೂಕ್ಲಿಯಸುಗಳಿವೆ. ಅವುಗಳಲ್ಲಿ ಮನುಷ್ಯನಿಗೆ ಗೊತ್ತಿರುವ ಇತರ ನ್ಯೂಕ್ಲಿಯಸುಗಳು–ಎಂದರೆ, ಲೀಥಿಯಂನಿಂದ ಯುರೇನಿಯಂ ವರೆಗೆ ಮತ್ತು ಎಲೆಕ್ಟ್ರಾನುಗಳು–ಕೂಡ ಇವೆ. ಭೂಮಿಯಲ್ಲಿ ಇಲ್ಲದ ಕೆಲವು ಯುರೇನಿಯಂ ಆಚೆಯ (ಟ್ರಾನ್ಸ್ ಯುರೇನಿಯಂ) ಧಾತುಗಳನ್ನು ಸಹ ವಿಶ್ವಕಿರಣಗಳಲ್ಲಿ ನೋಡಿರುವುದಾಗಿ ವರದಿ ಆಗಿದೆ. ವೀಕ್ಷಣೆಗಳಿಗೆ ಸಂಬಂಧಿಸಿದಂತೆ ಒಂದು ಸಮಸ್ಯೆ ಎಂದರೆ ಈ ನ್ಯೂಕ್ಲಿಯಸುಗಳ ಒಂದೊಂದು ಪ್ರಭೇದದ ವಿಪುಲತೆಯನ್ನು ನಿರ್ಧರಿಸುವುದು. ವಿಶ್ವಕಿರಣ ನ್ಯೂಕ್ಲಿಯಸುಗಳ ವೇಗ ಬೆಳಕಿನ ವೇಗದ ನೂರರಲ್ಲಿ ಒಂದು ಅಂಶದಿಂದ ತೊಡಗಿ ಬೆಳಕಿನ ವೇಗದ ಸಮೀಪದವರೆಗೂ ಉಂಟು. ಅವುಗಳ ಪೈಕಿ ಕೆಲವಕ್ಕೆ ಅದೆಷ್ಟು ಅಗಾಧ ಶಕ್ತಿಗಳಿವೆ ಎಂದರೆ ಭೂವಾಯು ಮಂಡಲದಲ್ಲಿಯ ನ್ಯೂಕ್ಲಿಯಸುಗಳೊಂದಿಗೆ ಅವು ಸಂಘಟಿಸಿದಾಗ ಲಕ್ಷಾಂತರ ಕಣಗಳು ಉಂಟಾಗುತ್ತವೆ. ಭೂಮಿಯ ಮೇಲೆ ಇವುಗಳ ಸುರಿಮಳೆ ಆಗುತ್ತದೆ. ಖಭೌತವಿಜ್ಞಾನದ ಒಂದು ಮುಖ್ಯ ಸಮಸ್ಯೆ ಎಂದರೆ ಈ ವಿಶ್ವಕಿರಣಗಳು ಎಲ್ಲಿ ಮತ್ತು ಹೇಗೆ ಉಗಮಿಸುತ್ತವೆ ಎಂಬುದನ್ನು ಅರಿಯುವುದು. ಅವು ಹೇಗೆ ಅಂಥ ಆಗಾಧ ಶಕ್ತಿಗಳನ್ನು ಪಡೆದಿರುತ್ತವೆ? ಸೂರ್ಯನ ಮೇಲ್ಮೈ ಯಲ್ಲಿ ಮಹಾಗಾತ್ರದ ಉದ್ರೇಕಗಳು ತಲೆದೋರಿದಾಗ ಅಲ್ಲಿಂದ ಶಕ್ತಿಯುತ ಕಣಗಳು ಹೊರ ಹೊಮ್ಮುತ್ತವೆ. ಆದರೆ ವಿಶ್ವಕಿರಣ ಕಣಗಳಿಗೆ ಇನ್ನೂ ಹೆಚ್ಚಿನ ಶಕ್ತಿಗಳಿವೆ. ಅತ್ಯಂತ ಹೆಚ್ಚಿನ ಶಕ್ತಿಯಿರುವ ಕಣಗಳು ನಕ್ಷತ್ರಗಳ ಆಸ್ಫೋಟನೆಗಳಿಂದ ಅಥವಾ ಬ್ರಹ್ಮಾಂಡಗಳ ಆಸ್ಫೋಟನೆಗಳಿಂದ ಉಗಮಿಸುವುದಾಗಿರಬಹುದು ಎಂದು ಭಾವಿಸಲಾಗಿದೆ.

ಅಂತರನಾಕ್ಷತ್ರಿಕ ಆಕಾಶದಲ್ಲಿಯ ಕಾಂತಕ್ಷೇತ್ರವನ್ನು ಅದು ವಿಶ್ವಕಿರಣ ಕಣಗಳ ಮೇಲಿನ ರೇಡಿಯೋ ಶಕ್ತಿಯ ಉತ್ಸರ್ಜನೆಯ ಮೇಲೆ ಉಂಟುಮಾಡುವ ಪರಿಣಾಮಗಳಿಂದ, ನಕ್ಷತ್ರದ ಬೆಳಕಿನ ಧ್ರುವೀಕರಣದ ಬದಲಾವಣೆಯಿಂದ ಮತ್ತು ಅದು ಅಂತರನಾಕ್ಷತ್ರಿಕ ಅನಿಲದ ರೇಡಿಯೋ ರೇಖಾ ಉತ್ಸರ್ಜನೆಯ ಮೇಲೆ ಉಂಟು ಮಾಡುವ ರೂಪಾಂತರಣದಿಂದ ಅಳೆಯಲಾಗುತ್ತದೆ. ಅಂತರನಾಕ್ಷತ್ರಿಕ ಆಕಾಶದಲ್ಲಿ ಕಾಂತಕ್ಷೇತ್ರದ ಸಾಮರ್ಥ್ಯ ಭೂಮಿತಲದ ಸಮೀಪ ಅದರ ಸಾಮರ್ಥ್ಯದ ಹಲವಾರು ಲಕ್ಷ ಅಂಶಗಳಲ್ಲಿ ಒಂದು ಮಾತ್ರ. ಈ ಕ್ಷೇತ್ರ ಸಾಮಾನ್ಯವಾಗಿ ಬ್ರಹ್ಮಾಂಡದ ಪರಿಭ್ರಮಿ ಕೈಗಳ (ಸ್ಪೈರಲ್ ಆರಮ್ಸ್) ಉದ್ದಕ್ಕೆ ಅಳವಡಿಸಲ್ಪಟ್ಟಿದೆ.

**6 ಪಲ್ಸಾರುಗಳು (ಸ್ಪಂದತಾರೆಗಳು):** ಕೇಂಬ್ರಿಜ್‌ನ ರೇಡಿಯೋ ವೀಕ್ಷಣಾಲಯದಲ್ಲಿ ವಿಜ್ಞಾನಿಗಳು 1967ರಲ್ಲಿ ಹೊಸ ಒಂದು ಆಕಾಶ ವಿದ್ಯಮಾನವನ್ನು ಆವಿಷ್ಕರಿಸಿದರು: ಕೆಲವು ನಿರ್ದಿಷ್ಟ ದಿಶೆಗಳಿಂದ ಅವಧಿಯುತ (ಪೀರಿಯಾಡಿಕ್) ರೇಡಿಯೋ ಸಂಕೇತಗಳು ಬರುತ್ತಿದ್ದುವು. ವಿಶ್ವದಲ್ಲಿರಬಹುದಾದ ಯಾವುದೋ ಬುದ್ಧಿವಂತ ಜೀವಿಗಳಿಂದ ಅವು ಬರುತ್ತಿರಬಹುದೆಂದು ಮೊದಲ ಬಾರಿಗೆ ವಿಜ್ಞಾನಿಗಳು ಯೋಚಿಸಿದರು. ಆದರೆ ಇಂಥ

ಸಂಕೇತಗಳನ್ನು ಕಳಿಸಲು ಬೇಕಾಗುವ ಬೃಹತ್ಪ್ರಮಾಣದ ಸಾಮರ್ಥ್ಯವನ್ನು ಲಕ್ಷಿಸಿದಾಗ ಇವು ಕೆಲವು ಆಕಾಶಕಾಯಗಳ ಪರಿಣಾಮವಾಗಿಯೇ ಬರುತ್ತಿರಬೇಕು ಎಂದು ಭಾವಿಸಿದರು. ಅವಧಿಯುತ ರೇಡಿಯೋ ಸಂಕೇತಗಳನ್ನೇ (ರೇಡಿಯೋ ಪಲ್ಸಸ್) ಉತ್ಸರ್ಜಿಸುತ್ತಿದ್ದ ಈ ಕಾಯಗಳಿಗೆ ಪಲ್ಸಾರುಗಳೆಂದು ಹೆಸರಿಟ್ಟರು. ಇಂದಿನ ತನಕ (1972) ಇಂಥ 300ಕ್ಕೂ ಹೆಚ್ಚು ಕಾಯಗಳನ್ನು ಆವಿಷ್ಕರಿಸಲಾಗಿದೆ. ಅವುಗಳ ಅವಧಿಗಳು 0.0015 ಸೆಕೆಂಡಿನಿಂದ 8.5 ಸೆಕೆಂಡುಗಳ ವರೆಗೆ ವ್ಯಾಪಿಸಿವೆ. ಪ್ರತಿ ಸೆಕೆಂಡಿಗೆ ಈ ಅವಧಿಗಳು ಒಂದು ಸೆಕೆಂಡಿನ ಸುಮಾರು ಒಂದು ಬಿಲಿಯನ್ ಅಂಶದಷ್ಟು ಬದಲಾಗುವುದೆಂದೂ ಗಮನಿಸಲಾಯಿತು. ಕನಿಷ್ಠತಮ ಅವಧಿ, ಎಂದರೆ 1.55 ಮಿಲಿ ಸೆಕೆಂಡು ಇರುವ ಪಲ್ಸಾರನ್ನು 1982ರಲ್ಲಿ ಅವಶೇಷದಲ್ಲಿ ಗುರುತಿಸಲಾಗಿದೆ. ಇದೇ ಪಲ್ಸಾರ್ ದೃಕ್–ಮತ್ತು ಎಕ್ಸ್–ವಿಸರಣೆಯನ್ನು ರೇಡಿಯೋ ವಿಸರಣದಷ್ಟೇ ಅವಧಿಯುತವಾಗಿ ಉತ್ಸರ್ಜಿಸುವುದನ್ನು ಕೂಡ ಕಾಣಲಾಯಿತು. ಭಿನ್ನ ಆವರ್ತಾಂಕಗಳಿರುವ (ಫ್ರೀಕ್ವೆನ್ಸೀಸ್) ರೇಡಿಯೋ ಸಂಕೇತಗಳು ಭೂಮಿಯನ್ನು ತಲಪಲು ಬೇಕಾಗುವ ಕಾಲಗಳನ್ನು ಆಧರಿಸಿ ಭೂಮಿಯಿಂದ ಪಲ್ಸಾರುಗಳ ದೂರಗಳನ್ನು ಅಂದಾಜು ಮಾಡಲಾಗಿದೆ. ಈ ದೂರಗಳು 100–3000 ಬೆಳಕಿನ ವರ್ಷಗಳವರೆಗೆ ಇವೆ. ಇತರ ನಕ್ಷತ್ರಗಳಂತೆಯೇ ಪಲ್ಸಾರುಗಳು ಕೂಡ ನಮ್ಮ ಬ್ರಹ್ಮಾಂಡದ ಸಮತಲದ ಮೇಲೆಯೇ ವಿತರಣೆಗೊಂಡಿರುವುದಾಗಿ ಕಂಡು ಬಂದಿದೆ. ಈ ನೈಜ ಗಡಿಯಾರ ಕ್ರಿಯಾವಿನ್ಯಾಸವನ್ನು (ಕ್ಲಾಕ್ ಮೆಕ್ಯಾನಿಸಂ) ವಿವರಿಸಲು ಬೇರೆ ಬೇರೆ ಸಿದ್ಧಾಂತಗಳನ್ನು ಪರಿಶೀಲಿಸಲಾಗಿದೆ. ಅತ್ಯಂತ ಸಂಭಾವ್ಯವಾದ ಸೂಚನೆ ಎಂದರೆ ಪಲ್ಸಾರಿನ ಕೇಂದ್ರವಸ್ತು ಒಂದು ನ್ಯೂಟ್ರಾನ್ ನಕ್ಷತ್ರ (ಹೆಚ್ಚಾಗಿ ನ್ಯೂಟ್ರಾನುಗಳಿಂದ ಮತ್ತು ಕೆಲವು ಪ್ರೋಟಾನುಗಳ ಹಾಗೂ ಎಲೆಕ್ಟ್ರಾನುಗಳಿಂದ ರಚಿತವಾದ ಅತಿಸಾಂದ್ರ ನಕ್ಷತ್ರ; ನ್ಯೂಟ್ರಾನ್ ನಕ್ಷತ್ರದ ದ್ರವ್ಯರಾಶಿ ಸರಿ ಸುಮಾರಾಗಿ ಸೂರ್ಯನ ದ್ರವ್ಯರಾಶಿಯಷ್ಟು ಇದೆ), ಇದು ಒಂದು ಮಹಾನೋವ ಆಸ್ಫೋಟನೆಯ ವೇಳೆ ಉಂಟಾಗಿರಬಹುದು ಎಂಬುದಾಗಿದೆ. ಈ ನ್ಯೂಟ್ರಾನ್ ನಕ್ಷತ್ರ ಅತ್ಯಧಿಕ ದರದಲ್ಲಿ ಆವರ್ತಿಸುತ್ತಿದೆಯೆಂದೂ ಇದರ ಅವಧಿಯೇ ಆಧಾರ ಗಡಿಯಾರ ಕ್ರಿಯಾವಿನ್ಯಾಸವೆಂದೂ ಊಹಿಸಲಾಗಿದೆ. ರೇಡಿಯೋ ವಿಸರಣೆಯನ್ನು ಶೋಧಕ ಬೆಳಕಿನ ದೂಲವಾಗಿ (ಸರ್ಚ್‌ಲೈಟ್ ಬೀಮ್) ನಕ್ಷತ್ರ ಹೊರಕಳಿಸುವುದೆಂದೂ ಈ ದೂಲವನ್ನು ಭೂಮಿ ಅಡ್ಡ ತಡೆದಾಗಲೆಲ್ಲ ಅವಧಿಯುತ ವಿಸರಣೆ ದೊರೆಯುವುದೆಂದೂ ನಂಬಲಾಗಿದೆ. ವಿಸರಣೆಯ ಈ ದೂಲ ಹೇಗೆ ರೂಪಿಸಲ್ಪಡುವುದೆನ್ನುವ ವಿಷಯ ಸ್ಪಷ್ಟವಾಗಿ ಗೊತ್ತಿಲ್ಲ. ಆದರೆ ಒಂದು ನ್ಯೂಟ್ರಾನ್ ನಕ್ಷತ್ರದೊಡನೆ ಹೊಂದಿಸಿರುವ ಕಾಂತಕ್ಷೇತ್ರ ಬಹು ತೀವ್ರವಾಗಿದ್ದು (ಸುಮಾರು $10^{10}$ರಷ್ಟು ಗೌಸ್) ಈ ತೀವ್ರಕಾಂತಕ್ಷೇತ್ರ ಹಾಗೂ ಅತಿವೇಗದ ಪರಿಭ್ರಮಣೆಗಳಿಂದಾಗಿ ಅತಿ ಶಕ್ತಿಯುತ ಕಣಗಳು ವಿಸರ್ಜಿಸಲ್ಪಟ್ಟು ಅವು ವಿಸರಣೆಯನ್ನು ನೀಡುವುವೆಂದು ಊಹಿಸಲಾಗಿದೆ. ವಿಸರಣೆಗೆ ಬೇಕಾಗುವ ಶಕ್ತಿಯನ್ನು ನ್ಯೂಟ್ರಾನ್ ನಕ್ಷತ್ರದಲ್ಲಿ ಸಂಚಯವಾಗಿರುವ ಆವರ್ತನಶಕ್ತಿಯಿಂದ ಪೂರೈಸಲಾಗುತ್ತಿದೆ.

ಚಿತ್ರ 6 ನಮ್ಮ ನಾಕ್ಷತ್ರಿಕ ವ್ಯವಸ್ಥೆಯ ನೆರೆಯ ಸದಸ್ಯ–ಆಂಡ್ರೊಮೀಡ ಬ್ರಹ್ಮಾಂಡ ಚಿತ್ರದಲ್ಲಿ ಕಾಣುವ ಬ್ರಹ್ಮಾಂಡಗಳು ಹೆಚ್ಚು ಕಡಿಮೆ ಒಂದೇ ಗಾತ್ರದವು ಮತ್ತು ಸುರುಳಿಯಾಕಾರದವು

**7 ಬ್ರಹ್ಮಾಂಡಗಳು:** ರಾತ್ರಿ ಆಕಾಶದ ಗಮನಾರ್ಹ ಲಕ್ಷಣಗಳಲ್ಲಿ ಒಂದು ಆಕಾಶದ ಅಡ್ಡಕ್ಕೆ ವ್ಯಾಪಿಸಿರುವ ಬೆಳಕಿನ ಪಟ್ಟೆ. ಇದರ ಹೆಸರು ಆಕಾಶಗಂಗೆ. ಟೆಲಿಸ್ಕೋಪಿನ ಆಗಮನಾನಂತರ ಈ ಬೆಳಕಿನ ಹೊಳೆಯನ್ನು ವೀಕ್ಷಿಸಿದಾಗ ಅದರಲ್ಲಿ ನಕ್ಷತ್ರಗುಚ್ಛಗಳೇ ಇರುವುದಾಗಿ ಕಂಡುಬಂದಿತು. ನಕ್ಷತ್ರಗಳು ಸೂರ್ಯನನ್ನೊಳಗೊಂಡ ಬಿಲ್ಲೆ ಆಕಾರದ ಒಂದು ವ್ಯವಸ್ಥೆಗೆ (ಬ್ರಹ್ಮಾಂಡ) ಸೇರಿವೆಯೆಂದು ಊಹಿಸಲಾಗಿತ್ತು. ಇದು ಸ್ಥಳೀಯ ಬ್ರಹ್ಮಾಂಡ, ಎಂದರೆ ಆಕಾಶಗಂಗೆ. ಮುಂದಿನ ಮಾಪನಗಳಿಂದ ಈ ಬ್ರಹ್ಮಾಂಡಕ್ಕೆ ಸರಿ ಸುಮಾರಾಗಿ ಗೋಳಾಕಾರದ ಒಂದು ಕೇಂದ್ರ ನ್ಯೂಕ್ಲಿಯಸ್ ಇದೆಯೆಂದೂ ಅದರ

ಚಿತ್ರ 7 ಸಪ್ತರ್ಷಿ ಮಂಡಲದಲ್ಲಿನ ಸುರುಳಿ [NGC 3031 (M 81)] ಬ್ರಹ್ಮಾಂಡದ ದೃಶ್ಯ

ಸುತ್ತ ಪರಿಭ್ರಮಿರೂಪದಲ್ಲಿ ಅಳವಡಿಸಲಾದ ನಕ್ಷತ್ರಗಳು ಇವೆಯೆಂದೂ ತಿಳಿಯಿತು. ಈ ಬ್ರಹ್ಮಾಂಡದ (ಆಕಾಶಗಂಗೆ) ವ್ಯಾಸ ಸುಮಾರು 1,00,000 ಬೆಳಕಿನ ವರ್ಷಗಳು (ಲೈಟ್ ಯಿಯರ್ಸ್; ಬೆ.ವ. $10^{18}$ ಸೆಂಮೀ.). ಪರಿಭ್ರಮಿ ಬಾಹುಗಳ ದಪ್ಪ ಸುಮಾರು 1,500 ಬೆ.ವ. ಆದರೆ ಕೆಲವು ನಕ್ಷತ್ರಗಳೂ ನಕ್ಷತ್ರ ಗುಚ್ಛಗಳೂ ಬಿಲ್ಲೆಯ ಹೊರಗಿದ್ದರೂ ಅವು ಕೂಡ ಇದೇ ಬ್ರಹ್ಮಾಂಡದಲ್ಲಿ ಸೇರಿವೆ. ಬ್ರಹ್ಮಾಂಡ ಕೇಂದ್ರದಿಂದ ಸೂರ್ಯನ ದೂರ ಸು. 30,000 ಬೆ.ವ. ಬ್ರಹ್ಮಾಂಡ ಒಂದು ಕೇಂದ್ರಾಕ್ಷದ ಸುತ್ತ ಆವರ್ತಿಸುತ್ತಿದೆ. ಇದರ ಅವಧಿ ಸು. 200 ದಶಲಕ್ಷ ವರ್ಷಗಳು. ಬ್ರಹ್ಮಾಂಡದ (ಆಕಾಶಗಂಗೆ) ದ್ರವ್ಯರಾಶಿ ಸೂರ್ಯನ ದ್ರವ್ಯರಾಶಿಯ 200 ಬಿಲಿಯನ್ ಪಾಲು ಇದೆ ಎಂದು ಅಂದಾಜು ಮಾಡಲಾಗುತ್ತದೆ.

ವಿಶ್ವದಲ್ಲಿ ಸುಮಾರು 300 ದಶಲಕ್ಷ ಬ್ರಹ್ಮಾಂಡಗಳಿವೆಯೆಂದು ದೊಡ್ಡ ಟೆಲಿಸ್ಕೋಪುಗಳು ತೋರಿಸಿಕೊಟ್ಟಿವೆ. ಕೆಲವು ಬ್ರಹ್ಮಾಂಡಗಳಿಗೆ ನಮ್ಮದಕ್ಕಿರುವಂಥ ರಚನೆಯೇ ಉಂಟು–ಎಂದರೆ ಕೇಂದ್ರದಲ್ಲಿ ನಕ್ಷತ್ರಗಳ ಸಾಂದ್ರೀಕರಣ ಇದ್ದು ಅಲ್ಲಿಂದ ದೂರ ಹೋದಂತೆ ನಕ್ಷತ್ರಗಳ ಅನಿಲದ ಮತ್ತು ದೂಳಿನ ವಿತರಣೆಯ ಸಾಂದ್ರತೆ ಕಡಿಮೆ ಆಗುತ್ತದೆ. ಇವು ಒಂದು ಪರಿಭ್ರಮಿಯಲ್ಲಿ ಅಳವಡಿಸಲ್ಪಟ್ಟಿವೆ. ನಕ್ಷತ್ರಗಳು ಒಂದು ದೀರ್ಘವೃತ್ತದ ರೂಪದಲ್ಲಿ ಅಳವಡಿಕೆಗೊಂಡು ಇತರ ಬ್ರಹ್ಮಾಂಡಗಳೂ ಇವೆ. ಇವೂ ಅಲ್ಲದೆ ಇತರ ಹಲವಾರು ಬ್ರಹ್ಮಾಂಡಗಳಿವೆ. ಇವುಗಳಿಗೆ ಕ್ರಮವಾದ ಅಕಾರವೇನೂ ಇಲ್ಲ–ಇವು ಕ್ರಮ ರಹಿತ ಬ್ರಹ್ಮಾಂಡಗಳು. ನಮ್ಮ ಬ್ರಹ್ಮಾಂಡವಾದ ಆಕಾಶಗಂಗೆಯಲ್ಲಿ ಇರುವಂಥ ನಕ್ಷತ್ರಗಳೇ ಇತರ ಬ್ರಹ್ಮಾಂಡಗಳಲ್ಲೂ ಇರುವುದಾಗಿ ತಿಳಿದುಬಂದಿದೆ. ಆದರೆ ಒಂದೊಂದು ಬ್ರಹ್ಮಾಂಡದಲ್ಲಿ ಇರುವ ನಕ್ಷತ್ರ ಪ್ರಭೇದಗಳ ಸಂಖ್ಯೆ ಬೇರೆ ಬೇರೆ ಬ್ರಹ್ಮಾಂಡಗಳ ದ್ರವ್ಯರಾಶಿಗಳು ಕೆಲವು ಹತ್ತು ಬಿಲಿಯನ್ನುಗಳಿಂದ ಸುಮಾರು 400 ಬಿಲಿಯನ್ ಸೌರ ದ್ರವ್ಯರಾಶಿಗಳವರೆಗೂ ಇರುವುದಾಗಿ ಅಂದಾಜು. ನಮಗೆ ಅತಿಸಮೀಪವಾಗಿ ಇರುವ ಬ್ರಹ್ಮಾಂಡಗಳು ಸಣ್ಣ ಮತ್ತು ದೊಡ್ಡ ಮ್ಯಾಗೆಲ್ಲಾನ್ ಮೇಘಗಳು. ಇವನ್ನು ಭೂಮಿ ದಕ್ಷಿಣಾರ್ಧಗೋಳದಿಂದ ನೋಡಬಹುದು. ಭೂಮಿಯಿಂದ ದೊಡ್ಡ ಮ್ಯಾಗೆಲ್ಲಾನ್ ಮೇಘದ ದೂರ ಸುಮಾರು 1,50,000 ಬೆ.ವ.

ಟೆಲಿಸ್ಕೋಪುಗಳಿಂದ ತಿಳಿದುಬಂದಿರುವ ಇನ್ನೊಂದು ಸ್ವಾರಸ್ಯಕರ ಅಂಶವೆಂದರೆ ಬ್ರಹ್ಮಾಂಡಗಳ ಗುಚ್ಛೀಕರಣ. ಬ್ರಹ್ಮಾಂಡಗಳು ಆಕಾಶದಲ್ಲಿ ಏಕರೀತಿಯಾಗಿ ವಿತರಣೆಗೊಂಡಿಲ್ಲ; ಬದಲು ಅವು ಗುಂಪುಗಳಾಗಿ ಇವೆ. ಈಗ ನಮ್ಮ ಬ್ರಹ್ಮಾಂಡ (ಆಕಾಶ ಗಂಗೆ) ಇತರ 17 ಬ್ರಹ್ಮಾಂಡಗಳ ಹಾಗೂ ಇತರ 11 ನಕ್ಷತ್ರಗುಚ್ಛಗಳ ಒಂದು ಗುಂಪಿನಲ್ಲಿದೆ. ಈ ಗುಂಪನ್ನು ಅನೇಕ ವೇಳೆ ಸ್ಥಳೀಯ ಗುಂಪೆನ್ನುವುದುಂಟು. ಸ್ಥಳೀಯ ಗುಂಪಿನ ವ್ಯಾಸ ಸು. 2.4 ದಶಲಕ್ಷ ಬೆ.ವ. ಸ್ಥಳೀಯ ಗುಂಪಿನ ಪ್ರೇಕ್ಷಣೀಯ ಸದಸ್ಯರಲ್ಲಿ ಒಂದು ಆಂಡ್ರೊಮೀಡ ಬ್ರಹ್ಮಾಂಡ. ಇದರ ಪರಿಭ್ರಮಿ ರಚನೆಯನ್ನು ಸ್ಪಷ್ಟವಾಗಿ ನೋಡಲಾಗಿದೆ. ಆಕಾಶದಲ್ಲಿ ಹಲವಾರು ಗುಚ್ಛಗಳನ್ನು ಕೂಡ ಕಾಣಬಹುದು. ಇವುಗಳ ಪೈಕಿ ಅತ್ಯಂತ ದೊಡ್ಡದು ಕೊಮಾ ಪುಂಜದಲ್ಲಿರುವ (ಕಾನ್ ಸ್ಟೆಲ್ಲೇಶನ್) ಗುಚ್ಛ. ಇದರ ಸದಸ್ಯರ ಸಂಖ್ಯೆ ಕೆಲವು ಸಾವಿರಗಳು; ವ್ಯಾಸ ಸು. 21 ದಶಲಕ್ಷ ಬೆ.ವ. ಬ್ರಹ್ಮಾಂಡಗುಚ್ಛಗಳು ಪುನಃ ದೊಡ್ಡ

ಗುಚ್ಛಗಳಾಗಿ ಅಥವಾ ಮಹಾಗುಚ್ಛಗಳಾಗಿ ರೂಪಗೊಳ್ಳುತ್ತವೆ ಎಂದು ಕೆಲವು ವೇಳೆ ಸೂಚಿಸುವುದುಂಟು.

ಚಿತ್ರ 8 ಟ್ರೈಆಂಗ್ಯುಲಮ್‌ನಲ್ಲಿನ ಒಂದು ಸುರುಳಿ ಬ್ರಹ್ಮಾಂಡದ [NGC 598 (M 33)] ದೃಶ್ಯ

ಈ ಬ್ರಹ್ಮಾಂಡಗಳಿಂದ ಉತ್ಸರ್ಜಿತವಾದ ಬೆಳಕನ್ನು ಹಲವಾರು ಖಗೋಳಜ್ಞರು ಅಧ್ಯಯಿಸಿದರು. ಅವರಲ್ಲಿ ಮುಖ್ಯನಾದವ ಹಬ್ಬಲ್. ಅತಿದೂರದಲ್ಲಿರುವ ಬ್ರಹ್ಮಾಂಡಗಳು ಉತ್ಸರ್ಜಿಸುವ ರೋಹಿತ ರೇಖೆಗಳು ಪ್ರಯೋಗ ಮಂದಿರದಲ್ಲಿ ಸಾಧಾರಣವಾಗಿ ಕಾಣುವ ಧಾತುರೇಖೆಗಳೊಡನೆ ಹೊಂದಿಕೊಳ್ಳುವುದಿಲ್ಲವಾಗಿ ಕಂಡು ಬಂದಿದೆ: ಬದಲು ಅವುಗಳ ಸ್ಥಾನಪಲ್ಲಟವಾಗಿತ್ತು. ಈ ರೇಖಾಪಲ್ಲಟದ ಕಾರಣ ಬ್ರಹ್ಮಾಂಡದ ಅತಿ ವೇಗದ ಚಲನೆ (ಡಾಪ್ಲರ್ ಪರಿಣಾಮ) ಇರಬಹುದೆಂದು ಯೋಚಿಸಲಾಗಿದೆ. ಬ್ರಹ್ಮಾಂಡ ಮಸಕಾಗಿದ್ದಷ್ಟೂ (ದೂರ ಹೆಚ್ಚಿದಂತೆ) ಪಲ್ಲಟ ಅತಿ ಹೆಚ್ಚು ಎಂದು ನೋಡಬಹುದು. ಈ ಫಲಿತಾಂಶಗಳನ್ನು ಉಪಯೋಗಿಸಿಕೊಂಡು ಬ್ರಹ್ಮಾಂಡಗಳು ನಮ್ಮಿಂದ ದೂರಕ್ಕೆ ಚಲಿಸುತ್ತಿವೆಯೆಂದೂ ಈ ದೂರಚಲನೆಯ ವೇಗ ಬ್ರಹ್ಮಾಂಡಗಳ ದೂರ ಹೆಚ್ಚಿದಷ್ಟು ಹೆಚ್ಚಾಗುವುದೆಂದೂ ಹಬ್ಬಲ್ ಸೂಚಿಸಿದ. ಇಂಥ ಒಂದು ನಿರೂಪಣೆ ವಿಶ್ವ ಉಬ್ಬುತ್ತಿದೆ ಎಂಬುದನ್ನು ಸೂಚಿಸುತ್ತದೆ. ಈ ಉಬ್ಬುವಿಕೆಯ ವಿವರಣೆ ವಿಶ್ವವಿಜ್ಞಾನದ (ಕಾಸ್ಮಾಲಜಿ) ವ್ಯಾಪ್ತಿಗೆ ಸೇರಿದ್ದು.

**8 ಅರೆನಕ್ಷತ್ರ ಕಾಯಗಳು (ಕ್ವೇಸಿ ಸ್ಟೆಲ್ಲಾರ್ ಆಬ್ಜೆಕ್ಟ್ಸ್)**; ಕೆಲವು ನಕ್ಷತ್ರ ಸದೃಶ ನೀಲವಸ್ತುಗಳ ರೋಹಿತಗಳು ಉತ್ಸರ್ಜನ ರೇಖೆಗಳನ್ನು ವ್ಯಕ್ತಪಡಿಸಿವೆ. ಇವು ಗೊತ್ತಿರುವ ಯಾವ ರೋಹಿತ ರೇಖೆಗಳಿಗೂ ಸಂವಾದಿಯಾಗಿ ಕಂಡು ಬರಲಿಲ್ಲ. ಈ ರೇಖೆಗಳು ಎಂದಿನವೇ, ಆದರೆ ಕೆಂಪಿನೆಡೆಗೆ ಪಲ್ಲಟಿಸಲ್ಪಟ್ಟಿವೆ ಎಂದು ಮಾರ್ಟಿನ್ ಷ್ಮಿಟ್ ಎಂಬಾತ 1963ರಲ್ಲಿ ಸೂಚಿಸಿದ. ಇಂಥ ವಸ್ತುಗಳಿಗೆ ಅರೆನಕ್ಷತ್ರ ವಸ್ತುಗಳು (ಕ್ವಾಸಿಸ್ಟೆಲ್ಲಾರ್ ಆಬ್ಜೆಕ್ಸ್) ಎಂದು ಹೆಸರು (**ನೋಡಿ–ಕ್ವೇಸಾರ್**). ಇಂಥ ಕೆಲವು ವಸ್ತುಗಳಿಗೆ ಅತಿ ದೊಡ್ಡ ರಕ್ತಪಲ್ಲಟಗಳಿವೆಯೆಂದು ಕಂಡುಬಂದಿದೆ. ಬೆಳಕಿನ ವೇಗಕ್ಕೆ ಸಮೀಪವಾದ ವೇಗಗಳಿಂದ ಇವು ಚಲಿಸುತ್ತಿರುವುವೆಂದು ಇವು ಸೂಚಿಸುವಂತಿವೆ. ಈ ಮಹಾವೇಗ ವಿಶ್ವದ ವಿಕಸನದ ಪರಿಣಾಮ. ಮೇಲೆ ಹೇಳಿದ ವಸ್ತುಗಳು ಬಲು ಬಲು ದೂರದಲ್ಲಿ, ವಿಶ್ವದ ಅಂಚಿನಲ್ಲೇ ಎನ್ನುವಂತೆ, ಇವೆ ಎಂಬುದಾಗಿ ಸೂಚಿಸಿದ್ದಾರೆ. ಈಗ, ಈ ವಸ್ತುಗಳು ಅಷ್ಟೊಂದು ದೂರ ಇರುವುದಾದರೆ ವಿಸರಣೆಯ ವೀಕ್ಷಿತ ಅಭಿವಾಹದ ಅರ್ಥ ಆ ವಸ್ತುವಿನಿಂದ ಅತ್ಯಂತ ಬೃಹತ್ಪ್ರಮಾಣದ ಶಕ್ತಿ ಉತ್ಸರ್ಜನೆ ಆಗುತ್ತಿದೆ ಎಂದು. ಇಂಥ ಮಹಾಗಾತ್ರದ ಶಕ್ತಿಯ ಉತ್ಪಾದನೆಗೂ ಈ ಆಕರಶಕ್ತಿ ವಿದ್ಯುತ್ಕಾಂತಶಕ್ತಿಯಾಗಿ ಪರಿವರ್ತನೆ ಆಗುವುದಕ್ಕೂ ಸಮರ್ಥ ವಿವರಣೆ ಕೊಡುವುದು ಖಭೌತಜ್ಞರಿಗೆ ಸಮಸ್ಯೆ ಆಗಿದೆ. ಈ ಮಹಾವೇಗಗಳನ್ನು ಕುರಿತು ನೀಡಿರುವ ಒಂದು ಪರ್ಯಾಯ ವಿವರಣೆ, ಆಸ್ಫೋಟನೆಗಳ ಪರಿಣಾಮವಾಗಿ ವಸ್ತುಗಳು ಬ್ರಹ್ಮಾಂಡಗಳಿಂದ ಎಸೆಯಲ್ಪಟ್ಟಿವೆ ಎನ್ನುತ್ತದೆ. ಆದರೆ ಈ ಸೂಚನೆಯಲ್ಲಿ ಒಂದು ತೊಡಕು ಉಂಟು. ಬೇರೆ ಯಾವುದೇ ಬ್ರಹ್ಮಾಂಡಗಳಿಂದ ಹೀಗೆ ಎಸೆಯಲ್ಪಟ್ಟ ಕೆಲವಾದರೂ ವಸ್ತುಗಳು ನಮ್ಮೆಡೆಗೆ ಬರುತ್ತಿರಬೇಕು. ಇಂಥ ಸಂದರ್ಭದಲ್ಲಿ ರೋಹಿತರೇಖೆಗಳು ನೀಲದೆಡೆಗೆ ಪಲ್ಲಟಿಸಲ್ಪಡಬೇಕು. ಇಂಥ ನೀಲ ಪಲ್ಲಟಗಳನ್ನು ಗಮನಿಸಲಾಗಿಲ್ಲ. ಆದ್ದರಿಂದ ಆಸ್ಫೋಟನ ಸಿದ್ಧಾಂತ ಸಂದೇಹಾಸ್ಪದ.

ಇಂಥ ಹೆಚ್ಚಿನ ರಕ್ತಪಲ್ಲಟಗಳನ್ನು ತೋರ್ಪಡಿಸುವ ಕೆಲವು ವಸ್ತುಗಳು ರೇಡಿಯೋ ವಿಸರಣೆಯಲ್ಲಿ ಉತ್ಸರ್ಜಿಸುತ್ತಿವೆ. ಆದರೆ ಇಂಥ ಇನ್ನು ಕೆಲವು ವಸ್ತುಗಳಿಂದ ರೇಡಿಯೋ ಅಭಿವಾಹವನ್ನು ನೋಡಲಾಗಿಲ್ಲ. ಅತಿರಕ್ತ ವಿಸರಣೆಯ ಅಗಾಧ ಅಭಿವಾಹಗಳನ್ನು ಕೆಲವು ಅತಿನಕ್ಷತ್ರವಸ್ತುಗಳಿಂದ (ಕ್ವೇಸಾರುಗಳು) ಗಮನಿಸಲಾಗಿದೆ.

ಪ್ರಕೃತದಲ್ಲಿ ರಕ್ತಪಲ್ಲಟ, ಶಕ್ತಿ ಆಕರ ಮತ್ತು ಅರೆನಕ್ಷತ್ರ ವಸ್ತುಗಳ ವೀಕ್ಷಿತ ಗುಣಗಳ ಇತರ ವಿವರಗಳನ್ನು ವಿವರಿಸುವ ಒಂದು ಸಂಪೂರ್ಣ ಸಿದ್ಧಾಂತ ಇಲ್ಲ. ಇನ್ನೂ ಹೆಚ್ಚಿನ ವೀಕ್ಷಣೆಗಳನ್ನು ನಡೆಸಬೇಕು. ಇವುಗಳಿಂದ ಈ ಪ್ರಶ್ನೆಗಳ ಮೇಲೆ ಬೆಳಕು ಬೀಳುವುದು ಖಚಿತ. (ಎಂ.ವಿ.ಕೆ.ಎ.; ಎಂ.ಎಸ್.ವಿ.)

**ಖರ[1] :** ರಾವಣನ ಬಲತಾಯ ಮಗ. ವಿಶ್ರವಸನೆಂಬ ಋಷಿಯಿಂದ ರಾಕಾ ಎಂಬ ರಾಕ್ಷಸಿಯಲ್ಲಿ ಜನಿಸಿದವ. ಶೂರ್ಪಣಖಿ ಮತ್ತು ದೂಷಣರು ಈತನ ಒಡಹುಟ್ಟಿದವರು. ದಿಗ್ವಿಜಯ ಸಮಯದಲ್ಲಿ ತನಗೆ ಎದುರಾದ ಶೂರ್ಪಣಖಿಯ ಗಂಡ ವಿದ್ಯುಜ್ಜಿಹ್ವನನ್ನು ರಾವಣ ಕೊಂದಾಗ ದುಃಖಿತಳಾದ ಶೂರ್ಪಣಖಿ ರಾವಣನನ್ನು ನಿಂದಿಸಿದಳು. ಆಗ ರಾವಣ ಆಕೆಗೆ ಅಭಯ ನೀಡಿ ಆಕೆಯನ್ನು ಖರದೂಷಣರ ವಶದಲ್ಲಿರಿಸಿ ಖರನಿಗೆ ದಂಡಕಾರಣ್ಯ ರಾಜ್ಯ ಮತ್ತು 14,000 ಮಂದಿ ರಾಕ್ಷಸರನ್ನು ಕೊಟ್ಟ. ರಾಮ ಪಂಚವಟಿಯಲ್ಲಿ ಸೀತಾಲಕ್ಷ್ಮಣರೊಂದಿಗಿದ್ದಾಗ ಶೂರ್ಪಣಖಿ ರಾಮನನ್ನು ಮೋಹಿಸಿ ಲಕ್ಷ್ಮಣನಿಂದ ಕಿವಿಮೂಗುಗಳನ್ನು ಕುಯಿಸಿಕೊಂಡು ಹಿಂದಿರುಗಿ ಖರನನ್ನು ಮೊರೆಹೊಕ್ಕಳು. ಖರ ತನ್ನ 14,000 ಸೇನೆಯೊಂದಿಗೆ ರಾಮನನ್ನು ಇದಿರಿಸಿ ಸೇನಾಸಮೇತ ಹತನಾದ. ಈ ವೃತ್ತಾಂತ ರಾಮಾಯಣ, ಭಾರತಗಳಲ್ಲಿದೆ. *

**ಖರ[2] : ನೋಡಿ – ಸಂವತ್ಸರಗಳು**

**ಖರಗ್‌ಪುರ :** ಪಶ್ಚಿಮ ಬಂಗಾಲದ ಮೇದಿನೀಪುರ (ಮಿಡ್ನಾಪುರ) ಜಿಲ್ಲೆಯ ಅತ್ಯಂತ ದೊಡ್ಡ ನಗರ. ಕೋಲ್ಕೊತದ ನೈರುತ್ಯಕ್ಕೆ 115 ಕಿಮೀ ದೂರದಲ್ಲಿ. ಉ.ಅ. 22° 20' ಮತ್ತು ಪೂ.ರೇ. 87° 21' ಮೇಲಿದೆ. ಜನಸಂಖ್ಯೆ 207,984 (2001) ಆಗ್ನೇಯ ರೈಲ್ವೆಜಾಲದಲ್ಲಿ ಖರಗ್‌ಪುರ ಒಂದು ಪ್ರಮುಖ ಕೂಡುನಿಲ್ದಾಣ. ಇಲ್ಲಿಂದ ಕೋಲ್ಕೊತಗೆ ಜೋಡಿ ವಿದ್ಯುತ್ ರೈಲುಮಾರ್ಗಗಳಿವೆ. ಮುಂಬಯಿ ಚೆನ್ನೈಗಳಿಗೆ ರಾಷ್ಟ್ರೀಯ ಹೆದ್ದಾರಿಗಳಿವೆ.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಟ್ಟಡ

ಖರಗ್‌ಪುರದ ಪ್ರಾಮುಖ್ಯ ಬೆಳೆದದ್ದು ಇಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸ್ಥಾಪನೆಯಾದ (1951) ಅನಂತರ. ಕೇಂದ್ರಸರ್ಕಾರದಿಂದ ಸ್ಥಾಪಿತವಾದ

ಈ ಸಂಸ್ಥೆ ಸ್ವತಂತ್ರ ವಿಶ್ವವಿದ್ಯಾಲಯದ ದರ್ಜೆಯದು. ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ತಜ್ಞರನ್ನು ನಿರ್ಮಾಣಮಾಡಲು ಭಾರತ ಸರ್ಕಾರ ಪ್ರಾರಂಭಿಸಿದ ಐದು ತಾಂತ್ರಿಕ ವಿದ್ಯಾಲಯಗಳಲ್ಲಿ ಮೊದಲನೆಯದು. ಈ ಸಂಸ್ಥೆಯಲ್ಲಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ, ಶುದ್ಧ ಮತ್ತು ಅನ್ವಯ ವಿಜ್ಞಾನಗಳಲ್ಲಿ ಪದವಿಗಳನ್ನು ನೀಡಲಾಗುತ್ತಿದೆ. ಎಂಜಿನಿಯರಿಂಗ್ ಕಾಲೇಜು ಮತ್ತು ಇನ್ಸ್ಟಿಟ್ಯೂಟ್‍ಗಳ ಅಧ್ಯಾಪಕರುಗಳಿಗೂ ಇಲ್ಲಿ ತರಬೇತಿ ನೀಡಲಾಗುತ್ತಿದೆ. ಈ ಸಂಸ್ಥೆಯಲ್ಲಿ ಭಾರತದ ವಿವಿಧ ಪ್ರಾಂತ್ಯಗಳ ವಿದ್ಯಾರ್ಥಿಗಳಲ್ಲದೆ ವಿದೇಶೀಯ ವಿದ್ಯಾರ್ಥಿಗಳೂ ಅಧ್ಯಯನ ನಡೆಸುತ್ತಿದ್ದಾರೆ. ಸು. 4000 ವಿದ್ಯಾರ್ಥಿಗಳಿದ್ದಾರೆ. ಇದಲ್ಲದೆ ಖರಗ್‍ಪುರದಲ್ಲಿ ಅನೇಕ ತಾಂತ್ರಿಕ ಹಾಗೂ ಇತರ ಶಿಕ್ಷಣ ಸಂಸ್ಥೆಗಳಿವೆ. ಖರಗ್‍ಪುರ ರೈಲ್ವೆ ವರ್ಕ್‍ಷಾಪ್ ಬಹಳ ದೊಡ್ಡದು. ನಗರದ ಕಾರ್ಮಿಕರಲ್ಲಿ ಹೆಚ್ಚು ಮಂದಿ ವರ್ಕ್‍ಷಾಪಿನ ಉದ್ಯೋಗಸ್ಥರು. ಖರಗ್‍ಪುರದಲ್ಲಿ ಸಂತ ಪೀರ್ ಲೋಹಾನಿಯ ಸ್ಮಾರಕವಿದೆ. ಹಿಂದೂ ಮುಸ್ಲಿಮರಿಬ್ಬರೂ ಇದಕ್ಕೆ ನಡೆದುಕೊಳ್ಳುತ್ತಾರೆ. (ಜಿ.ಎಸ್.ಎಸ್.)

**ಖರಿಜ, ಅಲ್ ವಹತ್ ಅಲ್ :** ಈಜಿಪ್ಟಿನ ಅತ್ಯಂತ ದೊಡ್ಡ ಓಯಸಿಸ್. ಲಿಬ್ಯನ್ ಮರುಭೂಮಿಯಲ್ಲಿ ಉ.ಅ. 24°–26 ಮತ್ತು ಪೂ.ರೇ. 30°–31' ನಡುವೆ ಇದೆ. ದಕ್ಷಿಣೋತ್ತರವಾಗಿ 160 ಕಿಮೀ. ಮತ್ತು ಪೂರ್ವಪಶ್ಚಿಮವಾಗಿ 19–80 ಕಿ.ಮೀ. ಇದೆ. ಇಲ್ಲಿರುವ ಮುಖ್ಯ ಪಟ್ಟಣ ಅಲ್ ಖರಿಜ. ಈ ಪಟ್ಟಣ ಕೈರೋದಿಂದ ದಕ್ಷಿಣಕ್ಕೆ ರೈಲುಮಾರ್ಗದಲ್ಲಿ 754 ಕಿಮೀ. ದೂರದಲ್ಲಿದೆ. ನೈಲ್ ಕಣಿವೆ ರೈಲುಮಾರ್ಗದ ಮೇಲಿರುವ ಅಲ್ ವಹತ್ ಸಂಧಿಸ್ಥಳದಿಂದ ಇಲ್ಲಿಗೆ ನ್ಯಾರೋ ಗೇಜ್ ರೈಲ್ವೆ ಸಂಪರ್ಕವುಂಟು.

ಇದಕ್ಕೆ ಖರ್ಗ, ಖರ್ಗೇಹ್ ಎಂಬ ಹೆಸರುಗಳೂ ಇವೆ. ಪ್ರಾಚೀನ ಈಜಿಪ್ಷಿಯನ್ನರು ಇದನ್ನು ಕೆನೆಮ್ ಎಂದು ಕರೆಯುತ್ತಿದ್ದರೆಂದೂ ಹೇಳಲಾಗಿದೆ. ಗ್ರೀಕ್ ಚರಿತ್ರಕಾರ ಹಿರಾಡೋಟಸ್ (ಪ್ರ.ಶ.ಪೂ.ಸು. 5ನೆಯ ಶತಮಾನ) ಈ ಓಯಸಿಸ್ ಪ್ರದೇಶವನ್ನು ಪುಣ್ಯವಂತರ ದ್ವೀಪ ಎಂದು ಕರೆದಿದ್ದಾನೆ. ಇದನ್ನು ಅಮಾನುಷ ಅಥವಾ ಅತಿಮಾನುಷ ಶಕ್ತಿಗಳ ಬೀಡು ಎಂದೂ ಪರಿಗಣಿಸಲಾಗಿತ್ತು. ಇದು ಬಹು ದೂರದಲ್ಲಿದ್ದ ಪ್ರದೇಶವಾದ್ದರಿಂದ ದೇಶಭ್ರಷ್ಟರನ್ನು ಇಲ್ಲಿಗೆ ಸಾಗಿಸುತ್ತಿದ್ದುದುಂಟು.

ಈ ಪ್ರದೇಶ ಸುತ್ತಣ ಪ್ರಸ್ಥಭೂಮಿಗಿಂತ ಸು. 303 ಮೀ. ಕೆಳಮಟ್ಟದಲ್ಲಿದೆ. ಸಮುದ್ರಮಟ್ಟದಿಂದ ಇದರ ಎತ್ತರ 21 ಮೀ. ಈ ಓಯಸಿಸಿನ ನಡುಗಡ್ಡೆಯಲ್ಲಿ ಮರಳಿನ ಬೀಳುಭಾಗವೊಂದಿದ್ದು, ಅದು ಬಹುಮಟ್ಟಿಗೆ ಬಂಜರಾಗಿದೆ. ಓಯಸಿಸಿನ ಸುತ್ತಲೂ ಸುಣ್ಣಕಲ್ಲಿನ ಬೆಟ್ಟಗಳುಂಟು. ಈ ಪ್ರದೇಶದಲ್ಲಿರುವ ಭೂಮಿ ತುಂಬ ಫಲವತ್ತಾದ್ದು. ಸುಣ್ಣಕಲ್ಲಿನ ಭೂಮಿಯಲ್ಲಿ ಬಾವಿಗಳನ್ನು ತೋಡಿ ನೀರು ಪೂರೈಕೆ ಮಾಡಿಕೊಂಡು ಬೇಸಾಯ ಕೈಗೊಳ್ಳಲಾಗಿದೆ. ಖರ್ಜೂರ, ಗೋದಿ, ಕಾಳುಗಳು, ಅಕ್ಕಿ, ಹತ್ತಿ, ಬಾರ್ಲಿ, ಕೆಲವು ಬಗೆಯ ಹಣ್ಣು ಮತ್ತು ತರಕಾರಿ ಇಲ್ಲಿಯ ಮುಖ್ಯ ಬೆಳೆಗಳು. ಖರ್ಜೂರದ ಮರದ ಎಲೆ ಮತ್ತು ನಾರುಗಳಿಂದ ಬುಟ್ಟಿಗಳನ್ನೂ ಚಾಪೆಗಳನ್ನೂ ಹೆಣೆಯುತ್ತಾರೆ.

ಅಲ್ ಖರಿಜ ಪಟ್ಟಣ ಖರ್ಜೂರ ಮರಗಳ ತೋಪಿನ ನಡುವೆಯೇ ಇದೆ. ಈ ಪಟ್ಟಣದ ರಸ್ತೆಗಳು ಕಿರಿದಾಗಿ ಅಂಕುಡೊಂಕಾಗಿವೆ. ಇಲ್ಲಿಯ ಈಗಿನ ನಿವಾಸಿಗಳು ಬರ್ಬರ್ ಮತ್ತು ಬೆದೊಯಿನ್ ವರ್ಗಕ್ಕೆ ಸೇರಿದವರು.

ಹಿಂದೆ ಇಲ್ಲಿ ವಿಸ್ತಾರವಾದ ಪ್ರದೇಶ ಕೃಷಿಗೆ ಒಳಪಟ್ಟಿತ್ತು. ಕಾಲಕ್ರಮದಲ್ಲಿ ಭೂಕುಸಿತದಿಂದ ಅದು ಕಡಿಮೆಯಾಗಿತ್ತು. ಈಚೆಗೆ ಮತ್ತೆ ನೆಲವನ್ನು ಕೃಷಿಯೋಗ್ಯವನ್ನಾಗಿ ಮಾಡಲಾಗುತ್ತಿದೆ. ಇಲ್ಲಿ ಮಳೆ ಬಹಳ ಕಡಿಮೆ. ಜೊತೆಗೆ ಭೂಮ್ಯಂತರ್ಗತ ಜಲತಲವೂ ಕ್ರಮೇಣ ಕೆಳಕ್ಕೆ ಇಳಿಯುತ್ತಿರುವುದರಿಂದ, ಚಿಲುಮೆಗಳು ಬತ್ತುತ್ತಿವೆ. ಬಾವಿಗಳನ್ನು ತೋಡಿ ನೀರನ್ನು ಪಡೆದುಕೊಳ್ಳುವ ಪದ್ಧತಿ ಜಾರಿಗೆ ಬಂದಿದೆ. ನೀರು ಸರಬರಾಯಿ ವ್ಯವಸ್ಥೆ ಉತ್ತಮಗೊಂಡಂತೆ ಜನಸಂಖ್ಯೆಯೂ ಹೆಚ್ಚುತ್ತಿದೆ. ಈ ಓಯಸಿಸ್ ಪ್ರದೇಶದಲ್ಲಿ ಪ್ರಾಚೀನ ಶಿಲಾಯುಗದ ಜನ ಬಹುಕಾಲ ವಾಸವಾಗಿದ್ದರೆಂಬುದು ಉತ್ಖನನಗಳಿಂದ ಗೊತ್ತಾಗಿದೆ. ಇತರ ಯುಗಗಳಲ್ಲಿದ್ದ ಮಾನವರ ನೆಲೆಗಳೂ ಈಚಿನ ಸಂಶೋಧನೆಗಳಿಂದ ಬೆಳಕಿಗೆ ಬಂದಿವೆ. ಅಲ್ ಖರಿಜದ ಪ್ರಾಚೀನ ಅವಶೇಷಗಳಲ್ಲಿ ಅತ್ಯಂತ ಮುಖ್ಯವಾದವೆಂದರೆ ಅಮ್ಮಾನ್, ಹಿಬಿಸ್ ಮತ್ತು ನದುರ ದೇವಾಲಯಗಳು, ರೋಮನ್ ಕೋಟೆ ಮತ್ತು ಕ್ರೈಸ್ತರ ಶ್ಮಶಾನ. ಶ್ಮಶಾನದಲ್ಲಿ ಇಟ್ಟಿಗೆಗಳಿಂದ ಕಟ್ಟಲಾಗಿರುವ ನೂರಾರು ಸಮಾಧಿಗಳುಂಟು. ಇಲ್ಲಿಯ ಪ್ರಮುಖ ಕಟ್ಟಡಗಳೆಂದರೆ ಎರಡು ಮಸೀದಿಗಳು ಮತ್ತು ಒಂದು ಸರ್ಕಾರಿ ಭವನ. ಅಲ್ ಖರಿಜ ಮತ್ತು ಅಲ್ ವಹತ್ ನಗರಗಳ ನಡುವೆ ರೈಲ್ವೆ ಸಂಪರ್ಕ ಏರ್ಪಟ್ಟಿದ್ದು 1908ರಲ್ಲಿ. (ಪಿ.ಜಿ.ಡಿ.)

**ಖರೋಷ್ಠೀ :** ಭಾರತದ ವಾಯವ್ಯಗಡಿಯಲ್ಲಿ ಪ್ರ.ಶ.ಪೂ. ಸು. 3ನೆಯ ಶತಮಾನದಿಂದ ಪ್ರ.ಶ. ಸು. 5ನೆಯ ಶತಮಾನದವರೆಗೆ ಬಳಕೆಯಲ್ಲಿದ್ದ ಒಂದು ಲಿಪಿ. ಬ್ಯಾಕ್ಟ್ರಿಯನರು, ಪಾರ್ಥಿಯನರು, ಶಕರು, ಕುಶಾನರು ಇದನ್ನು ಉಪಯೋಗಿಸುತ್ತಿದ್ದರು. ಮೌರ್ಯರೂ ಈ ಪ್ರಾಂತ್ಯದಲ್ಲಿ ಖರೋಷ್ಠೀ ಲಿಪಿಯನ್ನೇ ಉಪಯೋಗಿಸುತ್ತಿದ್ದರು. ಅಶೋಕನ ಶಾಬಾಸ್‍ಗಾರಿ ಮತ್ತು ಮಾನ್‍ಸೇರ್ ಶಾಸನಗಳು ಖರೋಷ್ಠೀ ಲಿಪಿಯಲ್ಲಿವೆ.

ಈ ಲಿಪಿಯ ಉಗಮದ ಬಗ್ಗೆ ಒಮ್ಮತವಿಲ್ಲದಿದ್ದರೂ ಇದು ಅರಾಮೇಯಿಕ್ ಲಿಪಿಯಿಂದ ಹುಟ್ಟಿತೆಂದು ಅನೇಕರ ಅಭಿಪ್ರಾಯ. ಎರಡೂ ಲಿಪಿಗಳಿಗೆ ಬಹಳ ಹೋಲಿಕೆ ಇದೆ; ಎರಡನ್ನೂ ಬಲದಿಂದ ಎಡಕ್ಕೆ ಬರೆಯುತ್ತಾರೆ. ಖರೋಷ್ಠೀ ಎಂಬುದು ಇರಾನಿಯನ್ ಭಾಷೆಯ ಖರಪೊಸ್ತ (ಕತ್ತೆಯ ಚರ್ಮ) ಎಂಬ ಪದದ ಸಂಸ್ಕೃತ ರೂಪಾಂತರವೆಂದು ಮೊದಲು ಕತ್ತೆಯ ಚರ್ಮದ ಮೇಲೆ ಈ ಲಿಪಿಯಲ್ಲಿ ಬರೆಯುತ್ತಿದ್ದುದರಿಂದ ಅದಕ್ಕೆ ಈ ಹೆಸರು ಬಂದಿದೆಯೆಂದೂ ಬ್ಯೂಲರನ ಮತ.

ಖರೋಷ್ಠೀ ಲಿಪಿ ಅದರ ಸಮಕಾಲೀನವಾದ ಬ್ರಾಹ್ಮೀಲಿಪಿಗಿಂತ ಭಿನ್ನವಾದ್ದು. ಬ್ರಾಹ್ಮೀಯನ್ನು ಎಡಗಡೆಯಿಂದ ಬಲಗಡೆಗೆ ಬರೆಯುತ್ತಾರೆ. ಖರೋಷ್ಠೀಲಿಪಿಯಲ್ಲಿ ದೀರ್ಘಸ್ವರಗಳ ಸಂಕೇತವಿಲ್ಲ ಮತ್ತು ವ್ಯಂಜನಗಳ ಅನಂತರ ಬರುವ ಸ್ವರಗಳನ್ನು ಪೂರ್ಣವಾಗಿ ಬರೆಯುವುದಿಲ್ಲ. ಖರೋಷ್ಠೀಯ ಅಕ್ಷರಗಳು ಸ್ವಲ್ಪ ಅಂಕು ಡೊಂಕಾಗಿದ್ದರೆ ಬ್ರಾಹ್ಮೀಯವು ನೇರವಾಗಿವೆ. ಖರೋಷ್ಠೀ ಲಿಪಿ ಭಾರತದಲ್ಲಿ ಬಹುಕಾಲ ಬಾಳಲಿಲ್ಲ. ಪ್ರ.ಶ.ಸು. 5 ಅಥವಾ 6ನೆಯ ಶತಮಾನದ ವೇಳೆಗೆ ಭಾತರದಲ್ಲಿ ಅದರ ಉಪಯೋಗ ನಶಿಸಿಹೋಯಿತು. (ಎಂ.ಎಸ್.ಕೆ.ಎಂ.)

**ಖರ್ಜೂರದ ಮರ :** ಅರಿಕೇಸೀ (ಪಾಮೀ) ಕುಟುಂಬಕ್ಕೆ ಸೇರಿದ ಸುಪ್ರಸಿದ್ಧ ಹಣ್ಣಿನ ಮರ. ತೆಂಗು, ಈಚಲು ಮುಂತಾದ ಮರಗಳಿಗೆ ಬಲು ಹತ್ತಿರದ ಸಂಬಂಧಿ. ಸಸ್ಯಶಾಸ್ತ್ರೀಯ ಹೆಸರು ಫೀನಿಕ್ಸ್ ಡ್ಯಾಕ್ಟೈಲಿಫೆರ. ಇಂಗ್ಲಿಷಿನಲ್ಲಿ ಬಳಕೆಯ ಹೆಸರು ಡೇಟ್ ಪಾಮ್. ಇದರ ಹಣ್ಣನ್ನು ಸಂಸ್ಕೃತದಲ್ಲಿ ಪಿಂಡ–ಖರ್ಜೂರ ಎಂದೂ ಕನ್ನಡದಲ್ಲಿ ಖರ್ಜೂರ, ಉತ್ತತ್ತಿ, ಕಾರೀಕ, ಗಿಜ್ಜಿರ ಹಣ್ಣು ಎಂದೂ ಕರೆಯುತ್ತಾರೆ.

ಖರ್ಜೂರದ ಮರ ಏಷ್ಯ ಮತ್ತು ಆಫ್ರಿಕಗಳ ಉಷ್ಣವಲಯಗಳಲ್ಲೆಲ್ಲ ಸ್ವಾಭಾವಿಕವಾಗಿ ಬೆಳೆಯುವುದಲ್ಲದೆ ಬೇಸಾಯದಲ್ಲೂ ಇದೆ. ಮೂಲತಃ ಎಲ್ಲಿಯದೆಂದು ಖಚಿತವಾಗಿ ತಿಳಿಯದಿದ್ದರೂ ಪರ್ಷಿಯದ ಖಾರಿ ಇಲ್ಲವೆ ಪಶ್ಚಿಮ ಪಾಕಿಸ್ತಾನ ಇದರ ಉಗಮಸ್ಥಾನವೆಂದು ನಂಬಲಾಗಿದೆ. ಅರಬ್ ದೇಶಗಳ ಮರುಭೂಮಿ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಇತಿಹಾಸಪೂರ್ವದಿಂದಲೂ ಬೆಳೆಯುತ್ತಿದ್ದ ಖರ್ಜೂರದ ಮರವನ್ನು ಸಹಸ್ರಾರು ವರ್ಷಗಳ ಹಿಂದೆಯೇ ಆ ದೇಶಗಳಲ್ಲಿ ವ್ಯಾಪಕವಾಗಿ ರೂಢಿಸಲಾಯಿತು. ಅಲ್ಲಿಂದ ಕಾಲಕ್ರಮೇಣ ಸ್ಪೇನಿಗೂ ನೈಲ್ ನದಿ ಕಣಿವೆಯ ಒಣ ಪ್ರದೇಶಗಳಿಗೂ ಕಾಲಿಟ್ಟಿತು. ಎರಡು–ಮೂರು ಶತಮಾನಗಳ ಹಿಂದೆ ಸ್ಪೇನಿನಿಂದ ಅಮೆರಿಕಕ್ಕೆ ಇದನ್ನು ತರಲಾಯಿತು. ಈಗ ಅಮೆರಿಕದ ಉಷ್ಣವಲಯದ ಒಣ ಪ್ರದೇಶಗಳಲ್ಲಿ ಇದರ ಬೇಸಾಯ ದೊಡ್ಡಪ್ರಮಾಣದಲ್ಲಿ ನಡೆಯುತ್ತಿದೆ.

ಕ್ಯಾಲಿ ಫೋರ್ನಿಯ ಹಾಗೂ ಆರಿಜೋನಗಳ ಒಳಪ್ರದೇಶಗಳಲ್ಲಿ 4,000 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಇದನ್ನು ಬೆಳೆಸಲಾಗುತ್ತಿದೆ. ಬಹುಶಃ ಭಾರತಕ್ಕೆ ದಂಡೆತ್ತಿ ಬಂದ ಮುಸ್ಲಿಮರ ತಮ್ಮ ಜೊತೆಯಲ್ಲಿ ಖರ್ಜೂರದ ಮರವನ್ನು ತಂದಿರಬೇಕು. ಅಂದಿನಿಂದಲೂ ಭಾರತದ ವಾಯವ್ಯ ಭಾಗದಲ್ಲಿ ಇದು ಕಾಣಬರುತ್ತದೆ. ಭಾರತದಲ್ಲಿ ಖರ್ಜೂರದ ಬೇಸಾಯ ಹೆಚ್ಚಾಗಿಲ್ಲ; ಗುಜರಾತ್, ರಾಜಸ್ಥಾನ್, ಪಂಜಾಬ್, ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ಜಿಲ್ಲೆಗಳಲ್ಲಿ ಸ್ವಲ್ಪಮಟ್ಟಿಗೆ ಇದನ್ನು ಬೆಳೆಸಲಾಗುತ್ತಿದೆ. ಅರಬ್ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಉತ್ಪಾದನೆಯಾಗುವ ಖರ್ಜೂರ ಕೊಂಚ ಕೀಳುದರ್ಜೆಯದು. ಇತ್ತೀಚೆಗೆ ವಾಯವ್ಯ ಏಷ್ಯದ ಕೆಲವು ದೇಶಗಳಿಂದ ಹಾಗೂ ಅಮೆರಿಕ ಸಂಯುಕ್ತಸಂಸ್ಥಾನಗಳಿಂದ ಖರ್ಜೂರದ ಕೆಲವು ಉತ್ಕೃಷ್ಟ ಬಗೆಗಳನ್ನು ತರಿಸಲಾಗಿದ್ದು ಅವನ್ನು ಪಂಜಾಬಿನ ಅಬೊಹಾರ್ ಮತ್ತು ಗುಜರಾತಿನ ಖೆಡಿಯೋಗಳಲ್ಲಿ ದೊಡ್ಡ ಪ್ರಮಾಣದಲ್ಲಿ

ಖರ್ಜೂರದ ಮರ

ಬೆಳೆಸುವ ಪ್ರಯತ್ನಗಳು ನಡೆದಿವೆ. ಖರ್ಜೂರದ ಬೆಳೆಗೆ ಇಂದು ಹೆಸರಾಗಿರುವ ದೇಶಗಳೆಂದರೆ ಇರಾಕ್, ಇರಾನ್, ಮೊರಾಕೊ ಮತ್ತು ಆಲ್ಜೀರಿಯಗಳು.

**ಸಸ್ಯವೈಜ್ಞಾನಿಕ ವಿವರಣೆ:** ಖರ್ಜೂರದ ಮರ ನೇರವಾಗಿ ಸು. 60'–100' ಎತ್ತರಕ್ಕೆ ಬೆಳೆಯುವ, ಕವಲೊಡೆಯದ ವೃಕ್ಷ. ಮರದ ಮುಖ್ಯ ಹಾಗೂ ವಿಶೇಷ ಲಕ್ಷಣವೆಂದರೆ ಮುಖ್ಯ ಕಾಂಡದ ಬುಡದಿಂದ ಹಲವಾರು ಉಪಶಾಖೆಗಳು (ಮೋಸುಗಳು, ಕಂದುಗಳು, ಬೇರು ಸಸಿಗಳು–ಆಫ್‌ಷೂಟ್ಸ್) ಹೊರಟಿರುವುದು. ಇವನ್ನು ಕತ್ತರಿಸದೆ ಹಾಗೆಯೆ ಬಿಟ್ಟಲ್ಲಿ ಎಲ್ಲವೂ ಬೆಳೆದುಕೊಂಡು ಖರ್ಜೂರದ ಮರ ಒಂದು ದೊಡ್ಡ ಮೆಳೆಯಾಗಿಬಿಡುತ್ತದೆ. ಆದರೆ ಸಾಮಾನ್ಯವಾಗಿ ಖರ್ಜೂರದ ಬೇಸಾಯವಿರುವಲ್ಲೆಲ್ಲ ಮೋಸುಗಳು ಒಂದು ನಿರ್ದಿಷ್ಟ ವಯಸ್ಸಿಗೆ ಬಂದಾಗ ಅವನ್ನು ಕತ್ತರಿಸಿ ತೆಗೆದುಹಾಕುತ್ತಾರೆ. ಅಲ್ಲದೆ ಇವು ಖರ್ಜೂರದ ಮರದ ಅಬೀಜ ಸಂತಾನೋತ್ಪತ್ತಿಯ ಮುಖ್ಯಸಾಧನಗಳೂ ಆಗಿವೆಯಾದ್ದರಿಂದ ಇವನ್ನು ಕತ್ತರಿಸಿ ಬೇರೆಯಾಗಿ ನೆಟ್ಟು ಹೊಸ ಮರಗಳನ್ನು ಬೆಳೆಸುವುದುಮಟು. ಮರದ ಮುಖ್ಯಕಾಂಡದ ಮೇಲೆಲ್ಲ ಉದುರಿಹೋದ ಎಲೆಗಳ ತೊಟ್ಟಿನ ಬುಡಗಳ ದಟ್ಟವಾದ ಹೊದಿಕೆಯಿದೆ. ವಜ್ರಾಕೃತಿಯ ಹಾಗೂ ಬೂದುಬಣ್ಣದ ಇವು ಕೆಲವೊಮ್ಮೆ ನಾರಿನಂತಾಗಿ ನಿಬಿಡವಾಗಿ ಹೆಣೆದುಕೊಂಡುಬಿಡುತ್ತದೆ. ಇದರಿಂದ ಮುಖ್ಯಕಾಂಡಕ್ಕೆ ಅದರ ಜೀವಮಾನಪೂರ್ತಿ ರಕ್ಷಣೆ ದೊರೆಯುತ್ತದೆ. ಮರದ ತುದಿಯಲ್ಲಿ ಈಚಲು ಮರದಲ್ಲಿರುವಂತೆ ಪತ್ರಕಿರೀಟವಿದೆ (ಗರಿಸಮೂಹ). ಮರದ ಮೇಲೆಯೇ ಬಿಟ್ಟಲ್ಲಿ ಗರಿಗಳು ಹಲವಾರು ವರ್ಷಗಳು ಹಾಗೆಯೇ ಇದ್ದು ಕ್ರಮೇಣ ಬಿದ್ದುಹೋಗುತ್ತವೆ. ವರ್ಷಂಪ್ರತಿ 10–20 ಹೊಸ ಎಲೆಗಳು ಹುಟ್ಟುತ್ತವೆ. ಸಾಮಾನ್ಯವಾಗಿ 2–3 ವರ್ಷಗಳಿಗೊಮ್ಮೆ ಗರಿಗಳನ್ನು ಕತ್ತರಿಸಿ ತೆಗೆದು ಚಾವಣಿಗೂ ಬುಟ್ಟಿ ಮುಂತಾದವನ್ನು ಮಾಡಲೂ ಬಳಸುವುದುಂಟು. ಗರಿಗಳು ಸುರುಳಿರೂಪದಲ್ಲಿ ಜೋಡಣೆಗೊಂಡಿವೆ. ಗರಿ ಸಮೂಹದ ಮಧ್ಯಭಾಗದಲ್ಲಿ ನೆಟ್ಟಗೆ ಮೇಲ್ಮುಖವಾಗಿ ಚಾಚಿರುವ ಎಳೆಯ ಗರಿಗಳೂ ಹೊರಭಾಗದಲ್ಲಿ ಬಾಗಿಕೊಂಡಿರುವ ವಯಸ್ಸಾದ ಗರಿಗಳೂ ಇವೆ. ಒಂದೊಂದು ಗರಿಯೂ ಬಲು ಉದ್ದ; 10'–20' ವರೆಗೂ ಇರುತ್ತದೆ. ತೊಟ್ಟು ದಪ್ಪವಾಗಿಯೂ ನಾರುನಾರಾಗಿಯೂ ಬಿರುಸಾಗಿಯೂ ಇದೆ. ಇದರ ಬಣ್ಣ ಬೂದಿಮಿಶ್ರಿತ ಹಸಿರು. ಇದು ಬುಡದಲ್ಲಿ ಅಗಲವಾಗಿ ಮುಮ್ಮೂಲೆಯಾಕಾರದಲ್ಲಿ ಹರಡಿದ್ದು ಕಾಂಡವನ್ನು ಭಾಗಶಃ ಸುತ್ತುವರಿದಿರುತ್ತದೆ. ಅಲ್ಲದೆ ಗರಿಯ ಬುಡದ ಸುತ್ತ ಕಗ್ಗಂದು ಬಣ್ಣದ ನಾರಿನಿಂದಾದ ಉರುಳೆಯಾಕಾರದ ಕವಚ ಇದೆ. ಗರಿಗಳು ಚಿಕ್ಕವಿದ್ದು ಇನ್ನೂ ಮೊಗ್ಗಿನ ರೂಪದಲ್ಲಿರುವಾಗ ಈ ಕವಚ ಇದಕ್ಕೆ ಒಳ್ಳೆಯ ರಕ್ಷಣೆಯನ್ನು ಒದಗಿಸುತ್ತದೆ. ತೊಟ್ಟು ಭಾಗವನ್ನು ಬಿಟ್ಟು ಗರಿಯ ಉದ್ದಕ್ಕೂ ನೂರಾರು ಕಿರುಪತ್ರಗಳಿವೆ (ಲೀಫ್ ಲೆಟ್ಸ್). ಗರಿಯ ಬುಡಭಾಗದೆಡೆಗೆ ಇವು ಜೊತೆಜೊತೆಯಾಗಿ ವ್ಯವಸ್ಥಿತವಾಗಿವೆ. ಆದರೆ ಗರಿಯ ತುದಿಯೆಡೆಗೆ ಹೋದಂತೆಲ್ಲ ಈ ವ್ಯವಸ್ಥೆ ಅಸ್ಪಷ್ಟವಾಗುತ್ತದೆ. ಕಿರುಪತ್ರದ ಜೋಡಿಯಲ್ಲಿ ಒಂದು ಮೇಲ್ಮುಖವಾಗಿಯೂ ಇನ್ನೊಂದು ಅಡ್ಡಲಾಗಿಯೂ ಚಾಚಿಕೊಂಡಿವೆ. ಪ್ರತಿ ಕಿರುಪತ್ರದ ಉದ್ದ 8"–16"; ಆಕಾರ ಭರ್ಜಿಯಂತೆ; ಗಡುಸಾಗಿಯೂ ಚೂಪಾಗಿಯೂ ಇದೆ. ಇದರ ಮೇಲೆಲ್ಲ ನೀಲಿ ಹಸಿರುಬಣ್ಣದ ಮೇಣದಂಥ ವಸ್ತುವಿನ ಲೇಪವಿದೆ. ಗರಿಯ ತೊಟ್ಟಿನ ಮೇಲೆ ಹಲವಾರು ಚಿಕ್ಕ ಗಾತ್ರದ ಚೂಪಾದ ಮುಳ್ಳುಗಳಿವೆ (ಗರಿಯ ಬುಡದಲ್ಲಿಯ ಕಿರುಪತ್ರಗಳೇ ಮಾರ್ಪಾಟಾಗಿ ಮುಳ್ಳುಗಳಾಗಿವೆ ಎಂಬ ಅಭಿಪ್ರಾಯವಿದೆ.) ಮುಳ್ಳುಗಳ ಸಂಖ್ಯೆ, ಜೋಡಣಾವ್ಯವಸ್ಥೆ ಹಾಗೂ ಉದ್ದ–ಇವು ಖರ್ಜೂರದ ಮರದ ವಿವಿಧ ಬಗೆಗಳಿಗನುಗುಣವಾಗಿ ವ್ಯತ್ಯಾಸವಾಗುತ್ತವೆ.

ಮುಖ್ಯ ಕಾಂಡದ ಬುಡದಿಂದ ಹಗ್ಗದಂತಿರುವ ಅಸಂಖ್ಯಾತ ಆಗಂತುಕ ಬೇರುಗಳು (ಅಡ್ವೆಂಟಿಷಸ್ ರೂಟ್ಸ್) ಉತ್ಪತ್ತಿಯಾಗುತ್ತವೆ. ಇವುಗಳ ಬಣ್ಣ ಕಗ್ಗಂದು. ಬಹುಮಟ್ಟಿಗೆ ಭೂಮಿಯ ಮೇಲ್ಪದರಲ್ಲೇ ಬೆಳೆದುಕೊಂಡು ಹೋಗುವ ಇವು ನೀರಿನ ನೆಲೆಯನ್ನರಸಿಕೊಂಡು ಬಲುದೂರ ಬೆಳೆಯತ್ತವೆ. ಈಜಿಪ್ಟಿನಲ್ಲಿ ಬೆಳೆಯುವ ಖರ್ಜೂರದ ಮರಗಳ ಬೇರುತುದಿಯ ಜೀವಕೋಶಗಳಲ್ಲಿ ಒಂದು ಬಗೆಯ ಬೂಷ್ಟು ವಾಸಿಸುತ್ತಿದ್ದು ಮರದ ನೈಟ್ರೊಜನ್ ಪೂರೈಕೆಯಲ್ಲಿ ಮಹತ್ತ್ವದ ಪಾತ್ರವಹಿಸುತ್ತದೆ.

ಖರ್ಜೂರದ ಮರದಲ್ಲಿ ಲಿಂಗಭೇದವಿದೆ. ಆದರೆ ಗಂಡು ಮತ್ತು ಹೆಣ್ಣುಮರಗಳ ವ್ಯತ್ಯಾಸ ಹೊರನೋಟಕ್ಕೆ ಕಾಣದು. ಕೆಲವು ಬಗೆಗಳಲ್ಲಿ ಮಾತ್ರ ಗಂಡು ಹಾಗೂ ಹೆಣ್ಣು ಮರಗಳನ್ನು ಅವುಗಳ ಎಲೆ, ಕಾಂಡ ಮುಂತಾದ ಲಿಂಗಸಂಬಂಧವಿಲ್ಲದ ಅಂಗಗಳ ಲಕ್ಷಣಗಳಿಂದ ಗುರುತಿಸಬಹುದು. ಗಂಡುಮರದಲ್ಲಿ ವರ್ಷಕ್ಕೆ 30–50 ಗಂಡು ಹೂಗೊಂಚಲುಗಳು ಉತ್ಪತ್ತಿಯಾಗುತ್ತವೆ. ಹೂಗೊಂಚಲು ತಾಳಗುಚ್ಛಮಾದರಿಯದು; ಗೊಂಚಲಿನ ಸುತ್ತ ಕಂದುಬಣ್ಣದ ಪುಡಿಯಿಂದ ಲೇಪಿತವಾದ ಕವಚ ಇದೆ. ಗೊಂಚಲಿನಲ್ಲಿ ಮೋಟಾದ ಕೇಂದ್ರ ಅಕ್ಷವನ್ನೂ ಇದರಿಂದ ಹೊರಡುವ ನೂರಾರು ಕವಲುಗಳನ್ನೂ ನೋಡಬಹುದು. ಕವಲುಗಳ ಮೇಲೆಲ್ಲ ಅವುಗಳ ಉದ್ದಕ್ಕೂ ಜೋಡಣೆಗೊಂಡ ಹೂಗಳಿವೆ. ಹೂಗಳು ಬಲು ಚಿಕ್ಕವು; 1/3" ಉದ್ದ ಇವೆ. ತಿಳಿಹಳದಿ ಬಣ್ಣದ ಇವಕ್ಕೆ ನವುರಾದ ಸುವಾಸನೆಯಿದೆ. ಪ್ರತಿ ಹೂವಿನಲ್ಲಿ 6 ಹಾಲೆಗಳನ್ನುಳ್ಳ ಪೆರಿಯಾಂತ್ ಭಾಗ ಮತ್ತು 6 ಕೇಸರಗಳಿವೆ. ಪೆರಿಯಾಂತ್ ಭಾಗದಲ್ಲಿ ತಲಾ 3 ಹಾಲೆಗಳ ಹೊರಸುತ್ತು ಮತ್ತು ಒಳಸುತ್ತನ್ನು ಗುರುತಿಸಬಹುದು. ಹೊರಸುತ್ತಿನ ಹಾಲೆಗಳು ಬಲುಚಿಕ್ಕವು–ಇವುಗಳಿಗೆ ರೂಢಿಯಲ್ಲಿ ಪುಷ್ಪಪತ್ರಗಳೆಂಬ (ಕೇಲಿಕ್ಸ್) ಹೆಸರಿದೆ. ಒಳಸುತ್ತಿನ ಹಾಲೆಗಳು ದೊಡ್ಡಗಾತ್ರದವು; ಇವನ್ನು ದಳಗಳು (ಕರೋಲ) ಎನ್ನುವುದುಂಟು. ಕೇಸರಗಳಲ್ಲಿ ಬಲುಚಿಕ್ಕದಾದ ಕೇಸರದಂಡವೂ ಉದ್ದವಾದ, ಚಪ್ಪಟೆಯಾದ ಮತ್ತು ಅಲೆಯಾಕಾರದ ಅಂಚನ್ನುಳ್ಳ ಪರಾಗಕೋಶಗಳೂ ಇವೆ. ಹೂವಿನ ಮಧ್ಯ ಭಾಗದಲ್ಲಿ ಪುಟ್ಟದಾದ ಬಂಜೆ ಅಂಡಾಶಯವೂ ಉಂಟು. ಪರಾಗ ಹಳದಿಬಣ್ಣದ್ದು. ಬಲು ಹಗುರವಾಗಿಯೂ ನಯವಾಗಿಯೂ ಇದೆ; ಬಹುಕಾಲ ಮೊಳೆಯುವ ಸಾಮರ್ಥ್ಯವನ್ನು ಉಳಿಸಿಕೊಂಡಿರಬಲ್ಲುದು.

ಹೆಣ್ಣುಮರದಲ್ಲೂ ತಾಳಗುಚ್ಛಮಾದರಿಯ ಹೂಗೊಂಚಲಿದೆ. ಗಂಡು ಹೂಗೊಂಚಲಿನಂತೆಯೇ ಇದು ಕೂಡ ಕವಚದಿಂದ ಆವೃತವಾಗಿದೆ. ಕವಚ ಗಂಡಿನದಕ್ಕಿಂತ ಹೆಚ್ಚು ಅಗಲವಾದುದು. ಅಲ್ಲದೆ ಹೆಣ್ಣು ಹೂಗೊಂಚಲು ಗಂಡುಗುಚ್ಛಕ್ಕಿಂತ ಹೆಚ್ಚು ಉದ್ದ. ಹೆಣ್ಣು ಹೂಗೊಂಚಲಿನಲ್ಲಿ ಉದ್ದನೆಯ ಹಾಗೂ ಹಲವಾರು ಕವಲುಗಳನ್ನೊಳಗೊಂಡ ಅಕ್ಷವಿದೆ. ಕವಲುಗಳ ಉದ್ದ 12"–20" ವರೆಗೆ ಇದೆ. ಅವುಗಳ ಉದ್ದಕ್ಕೂ ಅನೇಕ ಹೆಣ್ಣು ಹೂಗಳು ಜೋಡಣೆಗೊಂಡಿವೆ. ಪ್ರತಿ ಹೂವಿನಲ್ಲಿ ಎರಡು ಸುತ್ತುಗಳಲ್ಲಿ ಜೋಡಣೆಯಾದ ಆರು ಹಾಲೆಗಳಿಂದ ಕೂಡಿದ ಪೆರಿಯಾಂತ್ ಭಾಗ (ಎರಡು ಸುತ್ತುಗಳ ಹಾಲೆಗಳೂ ಗಾತ್ರದಲ್ಲಿ ಚಿಕ್ಕವು), ಮೂರು ಬಿಡಿಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯ ಇವೆ. ಖರ್ಜೂರದ ಮರದಲ್ಲಿ ಗಾಳಿಯ ಮೂಲಕ ಸ್ವಾಭಾವಿಕವಾಗಿ ಪರಾಗಸ್ಪರ್ಶಕ್ರಿಯೆ ನಡೆಯುತ್ತದೆ. ಆದರೂ ಸಾಗುವಳಿಯಲ್ಲಿರುವ ಮರಗಳಲ್ಲಿ ಕೈಯಿಂದ ಪರಾಗಸ್ಪರ್ಶಕ್ರಿಯೆಯನ್ನು ನಡೆಸುವುದೇ ವಾಡಿಕೆಯಲ್ಲಿರುವ ಕ್ರಮ. ಇದರಿಂದ ಸ್ವಾಭಾವಿಕ ಕ್ರಮದಲ್ಲಿ ಉಂಟಾಗಬಹುದಾದ ಪರಾಗನಷ್ಟವನ್ನು ಕಡಿಮೆಮಾಡಬಹುದು. ಗಂಡು ಹೂಗೊಂಚಲಿನ ಸಣ್ಣ ತುಂಡುಗಳನ್ನು ಹೆಣ್ಣುಹೂಗೊಂಚಲಿನ ಕವಲುಗಳ ಮಧ್ಯೆ ಸೇರಿಸಿ ಪರಾಗಸ್ಪರ್ಶ ನಡೆಯುವಂತೆ ಮಾಡಲಾಗುತ್ತದೆ. ಒಂದು ಗಂಡುಮರ ಸು. 100 ಹೆಣ್ಣುಮರಗಳಿಗೆ ಸಾಕಾಗುವಷ್ಟು ಪರಾಗವನ್ನು ಉತ್ಪಾದಿಸಬಲ್ಲುದು. ಖರ್ಜೂರದ ವಿವಿಧ ಬಗೆಗಳ ಗಂಡುಮರಗಳು ಉತ್ಪಾದಿಸುವ ಪರಾಗದ ಗುಣ ಮತ್ತು ಸಾಮರ್ಥ್ಯಗಳಲ್ಲಿ ವ್ಯತ್ಯಾಸವಿದೆ. ಈ ವ್ಯತ್ಯಾಸ ಫಲಗಳ ಗಾತ್ರ, ಗುಣ ಮತ್ತು ಮಾಗುವ ಸಮಯದ ಮೇಲೆ ಪ್ರಭಾವ ಬೀರುತ್ತದೆಯೆಂದು ತಿಳಿದಿದೆ. ಆದ್ದರಿಂದ ಒಳ್ಳೆಯ ಹಣ್ಣುಬಿಡುವ ಹೆಣ್ಣುಮರಗಳನ್ನು ಆಯುವಂತೆಯೆ

ಒಳ್ಳೆಯ ಪರಾಗವುಳ್ಳ ಗಂಡುಮರಗಳನ್ನೆ ಆಯ್ದು ಬೆಳೆಸಬೇಕು. ನಿಷೇಚನವಾದ ಮೇಲೆ ಪ್ರತಿ ಹೆಣ್ಣುಹೂವಿನ ಅಂಡಾಶಯದಲ್ಲಿಯ ಮೂರು ಕಾರ್ಪೆಲುಗಳಲ್ಲಿ ಒಂದೇ ಒಂದು ಬೆಳೆದು ಫಲವಾಗುತ್ತದೆ. ಉಳಿದ ಎರಡು ಕಾರ್ಪೆಲುಗಳು ಬಟಾಣಿಕಾಳಿನ ಗಾತ್ರಕ್ಕೆ



ತಾಳಗುಚ್ಛಗಳು–ಕವಚದೊಂದಿಗೆ. ಎಡಗಡೆಯದು ಗಂಡು, ಬಲಗಡೆಯದು ಹೆಣ್ಣು

ಬೆಳೆದು ಬಿದ್ದುಹೋಗುತ್ತವೆ. ಅನಂತರ ಹೆಣ್ಣು ಹೂಗೊಂಚಲಿನ ಎಲ್ಲ ಕವಲುಗಳೂ ಉದ್ದವಾಗಿ ಬೆಳೆದು ತೂಗಾಡುವ ಫಲಭರಿತ ಗೊಂಚಲುಗಳಾಗುತ್ತವೆ. ಒಂದೊಂದು ಮರದಲ್ಲೂ ಸುಮಾರು 20–30 ಗೊಂಚಲುಗಳು ಉತ್ಪತ್ತಿಯಾಗುತ್ತವೆ. ಫಲ (ಖರ್ಜೂರ) ಒಂದೇ ಬೀಜವುಳ್ಳ ಬೆರಿ ಮಾದರಿಯದು. ಇದರ ಉದ್ದ 1"–3". ಬಣ್ಣ ವಿವಿಧ ಬಗೆಗಳಿಗನುಗುಣವಾಗಿ ಅಚ್ಚಹಳದಿಯಿಂದ ಕೆಂಪುಮಿಶ್ರಿತ ಕಂದಿನ ವರೆಗೂ ವ್ಯತ್ಯಾಸವಾಗುತ್ತದೆ. ಅಂತೆಯೆ ಹಣ್ಣಿನ ಆಕಾರ ಮತ್ತು ವಾಸನೆಗಳಲ್ಲೂ ಬಗೆಯಿಂದ ಬಗೆಗೆ ಭಿನ್ನತೆಯಿದೆ. ಸಾಮಾನ್ಯವಾಗಿ ಹಣ್ಣು ಉದುದ್ದವಾಗಿರುವುದಾದರೂ ಕೆಲವು ಬಗೆಗಳಲ್ಲಿ ಗುಂಡಾಗಿರುವುದುಂಟು. ಹಣ್ಣಿನ ಬುಡದಲ್ಲಿ ಪೆರಿಯಾಂತಿನ ಉಳಿಕೆಗಳನ್ನು ಕಾಣಬಹುದು. ಬೀಜ ಸುಮಾರು 1" ಉದ್ದ ಇದೆ. ಬಲುಗಟ್ಟಿಯಾಗಿರುವ ಇದರ ಒಂದು ಪಕ್ಕದಲ್ಲಿ ಒಂದು ಉದ್ದನೆಯ ತೋಡೂ ಮೇಲೆಲ್ಲ ತೆಳುವಾದ ಕಾಗದದಂಥ ಪೊರೆಯೂ ಇವೆ.

**ಖರ್ಜೂರ ಮರದ ಬಗೆಗಳು:** ಖರ್ಜೂರ ಮರದಲ್ಲಿ ಅಸಂಖ್ಯಾತ ಬಗೆಗಳುಂಟು. ಇವುಗಳಲ್ಲಿ ಕೆಲವು ಮಾತ್ರ ಆರ್ಥಿಕ ದೃಷ್ಟಿಯಿಂದ ಮುಖ್ಯವಾದವು. ಖರ್ಜೂರದಲ್ಲಿ ಲಿಂಗಭೇದವಿರುವುದರಿಂದ ಉಂಟಾಗಿರಬಹುದಾದ ವಿಷಮಜನನಾಂಶಿ ಸ್ವಭಾವವೂ (ಹೆಟರೊಜೀನಸ್ ನೇಚರ್) ಆಹಾರವಸ್ತುವಾಗಿ ಬೆಳೆಸಲಾಗುವ ಪ್ರದೇಶಗಳಲ್ಲಿ ಬಹುಹಿಂದಿನ ಕಾಲದಿಂದ ಇರುವ ಬೇಸಾಯವೂ ಖರ್ಜೂರದ ಮರದಲ್ಲಿ ಅನೇಕ ಬಗೆಗಳಿರುವುದಕ್ಕೆ ಮುಖ್ಯ ಕಾರಣಗಳೆಂದು ಭಾವಿಸಲಾಗಿದೆ. ಅರೇಬಿಯ ಮತ್ತು ಉತ್ತರ ಆಫ್ರಿಕಗಳಲ್ಲಿ ಸಸಿಗಳ ಮೂಲಕ ಪಡೆದು ಬೆಳೆಸಿದ ಖರ್ಜೂರದ ಮರಗಳು ಗುಣ ಮತ್ತು ಇಳುವರಿಯ ದೃಷ್ಟಿಯಿಂದ ಅಷ್ಟು ಉತ್ತಮವಲ್ಲ. ಬೇರೆಡೆಯಲ್ಲಿ ಬೆಳೆಸುವ ಬಗೆಗಳು ಅಬೀಜ ಪುನರುತ್ಪಾದನೆಯಿಂದ ಪಡೆದವಾಗಿದ್ದು ಉತ್ತಮದರ್ಜೆಯವೆಂದು ಹೆಸರಾಗಿವೆ. ಖರ್ಜೂರದ ಮರದ ವಿವಿಧ ಬಗೆಗಳ ಸಂಖ್ಯೆ ನೂರನ್ನು ಮೀರುವುದಾದರೂ ಇವನ್ನು ಮೂರು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು.

**1 ಮೆತು ಖರ್ಜೂರ:** ಇದರ ಹಣ್ಣುಗಳು ಹೆಚ್ಚು ರಸಭರಿತ ಹಾಗೂ ಮೆತು; ಬೇಗ ಒಣಗುವುದಿಲ್ಲ. ಸಕ್ಕರೆಯ ಅಂಶ ಬೇರೆ ಬಗೆಗಳಿಗೆ ಹೋಲಿಸಿದರೆ ಬಹಳ ಕಡಿಮೆ (ಶೇ.60 ಮಾತ್ರ ಇದೆ) ಎನಿಸಿದರೂ ಸಹಜವಾಗಿ ಆಗಬಹುದಾದ ಹುದುಗುವಿಕೆಯನ್ನು ತಡೆಯಲು ಸಾಕಷ್ಟಿರುವುದರಿಂದ ಹಣ್ಣುಗಳನ್ನು ಸಂಗ್ರಹಿಸಿಡಬಹುದು. ಸಕ್ಕರೆ, ಗ್ಲೂಕೋಸ್ ಮತ್ತು ಫ್ರಕ್ಟೋಸುಗಳ ರೂಪದಲ್ಲಿರುತ್ತದೆ. ಮೆತುಖರ್ಜೂರವನ್ನು ಹಾಗೆಯೇ ಉಪಯೋಗಿಸಬಹುದು. ಇಲ್ಲವೇ ಒತ್ತಡಕ್ಕೊಳಪಡಿಸಿ ಅಗ್ವ ಎನ್ನಲಾಗುವ ರೂಪಕ್ಕೆ ಮಾರ್ಪಡಿಸಿ ಜೋಪಾನಿಸಬಹುದು. ಅಗ್ವ ಅರಬ್ ದೇಶಗಳ ಮಾರುಕಟ್ಟೆಗಳಲ್ಲಿ ಬಲುಸಾಮಾನ್ಯ. ಪ್ರಪಂಚಾದ್ಯಂತ ಮಾರಲಾಗುವ ಖರ್ಜೂರಗಳಲ್ಲಿ ಬಹುಪಾಲು ಈ ಬಗೆಯಿಂದ ಪಡೆಯಲಾದುದು. ಹಣ್ಣಿನ ಅಂಗಡಿಗಳಲ್ಲಿ ಖರ್ಜೂರ ಇಲ್ಲವೆ ಪಿಂಡೆ ಖರ್ಜೂರ ಎಂದು ಹೆಸರಿನಲ್ಲಿ ಮಾರಲಾಗುವ ಬಗೆ ಇದು. ಮೆತು ಖರ್ಜೂರದಲ್ಲಿ ಸು. 350 ಬಗೆಗಳುಂಟು. ಇವುಗಳಲ್ಲೆಲ್ಲ ಅತಿಮುಖ್ಯವಾದವು ಮಿಶ್ರಿಗ್, ಹಿಲ್ಲಾವಿ, ಖದ್ರಾವಿ ಮತ್ತು ಸೇಯರ್. ಇರಾಕ್, ಪಶ್ಚಿಮ ಪಾಕಿಸ್ತಾನ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಬೆಳೆಯುವ ಮುಖ್ಯ ಬಗೆಗಳಿವು.



ಹೆಣ್ಣು ತಾಳಗುಚ್ಛ (ಕವಲುಗಳ ನಡುವೆ ಗಂಡು ಹೂಗೊಂಚಲಿನ ರೆಂಬೆಯೊಂದನ್ನು ಇಟ್ಟಿದೆ)

**2 ಅರೆಮೆತು ಖರ್ಜೂರ:** ಈ ಗುಂಪಿಗೆ ಸೇರಿದ ಬಗೆಗಳ ಹಣ್ಣುಗಳಲ್ಲಿ ಮೆತು ಖರ್ಜೂರಕ್ಕಿಂತ ಗಟ್ಟಿಯಾದ ತಿರುಳಿದೆ. ಒಣಗುವುದು ಬಲುನಿಧಾನ. ಒಣಗಿದಾಗಲೂ ಮೃದುತ್ವವನ್ನು ಉಳಿಸಿಕೊಂಡಿರುತ್ತವೆ. ಮೆತುಖರ್ಜೂರಕ್ಕೆ ಹೋಲಿಸಿದರೆ ಇದರಲ್ಲಿಯ ಸಕ್ಕರೆಯ ಪರಿಮಾಣ ಹೆಚ್ಚು. ಹಣ್ಣು ಪೂರ್ತಿ ಮಾಗುವ ಮುನ್ನವೆ ಅದನ್ನು ಮರದಿಂದ ಬಿಡಿಸಲಾಗುತ್ತದೆ. ಈ ಗುಂಪಿನಲ್ಲೂ ಹಲವಾರು ಬಗೆಗಳಿದ್ದು ಇರಾಕ್ ದೇಶದಲ್ಲಿ ಬೆಳೆಯುವ ಜ಼ಾಹಿದಿ, ದಾಯೆರಿ ಬಗೆಗಳೂ ಆಲ್ಜೀರಿಯದಲ್ಲಿ ಬೆಳೆಯುವ ಡೆಗ್ಲೆಟ್ ನೂರ್ ಎಂಬುದೂ ಮುಖ್ಯವೆನಿಸಿವೆ. ಡೆಗ್ಲೆಟ್ ನೂರ್ ಬಗೆಯನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಬೆಳೆಸಲಾಗುತ್ತಿದೆ.

**3 ಒಣಖರ್ಜೂರ:** ಇದರ ಹಣ್ಣುಗಳು ಮರದಲ್ಲಿದ್ದಂತೆಯೆ ಬಿಸಿಲಿನ ಬೇಗೆಗೆ ಒಣಗಿಬಿಡುತ್ತವೆ. ಇದರಿಂದಾಗಿ ಇವನ್ನು ಬಹಳ ಕಾಲ ಸಂಗ್ರಹಿಸಿಡಬಹುದು. ಸಾಗಾಣಿಕೆಯೂ ಸುಲಭ. ಸಕ್ಕರೆಯ ಪರಿಮಾಣ ಬೇರೆ ಗುಂಪುಗಳ ಖರ್ಜೂರಗಳಿಗಿಂತ ಅತಿಹೆಚ್ಚು (ಸು. ಶೇ.65–70 ಇದೆ). ಸಕ್ಕರೆ ಸುಕ್ರೋಸ್ ರೂಪದಲ್ಲಿದೆ. ಭಾರತದಲ್ಲಿ ದಿನಸಿ ಅಂಗಡಿಗಳಲ್ಲೆಲ್ಲ ಸಿಕ್ಕುವ ಬಗೆ ಇದು. ಇದಕ್ಕೆ ಹಿಂದಿಯಲ್ಲಿ ಚುಹಾರ ಎಂದೂ ಕನ್ನಡದಲ್ಲಿ ಕಾರೀಕ,

ಉತ್ತತ್ತಿ ಎಂದೂ ಹೆಸರಿದೆ. ಇದರಲ್ಲೂ ಅನೇಕ ಬಗೆಗಳಿವೆ. ಇವುಗಳಲ್ಲಿ ಆಲ್ಜೀರಿಯದಿಂದ ಪಡೆಯಲಾಗುವ ಥೂರಿ ಬಗೆ ಅತಿಮುಖ್ಯವಾದದ್ದು.

**ಬೇಸಾಯ:** ಖರ್ಜೂರದ ಮರ ಮುಖ್ಯವಾಗಿ ಉಷ್ಣವಲಯದ ಬೆಳೆ. ಹವಾಮಾನದ ತನ್ನ ಅಗತ್ಯಗಳಲ್ಲಿ ಬಲು ನಿಷ್ಕೃಷ್ಟವಾದದ್ದು. ತಂಪು ಹವೆಯನ್ನು ಸ್ವಲ್ಪಕಾಲ ಸಹಿಸಬಲ್ಲುದಾದರೂ ಇದಕ್ಕೆ ದೀರ್ಘಾವಧಿಯ ಅತಿ ಹೆಚ್ಚಿನ ಉಷ್ಣತೆ ಅತ್ಯಂತ ಆವಶ್ಯಕ. ಹಗಲು ಮತ್ತು ರಾತ್ರಿ ಅಧಿಕ ಉಷ್ಣತೆ ಇರುವ ದೀರ್ಘಾವಧಿಯ ಬೇಸಗೆ ಅಗತ್ಯ. ಆರ್ದ್ರತೆ ಮತ್ತು ಮಳೆ ಕನಿಷ್ಠಪ್ರಮಾಣದಲ್ಲಿರಬೇಕು. ಹೂ ಬಿಡುವಾಗ, ಕಾಯಿ ಕಚ್ಚುವಾಗ ಸಂಪೂರ್ಣ ಶುಷ್ಕವಾದ ಹಾಗೂ ಹೆಚ್ಚು ಉಷ್ಣತೆಯ ಪರಿಸ್ಥಿತಿ ಇರಬೇಕು (ಉಷ್ಣತೆ $25^{o}$–$30^{o}$ ಸೆಂ. ಇರಬೇಕು). ಖರ್ಜೂರದ ಮರ ಮರಳು, ಗೋಡು, ಜೇಡಿಮಿಶ್ರಿತ ಗೋಡು ಮುಂತಾದ ಹಲವಾರು ಬಗೆಯ ಮಣ್ಣುಗಳಲ್ಲಿ ಬೆಳೆಯಬಲ್ಲುದಾದರೂ ನೀರು ಮತ್ತು ಗಾಳಿ ಸರಾಗವಾಗಿ ಚಲಿಸಬಲ್ಲಂಥ ಮರಳು ಮಿಶ್ರಿತ ಗೋಡು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮಣ್ಣು ಹೆಚ್ಚು ಆಳವಾಗಿಯೂ ನೀರನ್ನು ಹಿಡಿದಿಡುವ ಸಾಮರ್ಥ್ಯವುಳ್ಳದ್ದಾಗಿಯೂ ಇರಬೇಕು. ಮಣ್ಣಿನಲ್ಲಿಯ ಹೆಚ್ಚಿನ ಪರಿಮಾಣದ ಕ್ಷಾರತೆಯನ್ನೂ ಖರ್ಜೂರ ಸಹಿಸಬಲ್ಲುದು.



ಒಣ ಖರ್ಜೂರ (ಉತ್ತತ್ತಿ)

ಇದರಿಂದಾಗಿ ಇದರ ಬೇಸಾಯದಲ್ಲಿ (ಸಾಮಾನ್ಯವಾಗಿ ನೀರಾವರಿ ಭೂಮಿಯಲ್ಲೆ ಇದರ ಬೇಸಾಯ ಹೆಚ್ಚು) ಈ ಅಂಶಗಳ ಬಗ್ಗೆ–ಅದರಲ್ಲೂ ಗಿಡಗಳು ಚಿಕ್ಕವಿರುವಾಗ ಹೆಚ್ಚು ಗಮನ ಕೊಡುವುದು ಅಗತ್ಯ. ಖರ್ಜೂರದ ಮರದ ಈ ಬಗೆಯ ನಿಖರವಾದ ಆವಶ್ಯಕತೆಗಳಿಂದಾಗಿ ಖರ್ಜೂರದ ಮರದ ಕಾಲು ಹರಿವ ನೀರಿನಲ್ಲಿ, ತಲೆ ಉರಿವ ಬಾನಿನಲ್ಲಿ ಇರಬೇಕು ಎಂದು ಅರಬ್ ದೇಶಗಳಲ್ಲಿ ಹೇಳುವುದಿದೆ.

**ಬೇಸಾಯದ ಕ್ರಮ:** ಖರ್ಜೂರದ ಮರವನ್ನು ಕಂದುಗಳಿಂದ ಇಲ್ಲವೆ ಬೀಜಗಳಿಂದ ವೃದ್ಧಿಮಾಡಬಹುದು. ಬೀಜಗಳಿಂದ ಬೆಳೆಸುವುದು ಲಾಭದಾಯಕವಲ್ಲ. ಏಕೆಂದರೆ ಬಿತ್ತಿದ ಬೀಜಗಳಲ್ಲಿ ಶೇ.50ರಷ್ಟು ಮಾತ್ರ ಹೆಣ್ಣು ಸಸಿಗಳಾಗುತ್ತವೆ. ಉಳಿದವು ಗಂಡು ಸಸಿಗಳು. ಅಲ್ಲದೆ ಸಸಿಗಳ ಲಿಂಗವನ್ನು ಗೊತ್ತುಹಚ್ಚಲು 4–10 ವರ್ಷಗಳು ಬೇಕು. ಇವು ಬಿಡುವ ಹಣ್ಣಿನ ಗುಣ ಗೊತ್ತಾಗುವುದೂ ಅನಂತರವೇ. ಇದರಿಂದಾಗಿ ಕಂದುಗಳಿಂದ ವೃದ್ಧಿಮಾಡುವುದೇ ಯುಕ್ತಕ್ರಮ. ಆದರೂ ಕೆಲವೊಮ್ಮೆ ಬೀಜದಿಂದ ಪಡೆದ ಸಸಿ ಶ್ರೇಷ್ಠ ಗುಣಗಳಿಂದ ಕೂಡಿದ್ದಾಗಿರಬಹುದು. ಆಗ ಅದನ್ನು ಉಳಿಸಿಕೊಂಡು ಅದರಿಂದ ಹೊರಡುವ ಕಂದುಗಳಿಂದ ಮರಗಳನ್ನು ಬೆಳೆಸಿಕೊಳ್ಳಬಹುದು. ಹಣ್ಣಿನ ಗುಣ ಲಕ್ಷಣಗಳಲ್ಲಿ ಉತ್ತಮವೆನಿಸಿದ ಮರದಿಂದ ಹುಟ್ಟುವ ಕಂದುಗಳನ್ನು ಕತ್ತರಿಸಿ ತೆಗೆದು ಬೇರೆಡೆಯಲ್ಲಿ ನೆಟ್ಟು ಬೆಳೆಸುವುದೇ ವಾಡಿಕೆಯಲ್ಲಿರುವ ಕ್ರಮ. ಒಂದು ಮರಕ್ಕೆ 4–5 ವರ್ಷ ವಯಸ್ಸಾದ ಅನಂತರ ಕಂದುಗಳನ್ನು ಕತ್ತರಿಸಲು ಆರಂಭಿಸುತ್ತಾರೆ. ಒಂದು ಮರದಿಂದ ಪ್ರತಿವರ್ಷ ಎರಡು ಕಂದುಗಳಂತೆ 10–15 ವರ್ಷಗಳ ತನಕ ಪಡೆಯಬಹುದು. ಬೇರುಗಳು ಹೊರಟ ಕಂದುಗಳನ್ನು ಕತ್ತರಿಸುವುದೇ ಉತ್ತಮ. ಇವನ್ನು ಬೇರ್ಪಡಿಸುವ 4–5 ದಿವಸಗಳ ಮುಂಚೆ ಇಲ್ಲವೆ ಬೇರ್ಪಡಿಸಿದ ತತ್ ಕ್ಷಣ ಇವುಗಳಿಂದ ಎಳೆಯ ಗರಿಗಳನ್ನು ಬಿಟ್ಟು ಉಳಿದವನ್ನು ತೆಗೆದು ಹಾಕುತ್ತಾರೆ. ಕಂದುಗಳನ್ನು ಬೇರ್ಪಡಿಸುವ ಕಾಲ ಫೆಬ್ರುವರಿ–ಏಪ್ರಿಲ್ ಇಲ್ಲವೆ ಆಗಸ್ಟ್–ಸೆಪ್ಟೆಂಬರ್. ಕಂದುಗಳನ್ನು ಬೇರ್ಪಡಿಸಿದ ತತ್ ಕ್ಷಣವೇ ಬೇರೆಡೆಯಲ್ಲಿ ನೆಡಬೇಕು. ಆದರೆ ಕಂದುಗಳನ್ನು ನರ್ಸರಿಗಳಲ್ಲಿ ಕೊಂಚಕಾಲ ಹಾಗೆಯೇ ಇಟ್ಟಿರಬಹುದು. ಕಂದುಗಳನ್ನು ನೆಡುವಾಗ ಗಿಡದಿಂದ ಗಿಡಕ್ಕೆ ಸಾಕಷ್ಟು ಅಂತರವಿರುವಂತೆ ನೋಡಿಕೊಳ್ಳಬೇಕು. ಖರ್ಜೂರದ ಮರದ ಬಗೆ, ನೆಲದ ಗುಣ ಮತ್ತು ನೀರಾವರಿಯ ಕ್ರಮಗಳನ್ನು ಅನುಸರಿಸಿ ಅಂತರ ವ್ಯತ್ಯಾಸವಾಗುತ್ತದೆ. ಗಿಡದಿಂದ ಗಿಡಕ್ಕೆ (15'–25') X (15'–25') ಅಂತರವಿರುವುದು ಉತ್ತಮ ಎನ್ನಲಾಗಿದೆ. ಅಮೆರಿಕದಲ್ಲಿ 27' X 27' ಅಂತರ ಕೊಡುವುದು ರೂಢಿಯಲ್ಲಿದೆ. ಕಂದುಗಳು ನೆಲದಲ್ಲಿ ಚೆನ್ನಾಗಿ ಕೂರುವಂತೆ ನೆಡಬೇಕು. ಕಂದಿನ ತುದಿ ನೆಲದಿಂದ ½'–¾' ಮೇಲಕ್ಕೆ ಚಾಚಿರುವಂತಿರಬೇಕು. ಇದರಿಂದ ಗಿಡಗಳಿಗೆ ನೀರು ಹಾಯಿಸಿದಾಗ ನೀರು ಅವುಗಳ ತುದಿಯನ್ನು ಪ್ರವೇಶಿಸಿ ಕೊಳೆಯಿಸುವುದಿಲ್ಲ. ಕಂದುಗಳನ್ನು ನೆಟ್ಟ ಅನಂತರ ಎರಡು–ಮೂರು ವರ್ಷ ಅವು ಹವಾಮಾನದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವವರೆಗೂ ಚೆನ್ನಾಗಿ ಆರೈಕೆ ಮಾಡಬೇಕು.

ಉತ್ತಮ ಗೊಬ್ಬರವನ್ನು ಅಗತ್ಯ ಪ್ರಮಾಣದಲ್ಲಿ ಹಾಕುವುದು ಬಲು ಮುಖ್ಯ. ಗೊಬ್ಬರದ ಪರಿಮಾಣ ಮಣ್ಣಿನ ಫಲವತ್ತತೆ ಮತ್ತು ಮರದ ವಯಸ್ಸು ಮುಂತಾದವನ್ನು ಅವಲಂಬಿಸಿದೆಯಾದರೂ ಫಲ ಕೊಡುವ ಪ್ರತಿ ಮರಕ್ಕೂ ವರ್ಷಕ್ಕೆ 50–60 ಕೆಜಿ. ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರ ಇಲ್ಲವೆ 1–2 ಕೆಜಿ. ಅಮೋನಿಯಂ ಸಲ್ಫೇಟನ್ನೂ ಹಾಕಬೇಕು. ಜನವರಿ–ಫೆಬ್ರುವರಿಯಲ್ಲೊಮ್ಮೆ ಮತ್ತು ಆಗಸ್ಟ್–ಸೆಪೆಂಬರ್‌ನಲ್ಲೊಮ್ಮೆ ಹೀಗೆ ವರ್ಷಕ್ಕೆ ಎರಡು ಬಾರಿ ಮೇಲೆ ಹೇಳಿದ ಪರಿಮಾಣದ ಗೊಬ್ಬರವನ್ನು ಸಮಭಾಗ ಮಾಡಿ ಹಾಕಬೇಕು. ವಸಂತ ಕಾಲದಲ್ಲಿ ಮರ ಚಿಗುರೊಡೆಯುವ ಮುನ್ನ ಸಗಣಿ ಗೊಬ್ಬರವನ್ನು ಮರವೊಂದಕ್ಕೆ 45 ಕೆಜಿ.ಯ ದರದಂತೆ ಹಾಕಬಹುದು. ಅಮೆರಿಕದಲ್ಲಿ ಹಸುರು ಗೊಬ್ಬರದ ಬಳಕೆ ಉತ್ತಮ ಫಲಿತಾಂಶ ನೀಡಿದೆ.

ಖರ್ಜೂರದ ಮರಕ್ಕೆ ಹೆಚ್ಚು ನೀರು ಬೇಕು. ನೀರಾವರಿ ಸೌಲಭ್ಯವಿರುವೆಡೆ ಬೇಸಗೆಯಲ್ಲಿ 10–14 ದಿವಸಗಳಿಗೊಮ್ಮೆ ಮತ್ತು ಚಳಿಗಾಲದಲ್ಲಿ 30–40 ದಿವಸಗಳಿಗೊಮ್ಮೆ ನೀರು ಹಾಯಿಸಬೇಕು. ಖರ್ಜೂರದ ಮರದ ಬೇರುಗಳು ನೆಲದಲ್ಲಿ 6'–9' ಆಳಕ್ಕೆ ಇಳಿಯುವುದರಿಂದ ಅಷ್ಟು ಆಳದವರೆಗೆ ತೇವವಿರುವಂತೆ ನೋಡಿಕೊಳ್ಳಬೇಕು. ಮರ ಹೆಚ್ಚು ನೀರು ಹಾಯಿಸುವಿಕೆಯನ್ನು ಮತ್ತು ನೆರೆ ಹಾವಳಿಗಳನ್ನು ಸಹಿಸಬಲ್ಲುದಾದರೂ ಇದು ಬೆಳೆಯುವ ಭೂಮಿಯಲ್ಲಿ ಶಾಶ್ವತವಾಗಿ ನೀರು ನಿಲ್ಲಬಾರದು.

ಖರ್ಜೂರದ ಮರದ ತೋಟಗಳಲ್ಲಿ ಮರಗಳ ನಡುವಣ ಸ್ಥಳಗಳಲ್ಲಿ ಗೋದಿ, ಬಾರ್ಲಿ, ದ್ವಿದಳಧಾನ್ಯಗಳು, ತರಕಾರಿ ಸಸ್ಯಗಳು ಮುಂತಾದವನ್ನು ಉಪಬೆಳೆಗಳನ್ನಾಗಿ ಬೆಳೆಸಬಹುದು. ಹೀಗೆ ಮಾಡುವುದು ಆರ್ಥಿಕ ದೃಷ್ಟಿಯಿಂದ ಲಾಭದಾಯಕವಲ್ಲದೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲೂ ಸಹಕಾರಿ. ಮರಗಳು ಎತ್ತರಕ್ಕೆ ಬೆಳೆದಾಗ ದ್ರಾಕ್ಷಿ, ದಾಳಿಂಬೆ, ಅಂಜೂರ, ಸಕ್ಕರೆ ಬಾದಾಮಿ, ಕಿತ್ತಳೆ ಮುಂತಾದ ಹಣ್ಣಿನ ಗಿಡಗಳನ್ನು ಬೆಳೆಸಬಹುದು.

ಕಂದುಗಳನ್ನು ನೆಟ್ಟ 5–8 ವರ್ಷಗಳ ಅನಂತರ ಮರ ಹೂ ಬಿಡಲು ಆರಂಭಿಸುತ್ತದೆ. ಖರ್ಜೂರದ ಫಲೋತ್ಪಾದನಾ ಸಾಮರ್ಥ್ಯ ಗರಿಗಳ ಸಂಖ್ಯೆಯನ್ನು ಅವಲಂಬಿಸಿದೆ. ಪ್ರತಿ 8–9 ಗರಿಗಳಿಗೆ ಒಂದು ಗೊಂಚಲು ಹಣ್ಣುಗಳಿರುವುದು ಉತ್ತಮ ಎನ್ನಲಾಗಿದೆ. ಇದರಿಂದ ಮರದಲ್ಲಿಯ ಹಣ್ಣಿನ ಗೊಂಚಲಿನ ಸಂಖ್ಯೆಗನುಗುಣವಾಗಿ ಗರಿಗಳನ್ನು ಉಳಿಸಿಕೊಂಡು ಹೆಚ್ಚಾದವನ್ನು ಕತ್ತರಿಸಬೇಕು. ಒಣಗಿದ ಗರಿಗಳನ್ನಂತೂ ತೆಗೆದು ಹಾಕಲೇಬೇಕು. ಅಂತೆಯೆ ಅನಗತ್ಯವಾದ ಕಂದುಗಳನ್ನೂ ಕತ್ತರಿಸಿಬಿಡಬೇಕು. ಇಲ್ಲದಿದ್ದರೆ ಇಳುವರಿ ಕಡಿಮೆಯಾಗುತ್ತದೆ.

ಖರ್ಜೂರದ ಮರ ಹೂ ಬಿಡುವುದು ಮಾರ್ಚ್–ಏಪ್ರಿಲ್ ತಿಂಗಳುಗಳಲ್ಲಿ. ಹಣ್ಣು ಮಾಗುವ ಕಾಲ ಆಗಸ್ಟ್–ಅಕ್ಟೋಬರ್. ಹಣ್ಣುಗಳ ಗಾತ್ರ ಮತ್ತು ರುಚಿಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರತಿ ಗೊಂಚಲಿನಲ್ಲಿಯ ಕೆಲವು ಫಲಗಳನ್ನು ತೆಗೆದು ಹಾಕಬೇಕು. ಹೀಗೆ ಮಾಡುವುದರಿಂದ ಮಾರನೆಯ ವರ್ಷ ಹೂ ಅರಳಿಕೆಯೂ ಚೆನ್ನಾಗಿರುತ್ತದೆ. ಸಾಮಾನ್ಯವಾಗಿ ಒಂದೊಂದು ಹೂಗೊಂಚಲಿನಲ್ಲಿಯ ಶೇ.50 – 75ರಷ್ಟು ಹೂಗಳನ್ನು ಇಲ್ಲವೆ ಚಿಕ್ಕ ಕಾಯಿಗಳನ್ನು ತೆಗೆದು ಹಾಕುತ್ತಾರೆ. ಒಂದು ಮರದಿಂದ ಕೆಲವು ಗೊಂಚಲುಗಳನ್ನೇ ಕತ್ತರಿಸಿ ಹಾಕುವ ಕ್ರಮವೂ ಇದೆ.

**ಕೊಯ್ಲು ಮತ್ತು ಇಳುವರಿ:** ಬೆಳವಣಿಗೆಯ ಹಾಗೂ ಮಾಗುವ ಹಂತವನ್ನವಲಂಬಿಸಿ ಖರ್ಜೂರದ ಹಣ್ಣನ್ನು ನಾಲ್ಕು ಮುಖ್ಯ ಬಗೆಗಳಾಗಿ ವಿಂಗಡಿಸಲಾಗಿದೆ. ಅರಬ್ ದೇಶಗಳಲ್ಲಿ ಇವಕ್ಕೆ ಕಿಮ್ರಿ, ಖಲಾಲ್, ರುತಾಬ್ ಮತ್ತು ತಾಮರ್ ಎಂದೂ ಪಾಕಿಸ್ತಾನದಲ್ಲಿ ಗಾಂಡೋರ, ಡೋಕ, ಡಂಗ್ ಮತ್ತು ಪಿಂಡ್ ಎಂದೂ ಹೆಸರಿದೆ. ಗಾಂಡೋರ ಅಥವಾ ಕಿಮ್ರಿ ಎಂಬುದು ಎಳೆಯದು. ಹಸಿರು ಬಣ್ಣದ್ದು. ಡೋಕ ಅಥವಾ ಖಲಾಲ್ ಎಂಬುದು ಕೆಂಪು, ಹಳದಿಮಿಶ್ರಿತ ಕೆಂಪು ಇಲ್ಲವೆ ಹಳದಿಬಣ್ಣದ್ದು. ಡಂಗ್ (ರುತಾಬ್) ಎಂಬ ಬಗೆಯದು ಮೃದುವಾದ ತುದಿಯುಳ್ಳದ್ದು. ಇದರ ಬಣ್ಣ ಕಡು ಹಳದಿ ಇಲ್ಲವೆ ಕೆಂಪು.

ಪಿಂಡ್ (ತಾಮರ್) ಪೂರ್ಣ ಮಾಗಿದ ರೀತಿಯದು. ಖರ್ಜೂರವನ್ನು ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಹಂತಗಳಲ್ಲಿ ಕೊಯ್ಯುತ್ತಾರೆ. ಅರಬ್ ದೇಶಗಳಲ್ಲಿ ಕೆಲವು ಬಗೆಗಳನ್ನು ಖಲಾಲ್ ಹಂತದಲ್ಲೂ ಇನ್ನು ಕೆಲವನ್ನು ಪಿಂಡ್ ಹಂತದಲ್ಲೂ ಕೊಯ್ಯುತ್ತಾರೆ. ಪಾಕಿಸ್ತಾನದಲ್ಲಿ ಹಣ್ಣುಗಳು ಮಾಗುವ ಸ್ವಲ್ಪ ಸಮಯದ ಮುಂಚೆ ಬಿಡಿಸಲಾಗುತ್ತದೆ. ಭಾರತದಲ್ಲಿ ಡಂಗ್ ಹಂತದಲ್ಲಿ ಬಿಡಿಸುವುದು ವಾಡಿಕೆ. ಬಹುಪಾಲು ಬಗೆಯ ಖರ್ಜೂರದ ಮರಗಳು ನೆಟ್ಟ 4ನೆಯ ವರ್ಷದಿಂದ ಫಲ ಬಿಡಲು ಆರಂಭಿಸಿ 10–15 ವರ್ಷ ವಯಸ್ಸಾದಾಗ ಗರಿಷ್ಠ ಪರಿಮಾಣದಲ್ಲಿ ಫಲ ಕೊಡುತ್ತವೆ. ಫಲ ಕೊಡುವ ಅವಧಿ ಸುಮಾರು 50 ವರ್ಷಗಳು. ಇಳುವರಿಯ ಪರಿಮಾಣ ಬಗೆಯಿಂದ ಬಗೆಗೆ ಮತ್ತು ಹವಾಮಾನ ಸ್ಥಿತಿಯನ್ನವಲಂಬಿಸಿ ವ್ಯತ್ಯಾಸವಾಗುತ್ತದೆ. ಕೆಲವು ಬಗೆಗಳಲ್ಲಿ ವರ್ಷಕ್ಕೆ ಒಂದು ಮರದಿಂದ 45 ಕೆಜಿ. ಖರ್ಜೂರ ದೊರೆತರೆ ಇನ್ನು ಕೆಲವು ಬಗೆಗಳಲ್ಲಿ 240 ಕೆಜಿ. ದೊರೆಯಬಹುದು.

**ಖರ್ಜೂರದ ಮರಕ್ಕೆ ತಗಲುವ ರೋಗಗಳು:** ಇದಕ್ಕೆ ಹಲವಾರು ಬಗೆಯ ಶಿಲೀಂಧ್ರ ರೋಗಗಳು ಹಾಗೂ ಕೀಟಗಳು ತಗಲುವುದುಂಟು. ಶಿಲೀಂಧ್ರ ರೋಗಗಳಲ್ಲಿ ಮುಖ್ಯವಾದ್ದು ಗ್ರಾಫಿಯೋಲ ಫೀನಿಸಿಸ್ ಎಂಬ ಬೂಷ್ಟಿನಿಂದ ಉಂಟಾಗುವ ಗರಿಯ ಬೊಕ್ಕೆ ರೋಗ. ಇದರಿಂದ ಗರಿಗಳ ಮೇಲೆ ಕಪ್ಪು ಬಣ್ಣದ ಬೊಕ್ಕೆಗಳೇಳುತ್ತವೆ. ರೋಗ ಅಂಟಿದ ಗರಿಗಳನ್ನು ಕಿತ್ತುಹಾಕುವುದು ಮತ್ತು ಬೋರ್ಡೋ ಮಿಶ್ರಣ ಇಲ್ಲವೆ ಪೊಟ್ಯಾಸಿಯಂ ಪರ್ಮಾಂಗನೇಟ್ ದ್ರಾವಣವನ್ನು ಸಿಂಪಡಿಸುವುದು ಈ ರೋಗಕ್ಕೆ ನಿವಾರಣೋಪಾಯಗಳು. ಡೈಡರ್ಮ ಎಫ್ಯೂಸಮ್ ಎಂಬುದರಿಂದ ಉಂಟಾಗುವ ಚುಕ್ಕೆರೋಗ, ಪೆಸ್ಟಲೋಶಿಯ ಪಾಮೇರಮ್‍ನಿಂದ ಉಂಟಾಗುವ ಬೂದಿ ಕೊಳೆರೋಗ ಮುಂತಾದವು ಇತರ ಬಗೆಯ ಶಿಲೀಂಧ್ರ ರೋಗಗಳು.

ಕೀಟ ಪಿಡುಗುಗಳಲ್ಲಿ ಮುಖ್ಯವಾದವು– 1 ಕೆಂಪು ಮೂತಿ ಹುಳು (ರಿಂಕೋಫೋರಸ್ ಫೆರುಜಿನಿಯಸ್). ಇದರ ಡಿಂಬಗಳು ಕಾಂಡದ ತುದಿಯಲ್ಲಿ ಸುರಂಗಗಳನ್ನು ಕೊರೆದು ಅದು ಒಣಗಿಹೋಗಿ ಮುರಿದುಬೀಳುವಂತೆ ಮಾಡುತ್ತವೆ. 2 ಖಡ್ಗಜೀರುಂಡೆ (ಒರಿಕ್ಟಿಸ್ ರೈನಾಸೆರಸ್). ಇದು ಕೂಡ ಕೆಂಪು ಮೂತಿ ಹುಳುವಿನ ಡಿಂಬಗಳಂತೆಯೇ ಸುರಂಗಗಳನ್ನು ಕೊರೆದು ಮರಗಳನ್ನು ನಾಶಗೊಳಿಸುತ್ತದೆ. ಈ ಎರಡು ಬಗೆಯ ಕೀಟಗಳನ್ನು ಕೊಕ್ಕೆಯಂಥ ತುದಿಯುಳ್ಳ ಕಬ್ಬಿಣದ ಸಲಾಕೆಯಿಂದ ಹೊರತೆಗೆದು ಹಾಕಬಹುದು. ಕೀಟನಾಶಕಗಳನ್ನು ಸುರಂಗದೊಳಕ್ಕೆ ಹಾಕಿಯೂ ನಿರ್ಮೂಲಮಾಡಬಹುದು. 3 ಶಲ್ಕ ಕೀಟಗಳು. ಇವು ಕಿರುಗರಿಗಳ ಮೇಲೆ ಗರಿಗಳ ನಡುದಿಂಡಿನ ಮೇಲೆ ಇದ್ದು ಮರದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ರೋಸಿನ್ ಮಿಶ್ರಣದ ಬಳಕೆಯಿಂದ ಇವನ್ನು ಹತೋಟಿಯಲ್ಲಿಡಬಹುದು.

ಖರ್ಜೂರ ಪಕ್ವವಾಗುತ್ತ ಬಂದಂತೆ ಹಕ್ಕಿ ಮತ್ತು ಕೆಲವು ಬಗೆಯ ಕೀಟಗಳ ಹಾವಳಿ ಹೆಚ್ಚುವುದರಿಂದ ಇವನ್ನು ಕಾಗದ ಇಲ್ಲವೆ ಬಟ್ಟೆಯ ಚೀಲಗಳಿಂದ ಮರೆಮಾಡಿ ರಕ್ಷಿಸಬೇಕು.

**ಖರ್ಜೂರದ ಸಂಸ್ಕರಣ:** ಖರ್ಜೂರವನ್ನು ಅದು ಪಕ್ವವಾಗುವ ವಿವಿಧ ಹಂತಗಳಲ್ಲಿ ಹಾಗೆಯೆ ತಿನ್ನಬಹುದು. ಡೋಕ ಹಂತದಲ್ಲಿ ಖರ್ಜೂರಕ್ಕೆ ಬಂಧಕ ಗುಣ ವಿದೆಯಾದರೂ ಸಾಕಷ್ಟು ರುಚಿಯಾಗಿರುವುದಿಂದ ಅರಬ್ಬೀಯರು ಆ ಹಂತದಲ್ಲೇ ತಿನ್ನುತ್ತಾರೆ. ಡಂಗ್ ಹಂತದಲ್ಲಿಯ ಖರ್ಜೂರ ಬಹಳ ಮಧುರ ಮತ್ತು ಮೃದುವಾಗಿರುತ್ತದೆ. ಆದರೆ ಈ ಸ್ಥಿತಿಯಲ್ಲಿ ಬಹಳ ದಿನ ಸಂಗ್ರಹಿಸಿ ಇಡುವುದಕ್ಕಾಗುವುದಿಲ್ಲ. ಆದ್ದರಿಂದ ಖರ್ಜೂರವನ್ನು ಕಿತ್ತ ಅನಂತರ ಅವನ್ನು ವಿವಿಧ ರೀತಿಗಳಲ್ಲಿ ಸಂಸ್ಕರಿಸಿ, ಒಣಗಿಸಿ, ಸಂಗ್ರಹಿಸಿ ಇಡಲಾಗುತ್ತದೆ. ಖರ್ಜೂರವನ್ನು ಒಣಗಿಸುವ ಮುನ್ನ ಶೇ. 1 ರ ಕುದಿಯುತ್ತಿರುವ ಕೊಳೆ ಕಳೆಯುವ ತೀವ್ರಕ್ಷಾರ ಜಲದಲ್ಲಿ (ಲೈ) ಅದ್ದಿ ತೆಗೆದು ನೀರಿನಲ್ಲಿ ತೊಳೆಯಬೇಕು. ಇದರಿಂದ ಹಣ್ಣು ಶುದ್ಧವಾಗುವುದಲ್ಲದೆ ನೋಡುವುದಕ್ಕೂ ಚೆನ್ನಾಗಿ ಕಾಣುತ್ತವೆ. ಹಣ್ಣು ಒಣಗಲು ಬೇಕಾಗುವ ಅವಧಿಯೂ ಕಡಿಮೆಯಾಗುತ್ತದೆ. ಆದರೆ ರುಚಿಕೊಂಚ ಕಡಿಮೆಯಾಗುತ್ತದೆ. ಪಾಕಿಸ್ತಾನದಲ್ಲಿ ಖರ್ಜೂರವನ್ನು ಡಂಗ್ ಹಂತದಲ್ಲಿ ಕಿತ್ತು ಗರಿಗಳಿಂದ ಮಾಡಿದ ಚಾಪೆಗಳ ಮೇಲೆ ಹರಡಿ 3–7 ದಿವಸಗಳ ಕಾಲ ಬಿಸಿಲಿನಲ್ಲಿ ಒಣಗಿಸಲಾಗುತ್ತದೆ. ಕೆಲವು ಬಗೆಯ ಶುದ್ಧೀಕರಿಸುವ ಮತ್ತು ಒಣಗಿಸುವ ಉಪಕರಣಗಳನ್ನೂ ಬಳಸುವುದಿದೆ. ಡಂಗ್ ಹಂತದಲ್ಲಿ ಬಿಡಿಸುವುದು ಹೆಚ್ಚು ಖರ್ಚಿನದೂ ಪ್ರಯಾಸಕರವೂ ಆದ್ದರಿಂದ ಡೋಕ ಹಂತದಲ್ಲಿ ಬಿಡಿಸುವುದು ಉತ್ತಮ ಎನ್ನಲಾಗಿದೆ. ಯುಕ್ತವಾದ ರೀತಿಯಲ್ಲಿ ಒಣಗಿಸಿದ ಹಣ್ಣಗಳನ್ನು ವಿವಿಧ ಉಷ್ಣತೆಗಳಲ್ಲಿ ಬೇರೆ ಬೇರೆ ಕಾಲಾವಧಿಯ ವರೆಗೆ ಸಂಗ್ರಹಿಸಿಡಬಹುದು (ಉದಾಹರಣೆಗೆ ಡೆಗ್ಲೆಟ್ ನೂರ್ ಬಗೆಯನ್ನು $27^{o}$ ಸೆಂ. ನಲ್ಲಿ ಒಂದು ತಿಂಗಳ ವರೆಗೆ $16^{o}$ ಸೆಂ. ನಲ್ಲಿ 3 ತಿಂಗಳ ವರೆಗೆ, $4^{o}$ ಸೆಂ.ನಲ್ಲಿ 8 ತಿಂಗಳ ವರೆಗೆ ಮತ್ತು $0^{o}$ ಸೆಂ.ನಲ್ಲಿ ಒಂದು ವರ್ಷ ಸಂಗ್ರಹಿಸಿಡಬಹುದು).

ಅರಬ್ ದೇಶಗಳಲ್ಲಿ ಸಂಸ್ಕರಿಸಿದ ಖರ್ಜೂರವನ್ನು ಗರಿಗಳಿಂದ ಮಾಡಿದ ಬುಟ್ಟಿಗಳಲ್ಲಿ ತುಂಬಿ ಸಾಗಿಸಲಾಗುತ್ತದೆ. ಅಮೆರಿಕದಲ್ಲಿ ರಟ್ಟಿನ ಇಲ್ಲವೆ ಹಗುರ ಮರದ ಪೆಟ್ಟಿಗೆಗಳಲ್ಲಿ ತುಂಬಿ ಕಳಿಸಲಾಗುತ್ತದೆ. ರೋಗಕಾರಕ ಜೀವಾಣುಗಳು, ಕೀಟಗಳು ಖರ್ಜೂರಕ್ಕೆ ಅಂಟುವ ಸಂಭವವಿರುವುದರಿಂದ ಸ್ಥಳದಿಂದ ಸ್ಥಳಕ್ಕೆ ಸಾಗಿಸುವಾಗ ಹಣ್ಣನ್ನು ಪ್ಯಾಶ್ಚುರೀಕರಣಕ್ಕೆ ಒಳಪಡಿಸುವುದುಂಟು.

ಭಾರತದಲ್ಲಿ ಗಣನೀಯ ಪರಿಮಾಣದಲ್ಲಿ ಖರ್ಜೂರದ ಬಳಕೆಯಿದೆ. ಮುಖ್ಯವಾಗಿ ಇರಾಕ್, ಸೌದಿ ಅರೇಬಿಯ, ಇರಾನ್‍ಗಳಿಂದ ಖರ್ಜೂರವನ್ನು ಆಮದು ಮಾಡಿಕೊಳ್ಳಲಾಗುತ್ತದೆ.

**ರಾಸಾಯನಿಕ ಸಂಯೋಜನೆ ಮತ್ತು ಉಪಯೋಗ:** ಬಹಳ ಪುಷ್ಟಿಕರವಾದ ಆಹಾರವೆನಿಸಿರುವ ಖರ್ಜೂರದ ರಾಸಾಯನಿಕ ಸಂಯೋಜನೆ ಹೀಗಿದೆ–ತೇವಾಂಶ, ಶೇ.15.3; ಪ್ರೋಟೀನ್, ಶೇ.2.5; ಕೊಬ್ಬು, ಶೇ.0.4; ಕಾರ್ಬೊಹೈಡ್ರೇಟ್ ಶೇ.75.8: ನಾರು, ಶೇ.3.9: ಖನಿಜಾಂಶ, ಶೇ.2.1: ರಂಜಕ, ಶೇ.0,05; ಕ್ಯಾಲ್ಸಿಯಂ, ಶೇ.0.12. ಅಲ್ಲದೆ ಪ್ರತಿ ನೂರು ಗ್ರಾಮಿಗೆ 7.3 ಮಿಗ್ರಾಂ. ಕಬ್ಬಿಣ. 44 ಐ.ಯು, ಕ್ಯಾರೊಟಿನ್, 3 ಮಿಗ್ರಾಂ. ಆಸ್ಕಾರ್ಬಿಕ್ ಆಮ್ಲ, 0.023 ಮಿಗ್ರಾಂ. ರೈಬೊಫ್ಲೇವಿನ್. 0.011 ಮಿಗ್ರಾಂ. ತಯಮಿನ್ ಮತ್ತು 0.9 ಮಿಗ್ರಾಂ. ನಿಕೊಟಿನಿಕ್ ಆಮ್ಲಗಳೂ ಇವೆ. ಒಟ್ಟಾರೆ ಖರ್ಜೂರದಲ್ಲಿ ತಿನ್ನಲು ಯೋಗ್ಯವಾದ ಭಾಗ ಶೇ.86 ರಷ್ಟಿದ್ದು ಪ್ರತಿ ನೂರು ಗ್ರಾಂ ಖರ್ಜೂರದಿಂದ 317 ಕೆಲೊರಿ ಶಕ್ತಿಯನ್ನು ಪಡೆಯಬಹುದು. ಮಾಗಿದ ಖರ್ಜೂರದಲ್ಲಿಯ ಕಾರ್ಬೊಹೈಡ್ರೇಟುಗಳಲ್ಲಿ ಬಹುಪಾಲು ಸಕ್ಕರೆಗಳಿಂದಾದುದು. ಮೆತು ಖರ್ಜೂರಗಳಲ್ಲಿ ಗ್ಲೂಕೋಸ್ ಮತ್ತು ಫ್ರಕ್ಟೋಸ್ ರೂಪದಲ್ಲೂ ಒಣಬಗೆಗಳಲ್ಲಿ ಸುಕ್ರೋಸ್ ರೂಪದಲ್ಲೂ ಸಕ್ಕರೆ ಇರುತ್ತದೆ. ಅಲ್ಲದೆ ಅಲ್ಪಪ್ರಮಾಣದಲ್ಲಿ ರ್‍ಯಾಮ್ನೋಸ್, ಜೈಲೋಸ್, ರೈಬೋಸ್, ಅರ್‍ಯಾಬಿನೋಸ್, ಗ್ಯಲಕ್ಟೋಸ್ ಮುಂತಾದ ಸಕ್ಕರೆಗಳೂ ಇವೆ. ಅಪಕ್ವ ಹಣ್ಣುಗಳಲ್ಲಿ ಕೆಲವು ಬಗೆಯ ಬಂಧಕ ಘಟಕಗಳಿವೆ.ಇದರಿಂದಲೇ ಮಾಗದ ಹಣ್ಣುಗಳನ್ನು ತಿಂದರೆ ಹೊಟ್ಟೆ ಕಟ್ಟುವುದು. ಹಣ್ಣು ಮಾಗುತ್ತ ಬಂದಂತೆ ಈ ಘಟಕಗಳು ಅಳಿದುಹೋಗುತ್ತವೆ.

ಖರ್ಜೂರ ಅರಬ್ ದೇಶಗಳ ಜನರಿಗೆ ಪ್ರಮುಖವಾದ ಹಾಗೂ ಅಚ್ಚುಮೆಚ್ಚಿನ ಆಹಾರವಾಗಿದೆ. ಹೋಳಿಗೆ ಮೊದಲಾದ ಸಿಹಿತಿಂಡಿಗಳಲ್ಲೂ ಇದರ ಬಳಕೆಯುಂಟು. ಇದರಿಂದ ಹಲವಾರು ಬಗೆಯ ರಸಪಾಕಗಳನ್ನೂ ಒಂದು ರೀತಿಯ ಜೇನುತುಪ್ಪವನ್ನೂ ಮಾಡುವುದಿದೆ. ಹಾಲು, ಬೆಣ್ಣೆ ಮತ್ತು ಮಾಂಸಗಳೊಂದಿಗೆ ಇದನ್ನು ಬಳಸುತ್ತಾರೆ. ಹಲವಾರು ರೀತಿಯಲ್ಲಿ ಇದನ್ನು ಸಂಸ್ಕರಿಸಿ, ಹುದುಗುವಿಕೆಗೆ ಒಳಪಡಿಸಿ ಒಂದು ಬಗೆಯ ಮಾದಕ ಪಾನೀಯವನ್ನೂ(ಸಿರಪ್) ಬ್ರಾಂಡಿ ಅಥವಾ ಸಾರಾಯಿಯನ್ನೂ ತಯಾರು ಮಾಡುವುದುಂಟು. ನೈಜೀರಿಯದಲ್ಲಿ ಖರ್ಜೂರವನ್ನು ಮೆಣಸಿನಕಾಯಿಯೊಂದಿಗೆ ಬೆರೆಸಿ ಬೀರ್‍ಗೆ ಸೇರಿಸಿ ಕುಡಿಯುವ ಕ್ರಮ ಇದೆ. ಖರ್ಜೂರಕ್ಕೆ ಔಷಧೀಯ ಗುಣಗಳೂ ಇವೆ: ಇದು ಬಲು ಒಳ್ಳೆಯ ಶಾಮಕ, ಕಫಹಾರಕ, ಶಕ್ತಿವರ್ಧಕ, ಕಾಮೋತ್ತೇಜಕ ಹಾಗೂ ವಿರೇಚಕವೆಂದು ಹೆಸರಾಗಿದೆ. ಹೊಸ ಖರ್ಜೂರವನ್ನು ಹಾಲಿನೊಂದಿಗೆ ಸೇರಿಸಿ ಶಕ್ತಿದಾಯಕ ಕಷಾಯವಾಗಿ ಬಳಸುತ್ತಾರೆ. ಬಾದಾಮಿ, ಪಿಸ್ತಾ ಬೀಜ, ಸಕ್ಕರೆ, ಸಂಬಾರ ಪದಾರ್ಥಗಳು ಮುಂತಾದವುಗಳೊಂದಿಗೆ ಒಣ ಖರ್ಜೂರವನ್ನು ಸೇರಿಸಿ ಕುಟ್ಟಿ ತಯಾರಿಸಿದ ಮಿಶ್ರಣ ಬಲು ಒಳ್ಳೆಯ ಪುಷ್ಟಿದಾಯಕ ಆಹಾರವಾಗಿದೆ. ಬೀಜಗಳನ್ನು ಹುರಿದು ಪುಡಿಮಾಡಿ ಒಂದು ರೀತಿಯ ಕಾಫಿ ಮಾಡಲು ಬಳಸುವುದುಂಟು. ಬೀಜಗಳಿಂದ ತಯಾರಿಸುವ ಅಂಟು ಲೇಪವನ್ನು ಕೆಲವು ಬಗೆಯ ಕಣ್ಣಿನ ತೊಂದರೆಗಳಿಗೂ ತಲೆ ನೋವಿಗೂ ಮದ್ದಾಗಿ ಬಳಸುವುದುಂಟು. ಲೇಪವನ್ನು ಉತ್ತರಾಣಿ ಬೇರಿನೊಂದಿಗೆ ಅರೆದು ವೀಳೆಯದೆಲೆಗೆ ಸುಣ್ಣದಂತೆ ಹಚ್ಚಿ ಲವಂಗ, ಏಲಕ್ಕಿ, ಕಾಚು ಮತ್ತು ಅಡಕೆಪುಡಿಯೊಂದಿಗೆ ಸೇರಿಸಿ ತಯಾರಿಸಲಾಗುವ ಔಷಧಿ ಚಳಿಜ್ವರಕ್ಕೆ ಪರಿಣಾಮಕಾರಿ ಮದ್ದು ಎಂದು ಹೆಸರಾಗಿದೆ. ಬೀಜಗಳನ್ನು ನೀರಿನಲ್ಲಿ ನೆನೆಯಿಟ್ಟು ಮೃದುಗೊಳಿಸಿ ಒಂಟೆ, ಆಡು, ಕುರಿ ಮತ್ತು ದನಗಳಿಗೆ ಆಹಾರವಾಗಿ ಬಳಸುವುದುಂಟು. ಬೀಜಗಳಿಂದ ಎಣ್ಣೆಯನ್ನೂ ಪಡೆಯಬಹುದು. ಇರಾಕಿನಲ್ಲಿ ಈ ಎಣ್ಣೆಯನ್ನು ಸಾಬೂನು ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಆಕ್ಸಾಲಿಕ್ ಆಮ್ಲದ ಉತ್ಪಾದನೆಗೆ ಬಿಜಗಳನ್ನು ಕಚ್ಚಾವಸ್ತುವಾಗಿ ಬಳಸುವುದುಂಟು.

ಈಚಲು ಮರದಿಂದ ತೆಗೆದಂತೆ ಖರ್ಜೂರದ ಮರದಿಂದಲೂ ರಸವನ್ನು ಇಳಿಸುವುದುಂಟು. ಅದೇ ತಾನೆ ತೆಗೆದು ರಸ ಸಿಹಿಯಾದ್ದೂ ಮಧುರ ವಾಸನೆಯುಳ್ಳದ್ದೂ ಆಗಿರುತ್ತದೆ. ಇದು ತಂಪುಕಾರಕ ಹಾಗೂ ವಿರೇಚಕ ಎನ್ನಲಾಗಿದೆ. ಇದರಲ್ಲಿ ಸು. ಶೇ.10 ಸುಕ್ರೋಸ್ ಇದೆಯಾಗಿ ಇದರಿಂದ ಬೆಲ್ಲ ಹಾಗೂ ಸಕ್ಕರೆಯನ್ನು ತಯಾರಿಸಬಹುದು. ರಸವನ್ನು ಬಿಸಿಲಿನಲ್ಲಿ ಹಾಗೆಯೆ ಬಿಟ್ಟಲ್ಲಿ ಹುಳಿತು ಹೆಂಡವಾಗುತ್ತದೆ.

ಖರ್ಜೂರದ ಮರಕ್ಕೆ ಇನ್ನಿತರ ಉಪಯೋಗಗಳೂ ಉಂಟು. ಚಾಪೆ, ಬೀಸಣಿಗೆ, ಬುಟ್ಟಿ, ಹಗ್ಗ ಮುಂತಾದವನ್ನು ತಯಾರಿಸುವುದಕ್ಕೂ ಚಾವಣಿಗಳಿಗೆ ಹೊದಿಸುವುದಕ್ಕೂ ಇದರ ಗರಿಗಳನ್ನು ಬಳಸುತ್ತಾರೆ. ಗರಿಗಳ ತೊಟ್ಟಿನಿಂದ ಉತ್ತಮ ಬಗೆಯ ಕೈಬೆತ್ತ ಮತ್ತು ಪೆಟ್ಟಿಗೆಗಳನ್ನು ಮಾಡಬಹುದು. ತೊಟ್ಟಿನಿಂದ ಪಡೆಯಲಾಗುವ ನಾರನ್ನು ಕಡಲೆಕಾಯಿ

ಸಿಪ್ಪೆಯೊಂದಿಗೆ ಸೇರಿಸಿ ವಿದ್ಯುದವಾಹಕ ಹಲಗೆಗಳನ್ನು ತಯಾರಿಸುತ್ತಾರೆ. ಮರದ ಎಳೆಯ ತುದಿಮೊಗ್ಗನ್ನು ತರಕಾರಿಯಂತೆ ಬಳಸುವ ಕ್ರಮ ಅರಬ್ಬೀಯರಲ್ಲಿದೆ. ಹೂಗೊಂಚಲಿನ ಕವಚಗಳನ್ನು ಆಸವೀಕರಣಗೊಳಿಸಿ ತಯಾರಿಸಲಾಗುವ ತಾರ ಎನ್ನುವ ಹೆಸರಿನ ರಸ ಬಹಳ ಸುವಾಸನೆಯುಳ್ಳದ್ದಾಗಿದೆ. ಇದನ್ನು ಷರಬತ್ತುಗಳಲ್ಲಿ ಉಪಯೋಗಿಸುತ್ತಾರೆ. ಮರದಿಂದ ದೊರೆಯುವ ಚೌಬೀನೆ ಹಗುರವಾದ್ದೂ ಸಾಕಷ್ಟು ಬಾಳಿಕೆ ಬರುವಂಥಾದ್ದೂ ಆಗಿದೆ. ಮನೆ ಕಟ್ಟುವುದಕ್ಕೆ, ಸೇತುವೆ ನಿರ್ಮಾಣಕ್ಕೆ, ನೀರು ಹಾಯಿಸುವ ಕೊಳಾಯಿಗಳ ತಯಾರಿಕೆಯಲ್ಲಿ ಚೌಬೀನೆ ಉಪಯೋಗಕ್ಕೆ ಬರುತ್ತದೆ. ಗರಿಗಳನ್ನು ಹಾಗೂ ಹೂಗೊಂಚಲುಗಳನ್ನು ಕತ್ತರಿಸಿದಾಗ ಉಳಿಯುವ ಅನಪೇಕ್ಷಿತ ತುಂಡುಗಳನ್ನು ಗೊಬ್ಬರವಾಗಿ ಬಳಸುವುದಿದೆ. ಬೇರಾವ ಕೆಲಸಕ್ಕೂ ಬಾರದ ಭಾಗವನ್ನು ಇಂಧನವಾಗಿ ಉಪಯೋಗಿಸುವುದುಂಟು. *(ಎಸ್.ಡಿ.ಕೆ.; ಬಿ.ಎ.ಸಿ.)*

**ಖಲ್ಜಿಗಳು :** 1290–1320ರಲ್ಲಿ ದೆಹಲಿಯಿಂದ ಆಳಿದ ಮುಸ್ಲಿಂ ರಾಜರು (ಖಲ್ಜಿಗಳು). ಮೂಲತಃ ಖಲ್ಜಿಗಳು ತುರ್ಕರಾಗಿದ್ದರು. ಇವರು ಆಫ್ಘಾನಿಸ್ತಾನದ ಖಲ್ಜ್ ಪ್ರದೇಶದಲ್ಲಿ ಬಹಳ ಕಾಲ ನೆಲಸಿ ಆಫ್ಘನರ ಆಚಾರವಿಚಾರಗಳನ್ನು ರೂಢಿಸಿಕೊಂಡಿದ್ದರು. ಇವರು ತುರ್ಕರಿಗಿಂತ ಭಿನ್ನ ಪ್ರಕೃತಿಯುಳ್ಳವರಾಗಿದ್ದರೆಂದೂ ಗುಲಾಮ ಸಂತತಿಯ ಕಡೆಯ ರಾಜನಾದ ಕೈಕುಬಾದನ ಮರಣಾನಂತರ ತುರ್ಕರ ಆಡಳಿತ ಕೊನೆಗೊಂಡಿತೆಂದೂ ಆ ಕಾಲದ ಇತಿಹಾಸಕಾರ ಬರಾನಿ ಹೇಳುತ್ತಾನೆ. ಖಲ್ಜಿಗಳಿಗೂ ತುರ್ಕರಿಗೂ ಸ್ನೇಹವಿರಲಿಲ್ಲ. ಖಲ್ಜಿಗಳು ಸುಲ್ತಾನರಾಗುವ ಮುನ್ನ ಬಂಗಾಳವನ್ನು ಜಯಿಸಿ ಆಳುತ್ತಿದ್ದರು; ಮತ್ತು ಇನ್ನೂ ಅನೇಕ ಅಧಿಕಾರಗಳನ್ನು ಪಡೆದಿದ್ದರು. ಗುಲಾಮ ಸಂತತಿ ಕ್ಷೀಣವಾದಾಗ ಇವರೆಲ್ಲ ಜಲಾಲುದ್ದೀನ್ ಖಲ್ಜಿ ಎಂಬವನನ್ನು ದೆಹಲಿಯ ಸುಲ್ತಾನನ ಮಂತ್ರಿಯಾಗಿದ್ದ ನೈಜಾಮುದ್ದೀನನ ವಿರುದ್ಧ ಎತ್ತಿಕಟ್ಟಿದರು. ನೈಜಾಮುದ್ದೀನ್ ಜಲಾಲುದ್ದೀನನ ಶತ್ರು. ಸುಲ್ತಾನನ ಮರಣಾನಂತರ ಜಲಾಲುದ್ದೀನನನ್ನು ಅವರು ಸಿಂಹಾಸನದ ಮೇಲೆ ಕೂರಿಸಿದರು.

ಖಲ್ಜಿವಂಶದ ಆಡಳಿತ 30 ವರ್ಷಗಳ ಕಾಲ ನಡೆಯಿತು. ಈ ವಂಶದಲ್ಲಿ ಆಳ್ವಿಕೆ ನಡೆಸಿದ ಸುಲ್ತಾನರಲ್ಲಿ ಅಲ್ಲಾವುದ್ದೀನ್ ಖಲ್ಜಿ ಅತ್ಯಂತ ಪ್ರಸಿದ್ಧ. ಆತ 20 ವರ್ಷಗಳ ಕಾಲ ಆಡಳಿತ ನಡೆಸಿ ಭಾರತದಲ್ಲಿ ಮುಸ್ಲಿಂ ಚಕ್ರಾಧಿಪತ್ಯವನ್ನು ಅಭಿವೃದ್ಧಿಪಡಿಸಿದ. ಖಲ್ಜಿ ವಂಶದ ಮೊದಲನೆಯವನಾದ ಜಲಾಲುದ್ದೀನ್ ಸಿಂಹಾಸನವನ್ನೇರಿದಾಗ 70 ವರ್ಷ ವಯಸ್ಸಾಗಿತ್ತು. ತುಂಬ ಕರುಣಾಳುವಾದ ಈತ ಮುಪ್ಪಿನಿಂದಾಗಿ ದುರ್ಬಲನಾಗಿದ್ದ. ಈತನ ಆಡಳಿತ ಸಮರ್ಪಕವಾಗಿರಲಿಲ್ಲ. ಎಲ್ಲೆಲ್ಲೂ ದಂಗೆಗಳು ಎದ್ದುವು. ಇವಕ್ಕೆ ಮುಂದಾಳಾಗಿದ್ದವನೇ ಅಲ್ಲಾವುದ್ದೀನ್. ಈತ ಜಲಾಲುದ್ದೀನನ ಅಣ್ಣನ ಮಗ, ಅವನ ಅಳಿಯ. ಇವನು ಖಾಂದೇಶ್ ಮತ್ತು ದೇವಗಿರಿ ರಾಜ್ಯಗಳನ್ನು ಕೊಳ್ಳೆಹೊಡೆದು, ಐಶ್ವರ್ಯಬಲದಿಂದ, ಕುತಂತ್ರದಿಂದ ಜಲಾಲುದ್ದೀನನನ್ನೂ ಕೊಲೆಮಾಡಿ 1296ರಲ್ಲಿ ಸುಲ್ತಾನನಾದ.

ಅಲ್ಲಾವುದ್ದೀನ್ ಖಲ್ಜಿ

ಅಲ್ಲಾವುದ್ದೀನ್ (1296–1316) ಖಲ್ಜಿ ವಂಶದ ಪ್ರಖ್ಯಾತ ದೊರೆ. ತನ್ನ ವಿರೋಧಿಗಳನ್ನೆಲ್ಲ ಕೊಲೆಮಾಡಿದ. ರಾಜ್ಯ ವಿಸ್ತರಿಸಿದ. 1296–1305ರವರೆಗೆ ಅನೇಕ ಸಾರಿ ದಂಡೆತ್ತಿ ಬಂದ ಮಂಗೋಲಿಯನ ರನ್ನು ಹೊಡೆದು ಓಡಿಸಿದ. ದಕ್ಷಿಣ ಭಾರತದ ಮೇಲೆ ಮೊತ್ತಮೊದಲು ಆಕ್ರಮಣ ನಡೆಸಿದ ಮುಸ್ಲಿಂ ದೊರೆ ಈತನೇ. ದಕ್ಷಿಣ ದಲ್ಲಿ ದೇವಗಿರಿಯ ಯಾದವರು, ದೋರಸಮುದ್ರದ ಹೊಯ್ಸಳರು, ಪಾಂಡ್ಯರು, ಓರಂಗಲ್ಲಿನ ಕಾಕತೀಯರು ಇವರು ಅಲ್ಲಾವುದ್ದೀನ್ ಕಳುಹಿಸಿಕೊಟ್ಟ ಮಲ್ಲಿಕ್ ಕಾಫರನ ಸೈನ್ಯಕ್ಕೆ ಸೋತು ಶರಣಾಗತರಾದರು. ಈ ದಂಡೆಯಾತ್ರೆಗಳಿಂದ ಅಪಾರ ಐಶ್ವರ್ಯ ಅಲ್ಲಾವುದ್ದೀನನ ಕೈಸೇರಿತು. ಅವನ ಆಡಳಿತದ ಕೊನೆಗಾಲದಲ್ಲಿ ದೇಶದಲ್ಲಿ ಅವ್ಯವಸ್ಥೆ ತಲೆದೋರಿತು. ಅವನ ನಂಬಿಕೆಯ ಬಂಟನಾದ ಮಲ್ಲಿಕ್ ಕಾಫರನೇ ದ್ರೋಹ ಬಗೆದ. ಈ ಅವ್ಯವಸ್ಥೆಗಳ ನಡುವೆ ಅವನು 1316ರಲ್ಲಿ ಮರಣಹೊಂದಿದ. **(ನೋಡಿ– ಅಲ್ಲಾವುದ್ದೀನ್ ಖಲ್ಜಿ)**

ಅಲ್ಲಾವುದ್ದೀನನ ಮರಣಾನಂತರ ಅವನ ಆರು ವರ್ಷದ ಮಗನಾದ ಷಿಹಾಬುದ್ದೀನ್ ಉಮರನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ರಾಜ್ಯಸೂತ್ರಗಳನ್ನು ಕಾಫರ್ ವಶಪಡಿಸಿಕೊಂಡ. ಅಲ್ಲಾವುದ್ದೀನನ ಇಬ್ಬರು ಮಕ್ಕಳ ಕಣ್ಣುಗಳನ್ನು ಕೀಳಿಸಿ ಉಳಿದವರನ್ನು ಸೆರೆಯಲ್ಲಿಟ್ಟು ರಾಣಿಯನ್ನು ಅರಮನೆಯಿಂದೋಡಿಸಿದ. ಷಿಹಾಬುದ್ದೀನನ ತಾಯಿಯನ್ನು ಮದುವೆಯಾದ. ಇನ್ನೂ ಕ್ರೂರಕೃತ್ಯಗಳು ನಡೆಯುವುದಕ್ಕೆ ಮೊದಲೇ ಕೆಲವು ಜನ ಸಿಪಾಯಿಗಳು ಮಲ್ಲಿಕ್ ಕಾಫರನನ್ನು ಹಿಡಿದು ಕೊಲೆಮಾಡಿದರು. ಅನಂತರ ಅಲ್ಲಾವುದ್ದೀನನ ಮೂರನೆಯ ಮಗನಾದ ಮುಬಾರಕ್ ಖಾನನನ್ನು ಬಂಧನದಿಂದ ಬಿಡಿಸಿದರು. ಆತ ತಮ್ಮನಾದ ಷಿಹಾಬುದ್ದೀನನ ಕಣ್ಣು ಕೀಳಿಸಿ, ಕುತ್ಬುದ್ದೀನ್ ಮುಬಾರಕ್ ಷಹ ಎಂಬ ಹೆಸರಿನಿಂದ ಸುಲ್ತಾನನಾದ. ವಿಲಾಸಪ್ರಿಯನಾದ ಈತ ಸಿಂಹಾಸನಕ್ಕೆ ಬರುತ್ತಲೇ 17,000 ಬಂದಿಗಳನ್ನು ಬಿಡುಗಡೆ ಮಾಡಿದ; ಸೈನ್ಯಕ್ಕೆ 6 ತಿಂಗಳ ಸಂಬಳವನ್ನು ಇನಾಮಾಗಿ ಕೊಟ್ಟ; ಹೊಸ ಕಂದಾಯಗಳನ್ನೆಲ್ಲ ತೆಗೆದುಹಾಕಿದ. ಇದರಿಂದ ಜನರೆಲ್ಲರೂ ಭಯ ತಪ್ಪಿ ಸುಖಸಂತೋಷಗಳಲ್ಲಿ ಮಗ್ನರಾದರು. ಕುಡಿತ ಎಲ್ಲೆಲ್ಲೂ ಹೆಚ್ಚಿತು. ಸರಕುಗಳ ಬೆಲೆ ಹೆಚ್ಚಿ, ಮೋಸ ಲಂಚಗಳು ಅಧಿಕವಾದುವು. ದೇಶದಲ್ಲಿ ಎಲ್ಲೆಲ್ಲೂ ದಂಗೆ ನಡೆಯಿತು. ಕಡೆಗೆ 1321ರಲ್ಲಿ ಮುಬಾರಕನನ್ನು ಖುಸ್ರಾವ್ ಖಾನ್ ಕೊಲೆಮಾಡಿ, ಸುಲ್ತಾನ್ ನಸಿರುದ್ದೀನನೆಂಬ ಹೆಸರಿನಿಂದ ಸಿಂಹಾಸನವನ್ನೇರಿದ. ಇವನ ಆಡಳಿತ ಅರಾಜಕತೆಯಿಂದ ಕೂಡಿ ರಕ್ತಪಾತಕ್ಕೆ ಎಡೆ ಮಾಡಿಕೊಟ್ಟಿತು. ಹಿಂದು ಮುಸ್ಲಿಮರಿಬ್ಬರೂ ಇವನ ಆಡಳಿತದಿಂದ ಬೇಸತ್ತರು. ಈ ಸಮಯವನ್ನುಪಯೋಗಿಸಿಕೊಂಡು ಘಾಜಿಖಾನ್ ತೊಗಲಕ್ ಎಂಬವನು ಖುಸ್ರುವನ್ನು ಸೋಲಿಸಿ, ಅವನನ್ನು ಶೂಲಕ್ಕೇರಿಸಿ 1321ರಲ್ಲಿ ಸಿಂಹಾಸನವನ್ನೇರಿದ. ಇಲ್ಲಿಗೆ ಖಲ್ಜಿ ವಂಶ ಕೊನೆಗೊಂಡು, ತೊಗಲಕ್ ವಂಶದ ಆಳ್ವಿಕೆ ಪ್ರಾರಂಭವಾಯಿತು.

ಒಟ್ಟಿನಲ್ಲಿ 30 ವರ್ಷಗಳ ಕಾಲ ಆಡಳಿತ ನಡೆಸಿದ ಖಲ್ಜಿ ವಂಶದವರಲ್ಲಿ ಅಲ್ಲಾವುದ್ದೀನನನ್ನು ಬಿಟ್ಟರೆ, ಉಳಿದ ರಾಜರು ಅಶಕ್ತರಾಗಿದ್ದರು. ದಂಗೆಗಳು, ಅರಾಜಕತೆ, ಕೊಲೆಗಳು ಸಾಮಾನ್ಯವಾಗಿದ್ದುವು. ಆದರೆ ದಕ್ಷಿಣ ಭಾರತಕ್ಕೆ ಮೊದಲ ಬಾರಿಗೆ ದಂಡೆತ್ತಿಬಂದ ಮುಸ್ಲಿಂ ದೊರೆಗಳು ಖಲ್ಜಿಗಳೇ. ರಾಜ್ಯ ವಿಸ್ತರಣೆಗಿಂತ, ದಕ್ಷಿಣದ ಐಶ್ವರ್ಯವನ್ನು ಲೂಟಿಮಾಡುವುದೇ ಇವರ ಉದ್ದೇಶವಾಗಿತ್ತು. ಇವರ ಕಾಲದಲ್ಲಿ ಕಲೆ ಸಾಹಿತ್ಯ ಅಷ್ಟಾಗಿ ಬೆಳೆಯಲಿಲ್ಲ. ಅಮೀರ್ ಖುಸ್ರು **(ನೋಡಿ– ಅಮೀರ್ ಖುಸ್ರು)** ಎಂಬ ಪ್ರಖ್ಯಾತ ಪರ್ಷಿಯನ್ ಕವಿ ಅಲ್ಲಾವುದ್ದೀನನ ಆಸ್ಥಾನದಲ್ಲಿದ್ದ. *(ಬಿ.ಎಸ್.ಎ.)*

**ಖಲ್ಜಿ, ಮಾಳವದ :** 1436–1531. ಮಾಳವದಲ್ಲಿ ಘೋರಿ ಮನೆತನದ ಅರಸರ ಅನಂತರ ಆಡಳಿತಕ್ಕೆ ಬಂದ ದೊರೆಗಳ ವಂಶ. 1398ರಲ್ಲಿ ತೈಮೂರ್ ಭಾರತದ ಮೇಲೆ ನಡೆಸಿದ ದಾಳಿಯಿಂದಾಗಿ ದೆಹಲಿಯಲ್ಲಿ ತೊಗಲಕರ ಆಳ್ವಿಕೆ ಮುಕ್ತಾಯಗೊಂಡಿತು. ಅವರ ರಾಜ್ಯ ಛಿದ್ರವಾಗಿ ಅನೇಕ ಸ್ವತಂತ್ರ ರಾಜ್ಯಗಳು ತಲೆಯೆತ್ತಿದುವು. ಇವುಗಳಲ್ಲಿ ಮಾಳವದ ಘೋರಿಗಳ ರಾಜ್ಯವೂ ಒಂದು. ಇದರ ಸ್ಥಾಪಕ (1401) ದಿಲಾವರ್ ಖಾನ್. ಇವನ ಮಗ ಆಲ್ಪ್ ಖಾನ್ 1405ರಲ್ಲಿ, ತಂದೆಯ ಮರಣಾನಂತರ, ಹುಷಾಂಗ್ ಷಹನೆಂಬ ಹೆಸರಿನಿಂದ ರಾಜ್ಯವಾಳತೊಡಗಿದ. ಈತ 1410ರಲ್ಲಿ ತನ್ನ ರಾಜಧಾನಿಯನ್ನು ಹೊಸದಾಗಿ ಕಟ್ಟಿಸಿದ ಮಾಂಡೂವಿನ ಕೋಟೆಗೆ ಬದಲಾಯಿಸಿ, ಸೋದರ ಸಂಬಂಧಿಯಾದ ಮಲಿಕ್ ಮಘಿಯನ್ನು ಪ್ರಧಾನಿಯಾಗಿ ನೇಮಿಸಿಕೊಂಡ. ಇವನದು ಖಲ್ಜಿ ಸಂತತಿ. ಮಘಿಯ ಮಗ ಮಹಮೂದ್ ಷಹ. ಹುಷಾಂಗ್ ಷಹನ ಬಳಿಕ ಅವನ ಮಗ ಘಜ್ನಿ ಖಾನ್ ಪಟ್ಟವೇರಿದಾಗ ಮಘಿಯ ಮಗ ಮಹಮೂದ್ ಷಹ ಅವನಿಗೆ ಬೆಂಬಲವಾಗಿ ನಿಂತ. ಆದರೆ ಘಜ್ನಿ ಖಾನ್ ಕ್ರೂರಿಯೂ ವಿಷಯಲಂಪಟನೂ ಆಗಿದ್ದುದರಿಂದ ಕ್ರಮೇಣ ಮಹಮೂದ ಬಲಿಷ್ಠನಾಗಿ. ಕೊನೆಗೆ ಘಜ್ನಿ ಖಾನನ್ನು ಕೊಲ್ಲಿಸಿ, ತಾನೇ ಮಾಳವದ ಸುಲ್ತಾನನಾದ. ಮಾಳವದಲ್ಲಿ ಖಲ್ಜಿ ಮನೆತನ ಆಳ್ವಿಕೆಗೆ ಬಂತು (1436).

ಮಹಮೂದ್ ಷಹ ಖಲ್ಜಿ 36 ವರ್ಷಗಳ ಕಾಲ ಆಳಿದ. ಹುಷಾಂಗನ ಮಗನಾದ ಅಹಮದ್ ಖಾನ್ ಇವನ ವಿರುದ್ಧ ದಂಗೆ ಎದ್ದಾಗ ಅವನನ್ನು ಸೋಲಿಸಿ ವಿಷ ಉಣಿಸಿ ಕೊಲ್ಲಿಸಿದ. ಕೆಲವರಿಗೆ ಜಾಗೀರುಗಳನ್ನು ಕೊಟ್ಟು, ಇನ್ನು ಕೆಲವರನ್ನು ಕಠಿಣವಾಗಿ ದಂಡಿಸಿ ದಂಗೆಗಳನ್ನಡಗಿಸಿದ. ಗುಜರಾತಿನ ಸುಲ್ತಾನ್ ಅಹಮದ್ ಇವನ ವಿರುದ್ಧ ಏರಿ ಬಂದಾಗ, ತಂದೆಯ ಸಹಾಯದಿಂದ ಅವನನ್ನು ಹೊರದೂಡಿದ. ಚಂದೇರಿಯಲ್ಲಿಯ ದಂಗೆಕೋರನೊಬ್ಬ ಅಮೀರನ ವಿರುದ್ಧ ಸಾಗಿ, ಚಂದೇರಿ ಕೋಟೆಯನ್ನು ಎಂಟು ತಿಂಗಳುಗಳ ಕಾಲ ಮುತ್ತಿ ಆ ಕೋಟೆಯನ್ನು ವಶಪಡಿಸಿಕೊಂಡ. ಏತನ್ಮಧ್ಯೆ ಗ್ವಾಲಿಯರದ ಡುಂಗರಸೇನ ನರವಾರ ನಗರವನ್ನು ಮುತ್ತಿದನೆಂಬ ಸುದ್ದಿ ತಿಳಿದು ಪ್ರತಿಕ್ರಮವಾಗಿ ತಾನು ಗ್ವಾಲಿಯರನ್ನು ಮುತ್ತಿದ. ಡುಂಗರ ಸೇನನನ್ನು ಹಿಮ್ಮೆಟ್ಟಿಸಿದ.

ದೆಹಲಿಯಲ್ಲಿ ಆಳುತ್ತಿದ್ದ ಸಯ್ಯದ್ ವಂಶದ ಮುಹಮ್ಮದ್ ಷಹ ಸುಖಲೋಲುಪನೂ ಕಾಮಾಂಧನೂ ಆಗಿದ್ದ ಕಾರಣ ರಾಜ್ಯದಲ್ಲಿ ಅರಾಜಕತೆ ತಲೆದೋರಿತ್ತು. ಇದರಿಂದ ಬೇಸತ್ತು ಜಲಾಲ್ ಖಾನನೂ ರಾಜಧಾನಿಯ ಇತರ ಪ್ರಮುಖರೂ ಸೇರಿ ಮಾಳವದ ಮಹಮೂದ್ ಖಲ್ಜಿಯನ್ನು ದೆಹಲಿಗೆ ಬಂದು ಅಧಿಕಾರವನ್ನು ಸ್ವೀಕರಿಸುವಂತೆ

ಆಹ್ವಾನಿಸಿದರು. ಅದರಂತೆ ಮಹಮೂದ ದೆಹಲಿಗೆ ಸೈನ್ಯಸಮೇತ ಬಂದು ಹತ್ತು ಮೈಲುಗಳ ದೂರದಲ್ಲಿದ್ದ ತಲ್ಪತ್ ಎಂಬಲ್ಲಿ ಬೀಡುಬಿಟ್ಟ. ಇದನ್ನರಿತ ದೆಹಲಿಯ ಅರಸ ಸರ್ ಹಿಂದ್‌ನ ನಾಯಕನಾದ ಬಹವಾಲ್ ಲೋದಿಯನ್ನು ತನ್ನ ನೆರವಿಗೆ ಕರೆದ. ಎರಡು ಸೈನ್ಯಗಳ ನಡುವಣ ಮೊದಲ ದಿನದ ಯುದ್ಧ ಅನಿಶ್ಚಿತವಾಗಿ ಕೊನೆಗೊಂಡಿತು. ಆದರೂ ಮುಹಮ್ಮದ್ ಷಹ ಖಲ್ಜಿಯೊಡನೆ ಒಪ್ಪಂದ ಮಾಡಿಕೊಳ್ಳಬಯಸಿ ತನ್ನ ಬೇಹುಕಾರರನ್ನು ಕಳಿಸಿದ. ಅಷ್ಟರಲ್ಲಿ ಗುಜರಾತಿನ ಅಹಮದನಿಂದ ತನ್ನ ರಾಜ್ಯಕ್ಕೆ ವಿಪತ್ತು ಒದಗಿದ್ದ ಸಂಗತಿಯನ್ನರಿತ ಮಹಮೂದ ಖಲ್ಜಿ, ಮುಹಮ್ಮದ್ ಷಹನ ಒಪ್ಪಂದದ ಸೂಚನೆಗೆ ಸಮ್ಮತಿಸಿ ಕೂಡಲೇ ತನ್ನ ರಾಜಧಾನಿಗೆ ಹಿಂದಿರುಗಿದ (1440). ಆದರೆ ಮುಹಮ್ಮದ್ ಷಹನ ಈ ನಡವಳಿಕೆಯನ್ನು ಲೋದಿ ಅನುಮೋದಿಸಲಿಲ್ಲ. ಹಿಂದಿರುಗುತ್ತಿದ್ದ ಖಲ್ಜಿಯ ಸೈನ್ಯದ ಮೇಲೆ ಆತ ಅನಿರೀಕ್ಷಿತವಾಗಿ ಆಕ್ರಮಣ ಮಾಡಿ ಅವರ ವಸ್ತುವಾಹನಗಳನ್ನು ಸೂರೆ ಮಾಡಿದ. ಮಹಮೂದ್ ಖಲ್ಜಿ ಮಾತ್ರ ಹೆಚ್ಚು ಬಾಧೆಯಿಲ್ಲದೆ ಮಾಂಡುವಿಗೆ ಹಿಂದಿರುಗಿದ.

ಚಿತ್ತೂರಿನ ಮಹಾರಾಣ ಕುಂಭನಿಗೂ ಮಹಮೂದ್ ಷಹ ಖಲ್ಜಿಗೂ ನಡುವೆ ಹಲವಾರು ಬಾರಿ ಘರ್ಷಣೆಗಳಾದುವು. ಮಹಮೂದ ದೆಹಲಿಯ ಸಮೀಪದಲ್ಲಿದ್ದಾಗ ಕುಂಭ ಮಾಳವದೇಶವನ್ನು ಮುತ್ತಿ ಮಂಡಸೋರದವರೆಗೂ ಹೋದನೆಂದೂ ದೆಹಲಿಯಿಂದ ಚಿತ್ತೂರನ್ನು ಮುತ್ತಿ, ಅಲ್ಲಿಯ ದೇವಾಲಯಗಳನ್ನು ಹಾಳುಗೆಡವಿ ಆ ಸ್ಥಳಗಳಲ್ಲಿ ಮಸೀದಿಗಳನ್ನು ಕಟ್ಟಿಸಿದನೆಂದೂ ಇತಿಹಾಸಕಾರರು ಹೇಳಿದ್ದಾರೆ. ಆದರೆ ಈ ಘಟನೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಖಚಿತವಾದ ವಿವರಗಳು ತಿಳಿದಿಲ್ಲ.

1444ರಲ್ಲಿ ಒಮ್ಮೆ ಖಲ್ಜಿ ಮಹಮೂದ ಮಂಡಲಗಡವನ್ನು ವಶಪಡಿಸಿಕೊಳ್ಳಲು ಮಹಾರಾಣ ಕುಂಭನ ವಿರುದ್ಧ ದಂಡೆತ್ತಿ ವಿಫಲನಾಗಿ ಹಿಂದಿರುಗಿದ. ಇನ್ನೊಮ್ಮೆ ಇವನು ನಡೆಸಿದ ಪ್ರಯತ್ನದಲ್ಲಿ ಮೊದಲು ಅಜ್ಮೀರವನ್ನು ಗೆದ್ದುಕೊಂಡನಾದರೂ ಮಂಡಲಗಡವನ್ನು ಅಕ್ರಮಿಸುವ ಅವನ ಆಸೆ ನೆರವೇರದೆ ತೀವ್ರವಾದ ಸೋಲನ್ನನುಭವಿಸಬೇಕಾಯಿತು. 1456 ಮತ್ತು 1458ರಲ್ಲಿ ಪುನಃ ನಡೆಸಿದ ಪ್ರಯತ್ನಗಳು ಫಲಿಸಲಿಲ್ಲ.

ಗುಜರಾತಿನ ವಿರುದ್ಧವಾಗಿಯೂ ಮಹಮೂದ ಎರಡು ಬಾರಿ ಕದನ ಹೂಡಿದ. ಗುಜರಾತಿನ ಸುಲ್ತಾನ್ ಮಹಮ್ಮದನ ವಿರುದ್ಧ ಹೋರಾಟದಲ್ಲಿ ಸಹಾಯ ನೀಡಬೇಕೆಂದೂ ಇದಕ್ಕೆ ಪ್ರತಿಯಾಗಿ ಹಣವನ್ನೀಯುವುದಾಗಿಯೂ ಮಹಮೂದನನ್ನು 1450ರಲ್ಲಿ ಚಂಪಾನೇರದ ರಾಜ ಗಂಗಾದಾಸ ಕೋರಿದ. ಅಂತೆಯೇ ಖಲ್ಜಿ ಎರಡು ಸಲ (1450 ಮತ್ತು 1451) ಗುಜರಾತಿನ ಮೇಲೆ ದಂಡೆತ್ತಿಹೋದ. ಎರಡನೆಯ ಸಲ ಭರುಕಚ್ಛದವರೆಗೂ ಹೋಗಿದ್ದಾಗ ಶತ್ರುಸೈನ್ಯ ಇವನನ್ನು ತೀವ್ರವಾಗಿ ಎದುರಿಸಿ, ಇವನನ್ನು ಸೋಲಿಸಿ ಇವನ ವಸ್ತುವಾಹನಗಳನ್ನೂ 82 ಆನೆಗಳನ್ನೂ ಕಸಿದುಕೊಂಡಿತು. ಮಹಮೂದ ಮರುವರ್ಷ ತನ್ನ ಮಗನಾದ ಘಿಯಾಸುದ್ದೀನನನ್ನು ಸೂರತ್ ಕೋಟೆಯನ್ನು ಸೂರೆ ಮಾಡಲು ಕಳುಹಿಸಿದ.

1453ರಲ್ಲಿ ಗುಜರಾತಿನ ಸುಲ್ತಾನ ಕುತುಬ್-ಉದ್-ದೀನನೊಡನೆ ಒಂದು ಒಪ್ಪಂದವಾಯಿತು. ಇದರ ಪ್ರಕಾರ ಮಹಾರಾಣ ಕುಂಭನಿಗೆ ಸೇರಿದ್ದ ಅಜ್ಮೀರ್ ಮೇವಾಡ ಹಾಗೂ ಸುತ್ತಲಿನ ಪ್ರದೇಶಗಳನ್ನು ಖಲ್ಜಿ ಮಹಮೂದ್ ಷಹನೂ ಗುಜರಾತಿಗೆ ಹೊಂದಿದಂತಿದ್ದ ಪ್ರದೇಶಗಳನ್ನು ಅಲ್ಲಿಯ ಸುಲ್ತಾನನೂ ವಶಪಡಿಸಿಕೊಳ್ಳಬೇಕೆಂದು ಒಡಂಬಡಿಕೆಯಾಗಿತ್ತು. ಅದರಂತೆ ಮಹಮೂದ ದಾರಾವತಿಯನ್ನು (ಈಗಿನ ಬುಂದಿ ನಗರ) ಮೊದಲು ಮುತ್ತಿದ. ಆದರೆ ಅಷ್ಟರಲ್ಲೇ ದಕ್ಷಿಣದಲ್ಲಿ ಬಹುಮನಿ ಸುಲ್ತಾನನ ವಿರುದ್ಧ ಹೋಗಬೇಕಾದ ಪ್ರಸಂಗ ಒದಗಿ, ಸೇನೆಯನ್ನು ಹಿಂದೆಗೆದುಕೊಂಡ.

ಈ ನಡುವೆ ಮಹಮೂದ್ ಖಲ್ಜಿ ಕಾಲ್ಪಿ ಜಿಲ್ಲೆಯ ಕಡೆಗೆ ಗಮನ ಹರಿಸಿದ. ಹುಷಾಂಗ್ ಷಹನ ಕಾಲದಲ್ಲಿ ಈ ಜಿಲ್ಲೆಯ ಅಧಿಕಾರಿಯಾಗಿದ್ದ ಖಾದಿರ್ ಅನಂತರ ಸ್ವತಂತ್ರನಾಗಿದ್ದ. ಅವನ ಮಗ ನಾಜೀರ್ ಆಮೇಲೆ ಅಧಿಕಾರಕ್ಕೆ ಬಂದ. ಈತ ಕಾಲ್ಪಿಗಿಂತ ಹಿರಿದಾದ, ಹೆಚ್ಚು ಜನಭರಿತವಾದ ಷಾಪುರವೆಂಬ ನಗರವನ್ನು ಧ್ವಂಸಗೊಳಿಸಿ ಅಲ್ಲಿಯ ಮಹಮ್ಮದೀಯರನ್ನು ಹಿಂಸಿಸಿ ಅವರ ಹೆಂಗಸರನ್ನು ಕಾಫಿರರಿಗೆ ಕೊಟ್ಟನೆಂಬ ತೀವ್ರವಾದ ಆಪಾದನೆಗಳನ್ನು ಜಾನ್ಪುರದ ಸುಲ್ತಾನ ಮಹಮೂದ ಹೊರಿಸಿ. ಅವನನ್ನು ದಂಡಿಸಲು ಅನುಮತಿಯನ್ನೀಯಬೇಕೆಂದು ಖಲ್ಜಿ ಮಹಮೂದನನ್ನೇ ಕೇಳಿದ. ಖಲ್ಜಿಯಿಂದ ಅನುಮತಿ ದೊರಕಿದಾಗ ಅವನು ಕಾಲ್ಪಿಯನ್ನು ಮುತ್ತಿದ (1441). ನಾಜ್ಹಿರ್ ಪಶ್ಚಾತ್ತಾಪಪಟ್ಟು, ಮಾಳವದ ಸುಲ್ತಾನನ ಕ್ಷಮೆ ಕೋರಿದ. ಆದರೂ ಜಾನ್ಪುರದ ಸುಲ್ತಾನ ಕಾಲ್ಪಿಯಿಂದ ಕಾಲ್ತೆಗೆಯಲಿಲ್ಲ. ಪರಿಣಾಮವಾಗಿ ಖಲ್ಜಿ ಮಹಮೂದ ಅವನ ವಿರುದ್ಧ ಯುದ್ಧ ಘೋಷಿಸಿದ. ಆದರೆ ಇದು ಫಲಿಸಲಿಲ್ಲ. ಕೊನೆಗೆ ಮುಸ್ಲಿಂ ಸಂತನೊಬ್ಬನ ಮಧ್ಯಸ್ಥಿಕೆಯ ಫಲವಾಗಿ ಜಾನ್ಪುರದ ಸುಲ್ತಾನ ಕಾಲ್ಪಿಯಿಂದ ಹಿಂದಕ್ಕೆ ಸರಿದ.

ಆಗ ದಕ್ಷಿಣದಲ್ಲಿ ಅಲ್ಲಾವುದ್ದೀನ್ ಅಹಮದ್ ಬಹಮನೀ ರಾಜ್ಯದ ಸುಲ್ತಾನನಾಗಿದ್ದ. ಅವನ ಭಾವ ಜಲಾಲ್ ಖಾನ ಅವನ ವಿರುದ್ಧ ದಂಗೆ ಎದ್ದು ನಲ್ಗೊಂಡ ಕೋಟೆಯಲ್ಲಿ ಅಡಗಿ, ಮಾಳವದ ಸುಲ್ತಾನನ ನೆರವು ಬೇಡಿ ತನ್ನ ಮಗ ಸಿಕಂದರನನ್ನು ಕಳುಹಿಸಿದ (1455-56). ಅಲ್ಲಾವುದ್ದೀನ್ ಮರಣ ಹೊಂದಿರುವುದಾಗಿಯೂ ಬಹಮನೀ ರಾಜ್ಯ ಅರಾಜಕವಾಗಿರುವುದೆಂದೂ ಮಹಮೂದನಿಗೆ ಸಿಕಂದರ್ ಸುಳ್ಳು ಹೇಳಿ ಅವನ ಸಹಾಯವನ್ನು ಬೇಡಿದ. ಮಹಮೂದ ಇದನ್ನು ನಂಬಿ ದಕ್ಷಿಣಕ್ಕೆ ಬಂದಾಗ ಸತ್ಯಸಂಗತಿಯನ್ನು ತಿಳಿದು ತೆಪ್ಪನೆ ಸ್ವರಾಜ್ಯಕ್ಕೆ ಹಿಂತಿರುಗಿದ. ಇದೊಂದು ವ್ಯರ್ಥ ಪ್ರಯತ್ನವಾಯಿತು.

ಆದರೆ ಐದು ವರ್ಷಗಳ ಅನಂತರ, 1461ರಲ್ಲಿ ಪುನಃ ಬಹಮನೀ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಮಾರ್ಗದಲ್ಲಿ ಅಸೀರ್‌ಗಢವನ್ನು ಮುತ್ತಿದ. ಅದು ಅವನ ವಶವಾಗಲಿಲ್ಲ. ಆದರೆ ಖಾಂದೇಶದ ಸುಲ್ತಾನ ತಾತ್ತ್ವಿಕವಾಗಿ ಇವನ ಪರಮಾಧಿಕಾರವನ್ನು ಒಪ್ಪಿಕೊಂಡ. ಮಹಮೂದ ಇಷ್ಟರಿಂದ ತೃಪ್ತನಾಗಿ ಮುನ್ನಡೆದು ಬಹಮನೀ ಸೈನ್ಯವನ್ನೆದುರಿಸಿದ. ಆಗ ನಡೆದ ಘರ್ಷಣೆಯಲ್ಲಿ ಮಹಮೂದನದೇ ಮೇಲುಗೈಯಾಗಿ, ಅಲ್ಪವಯಸ್ಕನಾದ ಸುಲ್ತಾನ ನಿಜಾಂ ಷಹ ಮತ್ತು ಅವನ ತಾಯಿ ಮಲಿಕಾಜಹಾನ್ ಇವರು ಬೀದರ್ ಕೋಟೆಯನ್ನು ತೊರೆದು ಫಿರೋಜಾಬಾದಿಗೆ ಹೋಗಬೇಕಾಯಿತು. ಮಹಮೂದ ಬೀದರನ್ನು ಮುತ್ತಿದ. ಬಹಮನಿಯ ಸಹಾಯಕ್ಕೆ ಗುಜರಾತಿನಿಂದ ಬೇಗರ್ಹ ಧಾವಿಸಿ ಬಂದ. ಬಹಮನಿ ರಾಜ್ಯದ ಪ್ರಧಾನಿಯಾಗಿದ್ದ ಮಹಮೂದ್ ಗವಾನ್ ಈ ಸೈನ್ಯದೊಡಗೂಡಿ ಮಾಳವದ ಮಹಮೂದನ ವಿರುದ್ಧ ತೀವ್ರವಾಗಿ ಹೋರಾಡಿದ. ಮಾಳವದ ಸೈನ್ಯ ಹೆದರಿ ದಿಕ್ಕಾಪಾಲಾಗಿ ಓಡಿ ಬಹಳ ತೊಂದರೆಗಳನ್ನನುಭವಿಸಬೇಕಾಯಿತು. ಮಹಮೂದ ಹೇಗೋ ಜೀವದೊಡನೆ ಪಾರಾದ.

ಇಷ್ಟಾದರೂ ಮಹಮೂದ ತನ್ನ ಯತ್ನವನ್ನು ಬಿಡದೆ, ಪುನಃ ಬಹಮನಿಯ ವಿರುದ್ಧ, ಆ ಸಲ ಒರಿಸ್ಸದ ಗಜಪತಿಯ ಬೆಂಬಲದೊಡನೆ, ದಂಡೆತ್ತಿ, ದೌಲತಾಬಾದಿನವರೆಗೂ ಹೋದನಾದರೂ ಬಹಮನಿ ರಾಜ್ಯಕ್ಕೆ ಗುಜರಾತಿನ ಸೈನ್ಯ ಇನ್ನೂ ಬೆಂಬಲವಾಗಿ ಇದ್ದುದನ್ನು ಗಮನಿಸಿ ಹಿಂದಕ್ಕೆ ಹೊರಳಬೇಕಾಯಿತು (1462), ಮತ್ತೆ 1466ರಲ್ಲಿ ಇವನು ಎಲಿಚಪುರವನ್ನು ಮುತ್ತಿ ಅಲ್ಲಿ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದಾಗ ಬಹುಮನಿಯ ಸುಲ್ತಾನ ಅವನೊಡನೆ ಶಾಂತಿಯ ಒಪ್ಪಂದ ಮಾಡಿಕೊಂಡ. ಅದರಂತೆ ಎಲಿಚಪುರದ ವರೆಗಿನ ಬೀರಾರ್ ಪ್ರದೇಶ ಮಹಮೂದನ ವಶವಾಯಿತು.

ಹೀಗೆ ಸುಮಾರು 33 ವರ್ಷಗಳ ಕಾಲ ಆಳಿ 1469ರಲ್ಲಿ ಮರಣಿಸಿದ ಮಹಮೂದ ತನ್ನ ಆಳ್ವಿಕೆಯ ಹೆಚ್ಚಿನ ಭಾಗವನ್ನು ಯುದ್ಧಗಳಲ್ಲಿಯೇ ಕಳೆದ. ಅನೇಕ ಬಾರಿ ಸೋತರೂ ಧೃತಿಗೆಡದ ಇವನ ಆಕ್ರಮಣಕಾರಿ ನೀತಿಯಿಂದ ಇವನ ರಾಜ್ಯ ವಿಸ್ತಾರಗೊಂಡಿತು. ಇವನು ತನ್ನ ರಾಜ್ಯದಲ್ಲಿ ಸುಭದ್ರವಾದ ಆಡಳಿತವನ್ನು ನೆಲೆಗೊಳಿಸಿದ. ಈತ ಹಿಂದೂ ಮತದ್ವೇಷಿಯಾಗಿದ್ದು, ಹಿಂದೂಗಳ ದೇವಾಲಯಗಳನ್ನೂ ಇತರ ಕಟ್ಟಡಗಳನ್ನೂ ಭಿನ್ನಗೊಳಿಸುವುದರಲ್ಲಿ ವಿಶೇಷವಾದ ಆಸಕ್ತಿ ತೋರಿಸುತ್ತಿದ್ದ.

ಅನಂತರ ಇವನ ಹಿರಿಯ ಮಗ ಘಿಯಾಸುದ್ದೀನ್ ಅಧಿಕಾರಕ್ಕೆ ಬಂದ. ಈತ ಶಾಂತಿಪ್ರಿಯ. ಶಾಂತಿಯಲ್ಲಿ ಈತ ಎಷ್ಟು ನಿಷ್ಠೆ ತೋರಿಸಿದನೆಂದರೆ, ದೆಹಲಿಯ ಬಹಲೂಲ್ ಲೋದಿ ಇವನ ರಾಜ್ಯದ ಪಾಲಂಪುರವನ್ನು ಮುತ್ತಿದಾಗಲೂ ತೆಪ್ಪಗಿದ್ದ. ಕೊನೆಗೆ ಮಂತ್ರಿಗಳ ಬಲವಂತಕ್ಕೆ ಇವನು ಒಂದು ಸೈನ್ಯವನ್ನು ಲೋದಿಯ ವಿರುದ್ಧ ಕಳುಹಿಸಲು ಒಪ್ಪಿಕೊಂಡ. ಗುಜರಾತಿನ ಸುಲ್ತಾನ ಚಂಪಾನೇರವನ್ನು ಮುತ್ತಿದಾಗ ಆ ರಾಜ್ಯದ ದೊರೆ ಇವನ ಸಹಾಯ ಕೋರಿದ. ಆದರೆ ಮಹಮ್ಮದೀಯರ ವಿರುದ್ಧವಾಗಿ ಒಬ್ಬ ಹಿಂದುವಿಗೆ ಸಹಾಯ ಮಾಡುವುದು ತನ್ನ ನೀತಿಯಲ್ಲವೆಂದು ಹೇಳಿ ಈತ ಸಹಾಯವನ್ನು ನಿರಾಕರಿಸಿದ. ಇದರಿಂದ ಚಂಪಾನೇರ ಗುಜರಾತಿಗೆ ಸೇರಿತು.

ಇಷ್ಟಾದರೂ ಎರಡು ಸಲ ಇವನು ಚಿತ್ತೂರಿನ ವಿರುದ್ಧ ಕದನ ಹೂಡಿದ. ಮೇವಾಡದಲ್ಲಿ ಆಗ ಮಹಾರಾಣ ಕುಂಭನ ಮಗ ರಾಯಮಲ್ಲ ಆಳುತ್ತಿದ್ದ. ಅಲ್ಲಿಯ ಅಂತರಿಕ ಕಲಹಗಳು ತನಗೆ ಸಹಾಯಕವಾಗಬಹುದೆಂದು ಊಹಿಸಿ ಘಿಯಾಸ್ ಅದರ ಮೇಲೆ ಏರಿಹೋದ. ಆದರೆ ಎರಡು ಬಾರಿಯೂ ಸೋತ.

ಘಿಯಾಸುದ್ದೀನ ವಿಷಯಾಸಕ್ತನಾಗಿದ್ದ. ಈತನ ಅಂತಃಪುರದಲ್ಲಿ 1,600 ಸ್ತ್ರೀಯರಿದ್ದರಂತೆ. ಈತ ರಾಜ್ಯದ ಆಡಳಿತದ ಹೊಣೆಯನ್ನು ಮಗನಾದ ನಸೀರುದ್ದೀನನಿಗೆ ವಹಿಸಿ ತಾನು ಅಂತಃಪುರದಲ್ಲೇ ಕಾಲ ಕಳೆಯುತ್ತಿದ್ದ. ಇವನಿಗೆ ತನ್ನ ಧರ್ಮದಲ್ಲಿ ಅಪಾರ ಗೌರವವಿತ್ತು.

ಈತ 31 ವರ್ಷಗಳ ಕಾಲ ಆಳಿದ. ಇವನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಇವನ ಇಬ್ಬರು ಮಕ್ಕಳ ನಡುವೆ ಉತ್ತರಾಧಿಕಾರಕ್ಕಾಗಿ ಜಗಳಗಳು ನಡೆದು, ಕೊನೆಗೆ ಹಿರಿಯನಾದ ನಸೀರುದ್ದೀನ್ ತಮ್ಮನನ್ನು ಸೋಲಿಸಿ, ಕೊಂದು, ಅವನ ತಾಯಿಯಾದ ಖುರ್ಷಿದಳನ್ನು ಸೆರೆಗೆ ನೂಕಿ ಸಿಂಹಾಸನವನ್ನೇರಿದ (1500). ಇವನ ಮುದಿ ತಂದೆ ಈ ಸಂದರ್ಭದಲ್ಲಿ ಅಸಹಾಯ ಪ್ರೇಕ್ಷಕನಾಗಿ ಉಳಿದು, ಮರುವರ್ಷ (1501) ಮರಣ ಹೊಂದಿದ. ನಾಸೀರುದ್ದೀನ್ ಕುಡುಕ, ಕ್ರೂರಿ, ಕಾಮಾಂಧ. ರಾಜ್ಯದ ಶ್ರೀಮಂತ ವರ್ಗದವರೆಲ್ಲ ಒಂದುಗೂಡಿ ಇವನ ಮಗ ಷಿಹಾಬುದ್ದೀನನ ಪರವಾಗಿ ದಂಗೆಯೆದ್ದರು. ಸುಲ್ತಾನ ಅದನ್ನಡಗಿಸಿ ತನ್ನ ಕಿರಿಯ ಮಗ ಹುಮಾಯೂನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ. ನಾಸಿರುದ್ದೀನ್ ಮಡಿದಮೇಲೆ (1511) ಹುಮಾಯೂನ್ ಮತ್ತೊಮ್ಮೆ ಷಿಹಾಬುದ್ದೀನನನ್ನು ಸೋಲಿಸಿ ಇಮ್ಮಡಿ ಮಹಮೂದ್ ಷಹನೆಂಬ ಹೆಸರಿನಲ್ಲಿ ಅಧಿಕಾರಕ್ಕೆ ಬಂದ.

ಇಮ್ಮಡಿ ಮಹಮೂದ್ ಷಹ 20 ವರ್ಷಗಳ ಕಾಲ ಆಳಿದ. ಆಗ ರಾಜ್ಯದ ಹಿಂದೂ ಮುಸ್ಲಿಂ ಶ್ರೀಮಂತವರ್ಗಗಳ ನಡುವೆ ತೀವ್ರವಾದ ಘರ್ಷಣೆಗಳುಂಟಾದುವು.

ಇವನು ಬಸಂತರಾಯ್ ಎಂಬ ಹಿಂದುವನ್ನು ತನ್ನ ಪ್ರಧಾನಿಯಾಗಿ ನೇಮಿಸಿಕೊಂಡಿದ್ದ. ಇದನ್ನು ಸಹಿಸದ ಮಹಮ್ಮದೀಯರು ಅವನನ್ನು ಕೊಂದರು. ಅವನು ತನ್ನ ಅಧಿಕಾರದ ದುರುಪಯೋಗಪಡಿಸಿಕೊಂಡು ದುರಹಂಕಾರದಿಂದ ವರ್ತಿಸುತ್ತಿದ್ದನೆಂಬುದು ಅವನ ಮೇಲಿನ ಆಪಾದನೆ. ಅನಂತರ ಅಧಿಕಾರಕ್ಕೆ ಬಂದ ಇಕ್ಬಾಲ್ ಖಾನ್ ಹಾಗೂ ಮುಖ್ತಾಸ್ ಖಾನರು ಅಸೀರ್ ಗಢದಲ್ಲಿ ವಾಸಿಸುತ್ತಿದ್ದ ಷಿಹಾಬುದ್ದೀನನ ಪಕ್ಷವನ್ನು ಕೂಡಿಕೊಂಡು ಸುಲ್ತಾನನ ಮೇಲೆಯೇ ದಂಗೆ ಎದ್ದರು. ಇವರಿಬ್ಬರ ಸ್ಥಾನಕ್ಕೆ ಬಂದ ಮುಹಾಫಿಜ ಸಹ ಕೃತಘ್ನನಾದ; ಸುಲ್ತಾನನ ಹಿರಿಯ ಸೋದರನಾದ ಸಾಹಿಬ್ ಖಾನನ ಪಕ್ಷವನ್ನು ವಹಿಸಿದ. ಸಾಹಿಬ್ ಖಾನನ ವಿರುದ್ಧ ಹೋರಾಟದಲ್ಲಿ ಮಹಮೂದ ತೊಂದರೆಗಳಿಗೊಳಗಾಗಿ, ಉಜ್ಜಯಿನಿಗೆ ಓಡಿಹೋಗಿ, ಅಲ್ಲಿ ಹಿಂದುಗಳ ಸಹಾಯ ಪಡೆದ. ಮೇದಿನೀರಾಯನ ಸಹಾಯದಿಂದ ಸಾಹಿಬ್ ಖಾನನನ್ನು ಸೋಲಿಸಿ ರಾಜ್ಯವನ್ನು ಹಿಂದಕ್ಕೆ ಪಡೆದುಕೊಂಡ. ಮೇದಿನೀರಾಯ ಇವನ ಪ್ರಮುಖ ಸಲಹೆಗಾರನಾದ. ಆದರೆ ಕೆಲವು ವರ್ಷಗಳ ಬಳಿಕ ಈ ಹಿಂದೂ ಅಧಿಕಾರಿ ಸಹ ದರ್ಪಿಷ್ಟನಾಗಿ ವರ್ತಿಸಿ ರಾಜ್ಯದಲ್ಲಿ ಮಹಮ್ಮದೀಯರು ದಂಗೆ ಏಳಲು ಕಾರಣನಾದನೆಂದು ಹೇಳಲಾಗಿದೆ. ಇವನನ್ನು ಅಧಿಕಾರದಿಂದ ಕಿತ್ತುಹಾಕಿದಾಗ ಇವನು ಸುಲ್ತಾನನ ವಿರುದ್ಧ ನಿಂತು ಹಿಂದೂಗಳನ್ನು ಪ್ರಚೋದಿಸಿ ರಾಜ್ಯದ ಪರಿಸ್ಥಿತಿ ಉಲ್ಬಣಿಸುವಂತೆ ಮಾಡಿದ. ಹೆದರಿದ ಮಹಮೂದ, ಗುಜರಾತಿನ ಸುಲ್ತಾನ್ ಮುಜ಼ಾಫರನ ಆಶ್ರಯ ಪಡೆದು, ಅವನ ಸಹಾಯದಿಂದ ತನ್ನ ರಾಜ್ಯವನ್ನು ಮತ್ತೊಮ್ಮೆ ಪಡೆದುಕೊಂಡ.

ಸೋತ ಮೇದಿನಿರಾಯ ಚಿತ್ತೂರಿನ ಮಹಾರಾಣ ಸಾಂಗಾನ ಸಹಾಯದಿಂದ ಪುನಃ ಮಾಳವವನ್ನು ಮುತ್ತಿದ. ಸಾಂಗಾ ಮಹಮೂದನನ್ನು ಸೋಲಿಸಿ ಸೆರೆಹಿಡಿದನಾದರೂ, ಗಾಯಗೊಂಡ ಸುಲ್ತಾನನ ಆರೋಗ್ಯ ಸುಧಾರಿಸಿದ ಕೂಡಲೇ ಅವನನ್ನು ಮಾಂಡೂವಿಗೆ ಕಳಿಸಿಕೊಟ್ಟ. ಆದರೆ ಮಾಳವ ರಾಜ್ಯದ ಬಹಳ ಭಾಗಗಳು ಆ ವೇಳೆಗೆ ಸ್ವತಂತ್ರವಾಗಿದ್ದುವು. ಗುಜರಾತಿನಲ್ಲಿ ಮುಜ಼ಾಫರನ ಬಳಿಕ ಬಹಾದೂರ್ ಷಹ ಪಟ್ಟಕ್ಕೆ ಬಂದಾಗ ಅವನ ಪ್ರತಿಸ್ಪರ್ಧಿಯಾದ ಚಾಂದ್ ಖಾನನಿಗೆ ಮಾಳವದ ಮಹಮೂದ ಆಶ್ರಯ ಕೊಟ್ಟ ಕಾರಣ ಬಹಾದೂರ ಇವನ ಮೇಲೆ ಕದನ ಹೂಡಿ, ಇವನನ್ನು ಸೋಲಿಸಿ, ಬಂಧಿಸಿ ಚಂಪಾನೇರದ ಸೆರೆಮನೆಯಲ್ಲಿಡಲು ಕರೆದೊಯ್ಯುತ್ತಿದ್ದಾಗ, ತಪ್ಪಿಸಿಕೊಳ್ಳಲು ಯತ್ನಿಸಿದ. ಇವನನ್ನು ಕಾವಲುಗಾರರು ಕೊಂದರು (1531). ಇದರ ಪರಿಣಾಮವಾಗಿ ಮಾಳವ ಬಹಾದೂರ್ ಷಹನ ಪಾಲಾಯಿತು. ಮಾಳವದ ಖಿಲ್ಜಿ ಮನೆತನ ಕೊನೆಗೊಂಡಿತು. (ಜಿ.ಬಿ.ಆರ್.)

**ಖವಾಸ್ ಖಾನ್ :** ಬಿಜಾಪುರದ ಆದಿಲ್‌ಶಾಹಿವಂಶದ ದೊರೆಗಳ ಒಬ್ಬ ಸರದಾರನಾಗಿದ್ದ ದೌಲತ್ ಖಾನನ ಬಿರುದು. ಇಬ್ರಾಹಿಮನ ಮರಣಾನಂತರ ಮುಹಮ್ಮದ್ ಖಾನನಿಗೆ ರಾಜ್ಯ ದೊರಕಿಸಿಕೊಡಲು ಇವನು ಬಹುವಾಗಿ ಶ್ರಮಿಸಿದ. ಈ ಕಾರಣಕ್ಕಾಗಿ ಮುಹಮ್ಮದ್ ಖಾನ್ ಈತನಿಗೆ ಖವಾಸ್ ಖಾನ್ ಎಂಬ ಬಿರುದನ್ನು ನೀಡಿ ಇವನನ್ನು ತನ್ನ ಪ್ರಧಾನಿಯನ್ನಾಗಿ ನೇಮಿಸಿಕೊಂಡ. ಇದರಿಂದ ಇವನಿಗೆ ಅಹಂಕಾರ ಬಂತು. ತನ್ನ ಶಕ್ತಿ ಬೆಳೆಸಿಕೊಳ್ಳಲು ಯತ್ನಿಸಿ ಪ್ರತಿಸ್ಪರ್ಧಿಗಳನ್ನು ಅಡಗಿಸಿದ. ಈತನ ಅಹಂಕಾರವನ್ನು ನೋಡಿ ಮುಹಮ್ಮದ್ ಖಾನನಿಗೂ ಬೇಸರವಾಯಿತು. ಜನಾಭಿಪ್ರಾಯ ಚೆನ್ನಾಗಿಲ್ಲ ಎನ್ನುವುದನ್ನು ಕಂಡುಕೊಂಡ ಖವಾಸ್ ಖಾನ್ ಸಮಯ ಸಾಧಿಸಿ, ಬಿಜಾಪುರದ ಮೇಲೆ ದಂಡೆತ್ತಿ ಬರಲು ದೆಹಲಿಯ ಬಾದಶಹನಾದ ಶಹಾಜಹಾನನಿಗೆ ಆಮಂತ್ರಣ ಕೊಟ್ಟ.. ಮುಂದೆ ಔರಂಗ್‌ಜ಼ೇಬ್ ಶಿವಾಜಿಯ ವಿರುದ್ಧ ಹೋರಾಡಲು ಜಯಸಿಂಹನ ನೇತೃತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳಿಸಿದ. ಆ ಸಮಯಕ್ಕೆ ಖವಾಸ್ ಖಾನನೂ ಶಿವಾಜಿಯ ಮೇಲೆ ಏರಿಹೋದ. ಎರಡೂ ಸೈನ್ಯಗಳು ಪರಸ್ಪರ ಸಂಧಿಸುವ ಮುನ್ನವೇ ಶಿವಾಜಿಯ ಸೈನ್ಯಕ್ಕೂ ಖವಾಸ್ ಖಾನನ ಸೈನ್ಯಕ್ಕೂ ಒಂದು ದುರ್ಗಮ ಪ್ರದೇಶದಲ್ಲಿ ನಿರ್ಣಾಯಕವಾದ ಯುದ್ಧ ನಡೆಯಿತು. ಖವಾಸ್ ಖಾನ್ ಯುದ್ಧದಲ್ಲಿ ಗಾಯಗೊಂಡು ಸತ್ತನೆಂಬ ಸುಳ್ಳು ಸುದ್ದಿ ಹರಡಿತು. ಈ ನಡುವೆ ಶಿವಾಜಿ ಮತ್ತು ಜಯಸಿಂಹರ ಮಧ್ಯೆ ಒಪ್ಪಂದವಾಗಿ ಜಯಸಿಂಹ ಮುಂದುವರಿದು ಬಿಜಾಪುರದವರನ್ನು ಸುಲಿಗೆ ಮಾಡತೊಡಗಿದ.

ಖವಾಸ್ ಖಾನನ ವಿರೋಧದಿಂದಾಗಿ ಆದಿಲ್‌ಶಾಹಿಯ ರಾಜ್ಯಭಾರ ಅಸ್ತವ್ಯಸ್ತಗೊಂಡಿತ್ತು. ಇದನ್ನರಿತ ಔರಂಗ್‌ಜ಼ೇಬ್ ಆದಿಲ್‌ಶಾಹಿಯನ್ನು ಗೆದ್ದು ಬರಲು ತನ್ನ ಸೇನಾಪತಿಗಳಾದ ಬಹದ್ದೂರ್ ಶಹ ಮತ್ತು ದಿಲೇರ್‌ಖಾನರನ್ನು ಕಳುಹಿಸಿದ. 1675ರ ಅಕ್ಟೋಬರ್ 19ರಂದು ಬಹದ್ದೂರ್ ಶಹನನ್ನು ಖವಾಸ್ ಖಾನ್ ಭೀಮಾ ನದಿಯ ದಂಡೆಯ ಮೇಲೆ ಭೇಟಿ ಮಾಡಿದ. ಆದಿಲ್ ಶಾಹಿ ರಾಜ್ಯವನ್ನು ವೈಯಕ್ತಿಕ ಸ್ವಾರ್ಥಕ್ಕಾಗಿ ದಾನಮಾಡುವುದೇ ಈ ಭೇಟಿಯ ಉದ್ದೇಶವಾಗಿದೆ ಎಂಬ ಶಂಕೆಯಿಂದ ಖವಾಸ್ ಖಾನನ ವಿರೋಧಿಯಾದ ಬಹಲೋಲ್‌ಖಾನ್ ಆತನನ್ನು ಬಂಕಾಪುರದಲ್ಲಿ ಕೈದುಮಾಡಿಟ್ಟು, ಆಡಳಿತದ ಹೊಣೆಯನ್ನು ತಾನೇ ಕೈಯಲ್ಲಿ ತೆಗೆದುಕೊಂಡ. ಮುಹಮ್ಮದ್ ಖಾನನ ಆಜ್ಞೆಯ ಮೇರೆಗೆ ಖವಾಸ್ ಖಾನನನ್ನು 1676ರ ಜನವರಿ 20ರಂದು ಆತನ ವಾಡೆಯಲ್ಲೇ ಕೊಲೆ ಮಾಡಲಾಯಿತು. *

**ಖಾಂಡಲೈಟ್ :** ದಕ್ಷಿಣ ಭಾರತದ ಪೂರ್ವ ಘಟ್ಟಗಳ ಶ್ರೇಣಿಯಲ್ಲಿ ಕಂಡು ಬರುವ ಮುಖ್ಯ ಶಿಲಾ ವರ್ಗ. ಮೊತ್ತಮೊದಲಿಗೆ ಇದನ್ನು ಟಿ.ಎಲ್.ವಾಕರ್ ಎಂಬ ಭೂ ವಿಜ್ಞಾನಿ ಒರಿಸ್ಸ ರಾಜ್ಯದ ಗುಡ್ಡಗಾಡುಗಳಲ್ಲಿ ಪತ್ತೆ ಮಾಡಿದ. ಆ ಪ್ರದೇಶದ ಖಾಂಡ್ ಗುಂಪಿನ ಆದಿವಾಸಿಗಳ ಹೆಸರನ್ನು ಅನುಸರಿಸಿ ಈ ಶಿಲೆಗಳಿಗೆ ಖಾಂಡಲೈಟ್ ಎಂದು ಹೆಸರಿಟ್ಟ. ಪೂರ್ವ ಕರಾವಳಿಯ ಉದ್ದಕ್ಕೂ ಈ ಗುಂಪಿನ ಶಿಲೆಗಳು ಸಣ್ಣ ಸಣ್ಣ ಗುಡ್ಡ ಬೆಟ್ಟಗಳೋಪಾದಿಯಲ್ಲಿ ಕಂಡುಬರುತ್ತವೆ. ಕೇರಳ ಮತ್ತು ಶ್ರೀ ಲಂಕಾದ್ವೀಪದವರೆಗೂ ಈ ಶಿಲಾಶ್ರೇಣಿ ಹರಡಿದೆ. ತಮಿಳುನಾಡಿನ ಕೊಯಮತ್ತೂರು, ಮಧ್ಯಪ್ರದೇಶ ಮತ್ತು ಮ್ಯಾನ್ಮಾರ್‌ಗಳಲ್ಲೂ ಖಾಂಡಲೈಟುಗಳನ್ನು ಗುರುತಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸಹ ಇದನ್ನೇ ಬಲುಮಟ್ಟಿಗೆ ಹೋಲುವ ಹಲವು ಶಿಲೆಗಳಿವೆ.

ಖಾಂಡಲೈಟ್ ಮುಖ್ಯವಾಗಿ ಗಾರ್ನೆಟ್ ಮತ್ತು ಸಿಲಿಮನೈಟ್ ಖನಿಜಗಳಿಂದ ಉಂಟಾದ ರೂಪಾಂತರ ವರ್ಗದ ಪದರುಶಿಲೆ. ಗ್ರಾಫೈಟ್ ವಿವಿಧ ಪರಿಮಾಣಗಳಲ್ಲೂ ಕ್ವಾರ್ಟ್ಸ್ ಮತ್ತು ಫೆಲ್ಸ್‌ಪಾರುಗಳು ಅಲ್ಪಸ್ವಲ್ಪ ಪರಿಮಾಣದಲ್ಲೂ ಈ ಶಿಲೆಯಲ್ಲಿವೆ. ಇದರ ಬಣ್ಣ ಬೂದು ಅಥವಾ ಕೆಂಪು ಛಾಯೆ. ಸಾಮಾನ್ಯವಾಗಿ ಪದರು ರಚನೆ ಅಥವಾ ಗೀರು ರಚನೆ. ಉಷ್ಣಹವೆಯ ಮಳೆ ಬೀಳುವ ಪ್ರದೇಶಗಳಲ್ಲಿ ಶಿಲೆ ಬಹು ಸುಲಭವಾಗಿ ಶಿಥಿಲಗೊಂಡು, ಮುಟ್ಟಿದರೆ ಪುಡಿ ಪುಡಿಯಾಗಿ ಉದುರಿಹೋಗುತ್ತವೆ. ಲ್ಯಾಟರೈಟ್ ಮತ್ತು ಬಾಕ್ಸೈಟ್ ಎಂಬ ವಿಶೇಷ ನಿಕ್ಷೇಪಗಳೂ ಉಂಟಾಗಬಹುದು. ಹಾಗಿಲ್ಲದಲ್ಲಿ ಶಿಲೆ ತಕ್ಕಷ್ಟು ಗಡುಸಾಗಿದ್ದು ಕೆಂಪುಬಣ್ಣದ ಗಾರ್ನೆಟಿನ ವಿವಿಧ ಗಾತ್ರದ ನೂರಾರು ಹರಳುಗಳಿಂದಲೂ ಕಣಗಳಿಂದಲೂ ಕೂಡಿರುತ್ತದೆ.

ಆಂಧ್ರ ಪ್ರದೇಶ, ಕೇರಳ ಮತ್ತು ಒರಿಸ್ಸ ರಾಜ್ಯದ ಅನೇಕ ಪ್ರಸಿದ್ಧ ದೇವಾಲಯಗಳನ್ನು ಖಾಂಡಲೈಟಿನಿಂದ ನಿರ್ಮಿಸಲಾಗಿದೆ. ಹಲವು ಗುಹಾಂತರ್ದೇವಾಲಯಗಳನ್ನು ಶಿಲೆಯಿಂದ ಕಡೆಯಲಾಗಿದೆ. ಒರಿಸ್ಸದ ಇತಿಹಾಸ ಪ್ರಸಿದ್ಧ ಕೋಣಾರ್ಕ ಸೂರ್ಯ ದೇವಾಲಯದ ಹಲವಾರು ಸುಂದರ ವಿಗ್ರಹಗಳೂ ಈ ಶಿಲೆಯವು. ಈ ರಾಜ್ಯಗಳಲ್ಲಿ ಇಂದಿಗೂ ಖಾಂಡಲೈಟ್ ಕಟ್ಟಡದ ಕಲ್ಲಾಗಿ ಬಳಕೆಯಲ್ಲಿ ಉಂಟು. ಕೇರಳ ಮತ್ತು ಶ್ರೀ ಲಂಕಾ ದ್ವೀಪದ ಖಾಂಡಲೈಟುಗಳು ಗ್ರಾಫೈಟ್ (ಬರೆಯುವ ಸೀಸ) ಅದುರಿಗೆ ಮುಖ್ಯ ತವರು.

ಲೂಯಿ ಫರ್ಮರ್ ಎಂಬ ವಿಜ್ಞಾನಿಯ ಅಭಿಪ್ರಾಯದಂತೆ ಈ ಶಿಲೆಗಳಿಗೆ ಸಂಬಂಧಿಸಿದ ರೂಪಾಂತರ ಕ್ರಿಯೆ ಹೆಚ್ಚಿನ ಆಳದಲ್ಲಿ ನಡೆದರೂ ಇವುಗಳಿದ್ದ ಭೂ ಭಾಗ, ಎಂದರೆ ಆಂಧ್ರಪ್ರದೇಶದ ಪೂರ್ವ ಕರಾವಳಿ, ಕ್ರಮೇಣ ಮೇಲಕ್ಕೆ ಒಯ್ಯಲ್ಪಟ್ಟು ಈಗಿನ ಪೂರ್ವ ಘಟ್ಟಗಳಾಗಿವೆ. (ಬಿ.ವಿ.ಜಿ.)

**ಖಾಂಡವವನ :** ಇಂದ್ರನ ಉದ್ಯಾನಗಳಲ್ಲೊಂದು. ಸರಸ್ವತೀ ದೃಷದ್ವತೀ ನದಿಗಳ ಪೂರ್ವಭಾಗದಲ್ಲಿತ್ತು ಎನ್ನಲಾಗಿದೆ. ಒಮ್ಮೆ ವರುಣಲೋಕದಲ್ಲಿ 12 ವರ್ಷ ಸತತವಾಗಿ ಯಜ್ಞ ನಡೆದುದರಿಂದ ಜೀರ್ಣಶಕ್ತಿ ಕುಂದಿ ನರಳತೊಡಗಿದ ಅಗ್ನಿಯನ್ನು ನೋಡಿದ ದೇವವೈದ್ಯರಾದ ಅಶ್ವಿನೀದೇವತೆಗಳು ಇಂದ್ರನ ಖಾಂಡವವನದಲ್ಲಿ ಅಜೀರ್ಣವನ್ನು ಹೋಗಲಾಡಿಸುವ ಮೂಲಿಕೆಗಳಿವೆಯೆಂದೂ ಅವನ್ನು ಸೇವಿಸಿದರೆ ಮಾಂದ್ಯ ಹೋಗುವುದೆಂದೂ ಅಗ್ನಿಗೆ ತಿಳಿಸಿದರು. ಖಾಂಡವವನ ದಹನದ ಮುನ್ನ ಅಗ್ನಿ ಬ್ರಾಹ್ಮಣವೇಷದಲ್ಲಿ ಕೃಷ್ಣಾರ್ಜುನರಲ್ಲಿಗೆ ಹೋಗಿ ಅವರಿಂದ ಅಭಯ ಪಡೆದು ಅನಂತರ ಖಾಂಡವವನವನ್ನು ಸುಡತೊಡಗಿದ. ಇದರಿಂದ ಕುಪಿತಗೊಂಡ ಇಂದ್ರ ಯುದ್ಧಕ್ಕೆ ಬಂದ. ಅರ್ಜುನ ಇಂದ್ರನನ್ನು ಸೋಲಿಸಿದ. ಅಗ್ನಿಯನ್ನು ತಣ್ಣಗಾಗಿಸಲು ಇಂದ್ರ ಮಳೆ ಸುರಿಸಿದ. ಅರ್ಜುನ ಕೂಡಲೆ ಶರಪಂಜರ ನಿರ್ಮಿಸಿ ಮಳೆ ಅಗ್ನಿಯ ಮೇಲೆ ಬೀಳದಂತೆ ಮಾಡಿ ಅಗ್ನಿಯ ದಹನ ಕಾರ್ಯವನ್ನು ನಿರ್ವಿಘ್ನಗೊಳಿಸಿದ. ಅಲ್ಲಿಯೇ ವಾಸವಾಗಿದ್ದ ರಾಕ್ಷಸರ ಶಿಲ್ಪಿ ಮಯ ಅರ್ಜುನನನ್ನು ಮೊರೆಹೊಕ್ಕ. ಮುಂದೆ, ಖಾಂಡವವನವಿದ್ದ ಕಡೆ ವಿಶ್ವಕರ್ಮ ಪಾಂಡವರಿಗಾಗಿ ಇಂದ್ರಪ್ರಸ್ಥವನ್ನು ನಿರ್ಮಿಸಿದನಷ್ಟೆ. ಅಲ್ಲಿ ರಾಜಸೂಯ ಯಾಗವನ್ನು ನಡೆಸಲು ಅನುಕೂಲವಾಗುವಂಥ ಸಭಾಭವನವೊಂದನ್ನು ಮಯ ತನ್ನ ರಾಕ್ಷಸಶಿಲ್ಪಿಗಳೊಂದಿಗೆ ನಿರ್ಮಿಸಿಕೊಟ್ಟ. ಈ ವೃತ್ತಾಂತ ಭಾರತದಲ್ಲಿ ಬಂದಿದೆ. *

**ಖಾಂಡೇಕರ್, ವಿಷ್ಣು ಸಖಾರಾಮ :** 1898 ಮಹಾರಾಷ್ಟ್ರದ ಹಿರಿಯ ಸಾಹಿತಿ, ಕಾದಂಬರಿಕಾರ, ಕಥೆಗಾರ ಮತ್ತು ಪ್ರಬಂಧಕಾರ. ಹುಟ್ಟಿದ್ದು ಸಾಂಗಲಿಯಲ್ಲಿ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಲ್ಲಿಯೇ ಪಡೆದು ಪುಣೆಯ ಫರ್ಗ್ಯುಸನ್ ಕಾಲೇಜನ್ನು ಸೇರಿದರಾದರೂ ಮನೆತನದಲ್ಲಿಯ ತೊಂದರೆಗಳಿಂದಾಗಿ ವಿದ್ಯಾಭ್ಯಾಸವನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು. ಮುಂದೆ ತಮ್ಮ ಸಾಹಿತ್ಯ ಜೀವನದ ಮೇಲೆ ಪ್ರಭಾವ ಬೀರಿದ ಮಹಾರಾಷ್ಟ್ರದ ಹಿರಿಯ ನಾಟಕಕಾರ ಗಡಕರಿಯವರ ಪರಿಚಯ ಇವರಿಗೆ ಕಾಲೇಜಿನಲ್ಲಿರುವಾಗಲೇ ಲಭ್ಯವಾಯಿತು. ಗಾಂಧೀಜಿಯವರ ಗ್ರಾಮಸೇವೆಯ ಆದರ್ಶವನ್ನು ತುಂಬಿಕೊಂಡಿದ್ದ ಇವರು 1920ರ ಸುಮಾರಿಗೆ ಸಾವಂತವಾಡಿಯ ಹತ್ತಿರದಲ್ಲಿಯ ಶಿರೋಡೆ ಎಂಬಲ್ಲಿ ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕರಾಗಿ ಹದಿನೆಂಟು ವರ್ಷ ದುಡಿದರು.

ಅನಂತರ ಚಲನಚಿತ್ರಗಳಿಗೆ ಕಥೆ ಬರೆಯುವುದಕ್ಕೆಂದು ಕೊಲ್ಹಾಪುರಕ್ಕೆ ಬಂದು ಅಲ್ಲಿಯೇ ನೆಲೆಸಿದರು.

ಕವಿತೆ, ವಿಮರ್ಶೆ, ಕಥೆಗಳನ್ನು ಬರೆಯಲಾರಂಭಿಸಿದ ಖಾಂಡೇಕರರು ಮೊದಲ ಕಾದಂಬರಿ ಹೃದಯಾಚೀ ಹಾಕವನ್ನು 1930ರಲ್ಲಿ ಪ್ರಕಟಿಸಿದರು. ಅಂದಿನಿಂದ ಇಂದಿನವರೆಗೆ ಇವರು ಹದಿನೈದು ಕಾದಂಬರಿಗಳನ್ನೂ ಮೂವತ್ತು ಕಥಾಸಂಗ್ರಹಗಳನ್ನೂ ಹನ್ನೊಂದು ಪ್ರಬಂಧ ಸಂಗ್ರಹಗಳನ್ನೂ ಪ್ರಕಟಿಸಿದ್ದಾರೆ. ನಿಸರ್ಗದಲ್ಲಿಯ ಬೇರೆ ಬೇರೆವಸ್ತುಗಳನ್ನು ಸಾಂಕೇತಿಕವಾಗಿ ದರ್ಶಿಸಿ ಅವನ್ನೇ ಪಾತ್ರಗಳಂತೆ ಬಳಸುವ ರೂಪಕಕಥೆಯನ್ನು ಮರಾಠಿಯಲ್ಲಿ ಇವರೇ ಮೊದಲು ಮಾಡಿದರು. ಮಾನವಜೀವನದ ಸಮಸ್ಯೆಗಳ ಮೇಲೆ ಬೆಳಕು ಬೀರುವ ರೀತಿಯಲ್ಲಿ ಈ ವಿಧಾನವನ್ನು ಇವರು ಬಳಸಿರುವ ಬಗೆ ವಿಶಿಷ್ಟವಾದುದಾಗಿದೆ. ದೋನ ಧ್ರುವ, ಉಲ್ಕಾ, ಕ್ರೌಂಚವಧ, ಅಶ್ರೂ, ಯಯಾತಿ, ಅಮೃತ ವೇಲ ಎಂಬವು ಇವರ ಸುಪ್ರಸಿದ್ಧ ಕಾದಂಬರಿಗಳು. ಇವಲ್ಲದೆ ಮಹಾರಾಷ್ಟ್ರದ ಹಿರಿಯ ಲೇಖಕರಾದ ಅಗರ್ ಕರ್, ಗಡಕರಿ, ಕೇಶವಸುತ ಮುಂತಾದವರ ಬಗ್ಗೆ ವಿಮರ್ಶಾತ್ಮಕ ಗ್ರಂಥಗಳನ್ನೂ ಮಹಾರಾಷ್ಟ್ರದ ನಾಟಕಪರಂಪರೆಯನ್ನು ಕುರಿತಾದ ಸಂಶೋಧನಾತ್ಮಕ ಇತಿಹಾಸ ಗ್ರಂಥವಾದ ಮರಾಠೀಚಾ ನಾಟ್ಯಸಂಸಾರ ಎಂಬುದನ್ನೂ ಬರೆದಿದ್ದಾರೆ.

ಮರಾಠಿಯ ಅಗ್ರಗಣ್ಯ ಲೇಖಕರೆಂದು ಮಹಾರಾಷ್ಟ್ರದ ಜನತೆ ಇವರನ್ನು ಅನೇಕ ವಿಧದಲ್ಲಿ ಗೌರವಿಸಿದೆ. ಅನೇಕ ಪ್ರಾಂತಿಯ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಗಳೊಂದಿಗೆ ಸೊಲ್ಹಾಪುರದಲ್ಲಿ ಜರುಗಿದ ಅಖಿಲ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಇವರು ಬರೆದ ಛಾಯಾ ಎಂಬ ಚಿತ್ರಕಥೆಗೆ ಸುವರ್ಣಪದಕವೂ (1936) ಯಯಾತಿ ಕಾದಂಬರಿಗೆ ಕೇಂದ್ರಸಾಹಿತ್ಯ ಅಕಾಡಮಿಯ ಪುರಸ್ಕಾರವೂ (1969) ದೊರೆತಿವೆ. ಇವರಿಗೆ ಪದ್ಮಭೂಷಣ ಪ್ರಶಸ್ತಿ 1968ರಲ್ಲಿ ಬಂತು. ಮರುವರ್ಷ ಇವರು ಸಾಹಿತ್ಯ ಅಕಾಡಮಿಯ ಫೆಲೋ ಆದರು. ಲೇಖಕರಾಗಿ ಇವರ ಕೀರ್ತಿ ಮಹಾರಾಷ್ಟ್ರದ ಹೊರಗಡೆಯಲ್ಲಿಯೂ ಹಬ್ಬಿದೆ. ಇವರ ಹೃದಯಾಚೀ ಹಾಕ, ಕಾಂಚನ ಮೃಗ, ದೋನ ಧ್ರುವ, ಯಯಾತಿ ಕಾದಂಬರಿಗಳು ಕನ್ನಡಕ್ಕೆ ಅನುವಾದವಾಗಿವೆ.

ಸಾಹಿತಿಗಳಾಗಿ ಹೇಗೋ ಹಾಗೆ ಖಾಂಡೇಕರರು ಮಹಾರಾಷ್ಟ್ರದ ಸೂಕ್ಷ್ಮಗ್ರಾಹಿ ಸಮೀಕ್ಷಕರೆಂದೂ ಅತ್ಯಂತ ಚಿಂತನಪರ ಬುದ್ಧಿಜೀವಿಗಳೆಂದೂ ಹೆಸರು ಗಳಿಸಿದ್ದಾರೆ; ಮರಾಠೀ ಭಾಷೆಯ ಬಳಕೆಯಲ್ಲಿ ಅಸಾಧಾರಣ ಪ್ರಭುತ್ವವನ್ನು ಪಡೆದು ತಮ್ಮ ಬರೆಹಗಳುದ್ದಕ್ಕೂ ಅದನ್ನು ಮೆರೆದವರಲ್ಲಿ ಅಗ್ರಗಣ್ಯರೆಂದೆನಿಸಿಕೊಂಡಿದ್ದಾರೆ. ಖಾಂಡೇಕರರು ಕೊಲ್ಹಟ್‌ಕರರ ಉತ್ತರಾಧಿಕಾರಿ ಎಂದು ಬಹು ಹಿಂದೆಯೇ ಮುನ್ನುಡಿದ ಗಡಕರಿಯವರ ಮಾತನ್ನು ಇವರು ತಮ್ಮ ವಾಕ್ ಚಮತ್ಕೃತಿಯಿಂದಲೂ ಕಲ್ಪನಾವೈಭವದಿಂದಲೂ ಪ್ರಗತಿಪರವಾದ ವಿಚಾರ ಧೋರಣೆಯಿಂದಲೂ ನಿಜವಾಗಿಸಿದ್ದಾರೆ. ಕೊಲ್ಹಟ್‌ಕರರ ಸಮಾಜಸುಧಾರಣೆಯ ದೀಕ್ಷೆ ಇವರನ್ನು ವಿದ್ಯಾವಿತರಣೆಯ ಕೆಲಸದತ್ತ ಕರೆದೊಯ್ದಿತು. ಗ್ರಾಮಾಂತರಜೀವನದಲ್ಲಿಯ ಕಡುಬಡತನವನ್ನು, ಅದರ ನೂರಾರು ಸಮಸ್ಯೆಗಳನ್ನು, ಹತ್ತಿರದಿಂದ ನೋಡಿ ಅನುಭವಿಸಿದ ಇವರ ಬರೆಹಗಳಲ್ಲಿ ಬೆಳಕುಕತ್ತಲೆ, ಸುಖದುಃಖ, ಸಾಮಾಜಿಕ ಜೀವನದಲ್ಲಿಯ ಮೇಲುಕೀಳು–ಇಂಥ ದ್ವಂದ್ವ ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ ಪರಸ್ಪರ ವಿರುದ್ಧವಾದ ಎರಡು ಧ್ರುವಗಳ ನಡುವೆ ತೊಳಲಾಡುವ ಸಾಮಾನ್ಯ ಸಾಮಾಜಿಕನ ಜೀವನದಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಗಳನ್ನು ಕುರಿತೇ ಇವರು ತಮ್ಮ ಕಥೆ ಕಾದಂಬರಿಗಳನ್ನು ಹೆಣೆದಿದ್ದಾರೆ. ಮಧ್ಯಮ ವರ್ಗದವರ ಸುಖದುಃಖಗಳನ್ನು ಚಿತ್ರಿಸುವ ಇವರ ಕಾದಂಬರಿಗಳ ರಚನಾವಿಧಾನ ಕೆಲವೆಡೆ, ಕೆಲವುಮಟ್ಟಿಗೆ ಕೃತಕ ಎನಿಸುತ್ತದೆ. ಏಕೆಂದರೆ ಒಂದು ಸಮಸ್ಯೆಯನ್ನು ಸ್ಫುಟವಾಗಿಸುವುದಕ್ಕೆಂದೇ ಪಾತ್ರ ಸನ್ನಿವೇಶಗಳ ಯೋಜನೆಯನ್ನು ಅನೇಕ ಕಡೆ ಇವರು ಮಾಡಿಕೊಂಡುಬಿಡುತ್ತಾರೆ. ಆದರೆ ಇವರು ಎತ್ತಿಕೊಳ್ಳುವ ಸಮಸ್ಯೆಗಳು ಜೀವನದ ಮೂಲಭೂತ ಪ್ರಶ್ನೆಗಳಾಗಿರುವುದರಿಂದಲೂ ಅವನ್ನಿವರು ವೈವಿಧ್ಯಪೂರ್ಣವಾದ ಕಲ್ಪಕತೆಯಿಂದ ಚಿತ್ರಿಸಿರುವುದರಿಂದಲೂ ಕಥೆಗಳ ಕೃತ್ರಿಮತೆಯನ್ನು ಓದುಗ ಗಮನಿಸುವುದೇ ಇಲ್ಲ. ಜೀವನದ ಸಮಸ್ಯೆಗಳನ್ನು ಚಿತ್ರಿಸುವುದರ ಜೊತೆಗೆ ಕಾದಂಬರಿಯ ರಚನೆಯಲ್ಲಿ ಹೊಸ ತಂತ್ರವಿಧಾನಗಳನ್ನು ಬಳಸುವುದರಲ್ಲಿಯೂ ಇವರು ಸಿದ್ಧಹಸ್ತರೆನಿಸಿಕೊಂಡಿದ್ದಾರೆ. ಯಯಾತಿಯಂಥ ಪೌರಾಣಿಕ ಪಾತ್ರಗಳನ್ನು ಬಳಸಿಕೊಂಡು ಆಯಾಯ ಪಾತ್ರಗಳಿಂದಲೇ ಅನುಭವಗಳನ್ನು ಹೇಳಿಸುವ ಇವರ ಹೊಸ ಕಥನವಿಧಾನ ಸಾರ್ವತ್ರಿಕವಾದ ಮೆಚ್ಚುಗೆಯನ್ನು ಗಳಿಸಿದೆ.

ಖಾಂಡೇಕರರ ಛಾಯಾ, ಸುಖಾಚಾ ಶೋಧ, ಅಮೃತ, ಮಾಝುಬಾಳ್, ದೇವತಾ ಎಂಬ ಕಥೆಗಳನ್ನು ಚಲನಚಿತ್ರಕ್ಕೆ ಅಳವಡಿಸಿಕೊಳ್ಳಲಾಗಿದೆ.

ಖಾಂಡೇಕರರನ್ನು ಕಾದಂಬರಿಕಾರರೆನ್ನುವುದಕ್ಕಿಂತ ಪ್ರಧಾನವಾಗಿ ಪ್ರಬಂಧಕಾರರೆಂದು ಹೇಳುವವರೂ ಇದ್ದಾರೆ. ಸಮಕಾಲೀನ ಜೀವನವನ್ನು ಕುರಿತಾದ ಆಳವಾದ ಚಿಂತನೆಯ ಜೊತೆಗೆ ಮಿಂಚಿನಂತೆ ಕೆಲಸಮಾಡುವ ಇವರ ಕಲ್ಪಕಪ್ರತಿಭೆ ಮತ್ತು ವಾಗ್ವಿಲಾಸ ಮೈಗೂಡಿ ಅಸಾಧಾರಣ ಸೊಗಸಿನ ಅನುಭವವನ್ನು ಕೊಡಬಲ್ಲ ಇವರ ನೂರಾರು ಪ್ರಬಂಧಗಳು ಆ ಪ್ರಕಾರದಲ್ಲಿಯ ಶ್ರೇಷ್ಠ ಸಾಧನಗಳಾಗಿವೆ. ಇವರ ವಿಮರ್ಶನ ಲೇಖನಗಳಲ್ಲಿ ಸೂಕ್ಷ್ಮವಾದ ಬುದ್ಧಿ ಕೆಲಸಮಾಡುತ್ತಿರುವ ಹಾಗೆ ಇವರು ಬರೆದ ಅನೇಕ ಚಿತ್ರಕಥೆಗಳ ಹಿಂದೆ ಕಲ್ಪನಾವಿಲಾಸ ಮತ್ತು ಆಳವಾದ ಜೀವನಪ್ರಜ್ಞೆ ಕೆಲಸ ಮಾಡುತ್ತವೆ. ಅರ್ಧಶತಮಾನದುದ್ದಕ್ಕೂ ಸಾಗಿದ ಇವರ ವೈವಿಧ್ಯಪೂರ್ಣವಾದ ಬರವಣಿಗೆ ಸಮಕಾಲೀನ ಮರಾಠೀ ಸಾಹಿತ್ಯಪ್ರಪಂಚದಲ್ಲಿವರಿಗೆ ಎತ್ತರದ ಸ್ಥಾನವನ್ನು ಒದಗಿಸಿದೆ. ಇವರು ಹಿಂದಿನ ತಲೆಮಾರಿನವರಾದರೂ ಬದಲಾಗುತ್ತಿದ್ದ ಪರಿಸರಕ್ಕೆ ಒಂದು ನಿಶ್ಚಿತವಾದ ನಿಲುವಿನಿಂದ ಜೀವಂತ ಪ್ರತಿಕ್ರಿಯೆಯನ್ನು ತೋರ್ಪಡಿಸುತ್ತಿರುವ ಮಹಾರಾಷ್ಟ್ರದ ಶ್ರೇಷ್ಠ ಲೇಖಕರು. (ವಿ.ಎಂ.ಐ.)

**ಖಾಂಡ್ವಾ :** ಮಧ್ಯಪ್ರದೇಶ ರಾಜ್ಯದ ಪೂರ್ವ ನೇಮಾಡ ಜಿಲ್ಲೆಯ ಮುಖ್ಯಪಟ್ಟಣ. ಅದೇ ಹೆಸರಿನ ತಹಸೀಲ್. ಉ.ಅ. 29° 50 ಮತ್ತು ಪೂ.ರೇ. 76° 24'ದಲ್ಲಿ ನರ್ಮದಾ ನದೀಕಣಿವೆಯ ಮೇಲೆ, ಸಮುದ್ರಮಟ್ಟದಿಂದ 309 ಮೀ. ಎತ್ತರದಲ್ಲಿದೆ. ಇಲ್ಲಿಯದು ಉಷ್ಣ ವಾಯುಗುಣ. ಮಳೆ 40–45 ಸೆಂಮೀ.. ಭೂಮಿ ಫಲವತ್ತಾಗಿದೆ. ತಹಸೀಲಿನಲ್ಲಿ ಹತ್ತಿ ಅಲ್ಲದೆ ಕೆಲಮಟ್ಟಿಗೆ ಗೋದಿ ಮತ್ತು ಜೋಳ ಬೆಳೆಯುತ್ತಾರೆ. ಹತ್ತಿಯಿಂದ ಕಾಳು ತೆಗೆಯುವ ಮತ್ತು ಅದನ್ನು ಬೇಲುಗಳಾಗಿ ಕಟ್ಟುವ ಕಾರ್ಖಾನೆಗಳಿವೆ. ಖಾಂಡ್ವಾ ಹತ್ತಿಯ ಒಂದು ದೊಡ್ಡ ವ್ಯಾಪಾರಸ್ಥಳ. ಖಾಂಡ್ವಾದಲ್ಲಿ ಪಟ್ಟಣದ ಎಲ್ಲ ಅನುಕೂಲಗಳೂ ಉಂಟು. ಇದು ಒಂದು ರೈಲ್ವೆ ಸಂಧಿಸ್ಥಳ. ಮೋಟಾರು ರಸ್ತೆಗಳ ಕೇಂದ್ರ. ಜನಸಂಖ್ಯೆ 171976 (2001).

ಪ್ರಾಚೀನ ಕಾಲದಿಂದಲೂ ಖಾಂಡ್ವಾ ಮಹತ್ತ್ವದ ಸ್ಥಾನ ಪಡೆದಿದೆ. ಟಾಲೆಮಿ ಮತ್ತು ಆಲ್ ಬೆರೂನಿ ಇವರ ಬರೆಹಗಳಲ್ಲಿ ಈ ಊರಿನ ಉಲ್ಲೇಖವಿದೆ. ಇದು ಜೈನ ಧರ್ಮದ ಕೇಂದ್ರವಾದ್ದರಿಂದ ಇಲ್ಲಿ ಅನೇಕ ಜೈನಶಿಲ್ಪಗಳನ್ನು ಕಾಣಬಹುದು. 1802 ಇಲ್ಲಿ ಯಶವಂತರಾವ್ ಹೋಳ್ಕರ್ ಮತ್ತು 1858ರಲ್ಲಿ ತಾತ್ಯಾಟೋಪಿ ಇವರು ಈ ಊರನ್ನು ಲೂಟಿಮಾಡಿದ್ದರು. *

**ಖಾಂದೇಶ :** ಈಗಿನ ಮಹಾರಾಷ್ಟ್ರದ ಒಂದು ಭಾಗ. ದಖನಿನ ಉತ್ತರ ಭಾಗದಲ್ಲಿ ಹಬ್ಬಿದೆ. ಇದರಲ್ಲಿ ಎರಡು ಜಿಲ್ಲೆಗಳಿವೆ. ಖಾಂದೇಶದ ಉತ್ತರಕ್ಕೆ ಸಾತ್‌ಪುರಾ ಪರ್ವತ ಮತ್ತು ನರ್ಮದಾ ನದಿ, ಪೂರ್ವಕ್ಕೆ ವರ್ಹಾಡ ಮತ್ತು ನೇಮಾಡ ಜಿಲ್ಲೆಗಳು, ದಕ್ಷಿಣಕ್ಕೆ ಸಾತಮಾಲ, ಚಾಂಡೋರ ಮತ್ತು ಅಜಂತಾ ಗುಡ್ಡಗಳು, ಪಶ್ಚಿಮಕ್ಕೆ ಹಿಂದಣ ಬರೋಡ ಸಂಸ್ಥಾನ (ಮತ್ತು ರೇವಾಕಾಠಾ ಜಹಗೀರು) ಪ್ರದೇಶ, ನೈರುತ್ಯಕ್ಕೆ ನಾಸಿಕ ಜಿಲ್ಲೆ ಇವೆ. ತಪತಿ ಇಲ್ಲಿಯ ದೊಡ್ಡ ನದಿ. ನೆಲ ಫಲವತ್ತಾಗಿದೆ. ಇಲ್ಲಿ ವಾಯುಗುಣ ಏಕರೀತಿಯದಾಗಿಲ್ಲ. ಮಳೆಯ ಸರಾಸರಿ 40–90 ಸೆಂಮೀ. ಜೋಳ ಮತ್ತು ಹತ್ತಿ ಇಲ್ಲಿಯ ಮುಖ್ಯ ಬೆಳೆಗಳು. ಅನೇಕ ಊರುಗಳಲ್ಲಿ ಹತ್ತಿ ಹಿಂಜುವ ಗಿರಣಿಗಳಿವೆ. ಇದು ಇತರ ಪ್ರದೇಶಗಳಿಗೆ ರಫ್ತಾಗುತ್ತದೆ. ಕಾಡುಗಳಿಂದ ಬರುವ ಉತ್ಪನ್ನವೂ ಹೆಚ್ಚಾಗಿದೆ. ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಕಾಡು ತುಂಬಿದ ಗುಡ್ಡಗಳಿವೆ. ಕಾಡಿನಲ್ಲಿ ಭಿಲ್ಲರ ವಸತಿ ಹೆಚ್ಚು. ಇದು ಅನೇಕ ಹಿಂಸ್ರ ಪಶುಗಳಿಗೆ ಆಶ್ರಯಸ್ಥಾನ. ಹಿಂದಕ್ಕೆ ಇದು ಆನೆಗಳ ವಾಸ ಸ್ಥಾನವೂ ಆಗಿತ್ತು.

1906ರಲ್ಲಿ ಖಾಂದೇಶವನ್ನು ಪೂರ್ವ ಮತ್ತು ಪಶ್ಚಿಮ ಖಾಂದೇಶಗಳೆಂಬ ಎರಡು ಜಿಲ್ಲೆಗಳಾಗಿ ವಿಭಾಗ ಮಾಡಲಾಯಿತು. ಈಗ ಇವು ಜಳಗಾಂವ ಮತ್ತು ಧುಳೆ ಜಿಲ್ಲೆಗಳೆನಿಸಿಕೊಂಡಿವೆ. ಅಮಳನೇರ್, ಭೂಸಾವಳ್, ಚಾಳಿಸಗಾಂವ್, ಏರಂಡೋಲ, ನಂದುರಬಾರ್ ಮುಂತಾದ ನಗರಗಳು ಖಾಂದೇಶದಲ್ಲಿವೆ.

ಇಲ್ಲಿ ಶೇ. 90ರಷ್ಟು ಜನ ಹಿಂದುಗಳು. ವ್ಯಾಪಾರದಲ್ಲಿ ಮಾರವಾಡಿ ಮತ್ತು ಗುಜರಾತಿಗಳಿದ್ದಾರೆ. ಕ್ರೈಸ್ತ ಮಿಷನರಿಗಳಿವೆ. ತಪತಿ ನದಿಯ ಉತ್ತರಕ್ಕಿರುವ ವ್ಯಾಪಾರಿಗಳ ಮತ್ತು ರೈತರ ಭಾಷೆ ಗುಜರಾತಿ. ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಮರಾಠಿ ಭಾಷೆ ರೂಢಿಯಲ್ಲಿದೆ. ಖಾಂದೇಶೀ ಇಲ್ಲವೆ ಅಹಿರಾಣಿ ಎಂಬ ವಿಶಿಷ್ಟ ಉಪ ಭಾಷೆ ಕೆಲವು ಕಡೆ ಪ್ರಚಾರದಲ್ಲಿದೆ. ಪ್ರಾಥಮಿಕದಿಂದ ಕಾಲೇಜ್ ಮಟ್ಟದವರೆಗೆ ಶಿಕ್ಷಣ ಸೌಲಭ್ಯವುಂಟು.

ಹಿಂದೆ ಖಾಂದೇಶವನ್ನು ಕನ್ಹ (ಕೃಷ್ಣ) ದೇಶ ಎಂದು ಕರೆಯುತ್ತಿದ್ದರೆನ್ನಲಾಗಿದೆ. ಪುರಾಣಗಳಲ್ಲಿ ಬರುವ ಆಶ್ಮಕ ದೇಶವೇ ಖಾಂದೇಶ ಎಂದು ಹೆಸರಾಗಿದೆಯೆಂಬುದು ಅನೇಕ ಸಂಶೋಧಕರ ಅಭಿಪ್ರಾಯ. ಖಾಂದೇಶದ ತೋರಣಮಾಳ ಮತ್ತು ಅಶೀರಗಡಗಳಲ್ಲಿ ಅಶ್ವತ್ಥಾಮ ಇದ್ದನೆಂದು ಐತಿಹ್ಯವುಂಟು. ಪ್ರ.ಶ.ಪೂ.ಸು. 250ರಲ್ಲಿ ರಜಪೂತರು ಖಾಂದೇಶವನ್ನು ಆಳುತ್ತಿದ್ದರು. ಎರಡು ಮೂರು ಶತಕಗಳ ಅನಂತರ ಈ ಪ್ರದೇಶ ಆಂಧ್ರರ ವಶದಲ್ಲಿತ್ತು. ಅನಂತರ ಕ್ಷತ್ರಪ ಮತ್ತು ಚಾಲುಕ್ಯ ರಾಜರು ಇದನ್ನಾಳಿದರು. ಪ್ರ.ಶ. 1295ರಲ್ಲಿ ಖಾಂದೇಶದ ಮೇಲೆ ಅಲ್ಲಾವುದ್ದೀನ್ ಖಿಲ್ಜಿ ದಂಡೆತ್ತಿ ಬಂದು ಇದನ್ನು ವಶಪಡಿಸಿಕೊಂಡ. 1760ರಲ್ಲಿ ಮರಾಠರು ಅಶೀರಗಡವನ್ನು ಗೆದ್ದುಕೊಳ್ಳುವವರೆಗೆ ಈ ಭಾಗ ಮುಸಲ್ಮಾನರ ವಶದಲ್ಲಿಯೇ ಇತ್ತು. 1599ರಲ್ಲಿ ಅಕ್ಬರ್ ಖಾಂದೇಶವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಮುಂದೆ ಪ್ರ.ಶ. 1720ರಲ್ಲಿ ನಿಜಾಮ ಇದನ್ನು ತನ್ನದನ್ನಾಗಿ ಮಾಡಿಕೊಂಡ. 1760 ರಿಂದ 1818ರ ತನಕ ಇದು ಮರಾಠರ ಆಡಳಿತದಲ್ಲಿತ್ತು. ಅದರಲ್ಲಿಯ ಕೆಲವು ಭಾಗಗಳನ್ನು ಶಿಂಧೆ ಮತ್ತು ಹೋಳ್ಕರರಿಗೆ ಜಹಗೀರು ಹಾಕಿಕೊಡಲಾಯಿತು.

ಖಾಂದೇಶದಲ್ಲಿ ಅಹಿರಾಣಿ ರಾಜರ ಅನೇಕ ಹಳೆಯ ಶಿಲ್ಪಗಳನ್ನು ಕಾಣಬಹುದು. ಇವಕ್ಕೆ ಹೇಮಾಡಪಂತೀ ಎಂದು ಹೆಸರು. ಅನೇಕ ಕಡೆಗಳಲ್ಲಿ ಬೌದ್ಧ ಚೈತ್ಯ ಮತ್ತು ವಿಹಾರಗಳುಂಟು. ಪಾಟಣ ಇಲ್ಲಿಯ ಒಂದು ಪ್ರಾಚೀನ ಪಟ್ಟಣ. (ಎಸ್.ಕೆ.ಎಸ್.)

**ಖಾಕಿ ಬಟ್ಟೆ :** ಮಾಸಲು ಹಳದಿ ಅಥವಾ ಕಂದುಬಣ್ಣದ ಒಂದು ರೀತಿಯ ಬಟ್ಟೆ. ಮೊದಲಿಗೆ ಭಾರತದಲ್ಲಿ ರಾಜ್ಯವಾಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯದ ಸೈನಿಕರು ಇದನ್ನು ಬಳಸುತ್ತಿದ್ದರು. 1848ನೆಯ ಇಸವಿಯಲ್ಲಿ ಸರ್ ಹ್ಯಾರಿ ಬರ್‌ನೆಟ್ ಲುಂಡ್ಸೆನ್ ಎಂಬಾತ ಭಾರತದಲ್ಲಿದ್ದ ಬ್ರಿಟಿಷ್ ರೆಜಿಮೆಂಟಿನ ಸಮವಸ್ತ್ರವಾಗಿ ಖಾಕಿಯನ್ನು ಬಳಸಲಾರಂಭಿಸಿದ. ಅಲ್ಲಿಯ ಮುಂಚೂಣಿ ಪ್ರದೇಶಗಳಲ್ಲಿದ್ದ ಕಾವಲುಪಡೆಯವರು ಇದನ್ನು ಮೊದಲು ಧರಿಸುತ್ತಿದ್ದರು. ಅದಾದ ಮೇಲೆ ಬ್ರಿಟಿಷ್ ಚಕ್ರಾಧಿಪತ್ಯದ ಬೇರೆಲ್ಲ ರೆಜಿಮೆಂಟುಗಳಲ್ಲಿ ಇದನ್ನು ಉಪಯೋಗಿಸಲಾರಂಭಿಸಿದರು. 1830–1902ರ ಅವಧಿಯಲ್ಲಿ ನಡೆದ ದಕ್ಷಿಣ ಆಫ್ರಿಕ ಯುದ್ಧದಲ್ಲಿ ಬ್ರಿಟಿಷ್ ಹಾಗೂ ವಲಸೆ ಬಂದಿದ್ದ ಪಡೆಗಳು ಕಂದು ಮಿಶ್ರಿತವಾದ ಖಾಕಿ ಸಮವಸ್ತ್ರವನ್ನು ಧರಿಸಿ ಯುದ್ಧ ಮಾಡಿದವೆಂದು ಹೇಳಲಾಗಿದೆ. ಖಾಕಿಗೆ ಸೇರು ಎಂದು ಸೈನ್ಯಕ್ಕೆ ಸೇರು ಎನ್ನುವಷ್ಟರಮಟ್ಟಿಗೆ ಇದರ ಬಳಕೆ ಒಂದು ಕಾಲಕ್ಕೆ ಅಧಿಕವಾಗಿತ್ತು.

ಖಾಕಿ ಶಬ್ದ ಉರ್ದು ಅಥವಾ ಪರ್ಷಿಯನ್ ಭಾಷೆಯ ಖಾಕ್ (ಮಣ್ಣು) ಎಂಬ ಶಬ್ದದಿಂದ ವ್ಯುತ್ಪನ್ನವಾಗಿದೆ, ಮಣ್ಣು ಬಣ್ಣ ಅಥವ ಮಾಸಲು ಬಣ್ಣವಿರುವುದರಿಂದ ಯುದ್ಧ ಕ್ಷೇತ್ರದಲ್ಲಿ ಇದರಿಂದ ಬಹಳ ಅನುಕೂಲ. ಯೋಧರು ಸುಲಭವಾಗಿ ಶತ್ರುಗಳ ಕಣ್ಣು ತಪ್ಪಿಸಿ (ಕ್ಯಾಮುಫ್ಲೇಜ್) ಮುಂದೆಸಾಗಲೂ ಯುದ್ಧರಂಗದಲ್ಲಿ ವೈರಿಯ ಎದುರಿಗೆ ತಮ್ಮ ಇರವನ್ನೇ ಮರೆಮಾಚಿ ಬಿಡಲೂ ಇದರಿಂದ ಸಾಧ್ಯ. ನೇಯ್ಗೆಯ ವೈಶಿಷ್ಟ್ಯದಿಂದ ಈ ಬಟ್ಟೆ ಒರಟು ಉಪಯೋಗಕ್ಕೆ ತಕ್ಕುದಾಗಿದ್ದು ಬೆವರನ್ನು ಹೀರುವುದಲ್ಲದೆ ಸೂರ್ಯನ ಬೆಳಕನ್ನು ಚೆನ್ನಾಗಿ ತಡೆಯಬಲ್ಲುದು. ಆದ್ದರಿಂದಲೇ ಸೈನಿಕ ಸಮವಸ್ತ್ರಕ್ಕಾಗಿ ಇದರ ಬಳಕೆ ಉಚಿತವಾಗಿದೆ. ಹೀಗಾಗಿ ಇದು ಬ್ರಿಟಿಷ್ ಚಕ್ರಾಧಿಪತ್ಯದ ಪಡೆಗಳ ಸರ್ವಮಾನ್ಯ ಸಮವಸ್ತ್ರವಾಯಿತು. ಇದನ್ನು ಸ್ಪ್ಯಾನಿಷ್ ಅಮೆರಿಕನ್ನರ ಕದನದಲ್ಲಿ ಅಮೆರಿಕದ ಪಡೆಗಳು ಉಪಯೋಗಿಸಿದ್ದುವು. ಒಂದನೆಯ ಹಾಗೂ ಎರಡನೆಯ ಮಹಾ ಯುದ್ಧಗಳಲ್ಲಿಯೂ ಇದರ ಬಳಕೆಯಾದುದಕ್ಕೆ ದಾಖಲೆಗಳಿವೆ. ಈಗಲೂ ಪ್ರಪಂಚದ ಬಹಳಷ್ಟು ಪಡೆಗಳು ಖಾಕಿಯ ಸಮವಸ್ತ್ರವನ್ನೇ ಧರಿಸುತ್ತವೆ.

1900 ರಿಂದೀಚೆಗೆ ಸಾಮಾನ್ಯವಾಗಿ ಎಲ್ಲ ರೀತಿಯ ನಸುಗಂದು ಇಲ್ಲವೆ ಮಾಸಲು ಹಸಿರು ಬಣ್ಣದ ಬಟ್ಟೆಗಳಿಗೂ ಕ್ಯಾನ್‌ವಾಸ್, ಡ್ರಿಲ್ ಅಥವಾ ಹಾಲೆಂಡ್ ಬಟ್ಟೆಗಳಿಗೂ ಖಾಕಿಯೆಂದು ಕರೆಯುವುದು ರೂಢಿಯಾಗಿದೆ. ಮೊದಲಿಗೆ ಕೇವಲ ಹತ್ತಿಯಿಂದಲೇ ತಯಾರಿಸುತ್ತಿದ್ದ ಖಾಕಿ ಉಡುಪುಗಳನ್ನು ಇತ್ತೀಚೆಗೆ ಉಣ್ಣೆಯಿಂದಲೂ ತಯಾರಿಸುತ್ತಿದ್ದಾರೆ. ಒಂದು ಕಾಲಕ್ಕೆ ಕೇವಲ ಸೈನಿಕರ ಉಡುಪಾಗಿದ್ದ ಖಾಕಿ ಕ್ರಮೇಣ ಕ್ರೀಡಾಪಟುಗಳ, ಕಾರ್ಖಾನೆ ಮೊದಲಾದೆಡೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ, ಬಾಲಚಮೂಗಳ, ಎಂಜಿನಿಯರುಗಳ ಸಮವಸ್ತ್ರವಾಗಿದೆ. ಖಾಕಿ ಬಟ್ಟೆ ಬಣ್ಣ ಹೋಗುವುದಿಲ್ಲ. ಹೆಚ್ಚು ಕಾಲ ಬಾಳಿಕೆ ಬರುತ್ತದೆಯಲ್ಲದೆ, ಬಹಳ ಅಗ್ಗ.

ಈಗಲೂ ಭಾರತದಲ್ಲಿ ಪೋಲೀಸರು, ಹೋಂಗಾರ್ಡುಗಳು, ಎ.ಸಿ.ಸಿ., ಎನ್.ಸಿ.ಸಿ. ಮತ್ತು ಸ್ವಯಂಸೇವಕ ದಳಗಳವರು ಖಾಕಿ ಸಮವಸ್ತ್ರವನ್ನು ಧರಿಸುವುದುಂಟು. ಶಾಲೆಗೆ ಹೋಗುವ ಮಕ್ಕಳು ಸಹ ವಿವಿಧ ನಮೂನೆಯ ಖಾಕಿ ಸಮವಸ್ತ್ರಗಳನ್ನು ಉಪಯೋಗಿಸುತ್ತಾರೆ. ಸಮಾನತೆ, ಏಕತೆ ಮೊದಲಾದ ಭಾವೈಕ್ಯದ ಭಾವನೆಗಳನ್ನು ಮೂಡಿಸುವುದರಲ್ಲಿ ಇದು ಸಫಲವಾಗಿದೆ. ಅಲ್ಲದೆ ಮನೆಯಲ್ಲಿ ಬಳಸುವ ಚೀಲ, ರೇಡಿಯೋ, ಫ್ಯಾನ್, ಸೋಫ, ಮೆತ್ತೆ ಮೊದಲಾದವನ್ನು ಮುಚ್ಚುವ ಹೊದಿಕೆಗಳು ಹಾಗೂ ಹಾಸಿಗೆ ಸುತ್ತುವ ಚೀಲಗಳು, ಡೇರಾಗಳು ಇವೆಲ್ಲಕ್ಕೂ ಖಾಕಿಯನ್ನು ಬಳಸುತ್ತಾರೆ.

ಖಾಕಿ ಬಟ್ಟೆಯ ನೇಯ್ಗೆಯನ್ನು ಮೂಲೆ ನೇಯ್ಗೆಯೆಂದು (ಟ್ವಿಲ್) ಕರೆಯುತ್ತಾರೆ. ಇದರಲ್ಲಿ ನೇಯ್ಗೆ ಕರ್ಣ(ಡಯಾಗೊನಲ್) ರೀತಿಯಲ್ಲಿ ಮುಂದುವರಿಯುತ್ತದೆ. ಈ ಮಾದರಿ ನೇಯ್ಗೆಯ ಖಾಕಿಗೆ ತಡೆತ ಹಾಗೂ ತೊಡಿಕೆಯ ಶಕ್ತಿ ಹೆಚ್ಚಿಗೆಯಿರುತ್ತದೆ. ಸಾಧಾರಣ ನೇಯ್ಗೆಗಿಂತ ನಮ್ಯತೆ ಹಾಗೂ ಸ್ಥಿತಿಸ್ಥಾಪಕ ಶಕ್ತಿ ಇದರಲ್ಲಿ ಹೆಚ್ಚು. ನೇಯ್ಗೆಯ ವೈಶಿಷ್ಟ್ಯದಿಂದಾಗಿ ಖಾಕಿ ಬಟ್ಟೆಗಳು ಬೇಗ ಕೊಳೆಯಾಗುವುದಿಲ್ಲ.

ಮೂಲೆ ನೇಯ್ಗೆಯಲ್ಲಿ ಎಡಗೈ ಬಲಗೈ ಎಂದು ಎರಡು ಬಗೆ. ಖಾಕಿ ಬಟ್ಟೆಗೆ ಗಂಧಕ ಬಣ್ಣಗಾರಿಕೆ (ಸಲ್ಫರ್ ಡೈಯಿಂಗ್) ಮಾಡುತ್ತಾರೆ. ಇದು ಬಾಳಿಕೆ ಬರುವಂಥದು; ಒಗೆತ ಮತ್ತು ಬೆವರುಗಳಿಗೆ ತಡೆದು ಬರುವಂಥದು. ಆದರೆ ಅತಿಯಾಗಿ ಕ್ಲೋರಿನಿನಿಂದ ಚಲುವೆ ಮಾಡಿದರೆ ಬಣ್ಣ ಹೋಗುತ್ತದೆ. ಬಣ್ಣ ಕಟ್ಟುವುದಕ್ಕೆ ಮುಂಚೆ ಬಟ್ಟೆಯ ಮೊದಲಿನ ಬಣ್ಣವನ್ನು ತೆಗೆದು ಹಾಕುತ್ತಾರೆ. ಅನಂತರ ಬಣ್ಣದ ತೊಟ್ಟಿಯಲ್ಲಿ ನೆನೆಸಿ ಬಟ್ಟೆಯನ್ನು ಗಾಳಿಯಲ್ಲಿಟ್ಟು ಉತ್ಕರ್ಷಿಸುತ್ತಾರೆ. ಇಲ್ಲವೆ ಪೊಟ್ಯಾಸಿಯಂ ಬೈಕ್ರೊಮೇಟ್ ಮತ್ತು ಅಸಿಟಿಕಾಮ್ಲಗಳನ್ನು ಉಪಯೋಗಿಸಿ ಬೇಕಾದ ಮಟ್ಟಕ್ಕೆ ಬಣ್ಣವನ್ನು ಉಳಿಸಿಕೊಳ್ಳುತ್ತಾರೆ. ಇಂಥ ಉತ್ಕರ್ಷಣದಿಂದ ಗಂಧಕ ಸಲ್ಫ್ಯೂರಿಕ್ ಆಮ್ಲವಾಗಿ ಪರಿವರ್ತನೆಹೊಂದಿ ಬಟ್ಟೆಯನ್ನು ನಾಶ ಮಾಡಬಹುದು. ಆದ್ದರಿಂದ ಎಚ್ಚರಿಕೆ ವಹಿಸಿ ಹೆಚ್ಚಿನ ರಾಸಾಯನಿಕ ವಸ್ತುಗಳನ್ನು ಹೆಚ್ಚಿನ ಬಣ್ಣವನ್ನು ಚೆನ್ನಾಗಿ ತೊಳೆದು ತೆಗೆಯಬೇಕು. ಅತಿಯಾದ ತಾಪ ಮತ್ತು ಬಣ್ಣದ ತೊಟ್ಟಿಯಲ್ಲಿಯ ಕ್ಷಾರತೆಯಿಂದಾಗಿ ಬಣ್ಣ ಬಟ್ಟೆಯ ಒಳಗೆ ಚೆನ್ನಾಗಿ ಇಳಿಯುತ್ತದೆ. ಕೆಲಕಾಲ ಒಣಗಿಸಿದ ತರುವಾಯ ಬಟ್ಟೆ ನುಣುಪಾಗಿ ನವುರಾಗುತ್ತದೆ. (ಎಸ್.ಎಲ್.ಎ.)

**ಖಾಕಿ ಪಂಥದವರು :** ಉತ್ತರಭಾರತದ ವೈಷ್ಣವಪಂಥದವರು. ಪಾರ್ಸಿ ಭಾಷೆಯಲ್ಲಿ ಖಾಕಿ ಎಂದರೆ ಬೂದಿ ಎಂಬರ್ಥವೂ ಉಂಟು. ಈ ಜನ ಬೂದಿಯನ್ನು ಧಾರಣೆ ಮಾಡುತ್ತಾರಾಗಿ ಇವರಿಗೆ ಖಾಕಿ ಪಂಥದವರೆಂದು ಹೆಸರು ಬಂತು. ಇವರು ವೈಷ್ಣವರಾದರೂ ಕೆಲವು ಶೈವಪದ್ಧತಿಗಳನ್ನು ಅನುಸರಿಸುತ್ತಾರೆ. ಶೈವರಂತೆ ತಲೆಯ ಕೂದಲನ್ನು ಜಟೆಯಾಗಿ ಕಟ್ಟಿಕೊಳ್ಳುತ್ತಾರೆ. ಮೈಗೆಲ್ಲ ಬೂದಿ ಬಳಿದುಕೊಂಡು ಒಂದು ಲಂಗೋಟಿ ವಿನಾ ಬೇರೇನನ್ನೂ ಧರಿಸದೆ ತಿರುಗಾಡುತ್ತಾರೆ; ಲಕ್ಷ್ಮಣನ ಅನುಯಾಯಿಗಳೆಂದು ಹೇಳಿಕೊಳ್ಳುತ್ತಾರೆ. ರಾಮ ವನವಾಸ ಕೈಗೊಂಡಾಗ ಲಕ್ಷ್ಮಣ ಶೋಕಗೊಂಡು ಮೈಗೆಲ್ಲ ಬೂದಿ ಬಳಿದುಕೊಂಡನೆಂದೂ ಅವನ ಅನುಯಾಯಿಗಳಾದವರು ಅಂದಿನಿಂದ ಭಸ್ಮಧಾರಣೆ ಮಾಡುತ್ತ ಬಂದರೆಂದೂ ಈ ಪಂಥದವರು ಹೇಳಿಕೊಳ್ಳುತ್ತಾರೆ.

ಇವರ ಪಂಥ 16ನೆಯ ಶತಮಾನದಲ್ಲಿ ಹುಟ್ಟಿಕೊಂಡಿತು. ಕೃಷ್ಣದಾಸನ ಶಿಷ್ಯನಾದ ಕಿಷ್ ಎಂಬಾತ ಇದರ ಸ್ಥಾಪಕ. ರಮಾನಂದನ ಶಿಷ್ಯ ಅನಂತಾನಂದ ಈ ಪಂಥವನ್ನು ಬೆಳೆಸಲು ಶ್ರಮಿಸಿದ. ಈ ಪಂಥದ ಮುಖ್ಯ ಕೇಂದ್ರ ಅಯೋಧ್ಯೆ. ಇಲ್ಲಿ ದಯಾರಾಮನೆಂಬುವನಿಂದ ಸ್ಥಾಪಿತವಾದ ಒಂದು ಮಠವಿದೆ. ಅಯೋಧ್ಯೆಯ ಹನುಮಾನ್ ದೇವಸ್ಥಾನದ ಅರ್ಚಕರು ಖಾಕಿಗಳು. ಗುಜರಾತಿನ ಲವಾವಾಡ ಎಂಬ ಸ್ಥಳದಲ್ಲೂ ಅಹಮದಾಬಾದಿನಲ್ಲೂ ಖಾಕಿಗಳ ಮಠಗಳಿವೆ. (ಜಿ.ಎಚ್.)

**ಖಾಜ಼ಾರ್ :** ಒಂದು ಜನ ವರ್ಗ. ಇವರ ಭಾಷೆ ಬಹುಶಃ ಟರ್ಕಿಶ್. 500–1000ದ ಕಾಲದಲ್ಲಿ ಪ್ರಾಮುಖ್ಯ ತಳೆದಿದ್ದರು. ಇವರ ಸಾಮ್ರಾಜ್ಯದ ಎಲ್ಲೆಗಳನ್ನು ನಿರ್ದಿಷ್ಟವಾಗಿ ಗುರುತಿಸುವುದು ಅಸಾಧ್ಯ. ಅವು ಸ್ಥಿರವಾಗೇನೂ ಇರಲಿಲ್ಲ. ಆದರೆ 6ನೆಯ ಶತಮಾನದ ಉತ್ತರಾರ್ಧದ ವೇಳೆಗೆ ಸ್ಥೂಲವಾಗಿ ಆಜ಼ಾಫ್ ಸಮುದ್ರ, ಕ್ಯಾಸ್ಪಿಯನ್ ಸಮುದ್ರ, ವಾಲ್ಗ ನದಿ. ಡಾನ್ ನದಿ–ಇವು ಇದರ ಗಡಿಗಳಾಗಿದ್ದುವು. ದಕ್ಷಿಣದಲ್ಲಿ ಇವರ ಸಾಮ್ರಾಜ್ಯ ಕಾಕಸಸ್ ಪರ್ವತಗಳವರೆಗೂ ಹಬ್ಬಿತ್ತು.

ಖಾಜ಼ಾರ್ ಎಂಬ ಹೆಸರು ಮೊದಲ ಬಾರಿಗೆ 6ನೆಯ ಶತಮಾನದಲ್ಲಿ ಬರುತ್ತದೆ. ಆದರೆ ಈ ಜನ ಇದಕ್ಕೂ ಹಿಂದೆ ಬೇರೊಂದು ಹೆಸರಿನಲ್ಲಿ ಇದ್ದಿರಲೇಬೇಕೆಂಬುದಂತೂ ನಿಸ್ಸಂದೇಹ. ಅಕಾಟ್ಸಿರ್ ಎಂದು ಕರೆಯಲ್ಪಡುತ್ತಿದ್ದ ಹೂಣರೇ ಖಾಜ಼ಾರರ ಮೂಲಪುರಷರೆಂಬುದು ಕೆಲವು ವಿದ್ವಾಂಸರ ಅಭಿಮತ. ಇದು ನಿಜವಾಗಿದ್ದ ಪಕ್ಷದಲ್ಲಿ ಖಾಜ಼ಾರರ ಇತಿಹಾಸವನ್ನು ಇನ್ನೊಂದು ಶತಮಾನ ಕಾಲ ಹಿಂದಕ್ಕೆ ತೆಗೆದುಕೊಂಡು ಹೋಗಬಹುದು. ಏಕೆಂದರೆ ಅಕಾಟ್ಸಿರರು 5ನೆಯ ಶತಮಾನದ ನಡುಗಾಲದಲ್ಲಿದ್ದರೆಂದು ತಿಳಿದುಬರುತ್ತದೆ. ಆದರೆ ಅಕಾಟ್ಸಿರರ ವಿಚಾರವೂ ಇತಿಹಾಸಕಾರರಿಗೆ ಹೆಚ್ಚಾಗಿ ಗೊತ್ತಿಲ್ಲ. ಆದ್ದರಿಂದ ಖಾಜ಼ಾರರ ಬಗ್ಗೆ ಹೊಸ ಸಂಗತಿಯೇನೂ ದೊರಕುವುದಿಲ್ಲ. ರ‍್ಯಾವೆನ ಕಾಸ್ಮಾಗ್ರಫಿ ಎಂಬ ಗ್ರಂಥ ಬರೆದ ಅನಾಮಿಕ ಚರಿತ್ರಕಾರನ ಪ್ರಕಾರ ಅಕಾಟ್ಸಿರರೂ ಖಾಜ಼ಾರರೂ ಒಂದೇ. ಆದರೆ ತುರ್ಕದಿಂದ ಸಾಬಿರ್ ಎಂದು ಕರೆಯಲ್ಪಡುತ್ತಿದ್ದ ಜನರೇ ಪರ್ಷಿಯನ್‌ನಲ್ಲಿ ಖಾಜ಼ಾರ್ ಎನಿಸಿಕೊಂಡರೆಂಬುದು ಅರಬ್ ಚರಿತ್ರಕಾರ ಅಲ್–ಮಸೂದಿಯ ಮತ. ಈ ಎರಡೂ ಮತಗಳನ್ನು ಸಮನ್ವಯಗೊಳಿಸಬೇಕಾದರೆ ಅಕಾಟ್ಸಿರರೂ ಸಾಬಿರರೂ ಒಂದೇ ಎನ್ನಬೇಕಾಗುತ್ತದೆ. ಆದರೆ 5ನೆಯ ಶತಮಾನದ ಬಿಜ಼ಾಂಟಿನ್ ಚರಿತ್ರಕಾರ ಪ್ರಿಸ್ಕಸನ ಅಭಿಪ್ರಾಯ ಇದಕ್ಕೆ ವಿರುದ್ಧವಾಗಿದೆ. ಖಾಜ಼ಾರರೂ ಸಾಬಿರ್‌ಗಳೂ ಭಿನ್ನ ಜನರೆಂದು ಆತ ಹೇಳುತ್ತಾನೆ.

6ನೆಯ ಶತಮಾನದಲ್ಲಿದ್ದ ಮಿಟಲೀನಿನ ಜ಼ಕಾರಿಯನ ಸಿರಿಯಾಕ್ ಉದಂತಗಳಲ್ಲಿ ಕಾಜ಼ಾರರ ಬಗ್ಗೆ ಪ್ರಥಮವಾಗಿ ಖಚಿತವಾದ ಉಲ್ಲೇಖವಿದೆ. ಈ ಕಾಲದ ಪರ್ಷಿಯನ್ ದಾಖಲೆಗಳಲ್ಲಿ ಖಾಜ಼ಾರರ ಉಲ್ಲೇಖವಿಲ್ಲವಾದರೂ 1ನೆಯ ಖುಸ್ರೋ (531–579)

ಕಾಲದಲ್ಲೇ ಪರ್ಷಿಯನರು ಖಾಜ಼ಾರರೊಂದಿಗೆ ಸಂಪರ್ಕ ಹೊಂದಿದ್ದರೆಂದು ಹೇಳಬಹುದು. ಈ ಕಾಲದಲ್ಲಿ ಅವರು ಪಶ್ಚಿಮ ಟರ್ಕಿಕ್ ಸಾಮ್ರಾಜ್ಯಕ್ಕೆ ಸೇರಿದ್ದಿರಬಹುದು. ಖಾಜ಼ಾರರು ಪಶ್ಚಿಮದ ರಾಜಕೀಯವನ್ನು ಪ್ರವೇಶಿಸಿದ್ದು ಹಿರಾಕ್ಲಿಯಸ್ ಚಕ್ರವರ್ತಿಯ (610–641) ಕಾಲದಲ್ಲಿ. ಹಿರಾಕ್ಲಿಯಸ್ ಪರ್ಷಿಯನರ ವಿರುದ್ಧ ನಡೆಸಿದ ಯುದ್ಧದಲ್ಲಿ ಖಾಜ಼ಾರರ ಸಹಾಯಕ ದಳದ ನೆರವು ಪಡೆದ. ಇದರಿಂದ ಹಿರಾಕ್ಲಿಯಸನಿಗೆ ಜಯ ಲಭಿಸಿತು. ಚಕ್ರವರ್ತಿಯ ಪುತ್ರಿಯರಲ್ಲೊಬ್ಬಳನ್ನು ಖಾಜ಼ಾರರ ಮುಖಂಡ ಮದುವೆಯಾದ.

7ನೆಯ ಶತಮಾನದ ಮಧ್ಯಭಾಗದಲ್ಲಿ ಅರಬರು ಟ್ರಾನ್ಸ್ ಕಕೇಷಿಯನ್ ಪ್ರದೇಶವನ್ನು ಗೆದ್ದರು. 661ರಲ್ಲಿ ಅವರ ಸೇನೆ ಉತ್ತರ ಕಾಕಸಸ್‌ಗೆ ನುಗ್ಗಿ ಡೆರ್ಬೆಂಟ್ ನಗರವನ್ನು ಖಾಜ಼ಾರರಿಂದ ವಶಪಡಿಸಿಕೊಂಡಿತು. ಇದರಿಂದಾಗಿ ಆಕ್ರಮಣಕಾರಿ ಅರಬರಿಗೂ ಖಾಜ಼ಾರರಿಗೂ ದೀರ್ಘಕಾಲದ ಯುದ್ಧ ಪ್ರಾರಂಭವಾಯಿತು. ಖಾಜ಼ಾರರು ಪಶ್ಚಿಮದ ಕಡೆಯಲ್ಲಿ ಹರಡಿಕೊಂಡರು. 681ರ ವೇಳೆಗೆ ಖಾಜ಼ಾರರು ಪ್ರಬಲರಾದರು. 685ರ ವೇಳೆಗೆ ಕಾಕಸಸಿಗೆ ದಕ್ಷಿಣದ ಕಡೆ ದಾಳಿ ನಡಸಲಾರಂಭಿಸಿದರು. ಜಾರ್ಜಿಯ, ಆರ್ಮೇನಿಯ, ಕ್ಯಾಸ್ಪಿಯನ್ ಆಲ್ಬೇನಿಯ ಅವರ ಆಕ್ರಮಣಕ್ಕೆ ಒಳಗಾದುವು. 717ರಲ್ಲಿ ಅಜ಼ರ್ ಬೈಜಾನನ್ನು ಕೂಡ ಆಕ್ರಮಿಸಿಕೊಂಡರು. 721–722ರಲ್ಲಿ ಅವರು ತಮ್ಮ ಆಕ್ರಮಣ ಮುಂದುವರಿಸಿದರು. ಈ ವಿಜಯಗಳಿಂದಾಗಿ ಖಾಜ಼ಾರರು ಅರಬರ ನೆರೆಗೆ ಬಂದಂತಾಯಿತು. 722ರಲ್ಲಿ ಅರಬರಿಗೂ ಖಾಜ಼ಾರರಿಗೂ ಘರ್ಷಣೆ ಸಂಭವಿಸಿತು. ಮೊದಲ ವಿಜಯ ಖಾಜ಼ಾರರದು ಆದರೆ ಅನಂತರ ಅರಬರು ಪ್ರತಿ ದಾಳಿ ನಡೆಸಿ, ಡೇರಿಯಲ್ ಕಣಿವೆ ಉತ್ತರದಲ್ಲಿದ್ದ ಖಾಜ಼ಾರ್ ನಗರವಾದ ಬಲಾಂಜಾರನ್ನು ಹಿಡಿದುಕೊಂಡರು. ವೋಲ್ಗ ನದಿಯ ಮೇಲಿದ್ದ ಖಾಜ಼ಾರ್ ರಾಜಧಾನಿ ಆಟಿಲ್‌ಗೂ ಅಪಾಯವಿತ್ತು (729) ಆದರೆ 730ರಲ್ಲಿ ಖಾಜ಼ಾರರು ಮತ್ತೆ ಉಗ್ರವಾಗಿ ಮುನ್ನುಗ್ಗಿದರು. ಅವರ ವಿಜಯೀಸೇನೆ ಟೈಗ್ರಿಸ್ ನದಿಯ ದಂಡೆಯ ಮೇಲಿನ ಅರಬ್ ನಗರವಾದ ಮೊಸೂಲ್‌ವರೆಗೂ ಹೋಯಿತು. ಅನಂತರ ಅರಬರು ಖಾಜ಼ಾರರನ್ನು ಕಾಕಸಸಿನ ಉತ್ತರಕ್ಕೆ ಹಿಂತಳ್ಳಿದರಾದರೂ ಅರಬರ ವಿಸ್ತರಣ ಪ್ರಯತ್ನಕ್ಕೆ ಕಾಕಸಸ್ಸೇ ಉತ್ತರದ ಗಡಿಯಾಯಿತು.

ಈ ಕಾಲದಲ್ಲೆಲ್ಲ ಖಾಜ಼ಾರರು ಬಿಜ಼ಾಂಟಿನ್ ಚಕ್ರವರ್ತಿಗಳೊಡನೆ ಸಂಪರ್ಕ ಹೊಂದಿದ್ದರು. 2ನೆಯ ಜಸ್ಟಿನಿಯನ್ ದೇಶಭ್ರಷ್ಟನಾಗಿದ್ದಾಗ ಅನೇಕ ವರ್ಷಗಳ ಕಾಲ ಖಾಜ಼ಾರರೊಂದಿಗಿದ್ದ. 704ರಲ್ಲಿ ಖಾಜ಼ಾರರ ಮುಖಂಡನ ಮಗಳನ್ನು ಲಗ್ನವಾದ. ಆದರೆ ಅವರ ಸ್ನೇಹ ಹೆಚ್ಚು ಕಾಲ ಉಳಿಯಲಿಲ್ಲ. ಖೆರ್ಸಾನ್ ಪಟ್ಟಣದಲ್ಲಿ ಜನ ದಂಗೆಯೆದ್ದಾಗ ಅವರಿಗೆ ಖಾಜ಼ಾರರು ಸಹಾಯ ನೀಡಿ ಜಸ್ಟಿನಿಯನನ ಪತನಕ್ಕೆ (711) ಮುಖ್ಯ ಕಾರಣರಾದರು. 732ರಲ್ಲಿ ಮತ್ತೊಬ್ಬ ಬಿಜ಼ಾಂಟಿನ್ ಚಕ್ರವರ್ತಿ 3ನೆಯ ಲೀಯೋ (795–816) ತನ್ನ ಮಗನಿಗೆ ಖಾಜ಼ಾರ್ ರಾಜ ಕುಮಾರಿಯೊಬ್ಬಳನ್ನು ಮದುವೆ ಮಾಡಿದ. ಆತನೇ ಮುಂದೆ 5ನೆಯ ಕಾನ್ಸ್ಟಂಟೀನ್ ಆದ. ಆ ಕಾಲದ ಬಿಜ಼ಾಂಟಿನ್ ಆಸ್ಥಾನದಲ್ಲಿ ಖಾಜ಼ಾರರು ಅತ್ಯಂತ ಪ್ರಭಾವಶಾಲಿಗಳಾಗಿದ್ದರು ಕಾನ್ಸ್ಟಂಟೀನನ ಮಗ 4ನೆಯ ಲೀಯೋಗೆ ಖಾಜ಼ಾರ್ ಎಂಬುದು ಉಪನಾಮವಾಗಿತ್ತು.

ಒಟ್ಟಿನಲ್ಲಿ 8ನೆಯ ಶತಮಾನದ ಉತ್ತರಾರ್ಧದಲ್ಲಿ ಖಾಜ಼ಾರ್ ಚಕ್ರಾಧಿಪತ್ಯ ವೈಭವದ ಶಿಖರ ಮುಟ್ಟಿತ್ತು. ಖಾಜ಼ಾರರ ನೇರ ಪ್ರಭಾವ ಕಪ್ಪು ಸಮುದ್ರ ಕ್ಯಾಸ್ಪಿಯನ್ ಸಮುದ್ರಗಳ ಉತ್ತರ ತೀರದಿಂದ ಯೂರಲ್ಸ್ ಮತ್ತು ವೋಲ್ಗವರೆಗೂ ಹಬ್ಬಿತ್ತು. ಅಲಾನಿ ಮತ್ತು ಇತರ ಜನಾಂಗಗಳೂ ಹಂಗರಿಯನರೂ ಗಾಥರೂ ಕ್ರಿಮಿಯನ್ ಪರ್ಯಾಯದ್ವೀಪದ ಗ್ರೀಕ್ ವಸಾಹತುಗಳ ಜನರೂ ಖಾಜ಼ಾರರನ್ನು ತಮ್ಮ ಮಹಾಪ್ರಭುಗಳೆಂದು ಒಪ್ಪಿಕೊಂಡಿದ್ದರು.

8ನೆಯ ಶತಮಾನದ ಉತ್ತರಾರ್ಧದಲ್ಲಿ ಖಾಜ಼ಾರರಿಗೂ ಅರಬರಿಗೂ ನಡುವೆ ಯುದ್ಧಗಳು ಮತ್ತೆ ಆರಂಭವಾದವು. 786 ಮತ್ತು 787ರಲ್ಲಿ ಖಾಜ಼ಾರರು ಕ್ರಿಮಿಯದ ಗಾಥರ ಮೇಲೆ ದಂಡೆತ್ತಿ ಹೋದರು. ಈ ಸಮಯದಲ್ಲೇ ಜಾರ್ಜಿಯದ ಮೇಲೂ ಖಾಜ಼ಾರರು ಆಕ್ರಮಣ ನಡೆಸಿದರು.

9ನೆಯ ಶತಮಾನದಲ್ಲಿ ರಷ್ಯನರು ಖಾಜ಼ಾರರ ಪ್ರಬಲ ವಿರೋಧಿಗಳಾದರು. 965ರಲ್ಲಿ ರಷ್ಯನರ ಸೇನೆ ಖಾಜ಼ಾರರನ್ನು ಮಣಿಸಿತು. 1016ರಲ್ಲಿ ಬಿಜ಼ಾಂಟಿನ್ ಚಕ್ರವರ್ತಿ 2ನೆಯ ಬ್ಯಾಸಲ್ ರಷ್ಯನರೊಡನೆ ಸೇರಿಕೊಂಡು ಖಾಜ಼ಾರರ ಮೇಲೆ ದಂಡೆತ್ತಿ ಹೋಗಿ ಇವರ ಕ್ರಿಮಿಯನ್ ಪ್ರದೇಶಗಳನ್ನು ವಶಪಡಿಸಿಕೊಂಡ. 1030ರ ವೇಳೆಗೆ ಕಪ್ಪುಸಮುದ್ರದ ಉತ್ತರ ಕರಾವಳಿ ಪ್ರದೇಶದಲ್ಲಿ ಖಾಜ಼ಾರರ ರಾಜಕೀಯ ಪ್ರಭಾವ ಕೊನೆಗೊಂಡಿತು. ಅವರ ಪ್ರದೇಶಗಳೆಲ್ಲ ಬಿಜ಼ಾಂಟಿಯಂಗೆ ಸೇರಿಹೋದುವು. ಆದರೂ 12ನೆಯ ಶತಮಾನದ ವರೆಗೂ ಖಾಜ಼ಾರರ ಹೆಸರಿನ ಉಲ್ಲೇಖಗಳು ಕಂಡು ಬರುತ್ತವೆ.

ಖಾಜ಼ಾರರ ನಾಗರಿಕತೆ ಸಂಕೀರ್ಣವಾದ್ದು. ಕ್ರೈಸ್ತ, ಇಸ್ಲಾಂ, ಯೆಹೂದ್ಯಮತ ಮುಂತಾದವುಗಳ ಪ್ರಭಾವ ಖಾಜ಼ಾರರ ಮೇಲೆ ಬಿದ್ದಿತ್ತು. 740ರ ಸುಮಾರಿನಲ್ಲಿ ಖಾಜ಼ಾರ್ ದೊರೆಯೂ ಅವನ ಪರಿವಾರದ ಬಹುಮಂದಿಯೂ ಯೆಹೂದ್ಯ ಮತಕ್ಕೆ ಪರಿವರ್ತನೆ ಹೊಂದಿದರೆಂದು ಹೇಳಲಾಗಿದೆ.

ಖಾಜ಼ಾರರ ನಾಗರಿಕತೆ ಉನ್ನತಮಟ್ಟದ್ದಾಗಿತ್ತು. ಬಿಜ಼ಾಂಟಿನ್ ಮತ್ತು ಅರಬ್ ಮೂಲಗಳಿಂದ ಇದರ ಬಗ್ಗೆ ಅನೇಕ ವಿವರಗಳು ದೊರಕುತ್ತವೆ. ಆದರೆ ಖಾಜ಼ಾರ್ ಭಾಷೆಯ ಒಂದು ಸಾಲೂ ಲಭ್ಯವಿಲ್ಲ. ಖಾಜ಼ಾರರ ಶಾಸನಗಳು ಯಾವುವೂ ಇದುವರೆಗೂ ದೊರಕಿಲ್ಲ. ಗ್ರೀಕ್ ಗ್ರಂಥಗಳಲ್ಲಿ ಅಲ್ಲಲ್ಲಿ ಬರುವ ಉಪಪದಗಳನ್ನು–ಇವುಗಳಲ್ಲಿ ಹಲವು ವ್ಯಕ್ತಿನಾಮಗಳು–ನೋಡಿದಾಗ ಈ ಜನ ಟರ್ಕಿಶ್ ಭಾಷೆಯೊಂದನ್ನು ಆಡುತ್ತಿದ್ದರೆಂಬುದು ಗೊತ್ತಾಗುತ್ತದೆ.

ಮೂಲತಃ ಇವರ ಆಡಳಿತ ಟರ್ಕಿಕ್ ಮಾದರಿಯದಾದರೂ ಮಧ್ಯ ಯುರೇಷ್ಯದ ಇತರ ಟರ್ಕಿಕ್ ಸಾಮ್ರಾಜ್ಯಗಳಂತೆ ಇದು ಇರಲಿಲ್ಲ. ಇವರ ಸಾಮ್ರಾಜ್ಯ ವ್ಯವಸ್ಥೆ ಭಿನ್ನರೀತಿಯದು. ಇದರ ದೊರೆತನ ಅರೆ–ಧಾರ್ಮಿಕ ಸ್ವರೂಪದ್ದು. ದೊರೆಗೆ ವಾಸ್ತವವಾಗಿ ಅಧಿಕಾರವೇನೂ ಇರಲಿಲ್ಲ. ಟರ್ಕಿಕ್–ಮಂಗೋಲ್ ಅಲೆಮಾರಿಗಳ ಚಕ್ರಾಧಿಪತ್ಯಗಳಂತೆ ಇದು ಅತಿಯಾಗಿ ಆಕ್ರಮಣಶೀಲವಾಗಿರಲಿಲ್ಲ. ಈ ಜನಕ್ಕೆ ಕೃಷಿಯಲ್ಲಿ ಹೆಚ್ಚಿನ ಆಸಕ್ತಿಯಿತ್ತು. ವ್ಯಾಪಾರ ಮುಖ್ಯವಾಗಿತ್ತು. ರಷ್ಯನರು ಮಧ್ಯ ರಷ್ಯದ ಮುಖ್ಯ ವ್ಯಾಪಾರ ಮಾರ್ಗಗಳನ್ನು ಆಕ್ರಮಿಸಿಕೊಂಡಿದ್ದರಿಂದಲೇ ಖಾಜ಼ಾರ್ ಸಾಮ್ರಾಜ್ಯದ ಪತನವಾಯಿತೆಂದು ಊಹಿಸಬಹುದಾಗಿದೆ.

ಡಾನ್ ನದಿಯ ಕೆಳದಂಡೆಯ ಮೇಲಣ ಸಾರ್ಕೆಲ್ ನೆಲೆಯಲ್ಲಿ 9ನೆಯ ಶತಮಾನದಲ್ಲಿ ಗ್ರೀಕ್ ಶಿಲ್ಪಿಗಳ ನೆರವಿನಿಂದ ಕಟ್ಟಲಾದ ಖಾಜ಼ಾರ್ ಕೋಟೆಯ ಅವಶೇಷಗಳ ಉತ್ಖನನಗಳಿಂದ ಖಾಜ಼ಾರ್ ನಾಗರಿಕತೆಯ ಮಿಶ್ರಲಕ್ಷಣಗಳು ವ್ಯಕ್ತಪಟ್ಟಿದ್ದುವು. ವೋಲ್ಗ–ಡಾನ್ ಕಾಲುವೆಯ ನಿರ್ಮಾಣದಿಂದಾಗಿ ಈ ನೆಲೆ ನೀರಿನಲ್ಲಿ ಮುಚ್ಚಿಹೋಯಿತು. (ಎಸ್.ಕೆ.ಎಸ್.)

**ಖಾದೀ :** ಯಂತ್ರಗಳನ್ನು ಉಪಯೋಗಿಸದೆ ಕೈಯಿಂದಲೇ ಹತ್ತಿ ಹಿಂಜಿ, ತಕಲಿ ಅಥವಾ ಚರಕಗಳಿಂದ ನೂಲು ಮಾಡಿಕೊಂಡು ಕೈಮಗ್ಗಗಳಿಗೆ ಹಾಕಿ ತಯಾರಿಸಿದ ಬಟ್ಟೆ. ಹಬೆ ಮತ್ತು ಎಣ್ಣೆಯ ಯಂತ್ರಗಳು, ವಿದ್ಯುಚ್ಚಾಲಿತ ಯಂತ್ರಗಳು ಬಳಕೆಗೆ ಬರುವ ಮುನ್ನ ಎಲ್ಲ ದೇಶಗಳವರೂ ಕೈಯಿಂದಲೆ ತಮ್ಮ ಬಟ್ಟೆಗಳನ್ನು ಮಾಡಿಕೊಳ್ಳುತ್ತಿದ್ದರು. ಉತ್ತರ ಮತ್ತು ದಕ್ಷಿಣ ಅಮೆರಿಕದ ಇಂಡಿಯನರು, ಭಾರತದವರು ಇಂಥ ಬಟ್ಟೆ ಮಾಡುವ ಕಲೆಯಲ್ಲಿ ಅದ್ವಿತೀಯರಾಗಿದ್ದರು. ಇದರಿಂದ ಬಹುಜನರ ಜೀವನ ಸುಲಭವಾಗಿ ನಿರ್ವಹಣೆಯಾಗುತ್ತಿತ್ತು. ಇಂಗ್ಲೆಂಡ್ ದೇಶದಲ್ಲಿ ನೂಲು ತೆಗೆಯುವ ಯಂತ್ರ (ಸ್ಪಿನಿಂಗ್ ಜೆನಿ) ನಿರ್ಮಾಣವಾದ ಮೇಲೆ ಈ ಉದ್ಯಮ ಮೂಲೆಗುಂಪಾಯಿತು. ಯಂತ್ರೋದ್ಯಮದಿಂದ ವಸ್ತ್ರೋತ್ಪನ್ನ ವಿಧಾನ ಮಾನವನ ನಾಗರಿಕತೆಗೆ ಒಂದು ಹೊಸ ರೂಪವನ್ನೇ ಕೊಟ್ಟಿತು.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆರಂಭದಲ್ಲಿ ಮುರ್ಷಿದಾಬಾದ್ ರೇಷ್ಮ ವಸ್ತ್ರ, ಢಾಕಾ ಮಸ್ಲಿನ್‌ಗಳನ್ನು ಕೊಂಡೊಯ್ದು ಮಾರಿ ಶೇ.200ರಷ್ಟು ಲಾಭ ಸಂಪಾದಿಸುತ್ತಿದ್ದರು. ಕಾಲಕ್ರಮೇಣ, ಇಲ್ಲಿ ತಮ್ಮ ವ್ಯಾಪಾರ ಕುದುರಿದಂತೆಲ್ಲ ಅದರ ಆಧಾರದ ಮೇಲೆ ರಾಜಕೀಯ ಸಾಮ್ರಾಜ್ಯವನ್ನು ಕಟ್ಟಿ ಇಂಗ್ಲೆಂಡಿನ ಮ್ಯಾಂಚೆಸ್ಟರ್ ಮತ್ತು ಲ್ಯಾಂಕ್‌ಷೈರ್ ಗಳಲ್ಲಿ ನಡೆಯುತ್ತಿದ್ದ ನೂಲುವ ಮತ್ತು ವಸ್ತ್ರೋತ್ಪನ್ನ ಮಾಡುವ ಯಂತ್ರೋದ್ಯಮಕ್ಕೆ ನೆರವಾಗುವಂತೆ ಭಾರತದ ಆರ್ಥಿಕ ನೀತಿಯನ್ನು ರೂಪಿಸಿಕೊಂಡರು. ಇದರ ಆಘಾತಕ್ಕೆ ಸಿಕ್ಕಿ. ಚೇತನಹೀನವಾದ ಭಾರತದ ಗ್ರಾಮೋದ್ಯೋಗಗಳ ಪೈಕಿ ನೂಲು

ಚಿತ್ರ 1 ಎಡದಿಂದ ಬಲಕ್ಕೆ : ಹತ್ತಿ ಅರೆಯುವ (ಹತ್ತಿಯಿಂದ ಕಾಳನ್ನು ಬೇರ್ಪಡಿಸುವುದು) ಯಂತ್ರ; ಅರಳೆಯನ್ನು ಹಿಂಜುವ ಯಂತ್ರ; ಹಂಜಿಮಾಡುವ ಯಂತ್ರ.

ತೆಗೆಯುವ ಉದ್ಯಮ ಮತ್ತು ನೆಯ್ಗೆ ಪ್ರಧಾನವಾದುವು. ಇವು ಖಿಲವಾದ ಬಗೆ ಒಂದು ಕರುಣಾಜನಕ ಕಥೆಯೇ ಆಗಿದೆ. ಭಾರತದ ಈ ಆರ್ಥಿಕ ಅವನತಿ, ಬ್ರಿಟನ್ನಿನ ಆರ್ಥಿಕ ಸಾಮ್ರಾಜ್ಯದ ಅಭಿವೃದ್ಧಿಗೆ ಕಾರಣವಾಯಿತು. ಭಾರತ ಬ್ರಿಟನ್ನಿನ ಒಂದು ಅತ್ಯಧಿಕ ಲಾಭದ ಮಾರುಕಟ್ಟೆಯಾಗಿ ಪರಿಣಮಿಸಿತು. ಇದನ್ನು ಕುರಿತು ಒಂದು ಆಧಾರಯುತ ಉಲ್ಲೇಖ ಈ ರೀತಿ ಇದೆ: 1803ರಲ್ಲಿ ಕೇವಲ 3 ಲಕ್ಷ ರೂ. ಬೆಲೆ ಬಾಳುವ ಬಟ್ಟೆ ಭಾರತಕ್ಕೆ

ರಫ್ತಾಯಿತು. ಅದು 1829ರಲ್ಲಿ 29 ಲಕ್ಷಕ್ಕೆ ಏರಿ, 1929ರ ವೇಳೆಗೆ 66ಕೋಟಿ ರೂಪಾಯಿ ಬೆಲೆ ಬಾಳುವ ಬಟ್ಟೆಗೂ 6 ಕೋಟಿ ರೂಪಾಯಿ ಬೆಲೆಬಾಳುವ ನೂಲಿಗೂ ಏರಿತು. ಬ್ರಿಟಿಷರು ಭಾರತದಲ್ಲಿ ಸ್ಥಾಪಿಸಿದ ವಿಶ್ವವಿದ್ಯಾಲಯ ಶಿಕ್ಷಣ ಪದ್ಧತಿ, ನ್ಯಾಯಾಲಯಗಳು ಮತ್ತು ಶಾಸನ ಸಭೆಗಳು ಭಾರತದ ಸುತ್ತ ದಾಸ್ಯ ಶೃಂಖಲೆಯನ್ನು ರಚಿಸಿದಂತೆಯೇ ಲ್ಯಾಂಕಷೈರಿನ ಶಕ್ತಿಚಾಲಿತ ನೂಲುವ ಯಂತ್ರಗಳೂ ಶಕ್ತಿ ಚಾಲಿತ ನೆಯ್ಗೆ ಯಂತ್ರಗಳೂ ಆರ್ಥಿಕ ದಾಸ್ಯ ಶೃಂಖಲೆಯನ್ನು ರಚಿಸಿದುವು.

**ಸ್ವದೇಶಿ ಚಳವಳಿ :** ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಭಾರತದಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗ್ರತವಾಯಿತು. ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್ ಮತ್ತು ಲಾಲಾ ಲಜಪತ್‌ರಾಯ್ ಎಂಬ ಮೂವರು ಮುಖಂಡರು ಸ್ವದೇಶಿ ಚಳವಳಿಯನ್ನು ಆರಂಭಿಸಿದರು. ಆಗ್ಗೆ ಇದು ಕೇವಲ ರಾಜಕೀಯ ಉದ್ದೇಶದಿಂದ ಕೂಡಿತ್ತು. ಈ ಉದ್ದೇಶ ಸಾಧನೆಗೆ ಅವರು ವಿದೇಶೀ ವಸ್ತ್ರ ಬಹಿಷ್ಕಾರ ಎಂಬ ತಂತ್ರವನ್ನು ಉಪಯೋಗಿಸಿಕೊಂಡರು. ಇದು ಪ್ರಧಾನವಾಗಿ ಭಾವೋದ್ರೇಕ ಸ್ವರೂಪದ್ದಾಗಿದ್ದು ಬ್ರಿಟಿಷ್ ಪ್ರಭುತ್ವದ ಧೋರಣೆಗೆ ವಿರುದ್ಧವಾದ ಕಾರ್ಯಕ್ರಮವಾಗಿತ್ತು. 1905ರಲ್ಲಿ ನಡೆದ ಕಲ್ಕತ್ತ ಕಾಂಗ್ರೆಸ್ ಅಧಿವೇಶನ ಸ್ವದೇಶೀ ಚಳವಳಿಗೆ ಬೆಂಬಲ ನೀಡಿತು. ಅಂದಿನ ಕಾಂಗ್ರೆಸ್ಸಿನ ಸೂತ್ರವನ್ನು ಹಿಡಿದಿದ್ದ ಮಿತವಾದಿಗಳು ರಾಷ್ಟ್ರೀಯವಾದಿಗಳ ಉಗ್ರವಾದವನ್ನು ಒಪ್ಪದಿದ್ದರೂ ಸ್ವದೇಶೀ ಚಳವಳಿಗೆ ಬೆಂಬಲ ನೀಡಿದರು. ದೇಶದಲ್ಲಿ ಉತ್ಕ್ರಮಣಾವಸ್ಥೆಯಲ್ಲಿರುವ ಕೈಗಾರಿಕೆಗಳಿಗೆ ರಕ್ಷಣೆಯನ್ನೂ ಪ್ರೋತ್ಸಾಹವನ್ನೂ ನೀಡುವುದು ಅತ್ಯಂತ ಅಗತ್ಯವೆಂದು ಅವರು ಭಾವಿಸಿದರು.

1919ರಲ್ಲಿ ಮಹಾತ್ಮ ಗಾಂಧೀಜಿ ಕಾಂಗ್ರೆಸ್ ಸಂಸ್ಥೆಯ ನಾಯಕತ್ವವನ್ನು ವಹಿಸಿಕೊಂಡ ಮೇಲೆ, ಸ್ವದೇಶೀ ಚಳವಳಿಯ ಅರ್ಥ ವಿಸ್ತಾರವಾಯಿತು. ಅದು ಭಾವೋದ್ರೇಕದ ಮತ್ತು ಆರ್ಥಿಕಸ್ತರಗಳನ್ನು ಮೀರಿ ಮೇಲೆದ್ದು ಸ್ವರಾಜ್ಯ ಪ್ರಾಪ್ತಿಗೆ ಒಂದು ಪ್ರಭಾವಯುತ ಸಾಧನವಾಗಿ ಪರಿಣಮಿಸಿತು. ಅವರು ಹೀಗೆ ಹೇಳಿದರು: 'ನಾವು ಸ್ವರಾಜ್ಯವನ್ನು ಅರ್ಥ ಮಾಡಿಕೊಳ್ಳುವ ಮುನ್ನ ಸ್ವದೇಶೀ ಧೋರಣೆಯ ಬಗೆಗೆ ಪ್ರೇಮವನ್ನಷ್ಟೇ ಅಲ್ಲದೆ, ತೀವ್ರ ಪ್ರೇಮವನ್ನು ಹೊಂದಬೇಕು.' ಸ್ವದೇಶೀ ಎಂದರೆ, ಕೇವಲ ವಸ್ತ್ರವೊಂದೇ ಅಲ್ಲದೆ, ಎಲ್ಲ ಸ್ವದೇಶೀ ವಸ್ತುಗಳೆಂದು ಅವರು ವ್ಯಾಖ್ಯಾನ ಮಾಡಿದರು. ಹೀಗೆ, ಮೊದಮೊದಲು ವಿಧ್ವಂಸಕ ಸ್ವರೂಪ ತಾಳಿದ್ದ ಸ್ವದೇಶೀ ತತ್ತ್ವ ರಚನಾತ್ಮಕ ಸ್ವರೂಪವನ್ನು ತಾಳಿತು. ಈ ರಚನಾತ್ಮಕ ಚಳವಳಿಯಲ್ಲಿ ಖಾದೀ ಸ್ವಾಭಾವಿಕವಾಗಿಯೇ ಪ್ರಭಾವೀ ಪಾತ್ರ ವಹಿಸಿತು. ಖಾದೀ ಧರಿಸುವುದು ಭಾರತ ರಾಷ್ಟ್ರೀಯತೆಯ ಒಂದು ಸಂಕೇತವಾಯಿತು. ಒಮ್ಮೆ, ಜವಾಹರಲಾಲ್ ನೆಹರೂ ಅದನ್ನು ಸ್ವಾತಂತ್ರ್ಯ ಸಂಕೇತದ ಪೋಷಾಕು ಎಂದು ಕರೆದರು. *



ಚಿತ್ರ 2 ನೂಲುವ ಮೂರು ಸಾಧನಗಳು (ಎಡದಿಂದ ಬಲಕ್ಕೆ): ತಕಲಿ, ಕಿಸಾನ್ ಚರಕ, ಪೆಟ್ಟಿಗೆ ಚರಕ

**ಖಾದೀ ಉದ್ಯಮ :** ಗಾಂಧೀಜಿ ಖಾದಿಗೆ ಪ್ರಾಶಸ್ತ್ಯ ಕೊಡಲು ಹಲವಾರು ಕಾರಣಗಳನ್ನು ಕಂಡರು. ಪ್ರಥಮತಃ ಇದರ ಉದ್ದೇಶ ರಾಷ್ಟ್ರದ ಏಳು ಲಕ್ಷಹಳ್ಳಿಗಳಲ್ಲಿ ಅರೆಹೊಟ್ಟೆ ತಿಂದು, ಅರೆನಗ್ನರಾಗಿ ಜೀವಿಸುತ್ತಿದ್ದ ಕೋಟ್ಯಂತರ ಜನಸ್ತೋಮಕ್ಕೆ ಬದುಕಿನ ಆಶಾಕಿರಣ ಮೂಡುವಂತೆ ಮಾಡುವುದಾಗಿದ್ದಿತು. ಗಾಂಧೀಜಿ ಕೊಟ್ಟ ಇತರ ಕಾರಣಗಳಿವು: 1 ವಿರಾಮ ಹೊಂದಿದ್ದು, ನಾಲ್ಕು ಕಾಸಿನ ಆವಶ್ಯಕತೆ ಇದ್ದವರಿಗೆ ತತ್ ಕ್ಷಣದ ಉದ್ಯೋಗವನ್ನು ಕಲ್ಪಿಸಬಲ್ಲುದು. 2 ದೇಶದ ಬಹುಮಂದಿಗೆ ಪರಿಚಯವಿರುವಂಥದು. 3 ಕಲಿಯಲು ಸುಲಭ. 4 ಬೇಕಾದ ಬಂಡವಾಳ ತೀರ ಕಡಿಮೆ. 5 ಚರಕವನ್ನು ಸುಲಭವಾಗಿ, ಕಡಿಮೆ ಬೆಲೆಗೆ ತಯಾರಿಸಬಹುದು. 6 ಕ್ಷಾಮ ಮತ್ತು ಅಭಾವಗಳ ಕಾಲದಲ್ಲಿ ತತ್‌ಕ್ಷಣಪರಿಹಾರವನ್ನು ನೀಡಬಲ್ಲುದು. 7 ಬಡವರಾದವರಿಗೆ ಕೊಟ್ಯಂತರ ರೂಪಾಯಿಗಳನ್ನು ಹಂಚಬಲ್ಲದು. 8 ಸಹಕಾರ ಬುದ್ಧಿಯನ್ನು ಕಲಿಸಲು ಶಕ್ತಿಯುತವಾದ ಸಾಧನ. 9 ಗ್ರಾಮೀಣ ಜನರಿಗೂ ಲಕ್ಷಾಂತರ ಹಸಿದ ಜನಕ್ಕೂ ಹೊಸ ಬದುಕಿನ ಹೊಸ ಭರವಸೆಯನ್ನು ತರಬಲ್ಲುದು. 10 ಬಡತನಕ್ಕಿಂತ ಸೋಮಾರಿತನ ಕೆಟ್ಟದ್ದು. ಅದು ಎಲ್ಲ ಪಾತಕಗಳ ಮೂಲ. ಅದನ್ನು ಈ ಉದ್ಯಮ ನಿವಾರಿಸಬಲ್ಲುದು.

ಖಾದಿಯ ಸಾಧ್ಯತೆಗಳನ್ನು ಕುರಿತು ಗಾಂಧೀಜಿ ತುಂಬ ಬಣ್ಣಿಸಿದ್ದಾರೆ. ಅವು ಕೇವಲ ಮಾತುಗಳೇ ಆಗಿರದೆ, ವಾಸ್ತವ ರೂಪದಲ್ಲಿ ವ್ಯಕ್ತವಾದಂಥವು. ಮಾನವತೆ,

ಚಿತ್ರ 3 ಎಡದಿಂದ ಬಲಕ್ಕೆ : ಲಪೇಟಕ್ಕೆ ತಕಲಿಯಿಂದ ನೂತ ನೂಲನ್ನು ಸುತ್ತುವುದು, ಚರಕದಿಂದ ನೂತ ನೂಲನ್ನು ಲಪೇಟಕ್ಕೆ ಸುತ್ತುವುದು: ರಾಟಾಳದಿಂದ ನೂಲನ್ನು ಅಂಟಿಗೆ ತೋಡುವುದು

ಅರ್ಥೋತ್ಪನ್ನ, ಸ್ವಾವಲಂಬನ, ಪ್ರೇಮ ಅಥವಾ ಅಹಿಂಸೆ, ಸಮತೆ ಇವುಗಳೆಲ್ಲ ಖಾದಿ ಉದ್ಯಮದಲ್ಲಿ ಬೀಜರೂಪವಾಗಿ ಅಡಗಿವೆ. ಸ್ವಾತಂತ್ರ್ಯಸಿದ್ಧಿಗೆ ಖಾದಿ ನಿಜವಾದ ಹಾದಿ. ಸ್ವದೇಶೀ ಭಾವನೆ ಗಾಂಧೀ ಕಲ್ಪನೆಯ ಅಹಿಂಸಕ ಸಮಾಜ ರಚನೆಗೆ ಎಂದರೆ, ಶೋಷಣೆ, ವರ್ಗ ಮತ್ತು ವರ್ಣ ಭೇದಗಳಿಂದ ಮುಕ್ತವಾದ ಸಮಾಜರಚನೆಗೆ ಪೋಷಕ. ಅದು ಕಾಯಕದ ಅಥವಾ ಅನ್ನಶ್ರಮದ ಸಂಕೇತ. ಅಮೀರೀ-ಗರೀಬೀ ಎರಡೂ ಇಲ್ಲದ ಮಾನವೀಯಮೌಲ್ಯ ಪ್ರಧಾನವಾದ ಸಮಸಮಾಜದ ರಚನೆಯೇ ಅದರ ಗುರಿ. ಸಾರ್ವತ್ರಿಕವಾಗಿಯೂ ಸುಲಭವಾಗಿಯೂ ಆಗುವ ಉದ್ಯಮವೆಂದರೆ. ಖಾದಿಯೊಂದೇ. ಒಮ್ಮೆ ಗಾಂಧೀಜಿ ಕಳಕಳಿಯಿಂದ ಹೇಳಿದ ಮಾತುಗಳಿವು: ರಾಟೆ ಮತ್ತು ಖಾದಿಯ ಸಂದೇಶ ಒಂದು ಪರಮ ಆಧ್ಯಾತ್ಮಿಕ ಸಂದೇಶ. ಅದು ಪರಮ ಆಧ್ಯಾತ್ಮಿಕ ಸಂದೇಶವಾಗಿರುವಂತೆಯೇ ದೇಶಕ್ಕೆ ಪರಮ ಆರ್ಥಿಕ ಹಾಗೂ ರಾಜಕೀಯ ಮೇಲ್ಮೆಯನ್ನು ತರುವಂಥದೂ ಆಗಿವೆ. ಯಾವುದೇ ಧರ್ಮತತ್ತ್ವವನ್ನು ಮೌಲ್ಯವುಳ್ಳದು ಎನ್ನಬೇಕಾದರೆ ಅದು ಆರ್ಥಿಕ ಕ್ಷೇತ್ರದಲ್ಲಿ ಉಪಯುಕ್ತವೆನಿಸಬೇಕು. ಹಾಗೆಯೇ ಅರ್ಥವಿಚಾರ ಮೌಲ್ಯವುಳ್ಳದು ಎನ್ನಬೇಕಾದರೆ, ಅದು ಧರ್ಮತತ್ತ್ವವನ್ನು ಮತ್ತು ಆತ್ಮತತ್ತ್ವವನ್ನು ಒಳಗೊಂಡಿರಬೇಕು. ಹೀಗೆ ಖಾದೀ ಉದ್ಯಮದಲ್ಲಿ ಅರ್ಥಭಾವನೆ ಪೂರ್ಣವಾಗಿ ಧರ್ಮಪ್ರೇರಿತ; ಆದುದರಿಂದ ಅದರಲ್ಲಿ ಶೋಷಣೆಗೆ ಅವಕಾಶವಿಲ್ಲ.

ಖಾದೀ ಉದ್ಯಮವನ್ನು ಟೀಕಿಸುವವರು ಬಹಳ ಮಂದಿ, ಅದು ಯಂತ್ರ ವಿರೋಧಿ ಎಂಬುದು ಒಂದು ಪ್ರಧಾನ ಟೀಕೆ. ಇದು ತಪ್ಪುಭಾವನೆಯೆಂದು ಶ್ರುತಪಡಿಸಲು ಗಾಂಧೀಜಿ ಸದಾ ಸಿದ್ಧರಿದ್ದರು: ಅವರು ಹೀಗೆ ಹೇಳಿದರು; 'ಈ ನನ್ನ ದೇಹವೇ ಒಂದು ಸೂಕ್ಷ್ಮ ಯಂತ್ರವಾಗಿರುವಾಗ ಎಲ್ಲ ಯಂತ್ರಗಳನ್ನೂ ನಾನು ಹೇಗೆ ತಾನೆ ವಿರೋಧಿಸಲಿ? ನೂಲುವ ರಾಟೆಯೂ ಒಂದು ಯಂತ್ರವೇ. ನನ್ನ ವಿರೋಧವಿರುವುದು ಯಂತ್ರದ ಬಗೆಗೇ ಅಲ್ಲ. ಅದರ ಬಗೆಗೆ ಇರುವ ಹುಚ್ಚು ಅಭಿಲಾಷೆಗೆ. ಆ ಹುಚ್ಚು ಅಭಿಲಾಷೆ ಮತ್ತು ಶ್ರಮ ಉಳಿತಾಯ, ಹೆಚ್ಚು ವಿಶ್ರಾಂತಿ ಎಂಬ ಕಲ್ಪನೆಗಳ ಬಗೆಗೆ ನನ್ನ ವಿರೋಧ. ಮಾನವರು ಹೀಗೆ ಯಂತ್ರಗಳಿಂದ ಶ್ರಮ ಉಳಿತಾಯ ಮಾಡುತ್ತ ಹೋದರೆ, ಕೊನೆಗೊಂದು ದಿನ, ಸಹಸ್ರಾರು ಮಂದಿಗೆ ಕೆಲಸವೇ ಇಲ್ಲದಂತಾಗಿ, ಹೊಟ್ಟೆಗಿಲ್ಲದೆ ಮಡಿದಾರು. ಕಾಲ ಮತ್ತು ಶ್ರಮ ಎರಡೂ ಮಾನವ ಕುಲದ ಯಾವುದೋ ಒಂದು ಪಂಗಡಕ್ಕೆ ಮಾತ್ರ ದೊರಕುವುದನ್ನು ನಾನು ಒಪ್ಪುವುದಿಲ್ಲ; ಅದು ಎಲ್ಲರಿಗೂ ದೊರಕಬೇಕು. ಸಂಪತ್ತಿನ ಶೇಖರಣೆ ಕೆಲವರ ಹಸ್ತದಲ್ಲೇ ಆಗದೆ, ಎಲ್ಲರಿಗೂ ದೊರಕುವಂತಾಗಬೇಕು. ಮಾನವನೇ ಪರಮ ಗಣ್ಯ. ಯಂತ್ರ ಮಾನವನ ಜೀವನವನ್ನು ಅಂಗಾಂಗಗಳನ್ನು ಅಂದಗೆಡಿಸಿ, ವಿಕಾರಗೊಳಿಸಬಾರದು.'

ಈ ನಾಲ್ಕು ಮಾತುಗಳಲ್ಲಿ ಖಾದೀ ಬಗೆಗೆ, ಯಂತ್ರದ ಬಗೆಗೆ ಗಾಂಧೀಜೀಯ ವಿಚಾರ ಸರಣಿ ಸ್ಪಷ್ಟ. ಇಂದು ಶ್ರಮ ಉಳಿತಾಯ ಮಾಡುವ ಯಂತ್ರ ನಿರುದ್ಯೋಗವನ್ನು ಸೃಷ್ಟಿಸುತ್ತದೆ. ಸಂಪತ್ತು ಕೆಲವರಲ್ಲೇ ಶೇಖರವಾಗಿ, ಸಮಾಜ, ಶೋಷಕ-ಶೋಷಿತ ಎಂದು ಹೋಳಾಗಿ ಹೋಗಿದೆ. ಇದು ಯಂತ್ರಕುಶಲತೆಯ, ನಾಗರಿಕತೆಯ ಅನಿಷ್ಟ ಪರಿಣಾಮ. ಗಾಂಧೀಜಿ ಇದರ ವಿರೋಧಿಯೇ ಆಗಿದ್ದರು. ಯಾವ ಯಂತ್ರ ಮಾನವೀಯಮೌಲ್ಯ ಸಂವರ್ಧನೆ ಮಾಡಿದರೂ ಅದು ಅವರಿಗೆ ಸ್ವಾಗತಾರ್ಹವಾಗಿತ್ತು.

ಖಾದೀ ಬಗೆಗೆ ಇನ್ನೊಂದು ಟೀಕೆಯೂ ವಿಪುಲವಾಗಿ ಕೇಳಿ ಬರುತ್ತಿತ್ತು. ನೂಲುವುದಕ್ಕೆ ಅಗಾಧ ಸಮಯ ಉಪಯೋಗಿಸದ ಹೊರತು, ವಸ್ತ್ರ ಸ್ವಾವಲಂಬನೆ ಆಗಲಾರದಾಗಿ ಅದರಿಂದ ಜನತೆಗೆ ಆಗುವ ಉಪಯೋಗ ಕಡಿಮೆ. ಬದಲು ವಸ್ತ್ರೋತ್ಪನ್ನವನ್ನು ಯಂತ್ರೋದ್ಯಮದ ಮೂಲಕ ವ್ಯವಸ್ಥೆ ಮಾಡಿದರೆ ಲಕ್ಷಾಂತರ ಮಂದಿಗೆ ಶ್ರಮ ಕಡಿಮೆಯಾಗಿ ಬೌದ್ಧಿಕ ಚಟುವಟಿಕೆಗಳಿಗೆ ಹೆಚ್ಚು ಕಾಲ ದೊರಕುವುದೆಂದು ವಾದಿಸಲಾಗುತ್ತಿತ್ತು. ಇದಕ್ಕೆ ಗಾಂಧೀಜಿಯ ಉತ್ತರ ಹೀಗಿತ್ತು: ವಿರಾಮವೆಂಬುದು ಒಂದು ಹಂತದವರೆಗೆ ಆವಶ್ಯಕ ಮತ್ತು ಒಳ್ಳೆಯದು. ಬೆವರು ಹರಿಯುವಂತೆ ದುಡಿದು, ಅನ್ನ ತಿನ್ನಬೇಕೆಂದು ಮಾನವನನ್ನು ಭಗವಂತ ಸೃಷ್ಟಿಸಿದ. ಯಾವುದೋ ಬಗೆಯ ಯಂತ್ರ ಮಾಯಾಜಾಲದಿಂದ ಆಹಾರ ವಸ್ತುಗಳೂ ಸೇರಿದಂತೆ, ನಮಗೆ ಬೇಕಾದುದನ್ನೆಲ್ಲ ಉತ್ಪನ್ನ ಮಾಡಿಕೊಳ್ಳುವ ಕಾಲ ಬರುತ್ತದೆನ್ನುವುದನ್ನು ನೆನೆದರೆ, ಭಯವಾಗುತ್ತದೆ.

ಖಾದೀ ಸುಲಭ ಬೆಲೆಗೆ ದೊರೆಯಲು ಸಾಧ್ಯವಿಲ್ಲವೆಂಬುದು ಮಗುದೊಂದು ಟೀಕೆ. ಇಂದಿಗೂ ಇದು ಉಳಿದು ಬಂದಿದೆ. ಸ್ವದೇಶೀ ಅಥವಾ ವಿದೇಶೀ ಗಿರಣಿಗಳಲ್ಲಿ ಉತ್ಪನ್ನವಾದ ವಸ್ತ್ರದ ಬೆಲೆಯೊಂದಿಗೆ ಖಾದಿಯನ್ನು ಹೋಲಿಸಬಾರದು. ಏಕೆಂದರೆ ಗಿರಣಿಗಳು ರಾಜ್ಯಸರ್ಕಾರಗಳ ನೆರವು ಪಡೆದು, ವ್ಯವಸ್ಥಿತ ಉದ್ಯಮಗಳಾಗಿರುತ್ತವೆ. ಅವು ಅಪರಿಮಿತ ಸಹಾಯಧನವನ್ನೂ ಬಂಡವಾಳವನ್ನೂ ಹೊಂದಿರುವುದರಿಂದ ತಮ್ಮ ಉತ್ಪನ್ನವನ್ನು ತಾತ್ಕಾಲಿಕವಾಗಿ ನಷ್ಟಕ್ಕೂ ಮಾರಲು ಸಿದ್ಧವಿರುತ್ತವೆ. ಖಾದೀ ಉದ್ಯಮ



ಚಿತ್ರ 4 ಎಡದಿಂದ ಬಲಕ್ಕೆ : ಹಂಜಿ ತಯಾರಿಸುವ ಬೆಲಿನಿ ಯಂತ್ರ; ನಾಲ್ಕು ಕದರಿನ ಮರದ ಅಂಬರ್ ಚರಕ; ಎರಡು ಕದರಿನ ಲೋಹದ ಸುಧಾರಿತ ಅಂಬರ್ ಚರಕ; ಆರು ಕದರಿನ ಲೋಹದ ಅಂಬರ್ ಚರಕ (ನವೀನ ಮಾದರಿಯದು)

ಹಾಗೆ ಮಾಡಲು ಸಾಧ್ಯವೇ? ದೇಶದ ಲಕ್ಷಾಂತರ ಬಡ ಗ್ರಾಮೀಣ ಜನರ ದೃಷ್ಟಿಯಿಂದ ಖಾದಿಯೊಂದೇ ನಿಜವಾಗಿಯೂ ಸುಲಭ ಬೆಲೆಗೆ ದೊರಕುವಂಥದು-ಎಂದು ಗಾಂಧೀಜಿ ಸಾಧಿಸುತ್ತಿದ್ದರು.

ಚಿತ್ರ 5 ಕೈಮಗ್ಗ ಮತ್ತು ತಯಾರಾದ ಖಾದಿ ಬಟ್ಟೆಗಳು

ಖಾದೀ ಕೇವಲ ವಸ್ತ್ರವಲ್ಲ. ಅದೊಂದು ತತ್ತ್ವ. ಖಾದೀತತ್ತ್ವವೆಂದರೆ ಏನು? ಅದು ಭಾರತದ ಕೋಟ್ಯಂತರ ದರಿದ್ರ ನಾರಾಯಣರ ಸಂಕೇತ. ಅವರಿಗಾಗಿ ಬದುಕು ಸರಳವಾಗಬೇಕು, ಅಪಾರ ಶಾಂತಿ, ಸತ್ಯ ಮತ್ತು ಅಹಿಂಸೆಗಳಲ್ಲಿ ಎಂದಿಗೂ ಚ್ಯುತಿ ಹೊಂದದ ನಂಬಿಕೆ ಬೆಳೆಯಬೇಕು-ಎಂಬುದು ಅದರ ಆಶೆ. ಬಡವ-ಬಲ್ಲಿದರ ಅಂತರವನ್ನು ಅದು ಕಡಿಮೆ ಮಾಡುತ್ತದಲ್ಲದೆ ಬಂಡವಾಳದ ಹೊರೆಯಿಂದ ಶ್ರಮಜೀವಿಗಳನ್ನು ಪಾರಾಗಿಸುತ್ತದೆ. ಖಾದೀ ತಯಾರಿಸಿ ಧರಿಸಿದಲ್ಲಿ ಶಾಂತಿಯುತ ಸಮಾಜ. ಸರ್ವೋದಯ ಸಮಾಜಗಳ ರಚನೆ ಸುಲಭವಾಗುತ್ತದೆ-ಎಂಬುದು ಗಾಂಧೀಜಿಯ ಅಚಲ ನಂಬಿಕೆಯಾಗಿತ್ತು.

**ಖಾದಿ ಆಂದೋಲನ:** 1915ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿ ಬಂದ ಮೇಲೆ, ಅಹಮದಾಬಾದಿನ ಬಳಿ ಸಾಬರಮತಿ ಆಶ್ರಯವನ್ನು ಸ್ಥಾಪಿಸಿದರು. ಅಲ್ಲಿ ಚರಕದಿಂದ ನೂಲುವುದನ್ನು ನೆಯ್ಗೆ ಮಾಡುವುದನ್ನು ಆರಂಭಿಸಿದರು. ಆಶ್ರಮದ ಕಾರ್ಯಕರ್ತರಿಗೆ ಅದೊಂದು ದೈನಿಕ ಕ್ರಿಯೆಯಾಯಿತು. ನೂಲುವುದು ಪವಿತ್ರ ಕಾರ್ಯವಾಗಿ ಸೂತ್ರ ಯಜ್ಞ ಎನಿಸಿತು.

1919ರಲ್ಲಿ ನಡೆದ ಅಮೃತಸರದ ಕಾಂಗ್ರೆಸ್ ಅಧಿವೇಶನ ಸ್ವದೇಶೀ ಸ್ವರೂಪವನ್ನು ಖಾದೀ ಕಾರ್ಯದ ಮೂಲಕ ವ್ಯಕ್ತಪಡಿಸಿತು. ಇದಕ್ಕೆ ಗಾಂಧೀಜಿಯೇ ಕಾರಣ. ಬ್ರಿಟಿಷ್ ಸರ್ಕಾರದೊಂದಿಗೆ ಕಾಂಗ್ರೆಸ್ ತನ್ನ ಅಸಹಕಾರ ಆಂದೋಲನವನ್ನು ಆರಂಭಿಸುವ (1921) ಮುನ್ನ, ದೇಶಾದ್ಯಂತ ಖಾದೀ ಪ್ರಚಾರ ಕಾರ್ಯ ನಡೆಸಬೇಕೆಂದು ತೀರ್ಮಾನಿಸಿತು. ಅದರ ಅನಂತರ ನಡೆದ ಕಾಂಗ್ರೆಸ್ ಅಧಿವೇಶನಗಳಲ್ಲಿ ರಚನಾತ್ಮಕ ಕಾರ್ಯದ ಒಂದು ಪ್ರಧಾನ ಅಂಗವಾಗಿ ಖಾದೀ ಅಂಗೀಕೃತವಾಯಿತು. ಅಸಹಕಾರ ಆಂದೋಲನದ ಕಾಲದಲ್ಲೂ ಮುಂದೆ ಸವಿನಯನ ಶಾಸನೋಲ್ಲಂಘನ ಕಾಲದಲ್ಲೂ ಖಾದೀ ಸತ್ಯಾಗ್ರಹಿಗಳ ಪೋಷಾಕು ಆಯಿತು.

1925ರ ತನಕ ಖಾದೀ ಕಾರ್ಯ ಕಾಂಗ್ರೆಸ್ ಸಮಿತಿಗಳ ಕಾರ್ಯವೇ ಆಗಿತ್ತು. ಆ ವರ್ಷ, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಖಿಲ ಭಾರತ ಚರಕಾ ಸಂಘ ಎಂಬ ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಿತು. ಈ ಸಂಘದ ಕಾರ್ಯ ಕಾಂಗ್ರೆಸ್ಸಿನ ಇತಿಹಾಸದೊಂದಿಗೆ ಏಕತ್ರವಾಗಿ ಸೇರಿಹೋಗಿದೆ. ಆದರೂ 1941-42ನೆಯ ವರ್ಷ ಖಾದೀ ಕಾರ್ಯ ಅತ್ಯಂತ ಎತ್ತರಕ್ಕೆ ಏರಿತು. ಭಾರತದ 15,000 ಹಳ್ಳಿಗಳಲ್ಲಿ ಚರಕಾ ಸಂಘದ ಕಾರ್ಯ ನಡೆಯುತ್ತಿತ್ತು. 3,25,000 ಮಂದಿ ನೂಲುವವರೂ 25,000 ನೇಕಾರರೂ 5,000 ಇತರ ಕಾರ್ಯಕರ್ತರೂ ಇದ್ದರು. ಈ ಕಾರ್ಯದಲ್ಲಿ ಹರಿಜನರು, ಹಿಂದೂಗಳು, ಮುಸ್ಲಿಮರು ಯಾವ ಭೇದಭಾವವೂ ಇಲ್ಲದೆ, ಸಮಷ್ಟಿ ಪ್ರಜ್ಞೆಯಿಂದ ಕೆಲಸ ಮಾಡುತ್ತಿದ್ದರು.

1942ರ ಕ್ವಿಟ್-ಇಂಡಿಯ ಚಳವಳಿ ಕಾಲದಲ್ಲಿ ಖಾದೀ ಕಾರ್ಯ ಬಹಳ ಕಷ್ಟ ನಷ್ಟಗಳಿಗೆ ಗುರಿಯಾಯಿತು. ಅನೇಕ ಕಾರ್ಯಕರ್ತರು ಸೆರೆಮನೆ ಸೇರಿದರು. ಅನೇಕ ಖಾದೀ ಭಂಡಾರಗಳು ಬೆಂಕಿಗೆ ಆಹುತಿಯಾದುವು. ಉತ್ಕಲ, ಬಂಗಾಳ, ಬಿಹಾರ, ರಾಜಸ್ಥಾನ, ಗುಜರಾತು ಮತ್ತು ಕರ್ನಾಟಕ ಪ್ರಾಂತಗಳಲ್ಲಿ ಬಹಳ ನಷ್ಟವಾಯಿತು. ತಮಿಳುನಾಡು, ಆಂಧ್ರ, ಕೇರಳ ಮೊದಲಾದ ಪ್ರಾಂತಗಳಲ್ಲಿ ಬಹಳಲ್ಲದಿದ್ದರೂ ಸಾಕಷ್ಟು ನಷ್ಟವಾಯಿತು.

1945ರಲ್ಲಿ ಗಾಂಧೀಜಿ ಸೆರೆಮನೆಯಿಂದ ಹೊರಕ್ಕೆ ಬಂದಮೇಲೆ, ರಚನಾತ್ಮಕ ಕಾರ್ಯಗಳಿಗೆ ಹೊಸ ಸ್ಫೂರ್ತಿ ನೀಡಿ ಅವನ್ನು ಚೇತನಗೊಳಿಸಲು ಯತ್ನಿಸಿದರು. ಖಾದೀ ಕಾರ್ಯ ಸಮಗ್ರ ಗ್ರಾಮಸೇವೆಯ ಕಾರ್ಯವಾಗಬೇಕೆಂದು ವ್ಯವಸ್ಥೆ ಮಾಡಿದರು.

ರಾಷ್ಟ್ರಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ (1947) ಖಾದೀ ಕಾರ್ಯವನ್ನು ಸರ್ಕಾರವೇ ವಹಿಸಿಕೊಂಡು, ಅದರ ಮತ್ತು ಗ್ರಾಮೋದ್ಯೋಗಗಳ ಬೆಳವಣಿಗೆಗೆ ಶಾಸನಬದ್ಧ ಸಂಸ್ಥೆಗಳನ್ನು-ರಾಜ್ಯ ಮಟ್ಟದಲ್ಲಿ ಖಾದೀ ಮತ್ತು ಗ್ರಾಮೋದ್ಯೋಗ ಮಂಡಲಿಗಳು, ರಾಷ್ಟ್ರಮಟ್ಟದಲ್ಲಿ ಖಾದೀ ಮತ್ತು ಗ್ರಾಮೋದ್ಯೋಗಗಳ ಆಯೋಗ-ರಚಿಸಿತು. ಈ ಸಂಸ್ಥೆಗಳು ರಾಷ್ಟ್ರೀಯ ಯೋಜನೆಗಳಿಗೆ ಅನುಗುಣವಾಗಿ ಖಾದೀ ಉದ್ಯಮಕ್ಕೆ ಧನಸಹಾಯ ಮಾಡುತ್ತಿವೆ. ಆದರೆ, ಸ್ವಾತಂತ್ರ್ಯಕ್ಕಾಗಿ ಹೋರಾಟವಾಗುತ್ತಿದ್ದ ಕಾಲದಲ್ಲಿ ಖಾದಿಗೆ ಇದ್ದ ಪ್ರೋತ್ಸಾಹ, ಕಾರ್ಯೋತ್ಸಾಹ ಇಂದು ಮಾಯವಾಗುತ್ತಿವೆ. ಖಾದೀಕಾರ್ಯ ನಡೆದರೂ ಖಾದೀ ಸತ್ತ್ವ ಇಲ್ಲವಾಗುತ್ತಿದೆ.

ರಾಷ್ಟ್ರದ ಔದ್ಯೋಗಿಕ ಕ್ಷೇತ್ರದಲ್ಲಿ ಖಾದೀ ಭವಿಷ್ಯ ಏನೇ ಆಗಲಿ, ಅದು ಗಾಂಧೀ ನಾಯಕತ್ವದ ಸ್ವಾತಂತ್ರ್ಯ ಹೋರಾಟ ಯುಗದಲ್ಲಿ ವಹಿಸಿದ ಪಾತ್ರ ಅಮೋಘ. ಗಾಂಧೀಜಿ ಅಹಿಂಸಾ ಮಾರ್ಗದಿಂದ ಸರ್ವೋದಯ ಸಮಾಜ ರಚಿಸಬೇಕೆಂದು ಮಾಡಿದ ಕಾರ್ಯದಲ್ಲಿ ಅಹಿಂಸೆಯ ಸಂಕೇತವಾದ ಖಾದೀ ವಹಿಸಿದ ಪಾತ್ರ ಹಿರಿದು. ಅಹಿಂಸೆಯ ಸಾಧನ ಪಥದಿಂದ ಜನ ಬಹಳ ದೂರ ಸರಿದುಹೋಗಿದ್ದಾರೆ. ಇಂದು ಖಾದಿಯ ಬೆಲೆ ಹೆಚ್ಚುತ್ತಿದೆ. ಖಾದಿಯನ್ನು ಜನಪ್ರಿಯಗೊಳಿಸಲು ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ. (ಜಿ.ವಿ.ಎನ್.)

**ಖಾದ್ರಿಶಾಮಣ್ಣ :** (1925-1990) ಪ್ರಮುಖ ಪತ್ರಿಕೋದ್ಯಮಿ. ವಿದ್ಯಾರ್ಥಿದೆಸೆಯಿಂದಲೇ ಭಾಷೆಯ ಮೇಲೆ ಒಳ್ಳೆಯ ಸ್ವಾಮ್ಯ, ರಾಜಕೀಯದಲ್ಲಿ ಹರಿತವಾದ ಪ್ರಜ್ಞೆ, ಗಾಂಧೀವಾದದ ಬಗ್ಗೆ ಒಲವು ಮಾತ್ರವಲ್ಲ, ಒಳ್ಳೆ ಪ್ರಜ್ಞೆ- ಹೀಗೆಂದು ಖಾದ್ರಿಶಾಮಣ್ಣನವರ ಬಗ್ಗೆ ಹೇಳಿದವರು ಐವತ್ತು ವರ್ಷಗಳ ಗೆಳೆತನ ಹೊಂದಿದ್ದ ಎಚ್.ವೈ.ಶಾರದಾಪ್ರಸಾದ್.

ಕೆಲವು ಪತ್ರಕರ್ತರು ತಮ್ಮ ಸರ್ವಸ್ವವನ್ನು ತಮ್ಮ ಪತ್ರಿಕೆಗಳಿಗೆ ವಿನಿಯೋಗಿಸುತ್ತಾರೆ. ಇನ್ನು ಕೆಲವರು ಬೇರೆಯಾಗಿ ಪುಸ್ತಕ ಬರೆಯುವುದನ್ನು ಮಾಡುತ್ತಾರೆ. ಖಾದ್ರಿಶಾಮಣ್ಣ ಮೊದಲ ಗುಂಪಿಗೆ ಸೇರಿದ ಲೇಖಕರು. ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ ತಾತಯ್ಯ, ಡಿ.ವಿ.ಜಿ., ತಿ.ತಾ.ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮರ ಅನಂತರದ ಪೀಳಿಗೆಯವರಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಹೆಸರು. ತೀಕ್ಷ್ಣ ಸಂಪಾದಕೀಯಗಳಿಗೆ, ರಂಗುರಂಗಾದ ನುಡಿ ಚಿತ್ರಗಳಿಗೆ, ರೋಚಕ ತಲೆಬರೆಹಗಳಿಗೆ, ವ್ಯಕ್ತಿ–ಊರು–ದೇಶಗಳ ಹೆಸರುಗಳನ್ನು ಕರಾರುವಾಕ್ಕಾಗಿ ಹೇಳುವ ಪ್ರತಿಭಾವಂತಿಕೆಗೆ ಮತ್ತೊಂದು ಹೆಸರು ಖಾದ್ರಿಶಾಮಣ್ಣ. ಅವರಿಗೆ ಪತ್ರಿಕೋದ್ಯಮ ಒಂದು ದೀಕ್ಷೆಯಾಗಿತ್ತು; ಹೊಟ್ಟೆಪಾಡಿಗಾಗಿ ವೃತ್ತಿ ಅರಸಿಕೊಂಡು ಬಂದವರಲ್ಲ. ಅವರ ಸ್ವಧರ್ಮವೇ ಪತ್ರಿಕೋದ್ಯಮ. ವಿಚಾರಪ್ರಸಾರ ಅವರ ಮೂಲಮಂತ್ರ. ಕನ್ನಡದ ಕೂಗಾಗಲಿ, ಸಮಾಜದ ತುಳಿತಕ್ಕೊಳಗಾದವರ ದನಿಯಾಗಲಿ, ಮಹಿಳೆಯರ ಆರ್ತನಾದವಾಗಲಿ– ಖಾದ್ರಿಯವರ ಲೇಖನಿಗೆ ಅವನ್ನೆಲ್ಲಾ ಮನಮುಟ್ಟುವಂತೆ ಚಿತ್ರಿಸುವ ಸತ್ತ್ವ–ಕಸುವು ಇತ್ತು. ಇವರ 'ರೈತರು ಬಂದರು ದಾರಿಬಿಡಿ' ಸಂಪಾದಕೀಯ ಎಲ್ಲರ ಬಾಯಲ್ಲೂ ಹಚ್ಚ ಹಸಿರು.

ಮೇಲುಕೋಟೆಯ ವೈದಿಕ ಮನೆತನದಲ್ಲಿ 6, ಜೂನ್ 1925 ರಂದು ಜನನ. ಪ್ರಾಥಮಿಕ ವಿದ್ಯಾಭ್ಯಾಸದ ಜತೆಯಲ್ಲೇ ಸಂಸ್ಕೃತ ಶಿಕ್ಷಣ. ಮನೆಗೆ ದೊಡ್ಡಮಗ. ಮದ್ರಾಸಿನಲ್ಲಿದ್ದ ಚಿಕ್ಕಪ್ಪ, ಅತ್ತೆಯರಿಗೆ ಪ್ರೀತಿಯ'ಚಾಮು'. ಚಿಕ್ಕಪ್ಪನೊಡನೆ ಎಳೆಯನಿರುವಾಗಲೇ ಮದ್ರಾಸಿನ ಮರೀನಾ ಸಮುದ್ರದಂಡೆಯಲ್ಲಿ ಆ ಕಾಲದಲ್ಲಿ ರಾಷ್ಟ್ರನಾಯಕರ ಭಾಷಣ ಕೇಳುವ ಅವಕಾಶ. ಅಲ್ಲಿಂದಲೇ ರಾಷ್ಟ್ರೀಯ ವಿಚಾರಕ್ಕೆ ಬೀಜಾಂಕುರ. ಮೇಲುಕೋಟೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವಾದ ಮೇಲೆ ಮೈಸೂರಿನ ಮಹಾರಾಜಾ ಪ್ರೌಢಶಾಲೆಯಲ್ಲಿ ಓದು. ಆಗಲೇ ತಮ್ಮ ಹಿರಿಯ ವಿದ್ಯಾರ್ಥಿಗಳನ್ನೂ ಮಾತಿನಲ್ಲಿ ಮಣ್ಣು ಮುಕ್ಕಿಸುತ್ತಿದ್ದ ಗತ್ತು–ಗಮತ್ತು. ಸ್ವಾಮಿ ವಿವೇಕಾನಂದ–ರಾಮಕೃಷ್ಣ ಪರಮಹಂಸರ ಪ್ರಭಾವ. ಆಗಿನಿಂದಲೇ ಪ್ರತಿಭಟನೆ ಅವರ ವ್ಯಕ್ತಿತ್ವದ ಅಭಿನ್ನ ಅಂಶ. ಕಂದಾಚಾರದ ವಿರುದ್ಧ, ಸಂಪ್ರದಾಯದ ವಿರುದ್ಧ ಬಂಡೆದ್ದರು. ಬಲಾತ್ಕಾರವಾಗಿ ಉಪನಯನ ಮಾಡಿದಾಗ, ಜನಿವಾರ ಕಿತ್ತೆಸದು ಹೊರಬಂದರು. ಅವರೊಬ್ಬ ಹುಟ್ಟಾ ಸಮಾಜವಾದಿ. ಸ್ವಾಭಾವಿಕವಾಗಿಯೇ ಅಂದಿನ ಸಮಾಜವಾದಿ ಚಳವಳಿಯ ಹಿರಿಯರಾದ ಜಯಪ್ರಕಾಶ್ ನಾರಾಯಣ್, ಲೋಹಿಯಾ ಕಡೆಗೆ ಹೆಚ್ಚು ಆಕರ್ಷಿತರಾದರು. ಸ್ವಾತಂತ್ರ್ಯ ಚಳವಳಿಗೆ ವಿದ್ಯಾರ್ಥಿ ಚಳವಳಿಯ ಮೂಲಕ ಪ್ರವೇಶ, ಗಾಂಧೀಜಿ ಅವರ ಆತ್ಮಕಥೆ ಪುಸ್ತಕವನ್ನು ಓದಿದರು. ಪ್ರಬಂಧ ಸ್ಪರ್ಧೆಯಲ್ಲಿ ಗೆದ್ದ ಬಹುಮಾನದ 5 ರೂಪಾಯಿಗಳಿಗೆ ಖರೀದಿಸಿ ಓದಿದ್ದು ಆ ಪುಸ್ತಕವನ್ನು, ಗಾಂಧೀಜಿಯವರ 'ಯಂಗ್ ಇಂಡಿಯಾ' ಸಂಪುಟವನ್ನು. ಗಣಿತದ ತರಗತಿಯಲ್ಲಿ ಕುಳಿತು ಕಾರ್ಲ್‌ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಓದುತ್ತಿದ್ದರಂತೆ.

ಇಂಟರ್‌ಮೀಡಿಯಟ್ ಓದಿಗಾಗಿ ಯುವರಾಜಕಾಲೇಜಿಗೆ ಸೇರಿದರು. ಆದರೆ ಚಳವಳಿ ಅವರನ್ನು ಬಿಡಲಿಲ್ಲ. ಮಹಾರಾಜ ಕಾಲೇಜು ಜ್ಯೂನಿಯರ್ ಬಿ.ಎ.ಹಾಲ್. ಬಾಂಬ್‌ಸ್ಫೋಟದ ಸಂಚು, ಪೊಲೀಸರ ಕೈಗೆ ಶ್ರೀರಂಗಪಟ್ಟಣದ ಕಿರಂಗೂರು ಸೇತುವೆ ಬಳಿ ಸಿಕ್ಕಿ ಬಿದ್ದರು. ಜೈಲುವಾಸ, ಅನಂತರ ಕಾಲೇಜು ವಿದ್ಯಾಭ್ಯಾಸಕ್ಕೆ ವಿದಾಯ. ಲೋಕ ಜೀವನ ಶಿಕ್ಷಣ ಆರಂಭ. 'ದೇಶಕ್ಕೆ ಸ್ವಾತಂತ್ರ್ಯ ಬರುವರೆಗೂ ಕಾಲೇಜಿಗೆ ಹೋಗುವುದಿಲ್ಲ' ಎಂಬ ಪ್ರತಿಜ್ಞೆ. 1942ರ 'ಚಲೇಜಾವ್' ಚಳವಳಿಯಲ್ಲಿ ಸಕ್ರಿಯ. 'ಹರಿಜನ' ಪತ್ರಿಕೆಯನ್ನು ವಾರವಾರವೂ ಒಂದು ಅಕ್ಷರವೂ ಬಿಡದೆ ಓದುತ್ತಿದ್ದೆ–ಎಂದು ಖಾದ್ರಿಯವರೇ ಒಂದು ಕಡೆ ಹೇಳಿದ್ದಾರೆ : 1944ರಲ್ಲಿ ನಂಜನಗೂಡಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಾವೇಶ ಸಂಘಟನೆ ಮಾಡಿದರು. 1944ರ ಮಧ್ಯಭಾಗದಲ್ಲಿ ಜನವಾಣಿ ಪತ್ರಿಕೆಗೆ ಸೇರಿದರು. ಅಲ್ಲಿ ಆರು ತಿಂಗಳ ಕಾಲ ಕೆಲಸ. ಪತ್ರಿಕಾ ವೃತ್ತಿ ಹೋರಾಟಕ್ಕೆ ತಕ್ಕ ಕಸಬು ಎಂಬ ನಂಬಿಕೆ ಬೇರೂರಿತು, ಎಳೆಯ ಖಾದ್ರಿಯಲ್ಲಿ. ಅದು ಕೊನೆ ತನಕ ಅವರ ಉಸಿರಾಗಿತ್ತು. ಅದೇ ವರ್ಷದ ನವೆಂಬರ್‌ನಲ್ಲಿ ಸೇವಾ ಗ್ರಾಮಕ್ಕೆ ನಯೀತಾಲೀಂ ಶಿಕ್ಷಣ ಶಿಬಿರದಲ್ಲಿ ಸೇರಿಕೊಂಡರು. ಸೇವಾಗ್ರಾಮದಲ್ಲಿ ಗಾಂಧೀಜಿ ಸಾನಿಧ್ಯ. ಆಶ್ರಮಕ್ಕೆ ಬರುತ್ತಿದ್ದ ನೂರಾರು ಪತ್ರಿಕೆಗಳಲ್ಲಿ ಮುಖ್ಯವಾದ ಇಂಗ್ಲಿಷ್ ಪತ್ರಿಕೆಗಳನ್ನೆಲ್ಲ ಓದಿ ಗಾಂಧೀಜಿಯವರ ಅವಗಾಹನೆಗಾಗಿ ಕತ್ತರಿಸಿ ಇಡುವ ಕೆಲಸ. ಅದೂ ಒಂದು ಶಿಕ್ಷಣವಾಗಿ ಪರಿಣಮಿಸಿತು. ಸೇವಾ ಗ್ರಾಮದಿಂದ ಹಲವಾರು ಕನ್ನಡ ಪತ್ರಿಕೆಗಳಿಗೆ ನಿಯಮಿತವಾಗಿ ಲೇಖನಗಳನ್ನು ಬರೆದರು. ವಿಶೇಷ ಸುದ್ದಿಗಳನ್ನು ಕಳುಹಿಸಿದರು.

ಅಲ್ಲಿಂದ ಮೈಸೂರಿಗೆ ಮರಳಿ. ಎಚ್.ಸಿ. ದಾಸಪ್ಪ ದಂಪತಿಗಳ ನೇತೃತ್ವದಲ್ಲಿ ಕೆಲಸ. ಅನಂತರ ಗೆಳೆಯರ ಜತೆಗೂಡಿ ಕರ್ನಾಟಕ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸಂಘಟಿಸಲು ತೀರ್ಮಾನ. ಕಮಲಾದೇವಿ ಚಟ್ಟೋಪಾಧ್ಯಾಯ ಮಾರ್ಗದರ್ಶನ. ಕರ್ನಾಟಕದಾದ್ಯಂತ ಜಯಪ್ರಕಾಶನಾರಾಯಣರ ಪ್ರವಾಸ. ಮಂಗಳೂರಿನಲ್ಲಿ ಸೋಷಲಿಸ್ಟ್ ಸಮ್ಮೇಳನ. 'ಜಾಗೃತಿ' ಪತ್ರಿಕೆ ಸಂಪಾದಕನನ್ನಾಗಿ ಮಾಡಿ ಮುಂಬೈಗೆ ಕಮಲಾದೇವಿ ಕರೆದೊಯ್ದರು. ಅನಂತರ ಅದು ಧಾರವಾಡಕ್ಕೆ ಖಾದ್ರಿಯವರ ನೇತೃತ್ವದಲ್ಲೇ ಸ್ಥಳಾಂತರ. 1948ರ ಜೂನ್ ವೇಳೆಗೆ ಬೆಂಗಳೂರಿಗೆ ಪತ್ರಿಕೆ ವರ್ಗ, ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಮೈಸೂರು ಸೀಮೆಯಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದಲ್ಲಿ ಪಾತ್ರ. 'ಜಾಗೃತಿ' ಕೆಲವು ಸಂಚಿಕೆಗಳು ಬೆಂಗಳೂರಿನಲ್ಲಿ ಪ್ರಕಟಗೊಂಡವು. ಅರಸೊತ್ತಿಗೆ ಇಲ್ಲದ ಕರ್ನಾಟಕ ಆಗಲೇಬೇಕೆಂಬ ಲೇಖನ ಪತ್ರಿಕೆಯಲ್ಲಿ ಪ್ರಕಟವಾಯಿತು. ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ಅಧಿಕಾರಕ್ಕೆ ಬಂದ ಕೆ.ಸಿ. ರೆಡ್ಡಿ ಸರ್ಕಾರ 'ಜಾಗೃತಿ'ಯಿಂದ ಐದು ಸಾವಿರ ರೂಪಾಯಿ 'ಠೇವಣಿ' ಹಣ ಕೇಳಿತು. ಠೇವಣಿ ಹಣಕೊಡಲು ಆಗಲಿಲ್ಲ. ಪತ್ರಿಕೆ ನಿಂತು ಹೋಯಿತು. 'ಜಾಗೃತಿ' ನಾಡಿನೆಲ್ಲೆಡೆ ಬಹು ಜನಪ್ರಿಯವಾಗಿತ್ತು. ಅದರಲ್ಲಿ ಬರುತ್ತಿದ್ದ ರಾಜಕೀಯ ಲೇಖನಗಳನ್ನು ಜನರು ಅತ್ಯಂತ ಆಸಕ್ತಿಯಿಂದ ಎದಿರು ನೋಡುತ್ತಿದ್ದರು.

1948ರ ಏಪ್ರಿಲ್ 15 ರಂದು ನಾಸಿಕ್‌ನಲ್ಲಿ ನಡೆದ ಸಮಾಜವಾದಿಗಳ ಸಮ್ಮೇಳನದಲ್ಲಿ ಪಾಲ್ಗೊಂಡರು. ಅಲ್ಲೇ ಸೋಷಲಿಸ್ಟರು ಕಾಂಗ್ರೆಸ್ ತೊರೆಯಲು ತೀರ್ಮಾನಿಸಿದ್ದು. 1948–50ರ ಅವಧಿಯಲ್ಲಿ ಪ್ರಜಾವಾಣಿ ಸುದ್ದಿ ಸಂಪಾದಕ. ಅನಂತರ ಅದರ ಜಂಟೀ ಸಂಪಾದಕ. ಸಿ.ಜಿ.ಕೆ. ರೆಡ್ಡಿ ಜತೆಗೂಡಿ ಎಚ್.ಎ.ಎಲ್. ಕಾರ್ಮಿಕ ಮುಷ್ಕರದಲ್ಲಿ ಭಾಗವಹಿಸಿದ್ದಕ್ಕೆ ಕೆಲಸಕ್ಕೆ ರಾಜೀನಾಮೆ. ಮತ್ತೆ ರಾಜಕಾರಣಕ್ಕೆ. 1950 – 60ರತನಕ ಸಮಾಜವಾದಿ ಹಾಗೂ ಸರ್ವೋದಯ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಕರ್ನಾಟಕದಲ್ಲಿ ಸಮಾಜವಾದಿ ಚಳವಳಿ ಸಂಘಟಿಸಲು ಊರೂರು ಅಲೆತ. ಪ್ರಸಿದ್ಧ ಕಾಗೋಡು ಸತ್ಯಾಗ್ರಹದಲ್ಲಿ ಮಹತ್ವದ ಪಾತ್ರ. ಸೆರೆವಾಸ ಸ್ವಾತಂತ್ರ್ಯ ಬಂದ ನಂತರವೂ 1952ರ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿ, ಠೇವಣಿ ಉಳಿಸಿಕೊಂಡರು! ಅದು ಒಂದು ಸಾಧನೆಯೇ, ಪ್ರಬಲ ಕಾಂಗ್ರೆಸ್ ಎದುರಿಗೆ. ಆ ಚುನಾವಣೆಗಾಗಿ ಖಾದ್ರಿ ವೆಚ್ಚ ಮಾಡಿದ್ದು 350 ರೂಪಾಯಿ. ಜೆ.ಪಿ. ಸರ್ವೋದಯದ ಕಡೆ ಜಾರಿದಾಗ, ವಿನೋಬಾ ಸೆಳೆತಕ್ಕೆ ಖಾದ್ರಿ ಸಹ. ಜೆ.ಪಿ. ವಿನೋಬಾ ಭಾಷಣಗಳ ಕನ್ನಡ ಭಾಷಾಂತರಕಾರರಾಗಿ ಮನಮುಟ್ಟುವ ಭಾಷಣ ಶೈಲಿಯಿಂದ ಜನಪ್ರಿಯ.

ಮೈಸೂರಿನಲ್ಲಿ ಗಾಂಧೀಗ್ರಂಥವಾಲೆಯಲ್ಲಿ ಯಾಮುನಾಚಾರ್ಯರ ಜತೆ ಸಂಪಾದಕ ಮಂಡಲಿಯಲ್ಲಿ. ಗಾಂಧೀ ಸಾಹಿತ್ಯವನ್ನು ಕನ್ನಡಕ್ಕೆ ತರುವ ಕೆಲಸದಲ್ಲಿ ಭಾಗಿ. 'ಗಾಂಧೀ ಅರ್ಥವಿಚಾರ' ಹಾಗೂ 'ರಾಜನೀತಿ' ಅನುವಾದಿಸಿದರು. 1960ರಿಂದ ಮತ್ತೆ ಬೆಂಗಳೂರಿಗೆ. ಈ ಬಾರಿ, 'ಸಂಯುಕ್ತ ಕರ್ನಾಟಕ'ದ ಸುದ್ದಿ ಸಂಪಾದಕರಾಗಿ ಸೇರಿದರು. ಆಗ 'ವಿಶ್ವಮಿತ್ರ' ಎಂಬ ಹೆಸರಿನಲ್ಲಿ ವಾರ, ವಾರವೂ ಬಿಡಿಸುತ್ತಿದ್ದ ನುಡಿಚಿತ್ರ 'ವಾರದ ವ್ಯಕ್ತಿ' ಬಹಳ ಜನಪ್ರಿಯವಾಗಿತ್ತು. 1963 – 1965ರತನಕ ತಾಯಿನಾಡು ಬಳಗ ಆರಂಭಿಸಿದರು, 'ಗೋಕುಲ' ವಾರಪತ್ರಿಕೆ ಸಂಪಾದಕ, ಹೊಸತನ, ಹೊಸ ಲೇಖಕರ, ಕಲಾವಿದರ ಪರಿಚಯ. ನಾವಿನ್ಯತೆಗೆ ಹೆಸರಾಗಿ 'ಗೋಕುಲ', ವಾರಪತ್ರಿಕೆ ಬಂದಿತು. ಅನೇಕಾನೇಕ ಹೊಸ ಬರೆಹಗಾರರು 'ಗೋಕುಲ'ದ ಮೂಲಕ ನಾಡಿಗೆ ದೊರೆತರು. ಪುನಃ 'ಪ್ರಜಾವಾಣಿ' ಕೈಬೀಸಿ ಕರೆಯಿತು.

1965 – 1974ರವರೆಗೆ ಮತ್ತೆ ಪ್ರಜಾವಾಣಿ ಸುದ್ದಿ ಸಂಪಾದಕ. 1974ರ ಕೊನೆಯಿಂದ ಏಪ್ರಿಲ್ 1978ರವರೆಗೆ 'ಸಂಯುಕ್ತ ಕರ್ನಾಟಕ' ಪತ್ರಿಕಾ ಬಳಗದ ಪ್ರಧಾನ ಸಂಪಾದಕ. ಜುಲೈ 1978 – 1990ಮೇ 11ರವರೆಗೆ ಅಂದರೆ ಅವರ ನಿಧನದವರೆಗೆ 'ಕನ್ನಡ ಪ್ರಭ'ದ ಸಂಪಾದಕ.

1975ರ ತುರ್ತು ಪರಿಸ್ಥಿತಿಯ ಕಾಲದಲ್ಲಿ ಖಾದ್ರಿ ಅವರ ಚಡಪಡಿಕೆ ಸಮೀಪದಲ್ಲಿದ್ದವರಿಗೆ ಗೊತ್ತಾಗುತಿತ್ತು. ಆದರೂ ಭೂಗತ ಚಳವಳಿಯಲ್ಲಿ ಸಕ್ರಿಯ ರಾಜರು ಜಾರ್ಜ್‌ಫರ್ನಾಂಡೀಸ್, ಸಿ.ಜಿ.ಕೆ. ರೆಡ್ಡಿ–ಬರೋಡಾ ಡೈನಮೈಟ್ ಪ್ರಕರಣದಲ್ಲಿ ಗುಪ್ತಗಾಮಿನಿಯಾಗಿ ಖಾದ್ರಿ ಕೆಲಸ ಮಾಡಿದರು.

ಕಾಂಗ್ರೆಸ್ ವಿರೋಧಿ ಸರ್ಕಾರಗಳ ರಚನೆಯಲ್ಲಿ ಬಹಳ ಆಸಕ್ತಿ, ಖಾದ್ರಿ ಅವರ ಸಹಜ ವೈಚಾರಿಕ ಧೋರಣೆ. ರಾಮಕೃಷ್ಣ ಹೆಗಡೆ ಸರ್ಕಾರ ರಚಿತವಾದಾಗ, 1984ರಲ್ಲಿ ರಾಜ್ಯ ವಿಧಾನಪರಿಷತ್ ಸದಸ್ಯರಾಗಿ ನಾಮಕರಣ.

ಮುದ್ದಾದ ಅಕ್ಷರಗಳು, ಅಚ್ಚುಕಟ್ಟಾದ ವಿಚಾರಮಂಡನೆ. ಗಂಭೀರ, ಉಡಾಫೆಗೆ ಅವಕಾಶವೇ ಇಲ್ಲ. ಯುವ ಪೀಳಿಗೆ ಪ್ರತಿಭೆ ಕಂಡರೆ ಬಹಳ ಮೆಚ್ಚುಗೆ, ಪ್ರೋತ್ಸಾಹ. ಪೀಳಿಗೆಯ ಅಂತರ ಕಾಣದ ಪತ್ರಕರ್ತ.

ಪ್ರಜಾವಾಣಿ ಪತ್ರಿಕೆಯಲ್ಲಿದ್ದಾಗ ಲಂಡನ್ನಿನ ಕಾರ್ಡಿಫ್‌ಗೆ ಥಾಂಸನ್ ಪ್ರತಿಷ್ಠಾನದಲ್ಲಿ ವಿಶೇಷ ಪತ್ರಿಕೋದ್ಯಮ ತರಬೇತಿ. ಮೈಸೂರು ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷ. ಎ.ಎಫ್.ಡಬ್ಲ್ಯು.ಜೆ. ಕಾರ್ಯದರ್ಶಿ. ಅಖಿಲ ಭಾರತ ಸಂಪಾದಕರ ಸಮ್ಮೇಳನದ ಸ್ಥಾಯೀ ಸಮಿತಿ ಸದಸ್ಯ, ಕರ್ನಾಟಕ ಪತ್ರಿಕಾ ಅಕಾಡೆಮಿ (ಈಗ ಅದು ಮಾಧ್ಯಮ ಅಕಾಡೆಮಿ ಆಗಿದೆ) ಅಧ್ಯಕ್ಷ. ಅಮೇರಿಕ, ಯೂರೋಪ್, ಇರಾನ್, ಜಪಾನ್ ಪ್ರವಾಸಗಳನ್ನು ರಸವತ್ತಾಗಿ ಓದುಗರ ಜತೆ ಲೇಖನವಾಗಿ ಹಂಚಿಕೊಂಡರು.

ಗಾಂಧೀ ಅರ್ಥವಿಚಾರ, ರಾಜನೀತಿ, ಭೂದಾನಯಜ್ಞ ಸಮಗ್ರ ದರ್ಶನ, ಜಾನ್ ಎಫ್ ಕೆನಡಿ, ಅಮೆರಿಕದ ಕಾರ್ಮಿಕ ವರ್ಗದ ಕತೆ, ವಿನೋಬಾ ಕಂಡ ಗಾಂಧೀ, ಬರೋಡ ಡೈನಮೈಟ್ ಸಂಚು, ರಾಮಮನೋಹರ ಲೋಹಿಯಾ ಖಾದ್ರಿ ಶಾಮಣ್ಣ ಬರೆದ–ಅನುವಾದ ಮಾಡಿದ ಕೃತಿಗಳು.

ಸಂಪಾದಕೀಯ, ಅಗ್ರಲೇಖನ, ಮುಖಪುಟ ಸಂಪಾದಕೀಯಗಳಿಗೆ ಎತ್ತಿದ ಕೈ. ಅವರ ವ್ಯಕ್ತಿಚಿತ್ರಗಳು ಚಿತ್ತಾಕರ್ಷಕ. ಪುಟ್ಟ ಪುಟ್ಟ ವಾಕ್ಯಗಳಿಂದ, ಕನ್ನಡಕ್ಕೆ ಹೊಸತನತಂದರು. ಅವರ ಸಂಸ್ಕೃತ ಹಿಂದಿ ಜ್ಞಾನ, ಕನ್ನಡಕ್ಕೆ ವರವಾಯಿತು. ಖಾದ್ರಿಯವರ ಬಾನುಲಿ ಭಾಷಣಗಳು, ಚಿಂತನ ಕಾರ್ಯಕ್ರಮಗಳು ಶ್ರೋತೃಗಳಿಗೆ ರಸದೂಟ. ಜೀವನದಲ್ಲೂ ಶಿಸ್ತು, ಅಚ್ಚುಕಟ್ಟುತನಕ್ಕೆ ಆದ್ಯತೆ. (ಕೆ.ಎಸ್.ಎ.)

**ಖಾನಾಪುರ :** ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ತೀರ ದಕ್ಷಿಣದ ತಾಲ್ಲೂಕು ಮತ್ತು ಅದರ ಕೇಂದ್ರ. ತಾಲ್ಲೂಕಿನ ವಿಸ್ತೀರ್ಣ 1639 ಚ.ಕಿಮೀ. ಸಹ್ಯಾದ್ರಿ ಬೆಟ್ಟಗಳ ಪ್ರದೇಶದಲ್ಲಿರುವ ತಾಲ್ಲೂಕು ಪ್ರಕೃತಿ ಸೌಂದರ್ಯದಿಂದ ಕೂಡಿದೆ. ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಎತ್ತರವಾದ ಬೆಟ್ಟಗಳು, ಈಶಾನ್ಯ ಹಾಗೂ ಪೂರ್ವದಲ್ಲಿ ಬಯಲುಪ್ರದೇಶ, ದಕ್ಷಿಣ ಹಾಗೂ ನೈಋತ್ಯ ಭಾಗದಲ್ಲಿ ದಟ್ಟವಾದ ಕಾಡು ಇವೆ. ತಾಲ್ಲೂಕಿನ ವಾಯುಗುಣ ಹಿತಕರವಾದ್ದು. ಇಲ್ಲಿಯ ವಾರ್ಷಿಕ ಸರಾಸರಿ ಮಳೆ 142 ಸೆಂಮೀ. ಕುಳುಕುಂಬಿಯಲ್ಲಿ ಉಗಮಿಸುವ ಮಲಪ್ರಭಾ ನದಿ ತಾಲ್ಲೂಕಿನ ಉತ್ತರಾರ್ಧದಲ್ಲಿಯೇ ಹರಿದು ಪೂರ್ವಕ್ಕೆ ಸಾಗುತ್ತದೆ. ತಾಲ್ಲೂಕಿನ ಎಲ್ಲ ಕಡೆಗಳಲ್ಲೂ ಬತ್ತದ ಗದ್ದೆಗಳು ಮತ್ತು ಅಲ್ಲಲ್ಲಿ ಹಣ್ಣಿನ ತೋಟಗಳು ಉಂಟು. ಬತ್ತ, ಮೆಣಸಿನಕಾಯಿ ಇವು ತಾಲ್ಲೂಕಿನ ಮುಖ್ಯ ಬೆಳೆಗಳು. ದಕ್ಷಿಣ ಭಾಗದಲ್ಲಿರುವ ಕಾಡಿನಲ್ಲಿ ಬಿದಿರು, ಸಾಗವಾನಿ, ಶಿವನಿ, ಮತ್ತಿ ಮುಂತಾದ ಮರಗಳುಂಟು. ಮರಮುಟ್ಟು, ಉರುವಲು ಕಟ್ಟಿಗೆ ಇವು ಮುಖ್ಯ ಅರಣ್ಯೋತ್ಪನ್ನಗಳು. ಈ ತಾಲ್ಲೂಕಿನ ಜನಸಂಖ್ಯೆ 2,43,154 (2001).

ಲೋಂಡಾ ಒಂದು ಪ್ರಮುಖ ರೈಲ್ವೆ ಕೂಡುನಿಲ್ದಾಣ. ಇದರ ಸಮೀಪದಲ್ಲಿ ಮ್ಯಾಂಗನೀಸ್ ಗಣಿಗಳಿವೆ. ಹಳಶಿಯಲ್ಲಿ ಪುರಾತನ ವರಾಹ ಹಾಗೂ ನೃಸಿಂಹ ದೇವಸ್ಥಾನಗಳಿವೆ. ನಂದಗಡ ವ್ಯಾಪಾರಕೇಂದ್ರ. ಇಲ್ಲಿ ಅನೇಕ ಅಕ್ಕಿ ಗಿರಣಿಗಳುಂಟು. ಖಾನಾಪುರ–ಜಂಬೋಟಿ ರಸ್ತೆಯ ಸಮೀಪದಲ್ಲಿ, ಖಾನಾಪುರದ ವಾಯವ್ಯಕ್ಕೆ ಸು. 13 ಕಿ.ಮೀ. ದೂರದಲ್ಲಿ ಮಲಪ್ರಭಾ ನದಿಯ ಆಸೋಗಾ ಜಲಪಾತವಿದೆ.

ಖಾನಾಪುರ ಪಟ್ಟಣದ ಜನಸಂಖ್ಯೆ 16,563 (2001). ಇದು ಬೆಂಗಳೂರು–ಪುಣೆ ರೈಲುಮಾರ್ಗದಲ್ಲಿ ಲೋಂಡಾ ಮತ್ತು ಬೆಳಗಾಂವಿಗಳ ಮಧ್ಯದಲ್ಲಿರುವ ಪ್ರಮುಖ ನಿಲ್ದಾಣ. ಇಲ್ಲಿಂದ ಬೆಳಗಾವಿ ದಾಂಡೇಲಿ ಗೋವೆಗಳಿಗೆ ಬಸ್ಸು ಸೌಕರ್ಯವುಂಟು. ಖಾನಾಪುರ ಸಾಗವಾನಿ ಮತ್ತು ಬಿದಿರುಗಳ ಸಂಗ್ರಹಸ್ಥಳ, ವ್ಯಾಪಾರಕೇಂದ್ರ. ಇಲ್ಲಿ ಪಿಂಗಾಣಿ ಸಾಮಾನು ಮತ್ತು ಮಂಗಳೂರು ಹೆಂಚು ತಯಾರಿಸುವ ಕಾರ್ಖಾನೆಗಳುಂಟು. (ಸಿ.ಎಸ್.ಜೆ.)

**ಖಾಫೀ ಖಾನ್ :** ಮೊಗಲರ ಕಾಲದಲ್ಲಿದ್ದ ಒಬ್ಬ ಇತಿಹಾಸಕಾರ. ಮಹಮ್ಮದ್ ಹಷೀಂ ಅಥವಾ ಹಾಷಿಂ ಅಲೀಖಾನ್ ಇವನ ನಿಜವಾದ ಹೆಸರು. ಈತ ಬರೆದ ಮುಂತಖಿದ್–ಉಲ್–ಉಬಬ್ ಅಥವಾ ತಾರಿಖ್ ಇ ಖಾಫೀಖಾನ್ ಔರಂಗ್‌ಜೇಬನ ಕಾಲದ ಇತಿಹಾಸ ತಿಳಿಯಲು ನೆರವಾಗುವ ಪ್ರಮುಖ ಆಧಾರ ಗ್ರಂಥ.

ದೆಹಲಿಯ ಪ್ರತಿಷ್ಠಿತ ಮನೆತನವೊಂದರಲ್ಲಿ ಜನಿಸಿದ ಖಾಫೀ ಖಾನನ ತಂದೆ ಖ್ವಾಜಾಮೀರ್ ಕೂಡ ಒಬ್ಬ ಇತಿಹಾಸಕಾರನಾಗಿದ್ದ. ಆರಂಭದಲ್ಲಿ ಆತ ಶಾಹಜಹಾನನ ಮಗ ಮುರಾದ್ ಬಕ್ಷನ ಕೈಕೆಳಗೆ ಉನ್ನತ ಹುದ್ದೆಯಲ್ಲಿದ್ದು ಅನಂತರ ಔರಂಗಜೇಬನ ಅಡಿಯಲ್ಲಿ ನೌಕರನಾಗಿದ್ದ. ಅವನ ಮಗನಾದ ಖಾಫೀ ಖಾನ್ ಕೂಡ ಔರಂಗಜೇಬನ ಕೈಕೆಳಗೆ ರಾಜಕೀಯ ಮತ್ತು ಸೈನಿಕ ಹುದ್ದೆಗಳಲ್ಲಿದ್ದ. ಔರಂಗ್‌ಜೇಬನ ಮರಣಾನಂತರವೂ ಮೊಗಲ್ ಆಡಳಿತದಲ್ಲಿ ಅಧಿಕಾರಿಯಾಗಿದ್ದ. ಔರಂಗ್‌ಜೇಬನ ಕಾಲದಲ್ಲಿ ಗುಜರಾತಿನ ಮೊಗಲ್ ಸುಬೇದಾರ್ ಖಾಫೀ ಖಾನನನ್ನು ಮುಂಬಯಿ ದ್ವೀಪದಲ್ಲಿದ್ದ ಬ್ರಿಟಿಷರಲ್ಲಿಗೆ ದೂತನಾಗಿ ಕಳುಹಿಸಿದ್ದ. ಆ ಸಮಯದಲ್ಲಿ ಅವರ ನಡೆವಳಿಕೆಯನ್ನು ಈತ ಗಮನಿಸಿದ. ಅವರು ವಿನಾಕಾರಣ, ರಾಜಕೀಯ ಘನತೆಗೆ ಕುಂದು ಬರುವ ರೀತಿಯಲ್ಲಿ, ನಗುತ್ತಿದ್ದರೆಂದು ಈತ ಬರೆದಿಟ್ಟಿದ್ದಾನೆ. ದಖನಿನ ಮೇಲೆ ಔರಂಗ್‌ಜೇಬ್ ಕೈಗೊಂಡ ಸುದೀರ್ಘ ದಂಡಯಾತ್ರೆಯ ಕಾಲದಲ್ಲಿ ಆತನ ಜೊತೆಯಲ್ಲಿದ್ದ ಖಾಫೀ ಖಾನ್ ಮರಾಠರ ಚಟುವಟಿಕೆಗಳ ಬಗ್ಗೆಯೂ ಅನೇಕ ವಿವರಗಳನ್ನು ನೀಡಿದ್ದಾನೆ.

ಖಾಫೀ ಖಾನ್ ಬರೆದಿರುವ ಇತಿಹಾಸ ಬಾಬರನ ಆಳ್ವಿಕೆಯಿಂದ ಆರಂಭವಾಗುತ್ತದೆ. ಅದಕ್ಕೆ ಮೊದಲು ನೂಆದಿಂದ ಬಾಬರನವರೆಗಿನ ಮೊಗಲರ ಹಾಗೂ ಟಾರ್ಟರರ ಇತಿಹಾಸದ ಸೂಕ್ಷ್ಮ ಪರಿಚಯವನ್ನು ಮಾಡಿಕೊಡಲಾಗಿದೆ. ಅಕ್ಬರನ ಮರಣದ ವರೆಗಿನ ಇತಿಹಾಸ ಸಂಕ್ಷಿಪ್ತವಾಗಿದ್ದು ಅನಂತರ 130 ವರ್ಷಗಳ ಇತಿಹಾಸ ಸುದೀರ್ಘವಾಗಿದೆ. ಇದರಲ್ಲಿ ಕೊನೆಯ 53 ವರ್ಷಗಳಲ್ಲಿ ನಡೆದ ಘಟನೆಗಳಿಗೆ ಈತ ಪ್ರತ್ಯಕ್ಷದರ್ಶಿಯಾಗಿದ್ದ ಕಾರಣ ಇದು ಸಮಕಾಲೀನ ಇತಿಹಾಸ. ಈ ಗ್ರಂಥದ ರಚನೆಯ ಕಾಲದಲ್ಲಿ ಇದರ ಕೆಲವು ಭಾಗಗಳನ್ನು ಅವಲೋಕಿಸಿದ ಔರಂಗ್‌ಜೇಬ್ ಈ ಗ್ರಂಥವನ್ನು ಬರೆಯಕೂಡದೆಂದು ನಿಷೇಧಿಸಿದ. ಆದರೆ ಗ್ರಂಥಕರ್ತ ಮಾತ್ರ ಇದರಿಂದ ವಿಚಲಿತನಾಗದೆ ತನ್ನ ಕಾರ್ಯವನ್ನು ಗುಪ್ತವಾಗಿ ಮುಂದುವರಿಸಿದ. ಔರಂಗ್‌ಜೇಬನ ಅನಂತರದ ಮೊಗಲ್ ಅರಸನಾದ ಮಹಮ್ಮದ್ ಷಹ ಇದನ್ನು ಕಂಡು ಮೆಚ್ಚಿ, ಗುಪ್ತರೀತಿಯಲ್ಲಿ ಬರೆದ ಕಾರಣ ಗ್ರಂಥಕರ್ತನಿಗೆ ಖಾಫೀ ಖಾನ್ ಎಂದು ಬಿರುದನ್ನು ನೀಡಿದನೆಂಬ ಒಂದು ಕಥೆ ಪ್ರಚಲಿತವಾಗಿದೆ. ಆದರೆ ಇಲಿಯಟ್ ಇದನ್ನು ಒಪ್ಪಿಲ್ಲ. ಇವನ ಪಿತೃಗಳ ಮೂಲ ನಿವಾಸವಾದ ಖಾಫ್ ಎಂಬುದು ಖುರಸಾನ್‌ಗೆ ಸೇರಿದ ಒಂದು ಜಿಲ್ಲೆಯ ಹೆಸರೆಂದೂ ಖ್ವಾಫಿ ಎಂಬುದು ಮನೆತನದ ಹೆಸರೆಂದೂ ಸೂಚಿಸಿದ್ದಾನೆ. ಇವನ ತಂದೆಯ ಹೆಸರು ಖ್ವಾಜಾಮೀರ್ ಖ್ವಾಫಿ ಅಥವಾ ಮೀರ್ ಖ್ವಾಫಿ ಎಂಬುದನ್ನು ಇಲ್ಲಿ ಗಮನಿಸಬೇಕು. ತೈಮೂರನ ಮನೆತನದ ದೊರೆಗಳಲ್ಲಿ ಮಾತ್ರವೇ ಅಲ್ಲದೆ, ದೆಹಲಿಯ ದೊರೆಗಳಲ್ಲಿಯೇ ಸಿಕಂದರ್ ಲೋದಿಯ ಕಾಲದಿಂದಲೂ ಶ್ರದ್ಧೆ ಸರಳತೆ ನ್ಯಾಯಪರತೆಗಳಲ್ಲಿ ಔರಂಗ್‌ಜೇಬನಷ್ಟು ಪ್ರಸಿದ್ಧಿ ಪಡೆದವರು ಬೇರೆ ಯಾರೂ ಇರಲಿಲ್ಲ. ಧೈರ್ಯದಲ್ಲಿ, ದೀರ್ಘಕಾಲದ ಕಷ್ಟವನ್ನು ಅನುಭವಿಸುವುದರಲ್ಲಿ, ತರ್ಕಬದ್ಧವಾದ ನಿರ್ಣಯಗಳನ್ನು ನೀಡುವುದರಲ್ಲಿ ಈತ ಅದ್ವಿತೀಯನಾಗಿದ್ದ. ಪರಸ್ಪರ ಸ್ಪರ್ಧೆಗಳ ಫಲವಾಗಿ ಇವನ ಅಧೀನದಲ್ಲಿದ್ದ ಶ್ರೀಮಂತ ವರ್ಗಗಳಲ್ಲಿ ಒಡಕುಗಳುಂಟಾಗಿ, ಇವನ ಪ್ರತಿಯೊಂದು ಯೋಜನೆಯೂ ವ್ಯರ್ಥವಾಯಿತು. ಪ್ರತಿಯೊಂದೂ ವಿಳಂಬದ ಹಾದಿ ಹಿಡಿದು ತನ್ನ ಧ್ಯೇಯವನ್ನು ಸಾಧಿಸಲಾರದೆ ಹೋಯಿತು. ಮಾನವ ಸಹಜವಾದ ಅನೇಕ ಸುಖೋಪಭೋಗಗಳನ್ನು ಆತ ಸ್ವತಃ ನಿರಾಕರಿಸಿದ–ಎಂದು ಔರಂಗ್‌ಜೇಬನ ವಿಚಾರವಾಗಿ ಖಾಫೀ ಖಾನ್ ಹೇಳಿದ್ದಾನೆ. ತನ್ನ ಸ್ವಾಮಿಯ ಶತ್ರುವಾದ ಶಿವಾಜಿಯ ವಿಚಾರವಾಗಿ ಬರೆಯುತ್ತ ತನ್ನ ಪ್ರದೇಶದಲ್ಲಿಯ ಜನರ ಮಾನರಕ್ಷಣೆಗಾಗಿ ಶಿವಾಜಿ ಸದಾ ಶ್ರಮಿಸುತ್ತಿದ್ದ; ಮಹಮ್ಮದೀಯ ಸ್ತ್ರೀಯರು ಮತ್ತು ಮಕ್ಕಳು ತನಗೆ ಸೆರೆ ಸಿಕ್ಕಲ್ಲಿ ಅವರ ಗೌರವವನ್ನು ಕಾಪಾಡಲು ಆತ ಎಚ್ಚರ ವಹಿಸುತ್ತಿದ್ದ ಎಂದು ಈತ ಹೇಳಿರುವುದು ಇವನ ನಿರಪೇಕ್ಷ ಬರವಣಿಗೆಗೆ ಉದಾಹರಣೆ. ನೂರಾರು ಪುಟಗಳ ಈ ಸುದೀರ್ಘ ಕಥನ ಸಮ್ರಾಟ್ ಮಹಮ್ಮದ್ ಷಹನ ಹದಿನಾಲ್ಕನೆಯ ವರ್ಷದವರೆಗೆ ಮುಂದುವರಿದಿದೆ. (ಜಿ.ಬಿ.ಆರ್.; ಎಸ್.ಎನ್.ಕೆ.ಎ.)

**ಖಾರವೇಲ :** ಪ್ರ.ಶ.ಪೂ. ಒಂದನೆಯ ಶತಮಾನದ ಉತ್ತರಾರ್ಧದಲ್ಲಿ ಕಳಿಂಗ ದೇಶವನ್ನಾಳುತ್ತಿದ್ದ ದೊರೆ. ಈತನದು ಚೇದಿವಂಶ. ಮೇಘವಾಹನ ಈತನ ಮೂಲಪುರುಷನೆಂದು ಪರಿಗಣಿಸಲಾಗಿದೆ. ಭುವನೇಶ್ವರದ (ಒರಿಸ್ಸ) ಬಳಿಯ ಉದಯಗಿರಿ ಬೆಟ್ಟದ ಹಾಥಿಗುಂಫಾ ಎಂಬ ಗವಿಯಲ್ಲಿ ಖಾರವೇಲನ ಪರಾಕ್ರಮವನ್ನು ಬಣ್ಣಿಸುವ ಶಾಸನವಿದೆ. ಈತ ಶಾತವಾಹನ ಕುಲದ ಸಾತಕರ್ಣಿಯೊಂದಿಗೆ ಯುದ್ಧ ಮಾಡಿದ. ವಿದರ್ಭದ ಭೋಜನನ್ನೂ ರಠಿಕರನ್ನೂ ಸೋಲಿಸಿದ, ಅಂಗ ಮತ್ತು ಮಗಧ ರಾಜ್ಯಗಳ ಮೇಲೆ ವಿಜಯಯಾತ್ರೆ ನಡೆಸಿದ, ಎಂದು ಮುಂತಾಗಿ ಈತನ ಸಾಧನೆಗಳ ವಿವರಗಳು ಇದರಿಂದ ತಿಳಿಯುತ್ತವೆ. ಈತ ಜೈನಮತಾವಲಂಬಿ; ಆದರೂ ಅನ್ಯಮತಗಳಿಗೆ ಪುರಸ್ಕಾರ ನೀಡಿದ. ಇವನಿಂದ ಸಂಗೀತಾದಿ ಕಲೆಗಳಿಗೆ ಪ್ರೋತ್ಸಾಹ ಲಭ್ಯವಾಯಿತು. ಈ ಶಾಸನದಲ್ಲಿ ಈತನನ್ನು ಕ್ಷೇಮರಾಜ, ವೃದ್ಧರಾಜ, ಭಿಕ್ಷುರಾಜ, ಧರ್ಮರಾಜ ಎಂದು ಪ್ರಶಂಸಿಸಲಾಗಿದೆ. (ಪಿ.ಬಿ.ಡಿ.)

**ಖಾರವೇಲನ ಶಾಸನಗಳು:** ಖಾರವೇಲ ಮಹಾರಾಜನ ಎರಡು ಶಾಸನಗಳು ಒರಿಸ್ಸದಲ್ಲಿ ಭುವನೇಶ್ವರದ ಬಳಿಯ ಉದಯಗಿರಿ–ಖಂಡಗಿರಿ ಪರ್ವತಶ್ರೇಣಿಯ ಹಾಥಿಗುಂಫಾ ಮತ್ತು ಮಂಚಪುರಿ ಗುಹೆಗಳಲ್ಲಿ ದೊರೆತಿವೆ. ಎರಡೂ ಶಾಸನಗಳೂ ಬ್ರಾಹ್ಮೀ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿವೆ. ಮಂಚಪುರಿ ಗುಹಾಶಾಸನ ಮೂರೇಸಾಲುಗಳಿಂದ ಕೂಡಿದೆ. ಅರ್ಹಂತನ ಪ್ರಾಸಾದವನ್ನೂ (ಶಾಸನವನ್ನು ಕೊರೆಯಲಾಗಿರುವ) ಕಳಿಂಗದ ಶ್ರಮಣರ ಗುಹೆಯನ್ನೂ ಕಳಿಂಗ ಚಕ್ರವರ್ತಿ ಖಾರವೇಲನ ಅಗ್ರಮಹಿಷಿ ಮಾಡಿಸಿದಳೆಂದು ತಿಳಿದುಬರುತ್ತದೆ.

ಖಾರವೇಲನ ಹಾಥಿಗುಂಫಾ ಶಾಸನ ಹಲವು ದೃಷ್ಟಿಗಳಿಂದ ಐತಿಹಾಸಿಕ ಮಹತ್ತ್ವದ್ದಾಗಿದೆ. ಹದಿನೇಳು ಸಾಲುಗಳಲ್ಲಿ ಕೊರೆಯಲಾಗಿರುವ ಈ ಶಾಸನದ ಪಾಠ ಖಾರವೇಲನ ಹುಟ್ಟಿನಿಂದ, ಮೂವತ್ತೇಳು ವರ್ಷಗಳ ಅವಧಿಯ ಅವನ ಜೀವನದ ಒಂದು ಸಂಕ್ಷಿಪ್ತ ಪರಿಚಯವನ್ನು ಒದಗಿಸಿಕೊಡುವ ರೀತಿಯಲ್ಲಿ ರಚಿತವಾಗಿದೆ. ಶಾಸನದಲ್ಲಿ ನಮೂದಿಸಲಾಗಿರುವ ಮುಖ್ಯ ವಿಷಯಗಳ ಸಾರಾಂಶ ಹೀಗಿದೆ: ಆರ್ಯ, ಮಹಾರಾಜ, ಮಹಾಮೇಘವಾಹನ, ಚೇದಿರಾಜ ವಂಶವರ್ಧನ, ಕಳಿಂಗಾಧಿಪತಿ ಖಾರವೇಲ (ತನ್ನ ಜೀವನದ ಮೊದಲ) 15 ವರ್ಷಗಳನ್ನು ಬಾಲಕ್ರೀಡೆಗಳಲ್ಲಿ ಕಳೆದ ಅನಂತರ ಸಕಲ ಶಾಸ್ತ್ರಗಳಲ್ಲೂ ನೈಪುಣ್ಯವನ್ನು ಗಳಿಸಿ ಒಂಬತ್ತು ವರ್ಷಗಳ ಕಾಲ ಯುವರಾಜನಾಗಿ ಮೆರೆದ. ಹೀಗೆ 24 ವರ್ಷದವನಿದ್ದಾಗ ಕಳಿಂಗ ರಾಷ್ಟ್ರದ ಮಹಾರಾಜನಾಗಿ ಪಟ್ಟಗಟ್ಟಿಸಿಕೊಂಡು, ಚಂಡಮಾರುತದ ಹಾವಳಿಯಿಂದ ಜೀರ್ಣವಾಗಿದ್ದ ಕಳಿಂಗನಗರದ ಗೋಪುರ, ಪ್ರಾಕಾರ, ನಿವೇಶನ ಇವನ್ನು ತನ್ನ ಆಳ್ವಿಕೆಯ ಮೊದಲ ವರ್ಷದಲ್ಲಿ ಪುನರುದ್ಧಾರಗೊಳಿಸಿದ. ಎರಡನೆಯ ರಾಜ್ಯಸಂವತ್ಸರದಲ್ಲಿ ಸಾತಕರ್ಣಿಯ ಪ್ರಭಾವವನ್ನು ಕಡೆಗಣಿಸಿ ತುರಗ ಗಜ ಪದಾತಿ ರಥಗಳಿಂದ ಕೂಡಿದ ತನ್ನ ಸೈನ್ಯವನ್ನು ಪಶ್ಚಿಮದ ಪ್ರದೇಶಗಳಿಗೆ ಕಳುಹಿಸಿ ಕೃಷ್ಣವೇಣ್ಣಾನದೀ ತಟದ ಅಸಿಕ (ಋಷಿಕ್) ನಗರವನ್ನು

ಆಕ್ರಮಿಸಿದ. ಗಂಧರ್ವ ವಿದ್ಯೆಯಲ್ಲಿ ಪರಿಣತನಾದ ಖಾರವೇಲ ಮೂರನೆಯ ವರ್ಷದಲ್ಲಿ ನೃತ್ಯಗೀತ ವಾದ್ಯಾದಿ ಪ್ರದರ್ಶನಗಳನ್ನು ಏರ್ಪಡಿಸಿ ರಾಜಧಾನಿಯ ಜನರನ್ನು ಸಂತೋಷಗೊಳಿಸಿದ. ನಾಲ್ಕನೆಯ ವರ್ಷದಲ್ಲಿ ರಠಿಕ ಮತ್ತು ಭೋಜಕ ಸಮುದಾಯದವರು ತನ್ನ ಪಾದಗಳಿಗೆ ಎರಗುವಂತೆ ಮಾಡಿದ. 5ನೆಯ ವರ್ಷದಲ್ಲಿ ಹಿಂದೆ ನಂದರಾಜ ತೋಡಿಸಿದ್ದ ಕಾಲುವೆಯ ನೀರು ತನ್ನ ರಾಜಧಾನಿಯನ್ನೂ ತಲುಪುವಂತೆ ಮಾಡಿದನಷ್ಟೇ ಅಲ್ಲದೆ ತನ್ನ ಆಳ್ವಿಕೆಯ ಆರನೆಯ ವರ್ಷದಲ್ಲಿ ನಗರದ ಹಾಗೂ ಗ್ರಾಮೀಣ ಪ್ರಜೆಗಳಿಗೆ ಅಸಂಖ್ಯಾತ ಧನಕನಕಾದಿಗಳನ್ನು ಧಾರೆಯೆರೆದ. 7ನೆಯ ವರ್ಷದಲ್ಲಿ ಅವನ ಪಟ್ಟದರಸಿ ಅವನ ಶಿಶುವಿನ ತಾಯಾದಳು. ಎಂಟನೆಯ ವರ್ಷದಲ್ಲಿ ಗೊರಥಗಿರಿಯನ್ನು ಆಕ್ರಮಿಸಿಕೊಂಡು ರಾಜಗೃಹ ನಗರಕ್ಕೆ ಯಶಸ್ವಿಯಾಗಿ ಮುತ್ತಿಗೆ ಹಾಕಿದ. ಈ ಸುದ್ದಿ ತಿಳಿದ ಯವನ ರಾಜ ದಿಮಿತ ಮಧುರೆಗೆ ಪಲಾಯನಗೈದ. ಅದೇ ವರ್ಷದಲ್ಲಿ ಖಾರವೇಲ ಬ್ರಾಹ್ಮಣರಿಗೆ ಕರಪರಿಹಾರ ನೀಡಿದ. ತನ್ನ ಆಳ್ವಿಕೆಯ 9ನೆಯ ವರ್ಷದಲ್ಲಿ 38 ಲಕ್ಷ ಮುದ್ರೆಗಳ ವೆಚ್ಚದಲ್ಲಿ ಮಹಾ ವಿಜಯವೆಂಬ ಅರಮನೆಯನ್ನು ನಿರ್ಮಿಸಿದ. ಹತ್ತನೆಯ ವರ್ಷದಲ್ಲಿ ಭಾರತ ವರ್ಷದುದ್ದಕ್ಕೂ ದಿಗ್ವಿಜಯ ಪ್ರಯಾಣವನ್ನು ಕೈಗೊಂಡ. ಹನ್ನೊಂದನೆಯ ವರ್ಷದಲ್ಲಿ, ಪಲಾಯನಗೈದ ವೈರಿರಾಜರುಗಳ ಮಣಿ ರತ್ನಗಳನ್ನು ವಶಪಡಿಸಿಕೊಂಡ. ಪೂರ್ವದಲ್ಲಿ ರಾಜಧಾನಿ ಪಟ್ಟಣವಾಗಿ ಮೆರೆದಿದ್ದ ಪೀಥುಂಡವೆಂಬ ನಗರವನ್ನು ನೆಲಸಮ ಮಾಡಿ, ತನ್ನ ರಾಷ್ಟ್ರದ ಹಿತಕ್ಕೆ ಕಂಟಕಪ್ರಾಯವಾಗಿದ್ದ ತ್ರಮಿರ ದೇಶಗಳ ಒಕ್ಕೂಟವನ್ನು ಮುರಿದುಹಾಕಿದ. ಹನ್ನೆರಡನೆಯ ವರ್ಷದಲ್ಲಿ ಉತ್ತರಾಪಥದ ಅರಸುಗಳನ್ನು ಸೋಲಿಸಿ, ಮಗಧದವರಲ್ಲಿ ಭಯ ಹುಟ್ಟಿಸಿ, ಆ ದೇಶದ ಅರಸು ಬೃಹಸ್ಪತಿ ಮಿತ್ರ ತನಗೆ ತಲೆಬಾಗುವಂತೆ ಮಾಡಿದ. ಅಲ್ಲದೆ, ಹಿಂದೆ ನಂದರಾಜ ಸ್ಥಾನಾಂತರಗೊಳಿಸಿದ್ದ ಕಳಿಂಗದ ಜಿನಬಿಂಬವನ್ನು ಪುನಃ ಪ್ರತಿಷ್ಠಾಪಿಸಿ, ಅಂಗ, ಮಗಧ ರಾಷ್ಟ್ರಗಳ ಸಿರಿಸಂಪತ್ತುಗಳನ್ನು ತನ್ನವಾಗಿಸಿಕೊಂಡ. ಗೋಪುರಗಳನ್ನೂ ತೋರಣಗಳಿಂದ ಅಲಂಕೃತವಾದ ಶಿಖರಗಳನ್ನೂ ಅದ್ಭುತವಾದ ಗಜಶಾಲೆಯನ್ನೂ ನಿರ್ಮಿಸಿದ. ಪಾಂಡ್ಯರಾಜನಿಂದ ಮುಕ್ತಮಣಿರತ್ನಗಳನ್ನು ಕಪ್ಪಗೊಂಡ. ಹದಿಮೂರನೆಯ ವಿಜಯರಾಜ್ಯ ಸಂವತ್ಸರದಲ್ಲಿ ಶ್ರವಣರಿಗಾಗಿ ಕುಮಾರೀ ಪರ್ವತದಲ್ಲಿ ಆಶ್ರಯ ಗುಹೆಗಳನ್ನು ಕೊರೆಯಿಸಿದ. ಹೀಗೆ ಸರ್ವ ದೇವಾಲಯಗಳ ಸಂಸ್ಕಾರಕಾರಕನಾದ ಮಹಾವಿಜಯ ಖಾರವೇಲ ಶುಭಘಟನೆಗಳನ್ನು ವೀಕ್ಷಿಸುತ್ತ, ಕೇಳುತ್ತ ಅನುಭವಿಸುತ್ತ ಮೆರೆದಿದ್ದ.

ಹೀಗೆ ರಾಜನೊಬ್ಬನ ಸಾಧನೆಗಳನ್ನು ವರ್ಷದಿಂದ ವರ್ಷಕ್ಕೆ ಪಟ್ಟಿ ಮಾಡಿ ಹೇಳುವ ಹಾಥಿಗುಂಫಾ ಶಾಸನ ಭಾರತದ ಶಾಸನಕ್ಷೇತ್ರದಲ್ಲಿ ಅದ್ವಿತೀಯವಾಗಿಯೆ ಉಳಿದಿದೆ. ಅದರಲ್ಲಿ ಉಕ್ತರಾಗಿರುವ ಸಾತಕರ್ಣಿ, ದಿಮಿತ ಮುಂತಾದವರು, ಖಾರವೇಲನ ಸಮಕಾಲಿಕರು. ಯಾವ ಕಾಲದವರೆಂಬುದು ಖಚಿತವಾಗಿ ತಿಳಿದಿಲ್ಲವಾದ ಕಾರಣ ಲಿಪಿ ಶಾಸ್ತ್ರವನ್ನೂ ಶಾಸನ ಪಾಠದ ಓಜೋಗುಣ ಕಾವ್ಯಶೈಲಿಯನ್ನೂ ಆಧಾರವಾಗಿಟ್ಟುಕೊಂಡು ಖಾರವೇಲ ಪ್ರ.ಶ.ಪೂ. 1ನೆಯ ಶತಮಾನದ ಉತ್ತರಾರ್ಧದಲ್ಲಿ ರಾಜ್ಯವಾಳಿದನೆಂದು ಊಹಿಸಬೇಕಾಗಿದೆ. ಅವನು ಪರಮ ಜಿನಭಕ್ತನಿದ್ದನೆಂಬುದು ಮೇಲೆ ಚರ್ಚಿಸಲಾಗಿರುವ ಅವನ ಎರಡು ಶಾಸನಗಳಿಂದ ವ್ಯಕ್ತವಾಗುತ್ತದೆ. (ಕೆ.ವಿ.ಆರ್.)

**ಖಾರಾನ್ :** ಪಾಕಿಸ್ತಾನದ ಕಲಾತ್ ವಿಭಾಗದ ಒಂದು ಜಿಲ್ಲೆ; ಆ ಜಿಲ್ಲೆಯ ಮುಖ್ಯಪಟ್ಟಣ. ಹಿಂದೆ ಬಲೂಚಿಸ್ತಾನ್ ಪ್ರದೇಶದ ಒಂದು ಸಂಸ್ಥಾನವಾಗಿತ್ತು. 1952ರಿಂದ 1955ರತನಕ ಬಲೂಚಿಸ್ತಾನ್ ರಾಜ್ಯಗಳ ಒಕ್ಕೂಟದಲ್ಲಿತ್ತು. ವಿಸ್ತೀರ್ಣ 48051 ಚ.ಕಿಮೀ. ಜನಸಂಖ್ಯೆ 250,000 (2005). ಉತ್ತರದಲ್ಲಿ ರಾಸ್ ಖೊ, ದಕ್ಷಿಣದಲ್ಲಿ ಸಿಯಾನ್ ಪರ್ವತಶ್ರೇಣಿ ಮತ್ತು ಪೂರ್ವದಲ್ಲಿ ಗಾರ್ ಬೆಟ್ಟಗಳಿವೆ. ಇದು ಬಹುತೇಕ ಮರುಭೂಮಿ. ಸುತ್ತಣ ಪರ್ವತ ಪ್ರದೇಶದಿಂದ ಇಲ್ಲಿಗೆ ಪರ್ವತಗಳಿಂದ ಝರಿಗಳು ಹರಿದುಬರುತ್ತವೆ. ವರ್ಷವೆಲ್ಲ ದೂಳಿನಿಂದ ತುಂಬಿದ ಬಿರುಗಾಳಿ ಬೀಸುತ್ತಿರುತ್ತದೆ. ಕುರಿ, ಮೇಕೆ ಮತ್ತು ಒಂಟೆಗಳನ್ನು ಸಾಕುವುದು ಇಲ್ಲಿಯ ಜನರ ಮುಖ್ಯ ಕಸುಬು. ಬೆಟ್ಟಗಳ ಹತ್ತಿರ, ಮಷ್ಕೆಲ್ ಮತ್ತು ಬಡ್ಡೊ ನದೀತೀರಗಳಲ್ಲಿ ವ್ಯವಸಾಯ ಮಾಡುತ್ತಾರೆ. ಗೋದಿ ಇಲ್ಲಿಯ ಮುಖ್ಯ ಬೆಳೆ. ಖರ್ಜೂರವೂ ಬೆಳೆಯುತ್ತದೆ. ಜಿಲ್ಲೆಯ ಮುಖ್ಯ ಪಟ್ಟಣದ ಜನಸಂಖ್ಯೆ 111,150 (2005). ಹಿಂದೆ ಇದು ಖಾರಾನ್ ಸಂಸ್ಥಾನದ ರಾಜಧಾನಿಯಾಗಿತ್ತು. ಇದು ಕಲಾತ್ ನಗರದ ನೈಋತ್ಯಕ್ಕೆ 123 ಕಿಮೀ. ದೂರದಲ್ಲಿ ಖಾರಾನ್ ಬಡ್ಡೊ ನದಿಯ ದಡದ ಮೇಲಿದೆ. ಇಲ್ಲಿ ಸರ್ದಾರ್ ಅಮೀರ್ ಅಜಾದ್ ಖಾನ್ ಕಟ್ಟಿಸಿದ ಒಂದು ಹಳೆಯ ಕೋಟೆಯುಂಟು. ಇರಾನಿನ ಕಿಯಾನಿ ರಾಜವಂಶದ ನೌಷರ್‌ವಾನಿ ಪಂಗಡಕ್ಕೆ ಇಲ್ಲಿಯ ಆಡಳಿತಗಾರ ಮನೆತನ ಸೇರಿತ್ತು. ಮೊದಲು ಇದು ಕಲಾತ್‌ಗೆ ಅಧೀನವಾಗಿದ್ದು, 1884 ರಲ್ಲಿ ಬ್ರಿಟಿಷರ ಅಧೀನಕ್ಕೆ ಒಳಪಟ್ಟಿತು. 1940ರಲ್ಲಿ ಬ್ರಿಟಿಷ್ ಸರ್ಕಾರ ಖಾರಾನ್‌ನ ಪ್ರತ್ಯೇಕತೆಯನ್ನು ಪುರಸ್ಕರಿಸಿತು. ಹೆಸರಿಗೆ ಮಾತ್ರ ಅದು ಕಲಾತ್‌ಗೆ ಅಧೀನವಾಗಿತ್ತು. 1948ರ ಮಾರ್ಚ್ 17ರಂದು ಪಾಕಿಸ್ತಾನದಲ್ಲಿ ವಿಲೀನಗೊಂಡಿತು. (ಬಿ.ಎಸ್.ಎಚ್.)

**ಖಾರ್ಕಾಫ್ :** ಸೋವಿಯೆತ್ ದೇಶದ ಉಕ್ರೇನಿಯನ್ ಸೋವಿಯೆತ್ ಸಮಾಜವಾದಿ ಗಣರಾಜ್ಯದಲ್ಲಿಯ ಒಂದು ನಗರ, ಅಬ್ಲಾಸ್ಟ್ (ಆಡಳಿತವಿಭಾಗ) ಕೇಂದ್ರ. ಮಾಸ್ಕೊಗೆ ದಕ್ಷಿಣ–ನೈಋತ್ಯದಲ್ಲಿ 640 ಕಿಮೀ. ದೂರದಲ್ಲಿ, ಲೋಪಾನ್ ಮತ್ತು ಖಾರ್ಕಾಫ್ ನದಿಗಳ ಸಂಗಮದ ಬಳಿ ಸುಮಾರು ಇಪ್ಪತ್ತು ಉಪನಗರಗಳಿಂದ ಕೂಡಿರುವ ಇದರ ಜನಸಂಖ್ಯೆ 1.5 ಮಿಲಿಯನ್ (2000).

ರಷ್ಯದ ದಕ್ಷಿಣದ ಗಡಿನೆಲದ ರಕ್ಷಣೆಯ ಉದ್ದೇಶದಿಂದ 1656ರಲ್ಲಿ ಈ ನಗರವನ್ನು ನಿರ್ಮಿಸಲಾಯಿತು. 18ನೆಯ ಶತಮಾನದಲ್ಲಿ ಇದು ವ್ಯಾಪಾರ ಕೈಗಾರಿಕಾ ಕೇಂದ್ರವಾಗಿ ಬೆಳೆಯಿತು. 1732ರಲ್ಲಿ ಪ್ರಾಂತೀಯ ಕೇಂದ್ರವಾಯಿತು. 19ನೆಯ ಶತಮಾನದಲ್ಲಿ ಇಲ್ಲಿ ಕೈಗಾರಿಕೆಗಳು ಶೀಘ್ರವಾಗಿ ಅಭಿವೃದ್ಧಿ ಹೊಂದಿದುವು. ರಷ್ಯನ್ ಕ್ರಾಂತಿಯ ವೇಳೆಗೆ ಇದು ರಷ್ಯದ ಐದನೆಯ ದೊಡ್ಡ ನಗರವಾಗಿ ಪರಿಣಮಿಸಿತ್ತು. ಉಕ್ರೇನಿಯನ್ ಗಣರಾಜ್ಯ ಸ್ಥಾಪನೆಯಾದಾಗಿನಿಂದ (1917) 1934ರತನಕ ಆ ರಾಜ್ಯದ ರಾಜಧಾನಿಯಾಗಿತ್ತು. ಕ್ರಾಂತಿಯ ಅನಂತರವೂ ಖಾರ್ಕಾಫಿನ ಬೆಳೆವಣಿಗೆ ನಿಲ್ಲಲಿಲ್ಲ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಇದಕ್ಕೆ ಅಗಾಧ ನಷ್ಟ ಸಂಭವಿಸಿದರೂ ಯುದ್ಧಾನಂತರದಲ್ಲಿ ಚೇತರಿಸಿಕೊಂಡಿತು. ಈ ನಗರದಲ್ಲಿ ಅದುರು ಕರಗಿಸುವುದು, ಎಂಜಿನ್, ಟ್ರಾಕ್ಟರ್, ಬೈಸಿಕಲ್, ಕೃಷಿ ಉಪಕರಣ, ವಿದ್ಯುತ್ ಸಲಕರಣೆ ಹಾಗೂ ಜಲವಿದ್ಯುತ್ ಉತ್ಪಾದಕ ಯಂತ್ರ ತಯಾರಿಕೆ ಮುಂತಾದ ಬಣ್ಣ, ಬಿಸ್ಕತ್, ಹಿಟ್ಟು, ಜವಳಿ–ಇವು ಇಲ್ಲಿಯ ಇತರ ಕೆಲವು ಮುಖ್ಯ ಕೈಗಾರಿಕೆಗಳು.



ಖಾರ್ಕಾಫ್‌ನ ನಾಟ್ಯಶಾಲೆ

ಖಾರ್ಕಾಫ್ ಸೋವಿಯೆತ್ ದೇಶದ ಮೂರನೆಯ ದೊಡ್ಡ ರೈಲ್ವೆ ಜಂಕ್ಷನ್ (ಮೊದಲಿನ ಎರಡು ಮಾಸ್ಕೋ ಮತ್ತು ಲೆನಿನ್ ಗ್ರಾಡ್). ಮಾಸ್ಕೋ, ಕೀಯೆಫ್, ಒಡೆಸ್ಸ, ಬಾಕೂ ಇವುಗಳೊಂದಿಗೂ ಇತರ ಮುಖ್ಯ ನಗರಗಳೊಂದಿಗೂ ಸಂಬಂಧ ಕಲ್ಪಿಸುವ ಅನೇಕ ಹೆದ್ದಾರಿಗಳು ಇದರ ಮೂಲಕ ಹಾಯ್ದುಹೋಗುತ್ತವೆ. ವಿಮಾನ ಸಂಪರ್ಕವೂ ಉಂಟು. ಖಾರ್ಕಾಫ್ ಒಂದು ಮುಖ್ಯ ಸಾಂಸ್ಕೃತಿಕ ಮತ್ತು ಶಿಕ್ಷಣ ಕೇಂದ್ರ. ಇಲ್ಲಿಯ ಎ.ಎಂ. ಗಾರ್ಕಿ ವಿಶ್ವವಿದ್ಯಾಲಯ 1805ರಲ್ಲಿ ಸ್ಥಾಪಿತವಾದದ್ದು. ಇಲ್ಲಿ ಉನ್ನತ ಶಿಕ್ಷಣ ಸಂಶೋಧನ ಕೇಂದ್ರಗಳೂ ಇವೆ. ಸಂಗೀತ ಭವನ, ನಾಟ್ಯಶಾಲೆಗಳು, ವಸ್ತು ಸಂಗ್ರಹಾಲಯಗಳು–ಇವು ಇತರ ಆಕರ್ಷಣೆಗಳು. (ವಿ.ಜಿ.ಕೆ.)

**ಖಾರ್ಟೂಮ್ :** ಸೂಡಾನ್ ಗಣರಾಜ್ಯದ ರಾಜಧಾನಿ. ಖಾರ್ಟೂಮ್ ಪ್ರಾಂತ್ಯದ ಆಡಳಿತಕೇಂದ್ರ. ನೀಲಿ ಮತ್ತು ಬಿಳಿ ನೈಲ್‌ನದಿಗಳ ಸಂಗಮ ಸ್ಥಳದಲ್ಲಿದೆ. ಇಲ್ಲಿಯ ಜನಸಂಖ್ಯೆ 9,24,505 (1993). ಖಾರ್ಟೂಮ್ ಉತ್ತರ ಮತ್ತು ಆಮ್‌ಡರ್ಮನ್ ನಗರಗಳೊಂದಿಗೆ ಕೂಡಿದಂತೆ ಇದು ಇಡೀ ಸೂಡಾನಿನಲ್ಲೇ ದೊಡ್ಡ ನಗರಪ್ರದೇಶವಾಗಿ ಬೆಳೆಯುತ್ತಿದೆ. ಉತ್ತರದಲ್ಲಿ ನೀಲಿ ನೈಲ್‌ನದಿಯ ಬಲದಂಡೆಯ ಮೇಲೆ ಖಾರ್ಟೂಮ್ ಉತ್ತರವೂ ಸಂಗಮದ ಉತ್ತರಕ್ಕೆ ಪಶ್ಚಿಮದಂಡೆಯ ಮೇಲೆ ಆರ್ಮ್‌ಡರ್ಮನ್ ನಗರವೂ ಇವೆ.

ಅರಬ್ಬೀ ಭಾಷೆಯಲ್ಲಿ ಖಾರ್ಟೂಮ್ ಎಂದರೆ ಆನೆಯ ಸೊಂಡಿಲು, ನದೀಸಂಗಮದ ಬಳಿ ಸೊಂಡಿಲಂತೆ ಚಾಚಿಕೊಂಡಿರುವ ಸ್ಥಳದಲ್ಲಿ ಬೀಡುಬಿಟ್ಟಿದ್ದ (1821) ಈಜಿಪ್ಟ್ ಸೈನಿಕ ಶಿಬಿರವನ್ನು ಮೊದಲು ಹೀಗೆಂದು ಕರೆಯಲಾಗುತ್ತಿತ್ತು. ಕಾಲಕ್ರಮದಲ್ಲಿ ಸೈನಿಕ ಶಿಬಿರದ ಸುತ್ತ ವ್ಯಾಪಾರಿಗಳು ಪೇಟೆ ನಿರ್ಮಿಸಿದರು. ಪೇಟೆಯೇ ಕೋಟೆಯೊಳಗಿನ ಊರಾಯಿತು. ಸೂಡಾನಿನ ಗವರ್ನರ್–ಜನರಲ್ ಆಗಿದ್ದ ಮೇಜರ್ ಜನರಲ್ ಚಾರ್ಲ್ಸ್ ಗಾರ್ಡನನ್ನು ಮಹಮದೀಯ ಸೈನಿಕರು ಕೊಂದುಹಾಕಿದರು. ಇದರಿಂದ ಖಾರ್ಟೂಮನ್ನು ಪರಿತ್ಯಜಿಸಲಾಗಿತ್ತು. 1898ರಲ್ಲಿ ಮೇಜರ್ ಜನರಲ್ ಎಚ್.ಎಚ್. ಕಿಚನರ್ ಇದನ್ನು ಗೆದ್ದುಕೊಂಡಮೇಲೆ ನಗರವನ್ನು ಮತ್ತೆ ನಿರ್ಮಿಸಲಾಯಿತು. 1954ರ ತನಕ ಇದು ಆಂಗ್ಲೋ–ಈಜಿಪ್ಷಿಯನ್ ಸರ್ಕಾರದ ಕೇಂದ್ರವಾಗಿತ್ತು; 1954ರಿಂದ ಈಚೆಗೆ ಇದು ಸ್ವತಂತ್ರ ಸೂಡಾನಿನ ರಾಜಧಾನಿಯಾಗಿದೆ.

ಸರ್ಕಾರಿ ಕಚೇರಿಗಳ ಪೇಟೆ ವಲಯಗಳ ಸುತ್ತಲೂ ಖಾರ್ಟೂಮ್ ಬೆಳೆದಿದೆ. ಸಾಲು ಮರಗಳಿಂದ ವಿಶಾಲರಸ್ತೆಗಳೂ ಚೌಕಗಳೂ ಸುಂದರವಾಗಿವೆ. ನೀಲಿ ನೈಲ್

ನದಿಯ ದಂಡೆಯಲ್ಲಿ ಸರ್ಕಾರಿ ಅಧಿಕಾರಿಗಳ ನಿವಾಸಗಳ ಕಚೇರಿಗಳೂ ವಸ್ತುಸಂಗ್ರಹಾಲಯವೂ ಅರಮನೆ ಮತ್ತು ಶಾಸನಸಭಾ ಭವನವೂ ವಿಶ್ವವಿದ್ಯಾಲಯವೂ ಇವೆ. ಸಾಲುಮರಗಳಿಂದ ಕೂಡಿದ ರಸ್ತೆಯೊಂದು ನೀಲಿ ನೈಲ್ ಗುಂಟ ಸಾಗಿ, ಬಿಳಿ ನೈಲ್ ರಸ್ತೆ ಸೇತುವೆಯನ್ನು ಕೂಡುತ್ತದೆ. ಆಮ್‍ಡರ್ಮನ್‍ಗೆ ಹೋಗುವ ದಾರಿಯಿದು. ನದಿಯಲ್ಲಿ ನೌಕೆಗಳ ಸಂಚಾರಕ್ಕೆ ಅಡ್ಡಿಯಾಗದಂತೆ ಈ ಸೇತುವೆಯ ಕಮಾನು ತೆರೆಯಬಹುದು. ರೋಮನ್ ಕೆಥೊಲಿಕ್, ಆಂಗ್ಲಿಕನ್ ಮತ್ತು ಕಾಪ್ಟಿಕ್ ಆರಾಧನ ಮಂದಿರಗಳೂ ಗ್ರೀಕ್ ಮತ್ತು ಮರೊನೈಟ್ ಚರ್ಚುಗಳೂ ಅವುಗಳ ಶಾಲೆಗಳೂ ಮೃಗಾಲಯ ಮತ್ತು ಸಸ್ಯೋದ್ಯಾನಗಳೂ ಇಲ್ಲಿಯ ಹಸುರಿನ ನಡುವೆ ಕಂಗೊಳಿಸುತ್ತವೆ. ಈ ಸ್ಥಳದ ಹಿಂದೆ ಇರುವುದೇ ಮಾರುಕಟ್ಟೆ. ಅದರಿಂದಾಚೆಗೆ ಮಸೀದಿಗಳು, ಪೌರ ಆಸ್ಪತ್ರೆ, ವಿಶ್ವವಿದ್ಯಾಲಯ, ವೈದ್ಯ ಶಿಕ್ಷಣಶಾಲೆ ಮತ್ತು ಪ್ರಯೋಗಾಲಯ ಇವೆ.

ನಗರದ ದಕ್ಷಿಣದಲ್ಲಿರುವ ರೈಲ್ವೆ ನಿಲ್ದಾಣದಿಂದ ಎರಡು ಮುಖ್ಯ ರೈಲ್ವೆಮಾರ್ಗಗಳುಂಟು. ಇವುಗಳಲ್ಲಿ ಒಂದು ಮಾರ್ಗ ದಕ್ಷಿಣಾಗ್ನೇಯಾಭಿಮುಖವಾಗಿ ಸಾಗುತ್ತದೆ. ನೈಲ್ ನದಿಯ ಮೇಲೆ ಅಲ್ಲದೆ ಈ ಮಾರ್ಗವಾಗಿಯೂ ಖಾರ್ಟೂಮ್ ನಗರಕ್ಕೆ ಅನೇಕ ಸಾಮಗ್ರಿಗಳು(ಮೇಣ, ಚರ್ಮ, ಎಣ್ಣೆ ಬೀಜ) ಪರಿಷ್ಕರಣಕ್ಕಾಗಿ ಬರುತ್ತವೆ. ಉತ್ತರದ ರೈಲುಮಾರ್ಗ ಈ ಸರಕುಗಳೊಂದಿಗೆ ಪೋರ್ಟ್ ಸೂಡಾನಿಗೂ ಈಜಿಪ್ಟಿಗೂ ಸಾಗುತ್ತದೆ. ಆ ಮಾರ್ಗವಾಗಿ ಖಾರ್ಟೂಮ್‍ಗೆ ಗ್ಯಾಸೊಲಿನ್, ಸೀಮೆಯೆಣ್ಣೆ, ಯಂತ್ರ, ಜವಳಿ ಮುಂತಾದವು ಬರುತ್ತವೆ. ನಗರದ ಆಗ್ನೇಯ ಭಾಗದಲ್ಲಿ ಕೈಗಾರಿಕೆಗಳುಂಟು.



ಮಹದಿಯ ಗೋರಿ, ಖಾರ್ಟೂಮ್

ಹತ್ತಿ ಮತ್ತು ಮೇಣ ಪರಿಷ್ಕರಣ, ಚರ್ಮ ಸಂಸ್ಕರಣ, ಗಿರಣಿ, ಯಂತ್ರಗೆಲಸ, ಮುದ್ರಣ, ಗಾಜು ತಯಾರಿಕೆ, ಹೆಂಚು, ಹೆಣಿಗೆ ವಸ್ತ್ರ, ಸೌಮ್ಯಪಾನೀಯ, ಮಿಠಾಯಿ ತಯಾರಿಕೆ ಇವು ಇಲ್ಲಿಯ ಕೈಗಾರಿಕೆಗಳು. ಉದ್ಯಾನಭೂಯಿಷ್ಠವಾದ ಆಧುನಿಕ ಉಪನಗರಗಳು ಇರುವುದು ಆಗ್ನೇಯದಲ್ಲಿ, ಅಂತಾರಾಷ್ಟ್ರೀಯ ವಿಮಾಣ ನಿಲ್ದಾಣದ ಬಳಿ. ಇಲ್ಲಿರುವವರಲ್ಲಿ ಶೇ. 83 ಜನರ ಭಾಷೆ ಅರಬ್ಬೀ.

ಖಾರ್ಟೂಮ್ ನಗರವನ್ನೊಳಗೊಂಡ ಕೇಂದ್ರೀಯ ಪ್ರಾಂತ್ಯ ಉ.ಅ. 15° ಮತ್ತು 17° ನಡುವೆ ಇದೆ. ತ್ರಿಕೋಣಕಾರವಾದ ಈ ಪ್ರಾಂತ್ಯದ ದಕ್ಷಿಣಾಗ್ರದ ಕಡೆಯಲ್ಲಿ ಖಾರ್ಟೂಮ್, ಖಾರ್ಟೂಮ್ ಉತ್ತರ ಮತ್ತು ಅಮ್‍ಡರ್ಮನ್ ಪಟ್ಟಣಗಳಿವೆ. ಜಬಲ್ ಆಲಿಯ ಕಟ್ಟೆ ಇರುವುದು ಈ ಕೊನೆಯಲ್ಲಿ. ಪ್ರಾಂತ್ಯದ ಉತ್ತರದ ಎಲ್ಲೆ ನೈಲ್ ನದಿಯನ್ನು ಅದರ ಆರನೆಯ ಅಬ್ಬಿಯ ಬಳಿ ಹಾದುಹೋಗುತ್ತದೆ. ಜನಸಂಖ್ಯೆ 817364 (1994). ವಿಸ್ತೀರ್ಣ 20971 ಚ.ಕಿಮೀ. ಪ್ರಾಂತ್ಯದ ಅರ್ಧದಷ್ಟು ಜನ ಅಲ್ಲಿಯ ಮೂರು ನಗರಗಳಲ್ಲಿ ವಾಸಮಾಡುತ್ತಾರೆ.

ಖಾರ್ಟೂಮ್ ಪ್ರಾಂತ್ಯ ಸಮುದ್ರಮಟ್ಟದಿಂದ 365 ಮೀ. ಎತ್ತರದಲ್ಲಿದೆ. ಸೆಪ್ಟೆಂಬರ್‍ನಿಂದ ಜೂನ್‍ವರೆಗೆ ಇಲ್ಲಿ ಒಣಹವೆ ಇರುತ್ತದೆ. ಮೇ, ಜೂನ್ ಗಳಲ್ಲಿ ಮಧ್ಯಕ ಗರಿಷ್ಠ ಉಷ್ಣತೆ 41.7°ಸೆಂ. ಜನವರಿಯಲ್ಲಿ 15.6° ಸೆಂ. ಜುಲೈ – ಸೆಪ್ಟೆಂಬರ್ ಮೊದಲ ಭಾಗದ ವರೆಗೆ ಆಗಿಂದಾಗ್ಗೆ ಮಳೆ ಬೀಳುವುದುಂಟು. ಆದರೆ ವರ್ಷದ ಮಳೆಯ ಮೊತ್ತ 18 ಸೆಂಮೀ.ಗಿಂತ ಹೆಚ್ಚಿಲ್ಲ. ಬೆಟ್ಟಗಳ ಸುತ್ತ ಮತ್ತು ಅಲ್ಲಲ್ಲಿ ಅಲ್ಪಸ್ವಲ್ಪ ನೀರು ನಿಂತು ಹುಲ್ಲು, ನಾರುಬೇರು, ಪೊದೆಗಿಡ ಬೆಳೆಯಲು ಕಾರಣವಾಗುತ್ತದೆ. ಕುರಿ ಆಡು ಒಂಟೆಗಳಿಗೆ ಇವು ಮೇವು. ಒಣಹವೆಯ ಕಾಲದಲ್ಲಿ ಈ ಪ್ರಾಣಿಗಳನ್ನು ನೀರಿನ ಆಸರೆ ಇರುವಲ್ಲಿಗೆ ಹೊಡೆದೊಯ್ಯುತ್ತಾರೆ. ನಗರಗಳಿಗೆ ಮಾಂಸ, ಮೇಕೆಯ ಹಾಲು ಬರುವುದು ಈ ಪ್ರದೇಶದಿಂದ.

ಜುಲೈ ಮಧ್ಯಭಾಗದಿಂದ ಡಿಸೆಂಬರ್‍ವರೆಗೆ ನೈಲ್ ನದಿಯಲ್ಲಿ ಬರುವ ಪ್ರವಾಹದಿಂದ ತಗ್ಗಿನ ನೆಲವೂ ದ್ವೀಪಗಳೂ ಮುಚ್ಚಿಹೋಗುತ್ತವೆ. ಪ್ರವಾಹ ಇಳಿದಾಗ ಇಲ್ಲೆಲ್ಲ ಹುರುಳಿ, ಕಲ್ಲಂಗಡಿ, ಕರಬೂಜು, ಜೋಳ, ಕಬ್ಬು, ತರಕಾರಿ ಬೆಳೆಯುತ್ತಾರೆ. ಪಂಪ್ ಸಹಾಯದಿಂದ ಹಣ್ಣು, ತರಕಾರಿ, ದನದ ಮೇವು ಬೆಳೆಯುವುದುಂಟು. ಪ್ರಾಂತ್ಯದಲ್ಲಿರುವ ಮೂರು ಪಟ್ಟಣಗಳಿಗೂ ಮೂರು ಪುರಸಭೆಗಳಿವೆ. ಪ್ರಾಂತ್ಯವನ್ನು ಎರಡು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಒಂದು ಜಿಲ್ಲೆಗೆ ಖಾರ್ಟೂಮ್ ಉತ್ತರವೂ ಇನ್ನೊಂದಕ್ಕೆ ಅಮ್‍ಡರ್ಮನ್ ಆಡಳಿತ ಕೇಂದ್ರಗಳು. ಖಾರ್ಟೂಮ್ ಉತ್ತರ ಮುಖ್ಯ ಕೈಗಾರಿಕಾ ಕೇಂದ್ರ. ಜನಸಂಖ್ಯೆ 39,082. ಅಲ್ಲಿ ಶೇ. 95 ಮಂದಿ ಅರಬ್ಬೀ ಭಾಷೆ ಆಡುವವರಿದ್ದಾರೆ. (ಬಿ.ಎಸ್.ಎಚ್.)

**ಖಾರ್ದಾ ಕದನ :** ಅಹ್ಮದ್‍ನಗರದ ಆಗ್ನೇಯಕ್ಕೆ ಸು. 90 ಕಿಮೀ. ದೂರದಲ್ಲಿರುವ ಖಾರ್ದಾ ಅಥವಾ ಕುರ್ದ್ಲಾ ಎಂಬಲ್ಲಿ ಹೈದರಾಬಾದಿನ ನಿಜಾಮ ಮತ್ತು ಮರಾಠನಾಯಕರ ನಡುವೆ ಮಾರ್ಚ್ 1795ರಲ್ಲಿ ನಡೆದ ಕದನ. ಮೈಸೂರಿನ ಟೀಪುಸುಲ್ತಾನನ ವಿರುದ್ಧ ಬ್ರಿಟಿಷರು, ನಿಜಾಮ ಮತ್ತು ಮರಾಠರು ಒಕ್ಕೂಟ ರಚಿಸಿಕೊಂಡಿದ್ದರೂ ನಿಜಾಮ ಮತ್ತು ಮರಾಠರ ನಡುವೆ ಹಳೆಯ ದ್ವೇಷ ಹೊಗೆಯಾಡುತ್ತಿತ್ತು. ನಿಜಾಮ ಚೌತಾಯ ಮತ್ತು ಸರ್ ದೇಶಮುಖಿ ಕಾಣಿಕೆಗಳನ್ನು ಕೊಡಲಿಲ್ಲವೆಂಬ ಕಾರಣವನ್ನೊಡ್ಡಿ ಪೇಷ್ವ ಮಹದಾಜಿ ಸಿಂಧ್ಯನ ನಾಯಕತ್ವದಲ್ಲಿ ಮರಾಟರು ನಿಜಾಮನ ಸೈನ್ಯದ ಮೇಲೆ ಬಿದ್ದರು. ನಿಜಾಮನ ಸೈನ್ಯ ರೇಮಾಂಡ್ ಎಂಬ ಫ್ರೆಂಚ್ ದಳಪತಿಯ ನೇತೃತ್ವದಲ್ಲಿ ತರಬೇತಾಗಿದ್ದರೂ ಖಾರ್ದಾದಲ್ಲಿ ಪೂರ್ಣವಾಗಿ ಸೋತುಹೋಯಿತು. ಬ್ರಿಟಿಷರು ಅವನ ಸಹಾಯಕ್ಕೆ ಬರಲಿಲ್ಲ. ಆ ಸೋಲಿನ ಫಲವಾಗಿ ನಿಜಾಮ ವಿಧಿಯಿಲ್ಲದೆ ಸಂಧಾನಕ್ಕೆ ಒಪ್ಪಿಕೊಳ್ಳಬೇಕಾಯಿತು. ಯುದ್ಧದ ಖರ್ಚನ್ನು ಕೊಡಲೊಪ್ಪಿದುದಲ್ಲದೆ ತನ್ನ ರಾಜ್ಯದ ಕೆಲಭಾಗಗಳನ್ನು ಮರಾಠರಿಗೆ ಬಿಟ್ಟುಕೊಡಬೇಕಾಯಿತು. ಆ ಸೋಲಿನಿಂದಾಗಿ ನಿಜಾಮ ಬ್ರಿಟಿಷರ ಆಶ್ರಿತ ರಾಜನಾಗುವಂತಾಯಿತು. (ಎಚ್.ಜಿ.ಆರ್.)

**ಖಾಲ್ಸಾ :** ಸಿಕ್ಖರ ಯುದ್ಧೋತ್ಸಾಹಿ ಮತೀಯ ಸಂಸ್ಥೆ. ಸಿಕ್ಖರ 10ನೆಯ ಗುರುಗೋವಿಂದ 1708ರಲ್ಲಿ ಕೊಲೆಯಾದ ಅನಂತರ ಅವರ ನಾಯಕನಾಗಿದ್ದ ಬಾಂದಾ 1716ರಲ್ಲಿ ಮರಣದಂಡನೆಗೆ ಗುರಿಯಾದಾಗ ಸಿಕ್ಖರ ಮತಧರ್ಮ ರಕ್ಷಣೆಗಾಗಿ ಫೈಜುಲ್ಲಾಪುರದ ಕಪೂರ್‍ಸಿಂಗ್ ಇದನ್ನು ಸ್ಥಾಪಿಸಿದ. ಗುರುಗೋವಿಂದಸಿಂಗ್ ಸ್ವತಃ ಇದನ್ನು ಸ್ಥಾಪಿಸಿದನೆಂಬ ವಾದವೂ ಇದೆ. ಈ ವಾದವನ್ನು ಒಪ್ಪಿದರೂ ಕಪೂರ್‍ಸಿಂಗ್ ಈ ಸಂಸ್ಥೆಗೆ ನಿಶ್ಚಿತ ರೂಪ ಕೊಟ್ಟನೆಂಬುದಂತೂ ನಿಜ. ಔರಂಗ್‍ಜೇಬನ ಮತಾಂಧ ನೀತಿಯಿಂದಾಗಿ ಕಷ್ಟಗಳನ್ನನುಭವಿಸುತ್ತಿದ್ದ ಸಿಕ್ಖರಲ್ಲಿ ಗುರುಗೋವಿಂದ ಸಿಂಗ್ ಧೈರ್ಯ ಸಾಹಸಗಳನ್ನು ತುಂಬಿ ನವಚೈತನ್ಯವನ್ನು ಮೂಡಿಸಿದ. ಎಲ್ಲ ಮತಗಳವರೂ ಸಮಾನರೆಂದೂ ಖಾಲ್ಸಾ ಪಂಥದಲ್ಲಿ ಯಾವ ರೀತಿಯ ಭೇದ ಭಾವಗಳೂ ಇಲ್ಲವೆಂದೂ ಗೋವಿಂದ ಸಿಂಗ್ ಬೋಧಿಸಿದ. ಈ ಸಂಸ್ಥೆ ಪ್ರಾರಂಭವಾದಂದಿನಿಂದ ಪ್ರತಿಯೊಬ್ಬ ಸಿಕ್ಖ್ ಮತೀಯನೂ ಯೋಧನಾದ. ಪ್ರತಿಯೊಬ್ಬ ಸದಸ್ಯನೂ ಉದ್ದವಾದ ಕೂದಲನ್ನೂ, ಬಾಚಣಿಗೆಯನ್ನೂ, ಕಬ್ಬಿಣದ ಒಂದು ಬಳೆಯನ್ನೂ ಒಂದು ಕತ್ತಿಯನ್ನೂ ಹೊಂದಿರಬೇಕು; ಮತ್ತು ಷರಾಯಿ ಧರಿಸಬೇಕು; ಹೊಗೆಸೊಪ್ಪು ಮತ್ತಿತರ ಮಾದಕ ಪದಾರ್ಥಗಳನ್ನು ಸೇವಿಸಕೂಡದು; ಉಷಃ ಕಾಲದಲ್ಲೆದ್ದು ಸ್ನಾನಮಾಡಿ ಗುರುಗಳಿಂದ ರಚಿತವಾದ ಸ್ತೋತ್ರಗಳ ಪಠಣ ಮಾಡಬೇಕು–ಎಂಬವು ಖಾಲ್ಸಾಸಂಸ್ಥೆಯ ಕೆಲವು ನಿಯಮಗಳು. ಖಾಲ್ಸಾ ಸಭೆ ವೈಶಾಖಿ ಮತ್ತು ದೀಪಾವಳಿಯ ಮಾಸಗಳಲ್ಲಿ ಅಮೃತಸರದಲ್ಲಿ ಸೇರುತ್ತಿತ್ತು. ಎಲ್ಲರೂ ಒಟ್ಟುಗೂಡಿ ತೀರ್ಥ ಪ್ರಸಾದ ಸ್ವೀಕರಿಸಬೇಕಿತ್ತು. ಸಿಖ್ಖರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸರ್ವಸಮಾನತೆಯ ಆಧಾರದ ಮೇಲೆ ಪ್ರಯತ್ನ ಕೈಗೊಳ್ಳಲಾಗುತ್ತಿತ್ತು. ರಾಷ್ಟ್ರೀಯ ಸಂತರ

ಸೇನೆಯಾಗಿ ರೂಪಿತವಾದ ಖಾಲ್ಸಾದ ಸ್ಥಾಪನೆಯ ಅನಂತರ ಸಿಖ್ಖರಲ್ಲಿ ಒಗ್ಗಟ್ಟು ಮೂಡಿತು. ತಮ್ಮ ಧರ್ಮದ ರಕ್ಷಣೆಗಾಗಿ ಪ್ರಾಣ ತೆರಲೂ ಅವರು ಸಿದ್ಧರಾದರು. ಮೊಗಲ್ ಸಾಮ್ರಾಜ್ಯದ ವಿನಾಶಕ್ಕಾಗಿ ಬಹುವಾಗಿ ಹೋರಾಡಿದರು. (ಜಿ.ಆರ್.ಆರ್.)

**ಖಾಸಗಿ ಉದ್ಯಮ :** ಖಾಸಗಿ ವ್ಯಕ್ತಿಗಳ ಅಥವಾ ಗುಂಪುಗಳ ಒಡೆತನ, ಸಂಘಟನೆ, ವ್ಯವಸ್ಥಾಪನ, ನಿಯಂತ್ರಣಗಳಿಗೆ ವ್ಯವಹಾರೋದ್ಯಮಗಳು ಒಳಪಟ್ಟಿರುವಂಥ ವ್ಯವಸ್ಥೆ. ಲಾಭದೃಷ್ಟಿ, ಸ್ಪರ್ಧೆಯ ಪರಿಸ್ಥಿತಿ–ಇವು ಸಾಮಾನ್ಯವಾಗಿ ಇದಕ್ಕೆ ಪ್ರೇರಣೆಗಳಾಗಿರುತ್ತವೆ. ತಾತ್ತ್ವಿಕವಾಗಿ ಖಾಸಗಿ ಉದ್ಯಮ ಸರ್ಕಾರದ ಹಸ್ತಕ್ಷೇಪದಿಂದ ಮುಕ್ತವಾಗಿರುವುದೆಂದು ಹೇಳಲಾದರೂ, ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ವಸ್ತುತಃ ಅದು ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಸರ್ಕಾರಿ ನಿಯಂತ್ರಣಗಳಿಗೆ ಒಳಪಟ್ಟಿರುತ್ತದೆ. ಆಯಾ ದೇಶದ ರಾಜಕೀಯ ವ್ಯವಸ್ಥೆಗೆ ಅನುಗುಣವಾಗಿ ಈ ನಿಯಂತ್ರಣದ ಪ್ರಮಾಣ ವ್ಯತ್ಯಾಸವಾಗುತ್ತದೆ. ಸ್ವಹಿತಮೂಲವಾಗಿ ಸಂಭವಿಸುವ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಬೇಡಿಕೆ–ಸರಬರಾಯಿಗಳ ಪರಸ್ಪರ ಕ್ರಿಯೆಗಳಿಂದಾಗಿ ನಿಶ್ಚಿತವಾಗುವ ಬೆಲೆಗಿಂತ ಆದಷ್ಟು ಕಡಿಮೆ ವೆಚ್ಚದಲ್ಲಿ ಸರಕನ್ನು ಉತ್ಪಾದಿಸಿ ಗರಿಷ್ಠ ಲಾಭ ಗಳಿಸಲು ಉತ್ಪಾದಕರು ಉದ್ಯುಕ್ತರಾಗುವ ರಾದ್ದರಿಂದ ಉದ್ಯಮದ ದಕ್ಷತೆ ಉನ್ನತ ಮಟ್ಟದಲ್ಲಿರುವುದೆಂದೂ ಹೇಳಲಾಗಿದೆ. ಸಮಾಜದ ಆವಶ್ಯಕತೆ, ಕಲ್ಯಾಣ, ಸರಕು ಅಥವಾ ಸೇವೆಗಾಗಿ ಒಟ್ಟಿನಲ್ಲಿ ಸಮಾಜ ಹೊರಬೇಕಾದ ವೆಚ್ಚ ಇವುಗಳಿಗಿಂತ ವ್ಯಕ್ತಿಯ ಲಾಭದೃಷ್ಟಿ ಮುಖ್ಯವಾದರೂ ಸಮಾಜದ ಬೇಕುಬೇಡಗಳ ಸೂಚಿಯಾಗಿ ಬೆಲೆ ವ್ಯವಸ್ಥೆ ವರ್ತಿಸುವುದರಿಂದ ಖಾಸಗಿ ಉದ್ಯಮದ ಇಡೀ ದರ್ಶನ ಅದರ ಮೇಲೆಯೇ ನಿಂತಿದೆಯೆನ್ನಬಹುದು. ಪರಿಪೂರ್ಣ ಸ್ಪರ್ಧೆಯ ಅಭಾವದಿಂದಾಗಿ ಇದು ಕೇವಲ ತಾತ್ತ್ವಿಕವಾಗಿ ಉಳಿದಿದೆ.

ವ್ಯವಹಾರ ಚಟುವಟಿಕೆಗಳ ಉಗಮದ ಕಾಲದಲ್ಲೇ ಖಾಸಗಿ ಉದ್ಯಮವೂ ಆರಂಭವಾಯಿತೆನ್ನಬಹುದು. ಆದ್ಯ ಅಭಿಜಾತ ಅರ್ಥಶಾಸ್ತ್ರಜ್ಞರನೇಕರು ಈ ವ್ಯವಸ್ಥೆಯನ್ನು ಸರ್ಕಾರಿ ಉದ್ಯಮಕ್ಕಿಂತ ಹೆಚ್ಚು ದಕ್ಷವೆಂದೂ ಸಾಹಸಯುಕ್ತವೆಂದೂ ಹೊಗಳಿದ್ದಾರೆ. ಈಚಿನ ಅನೇಕ ಅರ್ಥಶಾಸ್ತ್ರಜ್ಞರು ಇದನ್ನು ಟೀಕಿಸಿಯೂ ಇದ್ದಾರೆ. ಉತ್ಪಾದನ ಸಾಧನಗಳ ಖಾಸಗಿ ಒಡೆತನ ನಿರ್ವಹಣೆಗಳಿಂದ ವರಮಾನ ಸಂಪತ್ತುಗಳ ಅಸಮ ವಿತರಣೆಯಾಗುವುದೆಂದೂ ಕಾರ್ಮಿಕರೂ ಅನುಭೋಗಿಗಳೂ ಶೋಷಣೆಗೆ ಒಳಗಾಗುವರೆಂದೂ ಏಕಸ್ವಾಮ್ಯ, ಕಲಬೆರಕೆ, ಕಾಳಸಂತೆ ಮುಂತಾದ ಸಮಾಜವಿರೋಧಿ ಪ್ರವೃತ್ತಿಗಳು ಲಾಭದೃಷ್ಟಿಯಿಂದಾಗಿ ಬೆಳೆಯುವುವೆಂದೂ ಹೇಳಲಾಗಿದೆ.

ಬಂಡವಾಳ ವ್ಯವಸ್ಥೆಯ ಪ್ರಧಾನ ಲಕ್ಷಣವೆಂದರೆ ಖಾಸಗಿ ಉದ್ಯಮ. ಬಂಡವಾಳ ವ್ಯವಸ್ಥೆ, ಖಾಸಗಿ ಉದ್ಯಮ ಇವೆರಡೂ ಸಮಾನಾರ್ಥಕಗಳೆಂಬಂತೆಯೂ ಸಾಮಾನ್ಯವಾಗಿ ಭಾವಿಸುವುದುಂಟು. ಬಂಡವಾಳ ವ್ಯವಸ್ಥೆಯ ಒಳಿತು ಕೆಡಕುಗಳೆಲ್ಲ ಖಾಸಗಿ ಉದ್ಯಮದೆಂದೂ ಖಾಸಗಿ ಉದ್ಯಮದ ಎಲ್ಲ ಒಳಿತು ಕೆಡಕುಗಳೂ ಬಂಡವಾಳ ವ್ಯವಸ್ಥೆಯದೆಂದೂ ಹೇಳುವ ವಾಡಿಕೆಯಿದೆ.

ಉದ್ಯಮದ ಸ್ವರೂಪ ಹಾಗೂ ಆವಶ್ಯಕತೆಗಳಿಗೆ ಅನುಗುಣವಾಗಿ ಖಾಸಗಿ ಉದ್ಯಮ ಘಟನೆ ನಾನಾರೂಪಗಳನ್ನು ತಳೆಯಬಹುದು. **(ನೋಡಿ– ಏಕವ್ಯಕ್ತಿ–ಸಂಸ್ಥೆ) (ನೋಡಿ– ಪಾಲುದಾರಿಕೆ) (ನೋಡಿ– ಕಂಪನಿ) (ನೋಡಿ– ಕಾರ್ಪೊರೇಷನ್)** –ಇವು ಕೆಲವು ಪ್ರರೂಪಗಳು. ಇವುಗಳನ್ನು ಕುರಿತ ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ.

**ಖಾಸಗಿ ಉದ್ಯಮ ವಲಯ:** ಸಂಪೂರ್ಣವಾಗಿ ಸ್ವತಂತ್ರವಾದ ಖಾಸಗಿ ಉದ್ಯಮ ವ್ಯವಸ್ಥೆ ಇಂದು ವಿಶ್ವದ ಯಾವ ನಾಗರಿಕ ರಾಷ್ಟ್ರದಲ್ಲೂ ಇಲ್ಲ. ಒಂದು ದೇಶದ ಆರ್ಥಿಕತೆಯ ಕಾರ್ಯಭಾಗಗಳನ್ನು ಅಧ್ಯಯನ ಮಾಡುವ ಸಲುವಾಗಿ ಅದನ್ನು ವಿವಿಧ ವಲಯಗಳಾಗಿ ವಿಂಗಡಿಸುವುದು ಅನುಕೂಲಕರ. ಒಂದು ಆರ್ಥಿಕತೆಯ ಮುಖ್ಯ ವಲಯಗಳು ಎರಡು: 1 ಸರ್ಕಾರಿ ವಲಯ: ಕೇಂದ್ರ ಪ್ರಾಂತೀಯ ಸ್ಥಳೀಯ ಸರ್ಕಾರಗಳು ನಡೆಸುವ ರಾಷ್ಟ್ರೀಕೃತ ಉದ್ಯಮಗಳು, ಇತರ ಸಾರ್ವಜನಿಕ ಕಾರ್ಪೊರೇಷನ್‌ಗಳು ಇವೆಲ್ಲ ಇದರ ಕಕ್ಷೆಯಲ್ಲಿ ಬರುತ್ತವೆ. 2 ಖಾಸಗಿ ವಲಯ: ಯಾವುದೇ ಸರ್ಕಾರದ ಅಂಗವಾಗಿರದ, ಆರ್ಥಿಕತೆಯ ಇತರ ಎಲ್ಲ ಧಾತುಗಳೂ (ಎಲಿಮೆಂಟ್ಸ್) ಇದಕ್ಕೆ ಒಳಪಡುತ್ತವೆ. ಸಮಾಜವಾದಿ ವ್ಯವಸ್ಥೆಯಲ್ಲಿ ಎಲ್ಲ ಉತ್ಪಾದನ ಸಾಧನಗಳೂ ರಾಷ್ಟ್ರದ ಒಡೆತನಕ್ಕೆ ಒಳಪಟ್ಟಿರುತ್ತವೆ. ಉಳಿದ ವ್ಯವಸ್ಥೆಗಳಲ್ಲಿ ಖಾಸಗಿ ಹಾಗೂ ಸರ್ಕಾರಿ ಉದ್ಯಮಗಳೆರಡೂ ಇರುವುದುಂಟು. ಇದು ಮಿಶ್ರ ಆರ್ಥಿಕತೆ. ಖಾಸಗಿ ಮತ್ತು ಸರ್ಕಾರಿ ವಲಯಗಳ ಸಾಪೇಕ್ಷ ಗಾತ್ರ, ಪ್ರಭಾವ, ದಕ್ಷತೆ, ಸಾಮರ್ಥ್ಯಗಳು ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತವೆ.

ಖಾಸಗಿ ವಲಯದಲ್ಲಿ ಪ್ರಕೃತಿ ಸಂಪತ್ತು, ಉತ್ಪಾದನ ಸಾಮಗ್ರಿ, ಬಂಡವಾಳಗಳು ಕೆಲವೇ ಪ್ರಭಾವಶಾಲಿ ಉದ್ಯಮಿಗಳ ನಿಯಂತ್ರಣದಲ್ಲಿರುವುದರಿಂದ, ವಿವಿಧ ಉದ್ಯಮಗಳನ್ನು ಪ್ರಾರಂಭಿಸಿ, ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಿ, ದಕ್ಷತೆ ಹೆಚ್ಚಿಸಿ, ವೆಚ್ಚಗಳನ್ನು ಮಿತಗೊಳಿಸಲು ಪ್ರಯತ್ನಿಸಿ, ಅಧಿಕ ಲಾಭ ಗಳಿಸುವ ಪ್ರಯತ್ನಗಳು ನಡೆಯುತ್ತವೆ; ದೇಶದ ಕೈಗಾರಿಕಾಕರಣ ಸುಲಭಸಾಧ್ಯವಾಗುತ್ತದೆ; ತೀವ್ರ ಆರ್ಥಿಕ ಪ್ರಗತಿಯಾಗುತ್ತದೆ–ಎಂಬ ವಾದಗಳನ್ನು ಮುಂದಿರಿಸಿ ಹಲವರು ಖಾಸಗಿ ವಲಯದ ಉದ್ಯಮಗಳಿಗೆ ಪ್ರೋತ್ಸಾಹ ಬಯಸಿದರೂ ಸಾಮಾನ್ಯವಾಗಿ ಖಾಸಗಿ ವಲಯದಲ್ಲಿ ಅಲ್ಪಕಾಲದಲ್ಲಿ ಕಡಿಮೆ ಬಂಡವಾಳದಿಂದ ಹೆಚ್ಚು ಲಾಭ ತರುವಂಥ ಅನುಭೋಗ ಸರಕುಗಳ ಉತ್ಪಾದನೆಗೆ ಹೆಚ್ಚು ಪ್ರಯತ್ನಗಳು ನಡೆಯುವುದೇ ಸಾಮಾನ್ಯ. ಮೂಲಭೂತವಾದ, ಶೀಘ್ರಲಾಭ ತರದ, ಹೆಚ್ಚು ಲಾಭದಾಯಕವಲ್ಲದ, ಜನೋಪಯೋಗಿಯಾದ ಕೈಗಾರಿಕೆಗಳ ಬೆಳವಣಿಗೆಯ ಕಡೆಗೆ ಲಕ್ಷ್ಯ ಹರಿಸದಿರುವ ಸಂಭವವುಂಟು. ನಿಸರ್ಗ ಸಾಧನಗಳು ಪೋಲಾಗುವ ಅಪಾಯವೂ ಇರುತ್ತದೆ. ದೇಶದ ದೀರ್ಘಕಾಲಿಕ ಅಭಿವೃದ್ಧಿಗೆ ಅಲ್ಲಿ ಗಮನ ಕಡಿಮೆ. ಕ್ರಮಬದ್ಧ ಆರ್ಥಿಕ ಯೋಜನೆಗಳೂ ಕಷ್ಟಸಾಧ್ಯ. ಪ್ರಬಲ ಖಾಸಗಿವಲಯವಿದ್ದಲ್ಲಿ ಆರ್ಥಿಕ ಶಕ್ತಿಗಳು ಕೇಂದ್ರೀಭವಿಸಿ ಜನಸಾಮಾನ್ಯರೂ ಕಾರ್ಮಿಕರೂ ಶೋಷಣೆಗೆ ಒಳಗಾಗಬಹುದು. ಬಡವ–ಶ್ರೀಮಂತ ಎಂಬ ವ್ಯತ್ಯಾಸ ಹೆಚ್ಚಿ ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಗಳ ಮೇಲೆ ದುಷ್ಪ್ರಭಾವ ಉಂಟಾಗಬಹುದು.

ಯಾವುದೇ ದೇಶದ ಆರ್ಥಿಕ ನಿರ್ಮಾಣ ಪ್ರಾರಂಭದ ಹಂತದಲ್ಲಿದ್ದಾಗ ದೇಶೀಯ ಬಂಡವಾಳ, ತಂತ್ರಜ್ಞಾನ ಮತ್ತು ಉದ್ಯಮಿಗಳ ಅಭಾವವಿರುತ್ತದೆ. ಆಗ ಒಂದು ದೇಶದ ಖಾಸಗಿ ಬಂಡವಾಳ ಇನ್ನೊಂದು ದೇಶದ ಖಾಸಗಿ ವಲಯದಲ್ಲಿ ಆ ಸರ್ಕಾರದ ನಿಯಂತ್ರಣಕ್ಕೊಳಪಟ್ಟು ಉದ್ಯಮಗಳನ್ನು ಪ್ರಾರಂಭಿಸಬಹುದು. ಆದರೆ ರಾಷ್ಟ್ರ ಅಭಿವೃದ್ಧಿ ಹೊಂದಿದಂತೆ ವಿದೇಶಿ ಬಂಡವಾಳದ ಅವಲಂಬನವನ್ನು ಕ್ರಮಕ್ರಮವಾಗಿ ಕಡಿಮೆ ಮಾಡುವುದು ಆವಶ್ಯಕವೆನಿಸಿದೆ.

**ಭಾರತದಲ್ಲಿ:** ಭಾರತದಲ್ಲಿ ಖಾಸಗಿ, ಸರ್ಕಾರಿ–ಎರಡು ವಲಯಗಳೂ ಇವೆ. ದೇಶದ ಪ್ರಮುಖ ಉದ್ಯೋಗವಾದ ಕೃಷಿ ವಿಶೇಷವಾಗಿ ಖಾಸಗಿ ವಲಯದಲ್ಲಿದೆ. ದೇಶದ ಕೈಗಾರಿಕಾಕರಣ ಇನ್ನೂ ಶೈಶವಾವಸ್ಥೆಯಲ್ಲಿದ್ದರೂ ಕೈಗಾರಿಕೆ, ಗಣಿಗಾರಿಕೆ, ಸಾರಿಗೆ ಹಾಗೂ ಇತರ ಸೇವೆಗಳಲ್ಲಿ ಖಾಸಗಿ ವಲಯ ಗಣನೀಯ ಪ್ರಮಾಣದಲ್ಲಿ ಅಭಿವೃದ್ಧಿಗೆ ಪೂರಕವಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಖಾಸಗಿ ಹಾಗೂ ಸರ್ಕಾರಿ ವಲಯಗಳೆರಡರಲ್ಲೂ ಬಂಡವಾಳ ಹೂಡಿಕೆ ಹೆಚ್ಚುತ್ತಿದ್ದರೂ ಸರ್ಕಾರಿ ವಲಯದ ದಿನೇದಿನೇ ಹೆಚ್ಚು ಪ್ರಭಾವಶಾಲಿಯಾಗಿ ಬೆಳೆಯುತ್ತಿದೆ.

ಭಾರತದ ಸರ್ಕಾರ 1948ರಲ್ಲಿ ಘೋಷಿಸಿದ ಕೈಗಾರಿಕಾ ನೀತಿಯಲ್ಲಿ 1 ಕೇಂದ್ರ ಸರ್ಕಾರದ ಏಕಸ್ವಾಮ್ಯವಿರುವ ಉದ್ಯಮಗಳು, 2 ಕ್ರಮೇಣ ಸರ್ಕಾರದ ಒಡೆತನಕ್ಕೆ ಬರುವ ಉದ್ಯಮಗಳು, 3 ಸರ್ಕಾರ ನಿಯಂತ್ರಿತ ಉದ್ಯಮಗಳು ಮತ್ತು 4 ಇತರೆ–ಎಂದು ನಾಲ್ಕು ವಿಧಗಳನ್ನಾಗಿ ವಿಂಗಡಿಸಲಾಗಿತ್ತು. ರಾಸಾಯನಿಕ ಗೊಬ್ಬರ, ಹತ್ತಿ ಜವಳಿ, ಉಣ್ಣೆ, ಸಿಮೆಂಟ್, ಸಕ್ಕರೆ, ಕಾಗದ, ರಬ್ಬರ್, ಉಪ್ಪು, ರಾಸಾಯನಿಕಗಳು, ಭಾರಯಂತ್ರಗಳು, ಟ್ರಾಕ್ಟರ್ ಇತ್ಯಾದಿ ಉದ್ಯಮಗಳನ್ನು ಖಾಸಗಿ ವಲಯಕ್ಕೆ ಬಿಟ್ಟುಕೊಟ್ಟು ಸರ್ಕಾರ ಅವುಗಳ ಮೇಲೆ ತನ್ನ ನಿಯಂತ್ರಣವಿರಿಸಿತ್ತು. ಆ ವೇಳೆಗಾಗಲೇ ಖಾಸಗಿ ವಲಯದಲ್ಲಿದ್ದ ಕಬ್ಬಿಣ ಮತ್ತು ಉಕ್ಕು, ಹಡಗು ನಿರ್ಮಾಣ, ಟೆಲಿಫೋನ್, ಟೆಲಿಗ್ರಾಫ್ ಉದ್ಯಮಗಳನ್ನು ಹತ್ತು ವರ್ಷಗಳವರೆಗೆ ರಾಷ್ಟ್ರೀಕರಿಸುವುದಿಲ್ಲವೆಂದೂ ಅನಂತರ ಪರಿಶೀಲಿಸಲಾಗುವುದೆಂದೂ ಸರ್ಕಾರ ಘೋಷಿಸಿತು. ಸಮಾಜವಾದಿ ಸಮಾಜದ ರಚನೆಗೆ ಪೂರಕವಾಗುವಂತೆ ಎರಡನೆಯ ಯೋಜನೆಯ ಪ್ರಾರಂಭದಲ್ಲಿ 1956ರಲ್ಲಿ ಕೈಗಾರಿಕಾ ನೀತಿಯಲ್ಲಿ ಕೈಗಾರಿಕೆಗಳನ್ನು ಮೂರು ವರ್ಗಗಳಾಗಿ ಪುನರ್ವಿಂಗಡಿಸಲಾಯಿತು. ಅದರಲ್ಲೂ ಖಾಸಗಿ ವಲಯಕ್ಕೆ ಸೂಕ್ತ ಅವಕಾಶ ನೀಡಲಾಗಿದೆ.

ಭಾರತದಲ್ಲಿ ಖಾಸಗಿ ವಲಯದಲ್ಲಿರುವ ಉದ್ಯಮಗಳ ಪ್ರಗತಿಯನ್ನು ಮುಂದೆ ಕೊಡಲಾಗಿದೆ:

| ವರ್ಷ | ಖಾಸಗಿ ವಲಯ ದಲ್ಲಿರುವ ಸಾರ್ವಜನಿಕ ಪರಿಮಿತ ಕಂಪನಿಗಳು | ಖಾಸಗಿ ಪರಿಮಿತ ಕಂಪನಿಗಳು | ಒಟ್ಟು | ಅವುಗಳ ಪಾವತಿ ಯಾದ ಬಂಡವಾಳ (ಕೋಟಿ ರೂ.) |
|---|---|---|---|---|
| 1966 | 6,329 | 20,137 | 26,466 | 1,807.0 |
| 1967 | 6,231 | 20,452 | 26,686 | 1,840.5 |
| 1968 | 6,152 | 20,939 | 27,091 | 1,890.9 |
| 1969 | 6,109 | 21,593 | 27,702 | 1,921.8 |
| 1970 | 6,097 | 23,566 | 29,663 | 2,002.5 |

1970ರ ಕೊನೆಯಲ್ಲಿ ದೇಶದಲ್ಲಿದ್ದ ಸರ್ಕಾರಿ ಕಂಪನಿಗಳ ಸಂಖ್ಯೆ 302. ಅವುಗಳ ಒಟ್ಟು ಪಾವತಿಯಾದ ಬಂಡವಾಳ ರೂ. 1,820 ಕೋಟಿ. ಎಂದರೆ ಒಂದು ಸರ್ಕಾರಿ ಕಂಪನಿಯ ಸರಾಸರಿ ಪಾವತಿಯಾದ ಬಂಡವಾಳ ರೂ. 6 ಕೋಟಿ. ಆದರೆ ಖಾಸಗಿ ವಲಯದ ಒಂದು ಸಂಸ್ಥೆಯ ಸರಾಸರಿ ಬಂಡವಾಳ ರೂ. 7 ಲಕ್ಷ.

1970–71ರ ಅಂಕಿ–ಅಂಶಗಳ ಪ್ರಕಾರ ಭಾರತದ ಮೊದಲ ಹತ್ತು ದೊಡ್ಡ ಕೈಗಾರಿಕಾ ದೈತ್ಯ ಸಂಸ್ಥೆಗಳಲ್ಲಿ ಮೊದಲ ಒಂಬತ್ತು ಸರ್ಕಾರಿ ವಲಯದಲ್ಲಿವೆ. ಹತ್ತನೆಯದು

ಖಾಸಗಿ ವಲಯದ ಅತಿದೊಡ್ಡ ಸಂಸ್ಥೆ. ದೇಶದ ಪ್ರಥಮ 25, 50, 100 ದೈತ್ಯ ಕೈಗಾರಿಕಾ ಸಂಸ್ಥೆಗಳಲ್ಲಿ ಅನುಕ್ರಮವಾಗಿ 11, 29, 71 ಸಂಸ್ಥೆಗಳು ಖಾಸಗಿ ವಲಯದಲ್ಲಿವೆ.

ದೇಶದಲ್ಲಿರುವ ಖಾಸಗಿ ವಲಯದ ಎಲ್ಲ ಉದ್ಯಮಗಳ ಆಸ್ತಿಗಳು, ಬಂಡವಾಳ, ಲಾಭ ನಷ್ಟ ಇತ್ಯಾದಿಗಳ ಬಗ್ಗೆ ವಿವರವಾದ ಮಾಹಿತಿಗಳು ಲಭ್ಯವಿಲ್ಲ. 1970–71ರಲ್ಲಿ ಪ್ರಥಮ 100 ದೈತ್ಯ ಸಾರ್ವಜನಿಕ ಪರಿಮಿತ ಕಂಪನಿಗಳ ಒಟ್ಟು ಆಸ್ತಿಗಳ ಮೌಲ್ಯ ರೂ. 3,234 ಕೋಟಿ. ಪಾವತಿಯಾದ ಬಂಡವಾಳ ಹಾಗೂ ಸಂಚಿತಿಗಳ (ರಿಸರ್ವ್) ಮೊತ್ತ ರೂ. 1,347 ಕೋಟಿ. ವಾರ್ಷಿಕ ಉತ್ಪಾದನೆ ರೂ. 3,021.33 ಕೋಟಿ. ತೆರಿಗೆ ತೆತ್ತ ಅನಂತರ ಉಳಿದ ಲಾಭ ರೂ. 171.63 ಕೋಟಿ. ಲಾಭಾಂಶ ವಿತರಣೆ ಮಾಡಿ ಪುನರ್ವಿನಿಯೋಜನೆಗೆ ಉಳಿದ ಲಾಭ 86.68 ಕೋಟಿ. ಪ್ರಥಮ 100 ದೈತ್ಯ ಕಂಪನಿಗಳಲ್ಲಿ ನಷ್ಟ ಅನುಭವಿಸುತ್ತಿರುವ ಕಂಪನಿಗಳ ಸಂಖ್ಯೆ 19. ಹತ್ತಿ ಜವಳಿ, ಕಾಗದ, ಸಕ್ಕರೆ, ಸಾರಿಗೆ, ಸಿಮೆಂಟ್, ಸಣಬು, ಎಂಜಿನಿಯರಿಂಗ್ ಹಾಗೂ ರಾಸಾಯನಿಕಗಳು, ವಿದ್ಯುತ್ ಉಪಕರಣ ಇತ್ಯಾದಿ ಉದ್ಯಮಗಳು ಪ್ರಮುಖವಾಗಿ ಖಾಸಗಿ ವಲಯದಲ್ಲಿವೆ. (ಆರ್.ಬಿ.ಎನ್.; ಆರ್.ವಿ.ಎಚ್.)

**ಖಾಸಗಿ ಶಿಕ್ಷಣ ಸಂಸ್ಥೆಗಳು :** ಹೆಸರೇ ತಿಳಿಸುವಂತೆ ಖಾಸಗಿ ಸಂಸ್ಥೆಗಳ ಆಡಳಿತಕ್ಕೆ ಒಳಪಟ್ಟ ಶಿಕ್ಷಣ ಸಂಸ್ಥೆಗಳು. ಇವಕ್ಕೆ ಸರ್ಕಾರಿ ದ್ರವ್ಯಸಹಾಯ ಇರಬಹುದು, ಇಲ್ಲದಿರಬಹುದು. ಖಾಸಗಿ ಸಂಸ್ಥೆಯ ಆಳ್ವಿಕೆಗೆ ಒಳಪಟ್ಟು ಸರ್ಕಾರದಿಂದ ದ್ರವ್ಯ ಸಹಾಯವನ್ನು ಪಡೆಯುವ ಅಥವಾ ಪಡೆಯದಿರುವ ಸ್ವತಂತ್ರ ಶಿಕ್ಷಣ ಸಂಸ್ಥೆಗಳಿವು. ಶ್ರೀಮಂತ ವರ್ಗದವರಿಗಾಗಿಯೇ ನಡೆಯುವ ಪಬ್ಲಿಕ್ ಶಾಲೆಗಳೂ ಈ ವರ್ಗಕ್ಕೆ ಸೇರುತ್ತವೆ. ಇವುಗಳ ಆಡಳಿತ ವ್ಯವಸ್ಥೆಯಲ್ಲೂ ಶಿಕ್ಷಣದೃಷ್ಟಿ ಮತ್ತು ಶಿಕ್ಷಣ ವ್ಯವಸ್ಥೆಗಳಲ್ಲೂ ಹೆಚ್ಚಿನ ವೈವಿಧ್ಯವಿದೆ. ಕೆಲವು ಕೇವಲ ಸೇವಾದೃಷ್ಟಿಯಿಂದ ಕೆಲಸಮಾಡಿದರೆ ಮತ್ತೆ ಕೆಲವು ಹಣ ಗಳಿಕೆಯ ದೃಷ್ಟಿಯಿಂದಲೇ ಕೆಲಸ ಮಾಡುತ್ತವೆ.

ಎಲ್ಲ ಹಂತಗಳ ಶಿಕ್ಷಣವನ್ನೂ ಒದಗಿಸುವ ಖಾಸಗಿ ಶಾಲೆಗಳಿವೆ. ತರಗತಿಗಳ ಗಾತ್ರ ಚಿಕ್ಕದಾಗಿದ್ದು ಪಾಠಗಳು ತಪ್ಪದೆ ನಡೆಯುತ್ತವಾದ ಕಾರಣ ಖಾಸಗಿ ಶಾಲೆಗಳು ಸರ್ಕಾರಿ ಶಾಲೆಗಳಿಗಿಂತ ಉತ್ತಮವೆನಿಸಿವೆ. ಹಾಗಾಗಲು ಇನ್ನೂ ಒಂದು ಕಾರಣವಿದೆ. ಖಾಸಗಿ ಶಾಲೆಗಳು ಎಲ್ಲರನ್ನೂ ಸೇರಿಸಿಕೊಳ್ಳುವುದಿಲ್ಲ. ಒಂದು ಪರೀಕ್ಷೆ ನಡೆಸಿ ಅದರಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶಾವಕಾಶ ನೀಡುತ್ತವೆ. ಇದರಿಂದಲೂ ಅವುಗಳ ಗುಣಮಟ್ಟ ಏರಿರುತ್ತದೆ.

ಖಾಸಗಿ ಶಾಲೆಗಳ ನಿಯಂತ್ರಣ ಸಾಮಾನ್ಯವಾಗಿ ಶಾಲಾ ಆಡಳಿತ ಸಮಿತಿಯ ಇಲ್ಲವೆ ಶಾಲಾ ನಿರ್ದೇಶಕರ ಆಡಳಿತಕ್ಕೆ ಒಳಪಟ್ಟಿರುತ್ತದೆ. ಆಡಳಿತ ಸಮಿತಿ ಶಾಲೆಯ ಆಡಳಿತವನ್ನು ನಿರ್ವಹಿಸುವುದಲ್ಲದೆ, ಶಾಲಾ ನಿಯಮಗಳನ್ನು ರಚಿಸುವ, ಮುಖ್ಯ ಅಧ್ಯಾಪಕರನ್ನು ನೇಮಿಸುವ ಮತ್ತು ಇತರ ಗುರುತರ ಕಾರ್ಯಗಳ ಹೊಣೆಯನ್ನೂ ಹೊರುತ್ತದೆ.

ಮುಖ್ಯೋಪಾಧ್ಯಾಯ ಆಡಳಿತ ಸಮಿತಿಯಿಂದ ನಿರ್ಮಿತವಾದ ಕಾನೂನುಗಳನ್ನು ಕಾರ್ಯಗತ ಮಾಡುತ್ತಾನೆ, ಶಾಲೆಯ ಆಡಳಿತವನ್ನು ನಿರ್ವಹಿಸುತ್ತಾನೆ. ಅಧ್ಯಾಪಕರ ನೇಮಕ, ಪಾಠಪ್ರವಚನಗಳ ಮೇಲ್ವಿಚಾರಣೆ, ಪಠ್ಯವಿಷಯಗಳ ಸಮಸ್ಯಾ ಪರಿಹಾರ, ಪೋಷಕರ ಅಹವಾಲುಗಳ ವಿತರಣೆ–ಇವಲ್ಲದೆ ಶಾಲೆಗೆ ಸಂಬಂಧಿಸಿದ ಇತರ ಎಲ್ಲ ಕೆಲಸಗಳನ್ನೂ ಆತನೇ ನಿರ್ವಹಿಸುತ್ತಾನೆ.

ಖಾಸಗಿ ಸಂಸ್ಥೆಗಳಿಗೆ ಹೆಚ್ಚಿನ ಸ್ವಾತಂತ್ರ್ಯವಿದೆ. ಉಪಾಧ್ಯಾಯರ ನೇಮಕ, ಬರ್ತರ್ಫು, ವಿದ್ಯಾರ್ಥಿಗಳ ಆಯ್ಕೆ, ಶುಲ್ಕ ವಿಧಿಸುವಿಕೆ, ಶುಲ್ಕ ವಸೂಲಿ–ಮುಂತಾದ ಎಲ್ಲ ಬಾಬುಗಳಲ್ಲೂ ಅವು ತಮ್ಮ ಧೋರಣೆಗೆ ತಕ್ಕಂತೆ ನಡೆಯಲವಕಾಶವಿದೆ. ಇದರಿಂದ ಒಳ್ಳೆಯದೂ ಆಗಿದೆ. ಕೆಟ್ಟದೂ ಆಗಿದೆ.

ಸರ್ಕಾರ ಸಾರ್ವಜನಿಕ ಶಿಕ್ಷಣದ ಹೊಣೆಯನ್ನು ವಹಿಸಿಕೊಂಡದ್ದು ಕೇವಲ 19ನೆಯ ಶತಮಾನದಲ್ಲಿ. ಅದಕ್ಕೂ ಹಿಂದೆ ಎಲ್ಲ ದೇಶಗಳಲ್ಲೂ ಶಿಕ್ಷಣ ಬಹುಮಟ್ಟಿಗೆ ಖಾಸಗಿ ವ್ಯತಿಗಳ ಅಥವಾ ಸಂಸ್ಥೆಗಳ ಪಾಲಿಗಿದ್ದ ಸೇವಾಕಾರ್ಯವಾಗಿತ್ತು. ಭಾರತದಲ್ಲಿ ಇಂಗ್ಲಿಷ್ ಆಡಳಿತ ಆರಂಭವಾದ ಮೇಲೂ ಅನೇಕ ವರ್ಷಗಳ ತನಕ ಶಿಕ್ಷಣ ಖಾಸಗಿ ಸೇವಾಕಾರ್ಯವಾಗಿಯೆ ನಡೆದುಕೊಂಡು ಬಂತು. 1813ರಲ್ಲಿ ಮೊಟ್ಟಮೊದಲು ಕಂಪನಿಯ ಸರ್ಕಾರ ಶಿಕ್ಷಣ ತನ್ನ ಹೊಣೆಯೆಂಬುದನ್ನು ಅಂಗೀಕರಿಸಿತು.

ಭಾರತದಲ್ಲಿ ಹಿಂದಿನಿಂದಲೂ ಶಿಕ್ಷಣವನ್ನು ಗುರುಕುಲ, ಆಶ್ರಮ, ಮಠ, ದೇವಾಲಯ, ಬಸದಿ, ವಿಹಾರ, ಮಸೀದಿ ಮುಂತಾದವು ನಡೆಸಿಕೊಂಡು ಬಂದುವು. ಅನಂತರ ಕ್ರೈಸ್ತಮತಪ್ರಚಾರಕರು, ಖಾಸಗಿ ಸಂಸ್ಥೆಗಳು ಮತ್ತು ವೈಯಕ್ತಿಕವಾಗಿ ಕೆಲವರು ಶಿಕ್ಷಣವನ್ನು ಪ್ರಸಾರ ಮಾಡಲು ಮುಂದೆ ಬಂದರೆಂದು ಹೇಳಬಹುದು. ಹದಿನೈದನೆಯ ಶತಮಾನದ ಅಂತ್ಯದಲ್ಲಿ ಕಲ್ಲಿಕೋಟೆಯಲ್ಲಿ ಕಾಲಿಟ್ಟ ಪೋರ್ಚುಗೀಸರು ಭಾರತದಲ್ಲಿ ಆಧುನಿಕ ಖಾಸಗಿ ಶಿಕ್ಷಣೋದ್ಯಮವನ್ನು ಆರಂಭಿಸಿದರೆನ್ನಬಹುದು. ಅನಂತರ ಇಲ್ಲಿಗೆ ಆಗಮಿಸಿದ ಇತರ ಪಾಶ್ಚಾತ್ಯ ಮತಪ್ರಚಾರಕರೂ ಖಾಸಗಿ ಶಿಕ್ಷಣಸಂಸ್ಥೆಗಳನ್ನು ಆರಂಭಿಸಿದರು. ಅವರ ಮೂಲ ಉದ್ದೇಶ ಮತಪ್ರಚಾರ ಮತ್ತು ಮತಾಂತರಣ. ಆ ಕಾರ್ಯಸಾಧನೆಗೆ ಶಿಕ್ಷಣ ಅವರಿಗೊಂದು ಉಪಕರಣವೆನಿಸಿತ್ತು. ಪ್ರಾರಂಭದಲ್ಲಿ ಹಣಗಳಿಕೆಯ ಆಸೆ ಅವರಿಗಿರಲಿಲ್ಲ.

ಈಸ್ಟ್ ಇಂಡಿಯ ಕಂಪನಿಯ ಚಾರ್ಟರ್ ನಿಬಂಧನೆ ಮತಪ್ರಚಾರಕರ ಶೈಕ್ಷಣಿಕ ಚಟುವಟಿಕೆಗಳಿಗೆ ಭಾರತದಲ್ಲಿ ಪೂರ್ಣ ಅವಕಾಶವಿತ್ತಿತ್ತು. 1813ರ ಮತ್ತು 1833ರ ನಡುವಣ ಕಾಲದಲ್ಲಿ ಕಂಪನಿಯ ಅಧೀನದಲ್ಲಿರುವ ಪ್ರದೇಶಗಳಲ್ಲಿ ಅನೇಕ ಖಾಸಗಿ ಮಿಷನರಿ ಸಂಸ್ಥೆಗಳು ಆರಂಭವಾಗಿ ಜನತೆಗೆ ಶಿಕ್ಷಣ ಸೌಲಭ್ಯವನ್ನೊದಗಿಸುತ್ತಿದ್ದುವು. ಸರ್ಕಾರ ಅವಕ್ಕೆ ಅಲ್ಪಸ್ವಲ್ಪ ಸಹಾಯ ಧನವಿತ್ತು ಪ್ರೋತ್ಸಾಹ ನೀಡುತ್ತಿತ್ತು. ಇದನ್ನು ಕಂಡ ದೇಶಿಯ ವ್ಯಕ್ತಿಗಳೂ ಸಂಸ್ಥೆಗಳೂ ಸಾರ್ವಜನಿಕ ಶಿಕ್ಷಣಕ್ಕಾಗಿ ಖಾಸಗಿ ಸಂಸ್ಥೆಗಳನ್ನು ಆರಂಭಿಸಲು ಮುಂದೆ ಬಂದರು.

**ಭಾರತೀಯ ಖಾಸಗಿ ಶಿಕ್ಷಣೋದ್ಯಮ:** ಆಂಗ್ಲ ಸರ್ಕಾರ ಭಾರತೀಯರ ಶಿಕ್ಷಣದ ಬಗ್ಗೆ ಅಷ್ಟಾಗಿ ಆಸಕ್ತಿಯನ್ನು ವಹಿಸದ ಕಾರಣ ಪ್ರಜೆಗಳೇ ತಮ್ಮ ಹೊಣೆಯನ್ನು ಅರಿತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಬೇಕಾಯಿತು. ಈ ದಿಶೆಯಲ್ಲಿ ಶೈಕ್ಷಣಿಕವಾದ ಮೊದಲ ಹೆಜ್ಜೆಗಳನ್ನಿಟ್ಟು ಜನತೆಯ ಶಿಕ್ಷಣದ ಆವಶ್ಯಕತೆಗಳನ್ನು ಪೂರೈಸುವಲ್ಲಿ ಮುಂದಾದವರು ಬಂಗಾಳಿಗಳು. ಭಾರತಿಯ ಮಹಾಪುರುಷರಲ್ಲಿ ಒಬ್ಬನಾದ ರಾಜ ರಾಮ್ ಮೋಹನರಾಯ್ ಬಂಗಾಳದಲ್ಲಿ ಹಿಂದೂ ಕಾಲೇಜೊಂದನ್ನು ತೆರೆಯಲು ನಿರ್ಧರಿಸಿದ. ಇವನ ಆಶೆ ಎಡ್ವರ್ಡ್ ಹೈಡ್ ಈಸ್ಟ್ ಎಂಬಾತನ ಸಹಾಯದಿಂದ ಈಡೇರಿತು.

ಖಾಸಗಿ ಶಿಕ್ಷಣೋದ್ಯಮದ ಪ್ರಚಾರ ಕಾರ್ಯ ಕೇವಲ ಮುಂಬಯಿ ಮತ್ತು ಕಲ್ಕತ್ತ ನಗರಗಳಂಥ ಮುಖ್ಯ ಪಟ್ಟಣಗಳಲ್ಲಿ ಮಾತ್ರ ಸಾಗದೆ ರಾಷ್ಟ್ರದ ದಿಗ್ ದಿಗಂತಗಳವರೆಗೂ ಹಬ್ಬತೊಡಗಿತು. ಬಂಗಾಳದ ಜಯನಾರಾಯಣ್ ಘೋಶಾಲ್ ಎಂಬಾತ 1818ರಲ್ಲಿ ವಾರಾಣಸಿಯಲ್ಲಿ ಆಂಗ್ಲ ಶಾಲೆಯೊಂದನ್ನು ತೆರೆದನಲ್ಲದೆ ಅದರ ವೆಚ್ಚಕ್ಕಾಗಿ 20,000 ರೂ. ಧನವನ್ನು ಮುಡುಪಾಗಿಟ್ಟ. 1828ರಲ್ಲಿ ಆಗ್ರದಲ್ಲಿನ ಗಂಗಾಧರಶಾಸ್ತ್ರಿಗಳೆಂಬುವರು ಜಮೀನಿನಿಂದ ಬರುತ್ತಿದ್ದ ಆದಾಯದ ಸಹಾಯದಿಂದ ಕಾಲೇಜು ಸ್ಥಾಪಿತವಾಯಿತು.

ಮುಂಬಯಿ ಪ್ರಾಂತ್ಯದ ಅನೇಕ ಜಿಲ್ಲೆಗಳಲ್ಲಿ ಕೊಡುಗೈ ದಾನಿಗಳ ಉದಾರ ಸಹಾಯದಿಂದಲೂ ಸಾಮಾನ್ಯ ಜನರಿಂದ ಎತ್ತಿದ ನಿಧಿಯಿಂದಲೂ ಅನೇಕ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾದುವು. ಇವುಗಳಲ್ಲಿ ಮುಖ್ಯವಾದ ಸಂಸ್ಥೆಯೆಂದರೆ ದಕ್ಷಿಣ ಕೊಂಕಣ ದೇಶೀಯ ಶಾಲೆ.

ಪಾಚಿಯಪ್ಪ ಶಾಲೆಯ ಸ್ಥಾಪನೆ ಮದ್ರಾಸಿನ ಶಿಕ್ಷಣ ಇತಿಹಾಸದಲ್ಲಿ ಒಂದು ಹೊಸ ಶಕವನ್ನು ಸ್ಥಾಪಿಸಿತು. ಪಾಚಿಯಪ್ಪ ಮೊದಲಿಯಾರ್ ಸಾಯುವ ಮುನ್ನ ಒಂದು ಲಕ್ಷ ಪಗೋಡಗಳ ನಿಧಿಯನ್ನು ಧಾರ್ಮಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗಾಗಿ 1794ರ ಮೊದಲೇ ಅರ್ಪಿಸಿದ. 1847ರ ಜನವರಿ ತಿಂಗಳಲ್ಲಿ ಪಾಚಿಯಪ್ಪ ಮೊದಲಿಯಾರ್ ಪ್ರಿಪರೇಟರಿ ಶಾಲೆ ಸ್ಥಾಪಿತವಾಯಿತು. ಈ ಸಂಸ್ಥೆ ಇಂದು ಅನೇಕ ಶಾಖೆಗಳಾಗಿ ಕವಲೊಡೆದಿದೆ.

1854ರಲ್ಲಿ ಪ್ರಕಟವಾದ ವುಡ್ಸ್ ಡೆಸ್‌ಪ್ಯಾಚ್ ಪತ್ರ ಖಾಸಗಿ ಸಂಸ್ಥೆಗಳಿಗೆ ದ್ರವ್ಯ ಸಹಾಯನೀಡಿ ಅವನ್ನು ಪ್ರೋತ್ಸಾಹಿಸಬೇಕೆಂದು ಸರ್ಕಾರಕ್ಕೆ ಶಿಫಾರಸುಮಾಡಿತು. ಅಷ್ಟೇ ಅಲ್ಲದೆ 1854 ಮತ್ತು 1902ರ ನಡುವಣ ಕಾಲದಲ್ಲಿ ಸರ್ಕಾರವಾಗಲಿ ಮತಪ್ರಚಾರಕರಾಗಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಸಾಹಸವನ್ನು ಮಾಡಲಿಲ್ಲ. ಈ ಶೈಕ್ಷಣಿಕ ಕೃಪಣತೆ ಭಾರತೀಯ ಶಿಕ್ಷಣ ಚಟುವಟಿಕೆಗಳಿಗೆ ಅಪೂರ್ವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಭಾರತೀಯರ ಶಿಕ್ಷಣ ಸಂಸ್ಥೆಗಳ ಬಾಹುಳ್ಯವನ್ನು ಈ ಮುಂದಿನ ಸಂಖ್ಯಾಪಟ್ಟಿ ದೃಢಪಡಿಸುತ್ತದೆ. ಸುಪ್ರಸಿದ್ಧ ಶಿಕ್ಷಣತಜ್ಞನಾದ ಎಫ್.ಡಬ್ಲ್ಯು. ತಾಮಸ್ ಕೂಡ 1854–1882ರ ನಡುವಣ ಕಾಲದಲ್ಲಿ ಮಿಷನರಿ ಸಂಸ್ಥೆಗಳು ಶಿಕ್ಷಣಕ್ಷೇತ್ರದಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದವೆಂದು ತಿಳಿಸುತ್ತಾನೆ.

**ದೇಶಿಯರು ಮತ್ತು ವಿದೇಶೀಯರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳು 1881–82**

| ಸಂಸ್ಥೆಗಳು | ದೇಶೀಯರಿಂದ ಸ್ಥಾಪಿತ | ವಿದೇಶೀಯರಿಂದ ಸ್ಥಾಪಿತ |
|---|---|---|
| ಆರ್ಟ್ಸ್ ಕಾಲೇಜುಗಳು | 5 | 18 |
| ಸೆಕೆಂಡರಿ ಶಾಲೆಗಳು | 1,341 | 757 |
| ಪ್ರಾಥಮಿಕ ಶಾಲೆಗಳು | 54,662 | 1,842 |
| ವೃತ್ತಿಪರ ಶಾಲಾ ಕಾಲೇಜುಗಳು | 10 | 18 |
| | 56,018 | 2,635 |

ರಾಷ್ಟ್ರೀಯ ಸರ್ಕಾರ ಸ್ಥಾಪಿತವಾದಾಗಿನಿಂದ ಶಿಕ್ಷಣ ಸಂಸ್ಥೆಗಳು ಖಾಸಗಿಯವರಿಂದ ಹಣ ಪಡೆಯಲು ಪ್ರಯತ್ನಿಸದೆ ಸರ್ಕಾರವನ್ನೇ ಅವಲಂಬಿಸುತ್ತಿವೆ. 1938ರಲ್ಲಿ ಕಾಂಗ್ರೆಸಿನವರು ಪ್ರಾಂತ್ಯಗಳ ಅಧಿಕಾರ ವಹಿಸಿಕೊಂಡಂದಿನಿಂದ ಜನತೆಯ ಈ ಅವಲಂಬನಾ ಬುದ್ಧಿ ಬೆಳೆಯತೊಡಗಿದೆ. ಕೆಲವು ಪ್ರಾಂತ್ಯಗಳಲ್ಲಿ ಖಾಸಗಿ ಶಾಲೆಗಳನ್ನು ಸರ್ಕಾರವೇ ವಹಿಸಿಕೊಳ್ಳಲಿ ಎಂಬ ಮನೋಭಾವವನ್ನು ಜನತೆ ವ್ಯಕ್ತಪಡಿಸುತ್ತಿದೆ. ಜನತೆಯ ಮತ್ತು ರಾಜಕಾರಣಿಗಳ ಕೆಲವು ಧೋರಣೆಗಳಿಂದಾಗಿ ಸ್ವತಂತ್ರ ಭಾರತದಲ್ಲಿ ಖಾಸಗಿ ಶಿಕ್ಷಣ ಪ್ರಗತಿ ಮಂದವಾಗುತ್ತಿದೆ.

1962–63ರಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿ ಕಾರ್ಯೋನ್ಮುಖವಾದ ವಿವಿಧ ಸಂಸ್ಥೆಗಳ ಸಂಖ್ಯಾ ಬಾಹುಳ್ಯವನ್ನು ಈ ಕೆಳಗಣ ಪಟ್ಟಿ ಸೂಚಿಸುತ್ತದೆ.

**ವಿವಿಧ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲಾಕಾಲೇಜುಗಳು 1962–63**

| | ಪ್ರಾಥಮಿಕ ಶಾಲೆಗಳು | ಮಾಧ್ಯಮಿಕ ಶಾಲೆಗಳು | ಪ್ರೌಢಶಾಲೆಗಳು | ಕಾಲೇಜುಗಳು |
|---|---|---|---|---|
| ಸರ್ಕಾರಿ ಶಿಕ್ಷಣ ಸಂಸ್ಥೆಗಳು | 19.5 | 19.4 | 18.2 | 32.1 |
| ಜಿಲ್ಲಾ ಬೋರ್ಡ್ | 56.5 | 49.6 | 12.2 | 0.5 |
| ಪುರಸಭಾ | 2.8 | 4.2 | 2.5 | – |
| ದ್ರವ್ಯಸಹಾಯ ಪಡೆಯುವ ಖಾಸಗಿ ಸಂಸ್ಥೆಗಳು | 20.1 | 21.4 | 58.5 | 55.1 |
| ದ್ರವ್ಯಸಹಾಯ ಪಡೆಯದ ಖಾಸಗಿ ಸಂಸ್ಥೆಗಳು | 1.1 | 5.4 | 8.6 | 12.3 |

**ಖಾಸಗಿ ಶಿಕ್ಷಣ ಸಂಸ್ಥೆಗಳು, ಸಮಸ್ಯೆಗಳು:** ಈ ಮೇಲಿನ ಪಟ್ಟಿ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರೌಢ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳಲ್ಲಿ ಎಷ್ಟು ಪ್ರಭಾವಶಾಲಿಗಳಾಗಿವೆ ಎಂಬುದನ್ನು ಸೂಚಿಸುತ್ತದೆ. ಭಾರತೀಯ ಖಾಸಗಿ ಸಂಸ್ಥೆಗಳು ಇನ್ನೂ ಅಧಿಕ ಸಂಖ್ಯೆಯಲ್ಲಿ ಶಾಲಾಕಾಲೇಜುಗಳನ್ನು ತೆರೆಯುತ್ತವೆ. ಜನಸಂಖ್ಯೆ ಬೆಳೆಯುತ್ತಿರುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳೂ ಬೆಳೆಯುತ್ತಿವೆ. ಅದರ ಪರಿಣಾಮವಾಗಿ ಸಾಕಷ್ಟು ಉಪಾಧ್ಯಾಯರನ್ನೂ ಹಣವನ್ನೂ ಒದಗಿಸಲಾರದೆ ಅವು ಮುಗ್ಗರಿಸುತ್ತಿವೆ. ವಿದ್ಯಾ ಸಂಪನ್ನರೂ ತ್ಯಾಗಶೀಲರೂ ಆದ ತರುಣ ಪೀಳಿಗೆಯವರನ್ನು ಸಾಕಷ್ಟು ಸಂಖ್ಯೆಯಲ್ಲಿ ಆಕರ್ಷಿಸುವಲ್ಲಿ ಈ ಸಂಸ್ಥೆಗಳು ವಿಫಲವಾಗಿವೆ. ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳಿಗೆ ಚೈತನ್ಯದಾಯಕವಾದ ಉತ್ಕಟ ರಾಷ್ಟ್ರೀಯ ಮನೋಭಾವ ಮಾಯವಾಗತೊಡಗಿದೆ. ಉದಾರಮತಿಗಳಿಂದ ಒದಗಿ ಬರುತ್ತಿದ್ದ ಹಣ ಸಹಾಯ ಉಡುಗತೊಡಗಿದೆ. ಬರುತ್ತಿರುವ ಕೊಂಚ ಧನಸಹಾಯ ಕೂಡ ಸಹಸ್ರಾರು ಶಿಕ್ಷಣ ಸಂಸ್ಥೆಗಳ ಮಿತಿಮೀರಿದ ಹಣದ ಹಸಿವೆಯನ್ನು ಇಂಗಿಸಲು ಸಾಲದಾಗಿದೆ. ಈ ಮೇಲಿನ ಕಾರಣಗಳಿಂದ ಸರ್ವೋತ್ಕೃಷ್ಟವಾದ ಕೆಲವು ಸಂಸ್ಥೆಗಳ ಜೊತೆಗೆ ತುಚ್ಛಮಟ್ಟದ ಸಹಸ್ರಾರು ಶಾಲಾಕಾಲೇಜುಗಳನ್ನೂ ಇಂದು ಖಾಸಗಿ ಶಿಕ್ಷಣ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಅನೇಕ ಶಿಕ್ಷಣ ಮಂದಿರಗಳು ಕೇವಲ ವ್ಯಾಪಾರೀ ಮನೋಧರ್ಮದಿಂದ ಕೆಲಸಮಾಡುತ್ತಿವೆ.

ಕೆಲವು ಸಂಸ್ಥೆಗಳಲ್ಲಿ ಕೋಮುವಾರು ಭಾವನೆಗಳು ತಲೆಯೆತ್ತುತ್ತಿವೆ. ಮತ್ತೆ ಕೆಲವು ರಾಜಕೀಯ ಪ್ರಭಾವಕ್ಕೆ ತುತ್ತಾಗುತ್ತಿವೆ.

ಅನೇಕ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರ ಸ್ಥಿತಿ ಉತ್ತಮವಾಗಿಲ್ಲ. ಖಾಯಂ ಕೆಲಸವಿಲ್ಲದೆ ಪರದಾಡುವ ಉಪಾಧ್ಯಾಯರ ಸಂಖ್ಯೆ ದಿನ ಕಳೆದಂತೆ ಬೆಳೆಯುತ್ತಿದೆ; ವಿಶ್ರಾಂತಿವೇತನವಿಲ್ಲದೆ ದುಡಿಯುತ್ತಿರುವ ಶಿಕ್ಷಕರ ಕಷ್ಟ ಅಪಾರವಾಗುತ್ತಿದೆ; ಭವಿಷ್ಯನಿಧಿಗೆ ತಮ್ಮ ಪಾಲಿನ ಹಣವನ್ನು ಪಾವತಿ ಮಾಡದ ಶಾಲೆಗಳ ಸಂಖ್ಯೆ ಇಮ್ಮಡಿಯಾಗುತ್ತಿದೆ. ಮೇಲಾಗಿ ಖಾಸಗಿ ಶಾಲಾ ಶಿಕ್ಷಕರ ವೇತನವೂ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಶಾಲೆಗಳ ಶಿಕ್ಷಕರಿಗಿಂತ ಕಡಿಮೆಯೆಂದೇ ಹೇಳಬೇಕು. ಅಲ್ಲದೆ ಅನೇಕ ಶಾಲೆಗಳಲ್ಲಿ ಅವರಿಗೆ ನಿಗದಿಯಾಗಿರುವ ಸಂಬಳ ದೊರಕುತ್ತಿಲ್ಲ. ಅಲ್ಲಿ ಅವರ ಸೇವಾನಿಯಮಗಳೂ ಸಮರ್ಪಕವಾಗಿಲ್ಲ. ಇವೆಲ್ಲ ಕಾರಣಗಳು ಅವರ ಕಾರ್ಯನಿಷ್ಠೆಯನ್ನು ಕುಂದಿಸುತ್ತಿವೆ. ಬಹುತೇಕ ಸಂಸ್ಥೆಗಳು ಸರ್ಕಾರದಿಂದ ಬರಬೇಕಾದ ಹಣವನ್ನು ಪಡೆದು ತಮ್ಮ ಪಾಲಿನ ಹಣವನ್ನು ಸುಳ್ಳು ಲೆಕ್ಕಗಳ ಮೂಲಕ ಸಲ್ಲಿಸಿ ಸರ್ಕಾರವನ್ನೂ ಜನತೆಯನ್ನೂ ವಂಚಿಸುತ್ತಿವೆ. ಆದ್ದರಿಂದ ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸಬೇಕೆಂಬ ಕೂಗು ಕೇಳಿಬರುತ್ತಿದೆ. ಪೋಷಕ ವರ್ಗದವರು ಸಹ ಅವುಗಳ ಬಗ್ಗೆ ಅತೃಪ್ತಿಗೊಳ್ಳುತ್ತಿದ್ದಾರೆ. ವಿವಿಧ ರೂಪದಲ್ಲಿ ಅವರಿಂದ ಹಣ ಸುಲಿಗೆ ಮಾಡುತ್ತಿರುವುದು ಇದಕ್ಕೆ ಮುಖ್ಯ ಕಾರಣ.

ಯುದ್ಧಾ ನಂತರದ ದಿನಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಹಣಕಾಸಿನ ಮುಗ್ಗಟ್ಟಿಗೆ ಒಳಗಾಗಿವೆ. ಹಿಂದೆ ದಾನಿಗಳಿಂದ ಸಂಗ್ರಹವಾಗುತ್ತಿದ್ದ ಧನದ ಬೆಂಬಲ ಅವಕ್ಕೆ ಈಗ ಬಹುಮಟ್ಟಿಗೆ ತಪ್ಪಿಹೋಗಿ ತಮ್ಮ ಪಾಲಿನ ಹಣವನ್ನು ಒದಗಿಸಲು ವಿದ್ಯಾರ್ಥಿಗಳಿಂದ ಅಧಿಕ ಶುಲ್ಕ, ದುಬಾರಿ ಚಂದಾ–ಇತ್ಯಾದಿಗಳ ರೂಪದಲ್ಲಿ ಹಣಬೆತ್ತಲು ಮೊದಲು ಮಾಡಿವೆ. ಸಾರ್ವಜನಿಕರು ಈ ಬಗ್ಗೆ ಪ್ರತಿಭಟಿಸುತ್ತಿದ್ದಾರೆ. ಅವುಗಳ ವೆಚ್ಚದ ಬಹುಪಾಲನ್ನು ಈಗ ಸರ್ಕಾರವೇ ವಹಿಸುತ್ತಿರುವುದು ಕಂಡುಬರುತ್ತಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರ ಮತ್ತು ಇತರ ಸಿಬ್ಬಂದಿಯವರ ವೇತನಾದಿ ಸೌಲಭ್ಯಗಳನ್ನು ರಕ್ಷಿಸಲು ಸರ್ಕಾರ ಈಚೆಗೆ ಇಲ್ಲ ದೇಶಗಳಲ್ಲೂ ಹೊಸ ನಿಯಮಗಳನ್ನು ರೂಪಿಸುತ್ತಿದೆ. ಹಾಗೆಯೇ ಅವುಗಳ ಆಡಳಿತದ ಬಗ್ಗೆಯೂ ಹೆಚ್ಚು ಕಟ್ಟುನಿಟ್ಟಾಗಿ ತನಿಖೆ ಆರಂಭವಾಗಿದೆ. ಸರ್ಕಾರವೇ ಎಲ್ಲ ಶಿಕ್ಷಣ ಸಂಸ್ಥೆಗಳನ್ನೂ ನಿರ್ವಹಿಸುವುದು ಅಸಾಧ್ಯವಾದ ಕೆಲಸವಾಗಿರುವುದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರಾಮುಖ್ಯವನ್ನು ತೆಗೆದುಹಾಕುವಂತಿಲ್ಲ. ಅವುಗಳ ವ್ಯವಸ್ಥೆ ಮಾರ್ಪಟ್ಟು ಶಿಕ್ಷಣ ಚೆನ್ನಾಗಿ ನಡೆಯಬೇಕೆಂಬುದು ವಿದ್ಯಾತಜ್ಞರ ಉದ್ದೇಶ.

(ಕೆ.ಎಸ್.ಎಸ್.ಎಸ್‌ಎಚ್.)

**ಖಾಸಿ ಭಾಷೆ :** ಅಸ್ಸಾಂ ಪ್ರದೇಶದ ಖಾಸಿ ಮತ್ತು ಜೈಂತಿಯ ಪರ್ವತ ಪ್ರದೇಶಗಳ ಆದಿವಾಸಿ ಜನರ ಆಡುನುಡಿ. ಸಿಲ್‌ಹೆಟ್ ಮತ್ತು ಕಾಚಾರ್ ಪ್ರದೇಶದ ಸುತ್ತುಮುತ್ತಲೂ ಈ ಭಾಷೆಯನ್ನಾಡುವವರಿದ್ದಾರೆ. ಇದು ಆಸ್ಟ್ರಿಕ್ ಭಾಷಾ ಪರಿವಾರಕ್ಕೆ ಸೇರಿದ ಮೋನ್ ಖ್ಮೇರ್ ಉಪವರ್ಗಕ್ಕೆ ಸೇರಿದುದೆಂದು ವಿದ್ವಾಂಸರ ಅಭಿಪ್ರಾಯ. ಈ ವರ್ಗಕ್ಕೆ ಸೇರಿದ ಇತರ ಸೋದರ ಭಾಷೆಗಳು ಪೆಗು, ಕಾಂಬೋಡಿಯ, ಅನ್ನಂ, ಮೆಕೊಂಗ್, ವಿಯೆಟ್ನಾಂ, ಲಾವೋ, ಥಾಯ್ಲೆಂಡ್, ಮ್ಯಾನ್ಮಾರ್ ದೇಶಗಳಲ್ಲಿ ಪ್ರಚಾರದಲ್ಲಿವೆ. ಭಾರತದಲ್ಲಿ ಖಾಸಿ ಮಾತಾಡುವವರ ಸಂಖ್ಯೆ 3,64,011. ಬೇಸಾಯ ಈ ಜನರ ಮುಖ್ಯ ಕಸಬು. ಶರೀರ ರಚನೆಯಲ್ಲಿ ಇವರು ಮಂಗೋಲಿಯನ್ ಜನಾಂಗದವರನ್ನು ಹೋಲುತ್ತಾರೆ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ರಾಬಿನ್‌ಸನ್ ಎಂಬಾತ ಖಾಸಿ ಭಾಷೆಯ ವ್ಯಾಕರಣವೊಂದನ್ನು ರಚಿಸಿದ. ಆ ಶತಮಾನದ ಕೊನೆಯ ಭಾಗದಲ್ಲಿ ರೆವರೆಂಡ್ ರಾಬರ್ಟ್ಸ್ ಎಂಬಾತ ವ್ಯಾಕರಣ, ಶಬ್ದಕೋಶ ಮತ್ತು ಪಾಠಮಾಲೆಗಳನ್ನು ಸಿದ್ಧಪಡಿಸಿದ.

ಭಾರತದ ಇತರ ಪ್ರಮುಖ ಆದಿವಾಸಿ ಭಾಷೆಗಳಾದ ಮುಂಡ ಭಾಷಾವರ್ಗದ ಭಾಷೆಗಳಿಗೂ ಖಾಸಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಖಾಸಿ ಭಾಷೆಯ ಧಾತುಗಳು ಏಕಾಕ್ಷರಿಗಳು ಮತ್ತು ವಾಕ್ಯದಲ್ಲಿ ಶಬ್ದಗಳ ಅನುಕ್ರಮ ಕರ್ತೃ, ಕ್ರಿಯಾಪದ ಮತ್ತು ಕರ್ಮಪದ–ಹೀಗೆ. ಶಬ್ದರಚನೆಯಲ್ಲಿ ಪರಸರ್ಗಗಳಿಗೆ ಬದಲಾಗಿ ಉಪಸರ್ಗಗಳಿವೆ. ಪದಾದಿಯಲ್ಲಿ ಸಂಧಿಸ್ವರಗಳು ಹೇರಳವಾಗಿ ಬರುತ್ತವೆ. ಶಬ್ದ ರಚನೆಯ ದೃಷ್ಟಿಯಿಂದ ಖಾಸಿ ಇಂಡೋ ಚೀನದ ಭಾಷೆಗಳಿಗೂ ಭಾರತದ ಭಾಷಾ ಪರಿವಾರಗಳಿಗೂ ಮಧ್ಯವರ್ತಿಯಾಗಿದೆ ಎನ್ನಬಹುದು.

ಈ ಭಾಷೆಗೆ ಪ್ರತ್ಯೇಕವಾದ ಲಿಪಿಯಿಲ್ಲ. ಕ್ರೈಸ್ತ ಮಿಷನರಿಗಳು ಇದನ್ನು ರೋಮನ್ ಲಿಪಿಯಲ್ಲಿ ಬರೆಯಲು ಪ್ರಾರಂಭಿಸಿದರು. ಖಾಸಿಯ ಧ್ವನಿ ವ್ಯವಸ್ಥೆಯಲ್ಲಿ ಕಂಡುಬರುವ ಮುಖ್ಯ ವೈಶಿಷ್ಟ್ಯಗಳೆಂದರೆ ತಾನ (ಟೋನ್) ಮತ್ತು ಕಂಠ್ಯಸ್ಪರ್ಶ. ಅಲ್ಲದೆ ಖಾಸಿ ಭಾಷೆಯಲ್ಲಿ ಮೂರ್ಧನ್ಯ ಧ್ವನಿಗಳಾದ ಟ, ಠ, ಡ, ಢ, ಣ, ಳ, ಷ ಕಂಡುಬರುವುದಿಲ್ಲ. ಅಲ್ಪಪ್ರಾಣ ಮಹಾಪ್ರಾಣ ವ್ಯತ್ಯಾಸವಿದೆ. ಆದರೆ ಚ, ಛ ಇಲ್ಲ. ಗ ಕಾರ ಅನುನಾಸಿಕದ ಜೊತೆಯಲ್ಲಿಯೇ ಬರುತ್ತದೆ (ಙ್ಗ). ಅಯ್, ಆಯ್, ಅವ್, ಆವ್, ಎಯ್, ಏವ್ ಮುಂತಾದ ಹಲವಾರು ವಿಧದ ಸಂಯುಕ್ತ ಸ್ವರಗಳೂ ಇವೆ.

ನಾಮಪದಗಳಲ್ಲಿ ಪುಲ್ಲಿಂಗ ಸ್ತ್ರೀಲಿಂಗ ಎಂಬ ಎರಡು ಬಗೆಯ ಲಿಂಗವಿವಕ್ಷೆಯಿದೆ. ಪ್ರಥಮ ಪುರುಷ ಸರ್ವನಾಮ ಲಿಂಗ ಹಾಗೂ ವಚನ ದ್ಯೋತಕವಾಗಿ ಪ್ರತಿಯೊಂದು ನಾಮಪದಕ್ಕೂ ಉಪಸರ್ಗದಂತೆ ಸೇರಿಕೊಳ್ಳುತ್ತದೆ–ಆಂಗ್ಲಭಾಷೆಯ ಆರ್ಟಿಕಲ್‌ಗಳಂತೆ. ಉದಾ: ಉ (ಪು. ಏಕವಚನ) ಉ ಬ್ರೀವ್=ಒಬ್ಬ ಮನುಷ್ಯ; ಕ (ಸ್ತ್ರೀ, ಏಕವಚನ) ಕ ಈಂಗ್=ಒಂದು ಮನೆ; ಕಿ (ಪು.ಬಹು) ಕಿಬ್ರೀವ್=ಮನುಷ್ಯರು–ಇತ್ಯಾದಿ.

ನಾಮಪದಗಳಿಗೆ ಈ ಕೆಳಗಿನ ವಿಭಕ್ತಿ ಪ್ರತ್ಯಯಗಳು ಸೇರುತ್ತವೆ. ಈ ಪ್ರತ್ಯಯಗಳು ಪೂರ್ವಪ್ರತ್ಯಯಗಳು (ಉಪಸರ್ಗಗಳು) ಎಂಬುದು ಗಮನಾರ್ಹ. ಇವಕ್ಕೆ ಉ ಸೇರಿಸಿದರೆ ಪು. ಏಕವಚನ. ಕಿ ಸೇರಿಸಿದರೆ ಪು. ಬಹುವಚನವಾಗುತ್ತದೆ.

| | | |
|---|---|---|
| ದ್ವಿತೀಯಾ | ಇಯ | ಇಯ ಉ ಬ್ರೀವ್=ಮನುಷ್ಯನನ್ನು |
| | | ಇಯ ಕಿ ಬ್ರೀವ್=ಮನುಷ್ಯರನ್ನು |
| ತೃತೀಯಾ | ದ | ದ ಉ ಬ್ರೀವ್=ಮನುಷ್ಯನಿಂದ |
| | | ದ ಕಿ ಬ್ರೀವ್=ಮನುಷ್ಯರಿಂದ |
| ಚತುರ್ಥೀ | ಹ | ಹ ಉ ಬ್ರೀವ್=ಮನುಷ್ಯನಿಗೆ |
| | ಶ | ಹ ಕಿ ಬ್ರೀವ್=ಮನುಷ್ಯರಿಗೆ |
| | ಇಯ | |
| ಪಂಚಮೀ | ನ | ನ ಉ ಬ್ರೀವ್=ಮನುಷ್ಯನಿಂದ |
| | | ನ ಕಿ ಬ್ರೀವ್=ಮನುಷ್ಯರಿಂದ |
| ಷಷ್ಠೀ | ಜೋಂಗ್ | ಜೋಂಗ್ ಉ ಬ್ರೀವ್=ಮನುಷ್ಯನ |
| | | ಜೋಂಗ್ ಕಿ ಬ್ರೀವ್=ಮನುಷ್ಯರ |

ಸಪ್ತಮೀ ಹ ಹ ಉ ಬ್ರೀವ್=ಮನುಷ್ಯನಲ್ಲಿ

ಹ ಕಿ ಬ್ರೀವ್=ಮನುಷ್ಯರಲ್ಲಿ

ನಾಮಪದವನ್ನು ವಿಶೇಷಣವನ್ನಾಗಿ ಪರಿವರ್ತಿಸಲು ಬ ಉಪಸರ್ಗ ಸೇರಿಸಬೇಕು. ಭಾ=ಒಳ್ಳೆಯತನ ಬಭಾ=ಒಳ್ಳೆಯ. ವಿಶೇಷಣ ವಿಶೇಷ್ಯಕ್ಕೆ ಪರವಾಗಿ ಬರುತ್ತದೆ. ಅಂದರೆ ವಿಶೇಷ್ಯ ಮೊದಲು ಆಮೇಲೆ ವಿಶೇಷಣ. ಉ ಬ್ರೀವ್ ಬಭಾ=ಮನುಷ್ಯ ಒಳ್ಳೆಯ ಅಥವಾ ಒಳ್ಳೆಯ ಮನುಷ್ಯ.

ಕ್ರಿಯಾ ಧಾತುಗಳು ಏಕಾಕ್ಷರಿಗಳಾದ ಮೂಲಧಾತುಗಳಾಗಿರಬಹುದು ಅಥವಾ ಉಪಸರ್ಗಗಳನ್ನು ಹಚ್ಚುವುದರಿಂದ ಸಾಧಿತವಾದ ಸಂಯುಕ್ತಧಾತುಗಳಾಗಿರಬಹುದು. ಸಂಯುಕ್ತ ಧಾತುಗಳಿಗೆ ಉದಾಹರಣೆ.

ಪ್ರೇರಣಾರ್ಥಕ: ಇಯಪ್=ಸಾಯಿ, ಪ್ಯಿನ್ ಇಯಪ್=ಕೊಲ್ಲು

ಪುನರುಕ್ತ : ಇಯಾಮ್=ಅಳು, ಇಯ್ಯೆ ಇಯಾಮ್=ಅಳುತ್ತಿರು

ಅನ್ಯೋನ್ಯಬೋಧಕ : ಇಯ್ಯೈತ್=ಪ್ರೀತಿಸು, ಇಯ ಇಯ್ಯೈತ್ ಪರಸ್ಪರ ಪ್ರೀತಿಸು.

ಪುರುಷ ಮತ್ತು ವಚನ ಸೂಚಕವಾಗಿ ಪ್ರತ್ಯಯಗಳಿಗೆ ಬದಲಾಗಿ ಸರ್ವನಾಮಗಳೇ ಉಪಯೋಗಿಸಲ್ಪಡುತ್ತವೆ. ವರ್ತಮಾನ ಕಾಲದಲ್ಲಿ ಧಾತುವಿಗೆ ಪ್ರತ್ಯಯ ಸೇರುವುದಿಲ್ಲ. ಭೂತಕಾಲ ಪ್ರತ್ಯಯ ಲ, ಭವಿಷ್ಯತ್ ಕಾಲ ಪ್ರತ್ಯಯ ನ್.

ಙ್ಗಾ ಲೊಂಗ್ = ನಾನು ಇದ್ದೇನೆ

ಙ್ಗಾ ಲ ಲೊಂಗ್ = ನಾನು ಇದ್ದೆ

ಙ್ಗಾನ್ ಲೊಂಗ್ = ನಾನು ಇರುವೆನು

ನಿಷೇಧಾರ್ಥ ಪ್ರತ್ಯಯ ಮ್, ಙ್ಗಾಮ್ ಥೋಹ್=ನಾನು ಬರೆಯುವುದಿಲ್ಲ. ತಾತ್ಕಾಲಿಕ ವರ್ತಮಾನ ಪ್ರತ್ಯಯ ದ. ಙ್ಗಾದ ತ್ರೆಯಿ=ನಾನು ಕೆಲಸ ಮಾಡುತ್ತಿದ್ದೇನೆ. (ಯು.ಪಿ.ಯು.)

**ಖಾಸಿ ಮತ್ತು ಜೈಂತಿಯ ಬೆಟ್ಟಗಳ ಜಿಲ್ಲೆ :** ಭಾರತದಲ್ಲಿ ಬ್ರಹ್ಮಪುತ್ರಾ ಮತ್ತು ಸುರ್ಮಾ ಕಣಿವೆಗಳ ನಡುವೆ ಇರುವ ಎರಡು ಬೆಟ್ಟ ಪ್ರದೇಶಗಳನ್ನೊಳಗೊಂಡ ಜಿಲ್ಲೆ. ವಿಸ್ತೀರ್ಣ 14349 ಚ.ಕಿಮೀ. ಮೇಘಾಲಯ ರಾಜ್ಯದಲ್ಲಿದೆ. ಪೂರ್ವಪಶ್ಚಿಮವಾಗಿ ಹಬ್ಬಿದ ಕಡಿದಾದ ಬೆಟ್ಟಸಾಲುಗಳೂ ನಡುವೆ ಪ್ರಸ್ಥಭೂಮಿಗಳೂ ಈ ಪ್ರದೇಶದ ಲಕ್ಷಣಗಳು. ದಕ್ಷಿಣದಲ್ಲಿ ಸುರ್ಮಾ ಕಣಿವೆಯಿಂದ ಮೇಲೇರಿರುವ ಪರ್ವತಗಳು ಸಮುದ್ರಮಟ್ಟದಿಂದ 1212–1818 ಮೀ.ಗಳ ಎತ್ತರವಿರುವ ಪ್ರಸ್ಥಭೂಮಿಯಾಗಿ ಪರಿಣಮಿಸುತ್ತವೆ. ಇದರ ಆಡಳಿತಕೇಂದ್ರವಾದ ಷಿಲಾಂಗ್ ಈ ಪ್ರಸ್ಥಭೂಮಿಯ ಮೇಲಿದೆ. ಹೆಚ್ಚು ಮಳೆಯಾಗುವ ಚಿರಾಪುಂಜಿ ಇರುವುದು ಈ ಜಿಲ್ಲೆಯಲ್ಲೇ. ಉತ್ತರದಲ್ಲೂ ಎರಡು ಪ್ರಸ್ಥಭೂಮಿಗಳಿವೆ. ಇವು ಸ್ವಲ್ಪ ತಗ್ಗು. ಒಟ್ಟಿನಲ್ಲಿ ಇಡೀ ಪ್ರಸ್ಥಭೂಮಿಪ್ರದೇಶ ಹುಲ್ಲಿನಿಂದ ತುಂಬಿ ಹಸಿರಾಗಿದೆ. ಸಸ್ಯ ಸಂಪತ್ತು ವೈವಿಧ್ಯಮಯವಾದ್ದು. ಆರ್ಕಿಡ್‌ಗಳು ವಿಶೇಷ. 909 ಮೀ. ಎತ್ತರದಲ್ಲಿ ಪೀತದಾರು ಹೆಚ್ಚಾಗಿ ಬೆಳೆಯುತ್ತದೆ. ಇನ್ನೂ ಎತ್ತರದಲ್ಲಿ ಓಕ್ ಮತ್ತು ಚೆಸ್ ನಟ್ ಉಂಟು. ಕಬ್ಬಿಣದ ಅದುರು ಮತ್ತು ಕಲ್ಲಿದ್ದಲ ಕೆಲವು ಮಾದರಿಗಳು ಇಲ್ಲಿವೆ.

ಕೃಷಿ ಇಲ್ಲಿಯ ಮುಖ್ಯ ಕಸಬು. ಕೈಗಾರಿಕೆ, ಸೇವಾವೃತ್ತಿ, ವ್ಯಾಪಾರ, ಸರಕುಸಾರಿಗೆ ಮುಂತಾದವುಗಳಲ್ಲಿ ನಿರತರಾದವರೂ ಇದ್ದಾರೆ. ಅಕ್ಕಿ ಮುಖ್ಯ ಆಹಾರ. ಬೆಟ್ಟಗಳ ಪಕ್ಕಗಳಲ್ಲೂ ಕಣಿವೆಗಳ ಕೆಳ ಭೂಪ್ರದೇಶಗಳಲ್ಲೂ ಬತ್ತ ಬೆಳೆಯುತ್ತಾರೆ. ಕಾಡನ್ನು ಸುಟ್ಟು ನೆಲವನ್ನು ತೆರವು ಮಾಡಿ ಅಲ್ಲಿ ಒಂದೆರಡು ವರ್ಷ ಬೆಳೆ ತೆಗೆದು ಅನಂತರ ಅದನ್ನು ಬಿಟ್ಟು ಬೇರೆಡೆಯಲ್ಲಿ ಅದೇ ರೀತಿ ಬೆಳೆ ತೆಗೆಯುವ ಕ್ರಮವೇ ಈಗಲೂ ಹೆಚ್ಚಾಗಿ ವಾಡಿಕೆಯಲ್ಲಿದೆ. ಪ್ರಕೃತಿದತ್ತ ಕಾಡನ್ನು ಹಾಳುಮಾಡುವ ಈ ಪದ್ಧತಿಯನ್ನು ಬಿಟ್ಟು ಸುಧಾರಿತ ಕೃಷಿಪದ್ಧತಿಯನ್ನು ಕೈಗೊಳ್ಳುವಂತೆ ಇಲ್ಲಿಯ ಕೃಷಿಕರನ್ನು ಪ್ರೋತ್ಸಾಹಿಸಲಾಗುತ್ತಿದೆ. ಹಿಂದೆ ಈ ಜಿಲ್ಲೆ ಕಿತ್ತಲೆಹಣ್ಣಿಗೆ ಪ್ರಸಿದ್ಧವಾಗಿತ್ತು. ಈಗ ಇದಕ್ಕೆ ಉತ್ತೇಜನ ಕಡಿಮೆಯಾಗಿದೆ. ಜಿಲ್ಲೆಯ ನಿವಾಸಿಗಳಲ್ಲಿ ಖಾಸಿ, ಸಿಂಟೆಂಗ್ ಮತ್ತು ಪಾರ್‌ಗಳು ಮುಖ್ಯರಾದವರು. ಕ್ರೈಸ್ತಮತ ಪ್ರಚಾರಕರಿಂದಾಗಿ ಇಲ್ಲಿ ಆ ಮತೀಯರ ಸಂಖ್ಯೆ ಹೆಚ್ಚಾಗಿದೆ.

ಈಗ ಖಾಸಿ ಮತ್ತು ಜೈಂತಿಯ ಬೆಟ್ಟ ಜಿಲ್ಲೆಯನ್ನು ಪ್ರತ್ಯೇಕಿಸಿ ಬೇರೆ ಬೇರೆ ಜಿಲ್ಲೆಗಳನ್ನಾಗಿ ಪರಿವರ್ತಿಸಲಾಗಿದೆ.

ಪೂರ್ವಖಾಸಿ : ಅಕ್ಟೋಬರ್ 1976ರಲ್ಲಿ ಪುನಾರಚಿತವಾಗಿದೆ. ಇದರ ವಿಸ್ತೀರ್ಣ 2748 ಚ.ಕಿಮೀ. ಜನಸಂಖ್ಯೆ 660923 (2001)

ಜೈಂತಿಯ : ಫೆಬ್ರವರಿ 1972ರಲ್ಲಿ ಪುನಾರಚಿತವಾಗಿದೆ. ಇದರ ವಿಸ್ತೀರ್ಣ 3819 ಚ.ಕಿಮೀ. ಜನಸಂಖ್ಯೆ 295692 (2001). (ಬಿ.ಎಸ್.ಎಚ್.)

**ಖಿಂಗಾನ್ :** ಈಶಾನ್ಯ ಚೀನದ ಪರ್ವತ ಶ್ರೇಣಿ. ಆಮೂರ್ ನದಿಯಿಂದ ಲಿಯೌ ನದಿಯ ಶಿರೋಭಾಗದ ವರೆಗೆ 1127ಕಿ.ಮೀ. ಹಬ್ಬಿದೆ. ದೊಡ್ಡ ಶ್ರೇಣಿ, ಚಿಕ್ಕ ಶ್ರೇಣಿ–ಎಂದು ಇದನ್ನು ಎರಡು ವಿಭಾಗ ಮಾಡಬಹುದು. ದೊಡ್ಡ ಶ್ರೇಣಿಯ ಅತ್ಯುನ್ನತ ಶಿಖರದ ಎತ್ತರ 2024ಮೀ. ಇದು ಮಂಗೋಲಿಯನ್ ಪ್ರಸ್ಥಭೂಮಿಯ ಪೂರ್ವ ಗಡಿಯಂತಿದೆ. ಪರ್ವತಶ್ರೇಣಿಯ ಪೂರ್ವಕ್ಕೆ ಮಧ್ಯ ಮಂಚೂರಿಯದ ಮೈದಾನ ಹಬ್ಬಿದೆ. ಇದು ಮೋಡದಿಂದ ಕೂಡಿದ ಆಗ್ನೇಯ ಮಾರುತವನ್ನು ತಡೆಯುವುದರಿಂದ ಪರ್ವತದ ಪೂರ್ವಕ್ಕಿರುವ ಮಂಚೂರಿಯದಲ್ಲಿ ಸಮೃದ್ಧವಾಗಿ ಮಳೆಯಾಗುತ್ತದೆ; ಪಶ್ಚಿಮದ ಮಂಗೋಲಿಯ ಪ್ರದೇಶ ಶುಷ್ಕವಾಗಿ ಪರಿಣಮಿಸಿದೆ.

ದೊಡ್ಡ ಖಿಂಗಾನ್‌ಗೆ ಅಡ್ಡಲಾಗಿ ಎರಡು ರೈಲು ರಸ್ತೆಗಳುಂಟು. ಇವುಗಳ ಉದ್ದಕ್ಕೂ ಅಲ್ಲಲ್ಲಿ ಜನವಸತಿಗಳುಂಟು. ಉತ್ತರದ ಮಾರ್ಗ ಮುಖ್ಯವಾದದು. ಇದು ಇತಿಹಾಸ ಪ್ರಸಿದ್ಧವಾದ ಚೀನೀ ಪೂರ್ವ ರೈಲ್ವೆ. ಇದು ಟ್ಸಿಟ್ಸಿಹರ್ ಮತ್ತು ಹೈಲಾರ್ ನದಿಗಳ ನಡುವೆ ಪರ್ವತವನ್ನು ಹಾಯ್ದುಹೋಗುತ್ತದೆ. ಚೌಬೀನೆ ಮರಗಳು ಬೆಳೆದಿರುವ ಎಡೆಗಳಿಂದ ದಿಮ್ಮಿಗಳನ್ನು ಸಾಗಿಸಲೂ ರೈಲು ಮಾರ್ಗಗಳುಂಟು. ದಕ್ಷಿಣದ ರೈಲುಮಾರ್ಗ ಮಂಚೂರಿಯದ ರೈಲ್ವೆ ವ್ಯವಸ್ಥೆಯ ಒಂದು ಶಾಖೆ. ಅದು ಉಲಾನ್ ಹಾಟೋದಿಂದ ಆರ್ಷನ್‌ನಲ್ಲಿರುವ ಬಿಸಿನೀರಿನ ಬುಗ್ಗೆಯವರೆಗೂ ಸಾಗುತ್ತದೆ.

ದೊಡ್ಡ ಖಿಂಗಾನ್ ಪರ್ವತವನ್ನು ಸಂಪೂರ್ಣವಾಗಿ ಪರಿಶೋಧಿಸಿಲ್ಲ. ಇದರ ಅತ್ಯಂತ ಉತ್ತರದ ಭಾಗದಲ್ಲಿ ಬಹುಭಾಗವೂ ಉಳಿದ ಕೆಲವು ಭಾಗಗಳೂ ಇಂದಿಗೂ ಅಜ್ಞಾತವಾಗಿಯೇ ಇವೆ. ಇಲ್ಲಿ ಜನವಸತಿ ಅತ್ಯಂತ ವಿರಳ. ಇರುವವರು ಬಹುತೇಕ ಮಂಗೋಲರು. ಇದು ಈಗ ಒಳಮಂಗೋಲಿಯನ್ ಸ್ವಯಮಾಡಳಿತ ಪ್ರದೇಶದ ಭಾಗವಾಗಿದೆ.

ಚಿಕ್ಕ ಖಿಂಗಾನ್ ಶ್ರೇಣಿಗೂ ದೊಡ್ಡ ಖಿಂಗಾನ್ ಶ್ರೇಣಿಗೂ ಸಂಬಂಧ ಏರ್ಪಟ್ಟಿರುವುದು ಇಲ್ಖುರಿ ಶ್ರೇಣಿಯಿಂದಾಗಿ. ಚಿಕ್ಕ ಖಿಂಗಾನ್ ಶ್ರೇಣಿ ಆಮೂರ್ ನದಿಯ ಪೂರ್ವದಂಡೆಯ ಉದ್ದಕ್ಕೂ 604ಕಿ.ಮೀ. ದೂರ ಸಾಗುತ್ತದೆ. ಈ ಪ್ರದೇಶ ಅಷ್ಟೇನೂ ಅಭಿವೃದ್ಧಿಯಾಗಿಲ್ಲ. ಈಚುನ್ ಎಂಬಲ್ಲಿ ಮಾತ್ರ ಚೌಬೀನೆ ಕೆಲಸದಲ್ಲಿ ನಿರತರಾದ ಕೆಲವರು ನೆಲಸಿದ್ದಾರೆ. (ಎಸ್.ಎನ್.ಎಲ್.)

**ಖಿಜûರ್ ಖಾನ್ :** ದೆಹಲಿಯ ಸುಲ್ತಾನನಾಗಿದ್ದ ಅಲ್ಲಾವುದ್ದೀನ್ ಖಲ್ಜಿಯ (1296–1316) ಹಿರಿಯ ಮಗ. ಅಲ್ಲಾವುದ್ದೀನ್ 1303ರಲ್ಲಿ ಮೇವಾಡವನ್ನು ಜಯಿಸಿದಾಗ ಅದರ ರಾಜಧಾನಿಯಾದ ಚಿತ್ತೂರಿಗೆ ಖಿಜûರಾಬಾದ್ ಎಂದು ನಾಮಕರಣ ಮಾಡಿ ಖಿಜûರ್ ಖಾನನನ್ನು ಅಲ್ಲಿ ಗವರ್ನರಾಗಿ ನೇಮಿಸಿ ದೆಹಲಿಗೆ ಹಿಂದಿರುಗಿದ. ಅದನ್ನು ಮತ್ತೆ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ರಜಪೂತರ ಒತ್ತಡದಿಂದಾಗಿ 1311ರ ವೇಳೆಗೆ ಖಿಜûರ್ ಖಾನ್ ಚಿತ್ತೂರನ್ನು ಬಿಟ್ಟು ಹೊರಡಬೇಕಾಯಿತು. ಮಲ್ಲಿಕ್‌ಕಾಫರನ ನೇತೃತ್ವದಲ್ಲಿ ದಕ್ಷಿಣದ ಕಡೆಗೆ ವಿಜಯಯಾತ್ರೆ ಹೊರಟ ಅಲ್ಲಾವುದ್ದೀನನ ಸೇನೆ ದೇವಗಿರಿಯ ರಾಮಚಂದ್ರದೇವನನ್ನು ಮಣಿಸಿದಾಗ, ಅವನಲ್ಲಿ ಆಶ್ರಯ ಪಡೆದಿದ್ದ ಗುಜರಾತಿನ ಮಾಜಿ ದೊರೆ ರಾಯಿ ಕರ್ಣದೇವನ ಮಗಳಾದ ದೇವಲಾದೇವಿಯನ್ನು ಸೆರೆಹಿಡಿದು ಗುಜರಾತಿನ ಗವರ್ನರಾದ ಆಲ್ಪ್ ಖಾನನ ಮೂಲಕ ದೆಹಲಿಯ ಸುಲ್ತಾನ ಅಲ್ಲಾವುದ್ದೀನನಿಗೆ ಒಪ್ಪಿಸಲಾಯಿತು. ಆಕೆಯನ್ನು ಖಿಜûರ್ ಖಾನ್ ಮದುವೆಯಾದ (1307). ಕವಿ ಅಮೀರ್ ಖುಸ್ರು ಇವರಿಬ್ಬರ ಪ್ರೇಮವನ್ನು ಕುರಿತ ಕವನವನ್ನು ರಚಿಸಿದ್ದಾನೆ.

ಅಲ್ಲಾವುದ್ದೀನ್ ಖಲ್ಜಿಯ ಮರಣಾನಂತರ (1316) ಖಿಜûರ್ ಖಾನನೇ ಸುಲ್ತಾನನಾಗುವನೆಂದು ನಿರೀಕ್ಷಿಸಲಾಗಿತ್ತು. ಆದರೆ ಆ ವೇಳೆಗೆ ಪ್ರಬಲನಾಗಿದ್ದ ಮಲ್ಲಿಕ್ ಕಾಫರ್ ಅಲ್ಲಾವುದ್ದೀನನದೆನ್ನಲಾದ ಉಯಿಲೊಂದನ್ನು ಪ್ರಕಟಪಡಿಸಿ, ಅದರಂತೆ ಅಲ್ಲಾವುದ್ದೀನನ ಐದಾರು ವರ್ಷಗಳ ಮಗನಾದ ಷಿಹಾಬುದ್ದೀನನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಅವನ ಪರವಾಗಿ ತಾನೇ ರಾಜ್ಯವಾಳತೊಡಗಿದ. ಖಿಜûರ್ ಖಾನನ ಮತ್ತು ಅವನ ತಮ್ಮ ಷಾದೀ ಖಾನನ ಕಣ್ಣುಗಳನ್ನು ಕೀಳಿಸಿದ. ಅಲ್ಲಾವುದ್ದೀನನ ಸಂಪತ್ತನ್ನೆಲ್ಲ ದೋಚಿಕೊಂಡು ಅವನ ಹೆಂಡತಿಯನ್ನು ಸೆರೆಮನೆಗೆ ಕಳುಹಿಸಿದ. ಅಲ್ಲಾವುದ್ದೀನನ ಮೂರನೆಯ ಮಗನಾದ ಮುಬಾರಕನೂ ಸೆರೆಯಾದ. ಅವನ ಕಣ್ಣುಗಳನ್ನೂ ಕೀಳಿಸುವುದು ಮಲ್ಲಿಕ್ ಕಾಫರನ ಉದ್ದೇಶವಾಗಿತ್ತು. ಆದರೆ ಅಲ್ಲಾವುದ್ದೀನನ ಸೇವಕರು ಕೆಲವರು ಕಾಫರನನ್ನು ಕೊಲೆ ಮಾಡಿದರು. ಅವನ ಮೂವತ್ತೈದು ದಿನಗಳ ಆಡಳಿತ ಕೊನೆಗೊಂಡಿತು. ಸೆರೆಯಿಂದ ಬಿಡುಗಡೆ ಹೊಂದಿದ ಮುಬಾರಕ್ ರಾಜಪ್ರತಿನಿಧಿಯಾದ. ಆದರೆ ಅರವತ್ನಾಲ್ಕು ದಿನಗಳ ರಾಜಪ್ರತಿನಿಧಿ ಆಡಳಿತದ ಅನಂತರ ಆತ ಷಿಹಾಬುದ್ದೀನನ ಕಣ್ಣು ಕೀಳಿಸಿ ತಾನೇ ಸಿಂಹಾಸನವನ್ನೇರಿದ. ಅಂತೂ ಖಿಜûರ್ ಖಾನನಿಗೆ ರಾಜ್ಯ ದಕ್ಕಲಿಲ್ಲ. (ಆರ್.ಜಿ.ಎಸ್.)

**ಖಿನ್ನತೆ :** ಮನೋರೋಗದ ಒಂದು ಲಕ್ಷಣ (ಡಿಪ್ರೆಷನ್). ಆಲಸ್ಯ, ನಿರಾಸಕ್ತಿ, ಧ್ಯಾನಸ ಇವು ಇದರ ಲಕ್ಷಣಗಳು. ರೋಗಲಕ್ಷಣ ಕೆಲವು ವೇಳೆ ತೀವ್ರವಾಗಿ ಹೆಚ್ಚಿನ ಮನೋವಿಕೃತಿಗೂ ಎಡೆಮಾಡಿಕೊಡಬಹುದು. ಖಿನ್ನತೆಯಿಂದ ಕೂಡಿರುವ ವ್ಯಕ್ತಿ ತನ್ನ ಬಾಹ್ಯ ಜಗತ್ತಿನಲ್ಲಿ–ಅಷ್ಟೇ ಏಕೆ, ತನ್ನ ಇಡೀ ಜೀವನದಲ್ಲಿ–ಕ್ರಮೇಣ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. ವ್ಯಸನಿಯಾಗಿ, ಎದೆಗುಂದಿದವನಾಗಿ, ನಿರುತ್ಸಾಹಿಯಾಗಿ ಕಾಣುತ್ತಾನೆ. ಯಾವುದೇ ಕಾರ್ಯದಲ್ಲಿ ನಿರತನಾಗಲು ಒಲವು ತೋರುವುದಿಲ್ಲ; ಅಲ್ಪಶ್ರಮದ ಕೆಲಸಗಳನ್ನು ಮಾಡಲು ಸಹ ತುಂಬ ಪ್ರಯಾಸಪಟ್ಟುಕೊಳ್ಳುತ್ತಾನೆ, ಅವನ ಆಲೋಚನಾ ವಿಧಾನವೇ ಕುಂಠಿತವಾಗುತ್ತದೆ, ಮಂದಗತಿಯದಾಗುತ್ತದೆ. ಜಡತೆ ಅವನನ್ನು ಆಕ್ರಮಿಸುತ್ತದೆ. ಸದಾ ಬಗ್ಗಿದ ನಿಲುವು, ಕಾಂತಿರಹಿತ ಕಣ್ಣುಗಳು, ದುಃಖದಿಂದ ಕೂಡಿದ

ಮುಖಭಾವ–ಇದು ಅವನ ಸಾಮಾನ್ಯ ಚಿತ್ರಣ. ಆತ ತನ್ನ ಬಗೆಗೇ ತಾನು ತಾತ್ಸಾರಪಟ್ಟುಕೊಳ್ಳುತ್ತಾನೆ. ತಾನು ಯಾವ ಕೆಲಸಕ್ಕೂ ಬಾರದ ನಿರುಪಯೋಗಿ ಎನ್ನುವ ಭಾವನೆ ಅವನಲ್ಲಿ ಮೊಳೆಯುತ್ತದೆ. ಅವನಿಗೆ ಸ್ವಲ್ಪವೂ ಆತ್ಮವಿಶ್ವಾಸವಿರುವುದಿಲ್ಲ. ತಾನೊಬ್ಬ ಅಪರಾಧಿ, ಮಹಾಪಾಪಿ ಎನ್ನುವ ಭ್ರಾಂತಿ ಅವನನ್ನು ಕಾಡುತ್ತದೆ. ಭವಿಷ್ಯ ಅವನಿಗೆ ಕರಾಳವಾಗಿ ತೋರುತ್ತದೆ, ಪ್ರಪಂಚವೆಲ್ಲವೂ ನಿರಾಶಾದಾಯಕವೆನಿಸುತ್ತದೆ. ಮಾನಸಿಕ ಖಿನ್ನತೆ ದೇಹದ ಮೇಲೆ ಪರಿಣಾಮ ಬೀರುತ್ತದೆ. ಹಸಿವೆ ಕಡಿಮೆಯಾಗುತ್ತದೆ. ನಿದ್ದೆ ಮಾಡಲಾಗುವುದಿಲ್ಲ. ತೀವ್ರವಾದ ಮಲಬದ್ಧತೆ ಉಂಟಾಗುತ್ತದೆ. ಹೀಗಾದಾಗ ಕೆಲವರು ಆತ್ಮಹತ್ಯೆಗೆ ಕೂಡ ಯತ್ನಿಸುತ್ತಾರೆ.

ಒಬ್ಬನೇ ರೋಗಿಯಲ್ಲಿ ಮೇಲೆ ಹೇಳಿದ ಎಲ್ಲ ಲಕ್ಷಣಗಳೂ ತೋರಬಹುದು ಅಥವಾ ಕೆಲವು ಲಕ್ಷಣಗಳು ಮಾತ್ರವೇ ತೋರಬಹುದು. ಲಕ್ಷಣಗಳ ತೀವ್ರತೆಯಲ್ಲಿ ಸಹ ರೋಗಿಯಿಂದ ರೋಗಿಗೆ ವ್ಯತ್ಯಾಸವಿರುತ್ತದೆ. ಸಾಧಾರಣವಾಗಿ ಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಖಿನ್ನತೆಯನ್ನು ವ್ಯಕ್ತಪಡಿಸಿಯೇ ಇರುತ್ತಾರೆ. ಆತ್ಮೀಯರೊಬ್ಬರು ಅಗಲಿದಾಗ ಇಲ್ಲವೆ ಆಳಿದಾಗ, ವ್ಯಾಪಾರದಲ್ಲೋ ಜೂಜಿನಲ್ಲೋ ಭರಿಸಲಾಗದ ನಷ್ಟವನ್ನು ಅನುಭವಿಸಿದಾಗ ಜನ ಹತಾಶರಾಗಿ ಖಿನ್ನತೆಯನ್ನು ಪ್ರದರ್ಶಿಸುತ್ತಾರೆ. ಆದರೆ ಆ ಬಗೆಯ ಅನುಭವ ತಾತ್ಕಾಲಿಕ. ಅದೇ ಅನುಭವ ತೀವ್ರವಾಗಿ ದೀರ್ಘಕಾಲದವರೆಗೆ ಮುಂದುವರಿದುಕೊಂಡು ಹೋಗಿ ವ್ಯಕ್ತಿಯ ಹೊಂದಾಣಿಕೆಯನ್ನು ಅಸ್ತವ್ಯಸ್ತಗೊಳಿಸಿದಾಗ ಅದು ಮನೋರೋಗದ ಲಕ್ಷಣವಾಗಿ ಪರಿಣಮಿಸುತ್ತದೆ.

ಖಿನ್ನತೆಯ ಮಟ್ಟ ತುಂಬ ಲಘುವಾಗಿದ್ದರೆ ಅದರ ಪರಿಣಾಮವೂ ಲಘುವಾಗಿರುತ್ತದೆ. ರೋಗಿ ತನ್ನ ಮನಸ್ಸನ್ನು ಯಾವುದೇ ಕೆಲಸದಲ್ಲಿ, ಆಲೋಚನೆಯಲ್ಲಿ ಹೆಚ್ಚು ಕಾಲ ನೆಲೆಗೊಳಿಸಲಾರ. ಆತ್ಮವಿಶ್ವಾಸವಿಲ್ಲದೆ, ನಿದ್ರೆ ಬಾರದೆ, ಬೇಸರ, ಕಿರಿಕಿರಿ, ದೇಹಾಲಸ್ಯಗಳಿಂದ ಆತ ತೊಳಲಾಡುತ್ತಾನೆ. ಖಿನ್ನತೆ ಅತಿರೇಕಾವಸ್ಥೆಗೆ ಏರಿದಾಗ ರೋಗಿ ನಿಶ್ಚೇಷ್ಟಿತನಾಗುತ್ತಾನೆ. ಮಾತನಾಡುವುದೂ ಇಲ್ಲ. ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವುದೂ ಇಲ್ಲ. ತಾನೇ ತಾನಾಗಿ ಆಹಾರವನ್ನು ಸಹ ತೆಗೆದುಕೊಳ್ಳುವುದಿಲ್ಲ. ಆತನ ಮಲಮೂತ್ರಗಳನ್ನು ಕೂಡ ಕೃತಕ ವಿಧಾನಗಳ ಮೂಲಕ ಹೊರತೆಗೆಯಬೇಕಾಗುತ್ತದೆ. ಲಘುಖಿನ್ನತೆ ಮತ್ತು ವಿಷಣ್ಣಜಡತ್ವ ಈ ಎರಡು ಅಂತ್ಯಗಳ ನಡುವೆ ಬೇರೆ ಬೇರೆ ಮಟ್ಟದ, ತೀವ್ರತೆಯಲ್ಲಿ ವ್ಯತ್ಯಾಸವುಳ್ಳ ಖಿನ್ನತೆಯ ಸ್ತರಗಳನ್ನು, ಪ್ರತಿಕ್ರಿಯೆಗಳನ್ನು ಗುರುತಿಸಬಹುದು.

ಖಿನ್ನತೆಗೆ ಎಡೆಮಾಡಿಕೊಡುವ ಎರಡು ಸಂಗತಿಗಳೆಂದರೆ ಆತ್ಮಗೌರವಕ್ಕೆ ಒದಗಿ ಬರುವ ಧಕ್ಕೆ ಇಲ್ಲವೆ ಪ್ರಿಯವಾದ ವಸ್ತುವೊಂದರ ನಷ್ಟ, ಆತ್ಮೀಯರ ಸಾವು, ಆರ್ಥಿಕ ನಷ್ಟ, ಸಾಮಾಜಿಕ ಅಪಮಾನ ಈ ಮೊದಲಾದುವು ಖಿನ್ನತೆಗೆ ಎಡೆಮಾಡಿಕೊಡುವ ಅಂಶಗಳು. ಈ ಬಗೆಯ ನಷ್ಟ ಅಥವಾ ನೋವನ್ನು ಅನುಭವಿಸಿದಾಗ ವ್ಯಕ್ತಿ ತಾನು ಎಲ್ಲವನ್ನೂ ಕಳೆದುಕೊಂಡಿದ್ದೇನೆ, ಪ್ರಪಂಚ ಬರೀ ಶೂನ್ಯ, ಯಾರೂ ತನ್ನನ್ನು ಪ್ರೀತಿಸುವುದಿಲ್ಲ. ತಾನು ಒಂಟಿ–ಎಂಬ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾನೆ. ಖಿನ್ನತೆಗೆ ಫ್ರಾಯ್ಡ್ ಪ್ರಿಯವಸ್ತುವಿನ ನಷ್ಟಕ್ಕಾಗಿ ತೋರುವ ಅತೀವವಾದ ಹಾಗೂ ಅಪಸಾಮಾನ್ಯವಾದ ದುಃಖ ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾನೆ. ಸಾಮಾನ್ಯವಾಗಿ ದುಃಖವೆಂದರೆ ಪ್ರಜ್ಞಾಪೂರ್ವಕವಾಗಿ ಅನುಭವಿಸಿದ ನಷ್ಟಕ್ಕಾಗಿಯೇ ವ್ಯಕ್ತಿ ತೋರುವ ಪ್ರಜ್ಞಾಪೂರ್ವಕವಾದ ಪ್ರತಿಕ್ರಿಯೆ. ಆದರೆ ಖಿನ್ನತೆಯಲ್ಲಿ ವ್ಯಕ್ತಿಗೆ ತನಗಾದ ನಷ್ಟದ ಅರಿವಿರುವುದಿಲ್ಲ. ಇದ್ದರೂ ಅದು ಮನಸ್ಸಿನ ಮೇಲೆ ಮಾಡಿರುವ ಪರಿಣಾಮ ತೀವ್ರತಮವಾಗಿರುತ್ತದಾಗಿ ಯಾವ ಸಮಾಧಾನದಿಂದಲೂ ವ್ಯಕ್ತಿಯ ಖಿನ್ನತೆ ಕಡಿಮೆಯಾಗುವುದಿಲ್ಲ.

ಫ್ರಾಯ್ಡನ ಪ್ರಕಾರ ಖಿನ್ನವ್ಯಕ್ತಿಯಲ್ಲಿ ಕಾಣಬರುವ ಅತಿ ಆತ್ಮಾವಹೇಳನ ವಾಸ್ತವವಾಗಿ ಆ ವ್ಯಕ್ತಿ ಪ್ರೀತಿಸುವ ಇನ್ನಾವುದೇ ಬೇರೊಬ್ಬ ವ್ಯಕ್ತಿ ಅಥವಾ ವಸ್ತುವನ್ನು ಕುರಿತದ್ದಾಗಿರುತ್ತದೆ. ಆ ಬೇರೊಬ್ಬ ವ್ಯಕ್ತಿ ಅಥವಾ ವಸ್ತುವಿನ ಬಗೆಗಿರುವ ಪ್ರೀತಿಯ ಭಾವನೆ ಮತ್ಸರದೊಂದಿಗೆ ಕೂಡಿದ್ದು ಸಂಕೀರ್ಣರೂಪ ತಾಳುತ್ತದೆ. ಪ್ರಜ್ಞೆಗೆ ಹೊರತಾಗಿರುವ ಈ ಸುಪ್ತ ಭಾವನೆಗಳು ಮತ್ತು ಆಕ್ರಮಣಕಾರಿ ವರ್ತನೆಗಳು ತಮ್ಮ ನಿಜವಾದ ಗುರಿಯತ್ತ ನಿರ್ದೇಶಿತವಾಗದೆ ಖಿನ್ನವ್ಯಕ್ತಿಯ ಆತ್ಮಾವಹೇಳನ ಮತ್ತು ಹತಾಶೆಯಲ್ಲಿ ಪರ್ಯವಸಾನಗೊಳ್ಳುತ್ತವೆ. ಈ ದೃಷ್ಟಿಯಿಂದ ಖಿನ್ನತೆಯನ್ನು ವಿಶ್ಲೇಷಿಸುವಲ್ಲಿ ಮನಸ್ಸು ಮತ್ತು ದೇಹ ಎರಡನ್ನೂ ಸೂಕ್ಷ್ಮವಾಗಿ ಪರೀಕ್ಷಿಸಿ ಚಿಕಿತ್ಸೆಯನ್ನು ಕೊಡಬೇಕಾಗುತ್ತದೆ. ಮನಸ್ಸಿನಲ್ಲಿ ಬೇರೂರಿರುವ ಖಿನ್ನತೆ ಹೋಗಲು ಬಹಳ ಕಾಲ ಬೇಕಾಗಬಹುದು. ಇದಕ್ಕೆ ಮನೆಯವರೆಲ್ಲರ, ವೈದ್ಯರ ಸಹಕಾರ ಅಗತ್ಯ. ಮೂಲಭೂತವಾದ ಕಾರಣಗಳೇನಿವೆ ಎಂಬುದನ್ನು ಗುರುತಿಸಿ ಅವು ನಿವಾರಣೆಯಾಗುವಂತೆ ಮಾಡುವುದು ಮೊದಲ ಕೆಲಸ. ಅದರಲ್ಲಿ ರೋಗಿಗೆ ನಂಬಿಕೆ ಹುಟ್ಟುವುದು ಸ್ವಲ್ಪ ಕಷ್ಟ. ತನಗೆ ಯಾರೂ ಮೋಸ ಮಾಡುತ್ತಿಲ್ಲ. ಎಲ್ಲರೂ ತನಗೆ ಅನುಕೂಲರಾಗಿದ್ದಾರೆ ಎಂಬ ಭರವಸೆ ಅವನಲ್ಲಿ ಮೂಡಬೇಕು. ಮೂಡಿದ್ದು ಮುಂದುವರಿಯಬೇಕು. ಜೊತೆಗೆ ಆಹಾರ ನಿದ್ರಾದಿಗಳಲ್ಲಿ ಪಥ್ಯ ಅಗತ್ಯವಾಗಬಹುದು. ಒಟ್ಟಿನಲ್ಲಿ ಪರಿಸರ ಬದಲಾವಣೆಯಿಂದಲೂ ಉಚಿತ ಔಷಧ ಪಥ್ಯದಿಂದಲೂ ರೋಗ ನಿಧಾನವಾಗಿ ಗುಣವಾಗುತ್ತದೆ. (ಎಚ್.ಎಸ್.ಐ.)

**ಖಿಲಾಫತ್ ಚಳವಳಿ :** ಮುಸ್ಲಿಮರಲ್ಲಿ ತುರ್ಕಿಯ ಸುಲ್ತಾನನಿಗೆ ಇದ್ದ ಮತೀಯ ಗೌರವವನ್ನು ಉಳಿಸಿಕೊಳ್ಳಲೂ ತುರ್ಕಿಯ ರಾಜಕೀಯ ಔನ್ನತ್ಯವನ್ನು ರಕ್ಷಿಸಲೂ ಭಾರತೀಯ ಮುಸ್ಲಿಮರು ಕೈಗೊಂಡ ಚಳವಳಿ. ತುರ್ಕಿ ದೇಶದ ಸುಲ್ತಾನನಿಗೆ ಕಲೀಫ ಎಂಬ ಹೆಸರಿತ್ತು. ಅವನು ರಾಜ್ಯಾಡಳಿತ ನಡೆಸುವುದರ ಜೊತೆಗೆ ಪ್ರಪಂಚದ ಮುಸ್ಲಿಂ ಜನಾಂಗದ ಧರ್ಮಗುರುವೂ ಆಗಿದ್ದ. ಅವನ ಸ್ಥಾನಮಾನಕ್ಕೆ ಸಂಬಂಧಿಸಿದ್ದಾದ್ದರಿಂದ ಇದು ಭಾರತದಲ್ಲಿ ಖಿಲಾಫತ್ ಎಂದು ಪ್ರಸಿದ್ಧವಾಯಿತು (ಇಂಗ್ಲಿಷಿನಲ್ಲಿ ಕಲೀಫೇಟ್). 20ನೆಯ ಶತಮಾನದ ಆದಿಯ ದಶಕದಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮುಂತಾದ ಐರೋಪ್ಯ ರಾಜ್ಯಗಳು ಇಸ್ಲಾಮೀ ರಾಜ್ಯಗಳ ಬಗೆಗೆ ಅದರಲ್ಲಿಯೂ ತುರ್ಕಿಯ ಕಲೀಫನ ಬಗೆಗೆ ನಡೆದುಕೊಳ್ಳುತ್ತಿದ್ದ ರೀತಿಯಿಂದ ಭಾರತದ ಮುಸ್ಲಿಮರಲ್ಲೂ ಅತೃಪ್ತಿ ಉಂಟಾಗಿತ್ತು. ಈ ಅತೃಪ್ತಿಯನ್ನು ಇಕ್ಬಲ್, ಷಿಬ್ಲಿ ಮೊದಲಾದ ಕವಿಗಳೂ ಅಬುಲ್ ಕಲಾಂ ಆಜ಼ಾದ್, ಮಹಮ್ಮದ್ ಅಲೀ ಮೊದಲಾದ ಪತ್ರಿಕೋದ್ಯಮಿಗಳೂ ತಮ್ಮ ಬರೆಹಗಳಲ್ಲಿ ವ್ಯಕ್ತಪಡಿಸಿದ್ದರು.

1914ರಲ್ಲಿ ಒಂದನೆಯ ಮಹಾಯುದ್ಧ ಆರಂಭವಾಯಿತು. ತುರ್ಕಿಯ ಸುಲ್ತಾನ ಮುಸ್ಲಿಂರ ಕಲೀಫ್, ಜರ್ಮನಿಯ ಕೈಸರ್ ಚಕ್ರವರ್ತಿಯೊಂದಿಗೆ ಸೇರಿ, ಮಿತ್ರ ರಾಷ್ಟ್ರಗಳಿಗೆ



ಅಲೀ ಸಹೋದರರು : ಮಹಮ್ಮದ್ ಅಲೀ (ಎಡಗಡೆ), ಷೌಕತ್ ಅಲಿ (ಬಲಗಡೆ)

ವಿರೋಧಿಯಾಗಿದ್ದ. ಭಾರತದ ಸೈನ್ಯದಲ್ಲಿ ಬಹಳ ಮಂದಿ ಮುಸ್ಲಿಮರಿದ್ದುದರಿಂದ, ಯುದ್ಧದಲ್ಲಿ ಅವರ ಪೂರ್ಣ ನೆರವನ್ನು ಪಡೆದುಕೊಳ್ಳುವುದಕ್ಕಾಗಿ ಭಾರತ ಸರ್ಕಾರ ಕಾತರವಾಗಿತ್ತು. ಬ್ರಿಟನಿನ ಪ್ರಧಾನಿ ಮತ್ತು ಭಾರತದ ವೈಸ್ ರಾಯ್ ಇಬ್ಬರೂ ಅರೇಬಿಯ, ಮೆಸೊಪೊಟೇಮಿಯ ಮತ್ತು ಜೆಡ್ಡಾಗಳಲ್ಲಿದ್ದ ಮುಸ್ಲಿಂ ಪವಿತ್ರ ಸ್ಥಳಗಳನ್ನು ರಕ್ಷಣೆ ಮಾಡುವುದಾಗಿ ಬಹಿರಂಗವಾಗಿ ಘೋಷಿಸಿದ್ದರು. ಆ ಕಾಲದಲ್ಲಿ ಕೆಲವು ದಿನ ಇಂಗ್ಲೆಂಡಿನಲ್ಲಿದ್ದ ಗಾಂಧೀಜೀ ಭಾರತೀಯ ಮುಸ್ಲಿಮರ ರಾಜಕೀಯ ಪ್ರಜ್ಞೆಯ ವಿಷಯವಾಗಿ ಸ್ಥೂಲವಾಗಿ ಅರಿತಿದ್ದರು. 1915ರಲ್ಲಿ ಅವರು ಭಾರತಕ್ಕೆ ಹಿಂದಿರುಗಿ ಬಂದ ಮೇಲೆ, ಮೂರು ವರ್ಷಗಳ ಕಾಲ ಯಾವ ರಾಜಕೀಯ ವಿವಾದದಲ್ಲಿಯೂ ಭಾಗವಹಿಸದೆ ಇದ್ದರು. ಆಗ ಮುಸ್ಲಿಂ ನಾಯಕರು ಖಿಲಾಫತ್ ಸಮಸ್ಯೆಗೆ ಸಂಬಂಧಿಸಿದಂತೆ ಅವರ ಸಲಹೆ ಕೇಳುತ್ತಿದ್ದರು. ಗಾಂಧೀಜೀ ಅವರಿಗೆ ತಾಳ್ಮೆಯನ್ನು ಬೋಧಿಸಿ, ಹಿಂಸಾಕೃತ್ಯಗಳಿಂದ ದೂರವಿರಬೇಕೆಂದು ಸೂಚಿಸುತ್ತಿದ್ದರು. ಅವರು ಖಿಲಾಫತ್ ನಾಯಕರೊಂದಿಗೆ, ಅದರಲ್ಲಿಯೂ ಸೆರೆಮನೆಯಲ್ಲಿದ್ದ ಮಹಮ್ಮದ್ ಅಲೀಯೊಂದಿಗೆ ಪತ್ರವ್ಯವಹಾರ ನಡೆಸಿದ್ದರು. 1918ರಲ್ಲಿ ಅವರು ದೆಹಲಿಯ ಸಮರ ಸಮ್ಮೇಳನದಲ್ಲಿ ಭಾಗವಹಿಸಲು ಹೋದಾಗ ಮಹಮ್ಮದ್ ಅಲೀಯ ಬಿಡುಗಡೆಗೂ, ತುರ್ಕಿಯ ಭವಿಷ್ಯದ ವಿಷಯದಲ್ಲಿ ಮುಸ್ಲಿಮರ ಆಶೋತ್ತರಗಳನ್ನು ಈಡೇರಿಸುವ ಬಗೆಗೂ ಸರ್ಕಾರದಿಂದ ಆಶ್ವಾಸನವನ್ನು ಬೇಡಿದ್ದರು.

1918 ನವೆಂಬರ್ ತಿಂಗಳಲ್ಲಿ ಯುದ್ಧ ಮುಕ್ತಾಯವಾದಾಗ, ಖಿಲಾಫತ್ ಪ್ರಶ್ನೆ ಮತ್ತೆ ತಲೆಯೆತ್ತಿತ್ತು. ತುರ್ಕಿಯ ಸಾಮ್ರಾಜ್ಯ ಚೂರುಚೂರಾಗುವ ಸ್ಥಿತಿ ಬಂದಿತ್ತು. ತುರ್ಕಿಯ ಸುಲ್ತಾನ ಕಲೀಫನಾಗಿ ಮುಂದುವರಿಯದಂತೆ ಆಯಿತು. ಬ್ರಿಟಿಷರು ತಮ್ಮ ಕಡೆಯವನಾಗಿದ್ದ, ಮೆಕ್ಕಾದ ಷೆರಿಫ್ ಷೇಕ್ ಹುಸೇನನನ್ನು ಹೊಸ ಕಲೀಫನನ್ನಾಗಿ ನೇಮಿಸಿದರು. ಈ ವೇಳೆಗೆ ಸರಿಯಾಗಿ (ಡಿಸೆಂಬರ್, 1919) ಮಹಮ್ಮದ್ ಅಲೀ ಮತ್ತು ಆತನ ಸಹೋದರ ಷೌಕತ್ ಅಲೀ ಬಿಡುಗಡೆಯಾದುದರಿಂದ ಖಿಲಾಫತ್ ಆಂದೋಲನಕ್ಕೆ ಹೊಸ ಚೈತನ್ಯ ಬಂತು. ವೈಸ್‌ರಾಯ್ ಲಾರ್ಡ್ ಚೆಮ್ಸ್‌ಫರ್ಡ್ ಅವರಿಗೆ ಮಾಡಿಕೊಂಡ ಮನವಿ ವಿಫಲವಾಯಿತು. ಖಿಲಾಫತ್ ನಾಯಕರು 1920 ಫೆಬ್ರವರಿ ತಿಂಗಳಲ್ಲಿ ಸಮ್ಮೇಳನ ಸೇರುವ ವೇಳೆಗೆ, ತುರ್ಕಿ ದೇಶದೊಂದಿಗೆ ಬ್ರಿಟನ್ ಮಾಡಿಕೊಂಡ ಒಪ್ಪಂದ ಪ್ರಕಟವಾಗಿ, ನಾಯಕರಿಗೆ ಇನ್ನೂ ನಿರಾಶೆಯಾಯಿತು. ಅವರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಲು ಮಾರ್ಗ ಯೋಚಿಸುತ್ತಿದ್ದಾಗ, ಗಾಂಧೀಜಿ ಸೂಚಿಸಿದ ಅಸಹಕಾರ ಚಳವಳಿಯನ್ನು ಅಂಗೀಕರಿಸಿದರು. ಗಾಂಧೀಜೀ ಚಳವಳಿಯ ನಾಯಕತ್ವವನ್ನು ವಹಿಸಿಕೊಂಡು ನಡೆಸಲು ಅಧಿಕಾರ ನೀಡಿದರು. ಗಾಂಧೀಜೀ ವೈಸ್‌ರಾಯನಿಗೆ ಪತ್ರ ಬರೆದ ಬ್ರಿಟಿಷರು ತುರ್ಕಿಯೊಡನೆ ಮಾಡಿಕೊಂಡಿದ್ದ ಒಪ್ಪಂದವನ್ನು ಹದಿನೈದು ದಿವಸಗಳೊಳಗೆ ಬದಲಾಯಿಸಿ, ಮುಸ್ಲಿಮರಿಗೆ ಕೊಟ್ಟ ಮಾತಿನಂತೆ ನಡೆಯದಿದ್ದರೆ ಹಿಂದುಗಳೂ ಖಿಲಾಫತ್ ಚಳವಳಿಯನ್ನು ಸೇರಲು ಕರೆ ನೀಡುವುದಾಗಿ ತಿಳಿಸಿದರು. ಪಂಜಾಬಿನ ಅತ್ಯಾಚಾರಗಳು, ಯುದ್ಧದ ತರುವಾಯ ಮಾಡಿದ ರಾಜಕೀಯ ಸುಧಾರಣೆಗಳ ಅಸಮರ್ಪಕತೆ ಇವುಗಳಿಂದ ರಾಷ್ಟ್ರದಲ್ಲಿ ಉಂಟಾಗಿದ್ದ ಅಸಮಾಧಾನಕ್ಕೆ ಖಿಲಾಫತ್ ಪ್ರಶ್ನೆಯೂ ಜೊತೆಗೂಡಿತು. ಗಾಂಧೀಜೀ ಮನವಿಯೊಂದನ್ನು ಹೊರಡಿಸಿ, ಹಿಂದುಗಳು ತಮ್ಮ ಕರ್ತವ್ಯ ಸಲ್ಲಿಸಬೇಕು. ಮುಸ್ಲಿಮರ ದುಃಖ ನಮ್ಮ ದುಃಖ ಎಂದು ಹೇಳಿದರು. ಸೆಪ್ಟೆಂಬರ್ ತಿಂಗಳಲ್ಲಿ ಸಮಾವೇಶಗೊಂಡ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಶೇಷ ಅಧಿವೇಶನ ಅಸಹಕಾರ ಚಳವಳಿಯ ಕಾರ್ಯಕ್ರಮವನ್ನು ಅಂಗೀಕರಿಸಿತು. ಹೀಗೆ ಗಾಂಧೀಜಿ ಖಿಲಾಫತ್ ಚಳವಳಿ ಹಾಗೂ ರಾಷ್ಟ್ರೀಯ ಹೋರಾಟದ ನಾಯಕರಾದರು.

ಅಲೀ ಸಹೋದರರೊಡನೆ ಗಾಂಧೀಜಿ ದೇಶಾದ್ಯಂತ ಪ್ರವಾಸ ಮಾಡಿ ರಾಷ್ಟ್ರೀಯ ಹೋರಾಟದ ಪ್ರಚಾರ ಮಾಡಿದರು. ಹಿಂದು–ಮುಸ್ಲಿಂ ಸೌಹಾರ್ದ ಶಿಖರಕ್ಕೇರಿತು. ಸಭೆಗಳಲ್ಲಿ ನೆರೆಯುತ್ತಿದ್ದ ಹಿಂದು–ಮುಸ್ಲಿಮರಿಬ್ಬರೂ ಗಾಂಧೀಜೀಯ ಮಾತನ್ನು ಆಸಕ್ತಿಯಿಂದಲೂ ಪೂಜ್ಯಭಾವದಿಂದಲೂ ಕೇಳುತ್ತಿದ್ದರು. ಪುರುಷರಿಗೆ ಅವಕಾಶವೇ ಇಲ್ಲದಿದ್ದ ಮುಸ್ಲಿಂ ಮಹಿಳಾ ಸಭೆಗಳಲ್ಲಿ ಕೂಡ ಗಾಂಧೀಜೀಗೆ ವಿಶೇಷ ಅವಕಾಶವಿರುತ್ತಿತ್ತು. ಅವರು ಅಷ್ಟೊಂದು ಪೂಜ್ಯರೆಂದು ಪರಿಗಣಿತರಾದರು. ಇಂಥ ವಿಶಿಷ್ಟವಾದ ಐಕ್ಯಭಾವದಿಂದ ಅಹಿಂಸಾತ್ಮಕವಾದ ರಾಷ್ಟ್ರೀಯ ಹೋರಾಟ ನಡೆಯಿತು. ಒಂದು ವರ್ಷದಲ್ಲಿ ಸ್ವರಾಜ್ಯ–ಎಂದು ಗಾಂಧೀಜೀ ಘೋಷಿಸಿದರು.

ಆದರೆ ಚೌರಿಚೌರ ಎಂಬಲ್ಲಿ ಹಿಂಸಾಕೃತ್ಯಗಳು ನಡೆದುದನ್ನು ಕೇಳಿದ ಗಾಂಧಿ ಅಸಹಕಾರ ಚಳವಳಿಯನ್ನೇ ನಿಲ್ಲಿಸುವ ಆಜ್ಞೆ ಮಾಡಿದರು. ಇದರಿಂದ ಹಿಂದೂ ಮುಸ್ಲಿಂ ನಾಯಕರಿಗೆಲ್ಲ ಅಗಾಧ ನಿರಾಶೆಯಾಯಿತು. ಜೊತೆಗೆ ಮಲಬಾರಿನಲ್ಲೂ ಮುಂಬಯಿ ಮತ್ತಿತರ ಕಡೆಗಳಲ್ಲೂ ಹಿಂದು–ಮುಸ್ಲಿಂ ಕಲಹಗಳು ನಡೆದವು. ಇದು ಹಿಂದುಗಳ ಸ್ವಾಭಿಮಾನವನ್ನು ಕೆರಳಿಸಿತು. ಅವರು ಶುದ್ಧಿ, ಸಂಘಟನೆ ಎಂದು ಆಂದೋಲನ ಆರಂಭಿಸಿದರು. ಖಿಲಾಫತ್ ಚಳವಳಿಯಿಂದಾಗಿ ಎರಡೂ ಕೋಮುಗಳಿಗೆ ತಾತ್ಕಾಲಿಕವಾಗಿ ಉಂಟಾಗಿದ್ದ ಐಕ್ಯಭಾವ ಇದರಿಂದ ಮಾಯವಾಯಿತು ಮುಸ್ಲಿಮರ ಆತಂಕ ಖಿಲಾಫತ್ತಿನ ಬಗೆಗಾಗಿದ್ದರೆ ಹಿಂದುಗಳು ಸ್ವರಾಜ್ಯದ ಬಗೆಗೆ ಕಳವಳಗೊಂಡರು.

ಭಾರತದಲ್ಲಿ ಈ ಪರಿಸ್ಥಿತಿಯಿದ್ದಾಗ 1922ರಲ್ಲಿ, ತುರ್ಕಿಯಲ್ಲೇ ಕ್ರಾಂತಿಕಾರಕ ಬದಲಾವಣೆಯಾಯಿತು. ಕೆಮಾಲ್ ಆಟಾತುರ್ಕ್‌ನ ನಾಯಕತ್ವದಲ್ಲಿ ಸುಲ್ತಾನ್ ಕಲೀಫನ ಅಧಿಕಾರಕ್ಕೆ ಚ್ಯುತಿಯಾಯಿತು. ತುರ್ಕಿ ಜಾತ್ಯತೀತ ಗಣರಾಜ್ಯವೆಂದು ಘೋಷಿಸಲಾಯಿತು. ಭಾರತದಲ್ಲಿ ಅಬುಲ್ ಕಲಾಂ ಅಜ್ಹಾದ್ ಮೊದಲಾದವರು ಮುಸ್ಲಿಮರ ಕೋಮುವಾರು ರಾಜಕೀಯದಲ್ಲಿ ಭಾಗವಹಿಸದೆ, ತಟಸ್ಥರಾದರು. ಮಹಮದ್ ಅಲೀಯ ನಾಯಕತ್ವದಲ್ಲಿದ್ದ ಮುಸ್ಲಿಮರು ಪ್ರತ್ಯೇಕವಾಗಿ ಉಳಿದರು. ಹೀಗೆ ಭಾರತದಲ್ಲಿ ಹಿಂದು–ಮುಸ್ಲಿಂ ಕೋಮುಗಳಲ್ಲಿ ಐಕಮತ್ಯವನ್ನು ಸ್ವಲ್ಪ ಕಾಲವಾಗಿ ಮೂಡಿಸಿದ್ದ ಖಿಲಾಫತ್ ಚಳವಳಿ ತಾನಾಗಿ ಕೊನೆಗೊಂಡಿತು. ಹಿಂದು–ಮುಸ್ಲಿಂ ಐಕ್ಯಕ್ಕೆ ಮಾರಕವಾದಂಥ ಮುಸ್ಲಿಂ ರಾಜಕಾರಣ ಬೆಳೆಯಿತು. ಭಾರತೀಯ ಮುಸ್ಲಿಮರು ಖಿಲಾಫತ್ ಬಗೆಗೆ ಆತಂಕಗೊಳ್ಳದಿದ್ದರೆ, ಅವರ ವಿಷಯಕ್ಕೆ ಗಾಂಧೀಜಿ ಪ್ರವೇಶಿಸುತ್ತಲೇ ಇರಲಿಲ್ಲ. ಆದರೆ ಸ್ವರಾಜ್ಯ ಪಡೆಯಲು ಇವೆರಡು ಕೋಮುಗಳ ಪರಸ್ಪರ ಸಾಮರಸ್ಯದ ಆವಶ್ಯಕತೆಯನ್ನು ಅರಿತಿದ್ದ ಗಾಂಧೀಜಿ, ಬ್ರಿಟಿಷರ ವಿಭಜಿಸಿ ಆಳುವ ತತ್ತ್ವವನ್ನು ನಿರ್ನಾಮಗೊಳಿಸುವುದಕ್ಕಾಗಿ ಖಿಲಾಫತ್ ಚಳವಳಿಗೆ ಪೂರ್ಣ ಬೆಂಬಲವಿತ್ತರು. (ಜಿ.ವಿ.ಎನ್.)

**ಖಿಲೌನ :** ಮಕ್ಕಳ ಉರ್ದು ಮಾಸಪತ್ರಿಕೆ 1947ರಲ್ಲಿ ಪ್ರಾರಂಭವಾಯಿತು. ಶಾಮಾ ಪತ್ರಿಕಾ ಗುಂಪಿನ ಒಡೆತನದಲ್ಲಿ ನವದೆಹಲಿಯಿಂದ ಪ್ರಕಟವಾಗುತ್ತಿತ್ತು. ಯೂನುಸ್ ದೆಹ್ಲವಿ ಇದರ ಸಂಪಾದಕ. ಇದರ ವಾರ್ಷಿಕ ಮತ್ತು ವಿಶೇಷ ಸಂಚಿಕೆಗಳು ಬಹು ಆಕರ್ಷಕವಾಗಿರುತ್ತವೆ. ಸಣ್ಣ ಕಥೆಗಳು, ವ್ಯಂಗ್ಯಚಿತ್ರಗಳು, ಧಾರಾವಾಹಿ ಕಾದಂಬರಿಗಳು, ವಿಜ್ಞಾನ ಕಥೆ, ವಿಶ್ವಕೋಶಸದೃಶ ಲೇಖನಗಳು, ಪ್ರಶ್ನೆ–ಉತ್ತರ ವಿಭಾಗ, ಛಾಯಾಚಿತ್ರಗಳು, ಸ್ಪರ್ಧೆಗಳು ಮುಂತಾದವುಗಳಿಂದ ಕೂಡಿ, ಉರ್ದು ಬರುವ ಮಕ್ಕಳಿಗೆ ಇದು ಪ್ರಿಯವಾಗಿದೆ. ಉರ್ದುವಿನ ಅನೇಕ ಹೆಸರಾಂತ ಲೇಖಕರ ಲೇಖನಗಳಿಂದಲೂ ಕಲಾವಿದರ ಚಿತ್ರಗಳಿಂದಲೂ ಕೂಡಿರುತ್ತದೆ. (ಎಸ್.ಐ.ಕೆ.)

**ಖೀವ :** ಸೋವಿಯತ್ ದೇಶದ ಉಜ್ಬೆಕ್ ಸೋವಿಯತ್ ಸಮಾಜವಾದಿ ಗಣರಾಜ್ಯದ ಖೊರೆಜ್ಮ್ ಅಬ್ಲಾಸ್ಟ್‌ನ (ಆಡಳಿತ ವಿಭಾಗ) ಒಂದು ಪಟ್ಟಣ. ಆಮೂದಾರ್ಯ ನದಿಗೆ ಪಶ್ಚಿಮಕ್ಕೆ ಕರಾ–ಕುಂ ಮರುಭೂಮಿಯ ಬಳಿಯ ಓಯಸಿಸ್ ಒಂದರ ಮೇಲಿದೆ. ಹಳೆಯ ಪಟ್ಟಣ ಪ್ರಾಚೀನವಾದುದ್ದು, 10ನೆಯ ಶತಮಾನದ ಅರಬ್ ಭೂಗೋಳಶಾಸ್ತ್ರಜ್ಞರಾದ ಅಲ್–ಇಸ್ತಖ್ರಿ ಮತ್ತು ಅಲ್–ಮಕ್‌ದೆಸಿ ಇದರ ಬಗ್ಗೆ ಉಲ್ಲೇಖಿಸಿದ್ದಾರೆ. ಇದರ ಸುತ್ತಣ ಪ್ರದೇಶ ಖಾನರ ಆಡಳಿತಕ್ಕೊಳಪಟ್ಟಿದ್ದಾಗ (1920ರ ವರೆಗೆ) ಖೀವ ಅದರ ರಾಜಧಾನಿಯಾಗಿತ್ತು. ಇಲ್ಲಿಯ ಪ್ರಾಚೀನ ಅವಶೇಷಗಳು ತುಂಬ ಕುತೂಹಲಕಾರಿಯಾಗಿವೆ. ಹಳೆಯ ನಗರ ಕುನಿ ಆರ್ಕ್ (ಹಳೆಯ ದುರ್ಗ) ದೀರ್ಘಚತುರಸ್ರಾಕಾರವಾದ ಗೋಡೆಯಿಂದ ಆವೃತವಾಗಿತ್ತು. ಇದಕ್ಕೆ ನಾಲ್ಕೂ ಕಡೆಗಳಲ್ಲೂ ನಾಲ್ಕು ದ್ವಾರಗಳಿದ್ದುವು. 19ನೆಯ ಶತಮಾನದ ನಡುಗಾಲದಲ್ಲಿ ಇದರ ಸುತ್ತಣ ಉಪನಗರಗಳನ್ನೂ ಸೇರಿಸಿ, 10 ದ್ವಾರಗಳುಳ್ಳ ಹೊರಗೋಡೆಗಳನ್ನು ನಿರ್ಮಿಸಲಾಯಿತು. ಆಗ ಹಳೆಯ ನಗರಕ್ಕೆ ಇಷಾನ್ ಕಾಲೆಹ್ (ಹಳೆಯ ಭಾಗ) ಎಂಬ ಹೆಸರು ಬಂತು. ಈಗ ಈ ಭಾಗವನ್ನು ಪುರಾತನ ಸ್ಮಾರಕವೆಂದು ಸಂರಕ್ಷಿಸಲಾಗಿದೆ.

ಖೀವ್ ನಗರದಲ್ಲಿ ಯಾಂತ್ರೀಕೃತ ಕೃಷಿಯ ಶಾಲೆ, ಕೃಷಿ ಕಾಲೇಜ್, ರೈಲ್ವೆ ಸಂಸ್ಥೆ, ಪುರುಷರ ಮತ್ತು ಮಹಿಳೆಯರ ಬೋಧಕ ಶಿಕ್ಷಣ ಶಾಲೆಗಳು ಮುಂತಾದ ಸಂಸ್ಥೆಗಳಿವೆ. ಹಿಂದಣ ಖಾನರ ಅರಮನೆ ಇದ್ದಲ್ಲಿ ಈಗ ಇತಿಹಾಸ–ಕ್ರಾಂತಿ ವಸ್ತುಸಂಗ್ರಹಾಲಯವುಂಟು. ಹತ್ತಿ ನೂಲುವಿಕೆ, ಇಟ್ಟಿಗೆ ತಯಾರಿಕೆ, ಜಮಖಾನ ತಯಾರಿಕೆ, ಕಸೂತಿ, ಮರಚಿತ್ರಗಾರಿಕೆ ಮುಂತಾದವು ಇಲ್ಲಿಯ ದೊಡ್ಡ ಸಣ್ಣ ಕೈಗಾರಿಕೆಗಳು. (ಬಿ.ಎಸ್.ಎಚ್.)

**ಖುದಾ–ಈ–ಖಿದ್ಮತ್‌ಗಾರ್ :** ಅವಿಭಾಜ್ಯ ಭಾರತದ ವಾಯವ್ಯ ಸರಹದ್ ಪ್ರಾಂತ್ಯದ ಪಠಾಣರ ಒಂದು ಸ್ವಯಂಸೇವಕ ಸಂಘಟನೆ. ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಸಿದ್ಧವಾಗಿದ್ದ ಖಾನ್ ಅಬ್ದುಲ್ ಗಫಾರ್ ಖಾನ್(ಗಡಿನಾಡ ಗಾಂಧಿ) ಮತ್ತು ಖಾನ್ ಸಾಹೇಬ್ ಈ ಸಂಘಟನೆಯ ಜನಕರು. ಖುದಾ–ಈ–ಖಿದ್ಮತ್‌ಗಾರ್ ಎಂದರೆ ದೇವರ ಸೇವಕ. ಪಠಾಣರಲ್ಲಿ ಹಿಂದಿನಿಂದ ನಡೆದುಬಂದಿದ್ದ ಕುಡಿತ, ಚೌರ್ಯ, ಮದುವೆಯಲ್ಲಿ ಅನವಶ್ಯಕ ಖರ್ಚು ಮುಂತಾದವುಗಳಿಂದ ಅವರನ್ನು ಪಾರುಮಾಡಿ ಸಮಾಜ ಸುಧಾರಣೆ ಮಾಡುವುದೇ ಈ ಸಂಘಟನೆಯ ಧ್ಯೇಯವಾಗಿತ್ತು. ಈಶ್ವರನಿಷ್ಠೆ, ಅಹಿಂಸೆ, ಸೇವೆ, ನಿರ್ಭಯತೆ ಮತ್ತು ಶುದ್ಧಜೀವನ ಇವೇ ಸಂಸ್ಥೆಯ ತತ್ತ್ವಗಳು. ಸೈನಿಕ ಕವಾಯತನ್ನು ಕಲಿಯುತ್ತಿದ್ದರೂ, ಗಾಂಧೀಪ್ರಣೀತ ಅಹಿಂಸೆಯನ್ನು ಮಾನ್ಯಮಾಡಿದ್ದರಿಂದ, ಸ್ವಯಂಸೇವಕರು ತಮ್ಮ ಕೈಯಲ್ಲಿ ಒಂದು ಚಿಕ್ಕ ಕೋಲನ್ನು ಕೂಡ ಹಿಡಿಯುತ್ತಿರಲಿಲ್ಲ. ಸರಹದ್ ಪ್ರಾಂತ್ಯದಲ್ಲಿದ್ದರೂ ಅಖಿಲ ಭಾರತ ಕಾಂಗ್ರೆಸ್ ಧೋರಣೆಯನ್ನನುಸರಿಸಿ ಈ ಸಂಘಟನೆ ಕೆಲಸ ನಡೆಸುತ್ತಿತ್ತು. ಈ ಸಂಘಟನೆಯ ಅಧಿಕೃತ ಧ್ವಜದಲ್ಲಿ ಕೆಂಪು ಕಪ್ಪು ಪಟ್ಟಿಗಳಿದ್ದುವು. ಕಾರ್ಯಕರ್ತರು ಕೆಂಪುಬಟ್ಟೆಯನ್ನು ಧರಿಸುತ್ತಿದ್ದರು. ಈ ಕಾರಣದಿಂದ ರಷ್ಯದ ಬೋಲ್ಷೆವಿಕ್ ಚಳವಳಿಗೂ ಖುದಾ–ಈ–ಖಿದ್ಮತ್‌ಗಾರ್ ಸಂಘಟನೆಗೂ ಬ್ರಿಟಿಷ್ ಸರ್ಕಾರ ಸಂಬಂಧ ಕಲ್ಪಿಸಿತು; ಸಂಘಟನೆಯನ್ನು ನ್ಯಾಯಬಾಹಿರವೆಂದು ಸಾರಿ, ಖಾನ್ ಸೋದರರನ್ನೂ ಇತರ ನಾಯಕರನ್ನೂ ಕೈದು ಮಾಡಿತು. ಸಂಸ್ಥೆಯ ಮೇಲೆ ಅನೇಕ ಆರೋಪಗಳನ್ನು ಮಾಡಿತು. ಈ ಆರೋಪಗಳಿಗೆ ಉತ್ತರ ಕೊಡಲೂ ಕಾಂಗ್ರೆಸ್ ನೇಮಿತ ಸಂಧಾನ ಸಮಿತಿ ಆ ಭಾಗಕ್ಕೆ ಹೋಗಿ ವರದಿ ಮಾಡಲೂ ಬ್ರಿಟಿಷ್ ಸರ್ಕಾರ ಅವಕಾಶ ಕೊಡಲಿಲ್ಲ; ಇಷ್ಟಲ್ಲದೆ ಸಮಿತಿಯ ನಿಜಸಂಗತಿಯ ವರದಿಯನ್ನೂ ಅದು ಸಂಗ್ರಹಿಸಿದ್ದ ಹೇಳಿಕೆ ಪತ್ರವನ್ನೂ ಜಫ್ತು ಮಾಡಿತು.

ಭಾರತದ ವಿಭಜನೆ ನಿಶ್ಚಿತವಾದ ಅನಂತರ ಆ ಸಮಯದಲ್ಲಿದ್ದ ಕಾಂಗ್ರೆಸ್ ಮುಖಂಡರಿಗೆ ಒಂದು ದೊಡ್ಡ ಪೇಚು ಒದಗಿತು. ಜೂನ್ 1947ರಲ್ಲಿ ಖಾನ್ ಸೋದರರ ಕಾಂಗ್ರೆಸ್ಸು ಸರಹದ್ ಪ್ರಾಂತ್ಯವನ್ನು ಆಳುತ್ತಿತ್ತು. ಪಾಕಿಸ್ತಾನದ ರಚನೆಯನ್ನು ಪ್ರಬಲವಾಗಿ ವಿರೋಧಿಸುತ್ತಿದ್ದ ಖಾನ್ ಸೋದರರ ಗಡಿನಾಡು ಪ್ರಾಂತ್ಯ ಪಾಕಿಸ್ತಾನದ ಅಧೀನಕ್ಕೆ ಬರುವ ಸಂದರ್ಭ ಬಂತು. ದೇಶದ ವಿಭಜನೆಗೆ ಒಪ್ಪಿಕೊಂಡು ಕಾಂಗ್ರೆಸ್ಸು ಸರಹದ್

ಪ್ರಾಂತ್ಯಕ್ಕೆ ಅನ್ಯಾಯ ಮಾಡಿತೆಂಬುದು ಖಾನ್ ಸೋದರರ ಅಭಿಪ್ರಾಯವಾಗಿತ್ತು. ಮುಸ್ಲಿಂ ಲೀಗ್ ಪಾಕಿಸ್ತಾನದಲ್ಲಿಯ ಪಠಾಣರನ್ನು ನ್ಯಾಯದಿಂದ ಕಾಪಾಡಬೇಕೆನ್ನುವ ಆಶ್ವಾಸನೆಯನ್ನು ಮಹಾತ್ಮಾ ಗಾಂಧಿಯವರು ವೈಸ್‌ರಾಯಿಯಿಂದ ಪಡೆದುಕೊಂಡರು. ಸರಹದ್ ಪ್ರಾಂತ್ಯ ಪಾಕಿಸ್ತಾನದಲ್ಲಿ ಸೇರಬೇಕೇ? ಅಥವಾ ಪಖ್ತುನಿಸ್ತಾನ್ ನಿರ್ಮಾಣವಾಗಬೇಕೇ? ಎನ್ನುವ ವಿಷಯವನ್ನು ಜನಮತಕ್ಕೆ ಹಾಕಲಾಯಿತು. ಖಾನ್ ಬಂಧುಗಳು ಜನಮತಗಣನೆಯನ್ನು ಬಹಿಷ್ಕರಿಸಿದರು. ಸರಹದ್ ಪ್ರಾಂತ್ಯ ಪಾಕಿಸ್ತಾನದಲ್ಲಿ ವಿಲೀನವಾಗಬೇಕೆಂಬುದಕ್ಕೆ ಬಹುಮತ ಬಂತು. ಪಾಕಿಸ್ತಾನದಲ್ಲಿ ಖುದಾ–ಈ–ಖಿದ್ಮತ್‌ಗಾರ್ ಸಂಘಟನೆಯ ಆಧಾರಸ್ತಂಭದಂತಿದ್ದ ಖಾನ್ ಸಾಹೇಬರ ಕೊಲೆಯಾಯಿತು. ಖಾನ್ ಅಬ್ದುಲ್ ಗಫಾರ್ ಖಾನರಿಗೆ ಸರ್ಕಾರದಿಂದ ಅನೇಕ ತೊಂದರೆಗಳುಂಟಾದವು. ಈ ಸನ್ನಿವೇಶದಲ್ಲಿ ಖುದಾ–ಈ–ಖಿದ್ಮತ್‌ಗಾರ್ ಚಟುವಟಿಕೆಗಳ ಬಗ್ಗೆ ವಿವರಗಳು ಹೊರಪ್ರಪಂಚಕ್ಕೆ ಗೊತ್ತಾಗಲಿಲ್ಲ.

1969 ಅಕ್ಟೋಬರ್‌ನಲ್ಲಿ ಗಫಾರ್ ಖಾನ್ ಭಾರತಕ್ಕೆ ಭೇಟಿ ನೀಡಿದಾಗ ಅವರ ಸ್ವಾಗತ ಸಮಾರಂಭದಲ್ಲಿ 1,000 ಖುದಾ–ಈ–ಖಿದ್ಮತ್‌ಗಾರರು ಭಾಗವಹಿಸಿದ್ದರು. 1970 ಫೆಬ್ರುವರಿಯಲ್ಲಿ ಗಫಾರ್‌ಖಾನರು ವಾಪಸಾದರು. ಆ ಸಮಯದಲ್ಲಿ ಖುದಾ–ಈ–ಖಿದ್ಮತ್‌ಗಾರ್ ಸಂಘಟನೆಯ ಮಾದರಿಯ ಮೇಲೆ ಒಂದು ಸ್ವಯಂಸೇವಕ ಸಂಸ್ಥೆಯನ್ನು ಭಾರತದಲ್ಲಿ ಸ್ಥಾಪನೆ ಮಾಡುವುದು ಅವಶ್ಯವಿದೆ ಎಂದು ಭಾರತದ ಕೆಲವು ಮುಖಂಡರು ಘೋಷಿಸಿದ್ದುಂಟು. *

**ಖುದೀರಾಮ್ ಬೋಸ್ :** 1890–1908. ಒಬ್ಬ ಬಂಗಾಲೀ ಕ್ರಾಂತಿಕಾರ. ತಂದೆ ತ್ರೈಲೋಕ್ಯನಾಥ ದೊಡ್ಡ ರಾಜಕೀಯ ನಾಯಕನಾಗಿದ್ದ. ಖುದೀರಾಮ್ ಚಿಕ್ಕವನಿರುವಾಗಲೇ ತಂದೆ ತೀರಿಹೋದ್ದರಿಂದ ಈತ ಸೋದರತ್ತೆಯ ಆಶ್ರಯದಲ್ಲಿ ಬೆಳೆದ. ಬಂಗಾಲದಲ್ಲಿ ಅರವಿಂದ ಘೋಷ್ ನೇತೃತ್ವದಲ್ಲಿ ಸ್ಥಾಪನೆಯಾದ ಯುಗಾಂತರ ಎಂಬ ಕ್ರಾಂತಿಕಾರಕ ಗುಪ್ತಸಂಸ್ಥೆಯ ಸದಸ್ಯನಾದ. ಮುಝಫರಪುರದಲ್ಲಿ ಜಿಲ್ಲಾ ನ್ಯಾಯಾಧೀಶನಾಗಿದ್ದ ಕಿಂಗ್ಸ್‌ಫರ್ಡನ ಮೇಲೆ ಬಾಂಬೆಸೆದು ಕೊಲ್ಲುವ ಉದ್ದೇಶದಿಂದ 1908 ಏಪ್ರಿಲ್ 30ರಂದು ಕಿಂಗ್ಸ್‌ಫರ್ಡ್ ಪ್ರವಾಸ ಮಾಡುತ್ತಿದ್ದನೆಂದು ಭಾವಿಸಲಾದ ರೈಲಿನ ಮೇಲೆ ಖುದೀರಾಮ್ ಬಾಂಬನ್ನೆಸೆದ. ಆದರೆ ಆ ಗಾಡಿಯಲ್ಲಿ ಕಿಂಗ್ಸ್‌ಫರ್ಡ್ ಇದ್ದಿರಲಿಲ್ಲ. ಅದರಲ್ಲಿ ಐರೋಪ್ಯ ವಕೀಲನೊಬ್ಬನೂ ಅವನ ಹೆಂಡತಿ ಮತ್ತು ಮಗಳೂ ಇದ್ದರು. ವಕೀಲನ ಹೆಂಡತಿಯೂ ಮಗಳೂ ಸಾವಿಗೆ ಈಡಾದರು. ಹಿಂದಿನ ಗಾಡಿಯಲ್ಲಿ ಬರುತ್ತಿದ್ದ ಕಿಂಗ್ಸ್‌ಫರ್ಡ್ ಉಳಿದುಕೊಂಡ. ಬಾಂಬೆಸೆದ ಮೇಲೆ ಖುದೀರಾಮ್ ಇಡೀ ರಾತ್ರಿ ಓಡಿ ಇಪ್ಪತ್ತು ಮೈಲು ದೂರ ಹೋದ. ಗುಪ್ತಪೊಲೀಸ್ ವಿಭಾಗದ ಸಬ್–ಇನ್ಸ್‌ಪೆಕ್ಟರ್ ನಂದಲಾಲ್ ಬ್ಯಾನರ್ಜಿ ಬೆನ್ನಟ್ಟಿ ಇವನನ್ನು ಹಿಡಿದ. ಇತರ ಕ್ರಾಂತಿಕಾರರು ನಂದಲಾಲನನ್ನು ಗುಂಡಿಕ್ಕಿ ಕೊಂದರು. ಕಾನೂನಿನ ಪ್ರಕಾರ ಖುದೀರಾಮನ ವಿಚಾರಣೆ ನಡೆದು ಇವನಿಗೆ ಫಾಸಿ ಶಿಕ್ಷೆ ವಿಧಿಸಲಾಯಿತು. 1908 ಆಗಸ್ಟ್ 11ರಂದು ಖುದೀರಾಮ್ ಕೈಯಲ್ಲಿ ಭಗವದ್ಗೀತೆಯನ್ನು ಹಿಡಿದು ನಗುನಗುತ್ತ ವಧಾಸ್ಥಳವನ್ನೇರಿ ಸಾವನ್ನಪ್ಪಿದ. ಆಗ ಈತನ ವಯಸ್ಸು 18 ಮಾತ್ರ. ಈತ ಬಾಂಬ್ ಎಸೆದ ಸ್ಥಳದಲ್ಲಿ ಈತನ ಪ್ರತಿಮೆಯನ್ನು ನಿಲ್ಲಿಸಿದ್ದಾರೆ. ಆ ಕಾಲದ ತರುಣರನೇಕರಿಗೆ ಈತ ಆದರ್ಶಪ್ರಾಯನಾಗಿದ್ದ. *

**ಖುರಸಾನ್ :** ಇರಾನಿನ ಈಶಾನ್ಯ ಭಾಗದಲ್ಲಿರುವ ಒಂದು ಪ್ರಾಂತ್ಯ. ಉತ್ತರದಲ್ಲಿ ಟರ್ಕ್‌ಮೆನ್ ಸೋವಿಯತ್ ಸಮಾಜವಾದಿ ಗಣರಾಜ್ಯವೂ ಪೂರ್ವಕ್ಕೆ ಆಫ್‌ಘಾನಿಸ್ಥಾನವೂ ಇತರ ದಿಕ್ಕುಗಳಲ್ಲಿ ಇರಾನಿನ ಮಜಾಂದರ್‍ರ‍್ಯಾನ್, ಇಸ್‌ಫಹಾನ್, ಕೆರ್‌ಮನ್ ಮತ್ತು ಬಲೂಚಿಸ್ತಾನ್ ಇವೆ. ವಿಸ್ತೀರ್ಣ 312639 ಚ.ಕಿಮೀ. ಜನಸಂಖ್ಯೆ (6047641) (2004). ಪ್ರಾಂತ್ಯದ ಆಡಳಿತ ಕೇಂದ್ರ ಮೆಷೆದ್ (2,41,989). ಸಮಾನಾಂತರವಾಗಿ ಹಬ್ಬಿರುವ ಎರಡು ಪರ್ವತಶ್ರೇಣಿಗಳು ಪ್ರಾಂತ್ಯದ ಉತ್ತರಭಾಗವನ್ನು ಆಕ್ರಮಿಸಿಕೊಂಡಿವೆ. ಒಂದು ಎಲ್‌ಬುರ್ಝ್ ಶ್ರೇಣಿಯ ಪೂರ್ವದ ವಿಸ್ತರಣ, ಇನ್ನೊಂದು ಕೊಪೆ ದಾ ಎಂಬ ಸ್ವತಂತ್ರ ಶ್ರೇಣಿ. 3030 ಮೀ.ಗಿಂತ ಉನ್ನತವಾದ ಎರಡು ಶಿಖರಗಳಿವೆ. ದಕ್ಷಿಣದಲ್ಲೂ 2121–2727 ಮೀ. ಎತ್ತರದ ಶ್ರೇಣಿಗಳುಂಟು. ದಾಷ್ಟ್ ಇಕಾ ವೀರ್ ಎಂಬ ಲವಣ ಮರುಭೂಮಿ ಖುರಸಾನ್ ಒಳಕ್ಕೆ ಚಾಚಿಕೊಂಡಿದೆ. ಈ ಮರುಭೂಮಿಯಲ್ಲಿ ಅಲ್ಲಲ್ಲಿ ಉಸುಬಿನಿಂದ ಕೂಡಿದ ಜವುಗುನೆಲವುಂಟು. ಕಾವೀರ್–ಇ ನಮಕ್, ಬಿಜಿಸ್ತಾನ ಮುಂತಾದ ಇತರ ಜವುಗು ನೆಲಗಳೂ ಉಂಟು. ಆದರೆ ದಕ್ಷಿಣಕ್ಕೆ ಸಾಗಿದಂತೆ ನೆಲ ಶುಷ್ಕವಾಗುತ್ತದೆ. ಇಲ್ಲಿ ವಿಶಾಲವಾದ ಮರಳುಗುಡ್ಡೆಗಳೂ ಉಂಟು. ಉತ್ತರದಲ್ಲಿ ಅನೇಕ ದೊಡ್ಡ ಓಯಸಿಸ್‌ಗಳಿವೆ. ದಕ್ಷಿಣದಲ್ಲಿ ಓಯಸಿಸ್‌ಗಳ ಸಂಖ್ಯೆ ಕಡಿಮೆ. ಅವು ಚಿಕ್ಕವು. ಅನೇಕ ಕಡೆಗಳಲ್ಲಿ ವಸಂತಕಾಲದ ಮಳೆಯಿಂದ ಓಯಸಿಸ್‌ಗಳಿಗೆ ಗೋದಿ ಬಾರ್ಲಿಗಳಿಗೆ ಸಾಕಾಗುವಷ್ಟು ನೀರು ಲಭ್ಯವಾಗುತ್ತದೆ. ಉಳಿದೆಡೆಗಳಲ್ಲಿ ಓಯಸಿಸ್‌ಗಳಿಗೆ ನೆಲದ ಅಡಿಯ ನಾಲೆಗಳೂ ಬಾವಿಗಳೂ ಆಧಾರ. ಖುರಸಾನಿನ ವಾಯುಗುಣ ಖಂಡಾಂತರ ಮಾದರಿಯದು; ಆರೋಗ್ಯಕರ. ಚಳಿಗಾಲದಲ್ಲಿ ಚಳಿ ಹೆಚ್ಚು. ಖುರಸಾನ್‌ನಲ್ಲಿರುವ ನದಿಗಳೆಲ್ಲ ಚಿಕ್ಕವು. ಅನೇಕ ನದಿಗಳು ಮಳೆಗಾಲದಲ್ಲಿ ಸ್ವಲ್ಪ ದೂರ ಹರಿದು ಬತ್ತಿ ಹೋಗುತ್ತವೆ. ಆಟ್ರೆಕ್ ಒಂದು ಮುಖ್ಯ ನದಿ; ಕ್ಯಾಸ್ಪಿಯನ್ ಸಮುದ್ರವನ್ನು ಸೇರುತ್ತದೆ. ಕಲ್–ಇ–ಮುರೆ, ರುದ್–ಇ–ಷುರ್, ಕಷಾಫ್ ರುದ್ ಇವು ಇತರ ನದಿಗಳು. ಇವನ್ನೆಲ್ಲ ಬಹಳ ಮಟ್ಟಿಗೆ ಬೇಸಾಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಈ ನದಿಗಳು ಅಂತ್ಯಭಾಗದಲ್ಲಿ ಉಪ್ಪು ನೀರಿನಿಂದ ಕೂಡಿರುತ್ತವೆ.

ಖುರಸಾನಿನಲ್ಲಿ ಟರ್ಕ್‌ಮೆನ್, ಕುರ್ದ್, ತೈಮೂರಿ, ಜಮ್‌ಷಿದಿ, ಹೈದರಿ, ಇರಾನಿಯನ್, ಬರ್ಬರಿ, ಅರಬ್, ಜಿಪ್ಸಿ, ಯಹೂದಿ–ಮುಂತಾದ ಅನೇಕ ಪಂಗಡಗಳ ಜನರಿದ್ದಾರೆ. ಆ ಪ್ರದೇಶದ ಇತಿಹಾಸವೇ ಇದಕ್ಕೆ ಕಾರಣ.

ಖುರಸಾನಿನ ಜನರ ಮುಖ್ಯ ಕಸುಬು ಕೃಷಿ. ಹಣ್ಣು, ಧಾನ್ಯ, ಹತ್ತಿ, ಹೊಗೆಸೊಪ್ಪು, ಎಣ್ಣೆಬೀಜ, ಕುಸುಂಬೆ, ರೇಷ್ಮೆ ಮುಖ್ಯ ಉತ್ಪನ್ನಗಳು. ಅರಣ್ಯಗಳಿಂದ ಇಂಗು ಮತ್ತು ಗೋಂದು ಸಂಗ್ರಹವಾಗುತ್ತವೆ. ಜಾನುವಾರು ಸಮೃದ್ಧವಾಗಿದೆ. ನಿಷಾಪುರ್ ಬಳಿಯ ಮಾ ದಾನ್‌ನಲ್ಲಿ ವೈಡೂರ್ಯ ಸಿಗುತ್ತದೆ. ಉಪ್ಪು ಇನ್ನೊಂದು ಉತ್ಪನ್ನ. ಕಬ್ಬಿಣ ತಾಮ್ರ ಸೀಸಗಳೂ ಅಲ್ಪ ಪರಿಮಾಣಗಳಲ್ಲಿ ಲಭ್ಯ ಉಂಟು. ಕೈಗಾರಿಕೆ ಹೆಚ್ಚಿಲ್ಲ. ಆಹಾರ ಪರಿಷ್ಕರಣ ಮುಖ್ಯವಾದ್ದು. ಇದಕ್ಕೆ ಮೆಷೆದ್ ಕೇಂದ್ರ. ಜಮಖಾನೆ, ಚರ್ಮ, ಹತ್ತಿ ಸರಕು, ಉಣ್ಣೆ, ಗೋಂದು, ವೈಡೂರ್ಯ–ಇವು ನಿರ್ಯಾತಗಳು. ಪ್ರಾಂತ್ಯದ ಮುಖ್ಯ ಪಟ್ಟಣ ಮೆಷಿದ್. ಟೆಹರಾನ್‌ಗೂ ಇಲ್ಲಿಗೂ ಟ್ರಾನ್ಸ್–ಇರಾನಿಯನ್ ರೈಲ್ವೆ ಸಂಪರ್ಕವುಂಟು. ಇಲ್ಲಿಂದ ಟರ್ಕ್‌ಮೆನ್ ಸೋವಿಯೆತ್ ಗಣರಾಜ್ಯದ ಅಷ್ಕಾಬಾದ್‌ಗೂ ಜ಼ಹೀದಾನ್ ಮತ್ತು ಸೀಸ್ತಾನ್‌ಗೂ ರೈಲುಮಾರ್ಗಗಳುಂಟು. ಮೆಷೆದ್‌ನಲ್ಲಿರುವ ಇಮಾಂ ರೇಜ಼ಾ ಮಸೀದಿ ಷಿಯ ಮುಸ್ಲಿಮರಿಗೆ ಪವಿತ್ರವಾದ್ದು.

**ಚರಿತ್ರೆ:** ಖುರಸಾನ್ ಅಥವಾ ಉದಿತೋದಿತ ಸೂರ್ಯನ ನಾಡು ಹಿಂದೆ ತುಂಬ ಪ್ರಸಿದ್ಧವಾಗಿತ್ತು. ಈಗ ಸೋವಿಯತ್ ದೇಶ ಮತ್ತು ಆಫ್ಘಾನಿಸ್ಥಾನದಲ್ಲಿರುವ ಪ್ರದೇಶಗಳೂ ಇದಕ್ಕೆ ಸೇರಿದ್ದುವು. 651–52ರಲ್ಲಿ ಅರಬರು ಇದನ್ನು ಆಕ್ರಮಿಸಿಕೊಂಡಿದ್ದರು ; (821–995)ರ ತನಕ ಆಳಿದ ತಹಿರಿದ್, ಸಫರಿದ್ ಮತ್ತು ಸಮನಿದ್ ರಾಜವಂಶಗಳ ಆಳ್ವಿಕೆಯಲ್ಲಿ ಇದು ಸ್ವಾತಂತ್ರ್ಯ ಪಡೆಯಿತು. ಇರಾನಿಯನ್ ಸಂಸ್ಕೃತಿಯ ಪುನರುಜ್ಜೀವನವಾಯಿತು. ಘಜ್ನವಿಡ್, ಸೆಲ್‌ಜುಕ್, ಖ್ವಾರಿಜಂ ಆಳ್ವಿಕೆಗೂ ಸೇರಿತ್ತು. (1220)ರಲ್ಲಿ ಚಿಂಗೀಜ್‌ಖಾನನೂ (1383)ರಲ್ಲಿ ತೈಮೂರನು ಇದನ್ನು ದಾಳಿ ಮಾಡಿದರು. ಸಫವಿದ್ ರಾಜರು ಉಜ್ಬೇಕ್‌ನ ಆಕ್ರಮಣದ ವಿರುದ್ಧ ಇಲ್ಲಿ ಕಾದಾಟ ನಡೆಸಿದರು. ನಾದಿರ್‌ಷಹನ ಮರಣದ ಅನಂತರ ಆಫ್ಘನರು ಇದನ್ನು ಆಕ್ರಮಿಸಿಕೊಂಡರು. ಕೆಲವು ಭಾಗವನ್ನು ಮಾತ್ರ ಖಾಜ಼ಾರರು ಮತ್ತೆ ಪಡೆದುಕೊಂಡರು. ಖುರಸಾನಿನ ಈಗಿನ ಸ್ವರೂಪ ಅದಕ್ಕೆ ಪ್ರಾಪ್ತವಾದ್ದು 1881ರಲ್ಲಿ.

(ಬಿ.ಎಸ್.ಎಚ್.)

**ಖುರಾಸಾನಿ ಓಮ :** ಹಯೊಸೈಯಾಮಸ್ ನೈಗರ್ ಎಂಬ ಸೊಲನೇಸೀ ಜಾತಿಗೆ ಸೇರಿದ ವಿಷಮೂಲಿಕೆಗೆ ಪ್ರಚಾರದಲ್ಲಿರುವ ಹೆಸರು. ಕುರಾಸಾನಿ, ಹಂದಿಗಾಳು ಎನ್ನುವುದೂ ಉಂಟು. ಇಂಗ್ಲಿಷಿನಲ್ಲಿ ಬೆನ್‌ಬೇನ್ ಎಂದೂ ಕರೆವುದಿದೆ; ಗ್ರೇಟ್ ಬ್ರಿಟನ್ ಇದರ ತವರಾದರೂ ಇದು ಮಧ್ಯ ಮತ್ತು ದಕ್ಷಿಣ ಯುರೋಪು, ಪಶ್ಚಿಮ ಏಷ್ಯ, ಸೈಬೀರಿಯ, ಭಾರತ, ಉತ್ತರ ಅಮೆರಿಕ–ಹೀಗೆ ಪ್ರಪಂಚದ ಅನೇಕ ಭಾಗಗಳಲ್ಲಿ ಹರಡಿದೆ. ಇದು ಬೆಳೆಯುವುದು ಪಾಳುಭೂಮಿಯಲ್ಲಿ ಮತ್ತು ಕಸದ ಕುಪ್ಪೆಗಳಲ್ಲಿ. ಇದರಲ್ಲಿ ಏಕವಾರ್ಷಿಕ ಬಗೆಯದು ಬೇಸಿಗೆಯಲ್ಲಿ $1' - 2'$ ಯಷ್ಟು ಎತ್ತರ ಬೆಳೆದು ಹೂಬಿಟ್ಟು, ಬೀಜ ಕೊಡುತ್ತದೆ. ದ್ವೈವಾರ್ಷಿಕ ಬಗೆಯದು ಔಷಧದ ದೃಷ್ಟಿಯಿಂದ ಮುಖ್ಯವಾದುದು. ಇದು ಮೊದಲನೆಯ ವರ್ಷ ಕುಚ್ಚುಕುಚ್ಚಾಗಿ ಎಲೆ ತೋರುತ್ತದೆ. ಈ ಎಲೆಗಳು ಚಳಿಗಾಲದಲ್ಲಿ ಉದುರಿದರೂ ಗಿಡ ಒಣಗುವುದಿಲ್ಲ; ಮುಂದಿನ ವಸಂತದಲ್ಲಿ ಮತ್ತೆ ಚಿಗುರಿ ಎರಡು ಅಡಿಯಷ್ಟು ಎತ್ತರವಾಗಿಯೂ ಸುಪುಷ್ಟವಾಗಿಯೂ ಬೆಳೆದು ಗೊಂಚಲು ಗೊಂಚಲಾಗಿ ಹೂಬಿಡುತ್ತದೆ. ಇವುಗಳ ಎಲೆಗಳು, ಅದರಲ್ಲೂ ತಳದ ಎಲೆಗಳು ದೀರ್ಘಚತುರಸ್ರಾಕಾರದವು. ಇವುಗಳ ತುದಿ ಕೋಚು ಕೋಚು. ರೋಮಗಳಿಂದ ಕೂಡಿರುವುದರಿಂದ ಈ ಎಲೆಗಳು ಬೆರಳಿಗೆ ಅಂಟುತ್ತವೆ. ಅಲ್ಲದೆ ಇವುಗಳಿಗೆ ಓಕರಿಕೆ ಬರಿಸುವ ವಾಸನೆ ಬೇರೆ ಇದೆ. ಈ ಗಿಡಗಳಲ್ಲಿನ ಹೂಗಳ ಬಣ್ಣ ಹಳದಿ ಅಥವಾ ಕಡುಗೆಂಪು; ಹೂಗಳು ಭಸ್ಮದಾನಿಯ ಆಕಾರದಲ್ಲಿರುತ್ತವೆ.

ಇದರ ಎಲೆಗಳನ್ನೂ ಹೂವಿನ ತುದಿಗಳನ್ನೂ ಅಮಲು ಬರಿಸಲೂ ನಿದ್ದೆ ಬರಿಸಲೂ ಉಪಯೋಗಿಸುತ್ತಾರೆ. ವಿರೇಚಕಗಳಿಂದಾಗಬಹುದಾದ ಹೊಟ್ಟೆನುಲಿಯನ್ನು ತಡೆಯಲು ವಿರೇಚಕಗಳೊಂದಿಗೆ ಇದನ್ನು ಮಿಶ್ರಮಾಡಬಹುದು. ನೂರರಲ್ಲಿ ಕೇವಲ 0.1 ಪಾಲು ಇರುವ ಸಸ್ಯಕ್ಷಾರಗಳಿಂದಾಗಿ ಇದಕ್ಕೆ ಈ ಔಷಧೀಯ ಗುಣ ಒದಗಿದೆ. ಈ ಸಸ್ಯಕ್ಷಾರಗಳಲ್ಲಿ ಮುಖ್ಯವಾದುವು ಹಯೋಸಿಯಾಮಿನ್ ($C_{17}H_{23}NO_3$), ಆಟ್ರೋಪೀನ್ ($C_{17}H_{23}NO_3$), ಮತ್ತು ಸ್ಕೊಪೋಲಮೀನ್ ($C_{17}H_{21}NO_4$), ಹಯೋಸಯಾಮೀನ್ ಮತ್ತು ಅಟ್ರೊಪೀನುಗಳ ವ್ಯತ್ಯಾಸ ಅತಿಸ್ವಲ್ಪ. ಮೊದಲನೆಯದರ ಮೂಲಕ ಸಮಾನ ಅಲೆಯುದ್ದಗಳಿರುವ ಹಾಗೂ ಸಮತಲೀಯವಾದ ಕಿರಣಗಳನ್ನು ಹಾಯಿಸಿದರೆ ಕಿರಣ ಬಾಗುವುದು. ಅದರ ಅಣುವಿನಲ್ಲಿ, ಬಾಗಿಸುವ ಶಕ್ತಿಯನ್ನು ಹೊಂದಿರುವ ಲೇವೊ ಟ್ರೋಫಿಕ್

ಆಮ್ಲವಿದೆ. ಅಟ್ರೋಪೀನಿನಲ್ಲಿಯಾದರೂ ರೆಸಿಮಿಕ್ ಟ್ರೋಪಿಕ್ ಆಮ್ಲವಿದೆ. ದುರ್ಬಲ ಪ್ರತ್ಯಾಮ್ಲದ ದ್ರಾವಣದಿಂದ ಈ ಎಲೆಗಳಲ್ಲಿನ ಸಾರವನ್ನು ಹೊರತೆಗೆಯುವಾಗ ಹಯೋಸಯಾಮೀನು ಅಟ್ರೋಪೀನಾಗಿ ಬದಲಾವಣೆ ಹೊಂದುತ್ತದೆ. ಕಣ್ಣಿನ ಪಾಪೆಯನ್ನು ಹಿಗ್ಗಿಸುವ ಶಕ್ತಿಯುಳ್ಳ ಅಟ್ರೋಪೀನ್ ತಯಾರಿಕೆ ಈ ರೀತಿ ಸಾಧ್ಯ.

ಒಣಗಿಸಿ ಪುಡಿಮಾಡಿದ ಎಲೆ ಮತ್ತು ಹೂಗಳ ತುದಿಗಳನ್ನು ಸೇದುವ ಮಿಶ್ರಣಗಳಲ್ಲಿ ಅಲ್ಲದೆ ಮತ್ತುತರಿಸುವ ಪಾನೀಯಗಳಲ್ಲಿ ಸೇರಿಸುವುದುಂಟು. ಕೆಲವು ಸಲ ಇದರ ಬೀಜಗಳನ್ನು ಹಲ್ಲುನೋವು ಕಡಿಮೆಮಾಡಲು ಉಪಯೋಗಿಸುತ್ತಾರೆ. ಇವೆರಡೂ ಸರಿಯಲ್ಲ. ಇದರಲ್ಲಿನ ರಸಾಯನಿಕಗಳ ಪ್ರಮಾಣ ನಿರ್ದಿಷ್ಟವಾಗಿಲ್ಲದಿರುವುದರಿಂದ ಇದರ ಕಷಾಯವನ್ನು ಔಷಧರೂಪವಾಗಿ ಬಳಸುವುದು ತುಂಬ ಅಪಾಯಕಾರಿ. ಆದರೆ ಇದರಿಂದ ತಯಾರಾದ, ಶುದ್ಧರೂಪದ ಔಷಧಗಳ ಉಪಯೋಗ ನಿಷಿದ್ಧವಲ್ಲ. ಅದಿರು ವಾಯು, ಬುದ್ಧಿಮಾಂದ್ಯ ಮುಂತಾದ ನರಮಂಡಲದ ಕಾಯಿಲೆಗಳ ಚಿಕಿತ್ಸೆಗೆ ಇವನ್ನು ಬಳಸುತ್ತಾರೆ. (ಎ.ಎಸ್.ಆರ್.)

**ಖುರ್ಜಾ :** ಉತ್ತರಪ್ರದೇಶದ ಬುಲಂದ್‌ಶಹರ್ ಜಿಲ್ಲೆಯ ಒಂದು ಪಟ್ಟಣ. ದೆಹಲಿಯ ಆಗ್ನೇಯಕ್ಕೆ 72 ಕಿ.ಮೀ. ದೂರದಲ್ಲಿದೆ. ಜನಸಂಖ್ಯೆ (98403) (2001). ಇದು ಅನೇಕ ರಾಷ್ಟ್ರೀಯ ಹೆದ್ದಾರಿಗಳ ಕೂಡುದಾಣ; ಪ್ರಮುಖ ವ್ಯಾಪಾರಕೇಂದ್ರ. ಇದರ ಸುತ್ತಣ ಪ್ರದೇಶದ ಮುಖ್ಯ ಉತ್ಪನ್ನಗಳಾದ ಗೋದಿ, ಬಾರ್ಲಿ, ಜೋಳ, ಹತ್ತಿ, ಕಬ್ಬು ಇವು ಇಲ್ಲಿ ಮುಖ್ಯವಾಗಿ ವ್ಯಾಪಾರವಾಗುತ್ತವೆ. ಇಲ್ಲಿ ಅನೇಕ ಹತ್ತಿಗಿರಣಿಗಳುಂಟು. ಕಲಾತ್ಮಕ ಮಣ್ಣಿನ ಪಾತ್ರೆಗಳ ತಯಾರಿಕೆಗೂ ಖುರ್ಜಾ ಪ್ರಸಿದ್ಧಿ ಪಡೆದಿದೆ. ಇಲ್ಲಿಯ ಸುಂದರ ಜೈನದೇವಾಲಯ ಅಸಂಖ್ಯಾತ ಭಕ್ತರನ್ನು ಆಕರ್ಷಿಸುತ್ತದೆ. *(ಎಸ್.ಎಲ್.ಕೆ.)*

**ಖುಲ್ನಾ :** ಬಾಂಗ್ಲಾದೇಶದ ಒಂದು ನಗರ. ಖುಲ್ನಾ ವಿಭಾಗದ ಮತ್ತು ಜಿಲ್ಲೆಯ ಮುಖ್ಯಪಟ್ಟಣ. ಭೈರಬ್ ನದಿಯ ದಂಡೆಯ ಮೇಲಿದೆ. ಇದೊಂದು ಮುಖ್ಯ ನದಿಬಂದರು, ವ್ಯಾಪಾರಕೇಂದ್ರ. ಇಲ್ಲಿಂದ ಜೆಸ್ಸೂರಿನ ಮುಖಾಂತರ ಭಾರತದ ಕೋಲ್ಕೊತಕ್ಕೆ ರೈಲ್ವೆ ಮತ್ತು ರಸ್ತೆ ಸಂಪರ್ಕವಿದೆ. ಜೆಸ್ಸೂರ್–ದರ್ಶನ ರೈಲ್ವೆಯ ಒಂದು ಮುಖ್ಯನಿಲ್ದಾಣವಾದ ಖುಲ್ನಾಗೂ ಬಾಂಗ್ಲಾದೇಶದ ಇತರ ಮುಖ್ಯ ಸ್ಥಳಗಳಿಗೂ ಭೂಜಲ ಸಾರಿಗೆಮಾರ್ಗಗಳಿವೆ. ಸು. 5 ಕಿ.ಮೀ. ದಕ್ಷಿಣಕ್ಕೆ ಕಾಜಿಬಾಚಾ ನದಿಯ ಮೇಲೆ ನಿರ್ಮಾಣವಾಗಿರುವ ನೌಕಾಂಗಣ, 29 ಕಿ.ಮೀ. ದಕ್ಷಿಣಕ್ಕೆ ಹೊಸದಾಗಿ ನಿರ್ಮಿತವಾದ ಚಲ್ನಾ ಬಂದರು–ಇವುಗಳಿಂದಾಗಿ ಖುಲ್ನಾದ ಜಲಸಾರಿಗೆ ವಿಶೇಷವಾಗಿ ವರ್ಧಿಸಿದೆ. ಖುಲ್ನಾ ಒಂದು ಮುಖ್ಯಕೈಗಾರಿಕಾಕೇಂದ್ರ ಕೂಡ ಹೌದು. ಸುಂದರಬನಗಳ ಅರಣ್ಯೋತ್ಪನ್ನವನ್ನಾಧರಿಸಿದ ಬೆಂಕಿಕಡ್ಡಿ ಕಾರ್ಖಾನೆಗಳೂ ಹತ್ತಿ ಸಣಬು ಮತ್ತು ಎಣ್ಣೆಗಿರಣಿಗಳೂ ಇಲ್ಲಿವೆ. ಪಾಕಿಸ್ತಾನದಿಂದ ಬಿಡುಗಡೆ ಹೊಂದಲು ಬಾಂಗ್ಲಾದೇಶ ಹೂಡಿದ ಹೋರಾಟದಲ್ಲಿ ಪ್ರಧಾನ ಪಾತ್ರ ವಹಿಸಿದ ನಗರಗಳಲ್ಲಿ ಖುಲ್ನಾ ಒಂದು.

ಖುಲ್ನಾ ಜಿಲ್ಲೆಯ ವಿಸ್ತೀರ್ಣ 4394.46 ಚ.ಕಿಮೀ. ಜನಸಂಖ್ಯೆ 23,34,285 (2000). ಜೆಸ್ಸೂರಿನಿಂದ ಪ್ರತ್ಯೇಕಿಸಿ ಈ ಜಿಲ್ಲೆಯನ್ನು ರಚಿಸಲಾದ್ದು (1882)ರಲ್ಲಿ. ಇದು ಮೆಕ್ಕಲು ಮಣ್ಣಿನಿಂದಾಗಿರುವ ಪ್ರದೇಶ. ಇಲ್ಲಿ ಅನೇಕ ನದಿಗಳು ಹರಿಯುತ್ತವೆ. ಜಿಲ್ಲೆಯ ವಾಯವ್ಯ ಭಾಗ ಉಳಿದ ಪ್ರದೇಶಕ್ಕಿಂತ ಎತ್ತರವಾಗಿದೆ. ಆಗ್ನೇಯ ಭಾಗ ತಗ್ಗು, ಜವುಗು; ಸುಂದರಬನಗಳಿಂದ ಕೂಡಿದೆ. ಇಲ್ಲಿ ಬೇಸಾಯ ಅಸಾಧ್ಯ; ಜನರಿಲ್ಲ. ಅಕ್ಕಿ, ಎಣ್ಣೆಬೀಜ, ಸಣಬು ಇಲ್ಲಿಯ ಮುಖ್ಯ ಬೆಳೆಗಳು. ನೀರಾವರಿ ಸೌಲಭ್ಯ ವಿಸ್ತರಿಸುತ್ತಿದೆ. (ಕೆ.ಆರ್.ಆರ್.)

**ಖುರ್ಷಿದ್ ಆಲಂಖಾನ್:** 1919–2013. ಕರ್ನಾಟಕದ ಮಾಜಿ ರಾಜ್ಯಪಾಲ (1991–99). ಕೇಂದ್ರ ಸರ್ಕಾರದ ಮಾಜಿ ಸಚಿವ. ಉತ್ತರ ಪ್ರದೇಶದ ಫರೂಕಾಬಾದ್ ಜಿಲ್ಲೆಯ ಕೈಮ್‌ಗಂಜ್‌ನಲ್ಲಿ 1919 ಫೆಬ್ರವರಿ 5ರಂದು ಜನಿಸಿದರು. ಪ್ರಾರಂಭಿಕ ಶಿಕ್ಷಣದ ಬಳಿಕ ಆಗ್ರ ವಿಶ್ವವಿದ್ಯಾಲಯದ ಪ್ರತಿಷ್ಠಿತ ಸೇಂಟ್ ಜಾನ್ಸ್ ಕಾಲೇಜಿನ ವಿದ್ಯಾರ್ಥಿಯಾಗಿ ಸೇರಿದರು. ಅಲ್ಲಿ ಬಿ.ಎ. ಪದವಿಯನ್ನೂ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಇವರು ಅಮೆರಿಕ ಸಂಯುಕ್ತಸಂಸ್ಥಾನದ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದು ಅಲ್ಲಿ ಆಡಳಿತ ಅಧ್ಯಯನದಲ್ಲಿ ಪದವಿ ಪೂರೈಸಿದರು.

ಇವರಿಗೆ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಇತ್ತು. ದಿವಂಗತ ಜಾಕೀರ್ ಹುಸೇನ್ ಅವರ ಅಳಿಯರಾಗಿದ್ದ ಖಾನ್ ನವದೆಹಲಿಯ ಜಾಕೀರ್ ಹುಸೇನ್ ಸ್ಮಾರಕ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾಗಿದ್ದರು. ಫರೀದಾಬಾದಿನ ವೈ.ಎಂ.ಸಿ.ಎ. ಎಂಜನಿಯರಿಂಗ್ ಸಂಸ್ಥೆಯ ಆಡಳಿತ ಮಂಡಳಿಯಲ್ಲೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ದೆಹಲಿಯ ಜಮೀಯಾ ಮಿಲಿಯ ಇಸ್ಲಾಮಿಯ ವಿಶ್ವವಿದ್ಯಾಲಯದಲ್ಲಿ ಇವರಿಗೆ ವಿಶೇಷ ಆಸಕ್ತಿಯಿತ್ತು. ಆ ವಿಶ್ವವಿದ್ಯಾಲಯದ ಕುಲಪತಿಯಾಗಿಯೂ ಸೇವೆ ಸಲ್ಲಿಸಿದ್ದರು. ಇವರು ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸದಸ್ಯರಾಗಿದ್ದರು.

ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದು. ಕೇಂದ್ರ ಸರ್ಕಾರದಲ್ಲಿ ವಿದೇಶಾಂಗ, ಪ್ರವಾಸೋದ್ಯಮ, ನಾಗರಿಕ ವಿಮಾನಯಾನ, ಜವಳಿ ಮತ್ತು ವಾಣಿಜ್ಯ ಮುಂತಾದ ವಿವಿಧ ಖಾತೆಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ವಿದೇಶಾಂಗ ಸಚಿವರಾಗಿ ಪ್ರಪಂಚಾದ್ಯಂತ ವ್ಯಾಪಕ ಪ್ರವಾಸ ಕೈಗೊಂಡ ಅನುಭವ ಇವರಿಗಿದೆ. ಹಲವು ಸಂದರ್ಭಗಳಲ್ಲಿ ವಿಶ್ವಸಂಸ್ಥೆ ಮತ್ತು



ಭದ್ರತಾ ಮಂಡಳಿಯ ಅಧಿವೇಶನಗಳನ್ನು ಉದ್ದೇಶಿಸಿ ಮಾತನಾಡಿದ ಕೀರ್ತಿ ಇವರದು.

ನವದೆಹಲಿ ಮತ್ತು ಉಗಾಂಡಗಳಲ್ಲಿ ಜರಗಿದ ಅಲಿಪ್ತ ರಾಷ್ಟ್ರಗಳ ವಿದೇಶಾಂಗ ಸಚಿವರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನದ ರಿಪಬ್ಲಿಕನ್ ಪಕ್ಷದ ಸಮಾವೇಶದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

1974 – 84ರ ತನಕ ರಾಜ್ಯಸಭೆ ಸದಸ್ಯರಾಗಿದ್ದ ಖಾನ್. ಉತ್ತರ ಪ್ರದೇಶದ ಫರೂಕಾಬಾದ್ ಕ್ಷೇತ್ರದಿಂದ 1984ರಲ್ಲಿ ಲೋಕಸಭೆಗೆ ಆಯ್ಕೆಯಾಗಿದ್ದರು.

ಗೋವ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡಾಗ (1989 ಜುಲೈ 18) ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡು 1991 ಜನವರಿ 6 ಸತತವಾಗಿ ಎಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇವರು ಮಹಾರಾಷ್ಟ್ರ ಮತ್ತು ಕೇರಳದ ಹಂಗಾಮಿ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಇವರಿಗೆ ತೋಟಗಾರಿಕೆ ಮತ್ತು ಓದಿನಲ್ಲಿ ವಿಶೇಷ ಆಸಕ್ತಿ. ಮಾಜಿ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ಇವರ ಪುತ್ರ. ಖಾನ್ ಅವರು ಅನಾರೋಗ್ಯದಿಂದಾಗಿ 2013 ಜುಲೈ 20ರಂದು ನಿಧನರಾದರು. *

**ಖುಸ್ರಾವ್:** ಮೊಗಲ್ ಚಕ್ರವರ್ತಿ ಜಹಾಂಗೀರನ (1605–27) ಹಿರಿಯ ಮಗ ಮತ್ತು ರಾಜಾ ಮಾನ್‌ಸಿಂಗನ ಸೋದರಳಿಯ. ಅಕ್ಬರನ ಕಾಲದಲ್ಲೇ ಅವನನ್ನು ಸಿಂಹಾಸನಕ್ಕೆ ಏರಿಸಲು ಸನ್ನಾಹ ನಡೆದಿತ್ತು. ಜಹಾಂಗೀರ್ ಸಿಂಹಾಸನವನ್ನೇರಿದ ಮೇಲೆ, ಅವನ ವಿಶ್ವಾಸ ಕಳೆದುಕೊಂಡಿದ್ದ ಖುಸ್ರಾವ್ ದಂಗೆ ಎದ್ದು ಲಾಹೋರನ್ನು ಹಿಡಿದುಕೊಳ್ಳಲು ಜಹಾಂಗೀರ್ ಅವನೊಡನೆ ಯುದ್ಧ ನಡೆಸಿ, ಅವನನ್ನು ಸೆರೆಹಿಡಿದ. ಅವನಿಗೆ ಕಾರಾಗೃಹವಾಸದ ಶಿಕ್ಷೆ ವಿಧಿಸಲಾಯಿತು. ಅವನೊಂದಿಗೆ ದಂಗೆಯಲ್ಲಿ ಭಾಗವಹಿಸಿದ್ದ ಅನುಯಾಯಿಗಳು ಕ್ರೂರ ಶಿಕ್ಷೆಯನ್ನು ಅನುಭವಿಸಿದರು. ಅವನಿಗೆ ಆಶ್ರಯ ಕೊಟ್ಟ ತಪ್ಪಿಗಾಗಿ ಸಿಖ್ಖರ ಗುರು ಅರ್ಜುನಸಿಂಗನನ್ನು ಕೊಲ್ಲಲಾಯಿತು. ಜಹಾಂಗೀರನ ಮರಣಾನಂತರ ತನ್ನ ಸೋದರ ಷಹಜಹಾನನ ಬಂದಿಯಾಗಿ ಖುಸ್ರಾವ್ 1662 ರ ತನಕ ಜೀವಿಸಿದ್ದು, ಅನುಮಾನಾಸ್ಪದ ರೀತಿಯಲ್ಲಿ ಮರಣ ಹೊಂದಿದ. ಸಿಂಹಾಸನಕ್ಕೆ ಈತನ ಸ್ಪರ್ಧೆಯನ್ನು ಕೊನೆಗೊಳಿಸುವ ಸಲುವಾಗಿ ಬಹುಶಃ ಷಹಜಹಾನನೇ ಇವನ ಕೊಲೆ ಮಾಡಿರಬೇಕೆಂಬ ಅಭಿಪ್ರಾಯವಿದೆ. (ಬಿ.ಎಸ್.ಎ.)

**ಖುಸ್ರಾವ್ ಖಾನ್, ನಾಸಿರುದ್ದೀನ್ :** ಗುಜರಾತಿನ ನಿಮ್ನವರ್ಗದಿಂದ ಇಸ್ಲಾಮಿಗೆ ಮತಾಂತರ ಹೊಂದಿದ್ದ ಒಬ್ಬ ವ್ಯಕ್ತಿ. ಖಲ್ಜಿ ಮನೆತನದ ಮುಬಾರಕ್ ಖಲ್ಜಿಯ (1316–20) ಒಲುಮೆಗೆ ಪಾತ್ರನಾಗಿ ಅವನ ಪ್ರಧಾನಿಯಾದ. ಅಲ್ಲಾವುದ್ದೀನನ ಮರಣಾನಂತರ ಸಿಂಹಾಸನವನ್ನೇರಿದ ಮುಬಾರಕ್ ಎಲ್ಲ ರಾಜ್ಯಸೂತ್ರಗಳನ್ನೂ ಖುಸ್ರಾವ್ ಖಾನನಿಗೆ ಒಪ್ಪಿಸಿಕೊಟ್ಟಿದ್ದ. ಮುಬಾರಕನ ಎಲ್ಲ ಕೆಟ್ಟ ಚಟಗಳಿಗೂ ಇವನು ಬೆಂಬಲ ಕೊಡುತ್ತಿದ್ದ. ಕೊನೆಗೆ ಇವನು ತನ್ನ ಸ್ವಾಮಿಗೇ ದ್ರೋಹ ಬಗೆದ. 1320ರಲ್ಲಿ ಮುಬಾರಕನನ್ನು ಕೊಲ್ಲಿಸಿ, ಸುಲ್ತಾನ್ ನಾಸಿರುದ್ದೀನ್ ಖುಸ್ರಾವ್ ಷಹ ಎಂಬ ಅಭಿಧಾನ ತಳೆದು ಸಿಂಹಾಸನವನ್ನೇರಿದ. ಆದರೆ ಇವನು ಆಡಳಿತದಲ್ಲಿ ನೆಮ್ಮದಿಯಾಗಿರಲಿಲ್ಲ. ಆಸ್ಥಾನದ ಶ್ರೀಮಂತರು ತನಗೇನೂ ಕೇಡಕು ಮಾಡದಂತೆ ಅವರಿಗೆ ಲಂಚ ಕೊಡಬೇಕಾಯಿತು. ತನ್ನ ನಂಟರಿಷ್ಟರಿಗೂ ಬೊಕ್ಕಸದಿಂದ ಧಾರಾಳವಾಗಿ ಹಣ ಕೊಟ್ಟ. ಇದರಿಂದ ಭಂಡಾರ ಬರಿದಾಯಿತು. ತನಗೆ ಹಿಂದೆ ಸುಲ್ತಾನನಾಗಿದ್ದ ಮುಬಾರಕನ ಕುಟುಂಬದವರನ್ನೂ ಅವನಲ್ಲಿ ನಿಷ್ಠೆ ಹೊಂದಿದ್ದವರನ್ನೂ ಕೊಲೆಗೆ ಈಡು ಮಾಡಿದ. ಈ ಅಪಕೃತ್ಯಗಳಿಂದಾಗಿ ಇವನ ಆಳ್ವಿಕೆ ಬಹುಕಾಲ ಮುಂದುವರಿಯಲಿಲ್ಲ. ಈತ ಅಧಿಕಾರಕ್ಕೆ ಬಂದ ಐದೇ ತಿಂಗಳುಗಳಲ್ಲಿ ಇವನ ಕ್ರೌರ್ಯ ಅನೀತಿಗಳಿಗೆ ಬೇಸತ್ತ ಮುಸ್ಲಿಂ ನಾಯಕರು ತೊಗಲಕನ ನೇತೃತ್ವದಲ್ಲಿ ಖುಸ್ರಾವ್ ಖಾನನನ್ನು ಸಿಂಹಾಸನದಿಂದ ತಳ್ಳಿ, ಶೂಲಕ್ಕೇರಿಸಿದರು. ಇವನ ಸಾವಿನೊಂದಿಗೆ ಖಲ್ಜಿವಂಶದ ಆಳ್ವಿಕೆ ಕೊನೆಗೊಂಡು ತೊಗಲಕರ ವಂಶದ ಆಳ್ವಿಕೆ ಪ್ರಾರಂಭವಾಯಿತು. (ಬಿ.ಎಸ್.ಎ.)

**ಖೂಜ಼ಿಸ್ತಾನ್ :** ಇರಾನಿನ ನೈಋತ್ಯ ಭಾಗದಲ್ಲಿ ಪರ್ಷಿಯನ್ ಕೊಲ್ಲಿಯ ಮುಖದ ಬಳಿ ಇರುವ ಪ್ರಾಂತ್ಯ. ಪಶ್ಚಿಮದಲ್ಲಿ ಇರಾಕ್, ಉತ್ತರದಲ್ಲಿ ಲುರಿಸ್ತಾನ್, ಪೂರ್ವದಲ್ಲಿ ಚಹರ್ ಮಹಲ್ ಮತ್ತು ಇಸ್‍ಫಹಾನ್, ಆಗ್ನೇಯದಲ್ಲಿ ಫಾರ್ಸ್ ಮತ್ತು ದಕ್ಷಿಣದಲ್ಲಿ ಪರ್ಷಿಯನ್ ಖಾರಿ ಇವೆ. ವಿಸ್ತೀರ್ಣ 63,238 ಚ.ಕಿಮೀ. ಜನಸಂಖ್ಯೆ 4,345,607 (2005). ಇದು ಮೆಸೊಪೊಟೇಮಿಯ ಮೈದಾನದ ಒಂದು ಭಾಗ. ಮೈದಾನದ ಪಕ್ಕದಲ್ಲಿರುವ ಜ್ಯಾಗ್ರಾಸ್ ಪರ್ವತಶ್ರೇಣಿಯನ್ನು ಇದು ಒಳಗೊಂಡಿದೆ. ಇಲ್ಲಿ ಹರಿಯುವ ಅನೇಕ ನದಿಗಳ ಪೈಕಿ ಕಾರೂನ್ ಮುಖ್ಯವಾದ್ದು. ಡೇಜ಼್ ಇದರ ಒಂದು ಮುಖ್ಯ ಉಪನದಿ. ಕಾರ್ಖಾ, ಜರಾಹಿ ಮತ್ತು ಜೋರೆಹ್ ಇತರ ನದಿಗಳು. ಇವು ಮೆಕ್ಕಲುಮಣ್ಣನ್ನು ತಂದು ಹರಡುತ್ತಿವೆ. ಕೊಲ್ಲಿಯ ಬಳಿಯ ಜವುಗು ನೆಲ ಭರತದಿಂದಾದ್ದು. ಜ್ಯಾಗ್ರಾಸ್‍ನ ಮುಂದುಗಡೆ ಇರುವ ತಪ್ಪಲುಬೆಟ್ಟಗಳ ಅಡಿಯಲ್ಲಿ ತೈಲನಿಕ್ಷೇಪವಿದೆ. ಜ್ಯಾಗ್ರಾಸ್ ಶ್ರೇಣಿ ದಟ್ಟವಾದ ಕಾಡುಗಳಿಂದಲೂ ಆಳವಾದ ಕಮರಿಗಳಿಂದಲೂ ಕೂಡಿದೆ.

ಖೂಜ಼ಿಸ್ತಾನದ ಮೈದಾನದ ಕೆಳಭಾಗದ್ದು ಮರುಭೂಮಿಯ ವಾಯುಗುಣ; ಬೇಸಗೆ ಶುಷ್ಕ, ತಾಪಕರ. ತೇವ ತುಂಬಿದ ಗಾಳಿ ಖಾರಿಯ ಕಡೆಯಿಂದ ಬೀಸಿದಾಗ ಹವ ಬಲು ಧಗೆಯಿಂದ ಕೂಡಿರುತ್ತದೆ. ಚಳಿಗಾಲದಲ್ಲಿ ಮಳೆ; ಮೈದಾನದಲ್ಲಿ ವರ್ಷಕ್ಕೆ 24 ದಿಂದ 40 ಸೆಂ.ಮೀ. ಪರ್ವತ ಪ್ರದೇಶಗಳಲ್ಲಿ ಹೆಚ್ಚು. ಖರ್ಜೂರ, ಜಂಬೀರ ಮತ್ತು ಇತರ ಹಣ್ಣುಗಳು, ಕಬ್ಬು, ಹತ್ತಿ, ನೀಲಿ, ಎಳ್ಳು, ಕಲ್ಲಂಗಡಿ, ಕರಬೂಜ ಮತ್ತು ತರಕಾರಿಗಳನ್ನು ನೀರಾವರಿಯಿಂದ ಬೆಳೆಯಲು ಅನುಕೂಲಕರವಾದ ವಾಯುಗುಣ ಇಲ್ಲಿದೆ.

ಇಲ್ಲಿಯ ಜನಸಂಖ್ಯೆಯ ಅರ್ಧಭಾಗ ಅರಬರು. ಇವರು ಮೈದಾನಗಳಲ್ಲಿ ವಾಸಿಸುತ್ತಾರೆ. ಭಖ್ತಿಯಾರಿ, ಲುರ್ ಮುಂತಾದವರೂ ಇದ್ದಾರೆ. ಪಟ್ಟಣಗಳಲ್ಲಿ ಪರ್ಷಿಯನರುಂಟು. ಅರಬರು ಅಲೆಮಾರಿತನವನ್ನು ಬಿಟ್ಟಿದ್ದರೂ ಭಖ್ತಿಯಾರಿಗಳೂ ಲುರ್ ಜನರೂ ಈಗಲೂ ಅಲೆದಾಡುತ್ತಿರುತ್ತಾರೆ.

ಬೈಬಲ್ಲಿನಲ್ಲಿ ಉಲ್ಲೇಖವಾಗಿರುವ ಈಲಾಮಿನ ಮಧ್ಯಭಾಗವೇ ಖೂಜ಼ಿಸ್ತಾನ. ಇದು ಬಹುತೇಕವಾಗಿ ಪ್ರಾಚೀನ ಸೂಸಿಯೇನ ಪ್ರದೇಶದಲ್ಲಿತ್ತು. ಒಮ್ಮೆ ಇಲ್ಲಿ ಕೃಷಿ, ವ್ಯಾಪಾರಗಳು ಪ್ರವರ್ಧಮಾನ ಸ್ಥಿತಿಯಲ್ಲಿದ್ದುವು. ಆದರೆ ಪಂಗಡಗಳ ಜಗಳ, ಅಭದ್ರತೆ, ದುರಾಡಳಿತದಿಂದ ಕ್ಷೀಣಿಸಿದುವು. ಹಳೆಯ ನೀರಾವರಿ ಕಟ್ಟೆಗಳು ಜೀರ್ಣವಾದುವು. ಪಹ್ಲವಿ ಮನೆತನದ ಅರಸರ ಕಾಲದಲ್ಲಿ ಈ ಪ್ರಾಂತ್ಯದ ಪುನರ್ನಿರ್ಮಾಣಕಾರ್ಯ ಚುರುಕಾಯಿತು. ತೈಲಸಾಧನಗಳ ಅಭಿವೃದ್ಧಿಯಾಯಿತು. ಪ್ರಾಂತ್ಯದ ಮುಖ್ಯ ಪಟ್ಟಣ ಆವಾಜ಼್. ಜನಸಂಖ್ಯೆ 1.6 ಮಿಲಿಯನ್ ಇದು ರೈಲ್ವೆ ರಸ್ತೆಗಳ ಸಂಧಿಸ್ಥಳ. ಡೆಜ಼್‍ಫುಲ್ 235,819 ಷೂಷ್ತಾರ್ 89,235 ಬೆಹ್‍ಬೆಹನ್ 96836 ಇತರ ಮುಖ್ಯ ಸ್ಥಳಗಳು. ತೈಲೋತ್ಪಾದನೆ ಇಲ್ಲಿಯ ಮುಖ್ಯ ಉದ್ಯಮ.

(ಬಿ.ಎಸ್.ಎಚ್.)

**ಖೆಡೀವ್ :** ತುರ್ಕಿಯ ಸುಲ್ತಾನ 1867ರಲ್ಲಿ ಈಜಿಪ್ಟಿನ ಇಸ್ಮಾಯಿಲ್ ಪಾಷಾಗೆ ಕೊಟ್ಟ ಬಿರುದು. ಖೆಡೀವ್ ಎಂಬುದು ಪಾರಸಿ ಭಾಷೆಯ ಶಬ್ದ. ಪ್ರಭು ಅಥವಾ ರಾಜಕುಮಾರ ಎಂದು ಇದರ ಅರ್ಥ. ಇಸ್ಮಾಯಿಲನೂ ಅವನ ಅನಂತರ ಬಂದ ಅಹಮದ್ ಟೆವ್‍ಫೀಕ್ ಮತ್ತು ಎರಡನೆಯ ಅಬ್ಬಾಸ್ ಹಿಲ್ಮಿ ಇವರೂ ಇದನ್ನು ಧರಿಸಿದ್ದರು. ಖೆಡೀವರದು ಅಲ್ಬೇನಿಯಮ್ ವಂಶ. ಈಜಿಪ್ಷಿಯನರು ಅವರನ್ನು ತುರ್ಕಿ ವಂಶದವರೆಂದೇ ಬಗೆದಿದ್ದರು. ಪಾಷಾಗಳು ತುರ್ಕಿ ಸುಲ್ತಾನನ ಮಾಂಡಲಿಕರಂತೆ ರಾಜ್ಯವಾಳುತ್ತಿದ್ದರು. 1914ರಲ್ಲಿ ಈಜಿಪ್ಟಿನ ಮೇಲೆ ತುರ್ಕಿಯ ಪ್ರಭುತ್ವ ಕೊನೆಗೊಂಡಾಗ ಖೆಡೀವ್ ಬಿರುದನ್ನು ಬ್ರಿಟಿಷರು ರದ್ದುಪಡಿಸಿದರು. ಈಜಿಪ್ಟ್ ಬ್ರಿಟನ್ನಿನ ಆರಕ್ಷಿತ ದೇಶವಾಯಿತು. ಅಲ್ಲಿಯ ದೊರೆ ಸುಲ್ತಾನ್ ಎನಿಸಿಕೊಂಡ ಸ್ವಾತಂತ್ರ್ಯಕ್ಕಾಗಿ ಈಜಿಪ್ಟಿನ ವಾಫ್ಡ್ ಪಕ್ಷ ನಡೆಸಿದ ಚಳವಳಿಯ ಫಲವಾಗಿ ಆತ 1923ರಲ್ಲಿ ಸಂವಿಧಾನಬದ್ಧ ದೊರೆಯಾದ. (ಎಂ.ಪಿ.; ಎಂ.ಕೆ.ಬಿ.)

**ಖೆಡ್ಡ :** ಕಾಡಾನೆಗಳನ್ನು ಸೆರೆಹಿಡಿದು ಪಳಗಿಸಲು ಯೋಜಿಸಿರುವ ಒಂದು ವಿಶೇಷ ಬಗೆಯ ಬೋನು. ಇಂಥ ಬೋನಿಗೆ ಆನೆಗಳನ್ನು ತರುಬುವ, ಅನಂತರ ಪಳಗಿಸುವ ವಿಸ್ತಾರವಾದ ಕಾರ್ಯಾಚರಣೆಗೆ ಖೆಡ್ಡ ಎನ್ನುತ್ತಾರೆ. ಕಾಡಿನಲ್ಲಿ ಆನೆಗಳ ಸಂಖ್ಯೆ ಹೆಚ್ಚಾಗಿ ಅವು ಜನಗಳಿಗೂ ಬೆಳೆಗಳಿಗೂ ಹಾನಿಯುಂಟುಮಾಡತೊಡಗಿದಾಗ ಅವನ್ನು ಸೆರೆಹಿಡಿಯಲಾಗುತ್ತದೆ. ಒಂದೋ ಎರಡೋ ಪುಂಡಾನೆಗಳು ತೊಂದರೆ ಕೊಟ್ಟಾಗ ಅವನ್ನು ಬೆದರಿಸಿ ಕಾಡಿನ ಒಳಭಾಗಕ್ಕೆ ಅಟ್ಟುತ್ತಾರೆ. ಇಲ್ಲವೆ ಗುಂಡಿಟ್ಟು ಕೊಂದುಬಿಡುತ್ತಾರೆ. ಬಹುಸಂಖ್ಯೆಯಲ್ಲಿ ಅವನ್ನು ಹಿಡಿಯಬೇಕಾದಾಗ ಮಾತ್ರ ಖೆಡ್ಡ ಯೋಜನೆಯನ್ನು ಹಾಕಲಾಗುತ್ತದೆ. ಖೆಡ್ಡ ಎನ್ನುವ ಪದ ಹಿಂದುಸ್ಥಾನಿಯದು. ಸಣ್ಣ ಗುಂಡಿ ಎಂದು ಇದರ ಮೂಲಾರ್ಥ. ಹಿಂದೆ ಒಂದು ಕಾಲದಲ್ಲಿ ಕಾಡಾನೆಗಳನ್ನು ಹಿಡಿಯುವಾಗ ಕಂದಕಗಳನ್ನು ತೋಡುತ್ತಿದ್ದುದರಿಂದ ಈ ಪದಕ್ಕೆ ಈ ಅರ್ಥ ಬಂದಿದೆ. ಖೆಡ್ಡಕ್ಕೆ ಹಿಂದಿಯಲ್ಲಿ ಬಂಗಡಿ ಎಂದೂ ಕನ್ನಡದಲ್ಲಿ ಆನೆಪಂಗಡಿ ಎಂದೂ ಹೆಸರಿದೆ. ಈಚೆಗೆ ಆನೆಗಳನ್ನು ಹಿಡಿಯಲು ಗುಂಡಿಗಳನ್ನು ತೋಡುತ್ತಿಲ್ಲ. ಏಕೆಂದರೆ ಗುಂಡಿಗೆ ಕೆಡೆದು ಬೀಳುವ ಆನೆಗೆ ಊನವಾಗಬಹುದು. ಎಷ್ಟೋ ಆನೆಗಳು ಸಾಯಲೂಬಹುದು. ಆದ್ದರಿಂದ, ಈಗ ನೆಲಮಟ್ಟದಲ್ಲೇ ದಪ್ಪ ದಿಮ್ಮಿಗಳಿಂದ ದೊಡ್ಡ ಬೋನೊಂದನ್ನು ನಿರ್ಮಿಸಿ ಅದರಲ್ಲಿ ಆನೆಗಳನ್ನು ಬಂಧಿಸುತ್ತಾರೆ. ಈ ವಿಧಾನ ಮೈಸೂರಿನ ವೈಶಿಷ್ಟ್ಯಗಳಲ್ಲಿ ಒಂದೆನಿಸಿ ಪ್ರಸಿದ್ಧವಾಗಿದೆ. ಹೈದರ್ ಅಲಿ, ಟಿಪ್ಪುಸುಲ್ತಾನರ ಕಾಲದಿಂದಲೂ ಈ ಕಾರ್ಯವಿಧಾನವನ್ನು ಉತ್ತಮಪಡಿಸುತ್ತ ಬರಲಾಗಿದೆ. ಸದ್ಯಕ್ಕೆ ಮೈಸೂರಿನ ಕಾಕನಕೋಟೆ ಕಾಡಿನ ಕಾರಾಪುರ, ಚಾಮರಾಜನಗರ ತಾಲ್ಲೂಕಿನ ಬೂದಿಪಡಗ ಮುಂತಾದ ಸ್ಥಳಗಳಲ್ಲಿ ಖೆಡ್ಡ ಕಾರ್ಯಾಚರಣೆ ನಡೆಯುತ್ತಿದೆ. ಇದಕ್ಕೆ ಅಪಾರವಾದ ಹಣಸಹಾಯವೂ ಜನಸಹಾಯವೂ ಬೇಕಾಗುವುದರಿಂದ ಇಂಥ ಕಾರ್ಯಕ್ರಮವನ್ನು ಅಗತ್ಯ ಬಿದ್ದಾಗ ಮಾತ್ರ ಏರ್ಪಡಿಸಲಾಗುತ್ತದೆ. ಈಚೆಗೆ ಇದನ್ನು ಜನಪ್ರಿಯವಾಗಿ ಮಾಡಿರುವುದರಿಂದ ಸರ್ಕಾರಕ್ಕೆ ಸ್ವಲ್ಪಮಟ್ಟಿನ ಲಾಭವೂ ಜನಕ್ಕೆ ಮನೋರಂಜನೆಯೂ ಒದಗುತ್ತಿದೆ.

ನದಿಯ ಒಂದು ಪಕ್ಕದಲ್ಲಿ ಖೆಡ್ಡ ಬೋನು ಇರುತ್ತದೆ. ಅದರ ಸುತ್ತಲೂ 8ರಿಂದ 9 ಅಡಿ ಆಳವಾದ ಕಂದಕವೊಂದು ಇರುತ್ತದೆ. ಕಾಡಿನಲ್ಲಿ ಹರಡಿ ಹೋಗಿರುವ ಆನೆಗಳನ್ನು ನದಿಯ ಮುಖಾಂತರ ಅಟ್ಟಿ ಖೆಡ್ಡದ ಒಳಕ್ಕೆ ಸೇರಿಸುವುದೇ ಇಷ್ಟೆಲ್ಲ ಏರ್ಪಾಡಿನ ಉದ್ದೇಶ. ಖೆಡ್ಡಕ್ಕೆ 3 ಪ್ರವೇಶದ್ವಾರಗಳಿರುತ್ತವೆ. ಒಂದೊಂದು ದ್ವಾರದ ಬಳಿಯೂ ಉದ್ದನೆಯ ಕಾಡುಮರಗಳ ಕಂಬಗಳನ್ನು ಆಳವಾಗಿ ಹೂಳಲಾಗಿದ್ದು ಒಂದೊಂದು ಅಡ್ಡಪಟ್ಟಿಗಳಿರುವ ಒರಟು ಬಗೆಯ ಬಾಗಿಲನ್ನು ಅಳವಡಿಸಲಾಗಿರುತ್ತದೆ. ಈ ಬಾಗಿಲುಗಳು ಮೇಲಿನಿಂದ ಕೆಳಕ್ಕೆ ಮುಚ್ಚಿಕೊಳ್ಳುವಂತಿರುತ್ತವೆ. ಇವಕ್ಕೆ ಬಂಗಾಳದ ಕುಸಿಯುವ ಬಾಗಿಲುಗಳು ಎಂದು ಹೆಸರು. ಖೆಡ್ಡದಿಂದ 16–20 ಕಿ.ಮೀ. ವರೆಗೆ ಓಡಾಡಲು ಅನುಕೂಲವಾಗುವಂತೆ ನೇರದಾರಿಗಳನ್ನೂ ಅಡ್ಡದಾರಿಗಳನ್ನೂ ಮಾಡಿರುತ್ತಾರೆ. ಸೆರೆಸಿಕ್ಕುವ ಮೊದಲು ಆಮೇಲೂ ಆನೆಗಳಿಗೆ ಅಸಹಜವೆನ್ನಿಸದಂತೆ ಈ ದಾರಿಗಳನ್ನು ಸೊಪ್ಪು ಸದೆಗಳಿಂದ ಮುಚ್ಚಿಬಿಡಲಾಗುತ್ತದೆ. ನೇರದಾರಿಗೂ ಅಡ್ಡದಾರಿಗೂ ನಡುವೆ ಏರ್ಪಡುವ ಒಂದೊಂದು ಆವರಣವೂ ಸು. 5–10 ಚ.ಕಿಮೀ ವಿಸ್ತಾರವಾಗಿದ್ದು ಒಂದೊಂದರಲ್ಲೂ ಒಂದು ವಾರದವರೆಗೆ ಆನೆಗಳಿಗೆ ಸಾಕಾಗುವಷ್ಟು ನೀರು, ಹುಲ್ಲು ಮತ್ತು ಇತರ ಆಹಾರವಸ್ತುಗಳ ಸೌಲಭ್ಯವನ್ನೇರ್ಪಡಿಸಿರುತ್ತಾರೆ. ಆನೆಗಳು ನದಿಯ ಇನ್ನೊಂದು ದಡದಿಂದಲೂ ಬರಬಹುದಾದ ಕಾರಣ ಅಲ್ಲೂ ಇದೇ ಬಗೆಯ ಆವರಣಗಳನ್ನೇರ್ಪಡಿಸಿರುತ್ತಾರೆ.

**ಕಾರ್ಯಾಚರಣೆ :** ಆನೆಗಳನ್ನು ಸೆರೆಹಿಡಿಯುವುದಕ್ಕೆ 3 ತಿಂಗಳ ಮುಂಚೆಯೇ ಚಟುವಟಿಕೆ ಆರಂಭವಾಗುತ್ತದೆ. ಇದಕ್ಕೆ ಹಲವಾರು ಪೂರ್ವಸಿದ್ಧತೆಗಳನ್ನು ಮಾಡುತ್ತಾರೆ. ಇಂಥ ಸಿದ್ಧತೆಗಳಲ್ಲಿ ಮುಖ್ಯವಾದವು ಇವು : (1) ಕಂದಕದಲ್ಲಿಯ ಮಣ್ಣು ಕಸ ಮುಂತಾದವನ್ನು ತೆಗೆದು ಹಾಕುವುದು. (2) ಬಾಗಿಲುಗಳ ರಿಪೇರಿ ಮತ್ತು ಆವಶ್ಯಕವಾದರೆ ಹೊಸ ಬಾಗಿಲುಗಳ ನಿರ್ಮಾಣ. (3) ಆನೆಗಳಿಗೆ ಹಗ್ಗ ಬಿಗಿಯಲು ಅಗತ್ಯವಾದ ಕಿರು ಆವರಣಗಳ ನಿರ್ಮಾಣ. (4) ನದಿಗಿಳಿದ ಆನೆಗಳು ಅಕಸ್ಮಾತ್ ತಪ್ಪಿಸಿಕೊಂಡು ಹೋಗಬಹುದಾದ್ದರಿಂದ ಇಂಥ ಅವಕಾಶವಿರುವೆಡೆಯಲ್ಲೆಲ್ಲ ಬಲವಾದ ಕಂಬಗಳನ್ನು ನೆಟ್ಟು ಅಡ್ಡಿ ಏರ್ಪಡಿಸುವುದು. (5) ದಂಡಗಳನ್ನೇರಿ ಆನೆಗಳು ತಪ್ಪಿಸಿಕೊಳ್ಳಬಹುದಾದ್ದರಿಂದ ನದಿದಡವನ್ನು ಕಡಿದಾಗಿರುವಂತೆ ಕೊರೆಯುವುದು. (6) ನದಿಯ ಮೂಲಕ ಆನೆಗಳನ್ನು ಖೆಡ್ಡ ಆವರಣದೊಳಕ್ಕೆ ಓಡಿಸುವ ನಯನ ಮನೋಹರವಾದ ದೃಶ್ಯವನ್ನು ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಜನಕ್ಕೆ ಅನುಕೂಲವಾಗುವಂತೆ ಎತ್ತರವಾದ ವೇದಿಕೆಗಳನ್ನು ನಿರ್ಮಿಸುವುದು ಮತ್ತು ಹಗ್ಗ ಕಟ್ಟುವ ಆವರಣದ ಸುತ್ತಲೂ ಇದೇ ತೆರನಾದ ವೇದಿಕೆಗಳ ನಿರ್ಮಾಣ. (7) ಖೆಡ್ಡದ ವಿಶೇಷ ಅಧಿಕಾರಿಗಳು ಹಾಗೂ ನೌಕರ ವರ್ಗದವರಿಗೆ ವಸತಿ ಮತ್ತು ಆಹಾರ ಸೌಕರ್ಯಗಳನ್ನು ಕಲ್ಪಿಸುವುದು ಮತ್ತು ಜನಗಳಿಗೆ ಹಾಗೂ ಕೂಡಿಡಲ್ಪಟ್ಟ ಆನೆಗಳಿಗೆ ನೀರಿನ ಸೌಲಭ್ಯ ಒದಗಿಸುವುದು. (8) ಆನೆಗಳು ನೀರಿಗಿಳಿಯಬಹುದಾದ ನದಿ ಭಾಗಗಳ ಎರಡೂ ಕಡೆ ಬಿದಿರಿನ ತೇಲುಸೇತುವೆಗಳನ್ನು ನಿರ್ಮಿಸುವುದು. ಶಿಕಾರಿಗಳು ಇವುಗಳ ಮೇಲೆ ನಿಂತು ಆನೆಗಳು ಅಡ್ಡಾದಿಡ್ಡಿ ಓಡದಂತೆ ನೋಡಿಕೊಳ್ಳುತ್ತಾರೆ. (9) ಕಾಡುರಸ್ತೆಗಳ ರಿಪೇರಿ ಹಾಗೂ ಅಲ್ಲಲ್ಲಿ ಶಿಕಾರಿಗಳನ್ನು ನೇಮಿಸುವುದು ಮತ್ತು ದಾರಿಗಳನ್ನು ಸರಿಪಡಿಸಿ, ಅವುಗಳ ಅಂತರವನ್ನು ಅಳೆದು, ಗುರುತಿಗೆಂದು 44 ಗಜಗಳಿಗೊಂದರಂತೆ ಗೂಟಗಳನ್ನು ಹೂಳಿ ಅವುಗಳ ಬಳಿ ಸೌದೆಗಳನ್ನು ಪೇರಿಸುವುದು. ಆನೆಗಳ ಹಿಂಡನ್ನು ಓಡಿಸುವಾಗ ಈ ಸ್ಥಳಗಳಲ್ಲಿ ಶಿಕಾರಿಗಳಿದ್ದು ಬೆಂಕಿಯನ್ನು ಹೊತ್ತಿಸಿಕೊಂಡು ಆನೆಗಳು ತಪ್ಪಿಸಿಕೊಳ್ಳದಂತೆ ಕಾಯುತ್ತಾರೆ. (10) ಉಪಾಹಾರಗೃಹವನ್ನು ತೆರೆಯುವುದು, (11) ಗಾಯಗೊಳ್ಳುವ ಜನಗಳಿಗೂ ಆನೆಗಳಿಗೂ ಅನುಕೂಲವಾಗುವಂತೆ ವೈದ್ಯಾಲಯಗಳನ್ನು ತೆರೆಯುವುದು. (12) ಅಧಿಕಾರಿಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಸಲುವಾಗಿ ವೈರ್‌ಲೆಸ್ ಕೇಂದ್ರವೊಂದನ್ನು ಆರಂಭಿಸುವುದು.

ಇಷ್ಟೆಲ್ಲ ಸಿದ್ಧತೆಗಳು ಮುಗಿದಮೇಲೆ ಅರಣ್ಯ ಅಧಿಕಾರಿಗಳು ಸ್ಥಳೀಯ ಕಾಡು ಕುರುಬರೇ ಮುಂತಾದ ಜನರೊಡನೆ ಕೇರಳ ಹಾಗೂ ಕೊಡಗು ಜಿಲ್ಲೆಯ ಗಡಿಯಲ್ಲಿಯ ಉನ್ನತವಾದ ಬೆಟ್ಟ ಪ್ರದೇಶಗಳಲ್ಲಿ ಕಾವಲು ನಿಂತು ಕಾಡಾನೆಗಳ ಸಂಚಾರವನ್ನು ಗಮನಿಸಿ ಹಿಂಡನಲ್ಲಿಯ ಆನೆಗಳ ಸಂಖ್ಯೆ, ಅವು ಹೋಗುವ ದಿಕ್ಕು ಮುಂತಾದವುಗಳ ಬಗ್ಗೆ ಖೆಡ್ಡ ಕಾರ್ಯಾಚರಣೆಯ ಮುಖ್ಯಾಧಿಕಾರಿಗೆ ಮಾಹಿತಿಗಳನ್ನು ಒದಗಿಸುತ್ತಾರೆ. ಎಲ್ಲ ಹಿಂಡುಗಳೂ ಸೆರೆಗೆ ಯೋಗ್ಯವಾಗಿರುವುದಿಲ್ಲ. ಹಿಂಡಿನಲ್ಲಿ ಸಾಕಷ್ಟು ಆನೆಗಳಿರಬೇಕು. ಮುದಿಯಾನೆಗಳೂ ಮರಿಗಳೂ ಹೆಚ್ಚಾಗಿರಬಾರದು. ಇಂಥ ಹಿಂಡುಗಳನ್ನು ಗುರುತಿಸಿ ಹಿಂಬಾಲಿಸಿ ಖೆಡ್ಡದ ಪರಿಧಿಯೊಳಗಿನ ಯಾವುದಾದರೂ ಒಂದು ಆವರಣದೊಳಗೆ ನುಗ್ಗುವಂತೆ ಮಾಡುವುದು ಇವರ ಕೆಲಸ.

ಸಾಕಷ್ಟು ಸಂಖ್ಯೆಯಲ್ಲಿ ಆನೆಗಳು ಆವರಣವೊಂದಕ್ಕೆ ಬಂದಿವೆಯೆಂಬ ಸುದ್ದಿ ತಿಳಿದ ಅನಂತರ ಖೆಡ್ಡದ ಮುಖ್ಯಾಧಿಕಾರಿ ಅವನ್ನು ಸುತ್ತುವರಿಯುವ ಕಾರ್ಯ ಚಟುವಟಿಕೆಗಳನ್ನು ಆರಂಭಿಸಲು ಆಜ್ಞಾಪಿಸುತ್ತಾನೆ. ನದಿಯ ಮೂಲಕ ಹಿಂಡನ್ನು ಓಡಿಸಿ ಖೆಡ್ಡ ಆವರಣದೊಳಕ್ಕೆ ಸೇರಿಸುವ ದಿನಕ್ಕೆ 10–15 ದಿನಗಳ ಮುಂಚೆಯೇ ಸುತ್ತುವರಿಯುವ ಈ ಕಾರ್ಯವನ್ನು ಕೈಗೊಳ್ಳುತ್ತಾರೆ. ಇದಕ್ಕೆ ಬೇಕಾಗುವ ಜನರನ್ನು ಸುತ್ತಮುತ್ತಲಿನ ಹಳ್ಳಿಗಳಿಂದ ಕರೆಸಿ ನೇಮಿಸಿಕೊಳ್ಳಲಾಗುತ್ತದೆ. ಇವರನ್ನು ಪ್ರತಿ ಕಿಮೀ.ಗೆ 40 ಮಂದಿಯಂತೆ (ಒಬ್ಬೊಬ್ಬರಿಗೂ 44 ಗಜ ಅಂತರವಿರುವಂತೆ) ನಿರ್ದಿಷ್ಟ ಪ್ರದೇಶಗಳ ಸುತ್ತ ನಿಲ್ಲಿಸಲಾಗುತ್ತದೆ. ಇವರ ಮೇಲ್ವಿಚಾರಣೆಗೆ ಪ್ರತಿ 40 ಮಂದಿಯ ಗುಂಪಿಗೆ ಒಬ್ಬ ರೇಂಜರ್, ಇಬ್ಬರು ಫಾರೆಸ್ಟರುಗಳು, ನಾಲ್ಕು ಜನ ಕಾಪುಗಾರರು, ನಾಲ್ಕು ಜನ ಯಜಮಾನರು ಇರುತ್ತಾರೆ.

ಅಲ್ಲದೆ, ಇವರೆಲ್ಲರ ಮೇಲುಸ್ತುವಾರಿಗೆಂದು ಪ್ರತಿ ಎರಡು ಮೀ.ಗಳಿಗೊಬ್ಬ ಗೆಜೆಟೆಡ್ ಅಧಿಕಾರಿಯಿರುತ್ತಾನೆ. ಇಡೀ ದಿನ ಹಗಲು ರಾತ್ರಿ ಎನ್ನದೆ ಬೆಂಕಿಯನ್ನು ಹೊತ್ತಿಸಿ ಉರಿಸಲಾಗುತ್ತದೆ. ಬೆಂಕಿಯನ್ನು ಕಂಡರೆ ಬಹಳ ಹೆದರುವ ಕಾಡಾನೆಗಳು ಈ ಹದ್ದನ್ನು ಮೀರಿ ಹೋಗುವುದಿಲ್ಲ. ಅಕಾಸ್ಮಾತ್ತಾಗಿ ಆನೆಗಳೇನಾದರೂ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರೆ ಬಿದಿರಿನ ಕಡಕುಗಳನ್ನು ಅಲ್ಲಾಡಿಸುವುದು, ತಮಟೆ ಬಡಿಯುವುದು ಮುಂತಾದವುಗಳಿಂದ ವಿಪರೀತ ಸದ್ದು ಮಾಡಿ ಅವು ಆವರಣದೊಳಗೇ ಇರುವಂತೆ ಮಾಡಲಾಗುತ್ತದೆ. ಕೆಲವು ಬಾರಿ ಆಕಾಶದ ಕಡೆಗೆ ಗುಂಡು ಹಾರಿಸಿ ಆನೆಗಳಿಗೆ ಭಯವನ್ನುಂಟು ಮಾಡುವುದೂ ಉಂಟು. ಹಿಂಡಿನಿಂದ ಒಂದೇ ಆನೆ ತಪ್ಪಿಸಿಕೊಳ್ಳಲು ಬಿಟ್ಟರೂ ಸಾಕು, ಉಳಿದವನ್ನು ಹತೋಟಿಯಲ್ಲಿಡುವುದು ಬಹಳ ಕಷ್ಟವಾಗುತ್ತದೆ.

ಸೆರೆಹಿಡಿದ ಆನೆಗಳನ್ನು ಹಗ್ಗದಿಂದ ಬಂಧಿಸುವುದು

ಹೀಗೆ ಆನೆಗಳನ್ನು ಸುತ್ತುವರಿದು ಹಿಡಿದಿರುವ ಆವರಣ ಸು. 8–10 ಚ.ಕಿಮೀ. ವಿಸ್ತಾರವಾಗಿದ್ದು ಸು. 20 ಕಿಮೀ. ಸುತ್ತಳತೆಯುಳ್ಳದ್ದಾಗಿರುತ್ತದೆ. ಒಂದು ಆವರಣವನ್ನು ಕಾಯಲು ಸು. 900–1000 ಶಿಕಾರಿಗಳು, ಅಧಿಕಾರಿಗಳು ಬೇಕಾಗುತ್ತಾರೆ. ಸುತ್ತುವರಿದ ಜನ ನಿಧಾನವಾಗಿ ಮುಂದುವರಿಯುತ್ತ ಹರಡಿರುವ ಆನೆಗಳನ್ನು ಒಂದೆಡೆ ಸೇರುವಂತೆ ಮಾಡುತ್ತಾರೆ. ಆನೆಗಳನ್ನು ನದಿಗೆ ತರುಬಲು ಗೊತ್ತಾಗಿರುವ ದಿನಕ್ಕೆ ಹಿಂದಿನದಿನ ಅವನ್ನು ಕೇವಲ 2 ಚ.ಕಿಮೀ. ಪ್ರದೇಶದಲ್ಲಿ ಗುಂಪುಗೂಡಿಸುತ್ತಾರೆ. ಯಾವುದೇ ಸಂದರ್ಭದಲ್ಲೂ ಇಷ್ಟು ಚಿಕ್ಕ ಪ್ರದೇಶದಲ್ಲಿ ಆನೆಗಳನ್ನು ಒಂದು ದಿನಕ್ಕಿಂತ ಹೆಚ್ಚು ಸಮಯ ಕೂಡಿಡುವಂತಿಲ್ಲ. ಏಕೆಂದರೆ ಮಿತವಾದ ಪ್ರದೇಶದಲ್ಲಿ ಅವಕ್ಕೆ ಮೇವು ನೀರು ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲವಾದ್ದರಿಂದ ಅವು ಯಾವ ಬೆದರಿಕೆಗೂ ಜಗ್ಗದೆ ಕಾವಲಿನವರನ್ನು ಘಾಸಿಗೊಳಿಸಿ ಅಲ್ಲಿಂದ ತಪ್ಪಿಸಿಕೊಂಡು ಹೋಗಬಹುದು. ನದಿಯ ಮೂಲಕ ಕಾಡಾನೆಗಳನ್ನು ಖೆಡ್ಡ ಆವರಣಕ್ಕೆ ಓಡಿಸುವ ದಿನ ಮುಂಜಾನೆ ಹೆಚ್ಚು ಗದ್ದಲ ಮಾಡದೆ, ಆನೆಗಳನ್ನು ಸು. ½ ಪ್ರದೇಶದೊಳಕ್ಕೆ ಕೂಡಿಡಲಾಗುತ್ತದೆ. ಅನಂತರ ನಿಶ್ಚಿತ ಕಾಲಕ್ಕೆ ಸರಿಯಾಗಿ ಹಲವಾರು ಸಾಕಿದ ಆನೆಗಳ ನೆರವಿನಿಂದ, ಕಾಡಾನೆಗಳನ್ನು ನದಿಗಿಳಿಸಲಾಗುತ್ತದೆ. ಸಾಕಿದ ಆನೆಗಳ ಮೇಲೆ ಬಂದೂ ಹಿಡಿದು ಸನ್ನದ್ಧರಾಗಿ ಕುಳಿತ ಅಧಿಕಾರಿಗಳ ನೇತೃತ್ವದಲ್ಲಿ ಪರಿಣತರಾದ ಶಿಕಾರಿಗಳು ಬಿದಿರಿನ ಕಡಕುಗಳು, ತಮಟೆಗಳನ್ನು ಬಡಿದು ಅಪಾರವಾಗಿ ಸದ್ದು ಮಾಡುತ್ತ, ಬಿದಿರಿನಿಂದ ಮಾಡಿದ ಉರಿಕೊಳ್ಳಿಗಳನ್ನು ಹಿಡಿದು ಬೆದರಿಸುತ್ತ ಹಿಂಡು ನದಿಯ ಕಡೆ ಸಾಗುವಂತೆ ಮಾಡುತ್ತಾರೆ. 15–20 ಗಜಗಳಿಗೆ ಒಂದು ಗುಂಪಿನಂತೆ ಹಲವಾರು ಗುಂಪುಗಳಲ್ಲಿ ಹೀಗೆ ಜನ ಕೂಡಿಕೊಂಡು ಈ ರೀತಿ ಸದ್ದು ಗದ್ದಲವೆಬ್ಬಿಸಿದಾಗ ಆನೆಗಳ ಗುಂಪು ನಿರ್ವಾಹವಿಲ್ಲದೆ ನದಿಯೆಡೆಗೆ ನುಗ್ಗುತ್ತದೆ. ಹೀಗೆ ಬೆದರಿದ ಆನೆಗಳು ಒಂದೆಡೆ ಸೇರುತ್ತಿದ್ದಂತೆ ಅಲ್ಲಿ ಮುಂಚೆಯೇ ಸಂಗ್ರಹಿಸಿಡಲಾದ ಸೌದೆಗೆ ಸೀಮೆಎಣ್ಣೆ ಸುರಿದು ಬೆಂಕಿಯಿಡುತ್ತಾರೆ. ಇದರಿಂದ ಮತ್ತಷ್ಟು ಬೆದರಿದ ಆನೆಗಳು ಸರಸರನೆ ನದಿಯ ಕಡೆಗೆ ಧಾವಿಸುತ್ತವೆ. ಆನೆಯನ್ನು ಬೆದರಿಸಲು ಆಗಿಂದಾಗ್ಗೆ ಹುಸಿಗುಂಡನ್ನು ಹಾರಿಸುವುದೂ ಅಗತ್ಯ ಬಿದ್ದರೆ ನಿಜವಾದ ಗುಂಡನ್ನು ಹಾರಿಸುವುದೂ ಉಂಟು. ತುಂಬ ಪುಂಡೇಳುವ ಆನೆಗಳಿಗೆ ಏಟು ಬೀಳುವ ಸಂಭವವೂ ಉಂಟು. ಇಷ್ಟೆಲ್ಲ ಒತ್ತಾಯಕ್ಕೆ ಸಿಕ್ಕ ಆನೆಗಳು ಗತ್ಯಂತರವಿಲ್ಲದೆ ನೀರಿಗಿಳಿಯುತ್ತವೆ. ಅವು ನೀರಿಗಿಳಿದ ತತ್‌ಕ್ಷಣ ಶಿಕಾರಿಗಳೂ ಬೇಟೆಯ ಅಧಿಕಾರಿಗಳೂ ಸಾಕಿದ ಆನೆಗಳ ಮೇಲೆ ಕುಳಿತು ಅವನ್ನು ಹಿಂಬಾಲಿಸುತ್ತಾರೆ. ಈ ರೀತಿ ಕಾಡಾನೆಗಳನ್ನು ನದಿಯಲ್ಲಿ ಅಟ್ಟಿಕೊಂಡು ಹೋಗುವ ದೃಶ್ಯ ಬಹಳ ರೋಚಕವಾಗಿರುತ್ತದೆ. ನದಿಯ ಆಚೆ ದಡದಲ್ಲಿ ಅಟ್ಟಣೆಗಳ ಮೇಲೆ ಕುಳಿತ ವೀಕ್ಷಕರಿಗೆ ಈಜುವುದು, ಮರಿಗಳು ಕೊಚ್ಚಿ ಹೋಗದಂತೆ ಅವನ್ನು ಸೊಂಡಿಲಿನಿಂದ ಎತ್ತಿ ಹಿಡಿದು ಸಾಗಿಸುವುದು, ಭಯದಿಂದ ಘೀಳಿಡುವುದು, ಸೊಂಡಿಲಿನಿಂದ ನೀರೆರೆಚುವುದು ಮುಂತಾದವು ಬಲು ಆಕರ್ಷಕವಾಗಿರುತ್ತವೆ.

ಹೀಗೆ ಹಂತಹಂತವಾಗಿ ಆನೆಗಳನ್ನು ಅಟ್ಟಿ ಕೊನೆಗೆ ಇರುವ ಒಂದೇ ಪ್ರವೇಶದ್ವಾರದ ಮೂಲಕ ಖೆಡ್ಡ ಆವರಣದೊಳಕ್ಕೆ ಅವನ್ನು ನುಗ್ಗಿಸಿ ಕೂಡಿಡಲಾಗುತ್ತದೆ. ಆನೆಗಳು ನದಿಯಲ್ಲಿ ಸಾಗುವಾಗ ಆಚೀಚೆ ಹೋಗದಂತೆಯೂ ನದಿಯ ದಡವನ್ನು ಹತ್ತಿ ತಪ್ಪಿಸಿಕೊಳ್ಳದಂತೆಯೂ ನದಿಯ ಎರಡು ದಡಗಳುದ್ದಕ್ಕೂ ಜನ ನಿಂತು ಸದ್ದು ಮಾಡುತ್ತಿರುತ್ತಾರೆ. ಖೆಡ್ಡ ಆವರಣದೊಳಕ್ಕೆ ಆನೆಗಳ ಹಿಂಡು ಸಂಪೂರ್ಣವಾಗಿ ನುಗ್ಗಿದೊಡನೆ ಬಾಗಿಲನ್ನು ಮುಚ್ಚಿ ಭದ್ರಪಡಿಸಿಬಿಡುತ್ತಾರೆ. ಕೂಡಲೆ ಕಂದಕದ ಹೊರಭಾಗದ ಬಳಿ 15 ಗಜಕ್ಕೊಬ್ಬನಂತೆ ಆಳುಗಳು ನಿಂತು ಕಾಯತೊಡಗುತ್ತಾರೆ. ಬೆಂಕಿಯನ್ನು ಉರಿಸುವುದು ಮತ್ತು ಬಿದಿರಿನ ಕಡಕುಗಳಿಂದಲೂ ತಮಟೆಗಳಿಂದಲೂ ಗದ್ದಲ ಮಾಡುವುದು ಏಕಪ್ರಕಾರ ನಡೆಯುತ್ತಲೇ ಇರುತ್ತದೆ.

ಆನೆಗಳನ್ನು ಖೆಡ್ಡ ಆವರಣದೊಳಕ್ಕೆ ಸೇರಿಸಿದ ಮೇಲೆ ಅವಕ್ಕೆ ಸಮೃದ್ಧಿಯಾಗಿ ಮೇವನ್ನೂ ನೀರನ್ನೂ ಒದಗಿಸುತ್ತಿದ್ದು ಒಂದೆರಡು ದಿನಗಳ ಅನಂತರ ಇಲ್ಲವೆ ಇನ್ನೂ ಹೆಚ್ಚುಕಾಲದ ಮೇಲೆ ಅವುಗಳಲ್ಲಿ ಕೆಲವನ್ನು ಆವರಣದಿಂದ ಹೊರಕ್ಕೆ ಬಿಟ್ಟುಕೊಂಡು ಅವುಗಳ ಕಾಲು ಮತ್ತು ಕೊರಳುಗಳಿಗೆ ಭಾರಿ ಭಾರಿ ಹಗ್ಗಗಳನ್ನು ಬಿಗಿದು ಅಲ್ಲಿಂದ ಸಾಗಿಸಿಕೊಂಡು ಹೋಗಿ ಮರಗಳಿಗೆ ಕಟ್ಟಿಹಾಕುವ ಕಾರ್ಯ ನಡೆಯುತ್ತದೆ. ಇದಕ್ಕಾಗಿ ಖೆಡ್ಡ ಆವರಣದ ಬಾಗಿಲಿಂದ ಮುಂದೆ, ಹೊರಭಾಗದಲ್ಲಿ ಕಿರಿದಾದ ಆವರಣವೊಂದನ್ನು ನಿರ್ಮಿಸಲಾಗಿರುತ್ತದೆ. ಈ ಆವರಣಕ್ಕೆ ಹಗ್ಗಬಿಗಿಯುವ ಜಾಗ(ರೋಪಿಂಗ್ ಸ್ಟಾಕೇಡ್) ಎಂದು ಹೆಸರು. ಸು. 125′ ಒಳಸುತ್ತಳತೆಯುಳ್ಳ ಜಾಗವಿದು. ಇದರ ಸುತ್ತ ಮೂರು ಮೂರು ವರಸೆಗಳಲ್ಲಿ ಭಾರಿಮರದ ಕಂಬಗಳನ್ನು ಆಳವಾಗಿ ಹೂಳಲಾಗಿರುತ್ತದೆ. ಇದೇ ಗಾತ್ರದ ಮರಗಳನ್ನು 11/2 ಅಡಿ ಅಂತರಕ್ಕೊಂದರಂತೆ ಅಡ್ಡಡ್ಡಲಾಗಿ ಹಗ್ಗಗಳಿಂದ ಬಿಗಿದು ಭದ್ರಗೊಳಿಸಿರುತ್ತಾರೆ. ಇದರ ಒಟ್ಟು ಎತ್ತರ ಸು. 15′ ಇರುತ್ತದೆ. ಇದರ ಮೇಲ್ಭಾಗದಲ್ಲಿ ವೀಕ್ಷಕರು ಕುಳಿತು ಆನೆಗಳಿಗೆ ಹಗ್ಗ ಬಿಗಿಯುವ ಸಾಹಸಕಾರ್ಯವನ್ನು ನೋಡಲು ಅನುಕೂಲವಾಗುವಂತೆ 6′ ಅಗಲದ ಅಟ್ಟಣೆಯೊಂದನ್ನು ನಿರ್ಮಿಸಲಾಗಿರುತ್ತದೆ.

**ಹಗ್ಗಗಳಿಂದ ಬಿಗಿಯುವುದು:** ಒಂದು ಸಲಕ್ಕೆ 4 – 6 ಆನೆಗಳನ್ನು ಬೇರ್ಪಡಿಸಿ, ಹಗ್ಗಬಿಗಿಯುವ ಆವರಣದೊಳಕ್ಕೆ ಸಾಗಿಸಲಾಗುತ್ತದೆ. ಕಬ್ಬಿನ ಜಲ್ಲೆ, ಬೆಲ್ಲ, ಸೊಪ್ಪುಸದೆಗಳ ಆಸೆ ತೋರಿಸಿ ಇವನ್ನು ಹಗ್ಗ ಕಟ್ಟುವ ಸ್ಥಳಕ್ಕೆ ಕರೆದೊಯ್ಯುತ್ತಾರೆ. ಹಗ್ಗಬಿಗಿಯುವ ಆವರಣ ಮುಖದಲ್ಲೂ ದಪ್ಪನಾದ ಬಾಗಿಲು ಇರುತ್ತದೆ. ಆನೆಗಳು ಈ ಆವರಣದೊಳಕ್ಕೆ ಬಂದಕೂಡಲೆ ಬಾಗಿಲನ್ನು ಮುಚ್ಚಿ ಹಗ್ಗದಿಂದ ಬಿಗಿದು ಭದ್ರ ಮಾಡುತ್ತಾರೆ. ಕಾಡಾನೆಗಳ

ಜೊತೆಗೆ 8–10 ಕುಮ್ಕಿ (ಪಳಗಿದ) ಆನೆಗಳನ್ನೂ ಒಳಕ್ಕೆ ಸಾಗಿಸುತ್ತಾರೆ. ಕುಮ್ಕಿ ಆನೆಗಳ ಮೇಲೆ ಪರಿಣತರಾದ ಮಾವುತರು ಕುಳಿತು ಕಾಡಾನೆಗಳನ್ನು ಎಲ್ಲ ದಿಕ್ಕುಗಳಿಂದಲೂ ಒತ್ತಿ

ಕೋಪೋದ್ರಿಕ್ತ ಸಲಗ–ಕಾಪುಗೋಡೆಯೊಳಗೆ

ಅವು ಪುಂಡಾಟ ಮಾಡದಂತೆ ನೋಡಿಕೊಳ್ಳುತ್ತಾರೆ. ಕಾಡಾನೆಗಳಿಗೆ ಹಗ್ಗ ಬಿಗಿಯುವ ಕಲೆಯಲ್ಲಿ ವಿಶೇಷ ಶಿಕ್ಷಣ ಹೊಂದಿರುವ ಅನುಭವಶಾಲಿಗಳಾದ ಇನ್ನೂ ಕೆಲವು ಮಾವುತರು ಹಗ್ಗ ಬಿಗಿಯುವ ಆವರಣದ ಕಂಬಗಳಲ್ಲಿನ ಕಿಂಡಿಗಳಲ್ಲಿ ಮನೆಮಾಡಿಕೊಂಡಿದ್ದು ಪಳಗಿದ ಆನೆಗಳ ಮಧ್ಯೆ ಇರುವ ಕಾಡಾನೆಗಳ ಹಿಂಗಾಲುಗಳಿಗೆ ಹೆಬ್ಬೆರಳು ಗಾತ್ರದ ನೂಲು ಹಗ್ಗಗಳಿಂದ ಹಲವು ವರಸೆಗಳ ತೊಡಕನ್ನು ಬಿಗಿಯುತ್ತಾರೆ. ಈ ಕಾರ್ಯಕ್ಕೆ ಅನುಕೂಲವಾಗಲೆಂದು ಹಗ್ಗಗಳಿಂದ ಸಡಿಲವಾದ ಕುಣಿಕೆಗಳನ್ನು ಮಾಡಿಕೊಂಡು ಮೊದಲೇ ಆವರಣದ ನೆಲದ ಮೇಲೆ ಹಾಕಲಾಗಿರುತ್ತದೆ. ಕುಮ್ಕಿ ಆನೆಗಳ ಸಹಾಯದಿಂದ ಕಾಡಾನೆಗಳನ್ನು ಒತ್ತರಿಸಿ ಅವು ಕುಣಿಕೆಗಳೊಳಕ್ಕೆ ಕಾಲಿಡುವಂತೆ ಮಾಡಲಾಗುತ್ತದೆ. ಜಾಗರೂಕತೆಯಿಂದ ಗಮನಿಸುತ್ತಿರುವ ಮಾವುತರು ಅವು ಕಾಲಿಟ್ಟ ತಕ್ಷಣ ಕುಣಿಕೆಗಳನ್ನು ಎಳೆದು ಬಿಗಿಯುತ್ತಾರೆ. ಅನಂತರ ರಟ್ಟೆ ಗಾತ್ರದ ಹಗ್ಗಗಳನ್ನು ಇದೇ ರೀತಿ ಬಿಗಿಯಲಾಗುತ್ತಿದೆ. ಆನೆಗೆ ಗೊತ್ತಾಗದೆ ಇರುವಷ್ಟು ಕೈಚಳಕದಿಂದ ಚಾತುರ್ಯದಿಂದ ಈ ಕೆಲಸ ನಡೆಯುತ್ತದಾದರೂ ಬಂಧನಕ್ಕೊಳಗಾಗಬೇಕೆಂಬ ಸುಳಿವನ್ನು ತಿಳಿದ ಆನೆಗಳು ಭಯಾನಕವಾಗಿ ಘೀಳಿಡುತ್ತ, ರೋಷದಿಂದ ಆವರಣದ ಕಂಬಗಳಿಗೆ ಡಿಕ್ಕಿ ಹೊಡೆದು ವಿರೋಧವನ್ನು ಪ್ರದರ್ಶಿಸುತ್ತವೆ. ಕಾಲುಗಳನ್ನು ಕಟ್ಟಿ ಹಾಕಿದ ಮೇಲೆ ಕುಮ್ಕಿ ಆನೆಗಳ ಸಹಾಯದಿಂದ ಆನೆಗಳ ಕೊರಳಿಗೆ ಹಗ್ಗವನ್ನು ಬಿಗಿಯಲಾಗುತ್ತದೆ. ಕಾಡಾನೆಗಳಿಗೆ ಹಗ್ಗ ಬಿಗಿಯುವ ಕಾರ್ಯ ಬಲು ಜಾಣ್ಮೆಯ ಕೆಲಸ. ಪಳಗಿದ ಆನೆ ಮತ್ತು ಮಾವುತರ ನಡುವೆ ಹೊಂದಾಣಿಕೆಯಿರಬೇಕು. ಯಾವನೊಬ್ಬನೂ ಅಲಕ್ಷ್ಯದಿಂದ ಇರಬಾರದು. ಇಲ್ಲವಾದರೆ ಮಾರಕ ಪರಿಣಾಮಗಳಾಗಬಹುದು.

ಹೀಗೆ ಎಲ್ಲ ಆನೆಗಳನ್ನೂ ಬಂಧಿಸಿದ ಅನಂತರ, ಅವನ್ನು ಪಳಗಿದ ಆನೆಗಳಿಗೆ ಕಟ್ಟಿ ಎಳೆದುಕೊಂಡು ಹೋಗಿ, ಹೊರಕ್ಕೆ ಸಾಗಿಸಿ ಒಳ್ಳೆಯ ನೆರಳು ಇರುವ ಸ್ಥಳಗಳಲ್ಲಿ ದೊಡ್ಡ ಮರಗಳಿಗೆ ಬೇರೆ ಬೇರೆಯಾಗಿ ಕಟ್ಟಿಹಾಕಲಾಗುತ್ತದೆ. ಇಂಥ ಸ್ಥಳಕ್ಕೆ ಫೀಲ್ ಖಾನ ಎಂದು ಹೆಸರು. ಹೀಗೆ ಆನೆಗಳನ್ನು ಕಟ್ಟಿ ಹಾಕಿದ ಮೇಲೆ ಅವು ಬಂಧನದಿಂದ ಪಾರಾಗಲು ಎಳೆದಾಡುತ್ತವೆ. ಎಳೆದಾಡುವ ರಭಸದಲ್ಲಿ ಹಗ್ಗಗಳು ಒತ್ತಿ ಕಾಲಿನ ಚರ್ಮ ಕಿತ್ತು ಹುಣ್ಣಾಗುವ ಸಂಭವ ಉಂಟು. ಇದಕ್ಕೆ ತಕ್ಕ ಚಿಕಿತ್ಸೆಯನ್ನು ನಡೆಸಿ ಆನೆಗಳಿಗೆ ಊನವಾಗದಂತೆ ನೋಡಿಕೊಳ್ಳಲಾಗುತ್ತದೆ. ಅನಂತರ ಸೆರೆ ಹಿಡಿದ ಆನೆಗಳನ್ನು ಕುಮ್ಕಿ ಆನೆಗಳ ಸಹಾಯದಿಂದ ದಿನವೂ ನದಿ ಇಲ್ಲವೆ ಯಾವುದಾದರೂ ನೀರಿನ ನೆಲೆಗೆ ಕರೆದೊಯ್ದು ಅವು ನೀರಿನಲ್ಲಿ ವಿರಮಿಸುವಂತೆ ಮಾಡಲಾಗುತ್ತದೆ. ಈ ಕಾಲದಲ್ಲಿ ಇವಕ್ಕೆ ಯಥೇಚ್ಛವಾಗಿ ಸೊಪ್ಪನ್ನೂ ಹುಲ್ಲನ್ನೂ ಹಾಕಲಾಗುತ್ತದೆ. ಜೊತೆಗೆ ರಾಗಿ ಮುದ್ದೆ, ಕಬ್ಬಿನ ಜಲ್ಲ ಬೆಲ್ಲ ಮುಂತಾದುವನ್ನು ತಿನ್ನಿಸುತ್ತಾರೆ. ಕಾಡಾನೆಗಳನ್ನು ಬಂಧಿಸುವ ಕಾರ್ಯ ಮುಗಿದ ದಿನದಿಂದಲೇ ಅವನ್ನು ಪಳಗಿಸುವ ಕಾರ್ಯ ಆರಂಭವಾಗುತ್ತದೆ. ನಿಧಾನವಾಗಿಯೂ ಕ್ರಮಕ್ರಮವಾಗಿಯೂ ನಡೆಯುವ ಈ ಕಾರ್ಯದಲ್ಲಿ ಅನುಭವಿಗಳಾದ ಮಾವುತರು ಬುದ್ಧಿವಂತಿಕೆಯಿಂದ, ಚತುರತೆಯಿಂದ ಕಾರ್ಯನಿರ್ವಹಿಸುತ್ತಾರೆ. ಪಳಗಿಸುವಿಕೆಯಲ್ಲಿ ಎರಡು ವಿಧಾನಗಳುಂಟು. ಒಂದು ವಿಧಾನದಲ್ಲಿ ಹಲವಾರು ಅಂಕಣಗಳುಳ್ಳ ಒಂದು ಮರದ ಕಟಕಟೆಯನ್ನು ಕಟ್ಟಲಾಗುತ್ತದೆ. ಒಂದೊಂದು ಅಂಕಣವೂ ಸೆರೆ ಹಿಡಿದ ಆನೆಯ ಗಾತ್ರಕ್ಕಿಂತ ಕೊಂಚ ದೊಡ್ಡದಾಗಿರುತ್ತದೆ. ಇದರಲ್ಲಿ ಆನೆ ಮಂಡಿಯೂರಿ ಕುಳಿತುಕೊಳ್ಳಲು ಮತ್ತು ನಿದ್ದೆ ಮಾಡಲು ಮಾತ್ರ ಸಾಕಾಗುವಷ್ಟು ಅವಕಾಶವಿರುತ್ತದೆ. ಇಂಥ ಅಂಕಣದೊಳಕ್ಕೆ ಒಂದು ಆನೆಯನ್ನು ಹೊಗಿಸಿ ಹಲವಾರು ದಿನಗಳು ಅದು ಅಲ್ಲಿಯೇ ಇರುವಂತೆ ಮಾಡಲಾಗುತ್ತದೆ. ಅದಕ್ಕೆ ಮೇವು ಮತ್ತು ನೀರನ್ನು ಅಲ್ಲಿಯೇ ಒದಗಿಸಲಾಗುತ್ತದೆ. ಪ್ರತಿ ನಿತ್ಯ 3–4 ಜನ ಅಂಕಣದೊಳಕ್ಕೆ ಸೇರಿಸಲ್ಪಟ್ಟ ಆನೆಯ ಮೈಯನ್ನು ತೆಂಗಿನ ಜುಂಗಿನಿಂದ ಉಜ್ಜುತ್ತಾರೆ. ಮಾನವ ಸ್ಪರ್ಶಕ್ಕೆ ಆನೆ ಒಗ್ಗಿಕೊಳ್ಳಲೆಂಬುದೇ ಇದರ ಉದ್ದೇಶ. ಕ್ರಮೇಣ ಅದರ ಬೆನ್ನ ಮೇಲೆ ಕುಳಿತುಕೊಳ್ಳುವ ಅಭ್ಯಾಸವೂ ನಡೆಯುತ್ತದೆ. ಅನಂತರ ಪ್ರತಿದಿನವೂ ಆನೆಯನ್ನು ಒಂದೆರಡು ಪಳಗಿದ ಆನೆಗಳ ಸಹಾಯದಿಂದ (ಆದರೆ ಅವಕ್ಕೆ ಇದನ್ನು ಬಂಧಿಸದೆ) ಹೊರತಂದು ಕೊಂಚ ದೂರ ಕರೆದೊಯ್ಯುತ್ತಾರೆ. ಹೀಗೆ 3–4 ತಿಂಗಳುಗಳು ಮಾಡಿದ ಮೇಲೆ ಅದಕ್ಕೆ ಕೆಲವು ಹಗುರವಾದ ಕೆಲಸಗಳನ್ನು ಕೊಟ್ಟು ಮಾಡಿಸುತ್ತಾರೆ. ಕಾಡಾನೆಯ ಎದುರಿನಲ್ಲಿ ಪಳಗಿದ ಆನೆಗಳಿಂದ ಆ ಕೆಲಸಗಳನ್ನು ಮಾಡಿಸಿ ಅದು ಅವನ್ನು ಅನುಕರಿಸುವಂತೆ ಮಾಡುತ್ತಾರೆ.

ಇನ್ನೊಂದು ವಿಧಾನ ಒರಟಾದುದು ಮತ್ತು ಹೆಚ್ಚು ಸಮಯ ಹಿಡಿಯುವಂಥದು. ಇದರಲ್ಲೂ ಮೇಲೆ ಹೇಳಿದ ರೀತಿಯಲ್ಲೆ ಪಳಗಿಸುವ ಕ್ರಮ ನಡೆಯುವುದಾದರೂ ಆನೆಯನ್ನು ಮರಕ್ಕೆ ಕಟ್ಟಿ ಹಾಕಿರುತ್ತಾರೆ.



ಸೆರೆಹಿಡಿದ ಆನೆಗಳಿಗೆ ಆಹಾರ ನೀಡಿಕೆ

ಪ್ರೌಢ ವಯಸ್ಸಿನ ಆನೆಗಳನ್ನು ಪಳಗಿಸಲು 6 ತಿಂಗಳಿನಿಂದ 1 ವರ್ಷದವರೆಗೆ ಬೇಕಾಗುತ್ತದೆ. 6′ಗಳಿಗೂ ಕಡಿಮೆ ಎತ್ತರದ ಕಿರಿವಯಸ್ಸಿನ ಆನೆಗಳನ್ನು ಪಳಗಿಸಲು 3 ತಿಂಗಳು ಸಾಕು. ಹೆಚ್ಚು ವಯಸ್ಸಾದವು ಪಳಗುವುದು ಬಹಳ ಕಷ್ಟ. ಪಳಗಿಸಲು ಸಾಧ್ಯವೇ ಇಲ್ಲ ಎನ್ನಬಹುದು. ಇಂಥವನ್ನು ಸಾಮಾನ್ಯವಾಗಿ ಕಾಡಿನೊಳಕ್ಕೆ ಬಿಟ್ಟು ಬಿಡುತ್ತಾರೆ.

(ಎನ್.ಎಸ್.ಕೆ.ಎ.)

**ಖೇರೀ :** ಉತ್ತರ ಪ್ರದೇಶದ ಲಖನೌ ವಿಭಾಗದ ಒಂದು ಜಿಲ್ಲೆ; ಒಂದು ಪಟ್ಟಣ. ಉ.ಅ. 27° 41′– 28° 42′ ಮತ್ತು ಪೂ.ರೇ.80° 42′– 81°-43′ ಮಧ್ಯದಲ್ಲಿದೆ. ಜಿಲ್ಲೆಯ ವಿಸ್ತೀರ್ಣ 7860 ಚಕಿಮೀ. ಭಾರತ–ನೇಪಾಳ ಗಡಿಗೆ ಹೊಂದಿಕೊಂಡಂತೆ ಇದೆ. ಇದರ ಉತ್ತರದ ಗಡಿಯಲ್ಲಿ ಹರಿಯುವ ನದಿ ಮೋಹನ್. ಈ ನದಿ ವಾಯವ್ಯ ದಿಕ್ಕಿನಿಂದ ಹರಿದು ಬರುವ ಹಲವಾರು ನದಿಗಳಿಂದ ಕತ್ತರಿಸಲ್ಪಟ್ಟ ಅನೇಕ ಎತ್ತರದ ಪ್ರಸ್ಥಭೂಮಿಗಳಿಂದ ಕೂಡಿದೆ. ಉಲ್ ನದಿ ಜಿಲ್ಲೆಯ ಮಧ್ಯಭಾಗದಲ್ಲಿ ಹರಿಯುತ್ತದೆ. ಇಲ್ಲಿ ಅನೇಕ ದೊಡ್ಡ ಸರೋವರಗಳುಂಟು. ಕೆಲವು ಸರೋವರಗಳು ಉತ್ತರದ ಪ್ರಾಚೀನ ನದಿಗಳಿಂದ ಸಂಭವಿಸಿದಂಥವು. ನದಿ, ಹಳ್ಳಗಳು ಮಳೆಗಾಲದಲ್ಲಿ ಮೇರೆ ಮೀರಿ ಹರಿಯುತ್ತವೆ. ಗೋಗ್ರಾ ಮತ್ತು ಚೌಕ ನದಿಗಳು ತಮ್ಮ ಪಾತ್ರಗಳನ್ನು ಆಗಾಗ್ಗೆ ಬದಲಾಯಿಸುತ್ತಿರುತ್ತವೆ. ಈ ಕಾರಣದಿಂದಾಗಿ ಇಲ್ಲಿ ರಸ್ತೆಗಳ ನಿರ್ಮಾಣ ತುಂಬ ಕಷ್ಟ. ಪೂರ್ವದ ಎಲ್ಲೆಯ ದಟ್ಟವಾದ ಕಾಡುಗಳುಂಟು. ಅಲ್ಲಿ ಸಾಲವೃಕ್ಷಗಳು ಸಾಮಾನ್ಯ. ಪೂರ್ವದ ಎಲ್ಲೆಯ ಕಡೆಗೆ ಸಸ್ಯಗಳು ಹೆಚ್ಚು ಒತ್ತಾಗಿವೆ. ಅಲ್ಲಿ ನಿಂತ ನೀರಿನಿಂದಾಗಿ ವಾಯುಗುಣ ಅನಾರೋಗ್ಯಕರ. ಉತ್ತರದ ಕಾಡಿನ ಬಹುಭಾಗ ಸರ್ಕಾರಕ್ಕೆ ಸೇರಿದ್ದು. ನದಿಗಳು ಮೆಕ್ಕಲುಮಣ್ಣನ್ನು ತಂದು ಬಿಡುವುದರಿಂದ ನದೀ ದಂಡೆಗಳು ತುಂಬ ಫಲವತ್ತಾಗಿವೆ. ಬತ್ತ ಇಲ್ಲಿಯ ಮುಖ್ಯ ಬೆಳೆ. ಲಕ್ಷ್ಮೀಪೂರ, ಮಹಮದೀ ಮತ್ತು ಗೋಳಾ ದೊಡ್ಡ ವ್ಯಾಪಾರಸ್ಥಳಗಳು. ಗೋಳಾದಲ್ಲಿ ಒಂದು ಪ್ರಾಚೀನ ದೇವಾಲಯವುಂಟು. ಸಕ್ಕರೆ ಈ ಜಿಲ್ಲೆಯ ಮುಖ್ಯ ಕೈಗಾರಿಕೆ. ವ್ಯವಸಾಯ ಮತ್ತು ಪಶು ಪೋಷಣೆ ಇಲ್ಲಿಯ ಮುಖ್ಯ ಕಸುಬು. ಇತ್ತೀಚೆಗೆ ಕಾಡನ್ನು ಕಡಿದು ವ್ಯವಸಾಯ ಕ್ಷೇತ್ರಗಳನ್ನು ಹೆಚ್ಚಿಸಿಕೊಂಡಿದ್ದಾರೆ. ನೇಪಾಳದೊಂದಿಗೆ ಈ ಜಿಲ್ಲೆ ವ್ಯಾಪಾರಸಂಪರ್ಕ ಹೊಂದಿದೆ.

ಹಿಂದಿನ ಕಾಲದಲ್ಲಿ ಹಸ್ತಿನಾಪುರ ರಾಜರ ವಶದಲ್ಲಿ ಈ ಪ್ರದೇಶವಿತ್ತೆಂದು ಹೇಳಲಾಗಿವೆ. 10ನೆಯ ಶತಮಾನದ ಅನಂತರ ಇದು ರಜಪೂತರ ಆಡಳಿತಕ್ಕೆ ಒಳಪಟ್ಟಿತು. ಅಕ್ಬರನ ಕಾಲದಲ್ಲಿ ಇದನ್ನು ಖೈರಾಬಾದ್ ಪರಗಣದಲ್ಲಿ ವಿಲೀನಗೊಳಿಸಲಾಯಿತು. 1801ರಲ್ಲಿ ಇದು ರೋಹಿಲಖಂಡದೊಂದಿಗೆ ಬ್ರಿಟಿಷರ ಅಧೀನಕ್ಕೆ ಬಂತು. ಮುಂದೆ ಅಯೋಧ್ಯೆಯ ನವಾಬರ ಆಳ್ವಿಕೆಗೆ ಒಳಪಟ್ಟಿದ್ದು ಕೊನೆಗೆ ಅದರೊಂದಿಗೆ ಬ್ರಿಟಿಷರ ನೇರ ಆಡಳಿತಕ್ಕೆ ಸೇರಿತು. ಪ್ರಾಚೀನ ಕಾಲದ ಅನೇಕ ಅವಶೇಷಗಳೂ ಶಾಸನಗಳೂ ಇಲ್ಲಿವೆ. ನೇಪಾಳದ

ಕಡೆಯ ದಾಳಿಗಳನ್ನು ತಡೆಯುವ ಉದ್ದೇಶದಿಂದ ಕಟ್ಟಲಾದ ಕೋಟೆಗಳ ಸಾಲೇ ಇದೆ. ಖೇರೀ ಜಿಲ್ಲೆಯ ಜನಸಂಖ್ಯೆ 32,00,137 (2001), ಜಿಲ್ಲೆಯ ಜನರ ಪ್ರಮುಖ ಭಾಷೆ ಹಿಂದಿ. ಲಖಿಂಪುರ ಇದರ ಆಡಳಿತ ಕೇಂದ್ರ.

ಖೇರೀ ಪಟ್ಟಣ ಲಖನೌ ನಗರದ ಉತ್ತರಕ್ಕೆ 117 ಕಿಮೀ.ದೂರದಲ್ಲಿ ಈಶಾನ್ಯ ರೈಲ್ವೆ ಮಾರ್ಗದಲ್ಲಿದೆ. ಸಕ್ಕರೆ ಕೈಗಾರಿಕೆಯ ಕೇಂದ್ರ. ಜನಸಂಖ್ಯೆ 25,017 (2001). (ಎಸ್.ಎನ್.ಎಲ್.)

**ಖೈಬರ್ ಕಣಿವೆಮಾರ್ಗ** : ಅಫ್ಘಾನಿಸ್ತಾನಕ್ಕೂ ಪಾಕಿಸ್ತಾನಕ್ಕೂ ನಡುವೆ, ಹಿಮಾಲಯ ಪರ್ವತಶ್ರೇಣಿಯ ಮಧ್ಯ ಇರುವ ಮುಖ್ಯ ಕಣಿವೆ ಮಾರ್ಗ; ಪೇಷಾವರಿಗೆ ಪಶ್ಚಿಮಕ್ಕೆ 117 ಕಿಮೀ ದೂರದಲ್ಲಿದೆ. ಈ ಕಣಿವೆ ಮಾರ್ಗ ಇರುವ ಬೆಟ್ಟಗಳಿಗೂ ಖೈಬರ್ ಎಂದೇ ಹೆಸರು. ಜಗತ್ತಿನ ಬೇರಾವ ಕಣಿವೆಗೂ ಇದಕ್ಕಿರುವ ಪ್ರಾಮುಖ್ಯವಿಲ್ಲ. ರಸ್ತೆ ಮತ್ತು ರೈಲುಮಾರ್ಗಗಳನ್ನು ಕೋದಂತಿರುವ ಈ ಕಣಿವೆ ಮುಂದೆ ಪ್ರಪಾತದಿಂದಲೂ ಹಿಂದೆ 1818–3030 ಮೀ ಎತ್ತರದ ಸುಣ್ಣಗಲ್ಲಿನ ಬಂಡೆಗಳಿಂದಲೂ ಕೂಡಿ ಇಕ್ಕಟ್ಟಾಗಿದೆ.



ಖೈಬರ್ ಕಣಿವೆಯ ಒಂದು ದೃಶ್ಯ

ಕಾಬೂಲಿನ ದಾರಿಯಲ್ಲಿರುವ ಈ ಕಣಿವೆಮಾರ್ಗ ಭಾರತದ ಇತಿಹಾಸದಲ್ಲಿ ಮಹತ್ತರ ಪಾತ್ರ ವಹಿಸಿದೆ. ಬಹು ಪುರಾತನ ಕಾಲದಿಂದ 18ನೆಯ ಶತಮಾನದ ಮಧ್ಯದ ವರೆಗೆ ತರಂಗತರಂಗವಾಗಿ ಆರ್ಯನ್, ಪರ್ಷಿಯನ್, ಗ್ರೀಕ್, ಸಿಥಿಯನ್, ಹೂಣ ಮತ್ತು ಮುಸ್ಲಿಮ್ ಜನ ಭಾರತಕ್ಕೆ ಬಂದದ್ದು ಈ ಮಾರ್ಗವಾಗಿಯೇ. (ಕೆ.ಟಿ.ಆರ್.)

**ಖೊಟ್ಟಿಗ** : 967ರಿಂದ 72ರವರೆಗೆ ಆಳಿದ ಒಬ್ಬ ರಾಷ್ಟ್ರಕೂಟ ಚಕ್ರವರ್ತಿ, 3ನೆಯ ಕೃಷ್ಣನ ತಮ್ಮ. 3ನೆಯ ಕೃಷ್ಣನ ಕಾಲಕ್ಕೆ ರಾಷ್ಟ್ರಕೂಟ ಸಾಮ್ರಾಜ್ಯ ಅತ್ಯಂತ ಬಲಯುತವೂ ವಿಸ್ತಾರವೂ ಆಗಿತ್ತು. ಕೃಷ್ಣ ಮರಣ ಹೊಂದಿದಾಗ ಅವನ ಮೊಮ್ಮಗ 4ನೆಯ ಇಂದ್ರ ಬಹುಶಃ ಇನ್ನೂ ಚಿಕ್ಕವನಾಗಿದ್ದುದರಿಂದ ಸಾಮ್ರಾಜ್ಯದ ಆಡಳಿತವನ್ನು ಖೊಟ್ಟಿಗ ವಹಿಸಿಕೊಂಡ; ಸು.967–68ರ ಮಧ್ಯದಲ್ಲಿ ಪಟ್ಟಾಭಿಷಿಕ್ತನಾದ. ಇವನಿಗೆ ರಟ್ಟಕಂದರ್ಪ ನಿತ್ಯವರ್ಷ ಯಶಕೆನಲ್ಲಾತ ಮತ್ತು ಚಲದಂಕಕಾರ ಎಂಬ ಬಿರುದುಗಳಿದ್ದುವು. ಇವನ ಕಾಲದಲ್ಲಿ ರಾಷ್ಟ್ರಕೂಟರ ಶಕ್ತಿ ಕ್ಷೀಣವಾಯಿತು. ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ಉತ್ತರದಲ್ಲಿ ಪರಮಾರರ ಸಿಯ್ಯಕ ಹರ್ಷನಿಂದ ಮೊದಲ ಪೆಟ್ಟು ಬಿತ್ತು. ಖೊಟ್ಟಿಗನ ರಾಜಧಾನಿ ಮಾನ್ಯಖೇಟ ನಾಶವಾಯಿತು. ಈ ವಿಷಯವನ್ನು ಧನಪಾಲನ ಪಾಯಿಲಚ್ಛೀ ಗ್ರಂಥದಲ್ಲಿ ತಿಳಿಸಲಾಗಿದೆ: ಧನಪಾಲ ಈ ಗ್ರಂಥವನ್ನು ವಿಕ್ರಮ ಸಂವತ್ಸರ 1029ರಲ್ಲಿ (972–73) ಮುಗಿಸಿದನೆಂದು ತಿಳಿಸಿರುವುದರಿಂದ, ಸು. 971–72ರ ಮಧ್ಯದಲ್ಲಿ ಮಾನ್ಯಖೇಟ ನಾಶವಾಗಿರಬೇಕೆಂದು ಊಹಿಸಲಾಗಿದೆ. ಈ ಯುದ್ಧದಲ್ಲಿ ಖೊಟ್ಟಿಗ ಮರಣ ಹೊಂದಿರಬಹುದು. ಏಕೆಂದರೆ ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಇವನ ಇನ್ನೊಬ್ಬ ತಮ್ಮನಾದ ನಿರುಪಮನ ಪುತ್ರ ಕರ್ಕ ರಾಜನಾದ.

ಖೊಟ್ಟಿಗನ ಮಾಂಡಲಿಕರಾಗಿ ಬಹು ಪ್ರಸಿದ್ಧಿಯನ್ನು ಪಡೆದವರೆಂದರೆ, ಬನವಾಸಿಯನ್ನು ಆಳುತ್ತಿದ್ದ ಶಂಕರಗಂಡ ಮತ್ತು ಗಂಗವಾಡಿಯನ್ನು ಆಳುತ್ತಿದ್ದ ಮಾರಸಿಂಹ. ಇವನ ಕಾಲದಲ್ಲಿ ಅವನತಿಯ ದಾರಿ ಹಿಡಿದ ರಾಷ್ಟ್ರಕೂಟರ ಸಾಮ್ರಾಜ್ಯ ಅವನ ಮರಣಾನಂತರ ಒಂದು ವರ್ಷದಲ್ಲೇ ಸಂಪೂರ್ಣ ನಾಶವಾಯಿತು. (ಎಸ್.ಎಸ್.ಜೆ.ವಿ.)

**ಖೊರಾನಾ, ಹರ್ ಗೋವಿಂದ್** : 1922–2011. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನೆಲಸಿದ್ದ ಭಾರತೀಯ ಅಣುಜೀವವಿಜ್ಞಾನಿ (ಮಾಲಿಕ್ಯುಲರ್ ಬಯಾಲಜಿಸ್ಟ್). ಆನುವಂಶಿಕ ಸಂಕೇತ ಭಾಷೆಯನ್ನು (ಜೆನೆಟಿಕ್ ಕೋಡ್) ಬಿಡಿಸುವುದರಲ್ಲಿ ಅವರು ವಹಿಸಿದ ಪ್ರಮುಖ ಪಾತ್ರಕ್ಕಾಗಿ 1968ರಲ್ಲಿ ಅವರಿಗೂ ಅಮೆರಿಕದ ನಿರೆನ್ ಬರ್ಗ್ ಮತ್ತು ಹಾಲಿ ಅವರಿಗೂ ವೈದ್ಯ ವಿಜ್ಞಾನ ಮತ್ತು ಶರೀರ ವಿಜ್ಞಾನದ ನೊಬೆಲ್ ಬಹುಮಾನವನ್ನು ಕೊಡಲಾಯಿತು.

ಖೊರಾನಾ ಅವರು 1922 ಜನವರಿ 8ರಂದು ಪಂಜಾಬ್ ರಾಜ್ಯದ ರಾಯಪುರ ದಲ್ಲಿ ಜನಿಸಿದರು. ಅವರ ವಿದ್ಯಾಭ್ಯಾಸ ನಡೆದದ್ದು ಪಂಜಾಬ್ ವಿಶ್ವವಿದ್ಯಾಲಯದಲ್ಲಿ. 1945ರಲ್ಲಿ ಆ ವಿಶ್ವವಿದ್ಯಾಲಯದಿಂದ ಎಂ.ಎಸ್‌ಸಿ. ಡಿಗ್ರಿಯನ್ನು ಪಡೆದ ತರುವಾಯ

ಅವರು ಆರ್ದೇಶಿರ್ ದಲಾಲ್ ವಿದ್ಯಾರ್ಥಿವೇತನವನ್ನು ಪಡೆದು ಉಚ್ಚ ಶಿಕ್ಷಣಕ್ಕಾಗಿ ಬ್ರಿಟನ್ನಿಗೆ ತೆರಳಿದರು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಅವರು ಎ. ರಾಬರ್ಟ್‌ಸನ್‌ರವರ ನೇತೃತ್ವದಲ್ಲಿ ಸಂಶೋಧನೆ ನಡೆಸಿ 1948ರಲ್ಲಿ ಡಾಕ್ಟೊರಲ್ ಡಿಗ್ರಿಯನ್ನು ಪಡೆದರು. ಅನಂತರ ಅವರು 1948–49ರಲ್ಲಿ ಜೂರಿಕ್‌ನಲ್ಲಿರುವ ಸ್ವಿಸ್ ಫೆಡರಲ್ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರೆಲಾಗ್‌ರವರೊಡನೆಯೂ 1950–52ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿನ ಫೀಲ್ಡ್ ಫೆಲೊ ಆಗಿ ಅಲೆಕ್ಸಾಂಡರ್ ಟಾಡ್ ಅವರೊಡನೆಯೂ ಸಂಶೋಧನೆ ನಡೆಸಿದರು. ಆ ಬಳಿಕ 1952–60ರಲ್ಲಿ ಕೆನಡದ ವ್ಯಾಂಕೂವರ್‌ನಲ್ಲಿರುವ ಬ್ರಿಟಿಷ್ ಕೊಲಂಬಿಯ ಸಂಶೋಧನ ಸಮಿತಿಯಲ್ಲಿ ಕಾರ್ಬನಿಕ ರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಹಾಗೂ ಬ್ರಿಟಿಷ್ ಕೊಲಂಬಿಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಸಂಶೋಧನ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. 1960ರಲ್ಲಿ ಅವರು ಅಲ್ಲಿಂದ ಅಮೆರಿಕಕ್ಕೆ ತೆರಳಿ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿಯ ಎನ್‌ಜೈಮ್ ಸಂಶೋಧನಾಲಯದ ಸಹನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು. 1970ರ ತನಕ ಅದೇ ಸಂಸ್ಥೆಯ ಜೀವವಿಜ್ಞಾನ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರೂ (ವಿಸಿಟಿಂಗ್ ಪ್ರೊಫೆಸರ್) ಆಗಿದ್ದರು. 1971ರಲ್ಲಿ ವಿಸ್ಕಾನ್ಸಿನ್ ಬಿಟ್ಟು ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯನ್ನು ಸೇರಿದರು.

ಖೊರಾನಾ ಅವರ ಸಂಶೋಧನಕ್ಷೇತ್ರ ಸಂಶ್ಲೇಷಕ ಕಾರ್ಬನಿಕ ರಸಾಯನ ವಿಜ್ಞಾನ(ಸಿಂಥೆಟಿಕ್ ಆರ್ಗ್ಯಾನಿಕ್ ಕೆಮಿಸ್ಟ್ರಿ) ಎಂದು ಹೇಳಬಹುದು. ಅಂದರೆ ಅವರು ಕಾರ್ಬನಿಕ ಸಂಯುಕ್ತಗಳನ್ನು ಕೃತಕವಾಗಿ ತಯಾರಿಸುವುದು. ಆದರೆ ಅವರು ಸಂಶ್ಲೇಷಣೆಗಾಗಿ ಆರಿಸಿಕೊಂಡ ಸಂಯುಕ್ತಗಳು ಜೀವರಾಸಾಯನಿಕ ಮಹತ್ತ್ವವುಳ್ಳವು; ಮುಖ್ಯವಾಗಿ ಕೊಎನ್‌ಜೈಮುಗಳು (**ನೋಡಿ–ಕೊಎನ್‌ಜೈಮು**), ಡೈ–,ಟ್ರೈ–,ಟೆಟ್ರ– ಮತ್ತು ಪಾಲಿನ್ಯೂಕ್ಲಿಯೊಟೈಡುಗಳು. ಆದ್ದರಿಂದ ಅವರ ಕಾರ್ಯಕ್ಷೇತ್ರದ ವ್ಯಾಪ್ತಿ ಅಣುಜೀವವಿಜ್ಞಾನದವರೆಗೂ ವಿಸ್ತರಿಸಿತು. ಅನೇಕ ಕೊಎನ್‌ಜೈಮುಗಳನ್ನು ಸಂಶ್ಲೇಷಿಸುವುದರಲ್ಲಿ ಪರಿಗಣಿಸಿರುವರಾದರೂ ಪಾಲಿನ್ಯೂಕ್ಲಿಯೊಟೈಡುಗಳ ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ಅವರ ಇನ್ನಿತರ ಸಾಧನೆಗಳನ್ನು ಬಹುಮಟ್ಟಿಗೆ ಮರೆಯುವಂತೆ ಮಾಡಿದೆ.

ಆನುವಂಶಿಕ ಲಕ್ಷಣಗಳನ್ನು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜೀನುಗಳು, ರಾಸಾಯನಿಕ ದೃಷ್ಟಿಯಲ್ಲಿ, ಡಿ–ಆಕ್ಸಿರೈಬೊನ್ಯೂಕ್ಲೆಯಿಕ್ ಆಮ್ಲ (ಡಿಎನ್‌ಎ) ಎಂಬುದು ಈಗ ಚೆನ್ನಾಗಿ ತಿಳಿದಿರುವ ವಿಷಯ. ಡಿಎನ್‌ಎಗೆ ಹೋಲಿಸಿದರೆ ಬಹು ಸರಳವೆನ್ನಬಹುದಾದ ನ್ಯೂಕ್ಲಿಯೊಟೈಡ್ ಅಣುಗಳು ಒಂದರೊಡನೊಂದು ಸಾಲಾಗಿ ಕೂಡಿಕೊಳ್ಳುವುದರಿಂದ ಉಂಟಾಗುವ ದೈತ್ಯಾಣುವೇ ಡಿಎನ್‌ಎ. ಅಂಥ ಅಣುವಿನಲ್ಲಿ ಅನೇಕ ನ್ಯೂಕ್ಲಿಯೊಟೈಡುಗಳಿರುವುದರಿಂದ ಅದನ್ನು ಪಾಲಿನ್ಯೂಕ್ಲಿಯೊಟೈಡ್ ಎನ್ನುತ್ತಾರೆ. ಅಡೆನಿಲಿಕ್ ಆಮ್ಲ (A), ಥೈಮಿಡಿಲಿಕ್ ಆಮ್ಲ (T), ಗ್ವಾನಿಲಿಕ್ ಆಮ್ಲ (G) ಮತ್ತು ಸೈಟಿಡಿಲಿಕ್ ಆಮ್ಲ (C) ಎಂಬ ನಾಲ್ಕು ಬಗೆಯ ನ್ಯೂಕ್ಲಿಯೊಟೈಡುಗಳು ಡಿಎನ್‌ಎ ಉದ್ದಕ್ಕೂ ಪುನಾರಾವರ್ತಿಸುವ ಅನುಕ್ರಮವೇ ಯಾವುದೇ ನಿರ್ದಿಷ್ಟ ಜೀನಿನ ವೈಶಿಷ್ಟ್ಯ. ಡಿಎನ್‌ಎ ಅಣು ನಿಜಕ್ಕೂ ಅಂಥ ಎರಡು ಎಳೆಗಳ ಜೋಡಣೆ. ಒಂದು ಎಳೆಯ ಉದ್ದಕ್ಕೂ ನಿರ್ದಿಷ್ಟ ಅನುಕ್ರಮದಲ್ಲಿ ಬರುವ A,T,G ಮತ್ತು C ಗಳಿಗೆ ಎದುರಾಗಿ ಇನ್ನೊಂದು ಎಳೆಯ ಮೇಲೆ ಅನುಕ್ರಮವಾಗಿ T, A, C

ಮತ್ತು G ಗಳು ಬರುವುದರಿಂದ ಎರಡು ಎಳೆಗಳೂ ಪರಸ್ಪರ ಪೂರಕವಾದವು. ಕೋಶವೊಂದು ವಿದಳನವಾಗುವಾಗ ಡಿಎನ್‌ಎ ಅಣುವಿನ ಎರಡು ಎಳೆಗಳು ಪ್ರತ್ಯೇಕಗೊಂಡು ಒಂದೊಂದು ಎಳೆಯೂ ತನಗೆ ಪೂರಕವಾದ ಇನ್ನೊಂದು ಎಳೆಯನ್ನು ತಯಾರಿಸಿಕೊಳ್ಳುವುದರಿಂದ ಮೂಲ ಡಿಎನ್‌ಎ ಅಣುವಿಗೆ ಸರ್ವಥಾ ಸಮವಾದ ಎರಡು ಅಣುಗಳು ಉಂಟಾಗುವುವು.

ಕೋಶದಲ್ಲಿ ನಡೆಯುವ ಪ್ರೋಟೀನ್ ಸಂಶ್ಲೇಷಣೆ ಡಿಎನ್‌ಎಯ ನಿರ್ದೇಶನದಲ್ಲಿ ನಡೆಯುವುದು. ಡಿಎನ್‌ಎ ಅಣುವಿನಲ್ಲಿನ A,T, G, C ನ್ಯೂಕ್ಲಿಯೊಟೈಡುಗಳ ಅನುಕ್ರಮ ಹೇಗೆ ಆ ನಿರ್ದಿಷ್ಟ ಡಿಎನ್‌ಎ ಅಣುವಿನ ವೈಶಿಷ್ಟ್ಯವೋ ಹಾಗೆ ನಿರ್ದಿಷ್ಟ ಪ್ರೋಟೀನಿನ ವೈಶಿಷ್ಟ್ಯವೆಂದರೆ ಅದರ ಅಣುವಿನಲ್ಲಿ ಕಂಡುಬರುವ ಇಪ್ಪತ್ತು ಬಗೆ ಬಗೆಯ ಅಮೈನೊ ಆಮ್ಲಗಳ ಅನುಕ್ರಮ. ಅನೇಕ ನ್ಯೂಕ್ಲಿಯೊಟೈಡುಗಳಿಂದಾದ ಅಣುವನ್ನು ಪಾಲಿನ್ಯೂಕ್ಲಿಯೊಟೈಡ್ ಎನ್ನುವಂತೆ ಅಮೈನೊ ಆಮ್ಲಗಳು ಒಂದರೊಡನೊಂದು ಕೂಡಿಕೊಂಡುದರಿಂದ ಉಂಟಾದ ಪ್ರೋಟೀನಿನಂಥ ಅಣುವನ್ನು ಪಾಲಿಪೆಪ್ಟೈಡ್ ಎಂದು ಕರೆಯುತ್ತಾರೆ. ಡಿಎನ್‌ಎ ಅಣುವಿನಲ್ಲಿ ನ್ಯೂಕ್ಲಿಯೊಟೈಡುಗಳ ಅನುಕ್ರಮ ಆ ಡಿಎನ್‌ಎ ಅಣುವಿನ ನಿರ್ದೇಶನದಲ್ಲಿ ತಯಾರಾಗಲಿರುವ ಪಾಲಿಪೆಪ್ಟೈಡ್ ಅಣುವಿನಲ್ಲಿನ ಅಮೈನೊ ಆಮ್ಲಗಳ ಅನುಕ್ರಮಕ್ಕೆ ಒಂದು ಸಂಕೇತವಿದ್ದಂತೆ. ಆದ್ದರಿಂದಲೇ ಯಾವುದೇ ಜೀನು ತನ್ನ ಅಣುವಿನಲ್ಲಿ, ನ್ಯೂಕ್ಲಿಯೊಟೈಡ್ ಅನುಕ್ರಮದ ರೂಪದಲ್ಲಿ, ಸಂಕೇತ ಭಾಷೆಯಲ್ಲಿರುವ ಮಾಹಿತಿಯನ್ನು ಬಳಸಿಕೊಂಡು ಒಂದು ನಿರ್ದಿಷ್ಟ ಪ್ರೋಟೀನಿನ ಸಂಶ್ಲೇಷಣೆಗೆ ಕಾರಣವಾಗಿ, ಆ ಪ್ರೋಟೀನ್ ಎನ್‌ಜೈಮಿನ ಸಹಾಯದಿಂದ ದೇಹದಲ್ಲಿ ನಡೆಯುವ ಜೀವರಾಸಾಯನಿಕ ಕ್ರಿಯೆಗಳನ್ನು ಹತೋಟಿಯಲ್ಲಿಟ್ಟುಕೊಂಡು, ತನಗೆ ನಿರ್ದಿಷ್ಟವಾದ ಲಕ್ಷಣಗಳನ್ನು ಜೀವಿಯಲ್ಲಿ ಉಂಟುಮಾಡಬಲ್ಲದು. ಡಿಎನ್‌ಎ ಅಣುವಿನಲ್ಲಿಯೆ ನ್ಯೂಕ್ಲಿಯೊಟೈಡುಗಳ ಅನುಕ್ರಮಕ್ಕೂ ಅದರ ನಿರ್ದೇಶನದಲ್ಲಿ ಸಂಶ್ಲೇಷಣೆಯಾಗುವ ಪ್ರೋಟೀನಿನಲ್ಲಿಯ ಅಮೈನೊ ಆಮ್ಲಗಳ ಅನುಕ್ರಮಕ್ಕೂ ಇರುವ ಪರಸ್ಪರ ಸಂಬಂಧವನ್ನೇ ಆನುವಂಶಿಕ ಸಂಕೇತ ಭಾಷೆ (ಜೆನೆಟಿಕ್ ಕೋಡ್) ಎಂದು ಕರೆಯುವುದು. ಈ ಭಾಷೆಯ ಗುಟ್ಟನ್ನು ಬಯಲು ಮಾಡುವುದರಲ್ಲಿಯೇ ಖೊರಾನಾ ಅವರು ಪ್ರಮುಖ ಪಾತ್ರ ವಹಿಸಿದ್ದು.

ಪ್ರೋಟೀನ್ ಸಂಶ್ಲೇಷಣೆಯನ್ನು ನಿರ್ದೇಶಿಸುವುದಕ್ಕೆ ಡಿಎನ್‌ಎ ರೈಬೊನ್ಯೂಕ್ಲಿಯಿಕ್ ಆಮ್ಲವೆಂಬ (ಆರ್‌ಎನ್‌ಎ) ಇನ್ನೊಂದು ಬಗೆಯ ನ್ಯೂಕ್ಲಿಯಿಕ್ ಆಮ್ಲವನ್ನು ಮಧ್ಯವರ್ತಿಯಾಗಿ ಉಪಯೋಗಿಸಿಕೊಳ್ಳುವುದು. ಡಿಎನ್‌ಎ ಮತ್ತು ಆರ್‌ಎನ್‌ಎಗಳಿಗೆ ಮುಖ್ಯವಾಗಿ ಎರಡು ವ್ಯತ್ಯಾಸಗಳಿವೆ. ಮೊದಲನೆಯದಾಗಿ, ಎರಡೂ ನ್ಯೂಕ್ಲಿಯೊಟೈಡುಗಳೆಂಬ ಸರಳತರ ಅಣುಗಳಿಂದ ರಚಿತವಾಗಿವೆಯಾದರೂ ಡಿಎನ್‌ಎಯ ನ್ಯೂಕ್ಲಿಯೊಟೈಡುಗಳಲ್ಲಿ ಡಿ ಆಕ್ಸಿರೈಬೋಸ್ ಎಂಬ ಒಂದು ಬಗೆಯ ಸಕ್ಕರೆ ಇರುವುದು. ಆರ್‌ಎನ್‌ಎಯ ನ್ಯೂಕ್ಲಿಯೊಟೈಡುಗಳಲ್ಲಿ ರೈಬೋಸ್ ಎಂಬ ಸಕ್ಕರೆಯಿರುವುದು. ಈ ವ್ಯತ್ಯಾಸದಿಂದಲೇ ಇವೆರಡರ ಹೆಸರುಗಳು ಬಂದಿವೆ ಎಂಬುದನ್ನು ಗಮನಿಸಬಹುದು. ಅದನ್ನು ಬಿಟ್ಟರೆ ಸದ್ಯದಲ್ಲಿ ಈ ವ್ಯತ್ಯಾಸದ ಬಗ್ಗೆ ಹೆಚ್ಚೇನೂ ಹೇಳುವ ಆವಶ್ಯಕತೆ ಇಲ್ಲ. ಎರಡನೆಯ ವ್ಯತ್ಯಾಸವೆಂದರೆ ಆರ್‌ಎನ್‌ಎಯಲ್ಲಿ ಥೈಮಿಡಿಲಿಕ್ ಆಮ್ಲ (T) ಇಲ್ಲ. ಅದಕ್ಕೆ ಬದಲು ಯುರಿಡಿಲಿಕ್ ಆಮ್ಲ (U) ಎಂಬ ಇನ್ನೊಂದು ಬಗೆಯ ನ್ಯೂಕ್ಲಿಯೊಟೈಡ್ ಇದೆ. ಅಂದರೆ, ಆರ್‌ಎನ್‌ಎ A, U, G ಮತ್ತು C ಗಳೆಂಬ ನಾಲ್ಕು ಬಗೆಯ ನ್ಯೂಕ್ಲಿಯೊಟೈಡುಗಳಿಂದ ಆದದ್ದು. ಡಿಎನ್‌ಎ ತನ್ನ ನಕಲನ್ನು ತಯಾರಿಸಿಕೊಳ್ಳುವಾಗ ಅದರಲ್ಲಿ ಜೊತೆಗೂಡಿರುವ ಎರಡು ಎಳೆಗಳು ಪ್ರತ್ಯೇಕಗೊಂಡು ಒಂದೊಂದು ಎಳೆಯೂ ತನಗೆ ಪೂರಕವಾದ ಒಂದು ಡಿಎನ್‌ಎ ಎಳೆಯನ್ನು ನಿರ್ಮಿಸಿಕೊಳ್ಳುವುದಷ್ಟೆ. ಪ್ರೋಟೀನ್ ಸಂಶ್ಲೇಷಣೆ ಆಗಬೇಕಾಗಿರುವಾಗ ಜೊತೆಗೂಡಿರುವ ಎಳೆಗಳು ಪ್ರತ್ಯೇಕಗೊಂಡ ತರುವಾಯ ಸಂಬಂಧಪಟ್ಟ ಎಳೆ ತನಗೆ ಪೂರಕವಾದ ಆರ್‌ಎನ್‌ಎ ಎಳೆಯನ್ನು ನಿರ್ಮಿಸುವುದು. ಅಂದರೆ ತನ್ನ ಮೇಲಿನ A, T, G, C ಗಳಿಗೆ ಎದುರಾಗಿ U, A, C, G ಗಳು ಅನುಕ್ರಮವಾಗಿ ಬರುವಂಥ ಒಂದು ಆರ್‌ಎನ್‌ಎ ಎಳೆಯನ್ನು ನಿರ್ಮಿಸಿ ಅದನ್ನು ಕೋಶದ್ರವದೊಳಕ್ಕೆ ಬಿಡುವುದು. ಈ ಒಂಟಿ ಎಳೆ ಆರ್‌ಎನ್‌ಎಯೇ ಮೇಲೆ ಹೇಳಿದ ಮಧ್ಯವರ್ತಿ. ಅದಕ್ಕೆ ದೂತ ಆರ್‌ಎನ್‌ಎ (ಮೆಸೆಂಜರ್ ಆರ್‌ಎನ್‌ಎ) ಎಂದು ಹೆಸರು. ಏಕೆಂದರೆ ಈ ಆರ್‌ಎನ್‌ಎ ಮಾಡುವ ಕೆಲಸವೇನೆಂದರೆ ತಯಾರಾಗಬೇಕಾಗಿರುವ ಪ್ರೋಟೀನ್ ಅಣುವಿನಲ್ಲಿನ ಅಮೈನೊ ಆಮ್ಲಗಳ ಅನುಕ್ರಮವನ್ನು ಕುರಿತ ಮಾಹಿತಿ ಜೀನಿನಲ್ಲಿ ಡಿಎನ್‌ಎ ಭಾಷೆಯಲ್ಲಿ (A, T, G, C ಗಳಲ್ಲಿ) ಇದ್ದುದನ್ನು ಆರ್‌ಎನ್‌ಎ ಭಾಷೆಯಲ್ಲಿ (A, U, G, C ಗಳಲ್ಲಿ) ಸಂಗ್ರಹಿಸಿಕೊಂಡು ಪ್ರೋಟೀನ್ ತಯಾರಿಕೆಯ ಸ್ಥಳವಾದ ರೈಬೊಸೋಮ್ ಎಂಬ ಕಣಗಳಿಗೆ ಕೊಂಡೊಯ್ಯುವುದು.

ಮಾಹಿತಿಯನ್ನು ಹೊತ್ತು ತಂದ ದೂತ ಆರ್‌ಎನ್‌ಎ ರೈಬೊಸೋಮ್ ಮೇಲೆ ಹರಡಿಕೊಳ್ಳುವುದು. ಅದರ ಮೇಲೆ ಅಮೈನೊ ಆಮ್ಲ ಅನುಕ್ರಮವನ್ನು ಕುರಿತ ಮಾಹಿತಿ A, U, G, C ಗಳ ಅನುಕ್ರಮದ ರೂಪದಲ್ಲಿದೆ. ಈ ಅನುಕ್ರಮದಲ್ಲಿ ಯಾವುದೇ ಒಂದು ನ್ಯೂಕ್ಲಿಯೊಟೈಡ್ ತ್ರಿವಳಿಯನ್ನು ತೆಗೆದುಕೊಂಡರೆ (AUG, AGG, GUC ಇತ್ಯಾದಿ) ಅದು ಇಪ್ಪತ್ತರ ಪೈಕಿ ಒಂದು ಅಮೈನೊ ಆಮ್ಲಕ್ಕೆ ಸಂಕೇತವಾಗಿರುವುದು. ಅಂಥ ತ್ರಿವಳಿಗಳಿಗೆ ಕೋಡಾನುಗಳೆಂದು ಹೆಸರು (**ನೋಡಿ–ಕೋಡಾನುಗಳು**). ಈ ಕೋಡಾನುಗಳನ್ನು ಗುರುತಿಸಿ, ಪ್ರತಿಯೊಂದು ತ್ರಿವಳಿಗೂ ಜವಾಬಾದ ನಿರ್ದಿಷ್ಟ ಅಮೈನೋ ಆಮ್ಲವನ್ನು ಕೋಶದ್ರವದಿಂದ ಹೊತ್ತು ತಂದು ಒದಗಿಸುವ ಕೆಲಸವನ್ನು ಸಾಗಣೆ ಆರ್‌ಎನ್‌ಎ (ಟ್ರಾನ್ಸ್‌ಫರ್ ಆರ್‌ಎನ್‌ಎ) ಎಂಬ ಮತ್ತೊಂದು ಬಗೆಯ ಅಮೈನೋ ಆಮ್ಲ ನಿರ್ವಹಿಸುವುದು. ಇಪ್ಪತ್ತು ಬೇರೆ ಬೇರೆ ಅಮೈನೊ ಆಮ್ಲಗಳಿಗೂ ಇಪ್ಪತ್ತು ಬೇರೆ ಬೇರೆ ಸಾಗಣೆ ಅಮೈನೊ ಆಮ್ಲಗಳಿವೆ. ರೈಬೊಸೋಮ್ ಮೇಲೆ ಪವಡಿಸಿರುವ ದೂತ ಆರ್‌ಎನ್‌ಎ ಯಲ್ಲಿ ಸಂಕೇತ ಭಾಷೆಯಲ್ಲಿರುವ ಮಾಹಿತಿಗೆ ಅನುಸಾರವಾಗಿ ಯುಕ್ತ ಅಮೈನೊ ಆಮ್ಲಗಳನ್ನು ಯುಕ್ತ ಅನುಕ್ರಮದಲ್ಲಿ ಸಾಗಣೆ ಅಮೈನೊ ಆಮ್ಲಗಳು ತಂದೊದಗಿಸಿದಾಗ ಆ ಅಮೈನೊ ಆಮ್ಲಗಳು ಅದೇ ಅನುಕ್ರಮದಲ್ಲಿ ಕೂಡಿಕೊಂಡು ನಿರ್ದಿಷ್ಟ ಪ್ರೋಟೀನು ಉತ್ಪತ್ತಿಯಾಗುವುದು.

ಆನುವಂಶಿಕ ಸಂಕೇತ ಭಾಷೆಯಲ್ಲಿ ಯಾವ ಕೋಡಾನು, ಅಂದರೆ ಯಾವ ನ್ಯೂಕ್ಲಿಯೊಟೈಡು ತ್ರಿವಳಿ, ಯಾವ ಅಮೈನೊ ಆಮ್ಲಕ್ಕೆ ಸಂಕೇತ ಎಂಬುದು ಬಹಳ ಕಾಲ ಒಂದು ರಹಸ್ಯವಾಗಿ ಉಳಿದಿತ್ತು. ಈ ರಹಸ್ಯವನ್ನು ಒಡೆಯುವುದರಲ್ಲಿ ಮೊತ್ತಮೊದಲ ದಿಟ್ಟ ಹೆಜ್ಜೆಯನ್ನಿಟ್ಟವರು ನಿರೆನ್‌ಬರ್ಗ್ ಮತ್ತು ಅವರ ಸಂಗಡಿಗರು. 1961ರಲ್ಲಿ ಅವರು ಬರೀ ಯುರಿಡಿಲಿಕ್ ಆಮ್ಲವೇ (U) ಇರುವ ಒಂದು ಪಾಲಿನ್ಯೂಕ್ಲಿಯೊಟೈಡನ್ನು ತೆಗೆದುಕೊಂಡು (ಅದನ್ನು ಅವರು ಪಾಲಿ -U ಎಂದು ಕರೆದರು) ಪ್ರೋಟೀನ್ ಸಂಶ್ಲೇಷಣೆಗೆ ಅಗತ್ಯವಾದ ಎಲ್ಲ ಸಾಮಗ್ರಿಗಳೂ (ಅಮೈನೋ ಆಮ್ಲಗಳು, ರೈಬೊಸೋಮ್‌ಗಳು. ಸಾಗಣೆ ಆರ್‌ಎನ್‌ಎಗಳು ಇತ್ಯಾದಿ) ಇರುವ ಒಂದು ಮಾಧ್ಯಮಕ್ಕೆ ಅದನ್ನು ಸೇರಿಸಿದಾಗ ಅದರಲ್ಲಿ ಬರೀ ಫೀನೈಲ್ ಅಲೆನೀನ್ ಎಂಬ ಅಮೈನೊ ಆಮ್ಲದಿಂದಲೇ ಆದ ಒಂದು ಪಾಲಿಪೆಪ್ಟೈಡ್ ಉತ್ಪತ್ತಿಯಾದುದನ್ನು ಕಂಡರು. ಫೀನೈಲ್ ಅಲ್‌ನೀನನ್ನು Phe ಎಂದು ಸೂಚಿಸಬಹುದಾದರೆ U-U-U-U-U ಎಂಬ ಪಾಲಿನ್ಯೂಕ್ಲಿಯೊಟೈಡು –Phe–Phe–Phe–Phe–ಎಂಬ ಪಾಲಿಪೆಪ್ಟೈಡನ್ನು ಉತ್ಪತ್ತಿ ಮಾಡಿತಷ್ಟೆ? ಒಂದು ಅಮೈನೊ ಆಮ್ಲಕ್ಕೆ ಒಂದು ನ್ಯೂಕ್ಲಿಯೊಟೈಡ್ ತ್ರಿವಳಿ ಸಂಕೇತ ಎನ್ನುವುದಾದರೆ, UUU ಎಂಬುದು Pheಗೆ ಸಂಕೇತ ಎಂಬುದು ಖಚಿತವಾಯಿತು. ನಿರೆನ್‌ಬರ್ಗ್‌ರವರ ವಿಧಾನವನ್ನೇ ಅನುಸರಿಸಿ ಪಾಲಿ–A, ಪಾಲಿ–G ಮತ್ತು ಪಾಲಿ–C ಗಳನ್ನು ಉಪಯೋಗಿಸಿಕೊಡು AAA, GGG, CCC ಎಂಬ ಕೋಡಾನುಗಲು ಯಾವ ಅಮೈನೊ ಆಮ್ಲಗಳಿಗೆ ಸಂಕೇತ ಎಂಬುದನ್ನೇನೋ ಪತ್ತೆ ಮಾಡಬಹುದು. ಆದರೆ GAC, UCU ಮುಂತಾದ ಮಿಶ್ರಿತ ಕೋಡಾನುಗಳ ಪೈಕಿ ಯಾವಯಾವುವು ಯಾವಯಾವ ಅಮೈನೊ ಆಮ್ಲಗಳಿಗೆ ಸಂಕೇತ ಎಂಬುದನ್ನು ಪತ್ತೆ ಮಾಡುವುದು ಹೇಗೆ? ನಿರ್ದಿಷ್ಟ ನ್ಯೂಕ್ಲಿಯೊಟೈಡ್ ಅನುಕ್ರಮವಿರುವ ಬಗೆಬಗೆಯ ಪಾಲಿನ್ಯೂ ಕ್ಲಿಯೊಟೈಡುಗಳನ್ನು ತಯಾರಿಸಿಕೊಳ್ಳುವುದು ಅನಿವಾರ್ಯವಾಯಿತು. ಖೊರಾನಾರವರು ಪ್ರವೇಶಿಸಿದ್ದು ಇಲ್ಲಿ.

ಕೊಎನ್‌ಜೈಮುಗಳ ಸಂಶ್ಲೇಷಣೆಯಲ್ಲಿ ಅಪಾರ ಪರಿಶ್ರಮ ಪಡೆದಿದ್ದ ಖೊರಾನಾ ಅವರು ಅದೇ ಬಳಗದ ಸಂಯುಕ್ತಗಳಾದ ಪಾಲಿನ್ಯೂಕ್ಲಿಯೊಟೈಡುಗಳತ್ತ ಗಮನ ಹರಿಸಿದರು. ಮಾನೊ ನ್ಯೂಕ್ಲಿಯೊಟೈಡುಗಳನ್ನು ಸರಣಿಗೂಡಿಸಬಲ್ಲ ರಾಸಾಯನಿಕ ವಿಧಾನಗಳನ್ನು ಅವರು 1958ರಲ್ಲೇ ನಿಯೋಜಿಸಿದ್ದರು. 1965–86ರಲ್ಲಿ ಟ್ರೈ ಮತ್ತು ಟೆಟ್ರ–ನ್ಯೂಕ್ಲಿಯೊಟೈಡುಗಳನ್ನು ಸಂಶ್ಲೇಷಿಸಲು ಯುಕ್ತ ರಾಸಾಯನಿಕ ವಿಧಾನಗಳನ್ನು ಅಳವಡಿಸಿಕೊಂಡು ಅವನ್ನು ನಿರ್ದಿಷ್ಟ ಅನುಕ್ರಮದಲ್ಲಿ ಕೂಡಿಸಿ 16 ನ್ಯೂಕ್ಲಿಯೊಟೈಡುಗಳು ಗೊತ್ತಾದ ಅನುಕ್ರಮದಲ್ಲಿರುವಂಥ ಪಾಲಿನ್ಯೂಕ್ಲಿಯೊಟೈಡುಗಳನ್ನು ರಾಸಾಯನಿಕ ವಿಧಾನದಿಂದ ತಯಾರಿಸಿದರು. 1968ರಲ್ಲಿ ಅವರು ಎನ್‌ಜೈಮುಗಳ ಸಹಾಯದಿಂದ ಡಿಆಕ್ಸಿ ಪಾಲಿನ್ಯೂಕ್ಲಿಯೊಟೈಡ್ ಸರಣಿಗಳನ್ನು ಜೋಡಿಸುವ ವಿಧಾನಗಳನ್ನು ಕಂಡುಹಿಡಿದರು. ಯೀಸ್ಟಿನ ಫೀನೈಲ್ ಅಲೆನೀನ್ ಸಾಗಣಿ ಆರ್‌ಎನ್‌ಎಯ ನ್ಯೂಕ್ಲಿಯೊಟೈಡು ಅನುಕ್ರಮವನ್ನು ನಿರ್ಧರಿಸಿರುವುದು ಇವರ ಸಂಗಡಿರ ಇನ್ನೊಂದು ಮಹತ್ಸಾದನೆ.

1969ರ ಮಧ್ಯ ಭಾಗದಲ್ಲಿ, ಅಂದರೆ ಅವರು ನೊಬೆಲ್ ಬಹುಮಾನವನ್ನು ಪಡೆದ ಮರುವರ್ಷ, ಒಂದು ನೈಸರ್ಗಿಕ ಜೀನನ್ನೇ ಕೃತಕವಾಗಿ ಸಂಶ್ಲೇಷಿಸಿ ಹೊಸದೊಂದು ಮೈಲುಗಲ್ಲನ್ನು ಸ್ಥಾಪಿಸಿದ್ದಾರೆ. ಜೀವದ ಕೃತದ ನಿರ್ಮಾಣ ತತ್ತ್ವಶಃ ಸಾಧ್ಯ ಎಂಬ ನಂಬಿಕೆಗೆ ಅವರ ಈ ಅದ್ಭುತ ಸಾಧನೆ ಎಡೆಮಾಡಿಕೊಟ್ಟಿದೆ. ಕೋಶ ವಿದಳನವಾಗುವಾಗ ಎರಡು ಎಳೆಗಳು ಬೇರೆಬೇರೆಯಾಗಿ, ಒಂದೊಂದು ಎಳೆಯೂ ತನಗೆ ಪೂರಕವಾದ ಇನ್ನೊಂದು ಎಳೆಯನ್ನು ತಯಾರಿಸಿಕೊಳ್ಳುವುದರಿಂದ, ಎರಡು ಡಿಎನ್‌ಎ ಅಣುಗಳು ಉದ್ಭವಿಸುವುವಷ್ಟೆ? 1968ರಲ್ಲಿ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದ

ಆರ್ಥರ್ ಕಾರ್ನ್‍ಬರ್ಗ್‍ರವರು ಈ ಬಗೆಯ ದ್ವಿಗುಣಿಕೆಯನ್ನು ಕೃತಕವಾಗಿ ಪ್ರಯೋಗಶಾಲೆಯಲ್ಲಿ ಆಗಮಾಡಿದರು. ಆದರೆ ಇದನ್ನು ಸಂಶ್ಲೇಷಣೆ ಎಂದು ಕರೆಯುವುದಕ್ಕಾಗುವುದಿಲ್ಲ. ಏಕೆಂದರೆ ನೈಸರ್ಗಿಕ ಜೀನನ್ನು ಅವರು ಕೃತಕವಾಗಿ ದ್ವಿಗುಣಿಸಿದರು, ಅಷ್ಟೆ. ಆದರೆ ಖೊರಾನಾ ಅವರು ಡಿಎನ್‍ಎ ಘಟಕಗಳಾದ ನ್ಯೂಕ್ಲಿಯೊಟೈಡು ಅಣುಗಳಿಂದ ಪ್ರಾರಂಭಮಾಡಿ ಒಂದು ಜೀನನ್ನು ಸಂಶ್ಲೇಷಿಸಿದ್ದಾರೆ.

ನ್ಯೂಕ್ಲಿಯೊಟೈಡುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ, ಬೇಕೆನಿಸಿದ ಜೀನನ್ನು ತಯಾರಿಸುವುದಕ್ಕೆ ಹೊರಟರೆ, ಮೊದಲು ಆ ಜೀನಿನಲ್ಲಿರುವ ನ್ಯೂಕ್ಲಿಯೊಟೈಡುಗಳ ಅನುಕ್ರಮ ಗೊತ್ತಿರಬೇಕಾಗುತ್ತದೆ. ಯೀಸ್ಟ್‍ನಲ್ಲಿಯ ಅಲೆನೀನ್ ಸಾಗಣೆ ಆರ್‍ಎನ್‍ಎಯ ಪೂರ್ಣ ರಚನೆಯನ್ನು 1964ರಲ್ಲಿ ಕಾರ್ನೆಲ್ ವಿಶ್ವವಿದ್ಯಾಲಯದ ರಾಬರ್ಟ್ ಹಾಲಿಯವರು ನಿರ್ಣಯಿಸಿದರು. ಈ ಆರ್‍ಎನ್‍ಎಯಲ್ಲಿಯ ನ್ಯೂಕ್ಲಿಯೊಟೈಡುಗಳ ಅನುಕ್ರಮ ತಿಳಿದಿರುವುದರಿಂದ, ಅದನ್ನು ಉತ್ಪತ್ತಿ ಮಾಡುವ ಜೀನಿನಲ್ಲಿರುವ ನ್ಯೂಕ್ಲಿಯೊಟೈಡು ಅನುಕ್ರಮವನ್ನೂ ತಿಳಿಯಬಹುದಷ್ಟೆ? ಖೊರಾನಾ ಅವರು ಅದನ್ನು ಆಧಾರವಾಗಿಟ್ಟುಕೊಂಡು, ನಿರ್ದಿಷ್ಟ ನ್ಯೂಕ್ಲಿಯೊಟೈಡುಗಳನ್ನು ಒಂದಕ್ಕೊಂದು ಸೇರಿಸಿ ಡಿಎನ್‍ಎಯ ಸಣ್ಣ ಸಣ್ಣ ಒಂಟಿ ಎಳೆಗಳನ್ನು ಮೊದಲು ತಯಾರಿಸಿದರು. ಅದಕ್ಕೆ ಪೂರಕವಾದ ಎಳೆಯನ್ನು ನಿರ್ಮಿಸಲು ಅವಶ್ಯವಾದ ನ್ಯೂಕ್ಲಿಯೊಟೈಡುಗಳನ್ನು ಒಂದೊಂದೇ ಸೇರಿಸಿ ಚಿಕ್ಕ ಚಿಕ್ಕ ಜೋಡಿ ಎಳೆಗಳನ್ನು ನಿರ್ಮಿಸಿದರು. ಕೊನೆಯದಾಗಿ ಡಿಎನ್‍ಎ ಲಿಗೇಸ್ ಎಂಬ ಎನ್‍ಜೈಮಿನ ನೆರವಿನಿಂದ ಈ ಜೋಡಿ ಎಳೆ ತುಂಡುಗಳನ್ನೆಲ್ಲ ಸೇರಿಸಿ ಪೂರ್ಣ ಜೋಡಿ ಎಳೆ ಡಿಎನ್‍ಎಯನ್ನು ತಯಾರಿಸಿದರು.

ಹೀಗೆ ಸಂಶ್ಲೇಷಿಸಿದ ಜೀನು ತನ್ನ ಜೈವಿಕ ಕಾರ್ಯಗಳನ್ನು ನೆರವೇರಿಸಬಲ್ಲುದೆ ಎಂಬುದನ್ನು ಪರೀಕ್ಷಿಸಲು ಖೊರಾನಾರವರು ಮುಂದಾದರು. ಆ ಜೀನಿನ ಕೊರತೆ ಇರುವ ಯೀಸ್ಟ್ ಜೀವಕೋಶಕ್ಕೆ ಕೃತಕ ಜೀನನ್ನು ಒದಗಿಸಿದಾಗ ಜೀವಕೋಶ ಎಂದಿನಂತೆ ಕೆಲಸ ಮಾಡಲು ಪ್ರಾರಂಭಿಸಿತು. ಆ ಜೀನನ್ನು ದ್ವಿಗುಣಿಸಲು ಪ್ರಯತ್ನ ನಡೆಸಲಾಗಿದೆ; ಮತ್ತು ಅದನ್ನು ಅಚ್ಚಾಗಿ ಮಾಡಿಕೊಂಡು ಅಲೆನೀನ್ ಸಾಗಣೆ ಆರ್‍ಎನ್‍ಎಯನ್ನು ಉತ್ಪತ್ತಿ ಮಾಡಲು ಯತ್ನಿಸಲಾಗಿದೆ.

ಅದಾದ ಬಳಿಕ ಈಗ ಎಷೆರಿಕೀಯ ಕೋಲೈ ಎಂಬ ಸೂಕ್ಷ್ಮಜೀವಿಯ ಒಂದು ಜೀನನ್ನು ತಯಾರಿಸುವ ಪ್ರಯತ್ನಗಳೂ ನಡೆದಿದೆ. ಡಿಎನ್‍ಎ ತುಂಡುಗಳು ಸಿದ್ಧವಾಗಿವೆ; ತಯಾರಿಸಿದ ಜೀನಿನ ಜೈವಿಕ ಕಾರ್ಯಾಚರಣೆಯನ್ನು ಪರೀಕ್ಷಿಸುವ ಸಲುವಾಗಿ ಆ ಜೀನಿನ ಕೊರತೆ ಇರುವ ಎಷೆರಿಕೀಯ ಕೋಲೈ ಜೀವಕೋಶಗಳನ್ನು ಸಿದ್ಧವಾಗಿಟ್ಟುಕೊಂಡಿದ್ದಾರೆ.

ಮನುಷ್ಯನಲ್ಲಿ ಜೀನು ದೋಷಗಳಿಂದ ಉದ್ಭವಿಸುವ ಸಿಹಿಮೂತ್ರರೋಗ, ಕೆಲವು ಬಗೆಯ ಮಾನಸಿಕ ವ್ಯಾಧಿಗಳು ಮುಂತಾದವನ್ನು ಗುಣಪಡಿಸುವ ಸಾಧ್ಯತೆಯನ್ನು ಎದುರುನೋಡಲು ಈ ಮಹತ್ಸಾಧನೆ ಎಡೆಮಾಡಿಕೊಟ್ಟಿದೆಯಾದರೂ ಕೃತಕ ಜೀನನ್ನು ದೇಹದ ಸರಿಯಾದ ಪ್ರದೇಶದಲ್ಲಿ ಸೇರಿಸುವಾಗ ನಾವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುವುದು ಎಂಬುದನ್ನು ನೆನಪಿನಲ್ಲಿಡಬೇಕಾಗಿದೆ.

2011 ನವೆಂಬರ್ 09 ರಂದು ನಿಧನರಾದರು. **(ಜಿ.ಆರ್.ಎಲ್.)**

**ಖೊರಾಮಾಬಾದ್ :** ಪಶ್ಚಿಮ ಇರಾನಿನಲ್ಲಿರುವ ಒಂದು ನಗರ. ಲುರಿಸ್ತಾನ್ ಪ್ರಾಂತ್ಯದ ಮುಖ್ಯ ಪಟ್ಟಣ. ಹ್ಯಾಮಡಾನಿನ ದಕ್ಷಿಣಕ್ಕೆ 144 ಕಿ.ಮೀ. ದೂರದಲ್ಲಿ ಲುರಿಸ್ತಾನ್ ಪರ್ವತದಲ್ಲಿರುವ ನದೀಕಣಿವೆಯ ಇಕ್ಕಟ್ಟಾದ ಸ್ಥಳದಲ್ಲಿದೆ. ಖೂಜಿಸ್ತಾನದಿಂದ ಡೆಝ್‍ಫುಲ್ ಮತ್ತು ಬೊರುಜರ್ಡ್ ಮೂಲಕ ಪ್ರಸ್ಥಭೂಮಿಗೆ ಸಾಗುವ ಮಾರ್ಗ ಇಲ್ಲಿ ಹಾಯ್ದು ಹೋಗುವುದರಿಂದ ಆ ಮಾರ್ಗದ ಮೇಲೆ ಖೊರಾಮಾಬಾದ್ ಹತೋಟಿ ಹೊಂದಿದೆ. ಜನಸಂಖ್ಯೆ 33,759 (2005). 20ನೆಯ ಶತಮಾನದ ಆದಿಯಲ್ಲಿ ಇದರ ಜನಸಂಖ್ಯೆ ಕೇವಲ 8,500 ಇತ್ತು. ಇದು ಬೆಳೆಯುತ್ತಿರುವ ನಗರ. ಈಗಲೂ ಅಲೆಮಾರಿಗಳಾಗಿರುವ ಲುರ್ ಜನರಿಗೆ ಇದು ಬೇಸಗೆ ಮಾರುಕಟ್ಟೆ. ಖೊರಾಮಾಬಾದಿನ ಪೇಟೆಬೀದಿಗಳು ತುಂಬ ಲವಲವಿಕೆಯಿಂದ ಕೂಡಿರುತ್ತವೆ. ಅಲ್ಲೊಂದು ಬಲವಾದ ರಕ್ಷಕ ಸೈನ್ಯವಿದೆ. ಪಟ್ಟಣಕ್ಕೂ ನದಿಗೂ ನಡುವೆ ಇರುವ ಗುಡ್ಡದ ತಲೆಯ ಮೇಲೆ ಹಿಂದಣ ಗವರ್ನರ್‍ಗಳ ನಿವಾಸವಾಗಿದ್ದ ಡೆಝ್-ಇ-ಸಿಯಾದ(ಕರಾಳದುರ್ಗ) ಅವಶೇಷಗಳಿವೆ. ಕುರ್ದಿಷ್ ಮುಖಂಡನೊಬ್ಬ 10ನೆಯ ಶತಮಾನದಲ್ಲಿ ಇದನ್ನು ಕಟ್ಟಿಸಿದ. (ಎಂ.ಎಚ್.)

**ಖೋಂಡ :** ಒಂದು ಆದಿವಾಸಿ ಬುಡಕಟ್ಟು. ಇದರ ವಾಸ್ತವ್ಯ ಒರಿಸ್ಸ ರಾಜ್ಯದ ಫುಲ್ಬಾನಿ ಕೋರಪುಟ್ ಮತ್ತು ಕಲಹಂಡಿ ಜಿಲ್ಲೆಗಳ ಕಾಡು ಮತ್ತು ಪರ್ವತ ಪ್ರದೇಶಗಳಲ್ಲಿ. ಜನಸಂಖ್ಯೆ 1,140,374 (1991). ಒರಿಸ್ಸದ ಆದಿವಾಸಿಗಳಲ್ಲಿ ಹೆಚ್ಚಿನ ಸಂಖ್ಯೆಯವರಿವರು. ಈ ಜನರ ಭಾಷೆ ಕುಈ (**ನೋಡಿ– ಕುಈ, ಕುವಿ–ಭಾಷೆ**). ಈ ಎರಡೂ ದ್ರಾವಿಡ ಮೂಲದವು. ಖೋಂಡರು ಹೆಚ್ಚಾಗಿ ವ್ಯವಸಾಯನಿರತರು. ಸಾಮಾನ್ಯವಾಗಿ ಉತ್ತಿ ಬಿತ್ತಿ ಬತ್ತ ಬೆಳೆಯುತ್ತಾರೆ. ಫುಲ್ಬಾನಿಯ ಕುಟ್ಟಿಯ ಖೋಂಡರು ಮೊದಲು ನೆಲಕ್ಕೆ ಬೆಂಕಿ ಇಟ್ಟು ಅಲ್ಲಿಯ ಗಿಡಗಂಟೆಗಳನ್ನು ಸುಟ್ಟು ಹಾಗೆ ಬೆಂದ ನೆಲದಲ್ಲಿ ಬೀಜ ಎರಚಿ ಬೆಳೆ ತೆಗೆಯುತ್ತಾರೆ.

ಈ ಜನರಲ್ಲಿ ನರಬಲಿ ಕೊಡುವ ಪದ್ಧತಿ ಇತ್ತು. ಇದನ್ನು 1836 – 1850ರ ಕಾಲದಲ್ಲಿ ದಮನ ಮಾಡಲಾಯಿತು. ನಾಗರಿಕ ವ್ಯಾಪಾರಸ್ಥರು ಮತ್ತು ಸಾಹಸಿಗಳು ಮುಗ್ಧ ಖೋಂಡರನ್ನು ವಂಚಿಸದಿರಲೆಂದು ಈ ಜನರಿರುವ ವಿಭಾಗವನ್ನು ಈಚೆಗೆ ಒಂದು ಏಜೆನ್ಸಿಯಾಗಿ ಮಾರ್ಪಡಿಸಲಾಗಿದೆಯಲ್ಲದೆ ಇವರನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಿ ಅವರಿಗೆ ಶಿಕ್ಷಣ ಮತ್ತು ನೌಕರಿಗಳಲ್ಲಿ ಅವಕಾಶವನ್ನೀಯಲಾಗಿದೆ.

ವಿವಾಹಕಾಲದಲ್ಲಿ ಕನ್ಯಾಶುಲ್ಕವಾಗಿ ಜಾನುವಾರುಗಳನ್ನು ಕೊಡುವ ಪದ್ಧತಿ ಇವರಲ್ಲುಂಟು.

ಖೋಂಡರಿಗೆ ಪಶ್ಚಿಮ, ಉತ್ತರ ಮತ್ತು ಪೂರ್ವದಲ್ಲಿ ಉರಿಯ ಭಾಷೆ ಮಾತಾಡುವ ಜನರ ದಕ್ಷಿಣದಲ್ಲಿ ತೆಲುಗು ಮಾತಾಡುವ ಜನರ ಸಂಪರ್ಕ ಬಹು ಹಿಂದಿನಿಂದಲೂ ಇದೆ. ಇದರಿಂದಾದ ಪರಿಣಾಮಗಳನ್ನು ಇವರ ಭಾಷೆ ಹಾಗೂ ಜೀವನ ಕ್ರಮಗಳಲ್ಲಿ ಕಾಣಬಹುದು. 1960ರ ದಶಕದಲ್ಲಿ ಒರಿಸ್ಸ ಸರ್ಕಾರದ ಕ್ಷೇಮಾಭಿವೃದ್ಧಿ ಯೋಜನೆಗಳಿಂದ ಖೋಂಡರು ಮುಂದೆ ಬರಲು ಹೆಚ್ಚಿನ ಅವಕಾಶ ಒದಗಿದೆ. *

**ಖೋಟಾನ್ :** ಚೀನದ ಷಿಂಜಿಯಾಂಗ್ ಉಯಿಗರ್ ಸ್ವಯಮಾಡಳಿತ ಪ್ರದೇಶದಲ್ಲಿರುವ ಒಂದು ಪಟ್ಟಣ, ಡಾರೀಂ ನದೀ ಕಣಿವೆಯ ದಕ್ಷಿಣದ ಅಂಚಿನಲ್ಲಿದೆ. ಜನಸಂಖ್ಯೆ ಸು. 114000 (2006). ಕಾಷ್ಗಾರ್ ಪಟ್ಟಣಕ್ಕೂ ಇದಕ್ಕೂ 432 ಕಿ.ಮೀ. ದೂರ. ಖೋಟಾನ್ ಪಟ್ಟಣ ಒಂದು ಓಯಸಿಸ್‍ನ ನಡುವೆ ಇದೆ. ಈ ಓಯಸಿಸ್‍ಗೆ ನೀರು ಒದಗುವುದು ಕೂನ್‍ಲೂನ್ ಪರ್ವತದಿಂದ ಇಳಿದು ಬರುವ ಯೂರುಂಗ್‍ಕಾಷ್ ಮತ್ತು ಕಾರಾಕಾಷ್ ನದಿಗಳಿಂದ. ಈ ಎರಡೂ ನದಿಗಳು ಕೂಡಿ ಖೋಟಾನ್ ನದಿಯಾಗಿ ಪರಿಣಮಿಸುತ್ತವೆ. ಈ ನದಿ ಕೊನೆಯಲ್ಲಿ ಟಾಕ್ಲಾ ಮಾಕಾನ್ ಮರುಭೂಮಿಯಲ್ಲಿ ಇಂಗಿಹೋಗುತ್ತದೆ.

ಚೀನದ ಪೂರ್ವದ ಹಾನ್ ಸಂತತಿಯ ಆಳ್ವಿಕೆಯ ಕಾಲದಲ್ಲಿ ಈ ಪಟ್ಟಣ ಅಷ್ಟೇನೂ ಮುಖ್ಯವಾದ್ದಾಗಿರಲಿಲ್ಲ. ಆದರೆ 1ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಾಮುಖ್ಯ ಗಳಿಸಿತು. ಇದಕ್ಕೆ ಖೋಟಾನಿನ ಸನ್ನಿವೇಶ ಮಹತ್ತ್ವವೂ ಅದು ಅತ್ಯಂತ ದೊಡ್ಡ ಓಯಸಿಸ್‍ನ ಕೇಂದ್ರವಾಗಿದ್ದುದೂ ಕಾರಣ. ಪಶ್ಚಿಮಕ್ಕೆ ಸಾಗುತ್ತಿದ್ದ ಎರಡು ಮುಖ್ಯ ಮಾರ್ಗಗಳ ಪೈಕಿ ದಕ್ಷಿಣದ ಮಾರ್ಗ ಇದರ ಮೂಲಕ ಸಾಗುತ್ತಿತ್ತು. ಇದು ಭಾರತಕ್ಕೂ ಮಧ್ಯ ಏಷ್ಯಕ್ಕೂ ನಡುವಣ ಮಾರ್ಗದ ಕೊಂಡಿಯಂತಿತ್ತು. ಪಾನ್ ಚಾವ್ ಎಂಬ ಸೇನಾನಿ ಇದನ್ನು 70ರಲ್ಲಿ ಗೆದ್ದ ಮೇಲೆ ಅನಂತರದ ಹಾನ್ ವಂಶದ ಆಳ್ವಿಕೆಯಲ್ಲಿ ಚೀನಕ್ಕೆ ಅಧೀನವಾಗಿತ್ತು. ಮತ್ತೆ 7ನೆಯ ಶತಮಾನದಲ್ಲಿ ಟಾಂಗ್ ವಂಶದ ದೊರೆಗಳ ವಶದಲ್ಲಿತ್ತು; ಒಂದು ಮುಖ್ಯ ಸೈನಿಕ ಠಾಣ್ಯವಾಗಿತ್ತು. 8ನೆಯ ಶತಮಾನದಲ್ಲಿ ಇದನ್ನು ಪಶ್ಚಿಮ ತುರ್ಕಿಸ್ಥಾನದ ಅರಬರು ಜಯಿಸಿದರು. 10ನೆಯ ಶತಮಾನದಲ್ಲಿ ಇದು ಕಾಷ್ಗಾರಿಗೆ ಸೇರಿತು. 13ನೆಯ ಶತಮಾನದಲ್ಲಿ ಚೆಂಘಿಸ್‍ಖಾನ್ ಇದನ್ನು ಗೆದ್ದುಕೊಂಡ. ಆಗ ಇದು ಮಂಗೋಲರ ಆಡಳಿತಕ್ಕೆ ಒಳಪಟ್ಟಿತ್ತು. 1274ರಲ್ಲಿ ಈ ಪ್ರದೇಶದ ಮಾರ್ಗವಾಗಿ ಪ್ರಯಾಣ ಮಾಡಿದ ಮಾರ್ಕೊ ಪೋಲೋ ಇಲ್ಲಿಯ ಕೃಷಿ ಸಂಪತ್ತು, ವಾಣಿಜ್ಯ ಪ್ರಗತಿ, ಜನರ ಶಾಂತಿಪ್ರಿಯತೆ ಇವನ್ನು ವರ್ಣಿಸಿದ್ದಾನೆ. ಅನಂತರ ಇದು ಮಧ್ಯ ಏಷ್ಯದ ಮುಸ್ಲಿಂ ಚಟುವಟಿಕೆಗಳ ಕೇಂದ್ರವಾಗಿ ಚೀನೀ ಪ್ರಭುತ್ವದ ವಿರುದ್ಧ ಮುಸ್ಲಿಮರು ನಡೆಸಿದ ದಂಗೆಯಲ್ಲಿ (1864–75) ಪ್ರಮುಖ ಪಾತ್ರ ವಹಿಸಿತ್ತು. ಕೊನೆಗೆ 1878ರಲ್ಲಿ ಈ ಪಟ್ಟಣ ಚೀನದ ಆಡಳಿತಕ್ಕೆ ಒಳಪಟ್ಟಿತು.

ಖೋಟಾನಿನ ವ್ಯವಸಾಯಾಭಿವೃದ್ಧಿಗೆ ಇಲ್ಲಿರುವ ಓಯಸಿಸ್ ಮುಖ್ಯ ಕಾರಣ. ಅನೇಕ ಕಡೆಗಳಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ. ಗೋದಿ, ಬತ್ತ, ಓಟ್ಸ್, ಮಿಲೆಟ್, ಮುಸುಕಿನ ಜೋಳ ಮುಖ್ಯವಾದ ಧಾನ್ಯಗಳು. ಹತ್ತಿಯನ್ನೂ ಅನೇಕ ಬಗೆಯ ಹಣ್ಣುಗಳನ್ನೂ ಬೆಳೆಯುತ್ತಾರೆ. ಹಿಪ್ಪುನೇರಳೆಯನ್ನು ಅಧಿಕವಾಗಿ ಬೆಳೆಯುವುದರಿಂದ ಖೋಟಾನ್ ಪಟ್ಟಣ ರೇಷ್ಮೆ ಕೈಗಾರಿಕೆಗೆ ಪ್ರಸಿದ್ಧ. ಜಮಖಾನೆ ಮತ್ತು ಫೆಲ್ಟ್ ತಯಾರಿಕೆ, ಲೋಹಗೆಲಸ ಇವು ಕೆಲವು ಕಸಬುಗಳು. ನದಿಯ ಮೆಕ್ಕಲುಮಣ್ಣಿನಿಂದ ಚಿನ್ನ ತೆಗೆಯುತ್ತಾರೆ. ಭರಣಿ, ಬಟ್ಟಲು, ಸೀಸೆ, ಪಿಂಗಾಣಿಗಳನ್ನು ಅಲಂಕರಿಸಲು ಬೇಕಾದ ಜೇಡ್‍ಶಿಲೆಗಳಿಗೆ ಖೋಟಾನ್ ಹಿಂದಿನಿಂದಲೂ ಪ್ರಸಿದ್ಧವಾಗಿದೆ. (ಎಂಎಚ್.)

**ಖೋಡರು : ನೋಡಿ–ಆದಿವಾಸಿಗಳು**

**ಖ್ಮೆರ್ :** ಕಾಂಬೋಡಿಯದಲ್ಲಿ (ಕಂಬುಜ ದೇಶ) ವಾಸಿಸುತ್ತಿದ್ದ ಒಂದು ಪ್ರಾಚೀನ ಬುಡಕಟ್ಟಿನ ಹೆಸರು. ಸುಮಾರು ಹತ್ತು ಶತಮಾನಗಳ ಹಿಂದೆ ಅಲ್ಲಿಯ ನಿವಾಸಿಗಳು ಆಡುತ್ತಿದ್ದ ಭಾಷೆ ಸಹ ಖ್ಮೆರ್ ಆಗಿದ್ದು ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ

ಪ್ರಚಾರದಲ್ಲಿತ್ತು. ಸ್ಟೇಂಗ್, ಮಾಂಗ್ ಮತ್ತು ಬಹ್ನಾರ್‌ಗಳು ಈ ಭಾಷೆಯ ಪ್ರಭೇದಗಳಾಗಿದ್ದುವು. ಖ್ಮೆರ್ ಭಾಷೆಯನ್ನು ವಿಯೆಟ್ನಾಂ ಮತ್ತು ಮುಂಡಭಾಷೆಗಳೊಡನೆ ಸೇರಿಸಿ ಆಸ್ಟ್ರೋ-ಏಷ್ಯಾಟಿಕ್ ಭಾಷೆ ಎಂದು ಈಗಿನ ಭಾಷಾವಿಜ್ಞಾನಿಗಳು ಕರೆದಿದ್ದಾರೆ.

ಆಂಗ್ಕೋರ್ ವಾಟ್ ದೇವಾಲಯದಲ್ಲಿನ ಅಪ್ಸರೆಯರ ಶಿಲ್ಪ

ಕಾಂಬೋಡಿಯದಲ್ಲಿ 9-12ನೆಯ ಶತಮಾನಗಳಲ್ಲಿ ಖ್ಮೆರ್ ಸಂಸ್ಕೃತಿ ಪ್ರಚಾರದಲ್ಲಿತ್ತು. ಸುಖೋದಯ ನಗರದಲ್ಲಿಯ ವಾಟ್‌ಲುವಾಂಗ್‌ನಲ್ಲಿ ಕಂಡುಬಂದ ಮೂರು ಶಿಖರಗಳ

ಬಂಟೈಶ್ರೀ ದೇವಸ್ಥಾನದ ಒಂದು ತ್ರಿಕೋಣಕ ಶಿಲ್ಪ

ಅವಶೇಷಗಳು 12ನೆಯ ಶತಮಾನದಲ್ಲಿ ಖ್ಮೆರ್ ಶೈಲಿಯಲ್ಲಿ ಕಟ್ಟಲಾದವು. ಈ ದೇಶದಲ್ಲಿ ಫ್ಯೂನಾನ್‌ನ ತುರುವಾಯ ತಲೆ ಎತ್ತಿದ ಸಾಮ್ರಾಜ್ಯವನ್ನು ಖ್ಮೆರ್ ಸಾಮ್ರಾಜ್ಯವೆಂದೂ ಕರೆಯಲಾಗಿದೆ.

ಕಂಬುಜ ಅರಸರ ಮೂಲಪುರುಷ ಕಂಬು ಎಂಬ ಒಬ್ಬ ಜ್ಞಾನಿಗೂ ಮೇರ ಎಂಬ ಒಬ್ಬ ಅಪ್ಸರೆಗೂ ಜನಿಸಿದವನೆಂದು ಹೇಳಿದೆ. ಖ್ಮೆರ್ ಎಂಬ ಹೆಸರು ಮೇರದಿಂದ ಬಂದಿರಬಹುದು. ಫ್ಯೂನಾನ್ ಸಂಸ್ಕೃತಿಯ ಅನೇಕ ಅಂಶಗಳನ್ನು ಖ್ಮೆರ್ ಸಂಸ್ಕೃತಿಯಲ್ಲಿ ಕಾಣಬಹುದು.

ರಾಜಧಾನಿ ಯಶೋಧರಪುರವನ್ನು ಕಟ್ಟಿಸಿದವನು ಕಾಂಬೋಡಿಯದಲ್ಲಿ 889 – 900ರ ತನಕ ಆಳಿದ ಯಶೋವರ್ಮ. 11ನೆಯ ಶತಮಾನದ ಪೂರ್ವಾರ್ಧದಲ್ಲಿ ಆಳಿದ ಅರಸನಾದ ಸೂರ್ಯವರ್ಮನ ಕಾಲದಲ್ಲಿ ಖ್ಮೆರ್ ಸಂಸ್ಕೃತಿ ಮತ್ತು ಪ್ರಭಾವಗಳು ಮೇನಾನ್ ಕಣಿವೆಯಾದ್ಯಂತ ಹಬ್ಬಿದುವು. 12ನೆಯ ಶತಮಾನದ ಮೊದಲರ್ಧದಲ್ಲಿ ಆಳುತ್ತಿದ್ದ ಇಮ್ಮಡಿ ಸೂರ್ಯವರ್ಮ ಅನೇಕ ದಂಡಯಾತ್ರೆಗಳನ್ನು ಕೈಗೊಂಡ. ಇವನ ಬಳಿಕ ಖ್ಮೆರ್ ಅರಸರ ಪ್ರಾಬಲ್ಯ ಇಳಿಮುಖವಾಗಿ ಕೊನೆಗೆ ನಶಿಸಿತು.

ಖ್ಮೆರ್ ಶಾಸನಗಳಿಂದ ಆ ಸಂಸ್ಕೃತಿಗೆ ಸಂಬಂಧಿಸಿದ ಕೆಲವು ವಿಶಿಷ್ಟ ಅಂಶಗಳು ವ್ಯಕ್ತವಾಗುತ್ತವೆ. ಅವರ ಅರಸನನ್ನು ಪೃಥ್ವಿಗೆ ಬಂದು ನೆಲಸಿದ ಒಬ್ಬ ದೇವತೆ ಎಂದು ಗಣಿಸಲಾಗುತ್ತಿತ್ತು. ಅವನ ರಾಜಧಾನಿ ಒಂದು ಸಣ್ಣ ಜಗತ್ತೆಂಬಂತೆ ಕಂಗೊಳಿಸುತ್ತಿತ್ತು. ಅದೊಂದು ದೇವಗಿರಿ, ಮೇರು ಪರ್ವತದಂತೆ. ಪ್ರತಿಯೊಬ್ಬ ರಾಜನೂ ಅಲ್ಲಿ ತನ್ನದೇ ಆದ ಅರಮನೆಯನ್ನು ಕಟ್ಟಿಸುತ್ತಿದ್ದ. ಅವನ ಮರಣಾನಂತರ ಅದೊಂದು ಸಮಾಧಿಭವನವಾಗುತ್ತಿತ್ತು. ರಾಜ್ಯದ ರಾಜಕೀಯ ಆಡಳಿತ ವ್ಯವಸ್ಥೆಗಳೆಲ್ಲ ರಾಜನನ್ನು ಅವಲಂಬಿಸಿದ್ದುವು. ಆತನೇ ದುಷ್ಟಶಿಕ್ಷಕ, ಶಿಷ್ಟರಕ್ಷಕ. ಸಮಾಜದಲ್ಲಿ ಪ್ರಜೆಗಳನ್ನು ಅವರ ಆನುವಂಶಿಕ ವೃತ್ತಿಗನುಗುಣವಾಗಿ ವಿಂಗಡಿಸಲಾಗಿತ್ತು. ಪ್ರತಿಯೊಬ್ಬನೂ ಈ ವ್ಯವಸ್ಥೆಯನ್ನು ಚಾಚೂ ತಪ್ಪದೆ ಗೌರವಿಸಬೇಕಾಗಿತ್ತು. ರಾಜ್ಯದಲ್ಲಿ ವ್ಯವಸಾಯಕ್ಕೆ ಅನುಕೂಲವಾಗುವಂತೆ ಅನೇಕ ಕಾಲುವೆಗಳನ್ನೂ ಕೆರೆಗಳನ್ನೂ ತೋಡಿಸಿದ್ದು ಖ್ಮೆರ್ ಅರಸರ ಕೊಡುಗೆ. ಇದರ ಪರಿಣಾಮವಾಗಿ ರಾಜ್ಯದಲ್ಲಿ ನೆಮ್ಮದಿ ನೆಲೆಸಿತ್ತು. ಅಂಗ್ಕೋರ್ ವಾಟ್ ಮುಂತಾದ ಅನೇಕ ವಾಸ್ತು ಶಿಲ್ಪ ಕೃತಿಗಳಿಗೆ ಪ್ರೋತ್ಸಾಹ ದೊರಕಿತು. **(ನೋಡಿ- ಕಂಬುಜದ ಇತಿಹಾಸ).** **(ಜ.ಬಿ.ಆರ್.)**

**ಖ್ಯಾತ ಕರ್ಣಾಟಕಗಳು :** ಕನ್ನಡ ಭಾಷೆಯ ಶಾಸನಸಾಹಿತ್ಯದಲ್ಲಿಯೂ ಕಾವ್ಯಶಾಸ್ತ್ರಾದಿ ಗ್ರಂಥರಾಶಿಯಲ್ಲಿಯೂ ಇತರ ವರ್ಣವೃತ್ತಗಳಿಗಿಂತ ಹೆಚ್ಚು ಬಳಕೆಯಾಗಿರುವ ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ ಎಂಬ ಆರು ಸಮಚತುಷ್ಪದೀ ವರ್ಣವೃತ್ತಗಳನ್ನು ಈ ಹೆಸರಿನಿಂದ ಕರೆಯುವುದು ರೂಢಿಯಾಗಿದೆ. ಈ ಮಾತಿಗೆ ಮೂಲವಾವುದು ಎಂಬುದು ವಿಚಾರಣೀಯ.

ನಾಗವರ್ಮನ (ಸು.990) ಛಂದೋಂಬುಧಿಯ ಕೆಲವು ಹಸ್ತಪ್ರತಿಗಳಲ್ಲಿ, ಸಮವೃತ್ತವಿವರಣೆಯ ದ್ವಿತೀಯಾಧಿಕಾರದ ಅಂತ್ಯಭಾಗದಲ್ಲಿ ಹೀಗೆ ಒಂದು ಪದ್ಯವಿದೆ:

ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂಱಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತೆ ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ
ಗಿರೆ ಮತ್ತೇಭ ಲಘುದ್ವಯತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ
ಹರಿಣಾಕ್ಷೀ ಲಘು ನಾಲ್ಕು ಚಂಪಕಮಿವಾಱುಂ ಖ್ಯಾತ ಕರ್ಣಾಟಕಂ॥

ಇದರಲ್ಲಿ ಪೂರ್ವೋಕ್ತವಾದ ಆರು ವೃತ್ತಗಳ ಸ್ವರೂಪವನ್ನು ಶೀಘ್ರವಾಗಿ ತಿಳಿಯುವುದಕ್ಕೆ ಅನುಸರಿಸಬಹುದಾದ ಸುಲಭೋಪಾಯವನ್ನು ಸೂಚಿಸಿದೆ. ಆದರೆ ಈ ಪದ್ಯಛಂದೋಂಬುಧಿಯ ಮೂಲಪಾಠದೊಳಗಿನದಲ್ಲ, ಈಚೆಗೆ ಯಾರೋ ಸೇರಿಸಿದ್ದು ಎಂದು ಊಹಿಸಬಹುದು. ಆ ಕಾಲದಿಂದೀಚೆಗೆ ಮೇಲಿನ ಆರು ವೃತ್ತಗಳಿಗೂ ಖ್ಯಾತ ಕರ್ಣಾಟಕಗಳು ಎಂಬ ಮಾತು ಪ್ರಚಲಿತವಾಗಿರಬೇಕು. ಆ ವೃತ್ತಗಳ ಪ್ರಸಿದ್ಧಿಗೆ ಕೆಲವು ಕಾರಣಗಳಿವೆ. ಕನ್ನಡ ಚಂಪೂಕಾವ್ಯಗಳಲ್ಲಿ ಕಂದ ಮತ್ತು ಗದ್ಯಖಂಡಗಳನ್ನು ಬಿಟ್ಟರೆ, ಬಹುವಿರಳವಾಗಿ ಬರುವ ಕೆಲವು ಅನ್ಯ ವರ್ಣವೃತ್ತಗಳು ಮತ್ತು ದೇಶ್ಯವೃತ್ತಗಳನ್ನು ಬಿಟ್ಟರೆ, ಉಳಿಯುವ ವೃತ್ತಗಳು ಎಂದರೆ ಶಾರ್ದೂಲ ವಿಕ್ರೀಡಿತಾದಿಗಳೇ. ಚಂಪೂ ಕಾವ್ಯವೆಂದರೆ ಮುಕ್ಕಾಲು ಪಾಲು ಕಂದ, ಕಾಲುಪಾಲು ಈ ಆರುವೃತ್ತಗಳು ಎಂಬ ಮಾತಿದೆ. ಇಷ್ಟು ಮಾತ್ರವಲ್ಲದೆ, ಕನ್ನಡ ಶಾಸನಗಳಲ್ಲಿಯೂ ವೃತ್ತಕಂದಗಳೋ ವೃತ್ತಗಳೋ ಮಾತ್ರವೇ ಬಳಕೆಯಾಗಿರುವ ಶಾಸ್ತ್ರ ಮತ್ತು ಶತಕಗಳಂಥ ಕೃತಿಗಳಲ್ಲಿಯೂ ಈ ಆರು ವೃತ್ತಗಳಲ್ಲಿ ಯಾವುದಾದರೊಂದನ್ನೋ ಕೆಲವನ್ನೋ ಸಾಮಾನ್ಯವಾಗಿ ಬಳಸಿರುವುದು ಕಂಡುಬರುತ್ತದೆ.

ಖ್ಯಾತ ಕರ್ಣಾಟಕಗಳು ಕನ್ನಡ ಸಾಹಿತ್ಯೋದಯದ ತೀರ ಮೊದಮೊದಲಿನ ಕಾಲದಲ್ಲೇ ಸಂಸ್ಕೃತ ಭಾಷಾಸಾಹಿತ್ಯಗಳ ಪ್ರಭಾವದಿಂದಾಗಿ ರೂಢಿಗೆ ಬಂದು, ನೆಲೆನಿಂತು, ಅನಂತರ ಗಾಢವಾಗಿ ವ್ಯಾಪಿಸಿದಂತೆ ತೋರುತ್ತದೆ. ಸು. 7ನೆಯ ಶತಮಾನದವೆಂದು ಗುರುತಿಸಿರುವ ಶ್ರವಣಬೆಳಗೊಳದ ಶಾಸನಗಳ ಕಾಲಕ್ಕಾಗಲೇ

ಈ ವೃತ್ತಗಳೆಲ್ಲ ಕಂಡುಬರುತ್ತವೆ. ಕವಿರಾಜಮಾರ್ಗದಿಂದೀಚಿನ ಕೃತಿಗಳಲ್ಲಿ ಕಾಣುವುದಂತೂ ಸರಿಯೇ. ಸಂಸ್ಕೃತ ಭಾಷಾ ಮರ್ಯಾದೆಗೆ ಒಗ್ಗಿದಂಥ ಈ ವೃತ್ತಗಳು ಕನ್ನಡದ ಜಾಯಮಾನಕ್ಕೆ ಕೂಡ ಒಗ್ಗುವಂತಾದುದು ಆ ಭಾಷೆಯ ಮೇಲೆ ಸಂಸ್ಕೃತದ ವರ್ಚಸ್ಸು ಎಷ್ಟರಮಟ್ಟಿಗೆ ಬಿದ್ದಿತೆನ್ನುವುದನ್ನು ವ್ಯಕ್ತಗೊಳಿಸುತ್ತದೆ.

ಹೆಸರಿನ ರೀತಿಯಿಂದಾಗಿ ಶಾರ್ದೂಲವಿಕ್ರೀಡಿತ–ಮತ್ತೇಭವಿಕ್ರೀಡಿತಗಳು, ಉತ್ಪಲಮಾಲೆ–ಚಂಪಕಮಾಲೆಗಳು, ಸ್ರಗ್ಧರೆ–ಮಹಾಸ್ರಗ್ಧರೆಗಳು ಸಹಜವಾಗಿಯೇ ಜೋಡಿಗೊಳ್ಳುತ್ತವೆ; ಅವು ಪ್ರಾಯಶಃ ಒಂದನ್ನೊಂದು ಹೋಲುವ ಒಂದು ಗುಂಪಿನ ವೃತ್ತಗಳಿರಬಹುದೆಂಬ ಸಂಶಯವನ್ನು ಉಂಟುಮಾಡುತ್ತವೆ. ಅವುಗಳ ಲಕ್ಷಣ ವಿಮರ್ಶೆಯಿಂದ ಆ ಸಂಶಯ ದೂರವಾಗಿ ಪರಸ್ಪರ ಸಂಬಂಧವೂ ಮನವರಿಕೆಯಾಗುತ್ತದೆ. ಅದನ್ನು ಮುಂದೆ ಗಮನಿಸಬಹುದು. ಪ್ರಸ್ತುತ, ವರ್ಣವೃತ್ತದ ಪ್ರಸ್ತಾರ ವಿಧಾನವನ್ನು ಅನ್ವಯಿಸಿ ಆ ವೃತ್ತಗಳ ಲಕ್ಷಣವನ್ನು ಸಂಸ್ಕೃತ ಹಾಗೂ ಕನ್ನಡ–ತೆಲುಗು ಛಂದೋಗ್ರಂಥಗಳಲ್ಲಿ ಸೂತ್ರರೂಪವಾಗಿಯೋ ಲಕ್ಷಣ–ಲಕ್ಷ್ಯಸಮೀಕರಣ ರೂಪವಾಗಿಯೋ ವಿವರಿಸಿರುವುದು ಕಂಡುಬರುತ್ತದೆ. ಶಾರ್ದೂಲವಿಕ್ರೀಡಿತ, ಚಂಪಕಮಾಲೆ ಮತ್ತು ಸ್ರಗ್ಧರೆಗಳ ಲಕ್ಷಣವನ್ನು ಪಿಂಗಲಾದ್ಯರೂ ಮತ್ತೇಭವಿಕ್ರೀಡಿತ, ಉತ್ಪಲಮಾಲೆ ಮತ್ತು ಮಹಾಸ್ರಗ್ಧರೆಗಳ ಲಕ್ಷಣವನ್ನು ಜಯಕೀರ್ತ್ಯಾದ್ಯರೂ ತಂತಮ್ಮ ಛಂದೋಗ್ರಂಥಗಳಲ್ಲಿ ವಿವರಿಸಿದ್ದಾರೆ. ಆದರೆ ಮೊದಲ ಮೂರರ ವಿವರಣೆಗೆ ದೊರೆತಿರುವ ಸ್ಥಾನ ಉಳಿದವುಗಳಿಗಿಲ್ಲ; ಮತ್ತೇಭ ಮೊದಲಾದ ಮೂರು ವೃತ್ತಗಳಿಗೆ ತಕ್ಕ ಪ್ರಾಚುರ್ಯವಾಗಲೀ ಪರಂಪರೆಯಾಗಲೀ ಸಂಸ್ಕೃತ ಸಾಹಿತ್ಯದಲ್ಲಿ ಇಲ್ಲದಿರುವುದೇ ಬಲುಮಟ್ಟಿಗೆ ಅದರ ಕಾರಣ. ಈಗ ತಿಳಿದಿರುವಂತೆ ಸಂಸ್ಕೃತ ಸಾಹಿತ್ಯದಲ್ಲಿ ರವಿಕೀರ್ತಿಕೃತವಾದ ಐಹೊಳೆಯ ಶಿಲಾಶಾಸನದಲ್ಲಿ(634) ಬರುವ ವರದಾತುಙ್ಗತರಙ್ಗರಙ್ಗವಿಲಸದ್ಧಂಸಾವಲೀ ಮೇಖಲಾಂ ಎಂಬುದಾಗಿ ಆರಂಭವಾಗುವ ಒಂದು ವೃತ್ತ ಮತ್ತು ವೆಂಕಟಾಧ್ವರಿಯ (1634) ಲಕ್ಷ್ಮೀಸಹಸ್ರನಾಮದೊಳಗಿನ ಕ್ಷಿಪತು ಕ್ಷಿಪ್ರಮನಲ್ಪಮಪ್ರತಿಹತಸ್ವಾಪತ್ರಯಂ ಮಾಮಕಮ್ ಮತ್ತು ಸರ್ವಾಪಕೃತಿಕ್ಷಮೇಪಿ ಕಲಯ ಸ್ವಾತೀವ ಶೀತಾಮ್ ದಯಾಂ ಎಂಬುದಾಗಿ ಆರಂಭವಾಗುವ ಎರಡು ವೃತ್ತಗಳು–ಇವು ಮಾತ್ರ ಮತ್ತೇಭ ವಿಕ್ರೀಡಿತಗಳೆಂದು ಗುರುತಿಸಲ್ಪಟ್ಟಿವೆ.

ಮತ್ತೇಭವಾದಿಯಾದ ಮೂರು ವೃತ್ತಗಳೂ ಸಂಸ್ಕೃತದಲ್ಲಿ ಪ್ರಸಿದ್ಧವಾಗಿಲ್ಲ ಎನ್ನವುದು ಸ್ಪಷ್ಟವೇ. ಆದರೆ ಶಾರ್ದೂಲವಾದಿಯಾದ ಮೂರರಲ್ಲಿ ಕೂಡ ಶಾರ್ದೂಲ, ಸ್ರಗ್ಧರೆಗಳು ಮಾತ್ರ ಸಂಸ್ಕೃತದಲ್ಲಿ ಬಹುವ್ಯಾಪ್ತವಾಗಿದ್ದು, ಚಂಪಕಮಾಲೆಗೆ ಆ ಪ್ರಾಮುಖ್ಯವಿಲ್ಲವಾಗಿದೆ. ಚಂಪಕಮಾಲೆಯನ್ನು ಸಂಸ್ಕೃತ ಛಂದೋಗ್ರಂಥಗಳಲ್ಲಿ ಶಶಿವದನಾ, ಚಿತ್ರಲತಾ, ರುಚಿರಾ, ಸರಸೀ, ಸಲಿಲನಿಧಿ, ಸಿದ್ಧಿ, ಧೃತಶ್ರೀ, ಪಂಚಕಾವಲೀ–ಎಂದು ಬೇರೆ ಬೇರೆ ಹೆಸರಿನಲ್ಲಿ ಲಕ್ಷಣಿಸಿದ್ದರೂ ಅದರ ನಿದರ್ಶನಗಳು ಮಾತ್ರ ಸಂಸ್ಕೃತ ಸಾಹಿತ್ಯದಲ್ಲಿ ಬಹು ವಿರಳ. ಇದಕ್ಕೆ ಕಾರಣವೇನೋ ತಿಳಿಯದು. ಪೂರ್ವಚಾಳುಕ್ಯರಾಜ ಮೂರನೆಯ ಗುಣಗ ವಿಜಯಾದಿತ್ಯನ (844–88) ಸಾತಲೂರು ತಾಮ್ರಶಾಸನದೊಳಗಿನ ಅರಿನೃಪವಾಜಿವಾರಣಪದಾತಿ ಮಹಾಭ್ರ ವಿರಾಮಮಾರುತಃ ಎಂಬ ಹಾಗೂ ಮಾಘಕವಿಯ (ಸು.750) ಶಿಶುಪಾಲವಧೆಯೊಳಗಿನ ತುರಗಶತಾಕುಲಸ್ಯ ಪರಿತಃ ಪರಮೇಕತುರಂಗ ಜನ್ಮನಃ ಎಂಬ ಆರಂಭವಿರುವ ಎರಡು ವೃತ್ತಗಳೂ ವಾಮನ (ಸು. 750–800), ರಾಜಶೇಖರ (880–920) ಮುಂತಾದವರ ಅಲಂಕಾರಗ್ರಂಥಗಳೊಳಗಿನ ಹಾಗೂ ಅಮಿತಗತಿಯ ಸುಭಾಷಿತ ರತ್ನ ಸಂದೋಹ ಮೊದಲಾದ ಪದ್ಯಸಂಕಲನಗಳೊಳಗಿನ ಸುಮಾರು ಆರೇಳು ವೃತ್ತಗಳೂ ಚಂಪಕಮಾಲೆಯ ನಿದರ್ಶನಗಳಾಗಿ ಗೋಚರಿಸುತ್ತವೆ. ಹೀಗೆ ದೊರೆತ ನಿದರ್ಶನಗಳಲ್ಲಿ ಕೆಲವು ಕಡೆ ಛಂದಸ್ಸು ವ್ಯತ್ಯಾಸವಾಗಿರುವುದೂ ಉಂಟು.

ಕನ್ನಡ ಸಾಹಿತ್ಯದಲ್ಲಿ ಶಾರ್ದೂಲ ವಿಕ್ರೀಡಿತ ಮೊದಲಾಗಿ ಮೇಲಿನ ಆರು ವೃತ್ತಗಳೂ ಸಮಾನಾಗಿ ಗಣ್ಯವಾಗಿವೆ. ಪ್ರಮಾಣದಲ್ಲಿ ಸ್ವಲ್ಪ ಹೆಚ್ಚುಕಡಿಮೆಗಳಾಗುತ್ತಿದ್ದರೂ ಕನ್ನಡದ ಪ್ರಾಚೀನ ಚಂಪೂಕಾವ್ಯಗಳಲ್ಲಿ ಇವು ಮೇಲಿಂದ ಮೇಲೆ ಬರುತ್ತವೆ. ಈ ವೃತ್ತಗಳೂ ಕಂದವೂ ಗದ್ಯದೊಂದಿಗೆ ಕೂಡಿ ಚಂಪುವಿನ ಚೌಕಟ್ಟನ್ನು ರೂಪಿಸುತ್ತವೆ.

ಪೂರ್ವೋಕ್ತ ವೃತ್ತಗಳ ಲಕ್ಷಣವನ್ನೂ ಕನ್ನಡ ಕೈಪಿಡಿಯ ಮೂಲಕ ಪ್ರಸಿದ್ಧವಾಗಿರುವ ನೆನಪಿನ ಸೂತ್ರಗಳನ್ನು ಹೀಗೆ ಸಂಗ್ರಹಿಸಬಹುದು (1) ಶಾರ್ದೂಲ ವಿಕ್ರೀಡಿತ : ಮಸಜಸತತಗ (ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ) ; ಕ್ರಮವಾಗಿ 12ನೆಯ ಮತ್ತು ಅಲ್ಲಿಂದ 7ನೆಯ ಅಕ್ಷರಕ್ಕೆ ಯತಿ (2) ಮತ್ತೇಭವಿಕ್ರಿಡಿತ : ಸಭರನಮಯಲಗ (ಸಭರಂನಮಯಲಂಗ ಮುಂಬಗೆಗೊಳಲ್ ಮತ್ತೇವಿಭಕ್ರೀಡಿತಂ) ; ಕ್ರಮವಾಗಿ 13ನೆಯ ಮತ್ತು ಅಲ್ಲಿಂದ 7ನೆಯ ಅಕ್ಷರಕ್ಕೆ ಯತಿ; (3) ಉತ್ಪಲಮಾಲೆ ಭರನಭಭರಲಗ (ಉತ್ಪಲ ಮಾಲೆಯಪ್ಪುದು ಭರಂನಭಭಂರಲಗಂ ನೆಗಟ್ಟಿರಲ್) ; 11ನೆಯ ಅಕ್ಷರಕ್ಕೆ ಯತಿ (ನಾಗವರ್ಮನ ಛಂದೋಂಬುಧಿ). (4) ಚಂಪಕಮಾಲೆ: ನಜಭಜಜಜರ (ನಜಭಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್); ಕ್ರಮವಾಗಿ 11 ನೆಯ ಮತ್ತು ಅಲ್ಲಿಂದ 10ನೆಯ ಅಕ್ಷರಗಳಿಗೆ ಯತಿಯೆಂದು ಪಿಂಗಲ ಕೇದಾರ ಭಟ್ಟರೂ 13 ನೆಯ ಅಕ್ಷರಕ್ಕೆ ಎಂದು ನಾಗವರ್ಮನೂ ಹೇಳುತ್ತಾರೆ. (5) ಸ್ರಗ್ಧರೆ : ಮರಭನಯಯಯ (ತೋಱಲ್ ಮಂರಂಭನಂ ಮುಯಗಣಮುಮದೆ ತಾಂಸ್ರಗ್ಧರಾವೃತ್ತಮಕ್ಕುಂ) ; ಕ್ರಮವಾಗಿ 7, 7, 7ನೆಯ ಅಕ್ಷರಗಳಿಗೆ ಯತಿ. (6) ಮಹಾಸ್ರಗ್ಧರೆ : ಸತತನಸರಗ (ಸತತಂನಂಸಂರರಂಗಂ ನೆರೆದೆಸೆಯೆ ಮಹಾ ಸ್ರಗ್ಧರಾವೃತ್ತಮಕ್ಕುಂ) ; ಕ್ರಮವಾಗಿ 8, 7, 7ನೆಯ ಅಕ್ಷರಗಳಿಗೆ ಯತಿ (15ನೆಯ ಅಕ್ಷರಕ್ಕೆ ಯತಿಯೆಂದು ನಾಗವರ್ಮ). ಸಂಸ್ಕೃತದಲ್ಲಿ ಯತಿ ನಿಯತ, ಕನ್ನಡದಲ್ಲಿ ಹಾಗೆ ನಿರ್ಬಂಧವಿಲ್ಲ. ನಾಗವರ್ಮ ಬಹುಮಟ್ಟಿಗೆ ಸಂಸ್ಕೃತ ಪರಿಪಾಠಿಯನ್ನು ಅನುಸರಿಸಿ ಖ್ಯಾತಕರ್ಣಾಟಕಗಳಿಗೆ ಯತಿನಿರ್ದೇಶನವನ್ನು ಮಾಡಿದ್ದರೂ ಕವಿಗಳು ಯತಿನಿಯಮವನ್ನು ಬಿಟ್ಟಿದ್ದಾರೆ. ಖ್ಯಾತ ಕರ್ಣಾಟಕಗಳ ಗುಣಲಕ್ಷಣಾದಿ ವಿವರಗಳಿಗೆ –(**ನೋಡಿ– ಉತ್ಪಲಮಾಲಾ, ಚಂಪಕಮಾಲೆ, ಮತ್ತೇಭವಿಕ್ರೀಡಿತ, ಮಹಾಸ್ರಗ್ಧರೆ, ಶಾರ್ದೂಲವಿಕ್ರೀಡಿತ, ಸ್ರಗ್ಧರೆ**).

ಅಕ್ಷರಗಣ ನಿಯಮದಂತೆ ಪರಿಶೀಲಿಸಿದರೆ ಒಂದೊಂದು ವಿಭಿನ್ನ ಲಕ್ಷಣದ ವೃತ್ತಗಳಾಗಿ ತೋರುವ ಖ್ಯಾತ ಕರ್ಣಾಟಕಗಳ, ಗುರುಲಘುಗಳನ್ನು ಗುರುತಿಸಿ, ಧಾಟಿಯನ್ನು ಪರಿಶೀಲಿಸಿದರೆ ಮೂರು ಜೋಡಿಗಳಲ್ಲಿ ಹತ್ತಿರ ಹತ್ತಿರವಾಗುವುದು ಕಂಡುಬರುತ್ತದೆ. ಆ ಮೂರು ಜೋಡಿಗಳು ಇವು : ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತಗಳು; ಉತ್ಪಲಮಾಲೆ, ಚಂಪಕಮಾಲೆಗಳು; ಸ್ರಗ್ಧರೆ, ಮಹಾಸ್ರಗ್ಧರೆಗಳು, ಈ ಅಂಶವನ್ನು ಗಮನಿಸಿ ಉತ್ಪಲ, ಶಾರ್ದೂಲ, ಸ್ರಗ್ಧರೆ ಇವುಗಳ ಮೊದಲಿನ ಗುರುವಿಗೆ ಎರಡು ಲಘುಗಳನ್ನು ಇಟ್ಟು ಚಂಪಕ, ಮತ್ತೇಭ, ಮಹಾಸ್ರಗ್ಧರೆಗಳನ್ನು, ಕನ್ನಡಕವಿಗಳು ಮಾಡಿಕೊಂಡಂತೆ ಕಾಣುವುದು ಎಂಬುದಾಗಿ ಒಂದು ಅಭಿಪ್ರಾಯ ವ್ಯಕ್ತಪಟ್ಟಿದೆ. ಸಂಸ್ಕೃತದಲ್ಲಿ ಶಾರ್ದೂಲ ಮತ್ತು ಸ್ರಗ್ಧರೆಗಳು ಗಣ್ಯವೃತ್ತಗಳಾಗಿದ್ದು, ಅವನ್ನು ಕನ್ನಡಕ್ಕೆ ತಂದುಕೊಳ್ಳುವಾಗ ವೈವಿಧ್ಯವನ್ನೂ ಸೌಲಭ್ಯವನ್ನೂ ಹೆಚ್ಚಿಸಿಕೊಳ್ಳಲು ಅವುಗಳ ಆದಿಗುರುವಿಗೆ ದ್ವಿಲಘುವನ್ನಿಟ್ಟು ಆ ಧಾಟಿಯ ಇನ್ನೆರಡು ಹೊಸವೃತ್ತಗಳನ್ನು ಕಲ್ಪಿಸಿಕೊಂಡಿರುವುದು ಸಾಧ್ಯ ಎನ್ನುವುದನ್ನು ಬಲುಮಟ್ಟಿಗೆ ಒಪ್ಪಬಹುದು. ಆದರೆ ಉತ್ಪಲಮಾಲೆ ಸಂಸ್ಕೃತದಲ್ಲಿ ಚಂಪಕಮಾಲೆಯಷ್ಟು ಕೂಡ ಪ್ರಸಿದ್ಧವಾಗಿದ್ದಂತೆ ತೋರದಿರುವುದರಿಂದ ಉತ್ಪಲದ_ಆದಿಗುರುವಿಗೆ ದ್ವಿಲಘುವನ್ನಿಟ್ಟು ಚಂಪಕವನ್ನು ಮಾಡಿಕೊಂಡಿದೆಯೆಂದು ತಿಳಿಯುವುದು ಹೇಗೆ ಎಂಬ ಪ್ರಶ್ನೆ ಹುಟ್ಟುತ್ತದೆ. ಚಂಪಕಮಾಲೆಯ ಆದಿ ದ್ವಿಲಘುವಿಗೆ ಗುರುವೊಂದನ್ನಿಟ್ಟು ಉತ್ಪಲಮಾಲೆಯನ್ನೇ ಹೊಸದಾಗಿ ಕಲ್ಪಿಸಿಕೊಂಡಿರಬಹುದು; ಯಾವುದೇ ಪ್ರಭಾವದಿಂದಾಗಲೀ ಕನ್ನಡ ಸಾಹಿತ್ಯದಲ್ಲಿ ಉತ್ಪಲಮಾಲೆ ರೂಢಿಗೆ ಬಂದ ಮೇಲೆ ಅದರ ಆದಿಗುರುವಿಗೆ ದ್ವಿಲಘುವನ್ನಿಟ್ಟು ಚಂಪಕಮಾಲೆಯನ್ನು ಮಾಡಿಕೊಂಡಿರಬಹುದು; ಇಲ್ಲವೆ ಉತ್ಪಲಮಾಲೆ, ಚಂಪಕಮಾಲೆಗಳು ಸ್ವತಂತ್ರವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿರಬಹುದು. ಸು 7ನೆಯ ಶತಮಾನದ ಕನ್ನಡ ಶಾಸನಗಳಲ್ಲಿಯೇ ಈ ಎರಡೂ ವೃತ್ತಗಳು ಬಳಕೆಯಾಗಿರುವುದರಿಂದ, ಯಾವ ವೃತ್ತದಿಂದ ಯಾವುದು ಹುಟ್ಟಿತು ಎಂಬುದನ್ನು ನಿಶ್ಚಯಿಸುವುದು ಕಷ್ಟ..

ಪೂರ್ವಪ್ರಸಿದ್ಧವಾದ ವೃತ್ತಗಳಿಂದ ಆದಿಯ ಅಲ್ಪವ್ಯತ್ಯಾಸದೊಡನೆ ಹೊಸ ವೃತ್ತಗಳನ್ನು ಮಾಡಿಕೊಂಡದ್ದು ಎರಡು ರೀತಿಯ ಪ್ರಯೋಜನಗಳಿಗೆ ದಾರಿಮಾಡಿತು, ಒಂದು ವೈವಿಧ್ಯಸಾಧನೆ; ಇನ್ನೊಂದು ಸೌಕರ್ಯಲಾಭ. ಇದರಿಂದಾಗಿ ಏಕಮುಖವಾದ ನಾದಲಯಗಳಲ್ಲಿ ಬಹುಮುಖತೆ ಬಂತು; ಮೂರು ನಿರ್ದಿಷ್ಟವೃತ್ತಗಳಲ್ಲಿ ನೈಪುಣ್ಯವನ್ನು ಸಾಧಿಸಿದ್ದರಿಂದ ಆರು ಬಗೆಯ ವೃತ್ತಗಳ ನಿರ್ವಹಣೆ ಅನಾಯಾಸವಾಗಿ ಕೈಗೂಡುವಂತಾಯಿತು. ಇಷ್ಟಾಗಿ ಕನ್ನಡಕ್ಕೆ ಹೊಂದಿರತಕ್ಕವು ಎಂದರೆ ಪ್ರಾಯಃ ಉತ್ಪಲಮಾಲೆ, ಚಂಪಕಮಾಲೆಗಳೆರಡೇ. ಪ್ರಮಾಣದಲ್ಲಿಯೂ ಉಳಿದವುಗಳಿಗಿಂತ ಇವೇ ಹೆಚ್ಚು ಎನ್ನುವುದು ವಿದ್ವಾಂಸರ ಅಭಿಪ್ರಾಯ. ಉತ್ಪಲಚಂಪಕಗಳಲ್ಲಿ ದೇಶ್ಯಶಬ್ದಗಳ ಸೇರಿಕೆಯೂ ಶಾರ್ದೂಲಾದಿಯಾದ ಉಳಿದವುಗಳಲ್ಲಿ ಸಂಸ್ಕೃತಶಬ್ದಗಳ ಹಾಗೂ ಸಮಾಸಗಳ ಸೇರಿಕೆಯೂ ಸಾಮಾನ್ಯ, ಮೊದಲಿನವು ಮೃದುತರವಾದ ಭಾವಗಳಿಗೆ, ಮತ್ತಿನವು ಘನಗಂಭೀರವಾದ ಭಾವಗಳಿಗೆ ಒಗ್ಗಿರತಕ್ಕುವು ಎಂದು ಕೂಡ ಅಭಿಪ್ರಾಯಪಡಲಾಗಿದೆ. ಆಯಾ ವೃತ್ತಗಳ ಹೆಸರಿಗೂ ಅಲ್ಲಿ ವ್ಯಕ್ತವಾಗುವ ಭಾವಭಾವನೆಗಳಿಗೂ ಹೊಂದಿಕೆಯಿದೆಯೆಂದು ಒಮ್ಮೊಮ್ಮೆ ತೋರುತ್ತದೆಯಾದರೂ ಹಾಗೆ ಹೊಂದಿಕೆಯಿಲ್ಲದೆಯೂ ಹೋಗಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. (ಟಿ.ವಿ.ವಿ.)

**ಖ್ವಾಜಾ ಇ ಜಹಾನ್ :** ಮಧ್ಯಯುಗೀನ ಭಾರತದಲ್ಲಿ ಆಳಿದ ಮುಸ್ಲಿಂ ಅರಸರು ತಮ್ಮ ಪ್ರಧಾನಿಗಳಿಗೆ (ವಜ಼ೀರ್) ಸಾಮಾನ್ಯವಾಗಿ ಕೊಡುತ್ತಿದ್ದ ಒಂದು ಬಿರುದು. ಆದರೆ ಈ ಬಿರುದಿನಿಂದಲೇ ಪ್ರಸಿದ್ಧರಾದ ಹಲವು ವ್ಯಕ್ತಿಗಳು ಇತಿಹಾಸದಲ್ಲಿ ಕಾಣಸಿಗುತ್ತಾರೆ. ಅವರಲ್ಲಿ ಪ್ರಮುಖರನ್ನು ಕುರಿತ ವಿವರಗಳನ್ನು ಮುಂದೆ ಕೊಡಲಾಗಿದೆ.

**1 ಅಹ್ಮದ್ ಅಯಾಜ಼್:** ತೊಗಲಕ್ ಮುಹಮ್ಮದ್ ದೆಹಲಿಯ ಸುಲ್ತಾನನಾಗಿ ಅಧಿಕಾರಕ್ಕೆ ಬಂದಾಗ ಮಲ್ಲಿಕ್ (ಅಹ್ಮದ್) ಅಯಾಜ಼ನನ್ನು ಖ್ವಾಜಾ-ಇ-ಜಹಾನ್ ಎಂದು ನೇಮಿಸಿದ. ಈತನನ್ನು ಕುರಿತಾದ ಕೆಲವು ವಿವರಗಳು ನಮಗೆ ಇಬ್ನ್ ಬತೂತನ ಬರೆಹಗಳಿಂದ ತಿಳಿದಿವೆ. ಸು. 1328ರಲ್ಲಿ ಸಿಂಧ್ ಪ್ರಾಂತ್ಯದ ಕಮಲಪುರದಲ್ಲಿ ಅಲ್ಲಿಯ ಕಾಜ಼ಿ ಮತ್ತು ಖತೀಬರ ನೇತೃತ್ವದಲ್ಲಿ ದಂಗೆಯುಂಟಾದಾಗ ಅದನ್ನು ಅಡಗಿಸಲು ಖ್ವಾಜಾ ಜಹಾನನನ್ನು ಸುಲ್ತಾನ ಅಲ್ಲಿಗೆ ಕಳುಹಿಸಿದ. ಆ ಸಮಯದಲ್ಲಿ ಆ ಅಧಿಕಾರಿ ದಂಗೆಕೋರರನ್ನು ಸೆರೆಹಿಡಿದು ಅವರ ಚರ್ಮ ಸುಲಿದು ಕೊಲ್ಲಬೇಕೆಂದು ಆಜ್ಞಾಪಿಸಿದ. ಚರ್ಮ ಸುಲಿಯುವ ಚಿತ್ರಹಿಂಸೆಗೊಳಪಡಿಸದೆ ಬೇರಾವ ವಿಧಾನದಲ್ಲಿಯಾದರೂ ಅವರನ್ನು ಕೊಲ್ಲಬೇಕೆಂದು ಆ ದಂಗೆಕೋರನಾಯಕರು ಖ್ವಾಜಾ ಜಹಾನನನ್ನು ಪ್ರಾರ್ಥಿಸಿದಾಗ, ಆತ ಅದಕ್ಕೆ ಒಪ್ಪದೆ ತಾನು ಸುಲ್ತಾನನ ಅಪ್ಪಣೆಯಂತೆಯೇ ನಡೆಯುವುದಾಗಿ ತಿಳಿಸಿದ.

1351ರಲ್ಲಿ ಮುಹಮ್ಮದ್ ಸಿಂಧೂ ನದೀತೀರದ ತಟ್ಟಾ ಎಂಬ ಸೇನಾಠಾಣ್ಯದಲ್ಲಿ ಮರಣ ಹೊಂದಿದ. ನಾಲ್ಕು ದಿನಗಳ ಅನಂತರ, ಮಾರ್ಚ್ 24ರಂದು, ಫಿರೋಜ಼ನನ್ನು ಮುಹಮ್ಮದನ ಉತ್ತರಾಧಿಕಾರಿಯಾಗಿ ಆರಿಸಲಾಯಿತು. ಸುಲ್ತಾನನ ಸೈನ್ಯದ ನಾಯಕತ್ವವನ್ನು ಮತ್ತು ರಾಜ್ಯದ ಸೂತ್ರಗಳನ್ನು ವಹಿಸುವ ನೂತನ ಹೊಣೆಯೊಂದಿಗೆ ಫಿರೋಜ಼್ ದೆಹಲಿಗೆ ಹಿಂದಿರುಗಿದ. ಆದರೆ ದೆಹಲಿಯಲ್ಲಿದ್ದ, ಈ ಬೆಳವಣಿಗೆಯನ್ನರಿಯದ ವಜ಼ೀರ ಅಯಾಜ಼್ ಮುಹಮ್ಮದನ ಮಗನೆಂದು ಹೇಳಲಾದ 6 ವರ್ಷ ವಯಸ್ಸಿನ ಹುಡುಗನೊಬ್ಬನನ್ನು ದೆಹಲಿಯ ಸಿಂಹಾಸನದ ಮೇಲೆ ಕುಳ್ಳಿರಿಸಿ ಅವನಿಗೆ ಘಿಯಾಸುದೀನ್ ಮಹಮ್ಮದ್ ಎಂದು ನಾಮಕರಣ ಮಾಡಿ ಅವನು ಮುಹಮ್ಮದನ ಉತ್ತರಾಧಿಕಾರಿಯೆಂದು ಘೋಷಿಸಿದ. ಫಿರೋಜ಼ನ ವಿರುದ್ಧವಾಗಿ ಈತ ದಂಗೆ ಎದ್ದನೆಂಬ ಭಾವನೆಗೆ ಇದು ಕಾರಣವಾಯಿತು. ವಾಸ್ತವವಾಗಿ ಅಯಾಜ಼್ ಸುದ್ದಿ ಸಂಗ್ರಹಿಸಲು ಕಳುಹಿಸಿದ್ದ. ಆಪ್ತ ಗುಲಾಮ ಮಾಲಿ ತುತುನ್ ವಿವರಗಳನ್ನು ಸರಿಯಾಗಿ ತಿಳಿಯದೆ, ಮುಹಮ್ಮದ್ ಮರಣಿಸಿದನೆಂದೂ ಮಂಗೋಲರು ತಟ್ಟಾವನ್ನು ಆಕ್ರಮಿಸಿರುವರೆಂದೂ ಫಿರೋಜ಼ನ ಬಗ್ಗೆ ತನಗೆ ಏನೂ ತಿಳಿಯದೆಂದೂ ವರದಿ ಮಾಡಿದ್ದ. ಅಯಾಜ಼್ ಕೈಗೊಂಡ ಮುಂದಿನ ಕ್ರಮಗಳಿಗೆ ಈ ವರದಿಯೇ ಆಧಾರವಾಗಿತ್ತು. ಒಮ್ಮೆ ತಪ್ಪು ಹೆಜ್ಜೆಯನ್ನಿಟ್ಟ ಇವನು ಅದನ್ನು ತಿದ್ದಿಕೊಳ್ಳಲಿಲ್ಲ. ಫಿರೋಜ಼್ ಸುಲ್ತಾನನಾಗಿ ಆಯ್ಕೆಯಾದನೆಂಬುದು ತಿಳಿದಾಗ ಅವನಿಗೆ ವಿಧೇಯತೆಯನ್ನು ಸೂಚಿಸದೆ ಇವನು ತನ್ನ ವಿರುದ್ಧ ಏರಿರಬಹುದೆಂದು ಊಹಿಸಿ ಯುದ್ಧ ಸಿದ್ಧತೆಗಳನ್ನು ಮಾಡಿದ. ಇವನ ಈ ನಡೆವಳಿಕೆಗಳಿಗೆ ದೆಹಲಿಯ ಹಲವು ಮುಖಂಡರು ಬೆಂಬಲ ನೀಡಿದ್ದರು. ಆದರೆ ಫಿರೋಜ಼್ ದೆಹಲಿಯನ್ನು ಸಮೀಪಿಸಿದಾಗ ಇವನ ಬೆಂಬಲಿಗರು ಫಿರೋಜ಼್‌ನ ಪಕ್ಷ ವಹಿಸಿದರು. ಕೊನೆಗೆ ಅಯಾಜ಼್ ಫಿರೋಜ಼ನಿಗೆ ಶರಣಾದ. ಈ ವೇಳೆಗೆ ಅಯಾಜ಼ನಿಗೆ ಸು. 84 ವರ್ಷ ವಯಸ್ಸಾಗಿತ್ತು. ಫಿರೋಜ಼ನಿಗೆ ಈತನನ್ನು ಕ್ಷಮಿಸಬೇಕೆಂಬ ಆಸೆ ಬಹಳವಾಗಿತ್ತು. ಆದರೆ ಫಿರೋಜ಼ನ ಅನುಯಾಯಿಗಳು ಇದಕ್ಕೆ ಸಮ್ಮತಿಸಲಿಲ್ಲ. ಅಯಾಜ಼ನನ್ನು 'ಸಮಾನ್' ಪ್ರಾಂತ್ಯಾಧಿಕಾರಿಯಾಗಿ ನೇಮಿಸಲಾಗಿದೆಯೆಂದು ಸುಳ್ಳು ಹೇಳಿ, ಅವನು ಅಲ್ಲಿಗೆ ಹೊರಟಾಗ ಅವನ ಹಿಂದೆ ಷೇರ್ ಖಾನ್ ಎಂಬವನನ್ನು ಕಳಿಸಿದರು. ವಸ್ತುಸ್ಥಿತಿಯನ್ನು ಅರಿತ ಅಯಾಜ಼್ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಶಿರಸ್ಸನ್ನು ನೆಲಕ್ಕೆ ಬಾಗಿಸಿದಾಗ ಅವನ ಕೋರಿಕೆಯ ಪ್ರಕಾರ ಅವನ ಮಿತ್ರನೊಬ್ಬ ಅವನ ಶಿರಚ್ಛೇದ ಮಾಡಿದನೆಂದು ಹೇಳಲಾಗಿದೆ.

**2 ನೂರುದ್ದೀನ್:** ಮಹಮ್ಮದ್ ತೊಗಲಕನ ಕಾಲದಲ್ಲಿ ತಾತ್ಕಾಲಿಕವಾಗಿ ದಖನಿನ ಸುಲ್ತಾನನಾಗಿದ್ದ ಇಸ್ಮಾಯಿಲ್ ಮುಖ್‌ನಿಂದ ಖ್ವಾಜಾ ಇ ಜಹಾನ್ ಬಿರುದು ಪಡೆದಿದ್ದಾತ. ಮಹಮ್ಮದ್ ತೊಗಲಕ್ ತನ್ನ ರಾಜ್ಯದ ದಖನ್ ವಿಭಾಗಕ್ಕೆ ಅಧಿಕಾರಿಯಾಗಿ ನೇಮಿಸಿದ್ದ ಖುತ್ಲುಗ್‌ಖಾನನ ವಿರುದ್ಧವಾಗಿ ಅಲ್ಲಿಯ ರಾಜಕೀಯ ಪಕ್ಷ ಸುಲ್ತಾನನಲ್ಲಿ ದೂರಿಕೊಂಡಾಗ (1345) ಸುಲ್ತಾನ ಖುತ್ಲುಗನನ್ನು ಹಿಂದಕ್ಕೆ ಕರೆಸಿಕೊಂಡು ಅವನ ಸ್ಥಳದಲ್ಲಿ ಅವನ ತಮ್ಮನಾದ ಅಲೀಮುಲ್ ಮುಲ್ಕನನ್ನು ತಾತ್ಕಾಲಿಕವಾಗಿ ನೇಮಿಸಿದ್ದ. ಖುತ್ಲುಗ್ ದೆಹಲಿಗೆ ಹಿಂದಿರುಗಿದ ಮೇಲೆ ಇಮದುಲ್ ಮುಲ್ಕ್ ಸರ್ತೇಜ ದಖನಿನ ವೈಸ್‌ರಾಯ್ ಆಗಿ ನೇಮಕಗೊಂಡ. ಆದರೆ ಇವನೂ ಅವನೊಡನೆ ನೇಮಕಗೊಂಡ. ಇತರ ಅಧಿಕಾರಿಗಳೂ ಸದರ್ ಅಮೀರರಿಗೆ ಒಪ್ಪಿಗೆಯಾಗಲಿಲ್ಲ. ಅವರು ದಂಗೆಯೆದ್ದರು. ಇದನ್ನು ಅಡಗಿಸಲು ಸುಲ್ತಾನನೇ ಗುಜರಾತಿಗೆ ಬಂದ. ದೌಲತಾಬಾದಿಲನಲ್ಲಿ ದಂಗೆಯೆದ್ದಿದ್ದ ಸದರ್ ಅಮೀರರನ್ನು ವಿಚಾರಣೆಗೆ ಗುರಿಪಡಿಸಲು ಬ್ರೋಚ್‌ಗೆ ಕಳುಹಿಸಬೇಕೆಂದು ಅಜ್ಞಾಪಿಸಿದ. ಮಲಿಕ್ ಅಹ್ಮದ್ ಲಾಚಿನ್ ಮತ್ತು ಖಲ್ಜ಼್ ಎಂಬ ಇಬ್ಬರು ಅಧಿಕಾರಿಗಳು ಇವರನ್ನು ಕರೆದೊಯ್ಯುತ್ತಿದ್ದಾಗ ಮಾರ್ಗದಲ್ಲಿ ಇವರು ಆ ಅಧಿಕಾರಿಗಳನ್ನು ಕೊಂದು ದೌಲತಾಬಾದಿಗೆ ಹಿಂದಿರುಗಿ, ಅಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದ ಅಲಿಮುಲ್ ಮುಲ್ಕನನ್ನು ಬದಿಗಿರಿಸಿ, ತಮ್ಮಲ್ಲಿ ಒಬ್ಬನಾದ ಇಸ್ಮಾಯಿಲ್ ಮುಖ್‌ನನ್ನು ತಾತ್ಕಾಲಿಕವಾಗಿ ದಖನಿನ ಸುಲ್ತಾನನೆಂದು ಆರಿಸಿದರು. ಈತ ನೂರುದ್ದೀನನನ್ನು ಖ್ವಾಜಾ ಇ ಜಹಾನನೆಂದು ನೇಮಿಸಿಕೊಂಡ. ಸುಲ್ತಾನನ ಉಳಿದ ಸೈನ್ಯವನ್ನು ಓಡಿಸಲು ಖ್ವಾಜಾ ಜಹಾನ್ ಗುಲ್ಬರ್ಗಕ್ಕೂ ಜಫರ್ ಖಾನ್ ಎಂಬ ಬಿರುದು ಪಡೆದಿದ್ದ ಹಸನ್ ಗಂಗು ಎಂಬವನು ಸಾಗರಕ್ಕೂ ಹೋಗಿ ಅಲ್ಲಿಯ ವಿರೋಧವನ್ನು ಅಡಗಿಸಿ ಹಿಂದಿರುಗಿದರು. ಆದರೆ ಈ ವೇಳೆಗೆ ಮಹಮ್ಮದ್ ಸ್ವತಃ ದೌಲತಾಬಾದಿಗೆ ಬಂದಿದ್ದ. ಇಸ್ಮಾಯಿಲನ ವಿರುದ್ಧವಾಗಿ ನೂರುದ್ದೀನ್ ಮತ್ತು ಜಫರ್ ಖಾನರು ಒಟ್ಟಿಗೆ ಕಾದಾಡಿದರು. ಯುದ್ಧದಲ್ಲಿ ನೂರುದ್ದೀನ್ ಖ್ವಾಜಾ ಜಹಾನನಿಗೆ ಬಾಣವೊಂದು ತಗುಲಿ ಆತ ಸತ್ತ. ಇದರ ಪರಿಣಾಮವಾಗಿ ಇಸ್ಮಾಯಿಲನ ಸೈನ್ಯ ಸೋಲನ್ನನುಭವಿಸಿತು. (ಜಿ.ಬಿ.ಆರ್.)

**3 ಮಲಿಕ್ ಸರ್ವಾರ್:** 1394ರಲ್ಲಿ ಅಸ್ತಿತ್ವಕ್ಕೆ ಬಂದ ಷಾರ್ಖಿ ಸ್ವತಂತ್ರ ರಾಜಮನೆತನದ ಸ್ಥಾಪಕ. ಈತ ನಪುಂಸಕ. ಮೊದಲು ಈತ ಫಿರೋಜ಼್ ಷಹ ತೊಗಲಕನ ಆಶ್ರಯದಲ್ಲಿ ಒಬ್ಬ ಅಧಿಕಾರಿಯಾಗಿದ್ದ. ಇವನ ಅಂದಿನ ಸ್ಥಾನಮಾನಗಳ ಬಗ್ಗೆ ಖಚಿತವಾಗಿ ಏನೂ ತಿಳಿಯದು. ಆದರೆ ಫಿರೋಜ಼ನ ಮರಣದ ಬಳಿಕ ಸುಲ್ತಾನನ ಸಿಂಹಾಸನಕ್ಕಾಗಿ ನಡೆದ ಒಳಜಗಳದಲ್ಲಿ ಈತ ಪ್ರಮುಖ ಪಾತ್ರ ವಹಿಸಿದ. ಸುಲ್ತಾನ್ ಅಬು ಬಕರ್‌ನ ಕಾಲದಲ್ಲಿ ಷಹ್ನ ಇ ಷಹರ್ ಎಂಬ ಅಧಿಕಾರದಲ್ಲಿ ಈತ ಮುಂದುವರಿದ. ಫಿರೋಜ಼ನ ಕಿರಿಯ ಮಗನಾದ ಮುಹಮ್ಮದ್ ಷಹನ ಬೆಂಬಲಿಗನಾಗಿದ್ದ. ಅಬು ಬಕರನ ವಿರುದ್ಧ ಮುಹಮ್ಮದ್ ಹೋರಾಡತೊಡಗಿದ. ಸರ್ವಾರ್ 50,000 ಸೈನ್ಯಬಲದೊಡನೆ ಮುಹಮ್ಮದನನ್ನು ಕೂಡಿಕೊಂಡ. ಇವನೊಂದಿಗೆ ಕೆಲವರು ಪ್ರಾಂತ್ಯಾಧಿಕಾರಿಗಳೂ ಸೇರಿದರು. ಇದರಿಂದ ತುಷ್ಟನಾದ ಮುಹಮ್ಮದ್ ಇವನನ್ನು ವಜ಼ೀರನಾಗಿ ನೇಮಿಸಿಕೊಂಡು ಇವನಿಗೆ ಖ್ವಾಜಾ ಜಹಾನನೆಂಬ ಬಿರುದನ್ನಿತ್ತ. ಆದರೆ ಕುಂಡ್ಲಿಯ ಕದನದಲ್ಲಿ ಮುಹಮ್ಮದ್ ಸೋತು ಸರ್ವಾರನೊಂದಿಗೆ ಜಲೇಸರಕ್ಕೆ ಹಿಂದಿರುಗಿದ. ಒಂದು ವರ್ಷದೊಳಗೆ ದೆಹಲಿಯ ರಾಜಕೀಯ ಪರಿಸ್ಥಿತಿಗಳು ಮಹಮ್ಮದನಿಗೆ ಅನುಕೂಲಕರವಾಗಿ ಪರಿಣಮಿಸಿದುವು. ಅಲ್ಲಿಯ ಅಮೀರರು ಮುಹಮ್ಮದನನ್ನು ಸುಲ್ತಾನ್ ಪದವಿಗೇರಿಸಿದರು. ಅವರಲ್ಲಿ ಪ್ರಮುಖನಾದ ಮೀರ್ ಹಜ಼ೀಬ್ ಸುಲ್ತಾನಿಯನ್ನು ಮುಹಮ್ಮದ್ ತನ್ನ ವಜ಼ೀರನಾಗಿಯೂ ಸರ್ವಾರನನ್ನು ಅವನ ಸಹಾಯಕನಾಗಿಯೂ (ನಾಯಿಬ್) ನೇಮಿಸಿದ. ಇದು ಸರ್ವಾರನಿಗೆ ತೃಪ್ತಿ ನೀಡಲಿಲ್ಲ. ಮುಹಮ್ಮದ್ ಜಲೇಸರದಲ್ಲಿ ಮುಹಮ್ಮದಾಬಾದ್ ಕೋಟೆಯನ್ನು ಕಟ್ಟಿಸುತ್ತಿದ್ದಾಗ ವಜ಼ೀರ ಆತನ ವಿರುದ್ಧ ದಂಗೆ ಎದ್ದಿರುವನೆಂದು ಸುಲ್ತಾನನಲ್ಲಿ ಆರೋಪಣೆ ಸಲ್ಲಿಸಿದ. ದೆಹಲಿಗೆ ಹಿಂದಿರುಗಿದ ಸುಲ್ತಾನ ಯಾವ ವಿಚಾರಣೆಯನ್ನೂ ಮಾಡದೆ ಸುಲ್ತಾನಿಯನ್ನು ಗಲ್ಲಿಗೇರಿಸಿ ಸರ್ವಾರನನ್ನು ವಜ಼ೀರ್ ಖ್ವಾಜಾ ಜಹಾನನಾಗಿ ನೇಮಿಸಿದ. ಸರ್ವಾರ್ ಈ ಪದವಿಯಲ್ಲಿ 1394ರ ತನಕ ಮುಂದುವರಿದ. ಆ ವೇಳೆಗೆ ಮುಹಮ್ಮದ್ ಷಹ ತೀರಿಕೊಂಡು ಅಲ್ಲಾವುದ್ದೀನ್ ಸಿಕಂದರ್ ಷಹ ಸುಲ್ತಾನನಾದ. ಈತನ ಬಳಿಕ, 1394 ಮಾರ್ಚ್ ತಿಂಗಳಲ್ಲಿ ಸರ್ವಾರ್ ಅನೇಕರ ಮನವೊಲಿಸಿಕೊಂಡು ಮುಹಮ್ಮದನ ಕೊನೆಯ ಮಗನಾದ ಮಹಮೂದನನ್ನು ಪಟ್ಟಕ್ಕೇರಿಸಿದ.

ಇಷ್ಟರಲ್ಲಿ ಜೌನ್‌ಪುರದಲ್ಲಿ ಅಶಾಂತ ಪರಿಸ್ಥಿತಿ ತಲೆದೋರಿದ ಕಾರಣ ಮಹಮೂದ್ ಸರ್ವಾರನನ್ನು ಅಲ್ಲಿಗೆ ಕಳುಹಿಸಿದ. ಸುಲ್ತಾನಸ್ ಷಾರ್ಖ್ ಎಂಬ ಬಿರುದನ್ನು ಪಡೆದು ಅಲ್ಲಿಗೆ ಬಂದ ಸರ್ವಾರ್ ಎಟಾವ, ಕೋಲಿ, ಕನೌಜ್ ಮುಂತಾದ ಕಡೆಗಳಲ್ಲಿ ತಲೆದೋರಿದ್ದ ಗಲಭೆಗಳನ್ನು ಅಡಗಿಸಿ ಕ್ರಮೇಣ ಅಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡ. ಇಷ್ಟರಲ್ಲಿ ತೈಮೂರ ದೆಹಲಿಯ ಮೇಲೆ ದಂಡೆತ್ತಿ ಬಂದ. ತತ್ಪರಿಣಾಮವಾಗಿ ಉಂಟಾದ ಅನಿಶ್ಚಿತ ಪರಿಸ್ಥಿತಿಯ ಲಾಭ ಪಡೆದು ಸರ್ವಾರ್ ಜೌನ್‌ಪುರದಲ್ಲಿ ಸ್ವಾತಂತ್ರ್ಯ ಘೋಷಿಸಿಕೊಂಡು ಆ ಸುತ್ತಲಿನ, ಎಂದರೆ ಕನೌಜಿನಿಂದ ಬಿಹಾರದ ವರೆಗಿನ, ಪ್ರದೇಶದ ಸುಲ್ತಾನನಾದ. ಹೀಗೆ ಅಲ್ಲಿ ಷಾರ್ಖ್ ಮನೆತನ ಅಸ್ತಿತ್ವಕ್ಕೆ ಬಂತು. ಅನಂತರ ಇವನು ಈಗಿನ ಅಲೀಗಢ, ಮೊರಾದಾಬಾದ್, ಮೈನ್‌ಪುರಿ ಜಿಲ್ಲೆ ಮುಂತಾದವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಸು. 5 ವರ್ಷಗಳ ಆಳ್ವಿಕೆಯ ಬಳಿಕ ಆಕಸ್ಮಿಕವಾಗಿ 1399ರಲ್ಲಿ ಸರ್ವಾರ್ ಮರಣ ಹೊಂದಿದ. ದೆಹಲಿಯ ಸುಲ್ತಾನನ ಕೈಕೆಳಗೆ ನುರಿತ ಅಧಿಕಾರಿಯೂ ಸೇನಾನಿಯೂ ಆಗಿದ್ದ ಈತ ಶೀಘ್ರದಲ್ಲಿ ತನ್ನ ರಾಜ್ಯದಲ್ಲಿ ಸುವ್ಯವಸ್ಥಿತವಾದ ಆಡಳಿತ ರೂಪಿಸಿದ.

ಅತೃಪ್ತರಾಗಿದ್ದ ಪ್ರಜೆಗಳನ್ನೂ ಭೂಮಾಲೀಕರನ್ನೂ ತನ್ನ ನಿಷ್ಠಾವಂತ ಪ್ರಜೆಗಳಾಗುವಂತೆ ಮನವೊಲಿಸಿಕೊಂಡ. ರಾಜಧಾನಿಯಲ್ಲಿ ಅನೇಕ ಕಟ್ಟಡಗಳನ್ನು ಕಟ್ಟಿಸಿ ಅದನ್ನು ಹೆಚ್ಚು ಸುಂದರವಾದ ನಗರವನ್ನಾಗಿ ಮಾಡಿದ. ಬಹು ಬೇಗ ಅದು ಸಾಹಿತ್ಯ ಸಂಸ್ಕೃತಿಗಳ, ಸೌಂದರ್ಯದ ನೆಲೆವೀಡಾಗಿ ಅನೇಕರ ಮೆಚ್ಚುಗೆ ಪಡೆಯಿತು. **(ಆರ್.ಜಿ.ಎಸ್.; ಜಿ.ಬಿ.ಆರ್.)**

**4 ಖ್ವಾಜಾ ಇ ಜಹಾನ್ ತುರ್ಕ್:** ಬಹಮನಿ ರಾಜ್ಯದ ಸುಲ್ತಾನನಾಗಿದ್ದ ಹುಮಾಯೂನ್ ಷಹನ (1458–61) ಪ್ರಧಾನಿಯಾಗಿದ್ದ ಮಹಮ್ಮದ್ ಗವಾನನ ಸಹೋದ್ಯೋಗಿ. ಸುಲ್ತಾನನ ಪ್ರತಿಸ್ಪರ್ಧಿಯಾಗಿದ್ದ ಸಿಕಂದರನನ್ನು ಕದನದಲ್ಲಿ ಸೋಲಿಸುವುದರಲ್ಲಿ ಇವರಿಬ್ಬರೂ ಸುಲ್ತಾನನಿಗೆ ನೆರವಾದರು. ಸಿಕಂದರ್ ಪ್ರಾಣ ಕಳೆದುಕೊಂಡ. ಸಿಕಂದರನಿಗೆ ವೆಲಮವಂಶದ ಲಿಂಗ ಸಹಾಯ ಮಾಡಿದನೆಂಬ ಕಾರಣದಿಂದ ಇವರು ಆತನ ಮೇಲೆ ದಂಡೆತ್ತಿ ಹೋಗಿ ದೇವರಕೊಂಡ ಕೋಟೆಯನ್ನು ಮುತ್ತಿದರು. ಲಿಂಗನ ಸಹಾಯಕ್ಕೆ ಗಜಪತಿ ವಂಶದ ಹಮ್ಮೀರ ಧಾವಿಸಿ ಸುಲ್ತಾನನ ಸೈನ್ಯವನ್ನು ಸೋಲಿಸಿದ.

ಹುಮಾಯೂನ್ 1461ರಲ್ಲಿ ಮಡಿದ. ಆತನ ಅನಂತರ ಆತನ ಎಂಟು ವರ್ಷದ ಮಗನಾದ ಅಹ್ಮದ್‍ಖಾನ್ (3ನೆಯ ನಿಜಾಮುದ್ದೀನ್ ಅಹ್ಮದ್) ಪಟ್ಟಕ್ಕೆ ಬಂದ. ಈತ ಪ್ರಾಪ್ತವಯಸ್ಕನಾಗುವ ತನಕ ರಾಜ್ಯದ ಆಡಳಿತವನ್ನು ನಡೆಸಲು ವಿಧವೆಯಾದ ರಾಣಿ ಮಕ್ದುಮಾ-ಇ-ಜಹಾನ್ ನರ್ಗಿಸ್ ಬೇಗಂ ಒಂದು ಅಧಿಕಾರ ಮಂಡಳಿಯನ್ನು ನೇಮಿಸಿದಳು. ಆಕೆಯೂ ಖ್ವಾಜಾ ಜಹಾನ್ ತುರ್ಕ್, ಮಹಮ್ಮದ್ ಗವಾನ್ ಇವರೂ ಆ ಮಂಡಳಿಯಲ್ಲಿದ್ದರು. ಆ ವೇಳೆಗೆ ಬಹಮನಿಯಲ್ಲಿ ಹೊಸದಾಗಿ ಹೊರಗಿನಿಂದ ಬಂದ ಮಹಮ್ಮದೀಯರ ಒಂದು ಪಂಗಡವಾದ ಅಫಕಿಗೂ ಅಲ್ಲಿಯೇ ಇದ್ದ. ಹೆಚ್ಚಾಗಿ ಮತಾಂತರಗೊಂಡ, ಮಹಮ್ಮದೀಯರ ಇನ್ನೊಂದು ಪಂಗಡವಾದ ದಖನಿಗೂ ನಡುವೆ ಭಿನ್ನಾಪ್ರಾಯಗಳು ತಲೆದೋರಿದುವು. ಗವಾನ್ ಹೊರಗಿನಿಂದ ಬಂದವನೆಂದು ಪರಿಗಣಿತನಾಗಿದ್ದ ಕಾರಣ, ಆತ ರಾಜ್ಯದ ನೀತಿಯನ್ನು ಬಹಳ ಜಾಗರೂಕತೆಯಿಂದ ರೂಪಿಸಬೇಕಾಗುತ್ತಿತ್ತು. ಈ ನಾಯಕತ್ರಯರ ಆಡಳಿತ ದಕ್ಷರೀತಿಯಲ್ಲಿ ನಡೆಯುತ್ತಿತ್ತು. ಆಡಳಿತದ ಮೊದಲ ಹೆಜ್ಜೆಯಾಗಿ ಎಲ್ಲ ರಾಜಕೀಯ ಕೈದಿಗಳಿಗೂ ಕ್ಷಮಾದಾನವಿತ್ತು ಅದುವರೆಗೆ ಸರ್ಕಾರಿ ಸೇವೆಯಲ್ಲಿಲ್ಲದಿದ್ದ ಪಂಡಿತರಿಗೂ ದಕ್ಷರಿಗೂ ಸೇವಾಸೌಕರ್ಯಗಳನ್ನು ಏರ್ಪಡಿಸಿದರು. ಇಷ್ಟಾದರೂ ಎರಡೂ ಪಂಗಡಗಳ ನಡುವೆ ದ್ವೇಷಭಾವನೆಗಳು ಹೊಗೆಯಾಡುತ್ತಲೇ ಇದ್ದುವು.

ಹುಡುಗನೊಬ್ಬ ಸಿಂಹಾಸನಾರೂಢನಾದುದನ್ನು ತಿಳಿದ ನೆರೆಯ ಅರಸರು ಬಹಮನಿ ರಾಜ್ಯದ ಮೇಲೆ ದಂಡೆತ್ತಿ ಬಂದರು. ಹಾಗೆ ಬಂದವರಲ್ಲಿ ಮೊದಲಿಗ ಒರಿಸ್ಸದ ಗಜಪತಿ ವಂಶದ ಕಪಿಲೇಶ್ವರ. ಆದರೆ ಈತ ರಾಜಧಾನಿಯ ವರೆಗೂ ನಿರಾಯಾಸವಾಗಿ ಬಂದರೂ ಅಲ್ಲಿ ಸೋಲನ್ನನುಭವಿಸಿ ಓಡಿಹೋದ. ಖಾಂದೇಶದ ಸುಲ್ತಾನ ಹಾಗೂ ಕಪಿಲೇಶ್ವರರೊಡಗೂಡಿ ಮಾಲವದ ಮಹಮೂದ್ ಖಿಲ್ಜಿ ಈ ರಾಜ್ಯದ ಮೇಲೆ ದಂಡೆತ್ತಿ ಬಂದಾಗ ಖ್ವಾಜಾ ಇ ಜಹಾನ್ ಇತರರೊಡಗೂಡಿ ರೋಷಾವೇಶದಿಂದ ಹೋರಾಡಿದ. ಹುಡುಗನಾಗಿದ್ದ ಸುಲ್ತಾನನೂ ಇದರಲ್ಲಿ ಸ್ವತಃ ಪಾಲ್ಗೊಂಡಿದ್ದ. ಆದರೆ ಸೈನ್ಯದಲ್ಲಿದ್ದ ಒಂದು ಆನೆ ಒಮ್ಮೆ ರೊಚ್ಚಿಗೆದ್ದಾಗ ಸುಲ್ತಾನ ಕುಳಿತಿದ್ದ ಕುದುರೆ ಸಹ ದಿಕ್ಕೆಟ್ಟು ಓಡಿತು. ಆಗ ಸಿಕಂದರ್ ಖಾನ್ ಸುಲ್ತಾನನನ್ನು ಕಷ್ಟದಿಂದ ರಕ್ಷಿಸಿದ. ಖ್ವಾಜಾ ಇ ಜಹಾನ್, ಗವಾನ್ ಮತ್ತು ಇತರರು ದಿಗ್ಭ್ರಾಂತರಗಿ ಬಿದರೆಗೆ ಹಿಂದಿರುಗಿ ಸುಲ್ತಾನನ ಪ್ರಾಣವನ್ನು ಉಳಿಸಲು ಅಲ್ಲಿಂದ ಗುಲ್ಬರ್ಗದ ಸಮೀಪವಿರುವ ಫಿರೂಜಾಬಾದಿಗೆ ಓಡಿದರು. ಅಲ್ಲಿಂದ ಗುಜರಾತಿನ ಸುಲ್ತಾನನ ಸಹಾಯ ಪಡೆದು ಖಿಲ್ಜಿಯನ್ನು ಕೊನೆಗೂ ಹಿಮ್ಮೆಟ್ಟಿಸಿದರು. ಮಹಮೂದ್ ಖಿಲ್ಜಿಯನ್ನು ಖ್ವಾಜಾ ಇ ಜಹಾನ್ ಅಟ್ಟಿಸಿಕೊಂಡುಹೋದ (1462).

ಆದರೆ 1463ರಲ್ಲಿ ಸುಲ್ತಾನ್ ಅಹಮ್ಮದ್ ತನ್ನ ಮದುವೆಯ ರಾತ್ರಿ ಅಕಸ್ಮಾತ್ ಮರಣಹೊಂದಿದ. ಅವನ ಅನಂತರ ಆತನ ತಮ್ಮ ಮಹಮ್ಮದ್‍ಖಾನ್ 3ನೆಯ ಷಂಸುದ್ದೀನ್ ಮಹಮ್ಮದ್ ಎಂಬ ಬಿರುದಿನಿಂದ ಸಿಂಹಾಸನಾರೂಢನಾದ. ಇದಾದ ಕೆಲವೇ ದಿನಗಳಲ್ಲಿ ಖ್ವಾಜಾ ಇ ಜಹಾನ್ ತುಂಬಿದ ರಾಜಸಭೆಯಲ್ಲಿ ಕೊಲೆಗೆ ಈಡಾದ. ದುರಾದೃಷ್ಟವಶಾತ್ ಆ ವೇಳೆಗೆ ಈತ ತನ್ನ ದುಡುಕಿನ ಪ್ರವೃತ್ತಿಯಿಂದಾಗಿ ರಾಣಿಯ ವಿಶ್ವಾಸ ಕಳೆದುಕೊಂಡಿದ್ದ. ಹಿಂದಿನ ಸುಲ್ತಾನನನ್ನು ರಣರಂಗದಲ್ಲಿ ಕಾಪಾಡಿದ ಸಿಕಂದರನನ್ನು ಈತ ಸೆರೆಮನೆಗೆ ಕಳುಹಿಸಿದುದೂ ಒಂದು ಕಾರಣ. ಜೊತೆಗೆ, ಅಧಿಕಾರ ಮದದಿಂದ ಪ್ರಜಾಪೀಡಕನಾಗಿ ಜನತೆಯ ವಿಶ್ವಾಸವನ್ನೂ ಕಳೆದುಕೊಂಡಿದ್ದ. ಈ ಎಲ್ಲ ಕಾರಣಗಳಿಂದ ಇವನ ಸಾವು ಯಾರಿಗೂ ಖೇದವನ್ನುಂಟುಮಾಡಲಿಲ್ಲ.

ಖ್ವಾಜಾ ಇ ಜಹಾನ್ ತುರ್ಕನ ಮರಣದೊಂದಿಗೆ ನಾಯಕತ್ರಯರ ಆಡಳಿತ ಕೊನೆಗೊಂಡಿತು. ರಾಣಿ ರಾಜಕೀಯದಿಂದ ಹಿಂದೆ ಸರಿದಳು. ಮಹಮ್ಮದ್ ಗವಾನ್ ಪ್ರಧಾನಿಯಾಗಿ ನೇಮಕಗೊಂಡು ಸುಲ್ತಾನನಿಂದ ಖ್ವಾಜ ಇ ಜಹಾನನೆಂಬ ಬಿರುದು ಪಡೆದ. ಆದರೆ ಇತಿಹಾಸದಲ್ಲಿ ಈತ ಹೆಚ್ಚಾಗಿ ಗವಾನನೆಂದೇ ಪ್ರಸಿದ್ಧನಾಗಿದ್ದಾನೆ.

**5 ಖ್ವಾಜಾ ಸುರೂರ್:** ದಕ್ಷಿಣ ಭಾರತದ ಮಧುರೆಯಲ್ಲಿ 1344–45ರಿಂದ ಆಳತೊಡಗಿದ ಸುಲ್ತಾನ್ ನಸೀರುದ್ದೀನನ ವಜೀರನಾಗಿದ್ದ ಬದ್ರುದ್ದೀನ್ ಮರಣ ಹೊಂದಿದಾಗ ಆತನ ಸ್ಥಾನಕ್ಕೆ ನೇಮಕಗೊಂಡಿದ್ದ ಖ್ವಾಜಾ ಸುರೂರನಿಗೆ (ನೌಕಾದಳದ ಅಧಿಪತಿ) ಖ್ವಾಜಾ ಇ ಜಹಾನ್ ಎಂಬ ಬಿರುದು ಕೊಡಲಾಗಿತ್ತು. ಯಾರೇ ಆಗಲಿ ತನ್ನನ್ನು ಬೇರಾವ ರೀತಿ ಸಂಬೋಧಿಸಿದರೂ ಅವರು ನಿಗದಿಯಾದ ದಿನಾರಗಳನ್ನು ದಂಡವಾಗಿ ಕೊಡಬೇಕೆಂದು ಆತ ವಿಧಿಸಿದ್ದ. ದೆಹಲಿಯ ಸುಲ್ತಾನನ ಪದ್ಧತಿಯನ್ನು ಅನುಸರಿಸಿದ್ದು ಇವನ ಇಂಥ ಪ್ರತಿಷ್ಠೆಗೆ ಕಾರಣವಾಗಿತ್ತು. **(ಜಿ.ಬಿ.ಆರ್.)**

# ಗ

ಕನ್ನಡ ವರ್ಣಮಾಲೆಯಲ್ಲಿನ ಕವರ್ಗದಲ್ಲಿ ಮೂರನೆಯದು. ಅಲ್ಪಪ್ರಾಣಾಕ್ಷರ. ಇದರ ಅತ್ಯಂತ ಪ್ರಾಚೀನ ಸ್ವರೂಪವನ್ನು ಅಶೋಕನ ಕಾಲದ ಬ್ರಾಹ್ಮೀ ಶಾಸನಗಳಲ್ಲಿ ಕಾಣಬಹುದು. ಕೆಳಭಾಗದ ರೇಖೆಯಿಲ್ಲದಿರುವ ಸಮಭುಜ ತ್ರಿಕೋಣದಂತೆ ಕಾಣುವ ಮೌರ್ಯರ ಕಾಲದ ಈ ಅಕ್ಷರದ ಸ್ವರೂಪ ಶಾತವಾಹನ ಕಾಲದಲ್ಲಿ ದುಂಡಗಾಗಿ ಹಿಡಿ ಮತ್ತು ನಾಲಗೆ ಇಲ್ಲದ ಘಂಟಾಕೃತಿಯನ್ನು ತಾಳುತ್ತದೆ. ಕದಂಬರ ಶಾಸನಗಳಲ್ಲಿ ಪೇಟಿಕಾಶಿರದ ತಲೆಕಟ್ಟು ಬಂದು ಸೇರುತ್ತದೆ. ಅಲ್ಲಿಂದ ಮುಂದೆ ಈ ಅಕ್ಷರ ಹೆಚ್ಚು ಬದಲಾವಣೆಗಳಿಲ್ಲದೆ ಮುಂದುವರಿದು ಈಗಿರುವ ರೂಪವನ್ನು ತಾಳುತ್ತದೆ. ಪ್ರಾಚೀನ

**ಅಶೋಕ ಪ್ರ.ಶ.ಪೂ. ೩ನೆಯ ಶತಮಾನ**

**ಶಾತವಾಹನ ಪ್ರ.ಶ.ಪೂ. ೨ನೆಯ ಶತಮಾನ**

**ಕದಂಬ ೫ನೆಯ ಶತಮಾನ**

**ಗಂಗ ೬ನೆಯ ಶತಮಾನ**

**ಬಾದಾಮಿ ಚಳುಕ್ಯ ೬ನೆಯ ಶತಮಾನ**

**ರಾಷ್ಟ್ರಕೂಟ ೯ನೆಯ ಶತಮಾನ**

**ಕಲ್ಯಾಣಿಚಾಳುಕ್ಯ ಪ್ರ.ಶ. ೧೧ನೆಯ ಶತಮಾನ**

**ಕಳಚೂರಿ, ಹೊಯ್ಸಳ ಮತ್ತು ಸೇವುಣ ೧೩ನೆಯ ಶತಮಾನ**

**ವಿಜಯನಗರ ೧೫ನೆಯ ಶತಮಾನ**

**ಮೈಸೂರು ಅರಸರು ೧೮ನೆಯ ಶತಮಾನ**

ಬ್ರಾಹ್ಮೀ ಲಿಪಿಯಿಂದ ಹೆಚ್ಚು ಬದಲಾವಣೆ ಹೊಂದದ ಅಕ್ಷರಗಳಲ್ಲಿ ಇದು ಮುಖ್ಯವಾದುದು. ಈ ಅಕ್ಷರ ಕಂಠ್ಯ ಘೋಷ ಸ್ಪರ್ಶಧ್ವನಿಯನ್ನು ಸೂಚಿಸುತ್ತದೆ. (ಎ.ವಿ.ಎನ್.)

**ಗಂಗ್‌ಟೋಕ್ :** ಭಾರತ ದೇಶದ ಉತ್ತರ ದಿಕ್ಕಿನಲ್ಲಿರುವ ಸಿಕ್ಕಿಂ ರಾಜ್ಯದ ರಾಜಧಾನಿ ಡಾರ್ಜಿಲಿಂಗಿನ ಈಶಾನ್ಯಕ್ಕೆ 45 ಕಿ.ಮೀ. ದೂರದಲ್ಲಿ ಭಾರತ–ಟಿಬೆಟ್ ನಡುವಣ ವ್ಯಾಪಾರ ಮಾರ್ಗದಲ್ಲಿ ಉ.ಅ. 27° 20' ಪೂ.ರೇ. 88° 38' ಮೇಲೆ ಸಮುದ್ರ ಮಟ್ಟಕ್ಕೆ 1700 ಮೀ. ಎತ್ತರದಲ್ಲಿ ಇದೆ. ಜನಸಂಖ್ಯೆ 29,162 (2001). ಸಿಕ್ಕಿಂ ರಾಜ್ಯ ಬೆಟ್ಟಗಳಿಂದ ಆವೃತವಾದದ್ದು. ಪರ್ವತಪ್ರದೇಶವಾಗಿರುವುದರಿಂದ ಇಲ್ಲಿ ಹೆಚ್ಚಿನ ಆಧುನಿಕ ವಾಹನ ಸೌಕರ್ಯಗಳಿಲ್ಲ. 1954 ರಲ್ಲಿ ಸಿಕ್ಕಿಂನಲ್ಲಿ ಸಪ್ತವಾರ್ಷಿಕ ಯೋಜನೆ ಜಾರಿಗೆ ಬರುವ ಮುನ್ನ ಗಂಗ್‌ಟೋಕ್‌ಗೂ ಬಂಗಾಳ–ಸಿಕ್ಕಿಂ ಗಡಿಯ ಬಳಿಯಲ್ಲಿರುವ ರಂಗ್‌ಪೊಗೂ ನಡುವೆ 48 ಕಿಮೀ. ದೂರದ ಮೋಟರ್ ಹೆದ್ದಾರಿ ಮಾತ್ರ ಇತ್ತು. 1954ರ ಅನಂತರ ಗಂಗ್‌ಟೋಕ್‌ನಿಂದ ದಕ್ಷಿಣಕ್ಕೂ ಉತ್ತರದಲ್ಲಿರವ ಲಾಚೆನ್‌ಗೂ ಜೀಪ್ ದಾರಿಗಳೂ ಮೋಟರು ಹೆದ್ದಾರಿಗಳೂ ನಿರ್ಮಾಣವಾದುವು. ಇದರಿಂದಾಗಿ ಉತ್ತರ ಸಿಕ್ಕಿಂನಿಂದ ರಾಜ್ಯದ ದಕ್ಷಿಣ ಭಾಗಗಳಿಗೆ ಅರಣ್ಯೋತ್ಪನ್ನ, ಸೇಬು, ಆಲೂಗಡ್ಡೆ ಮುಂತಾದವನ್ನು ಸಾಗಿಸುವ ಸೌಲಭ್ಯ ಏರ್ಪಟ್ಟಿತು. ರಿಷಿ, ಜೆಲೆಪ್ಲಗಳಿಂದ ಗಂಗ್‌ಟೋಕ್‌ಗೆ ಇದ್ದ ಕುದುರೆಮಾರ್ಗ ಜೀಪ್ ದಾರಿಯಾಗಿ ಪರಿವರ್ತನೆಗೊಂಡಿದೆ. ಗಂಗ್‌ಟೋಕ್‌ಗೂ ಸಿಕ್ಕಿಂನ ಇತರ ಸ್ಥಳಗಳಿಗೂ ಈಗ ತಕ್ಕಮಟ್ಟಿನ ರಸ್ತೆ ಸಂಪರ್ಕ ಏರ್ಪಟ್ಟಿದೆ.

ಗಂಗ್‌ಟೋಕ್‌ನಲ್ಲಿ ಸಿಕ್ಕಿಂ ರಾಜನ ಅರಮನೆ, ಮಂತ್ರಿಮಂಡಲದ ಸದಸ್ಯರ ನಿವಾಸ ಸ್ಥಾನಗಳು ಮತ್ತು ಸರ್ಕಾರಿ ಸೌಧಗಳಲ್ಲದೆ ಶಾಲೆಕಾಲೇಜುಗಳು, ಜೈಲು, ಆಸ್ಪತ್ರೆಗಳು ಉಂಟು. ಇಲ್ಲಿಂದ ನೈರುತ್ಯಕ್ಕೆ 6.4 ಕಿ.ಮೀ. ದೂರದಲ್ಲಿ ರೂಮ್‌ಟೆಮ್‌ನ ಬೌದ್ಧ ಮಠವಿದೆ. ಬೇಳೆ, ಮೆಕ್ಕೆಜೋಳ, ಅಕ್ಕಿ, ಕಿತ್ತಳೆಹಣ್ಣು–ಇವು ಇಲ್ಲಿ ವ್ಯಾಪಾರವಾಗುವ ಪ್ರಮುಖ ಸರಕುಗಳು. *

**ಗಂಗ :** ಕನ್ನಡದಲ್ಲಿ ಈ ಹೆಸರಿನ ಇಬ್ಬರು ಕವಿಗಳಿದ್ದಾರೆ. ಇವರಲ್ಲಿ ಮೊದಲನೆಯವ ಪಾಂಚಾಳದವನಾಗಿದ್ದು ಕುಮಟಿರಾಮನ ಕಥೆಯನ್ನು ಬರೆದಿರುವವನೆಂದೂ ಇವನ ಕಾಲ ಸು. 1650 ಆಗಿರಬಹುದೆಂದೂ ಕವಿಚರಿತ್ರೆಕಾರರ ಅಭಿಪ್ರಾಯ. ಈತನನ್ನು ಪಾಂಚಾಳಗಂಗನೆಂದೇ ನಿರ್ದೇಶಿಸುವುದುಂಟು. ಇತ್ತೀಚೆಗೆ ಈ ವಿಚಾರವಾಗಿ ನಡೆದಿರುವ ಸಂಶೋಧನೆಗಳಿಂದ ಹೆಚ್ಚು ವಿಚಾರಗಳೇನೂ ತಿಳಿದುಬರದಿದ್ದರೂ ಈ ಕವಿಯಿಂದ ರಚಿತವಾಗಿರುವ ಕುಮಾರರಾಮನ ಸಾಂಗತ್ಯ ತುಂಬ ಕುತೂಹಲಕಾರಿಯಾದುದೆಂದು ವಿದಿತವಾಗುತ್ತದೆ. ಕನ್ನಡದ ಕಡುಗಲಿಯಾದ ಕುಮಾರರಾಮನನ್ನು ಕುರಿತು ನಂಜುಂಡ, ಪಾಂಚಾಳಗಂಗ ಮತ್ತು ಮಹಲಿಂಗಸ್ವಾಮಿ ಎಂಬ ಮೂವರು ಕವಿಗಳು ಸಾಂಗತ್ಯಕೃತಿಗಳನ್ನು ರಚಿಸಿರುತ್ತಾರೆ. ಇವುಗಳಲ್ಲಿ ನಂಜುಂಡನ ಕೃತಿ ಪ್ರೌಢವೆನ್ನಿಸಿದರೆ, ಪಾಂಚಾಳಗಂಗನ ಕೃತಿ ತುಂಬ ಸರಳವೂ ಸಂಕ್ಷಿಪ್ತವೂ ಎಲ್ಲಕ್ಕಿಂತ ಹೆಚ್ಚಾಗಿ ಹಲವು ಪಾಠ ಪ್ರಭೇದಗಳನ್ನುಳ್ಳದೂ ಆಗಿದೆ. ಮಹಲಿಂಗಸ್ವಾಮಿಯ ರಚನೆಯಲ್ಲಿ ಮುಖ್ಯಕಥೆಗಿಂತ ಉಪಕಥೆಗಳೇ ಹೆಚ್ಚು. ಗಂಗ ತನ್ನನ್ನು ಕುರಿತು ಹೇಳಿಕೊಳ್ಳುವಾಗ ಕನ್ನಡ ಕವಿಜಾಣ ರನ್ನದ ಪದಜಾತಿ ಮುನ್ನಿನ ಪಂಚಾಸ್ಯ ಚನ್ನಭುಜಂಗನ ಭೃತ್ಯ ಗಂಗಯ್ಯ–ಎಂದು ತಿಳಿಸುವುದರಿಂದ ಈತ ಶಿವಭಕ್ತನೆಂತಲೂ ಇವನಿಗೆ 'ಕನ್ನಡ ಕವಿಜಾಣ' ಎಂಬ ಬಿರುದೋ ಇಲ್ಲವೇ ಆಪ್ತವಾದ ಮತ್ತೊಂದು ಹೆಸರೋ ಇದ್ದಿರಬಹುದೆಂದೂ ಊಹಿಸಬಹುದು. ಪೂರ್ವಕವಿಗಳನ್ನು ಸ್ತುತಿಸಿರುವ ಒಂದು ಪದ್ಯವಿದ್ದರೂ ಅದು ಹಲವಾರು ಪಾಠಾಂತರಗಳಿಂದ ಕೂಡಿರುವುದರಿಂದ ಆ ಮೂಲಕ ಕವಿಯ ಕಾಲವನ್ನು ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಈತ ತನ್ನ ಇಷ್ಟದೇವತೆಯಾದ ನಂಜನಗೂಡಿನ ನಂಜುಂಡನನ್ನೂ ತಗಡೂರಿನ ವಿನಾಯಕನನ್ನೂ ಸ್ತುತಿಸುವುದರಿಂದ ಈ ಕಡೆಯವನಿರಬಹುದೆಂದು ಭಾವಿಸಬಹುದು. ಇವನ ಕೃತಿಯನ್ನುಳ್ಳ ಹಸ್ತಪ್ರತಿಗಳು ಹೇರಳವಾಗಿ ದೊರೆತರೂ ಅವು ಭಿನ್ನ ಭಿನ್ನವಾದ ಪಾಠಾಂತರಗಳಿಂದ ನಿಬಿಡವಾಗಿದೆ. ಆದರೆ ಕುಮಾರರಾಮನ ಚಿಕ್ಕಮ್ಮನಾದ ರತ್ನಾಜಿಯನ್ನು ಕುರಿತ ಕಥಾಭಾಗ ಮಾತ್ರ ಎಲ್ಲ ಪ್ರತಿಗಳಲ್ಲಿಯೂ ಬಹುಮಟ್ಟಿಗೆ ಒಂದೇ ತೆರನಾಗಿರುವುದುರಿಂದ ಮೂಲಕೃತಿ ಇಷ್ಟೇ ಇದ್ದಿರಬಹುದೆಂದು ಊಹಿಸಲು ಅವಕಾಶವಿದೆ. ಈ ತನಕ ದೊರೆತಿರುವ ಹಸ್ತಪ್ರತಿಗಳಲ್ಲಿ ಸು. 1698ಕ್ಕೆ ಸೇರಿದುದೇ ಪ್ರಾಚೀನವಾಗಿರುವುದರಿಂದ ಕವಿಯ ಕಾಲವನ್ನು ಆರ್. ನರಸಿಂಹಾಚಾರ್ಯರು ಸೂಚಿಸಿರುವಂತೆ ಸು. 1650 ಎಂದು ಅಂಗೀಕರಿಸಬಹುದು. ನಂಜುಂಡನ ಕಾವ್ಯದ ಪ್ರಭಾವ ಇವನ ಕಾವ್ಯದ ಮೇಲೆ ಆಗದಿದ್ದರೂ ಈತನ ಕಾವ್ಯದ ಪ್ರಭಾವ ಮಹಾಲಿಂಗಸ್ವಾಮಿಯ ಕೃತಿಯ ಮೇಲೆ ಆಗಿದೆಯೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಈತನ ಕಥಾನಿರೂಪಣೆ, ಸರಳ ಶೈಲಿ ಘಟನಾ ಪ್ರಾಧಾನ್ಯಗಳನ್ನು ಗಮನಿಸಿದರೆ 'ಸಕ್ಕರೆ ಸವಿಯಂತೆ ಮಧುರ ಮಾವಿನ ಹಣ್ಣ ಉಕ್ಕುವ ತನಿರಸದಂತೆ, ಮಕ್ಕಳ ನಸುನಗೆಯಂತೆ ಗಂಗನ ಮಾತು ಸತ್ಕವಿಗಳು ಲಾಲಿಪುದು' ಎಂದು ಹೇಳಿಕೊಂಡಿರುವುದನ್ನು ಸ್ವಲ್ಪಮಟ್ಟಿಗಾದರೂ ಒಪ್ಪಿಕೊಳ್ಳಬಹುದು. ಸು. 2,000 ಪದ್ಯಗಳಿಂದ ಹಿಡಿದು ಸು. 5,000 ಪದ್ಯಗಳವರೆಗೆ ಇವನ ಹಸ್ತಪ್ರತಿಗಳಲ್ಲಿ ಅಂತರ ಕಂಡುಬರುವುದರಿಂದ ಈ ಕೃತಿಯ ಮೂಲ ಪಾಠವನ್ನು ನಿರ್ಣಯಿಸುವ ತನಕ ಸದ್ಯಕ್ಕೆ ಹೆಚ್ಚಾಗಿ ಏನೂ ಹೇಳುವಂತಿಲ್ಲ. ಈತನ ಕಾವ್ಯಭಾಗಗಳನ್ನು ಅಲ್ಲಲ್ಲಿಯೆ ಹಾಡುವ ಪದ್ಧತಿ ಈಗಲೂ ಕಂಡುಬರುವುದರಿಂದ ಕುಮಾರರಾಮನನ್ನು ಕುರಿತ ಸಾಂಗತ್ಯ ಕೃತಿಗಳಲ್ಲಿ ಇದು ಅತ್ಯಂತ ಜನಪ್ರಿಯವಾದುದು ಎಂದು ಹೇಳಬಹುದು.

ಎರಡನೆಯವನಾದ ಗಂಗ ಗಿರಿಜಾಕಲ್ಯಾಣವೆಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತ ಬ್ರಾಹ್ಮಣನಿರಬೇಕೆಂದೂ ಸ್ಥಳ ಶಿವಗಂಗೆಯೆಂದೂ ಕಾಲ ಸು. 1750 ಆಗಿರಬಹುದೆಂದೂ ಕವಿಚರಿತೆಕಾರರು ತಿಳಿಸಿರುತ್ತಾರೆ. (ವಿ.ಜಿ.)

**ಗಂಗರ ಮೂರ್ತಿಶಿಲ್ಪ, ತಲಕಾಡಿನ :** ತಲಕಾಡಿನ ಗಂಗರ, ಮೂರ್ತಿ ಶಿಲ್ಪ ವಾಸ್ತುಶಿಲ್ಪದಂತೆ ಪಲ್ಲವ ಶಿಲ್ಪದಿಂದಲೆ ಸ್ಫೂರ್ತಿ ಪಡೆದು ಬೆಳೆದಿದ್ದರೂ ತನ್ನದೇ ಆದ ಹಲವು ವಿಶಿಷ್ಟ ಗುಣಗಳನ್ನು ಪಡೆದಿದೆ. ಗಟ್ಟಿಕಲ್ಲಿನ ಮೇಲೆ ತೆಳುವಾಗಿ ಮೂರ್ತಿಗಳನ್ನು ಬಿಡಿಸಿ ಕೇವಲ ಕೆಲವು ರೇಖೆಗಳಿಂದಲೆ ಮೂರ್ತಿಯ ಭಾವವನ್ನು ಅಭಿವ್ಯಕ್ತಗೊಳಿಸುವ ಬೌದ್ಧ ಶಿಲ್ಪದ ರೀತಿಯಿಂದ ಹಿಡಿದು ಗುಂಡಾಗಿ ಪೂರ್ಣ ರೂಪದಲ್ಲಿ ಬಿಡಿಸಿದ ಮೂರ್ತಿಗಳವರೆಗೂ ಗಂಗ ರೂವಾರಿಗಳು ಕಲೆಯನ್ನು ರೂಢಿಸಿಕೊಂಡಿದ್ದರು. ತೆಳುವುಬ್ಬು ಶಿಲ್ಪವೇ ಆಗಲಿ, ಪೂರ್ಣ ಗುಂಡು ರೂಪವೇ ಆಗಲಿ, ಅವು ತಾಳ ಲಯಬದ್ಧವಾಗಿದ್ದು, ಸರಳವಾಗಿ, ಭಾವಪೂರ್ಣವಾಗಿ, ನೈಜತೆಯನ್ನು ಪ್ರತಿಬಿಂಬಿಸುವಂತೆ ಕಂಡರಿಸುವ ರೀತಿ ಅವರಿಗೆ ಸಿದ್ಧಿಸಿತ್ತು. ಆದ್ದರಿಂದಲೇ ಅವರ ಕಾಲದ ಮೂರ್ತಿಶಿಲ್ಪಗಳು ಹೇರಳವಾಗಿಲ್ಲದಿದ್ದರೂ ಇರುವ ಕೆಲವೇ ಆದರೂ ಪ್ರಭಾವಯುಕ್ತವಾಗಿವೆ. ಇದರೊಂದಿಗೆ ಸ್ಥಳೀಯವಾಗಿ ಬೆಳೆಸಿಕೊಂಡಿದ್ದ ಶಿಲ್ಪ ಶೈಲಿಯಲ್ಲಿ ಅಲ್ಲಲ್ಲಿಯ ರೂವಾರಿಗಳು ಕಂಡರಿಸಿರುವ ಮೂರ್ತಿಶಿಲ್ಪ ಕೆಲಮಟ್ಟಿಗೆ ಒರಟುತನವನ್ನು ಪ್ರದರ್ಶಿಸಿದರೂ ಅದರಲ್ಲಿ ನೈಜತೆಯನ್ನು ಗುರುತಿಸಬಹುದು. ವೀರಗಲ್ಲುಗಳಲ್ಲಿ ಹೆಚ್ಚಾಗಿ ಇಂಥ ಶಿಲ್ಪವನ್ನು ಕಾಣಬಹುದು.

ಗರ್ಜಿಯ ಕಲ್ಲೇಶ್ವರ ದೇವಾಲಯದ ನವರಂಗದ ಕಂಬಗಳ ಬುಡದಲ್ಲಿ ಚೌಕನೆಯ ಮುಖಗಳ ಮೇಲೆ ಇರುವ ತೆಳುವುಬ್ಬು ಶಿಲ್ಪದಲ್ಲಿ ಕಂಡರಿಸಿರುವ ಹಲವು ಮೂರ್ತಿಗಳಲ್ಲಿ ಒಂದು ಬಗೆಯ ರೂಕ್ಷತೆಯಿದೆ. ಆದರೂ ಅದರಲ್ಲಿ ಕ್ರಿಯೆಯಿದೆ, ನೈಜತೆಯಿದೆ, ಮೂರ್ತಿಯ

ಮನೋಭಾವವನ್ನು ಹೊರಬಿಂಬಿಸುವಲ್ಲಿ ರೂವಾರಿ ಯಶಸ್ವಿಯಾಗಿದ್ದಾನೆ. ತೀಕ್ಷ್ಣವಾಗಿ ನರ್ತಿಸುತ್ತಿರುವ ಅಂಧಾರಿ, ಅವನ ಸುತ್ತಲೂ ನೆರೆದಿರುವ ವಾದ್ಯಕಾರರು, ಗಜಾಸುರನನ್ನು ಸೀಳಿ ಲೀಲಾನರ್ತನದಲ್ಲಿ ತೊಡಗಿರುವ ಅಷ್ಟಭುಜಮೂರ್ತಿ ಗಜಾರಿ, ಭೈರವ, ಅರ್ಧನಾರೀಶ್ವರ ಅಥವಾ ಹರಿಹರ, ಒಂದೊಂದು ಭಾವಪೂರ್ಣವಾಗಿ ಸತ್ತ್ವಯುತವಾಗಿವೆ. ಇದೇ ರೀತಿ ಆ ನಂದಿಯ ವೀರಭದ್ರ ದೇವಾಲಯದ ಮೆಟ್ಟಿಲುಗಳ ಎರಡು ಪಕ್ಕಗಳಲ್ಲಿಯೂ ನಿಲ್ಲಿಸಿರುವ ಪುರಾತನ ಗಂಗ ದೇವಾಲಯವೊಂದರ ಕಟಾಂಜನಗಳ ಮೇಲೆ ಬಿಡಿಸಿರುವ ನಟರಾಜ ತ್ರಿವಿಕ್ರಮ ಮೂರ್ತಿಗಳೂ ಭಾವ, ಭಂಗಿ, ಚಲನೆಗಳಲ್ಲಿ ಬಾದಾಮಿ ಚಲುಕ್ಯರ ಶಿಲ್ಪವನ್ನು ನೆನಪಿಗೆ ತರುತ್ತವೆ. ಇವುಗಳಿಗಿಂತಲೂ ತೆಳುವಾಗಿ ರೇಖಾಕೃತಿಯಂತೆಯೇ ಕಾಣುವ ರಾಮಾಯಣದ ಕಥೆಯನ್ನು ಬಿಡಿಸಿರುವ ವಿಶಿಷ್ಟವಾದ ಶಿಲ್ಪವನ್ನು ವರುಣದ ಮಹಲಿಂಗೇಶ್ವರ ದೇವಾಲಯದ ಗೋಡೆಯ ಮೇಲೆ ನೋಡಬಹುದು. ಲೋವೆಯ ಕೆಳಗೆ ದೇವಾಲಯದ ಸುತ್ತಲೂ ಚಿತ್ರಿಸಿರುವ ಒಂದು ಸಾಲು ಪಟ್ಟಿಕೆಯಲ್ಲಿ ಆಯಾ ಸನ್ನಿವೇಶಗಳು ಅರ್ಥವತ್ತಾಗಿ ಪ್ರತಿಬಿಂಬಿಸಿವೆ; ಕಿರಿದರಲ್ಲೆ ಹಿರಿಯ ಭಾವವನ್ನು ಸೆರೆ ಹಿಡಿದಿರುವ ಜಾಣ್ಮೆ ವ್ಯಕ್ತವಾಗಿದೆ.

ತೆಳುವುಬ್ಬು ಶಿಲ್ಪದಲ್ಲಿ ಬಿಡಿಸಿರುವ ನೂರಾರು, ವೀರಗಲ್ಲುಗಳ ಶಿಲ್ಪದ ರೀತಿ ಗಂಗರ ಕಾಲಕ್ಕೆ ವಿಶಿಷ್ಟವಾದ್ದು. ಇವಕ್ಕೆ ಮಾದರಿಯಾಗಿ ಹಿರೇಗುಂಡುಗಲ್ಲಿನ ವೀರಗಲ್ಲುಗಳಲ್ಲಿ ದ್ವಂದ್ವಯುದ್ಧದಲ್ಲಿ ನಿರತರಾಗಿರುವ ವೀರರನ್ನು ಶಿಲ್ಪಿಸಿರುವ ರೀತಿಯನ್ನು ನೋಡಬಹುದು. ಕೆಚ್ಚಿನಿಂದ ಮುಂದೆ ನುಗ್ಗಿ ಒಬ್ಬರನ್ನೊಬ್ಬರು ಎದುರಿಸುತ್ತಿರುವ ವೀರರ ಮುಖದಲ್ಲಿ

ಭೈರವ–ಕಲ್ಲೇಶ್ವರ ದೇವಾಲಯ, ಗರ್ಜಿ

ತೋರುವ ದೃಢತೆ ಸಾಹಸ ಧೈರ್ಯಗಳನ್ನು, ಅಂಗಸೌಷ್ಠವಗಳನ್ನು ಆಳವಿಲ್ಲದೆ ಸರಳವಾದ ಶಿಲ್ಪದಲ್ಲಿಯೇ ರೂವಾರಿ ಹೊಮ್ಮಿಸಿದ್ದಾನೆ, ಒಂದು ಯುದ್ಧದ ವಿಸ್ತಾರವಾದ ಚಿತ್ರಣವನ್ನೇ ಬಿಡಿಸಿರುವ ಬೇಗೂರಿನ ವೀರಗಲ್ಲು ಗಂಗರ ಕಾಲದ ಸ್ಥಳೀಯ ಶಿಲ್ಪರೀತಿಗೆ, ಸರಳತೆಗೆ, ನೈಜತೆಗೆ ಹೆಸರಾಗಿದೆ. ರಣರಂಗದ ತುಂಬ ಏಳುತ್ತಿರುವ, ಬೀಳುತ್ತಿರುವ, ಕತ್ತಿ ಬಿಲ್ಲು ಬಾಣಗಳನ್ನು ಹಿಡಿದು ಹೋಗುತ್ತಿರುವ ಹಲವು ಭಂಗಿಯ ಕಾಲಾಳುಗಳು, ಏಟು ತಿಂದು ಸತ್ತವರ ಹೆಣದ ರಾಶಿ, ಅವುಗಳ ನಡುವೆ ಕುದುರೆಯ ಮೇಲೆ ಕುಳಿತ ನಾಗತ್ತರ ವೀರಾವೇಶದಿಂದ ಹಿಮ್ಮೆಟ್ಟಿಸುತ್ತಿರುವ ಶತ್ರುವಿನ ಆನೆ, ಮೂಲೆಯೊಂದರಲ್ಲಿ ಹೆಣವನ್ನೆತ್ತಿ ಒಯ್ಯುತ್ತಿರುವ ಮರುಳು, ಮೇಲೆ ಸ್ವರ್ಗದಲ್ಲಿ ಕುಳಿತ ವೀರನ ಮುಂದೆ ನಡೆಯುತ್ತಿರುವ ನರ್ತನ ಎಲ್ಲವನ್ನೂ ಸಹಜವಾಗಿ ರಸವತ್ತಾಗಿ ಚಿತ್ರಿಸಿದ್ದು ಬೇರೆಡೆ ಕಾಣಲಾಗದ ವಿವರಗಳು ಇಲ್ಲಿ ಬಂದಿವೆ.

ಗಂಗರ ಕಾಲದ ಮೂರ್ತಿಗಳ ಮತ್ತು ಜೈನ ಮೂರ್ತಿಗಳ ಹಲವು ಪ್ರಕಾರಗಳಿವೆ. ವೈಷ್ಣವಮೂರ್ತಿಗಳೂ ಕೆಲವಿವೆ. ಶೈವ ಮೂರ್ತಿಗಳಲ್ಲಿ ಮುಖ್ಯವಾಗಿ ಶಿವಲೀಲೆಗಳು, ಸಪ್ತ ಮಾತೃಕೆಯರು, ಮಹಿಷಾಸುರ ಮರ್ದಿನಿ, ಪಂಚಾಯತನ ಮೂರ್ತಿಗಳು ಮತ್ತು ನವರಂಗದ ಚಾವಣಿಯಲ್ಲಿ ನಟರಾಜನ ಅಷ್ಟದಿಕ್ಪಾಲಕ ಮೂರ್ತಿಗಳು ಹೆಚ್ಚು ಕಂಡು ಬರುತ್ತವೆ. ಕುಣಿಗಲ್ಲಿನಲ್ಲಿ ಈಚಿನ ದೇವಾಲಯವೊಂದರಲ್ಲಿ ಪುರಾತನವಾದ ಮಹಿಷಾಸುರ ಮರ್ದಿನಿಯ ಮೂರ್ತಿ ಎಂಟು ಅಥವಾ ಒಂಬತ್ತನೆಯ ಶತಮಾನದ ಗಂಗರ

ಬೇಗೂರಿನಲ್ಲಿರುವ ನಾಗತ್ತರನ ವೀರಗಲ್ಲು

ಶಿಲ್ಪವೈಶಿಷ್ಟ್ಯವನ್ನು ಎತ್ತಿ ಹಿಡಿಯುತ್ತದೆ. ನಂದಿಯಲ್ಲಿರುವ ಮಹಿಷಾಸುರ ಮರ್ದಿನಿಯಂತಿರುವ ಈ ಮೂರ್ತಿ ತೆಳುವುಬ್ಬು ಶಿಲ್ಪದಲ್ಲಿದ್ದು ಸ್ಥೂಲರೂಪ ರೇಷೆಗಳನ್ನು ಬಿಡಿಸಿದ್ದರೂ ಆಕರ್ಷಕವಾಗಿದೆ. ನಾಲಗೆಯನ್ನು ಹೊರಚಾಚಿರುವ ಕೋಣನ ತಲೆಯ ಮೇಲೆ ಎಡಗಾಲು ಮೆಟ್ಟಿ ಬಲಗಾಲನ್ನು ಅಡ್ಡಗಾಲು ಹಾಕಿ ತ್ರಿಭಂಗಿಯಲ್ಲಿ ಲೀಲಾವಿನೋದ ದಿಂದ ನಿಂತಿರುವ ಚತರ್ಭುಜ ಮೂರ್ತಿಯ ಒಂದು ಕಡೆ ಸಿಂಹ, ಇನ್ನೊಂದು ಕಡೆ ಜಿಂಕೆಯಿದ್ದು ವಿಶಿಷ್ಟವಾಗಿದೆ. ಪಲ್ಲವರ, ಚೋಳರ, ದೇವಾಲಯಗಳಲ್ಲಿರುವಂತೆ ಗಂಗರ ದೇವಾಲಯಗಳಲ್ಲಿರುವ ಸಪ್ತಮಾತೃಕೆಯರ ಮೂರ್ತಿಗಳು ಬೇರೆ ಬೇರೆಯಾಗಿ ಒಂದು ಸಾಲಿನಲ್ಲಿ ಇರುತ್ತದೆ. ನೊಣವಿನ ಕೆರೆಯ ಗಂಗೇಶ್ವರ ನೊಣಬೇಶ್ವರ ದೇವಾಲಯಗಳು ಬಳಿ ಇದ್ದ ಇಂಥ ಮೂರ್ತಿಗಳು ತೆಳುವಾಗಿ ಬಿಡಿಸಿದ್ದರೂ ಸತ್ತ್ವಯುಕ್ತವಾಗಿವೆ. ನರಸಮಂಗಲದ ರಾಮೇಶ್ವರ ದೇವಾಲಯದ ಗೋಡೆ ಗೋಪುರಗಳ ಮೇಲಿರುವ ಗಚ್ಚಿನ ಮೂರ್ತಿಗಳೂ ದೇವಾಲಯದ ಒಳಗೂ ಹೊರಗೂ ಇರುವ ಸಪ್ತಮಾತೃಕಾ, ಪಂಚಾಯತನ ಮೂರ್ತಿಗಳೂ ಪೂರ್ಣ ರೂಪದಲ್ಲಿ ಬಿಡಿಸಿದ್ದು ವೈಶಿಷ್ಟ್ಯ ಪೂರ್ಣವಾಗಿ ಕಲೆಯ ಉತ್ತಮ ಗುಣಗಳನ್ನು ಪ್ರದರ್ಶಿಸುತ್ತವೆ. ವಿಶಾಲ ವಕ್ಷಸ್ಥಳ, ತೆಳುನಡು, ನೀಳವಾದ ಕೈಕಾಲುಗಳು, ಕೆಲವೇ ಆಭರಣಗಳು, ಮಂದಹಾಸ ಯುಕ್ತವಾದ ಗಂಭೀರ ಮುಖ

ಯಕ್ಷ, ಚಂದ್ರಗುಪ್ತಬಸದಿ, ಶ್ರವಣಬೆಳಗೊಳ

ಮುದ್ರೆ, ದಪ್ಪ ಕೆಳದುಟಿಗಳು ಇರುವ, ನೈಜವಾಗಿ ಅತ್ಯಂತ ಆಕರ್ಷಕವಾಗಿರುವ ಈ ಮೂರ್ತಿಗಳಿಗೆ ಸಾಟಿಯನ್ನು ಎಲ್ಲೋರ ಮಹಾಬಲಿಪುರಗಳಲ್ಲಿ ಮಾತ್ರ ಕಾಣಬಹುದು. ಈ ದೇವಾಲಯದ ನವರಂಗದ ಒಳಚಾವಣಿಯಲ್ಲಿಯೂ ಇದರಂತೆ ನಂದಿಯ ಭೋಗನಂದೀಶ್ವರ ದೇವಾಲಯ, ಮದ್ದೂರಿನ ದೇಶೇಶ್ವರ ದೇವಾಲಯ, ಆಲೂರಿನ ಅರ್ಕೇಶ್ವರ ದೇವಾಲಯ, ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯ ಮುಂತಾದ ಗಂಗರ ಕಾಲದ ಹಲವಾರು ದೇವಾಲಯಗಳ ನವರಂಗದ ಚಾವಣಿಗಳಲ್ಲಿಯೂ ನಡುವೆ ನಟರಾಜನನ್ನು ಸುತ್ತಲೂ ಅಷ್ಟದಿಕ್ಪಾಲಕರನ್ನೂ ಸುಂದರವಾಗಿ ಬಿಡಿಸಿದೆ. ಇವುಗಳಲ್ಲೆಲ್ಲ ಅತ್ಯಂತ ಆಕರ್ಷಕವೂ ಭವ್ಯವೂ ಆದದ್ದೆಂದರೆ ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯದ ಶಿಲ್ಪ. ನಡುವೆ ತೆಳುವಾಗಿ ನೀಳವಾಗಿ ಅಪಸ್ಮಾರನನ್ನು ತುಳಿದು ನೃತ್ಯಮಗ್ನನಾಗಿರುವ ಸಂಧ್ಯಾತಾಂಡವ ಶಿವನ ಆ ನಾಟ್ಯಭಂಗಿ ಅಪೂರ್ವವಾದ್ದು. ಜಟಾಮಕುಟ, ಸರ್ಪಕುಂಡಲ, ಕೇವಲ ಕೆಲವೇ ಆಭರಣ ಧರಿಸಿ ಮೇಲಿನ ಎರಡು ಕೈಗಳಲ್ಲೂ ತ್ರಿಶೂಲಗಳನ್ನು ಹಿಡಿದು ಲಂಬಹಸ್ತನಾಗಿ ತನ್ನ ಸುತ್ತಲೂ ತ್ರಿಘಟೆ, ತಾಳಕೊಳಲುಗಳನ್ನು ಬಾರಿಸುತ್ತಿರುವವರನ್ನು ತಲ್ಲೀನಗೊಳಿಸಿ ನರ್ತಿಸುತ್ತಿರುವ ನಟರಾಜನ ಮುಖದ ಪ್ರಸನ್ನತೆ ಅನುಪಮವಾದ್ದು: ಎಂಟು ಮೂಲೆಗಳಲ್ಲೂ ಈ ಮೂರ್ತಿಯಷ್ಟೇ ಸುಂದರವಾಗಿರುವ ಅಷ್ಟದಿಕ್ಪಾಲಕರು ಸತೀಸಮೇತರಾಗಿ ತಮ್ಮತಮ್ಮ ವಾಹನಗಳನ್ನೇರಿ ಮೋಡಗಳ ನಡುವೆ ತೇಲಿಹೋಗುತ್ತಿರುವುದು, ನಡುವಿನ ನಾಲ್ಕು ಮೂಲೆಗಳಲ್ಲೂ ಗಂಧರ್ವರು ಹೂವಿನ ದಂಡೆಯನ್ನು ಹಿಡಿದು ಆಕಾಶದಲ್ಲಿ ಚಿಮ್ಮುತ್ತಿರುವುದು ಆ ಸನ್ನೀವೇಶಕ್ಕೆ ಅತ್ಯಂತ ಯುಕ್ತವಾಗಿ ಹೊಂದಿಕೊಂಡು, ಕ್ರೀಯಾಶೀಲವಾಗಿ, ಭಾವಪೂರ್ಣವಾಗಿ, ನೋಡುವವರನ್ನು ಮುಗ್ಧಗೊಳಿಸುತ್ತದೆ.

ಗಂಗರಾಜರು ಜೈನಮತಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದರು, ಅದರಿಂದ ಗಂಗವಾಡಿಯ ಅನೇಕ ಕಡೆ ಜೈನಬಸದಿಗಳು ನಿರ್ಮಾಣವಾಗಿದ್ದವು. ಬಸದಿಗಳು ಸಾಮಾನ್ಯವಾಗಿ

ರಾಮ ರಾವಣರ ಯುದ್ಧ, ಮಹಲಿಂಗೇಶ್ವರ ದೇವಾಲಯ, ವರುಣ

ನಿರಾಡಂಬರವಾಗಿದ್ದರೂ ಅವುಗಳಲ್ಲಿಯ ಜಿನರ ಮೂರ್ತಿಗಳು, ಯಕ್ಷಯಕ್ಷಿಯರು ಚಾವಣಿಯಲ್ಲಿಯ ಅಷ್ಟದಿಕ್ಪಾಲಕಾದಿಗಳನೇಕ ಉಳಿದುಬಂದಿವೆ. ಕಂಬದಹಳ್ಳಿಯ ಆದಿನಾಥನ ಮೂರ್ತಿ, ಶ್ರವಣಬೆಳಗೊಳದ ಶಾಂತಿನಾಥ, ಚಂದ್ರಪ್ರಭ, ಸುಪಾರ್ಶ್ವನಾಥರ ಮೂರ್ತಿಗಳ ಶಿಲ್ಪಗಳು ನಿರಾಭರಣವಾಗಿದ್ದರೂ ತಪೋನಿರತರಾಗಿರುವ ಅವರ ಮುಖದಲ್ಲಿ ಶಾಂತತೆ, ತೇಜಸ್ಸು ಹೊಮ್ಮುವಂತೆ ಕಂಡರಿಸುವ ಶಿಲ್ಪ ಶ್ರೇಷ್ಠವಾದ್ದು. ಯಕ್ಷಯಕ್ಷಿಯರನ್ನಂತೂ ಭಾವಯುಕ್ತವಾಗಿ ಸುಂದರವಾಗಿ ಕಡೆದಿದ್ದಾರೆ. ಚಂದ್ರಗುಪ್ತ ಬಸದಿಯಲ್ಲಿರುವ ನಿಂತಿರುವ ಯಕ್ಷನ ಮೂರ್ತಿ ಈ ರೀತಿಯ ಶಿಲ್ಪಕ್ಕೆ ಉತ್ತಮವಾದ ಉದಾಹರಣೆ.

ಗಂಗರ ಮೂರ್ತಿಶಿಲ್ಪದ ಪರಾಕಾಷ್ಠೆಯನ್ನು ಶ್ರವಣಬೆಳಗೊಳದ ದೊಡ್ಡಬೆಟ್ಟದ ಮೇಲಿರುವ ಗೊಮ್ಮಟೇಶ್ವರನಲ್ಲಿ ನೋಡಬಹುದು. ಸು. 983ರಲ್ಲಿ ಚಾವುಂಡರಾಯ ನಿರ್ಮಿಸಿದ ಈ ಮೂರ್ತಿ ಸನ್ನಿವೇಶ, ಗಾತ್ರ, ರಚನೆ, ರೀತಿ ಎಲ್ಲದರಲ್ಲಿಯೂ ಅದ್ವಿತೀಯವೆನ್ನಿಸಿಕೊಂಡಿದೆ. ಬೆಟ್ಟದ ತುತ್ತತುದಿಯಲ್ಲಿ ಬಟ್ಟಬಯಲಿನಲ್ಲಿ 58 ಅಡಿ ಎತ್ತರವಾಗಿ ದಿಗಂಬರನಾಗಿ ಈ ಮೂರ್ತಿಯ ಭವ್ಯತೆ ಪ್ರಪಂಚದಲ್ಲಿಯೆ ಅದ್ಭುತವಾದ್ದು. ಬಾಹುಬಲಿಯ ಚರಿತ್ರೆಯ ಹಿನ್ನಲೆಯಲ್ಲಿ ಈ ಮೂರ್ತಿಯನ್ನು ನೋಡಿದಾಗ ಶಿಲ್ಪಿ ಅದೆಷ್ಟು ಸಂಪೂರ್ಣವಾಗಿ ಯಶಸ್ವಿಯಾಗಿದ್ದಾನೆಂಬುದು ತಿಳಿಯದಿರದು. ಬಾಹುಬಲಿಯ ಪರಿಪೂರ್ಣತ್ಯಾಗ, ಆತ್ಮಸಂಯಮಗಳು, ಪ್ರಪಂಚದ ಕಷ್ಟಕಾರ್ಪಣ್ಯಗಳೆಡೆ ಮರುಕಬೆರತ ಕಿರುನಗೆಯ ನೋಟ, ಹುತ್ತ ಬಳ್ಳಿಗಳು ಬೆಳೆದರೂ ಅಲುಗದ ನಿಶ್ಚಲತೆ_ಎಲ್ಲವೂ ಆ ಮೂರ್ತಿಯಲ್ಲಿ ಎದ್ದು ತೋರುತ್ತವೆ. ವಿಸ್ತಾರವಾದ ಆ ಎದೆ, ನೇರವಾದ ಆ ನಿಲುವು, ಯಾವುದಕ್ಕೂ ಹೆದರದ, ಚಕ್ರವರ್ತಿಯನ್ನೇ ಸೋಲಿಸಿದ ಒಂದು ಕೆಚ್ಚು ಅತ್ಯಾಭಿಮಾನವನ್ನೂ ಸೂಚಿಸುತ್ತವೆ. ಈಜಿಪ್ಟನ್ನು ಬಿಟ್ಟರೆ ಬೇರೆಲ್ಲಿಯೂ ಇಂಥ ಅದ್ಭುತವಾದ, ಇಷ್ಟು ಪ್ರಭಾಯುತವಾದ ಶಿಲ್ಪ ಇಲ್ಲ ಎಂದು ಫರ್ಗೂಸನ್ ಹೇಳಿದರೆ, ಇಷ್ಟು ಉನ್ನತವಾದ ಮೂರ್ತಿಯಲ್ಲಿ ಇಂಥ ಸೌಂದರ್ಯವೂ ಇಂಥ ಅತಿಶಯವೂ ಇರುವುದು ಬೇರಡೆಯಲ್ಲಿ ಅಸಾಧ್ಯ. ಕ್ಷಿತಿಸಂಪೂಜ್ಯವಾದ ಈ ಗೊಮ್ಮಟೇಶ್ವರ ಜಿನ ಶ್ರೀರೂಪ ಆತ್ಮೋಪಮವಾದ್ದೆಂದು ಹೇಳಿರುವ ಪ್ರಾಚೀನ ಕವಿ ವಾಣಿಯಲ್ಲಿ ಅತಿಶಯೋಕ್ತಿಯಿಲ್ಲ.

ಮಾನವ ಅಥವಾ ದೇವತೆಗಳ ರೂಪವನ್ನು ಕಂಡರಿಸುವುದರಲ್ಲಷ್ಟೇ ಅಲ್ಲ, ಪ್ರಾಣಿಗಳನ್ನು ಕಂಡರಿಸುವುದರಲ್ಲೂ ಅವುಗಳ ರೂಪ ಗುಣ ಸ್ವಭಾವಗಳನ್ನು ಚೆನ್ನಾಗಿ ಸೆರೆ ಹಿಡಿದಿದ್ದಾರೆ, ಗಂಗರ ರೂವಾರಿಗಳು, ಕಲ್ಲಿನ ಶಾಸನಗಳ ಮೇಲಿನ ಮತ್ತು ತಾಮ್ರ ಶಾಸನಗಳ ಮುದ್ರೆಗಳ ಮೇಲಿನ ಆನೆಗಳು, ಅಷ್ಟದಿಕ್ಪಾಲಕರ ವಾಹನಗಳು ಮುಂತಾದುವುಗಳಲ್ಲಿ ಇದನ್ನು ನೋಡಬಹುದು.

ಇವರ ಕಾಲದ ಲೋಹಮೂರ್ತಿಗಳು ಹೆಚ್ಚು ಉಳಿದುಬಂದಿಲ್ಲ. ಈಗ ಶ್ರವಣಬೆಳಗೊಳದ ಜೈನಮಠದಲ್ಲಿರುವ ಗಂಗ ನೊಳಂಬ ಕುಲಾಂತಕ ಮಾರಸಿಂಹನ ಅಕ್ಕ ಕುಂದಣಸೋಮಿದೇವಿ ಮಾಡಿಸಿದ ಜಿನಮೂರ್ತಿ ಇಂಥ ಮೂರ್ತಿಗಳಲ್ಲೊಂದು.

(ಎಂ.ಎಚ್.)

**ಗಂಗರ ವಾಸ್ತುಶಿಲ್ಪ, ತಲಕಾಡಿನ :** ತಲಕಾಡಿನ ಗಂಗರ ಕಾಲದ ವಾಸ್ತುಶಿಲ್ಪದ ಮಾದರಿಗಳು ಹೆಚ್ಚು ಉಳಿದುಬಂದಿಲ್ಲ. ಕೆಲವು ಸಂಪೂರ್ಣವಾಗಿ ನಾಶವಾಗಿದ್ದರೆ ಹಲವು ಮುಂದಿನ ತಲೆಮಾರುಗಳಲ್ಲಿ ಬಹುಮಟ್ಟಿಗೆ ಬದಲಾವಣೆ ಹೊಂದಿವೆ. ಗಂಗರು ಕಟ್ಟಿಸಿದ ಬಸದಿಗಳನ್ನೂ ದೇವಾಲಯಗಳನ್ನೂ ಶಾಸನಗಳೇನೋ ತಿಳಿಸುತ್ತವೆ. ಹರಿವರ್ಮನ ಕಾಲದಲ್ಲಿದ್ದ ಮೂಲಸ್ಥಾನೇಶ್ವರ, ಅವಿನೀತನ ಹೆಸರಿನಲ್ಲಿ ಕಟ್ಟಿಸಿದ್ದಿರಬಹುದಾದ ವಿನೀತೇಶ್ವರ, ಮಾಧವ ಅವಿನೀತರು ದತ್ತಿಬಿಟ್ಟ ಅರ್ಹತಾಯತನ, ಶ್ರೀಪುರುಷನ ಕಾಲದಲ್ಲಿ ಕಂದಚ್ಚಿ ಕಟ್ಟಿಸಿದ ಜಿನಬಸದಿ, ಇವಲ್ಲದೆ ನೀತಿ ಮಾರ್ಗೇಶ್ವರ, ಜಗಧರನಗರೇಶ್ವರ, ಶಿವಮಾರೇಶ್ವರ, ಶಿವಮಾರನ ಬಸದಿ ಮುಂತಾದ ಹೆಸರುಗಳು ಅವರ ಕಾಲದ ಶಾಸನಗಳಲ್ಲಿವೆ. ಈಗ ಉಳಿದು ಬಂದಿರುವ ಕಟ್ಟಡಗಳಲ್ಲಿ ಕೆಲವು ಅವುಗಳ ವಾಸ್ತು ಮತ್ತು ಶಿಲ್ಪಶೈಲಿಯಿಂದ ಗಂಗರ ಕಾಲಕ್ಕೆ ಸೇರಿದವೆಂದು ನಿರ್ದಿಷ್ಟವಾಗಿ ಹೇಳಬಹುದಾದರೂ ಅವು ಯಾರ ಕಾಲದಲ್ಲಿ ನಿರ್ಮಾಣವಾದುವೆಂದು ತಿಳಿಸಲು ಶಾಸನಾಧಾರಗಳಿಲ್ಲ. ಆದ್ದರಿಂದ ಗಂಗರ ವಾಸ್ತುಶಿಲ್ಪದ ಹುಟ್ಟು ಬೆಳವಣಿಗೆಗಳನ್ನು ಸ್ಪಷ್ಟವಾಗಿ ಚಿತ್ರಿಸಲು ಆಧಾರಗಳು ಸಾಲವು ; ಈಗ ಅಳಿದುಳಿದಿರುವ ಕೆಲವು ಅವಶೇಷಗಳಿಂದ ಅವುಗಳ ಸ್ಥೂಲರೂಪರೇಖೆಗಳನ್ನು ಗುರುತಿಸಬಹುದು.

ಗಂಗರ ಮೊದಲ ಕಟ್ಟಡಗಳು ಇಟ್ಟಿಗೆ, ಗಾರೆ, ಮರಗಳಿಂದ ನಿರ್ಮಿತವಾಗಿರಬೇಕು, ಮಂಡಲಿಯಲ್ಲಿ ದಡಿಗಮಾಧವರು ಕಟ್ಟಿಸಿದ್ದ ಬಸದಿಯನ್ನು ಮುಂದೆ ಅವರ ವಂಶದವರು ಮರವೆಸನಾಗಿ ಮಾಡಿ ಪಟ್ಟಣದ ಬಸದಿಯೆಂದು ಹೆಸರಿಟ್ಟದ್ದುದಾಗಿ ಅಲ್ಲಿಯ ಶಾಸನ ತಿಳಿಸುತ್ತದೆ. ನೊಣಮಂಗಲದಲ್ಲಿ ಪಾಳುದಿಬ್ಬವೊಂದನ್ನಗೆಯುತ್ತಿದ್ದಾಗ ಬೆಳಕಿಗೆ ಬಂದ ಬಸದಿಯೊಂದರಲ್ಲಿ ದೊರೆತ ಎರಡು ತಾಮ್ರ ಶಾಸನಗಳು ಗಂಗರಾಜ ಮಾಧವನೂ ಅವನ ಮಗ ಅವಿನೀತನೂ ಅರ್ಹತಾಯತನಕ್ಕೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತವೆ. ಅಗಲವಾದ, ಆದರೆ ತೆಳುವಾದ ಇಟ್ಟಿಗೆಗಳಿಂದ ನಿರ್ಮಿತವಾಗಿದ್ದ ಈ ಬಸದಿಯನ್ನು ಊರಿನವರು ಈಚೆಗೆ ಅಗೆದುಹಾಕಿರುವುದರಿಂದ ಕಟ್ಟಡದ ವಿನ್ಯಾಸ ಹೇಗಿತ್ತೆಂಬುದು ತಿಳಿಯದು. ಗಂಗರ ಕಾಲದ ಇಟ್ಟಿಗೆಯ ಕಟ್ಟಡಗಳನ್ನು ಇವರ ಮುಖ್ಯ ಪಟ್ಟಣಗಳಲ್ಲೊಂದಾಗಿದ್ದ ಮಣ್ಣೆಯಲ್ಲಿ ನೋಡಬಹುದು ಕಪಿಲೇಶ್ವರ, ಸೋಮೇಶ್ವರ ದೇವಾಲಯಗಳ ಜೊತೆಗೆ ಇರುವ, ಈಗ ಸೂಳೆಯರ ಗುಡಿ ಎಂದು ಕರೆಯುವ ದೇವಾಲಯ ಮಾರಸಿಂಹನ ದಂಡನಾಯಕ ಶ್ರೀ ವಿಜಯ ಕಟ್ಟಿಸಿದ ತುಂಗಂ, ನಿರ್ಮಳಂ, ಸ್ವಮಹಸ್ಸಮಂ ಆದ ಜಿನಾಲಯವಾಗಿರಬೇಕು, ಈಗ ಎಲ್ಲ ದೇವಾಲಯಗಳೂ ಶಿಥಿಲವಾಗಿವೆ.

ಇವರ ಇಟ್ಟಿಗೆಯ ಕಟ್ಟಡಗಳಲ್ಲಿ ಪ್ರಾಚೀನವೂ ಶ್ರೇಷ್ಠವೂ ಆದ್ದು ನರಸಮಂಗಲದ ರಾಮೇಶ್ವರ ದೇವಾಲಯ. ಇದರ ಕಾಲ ನಿಖರವಾಗಿ ತಿಳಿಯದಾದರೂ ಕಟ್ಟಡದ ರೀತಿ ಮೂರ್ತಿಗಳ ಕಂಡರಣೆ, ದೇವಾಲಯದ ಕಂಬಗಳು, ಚಾವಣಿ ಮುಂತಾದವನ್ನು ಪರಿಶೀಲಿಸಿದಾಗ ಇದು ಗಂಗರ ಕಾಲದಲ್ಲಿಯೆ ತಕ್ಕಷ್ಟು ಪ್ರಾಚೀನವಾದ್ದೆಂಬುದು ನಿರ್ವಿವಾದ. ತಳಹದಿ ಮಾತ್ರ ಕಗ್ಗಲ್ಲಿನಲ್ಲಿದ್ದು ಮೇಲಿನ ಕಟ್ಟಡ ಪೂರ್ತಿಯಾಗಿ ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿದ್ದರೂ ಇದರ ಗರ್ಭಗೃಹ ಮತ್ತು ಅದರ ಮೇಲಿನ ಗೋಪುರ 1200 ವರ್ಷಗಳಿಗೂ ಹೆಚ್ಚು ಕಾಲದಿಂದ ನಿಂತಿರುವುದಷ್ಟೆ ಅಲ್ಲ, ಅದರ ಮೇಲೆ ಗಚ್ಚಿನಲ್ಲಿ ನಿರ್ಮಿಸಿರುವ ಮೂರ್ತಿಗಳು, ನವುರಾದ ಅಲಂಕರಣ ಕೂಡ ಅಚ್ಚಳಿಯದಿರುವುದು ಸೋಜಿಗದ ಸಂಗತಿ. ಹೊರಗೋಡೆಗಳ ಮೇಲೆ ಜೋಡಿ ಅರೆಗಂಬಗಳು, ಮೂರು ಅಂತಸ್ತುಗಳಲ್ಲಿ ಮೇಲೆದ್ದಿರುವ ಗೋಪುರದಲ್ಲಿ ಪಂಜರ, ಕೂಡುಗಳ ನಡುವೆ ಹಲವು ವಿಧವಾದ ಅಪರೂಪ ಭಂಗಿಗಳಲ್ಲಿರುವ ಗಚ್ಚಿನ ಮೂರ್ತಿಗಳಿವೆ. ಇದರ ಒಟ್ಟು ರಚನೆ ಮಹಾಬಲಿಪುರದ ಧರ್ಮರಾಜ ರಥದ ಮಾದರಿಯಲ್ಲಿದೆ. ಗಂಟೆ ಮತ್ತು ಕಲಶದಾಕಾರದಲ್ಲಿರುವ ದಪ್ಪ ಕಂಬಗಳಿರುವ ನವರಂಗದ ಚಪ್ಪಟೆಯ ಒಳಚಾವಣಿಯಲ್ಲಿ ದೊಡ್ಡದಾದ ಮಧ್ಯದ ಅಂಕಣದಲ್ಲಿ ಸುತ್ತಲೂ ಅಷ್ಟದಿಕ್ಪಾಲಕರೂ ನಡುವೆ ನಟರಾಜನ ಮೂರ್ತಿಯೂ ಇವೆ. ಒಳಗೋಡೆಯ ಮೇಲ್ತುದಿಯ ಸುತ್ತಲೂ ಹಲವು ಭಂಗಿಗಳಲ್ಲಿರುವ ಕುಬ್ಜರ ಮೂರ್ತಿಗಳು, ಪಂಚತಂತ್ರದ ಕಥೆಗಳು, ರಾಮಾಯಣದ ಕಥೆಗಳು–ಇವನ್ನು ಸುಂದರವಾಗಿ ಕಡೆದಿದೆ. ದೇವಾಲಯದ ಒಳಗೂ ಸುತ್ತಲೂ ಚಂಡೀಕೇಶ್ವರ, ಸಪ್ತಮಾತೃಕೆಯರು, ಪಂಚಾಯತನ ಮೂರ್ತಿಗಳು ಮೊದಲಾದ ಶಿಲಾಮೂರ್ತಿಗಳಿವೆ.

ಚೋಳರು ಗಂಗವಾಡಿಯನ್ನಾಕ್ರಮಿಸಿಕೊಂಡಮೇಲೆ ಅಲ್ಲಿದ್ದ ಹಲವು ಇಟ್ಟಿಗೆಯ ಕಟ್ಟಡಗಳನ್ನು ಬದಲಾಯಿಸಿ ಕಲ್ಲಿನ ದೇವಾಲಯಗಳನ್ನು ನಿರ್ಮಿಸಿದರು. ಕೋಲಾರದ

ಪಿಡಾರಿಯಾರ್ ಅಥವಾ ಕೋಲಾರಮ್ಮನ ದೇವಾಲಯ ಮೊದಲು ಇಟ್ಟಿಗೆಯದಾಗಿತ್ತು. ರಾಜೇಂದ್ರಚೋಳನ ಅಪ್ಪಣೆಯ ಮೇಲೆ ಉತ್ತಮಚೋಳ ಬ್ರಹ್ಮಮಾರಾಯ ಆ ಕಟ್ಟಡವನ್ನು ತೆಗೆದು ಕಲ್ಲಿನ ದೇವಾಲಯವನ್ನು ನಿರ್ಮಿಸಿದುದಾಗಿ ಶಾಸನವೊಂದು ತಿಳಿಸುತ್ತದೆ. ಕಿತ್ತೂರಿನ ರಾಮೇಶ್ವರ ದೇವಾಲಯ, ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯ, ಗರ್ಜಿಯ ಈಶ್ವರ ದೇವಾಲಯ, ನೊಣವಿನಕೆರೆಯ ಗಂಗೇಶ್ವರ ನೊಳಬೇಶ್ವರ ದೇವಾಲಯಗಳು

ರಾಮೇಶ್ವರ ದೇವಾಲಯ, ನರಸಮಂಗಲ

ಮೊದಲು ಇಟ್ಟಿಗೆಯ ಗೋಡೆಗಳನ್ನು ಹೊಂದಿದ್ದಿರಬೇಕು. ಆ ಗೋಡೆಗಳು ಶಿಥಿಲವಾದ ಮೇಲೆ ಈಚೆಗೆ ಬೇರೆ ಗೋಡೆಗಳನ್ನು ನಿರ್ಮಿಸಿದ್ದು ಹೊರನೋಟಕ್ಕೆ ತೀರಸಾಮಾನ್ಯವಾದ ಕಟ್ಟಡಗಳಂತೆ ಕಾಣುತ್ತವೆ. ಆದರೆ ಅವುಗಳ ಒಳಹೊಕ್ಕಾಗ ಗಂಗರ ವಾಸ್ತುರೀತಿಯ ವೈಶಿಷ್ಟ್ಯ ಸ್ಪಷ್ಟವಾಗುತ್ತದೆ. ಸಣ್ಣ ಪ್ರಮಾಣದ ನವರಂಗ, ತೆರೆದ ಸುಕನಾಸಿ, ಚಿಕ್ಕ ಗರ್ಭಗೃಹ; ಚೌಕನಾದ ಬುಡದ ಮೇಲೆ ಗುಂಡಾಗಿ ಮೇಲೆದ್ದು ಅಷ್ಟು ಎತ್ತರವಲ್ಲದ ತೆಳುಗಂಬಗಳು, ಕಂಬಗಳ ಮೇಲುಬದಿಯಲ್ಲಿ ಕಲಶ ಅಥವಾ ಹೂಜಿಯ ಆಕೃತಿ, ನವರಂಗದ ಮಧ್ಯೆ ದೊಡ್ಡ ಅಂಕಣ ಮತ್ತು ಆ ಅಂಕಣದ ಚಾವಣಿಯಲ್ಲಿ ಮಾತ್ರ ಶಿಲ್ಪಕೃತಿ–ಸಾಮಾನ್ಯವಾಗಿ ಅಷ್ಟದಿಕ್ಪಾಲಕರು ಮತ್ತು ಅವರ ನಡುವೆ, ಶಿವದೇವಾಲಯವಾದರೆ ನಟರಾಜ, ಜಿನಬಸದಿಯಾದರೆ ಜಿನನ ಮೂರ್ತಿ. ಈ ಸಾಮಾನ್ಯಲಕ್ಷಣದಲ್ಲಿಯೂ ಒಂದೊಂದು ದೇವಾಲಯಕ್ಕೂ ಕೆಲಕೆಲವು ವಿಶಿಷ್ಟತೆಗಳನ್ನೂ ಕಾಣಬಹುದು. ಕಿತ್ತೂರಿನಲ್ಲಿ ಪಲ್ಲವರೀತಿಯನ್ನನುಕರಿಸುವ ಸಿಂಹಸ್ತಂಭಗಳು ಕೆಲವಿದ್ದ ಕುರುಹುಗಳಿವೆ. ಗರ್ಜಿಯಲ್ಲಿ ಕಂಬಗಳು ಅಷ್ಟಕೋನಾಕೃತಿಯಲ್ಲಿವೆ; ಚೌಕನಾದ ಬುಡದ ನಾಲ್ಕು ಮುಖಗಳ ಮೇಲೆ ತೆಳುವಾಗಿ ಬಿಡಿಸಿದ ಮೂರ್ತಿಶಿಲ್ಪಗಳಿವೆ. ಆಕರ್ಷಕವಾಗಿವೆ. ಅರಳಗುಪ್ಪೆಯ ದೇವಾಲಯದ ಒಳಚಾವಣಿಯನ್ನಂತೂ ರೂವಾರಿ ಅತ್ಯಂತ ಸುಂದರವಾಗಿ ಬಿಡಿಸಿದ್ದಾನೆ.

ಗಂಗರ ಕಾಲದಲ್ಲಿ ಗವಿಗಳನ್ನು ಕೊರಿಸಿ ದೇವಾಲಯಗಳನ್ನು ಸ್ಥಾಪಿಸಿದ್ದಕ್ಕೆ ದಾಖಲೆಗಳಿಲ್ಲ. ಮೇಲುಕೋಟೆಯಲ್ಲಿ ಕಗ್ಗಲ್ಲಿನ ಮೊರಡಿಯಲ್ಲಿ ಅರ್ಧಮಾತ್ರ ಕೊರೆದಿರುವ ಗವಿ ಇವರ ಕಾಲಕ್ಕೆ ಸೇರಿರಬಹುದಾದರೂ ಗವಿ ಪೂರ್ತಿಯಾಗಿಲ್ಲದಿರುವುದರಿಂದಲೂ ಮೂರ್ತಿಶಿಲ್ಪ ಇಲ್ಲದಿರುವುದರಿಂದಲೂ ಇದನ್ನು ಖಚಿತವಾಗಿ ಹೇಳಲುಬಾರದು. ಆದರೆ ಸ್ವಾಭಾವಿಕ ಗವಿಗಳಲ್ಲಿ ಬಂಡೆಗಳ ಮೇಲೆ ಮೂರ್ತಿಗಳನ್ನು ಬಿಡಿಸಿ ಬಸದಿಗಳನ್ನು ನಿರ್ಮಿಸಿದ ಉದಾಹರಣೆಗಳಿವೆ. ನಂದಿಯಲ್ಲಿ ಗೋಪಿನಾಥ ಗುಡ್ಡದಲ್ಲಿರುವ ಸ್ವಾಭಾವಿಕ ಗವಿಯ ಮೇಲಣ ಬಂಡೆ ಶಾಸನ 8ನೆಯ ಶತಮಾನಕ್ಕೆ ಸೇರಿದ್ದು. ಶ್ರೀರಾಮ ಅಲ್ಲಿ ಚೈತ್ಯಭವನವನ್ನು ನಿರ್ಮಿಸಿದಂತೆಯೂ ಅನಂತರ ಕುಂತಿ ಅದನ್ನು ಪುನರ್ನವೀಕರಿಸಿದಂತೆಯೂ ಜಿನೇಂದ್ರ ಚೈತ್ಯಸನ್ನಿಧಿಯಿಂದ ಆ ಪರ್ವತ ಪುನೀತವಾದುದಾಗಿಯೂ ಆ ಶಾಸನದಲ್ಲಿ ತಿಳಿಸುವುದರಿಂದ ಗಂಗರ ಕಾಲದಲ್ಲಿ ಅದು ಚೈತ್ಯಾಲಯವಾಗಿದ್ದಿರಬೇಕು. ಇದೇ ರೀತಿ ಚಿತ್ತೂರು ತಾಲ್ಲೂಕಿನ ವಳ್ಳಿಮಲೆಯಲ್ಲಿ ಒಂದನೆಯ ರಾಚಮಲ್ಲ ಸ್ವಾಭಾವಿಕ ಗುಹೆಯಲ್ಲಿ ಬಸದಿಯನ್ನು ಮಾಡಿಸಿದನೆಂದು ಅಲ್ಲಿಯ ಶಾಸನ ತಿಳಿಸುತ್ತದೆ. ಅಲ್ಲಿ ಬಂಡೆಯ ಮೇಲೆ ಕೆಲವು ಜಿನಬಿಂಬಗಳನ್ನು ಬಿಡಿಸಿದೆ. ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಮೇಲೆ ಬಂಡೆಯನ್ನು ಕೊರೆದು ಅಖಂಡ ದ್ವಾರವೊಂದನ್ನು ಚಾವುಂಡರಾಯ ಮಾಡಿಸಿದ್ದಾನೆ.

ಇಟ್ಟಿಗೆ ಕಟ್ಟಡಗಳ ಜೊತೆಗೆ ಮೊದಲು ಕೆಲವು ಸರಳವಾದ ಕಲ್ಲಿನ ಕಟ್ಟಡಗಳನ್ನೂ ಗಂಗರು ಕಟ್ಟಿಸಿದ್ದಾರೆ, ಅಗಲವಾದ ದೊಡ್ಡದೊಡ್ಡ ತೆಳು ಚಪ್ಪಡಿಗಳನ್ನೇ ಗೋಡೆಗೂ ಚಾವಣಿಗೂ ಉಪಯೋಗಿಸಿ ಕಟ್ಟಿರುವ ಈ ದೇವಾಲಯಗಳು ಶಿಲ್ಪ ದೃಷ್ಟಿಯಿಂದ ತೀರ ಸಾಮಾನ್ಯವಾದ ಕಟ್ಟಡಗಳು. ತೋಟಗೆರೆಯಲ್ಲಿರುವ ಕೇವಲ 5ಅಡಿ ಚೌಕ, 5 ಅಡಿ ಎತ್ತರವಿರುವ ಒಂದೇ ಅಂಕಣದ ಅರ್ಜುನರಾಯನ ಗುಡಿ ಈ ರೀತಿಯಲ್ಲಿದೆ. ಇದು ಶ್ರೀಪುರುಷನ ಕಾಲಕ್ಕಿಂತ ಮುಂಚಿನದಾಗಿ ತೋರುತ್ತದೆ. ಸಂಪಿಗೆಪುರದಲ್ಲಿರುವ ಶಿವಾಲಯ

ಭೋಗನಂದೀಶ್ವರ ದೇವಾಲಯ, ನಂದಿ

ಇದೇ ಮಾದರಿಯದೆ. ದೇವಸ್ಥಾನಕ್ಕೆ ಗರ್ಭಗುಡಿ ಸುಕನಾಸಿ ನವರಂಗಗಳಿವೆ. ಇವುಗಳ ಗೋಡೆ ಚಾವಣಿಗಳೆಲ್ಲ ತೆಳುಹಾಸುಗಲ್ಲುಗಳಿಂದ ನಿರ್ಮಿತವಾಗಿವೆ. ಈ ದೇವಾಲಯಗಳಲ್ಲಿರುವ ಪಂಚಾಯತನ ಮೂರ್ತಿಗಳು ಸುಂದರವಾದ ಗಂಭೀರ ಮುಖ ಮುದ್ರೆಯುಳ್ಳವು ; ಗಂಗರ ಕಾಲದವು. ಇವುಗಳಿಗೆ ಸೇರಿದಂತೆ ಗಂಗರ ಶಾಸನಗಳು ನಿಂತಿವೆ.

ಗಂಗರಿಗೇ ವಿಶಿಷ್ಟವಾದ ವಾಸ್ತುಶಿಲ್ಪ ಶೈಲಿ ಇಲ್ಲದಿದ್ದರೂ ಪಲ್ಲವರೂ ದ್ರಾವಿಡ ಶಿಲ್ಪ ಶೈಲಿಯಿಂದ ಸ್ಫೂರ್ತಿಗೊಂಡು ಮುಂದೆ ಹಲವು ಸುಂದರವಾದ ದೇವಾಲಯಗಳನ್ನೂ ಬಸದಿಗಳನ್ನೂ ಕಲ್ಲಿನಲ್ಲಿ ಕಟ್ಟಿಸಿರುವುದು ಕಂಡುಬರುತ್ತದೆ. ಈ ಗುಂಪಿಗೆ ಸೇರಿದ ಕಟ್ಟಡಗಳಲ್ಲಿ ಗಂಗಾವಾರದಲ್ಲಿರುವ ತಬ್ಲೇಶ್ವರ ಅಥವಾ ಸೋಮೇಶ್ವರ ದೇವಾಲಯ ಪ್ರಾಚೀನವಾದ್ದೆಂದು ಹೇಳಬಹುದು. ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪಗಳಿರುವ ಈ ದೇವಾಲಯ ಸರಳವಾದ್ದು, ಗರ್ಭಗುಡಿಯ ಮೇಲೆ ಚಿಕ್ಕದಾಗಿ ಒಂದೇ ಅಂತಸ್ತುಳ್ಳ ಗೋಪುರ, ಚೌಕಾಕೃತಿಯ ತಲ ವಿನ್ಯಾಸ, ಹೊರಗೋಡೆಯಲ್ಲಿ ದೂರದೂರದಲ್ಲೊಂದೊಂದು ಅರೆಗಂಬ, ಬುಡದಲ್ಲಿ ಸರಳವಾದ ದಿಂಡುಗಲ್ಲು, ಮೇಲೆ ಕಿರಿದಾದ ಲೋವೆ, ಒಳಗೆ ಕಿರಿದಾದ ಕಂಬಗಳು ಇವುಗಳೊಂದಿಗೆ ಪ್ರಾಕಾರದ ಅಂಕಣವೊಂದರಲ್ಲಿ ನಿಂತಿರುವ ಪಲ್ಲವರೀತಿಯ ಸಿಂಹಸ್ತಂಭ–ಇವು ಅದರ ಪ್ರಾಚೀನತೆಯನ್ನು ಸೂಚಿಸುತ್ತವೆ. ಮಳೂರು ಪಟ್ಟಣದಲ್ಲಿರುವ ನಾರಾಯಣ ಸ್ವಾಮಿ ದೇವಾಲಯ, ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿ–ಇವುಗಳ ಮೇಲೂ ಒಂದೇ ಅಂತಸ್ತಿನ ಗೋಪುರಗಳಿದ್ದರೂ ಗ್ರೀವ ಆಮಲಕಗಳ ಬೆಳವಣಿಗೆಗೆ ಸ್ಪಷ್ಟವಾಗಿದೆ. ಉಳಿದಂತೆ ಕಟ್ಟಡಗಳು ಸರಳವಾದವು. ಬನ್ನೂರಿನ ಹನುಮಂತೇಶ್ವರ ದೇವಾಲಯದ ಮೂಲಗುಡಿ, ವರುಣದ ಬೂತೇಶ್ವರ ದೇವಾಲಯ ಇವು ತಗ್ಗಾದ ಸರಳವಾದ ದೇವಾಲಯಗಳು. ವರುಣದ ದೇವಾಲಯದಲ್ಲಿ ಗೋಡೆಯ ಮೇಲೆ ಲೋವೆಯ ತಳಭಾಗದಲ್ಲಿ ಅತಿ ತೆಳುವಾಗಿ ಬಿಡಿಸಿರುವ ರಾಮಾಯಣದ ಚಿತ್ರಗಳು ಇರುವುದೊಂದು ವಿಶೇಷ.

ನಂದಿಯ ಭೋಗನಂದೀಶ್ವರ ದೇವಾಲಯದ ಮೂಲ ಗುಡಿ, ಬೇಗೂರಿನ ನಾಗೇಶ್ವರ ದೇವಾಲಯ, ಕಂಬದಹಳ್ಳಿಯ ಪಂಚಕೂಟ ಬಸದಿಯಲ್ಲಿನ ಆದೀಶ್ವರ ಬಸದಿ ಮತ್ತು ಶ್ರವಣಬೆಳಗೊಳದ ಚಾವುಂಡರಾಯ ಬಸದಿ–ಇವುಗಳಲ್ಲಿ ಗಂಗರ ಕಾಲದ ವಾಸ್ತುಶಿಲ್ಪದ ಪೂರ್ಣವಿಕಾಸವನ್ನು ನೋಡಬಹುದು. ಬಹುಶಃ ಗಂಗ ಜಯತೇಜನ ಕಾಲದಲ್ಲಿ ರತ್ನಾವಳಿ ಕಟ್ಟಿಸಿದ ಭೋಗನಂದಿಯ ಮೂಲದೇವಾಲಯ ಚೌಕವಿನ್ಯಾಸವುಳ್ಳದ್ದಾಗಿತ್ತು. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗಗಳು ಮಾತ್ರ ಇದ್ದುವು. ಹೊರ ಗೋಡೆಯ ಬುಡದ ದಿಂಡುಗಳ ಮೇಲೆ ಮಕರ, ಆನೆ, ಸಿಂಹ ಮತ್ತು ಕುಬ್ಜರ ಮೂರ್ತಿಗಳು, ಗೋಡೆಯ ಮೇಲೆ ಅರೆಗಂಬಗಳು, ನಡುವೆ ಹೆಚ್ಚು ಅಲಂಕೃತವಾದ ಬಳ್ಳಿಯ ಸುರುಳಿಯಂತೆ

ಕೊರೆದ ಜಾಲರಂಧ್ರಗಳು, ಒಂದೊಂದು ಸುರುಳಿಯಲ್ಲೂ ನೃತ್ಯಗೀತವಾದ್ಯಗಳಲ್ಲಿ ನಿರತರಾದ ಕುಬ್ಜರು. ಲೋವೆಯ ಮೇಲೆ ಅಲ್ಲಲ್ಲಿ ಕೀರ್ತಿಮುಖಗಳು, ಕುಬ್ಜರ ಸಾಲು, ಕೈಪಿಡಿಯ ಸುತ್ತಲೂ ಪಿಂಜರ, ಗಜ ಪೃಷ್ಠಾಕೃತಿಗಳು, ಅವುಗಳ ಮುಂಭಾಗದ ಲಾಳದಾಕೃತಿಯ ಕಮಾನುಗಳ ಕೆಳಗೆ ಶಿವಲೀಲೆಗಳು ಮತ್ತು ಇತರ ಮೂರ್ತಿಗಳು, ಮೂರು ಅಂತಸ್ತುಗಳಲ್ಲಿ ಮೇಲೆದ್ದಿರುವ ಗೋಪುರ ಸುಂದರವಾಗಿದೆ. ನವರಂಗದ ಕಂಬಗಳ ಮೇಲೂ ತೆಳುವಾಗಿ ಮೂರ್ತಿಗಳನ್ನು ಬಿಡಿಸಿದೆ. ಚಾವಣಿಯಲ್ಲಿ ಪಲ್ಲವಶಿಲ್ಪವನ್ನನುಕರಿಸುವ ಅಷ್ಟದಿಕ್ಪಾಲಕರು ಮತ್ತು ನಡುವೆ ಉಮಾಮಹೇಶ್ವರನ ಮೂರ್ತಿಗಳು ಪ್ರಸನ್ನ ಗಂಭೀರ ಭಾವವನ್ನು ವ್ಯಕ್ತಪಡಿಸುತ್ತವೆ. ಪಲ್ಲವರ ಕೊನೆಯ ವರ್ಷಗಳಲ್ಲಿ ಬೆಳೆದು ಬಂದ ವಾಸ್ತುರೀತಿಯನ್ನೇ ಹೋಲುವ ಈ ದೇವಾಲಯದ ಪ್ರತಿರೂಪ ಬೇಗೂರಿನ ನಾಗೇಶ್ವರ ದೇವಾಲಯವೆನ್ನಬಹುದು. ಗಂಗ ಎಱೆಯಪ್ಪನ ಸಾಮಂತ ನಾಗತ್ತರ ಕಟ್ಟಿಸಿರಬಹುದಾದ ಈ ನಾಗೇಶ್ವರ ದೇವಾಲಯ ಗಾತ್ರದಲ್ಲಿ ಸ್ವಲ್ಪ ಚಿಕ್ಕದು. ಇದರ ಗೋಪುರ ಒಂದೊಂದು ಅಂತಸ್ತಿನಲ್ಲೂ ಮಧ್ಯದ ಗೂಡುಗಳಲ್ಲಿ ಇರುವ ದಕ್ಷಿಣಾಮೂರ್ತಿ, ವಿಷ್ಣು, ನರಸಿಂಹ, ಸರಸ್ವತಿ ಮೊದಲಾದ ಮೂರ್ತಿಗಳು ಆಕರ್ಷಕವಾಗಿವೆ.

ಕಂಬದಹಳ್ಳಿಯ ಆದಿನಾಥಬಸದಿ ಮೂರು ಗರ್ಭಗುಡಿಗಳಿರುವ ಒಂದು ತ್ರಿಕೂಟಾಚಲ, ಹೊರಗೋಡೆಗಳ ನಡುವೆ ಒಂದೊಂದು ಆಳವಿಲ್ಲದ ಗೂಡು, ಅದರ ಎರಡು ಕಡೆಯೂ ಅರೆಗಂಬಗಳು ಇವೆ. ಲೋವೆಯ ಕೆಳಗೆ ಒಂದು ಸಾಲು ಹಂಸಪಕ್ಷಿಗಳೂ ಮೇಲೆ ನೀರ್ಗುದುರೆಗಳ ಸಾಲೂ ಇರುವುದರೊಂದಿಗೆ ಎರಡನೆಯ ಅಂತಸ್ತಿನ ನಾಲ್ಕು ಮೂಲೆಗಳಲ್ಲಿಯೂ ಸಿಂಹಗಳು ಪಂಜವನ್ನೆತ್ತಿ ಮಲಗಿವೆ. ತುದಿಯ ಆಮಲಕಗಳಲ್ಲಿ ಒಂದು ಗುಂಡಗೂ ಎರಡನೆಯದು ಚೌಕಾಕಾರವಾಗಿಯೂ ಮೂರನೆಯದು ಅಷ್ಟಮುಖವುಳ್ಳದ್ದಾಗಿಯೂ ಇವೆ. ನವರಂಗದ ಕಂಬಗಳು ತುದಿಯಲ್ಲಿ ಕಲಶವುಳ್ಳ ಅಷ್ಟಕೋನಾಕೃತಿಯವು. ಚಾವಣಿಯ ನಡುವಣ ಅಂಕಣದಲ್ಲಿ ಅಷ್ಟದಿಕ್ಪಾಲಕರ ನಡುವೆ ಧರಣೇಂದ್ರ ಯಕ್ಷನ ಮೂರ್ತಿಯಿದೆ. ಈ ನಡುವಣ ಅಂಕಣದ ಸುತ್ತಲೂ ಚಾವಣಿಗೆ ಹಾಕಿರುವ ಹಾಸಗಲ್ಲುಗಳು ಹೊರ ಭಾಗಕ್ಕೆ ಚಾಚುವಾಗ ಅಗಲವಾಗುತ್ತ ಹೋಗುವುದರಿಂದ ಸುತ್ತಲೂ ಕಿರಣಗಳು ಹರಡುವಂತೆ ತೋರುತ್ತವೆ.

ಪಂಚಕೂಟ ಬಸದಿಯ ಗೋಪುರ, ಕಂಬದ ಹಳ್ಳಿ

ಗಂಗರ ಕಾಲದ ಕಟ್ಟಡಗಳಲ್ಲಿ ಬಹುಶಃ ಕೊನೆಯದೂ ದೊಡ್ಡದು ಸುಂದರವಾದ್ದೂ ಆದ ಕಟ್ಟಡವೆಂದರೆ ಶ್ರವಣಬೆಳಗೊಳದ ಚಿಕ್ಕ ಬೆಟ್ಟದ ಮೇಲಿರುವ, ಚಾವುಂಡರಾಯನ ಬಸದಿ, ಸು. 983ರಲ್ಲಿ ಗೊಮ್ಮಟೇಶ್ವರನ ಪ್ರತಿಷ್ಠೆಯನ್ನು ಮಾಡಿದಾಗಲೇ ಚಾವುಂಡರಾಯ ಈ ಬಸದಿಯನ್ನೂ ಕಟ್ಟಿಸಿರಬೇಕು. ಎತ್ತರವಾದ ತಳಹದಿಯ ಮೇಲೆ ಗರ್ಭಗೃಹ, ಸುಕನಾಸಿ, ದೊಡ್ಡದಾದ ನವರಂಗ ಇವೆ. ಹೊರ ಗೋಡೆಗಳು ಸರಳವಾದ ಅರೆಗಂಬಗಳು, ಗೂಡುಗಳಿಂದಲಂಕೃತವಾಗಿದ್ದರೂ

ಚಾವುಂಡರಾಯ ಬಸದಿ, ಶ್ರವಣಬೆಳಗೊಳ

ಮೇಲ್ಭಾಗದಲ್ಲಿ ಲೋವೆಯ ಕೆಳಗಿನ ಹಂಸದ ಸಾಲು, ಲೋವೆಯ ಮುಂಭಾಗದಲ್ಲಿ ಅಲ್ಲಲ್ಲಿ ಅಲಂಕೃತ ಕೀರ್ತಿಮುಖಗಳು, ಮೇಲೆ ನೀರ್ಗುದುರೆಗಳ ಸಾಲು, ಆ ಸಾಲಿನ ಮೇಲೆ ಕೈಪಿಡಿಯ ಪಿಂಜರ, ಗೂಡು, ಗಜಪೃಷ್ಠಗಳ ಅಲಂಕೃತ ಕಮಾನುಗಳ ಕಡೆಗೆ ಇರುವ ಜಿನರ ಮತ್ತು ಇತರರ ಭಾವಯುಕ್ತವಾದ ಮೂರ್ತಿಗಳು, ಇವು ಸರಳವೂ ಸುಂದರವೂ ಆಗಿವೆ. ಗೋಪುರದಲ್ಲಿ ಚೌಕಾಕಾರದ ಇನ್ನೊಂದು ಗುಡಿಯಿದೆ. ಪಾರ್ಶ್ವನಾಥನ ಮೂರ್ತಿಯನ್ನು ಚಾವುಂಡರಾಯನ ಮಗ ಜೊಪ್ಪಣ ಇಲ್ಲಿ ಪ್ರತಿಷ್ಠಿಸಿದ್ದಾನೆ. ಗಂಗರ ಕಾಲದ ಕಟ್ಟಡಗಳಲ್ಲೆಲ್ಲ ತನ್ನ ಮೊದಲಿನ ಸ್ಥಿತಿಯಲ್ಲೆ ಉಳಿದು ಬಂದಿರುವ ಕಟ್ಟಡವೆಂದರೆ ಇದೊಂದೆ.

ಬಹುಕಾಲ ಗಂಗರ ರಾಜಧಾನಿಯಾಗಿದ್ದ ತಲಕಾಡಿನಲ್ಲಿ ಅವರ ಕಾಲದ ಅನೇಕ ಕಟ್ಟಡಗಳು ಇದ್ದಿರಬೇಕು. ಆದರೆ ಅದರ ಬಹುಭಾಗ ಮರಳಿನಲ್ಲಿ ಹೂತು ಹೋಗಿರುವುದರಿಂದಲೂ ಉಳಿದುಬಂದಿರುವ ಕೆಲವು ದೇವಾಲಯಗಳು ಹಳೆಯ ಕಾಲದ ಶಿಲ್ಪವನ್ನು ಉಪಯೋಗಿಸಿ ಪುನರ್ನಿರ್ಮಿತವಾದವಾಗಿರುವುದರಿಂದಲೂ ಆ ಕಟ್ಟಡಗಳ ವಾಸ್ತು ರೀತಿಯನ್ನು ಈಗ ಅರಿಯಲು ಸಾಧ್ಯವಿಲ್ಲ. ತಲಕಾಡು, ಹೆಮ್ಮಿಗೆ, ಟಿ. ನರಸೀಪುರ, ಕಿತ್ತೂರು, ಅವನಿ, ಹೆಬ್ಬಟ ಮೊದಲಾದ ಕಡೆ ಗಂಗರ ಕಾಲದವೆಂದು ಖಚಿತವಾಗಿ ಹೇಳಬಹುದಾದ ಶಿಲ್ಪಗಳು, ಕಂಬಗಳು ಮತ್ತು ಇತರ ಅವಶೇಷಗಳು ಚೆಲ್ಲಾಡಿರುವುದರಿಂದ ಅವರ ಕಾಲದ ಅನೇಕ ಕಟ್ಟಡಗಳು ನಾಶವಾಗಿರುವುದು ಸ್ಪಷ್ಟ.

(ಎಂ.ಎಚ್.)

**ಗಂಗರ ಶಾಸನಗಳು, ತಲಕಾಡಿನ :** ಸು. 700 ವರ್ಷಗಳಷ್ಟು ಕಾಲ ಆಳಿದ ಗಂಗವಂಶದ ರಾಜರ ಶಾಸನಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಆದರೂ ಅವು ಹಲವು ರೀತಿಯಲ್ಲಿ ಮುಖ್ಯವೂ ವೈವಿಧ್ಯಪೂರ್ಣವೂ ಆದಂಥವು. ಮೊದಮೊದಲ ಗಂಗರಾಜರ ಇತಿಹಾಸವನ್ನರಿಯಲು ಇವೇ ಪೂರ್ಣ ಆಧಾರ. ಗಂಗರ ಶಾಸನಗಳು ಸ್ಥೂಲವಾಗಿ ಮೂರು ಬಗೆ: 1 ತಾಮ್ರಶಾಸನಗಳು, 2 ಶಿಲಾ ಶಾಸನಗಳು ಮತ್ತು 3 ವೀರಗಲ್ಲುಗಳು, ಸು. 4ನೆಯ ಶತಮಾನದಿಂದಲೇ ಗಂಗರಾಜರ ಆಳ್ವಿಕೆ ಆರಂಭವಾಗಿದ್ದರೂ 8ನೆಯ ಶತಮಾನದವರೆಗೂ ಇವರ ಶಿಲಾಶಾಸನಗಳು ಬಲು ವಿರಳವಾಗಿವೆ. 726ರಲ್ಲಿ ಪಟ್ಟಕ್ಕೆ ಬಂದ ಶ್ರೀಪುರುಷನಿಗಿಂತ ಹಿಂದಿನ ರಾಜರ ಶಿಲಾಶಾಸನಗಳೆಂದರೆ ಆವಣಿಯಲ್ಲಿ ದೊರಿತಿರುವ ತುಂಡುಶಾಸನ, ಸಿರಿಗುಂದದ ನಿರ್ವಿನೀತನ ಶಾಸನ, ಕಲ್ಲೂರಿನ ಶ್ರೀವಿಕ್ರಮನ ಶಾಸನ ಮತ್ತು ತಿರುವಳ್ಳೂರಿನ 1ನೆಯ ಶಿವಮಾರನ ಶಾಸನ-ಇವಿಷ್ಟೆ. ಆದರೆ ಇದೇ ಅವಧಿಯಲ್ಲಿ ಗಂಗರ ಹಲವಾರು ತಾಮ್ರಶಾಸನಗಳು ದೊರೆತಿವೆ.

ಪ್ರಾಚೀನ ಕನ್ನಡ ಅರಸುಮನೆತನಗಳಲ್ಲಿ ಬಹುಶಃ ಗಂಗರಷ್ಟು ಹೆಚ್ಚಾಗಿ ತಾಮ್ರ ಶಾಸನಗಳನ್ನು ಹಾಕಿಸಿರುವರು ಬೇರೆ ಇಲ್ಲ. ಇದುವರೆಗೂ ಸು. 100ಕ್ಕೂ ಮೀರಿ ಅವರ ತಾಮ್ರಶಾಸನಗಳು ದೊರೆತಿವೆ. ಇಮ್ಮಡಿ ಮಾರಸಿಂಹನವರೆಗೂ ಗಂಗರಾಜರು ತಾಮ್ರಶಾಸನಗಳನ್ನು ಹಾಕಿಸಿದ್ದಾರೆ. ಮುಂದಿನ ರಾಜರ ತಾಮ್ರ ಶಾಸನಗಳು ದೊರೆತಿಲ್ಲ.

ಗಂಗರ ತಾಮ್ರಶಾಸನಗಳಿಗೂ ಶಿಲಾಶಾಸನಗಳಿಗೂ ಹಲವು ಮುಖ್ಯವಾದ ವ್ಯತ್ಯಾಸಗಳುಂಟು. ತಾಮ್ರಶಾಸನಗಳು ಬಹುಪಾಲು ಸಂಸ್ಕೃತದಲ್ಲಿವೆ; ಶಿಲಾ ಶಾಸನಗಳು ಕನ್ನಡದಲ್ಲಿವೆ. ತಾಮ್ರಶಾಸನಗಳಲ್ಲಿ ಒಕ್ಕಣೆ ಹೆಚ್ಚು. ಗಂಗವಂಶದ ಮೂಲಪುರುಷ ಕೊಂಗುಣಿವರ್ಮನಿಂದ ಆರಂಭಿಸಿ ಶಾಸನ ಕೊರೆಸಿದ ರಾಜನವರೆಗೂ ಪೀಳಿಗೆಯನ್ನು ಸವಿವರವಾಗಿ ಕೊಟ್ಟಿರುತ್ತದೆ. ಶಿಲಾ ಶಾಸನಗಳಲ್ಲಾದರೋ ಹೆಚ್ಚು ವಿಷಯಗಳಿರುವುದಿಲ್ಲ; ಅವನ್ನು ಹಾಕಿಸಿದ ರಾಜರ ಹೆಸರು, ಒಮ್ಮೊಮ್ಮೆ ಅವರ ಬಿರುದುಗಳು, ಶಾಸನದ ಕಾಲ ಮತ್ತು ಉದ್ದೇಶಗಳನ್ನು ನೇರವಾಗಿ ಸರಳವಾಗಿ ತಿಳಿಸಿರುತ್ತದೆ. ಆವಣಿಯ ತುಂಡು ಶಿಲಾಶಾಸನ ಇದಕ್ಕೆ ಅಪವಾದ. ಇದು ತಾಮ್ರ ಶಾಸನಗಳಂತೆ ಸಂಸ್ಕೃತದಲ್ಲಿದೆ: ಗಂಗರ ಪೀಳಿಗೆಯನ್ನು ಕೊಡುತ್ತದೆ. ಆದರೆ ನಡುವೆಯೇ ನಿಂತು ಹೋಗುವುದರಿಂದ ಇದು ಯಾರ ಕಾಲದ್ದೆಂದು ಹೇಳಲು ಬಾರದು. ಹೀಗೆಯೇ ಗುಂಡ್ಲುಪೇಟೆ ತಾಲ್ಲೂಕಿನ ಶಾಸನವೊಂದರಲ್ಲಿ ಒಂದೂವರೆ ಶ್ಲೋಕಗಳಲ್ಲಿ ಗಂಗವಂಶದ ಪೀಳಿಗೆಯನ್ನು ಕೊಂಗುಣಿವರ್ಮನಿಂದ ಆರಂಭಿಸಿ ಒಂದನೆಯ ಶಿವಮಾರನ ವರೆಗೆ ಹೀಗೆ ತಿಳಿಸಿದೆ:

ಕೊಂಗುಣಿರ್ಮಾಧವಶ್ಚೈವ ಹರಿಶ್ಚ ವಿಷ್ಣುಗೋಪಮಃ
ಮಾಧವೋಪ್ಯವಿನೀತಶ್ಚ ದುರ್ವಿನೀತಶ್ಚ ಮುಷ್ಕರಃ
ಶ್ರೀ ವಿಕ್ರಮಶ್ಚ ದುಗಶ್ಚ ಶಿವಮಾರಸ್ತಥೈವಚ

ವಳ್ಳಿಮಲೆಯ ಗುಹೆಯೊಂದರಲ್ಲಿ ಇರುವ ಒಂದನೆಯ ರಾಜಮಲ್ಲನ ಶಾಸನದಲ್ಲಿ ಅವನ ಹಿಂದಿನ ಮೂರು ತಲೆಮಾರುಗಳ ಹೆಸರುಗಳನ್ನು, ಎಂದರೆ ಒಂದನೆಯ ಶಿವಮಾರ, ಅವನ ಮಗ ಶ್ರೀಪುರುಷ, ಅವನ ಮಗ ರಣವಿಕ್ರಮ, ರಣವಿಕ್ರಮನ ಮಗ ರಾಜಮಲ್ಲ ಎಂದು ತಿಳಿಸುವುದೊಂದು ವಿಶೇಷ. ಉಳಿದಂತೆ ಈ ಪೀಳಿಗೆ ಶಿಲಾಶಾಸನಗಳಲ್ಲಿ ಕಂಡುಬರುವುದಿಲ್ಲ. ಆದ್ದರಿಂದಲೇ ಗಂಗರ ವಂಶಾವಳಿಯನ್ನು ಗುರುತಿಸಲು ಶಿಲಾಶಾಸನಗಳಿಗಿಂತ ಹೆಚ್ಚಾಗಿ ತಾಮ್ರಶಾಸನಗಳೇ ಆಧಾರ.

ಗಂಗರ ತಾಮ್ರ ಶಾಸನಗಳು ಹೆಚ್ಚಾಗಿದ್ದರೂ ಅವುಗಳ ನೈಜತೆಯ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಭಿಪ್ರಾಯಗಳಿವೆ. ರೈಸ್ ತನಗೆ ದೊರೆತ ತಾಮ್ರಶಾಸನಗಳೆಲ್ಲವನ್ನೂ ಸಾಮಾನ್ಯವಾಗಿ ನೈಜವೆಂದೇ ಪ್ರತಿಪಾದಿಸಿದರೆ, ಫ್ಲೀಟ್ ಮೊದ ಮೊದಲು ಈ ಎಲ್ಲ ಶಾಸನಗಳೂ ಕೂಟಶಾಸನಗಳೆಂದೇ ಹೇಳಿದ. ಆದರೆ ಕಡೆಗೆ ಪೆನುಗೊಂಡೆ ತಾಮ್ರಶಾಸನವೇ ಮೊದಲಾದ ಕೆಲವನ್ನಾದರೂ ನೈಜವೆಂದು ಫ್ಲೀಟ್ ಒಪ್ಪಿಕೊಳ್ಳಬೇಕಾಯಿತು. ಈಚೆಗೆ ಗಂಗರ ಹಲವು ತಾಮ್ರಶಾಸನಗಳೂ ದೊರೆತಿರುವುದರಿಂದ ಇವುಗಳ ತೌಲನಿಕ ಅಧ್ಯಯನದಿಂದ ನೈಜ ಮತ್ತು ಕೂಟಶಾಸನಗಳನ್ನು ಬೇರ್ಪಡಿಸುವುದು ಈಗ ಸಾಧ್ಯವಾಗಿದೆ. ಹೀಗೆ ಪರಿಶೀಲಿಸಿದಾಗ ಅವುಗಳಲ್ಲಿ ಕೆಲವಾದರೂ ಕೂಟಶಾಸನಗಳಿರಬೇಕೆಂಬುದು

ಗಂಗರತಾಮ್ರ ಶಾಸನ

ವ್ಯಕ್ತವಾಗುತ್ತದೆ. ಇಂಥ ಶಾಸನಗಳಲ್ಲಿ ಗಂಗರ ವಂಶಾವಳಿಯನ್ನು ಸರಿಯಾಗಿ ಕೊಟ್ಟಿದ್ದರೂ ಲಿಪಿ, ಭಾಷೆ, ಕೊಟ್ಟಿರುವ ಕಾಲ ಮುಂತಾದವುಗಳಲ್ಲಿಯೂ ಶಾಸನಗಳನ್ನು ಕೊರೆದಿರುವ ರೀತಿ, ಹಲಗೆಗಳ ಆಕಾರಗಳಲ್ಲಿಯೂ ಅವು ಹುಟ್ಟಿತೆಂದು ಹೇಳಲಾದ ಕಾಲದ್ದಲ್ಲದೆ ಬೇರೆಯ ಕಾಲದವಾಗಿರುತ್ತವೆ. ಸು. 5ನೆಯ ಶತಮಾನದಲ್ಲಿದ್ದ 1ನೆಯ ಮಾಧವನದೆಂದು ತಿಳಿಸುವ ನಂದಿಯ ತಾಮ್ರಶಾಸನದ ಲಿಪಿ 9ನೆಯ ಶತಮಾನದ್ದಕ್ಕಿಂತ ಹಿಂದೆ ಹೋಗಲಾರದು; ಕನ್ನಡ ಬೆರೆತ ಸಂಸ್ಕೃತ ಭಾಷೆ, ಅದರಲ್ಲಿಯ ಹೇರಳವಾದ ವ್ಯಾಕರಣ ದೋಷಗಳು, ಕಂಡರಿಸಿರುವ ಒರಟು ರೀತಿ–ಇವುಗಳನ್ನು ನೋಡಿದಾಗ ಇವು ಗಂಗರ ಆಸ್ಥಾನದಲ್ಲಿದ್ದ ವಿಶ್ವಕರ್ಮರಿಂದ ರಚಿತವಾದವೇ? ಎಂಬ ಸಂದೇಹ ಬರುತ್ತದೆ. ತಗಡೂರು, ತಂಜಾವೂರು, ಕೂಡಲೂರುಗಳಲ್ಲಿ ದೊರೆತ–ಹರಿವರ್ಮನವೆಂದು ಹೇಳಿಕೊಳ್ಳುವ–ಶಾಸನಗಳು, ಮಡಿಕೇರಿಯಲ್ಲಿ ದೊರೆತ ಅವಿನೀತನ ತಾಮ್ರ ಶಾಸನ ಮುಂತಾದವನ್ನು ಈ ಗುಂಪಿಗೆ ಸೇರಿಸಬಹುದು. ಗಂಗರ ತಾಮ್ರಶಾಸನಗಳಲ್ಲಿ ಸು. 12 – 15ರ ವರೆಗೆ ಇಂಥ ಕೂಟಶಾಸನಗಳಿರಬಹುದೆಂದು ಈಗ ವಿದ್ವಾಂಸರು ಒಪ್ಪುತ್ತಾರೆ.

ಉತ್ತನೂರು ಎಂಬಲ್ಲಿ ಗಂಗದುರ್ವಿನೀತನ 30ನೆಯ ವರ್ಷದ ಆಳ್ವಿಕೆಯ ಎರಡು ತಾಮ್ರಶಾಸನಗಳು ದೊರೆತಿವೆ. ಒಂದನ್ನು ಸುಂದರವಾಗಿ ತಪ್ಪಿಲ್ಲದಂತೆ ಕಂಡರಿಸಲಾಗಿದ್ದು, ಅದು ನೈಜಶಾಸನದ ಎಲ್ಲ ಲಕ್ಷಣಗಳನ್ನೂ ಪಡೆದಿದ್ದರೆ, ಇನ್ನೊಂದು ಒರಟಾದ ಕೆತ್ತನೆಯಿಂದ ಕೂಡಿದ್ದು, ಕೂಟಶಾಸನದ ಲಕ್ಷಣಗಳನ್ನೂ ಒಳಗೊಂಡಿದೆ. ಆದರೆ ಈ ಎರಡು ಶಾಸನಗಳಲ್ಲಿಯೂ ಬರುವ ವಿಷಯ ಒಂದೇ; ಒಂದೇ ದಾನದ ವಿಷಯವನ್ನೇ ಎರಡೂ ತಿಳಿಸುತ್ತವೆ. ಆದ್ದರಿಂದ ಕೂಟಶಾಸನವೆಂದು ಕಂಡುಬರುವ ತಾಮ್ರಶಾಸನವನ್ನು ದಾನ ಪಡೆದವರ ವಂಶದವರು ಮುಂದೆ ಯಾವಾಗಲೋ ತಮ್ಮ ದಾಖಲೆಗಾಗಿ ಮೂಲಶಾಸನದಿಂದ ಪ್ರತಿ ಮಾಡಿಸಿಕೊಂಡಿದ್ದಿರಬೇಕೆಂಬುದು ಸ್ಪಷ್ಟ. ಈಗ ಕೂಟಶಾಸನಗಳೆಂದು ಸ್ಪಷ್ಟವಾಗಿರುವ ತಾಮ್ರಶಾಸನಗಳಲ್ಲಿ ಕೆಲವಾದರೂ ಇಂಥ ಪ್ರತಿಗಳಾಗಿರಬಹುದು.

ಇವರ ತಾಮ್ರಶಾಸನಗಳು 3 – 7 ಹಲಗೆಗಳವರೆಗೆ ಇರುತ್ತವೆ. ಮೊದಮೊದಲಿನ ಶಾಸನಗಳ ಹಲಗೆಗಳ ಅಗಲ ಕಿರಿದಾಗಿದ್ದು ಓಲೆಗರಿಯಾಕಾರದಲ್ಲಿವೆ. ಹಲಗೆಯ ಒಂದೊಂದು ಮುಖದ ಮೇಲೂ ಸ್ಫುಟವಾಗಿ ಹಳಗನ್ನಡ ಲಿಪಿಯಲ್ಲಿ ಕಡೆದ 4 ಅಥವಾ 5 ಪಂಕ್ತಿಗಳಿವೆ. ಮುಂದೆ ಕ್ರಮೇಣ ಹಲಗೆಯ ಅಗಲ ಹೆಚ್ಚಾಗಿದೆ. ಸಾಲುಗಳು ಹೆಚ್ಚಿವೆ. ಒಕ್ಕಣೆ ಬೆಳೆದಿದೆ. ಶಾಸನದ ಹಲಗೆಗಳನ್ನು ಎಡಭಾಗದಲ್ಲಿರುವ ರಂಧ್ರಗಳ ಮೂಲಕ ಹಾದುಹೋಗುವ ಒಂದು ಬಳೆಯಿಂದ ಬಂಧಿಸಿ ಬಳೆಯ ತುದಿಗಳನ್ನು ಜೋಡಿಸಿ ಆನೆಯ ಮುದ್ರೆ ಹಾಕಲಾಗುತ್ತಿತ್ತು. ಲಿಪಿ ಆಯಾ ಶತಮಾನದ ಕನ್ನಡದಲ್ಲಿದ್ದರೂ ಭಾಷೆ ಸಂಸ್ಕೃತ, ಪ್ರೌಢ ಶೈಲಿಯ ಗದ್ಯ; ಶಾಸನಗಳ ಒಕ್ಕಣೆ ಒಂದೇ ಬಗೆ. ನೈಜಶಾಸನಗಳಲ್ಲಿ ಮೊದಮೊದಲಿನ ತಾಮ್ರಶಾಸನಗಳು ಪೂರ್ತಿಯಾಗಿ ಸಂಸ್ಕೃತದಲ್ಲಿದ್ದರೂ ದುರ್ವಿನೀತನಿಂದೀಚೆಗೆ ದಾನ ಕೊಟ್ಟ ಗ್ರಾಮದ ಎಲ್ಲೆಯನ್ನು ತಿಳಿಸುವಾಗ ಒಮ್ಮೊಮ್ಮೆ ಕನ್ನಡವನ್ನು ಬಳಸುವ ರೂಢಿ ಬಳಕೆಗೆ ಬಂತು. ಗಂಗ ದುರ್ವಿನೀತನ ಆಳ್ವಿಕೆಯ ನಾಲ್ಕನೆಯ ವರ್ಷದ, ಪೆಣ್ಣೂರು ತಾಮ್ರಶಾಸನದಲ್ಲಿ ಕೊನೆಯ ಒಂದು ವಾಕ್ಯ ಮಾತ್ರ ಕನ್ನಡದಲ್ಲಿದೆ–ಶಾಸನವನ್ನು ಕಂಡರಿಸಿದ ಚೋಮತ್ತಪ್ಪರನಿಗೆ ಕೊಟ್ಟ ದತ್ತಿಯನ್ನು ತಿಳಿಸುವ ಮಕ್ಕಣ್ಡಕತ್ತು ಮಣುಮ್ಮನೆಯುಮ್ಪಾಟುಮ್ಪಟ್ಟಿಯುನ್ತರಕ್ಕುಮ್ ಒಡೆಅನ್ ಎಂಬ ವಾಕ್ಯ ಆ ಕಾಲದ ಕನ್ನಡದ ಸ್ವರೂಪವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ.

ಸಾಮಾನ್ಯವಾಗಿ ಈ ಶಾಸನಗಳು ಆರಂಭವಾಗುವುದು ಸ್ವಸ್ತಿಜಿತಂ ಭಗವತಾ ಎಂದು. ಮುಂದೆ ಕೊಂಗುಣಿವರ್ಮನಿಂದ, ತಾಮ್ರಶಾಸನವನ್ನು ಹಾಕಿಸಿದ ರಾಜನವರೆಗೆ ವಂಶಾವಳಿಯನ್ನು ವಿವರಿಸುತ್ತದೆ. ಗ್ರಾಮಗಳನ್ನು ದಾನವಾಗಿ ಕೊಟ್ಟ ವಿಷಯವನ್ನು ನಿರೂಪಿಸಿರುವುದೇ ಹೆಚ್ಚು. ಶಾಸನಗಳನ್ನು ಕೊರೆಯುತ್ತಿದ್ದವನ ಬಗ್ಗೆ ವಿಶ್ವಕರ್ಮಾಚಾರ್ಯ ಎಂಬ ಅವನ ಅಧಿಕಾರದ ಹೆಸರನ್ನೇ ತಿಳಿಸುತ್ತಿದ್ದರೂ ಒಮ್ಮೊಮ್ಮೆ ಅವನ ಹೆಸರನ್ನು ಕೊಡುತ್ತಿದ್ದುದುಂಟು.

ಗಂಗರ ತಾಮ್ರಶಾಸನಗಳ ರೀತಿ, ಲಿಪಿಯ ಬೆಳವಣಿಗೆ, ಅದರ ಸೌಂದರ್ಯ–ಇವಕ್ಕೆ ಹಲವು ಉದಾಹರಣೆಗಳನ್ನು ಕೊಡಬಹುದು: ಕೃಷ್ಣವರ್ಮನ ಕುಡಿಥಿಯಂ ದಾನ ಶಾಸನ, ಅವಿನೀತನ ಹೊಸಕೋಟೆಯ ತಾಮ್ರಶಾಸನ, ದುರ್ವಿನೀತನ ಪೆಣ್ಣೂರು ದಾನಶಾಸನ, ಗುಮ್ಮರೆಡ್ಡಿಪುರ ಶಾಸನ, ಸುಂದರವಾದ ಲಿಪಿಯುಳ್ಳ, 1ನೆಯ ಶಿವಮಾರನ 713ರ ಹಲ್ಲೆಗೆರೆ ತಾಮ್ರಶಾಸನ, ಶ್ರೀಪುರುಷನ ಆಳ್ವಿಕೆಯ ಮೊದಲನೆಯ ವರ್ಷದ ಬಾರದೂರು ದಾನಶಾಸನ, 25ನೆಯ ವರ್ಷದ ಜಾವಳಿ ಶಾಸನ, 50ನೆಯ ವರ್ಷದ ದೇವರಹಳ್ಳಿ ಶಾಸನ, 1ನೆಯ ರಾಚಮಲ್ಲನ ಆಳ್ವಿಕೆಯ ಮೊದಲನೆಯ ವರ್ಷದ (819) ಪೆರ್ಜರಂಗಿ ದಾನಶಾಸನ ಇವು ಕೆಲವು. ಇವುಗಳಲ್ಲೆಲ್ಲ ಮಾರಸಿಂಹನ, ಏಳು ಹಲಗೆಗಳಿರುವ, ಕೂಡಲೂರು ಶಾಸನ ಮಾದರಿಯಾದ್ದು ಮತ್ತು ಚಾರಿತ್ರಿಕವಾಗಿ ಅಮೂಲ್ಯವಾದ್ದು. 963ರಲ್ಲಿ ಹುಟ್ಟಿದ ಈ ಶಾಸನ ಭಾಷೆ, ಲಿಪಿ ಎಲ್ಲದರಲ್ಲಿಯೂ ಸುಂದರವಾಗಿದೆ. ಚೌಕನಾಗಿರುವ ಇದರ ಆನೆಯ ಮುದ್ರೆಯೂ ಆಕರ್ಷಕವಾಗಿದೆ. ಅದರ ಕೆಳಗೆ ಶ್ರೀಮಾರಸಿಂಘದೇವ ಎಂಬ ರಾಜನ ಅಂಕಿತವೂ ಇದೆ. ಮಾರಸಿಂಹನ ಸಂಪೂರ್ಣವಾದ ವಂಶಾವಳಿಯಿದೆ. ಒಬ್ಬೊಬ್ಬ ರಾಜನಿಗೂ ದೀರ್ಘವಾದ ವಿವರಗಳುಂಟು. ಇದೇ ಗಂಗರ ಶಾಸನಗಳಲ್ಲೆಲ್ಲ ಅತ್ಯಂತ ವಿಸ್ತಾರವಾದ ಶಾಸನವೆಂದು ಹೇಳಬಹುದು. ಇದೇ ರಾಜನ ಇದೇ ರೀತಿಯ ಇನ್ನೊಂದು ತಾಮ್ರಶಾಸನ–ಧಾರವಾಡ ಜಿಲ್ಲೆಯಲ್ಲಿ ದೊರೆತಿದೆ.

ಹಿಂದೆಯೇ ತಿಳಿಸಿದಂತೆ ಗಂಗರ ಮೊದಲ ರಾಜರುಗಳ ಶಿಲಾಶಾಸನಗಳೂ ಹೆಚ್ಚಾಗಿ ದೊರೆತಿಲ್ಲ. ಶ್ರೀಪುರುಷನಿಗಿಂತ ಹಿಂದಿನ ಕೇವಲ ನಾಲ್ಕು ಶಾಸನಗಳು ಮಾತ್ರ ದೊರೆತಿವೆ. ಗಂಗರ ತಾಮ್ರಶಾಸನಗಳ ನೈಜತೆಯನ್ನು ಶಂಕಿಸುವುದಕ್ಕೆ ಫ್ಲೀಟನಿಗೆ ಇದೂ ಒಂದು ಕಾರಣ. ಶ್ರೀಪುರುಷ ಪಟ್ಟಕ್ಕೆ ಬಂದ ವರ್ಷದಿಂದಲೇ ಶಿಲಾಶಾಸನಗಳೂ ವೀರಗಲ್ಲುಗಳೂ ದೊರೆಯಲಾರಂಭಿಸುತ್ತವೆ. ಇವುಗಳ ಸಂಖ್ಯೆ ಮುಂದೆ ಬೆಳೆಯುತ್ತ ಹೋಗುತ್ತದೆ. ಈ ಶಾಸನಗಳೂ ವೀರಗಲ್ಲುಗಳೂ ಹೆಚ್ಚಾಗಿ ಕಗ್ಗಲ್ಲಿನ ಮೇಲೆಯೇ ಇವೆ. ಇವರ ಪ್ರಾಚೀನ ಶಿಲಾಶಾಸನಗಳಲ್ಲೊಂದಾದ, ನಿರ್ವಿನೀತನ ಸಿರಿಗುಂದದ ಶಾಸನವನ್ನು ಬಳಪದ ಕಲ್ಲಿನ ತೆಳುಹಲಗೆಯ ಮೇಲೆ ಕಂಡರಿಸಿದೆ; ಹಾಗೆಯೇ ಚಾವುಂಡರಾಯನ ಪ್ರತಾಪವನ್ನು ವರ್ಣಿಸುವ ಶಾಸನವಿರುವ ತ್ಯಾಗದ ಬ್ರಹ್ಮದೇವರ ಕಂಬವೂ ಬಳಪದ ಕಲ್ಲಿನದು. ತಲಕಾಡಿನಲ್ಲಿ ದೊರೆತ ಶ್ರೀಪುರಷನ ರಾಜ್ಯಾಡಳಿತದ

ಒಂದನೆಯ ವರ್ಷದ ಶಿಲಾಶಾಸನದಂತೆ ನಯಗೊಳಿಸಿದ ದೊಡ್ಡದಾದ ಶಿಲಾಫಲಕದ ಮೇಲೆ ಸುಂದರವಾಗಿ ಕಂಡರಿಸಿರುವ ಶಾಸನಗಳು ಕೆಲವಿದ್ದರೂ ಸಾಮಾನ್ಯವಾಗಿ ಒರಟು ಬಂಡೆಯ ಮೇಲೋ ಹದಗೊಳಿಸದ ಕಲ್ಲಿನ ಹಲಗೆಗಳ ಮೇಲೋ ಉಬ್ಬು ತಗ್ಗುಗಳ ನಡುವೆಯೇ ಕೊರೆದಿರುವುದೇ ಹೆಚ್ಚು. ಆದರೂ ಅಕ್ಷರಗಳು ದೊಡ್ಡವೂ ಆಳವೂ ಆಗಿರುವುದರಿಂದ ಅವನ್ನು ಗುರುತಿಸಲು ಹೆಚ್ಚು ತೊಂದರೆ ಆಗದು. ಇವುಗಳಲ್ಲಿ ಹೆಚ್ಚು ವಿಷಯ ಇರುವುದಿಲ್ಲ. ಭಾಷೆ ಕನ್ನಡವೇ ಆದರೂ ಆಗಿನ ಆಡುನುಡಿಗಳನ್ನು



ಶ್ರೀಪುರುಷನ ಶಾಸನ, ತಲಕಾಡು

ಹೆಚ್ಚು ಬಳಸುತ್ತಿದ್ದುದರಿಂದಲೋ ಆಗಿನ ಅನೇಕ ಪಾರಿಭಾಷಿಕ ಪದಗಳು ಈಗ ಬಳಕೆಯಲ್ಲಿಲ್ಲದಿರುವುದರಿಂದಲೋ ಬರವಣಿಗೆಯಲ್ಲಿ ತಪ್ಪು ಹೆಚ್ಚಾಗಿರುವುದರಿಂದಲೋ ಎಷ್ಟೋ ವೇಳೆ ಈ ಶಾಸನಗಳೂ ಅರ್ಥಕ್ಕೆ ನಿಲುಕುವುದಿಲ್ಲ. ಮಂಡ್ಯ ತಾಲ್ಲೂಕಿನ ತಾಯಲೂರು ಶಾಸನ, ಶ್ರೀರಂಗಪಟ್ಟಣ ತಾಲ್ಲೂಕಿನ ಕ್ಯಾತನಹಳ್ಳಿ ಶಾಸನ ಮುಂತಾದವುಗಳಲ್ಲಿರುವಂತೆ ಶಾಸನದ ಕಲ್ಲಿನ ಮೇಲೆ ಗಂಗರ ವಂಶ ಲಾಂಛನವಾದ ಆನೆಯ ಚಿತ್ರವನ್ನು ಬಿಡಿಸುವುದುಂಟು. ಕೊಡಗಿನ ಬಿಳಿಯೂರು ಪೆಗ್ಗೂರುಗಳಲ್ಲಿ ದೊರೆತ ಗಂಗ ಶಾಸನಗಳ ಮೇಲ್ಭಾಗದಲ್ಲಿ ಆನೆಯೊಂದಿಗೆ ಕಲಶ, ದೀಪಸ್ತಂಭ, ಮುಕ್ಕೊಡೆಗಳ ಶಿಲ್ಪವನ್ನೂ ನೋಡಬಹುದು.

ಗಂಗರ ಕೆಲವು ಕಂಬ ಶಾಸನಗಳೂ ಉಂಟು. ಇವುಗಳಲ್ಲಿ ಶ್ರವಣಬೆಳಗೊಳದ ಕೂಗೆಬ್ರಹ್ಮದೇವರ ಕಂಬದ ಬುಡದಲ್ಲಿರುವ ಮಾರಸಿಂಹನ ಶಾಸನ ಗಂಗರ ಶಿಲಾಶಾಸನಗಳಲ್ಲಿಯೇ ಉದ್ದವಾದದ್ದೆನ್ನಬಹುದು. ಇದು ಮಾರಸಿಂಹ ತೀರಿಕೊಂಡ ಅನಂತರ ಅವನ ನೆನಪಿಗಾಗಿ ನಿಲ್ಲಿಸಿರುವ ಶಾಸನಗಂಬ. ಈ ದೊಡ್ಡ ಶಾಸನದಲ್ಲೂ ಮಾರಸಿಂಹನ ವಂಶಾವಳಿಯನ್ನು ತಿಳಿಸಿಲ್ಲ. ತನ್ನ ಜೀವಿತಕಾಲದಲ್ಲಿ ಮಾರಸಿಂಹ ನಡೆಸಿದ ಯುದ್ಧಗಳನ್ನು ಮತ್ತು ಅವನ ಸಾಧನೆಗಳನ್ನು ಹೃದಯಂಗಮವಾಗಿ ಚಿತ್ರಿಸಿದೆ. ತ್ಯಾಗದ ಬ್ರಹ್ಮದೇವರ ಕಂಬ ಇನ್ನೊಂದು ರಾಚಮಲ್ಲನ ಮಂತ್ರಿ ಚಾವುಂಡರಾಯನ ಗುಣಗಾನ ಮಾಡುವ ಈ ಕಂಬದ ಮೇಲಿನ ಶಾಸನವನ್ನು ಮೂರು ಮುಖಗಳ ಮೇಲೆ ಕೆತ್ತಿ ಹಾಕಿರುವುದು ಶೋಚನಿಯ.

ಗಂಗರ ಕಾಲದ ವೀರಗಲ್ಲುಗಳು ತಮ್ಮದೇ ಆದ ವೈಶಿಷ್ಟ್ಯ ಹೊಂದಿವೆ. ಇವರ ಕಾಲದ ದಾನಶಾಸನಗಳಿಗಿಂತ ವೀರಗಲ್ಲಿನ ಶಾಸನಗಳ ಸಂಖ್ಯೆಯೇ ಹೆಚ್ಚೆಂದು ಹೇಳಬಹುದು. ಸಾಂಪ್ರದಾಯಿಕವಾದ, ಮೂರು ಅಂತಸ್ತುಗಳ ವೀರಗಲ್ಲುಗಳು ಕೆಲವಿವೆ. ಅವುಗಳಲ್ಲಿ ಎಳ್ಳಂಬಳಸೆಯ ವೀರಗಲ್ಲು ದೊಡ್ಡದಾಗಿಯೂ ಅತ್ಯಂತ ಸುಂದರವಾಗಿಯೂ ಇದೆ. ಬೂದುಬಣ್ಣದ ಕಗ್ಗಲ್ಲಿನಲ್ಲಿ ಈಗ ತಾನೆ ಕಡೆದು ನಿಲ್ಲಿಸಿರುವಷ್ಟು ಹೊಸದಾಗಿ ಕಾಣಿಸುವ ಈ ವೀರಗಲ್ಲಿನ ಮೊದಲ ಅಂತಸ್ತು ವೀರರು ಯುದ್ಧದಲ್ಲಿ ತೊಡಗಿರುವುದನ್ನು ಎರಡನೆಯದು



ಗಂಗರ ವೀರಗಲ್ಲು, ಹಿರೇಗುಂಡುಗಲ್ಲು

ಅವರು ಅಪ್ಸರೆಯರ ತೋಳತೆಕ್ಕೆಯಲ್ಲಿ ಸ್ವರ್ಗದೆಡೆಗೆ ಹಾರುತ್ತಿರುವುದನ್ನೂ ಮೇಲಿನ ಅಂತಸ್ತು ಸ್ವರ್ಗದಲ್ಲಿ ಸುಖಾಸೀನರಾಗಿ ಕುಳಿತಿರುವ ನಾಲ್ವರು ವೀರರನ್ನು ಚಿತ್ರಿಸಿದೆ. ಅಡ್ಡಪಟ್ಟಿಕೆಗಳಲ್ಲಿ ಶ್ರೀಪುರುಷ ಶಿವಮಾರ ಮೊದಲಾದವರು ತೀರಿಕೊಂಡ ವಿಷಯವನ್ನು ತಿಳಿಸುವ ಶಾಸನವಿದೆ. ಆದರೂ ಇವರ ವೀರಗಲ್ಲುಗಳು ಒರಟು ಹಾಸುಗಲ್ಲಗಳ ಮೇಲಿರುವುದೇ ಹೆಚ್ಚು.. ಎಷ್ಟೋ ವೇಳೆ ಈ ಹಾಸುಗಲ್ಲುಗಳಿಗೆ ನಿರ್ದಿಷ್ಟವಾದ ಆಕಾರ, ಅಳತೆ ಇರುವುದಿಲ್ಲ. ಬಂಡೆಯಿಂದ ಸಿಡಿಸಿದ. ಈ ಹಲಗೆಗಳು ಯಾವ ಆಕಾರದಲ್ಲಿದ್ದರೆ ಹಾಗೆಯೇ ಅವನ್ನು ಕಂಡರಿಸಲು ಉಪಯೋಗಿಸಿದ್ದಾರೆ. ಶಿಲ್ಪವನ್ನು ಶಾಸನವನ್ನು ಕಂಡರಿಸಿರುವ ಮುಖವನ್ನು ಕೂಡ ನಯಗೊಳಿಸಿರುವುದಿಲ್ಲ. ಇದರಲ್ಲಿ ಹೆಚ್ಚು ಭಾಗ ವೀರರ ಆಕೃತಿಗಳಿಗಾಗಿ ಮೀಸಲು-ಒಂದೇ ಅಂತಸ್ತಿನಲ್ಲಿ ಕತ್ತಿ ಗುರಾಣಿಗಳನ್ನು ಹಿಡಿದ ವೀರರು ಒಬ್ಬರನ್ನೊಬ್ಬರು ಎದುರಿಸುತ್ತಿರುವಂತೆಯೋ ಆನೆಕುದುರೆಗಳ ಮೇಲೆ ಕುಳಿತು ಯುದ್ಧ ಮಾಡುತ್ತಿರುವಂತೆಯೋ ತೆಳು ಉಬ್ಬು ಶಿಲ್ಪದಲ್ಲಿ ಬಿಡಿಸಿದ್ದು ಭಾವಯುಕ್ತವಾಗಿರುತ್ತವೆ. ಈ ಶಿಲ್ಪದ ಸುತ್ತಲೂ ಯುದ್ಧದ ವಿಷಯವನ್ನು ತಿಳಿಸುವ ಒಂದು ಶಾಸನ. ಹಿರೆಗುಂಡುಗಲ್ಲಿನಲ್ಲಿ ಇಂಥ 20ಕ್ಕೂ ಹೆಚ್ಚು ವೀರಗಲ್ಲುಗಳ ಒಂದು ದೊಡ್ಡ ಗುಂಪೇ ಇದೆ. ರಾಷ್ಟ್ರಕೂಟರಿಗೂ ಗಂಗ ಶ್ರೀಪುರುಷ ಶಿವಮಾರರಿಗೂ ಬೇರೆಬೇರೆ ಕಡೆ ನಡೆದ ಯುದ್ಧಗಳಲ್ಲಿ ಮಡಿದ ವೀರರ ಸ್ಮಾರಕವಾಗಿ ಇವು ನಿಂತಿವೆ. ಈಗ ಬೆಂಗಳೂರು ವಸ್ತುಸಂಗ್ರಹಾಲಯದಲ್ಲಿರುವ, ಬೇಗೂರಿನದಾದ, ಏಳು ಅಡಿ ಉದ್ದ ಏಳು ಅಡಿ ಅಗಲ ಇರುವ ದೊಡ್ಡದೊಂದು ವೀರಗಲ್ಲು. ಗಂಗ ಎಱೆಯಪ್ಪನಿಗೂ ನೊಳಂಬರ ವೀರಮಹೇಂದ್ರನಿಗೂ ನಡೆದ ಯುದ್ಧದಲ್ಲಿ ತುಂಬೆಪಾಡಿಯಲ್ಲಿ ಗಂಗರ ಸಾಮಂತನಾಗಿದ್ದ ನಾಗತ್ತರ ಶತ್ರುವಿನ ಆನೆಯನ್ನೆದುರಿಸಿ ತುಮುಲ ಯುದ್ಧದಲ್ಲಿ ಮಡಿದ ವಿಷಯವನ್ನು ತಿಳಿಸುತ್ತದೆ. ಶಾಸನದ ಕೆಳಗೆ ವಿಸ್ತಾರವಾಗಿ ಬಿಡಿಸಿರುವ ಯುದ್ಧದ ನೈಜಚಿತ್ರಣ, ಅದಕ್ಕೆ ಸೇರಿದಂತೆಯೇ-ಮೇಲ್ಭಾಗದಲ್ಲಿ-ಯುದ್ಧದಲ್ಲಿ ಮಡಿದ ನಾಗತ್ತರ ಸ್ವರ್ಗದಲ್ಲಿ ಕುಳಿತು ಅಪ್ಸರೆಯರ ನೃತ್ಯವನ್ನೀಕ್ಷಿಸುತ್ತಿರುವ ದೃಶ್ಯ ಅನ್ಯಾದೃಶ್ಯವಾದ್ದು. ಯುದ್ಧದಲ್ಲಿ ಸತ್ತ ವೀರರಿಗಷ್ಟೆ ಅಲ್ಲ ; ರಾಜರಿಗಾಗಿ ವೇಳೆಗೊಂಡು ಸತ್ತ ವೀರರಿಗಾಗಿ ನಿಲ್ಲಿಸಿರುವ ವೀರಗಲ್ಲುಗಳೂ ಹಲವಿವೆ. ನೀತಿಮಾರ್ಗ ಸ್ವರ್ಗಸ್ಥನಾದಾಗ. ಅವನ ಮನೆಮಗತಿಯಾಗಿದ್ದ ಅಗರಯ್ಯ ಕೀಱ್ಗುಂಡೆಯಾಗಿ ಅವನೊಂದಿಗೆ ಸಾವನಪ್ಪಿದ

ವಿಷಯವನ್ನು ದೊಡ್ಡ ಹುಂಡಿಯ ವೀರಗಲ್ಲೊಂದು ತಿಳಿಸುತ್ತದೆ. ಪರ್ಯಂಕದ ಮೇಲೆ ಮಲಗಿರುವ ರಾಜನನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಅಗರಯ್ಯ ಸಾಯಲು ಸಿದ್ಧವಾಗಿರುವಂತೆ ಆ ಶಾಸನದ ಮೇಲಿರುವ ಶಿಲ್ಪದಲ್ಲಿ ಬಿಡಿಸಿದೆ. ರಾಚಮಲ್ಲ ಕುಂಬಳೆಯಲ್ಲಿ ಸ್ವರ್ಗಸ್ಥನಾದಾಗ ಬೆದನ್ರೆರಾಚಯ ಎನ್ನುವರು ಕಿಚ್ಚು ಹೊಕ್ಕುದನ್ನೂ ಗಂಗ ಚನ್ದಿಯಮ್ಮರಸ ಕಾಲವಾದಾಗ ಅಲ್ಲಿಗ ಕೀಲ್ಗುಂಠೆಯಾದ್ದನ್ನೂ ವೀರಗಲ್ಲುಗಳು ತಿಳಿಸುತ್ತವೆ. ಆತಕೂರಿನಲ್ಲಿ ದೊರೆತ ದೊಡ್ಡದೊಂದು ವೀರಗಲ್ಲು ಸ್ವಾರಸ್ಯವಾದ್ದು. ಗಂಗಬೂತುಗ ರಾಷ್ಟ್ರಕೂಟರೊಡನೆ ಸೇರಿ ಚೋಳರಾಜಾದಿತ್ಯದ ಮೇಲೆ ತಕ್ಕೊಲದಲ್ಲಿ ಯುದ್ಧ ಮಾಡಿದಾಗ ಮನಾಲರನೆಂಬ ವೀರ ತೋರಿಸಿದ ಶೌರ್ಯಕ್ಕೆ ಮೆಚ್ಚಿ ಬೇಡಿಕೊ ಎಂದಾಗ, ಕಾಳಿ ಎಂಬ ಬೇಟೆನಾಯಿಯನ್ನು ಮನಾಲರ ಕೇಳಿ ಪಡೆಯುತ್ತಾನೆ. ಒಮ್ಮೆ ಆ ನಾಯಿಯನ್ನು ಕಾಡುಹಂದಿಯೊಂದರ ಮೇಲೆ ಬಿಟ್ಟಾಗ ನಾಯಿಯೂ ಹಂದಿಯೂ ಒಡಸಾಯುತ್ತವೆ. ಮನಾಲರ ಆ ನಾಯಿಗಾಗಿ ವೀರಗಲ್ಲನ್ನು ನಿಲ್ಲಿಸಿ ಅದರ ಪೂಜೆಗಾಗಿ ಭೂಮಿದಾನ ಮಾಡಿದ್ದಾನೆ. ಶಾಸನದ ಮೇಲೆ ನಾಯಿ ಹಂದಿಗಳು ಕಚ್ಚಾಡುತ್ತಿರುವ ಶಿಲ್ಪವಿದೆ. (ಎಂ.ಎಚ್.)

**ಗಂಗರಾಜ :** ಹೊಯ್ಸಳ ವಿಷ್ಣುವರ್ಧನನ ಪಂಚಪ್ರಧಾನರಲ್ಲಿ ಪ್ರಮುಖ, ದಂಡನಾಯಕ. ತಾಯಿ ಪೋಚಿಕಬ್ಬೆ. ತಂದೆ ಈಚರಾಜ ಅಥವಾ ಬೌಧಮಿತ್ರ; ನೃಪ-ಕಾಮ ಹೊಯ್ಸಳನ ಸೇವೆ ಮಾಡುತ್ತಿದ್ದನೆಂದು ತಿಳಿದುಬರುತ್ತದೆ. ಶ್ರವಣಬೆಳಗೊಳದ ಮತ್ತು ಹಾಸನದ ಅನೇಕ ಶಾಸನಗಳಲ್ಲಿ ಗಂಗರಾಜನಿಗೆ ಸಂಬಂಧಿಸಿದ ಹಲವು ಸಂಗತಿಗಳು ದೊರೆಯುತ್ತವೆ. ಅವನಿಗೆ ಬಮ್ಮ ಚಮೂಪನೆಂಬ ಅಣ್ಣನೊಬ್ಬನಿದ್ದ. ಆತನೊಬ್ಬ ಸೇನಾನಿಯಾಗಿದ್ದನೆಂದು ಕಾಣುತ್ತದೆ. ಗಂಗರಾಜನಿಗೆ ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ, ದ್ರೋಹಘರಟ್ಟ, ಸ್ವಾಮಿದ್ರೋಹಘರಟ್ಟ ಎಂದು ಮುಂತಾಗಿ ಅನೇಕ ಬಿರುದುಗಳಿದ್ದುವು. ವಿಷ್ಣುವರ್ಧನನ ಪಟ್ಟಾಭಿಷೇಕದಲ್ಲಿ ಈತ ಪೂರ್ಣಕುಂಭನಾಗಿದ್ದನೆಂದು ವರ್ಣಿತನಾಗಿದ್ದಾನೆ. ಆ ಉತ್ಸವದಲ್ಲಿ ಇವನು ಪ್ರಮುಖಪಾತ್ರ ವಹಿಸಿದ್ದಿರಬೇಕು. ಈತ ಕಣ್ಣೇಗಾಲದ ಕದನದಲ್ಲಿ **(ನೋಡಿ- ಕಣ್ಣೇಗಾಲ ಕದನ)** ಚಾಳುಕ್ಯರನ್ನು ಓಡಿಸಿದ. ತಲಕಾಡನ್ನು ಚೋಳರ ಆಡಳಿತದಿಂದ ವಿಮೋಚನಗೊಳಿಸಿದ. ಕೊಂಗು, ಚೆಂಗಿರಿ ಮುಂತಾದ ಅನೇಕ ಸ್ಥಳಗಳನ್ನು ಹಿಡಿದುಕೊಂಡ. ಜೈನಧರ್ಮದಲ್ಲಿ ಇವನಿಗೆ ವಿಶೇಷ ಅಭಿಮಾನವಿತ್ತು. ಈತ ಶುಭಚಂದ್ರ ಸಿದ್ಧಾಂತದೇವನ ಶಿಷ್ಯನಾಗಿದ್ದನೆಂದು ಹೇಳಲಾಗಿದೆ. ಗಂಗವಾಡಿಯ ಎಲ್ಲ ಜೈನದೇಗುಲಗಳನ್ನು ಜೀರ್ಣೋದ್ಧಾರ ಮಾಡಿಸಿದನೆಂದೂ ಗೊಮ್ಮಟದೇವನ ವಿಗ್ರಹದ ಸುತ್ತ ಆವರಣವನ್ನು ಕಟ್ಟಿಸಿದನೆಂದೂ ತಿಳಿದುಬರುತ್ತದೆ. ಗಂಗವಾಡಿ 96000 ವನ್ನು ಈತ ಕೊಪಣವಾಗಿ ಪರಿವರ್ತಿಸಿದನೆಂದು ಶಾಸನಗಳು ತಿಳಿಸುತ್ತವೆ. ಶ್ರವಣಬೆಳಗೊಳದ ಸನಿಹದಲ್ಲೇ ಈತ ಜಿನನಾಥಪುರವೆಂಬ ಊರನ್ನು ಕಟ್ಟಿಸಿದ. ಇವನಿಗೆ ಕೊಡಲಾಗಿದ್ದ ದತ್ತಿಗಳನ್ನು ಈತ ತನ್ನ ಗುರುವಿಗೆ ಒಪ್ಪಿಸಿದ. ಇವನ ಹೆಂಡತಿ ಲಕ್ಷ್ಮಿಯೂ ದಾನಶೀಲೆ. ಇವನ ಬಂಧುವರ್ಗಕ್ಕೆಲ್ಲ ದಾನಗುಣ ಸಹಜವಾಗಿ ಬಂದಿತ್ತೆಂದು ತಿಳಿದುಬರುತ್ತದೆ. ಗಂಗರಾಜನ ಸ್ವಧರ್ಮನಿಷ್ಠೆ ಸಂಕುಚಿತವಾದ್ದಾಗಿರಲಿಲ್ಲ. ಅನ್ಯಮತಗಳ ಜನಕ್ಕೂ ಅವನು ಉದಾರವಾಗಿ ದಾನಮಾಡಿದ. ವಿದ್ಯಾಭ್ಯಾಸ, ದಲಿತರ ಸೇವೆ, ರೋಗಿಗಳ ಶುಶ್ರೂಷೆಗಳಿಗಾಗಿ ಇವನು ದತ್ತಿಗಳನ್ನು ನೀಡಿದ್ದಾನೆ.

ಗಂಗರಾಜ ಸಮರ್ಥ ಸೇನಾನಿಯಾಗಿದ್ದನೆಂಬುದಕ್ಕೂ ಧಾರಾಳವಾಗಿ ದಾಖಲೆಗಳುಂಟು. ವಿಷ್ಣುವರ್ಧನನ ರಾಜ್ಯವಿಸ್ತರಣ ಕಾರ್ಯದಲ್ಲಿ ಇವನು ಪ್ರಧಾನಪಾತ್ರವಹಿಸಿದ. ಗಂಗವಾಡಿಯನ್ನು ಚೋಳರ ಆಕ್ರಮಣದಿಂದ ವಿಮುಕ್ತಗೊಳಿಸಲು ವಿಷ್ಣುವರ್ಧನ ಗಂಗರಾಜನಿಗೆ ಸಮಸ್ತ ಸೈನ್ಯಾಧಿಕಾರವನ್ನೂ ವಹಿಸಿದ್ದ. ಗಂಗರಾಜಚೋಳರ ಆಡಳಿತವನ್ನು ಕೊನೆಗಾಣಿಸಲು ಎಂಥ ತ್ಯಾಗಕ್ಕಾದರೂ ಸಿದ್ಧನಾದ. ಸೈನ್ಯದ ಮುಖಂಡತ್ವವನ್ನು ವಹಿಸಿ ತಲಕಾಡಿನತ್ತ ಮುಂದುವರಿದ. ಅವನ ಸೈನ್ಯ ಕನ್ನಂಬಾಡಿಯನ್ನು ದಾಟಿ ಮುಂದುವರಿಯುತ್ತಿದ್ದಾಗ ಆ ಸುದ್ದಿ ತಿಳಿದು ತಲಕಾಡಿನ ಚೋಳ ಅಧಿಕಾರಿ ಅದಿಯಮನೆಂಬವನು ಹೊಯ್ಸಳ ಸೇನೆಯನ್ನೆದುರಿಸಲು ಸಜ್ಜಾಗಿ, ಕಾವೇರಿಯನ್ನು ದಾಟಿ ಬಂದ. ಅವನ ಸೇನೆ ಕಾವೇರಿಗೆ ಬೆನ್ನು ಮಾಡಿ ನಿಂತಿತು. ಅದು ನದಿಯನ್ನು ದಾಟದೆ ಇದ್ದಿದ್ದ ಪಕ್ಷದಲ್ಲಿ ಯುದ್ಧದ ಗತಿ ಬೇರೆ ರೀತಿ ಆಗುತ್ತಿತ್ತೋ ಏನೊ. ಹೊಯ್ಸಳರಿಗೆ ತಲಕಾಡನ್ನು ಒಪ್ಪಿಸಲು ನಿರಾಕರಿಸಿದ ಚೋಳಸೇನೆಯನ್ನು ಗಂಗರಾಜನ ಸೇನೆ ನದಿಯ ದಡದಲ್ಲೇ ಅಟ್ಟಿಸಿಕೊಂಡು ಹೋಯಿತು. ಚೋಳಸೇನೆ ತಲಕಾಡಿನ ಬಳಿಯಲ್ಲಿ ನದಿ ದಾಟಿ ಕೋಟೆಯೊಳಗೆ ಸೇರಿಕೊಂಡಿತು. ಅಲ್ಲಿ ನದಿ ಆಳವಾಗಿರದಿದ್ದರೂ ಆ ಇಕ್ಕಟ್ಟಿನ ಪ್ರಸಂಗದಲ್ಲಿ ಅನೇಕ ಚೋಳ ಸೈನಿಕರು ನಾಶವಾಗಿರಬೇಕೆಂದು ನಂಬಲಾಗಿದೆ. ಗಂಗರಾಜ ಕೂಡಲೇ ಕೋಟೆಯನ್ನು ಮುತ್ತಿ ಅದನ್ನು ವಶಪಡಿಸಿಕೊಂಡ. ಆದಿಯಮನ ಗತಿಯೇನಾಯಿತೆಂಬುದು ತಿಳಿದಿಲ್ಲ. ಬಹುಶಃ ಅವನು ಸತ್ತಿರಬೇಕು. ಅನಂತರ ಗಂಗರಾಜನ ಸೇನೆ ಪೂರ್ವದಲ್ಲಿದ್ದ ಇತರ ಚೋಳ ಅಧಿಕಾರಗಳತ್ತ ಏರಿಹೋಯಿತು. ಹೊಯ್ಸಳರಿಗೆ ಬೆದರಿ ದಾಮೋದರನೆಂಬವನು ಕಂಚಿಗೆ ಓಡಿಹೋದ. ನರಸಿಂಗವರ್ಮ ಬೆಂಗಿರಿಯ ಬಳಿಯಲ್ಲಿ ಸಾವಿಗೆ ಈಡಾದ.

ವಿಷ್ಣುವರ್ಧನನ ಏಳಿಗೆಯನ್ನು ಮುರಿಯಬೇಕೆಂದು ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯ 1118ರಲ್ಲಿ ತನ್ನ ಹನ್ನೆರಡು ಮಂದಿ ಸಾಮಂತರ ಸೈನ್ಯಗಳನ್ನು ಒಟ್ಟುಗೂಡಿಸಿ ಹೊಯ್ಸಳರ ಮೇಲೆ ಕಳುಹಿಸಿದ. ಹೊಯ್ಸಳನಾಡಿನ ಉತ್ತರದಲ್ಲಿತ್ತೆಂದು ಹೇಳಲಾದ ಕಣ್ಣೇಗಾಲವೆಂಬ ಸ್ಥಳದಲ್ಲಿ ಗಂಗರಾಜನ ಸೇನೆ ಶತ್ರುವನ್ನು ಎದುರಿಸಿತು. ರಾತ್ರಿ ನಡೆದ ಈ ಕೈಕೈ ಯುದ್ಧದಲ್ಲಿ ಗಂಗರಾಜನರ ವಿಜಯ ಲಭಿಸಿತು. ಚಾಳುಕ್ಯ ಸೈನ್ಯ ದಿಕ್ಕಾಪಾಲಾಯಿತು. ಶತ್ರುವಿನ ಅಗಾಧ ಸಾಮಗ್ರಿ ಹೊಯ್ಸಳರ ವಶವಾಯಿತು. ಕಣ್ಣೇಗಾಲ ಕದನದಲ್ಲಿ ಗಂಗರಾಜನ ಸಾಹಸದಿಂದಾಗಿ ವಿಷ್ಣುವರ್ಧನ ಹೊಯ್ಸಳನ ಕೀರ್ತಿ ಪ್ರತಿಷ್ಠೆಗಳು ಬೆಳೆದುವು. ಅವನ ರಾಜ್ಯ ವಿಸ್ತಾರಗೊಂಡಿತಲ್ಲದೆ ಅವನು ಸ್ವತಂತ್ರನಾಗಿ ಆಳಲುಪಕ್ರಮಿಸಿದ. ಗಂಗರಾಜನನ್ನು ಮೆಚ್ಚಿದ ವಿಷ್ಣುವರ್ಧನ ಅವನಿಗೆ ಮಹಾಸಾಮಂತಾಧಿಪತಿ, ಪ್ರಧಾನಾಮಾತ್ಯ, ಮಹಾಪ್ರಚಂಡ ದಂಡನಾಯಕ, ದ್ರೋಹಘರಟ್ಟ ಮುಂತಾದ ಬಿರುದುಗಳನ್ನು ನೀಡಿದ.

ಗಂಗರಾಜ 1133ರ ಪ್ರಾರಂಭದಲ್ಲಿ ಮರಣ ಹೊಂದಿದ. ಅದಕ್ಕೆ ಮುಂಚೆಯೇ 1121ರಲ್ಲಿ ಲಕ್ಷ್ಮಿ ತೀರಿಕೊಂಡಿದ್ದಳು. ಗಂಗರಾಜನ ಮರಣದಿಂದ ವಿಷ್ಣುವರ್ಧನ ವಿಶೇಷವಾಗಿ ದುಃಖಿತಪ್ತನಾದ. ಗಂಗರಾಜನ ಮಗನಾದ ಬೊಪ್ಪನನ್ನು ದೊರೆ ತನ್ನ ದಂಡನಾಯಕ ಹಾಗೂ ಸಚಿವನನ್ನಾಗಿ ನೇಮಿಸಿಕೊಂಡ. ಬೊಪ್ಪ ದಂಡನಾಯಕ ತನ್ನ ತಂದೆಯ ಜ್ಞಾಪಕಾರ್ಥವಾಗಿ ದೋರಸಮುದ್ರದಲ್ಲಿ ಪಾರ್ಶ್ವನಾಥ ಜಿನಾಲಯವನ್ನು ಕಟ್ಟಿಸಿ ಅದನ್ನು ಗಂಗರಾಜನ ಬಿರುದುಗಳಲ್ಲೊಂದಾದ ದ್ರೋಹ ಘರಟ್ಟ ಜಿನಾಲಯ ಎಂಬ ಹೆಸರಿನಿಂದ ಕರೆದ. ಈ ಜಿನಾಲಯ ಇಂದಿಗೂ ವಿಜಯ ಪಾರ್ಶ್ವನಾಥ ಜಿನಾಲಯ ಎಂಬ ಹೆಸರಿನಿಂದ ದ್ವಾರಸಮುದ್ರದಲ್ಲಿ ಪ್ರಸಿದ್ಧವಾಗಿದೆ. ಗಂಗರಾಜ ಧರ್ಮಿಷ್ಠ, ಉದಾರಿ, ಸ್ವಾಮಿನಿಷ್ಠ, ಪರಾಕ್ರಮಿ, ರಾಜತಂತ್ರನಿಪುಣ ಎಂದು ಶಾಸನಗಳಲ್ಲಿ ಹೊಗಳಿಕೆಗೆ ಪಾತ್ರನಾಗಿದ್ದಾನೆ. (ಜಿ.ಆರ್.ಆರ್.)

**ಗಂಗರು, ಕಳಿಂಗದ :** ಕಳಿಂಗ ದೇಶವನ್ನು ಆಳಿದ ಒಂದು ರಾಜಮನೆತನ. ಈ ಮನೆತನದ ರಾಜರು ಪೂರ್ವ ಗಂಗರೆಂದೂ ಹೆಸರಾಗಿದ್ದಾರೆ. ಕಳಿಂಗದೇಶದ ಇತಿಹಾಸ ಹೆಚ್ಚು ಸ್ಫುಟವಾಗಿ ಕಂಡುಬರುವುದು ಪ್ರಶ. 5ನೆಯ ಶತಮಾನದ ಅಂತ್ಯಭಾಗದಿಂದ ಮಾತ್ರ. ಆ ಕಾಲದಿಂದ ಹಿಡಿದು ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾಮ್ರ ಹಾಗೂ ಶಿಲಾ ಶಾಸನಗಳು ದೊರಕಿವೆ-ದೊರಕುತ್ತಿವೆ. ಇವುಗಳ ಆಧಾರದಮೇಲೆ ಆ ಕಾಲದಿಂದ ಆರಂಭಿಸಿ ಕಳಿಂಗದ ಇತಿಹಾಸವನ್ನು ರಚಿಸಲಾಗಿದೆ. ಆದರೂ ಇದುವರೆಗೆ ದೊರೆತಿರುವ ಆಧಾರಗಳು ಹಲವಾರು ವಿವಾದಗಳಿಗೆ ಎಡೆ ಮಾಡಿವೆ.

ಮಕರವಾಹನ–ಕೋಣಾರ್ಕ ದೇವಾಲಯ

ಕಳಿಂಗದಲ್ಲಿ ಆಳಿದ ಈ ಮನೆತನ ಮೊದಲನೆಯ ಅರಸ ಮಹಾರಾಜ 1ನೆಯ ಇಂದ್ರವರ್ಮ. ಈತನನ್ನು ತ್ರಿಕಲಿಂಗಾಪತಿ ಎಂದು ವರ್ಣಿಸಲಾಗಿದೆ. ತ್ರಿಕಲಿಂಗ ಎಂಬ ಪದದ ಸರಿಯಾದ ಅರ್ಥ ಇನ್ನೂ ಸ್ಪಷ್ಟವಾಗಿಲ್ಲ. ಈತನ ರಾಜಧಾನಿ ಕಳಿಂಗ ನಗರ ಈಗಿನ ಆಂಧ್ರಪ್ರದೇಶದ ಗಂಜಾಂ ಜಿಲ್ಲೆಯ ಮುಖಲಿಂಗಂ ದಂತಾಪುರ (ಶ್ರೀ ಕಾಕುಳಂ ಸಮೀಪದಲ್ಲಿಯ ದಂತವಕ್ತ್ರನ ಕೋಟೆ ಅಥವಾ ವಿಶಾಖ ಪಟ್ಟಣ ಜಿಲ್ಲೆಯಲ್ಲಿ ದಂತ ನದೀತೀರದಲ್ಲಿರುವ ದಂತಪುರ) ಇವರ ಇನ್ನೊಂದು ನೆಲೆವೀಡು. ಇವರು ಮಹೇಂದ್ರ ಗಿರಿಯಲ್ಲಿ ವಿರಾಜಿಸಿದ ಗೋಕರ್ಣೇಶ್ವರನ ಭಕ್ತರು. ಈತನ ಮತ್ತು ಇವನ ಅನಂತರ ಆಳಿದ ಅರಸರ ಶಾಸನಗಳಲ್ಲಿ ಉಕ್ತವಾಗಿರುವ

ಕಾಲ ಶಕಸಂವತ್ಸರಗಳಿಗೆ ಸಂಬಂಧಿಸಿಲ್ಲ. ಇವರು ಕಳಿಂಗದೇಶವನ್ನು ಆಳತೊಡಗಿದಂದಿನಿಂದ ತಮ್ಮದೇ ಆದ ಕಾಲಗಣನೆಯನ್ನು ಆರಂಭಿಸಿದ್ದುದಾಗಿ ತೋರುತ್ತದೆ. ಇಂದ್ರವರ್ಮನ, ಇದುವರೆಗೆ ಲಭ್ಯವಿರುವ, ಶಾಸನಗಳಲ್ಲಿ ಮೊದಲನೆಯದು 39ನೆಯ ವರ್ಷಕ್ಕೆ ಸೇರಿದುದಾಗಿದೆ. ಈ ಕಾಲಗಣನೆ ಸು. 496ರಲ್ಲಿ ಅಥವಾ 496–98ರಲ್ಲಿ ಆರಂಭವಾಯಿತೆಂದು ನಿರ್ಧರಿಸಲಾಗಿದೆ. ಇವರ ಹೆಸರು ವರ್ಮಾಂತ್ಯವಾಗಿದ್ದರೂ ದಾನಾರ್ಣವ, ಗುಣಾರ್ಣವ, ವಜ್ರಹಸ್ತ ಮತ್ತು ಮಧುಕಾಮಾರ್ಣವ ಎಂಬ ಇತರ ಹೆಸರಿನ ಅರಸರೂ ಈ ಸಂತತಿಗೆ ಸೇರಿದಂತೆ ಕಂಡುಬಂದಿದೆ. 1038ರಿಂದ ಆಳತೊಡಗಿದ ವಜ್ರಹಸ್ತನ ತಂದೆ ಮಧುಕಾಮರ್ಣವನೇ ಗಂಗಶಕೆ 528ನೆಯ ವರ್ಷದ (1024) ಶಾಸನದಲ್ಲಿಯ ಮಧುಕಾಮಾರ್ಣವನೇ ಎಂದು ಊಹಿಸಿ, ಇವನೂ ಇವನ ಅನಂತರ ಆಳಿದ ಇತರರೂ ಆಳಿದ ಮೊದಲಿನ ಗಂಗಸಂತತಿಗೆ ಸಂಬಂಧಿಸಿದವರೆಂದು ಹೇಳಲಾಗಿದೆ.

ಗಂಗರ ಶಾಸನಗಳಲ್ಲಿ ಇವರ ಪ್ರಾಚೀನರನ್ನು ಕುರಿತು ಹೆಚ್ಚಿನ ವಿವರಗಳಿವೆ. ಚಂದ್ರವಂಶಕ್ಕೆ ಸೇರಿದ ಇವರು ಆತ್ರೇಯ ಗೋತ್ರಜರು. ಚಂದ್ರನ ಮಗನಾದ ಬುಧನ ವಂಶದಲ್ಲಿ ಪುರೂರವ, ಆಯು, ನಹುಷ, ಯಯಾತಿ, ತುರ್ವಸುಗಳು ಆಳಿದರು. ತುರ್ವಸುವಿಗೆ ಬಹಳ ಕಾಲ ಸಂತಾನವಿರಲಿಲ್ಲ. ಆಗ ಗಂಗಾದೇವಿಯನ್ನು ಪೂಜಿಸಿದ್ದರ ಫಲವಾಗಿ ಗಾಂಗೇಯನೆಂಬ ಮಗ ಜನಿಸಿದ. ಇವನ ವಂಶದಲ್ಲಿ ಹುಟ್ಟಿದ ಕೋಲಾಹಲನೆಂಬ ಅರಸು ಕೋಲಾಹಲಪುರವನ್ನು ನೆಲೆಗೊಳಿಸಿದ. ಈ ವಂಶದಲ್ಲಿ 80 ತಲೆಮಾರುಗಳ ಬಳಿಕ ಆಳಿದ ವೀರಸಿಂಹನಿಗೆ ಕಾಮಾರ್ಣವ, ದಾನಾರ್ಣವ, ಗುಣಾರ್ಣವ, ಮಾರಸಿಂಹ, ವಜ್ರಹಸ್ತರೆಂಬ ಐವರು ಮಕ್ಕಳು ಹುಟ್ಟಿದರು. ಆದರೆ ಇವರ ರಾಜ್ಯ ಇವರ ಚಿಕ್ಕಪ್ಪನ ವಶವಾದ ಕಾರಣ, ಇದನ್ನು ಹಿಂತೆಗೆದುಕೊಳ್ಳುವ ಶಕ್ತಿಯಿದ್ದರೂ ಇವರು ಈ ರಾಜ್ಯವನ್ನು ತ್ಯಜಿಸಿ ಕಾಮಾರ್ಣವನ ನೇತೃತ್ವದಲ್ಲಿ ಪೂರ್ವದಿಶೆಗೆ ಸಾಗಿ ಮಹೇಂದ್ರಗಿರಿಯಲ್ಲಿ ನೆಲಸಿದ್ದ ಗೋಕರ್ಣಸ್ವಾಮಿಯನ್ನು ಆರಾಧಿಸಿ ಆ ದೇವರ ಅನುಗ್ರಹದಿಂದ ರಾಜ್ಯಚಿಹ್ನಗಳನ್ನು ಪಡೆದು ಕಳಿಂಗರಾಜ್ಯವನ್ನು ಗೆದ್ದರು. ದಂತಾಪುರ ಇವರ ರಾಜಧಾನಿಯಾಯಿತು. ಕಾಮಾರ್ಣವನ ಸೋದರರು ಅಲ್ಲಿಯ ಕೆಲವು ಪ್ರಾಂತ್ಯಗಳ ಅಧಿಪತಿಗಳಾದರು. ಕಾಮಾರ್ಣವನ ಅನಂತರ ಇವನ ಸೋದರನಾದ ಗುಣಾರ್ಣವನೂ ಅವನ ಸಂತತಿಯವರೂ ಆಳಿದರು. ಇವರಲ್ಲಿ 14ನೆಯ ಅರಸ 4ನೆಯ ಕಾಮಾರ್ಣವನ ಮೊಮ್ಮಗನೂ 4ನೆಯ ವಜ್ರಹಸ್ತನ ಮಗನೂ ಆದ ಮಧುಕಾಮಾರ್ಣವ. ಈತನ ಮಗನಾದ ವಜ್ರಹಸ್ತನೇ ಮೇಲೆ ಹೇಳಿದಂತೆ 1038ರಲ್ಲಿ ಪಟ್ಟಕ್ಕೆ ಬಂದನು. ಇದು 11ನೆಯ ಶತಮಾನದ ಅನಂತರದ ಇವರ ಶಾಸನ ಗಳಿಂದ ತಿಳಿದುಬಂದಿರುವ ಕೆಲವು ವಿವರಗಳು. ಕೋಲಾಹಲ ಪುರ ಈಗಿನ ಕೋಲಾರ. ಈ ಗಂಗರು ತಲಕಾಡಿನ ಗಂಗರ ವಂಶಕ್ಕೆ ಸೇರಿದವರಾಗಿದ್ದು, ಅವರ ಸೋದರ ಸಂಬಂಧಿ ಗಳೆಂದು ಹೇಳಲಾಗಿದೆ. ಆದರೆ ಗಂಗಶಕೆಯನ್ನು ಆರಂಭಿಸಿದ ಇಂದ್ರವರ್ಮ ಮತ್ತು ಅವನ ಸಂತತಿ ಯವರನ್ನು ಕುರಿತು ಹೆಚ್ಚು ವಿವರಗಳು ಸಿಕ್ಕಿಲ್ಲ.

ವೀಣಾಪಾಣಿ, ಕೋಣಾರ್ಕದ ಒಂದು ಶಿಲ್ಪ

ಇಂದ್ರವರ್ಮ, ಮಹಾಸಾಮಂತ ವರ್ಮರ ಬಳಿಕ ರಾಜಸಿಂಹ, ರಣಭೀತ ಎಂಬ ಬಿರುದುಗಳನ್ನು ಹೊಂದಿದ್ದ ಹಸ್ತಿವರ್ಮ ಆಳಿದ. ಇವನ ಅನಂತರ ಇಂದ್ರವರ್ಮನೆಂಬ ಹೆಸರಿನ ಇಬ್ಬರು ಆಳಿದಂತೆ ತೋರುತ್ತದೆ. ಮೂರನೆಯ ಇಂದ್ರ ವರ್ಮನಿಗೆ ದಾನಾರ್ಣವನೆಂಬ ಇನ್ನೊಂದು ಹೆಸರೂ ಇತ್ತು. ಅಂತೆಯೇ ಅನಂತರ ಆಳಿದ ನಾಲ್ಕನೆಯ ಇಂದ್ರವರ್ಮನೇ ಗುಣಾರ್ಣವನೆಂಬ ಹೆಸರಿನಿಂದ ಶಾಸನದಲ್ಲಿ ಉಕ್ತವಾದ ಅರಸನೆಂದು ಹೇಳಲಾಗಿದೆ. ಇವನ ಮಗ ಮಹಾರಾಜ ದೇವೇಂದ್ರವರ್ಮ. ಈತ ಸ್ವಶಕ್ತಿಯಿಂದ ಕಳಿಂಗದೇಶಾಧಿಪತಿಯಾದುದಾಗಿ ಹೇಳಿಕೊಂಡಿದ್ದಾನೆ. ಈತನ ಅನಂತರ ಕ್ರಮವಾಗಿ ಅನಂತವರ್ಮ, ನಂದ (ಇಂದ್ರ ?) ವರ್ಮ ಹಾಗೂ ಇಮ್ಮಡಿ ದೇವೇಂದ್ರ ವರ್ಮರು ಆಳಿದರು. ಈ ಕೊನೆಯ ಅರಸನ ಶಾಸನಕಾಲ 752. ಅನಂತರ ಸು. 50 ವರ್ಷಗಳ ವರೆಗೆ ಇವರ ಇತಿಹಾಸ ತಿಳಿಯದು. ಇಮ್ಮಡಿ ಅನಂತವರ್ಮನ 802ರ ಶಾಸನ ದೊರೆತಿದೆ. ಅನಂತರ ಇನ್ನೂ ಇತರರು ಈ ಸಂತತಿಯ ಅರಸರು ಆಳಿದರು. ಅವರ ಪರಸ್ಪರ ಸಂಬಂಧ ಮತ್ತಿತರ ವಿಷಯಗಳನ್ನು ಕುರಿತ ಹೆಚ್ಚಿನ ವಿವರಗಳು ಸಿಕ್ಕಿಲ್ಲ. 1038ರಲ್ಲಿ ಆಳತೊಡಗಿದ ವಜ್ರಹಸ್ತನತನಕ ಈ ಸಂತತಿಯ ಅರಸುಗಳ ಹೆಸರುಗಳು ಲಭ್ಯವಾಗಿವೆ. ಈ ಗಂಗರನ್ನು ಪ್ರಾಚೀನ ಪೂರ್ವಗಂಗರೆಂದೂ ಇತಿಹಾಸಕಾರರು ಕರೆದಿದ್ದಾರೆ.

1038ರಲ್ಲಿ ಪಟ್ಟಾಭಿಷಿಕ್ತನಾದ ವಜ್ರಹಸ್ತನ ಶಾಸನಗಳಲ್ಲಿ ಕೊಡಲಾದ ವಂಶಾವಳಿಗೂ ಅವನ ಮೊಮ್ಮಗ ಅನಂತವರ್ಮ ಚೋಡಗಂಗನ ಶಾಸನಗಳಲ್ಲಿಯ ವಂಶಾವಳಿಗೂ ಕೆಲವು ಭೇದಗಳಿವೆ. ಅದನ್ನು ಹೊಂದಿಸುವ ಯತ್ನಗಳೂ ನಡೆದಿವೆ. ಆದರೂ ಈ ವ್ಯತ್ಯಾಸಗಳಿಗೆ ಕಾರಣಗಳೇನು ಎಂಬುದು ಕಂಡುಬಂದಿಲ್ಲ. ವಜ್ರಹಸ್ತನ ಹಾಗೂ ಅನಂತರದ ಶಾಸನಗಳಲ್ಲಿ ಹೊಸ ಪದ್ಧತಿಯನ್ನನುಸರಿಸಿರುವುದೂ ಕಂಡುಬರುತ್ತದೆ. ಶಾಸನದ ತೇದಿಯನ್ನು ಶಕಕಾಲಗಣನೆಯ ಪ್ರಕಾರ ಮಾಡುವ ಪದ್ಧತಿ ಈಗ ಆರಂಭವಾಯಿತು. ಈತನ ತಾಯಿ ವೈದುಂಬವಂಶದ ರಾಜಪುತ್ರಿ, ಪತ್ನಿ ಹೈಹಯ ವಂಶಜಳು. ಇವನ ಕಾಲದಲ್ಲಿ ಕಲಚುರಿ ಕರ್ಣ ಕಳಿಂಗವನ್ನು ಮುತ್ತಿದಂತೆ ತೋರುತ್ತದೆ.

ವಜ್ರಹಸ್ತನ ಮಗ 1ನೆಯ ರಾಜರಾಜ ದೇವೇಂದ್ರವರ್ಮ, ವೆಂಗಿ ಚಾಳುಕ್ಯರ 7ನೆಯ ವಿಕ್ರಮಾದಿತ್ಯನಿಗೆ ಆಶ್ರಯಕೊಟ್ಟನೆಂಬ ಕಾರಣದಿಂದ ಇವನ ಮೇಲೇರಿ ಬಂದ ಚೋಳ ಕುಲೋತ್ತುಂಗನನ್ನು ಈತ ಹಿಂದಕ್ಕೋಡಿಸಿದ. ಇವನ ಸೇನಾನಿಯಾದ ವನಪತಿ ಚೋಳ, ವೆಂಗಿ ಮತ್ತು ಉತ್ಕಲ ದೇಶಾಧಿಪರರನ್ನು ಸೋಲಿಸಿದನೆಂದು ಹೇಳಿದೆ. ಈತನ ಸಹಾಯದೊಡನೆ ರಾಜರಾಜ ತನ್ನ ರಾಜ್ಯವನ್ನು ಸ್ವಲ್ಪಮಟ್ಟಿಗೆ ವಿಸ್ತರಿಸಿಕೊಂಡ. ಇವನ ಮಗನಾದ ಅನಂತವರ್ಮ ಚೋಡಗಂಗ ಸಹ ದಕ್ಷಿಣದ ಚೋಳರ ದಾಳಿಯನ್ನೆದುರಿಸಿ, ಅತಿ ಪ್ರಯಾಸದಿಂದ ಅವರನ್ನು ಹಿಂದೂಡಿದುದಲ್ಲದೆ ಸ್ವಲ್ಪಕಾಲ ಆಂಧ್ರದಲ್ಲಿ ಗೋದಾವರಿ ಉತ್ತರ ತೀರದ ವರೆಗಿನ ಪ್ರದೇಶವನ್ನು ಸಹ ಆಕ್ರಮಿಸಿದ್ದ. 1118 ಸುಮಾರಿಗೆ ಉತ್ಕಲ ಗಂಗರಾಜ್ಯಕ್ಕೆ ಸೇರಿ ಗಂಗರು ಉತ್ಕಲಾಧಿಪತಿಗಳೆನಿಸಿಕೊಂಡರು: ಬಂಗಾಲದಲ್ಲಿ ಪಾಲರು ಅವನತಿ ಹೊಂದಿದ ಬಳಿಕ ಉಂಟಾದ ಅನಿಶ್ಚಿತ ಪರಿಸ್ಥಿತಿಯ ಪ್ರಯೋಜನ ಪಡೆದು ಅವರ ರಾಜ್ಯದ ಕೆಲವು ಭಾಗಗಳನ್ನು ಈತ ಆಕ್ರಮಿಸಿದ. ಇವನ ಆಳ್ವಿಕೆಯ ಕಾಲದಲ್ಲಿ ರಾಜ್ಯ ವಿಜೃಂಭಿಸಿತು. ಈತ ಪುರಿಯ ಜಗನ್ನಾಥಾಲಯದ ವಿಮಾನವನ್ನೂ ಜಗಮೋಹನ ಮಂಟಪವನ್ನೂ ಕಟ್ಟಿಸಿದ. ಕಸ್ತೂರಿಕಾಮೋದಿನೀ, ಲಕ್ಷ್ಮೀದೇವಿ, ಚೋಳಮಹಾದೇವಿ ಮೊದಲಾದ. ಹಲವಾರು ರಾಜಪುತ್ರಿಯರು ಈತನನ್ನು ವರಿಸಿದ್ದರು. ವಿಕ್ರಮಗಂಗ, ಪ್ರತಾಪಗಂಗ, ನವನವತಿಸಹಸ್ರಕುಂಜರಾಧೀಶ್ವರ ಮುಂತಾದವು ಈತನ ಬಿರುದುಗಳು. ವಿಸ್ತಾರವಾದ ರಾಜ್ಯಕ್ಕೆ ಮಧ್ಯದಲ್ಲಿದ್ದ ಕಟಕ್ ಇವನ ನೂತನ ರಾಜಧಾನಿಯಾಯಿತು. ಇವನ ಕಾಲದಲ್ಲಿ ಸೂರ್ಯಸಿದ್ಧಾಂತವನ್ನನುಸರಿಸಿ ರಚಿಸಲಾದ ಭಾಸ್ವತಿ ಎಂಬ ಜ್ಯೋತಿಶ್ಶಾಸ್ತ್ರ ಗ್ರಂಥ 1099ರಲ್ಲಿ ಶಂಕರ ಸರಸ್ವತಿಯ ಮಗನಾದ ಸತಾನಂದ ನೆಂಬವನಿಂದ ಪುರಿಯಲ್ಲಿ (ಪುರುಷೋತ್ತಮಪುರ) ಪ್ರಕಟವಾಯಿತು.

ಸುಮಾರು ಒಂದು ಶತಮಾನದ ಅನಂತರ ಆಳಿದ ಮೊದಲನೆಯ ನರಸಿಂಹದೇವ (1238–63) ಈ ವಂಶದ ಇನ್ನೊಬ್ಬ ಪ್ರಖ್ಯಾತನಾದ ಅರಸ. ಇವನು ಬಂಗಾಲದ ಸುಲ್ತಾನರೊಡನೆ ಅನೇಕ ಕದನಗಳನ್ನು ಹೂಡಿ ರಾಢಾ, ನರೇಂದ್ರಮಂಡಲ ಪ್ರಾಂತ್ಯಗಳನ್ನು ವಶಪಡಿಸಿಕೊಂಡ, ಕಾಕತೀಯರೊಡನೆ ಸಹ ಹೋರಾಡಿದ. ಇವನ ಆಳ್ವಿಕೆ ಸಹ ಈ ಗಂಗರ ಇತಿಹಾಸದಲ್ಲಿ ಖ್ಯಾತಿಹೊಂದಿದೆ. ವಿದ್ಯಾಭಿಮಾನಿಯಾದ ಈತನ ಆಸ್ಥಾನದಲ್ಲಿ ಏಕಾವಳೀ ಎಂಬ ಅಲಂಕಾರಗ್ರಂಥದ ಕರ್ತೃವಾದ ವಿದ್ಯಾಧರ ಶೋಭಿಸಿದ. ಶ್ರೀ ಕೂರ್ಮಂ, ಸಿಂಹಾಚಲಂ ಮುಂತಾದ ಕಡೆಗಳಲ್ಲಿ ದೇವಾಲಯಗಳಿಗೆ ಸೇರಿದಂತೆ ಅನೇಕ ಮಂಟಪಗಳನ್ನೂ ಇತರ ಕಟ್ಟಡಗಳನ್ನೂ ಕಟ್ಟಿಸಿ ಆ ದೇವಾಲಯಗಳಿಗೆ ಬಹಳ ದಾನಗಳನ್ನು ಮಾಡಿದ. ಕಳಿಂಗ ದೇಶದ ಅನೇಕ ಸುಂದರವಾದ ಆಲಯಗಳನ್ನು ಕಟ್ಟಿಸಿದ ಖ್ಯಾತಿ ಈ ಗಂಗರದಾಗಿದೆ. ಕೋಣಾರ್ಕದ ಸುಂದರವಾದ ಸೂರ್ಯ ದೇವಾಲಯವನ್ನು ಕಟ್ಟಿಸಿದವನು ಮೊದಲನೆಯ ನರಸಿಂಹ.

ಈತನ ಮಗ 1ನೆಯ ಭಾನುದೇವನ ಕಾಲದಲ್ಲಿ ಪ್ರಮುಖ ದ್ವೈತಮತಾಚಾರ್ಯರಲ್ಲಿ ಒಬ್ಬರಾದ ಶ್ರೀ ನರಹರಿತೀರ್ಥರು ಕಳಿಂಗದೇಶದಲ್ಲಿ ನೆಲಸಿ ತಮ್ಮ ಧರ್ಮವನ್ನು ಬೋಧಿಸುತ್ತಿದ್ದರು. ಶ್ರೀ ಕೂರ್ಮದೇವಾಲಯದ ಎದುರಿನಲ್ಲಿರುವ

ಯೋಗಾನರಸಿಂಹಾಲಯವನ್ನು ಇವರು ಕಟ್ಟಿಸಿದರು. ಭಾನುದೇವ ಲಖನೌತಿ ಸುಲ್ತಾನ ಮಲ್ಲಿಕ್ ಯಾಕ್ಲಖಿಯ ವಿರುದ್ಧ ಕಾದಿದಂತೆ ಮಹಮ್ಮದೀಯ ಇತಿಹಾಸಕಾರರಿಂದ ತಿಳಿದುಬರುತ್ತದೆ. ಇವನ ಆಳ್ವಿಕೆಯ ಕಾಲದಲ್ಲಿ ಎಲಮಂಚಿಲಿಯ ಚಾಳುಕ್ಯರು, ವಡ್ಡಾದಿಯ (ವಿಶಾಖಪಟ್ಟಣ ಜಿಲ್ಲೆಯ ಅನಕಾಪಲ್ಲಿ ಸಮೀಪದ ಅದೇ ಹೆಸರಿನ ಗ್ರಾಮ) ಮತ್ಸ್ಯರು, ವೀರಕೂಟ ಪಲ್ಲವರು, ಇತ್ಯಾದಿ ಕೆಲವು ಸಾಮಂತರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು.



ನಾಗ ನಾಗಣಿ, ಕೋಣಾರ್ಕ ದೇವಾಲಯ

ಭಾನುದೇವನ ಮಗ ಇಮ್ಮಡಿ ವೀರನರಸಿಂಹ. ಈತನ ಕಾಲದಲ್ಲಿ ನರಹರಿತೀರ್ಥ ಶ್ರೀಪಾದರು ತಮ್ಮ ಗುರುಗಳ ಆದೇಶದಂತೆ ಸೀತಾರಾಮಲಕ್ಷ್ಮಣರ ವಿಗ್ರಹಗಳನ್ನು ರಾಜಭಂಡಾರದಿಂದ ಪಡೆದು ಕಳಿಂಗವನ್ನು ಬಿಟ್ಟು ಉಡುಪಿಗೆ ಹೋಗಿ ನೆಲಸಿದರು. ಈ ಅರಸನ ಮಗ ಇಮ್ಮಡಿ ಭಾನುದೇವನ (1305–27) ಕಾಲದಲ್ಲಿ ತೊಗಲಕ್ ಮನೆತನ ದೆಹಲಿಯಲ್ಲಿ ಅಧಿಕಾರಕ್ಕೆ ಬಂತು. ಘಿಯಾಸುದ್ದೀನ್ ತೊಗಲಕನ ಮಗನಾದ ಮಲ್ಲಿಕ್ ಫಕ್ರುದ್ದೀನ್ ಜಾನಾ (ಉಲುಘ್‌ಖಾನ್) ಕಾಕತೀಯರ ವಿರುದ್ಧ ದಂಡೆತ್ತಿ ಅವರ ರಾಜ್ಯವನ್ನು ನಾಶಗೊಳಿಸಿ ಭಾನುದೇವನ ರಾಜ್ಯವನ್ನು ಮುತ್ತಿ ಜಾಜ್‌ನಗರವನ್ನು ಆಕ್ರಮಿಸಿದ. ಅಗ ನಡೆದ ತೀವ್ರವಾದ ಕದನದಲ್ಲಿ ಕೊನೆಗೆ ಭಾನುದೇವ ಸೋತ. ಆದರೆ ಉಲುಘ್‌ಖಾನ ತನ್ನ ವಾಡಿಯೊಡನೆ ಹಿಂದಿರುಗಿದ.

1358ರಿಂದ ಆಳಿದ 3ನೆಯ ಭಾನುದೇವ ದೆಹಲಿಯ ಫಿರೋಜ್ ಷಹ ತೊಗಲಕನ ದಾಳಿಯನ್ನೆದುರಿಸಬೇಕಾಯಿತು. ಗಂಗರಾಜ್ಯದ ಐಶ್ವರ್ಯವನ್ನು ಕುರಿತು ಕೇಳಿದ್ದ ಸುಲ್ತಾನ ಪುರಿಯನ್ನು ಮುತ್ತಿ ಜಗನ್ನಾಥದೇವಾಲಯದ ಅತುಲೈಶ್ವರ್ಯವನ್ನು ಸೂರೆಮಾಡಿ ಅಲ್ಲಿಯ ದೇವಾಲಯವನ್ನು ಹಾಳುಗೆಡವಿ, ಮೂಲವಿಗ್ರಹವನ್ನು ಕಿತ್ತೆಸೆದು ಆ ಕ್ಷೇತ್ರವನ್ನು ಅಪವಿತ್ರಗೊಳಿಸಿದ. ವಾರ್ಷಿಕವಾಗಿ ನಿಗದಿಗೊಳಿಸಿದ ದ್ರವ್ಯವನ್ನು ಕಾಣಿಕೆಯಾಗಿ ಸಲ್ಲಿಸಬೇಕೆಂಬ ಷರತ್ತಿಗೆ ಒಪ್ಪಿ ಸುಲ್ತಾನ ಅಲ್ಲಿಂದ ಕಾಲ್ತೆಗೆದ.

ಅನಂತರ ಪಟ್ಟಕ್ಕೆ ಬಂದ ನಾಲ್ಕನೆಯ ವೀರನರಸಿಂಹದೇವನ (1378–09) ಕಾಲದಲ್ಲಿ ಸಾಮಂತರು ಪ್ರಬಲಗೊಂಡು ಕೇಂದ್ರಾಧಿಕಾರ ಕುಗ್ಗಿತು. ಇದರಿಂದ ಶತ್ರುಬಾಧೆ ಹೆಚ್ಚಿತು. ರಾಚಕೊಂಡದ ರೇಚೆರ್ಲ ಅನವೊತನಾಯ, ಕೊಂಡವೀಡಿನ ಕಾಟಯವೇಮಾರೆಡ್ಡಿ ಮೊದಲಾದವರು ಕಳಿಂಗವನ್ನು ಮುತ್ತಿದರು. ಮುಸ್ಲಿಮರ ಭಾದೆಯಂತೂ ಇದ್ದೇ ಇತ್ತು. ಇವುಗಳಿಂದ ರಾಜ್ಯದ ಬಲ ಕ್ಷೀಣಿಸಿತು.

ನಾಲ್ಕನೆಯ ವೀರಭಾನುದೇವ ಈ ವಂಶದ ಕೊನೆಯ ಅರಸ (1409–39). ವಿಜಯನಗರದಲ್ಲಿ ಈತನ ಸಮಕಾಲೀನನಾಗಿ ಇಮ್ಮಡಿ ದೇವರಾಯ ಆಳುತ್ತಿದ್ದ. ಆತನ ಸಹಾಯದೊಡನೆ ರೆಡ್ಡಿವಂಶದ ನಾಯಕರು ಮೇಲಿಂದ ಮೇಲೆ ಕಳಿಂಗ ರಾಜ್ಯವನ್ನು ಮುತ್ತಿ ಆ ರಾಜ್ಯದ ಪತನಕ್ಕೆ ಕಾರಣರಾದರು. ಇಂಥ ದಾಳಿಗಳಲ್ಲೊಂದನ್ನು ಹಿಮ್ಮೆಟ್ಟಿಸುವ ಯತ್ನದಲ್ಲಿ ಭಾನುದೇವ ರಾಜಧಾನಿಯಿಂದ ಹೊರಗಿದ್ದಾಗ ಆ ರಾಜ್ಯದಲ್ಲಿ ಗಜಪತಿವಂಶದ ಕಪಿಲೇಶ್ವರ ಬಂಡೆಬ್ಬಿಸಿ ತಾನೇ ಕಳಿಂಗಾಧಿಪತಿಯಾದ.

ಚಕ್ರ, ಸೂರ್ಯದೇವಾಲಯ, ಕೋಣಾರ್ಕ

ಕಳಿಂಗದಲ್ಲಿ ಆಳಿದ ಈ ಗಂಗರು ಬಹು ದೀರ್ಘಕಾಲ ಆಳಿದ ಭಾರತೀಯ ರಾಜವಂಶಗಳಲ್ಲಿ ಪ್ರಖ್ಯಾತರು. ಈ ವಂಶದ ಅನಂತರದ ಅರಸರು ಮಹಮ್ಮದೀಯರ ದಾಳಿಯನ್ನು ಅನೇಕ ವರ್ಷಗಳ ಕಾಲ ಧೈರ್ಯದಿಂದ ಎದುರಿಸಿ ಹಿಂದೂ ಸಂಸ್ಕೃತಿಯ ಧರ್ಮದ ರಕ್ಷಣೆಗಾಗಿ ಶ್ರಮಿಸಿದರು. ಇವರ ಕಾಲದಲ್ಲಿ ವೈಷ್ಣವಮತಕ್ಕೆ ವಿಶಿಷ್ಟವಾದ ಪ್ರೋತ್ಸಾಹ ಆಶ್ರಯಗಳು ದೊರೆತವು. ಪುರಿ, ಭುವನೇಶ್ವರ, ಕೋಣಾರ್ಕ ಮುಂತಾದ ಕಡೆಗಳಲ್ಲಿಯೂ ಪ್ರಖ್ಯಾತವಾದ ಸುಂದರ ದೇವಾಲಯಗಳನ್ನು ಕಟ್ಟಿಸಿದ ಕೀರ್ತಿ ಇವರದಾಗಿದೆ. ಕಳಿಂಗ ಶೈಲಿ ಎಂದು ಹೆಸರಾದ ವಿಶಿಷ್ಟವಾದ ಶಿಲ್ಪಶೈಲಿಯ ಪೋಷಕರಿವರು. ಇದು ಈ ವಂಶದ ವಿಶಿಷ್ಟವಾದ ಕೊಡುಗೆ. (ಜಿ.ಆರ್.ಆರ್.; ಜಿ.ಬಿ.ಆರ್.)

**ಗಂಗರು, ತಲಕಾಡಿನ :** ದಕ್ಷಿಣ ಭಾರತದ ಒಂದು ಪ್ರಸಿದ್ಧ ರಾಜಮನೆತನದ ಅರಸರು. ಪಶ್ಚಿಮ ಗಂಗರೆಂದೂ ಪ್ರಸಿದ್ಧರಾಗಿದ್ದಾರೆ. ಇವರು ಕನ್ನಡನಾಡಿನ ದಕ್ಷಿಣ ಭಾಗ ಹಾಗೂ ಸುತ್ತಮುತ್ತಣ ಪ್ರದೇಶದ ಮೇಲೆ ಸು. 700 ವರ್ಷಗಳ ಕಾಲ ಪ್ರಭುತ್ವ ನಡೆಸಿದರು. ಇವರು ಮೊದಲು ಗಂಗಜುಸಾಸಿರ ಅಂದರೆ ಗಂಗ 6000 ಪ್ರಾಂತ್ಯದ ಅಧಿಪತಿಗಳಾಗಿದ್ದರು. ಕುವಳಾಲ (ಈಗಿನ ಕೋಲಾರ) ಇವರ ರಾಜಧಾನಿಯಾಗಿತ್ತು. ಈ ಪ್ರಾಂತ್ಯ ಆಂಧ್ರಪ್ರದೇಶದ ಅನಂತಪುರ ಹಾಗೂ ಕಡಪ ಜಿಲ್ಲೆಗಳನ್ನೊಳಗೊಂಡಿತ್ತು. ಕ್ರಮೇಣ ಇವರ ರಾಜ್ಯ ವಿಸ್ತಾರವಾಯಿತು. ಅದಕ್ಕೆ ಗಂಗವಾಡಿ 96000 ಎಂಬ ಹೆಸರು ಬಂತು. ಆದರೆ ಆ ವೇಳೆಗೆ ಗಂಗರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಕರ್ನಾಟಕದ ಅರಸು ಮನೆತನದ ಮಾಂಡಲಿಕರಾಗಿದ್ದರು. ಕರ್ನಾಟಕದ ತುಮಕೂರು, ಬೆಂಗಳೂರು, ಕೊಡಗು, ಮಂಡ್ಯ, ಮೈಸೂರು ಜಿಲ್ಲೆಗಳನ್ನಲ್ಲದೆ, ತಮಿಳುನಾಡಿನ ಸೇಲಂ, ಕೊಯಮತ್ತೂರು, ಉತ್ತರ ಆರ್ಕಾಟ್ ಜಿಲ್ಲೆಗಳ ಕೆಲವು ಭಾಗಗಳೂ ಇವರ ರಾಜ್ಯಕ್ಕೆ ಸೇರಿದ್ದವು. ಆಗ ಮೈಸೂರು ಜಿಲ್ಲೆಯ ತಲವನಪುರ(ಈಗಿನ ತಲಕಾಡು) ಇವರ ರಾಜಧಾನಿಯಾಯಿತು. ಚನ್ನಪಟ್ಟಣದ ಸಮೀಪದ ಮಂಕುಂದ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿರುವ ಮಣ್ಣೆ (ಮಾನ್ಯಪುರ) ಇವರ ನೆಲೆವೀಡುಗಳಾಗಿದ್ದವು.

ಈ ಗಂಗರು ಯಾರು ಎಂಬ ಪ್ರಶ್ನೆಗೆ ಸದ್ಯದಲ್ಲಿ ಲಭ್ಯವಿರುವ ಆಧಾರಗಳ ಮೇಲೆ ಖಚಿತವಾದ ಉತ್ತರ ಹೇಳಲಾಗದು. 11–12ನೆಯ ಶತಮಾನದ ಅನಂತರದ ಇವರ ಶಾಸನಗಳಲ್ಲಿ ಈ ಮನೆತನದ ಮೂಲಪುರುಷರನ್ನು ಕುರಿತು ಕೆಲವು ಕಥೆಗಳಿವೆ. ಇವರು ಮೊದಲು ಉತ್ತರ ಭಾರತದಲ್ಲಿ ಅಯೋಧ್ಯಾಪುರದಲ್ಲೂ ಅನಂತರ ಅಹಿಚ್ಛತ್ರಪುರದಲ್ಲೂ ಆಳುತ್ತಿದ್ದರು. ಕಾರಣಾಂತರಗಳಿಂದ ಈ ವಂಶದ ದಡಿಗ ಮತ್ತು ಮಾಧವರೆಂಬ ಇಬ್ಬರು ರಾಜಕುಮಾರರು ದಕ್ಷಿಣ ಭಾರತದ ಗಂಗಪೇರೂರಿಗೆ ವಲಸೆಬಂದು ಅಲ್ಲಿ ಗಂಗವಾಡಿ 96000 ರಾಜ್ಯವನ್ನು ಸ್ಥಾಪಿಸಿದರು. ನಂದಗಿರಿ(ನಂದಿಬೆಟ್ಟ) ಇವರ ಪ್ರಮುಖ ಕೋಟೆಗಳಲ್ಲಿ ಒಂದು. ಕುವಳಾಲ ಇವರ ರಾಜಧಾನಿ. ಗಂಗ ಪೇರೂರು ಎಂಬ ಹೆಸರಿನ ಗ್ರಾಮವೊಂದು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿದೆ. ಇದೇ ಶಾಸನೋಕ್ತ ಗಂಗ ಪೇರೂರು ಗ್ರಾಮವೆಂದು ಊಹಿಸಲಾಗಿದೆ.

ಸೂರ್ಯವಂಶದ, ಇಕ್ಷ್ವಾಕು ಕುಲದ ಧನಂಜಯ ಈ ವಂಶದ ಮೂಲಪುರುಷನೆಂದು 11ನೆಯ ಶತಮಾನದ ಒಂದು ಶಾಸನದಲ್ಲಿ ಹೇಳಿದೆ. ಈತನ ಮಗ ಹರಿಶ್ಚಂದ್ರನಿಗೆ ದಡಿಗ ಮಾಧವರೆಂಬಿಬ್ಬರು ಮಕ್ಕಳಿದ್ದರು. ಇನ್ನೊಂದು ಶಾಸನದಲ್ಲಿ ಹರಿಶ್ಚಂದ್ರನ ಮಗನ ಹೆಸರು ಭರತನೆಂದಿದೆ. ಇವನಿಗೆ ವಿಜಯ ಮಹಾದೇವಿ ಎಂಬ ಪತ್ನಿಯಿದ್ದು, ಆಕೆ ಗಂಗಾನದಿಯಲ್ಲಿ ಸ್ನಾನಮಾಡಿ ಪೂರ್ಣಮನೋರಥಳಾದ ಕಾರಣ ಅವಳ ಮಗನಿಗೆ ಗಂಗಾದತ್ತ ಎಂಬ ಹೆಸರಾಯಿತು. ಇವನ ವಂಶದಲ್ಲಿ ವಿಷ್ಣುಗುಪ್ತನೆಂಬಾತ ಇಂದ್ರನನ್ನು ಸಂಪ್ರೀತಿಗೊಳಿಸಿ ಒಂದು ಆನೆಯನ್ನು ಪಾರಿತೋಷಕವಾಗಿ ಪಡೆದ. ಇವನ ಮಕ್ಕಳು ಭಗದತ್ತ ಮತ್ತು ಶ್ರೀದತ್ತ. ಭಗದತ್ತ ಕಳಿಂಗದೇಶಾಧಿಪತಿಯಾದ. ಶ್ರೀದತ್ತ ವಂಶಾನುಗತವಾದ ರಾಜ್ಯವನ್ನೂ ಆನೆಯನ್ನೂ ಪಡೆದ. ಇವನ ವಂಶಜ ಪದ್ಮನಾಭ. ಇವನಿಗೆ ಇಬ್ಬರು ಗಂಡುಮಕ್ಕಳು. ಉಜ್ಜಯಿನಿಯ ಮಹೀಪಾಲ ಇವನ ವಿರುದ್ಧ ದಂಡೆತ್ತಿ ಬಂದಾಗ ಇವನು ತನ್ನ ಮಕ್ಕಳನ್ನು ದಕ್ಷಿಣದೇಶಕ್ಕೆ ಕಳುಹಿಸಿದ. ಅದಕ್ಕೆ ಮೊದಲು ಆ ಇಬ್ಬರು ಗಂಡುಮಕ್ಕಳಿಗೆ ದಡಿಗ ಮತ್ತು ಮಾಧವ ಎಂದು ಹೆಸರುಗಳನ್ನು ಬದಲಿಸಿದ. ಇವರು ಪೇರೂರಿಗೆ ಬಂದಾಗ ಸಿಂಹನಂದಿ ಆಚಾರ್ಯರನ್ನು ಕಂಡರು. ಅವರಿಂದ ಶಿಕ್ಷಣ ಪಡೆದರು. ಪದ್ಮಾವತಿ ದೇವಿಯ ಪ್ರಸಾದದಿಂದ ಒಂದು ಖಡ್ಗವನ್ನು ಪಡೆದು, ಅದರ ಪ್ರಭಾವದಿಂದ ಒಂದು ರಾಜ್ಯಾಧಿಪತ್ಯವನ್ನು ಸ್ಥಾಪಿಸಿದರು–ಎಂಬುದು ಇವರ ಮೂಲಕ್ಕೆ ಸಂಬಂಧಿಸಿದಂತೆ ಶಾಸನಗಳಲ್ಲಿ ಹೇಳಲಾದ ಇನ್ನೊಂದು ಕಥೆ.

ಆದರೆ ಇದಕ್ಕೂ ಹಿಂದಿನ ಕಾಲದ ಶಾಸನಗಳಲ್ಲಿ ಈ ಪ್ರಸ್ತಾಪ ಬರುವುದಿಲ್ಲ. ಅವುಗಳಲ್ಲಿ ಹೇಳಿದಂತೆ ಮನೆತನದ ಮೊದಲ ಅರಸ ಕೊಂಗುಣಿವರ್ಮ, ಈತ ಜಾಹ್ನವೇಯಕುಲಸಂಭೂತ, ಕಾಣ್ವಾಯನ ಗೋತ್ರಕ್ಕೆ ಸೇರಿದವ. ಸ್ವಬಲದಿಂದ ರಾಜ್ಯವನ್ನು ಸ್ಥಾಪಿಸಿದ. ಜೈನಗುರುವಾದ ಸಿಂಹನಂದಿ ಆಚಾರ್ಯ ಈತನಿಗೆ ಖಡ್ಗವೊಂದನ್ನಿತ್ತಗ ಅದರಿಂದ ಮಹಾಶಿಲಾಸ್ತಂಭವೊಂದನ್ನು ತುಂಡರಿಸಿದ. ಇದು ಅವನ ಶೌರ್ಯದ ಪ್ರತೀಕ. ಸಿಂಹನಂದಿಯ ಆಶೀರ್ವಾದಬಲದಿಂದ ಇವನು ಅನಂತರ ರಾಜ್ಯವೊಂದನ್ನು ಸ್ಥಾಪಿಸಿದ.

ಈ ಎರಡೂ ಹೇಳಿಕೆಗಳಲ್ಲಿಯ ವ್ಯತ್ಯಾಸವನ್ನು ಗಮನಿಸಬಹುದು. ಮೊದಲಿನ ಶಾಸನಗಳಲ್ಲಿ ಇವರು ಉತ್ತರದ ಅಯೋಧ್ಯೆಯಿಂದಾಗಲಿ, ಅಹಿಚ್ಛತ್ರದಿಂದಾಗಲಿ ಬಂದವರೆಂದು ಹೇಳಿಲ್ಲ. ಅಲ್ಲದೆ ಆ ಶಾಸನಗಳಲ್ಲಿ ದಡಿಗನ ಹೆಸರೂ ಇಲ್ಲ. ಇವರ ರಾಜಧಾನಿ ಮೊದಲು ಕುವಳಾಲವಾಗಿದ್ದು ಅನಂತರ ತಲಕಾಡಾಯಿತು. ಇವರ ರಾಜ್ಯ ಕರ್ನಾಟಕದ ದಕ್ಷಿಣ ಭಾಗಕ್ಕೆ ಸೀಮಿತವಾಗಿತ್ತು–ಎಂಬ ಅಂಶಗಳು ಎಲ್ಲ ಶಾಸನಗಳಲ್ಲೂ ಉಕ್ತವಾಗಿವೆ. 10–12ನೆಯ ಶತಮಾನಗಳಲ್ಲಿ ಎಲ್ಲ ಅರಸು ಮನೆತನಗಳ ಮೂಲಪುರುಷರನ್ನೂ ಕುರಿತು ಇಂಥವೇ ಕಥೆಗಳನ್ನು ಹೆಣೆದಿದೆ. ಅವುಗಳನ್ನು ನಂಬಲು ಆಧಾರಗಳಿಲ್ಲ. ಗಂಗರು ಮೂಲತಃ ಹಳೆಯ ಮೈಸೂರು ಸಂಸ್ಥಾನದ ಭಾಗಕ್ಕೆ ಸೇರಿದವರೆಂಬುದರಲ್ಲಿ ಸಂದೇಹವಿಲ್ಲ. ಇವರ ಶಿಲಾಶಾಸನಗಳು ಹಳಗನ್ನಡ ಮತ್ತು ನಡುಗನ್ನಡ ಭಾಷೆಯಲ್ಲಿವೆ. ಇವರು ಆಳಿದ ರಾಜ್ಯ ದಕ್ಷಿಣ ಕರ್ನಾಟಕಕ್ಕೆ ಸೀಮಿತವಾಗಿತ್ತು. ಇವರು ಧರಿಸಿದ ಬಿರುದುಗಳೂ ಮುತ್ತರಸ ಮುಂತಾದ ನಾಮಧೇಯಗಳೂ ಇವರು ಕನ್ನಡಿಗರೆಂಬುದನ್ನು ಸಾರಿಹೇಳುತ್ತವೆ. ದುರ್ವಿನೀತಾದಿ ಅರಸರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಚಿರಸ್ಮರಣೀಯವಾದ್ದು. ಈ ಎಲ್ಲ ಕಾರಣಗಳಿಂದ ಇವರು ಮೂಲತಃ ಕನ್ನಡಿಗರೆಂಬುದರಲ್ಲಿ ಸಂದೇಹವಿಲ್ಲ. ಈಗ ಈ ಭಾಗದಲ್ಲಿರುವ ಗಂಗಡಿಕಾರ ವಕ್ಕಲಿಗರು ಈ ಮನೆತನದವರೆಂದು ಹಲವರ ಊಹೆ. ಇದು ಸರಿಯೆಂದು ಹೇಳಲು ಖಚಿತ ಆಧಾರಗಳಿಲ್ಲದಿದ್ದರೂ ಈ ಊಹೆಯನ್ನು ಅಲ್ಲಗಳೆಯಲಾಗದು.

ಈ ಮನೆತನದ ಮೊದಲ ಕೆಲವು ಅರಸರ ಇತಿಹಾಸಕ್ಕೆ ಸಂಬಂಧಿಸಿದಂತೆ ಕೆಲವು ತೊಡಕುಗಳಿವೆ. ಆ ಅರಸರವೆಂದು ಹೇಳಲಾದ ತಾಮ್ರ ಶಾಸನಗಳೆಲ್ಲ ಕೂಟ ಶಾಸನಗಳೆಂದು ಫ್ಲೀಟನ ಅಭಿಪ್ರಾಯವಾಗಿತ್ತು. ಹೀಗೆ ಆ ಅರಸರ ಅಸ್ತಿತ್ವವೇ ಮೊದಲು ಪ್ರಶ್ನೆಗೆ ಒಳಗಾಯಿತು. ದುರ್ವಿನೀತ ಹಾಗೂ ಅವನ ಅನಂತರದ ಅರಸರು ಮಾತ್ರ ಐತಿಹಾಸಿಕ ಪುರುಷರೆಂಬುದಾಗಿ ಅನಂತರ ಫ್ಲೀಟ್ ಒಪ್ಪಿಕೊಂಡಿದ್ದಾನೆ. ಅವರ ಎಲ್ಲ ಶಾಸನಗಳೂ ನೈಜವೆಂಬುದು ರೈಸ್ ಅಭಿಪ್ರಾಯ. ಇವೆರಡು ಅಭಿಪ್ರಾಯಗಳೂ ಸರಿಯಲ್ಲ. ಆ ಅರಸರ ಕೆಲವು ಶಾಸನಗಳು ಕೂಟವೆಂಬುದು ನಿಜ. ಆದರೆ ಲಿಪಿಯ ಆಧಾರದ ಮೇಲೆ ಹಾಗೂ ಆಂತರಿಕ ವಿಷಯಗಳನ್ನವಲಂಬಿಸಿ, ಇವರ ಅನೇಕ ಶಾಸನಗಳು ನೈಜವೆಂದು ಈಗ ಹೇಳಬಹುದು.

ಈ ರಾಜರ ಆಳ್ವಿಕೆಯ ಕಾಲವನ್ನು ಸಹ ಖಚಿತವಾಗಿ ಗೊತ್ತುಪಡಿಸಲು ಸಾಧ್ಯವಾಗಿಲ್ಲ. ಗಂಗ ಹರಿವರ್ಮನನ್ನು ಪಲ್ಲವರ ಸಿಂಹವರ್ಮ ಪಟ್ಟಕ್ಕೆ ತಂದನೆಂದು ಹೇಳಲಾಗಿದೆ. ಲೋಕವಿಭಾಗವೆಂಬ ಜೈನಗ್ರಂಥದಲ್ಲಿ ಶಕ 380ನೆಯ ವರ್ಷ, ಎಂದರೆ 458, ಸಿಂಹವರ್ಮನ ಆಳ್ವಿಕೆಯ 22ನೆಯ ವರ್ಷಕ್ಕೆ ಸಮನೆಂದು ಹೇಳಿದೆ. ಸಿಂಹವರ್ಮನ ಆಳ್ವಿಕೆ 436ರಲ್ಲಿ ಆರಂಭವಾಯಿತೆಂದೂ ಸು. 440ರಲ್ಲಿ ಹರಿವರ್ಮ ಪಟ್ಟಾಭಿಷಿಕ್ತನಾದನೆಂದೂ ಊಹಿಸಲಾಗಿದೆ. ಆದರೆ ಲೋಕವಿಭಾಗದಲ್ಲಿ ಹೇಳಿರುವ ಕಾಲವೇ ಸಂದೇಹಾಸ್ಪದವಾಗಿದೆಯೆಂಬ ಇನ್ನೊಂದು ವಾದವೂ ಉಂಟು. ಇದಲ್ಲದೆ ಗಂಗ ಮುಮ್ಮಡಿ ಮಾಧವನ ಪತ್ನಿ, ಕದಂಬ 1ನೆಯ ಕೃಷ್ಣವರ್ಮನ ಸೋದರಿಯೆಂದು ಹೇಳಿದೆಯಾದ ಕಾರಣ ಮುಮ್ಮಡಿ ಮಾಧವನ ಆಳ್ವಿಕೆಯ ಕಾಲವನ್ನು ಕೃಷ್ಣವರ್ಮನ ಆಳ್ವಿಕೆಯ ಕಾಲದ ಆಧಾರದ ಮೇಲೆ ನಿರ್ಧರಿಸಬೇಕಾದ್ದು ಆವಶ್ಯಕ. ಇತ್ತೀಚಿನ ಗ್ರಂಥವೊಂದರಲ್ಲಿ (ಎ ಹಿಸ್ಟೊರಿ ಆಫ್ ಕರ್ನಾಟಕ, ಸಂ.ಪಿ.ಬಿ.ದೇಸಾಯಿ) ಈ ವಿಷಯವನ್ನು ಚರ್ಚಿಸಿ, ಗಂಗರ ಹರಿವರ್ಮ ಅಥವಾ 1ನೆಯ ಕೃಷ್ಣವರ್ಮನ ಕಾಲವನ್ನು 375 – 400ರ ತನಕ ಎಂದು ಸೂಚಿಸಲಾಗಿದೆ. ಗಂಗವಂಶದ ಅರಸರ ಆಳ್ವಿಕೆಯ ಕಾಲಸೂಚಿಗಳನ್ನು ಕುರಿತು ಮಾಡಲಾದ ಹಲವಾರು ಊಹೆಗಳಲ್ಲಿ ಇದೂ ಒಂದು. ಇದಮಿತ್ಥಂ ಎಂದು ಹೇಳಲಾಗದಿದ್ದರೂ ಈ ಸೂಚನೆಯನ್ನು ಒಮ್ಮೆಲೇ ತಿರಸ್ಕರಿಸಲಾಗದು. ಇಲ್ಲಿ ಇದೇ ಸೂಚನೆಯನ್ನು ಆಧರಿಸಲಾಗಿದೆ.

ಇವರ ವಂಶಾವಳಿಯಲ್ಲಿ ಮೊದಲ ಕೆಲವು ಅರಸರನ್ನು ಕುರಿತು ಸಹ ಭಿನ್ನಾಭಿಪ್ರಾಯಗಳಿವೆ. ವಂಶದ ಮೂಲಪುರುಷನ ಹೆಸರು ಕೊಂಗುಣಿವರ್ಮ, ಈತನ ಮಗ 1ನೆಯ ಮಾಧವ ಎಂದು ಸಾಮಾನ್ಯವಾಗಿ ಇತಿಹಾಸಕಾರರು ಒಪ್ಪಿದ್ದಾರೆ. ಆದರೂ ಕೊಂಗುಣಿವರ್ಮ ಎಂಬುದು ಮಾಧವನ ಬಿರುದೆಂದೂ ಮಾಧವ–ಕೊಂಗಣಿವರ್ಮರು ಇಬ್ಬರು ಭಿನ್ನ ವ್ಯಕ್ತಿಗಳಲ್ಲವೆಂದೂ ಒಂದು ವಾದವಿದೆ. ಮಾಧವನಿಗೆ ಮೂವರು ಮಕ್ಕಳು–ಆರ್ಯವರ್ಮ, ಹರಿವರ್ಮ ಮತ್ತು ಕೃಷ್ಣವರ್ಮ. ಇವರು ಮೂವರು ಬೇರೆಬೇರೆ ಕಡೆ–ಪರುವಿ, ಕೈವಾರ ಮತ್ತು ತಲಕಾಡುಗಳಿಂದ–ಸ್ವತಂತ್ರವಾಗಿ ಆಳತೊಡಗಿದರೆಂದು ಶ್ರೀಕಂಠಶಾಸ್ತ್ರೀ ಮೊದಲಾದ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇವರ ಶಾಸನಗಳಲ್ಲಿ ಕೊಟ್ಟಿರುವ ವಂಶಾವಳಿಗಳ ತೌಲನಿಕ ಪರೀಕ್ಷೆಯಿಂದ ಮೂರು ಹೆಸರುಗಳೂ ಒಬ್ಬನವೇ ಆಗಿವೆ–ಎಂದು ಲಕ್ಷ್ಮೀನಾರಾಯಣರಾಯರು ತೋರಿಸಿದ್ದಾರೆ. ಇದನ್ನು ಇಲ್ಲಿ ಒಪ್ಪಲಾಗಿದೆ. ಕೃಷ್ಣವರ್ಮನಿಗೆ, ಸಿಂಹವರ್ಮಾ ಪರನಾಮಧೇಯನಾದ ಇಮ್ಮಡಿಮಾಧವ ವಿಷ್ಣುಗೋಪ ಮತ್ತು ವೀರವರ್ಮನೆಂಬ ಮೂವರು ತನಯರು. ವಿಷ್ಣುಗೋಪನ ಮಗ ಮುಮ್ಮಡಿ ಮಾಧವ. ಈತ ತಡಂಗಾಲ ಮಾಧವನೆಂದೂ ಪರಿಚಿತನಾಗಿದ್ದಾನೆ. ಇವನ ಮಗ ಅವಿನೀತ. ಅವಿನೀತ ಅನಂತರದ ಗಂಗರ ವಂಶಾವಳಿಯಲ್ಲಿ ಹೆಚ್ಚಿನ ಬಿಕ್ಕಟ್ಟುಗಳಿಲ್ಲ.

ಕೊಂಗುಣಿವರ್ಮ ವಂಶದ ಸ್ಥಾಪಕ, ಜೈನಮುನಿಯ ಆಶೀರ್ವಾದ ಬೆಂಬಲಗಳಿಂದ ರಾಜ್ಯವೊಂದನ್ನು ಸ್ಥಾಪಿಸಿದ. ಆದರೆ ಇದನ್ನು ಕುರಿತಾದ ವಿವರಗಳೂ ಲಭ್ಯವಿಲ್ಲ. ಅನಂತರ ಆಳಿದ ಕೆಲವು ಗಂಗ ಅರಸರು ಬಹುಶಃ ಈತನ ನೆನಪಿಗಾಗಿ ಕೊಂಗುಣಿವರ್ಮ ಎಂಬುದನ್ನು ಒಂದು ಬಿರುದಾಗಿ ತಮ್ಮ ಹೆಸರುಗಳಿಗೆ ಸೇರಿಸಿಕೊಳ್ಳುತ್ತಿದ್ದರು. ಇವನ ಮಗ ಮಾಧವನ ಶಾಸನ ಕೋಟ ತಾಮ್ರ ಶಾಸನ ಈ ಮನೆತನದ ಪ್ರಾಚೀನ ಹಾಗೂ ನೈಜ ಶಾಸನವೆನ್ನಲಾಗಿದೆ. ಈತನಿಗೆ ಕೃಷ್ಣವರ್ಮನೆಂಬ ಮಗನಿದ್ದ. ಈತನನ್ನು ಪಟ್ಟಕ್ಕೆ ತರುವುದರಲ್ಲಿ ಪಲ್ಲವ ಸಿಂಹವರ್ಮ ಪ್ರಮುಖಪಾತ್ರ ವಹಿಸಿದನಂತೆ. ಇದೇ ಸುಮಾರಿಗೆ ಉತ್ತರ ಕರ್ನಾಟಕದ ಕಾರವಾರ, ಬೆಳಗಾಂವಿ, ಧಾರವಾಡ ಜಿಲ್ಲೆಗಳನ್ನೊಳಗೊಂಡ ಪ್ರದೇಶದಲ್ಲಿ ಕದಂಬ ರಾಜ್ಯದ ಸ್ಥಾಪನೆಯಾಗಿತ್ತು. ಕದಂಬರಿಗೂ ಪಲ್ಲವರಿಗೂ ನಡುವೆ ವೈರವಿದ್ದು, ಸಹಜವಾಗಿಯೇ ಪಲ್ಲವರು ಗಂಗರನ್ನು ಪ್ರೋತ್ಸಾಹಿಸಿ ಅವರಿಗೆ ಸಹಾಯಕರಾದರು. ಗಂಗ ಇಮ್ಮಡಿ ಮಾಧವ ಸಹ ಪಲ್ಲವ ಸ್ಕಂದವರ್ಮನ ಸಹಾಯದಿಂದ ರಾಜ್ಯಾಭಿಷಿಕ್ತನಾದನೆಂದಿದೆ. ಇವರು ಎದುರಿಸಿದ ತೊಡಕುಗಳಾವುವು, ಪಲ್ಲವರ ಸಹಾಯ ಇವರಿಗೆ ಬೇಕಾಗಲು ಆಗ ನಡೆದಿರಬಹುದಾದ ಘಟನೆಗಳೆಂಥವು ಎಂಬ ಯಾವ ಪ್ರಶ್ನೆಗಳಿಗೂ ಇದುವರೆಗೂ ಯುಕ್ತವಾದ ಸಮಾಧಾನ ದೊರೆತಿಲ್ಲ. ವಿಷ್ಣುಗೋಪ ಈ ಮಾಧವನ ಅನುಜ. ವೀರವರ್ಮನೆಂಬ ಇನ್ನೊಬ್ಬ ಸೋದರ ಅಲ್ಪವಯಸ್ಕನಾಗಿದ್ದಾಗಲೇ ಮರಣಿಸಿರಬಹುದು. ಮಾಧವನಿಗೆ ಸಂತತಿಯಿರಲಿಲ್ಲ. ಆದ್ದರಿಂದ ವಿಷ್ಣುಗೋಪನ ಮಗನಾದ ಮುಮ್ಮಡಿ ಮಾಧವ ಇವನ ಉತ್ತರಾಧಿಕಾರಿಯಾದ. ಈ ವೇಳೆಗೆ ಕದಂಬರೊಡನೆ ಇವರಿಗೆ ಇದ್ದ ವೈಷಮ್ಯ ಹೆಚ್ಚಾಗಿ ಬಹುಶಃ ಅದನ್ನು ಕೊನೆಗಾಣಿಸಲೆಂದು ಕದಂಬ ಕಾಕುತ್ಸ್ಥವರ್ಮ ತನ್ನ ಮಗಳನ್ನು ಮಾಧವನಿಗೆ ಲಗ್ನ ಮಾಡಿಕೊಟ್ಟಂತೆ ತೋರುತ್ತದೆ.

ಮಾಧವನ ಮಗ ಅವಿನೀತ. ತಾಯಿಯ ತೊಡೆಯ ಮೇಲಿದ್ದಾಗಲೇ ಇವನಿಗೆ ರಾಜ್ಯಾಭಿಷೇಕವಾಯಿತೆಂದು ಒಂದು ಶಾಸನದಲ್ಲಿ ಹೇಳಿದೆ. ಆದರೆ ಈತ ಪ್ರಾಪ್ತ ವಯಸ್ಕನಾಗಿ ಅಧಿಕಾರಸೂತ್ರಗಳನ್ನು ಸ್ವತಃ ಪಡೆದಂದಿನಿಂದಲೇ ಇವನ ಆಳ್ವಿಕೆಯ ವರ್ಷಗಳನ್ನು ಗಣಿಸಲಾಗಿದೆ. ಇವನ ಹೊಸಕೋಟೆ ತಾಮ್ರಶಾಸನದಲ್ಲಿ ಪಲ್ಲವ ಅರಸನಾದ ಸಿಂಹವಿಷ್ಣುವಿನ ತಾಯಿ ಕಟ್ಟಿಸಿದ ಬಸದಿಗೆ ಈತ ದತ್ತಿಯನ್ನು ಬಿಟ್ಟ ವಿಷಯ ಹೇಳಿದೆ. ಗಂಗರ ರಾಜ್ಯದಲ್ಲಿ ಆಕೆ ಬಸದಿಯನ್ನು ಕಟ್ಟಿಸಿರುವುದನ್ನು ಗಮನಿಸಿದರೆ ಆಕೆ ಗಂಗ ಮನೆತನಕ್ಕೆ ಸೇರಿದವಳಾಗಿರಬಹುದೆಂದು ಹೇಳಿದೆ. ಇವನ ಆಳ್ವಿಕೆಯ ಆರಂಭದಲ್ಲಿ ಕಲುಷಿತಗೊಂಡಿದ್ದ ರಾಜಕೀಯ ಪರಿಸ್ಥಿತಿಯ ಲಾಭ ಪಡೆದು ದಂಗೆ ಎದ್ದ ಹಲವಾರು ಸಾಮಂತರನ್ನು ಈತ ಸದೆಬಡೆದ.

ಇವನ ಅನಂತರ ಇವನ ಮಗನಾದ ದುರ್ವಿನೀತ ಆಳತೊಡಗಿದ. ಪುನ್ನಾಟ ದೇಶದ ರಾಜಪುತ್ರಿಯಾದ ಜ್ಯೇಷ್ಠಾದೇವಿ ಈತನ ತಾಯಿ. ಈತ ಹಿರಿಯ ಮಗನಾಗಿದ್ದರೂ ಇವನ ತಂದೆ ತನ್ನ ಉತ್ತರಾಧಿಕಾರವನ್ನು ಕಿರಿಯ ಮಗನೊಬ್ಬನಿಗೆ ವಹಿಸಿದ ಕಾರಣ

ಈತ ತನ್ನ ಹಕ್ಕನ್ನು ಸ್ಥಾಪಿಸಲು ಹೆಣಗಬೇಕಾಯಿತು. ಅಂದರಿ, ಆಲತ್ತೂರು, ಪೊರುಳಜೆ ಮತ್ತು ಪೆರ್ನಗರಗಳಲ್ಲಿ ನಡೆದ ತೀವ್ರ ಕದನಗಳಲ್ಲಿ ಇವನು ಶತ್ರುಗಳನ್ನು ಸೋಲಿಸಿದ. ಪುನ್ನಾಟ ರಾಜ್ಯದ ಅರಸನಿಗೆ ಗಂಡುಮಕ್ಕಳಿಲ್ಲದ ಕಾರಣ ಆ ರಾಜ್ಯ ಸಹ ಇವನಿಗೆ ದಕ್ಕಿತು; ಪುನ್ನಾಟ ಎಂಬುದು ಮೈಸೂರು ಜಿಲ್ಲೆಯ ಕಾವೇರಿ ಮತ್ತು ಕಪಿಲಾ ನದಿಗಳ ನಡುವಣ ಪ್ರದೇಶವಾಗಿತ್ತು. ಇದರ ರಾಜಧಾನಿ ಕೀರ್ತಿಪುರ–ಈಗಿನ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಿತ್ತೂರು. ಇವನ ವಿರುದ್ಧ ಯುದ್ಧಮಾಡಿದ ವೈರಿಗಳಾರೆಂಬುದು ತಿಳಿಯದು; ಚಾಳುಕ್ಯ ವಂಶದ ಒಂದನೆಯ ಕೀರ್ತಿವರ್ಮ ಅವರಲ್ಲಿ ಒಬ್ಬನೆಂದು ಹಲವರು ಹೇಳಿದ್ದಾರಾದರೂ ಇದು ಇನ್ನೂ ದೃಢಪಟ್ಟಿಲ್ಲ. ಇವನು ಪಾಣ್ಣಾದ ದೇಶವನ್ನು ಸಹ ಆಳುತ್ತಿದ್ದನೆಂದು ಶಾಸನಗಳಲ್ಲಿ ಹೇಳಿದೆ. ಆ ದೇಶವನ್ನು ಗುರುತಿಸಲಾಗಿಲ್ಲ. ಇದು ಬಾಣನಾಡಾಗಿರಬಹುದೆಂದು ಸೂಚಿಸಲಾಗಿದೆ. ಇವನ ಕಾಲದಲ್ಲಿ ರಾಜ್ಯ ಆರ್ಥಿಕವಾಗಿ ಧನಾಢ್ಯನಾಗಿದ್ದು ಪ್ರಜೆಗಳು ಸುಖ–ಸಮೃದ್ಧಿಗಳಿಂದ ತುಷ್ಟರಾಗಿದ್ದರು. ಸ್ವತಃ ಕವಿಯೂ ಪಂಡಿತನೂ ಆದ ಅರಸ, ಕಲೆ–ಸಾಹಿತ್ಯಗಳಿಗೆ ಆಶ್ರಯದಾತನಾಗಿದ್ದ. ಭಾರವಿ ಇವನ ಆಸ್ಥಾನದಲ್ಲಿ ಕೆಲಕಾಲ ಇದ್ದಂತೆ ತೋರುತ್ತದೆ. ಭಾರವಿ ರಚಿಸಿದ ಕಿರಾತಾರ್ಜುನೀಯದ 15ನೆಯ ಸರ್ಗಕ್ಕೆ ಟೀಕೆಯನ್ನು ರಚಿಸಿದವನೂ ಗುಣಾಢ್ಯ, ಪೈಶಾಚಿ ಭಾಷೆಯಲ್ಲಿ ಬರೆದ ವಡ್ಡಕಥೆಯನ್ನು ಸಂಸ್ಕೃತದಲ್ಲಿ ಬರೆದವನೂ ಶಬ್ದಾವತಾರವೆಂಬ ವ್ಯಾಕರಣ ಗ್ರಂಥವನ್ನು ರಚಿಸಿದವನೂ ಈತನೇ. ಇವನ ಗುರುಗಳಾದ ಪೂಜ್ಯಪಾದರು ಶಬ್ದಾವತಾರವೆಂಬ ಪಾಣಿನೀಸೂತ್ರವೃತ್ತಿಯನ್ನು ಬರೆದಿದ್ದು ಅದಕ್ಕೆ ಟೀಕೆಯಾಗಿ ದುರ್ವಿನೀತ ಅದೇ ಹೆಸರಿನ ಗ್ರಂಥವನ್ನು ಬಹುಶಃ ಕನ್ನಡದಲ್ಲಿ ರಚಿಸಿದನೆಂದು ಹೇಳಲಾಗಿದೆ. ಶಾಸನಗಳಲ್ಲಿ ಈತನನ್ನು ನೀತಿಶಾಸ್ತ್ರ ಪ್ರವಚನ ಹಾಗೂ ಪ್ರಯೋಗಗಳಲ್ಲಿ ಸಾಕ್ಷಾತ್ ವಿಷ್ಣುಗುಪ್ತನೆಂದೂ ಗಾಂಧರ್ವವಿದ್ಯೆ, ನಾಟ್ಯಶಾಸ್ತ್ರ ಇತ್ಯಾದಿಗಳಲ್ಲಿ ತುಂಬುರು ನಾರದ, ಭರತ, ಕಂಬಲಾಚಾರ್ಯ ಇವರನ್ನೆಲ್ಲಾ ಮೀರಿಸಿದ್ದನೆಂದೂ ಪ್ರಶಂಸಿಸಲಾಗಿದೆ. ಗಂಗ ಮನೆತನದ ಪ್ರಖ್ಯಾತ ಅರಸರಲ್ಲಿ ಈತ ಮೊದಲಿಗ.

ದುರ್ವಿನೀತನ ಅನಂತರ ಅಕ್ರಮವಾಗಿ ಅವನ ಇಬ್ಬರು ಮಕ್ಕಳಾದ ಮುಷ್ಕರ ಮತ್ತು ಪೊಲವೀರರು ರಾಜ್ಯವಾಳಿದರು. ಇವರಿಗೂ ಕಿರಿಯನಾದ ಇನ್ನೊಬ್ಬ ಸೋದರನಿದ್ದಂತೆ ತೋರುತ್ತದೆ. ಆದರೆ ಅವನ ಹೆಸರು ಗೊತ್ತಿಲ್ಲ; ಅವನು ರಾಜ್ಯವಾಳಲೂ ಇಲ್ಲ. ಮುಷ್ಕರ ಸಿಂಧು ರಾಜನ ಮಗಳನ್ನು ಮದುವೆಯಾಗಿದ್ದ ಪೊಲವೀರ ಕಾಡುವೆಟ್ಟಿ ಹಾಗೂ ವಲ್ಲವರಸರ ಸಹಾಯದಿಂದ ರಾಜ್ಯವನ್ನು ಪಡೆದನೆಂದು ಒಂದು ಶಾಸನ ಸೂಚಿಸಿದೆ. ಆದರೆ ಇವರಿಬ್ಬರು ಯಾರು ಎಂದು ಹೇಳಲು ಸಾಧ್ಯವಾಗಿಲ್ಲ. ಬಹುಶಃ ಪಲ್ಲವ ಹಾಗೂ ಚಾಳುಕ್ಯವಂಶದ ಅರಸರಾಗಿರಬಹುದು. ಪೊಲವೀರನ ಅನಂತರ ಮುಷ್ಕರನ ಮಗನಾದ ಶ್ರೀವಿಕ್ರಮ 629 – 654ರ ತನಕ ಅವನ ಮಗ ಭೂವಿಕ್ರಮ 654 – 679ರ ತನಕ ಆಳಿದರು. ಶ್ರೀವಲ್ಲಭ, ಮನೋವಿನೀತ ಎಂಬ ಬಿರುದುಗಳನ್ನು ಪಡೆದಿದ್ದ ಭೂವಿಕ್ರಮ ವಿಳಂದೆ ಎಂಬಲ್ಲಿ ನಡೆದ ಘೋರಕದನದಲ್ಲಿ ಪಲ್ಲವರನ್ನು ಸೋಲಿಸಿದನೆಂದು ಹೆಬ್ಬೂರು ಶಾಸನದಲ್ಲಿ ಹೇಳಿದೆ. ಈ ವೇಳೆಗೆ ಗಂಗರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು, ಆಗ ಪ್ರಬಲರಾಗಿದ್ದ ಚಾಳುಕ್ಯರ ಅಧೀನರಾಗಿದ್ದು, ಬಹುಶಃ ಚಾಳುಕ್ಯ 1ನೆಯ ವಿಕ್ರಮಾದಿತ್ಯ ಪಲ್ಲವರೊಡನೆ ನಡೆಸಿದ ಕದನಗಳಲ್ಲೊಂದರಲ್ಲಿ ಗಂಗರ ಈ ಅರಸ ಪ್ರಮುಖ ಪಾತ್ರವಹಿಸಿದ್ದಿರಬಹುದೆಂದು ಊಹಿಸಲಾಗಿದೆ.

ಭೂವಿಕ್ರಮ ಬಳಿಕ ಅವನ ತಮ್ಮನಾದ 1ನೆಯ ಶಿವಮಾರ ಪಟ್ಟಕ್ಕೆ ಬಂದ. ಇವನ ಹಳ್ಳಿಗೇರಿ ತಾಮ್ರಶಾಸನದ ಕಾಲ ಶಕ 635. ಇದು ಇವನ ಆಳ್ವಿಕೆಯ 34ನೆಯ ವರ್ಷವೆಂದು ಹೇಳಿರುವ ಕಾರಣ ಇವನು ಶಕ 601ರಲ್ಲಿ, ಎಂದರೆ ಪ್ರ.ಶ. 679ರಲ್ಲಿ, ಪಟ್ಟಕ್ಕೆ ಬಂದ. ಲಕ್ಷ್ಮೀ ಈತನನ್ನು ಒಲಿದುಬಂದಳೆಂಬ ಹೇಳಿಕೆಯನ್ನು ಗಮನಿಸಿದರೆ ಬಹುಶಃ ಭೂವಿಕ್ರಮನಿಗೆ ಮಕ್ಕಳಿಲ್ಲದ್ದರಿಂದ ರಾಜ್ಯ ಇವನಿಗೆ ದಕ್ಕಿತೆಂದು ಊಹಿಸಬಹುದು. ಪಲ್ಲವ ಯುವರಾಜನ ಮಕ್ಕಳಾದ ಪಲ್ಲವಾಧಿರಾಜ ಜಯ ಮತ್ತು ವೃದ್ಧ ಎಂಬವನು, ಪಲ್ಲವೇಳಾರಸ ಮತ್ತು ತುಪ್ಪುರಾಳರಸರು ಈತನ ಮಾಂಡಲಿಕರಾಗಿದ್ದರು. ಕೊಂಗಲ್ನಾಡು 2000, ತೊಜೆನಾಡು 500 ಮತ್ತು ಮಲೆ 1000 ಪ್ರಾಂತ್ಯಗಳನ್ನು ಇನ್ನೊಬ್ಬ ಮಾಂಡಲಿಕನಾದ ಎಳೆಗಂಗ ಆಳುತ್ತಿದ್ದ. ಶಿವಮಾರನಿಗೆ ಶಿಷ್ಟಪ್ರಿಯ, ನವಕಾಮ, ಅವನಿಮಹೇಂದ್ರ, ಸ್ಥಿರವಿನೀತ, ದೇವರಾಜ ಮೊದಲಾದ ಬಿರುದುಗಳಿದ್ದವು.

ಶಿವಮಾರನ ಅನಂತರ ಅವನ ಮೊಮ್ಮಗನಾದ ಶ್ರೀಪುರುಷ ರಾಜನಾದ. ಶಿವಮಾರನ ಮಗನೂ ಶ್ರೀಪುರುಷನ ತಂದೆಯೂ ಆಗಿದ್ದ ರಾಜಕುಮಾರ ತನ್ನ ತಂದೆ ಜೀವಿಸಿದ್ದಾಗಲೇ ಮೃತಪಟ್ಟಿರಬಹುದು. 725 – 788ರ ತನಕ 60 ವರ್ಷಗಳ ಕಾಲ ಆಳಿದ ಶ್ರೀಪುರುಷನಿಗೆ ಮುತ್ತರಸ ಎಂಬ ಇನ್ನೊಂದು ಹೆಸರೂ ರಾಜಕೇಸರಿ ಭೀಮಕೋಪ, ರಣಭಾಜನ ಇತ್ಯಾದಿ ಬಿರುದುಗಳೂ ಇದ್ದುವು. ಶ್ರೀಪುರುಷನ ಆಳ್ವಿಕೆಯ ಪ್ರಾರಂಭದಲ್ಲಿ ಪಲ್ಲವರಿಗೂ ಗಂಗರಿಗೂ ಘೋರಕದನಗಳು ನಡೆದುವು. ಪಲ್ಲವ ಅರಸನಾದ ನಂದಿವರ್ಮ ಪಲ್ಲವಮಲ್ಲ ಇವನ ಸಮಕಾಲೀನನಾಗಿದ್ದು, ಇವನ ತಾಮ್ರಶಾಸನವೊಂದರಲ್ಲಿ ಉಗ್ರೋದಯವೆಂಬ ರತ್ನ ಖಚಿತ ಕಂಠಾಭರಣವನ್ನು ಇವನು ಗಂಗರಾಜನಿಂದ ಕಿತ್ತುಕೊಂಡನೆಂದು ಹೇಳಿದೆ. ಇವರು ಗಂಗರಾಜ್ಯದ ಕುವಳಾಲದವರೆಗೂ ಮುನ್ನಡೆದಿದ್ದರೆಂದು ಆ ಪ್ರದೇಶದಲ್ಲಿ ದೊರೆತ ವೀರಗಲ್ಲುಗಳಿಂದ ಖಚಿತ ಪಡುತ್ತದೆ. ಆದರೆ ಶ್ರೀಪುರುಷನ ಆಳ್ವಿಕೆಯ ಕೊನೆಯ ವರೆಗೂ ಈ ಪ್ರದೇಶಗಳು ಅವನ ರಾಜ್ಯದ ಭಾಗಗಳಾಗಿದ್ದುವೆಂಬುದು ಅವನ ಶಾಸನಗಳಿಂದ ತಿಳಿದಿದೆಯಾದ ಕಾರಣ, ಹೀಗೆ ದಂಡೆತ್ತಿಬಂದ ಪಲ್ಲವರನ್ನು ಶ್ರೀಪುರುಷ ಧೈರ್ಯದಿಂದ ಎದುರಿಸಿ, ಉಗ್ರವಾದ ಕದನಗಳಲ್ಲಿ ಸೋಲಿಸಿದನೆಂಬುದು ಸ್ಪಷ್ಟವಾಗುತ್ತದೆ. ಇದೇ ಸಮಯದಲ್ಲಿ ಚಾಳುಕ್ಯ ಇಮ್ಮಡಿ ವಿಕ್ರಮಾದಿತ್ಯನೂ ಪಲ್ಲವನಂದಿವರ್ಮನನ್ನು ಸೋಲಿಸಿದ. ಆದರೆ ಇವರಿಬ್ಬರೂ ಕೂಡಿ ಪಲ್ಲವರನ್ನು ಸೋಲಿಸಿದರೋ ಅಥವಾ ಪ್ರತ್ಯೇಕವಾಗಿ ವಿಜಯವನ್ನು ಸಾಧಿಸಿದರೋ ಹೇಳಲಾಗುವುದಿಲ್ಲ.

757ರ ವೇಳೆಗೆ ಬಾದಾಮಿ ಚಾಳುಕ್ಯರ ರಾಜ್ಯ ರಾಷ್ಟ್ರಕೂಟದ ವಶವಾಯಿತು. ಗಂಗ ಶ್ರೀಪುರುಷ ತನ್ನ ಸಾರ್ವಭೌಮತ್ವವನ್ನು ಒಪ್ಪುವನೆಂದು ರಾಷ್ಟ್ರಕೂಟ ಕೃಷ್ಣ ಆಶಿಸಿದ್ದ. ಆದರೆ ಶ್ರೀಪುರುಷ ರಾಷ್ಟ್ರಕೂಟರ ಅಸ್ತಿತ್ವವನ್ನೇ ಗಮನಕ್ಕೆ ತಂದುಕೊಳ್ಳಲಿಲ್ಲ. ಆದ್ದರಿಂದ ಇವರಿಬ್ಬರ ನಡುವೆ ಕದನಗಳಾದುವು. ಕೃಷ್ಣ ಮಣ್ಣೆಯಲ್ಲಿ ಸೈನ್ಯಸಮೇತ ಬೀಡುಬಿಟ್ಟಿದ್ದ (768). ಆದರೆ ಪಿಂಚನೂರು, ಬಾಗೆಯವಾರು ಮುಂತಾದ ಕಡೆಗಳಲ್ಲಿ ನಡೆದ ಕದನಗಳಲ್ಲಿ ಶ್ರೀಪುರುಷ ಶತ್ರುಗಳನ್ನು ಸೋಲಿಸಿ ಹೊರದೂಡಿದನಲ್ಲದೆ ಅವರನ್ನು ಬಳ್ಳಾರಿ ಜಿಲ್ಲೆಯ ಕಂಪಲಿಯ ವರಗೂ ಅಟ್ಟಿಸಿಕೊಂಡು ಹೋದ. ಆದರೂ ಗಂಗರಾಜ್ಯದ ಉತ್ತರದ ಸ್ವಲ್ಪ ಭಾಗ ಕೆಲವು ಕಾಲ ಶ್ರೀಪುರುಷನ ಕೈತಪ್ಪಿತ್ತು.

ಶ್ರೀಪುರುಷನ ಆಳ್ವಿಕೆಯ ಕಾಲಕ್ಕೆ ಗಂಗರಾಜ್ಯ ಷಣ್ಣವತಿ ಸಹಸ್ರ (96,000) ಎನಿಸಿಕೊಂಡಿತ್ತು. ಇಷ್ಟು ವಿಸ್ತಾರವಾದ ರಾಜ್ಯವನ್ನು ಶ್ರೀರಾಜ್ಯವೆಂದೂ ಕರೆಯಲಾಗಿದೆ. ನೊಳಂಬರು ಗಂಗರ ಸಾಮಂತರಾಗಿದ್ದರು. ಆದರೆ ಇವರು ಸ್ವಲ್ಪಕಾಲ ರಾಷ್ಟ್ರಕೂಟರ ಪ್ರಭುತ್ವವನ್ನು ಒಪ್ಪಿಕೊಳ್ಳಬೇಕಾಯಿತು. ಕೃಷ್ಣನ ಅನಂತರ ಅವನ ಮಕ್ಕಳಾದ ಇಮ್ಮಡಿ ಗೋವಿಂದ ಮತ್ತು ಧ್ರುವರ ನಡುವಣ ಕಲಹಗಳ ಸಮಯದಲ್ಲಿ ಇವರು ಪುನಃ ಗಂಗರ ಪಕ್ಷವನ್ನೇ ಸೇರಿದರು. ಈ ಮನೆತನದ ನೊಳಂಬ ಮಾರವೆಯನ್ನು ಶ್ರೀಪುರುಷ ವಿವಾಹವಾಗಿದ್ದ. ಈಕೆಯಲ್ಲದೆ ವಿಜಯಮಹಾದೇವಿ ಮತ್ತು ಇನ್ನೊಬ್ಬಳು ಇವನ ಪತ್ನಿಯರು. ದುಗ್ಗಮಾರ ಎಱೆಯಪ್ಪ, ಇಮ್ಮಡಿ ಶಿವಮಾರ ಹಾಗೂ ವಿಜಯಾದಿತ್ಯರೆಂಬ ಮೂವರು ಮಕ್ಕಳಿದ್ದರು. ಶ್ರೀಪುರುಷ ಗಜಶಾಸ್ತ್ರವೆಂಬ ಗ್ರಂಥದ ಕರ್ತೃವೆಂದು ಅನಂತರದ ಶಾಸನಗಳಲ್ಲಿ ಹೇಳಿದೆ. ಭೇದಭಾವನೆಯಿಲ್ಲದೆ ಬಸದಿಗಳಿಗೂ ದೇವಾಲಯಗಳಿಗೂ ಈ ಅರಸ ದತ್ತಿಗಳನ್ನು ನೀಡಿದ. ಬದುಕಿರುವ ವರೆಗೂ ರಾಷ್ಟ್ರಕೂಟರು ಗಂಗರಾಜ್ಯವನ್ನು ಆಕ್ರಮಿಸಲು ಅಶಕ್ತರಾದರು.

2ನೆಯ ಶಿವಮಾರ ಪಟ್ಟಕ್ಕೆ ಬಂದಕೂಡಲೇ ರಾಷ್ಟ್ರಕೂಟರು ಪುನಃ ಗಂಗರಾಜ್ಯವನ್ನು ಮುತ್ತಿದರು. ಮುದುಗುಂದೂರಿನ ಕದನದಲ್ಲಿ ಶಿವಮಾರ ಸೋತು ಶತ್ರುಗಳಿಗೆ ಸೆರೆಸಿಕ್ಕಿದ. ಗಂಗರಾಜ್ಯದಲ್ಲಿ ಧ್ರುವನ ಮಗನಾದ ಕಂಬಯ್ಯ ಸ್ಥಾಪಿತನಾದ. ಆದರೆ ಧ್ರುವನ ಮರಣಾಂತರ ಕಂಬಯ್ಯನಿಗೂ ಮುಮ್ಮಡಿ ಗೋವಿಂದನಿಗೂ ಸಿಂಹಾಸನಕ್ಕಾಗಿ ನಡೆದ ಅಂತಃಕಲಹಗಳ ಪರಿಣಾಮವಾಗಿ ಶಿವಮಾರ ಸೆರೆಯಿಂದ ಮುಕ್ತನಾಗಿ ಸ್ವದೇಶಕ್ಕೆ ಹಿಂದಿರುಗಿನಾದರೂ 3ನೆಯ ಗೋವಿಂದ ಆಳತೊಡಗಿದಾಗ ಪುನಃ ಬಂಧಿತನಾದ. ಸ್ವಲ್ಪಕಾಲ ಅವನ ಮಗ ಮಾರಸಿಂಹ ಗಂಗಮಂಡಲದ ಅಧಿಪತಿಯಾದನಾದರೂ ಅನಂತರ ಅವನ ಗತಿ ಏನಾಯಿತೆಂಬುದು ತಿಳಿಯದು. ಗೋವಿಂದನ ಆಳ್ವಿಕೆಯ ವರ್ಷಗಳಲ್ಲಿ ಬಹಳ ಕಾಲವನ್ನು ಶಿವಮಾರ ಸೆರೆಮನೆಯಲ್ಲೇ ಕಳೆದ. ಆದರೆ ಗೋವಿಂದನ ಕೊನೆಯ ವರ್ಷಗಳಲ್ಲಿ ಸು. 813ರಲ್ಲಿ ಶಿವಮಾರ ಗಂಗಮಂಡಲದ ಅಧಿಪತಿಯಾಗಿ ಪಲ್ಲವ ನಂದಿವರ್ಮನಿಂದ ಅಭಿಷಕ್ತನಾದ. ಆದರೆ ರಾಷ್ಟ್ರಕೂಟರ ಸಾಮಂತನೆಂದೇ ಈ ಪದವಿಯನ್ನು ಅವನು ಪಡೆಯಬೇಕಾಯಿತು. ಗೋವಿಂದನ ಬಳಿಕ 1ನೆಯ ಅಮೋಘವರ್ಷನ ಕಾಲದಲ್ಲಿ ರಾಜ್ಯದಲ್ಲಿ ತಲೆದೋರಿದ್ದ ಅಶಾಂತಿಯುತ ವಾತಾವರಣ ಉಪಯೋಗ ಪಡೆದು ಸ್ವತಂತ್ರನಾಗಲು ಹವಣಿಸಿದಾಗ ರಾಷ್ಟ್ರಕೂಟರ ಸೈನ್ಯ ಅವನ ವಿರುದ್ಧ ಬಂದು, ಕಾಗಿಮೊಗೆಯೂರಿನಲ್ಲಿ (ತುಮಕೂರು ಜಿಲ್ಲೆ) ನಡೆದ ಕದನದಲ್ಲಿ ವೀರಮರಣವನ್ನಪ್ಪಿದ. ಜೀವಮಾನವಿಡೀ ಸಂಕಟಗಳನ್ನೆದುರಿಸಿದರೂ ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ಇವನು ಮಾಡಿದ ಸಾಹಸಗಳೆಲ್ಲ ವಿಫಲವಾದವು. ಶಿವಮಾರನ ಬಳಿಕ ಗಂಗಮಂಡಲದ ಆಧಿಪತ್ಯವನ್ನು ಅವನ ಸೋದರನಾದ ವಿಜಯಾದಿತ್ಯನಿಗೆ ಕೊಡಲಾಯಿತಾದರೂ ಅವನು ಅದನ್ನು ತನ್ನ ಮಗನಾದ ರಾಜಮಲ್ಲನಿಗೆ ವಹಿಸಿಕೊಟ್ಟ. ಈ ವೇಳೆಗೆ ರಾಜ್ಯದ ಸ್ವಲ್ಪಭಾಗ ರಾಷ್ಟ್ರಕೂಟದ ಸೇನಾನಿಯಾದ ಬಂಕೇಶನ ಅಧೀನದಲ್ಲಿ ಉಳಿಯಿತು. ಇವನೂ ಇವನ ಬಳಿಕ ಆಳಿದ ಇವನ ಮಗ ನೀತಿಮಾರ್ಗ ಎಱೆಗಂಗನೂ ಸ್ವಾತಂತ್ರ್ಯಕ್ಕಾಗಿ ಯತ್ನಿಸಿದ ರಾದರೂ ಯಶಸ್ವಿಗಳಾಗಲಿಲ್ಲ. ಈ ಪ್ರಯತ್ನಗಳ ಅಂಗವಾಗಿ ರಾಜಮಲ್ಲ ತನ್ನ ಮಗಳಾದ ಜಾಯಬ್ಬೆಯನ್ನು ನೊಳಂಬಕುಲದ ಪೊಳಲ್ಚೋರನಿಗಿತ್ತು ವಿವಾಹ ಮಾಡಿಕೊಟ್ಟ. ಇವರ ವಿಧೇಯತೆಯನ್ನು ಶಂಕಿಸಿದ ಅಮೋಘವರ್ಷ ಇವರ ವಿರುದ್ಧ ಬಂಕೇಶನನ್ನು ದೊಡ್ಡ ಸೈನ್ಯದೊಡನೆ ಕಳುಹಿಸಿದ. ರಾಜಾಜೂಮಡು ಎಂಬಲ್ಲಿ ಭೀಕರ ಕದನವಾಯಿತಾದರೂ ಪರಿಣಾಮ ಇಬ್ಬರಿಗೂ ಹಿತಕರವಾಗಿರಲಿಲ್ಲ. ದಂಡಿಸಿ ಗೆಲ್ಲುವ

## ತಲಕಾಡಿನ ಗಂಗರು


ಕೊಂಗುಣಿವರ್ಮ (ಸು.350–370)
ಮಾಧವ I (ಸು.370–390)
ಅರಿವರ್ಮ/ಅಯ್ಯವರ್ಮ/ಆರ್ಯವರ್ಮ/ ಕೃಷ್ಣವರ್ಮ (ಸು.420–460)
ಮಾಧವ II ಸಿಂಹವರ್ಮ
ವಿಷ್ಣುಗೋಪ (ಸು.460–)
ವೀರವರ್ಮ (ಸು.420–40)
ಮಾಧವ III
ಅವಿನೀತ (ಸು.510–560)
ದುರ್ವಿನೀತ (ಸು.560–600)
ಮಗ(ಹೆಸರು ತಿಳಿದಿಲ್ಲ)
ಮುಷ್ಕರ (529–579)
ಪೊಲವೀರ (604–629)
ಶ್ರೀವಿಕ್ರಮ
ಭೂವಿಕ್ರಮ (ಸು.619–69)
ಶಿವಮಾರ I (ಸು.679–725)
ಮಗನ ಹೆಸರು ತಿಳಿದಿಲ್ಲ
ಶ್ರೀಪುರುಷ (ಸು.725–88)
ದುಗ್ಗಮಾರ
ಶಿವಮಾರ II (ಸು.789–802)
ವಿಜಯಾದಿತ್ಯ
ರಾಚಮಲ್ಲ I (ಸು.818–53)
ಮಾರಸಿಂಹ I (ಸು.802–)
ಪೃಥ್ವೀಪತಿ I
ನೀತಿಮಾರ್ಗ ಎಟೆಗಂಗ (853–70)
ನನ್ನಿಯ ಗಂಗ
ಪೃಥ್ವಿಯ ಗಂಗ II
ರಾಚಮಲ್ಲ II (870–919)
ಬೂತುಗ I
ನೀತಿಮಾರ್ಗII (ಸು.886–920)
ನರಸಿಂಹ (ಸು.920–33)
ರಾಚಮಲ್ಲ III (ಸು.933–36)
ಬೂತುಗ II (ಸು.936–63)
ಮರುಳ (ಸು.961–63)
ಮಾರಸಿಂಹ II (ಸು.963–77)
ನೀತಿಮಾರ್ಗಗೋವಿಂದರಸ
ರಾಚಮಲ್ಲ IV (977–99)

ಬದಲು ಒಲವಿನಿಂದ ಇವನನ್ನು ತನ್ನ ಅಧೀನಕ್ಕೆ ತರಲು ರಾಷ್ಟ್ರಕೂಟ ಅರಸ ತನ್ನ ಮಗಳಾದ ಚಂದ್ರೋಬಲಬ್ಬೆಯನ್ನು ಎಱೆಗಂಗನ ಕಿರಿಯ ಮಗನಾದ ಒಂದನೆಯ ಬೂತುಗನಿಗೆ ಮದುವೆ ಮಾಡಿಕೊಟ್ಟ.

ಇಮ್ಮಡಿ ಶಿವಮಾರನಿಗೆ ಪೃಥ್ವೀಪತಿಯೆಂಬ ಮಗನಿದ್ದ. ಶಿವಮಾರನ ಬಳಿಕ ನ್ಯಾಯವಾಗಿ ಅವನು ಅಧಿಕಾರಕ್ಕೆ ಬರಬೇಕಿತ್ತು. ಆದರೆ ಅಲ್ಪವಯಸ್ಕನೆಂಬ ಕಾರಣದಿಂದ ಅದು ಅವನಿಗೆ ದಕ್ಕಲಿಲ್ಲ. ಅವನ ಮಗನಾದ ಗಂಗನೆಂಬುವನು ರಾಜಮಲ್ಲನ ವಿರುದ್ಧ ಬಂಡೆದ್ದ. ನನ್ನಿಯಗಂಗನ ಸೋದರಿಯಾದ ಕುಂದವ್ವೆ ಬಾಣವಿದ್ಯಾಧರನ ಪತ್ನಿಯಾಗಿದ್ದಳು. ಅವರಿಗೆ ಜನಿಸಿದವನೇ ಪ್ರಭುಮೇರುವಿಜಯಾದಿತ್ಯ. ಬಾಣಕುಲದ ಈ ಅರಸ ನನ್ನಿಯಗಂಗನಿಗೆ ಬೆಂಬಲವಾಗಿ ನಿಂತದ್ದು ಆಶ್ಚರ್ಯವೇನಿಲ್ಲ. ಈ ವೇಳೆಗೆ ಗಂಗರು ಹಾಗೂ ಮೈದುಂಬರ ಸಹಾಯಪಡೆದ ನನ್ನಿಯಗಂಗ ಪುಲಿನಾಡನ್ನು ನೊಳಂಬರಿಂದ ಕಸಿದು, ತಲಕಾಡಿನಲ್ಲಿ ಮಣ್ಣೆ 200 ಮತ್ತು ಗಂಗ 6000 ಪ್ರಾಂತ್ಯಗಳನ್ನು ಗೆದ್ದು, ತಲಕಾಡನ್ನು ಸಹ ಅಕ್ರಮಿಸಿದ. ಆದರೆ ಸೋದೆಮಡಿ ಎಂಬಲ್ಲಿ ನಡೆದ ಘೋರ ಕದನದಲ್ಲಿ ನೊಳಂಬ ಮಹೇಂದ್ರ ಈ ಮೂರು ಮನೆತನಗಳ ಸೈನ್ಯವನ್ನು ಸೋಲಿಸಿದ. ನನ್ನಿಯ ಗಂಗನೂ ಅವನ ಸಹಾಯಕರೂ ಓಡಿಹೋದರು. ಅನಂತರ ಆ ಗಂಗನ ಗತಿ ಏನಾಯಿತು ಎಂಬುದು ತಿಳಿಯದು. ಅವನ ಮಗನಾದ ಇಮ್ಮಡಿ ಪೃಥ್ವೀಪತಿ ಚೋಳಪರಾಂತಕನಿಂದ ಸೆಂಬಿಯ ಮಹಾಬಲಿ ಬಾಣರಸ ಎಂಬ ಬಿರುದನ್ನು ಪಡೆದನೆಂದು ತಿಳಿದಿದೆ.

ಹೀಗೆ ರಾಜಮಲ್ಲನಿಗೆ ಬೆಂಬಲವಾಗಿ ನಿಂತು ಅವನ ರಾಜ್ಯವನ್ನು ಉಳಿಸಿಕೊಟ್ಟ ಮಹೇಂದ್ರ ಕ್ರಮೇಣ ಪ್ರಬಲನಾಗಿ ಅವನ ವಿರುದ್ಧವಾಗಿ ಮಲೆತು ನಿಂತ. ರಾಜಮಲ್ಲನ ಸೋದರನಾದ ಬೂತುಗ ಅಣ್ಣನ ನೆರವಿಗೆ ಬಂದು ಹಿರಿಯೂರು, ಸೂಳೂರು, ಸಾಮಿಯೂರುಗಳಲ್ಲಿ ನಡೆದ ಕದನಗಳಲ್ಲಿ ಮಹೇಂದ್ರನನ್ನು ಸೋಲಿಸಿದ. ಆದರೂ ಗಂಗ 96000 ಪ್ರಾಂತ್ಯದ ಅಧಿಕಾರವನ್ನು ಮಹೇಂದ್ರ ಸುಲಭವಾಗಿ ಬಿಡಲಿಲ್ಲ. ಬೂತುಗನ ಅನಂತರ ಅವನ ಮಗ ಎಱೆಗಂಗ ಅಥವಾ ಎಱೆಯಪ್ಪ ಮಹೇಂದ್ರನನ್ನು ಸೋಲಿಸಿ ಕೊಂದ. ಇದರ ಅನಂತರ ನೊಳಂಬರು ಪುನಃ ಗಂಗರಿಗೆ ನಿಷ್ಠೆಯನ್ನು ತೋರಿಸಿ ಅವರ ಸಾಮಂತರೆನಿಸಿಕೊಂಡರು. ಎಱೆಯಪ್ಪನಿಗೆ ಇದರ ಫಲವಾಗಿ ಮಹೇಂದ್ರಾಂತಕನೆಂಬ ಬಿರುದು ಸಂದಿತು. ಈತ ಮಕ್ಕಳಿಲ್ಲದ ದೊಡ್ಡಪ್ಪನೊಡನೆ 886 – 919ರ ತನಕ ಜೊತೆಯಾಗಿ ಆಳಿದ. ಇವನ ಕಾಲದಲ್ಲಿ ಪೂರ್ವ ಚಾಳುಕ್ಯ ಮನೆತನದ ಅಮ್ಮರಾಜ ನೊಳಂಬರ ವಿರುದ್ಧ ದಂಡೆತ್ತಿ ಬಂದಾಗ ಇವರು ನೊಳಂಬರಿಗೆ ಸಹಾಯ ಮಾಡಬೇಕಾಯಿತು. ಇವನ ಬಳಿಕ ನರಸಿಂಹ ಮತ್ತು ಮುಮ್ಮಡಿ ರಾಚಮಲ್ಲರು ಆಳಿದರು. ಇವರು ನೊಳಂಬರ ಹಾಗೂ ರಾಷ್ಟ್ರಕೂಟರ ವಿರುದ್ಧ ಕೆಲವು ಬಾರಿ ಹೋರಾಡಿದರು. ರಾಚಮಲ್ಲನ ತಮ್ಮನಾದ ಇಮ್ಮಡಿ ಬೂತುಗ ಗಂಗ ಸಿಂಹಾಸನವನ್ನೇರಬಯಸಿ ಅದಕ್ಕಾಗಿ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಮಿತ್ರನಾಗಿ ಅವನ ಕದನಗಳಲ್ಲಿ ನೆರವು ನೀಡಿದ. ಕೃಷ್ಣನ ಸೋದರಿಯಾದ ರೇವಕನಿಮ್ಮಡಿಯನ್ನು ಸು. 936ರಲ್ಲಿ ಮದುವೆಯಾದ. ಆಗ ಇವನಿಗೆ ಬೆಳ್ವಲ ಪುರಿಗೆಱೆನಾಡುಗಳು, ಬಾಗೆನಾಡು 70, ಕಿಸುಕಾಡು 70 ಪ್ರಾಂತ್ಯಗಳನ್ನು ಬಳುವಳಿಯಾಗಿ ಕೊಡಲಾಗಿತ್ತು. ಕೃಷ್ಣನಿಗೆ ಸಹಾಯಕನಾಗಿ ಅವನು ಚೋಳರಾಜಾದಿತ್ಯನೊಡನೆ ಕಾದಿದ ತಕ್ಕೋಲಂ ಕದನದಲ್ಲಿ ಪ್ರಮುಖಪಾತ್ರ ವಹಿಸಿ ರಾಜಾದಿತ್ಯನ ಅಳಿವಿಗೆ ಕಾರಣನಾದ (847-48). ಬನವಾಸಿ 12000 ಪ್ರಾಂತ್ಯದ ಆಧಿಪತ್ಯವನ್ನು ಸಹ ಬೂತುಗನಿಗೆ ಕೃಷ್ಣ ವಹಿಸಿದ. ಈ ವೇಳೆಗೆ ಬೂತುಗ ತನ್ನ ಸ್ವಾಮಿಯ ನೆರವಿನಿಂದ ಸೋದರರನ್ನು ಸೋಲಿಸಿ ಗಂಗರಾಜ್ಯವನ್ನು ಸಹ ತನ್ನದಾಗಿ ಮಾಡಿಕೊಂಡಿದ್ದ. ಇವನ ಕಾಲದಿಂದಾರಂಭಿಸಿ ಗಂಗರು ರಾಷ್ಟ್ರಕೂಟರ ಮೆಚ್ಚಿನ ಸಾಮಂತರಾಗಿ ಮುಂದುವರಿದರು. ಸತ್ಯವಾಕ್ಯ, ಗಂಗಗಾಂಗೇಯ, ಗಂಗನಾರಾಯಣ, ಜಯದುತ್ತರಂಗ–ಇವೆಲ್ಲ ಬೂತುಗನ ಬಿರುದುಗಳು. ಇವನ ಪತ್ನಿ ರೇವಕನಿಮ್ಮಡಿ ಚಾಗವೆಡಂಗಿ ಎಂದು ಪ್ರಸಿದ್ಧಳಾಗಿದ್ದಳು. ಈಕೆಯ ಮಗ ಮರುಳ. ಬೂತುಗನ ಇನ್ನೊಬ್ಬ ಹೆಂಡತಿಯಾದ ಕಲ್ಲಬ್ಬರಸಿ ಇಮ್ಮಡಿ ಮಾರಸಿಂಹನ ತಾಯಿ.

ಬೂತುಗನ ಬಳಿಕ 961ರಲ್ಲಿ ಮರುಳ ಅಧಿಕಾರಕ್ಕೆ ಬಂದ. ಇವನು ರಾಷ್ಟ್ರಕೂಟ ಕೃಷ್ಣನ ಮಗಳನ್ನು ಮದುವೆಯಾಗಿದ್ದ. ಇವನು ಪರಮ ಜಿನಭಕ್ತ, ಗಂಗಮಾರ್ತಂಡ. ಗಂಗಚಕ್ರಾಯುಧ, ಕೀರ್ತಿಮನೋಭವ ಇತ್ಯಾದಿ ಬಿರುದಾಂಕಿತನಾಗಿದ್ದ ಈತ ಕೇವಲ ಎರಡು ವರ್ಷಗಳ ಕಾಲ ಆಳಿದ. ಅನಂತರ ಇವನ ಸೋದರನಾದ ಇಮ್ಮಡಿ ಮಾರಸಿಂಹ ಅಧಿಕಾರಾರೂಢನಾದ. ಇವರೆಲ್ಲ ರಾಷ್ಟ್ರಕೂಟರಿಗೆ ನಿಷ್ಠಾವಂತರಾದ ಸಾಮಂತರಾಗಿದ್ದ ಕಾರಣ ಇವರ ಇತಿಹಾಸ ರಾಷ್ಟ್ರಕೂಟರ ಇತಿಹಾಸದ ಒಂದು ಭಾಗವಿದ್ದಂತಾಗುತ್ತದೆ. ಅಧಿಕಾರಕ್ಕೆ ಬಂದಾಗ ಕೃಷ್ಣ ದಕ್ಷಿಣ ಭಾರತದಲ್ಲಿ ಅತಿಪರಾಕ್ರಮಶಾಲಿಯಾದ ಅರಸ ಎನಿಸಿಕೊಂಡಿದ್ದ. ಉತ್ತರದಲ್ಲಿ ಇವನು ನಡೆಸಿದ ಕದನಗಳಲ್ಲಿ ಮಾರಸಿಂಹ ಪ್ರಮುಖ ಪಾತ್ರವಹಿಸಿ ಗೂರ್ಜರಾಧಿರಾಜನೆನಿಸಿಕೊಂಡ. ಅನೇಕ ಕಾಳಗಗಳಲ್ಲಿ ಹೋರಾಡಿ ಶತ್ರುಗಳನ್ನು ಸದೆಬಡಿದ. 967ರಲ್ಲಿ ಕೃಷ್ಣನ ನಿಧನದ ಬಳಿಕ ರಾಷ್ಟ್ರಕೂಟರಾಜ್ಯ ಅವನತಿಯ ಮಾರ್ಗವನ್ನು ಹಿಡಿದಾಗ, ಅದನ್ನು ಉಳಿಸಲು ಬಹಳ ಶ್ರಮಿಸಿದ. ಖೊಟ್ಟಿಗನನ್ನು ಸೋಲಿಸಿ ಮಾನ್ಯಖೇಟವನ್ನು ಆಕ್ರಮಿಸಿದ್ದ ಪರಮಾರ ಸೀಯಕನೊಡನೆ ಶ್ರಮದಿಂದ ಹೋರಾಡಿ ಅವನನ್ನು ಓಡಿಸಿದ. ಆದರೂ ರಾಷ್ಟ್ರಕೂಟ ರಾಜ್ಯ ಚಾಳುಕ್ಯ ಇಮ್ಮಡಿ ತೈಲಪನ ಆಕ್ರಮಣವನ್ನು ತಾಳಲಾರದೆ ಅಸ್ತಂಗತವಾದಾಗ ಕೃಷ್ಣನ ಮೊಮ್ಮಗನೂ ತನ್ನ ಸೋದರಳಿಯನೂ ಆದ ನಾಲ್ವಡಿ ಇಂದ್ರನಿಗೆ ಬೆಂಬಲವಾಗಿ ನಿಂತು ಅವನಿಗೆ ಬಂಕಾಪುರದಲ್ಲಿ ಪಟ್ಟಗಟ್ಟಿದ. ಗೋಣೂರು ಕದನದಲ್ಲಿ ನೊಳಂಬಾಂತಕನೆನಿಸಿಕೊಂಡ. ಇಷ್ಟಾದರೂ ವಿಧಿ ಇವನಿಗೆ ವಿರೋಧವಾಗಿದ್ದು, ಇವನ ಶ್ರಮಗಳು ವ್ಯರ್ಥವಾಗಿ ಮತ್ತೊಮ್ಮೆ ಚಾಳುಕ್ಯ ರಾಜ್ಯ ತಲೆಯೆತ್ತಿತು. ಕೊನೆಗೆ ಹತಾಶನಾದ ಮಾರಸಿಂಹ ಸಲ್ಲೇಖನ ವಿಧಿಯಿಂದ ಶ್ರವಣಬೆಳಗೊಳದಲ್ಲಿ ನಿಧನಹೊಂದಿದ.

ಇವನ ಅನಂತರ ಗಂಗರಲ್ಲಿ ಅಂತಃಕಲಹಗಳುಂಟಾದುವು. ಮಾರಸಿಂಹನ ಮಂತ್ರಿಯಾದ ಚಾಮುಂಡರಾಯ ತನ್ನ ಸ್ವಾಮಿಯ ಮಗನಾದ ರಾಚಮಲ್ಲನ ಪಕ್ಷವನ್ನು ಸೇರಿ ಮಾರಸಿಂಹನ ಸೋದರನಾದ ನೀತಿಮಾರ್ಗ ಗೋವಿಂದರಸನ ವಿರುದ್ಧ ಹೋರಾಡಿದ. ಆದರೆ ಚಾಳುಕ್ಯತೈಲಪ ಅಳಿದುಳಿದ ಗಂಗರನ್ನೆಲ್ಲ ನಿರ್ಮೂಲಮಾಡಲು ನಿಶ್ಚಯಿಸಿ ಇವರಿಬ್ಬರನ್ನು ಅಡಗಿಸಿದ. ಗಂಗವಾಡಿಯ ಉತ್ತರದ ಭಾಗ ತೈಲಪನ ವಶವಾಯಿತು. ರಾಚಮಲ್ಲ ದಕ್ಷಿಣಭಾಗವನ್ನು 999ರ ತನಕ ಆಳಿದ. ಆದರೆ ಆ ವೇಳೆಗ ದಕ್ಷಿಣದಲ್ಲಿ ಚೋಳರು ಪ್ರಬಲರಾಗಿ ಚಾಳುಕ್ಯರ ವಿರುದ್ಧ ದಂಡೆತ್ತಿ ಬರಲು ಸಿದ್ಧರಾಗುತ್ತಿದ್ದರು. ಅದಕ್ಕೆ ನಾಂದಿಯಾಗಿ ಅವರು ಗಂಗರ ಪ್ರಾಂತ್ಯವನ್ನು ತಮ್ಮ ವಶಕ್ಕೆ ತಂದುಕೊಂಡರು. ಗಂಗ ಮನೆತನಕ್ಕೆ ಸೇರಿದ ಕೆಲವರು–ಕಂಚರಸ, ಉದಯಾದಿತ್ಯ ಇತ್ಯಾದಿ–ಅನಂತರ ಚಾಲುಕ್ಯರ ಅಧೀನದಲ್ಲಿ ಅಲ್ಲಲ್ಲಿ ಪ್ರಾಂತ್ಯಾಧಿಕಾರಿಗಳಾದುದನ್ನು ಕಾಣುತ್ತೇವೆ.

ಸು. 7 ಶತಮಾನಗಳ ಕಾಲ ಅಧಿಕಾರದಲ್ಲಿದ್ದ ತಲಕಾಡಿನ ಗಂಗರೆಂದು ಪ್ರಸಿದ್ಧರಾಗಿರುವ ಈ ಮನೆತನದ ಮೊದಲ ಅರಸರು ಸ್ವತಂತ್ರವಾಗಿ ಮೊದಲ ಸು. 300 ವರ್ಷಗಳನ್ನು, ಅನಂತರ ಬಾದಾಮಿಯ ಚಾಳುಕ್ಯರ ಹಾಗೂ ರಾಷ್ಟ್ರಕೂಟರ ಸಾಮಂತರಾಗಿ ಉಳಿದ 400 ವರ್ಷಗಳನ್ನು ಕಳೆದರು. ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಮೊದಲು ಮತ್ತು ಹೊಸದಾಗಿ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರ ಸಾಮಂತಿಕೆಯನ್ನು ಒಪ್ಪುವ ಮೊದಲು, ಇವರು ನಡೆಸಿದ ಹೋರಾಟಗಳು ಪ್ರಶಂಸನೀಯ. ಇದು ಇವರ ಸ್ವಾತಂತ್ರಾಪೇಕ್ಷೆಗೆ ಸ್ವಾಮಿನಿಷ್ಠೆಗೂ ಅಪೂರ್ವನಿದರ್ಶನಗಳಾಗಿವೆ. ಇಮ್ಮಡಿ ಶಿವಮಾರನ ಹಾಗೂ ಇಮ್ಮಡಿ ಮಾರಸಿಂಹರು ಈ ದಿಶೆಯಲ್ಲಿ ನಡೆಸಿದ ಯತ್ನಗಳು ಇತಿಹಾಸ ಪ್ರಸಿದ್ಧವಾಗಿವೆ. ಒಮ್ಮೆ ಒಪ್ಪಿದ ಬಳಿಕ ಸ್ವಾಮಿಗೆ ಯಾವಜ್ಜೀವ ನಿಷ್ಠರಾಗಿದ್ದರು. ಆ ನಿಷ್ಠೆಗಾಗಿ ಪ್ರಾಣತ್ಯಾಗಮಾಡಲು ಸಹ ಇವರು ಹಿಂಜರಿಯಲಿಲ್ಲ. ಈ ಅರಸರು ಜಿನಭಕ್ತರು. ಇವರ ಕಾಲದಲ್ಲಿ ಕರ್ನಾಟಕದಲ್ಲಿ ಗಂಗರ ರಾಜ್ಯದಲ್ಲಿ ಅನೇಕ ಬಸದಿಗಳು ನಿರ್ಮಿತವಾದವು. ಪ್ರಪಂಚದಲ್ಲಿಯೇ ಪ್ರಖ್ಯಾತವಾದ, ಶ್ರವಣಬೆಳಗೊಳದ ಗೊಮ್ಮಟಮೂರ್ತಿಯನ್ನು ಸ್ಥಾಪಿಸಿದ ಕೀರ್ತಿ ಮಾರಸಿಂಹನ ಮಂತ್ರಿಯಾದ ಚಾಮುಂಡರಾಯನಿಗೆ ಸಂದಿದೆ. ಇವರು ಇತರ ಮತಗಳನ್ನು ಹೀಯಾಳಿಸಲಿಲ್ಲ. ಸಮದರ್ಶಿಗಳಂತೆ ಸರ್ವಧರ್ಮಗಳಿಗೂ ಆಶ್ರಯವನ್ನಿತ್ತಿದ್ದರು. ಇವರಲ್ಲಿ ಅನೇಕರು ಸ್ವತಃ ಪಂಡಿತರು, ಕವಿಗಳು. ಸಹಜವಾಗಿಯೇ ಈ ಕಾಲದಲ್ಲಿ ಸಾಹಿತ್ಯ–ಕಲೆಗಳಿಗೆ ಬಹಳ ಪ್ರೋತ್ಸಾಹ ದೊರೆಯಿತು. ಸದಾ ಯುದ್ಧನಿರತರಾದರೂ ಆಡಳಿತವನ್ನು ಕಡೆಗಣಿಸದೆ ಪ್ರಜೆಗಳ ಕ್ಷೇಮಾಭ್ಯುದಯಗಳಿಗಾಗಿ ಅನೇಕ ಕಾರ್ಯಗಳನ್ನು ಮಾಡಿದರು. ನೀರಾವರಿ ಸೌಲಭ್ಯಕ್ಕಾಗಿ ಕೆರೆಗಳನ್ನು ತೋಡಿಸಿದರು. ಬಾವಿಗಳನ್ನು ಅಗೆಸಿದರು. ಕಾಲುವೆಗಳನ್ನು ಕಟ್ಟಿಸಿದರು. ಎಂತಲೇ ಗಂಗರಾಜ್ಯ ಸಮೃದ್ಧವಾಗಿತ್ತು. (ಜಿ.ಆರ್.ಆರ್.; ಜಿ.ಬಿ.ಆರ್.)

**ಗಂಗಾಂಬಿಕೆ :** ಬಸವಣ್ಣನವರ ಧರ್ಮಪತ್ನಿ, ವಚನಕಾರ್ತಿ, ಅನುಭಾವಿ, ಆದರ್ಶಸತಿ ಎನಿಸಿದ ಈಕೆ ಕಳಚುರಿಯ ಬಿಜ್ಜಳನ ಮಹಾಮಂತ್ರಿ ಬಲದೇವನ ಮಗಳು. ರುದ್ರಮುನಿ ಈಕೆಯ ಗುರು. ಮಹಾಮನೆಯ ಮತ್ತು ಅನುಭವ ಮಂಟಪದ ಕಾರ್ಯದಲ್ಲಿ ಬಸವಣ್ಣವನವರಿಗೆ ಈಕೆ ತುಂಬ ನೆರವಾಗಿದ್ದಳು. ಈಕೆಯ ಪಾತಿವ್ರತ್ಯ ಮತ್ತು ದಾಸೋಹ ಭಾವಗಳನ್ನು ಬಸವಪುರಾಣದಲ್ಲಿ ಬಣ್ಣಿಸಲಾಗಿದೆ.

ಗಂಗಾಪ್ರಿಯ ಕೂಡಲಸಂಗಮ ಎಂಬುದು ಈಕೆಯ ವಚನಗಳ ಅಂಕಿತ. ಬಸವಣ್ಣನವರು ಏಕನಿಷ್ಠೆಯಿಂದ ನಿರ್ವಹಿಸುತ್ತಿದ್ದ ಕೆಲಸಕಾರ್ಯಗಳನ್ನು ಗಂಗಾಂಬಿಕೆ ತನ್ನ ಒಂದು ವಚನದಲ್ಲಿ ಹೀಗೆ ವರ್ಣಿಸಿದ್ದಾಳೆ.

ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತೋ !
ಮಾದಲಾಂಬಿಕಾ ನಂದನನು ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ
ನೋಳ್ಪನೆಂತೋ
ಮಾದರಸನ ಮೋಹದ ಮಗನು ಸಾಂದ್ರವಾಗಿ ಲಿಂಗಾರ್ಚನೆ
ಲಿಂಗತೃಪ್ತಿ ಅನುಗೈವನೆಂತೋ ಗಂಗಾಪ್ರಿಯ ಕೂಡಲಸಂಗಮ ಶರಣ ಚೆನ್ನ.

ಈಕೆಯ ಸಮಾಧಿ ಬಿಜಾಪುರ ಜಿಲ್ಲೆಯ ಕಪ್ಪಡಿ ಸಂಗಮಕ್ಷೇತ್ರಕ್ಕೆ ಅನತಿದೂರದಲ್ಲಿದೆ.
(ಬಿ.ಎಸ್.)

**ಗಂಗಾದೇವಿ :** ಕನ್ನಡ ನಾಡಿನ ಒಬ್ಬ ಸಂಸ್ಕೃತ ಕವಯಿತ್ರಿ. ವಿಜಯನಗರದ ಬುಕ್ಕರಾಯನ (ಆಳ್ವಿಕೆ 1356–77) ಎರಡನೆಯ ಮಗ ಕಂಪಣ್ಣ, ಕಂಪಣ್ಣವೊಡೆಯ, ಕಂಪಣ್ಣರಾಯ ಅಥವಾ ಕಂಪರಾಯನ (ಮರಣ 1377) ಪತ್ನಿ. ಈಕೆಯ ಬಾಲ್ಯ ಮತ್ತು ತಂದೆತಾಯಿಯರ ವಿಷಯ ತಿಳಿದುಬರುವುದಿಲ್ಲ. ಗಂಗಾದೇವಿ ಮಧುರಾ ವಿಜಯಂ ಅಥವಾ ವೀರಕಂಪಣರಾಯಚರಿತಂ ಎಂಬ ಸಂಸ್ಕೃತ ಕಾವ್ಯವನ್ನು ರಚಿಸಿದ್ದಾಳೆ. ವಿಜಯನಗರದ ದಕ್ಷಿಣ ಪ್ರಾಂತ್ಯದ ಮೇಲಾಧಿಕಾರಿಯಾಗಿದ್ದ ಕಂಪಣ್ಣನ ದಕ್ಷಿಣ ದೇಶದ ದಂಡಯಾತ್ರೆ (ಸು. 1360)–ಮುಖ್ಯವಾಗಿ ಮಧುರೆಯ ವಿಜಯದ–ವರ್ಣನೆ ಇಲ್ಲಿದೆ. ಕಂಪಣ್ಣನ ಹುಟ್ಟು, ವಂಶ, ಬುಕ್ಕರಾಯನ ವ್ಯಕ್ತಿತ್ವ ಇವನ್ನೂ ಗಂಗಾದೇವಿ ಇಲ್ಲಿ ವಿವರಿಸಿದ್ದಾಳೆ. 1360–71ರ ಸುಮಾರಿನಲ್ಲಿ ರಚಿತವಾದ ಈ ಕೃತಿಯಲ್ಲಿ ವಿಜಯನಗರದ ವರ್ಣನೆಯೂ ಇದೆ. ವಿಜಯನಗರ ಸುರನಗರಿಯಾದ ಅಮರಾವತಿಯಂತೆ ಶೋಭಾಯಮಾನವಾಗಿತ್ತೆಂದೂ ಅದರ ಕೋಟೆಯ ಹೆಬ್ಬಾಗಿಲು ಮೇರುವಿನಂತೆ ಬೃಹತ್ತರವಾಗಿತ್ತೆಂದೂ ಸಕಲ ಶ್ರೀಮಂತಿಕೆಯಿಂದಲೂ ಭವ್ಯ ಪ್ರಾಸಾದಗಳಿಂದಲೂ ಹೂಗಿಡಬಳ್ಳಿಗಳಿಂದಲೂ ಕಣ್ಮನಗಳಿಗೆ ಹಬ್ಬವುಂಟುಮಾಡುತ್ತಿತ್ತೆಂದೂ ಗಂಗಾದೇವಿ ವರ್ಣಿಸಿದ್ದಾಳೆ. ಗಂಗಾದೇವಿಯೊಡನೆ ವಿವಾಹವಾದ ಮೇಲೆ ಕಂಪಣ್ಣ ತನ್ನ ವಿಜಯಯಾತ್ರೆ ಕೈಗೊಂಡ. ಸಂಬುವರಾಯನನ್ನು ಸೋಲಿಸಿ ಕಾಂಚೀಪುರದಲ್ಲಿ ಸುವ್ಯವಸ್ಥೆ ನೆಲೆಸುವಂತೆ ಮಾಡಿದ. ಅನಂತರ ಕಂಪರಾಯ ಮಧುರೆಯನ್ನು ಮುತ್ತಿ ಅಲ್ಲಿಯ ಸುಲ್ತಾನನನ್ನು ಸೋಲಿಸಿದ. ವಿಜಯಯಾತ್ರೆಯ ಸಮಯದಲ್ಲಿ ಈಕೆಯೂ ಗಂಡನೊಂದಿಗಿದ್ದು ತಾನು ಕಣ್ಣಾರ ಕಂಡಿದ್ದನ್ನು ವರ್ಣಿಸಿರಬೇಕು. ದುರುದೃಷ್ಟವಶಾತ್ ಮಧುರಾವಿಜಯಂ ಪೂರ್ಣವಾಗಿ ಲಭ್ಯವಾಗಿಲ್ಲ. ಮೊದಲಿನ ಎಂಟು ಸರ್ಗಗಳೂ ಒಂಬತ್ತನೆಯದರ ಸ್ವಲ್ಪ ಭಾಗವೂ ಸಿಕ್ಕಿವೆ. ಸಿಕ್ಕಿರುವ ಏಕೈಕ ಪ್ರತಿಯಲ್ಲೂ ಅನೇಕ ಪದ್ಯಗಳು ನಷ್ಟವಾಗಿವೆ. (ಜಿ.ಆರ್.ಆರ್.)

**ಗಂಗಾಧರ ಮಡಿವಾಳೇಶ್ವರ ತುರಮರಿ:** 1827–77. ಬಾಣನ ಕಾದಂಬರಿಯನ್ನು ಬಾಣಕವಿಯ ಕಾದಂಬರಿ ಎಂಬ ಹೆಸರಿನಲ್ಲಿ ಹೊಸಗನ್ನಡದಲ್ಲಿ ಬರೆದ ಲೇಖಕರು. ಬೆಳಗಾಂವಿ ಜಿಲ್ಲೆ ತುರಮರಿಯಲ್ಲಿ ಜನಿಸಿದ ಇವರು ಅಥಣಿ ಮಠದ ಮಡಿವಾಳ ಸ್ವಾಮಿಗಳ ಆಶ್ರಯದಲ್ಲಿ ಬೆಳೆದು ಅಭಿವೃದ್ಧಿಗೆ ಬಂದರು. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಪಾಂಡಿತ್ಯ ಗಳಿಸಿ ಬೆಳಗಾಂವಿಯ ನಾರ್ಮಲ್ ಶಾಲೆಯಲ್ಲಿ ಕನ್ನಡ ಪಂಡಿತರಾದರು. ಅನಂತರ ಸ್ವಲ್ಪ ಕಾಲ ಆ ಶಾಲೆಯ ಉಪಮುಖ್ಯೋಪಾಧ್ಯಾಯರಾಗಿಯೂ ಕೆಲಸ ಮಾಡಿದರು. ಮರಾಠಿಯ ಪ್ರಾಬಲ್ಯವಿದ್ದ ಉತ್ತರ ಕರ್ನಾಟಕದಲ್ಲಿ ಕನ್ನಡದ ಅಭ್ಯಾಸನಿಷೆವಿ ಆಗ ತಾನೇ ಆರಂಭವಾಗಿತ್ತು. ಅಂಥ ಸಮಯದಲ್ಲಿ ಇವರು ಕನ್ನಡ ಶಬ್ದಮಂಜರೀ ಕೋಶವನ್ನು ಬರೆದರು. ಕನ್ನಡ ವಾಚನಾಭಿರುಚಿಯನ್ನು ಹೆಚ್ಚಿಸಲು ಕನ್ನಡ ಕವಿತಾಪದ್ಧತಿ, ಕವಿತಾಸಂಗ್ರಹ, ಕೈವಲ್ಯಪದ್ಧತಿ ಟೀಕೆ ಮುಂತಾದ ಪದ್ಯಸಂಗ್ರಹಗಳನ್ನೂ ಪ್ರಕಟಿಸಿದರು. ಬಾಣಕವಿಯ ಕಾದಂಬರಿಯಲ್ಲಿ ಬರುವ, ಆಗ ನನ್ನ ಪಕ್ಕ ಬಲಿತಿದ್ದಿಲ್ಲ. ಗೋಣು ನಿಲ್ಲುತ್ತಿದ್ದಿಲ್ಲ. ನಡೆಯಲಿಕ್ಕೆ ಕಾಲೊಳಗೆ ಕಸುವು ಇದ್ದಿಲ್ಲ. ಆದುದರಿಂದ ಆಗಾಗ ನನ್ನ ಮೋರೆಯು ನೆಲಕ್ಕೆ ಬಡಿಯುವದು; ಅಡಿಗಡಿಗೆ ಹೋಳ ಮೈಯಲ್ಲಿಯಿಂದ ಬೀಳುವೆನು; ಹೊರಳಾಡುತ್ತ ಹೋಗುವುದರಿಂದ ಮೈಯೆಲ್ಲ ಮಣ್ಣಾಯಿತು; ಹೆಜ್ಜೆಜ್ಜೆಗೆ ತೇಕುಹತ್ತಿ ವಕವಕ ಬಾಯಿ ಬಿಡಹತ್ತಿದೆನು. ಎಷ್ಟು ಕಷ್ಟವಾದರೂ ಬದುಕಬೇಕೆಂಬ ಆಶೆ ಬಿಡುವುದಿಲ್ಲ– ಈ ರೀತಿಯ ವಾಕ್ಯಗಳು ಇವರ ಓಜಸ್ವೀ ಗದ್ಯಶೈಲಿಯನ್ನು ಪರಿಚಯ ಮಾಡಿಕೊಡುತ್ತವೆ. ಕನ್ನಡ ಗದ್ಯದ ಬೆಳವಣಿಗೆಗೆ ತುರಮರಿಯವರ ಕೊಡುಗೆ ಗಣ್ಯವಾದುದು. (ಕೆ.ಕೆ.)

**ಗಂಗಾಧರರಾವ್, ಎಂ.ಎನ್. :** 1888–1961. ಕನ್ನಡ ನಾಟಕರಂಗದಲ್ಲಿ ಪ್ರಸಿದ್ಧಿ ಗಳಿಸಿದ ಒಬ್ಬ ನಟ. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು, ಮೂಕನ ಹಳ್ಳಿ ಪಟ್ಟಣದಲ್ಲಿ ಹುಟ್ಟಿದರು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ತಾಯಿ, ಅಣ್ಣ, ಅತ್ತಿಗೆಯರ ಆಶ್ರಯದಲ್ಲಿ ಬೆಳೆದರು. ಇವರ ಜೀವನದ ಮೊದಲ ಹಾಗೂ ಕೊನೆಯ ದಿನಗಳು ಅಷ್ಟೇನೂ ಸುಖಮಯವಾಗಿರಲಿಲ್ಲ. 73 ವರ್ಷಗಳ ದೀರ್ಘಜೀವನ ನಡೆಸಿ, ಕನ್ನಡನಾಡಿನ ಹಾಗೂ ದಕ್ಷಿಣಭಾರತದ ವಿವಿಧ ಭಾಗಗಳಲ್ಲಿ ಸುತ್ತಿ ನಾಟಕ ಪ್ರದರ್ಶನಗಳನ್ನು ಅದ್ದೂರಿಯಾಗಿ ನಡೆಸಿ ಹುಟ್ಟಿದ ಊರಿಗೇ ಹಿಂತಿರುಗಿ ಅಸುನೀಗಿದರು.

ಗಂಗಾಧರರಾಯರಿಗೆ ವಿದ್ಯೆ ಹತ್ತಲಿಲ್ಲ. ಭಜನೆ, ಸಂಗೀತ, ಹರಿಕಥೆ, ನಾಟಕ ಮೊದಲಾದವುಗಳಲ್ಲಿ ಹೆಚ್ಚಿನ ಆಸಕ್ತಿ ಉಂಟಾಯಿತು. ಆತ್ಮೀಯ ಬಂಧು ವೆಂಕಟನಾರಾಯಣ ಜೋಯಿಸರಲ್ಲಿ ಸಂಗೀತ, ಗಮಕಗಳ ಅಭ್ಯಾಸ ಮಾಡಿದರು. ಪಿಟೀಲು ವಿದ್ವಾನ್ ಪುಟ್ಟಣ್ಣಯ್ಯನವರಿಂದಲೂ ಪಾಠವಾಯಿತು. ವಯಸ್ಸಿಗೆ ಬಂದಮೇಲೆ ಅಧ್ಯಾಪಕವೃತ್ತಿ ಹಿಡಿದರು. ಅನಂತರ ಪೊಲೀಸ್ ಕಚೇರಿಯಲ್ಲಿ ಗುಮಾಸ್ತರಾದರು. ಕೆಲಕಾಲ ವ್ಯವಸಾಯ ಮಾಡಿದರು. ಕೊನೆಗೆ ಮೂಕಿ ಸಿನಿಮಾ ನಡೆಸುವ ಉದ್ಯೋಗದಲ್ಲೂ ತೊಡಗಿದ್ದುಂಟು. ಗುಬ್ಬಿ ಕಂಪನಿ ನಾಟಕಗಳಿಂದ ಪ್ರಭಾವಿತರಾಗಿ ಧರ್ಮ ಪಾಲಚರಿತ್ರೆಯೆಂಬ ನಾಟಕದಲ್ಲಿ ಧರ್ಮಪಾಲನ ಪಾತ್ರವಹಿಸಿದರು. ಅದೇ ಸಮಯಕ್ಕೆ ಇವರ ಮದುವೆ ಆಯಿತು.

ನಾಟಕ ಗೀಳು ತಲೆಗೆ ಹತ್ತಿದುದರಿಂದ ರಾಯರು ತುಮಕೂರಿನಲ್ಲಿದ್ದ ಶ್ರೀ ಸೀತಾಮನೋಹರನಾಟಕ ಮಂಡಳಿಯನ್ನು ಸೇರಿದರು. ಅನಂತರ ಗುಬ್ಬಿ ಕಂಪನಿಯನ್ನು ಸೇರಿ ಮುಖ್ಯಪಾತ್ರಗಳನ್ನು ವಹಿಸಿದರು. ರೌದ್ರ, ವೀರ, ಅದ್ಭುತ, ಬೀಭತ್ಸ ರಸಗಳನ್ನು ಪ್ರತಿಪಾದಿಸುವ ಪಾತ್ರಗಳನ್ನು ವಹಿಸಿ ಸೈ ಎನಿಸಿಕೊಂಡರು. ಈ ಪಾತ್ರಗಳಿಗೊಪ್ಪುವ ದೈತ್ಯ ದೇಹ, ದೊಡ್ಡಗಂಟಲು ರಾಯರಿಗೆ ದೈವದತ್ತವಾಗಿ ಬಂದ ವರಗಳಾಗಿದ್ದವು. ರಾಯರು ಹೆಚ್ಚಿನ ಕಾಲ ಗುಬ್ಬಿ ಕಂಪನಿಯಲ್ಲಿದ್ದರೂ ಶ್ರೀ ಭಾರತ ಜನಮನೋಲ್ಲಾಸಿನೀ ನಾಟಕ ಸಭಾ, ಶ್ರೀ ಲಕ್ಷ್ಮೀಕಾಂತ ವಿಲಾಸ ನಾಟಕ ಸಭಾ, ಶ್ರೀ ಗುಬ್ಬಿ ಚನ್ನಬಸವೇಶ್ವರ ಕೃಪಾಪೋಷಿತ ಲಲಿತಕಲಾವರ್ಧಿನೀ ನಾಟಕಸಭಾ, ಶ್ರೀ ಶಾಂಭವೀ ಪ್ರಾಸಾದಿಕ ನಾಟಕಮಂಡಳಿ, ಶ್ರೀ ಕೃಷ್ಣಮನೋರಂಜನೀ ನಾಟಕಸಭಾ, ಗುಬ್ಬಿ ಬಾಲ ಕಲಾವರ್ಧಿನೀ ನಾಟಕ ಸಭಾ, ಆರು ಜನದ ಕಂಪನಿ, ಶ್ರೀ ಮಂಜುನಾಥೇಶ್ವರ ನಾಟಕಮಂಡಳಿ, ಶೇಷಕಮಲ ಕಲಾಮಂಡಳಿ, ಶ್ರೀ ಚಾಮುಂಡೇಶ್ವರಿ ಕಂಪನಿಯ ಮಿತ್ರರು–ಇವೇ ಮೊದಲಾದ ಕಂಪನಿಗಳಲ್ಲಿ ಮಾಲೀಕರಾಗಿ, ಪಾಲುದಾರರಾಗಿ, ನಟರಾಗಿ ಬೇರೆಬೇರೆ ಸ್ಥಾನದಲ್ಲಿ ನಿಂತು ಕೆಲಸಮಾಡಿದರು.

ರಾಯರು ಪ್ರಹ್ಲಾದಚರಿತ್ರೆಯಲ್ಲಿ ಹಿರಣ್ಯಕಶಿಪು, ಶ್ರೀಕೃಷ್ಣಲೀಲಾ ಮತ್ತು ಕಂಸವಧಗಳಲ್ಲಿ ಕಂಸ, ಯಮಗರ್ವಭಂಗದಲ್ಲಿ ಯಮ, ಚಂದ್ರಹಾಸದಲ್ಲಿ ದುಷ್ಟಬುದ್ಧಿ–ಇವೇ ಮೊದಲಾದ ಪಾತ್ರಗಳನ್ನು ಬಹಳ ಉತ್ತಮರೀತಿಯಲ್ಲಿ ನಿರ್ವಹಿಸುತ್ತಿದ್ದರು. ಇವರ ಅಭಿನಯ ಕೇವಲ ವೀರ ಅದ್ಭುತ ರಸಗಳ ಪಾತ್ರಚಿತ್ರಣಕ್ಕೆ ಮೀಸಲಾಗಿರಲಿಲ್ಲ. ಇತರ ರಸಗಳನ್ನು ಪ್ರತಿಪಾದಿಸುವ ಪಾತ್ರಗಳನ್ನೂ ಇವರು ಸಮರ್ಪಕವಾಗಿ ನಿರ್ವಹಿಸುತ್ತಿದ್ದರು. ಉತ್ತಮ ಅಭಿನಯವನ್ನು ಮೆಚ್ಚಿ ಅಂದಿನ ಜನರು ರಾಯರಿಗೆ ಅಭಿನಯಕಂಠೀರವ, ನಟಭಯಂಕರ, ಅಭಿನಯ ಸಾಮ್ರಾಟ ಮೊದಲಾದ ಬಿರುದುಗಳನ್ನೂ ವಿವಿಧಬಗೆಯ ಉಡುಗೊರೆಗಳನ್ನೂ ಕೊಟ್ಟರು. ರಾಯರ ರೌದ್ರಾಭಿನಯ ಕೆಲವು ವೇಳೆ ರಸಿಕರನ್ನು ರಂಗಮಂದಿರಲ್ಲೇ ಮೂರ್ಛೆಗೊಳಿಸಿದ್ದೂ ಉಂಟು. ಕಂಪನಿಗಳನ್ನು ನಡೆಸಿದ ರಾಯರು ರಂಗಸಜ್ಜಿಕೆ, ದೀಪಾಲಂಕಾರ, ರಂಗಸಂಗೀತ, ಉತ್ತಮ ಅಭಿನಯ ಇವೇ ಮೊದಲಾದವುಗಳಿಗೆ ಹೆಚ್ಚಿನ ಗಮನ ನೀಡಿದರು. ಸ್ವಭಾವತಃ ರಾಯರು ಬಹಳ ಉದಾರಿಗಳು. ಒಮ್ಮೆ ಇವರು ಬಡ ಬ್ರಾಹ್ಮಣನೊಬ್ಬನಿಗೆ ಏಳೆಂಟು ತೊಲ ಚಿನ್ನದ ಆಭರಣವನ್ನು ದಾನವಾಗಿ ಕೊಟ್ಟಿದ್ದುಂಟು. ಧಾರ್ಮಿಕ ಕಾರ್ಯಗಳಿಗಾಗಿ ಯಾಚಿಸಿ ಬಂದವರಿಗೆ ರಾಯರು ಸಹಾಯದ ಹಸ್ತವನ್ನು ನೀಡಿದರು. ರಂಗಭೂಮಿಯಲ್ಲಿ ಬಹಳ ವರ್ಷ ರಾರಾಜಿಸಿದರೂ ಸ್ವಂತ ಜೀವನ ಅಷ್ಟು ಸುಖಮಯವಾಗಿರಲಿಲ್ಲ. ಕೊನೆಯ ದಿನಗಳಲ್ಲಂತೂ ರಾಯರು ತುಂಬ ಕಷ್ಟಗಳನ್ನನುಭವಿಸಿದರೆಂದು ಹೇಳಲಾಗಿದೆ.

(ಎಸ್.ಎ.ಎಂ.)

**ಗಂಗಾಧರರಾವ್ ದೇಶಪಾಂಡೆ :** 1871–1961. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕರ್ನಾಟಕದ ನಾಯಕರಲ್ಲೊಬ್ಬರು. ಬೆಳಗಾಂವಿಯ ಬಳಿಯ ಜಲಾಲಪುರ ಎಂಬ ಹಳ್ಳಿಯಲ್ಲಿ ಜನಿಸಿದರು. ಬೆಳೆದದ್ದು ಅದರ ಹತ್ತಿರದ ಹುದಲಿಯಲ್ಲಿ. ತಂದೆ ಬಾಳಕೃಷ್ಣ ದೇಶಪಾಂಡೆ. ಬಾಲ್ಯದಲ್ಲಿ ತಂದೆಯಿಂದ ದೊರೆತ ರಾಷ್ಟ್ರೀಯತ್ವದ ಪರಿಕಲ್ಪನೆ, ಮುಂದೆ ಲೋಕಮಾನ್ಯ ಬಾಲ ಗಂಗಾಧರ ತಿಲಕರಿಂದ ಪಡೆದ ಕಾಂಗ್ರೆಸ್ ದೀಕ್ಷೆ, ತರುವಾಯ ಮಹಾತ್ಮಾ ಗಾಂಧೀಜಿಯವರ ಅನುಯಾಯಿತನ–ಇವು ಗಂಗಾಧರರಾಯರ ವ್ಯಕ್ತಿತ್ವವನ್ನು ರೂಪಿಸಿದುವು. ಚಿಕ್ಕಂದಿನಲ್ಲಿ ಇವರು ಗೋಪಾಲಕೃಷ್ಣ ಗೋಖಲೆಯವರ ವಿಚಾರಗಳಿಂದಲೂ ಮುಪ್ಪಿನಲ್ಲಿ ರಾಮಭಾವು ರಾನಡೆಯವರ ಆಧ್ಯಾತ್ಮಿಕ ಚಿಂತನೆಯಿಂದಲೂ ಪ್ರಭಾವಿತರಾಗಿದ್ದರು.

ಗಂಗಾಧರರಾಯರು ಬಾಲ್ಯದಲ್ಲಿ ಕಲಿತದ್ದು ಮರಾಠಿ. ಆಗ ಬೆಳಗಾಂವಿಯ ಸುತ್ತಮುತ್ತಲೂ ಕನ್ನಡ ಕಲಿಸುವ ಏರ್ಪಾಡು ಇರಲಿಲ್ಲ. ಗಂಗಾಧರರಾಯರ ಹಿರಿಯರು ಅಚ್ಚ ಕನ್ನಡಿಗರೇ ಆಗಿದ್ದರೂ ಪೇಶ್ವೆಯರ ಆಳ್ವಿಕೆಯ ಪ್ರಭಾವದಿಂದಾಗಿ ಆಗ ಅವರ ಮೇಲೆ ಮರಾಠಿಯ ಪ್ರಭಾವ ವಿಶೇಷವಾಗಿತ್ತು.

ಹದಿಮೂರನೆಯ ವಯಸ್ಸಿನಲ್ಲೆ ಗಂಗಾಧರರಾಯರಿಗೆ ಮದುವೆಯಾಯಿತು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿದ್ದಾಗ ಇವರಿಗೆ ಟಿಳಕ, ಅಗರಕರ ಇವರ ಸಂಪರ್ಕ ಬೆಳೆಯಿತು. ಅಲ್ಲಿಯ ಅನೇಕ ಪ್ರಮುಖ ವ್ಯಕ್ತಿಗಳು ಇವರ ಮಿತ್ರರಾದರು. ಪರೀಕ್ಷೆಗಳಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಬೇಕೆಂದು ಗಂಗಾಧರರಾಯರು ಎಂದೂ ಪ್ರಯತ್ನಿಸಲಿಲ್ಲ. ಬಿ.ಎ. ಯಲ್ಲಿ ಸಾಧಾರಣ ವಿದ್ಯಾರ್ಥಿಯೆನಿಸಿದ್ದರು. ಆದರೆ ಟಿಳಕರ ಲೇಖನಗಳು, ಭಾಷಣಗಳು, ಸಂಪಾದಕೀಯ ನುಡಿಗಳು ಗಂಗಾಧರರಾಯರಲ್ಲಿ ಸ್ಫೂರ್ತಿಯನ್ನೂ ಜಾಗೃತಿಯನ್ನೂ ಉಂಟುಮಾಡಿದವು. ಇದರಿಂದಲೇ ಅವರಿಗೆ ಟಿಳಕರ ಸಂಪರ್ಕಪಡೆಯುವ ಉತ್ಸುಕತೆಯಾದ್ದು. ಅವರು ಅದನ್ನು ಸಾಧಿಸಿದರು. ಗೋಪಾಲಕೃಷ್ಣ ಗೋಖಲೆ ಮತ್ತು ರಾನಡೆ ಅವರನ್ನು ಕಂಡರು.

ಈ ಮನೋಭೂಮಿಕೆಯಿಂದೊಡಗೂಡಿ ಗಂಗಾಧರರಾಯರು ವಕೀಲರಾಗಿ ಬೆಳಗಾಂವಿಗೆ ಬಂದ ಮೇಲೆ ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರಾಗಿ ಲೋಕಮಾನ್ಯಟಿಳಕರ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯಾಂದೋಲನದಲ್ಲಿ ಉದ್ಯುಕ್ತರಾದರು, ಸಂಘಟನೆಯ ಕಾರ್ಯ

ಕೈಗೊಂಡರು. ಕಾಂಗ್ರೆಸ್ಸಿಗೆ ಹಣ ಸಂಗ್ರಹ ಮಾಡಿದರು. ಟಿಳಕರನ್ನು ಬೆಳಗಾಂವಿಗೆ ಬರಮಾಡಿಕೊಂಡರು. ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದರು. ಟಿಳಕರ ನಿಷ್ಠಾವಂತ ಅನುಯಾಯಿಯಾಗಿ ಕಾಂಗ್ರೆಸ್ ಕಾರ್ಯಕ್ರಮಕ್ಕಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡರು.

1921ರಲ್ಲಿ ಗಂಗಾಧರರಾವ್ ದೇಶಪಾಂಡೆಯವರು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಹೊಂದಿದರು. ಅದೇ ವರ್ಷ ರಾಜದ್ರೋಹದ ಆಪಾದನೆಯ ಮೇಲೆ ಬ್ರಿಟಿಷ್ ಸರ್ಕಾರ ಅವರನ್ನು ಬಂಧಿಸಿ ಆರು ತಿಂಗಳ ಕಾರಾಗೃಹ ಶಿಕ್ಷೆ ವಿಧಿಸಿತು. ಲೋಕಮಾನ್ಯ ಟಿಳಕರಿಂದ ಸ್ವಾತಂತ್ರ್ಯ ಚಳವಳಿಯ ಧುರೀಣತ್ವ ಗಾಂಧೀಜಿಯವರಿಗೆ ಬಂದಮೇಲೆ ಗಂಗಾಧರರಾಯರು ಗಾಂಧೀಜಿಯವರಿಗೆ ತಮ್ಮ ನಿಷ್ಠೆಯನ್ನು ತೋರಿ ಅವರ ಅಹಿಂಸಾತ್ಮಕ ಚಟುವಟಿಕೆ ಗಳಲ್ಲಿ ಭಾಗವಹಿಸತೊಡಗಿದರು. 1922ರಲ್ಲಿ ಮಹಾರಾಷ್ಟ್ರ, ಕರ್ನಾಟಕ ಎರಡೂ ಪ್ರಾಂತ್ಯಗಳಲ್ಲಿ ದೀರ್ಘಸಂಚಾರ ಕೈಗೊಂಡರು. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸಕ್ಕೆ ಕರ್ನಾಟಕದ ಜನರನ್ನೂ ಜೋಡಿಸಲು ಇವರೂ ಕಾರಣ ರಾದರು. 1923ರಲ್ಲಿ ಮತ್ತೆ ಇದೇ ಬಗೆಯ ಪ್ರವಾಸ ಕೈಗೊಂಡು ಗಾಂಧಿಯವರ ಧ್ಯೇಯಧೋರಣೆಗಳನ್ನು-ಅವರ ಅಹಿಂಸಾತತ್ತ್ವ, ವಿದೇಶಿ ಚಳವಳಿ, ಖಾದೀವ್ರತಗಳನ್ನು ಕುರಿತು ಜನಸಾಮಾನ್ಯರಲ್ಲಿ ತಿಳಿವಳಿಕೆ ಮಾಡಿಕೊಟ್ಟರು.



1924ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನಕ್ಕೆ ಗಂಗಾಧರರಾಯರೆ ಸ್ವಾಗತಾಧ್ಯಕ್ಷರು. ಬೆಳಗಾಂವಿ ಕಾಂಗ್ರೆಸ್ಸು ಕನ್ನಡಿಗರಿಗೂ ಕನ್ನಡೇತರರಿಗೂ ವಿಜಯನಗರದ ವೈಭವವನ್ನೂ ವಿದ್ಯಾರಣ್ಯರ ಪುಣ್ಯ ಪ್ರಭಾವವನ್ನೂ ನೆನಪಿಗೆ ತಂದುಕೊಟ್ಟಿತು. ಅಧಿವೇಶನದ ಸ್ಥಳಕ್ಕೆ ವಿಜಯನಗರದ ಹೆಸರನ್ನೇ ಇಡಲಾಗಿತ್ತು.

ಗಂಗಾಧರರಾಯರು ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕರ್ನಾಟಕದ ಪ್ರತಿನಿಧಿಯಾಗಿದ್ದರು. 1930ರ ಉಪ್ಪಿನ ಸತ್ಯಾಗ್ರಹದಲ್ಲಿ ಗಂಗಾಧರರಾಯರೇ ಕರ್ನಾಟಕದ ಮೊದಲನೆಯ ಸತ್ಯಾಗ್ರಹಿ. 1924ರಲ್ಲಿ ಹರಿಜನೋದ್ಧಾರಕ್ಕಾಗಿ ಗಾಂಧೀಜಿ ಕರ್ನಾಟಕದ ಸಂಚಾರವನ್ನು ಕೈಗೊಂಡಾಗ ಗಂಗಾಧರರಾಯರು ಅವರ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿ ಹೇಳುತ್ತಿದ್ದರು. 1932ರಲ್ಲಿ ಹುದಲಿಯಲ್ಲಿ ಇವರು ಗಾಂಧೀ ಸೇವಾಸಂಘ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದರು. ಈ ಎಲ್ಲ ಕಾರ್ಯಗಳಲ್ಲೂ ಗಂಗಾಧರರಾಯರಿಗೆ ಸಹಾಯಕರಾಗಿದ್ದವರು ಪುಂಡಲೀಕ ಕಾತಗಡೆ. 1938ರಲ್ಲಿ ಇವರು ಮತ್ತೊಮ್ಮೆ ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. 1941ರ ವೈಯಕ್ತಿಕ ಸತ್ಯಾಗ್ರಹ, 1942ರ ಚಲೇಜಾವ್ ಚಳವಳಿ-ಇವುಗಳಲ್ಲೂ ಗಂಗಾಧರರಾಯರು ಭಾಗವಹಿಸಿದರು. 1942 – 1944ರ ತನಕ ಅವರು ನಾಸಿಕ್ ಕಾರಾಗೃಹದಲ್ಲಿ ರಾಜಕೀಯ ಕೈದಿಯಾಗಿದ್ದರು. 1945 – 1950ರ ತನಕ ವಿಧಾಯಕ ಕಾರ್ಯದಲ್ಲಿಯೇ ತೊಡಗಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ ಇವರು ಅಧಿಕಾರ ಪಡೆಯಲು ಪ್ರಯತ್ನಿಸಲಿಲ್ಲ. ಸ್ವಾತಂತ್ರ್ಯವನ್ನು ಗಳಿಸಿಕೊಟ್ಟವರು ತಾವೇ-ಎಂದು ಆ ಪೀಳಿಗೆಯ ಜನ ಅಹಂಕಾರ ತಾಳಬಾರದೆಂದು ಇವರು ಬೋಧಿಸುತ್ತಿದ್ದರು. ಅಧಿಕಾರ ಲಾಲಸೆ ಇರಬಾರದೆಂದೂ ಉಪದೇಶಿಸಿದರು.

ತಮ್ಮ ಜೀವನದ ಕೊನೆಯ ಭಾಗವನ್ನು ಇವರು ಅಧ್ಯಾತ್ಮ ಚಿಂತನೆಯಲ್ಲಿಯೆ ಕಳೆದರು. ಆಗ ಇವರು ರಾನಡೆಯವರ ನಿಷ್ಠಾವಂತ ಅನುಯಾಯಿಯಾಗಿದ್ದರು.

ಗಂಗಾಧರರಾಯರು ವಿಶಾಲಮನೋಭಾವದಿಂದ. ಬಾಳಿ, ಜನತೆಗೂ ಅದನ್ನೇ ಬೋಧಿಸಿದರು. ಗಂಗಾಧರರಾಯರು ಕನ್ನಡ ಮರಾಠಿಗಳ ನಡುವಿನ ಸೇತುವೆಯಂತಿದ್ದರು. ಭಾಷಾಭಾವೈಕ್ಯ ಜಾತೀಯ ಏಕತೆಗಳಿಗಾಗಿ ಇವರು ಶ್ರಮಿಸಿದರು.

ಗಂಗಾಧರರಾಯರು ತಮ್ಮ ವೈಯಕ್ತಿಕ ಜೀವನದಿಂದ ಆದರ್ಶಪ್ರಾಯರಾಗಿದ್ದರು.

(ಎನ್.ಕೆ.ಕೆ.)

**ಗಂಗಾಧರ ಶಾಸನ :** ಕನ್ನಡ ಕವಿಗಳ ಚರಿತ್ರೆಯನ್ನು ನಿರೂಪಿಸುವಲ್ಲಿ ಸಹಾಯವಾಗುವ ಕೆಲವೇ ಶಾಸನಗಳಲ್ಲಿ ಒಂದು. ಇದು ಕನ್ನಡದ ಆದಿಕವಿಯಾದ ಪಂಪನ ತಮ್ಮ ಜಿನವಲ್ಲಭನಿಂದ ಕೆತ್ತಿಸಲಾದುದು. ಕಂಡರಿಸಿದ ಶಿಲ್ಪಿ ಎರೆಯಮ್ಮ. ಉದ್ದೇಶ ಜಿನವಲ್ಲಭನನ್ನು ಸುತ್ತಿಸುವುದೇ ಆಗಿದ್ದರೂ ಪಂಪನ ಚರಿತ್ರೆಯ ಮೇಲೆ ಇದು ಆನುಷಂಗಿಕವಾಗಿ ವಿಶೇಷ ಬೆಳಕನ್ನು ಬೀರಿದೆ. ಪಂಪನ ಅಜ್ಜ, ತಂದೆ, ತಾಯಿ, ಆಕೆಯ ತವರಿನವರು, ಸೋದರ ಹಾಗೂ ಗುರು ಇವರ ಬಗೆಗೆ ಕೆಲವು ಸ್ಪಷ್ಟ ಹೇಳಿಕೆಗಳನ್ನಿದು ಒಳಗೊಂಡಿದೆ. ಈ ಶಾಸನ ಮೊದಲಬಾರಿಗೆ ತೆಲುಗು ಪತ್ರಿಕೆ ಭಾರತಿಯಲ್ಲಿ 1967 ಮಾರ್ಚ್ ತಿಂಗಳಲ್ಲಿ ಆಂಧ್ರಪ್ರದೇಶದ ಪುರಾತತ್ತ್ವ ಶಾಖೆಯ ಸಹಾಯಕ ಸಂಚಾಲಕರಾದ ಎನ್. ವೆಂಕಟರಮಣಯ್ಯನವರಿಂದ ಪ್ರಕಾಶಗೊಂಡಿತು. ಅನಂತರ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಪತ್ರಿಕೆಗಳಲ್ಲೂ ಕನ್ನಡ ಶಾಸನ ಸಂಪದ ಎಂಬ ಶಾಸನಗಳ ಸಂಗ್ರಹಗ್ರಂಥದಲ್ಲೂ ಅಚ್ಚಾಯಿತು.

ಜಿನವಲ್ಲಭ ಕೆತ್ತಿಸಿದ ಚಕ್ರೇಶ್ವರಿ

ಗಂಗಾಧರ ಶಾಸನ ಆಂಧ್ರಪ್ರದೇಶದ ಕರೀಮ್‌ನಗರ ಜಿಲ್ಲೆಯಲ್ಲಿದೆ. ಕರೀಮ್‌ನಗರದಿಂದ ಜಗತ್ಯಾಲ ತಾಲ್ಲೂಕಿಗೆ ಹೋಗುವ ದಾರಿಯಲ್ಲಿ ಕುರ್ಕಿಯಾಲ್ ಎಂಬ ಹಳ್ಳಿಯಿಂದ ಪೂರ್ವದಲ್ಲೂ ಗಂಗಾಧರಯೆಂಬ ಹಳ್ಳಿಯಿಂದ ದಕ್ಷಿಣದಲ್ಲೂ ನೇಲ್ಕೊಂಡಪಲ್ಲಿಯೆಂಬ ಹಳ್ಳಿಯಿಂದ ಈಶಾನ್ಯದಲ್ಲೂ ಎಂದರೆ ಈ ಮಧ್ಯದಲ್ಲಿರುವ ಬೆಟ್ಟದಲ್ಲಿ ಈ ಶಾಸನವನ್ನು ಕೊರೆಯಲಾಗಿದೆ. ಕುರ್ಕಿಯಾಲ್ ಎಂಬ ಹಳ್ಳಿಯ ಸೀಮೆಯ ಒಳಗಡೆಯೇ ಇದು ಬರುತ್ತದೆ. ಬೆಟ್ಟದ ಪಕ್ಕದಲ್ಲಿ ವಾಯವ್ಯದಿಶೆಯಲ್ಲಿ ಪಾತಚೆರುವು ಎಂಬ ಕೆರೆಯೊಂದಿದೆ. ಬಹುಶಃ ಇದುವೆ ಕವಿತಾಗುಣಾರ್ಣವತಟಾಕವಾಗಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಬೆಟ್ಟಕ್ಕೆ ಈಗ ಬೊಮ್ಮಲ ಗುಟ್ಟವೆಂದು (ಗೊಂಬೆಗಳ ಗುಡ್ಡ) ಹೆಸರು. ಬೆಟ್ಟದ ನಿಡಿದಾದ ದಾರಿಯಲ್ಲಿ ಸು. 125′ ಏರಿದಮೇಲೆ ಒಂದು ಬೃಹತ್ ಶಿಲೆಯಿದೆ. ಅದರ ಮೇಲೆ ಸು. 4′ ಎತ್ತರದ ಸ್ತ್ರೀಮೂರ್ತಿಯೊಂದನ್ನು ಕೆತ್ತಲಾಗಿದೆ. ಜನತೆ ಈಕೆಯನ್ನು ಬೊಮ್ಮಲಮ್ಮನೆಂದು (ಚಕ್ರೇಶ್ವರಿ) ಈಗಲೂ ಪೂಜಿಸುತ್ತಾರೆ. ಈ ವಿಷಯ ಆ ವಿಗ್ರಹದ ಪಾದದಲ್ಲಿಯೆ ಕೆತ್ತಲಾಗಿರುವ ಶಾಸನದಲ್ಲಿ ಸ್ಪಷ್ಟವಿದೆ. ಚಕ್ರೇಶ್ವರಿ ಎಂದರೆ ಅದೇ ವೃಷಭಾದ್ರಿಯಲ್ಲಿದ್ದ ವೃಷಭನಾಥ ತೀರ್ಥಂಕರನ ಯಕ್ಷಿಣಿ. ಆ ವೃಷಭನಾಥ ಜಿನಾಲಯ ಎಲ್ಲಿದ್ದಿತೆಂಬುದು ಈಗ ತಿಳಿಯದು. ಚಕ್ರೇಶ್ವರಿಯ ಜೊತೆಗೆ ಇನ್ನೂ ಕೆಲವು ಪ್ರತಿಮೆಗಳು ಆಕೆಯ ಎಡಕ್ಕೂ ಬಲಕ್ಕೂ ಇವೆ. ಆಕೆಯ ತಲೆಯ ಮೇಲೆಯೆ ಸ್ವಲ್ಪ ಎತ್ತರದಲ್ಲಿ ಎರಡು ದೊಡ್ಡ ಜಿನಬಿಂಬಗಳೂ ಇವೆ. ಇವು ಬಹಳ ಎತ್ತರದ ಮೇಲಿರುವುದರಿಂದ ಬಹುದೂರದ ವರೆಗೆ ಗೋಚರಿಸುತ್ತವೆ. ಅದರಲ್ಲೂ ನೇಲ್ಕೊಂಡಪಲ್ಲಿಗೆ ಹೆಚ್ಚು ಸ್ಫುಟವಾಗಿ ಕಾಣಿಸುತ್ತವೆ. ಈ ಶಾಸನದ ಪ್ರಕಾರ, ಇಲ್ಲಿರುವ ಎಲ್ಲ ಪ್ರತಿಮೆಗಳನ್ನೂ ಕೆತ್ತಿಸಿದ ವ್ಯಕ್ತಿ, ಪಂಪನ ತಮ್ಮ ಜಿನವಲ್ಲಭ, ಮೊದಲ ಸಲ ಈ ಶಾಸನವನ್ನು ಪ್ರಕಟಿಸಿದ ವ್ಯಕ್ತಿಗಳು ಗಂಗಾಧರಯೆಂಬ ಹಳ್ಳಿಯಿಂದ ಶಾಸನವಿರುವ ಎಡೆಗೆ ನೋಡಲು ಹೋದರಾಗಿ ತಮ್ಮ ಲೇಖನದಲ್ಲವರು ಇದನ್ನು ಗಂಗಾಧರ ಶಾಸನ ಎಂದೇ ಹೆಸರಿಸಿದರು. ಇದಕ್ಕೆ ಇನ್ನೊಂದು ಕಾರಣವೂ ಇದೆ. ಗಂಗಾಧರ ಗ್ರಾಮ ಹತ್ತನೆಯ ಶತಮಾನದಲ್ಲಿ ಜೈನಧರ್ಮಿಗಳಿಗೆ ಒಂದು ಕೇಂದ್ರವಾಗಿತ್ತು. ಇದು ಪಂಪನಿಗೆ ಆಶ್ರಯವನ್ನಿತ್ತ ಎರಡನೆಯ ಅರಿಕೇಸರಿಯ ಪ್ರಥಮ ಪುತ್ರನಾದ ವಾಗ್ರಾಜನಿಗೆ ರಾಜಧಾನಿಯೂ ಆಗಿತ್ತು. ಅವನ ಆಸ್ಥಾನದಲ್ಲಿ ಕವಿಯಾಗಿದ್ದ ಸೋಮದೇವಸೂರಿ ಸಂಸ್ಕೃತಕಾವ್ಯವಾದ ಯಶಸ್ತಿಲಕಚಂಪುವನ್ನು ಗಂಗಾಧರದಲ್ಲಿಯೇ ರಚಿಸಿ ಸಮಾಪ್ತಿಗೊಳಿಸಿದ. ಜೈನಧರ್ಮದ ಕೇಂದ್ರವಾಗಿದ್ದ ಗಂಗಾಧರದ ಹತ್ತಿರವೇ ಬೊಮ್ಮಲಗುಟ್ಟ ಇರುವುದರಿಂದ, ಕುರ್ಕಿಯಲ್ ಗ್ರಾಮ ಅಷ್ಟು ಪುರಾತನವೆಂದು ತೋರದುದರಿಂದ ಈ ಶಾಸನವನ್ನು ಗಂಗಾಧರ ಶಾಸನ ಎಂದಿರುವಲ್ಲಿ ಔಚಿತ್ಯವಿದೆ. ಕೆಲವರು ಇದನ್ನು ಕುರ್ಕಿಯಾಲ ಶಾಸನವೆಂದೂ ಕರೆದಿದ್ದಾರೆ.

ಈ ಶಾಸನದಲ್ಲಿ 14′5″ ಅಳತೆಯ ಪಂಕ್ತಿಗಳು ಹತ್ತು ಮತ್ತು 4′ ಅಳತೆಯ ಪಂಕ್ತಿ ಒಂದು-ಹೀಗೆ ಒಟ್ಟು ಹನ್ನೊಂದು ಪಂಕ್ತಿಗಳಿವೆ. ಶಾಸನದ ಲಿಪಿ, ಹತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟ ಹಾಗೂ ಚಾಳುಕ್ಯರ ನಾಡಿನಲ್ಲೊಂದೆಡೆಯಲ್ಲಿ (ಈಗಿನ ತೆಲಂಗಾಣ ಪ್ರದೇಶದಲ್ಲಿ)

ಬಳಕೆಯಲ್ಲಿದ್ದ ಕನ್ನಡ-ತೆಲುಗು ಲಿಪಿ. ಅಕ್ಷರಗಳು ಎರಡನೆಯ ಅರಿಕೇಸರಿಯ ವೇಮುಲವಾಡದ ಶಾಸನಾಕ್ಷರಗಳನ್ನು ಹೋಲುತ್ತವೆ. ಕನ್ನಡ, ಸಂಸ್ಕೃತ ಮತ್ತು ತೆಲುಗು ಹೀಗೆ ಮೂರು ಭಾಷೆಗಳನ್ನು ಇದರಲ್ಲಿ ಬಳಸಲಾಗಿದೆ. ಧೋರಣೆ ಗದ್ಯ ಪದ್ಯಾತ್ಮಕವಾಗಿದೆ. ಓಂ ನಮಃ ಸಿದ್ದೇಭ್ಯಃ ಎಂಬ ಸಂಸ್ಕೃತ ವಾಕ್ಯದಿಂದ ಜೈನರದ್ದೆ ಪಂಚಪರಮೇಷ್ಠಿಗಳಲ್ಲೊಬ್ಬರಾದ ಸಿದ್ದರ ಸ್ತುತಿಯೊಂದಿಗೆ ಶಾಸನ ಪ್ರಾರಂಭವಾಗುತ್ತದೆ. ತರುವಾಯ ಒಂದು ದೀರ್ಘ ಕನ್ನಡ ಗದ್ಯ, ಅನಂತರದಲ್ಲಿ ಮೂರು ಸಂಸ್ಕೃತ ವೃತ್ತಗಳು (ಎರಡು ಶಾರ್ದೂಲವಿಕ್ರೀಡಿತ, ಒಂದು ಪೃಥ್ವಿ), ಅನಂತರದಲ್ಲಿ ಆರು ಕನ್ನಡವೃತ್ತಗಳು (ನಾಲ್ಕು ಚಂಪಕಮಾಲ, ಒಂದು ಮತ್ತೇಭವಿಕ್ರೀಡಿತ, ಒಂದು ತರಳ), ತರುವಾಯದಲ್ಲಿ ಮೂರು ತೆಲುಗು ಪದ್ಯಗಳು (ಕಂದಗಳು) ಬಂದು ಕೊನೆಗೊಂದು ಕನ್ನಡದ ಸಣ್ಣ ಗದ್ಯ ಭಾಗವಿದೆ. ಶಿಲ್ಪಿ ಬಹಳ ಜಾಕರೂಕತೆಯಿಂದ ಕೆತ್ತಿದ್ದರೂ ಅಲ್ಲಲ್ಲಿ ಸ್ವಲ್ಪ ತಪ್ಪುಗಳಿವೆ. ತೆಲುಗು ಪದ್ಯಗಳಲ್ಲಿ ಅವು ಅಧಿಕ. ಕಾರಣ ಪ್ರಾಯಃ ಶಿಲ್ಪಿಗೆ ತೆಲುಗುಭಾಷೆಯ ಪರಿಚಯವಿಲ್ಲದಿರಬಹುದೆಂದು ತೋರುತ್ತದೆ. ಆದರೂ ತೆಲುಗು ಸಾಹಿತ್ಯಕ್ಕೆ ಇದು ಬಹುಮುಖ್ಯವಾದ ಶಾಸನ. ಏಕೆಂದರೆ. ತೆಲುಗು ಭಾಷೆಯಲ್ಲಿ ಸದ್ಯಕ್ಕೆ ಇಲ್ಲಿಯವೇ ಪ್ರಥಮಕಂದಪದ್ಯಗಳು.

ಈ ಶಾಸನ ಜಿನವಲ್ಲಭ ಪ್ರಶಸ್ತಿಯಾದುದರಿಂದ ಇದರಲ್ಲಿ ಆತನ ವಂಶಚರಿತ್ರೆ, ಗುಣಸಂಪತ್ತಿ, ವೈದುಷ್ಯ ಹಾಗೂ ಮತಾಭಿನಿವೇಶನ ಮುಂತಾದ ವಿಷಯಗಳನ್ನು ವರ್ಣಿಸಲಾಗಿದೆ. ವಿವರ ಹೀಗಿದೆ :

ಜಿನವಲ್ಲಭ ವೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಜ್ಜ ಕಮ್ಮೆ ಬ್ರಾಹ್ಮಣ ಜಮದಗ್ನಿ ಪಂಚಾರ್ಷೇಯ ಶ್ರೀವತ್ಸ ಗೋತ್ರದಲ್ಲಿ ಹುಟ್ಟಿದ ಗುಂಡಿಕಜ್ಜ ನಿಡುಂಗೊಂಡೆಯ ಅಭಿಮಾನಚಂದ್ರನ ಮೊಮ್ಮಗನಾದ ಭೀಮಪ್ಪಯ್ಯನಿಗೆ ಬೆಳ್ವೊಲದಣ್ಣಿಗೆರೆಯ ಜೋಯಿಸಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಯ ಉದರದಲ್ಲಿ ಜನಿಸಿದಾತ. ಕೊಂಡಕುಂದೆಯ ದೇಸಿಯಗಣದ ಪುಸ್ತಕ ಗಚ್ಛಕ್ಕೆ ಸೇರಿದ ಪಂಡರಂಗವಲ್ಲಿಯ ಜಯಣಂದಿ ಸಿದ್ಧಾಂತ ಭಟಾರರ ಶಿಷ್ಯ. ಸಬ್ಬಿನಾಡ ನಟ್ಟನಡುವಿದ್ದ ಧರ್ಮಪುರದ ಉತ್ತರ ದಿಗ್ಭಾಗದಲ್ಲಿದ್ದ ವೃಷಭಗಿರಿಯಲ್ಲಿ ಅನಾದಿಕಾಲದಿಂದ ತೀರ್ಥಸ್ಥಳವೆಂದು ಪ್ರಸಿದ್ಧವಾದ ಆ ಪರ್ವತ ದಕ್ಷಿಣ ದಿಶಾಭಾಗದ ಸಿದ್ಧಶಿಲೆಯಲ್ಲಿ ತಮ್ಮ ಕುಲದೈವವೇ ಮೊದಲಾದ ದೇವತೆಗಳನ್ನೂ ಜಿನಬಿಂಬಗಳನ್ನು ಚಕ್ರೇಶ್ವರಿಯನ್ನೂ ಆಕೆಯ ಅಕ್ಕಪಕ್ಕದಲ್ಲಿ ಇನ್ನೂ ಕೆಲವು ಪ್ರತಿಮೆಗಳನ್ನೂ ಈತ ಕೆತ್ತಿಸಿದ. ತ್ರಿಭುವನ ತಿಲಕವೆಂಬ ಜಿನಬಸದಿಯನ್ನು ಕಟ್ಟಿಸಿದ. ಕವಿತಾಗುಣಾರ್ಣವವೆಂಬ ಕೆರೆಯನ್ನೂ ಮದನವಿಳಾಸವೆಂಬ ವನವನ್ನೂ ಮಾಡಿಸಿದ. ಅಣ್ಣ ಅಗ್ರಹಾರವಾಗಿ ಪಡೆದ ಧರ್ಮಪುರವನ್ನೂ ಅದರ ಹತ್ತಿರದ ವೃಷಭಗಿರಿಯಲ್ಲಿ ನಡೆಯುವ ಜೈನಾಭಿಷೇಕೋತ್ಸವವನ್ನೂ ನೋಡಲು ಬರುತ್ತಿದ್ದ ಯಾತ್ರಾರ್ಥಿಗಳಿಗೆ ಸನ್ಮಾನದಾನಗಳನ್ನು ಭೀಮನ ತನುಜನೂ ಪಂಪನ ಅನುಜನೂ ಆದ ಜಿನವಲ್ಲಭ ಮಾಡುತ್ತಿದ್ದ. ಈತ ಸಮ್ಯಕ್ತ್ವರತ್ನಾಕರ, ಗುಣಪಕ್ಷಪಾತಿ; ಚತುರ ಕವಿತ್ವರಚನೆಯಲ್ಲಿ ಸುಪ್ರಸಿದ್ಧ. ಮತ್ತೆ ಕಾವ್ಯವನ್ನು ವಿವರಿಸುವಲ್ಲಿ, ಸತ್ಪುರುಷರಿಗೆ ಕಾವ್ಯವನ್ನು ಹೇಳಿಕೊಡುವಲ್ಲಿ, ಸುಶ್ರಾವ್ಯವಾಗಿ ಸಂಗೀತವನ್ನು ಹೇಳುವಲ್ಲಿ, ಸರಾಗವಾಗಿ ಕಾವ್ಯವನ್ನು ವಾಚಿಸುವಲ್ಲಿ ಸಾಟಿಯಿಲ್ಲವೆನಿಸಿ ವಾಗ್ವಧೂವರವಲ್ಲಭನೆಂದು ಕೀರ್ತಿತನಾಗಿದ್ದವ.

ಜೈನಮತದಲ್ಲಿ ಅತೀವ ಶ್ರದ್ಧೆಯುಳ್ಳ ಜಿನವಲ್ಲಭ ಜಿನವಲ್ಲಭವನಗಳನ್ನು ನಿರ್ಮಿಸಿ ದ್ವಿಜರಿಗೆ ಆವಾಸಸ್ಥಾನವಾದ ಆ ದಕ್ಷಿಣ ವೃಷಭಾದ್ರಿಯ ಮೇಲೆ ಜಿನಬಿಂಬಗಳನ್ನೂ ಜೈನ ದೇವತೆಗಳನ್ನು ಕೆತ್ತಿಸಿ ಅದನ್ನೊಂದು ಚೈತ್ಯಾಲಯದ ಹಾಗೆ ಮಾಡಿಸಿದ. ಪಂಪ ಆ ಧರ್ಮಪುರವನ್ನು ದತ್ತಿಯಾಗಿ ಪಡೆದಿದ್ದನೆನ್ನುವ ವಿಷಯವನ್ನು ಪ್ರತಿನಿಧಿಸುವ ಪ್ರತೀಕಗಳಾಗಿ ಅವು ಮೆರೆದವು. ವೃಷಭಾದ್ರಿ ಜಿನಧರ್ಮದೊಂದಿಗೆ ನೃಪಕುಲತಿಲಕ ಅರಿಕೇಸರಿ ಹಾಗೂ ಕವಿಕುಲತಿಲಕ ಕವಿತಾಗುಣಾರ್ಣವ ಪಂಪ-ಇವರುಗಳ ಬಿರುದುಗಳನ್ನು ಹೊತ್ತು ನಿಂತಿತು.

ಶಾಸನ ಮತ್ತು ವಿಕ್ರಮಾರ್ಜುನ ವಿಜಯಗಳ ವಂಶಾವಳಿ ಹೀಗಿದೆ :

| **ಗಂಗಾಧರ ಶಾಸನ** | **ವಿಕ್ರಮಾರ್ಜುನ ವಿಜಯ** |
|---|---|
| ಅಭಿಮಾನಚಂದ್ರ (ಭವ್ಯರತ್ನಾಕರ) | ಮಾಧವ ಸೋಮಯಾಜಿ |
| (ಗುಂಡಿಕಜ್ಜ ನಿಡುಂಗೊಂಡೆಯ ನಿವಾಸಿ | (ಈತನ ಊರು ವೆಂಗಿ |
| ಬೆಳ್ವೊಲದಣ್ಣಿಗೆರೆಯ ಸಿಂಘ | ಮಂಡಲದ |
| ಜೋಯಿಸ) | ವೆಂಗಿಪಟು) |
| × | ಅಭಿಮಾನಚಂದ್ರ |
| × | ಕೊಮರಯ್ಯ |
| ಭೀಮಪಯ್ಯ (ಭಾರ್ಯೆ ಅಬ್ಬಣಬ್ಬೆ) | ಭೀಮ (ಫ. ಪ್ರತಿ) (ಅಭಿರಾಮದೇವರಾಯ?) |
| ಪಂಪ ಜಿನವಲ್ಲಭ (ಸಮ್ಯಕ್ತ್ವರತ್ನಾಕರ) | ಪಂಪ |

ಶಾಸನ ಹಾಗೂ ಪಂಪನಕೃತಿಯ ವಿವರಗಳನ್ನು ತೋಲನವಿಮರ್ಶೆಗೆ ಇಟ್ಟರೆ ವ್ಯಕ್ತವಾಗುವ ಅಂಶಗಳಿವು: 1) ಪಂಪನ ಅಜ್ಜನಾದ ಅಭಿಮಾನಚಂದ್ರನೇ ಜೈನ. ಆತ ಗುಂಡಿಕಜ್ಜ ನಿಡುಂಗೊಂಡೆಯ ವಾಸ್ತವ್ಯನೆಂಬುದು. 2) ಪಂಪನ ತಾಯಿಯಾಗಿರಬಹುದಾದ (?) ಅಬ್ಬಣಬ್ಬೆ ಬೆಳ್ವೊಲದ ಅಣ್ಣಿಗೆರೆಯ ಜೋಯಿಸಸಿಂಘನೆಂಬವನ ಮೊಮ್ಮಗಳೆಂಬುದು. 3) ಪಂಪ ದತ್ತಿಯಾಗಿ ಪಡೆದ ಅಗ್ರಹಾರವಾದ ಧರ್ಮಪುರ ಸಬ್ಬಿನಾಡ ನಟ್ಟನಡುವೆ ಇದ್ದಿತೆಂಬುದಲ್ಲದೆ ಅದು ಈಗಿನ ಬೊಮ್ಮಲಗುಟ್ಟದ ಪಕ್ಕದಲ್ಲೆಲ್ಲೊ ಇದ್ದಿತೆಂಬುದು. 4) ಪಂಪನಿಗೆ ಅರಿಕೇಸರಿ ಹಾಕಿಕೊಟ್ಟ ಶಾಸನ ಶಿಲಾಶಾಸನವಾಗಿದ್ದ ಅದು ವೃಷಭಾದ್ರಿಯಲ್ಲಿ ಇದ್ದಿತೆಂಬುದು. ಇತ್ಯಾದಿಗಳು ಹೊಸವಿಷಯಗಳು.

1) ಗುರುಪರಂಪರೆಯಲ್ಲಿ ದೇವೇಂದ್ರ ಮುನಿಗಳ ಹೆಸರಿಲ್ಲದುದು. 2) ಪಂಪನ ಕೃತಿ ಆದಿಪುರಾಣದ ಹೆಸರಿಲ್ಲದುದು. 3) ಅಜ್ಜಂದಿರಾದ ಮಾಧವ ಸೋಮಯಾಜಿ ಹಾಗೂ ಕೊಮರಯ್ಯ ಇವರುಗಳ ಹೆಸರಿಲ್ಲದೆ ಇರುವುದು. 4) ಪಂಪನ ಜೀವನಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೆ ಆತನ ಇತರ ಬಿರುದುಗಳ ಬಗೆಗೆ ಒಂದಕ್ಷರವೂ ಇಲ್ಲದುದು-ಇತ್ಯಾದಿಗಳು ಇಲ್ಲಿಯ ಲೋಪಗಳು.

ಈ ಶಾಸನವನ್ನು ಮೊದಲ ಬಾರಿ ಪ್ರಕಟಿಸಿದ ವಿದ್ವಾಂಸರು ಪಂಪನ ಅಥವಾ ಜಿನವಲ್ಲಭ ತಾಯಿಯ ಹೆಸರು ಅಬ್ಬಣಬ್ಬೆ ಎಂದೂ ಆಕೆ ಜೋಯಿಸ ಸಿಂಘನ ಮಗಳೆಂದೂ ಜಿನವಲ್ಲಭ ಗುರುಗಳು ಜಯಗೊಂಡ ಸಿದ್ಧಾಂತ ಭಟಾರರೆಂದೂ ಓದಿದ್ದರು. ಆದರೆ ಆಕೆಯ ಹೆಸರು. ಅಬ್ಬಣಬ್ಬೆ ಎಂದು ಪಿ.ಬಿ. ದೇಸಾಯಿಯವರೂ ಆಕೆ ಜೋಯಿಸಸಿಂಘನ ಮೊಮ್ಮಗಳೆಂದು ಎಂ.ಎಂ.ಕಲ್ಬುರ್ಗಿಯವರೂ ಆತನ ಗುರು ಜಯಣನ್ದಿಸಿದ್ಧಾಂತ ಭಟಾರರೆಂದು ಜಿ.ಎಸ್.ಗಾಯಿ ಅವರೂ ತೀರ್ಮಾನಿಸಿಕೊಟ್ಟಿದ್ದಾರೆ. ಜಿನವಲ್ಲಭ ತಾನು ಪಂಪನ ತಮ್ಮನೆಂದು ಸ್ಪಷ್ಟ ಹೇಳಿಕೊಂಡಿರುವುದರಿಂದ ಆತನ ವಂಶಾವಳಿ ಪಂಪನ ವಂಶಾವಳಿಗೆ ಸರಿಹೋಗುವದರಿಂದ ಆತನ ಈ ಗಂಗಾಧರ ಶಾಸನ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬನಾದ ಪಂಪನ ಚರಿತ್ರೆಯನ್ನು ಬರೆಯುವಲ್ಲಿ ಅತ್ಯಮೂಲ್ಯವಾದ ಸಾಧನವಾಗಿದ್ದು ಸುಮಾರು ಒಂದು ಸಾವಿರ ವರ್ಷ ತಿಳಿಯದಿದ್ದ ವಿಷಯವನ್ನು ತಿಳಿಸಿ ಹೊಸಬೆಳಕನ್ನು ಚೆಲ್ಲಿದೆ. ಈ ಶಾಸನವನ್ನು ಇತ್ತೀಚೆಗೆ ಭಾರತ ಸರ್ಕಾರ ರಾಷ್ಟ್ರೀಯ ಸ್ಮಾರಕಗಳಲ್ಲೊಂದೆಂದು ನಿರ್ಧರಿಸಿದೆ. (ಎಸ್.ಎಸ್.ಜೆ.ಎ.)

**ಗಂಗಾಧರ ಶಾಸ್ತ್ರೀ (ಪಟವರ್ಧನ) :** ಬಡೋದೆಯ ಗಾಯಕವಾಡ ವಂಶದ ರಾಜರಿಗೆ 19ನೆಯ ಶತಮಾನದ ಪ್ರಾರಂಭದಲ್ಲಿ ಮುಖ್ಯಮಂತ್ರಿಯಾಗಿದ್ದಾತ. ಅವರ ವಕೀಲನಾಗಿದ್ದನೆಂದೂ ಹೇಳಲಾಗಿದೆ. ಮೇಣವಳಿ ಇವನ ಮೂಲಸ್ಥಾನ. ಇವನ 8ನೆಯ ವಯಸ್ಸಿನಲ್ಲಿ ಈತನ ಅಜ್ಜ ಪಟವರ್ಧನ ಪುಣೆಯನ್ನು ಸೇರಿ ಅಲ್ಲಿ ಪೇಶ್ವೆಯರ ವಾಡೆಯಲ್ಲಿ ಗುಮಾಸ್ತ ಕೆಲಸ ಪಡೆದು ನಿಂತ. ಅದರ ಜೊತೆಗೆ ಹರಿಪಂತ ಫಡಕೆಗೆ ಉಪಾಧ್ಯಾಯನೂ ಆದ. ಪಟವರ್ಧನ ಪೇಶ್ವೆಯಲ್ಲಿ ಗುಮಾಸ್ತೆ ಕೆಲಸ ಮಾಡುತ್ತಾನೆಂಬ ವಿಷಯ ತಿಳಿದಕೂಡಲೆ ಹರಿಪಂತ ಆತನನ್ನು ಉಪಾಧ್ಯಾಯ ವೃತ್ತಿಯಿಂದ ಬಿಡಿಸಿದ. ಆ ಘಟನೆ ನಡೆದ ಬಳಿಕ ಗಂಗಾಧರಶಾಸ್ತ್ರೀ ಅಲ್ಲಿರದೆ ಕೃಷ್ಣಾತೀರಕ್ಕೆ ಹೋಗಿ ತನ್ನ ವಯಸ್ಸಿನ 20ನೆಯ ವರ್ಷದವರೆಗೂ ಶಾಸ್ತ್ರಾಧ್ಯಯನ ಮಾಡಿದ. ಅನಂತರ ಪುಣೆಗೆ ಮರಳಿ, ತನ್ನ ಕುಟುಂಬದವರೆಲ್ಲರನ್ನೂ ಕರೆದುಕೊಂಡು ಬಡೋದೆಗೆ ಹೋದ.

ಗಂಗಾಧರಶಾಸ್ತ್ರೀ ಬಡೋದೆಯಲ್ಲಿ ವಾಕರ್ ಎಂಬ ಇಂಗ್ಲಿಷ್ ಅಧಿಕಾರಿಯ ಆಗ್ರಹದ ಮೇರೆಗೆ ಆಂಗ್ಲರ ಪಕ್ಷದ ಅಧಿಕಾರಿಯಾಗಿ ಗಾಯಕವಾಡರ ದರ್ಬಾರಿನಲ್ಲಿ ನಿಂತ. 1814ರಲ್ಲಿ ಗಾಯಕವಾಡ ಹಾಗೂ ಪೇಶ್ವೆ ಮನೆತನಗಳ ಮಧ್ಯೆ ಇದ್ದ ಕೊಡು-ಕೊಳ್ಳುವ ಲೆಕ್ಕವನ್ನು ತೀರ್ಮಾನಿಸುವ ಕಾರ್ಯನಿಮಿತ್ತ ಶಾಸ್ತ್ರೀ ಬಡೋದೆಯಿಂದ ಪುಣೆಗೆ ಹೋದ. ಇದೇ ಸಮಯವನ್ನು ಸಾಧಿಸಿ ದಿವಾನ ಸೀತಾರಾಮ ರಾವಜಿ ಎಂಬಾತ ಪೇಶ್ವೆ ಬಾಜಿರಾಯನ (1796-1818) ಮನಸ್ಸನ್ನು ಕೆಡಿಸಿ ಗಂಗಾಧರಶಾಸ್ತ್ರೀ ಆಂಗ್ಲರಿಗೆ ಬೇಕಾದವನು ಎಂದು ಚಾಡಿ ಹೇಳಿ, ಶಾಸ್ತ್ರೀ ಹೋದ ಕಾರ್ಯದಲ್ಲಿ ಯಶಸ್ವಿಯಾಗದ ಹಾಗೆ ವಿರುದ್ಧ ವಾತಾವರಣ ಸೃಷ್ಟಿಮಾಡಿದ. ಶಾಸ್ತ್ರೀ ತೀರ್ಮಾನಿಸಲು ಹೋದ ಕೆಲಸ ಎಳಕಲಿಗೆ ಬಿತ್ತು. ಎಷ್ಟೋ ದಿವಸಗಳು ಕಳೆದ ಮೇಲೆ ಒಮ್ಮೆ ಆತ 2ನೆಯ ಬಾಜೀರಾಯನೊಂದಿಗೆ ದೇವತಾದರ್ಶನಕ್ಕೆಂದು ಶ್ರೀಕ್ಷೇತ್ರ ಪಂಢರಪುರಕ್ಕೆ ಹೋಗಿ ಮರಳುವಾಗ್ಗೆ ದಾರಿಯಲ್ಲಿ ಯಾರೊ ಇವನನ್ನು ಕಡಿದು ತುಂಡು ಮಾಡಿ ಹಾಕಿದರೆಂದು ಒಂದು ಹೇಳಿಕೆಯಿದೆ. ಲೇವಾದೇವಿ ಲೆಕ್ಕ ನಿರ್ಣಯಿಸಲು ಬಂದ ಇವನನ್ನು ತ್ರಿಂಬಕಜೀ ಎಂಬಾತನ ಕುತಂತ್ರದಿಂದ 2ನೆಯ ಬಾಜೀರಾಯ ನಾಸಿಕಕ್ಕೆ ಕಳುಹಿಸಿ ಅಲ್ಲಿ ಕೊಲ್ಲಿಸಿದನೆಂದು ಇನ್ನೊಂದು ಹೇಳಿಕೆಯಿದೆ. ವಸ್ತುಸ್ಥಿತಿ ಏನೇ ಇರಲಿ, ಗಂಗಾಧರಶಾಸ್ತ್ರೀಯ ಕೊಲೆಯಾದ್ದಂತೂ ನಿಜ. ಇದು ತಮ್ಮ

ಸರ್ಕಾರಕ್ಕೆ ಅಪ್ರಿಯವಾದ ಕಾರ್ಯವೆಂದು ಇಂಗ್ಲಿಷರು ಬಗೆದು ಪೇಶ್ವೆಗೆ ಇದ್ದ ಅಧಿಕಾರವೆಲ್ಲವನ್ನು ಕಿತ್ತುಕೊಂಡರು.

ಈತನ ವಂಶಜರು ಇನ್ನೂ ಪುಣೆ ಹಾಗೂ ಬಡೋದೆಗಳಲ್ಲಿ ಇದ್ದಾರೆ. ಪೇಶ್ವೆ ಮನೆತನದ ಅಧಿಕಾರದ ಮುಕ್ತಾಯಕ್ಕೆ ಶಾಸ್ತ್ರೀಯ ಕೊಲೆ ನಿಮಿತ್ತವಾದ್ದರಿಂದ ಆತನ ಹೆಸರು ಇತಿಹಾಸದಲ್ಲಿ ಸ್ಥಾನ ಗಳಿಸಿಕೊಂಡಿದೆ. (ಎಸ್.ಎಸ್.ಜಿ.ಎ.)

**ಗಂಗಾ ನದಿ :** ಉತ್ತರ ಭಾರತದ ದೊಡ್ಡ ನದಿ, ಹಿಂದುಗಳಿಗೆ ಪವಿತ್ರವಾದ ನದಿ. 2525 ಕಿಮೀ. ಉದ್ದವಿದೆ. ಇದರ ಜಲಾನಯನ ಭೂಮಿಯ ವಿಸ್ತೀರ್ಣ 951600 ಚ.ಕಿಮೀ. ಇದು ಏಷ್ಯದ ಅತ್ಯಂತ ವಿಸ್ತಾರವೂ ಜನನಿಬಿಡವೂ ಆದ ನದೀಬಯಲುಗಳಲ್ಲೊಂದು. ಗಂಗಾ ನದಿ ಮಧ್ಯ ಹಿಮಾಲಯ ಪ್ರದೇಶದಿಂದ ಆಗ್ನೇಯಾಭಿಮುಖವಾಗಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಇದಕ್ಕೆ ವಿಷ್ಣುಪಾದಿ, ಜಾಹ್ನವಿ, ಮಂದಾಕಿನೀ, ಭಾಗಿರಥೀ, ವರನದಿ, ತ್ರಿಪಥಗಾ, ಹರಶೇಖರಾ ಎಂದು ಅನೇಕ ಹೆಸರುಗಳುಂಟು. ಗಂಗೆಯನ್ನು ದೇವಿಯೆಂದು ಎಷ್ಟೋ ದೇವಾಲಯಗಳಲ್ಲಿ ಪೂಜೆ ಮಾಡುತ್ತಾರೆ. ಗಂಗೆಯ ದೇವತಾಮೂರ್ತಿಗಳಲ್ಲಿ ಮತ್ಸ್ಯ, ಮಕರ, ಪದ್ಮ, ಕಲಶ ಲಾಂಛನಗಳಿರುತ್ತವೆ. ಪಾಪವನ್ನು ತೊಳೆಯುವ ಶಕ್ತಿ ಗಂಗೆಯ ವೈಶಿಷ್ಟ್ಯವೆಂದು ಅನೇಕರ ನಂಬಿಕೆ. ಗಂಗಾನದಿಯನ್ನು ಗಂಗಾಮಾಯಿ, ಗಂಗಾಜಿ ಎಂದು ಭಕ್ತಿಯಿಂದ ಕರೆಯುವುದಂಟು. ಗಂಗಾಸ್ನಾನದ ಪುಣ್ಯವನ್ನು ಪುರಾಣಗಳೆಲ್ಲ ಕೊಂಡಾಡುತ್ತವೆ. ವೈಶಾಖ ಸಪ್ತಮಿಯನ್ನು ಗಂಗಾಸಪ್ತಮಿಯೆನ್ನುವರು. ಅಂದು ಶ್ರದ್ಧಾನ್ವಿತರು ಸ್ನಾನ ಮಾಡಿ ಮುಡಿ ಒಪ್ಪಿಸುತ್ತಾರೆ. ಶುಭಕರ್ಮಗಳೆಲ್ಲೆಲ್ಲ ಗಂಗೆಯನ್ನು ಪೂಜಿಸುವ ಪದ್ಧತಿಯುಂಟು. ಗಂಗಾತೀರದ ಮರಣ ಪುಣ್ಯಕರವೆಂಬ ನಂಬಿಕೆಯಿದೆ.

**ಉಗಮ, ಹರಿವು :** ಮಹಾಭಾರತದ ಪ್ರಕಾರ ಗಂಗಾನದಿ ಉಗಮಿಸುವುದು ಬಿಂದುಸಾರದಲ್ಲಿ. ಜೈನಗ್ರಂಥವಾದ ಜಂಬುದ್ದೀವ–ಪಣ್ಣತ್ತಿಯ ಪ್ರಕಾರ ಪದ್ಮಹ್ರದ ಇದರ ಉಗಮಸ್ಥಳ. ಅನೋತತ್ತ ಸರೋವರದ ದಕ್ಷಿಣಮುಖದಲ್ಲಿ ಗಂಗೆ ಉಗಮಿಸುತ್ತದೆಯೆಂಬುದಾಗಿ ಪಾಳಿ ಗ್ರಂಥಗಳಿಂದ ಗೊತ್ತಾಗುತ್ತದೆ. ಆಧುನಿಕ ಭೂಗೋಳಶಾಸ್ತ್ರಜ್ಞರ ಪ್ರಕಾರ ಉತ್ತರ ಪ್ರದೇಶದ ತೆಹ್ರಿ–ಘರ್‌ವಾಲ್ ಜಿಲ್ಲೆಯಲ್ಲಿ, ಗಂಗೋತ್ರಿಯ ಬಳಿ, ಹಿಮಾಲಯದ ಬರ್ಫಪೀಠವೊಂದರ ಬುಡದ ಮಂಜುಗುಹೆಯಲ್ಲಿ ಭಾಗೀರಥಿಯ ಉಗಮವಾಗುತ್ತದೆ. ಇದು ಗಂಗಾನದಿಯ ಜಲಮೂಲದ ಎರಡು ಮುಖ್ಯ ಝರಿಗಳಲ್ಲೊಂದು; ಅವೆರಡರಲ್ಲಿ ಚಿಕ್ಕದು. ಮತ್ತೊಂದು ಶಾಖೆಯ ಹೆಸರು ಅಲಕನಂದಾ. ಇದರ ಉಗಮ ಟಿಬೆಟ್ ಗಡಿಯ ಬಳಿ. ಇವೆರಡೂ ಇನ್ನೂ ಹಲವು ಸಣ್ಣ ಹೊಳೆಗಳೂ ಹರಿದ್ವಾರಕ್ಕೆ 64 ಕಿ.ಮೀ. ಮೇಲೆ, ದೇವಪ್ರಯಾಗದಲ್ಲಿ ಕೂಡಿಕೊಳ್ಳುತ್ತವೆ. ಅಲ್ಲಿಂದ ಮುಂದಕ್ಕೆ ಹರಿಯುವ ನದಿಯೇ ಗಂಗಾ ಎಂದು ಹೆಸರು ತಳೆಯುತ್ತದೆ. ಡೆಹ್ರಾ ಡೂನಿನಿಂದ ಹರಿದ್ವಾರದ ವರೆಗೆ ನದಿಯ ಪ್ರವಾಹದ ವೇಗ ಬಲು ಹೆಚ್ಚು. ಹರಿದ್ವಾರದ ಬಳಿ ಅದು ಮೈದಾನವನ್ನು ಪ್ರವೇಶಿಸುತ್ತದೆ. ಹರಿದ್ವಾರಕ್ಕೆ ಗಂಗಾದ್ವಾರವೆಂದೂ ಹೆಸರುಂಟು. ಮಂದಾಕಿನಿ ಎಂಬುದು ಅಲಕನಂದಾದ ಉಪನದಿಗಳಲ್ಲೊಂದು. ಘರ್‌ವಾಲಿನ ಕೇದಾರನಾಥದಲ್ಲಿ ಉಗಮಿಸುವ ಕಾಳಿಗಂಗಾವೇ ಇದು. ಗಂಗಾನದಿಯ ಪ್ರವಾಹ ವರ್ಷವೆಲ್ಲ ಏಕರೀತಿಯಾಗಿರುವುದಿಲ್ಲವಾದರೂ ಭಾರತದ ಇತರ ಹಲವು ನದಿಗಳಂತೆ ಇದು ತೀವ್ರವಾದ ಏರಿಳಿತಗಳಿಗೆ ಒಳಗಾಗಿರುವುದಿಲ್ಲ. ಮುಂಗಾರಿನ ಮಳೆಯ ನೀರಿನ ಜೊತೆಗೆ ಬೇಸಗೆಯಲ್ಲಿ ಹಿಮಾಲಯದ ಮಂಜು ಕರಗಿದ ನೀರೂ ಹರಿಯುತ್ತದೆ.

ಉತ್ತರ ಪ್ರದೇಶದ ಪಶ್ಚಿಮ ಮೈದಾನದಲ್ಲಿ ದಕ್ಷಿಣಾಭಿಮುಖವಾಗಿ ಹರಿಯುವ ನದಿ ಕಾನ್ಪುರದಿಂದ ಅಲಹಾಬಾದಿನ ವರೆಗೆ ಆಗ್ನೇಯ ದಿಕ್ಕಿನಲ್ಲಿ ಪ್ರವಹಿಸಿ, ಅಲ್ಲಿ ಯಮುನಾ ನದಿಯನ್ನು ಕೂಡಿಕೊಂಡು ಪೂರ್ವ ದಿಕ್ಕಿಗೆ ಹರಿದು, ವಾರಾಣಸಿಯ ಬಳಿ ಉತ್ತರದಿಂದ ಬರುವ ಘಾಘ್ರ ಮತ್ತು ದಕ್ಷಿಣದಿಂದ ಬರುವ ಸೋನ್ ನದಿಗಳಿಂದ ಕೂಡಿ ಬಿಹಾರದ ನಡುವೆ ಪೂರ್ವದ ಕಡೆಗೆ ಪ್ರವಹಿಸಿ, ಉತ್ತರದ ಕಡೆಯಿಂದ ಬರುವ ಗಂಡಕ್ ಮತ್ತು ಕೋಸಿ ನದಿಗಳನ್ನು ಸಂಗಮಿಸಿಕೊಳ್ಳುತ್ತದೆ. ಅಲ್ಲಿ ಇದು ಛೋಟಾನಾಗಪುರ ಪ್ರಸ್ಥಭೂಮಿಯನ್ನು ಬಳಸಿ ಆಗ್ನೇಯ ದಿಕ್ಕಿನಲ್ಲಿ ಪ್ರವಹಿಸಿ ಹಲವಾರು ಕವಲುಗಳಾಗಿ



ಒಡೆದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಬಾಂಗ್ಲಾ ದೇಶದಲ್ಲಿ ಗಂಗಾ–ಬ್ರಹ್ಮಪುತ್ರಾ ನದಿಗಳು ಒಂದಾಗುತ್ತವೆ. ಪದ್ಮಾ ನದಿ ಇವುಗಳ ಸಂಗಮದ ಪರಿಣಾಮ.

ಗಂಗಾನದಿಯನ್ನು ಆದಿ, ಮಧ್ಯ ಮತ್ತು ಅಂತ್ಯ ಗಂಗಾ ಎಂದು ಸ್ಥೂಲವಾಗಿ ವಿಭಾಗಿಸಬಹುದು. ಉತ್ತರ ಪ್ರದೇಶದ ಪಶ್ಚಿಮಾರ್ಧದಲ್ಲಿರುವ ಭಾಗ ಆದಿ ಗಂಗಾ ಅದರ ಮುಖ್ಯ ಕೂಡು ನದಿಗಳಾದ ಘಾಘ್ರಾ ಮತ್ತು ಗೋಮತಿಗಳು ಮಧ್ಯ ಗಂಗಾ ಬಯಲಿನಲ್ಲಿ ಅದರೊಡನೆ ಸಂಗಮವಾಗುತ್ತದೆ. ಗಂಗಾನದಿಗೆ ಸೇರುವ ಕೂಡುನದಿಗಳೆಲ್ಲ ಲಘುಕೋನಗಳಲ್ಲಿ ಸಂಗಮಿಸುತ್ತವೆ. ಉಪನದಿಗಳು ಗರಿಯಂತೆ ಕೆದರಿಕೊಂಡಿವೆ. ಇವುಗಳ ಮರಳು ದಿಬ್ಬಗಳು ಮಳೆಗಾಲದಲ್ಲಿ ಮುಳುಗಿ ಹೋಗುತ್ತವೆ. ಈ ನದಿಗಳು ಬಳಸಿ ಹರಿಯುತ್ತವೆ. ಇವು ಆದಿಗಂಗಾ ಪ್ರದೇಶದ ಎಲ್ಲ ಉಪನದಿಗಳ ಸಾಮಾನ್ಯ ಲಕ್ಷಣಗಳು. ಗಂಗಾ ನದಿಯ ಪ್ರಮುಖ ಉಪನದಿಗಳಾದ ಯಮುನಾ, ರಾಮಗಂಗಾ, ಮತ್ತು ಘಾಘ್ರಾ ಇಡೀ ವರ್ಷ ತುಂಬಿ ಹರಿಯುವ ಹಿಮಾಲಯನ್ ನದಿಗಳು. ಘಾಘ್ರಾ ಮತ್ತು ಗೋಮತಿ ನದಿಗಳು ಅವಧ್ (ಅಯೋಧ್ಯಾ) ಮತ್ತು ಸರಯೂ ಪಾರ್ ಕಣಿವೆಗಳಲ್ಲೂ ರಾಮಗಂಗಾ ರೋಹಿಲ್ ಖಂಡದ ಬಯಲಿನಲ್ಲೂ ಹರಿಯುತ್ತವೆ. ಈ ಭಾಗದ ಮುಖ್ಯ ನೀರಾವರಿ ವ್ಯವಸ್ಥೆಯೆಂದರೆ ಹರಿದ್ವಾರದ ಬಳಿ ಗಂಗೆಯ ಬಲದಂಡೆಯಿಂದ ಹೊರಟು ಮಣಿಪುರದ ವರೆಗೆ ಸು. 15.79 ಲಕ್ಷ ಎಕರೆಗಳಷ್ಟು ಕೃಷಿ ಭೂಮಿಗೆ ನೀರು ಒದಗಿಸುವ ಗಂಗಾನಾಲೆ. ಇದರಿಂದ ಸಹಾರನ್‌ಪುರ, ಮುಜಫರ್ ನಗರ, ಬುಲಂದ್‌ಶಹರ್, ಮೀರತ್, ಇಟಾವಾ, ಆಲೀಗಢ, ಮಥುರಾ, ಕಾನ್ಪುರ, ಮೈನ್‌ಪುರಿ, ಫರೂಕಾಬಾದ್ ಮತ್ತು ಫತೇಗಢ ಜಿಲ್ಲೆಗಳಿಗೆ ಅನುಕೂಲವಾಗಿದೆ. ಗಂಗಾ ಮತ್ತು ಯಮುನಾ ನದಿಗಳು ಸಂಗಮಿಸುವುದು ಪ್ರಯಾಗದಲ್ಲಿ (ಅಲಹಾಬಾದ್).

ಗಂಗಾದೇವತೆ (12ನೆಯ ಶತಮಾನ, ಸೇನ ರಾಜವಂಶ)

ಮಧ್ಯಗಂಗಾ ಬಯಲು ಭಾರತದ ಹೃದಯಭಾಗ. ಅದು ಉತ್ತರ ಪ್ರದೇಶದ ಪೂರ್ವಾರ್ಧವನ್ನು, ಅಂದರೆ ಪೂರ್ಬಿಯ ಬಯಲು ಮತ್ತು ಬಿಹಾರ ರಾಜ್ಯದ ಬಹುಭಾಗವನ್ನು ಒಳಗೊಂಡಿದೆ. ಈ ಭಾಗದಲ್ಲೂ ಉಪನದಿಗಳು ಲಘುಕೋನಗಳಲ್ಲಿ ಹರಿದು ಗಂಗೆಯೊಡನೆ ಸಂಗಮವಾಗುತ್ತವೆ; ಕೆಲವು ಅದಕ್ಕೆ ಸಮಾಂತರದಲ್ಲಿ ಹರಿಯುತ್ತವೆ. ಗಂಗಾ ನದಿ ಹೊತ್ತು ತಂದ ಮೆಕ್ಕಲು ಮರಳು ಹಾಗೂ ಪುಡಿಗಲ್ಲುಗಳ ಸಮೇತ ಅದು ನಿಧಾನವಾಗಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಗಂಗಾ ನದಿಗೆ ದಕ್ಷಿಣದಲ್ಲಿರುವ ಗುಡ್ಡನಾಡುಗಳಿಗಿಂತ ಹಿಮಾಲಯದ ತಪ್ಪಲು ದೂರವಿರುವುದರಿಂದ ಅದರ ಉತ್ತರದ ಕೂಡು ನದಿಗಳು ಸಮತಲ ಪ್ರಸ್ಥಭೂಮಿಗಳಲ್ಲಿ ಹೆಚ್ಚು ದೂರದಿಂದ ಬಳಸಿ ನಿಧಾನವಾಗಿ ಹರಿದು ಬರುತ್ತವೆ. ಅವುಗಳಲ್ಲಿ ಮುಖ್ಯವಾದವು ಗೋಮತಿ, ಘಾಘ್ರಾ, ಭಾಗಮತಿ ಮತ್ತು ಕೋಸಿ. ದಕ್ಷಿಣದ ಕೂಡುನದಿಗಳು ತಗ್ಗುಭೂಮಿಯತ್ತ ರಭಸದಿಂದ ಹರಿದು ಬರುತ್ತವೆ. ಗಂಗಾ ನದಿಯ ದಕ್ಷಿಣದ ದಂಡೆ ಕಂಕರು, ಜೆಲ್ಲಿ ಮತ್ತು ಬಲವಾದ ಬಂಡೆಗಳ ಸಾಲುಗಳಿಂದ ಕೂಡಿದೆ. ಮಿರ್ಜಾಪುರ, ವಾರಾಣಸಿ, ಪಾಟ್ನ ಮತ್ತು ಮುಂಗೇರ್ ಕಡೆ ಈ ಬಂಡೆಗಳ ಸಾಲು ಹೆಚ್ಚು. ಆದ್ದರಿಂದ ಅದರ ದಕ್ಷಿಣದ ದಂಡೆ ಉತ್ತರದ ದಂಡೆಗಿಂತ ಭದ್ರವಾಗಿದೆ. ಸರಯೂಪಾರ್ ನದಿಯೊಂದಿಗೆ ಕೂಡಿಕೊಂಡು ಬರುವ ಘಾಘ್ರ ಪಾಟ್ನದ ಪಶ್ಚಿಮಕ್ಕೆ ಛಪ್ರಾ ಬಳಿ ಗಂಗಾ ನದಿಯೊಂದಿಗೆ ಸಂಗಮವಾಗುತ್ತದೆ. ಹಿರಿಯ ಉಪನದಿಗಳು ಹರಿದುಬಂದು ಗಂಗೆಯೊಂದಿಗೆ ಸಂಗಮವಾಗುವ ಪ್ರದೇಶಗಳನ್ನೆಲ್ಲ ದೊ–ಅಬ್‌ಗಳೆಂದು ಕರೆಯುತ್ತಾರೆ. ಇಡೀ ಗಂಗಾ ಬಯಲು ಗಂಗಾ–ಯಮುನಾ ದೋ–ಅಬ್, ನದಿ ಅಂತರ್ವೇದಿ ಗಂಗಾ–ಘಾಘ್ರ ದೋ–ಅಬ್, ಗಂಗಾ–ಸೋನ್ ದೋ–ಅಬ್ ಎಂದು ಮುಂತಾಗಿ ವಿಭಜಿತವಾಗಿವೆ. ಗಂಗಾ–ಘಾಘ್ರ ದೋ–ಅಬ್ ಪ್ರದೇಶದಲ್ಲಿ ಪ್ರವಹಿಸಿ ಗಂಗಾ ನದಿಯನ್ನು ನೇರವಾಗಿ ಸೇರುವ ನದಿಗಳಲ್ಲಿ ಗೋಮತಿ, ಛೋಟಿ ಸರಯು, ಮಾಂಗೈ ಬೇಸು ಮತ್ತು ಗಂಗಿ ಮುಖ್ಯವಾದವು. ಉತ್ತರದಿಂದ ಹರಿದು ಗಂಗೆಯನ್ನು ಸೇರುವ ಘಾಘ್ರಾ, ರಪ್ತಿ, ಗಂಡಕ್ ಇವು ತಮ್ಮ ಪಾತ್ರಗಳನ್ನು ಬದಲಾಯಿಸುತ್ತಿರುತ್ತವೆ ; ಗಂಡಕ್ ಮತ್ತು ಪೂರ್ವಕ್ಕಿರುವ ಕೋಸಿ ನದಿಗಳ ನಡುವೆ ಹರಿಯುವ ಬಡೀಗಂಡಕ್ ನದಿ ಭಾಗಮತಿಯೊಂದಿಗೆ ಸಂಗಮಿಸಿ ಗಂಗೆಯಲ್ಲಿ ಲೀನವಾಗುತ್ತದೆ. ಹಿಮಾಲಯದ ಪೂರ್ವಭಾಗದಿಂದ ಇಳಿದು ಪೂರ್ಣಿಯ ಜಿಲ್ಲೆಯಲ್ಲಿ ಗಂಗೆಯನ್ನು ಸೇರುವ ಕೋಸಿ ಬಿಹಾರದ ಕಣ್ಣೀರಿನ ನದಿ ಎಂಬ ಹೆಸರು ಪಡೆದಿದೆ. ಅದು ಕಳೆದ ಎರಡು ಶತಮಾನಗಳಲ್ಲಿ ದರ್ಭಾಂಗ ಜಿಲ್ಲೆಯಲ್ಲಿ ಪೂರ್ಣಿಯ ನಗರದಿಂದ ಹಿಡಿದು ತಿಲ್‌ಜುಗ ವರೆಗಿನ ಪ್ರದೇಶದಲ್ಲಿ ಸು. 120 ಕಿಮೀ.ದೂರ ಸರಿದುಬಂದಿದೆ. ಈ ನದಿಯನ್ನು ಪಳಗಿಸುವ ಉದ್ದೇಶದಿಂದಲೇ ಕೋಸಿ ಜಲಾಶಯ ಯೋಜನೆಯನ್ನು ಜಾರಿಗೆ ತರಲಾಗಿದೆ.

ಮಧ್ಯಗಂಗಾ ದಕ್ಷಿಣದಿಂದ ಸ್ವೀಕರಿಸುವ ನದಿಗಳಲ್ಲಿ ಅತ್ಯಂತ ದೊಡ್ಡದು ಸೋನ್ ದಕ್ಷಿಣದ ನದಿಗಳು ಮಳೆಗಾಲದಲ್ಲಿ ತಮ್ಮ ಜಲಾನಯನ ಭೂಮಿಯಲ್ಲಿ ಸಂಗ್ರಹವಾಗುವ ನೀರಿನೊಂದಿಗೆ ರಭಸವಾಗಿ ಹರಿಯುತ್ತವೆ. ಇವು ವಿಶಾಲವಾದ ಹಾಗೂ ಆಳವಿಲ್ಲದ ನದಿಗಳಾದ ಪ್ರಯುಕ್ತ ಬೇಸಗೆಯಲ್ಲಿ ಅಲ್ಲಲ್ಲಿ ಮಡುಗಳಾಗಿ ನಿಲ್ಲುತ್ತವೆ. ವಿಂಧ್ಯಪರ್ವತಗಳ ಕಡೆಯಿಂದ ಉತ್ತರಾಭಿಮುಖವಾಗಿ ಹರಿದು ಗಂಗಾ ನದಿಯನ್ನೂ ಸೇರುವ ನದಿಗಳು ಕರ್ನೌಟಿ, ಓಜ್ನಾಲ, ಖೇಜೂರಿ ಜಾತರ್, ಜಾರ್ಗೋ ಮತ್ತು ತಾನ್ಸಾ. ಸೋನ್ ನದಿಯ ಪೂರ್ವಕ್ಕೆ ಛೋಟಾನಾಗಪುರ ಪ್ರಸ್ಥಭೂಮಿಗೆ ಉತ್ತರದಲ್ಲಿ ಉತ್ತರಕ್ಕೆ ಹರಿದು ಗಂಗಾ ನದಿಯನ್ನು ಸೇರುವ ಉಪನದಿಗಳಲ್ಲಿ ಪ್ರಮುಖವಾದುವು

ಪುನ್‌ಪುನ್, ಮೋಹಿನಿ ಮತ್ತು ಚಂದನ್, ಪ್ರವಾಹಕಾಲದಲ್ಲಿ ಗಂಗಾ ನದಿಯ ನೀರು ಈ ನದಿಗಳ ನೀರನ್ನು ಒತ್ತರಿಸಿ, ಅವುಗಳ ಅಕ್ಕಪಕ್ಕದ ಪ್ರದೇಶಗಳೆಲ್ಲ ಜಲಾವೃತವಾಗಿರುತ್ತವೆ.

ಗಂಗೋತ್ರಿ : ಗಂಗಾನದಿಯ ಉಗಮಸ್ಥಳ

ಗಂಗಾ ನದಿಯ ಅಂತ್ಯಭಾಗ ಪೂರ್ಣಿಯ ಜಿಲ್ಲೆಯ ಕೃಷ್ಣಗಂಜ್ (ಪುರಿಲಿಯಾ ಜಿಲ್ಲೆ ಮತ್ತು ಡಾರ್ಜಿಲಿಂಗ ಜಿಲ್ಲೆಯ ಪರ್ವತ ಭಾಗಗಳ ವಿನಾ) ಇಡೀ ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶದ ಬಹು ಭಾಗಗಳನ್ನು ಒಳಗೊಂಡಿದೆ. ಈ ಇಡೀ ಪ್ರದೇಶ ಗಂಗಾ ನದಿಯ ಮುಖಜಭೂಮಿಯೆಂದು ಪರಿಗಣಿತವಾಗಿದ್ದರೂ ರಾಜ್ ಮಹಲ್–ಗಾರೋ ಪ್ರದೇಶವೇ ವಾಸ್ತವವಾಗಿ ಅದರ ಮುಖಜ ಭೂಮಿ. ಇದು ಬಹುಶಃ ಪ್ರಪಂಚದ ಅತ್ಯಂತ ದೊಡ್ಡ ನದೀಮುಖಜಭೂಮಿ.

ಗಂಗಾ ನದಿ ಈ ಭಾಗದಲ್ಲಿ ಅನೇಕ ಶಾಖೆಗಳಾಗಿ ಒಡೆಯುತ್ತದೆ ಹಲವಾರು ಉಪನದಿಗಳೂ ಬಂದು ಸೇರುತ್ತವೆ. ಇವು ದಕ್ಷಿಣ ದಿಕ್ಕಿಗೆ ಹರಿಯುತ್ತವೆ. ಬತ್ತಿಹೋದ ನದಿಗಳ ಭಾಗ; ಸುಂದರಬನದ ಮುಖಜಭೂಮಿ ; ಬೀರ್ ಭೂಮ್, ಬರ್ದ್‌ವಾನ್, ಮಿಡ್ನಾಪುರ, ಹೂಗ್ಲಿ ಮತ್ತು ಹೌರ ಜಿಲ್ಲೆಗಳ ಫಲವತ್ತಾದ ಭೂಮಿ–ಇವು ಈ ನದೀಮುಖಜಭೂಮಿಯ ಮುಖ್ಯ ವಿಭಾಗಗಳು.



ಹೃಷೀಕೇಶದ ಬಳಿಯಲ್ಲಿ ಗಂಗಾ

ಗಂಗಾ ನದಿಯ ಶಾಖೆಗಳಲ್ಲಿ ಪದ್ಮಾ ಮತ್ತು ಹೂಗ್ಲಿ ದೊಡ್ಡವು. ಹಿಮಾಲಯದ ಕಡೆಯಿಂದ ಮಹಾನಂದ, ಕರತೋಯ, ತಿಷ್ಟ, ಸಂಕೋಶ್ ಮೊದಲಾದ ನದಿಗಳು ಹರಿದುಬರುತ್ತವೆ; ಭಾಗೀರಥಿ ಮತ್ತು ಹೂಗ್ಲಿ ನದಿಗಳನ್ನು ಕೂಡುವ ಮಯೂರಾಕ್ಷಿ, ದಾಮೋದರ್, ದ್ವಾರಕೇಶ್ವರ ನದಿಗಳು ರಭಸದಿಂದ ಹರಿದು ಬರುತ್ತವೆ. ಪದ್ಮಾ ಹಾಗೂ ಹೂಗ್ಲಿಗಳ ನಡುವಣ ಭಾಗ ನದೀಕವಲುಗಳ ಪ್ರದೇಶವಾಗಿದ್ದು, ಅಲ್ಲಿ ಜೌಗು ಹೆಚ್ಚು. ಗಂಗಾನದಿಯ ಮುಖ್ಯ ಶಾಖೆಯಾದ ಹೂಗ್ಲಿಯೂ ಇತರ ಹಲವು ಕವಲುಗಳೂ ಸುಂದರಬನಗಳತ್ತ ಸಾಗಿ, ಸಾಗರದ್ವೀಪದ ಬಳಿ ಬಂಗಾಳ ಕೊಲ್ಲಿಗೆ ಬೀಳುತ್ತವೆ. ಗಂಗಾನದಿಯ ಇನ್ನೊಂದು ಶಾಖೆ ಪದ್ಮಾ. ಅದು ಬಾಂಗ್ಲಾ ದೇಶದ ಗಡಿಯನ್ನೂ ಪ್ರವೇಶಿಸಿ ಬ್ರಹ್ಮಪುತ್ರಾ ನದಿಯೊಂದಿಗೆ ಕೂಡಿಕೊಂಡು ಇಳಿದು ಚಿತ್ತಗಾಂಗ್‌ಗೆ ಉತ್ತರದಲ್ಲಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಕೋಲ್ಕೊತ ನಗರ ಇರುವುದು ಹೂಗ್ಲಿಯ ದಂಡೆಯ ಮೇಲೆ, ನದಿಯ ಮೇಲಿನಿಂದ ಕೋಲ್ಕೊತ ಬಂದರಿಗೆ ನಿರಂತರ ತೊಂದರೆಯುಂಟು. ಗಂಗಾನದಿಯ ಕೆಳಭಾಗದ ಪ್ರದೇಶದಲ್ಲಿ ಜನಸಾಂದ್ರತೆ ಹೆಚ್ಚು.

**ಸಂಗಮಗಳು :** ಧರ್ಮಶ್ರದ್ಧೆಯುಳ್ಳ ಜನ ಗಂಗಾನದಿಯ ಉದ್ದಕ್ಕೂ ಇರುವ ಪುಣ್ಯ ಕ್ಷೇತ್ರಗಳಿಗೆ ಯಾತ್ರೆ ಹೋಗುತ್ತಾರೆ : ಗಂಗಾ ನದಿಯ ಸಂಗಮಸ್ಥಳಗಳ ಹಾಗೂ ಪುಣ್ಯಕ್ಷೇತ್ರಗಳ ಪೈಕಿ ತೆಹ್ರಿ, ದೇವಪ್ರಯಾಗ, ರುದ್ರಪ್ರಯಾಗ, ಕರ್ಣಪ್ರಯಾಗ, ಬದರೀನಾಥ. ಕೇದಾರನಾಥ ಇವು ಹಿಮಾಲಯ ಪರ್ವತ ಪ್ರದೇಶಕ್ಕೆ ಸೇರಿದವು. ಋಷಿಗಂಗಾ ಮತ್ತು ವಿಷ್ಣುಗಂಗಾ ಸಂಗಮವಾಗುವ ಸ್ಥಳದಲ್ಲಿ ಬದರೀನಾಥ ಇದೆ. ದೇವ ಪ್ರಯಾಗ ಭಾಗೀರಥೀ ಮತ್ತು ಅಲಕನಂದಾ ನದಿಗಳ ಸಂಗಮಸ್ಥಳ. ಗಂಗಾ ಮತ್ತು ಯಮುನಾ ನದಿಗಳು ಅಲಹಾಬಾದಿನಲ್ಲಿ ಸಂಗಮಿಸುತ್ತವೆ. ಕಾಶಿ ಪವಿತ್ರ ಕ್ಷೇತ್ರ. ಪಾಟ್ನದ ಪಶ್ಚಿಮಕ್ಕೆ ಛಪ್ರಾ ಬಳಿ ಘಾಘ್ರ ನದಿ ಗಂಗಾ ನದಿಯೊಡನೆ ಸಂಗಮವಾಗುತ್ತದೆ. ಗಂಗಾ ಮತ್ತು ಕೋಸಿ ನದಿಗಳು ಕುರಸೇಲಾದ ಬಳಿ ಕೂಡುತ್ತವೆ. ಗಂಗಾನದಿ ಸಮುದ್ರವನ್ನು ಸೇರುವ ಸ್ಥಳ ಗಂಗಾಸಾಗರ ಅಥವಾ ಸಾಗರದ್ವೀಪ ಇವಲ್ಲದೆ ಇನ್ನೂ ಹಲವಾರು ನದೀ ಸ್ಥಳಗಳು ಪವಿತ್ರ ಕ್ಷೇತ್ರಗಳಾಗಿವೆ.

**ವೇದಪುರಾಣಗಳಲ್ಲಿ :** ಋಗ್ವೇದದಲ್ಲಿ ಗಂಗಾ ನದಿಯ ಬಗ್ಗೆ ಎರಡು ಕಡೆ ಉಲ್ಲೇಖವಿದೆ. ರಾಮಾಯಣದಲ್ಲಿ ಗಂಗೆಯ ವೃತ್ತಾಂತವನ್ನು ವಿಶ್ವಾಮಿತ್ರ ರಾಮಲಕ್ಷ್ಮಣರಿಗೆ ತಿಳಿಸುತ್ತಾನೆ. ವಿಯದ್ಗಂಗೆ ಅಥವಾ ದೇವಗಂಗೆ ವಿಷ್ಣುವಿನ ಪಾದದಿಂದ ಹರಿಯುವುದಾಗಿ ಪುರಾಣಗಳು ತಿಳಿಸುತ್ತವೆ. ಅಯೋಧ್ಯಾಪತಿಯಾದ ಸಗರನ ಯಾಗದ ಕುದುರೆಯನ್ನು ಇಂದ್ರ ಅಪಹರಿಸಿದ. ಸಗರನ 60,000 ಮಕ್ಕಳು ಅದನ್ನು ಹುಡುಕಲು ಹೊರಟು ಕಪಿಲನ ಕೋಪಕ್ಕೆ ತುತ್ತಾಗಿ ಭಸ್ಮವಾದರು. ಋಷಿಯ ಕೋಪಾಗ್ನಿಗೆ ತುತ್ತಾದ ತನ್ನ ಪೂರ್ವಜರಿಗೆ ಮುಕ್ತಿ ದೊರಕಿಸಲು ದಿಲೀಪನ ಮಗನಾದ ಭಗೀರಥ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ, ಗಂಗೆಯನ್ನು ಅವರ ಭಸ್ಮದ ಮೇಲೆ ಹರಿಸಲು ಆಕೆಯನ್ನು ಭೂಲೋಕಕ್ಕೆ ತರಿಸಿದ. ಇದರಿಂದ ಗಂಗಾನದಿಗೆ ಭಾಗೀರಥೀ ಎಂಬ ಹೆಸರಾಯಿತು. ಗಂಗಾ ತನ್ನನ್ನು ಭೂಲೋಕಕ್ಕೆ ತರಿಸಿದ ಕಾರಣದಿಂದ ಕುಪಿತಳಾಗಿ ರಭಸದಿಂದ ಇಳಿಯಲು ಅವಳ ರಭಸದಿಂದ ಭೂಮಿಯನ್ನು ರಕ್ಷಿಸಲು ಶಿವ ಅವಳನ್ನು ತನ್ನ ಜಟೆಯಲ್ಲಿ ಹಿಡಿದು ನಿಲ್ಲಿಸಿದ. ಇದರಿಂದ ಶಿವನಿಗೆ ಗಂಗಾಧರನೆಂಬ ಹೆಸರಾಯಿತು. ಗಂಗೆ ಶಿವನ ಜಟೆಯಿಂದ ಸಪ್ತ ನದಿಗಳಾಗಿ ಹರಿದಳೆಂದು ಹೇಳುತ್ತಾರೆ. ಗಂಗೆ ಬಿಂದು ಸರೋವರದಿಂದ ಹಾಗೆ

ಸಂಗಮ, ಪ್ರಯಾಗ

ಹರಿಯುತ್ತಾಳೆಂಬ ಪ್ರತೀತಿಯೂ ಉಂಟು. ಆದರೆ, ಈ ಸರೋವರ ಯಾವುದೆಂಬುದು ತಿಳಿದಿಲ್ಲ. ಈ ಸಪ್ತನದಿಗಳಲ್ಲಿ ಭೌಗೋಳಿಕವಾಗಿ ತಿಳಿದಿರುವುದು ಗಂಗಾ ಮತ್ತು ಸಿಂಧೂ ಎರಡು ಮಾತ್ರ. ಭಗೀರಥನೊಡನೆ ಹೊರಟ ಗಂಗಾ ನದಿ ಜಹ್ನು ಋಷಿಯ ಆಶ್ರಮವನ್ನು



ವಾರಾಣಸಿಯಲ್ಲಿ ಗಂಗಾ

ಪ್ರವೇಶಿಸಲು ಜಹ್ನು ಕೋಪಗೊಂಡು ಗಂಗೆಯನ್ನು ಆಪೋಶನ ತೆಗೆದುಕೊಂಡ. ಬ್ರಹ್ಮನಲ್ಲಿ ಭಗೀರಥ ಮೊರೆಯಿಡಲು ಜಹ್ನು ಕೃಪೆ ತೋರಿ ತನ್ನ ಕಿವಿಯಿಂದ ಗಂಗೆಯನ್ನು ಹೊರಬಿಟ್ಟ. ಇದರಿಂದ ಗಂಗೆಗೆ ಜಾಹ್ನವೀ ಎಂಬ ಹೆಸರಾಯಿತು. ಕೊನೆಗೆ ಭಗೀರಥ ಗಂಗೆಯೊಡನೆ ಸಾಗರವನ್ನು ಸಮೀಪಿಸಿ, ಸಗರನ ಮಕ್ಕಳು ಮೃತರಾದ ಸ್ಥಳವನ್ನು ಮುಟ್ಟಲು ಗಂಗಾ ಅವರ ಮೇಲೆ ಹರಿದು ಸಾಗರವನ್ನು ಸೇರಿದಳು. ಬಂಗಾಳ ಕೊಲ್ಲಿಯ ಸಾಗರದ್ವೀಪ ಇಂದಿಗೂ ಒಂದು ಯಾತ್ರಸ್ಥಳ.

ಗಂಗಾ ಹಿಮವತ್‌ರಾಜನ ಮತ್ತು ಮೀನಾದೇವಿಯ ಮಗಳು. ಉಮಾ ಆಕೆಯ ಸೋದರಿ. ಗಂಗಾ ಶಂತನು ಮಹಾರಾಜನ ಪತ್ನಿಯಾಗಿ ಭೀಷ್ಮನನ್ನು ಪಡೆದಳು. ಆದ್ದರಿಂದ ಭೀಷ್ಮನಿಗೆ ಗಾಂಗೇಯನೆಂದು ಹೆಸರು. ವಿಚಿತ್ರ ಪರಿಸ್ಥಿತಿಗಳಿಂದಾಗಿ ಗಂಗಾ ಕುಮಾರಸ್ವಾಮಿಯ (ಕಾರ್ತಿಕೇಯನ) ತಾಯಿಯಾಗಬೇಕಾಗಿ ಬಂದ ಕಾರಣ ಆಕೆಯನ್ನು ಕುಮಾರಸೂ ಎಂದು ಕರೆಯಲಾಗಿದೆ. ಗಂಗೆಗೆ ಭದ್ರ ಸೋಮ, ದೇವಭೂತಿ, ಹರಿಶೇಖರಾ, ಮಂದಾಕಿನೀ ಮೊದಲಾದ ಹೆಸರುಗಳೂ ಇವೆ.

**ಇತಿಹಾಸ :** ಆದಿಗಂಗಾ ಬಯಲು ಆರ್ಯರ ಸಪ್ತಸಿಂಧು ನಾಡಿನ ಪೂರ್ವ ಭಾಗ; ಕುರು ಪಾಂಚಾಲ ದೇಶ. ಪ್ರಸಿದ್ಧ ಹಸ್ತಿನಾವತಿ ಮತ್ತು ಇಂದ್ರಪ್ರಸ್ಥ ನಗರಗಳಿದ್ದ ಭಾಗ. ಇಂದಿನ ಸೀತಾಪುರ ಜಿಲ್ಲೆಯ ದಟ್ಟಡವಿ ಹಿಂದಿನ ನೈಮಿಷಾರಣ್ಯ. ಈಗಿನ ಉನ್ನಾವೊ

ಜಿಲ್ಲೆ ಮಹಾಭಾರತದ ಖಾಂಡವವನ ಮತ್ತು ಗಂಗಾತಟದ ವಾಲ್ಮೀಕಿ ಆಶ್ರಮವಿದ್ದ ಭಾಗ. ಇದು ಮಹಾ ಕಾವ್ಯಗಳಲ್ಲಿ ಉಕ್ತವಾದ ಮಧ್ಯದೇಶ. ಇತಿಹಾಸದಲ್ಲಿ ಪ್ರಸಿದ್ಧವಾದ ಹಿಂದೂಸ್ಥಾನ. ಗಂಗಾ ಬಯಲಿನ ಈ ಭಾಗದಲ್ಲಿ ಭಾರತದ ಕೊನೆಯ ಸಮ್ರಾಟ ಪೃಥ್ವೀರಾಜ ಚೌಹಣನಿಗೂ ಮಹಮ್ಮದ್ ಘೋರಿಗೂ ಥಾನೇಶ್ವರದ ಬಳಿ ಯುದ್ಧ (1191–92) ನಡೆದು ದೆಹಲಿಯ ಸುಲ್ತಾನರ ಆಳ್ವಿಕೆ ಪ್ರಾರಂಭವಾಯಿತು. ಒಂದನೆಯ ಪಾಣಿಪತ್ ಯುದ್ಧದಲ್ಲಿ ಮೊಗಲ ದೊರೆ ಬಾಬರನಿಗೆ ಸಿಂಹಾಸನ ದೊರಕಿತು(1526). ಎರಡನೆಯ ಪಾಣಿಪತ್ ಯುದ್ಧದಲ್ಲಿ ಮೊಗಲ್ ಸಾಮ್ರಾಜ್ಯ ಸ್ಥಿರಗೊಂಡಿತು (1556). ಮೂರನೆಯ ಪಾಣಿಪತ್ ಯುದ್ಧದಲ್ಲಿ ಮರಾಠರ ಬಲ ಕುಗ್ಗಿ ಬ್ರಿಟಿಷರು ವಶಪಡಿಸಿಕೊಂಡಿದ್ದು 1858ರಲ್ಲಿ.

ಮಧ್ಯಗಂಗಾ ಬಯಲಿನಲ್ಲಿ ಇತಿಹಾಸಪೂರ್ವ ಕಾಲದಿಂದ ಜನಜೀವನ ಸಾಗಿ ಬಂದಿದೆ. 10,000 ವರ್ಷಗಳ ಹಿಂದೆ ಈ ಭಾಗದಲ್ಲಿದ್ದ ಜನಕ್ಕೆ ವ್ಯವಸಾಯ ತಿಳಿದಿತ್ತು. ನಿಷಾದ, ಕಿರಾತ, ದ್ರಾವಿಡ ಮತ್ತು ಹಿಂದೂ ಆರ್ಯರ ಸಾಂಸ್ಕೃತಿಕ ಗುಂಪುಗಳಿಂದ ಈ ಭಾಗದಲ್ಲಿ ಭಾರತೀಯ ನಾಗರಿಕತೆ ಪ್ರಾರಂಭವಾಯಿತು. ಇಲ್ಲಿದ್ದ ಆರ್ಯೇತರರು ಸುಸಂಸ್ಕೃತರಾಗಿದ್ದುದನ್ನು ಆರ್ಯರು ಇಲ್ಲಿಗೆ ಬಂದಾಗ ಕಂಡರು. ಋಗ್ವೇದದಲ್ಲಿ ಗಂಗಾ,



ಹರಿದ್ವಾರದ ಬಳಿಯಲ್ಲಿ ಗಂಗಾ: ಬ್ರಹ್ಮಾಂಡ

ಯಮುನಾ, ಸರಯೂ ನದಿಗಳ ಬಗ್ಗೆ ಉಲ್ಲೇಖವಿದೆ. ಅಲೆಮಾರಿ ಜೀವನ ನಡೆಸುತ್ತಿದ್ದ ಆರ್ಯರ ಗುಂಪುಗಳಲ್ಲಿ ಕುರು ಮತ್ತು ಪಾಂಚಾಲರು ಈ ಭಾಗದಲ್ಲಿ ರಾಜ್ಯ ಕಟ್ಟಿದರು. ಗಂಡಕೀ ನದಿ ವಿದೇಹಕ್ಕೂ ಕೋಸಲ ರಾಜ್ಯಕ್ಕೂ ಗಡಿಯಾಗಿತ್ತು. ಬುದ್ಧನ ಕಾಲದಲ್ಲಿ ಮಧ್ಯಗಂಗಾ ಬಯಲಿನಲ್ಲಿ ಪ್ರಸಿದ್ಧವಾಗಿದ್ದ ರಾಜ್ಯಗಳಲ್ಲಿ ಪ್ರಧಾನವಾದವು ಕೋಸಲ, ಶ್ರಾವಸ್ತಿ, ವತ್ಸ, ಕೌಶಾಂಬಿ, ಮಗಧ ಮತ್ತು ಅಂಗ. ಮಗಧ ರಾಜ್ಯದ ರಾಜಧಾನಿ ಪಾಟಲಿಪುತ್ರ



ಹೂಗ್ಲಿಯ ಡೈಮಂಡ್ ರೇವಿನ ಮೇಲೆ ಸೂರ್ಯಾಸ್ತ ದೃಶ್ಯ

ರಾಜಕೀಯ ಕೇಂದ್ರವಾಗಿತ್ತು. ಸುಂಗ, ಕಾನ್ವ, ಕುಷಾಣ ಮೊದಲಾದ ಸಂತತಿಗಳ ತರುವಾಯ 320 ರಲ್ಲಿ ಗುಪ್ತರು ಪಾಟಲಿಪುತ್ರದಲ್ಲಿ ಆಳುತ್ತಿದ್ದರು. ಪಾಟಲಿಪುತ್ರಕ್ಕೂ ವಂಗರಾಜ್ಯದ ತಾಮ್ರಲಿಪ್ತಿ ರೇವಿಗೂ ಸಂಪರ್ಕವಿತ್ತು. ಕೊನೆಕೊನೆಯ ಗುಪ್ತರು ಬಲಹೀನರಾಗಿ, ಮಗಧರಾಜ್ಯ ಬಂಗಾಳದ ಅರಸರ ವಶವಾಯಿತು. ಹರ್ಷನ ರಾಜ್ಯವೈಭವ ಕೇವಲ ನೆನಪಾಗಿ ಉಳಿಯಿತು. ಪಾಲರ 300 ವರ್ಷಗಳ ಆಳ್ವಿಕೆಯಲ್ಲಿ ಗುಪ್ತರ ಮಾದರಿಯ ಆಳ್ವಿಕೆಯೇ ಮುಂದುವರಿಯಿತು. ಮೊಗಲರ ಕಾಲದಲ್ಲಿ ಗಂಗಾ ಬಯಲಿನ ಪ್ರದೇಶ ಸುಭಾ ಅಥವಾ ಪ್ರಾಂತ್ಯಗಳಾಗಿ ವಿಂಗಡವಾಗಿ, ಸುಭಾಗಳು ಸರ್ಕಾರ (ವಿಭಾಗ) ಹಾಗೂ ಜಿಲ್ಲೆಗಳಾಗಿ ವಿಭಜಿತವಾದುವು. 1857ರ ಬಂಡಾಯದಲ್ಲಿ ಗಂಗಾ ಬಯಲಿನ ಈ ಭಾಗದ ಪಟ್ಟಣಗಳು ಪ್ರಮುಖಪಾತ್ರ ವಹಿಸಿದ್ದುವು. ಭಾರತದ ಸ್ವಾತಂತ್ರ್ಯದ ತರುವಾಯ ರಾಜ್ಯಗಳ ಪುನರ್ವಿಂಗಡಣೆಯಲ್ಲಿ ಅದು ಉತ್ತರ ಪ್ರದೇಶಕ್ಕೆ ಸೇರಿತು.

ಅಂತ್ಯಗಂಗಾ ಭಾಗ ವೇದಸಾಹಿತ್ಯದಲ್ಲಿ ವಂಗದೇಶವೆಂದು ಪ್ರಸಿದ್ಧವಾಗಿದೆ. ಐತರೇಯ ಬ್ರಾಹ್ಮಣದಲ್ಲಿ ಇದು ಪ್ರಾಚ್ಯ ಪ್ರದೇಶ ಭಾಗ ; ಕಿರಾತ, ಭರತ, ನಿಷಾದ ಮತ್ತು ಸಾವರರ ನೆಲೆವೀಡು. 10ನೆಯ ಶತಮಾನದಲ್ಲಿ ಮಂಗೋಲ್ ಬುಡಕಟ್ಟಿನ ಜನ ಈ ಭಾಗಕ್ಕೆ ಚುಂಬಿ ಕಣಿವೆಯಿಂದ ಬಂದರು. ಅಲ್ಲಿಯವರೆಗೆ ಪುಂಡ್ರ, ಪಾಲ, ಸೇನ, ಕಾಂಚ್ ಮೊದಲಾದ ಮನೆತನದವರು ಈ ಭಾಗವನ್ನು ಆಳಿದರು. ಅವರಲ್ಲಿ ಧರ್ಮಪಾಲ ಮತ್ತು ಬಲ್ಲಾಳಸೇನ ಪ್ರಸಿದ್ಧರು. ಗುಪ್ತರ ಆಳ್ವಿಕೆ ಕುರುಹು ದಿನಾಜ್‌ಪುರದಲ್ಲಿ ಕಂಡುಬರುತ್ತದೆ. ವಂಗದೇಶ ಹಿಂದೆ ಕಂಬುಜ(ಕಾಂಬೋಡಿಯ), ಸುವರ್ಣಭೂಮಿ (ಮ್ಯಾನ್ಮಾರ್), ತಪ್ರೋಬಾನೆ (ಶ್ರೀಲಂಕಾ), ದಖಿನ್ ಮತ್ತು ಪರ್ಷಿಯ ಕೊಲ್ಲಿಯ ಪ್ರದೇಶಗಳೊಡನೆ ಸಂಪರ್ಕವಿತ್ತು. 13ನೆಯ ಶತಮಾನದಲ್ಲಿ ಇಲ್ಲಿ ಮುಸ್ಲಿಮರ ಆಳ್ವಿಕೆ ಪ್ರಾರಂಭವಾಯಿತು. ದೆಹಲಿಯ ಸುಲ್ತಾನರಿಗೂ ಮೊಗಲ್ ಸಾಮ್ರಾಟರಿಗೂ ಇಲ್ಲಿಯ ಮುಸ್ಲಿಂ ಅರಸರು ಅಧೀನರಾಗಿದ್ದರು. ಇಬ್ನ್ ಬತೂತ ಬಂಗಾಳವನ್ನು ನಿಸರ್ಗದ ತವರು, ಸಮೃದ್ಧಿಯ ನಾಡು ಎಂದು ಕರೆದಿದ್ದಾನೆ. 17ನೆಯ ಶತಮಾನದಲ್ಲಿ ಡಚ್ಚರು (1632), ಫ್ರೆಂಚರು (1673–1676), ಡೇನಿಷರು (1676) ಮತ್ತು ಬ್ರಿಟಿಷರು (1690) ಕಾಲಿಟ್ಟರು. ಬ್ರಿಟಿಷರು ಪ್ಲಾಸಿ ಕದನದಲ್ಲಿ (1757) ಮುಸ್ಲಿಮರನ್ನು ಗೆದ್ದು, ಬಕ್ಸಾರ್ (1764) ಕದನದಲ್ಲಿ ಬಂಗಾಲವನ್ನು ವಶಪಡಿಸಿಕೊಂಡು ಕಲ್ಕತ್ತ ನಗರದಲ್ಲಿ ವಿಲಿಯಂ ಕೋಟೆಯನ್ನು ಕಟ್ಟಿಸಿದರು. ನವಾಬರ ಮತ್ತು ಬ್ರಿಟಿಷರ ದ್ವಿಪ್ರಭುತ್ವದಲ್ಲಿ ಬಂಗಾಲ ಕ್ಷಾಮಕ್ಕೀಡಾಯಿತು (1770). ಬ್ರಿಟಿಷ 1912ರಲ್ಲಿ ಬಿಹಾರವನ್ನು ಬಂಗಾಲದಿಂದ ಪ್ರತ್ಯೇಕಿಸಿದರು. ತಮ್ಮ ಸಾಮ್ರಾಜ್ಯದ ರಾಜಧಾನಿಯನ್ನು ಕಲ್ಕತ್ತೆಯಿಂದ ದೆಹಲಿಗೆ ವರ್ಗಾಯಿಸಿದರು. ಅಂದಿನ ಕಲ್ಕತ್ತ ನಗರ ವಾಣಿಜ್ಯ ಕೇಂದ್ರವಾಗಿ ಉಳಿಯಿತು.

**ಪಟ್ಟಣಗಳು :** ಗಂಗಾ ನದಿಯ ದಂಡೆಯ ಮೇಲೆ ಅನೇಕ ಪ್ರಸಿದ್ಧ ಪಟ್ಟಣಗಳೂ ಯಾತ್ರಾಸ್ಥಳಗಳೂ ಇವೆ. ಹಿಮಾಲಯದಲ್ಲಿ ಋಷಿಗಂಗಾ ಮತ್ತು ವಿಷ್ಣುಗಂಗಾ ಸಂಗಮವಾಗುವ ಸ್ಥಳದಲ್ಲಿ ಬದರೀನಾಥ ಇದೆ. ಕೇದಾರನಾಥ ಇನ್ನೊಂದು ನಗರ. ದೇವಪ್ರಯಾಗ ಭಾಗೀರಥೀ ಮತ್ತು ಅಲಕನಂದಾ ನದಿಗಳು ಸಂಗಮವಾಗುವ ಕಡೆ ಇರುವ ನಗರ. ಹೃಷಿಕೇಷ ಮತ್ತು ಹರಿದ್ವಾರ ಇನ್ನೆರಡು ಪ್ರಸಿದ್ಧ ಯಾತ್ರಾಸ್ಥಳಗಳು. ಕಾನ್ಪುರ ಉತ್ತರಪ್ರದೇಶದ ಅತ್ಯಂತ ದೊಡ್ಡ ನಗರ. ಭಾರತದ ಮಹಾ ನಗರಗಳಲ್ಲಿ ಎಂಟನೆಯದು. ಇದು ಗಂಗಾ ನದಿಯ ಬಲದಂಡೆಯ ಮೇಲಿದೆ. ಅಲಹಾಬಾದ್ ಗಂಗೆ ಯಮುನೆಗಳ ಸಂಗಮದಬಳಿ ಇದೆ. ಅಂತರ್ಗಾಮಿನಿಯಾದ ಸರಸ್ವತಿಯೂ ಇಲ್ಲಿ ಸಂಗಮಿಸುತ್ತದೆಯೆಂದು ಪ್ರತೀತಿ. ಆದ್ದರಿಂದ ತ್ರಿವೇಣಿಸಂಗಮವೆಂದು ಪ್ರಸಿದ್ಧವಾಗಿದೆ.

ಹೂಗ್ಲಿ, ಕೋಲ್ಕೊತ

ಇದು ತೀರ್ಥರಾಜ. ಇಲ್ಲಿ ನಡೆಯುವ ಮಾಘಮೇಳ ವಾರ್ಷಿಕಜಾತ್ರೆಯಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳ ಮಹಾಜಾತ್ರೆಯಲ್ಲಿ ಲಕ್ಷೋಪಲಕ್ಷ ಜನ ಸೇರುತ್ತಾರೆ. ಭಾರತದಲ್ಲೆಲ್ಲ ಇದೇ ಅತ್ಯಂತ ದೊಡ್ಡ ಜನಕೂಟ.

ವಾರಾಣಸಿ ಇನ್ನೊಂದು ಪ್ರಸಿದ್ಧ ನಗರ. ಇದೇ ಕಾಶೀ ಅಥವಾ ವಿಶ್ವನಾಥಪುರಿ. ಇದು ಭಾರತೀಯ ಸಂಸ್ಕೃತಿ, ನಾಗರಿಕತೆ ಮತ್ತು ಶಿಕ್ಷಣಗಳ ಕೇಂದ್ರ. ಗಂಗಾ ನದಿಯ ಎಡದಂಡೆಯ ಮೇಲಿದೆ. ಗಂಗೆಯ ದಂಡೆಯ ಮೇಲೆ ವಾರಾಣ್ ಮತ್ತು ಅಸೀ ನದಿಗಳ ನಡುವೆ ಸ್ಥಾಪಿತವಾಗಿರುವುದರಿಂದ ಈ ಕ್ಷೇತ್ರಕ್ಕೆ ವಾರಾಣಸಿ ಎಂದು ಹೆಸರಾಯಿತು. ನಗರಕ್ಕೆ ಉತ್ತರದಲ್ಲಿ ಕೆಲವು ಮೈಲುಗಳ ದೂರದಲ್ಲಿ ಸಾರಾನಾಥದ ಹಳೆಯ ನಿವೇಶನವಿದೆ. ಬುದ್ಧ ತನ್ನ ಧರ್ಮ ಪ್ರಸಾರವನ್ನು ಪ್ರಾರಂಭಿಸಿದ ಸ್ಥಳ ಇರುವುದು ಅಲ್ಲೇ. ಬಿಹಾರದ ಮಧ್ಯಗಂಗಾ ಹರಿವಿನಲ್ಲಿ ಗಂಗಾ ಬಲದಂಡೆಯಮೇಲೆ ಪಾಟ್ನ ನಗರವಿದೆ. ಇದಕ್ಕೆ 3,000 ವರ್ಷಗಳಷ್ಟು ದೀರ್ಘವಾದ ಇತಿಹಾಸವುಂಟು. ಇದು ಹಿಂದೆ ಮಗಧರಾಜ್ಯದ ಅನೇಕ ಅರಸು ಮನೆತನಗಳಿಗೆ ರಾಜಧಾನಿಯಾಗಿದ್ದ ಪಾಟಲಿಪುತ್ರ. ಭಾಗಲ್ಪುರ ಇನ್ನೊಂದು ಮುಖ್ಯ ನಗರ. ಇದು ಪ್ರಾಚೀನ ಚಂಪಾ ನಗರ; ಅಂಗದೇಶದ ರಾಜಧಾನಿ. ಈಗ ಬಿಹಾರದ ಭಾಗಲ್‍ಪುರ ವಿಭಾಗದ ಮುಖ್ಯ ಪಟ್ಟಣ.

ಅಂತ್ಯಗಂಗಾ ಪ್ರದೇಶದ ನಗರಗಳು ಹಲವಾರು. ಅವುಗಳಲ್ಲಿ ಮುಖ್ಯವಾದುವು ಬುರ್ದ್ವಾಂಪುರ, ಸಿಲಿಗುರಿ, ಇಂಗ್ಲಿಷ್ ಬಜ್ಹಾರ್ ಶಾಂತಿಪುರ, ನವದ್ವೀಪ, ಕೃಷ್ಣನಗರ, ದುರ್ಗಾಪುರ, ಖರಗ್‍ಪುರ, ಹೂಗ್ಲಿ, ಚೀನ್‍ಸುರ, ಚಂದ್ರನಗರ, ಸೆರಾಂಪುರ, ರಿಷ್ರ ಮತ್ತು ಕೊನ್ನಾಗರ್. ಕೋಲ್ಕೊತ ಗಂಗಾನದೀ ಪ್ರದೇಶದ ಅತ್ಯಂತ ದೊಡ್ಡ ನಗರ. ಇದರ ಸುತ್ತ ಅನೇಕ ಉಪನಗರಗಳಿವೆ.

**ಆರ್ಥಿಕ ಉಪಯೋಗ :** ಹರಿದ್ವಾರದಿಂದ ಮುಂದಕ್ಕೆ ದೋಣಿಗಳ ಸಂಚಾರ ಸಾಧ್ಯ. ಆದರೆ ನದೀಪ್ರವಾಹ ಒಂದೇ ಸಮನಾಗಿರುವುದಿಲ್ಲವಾದ್ದರಿಂದ ಸ್ಟೀಮರುಗಳ ಸಂಚಾರಕ್ಕೆ ಹೆಚ್ಚು ಅನುಕೂಲವಾಗಿಲ್ಲ. ಗಂಗಾನದಿಯ ಬಯಲು ಅತ್ಯಂತ ಫಲವತ್ತಾದ್ದು. ಗಂಗಾ ಮತ್ತು ಅದರ ಉಪನದಿಗಳು ನೀರಾವರಿಗೆ ಒದಗಿಬಂದಿವೆ. ಹರಿದ್ವಾರದಿಂದ ಹೊರಡುವ ಗಂಗಾ ಮೇಲ್ದಂಡೆ ಕಾಲುವೆಯಿಂದಲೂ ನರೋರ ಬಳಿ ಕಟ್ಟಲಾದ ಗಂಗಾ ಕೆಳದಂಡೆ ಕಾಲುವೆಯಿಂದಲೂ ವಿಸ್ತೃತ ನೀರಾವರಿ ಸೌಲಭ್ಯ ಏರ್ಪಟ್ಟಿದೆ. ಹರಿದ್ವಾರದ ಬಳಿ ವಿದ್ಯುತ್ತಿನ ಉತ್ಪಾದನೆಯಾಗುತ್ತದೆ. ಕಾಲುವೆಯಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗದ ಎತ್ತರದಲ್ಲಿರುವ ಸ್ಥಳಗಳಲ್ಲಿ ಬಾವಿ ತೋಡಿ ವಿದ್ಯುತ್ತಿನ ಸಹಾಯದಿಂದ ಪಂಪುಗಳ ಮೂಲಕ ನೀರಾವರಿ ಸೌಲಭ್ಯ ಏರ್ಪಡಿಸಲಾಗಿದೆ. (ವಿ.ಜಿ.ಕೆ.; ಕೆ.ಕೆ.)

**ಗಂಗಾನಾಥ ಝಾ :** 1872–1941. ಸಂಸ್ಕೃತ ಸಾಹಿತ್ಯದಲ್ಲೂ ದರ್ಶನ ಮುಂತಾದ ಶಾಸ್ತ್ರಗಳಲ್ಲೂ ನೈಪುಣ್ಯ ಪಡೆದು ಅಪಾರ ಪಾಂಡಿತ್ಯದ ನಿಧಿಯೆಂಬ ಕೀರ್ತಿಗಳಿಸಿದ ಮಹನೀಯರು. ಅಲಹಾಬಾದ್ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದು ಅಮೋಘ ಸಾರಸ್ವತ ಸೇವೆಯನ್ನಿವರು ಸಲ್ಲಿಸಿದರು. ಹುಟ್ಟಿದ್ದು ಬಿಹಾರಿನ ದರ್ಭಾಂಗ ಜಿಲ್ಲೆಯಲ್ಲಿ ಶ್ರೋತ್ರಿಯ ವಂಶವೊಂದರಲ್ಲಿ. ಬಾಲ್ಯದಿಂದಲೂ ಸಾಂಪ್ರದಾಯಿಕವಾಗಿ ಸಂಸ್ಕೃತವನ್ನು ಅಧ್ಯಯನ ಮಾಡಿ, ಮುಂದೆ ದರ್ಭಾಂಗ ಮಹಾರಾಜರ ಪುಸ್ತಕ ಭಂಡಾರದಲ್ಲಿ ಗ್ರಂಥಪಾಲಕರಾಗಿ ನೇಮಕಗೊಂಡರು. ಮುಖ್ಯವಾಗಿ ಸಂಸ್ಕೃತ ವಿದ್ಯಾರ್ಜನೆಯಲ್ಲಿ ಇವರಿಗಿದ್ದ ಆಸಕ್ತಿ ಶ್ರದ್ಧೆಗಳ ಅಭಿವ್ಯಕ್ತಿಗೆ ಅಲ್ಲಿ ಯುಕ್ತ ಅವಕಾಶ ಲಭಿಸಿತಾಗಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ಅನೇಕ ಕಡೆಗಳಿಂದ ಇವರ ವಿದ್ವತ್ತಿಗೆ ಮನ್ನಣೆ ಗೌರವಗಳು ದೊರಕಿದವು; ಅನಂತರ ಇವರು ವಾರಾಣಸಿಯ ಸರ್ಕಾರಿ ಸಂಸ್ಕೃತ ಕಾಲೇಜಿಗೆ ಮುಖ್ಯಾಧಿಕಾರಿಯಾಗಿ ನೇಮಕಗೊಂಡರು. ಆ ಸ್ಥಾನವನ್ನಲಂಕರಿಸಿದ ಭಾರತೀಯರಲ್ಲಿವರು ಮೊದಲಿಗರು. ತರುವಾಯ ಅಲಹಾಬಾದ್ ವಿಶ್ವವಿದ್ಯಾಲಯ ಕುಲಪತಿಗಳಾದರು. ಬನಾರಸ್ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್. ಪದವಿಯನ್ನು ಕೊಟ್ಟು ಗೌರವಿಸಿತು. ಸರ್ಕಾರದಿಂದ ಮಹಾಮಹೋಪಾಧ್ಯಾಯ ಎಂಬ ಮನ್ನಣೆಯೂ ಸರ್ ಬಿರುದೂ ಬಂದುವು. ಅನೇಕ ಶಿಷ್ಯರೂ ಮಿತ್ರರೂ ಸಹವಿದ್ವಾಂಸರೂ ಇವರ 60ನೆಯ ಜನ್ಮದಿನೋತ್ಸವ ಶುಭ ಸಂದರ್ಭದಲ್ಲಿ, ಪೌರಸ್ತ್ಯ ಸಾಹಿತ್ಯ, ಸಂಸ್ಕೃತಿ ವಿಷಯಗಳನ್ನು ಕುರಿತ ಲೇಖನಗಳಿಂದ ಕೂಡಿದ ಗ್ರಂಥವೊಂದನ್ನು ಸಮರ್ಪಿಸಿ ತಮ್ಮ ಪ್ರೀತ್ಯಾದರಗಳನ್ನು ತೋರಿಸಿದರು. ಇವರ ಮರಣಾನಂತರ 1943 ನವೆಂಬರಿನಲ್ಲಿ ಇವರ ಸ್ಮರಣಾರ್ಥವಾಗಿ ಗಂಗಾನಾಥ ಝಾ ರಿಸರ್ಚ್ ಇನ್ಸ್ಟಿಟ್ಯೂಟ್ ಎಂಬ ಮಹಾ ಸಂಸ್ಥೆ ಇವರ ಗಣ್ಯಮಿತ್ರರಾಗಿದ್ದ ಪಂಡಿತ ಮದನ ಮೋಹನ ಮಾಳವೀಯ ಮೊದಲಾದ ಮಹಾಪುರುಷರ ಸಮ್ಮುಖದಲ್ಲಿ ಸ್ಥಾಪನೆಗೊಂಡಿತು.

ಉದ್ದಾಮ ಪಾಂಡಿತ್ಯ, ಸರಳ ಜೀವನ ಇವು ಇವರ ವ್ಯಕ್ತಿತ್ವದ ಎರಡು ಮುಖಗಳಾಗಿದ್ದುವು. ಸಾಂಪ್ರದಾಯಿಕ ರೀತಿಯಲ್ಲಿ ಸಂಸ್ಕೃತ ಶಿಕ್ಷಣವನ್ನು ಪಡೆದು ಆ ಕ್ರಮದಿಂದ ಬರುವ ಅಗಾಧತೆಯನ್ನು ತಮ್ಮ ಪಾಂಡಿತ್ಯಕ್ಕವರು ದೊರಕಿಸಿಕೊಂಡಿದ್ದರು. ಸಾಂಪ್ರದಾಯಿಕ ಪಾಂಡಿತ್ಯದ ಆಳ, ಆಧುನಿಕ ವಿದ್ವತ್ತಿನ ವಿಸ್ತಾರ ಮತ್ತು ವೈವಿಧ್ಯ–ಇವುಗಳ ಮಧುರ ಸಮ್ಮಿಶ್ರವನ್ನು ಇವರಲ್ಲಿ ಕಾಣಬಹುದಾಗಿತ್ತು. ಸಾಹಿತ್ಯ, ಸ್ಮೃತಿಗಳು, ದರ್ಶನಗಳು ಮುಂತಾದ ಸಂಸ್ಕೃತಿ ವಿದ್ಯಾ ವಿಭಾಗಗಳು ಇವರ ಅಧ್ಯಯನಕ್ಕೂ ಪ್ರಾವೀಣ್ಯಕ್ಕೂ ವಿಷಯಗಳಾಗಿದ್ದವು. ಪ್ರಾಚೀನ ಭಾರತದ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಇವರು ರಚಿಸಿರುವ ಗ್ರಂಥಗಳು ಅಮೂಲ್ಯವೆನಿಸಿವೆ.

ಘನತೆ ಗಾಂಭೀರ್ಯಗಳು ಇವರ ಸರಳ ಜೀವನಕ್ಕೆ ಮೆರುಗು ಕೊಟ್ಟಿದ್ದುವು. ಆಧುನಿಕ ಜೀವನದ ಕೆಲವು ಕ್ರಮಗಳಲ್ಲೊಂದಾದ ಅತಿಪ್ರಚಾರದಲ್ಲಿರುವರಿಗೆ ತಿರಸ್ಕಾರವಿತ್ತು ಸಚ್ಚಾರಿತ್ರ್ಯ, ಸರಳತೆ, ಔನ್ನತ್ಯ, ಗಾಂಭೀರ್ಯ ಇತ್ಯಾದಿ ಸದ್ಗುಣಗಳಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದ ಇವರಿಗೆ ಭಾರತೀಯ ಸಂಸ್ಕೃತಿಗನುಗುಣವಾದ ಸಾಧನೆ ಸಿದ್ಧಿಗಳು ಪ್ರಧಾನವೆನಿಸಿದ್ದವು. ಇವರ ಜೀವಿತದ ಮತ್ತೊಂದು ವೈಶಿಷ್ಟ್ಯವೆಂದರೆ, ಪಂಡಿತ ಮದನಮೋಹನ ಮಾಳವೀಯರಂಥ ಮಹಾಮಹಿಮರ ಪರಮ ಸ್ನೇಹ. ಅಮರನಾಥ ಝಾ ಅವರು ಇವರ ಸುಪುತ್ರರಲ್ಲೊಬ್ಬರೆಂಬುದು ಇಲ್ಲಿ ಗಮನಿಸಬೇಕಾದ ವಿಷಯ.

ಗಂಗಾನಾಥ ಝಾ ಅಧಿಕ ಸಂಖ್ಯೆಯಲ್ಲಿ ಉತ್ತಮ ಗ್ರಂಥಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವು ಹೀಗಿವೆ: ಶಾಂಡಿಲ್ಯನ ಭಕ್ತಿಸೂತ್ರ, ಜಯದೇವನ ಪ್ರಸನ್ನ ರಾಘವ, ವಾತ್ಸ್ಯಾಯನ–ನ್ಯಾಯಭಾಷ್ಯ, ಮಂಡನಮಿಶ್ರ ವಿರಚಿತ ಮೀಮಾಂಸಾನುಕ್ರಮಣಿಕಾ–ಇವುಗಳಿಗೆ ಅನುಕ್ರಮವಾಗಿ ಇವರು ರಚಿಸಿರುವ ಭಕ್ತಿ ಕಲ್ಲೋಲೀನೀಭಾವಬೋಧಿನಿ, ಖದ್ಯೋತ, ಮೀಮಾಂಸಾಮಂಡನ ಎಂಬ ವ್ಯಾಖ್ಯಾನಗಳೂ ವೇಲಾ ಮಾಹಾತ್ಮ್ಯ ಎಂಬುದೂ ಇವರ ಸ್ವತಂತ್ರಯ ಸಂಸ್ಕೃತ ಕೃತಿಗಳು. ಇಂಗ್ಲಿಷಿನ ಗ್ರಂಥಗಳೆಂದರೆ : ಪ್ರಾಭಾಕರ ಸ್ಕೂಲ್ ಆಫ್ ಪೂರ್ವಮೀಮಾಂಸಾ, ಸಾಧೋಲಾಲ್ ಲೆಕ್ಚರ್ಸ್ ಆನ್ ನ್ಯಾಯ, ಫಿಲಾಸಾಫಿಕಲ್ ಡಿಸಿಪ್ಲಿನ್ (ಕಮಲ ಲೆಕ್ಚರ್ಸ್, ಕಲ್ಕತ್ತ), ಹಿಂದೂ ಲಾ ಇನ್ ಇಟ್ಸ್ ಸೋರ್ಸಸ್; ಶಂಕರಾಚಾರ್ಯ ಅಂಡ್ ಹಿಸ್ ವರ್ಕ್ ಫಾರ್ ದಿ ಅಪ್‍ಲಿಫ್ಟ್ ಆಫ್ ದಿ ಕಂಟ್ರಿ. ಇವರ ಇಂಗ್ಲಿಷ್ ಅನುವಾದರೂಪದ ಗ್ರಂಥಗಳಲ್ಲಿ ಮುಖ್ಯವಾದವು: ವಿಜ್ಞಾನ ಭಿಕ್ಷುವಿನ ಯೋಗಸಾರ ಸಂಗ್ರಹ, ಮಮ್ಮಟನ ಕಾವ್ಯಪ್ರಕಾಶ, ವಾಚಸ್ಪತಿಮಿಶ್ರಕೃತ ಸಾಂಖ್ಯತತ್ತ್ವಕೌಮುದೀ, ಶಂಕರಾಚಾರ್ಯರ ಛಾಂದೋಗ್ಯೋಪನಿಷದ್ ಭಾಷ್ಯ, ಕುಮಾರಿಲನ ಶ್ಲೋಕವಾರ್ತಿಕ, ವ್ಯಾಸರ ಯೋಗಸೂತ್ರಭಾಷ್ಯ, ಕೇಶವಮಿಶ್ರನ ತರ್ಕಭಾಷ್ಯ, ವಾಮನ ಕಾವ್ಯಾಲಂಕಾರಸೂತ್ರವೃತ್ತಿ, ಶ್ರೀಹರ್ಷನ ಖಂಡನಖಂಡಖಾದ್ಯ, ನ್ಯಾಯಸೂತ್ರಭಾಷ್ಯ ವಾರ್ತಿಕ, ನ್ಯಾಯಕಂದಲೀಸಮೇತ ಪ್ರಶಸ್ತಪಾದ ಭಾಷ್ಯ, ಮೇಧಾತಿಥಿ ಭಾಷ್ಯದೊಡನೆ ಮನುಸ್ಮೃತಿ, ಕುಮಾರಿಲನ ತಂತ್ರವಾರ್ತಿಕ, ಶಬರಸ್ವಾಮಿಯ ಮೀಮಾಂಸಾಸೂತ್ರಭಾಷ್ಯ ಮತ್ತು ಶಾಂತರಕ್ಷಿತನ ತತ್ತ್ವ ಸಂಗ್ರಹ. ಝಾ ಅವರಿಂದ ಸಂಪಾದಿತವಾದ ಕೆಲವು ಗ್ರಂಥಗಳು : ಶಂಕರ ಕವಿಯ ಕವಿಕರ್ಪಟಿಕಾ, ಗೋಪಾಲನ್ಯಾಯಪಂಚಾನನ ಪ್ರಾಯಶ್ಚಿತ್ತ ಕದಂಬ, ಶಂಕರಾಚಾರ್ಯ ವಿರಚಿತ ಪಂಚೀಕರಣ, ಗೋಕುಲನಾಥನ ಅಮೃತೋದಯ, ಕೃಷ್ಣಯಜ್ವಕೃತ ಮೀಮಾಂಸ ಪರಿಭಾಷಾ, ಆಪದೇವನ ಮೀಮಾಂಸಾನ್ಯಾಯ ಪ್ರಕಾಶ, ಶಂಕರಮಿಶ್ರನ ವಾದಿವಿನೋದ, ಮಂಡನಮಿಶ್ರಕೃತ ಭಾವನಾವಿವೇಕ, ಜಯಂತಭಟ್ಟನ

ನ್ಯಾಯಕಲಿಕಾ, ವಾತ್ಸಾಯನ ಭಾಷ್ಯದೊಡನೆ ನ್ಯಾಯಸೂತ್ರ, ಮತ್ತು ಪಾರ್ಥಸಾರಥಿಮಿಶ್ರರ ತಂತ್ರರತ್ನ (ಭಾಗ 1) ಅಲ್ಲದೆ ಇವರಿಂದ ಹಿಂದೀ, ಮೈಥಿಲೀ ಭಾಷೆಗಳಲ್ಲೂ ಗ್ರಂಥರಚನೆಯ ಸಂಪಾದನೆಯ ಕೆಲಸ ನಡೆದಿದೆ. ಇವರು ಇಂಡಿಯನ್ ಥಾಟ್ ಎಂಬ ಸಂಶೋಧನ ಪತ್ರಿಕೆಯ ಸಂಪಾದಕತ್ವವನ್ನೂ ಸ್ವಲ್ಪಕಾಲ ನಿರ್ವಹಿಸಿದರು.

ಹೀಗೆ ಝಾ ಅವರು ಸಾಹಿತ್ಯ, ನ್ಯಾಯ, ಮೀಮಾಂಸಾ, ವೇದಾಂತ, ಅಲಂಕಾರ ಶಾಸ್ತ್ರ, ಧರ್ಮಶಾಸ್ತ್ರ ಮುಂತಾದ ಸಂಸ್ಕೃತವಾಙ್ಮಯ ವಿಭಾಗಗಳಲ್ಲಿಯ ಉದ್ಗ್ರಂಥಗಳಲ್ಲಿ ಕಂಡುಬರುವ ಗಹನ ವಿಚಾರಗಳನ್ನು ತಮ್ಮ ವಿದ್ವತ್ಪೂರ್ಣ ಗ್ರಂಥಸಂಪಾದನೆ, ವಿವರಣೆ, ವ್ಯಾಖ್ಯಾನ, ಅನುವಾದ ಮುಂತಾದ ಕ್ರಮಗಳಿಂದ ಬೆಳಕಿಗೆ ಬಂದು ಮಹದುಪಕಾರ ಮಾಡಿ ಎಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಮಹಾ ವಿದ್ವಾಂಸರಾಗಿ, ಸರಳ ಜೀವನವನ್ನು ನಡೆಸಿ, ಸಂಸ್ಕೃತದಲ್ಲಡಗಿರುವಂತೆ ಪ್ರಾಚೀನ ಭಾರತದ ಭವ್ಯಸಂಸ್ಕೃತಿಯ ಮಹತ್ತ್ವವನ್ನು ದೇಶವಿದೇಶಗಳಲ್ಲಿ ಸಾರಿ, ದೇಶಸೇವೆ ಮಾಡಿ ಗಂಗಾನಾಥರು ಕೃತಕೃತ್ಯರಾದ ಪುಣ್ಯಾತ್ಮರೆನಿಸಿಕೊಂಡಿದ್ದಾರೆ. ಭಾರತದೇಶದ ಸುಪುತ್ರರ ಪರಂಪರೆಯಲ್ಲಿ ಇವರ ಸ್ಥಾನ ಹಿರಿದಾಗಿದೆಯಲ್ಲದೆ ಇವರ ಕೀರ್ತಿ ಆಚಂದ್ರಾರ್ಕವಾಗಿದೆ. (ಬಿ.ಕೆ.ಎಸ್.)

**ಗಂಗಾವತಿ:** ಕೊಪ್ಪಳ ಜಿಲ್ಲೆಯ ಒಂದು ತಾಲ್ಲೂಕು; ಆ ತಾಲ್ಲೂಕಿನ ಕೇಂದ್ರ. ಕೊಪ್ಪಳ, ಯಲಬುರ್ಗಿ, ಕುಷ್ಟಗಿ, ರಾಯಚೂರು ಜಿಲ್ಲೆಯ ಸಿಂಧನೂರು, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಹೊಸಪೇಟೆ ಈ ತಾಲ್ಲೂಕುಗಳು ಗಂಗಾವತಿ ತಾಲ್ಲೂಕನ್ನು ಸುತ್ತುವರಿದಿದೆ. ಈ ತಾಲ್ಲೂಕಿನ ವಿಸ್ತೀರ್ಣ 1,325.5ಚ.ಕಿಮೀ. ಜನಸಂಖ್ಯೆ 4,05,076. ಒಟ್ಟು ಗ್ರಾಮಗಳು 157. ಗಂಗಾವತಿ, ವೆಂಕಟಗಿರಿ, ಕನಕಗಿರಿ, ನವಲಿ, ಕರಟಗಿ, ಹುಲಿಹೈದರ್, ಸಿದ್ಧಾಪುರ ಮತ್ತು ಮರ್ಲಿ ಇವು ಹೋಬಳಿಗಳು.

ತಾಲ್ಲೂಕಿನ ಬಹುಭಾಗ ವಿಶೇಷವಾಗಿ ಕಪ್ಪುಮಣ್ಣಿನ ಮಟ್ಟಸಭೂಮಿ. ಕೆಲವು ಕೆಂಪುಮಣ್ಣಿನ ಪಟ್ಟಿಗಳೂ ಮಧ್ಯೆ ಮಧ್ಯೆ ಬರುತ್ತವೆ. ಅಲ್ಲಲ್ಲಿ ಕಣಶಿಲೆಯ ಗುಡ್ಡಗಳೂ ಟ್ರಾಪ್‌ಶಿಲೆಯ ಉಬ್ಬುಗಳೂ ಇವೆ. ತಾಲ್ಲೂಕಿನ ಉತ್ತರದಲ್ಲಿರುವ ನಿಶಾನಿಗುಡ್ಡ (580ಮೀ), ಪಶ್ಚಿಮದಲ್ಲಿರುವ ಎಮ್ಮೆಗುಡ್ಡ (821ಮೀ), ಪೂರ್ವದಲ್ಲಿರುವ ಮಾರಿಗುಡ್ಡ (597ಮೀ) ಇವು ಎತ್ತರದ ಬೆಟ್ಟಗಳು. ಈ ತಾಲ್ಲೂಕಿನ ದಕ್ಷಿಣ ಅಂಚಿನಲ್ಲಿ ಈಶಾನ್ಯಾಭಿಮುಖವಾಗಿ ತುಂಗಭದ್ರಾ ನದಿ ಹರಿಯುತ್ತದೆ. ಆದರೆ ತುಂಗಭದ್ರಾ ಜಲಾಶಯದ ಎಡನಾಲೆ ಈ ತಾಲ್ಲೂಕಿನ ಮೂಲಕ ಪ್ರವಹಿಸುವುದರಿಂದ ನೀರಾವರಿ ಉತ್ತಮವಾಗಿದೆ. ವರ್ಷಕ್ಕೆ ಎರಡುಮೂರು ಬೆಳೆಗಳನ್ನು ಬೆಳೆಯುತ್ತಾರೆ. ಕಬ್ಬು, ಬತ್ತ, ಸೇಂಗ, ಔಡಲ, ಜೋಳ ಮುಖ್ಯ ಬೆಳೆಗಳು. ಬತ್ತದ ಗಿರಣಿಗಳೂ ಖಂಡಸಾರಿ ಸಕ್ಕರೆ ಕಾರ್ಖಾನೆಗಳೂ ಬೆಲ್ಲ ತಯಾರಿಕೆ ಕೇಂದ್ರಗಳೂ ಎಣ್ಣೆ ತೆಗೆಯುವ ಮಿಲ್ಲುಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ. ತಾಲ್ಲೂಕಿನಲ್ಲಿ ಔದ್ಯೋಗಿಕ ಬೆಳವಣಿಗೆಯಾಗಿದೆ.

ಆನೆಗೊಂದಿ (ನೋಡಿ) ಮತ್ತು ಕನಕಗಿರಿ (ನೋಡಿ) ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಸ್ಥಳಗಳು. ಗಂಗಾವತಿಯಿಂದ 9ಕಿಮೀ ಪಶ್ಚಿಮಕ್ಕಿರುವ ಬೆನಕಲ್ ಎಂಬಲ್ಲಿ ನವಶಿಲಾಯುಗದ ಒಂದು ಬೂದಿ ಗುಡ್ಡ, ಬೃಹತ್ ಶಿಲಾ ಸಮಾಧಿ ಸಂಸ್ಕೃತಿ ಕಾಲದ ಹಲವು ಕಲ್ಲುಗೋರಿಗಳು ಮತ್ತು ಬಂಡೆಗಳ ಮೇಲೆ ಚಿತ್ರಿಸಿರುವ ಪ್ರಾಗೈತಿಹಾಸಿಕ ಚಿತ್ರಗಳು ಇವೆ.

ಕನಕಾಚಲ ದೇವಲಯದ ಪ್ರವೇಶದ್ವಾರ, ಕನಕಗಿರಿ

ಗಂಗಾವತಿ ಈ ತಹಶೀಲಿನ ಮುಖ್ಯ ಪಟ್ಟಣ. ಕೊಪ್ಪಳ– ರಾಯಚೂರು ಮಾರ್ಗದಲ್ಲಿ ಕೊಪ್ಪಳದಿಂದ ಸು.48ಕಿಮೀ ಪೂರ್ವಕ್ಕಿದೆ. ಹಿಂದೆ ಇದಕ್ಕೆ ನೀಲಾವತಿ ಎಂಬ ಹೆಸರಿತ್ತೆಂದು ಐತಿಹ್ಯ. ಊರಿನ ದಕ್ಷಿಣಕ್ಕೆ 3ಕಿಮೀ ಅಂತರದಲ್ಲಿ ತುಂಗಭದ್ರಾ ನದಿ ಹರಿಯುತ್ತದೆ. ತುಂಗಭದ್ರಾ ಜಲಾಶಯದಿಂದ ನೀರಾವರಿ ಪ್ರಾರಂಭವಾದ ಮೇಲೆ ಪಟ್ಟಣ ಶೀಘ್ರವಾಗಿ ಪ್ರಗತಿಹೊಂದುತ್ತಿದೆ. ಹಿಂದೆ ಸಣ್ಣ ಹಳ್ಳಿಯಾಗಿದ್ದ ಗಂಗಾವತಿ ಇಂದು ಪಟ್ಟಣವಾಗಿದೆ. ನೆರೆಹೊರೆಯ ಹಿರೇಜಂತಗಲ್, ಹೊಸಹಳ್ಳಿ, ಜಂಗಮರ ಕಲ್ಗುಡಿ, ದೇಸಾಯಿ ಕ್ಯಾಂಪ್, ಹಿರೂರು, ದೊಡ್ಡಹಟ್ಟಿ ಇವು ಈ ಊರಿಗೆ ಸೇರಿವೆ. ಇಲ್ಲಿ ನಗರಸಭೆ ಇದೆ (ಸ್ಥಾಪನೆ 1953). ನಗರದ ಜನಸಂಖ್ಯೆ 93,249.

ಇಲ್ಲಿ ಒಂದು ಕೃಷಿ ಸಂಶೋಧನಾಲಯ ಇದೆ. ಸಮೀಪದ ಬಪ್ಪರಹಟ್ಟಿಯಲ್ಲಿ ಒಂದು ಗ್ರಾಮಸೇವಕ ತರಬೇತಿ ಕೇಂದ್ರವುಂಟು. ಗಂಗಾವತಿಯಲ್ಲಿ ಅಕ್ಕಿ ಗಿರಣಿಗಳೂ ಖಂಡಸಾರಿ ಸಕ್ಕರೆ ಕಾರ್ಖಾನೆಗಳೂ ಇವೆ. ಇದೊಂದು ವಾಣಿಜ್ಯ ಕೇಂದ್ರ. ಬೆಲ್ಲ ಮತ್ತು ಕೆಲವು ಧಾನ್ಯಗಳು ಇಲ್ಲಿಯ ವ್ಯಾಪಾರ ಸರಕುಗಳು.

ಇಲ್ಲಿ ಸಾಮಾನ್ಯ ರೀತಿಯ ನಗರೇಶ್ವರ, ವೆಂಕಟೇಶ್ವರ ದೇವಾಲಯಗಳಿವೆ. ವಿಜಯನಗರದ ರಾಜರಿಂದ ಕಟ್ಟಲಾದುದೆನ್ನಲಾದ ವಿರೂಪಾಕ್ಷ ದೇವಾಲಯ ಹಳೆಯದು. ಮುದ್ದು ಸಂಗಸ್ವಾಮಿಗಳ ಹಳೆಯ ಮಠವೂ ಈ ಊರಿನಲ್ಲಿದೆ. (ಡಿ.ಕೆ.,ಎಸ್.ಜಿ.ಕೆ.)

**ಗಂಗೂಬಾಯಿ ಹಾನಗಲ್:** 1913–2009. ಸಂಗೀತ ಕ್ಷೇತ್ರದಲ್ಲಿ ಅಖಿಲ ಭಾರತ ಖ್ಯಾತಿ ಪಡೆದ ಅಗ್ರಗಣ್ಯ ಕಲಾವಿದರ ಪೈಕಿ ಒಬ್ಬರು. ಸಂಗೀತದಲ್ಲಿ ಸಾಕಷ್ಟು ಅಭಿರುಚಿ ಮತ್ತು ಪರಿಶ್ರಮವಿದ್ದ ಮನೆತನದಲ್ಲಿ ಹುಟ್ಟಿದ ಇವರಿಗೆ ಸಂಗೀತದಲ್ಲಿ ಬಾಲ್ಯದಿಂದಲೂ ಅಪೂರ್ವವಾದ ಪ್ರವೇಶ ದೊರೆಯಿತು. ಇವರ ತಾಯಿ ಅಂಬಾಬಾಯಿ, ತಂದೆ ಚಿತ್ತುರಾವ್ ನಾಡಗೀರ. ಅಜ್ಜಿಕಮಲಾಬಾಯಿ ಇವರಿಬ್ಬರೂ ಸಂಗೀತ ಬಲ್ಲವರಾಗಿದ್ದು ತಮ್ಮ ಒಲವನ್ನು ಇವರಲ್ಲಿ ಬಿತ್ತಿದರು. ಅಂಬಾಬಾಯಿಯವರು ಕರ್ನಾಟಕ ಸಂಗೀತದಲ್ಲಿ ಪರಿಶ್ರಮ ಪಡೆದಿದ್ದರು. ಮಗಳಿಗೆ ಹಿಂದುಸ್ಥಾನೀ ಸಂಗೀತದಲ್ಲಿ ಶಿಕ್ಷಣ ಕೊಡಿಸಿದರು. ಗಂಗೂಬಾಯಿ ಯವರ ಸಂಗೀತ ಶಿಕ್ಷಣಕ್ಕೆ ನೆರವಾದವರು ಸೋದರಮಾವ ರಾಯಣ್ಣ ಹಾನಗಲ್‌ಅವರು. ಸೋದರ ಶೇಷಗಿರಿಹಾನಗಲ್ ಅವರು ಮನ್ನಣೆ ಪಡೆದಿರುವ ತಬಲ ವಾದಕರಾಗಿದ್ದರೆ, ಮಗಳು ಕೃಷ್ಣಾ ಹಾನಗಲ್ ಶಾಸ್ತ್ರೀಯ ಹಾಗೂ ಲಲಿತ ಸಂಗೀತದಲ್ಲಿ ಹೆಸರು ಮಾಡಿದ್ದಾರೆ. ಈ ಇಬ್ಬರೂ ಗಂಗೂಬಾಯಿಯವರ ಸಂಗೀತ ಕಛೇರಿಗಳಲ್ಲಿ

ಹಿಮ್ಮೇಳ ನುಡಿಸುತ್ತಿದ್ದರು; ಜೊತೆಗೆ ಹಾಡುತ್ತಿದ್ದರು. ಎಳೆವಯಸ್ಸಿನಲ್ಲೇ ಗಂಗೂಬಾಯಿಯವರು ಬೆಳಗಾಂವಿ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತ ಗೀತೆಯನ್ನು ಹಾಡಿ (1924) ಜನರ ಮೆಚ್ಚುಗೆ ಗಳಿಸಿದರು. ಬಾಲ್ಯದಲ್ಲಿ ಇವರ ಸಂಗೀತ ವಿದ್ಯಾಭ್ಯಾಸ ನಡೆದದ್ದು ಹುಲಗೂರ ಕೃಷ್ಣಾಚಾರ್ಯ, ದತ್ತೋಪಂತ ದೇಸಾಯಿಗಳ ಬಳಿ, ಹುಬ್ಬಳ್ಳಿಯಲ್ಲಿ. ಇಪ್ಪತ್ತರ ಹರಯದಲ್ಲಿ ಗಂಗೂಬಾಯಿಗೆ ಕುಂದಗೋಳದ ಕಿರಾನಾ ಘರಾಣೆಯ ಖ್ಯಾತ ಗಾಯಕ ರಾಮಭಾವು ಕುಂದಗೋಳಕರರ ಕೃಪೆ ಲಭಿಸಿತ್ತು. ಅವರು ಅಂದಿಗೆ ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಸವಾಯಿ ಗಂಧರ್ವರೆಂದು ಖ್ಯಾತರಾಗಿದ್ದವರು; ಅವರು ಕಿರಾನಾ ಘರಾಣೆಯ ಖ್ಯಾತ ಅಬ್ದುಲ್ ಕರೀಂಖಾನರ ಶಿಷ್ಯರು. ಸ್ವರದ ಕೆಲಸದಲ್ಲಿ ಶ್ರುತಿಪಾವಿತ್ರ್ಯದಲ್ಲಿ ಖ್ಯಾಲ್ ಗಾಯನದ ಸೊಗಸುಗಾರಿಕೆಯಲ್ಲಿ ಕಿರಾನಾ ಘರಾಣಾ ಅಂದಿಗೆ ತನ್ನದೇ ಆದ ಪರಂಪರೆಯನ್ನು ಸ್ಥಾಪಿಸಿತ್ತು. ಗಂಗೂಬಾಯಿ ಹುಬ್ಬಳ್ಳಿಯಲ್ಲಿದ್ದುಕೊಂಡು ದಿನವೂ ಕುಂದಗೋಳಕ್ಕೆ ಹೋಗಿ ಬರುತ್ತ ಸಂಗೀತಾಭ್ಯಾಸ ನಡೆಸಿದರು. ಸಾಧನೆಯಲ್ಲಿ ಗಂಗೂಬಾಯಿಯವರದು ಸೋಲದ ಶ್ರದ್ಧೆ. ಕ್ರಮೇಣ ಪೂರಿಯಾ, ತೋಡಿ, ಅಸಾವರಿ, ಶುದ್ಧಕಲ್ಯಾಣ್, ಮಾಲಕಂಸ, ಮಿಯಾಮಲ್ಹಾರ, ದರ್ಬಾರಿ ಕಾನಡ ಮೊದಲಾದ ರಾಗಗಳನ್ನವರು ಹಸ್ತಗತ ಮಾಡಿಕೊಂಡರು. ಸವಾಯಿ ಗಂಧರ್ವರ ಶಿಷ್ಯೆಯಾಗಿ ಮುಂದೆ ಗಂಗೂಬಾಯಿಯವರು 25 ವರ್ಷ ವಯಸ್ಸಿನಿಂದ ಸ್ವತಂತ್ರರಾಗಿ ಸಂಗೀತ ಕಛೇರಿ ಮಾಡಲಾರಂಭಿಸಿದರು. ಗಂಗೂಬಾಯಿಯವರು ಸ್ವಭಾವತಃ ಸರಳ ಮನೋಧರ್ಮದವರು. ಆಡಂಬರ ಇವರಿಗೆ ಸಲ್ಲದು. ಹೀಗಾಗಿ ದೆಹಲಿ ಮತ್ತು ಕಲ್ಕತ್ತ ಪ್ರಸಾರಕೇಂದ್ರಗಳಲ್ಲಿ ಇವರು ಮೊದಲು ಹಾಡಲು ಹೋದಾಗ ಅಲ್ಲಿಯವರು ಉದಾಸೀನರಾಗಿ ಕಂಡು ಅನಂತರ ತಮ್ಮ ತಪ್ಪಿನ ಅರಿವಾಗಿ ಗಂಗೂಬಾಯಿಯವರನ್ನು ಗೌರವಿಸಿದರು. ಕ್ರಮೇಣ ಇವರು ತಮ್ಮ ಘನವಾದ ಸಂಗೀತದಿಂದ ಎಲ್ಲರ ಗೌರವಕ್ಕೂ ಪಾತ್ರರಾದರು. ಇವರ ಖ್ಯಾತಿ ಹೆಚ್ಚುತ್ತಿದ್ದಂತೆ ಟೈಮ್ಸ್ ಆಫ್ ಇಂಡಿಯ, ಹಿಂದುಸ್ಥಾನ್ ಟೈಮ್ಸ್, ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ ಮೊದಲಾದ ಪತ್ರಿಕೆಗಳು ಇವರ ಬಗ್ಗೆ ಲೇಖನಗಳನ್ನು ಪ್ರಕಟಿಸಿ ಇವರ ಗಾಯನ ಕಲೆಯನ್ನು ಹೊಗಳಿದವು. ಮುಂಬಯಿಯ

ಗ್ರಾಮಫೋನ್ ಕಂಪನಿಯವರು ಇವರ ಗಾಯನಗಳನ್ನು ಮುದ್ರಿಸಿದರು. ಇಂದಿಗೂ ಗಂಗೂಬಾಯಿಯವರ ರಾಮ ಹರೀಕಾ ಭೇದ ನ ಪಾಯೊ ಎಂಬ ಜೋಗಿಯ ರಾಗದ ಹಾಡು ಮತ್ತು ಮಿಯಾಮಲ್ಹಾರದ ಕಹೆ ಲಾಡಲೀ ಎಂಬ ಹಾಡುಗಳನ್ನು ಹಲವರು ಮೆಚ್ಚಿಕೊಂಡಿದ್ದಾರೆ.

ಸ್ವಾತಂತ್ರ್ಯಪೂರ್ವದ ಲಾಹೋರ್ ಮತ್ತು ಪೆಷಾವರ್ ಕೇಂದ್ರಗಳನ್ನೊಳಗೊಂಡಂತೆ ಗಂಗೂಬಾಯಿಯವರು ದೆಹಲಿ, ಕಲ್ಕತ್ತ, ಲಖನೌ, ಬರೋಡ, ಹೈದರಾಬಾದ್ ಮೊದಲಾದ ಪ್ರಸಾರ ಕೇಂದ್ರಗಳಿಂದ ಹಾಡಿದ್ದಾರೆ. ಕಲ್ಕತ್ತ, ಗ್ವಾಲಿಯರ್, ಪ್ರಯಾಗ, ಅಮೃತಸರ, ಕರಾಚಿ, ಗಯ, ಡೆಹ್ರಾಡೂನ್, ಆಗ್ರ ಮೊದಲಾದ ಮಹಾನಗರಗಳಲ್ಲಿ ಇವರು ಸಾರ್ವಜನಿಕ ಸಂಗೀತ ಕಛೇರಿ ನಡೆಸಿದ್ದಾರೆ. ಪ್ರಸಿದ್ಧ ನ್ಯೂ ಥಿಯೇಟರ್ಸ್ ಚಲನಚಿತ್ರ ಸಂಸ್ಥೆಯ ಕಲಾವಿದರಾದ ಸೈಗಲ್, ಕಾನನ್ ಬಾಲ, ಪಹರಿ ಸನ್ಯಾಲ್ ಮೊದಲಾದವರು ಇವರನ್ನು ತುಂಬ ಮೆಚ್ಚಿಕೊಂಡು ಅಭಿಮಾನದಿಂದ ಸತ್ಕರಿಸಿದ್ದರು. ಸಂಗೀತ ಕ್ಷೇತ್ರಗಳಲ್ಲಿ ಪ್ರಸಿದ್ಧರೆನಿಸಿದ ಬಡೆ ಗುಲಾಂ ಅಲಿ ಖಾನ್, ಅಲಾಉದ್ದೀನ್ ಖಾನ್, ಸಿದ್ಧೇಶ್ವರೀ ದೇವಿ, ಪಂಡಿತ ರವಿಶಂಕರ್, ಬಿಸ್ಮಿಲ್ಲಾ ಖಾನ್ ಮೊದಲಾದವರು ಗಂಗೂಬಾಯಿಯವರನ್ನು ಪ್ರಶಂಸಿಸಿದ್ದಾರೆ. ಗಂಗೂಬಾಯಿಯವರು ಭಾರತ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ನೇಪಾಳ, ಪಾಕಿಸ್ತಾನಗಳಿಗೆ ಭೇಟಿಕೊಟ್ಟು ಹಿಂದೂಸ್ತಾನೀ ಕಚೇರಿ ನೀಡಿದ್ದಾರೆ.

ಇವರ ಅಮೋಘ ಸಂಗೀತಸೇವೆಯನ್ನು ಮನಗಂಡು ಕರ್ನಾಟಕ ಸಂಗೀತ ನಾಟಕ ಅಕಾಡೆಮಿ 1963ರಲ್ಲಿ ಪ್ರಶಸ್ತಿ ಇತ್ತು ಸನ್ಮಾನಿಸಿತು. ಭಾರತ ಸರ್ಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿಯಿತ್ತು ಗೌರವಿಸಿದೆ (1974). ಆಕಾಶವಾಣಿ – 50 ವರ್ಷದ ಪ್ರಶಸ್ತಿ (1971) ಯನ್ನೂ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್ (1976) ಪದವಿಯನ್ನು ಪಡೆದರು. 1982ರಲ್ಲಿ ಕರ್ನಾಟಕ ರಾಜ್ಯ ಸಂಗೀತ–ನೃತ್ಯ ಅಕಾಡೆಮಿಯ ಅಧ್ಯಕ್ಷರು. 1992ರಲ್ಲಿ ರಾಜ್ಯ ವಿಧಾನ ಪರಿಷತ್‌ನ ನಾಮಕರಣ ಸದಸ್ಯರು ಆಗಿದ್ದರು. ಇವಿಷ್ಟೇ ಅಲ್ಲದೆ ಕರ್ನಾಟಕ ಸರ್ಕಾರದ ಕನಕ–ಪುರಂದರ ಪ್ರಶಸ್ತಿ (1992), ಸಂಗೀತರತ್ನ ಪಿಟೀಲು ಚೌಡಯ್ಯ ಪ್ರಶಸ್ತಿ (1995), ತಾನ್‌ಸೇನ್ ಪುರಸ್ಕಾರ ಮತ್ತು ದೀನಾನಾಥ ಮಂಗೇಶ್ಕರ್ ಪ್ರಶಸ್ತಿ (1998), ಪಂಡಿತ ರಾಮನಾರಾಯಣ ಪುರಸ್ಕಾರ (2000), ಪದ್ಮವಿಭೂಷಣ (2002), ಆದಿತ್ಯ ಬಿರ್ಲಾ ಕಲಾ ಶಿಖರ ಪ್ರಶಸ್ತಿ (2005), ಈ ಟಿವಿ ವರ್ಷದ ಕನ್ನಡಿಗ ಪ್ರಶಸ್ತಿ (2007), ಸವಾಯಿ ಗಂಧರ್ವ ರಾಷ್ಟ್ರೀಯ ಪುರಸ್ಕಾರ (2008)ಗಳು ಬಂದಿವೆ. ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಆರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಭಾರತ ದೇಶದ ಒಂಬತ್ತು ಪ್ರಧಾನ ಮಂತ್ರಿಗಳು ಹಾಗೂ ಐವರು ರಾಷ್ಟ್ರಪತಿಗಳಿಂದ ಗೌರವ ಸಂದಿದೆ. ಇವಲ್ಲದೆ ಇವರಿಗೆ ಭಾರತಾದ್ಯಂತ ದೊರೆತ ಸನ್ಮಾನಪತ್ರಗಳು, ಸುವರ್ಣಪದಕಗಳು, ಇತರ ಕಾಣಿಕೆಗಳು, ಉಡುಗೊರೆಗಳು, ಅಸಂಖ್ಯಾತ. ಕಾಶಿಯ ನಾಗರೀ ಪ್ರಚಾರಿಣೀ ಸಭೆ ಮತ್ತು ಪ್ರಯಾಗದ ಸಂಗೀತ ಸಮಿತಿಗಳು ಇವರಿಗೆ ಭಾರತೀಯ ಕಂಠಶಿರೋಮಣಿ ಹಾಗೂ ಸ್ವರಶಿರೋಮಣಿ ಎಂಬ ಬಿರುದುಗಳನ್ನಿತ್ತಿವೆ. ಇವರಿಗೆ ಹುಬ್ಬಳ್ಳಿಯಲ್ಲಿ ಪೌರಸನ್ಮಾನ ಮಾಡಲಾಯಿತು (2005).

ಗಂಗೂಬಾಯಿಯವರನ್ನು ಸಂಗೀತ ಗಂಗಾದೇವಿ ಎಂದು ಕವಿ ಬೇಂದ್ರೆ ಬಣ್ಣಿಸಿದ್ದಾರೆ. ಇವರು ಕೇಸರಬಾಯಿ ಕೇರಕರ, ಹೀರಾಬಾಯಿ ಬಡೋದೇಕರ, ಮೋಗೂಬಾಯಿ ಕುರಡೀಕರ ಇವರ ಸಾಲಿನಲ್ಲಿ ನಿಂತಿರುವ ಪ್ರಸಿದ್ಧ ಗಾಯಕಿ ಎನಿಸಿದ್ದಾರೆ. ಅಮೆರಿಕ, ಜರ್ಮನಿ, ಪಾಕಿಸ್ತಾನ, ಫ್ರಾನ್ಸ್, ನೇಪಾಳ, ಬಾಂಗ್ಲಾ, ನೆದರ್ಲೆಂಡ್‌ಗಳಲ್ಲಿ, ಸಂಗೀತ ಕಚೇರಿಗಳನ್ನು ನಡೆಸಿ ಭಾರತೀಯ ಸಂಗೀತವನ್ನು ಸೀಮೋಲ್ಲಂಘನ ಮಾಡಿಸಿದ್ದಾರೆ.

ಅನಾರೋಗ್ಯದಿಂದಾಗಿ 2009 ಜುಲೈ 21 ರಂದು ನಿಧನರಾದರು. (ಎಚ್.ಕೆ.ಕೆ.)

**ಗಂಗೆ – ಗೌರಿ :** ಶಿವನ ಮಡದಿಯರು. ಸಂಸ್ಕೃತ ಸಾಹಿತ್ಯದಲ್ಲಿ ಹಾಗೂ ಕನ್ನಡ ಜನಪದ ಸಾಹಿತ್ಯದಲ್ಲಿ ಗಂಗೆ–ಗೌರಿಯರ ಪ್ರಸ್ತಾಪವಿದೆ.

ಪಾರ್ವತಿಯ ತಪೋನಿಷ್ಠೆಗೆ ಮನಸೋತ ಪರಮೇಶ್ವರ ಆಕೆಯನ್ನು ವಿವಾಹವಾದ ಬಳಿಕ ಪ್ರೀತಿಯಿಂದ ತನ್ನ ತೊಡೆಯ ಮೇಲೆ ಆಕೆಯನ್ನು ಕುಳ್ಳಿರಿಸಿಕೊಂಡು ಆಲಿಂಗಿಸಿ ಕೊಂಡನೆಂಬುದೂ ಭಗೀರಥನ ತಪಃಫಲವಾಗಿ ಗಂಗೆ ದೇವಲೋಕದಿಂದ ಭೂಮಿಗೆ ಧುಮುಕಲಾರಂಭಿಸಿದಾಗ ಆ ವೇಗವನ್ನು ತಾಳಲು ಭೂಮಿ ಅಸಮರ್ಥಳೆಂಬುದನ್ನು ಗ್ರಹಿಸಿದ ಶಿವ ದೃಢವಾಗಿ ನಿಂತು ಆಕೆಯನ್ನು ತನ್ನ ಜಟಾಕಲಾಪದೊಳಕ್ಕೆ ತಾಳಿಕೊಂಡನೆಂಬುದೂ ಪುರಾಣಪ್ರಸಿದ್ಧ ವಿಷಯ. ಗೌರಿ ಶಿವನ ಪತ್ನಿ ; ಶಿವನ ಎಡತೊಡೆ ಅವಳಿಗೆ ಆಸನ. ಗಂಗೆ ಪ್ರಾಸಂಗಿಕವಾಗಿ ಬಂದವಳು ; ಆದರೂ ಅವಳಿಗೆ ಶಿವನ ತಲೆಯ ಮೇಲೆ ಸ್ಥಾನ. ಶಿವನ ಪ್ರೇಮಕ್ಕಾಗಿ ಉಗ್ರವಾದ ತಪಸ್ಸುಮಾಡಿ ಅವನನ್ನು ವರಿಸಿ ಮದುವೆಯಾದ ಪತ್ನಿಗೆ ತನ್ನ ಸಮ್ಮುಖದಲ್ಲೇ ಈ ರೀತಿ ಅನ್ಯಸ್ತ್ರೀಯೊಬ್ಬಳು ತನ್ನ ಪತಿಯ ತಲೆಯ ಮೇಲೆ ಕುಳಿತುಕೊಳ್ಳುವಷ್ಟು ಸ್ವಾತಂತ್ರ್ಯ ಪಡೆಯುವುದು ಸಹ್ಯವಾದೀತೆ–ಎಂಬ ಸ್ತ್ರೀಸ್ವಭಾವವನ್ನು ಆಧಾರವಾಗಿಟ್ಟುಕೊಂಡು ಕೆಲವು ಕವಿಗಳು ಕುಹಕವಾಗಿ, ಆಲಂಕಾರಿಕವಾಗಿ, ರಂಜನೀಯವಾಗಿ ಅನೇಕ ಶ್ಲೋಕಗಳನ್ನು ರಚಿಸಿದ್ದಾರೆ. ಒಬ್ಬ ಕವಿಯಂತೂ ಶಿವ ಸಂಸಾರದಲ್ಲಿ ಜುಗುಪ್ಸೆಗೊಂಡು ಹಾಲಾಹಲವನ್ನು ಕುಡಿಯಲು ಇತರ ಕೌಟುಂಬಿಕ ಕಲಹಗಳ ಜೊತೆಯಲ್ಲಿ, ಗೌರಿಗೆ ಗಂಗೆಯ ಮೇಲೆ ಉಂಟಾಗಿದ್ದ ಅಸೂಯೆಯೂ ಕಾರಣವಾಯಿತೆಂದು ಹೇಳಿರುವುದು ತುಂಬ ರಂಜಕವಾಗಿದೆ.

*.....ಗೌರಿ ಜಹ್ನುಸುತಾಮಸೂಯತಿ ; ಕಲಾನಾಥಂ ಕಪಾಲಾನಲಃ*
*ನಿರ್ವಿಣ್ಣಃ ಸ ಪಪೌ ಕುಟುಂಬಕಲಹಾದೀಶೋಽಪಿ ಹಾಲಹಲಂ*

ಕೊಂಕು ನುಡಿಗೆ ಪ್ರಸಿದ್ಧ ಉದಾಹರಣೆಯಾದ ವಿಶಾಖದತ್ತನ ಮುದ್ರಾರಾಕ್ಷಸ ನಾಟಕದ ನಾಂದೀ ಪದ್ಯದಲ್ಲೂ ಗೌರಿಗೆ ಗಂಗೆಯ ಮೇಲಿದ್ದ ಅಸೂಯೆ ಅಭಿವ್ಯಕ್ತವಾಗುತ್ತದೆ.

*ಧನ್ಯಾ ಕೇಯಂ ಸ್ಥಿತಾ ತೇ ಶಿರಸಿ? ಶಶಿಕಲಾ ; ಕಿಂ ನು ನಾಮೈತದಸ್ಯಾಃ ?*
*ನಾಮೈವಾಸ್ಯಾಸ್ತದೇತತ್ಪರಿಚಿತಮಪಿ ತೇ ವಿಸ್ಮೃತಂ ಕಸ್ಯ ಹೇತೋಃ*
*ನಾರೀಂ ಪೃಚ್ಛಾಮಿ ನೇಂದುಂ ; ಕಥಯತು ವಿಜಯಾ ನ ಪ್ರಮಾಣಂ ಯದೀಂದುಃ*
*ದೇವ್ಯಾ ನಿಹ್ನೋತುಮಿಚ್ಛೋಃ ಇತಿ ಸುರಸರಿತಂ ಶಾಠ್ಯಮವ್ಯಾದ್ವಿಭೋರ್ವಃ*

ಶಿವನ ತಲೆಯ ಮೇಲೆ ಸ್ಥಾನ ಪಡೆದಿರುವ ಗಂಗೆಯನ್ನು ನೋಡಿ ಗೌರಿ ತನ್ನಲ್ಲುಂಟಾದ ಅಸೂಯೆಯನ್ನು ಹೊರಗೆಡಹದೆ, ಚುಚ್ಚುನುಡಿಯಿಂದ ಶಿವನನ್ನೇ ಪ್ರಶ್ನಿಸುತ್ತಾಳೆ–ಧನ್ಯಾ ಕೇಯಂ ಸ್ಥಿತಾ ತೇ ಶಿರಸಿ?–ನಿನ್ನ ತಲೆಯ ಮೇಲೆ ಕುಳಿತಿರುವ ಧನ್ಯೆಯಾದ ಈಕೆ ಯಾರು? ಗೌರಿಯ ಅಸೂಯೆ ಅಸಹನೆಗಳನ್ನು ಮನಗಂಡ ಶಿವ, ಗಂಗೆ ತನ್ನ ಜಟೆಯಲ್ಲಿಲ್ಲವೇ ಇಲ್ಲವೋ ಎಂಬಂತೆ, ಗೌರಿ ಕೇಳಿದುದು ತನ್ನ ತಲೆಯ ಮೇಲಿರುವ ಚಂದ್ರಕಲೆಯನ್ನುದ್ದೇಶಿಸಿಯೇ ಎಂಬ ಭಾವಬರುವಂತೆ, ಉತ್ತರ ಹೇಳುತ್ತಾನೆ–ಶಶಿಕಲೆ ಎಂದು. ಗೌರಿ ಕೇಳುತ್ತಾಳೆ–ಶಶಿಕಲೆ ಎಂಬುದು ಆಕೆಯ ಹೆಸರೇನು ? ಶಿವ ಹೇಳುತ್ತಾನೆ–ಹೌದು ; ಅದು ಅವಳ ಹೆಸರೇ. ಈ ವಿಚಾರ ನಿನಗೆ ಪರಿಚಿತವಾದದ್ದೇ ಆದರೂ ಹೇಗೆ ಮರೆತುಹೋಯಿತು ? ಶಿವ ಮಾಡುತ್ತಿರುವ ಈ ಅಪಲಾಪ ಗೌರಿಗೆ ಅರ್ಥವಾಗಿ, ಅವಳು ಗಡಸು ಧ್ವನಿಯಲ್ಲಿ ಹೇಳುತ್ತಾಳೆ– ನಾನು ಚಂದ್ರನನ್ನು (ಕುರಿತು) ಕೇಳುತ್ತಿಲ್ಲ ; ಹೆಂಗಸನ್ನು ಕುರಿತು ಕೇಳುತ್ತಿದ್ದೇನೆ. ಗೌರಿಯ ಈ ಮಾತಿನ ಅರ್ಥವನ್ನೂ ತಿರುವುಮುರುವು ಮಾಡಿ ಶಿವ ಹೇಳುತ್ತಾನೆ ಹಾಗಾದರೆ ಹೆಂಗಸಾದ (ನಿನ್ನ ಈ ಸಖಿ) ವಿಜಯಿಯೇ ಹೇಳಲಿ–ಇದು ಪ್ರಾಮಾಣಿಕವಾಗಿ ಚಂದ್ರನೇ ಅಲ್ಲವೇ ಎಂಬುದನ್ನು. ಈ ಪ್ರಕಾರವಾಗಿ ಗೌರೀದೇವಿಯಿಂದ ಗಂಗೆಯನ್ನು ಮರೆಸಬಯಸಿದ ಪರಶಿವನ ಶಾಠ್ಯ ನಿಮ್ಮನ್ನು ಸಲಹಲಿ–ಎಂದು ಕವಿ ಆಶಿಸುತ್ತಾನೆ.

ಇದೇ ಬಗೆಯ, ಆದರೆ ಬೇರೆ ಧಾಟಿಯ ಮತ್ತೊಂದು ಕುಹಕಪೂರ್ಣ ಶ್ಲೋಕದಲ್ಲಿ ಗಂಗೆಯ ಮೇಲೆ ಗೌರಿಗಿದ್ದ ಮಾತ್ಸರ್ಯ ಸ್ಪಷ್ಟವಾಗಿ ಮೂಡಿಬಂದಿದೆ. ಇಲ್ಲೂ ಶಿವ ತನ್ನ ತಲೆಯ ಮೇಲೆ ಗಂಗೆ ಎಂಬ ಯಾವ ಹೆಂಗಸೂ ಇಲ್ಲವೇ ಇಲ್ಲ ; ಅಲ್ಲಿರುವುದು ಬರೀ ನೀರು ಸ್ವಾರಸ್ಯವಾಗಿ ನಿರೂಪಿಸಿ ಗೌರಿಗೆ ತಿಳಿಯಹೇಳಿರುವ ರೀತಿ ಪ್ರತಿಭಾಸಂಪನ್ನವಾಗಿದೆ.

*ಮೌಳೌ ಕಿಂನು ಮಹೇಶ ? ಮಾನಿನಿ, ಜಲಂ; ಕಿಂ ವಕ್ತ್ರಂ? ಅಂಭೋರುಹಂ;*
*ಕಿಂ, ನೀಲಾಲಕವೇಣಿಕಾ ? ಮಧುಕರಾಃ ಕಿಂ ಭ್ರೂಲತೇ ? ವೀಚಿಕಾಃ ;*
*ಕಿಂ ನೇತ್ರೇ ? ಶಫರೀದ್ವಯಂ ; ಕಿಮು ಕುಚೌ ? ಪ್ರೇಂಖದ್ರಥಾಂಗದ್ವಯಂ*
*ಸಾಶಂಕಾಂ ಇತಿ ವಂಚಯನ್ ಗಿರಿಸುತಾಂ ಗಂಗಾಧರಃ ಪಾತು ವಃ*

ಇಲ್ಲಿ ಗೌರಿ ಗಂಗೆಯ ಹೆಸರೆತ್ತದೆಯೇ ಅವಳ ಒಂದೊಂದು ಅವಯವವನ್ನೂ ನಿರ್ದೇಶಿಸಿ ಶಿವನನ್ನು ಪ್ರಶ್ನಿಸುವ ಧಾಟಿ ಗಂಭೀರವಾಗಿದೆ. ಅವಳು ಮೊದಲು ಕೇಳುತ್ತಾಳೆ–ಇದೇನು ನಿನ್ನ ತಲೆಯ ಮೇಲೆ, ಮಹೇಶ ? ಶಿವ ಹೇಳುತ್ತಾನೆ ನಿರ್ಲಿಪ್ತನಾಗಿ–ನೀರು, ಮಾನಿನಿ. ಇಲ್ಲಿ ಶಿವನಲ್ಲಿ ಏನನ್ನೂ ಮರೆಮಾಚುವ ಪ್ರಸಕ್ತಿಯೇ ಇಲ್ಲ. ಅವನಿಗೆ ಗಂಗೇ ಬರೀ ನೀರು ಅಥವಾ ನದಿ. ಗೌರಿ ದೃಷ್ಟಿಯಲ್ಲಿ ಗಂಗೆ ಒಬ್ಬ ರೂಪವತಿಯಾದ ಹೆಂಗಸು. ಆದ್ದರಿಂದಲೇ ಅವಳಿಗೆ ಅಸಹನೆ, ಅಸೂಯೆ. ಶಿವನ ಸಲೀಸಾದ ಉತ್ತರ ಕೇಳಿ ಅವಳು ಪುನಃ ಪ್ರಶ್ನಿಸುತ್ತಾಳೆ–(ಈ) ಮುಖವೋ ? ಅದು ಕಮಲ. ಈ ನೀಲಕೇಶಗಳ ಜಡೆಯೋ? ಅವು ದುಂಬಿಗಳ ಸಾಲು. ಈ ಎರಡು ಹುಬ್ಬುಗಳು ? ಅವು ಅಲೆಗಳು. ಆ ಎರಡು ಕಣ್ಣುಗಳೊ ? ಅವು ಎರಡು ಮೀನುಗಳು ಜೋಡಿ. ಆ ಎರಡು ಸ್ತನಗಳು ? ಅವು ತೂಗಾಡುತ್ತಿರುವ ಚಕ್ರವಾಹಕಗಳು! ಆಶಂಕಗೊಂಡ ಗೌರಿಯನ್ನು ಈ ರೀತಿ ವಂಚಿಸುತ್ತಿರುವ ಗಂಗಾಧರ ನಿಮ್ಮನ್ನು ಸಲಹಲಿ.

ಇದೇ ಬಗೆಯ ಮತ್ತೂ ಒಂದು ಶ್ಲೋಕದ ವಸ್ತುವೂ ಗೌರಿಯ ಅಸೂಯೆಯೇ ಆಗಿದೆ.

*ಏಷಾ ತೇ ಹರ! ಕಾ ಸುಗಾತ್ರಿ ? ಕತಮಾ ? ಮೂರ್ಧ್ನಿ ಸ್ಥಿತಾ; ಕಿಂ ಜಟಾ ?*
*ಹಂಸಃ ಕಿಂ ಭಜತೇ ಜಟಾಂ? ನಹಿ, ಶಶೀ; ಚಂದ್ರೋಜಲಂ ಸೇವತೇ ?*
*ಮುಗ್ಧೇ! ಭೂತಿರಿಯಂ; ಕುತ್ರೋತ್ರ ಸಲಿಲಂ ? ಭೂತಿಸ್ತರಂಗಾಯತೇ*
*ಏವಂ ಯೋ ವಿನಿಗೂಹತೇ ತ್ರಿಪಥಗಾಂ ಪಾಯಾತ್ಸವಃ ಶಂಕರಃ*

ಮೇಲಿನ ಶ್ಲೋಕಗಳು ಸಂವಾದರೂಪದಲ್ಲಿದ್ದರೆ ಮುಂದಿನ ಶ್ಲೋಕದಲ್ಲಿ ಗಂಗೆಯನ್ನು ತನ್ನ ತಲೆಯಮೇಲಿರಿಸಿಕೊಂಡಿರುವ ಶಿವನನ್ನು ಗೌರಿ ನೇರವಾಗಿಯೇ ಕೋಪದಿಂದ ತರಾಟೆಗೆ ತೆಗೆದುಕೊಳ್ಳುವುದನ್ನು ಕಾಣಬಹುದು.

# ಗಂಗೆ–ಗೌರಿ

*ಸಂಪ್ರಾಪ್ತಂ ಮಕರಧ್ವಜೇನ ಮಥನಂ ತ್ವತ್ತೋಮದರ್ಥೇ ಪುರಾ*
*ತದ್ಯುಕ್ತಂ ಬಹುಮಾರ್ಗಗಾಂ ಮಮ ಪುರೋ ನಿರ್ಲಜ್ಜ ವೋಢುಸ್ತವ ?*
*ತಾಮೇನಾಮನುನಯಸ್ವ ಭಾವಕುಟಿಲಾಂ ; ಹೇ ಕೃಷ್ಣಕಂಠ ! ಗ್ರಹಂ*
*ಮುಂಚೇತ್ಯಾಹ ರುಷಾ ಯಮದ್ರಿತನಯಾ (ಲಕ್ಷ್ಮೀಶ್ಚ) ಪಾಯತ್ಸ ವಃ*

ಹಿಂದೆ ನನಗಾಗಿ ಮನ್ಮಥನೂ ನಿನ್ನ ದೆಸೆಯಿಂದ ಕಷ್ಟಕ್ಕೀಡಾದ. ಹಾಗಿರುವಾಗ ಎಲೌ ಲಜ್ಜೆಯಿಲ್ಲದವನೆ ! ನನ್ನ ಮುಂದೆಯೇ ಗಂಗೆಯನ್ನು ತಲೆಯ ಮೇಲೆ ಹೊತ್ತುಕೊಂಡಿರುವೆಯಲ್ಲ, ಇದು ನಿನಗೆ ತರವೇ ? ಕುಟಿಲ ಪ್ರೇಮದ ಅವಳ ಅನುನಯವನ್ನೇ ಮಾಡು ಓ ನೀಲಕಂಠ ! ಬಿಡು ನನ್ನ ಆಲಿಂಗವನ್ನು–ಎಂಬುದಾಗಿ ಗೌರಿ ಕೋಪದಿಂದ ಯಾವನನ್ನುದ್ದೇಶಿಸಿ ನುಡಿದಳೋ ಆ ಶಿವ ನಿಮ್ಮನ್ನು ಸಲಹಲಿ.

ಈ ಎಲ್ಲ ಶ್ಲೋಕಗಳೂ ಆಶೀರ್ವಚನರೂಪವಾದ ಮಂಗಳಶ್ಲೋಕಗಳೆಂಬುದನ್ನು ಗಮನಿಸಬೇಕು. ಗೌರಿಯ ಅಸಹನೆ ಅಸೂಯೆಗಳು ಕವಿಗಳಿಂದ ಆರೋಪಿತವಾದುವೇ ವಿನಾ ವಾಸ್ತವಿಕವಲ್ಲ. ಗಂಗೆ–ಗೌರಿ ಇಬ್ಬರೂ ಸತ್ತ್ವಪ್ರಧಾನರು; ದೈವೀಸಂಪತ್ತಿಯಿಂದ ಕೂಡಿದ ಮಹಾನುಭಾವೆಯರು, ಜಗದ್ವಂದ್ಯೆಯರು. (ಎಸ್.ಆರ್.ಎನ್.)

ಗಂಗೆಗೌರಿಯರ ಚಿತ್ರಗಳು ಕಾವ್ಯಪುರಾಣಗಳಲ್ಲಿಗಿಂತ ಹೆಚ್ಚು ಯಶಸ್ವಿಯಾಗಿ ಜನಪದ ಸಾಹಿತ್ಯದಲ್ಲಿ ಕಾಣಸಿಗುತ್ತವೆ. ಈ ಯಶಸ್ಸಿಗೆ ಕಾರಣ, ಬಹುಶಃ, ಇಲ್ಲಿ ಅವರೂ ಜನಪದರಾಗಿಯೇ ಕಾಣಿಸಿಕೊಳ್ಳುವುದಾಗಿರಬಹುದು. ಜನಪದ ಸಾಹಿತ್ಯದಲ್ಲಿ ಗಂಗೆಗೌರಿಯ ಸಂಬಂಧದ ಬಗ್ಗೆ ಅನೇಕ ಪಾಠಾಂತರಗಳು ಸಿಕ್ಕುತ್ತವೆ. ಅವುಗಳಲ್ಲಿ ಮುಖ್ಯವಾದ ಪಾಠಾಂತರಗಳ ಆಧಾರದಮೇಲೆ ಆ ಇಬ್ಬರ ಕೆಲವು ಚಿತ್ರಗಳನ್ನು ಇಲ್ಲಿ ಕೊಡಲಾಗಿದೆ.

ನೀಲಮ್ಮ ಮೀಯುವಾಗ ನೀರಿನಲ್ಲಿ ಮಲ್ಲಯ್ಯನ ಕಳಸವನ್ನು ಕಾಣುತ್ತಾಳೆ. ಸ್ನಾನಮಾಡಿ ಮಲಗಿದಮೇಲೆ ಅವಳಿಗೆ ಒಂದು ಕನಸು ಬೀಳುತ್ತದೆ. ಮಲ್ಲಯ್ಯ ಕನಸಿನಲ್ಲಿ ಕಾಣಿಸಿಕೊಂಡು ಕನ್ನೆಯರು ಹುಟ್ಟಿದರೆ ತನಗೆ ಕೊಡುವಂತೆ ಕೇಳುತ್ತಾನೆ. ಕನಸೊಡೆದು ಎದ್ದ ಆಕೆ ಹೆಣ್ಣು ಹುಟ್ಟಿದರೆ ಲಿಂಗಕ್ಕೆ ಸಂತೋಷದಿಂದ ಧಾರೆ ಎರೆದೇನೆಂದು ಹಿಗ್ಗುತ್ತಾಳೆ. ಅದರಂತೆ ಅವಳಲ್ಲಿ ಗಿರಿಜೆ ಹುಟ್ಟುತ್ತಾಳೆ. ಅದನ್ನು ತಿಳಿದ ಗಿರಿಯ ಮಲ್ಲಯ್ಯ ಬೆಟ್ಟದಷ್ಟು ಹೊನ್ನನ್ನು ಹೊರಿಸಿಕೊಂಡು ಅವಳನ್ನು ಕೇಳಲು ಬರುತ್ತಾನೆ. ಮಲ್ಲಯ್ಯನ ಮುಂದೆ ಬಣ್ಣದ ಹಚ್ಚಡದ ಬಸವಯ್ಯ ಬಂದು ನಮ್ಮ ಮಠಕ್ಕೆ ಹೆಣ್ಣನ್ನು ಕೊಡಿ ಎಂದು ಕೇಳುತ್ತಾನೆ. ಮಲ್ಲಯ್ಯನ ಬೈರಾಗಿಬಾಳನ್ನು ಗಿರಿಜೆಯ ತಂದೆತಾಯಿಯರು ಜರಿಯುತ್ತಾರೆ. ಅದರಿಂದ ಗಿರಿಜೆಗೆ ದುಃಖವಾಗುತ್ತದೆ. ಮಲ್ಲಯ್ಯನಿಗೆ ತನ್ನನ್ನು ಕೊಡಬೇಕೆಂದು ತಾಯಿಯನ್ನು ಒತ್ತಾಯಿಸುತ್ತಾಳೆ. ಮಲ್ಲಯ್ಯನ ಕಷ್ಟಕರ ಜೀವನವನ್ನು ತಾಯಿ ವಿವರಿಸುತ್ತಾಳೆ. ಗಿರಿಜೆ ಎಲ್ಲ ತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ಕೋಪಗೊಂಡ ತಂದೆತಾಯಿಯರು ಅವಳನ್ನು ಹೊರಗೆ ತಳ್ಳಿಬಿಡುವುದಾಗಿ ಹೆದರಿಸುತ್ತಾರೆ. ಅತ್ತ ಮಲ್ಲಯ್ಯ ಗಿರಿಜೆಯ ಯೋಚನೆಯಲ್ಲಿಯೇ ಮಲಗಿದ್ದು ಅವಳನ್ನು ಗೆದ್ದು ತರಲು ಮತ್ತೆ ಹೊರಡುತ್ತಾನೆ. ಜಂಗಮನ ವೇಷದಲ್ಲಿ ಬಂದ ಅವನು ಕೆರೆಯಲ್ಲಿ ನೀರು ಮೊಗೆಯತ್ತಿದ್ದ ಗಿರಿಜೆಯನ್ನು ಕಾಣುತ್ತಾನೆ. ಅ ಚೆಲುವೆಯನ್ನು ಕಂಡು ತನ್ನ ಜಪವನ್ನೇ ಮರೆತು ಬಿಡುತ್ತಾನೆ. ಅವರಿಬ್ಬರಲ್ಲಿ ಸರಸ ಸಂಭಾಷಣೆ ನಡೆದು ಪ್ರೇಮಾಂಕುರವಾಗುತ್ತದೆ. ಅವಳನ್ನು ಕೊಡಲು ತಂದೆತಾಯಿಯರೂ ಒಪ್ಪುತ್ತಾರೆ. ಮದುವೆ ವಿಜೃಂಭಣೆಯಿಂದ ನಡೆಯುತ್ತದೆ.

ಇನ್ನೊಂದು ಪಾಠಾಂತರ ಹೀಗಿದೆ : ಭೋಲೋಕದಲ್ಲಿ ಗೌರಿಯ ಅವತಾರವಾದ ಮೇಲೆ ಸುಂದರ ಯುವತಿಯಾಗಿ ಅವಳನ್ನು ಯಾರಿಗೆ ಕೊಡಬೇಕೆಂಬುದು ತಂದೆತಾಯಿಗಳಿಗೆ ದೊಡ್ಡ ಸಮಸ್ಯೆಯಾಗಿ ಹೋಯಿತು. ಯಾವ ವರನನ್ನೂ ಅವಳು ಒಪ್ಪದೆ ನಿರಾಶೆಯನ್ನುಂಟು ಮಾಡಿದಳು. ಯಾರಿಗೆ ಕೊಡಲಿ ಎಂದು ತಂದೆ ಮಗಳನ್ನೇ ಕೇಳುತ್ತಾನೆ. ಬ್ರಾಹ್ಮಣನಿಗೆ ಕೊಡಲೆ ಎಂದರೆ ಅವರ ಕಟ್ಟುನಿಟ್ಟಾದ ಜೀವನ ತನಗೆ ಒಗ್ಗದೆಂದು ಹೇಳಿ ನಿರಾಕರಿಸುತ್ತಾಳೆ. ಹೀಗೆಯೇ ಶಿವಭಕ್ತರು, ಕೋಮಟಿಗರು, ಒಕ್ಕಲಿಗರು, ತುರುಕರು, ಕುಂಬಾರರು, ಕುರುಬರು, ನಾಯ್ಕರು, ಗೊಲ್ಲರು ಮುಂತಾದ ವಿವಿಧ ಜಾತಿಯ ವಿವಿಧ ಕಸಬಿನವರನ್ನು ಸೂಚಿಸಿದರೂ ಹಲವು ಕಾರಣಗಳನ್ನು ಹೇಳಿ ಬೇಡವೆನ್ನುತ್ತಾಳೆ. ಕೊನೆಗೆ ಶಿವಗಂಗೆಯ ಸಂನ್ಯಾಸಿ ಮಠದಲ್ಲಿರುವ ಜಂಗಮನಿಗೆ ಕೊಟ್ಟು ಲಗ್ನ ಮಾಡಬಹುದೆಂದು ಮಗಳು ತಿಳಿಸಲು ಅದನ್ನು ಕೇಳಿದ ತಂದೆತಾಯಿಯರು ವಿಸ್ಮಯಗೊಳ್ಳುತ್ತಾರೆ. ಜಂಗಮಜೀವನದ ಅಸಹ್ಯವಾದ ಸ್ಥಿತಿಯನ್ನು ವಿವರಿಸುತ್ತಾರೆ. ಆದರೂ ಅವಳು ಕೇಳುವುದಿಲ್ಲ. ಕೋಪಗೊಂಡ ಅವರು ಈಕೆ ನಮ್ಮ ಘನತೆಯನ್ನು ಹಾಳುಮಾಡುವ ಹೆಣ್ಣು ಎಂದುಕೊಂಡು ಕಣ್ಣು ಕಟ್ಟಿ ಕಾಡಿಗೆ ಬಿಡುತ್ತಾರೆ. ಅಲ್ಲಿ ಗೌರಮ್ಮ ಹನ್ನೆರಡು ಬೆಟ್ಟದ ನಡುವೆ ಕುಳಿತು ಶಿವನನ್ನು ಕುರಿತು ತಪಸ್ಸು ಮಾಡುತ್ತಾಳೆ. ಶಿವ ಮುದಿಜಂಗಮನ ವೇಷ ಧರಿಸಿ ಜೋಳಿಗೆ ಹಿಡಿದು ಭಿಕ್ಷೆಗೆ ಬರುತ್ತಾನೆ. ಕಾಡಿನಲ್ಲಿ ಅವಳೇನನ್ನು ಕೊಟ್ಟಾಳು ? ಕೊನೆಗೆ ಶಿವ ತನ್ನ ನಿಜರೂಪವನ್ನು ತೋರಿ ಅವಳನ್ನು ತನ್ನೊಂದಿಗೆ ಮಠಕ್ಕೆ ಕರೆದುಕೊಂಡು ಹೋಗಿ ಅವಳ ತಂದೆತಾಯಿಗಳನ್ನು ಕರೆಸಿ ವಿಜೃಂಭಣೆಯಿಂದ ಮದುವೆ ಮಾಡಿಕೊಳ್ಳುತ್ತಾನೆ.

ಜನಪದ ಸಾಹಿತ್ಯದಲ್ಲಿ ಗಂಗೆ ಕಾಣಿಸಿಕೊಳ್ಳುವುದು ಹೀಗೆ:

ಉಂಡುಟ್ಟು ಮಂಚದ ಮೇಲೆ ಮಲಗಿದ ಗಿರಿಮಾಜಿಗೆ ಕನಸಿನಲ್ಲಿ ಶಿವ ಕಾಣಿಸಿ ಗರ್ಭಿಣಿಯಾದ ಅವಳೊಡಲಲ್ಲಿ ಹೆಣ್ಣುಮಕ್ಕಳು ಹುಟ್ಟಿದರೆ ತನಗೆ ಕೊಡುವಂತೆ ಕೇಳುತ್ತಾನೆ. ಗಿರಿಮಾಜಿಗೆ ನವಮಾಸಗಳು ತುಂಬಿ ದಿನ ಹತ್ತಿರವಾಗಲು ಪತಿ ಗಿರಿರಾಯ ಸೂಲಗಿತ್ತಿ ಸಂಗಮ್ಮನನ್ನು ಹುಡುಕಿ ಕರೆತರುತ್ತಾನೆ. ಎರಡು ಹೆಣ್ಣುಮಕ್ಕಳು ಜನಿಸುತ್ತವೆ. ಆದರೆ ಹಿರಿಯ ಹೆಣ್ಣು ಹುಟ್ಟಿದ ಗಳಿಗೆಯಲ್ಲಿ ಶಕುನ ಸರಿತೋರದೆ ಹುಟ್ಟಿದ ಮನೆಗೆ ಅವಳು ಕಂಟಕಪ್ರಾಯಳಾಗುವಳೆಂದು ಸಂಗಮ್ಮನೂ ಪುರೋಹಿತರೂ ಹೇಳಿದ ಮೇಲೆ ತೊಟ್ಟಿಲ ಸಮೇತ ಹೊಳೆಗೆ ಬಿಟ್ಟು ಬರುತ್ತಾನೆ, ಗಿರಿರಾಯ. ಮೀನು ಹಿಡಿಯುವಾಗ ಅಂಬಿಗರ ಗಂಗನಿಗೆ ಆ ಮಗು ಸಿಕ್ಕುತ್ತದೆ. ಹೀಗೆ ಗಂಗೆ ಅಂಬಿಗರ ಮನೆಯಲ್ಲಿ ಬೆಳೆದು ದೊಡ್ಡವಳಾಗುತ್ತಾಳೆ.

ಜನಪದ ಸಾಹಿತ್ಯದಲ್ಲಿ ಗಂಗೆಗೌರಿಯರ ಜಗಳ ಅತಿ ಮೋಜಿನ ಪ್ರಸಂಗವೆನಿಸಿದೆ. ಈ ಜಗಳದಲ್ಲಿ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕಂಡುಬರುವ ಇಬ್ಬರು ಹೆಂಗಸರ ಜಗಳ, ಸವತಿಮಾತ್ಸರ್ಯಗಳು ಪ್ರತಿಬಿಂಬಿತವಾಗಿವೆ.

ಗಂಗೆಯನ್ನು ತರುವ ಪೂರ್ವದಲ್ಲಿಯೇ ಗೌರಿಯ ಮುನಿಸು ಪ್ರಾರಂಭವಾಗುತ್ತದೆ. ತೊಳತೊಳತೊಳಗುತ್ತಿರುವ ಗಂಗೆಯನ್ನು ಸ್ವಪ್ನದಲ್ಲಿ ಕಂಡ ಶಿವ ಪಕ್ಕದಲ್ಲಿ ಮಲಗಿದ್ದ ಗೌರಿಗೆ ಹೇಳುತ್ತಾನೆ. ಅವನು ಯಾಕೆ ಹೇಳುತ್ತಿದ್ದಾನೆಂದು ಅವಳಿಗೆ ಅರ್ಥವಾಗುತ್ತದೆ. 'ಮಕ್ಕಾಳಿರ್ಲೇಳಿ ಮನೆತುಂಬ' ಎಂದು ವ್ಯಂಗ್ಯವಾಗಿ ನುಡಿದು ಮಗ್ಗುಲಾಗುತ್ತಾಳೆ. ಆದರೆ ಮರುದಿನ ಶಿವ ವೇಷಧರಿಸಿ ಹೊರಟೇಬಿಡುತ್ತಾನೆ. ಭೋಲೋಕಕ್ಕೆ ಬಂದ ಶಿವ ನೀರನ್ನು ಮೊಗೆಯುತ್ತಿರುವ ಗಂಗೆಯನ್ನು ಕಂಡು ಜಪವಮಾಡುತ್ತಿರುವಂತೆ ತಾನು ನಟಿಸುತ್ತಿದ್ದೇನೆಂಬುದನ್ನೂ ಮರೆಯುತ್ತಾನೆ. ಇವನ ಸ್ಥಿತಿಯನ್ನು ಕಂಡ ಗಂಗೆ 'ಜಪವ ಮರಿಸವ್ರ ಮಗಳಲ್ಲ' ಎಂದು ಹಾಸ್ಯ ಮಾಡುತ್ತಾಳೆ. ಹಾಸ್ಯಕ್ಕಿಂತ ಹೆಚ್ಚಾಗಿ ಇಲ್ಲಿ ನಾನು ಬಡವರ ಮನೆಯ ಹುಡುಗಿ ಎಂಬ ದೈನ್ಯದ ಭಾವ ಎದ್ದುಕಾಣುತ್ತದೆ. ಶಿವ ಗಂಗೆಯನ್ನು ತರುತ್ತಿರುವ ಸುದ್ದಿಯನ್ನು ಗಿಣಿರಾಮನಿಂದ ತಿಳಿದು ಗೌರಿ ಅಪ್ಪನ ಮನೆಗೆ ಹೊರಡುತ್ತಾಳೆ. ಅವರು ಬರುವ ಹೊತ್ತಿಗೆ ರಾಡ್ಮುಂಡ್ಗೆ (ಮಂಡಿಗದ್ದಗಳನ್ನು ಸೇರಿಸಿ ಮಲಗುವುದು) ಹಾಕಿ ಮಲಗು ಹೋಗು ಎಂದು ಅಪ್ಪ ಬುದ್ಧಿ ಹೇಳಿ ಕಳಿಸುತ್ತಾನೆ. ಕದ ತೆಗೆಯದೆ ಮಲಗಿದ್ದ ಗೌರಿಯನ್ನು ಹೆದರಿಸಿ ಕದ ತೆಗೆಸುತ್ತಾನೆ ಶಿವ. ಗೌರಿ ಊಟಕ್ಕೆ ಎರಡು ಮಣೆಗಳನ್ನು ಹಾಕುತ್ತಾಳೆ. 'ಇಬ್ಬರುಂಟೇನೆ ಪುರುಷ್ಯರು ?' ಎಂದು ಕೇಳಿದ ಶಿವನಿಗೆ 'ಸಿವ್ನ ಕೆಂಜಡೆಯ ಮುಡಿವಳಗೆ ಇರುವ ಸಿವ್ಗಂಗೇಗೆ ಒಂದು, ನಿಮಗೊಂದು' ಎಂದು ಉತ್ತರಿಸುತ್ತಾಳೆ. ಶಿವ ಅಪ್ರತಿಭನಾಗುತ್ತಾನೆ. ಅನಂತರ ಗೌರಿ ಗಂಗೆಗೆ ಹರಸುತ್ತ 'ಅಂಬುಗನ ಮಗಳೆ ಸುಕುಬಾಳೊ' ಎನ್ನುತ್ತಾಳೆ. ಅಂಬಿಗನ ಮಗಳು ಎಂದು ಕರೆದಳಲ್ಲ ಎಂದು ಗಂಗೆಗೆ ಚುರುಕಾಗುತ್ತದೆ. 'ಕೆಂಪೇರ ಜಗಳ ಶಂಖ ಬಾರಿಸಿದ್ಹಂಗ' ಮೊದಲಾಗುತ್ತದೆ ಜಗಳ. ಆಗಾಗ ಇಂಥ ಸಣ್ಣಪುಟ್ಟ ಜಗಳಗಳು ಇದ್ದೇ ಇರುತ್ತವೆ. ಹೀಗೇ ಇರುವಾಗ ಒಮ್ಮೆ ತಾನು ಮುಡಿದು ಮಿಕ್ಕಿದ ಹೂವನ್ನು ಗೌರಿ ಗಂಗೆಗೆ ಕಳಿಸುತ್ತಾಳೆ. ಒಳ್ಳೊಳ್ಳೆ ಹೂವನ್ನೆಲ್ಲ ತಾನು ಮುಡಿದು ಬಾಡಿಬತ್ತಿದ ಹೂವನ್ನು ಕಳಿಸಿದ್ದಾಳೆ ಎಂದುಕೊಂಡು ಗಂಗೆ ಅವನ್ನು ಬೀದಿಗೆ ಚೆಲ್ಲುತ್ತಾಳೆ, ಬೇಲಿಗೆ ಎಸೆಯುತ್ತಾಳೆ. ಇದನ್ನೆಲ್ಲ ತಿಳಿದ ಗೌರಿ, ಗಂಗೆ ಬೆಸ್ತರ ಹುಡುಗಿಯೆಂದೂ ಅವಳ ತಂದೆ ಅಣ್ಣಂದಿರು ಮೀನು ಸೀಗಡಿ ಮಾರುವವರೆಂದೂ ಅವಳ ಬಂಧು ಬಳಗ ಸುಣ್ಣ ಸುಡುವವರೆಂದೂ ಜರೆಯುತ್ತಾಳೆ. ಸರಿ, ಪರಸ್ಪರ ಜಡೆ ಹಿಡಿದು ಜಗಳ ಪ್ರಾರಂಭಿಸುತ್ತಾರೆ. ಕುಸ್ತಿಯಲ್ಲಿ ಗಂಗೆ ಕೆಳಗೆ, ಗೌರಿ ಮೇಲೆ. ಜಗಳ ನಡೆಯುತ್ತಿದ್ದಾಗ ಗೌರಿ ಹೊರಗಾಗುತ್ತಾಳೆ. ಮಳೆದೇವರು ಗಾಳಿದೇವರುಗಳನ್ನು ಕರೆದು ಗಂಗೆ ಆಣೆ ಭಾಷೆ ತೆಗೆದುಕೊಳ್ಳುತ್ತಾಳೆ. ಭೂಮಿಯ ಮೇಲಿನ ನೀರನ್ನೆಲ್ಲ ಮಾಯ ಮಾಡುತ್ತಾಳೆ. ಗೌರಿ ನೀರನ್ನು ತರಲು ಮಗನಾದ ಚೆನ್ನವೀರನನ್ನು ಕಳಿಸುತ್ತಾಳೆ. ಹುಡುಕಿ ಹುಡುಕಿ ಸಾಕಾದ ಅವನನ್ನು ಕಾಶಿಗೆ ಹೋಗು ಎನ್ನುತ್ತಾಳೆ, ಗೌರಿ. ಕಾಶಿಯಲ್ಲೂ ನೀರಿಲ್ಲ. ಅಲ್ಲಿಂದ ಬಳಲಿ ಬರುವಾಗ ಗಂಗೆ ನೋಡುತ್ತಾಳೆ. ಅಲ್ಲೊಂದು ಹಳ್ಳವನ್ನು ಸೃಷ್ಟಿಮಾಡುತ್ತಾಳೆ. ಆ ಹಳ್ಳದಲ್ಲಿ ಮನದಣಿಯ ನೀರು ಕುಡಿದು ಸ್ನಾನಮಾಡಿ ಬುತ್ತಿ ಬಿಚ್ಚುತ್ತಾನೆ ವೀರಣ್ಣ. ಎರಡು ಪಾಲುಮಾಡಿ ಚಿಕ್ಕವ್ವನಾದ ಗಂಗೆಗೆ ಒಂದು ಪಾಲನ್ನು ಬಿಟ್ಟು ಉಳಿದದ್ದನ್ನು ತಾನು ಉಣ್ಣುತ್ತಾನೆ. ಆಮೇಲೆ ಹನ್ನೆರಡು ಕಂಬ ಅಡ್ಡೆ ನೀರು ಮೊಗೆದು ಹೆಗಲಮೇಲೆ ಹೊತ್ತು ಮೂರು ಹೆಜ್ಜೆ ಹೋಗುವಷ್ಟರಲ್ಲಿ ಸವತಿ ಗೌರಿಗೆ ನೀರು ಹೋಗುತ್ತಿದೆ ಎಂದು ತಿಳಿದ ಗಂಗೆ ಹಳ್ಳದಲ್ಲಿದ್ದ ಮತ್ತು ಅಡ್ಡೆಯಲ್ಲಿದ್ದ ನೀರನ್ನೆಲ್ಲ ಮಾಯ ಮಾಡುತ್ತಾಳೆ. ಇದು ಗಂಗೆಯ ಮಾಯ ಎಂದು ಅವನಿಗೆ ತಿಳಿದುಹೋಗುತ್ತದೆ. ಮೂವತ್ತು ದಿನದಿಂದ ಊಟ ಇಲ್ಲದೆ ಗೌರಿ ಬಳಲುತ್ತಿದ್ದು ಕೈಲಾಸಗಿರಿಯಲ್ಲಿರುವ ಶಿವನ ಬಳಿಗೆ ಮಗನನ್ನು ಕಳಿಸುತ್ತಾಳೆ. ಶಿವನಿಗೆ ಜಗಳದ ವಿಷಯವನ್ನು ಹೇಳುತ್ತಾನೆ, ವೀರಣ್ಣ. ಶಿವ ಬರುತ್ತಾನೆ. ಗೌರಿ ಹೊರಗೆ ಕೂತಿದ್ದಾಳೆ. ಹಾಲುಮೊಸರು ತುಪ್ಪ ಜೇನುಗಳ ಅಡ್ಡೆಯನ್ನು ತರಲೇ ಎಂದು ಕೇಳುತ್ತಾನೆ. ಯಾವುದರಿಂದಲೂ ತನ್ನ ಸೂತಕ ಕಳೆಯುವುದಿಲ್ಲ ಎನ್ನುತ್ತಾಳೆ. ಗಂಗೆಯ ಬಳಿಗೆ ಹೋಗು ಎನ್ನುತ್ತಾನೆ. ಸತ್ತರೂ ಆಕೆಯ ಬಳಿಗೆ ಹೋಗಲಾರೆ ಎನ್ನುತ್ತಾಳೆ. ವಿಧಿಯಿಲ್ಲದೆ ಮಗನನ್ನು ಕಳಿಸುತ್ತಾಳೆ. ನಿನಗೆ ಬೇಕಾದರೆ ಒಂದು ಚೆಂಬು ಕೊಡುತ್ತೇನೆ, ನಿನ್ನವ್ವನಿಗೆ ಇಲ್ಲ, ಎನ್ನುತ್ತಾಳೆ ಗಂಗೆ. ನಮ್ಮ ಬಾವಿಯಲ್ಲಿ ಕಪ್ಪೆ ಇರುತ್ತವೆ. ಅದು ಕಲಕುನೀರು, ಮೀನು ಇರುತ್ತವೆ. ಅದು ಹೊಲಸುನೀರು–ಎಂದು ಕಟಕಿಯಾಡಿದ ಮೇಲೆ ಬರಿಗೈಯಲ್ಲಿ

ಹಿಂತಿರುಗುತ್ತಾನೆ, ವೀರಣ್ಣ ಪೆಟ್ಟಿಗೆಯಲ್ಲಿದ್ದ ಪಟ್ಟೆಸೀರೆ ಉಟ್ಟುಕೊಂಡು ಆಭರಣಗಳನ್ನೆಲ್ಲ ಧರಿಸಿಕೊಂಡು ಐದು ಜನ ಮಕ್ಕಳನ್ನು ಕರೆದುಕೊಂಡು ಗೌರಿಯೇ ಹೊರಡುತ್ತಾಳೆ. ಎಷ್ಟು ಕೂಗಿದರೂ ಗಂಗೆ ಬಾಗಿಲು ತೆಗೆಯುವುದಿಲ್ಲ. ಉಟ್ಟಿದ್ದ ಪಟ್ಟೆಸೀರೆ ಆಭರಣಗಳು ಐದು ಜನ ಮಕ್ಕಳು–ಏನು ಬೇಕಾದರೂ ಕೊಡುವೆನೆಂದರೂ ಉತ್ತರ ಬರುವುದಿಲ್ಲ. ಕೊನೆಗೆ ನನ್ನ ಭಾಗದ ಗಂಡನನ್ನು ಕೊಡುತ್ತೇನೆ ಎಂದಾಗ, ಹಾಲು ಅನ್ನ ಮುಟ್ಟಿ ಭಾಷೆ ಮಾಡಿಸಿಕೊಂಡು, ಗಂಗಮ್ಮ ಬಾಗಿಲು ತೆಗೆಯುತ್ತಾಳೆ. ಮಳೆದೇವರು ಗಾಳಿ ದೇವರನ್ನು ಕರೆದು ಆಣೆ ಭಾಷೆ ಬಿಡಿಸುತ್ತಾಳೆ. ಗುಡುಗು ಮಿಂಚುಗಳು ಕಾಣಿಸಿ ಜಡಿಮಳೆ ಸುರಿಯುತ್ತದೆ. ಸೂತಕ ತೀರಿಸಿಕೊಂಡು, ಇಬ್ಬರೂ ಜೊತೆಯಲ್ಲಿ ಈಜಾಡಿ, ಜೊತೆಯಲ್ಲಿ ಹಾಲು ಅನ್ನ ಉಂಡು, ಆಮೇಲೆ ಇವತ್ತು ರಾತ್ರಿ ಶಿವನನ್ನು ಕಳುಹು' ಎಂಬ ಗಂಗೆಯ ಮಾತನ್ನು ಕೇಳಿ 'ಎಲ್ಲಾದ್ರೂ ಉಂಟೇನೆ' ಎಂದು ಹೇಳಿ ಮಾತಿಗೆ ತಪ್ಪುತ್ತಾಳೆ ಗೌರಿ. ಕೇಶಾಕೇಶಿ ಮತ್ತೆ ಪ್ರಾರಂಭವಾಗುತ್ತದೆ. ಎರಡು ಮೂರು ಪೆಟ್ಟು ತಿಂದ ಗಂಗೆ ಕೈಬೀಸಿ ಮಳೆರಾಯನನ್ನು ಕರೆಯುತ್ತಾಳೆ. ಗಂಗೆ ಮೊಣಕಾಲುದ್ದ ನೀರಲ್ಲಿ ನಿಂತರೆ, ಗೌರಿ ಕೊಚ್ಚಿಹೋಗುತ್ತಾಳೆ. ಬೇಟೆಗೆ ಹೋಗಿದ್ದ ಶಿವ ಬರುತ್ತಾನೆ. ಗಂಗೆಯನ್ನು ಬೆಸ್ತರ ಮನೆಗೆ ಕಳಿಸುತ್ತ 'ವರ್ಷಕ್ಕೊಮ್ಮೆ ಮಾರಿ ಹಬ್ಬದಲ್ಲಿ ನೀನು ಬಾ, ನಡು ಊರಲ್ಲಿ ನಿನ್ನ ಪೂಜುತ್ತಾರೆ, ಕುರಿಕೋಳಿಗಳ ನಿನಗೆ ಕಡಿತಾರೆ' ಎಂದು ಹೇಳುತ್ತಾನೆ. 'ಬ್ರಾಹ್ಮಣರ ಮನೆಯಲ್ಲಿ ಸೇರಿಕೋ, ವರ್ಷಕ್ಕೊಮ್ಮೆ ಗೌರಿಹಬ್ಬದಲ್ಲಿ ನೀನು ಬಾ, ಮಲ್ಲಿಗೆ ಹೂವಿನ ಪೂಜೆ ನಿನಗೆ ಮಾಡುತ್ತಾರೆ' ಎಂದು ಗೌರಿಗೆ ಹೇಳಿಕಳಿಸುತ್ತಾನೆ. 'ನಿಮ್ಮಿಬ್ಬರ ಮಧ್ಯದಲ್ಲಿ ಶಿವರಾತ್ರಿ ಹಬ್ಬ, ಆ ಹಬ್ಬದಲ್ಲಿ ನಾ ಬರುತ್ತೀನಿ' ಎಂದು ಶಿವ ಮೂವರಿಗೂ ಮೂರು ಹಬ್ಬ, ನಿಯಮಿಸುತ್ತಾನೆ. (ಆರ್.)

**ಗಂಗೇಶ :** ತತ್ತ್ವಚಿಂತಾಮಣಿಯ ಕರ್ತೃ. ನವೀನ ನ್ಯಾಯದಲ್ಲಿ ಹೆಸರಾಂತ ತಾರ್ಕಿಕ. ಗಂಗೇಶೋಪಾಧ್ಯಯನೆಂದೂ ಕರೆವುದಿದೆ. ನ್ಯಾಯ ವೈಶೇಷಿಕ ದರ್ಶನಗಳ ಸಮ್ಮಿಲನದಿಂದ ಉಂಟಾದ ನವ್ಯಪಂಥದ ಪ್ರವರ್ತಕ. ಕಾಲ ಹದಿನಾಲ್ಕನೆಯ ಶತಮಾನ. ಮಿಥಿಲೆ ಜನ್ಮಸ್ಥಳ.

ಭಾರತೀಯ ಷಡ್ದರ್ಶನದಲ್ಲಿ ಗೌತಮರ ನ್ಯಾಯದರ್ಶನ ಮತ್ತು ಕಣಾದರ ವೈಶೇಷಿಕ ದರ್ಶನ ಈ ಎರಡರ ಉಗಮ ಮತ್ತು ವಿಕಾಸದ ಕಾಲಮಾನಗಳನ್ನು ಸೂತ್ರಗಳ ಕಾಲ, ಭಾಷ್ಯಗಳ ಕಾಲ ಮತ್ತು ತಾರ್ಕಿಕ ಸಾಹಿತ್ಯದ ಕಾಲವೆಂದು ಮೂರು ವಿಭಾಗಗಳನ್ನಾಗಿ ಮಾಡಬಹುದು. ಮೂರನೆಯದು ನವೀನ ನ್ಯಾಯದ ಕಾಲವೆಂದು ಪ್ರಸಿದ್ಧಿಯಾಗಿದೆ. ಈ ಕಾಲದ ನ್ಯಾಯ ವೈಶೇಷಿಕ ದರ್ಶನ ಗ್ರಂಥಗಳು ಮೂಲಸೂತ್ರಗಳ ಮುಖ್ಯ ವಿಷಯಗಳಾದ ಉದ್ದೇಶ, ಪದಾರ್ಥಗಳ ವಿಭಾಗ, ಲಕ್ಷಣ ಮತ್ತು ಪರೀಕ್ಷಣ–ಇವುಗಳ ವಿಶದೀಕೃತ ಪ್ರತಿಪಾದನೆಯ ಕಡೆಗೆ ಹೆಚ್ಚು ಲಕ್ಷ್ಯವಿಡದೆ ಯಥಾರ್ಥಜ್ಞಾನ ಸಾಧನಗಳಾದ ಪ್ರತ್ಯಕ್ಷಾದಿ ನಾಲ್ಕು ಪ್ರಮಾಣಗಳ ಸೂಕ್ಷ್ಮಾತಿಸೂಕ್ಷ್ಮ ಪರಿಶೀಲನೆಗೆ ಮೀಸಲಾಗಿವೆ. ಇಂಥ ಗ್ರಂಥಗಳಲ್ಲಿ ಪ್ರಸಿದ್ಧವಾದುದು ತತ್ತ್ವ ಚಿಂತಾಮಣಿ. ಇದು ಉದಯನಾಚಾರ್ಯರ ಕಿರಣಾವಳೀ ಗ್ರಂಥವಾದ ಮೇಲೆ ಬಂದ ಮತ್ತೊಂದು ಬೃಹದ್‌ಗ್ರಂಥ. ಇದು ಪೂರ್ವಸೂರಿಗಳ ರಚನಾತ್ಮಕವೂ ವಿಮರ್ಶಾತ್ಮಕವೂ ತಾರ್ಕಿಕವೂ ಆದ ದಾರ್ಶನಿಕ ವಿಷಯನಿರೂಪಣೆಗೆ ಹೊಸ ತಿರುವೊಂದನ್ನಿತ್ತು ನವ್ಯ ಪಂಥದ ಆಚಾರ್ಯ ಕೃತಿಯಾಯಿತು ಎಂದು ಮಹಾಮಹೋಪಾಧ್ಯಾಯ ಕುಪ್ಪುಸ್ವಾಮಿ ಶಾಸ್ತ್ರಿಗಳ ಅಭಿಪ್ರಾಯ. ಇದುವರೆಗೆ ಪದಾರ್ಥಶಾಸ್ತ್ರವಾಗಿದ್ದ ನ್ಯಾಯ ವೈಶೇಷಿಕ ದರ್ಶನ ಮುಂದೆ ಪ್ರಮಾಣಶಾಸ್ತ್ರವಾಯಿತು. ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದಪ್ರಮಾಣಗಳನ್ನು ಅಧಿಕರಿಸಿ ನಾಲ್ಕು ಖಂಡಗಳಲ್ಲಿ ರಚಿತವಾದ ಈ ಗ್ರಂಥದಲ್ಲಿ ನವ್ಯವಾದ ಅವಚ್ಛೇದಕ, ಅವಚ್ಛೇದ್ಯ, ನಿರೂಪಕ, ನಿರೂಪ್ಯ, ಅನುಯೋಗಿ, ಪ್ರತಿಯೋಗಿ ಮುಂತಾದ ತಾರ್ಕಿಕ ಪದಪುಂಜಗಳು ಬಳಕೆಗೆ ಬಂದುವು.

ತತ್ತ್ವಚಿಂತಾಮಣಿ ಬಂಗಾಳದಲ್ಲಿ ಅಭೂತಪೂರ್ವವೂ ಅನ್ಯಾದೃಶವೂ ಆದ ತಾರ್ಕಿಕ ಚಟುವಟಿಕೆಗಳಿಗೆ ದಾರಿ ಮಾಡಿಕೊಟ್ಟಿತು. ನವ್ಯ ಪಂಥೀಯ ಆಚಾರ್ಯ ಪರಂಪರೆಯೊಂದರ ಉದಯಕ್ಕೆ ಕಾರಣವಾಯಿತು. ಆ ಪರಂಪರೆಯಲ್ಲಿ ಗಂಗೇಶನ ಮಗ ವರ್ಧಮಾನ, ಬಂಗಾಳದ ಜಗದ್ವಿಖ್ಯಾತ ದಾರ್ಶನಿಕ ಕೃಷ್ಣಚೈತನ್ಯನ (ಗೌರಾಂಗ) ವಿದ್ಯಾಗುರು ವಾಸುದೇವ ಸಾರ್ವಭೌಮ, ರಘುನಾಥ ಶಿರೋಮಣಿ, ಮಥುರಾನಾಥ ಭಟ್ಟಾಚಾರ್ಯ, ಜಗದೀಶ ಭಟ್ಟಚಾರ್ಯ ಮತ್ತು ಇವರೆಲ್ಲರಿಗೂ ತಿಲಕಪ್ರಾಯನಾದ ಗದಾಧರ ಭಟ್ಟಚಾರ್ಯ–ಇವರು ಪ್ರಮುಖರಾದವರು. (ಸಿ.ಜಿ.ಪಿ.)

**ಗಂಗೋತ್ರಿ :** ಗಂಗಾವತಾರ ಎಂಬುದರ ತದ್ಭವ ಶಬ್ದವಿದು. ಪವಿತ್ರ ಗಂಗಾನದಿಯ ಉಗಮಸ್ಥಾನವೆಂದು ಇದರ ತಾತ್ಪರ್ಯ. ಗರ್ವಾಲ್ ಸಂಸ್ಥಾನಕ್ಕೆ ಸೇರಿದ ತೀಹ್ರೀ ಜಿಲ್ಲೆಯಲ್ಲಿರುವ (ಉತ್ತರಾಂಚಲ) ಈ ಸ್ಥಳ ಹಿಂದೂ ಜನರಿಗೆ ಪವಿತ್ರ ಯಾತ್ರಾಸ್ಥಳವಾಗಿದೆ. ಉತ್ತರ ಅಕ್ಷಾಂಶ 30°-56, ಪೂರ್ವರೇಖಾಂಶ 79°-02 ಇಲ್ಲೊಂದು ಗಂಗಾದೇವಿಯ ದೇವಾಲಯವೂ ಇದೆ. ದೇವಾಲಯಕ್ಕೆ ಹತ್ತಿರದಲ್ಲಿಯೇ ಗೌರಿಕುಂಡವೆಂಬಲ್ಲಿ ಕೇದಾರಗಂಗಾ ಎಂಬ ಉಪನದಿ ಭಾಗೀರಥಿ ನದಿಯನ್ನು ಸೇರುತ್ತದೆ. ಪಾಪಗಳನ್ನು ಕಳೆದುಕೊಳ್ಳಬೇಕೆಂಬ ಯಾತ್ರಾರ್ಥಿಗಳು ಈ ಸಂಗಮದಲ್ಲಿ ಸ್ನಾನಮಾಡುತ್ತಾರೆ. ಇಲ್ಲಿರುವ ಗಂಗಾದೇವಿ ಗುಡಿ ಈಚಿನದು; ಇದನ್ನು 18ನೆಯ ಶತಮಾನದಲ್ಲಿ ಗೂರ್ಖ ಅಧಿಕಾರಿಯೊಬ್ಬ ಕಟ್ಟಿಸಿದ. ಗಂಗೋತ್ರಿಯಲ್ಲಿ ಭೈರವನ ಒಂದು ಗುಡಿಯೂ ಉಂಟು. ಮೂಲತಃ ಆರ್ಯೇತರ ದೇವತೆಯಾದ ಭೈರವನಿಗೆ ಆರ್ಯ ದೇವಗಣದಲ್ಲಿ ಪ್ರವೇಶ ದೊರೆತಾಗ ಅವನಿಗೆ ದ್ವಾರಪಾಲಕನ ಸ್ಥಾನ ಮೀಸಲಾಯಿತೆಂದು ಕಾಣುತ್ತದೆ. ಗಂಗಾನದಿಯ ನಿಜವಾದ ಉಗಮ ಒಂದು ಗುಹೆಯಾಗಿದ್ದು ಅದನ್ನು ಗೋಮುಖವೆನ್ನುವರು. ಹಿಮವತ್ಪರ್ವತದ ಮಂಜು ಮತ್ತು ಹಿಮ ಕರಗಿದಂತೆ ಆ ಗವಿಯೊಳಗಿಂದ ನೀರು ಭೋರ್ಗರೆಯುತ್ತ ಹೊರಗೆ ಹರಿಯುವುದು ಕಾಣುತ್ತದೆ. ಆದರೆ ಸಾಮಾನ್ಯವಾಗಿ ಜನ ಗಂಗೋತ್ರಿಯನ್ನೇ ಗಂಗೆಯ ಉಗಮವೆಂದು ಭಾವಿಸುತ್ತಾರಲ್ಲದೆ ಇನ್ನೂ ಮೇಲಿನ ಗುಡ್ಡವನ್ನೇರಿ ಗೋಮುಖದವರೆಗೆ ಹೋಗುವ ಪ್ರಯಾಸವನ್ನು ಕೈಗೊಳ್ಳುವುದಿಲ್ಲ. ಆದರೆ ಆ ದಾರಿಯೇನೂ ಅವರು ಭಾವಿಸುವಷ್ಟು ದುರ್ಗಮವಾಗಿಲ್ಲ.

ಪುರಾಣಗಳಲ್ಲಿ ಗಂಗೋತ್ರಿ ಕ್ಷೇತ್ರದ ಮಹಿಮೆ ಅಷ್ಟೊಂದು ವರ್ಣಿತವಾಗಿದ್ದರೂ ಪ್ರವಾಸದ ಕಷ್ಟದಿಂದಾಗಿ ಇಲ್ಲಿಗೆ ಬರುವ ಯಾತ್ರಿಕರ ಸಂಖ್ಯೆ ಹೆಚ್ಚಾಗಿರುವುದಿಲ್ಲ. ಗಂಗೋತ್ರಿಯಲ್ಲಿಯ ಗಂಗೆಯನ್ನು ಕಲಶಗಳಲ್ಲಿ ತುಂಬಿ ಮೊಹರು ಮಾಡಿ ಸುತ್ತಣ ಪಟ್ಟಣಗಳಲ್ಲಿ ಮಾರಾಟ ಮಾಡುತ್ತಾರೆ. (ಕೆ.ಕೆ.)

**ಗಂಜಾಂ :** ಒಡಿಶಾ ರಾಜ್ಯದ ಒಂದು ಜಿಲ್ಲೆ. ಪೂರ್ವ ಘಟ್ಟಗಳಿಗೂ ಬಂಗಾಳ ಕೊಲ್ಲಿಗೂ ನಡುವೆ ಇರುವ ಜಿಲ್ಲೆಯ ಉತ್ತರದಲ್ಲಿ ಪುರಿ ಜಿಲ್ಲೆಯೂ ದಕ್ಷಿಣದಲ್ಲಿ ಆಂಧ್ರ ಪ್ರದೇಶದ ಶ್ರೀಕಾಕುಲಂ ಜಿಲ್ಲೆಯೂ ಇವೆ. ಪುಲ್‌ಬಾನಿ, ಕೋರಾಪುಟ್ ಇವು ಗಂಜಾಂನ ಪಶ್ಚಿಮಕ್ಕೆ ಇರುವ ಜಿಲ್ಲೆಗಳು. ವಿಸ್ತೀರ್ಣ 8,206 ಕಿ.ಮೀ. ಜನಸಂಖ್ಯೆ 31,60,635 (2001) ಜನಸಾಂದ್ರತೆ : 382 ಸಾಕ್ಷರತೆ ಶೇ. 62.94.

ಈ ಜಿಲ್ಲೆಯ ವಾಯವ್ಯ ಮತ್ತು ನೈಋತ್ಯ ತುದಿಗಳಲ್ಲಿ ಸಾಲವೃಕ್ಷಗಳಿಂದ ಕೂಡಿದ ಕಾಡುಗಳುಂಟು. ದಕ್ಷಿಣ ಭಾಗ ಬೆಟ್ಟಗಳಿಂದ ಕೂಡಿದೆ. ಬೆಟ್ಟ ಕಾಡುಗಳಿಲ್ಲದ ಪ್ರದೇಶ ಮೈದಾನ. ಉತ್ತರದ ಅರಣ್ಯದಲ್ಲಿ ಖೋಂಡ್ ಮತ್ತು ದಕ್ಷಿಣದಲ್ಲಿ ಸಾವರ ಬುಡಕಟ್ಟುಗಳ ಜನರಿದ್ದಾರೆ.

ಗಂಜಾಂ ಪ್ರಾಚೀನ ಕಳಿಂಗ ರಾಜ್ಯದ ಭಾಗವಾಗಿತ್ತು. ಈ ಜಿಲ್ಲೆಯಲ್ಲಿ ಹರಿಯುವ ಋಷಿಕುಲ್ಯ ನದಿಯ ದಂಡೆಯ ಮೇಲಿರುವ ಜೌಗಡದಲ್ಲಿ ಅಶೋಕನ ಶಿಲಾಶಾಸನ ಸಿಕ್ಕಿದೆ. ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಈ ಪ್ರದೇಶವನ್ನು ಸಮುದ್ರಗುಪ್ತ ಗೆದ್ದಿದ್ದ. ಮಧ್ಯಯುಗದಲ್ಲಿ ಮಥರ, ಶೈಲೋದ್ಭವ, ಗಂಗ ಮುಂತಾದ ಸಂತತಿಗಳ ರಾಜರು ಇದನ್ನು ಆಳುತ್ತಿದ್ದರು. 16–18ನೆಯ ಶತಮಾನಗಳಲ್ಲಿ ಇದು ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತು. 1753ರಲ್ಲಿ ಫ್ರೆಂಚರು ಉತ್ತರ ಸರ್ಕಾರದದೊಂದಿಗೆ ಅದರ ಭಾಗವಾಗಿದ್ದ ಈ ಪ್ರದೇಶವನ್ನೂ ವಶಪಡಿಸಿಕೊಂಡರು. ತರುವಾಯ ಇದು ಬ್ರಿಟಿಷರ ಕೈವಶವಾಯಿತು. 1768ರಲ್ಲಿ ಅವರು ಗಂಜಾಂ ಬಳಿ ಕೋಠಿಯೊಂದನ್ನು ಸ್ಥಾಪಿಸಿಕೊಂಡರು. 1815ರ ತನಕ ಗಂಜಾಂ ಪಟ್ಟಣವೇ ಗಂಜಾಂ ಜಿಲ್ಲೆಯ ಆಡಳಿತಕೇಂದ್ರವಾಗಿತ್ತು. ಇಲ್ಲಿ ಪದೇ ಪದೇ ಕಾಲರಾ ವ್ಯಾಧಿ ಹರಡುತ್ತಿದ್ದುದರಿಂದ ಬ್ರಿಟಿಷರು ಇದನ್ನು ತ್ಯಜಿಸಿ ಬುಬರ್ಹಾಂಪುರ ಮತ್ತು ಛತ್ರಪುರದಲ್ಲಿ ನೆಲಸಿದರು. ಮದ್ರಾಸ್ ಪ್ರಾಂತ್ಯದಲ್ಲಿ ಗಂಜಾಂ ಜಿಲ್ಲೆಯನ್ನು ಹೊಸದಾಗಿ ರಚಿತವಾದ ಒರಿಸ್ಸ ಪ್ರಾಂತ್ಯಕ್ಕೆ 1936ರಲ್ಲಿ ಸೇರಿಸಲಾಯಿತು.

ಗಂಜಾಂ ಜಿಲ್ಲೆಯಲ್ಲಿ ಭಾರಿ ಕೈಗಾರಿಕೆಗಳಿಲ್ಲ. ಅಸ್ಕದಲ್ಲಿ ಸಕ್ಕರೆ ಕಾರ್ಖಾನೆ ಇದೆ. ಹುಮದಲ್ಲಿ ಸಮುದ್ರದ ನೀರಿನಿಂದ ಉಪ್ಪು ತಯಾರಿಸುತ್ತಾರೆ. ನೂಲ್ಗೆ, ನೇಯ್ಗೆ ಮುಖ್ಯ ಗುಡಿಕೈಗಾರಿಕೆಗಳು. ಕೃಷಿಯೇ ಇಲ್ಲಿ ಬಹು ಜನರ ಮುಖ್ಯ ಕಸಬು. ಇಲ್ಲಿಯ ನದಿಗಳು ಚಿಕ್ಕವಾದರೂ ಸಣ್ಣ ನೀರಾವರಿ ವ್ಯವಸ್ಥೆ ತಕ್ಕಮಟ್ಟಿಗೆ ಇದೆ. ಬತ್ತ, ಕಬ್ಬು, ದ್ವಿದಳಧಾನ್ಯ, ನೆಲಗಡಲೆ, ಎಳ್ಳು, ಗೋಡಂಬಿ ಮುಖ್ಯ ಬೆಳೆಗಳು.

ಗಂಜಾಂ ಜಿಲ್ಲೆಯ ಮುಖ್ಯ ಪಟ್ಟಣ ಛತ್ರಪುರ, ಇತರ ದೊಡ್ಡ ಪಟ್ಟಣಗಳು ಬುರ್ಹಾಂಪುರ, ಗೋಪಾಲಪುರ ಮತ್ತು ಪರ್ಲಕಿಮೇಡಿ. ಪರ್ಲಕಿಮೇಡಿ ಒಂದು ಪ್ರಾಚೀನ ಸ್ಥಳ. ಛತ್ರಪುರ ಬುರ್ಹಾಂಪುರಗಳ ಮೂಲಕ ಭಾರತದ ಆಗ್ನೇಯ ರೈಲ್ವೆಯ ಮಾರ್ಗವೊಂದು ಸಾಗುತ್ತದೆ. ಬುರ್ಹಾಂಪುರ ಕೋಲ್ಕೊತ–ಚೆನ್ನೈ ರಾಷ್ಟ್ರೀಯ ಹೆದ್ದಾರಿಯ ಮೇಲಿದೆ.

ಗಂಜಾಂ ಜಿಲ್ಲೆಯ ಕಾಲೇಜುಗಳು ಉತ್ಕಲ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿವೆ. (ವಿ.ಜಿ.ಕೆ.)

**ಗಂಜೀಫ :** ಇಸ್ಪೀಟಿನಂಥ ಒಂದು ಆಟ. ಇದಕ್ಕೆ ಛದ್ ಎಂಬ ಇನ್ನೊಂದು ಹೆಸರೂ ಇದೆ. ಬಾಬರ್‌ನಾಮ, ಐನೆ ಅಕ್ಬರಿ, ಕಾಬೂನೆ ಇಸ್ಲಾಮ್, ಗಿರಿಧರ ಕೃತ ಗಂಜೀಫ್ ಲೇಖನ, ಶ್ರೀತತ್ತ್ವನಿಧಿ ಇತ್ಯಾದಿ ಗ್ರಂಥಗಳಲ್ಲಿ ಇದರ ವರ್ಣನೆಯಿದೆ. ಆಟದ ಪ್ರಕಾರಗಳು ಮತ್ತು ವಿವರಣೆಗಳಲ್ಲಿ ಒಂದು ಗ್ರಂಥಕ್ಕೂ ಇನ್ನೊಂದು ಗ್ರಂಥಕ್ಕೂ ವ್ಯತ್ಯಾಸವಿದೆ. 96 ಎಲೆಗಳನ್ನು ಉಪಯೋಗಿಸಿಕೊಂಡು ಆಡುವ ಆಟಗಳಲ್ಲಿ ಚಂಗ್, ಬರಾತ್, ಕಿಮಾಸ್, ಪಮ್‌ಶೇರ್ ಇತ್ಯಾದಿಯಾಗಿ ಎಂಟು ಪ್ರಕಾರಗಳಿವೆ. ಶ್ರೀತತ್ತ್ವನಿಧಿ ಗ್ರಂಥದ 9ನೆಯ ಭಾಗವಾದ ಕೌತುಕನಿಧಿಯಲ್ಲಿ ಇದರ ಉಲ್ಲೇಖವಿದ್ದು ಚಾಮುಂಡೇಶ್ವರಿ, ಜಗನ್ಮೋಹನ,

ನವೀನ ದಶಾವತಾರ, ನವಗ್ರಹ, ಪಂಚಪಾಂಡವ, ಅಷ್ಟೈಶ್ವರ್ಯ, ಕಲ್ಯಾಣ, ಅಷ್ಟಸಿದ್ಧಿ ಮುಂತಾಗಿ ಗಂಜೀಫಿನ ಹದಿಮೂರು ಪ್ರಕಾರಗಳ ಉಲ್ಲೇಖವಿದ್ದು ಪ್ರಾರಂಭದಲ್ಲಿ ಬರುವ ಸಾಮ್ರಾಜ್ಯಪೇಟಿಕಾ ಗಂಜೀಫಿನ ವಿಭಾಗದಲ್ಲಿ ಚಾಮುಂಡೇಶ್ವರಿ, ಜಗನ್ಮೋಹಿನಿ, ದಶಾವತಾರ, ಅಷ್ಟೈಶ್ವರ್ಯ, ಕಲ್ಯಾಣ, ಅಷ್ಟಸಿದ್ಧಿ, ಸಾರಸಂಗ್ರಹ ಎಂಬ ಏಳು ಪ್ರಕಾರಗಳ ಆಟಗಳನ್ನು ಆಡುವ ಕ್ರಮಗಳನ್ನು ವಿವರಿಸಲಾಗಿದೆ.

ಸಾಮ್ರಾಜ್ಯಪೇಟಿಕಾ ಗಂಜೀಫಿನ ನಿರ್ಮಾಣಕ್ರಮವನ್ನು ಸಂಸ್ಕೃತ ಶ್ಲೋಕದಲ್ಲಿ ಕೊಟ್ಟು ಅದರ ವಿವರಗಳನ್ನು ಕನ್ನಡದಲ್ಲಿಯೂ ಹೇಳಿದೆ. ಆ ವಿವರ ಈ ರೀತಿ ಇದೆ.

ಆಟಕ್ಕೆ ಒಟ್ಟು 636 ಎಲೆಗಳು ಬೇಕು. ಇದರಲ್ಲಿ ಬಾಜು 30 ಮತ್ತು ದರ 18 ಮೇರೆಗೆ 540 ಎಲೆಗಳು (ವಿವರ ಮುಂದೆ ನೀಡಿದೆ) ಮತ್ತು ಚಕ್ರವರ್ತಿ ಎಲೆ 64, ಗಿಣಿ ಎಲೆ 11, ಹಂಸ ಎಲೆ 7, ನವಿಲು ಎಲೆ 7, ಚೇಟಿಕಾ ಸ್ತ್ರೀಯರ ಎಲೆ 7–ಈ ರೀತಿ ಒಟ್ಟು 96 ಎಲೆಗಳಿರುತ್ತವೆ. ಅಂದರೆ 30×18=540+64+11+7+7+7=636. ಬಾಜು 30 ಮತ್ತು ದರ 18 ರ ಎಲೆಗಳ ವಿವರ ಈ ರೀತಿ ಇದೆ. ಬಾಜು 30 ಎಂದರೆ ಚಾಮುಂಡೇಶ್ವರಿ, ವಿಷ್ಣು, ಈಶ್ವರ, ವಿನಾಯಕ ಇತ್ಯಾದಿ 30 ದೇವತೆಗಳ ಹೆಸರಿನಲ್ಲಿರುವಂಥವು. ಈ ಒಂದೊಂದು ಬಾಜುವಿನಲ್ಲೂ ತಲಾ 18 ದರ ಎಲೆಗಳಿರುತ್ತವೆ. ಪ್ರತಿ ಹದಿನೆಂಟು ಎಲೆಗಳಲ್ಲಿ 6 ಹುಕುಮಿ ಎಲೆಗಳು. 12 ಕರ್ಚಿ ಎಲೆಗಳು. ಚಾಮುಂಡೇಶ್ವರಿ ಬಾಜುವಿನ ಹುಕುಮಿ ಎಲೆಗಳ ವಿವರ ಹೀಗಿದೆ: ಮೊದಲ ಎಲೆಯಲ್ಲಿ ಚಾಮುಂಡೇಶ್ವರಿ, ಎರಡನೆಯ

ಎಲೆಯಲ್ಲಿ ಸಿಂಹದ ಮೇಲೆ ಕುಳಿತಿರುವ ರಾಣಿ, ಮೂರನೆಯ ಎಲೆಯಲ್ಲಿ ರಥಾರೂಢನಾದ ಮಂತ್ರಿ. ನಾಲ್ಕನೆಯ ಎಲೆಯಲ್ಲಿ ಅಶ್ವಾರೂಢನಾದ ಸೇನಾಪತಿ, ಐದನೆಯ ಎಲೆಯಲ್ಲಿ ಚೌಕಿನ ಮೇಲೆ ಕುಳಿತ ಪದಾತಿ, ಆರನೆಯ ಎಲೆಯಲ್ಲಿ ಬುರುಜಿನ ಮೇಲೆ ಧ್ವಜ ಹಿಡಿದು ಕುಳಿತಿರುವ ದೇವತೆ ಇವರ ಚಿತ್ರಗಳು. ಅದೇ ಬಾಜುವಿನ ಉಳಿದ ಕರ್ಚಿ ಎಲೆ 12 ರಲ್ಲೂ ಚಾಮುಂಡೇಶ್ವರಿ ಚಿತ್ರವಿದ್ದು ಅದರ ಕೆಳಗೆ ಮೇಷ, ವೃಷಭ, ಮಿಥುನ, ಕಟಕ ಇತ್ಯಾದಿ 12 ರಾಶಿಗಳ ಲಾಂಛನವನ್ನು ಎಲೆಗೊಂದರಂತೆ ಚಿತ್ರಿಸಲಾಗಿರುತ್ತದೆ. ಉಳಿದ 29 ಬಾಜುಗಳಿಗೆ ವಿಷ್ಣು, ಈಶ್ವರ, ಗಣಪತಿ ಇತ್ಯಾದಿ 29 ದೇವತೆಗಳ ಚಿತ್ರವಿದ್ದು ಇಲ್ಲಿಯೂ ಪ್ರತಿಯೊಂದಕ್ಕೂ 6 ಹುಕುಮಿ ಎಲೆ 12 ಕರ್ಚಿ ಎಲೆಗಳಿರುತ್ತವೆ. ಇಲ್ಲಿಯ ವೈಶಿಷ್ಟ್ಯವೆಂದರೆ ಆಯಾಯ ದೇವತೆಗಳು ಆನೆಯ ಮೇಲೆ ಕುಳಿತಿರುವಂತೆ ಚಿತ್ರಿತವಾಗಿರುತ್ತದೆ. ಅವರವರ ರಾಣಿಯರು ಪಲ್ಲಕ್ಕಿಯಲ್ಲೂ ಮಂತ್ರಿಗಳು ರಥದ ಮೇಲೂ ಸೇನಾಪತಿಗಳು ಕುದುರೆಯ ಮೇಲೂ ಪದಾತಿಗಳೂ ಚೌಕಿಯ ಮೇಲೂ ಧ್ವಜವನ್ನು ಹಿಡಿದಿರುವ ದೇವತೆಗಳು ಕೋಟೆ ಬುರುಜಿನ ಮೇಲೂ ಇರುತ್ತಾರೆ. ಕರ್ಚಿ ಎಲೆಗಳಲ್ಲಿ ಆಯಾ ಪ್ರಧಾನ ದೇವತೆಗಳು. ಅವುಗಳ ಅಡಿಯಲ್ಲಿ ಎಲೆಗೊಂದರಂತೆ ಮೇಷಾದಿಗಳು ಚಿತ್ರಿತವಾಗಿರುತ್ತವೆ.

ಉಳಿದ 96 ಎಲೆಗಳ ವಿಷಯ ಹೀಗಿದೆ: ಸುಲಭವಾಗಿ ಗುರುತಿಸಲು ಈ ಎಲೆಗಳ ಅಂಚಿನಲ್ಲಿ ಚಿಹ್ನೆಯೊಂದನ್ನು ತೋರಿಸಲಾಗಿರುತ್ತದೆ. 64 ಚಕ್ರವರ್ತಿ ಎಲೆಗಳಿಗೆ ರಾಜರಾಜೇಶ್ವರಿ, ಕಾಳಿ, ಲಕ್ಷ್ಮೀ, ಸರಸ್ವತಿ, ಬ್ರಾಹ್ಮೀ, ವೈಷ್ಣವಿ, ಇಂದ್ರಾಣಿ, ದಂಡಿನಿ, ಮಂತ್ರಿಣಿ, ಯೋಗನಿದ್ರಾ, ಬಾಲಾ, ಭುವನೇಶ್ವರಿ ಇತ್ಯಾದಿ 64 ದೇವತೆಗಳ ಲಾಂಛನವಿರುತ್ತದೆ. ಉಳಿದವು ಗಿಣಿ ಎಲೆ 11, ಹಂಸ ಎಲೆ 7, ನವಿಲು ಎಲೆ 7, ಚೇಟಿಕಾಸ್ತ್ರೀಯರ ಎಲೆ 7. ಈ ರೀತಿಯಾಗಿ ರಚಿಸಿದ 636 ಎಲೆಗಳನ್ನು ಇಟ್ಟುಕೊಂಡು ಮೂರು, ನಾಲ್ಕು ಅಥವಾ ಆರು ಜನರು ಕುಳಿತು ಆಡಬಹುದು. ಸಾಮ್ರಾಜ್ಯಪೇಟಿಕಾ ಗಂಜೀಫಿನಲ್ಲಿ ಹಗಲು ಮತ್ತು ರಾತ್ರಿ ಎರಡರ ಆಟದಲ್ಲೂ ಚಾಮುಂಡೇಶ್ವರಿಯೇ ಅಧಿದೇವತೆಯಾಗಿರುತ್ತಾಳೆ. ಆದ್ದರಿಂದ ಆ ಎಲೆ ಇರುವವನೇ ಆಟವನ್ನು ಪ್ರಾರಂಭಿಸುತ್ತಾನೆ.

ಹೆಚ್ಚು ಬಳಕೆಯಿರುವ ದಶಾವತಾರೀ ಗಂಜೀಫು ಆಟದ ವಿವರ ಈ ರೀತಿಯಿದೆ: ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ–ಈ ಹತ್ತು ಅವತಾರಗಳಿಗೆ ಪ್ರತಿಯೊಂದಕ್ಕೂ, ರಾಜಾ, ವಜೀರ್ ಮತ್ತು ಎಕ್ಕಾದಿಂದ ಹತ್ತು ಈ ಪ್ರಕಾರ 12 ಎಲೆಗಳನ್ನು ಸೇರಿಸಿ ಒಟ್ಟು 120 ಎಲೆಗಳನ್ನು ಉಪಯೋಗಿಸುತ್ತಾರೆ. ಮೂರು ಜನ ಆಟಗಾರರು ಸರತಿಯಂತೆ ಎಲೆಗಳನ್ನು ಹಂಚಿಕೊಳ್ಳುತ್ತಾರೆ, ಹಗಲಿನಲ್ಲಿ ಆಟ ಪ್ರಾರಂಭಿಸಿದರೆ ಯಾರ ಕೈಯಲ್ಲಿ ರಾಮ–ರಾಜಾ ಎಲೆ ಬಂದಿರುತ್ತದೋ ಅವನು ಆಟವನ್ನು ಮೊದಲು ಪ್ರಾರಂಭಿಸುತ್ತಾನೆ. ಆತನಿಗೆ ಸುರ್ಕ್ಯಾ ಎಂದು ಹೆಸರು. ಆತ ಪ್ರಥಮವಾಗಿ ರಾಮ–ರಾಜಾ ಮತ್ತು ಅದೇ ವರ್ಗದ ಇನ್ನೊಂದು ಕಡಿಮೆ ಬೆಲೆಯ (ಹಲ್ಕಾ) ಎಲೆಯನ್ನು ಇಳಿಸುತ್ತಾನೆ. ಉಳಿದ ಆಟಗಾರರು ತಮ್ಮ ಕೈಯಲ್ಲಿದ್ದ ಎರಡೆರಡು ಹಲ್ಕಾ ಎಲೆಗಳನ್ನು ಮೊದಲಿನ ಎಲೆಯ ಮೇಲೆ ಇಳಿಸುತ್ತಾರೆ. ಈ ಪ್ರಕಾರ ಬಿದ್ದ ಆರು ಎಲೆಗಳನ್ನು ಸುರ್ಕ್ಯಾ ಹೊಂದುತ್ತಾನೆ. ಇದೇ ರೀತಿ ತನ್ನಲ್ಲಿ ಹುಕುಮಿ ಎಲೆಗಳಿರುವವರೆಗೂ ಆಡಿ ಅನೇಕ ಎಲೆಗಳನ್ನು ಪಡೆಯುತ್ತಾನೆ. ಒಬ್ಬನ ಆಟ (ಡಾವ್) ಮುಗಿದ ಅನಂತರ ಇನ್ನೊಬ್ಬ ಆಟಗಾರ ತನ್ನಲ್ಲಿರುವ ಹುಕುಮಿ ಎಲೆಗಳಿಂದ ಆಟ ಆರಂಭಿಸಿ ಉಳಿದವರಿಂದ ಎಲೆಗಳನ್ನು ಪಡೆಯುತ್ತಾ ಹೋಗುತ್ತಾನೆ. ಕೊನೆಯಲ್ಲಿ ಹೆಚ್ಚಿನ ಎಲೆಗಳನ್ನು ಯಾರು ಪಡೆಯುತ್ತಾರೊ ಅವರು ಗೆದ್ದ ಹಾಗೆ. ಗಂಜೀಫು ಆಟಗಳ ವಿಧಾನ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತದೆ. ಭಾರತದಲ್ಲಿ ಒಂದು ಕಾಲದಲ್ಲಿ ಜನಪ್ರಿಯವಾಗಿದ್ದ ಈ ಆಟ ಈಗ ತುಂಬ ವಿರಳವಾಗಿದೆ. ಇದರ ಮಾದರಿ ಎಲೆಗಳನ್ನು ಮೈಸೂರಿನಲ್ಲಿನ ಜಗನ್ಮೋಹನ ಅರಮನೆಯ ಕಲಾಶಾಲೆಯಲ್ಲೂ (ಚಿತ್ರ ನೋಡಿ), ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯದಲ್ಲೂ

ಕಾಣಬಹುದು. ಗಂಜೀಫು ಶೈಲಿಯಲ್ಲಿ ಚಿತ್ರಗಳನ್ನು ರಚಿಸುವ ಕರ್ನಾಟಕದ ರಘುಪತಿ ಭಟ್ ಅವರಿಗೆ 'ಸಿದ್ಧಹಸ್ತ ಶಿಲ್ಪಿ' ಪ್ರಶಸ್ತಿ ದೊರೆತ ಮೇಲೆ ಗಂಜೀಫು ಶೈಲಿಯಲ್ಲಿ ಚಿತ್ರಕಲಾಭ್ಯಾಸ

ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ವಿದೇಶಿ ಪ್ರವಾಸಿಗರು ಕರ್ನಾಟಕದಲ್ಲಿ ಕೊಳ್ಳುವ ಸ್ಮರಣಿಕೆಗಳಲ್ಲಿ ಗಂಜೀಫಾ ಎಲೆಗಳೂ ಸೇರಿವೆ. *

**ಗಂಟರ್, ಎಡ್ಮಂಡ್ :** 1581–1626. ಇಂಗ್ಲೆಂಡಿನ ಗಣಿತಶಾಸ್ತ್ರಜ್ಞ. ಜನನ ಹಾರ್ಟ್‌ಫರ್ಡ್‌ಷಿರ್‌ನಲ್ಲಿ. ಖಗೋಳೀಯ ದೂರಮಾಪನಗಳಿಗೆ ಸಂಬಂಧಿಸಿದಂತೆ ಅನೇಕ ಮಾಪನೋಪಕರಣಗಳನ್ನು ರೂಪಿಸಿದ ಖ್ಯಾತಿ ಇವನದು. ವೆಸ್ಟ್‌ಮಿನ್ಸ್ಟರ್ ಶಾಲೆಯಲ್ಲಿ ಇವನ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಅನಂತರ ಆಕ್ಸ್‌ಫರ್ಡಿನ ಕ್ರೈಸ್ಟ್‌ಚರ್ಚ್‌ಗೆ ವಿದ್ಯಾರ್ಥಿಯಾಗಿ ಸೇರಿದ (1599). ವಿದ್ಯಾಭ್ಯಾಸ ಮುಗಿದ ಬಳಿಕ ಲಂಡನಿನ ಗ್ರೆಷ್‌ಹ್ಯಾಂ ಕಾಲೇಜಿಗೆ ಸೇರಿ ತನ್ನ ಕಡೆಯ ಕಾಲದ ವರೆಗೂ ಖಗೋಳಶಾಸ್ತ್ರದ ಪ್ರಾಧ್ಯಾಪಕನಾಗಿ ಅಲ್ಲಿಯೇ ಸೇವೆಗೈದ. ಸೆಕ್ಟರ್, ಕ್ರಾಸ್‌ಸ್ಟಾಫ್, ಬೌ ಕ್ವಾಡ್ರೆಂಟ್ ಮುಂತಾದ ಖಗೋಳೀಯ ಉಪಕರಣಗಳನ್ನು ಕುರಿತು ವಿವರಣೆಗಳು ಇವನ ಬರೆಹಗಳಲ್ಲಿ ಕಾಣಬರುತ್ತವೆ. ಕ್ಯಾನನ್ ಟ್ರೈ ಆಂಗ್ಯುಲೋರಮ್ ಈತ ಪ್ರಕಟಿಸಿದ (1960) ಒಂದು ಗ್ರಂಥ. ಯಾವುದೇ ಒಂದು ಸ್ಥಳದಲ್ಲಿ ಅಲ್ಲಿಯ ಕಾಂತದಿಕ್ಪಾತ ವ್ಯಸ್ತಗೊಳ್ಳುತ್ತದೆ ಎಂಬ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದವರಲ್ಲಿ (1622 ಇಲ್ಲವೆ 1625) ಈತನೇ ಮೊದಲಿಗನೆನ್ನಬಹುದು. ತ್ರಿಕೋಣಮಿತಿಯ ಪದಗಳಾದ ಸೈನ್ ಮತ್ತು ಕೋಸೈನ್ ಎಂಬುವನ್ನು ಈತ ಮೊದಲಿಗೆ ಉಪಯೋಗಿಸಿದವನೆಂದೂ ತನ್ನ ಮಿತ್ರ ಹಾಗೂ ಸಹೋದ್ಯೋಗಿಯೂ ಆಗಿದ್ದ ಗಣಿತಜ್ಞ ಹೆನ್ರಿ ಬ್ರಿಗ್ಸ್ (1556–1630) ಎಂಬುವನಿಗೆ ಅಂಕಗಣಿತೀಯ ಪೂರಕದ ಬಳಕೆಯನ್ನು ಸೂಚಿಸಿದವನೆಂದೂ ಹೇಳಲಾಗಿದೆ.

ಇವನ ಆವಿಷ್ಕಾರಗಳಲ್ಲಿ ಮುಖ್ಯವಾಗಿ ಮೋಜಣಿ ಕೆಲಸಗಳಲ್ಲಿ ಬಳಸುವ ಗಂಟರನ ಸರಪಣಿ ಎಂಬುದು ಗಮನಾರ್ಹ. ಇದು 66, ಉದ್ದ 100 ಕೊಂಡಿಗಳಿರುವ ಸರಪಣಿ. ಲೆಕ್ಕಾಚಾರಗಳನ್ನು ಮಾಡುವ ಉಪಕರಣ ಸ್ಲೈಡ್ ರೂಲ್ ಕಾಣಬರುವುದಕ್ಕೆ ಮುಂಚೆ ಗಂಟರನ ರೇಖೆಯೆಂಬ ಉಪಕರಣವಿತ್ತೆನ್ನಲಾಗಿದೆ. ಸಮುದ್ರಯಾನಕ್ಕೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನೀಯುವ ಗಂತರನ ಮಾನಕವೆಂಬ ಉಪಕರಣವನ್ನೂ ಈತ ಆವಿಷ್ಕರಿಸಿದ್ದ. *

**ಗಂಟಲಮಣಿ :** ಧ್ವನಿನಾಳ ಇಲ್ಲವೇ ಧ್ವನಿಸಂಪುಟದಲ್ಲಿ ಬಲು ದೊಡ್ಡ ಭಾಗವಾಗಿರುವ ಗುರಾಣಿಕ ಮೆಲ್ಲೆಲುಬಿನ ಮೇಲಂಚು ಮುಂಗತ್ತಿನಲ್ಲಿ ಉಬ್ಬಿದಂತಿರುವ ಭಾಗ (ಅದಾಮ್ಸ್ ಆಪಲ್). ತಿನ್ನಬಾರದ ಹಣ್ಣನ್ನು ಆಡಮ್ ನುಂಗಿ ಬಿಟ್ಟಿದ್ದರಿಂದ ಅದು ಗಂಟಲಲ್ಲೇ ಸಿಲುಕಿಕೊಂಡು ಆ ಭಾಗ ಊದಿಕೊಂಡಿತೆಂಬ ಕತೆ ಉಂಟು. ಗಂಟಲಮಣಿ ಹೆಂಗಸರಿಗಿಂತಲೂ ಗಂಡಸರಲ್ಲೇ ಎದ್ದು ತೋರುತ್ತದೆ. ಏನಾದರೂ ನುಂಗುವಾಗ ಗಂಟಲಮಣಿ ಮೇಲಕ್ಕೆ ಏರುತ್ತದೆ. ನುಂಗುವಾಗ ಆಹಾರ ಉಸಿರು ನಾಳದೊಳಕ್ಕೆ ಹೋಗದಂತೆ ಅಡ್ಡಗಟ್ಟುವ ಕವಾಟ ಏರ್ಪಾಡಿದು. ಗಂಟಲಮಣಿಯ ಮೇಲೆ ಬೆರಳಿಟ್ಟು ಹಾಗೇ ಕೆಳಕ್ಕೆ ಜಾರಿಸುತ್ತಾ ಬಂದರೆ ಒಂದೆ ಗುಳಿ ಸಿಕ್ಕಿ, ಆಮೇಲೆ ಗಟ್ಟಿಯಾಗಿರುವ ಕ್ರೈಕಾಯ್ಡ್ ಮೆಲ್ಲೆಲುಬಿನ ಒಂದು ಉಂಗುರ ತಾಕುತ್ತದೆ. ಗಂಟಲಲ್ಲಿ ಏನಾದರೂ ಹೇಗಾದರೂ ಅಡಚಣೆಯಾಗಿ ಉಸಿರು ಕಟ್ಟಿದ್ದರೆ ವೈದ್ಯರು ಹಿಂದುಮುಂದು ನೋಡದೆ ತುರ್ತಾಗಿ ಈ ಗುಣಿಯಲ್ಲಿ ತೂತು ಮಾಡಿ ಸರಾಗವಾಗಿ ಉಸಿರಾಡುವಂತೆ ಮಾಡುವುದುಂಟು.

(ಡಿ.ಎಸ್.ಎಸ್.)

**ಗಂಟಲ ಮಾರಿ :** ಒಬ್ಬರಿಂದೊಬ್ಬರಿಗೆ ಭರದಿಂದ ಹರಡುವ ಸೋಂಕು ಜಾಡ್ಯಗಳಲ್ಲಿ ಒಂದು(ಡಿಫ್ತೀರಿಯ). ಗಳಚರ್ಮರೋಗ ಎಂದೂ ಕರೆವುದಿದೆ. ಮೂಗು, ಗಂಟಲು, ಗಳಗ್ರಂಥಿಗಳು (ಟಾನ್‌ಸಿಲ್ಸ್) ಹಾಗೂ ದುಗ್ಧ ಗ್ರಂಥಿಗಳು ಈ ರೋಗದ ಮುಖ್ಯ ನೆಲೆಗಳು. ರೋಗಕ್ಕೆ ಕಾರಣ ಕೋರಿನಿಬ್ಯಾಕ್ಟೀರಿಯಂ ಡಿಫ್ತೀರಿಯೀ ಎಂಬ ಏಕಾಣು ಜೀವಿಗಳು. ದೇಹದ ಒಳಭಾಗವೊಂದಲ್ಲಿಯ ಮುಖ್ಯವಾಗಿ ಗಂಟಲಿನಲ್ಲಿಯ ಶ್ಲೇಷ್ಮಚರ್ಮ ಉದ್ದೀಪನಹೊಂದಿ ಅದರಿಂದ ಹೊರಟ ಸ್ರವ ಕೃತಕ ಚರ್ಮವಾಗಿ ಬೆಳೆವುದರೊಂದಿಗೆ ಬ್ಯಾಕ್ಟೀರಿಯ ಹೊರಜೀವವಿಷ (ಎಕ್ಸೊಟಾಕ್ಸಿನ್) ರಕ್ತದಲ್ಲಿ ವ್ಯಾಪಿಸಿ ರೋಗಲಕ್ಷಣಗಳನ್ನು ಹೊರಹೊಮ್ಮಿಸುವುದು ಈ ರೋಗದ ವೈಶಿಷ್ಟ್ಯ. ರೋಗ ಪಿಡುಗು ರೂಪದಲ್ಲಿ (ಎಪಿಡೆಮಿಕ್) ತಲೆ ಎತ್ತಬಹುದು ಅಥವಾ ಸ್ಥಳಜನ್ಯವಾಗಿ (ಎಂಡೆಮಿಕ್) ವರ್ಷದುದ್ದಕ್ಕೂ ಇರಬಹುದು. ಆಗಾಗ ಅಲ್ಲಲ್ಲೆ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳಲುಬಹುದು (ಸ್ಪೊರ್‍ಯಾಡಿಕ್). ಪ್ರಪಂಚದ ಎಲ್ಲ ಭಾಗಗಳಲ್ಲೂ ಈ ರೋಗವಿದೆ. ಮುಂದುವರಿದ ದೇಶಗಳಲ್ಲಿ ಎಲ್ಲ ಶಿಶುಗಳಿಗೂ ರೋಗನಿರೋಧಕ ಚುಚ್ಚುಮದ್ದನ್ನು ಕೊಡುತ್ತಿದ್ದಾರಾಗಿ ರೋಗ ಸಾಕಷ್ಟು ಹತೋಟಿಗೆ ಬಂದಿದೆ.

**ರೋಗಕಾರಕ :** ಪಿಯರ್ ಬ್ರೆಟಾನೊ ರೋಗಲಕ್ಷಣಗಳ ವಿವರಗಳನ್ನು ಹೊರಗೆಡವಿದ (1826). 57 ವರ್ಷಗಳ ಅನಂತರ ಇ. ಕ್ಲೆಬ್ಸ್ ಎಂಬ ವಿಜ್ಞಾನಿ ರೋಗಿಯ ಪೊರೆಯಿಂದ ಡಿಫ್ತೀರಿಯ ಬ್ಯಾಕ್ಟೀರಿಯಾಗಳನ್ನು ಪ್ರದರ್ಶಿಸಿದ. ಇವೇ ರೋಗಕ್ಕೆ ಕಾರಣವೆಂಬುದನ್ನು ಎಫ್. ಲಾಫ್ಲರ್ ಖಚಿಪಡಿಸಿದ. ಆದ್ದರಿಂದಲೇ ಇವನ್ನು ಈಗಲೂ ಕ್ಲೆಬ್ಸ್–ಲಾಫ್ಲರ್ ಬ್ಯಾಕ್ಟೀರಿಯಾಗಳೆಂದು ಕರೆಯುವುದು ರೂಢಿ. ವರ್ಗೀಕರಿಸುವಾಗ ಇವಕ್ಕೆ ಕೋರಿನಿಬ್ಯಾಕ್ಟೀರಿಯಂ ಡಿಫ್ತೀರಿಯೀ ಎಂದು ಹೆಸರಿಸಲಾಗಿದೆ. ಗ್ರ್ಯಾಂ ವರ್ಣಸಂಸ್ಕರಣಕ್ಕೆ ಈ ಬ್ಯಾಕ್ಟೀರಿಯಾಗಳು ವ್ಯಾಪಿತವಾಗಿವೆ. ಇವಕ್ಕೆ ತಾವಾಗಿ ತಾವೇ ಚಲಿಸುವ ಶಕ್ತಿ ಇಲ್ಲ. ದೇಹಾದ್ಯಂತ ತಾವೇ ನುಗ್ಗಿ ವೃದ್ಧಿಯಾಗಿ ಅಂಗಾಂಶಗಳೆಲ್ಲವನ್ನೂ ಇವು ಮುತ್ತಲಾರವು. ಇದ್ದಲ್ಲಿಯೇ ಇದ್ದು ತಮ್ಮ ದೇಹದ ಹೊರವಲಯದಿಂದ ಅತ್ಯಂತ



ಕೋರಿನಿ ಬ್ಯಾಕ್ಟೀರಿಯಂ ಡಿಫ್ತೀರಿಯೀ ಎಂಬ ಏಕಾಣುಜೀವಿಗಳು

ಶಕ್ತಿಯುತವಾದ ಹೊರಜೀವ ವಿಷವನ್ನು ಇವು ಉತ್ಪತ್ತಿ ಮಾಡುತ್ತವೆ. ಈ ವಿಷ ಪ್ರಭಾವದಿಂದಲೇ ರೋಗ ಲಕ್ಷಣಗಳು ಹೊಮ್ಮುತ್ತವೆ. ತೀವ್ರತೆಯ ದೃಷ್ಟಿಯಿಂದ ಇವುಗಳಲ್ಲಿ ದಾರುಣ, ಮಧ್ಯಸ್ಥ, ಸಾಧು ಎಂದು ಮೂರು ಬಗೆ. ಈ ಮೂರು ರೋಗಕಾರಕಗಳೇ. ವಿಷರಹಿತ ಏಕಾಣುಜೀವಿಗಳೂ ಇವೆ. ಇವುಗಳಿಂದ ರೋಗ ಪ್ರಾಪ್ತವಾಗುವುದಿಲ್ಲ. ರೋಗಕಾರಕಗಳು ಉಷ್ಣಾಂಶ ಹಾಗೂ ರಾಸಾಯನಿಕ ಪ್ರಭಾವಕ್ಕೊಳಗಾದರೆ ಸುಲಭವಾಗಿ ನಾಶ ಹೊಂದುತ್ತವೆ. ವಸ್ತುಗಳ ಮೇಲೆ ಹಾಗೂ ದೂಳಿನಲ್ಲಿ ಇವು ಕೇವಲ ಸ್ವಲ್ಪಕಾಲ ಮಾತ್ರ ಉರ್ಜಿತವಾಗಬಲ್ಲವು.

ಮಾಂಸಬಟ್ಟಿ ಹಾಗೂ ಪೆಪ್ಟೋನ್ ಅಂಶ ಸೇರಿದ ಎಲ್ಲ ರೀತಿಯ ದ್ರವ ಮಾಧ್ಯಮಗಳಲ್ಲೂ ಈ ಜೀವಾಣುಗಳ ತಳಿ ಎಬ್ಬಿಸಬಹುದು. ಆದರೆ ಈ ದ್ರವ ಮಾಧ್ಯಮಗಳಲ್ಲಿ ಗ್ಲೂಕೋಸ್ ಮತ್ತು ಸಾಂದ್ರೀಕರಿಸಿದ ರಕ್ತದ್ರವವಿದ್ದಲ್ಲಿ (ಇನ್ಸ್‌ಪಿಸೇಟೆಡ್ ಸೀರಮ್) ಪುಷ್ಕಳವಾಗಿ ಬೆಳೆಯುತ್ತವೆ. ಈ ದ್ರವ ಮಾಧ್ಯಮವನ್ನು ಮೂಲತಃ ಕಂಡುಹಿಡಿದವನು ಲಾಫ್ಲರ್. ಸ್ಯಾಕರೋಸ್ ವಿನಾ ಗ್ಲುಕೋಸ್ ಮತ್ತು ಇತರ ಸಕ್ಕರೆಗಳಲ್ಲಿ ಈ ಜೀವಾಣುಗಳು ಹುದುಗೆಬ್ಬಿಸುತ್ತವೆ. ಆದರೆ ಯಾವ ಅನಿಲವೂ ಉತ್ಪತ್ತಿಯಾಗದು. ದಾರುಣಜಾತಿಗೆ ಸೇರಿದವು ಪಿಷ್ಟ ಮತ್ತು ಗ್ಲೈಕೋಜನ್ ಸಕ್ಕರೆಗಳಲ್ಲೂ ಹುದುಗೆಬ್ಬಿಸುತ್ತವೆ.

**ಗಂಟಲ ಮಾರಿ ವಿಷ :** ಇದು ಒಂದು ರೀತಿಯ ಹೊರಜೀವವಿಷವಷ್ಟೆ. ಏಕಾಣುಜೀವಿಗಳನ್ನು ಸೋಸಿದಾಗ ಸೋಸಿ ಹೊರಬಂದ ದ್ರವದಲ್ಲಿ ಈ ವಿಷವಿರುತ್ತದೆ. ಈ ದ್ರವವನ್ನು ಪ್ರಾಣಿಗಳ ದೇಹಕ್ಕೆ ಸೇರಿಸಿದರೆ ಅವು ರೋಗಗ್ರಸ್ತವಾಗಿ ಪ್ರಾಣ ಬಿಡುತ್ತವೆಂಬುದನ್ನು ಪಿ.ಪಿ.ಇ. ರೂ ಪ್ರದರ್ಶಿಸಿದ. ಆಗಿನಿಂದಲೇ ಈ ವಿಷವನ್ನು ಸಂಸ್ಕರಿಸಿ ರೋಗನಿರೋಧಕ ರಕ್ಷೆಯಾಗಿ ಅಳವಡಿಸಿಕೊಳ್ಳಲು ಪ್ರಯತ್ನ ಸತತವಾಗಿ ನಡೆದು ಬಂತು.

**ಸೋಂಕಿನ ಮೂಲ :** ರೋಗಿ ಅಥವಾ ರೋಗವಾಹಕರು (ರೋಗಲಕ್ಷಣಗಳಲ್ಲೊಂದನ್ನೂ ಹೊರ ತೋರ್ಪಡಿಸಿಕೊಳ್ಳದೆ, ರೋಗಕಾರಕಗಳನ್ನು ಮಾತ್ರ ದೇಹದಲ್ಲಿ ಹೊತ್ತು ಇತರರಿಗೆ ಸೋಂಕು ಸಾಗಿಸುವ ವ್ಯಕ್ತಿಯೇ ರೋಗವಾಹಕ) ಸೋಂಕನ್ನು ಒಬ್ಬರಿಂದೊಬ್ಬರಿಗೆ ಹರಡುತ್ತಾರೆ. ಕೆಲವರಲ್ಲಿ ರೋಗದ ಸೋಂಕು ತಗಲಿದ್ದರೂ ಲಕ್ಷಣಗಳು ಹೊರಹೊಮ್ಮುವುದಿಲ್ಲ. ಹಾಗೂ ಲಕ್ಷಣಗಳು ಕಂಡುಬಂದರೂ ಅವು ಅತ್ಯಂತ ಸಾಧು

ಲಕ್ಷಣಗಳಾದ ಕಾರಣ ಗಮನಕ್ಕೆ ಬಾರದಿರುವುದೂ ಉಂಟು. ಈ ಎರಡು ರೀತಿಯ ವ್ಯಕ್ತಿಗಳೂ ತಮಗೆ ಅರಿವಿಲ್ಲದೆ ಸೋಂಕನ್ನು ಇತರರಿಗೆ ಸಾಗಿಸುತ್ತಾರೆ.

ರೋಗವಾಹಕರಲ್ಲಿ ಸೋಂಕು ಸಾಗಿಸುವ ವ್ಯವಸ್ಥೆ ತಾತ್ಕಾಲಿಕದಾಗಿರಬಹುದು ಅಥವಾ ದೀರ್ಘಾವಧಿಯದಾಗಿರಬಬಹುದು ತಾತ್ಕಾಲಿಕವಾಗಿ ಒಂದು ತಿಂಗಳು ಇದ್ದರೆ ದೀರ್ಘಾವಧಿಯಾಗಿ ಒಂದು ವರ್ಷವಿರಬಹುದು. ಸಾರ್ವಜನಿಕರಲ್ಲಿ. ದೀರ್ಘಾವಧಿವಾಹಕರ ಸಂಖ್ಯಾಪ್ರಮಾಣ ಶೇ 0.1 – 5 ಎಂದು ಅಂದಾಜಾಗಿದೆ.

**ಸೋಂಕು :** ಗಂಟಲು, ಮೂಗಿನ ವಿಸರ್ಜನೆಯಲ್ಲಿರುವ ರೋಗಕಾರಕಗಳು ಬಟ್ಟೆಬರೆ, ಕರವಸ್ತ್ರ, ಟವಲು, ತಿನ್ನುವ ಹಾಗೂ ಕುಡಿಯುವ ಪಾತ್ರೆ ಪಡಿಗಗಳು, ಥರ್ಮೋಮೀಟರ್, ಆಟದ ಸಾಮಾನುಗಳು, ಪೆನ್ಸಿಲ್ ಇತ್ಯಾದಿ ಬಳಕೆಯ ವಸ್ತುಗಳನ್ನು ಸೇರುತ್ತವೆ. ಕ್ರಿಮಿ ಮಲಿನವಾದ ಈ ವಸ್ತುಗಳಿಂದ ಸೋಂಕು ಇತರರಿಗೆ ಹಾಯಬಹುದು.

**ಸೋಂಕು ಹರಡುವ ಅವಧಿ :** ರೋಗಲಕ್ಷಣಗಳು ಪ್ರಾರಂಭವಾದಂದಿನಿಂದ ಸಾಮಾನ್ಯವಾಗಿ 14 – 28 ದಿವಸಗಳ ತನಕ ರೋಗಿಯಿಂದ ಇತರರಿಗೆ ರೋಗ ಹರಡಲವಕಾಶವಿದೆ. ರೋಗದಿಂದ ಚೇತರಿಸಿಕೊಳ್ಳುತ್ತಿರುವವರ ಗಂಟಲು, ಮೂಗಿನ ವಿಸರ್ಜನೆಯನ್ನು ಪರೀಕ್ಷೆಗೊಳಪಡಿಸಬೇಕು. 24 ಗಂಟೆಗಳಲ್ಲಿ ಎರಡು ವೇಳೆ ಪರೀಕ್ಷಿಸಿ ಏಕಾಣುಜೀವಿಗಳ ಸುಳಿವಿಲ್ಲವೆಂದು ತಿಳಿದರೆ ರೋಗಿ ಸೋಂಕನ್ನು ಹರಡಲಾರೆನೆಂಬುದು ಇತ್ಯರ್ಥವಾದಂತೆ.

**ಆಶ್ರಯ ಕೊಡುವ ವ್ಯಕ್ತಿ :** ಗಂಟಲಮಾರಿ ಸಾಮಾನ್ಯವಾಗಿ ಮಕ್ಕಳನ್ನು ಕಾಡಿಸುವ ರೋಗ. ಶಾಲೆಗೆ ಇನ್ನೂ ಸೇರದಿರುವ ಮಕ್ಕಳಲ್ಲಿ ಈ ರೋಗದ ಪ್ರಮಾಣ ಅತ್ಯಧಿಕ. ನಿರೋಧ ಶಕ್ತಿ ಇಲ್ಲದಿದ್ದರೆ ಯಾವ ವಯಸ್ಸಿನಲ್ಲಾದರೂ ಇದು ಕಾಣಿಸಿಕೊಳ್ಳಬಹುದು. ಪಾಶ್ಚಾತ್ಯ ದೇಶಗಳಲ್ಲಿ ಜನಿಸಿದ ಶಿಶುಗಳಿಗೆಲ್ಲ ಸಾಮೂಹಿಕ ಚುಚ್ಚುಮದ್ದಿನ ಕಾರ್ಯಕ್ರಮದಿಂದ ನಿರೋಧರಕ್ಷೆ ಸಿಕ್ಕುತ್ತದಾಗಿ ಮನೆಗಿಂತ ಶಾಲೆಗಳಲ್ಲಿ ಇದರ ಸೋಂಕು ಹತ್ತುವುದು ಹೆಚ್ಚು. ಪ್ರೌಢರಿಗಿದು ಅಂಟಿದಾಗ ರೋಗಲಕ್ಷಣಾದಿಗಳಲ್ಲಿ ಸ್ತ್ರೀಪುರುಷರಲ್ಲಿ ಏನಾದರೂ ವ್ಯತ್ಯಾಸಗಳು ಕಂಡುಬರುತ್ತವೆಯೇ ಎಂಬುದನ್ನು ತಿಳಿಸಲು ಇರುವ ಆಧಾರಗಳು ಸಾಲವು.

**ನಿರೋಧ ಶಕ್ತಿ :** ತಾಯಿಯ ರಕ್ತದಲ್ಲಿ ಈ ರೋಗಕ್ಕೆ ರಕ್ಷಣೆ ಕೊಡುವ ಪ್ರತಿ ವಿಷವಸ್ತುಗಳಿದ್ದರೆ ಅವು ಗರ್ಭದಲ್ಲಿರುವ ಶಿಶುವಿಗೂ ಸಾಗಿ ಬರುತ್ತದಾಗಿ, ಜನಿಸಿದ ಶಿಶು ಮೊದಲು ಕೆಲವು ತಿಂಗಳಲ್ಲಿ ಈ ರೋಗದಿಂದ ನರಳುವುದಿಲ್ಲ. ಈ ರೀತಿ ದತ್ತವಾದ ನಿರೋಧ ಶಕ್ತಿ ಅದೃಶ್ಯವಾಗುವುದರೊಳಗಾಗಿ ಪ್ರತಿವಿಷಜನಕಗಳನ್ನು (ಆಂಟಿಜನ್) ಕೊಟ್ಟರೆ ಯಶಸ್ವಿ ರೋಗ ರಕ್ಷಣೆ ದೊರೆಯುತ್ತದೆಂದು ಹೇಳಲಾಗಿದೆ. ಈ ಪ್ರತಿವಿಷಜನಕವನ್ನು ನಾಯಿಕೆಮ್ಮಿನ ವಿರುದ್ಧ ಕೊಡುವ ರಕ್ಷೆಯೊಂದಿಗೆ ಸೇರಿಸಿಕೊಟ್ಟರೆ ಯಶಸ್ವಿ ನಿರೋಧ ಶಕ್ತಿ ಒದಗುತ್ತದೆನ್ನಲಾಗಿದೆ. ಡಿಫ್ತೀರಿಯ ನಿರೋಧ ಪ್ರತಿ ವಿಷವಸ್ತುಗಳುಳ್ಳ ರಕ್ತದ್ರವವನ್ನು 500ರಿಂದ 1,000 ಘಟಕಗಳಷ್ಟು ಕೊಟ್ಟರೆ ವ್ಯಕ್ತಿಯ ದೇಹದಲ್ಲಿ ತಾತ್ಕಾಲಿಕವಾಗಿ ನಿರೋಧಶಕ್ತಿ ಬರುತ್ತದೆ. ಈ ಶಕ್ತಿ 2–3 ವಾರಗಳಲ್ಲಿ ಅದೃಶ್ಯವಾಗುತ್ತದೆ. ಪ್ರಕೃತಿದತ್ತವಾದ ಸಕ್ರಿಯಾ ನಿರೋಧಶಕ್ತಿ ರೋಗ ಅಥವಾ ಸೋಂಕಿನ ಸಂಪರ್ಕದಿಂದಲೂ ಉತ್ಪತ್ತಿಯಾಗುತ್ತದೆ. ವ್ಯಕ್ತಿಯಲ್ಲಿ ಈ ರೀತಿಯ ನಿರೋಧಶಕ್ತಿ ಇದೆಯೆ ಇಲ್ಲವೆ ಎಂಬುದನ್ನು ಕಂಡಹಿಡಿಯಲು ಶಿಕ್ ಪರೀಕ್ಷೆ ಮಾಡಿ ತಿಳಿದುಕೊಳ್ಳಬಹುದು. ಈ ಪರೀಕ್ಷೆಯಂತೆ ಕೈತೋಳಿನ ಮುಂಭಾಗದ ಚರ್ಮಕ್ಕೆ 0.2 ಮಿ.ಲಿ. ಗಳಷ್ಟು ಡಿಫ್ತೀರೀಯ ವಿಷವನ್ನು ಚುಚ್ಚುಮದ್ದಿನಂತೆ ಸೇರಿಸಿ 24–36ಗಂಟೆಗಳ ಅನಂತರ ಪರೀಕ್ಷಿಸಿದರೆ ಕೊಟ್ಟ ಸ್ಥಳದಲ್ಲಿ ಚರ್ಮ ಊದಿ ಕೆಂಪಗಾಗಬಹುದು. ಅಂಥವರ ರಕ್ತದಲ್ಲಿ ವಿಷವನ್ನು ನಿಷ್ಪರಿಣಾಮಕಾರಿ ಮಾಡುವ ಪ್ರತಿವಿಷವಸ್ತುಗಳಿಲ್ಲದಿರುವುದೇ ಈ ಪ್ರತಿಕ್ರಿಯೆಗೆ ಕಾರಣ, ಅಂದರೆ ಈ ಪ್ರತಿಕ್ರಿಯೆ ತೋರುವವರಿಗೆ ಡಿಫ್ತೀರಿಯ ರೋಗ ಅಂಟಬಹುದು. ಪ್ರತಿಕ್ರಿಯೆ ತೋರದಿರುವವರ ದೇಹದಲ್ಲಿ ಪ್ರತಿವಿಷವಸ್ತುಗಳು ಇವೆಯಾದ್ದರಿಂದ ಅವರಿಗೆ ರೋಗ ತಗಲುವ ಸಂಭವ ಕಡಿಮೆ. ಭಾರತದಲ್ಲಿ ಈ ಪರೀಕ್ಷೆಗಳನ್ನು ಕೆಲವೆಡೆಗಳಲ್ಲಿ ಸಾಮೂಹಿಕವಾಗಿ ನಡೆಸಿ ಅಧ್ಯಯನ ಮಾಡಲಾಗಿದೆ. ಮೂರು ವರ್ಷದ ವಯಸ್ಸಿನ ಮಕ್ಕಳಲ್ಲಿ ಶೇ. 70 ಮಂದಿಯಲ್ಲಿ ಹಾಗೂ ಐದು ವರ್ಷದ ವಯಸ್ಸಿನ ಮಕ್ಕಳಲ್ಲಿ ಶೇ. 99 ಮಂದಿಯಲ್ಲಿ ನಿರೋಧ ಶಕ್ತಿ ಬೆಳದು ಬಂದಿರುವುದು ಈ ಆಧ್ಯಯನಗಳಿಂದ ತಿಳದಿದೆ. ಅಂದರೆ ಸಾಮೂಹಿಕ ಚುಚ್ಚು ಮದ್ದಿನ ಕಾರ್ಯಕ್ರಮ ಜಾರಿಗೆ ಬಂದು ಫಲದಾಯಕವಾಗಬೇಕಾದರೆ ಮಕ್ಕಳಿಗೆ ಮೂರು ವರ್ಷಗಳು ತುಂಬುವ ಮುನ್ನ ರೋಗರಕ್ಷೆ ಕೊಡಬೇಕೆಂದಾಯಿತು. ಡಿಫ್ತೀರಿಯ ಟಾಕ್ಸಾಯಿಡನ್ನು ಮಕ್ಕಳಿಗೆ ಸಕಾಲದಲ್ಲಿ ಕೊಟ್ಟು ಸಕ್ರಿಯಾನಿರೋಧ ಶಕ್ತಿಯನ್ನು ಉತ್ಪತ್ತಿ ಮಾಡಬಹುದು. ಜನಸಮೂಹದಲ್ಲಿ ಇದರ ಪಿಡುಗನ್ನು ತಡೆಹಾಕಲು ಕಡೇ ಪಕ್ಷ ಶೇ. 70 ಮಂದಿಯಲ್ಲಾದರೂ ಸಕ್ರಿಯಾನಿರೋಧಶಕ್ತಿ ಇರಬೇಕೆಂದು ಅಂದಾಜಾಗಿದೆ.

**ಬಾಹ್ಯ ಪರಿಸರ ಮತ್ತು ಡಿಫ್ತೀರಿಯ :** ಏರುಪೇರುಗಳು ಕೆಲವು ವೇಳೆ ಕಂಡುಬರಬಹುದಾದರೂ ವರ್ಷದುದ್ದಕ್ಕೂ ಈ ರೋಗದಿಂದ ನರಳುವವರಿರುತ್ತಾರೆ. ಕೋಲ್ಕೊತ್ತ ನಗರಗಳಲ್ಲಿ ಆಗಸ್ಟ್ ತಿಂಗಳಲ್ಲಿ ರೋಗದ ಸಂಖ್ಯೆ ಅತ್ಯಧಿಕವಾದರೆ ಮುಂಬಯಿ ನಗರದಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಉಪದ್ರವದ ಪರಮಾವಧಿ ಕಂಡು ಬಂದಿದೆ.

**ರೋಗ ಬಲಿಯುವ ಕಾಲ :** ರೋಗಕಾಲದ ಏಕಾಣುಜೀವಿಗಳು ಆಶ್ರಯ ಕೊಡುವ ವ್ಯಕ್ತಿಯ ದೇಹವನ್ನು ಹೊಕ್ಕ 2 – 5 ದಿವಸಗಳೊಳಗೆ ರೋಗ ಲಕ್ಷಣಗಳು ಕಾಣಿಸುತ್ತವೆ.

**ರೋಗ ಹರಡುವ ಬಗೆ :** ಮುಖ್ಯವಾಗಿ ಮೂರು ಮಾರ್ಗಗಳಿಂದ ರೋಗ ಹರಡಲು ಅವಕಾಶವಿದೆ. ಮಾತನಾಡಿದಾಗ, ಕೆಮ್ಮಿದಾಗ, ಸೀನಿದಾಗ ಅಥವಾ ಉಗುಳಿದಾಗ ಹೊರಬೀಳುವ ತುಂತುರಗಳಿಂದಲೂ ಸೋಂಕು ಅಂಟಿರುವ ಧೂಳಿನಿಂದಲೂ ರೋಗ ಒಬ್ಬರಿಂದೊಬ್ಬರಿಗೆ ಹರಡುತ್ತದೆ. ಮಲಿನಗೊಂಡ ಬಟ್ಟೆ ಬರೆಗಳಿಂದ ರೋಗ ಹರಡಬಹುದಾದರೂ ಹಾಗಾಗುವುದು ಅಪರೂಪ. ಕುದಿಸಿ ಉಪಯೋಗಿಸುವುದರಿಂದ ಹಾಲಿನ ಮೂಲಕ ಸೋಂಕು ಹರಡುವುದು ಅಪರೂಪ.

**ದೇಹದೊಳಗೆ ಸೋಂಕಿನ ಪ್ರವೇಶ :** ಉಸಿರಾಡುವಾಗ ಮೂಗು. ಬಾಯಿ, ಗಂಟಲು, ಶ್ವಾಸನಾಳ ಅಂದರೆ ಶ್ವಾಸಾಂಗಗಳ ಮೂಲಕ ಸೋಂಕು ದೇಹಕ್ಕೆ ಹೊಕ್ಕು ನೆಲೆಸುತ್ತದೆ. ಚರ್ಮದ ಮೂಲಕ ಅಂದರೆ ಗಾಯಗಳ ಮೂಲಕವೂ ಸೋಂಕು ಅಂಟಬಹುದು. ಕಣ್ಣು, ಜನನೇಂದ್ರಿಯ ಹಾಗೂ ನಡು ಕಿವಿಯ ಲೋಳೆಪೊರೆಗಳಲ್ಲಿ ಕೆಲವು ವೇಳೆ ಸೋಂಕು ಕಂಡುಬರುವುದುಂಟು.

ರೋಗಕಾರಕ ಜೀವಾಣುಗಳು ದೇಹವನ್ನು ಹೊಕ್ಕು ಸ್ಥಾಪಿತವಾದೆಡೆಗಳಲ್ಲೇ ವೃದ್ಧಿಗೊಂಡು ಸ್ಥಳೀಕ ವಿಕಾರಗಳನ್ನು ಉಂಟುಮಾಡುತ್ತವೆ. ಗಾಯವಾಗಿ ಅದರಿಂದ ಸ್ರಾವ ಒಸರುವುದು, ರೋಗದ ಪೊರೆ ರೂಪುಗೊಳ್ಳುವುದು, ದುರ್ನಾತ, ಸುತ್ತುಮುತ್ತಲಿರುವ ಅಂಗಾಂಶಗಳ ಉರಿ, ಊತ, ದುಗ್ಧ ಗ್ರಂಥಿಗಳೂ ಉರಿ ಊತಕ್ಕೊಳಗಾಗಿ ಗಂಟಲೂದಿಕೊಂಡು ಹೋರಿಗಂಟಲಿನಂತೆ ಕಾಣುವುದು–ಇವು ಮುಖ್ಯವಾದ ಕೆಲವು ವಿಕಾರಗಳು. ಜೀವಾಣುಗಳು ಸ್ಥಾಪನೆಯಾದೆಡೆಗಳಲ್ಲಿ ಅತ್ಯುಗ್ರವಾದ ಹೊರಜೀವ ವಿಷವನ್ನು ಉತ್ಪತ್ತಿ ಮಾಡುತ್ತವೆ.

**ರೋಗಿಯ ಮರಣಕ್ಕೆ ಕಾರಣಗಳು :** ಹೃದಯಸ್ನಾಯುವಿನ ಮೇಲೆ ಹೊರಜೀವವಿಷದ ಪರಿಣಾಮದಿಂದ ರೋಗ ಪ್ರಾರಂಭದ ಮೂರು ದಿನಗಳಲ್ಲಿ ಅಥವಾ ಎರಡು ವಾರಗಳ ಅನಂತರ ಸಾವಕಾಶವಾಗಿ ಹೃದಯಾಘಾತಕ್ಕೊಳಗಾಗಿ ರೋಗಿ ಅಸುನೀಗುವುದು ಸಾಮಾನ್ಯ, ಹೊರಜೀವವಿಷದ ವ್ಯಾಪನೆಯಿಂದ ಇತರ ಸ್ನಾಯುಗಳೂ ಅಧೀನ ತಪ್ಪಿ ಸಾವಿಗೆಡೆಗೊಡಬಹುದು. ಮುಖ್ಯವಾಗಿ ವಪೆ ಮತ್ತಿತರ ಶ್ವಾಸಾಂಗಗಳ ಸ್ನಾಯುಗಳು ಈ ರೀತಿಯ ಪ್ರಭಾವಕ್ಕೊಳಗಾಗಿ ಸಾವನ್ನು ಉಂಟುಮಾಡಬಹುದು. ಗಂಟಲಿನ ಅಂಗಾಂಶಗಳು ಉರಿ, ಊತಕ್ಕೊಳಗಾಗಿ ಉಸಿರಾಡುವುದಕ್ಕಾಗದಾಗಲೂ ಸಾವು ಬಂದಡಸಬಹುದು.

**ರೋಗ ನಿದಾನ :** ಮೊದಮೊದಲಲ್ಲಿ ಈ ರೋಗವನ್ನು ಪತ್ತೆ ಹಚ್ಚುವುದು ಸುಲಭವಲ್ಲ. ಸ್ವಲ್ಪ ಅನುಮಾನ ಬಂದರೂ ಕೂಡಲೇ ಡಿಫ್ತೀರಿಯ ರೋಗ ಚಿಕಿತ್ಸೆಯನ್ನೇ ತಕ್ಷಣ ಪ್ರಾರಂಭಿಸಬೇಕು. ಗಂಟಲು ಮೂಗಿನ ಲೋಳೆಪೊರೆಯಿಂದ, ಸ್ರವಿಸುವ ಗಾಯದಿಂದ ಇಲ್ಲವೆ ಡಿಫ್ತೀರಿಯ ಪೊರೆಯಿಂದ ಪರೀಕ್ಷೆಗಾಗಿ ವಸ್ತುವನ್ನು ಪಡೆದು ಪ್ರಯೋಗಶಾಲೆಗಳಲ್ಲಿ ಯುಕ್ತ ಪರೀಕ್ಷೆಗಳನ್ನು ನಡೆಸಿ ರೋಗ ನಿರ್ಧರಿಸಬಹುದು. ದ್ರವಮಾಧ್ಯಮಗಳಲ್ಲಿ ತಳಿ ಎಬ್ಬಿಸಿ, ಸೂಕ್ಷ್ಮದರ್ಶಿಗಳಲ್ಲಿ ಪರಿಶೀಲಿಸಿ ಅಂತಿಮ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದರೆ ಅಷ್ಟಾಗುವವರೆಗೂ ಚಿಕಿತ್ಸೆಯನ್ನು ಮಾತ್ರ ತಡೆಹಿಡಿಯಬಾರದು.

**ರೋಗ ಪ್ರತಿಬಂಧಕೋಪಾಯಗಳು :** ವ್ಯಕ್ತಿಯಲ್ಲಿ ಸಕ್ರಿಯ ಹಾಗೂ ಅಕ್ರಿಯ ನಿರೋಧ ಶಕ್ತಿಯನ್ನು ಉತ್ಪತ್ತಿಮಾಡಿ ರೋಗವಿರುದ್ಧ ರಕ್ಷಣೆ–ಕೊಡುವುದೊಳಿತು. ಸಕ್ರಿಯ ನಿರೋಧ ಶಕ್ತಿಯನ್ನು ಸಾಮೂಹಿಕವಾಗಿ ಉತ್ಪನ್ನ ಮಾಡಿ ರೋಗ ತಡೆಗಟ್ಟುವುದು ಆಧುನಿಕ ಕ್ರಮ. ಈ ಸಕ್ರಿಯ ನಿರೋಧಶಕ್ತಿಯನ್ನು ಉತ್ಪತ್ತಿಮಾಡಲು ಸಿದ್ಧಮಾಡಿದ ಪ್ರತಿವಿಷಜನಕಗಳು ಹೀಗಿವೆ : 1 ಪಟಿಕದ ಟಾಕ್ಸಾಯಿಡ್, 2. ಅಲ್ಯೂಮಿನಿಯಂ ಫಾಸ್ಫೇಟ್ ಟಾಕ್ಸಾಯಿಡ್, 3 ಫಾರ್ಮಾಲ್ ಟಾಕ್ಸಾಯಿಡ್, 4 ಟಾಕ್ಸಾಯಿಡ್–ಆಂಟಿ–ಟಾಕ್ಸಿನ್ ಫ್ಲಾಕ್ಯೂಲ್ಸ್, 5 ಟ್ರಿಪಲ್ ಆಂಟಿಜೆನ್ (ತ್ರಿರೋಗ ನಿರೋಧಕರಕ್ಷೆ).

ಪ್ರಪ್ರಥಮದಲ್ಲಿ ಪೂರ್ಣನಿರೋಧಶಕ್ತಿ ಬೆಳೆಸಲು ಕೊಡಬೇಕಾದ ಚುಚ್ಚುಮದ್ದುಗಳ ಪ್ರಮಾಣ

| | ಟಾಕ್ಸಾಯಿಡ್ ಬಗೆ | ಮೊದಲನೆ ಬಾರಿ | ಎರಡನೆ ಬಾರಿ | ಕಡೆಯದು ಕೊಡಬೇಕಾದ ಪ್ರಮಾಣ | ನಿರೋಧಶಕ್ತಿ ವೃದ್ಧಿಗೊಳಿಸಲು 4–5 ವರ್ಷಗಳಿಗೊಮ್ಮೆ ಒಂದು ಬಾರಿ |
|---|---|---|---|---|---|
| 1 | ಪಟಿಕದ ಟಾಕ್ಸಾಯಿಡ್ ಅಥವಾ ಅಲ್ಯುಮಿನಿಯಂ ಫಾಸ್‌ಫೇಟ್ ಟಾಕ್ಸಾಯಿಡ್ | 0.5 ಮಿ.ಲೀ. | 0.5 ಮಿ.ಲೀ. | ---------- | 0.2 ರಿಂದ 0.5 ಮಿ.ಲೀ. |
| 2 | ಫಾರ್ಮಾಲ್ ಟಾಕ್ಸಾಯಿಡ್ | 1.0 ಮಿ.ಲೀ. | 1.0 ಮಿ.ಲೀ. | ---------- | 0.2 ರಿಂದ 0.5 ಮಿ.ಲೀ. |
| 3 | ಟಾಕ್ಸಾಯಿಡ್–ಆಂಟಿ–ಟಾಕ್ಸಿನ್ ಫ್ಲಾಕ್ಯೂಲ್ಸ್ | 1.0 ಮಿ.ಲೀ. | 1.0 ಮಿ.ಲೀ. | 1.0 ಮಿ.ಲೀ. | 1.0 ಮಿ.ಲೀ. |
| 4 | ತ್ರಿರೋಗ ಚುಚ್ಚುಮದ್ದು ಸರಳವಾದದ್ದು ಡಿ.ಪಿ.ಟಿ. | 1.0 ಮಿ.ಲೀ. | 1.0 ಮಿ.ಲೀ. | 1.0 ಮಿ.ಲೀ. | 1.0 ಮಿ.ಲೀ. 18 ತಿಂಗಳುಗಳ ಅನಂತರ ಹಾಗೂ ಶಾಲೆಗೆ ಸೇರುವ ವೇಳೆಯಲ್ಲಿ |
| 5 | ಪಟಿಕ ಹೀರಿದ ತ್ರಿರೋಗ ಚುಚ್ಚುಮದ್ದು | 0.5 ಮಿ.ಲೀ. | 0.5 ಮಿ.ಲೀ. | ---------- | 0.5 ಮಿ.ಲೀ.ಶಾಲೆಗೆ ಸೇರುವಾಗ |

(1, 2, 3, 4 ಚುಚ್ಚುಮದ್ದುಗಳ ಮಧ್ಯಂತರ 4 ರಿಂದ 6 ವಾರಗಳು, 5ನೇ ವಿಧದ ಚುಚ್ಚುಮದ್ದುಗಳ ಮಧ್ಯಂತರ ಕಡೇಪಕ್ಷ 2 ತಿಂಗಳುಗಳಾದರೂ ಇರಬೇಕು.)

ಮೇಲೆ ಹೇಳಿರುವ ಪ್ರತಿವಿಷಜನಕಗಳಲ್ಲಿ ಫಾರ್ಮಾಲ್ ಟಾಕ್ಸಾಯಿಡ್ ಹಾಗೂ ಟಾಕ್ಸಾಯಿಡ್ ಆಂಟಿ–ಟಾಕ್ಸಿನ್ ಫ್ಲಾಕ್ಯೂಲುಗಳನ್ನು ಪ್ರಪ್ರಥಮದಲ್ಲೇ ಉಪಯೋಗಿಸಲು ತಜ್ಞರು ಶಿಫಾರಸು ಮಾಡುವುದಿಲ್ಲ. ಇವುಗಳಿಗೆ ಪ್ರತಿವಿಷವಸ್ತುವನ್ನು ಯಶಸ್ವಿಯಾಗಿ ಉತ್ಪತ್ತಿ ಮಾಡುವ ಶಕ್ತಿ ಸಾಲದು. ಸಾಮಾನ್ಯ ಬಳಕೆಗೆ ಅತ್ಯುತ್ತಮವಾದದ್ದು ತ್ರಿರೋಗ ನಿರೋಧ ರಕ್ಷೆ.

ಈ ತ್ರಿರೋಗ ನಿರೋಧರಕ್ಷೆ ಒಂದೇ ಕಾಲದಲ್ಲಿ ಡಿಫ್ತೀರಿಯ, ನಾಯಿ ಕೆಮ್ಮು ಮತ್ತು ಧನುರ್ವಾಯು ಈ ಮೂರು ರೋಗಗಳಿಗೆ ತಡೆಯನ್ನೊದಗಿಸುತ್ತವೆ. ಸರಳವಾದ ಟಾಕ್ಸಾಯಿಡ್ ಹಾಗೂ ಪಟಿಕ ಮಾಡಿದ ಟಾಕ್ಸಾಯಿಡ್ ಎಂದು ಈ ಮದ್ದಿನಲ್ಲಿ ಎರಡು ಬಗೆ. ದೇಹದಲ್ಲಿ ಪೂರ್ಣನಿರೋಧ ಶಕ್ತಿಯುತ್ಪತ್ತಿ ಮಾಡಲು ಸರಳವಾದ ಟಾಕ್ಸಾಯಿಡನ್ನು ಮೇಲ್ತೋಳಿನ ಮಾಂಸಖಂಡಕ್ಕೆ ತಿಂಗಳಿಗೊಮ್ಮೆ 1 ಮಿಲಿಲೀಟರಿನಷ್ಟು ಪರಿಮಾಣದಲ್ಲಿ ಮೂರು ಬಾರಿ ಕೊಡಬೇಕು. ಇದರಿಂದ ಬೆಳೆದ ನಿರೋಧ ಶಕ್ತಿಯನ್ನು ವೃದ್ಧಿಗೊಳಿಸಲು 18 ತಿಂಗಳುಗಳ ಅನಂತರ ಹಾಗೂ ಶಾಲೆಗೆ ಸೇರಿಸುವ ವೇಳೆಯಲ್ಲಿ ಒಂದೊಂದು ಬಾರಿ ಕೊಡಬೇಕು. ಪ್ರತಿವಿಷವಸ್ತುವನ್ನು ಉತ್ಪತ್ತಿಮಾಡುವ ಕ್ರಿಯೆಯಲ್ಲಿ ಪಟಿಕ ಕೂಡಿದ ಟಾಕ್ಸಾಯಿಡ್ ಸರಳವಾದದ್ದಕ್ಕಿಂತ ಐದರಷ್ಟು ಅಧಿಕ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಪ್ರಥಮವಾಗಿ ಪೂರ್ಣ ನಿರೋಧಶಕ್ತಿ ಬೆಳೆಸಲು ಎರಡೇ ಬಾರಿ ಕೊಟ್ಟರೆ ಸಾಕು. ಒಂದರಿಂದ ಮತ್ತೊಂದರ ನಡುವಣ ಅವಧಿ ಕಡೇ ಪಕ್ಷ ಎರಡು ತಿಂಗಳುಗಳಾದರೂ ಇರಬೇಕು.

ಯಾವ ಯಾವ ನಿರೋಧ ರಕ್ಷೆಗಳನ್ನು ಯಾವ ಯಾವ ಪ್ರಮಾಣದಲ್ಲಿ ಕೊಡಬೇಕು, ಎಷ್ಟು ಬಾರಿ ಕೊಡಬೇಕು, ಅವುಗಳ ಮಧ್ಯವಿರಬೇಕಾದ ಅವಧಿ ಎಷ್ಟು ಹಾಗೂ ನಿರೋಧ ಶಕ್ತಿ ವೃದ್ಧಿಗೊಳಿಸಬೇಕಾದದ್ದು ಎಷ್ಟು ವರ್ಷಕ್ಕೊಮ್ಮೆ ಇತ್ಯಾದಿ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

**ರೋಗ ನಿಯಂತ್ರಣ :** ರೋಗ ಸೋಂಕಿನಿಂದ ಸಾರ್ವಜನಿಕರಲ್ಲಿ ಹರಡದಂತೆ ನೋಡಿಕೊಳ್ಳುವುದು ಮೊದಲ ಕೆಲಸ.

ಎಳಸಿನಲ್ಲೇ ರೋಗವನ್ನು ಗುರುತು ಹಚ್ಚುವುದು ನಿಯಂತ್ರಣದ ಮೊದಲ ಹೆಜ್ಜೆ. ಗಂಟಲು ಮತ್ತು ಮೂಗಿನ ಗಾಯದ ಸ್ರಾವವನ್ನು ಪರೀಕ್ಷೆಗೊಳಪಡಿಸಿ ಡಿಫ್ತೀರಿಯ ಜೀವಾಣುಗಳಿವೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಬೇಕು. ಜೀವಾಣುಗಳು ವಿಷಪೂರಿತ ಗುಂಪಿಗೆ ಸೇರಿದವೇ ಅಥವಾ ವಿಷರಹಿತ ಗುಂಪಿಗೆ ಸೇರಿದವುಗಳೇ ಎಂಬುದೂ ಇತ್ಯರ್ಥವಾಗಬೇಕು. ಪರೀಕ್ಷೆಯಲ್ಲಿ ಡಿಫ್ತೀರಿಯ ಜೀವಾಣುಗಳಿಲ್ಲವೆಂದು ವರದಿಯಾದರೂ ಚಿಕಿತ್ಸೆಯನ್ನು ನಿಲ್ಲಿಸಲಾಗದು.

ರೋಗಿಯನ್ನು ಪ್ರತ್ಯೇಕಿಸಿ ಇತರರ ಸಂಪರ್ಕವಿಲ್ಲದಂತೆ ಮಾಡಬೇಕು. ರೋಗಿಯ ಸಂಪರ್ಕ ಹೊಂದಿದವರೆಲ್ಲರೂ 4 ವಾರಗಳು ಬೇರೆಯಿದ್ದು ದಿನವಹಿ ವೈದ್ಯರ ಮೇಲ್ವಿಚಾರಣೆ ಒಳಪಟ್ಟಿರಬೇಕು. ನಾಲ್ಕು ವಾರಗಳ ಅನಂತರದ ಪರೀಕ್ಷೆಯಲ್ಲಿ ಸೋಂಕು ಇಲ್ಲವೆಂದು ಖಚಿತವಾದಲ್ಲಿ ಪುನಃ ಅವರು ಇತರರೊಂದಿಗೆ ಬೆರೆಯಲು ಅವಕಾಶ ಕೊಡಲಡ್ಡಿಯಿಲ್ಲ.

ರೋಗಿಗಳಿಗೆ ಯಶಸ್ವಿ ಚಿಕಿತ್ಸೆ ಮತ್ತು ಶುಶ್ರೂಷೆ ಅಗತ್ಯ. ರೋಗಿಯ ದೇಹದಲ್ಲಿ ವ್ಯಾಪಿಸಿರುವ ಹೊರಜೀವವಿಷವನ್ನು ನಿಷ್ಪರಿಣಾಮಕಾರಿಯಾಗಿ ಮಾಡಲು 40,000 – 100,000 ಘಟಕಗಳ ಪ್ರಮಾಣದಲ್ಲಿ ಸಿದ್ಧಪಡಿಸಿದ ಪ್ರತಿವಿಷವಸ್ತುಗಳನ್ನೊಳಗೊಂಡ ರಕ್ತದ್ರವವನ್ನು ಕೊಡಬೇಕು. ಈ ರಕ್ತದ್ರವ ರೋಗಿಗೆ ಒಗ್ಗುತ್ತದೆಯೇ ಇಲ್ಲವೆ ಎಂಬುದು ಯುಕ್ತ ಪರೀಕ್ಷೆಯಿಂದ ನಿರ್ಧಾರವಾದ ಅನಂತರವೇ ಕೊಡಬೇಕು. ಇಲ್ಲದಿದ್ದರೆ ರೋಗಿಯ ಪ್ರಾಣಕ್ಕೆ ಅಪಾಯ. ಜೊತೆಗೆ ಪೆನಿಸಿಲಿನ್ ಪ್ರತಿಜೀವಕವನ್ನು ಭಾರಿ ಪ್ರಮಾಣದಲ್ಲಿ ಅಂದರೆ ಐದು ಲಕ್ಷ ಘಟಕಗಳನ್ನು ದಿನಕ್ಕೆ ಎರಡು ಬಾರಿಯಂತೆ ಒಂದು ವಾರ ಕೊಡಬೇಕು.

ರೋಗಿಯಿಂದ ಹೊರಬೀಳುವ ರೋಗಕಾರಕಗಳನ್ನು ನಾಶಪಡಿಸಲು ಕ್ರಿಮಿನಾಶಕಗಳನ್ನು ಉಪಯೋಗಿಸಬೇಕು. ಗಂಟಲು, ಮೂಗುಗಳ ವಿಸರ್ಜನೆ ಮತ್ತು ಲಸಿಕೆಯಿಂದ ಮಲಿನವಾದ ವಸ್ತುಗಳನ್ನೂ ಯುಕ್ತ ರೀತಿಯಲ್ಲಿ ಶುದ್ಧಗೊಳಿಸಬೇಕು. ರೋಗವಿಮೋಚನೆಯಾದ ಮೇಲೂ ಈ ಕ್ರಮಗಳನ್ನು ಮುಂದುವರಿಸಿ ರೋಗಿಯ ಕೊಠಡಿಯನ್ನೂ ಶುದ್ಧಗೊಳಿಸುವುದು ಒಳ್ಳೆಯದು.

ರೋಗಿ ಚೇತರಿಸಿಕೊಂಡ ಮೇಲೆ ಸೋಂಕು ನಿರ್ನಾಮವಾಗಿದೆಯೇ ಎಂಬುದನ್ನು ನಿರ್ಧರಿಸಿಕೊಳ್ಳಬೇಕು. ಸೋಂಕಿದ್ದವರಿಗೆ ಪ್ರತಿಜೀವಕಗಳಿಂದ ಚಿಕಿತ್ಸೆ ಕೊಡಬೇಕು. ಇದಕ್ಕಾಗಿ 250 ಮಿಲಿಗ್ರಾಂ ಎರಿತ್ರೋಮೈಸಿನನ್ನು ಆರು ಗಂಟೆಗೊಂದಾವರ್ತಿಯಂತೆ ಕೊಡಬೇಕು.

ರೋಗಿಯ ಸಂಪರ್ಕ ಹೊಂದಿದವರನ್ನು ಪರೀಕ್ಷೆ ಒಳಪಡಿಸುವುದೊಂದೇ ಅಲ್ಲದೆ ಕೂಡಲೆ ಸಿದ್ಧಪಡಿಸಿದ ಪ್ರತಿವಿಷವಸ್ತುವಿನ ರಕ್ತದ್ರವವನ್ನು 500–1000 ಘಟಕಗಳ ಪ್ರಮಾಣದಲ್ಲಿ ಕೊಡಬೇಕು. ಇದರೊಂದಿಗೆ ಎರಡು ವಾರಗಳ ಮೇಲೆ ಪ್ರತಿಯೊಬ್ಬರಿಗೂ ಸಕ್ರಿಯ ನಿರೋಧ ಶಕ್ತಿ ಬೆಳೆಸಲು ಟಾಕ್ಸಾಯಿಡುಗಳನ್ನು ಕೊಡಬೇಕು. ಮೊದಲೇ ಟಾಕ್ಸಾಯಿಡ್ ಪಡೆದು ಸಕ್ರಿಯ ನಿರೋಧ ಶಕ್ತಿಯುಳ್ಳವರಿಗೆ ಈ ಶಕ್ತಿಯನ್ನು ವೃದ್ಧಿಗೊಳಿಸಲು 0.1 ಅಥವಾ 0.2 ಮಿ.ಲೀ. ಟಾಕ್ಸಾಯಿಡ್ ಚುಚ್ಚುಮದ್ದನ್ನು ಕೊಡಬೇಕು. ಸಂಪರ್ಕ ಹೊಂದಿದವರೆಲ್ಲರೂ ದಿನವಹಿ ವೈದ್ಯರಿಂದ ಪರೀಕ್ಷೆ ಮಾಡಿಸಿಕೊಳ್ಳುವುದು ಅವಶ್ಯ. ಮಕ್ಕಳ ಸಂಪರ್ಕವಿರುವವರು ಅಂದರೆ ದಾದಿಯರು, ಉಪಾಧ್ಯಾಯರು ಇತ್ಯಾದಿ ಉದ್ಯೋಗದವರು ತಮ್ಮಲ್ಲಿ ರೋಗದ ಸೋಂಕಿಲ್ಲವೆಂದು ನಿರ್ಧಾರವಾಗುವ ವರೆಗೆ ಉದ್ಯೋಗದಲ್ಲಿ ತೊಡಗಬಾರದು.

ಗಂಟಲ ಮಾರಿ ರೋಗದ ಮೂಲೋತ್ಪಾಟನೆಗೆ ಆಧುನಿಕ ವೈದ್ಯ ವಿಜ್ಞಾನದ ಜೊತೆಗೆ ಜನಸಮುದಾಯ ಶಿಕ್ಷಣ ಮತ್ತು ಸಹಕಾರವೂ ಅಗತ್ಯವೆಂಬ ವಿಷಯವನ್ನು ಒತ್ತಿಹೇಳಬೇಕಾಗಿದೆ. – (ಆರ್.ಎಸ್.ವಿ.)

**ಗಂಟಲಿನ ರೋಗಗಳು :** ಇವು ಮುಖ್ಯವಾಗಿ ಊತದಿಂದುಂಟಾಗುತ್ತದೆ. ಇಲ್ಲವೇ ಗಂಟಲಿನ ಸ್ನಾಯುಗಳು ತಮ್ಮ ಕ್ರಿಯಾಸಾಮರ್ಥ್ಯವನ್ನು ಕಳೆದುಕೊಂಡು ಸಂಕುಚಿಸಲಾಗದಾಗ ಸಂಭವಿಸುತ್ತವೆ. ಗಂಟಲಿನ ಊತ ವಿಷಾಣುಗಳ ಸೋಂಕಿನಿಂದಲೋ ಇನ್ನಾವ ಕಾರಣದಿಂದಲೋ ಆಗಬಹುದು. ಸಾಧಾರಣವಾಗಿ ಇದು ಗಂಟಲು ನೋವಾಗಿ ಕಾಣಿಸಿಕೊಳ್ಳುತ್ತದೆ. ಗಂಟಲಿನ ನೋವು ಸಾಮಾನ್ಯವಾಗಿ ಎಲ್ಲರೂ ಅನುಭವಿಸಿರುವ ಬೇನೆ ಉಗುಳು ನುಂಗಿದಾಗ ನೋವಾಗುವುದು, ಗಂಟಲು ಕೆರೆತ ಉಂಟಾಗುವುದು, ಗಂಟಲು ಕಟ್ಟಿ (ಕೂತು) ಧ್ವನಿ ಬದಲಾಯಿಸಿ ಸ್ಪಷ್ಟವಾಗಿ ಮಾತನಾಡುವುದಕ್ಕೂ ಆಹಾರ ಪದಾರ್ಥಗಳನ್ನು ನುಂಗುವುದಕ್ಕೂ ಆಗದೇ ಇರುವುದು ಇವೆಲ್ಲ ಸಾಧಾರಣವಾಗಿ ಈ ಸ್ಥಿತಿಯಲ್ಲಿ ಕಾಣಬರುತ್ತವೆ. ಬಾಲ್ಯದಲ್ಲಿ ಇದರಿಂದ ದವಡೆಯ ಕೆಳಭಾಗದಲ್ಲಿ ಗಳಲೆ ಕಟ್ಟಿಕೊಳ್ಳುವುದು ಸಾಮಾನ್ಯ. ಜ್ವರ ಕೂಡ ಬರಬಹುದು. ಗಂಟಲು ನೋವಾದಾಗ ಗಂಟಲಿನಲ್ಲಿರುವ ಟಾನ್ಸಿಲ್ ಗ್ರಂಥಿಗಳೂ ಊದಿಕೊಳ್ಳುತ್ತವೆ. ಈ ಬೇನೆಗೆ ಟಾನ್ಸಿಲೈಟಿಸ್ ಎಂದು ಹೆಸರು. ಪ್ರವಾದ ವಾದ ಕೆಂಡಾಮಂಡಲಜ್ವರ, ಗ್ಲಾಮೆರ್ಯುಲೋ ನೆಫ್ರೈಟಿಸ್ ಎಂಬ ಮೂತ್ರಪಿಂಡದ ರೋಗ, ಮಕ್ಕಳ ಸಂಧಿವಾತರೋಗ ಮುಂತಾದವುಗಳ ಪ್ರಥಮ ಲಕ್ಷಣವಾಗಿ ಕೂಡ ಗಂಟಲು ನೋವು ಬರಬಹುದಾದ್ದರಿಂದ ಈ ಬೇನೆಯನ್ನು ಕಡೆಗಾಣದೆ

ಪ್ರಬಲ ಔಷಧೋಪಚಾರವನ್ನು ಒಡನೆ ಮಾಡಿಸಬೇಕು. ಗಂಟಲಿನ ಊತ ಕಿರುನಾಲಿಗೆಗೆ ಹರಡಿದರೆ ಅದು ಉದ್ದವಾಗಿ ಕೆಳಗೆ ಇಳಿಬೀಳುತ್ತದೆ. ಇದು ಗಂಟಲಿನ ಇತರ ಭಾಗಗಳಿಗೆ ಸೋಕಿದಾಗ ಕೆಮ್ಮು ಉಂಟಾಗುತ್ತದೆ. ಕಿರುನಾಲಿಗೆ ಬಿದ್ದು ಕೆಮ್ಮು ಹತ್ತಿದಾಗ ಗಂಟಲಿಗೆ ಔಷಧಿಯನ್ನು ಲೇಪಿಸಿ ಚಿಕಿತ್ಸೆ ಮಾಡಬೇಕು. ಗಂಟಲಿನ ಊತ ಟಾನ್ಸಿಲಿನ ಆವರಣಕ್ಕೆ ಹರಡಿದರೆ ಬಾಯಿಬಿಡುವುದಕ್ಕೂ ಆಗದಷ್ಟು ನೋವು ಉಂಟಾಗುತ್ತದೆ ; ಜ್ವರ ಬರುತ್ತದೆ. ಆಗ ಕ್ವಿನ್ಸಿಯೆಂಬ ರೋಗ ಉಂಟಾಗಬಹುದು. ಇದಕ್ಕೆ ಚುಚ್ಚುಮದ್ದು ಕೊಡಬೇಕು. ಅಗತ್ಯವಾದರೆ ಶಸ್ತ್ರಚಿಕಿತ್ಸೆಯನ್ನು ಕೂಡ ಮಾಡಬೇಕಾಗುತ್ತದೆ. ಗಂಟಲು ನೋವು, ಕ್ವಿನ್ಸಿ ಮತ್ತು ಮೇಲೆ ಹೇಳಿರುವ ಇತರ ರೋಗಗಳು ಸಾಮಾನ್ಯವಾಗಿ ಸ್ಟ್ರೆಪ್ಟೋಕಾಕಸ್ ಎಂಬ ವಿಷಾಣುವಿನಿಂದ ಉಂಟಾಗುವ ರೋಗಗಳಾದರೂ ಗಂಟಲು ನೋವು ಅನೇಕ ವಿಧವಾದ ವೈರಸುಗಳಿಂದ ಸಹ ಉಂಟಾಗುತ್ತದೆ.

ಗಂಟಲು ನೋವು, ನೋವಿಗಿಂತ ಹೆಚ್ಚಾಗಿ ಗಂಟಲ ಊತ, ಸ್ವಲ್ಪ ಜ್ವರ ಮಾತ್ರವಿದ್ದರೂ ದೇಹದಲ್ಲಿ ಅತಿ ವಿಷಮಿಸಿದ ಸ್ಥಿತಿ, ಬಹಳವಾದ ನಿಶ್ಶಕ್ತಿ – ಇವು ಡಿಫ್ತೀರಿಯ ರೋಗದಲ್ಲಿ ಕಾಣಬರುತ್ತದೆ. ಸಣ್ಣ ವಯಸ್ಸಿನವರ ಅಲ್ಪತೀವ್ರತೆಯ ಗಂಟಲು ನೋವು ಎಂದುಕೊಂಡು ಇದನ್ನು ಉದಾಸೀನಮಾಡಬಾರದು. ಶೈಶವದಲ್ಲಿ ಸಾಮಾನ್ಯವಾಗಿ ವರ್ಷತುಂಬುವುದರ ಒಳಗೆ ಡಿಫ್ತೀರಿಯ ನಿರೋಧಕ ಮದ್ದನ್ನು ಕೊಟ್ಟಿದ್ದ ಸಂದರ್ಭಗಳಲ್ಲಿ ಆ ರೋಗ ಕಂಡುಬಂದರೆ ಅದರ ತೀವ್ರತೆ ಕಡಿಮೆ, ಆದರೂ ಡಿಫ್ತೀರಿಯ ರೋಗ ಬಹು ಬೇಗ ಪ್ರಬಲಿಸಿ ವಿಷಮಿಸಿ ಜೀವಕ್ಕೆ ಅಪಾಯವಾಗಬಹುದಾದ್ದರಿಂದ ವಿಷಾಣು ಪರೀಕ್ಷೆಯಿಂದ ಅದರ ಸೋಂಕನ್ನು ಖಚಿತಪಡಿಸಿ ಕೊಂಡು ತಡಮಾಡದೆ ನಿರೋಧಕಮದ್ದು, ಪೆನಿಸಿಲಿನ್ ಇವನ್ನು ಅಗತ್ಯಪ್ರಮಾಣದಲ್ಲಿ ಚುಚ್ಚುಮದ್ದಾಗಿ ಉಪಯೋಗಿಸಿ ಚಿಕಿತ್ಸೆ ಮಾಡಬೇಕು. ಗಂಟಲು ನೋವು ಇನ್‌ಫೆಕ್ಷಿಯಸ್ ಮಾನೋನ್ಯೂಕ್ಲಿಯೋಸಿಸ್ ಎಂಬ ರೋಗದಲ್ಲೂ ಪ್ರಧಾನವಾಗಿ ಕಾಣಬರುತ್ತದೆ. ಎಕ್ಸ್‌ಕಿರಣಗಳಿಗೆ ಅತಿಯಾಗಿ ಒಡ್ಡಲ್ಪಟ್ಟಾಗಲೂ ಅನೇಕ ನವೀನ ಔಷಧಿಗಳ ಸೇವನೆಯಿಂದಲೂ ಉಂಟಾಗುವ ಎಗ್ರಾನ್ಯುಲೋಸೈಟೋಸಿಸ್ ಎಂಬ ರೋಗಸ್ಥಿತಿಯಲ್ಲೂ ಗಂಟಲು ನೋವು ಪ್ರಧಾನ ಲಕ್ಷಣವಾಗಿರುತ್ತದೆ.

ಗಂಟಲಿನಲ್ಲಿಯ ಅಡಿನಾಯ್ಡ್ ಗ್ರಂಥಿಗಳು ಮಕ್ಕಳಲ್ಲಿ ಬಾಯಿಯ ಅಟ್ಟದ ಹಿಂಭಾಗದ ಮೇಲ್ಮೈ ಕೆಳಮೈ ಎರಡು ಮೈಯಲ್ಲೂ ಕಾಣಬರುವ ಲಿಂಫಾಯ್ಡ್ ಅಂಗಾಂಶಗಳು. ವಯಸ್ಸಾದ ಮೇಲೆ ಇವು ಕ್ಷೀಣಿಸುವುವಾದರೂ ಬಾಲ್ಯದಲ್ಲಿ ಇವು ವೃದ್ಧಿಗೊಂಡು ಮೂಗಿನಿಂದ ಉಸಿರಾಟಕ್ಕೆ ಅಡಚಣೆ ಮಾಡಬಹುದು. ಇಂಥ ಮಕ್ಕಳು ಉಸಿರಾಡುವುದಕ್ಕಾಗಿ ಯಾವಾಗಲೂ, ನಿದ್ದೆ ಮಾಡುವಾಗ ಸಹ, ಬಾಯಿ ಬಿಟ್ಟುಕೊಂಡಿರುತ್ತಾರೆ. ಜೊತೆಗೆ ವೃದ್ಧಿಗೊಂಡ ಅಡಿನಾಯ್ಡ್‌ಗ್ರಂಥಿಗಳು ಯೂಸ್ಟೇಕಿಯನ್ ನಾಳದ ರಂಧ್ರವನ್ನು ಮುಚ್ಚಿಬಿಡುವುದರಿಂದಲೂ ಆ ನಾಳ ಊತಗೊಳ್ಳುವಂತೆ ಮಾಡುವುದರಿಂದಲೂ ಕಿವುಡು ಸಂಭವಿಸುವ ಸಾಧ್ಯತೆ ಉಂಟು. ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಬಹುವಾಗಿ ಕಿವುಡಿಗೆ ಇದೇ ಕಾರಣ. ಅಡಿನಾಯ್ಡ್ ಗ್ರಂಥಿಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದುಬಿಟ್ಟರೆ ಕಿವುಡು ಗುಣವಾಗುತ್ತದೆ. ಪದೇ ಪದೇ ಗಂಟಲು ನೋವು ಬಂದು ಟಾನ್ಸಿಲ್ ಗ್ರಂಥಿಗಳೂ ಅಡಿನಾಯ್ಡ್ ಗ್ರಂಥಿಗಳೂ ಮಕ್ಕಳಲ್ಲಿ ಊತಗೊಂಡು ಕೆಂಪಗೂ ದಪ್ಪವಾಗಿಯೂ ಇರುತ್ತವೆ. ಇವುಗಳ ಬಹುಕಾಲಿಕ ಊತ ಸಾಮಾನ್ಯವಾಗಿ ನೋವನ್ನು ಉಂಟು ಮಾಡದಿದ್ದರೂ ಅನೇಕ ವೇಳೆ ನುಂಗುವುದಕ್ಕೂ ಉಸಿರಾಡುವುದಕ್ಕೂ ಅಡಚಣೆ ಮಾಡುವುದಲ್ಲದೆ ಮೇಲೆ ಹೇಳಿದಂತೆ ಕಿವುಡನ್ನು ಕೂಡ ಉಂಟುಮಾಡುತ್ತವೆ. ಹೀಗಾಗಿದ್ದರೆ ಮಾತ್ರ ಅವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಬೇಕಾಗುತ್ತದೆ. ಸಾಧಾರಣವಾಗಿ ಗಂಟಲು ಪ್ರದೇಶದಲ್ಲಿ ಟಾನ್ಸಿಲ್ ಅಡಿನಾಯ್ಡ್ ಗ್ರಂಥಿಗಳಲ್ಲದೆ ನಾಲಿಗೆ ಬುಡದಲ್ಲಿ ಮತ್ತು ಸುತ್ತಮುತ್ತ ಇನ್ನೂ ಅನೇಕ ಲಿಂಫಾಯ್ಡ್ ಅಂಗಾಂಶಗಳಿದ್ದು ಇವೆಲ್ಲವೂ ಆಹಾರ ಮತ್ತು ವಾಯುಸೇವನೆ ಮಾಡುವಾಗ ನಮ್ಮ ದೇಹದ ಒಳಹೊಗಬಹುದಾದ ವಿಷಾಣುಗಳನ್ನು ತಡೆಗಟ್ಟಿ ದೇಹಕ್ಕೆ ಪ್ರಥಮ ರಕ್ಷಣೆ ಟಾನ್ಸಿಲಿನಿಂದಲೇ ಎಂದು ನಂಬಿಕೆ ಇದೆ. ಟಾನ್ಸಿಲ್ಲು ಹೀಗೆ ದೇಹಕ್ಕೆ ಉಪಯುಕ್ತವಾಗಿರುವುದರಿಂದ ಅನಿವಾರ್ಯ ಸಂದರ್ಭವಲ್ಲದಿದ್ದರೆ ಅದನ್ನು ತೆಗೆದುಹಾಕಬಾರದು. ಟಾನ್ಸಿಲನ್ನು ತೆಗೆದುಹಾಕಿದವರಲ್ಲಿ ಅನೇಕರು ನಾಲ್ಕಾರು ದಿವಸಗಳಲ್ಲಿಯೇ ರೋಗ ಪೀಡಿತರಾಗುವುದು ಕಾಣಬರುತ್ತದೆ. ವಿಷಾಣುವಿನ ಆಕ್ರಮಣದ ವಿರುದ್ಧ ಪ್ರಥಮ ರಕ್ಷಣೆಯ ಲೋಪದಿಂದಾಗಿಯೇ ಅವರು ರೋಗಪೀಡಿತರಾಗುತ್ತಾರೆಂದು ಕಾಣುತ್ತದೆ.

ಪೋಲಿಯೋಮೈಯಲೈಟಿಸ್ ರೋಗ ತಗುಲಿದಾಗ, ಹುಚ್ಚುನಾಯಿ ಕಡಿದಾಗ, ಡಿಫ್ತೀರಿಯ ರೋಗಕ್ಕೆ ಸಾಕಷ್ಟು ಚಿಕಿತ್ಸೆ ಮಾಡದೆ ಅದು ದೀರ್ಘಕಾಲಿಕ ವ್ಯಾಧಿಯಾದಾಗ, ಸೀಸಸಂಯುಕ್ತ ವಸ್ತುಗಳು, ಮೀಥೈಲ್ ಆಲ್ಕೊಹಾಲ್ ಮುಂತಾದವುಗಳ ಸೇವನೆಯಿಂದ ನಂಜು ಉಂಟಾದಾಗ ಇವೇ ಮುಂತಾದ ಸಂದರ್ಭಗಳಲ್ಲಿ ಗಂಟಲಿನ ಸ್ನಾಯುಗಳು ಸ್ತಂಭಿತಗೊಂಡು ನುಂಗುವುದಕ್ಕೂ ಸ್ಪಷ್ಟವಾಗಿ ಮಾತನಾಡುವುದಕ್ಕೂ ಸಾಧ್ಯವಾಗದೆ ಹೋಗುತ್ತದೆ. ಭಾವಾತಿರೇಕದಿಂದ ಗಂಟಲಿನ ನೀಚಭಾಗದ ಸ್ನಾಯುಗಳು ಬಿಗಿತಗೊಂಡು ಗಂಟಲಿನಲ್ಲಿ ಏನೋ ಸಿಕ್ಕಿಹಾಕಿಕೊಂಡು ನುಂಗಲೂಬಾರದು ಉಗುಳಲೂ ಬಾರದು ಎಂಬಂತೆ ಭಾಸವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಆಹಾರಪದಾರ್ಥಗಳನ್ನು ನುಂಗುವುದಕ್ಕೆ ಪ್ರಯತ್ನಪಟ್ಟಾಗ ಅವು ಮೂಗಿನಿಂದ ಹೊರಕ್ಕೆ ಬಂದುಬಿಡಬಹುದು. ಇದು ಸಾಮಾನ್ಯವಾಗಿ ಡಿಫ್ತೀರಿಯ ರೋಗಕ್ಕೆ ಸಾಕಾದಷ್ಟು ಚಿಕಿತ್ಸೆ ಮಾಡಿದ್ದಾಗ ಸಂಭವಿಸುವ ಗಂಟಲಿನ ನರಸ್ನಾಯುಗಳ ದೌರ್ಬಲ್ಯದಿಂದಾಗುತ್ತದೆ. ತಜ್ಞರಿಂದ ಇದಕ್ಕೆ ಚಿಕಿತ್ಸೆ ಆವಶ್ಯಕ.

ಗಂಟಲಿನ ಸ್ನಾಯುಗಳು ಸ್ತಂಭಿತವಾಗಿ ಕ್ರಿಯಾಸಾಮರ್ಥ್ಯವನ್ನು ಕಳೆದುಕೊಂಡಾಗ ಮತ್ತು ಗಂಟಲಿನ ಧ್ವನಿಸಂಪುಟ ಊತಗೊಂಡಾಗ ಗಂಟಲು ಕೂತು ಹೋಗಿ ಧ್ವನಿ ಕರ್ಕಶವಾಗುತ್ತದೆ. ಸಣ್ಣಮಕ್ಕಳಲ್ಲಿ ಇದರಿಂದ ಉಸಿರಾಡುವುದೂ ಕಷ್ಟವಾಗಿ ಕೂಗುಸುರಿನ ಸ್ಥಿತಿಯುಂಟಾಗಬಹುದು. ಈ ಸ್ಥಿತಿಗೆ ತುರ್ತಾಗಿ ಆವಿಸೇವನೆ ಮತ್ತು ವಿಷಾಣುನಿರೋಧಕ ಔಷಧಿಗಳಿಂದ ಚಿಕಿತ್ಸೆ ಮಾಡಬೇಕಾಗುತ್ತದೆ. ಕ್ಷಯಸಂಬಂಧವಾಗಿ ಸಂಭವಿಸುವ ಕೂಗುಸುರಿಗೆ ಸ್ಟ್ರೆಪ್ಟೋಮೈಸಿನ್ ಕೊಡಬೇಕಾಗುತ್ತದೆ. ಡಿಫ್ತೀರಿಯ ರೋಗದಲ್ಲಿ ಉಂಟಾದ ಕೂಗುಸಿರು ರೋಗದ ಅದೇ ಮೊದಲ ಸೂಚನೆಯಾಗಿ ಬಹುಬೇಗ ಪ್ರಮಾದಕಾರಿ ಆಗಬಹುದಾದ್ದರಿಂದ ಶ್ವಾಸನಾಳಗಳನ್ನು ಛಿದ್ರಿಸಿ ಸುಲಭವಾಗಿ ಉಸಿರಾಡುವಂತೆ ಮಾಡಬೇಕಾಗುತ್ತದೆ. ಅತಿಯಾಗಿ ಕಿರುಚಾಡಿದಾಗ ಕರ್ಕಶಧ್ವನಿ ಬರುವಂತೆಯೇ ಹಾಡುಗಾರಿಕೆಯಲ್ಲೂ ಬರಬಹುದು. ಹಾಡುಗಾರರಲ್ಲಿ ಮತ್ತು ಅತಿಯಾಗಿ ಕಿರುಚಾಡಿದಾಗ ಕರ್ಕಶಧ್ವನಿ ಬರುವಂತೆಯೇ ಹಾಡುಗಾರಿಕೆಯಲ್ಲೂ ಬರಬಹುದು. ಹಾಡುಗಾರರಲ್ಲಿ ಮತ್ತು ಅತಿಯಾಗಿ ಧೂಮಪಾನಮಾಡುವವರಲ್ಲಿ ಗಂಟಲಿನ ಧ್ವನಿ ಸಂಪುಟದಲ್ಲಿ ಗಂಟುಕಟ್ಟಿಕೊಂಡು ಕರ್ಕಶಧ್ವನಿ ಉಂಟಾಗಬಹುದು. ಗಂಟಲಿನಲ್ಲಿ ಏಡಿಗಂತಿ ಕಾಣಿಸಿಕೊಂಡಾಗ ಕೂಡ ಕರ್ಕಶಧ್ವನಿ ಉಂಟಾಗುತ್ತದೆ. ಗಂಟಲಿನ ಏಡಿಗಂತಿ ವಿರಳವಾದರೂ ಹದಿನೈದು ದಿವಸಗಳು ಕಳೆದ ಬಳಿಕವೂ ಗಂಟಲಿನ ಕರ್ಕಶಧ್ವನಿ ನಿಲ್ಲದಿದ್ದರೆ ಅದು ಏಡಿಗಂತಿಯ ಪರಿಣಾಮವೇ ಇರಬೇಕು ಎಂದು ತಿಳಿದು ಪರೀಕ್ಷೆ ನಡೆಸುವುದು ಅಗತ್ಯ. ಗಂಟಲಿನ ಏಡಿಗಂತಿ ಪ್ರಾರಂಭದಲ್ಲಿ ನೋವುಂಟು ಮಾಡದೇ ಇರುವುದರಿಂದ ಬಹುಕಾಲಿಕ ಧ್ವನಿ ಕರ್ಕಶತೆಯನ್ನು ಉದಾಸೀನದಿಂದ ಕಾಣಬಹುದು. ಹಾಗೆ ಮಾಡದೆ ಶಸ್ತ್ರ ಕ್ರಿಯೆಯಿಂದ ಈ ಭಾಗದ ಚೂರೊಂದನ್ನು ತೆಗೆದು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದರೆ ಸ್ಥಿತಿಯ ಅರಿವು ಉಂಟಾಗುತ್ತದೆ. ಗಂಟಲಿನ ಏಡಿಗಂತಿ ವ್ಯಾಪಕವಾಗಿದ್ದರೆ, ಧ್ವನಿಸಂಪುಟವನ್ನು ಶಸ್ತ್ರ ಕಾರ್ಯದಿಂದ ತೆಗೆದುಹಾಕಿ ಚಿಕಿತ್ಸೆಮಾಡಲು ಪ್ರಯತ್ನಮಾಡುತ್ತಾರೆ ಹೀಗೆ ಮಾಡಿದ ಮೇಲೆ ಧ್ವನ್ಯುತ್ಪತ್ತಿಗೆ ಬೇರೆ ವಿಧಾನವನ್ನು ಅನುಸರಿಸಿ ಕಷ್ಟಪಟ್ಟು ಕಲಿಯಬೇಕಾಗುತ್ತದೆ. ಹೀಗೆ ಕಲಿತವರು ಕೆಲವರು ಚೆನ್ನಾಗಿಯೇ ಮಾತನಾಡಬಲ್ಲರೆಂದು ತಿಳಿದು ಬಂದಿದೆ.

(ಎಸ್.ಆರ್.ಆರ್.)

**ಗಂಟಲು :** ಮೂಗು, ಬಾಯಿ ಅಂಗಗಳ ಹಿಂದೆ ಇರುವ ಮತ್ತು ಆಹಾರ ಗಾಳಿ ಎರಡೂ ಹಾದು ಹೋಗುವ ನಾಳ (ಥ್ರೋಟ್). ಇದರ ಕೆಳಗೆ ಅನ್ನನಾಳ ಮತ್ತು ಉಸಿರುನಾಳದೊಳಕ್ಕೆ ಗಂಟಲು ತೆರೆದಿದೆ. ನುಂಗುವಾಗ ದ್ರವ ಅಥವಾ ಘನರೂಪದ ಆಹಾರ ಬಾಯಿಂದ ಮೊದಲು ಗಂಟಲನ್ನು ಸೇರುತ್ತದೆ. ಉಸಿರಿನ ಗಾಳಿಯೂ ಗಂಟಲ ಮೂಲಕ ಉಸಿರುನಾಳದೊಳಕ್ಕೆ ಹೋಗಿಬರುತ್ತದೆ. ಕಿವಿಗಂಟಲುನಾಳದ ಮೂಲಕ ಗಾಳಿ ಗಂಟಲಿನಿಂದ ನಡುಗಿವಿಯನ್ನು ಸೇರಿ ಹೊರಗಿವಿ (ಕುಹರ) ಮತ್ತು ನಡುಗಿವಿಯ ನಡವೆ




ಚಿತ್ರ 1 ತಲೆ, ಗಂಟಲುಗಳ ಅರ್ಧಸೀಳು ನೋಟ : 1. ನಾಲಗೆ, 2. ಗಟ್ಟಿ ಅಂಗುಳ, 3. ಕಿವಿ ಗಂಟಲು ನಾಳದ ರಂಧ್ರ, 4. ವ ಝಗಿನ ಗಂಟಲು, 5. ಬಾಯಿ ಗಂಟಲು, ಗ್ರಂಥಿಗಳು, 6. ಮೃದು ಅಂಗುಳದಲ್ಲಿಯ ಗ್ರಂಥಿಗಳು, 7. ಟಾನ್ಸಿಲ್, 8. ಎಪಿಗ್ಲಾಟಿಸ್

ಇರುವ ಕಿವಿದಮಟೆಯ ಹೊರ ಒಳಪಕ್ಕಗಳಲ್ಲಿ ಗಾಳಿಯ ಒತ್ತಡ ಸಮವಾಗಿರುವಂತೆ ಮಾಡುತ್ತದೆ.

**ರಚನೆ :** ಗಂಟಲು ಹಿಂದುಮುಂದೆ ಚಪ್ಪಟೆಯಾಗಿದೆ. ಇದರ ಉದ್ದ 5′′. ಮೂಗಿನ ಹಿಂದೆ ತಲೆಬುರುಡೆಯ ತಳದಲ್ಲಿ ಇದರ ಅಗಲ ಸು. 2′′. ಕೆಳಗೆ ಅನ್ನನಾಳವನ್ನು ಸೇರುವಲ್ಲಿ ಇದರ ಅಗಲ 1′′. ಗಂಟಲಿನ ಭಿತ್ತಿ ನಾರುಮಾಂಸ ಹಾಗೂ ಸ್ನಾಯುಗಳಿಂದ ಸುತ್ತಲಿನ ಮಾಂಸವಿಶೇಷಗಳಿಗೆ ಅಂಟಿಕೊಂಡಿದೆ. ಬಾಯಿ, ಮೂಗು, ಕಿವಿ ಗಂಟಲುನಾಳ, ಉಸಿರುನಾಳ ಮತ್ತು ಅನ್ನನಾಳಗಳಿಗೆ ಗಂಟಲು ಅಂಟಿಕೊಂಡಿದ್ದರೂ ತಲೆಬುರುಡೆಯ ತಳ, ಕೆಳದವಡೆ ಮೂಳೆ, ನಾಲಗೆ, ಹೈಯಾಯಿಡ್ ಮೂಳೆ ಮತ್ತು ಗೋಮಾಳೆಯ ಮೃದ್ವಸ್ಥಿಗಳಿಗೆ ಹೆಚ್ಚು ಗಟ್ಟಿಯಾಗಿ ಇದು ಅಂಟಿಕೊಂಡಿದೆ. ನುಂಗುವಾಗ ಗಂಟಲು ಅಕ್ಕಪಕ್ಕದ ಮಾಂಸ ವಿಶೇಷಗಳ ಮೇಲೆ ನುಣ್ಣಗೆ ಆಡುವಂತೆ ಭಿತ್ತಿಯ ಹೊರ ನಾರುಮಾಂಸ ಪದರ ಸಡಿಲವಾಗಿದೆ.

**ಗಂಟಲಿನ ಮುಖ್ಯ ಭಾಗಗಳು ಮೂರು :** ಬಾಯ ಗಂಟಲು, ಮೂಗಿನ ಗಂಟಲು ಮತ್ತು ಗೋಮಾಳೆಗಳುಂಟು. ಮೂಗಿನ ಗಂಟಲಲ್ಲಿ ಆಹಾರ ಹೋಗುವುದಿಲ್ಲ. ಗಾಳಿ ಮಾತ್ರ ಓಡಾಡುತ್ತದೆ. ಮಿಕ್ಕೆರಡರ ಮೂಲಕ ಗಾಳಿ, ಆಹಾರ ಎರಡೂ ಹೋಗುತ್ತವೆ. ಈ ಭಾಗಗಳ ಕೆಲವು ಮಿತಿಗಳನ್ನು ಅಗಲ ತೆರೆದ ಬಾಯಿಯಲ್ಲಿ ಕಾಣಬಹುದು. ಬಾಯಿಗೂ ಬಾಯ ಗಂಟಲಿಗೂ ನಡುವೆ ಇರುವ ರಂಧ್ರದಲ್ಲಿ ಕೆಲವು ವಿಶೇಷಗಳನ್ನು ಗುರುತು ಹಿಡಿಯಬಹುದು. ಈ ರಂಧ್ರದ ಎರಡು ಕಡೆಗಳಲ್ಲಿ ಅಂಗುಳದ ಟಾನ್ಸಿಲ್ ಕಾಣಬರುತ್ತದೆ. ಇದು ಎರಡು ಲೋಳೆಪೊರೆ ಮಡಿಕೆಗಳ ನಡುವೆ ಉಂಟು. ಮುಂದಿರುವುದು ನಾಲಗೆ ಅಂಗುಳದ ಮಡಿಕೆ. ಹಿಂದಿರುವುದು ಗಂಟಲು ಅಂಗುಳದ ಮಡಿಕೆ. ನಾಲಗೆಯ ಮುಂದಿನ 2/3 ಭಾಗಗಳು ಮತ್ತು ಬಾಯಿ ಹಿಂದಿನ 1/3 ಭಾಗ ಸೇರುವ ಸಂಧಿಯೂ ನಾಲಗೆ ಅಂಗುಳದ ಮಡಿಕೆಗಳೂ ಬಾಯಿ ಮತ್ತು ಬಾಯಿ ಗಂಟಲಿನ ನಡುವೆ ಎಲ್ಲೆಯನ್ನೂ ತೋರಿಸುತ್ತವೆ. ಮೇಲೆ ಗಟ್ಟಿ ಅಂಗುಳ ಬಾಯಿಯನ್ನು ಮೂಗಿನಿಂದ ಬೇರ್ಪಡಿಸುತ್ತದೆ. ಮೃದು ಅಂಗಳ ಬಾಯಿಯ ಮತ್ತುಮೂಗಿನ ಗಂಟಲುಗಳ ನಡುವೆ ಉಂಟು. ಮೃದು ಅಂಗುಳದ ಹಿಂದಿನ ಅಂಚಿನ ಮಧ್ಯದಲ್ಲಿ ಕಿರುನಾಲಗೆ ಕಾಣಿಸುತ್ತದೆ. ನಾಲಗೆಯ ಬುಡ ಉಬ್ಬಿರುವುದರಿಂದ ಇದರ ಹಿಂದಿರುವ ಬಾಯ ಗಂಟಲಿನ ಕೆಳಭಾಗ ಮತ್ತು ಗೋಮಾಳೆಗಂಟಲು ಕಾಣುವುದಿಲ್ಲ. ಕಾಣದಿರುವ ಈ ಭಾಗದಲ್ಲೇ ಬಾಯ ಗಂಟಲಿಗೂ ಗೋಮಾಳೆಗಂಟಲಿಗೂ ನಡುವೆ ದಿಕ್ಕು ತಿರುಗಿಸುವ ಹೆಡೆಯಂತಿರುವ ಎಪಿಗ್ಲಾಟಿಸ್ ಉಂಟು.

ಗಂಟಲುಭಿತ್ತಿಯ ಮುಖ್ಯಪದರುಗಳು ಒಳಗಿಂದ ಹೊರಕ್ಕೆ ಈ ರೀತಿ ಇವೆ : 1 ಕಣಗಳ ಪೊರೆ ಮತ್ತು ನಾರುಮಾಂಸ ಪೊರೆಯಿಂದಾದ ಲೋಳೆಪೊರೆ. ಇದರ ಹೊರಪದರ ಮೇಲೆ ಕೆಳಗೆ ಗಟ್ಟಿಯಾಗಿ ಅಂಟಿಕೊಂಡು ಗಂಟಲಿಗೆ ಆಧಾರವಾಗಿದೆ. 2 ಸ್ನಾಯುಪದರ. 3 ನಾರುಮಾಂಸ ಪದರ. ಗಂಟಲಸ್ನಾಯು ಪದರ ಇಚ್ಛೆಯ ಹತೋಟಿಯಲ್ಲಿದೆ. ನುಂಗುವ ಕಾರ್ಯದಲ್ಲಿ ಇದು ಮುಖ್ಯ ಪಾತ್ರವನ್ನು ವಹಿಸುತ್ತದೆ. ಲೋಳೆಪೊರೆಯಲ್ಲಿ ಹಲವು ಸಣ್ಣ ಜೊಲ್ಲು ಗ್ರಂಥಿಗಳಿವೆ.

ಟಾನ್ಸಿಲುಗಳ ಸ್ಥಾನ ಗಂಟಲು. ಕಿವಿಗಂಟಲುನಾಳದ ರಂಧ್ರದ ಹತ್ತಿರ ಒಂದು ಟಾನ್ಸಿಲ್ ಉಂಟು. ಮೂಗಿನ ಗಂಟಲಮಾಡಿನಲ್ಲಿ ಗಂಟಲ ಟಾನ್ಸಿಲ್ ಉಂಟು. ಹಲವು ವೇಳೆ ಮಕ್ಕಳಲ್ಲಿ ಇದು ಊದಿಕೊಂಡು ಉಸಿರಾಡಲು ಕಷ್ಟ ಕೊಡುತ್ತದೆ. ನಾಲಗೆಯ ಹಿಂದಿನ 1/3 ಭಾಗದಲ್ಲಿ ಇರುವ ನಾಲಗೆ ಟಾನ್ಸಿಲ್ ಬಾಯಗಂಟಲಲ್ಲಿದೆ. ಈ ಟಾನ್ಸಿಲುಗಳಲ್ಲಿ ಲೋಳೆ ಪೊರೆಯಲ್ಲಿ ಹುದುಗಿರುವ ದುಗ್ಧಮಾಂಸವಿಶೇಷಗಳು. ಇವುಗಳ ಹೆಚ್ಚು ಭಾಗ ಬಿಳಿರಕ್ತ ಕಣಗಳಲ್ಲಿ ಒಂದು ಬಗೆಯಾದ ಸಣ್ಣ ದುಗ್ಧಕಣಗಳಿಂದಾದುದು. ಸಾಧಾರಣವಾಗಿ ಈ ಮಾಂಸವಿಶೇಷಗಳು ಪ್ರಾಯ ಮೀರುತ್ತಿರುವಂತೆ ಕ್ಷೀಣಗೊಳ್ಳುತ್ತವೆ.

**ಹೋಲಿಕೆ ಅಂಗರಚನೆ :** ಸ್ಥೂಲವಾಗಿ ಹೇಳುವುದಾದರೆ ಬಾಯಿಯ ಅನಂತರ ಇರುವ ಆಹಾರನಾಳದ ಭಾಗವೇ ಗಂಟಲು. ಅಕಶೇರುಕಗಳು ತಮ್ಮ ರಚನೆಯಲ್ಲಿ ವಿವಿಧ ಮಟ್ಟಗಳನ್ನು ಮುಟ್ಟಿವೆ. ಸರಳ ರಚನೆಯ ಪ್ರಾಣಿಗಳಲ್ಲಿ ಜಟಿಲ ರಚನೆಯ ಪ್ರಾಣಿಗಳಲ್ಲಿರುವ ಆಹಾರ ನಾಳಕ್ಕೆ ಸಮವಾದ ಆಹಾರ ನಾಳವಿಲ್ಲದಿರುವುದರಿಂದ ಅಂಗಗಳ ರಚನೆಯೂ ಸರಳವಾಗಿದ್ದು ಗಂಟಲೇ ಇರುವುದಿಲ್ಲ. ಆಹಾರನಾಳವಿರುವ ಕೆಲವು ಅಕಶೇರುಕಗಳಲ್ಲಿ ಬಾಯಿ ಮತ್ತು ಜಠರಕೋಶದ ನಡುವೆ ಗಂಟಲಿಲ್ಲ. ಗಂಟಲಿರುವ ಅಕಶೇರುಕಗಳಲ್ಲಿ ಗಂಟಲಿನ ರಚನೆ ಮತ್ತು ಕ್ರಿಯೆಗಳಲ್ಲಿ ವೈವಿಧ್ಯ ಉಂಟು. ಉದಾಹರಣೆಗಳು : (1) ಜಿಗಣೆಗಳಲ್ಲಿ ಗಂಟಲಿನ ಭಿತ್ತಿಯಲ್ಲಿ ಬಲವಾದ ಸ್ನಾಯು ಉಂಟು. ಇದು ಜಿಗಣೆಗೆ ತಾನು ಕಡಿದ ಪ್ರಾಣಿಯ ರಕ್ತವನ್ನು ಹೀರಲು ಸಹಾಯಕಾರಿ. (2) ಕೆಲವು ಸಮುದ್ರಹುಳುಗಳಲ್ಲಿ ಬಾಯಿ ಮತ್ತು ಗಂಟಲಿನ ಭಿತ್ತಿಗಳು ಆಚೆಗೆ ಒಳಹೊರಮುಖವಾಗಿ ಮಡಿಚಿಕೊಂಡು ಆಹಾರವನ್ನು ಕಬಳಿಸಲು ಚಾಚುವಂತಿವೆ. ಕಬಳಿಸುವುದಕ್ಕೆ ಸಹಾಯ ಮಾಡಲು ಗಂಟಲಿನ ಒಳಮೈ ಮೇಲೆ ಗುಳ್ಳೆಗಳು ಅಥವಾ ಕೊಂಬಿನ ಹಲ್ಲುಗಳಿರಬಹುದು.

ಅಕಶೇರುಕಗಳ ಗಂಟಲು ಕಶೇರುಕಗಳ ಗಂಟಲಿಗೆ ನಿಜವಾಗಿ ಸರಿಸಮವಲ್ಲ ಅವುಗಳ ಹೋಲಿಕೆ ಆಹಾರನಾಳಗಳಲ್ಲಿರುವ ಸ್ಥಾನಗಳಿಂದ ಮಾತ್ರ. ಹುಳುಗಳ ರೆಕ್ಕೆಗಳು ಹಕ್ಕಿಗಳ ರೆಕ್ಕೆಗಳಂತೆ ಹಾರಲು ಉಪಯೋಗವಾದರೂ ಅವುಗಳ ರಚನೆಯಲ್ಲಿ ವ್ಯತ್ಯಾಸ ಇರುವಂತೆ ಹುಳುಗಳ ರೆಕ್ಕೆಗಳಲ್ಲಿ ಮಾಂಸಮೂಳೆಗಳಿಲ್ಲ. ಬೆನ್ನು ಮೂಳೆಯಿರುವ ಮತ್ತು ಬೆನ್ನು ಹುರಿ(ನೋಟೊಕಾರ್ಡ್) ಮಾತ್ರ ಇರುವ ಪ್ರಾಣಿಗಳಲ್ಲೆಲ್ಲ ಗಂಟಲಿನ ಉತ್ಪತ್ತಿ ಮತ್ತು ರಚನೆಗಳು ಒಂದೇ ರೀತಿಯವಾಗಿರುವುದರಿಂದ ಇವುಗಳ ಗಂಟಲುಗಳು ಸರಿಸಮ.

ಕಶೇರುಕಗಳ ವಿವಿಧ ವರ್ಗಗಳಲ್ಲಿ ಗಂಟಲಿನ ರಚನೆ ಭಿನ್ನವಾಗಿದೆ. ಗಾಳಿಯಲ್ಲಿ ಉಸಿರಾಡುವ, ಅಂದರೆ ಫುಪ್ಪುಸಗಳಿರುವ ಪ್ರಾಣಿಗಳಲ್ಲಿ (ಸ್ತನಿ, ಹಕ್ಕಿ, ಸರೀಸೃಪ ಮತ್ತು ಕಪ್ಪೆಯಂಥ ಹಲವು ಸ್ಥಳಜಲಚರ) ಗಂಟಲಿನ ರಚನೆ ಮನುಷ್ಯನ ಗಂಟಲ ರಚನೆಯಂತೆಯೇ ಇದೆ. ಕಿವಿರುಗಳಿಂದ ನೀರಿನಲ್ಲಿ ಉಸಿರಾಡುವ ಪ್ರಾಣಿಗಳ (ಮೀನು) ಗಂಟಲಿನ ರಚನೆ ಬೆನ್ನುಹುರಿ ಪ್ರಾಣಿಗಳ ಮೂಲರಚನೆಯಂತಿದೆ. ಗಂಟಲಿನಲ್ಲಿ ಕಿವಿರುಗಳಿರುವುದು ಆದಿಮ




ಚಿತ್ರ 2 ತೆರೆದ ಬಾಯಿಯ ಒಳನೋಟ 1. ಕಿರುನಾಲಗೆ, 2. ಓಣಿ, 3. ಟಾನ್ಸಿಲ್, 4. ಬಾಯಿಗಂಟಲು, 5. ನಾಲಗೆ

ಸ್ಥಿತಿ. ಮೀನಿನಲ್ಲಿ ಮತ್ತು ಕೆಲವು ಬಾಲವಿರುವ ಸ್ಥಳಜಲಚರಗಳಲ್ಲಿ ಜೀವನದುದ್ದಕ್ಕೂ ಕಿವಿರುಗಳಿರುತ್ತವೆ. ಸ್ಥಳ ಜಲಚರಗಳ ಮರಿಗಳು ಪ್ರೌಢಾವಸ್ಥೆಯಲ್ಲಿರುವ ಸೆಕ್ಯೂರಸ್ ಇತ್ಯಾದಿ ಪ್ರಾಣಿಗಳಲ್ಲಿ ಕಿವಿರುಗಳು ಕುಚ್ಚುಗಳಂತಿರುವ ಹೊರ ಅವಯವಗಳು. ಮೀನುಗಳಲ್ಲಿ ಸರ್ವೇಸಾಮಾನ್ಯವಾಗಿ ಕಿವಿರುಗಳು ಗಂಟಲಭಿತ್ತಿಯಲ್ಲೇ ಇರುವ ಒಳಅಂಗಗಳು. ಉದಾಹರಣೆಗೆ ಶಾರ್ಕ್‌ಮೀನಿನ ಕತ್ತಿನ ಭಾಗದ ಇಕ್ಕೆಲಗಳಲ್ಲಿ ಸಾಧಾರಣವಾಗಿ 5 ಕಿವಿರುಬಿರುಕುಗಳಿವೆ; ಇವಲ್ಲದೆ ಮುಂದುಗಡೆ ಸ್ಪೈರಕಲ್ ಎಂಬ ರಂಧ್ರವಿದೆ. ಬಿರುಕುಗಳು ಗಂಟಲಿಗೂ ಆಚೆಯ ನೀರಿಗೂ ನಡುವೆ ಇರುವ ಮಾರ್ಗಗಳು. ಈ ಬಿರುಕುಗಳಲ್ಲಿರುವ ಕಿವಿರುಗಳಿಗೆ ನೀರಿನ ಸ್ನಾನವಾಗುತ್ತಿದ್ದಂತೆ ಅವು ನೀರಿನಲ್ಲಿ ಕರಗಿರುವ ಆಕ್ಸಿಜನ್ನನ್ನು ಹೀರುತ್ತವೆ. ಮೂಳೆ ಮೀನುಗಳಲ್ಲಿ ಬಲ ಎಡ ಕಿವಿರುಗಳ ಮುಚ್ಚಳಗಳಿವೆ. ಇದರಿಂದ ಆಚೆ ಕಾಣುವಂತೆ ಒಂದೇ ಬಿರುಕಿದೆ. ಮೇಲಿನ ಎಲ್ಲ ಉದಾಹರಣೆಗಳಲ್ಲಿಯೂ ಕಿವಿರುಗಳು ಉಸಿರಾಟದ ಅಂಗಗಳು ; ಅವುಗಳಲ್ಲಿರುವ ಸೂಕ್ಷ್ಮರಕ್ತನಾಳಗಳ ಕುಚ್ಚುಗಳಲ್ಲಿರುವ ಇಂಗಾಲದ ಡೈ ಆಕ್ಸೈಡ್ ನೀರನ್ನು ಸೇರಿ ಆಕ್ಸಿಜನ್ ರಕ್ತವನ್ನು ಸೇರುತ್ತದೆ. ಈ ಕ್ರಿಯೆ ಫುಪ್ಪುಸಗಳಲ್ಲಿ ಗಾಳಿಗೂ ರಕ್ತಕ್ಕೂ ನಡುವೆ ನಡೆಯುವ ಅನಿಲ ವಿನಿಮಯದಂತಿದೆ. ಗಾಳಿಯಲ್ಲಿ ಉಸಿರಾಡುವ ಬೆನ್ನುಮೂಳೆ ಪ್ರಾಣಿಗಳ ಭ್ರೂಣಾವಸ್ಥೆಯಲ್ಲಿ ಮೀನಿನಲ್ಲಿರುವಂತೆ ಕಿವಿರುಗಳಿರುವ ಗಂಟಲಿನ ಆದಿರೂಪ ಕಾಣಿಸಿಕೊಳ್ಳುತ್ತದೆ. ಆದರೆ ಕಿವಿರುಗಳು ಬೆಳೆಯುವುದಿಲ್ಲ. ಬೆಳವಣಿಗೆಯ ಹಲವು ಘಟ್ಟಗಳು ಕಾಣಿಸಿಕೊಳ್ಳುವುದಿಲ್ಲ. ಉದಾಹರಣೆಗೆ ಕಿವಿರು ಬಿರುಕುಗಳಾಗುವುದಿಲ್ಲ. ಮನುಷ್ಯನಲ್ಲಿ ಅಪರೂಪ ವಿಚಿತ್ರವಾಗಿ ಒಂದು ಹೆಚ್ಚು ಕಿವಿರು ಬಿರುಕುಗಳು ರೂಪಗೊಳ್ಳಬಹುದು. ಇವು ಗಂಟಲಿನೊಳಕ್ಕೆ ತೆರೆಯುಬಹುದು ಅಥವಾ ತೆರೆಯದಿರಬಹುದು.

ಸ್ತನಿಗಳಲ್ಲಿ ಬಾಯಿಮೂಗುಗಳ ನಡುವೆ ಅಂಗುಳವಿರುವುದರಿಂದ ಅಗಿಯುವ ಕಾರ್ಯ ಸಾಧ್ಯವಿದೆ. ಇತರ ಕಶೇರುಕಗಳಲ್ಲಿ ಅಂಗುಳವಿಲ್ಲದೆ ಮೂಗುಬಾಯಿ ಒಂದೇ

ಆಗಿರುವುದರಿಂದ ಅಗಿಯುವ ಸಾಧ್ಯತೆಯಿಲ್ಲ. ಉದಾಹರಣೆಗೆ ಹಾವು ಹಕ್ಕಿಗಳು ಆಹಾರವನ್ನು ಅಗಿಯುವಾಗ ಉಸಿರಾಡಬಲ್ಲವು; ನುಂಗುವಾಗ ಮೃದು ಅಂಗುಳ ಮೂಗಿನ ಗಂಟಲನ್ನು ಬಾಯಿ ಗಂಟಲಿಂದ ಬೇರ್ಪಡಿಸುವುದರಿಂದ ಆಹಾರ ಮೂಗಿನೊಳಕ್ಕೆ ನುಗ್ಗುವುದಿಲ್ಲ. (ಎಂ.ಡಿ.)

**ಗಂಟಲು ಕಟ್ಟುವಿಕೆ, ಪ್ರಾಣಿಗಳಲ್ಲಿ :** ಪ್ರಾಣಿಗಳು ಆಹಾರವನ್ನು ಸೇವಿಸುವಾಗ ಆಕಸ್ಮಿಕವಾಗಿ ಅನ್ನನಾಳದಲ್ಲಿ ಆಹಾರಪದಾರ್ಥ ಸಿಕ್ಕಿಹಾಕಿಕೊಳ್ಳುವುದು. ಇದರಿಂದ ಅನ್ನನಾಳದ ಒಳ ಆವರಣ ಮುಚ್ಚಿಹೋಗುತ್ತದೆ. ಸಾಮಾನ್ಯವಾಗಿ ಎಲ್ಲ ಪ್ರಾಣಿಗಳಲ್ಲಿ ಈ ಬವಣೆ ಕಾಣಬರುವುದು. ಕುದುರೆ, ಹಸು, ನಾಯಿ ಮುಂತಾದ ಪ್ರಾಣಿಗಳು ಬಹು ಬೇಗನೆ ಈ ಅಪಾಯಕ್ಕೆ ಒಳಗಾಗುತ್ತವೆ. ಆಹಾರ ಅನ್ನನಾಳದಲ್ಲಿ ನಿಲ್ಲಲು ಅನೇಕ ಕಾರಣಗಳುಂಟು. ಅವು ಪ್ರಾಣಿಗಳ ಆಹಾರ, ಆಹಾರಕ್ರಮ ಮುಂತಾದವುಗಳ ಮೇಲೆ ಅವಲಂಬಿತವಾಗಿವೆ.

ಕುದುರೆ: ಸಾಕುಪ್ರಾಣಿಗಳಲ್ಲೆಲ್ಲ ಕುದುರೆ ಈ ಬೇನೆಗೆ ಬಹಳ ಬೇಗ ಒಳಗಾಗುವುದು. ತನಗೆ ಇಷ್ಟವಾದ ಆಹಾರ ಸಿಕ್ಕಿದಾಗ ಕುದುರೆ ಅದನ್ನು ಗಬಗಬನೆ ತಿನ್ನುವುದು. ಹೀಗೆ ಅವಸರವಾಗಿ ತಿನ್ನುವಾಗ ಆಹಾರದ ತುತ್ತು ಉಂಡೆಯಾಗಿ ಅನ್ನನಾಳದಲ್ಲಿ ಅಡಚಿಕೊಳ್ಳುವುದುಂಟು. ಆಗ ಆಹಾರ ಮುಂದೆ ಹೋಗದಂತೆ ನಿಲ್ಲುತ್ತದೆ. ಇದರಿಂದ ಅನ್ನನಾಳ ಬಂಧಿತವಾಗುವುದು. ಕುದುರೆ ಮರಿಗಳಲ್ಲಿ ಔಷಧಿಯ ದೊಡ್ಡ ಗುಳಿಗೆಗಳನ್ನು ಕೊಟ್ಟಾಗಲೂ ಈ ಪರಿಸ್ಥಿತಿ ಉಂಟಾಗುವುದು. ಒಮ್ಮೊಮ್ಮೆ ಅನ್ನನಾಳದಲ್ಲಿ ಉರಿಯೂತವಿದ್ದು ಅದರಿಂದ ಅನ್ನನಾಳ ತನ್ನ ಸ್ವಾಭಾವಿಕ ಕ್ರಿಯೆಯನ್ನು ಮಾಡಲು ಅಸಮರ್ಥವಾಗುವುದು. ಅಂಥ ವೇಳೆಯಲ್ಲಿ ಈ ಗಂಟಲು ಬೇನೆ ಕಾಣಿಸಿಕೊಳ್ಳುವುದುಂಟು. ಗಂಟಲು ಕಟ್ಟಿದಾಗ ಕುದುರೆ ಆಹಾರ ತಿನ್ನುವುದನ್ನು ನಿಲ್ಲಿಸಿ ಕುತೂಹಲ ದೃಷ್ಟಿಯಿಂದ ಕಿವಿಗಳನ್ನು ಹಿಂದಕ್ಕೆ ಮುಂದಕ್ಕೆ ಅಲ್ಲಾಡಿಸುತ್ತ ಇರುವುದು. ನುಂಗಲು ಹವಣಿಸಿ ಅದು ಸಾಧ್ಯವಾಗದೆ ನರಳುವುದು. ಜೊಲ್ಲು ವಿಪರೀತವಾಗುವುದು. ಬಾಯಿಯಲ್ಲಿ ಉಳಿದಿರುವ ಅರ್ಧಂಬರ್ಧ ಆಹಾರ ಹಾಗೂ ಜೊಲ್ಲುಮೂಗಿನ ಮೂಲಕ ಹೊರಬರುವುದು. ಉಸಿರುಕಟ್ಟಿದಂತಾಗಿ ಕೆಮ್ಮುವುದು. ನುಲಿತದ ಇತರ ಲಕ್ಷಣಗಳನ್ನು ತೋರಿಸುವುದು. ಕುದುರೆ ಮರಿಯಲ್ಲಿ ಬಾಯಿಯ ಮೂಲಕ ಕುಡಿದ ಹಾಲು ಮೂಗಿನ ಮೂಲಕ ಹೊರಬರುವುದು. ಕಾಳುಗಳಿಂದ ಹಾಗೂ ಮೆದು ಆಹಾರ ಪದಾರ್ಥದಿಂದ ಅನ್ನನಾಳ ಬಂಧಿತವಾಗಿದ್ದರೆ ಬಾಯಿಯಲ್ಲಿ ಉತ್ಪತ್ತಿಯಾಗುವ ಲಾಲಾರಸದಿಂದ ಮುಂದೆ ಅಡಚಿದ ಆಹಾರವಸ್ತು ಕರಗಿ ಹೋಗುವುದು. ಈ ಅಡಚಣೆ ಕೆಲವು ಗಂಟೆಗಳೊಳಗಾಗಿ ಅಥವಾ ಒಂದೆರಡು ದಿವಸಗಳೊಳಗಾಗಿ ನಿವಾರಣೆಯಾಗುವುದು. ಉಸಿರಾಡುವಾಗ ಆಹಾರವಸ್ತುವಿನ ಕಣಗಳು ಘುಪ್ಪುಸಗಳನ್ನು ಸೇರುವುದರಿಂದ ನ್ಯೂಮೋನಿಯ ಬೇನೆ ಬರಬಹುದು. ಇಷ್ಟೆಲ್ಲ ಆದರೂ ಜೀವಭಯವಿರುವುದಿಲ್ಲ. ಕುದುರೆಗೆ ಹೆಚ್ಚಾಗಿ ನೀರು ಕುಡಿಯಲು ಬಿಡಬೇಕು. ಮುಂದೆ ಆಹಾರ ತಿನ್ನಲು ಬಿಡಬಾರದು. ವೇದನಾ ನಿವಾರಕಗಳನ್ನು ಕೊಡಬಹುದು.

**ಹಸು:** ಹಸುಗಳಲ್ಲಿ ಸಹ ಕುದುರೆಯಲ್ಲಿ ಆಗುವ ರೀತಿಯಲ್ಲಿ ಗಂಟಲು ಕಟ್ಟುವುದುಂಟು. ಕುದುರೆಗಳಂತೆಯೇ ಹಸುಗಳು ಕೂಡ ತಮಗೆ ಬೇಕಾದ ಆಹಾರ ಸಿಕ್ಕಿದರೆ ಗಬಗಬನೆ ತಿನ್ನುತ್ತವೆ. ಹೀಗಾಗಿ ಗಂಟಲು ಕಟ್ಟುತ್ತದೆ. ಆಲೂಗಡ್ಡೆ, ಜೋಳದ ದಿಂಡು, ಗೆಡ್ಡೆಗಳು, ಹಲಸು ಹಣ್ಣಿನ ಸೆವಾಲೆ, ಈರುಳ್ಳಿ, ಕೋಸು, ಮಾವಿನ ಓಟೆ, ತಾಟಿನುಂಗಿನ ಕಾಯಿ ಹಾಗೂ ಅಡುಗೆ ಮನೆಯಿಂದ ಹೊರಗೆ ಹಾಕಿದ ತರಕಾರಿ ಚೂರುಗಳು, ಕೆಟ್ಟುಹೋದ ತರಕಾರಿಗಳು, ಬೀದಿಯ ಬದಿಯಲ್ಲಿ ಸಿಗುವ ಇತರ ವಸ್ತುಗಳು ಇತ್ಯಾದಿ ಅನೇಕ ಪದಾರ್ಥಗಳನ್ನು ಹಸುಗಳು ತಿನ್ನುವುದರಿಂದ ಈ ಬೇನೆ ಉಂಟಾಗುವುದು. ಅನ್ನನಾಳಕ್ಕಿಂತ ದೊಡ್ಡದಾದ ಆಹಾರ ವಸ್ತುಗಳು ಬೇನೆ ಬರಲು ಪ್ರಮುಖ ಕಾರಣ. ಗಂಟಲು ಕಟ್ಟಿದ ಸ್ಥಿತಿಯಲ್ಲಿ ಕುದುರೆಯಲ್ಲಿ ಕಾಣಬರುವ ರೋಗಲಕ್ಷಣಗಳೇ ಹಸುವಿನಲ್ಲೆ ಕಾಣಬರುವುದು. ಅಲ್ಲದೆ ಹಸುಗಳಿಗೆ ಹೊಟ್ಟೆ ಉಬ್ಬುತ್ತದೆ. ಚಿಕಿತ್ಸೆಯ ಮೊದಲ ಹಂತವಾಗಿ ಈ ಹೊಟ್ಟೆ ಯೂತವನ್ನು ಇಳಿಸಬೇಕು. ಅನ್ನನಾಳದಲ್ಲಿ ಸಿಕ್ಕಿಹಾಕಿಕೊಂಡಿರುವ ಆಹಾರವನ್ನು ಹಾಗೆಯೇ ಮೇಲಕ್ಕೆ ಬರುವಂತೆ ನಿಧಾನವಾಗಿ ಮೇಲೆ ನೀವಿ ಅಡಚಿಕೊಂಡಿದ್ದ ಆಹಾರ ಬಾಯಿಗೆ ಬಂದ ಒಡನೆ ಹೊರಗೆ ತೆಗೆಯಬೇಕು. ಗಂಟಲಿನ ಮೂಲಕ ನಿಧಾನವಾಗಿ ಗಂಟಲನಳಿಕೆಯನ್ನು ಒಳಹೊಗಿಸಿ ಅಡಚಿರುವ ಆಹಾರವನ್ನು ನೂಕಬೇಕು. ಇದರಿಂದ ಕಟ್ಟಿಕೊಂಡಿದ್ದ ಅನ್ನನಾಳ ಸರಿಹೋಗುವುದು.

ಇತರ ಪ್ರಾಣಿಗಳಲ್ಲಿಯೂ ಇದೇ ರೀತಿಯ ಬೇನೆ ಕಂಡುಬರುವುದು. ನಾಯಿಗಳಲ್ಲಿ ಮೂಳೆ ತಿನ್ನುವುದರಿಂದ, ರಬ್ಬರ್‌ಚೆಂಡನ್ನು ನುಂಗುವುದರಿಂದ ಹಾಗೂ ಇತರ ಪದಾರ್ಥಗಳಿಂದ ಗಂಟಲು ಕಟ್ಟುವಿಕೆ ತೋರಿಬರುವುದು. (ಜಿ.ಆರ್.ಆರ್.ಎಸ್.)

**ಗಂಟಲುಬೇನೆ :** ದನ, ಎಮ್ಮೆ, ಕುರಿ ಮತ್ತು ಆಡು ಜಾತಿಗಳಿಗೆ ತಗಲುವ ಅತಿ ತೀವ್ರವಾದ ಅಂಟುರೋಗ. ಗಳಲೆರೋಗ ಎಂದು ಕೂಡ ಕರೆಯುವುದುಂಟು. ಈ ರೋಗದಲ್ಲಿ ಚರ್ಮದ ಕೆಳಗೆ ಬಾವು ಬರಬಹುದು; ಸಣ್ಣ ಕರುಳುಗಳ ನೋವು ತಲೆದೋರಬಹುದು; ಇಲ್ಲವೇ ಘುಪ್ಪುಸಭಾಗಗಳು ಕೆಟ್ಟು ನ್ಯೂಮೋನಿಯ ಬರಬಹುದು. 1838ರಲ್ಲಿ ಯುರೋಪ್ ಖಂಡದಲ್ಲಿ ಬೋಲಿಂಗ್‌ರ್ ಎಂಬ ವಿಜ್ಞಾನಿ ಈ ರೋಗವನ್ನು ಮೊದಲು ಕಂಡುಹಿಡಿದ. 1885ರಲ್ಲಿ ಕೆಟ್ ಎಂಬ ವಿಜ್ಞಾನಿ ಈ ರೋಗಕ್ಕೆ ಮೂಲಕಾರಣವಾದ ಕ್ರಿಮಿಯನ್ನು ಕಂಡುಹಿಡಿದ. ಅಂದಿನಿಂದ ಭಾರತದಲ್ಲಿಯೂ ಪ್ರಪಂಚದ ಇತರ ಎಲ್ಲದೇಶಗಳಲ್ಲಿ ಈ ರೋಗವನ್ನು ಗುರುತಿಸಲಾಗಿದೆ. ಭಾರತದಲ್ಲಿ ಪ್ರತಿವರ್ಷ 33,000ಕ್ಕಿಂತಲೂ ಹೆಚ್ಚು ದನ ಮತ್ತು ಎಮ್ಮೆಗಳು ಈ ರೋಗದಿಂದ ಸಾಯುತ್ತವೆ.

**ರೋಗಮೂಲ ವಿಜ್ಞಾನ :** ಈ ರೋಗಕ್ಕೆ ಮೂಲಕಾರಣ ಪಾಶ್ಚುರೆಲ್ಲ ಸೆಪ್ಟಿಕ ಎಂಬ ಹೆಸರಿನ ಸೂಕ್ಷ್ಮಕ್ರಿಮಿ. ಇದು ದೇಹದ ಹೊರಗೆ ಭೂಮಿಯ ಮಣ್ಣಿನಲ್ಲಿ ಅಲ್ಲದೆ ಜೌಗುಪ್ರದೇಶದಲ್ಲಿ ಹೆಚ್ಚಾಗಿ ಇರುತ್ತದೆ. ಸಾಮಾನ್ಯವಾಗಿ ಇದು ಆರೋಗ್ಯವಾದ ಪ್ರಾಣಿಗಳ ಊರ್ಧ್ವಶ್ವಾಸನಾಳಗಳಲ್ಲಿಯೇ ಇದ್ದು ಪ್ರಾಣಿಗಳ ಶಕ್ತಿ ಕುಂದಿದಾಗ ಮೇಲ್ಗೈ ಹೊಂದಲು ಅವಕಾಶವಾಗುತ್ತದೆ. ಶರೀರದಲ್ಲಿ ಈ ಕ್ರಿಮಿ ರೋಗದಿಂದ ಬಳಲುವ ಪ್ರಾಣಿಯ ಎಲ್ಲ ಅವಯವಗಳಲ್ಲಿ ಅದರಲ್ಲಿಯೂ ರಕ್ತ ಮತ್ತು ಬಾವು ಬಂದ ಜಾಗಗಳಲ್ಲಿ ಕಂಡುಬರುತ್ತದೆ. ಇದನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಗುರುತಿಸಬಹುದು.

**ರೋಗಲಕ್ಷಣಗಳು :** ಗಂಟಲುಬೇನೆ ಅತಿ ತೀಕ್ಷ್ಣವಾಗಿದ್ದು ರಕ್ತದಲ್ಲಿ ಕ್ರಿಮಿಬೇಗನೆ ಪಸರಿಸಿ ಕೂಡಲೇ ರೋಗದ ಲಕ್ಷಣಗಳು ಕಂಡುಬರುತ್ತವೆ. ಜ್ವರ $106^0$ ಫ್ಯಾ. $107^0$ ಫ್ಯಾ. ಇರುವುದು. ನಾಲಗೆ ಬಾಯಿಯಿಂದ ಹೊರಗೆ ಚಾಚಿರುತ್ತದೆ. ವಿಪರೀತ ಜೊಲ್ಲುಸೋರುವುದು. ಕಣ್ಣು ಕೆಂಪಾಗುವುದು. ಪ್ರಾಣಿ ಅತೀವ ಇಳಿಮುಖವಾಗಿದ್ದು 34 ಗಂಟೆಗಳಲ್ಲಿ ಮರಣ ಹೊಂದಬಹುದು. ಕೆಲವು ಸಮಯ ಗಂಟಲು, ಗಂದೆಗಳು, ಎದೆ ಈ ಜಾಗಗಳಲ್ಲಿ ಅತೀವ ನೋವಾದ ಬಾವುಗಳು ಕಂಡುಬರುತ್ತವೆ. ಉಸಿರಾಡಲು ತೊಂದರೆಯಾಗುತ್ತದೆ. ಬೇನೆಯ ಕೆಲವು ದಿವಸಗಳು ಕಳೆಯುವಾಗ ನ್ಯೂಮೋನಿಯ ತಲೆದೊರಬಹುದು. ಇಲ್ಲವೇ ಕರುಳಿನಲ್ಲಿ ಬದಲಾವಣೆಗಳು ಕಂಡುಬರಹುದು. ಮರಣಾನಂತರ ಪ್ರಾಣಿಗಳ ದೇಹವನ್ನು ತೆಗೆದು ಪರೀಕ್ಷೆ ಮಾಡಿದರೆ ರೋಗ ಅತಿ ತೀಕ್ಷ್ಣವಾಗಿದ್ದರೆ ದೇಹದ ಎಲ್ಲ ಭಾಗಗಳಲ್ಲಿ ರಾಗಿಯಷ್ಟು ಗಾತ್ರದ ರಕ್ತ ಗಂಟುಗಳು ಕಂಡುಬರುತ್ತವೆ. ರಸಗ್ರಂಥಿಗಳು ಕೆಂಪಾಗಿ ಉಬ್ಬಿರುತ್ತವೆ. ಈ ಬೇನೆ ಎದೆಗೆ ಪಸರಿಸಿದಾಗ ಎದೆಗೂಡಿನಲ್ಲಿ ದೇಹದ ರಸ ಅಥವಾ ಮಂದವಾದ ರಸ ತುಂಬಿಕೊಂಡಿದ್ದು ಎದೆಗೂಡಿನ ಪದರು ಕೆಂಪಾಗಿರುತ್ತದೆ. ಘುಪ್ಪುಸಗಳು ಬಾತಿದ್ದು ಅಲ್ಲಲ್ಲಿ ಕೆಂಪು ಅಥವಾ ಕಪ್ಪುಬಣ್ಣದ ಬದಲಾವಣೆಗಳನ್ನು ತೋರಿಸುತ್ತವೆ. ಇಂಥ ಘುಪ್ಪುಸ ಒಂದನ್ನು ಕತ್ತರಿಸಿದರೆ ಅದರಲ್ಲಿ ದಪ್ಪವಾದ ಬಿಳಿಗೆರೆಗಳನ್ನು ಕಂಡುಬರುತ್ತವೆ.

**ಚಿಕಿತ್ಸೆ :** ಗಂಟಲು ಬೇನೆ ಬಂದಿರುವ ಎಲ್ಲ ಪ್ರಾಣಿಗಳನ್ನು ಬೇರ್ಪಡಿಸಿ ಉಳಿದವುಗಳಿಂದ ದೂರವಿಡಬೇಕು. ಅವನ್ನು ಬೆಚ್ಚಗಿರುವ ಜಾಗದಲ್ಲಿ ಕಟ್ಟಿ ಒಳ್ಳೆಯ ಆಹಾರವನ್ನು ಕೊಡಬೇಕು. ಈ ರೋಗಕ್ಕೆ ಬಗೆ ಬಗೆಯ ಸಲ್ಫನಾಮೈಡ್ ಔಷಧಿಗಳ ಗುಣ ಕೊಡುತ್ತವೆ. ಸಮರ್ಥ ವೈದ್ಯರ ನೆರವನ್ನು ಒಡನೆ ಪಡೆಯುವುದು ಕ್ಷೇಮ. ಆಗಿಂದಾಗ್ಗೆ ರೋಗ ಕಾಣಬರುವ ಪ್ರದೇಶಗಳಲ್ಲಿ ಮುಂಗಾರು ಮತ್ತು ಹಿಂಗಾರು ಮಳೆಯ ಆರಂಭದಲ್ಲಿ ವಿಶೇಷವಾಗಿ ಈ ರೋಗ ಬರುತ್ತದೆ. ಇದು ಒಮ್ಮೆಲೆ ತೀಕ್ಷ್ಣವಾಗಿ ಉಲ್ಬಣ ಸ್ಥಿತಿಯುಂಟಾಗುತ್ತದೆ. ಆದ್ದರಿಂದ ಚಿಕಿತ್ಸಾ ಕ್ರಮ ಕೈಗೊಳ್ಳವಷ್ಟು ಅವಕಾಶ ಸಿಗುವುದು ಕೂಡ ಕಷ್ಟವಾಗುತ್ತದೆ. ರೋಗ ದೊಡ್ಡ ಗಾತ್ರದಲ್ಲಿ ಹಬ್ಬಿದರೆ ಪ್ರತಿಯೊಂದು ಪ್ರಾಣಿಯನ್ನೂ ಉಪಚರಿಸುವುದು ಕಠಿಣವಾಗುತ್ತದೆ. ಇಂಥ ಪ್ರಸಂಗದಲ್ಲಿ ಒಂದೇ ಪ್ರತಿಬಂಧಕ ಮಾರ್ಗವೆಂದರೆ ಪ್ರತಿವರ್ಷ ಈ ಪ್ರದೇಶಗಳಲ್ಲಿ ಚುಚ್ಚುಮದ್ದನ್ನು ಎಲ್ಲ ದನಗಳಿಗೆ ಹಾಕಿಸುವುದು. ಈ ಚುಚ್ಚುಮದ್ದು ರೋಗವನ್ನು ಹತೋಟಿಗೆ ತರಲು ಬಹಳ ಉಪಕಾರಿಯಾಗಿದೆ. ಚುಚ್ಚುಮದ್ದಿನಿಂದ ಉಪಚರಿಸಿದ ಪ್ರಾಣಿಗಳು ಕನಿಷ್ಠ 10 ತಿಂಗಳವರೆಗೆ ಗಂಟಲುಬೇನೆಯಿಂದ ಮುಕ್ತವಾಗಿರುತ್ತವೆ. (ಆರ್.ಎಫ್.ಪಿ.)

**ಗಂಟು :** ಭಾರವಾದ ಪದಾರ್ಥಗಳನ್ನು ಎಳೆಯಲು, ಎತ್ತಲು, ಎರಡು ಪದಾರ್ಥಗಳನ್ನು ಬಂಧಿಸಲು ಅನುಕೂಲವಾಗುವಂತೆ ದಾರ, ಹುರಿ, ಹಗ್ಗಗಳಿಂದ ಹಾಕುವ ಕಟ್ಟು(ನಾಟ್). ಸಾಮಾನ್ಯ ಬಳಕೆಯಲ್ಲಿ ಅನೇಕ ಮಾದರಿಯ ಗಂಟುಗಳನ್ನೂ ಕಾಣಬಹುದು. ಗಣಿತಶಾಸ್ತ್ರದಲ್ಲಿ ರೇಖೆಯ ಮಡಿಕೆಗೂ ವರ್ತುಲಕ್ಕೂ ಸಂಬಂಧಿಸಿದ ಆಕೃತಿಗೆ ಇದೇ ಹೆಸರಿದೆ.

ಮೊದಲನೆಯ ಸಾಮರ್ಥ್ಯದ ಗಂಟು ದಿನಬಳಕೆ ಉಪಯೋಗದಲ್ಲಿರುವಂಥದು. ಆಯಾ ವೃತ್ತಿಯವರು ತಮ್ಮ ತಮಗೆ ಅನುಕೂಲವಾದ ಗಂಟುಮಾದರಿಗಳನ್ನು ಬಳಸುತ್ತಾರೆ. ದಾರ ಅಥವಾ ನೂಲು, ಹುರಿ, ಹಗ್ಗಗಳನ್ನು ಉಪಯೋಗಿಸಿ ಬೇಕಾದ ಗಂಟುಗಳನ್ನು ಹಾಕಬಹುದು. ದಾರ ತೆಳು. ಮೂರುನಾಲ್ಕು ದಾರಗಳನ್ನು ಒಟ್ಟಿಗೆ ಹೊಸೆದರೆ ಹುರಿ ಆಗುತ್ತದೆ. ಮೂರೊ ನಾಲ್ಕೊ ಹೆಚ್ಚೊ ಹುರಿಗಳು ಸೇರಿದಾಗ ಹಗ್ಗ ಆಗುತ್ತದೆ. ಅಂಥ ಮೂರೊ ನಾಲ್ಕೊ ಹಗ್ಗಗಳನ್ನು ಹೊಸೆದಾಗ ಹೊರಜಿ ಆಗುತ್ತದೆ. ಹಿಂದೆ ಬಳಕೆಯಲ್ಲಿದ್ದ ಕೂವೆ ಪಟಗಳುಳ್ಳ ನೌಕೆಗಳಿಗೆ ಹಗ್ಗ, ಹೊರಜಿ ಬಹಳ ಅಗತ್ಯವಾಗಿದ್ದವು. ತಮ್ಮ ಅನುಕೂಲಗಳಿಗೆ ತಕ್ಕಂತೆ ನಾವಿಕರು ಬಗೆಬಗೆಯ ಗಂಟುಗಳನ್ನು ಬಳಸಲುಪಕ್ರಮಿಸಿದರಾಗಿ ಅವಕ್ಕೆ ನಾವಿಕರ ಗಂಟುಗಳೆಂಬ ಹೆಸರೇ ಉಳಿದು ಹೋಯಿತು.

ತುಂಡು ಹಗ್ಗವನ್ನು ಕೈಲಿ ಹಿಡಿದು ಎಡಭಾಗದ ಮೇಲೆ ಬಲಭಾಗ ಇಲ್ಲವೆ ಬಲಭಾಗದ ಮೇಲೆ ಎಡಭಾಗ ಬರುವಂತೆ ಇಟ್ಟರೆ ಒಂದು ವಂಕಿ ಅಥವಾ ಬಳೆ ಏರ್ಪಡುತ್ತದೆ. ಹಾಗೆ ಹಗ್ಗವನ್ನು ತಿರುಚುವುದಕ್ಕೆ ಮಡಿಕೆ ಅಥವಾ ಗೂಲೆ ಎಂದು ಹೆಸರು (ಚಿತ್ರ 1). ಗೂಲೆಯನ್ನು ಅರೆಗಂಟು ಎಂದೂ ಕರೆದಿದ್ದಾರೆ. ಬಿ ಭಾಗದ ಮೇಲೆ ಕೂತಿರುವ ಎ ಭಾಗವನ್ನು ಸಿ ವಂಕಿಯ ಒಳಗಿನಿಂದ ತೂರಿಸಿ ಎತ್ತಿದರೆ ಸಾಧಾರಣ ಗಂಟು ಏರ್ಪಡುತ್ತದ. (ಚಿತ್ರ 2). ಹಾಗೆಯೇ ಬಿ ಭಾಗವನ್ನು ವಂಕಿಯಲ್ಲಿ ತೂರಿಸಿದಾಗಲು ಅದೇ ಗಂಟು ಏರ್ಪಡುತ್ತದೆ. ಗಂಟುಗೊಳ್ಳುವಂತೆ ಮಾಡದೆ ಒಂದರ ಮೇಲೊಂದರಂತೆ ಎರಡು ಗೂಲೆಯನ್ನು ಗೂಟದ ಸುತ್ತ ಹಾಕಿದರೆ ಕೊಟ್ಟಿಗೆ ಗೂಲೆ (ಕ್ಲೋವ್ ಹಿಚ್) ಏರ್ಪಡುತ್ತದೆ. (ಚಿತ್ರ 3). ಗಂಟಿನಲ್ಲಿ ಇರಬೇಕಾದ ನಾಲ್ಕು ಲಕ್ಷಣಗಳೂ ಇದಕ್ಕಿದೆ : ಹಾಕುವುದು ಸುಲಭ. ಹಾಕಿದಮೇಲೆ ಭದ್ರವಾಗಿರುತ್ತದೆ. ಬಿಚ್ಚುವುದೂ ಸುಲಭ ನೋಡಲು ಚೆಂದ (ಚಿತ್ರ 3).

ಗೂಲೆಯ ಒಂದು ಬಿಡಿ ತುಂಡನ್ನು ಅದರ ಬಳೆಯೊಳಗೆ ತೂರಿಸಿ ಮೇಲಕ್ಕೆ ಎಳೆದು ತಂದರೆ ಮೇಲ್ಮೈ ಗಂಟು (ಓವರ್‌ಹೆಡ್ ನಾಟ್) ಆಗುತ್ತದೆ. (ಚಿತ್ರ 4). ಸಾಮಾನ್ಯವಾಗಿ ದೈನಂದಿನ ಜೀವನದಲ್ಲಿ ಇದರ ಉಪಯೋಗವೇ ಹೆಚ್ಚು. ಬಿಡಿ ತುಂಡನ್ನು ಇನ್ನೂ ಒಂದು ಬಾರಿ ಬಳೆಯೊಳಗೆ ನುಸಿಸಿ ಜೀರಿದರೆ ಗಂಟು ಹೆಚ್ಚು ಭದ್ರವಾಗುತ್ತದೆ. ಸ್ವಲ್ಪ ತೊಡಕೂ ಆಗಬಹುದು.

ಮರದ ದಪ್ಪ ತುಂಡುಗಳನ್ನು ಎತ್ತುವುದಕ್ಕೂ ಎಳೆಯುವುದಕ್ಕೂ ನಾಟಾ ಗೂಲೆ (ಟಿಂಬರ್ ಹಿಚ್) ಹಾಕಬೇಕಾಗುತ್ತದೆ. (ಚಿತ್ರ 5). ಗೂಲೆಯ ಒಂದು ಬಿಡಿ ತುಂಡನ್ನು ಉದ್ದವಾಗಿ ಇಟ್ಟುಕೊಂಡು, ಇನ್ನೊಂದನ್ನು ಒಳಕ್ಕೂ ಹೊರಕ್ಕೂ ಮತ್ತೆ ಒಳಕ್ಕೂ ನುಸಿಸಿ ಬಿಗಿಯಬೇಕು. ಇನ್ನೊಮ್ಮೆ ಹಾಗೆಯೇ ನುಸಿಸಿದರೆ ಇನ್ನೂ ಗಟ್ಟಿ. ನಾಟಾ ಗೂಲೆಯಂತೆಯೇ ಕೆಲಸಮಾಡಬಲ್ಲ ಇನ್ನೊಂದು ಗಂಟಿದೆ. ಅದರ ಹೆಸರು ಸುತ್ತು ಮತ್ತು ಎರಡು ಗೂಲೆ (ರೌಂಡ್ ಟರ್ನ್ ಅಂಡ್ ಟು ಹಿಚಸ್). ಬಿಡಿ ತುಂಡುಗಳ ಕೊನೆಯನ್ನು ಸೇರಿಸಿ ಹುರಿಯಿಂದ ಕಟ್ಟಿಬಿಟ್ಟರೆ ಒಳ್ಳೆಯದು (ಚಿತ್ರ 6).

ಜೀರು ಗುಣಿಕೆ ಅಥವಾ ನೇಣು (ಉರಲು) ಸರಳವಾದ ಗಂಟು (ನೂಸ್, ರನಿಂಗ್ ನೂಸ್). ಎಷ್ಟು ಬೇಕೋ ಅಷ್ಟು ವ್ಯಾಸದ ಬಳೆಯನ್ನು (ಸಿ) ಇರಿಸಿಕೊಂಡು ಉದ್ದ ಭಾಗದ (ಬಿ) ಸುತ್ತ ಮೇಲ್ಮೈಗಂಟನ್ನು ಹಾಕಬೇಕು; ತುಂಡು ತುದಿಯನ್ನು (ಎ) ಎಳೆದರೆ ಗಂಟು ಬಿಗಿಯಾಗುತ್ತದೆ; ಅದು ಸರಿದಾಡುವ ಕುಣಿಕೆಯಾದ್ದರಿಂದ ಉದ್ದಭಾಗದ ಮೇಲೆ ಹಿಂದಕ್ಕೂ ಮುಂದಕ್ಕೂ ಜಾರುಬಲ್ಲುದು. ತುಂಟಕುದುರೆ ಅಥವಾ ತೊಂಡುದನವನ್ನು ಇದರಿಂದ ಹಿಡಿದು ಹತೋಟಿಗೆ ತರಬಹುದು.(ಚಿತ್ರ 7). ಅಮೆರಿಕ ಮತ್ತು ಆಸ್ಟ್ರೇಲಿಯ ದನಗಾಹಿಗಳು ಓಡುತ್ತಿರುವ ಪ್ರಾಣಿಗಳನ್ನು ಹಿಡಿಯಲು ಇಂದಿಗೂ ಈ ಗಂಟನ್ನು ಬಳಸುತ್ತಾರೆ. ಕುದುರೆಯ ಮೇಲೆ ಕುಳಿತು ಓಡುತ್ತ ಪ್ರಾಣಿಯನ್ನು ಹಿಂಬಾಲಿಸಿ ಅದು ಹತ್ತಿರವಾದಂತೆ ಕೈಯಲ್ಲಿನ ಕುಣಿಕೆ ಹಾಕಿದ ಹಗ್ಗವನ್ನು ಪ್ರಾಣಿಯ ಕಡೆಗೆ ಗುರಿಯಿಟ್ಟು ಎಸೆಯುತ್ತಾರೆ. ನಿರಾಯಾಸವಾಗಿ ಕುಣಿಕೆ ಪ್ರಾಣಿಯ ಕತ್ತಿಗೆ ಸೇರಿ ಬಿಗಿಯಾಗಿ ಕೂಡುತ್ತದೆ. ಇದಕ್ಕೆ ಹೆಚ್ಚಿನ ಕೈಚಳಕ ಆವಶ್ಯಕ.

ಜಾರದೆ ಭದ್ರವಾಗಿ ನಿಲ್ಲಬಲ್ಲ ಕುಣಿಕೆ ಗಂಟು (ಬೊ ಲೈನ್) ಬಲು ಉಪಯುಕ್ತವಾದದ್ದು (ಚಿತ್ರ 8). ಉದ್ದಭಾಗದ (ಬಿ) ಸುತ್ತ ಒಂದು ಗಂಟನ್ನು ಹಾಕಿ ಅವಶ್ಯವಾದಷ್ಟು ಅಗಲದ ಬಳೆಗೆ (ಸಿ) ಅವಕಾಶವಿರುವಂತೆ ಮಾಡಿಕೊಳ್ಳುವುದೇ ಉದ್ದೇಶ. ಬೆಂಕಿಬಿದ್ದ ಮನೆಯಲ್ಲಿ ಸಿಕ್ಕಿ ಉಸಿರುಕಟ್ಟಿರುವವನ ಸುತ್ತ ಬಳೆಯನ್ನು ಅಳವಡಿಸಿ. ಉದ್ದಭಾಗದಿಂದ ತನ್ನ ಸುತ್ತಲೂ ಒಂದು ಕುಣಿಕೆ ಗಂಟನ್ನು ಕಟ್ಟಿಕೊಂಡು, ನೆಲದಮೇಲೆ ತೆವಳುತ್ತ ಮುಂಬರಿದು ಅಪಾಯದಿಂದ ಅವನನ್ನು ರಕ್ಷಿಸಬಹುದು. ಭಾರವಸ್ತುಗಳನ್ನು ಎಳೆಯಲೂ ಎತ್ತಲೂ ಇದೇ ಕುಣಿಕೆ ಗಂಟು ನೆರವಾಗುತ್ತದೆ. ನೀರಿನಲ್ಲಿ ಮುಳುಗಿ ಸಾಯುತ್ತಿದ್ದವರನ್ನು ಇದೇ ಗಂಟಿನಿಂದ ಪಾರುಮಾಡಿದ ನಿದರ್ಶನಗಳಿವೆ. ಸ್ವಾರಸ್ಯವೆಂದರೆ ಜೀರುಗುಣಿಕೆಯಂತೆ ಇದು ವ್ಯಕ್ತಿಯ ಗಂಟಲನ್ನೊ ಹೊಟ್ಟೆಯನ್ನೊ ಬಿಗಿದು ಉಸಿರು ಕಟ್ಟಿಸುವುದಿಲ್ಲ. ಅಂದರೆ ಮೊದಲು ಹಾಕಿದ ಬಳೆ ಗಾತ್ರದಲ್ಲಿ ವ್ಯತ್ಯಾಸವಾಗುವುದಿಲ್ಲ.

ಹಗ್ಗ, ಹುರಿಗಳನ್ನು ಕತ್ತರಿಸಿ ತುಂಡುಮಾಡುವುದು ಮಿತವ್ಯಯವಲ್ಲ. ಅದು ಹೆಚ್ಚು ಉದ್ದವಾಗಿದ್ದ ಪಕ್ಷದಲ್ಲಿ ಅದನ್ನು ಸಣ್ಣದನ್ನಾಗಿ ಮಾಡಿಕೊಳ್ಳವುದಕ್ಕೆ ಎರಡು ಗಂಟು ಇವೆ–ತುಂಡು ಗಂಟು (ಷೀಪ್‌ಷ್ಯಾಂಕ್), ಬೆಸ್ತ ಗಂಟು (ಫಿಷರ್‌ಮನ್ಸ್ ನಾಟ್). ಹಗ್ಗವನ್ನು (ಚಿತ್ರ 9ರಲ್ಲಿನ) 1 ನೆಯ ಚಿತ್ರದಲ್ಲಿರುವಂತೆ ಮಡಿಸಿ. 2ನೆಯದರಂತೆ ಎರಡು ಕಡೆಯಲ್ಲೂ ಮಡಿಕೆಯ ಸುತ್ತ ಬಿಡಿ ತುಂಡುಗಳಿಂದ ಗೂಲೆ ಹಾಕಿ ಬಿಗಿಮಾಡಿದರೆ ಹಗ್ಗ ಸಣ್ಣದಾಗುತ್ತದೆ. ಇದೇ ತುಂಡುಗಂಟು. ಎರಡು ಹುರಿಗಳನ್ನು ಕೂಡಿಸುವುದಕ್ಕೆ ಬೆಸ್ತಗಂಟು ನೆರವಾಗುತ್ತದೆ.

ಕುಣಿಕೆ ಭದ್ರವಾಗಿ ನಿಲ್ಲುವ ಇನ್ನೊಂದು ಗಂಟೂ ಉಂಟು. ಅದಕ್ಕೆ ಮಧ್ಯವರ್ತಿಗಂಟು (ಮಿಡ್ಲ್‌ಮನ್ಸ್ ನಾಟ್) ಎಂದು ಹೆಸರು. ಚಿತ್ರದಲ್ಲಿರುವಂತೆ ಬಳೆಯ ಮುಂಭಾಗಕ್ಕೆ ಗೊತ್ತಾಗುವಂತೆ ಎರಡು ಮೇಲ್ಮೈಗಂಟನ್ನು ಹಾಕಿ ಅದನ್ನು ಒತ್ತೊತ್ತಾಗಿ ಸರಿಸತಕ್ಕದ್ದು (ಚಿತ್ರ 10).

ಎಷ್ಟೋ ವೇಳೆ ಹಗ್ಗಕ್ಕಾಗಿ ಕಾಯುವುದಕ್ಕೆ ಸಮಯ ಇರುವುದಿಲ್ಲ. ನದಿ ದಾಟಿಸಲು ಬೊಂಬಿನಿಂದ ತಾತ್ಕಾಲಿಕ ತೆಪ್ಪ ಕಟ್ಟಬೇಕಾದರೆ ದಡದಲ್ಲಿ ಬೆಳೆದಿರುವ ಹಂಬು ಸಾಕು. ಅದರಿಂದ ಚಿತ್ರದಲ್ಲಿರುವಂತೆ ಗಂಟು ತಯಾರಿಸಬಹುದು. ಹಗ್ಗದಷ್ಟು ಲಲಿತವಾಗಿ ಹಂಬನ್ನು ಕೊಂಕಿಸಲಾಗುವುದಿಲ್ಲವಾಗಿ ಸುತ್ತುಗಳನ್ನು ಹಾಕಿ ಅದನ್ನು ಭದ್ರಗೊಳಿಸಬೇಕಾಗುತ್ತದೆ (ಚಿತ್ರ 11).

ತೂಕವಾದ ಮೂಟೆ, ತೊಲೆ ಮುಂತಾದುವನ್ನು ಮೇಲಕ್ಕೆತ್ತಲೂ ಕೆಳಕ್ಕೆ ಇಳಿಸಲೂ ಜೋಲಿ ಅಥವಾ ಜೋತ (ಸ್ಲಿಂಗ್) ಆವಶ್ಯಕವಾಗುತ್ತದೆ. ಅದರಲ್ಲಿ ಎರಡು ಬಳೆಗಳಿರುತ್ತವೆ. ಅವುಗಳಲ್ಲಿ ಮೇಲ್ಮೈಗಂಟೂ ಉದ್ದಭಾಗವೂ ಇರುತ್ತವೆ. ಎತ್ತುವ ಸಾಧನ (ಕ್ರೇನ್) ಇದ್ದ ಪಕ್ಷದಲ್ಲಿ ಅದರ ಕೊಕ್ಕೆಗೆ ಮೂಟೆಯನ್ನು ಹಿಡಿದು ಕೊಂಡಿರುವ ಹಗ್ಗವನ್ನು ಸಿಕ್ಕಿಸುವುದು ಸುಲಭ. ಮೂಟೆಯ ಸುತ್ತ ಹಗ್ಗ ಎರಡು ಸಾರಿ ಬರುವಂತೆ ಮಾಡಿ ಹಗ್ಗವನ್ನು ಬಳೆಯೊಳಗೆ ಸೆಳೆದುಕೊಂಡು ಅದರ ಎರಡು ಕೊನೆಯನ್ನು ಸೇರಿಸಿ ಕಟ್ಟಿದರೆ ಸಾಕು. ಈ ಜೋಲಿಗೆ ಹಿಂದಣದಂತೆ ಯಾವ ಗಂಟೂ ಬೇಕಿಲ್ಲ; ಹೆಚ್ಚು ಗೂಲೆಯೂ ಬೇಕಿಲ್ಲ. ಮನುಷ್ಯನ ಜಾಣ್ಮೆಗೂ ಕರಕೌಶಲಕ್ಕೂ ಇದೊಂದು ಉದಾಹರಣೆ (ಚಿತ್ರ 12,13).

ನಾನಾ ಬಗೆಯ ಬಿಗಿತಗಳುಂಟು (ಲ್ಯಾಷಿಂಗ್) ಲಾಟೀನು ತೂಗುಹಾಕುವುದಕ್ಕೆ ಮೂರು ದೊಣ್ಣೆಗಳಿಂದ ಒಂದು ಮೂರುಕಾಲಿನ ನಿಲುವನ್ನು ಸಿದ್ಧಪಡಿಸುತ್ತಾರೆ. ಇಲ್ಲಿನ ಬಿಗಿತೆ, ಕಾಲುಗಳು ಅರಳಿ ನಿಲ್ಲಲು ಆಸ್ಪದವೀಯುವುದಷ್ಟು ಅಳ್ಳಕವಾಗಿರಬೇಕು; ಸಡಿಲ ಬೀಳದಷ್ಟು ಬಿಗಿಯಾಗಿಯೂ ಇರಬೇಕು. ಮೂರು ದೊಣ್ಣೆಗಳನ್ನೂ ಕೂಡಿಸಿ ಹಿಡಿದುಕೊಂಡು, ದಪ್ಪ ಹುರಿಯಿಂದಲೊ ಸಣ್ಣ ಹಗ್ಗದಿಂದಲೊ ಮೊದಲು ಕೊಟ್ಟಿಗೆ ಗೂಲೆಯನ್ನು ಒಂದು ದೊಣ್ಣೆಯ ಸುತ್ತ ಹಾಕಿ, ಅಮೇಲೆ ಹುರಿ ಒಂದರ ಮೇಲೆ ಇನ್ನೊಂದರ ಕೆಳಗೆ ಮೂರನೆಯದರ ಮೇಲೆ ಬರುವಂತೆ ಹಲವು ಸಾರಿ ಪೂರ್ತಿ ಬಿಗಿ ಮಾಡದೆ ಸುತ್ತಿ, ಅನಂತರ ಎರಡು ದೊಣ್ಣೆಗಳ ಮಧ್ಯೆ ಕೆಲವು ಸುತ್ತುಗಳನು ತಿರುವಿ, ಕೊನೆಗೆ ಕೊಟ್ಟಿಗೆ ಗಂಟು ಹಾಕಬೇಕು. ಇದಕ್ಕೆ ಸಂಖ್ಯೆ ಎಂಟರ ಬಿಗಿತೆ (ಫಿಗರ್ ಆಫ್ ಎಯ್ಟ ಲ್ಯಾಷಿಂಗ್) ಎಂದು ಹೆಸರು (ಚಿತ್ರ 14). ಇನ್ನೊಂದು ಚೌಕ ಬಿಗಿತೆ (ಸ್ಕ್ವೇರ್‌ಲ್ಯಾಷಿಂಗ್). ನೆಟ್ಟಗೆ ನಿಂತ ಕಂಬಕ್ಕೆ ಅಡ್ಡ ತೊಲೆ ಬಿಗಿಯುವುದಕ್ಕೆ ಇದು ಅನುಕೂಲ. ಕೊಟ್ಟಿಗೆ ಗೂಲೆಯಿಂದ ಬಿಗಿತೆಯ ಪ್ರಾರಂಭ, ಮುಕ್ತಾಯ, ಮಧ್ಯೆ ತೊಲೆಗಳ ಕೂಡಣಜಾಗದಲ್ಲಿ ಕೆಳಗೆ ಮೇಲೆ ಆ ಕಡೆ ಈ ಕಡೆ ಕ್ರಮವಾಗಿ ಹಗ್ಗದ ಸುತ್ತುಗಳನ್ನು ಒತ್ತೊತ್ತಾಗಿಯೂ ಬಿಗಿಯಾಗಿಯೂ ಜೋಡಿಸತಕ್ಕದ್ದು. ನಯನಮನೋಹರವಾದ ಬಿಗಿತ ಇದು (ಚಿತ್ರ 15). ತೊಲೆಗಳ ಕೋನಕೋನವಾಗಿ ಬಂಧಿತವಾಗಬೇಕಾದಾಗ ಮೂಲೆ ಬಿಗಿತೆಯನ್ನು (ಡಯಾಗ್ನಲ್ ಲ್ಯಾಷಿಂಗ್) ಬಳಸಿಕೊಳ್ಳಬೇಕು. ಕೊಟ್ಟಿಗೆ ಗೂಲೆಯೇ ಅದಕ್ಕೆ ಮುಖ್ಯವಾದ್ದು.

ಎರಡು ಹಗ್ಗಗಳನ್ನು ಜಂಟಿಮಾಡುವಲ್ಲಿ ಹಗ್ಗ ಎರಡೂ ಒಂದೇ ದಪ್ಪವಾದರೆ ಸಮಗಂಟು (ರೀಫ್ ನಾಟ್) ಯುಕ್ತವಾದದ್ದು. ಒಂದು ಹಗ್ಗದ ಬಳೆಯೂ ಬಿಡಿತುಂಡುಗಳೂ ಇನ್ನೊಂದರ ಕೆಳಗೆ ಮೇಲೆ ಪುನಃ ಕೆಳಗೆ ನುಸಿಯಂತೆ ಎಚ್ಚರಿಕೆಯಿಂದ ಇದನ್ನು ನಿರ್ವಹಿಸಬೇಕು; ಇನ್ನೊಂದು ಹಗ್ಗ ವಿಲೋಮವಾಗಿ ಮೇಲೆ ಕೆಳಗೆ ಪುನಃ ಮೇಲೆ ಬರುತ್ತದೆ. ಗಂಟುಗಳೆಲ್ಲಲ್ಲ ಇದು ಪ್ರಾಯಶಃ ಅತ್ಯಂತ ಸುಂದರ, ಬ್ಯಾಂಡೇಜಿನ ಎರಡು ಕೊನೆಗಳನ್ನು ಕೂಡಿಸುವುದಕ್ಕೂ ವೈದ್ಯರು ಉಪಯೋಗಿಸುವ ಶ್ರೇಷ್ಠ ಗಂಟು ಇದು. ಶಿಲ್ಪದಲ್ಲಿ ಅಲಂಕಾರಕ್ಕೂ ಇದೇ ಬರುತ್ತದೆ. ಇದಕ್ಕೆ ಪವಿತ್ರದ ಗಂಟು ಎಂಬ ಅಂಕಿತವು ದತ್ತವಾಗಿದೆ. (ಚಿತ್ರ 16).ಸಮಗಂಟನ್ನು ಹಾಕಹೋಗಿ ಒಂದು ಕೈ ತಪ್ಪಿದರೆ ವಿಷಮ ಗಂಟು ಅಥವಾ ಅಜ್ಜಿಗಂಟು (ಗ್ರ್ಯಾನಿ ನಾಟ್) ಆಗುತ್ತದೆ. ತುಂಡುಗಳು ಕುಣಿಕೆಯಲ್ಲಿ ಒಂದು ಮೇಲೆ ಒಂದು ಕೆಳಗೆ ಇರುವುದರಿಂದ ಗಂಟು ತೊಡಕಾಗುವ ಸಂಭವವುಂಟು (ಚಿತ್ರ 17). ಇದನ್ನು ಬಿಚ್ಚುವುದಂತೂ ಪ್ರಯಾಸಕರ.

ಜಂಟಿಸಬೇಕಾದ ಹಗ್ಗಗಳಲ್ಲಿ ಒಂದು ದಪ್ಪ ಇನ್ನೊಂದು ಸಣ್ಣ ಆದಲ್ಲಿ ಸಮಗಂಟುನೇರ್ಪಡಲ್ಲ. ಆಗ ಜಂಟಿಗಂಟನ್ನು (ಷೀಟ್ ಬೆಂಡ್) ಬಳಸಬೇಕು (ಚಿತ್ರ 18).ಇಲ್ಲಿ ಎ ದಪ್ಪ ಹಗ್ಗ ಅಥವಾ ಹೊರಜಿ ಅಥವಾ ನೌಕೆಯ ಹಾಯಿಪಟದ ಒಂದು ಮೂಲೆ; ಅದನ್ನು ಕೊಂಚ ಕೊಂಕಿಸಬಹುದೇ ವಿನಾ ಮಡಿಚಿ ನುಸಿಸಿ ಗಂಟು ಹಾಕಲಾಗುವುದಿಲ್ಲ. ಬಿ ಸಣ್ಣ ಹಗ್ಗ ; ಅದನ್ನು ಚಿತ್ರದಲ್ಲಿರುವಂತೆ ಎ ಯ ಕೊಂಕಿನ ಕೆಳಗೆ ಮೇಲೆ ಕೆಳಗೆ ಮೇಲೆ ಪುನಃ ಕೆಳಗೆ ತೂರಿಸಿ ಎರಡರಲ್ಲಿ ದೊಡ್ಡ ತುಂಡನ್ನು ಎಳೆದು ಬಿಗಿಮಾಡಿದರೆ ಸಾಕಷ್ಟು ಭದ್ರದ ಗಂಟಾಗುತ್ತದೆ. ಇನ್ನೂ ಬಿಗಿ ಬೇಕಾದರೆ ಕ್ಯಾರಿಕ್ ಜಂಟಿ ಗಂಟು ಇದ್ದೇ ಇದೆ (ಚಿತ್ರ 19). ದಪ್ಪ ಹಗ್ಗದ ಬಿಡಿತುಂಡುಗಳು ಒಂದರ ಮೇಲೊಂದು ಹಾಯುವುದರಿಂದ ಸಣ್ಣ ಹಗ್ಗ ಒಂದರ ಮೇಲೆ ಇನ್ನೊಂದರ ಕೆಳಗೆ ಸರಿಯುತ್ತದೆ.




ಗಂಟುಗಳ ವಿವಿಧ ಬಗೆಗಳು (ವಿವರಗಳಿಗೆ ಲೇಖನ ನೋಡಿ)

ಹಗ್ಗದ ತುದಿಯಲ್ಲಿ ಎಳೆಗಳು ಸಡಿಲ ಬೇರೆ ಬೇರೆಯಾಗುವ ಅಪಾಯ ಹೆಚ್ಚಾಗಿದೆ; ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಬೇಗ ಹಗ್ಗ ಸೀಳಿ ಎಳೆ ಎಳೆಯಾಗಿ ನಿಷ್ಪ್ರಯೋಜಕವಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳಲು ಕೆಲವು ಉಪಾಯಗಳಿವೆ. ಅವುಗಳಲ್ಲಿ ಹುರಿ ಸುತ್ತಿಕೆ (ಫ್ವಿಪಿಂಗ್) ಒಂದು ಹಗ್ಗದ ತುದಿಭಾಗದ ಮೇಲೆ ಟ್ವೈನ್ ದಾರವನ್ನು ಇರಿಸಿ, ಒಂದು ಕೊನೆಯನ್ನು ಗೊಲಸುಮಾಡಿ ಇನ್ನೊಂದು ಕೊನೆಯಿಂದ ದಾರವನ್ನು ಹಗ್ಗದ ಸುತ್ತ ಸುತ್ತುತ್ತ ಕೆಳಗಿಂದ ಮೇಲಕ್ಕೆ ಹೋಗಿ ಅಲ್ಲಿರುವ ಗೊಲಸಿನೊಳಕ್ಕೆ ದಾರದ ತುದಿಯನ್ನು ತೂರಿಸಿ ಕೆಳಗಿರುವ ಕೊನೆಯನ್ನು ಎಳೆದರೆ, ಹಗ್ಗದ ತುದಿಗೆ ಟ್ವೈನ್‌ದಾರದ ಗಟ್ಟಿ ಹೊರಮೈ ಲಭಿಸುತ್ತದೆ. ಇದರಿಂದ ಎಳೆಗಳಿಗೆ ಕ್ಷೇಮ (ಚಿತ್ರ 20).

ಇದಕ್ಕಿಂತ ಹೆಚ್ಚು ಬಲವುಳ್ಳದ್ದೂ ಚೆಲುವುಳ್ಳದ್ದೂ ಆದ ಜಡೆ ಹೆಣೆಯುವ ವಿಧಾನದ ಗಂಟು; ಅದಕ್ಕೆ ಸಿಂಗಲ್ ವಾಲ್‌ನಾಟ್ ಎಂದು ಹೆಸರು (ಚಿತ್ರ 21). ಹಗ್ಗದ ತುದಿಯಲ್ಲಿ ಸ್ವಲ್ಪ ದೂರ ಎಳೆ ಬಿಡಿಸಿಕೊಂಡು ಅವನ್ನು ಒಂದರ ಒಳಗೆ ಮಗ್ಗುಲಿನದು ತೂರುವಂತೆ ಮಾಡುತ್ತ ಹೋಗಿ, ಭದ್ರವಾಗಿ ಬಿಗಿದೆಳೆದು, ಕಟ್ಟ ಕಡೆಯಲ್ಲಿ ಎಳೆಗಳ ಅಂಚುಗಳನ್ನು ಕತ್ತರಿಸಬಹುದು. ಎಳೆಗಳನ್ನು ಕಡೆಯಲ್ಲಿ ಕಿರೀಟದಂತೆ ರೂಪಿಸಬೇಕು ಚಿತ್ರ (21–2)ನಲ್ಲಿ ಡಬ್ಬಲ್ ವಾಲ್ ನಾಟ್ ಹೆಣಿಗೆ ಮತ್ತು ಕಿರೀಟಗಳನ್ನು ಕಾಣಬಹುದು.

ಇವೇ ಅಲ್ಲದೆ ಇನ್ನೂ ಹತ್ತೆಂಟು ವಿಧದ ಗಂಟುಗಳುಂಟು. ಕೆಲವು ಮಕ್ಕಳ ಆಟಕ್ಕೆ ಬರುತ್ತವೆ; ಮತ್ತೆ ಕೆಲವು ವಿನೋದ ವ್ಯಾಪಾರಕ್ಕೆ ಬರುತ್ತವೆ; ಮತ್ತೂ ಕೆಲವು ಜಾದೂಗಾರರ ಮಾಯಮಂತ್ರಕ್ಕೆ ಬರುತ್ತವೆ. ಅವುಗಳನ್ನು ಇಲ್ಲಿ ವಿವರಿಸಿಲ್ಲ.

ವಿಜ್ಞಾನದ ರೀತ್ಯ ಭೌತಿಕ ರೇಖೆ ಶುದ್ಧ ವರ್ತುಲವಾಗದೆ ತನ್ನ ಕೊನೆಗಳನ್ನು ಕಳೆದುಕೊಂಡು ಅನಂತ್ಯವಾಗುವುದೇ ಗಂಟು. ಗಂಟುಗಳ ತತ್ತ್ವವನ್ನು ಮೊದಲು ಪ್ರಸ್ತಾಪಿಸಿದಾಗ ಲಿಸ್ಟಿಂಗ್, 1847ರಲ್ಲಿ ಆತ ಹೊರತಂದ ಒಂದು ಗ್ರಂಥದಲ್ಲಿ ಕೆಲವು ಸರಳ ಗಂಟುಗಳು ವಿವರಗಳಿವೆ. ದಾರದ ಗಂಟು ಸಮತಲದ ಮೇಲೆ ಪ್ರಕ್ಷೇಪಣಗೊಂಡಲ್ಲಿ ಅದರ ಸುತ್ತುಕಗಳು ಅನ್ಯೋನ್ಯವಾಗಿ ಯಾವ ರೀತಿಯಲ್ಲಿವೆ. ಎಂಬುದನ್ನು ಅರಿಯಬಹುದು ಎಂದು ಅವನ ವಾದ. 22ನೆಯ ಚಿತ್ರದಲ್ಲಿರುವುವು ಬಲಗೈ ಮತ್ತು ಎಡಗೈ ತಿರಿಚಿನಿಂದಾದ ಗಂಟುಗಳು. ಒಂದು ಇನ್ನೊಂದರ ಕನ್ನಡಿ ಪ್ರತಿಬಿಂಬ. ಸ್ವಲ್ಪ ಪರಿಶೀಲನೆ ನಡೆಸಿ ಲಿಸ್ಟಿಂಗ್ ಆ ವಿಚಾರವನ್ನು ಅಲ್ಲಿಗೇ ಕೈಬಿಟ್ಟ.

1876–77 ರಂದು ಟೇಟ್ ಎಂಬ ಶಾಸ್ತ್ರಜ್ಞ ಪ್ರಕಟಿಸಿದ ಪ್ರಬಂಧದಲ್ಲಿ ಗಂಟುಗಳ ಚರ್ಚೆ ವಿಪುಲವಾಗಿ ಬಂದಿದೆ. ಟೇಪ್‌ಗೆ ಲಿಸ್ಟಿಂಗನ ಅಭಿಪ್ರಾಯಗಳು ಅಷ್ಟಾಗಿ ತಿಳಿದಿರಲಿಲ್ಲ. ವಕ್ರರೇಖೆ ತಿರಿಚಿಕೊಳ್ಳುವಾಗ ಉಂಟಾಗುವ ಅಡ್ಡಹಾಯಿಕೆಗಳೆಷ್ಟು, ಗಂಟಿನ ಆಕೃತಿಗಳೆಷ್ಟು, ಎಂಬುದನ್ನು ಕೂಲಂಕಷವಾಗಿ ಪರಿಶೋಧಿಸಿ ಅಡ್ಡಹಾಯಿಕೆ 3,4,5,6 ಅಥವಾ 7 ಸಲ ಮಾತ್ರ ಆಗುತ್ತದೆಂದು ಈಗ ನಿರ್ಧರಿಸಿದೆ. ಚಿತ್ರ 23ರಲ್ಲಿ ನಾಲ್ಕು ಅಡ್ಡಹಾಯಿಕೆ ; ಅವುಗಳ ಪ್ರತಿಬಿಂಬಗಳಲ್ಲೂ ಅಷ್ಟೆ. ರೇಖೆಗಳ ಜೋಡಣೆಯಲ್ಲಿ ಸಮಾನ ಲಕ್ಷಣಗಳಿರುವುದನ್ನು ವಿಶಿಷ್ಟ ಲಕ್ಷಣದ ಒಂದು ಆಕೃತಿಯನ್ನೂ ಈತ ತೋರಿ ಕೊಟ್ಟ. ಚಿತ್ರ 5ರಲ್ಲಿ ಗಂಟಾಗಲೀ ಜೋಡಣೆಯಾಗಲೀ ಇಲ್ಲ: ಆದರೂ ಮೂರೂ ಹೇಗೋ ಒಂದಾಗಿ ಕೂಡಿಕೊಂಡಿವೆ. ಜಾದೂಗಾರರು ಮೂರು ಸಣ್ಣ ಚಕ್ರಗಳನ್ನು ಒಂದರೊಳಗೊಂದು ಹೊಕ್ಕಿರುವಂತೆ ತೋರಿಸಿ ತಕ್ಷಣ ಅವು ಬೇರೆ ಬೇರೆಯೆಂದು ವಿಸ್ಮಯಗೊಳಿಸುವ ಕೈಚಳಕಕ್ಕೆ ಈ ಆಕೃತಿ ಆಧಾರ. ಗಂಟುತನ (ನಾಟಿನೆಸ್). ಗಂಟಾಗಿರುವಿಕೆ (ಬಿ–ನಾಟೆಡ್‌ನೆಸ್), ಗಂಟು ಒಳಗೊಂಡಿರುವಿಕೆ (ನಾಟ್‌ಫುಲ್‌ನೆಸ್) ಮುಂತಾದ ವಿಚಾರಗಳನ್ನು ಅಂಕಿಗಳ ಮೂಲಕ ಟೇಟ್ ವರ್ಣಿಸಿದ್ದಾನೆ. (ಎಸ್.ವಿ.ಆರ್.)

**ಗಂಟುಗಳು :** ಕೆಲವು ಬಗೆಯ ಪರಾವಲಂಬಿ ಜೀವಿಗಳಾದ ಬ್ಯಾಕ್ಟೀರಿಯ. ಶಿಲೀಂಧ್ರ ಮತ್ತು ಕೀಟಗಳು ಗಿಡಗಳ ಮೇಲೆ ವಾಸ ಮಾಡಲು ತೊಡಗಿದಾಗ ಉಂಟಾಗುವ ರಚನೆಗಳು (ಗಾಲ್ಸ್). ಗಿಡಗಳಿಗೆ ಬೇರೆ ಕಾರಣಗಳಿಂದ ಗಾಯಗಳಾದಾಗಲೂ ಗಂಟುಗಳು ಉಂಟಾಗುತ್ತವೆ. ಪರಾವಲಂಬಿ ಜೀವಿಯು ಗಿಡವನ್ನು ಹೊಕ್ಕಾಗ ಜೀವಿಯಿಂದ ಒಂದು ವಿಧವಾದ ದ್ರವ ಸ್ರವಿಸಿ ಸುತ್ತಮುತ್ತಲಿನ ಜೀವಕೋಶಗಳು ವಿಭಜನೆ ಹೊಂದುವಂತೆಯೂ ಹಿಗ್ಗುವಂತೆಯೂ ಮಾಡಿ ಗಂಟುಗಳ ಉದ್ಭವಕ್ಕೆ ಕಾರಣವಾಗುತ್ತದೆ.

ಗಂಟುಗಳು ಕಾಂಡ ಬೇರು ಇಲ್ಲವೆ ಎಲೆಗಳಲ್ಲಿ ಉಂಟಾಗಬಹುದು. ಕೆಲವು ಸಸ್ಯಗಳಲ್ಲಿ ಹೂಗಳೂ ಕಾಯಿಗಳೂ ಗಂಟುಗಳಾಗಿ ಮಾರ್ಪಾಡಾಗುವುದುಂಟು. ಸಸ್ಯಕೋಶಗಳ ಜೋಡಣೆ ಮತ್ತು ಪರಾವಲಂಬಿಗಳಿಂದ ಸ್ರವಿಸುವ ರಸದ ಉದ್ವೇಗಕಾರಕ ಗುಣಗಳನ್ನವಲಂಬಿಸಿ ಗಂಟುಗಳು ತಮ್ಮ ಗಾತ್ರ, ಆಕಾರ ಮತ್ತು ರಚನೆಗಳಲ್ಲಿ ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ. ಒಂದು ಜೀವಿ ಮತ್ತೊಂದು ಜೀವಿಯ ಕೋಶದ ಮೇಲೆ ತನ್ನ ಪ್ರಭಾವವನ್ನು ಬೀರಿದಾಗ, ಇವೆರಡರ ಜೀವಕೋಶಗಳಿಗೂ ಉಂಟಾಗುವ ಘರ್ಷಣೆ ಮತ್ತು ಕೋಶಗಳಲ್ಲಿನ ವಿಭಿನ್ನ ಅಂಶಗಳಲ್ಲಿನ ಮಿಲನದಿಂದ, ಕೋಶಗಳು ಚೋದನೆಗೊಂಡು ಅತಿಯಾಗಿ ಬೆಳೆಯುತ್ತವೆ.

ಗಂಟುಗಳಲ್ಲಿಯ ಬೇರಿನ ಗ್ರಂಥಿ, ಕಾಂಡದ ಗ್ರಂಥಿ, ಎಲೆಗಳ ಗ್ರಂಥಿಗಳೂ ಸೇರಿರಬಹುದು. ಕೆಲವು ಕೀಟಗಳು ಮೊಟ್ಟೆಗಳನ್ನು ಎಲೆಗಳ ಮೇಲೆ ಇಡುತ್ತವೆ. ಆಗ ಇವು ಒಂದು ವಿಧವಾದ ಪ್ರಚೋದಕ ದ್ರವವನ್ನು ಸ್ರವಿಸುತ್ತವೆ. ಈ ದ್ರವದ ಪ್ರಭಾವದಿಂದ ಎಲೆಯ ಒಳಗಿನ ಜೀವಕೋಶಗಳು ಮೊಟ್ಟೆಗಳ ಸುತ್ತಲೂ ಬೆಳೆದು ಗಂಟುಗಳಾಗುತ್ತವೆ. ಇಂಥ ಗಂಟುಗಳಿಗೆ ಕೀಟಗಂಟುಗಳು ಎಂದು ಹೆಸರು. ಹೈಮೆನಾಪ್ಟರ, ಡಿಪ್ಟರ, ಹೆಮಿಪ್ಟರ, ಹೋಮಾಪ್ಟರ, ಕೋಲಿಯಾಪ್ಟರ ಮುಂತಾದ ಗುಂಪುಗಳ ಕೀಟಗಳು ಗಂಟುಗಳನ್ನು ಉತ್ಪತ್ತಿ ಮಾಡುವ ಕೀಟಗಳಲ್ಲಿ ಮುಖ್ಯವಾದುವು.

ಅಕೇಸಿಯ ಲ್ಯೂಕೋಪ್ಲಿಯ (ಬಿಳಿಗೊಬ್ಬಳಿ), ಆರಿಕ ಕ್ಯಾಟಿಚು (ಅಡಿಕೆ), ಸಿನಮೋಮಮ್ ಜೀಲ್ಯಾನಿಕಮ್ (ದಾಲ್ಚಿನ್ನಿ), ಫ್ರಾಕ್ಸಿನಸ್ ಫ್ಲಾರಿಬಂಡ, ಪೊಂಗೇಮಿಯ ಗ್ಲಾಬ್ರ (ಹೊಂಗೆ), ಪ್ರೊಸಾಪಿಸ್ ಸ್ಪೈಸಿಜರ (ದಿವಿ), ಟರ್ಮಿನೇಲಿಯ ಚೆಬಲ (ಅಳಲೆ), ಗಾರುಗ ಪಿನೇಟ, ಪಿಸ್ತಾಚಿಯ ವೇರ (ಪಿಸ್ತ), ಟುಮಾರಿಕ್ಸ್, ಕ್ವರ್ಕಸ್ (ಓಕ್) ಮುಂತಾದ ಮರಗಳಲ್ಲಿ ಕೀಟಗಂಟುಗಳನ್ನು ಕಾಣಬಹುದು. ಕೀಟಗಂಟುಗಳಿಂದ ಅನೇಕ ಉಪಯೋಗಗಳಿವೆ. ಚರ್ಮದ ಕೈಗಾರಿಕೆ, ಬಣ್ಣದ ಕೈಗಾರಿಕೆಗಳಲ್ಲಿ ಇವನ್ನು ವಿಶೇಷಣವಾಗಿ ಉಪಯೋಗಿಸುತ್ತಾರೆ. ಕೆಲವು ಗಂಟುಗಳನ್ನು ಔಷಧೀ ತಯಾರಿಕೆಗೂ ಉಪಯೋಗಿಸುತ್ತಾರೆ. ಪಿಸ್ತ ಗಿಡದ ಗಂಟುಗಳಿಂದ ಕೆಮ್ಮು, ಅಸ್ತಮ ಮುಂತಾದ ರೋಗಗಳಿಗೆ ಕಷಾಯವನ್ನು ಮಾಡುತ್ತಾರೆ. ಸರ್ಪದ ಮತ್ತು ಚೇಳಿನ ವಿಷಾಪಹಾರಿಯಾಗಿಯೂ ಇದನ್ನು ಬಳಸುವುದುಂಟು. ಅನೇಕ ರಾಸಾಯನಿಕಗಳನ್ನೂ ಇವುಗಳಿಂದ ತಯಾರಿಸಬಹುದು.

ಬೇರಿನಗ್ರಂಥಿಗಳೂ ಒಂದು ಬಗೆಯ ಗಂಟುಗಳೇ. ಮಣ್ಣಿನಲ್ಲಿ ವಾಸಿಸುವ ಬ್ಯಾಕ್ಟೀರಿಯ ಮತ್ತಿತರ ಸೂಕ್ಷ್ಮ ಕ್ರಿಮಿಗಳು ಬೇರಿನಲ್ಲಿ ಸೇರಿ ಗಂಟುಗಳಾಗುತ್ತವೆ. ಅವರೆ ಜಾತಿಯ ಗಿಡಗಳಲ್ಲಿ ಗಂಟುಗಳು ಹೇರಳವಾಗಿರುತ್ತವೆ. ಇವುಗಳ ಆಕಾರ ವೈವಿಧ್ಯಮಯ. ಇವುಗಳಲ್ಲಿ ರೈಜೋಬಿಯಂ ಎಂಬ ಬ್ಯಾಕ್ಟೀರಿಯ ಸೇರಿಸಿಕೊಂಡು ನೈಟ್ರೋಜನ್ ಸ್ಥಿರೀಕರಣದಲ್ಲಿ ಸಹಾಯ ಮಾಡಿ ಮಣ್ಣನ್ನು ಫಲವತ್ತಾಗಿ ಮಾಡುತ್ತವೆ. ಸೊಲನೇಸೀ (ಬದನೆ ಕುಟುಂಬ) ಮತ್ತು ಕುಕರ್ಬಿಟೇಸೀ ಕುಟುಂಬಗಳ (ಕುಂಬಳ ಕುಟುಂಬ) ಸಸ್ಯಗಳಲ್ಲಿ ನೆಮಟೋಡ ಪ್ರಾಣಿಗಳಿಂದ ಕೆಲವು ಬೇರಿನ ಗಂಟುಗಳು ಉಂಟಾಗುತ್ತವೆ. ಇವು ಸಣ್ಣ ಸಣ್ಣ ಗುಳ್ಳೆಗಳಂತೆ ಕಂಡುಬರುತ್ತವೆ ಕ್ರೂಸಿಫೇರಿ ಕುಂಟುಂಬದ (ಮೂಲಂಗಿ ಕುಟುಂಬ) ಸಸ್ಯಗಳ ಬೇರುಗಳಲ್ಲಿ ಕ್ಲಬ್ ರಾಟ್ ಎಂಬ ರೋಗದ ಫಲವಾಗಿ ಬೇರುಗಳು ಗಂಟುಗಳಾಗಿರುತ್ತವೆ.

ಕಾಂಡ ಮತ್ತು ಗಂಟುಗಳಲ್ಲಿ ಎರಡು ವಿಧ :1 ಹಿಸ್ಟಾಯ್ಡ್ ಗಂಟು ಮತ್ತು 2 ಆರ್ಗನಾಯ್ಡ್ ಗಂಟು. ಹಿಸ್ಟಾಯಡ್ ಗಂಟುಗಳು ಸರಳವಾದುವು ಮತ್ತು ಅಂಗಾಂಶಗಳಿಗೆ–ಸಂಬಂಧಿಸಿದುವು. ಇವು ಸಿಂಕೈಟ್ರಿಯಂ, ಜಿಮ್ನೊಸ್ಪೋರಿಯಂ ಮುಂತಾದ ಶಿಲೀಂಧ್ರಗಳಿಂದ ಉಂಟಾಗುತ್ತವೆ. ಈ ಜೀವಿಗಳು ಗಿಡಗಳ ಎಪಿಡರ್ಮಿಸಿನಲ್ಲಿ ಸೇರಿ ಸುತ್ತಮುತ್ತಲಿನ ಕೋಶಗಳನ್ನು ಉದ್ವೇಗಗೊಳಿಸಿ ಬೆಳವಣಿಗೆಯನ್ನುಂಟು ಮಾಡಿ ಗಂಟುಗಳನ್ನುತ್ಪತ್ತಿ ಮಾಡುತ್ತವೆ. ನಿಂಬೆಜಾತಿಯ ಸಸ್ಯಗಳಿಗೆ ಅಂಟುವ ಸ್ಕ್ಯಾಬ್ ರೋಗ ಎಲ್ಸಿನೋ ಎಂಬ ಶಿಲೀಂಧ್ರದಿಂದಾಗುತ್ತದೆ. ಆರ್ಗನಾಯ್ಡ್ ಗಂಟುಗಳಲ್ಲಿ ನಿರ್ದಿಷ್ಟವಾದ ಗಂಟಿನ ರೂಪ ಕಾಣುವುದಿಲ್ಲ. ಕಾಂಡ, ಎಲೆ, ಹೂ ಮತ್ತು ಹೂವಿನ ಭಾಗಗಳು ಅನಿರ್ದಿಷ್ಟ ರೀತಿಯಾಗಿ ಬೆಳೆದು ವಿವಿಧಾಕಾರಗಳನ್ನು ತಾಳುತ್ತವೆ. ಪರಾವಲಂಬಿಗಳು ಆಶ್ರಯ ಕೋಶಗಳನ್ನು ಕೊಲ್ಲುವುದಿಲ್ಲ. ಬಾಹ್ಯ ರಚನೆಯನ್ನು ಮಾತ್ರ ಬದಲಾಯಿಸುತ್ತವೆ. ಮೋಟಕಾದ ಕಾಂಡವನ್ನು ನೀಳವಾಗಿಯೂ ಕವಲೊಡೆಯದ ಕಾಂಡವನ್ನು ವಿಪರೀತವಾಗಿ ಕವಲೊಡೆಯುವಂತೆಯೂ ಎಲೆಗಳ ಸ್ಥಾನಗಳನ್ನು ಬದಲಾಯಿಸಿ ಅವುಗಳ ಸಮತೆ ಬದಲಾಗುವಂತೆಯೂ ಮಾಡುತ್ತವೆ. ಹೂಗಳಲ್ಲಿನ ದಳಗಳ ಸಂಖ್ಯೆ ಹೆಚ್ಚಾಗುತ್ತದೆ. ಕೇಸರಗಳು ಅಗಲವಾದ ದಳಗಳಾಗುತ್ತವೆ. ಅಂಡಾಶಯವೂ ಮಾರ್ಪಾಡಾಗುತ್ತದೆ. ವೈರಸ್, ಬ್ಯಾಕ್ಟೀರಿಯ. ಆಲ್ಬುಗೊ ಮುಂತಾದ ಜೀವಿಗಳು ಈ ರೀತಿಯ ಬಾಹ್ಯರಚನಾ ವೈಪರೀತ್ಯಗಳನ್ನುಂಟುಮಾಡುತ್ತವೆ. ಮಾಟಗಾತಿಯ ಬರಲು (ವಿಚಸ್ ಬ್ರೂಮ್) ಎಂದು ಕರೆಯಲ್ಪಡುವ ರಚನೆಯೂ ಇದೇ ರೀತಿಯಲ್ಲಿ ಉಂಟಾದುದು. ಇದರಲ್ಲಿ ಕೊಂಬೆಗಳು ಅಧಿಕಸಂಖ್ಯೆಯಲ್ಲಿ ಉತ್ಪತ್ತಿಯಾಗಿ ಒಂದರ ಪಕ್ಕದಲ್ಲೊಂದು ಬೆಳೆದು ಪೊರಕೆಯಂತೆ ಕಾಣುತ್ತವೆ. ಟ್ಯಾಫ್ರೈನ ಎಂಬ ಶಿಲೀಂಧ್ರ ಇದಕ್ಕೆ ಕಾರಣ. ಇವು ಅಂಗಗಳಿಗೆ ಸಂಬಂಧಿಸಿದ ಗಂಟುಗಳು.

ಗಂಟುಗಳ ಅಧಿಕ ಆಹಾರಾಂಶ ಶೇಖರವಾಗಿರುತ್ತದೆ. ಫಾರ್ಮೋಸದಲ್ಲಿ ಬೆಳೆಯುವ ಜೈಜಾನಿಯ ಗಿಡದಲ್ಲಿ ಯುಸ್ಟಿಲ್ಯಾಗೊ ಎಂಬ ಶಿಲೀಂಧ್ರದಿಂದ ಉಂಟಾಗುವ ಗಂಟುಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಸಿಡಾರ್ ಆಪಲ್ ಗಂಟಿನಲ್ಲಿ ಪಿಷ್ಟವು ಶೇಖರವಾಗಿರುತ್ತದೆ. ಹಿಮಾಲಯದಲ್ಲಿ ಬೆಳೆಯುವ ಆರ್ಬಿಕ ಪಾರ್ವಿಫೋಲಿಯ ಎಂಬ ಗಿಡದಲ್ಲಿ ಉಂಟಾಗುವ ಗಂಟುಗಳನ್ನು ಅನಿನ ನಿವಾಸಿಗಳು ತಿನ್ನುವುದುಂಟು.

ಕ್ರೌನ್ ಗಾಲ್ ಮುಂತಾದ ಗಂಟುಗಳಲ್ಲಿ ಅಧಿಕ ಮೊತ್ತದ ಪ್ರೋಟಿನ್ ಅಂಶವಿರುತ್ತದೆ. ಪಿಷ್ಟ, ಪೆಕ್ಟಿನ್, ಸೆಲ್ಯುಲೋಸ್, ಲಿಗ್ನಿನ್ ಮುಂತಾದ ಪದಾರ್ಥಗಳು ಇತರ ಜೀವಕೋಶಗಳಲ್ಲಿರುವುದಕ್ಕಿಂತಲೂ ಹೆಚ್ಚು ಮೊತ್ತದಲ್ಲಿರುತ್ತವೆ.

ರೂಬಸ್ ಜಾತಿಯ ಗಿಡಗಳಲ್ಲಿ ಹಾಗೂ ಸೇಬು, ಪಿಯರ್, ಪ್ಲಮ್, ಚೆರ್‍ರಿ, ಏಪ್ರಿಕಾಟ್, ಪೀಚ್ ಗಿಡಗಳಲ್ಲಿ ಬ್ಯಾಕ್ಟೀರಿಯ ರೂಬಿ ಎಂಬ ಶಿಲೀಂಧ್ರದಿಂದ ಗಂಟುಗಳಾಗುತ್ತವೆ. (ಎಂ.ಸಿ.ಆರ್.)

**ಗಂಟು ನೊಣ :** ಕೀಟವರ್ಗದ ಸಸಿಡೊಮೈಯಿಡೀ ಕುಟುಂಬದ ಕೀಟಗಳಿಗಿರುವ ಸಾಮಾನ್ಯ ಹೆಸರು. ವಿವಿಧ ಬಗೆಯ ಸಸ್ಯಗಳಿಗೆ ಅಂಟಿ ಗಂಟುಗಳನ್ನು ಉಂಟುಮಾಡುವುದರಿಂದ ಈ ಹೆಸರು. ಸೊಳ್ಳೆಗಳನ್ನು ಹೋಲುತ್ತದೆ. ಅನೇಕ ಬಗೆಯ ಗಂಟು ನೊಣಗಳಿವೆ. ಉದ್ದವಾದ ಮಣಿಸರದಂತಿರುವ ಕುಡಿಮೀಸೆಗಳು, ಮೀಸೆಗಳ ಮೇಲೆ ಇರುವ ಬಿರುಸುಕೂದಲು, ಸರಳರೀತಿಯ ಕಾಂಡಗಳುಳ್ಳ ಎರಡು ರೆಕ್ಕೆಗಳು ಇವುಗಳ ವಿಶೇಷ ಲಕ್ಷಣಗಳು.

ಪ್ರೌಢಕೀಟಗಳು ಸಸ್ಯಾಹಾರಿಗಳು. ಕೆಲವು ಪ್ರಭೇದಗಳು ಆರ್ಥಿಕ ಮಹತ್ತ್ವವಿರುವ ಹಲವಾರು ಸಸ್ಯಗಳ ಮೇಲೆ ಪರಾವಲಂಬಿಗಳಾಗಿದ್ದು ಗಂಟುಗಳ ಉತ್ಪನ್ನಕ್ಕೆ ಕಾರಣವಾಗುತ್ತವೆ. ಆದರೆ ಇವುಗಳ ಡಿಂಬಗಳು ತಮ್ಮ ಆಹಾರ ಸೇವನೆಯಲ್ಲಿ ಪ್ರೌಢ ಕೀಟಗಳಿಂದ ಬೇರೆಯಾಗಿವೆ. ಕೆಲವು ಬಗೆಗಳ ಡಿಂಬಗಳು ಬೇರೆ ಬಗೆಯ ಕೀಟಗಳನ್ನು ಮುಖ್ಯವಾಗಿ ತಿಗಣೆ ಮತ್ತು ನುಸಿಗಳನ್ನು ತಿನ್ನುತ್ತವೆ. ಇನ್ನು ಕೆಲವು ಬಗೆಯ ಡಿಂಬಗಳು, ಕೊಳೆಯುತ್ತಿರುವ ಸಸ್ಯಗಳನ್ನು ತಿಂದು ಜೀವಿಸುತ್ತವೆ.

ಗಂಟು ನೊಣಗಳಲ್ಲಿ ಬಹಳ ಮುಖ್ಯವಾದವು ಮತ್ತು ವಿಶೇಷ ಹಾನಿಕಾರಕವಾದವುಗಳೆಂದರೆ *ಹೆಸ್ಸಿಯನ್* ನೊಣದ ಮರಿ. ಉತ್ತರ ಅಮೆರಿಕ, ಯುರೋಪ್ ಮತ್ತು ನ್ಯೂಜ಼ೀಲೆಂಡ್ ಮುಂತಾದ ದೇಶಗಳಲ್ಲಿ ಗೋದಿ ಬೆಳೆಯನ್ನು ನಾಶಮಾಡುತ್ತವೆ. ಪಿಯರ್‌ನ ನೊಣ ಯುರೋಪಿನಲ್ಲಿ ಪಿಯರ್ ಹಣ್ಣಿಗೆ ಬಹಳ ಹಾನಿಕಾರಕವಾಗಿದೆ. ಹೀಗೆಯೇ ಜೋಳದ ತೆನೆಯ ನೊಣವಾದ *ಕಾಂಟರಿನಿಯ ಆಂಡ್ರೋಪೋಗೋನಿಸ್* ದಕ್ಷಿಣ ಭಾರತದ ಪೈರಿಗೆ ಹಾನಿಯನ್ನುಂಟುಮಾಡುತ್ತದೆ. (ಜೆ.ಪಿ.ಸಿ.)

**ಗಂಟೆ :** ಪೂಜಾದಿಕಾಲಗಳಲ್ಲಿ ಬಾರಿಸುವ ಒಂದು ಬಗೆಯ ಶೋಭನ ವಾದ್ಯ. ಶುದ್ಧ ಕಂಚಿನಿಂದಾದ ಇದನ್ನು ಬಾರಿಸಿದಾಗ ಓಂಕಾರ ಧ್ವನಿಸುತ್ತದೆಂದು ಹೇಳಲಾಗಿದೆ. ಗಂಟೆ ಎಂಬುದು ಸಂಸ್ಕೃತದ ಘಂಟಾ ಪದದ ತದ್ಭವ. ಶೈವಾಗಮದಲ್ಲಿ ತಿಳಿಸಿರುವಂತೆ ಸಾಮಾನ್ಯ ಗಂಟೆಯ ಎತ್ತರ 5” ಎತ್ತರದಷ್ಟೇ ವಿಸ್ತಾರ. ಓಷ್ಠ ನಾಲ್ಕು ಗೋದಿಯ ದಪ್ಪ. ಶಿಖರ 1” ಕತ್ತು ½” ನಾಲಗೆ 1’. ಮಹಾ ಘಂಟೆಯಾದರೆ ಎತ್ತರ 7” ವಿಸ್ತಾರ 8” ಶಿಖರ 2”.

ಕೈಗಂಟೆಯ ನಾಲಗೆಯಲ್ಲಿ ಸರಸ್ವತಿಯೂ ಮುಖದಲ್ಲಿ ಬ್ರಹ್ಮನೂ ಹೊಟ್ಟೆಯಲ್ಲಿ ರುದ್ರನೂ ದಂಡದಲ್ಲಿ ವಾಸುಕಿಯೂ ತುದಿಯಲ್ಲಿ ಚಕ್ರವೂ ಅಧಿದೇವತೆಗಳಾಗಿ ನೆಲಸಿದ್ದಾರೆಂದು ನಂಬಿಕೆ. ಘಂಟಾಸ್ವನವನ್ನು ನಾದಬ್ರಹ್ಮವೆಂದು ಸಂಬೋಧಿಸಲಾಗಿದೆ. ಮೊದಲು ಈ ದೇವತೆಗಳನ್ನು ಪೂಜಿಸಿ ಬಳಿಕ ಗಂಟೆಯನ್ನು ಹೊಡೆಯಬೇಕು. ಉಪಯೋಗಿಸುವಾತ ತನ್ನ ನಾಭಿಯ ಕೆಳಗೆ ಬರುವಂತೆ ಗಂಟೆಯನ್ನು ಹಿಡಿದುಕೊಂಡು ಹೊಡೆಯಬಾರದು. ಗಂಟೆಯ ಧ್ವನಿಯಲ್ಲಿ ಒಡಕಾಗಲಿ ಮರ್ಮರ ಘರ್ಘರ ಶಬ್ದಗಳಾಗಲೀ ಇರಬಾರದು. ಗಂಟೆಯಮೇಲೆ ಹನುಮಂತ ಚಕ್ರ ಗರುಡ ವೃಷಭಶೂಲ ಕಮಲ ಇತ್ಯಾದಿ ಚಿಹ್ನೆಗಳಿರುವುದುಂಟು.

ಯಾವುದೇ ಶುಭಕಾರ್ಯವನ್ನು ಘಂಟಾನಾದವಿಲ್ಲದೆ ಪ್ರಾರಂಭಿಸುವಂತಿಲ್ಲ. ಪದ್ಮಪುರಾಣದಲ್ಲಿ “ಸರ್ವವಾದ್ಯಮಯಿ ಘಂಟಾವಾದ್ಯಾಭಾವೇ ನಿಯೋಜಯೇತ್” ಎಂದು ತಿಳಿಸಿರುವಂತೆ ಗಂಟೆ ಸರ್ವಮಂಗಳ ವಾದ್ಯಗಳ ಪ್ರತೀಕವಾಗಿದೆ. ಸ್ಕಾಂದ ಪುರಾಣದಲ್ಲಿ “ಘಂಟಾನಾದೇನ ದೇವೇಶಃ ಪ್ರೀತೋಭವತಿ ಕೇಶವಃ”. ಎಂದಿದೆ. “ನಗಾರಿ ಚಿಹ್ನಿತಾ ಘಂಟಾ ರಥಾಂಗೇನಾ ಸಮನ್ವಿತಾ ವಾದನಾತ್ ಕುರುತೇನಾಶಂ ಜನ್ಮಮೃತ್ಯು ಭಯಾನಿ ಚ” ಎಂಬ ಆರ್ಯೋಕ್ತಿಯೂ ಇದೆ. ಇದರಂತೆ ಭಗವಂತನ ನಿತ್ಯ ಕಿಂಕರನಾದ ಗರುಡ ಇಲ್ಲವೆ ಚಕ್ರದಿಂದ ಅಂಕಿತವಾದ ಗಂಟೆಯ ನಾದದಿಂದ ಭಗವಂತ ಪ್ರೀತನಾಗುತ್ತಾನಾಗಿ ಜನ್ಮಮೃತ್ಯು ಭಯಗಳು ತಪ್ಪುತ್ತವೆ. ದೇವೀ ಮಾಹಾತ್ಮ್ಯದಲ್ಲಿ “ಹಿನಸ್ತಿ ದೈತ್ಯತೇಜಾಂಸಿ ಸ್ವನೇನಾಪೂರ್ಯ ಯಾ ಜಗತ್ ಸಾ ಘಂಟಾಪಾತುನೋ ದೇವೀ ಪಾಪೇಭ್ಯೋಃ ಸುತಾನಿವ” ಎಂದಿದೆ. ಇದರಂತೆ ಘಂಟಾನಾದದಿಂದ ಮನಸ್ಸಿನಲ್ಲಿರುವ ರಾಕ್ಷಸೀಭಾವನೆಗಳು ದೂರವಾಗಿ ದೈವೀಭಾವನೆಗಳು ಆವಿರ್ಭವಿಸುತ್ತವೆ. ಓಂಕಾರನಾದ ಸಹಿತ ಘಂಟಾಧ್ವನಿರೂಪ ವರ್ಣಶಕ್ತಿಯಿಂದ ವರ್ಣಘಟಕಮಂತ್ರಗಳೂ ಇಷ್ಟ ದೇವತೆಗಳೂ ಎಚ್ಚರಗೊಳ್ಳುವುದರಿಂದ ದೇವಪೂಜಾರಂಭಕಾಲದಲ್ಲಿ ಗಂಟೆಯನ್ನು ಪೂಜಿಸಿ ಬಳಿಕ ಧ್ವನಿ ಮಾಡಬೇಕು. ಈ ಕಾರಣದಿಂದ ಗಂಟೆಯನ್ನು ಮಂತ್ರಮಾತಾ ಎಂದು ಕರೆಯುತ್ತಾರೆ. ಸಚ್ಚಿದಾನಂದ ಸಾಕ್ಷಾತ್ಕಾರಕ್ಕೆ ಮೂಲವಾದ ನಾದ ತತ್ತ್ವದ ಬಾಹ್ಯಪ್ರಯೋಗವಾಗಿ ಗಂಟೆ ಬಳಕೆಗೆ ಬಂದಿತೆಂದೂ ಕ್ರಮೇಣ ದೇವತಾಲಾಂಛನವೆಂಬ ಗೌರವವನ್ನು ಹೊಂದಿ ಪೂಜಾರ್ಹವಾಯಿತೆಂದೂ ಹೇಳಲಾಗಿದೆ. ಘಂಟಾನಾದವಿಲ್ಲದ ಪೂಜೆ ಇಲ್ಲ. ಪೂಜಾಕಾಲವನ್ನು ಬಿಟ್ಟು ಇತರ ಕಾಲಗಳಲ್ಲಿ ಘಂಟಾನಾದವಿಲ್ಲ.

ದೇವಾರ್ಚನೆ ಆವಾಹನೆ ಧೂಪ ದೀಪ ಅರ್ಘ್ಯ ನೈವೇದ್ಯ ಜಪ ಸ್ತುತ್ಯವಸಾನ ಪೂರ್ಣಾಹುತಿ ವಿಷ್ವಕ್ಸೇನಾರ್ಚನೆ ಗಣಪತಿ ಪೂಜೆ ಬಲಿಪ್ರದಾನ ಈ ಕಾಲಗಳಲ್ಲಿ ಘಂಟಾನಾದ ಮಾಡಬೇಕು. ಈನಾದ ನಮ್ಮನ್ನು ಎಚ್ಚರಿಸುವುದು ಮಾತ್ರವಲ್ಲದೆ ಸರ್ವವಿಘ್ನಗಳನ್ನೂ ನಾಶಪಡಿಸಿ ಮಂಗಳವನ್ನುಂಟುಮಾಡುತ್ತದೆ.

ಗಂಟೆಯನ್ನು ಆಗಮೋಕ್ತಪ್ರಕಾರದಲ್ಲಿ ಪ್ರತಿಷ್ಠೆ ಮಾಡಿ ಬಳಿಕ ಉಪಯೋಗಿಸಬೇಕು. ಅಸಂಸ್ಕೃತ ಗಂಟೆಯನ್ನು ಬಾರಿಸುವುದರಿಂದ ಪೂಜೆ ನಿಷ್ಫಲವಾಗುತ್ತದೆ. ಗಂಟೆಯನ್ನು ಬಾರಿಸುವುದಕ್ಕೆ ಮೊದಲು “ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಾಕ್ಷಸಾಂ ಕುರ್ವೇಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ” (ದೇವರ ಆಗಮನಕ್ಕಾಗಿ ರಕ್ಕಸರ ನಿರ್ಗಮನಕ್ಕಾಗಿ ದೇವಸ್ಥಾನದ ಲಾಂಛನವಾದ ಘಂಟಾಧ್ವನಿಯನ್ನು ಮಾಡುತ್ತೇನೆ) ಎಂದು ಹೇಳಿ ಬಳಿಕ ಘಂಟಾನಾದ ಮಾಡುವುದು ಇಂದಿಗೂ ರೂಢಿಯಲ್ಲಿದೆ. ವೈಷ್ಣವ ದೇವಾಲಯಗಳಲ್ಲಿ ಮಹಾನಿವೇದನ ಕಾಲದಲ್ಲಿ ಬಾರಿಸುವುದಕ್ಕಾಗಿಯೇ ಪ್ರತ್ಯೇಕವಾದ ಒಂದು ದೊಡ್ಡ ಗಂಟೆ ಇರುತ್ತದೆ. ಕೆಲವಡೆ ದೇವಮಂದಿರದ ಬಾಗಿಲಿಗೆ ಚಿಕ್ಕ ಚಿಕ್ಕ ಗಂಟೆಗಳನ್ನು ಜೋಡಿಸಿರುವುದುಂಟು. ಎಲ್ಲ ಪ್ರಾರ್ಥನಾ ಮಂದಿರಗಳಲ್ಲಿಯೂ ಒಂದು ದೊಡ್ಡ ಸಾಧಾರಣವಾಗಿ ದೊಡ್ಡದೊಂದು ಗಂಟೆ ಇರುತ್ತದೆ. ಪ್ರಾರ್ಥನೆಗೆ ಮೊದಲು ಎಲ್ಲರೂ ಮಂದಿರಕ್ಕೆ ಬಂದು ಸೇರಲು ಅನುಕೂಲಿಸುವಂತೆ ಈ ಗಂಟೆಯನ್ನು ಬಾರಿಸುತ್ತಾರೆ. ಹಿಂದೂ ದೇವಾಲಯಗಳಲ್ಲಿ ದೇವರ ಮುಂಭಾಗದಲ್ಲೇ ದೊಡ್ಡ ಗಂಟೆಗಳನ್ನು ಕಟ್ಟಿರುತ್ತಾರೆ. ಭಕ್ತರು ದೇವರ ದರ್ಶನಕ್ಕೆ ಹೋದಾಗ ಗಂಟೆ ಬಾರಿಸಿ ಬಳಿಕ ನಮಸ್ಕರಿಸುತ್ತಾರೆ.

ಶ್ರೀ ವೈಷ್ಣವ ಆಚಾರ್ಯಪರಂಪರೆಗೆ ಸೇರಿದ ವೇದಾಂತ ದೇಶಿಕರು ಭಗವಂತನ ಘಂಟಾವತಾರವೆಂದು ಪ್ರತೀತಿ. ಶ್ರೀ ವೆಂಕಟೇಶನ ಭಕ್ತರಾದ ಇವರ ಮಾತಾಪಿತೃಗಳಿಗೆ ಬಹುಕಾಲದ ತನಕ ಮಕ್ಕಳಿರಲಿಲ್ಲ. ಒಮ್ಮೆ ಇವರು ಮಲಗಿದ್ದಾಗ ತಿರುಪತಿಯ ವೆಂಕಟೇಶನ ಗರ್ಭಗೃಹದ ಗಂಟೆಯನ್ನು ಆಚಾರ್ಯರ ತಾಯಿಯವರು ನುಂಗಿದಂತೆ ಸ್ವಪ್ನ ಕಂಡು ಬೆಳಗ್ಗೆ ದೇವಸ್ಥಾನದಲ್ಲಿ ನೋಡಲಾಗಿ ಆ ಗಂಟೆಯೂ ಇರಲಿಲ್ಲ. ತಮ್ಮ ತಾಯಿಯ ಗರ್ಭದಲ್ಲಿ ತಿರುಪತಿಯ ಶ್ರೀವೆಂಕಟೇಶನ ಘಂಟಾ ಸ್ವರೂಪವಾಗಿ ಶ್ರೀ ಆಚಾರ್ಯರು ಆವಿರ್ಭವಿಸಿ ಘಂಟಾವತಾರವೆಂದು ಪ್ರಸಿದ್ಧರಾಗಿ ಶಿಷ್ಯವರ್ಗದ ದಾನವೀ ಭಾವಗಳನ್ನು ದೂರೀಕರಿಸಿ ಅವರ ಮನಸ್ಸಿನಲ್ಲಿ ದೈವೀಭಾವಗಳನ್ನು ನೆಲೆಗೊಳಿಸುವಂತೆ ಮಾಡಿದ ಮಹಾತ್ಮರಾಗಿದ್ದಾರೆ. (ಎಸ್.ಎನ್.ಕೆ.; ಜಿ.ಕೆ.ಎಚ್.)

ಲೌಕಿಕವಾಗಿ ಗಂಟೆಯ ಬಳಕೆ ಎಷ್ಟೆಂಬುದನ್ನು ನೋಡಬಹುದು. ಜಿಲ್ಲಾ ಮತ್ತು ತಾಲ್ಲೂಕು ಕಚೇರಿಗಳಲ್ಲಿ ವೇಳೆ ತಿಳಿಸಲು ದಿನದಿನವೂ ಗಂಟೆ ಬಾರಿಸುವ ಸಂಪ್ರದಾಯವಿತ್ತು. ಇಲ್ಲಿನ ಗಂಟೆಗಳಿಗೆ ಜಾಗಟೆಯ ರೂಪವಿರುತ್ತದೆ. ದಪ್ಪ ಲೋಹದ ತಟ್ಟೆಯೊಂದನ್ನು ಹಗ್ಗದಿಂದ ನೇತುಹಾಕಿದ್ದು ಅದನ್ನು ಲೋಹದ ಇಲ್ಲವೆ ಮರದ ದಾಂಡಿನಿಂದ ಬಾರಿಸುವುದು ವಾಡಿಕೆ. ಶಾಲೆ ಕಾಲೇಜುಗಳಲ್ಲಿ ರೈಲು ನಿಲ್ದಾಣಗಳಲ್ಲಿ ಉಪಯೋಗಿಸುವ ಗಂಟೆಗಳು ಮತ್ತೊಂದು ಬಗೆಯವು. ದಪ್ಪದೊಂದು ಕಬ್ಬಿಣದ ತುಂಡನ್ನು ಹಗ್ಗದಿಂದ ನೇತು ಹಾಕಿ ಅದನ್ನು ಸುತ್ತಿಗೆಯಿಂದ ಬಡಿಯುವುದು ಇಲ್ಲಿಯ ವಾಡಿಕೆ. ರಸಿಕರನೇಕರು ಮನೆಯ ಬಾಗಿಲಿಗೆ ತೋರಣದಂತೆ ಕಿರುಗಂಟೆಯ ಸಾಲನ್ನು ಅಳವಡಿಸುತ್ತಾರೆ. ಬಾಗಿಲ ತೆರೆ ಅಲುಗಿದಾಗ ಗಂಟೆಗಳ ಕಿರುದನಿ ಮನೋಹರವಾಗಿ ಹೊಮ್ಮುತ್ತದೆ. ಜಾನುವಾರುಗಳ ಕೊರಳುಗಳಿಗೆ ಮರದ, ತೆಂಗಿನ ಕರಟದ ಲೋಹದ ಗಂಟೆಗಳನ್ನು ಕಟ್ಟುವ ಅಭ್ಯಾಸ ಹಳ್ಳಿಗರಲ್ಲಿ ಇಂದಿಗೂ ಉಳಿದುಬಂದಿವೆ. ಕಾಡಿನಲ್ಲಿ ಮೇವಿಗಾಗಿ ಅಲೆಯುವ ಪ್ರಾಣಿಗಳಿಗೆ ಇದರಿಂದ ಬಹಳ ಪ್ರಯೋಜನವಿದೆ. ಅವು ಒಂದನ್ನೊಂದು ಹಿಂಬಾಲಿಸುತ್ತವೆ. ಕಳೆದುಹೋದ ಪ್ರಾಣಿಯ ಜಾಡು ಹಿಡಿಯುವಾಗಲೂ ಗಂಟೆಯ ದನಿ ಅನುವಾಗುತ್ತದೆ.

ವಾದ್ಯಮೇಳದಲ್ಲಿ ತಾಳದ ಒಂದು ಪ್ರಭೇದವಾಗಿ ಬಳಕೆಯಲ್ಲಿರುವ ತ್ರಿಕೋಣ ಗಂಟೆಯ ಒಂದು ರೂಪವೇ ಆಗಿದೆ. ಒಂದು ದೃಷ್ಟಿಯಲ್ಲಿ ಜಲತರಂಗವೂ ಗಂಟೆಯ ವಿನ್ಯಾಸವನ್ನೇ ಹೋಲುತ್ತದೆನ್ನಬಹುದು. ಫ್ಲ್ಯಾಂಡರ್ಸಿನ ಜನ ಶತಶತಮಾನಗಳಿಂದ ಪ್ರಯೋಗ ನಡಸಿ ಗಂಟೆಗಳಿಂದಲೇ ವಾದ್ಯವೊಂದನ್ನು ತಯಾರಿಸುವ ಪ್ರಯತ್ನ ಮಾಡಿದ್ದರೆನ್ನಲಾಗಿದೆ.

ಸಾಮಾನ್ಯವಾಗಿ ತವರ ಮಿಶ್ರಿತವಾಗಿರುವ ಕಂಚಿನಲ್ಲಿ ಗಂಟೆಗಳನ್ನು ತಯಾರಿಸುತ್ತಾರೆ. ಕೆಲವೊಮ್ಮೆ ಸತು–ಸೀಸ ಮತ್ತು ಬೆಳ್ಳಿ ಇವನ್ನೂ ಉಪಯೋಗಿಸುವುದುಂಟು. ಗಂಟೆಯಲ್ಲಿ ಬೆಳ್ಳಿಯನ್ನು ಬಳಸುವುದರಿಂದ ಅದರ ಧ್ವನಿ ಮಧುರವಾಗುವುದೆಂಬ ನಂಬಿಕೆ ಬಹಳ ಕಾಲದಿಂದ ಇದ್ದರೂ ಈಗ ಅದನ್ನು ಶಾಸ್ತ್ರವಿದರು ಒಪ್ಪುವುದಿಲ್ಲ. ಗಂಟೆಯ ಆಕೃತಿ, ಅದಕ್ಕೆ ಇರುವ ತಿರುವುಗಳು ಅದರ ಉದ್ದ, ಗಾತ್ರ, ಅಡ್ಡಳತೆ, ವಿವಿಧ ಭಾಗಗಳಲ್ಲಿನ ದಪ್ಪ ಇವನ್ನು ಅನುಭವದಿಂದ ನಿರ್ಧರಿಸುತ್ತಾರೆ.

ಗಂಟೆ ಉಬ್ಬಿರುವ ತೆರೆದ ಭಾಗದಲ್ಲಿಯ ಹೊರ ಮತ್ತು ಒಳಮುಖಗಳ ವಕ್ರತೆಗಳು ಪರಸ್ಪರ ವಿರುದ್ಧವಾಗಿವೆ. ಇದಕ್ಕೆ ಶಬ್ದ ಧನು (ಸೌಂಡ್ ಬೋ) ಎಂದು ಹೆಸರು. ಈ ಭಾಗದ ಸ್ಥೂಲತೆ ಅಲ್ಲಿಯ ಅಡ್ಡಳತೆಯ ಸುಮಾರು ಹನ್ನೆರಡನೆಯ ಒಂದು ಭಾಗದಿಂದ ಹದಿನೈದನೆಯ ಒಂದು ಭಾಗದಷ್ಟಿರುವುದು. ಗಂಟೆಯೊಳಗೆ ತೂಗಾಡುತ್ತಿರುವ ಅದರ ನಾಲಗೆ ಭಾಗವನ್ನು ಪ್ರಹರಿಸಿದಾಗ ನಾದೋತ್ಪತ್ತಿಯಾಗುತ್ತದೆ.

ವಿವಿಧಾಕೃತಿ ಮತ್ತು ಗಾತ್ರಗಳ ಗಂಟೆಗಳಿರುವಂತೆಯೇ ಗಂಟೆಗಳ ತೂಕಗಳಲ್ಲೂ ಭಾರಿ ಪ್ರಮಾಣದ ವೈವಿಧ್ಯ ಕಂಡುಬರುವುದು. ಹಲವಾರು ಟನ್‍ಗಳಷ್ಟು ಭಾರವಾದ ಗಂಟೆಗಳಿಂದ ಹಿಡಿದು ಕೆಲವೇ ಕೆಜಿಗಳಷ್ಟು ಹಗುರವಾಗಿರುವ ಗಂಟೆಗಳೂ ಉಂಟು. ರಷ್ಯಾದಲ್ಲಿ ಮಾಸ್ಕೊದ ಕ್ರೆಮ್‍ಲಿನ್ ಆವರಣದಲ್ಲಿರುವ ಸ್ಸಾರ್ ಕೊಲೊಕೊಲ್ (ಗಂಟೆಗಳ ರಾಜ) ಎಂಬ ರಷ್ಯನ್ ಗಂಟೆ ಪ್ರಪಂಚದಲ್ಲೇ ಅತಿ ದೊಡ್ಡದೆನ್ನಲಾಗಿದೆ. 19' ಎತ್ತರ. 22 1/2' ವ್ಯಾಸವಿರುವ ಇದರ ತೂಕ 200 ಟನ್ನುಗಳಿಗಿಂತಲೂ ಹೆಚ್ಚು. 1733–35ರಲ್ಲಿ ಎರಕ ಹೊಯ್ದ ಈ ಗಂಟೆಯನ್ನು ಒಂದು ಬಾರಿಯೂ ಬಾರಿಸಲಾಗಲಿಲ್ಲವೆಂಬುದು ಗಮನಾರ್ಹ ಸಂಗತಿ. ಇದನ್ನು ಬಂಧಿಸಿದ್ದ ಆಧಾರಗಳು ಸುಟ್ಟುಹೋದವಾಗಿ ಗಂಟೆ ಮೇಲಿನಿಂದ ಕೆಳಕ್ಕೆ ಬಿದ್ದು ಒಡೆದು ಹೋಯಿತು (1737). ಹಾಗೆ ಬಿದ್ದಾಗ 11 ಟನ್ ತೂಕದ ಅದರ ಭಾಗವೊಂದು ಮುರಿದು ಬಿದ್ದಿತು. ಟ್ರಾಟ್ಸ್‌ಕೋಯ್‌ನಲ್ಲಿಯ ಒಂದು ಗಂಟೆ 171 ಟನ್ ತೂಕವಿದೆ. ಸದ್ಯದಲ್ಲಿ ಬಳಕೆಯಲ್ಲಿರುವ ಗಂಟೆಗಳಲ್ಲಿ ಅತಿದೊಡ್ಡದು (110 ಟನ್) ಮಾಸ್ಕೋದಲ್ಲಿದೆ. ಇತರ ದೊಡ್ಡ ಗಂಟೆಗಳಿವು : ಪೀಕಿಂಗಿನದು (53 ಟನ್), ನಾತ್ರದಾಮ್‌ನದು (17 ಟನ್), ಫಿಲಿಡೆಲ್ಫಿಯದ ಇಂಡಿಪೆಂಡೆನ್ಸ್ ಗಂಟೆ (6½ ಟನ್), ವೆಸ್ಟ್‌ಮಿನ್‌ಸ್ಟರಿನ ಬಿಗ್‌ಬೆನ್ (13½ ಟನ್). ಇದು ಈಗ ಬಿರುಕು ಬಿಟ್ಟಿದೆ. ಅತಿ ಎತ್ತರದ ಗಂಟೆಗಳೆಂದರೆ ನ್ಯೂಯಾರ್ಕಿನ ಮೆಟ್ರೊಪಾಲಿಟನ್ ಲೈಫ್ ಇನ್ಶೂರೆನ್ಸ್ ಗೋಪುರದಲ್ಲಿಯ ( ಎತ್ತರ 700') ಗಂಟೆಗಳು. ಇವುಗಳ ಶಬ್ದವೇ ಮೈಲಿಗಳ ವರೆಗೂ ಕೇಳಿಸುತ್ತದೆನ್ನಲಾಗಿದೆ.

6ನೆಯ ಶತಮಾನದ್ದೆನ್ನಲಾದ, ಜಪಾನಿನ ಕಂಚಿನ ಗಂಟೆ. ಇಟಲಿಯ ಜಿನೊಆದ ಪ್ರಾಚ್ಯ ಶಿಲಾವಸ್ತು ಸಂಗ್ರಹಾಲಯದಲ್ಲಿದೆ

ಗಂಟೆಯ ನಿರ್ಮಾಣ ಕಾರ್ಯದಲ್ಲಿ ಮೊದಲು ಅದರ ಆಕಾರದ ಅಚ್ಚನ್ನು ಸಿದ್ಧಪಡಿಸಿಕೊಳ್ಳಬೇಕು. ಹೊಸ ಗಂಟೆಯ ರೂಪುರೇಷೆಗಳ ನಿರ್ಣಯದ ಬಳಿಕ ಅಚ್ಚಿನ ಒಳಭಾಗವನ್ನು ಇಟ್ಟಿಗೆಯಿಂದ ಕಟ್ಟಿ ಅದರ ಮೇಲೆ ಗಾರೆಯನ್ನು ಲೇಪಿಸಿ ಅದರ ಮೈಯನ್ನು ಬೇಕಾದ ರೂಪಕ್ಕೆ ತರಲಾಗುವುದು ಇದರ ಆಧಾರದ ಮೇಲೆ ಭಂಗುರವಾದ ಜೇಡಿಮಣ್ಣಿನಲ್ಲಿ ನಕಲಿ ಗಂಟೆಯನ್ನು ನಿರ್ಮಿಸಲಾಗುವುದು. ಅನಂತರ ನಿಜ ಗಂಟೆಯ ಹೊರಭಾಗದಲ್ಲಿರಬೇಕಾದ ಅಲಂಕಾರ ವಿನ್ಯಾಸ ಬರವಣಿಗೆ ಮೊದಲಾದವನ್ನು ನಕಲಿ ಗಂಟೆಯ ಮೇಲೆ ಮೇಣದಲ್ಲಿ ರೂಪಿಸಲಾಗುವುದು. ಎರಕದ ಅಚ್ಚಿನ ಹೊರಭಾಗವನ್ನು ಗಾರೆಯಿಂದ ರಚಿಸಿ ಕಾದ ಕಂಚಿನ ದ್ರವದ ಒತ್ತಡವನ್ನು ತಡೆದುಕೊಳ್ಳುವಂತೆ ಕಬ್ಬಿಣದ ಪಟ್ಟಿಗಳಿಂದ ಈ ಭಾಗವನ್ನು ದೃಢಪಡಿಸಲಾಗುವುದು. ಬಳಿಕ ಅಚ್ಚಿನ ಒಳ ಮತ್ತು ಹೊರಭಾಗಗಳನ್ನು (ಮಣ್ಣಿನ ನಕಲಿ ಗಂಟೆ) ಚೆನ್ನಾಗಿ ಒಣಗಿಸಿ, ಸುಡುವುದರಿಂದ ಮೇಣ ಕರಗಿ, ಹೊರಬಂದು, ಅಚ್ಚಿನ ಒಳ ಮತ್ತು ಹೊರ ಭಾಗಗಳು ಹೆಚ್ಚು ಗಟ್ಟಿಯಾಗುತ್ತವೆ. ಅಲಂಕಾರ ವಿನ್ಯಾಸ ಬರೆವಣಿಗೆಗಳ ಋಣರೂಪ ಅಚ್ಚಿನ ಹೊರ ಮುಖದ ಒಳಪದರದಲ್ಲಿ ಮುದ್ರಿತವಾಗಿರುತ್ತವೆ. ಮತ್ತೆ ಮುಚ್ಚಳವನ್ನು ಹೊರತೆಗೆದು ಚಕ್ಕೆ ಎಬ್ಬಿಸಿ ನಕಲಿ ಗಂಟೆಯನ್ನು ತೆಗೆಯಲಾಗುವುದು. ಹೊರ ಭಾಗವನ್ನು ಅದರ ಸ್ಥಾನದಲ್ಲಿ ಭದ್ರಪಡಿಸಿ ನಕಲಿ ಗಂಟೆಯ ಸ್ಥಳದಲ್ಲಿ ಕರಗಿದ ಕಂಚಿನ ದ್ರವವನ್ನು ಸುರಿಯಲಾಗುವುದು. 18 ಟನ್ ಭಾರವುಳ್ಳ ಗಂಟೆಯನ್ನು ನಿರ್ಮಿಸಲು ಕಾದ ಲೋಹದ ದ್ರವವನ್ನು ಸುರಿಯಲು ಸು. 15 ಮಿನಿಟುಗಳಾದರೂ ಬೇಕಾಗುವುದು. ಇದು ಆರಲು 36 ಗಂಟೆಗಳು ಬೇಕು. ಅನಂತರ ಅಚ್ಚನ್ನು ತೆಗೆದು ಗಂಟೆಯ ಮೇಲ್ಮೈಗಳಲ್ಲಿರಬಹುದಾದ ಪ್ರಕ್ಷೇಪಗಳನ್ನು ಬಿಟ್ಟಿ ಹಾಕಿ ಮೇಲ್ಮೈಯನ್ನು ನಯಗೊಳಿಸಿ ಮೆರುಗು ಕೊಡಲಾಗುವುದು. ಗಂಟೆಯ ತಯಾರಿಕೆಯಲ್ಲಿ ಕರಗಿದ ಲೋಹದ್ರವವನ್ನು ಅಚ್ಚಿನೊಳಗೆ ಹೊಯಿವುದೇ ಅತ್ಯಂತ ಕ್ಲಿಷ್ಟವಾದ ಕಾರ್ಯ. ಬಿರುಕು ಬೀಳದಂತೆಯೂ ಮಧ್ಯ ವಾಯು ಸೇರದಂತೆಯೂ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ ಗಂಟೆಯ ಸ್ವರ ಕೆಡುವುದು. ಅಚ್ಚಿನಿಂದ ಅದನ್ನು ತೆಗೆದ ಗಂಟೆಯ ಹೊರಮುಖವನ್ನು ಉಜ್ಜುವುದರಿಂದ ಸ್ವರದ ಸ್ಥಾಯಿಯನ್ನು ಎತ್ತರಿಸಬಹುದು. ಒಳಮುಖವನ್ನು ಉಜ್ಜುವುದರಿಂದ ಕಡಿಮೆ ಮಾಡಬಹುದು.

ಸಾಮಾನ್ಯವಾಗಿ ಭಾರಿ ಪ್ರಮಾಣದ ಗಂಟೆಯನ್ನು ಅದರ ಶಿಖಾಗ್ರದಲ್ಲಿ ತೂಗುಹಾಕಿ ಗಂಟೆ ಉಬ್ಬಿರುವ ಕೆಳ ತುದಿಯಲ್ಲಿ ಸುತ್ತಿಗೆಯಿಂದ ಬಡಿದು ಶಬ್ದ ಹೊರಹೊಮ್ಮುವಂತೆ ಮಾಡುವರು. ಗಂಟೆಯನ್ನು ಸರಿಯಾದ ರೀತಿಯಲ್ಲಿ ಬಾರಿಸಿದಾಗ ಎರಡು ರೀತಿಯ ಸ್ವರಗಳು ಹೊರಹೊಮ್ಮುತ್ತವೆ : ಪ್ರವಾಹ ಧ್ವನಿ, ಗುಂಜನ ಸ್ವರ (ಹಂ ನೋಟ್), ಗಂಟೆಯಿಂದ ಹೊರ ಹೊಮ್ಮುವ ಶಬ್ದದಲ್ಲಿ ಪ್ರಹಾರ ಧ್ವನಿಯನ್ನು ಬಿಟ್ಟು ಐದು ಮುಖ್ಯ ಅಂಶ ಸ್ವರಗಳನ್ನು ಗುರುತಿಸಬಹುದೆಂದು ತಿಳಿಯಲಾಗಿದೆ. ಇವುಗಳಿಗೆ ನಾಮಿನಲ್,

ಮಾಸ್ಕೋದಲ್ಲಿರುವ ಸಾರ್ ಕೊಲೊಕೊಲ್ ಗಂಟೆ

ಪಂಚಮ, ಟರ್ಸ್, ಮೂಲನಾದ ಮತ್ತು ಗುಂಜನಸ್ವರವೆಂದು ಹೆಸರು. ಹೆಚ್ಚಿನ ಸ್ಥಾಯಿ ಇರುವ ಇನ್ನೂ ಕೆಲವು ಅಂಶಸ್ವರಗಳಿರುವುವಾದರೂ ಅವು ಬಲು ಬೇಗ ಕಾಲದೊಂದಿಗೆ ನಶಿಸಿಹೋಗುತ್ತವೆ.

ಗಂಟೆಯ ನಿರ್ಮಾಪಕರು ಅದರ ಬೇರೆ ಬೇರೆ ಭಾಗಗಳಲ್ಲಿ ದಪ್ಪವನ್ನು ಯಥೋಚಿತವಾಗಿ ನೇರ್ಪುಗೊಳಿಸಿ ಲಘುಸ್ವರಗಳು (ಲೋಅರ್) ಸಾಧ್ಯವಾದಷ್ಟು ಮಟ್ಟಿಗೆ ಗೌಣಸ್ವರಗಳಾಗಿರುವಂತೆಯೂ (ಹಾರ್ಮೋನಿಕ್ಸ್) ಗುಂಜನ ಸ್ವರ, ಮೂಲನಾದ ಮತ್ತು ನಾಮಿನಲ್ ಇವು ಮೂರೂ ಅನುಕ್ರಮವಾಗಿರುವ ಅಷ್ಟಮ ಸ್ವರಗಳಾಗಿರುವಂತೆಯೂ ಮೂಲನಾದ ಮತ್ತು ಪ್ರಹಾರ ಧ್ವನಿ ಇವು ಒಂದೇ ಸ್ಥಾಯಿವುಳ್ಳವಾಗಿರುವಂತೆಯೂ ಅಳವಡಿಸಲು ಪ್ರಯತ್ನಿಸುತ್ತಾರೆ. ಪ್ರಹಾರ ಧ್ವನಿಯೊಂದರ ಅಸ್ತಿತ್ವ ಅತ್ಯಂತ ವಿಲಕ್ಷಣವಾಗಿದ್ದು ಅದರ ಬಗೆಗಿನ ಯಾವುದೇ ರೀತಿಯ ಭೌತ ವಿವರಣೆ ತಿಳಿದಿಲ್ಲ. ಗಂಟೆಯಿಂದ ಹೊರಹೊಮ್ಮುವ ಅಂಶ ಸ್ವರಗಳನ್ನು ಶ್ರುತಿಕವಲೊಂದರ ಸಹಾಯದಿಂದ ಅನುನಾದವಾಗಿ ಹೊರಡಿಸಬಹುದಾದರೂ ಪ್ರಹಾರ ಧ್ವನಿಯನ್ನು ಈ ರೀತಿ ಹೊರಸೆಳೆಯುವುದು ಅಸಾಧ್ಯ. ಅಲ್ಲದೆ ಅನುನಾದಕದ ಸಹಾಯದಿಂದ ಈ ನಾದವನ್ನು ಪತ್ತೆಹಚ್ಚಲು ಸಾಧ್ಯವೂ ಇಲ್ಲ.

ಹಾಗೂ ಇದಕ್ಕೆ ಮತ್ತೊಂದು ಸ್ವರದೊಂದಿಗೆ ಪ್ರಹಾರಧ್ವನಿ ಮಟ್ಟದಷ್ಟೇ ಇರುವ ವಿಸ್ಪಂದನಗಳನ್ನು (ಬೀಟ್ಸ್) ಉತ್ಪತ್ತಿ ಮಾಡುವ ಸಾಮರ್ಥ್ಯವೂ ಇರುವುದಿಲ್ಲ.

ಗಂಟೆಯೊಂದರ ಬಡಿತದ ಅನಂತರದ ವಿವಿಧ ಕಾಲಗಳಲ್ಲಿಯ ಶ್ರವಣ ಸಂಬಂಧವಾದ ವರ್ಣಪಟಲಗಳನ್ನು ಜೋನ್ಸ್ ಮತ್ತು ಅಲ್ಡರ್‌ಮನ್ ಎಂಬ ವಿಜ್ಞಾನಿಗಳು ನಿರ್ಣಯಿಸಿರುವರು. ಕರ್ಬಿಸ್ ಮತ್ತು ಗಿಯನಿನಿ ಎಂಬ ವಿಜ್ಞಾನಿಗಳು ಟೈಸರ್ ವಿಧಾನದಿಂದ ಅಂದರೆ ವಾಲ್ವ್ ಆಂದೋಲಕ ಮತ್ತು ಧ್ವನಿವರ್ಧಕ ಯಂತ್ರಗಳ ಸಹಾಯದಿಂದ ಪ್ರತಿಯೊಂದು ಅಂಶಸ್ವರವನ್ನು ಗಂಟೆಯಲ್ಲಿ ಹೊರಹೊಮ್ಮಿಸಿ ಗಂಟೆಯ ಕಂಪನ ಮೇಲ್ಮೈಯನ್ನು ಸ್ಟೆತೊಸ್ಕೋಪ್ ಒಂದರಿಂದ ಪರೀಕ್ಷಿಸಿ ಗಂಟೆಯ ಮೇಲಿನ ನಿಸ್ಪಂದನ ರೇಖೆಗಳ ಶೋಧನೆಯಲ್ಲಿ ಜಯಪ್ರದರಾಗಿದ್ದಾರೆ.

ಗಂಟೆಯ ಕಂಪನ ರೀತಿಗಳು ಗುಂಡಾದ ತಟ್ಟೆಗಿರುವಂತೆಯೇ ಇರುತ್ತವೆ. ನಿಸ್ಪಂದನ ಅಥವಾ ಸ್ಥಾಯೀರೇಖೆಗಳಿಂದ ಅಂಚು ಪರಸ್ಪರ ವಿರುದ್ಧ ರೀತಿಯಲ್ಲಿ ಕಂಪಿಸುತ್ತಿರುವ ಭಾಗಗಳಾಗಿ ವಿಭಾಗಿಸಲ್ಪಡುವುದು. ಈ ರೀತಿ ವಿಭಾಗಿಸಲ್ಪಟ್ಟ ಭಾಗಗಳು ನಾಲ್ಕಕ್ಕೆ ಕಡಿಮೆ ಇಲ್ಲದಂತೆ ಸರಿಸಂಖ್ಯೆಯಲ್ಲಿರುತ್ತವೆ. ಅಂಚಿನ ವಿವಿಧ ಭಾಗಗಳಲ್ಲಿ ತೂಗು ಹಾಕಿದ ಬೆಂಡಿನ ಚೆಂಡೊಂದನ್ನು ಸ್ಪರ್ಶಿಸುವುದರಿಂದ ಇದನ್ನು ಪರೀಕ್ಷಿಸಬಹುದು. ಅಥವಾ ಗಂಟೆಯನ್ನು ತಲೆಕೆಳಗುಮಾಡಿ ನೀರನ್ನು ತುಂಬಿ ಅಂಚನ್ನು ಕಮಾನೊಂದರಿಂದ ನುಡಿಸುವುದರಿಂದ ನಿಸ್ಪಂದನ ರೇಖೆಗಳನ್ನು ಬಿಟ್ಟು ಉಳಿದೆಲ್ಲ ಬಿಂದುಗಳಿಂದಲೂ ಹೊರಬರುತ್ತಿರುವ ಅಲೆಗಳನ್ನು ಕಾಣಬಹುದು.

(ಜಿ.ಎಸ್.ಎಸ್.ಎಸ್.)

**ಗಂಟೆಹಕ್ಕಿ :** ಹಲವಾರು ಜಾತಿಯ ಹಕ್ಕಿಗಳ ಕೂಗು ಗಂಟೆಯ ನಿನಾದವನ್ನು ಹೋಲುವುದರಿಂದ ಈ ಹಕ್ಕಿಗಳಿಗೆ ಈ ಹೆಸರಿದೆ. ಆದರೆ ಮುಖ್ಯವಾಗಿ ದಕ್ಷಿಣ ಅಮೆರಿಕದಲ್ಲಿ ವಾಸಿಸುವ ಕ್ಯಾಂಪನೀರೊ ಗುಂಪಿಗೆ ಸೇರಿದ 4 ಪ್ರಭೇದಗಳಿಗೆ ಮುಖ್ಯವಾಗಿ *ಚಾಸ್ಮೋರಿಂಕಸ್ ನಿವೀಯಸ್* ಪ್ರಭೇದಕ್ಕೆ–ಈ ಹೆಸರು ಅನ್ವಯಿಸುತ್ತದೆ. ಇದೊಂದು ಸಣ್ಣಹಕ್ಕಿ. ಇದರ ನೆತ್ತಿಯ ಮೇಲೆ ಕೋಡಿನಂಥ ಶಿಖೆ ಇದೆ. ಬಹಳ ಇಂಪಾಗಿ, ನಳಿಕೆ–ಗಂಟೆಯ ನಾದವನ್ನು ಹೋಲುವ ರೀತಿಯಲ್ಲಿ ಕೂಗುತ್ತದೆ.

ಆಸ್ಟ್ರೇಲಿಯದ ಕೆಲವು ಜೇನುಹಕ್ಕಿಗಳಿಗೂ ಗಂಟೆಹಕ್ಕಿಗಳು ಎಂಬ ಹೆಸರಿದೆ. ಪೂರ್ವ ಆಸ್ಟ್ರೇಲಿಯದಲ್ಲಿ ವಾಸಿಸುವ ಕಣ್ಣಿನ ಸುತ್ತ ಮಚ್ಚೆಗಳುಳ್ಳ *ಮ್ಯಾನೊರೈನ ಮೆಲನೊಫ್ರಿಸ್* ಒಳನಾಡಿನ ಶುಷ್ಕಪ್ರದೇಶಗಳಲ್ಲಿ ವಾಸಿಸುವ ಶಿಖೆಯ ಗಂಟೆ ಹಕ್ಕಿಯಾದ *ಓರಿಯಾಯ್ಕ ಗಟರ್‍ಯಾಲಿಸ್*, ನ್ಯೂಜೀಲೆಂಡ್‌ನ *ಆಂತೊರ್ನಿಸ್ ಮೆಲನ್ಯೂರ* ಇವು ಮುಖ್ಯವಾದವು. *ಆಂತೊರ್ನಿಸ್ ಮೆಲನ್ಯೂರ* ಹಕ್ಕಿಯ ಗಾನವನ್ನು ಕೇಳಿದ ಕ್ಯಾಪ್ಟನ್ ಕುಕ್ ಉಚ್ಚ ರೀತಿಯಲ್ಲಿ ಸ್ವರಗೂಡಿಸಿದ ಸಣ್ಣ ಗಂಟೆನಾದದಂತೆ ಈ ಹಕ್ಕಿಯ ಕೂಗು ಇತ್ತು ಎಂದು ವರ್ಣಿಸಿದ್ದಾನೆ.

ಪ್ರೋಸ್ತೆಮಡೇರ ನೋವ–ನ್ಯೂಜೀಲೆಂಡಿಯೆ ಎಂಬ ಟಿಯು ಹಕ್ಕಿಯ ಕೂಗು ಸಹ ಇದೇರೀತಿ ಬೆಳ್ಳಿ ಗಂಟೆಯ ನಾದವನ್ನು ಹೋಲುತ್ತದೆ. ಈ ಹಕ್ಕಿ ಸುಮಾರು ಒಂದು ಗಂಟೆ ವಿರಾಮಕ್ಕೊಂದಾವರ್ತಿ ಕೂಗುವುದರಿಂದ ವೇಳೆಯನ್ನು ತಿಳಿಸುವಂತೆ ಕೂಗುತ್ತದೆ. ಎಂಬ ಭಾವನೆ ಬರುತ್ತದೆ. (ಎನ್.ವಿ.ಎ.)

**ಗಂಡ :** ಸು. 1008 ರಿಂದ 1017ರ ತನಕ ಜೇಜಕ ಭುಕ್ತಿಯಲ್ಲಿ (ಈಗಿನ ಬುಂದೇಲಖಂಡ) ಆಳಿದ ಚಂದೇಲವಂಶದ ಅರಸ. ಗಂಡದೇವ ಎಂದೂ ಇವನಿಗೆ ಹೆಸರಿದೆ. ಈತನ ತಂದೆ ಧಂಗ ಸ್ವತಂತ್ರ ಚಂದೇಲ ರಾಜ್ಯದ ಸ್ಥಾಪಕ. ಅವನ ಅನಂತರ ಆಳತೊಡಗಿದ ಗಂಡನ ಕಾಲದಲ್ಲಿ ಘಜ್ನಿಯ ಮಹಮೂದ ದಂಡೆತ್ತಿ ಬಂದಿದ್ದನೆಂದೂ ಆಗ ಈತ ಅವನನ್ನು ಎರಡು ಬಾರಿ ಎದುರಿಸಿದನೆಂದೂ ಅನೇಕ ಇತಿಹಾಸಕಾರರು ಬರೆದಿದ್ದಾರೆ. ಕನೌಜಿನ ಅರಸನಾದ ರಾಜ್ಯಪಾಲ ಯುದ್ಧ ಮಾಡದೆ ಮಹಮೂದನಿಗೆ ಶರಣಾದುದನ್ನು ಕಂಡು ಬೇಸತ್ತ ಇತರ ರಜಪೂತ ಅರಸರು ಅವನನ್ನು ದಂಡಿಸಲು ಗಂಡದೇವನ ನೇತೃತ್ವದಲ್ಲಿ ಒಟ್ಟುಗೂಡಿದರೆಂದೂ ಇವರ ವಿರುದ್ಧ ಹೋರಾಡಲು ಬಂದ ಮಹಮೂದ ಇವರ ಸೈನ್ಯವನ್ನು ಕಂಡು ದಿಗ್ಭ್ರಾಂತನಾದನೆಂದೂ ಆದರೆ ಕೊನೆಯ ಕ್ಷಣದಲ್ಲಿ ತನ್ನ ಬೆಂಬಲಿಗರ ನಿಷ್ಠೆಯನ್ನು ಸಂದೇಹಿಸಿದ ಗಂಡ ರಣರಂಗದಿಂದ ಕಾಲ್ತೆಗೆದನೆಂದೂ (1019) ಹೇಳಲಾಗಿದೆ. ಮಹಮೂದ ಇನ್ನೊಮ್ಮೆ(1022) ಕಾಲಿಂಜರದ ಕೋಟೆಯನ್ನು ಮುತ್ತಿದಾಗ ಗಂಡ ಅವನಿಗೆ ಹೆದರಿ 300 ಆನೆಗಳನ್ನು ಬಳುವಳಿಯಾಗಿತ್ತು, ಅವನನ್ನು ಹಿಂದಿರುಗಿಸಿದನೆನ್ನಲಾಗಿದೆ.

ಆದರೆ ಇತ್ತೀಚೆಗೆ ಈ ವಿಷಯಗಳನ್ನು ಸಂಶೋಧಕರೊಬ್ಬರು ಅಲ್ಲಗಳೆದಿದ್ದಾರೆ. ಗಂಡನಿಗೆ ಸಂಬಂಧಿಸಿದ ಶಾಸನಗಳಾವುವೂ ಇಲ್ಲ. ಅನಂತರದ ಶಾಸನಗಳಲ್ಲಿಯೂ ಅವನನ್ನು ಕುರಿತ ಉಲ್ಲೇಖದಲ್ಲಿ ವಿಶೇಷಗಳೇನೂ ಕಂಡುಬಂದಿಲ್ಲ. ಅವನು ಪಟ್ಟಕ್ಕೆ ಬಂದ ಅಥವಾ ಮರಣಿಸಿದ ವರ್ಷವೂ ಖಚಿತವಾಗಿ ಗೊತ್ತಿಲ್ಲ. ಗಂಡನ ಮಗನಾದ ವಿದ್ಯಾಧರ 1019ರಲ್ಲಿ ಆಳುತ್ತಿದ್ದನೆನ್ನಲು ಆಧಾರಗಳಿವೆ. ಅದಕ್ಕೂ ಒಂದೆರಡು ವರ್ಷಗಳ ಮೊದಲೇ ವಿದ್ಯಾಧರ ತನ್ನ ಆಳ್ವಿಕೆಯನ್ನು ಆರಂಭಿಸಿರಬೇಕು. ಎಂದರೆ ಗಂಡನ ಆಳ್ವಿಕೆ ಸು. 1017ಕ್ಕೆ ಮುಕ್ತಾಯವಾಗಿರಬೇಕು. ಮಹಮೂದ 1019 ರಲ್ಲಿ ಕಾಲಂಜರನ್ನು ಮುತ್ತಿದಲ್ಲಿ, ಆ ವೇಳೆಯಲ್ಲಿ ಅಲ್ಲಿ ಗಂಡನ ಮಗನಾದ ವಿದ್ಯಾಧರ ಆಳುತ್ತಿದ್ದನೇ ಹೊರತು ಗಂಡನಲ್ಲ, ಮುಸ್ಲಿಂ ಇತಿಹಾಸಕಾರರು ಉಲ್ಲೇಖಿಸಿರುವ ನಂದ ಎಂಬ ಅರಸನೇ ಗಂಡ ಎಂದು ಭಾವಿಸುವುದು ತಪ್ಪು, ಎಂದು ಇತ್ತೀಚೆಗೆ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

ತಂದೆಯಿಂದ ಪಡೆದ ರಾಜ್ಯವನ್ನು ಕಾಪಾಡಿಕೊಂಡು ಬಂದನೆಂಬುದಷ್ಟೇ ಗಂಡ ಗಳಿಸಿದ ಕೀರ್ತಿ. (ಜೆ.ಬಿ.ಆರ್.)

**ಗಂಡಕಿ :** ನೇಪಾಳ ಭಾರತಗಳಲ್ಲಿ ಹರಿಯುವ ಒಂದು ನದಿ; ಗಂಗಾನದಿಯ ಉಪನದಿ. ನೇಪಾಳದ ಹಿಮಾಲಯ ಪರ್ವತಭಾಗದ ಧವಳಗಿರಿಯಲ್ಲಿ ಉ.ಅ $27^\circ\ 27'$ ಮತ್ತು ಪೂ. ರೇ. $83^\circ\ 56'$ ನ 7,600 ಎತ್ತರದಲ್ಲಿ ಹುಟ್ಟಿ ನೈಋತ್ಯ ದಿಕ್ಕಿಗೆ ಪ್ರವಹಿಸಿ ಭಾರತವನ್ನು ಪ್ರವೇಶಿಸುತ್ತದೆ. ಇದನ್ನು ನೇಪಾಳದಲ್ಲಿ ಶಾಲಿಗ್ರಾಮೀ ಎಂದೂ ಉತ್ತರ ಪ್ರದೇಶದಲ್ಲಿ ನಾರಾಯಣೀ ಮತ್ತು ಸಪ್ತಗಂಡಕೀ (ಏಳು ಹೊಳೆಗಳಿಂದ ರೂಪಿತವಾದುದು) ಎಂದೂ ಕರೆಯುತ್ತಾರೆ. ಗಂಡಕ, ಮಹಾಗಂಡಕ ಎಂದು ಇದಕ್ಕೆ ಹೆಸರುಗಳುಂಟು. ಮಹಾಭಾರತದಲ್ಲಿ ಸದಾನೀರಾ ಎಂದು ಹೆಸರಿಸಲಾಗಿರುವ ನದಿ ಇದೇ ಎಂಬುದು ಲಾಸೆನ್‌ನ ಅಭಿಪ್ರಾಯ. ಮಳೆಗಾಲದಲ್ಲಿ ಮಳೆಯ ನೀರಿನಿಂದಲೂ, ಬೇಸಗೆಯಲ್ಲಿ ಹಿಮ ಕರಗಿದ ನೀರಿನಿಂದಲೂ ಒಟ್ಟಿನಲ್ಲಿ ಸದಾ ಕಾಲವೂ ತುಂಬಿ ಹರಿಯುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಗ್ರೀಸಿನ ಭೂಗೋಳಶಾಸ್ತ್ರಜ್ಞರು ಕೊಂಡೊಚೇಟ್ಸ್ ಎಂದು ಕರೆದಿರುವ ನದಿ ಇದೇ ಎಂದು ಹೇಳಲಾಗಿದೆ. ತ್ರಿಶೂಲ ಗಂಗಾ ಇದರ ಉಪನದಿ. ಬಿಹಾರದ ಚಂಪಾರಣ್, ಸಾರನ್ ಮತ್ತು ಮುಜಫರ್‌ಪುರ ಜಿಲ್ಲೆಗಳ ಮೂಲಕ ಹರಿದು ಕೊನೆಗೆ ಪಾಟ್ನದ ಬಳಿ ಇದು ಗಂಗಾನದಿಯನ್ನು ಸೇರಿಕೊಳ್ಳುತ್ತದೆ. ಇದರ ಉದ್ದ ಸು. 425 ಕಿಮೀ. ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಇದು ಬಹುದೂರ ಹರಿಯುತ್ತದೆ. ವಾಸ್ತವವಾಗಿ ಈ ವಲಯದಲ್ಲಿ ಈ ಎರಡು ರಾಜ್ಯಗಳ ನಡುವಣ ಗಡಿ ನಿರ್ಧಾರಕ ನದಿಯಿದು. ಒಟ್ಟು ಜಲಾನಯನ ಪ್ರದೇಶ 48,500 ಚ.ಕಿಮೀ. ಇದರಲ್ಲಿ 9,540 ಕಿಮೀ. ಮಾತ್ರ ಭಾರತದಲ್ಲಿದೆ. ವಾರ್ಷಿಕ ಸರಾಸರಿ ನೀರಿನ ಹರಿವು 52,200 ಮಿಲಿಯನ್ ಘನ ಮೀಟರ್.

ಮಳೆಗಾಲದಲ್ಲಿ ಇದರ ಪ್ರವಾಹ ಸುತ್ತಮುತ್ತಣ ಬಯಲು ಪ್ರದೇಶಗಳಿಗೆ ನುಗ್ಗಿ ಬಹಳ ಅನಾಹುತವನ್ನುಂಟು ಮಾಡುತ್ತದೆ. ಇದನ್ನು ತಪ್ಪಿಸಲು ಕೆಲವಡೆಗಳಲ್ಲಿ ನದಿಯ ದಡದಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸಲಾಗಿದೆ. ನದಿಯಲ್ಲಿ ವರ್ಷಾದ್ಯಂತವೂ ದೋಣಿ ಸಂಚಾರವುಂಟು. ನೇಪಾಳದ ಮತ್ತು ಗೋರಖ್‌ಪುರದ ಕಾಡುಗಳಿಂದ ಮರದ ದಿಮ್ಮಿಗಳನ್ನು ಸಾಗಿಸಲು ನದಿ ಉಪಯುಕ್ತವಾಗಿದೆ. ಜನವಸತಿಯ ಪ್ರದೇಶವನ್ನು ತಲಪಿದ ಮೇಲಂತೂ ಕಟ್ಟಡ ಸಾಮಾಗ್ರಿ, ಧಾನ್ಯ, ಸಕ್ಕರೆ ಮೊದಲಾದ ಸರಕುಗಳು ಈ ಜಲಮಾರ್ಗದ ಮೂಲಕ ಸಾಗುತ್ತವೆ. ಈ ನದಿಯಿಂದ ಸಾರನ್ ಮತ್ತು ಚಂಪಾರಣ್ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ಏರ್ಪಟ್ಟಿದೆ. ಹಾಜಿಪುರ, ಶೋಣಪುರಗಳಿಗೂ ಈ ನದಿಯಿಂದ ತುಂಬ ಅನುಕೂಲವುಂಟು. (ಪಿ.ಜಿ.ಡಿ.)

**ಗಂಡಭೇರುಂಡ :** ಎರಡು ತಲೆಗಳುಳ್ಳ ಒಂದು ಪೌರಾಣಿಕ ಪಕ್ಷಿ. ಪಾಶ್ಚಾತ್ಯ ಪೌರಸ್ತ್ಯ ದೇಶಗಳಲ್ಲಿ ಗಂಡಭೇರುಂಡದ ಚರಿತ್ರೆಗೆ ಸಂಬಂಧಪಟ್ಟ ಕೆಲವು ಆಧಾರಗಳು ಸಿಕ್ಕಿವೆ. ಈಜಿಪ್ಟ್, ಸುಮೇರಿಯ ಮತ್ತು ಆರ್ಯನ್ ಸಂಸ್ಕೃತಿಗಳಿಗೆ ಸಂಬಂಧಿಸಿದ, ರೆಕ್ಕೆಯಿಂದ ಕೂಡಿದ ಸೂರ್ಯಚಕ್ರವೂ ಜೀವವೃಕ್ಷವೂ ಸಂಯೋಜನೆಗೊಂಡು ಗಂಡಭೇರುಂಡ ರೂಪುಗೊಂಡಿತೆಂಬುದು ವಿವಾದಸ್ಪದವಾದ ಅಭಿಪ್ರಾಯ. ಆ ಬಗ್ಗೆ ಹೆಚ್ಚಿನ ಆಧಾರಗಳೇನೂ ಇಲ್ಲ. ಈಜಿಪ್ಟ್, ಅಸ್ಸೀರಿಯ ಮೊದಲಾದ ದೇಶಗಳಲ್ಲಿ ಇದು ಫಲವತ್ತಿನ ಆರಾಧನೆಗೆ (ಫರ್ಟಿಲಿಟಿ ಕಲ್ಟ್) ಸಂಬಂಧಪಟ್ಟ ಚಿಹ್ನೆ ಎಂದು ಊಹಿಸಲಾಗಿದೆ.

ಗಂಡಭೇರುಂಡ ಪ್ರ.ಶ.ಪೂ. 1000ಕ್ಕಿಂತಲೂ ಮುಂಚಿನ ಹಿಟೈಟ್ ಶಿಲ್ಪದಲ್ಲಿ ಸಿಗುತ್ತದೆ. ಸಿಥಿಯನರಿಂದ ಇದು ರಷ್ಯ, ಜರ್ಮನಿ ಮೊದಲಾದ ದೇಶಗಳಿಗೆ ಹರಡಿತೆಂದು ಕೆಲವರ ನಂಬಿಕೆ. ಇದು ಭಾರತ ಉಪಖಂಡದ ತಕ್ಷಶಿಲೆಯಲ್ಲಿ ಮೊತ್ತಮೊದಲು ನಮಗೆ ದೊರೆಯುತ್ತದೆ.

ವಿಷ್ಣು ನರಸಿಂಹಾವತಾರವನ್ನು ಎತ್ತಿ ಹಿರಣ್ಯಕಶಿಪುವನ್ನು ಸಂಹಾರ ಮಾಡಿದ ಮೇಲೂ ಅವನ ಕೋಪ ಶಮನವಾಗದೆ ಇದ್ದು, ಅವನಿಂದ ಇಡೀ ವಿಶ್ವವೇ ನಾಶವಾದೀತೆಂಬ ಅಂಜಿಕೆ ಮೂಡಿದಾಗ ದೇವತೆಗಳ ಪ್ರಾರ್ಥನೆಯಂತೆ ಶಿವ ಶರಭಾವತಾರ ಎತ್ತಿ ನರಸಿಂಹನನ್ನು ಎದುರಿಸಿದ. ಆಗ ವಿಷ್ಣು ಶರಭವನ್ನು ಅಡಗಿಸಲು ಗಂಡಭೇರುಂಡನಾದನೆಂದು ಪ್ರತೀತಿ. ಇದು ಶರಭಕ್ಕಿಂತ ಹೆಚ್ಚು ಶಕ್ತಿಯುತವಾದ್ದೆಂದೂ ಶರಭವೇ ಇದಕ್ಕೆ ಆಹಾರವೆಂದೂ ಹೇಳಲಾಗಿದೆ. ಗಂಡಭೇರುಂಡ ಶಕ್ತಿ ಪರಾಕಾಷ್ಠೆಯ ಚಿಹ್ನೆಯೆನಿಸಿದೆ. ವಿಷ್ಣುವಾಹನನಾದ ಗರುಡ, ಋಗ್ವೇದದಲ್ಲಿ ಬರುವ ಎರಡು ಹಕ್ಕಿಗಳು– ಇವುಗಳಿಂದ ಎರಡು ತಲೆಗಳುಳ್ಳ ಗಂಡಭೇರುಂಡ ಪಕ್ಷಿ ವಿಕಾಸಗೊಂಡಿರಬಹುದೆಂದೂ

ಊಹಿಸಲಾಗಿದೆ. ಶಕ್ತಿಯ ಸಂಕೇತವಾಗಿ, ಇಲ್ಲವೇ ಶಾಂತಿಯ ಸಂಕೇತವಾಗಿ ಭಾರತದ ರಾಜರು ಹಿಂದಿನಿಂದಲೂ ಗಂಡಭೇರುಂಡವನ್ನು ತಮ್ಮ ಧ್ವಜಗಳಲ್ಲಿ ಸೇರಿಸಿಕೊಂಡು ಬಂದಿದ್ದಾರೆ.

ಚಾಳುಕ್ಯರ ಕಾಲಕ್ಕೆ ಸೇರಿದ ಗಂಡಭೇರುಂಡ ಸ್ತಂಭವೊಂದು ಶಿವಮೊಗ್ಗ ಜಿಲ್ಲೆಯ ಷಿಕಾರಿಪುರ ತಾಲ್ಲೂಕಿನ ಬೆಳಗಾಮಿಯಲ್ಲಿ (ಬಳ್ಳಿಗಾಮೆ) ಸಿಕ್ಕಿದೆ. ಈ ಸ್ತಂಭದ ತುದಿಯಲ್ಲಿ ಮನುಷ್ಯಾಕಾರದ ದೇಹದಿಂದಲೂ ಎರಡು ತಲೆಗಳಿಂದಲೂ ಕೂಡಿದ ಗಂಡಭೇರುಂಡ ಆಕೃತಿ ನಿಂತಿದೆ. ಇದು ರಾಕ್ಷಸರನ್ನು ನುಂಗುತ್ತಿರುವಂತೆ ಚಿತ್ರಿಸಲಾಗಿದೆ. ಮಹಾಮಂಡಲೇಶ್ವರ ಚಾಮುಂಡರಾಯರಸ ಶಕ 969ರಲ್ಲಿ (1047) ಇದನ್ನು ಸ್ಥಾಪಿಸಿ ಗಂಡಭೇರುಂಡೇಶ್ವರ ದೇವರಿಗೆ ದತ್ತಿಯನ್ನು ಹಾಕಿಸಿಕೊಟ್ಟನೆಂಬುದಾಗಿ ಈ ಸ್ತಂಭದ ಅಡಿಯಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. 12, 13ನೆಯ ಶತಮಾನಗಳಲ್ಲಿ ಗುಂಟೂರು ಜಿಲ್ಲೆಯ ಧಾನ್ಯಕಟಕದಿಂದ ಆಳುತ್ತಿದ್ದ ತೆಲುಗು ಕೋಟರಿಗೂ ಗಂಡಭೇರುಂಡ ಗೊತ್ತಿತ್ತು.

ಹೊಯ್ಸಳ ಶಿಲ್ಪದಲ್ಲಿಯ ನಾಶದ ಸರಪಣಿ ತುಂಬ ಕುತೂಹಲಕಾರಿಯಾಗಿದೆ. ಬೇಲೂರಿನ ಕೇಶವ ದೇವಾಲಯ (1117) ಮತ್ತು ಕೊರವಂಗಲದ ಬೂಚೇಶ್ವರ ದೇವಾಲಯಗಳಲ್ಲಿ (1173) ಇದನ್ನು ನೋಡಬಹುದು. ಜಿಂಕೆಯನ್ನು ನುಂಗುತ್ತಿರುವ



ಭೇರುಂಡೇಶ್ವರ, ಬಳ್ಳಿಗಾಮೆ

ಹೆಬ್ಬಾವನ್ನು ಆನೆಯೊಂದು ತನ್ನ ಸೊಂಡಿಲಿನಲ್ಲಿ ಸಿಕ್ಕಿಸಿಕೊಂಡಿದೆ. ಆನೆಯನ್ನು ಸಿಂಹವೂ ಸಿಂಹವನ್ನು ಶರಭವೂ ಗಂಡಭೇರುಂಡವೂ ಕೊಲ್ಲುತ್ತಿವೆ.

ವಿಜಯನಗರದ ಸಮ್ರಾಟನಾಗಿದ್ದ ಅಚ್ಯುತರಾಯನ (1530–42) ಚಿನ್ನದ ಮತ್ತು ತಾಮ್ರದ ನಾಣ್ಯಗಳ ಮೇಲೆ ಗಂಡಭೇರುಂಡದ ಮುದ್ರೆಯಿದೆ. ನಾಣ್ಯಗಳ ಮುಮ್ಮುಖದಲ್ಲಿ ಗಂಡಭೇರುಂಡ ತನ್ನ ಬೆನ್ನು ಕಾಣುವಂತೆ ಮೇಲಕ್ಕೆ ಹಾರುತ್ತಿರುವುದನ್ನು ತೋರಿಸಿದೆ. ಸೊಂಡಿಲು ಬಾಲಗಳನ್ನೆತ್ತಿಕೊಂಡಿರುವ ಭಯಗ್ರಸ್ತವಾದ ಆನೆಗಳನ್ನು ಆ ಪಕ್ಷಿ ತನ್ನೆರಡು ಕೊಕ್ಕುಗಳಲ್ಲೂ ಕಾಲುಗಳಲ್ಲೂ ಸಿಕ್ಕಿಸಿಕೊಂಡಿದೆ.

ವಿಜಯನಗರ ಚಕ್ರಾಧಿಪತ್ಯದ ಪತನವಾದ ಅನಂತರ ಅನೇಕ ಪಾಳೆಯಗಾರರು ಸ್ವತಂತ್ರರಾಗಿ ಆಳಿದರಷ್ಟೆ. ಮಧುರೆಯ ನಾಯಕರೂ ಕೆಳದಿಯ ನಾಯಕರೂ ಗಂಡಭೇರುಂಡವನ್ನು ಮುಂದುವರಿಸಿಕೊಂಡು ಬಂದರು. 16 ನೆಯ ಶತಮಾನಕ್ಕೆ ಸೇರಿದ ಕೆಳದಿಯ ವೀರಭದ್ರ ದೇವಾಲಯದ ಭುವನೇಶ್ವರಿಯಲ್ಲಿರುವ ಗಂಡಭೇರುಂಡ ಶಿಲ್ಪ ವಿಜಯನಗರದ ಗಂಡಭೇರುಂಡದಂತೆಯೇ ತನ್ನ ಕಾಲುಗಳಲ್ಲಿ ಆನೆಗಳನ್ನು ಸಿಕ್ಕಿಸಿಕೊಂಡಿದೆ. ಬಲಗಡೆ ಕಾಲಿಗೆ ಸಿಕ್ಕಿಸಿಕೊಂಡಿದೆ. ಬಲಗಡೆ ಕಾಲಿಗೆ ಸಿಕ್ಕಿಸಿಕೊಂಡಿರುವ ಆನೆಯ ಸೊಂಡಿಲಿನಿಂದ ಮನುಷ್ಯನೊಬ್ಬ ತೂಗಾಡುತ್ತಿದ್ದಾನೆ. ಗಂಡಭೇರುಂಡ ತನ್ನ ಎರಡು ಕೊಕ್ಕುಗಳಲ್ಲಿಯೂ ಹರಿತವಾದ ಉಗುರುಗಳಿರುವ ಕಾಲುಗಳಿಂದ ಆನೆಗಳನ್ನು ಎತ್ತಿಕೊಂಡಿರುವ ಸಿಂಹಗಳನ್ನು ಕಚ್ಚಿಕೊಂಡಿದೆ. ಈ ಗಂಡಭೇರುಂಡ ಶಿಲ್ಪ ಒಂದು ಶ್ರೇಷ್ಠಕಲಾಕೃತಿ.

ಗಂಡಭೇರುಂಡ ಪ್ರಾಚೀನ ಕಾಲದಿಂದಲೂ ಶಾಂತಿ, ಪ್ರಗತಿ, ಸಮೃದ್ಧಿಗಳ ಚಿಹ್ನೆಯಾಗಿದೆ. ವಿಜಯನಗರದ ಅರಸರೂ ಕೆಳದಿಯ ನಾಯಕರೂ ಗಂಡಭೇರುಂಡ ಚಿಹ್ನೆಯನ್ನು ಬಳಸಿಕೊಂಡದ್ದು ತಮ್ಮ ಸಾರ್ವಭೌಮತ್ವವನ್ನು ಸೂಚಿಸಲಿಕ್ಕಾಗಿ. ಮೈಸೂರು



ಗಂಡಭೇರುಂಡದ ಒಂದು ಕಲಾಕೃತಿ

ರಾಜರು ವಿಜಯನಗರದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಾಗ ತಮ್ಮ ಧ್ವಜದ ಮೇಲೆ ಗಂಡಭೇರುಂಡವನ್ನು ಪ್ರತಿಷ್ಠಾಪಿಸಿಕೊಂಡರು. ಮೈಸೂರರಸರ ಲಾಂಛನದಲ್ಲಿ ಮಧ್ಯದಲ್ಲಿ ಗಂಡಭೇರುಂಡವೂ ಮೂರು ಪಂಜಾಗಳನ್ನೂರಿ ಮುಂದಿನ ಬಲಪಂಜಾವನ್ನೆತ್ತಿ ಬಲಕ್ಕೆ ನೋಡುತ್ತ ನಡೆಯುವಂತಿರುವ ಸಿಂಹವೂ ಯಾಳಿಗಳಿಗೂ ಇವೆ. ಈಗಿನ ಮೈಸೂರು ಸರ್ಕಾರದ ಲಾಂಛನದಲ್ಲಿಯೂ ಗಂಡಭೇರುಂಡದ ಚಿಹ್ನೆಯಿದೆ.

(ಎಸ್.ಎಂ.)

**ಗಂಡಮಕ್ ಕೌಲು :** ಆಫ್ಘಾನಿಸ್ತಾನದ ಮೇಲೆ ತಮ್ಮ ಪ್ರಭಾವವನ್ನು ಸ್ಥಾಪಿಸುವುದಕ್ಕಾಗಿ ಬ್ರಿಟನ್ ರಷ್ಯಗಳಲ್ಲಿ ಎದ್ದ ಸ್ಪರ್ಧೆಯ ಫಲವಾಗಿ ಬ್ರಿಟಿಷರಿಗೂ ಆಫ್ಘಾನಿಸ್ತಾನಕ್ಕೂ ನಡುವೆ ಸಂಭವಿಸಿದ ಎರಡನೆಯ ಆಫ್ಘನ್ ಯುದ್ಧ ಒಂದು ನಿರ್ಣಾಯಕ ಘಟ್ಟ ಮುಟ್ಟಿದಾಗ ಏರ್ಪಟ್ಟ ಕೌಲು. ರಷ್ಯನರ ಚಿತಾವಣೆಯಿಂದಾಗಿ ಆಫ್ಘಾನಿಸ್ತಾನದ ಅಮೀರ ಬ್ರಿಟಿಷರೊಂದಿಗೆ ಯುದ್ಧಮಾಡುವ ಘಟ್ಟಕ್ಕೆ ಬಂದಿದ್ದ ಸಮಯದಲ್ಲಿ ರಷ್ಯನರಿಂದ ಆ ದೊರೆಗೆ ಸಹಾಯ ಬರಲಿಲ್ಲ. ಬ್ರಿಟಿಷರೊಂದಿಗೆ ಶಾಂತಿ ಮಾಡಿಕೊಳ್ಳಬೇಕೆಂದು ರಷ್ಯನರು ಕೊನೆ ಗಳಿಗೆಯಲ್ಲಿ ಸಲಹೆ ನೀಡಿದರು. ಬ್ರಿಟಿಷ್ ಪಡೆಗಳು ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನಡೆಸಿದುವು(1878 ನವೆಂಬರ್ 20). ಕಾಂದಹಾರ್ ಬ್ರಿಟಿಷರ ವಶವಾಯಿತು. ಅಮೀರ್ ಷೇರ್ ಆಲಿ ತುರ್ಕಿಸ್ತಾನಕ್ಕೆ ಓಡಿ ಹೋದ. ಅವನ ಮಗ ಯಾಕೂಬ್ ಆಡಳಿತಸೂತ್ರ ವಹಿಸಿಕೊಂಡ. ಬ್ರಿಟಿಷರೊಂದಿಗೆ ಸಂಧಾನಕ್ಕೆ ಮುಂದಾದ. 1879 ಮೇ 26ರಂದು ಗಂಡಮಕ್ ಒಪ್ಪಂದವಾಯಿತು.

ಈ ಕೌಲಿನ ಷರತ್ತುಗಳು ಒಟ್ಟಿನಲ್ಲಿ ಬ್ರಿಟಿಷರಿಗೆ ಅನುಕೂಲಕರವಾಗಿದ್ದವು. ಅವರ ಕೇಳಿಕೆಗಳೆಲ್ಲ ಪ್ರಾಪ್ತವಾಗಿದ್ದುವು. ಬ್ರಿಟಿಷ್ ರಾಜಪ್ರತಿನಿಧಿಯೊಬ್ಬ ಕಾಬೂಲಿನಲ್ಲಿ ಖಾಯಂ ಆಗಿ ಇರಲು ಅಮೀರ್ ಒಪ್ಪಿಕೊಂಡ. ಭಾರತದ ವೈಸ್‌ರಾಯಿಯ ಸಲಹೆಗೆ ಅನುಸಾರವಾಗಿ ತನ್ನ ದೇಶದ ವಿದೇಶಾಂಗ ವ್ಯವಹಾರ ನಡೆಸಲೂ ಅವನು ಒಪ್ಪಿದ. ಅಮೀರ ಆಫ್ಘಾನಿಸ್ತಾನಕ್ಕೆ ಸೇರಿದ್ದ ಕುರ್‍ರಂ, ಪಿಶಿನ್ ಮತ್ತು ಸಿಬಿ ಜಿಲ್ಲೆಗಳನ್ನು ಬ್ರಿಟಿಷರಿಗೆ ಒಪ್ಪಿಸಿಕೊಟ್ಟ. ಯಾಕುಬನನ್ನು ಬ್ರಿಟಿಷರು ಆಫ್ಘಾನಿಸ್ತಾನದ ಅಮೀರನೆಂದು ಮಾನ್ಯ ಮಾಡಿದರಲ್ಲದೆ, ಆಫ್ಘಾನಿಸ್ತಾನದ ಮೇಲೆ ಬೇರೆ ಯಾವ ರಾಷ್ಟ್ರವಾದರೂ ಆಕ್ರಮಣ ಮಾಡಿದರೆ ಬ್ರಿಟಿಷರು ಆಫ್ಘಾನಿಸ್ತಾನಕ್ಕೆ ಸೈನ್ಯ ಮತ್ತು ಶಸ್ತ್ರಾಸ್ತ್ರ ಸಹಾಯ ನೀಡಲು ಒಪ್ಪಿದರು.

ಕೌಲಿಗೆ ಅನುಸಾರವಾಗಿ ಜುಲೈ 24ರಂದು ಕಾಬೂಲನ್ನು ತಲಪಿದ ಬ್ರಿಟಿಷ್ ನಿಯೋಗಿ ಕ್ಯಾವಗ್ನಾರಿಯನ್ನು ಅಲ್ಲಿಯ ಬಂಡುಕೋರ ಸೈನಿಕರು ಕೊಲೆ ಮಾಡಿದರು. ಇದರಲ್ಲಿ ಅಮೀರನ ಕೈವಾಡವಿತ್ತೆ? ಇದ್ದರೆ ಎಷ್ಟರಮಟ್ಟಿಗೆ ಇತ್ತು? ಎಂಬುದು ಸ್ಪಷ್ಟವಿಲ್ಲ. ಕ್ಯಾವಗ್ನಾರಿ ಚಾತುರ್ಯದಿಂದ ವರ್ತಿಸಿರಲಿಲ್ಲವೆಂಬುದೂ ಅವನನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಅಮೀರ ಬ್ರಿಟಿಷರಿಗೆ ಸೂಚಿಸಿದ್ದನೆಂಬುದೂ ನಿಜ. ಅಂತೂ ಈ ಕೊಲೆಯಿಂದಾಗಿ ಕೌಲು ಮುರಿದುಬಿತ್ತು. ಮತ್ತೆ ಯುದ್ಧ ಮುಂದುವರಿದು ಆನಂತರ ಹಲವು ಘಟನೆಗಳಾದ ಮೇಲೆ ಅಲ್ಲಿ ಬ್ರಿಟಿಷರ ಸ್ಥಾನ ಭದ್ರವಾಯಿತು. (ಜಿ.ಆರ್.ಆರ್.)

**ಗಂಡಮಾಲೆ :** ಗುರಾಣಿಕ ಗ್ರಂಥಿಯ (ಥೈರಾಯ್ಡ್ ಗ್ಲ್ಯಾಂಡ್) ಊತದಿಂದ ಗಂಟಲ ಮುಂಭಾಗದಲ್ಲಿ ಉಂಟಾಗುವ ಬಾವು (ಗಾಯ್ಟರ್). ಇದನ್ನು ಗಳಗಂಡ, ಎಂದೂ ಕರೆವುದಿದೆ. ಸಾಮಾನ್ಯವಾಗಿ ಬೆಟ್ಟಪ್ರದೇಶಗಳಲ್ಲಿ ಅಂದರೆ ಆಲ್ಪ್ಸ್, ಪಿರನೀಸ್, ಕಾರ್ಪೇತಿಯನ್ಸ್, ಆಂಡೀಸ್ ಮತ್ತು ಹಿಮಾಲಯ ಪ್ರದೇಶಗಳಲ್ಲಿ ಇದು ಸಾಮಾನ್ಯ. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯಲ್ಲಿ ಇದು ತಲೆದೋರಿದುದುಂಟು. ವಿಟಮಿನುಗಳ ಕೊರತೆಯ ಜೊತೆಗೆ ಆಹಾರದಲ್ಲಿ ಸಾಕಷ್ಟು ಅಯೊಡಿನ್ ಇಲ್ಲದಲ್ಲಿ ಈ ರೋಗ ಉಂಟಾಗುತ್ತದೆಂದು ತಿಳಿದು ಬಂದಿದೆ. ಸಾಮಾನ್ಯವಾಗಿ ಇದು ವಯಸ್ಕರಲ್ಲಿ ಹೆಚ್ಚು. ಅದರಲ್ಲೂ ಗಂಡಸರಿಗಿಂತ ಹೆಂಗಸರಲ್ಲಿ ಎಂಟು ಪಟ್ಟು ಹೆಚ್ಚು. ಕೆಲವೇಳೆ ಆನುವಂಶಿಕ ಕಾರಣಗಳಿಂದಾಗಿ ಎಳೆಯವರಿಗೂ ಬರಬಹುದು. ಈ ರೋಗ ತಗುಲಿದಾಗ ಗುರಾಣಿಕ ಗ್ರಂಥಿಯ ಕಾರ್ಯಪಟುತ್ವ ತುಂಬ ಹೆಚ್ಚಬಹುದು, ಇಲ್ಲವೆ ತೀರ ಕುಗ್ಗಲೂಬಹುದು. ಗಡ್ಡೆದಪ್ಪ ನಾದಂತೆಲ್ಲ ಸುತ್ತಲಿನ ಭಾಗಗಳ ಮೇಲಿನ ಒತ್ತಡ ಹೆಚ್ಚುವುದು ಉಸಿರಾಡುವುದಕ್ಕೆ ತೊಂದರೆ ಯಾಗಿ ಕೆಮ್ಮು, ಒಡಕು ಧ್ವನಿ ಕಾಣಿಸಬಹುದು. ಒತ್ತಡದಿಂದ ರಕ್ತನಾಳಗಳ ಬಣ್ಣ ನೀಲಿಯಾಗಬಹುದು, ಅಪರೂಪ ವಾಗಿ ನುಂಗುವುದಕ್ಕೆ ಕಷ್ಟವಾಗಬಹುದು. ಕಣ್ಣು ಪಾಪೆ ಅಗಲವಾಗಿ ಮುಖ ಬೆವರಬಹುದು. ಶೇಕಡ ಎರಡರಷ್ಟು ರೋಗಿಗಳಲ್ಲಿ ಪರಿಸ್ಥಿತಿ ವಿಷಮಿಸಿ ಏಡಿಗಂತಿ (ಕ್ಯಾನ್ಸರ್) ಕಾಣಿಸಬಹುದು. ಗಡ್ಡೆ ಬೇಗ ದಪ್ಪವಾಗುವುದು, ಗಟ್ಟಿಯಾಗುವುದು ಮತ್ತು ಒತ್ತಡದ ಚಿಹ್ನೆಗಳು ಹೆಚ್ಚುವುದು–ಇವು ಏಡಿಗಂತಿಯ ಚಿಹ್ನೆಗಳು. ಕ್ರಮೇಣ ರೋಗ ಪಿತ್ತಜನಕಾಂಗ, ಶ್ವಾಸಕೋಶಗಳು ಮತ್ತು ಮೂಳೆಗಳಿಗೆ ಹರಡಬಹುದು. ಆಹಾರದಲ್ಲಿ ಉಚಿತ ಪ್ರಮಾಣದಲ್ಲಿ ಅಯೋಡಿನ್ ಸೇರಿಸಿ ಸೇವಿಸುವುದರಿಂದ ರೋಗವನ್ನು ತಹಬಂದಿಗೆ ತರಬಹುದು. ಕೆಲವು ವೇಳೆ ಶಸ್ತ್ರಚಿಕಿತ್ಸೆಯ ಅಗತ್ಯ ತೋರುವುದೂ ಉಂಟು. (ಬಿ.ಎಸ್‌ಯುಬಿ.)



ಗಂಡಮಾಲೆಯಿಂದಾಗಿ ಗಂಟಲಲ್ಲಿ ಬಾವು ಬಂದಿರುವುದು

**ಪ್ರಾಣಿಗಳಲ್ಲಿ :** ದೇಹದಲ್ಲಿಯ ಅಯೊಡಿನ್ ಅಂಶದಲ್ಲಿ ತುಸು ಏರುಪೇರು ಆದರೂ ಸಾಕು, ಪ್ರಾಣಿಗಳಲ್ಲಿ ಗಂಡಮಾಲೆ ಬೇನೆಯ ಅನೇಕ ರೂಪಗಳು ಕಾಣಿಸಿಕೊಳ್ಳುತ್ತವೆ. ದೇಹದಲ್ಲಿಯ ಅಯೊಡಿನ್ ಪ್ರಮಾಣ 30 ಲಕ್ಷಗಳಲ್ಲಿ ಕೇವಲ 1 ಪಾಲಾದರೂ ಅದಿಲ್ಲದೆ ಗುರಾಣಿಕ ಗ್ರಂಥಿ ದೇಹಪೋಷಕವಾದ ಥೈರಾಕ್ಸಿ ಚೋದನಿಕವನ್ನು ಉತ್ಪತ್ತಿ ಮಾಡದು. ಥೈರಾಕ್ಸಿನ್ ಬೆಳೆಯುವ ಪ್ರಾಣಿಗಳ ಹಾಗೂ ಪಿಂಡ ಹೊತ್ತಿರುವ ತಾಯಿ ಪ್ರಾಣಿಗಳ ಆಹಾರಕ್ರಿಯೆಯಲ್ಲಿ ತನ್ನದೇ ಆದ ಪ್ರಮುಖಪಾತ್ರವನ್ನು ವಹಿಸಿದೆ ಧರ್ಮ ಹಾಗೂ ಕೂದಲು ನುಣುಪಾಗಲು ಖನಿಜ ಹಾಗೂ ಸಾರಜನಕಗಳು ಈ ದೇಹದಲ್ಲಿ ಸೇರಿಹೊಗಲು ಈ ಚೋದನಿಕದ ಆವಶ್ಯಕತೆ ಇದೆ.

ಆಹಾರ ಹಾಗೂ ನೀರಿನ ಮೂಲಕ ಅಯೊಡಿನ್ ಪೂರೈಕೆ ಸರಿಯಾಗಿ ಸಾಗದೆ ಹೋದರೆ ದೇಹದಲ್ಲಿ ಇದರ ಅಂಶ ಕಡಿಮೆಯಾಗುವುದು. ಆಗ ದೇಹದಲ್ಲಿ ಅವಶ್ಯವಾಗಿರುವ ಅಯೊಡಿನನ್ನು ಹೆಚ್ಚಾಗಿ ಉತ್ಪಾದನೆ ಮಾಡಲು ಗುರಾಣಿಕ ಗ್ರಂಥಿ ತನ್ನಷ್ಟಕ್ಕೆ ತಾನೇ ದೊಡ್ಡದಾಗಿ ಊದಿಕೊಳ್ಳುತ್ತದೆ.

ಗಳಗಂಟಲ ಬೇನೆ ಸಾಮಾನ್ಯವಾಗಿ ಎಲ್ಲ ಪ್ರಾಣಿಗಳಲ್ಲಿಯೂ ಕಾಣಬರುತ್ತದೆ. ನಾಯಿಮರಿ, ಕುದುರೆಮರಿ, ಕುರಿಮರಿ ಹಾಗೂ ಕರುಗಳಲ್ಲಿ ಈ ಬೇನೆ ವಿಶಿಷ್ಟವಾಗಿ ಕಾಣಬರುತ್ತದೆ. ಸಾಮಾನ್ಯವಾಗಿ ನೆಲ, ನೀರು ಹಾಗೂ ಆಹಾರದಲ್ಲಿ ಅಯೊಡಿನ್ ಅಂಶದ ಕೊರತೆ ಕಾಣಬಂದಾಗ ಈ ಬೇನೆ ಬರುವುದು.

ಅಯೊಡಿನ್ ಅಂಶ ಪ್ರಧಾನವಾಗಿ ನೆಲದಲ್ಲಿದೆ. ಸಸ್ಯಗಳ ಹಾಗೂ ಹುಲ್ಲಿನ ಮೂಲಕ ಅದು ಪ್ರಾಣಿ ದೇಹವನ್ನು ಸೇರುತ್ತದೆ. ನೆಲದಲ್ಲಿ ಅಯೊಡಿನ್ ಅಂಶ ಕಡಿಮೆಯಾದರೆ ಸಸ್ಯ ಹಾಗು ನೀರಿನಲ್ಲೂ ಅದರ ಅಂಶ ಇಲ್ಲವಾಗುವುದು. ನೆಲದಲ್ಲಿ ಸಸ್ಯಸಂಬಂಧವಾದ ಗೊಬ್ಬರವಿದ್ದು, ಲವಣಾಂಶವೂ ಹೆಚ್ಚಾಗಿದ್ದರೆ ಅಯೊಡಿನ್ ಅಂಶ ಕಡಿಮೆಯಾಗುವುದು. ಗೊಬ್ಬರರೂಪದಲ್ಲಿ ಲವಣವನ್ನು ಹೆಚ್ಚಿಗೆ ಉಪಯೋಗಿಸಿದರೂ ಅಷ್ಟೆ. ಸಸ್ಯಗಳಲ್ಲಿಯ ಅಯೊಡಿನ್ ಅಂಶ ಪ್ರಮುಖವಾಗಿ ನೆಲದ ಗುಣ, ಮಣ್ಣಿನ ಗುಣ ಹಾಗೂ ಕಾಲವನ್ನು ನಿರ್ಧರಿಸುವುದು.

ಪ್ರಾಣಿಗಳು ಬಳಸುವ ವಿವಿಧ ರೀತಿಯ ಆಹಾರಗಳಲ್ಲಿ ಸಸ್ಯಸಂಬಂಧವಾದ ಆಹಾರ ಪ್ರಧಾನವಾದದು. ಅಯೊಡಿನ್ ಕೊರತೆ ಇರುವ ಹುಲ್ಲುಗಾವಲಿನಲ್ಲಿ ಮೇಯುವಾಗ, ಮೇಲಾಗಿ ಆಹಾರದಲ್ಲಿ ಹೆಚ್ಚಿಗೆ ಲವಣಾಂಶವನ್ನು ಸೇರಿಸಿದಾಗ ಅಯೊಡಿನ್ ಕೊರತೆ ಉಂಟಾಗುತ್ತದೆ. ಅನೇಕ ರೀತಿಯ ಹುಲ್ಲುಗಳಲ್ಲಿ ಈ ಬೇನೆ ತರುವ ವಸ್ತುವಿದೆ. ಕಾಳೆ, ಕೋಸು, ಟರ್ನಿಪ್, ಬ್ರಸಲ್ಸ್ ಚಿಗುರು, ಸೋಯ ಅವರೆಗಳಲ್ಲಿ ರೋಗಕಾರಕವಾದ ತಯೋಸಿನೇಟ್ ಎಂಬ ವಸ್ತುವಿದೆ. ನಾರಗಸೆಯಲ್ಲಿ ಸಿಗುವ ಲಿನ್‌ಮಾರಿನ್ ಎಂಬ ಗ್ಲೂಕೋಸೈಡು ಸಹ ಇದೇ ರೀತಿಯದೆಂದು ತಿಳಿದುಬಂದಿದೆ. ಆದುದರಿಂದ ಈ ಸಸ್ಯಗಳನ್ನು ಬಹಳ ದಿನಗಳ ಕಾಲ ಆಹಾರವಾಗಿ ಕೊಡಬಾರದು. ಕುರಿಗಳ ಮೇವಿಗಾಗಿ ಬೆಳೆಸುವ ರೇಪ್‌ಗಿಡದ ಬೀಜವನ್ನು ಹಾಗೂ ನೆಲಗಡಲೆಯನ್ನು ಪ್ರಾಯೋಗಿಕವಾಗಿ ಇಲಿಗಳಿಗೆ ತಿನ್ನಿಸಿದಾಗ ಈ ಬೇನೆ ಬಂದಿದೆ. ಈ ವಸ್ತುಗಳಲ್ಲೂ ರೋಗಕಾರಕ ವಸ್ತುವಿದೆ. ನಾರಗಸೆ ಹಾಗೂ ಕಾಳೆ ಸಸ್ಯಗಳನ್ನ ಬಸಿರಾದ ಕುರಿಗಳಿಗೆ ಕೊಡುವುದರಿಂದ ಹುಟ್ಟುವ ಕುರಿಮರಿಗಳು ಈ ರೋಗದಿಂದ ನರಳುತ್ತವೆ. ಬ್ಯಾಕ್ಟೀರಿಯಗಳಿಂದ ಕೆಟ್ಟುಹೋದ ನೀರು ಹಾಗೂ ಆಹಾರವಸ್ತುಗಳನ್ನು ಪ್ರಾಣಿಗಳಿಗೆ ಕೊಟ್ಟಾಗಲೂ ಈ ಬೇನೆ ಕಾಣಿಸುತ್ತದೆ. ಒಟ್ಟಾರೆ ಆಹಾರದಲ್ಲಿ ಸಯನೋಜೆನಿಟಿಕ್ ಗ್ಲೂಕೋಸೈಡ್ ಅಂಶದ ಕೊರತೆ ಕಾಣಬಂದರೆ ಗಂಡಮಾಲೆ ಬರುತ್ತದೆ.

ಅಯೊಡಿನ್ ಅಂಶ ದೇಹದಲ್ಲಿ ಕಡಿಮೆ ಆದಾಗ ಥೈರಾಕ್ಸಿನ್ ಉತ್ಪಾದನೆ ಸ್ಥಗಿತಗೊಳ್ಳುತ್ತದಷ್ಟೆ. ಆಗ ಗುರಾಣಿಕ ಗ್ರಂಥಿ ಹೆಚ್ಚಿಗೆ ಕೆಲಸ ಮಾಡಲು ಸಹಾಯವಾಗುವಂತೆ ಪಿಟ್ಯುಟರಿ ಗ್ರಂಥಿ ಥೈರೊಟ್ರೋಫಿಕ್ ಚೋದನಿಕವನ್ನು ಉತ್ಪಾದನೆ ಮಾಡಿ ಗುರಾಣಿಕವನ್ನು ಎಚ್ಚರಿಸುತ್ತದೆ. ಇದರಿಂದ ಗುರಾಣಿಕ ತನ್ನ ಸ್ವಾಭಾವಿಕ ಗಾತ್ರಕ್ಕಿಂತ ದೊಡ್ಡದಾಗುವುದು. ಧ್ವನಿಪೆಟ್ಟಿಗೆ ಬಳಿ ಈ ಬಾವು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಎಳೆ ಪ್ರಾಣಿಗಳಲ್ಲಿ ಬೇನೆ ಈ ರೀತಿಯದು ಅಷ್ಟೆ. ಅವುಗಳಲ್ಲಿ ಸ್ಪಷ್ಟವಾಗಿ ರೋಗಲಕ್ಷಣಗಳೇನೂ ಕಾಣಬರವು. ಬಂದ ಬೇನೆ ಕೆಲವೊಮ್ಮೆ ಹಠಾತ್ತನೆ ಮರೆಯಾಗುವುದೂ ಉಂಟು.

**ಕುರಿ :** ಅಯೊಡಿನ್ ಕೊರೆಯಿರುವ ಮೇವನ್ನು ಸೇವಿಸುವ ಕುರಿಗಳ ಮತ್ತು ಮೇಕೆಗಳ ಮರಿಗಳಿಗೂ ಗಂಡಮಾಲೆ ಬರುತ್ತದೆ. ಡಾರ್ಸೆಟ್ ಹಾರ್ನ್ ಕುರಿಗಳಲ್ಲಿದು ಸಾಮಾನ್ಯ. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಯುರೋಪುಗಳಲ್ಲಿ ಈ ರೋಗ ಅಷ್ಟು ಸ್ಪಷ್ಟವಾಗಿ ಕಾಣಬರುವುದಿಲ್ಲ. ಕುರಿಗಳಲ್ಲಿರುವ ಹುಳುಗಳನ್ನು ಹೊರಹಾಕಲು ಉಪಯೋಗಿಸುವ ಹುಳುನಿವಾರಕಗಳನ್ನು ಎಡೆಬಿಡದೆ ಕೊಟ್ಟಾಗಲೂ ಹೆಚ್ಚಿನ ಅಂಶದಲ್ಲಿ ಫ್ಲೋರಿನ್ನನ್ನು ಸೇವಿಸಿದಾಗಲು ಈ ಬೇನೆ ಬರುತ್ತದೆನ್ನಲಾಗಿದೆ. ಕುರಿಗಳಲ್ಲಿ ಗಂಟಲ ಬಾವು ಬಹಳ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು. ಆಗತಾನೆ ಹುಟ್ಟಿದ ಕುರಿಮರಿಗಳಿಗೆ ರೋಗದ ಸೊಂಕಿದ್ದಲ್ಲಿ ಅವು ಶಕ್ತಿಹೀನವಾಗುವುವು. ದೇಹಭಾಗದ ಕೆಲವಡೆ ಕೂದಲೇ ಇರುವುದಿಲ್ಲ. ಕೆಲವೊಮ್ಮೆ ಮೇಕೆಗಳಲ್ಲಿ ಈ ರೋಗ ವಿಪರೀತ ಮಟ್ಟಕ್ಕೇರುವುದುಂಟು.

**ನಾಯಿ :** ನಾಯಿಗಳಲ್ಲಿ ಗಂಡಮಾಲೆ ವಿವಿಧ ರೀತಿಯಲ್ಲಿ ಕಾಣಬರುವುದು. ಗ್ರೇವ್ಸನ ರೋಗವೆಂದು ಕರೆಯುವ ಊದುಗಣ್ಣು (ಎಕ್ಸಾಪ್ಥಾಲ್ಮಿಕ್ ಗಾಯ್ಟರ್) ಒಮ್ಮೊಮ್ಮೆ ಕಾಣಬರುವುದುಂಟು. ಈ ಪರಿಸ್ಥಿತಿಯಲ್ಲಿ ಗುರಾಣಿಕ ಗ್ರಂಥಿ ಊದಿಕೊಳ್ಳುವುದಲ್ಲದೆ ಕಣ್ಣುಗುಡ್ಡೆಗಳು ದೊಡ್ಡವಾಗಿ ಹೊರಗೆ ಚಾಚಿಕೊಂಡು ಕಣ್ಣು ಊದಿದಂತೆ ಕಾಣುವುದು. ಮನಸ್ಸಿನ ನೆಮ್ಮದಿ ಕೆಟ್ಟು ಪ್ರಾಣಿ ಬೇಗನೆ ಕೆರಳುವುದು. ನಾಯಿಯಲ್ಲಿ ಒಮ್ಮೊಮ್ಮೆ ಪೂತಿಕೋಶದ ಗಂಡಮಾಲೆ (ಸಿಸ್ಟಿಕ್ ಗಾಯ್ಟರ್) ಕಾಣಬರುವುದೂ ಉಂಟು.

**ಹಸು :** ತಾಯಿಯಲ್ಲಿ ಅಯೊಡಿನ್ ಕೊರತೆ ಇದ್ದರೆ ಹುಟ್ಟಿದ ಕರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸತ್ತುಹೋಗುತ್ತವೆ. ಬದುಕಿದ ಕರುಗಳು ಹಾಲನ್ನು ಕುಡಿಯಲಾಗದಷ್ಟು ದುರ್ಬಲವಾಗಿರುತ್ತವೆ. ಅಲ್ಲಲ್ಲಿ ಕೂದಲು ಬಿದ್ದು ಬೊಕ್ಕೆಗಳು ಕಾಣಿಸಿಕೊಳ್ಳುತ್ತವೆ. ಆಗತಾನೆ ಹುಟ್ಟಿದ ಕರುಗಳಲ್ಲಿ ದಪ್ಪ ಕತ್ತಿನ (ಬಿಗ್ ನೆಕ್) ರೋಗದ ರೂಪದಲ್ಲಿ ಈ ಬೇನೆ ಕಾಣಿಸಿಕೊಳ್ಳುತ್ತದೆ. ವಯಸ್ಕ ಪ್ರಾಣಿಗಳಲ್ಲಿ ಗುರಾಣಿಕಗ್ರಂಥಿ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಇದರಿಂದ ಉಸಿರಾಟಕ್ಕೂ ತೊಂದರೆಯಾಗುವುದುಂಟು.

**ಕುದುರೆ :** ಕುದುರೆಗಳು ಈ ಬೇನಿಯಿಂದ ಬಳಲುತ್ತವಾದರೂ ಕೂದಲ ಬೆಳವಣಿಗೆಯಲ್ಲಿ ವ್ಯತ್ಯಾಸ ಕಾಣದು. ಗ್ರಂಥಿ ಸ್ಪಷ್ಟವಾಗಿ ಊದಿಕೊಳ್ಳುತ್ತದೆ. ರೋಗ ತಗಲಿದ ಕುದುರೆಮರಿ ತುಂಬ ನಿಶ್ಶಕ್ತವಾಗಿರುತ್ತದೆ.

**ಹಂದಿ :** ತಾಯಿಗೆ ರೋಗವಿದ್ದಲ್ಲಿ ಹುಟ್ಟಿದ ಮರಿಗಳಲ್ಲಿ ಕೂದಲಿನ ಅಭಾವವು ಶಕ್ತಿಹೀನತೆಯೂ ಕಂಡುಬರುತ್ತದೆ. ಚರ್ಮದ ಊತ ಕಾಣಬರುತ್ತದೆ. ಹುಟ್ಟಿದ ಕೆಲವೇ ಗಂಟೆಗಳಲ್ಲಿ ಮರಿಗಳೂ ನರಳಿ ಸುತ್ತುಹೋಗುವುವು. ಹಂದಿಗಳಲ್ಲಿ ಗ್ರಂಥಿಯ ಊತವಿದ್ದರೂ ಅಷ್ಟು ಸ್ಪಷ್ಟವಾಗಿ ಕಾಣಬರುವುದಿಲ್ಲ. ಮರಣೋತ್ತರ ಪರೀಕ್ಷೆಯ ವೇಳೆಯಲ್ಲಿ ರೋಗಗ್ರಸ್ತ ಪ್ರಾಣಿಯ ಗ್ರಂಥಿಗಳು ಸ್ಪಷ್ಟವಾಗಿ ದೊಡ್ಡದಾಗಿರುವುದನ್ನು ಗಮನಿಸಬಹುದಲ್ಲದೆ ಅದರ ತೂಕದ ವ್ಯತ್ಯಾಸವನ್ನೂ ಕಾಣಬಹುದು.

**ಚಿಕಿತ್ಸೆ :** ಬೇನೆ ವಾಸಿಯಾಗಲು ದೇಹದಲ್ಲಿ ಸರಿಯಾದ ಪ್ರಮಾಣದಲ್ಲಿ ಅಯೊಡಿನ್ ಅಂಶ ಸಿಗುವಂತೆ ಮಾಡಬೇಕು. ಸಸ್ಯಗಳಿಗೆ ಗೊಬ್ಬರದ ಮೂಲಕ ಅಯೊಡಿನ್ನನ್ನು ಕೊಡುವುದರಿಂದ ಮುಂದೆ ಅದು ಪ್ರಾಣಿಯ ದೇಹವನ್ನು ಆಹಾರದ ಮೂಲಕ ಸೇರುತ್ತದೆ. ಪ್ರಾಣಿಗಳು ನೆಕ್ಕುವ ಖನಿಜಗಳಲ್ಲಿ ಅಯೊಡಿನ್ನನ್ನು ಸೇರಿಸುವುದು ಇನ್ನೊಂದು ಕ್ರಮ. ಪ್ರತಿ ಒಂದು ಟನ್ ಉಪ್ಪಿಗೆ ಐದು ಔನ್ಸ್ ಪೊಟಾಸಿಯಂ ಅಯೋಡೇಟನ್ನು ಶೇ. 8 ಕ್ಯಾಲ್ಸಿಯಂ ಸ್ಟಿಯರೇಟಿನ ಜೊತೆ ಕೊಡಬೇಕು. ಹೀಗೆ ಬೆರಕೆ ಮಾಡದೆ. ಪೊಟ್ಯಾಸಿಯಂ ಅಯೋಡೇಟನ್ನು ಹಾಗೆಯೇ ಉಪಯೋಗಿಸಬಾರದು. ರೋಗ ತಗಲಿದ ಪ್ರತಿ ಕುರಿಗೂ 280 ಮಿ.ಗ್ರಾಮಿನಷ್ಟು ಪೊ. ಅಯೊಡೈಡ್ ಇಲ್ಲವೆ 369 ಮಿ.ಗ್ರಾಂ. ಪೊ. ಅಯೋಡೇಟನ್ನು ಕೊಟ್ಟರೆ ಉತ್ತಮ. ಹಸುವಾದರೆ 4 ಮಿ.ಲೀ. ಮತ್ತು ಹಂದಿ ಹಾಗೂ ಕುರಿಗಳಾದರೆ 2 ಮಿ.ಲೀ. ನಂತೆ ಪ್ರತಿ ಪ್ರಾಣಿಗೂ ಪ್ರತಿವಾರವೂ ಪಕ್ಕೆಯ ಒಳಗಡೆಯ ಭಾಗದಲ್ಲಿ ಅಯೊಡಿನ್ನನ್ನು ಬಳಿದರೆ ಒಳ್ಳೆಯದು. ಆಗಾಗ್ಗೆ ಪ್ರಾಣಿಗಳು ಈ ಭಾಗಗಳನ್ನು ನೆಕ್ಕುವದರಿಂದ ನಿಧಾನವಾಗಿ ಅಯೊಡಿನ್ ಹೊಟ್ಟೆಗೆ ಸೇರಿ ಹೋಗುತ್ತದೆ. 0.007 ಅಯೊಡಿನ್ ಅಂಶವಿರುವ ಉಪ್ಪನ್ನು ಬಸಿರಾದ ಹಸುಗಳಿಗೆ ನೆಕ್ಕಲು ಕೊಡುವುದರಿಂದ ಮುಂದೆ ಹುಟ್ಟುವ ಕರುಗಳನ್ನು ಈ ಬೇನೆಯಿಂದ ಪಾರುಮಾಡಬಹುದು. ಗ್ರಂಥಿಯನ್ನು ಮೊದಲಿನ ಸ್ಥಿತಿಗೆ ತರಲು ಕ್ಷ ಕಿರಣಗಳನ್ನು ಉಪಯೋಗಿಸಬೇಕು. ಗ್ರಂಥಿಗೆ ರಕ್ತಪೊರೈಸಲು ಧಮನಿಗಳನ್ನು ಹಿಡಿತದಲ್ಲಿಡುವುದೂ ಅಗತ್ಯ. (ಜಿ.ಆರ್.ಆರ್.ಎಸ್.)

**ಗಂತಿ[1] :** ಅನೇಕ ಪ್ರಸ್ತರ ಶಿಲೆಗಳಲ್ಲಿ ಅವುಗಳ ಮೂಲವಸ್ತು ಶೇಖರವಾದ ಬಳಿಕ ಅಂತರ್ಜಲದ ಚಟುವಟಿಕೆಯಿಂದ ಉತ್ಪನ್ನವಾಗುವ ವಸ್ತುಗಳಲ್ಲಿ ಮುಖ್ಯವಾದ ಮೂರು ವಸ್ತುಗಳಲ್ಲಿ ಒಂದು (ನೋಡ್ಯೂಲ್). ಉಳಿದ ಎರಡು ವಸ್ತುಗಳು ಕಲ್ಲುಂಡೆಗಳು ಮತ್ತು ಜಿಯೋಡ್. ಗಂತಿಗಳು ಸಾಮಾನ್ಯವಾಗಿ ಅತಿ ಕಠಿನವಾಗಿ, ಕಪ್ಪಾಗಿ, ಮೇಲುಗಡೆ ಮಿನುಗುವ, ನಿಯತರೂಪವಿಲ್ಲದೆ ಗಂಟು ಗಂಟಾಗಿರುವ ಖನಿಜ ವಸ್ತುಗಳ ಗೆಡ್ಡೆಗಳು. ಕಲ್ಲುಂಡೆಗಳ ರಚನೆ ಕ್ರಮಬದ್ಧವಾಗಿರುತ್ತದೆ; ಆದರೆ ಗಂತಿಗಳದು ಹಾಗಿರುವುದಿಲ್ಲ. ಸಮಕಾಲೀನ ಗಂತಿಗಳು ವಿಶಾಲವಾದ ಪ್ರದೇಶಗಳಲ್ಲಿ ಸಿಕ್ಕುತ್ತವೆ. ಅವುಗಳಿಂದ ಆ ಶಿಲೆಯನ್ನು ಗುರ್ತಿಸಿ ಅದರ ಕಾಲವನ್ನೂ ನಿರ್ಧರಿಸಬಹುದು. ಕೆಲವು ಸಂದರ್ಭಗಳಲ್ಲಿ ಅಧಿಕ ಮೊತ್ತದಲ್ಲಿ ಅತಿ ಸಮೀಪದಲ್ಲಿ ಶೇಖರವಾಗಿ ಗಂತಿಗಳು ಪದರಗಳನ್ನೇ ನಿರ್ಮಿಸಬಹುದು. ಆಕಾರದಲ್ಲಿ ಇವು ವೃತ್ತ ಅಂಡಬಿಲ್ಲೆಯಂತೆಯೋ ಚಿತ್ರವಿಚಿತ್ರವಾಗಿಯೋ ಇರಬಹುದು. ಗಾತ್ರದಲ್ಲಿ ಕೆಲವು ಅಂಗುಲಗಳಿಂದ ಅನೇಕ ಅಡಿ ಅಥವಾ ಗಜಗಳವರೆಗೂ ಇರಬಹುದು. ರಾಸಾಯನಿಕ ವಸ್ತು ರಚನೆಯಲ್ಲಿ ಗಂತಿಗಳು ತಾವಿರುವ ಶಿಲೆಯಿಂದ ಬೇರೆಯಾಗುತ್ತವೆ. ಸಾಮಾನ್ಯವಾಗಿ ಕೂಡುಗಲ್ಲುಗಳನ್ನು ಬಂಧಿಸುವ ದ್ರವ್ಯಗಳೇ ಗಂತಿಗಳಲ್ಲಿರುತ್ತವೆ. ಉದಾಹರಣೆಗೆ ಸಿಲಿಕ (ಚೆರ್ಟ್ ಮತ್ತು ಚಕ್ಕಮಕ್ಕಿ ಕಲ್ಲು), ಸುಣ್ಣಕಲ್ಲು, ಡಾಲೋಮೈಟ್, ರಂಜಕದ ಅದುರುಗಳು, ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರುಗಳು ಇತ್ಯಾದಿ. ಚೆರ್ಟ್ ಗಂತಿಗಳು ಅಪ್ಪಲಾಶಿಯನ್ ಪರ್ವತದ ಕೆಲವು ಸುಣ್ಣಕಲ್ಲುಗಳಲ್ಲಿ ಹೇರಳವಾಗಿವೆ. ಇಂಗ್ಲೆಂಡಿನಲ್ಲಿ ಡೋವರ್ ಬಳಿ ಕ್ರಿಟೇಷಸ್ ಯುಗದ ಸೀಮೆಸುಣ್ಣದಲ್ಲಿ ಚಕ್ಕಮಕ್ಕಿ ಕಲ್ಲಿನ ಗಂತಿಗಳಿವೆ. ದಕ್ಷಿಣಭಾರತದಲ್ಲಿ ತಿರುಚ್ಚಿರಪಳ್ಳಿ ಜಿಲ್ಲೆಯ ಕ್ರಿಟೇಷಸ್ ಯುಗದ ಮಣ್ಣಿನ ಪದರಗಳಲ್ಲಿ ಗೊಬ್ಬರವನ್ನು ತಯಾರಿಸಲು ಬೇಕಾದ ರಂಜಕದ ಗಂತಿಗಳು (80 ಲಕ್ಷ ಟನ್ ಮೊತ್ತದಲ್ಲಿ) ಸಿಕ್ಕುತ್ತವೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ರಂಜಕದ ಶಿಲೆಗಳೇ ಇವೆ; ಗಂತಿಗಳೂ ಇವೆ. ಚೆರ್ಟ್ ಗಂತಿಗಳು ಜೀವಿಗಳ ಚಟುವಟಿಕೆಯಿಂದಾದವು. ನಾಲ್ಕು ಕೋಟಿ ಚದರ ಮೈಲಿ ವಿಸ್ತಾರವಾಗಿರುವ ಆಳವಾದ ಸಾಗರದ ತಳದಮೇಲೆ ಕೆಂಪುಮಣ್ಣಿನ ಜತೆಗೆ ಮ್ಯಾಂಗನೀಸ್ ಗಂತಿಗಳು ಹೇರಳವಾಗಿ ದೊರೆಯುತ್ತವೆ. ಕ್ರಮೇಣ ಇವು ಅಮೂಲ್ಯವಾದ ಲೋಹದ ಅದಿರುಗಳೆಂದು ಪರಿಗಣಿತವಾಗಬಹುದು. ಈ ಗಂತಿಗಳು ಎಲೆಯಂತೆ, ಚಿಪ್ಪಿನಂತೆ ಇಲ್ಲವೇ ಮತ್ತಾವ ಜೀವಿಯ ಅಂಗದಂತೆ ಮತ್ತು ಅಪರೂಪವಾಗಿ ಮರಳಿನ ಕಣದ ಸುತ್ತ ಈರುಳ್ಳಿಯಂತೆ ಪದರ ಪದರವಾಗಿ ಬೆಳೆದಿರುತ್ತವೆ. ಮೆದುವಾದ ಶಿಲೆ ನೀರಿನಿಂದ ಕರಗಿ ನಾಶವಾದ ಮೇಲೆ ಗಟ್ಟಿಯಾಗಿರುವ ಗಂತಿಗಳು ಗೋಚರವಾಗುತ್ತವೆ. ಇವನ್ನು ಗಾಲ್ಫ್ ಚಂಡುಗಳೆಂದು ಕರೆಯುವುದುಂಟು. (ಎ.ಎನ್.ಎಸ್.)

**ಗಂತಿ[2] :** ಮೈಯಲ್ಲಿ ಎಲ್ಲಾದರೂ ಯಾವ ಅಂಗಾಂಶದಿಂದಲಾದರೂ ಏಳುವ ಬಾವು ಇಲ್ಲವೇ ಗಡ್ಡೆ. ವೈದ್ಯಶಾಸ್ತ್ರದಲ್ಲಿ ಗಂತಿ (ಟ್ಯೂಮರ್) ಪದಕ್ಕೆ ಒಂದು ಗೊತ್ತಾದ ಅರ್ಥವಿದೆ. ಮೈಯಲ್ಲಿಯ ಕೆಲವು ಜೀವಕಣಗಳು ಯಾವ ಕಾರಣವಾಗಲೀ ಉದ್ದೇಶವಾಗಲೀ ಇಲ್ಲದೆ ಅವಷ್ಟಕ್ಕವೇ ತಡೆಯಿಲ್ಲದೆ ಸಿಕ್ಕಾಬಟ್ಟೆ ಅಸಹಜವಾಗಿ, ಸರಿಪಡಿಸಲಾಗದಷ್ಟು ಶಾಶ್ವತವಾಗಿ ಅಂಗಾಂಶದಲ್ಲಿ ಬೆಳೆದಿರುವುದಕ್ಕೆ ಮಾತ್ರ ಗಂತಿ ಎನ್ನುತ್ತಾರೆ. ಬಹುಮಟ್ಟಿಗೆ, ಎಲ್ಲ ಬೆನ್ನುಲುಬಿಗಳಲ್ಲೂ ಕೆಲವು ಕೀಟಗಳಲ್ಲೂ ಗಿಡಮರಗಳಲ್ಲೂ ಗಂತಿಗಳು ಏಳುತ್ತವೆ. ಹಲವು ಜೀವಕಣಗಳಿರುವ ಎಲ್ಲ ಜೀವಿಗಳಲ್ಲೂ ಇದು ಸಾಮಾನ್ಯ, ಮುಖ್ಯವಾಗಿ ಹುಸಿಗಂತಿಗಳು (ವಿಷಮವಲ್ಲದ ಬಾವುಗಳು), ನಿಜಗಂತಿಗಳು (ವಿಷಮವಾದವು) ಎಂಬಂತೆ ಗಂತಿಗಳಲ್ಲಿ ಎರಡು ಬಗೆಗಳಿವೆ.

ಗಂತಿಗಳನ್ನು ಹೀಗೆ ವಿಂಗಡಿಸಲು ಅವುಗಳ ಜೀವಕಣಗಳ ಸ್ವರೂಪವೇ ಕಾರಣ. ಇವನ್ನು ಗುರುತಿಸಿದಾಗಲೇ ಊದಿರುವ ಒಂದು ಅಂಗಾಂಶದ ಹುಟ್ಟು, ಗುಣ, ಪ್ರಮಾಣಗಳನ್ನು ಖಚಿತವಾಗಿ ನಿರ್ಧರಿಸುವಂತಾಗಿದೆ. ಆದ್ದರಿಂದ ಅಂಗಾಂಶಗಳಲ್ಲಿ ಎಂದಿನ ಆರೋಗ್ಯದ ಹಾಗೆಯೇ ಅಸಹಜವಾದ, ಇಲ್ಲವೇ ಹೊರಗಿಂದ ಬಂದ ಜೀವಕಣಗಳು ಇರಬಹುದು. ಅಸಹಜವಾದವೂ ಮೊದಲು ಆರೋಗ್ಯವಾಗಿದ್ದ ಜೀವಕಣಗಳೇ ಆದರೂ ಆಕಾರ, ರೂಪ, ಗುಣ, ಜೋಡಣೆಗಳಲ್ಲಿ ಮಾತ್ರ ಇದ್ದಕ್ಕಿದ್ದಹಾಗೆ ಬದಲಾವಣೆಗಳು ಕಂಡುಬರುತ್ತವೆ. ಹೀಗೇಕಾಯಿತೆನ್ನುವುದೇ ಇನ್ನೂ ಗೊತ್ತಿಲ್ಲ.

ಊತದಲ್ಲಿಯ ಒಂದೊಂದು ಜೀವಕಣದ ಗಾತ್ರ ದೊಡ್ಡದಾಗಿದ್ದರೆ ಮಲೆತ (ಹೈಪರ್‌ಟ್ರೋಫಿ) ಎನ್ನಿಸಿಕೊಳ್ಳುವುದು. ನಿಜಗಂತಿಗಳಲ್ಲಿ ಇದು ಸಾಮಾನ್ಯವಾದರೂ ಬೇರೆ ಬೇನೆಗಳಲ್ಲೂ ಇದನ್ನು ಕಾಣಬಹುದು. ಒಂದೆಡೆಯ ಜೀವಕಣಗಳು ಗುಣಿತವಾಗಿ ಹೆಚ್ಚಿಕೊಂಡಿದ್ದಕ್ಕೆ ಹೆಗ್ಗುಣಿತ (ಹೈಪರ್‌ಪ್ಲೇಸಿಯ) ಎಂದಿದೆ. ಎಷ್ಟೋ ವೇಳೆ ಗಂತಿಯನ್ನು ಗುರುತಿಸಲು ಇದೊಂದೇ ಗುಣ ಸಾಕು. ಹುಟ್ಟುಮರಳಿಕೆಯಲ್ಲಿ (ಅನಪ್ಲೇಸಿಯ) ಜೀವಕಣದ ಆಕಾರ, ಗಾತ್ರಗಳಲ್ಲಿ ಇನ್ನೂ ಹಿಂಗಾಲದ ರೂಪ ತಾಳಿರುತ್ತದೆ. ಆರೋಗ್ಯದಲ್ಲೂ ರೋಗಗಳಲ್ಲೂ ಹೀಗಾಗುವುದು ಕೆಲವೇಳೆ ಕಂಡರೂ ವಿಷಮ ಗಂತಿಗಳಲ್ಲಿ ಯಾವಗಲೂ ಹೀಗೇ ಇರುವುದು. ಒಟ್ಟಿನಲ್ಲಿ, ನಿಜಗಂತಿಗಳಲ್ಲಿ ಎಂದಿನಂತಿರದ ಈ ಅಸಹಜ ಗುಣಗಳೊಂದಿಗೆ ಜೀವಕಣಗಳು ಬೆಳೆಯುತ್ತಿರುವುವು.

**ಹುಸಿ ಗಂತಿಗಳು :** ಕಾರಣ, ಹುಟ್ಟು ಎರಡೂ ಚೆನ್ನಾಗಿ ಗೊತ್ತಿರುವ ಈ ಗಂತಿಗಳು ಹಲವು ತೆರನಾಗಿರುತ್ತವೆ. ಹೆಸರೇ ಹೇಳುವಂತೆ, ಇವು ಕೇವಲ ಬಾವುಗಳೇ ಹೊರತು ನಿಜವಾದ ಗಂತಿಗಳಲ್ಲ.

ಕೆರಳಿಕೆಗಳ ಎದುರಿನ ಪ್ರತಿಕ್ರಿಯೆಯಾಗಿ ಉರಿತದಿಂದೇಳುವ (ಇನ್‌ಫ್ಲಮೇಟರಿ) ಊತ. ಗಾಯ ಪೆಟ್ಟುಗಳಾದರೆ, ಮೈಗಾಗದ ಏನಾದರೂ ವಸ್ತುವೋ ಜೀವಾಣುವೋ ಒಳಹೊಕ್ಕರೆ, ಹಾಗೆ ತೂರಿದೆಡೆಯಲ್ಲಿ ಮೈಯಲ್ಲಿರುವ ಎಂದಿನ ಜೀವಕಣಗಳಿಂದೇಳುವ ಊತವಿದು. ಪೆಟ್ಟಾದ ಜಾಗದಲ್ಲಿ ತರಚಿ, ಜಜ್ಜಿ, ರಕ್ತ ಕಟ್ಟಿಕೊಂಡು ಗಂತಿಯೋ (ಹೆಮಟೋಮ) ಉಳುಕೋ ಆಗಬಹುದು. ಗಾಯ ವಾಸಿಯಾದೆಡೆ ಏಳುವ ಗಡಸುಗಂಟುಗಳು (ಕ್ಯಾಲಸಸ್), ದಿಂಚೀಉರಿತ (ಬರ್ಸೈಟಿಸ್), ಮುರಿದ ಮೂಳೆ ಸರಿಯಾಗಿ ಕೂಡದಡೆಯಲ್ಲಿ ಹೆಚ್ಚಿಗೆ ಬೆಳೆವುದೂ ಬೇರೂರಿದ ಊತಗಳ ಉದಾಹರಣೆಗಳು. ಕುರು, ಕೀವುಕುರು, ಉಗುರುಸುತ್ತು, ಊದಿದ ಅದಗಳ್ಳೆಗಳು–ಇವೆಲ್ಲ ಸೋಂಕು ಹತ್ತಿದ್ದರಿಂದ ಕೂಡಲೇ ಏಳುವ ಊತಗಳು. ಸಾಮಾನ್ಯವಾಗಿ ಕ್ಷಯ, ಉಪದಂಶ, ಕುಷ್ಠ ಮುಂತಾದವುಗಳಿಂದ ಏಳುವ ಗಂತಿಗಳು ಬಹುಕಾಲ ಇರುತ್ತವೆ.

ಒಂದು ಅಂಗದ ಇಲ್ಲವೇ ಅಂಗಭಾಗದ ಜೀವಕಣಗಳ ಗಾತ್ರ ಹೆಚ್ಚಿಯೋ ಅಂಕಿ ಗುಣಿತವಾಗೋ ದೊಡ್ಡದಾಗಿ ಬೆಳೆದವು ಮಲೆತದ (ಹೈಪರ್‌ಟ್ರೋಫಿಕ್) ಊತಗಳು. ಸಾಮು, ದಂಡೆ ಹೊಡೆವ ಕುಸ್ತಿ ಜಟ್ಟಿಗಳ ತೋಳು, ತೊಡೆ, ಹೆಗಲುಗಳ ಸ್ನಾಯುಗಳು ಮಿತಿಮೀರಿ ದಪ್ಪವಾಗಿ ಬೆಳೆದಿರುವುದು ಇದರ ಉದಾಹರಣೆ. ಬಸುರಿಯಲ್ಲಿ ಮೊಲೆಗಳೂ ಗರ್ಭಕೋಶವೂ ದೊಡ್ಡವಾಗುವುದೂ ಹೀಗೇ. ಇವೆಲ್ಲ ಮೈಯ ಎಂದಿನ ನಿಜಗೆಲಸಗಳಿಗೆ ಸಂಬಂಧಿಸಿವೆಯೇ ಹೊರತು ರೋಗಗಳಲ್ಲವಾದ್ದರಿಂದ ಇವು ನಿಜಗಂತಿಗಳಲ್ಲ.

ಬದುಕಿರುವ ಜೀವಿಗಳು ಮೈ ಒಳಹೊಕ್ಕು ಅಲ್ಲೇ ದೊಡ್ಡದಾಗಿ ಬೆಳೆವುವು ಪರಪಿಂಡಿಗಳ ಊತಗಳು. ನೀರ್ದೊಟ್ಟಿನ ರೋಗದಲ್ಲಿ, ಮುಖ್ಯವಾಗಿ ಈಲಿಯಂಥ ಕೆಲವೇ ಅಂಗಗಳಲ್ಲಿ ಜಿಟ್ಟಿಗಳು(ಸಿಸ್ಟ್) ಬೆಳೆವುದು ಸಾಮಾನ್ಯ ಉದಾಹರಣೆ. ಜಿಟ್ಟಿಗಳ ಗೋಡೆಯೂ ಒಳಗಿರುವ ರಸವೂ ಹೊರಗಿನ ಜೀವಿಯಿಂದಾದವು. ಜಿಟ್ಟಿಯ ಸುತ್ತಲೂ ಒಂದಿಷ್ಟು ಉರಿತದ ಪ್ರತಿಕ್ರಿಯೆ ಕಾಣುತ್ತದೆ.

ಕೊಳೆತ ಜೀವಕಣಗಳಿಂದಾದ ರಸ ತುಂಬಿರುವ, ಚಂಡಿನಾಕಾರದಲ್ಲಿ ಬೆಳೆದ ಜಿಟ್ಟಿಗಳಲ್ಲಿ ಹಲ ಬಗೆಗಳಿವೆ. ಕೆಲವು ನಿಜಗಂತಿಗಳು ಜಿಟ್ಟಿಗಳ ಆಕಾರದಲ್ಲಿರಲೂಬಹುದು. ನಿಜಗಂತಿಯೊಳಗೆ ಗಟ್ಟಿಯಾಗಿರುವ ಭಾಗ ಕೊಳೆತು ಜಿಟ್ಟಿಗಳ ಹಾಗೆ ಕಾಣಬಹುದು. ಇನ್ನು ಕೆಲವು ಜಿಟ್ಟಿಗಳು ಗಂತಿಗಳೇ ಅಲ್ಲ. ಇದಕ್ಕೆ ಉದಾಹರಣೆಗಳು ಹಲವಾರಿವೆ. ಹೊರಸಾಗಿಸುವ ನಾಳಕ್ಕೆ ಅಡ್ಡಿಯಾಗಿ ಗ್ರಂಥಿಯೇ ಹಿಗ್ಗಿರುವ ಹಿಡಿದಿಟ್ಟ ಜಿಟ್ಟಿಯ ಉದಾಹರಣೆ ಮೈಜಿಡ್ಡಿನ ಜಿಟ್ಟಿ (ಸೆಬೇಷಿಯಸ್ ಸಿಸ್ಟ್). ಸಾಮಾನ್ಯವಾಗಿ ಕೊಂಚವೇ ರಸವಿರುವ ಚೀಲದಲ್ಲಿ ನೀರ್ದುಂಬಿ ಬಿರುದುಂಬಿದ ಜಿಟ್ಟಿಯ ಉದಾಹರಣೆ ಚೇರು (ಹೈಡ್ರೋಸಿಲ್). ಹುಟ್ಟುವಾಗಲೇ ಹಸುಗೂಸಿನಲ್ಲಿ ಕಂಡುಬರದಿದ್ದರೂ ಪಿಂಡದಲ್ಲಿದ್ದ ಕೆಲವು ರಚನೆ ಕಟ್ಟುಗಳು ವಿಕಾಸವಾಗದೆ ಮೊಳಕೆಯಾಗೇ ಉಳಿದಿದ್ದು ಮುಂದೆಂದಾರು ತೋರುವುದರ ಉದಾಹರಣೆ ಗುರಾಣಿಕೆ

ನಾಲಗೆಯ (ತೈರೊಗ್ಲಾಸಲ್) ಜಿಟ್ಟೆ ಪರಪಿಂಡಿ ಜಿಟ್ಟೆಯನ್ನು ಆಗಲೇ ವಿವರಿಸಿದೆ. ಅನುವಳಿಕ (ಡಿಜನರೇಟಿವ್) ಜಿಟ್ಟೆಯ ಉದಾಹರಣೆ ರಕ್ತದ ಜಿಟ್ಟೆ. ಎಲ್ಲ ಜಿಟ್ಟೆಗಳಲ್ಲೂ ಒಳಗಡೆ ಇರುವ ರಕ್ತ, ಲೋಳೆ, ರಸ ನೀರುನೀರಾಗಿರುವುದು. ಚರ್ಮದ ಮೇಲಿರುವ ಜಿಟ್ಟೆಗಳಲ್ಲಿ ಹಾಲುರಸದಂಥ ತಿಳಿರಸವಿದ್ದರೆ ಅವುಗಳ ಮೂಲಕ ಬೆಳಕು ಹಾಯುವಂತಿರುವುದು. ಒಂದು ಬಾವು ಜಿಟ್ಟೆಯೋ ಅಲ್ಲವೋ ತಿಳಿಯಲು ಕೊಳವೆಸೂಜಿ ಹಾಕಿನೋಡಬೇಕು. ರಸ ಹೊರಸುರಿದರೆ ಅದು ಜಿಟ್ಟೆ. ಶಸ್ತ್ರಕ್ರಿಯೆಯಿಂದ ಕೊಯ್ದು ತೆಗೆಯಬಹುದು ಇವುಗಳ ಚಿಕಿತ್ಸೆ.

ಗೋಡೆಗಳೋ ಹೊದಿಕೆಕವಚವೋ ಕೊಳೆತು ಮೆತ್ತಗಾಗವುದರಿಂದ ಪೊಳ್ಳಾಗಿರುವ ಅಂಗವೋ ಅಂಗಾಂಶವೋ ಬಿರಿದುಂಬಿದರೆ ಅನುವಳಿಕ ಜಿಟ್ಟೆಗಳಾಗುತ್ತವೆ: ಅಗಲುಬ್ಬು (ಅನ್ಯೂರಿಸಂ), ವಕ್ರಸಿರ (ವೆರಿಕೋಸ್ ವೆಯ್ನ್), ಬೂರು (ಹರ್ನಿಯ). ತಿರುಚೀಲ (ಡೈವರ್ಟಿಕ್ಯುಲಂ) ಇಂಥವು.

ಕೆಲವೇಳೆ ಏನೂ ಊದಿರದಿದ್ದರು ಊತವಿದ್ದ ಹಾಗೇ ತೋರುವುದುಂಟು. ಮೈ ಬಡಕಲಾಗಿ ಸೊರಗಿರುವಾಗ ಒಳಾಂಗಗಳು ಎದ್ದು ತೋರಿದಾಗ ಬಾವುಗಳಾಗಿ ಕಾಣುತ್ತವೆ.

ಕೆಲವು ಬಾವುಗಳ ಹುಟ್ಟು, ಗುಣಗಳ ವಿಚಾರವಾಗಿ ಒಮ್ಮತವಿಲ್ಲ. ಇವು ನಿಜಗಂತಿಗಳೋ ಉರಿತಗಳೋ ಅನುವಳಿಕೆಗಳೋ ಇನ್ನೂ ಖಚಿತವಿಲ್ಲ. ಹಾಲುರಸ ಗ್ರಂಥಿಗಳಿಗೆ ಹತ್ತುವ ಹಾಡ್ಜ್‌ಕಿನ್ನನ ರೋಗ ಇಂಥದೊಂದು.

ತಾನು ಬಸುರಾಗಿರುವೆನೆಂದು ಭ್ರಮಿಸುವ ಹೆಣ್ಣಿನ ಕೆಳಹೊಟ್ಟೆ ದಪ್ಪವಾಗಿರುವಂತೆ ತೋರುವುದಕ್ಕೆ ತೋರ್ಕೆ(ಫ್ಯಾಂಟಂ) ಗಂತಿ ಎಂದಿದೆ. ಇದರೊಂದಿಗೇ ಬಸುರಿಯ ಬಯಕೆಗಳು ಮತ್ತಿತರ ಲಕ್ಷಣಗಳೂ ತೋರುವುದುಂಟು. ಅರಿವು ತಪ್ಪಿಸಿದರೆ, ಪರವಶತೆಯಿಂದ (ಹಿಪ್ನೋಟಿಸಂ) ತೋರ್ಕೆ ಗಂತಿ ಮಾಯವಾಗುತ್ತದೆ.

**ನಿಜಗಂತಿಗಳು :** ಮೈಯಲ್ಲಿ ಮೊದಲೇ ಇರುವ ಜೀವಕಣಗಳಿಂದೆದ್ದ, ಬೇಗನೇ ಬೆಳೆವ, ಅಂಗಾಂಶ ಜೀವಕಣಗಳ ಗಂಟುಗಳಿರುವವೇ ನಿಜವಾದ ಗಂತಿಗಳು, ಕೆಲವೇಳೆ ಯಾವ ಜೀವಕಣಗಳಿಂದ ಹುಟ್ಟಿದ್ದವೋ ಅವುಗಳ ಹಾಗೇ ಎಂದಿನಂತಿರುತ್ತವೆ, ಗಂತಿಯ ಈ ಜೀವಕಣಗಳು. ಸಾಮಾನ್ಯವಾಗಿ ಇಂಥವು ನಿರಪಾಯಕರ. ಇವಕ್ಕೆ ಮೆಲುಪಿನವು (ಬಿನ್ಯನ್) ಎಂದಿದೆ. ಆದರೆ ನಿಜಗಂತಿಗಳಲ್ಲಿಯ ಜೀವಕಣಗಳ ರೂಪ, ಗಾತ್ರ, ಆಕಾರ, ರಚನೆ ಎಂದಿನಂತಿರವು. ಇವೆಲ್ಲ ವಿಷಮ (ಮೆಲೆಗ್ನೆಂಟ್) ಗಂತಿಗಳು. ಇವು ಬಲು ಹಾನಿಕರವಾದವು. ಜೀವಕಣಗಳ ಬೆಳೆತದಲ್ಲಿ ಸಾಮಾನ್ಯವಾಗಿ ಹುಟ್ಟು ಮರಳಿಕೆ ಹೆಗ್ಗುಣವಾಗಿರುವುದು.

ಈ ಗಂತಿಗಳು ಏಳಲು ಕಾರಣವೇ ಖಚಿತವಿಲ್ಲ. ಆರೋಗ್ಯವಂತರಲ್ಲಿ ಎಲ್ಲರಲ್ಲೂ ಆಗುವ ಹಾಗೇ ಜೀವಕಣಗಳು ವೆಗ್ಗಳಿಸುವುದರಿಂದಲೇ (ಪ್ರೊಲಿಫೆರೇಷನ್) ಗಂತಿಗಳು ಬೆಳೆಯುತ್ತವೆ. ಎಲ್ಲ ಜೀವಿಗಳಂತೆ ಮೈಯ ಜೀವಕಣಗಳಿಗೂ ಕೆಲವು ದಿನಗಳಿಂದ ಹಿಡಿದು ವರ್ಷಗಳ ತನಕದ ಪ್ರಾಣವಿರುತ್ತದೆ. ಕಾಲಕಾಲಕ್ಕೆ ಸತ್ತು ಬಿದ್ದುಹೋದವುಗಳ ಬದಲು ಬೇರೆ ಹುಟ್ಟಿಕೊಳ್ಳುತ್ತವೆ. ಹೊಸ ಜೀವಕಣಗಳು ಹೊಸದಾಗಿ ಹುಟ್ಟುವು. ಇರುವ ಕಣವೇ ಇಪ್ಪಾಲಾಗಿ ಒಡೆದು ಹೊಸಕಣಗಳು ಹುಟ್ಟುತ್ತವೆ. ಸುಟ್ಟಗಾಯದಲ್ಲಿ ಆಗುವಂತೆ, ಚರ್ಮ ಬಿದ್ದುಹೋದರೆ, ಅಕ್ಕಪಕ್ಕದ ಜೀವಕಣಗಳು ಗುಣಿತವಾಗಿ ಆ ಜಾಗವನ್ನು ತುಂಬುತ್ತವೆ. ಉದ್ದೇಶ ನೆರವೇರಿದ ಒಡನೆಯೇ ಕಣಗಳ ಬೆಳೆತ ತಾನೇ ತಾನಾಗಿ ನಿಂತುಹೋಗುತ್ತದೆ. ಗಾಯ ವಾಸಿಯಾಗಲು ಹೀಗಾಗುವುದೇನೋ ಸರಿಯೆ. ಕಿತ್ತು ಹೋದ ಜಾಗ ಸರಿಯಾಗಿ ತುಂಬಿದ ಕೂಡಲೇ ಜೀವಕಣಗಳ ಬೆಳೆತಕ್ಕೆ ಸರಕ್ಕನೆ ತಡೆಯಾಗುವ ಉಪಾಯವಂತೂ ಬಲು ಸೋಜಿಗ. ಹೀಗೆ ಜೀವಕಣಗಳು ಗುಣಿತವಾಗಲು ಸಹಜ ಚೋದನೆಯೇನೋ ಇರಬೇಕು. ಅದೇ ತೆರನಾಗಿ ಜೀವಕಣಗಳ ಗುಣಿತ ಸರಕ್ಕನೆ ನಿಲ್ಲುವುದಕ್ಕು ಅಂಥದೇ ಸಹಜ ಚೋದನೆಯೊಂದು ಇರಬೇಕು.

ಸಹಜವಾದ ಅಂಥ ಯಾವ ಚೋದನೆಯೂ ಇಲ್ಲದೆ ಜೀವಕಣಗಳು ಗುಣಿತವಾಗುವುದರಿಂದಲೋ ಅಸಹಜ ಚೋದನೆಯಿಂದಲೋ ಗಂತಿಗಳು ಏಳುವುವು. ಈ ಚೋದನೆಗಳು ಎಂಥವು ಎಂಬುದು ಮಾತ್ರ ಗೊತ್ತಿಲ್ಲ. ಗೊತ್ತಾಗುವ ಹಾಗೆ ಯಾವ ಕಾರಣವೂ ಇರದೆಯೇ ಒಂದು ಅಂಗದ ಊತಕದ ಜೀವಕಣಗಳು ಇದ್ದಕ್ಕಿದ್ದಂತೆ ಗುಣಿತವಾಗಿ ಇರುವ ಜಾಗವನ್ನೇ ಆಕ್ರಮಿಸುತ್ತವೆ. ಸಹಜವಾಗಿ ಗಾಯ ವಾಸಿಯಾಗುವಾಗ ಆಗುವುದಕ್ಕೂ ಇದಕ್ಕೂ, ಒಂದು ಮುಖ್ಯ ವ್ಯತ್ಯಾಸವಿದೆ. ತಾಯಿ ಜೀವಕಣದಿಂದ ವಿಕಾಸವಾದ ಮರಿಕಣ ತಾಯಿ ಕಣವನ್ನು ಹೋಲದೆ ಇನ್ನೂ ಹಿಂದಿನ ಆದಿಕಣದ ಹಾಗಿರುತ್ತದೆ.

ಗಂತಿಗಳು ಏಳಲು ಕೆಲವು ಅಂಶಗಳು ಕಾರಣಗಳಂತೆ ತೋರಬಹುದು. ಬೇರೂರಿದ ಕೆರಳಿಕೆ (ಇರಿಟೇಷನ್) ಅಂಥ ಒಂದು ಅಂಶ. ಕಸಬು, ಜೀವನದ ಕ್ರಮಗಳಿಗೆ ತಕ್ಕಂತೆ ಬಗೆ ಬಗೆಯ ಗಂತಿಗಳನ್ನು ಕಾಣಬಹುದು.

ಚಳಿಗಾಲದಲ್ಲಿ ಬೆಚ್ಚಗಿರಲು ಕಾಶ್ಮೀರದ ಜನ ಉರಿಕೆಂಡಗಳಿರುವ ಮಡಕೆಗಳನ್ನು (ಕಾಂಗ್ರಿ) ಯಾವಾಗಲೂ ಹೊಟ್ಟೆಗೆ ಕಟ್ಟಿಕೊಂಡಿರುವುದರಿಂದ ಹೊಟ್ಟೆಯ ಮೇಲೆ ಕಾಂಗ್ರಿ ಏಡಿಗಂತಿ ಏಳುತ್ತದೆ. ಆಂಧ್ರಪ್ರದೇಶದಲ್ಲಿ ಹೆಂಗಸರು ಚುಟ್ಟದ ಉರಿವ ಕೊನೆಗಳನ್ನು ಬಾಯೊಳಗೆ ಇರಿಸಿಕೊಂಡು ಹೊಗೆ ಸೇದುವುದರಿಂದ ಬಾಯಲ್ಲಿ ಏಡಿಗಂತಿ ಏಳವುದು. ಹಲ್ಲು ಸವೆದು ಚೂಪಾಗಿ ಒಳದವಡೆಗೆ ಉಜ್ಜಿದಾಗ ಬಾಯೊಳಗೆ ಏಡಿಗಂತಿ ಏಳಬಹುದು. ಅತಿ ನೇರಳೆ ಕಿರಣಗಳು, ಎಕ್ಸ್ ಕಿರಣಗಳು, ವಿಕಿರಣಶೀಲ ಸಮಸ್ಥಾನಿಗಳು (ಐಸೊಟೋಪ್ಸ್) ರಕ್ತದಲ್ಲಿ ಗಂತಿಗಳೇಳಲು ಕಾರಣವಾಗಬಹುದು. ಗಡಿಯಾರದ ರೇಡಿಯಂ ಸೂಚೀಬಿಲ್ಲೆ (ಡಯಲ್) ತಯಾರಕರಲ್ಲಿ ಮೂಳೆ ಏಡಿಗಂತಿ ಏಳುತ್ತದೆ. ಯುರೇನಿಯಂ ಗಣಿ ಕೆಲಸಗಾರರಲ್ಲಿ ಪುಪ್ಪುಸದ ಏಡಿಗಂತಿ ಸಾಮಾನ್ಯ. ಯಾವಾಗಲೂ ಇಲ್ಲಣವನ್ನು ಮೈಗೆ ತಾಕಿಸಿಕೊಳ್ಳುವವರಲ್ಲಿ ಚರ್ಮದಲ್ಲು ಸಿಗರೇಟು ವಿಪರೀತ ಸೇದುವವರಲ್ಲಿ ಪುಪ್ಪುಸದಲ್ಲೂ ಅನಿಲೀನ್ ಬಣ್ಣವಸ್ತು ತಯಾರಕರಲ್ಲಿ ಕಂಕೋಶದಲ್ಲೂ ಹೊಗೆಸೊಪ್ಪಿನೊಂದಿಗೆ ಎಲೆಅಡಿಕೆಯನ್ನು ಯಾವಾಗಲೂ ಜಗಿಯುತ್ತ ದವಡೆಗೆ ಒತ್ತಲಿಸುವವರಲ್ಲಿ ಒಳ ಬಾಯಿ ನಾಲಗೆಗಳಲ್ಲೂ ಏಡಿಗಂತಿ ಏಳುವುದು.

ಅಂತಃಸ್ರಾವೀ ರಸಗಳಾದ ಹಾರ್ಮೋನುಗಳ ಪ್ರಯೋಗವಾದಾಗ ಪ್ರಾಣಿಗಳಲ್ಲಿ ಗಂತಿಗಳಾಗಿವೆಯಾದರೂ ಗಂತಿಗಳ ಮೇಲೆ ಅವುಗಳ ಪರಿಣಾಮವೆಷ್ಟು ಎನ್ನುವುದು ಖಚಿತವಾಗಿಲ್ಲ.

ನಿಜಗಂತಿಗಳಿಗೆ ವಯಸ್ಸಿನ ಜನಾಂಗದ ಅಡ್ಡಿ ಇಲ್ಲವಾದರೂ ವಯಸ್ಸು ಹೆಚ್ಚಿದ ಹಾಗೆಲ್ಲ ಇವುಗಳ ಬೆಳೆವಣಿಗೆಯೂ ಏರುತ್ತ ಹೋಗುತ್ತದೆ. ಕೆಲವಕ್ಕೆ ಆಗ ಹುಟ್ಟಿದ ಹಸುಗೂಸೂ ಹೊರತಲ್ಲ. ವಿಷಮಗಂತಿಗಳು ಮುಖ್ಯವಾಗಿ ಕೆಲವು ತಲೆಮಾರುಗಳಲ್ಲಿ ಏಳುವಂತೆ ತೋರುವುದು. ಹೀಗಾಗುವುದನ್ನು ಚಿಟ್ಟಿಲಿಗಳ ಮೇಲಿನ ಪ್ರಯೋಗಗಳಿಂದ ಸ್ಥಿರಪಡಿಸಲಾಗಿದೆ. ತಲೆಮಾರಿನಲ್ಲಿ ತೋರುವ ಈ ಗುಣ ಏಡಿಗಂತಿ ಏಳುವುದರಲ್ಲಿಯ ಬಲು ಸಣ್ಣ ಅಂಶ. ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗಮನಿಸುವುದಾದರೆ ಮೊಲೆಯ ಏಡಿಗಂತಿ ಅಮೆರಿಕದ ಹೆಂಗಸರಲ್ಲಿ ಹೆಚ್ಚಾದರೆ, ಜಪಾನೀ ಹೆಂಗಸರಲ್ಲಿ ಬಲು ವಿರಳ. ಹಾಗೆಯೇ ಏಷ್ಯದವರಲ್ಲಿ ಈಲಿಯ ಏಡಿಗಂತಿ ಸಾಮಾನ್ಯ ; ಬಿಳಿಯರಲ್ಲಿ ಕಡಿಮೆ. ಅವರಲ್ಲಿ ಸಾಮಾನ್ಯವಾಗಿ ಏಳುವ ಚರ್ಮದ ಏಡಿಗಂತಿ ಕರಿಯರಲ್ಲಿ ಅಷ್ಟಾಗಿಲ್ಲ.

ಕೆಲವು ಗಂತಿಗಳು ಗಂಡು ಮತ್ತು ಹೆಣ್ಣುಗಳಲ್ಲಿ ವ್ಯತ್ಯಾಸ ತೋರುವುವು. ತುಟಿಯ ಏಡಿಗಂತಿ ಹೆಂಗಸರಲ್ಲಿ ವಿರಳ ; ಗುರಾಣಿಕ ಗ್ರಂಥಿಯ ಗಂತಿಗಳು ಹೆಂಗಸರಲ್ಲೇ ಹೆಚ್ಚು. ಕೆಲವು ಅಂಗಗಳು ಗಂತಿಗಳಿಗೆ ಈಡಾಗುವುದು ಹೆಚ್ಚು. ಜಠರ, ಅನ್ನನಾಳ, ನೆಟ್ಟಗರಳು (ರೆಕ್ಟಂ), ಪುಪ್ಪುಸ, ಹೆಂಗಸಿನ ಮೊಲೆ ಮತ್ತು ಜನನಾಂಗಗಳಲ್ಲಿ ಸಾಮಾನ್ಯ ; ಗುಂಡಿಗೆ, ತೊರಳೆಯಂಥವಲ್ಲಿ ವಿರಳ. ರೋಗಿಗಳಲ್ಲಿ. ಚಟ್ಟೆಹುಳುಗಳಿಂದ (ಫ್ಲೂಕ್ಸ್) ಈಲಿ, ಕಂಕೋಶಗಳಲ್ಲಿ ಏಡಿಗಂತಿ ಏಳಬಹುದು.

ಜೀವಾಣುಗಳಿಂದ ಆಗುವ ಸೋಂಕು ಗಂತಿಗಳಿಗೆ ಕಾರಣವಲ್ಲ. ಸೋಸಬಹುದಾದ ಒಂದು ವಿಷಕಣದಿಂದ ಕೋಳಿಯಲ್ಲಿ ಕೆಲವು ಗಂತಿಗಳನ್ನು ಎಬ್ಬಿಸಬಹುದು. ಮಕ್ಕಳಲ್ಲಿ ಮೆತು ನರೂಲಿಗಳು(ವಾರ್ಟ್ಸ್) ಹೀಗೆಯೇ ಏಳುವುದಾದರೂ ನರೂಲಿಗಳು ಗಂತಿಗಳೇ ಎಂಬ ವಿಷಯ ಶಂಕಾಸ್ಪದ.

ಮುಖ್ಯವಾಗಿ, ಕೆಲಸಗಾರರ ಪರಿಹಾರ ಮಂಡಲಿಯ ಗಮನಕ್ಕೆ ಕೆಲವೇಳೆ ಬಂದಿರುವಂತೆ ಗಾಯ, ಪೆಟ್ಟಿಂದ ಗಂತಿ ಏಳುತ್ತದೆ ಎಂದು ಹೇಳಿರುವುದುಂಟು. ಸಾಮಾನ್ಯವಾಗಿ, ಮಾಂಸಗಂತಿ(ಸಾರ್ಕೋಮ) ತೆರನ ಗಂತಿಗಳು ಗಾಯ, ಪೆಟ್ಟಿಂದ ಕೆಲವೇಳೆ ಏಳಬಹುದೆಂಬ ಅನುಮಾನವಿದ್ದರೂ ಇನ್ನೂ ಖಚಿತವಾಗಿಲ್ಲ.

**ಕೆಡಕು :** ಮೈಗೆ ಕೆಡಕಾಗುವ ಹೊತ್ತಿನಲ್ಲಿ ಕಾಪಿಡುವ ಮರುಕ್ರಿಯೆ ಒಂದು ಹಂತವಾಗಿರುವುದರಿಂದ ಸಹಜವಾದ ಉರಿತದ ಊತಗಳು ಮೈಗೆ ಅನುಕೂಲಕರ. ನಿಜಗಂತಿಗಳಿಗೆ ಈ ತೆರನ ಯಾವ ಉದ್ದೇಶವೂ ಇಲ್ಲ ; ಅರ್ಥವೂ ಇಲ್ಲ. ಇವುಗಳ ಪಾತ್ರ ಕೇವಲ ರೋಗಿಯನ್ನು ಸಾಯಿಸುವುದರಲ್ಲಿದೆ. ರೋಗಿಗೆ ಏನಾದರೂ ಸರಿಯೆ, ಇವಷ್ಟಕ್ಕೆ ಇವು ಬೆಳೆಯುತ್ತ ಹೋಗುತ್ತವೆ. ಇರುವೆಡೆಯಿಂದ ಇವು ಏಡಿಯ ಕಾಲುಗಳ ಹಾಗೆ ಎಲ್ಲ ದಿಕ್ಕುಗಳಲ್ಲೂ ಹರಡಿಕೊಳ್ಳುವುದರಿಂದಲೇ ಇವಕ್ಕೆ ಏಡಿಗಂತಿ (ಕ್ಯಾನ್ಸರ್) ಎಂಬ ಹೆಸರಾಗಿದೆ.

ಉರಿತದ ಊತಗಳು ರೂಪಿಸುವ ಕ್ರಿಯೆಯ ತೀವ್ರತೆ ಮೈ ಆರೋಗ್ಯಕ್ಕೆ ತಕ್ಕ ಹಾಗೆ ಇರುತ್ತದೆ. ಬಡಕಲ, ಸಣಕಲ ಮೈಯವರಲ್ಲಿ ಉರಿತದ ಪ್ರತಿಕ್ರಿಯೆ ಕೊಂಚ ಇಲ್ಲವೇ ಏನೂ ಇಲ್ಲವಾಗಬಹುದು. ನಿಜಗಂತಿ ಬೆಳೆತಕ್ಕೆ ಮೈ ಆರೋಗ್ಯ ಲೆಕ್ಕಕ್ಕೇ ಇಲ್ಲ. ಆದ ಗಾಯ ವಾಸಿಯಾಗುವ ಕುರುಹೇ ಇಲ್ಲದಷ್ಟು ಮೈ ಸೊರಗಿದ್ದರೂ ಮೈಯಲ್ಲೆದ್ದ ನಿಜಗಂತಿ ಮಾತ್ರ ಜೀವಕಣ ಗುಣಿತದಿಂದ ಬೆಳೆಯುತ್ತಲೇ ಹೋಗುವುದು. ಈ ವಿಷಯದಲ್ಲಿ ಗಂತಿಗಳು ಪರಪಿಂಡಿಗಳಂತೆ ವರ್ತಿಸುತ್ತವೆ.

**ರೋಗಲಕ್ಷಣಗಳು :** ಹೊಸದಾಗಿ ಬೆಳೆದ ಗಂತಿಯ ಜೀವಕಣಗಳ ತಂಡ ಒಂದೆಡೆಯಲ್ಲಿ ಹೆಪ್ಪುಗಟ್ಟಿ ಊತವಾಗಿರುವುದು. ಚರ್ಮದಲ್ಲೊ ಅದರ ಹತ್ತಿರವೊ ಎದ್ದಿದ್ದರೆ ಕೈಗೆ ಮುಟ್ಟಲು ಸಿಗುವುದು, ಇಲ್ಲವೇ ಕಣ್ಣಿಗೆ ಎದ್ದುತೋರುವುದು. ಮೈಯಲ್ಲಿ ಯಾವ ಅಂಗದಲ್ಲಾದರೂ ಸರಿಯೆ ಗಂತಿಗಳು ಹುಟ್ಟಬಹುದಾದ್ದರಿಂದ ಎಲ್ಲ ಗಂತಿಗಳೂ ಕೈಗೆ ಮುಟ್ಟಲು ಸಿಗಲಾರವು.

ಮುಖ್ಯವಾಗಿ ವಿಷಮವಾದ ಕೆಲವು ಗಂತಿಗಳು ಬರೀ ಗಡ್ಡೆಯ ಹಾಗಿರಬೇಕಾದುದೆಲ್ಲ. ಹುಣ್ಣು. ಒಣಬಿರುಕು, ಸೀಳುಗಳಾಗೂ ನರೂಲಿ ತೆರನ ಚಾಚುಗಳಾಗೂ ಹರಡಿಕೊಂಡೂ ಅವು ಕಾಣಬರುವುದುಂಟು. ಎಂದಿನ ಜೀವಕಣಗಳ ಬದಲಾಗಿ ಗಂತಿಯ ಜೀವಕಣಗಳು ಹುಟ್ಟಿಕೊಂಡಿರಬಹುದು. ಎಂದಿನ ಜೀವಕಣಗಳೂ ಹಾಳಾಗುವುದೂ ಹೊಸ ಗಂತಿಯವು ಅವುಗಳ ಜಾಗಕ್ಕೆ ಬರುವುದೂ ಒಂದೇ ಜೀವಕಣಗಳು ಹಾಳಾಗುವುದೂ ಹೊಸ ಗಂತಿಯವು ಅವುಗಳ ಜಾಗಕ್ಕೆ ಬರುವುದೂ ಒಂದೇ ಸಮವಾಗಿದ್ದರೆ ಊತಕ ಮೆತುವೋ ಗಡುಸೋ ಆಗಬಹುದೇ ಹೊರತು ಅಂಗದ ಗಾತ್ರ ಅಷ್ಟೇನೂ ವ್ಯತ್ಯಾಸವಾಗದು. ಮಿಕ್ಕ ಗಂತಿಗಳಲ್ಲಿ ಗಂತಿಯ ಜೀವಕಣಗಳಿಗಿಂತಲೂ ಬೇಗ ಬೇಗನೆ ಎಂದಿನ ಜೀವಕಣಗಳು ಹಾಳಾಗುವುವು. ಆಗ ಮೊಲೆಯಲ್ಲೇಳುವ ಕೆಲವು ಏಡಿಗಂತಿಗಳಲ್ಲೂ ಕರುಳಿನ ಸುತ್ತಲು ಸುತ್ತುವರಿದ ಏಡಿಗಂತಿಯಲ್ಲೂ ಇತರ ಗಂತಿಯಲ್ಲಾಗುವಂತೆ ಗಂತಿಯೆದ್ದ ಭಾಗ ಸಣ್ಣದಾಗುತ್ತದೆ.

ಮೈಯಲ್ಲಿ ಕೊಳವೆಗಳ ಹಾಗಿರುವ ಕರುಳು, ಅನ್ನನಾಳ, ಪಿತ್ತನಾಳ, ಮೂತ್ರಕ ನಾಳಗಳೇ ಮುಂತಾದವಲ್ಲಿ ಏಳುವ ಗಂತಿಗಳಿಂದ ತೀರ ಅಡ್ಡಗಟ್ಟಿದಂತಾಗಿ ಅವುಗಳಲ್ಲಿ ಏನೂ ಮುಂದೆ ಸಾಗದಂತಾಗುತ್ತದೆ. ಅಂಥ ಗಂತಿಗಳು ಸಾಗುನಾಳಗಳ ಗೋಡೆಯಲ್ಲಿ ಇರುವುದರಿಂದದ ಅವು ಒಡೆದುಕೊಂಡರೆ ಸಾಗುನಾಳಕ್ಕೆ ರಕ್ತಸುರಿಯುತ್ತದೆ. ಏಡಿಗಂತಿ ಹೀಗೆ ಎದ್ದಿರುವಾಗ ಸಹಜ ಕಂಡಿಗಳಿಂದ ರಕ್ತ ಹೊರಬೀಳಲು ಇದೇ ಕಾರಣ, ಜಠರದ ಏಡಿಗಂತಿಯಿಂದ ರಕ್ತವಾಂತಿಯಾಗುವುದು. ಮೂತ್ರಪಿಂಡ, ಕಂಕೋಶಗಳಲ್ಲಿ ಗಂತಿ ಎದ್ದಿದರೆ ಮೂತ್ರದಲ್ಲಿ ರಕ್ತಹೋಗುವುದು. ಗಂತಿಯಲ್ಲಿ ಕೀವುಗೂಡಿದರೆ ಚರ್ಮದ ಮೇಲೆ ಒಡೆದುಕೊಂಡು ಹುಣ್ಣಾಗಿ ಕೀವು ಸೋರಬಹುದು.

ಎದೆಗೂಡು, ತಲೆಬುರುಡೆ, ಬೆನ್ನುಗಂಬಗಳೇ ಮುಂತಾದ ಹಿಗ್ಗಿಸಲಾಗದ ಪೊಳ್ಳುಗಳೊಳಗೆ ಬೆಳೆದ ಗಂತಿಯಿಂದ ಮೂಳೆಯೇ ನಿರ್ಬಲವಾಗಿ ಮುರುಟಿಕೊಳ್ಳಬಹುದು, ಬಾಗಬಹುದು, ಮುರಿಯಲೂಬಹುದು. ಹೀಗಾಗುವಾಗ ಅಕ್ಕಪಕ್ಕದಲ್ಲಿರುವ ಗುಂಡಿಗೆ, ಫುಪ್ಫುಸ, ಮಿದುಳು, ಬೆನ್ನುಹುರಿಯಂಥ ಜೀವಾಳದ ಅಂಗಗಳು ಕುಗ್ಗಿ ಸೊರಗಬಹುದು. ಯಾವ ಅಂಗಾಂಶದಲ್ಲಿ ಗಂತಿ ಬೆಳೆಯುತ್ತದೋ ಅದರ ಕೆಲಸ ಕೆಡಬಹುದು. ಕಣ್ಣಲ್ಲಿ ಗಂತಿ ಎದ್ದರೆ ಆ ಭಾಗದ ಕಣ್ಣು ಕುರುಡಾಗುತ್ತದೆ.

ಎಲ್ಲ ಗಂತಿಗಳೂ ನೋವು ಕೊಡವು. ಬೆನ್ನುಗಂಬದಲ್ಲಿಯ ಗಂತಿ ಹತ್ತಿರದ ನರಜಾಡನ್ನು ಕೆರಳಿಸುವುದರಿಂದಲೋ ಒತ್ತಡ ನೇರವಾಗಿ ಅದರ ಮೇಲೆ ಬೀಳುವುದರಿಂದಲೊ ನೋವೇಳುತ್ತದೆ. ತಲೆಬುರುಡೆಯಂಥ ಹಿಗ್ಗದ ಪೊಳ್ಳಿನಲ್ಲಿ ಮಿದುಳಿನಗಂತಿ ಒತ್ತಡ ಹೆಚ್ಚಿದರೆ ತಲೆನೋವು ತೋರುವುದು. ಕರುಳಿನಲ್ಲಿ ಗಂತಿ ಎದ್ದರೆ ಹೊಟ್ಟೆಶೂಲೆ ಕಾಣಿಸಿಕೊಳ್ಳಬಹುದು. ಆದ್ದರಿಂದ ಗಂತಿಗಳು ಮೊದಮೊದಲು ಎಳೆಯದಾಗಿರುವಾಗ ನೋವೇ ತೋರದು. ಇದನ್ನು ಮಹಾದುರದೃಷ್ಟ ಎನ್ನಬಹುದು. ಎಷ್ಟೇ ದೊಡ್ಡ ಗಡ್ಡೆ ಎಲ್ಲೇ ಎದ್ದಿರಲಿ, ನೋವಿಲ್ಲವಾದರೆ ರೋಗಿ ವೈದ್ಯನಲ್ಲಿ ಸಲಹೆ ಪಡೆಯದೆ ತೆಪ್ಪನಿದ್ದುಬಿಡುತ್ತಾನೆ. ಗಂತಿಗಳು ಎಷ್ಟೇ ದೊಡ್ಡವಾಗಿರಲಿ ಆ ಜಾಗದ ನಿಜಗೆಲಸಕ್ಕೆ ಅಡ್ಡಿಯಾಗದಿದ್ದರೆ ನೋವು ಇನಿತೂ ಕಾಣಬರದು. ಆದರೆ ವಿಷಮಗಂತಿ ಬಲಿತ ಹಾಗೆಲ್ಲ ಸಾಮಾನ್ಯವಾಗಿ ನೇರವಾಗಿ ನರಗಳಲ್ಲಿ ಹರಡಿಕೊಂಡೋ ಮೂಳೆಯನ್ನು ಹಾಳಿಟ್ಟೋ ನೋವು ಕೊಡುತ್ತದೆ ; ನರಗಳಲ್ಲಿ ಏಳುವವನ್ನೂ ಬಿಟ್ಟರೆ ಉಳಿದ ಗಂತಿಗಳಲ್ಲಿ ನರಗಳೇ ಇರವು.

**ವಿಂಗಡಣೆ :** ಮೈಯಲ್ಲಿ ಯಾವ ಅಂಗ, ಅಂಗಾಂಶ, ಜೀವಕಣಗಳಲ್ಲಿ ಎಷ್ಟು ವಿಷಮವಾಗಿ ಏಳುವುದೆಂಬುದನ್ನು ಗಮನಿಸಿ ಗಂತಿಗಳನ್ನು ವಿಂಗಡಿಸಬಹುದು. ಆದರೆ ಕೆಲವು ಗಂತಿಗಳ ಜೀವಕಣಗಳು ಯಾವ ಮೂಲಕಣಗಳಿಂದ ಏಳುತ್ತವೆಂದು ಗುರುತಿಸುವುದು ಕಷ್ಟವಾದ್ದರಿಂದ ವಿಂಗಡಣೆ, ಕೆಲವೇಳೆ ಖಚಿತವಾಗಿರದು. ಗಂತಿಗಳೆಲ್ಲ ಜೀವಕಣಗಳಿಂದ ಆಗಿರುವುದರಿಂದ ಹೆಚ್ಚಾಗಿರುವ ಜೀವಕಣಗಳ ಬಗೆಯಂತೆ ವಿಂಗಡಿಸುವುದು. ವಾಡಿಕೆ. ಅಂದರೆ, ಇದು ಅಂಗಾಂಶದ ಮೇಲಿನ ವಿಂಗಡಣೆ ಎಂದಾಯಿತು. ಮೈಯಲ್ಲಿ ಮುಖ್ಯವಾಗಿ ಎರಡು ಬಗೆಯ ಅಂಗಾಂಶಗಳಿವೆ ಮೈಮೇಲೂ ನಾಳಗಳೊಳಗೂ ಗ್ರಂಥಿಗಳೊಳಗೂ ಇರುವ ಮೇಲು ಪೊರೆಯ(ಎಪಿಥೀಲಿಯಲ್) ಅಂಗಾಂಶ ಒಂದು. ಮುಖ್ಯವಾಗಿ ಅಂಗಗಳಿಗೆ ಆಸರೆಯಾಗಿರುವ ಕೂಡಿಸುವ ಅಂಗಾಂಶ ಇನ್ನೊಂದು. ಆದ್ದರಿಂದ ಗಂತಿಗಳನ್ನು ಮೇಲುಪೊರೆಯವು, ಕೂಡಿಸುವ ಅಂಗಾಂಶದವು, ಇವೆರಡೂ ಬೆರೆತವು–ಹೀಗೆ ಮೂರು ವಿಭಾಗಗಳಾಗಿ ವಿಂಗಡಿಸಬಹುದು.

**ವಿಷಮ ಗಂತಿಗಳು :** ಸೂಕ್ಷ್ಮದರ್ಶದ ಬಳಕೆಗೆ ಬರುವ ಮುನ್ನ ರೋಗಿಯ ಕೊನೆಯ ಪಾಡು ಏನಾಯಿತೆನ್ನುವುದಕ್ಕೆ ತಕ್ಕಂತೆ ವೈದ್ಯರು ಗಂತಿಗಳನ್ನು ವಿಷಮ ಮತ್ತು ಮೆಲುಪಿನವು ಎಂಬುದಾಗಿ ವಿಂಗಡಿಸುತ್ತಿದ್ದರು. ಚಿಕಿತ್ಸೆ ದಕ್ಕದಿದ್ದಾಗ, ಎಳಸಿನಲ್ಲೇ ವಿಷಮಗಂತಿಗಳನ್ನು ಬುಡಮಟ್ಟ ತೆಗೆದುಹಾಕದಿದ್ದಲ್ಲಿ ಸಾಮಾನ್ಯವಾಗಿ ರೋಗಿ ಸಾಯುತ್ತಾನೆ.

ಏಕೆಂದರೆ ಗಂತಿಯಲ್ಲಿಯ ವಿಷಮ ಜೀವಕಣಗಳು ಮೈಯಲ್ಲಿ ಎಲ್ಲೆಲ್ಲೋ ಕಾಳ್ಗಿಚ್ಚಿಂತೆ ಹರಡಿ ರೋಗಿಯನ್ನು ಸಾಯಿಸುತ್ತವೆ. ಹಾಲುರಸನಾಳಗಳು ಮತ್ತು ರಕ್ತನಾಳಗಳ ಮೂಲಕವಲ್ಲದೆ ಸಾಧಾರಣ ಸಾಗುನಾಳ ದಾರಿಗಳು ಮತ್ತು ಪೊಳ್ಳುಗಳ ಮೂಲಕವೂ ಈ ವಿಷಕಣಗಳು ಹರಡಬಹುದು.

ವಿಷಮಗಂತಿಗಳ ಇನ್ನೊಂದು ಹೆಗ್ಗುಣವೆಂದರೆ ಅವು ಹುಟ್ಟಿದಡೆಯಿಂದ ಎತ್ತೆತ್ತಲೋ ಹರಡಿ ಮೈಯಲ್ಲಿಯ ಎಲ್ಲ ಅಂಗಾಂಶಗಳು, ಅಂಗಗಳಲ್ಲೂ ಗೂಳೆಯಗಳನ್ನು (ಮೆಟಸ್ಟೇಸಸ್) ಹೂಡಬಹುದು. ಹೀಗೆ ಹಬ್ಬಿದ ಗಂತಿಗಳಲ್ಲಿ ಒಂದೊಂದರ ಆಕಾರ ಗಾತ್ರಗಳು ಬೇರೆ ಬೇರೆಯಾಗಿರಬಹುದು. ಮೆಲುಪಿನ ಗಂತಿಯಲ್ಲಿ ಜೀವಕಣಗಳೆಲ್ಲ ಒಂದುಗೂಡಿ ಒಂದೇ ಮುದ್ದೆಗಟ್ಟಿರುವುದರಿಂದ ಅವನ್ನು ಶಸ್ತ್ರಕ್ರಿಯೆಯಿಂದ ಬುಡಮಟ್ಟ ತೆಗೆದುಹಾಕಬಹುದು. ಆದರೆ ವಿಷಮಗಂತಿಯನ್ನು ಮಾತ್ರ ತೀರ ಎಳಸಾಗಿರುವಾಗ ಬುಡಮಟ್ಟ ತೆಗೆಯಬಹುದೇ ವಿನಾ ಬೆಳೆದು ಹರಡಿದ ಮೇಲೆ ಒಂದೇ ಶಸ್ತ್ರಕ್ರಿಯೆಯಿಂದ ನಿರ್ಮೂಲ ಮಾಡುವುದು ಕಷ್ಟ..

ಮೆಲುಪಿನ ಗಂತಿ ವಿಷಮಕ್ಕೆ ತಿರುಗುವುದೂ ಒಬ್ಬನಲ್ಲೇ. ಒಂದೇ ಹೊತ್ತಿನಲ್ಲಿ ಎರಡು ಬಗೆಯವೂ ಇರುವುದೂ ಬಲು ಅಪರೂಪವೇ.

**ಮೆಲುಪಿನ ಗಂತಿಗಳು :** ಸಾಮಾನ್ಯವಾಗಿ ನಾಲ್ಕು ವರ್ಷದೊಳಗಿನ ಎಳೆಯರಲ್ಲಿ ಈ ಗಂತಿಗಳು ಎದ್ದು ಬಲು ನಿಧಾನವಾಗಿ ಬೆಳೆಯುತ್ತವೆ. ಇವುಗಳ ಜೀವಕಣಗಳು ಅರೋಗ್ಯವಂತರ ಅಂಗಾಂಶದಲ್ಲಿ ಇರುವವುಗಳ ಹಾಗೇ ಇರುತ್ತವೆ. ಸಾಮಾನ್ಯವಾಗಿ ಇವುಗಳಿಂದ ಏನೂ ಹಾನಿಯಾಗದು. ಯಾರನ್ನು ಇವು ಸಾಯಿಸವು. ಜೀವಕಣಗಳ ಬೆಳೆತ, ಜೋಡಣೆ ಅಡ್ಡಾದಿಡ್ಡಿಯಾಗಿದ್ದರೂ ಹುಟ್ಟಿದ ಜಾಗವನ್ನು ಬಿಟ್ಟು ಬೇರೆಲ್ಲೂ ಹೊರಡವು. ಒತ್ತೊತ್ತಾಗಿ ಬೆಳೆದು ದೊಡ್ಡವಾದ ಹಾಗೆಲ್ಲ ಅಕ್ಕಪಕ್ಕದ ಅಂಗಾಂಶಗಳನ್ನು ಒತ್ತರಿಸುವುವೇ ಹೊರತು ವಿಷಮಗಂತಿಗಳ ಹಾಗೆ ಒಳನುಗ್ಗವು.

ಎಷ್ಟೋ ಮೆಲುಪಿನ ಗಂತಿಗಳಿಗೆ ಕವಚವಿರುತ್ತದೆ. ಗಂತಿಯ ಸುತ್ತಲೂ ಇರುವ ರಚನೆಗಟ್ಟುಗಳಿಂದ ಬರುವ ಕೂಡಿಸುವ ಅಂಗಾಂಶ ಕವಚವಾಗಿರುತ್ತದೆ. ಕವಚಗಂತಿಯ ಮೇರೆಯನ್ನು ತೋರುವುದೇ ಹೊರತು, ಅದರ ಮಿತಿಗಟ್ಟುವುದಿಲ್ಲ. ವಿಷಮ ಗಂತಿಗಳಲ್ಲಿ ಈ ತೆರನ ಕವಚಗಳಿಲ್ಲ. ಆದರೆ ವಿಷಮವಾದ ಮಾಂಸಗಂತಿಗಳಲ್ಲಿ ಕೆಲವಕ್ಕೆ ಮೊದಮೊದಲು ಹುಸಿಗವಚ ಇರುವುದು. ಕವಚವಿದ್ದರೆ ಗಂತಿಯನ್ನು ಅತ್ತಿತ್ತ ಆಡಿಸಬಹುದು. ಜರುಗಿಸಬಹುದು. ಚೆನ್ನಾಗಿ ಕವಚ ಮುಚ್ಚಿರುವ ಗಂತಿಗಳು ಸುತ್ತ ಮುತ್ತಣ ಅಂಗಾಂಶಗಳಿಗೆ ಅಂಟಿರವು. ಮೊಲೆಯಲ್ಲಿ ಏಳುವ ತಂತುಗ್ರಂಥಿ ಗಂತಿಯನ್ನು (ಫೈಬ್ರೊಅಡಿನೋಮ) ಮುಟಿಸಬಹುದು. ಮೂಳೆಗಳಲ್ಲಿ ಗಂತಿ ಎದ್ದಿದ್ದರೆ (ಬೋನ್‌ಟ್ಯೂಮರ್), ಅದರ ಸುತ್ತ ಇರುವ ಸ್ನಾಯುಗಳನ್ನೂ ಕಂಡರಗಳನ್ನೂ ಅದರ ಮೇಲೆ ಸರಾಗವಾಗಿ ಅತ್ತಿಂದಿತ್ತ ಆಡಿಸಬಹುದು. ಹಲವಾರು ಮೆಲುಪಿನ ಗಂತಿಗಳು ಮೈಯಲ್ಲಿ ಬೇರೆ ಬೇರೆಯಾಗಿ ಒಂದೇ ಬಾರಿ ಇಲ್ಲವೇ ಒಂದಾದ ಮೇಲೊಂದಾಗಿ ಏಳಬಹುದು. ಆ ಗಂತಿಗಳೆಲ್ಲ ಒಂದೇ ತೆರನಾಗಿರುತ್ತವೆ.

**ಕೂಡಿಸುವ ಅಂಗಾಂಶ ಮೂಲದವು :** ಕೊಬ್ಬುಗಂತಿ(ಅಡೆನೋಮ): ಅರೋಗ್ಯದ ಕೊಬ್ಬಿನ ಜೀವಕಣಗಳ ಹಾಗಿರುವ ಕೊಬ್ಬಿನ ಜೀವಕಣಗಳಿಂದೇಳುವ, ತೀರ ಸಾಮಾನ್ಯವಾದ ಗಂತಿಯಿದು. ಇದರ ಸುತ್ತ ತೆಳ್ಳನೆಯ ಕವಚ ಸುತ್ತವರಿದಿದ್ದು ಹಾಲೆಗಳಾಗೂ (ಲೋಬ್ಸ್) ವಿಂಗಡವಾಗಿರುತ್ತವೆ. ವಿಂಗಡಣೆ, ಗುರುತಿಸಬಹುದಾದ ಮಿತಿಗೆರೆ–ಇದರ ಹೆಗ್ಗುಣಗಳು. ಕೊಬ್ಬುಗಂತಿಗಳಲ್ಲಿ ಸಣ್ಣವು ಚಪ್ಪಟೆಯಾಗೂ ದೊಡ್ಡವು ಅರೆಗೋಳದ ಹಾಗೂ ಉಳಿದವು ತೊಂಗಿ ಬಿದ್ದೂ ಇರುತ್ತವೆ. ಎಳೆಯದರಲ್ಲಿ ಕೆಲವೇಳೆ ಬಿಗುವಾಗಿದ್ದರೂ ಬೆಳೆದ ಮೇಲೆ ಮೆತ್ತಗಿರುತ್ತವೆ. ಇವು ನೋಯುವುದು ಬಲು ಅಪರೂಪ. ಹಾಗೇನಾದರೂ ನೋವು ಕಂಡರೆ ಇವುಗಳೊಳಗೆ ಸುಣ್ಣಗೂಡಿರಬೇಕು. ಮೈಕಾನಿನ ಮಟ್ಟದಲ್ಲಿ ಕೊಬ್ಬು ನೀರಂತಿರುವುದರಿಂದ ಮೈ ಮೇಲೆ ಕಾಣುವ ಕೊಬ್ಬು ಗಂತಿಗಳ ಮೂಲಕ ಜೋರಾದ ಬೆಳಕನ್ನು ಮಸಕಾಗಿ ಹಾಯಿಸಬಹುದು. ಮೈಯಲ್ಲಿ ಕೊಬ್ಬು ಇರುವೆಡೆಗಳಲ್ಲೆಲ್ಲ ಇದು ಏಳಬಹುದು. ಚರ್ಮದಡಿಯಲ್ಲಿ ಏಳುವುದೇ ತೀರ ಸಾಮಾನ್ಯ. ಇದು ಒಂಟಿಯಾಗಿ ಇರಬಹುದಾದರೂ ಹತ್ತಾರು ಒಟ್ಟಿಗೇ ಇರಲೂ ಬಹುದು. ಕಡಲೆಕಾಳಿನಿಂದ ಹಿಡಿದು ಕುಂಬಳ ಕಾಯಿ ಗಾತ್ರಕ್ಕೆ ಇದು ಬೆಳೆಯುವುದುಂಟು. ಯಾರಲ್ಲಾದರೂ ಏಳಬಹುದಾದರೂ ಎಳೆ ಮಕ್ಕಳಲ್ಲಿ ವಿರಳ. ಇವೆಂದಿಗೂ ವಿಷಮವಾಗವು.

ನೋಡಲು ವಿಕಾರವಾಗಿ ತೋರುವಾಗ, ಒಂದೆಡೆಯ ಕೆಲಸಕ್ಕೆ ಅಡ್ಡಿಯಾದಾಗ ಶಸ್ತ್ರಕ್ರಿಯೆಯಿಂದ ಕೊಯ್ದೆಗೆವುದೇ ಇದರ ಚಿಕಿತ್ಸೆ, ಕರುಳೊಳಗೋ ಬೆನ್ನುಗಂಬದಲ್ಲೋ ಇದ್ದು ಒತ್ತುತ್ತಿದ್ದರೆ ತೆಗೆದೆಸೆಯಬೇಕಾಗುತ್ತದೆ. ಬುಡಮುಟ್ಟ ಕಿತ್ತು ಹಾಕುವುದು ಸುಲಭ. ತೆಗೆದ ಮೇಲೆ ಎಂದಿಗೂ ಮರುಕಳಿಸದು.

**ತಂತು ಗಂತಿ** (ಫೈಬ್ರೋಮ) : ದಪ್ಪನೆಯ ಗಟ್ಟಿ ಕವಚವಿರುವ ಬಿಳಿಯ ತಂತು ಅಂಗಾಂಶದ ಅಪರೂಪ ಗಂತಿಯಿದು. ಮುಖ್ಯವಾಗಿ ಒಸಡು, ಮೂಗಂಟಲ್ಕುಳಿ (ನೇಸೊಫ್ಯಾರಿಂಕ್ಸ್), ಮಣಿಕಟ್ಟಿನ ಹಿಂಭಾಗ, ಕಂಡರಚೀಲ, ಮೊಲೆ, ಅಂಡಾಶಯ, ವೃಷಣಗಳಂಥ ಕೆಲವು ಗ್ರಂಥಿಗಳು ಮತ್ತು ನರಗಳಲ್ಲಿ ಈ ಗಂತಿ ಕಾಣಿಸಿಕೊಳ್ಳುತ್ತದೆ. ನರಗಳಲ್ಲಿ ಏಳುವುವು ಸಾಮಾನ್ಯ. ನರಕವಚದಲ್ಲಿ ಏಳುವುದರಿಂದ ನರದ ನಿಜಕೆಲಸಕ್ಕೆ ಹಾನಿಯಿಲ್ಲ. ಚರ್ಮದಡಿಯಲ್ಲಿರುವ ನರಗಳ ಸಂಬಂಧವಾಗಿ ನೂರಾರು ಸಾವಿರಾರು

ಸಣ್ಣಸಣ್ಣ ತಂತುಗಂತಿಗಳೆದ್ದು, ಚರ್ಮ ಅಲ್ಲಲ್ಲಿ ಬಣ್ಣಗಟ್ಟಿರುವುದಕ್ಕೆ ಫಾನ್ ರೆಕ್ಲಿಂಗ್‌ಹಾಸೆನ್ನನ ರೋಗ ಎಂದಿದೆ. ಈ ರೋಗ ಹಲವು ತಲೆಮಾರುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಲೋಳೆಗಂತಿಯಾಗಿ (ಮಿಕ್ಸೋಮ) ಹಾಳಾಗುವುದೂ ಮಾಂಸಗಂತಿಯಾಗಿ ವಿಷಮಕ್ಕೆ ತಿರುಗುವುದೂ ತಂತುಗಂತಿಗಳ ತೊಡಕುಗಳು. ಒಂಟಿಯಾಗಿ ದೊಡ್ಡವಾಗಿದ್ದವನ್ನು ಕೊಯ್ತೆಗೆಯಬೇಕು. ಸಣ್ಣ ಸಣ್ಣವು ನೂರಾರಾಗಿದ್ದರೆ ಸರಿಯಾದ ಚಿಕಿತ್ಸೆಯಿಲ್ಲ.

**ನಾಳ ಗಂತಿ** (ಆಂಜಿಯೋಮ) : ನಾಳಗಳೇ ಹೆಚ್ಚಾಗಿರುವ ಈ ಗಂತಿಯಲ್ಲಿ ಎರಡು ಬಗೆಗಳಿವೆ : ರಕ್ತನಾಳಗಂತಿ (ಹೀಮಾಂಜಿಯೋಮ), ಹಾಲುರಸನಾಳಗಂತಿ (ಲಿಂಫಾಂಜಿಯೋಮ). ರಕ್ತನಾಳಗಂತಿಯಲ್ಲೂ ಯಾವ ತೆರನ ರಕ್ತನಾಳದಿಂದ ಹುಟ್ಟಿದ ಎನ್ನುವುದಕ್ಕೆ ತಕ್ಕಂತೆ ಮೂರು ಬಗೆಗಳಿವೆ : ಲೋಮನಾಳದ್ದು (ಕೆಪಿಲರಿ) ಗೂಡಾಗೂಡಾದ್ದು (ಕೆವರ್ನಸ್), ಹೆಣಿಲುರೂಪಿ (ಪ್ಲೆಕ್ಸಿಫಾರಂ).

ಹುಟ್ಟುಮಚ್ಚೆಯ ಬಲು ಸಾಧಾರಣವಾದ ರೂಪವೇ ಲೋಮನಾಳದ ರಕ್ತನಾಳ ಗಂತಿ. ಇದರಲ್ಲಿ ಲೋಮನಾಳಗಳೂ ರಕ್ತವೂ ಕೆಂಪಗೆ ಒರಟೊರಟಾಗಿ ನೋವಿಲ್ಲದ, ಎತ್ತರಿಸಿದ, ಹಲವೇಳೆ ಮೇರಿಯಿಲ್ಲದ ಮಚ್ಚೆಯಾಗಿರುವುದು. ಗಂತಿಯೊಳಗಿನ ರಕ್ತವನ್ನು ಬೆರಳಿಂದೊತ್ತಿ ಬೀಳಿಸಬಹುದು. ಈ ಗಂತಿಗೆ ಕವಚವಿಲ್ಲ. ಹುಟ್ಟಿದ ಕೆಲಕಾಲದಲ್ಲೇ ಒಂದೋ ಹಲವಾರೋ ಎದ್ದು ತಿಂಗಳುಗಳಲ್ಲಿ ಹೆಚ್ಚುತ್ತಹೋಗುತ್ತವೆ. ಇವುಗಳಲ್ಲಿ ಎಷ್ಟೋ ಅವಕ್ಕವೇ ಕರಗಿಹೋಗುವುವು. ಇವಕ್ಕೆ ಗಾಯವಾದರೆ ಪೆಟ್ಟಾದರೆ ರಕ್ತಸುರಿದರೆ, ಎಕ್ಸ್‌ಕಿರಣಗಳು ಮತ್ತು ರೇಡಿಯಮುಗಳಿಂದ ಚಿಕಿತ್ಸೆ ಆಗಬೇಕು. ಒಂದು ಬಾರಿ ಕಿತ್ತೊಗೆದರೆ ಈ ಗಂತಿ ಮರುಕಳಿಸದು.

ಗೂಡುಗೂಡಾದ ರಕ್ತನಾಳಗಂತಿಯು ತುಂಬ ಸಿರದ (ವೀನಸ್) ರಕ್ತನಾಳಗಳಿರುತ್ತವೆ. ಚರ್ಮದ ಮೇಲೆ ಕಂಡಾಗ ಅದು ಮೆತುವಾದ, ನೋವಿಲ್ಲದ, ನೀಲಿ ಬಣ್ಣದ, ಹುಳು ತುಂಬಿರುವಂತೆ ತೋರುವ, ಒತ್ತಿದರೆ ಬರಿದಾಗಿ, ಕೆಳಕ್ಕೆ ಇಳಿಬಿಟ್ಟರೆ ಮತ್ತೆ ತುಂಬುವಂತಿರುವುದು. ಮುಂಡದ ಮೇಲೆ ಎದ್ದಿದ್ದರೆ ಕೆಮ್ಮಿದಾಗ ಉಬ್ಬುತ್ತದೆ. ಚರ್ಮದಡಿಯಲ್ಲಿ, ಸ್ನಾಯುಗಳಲ್ಲಿ, ಒಳಾಂಗಗಳಲ್ಲಿ, ಮೂಳೆಗಳಲ್ಲೂ ಒಂಟಿಯಾಗಿ ಏಳುತ್ತದೆ. ಮೂಳೆಯಲ್ಲಿ ಎದ್ದಾಗ, ಮೂಳೆ ಸವೆದು ಹೋಗಿ ಬಾಗಬಹುದು. ಇಲ್ಲವೇ ಸಣ್ಣ ಪೆಟ್ಟಿಂದಲೇ ಮುರಿಯಬಹುದು. ಆಗುವುದಾರೆ ಕೊಯ್ತೆಗೆಯಬೇಕು, ಇಲ್ಲವಾದರೆ ಬೆನ್ನುಗಂಬದಲ್ಲಿ ಎದ್ದಿರುವಾಗಿನಂತೆ ವಿಕಿರಣ ಚಿಕಿತ್ಸೆಕೊಡಬೇಕು.

ಧಮನಿ (ಆರ್ಟರಿ) ರಕ್ತನಾಳಗಳು ಕಂತೆಗಟ್ಟಿರುವುದು ಹೆಣಿಲುರೂಪಿ ರಕ್ತನಾಳಗಳ ಗಂತಿ. ಕೆಲವೇಳೆ ದೊಡ್ಡ ಸಿರಗಳೂ ಇದರಲ್ಲಿರಬಹುದು. ಕಪೋಲದಲ್ಲಿ ಏಳುವುದೇ ತೀರ ಸಾಮಾನ್ಯ, ಅಲ್ಲಿ ಧರ್ಮವನ್ನೂ ಮೂಳೆಯನ್ನೂ ಸವೆಸಬಹುದು. ಹುಷಾರಾಗಿ ಪೂರ್ತಿಕೊಯ್ತೆಗೆಯುವುದೇ ಚಿಕಿತ್ಸೆ.

ಹಾಲುರಸನಾಳಗಂತಿಗಳು ಅಪರೂಪದವು. ರಕ್ತನಾಳಗಂತಿಗಳಲ್ಲಿ ಇದ್ದ ಹಾಗೆ ಇವಲ್ಲೂ ಮೂರು ಬಗೆಗಳಿವೆ. ಮುಖ್ಯವಾಗಿ ತುಟಿ, ನಾಲಗೆ ತುದಿಗಳಲ್ಲೇಳುವ ಸಾಸಿವೆಕಾಳಿನ ಗಾತ್ರದ ಪುಟಾಣಿ ಮುತ್ತಿನಂಥ ಕಿರುಕೋಶಗಳು ಲೋಮನಾಳದ ಹಾಲುರಸನಾಳಗಂತಿಯಲ್ಲಿ ತುಂಬಿರುತ್ತವೆ. ತೇವಗಂತಿ (ಸಿಸ್ಟಿಕ್ ಹೈಗ್ರೋಮ) ಎಂದೂ ಹೆಸರಿರುವ, ಗೂಡುಗೂಡಾದ ಬಗೆಯದರಲ್ಲಿ ದೊಡ್ಡ, ತೆಳುಗೋಡೆಯ ಬೆಳಕು ಹಾಯಿಬಿಡುವ ಹಾಲುರಸದ ಜಿಟ್ಟಿಗಳಿರುತ್ತವೆ. ಕೊರಳಲ್ಲಿ ಇವು ಸಾಮಾನ್ಯ. ಸೊಟ್ಟಾಪಟ್ಟೆ ಹಿಗ್ಗಿದ ಹಾಲುರಸನಾಳಗಳಿರುವ ಹೆಣಿಲುರೂಪಿ ಹಾಲುರಸನಾಳಗಂತಿಗಳೂ ತುಟಿ, ನಾಲಗೆಗಳಲ್ಲಿ ಏಳುತ್ತವೆ. ಹಾಲುರಸನಾಳಗಂತಿಗಳನ್ನು ಕೊಯ್ತೆಗೆಯಬೇಕು ಇಲ್ಲವೇ ವಿಕಿರಣಕ್ಕೊಡ್ಡಬೇಕು. ಇವಾವಕ್ಕೂ ಕವಚಗಳಿಲ್ಲ.

**ಮೆಲ್ಲೆಲುಗಂತಿ (ಕಾಂಡ್ರೋಮ) :** ಪಿಂಡದಲ್ಲಿ ಮೂಳೆ ವಿಕಸಿಸುವ ಗಾಜಂದ (ಹಯಲೀನ್) ಮೆಲ್ಲೆಲುಬಿನ ಗಂತಿಯಿದು. ಕೇವಲ ಮೂಳೆಗಳಲ್ಲೇ ಏಳುವುದಾದರೂ ಈ ಗಂತಿ ಮೆತ್ತನೆಯ ಬೇರೆಡೆಗಳಲ್ಲೂ ಏಳಬಹುದು. ಇದಕ್ಕೆ ದಪ್ಪನೆಯ ಕವಚವಿದ್ದು ಹಾಲೆಗಳಾಗಿರುತ್ತ ತೊಳೆಗಳ ಹಾಗಿರುವುದು. ಕಂಕಾಲದ(ಸ್ಕೆಲಿಟಲ್) ಚಪ್ಪಟೆ ಮೂಳೆಗಳ ಮೇಲೆ ಹೊರಚಾಚಿ ಒಂಟಿಯಾಗಿ ಬೆಳೆವುದು ಹೊರ ಮೆಲ್ಲೆಲು ಗಂತಿ (ಎಕ್ಕಾಂಡ್ರೋಮ). ಅಕ್ಕಪಕ್ಕದ ರಚನೆಗುಟ್ಟುಗಳನ್ನು ದೂರ ತಳ್ಳಿ ಸುಮಾರು ತೆಂಗಿನಕಾಯಿ ಗಾತ್ರಕ್ಕೆ ಬೆಳೆಯುತ್ತದೆ. ಸಾಮಾನ್ಯವಾಗಿ ಬೆರಳು, ಬೆಟ್ಟುಗಳಂಥ ಸಣ್ಣ ಉದ್ದನೆಯ ಮೂಳೆಗಳ ಒಳಗಡೆ ಬೆಳೆವವು ಒಳಮೆಲ್ಲೆಲುಗಂತಿಗಳು(ಎನ್ ಕಾಂಡ್ರೋಮ). ಇವು ಹಲವಾರು ಒಟ್ಟಿಗಿದ್ದು ಮೈಯ ಎರಡು ಪಕ್ಕಗಳಲ್ಲೂ ಇರುತ್ತವೆ. ಬೆಳೆದಂತೆಲ್ಲ ಮೂಳೆಯ ಗೋಡೆಗಳನ್ನು ತೆಳುಸಿಪ್ಪೆಯಾಗಿಸಿ ಸಾಕಷ್ಟು ವಿಕಾರಗೊಳಿಸುತ್ತವೆ. ಮೂಳೆ ಸೀಳಿಕೊಂಡು ಹೊರಗೂ ತಲೆಹಾಕಬಹುದು. ಮೆಲ್ಲೆಲುಗಂತಿಗಳೆಲ್ಲ ನೋವಿಲ್ಲದವು. ಆದರೆ ಲೋಳೆಗಂತಿಯಾಗೋ ವಿಷಮ ಮಾಂಸಗಂತಿಯಾಗೋ ಬದಲಾಗುವ ಅಪಾಯವಿದೆ. ಇವನ್ನು ಶಸ್ತ್ರಕ್ರಿಯೆಯಿಂದ ತೆಗೆವುದೊಂದೇ ಚಿಕಿತ್ಸೆ.

**ಎಲುಗಂತಿ (ಆಸ್ಟಿಯೋಮ) :** ಬರೀ ಮೂಳೆಯಿಂದೇಳುವ ಗಂತಿಯಿದು. ಸ್ಪಂಜಾಲರಿನದು (ಕ್ಯಾನ್ಸೆಲಸ್), ಒತ್ತಾದದ್ದು (ಕಾಂಪ್ಯಾಕ್ಟ್) ಎಂಬ ಎರಡು ಬಗೆಗಳಿವೆ. ಸ್ಪಂಜಾಲರಿಯದರಲ್ಲಿ ಉದ್ದ ಮೂಳೆಯ ಇಡೀ ತಾಳಿನ ಸ್ಪಂಜಿನಂಥ ಕುಸುರಿನೊಂದಿಗೆ ಗಡಸಾದ ಒತ್ತೊತ್ತಾಗಿರುವ ಮೂಳೆಯ ರಗಟೆಯೂ (ಕಾರ್ಟೆಕ್ಸ್) ಇರುತ್ತದೆ. ಹೊರನೋಟಕ್ಕೆ ಒಂದು ಕಡೆ ಮೂಳೆ ಬುಡ್ಡೆಯಾಗಿ ಹೊರಕ್ಕೆ ಚಾಚಿಕೊಂಡ ಹಾಗಿರುತ್ತದೆ. ಕಂಕಾಲಕ್ಕೆ ಬಲವಾಗಿ ಹತ್ತಿರುವ ಗಟ್ಟಿಗಡ್ಡೆಗಳಾಗಿದ್ದು ಅವುಗಳ ಮೇಲ್ಗಡೆಯಿರುವ ರಚನೆಗಟ್ಟುಗಳನ್ನು ದೂರ ತಳ್ಳಿರುವುದು. ಎಷ್ಟೋ ವೇಳೆ ಇದರ ತುದಿಯಲ್ಲಿ ಮೇಲೆದ್ದಿರುವ ದಿಂಚೀಲದಲ್ಲಿ (ಬರ್ಸ) ಆಗಾಗ್ಗೆ ಉರಿತವಾಗಿ ನೋವು ಕೊಡುತ್ತದೆ. ಮೂಳೆಬೆಳೆವ ವಯಸ್ಸಲ್ಲಿ ಮಾತ್ರ ಈ ಗಂತಿಗಳು ತೋರುವುದರಿಂದ ಮೂಳೆ ವಿಕಾಸ ಕೆಟ್ಟು ಹೀಗಾಗಬಹುದು. ತಾಯಿ ಮೂಳೆಯ ಬೆಳವಣಿಗೆ ನಿಂತು ಹೋದ ಮೇಲೆ ಈ ಗಂತಿ ಬೆಳೆತವೂ ನಿಲ್ಲುವುದು. ಹಲವಾರು ಒಂಟೊಂಟಿಯಾಗಿ ಏಳಬಹುದು. ಇವನ್ನು ಶಸ್ತ್ರಚಿಕಿತ್ಸೆಯಿಂದ ಕೊಯ್ತೆಗೆವುದೇ ಚಿಕಿತ್ಸೆ.

ಮೂಳೆಯ ಗಡಸು ಭಾಗವಾದ ರಗಟೆಯಿಂದ ಮಾತ್ರ ಒತ್ತೊತ್ತಾದ ಎಲುಗಂತಿ ವಿಕಾಸವಾಗುತ್ತದೆ. ಇದು ಯಾವಾಗಲೂ ಒಂಟಿಯಾಗಿ ಬೆಳೆವುದು. ಇದರಷ್ಟು ಗಡುಸಾದ ಗಂತಿ ಮೈಯಲ್ಲಿಲ ಮತ್ತಲ್ಲೂ ಬೆಳೆಯದು. ಮುಖ್ಯವಾಗಿ ತಲೆಚಿಪ್ಪು, ದವಡೆ ಮೂಳೆಗಳಂಥ ಚಪ್ಪಟೆ ಮೂಳೆಗಳ ಮೇಲೆ ಏಳುತ್ತದೆ. ತಲೆಚಿಪ್ಪಿನ ಒಳಗೋ ಹೊರಗೋ ಇಬ್ಬದಿಗಳಲ್ಲೋ ಯಾವ ವಯಸ್ಸಲ್ಲಾದರೂ ಏಳಬಹುದು. ತಲೆ ಬುರುಡೆಯೊಳಗೆ ಎದ್ದರೆ ಮಿದುಳನ್ನು ಒತ್ತರಿಸುತ್ತದೆ. ತಲೆಚಿಪ್ಪಿನ ಹೊರಗೆ ಎದ್ದ ಎಲುಗಂತಿ ಗಡುಸಾಗಿದ್ದು ಅದರ ಮೇಲೆ ನೆತ್ತಿ ಚರ್ಮ ಸರಾಗವಾಗಿ ಆಡುವಂತಿರುವುದು. ಗಂತಿ ಎದ್ದಿರುವ ಇಡೀ ಮೂಳೆ ಭಾಗದೊಂದಿಗೇ ಅದನ್ನು ತೆಗೆದುಹಾಕುವುದೇ ಚಿಕಿತ್ಸೆ.

ಅಪರೂಪದ ಲೋಳೆಗಂತಿಯ ತುಂಬ ಗಿಜಿ (ಜಲ್ಲಿ) ತೆರನ ಕೂಡಿಸುವ ಅಂಗಾಂಶವಿರುತ್ತದೆ.

ನರಜೀವಕಣಗಳೂ ನರತಂತೂ ಕೂಡಿರುವ ನರಗಂತಿಯೂ (ನ್ಯೂರೋಮ) ಅಷ್ಟೇ ಅಪರೂಪ.

ಕೇವಲ ಸ್ನಾಯುಗಳೇ ಇರುವ ಸ್ನಾಯುಗಂತಿಯೂ (ಮಯೋಮ) ಬಲು ಅಪರೂಪ. ನಯ ಸ್ನಾಯುಗಳಿಂದ ಕೂಡಿದ್ದು ನಯಸ್ನಾಯುಗಂತಿ (ಲಿಯೋಮಯೋಮ) ; ಪಟ್ಟೆ ಸ್ನಾಯುಗಳಿಂದ ತುಂಬಿದ್ದು ಪಟ್ಟೆಸ್ನಾಯುಗಂತಿ (ರ್‍ಯಾಬ್ಡೊಮಯೋಮ).

ತಂತುಸ್ನಾಯುಗಂತಿ (ಫೈಬ್ರೊಮಯೋಮ) ಕೂಡಿಸುವ ಅಂಗಾಂಶಗಳಾದ ತಂತುಗಳೂ ಸ್ನಾಯುಗಳೂ ಇರುವ ಗಂತಿ ಇದು. ಅಚ್ಚು ತಂತುಗಂತಿ, ಸ್ನಾಯುಗಂತಿಗಳಿಗಿಂತ ಇದೇ ಹೆಚ್ಚು ಸಾಮಾನ್ಯ. ಗರ್ಭಕೋಶದಲ್ಲಿ ಏಳುವ ಗಂತಿಗಳಲ್ಲೆಲ್ಲ ಇದು ಹೆಚ್ಚಿನದು. ಸಾಧಾರಣವಾಗಿ ಇದನ್ನು ನಾರುಗಂತಿ (ಫೈಬ್ರಾಯ್ಡ್) ಎನ್ನುವುದುಂಟು. ಹೆಣ್ಣು ಮೈನೆರೆವ ವಯಸ್ಸು ದಾಟಿದ ಮೇಲೆ ಮಾತ್ರ ಏಳುವುದು. ಗರ್ಭಕೋಶದಲ್ಲಿ ಇವು ಹೊರಚಾಚಿಕೊಂಡೊ ಒಳಚಾಚಿಕೊಂಡೊ ಕೆಲವೇಳೆ ರಕ್ತಸುರಿಸುತ್ತಲೊ ಇರಬಹುದು. ಇಲ್ಲವೇ ಇಡೀ ಗರ್ಭಕೋಶವನ್ನೇ ಹಿರಿಹಿಗ್ಗಿಸಬಹುದು. ಈ ಗಂತಿಗಳು ಅಗಾಧ ಗಾತ್ರಕ್ಕೆ ಬೆಳೆಯಬಲ್ಲವು. ಗಂತಿ ಸರಳ ಅನುವಳಿಕೆಗಳಿಂದ ಕೆಟ್ಟು ಹಾಳಾಗಬಹುದು. ಇಲ್ಲವೇ ವಿಷಮಗಂತಿಯಾಗಿ ಮಾರ್ಪಡಬಹುದು. ಅಂದರೆ ಏಡಿಗಂತಿಯಾಗಬಹುದು. ಶಸ್ತ್ರಕ್ರಿಯೆ ಒಂದೇ ಇದರ ನಿರ್ಮೂಲನ ಚಿಕಿತ್ಸೆ, ಗರ್ಭಕೋಶದಲ್ಲಿ ಅಲ್ಲಲ್ಲಿ ಹಲವಾರು ಇದ್ದರೆ ಇಡೀ ಗರ್ಭಕೋಶವನ್ನೇ ತೆಗೆದುಹಾಕಬೇಕಾಗಬಹುದು.

**ಎಲುಮೆಲ್ಲೆಲುಗಂತಿ** (ಆಸ್ಟಿಯೊಕಾಂಡ್ರೋಮ) : ಎಲುಗಂತಿ, ಮೆಲ್ಲೆಲುಗಂತಿಗಳು ಕೂಡಿ ಆಗಿರುವ ಗಂತಿ. ಆದರೂ ಮೆಲ್ಲೆಲುಗಂತಿಗಳ ಹಾಗೇ ಇದ್ದು ಇವು ಏಳುವ ಜಾಗಗಳಲ್ಲೇ ಏಳುತ್ತವೆ. ಶಸ್ತ್ರಕ್ರಿಯೆಯಿಂದ ಕೊಯ್ತೆಗೆವುದೇ ಚಿಕಿತ್ಸೆ.

**ರಕ್ತನಾಳಗೊಂಡೆಗಂತಿ** (ಗ್ಲೋಮಸ್‌ಟ್ಯೂಮರ್): ಸಾಮಾನ್ಯವಾಗಿ ಬೆರಳುಗಳ ಮೇಲೇಳುವ ಈ ವಿಚಿತ್ರಗಂತಿಯ ತುಂಬ ರಕ್ತನಾಳಗಳು, ನರಕಣಗಳು ನರತಂತುಗಳು, ಮೇಲುಪೊರೆತೆರನ ಜೀವಕಣಗಳೂ ಇರುತ್ತವೆ. ಚರ್ಮದಡಿಯಲ್ಲೋ ಉಗುರ ಕಣ್ಣಲ್ಲೋ ವಿಪರೀತ ನೋವಿಡುವ ಕೆಂಪು ಮಚ್ಚೆಯಾಗಿ ಕಾಣುತ್ತವೆ. ಗೋದಿಕಾಳುಗಾತ್ರ ಮೀರದ ಈ ಮಚ್ಚೆ ಮೊದಲು ಗೊತ್ತಾಗುವುದು ಬೆರಳಾಡಿಸಿದರೆ ಏಳುವ ಇದರ ಉರಿ, ಚಳುಕುಗಳಿಂದ. ಶಸ್ತ್ರಕ್ರಿಯೆಯಿಂದ ಕೊಯ್ತೆಗೆವುದು ಇದರ ಚಿಕಿತ್ಸೆ. ಮೇಲುಪೊರೆ ಅಂಗಾಂಶ ಮೂಲದವು ಹೀಗಿವೆ :

**ಚೂಚಕಗಂತಿ** (ಪೆಪಿಲೋಮ) : ಮೇಲ್ಮೈ ಮೇಲುಪೊರೆಯಿಂದ ಹೊಸದಾಗೇಳುವ ಗಂತಿಯಿದು. ಯಾವ ತೆರನ ಮೇಲುಪೊರೆಯಿಂದ ಹುಟ್ಟಿದೆ ಎನ್ನುವುದಕ್ಕೆ ತಕ್ಕಂತೆ ಇದರ 3 ಬಗೆಗಳಿವೆ. ಪದರಗಟ್ಟಿದ ಹೊದಿಕೆಯ ಮೇಲುಪೊರೆಯಿಂದ ಹೊದಿಕೆಯ ಚೂಚಗಂತಿ ಚರ್ಮದಲ್ಲಿ ಏಳುತ್ತದೆ. ನಾಲಗೆ, ಬಾಯಿ, ದನಿತಂತುಗಳ ಮೇಲೂ ಬೆಳೆವುದುಂಟು. ಚೆನ್ನಾಗಿ ಬೆಳೆದುದಕ್ಕೆ ನರೂಲಿ ಎಂದಿದೆ. ಕೆಲವೇಳೆ ಒಟ್ಟಿಗೇ ಹಲವಾರು ಬೆಳೆಯುತ್ತವೆ. ಶಸ್ತ್ರಕ್ರಿಯೆ ಇಲ್ಲವೇ ವಿಕಿರಣಗಳಿಗೊಡ್ಡುವುದು ಚಿಕಿತ್ಸೆ.

ನಡುತರದ (ಟ್ರಾನ್ಸಿಷನಲ್) ಚೂಚುಕಂತಿಗಳು ಮೂತ್ರಪಿಂಡ, ಮೂತ್ರಕನಾಳ, ಕಂಕೋಶಗಳಲ್ಲಿ ಮಾತ್ರ ಏಳುವುವು. ಇವುಗಳ ತುಂಬ ರಕ್ತನಾಳಗಳು ಹರಡಿದ್ದು ಸುತ್ತಲೂ

ಮೇಲುಪೊರೆಯ ನಾಜೂಕಿನ ಪದರವಿರುವುದರಿಂದ ಸುಲಭವಾಗಿ ರಕ್ತ ಸುರಿಸುತ್ತವೆ. ನೋವೇ ಇರದೆ ಮೂತ್ರದಲ್ಲಿ ರಕ್ತ ಹೊರಬೀಳುವುದೇ ಮೊದಲ ಕುರುಹಾಗಿರಬಹುದು. ಅಲ್ಲದೆ ಮೂತ್ರ ಬರದಂತಾಗಿ ಸೋಂಕು ಹತ್ತಬಹುದು. ನಡಂತರದ ಚೂಚುಕಗಂತಿಗಳೆಲ್ಲ ಎಂದಿದ್ದರೂ ವಿಷಮವಾಗುವವೇ. ಆದ್ದರಿಂದ, ಇವಿರುವುದು ಗೊತ್ತಾದ ಕೂಡಲೇ ಕಿತ್ತೊಗೆಯುವುದೇ ಲೇಸು. ಕಂಕೋಶದಲ್ಲಿ ಎದ್ದಿದ್ದರೆ, ಬರೆಗುಳದಿಂದ(ಕಾಟರಿ) ಸುಟ್ಟುಹಾಕಬಹುದು.

ಕಂಬಾಕಾರಿ (ಕಲಮ್ನಾರು) ಜೀವಕಣ ಚೂಚಗಂತಿಗಳು ಕರುಳು, ಮೊಲೆಯ ದೊಡ್ಡ ಸಾಗುನಾಳ ಮತ್ತು ಕೆಲವು ಜಿಟ್ಟಿಗಳ ಗೋಡೆಗಳಲ್ಲಿ ಹುಟ್ಟಿ ಅವುಗಳೊಳಕ್ಕೆ ತೊಂಗಿ ಬೀಳುತ್ತವೆ. ಬಲು ಸುಲಭವಾಗಿವು ರಕ್ತ ಸುರಿಸುತ್ತವೆ. ಇವೆಲ್ಲ ವಿಷಮವಾಗಬಲ್ಲವು ಆದ್ದರಿಂದ ಗೊತ್ತಾದ ಕೂಡಲೇ ಇವನ್ನು ಶಸ್ತ್ರಕ್ರಿಯೆಯಿಂದ ಕಿತ್ತೊಗೆಯಬೇಕು.

**ಗ್ರಂಥಿಗಂತಿ (ಆಡೆನೋಮ)** : ಗ್ರಂಥಿಗಳ ಜೀವಕಣಗಳು ಕಿರುನಾಳಗಳು ಇವಿಂದೇಳುವ, ವಿರಳವಾಗಿ ತಲೆದೋರುವ ಗ್ರಂಥಿ, ಅನ್ನದ ಸಾಗುನಾಳ, ಲೋಳೆ ಮತ್ತು ಚರ್ಮದ ಗ್ರಂಥಿಗಳು, ಅಂತಃಸ್ರಾವೀ ಗ್ರಂಥಿಗಳಲ್ಲಿ ಹುಟ್ಟುತ್ತವೆ. ಸುತ್ತಲೂ ಕವಚವಿರುವ, ದುಂಡಗಿರುವ, ನೋವಿಲ್ಲದ ಸಣ್ಣ ಗಡ್ಡೆಯಿದು. ಗುರಾಣಿಕ, ಉಪಗುರಾಣಿಕ, ತೆಮಡಿಕ, ಮಾಂಸಲಿಗಳ ತೆರನ ಗ್ರಂಥಿಗಳಲ್ಲಿ ಇದು ಎದ್ದರೆ ಆಯಾ ಗ್ರಂಥಿಗಳ ರಸಸುರಿತ ವಿಪರೀತ ಹೆಚ್ಚಿ ಬೇನೆಗಳಾಗುವುವು. ಬೇರೆಡೆಗಳಲ್ಲಿ ಇವು ರಕ್ತಸುರಿಸಬಲ್ಲವು. ಕರುಳಲ್ಲಿ ಎದ್ದಿದ್ದರೆ ಆತಂಕವಾಗಬಹುದು.

**ಒಳನಾಟಿದ ಇಡುಜಿಟ್ಟ** (ಇಂಪ್ಲಾಂಟೇಷನ್ ಡರ್ಮಾಯ್ಡ್) : ಸಾಧಾರಣವಾಗಿ ಬೆರಳು, ಅಂಗೈಗಳಲ್ಲಿ ಏಳುವ ಇದು ಜಿಟ್ಟ ರೂಪದಲ್ಲಿದ್ದು, ಪಿಂಡ ವಿಕಾಸದಲ್ಲಿ ಚರ್ಮದ ಒಂದು ಸಣ್ಣ ಚೂರು, ಚರ್ಮದಲ್ಲಿ ಆಳವಾಗಿ ನಾಟಿದ್ದರಿಂದ ಇದು ಏಳುವುದೆಂಬ ನಂಬುಗೆ ಇದೆ. ಇದರ ತುಂಬ ಮೇಲುಪೊರೆಯ ಒಡೆಗಲಸು (ಡೆಬ್ರಿ) ಇರುತ್ತದೆ. ಗಜ್ಜುಗದ ಗಾತ್ರ ಮೀರದೆ, ನೋವಿಲ್ಲದೆ, ವಿಷಮವಾಗದೆ ಬೆಳೆದಿರುತ್ತದೆ. ಕೊಯ್ದು ತೆಗೆದು ಹಾಕುವುದೇ ಸರಿಯಾದ ಚಿಕಿತ್ಸೆ.

ಹಲವು ಅಂಗಾಂಶಗಳ ಮೂಲದವು ಹೀಗಿವೆ :

**ಹಲ್ಲುಗಂತಿ** (ಓಡೊಂಟೋಮ) : ಹಲ್ಲಿನ ಭಾಗಗಳಿಂದ ಏಳುವ ಈ ಗಂತಿ ದವಡೆಗಳಲ್ಲಿ ಮಾತ್ರ ಹುಟ್ಟುವುದು. ಮೇಲುಪೊರೆಯ ಅಲ್ಲದೆ ಕೂಡಿಸುವ ಅಂಗಾಂಶಗಳೆರಡರಿಂದಲೂ ಹಲ್ಲುಗಳು ಹುಟ್ಟುವುದರಿಂದ ಹಲತೆರನ ಹಲ್ಲುಗಂತಿಗಳು ಏಳಬಹುದಾದರೂ ರೋಗಿಗಳಲ್ಲಿ ಮೇಲುಪೊರೆ ಮೂಲದವೇ ಸಾಮಾನ್ಯ. ಹಲ್ಲು ಬೆಳೆತದ ಯಾವ ಹಂತದಲ್ಲಾದರೂ ಗಂತಿ ವಿಕಾಸವಾಗಬಹುದು. ಆದ್ದರಿಂದ, ಮುಖ್ಯವಾಗಿ ಮೂರು ಬಗೆಯ ಹಲ್ಲುಗಂತಿಗಳನ್ನು ಗುರುತಿಸಬಹುದು: ದವಡೆಯ ತಂತುಜಿಟ್ಟಿಯ (ಫೈಬ್ರೊಸಿಸ್ಟಿಕ್) ರೋಗ, ಹಲ್ಲುಗೂಡಿದ (ಡೆಂಟಿಜರಸ್) ಜಿಟ್ಟಿ, ಹಲ್ಲಿನ (ಡೆಂಟಲ್) ಜಿಟ್ಟಿ, ಇವು ಎದ್ದಿರುವಾಗ ದವಡೆ ಮೂಳೆ ಬಾತುಕೊಂಡು ನೋಯುತ್ತದೆ. ಇವನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಬಹುದು.

**ತಂತುಗ್ರಂಥಿಗಂತಿ** (ಫೈಬ್ರೊಅಡೆನೋಮ) : ಬರಿಯ ತಂತುಗಂತಿ, ಗ್ರಂಥಿಗಂತಿಗಳಿಗಿಂತಲೂ ಈ ಬೆರಕೆಗಂತಿಯೇ ಸಾಮಾನ್ಯ, ಇದರಲ್ಲಿ ಬಿಳಿಯ ತಂತು ಅಂಗಾಂಶವೂ ಒಂದು ರಸಸುರಿಕ ಗ್ರಂಥಿಯ ಮೇಲುಪೊರೆಯ ಜೀವಕಣಗಳೂ ಇರುತ್ತವೆ. ದುಂಡಗೆ, ನೋವಿಲ್ಲದೆ, ಮುಟ್ಟಲು ಬಿಗುವಾಗೂ ದಪ್ಪ ಕವಚಗೂಡಿ, ಮೊಲೆ, ಮುನ್ನಿಲುಗಗಳಲ್ಲಿ ಕೆಲವೇಳೆ ಹಲವಾರು ಇರುವುವು. ಮೊಲೆಯಲ್ಲಿ ತೀರ ಸಾಮಾನ್ಯವಾಗಿರುವ ಈ ಗಂತಿಗೂ ಏಡಿಗಂತಿಗೂ ವ್ಯತ್ಯಾಸವಿದೆ. ಒಂದು ಇಲ್ಲವೇ ಎರಡೂ ಮೊಲೆಗಳಲ್ಲಿ ಒಂದೋ ಹೆಚ್ಚಿಗೋ ಇರಬಹುದು. 35 ವರ್ಷ ಮೀರದವರಲ್ಲಿ ಇದು ಸಾಮಾನ್ಯ, ಮೊಲೆಯೊಳಗಡೆ ಇದು ಎತ್ತೆಂದರತ್ತ ಸರಾಗವಾಗಿ ಆಡಿಸುವಂತಿರುವುದು. ಗಡಸಾದ್ದು, ಮೆತ್ತನೆಯದು, ಜಿಟ್ಟಿಯದು ಎಂಬ ಮೂರು ಬಗೆಗಳಿವೆ. ಮೊದಲನೆಯದು ಕಿತ್ತಳೆಹಣ್ಣಿನ ಗಾತ್ರ ಮೀರದು. ಉಳಿದವರೆಡೂ ಕುಂಬಳಕಾಯಿ ಗಾತ್ರಕ್ಕೆ ಬೆಳೆಯಬಹುದು. ತಂತುಗ್ರಂಥಿಗಂತಿಗಳಲ್ಲಿ ಎಲ್ಲೋ ಒಂದೊಂದು ವಿಷಮವಾಗಬಲ್ಲದು. ಗೊತ್ತಾದ ಕೂಡಲೇ ಇದನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಬೇಕು.

**ನಿದಾನ** : ಗಂತಿಗಳು ಇರುವುದನ್ನೂ ಯಾವ ಬಗೆಯದು ಎನ್ನುವುದನ್ನು ಗುರುತಿಸಲೂ ಎರಡು ವಿಧಾನಗಳಿವೆ. ಮೊದಲನೆಯದು ಗಂತಿಯ ಲಕ್ಷಣಗಳು, ಚರಿತ್ರೆ ಮುಂತಾದುವನ್ನು ವಿಚಾರಿಸಿ ನೋಡುವುದು. ಎರಡನೆಯದು ಇನ್ನೂ ವೈಜ್ಞಾನಿಕವಾಗಿ, ಗಂತಿಯ ಒಂದು ಚೂರನ್ನು ಕೊಯ್ದು ಬಿಡಿಸಿ ನೋಡುವುದು.

ಮೊದಲಾಗಿ, ಕಣ್ಣಿಂದ ನೋಡಿ ತಿಳಿದು ಗಂತಿಯ ಗುಣಗಳು, ಅದರಿಂದೇಳುವ ಲಕ್ಷಣಗಳು, ಎದ್ದಿರುವ ಜಾಗ, ಬೆಳೆದು ಹರಡಿದ ರೀತಿ, ಅಕ್ಕಪಕ್ಕಗಳ ರಚನೆಗಟ್ಟುಗಳ ಮೇಲೂ ಅವುಗಳ ಕೆಲಸದ ಮೇಲೂ ಬೀರುವ ಪ್ರಭಾವ–ಇವನ್ನು ವಿಚಾರಿಸಬೇಕು. ಈ ವಿಧಾನಕ್ಕೆ ವೈದ್ಯನ ತಿಳಿವಳಿಕೆ, ಅನುಭವ, ವಿವೇಚನೆ ಚೆನ್ನಾಗಿರಬೇಕು. ಕೆಲವೇಳೆ, ಹೊರಗೆ ಚೆನ್ನಾಗಿ ಕಾಣದ, ಕೈಯಿಂದ ಮುಟ್ಟಲಾಗದ ಮೂಳೆಗಳಲ್ಲಿ ಕರುಳು ಇಲ್ಲವೇ ಆಳದ ಒಳಾಂಗಗಳಲ್ಲಿ ಇರಬಹುದಾದ ಗಂತಿಗಳ ಎಕ್ಸ್‌ಕಿರಣ ಪರೀಕ್ಷೆಯೂ ಇದರೊಂದಿಗೇ ಆಗಬಹುದು.

ಗಂತಿಯ ಒಂದು ಸಣ್ಣ ಮಾದರಿ ಚೂರನ್ನು ಕೊಯ್ದು ತೆಗೆದು ತೆಳು ಸಿಪ್ಪೆಯಷ್ಟನ್ನು ಸೂಕ್ಷ್ಮದರ್ಶಕದ ಅಡಿಯಲ್ಲಿಟ್ಟು ಪರೀಕ್ಷಿಸುವುದಕ್ಕೆ ಜೀವುಂಡಿಗೆ (ಬಯಾಪ್ಸಿ) ಎಂದಿದೆ. ಗಂತಿಯ ನಿಜವಾದ ಗುಣ, ರಚನೆಗಳು ಇದರಿಂದ ಖಚಿತವಾಗಬಹುದು. ಗಂತಿಯ ಪತ್ತೆ, ಗುರುತು ಸರಿಯಾಗಿ ಸಿಕ್ಕದಾಗ ಚಿಕಿತ್ಸೆಯನ್ನು ಆರಿಸಿಕೊಳ್ಳಬೇಕಾದಾಗ, ಬಲು ದೊಡ್ಡ ಶಸ್ತ್ರಕ್ರಿಯೆಗೆ ರೋಗಿಯನ್ನು ಈಡಾಗಿಸಬೇಕಾದಾಗ ಇದನ್ನು ಮಾಡಲೇಬೇಕಾಗುತ್ತದೆ. ಕೆಲವಕ್ಕೆ ಶಸ್ತ್ರಕ್ರಿಯೆ, ಕೆಲವಕ್ಕೆ ವಿಕಿರಣಚಿಕಿತ್ಸೆ, ಇನ್ನೂ ಕೆಲವಕ್ಕೆ ಇವೆರಡನ್ನೂ ಕೈಗೊಳ್ಳಬೇಕಾಗುವುದು. ಯಾವ ಚಿಕಿತ್ಸೆ ಮಾಡಬೇಕುನ್ನುವುದಕ್ಕೆ ಸಾಧಾರಣವಾಗಿ ಜೀವುಂಡಿಗೆ ಉತ್ತರ ನೀಡುವುದು. ಖಚಿತ ನಿದಾನಕ್ಕಾಗಿ ಇದನ್ನು ನೆಚ್ಚಿಕೊಳ್ಳಬಹುದಾದರೂ ಗಂತಿ ವಿಷಮವಾಗುವ ಜಾತಿಯದ್ದಾಗಿದ್ದರೆ, ಇದು ನೇರ ಉತ್ತರ ನೀಡಲಾರದು.

ಗಂತಿಗಳನ್ನು ಗುರುತಿಸಲು ಇನ್ನೂ ಕೆಲವು ವಿಧಾನಗಳು ಬಳಕೆಯಲ್ಲಿವೆ. ಎಲ್ಲ ಗಂತಿಗಳಿಗೂ ಒಂದೇ ಒಂದು ಜೀವರಾಸಾಯನಿಕ ಪರೀಕ್ಷೆ ಇಲ್ಲವಾದರೂ ಕೆಲವು ಬಗೆಯ ಗಂತಿಗಳು, ಮುಖ್ಯವಾಗಿ ಮಾಂಸಲಿ ಇಲ್ಲವೇ ಉಪಗುರಾಣಿಕ ಗ್ರಂಥಿಗಂತಿಗಳು, ಇರುವುದನ್ನು ಒಳಸಾಗಿಯಾದರೂ ಕಂಡುಕೊಳ್ಳಬಹುದು. ಗಂತಿಗಳನ್ನು ಎಳೆಯದರಲ್ಲೇ ಕಂಡುಹಿಡಿಯುವುದು ಮುಖ್ಯವಾಗಿ ರೋಗಿಯ ಕೈಲೇ ಇದೆ. ಗಂತಿ ಎದ್ದಿರುವ ಅನುಮಾನ ಬಂದ ಕೂಡಲೇ ತಡಮಾಡದೆ ವಿವರವಾದ ವೈದ್ಯಪರೀಕ್ಷೆ ಮಾಡಿಸಿಬಿಡಬೇಕು. ಯಾವಾಗಲೂ ಮೆಲುಪಿನವಾಗಿದ್ದ ಗಂತಿಗಳು ಕೆಲವು ವಿಷಮಕ್ಕೆ ತಿರುಗುತ್ತವೆ. ಆದರೆ ಬಹು ಕಾಲದಿಂದಲೂ ಇದ್ದ ಗಂತಿಗಳಲ್ಲಿ ಮಾತ್ರ ಹೀಗಾಗುವುದರಿಂದ, ಚಿಕಿತ್ಸೆಯಿಂದ ಪೂರ್ತಿ ವಾಸಿಯಾಗಬೇಕಾದರೆ ಎಳಸಿನಲ್ಲೇ ಗಂತಿಯ ಗುರುತು ಪತ್ತೆ ಆಗಿಯೇ ತೀರಬೇಕು.

ಏಡಿಗಂತಿಗಳ ತೆರನ ವಿಷಮ ಗಂತಿಗಳಿಂದ ಲಕ್ಷಾನುಕೋಟಿ ಮಂದಿ ಅಸು ನೀಗುತ್ತಿರುವುದರಿಂದ ಗಂತಿಗಳ ಗುಟ್ಟುಗಳನ್ನು ಹೊರಗೆಳೆಯಲು ಅಪಾರ ಯತ್ನಗಳಾಗುತ್ತಿವೆ. ಗಂತಿಗಳು ಏಳುವ ಕಾರಣಗಳು, ಹರಡುವ ಬಗೆಗಳು, ಬೆಳೆಯಲು ಬೇಕಾದ ಅನುಕೂಲಾಂಶಗಳು, ನಿರ್ಮೂಲಗೊಳಿಸುವ ವಿಧಾನಗಳು –ಇವೆಲ್ಲ ಆಳವಾದ ಪರಿಶೀಲನೆಗೊಳಾಗಾಗಿವೆ. ಇದಕ್ಕಾಗಿ ಅಂಗಾಂಶವಿಜ್ಞಾನ, ಜೀವರಸಾಯನವಿಜ್ಞಾನ, ಭೌತಿಕ ರಸಾಯನವಿಜ್ಞಾನ, ಅಂಗಾಂಶದ ತಳಿ ಎಬ್ಬಿಕೆ, ಏಕಾಣುಜೀವವಿಜ್ಞಾನ, ವಿಕಿರಣವಿಜ್ಞಾನ, ಪ್ರಾಣಿಗಳ ಮೇಲಿನ ಪ್ರಯೋಗಗಳು, ಶಸ್ತ್ರವೈದ್ಯ, ರೋಗಿಗಳ ಪರೀಕ್ಷೆ, ಜೀವಾಳದ ಅಂಕಿಅಂಶಗಳು, ಜನಾರೋಗ್ಯ ಸಮೀಕ್ಷೆಗಳು – ಇವುಗಳೆಲ್ಲಲ್ಲ ಸಂಶೋಧನೆ ನಡೆಯುತ್ತಿದೆ **(ನೋಡಿ: ಏಡಿಗಂತಿ; ಏಡಿಗಂತಿ ಸಂಶೋಧನೆ)**.

(ಡಿ.ಎಸ್.ಎಸ್., ಕೆ.ವಿ.ಜಿ.)

**ಗಂದಿಗ** : ಔಷಧ ಸಾಮಗ್ರಿಗಳನ್ನು ಅಂಗಡಿಯಲ್ಲಿಟ್ಟುಕೊಂಡು ಮಾರುವ ಕಸಬುದಾರ (ಅಪಾತಿಕರಿ). ಭಾರತದಲ್ಲಿ ಈ ಕಸಬು ಬಹುಶಃ ಸು. 200 – 300 ವರ್ಷಗಳಿಂದೀಚೆಗೆ ಹುಟ್ಟಿಕೊಂಡಿತೆಂದು ಕಾಣುತ್ತದೆ. ಇದಕ್ಕೆ ಪೂರ್ವದಲ್ಲಿ ಔಷಧ ಸಾಮಗ್ರಿಗಳ ಮಾರಾಟವೇ ಇರಲಿಲ್ಲ. ಮೊದಲಿನಿಂದಲೂ ಔಷಧಸಾಮಗ್ರಿಗಳನ್ನು ಮುಖ್ಯವಾಗಿ ಗಿಡಮೂಲಿಕೆಗಳನ್ನು, ವೈದ್ಯನೇ ಹುಡುಕಿ ತರಬೇಕಾಗಿತ್ತು. ಅದಕ್ಕೆ ಬೇಕಾದ ಪರಿಚಯಜ್ಞಾನ, ಕಾಲದೇಶ ವರ್ತಮಾನಗಳ ಅರಿವು, ಸಂಗ್ರಹಿಸಿಡಲು ಅನುಸರಿಸಬೇಕಾದ ವಿಧಗಳ ತಿಳಿವಳಿಕೆ–ಇವೆಲ್ಲ ಸಿದ್ಧಿಸಿರುವ ವೈದ್ಯ ಮಾತ್ರ ಈ ಕೆಲಸ ಮಾಡಬಹುದಾಗಿದ್ದು ಒಂದು ಔಷಧಿಯನ್ನು ತಯಾರುಮಾಡಬೇಕಾಗಿ ಬಂದಾಗ ಮಾತ್ರ ಅದಕ್ಕೆ ಬೇಕಾದ ಸಾಮಗ್ರಿಗಳ ಶೇಖರಣೆಗೆ ವೈದ್ಯನೇ ತೊಡಗುತ್ತಿದ್ದ. ಅನೇಕ ವೇಳೆ ಶೇಖರಿಸಿಟ್ಟಿದ್ದ ಸಾಮಗ್ರಿಗಳು ದಿನಕಳೆದಂತೆ ಅನುಪಯುಕ್ತವಾಗಬಹುದಾದ್ದರಿಂದ ಅನಿವಾರ್ಯವಾದ ಹೊರತು ಹಾಗೆ ಸಾಮಗ್ರಿಗಳನ್ನು ಶೇಖರಿಸಿಕೊಟ್ಟುಕೊಳ್ಳುವುದಕ್ಕೆ ಆತ ಹೋಗುತ್ತಿರಲಿಲ್ಲವೆಂದು ತೋರುತ್ತದೆ. ಕಾಲಕ್ರಮದಲ್ಲಿ ಬೇರೆ ಕಾರ್ಯಗೌರವದಿಂದಲೋ ದೊಡ್ಡಸ್ತಿಕೆಯಿಂದಲೋ ಸೋಮಾರಿತನದಿಂದಲೋ ವೈದ್ಯನಾದವ ಔಷಧಸಾಮಗ್ರಿಗಳ ಶೇಖರಣೆಗೆ ಬೇರೆಯವರನ್ನು ನೇಮಿಸಿಕೊಳ್ಳಲು ಪ್ರಾರಂಭಿಸಿದನೆಂದು ಕಾಣುತ್ತದೆ. ಇದರಿಂದ ಅನೇಕ ಗಿಡಮೂಲಿಕೆಗಳ ಔಷಧಸಾಮಾಗ್ರಿಗಳ ಬಗ್ಗೆ ವೈದ್ಯನಿಗಿದ್ದ ಸ್ವಂತ ಮಾಹಿತಿ ಕಡಿಮೆಯಾಯಿತಾದರೂ ಸಂಗ್ರಹಣೆಯ ಜವಾಬ್ದಾರಿ ತಪ್ಪಿತಾಗಿ ಮನಸ್ಸಿನ ಚಿಂತೆ ದೂರವಾಯಿತು. ಹೀಗಾಗಿ ಬೇರೆಯವರು–ವಿಶೇಷವಾಗಿ ವನಚರಿಗಳು, ಔಷಧ ಸಾಮಾಗ್ರಿಗಳ ಪರಿಚಯವನ್ನು ಮಾಡಿಕೊಳ್ಳಬೇಕಾಗಿ ಬಂತು. ಅವುಗಳು ದೊರಕುವ ಸ್ಥಳ, ಸಂಗ್ರಹಿಸಬೇಕಾದ ಮೂಲಿಕೆಯ ಭಾಗ–ಮುಂತಾದ ಆವಶ್ಯಕತೆಗಳನ್ನು ಅವರು ಕ್ರಮೇಣ ರೂಢಿಸಿಕೊಂಡು ಔಷಧಸಾಮಗ್ರಿಗಳನ್ನು ಒದಗಿಸತೊಡಗಿದರು. ಕೊನೆಗೆ ಔಷಧಸಾಮಗ್ರಿಗಳನ್ನು ಸಂಗ್ರಹಿಸುವವ ಮತ್ತು ಉಪಯೋಗಿಸುವ ವೈದ್ಯ ಇವರಿಬ್ಬರ ಮಧ್ಯವರ್ತಿಯಾಗಿ ವ್ಯಾಪಾರವೇ ಮುಖ್ಯವಾದ ಇಂದಿನ ಗಂದಿಗ ಹುಟ್ಟಿಕೊಂಡನೆಂದು ತೋರುತ್ತದೆ. ಸು. 1700–1800ರಲ್ಲಿ ಪಾಶ್ಚಾತ್ಯ ವೈದ್ಯವೂ ಭಾರತಕ್ಕೆ ಕಾಲಿಟ್ಟು ಅದಕ್ಕೆ ವಿಶಿಷ್ಟವಾದ ಔಷಧಸಾಮಗ್ರಿಗಳ ಮಾರಾಟಕ್ಕೇ ಪ್ರತ್ಯೇಕವಾದ ಅಂಗಡಿಗಳು

ಪ್ರಾರಂಭವಾದುವು. ಹಾಗೆಯೇ ಭಾರತೀಯ ಔಷಧ ಸಾಮಗ್ರಿಗಳ ಮಾರಾಟಕ್ಕೂ ಅಂಗಡಿಗಳು ಪ್ರಾರಂಭವಾದುವು. ಸಾಮಾನ್ಯವಾಗಿ ಭಾರತೀಯ ಔಷಧಿಗಳನ್ನು ಸಂಗ್ರಹಿಸಿಟ್ಟುಕೊಂಡು ಮಾರುವವನನ್ನು ಇಂದಿಗೂ ಗಂದಿಗನೆನ್ನುತ್ತಾರೆ.

ಗಂದಿಗನಿಗೆ ಇಂಗ್ಲಿಷಿನಲ್ಲಿ ಅಪಾತಿಕರಿ ಎಂದು ಕರೆಯುವುದು ಭಾಗಶಃ ಸರಿ. ಗ್ರೀಕ್ ಮೂಲದಲ್ಲಿ ಇದಕ್ಕೆ ಸಂಗ್ರಹಕಾರ ಎನ್ನುವ ಅರ್ಥವಿದೆ. ಮಧ್ಯಯುಗದಲ್ಲಿ ಈ ಹೆಸರನ್ನು ಔಷಧಿಗಳನ್ನು ತಯಾರುಮಾಡಿ ಮಾರುವ, ಸ್ವತಃ ವೈದ್ಯರಲ್ಲದ ಅಂಗಡಿಕಾರರಿಗೆ ಅನ್ವಯಿಸಲಾಯಿತು. ಯುರೋಪ್, ಅಮೆರಿಕ ಮತ್ತು ಸ್ಕಾಟ್ಲೆಂಡಿನಲ್ಲಿ ಇಂದಿಗೂ ಇದಕ್ಕೆ ಈ ಅರ್ಥವೇ ಇದೆ. ಆದರೆ ಇಂಗ್ಲೆಂಡಿನಲ್ಲಿ ವಿಶಿಷ್ಟ ತಜ್ಞತೆ ಇಲ್ಲದ ಸಾಮಾನ್ಯ ವೈದ್ಯನಿಗೆ ಈ ಹೆಸರಿದೆ. 16ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಕಾಯಚಿಕಿತ್ಸಕರೆಂದೂ ಶಸ್ತ್ರವೈದ್ಯರೆಂದೂ ವೈದ್ಯವಿಂಗಡಣೆ ನಡೆದು 1518ರಲ್ಲಿ ಮತ್ತು 1540ರಲ್ಲಿ ಈ ಎರಡು ರೀತಿಯ ವೈದ್ಯರುಗಳ ಎರಡು ಸಂಘಗಳಿಗೆ ಸರ್ಕಾರದಿಂದ ಮತ್ತು ರಾಜನಿಂದ ಮಾನ್ಯತೆ ಪಡೆದವು. ಈ ಎರಡೂ ಸಂಘಗಳಿಗೆ ಸೇರದ ಬೇರೆ ವೈದ್ಯರುಗಳಿಗೆ ಈ ಸಂಘಗಳ ಸದಸ್ಯವೈದ್ಯರುಗಳಿಂದ ಕ್ರಮೇಣ ಬಹುವಾಗಿ ಕಿರುಕುಳವುಂಟಾಗಿ 1543ರಲ್ಲಿ ಇವರೆಲ್ಲ ಸಂಘಟಿತರಾಗಿ ಸರ್ಕಾರದಿಂದ ರಕ್ಷಣೆ ಪಡೆದದ್ದಲ್ಲದೆ ರಾಜನಿಂದಲೂ ಮನ್ನಣೆ ಪಡೆದರು. ಬಹುವಾಗಿ ಈ ರೀತಿಯ ವೈದ್ಯರು ತಾವೇ ಔಷಧಿಗಳನ್ನು ತಯಾರು ಮಾಡಿಯೂ ಮಾರುತ್ತಲೂ ಇದ್ದುದರಿಂದ ಇವರುಗಳಿಗೆ ಅಪಾತಿಕರಿಗಳೆಂದು ಹೆಸರಾಯಿತು. ಇದು ಬಹುಶಃ ಪ್ರಾರಂಭದಲ್ಲಿ ಭಾರತದಲ್ಲಿ ಇದ್ದ ಸ್ಥಿತಿ. ಅಪಾತಿಕರಿಗಳ ಸಂಘಕ್ಕೆ ಸದಸ್ಯರಾಗಬೇಕಾದರೆ ಇರಬೇಕಾದ ಅರ್ಹತೆಗಳನ್ನು 1815ರಲ್ಲಿ ನಿಷ್ಕರ್ಷಿಸಲಾಯಿತು. ಸಂಘದವರು ವ್ಯಕ್ತಿಯ ವೈದ್ಯಜ್ಞಾನಪರೀಕ್ಷೆ ನಡೆಸಿ ತೇರ್ಗಡೆಯಾದವರನ್ನು ಮಾತ್ರ ಸದಸ್ಯರಾಗಿ ತೆಗೆದುಕೊಳ್ಳುವಂತೆಯೂ ಈ ಪರೀಕ್ಷೆ ಇಂಗ್ಲೆಂಡಿನ ಜನರಲ್ ಮೆಡಿಕಲ್ ಕೌನ್ಸಿಲಿನ ಉಸ್ತುವಾರಿಗೆ ಒಳಪಟ್ಟಿರುವಂತೆಯೂ ಏರ್ಪಡಾಗಿ ಇಂದು ಅಪಾತಿಕರಿ ಸೊಸೈಟಿಯ ಸದಸ್ಯ–ಅಪಾತಿಕರಿ–ಅಂದರೆ ಸಾಮಾನ್ಯ ವೈದ್ಯ ಎಂದಾಗಿದೆ.

ವೈದ್ಯರಲ್ಲದೆ ವೈದ್ಯರ ಅಪ್ಪಣೆಯಂತೆ ತಯಾರುಮಾಡಿದ ಔಷಧಗಳನ್ನೋ ಔಷಧ ಸಾಮಗ್ರಿಗಳನ್ನೋ ಮಾರುವ ಅಂಗಡಿಕಾರರನ್ನು ಈಗ ಪ್ರಪಂಚಾದ್ಯಂತ ಕೆಮಿಸ್ಟ್ ಮತ್ತು ಡ್ರಗಿಸ್ಟ್ ಎಂದು ಕರೆಯಲಾಗಿದೆ. ಇವರು ಸಾಮಾನ್ಯವಾಗಿ ಪಾಶ್ಚಾತ್ಯ ಔಷಧಿ ಮತ್ತು ಔಷಧಸಾಮಗ್ರಿಗಳನ್ನು ಮಾತ್ರ ಮಾರುತ್ತಾರೆ. ಇವನ್ನು ಮಾರಬೇಕಾದರೆ ಸರ್ಕಾರದ ಅನುಜ್ಞೆ ಅಗತ್ಯವಾದುದರಿಂದ ಗಂದಿಗರು ಇವನ್ನು ಮಾರುವಂತಿಲ್ಲ. ಕೆಮಿಸ್ಟ್ ಮತ್ತು ಡ್ರಗಿಸ್ಟ್‌ಗಳು ವೈದ್ಯರ ಆದೇಶದಂತೆ ಔಷಧಿಗಳನ್ನು ತಯಾರು ಮಾಡಿಕೊಡುವಂತೆ ಗಂದಿಗರು ಮಾಡುವುದಿಲ್ಲ. ಔಷಧತಯಾರಿಕೆ ದೇಶೀಯ ವೈದ್ಯದಲ್ಲಿ ಇಂದಿಗೂ ವೈದ್ಯನಿಂದಲೇ ಜರಗಬೇಕಾದ ಕಾರ್ಯವಾಗಿದೆಯಾಗಿ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಮಾತ್ರ ಗಂದಿಗ ಮಾರುತ್ತಾನೆ. ಈಚೆಗೆ, ಅಂದರೆ ಸು. 50–60 ವರ್ಷಗಳಿಂದ ತಯಾರಾದ ದೇಶೀಯ ಔಷಧಿಗಳೂ ಪಾಶ್ಚಾತ್ಯ ದೇಶಗಳಲ್ಲಿಯಂತೆಯೇ ಇಲ್ಲೂ ಮಾರುಕಟ್ಟೆಗೆ ಬಂದಿವೆ. ಇವನ್ನು ಗಂದಿಗ ಮಾರಬಹುದಾದರೂ ಸಾಮಾನ್ಯವಾಗಿ ಸರ್ಕಾರಿ ಅನುಜ್ಞೆ ಪಡೆದ ಕೆಮಿಸ್ಟ್ ಮತ್ತು ಡ್ರಗಿಸ್ಟೇ ಇವನ್ನು ಮಾರುತ್ತಾನೆ.

(ಎಸ್‌ಆರ್‌ಆರ್)

**ಗಂದಿಗೆಗಾರನ ತೂಕ :** ಚಿನ್ನ, ಬೆಳ್ಳಿ, ವಜ್ರ, ಹರಳು, ಮದ್ದುಗಳ ಹೊರತಾಗಿ ಸಾಮಾನುಗಳನ್ನು ತೂಗಲು ಮುಖ್ಯವಾಗಿ ಇಂಗ್ಲೆಂಡ್, ಅಮೆರಿಕಗಳಲ್ಲಿ ಬಳಸುತ್ತಿದ್ದ ತೂಕ ಪದ್ಧತಿ (ಆವರ್ಡುಪೋಯಿಸ್ ವೆಯ್ಟ್). ಇದರ ಮೂಲಮಾನ ತೂಕ ಒಂದು ಗ್ರೆಯ್ನು. ಒಂದು ಘನ ಅಂಗುಲದಷ್ಟು ನೀರು 252.458 ಗ್ರೆಯ್ನುಗಳು ತೂಗುತ್ತದೆ. ಇಂಥ 7000 ಗ್ರೆಯ್ನುಗಳು ಸೇರಿಸಿದರೆ ಗಂದಿಗೆಗಾರನ ಒಂದು ಪೌಂಡು ಆಗುತ್ತದೆ. ಒಂದು ಪೌಂಡಿನಲ್ಲಿ 16 ಔನ್ಸುಗಳು ಒಂದು ಔನ್ಸಿನಲ್ಲಿ 16 ಡ್ರಾಮುಗಳೂ ಇರುವುವು. 14 ಪೌಂಡಿಗಳಿಗೆ ಒಂದು ಸ್ಟೋನು, 2 ಸ್ಟೋನುಗಳಿಗೆ ಒಂದು ಕ್ವಾರ್ಟರು, 4 ಕ್ವಾರ್ಟರುಗಳಿಗೆ ಒಂದು ಹಂಡ್ರಡ್‌ವೇಟ್, 20 ಹಂಡ್ರಡ್‌ವೇಟುಗಳಿಗೆ ಒಂದು ಟನ್ನೂ ಆಗುತ್ತವೆ.

(ಡಿ.ಎಸ್.ಎಸ್.)

**ಗಂಧಕ :** ಆವರ್ತಕೋಷ್ಟಕದ 6ನೆಯ ಪ್ರಧಾನ ಗುಂಪಿನ ಧಾತು ; ಪರಮಾಣು ಸಂಖ್ಯೆ 16 ; ಪರಮಾಣು ತೂಕ $32.066 \pm 0.003$; ರಾಸಾಯನಿಕ ಸಂಕೇತ S (ಸಲ್ಫರ್). ನೈಸರ್ಗಿಕವಾಗಿ ಲಭಿಸುವ ಐಸೊಟೋಪುಗಳು 32,33,34,36. ಎಲೆಕ್ಟ್ರಾನಿಕ್ ವಿನ್ಯಾಸ $1s^2\ 2s^2\ 2p^6\ 3s^2\ 3p^4$. ಗಂಧಕದ ಪರಿಚಯ ಮಾನವನಿಗೆ ಪುರಾತನ ಕಾಲದಿಂದಲೂ ಇದೆ. ಬೈಬಲ್ಲಿನಲ್ಲಿ ಮತ್ತು ಹೋಮರನ ಒಡಿಸ್ಸಿಯಲ್ಲಿ ಗಂಧಕದ ಉಲ್ಲೇಖವುಂಟು. ಸಂಸ್ಕೃತದಲ್ಲಿ ಸಲ್ಫಾರಿ ಎಂದರೆ ತಾಮ್ರದ ಶತ್ರು ಎಂದರ್ಥ. ತಾಮ್ರ ಮತ್ತು ಗಂಧಕಗಳನ್ನು ಒಟ್ಟಿಗೆ ಕಾಯಿಸಿದಾಗ ತಾಮ್ರ ನಾಶವಾಗುವುದೆಂದು ಬಗೆದು (ವಾಸ್ತವವಾಗಿ ತಾಮ್ರದ ಸಲ್ಫೈಡ್ ಆಗುವುದು) ಅದನ್ನು ಹೀಗೆ ಕರೆದಿರಬೇಕು. ಈ ಪದವೇ ರೂಪಾಂತರವಾಗಿ ಸಲ್ಫರ್ ಆಗಿದೆಯೆಂದು ಭಾವಿಸಲಾಗಿದೆ. ಗ್ರೀಕರು ಮತ್ತು ರೋಮನರು ಗಂಧಕದ ಹೊಗೆಯನ್ನು ಕ್ರಿಮಿನಾಶಕವಾಗಿ ಮತ್ತು ಬಟ್ಟೆಗಳನ್ನು ಚಲುವೆ ಮಾಡಲು ಬಳಸುತ್ತಿದ್ದರೆಂದು ವರದಿ. ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಗಂಧಕದ ಉಪಯೋಗ ಪ್ರಾಚೀನವಾದುದು. ಅದೊಂದು ಧಾತುವೆಂದು ಖಚಿತಪಡಿಸಿದವನು ಲೆವಾಸಿಯೆ (1777). ಧಾತುವಿನ ರೂಪದಲ್ಲಿ ಮತ್ತು ಸಂಯುಕ್ತ ಸ್ಥಿತಿಯಲ್ಲಿ ದೊರೆಯುವುದು ಇದರ ವೈಶಿಷ್ಟ್ಯ. ಸಕ್ರಿಯವಾದ ಜ್ವಾಲಾಮುಖಿಗಳು ಇರುವ ಎಡೆಗಳಲ್ಲೆಲ್ಲ ಗಂಧಕ ಸಿಕ್ಕುತ್ತವೆ. ಇವೇನೂ ಆಕಸ್ಮಿಕವಲ್ಲ; ಜ್ವಾಲಾಮುಖಿಗಳು ಹೊರಹಾಕುವ ಅನಿಲಗಳೊಡನೆ ಭೂಗತಗಂಧಕ ಮತ್ತು ಅದರ ಸಂಯುಕ್ತಗಳ ದಹನದಿಂದ ಹುಟ್ಟುವ ಹೈಡ್ರೊಜನ್ ಸಲ್ಫೈಡ್ ಮತ್ತು ಗಂಧಕದ ಡೈಆಕ್ಸೈಡುಗಳು ಸೇರಿಕೊಂಡಿರುತ್ತವೆ. ಇವು ವಾಯುಮಂಡಲದ ಸಂಪರ್ಕದಲ್ಲಿ ತಣಿದು ವರ್ತಿಸಿದಾಗ ಗಂಧಕ ಉಂಟಾಗುವುದು.

$$2H_2S + SO_2 \rightarrow 2H_2O + 3S \downarrow$$

ಈ ದೂಳು ಜ್ವಾಲಾಮುಖಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಗ್ರಹವಾಗಿ ಗಂಧಕದ ನಿಕ್ಷೇಪ ಮೈದಳೆದಿರುವುದು ಸಂಭವನೀಯ. ಗಂಧಕನಿಕ್ಷೇಪಗಳಿರುವ ದೇಶಗಳೆಂದರೆ ಇಟಲಿ, ಸಿಸಿಲಿ, ಜಪಾನ್, ಗ್ರೀಸ್, ರಷ್ಯ, ಆಸ್ಟ್ರಿಯ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು. ಅಮೆರಿಕದ ಲೂಸಿಯಾನ ಮತ್ತು ಟೆಕ್ಸಾಸ್ ಜಿಲ್ಲೆಗಳಲ್ಲಿ ಹಂಚಿ ಹೋಗಿರುವ ಗಂಧಕದ ನಿಕ್ಷೇಪ ಪ್ರಪಂಚದಲ್ಲೇ ಅತಿ ದೊಡ್ಡದೆಂದು ಒಂದು ಅಂದಾಜು. ಗಂಧಕದ ಈ ಸ್ತರ ಭೂಮಟ್ಟಕ್ಕಿಂತ ಸು. 210-275 ಮೀಟರುಗಳಷ್ಟು ಕೆಳಗಿದೆ. ಸಂಯುಕ್ತಸ್ಥಿತಿಯಲ್ಲಿ ಲೋಹದ ಸಲ್ಫೈಡುಗಳು ಮತ್ತು ಸಲ್ಫೇಟುಗಳಾಗಿ ನಮಗೆ ಪರಿಚಿತ. ನೈಸರ್ಗಿಕ ಸಲ್ಫೈಡುಗಳಲ್ಲಿ ಮುಖ್ಯವಾದವುಗಳೆಂದರೆ ಗೆಲಿನ (Pbs), ಸತುವಿನ ಬ್ಲೆಂಡ್ (ZnS), ಕಬ್ಬಿಣದ ಪಿರೈಟೀಸ್ ($FeS_2$), ತಾಮ್ರದ ಪಿರೈಟೀಸ್ ($CuFeS_2$), ಸಿನಬಾರ್ (HgS) ಮತ್ತು ಸ್ಟಿಬ್ನೈಟ್ ($Sb_2S_3$). ಸಲ್ಫೇಟುಗಳ ಪೈಕಿ ಜಿಪ್ಸಂ ($CaSo_4.2H_2O$), ಗ್ಲಾಬರ್ ಲವಣ ($Na_2SO_4.10\,H_2O$), ಎಪ್ಸಂ ಲವಣ ($Mg\,SO_4.7\,H_2O$) ಮತ್ತು ಬೆರೈಟಿಸುಗಳನ್ನು ($BaSo_4$) ಹೆಸರಿಸಬಹುದು. ಗಂಧಕದ ಅಂಶವುಳ್ಳ ಕಾರ್ಬನಿಕ ವಸ್ತುಗಳೆಂದರೆ ಮೊಟ್ಟೆ, ನೀರುಳ್ಳಿ, ಸಾಸುವೆ, ಕೂದಲು, ಉಣ್ಣೆ, ಕಲ್ಲಿದ್ದಲು ಮತ್ತು ಪೆಟ್ರೋಲಿಯಂ.

ಗಂಧಕದ ಬಹುಪಾಲನ್ನು ಉತ್ಪಾದಿಸುವುದು ಸಿಸಿಲಿ ಮತ್ತು ಲೂಸಿಯಾನ ನಿಕ್ಷೇಪಗಳಿಂದ. ಈ ಉತ್ಪಾದನ ಕ್ರಮಗಳ ಕಾರ್ಯಾಚರಣೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯಗಳಿವೆ. ಹೀಗಾಗಿ ಅವುಗಳಿಗೆ ಸಿಸಿಲಿಯನ್ ವಿಧಾನ ಮತ್ತು ಲೂಸಿಯಾನ ವಿಧಾನಗಳೆಂದೇ ಹೆಸರಾಗಿದೆ.

**ಸಿಸಿಲಿಯನ್ ವಿಧಾನ :** ಸಿಸಿಲಿಯ ನಿಕ್ಷೇಪದಲ್ಲಿರುವುದು ಕೇವಲ ಶೇ.24 ಗಂಧಕ. ಉಳಿದದ್ದು ಜೇಡಿಮಣ್ಣು ಮತ್ತು ಜಿಪ್ಸಂ. ಕಚ್ಚಾ ಗಂಧಕವನ್ನು ಅದರಲ್ಲಿರುವ ಕಶ್ಮಲಗಳಿಂದ ಪ್ರತ್ಯೇಕಿಸಲು ಒಂದು ಗೂಡಿನಲ್ಲಿ ಕರಗಿಸಲಾಗುವುದು. ಸಿಸಿಲಿಯಲ್ಲಿ ಕಟ್ಟಿಗೆ ದುಬಾರಿ.




ಚಿತ್ರ 1 ಸಿಸಿಲಿಯನ್ ವಿಧಾನದಲ್ಲಿ ಬಳಸುವ ಗಿಲ್ಲನ ಕುಲುಮೆ. 1–ವಾಯು, 2–ಚಿಮ್ನಿ, A–ಗಂಧಕವನ್ನು ಹೊರತೆಗೆದ ಬಳಿಕ ಉಳಿದಿರುವ ಬಿಸಿಕಲ್ಲು, B–ಕಚ್ಚಾಗಂಧಕ (ಸ್ವಲಾಂಶ ಉರಿಯುವುದು) C–ಉರಿಗೆ ಈಡಾಗದ ಗ್ರಾಸದ ಉಷ್ಣತೆ ಹೆಚ್ಚುವುದು, D–ಹೊಸ ಅದುರು ಕ್ರಮೇಣ ಬಿಸಿಯಾಗುವುದು

ಆದ್ದರಿಂದ ಸ್ವಲ್ಪ ಗಂಧಕವನ್ನೇ ಉರಿಸಿ ಆಗ ಹುಟ್ಟುವ ಉಷ್ಣದಿಂದ ಉಳಿದ ಗಂಧಕವನ್ನು ಕರಗಿಸುವ ವ್ಯವಸ್ಥೆ ಮಾಡಿರುತ್ತಾರೆ. ಪ್ರತಿನಿತ್ಯ ದ್ರವ ಗಂಧಕವನ್ನು ತೇವವಾದ ಮರದ ಎರಕಗಳಿಗೆ ಹರಿಸಿ ತಣಿಯಲು ಬಿಡಲಾಗುವುದು. ಅದು ಗಟ್ಟಿಯಾಗಲು 3-4 ದಿವಸಗಳು ಬೇಕು. ಹೀಗೆ ತಯಾರಿಸಿದ ಗಂಧಕದಲ್ಲಿ ಶೇ.5 ವರೆಗೆ ಕಶ್ಮಲಗಳಿರುವುದುಂಟು. ಶುದ್ಧೀಕರಣಕ್ಕಾಗಿ ಅಶುದ್ಧ ಗಂಧಕವನ್ನು ಮಾರ್ಸೆಲ್ಸ್ ಮತ್ತು ಆಂಟ್‌ವರ್ಪ್ ನಗರಗಳಿಗೆ ರಫ್ತು ಮಾಡುವುದು ರೂಢಿ. ಅಗ್ಗದ ಉರುವಲಿನ ಅಭಾವದಿಂದಾಗಿ ಗಂಧಕವನ್ನು ಸ್ಥಳದಲ್ಲೇ ಶುದ್ಧಿ ಮಾಡುವಂತಿಲ್ಲ. ಶುದ್ಧೀಕರಣ ವಿಧಾನ ವಿರಳ. ಒಂದು ಕಬ್ಬಿಣದ ತೊಟ್ಟಿಯಲ್ಲಿ ಅಶುದ್ಧ ಗಂಧಕವನ್ನು ಕರಗಿಸಲಾಗುವುದು. ದ್ರವ ಗಂಧಕ ಒಂದು

ರಿಟಾರ್ಟಿಗೆ ಇಳಿಯುತ್ತದೆ. ಇದೂ ಕಬ್ಬಿಣದ್ದೇ. ಅಲ್ಲಿ ಗಂಧಕ ಕುದಿಯುವುದು. ಗಂಧಕದ ಆವಿ ವಿಶಾಲವಾದ ಒಂದು ಇಟ್ಟಿಗೆ ಗೂಡನ್ನು ಪ್ರವೇಶಿಸುತ್ತದೆ. ಪ್ರಾರಂಭದಲ್ಲಿ ಗಂಧಕದ ಆವಿ ಗೂಡಿನ ಗೋಡೆಗಳ ಮೇಲೆ ನುಣ್ಣನೆಯ ಪುಡಿಯಾಗಿ ಶೇಖರವಾಗುತ್ತದೆ. ಇದನ್ನು ಕೆರೆದು ತೆಗೆಯಬಹುದು. ಇದೇ ಗಂಧಕದ ಅರಳು (ಫ್ಲವರ್ಸ್ ಆಫ್ ಸಲ್ಫರ್). ಕ್ರಮೇಣ ಗೂಡಿನ ಗೋಡೆಗಳು ಬಿಸಿಯಾಗುವುದರಿಂದ ಗಂಧಕ ಕರಗಿ ಗೂಡಿನ ತಳ ಸೇರುವುದು. ಆಗಿಂದಾಗ್ಗೆ ಇದನ್ನು ನಿಯೋಜಿತ ದ್ವಾರದ ಮೂಲಕ ಒದ್ದೆಯಾದ ಮರದ ಎರಕಗಳಿಗೆ ಹರಿಯಗೊಟ್ಟರೆ ತಣಿದ ಅನಂತರದ ಗಂಧಕದ ಕಡ್ಡಿಗಳಾಗುವುವು. ಇದೇ ಗಂಧಕ ಉರುಳೆ (ರೋಲ್ ಸಲ್ಫರ್).

**ಲೂಸಿಯಾನ ಅಥವಾ ಫ್ರಾಷ್ ವಿಧಾನ :** ಅಮೆರಿಕದ ನಿಕ್ಷೇಪದಲ್ಲಿರುವ ಗಂಧಕದ ಪ್ರಮಾಣ ಶೇ.60-70. ಈ ನಿಕ್ಷೇಪ ಭೂಮಟ್ಟಕ್ಕಿಂತ 210-275 ಮೀಟರುಗಳಷ್ಟು ಕೆಳಗಿರುವುದಷ್ಟೆ. ಇಷ್ಟು ಆಳದಲ್ಲಿರುವ ಗಂಧಕದ ಸ್ತರದ ಮೇಲೆ ಸು. 150 ಮೀಟರುಗಳಷ್ಟು ದಪ್ಪ ಉಸುಬು ಮತ್ತು ಜೇಡಿಮಣ್ಣು ಮತ್ತು 30 ಮೀಟರುಗಳಷ್ಟು ದಪ್ಪ ಸುಣ್ಣಕಲ್ಲಿನ ಪದರ, ಅಗಾಧ ಗಾತ್ರ ನೀರು, ಹೈಡ್ರೋಜನ್ ಸಲ್ಫೈಡ್ ಮತ್ತು ಗಂಧಕದ ಡೈಆಕ್ಸೈಡುಗಳಂಥ ವಿಷವಾಯುಗಳು ಸಂಗ್ರಹವಾಗಿರುವುವು. ಈ ಪರಿಸ್ಥಿತಿಯಲ್ಲಿ ಗಂಧಕವನ್ನು ಮೇಲೆತ್ತುವುದು ಒಂದು ಸಮಸ್ಯೆಯಾಗಿತ್ತು. ಇದನ್ನು ಯಶಸ್ವಿಯಾಗಿ ನಿರ್ವಹಿಸುವ ವಿಧಾನವನ್ನು ರೂಪಿಸಿದಾತ ಹೆರ್ಮಾನ್ ಫ್ರ್ಯಾಷ್ (1902). ಇದೊಂದು ಎಂಜಿನಿಯರಿಂಗ್ ಸಾಹಸ ಎನ್ನಬಹುದು. ಇದರ ವಿವರ ಹೀಗಿದೆ :

ಗಂಧಕದ ನಿಕ್ಷೇಪವಿರುವ ಪ್ರದೇಶದಲ್ಲಿ ಯಾಂತ್ರಿಕವಾಗಿ ಗಂಧಕದ ಸ್ತರವನ್ನು ಮುಟ್ಟುವಷ್ಟು ಆಳದ ಒಂದು ದೊಡ್ಡ ರಂಧ್ರವನ್ನು ಕೊರೆಯಲಾಗುವುದು. ಅದರಲ್ಲಿ ಸು. 30 ಸೆಂ.ಮೀ. ವ್ಯಾಸವುಳ್ಳ ಒಂದು ಕೊಳವೆಯನ್ನು ನೆಡುತ್ತಾರೆ. ಇದು ರಕ್ಷಾ ಕವಚದಂತೆ. ಇದರೊಳಕ್ಕೆ ಫ್ರ್ಯಾಷ್ ಗಂಧಕದ ಪಂಪನ್ನು ಇಳಿಬಿಡುವರು. ಈ ಪಂಪಿನಲ್ಲಿ ಸಮಾನಾಕ್ಷುವಳ್ಳ ಕ್ರಮವಾಗಿ 15,7.5 ಮತ್ತು 2.5 ಸೆಂ.ಮೀ. ವ್ಯಾಸದ ಮೂರು ಕಬ್ಬಿಣದ ಕೊಳವೆಗಳಿರುತ್ತವೆ. ಚದರಂಗುಲಕ್ಕೆ 140 ಪೌಂಡುಗಳಷ್ಟು ಒತ್ತಡದಲ್ಲಿ 170$^{\circ}$ ಸೆಂ.ಗೆ ಕಾಯಿಸಿರುವ ನೀರನ್ನು ಹೊರ ಕೊಳವೆಯ ಮೂಲಕ ಹಾಯಿಸಲಾಗುತ್ತದೆ. ಇದು ಗಂಧಕದ ಸ್ತರವನ್ನು ಮುಟ್ಟಿದ ತತ್‌ಕ್ಷಣ ಅದನ್ನು ಕರಗಿಸುವುದು. (ಗಂಧಕದ ದ್ರವನ ಬಿಂದು 112.8$^{\circ}$ ಸೆಂ.) ದ್ರವ ಗಂಧಕ ಭಾರವಾದದ್ದರಿಂದ ಪಂಪಿನ ಸುತ್ತ ಶೇಖರಗೊಳ್ಳುತ್ತದೆ. ಒಳಕೊಳವೆಯ ಮೂಲಕ ಹೊಕ್ಕ ಒತ್ತಡದ ಬಿಸಿಗಾಳಿ ದ್ರವ ಗಂಧಕ ಮತ್ತು ನೀರಿನ ಮಿಶ್ರಣವನ್ನು ನೊರೆಗೂಡಿಸುವುದು. ನೊರೆಗೂಡಿದ ಗಂಧಕ ಹಗುರ. ಆದ್ದರಿಂದ ಗಾಳಿಯ ಒತ್ತಡದಿಂದ ಅದು ಮಧ್ಯದ ಕೊಳವೆಯಲ್ಲಿ ಏರಿ ಹೊರಬೀಳುತ್ತದೆ. ಇದನ್ನು ಮರದ ತೊಟ್ಟಿಗಳಲ್ಲಿ ತಣಿಯಲು ಬಿಡುವರು. ಆಗ ಗಂಧಕ ಮಾತ್ರ ಘನೀಭವಿಸುವುದು. ಅನಂತರ ತೊಟ್ಟಿಯನ್ನು ಒಡೆದು ಹಾಕಿದರೆ ಗಂಧಕದ ದೊಡ್ಡ ಹೆಪ್ಪೇ ಕಳಚಿ ಬೀಳುತ್ತದೆ. ಇದನ್ನು ಚೂರುಮಾಡಿ ಅಥವಾ ಪುಡಿ ಮಾಡಿ ಮಾರುಕಟ್ಟೆಗೆ ರವಾನಿಸುವುದು ವಾಡಿಕೆ. ಹೀಗೆ ತಯಾರಿಸಿದ ಶೇ. 99.95 ಶುದ್ಧವಾಗಿರುವುದು ಗಮನಾರ್ಹ.




ಚಿತ್ರ 2 ಫ್ರ್ಯಾಷ್ ವಿಧಾನದಿಂದ ಗಂಧಕದ ಉತ್ಪಾದನೆಯಲ್ಲಿ ಬಳಸುವ ಕುಲುಮೆ: 1 ಒತ್ತರಿತ ಬಿಸಿಗಾಳಿ, 2. ದ್ರಾವ್ಯಗಂಧಕ, 3. ಅಧಿಕೋಷ್ಣದ ನೀರು, 4 ನೆಲಮಟ್ಟ, 5 ಗಷ್ಟು, 6ಯ ಕ್ಯಾಲ್‌ಸೈಟ್ ಕಾಪ್ ಶಿಲೆ, 7 ಗಂಧಕಯುಕ್ತ ಕ್ಯಾಲ್ಸೈಟ್, 8 ದ್ರಾವ್ಯಗಂಧಕ, 9 ಅನ್ ಹೈಡ್ರೈಟ್, 10 ಶಿಲಾಲವಣ

**ಉಪೋತ್ಪನ್ನ ಗಂಧಕ :** ಕಲ್ಲಿದ್ದಲ್ಲನ್ನು ಶುಷ್ಕ ಆಸವನಕ್ಕೆ ಗುರಿಪಡಿಸಿದಾಗ ಅದರಲ್ಲಿದ್ದ ಗಂಧಕ ಸಂಯುಕ್ತಗಳು ಹೈಡ್ರೋಜನ್ ಸಲ್ಫೈಡಿನ ರೂಪದಲ್ಲಿ ಹೊರಬೀಳುತ್ತವೆ, ಆದ್ದರಿಂದ ಕಲ್ಲಿದ್ದಲ ಅನಿಲವನ್ನು ಜಲಯುಕ್ತ ಫೆರಿಕ್ ಆಕ್ಸೈಡಿನ ಮೇಲೆ ಹಾಯಿಸಿದರೆ ಅದು ಫೆರಿಕ್ ಹೈಡ್ರಾಕ್ಸೈಡಿನಂತೆ ವರ್ತಿಸಿ ಹೈಡ್ರೋಜನ್ ಸಲ್ಫೈಡನ್ನು ಹೀರುವುದು, ಫೆರಿಕ್ ಆಕ್ಸೈಡ್ ಎಲ್ಲ ತೀರಿದ ಮೇಲೆ ಅದನ್ನು ತೇವವಾದ ಗಾಳಿಯ ಸಂಪರ್ಕದಲ್ಲಿ ಬಿಟ್ಟರೆ ಪುನಃ ಜಲಯುಕ್ತ ಫೆರಿಕ್ ಆಕ್ಸೈಡಾಗಿ ಗಂಧಕವನ್ನು ಬಿಡುಗಡೆ ಮಾಡುವುದು. ಉತ್ಪತ್ತಿಯಾದ ಗಂಧಕವನ್ನು ಆಸವಿಸಿ ಅಥವಾ ಕಾರ್ಬನ್ ಡೈ ಸಲ್ಫೈಡಿನಲ್ಲಿ ವಿಲೀನಗೊಳಿಸಿ ಸಂಪಾದಿಸಬಹುದು. ಆದರೆ ತೀರಿದ ಫೆರಿಕ್ ಆಕ್ಸೈಡನ್ನು ಹುರಿದು ಗಂಧಕದ ಡೈಆಕ್ಸೈಡ್ ಮಾಡಿಕೊಂಡು ಅದನ್ನು ಸಲ್ಫ್ಯೂರಿಕ್ ಆಮ್ಲಕ್ಕೆ ಪರಿವರ್ತಿಸುವುದೇ ಸಾಮಾನ್ಯ.

ಸಲ್ಫೈಡ್ ಅದುರುಗಳಿಂದ ಲೋಹಗಳನ್ನು ಉತ್ಪಾದಿಸುವಾಗ ಕುಲುಮೆಯಿಂದ ಹೊರಬೀಳುವ ಅನಿಲಗಳೊಡನೆ ಗಂಧಕದ ಡೈ ಆಕ್ಸೈಡ್ ಇರುತ್ತದೆ. ಇದನ್ನು ಕೋಕಿನಿಂದ ಅಪಕರ್ಷಿಸಿ ಗಂಧಕವನ್ನು ತಯಾರಿಸಬಹುದು.

$$SO_2 + C \rightarrow CO_2 + S$$

ಈ ಕ್ರಿಯೆ ಪೂರ್ತಿಯಾಗಿ ನೆಡೆಯಲು 1100$^{\circ}$ ಸೆಂ. ಉಷ್ಣತೆ ಅಗತ್ಯ. ಇದು ಉಷ್ಣಜನಕ ಕ್ರಿಯೆ. ಆದ್ದರಿಂದ ಒಮ್ಮೆ ಪ್ರಾರಂಭಿಸಿದರೆ ಸಾಕು, ಅನಂತರ ತನ್ನ ಪಾಡಿಗೆ ತಾನೇ ಮುಂದುವರಿಯುತ್ತದೆ. ಉರುವಲಿಗಾಗಿ ಏನೂ ವೆಚ್ಚ ತಗಲದು. ಆದರೆ ಉಪೋತ್ಪನ್ನ ಗಂಧಕದ ಡೈಆಕ್ಸೈಡನ್ನು ಹೀಗೆ ಸದ್ವಿನಿಯೋಗ ಮಾಡದೆ ವಾತಾವರಣಕ್ಕೆ ಬಿಟ್ಟುಬಿಡುವುದು ಮೊದಲಿನ ಪದ್ಧತಿಯಾಗಿತ್ತು. ಏಕೆಂದರೆ ಒಂದು ವೇಳೆ ಅದರಿಂದ ಸಲ್ಫ್ಯೂರಿಕ್ ಆಮ್ಲವನ್ನು ತಯಾರಿಸಿದರೂ ಅದರ ಸಾಗಣೆ ಕಷ್ಟ ಮತ್ತು ದುಬಾರಿ. ಅದೇ ಗಂಧಕದ ಡೈಆಕ್ಸೈಡಿನಿಂದ ಗಂಧಕ ತಯಾರಿಸಿಕೊಂಡರೆ ಈ ತೊಂದರೆಯಿಲ್ಲ. ಗಂಧಕವನ್ನು ಸಾಗಿಸುವುದು ಬಲು ಸುಲಭ. ಆದರೆ ಇಲ್ಲಿ ಬೇರೊಂದು ಸಮಸ್ಯೆ ಏಳುತ್ತದೆ. ಲೋಹೋತ್ಪಾದಕ ಕುಲುಮೆಗಳು ವಿಸರ್ಜಿಸುವ ಅನಿಲದಲ್ಲಿ ಶೇ.5ಕ್ಕಿಂತ ಹೆಚ್ಚು ಮೊತ್ತದ ಗಂಧಕದ ಡೈಆಕ್ಸೈಡ್ ಇರುವುದು ಅಪರೂಪ. ಇದನ್ನು ಸಾರೀಕರಿಸಿದ ಹೊರತು ಅದರಿಂದ ಗಂಧಕದ ತಯಾರಿಕೆ ವ್ಯಾವಹಾರಿಕವಲ್ಲ. ಅದಕ್ಕಾಗಿ ಅನಿಲ ಮಿಶ್ರಣವನ್ನು ಪ್ರತ್ಯಾಮ್ಲೀಯ ಅಲ್ಯೂಮಿನಿಯಂ ಸಲ್ಫೇಟ್ ದ್ರಾವಣದ ಮೂಲಕ ಹಾಯಿಸುವರು. ಆಗ ಗಂಧಕದ ಡೈಆಕ್ಸೈಡನ್ನು ಹೀರುತ್ತದೆ. ದ್ರಾವಣವನ್ನು ಕಾಯಿಸಿದರೆ ಗಂಧಕದ ಡೈಆಕ್ಸೈಡ್ ಬಿಡುಗಡೆಯಾಗುವುದು. ಇದನ್ನು ಹಿಂದೆ ಹೇಳಿದಂತೆ ಅಪಕರ್ಷಿಸಿ ಗಂಧಕವನ್ನು ಪಡೆಯಬಹುದು. ಈ ವಿಧಾನದ ಬಗ್ಗೆ ಆಸಕ್ತಿ ಹೆಚ್ಚುತ್ತಿದೆ.



ಚಿತ್ರ 3 ಅಷ್ಟಮುಖಿ ಗಂಧಕದ ಸ್ಫಟಿಕಾಕೃತಿ



ಚಿತ್ರ 4 ಸೂಜಿಗಂಧಕದ ಸ್ಫಟಿಕಾಕೃತಿ

**ಭೌತ ಲಕ್ಷಣಗಳು :** ಅಪರರೂಪತೆಗೆ (ಅಲ್ಲಾಟ್ರೋಪಿ) ಹೆಸರಾದ ಧಾತು ಗಂಧಕ ಅಷ್ಟಮುಖಿ ಗಂಧಕ, ಸೂಜಿ ಗಂಧಕ ಮತ್ತು ಮೆದು ಗಂಧಕ ಇದರ ಮುಖ್ಯ ಅಪರರೂಪಗಳು. ಅವನ್ನು ತಯಾರಿಸುವ ಬಗೆ ಈ ಮುಂದಿನಂತಿದೆ. ಅಷ್ಟಮುಖಿ ಗಂಧಕಕ್ಕೆ ರಾಂಬಿಕ್ ಇಲ್ಲವೇ ಆಲ್ಫ್ ಗಂಧಕ ಎಂಬ ಹೆಸರುಗಳಿವೆ. ಗಂಧಕದ ಅರಳನ್ನು ಕಾರ್ಬನ್ ಡೈ

ಸಲ್ಫೈಡಿನಲ್ಲಿ ವಿಲೀನ ಮಾಡಿ ಆ ದ್ರಾವಣವನ್ನು ಒಣಗಿದ ಒಂದು ಸೋಸು ಕಾಗದದ ಮೂಲಕ ಸೋಸಿ ಬಂದ ದ್ರಾವಣವನ್ನು ಒಂದು ಗಾಜಿನ ತಟ್ಟೆಯಲ್ಲಿಟ್ಟು ಸ್ವಲ್ಪ ಹೊತ್ತು ಗಾಳಿಯಲ್ಲಿ ಬಿಟ್ಟರೆ ಆಗ ಕಾರ್ಬನ್ ಡೈ ಸಲ್ಫೈಡ್ ಪೂರ್ಣವಾಗಿ ಆವಿಯಾಗಿ ಹೋಗುತ್ತದೆ. ಉಳಿಯುವುದೇ ಅಷ್ಟಮುಖಿ ಗಂಧಕದ ಹರಳುಗಳು. ಅವುಗಳ ಸ್ಫಟಿಕಾಕೃತಿ ಚಿತ್ರ (3) ರಲ್ಲಿ ಸೂಚಿತವಾಗಿದೆ.

ಸೂಜಿ ಗಂಧಕಕ್ಕೆ ಮಾನೊಕ್ಲಿನಿಕ್ ಇಲ್ಲವೆ ಪ್ರಿಸ್ಮ್ಯಾಟಿಕ್ ಇಲ್ಲವೇ ಬೀಟ ಗಂಧಕ ಎಂಬ ಹೆಸರುಗಳಿವೆ. ಒಂದು ಪಿಂಗಾಣಿ ಮೂಸೆಯಲ್ಲಿ ಗಂಧಕದ ಅರಳನ್ನು ಕರಗುವಷ್ಟು ಮಾತ್ರ ಕಾಯಿಸಿ ತಣಿಯಲು ಬಿಟ್ಟಾಗ ಅದರ ಮೇಲ್ಮೈ ಹೆಪ್ಪುಗಟ್ಟುತ್ತದೆ. ಅದರ ಅಡಿಯಲ್ಲಿರುವ ಗಂಧಕ ಇನ್ನೂ ದ್ರವಸ್ಥಿತಿಯಲ್ಲೇ ಇರುವುದು. ಈ ಪದರವನ್ನು ಎರಡು ಕಡೆ ಗಾಜಿನ ಕಡ್ಡಿಯಿಂದ ತಿವಿದು ರಂಧ್ರಮಾಡಿ ಮೂಸೆಯನ್ನು ಬೋರಲಾಗಿ ಹಿಡಿದು ಕೊಂಡರೆ ಒಂದು ಕಿಂಡಿಯ ಮೂಲಕ ಗಾಳಿ ಒಳಹೊಕ್ಕು ಮತ್ತೊಂದರ ಮೂಲಕ ದ್ರವಗಂಧಕವನ್ನು ಹೊರಡಿಸುತ್ತದೆ. ಅನಂತರ ಮೇಲ್ಮೈಯನ್ನು ಕೆರೆದು ಹಾಕಿದರೆ ಸೂಜಿಯಾಕಾರದ ಗಂಧಕದ ಹರಳುಗಳು (ಚಿತ್ರ4) ಮೂಸೆಯ ಒಳಪಾರ್ಶ್ವಕ್ಕೆ ಅಂಟಿ ಕೊಂಡಿರುತ್ತವೆ.ಮೆದು ಗಂಧಕವನ್ನು ಗ್ಯಾಮ ಅಥವಾ ಪ್ಲಾಸ್ಟಿಕ್ ಗಂಧಕ ಎನ್ನುವುದುಂಟು. ಒಂದು ಪ್ರನಾಳದಲ್ಲಿ ಸ್ವಲ್ಪ ಗಂಧಕವನ್ನು ಕುದಿಸಿ ಆ ದ್ರವವನ್ನು ಸಣ್ಣ ಧಾರೆಯ ರೂಪದಲ್ಲಿ ತಣ್ಣೀರಿಗೆ ಸುರಿದಾಗ ರಬ್ಬರಿನಂಥ ಘನ ಉಂಟಾಗುವುದು. ಇದೇ ಮೆದು ಗಂಧಕ. ಇದು ಸಹ ಗಾಜಿನಂತೆ ತನ್ನ ಘನೀಭವನ ಬಿಂದುವನ್ನು ದಾಟಿರುವ ದ್ರವ.

ಒಂದೇ ಧಾತುವಿನ ಅಪರರೂಪಗಳ ಭೌತ ಲಕ್ಷಣಗಳಲ್ಲಿ ವ್ಯತ್ಯಾಸವಿರಬೇಕಷ್ಟೆ. ಇದು ಕೆಳಗಿನ ಪಟ್ಟಿಯಿಂದ ವೇದ್ಯ.

ಗಂಧಕದ ಇತರ ರೂಪಗಳೆಂದರೆ ಅಸ್ಫಟಿಕ ಗಂಧಕ ಮತ್ತು ಕಲಿಲ ಗಂಧಕ. ಗಂಧಕದ ಅರಳನ್ನು ಕಾರ್ಬನ್ ಡೈ ಸಲ್ಫೈಡಿನಲ್ಲಿ ವಿಲೀನಿಸಿದಾಗ ದ್ರಾವಣವಾಗದೆ ಉಳಿಯುವ ವಸ್ತುವೇ ಅಸ್ಫಟಿಕ ಗಂಧಕ ಇದು ಸಾಮಾನ್ಯ ಗಂಧಕದ ಅರಳಿನ ಶೇ.5-6ಭಾಗವಾಗಿರುತ್ತದೆ.

| ಗುಣ | ಅಷ್ಟಮುಖಿ ಗಂಧಕ | ಸೂಜಿ ಗಂಧಕ | ಮೆದು ಗಂಧಕ |
|---|---|---|---|
| 1 ಹರಳುರೂಪ | ರಾಂಬಿಕ್ | ಪ್ರಿಸ್ಮ್ಯಾಟಿಕ್ | ಇಲ್ಲ |
| 2 ಬಣ್ಣ | ತಿಳಿ ಹಳದಿ | ಹಳದಿ | ಕಂದು |
| 3 ಸಾಪೇಕ್ಷಸಾಂದ್ರತೆ | 2.06 | 1.96 | 1.95 |
| 4 ದ್ರವನ ಬಿಂದು | 112.8° ಸೆಂ. | 118.7° ಸೆಂ. | ದ್ರವನ ಬಿಂದುವೆಂಬುವುದಿಲ್ಲ |
| 5 ಕಾರ್ಬನ್ ಡೈಸಲ್ಫೈಡಿನಲ್ಲಿ ದ್ರಾವ್ಯತೆ | ದ್ರಾವ್ಯ | ದ್ರಾವ್ಯ | ಅದ್ರಾವ್ಯ |
| 6 ಸ್ಥಿರತೆ | 95.6° ಸೆಂ.ಗಿಂತ ಕೆಳಗಿನ ಉಷ್ಣತೆಯಲ್ಲಿ ಸ್ಥಿರ. ಇದೇ ನಮಗೆ ಪರಿಚಿತವಾದ ಗಂಧಕದ ರೂಪ. | 95.6°-120° ಸೆಂ. ಉಷ್ಣತಾಮಿತಿ ಮಾತ್ರ ಸ್ಥಿರಯಲ್ಲಿ | ಅಸ್ಥಿರ. ಕ್ರಮೇಣ ಅಷ್ಟಮುಖಿ ಗಂಧಕವಾಗಿ ಬಿಡುತ್ತದೆ. |

ಬಿಳಿಯ ಪುಡಿ. ಗಂಧಕದ ಅರಳು, ಅರಳಿದ ಸುಣ್ಣ ಮತ್ತು ನೀರುಗಳನ್ನು ಅನುಕ್ರಮವಾಗಿ 2,1,13 ಪ್ರಮಾಣದಲ್ಲಿ ಬೆರಸಿ ಕುದಿಸಿದರೆ ಕ್ಯಾಲ್ಸಿಯಂ ಪೆಂಟಸಲ್ಫೈಡಿನ ದ್ರಾವಣವಾಗುತ್ತದೆ. ಇದಕ್ಕೆ ಹೈಡ್ರೊಕ್ಲೋರಿಕ್ ಆಮ್ಲವನ್ನು ಸೇರಿಸಿದರೆ ಹಾಲು ಬಿಳುಪು ಒತ್ತರ ಬರುವುದು. ಇದೇ ಹಾಲು ಗಂಧಕ. ಇದು ಕೂಡ ಗಂಧಕದ ಅಸ್ಫಟಿಕ ರೂಪವೇ. ಕಾರ್ಬನ್ ಡೈ ಸಲ್ಫೈಡಿನಲ್ಲಿ ದ್ರಾವ್ಯ. ವೈದ್ಯಕೀಯದಲ್ಲೂ ಚರ್ಮ ರೋಗಗಳ ಚಿಕಿತ್ಸೆಯಲ್ಲೂ ಇದರ ಉಪಯೋಗ ಉಂಟು. ಸಾಪೇಕ್ಷ ಸಾಂದ್ರತೆ 1.82. ಹಳದಿ ಬಣ್ಣದ ಅಮೋನಿಯಂ ಪಾಲಿಸಲ್ಫೈಡು ಹೈಡ್ರೊಕ್ಲೋರಿಕ್ ಆಮ್ಲದೊಡನೆ ವರ್ತಿಸಿದಾಗಲೂ ಇದು ಉಂಟಾಗುವುದು. ಸೋಡಿಯಂ ಥಯೊ ಸಲ್ಫೇಟಿನ ದ್ರಾವಣಕ್ಕೆ ಸಾರರಿಕ್ತ ಹೈಡ್ರೊಕ್ಲೋರಿಕ್ ಆಮ್ಲವನ್ನು ಸೇರಿಸಿ ಕಲಿಲ ಗಂಧಕವನ್ನು ಪಡೆಯಬಹುದು. ಇದನ್ನು ಕೂಡಿಟ್ಟರೆ ಅಥವಾ ಕಾಯಿಸಿದರೆ ಸಾಮಾನ್ಯ ಗಂಧಕವಾಗಿ ಬಿಡುತ್ತದೆ. ವೈದ್ಯಕೀಯದಲ್ಲಿ ಇದರ ಉಪಯೋಗವಿದೆ.

ಈ ಅಪರರೂಪಗಳಲ್ಲಿರುವುದು ಗಂಧಕ ಮಾತ್ರ ಎಂಬುದನ್ನು ಒಂದು ಸರಳ ಪ್ರಯೋಗದಿಂದ ಸಮರ್ಥಿಸಬಹುದು. ಸರದಿಯ ಪ್ರಕಾರ ಪ್ರತಿಯೊಂದು ಅಪರರೂಪದ ನಿರ್ದಿಷ್ಟ ತೂಕವನ್ನು ಒಂದು ನಾಳದಲ್ಲಿಟ್ಟು ಪರಿಶುದ್ಧ ಆಕ್ಸಿಜನ್ನಿನಲ್ಲಿ ಉರಿಸಬೇಕು. ಉತ್ಪತ್ತಿಯಾದ ಗಂಧಕದ ಡೈ ಆಕ್ಸೈಡನ್ನು ಮುಂಚೆಯೇ ತೂಗಿರುವ ಬಲ್ಬುಗಳಲ್ಲಿರುವ ಪೊಟ್ಯಾಷ್ ದ್ರಾವಣ ಹೀರುತ್ತದೆ. ಪರಿಣಾಮವಾಗಿ ಬಲ್ಬುಗಳ ತೂಕ ಹೆಚ್ಚುವುದು. ಈ ತೂಕ ವ್ಯತ್ಯಾಸ ಉತ್ಪತ್ತಿಯಾದ ಗಂಧಕದ ಡೈ ಆಕ್ಸೈಡಿನ ತೂಕವನ್ನು ಸೂಚಿಸುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಬಿಡುಗಡೆಯಾದ ಗಂಧಕದ ಡೈ ಆಕ್ಸೈಡಿನ ತೂಕ ನಿಯತವಾಗಿರುವುದು. ಆದ್ದರಿಂದ ಈ ಅಪರರೂಪಗಳಲ್ಲಿ ಗಂಧಕದ ವಿನಾ ಮತ್ತೇನೂ ಇಲ್ಲ.

ಗಂಧಕವನ್ನು ಕಾಯಿಸಿದ್ದಾಗ ಸ್ವಾರಸ್ಯವಾದ ಬದಲಾವಣೆಗಳಾಗುತ್ತವೆ. ನಿಧಾನವಾಗಿ ಕಾಯಿಸುತ್ತ ಹೋದರೆ 95.6° ಸೆಂ. ಮೀರಿದ ಉಷ್ಣತೆಯಲ್ಲಿ ಬೀಟ ಗಂಧಕವಾಗಿ ತಣಿಸಿದಾಗ ಮತ್ತೆ ಆಲ್ಫ ಗಂಧಕವಾಗುವುದು. ಆದ್ದರಿಂದ ಈ ಉಷ್ಣತೆಗೆ ಆಲ್ಫ ಬೀಟ ರೂಪಗಳ ಸಂಕ್ರಾಂತಿ ಉಷ್ಣತೆ (ಟ್ರಾನ್ಸಿಷನ್ ಟೆಂಪರೇಚರ್) ಎಂದು ಹೆಸರು. ಆದರೆ ಆಲ್ಫ ಗಂಧಕವನ್ನು ತೀವ್ರಗತಿಯಲ್ಲಿ ಕಾಯಿಸಿದರೆ ಬೀಟ ರೂಪ ತಳೆಯದೆ 112.8 ಸೆಂ.ನಲ್ಲಿ ಕರಗಿ ನಸು ಕಂದು ಬಣ್ಣದ ಪಾರದರ್ಶಕ ದ್ರವವಾಗುತ್ತದೆ. ಕಾಯಿಸುವುದನ್ನು ಮುಂದುವರಿಸಿದರೆ ದ್ರವದ ಸ್ನಿಗ್ಧತೆ ಹೆಚ್ಚುವುದು. ಕಪ್ಪು ಛಾಯೆ ಮೂಡುವುದು. 160° ಸೆಂ. ಸನಿಹದಲ್ಲಿ ದ್ರವ ಎಷ್ಟು ಗಟ್ಟಿಯಾಗಿರುವುದೆಂದರೆ ಅದು ಇರುವ ಪ್ರನಾಳವನ್ನು ಬೋರಲು ಹಾಕಿದರೂ ದ್ರವ ಬೀಳುವುದಿಲ್ಲ. ಉಷ್ಣತೆ ಏರಿದಂತೆ 230° ಸೆಂ. ನಲ್ಲಿ ಅತಿ ಸ್ನಿಗ್ಧವಾದ ಕಪ್ಪುದ್ರವ ಉಂಟಾಗುತ್ತದೆ. ಅಂತಿಮವಾಗಿ 444.6° ಸೆಂ. ನಲ್ಲಿ ಕುದ್ದು ತಿಳಿಕಂದು ಬಣ್ಣದ ಧೂಮವಾಗಿ ಹೋಗುತ್ತದೆ. ಹಂತ ಹಂತವಾಗಿ ನಡೆಯುವ ಈ ಬದಲಾವಣೆಗಳಿಗೆ ಗಂಧಕ ಈ ಕೆಳಗಿನಂತೆ ತನ್ನ ಅಪರ ರೂಪಗಳಿಗೆ ಪರಿವರ್ತಿತವಾಗುವುದೇ ಕಾರಣವೆಂದು ಭಾವಿಸಲಾಗಿದೆ :

| 95.6° ಸೆಂ. | 120° ಸೆಂ | 160° ಸೆಂ | 444.6° ಸೆಂ | |
|---|---|---|---|---|
| α-S ↔ | β-S ↔ | λ-S ↔ | u-S ↔ | S |
| ಘನ | ಘನ | ದ್ರವ | ದ್ರವ | ಆವಿ |

ಕುದಿಯುತ್ತಿರುವ ಗಂಧಕವನ್ನು ತಣಿಸಿದಾಗ ಈ ಬದಲಾವಣೆಗಳು ಇದೇ ಕ್ರಮದಲ್ಲಿ ಹಿಮ್ಮರಳುತ್ತವೆ. λ ಮತ್ತು μ ಗಂಧಕಗಳ ಅಸ್ತಿತ್ವಕ್ಕೆ ಅಲೆಕ್ಸ್ಯಾಂಡರ್ ಸ್ಮಿತ್‌ನ ಪ್ರಯೋಗಗಳು ಆಧಾರ.

**ರಾಸಾಯನಿಕ ಗುಣಗಳು :** ಅತ್ಯಂತ ಪಟುವಾದ ಧಾತುಗಳ ಪೈಕಿ ಗಂಧಕವೂ ಒಂದು. ಇದರ ಸರ್ವತೋಮುಖವಾದ ಕ್ರಿಯಾಶೀಲತೆಗೆ ಈ ಕೆಳಗಿನ ಸಂದರ್ಭಗಳು ನಿದರ್ಶನ. ಸೂಕ್ಷ್ಮಕಣಗಳ ರೂಪದಲ್ಲಿರುವ ಗಂಧಕ ಸಾಮಾನ್ಯ ಉಷ್ಣತೆಯಲ್ಲೂ ತೇವವಾದ ಗಾಳಿಯಿಂದ ಸಲ್ಫ್ಯೂರಿಕ್ ಆಮ್ಲವಾಗಿ ಉತ್ಕರ್ಷಿತವಾಗಬಲ್ಲದು. ಗಾಳಿಯಲ್ಲಿ ತಿಳಿನೀಲಿ ಬಣ್ಣದ ಜ್ವಾಲೆಯಿಂದ ಉರಿದು ಗಂಧಕದ ಡೈ ಆಕ್ಸೈಡನ್ನು ಕೊಡುತ್ತದೆ. ಕುದಿಯುತ್ತಿರುವ ಗಂಧಕದೊಡನೆ ಹಬೆ ವರ್ತಿಸಿದಾಗ ಹೈಡ್ರೊಜನ್ ಸಲ್ಫೈಡ್ ಮತ್ತು ಗಂಧಕದ ಡೈ ಆಕ್ಸೈಡುಗಳು ಉತ್ಪನ್ನಗಳು. ಅಗ್ನಿ ಪರ್ವತಗಳು ಉಗುಳುವ ಧೂಮದಲ್ಲಿ ಈ ಅನಿಲಗಳು ಇರಲು ಇದೇ ಕ್ರಿಯೆ ಕಾರಣವಾಗಬಹುದು. ಉತ್ಕರ್ಷಣ ಗುಣವಿರುವ ಸಾರಯುತ ಸಲ್ಫ್ಯೂರಿಕ್ ಆಮ್ಲ ಮತ್ತು ನೈಟ್ರಿಕ್ ಆಮ್ಲಗಳೊಡನೆ ಮಾತ್ರ ವರ್ತಿಸುವುದು. ಆದ್ದರಿಂದಲೇ ಉತ್ಕರ್ಷಣಕಾರಿಯಲ್ಲದ ಹೈಡ್ರೊಕ್ಲೋರಿಕ್ ಆಮ್ಲದಿಂದ ಇದು ಪ್ರಭಾವಿತವಾಗುವುದಿಲ್ಲ. ಸಾರಯುತ ಸಲ್ಫ್ಯೂರಿಕ್ ಆಮ್ಲ ದೊಡನೆ ಕುದಿಸಿದಾಗ ಗಂಧಕದ ಡೈ ಆಕ್ಸೈಡಿಗೆ ಉತ್ಕರ್ಷಿತವಾಗುತ್ತದೆ. ಉತ್ಕರ್ಷಣ ಗುಣದಲ್ಲಿ ಸಲ್ಫ್ಯೂರಿಕ್ ಆಮ್ಲಕ್ಕಿಂತ ನೈಟ್ರಿಕ್ ಆಮ್ಲ ಮೇಲು. ಆದ್ದರಿಂದ ಇದರೊಡನೆ ಕುದಿಸಿದಾಗ ಗಂಧಕ ಸಲ್ಫ್ಯೂರಿಕ್ ಆಮ್ಲವಾಗಿ ಉತ್ಕರ್ಷಿತವಾಗುವುದು ಅನಿರೀಕ್ಷಿತವೇನಲ್ಲ. ಸಾರಯುತ ಕ್ಷಾರೀಯ ದ್ರಾವಣಗಳಲ್ಲಿ ಗಂಧಕ ವಿಲೀನವಾಗಿ ಆಯಾ ಸಲ್ಫೈಡ್, ಸಲ್ಫೈಟ್ ಮತ್ತು ಥಯೊಸಲ್ಫೇಟುಗಳ ಮಿಶ್ರಣವನ್ನು ಉಂಟುಮಾಡುತ್ತದೆ. ಉನ್ನತ ಉಷ್ಣತೆಯಲ್ಲಿ ಗಂಧಕದೊಡನೆ ಸಂಯೋಜಿಸದಿರುವ ಲೋಹಗಳು ಅಪರೂಪ. ಆಗ ಉಷ್ಣ ಮತ್ತು ಬೆಳಕು ಹುಟ್ಟಿ ಆಯಾ ಲೋಹದ ಸಲ್ಫೈಡುಗಳಾಗುತ್ತವೆ. ತಾಮ್ರ ಮತ್ತು ಬೆಳ್ಳಿಗಳು ವರ್ತಿಸಲು ಸಾಮಾನ್ಯ ಉಷ್ಣತೆಯೇ ಸಾಕು. ದ್ರವ ವಾಯುವಿನ ಶೈತ್ಯದಲ್ಲೂ ವರ್ತಿಸುವುದು ಪಾದರಸದ ವೈಶಿಷ್ಟ್ಯ. ಗಂಧಕದೊಡನೆ ಕಾಯಿಸಿದಾಗ ಆರ್ಸೆನಿಕ್, ಆಂಟಿಮೊನಿ ಮುಂತಾದ ಸಹ ಹೀಗೆಯೇ ತಮ್ಮ ಸಲ್ಫೈಡುಗಳನ್ನು ಕೊಡುತ್ತವೆ. ಕುದಿಯುತ್ತಿರುವ ಗಂಧಕಕ್ಕೆ ಹೈಡ್ರೊಜನ್ ಅಥವಾ ಕ್ಲೋರಿನನ್ನು ಹಾಯಿಸಿದಾಗ ಅನುಕ್ರಮವಾಗಿ ಹೈಡ್ರೊಜನ್ ಸಲ್ಫೈಡ್ ಮತ್ತು ಗಂಧಕ ಮಾನೊಕ್ಲೋರೈಡುಗಳಾಗುತ್ತವೆ. ಕೆಂಗಾವಿನಲ್ಲಿರುವ ಕಾರ್ಬನಿನ ಮೇಲೆ ಗಂಧಕದ ಆವಿಯನ್ನು ಹಾಯಿಸಿ ಕಾರ್ಬನ್ ಡೈ ಸಲ್ಫೈಡನ್ನು ಪಡೆಯಬಹುದು. ಫ್ಲೂರೀನ್, ಬ್ರೋಮೀನ್, ರಂಜಕ, ಬೋರಾನ್ ಮತ್ತು ಸಿಲಿಕಾನುಗಳು ಕೂಡ ಗಂಧಕದೊಡನೆ ಸಂಯೋಜಿಸುತ್ತವೆ. ಅಯೊಡೀನು ಗಂಧಕದೊಡನೆ ಸಂಯೋಜಿಸುವುದಾದರೂ ಗಂಧಕದ ಅಯೊಡೈಡುಗಳು ಅಸ್ಥಿರ ವಸ್ತುಗಳು. ಕರಗಿಸಿದ ಪೊಟ್ಯಾಸಿಯಂ ಕಾರ್ಬೊನೇಟಿನಲ್ಲಿ ಗಂಧಕ ವಿಲೀನವಾದಾಗ ಉಂಟಾಗುವ ಕಂದು ಬಣ್ಣದ ಉತ್ಪನ್ನಕ್ಕೆ ಲಿವರ್ ಆಫ್ ಸಲ್ಫರ್ ಎಂದು ಹೆಸರು. ಇದು ಪೊಟ್ಯಾಸಿಯಂ ಡೈ ಸಲ್ಫೈಡ್ ಮತ್ತು ಥಯೊಸಲ್ಫೇಟುಗಳ ಮಿಶ್ರಣ. ಗಂಧಕವನ್ನು ಪೊಟ್ಯಾಸಿಯಂ ಕ್ಲೋರೇಟ್ ಅಥವಾ ಪೊಟ್ಯಾಸಿಯಂ ನೈಟ್ರೇಟುಗಳಂಥ ಉತ್ಕರ್ಷಣಕಾರಿಗಳೊಡನೆ ಬೆರೆಸಿ ಮಿಶ್ರಣವನ್ನು ಹೊತ್ತಿಸಿದರೆ ಅದು ಸಿಡಿಯುವುದು. ಈ ಮಿಶ್ರಣಕ್ಕೆ ಇದ್ದಲು ಪುಡಿಯನ್ನು ಸೇರಿಸಿದರೆ ತುಪಾಕಿ ಮದ್ದು ಆಗುತ್ತದೆ. ಗಂಧಕದ ಯಾವುದೇ ಅಪರರೂಪವಾಗಲಿ ಪಿಪೆರಿಡಿನ್ನಿನಲ್ಲಿ ವಿಲೀನವಾದಾಗ ಕೆಂಪು ದ್ರಾವಣ ಉಂಟಾಗುವುದು. ಗಂಧಕವನ್ನು ಗುರುತಿಸಲು ಇದೊಂದು ಸೂಕ್ಷ್ಮ ಪರೀಕ್ಷಾ ಪ್ರಯೋಗ.

ಗಂಧಕ ಮತ್ತು ಅದರ ಸಂಯುಕ್ತಗಳು ಉಪಯುಕ್ತ ವಸ್ತುಗಳು. ದ್ರಾಕ್ಷಿ ಬಳ್ಳಿಗಳಿಗೆ ಮಾರಕವಾದ ಬೂಷ್ಟು ಮತ್ತು ಅಣಬೆಗಳನ್ನು ಗಂಧಕ ನಾಶ ಮಾಡಬಲ್ಲದು. ಗಂಧಕದ ಅರಳು ಕೀಟನಾಶಕ, ಗಂಧಕದ ಡೈ ಆಕ್ಸೈಡ್, ಸಲ್ಫ್ಯೂರಿಕ್ ಆಮ್ಲ, ಕಾರ್ಬನ್ ಡೈ ಸಲ್ಫೈಡ್, ತುಪಾಕಿಮದ್ದು ಮತ್ತು ಬೆಂಕಿಕಡ್ಡಿಗಳ ತಯಾರಿಕೆಗೆ ಇದು ಬೇಕು. ರಬ್ಬರಿನ ಬಾಳಿಕೆಯನ್ನು ಹೆಚ್ಚಿಸಲು ಅದಕ್ಕೆ ಗಂಧಕದ ಮಾನೊಕ್ಲೋರೈಡನ್ನು ಸೇರಿಸುತ್ತಾರೆ. ಕಲಿಲ ಗಂಧಕ ಮತ್ತು ಹಾಲು ಗಂಧಕಗಳ ಉಪಯೋಗ ವೈದ್ಯಕೀಯದಲ್ಲಿ ಇದೆ. ಕೆಲವು ಅಗ್ಗವಾದ ಮತ್ತು ಶಾಶ್ವತವಾದ ವರ್ಣದ್ರವ್ಯಗಳ ಸಂಶ್ಲೇಷಣೆಯಲ್ಲಿ ಗಂಧಕದ ಪಾತ್ರ ಉಂಟು. ಗಂಧಕ ಸಂಯುಕ್ತಗಳ ಉಪಯೋಗ ವ್ಯಾಪಕ. ಸೋಡಿಯಂ ಥಯೊಸಲ್ಫೇಟ್ ಇಲ್ಲದೆ ಫೋಟೊಗ್ರಫಿ ನಡೆಯದು. ಬಟ್ಟೆ ಮತ್ತು ಕಾಗದಗಳನ್ನು ಚಲುವೆ ಮಾಡಿದಾಗ ಅವುಗಳ ಮೇಲೆ ಉಳಿಯಬಹುದಾದ ಕ್ಲೋರಿನನ್ನು ತೊಡೆದು ಹಾಕದಿದ್ದರೆ ಅವು ಗಾಸಿಗೊಳ್ಳುತ್ತವೆ. ಅದಕ್ಕಾಗಿ ಸೋಡಿಯಂ ಥಯೋಸಲ್ಫೇಟನ್ನು ಕ್ಲೋರಿನ್‌ಹಾರಕವಾಗಿ ಬಳಸುತ್ತಾರೆ. ಚರ್ಮ ಹದ ಮಾಡಲು ಕ್ಯಾಲ್ಸಿಯಂ ಪಾಲಿಸಲ್ಫೈಡ್ ಉಪಯುಕ್ತ. ವ್ಯವಸಾಯದಲ್ಲಿ ಅಮೋನಿಯಂ ಸಲ್ಫೇಟ್ ಗೊಬ್ಬರದ ಬಳಕೆ ವ್ಯಾಪಕ. ಗಂಧಕದ ಹೆಕ್ಸಫ್ಲೂರೈಡು ($SF_6$) ಉತ್ತಮ ವಿದ್ಯುನ್ನಿರೋಧಕ. ಸಲ್ಫಾಮಿಕ್ ಆಮ್ಲವನ್ನು ಬಣ್ಣಗಳ ತಯಾರಿಕೆಯಲ್ಲೂ ಅದರ ಲವಣಗಳನ್ನು ಕಾಗದ ಮತ್ತು ಬಟ್ಟೆಗಳಿಗೆ ಅಗ್ನಿನಿರೋಧಕ ಗುಣ ನೀಡುವಲ್ಲೂ ಬಳಸುತ್ತಿದ್ದಾರೆ. ಅನೇಕ ಸಂಶ್ಲೇಷಿತ ಮಾರ್ಜಕಗಳ ಉತ್ಪಾದನೆಗೆ ಸಲ್ಫಾನಿಕ್ ಆಮ್ಲಗಳು ಅಗತ್ಯ. ಪ್ಲಾಸ್ಟಿಕ್ ಕೈಗಾರಿಕೆಯಲ್ಲಿ ಥಯೋಯೂರಿಯ ಬಳಕೆಯಾಗುತ್ತಿದೆ. ವಿಮಾನಗಳ ಮತ್ತು ಪೆಟ್ರೋಲ್ ಟ್ಯಾಂಕುಗಳ ಒಳಹೊದಿಕೆಗಳಲ್ಲಿ ಕಾರ್ಬನಿಕ ಪಾಲಿಸಲ್ಫೈಡುಗಳಿರುತ್ತವೆ. ಅನಿಲ ಉರುವಲನ್ನು ಬಳಸುವ ಯಂತ್ರ ವ್ಯವಸ್ಥೆಯಲ್ಲಿ ಮರ್ ಕ್ಯಾಪ್ಟನ್ನುಗಳನ್ನು (ಗಂಧಕಯುಕ್ತ ಆಲ್ಕೋಹಾಲುಗಳು) ಬಳಸಿದರೆ ಅವು ಅಗ್ನಿ ಪ್ರಕರಣಗಳ ಮುನ್ಸೂಚನೆ ನೀಡುತ್ತವೆ. ವೈದ್ಯಕೀಯದಲ್ಲಿ ಪ್ರಸಿದ್ಧವಾದ ಔಷಧಿಗಳು ಎನಿಸಿಕೊಂಡಿರುವ ಸಲ್ಫ ಮದ್ದುಗಳು ಮತ್ತು ಪೆನಿಸಿಲಿನ್ ಸಹ ಗಂಧಕಯುಕ್ತ ವಸ್ತುಗಳೇ. ಮಾನವ ದೇಹಪೋಷಣೆಗೆ ಅಗತ್ಯವಾದ ಮಿಥಯೊನೈನ್, ಸಿಸ್ಟೀನ್ ಮುಂತಾದ ಅಮೈನೊ ಆಮ್ಲಗಳು ಕೂಡ ಗಂಧಕಾನ್ವಿತ ಸಂಯುಕ್ತಗಳೇ ಎಂದಲ್ಲಿ ಗಂಧಕದ ಮಹತ್ತ್ವದ ಅರಿವಾದೀತು.

(ಎಚ್.ಜಿ.ಎಸ್.)

**ಗಂಧಕದ ಆಕ್ಸಿ ಆಮ್ಲಗಳು :** ಸಲ್ಫ್ಯೂರಿಕ್ ಆಮ್ಲ, ಪೈರೊಸಲ್ಫ್ಯೂರಿಕ್ ಆಮ್ಲ. ಹೈಪೊ ಸಲ್ಫ್ಯೂರಿಕ್ ಆಮ್ಲ, ಥಯೋಸಲ್ಫ್ಯೂರಿಕ್ ಆಮ್ಲ. ಪರ್‌ಸಲ್ಫ್ಯೂರಿಕ್ ಆಮ್ಲಗಳು ಮತ್ತು ಥಯಾನಿಕ್ ಆಮ್ಲಗಳು (ಆಕ್ಸಿ ಆಸಿಡ್ಸ್ ಆಫ್ ಸಲ್ಫರ್) ಸಲ್ಫ್ಯೂರಿಕ್ ಆಮ್ಲದ ವಿವರಗಳಿಗೆ ನೋಡಿ ಸಲ್ಫ್ಯೂರಿಕ್ ಆಮ್ಲ.

**ಪೈರೊ ಸಲ್ಫ್ಯೂರಿಕ್ ಆಮ್ಲ:** $H_2S_2O_7$. ಇದಕ್ಕೆ ಓಲಿಯಂ ಅಥವಾ ಹೊಗೆಯಾಡುವ ಸಲ್ಫ್ಯೂರಿಕ್ ಆಮ್ಲ ಎಂದೂ ಹೆಸರು. ಸಾರಯುತ ಸಲ್ಫ್ಯೂರಿಕ್ ಆಮ್ಲದಲ್ಲಿ ಗಂಧಕದ ಟ್ರೈಆಕ್ಸೈಡು ವಿಲೀನವಾದಾಗ ಈ ಆಮ್ಲ ಮೈದಳೆಯುವುದು. ಆಂಶೀಕವಾಗಿ ನಿರ್ಜಲಗೊಂಡಿರುವ ಫೆರಸ್ ಸಲ್ಫೇಟಿನ ಹರಳುಗಳನ್ನು ($FeSO_4.H_2O$) ಅಸವಿಸಿ ಬಂದುದನ್ನು ಕೊಂಚ ಸಲ್ಫ್ಯೂರಿಕ್ ಆಮ್ಲವಿರುವ ಸಂಗ್ರಾಹಕದಲ್ಲಿ ಶೇಖರಿಸಿದಾಗ ಈ ಆಮ್ಲ ಉಂಟಾಗುವುದು. ಫೆರಸ್ ಸಲ್ಫೇಟಿನ ವಿಭಜನೆಯಿಂದ ಫೆರಿಕ್ ಸಲ್ಫೇಟ್ [$Fe_2(SO_4)_3$] ಬರುತ್ತದೆ. ಇದು ಅನಂತರ ವಿಭಜಿಸಿ ಗಂಧಕದ ಟ್ರೈಆಕ್ಸೈಡನ್ನು ಬಿಡುಗಡೆ ಮಾಡುವುದು. ಗಂಧಕದ ಟ್ರೈಆಕ್ಸೈಡು ಸಂಗ್ರಾಹಕದಲ್ಲಿಟ್ಟಿರುವ ಸಲ್ಫ್ಯೂರಿಕ್ ಆಮ್ಲದಲ್ಲಿ ವಿಲೀನವಾಗಿ ಪೈರೊಸಲ್ಫ್ಯೂರಿಕ್ ಆಮ್ಲವನ್ನು ರೂಪಿಸುವುದು. ಈ ಆಮ್ಲವನ್ನು ತಯಾರಿಸುವ ಇನ್ನೊಂದು ವಿಧಾನವೆಂದರೆ ಸೋಡಿಯಂ ಬೈಸಲ್ಫೇಟನ್ನು 400° ಸೆಂ. ಉಷ್ಣತೆಗೆ ಕಾಯಿಸುವುದು. ದೊರೆತ ಸೋಡಿಯಂ ಪೈರೊ ಸಲ್ಫೇಟನ್ನು ಸಾರಯುತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಕಾಯಿಸಿ ಪೈರೊಸಲ್ಫ್ಯೂರಿಕ್ ಆಮ್ಲವನ್ನು ಪಡೆಯಬಹುದು.

$$2NaHSO_4 \rightarrow Na_2S_2O_7 + H_2O$$

$$Na_2S_2O_7 + H_2SO_4 \rightarrow Na_2SO_4 + H_2S_2O_7$$

ಗ್ರೀಕ್ ಭಾಷೆಯಲ್ಲಿ ಪೈರ್ ಎಂದರೆ ಬೆಂಕಿ ಎಂದರ್ಥ. ಬೈಸಲ್ಫೇಟನ್ನು ಕಾಯಿಸಿ ಪೈರೊ ಸಲ್ಫೇಟನ್ನು ಪಡೆಯಬಹುದಾದ್ದರಿಂದ ಆಮ್ಲಕ್ಕೆ ಈ ಹೆಸರು. ಇದು ಸ್ನಿಗ್ಧವಾದ ಎಣ್ಣೆಯಂಥ ದ್ರವ. ಸಾರಯುತ ಸಲ್ಫ್ಯೂರಿಕ್ ಆಮ್ಲದಲ್ಲಿ ಗಂಧಕದ ಟ್ರೈಆಕ್ಸೈಡ್ ವಿವಿಧ ಪ್ರಮಾಣದಲ್ಲಿ ವಿಲೀನವಾಗಿ ಪೈರೊ ಸಲ್ಫ್ಯೂರಿಕ್ ಆಮ್ಲವಾಗಿದೆಯಷ್ಟೆ ಇದು ಹೊಗೆಯಾಡಲು ಅದರಿಂದ ಗಂಧಕದ ಟ್ರೈಆಕ್ಸೈಡ್ ಎಲ್ಲ ಪಾರಾಗಿ ಸಲ್ಫ್ಯೂರಿಕ್ ಆಮ್ಲ ಮಾತ್ರ ಉಳಿಯುವುದು ಈ ಭಾವನೆಗೆ ಸಾಕ್ಷಿ. ಪೆಟ್ರೋಲಿಯಮಿನ ಸಂಸ್ಕರಣ, ವರ್ಣದ್ರವ್ಯಗಳ ಉತ್ಪಾದನೆ, ಸ್ಫೋಟಕಗಳು ಮತ್ತು ಕಪ್ಪು ಬೂಟ್‌ಪಾಲಿಷುಗಳ ತಯಾರಿಕೆಯಲ್ಲಿ ಈ ಆಮ್ಲದ ಪಾತ್ರ ಉಂಟು,

**ಹೈಪೊಸಲ್ಫ್ಯೂರಸ್ ಆಮ್ಲ :** $H_2S_2O_4$. ಸಲ್ಫ್ಯೂರಸ್ ಆಮ್ಲದಲ್ಲಿ ($H_2SO_3$). ಕಬ್ಬಿಣ ವಿಲೀನವಾದಾಗ ಯಾವ ಅನಿಲವೂ ಬಿಡುಗಡೆಯಾಗುವುದಿಲ್ಲವೆಂದು ಸಿ.ಎಲ್. ಬರ್ತಲೊ ಗಮನಿಸಿದ್ದ (1789). ಸತು ಮತ್ತು ತವರಗಳೂ ಅದರೊಡನೆ ಹೀಗೆಯೇ ವಿಲೀನವಾಗುವುವು ಎಂದು ಎಲ್.ಎನ್. ವ್ಯಾಂಕ್ವೆಲಿನ್ ಮತ್ತು ಎ.ಎಫ್. ಪೂರ್‌ಕ್ರಾಯ್ ತೋರಿಸಿದರು(1798). ಹೀಗಾಗಲು ಆಯಾ ಹೈಪೊ ಸಲ್ಫೈಟುಗಳು ಉಂಟಾಗುವುದೇ ಕಾರಣ ಎಂದು ಶೋಧಿಸಿದವನು ಷೂಟ್ಸೆನ್ ಬರ್ಗರ್ (1869). ಹೈಪೊಸಲ್ಫ್ಯೂರಸ್ ಆಮ್ಲವನ್ನು ಆವಿಷ್ಕರಿಸಿದ ಕೀರ್ತಿಯೂ ಅವನದೇ. ಹೈಪೊಸಲ್ಫ್ಯೂರಸ್ ಆಮ್ಲ ಬಲು ಅಸ್ಥಿರ ವಸ್ತು. ದ್ರಾವಣರೂಪದಲ್ಲಿ ಮಾತ್ರ ಇದು ನಮಗೆ ಪರಿಚಿತ. ದ್ರಾವಣದ ಬಣ್ಣ ಹಳದಿ. ದುರ್ವಾಸನೆ ಬೀರುತ್ತಿರುತ್ತದೆ. ವಾಯುವಿನಿಂದ ಸರಾಗವಾಗಿ ಆಕ್ಸಿಜನ್ನನ್ನು ಹೀರಿ ಪೈರೊಸಲ್ಫ್ಯೂರಸ್ ಆಮ್ಲವಾಗಿ ($H_2S_2O_5$) ಪರಿವರ್ತನೆಗೊಳ್ಳುತ್ತದೆ. ಹೈಪೊ ಸಲ್ಫ್ಯೂರಸ್ ಆಮ್ಲ ಸಲ್ಫ್ಯೂರಿಕ್ ಆಮ್ಲದಷ್ಟೇ ಪ್ರಬಲವಾದ ಆಮ್ಲ. ದ್ವಿ ಪ್ರತ್ಯಾಮ್ಲೀಯ ಆಮ್ಲ. ತನ್ನ ಆಕ್ಸಿಜನ್ ಒಲವಿನ ದೆಸೆಯಿಂದ ಪ್ರಬಲ ಅಪಕರ್ಷಣಕಾರಿ ಎನಿಸಿಕೊಂಡಿದೆ. ಇದರ ಲವಣಗಳಿಗೆ ಹೈಪೊಸಲ್ಫೈಟುಗಳು ಎಂದು ಹೆಸರು. ಇವುಗಳಲ್ಲಿ ಮುಖ್ಯವಾದದ್ದು ಸೋಡಿಯಂ ಹೈಪೊಸಲ್ಫೈಟ್ ($Na_2S_2O_4$). ಇದು ಉಪಯುಕ್ತ ಲವಣ. ಉದಾಹರಣೆಗೆ ಇದರ ದ್ರಾವಣ ಆಕ್ಸಿಜನನ್ನು ಅವಶೋಷಿಸಬಲ್ಲದು. ಒಂದು ಅನಿಲ ಮಿಶ್ರಣದಲ್ಲಿರುವ ಆಕ್ಸಿಜನ್ನಿನ ಪ್ರಮಾಣವನ್ನು ನಿರ್ಧರಿಸಲು ಈ ಕ್ರಿಯೆ ಸಹಾಯಕ. ಸಕ್ಕರೆ ಮತ್ತು ಇಂಡಿಗೋಗಳನ್ನು ಇದರಿಂದ ಚಲುವೆ ಮಾಡಬಹುದು. ಇದರ ಸಂಪರ್ಕದಲ್ಲಿ ಪರ್ಮ್ಯಾಂಗನೇಟುಗಳು ಬಣ್ಣ ಕಳೆದುಕೊಳ್ಳುತ್ತವೆ. ಬೆಳ್ಳಿಯ ನೈಟ್ರೇಟ್, ಚಿನ್ನದ ಕ್ಲೋರೈಡ್ ಮತ್ತು ಪ್ಲಾಟಿನಂ ಕ್ಲೋರೈಡುಗಳ ದ್ರಾವಣಗಳಿಂದ ಆಯಾ ಲೋಹಗಳು ಒತ್ತರಿಸಿವುವು. ಕ್ಯುಪ್ರಿಕ್ ಲವಣವಾದರೆ ಬಿಡುಗಡೆಯಾದ ತಾಮ್ರ ಕಲಿಲ ಸ್ಥಿತಿಯಲ್ಲಿರುತ್ತದೆ. ತೇವಾಂಶದ ಸಂಪರ್ಕದಲ್ಲಿ ಇದು ಹೈಡ್ರೊಜನ್ ಸಲ್ಫೈಡನ್ನು ಗಂಧಕಕ್ಕೆ ಪರಿವರ್ತಿಸುವುದರಿಂದ ಸೋಡಿಯಂ ಹೈಪೊಸಲ್ಫೈಟಿಗೆ ಉತ್ಕರ್ಷಣ ಗುಣ ಕೂಡ ಇರುವಂತೆ ತೋರುತ್ತದೆ. ಇಂಡಿಗೋ ನೀಲಿ ಇದರ ಸಂಪರ್ಕದಲ್ಲಿ ಬೆಳ್ಳಗಾಗುವುದು. ಇಂಡಿಗೋ ಬಿಳುಪು ದ್ರಾವ್ಯ ವಸ್ತು. ಇದರ ದ್ರಾವಣದಲ್ಲಿ ಬಟ್ಟೆಯನ್ನು ಅದ್ದಿ ಗಾಳಿಗೆ ಒಡ್ಡಿದರೆ ನೀಲಿ ಬಣ್ಣ ಮರುಕಳಿಸುತ್ತದೆ.

ಥಯೊ ಸಲ್ಫ್ಯೂರಿಕ್ ಆಮ್ಲ: $H_2S_2O_3$. ಇದುವರೆಗೂ ಇದನ್ನು ಪ್ರತ್ಯೇಕಿಸಲು ಸಾಧ್ಯವಾಗಿಲ್ಲ. ದ್ರಾವಣದಲ್ಲಿ ಕ್ಷಣಿಕವಾಗಿ ಉತ್ಪತ್ತಿಯಾಗಿ ಕೂಡಲೇ ಗಂಧಕ ಮತ್ತು ಸಲ್ಫ್ಯೂರಸ್ ಆಮ್ಲಗಳಿಗೆ ವಿಭಜಿಸುವುದು. ಉಂಟಾದ ಸಲ್ಫ್ಯೂರಸ್ ಆಮ್ಲದ ದೆಸೆಯಿಂದ ಇದಕ್ಕೂ ಅಪಕರ್ಷಣ ಗುಣ ಪ್ರಾಪ್ತವಾಗುತ್ತದೆ. ಥಯೊ ಸಲ್ಫ್ಯೂರಿಕ್ ಆಮ್ಲದ ಲವಣಗಳೇ ಥಯೊ ಸಲ್ಫೇಟುಗಳು. ಇವು ಸ್ಥಿರ ವಸ್ತುಗಳು. ಇವುಗಳಲ್ಲಿ ಮುಖ್ಯವಾದದ್ದು ಸೋಡಿಯಂ ಥಯೊ ಸಲ್ಫೇಟ್ ($Na_2S_2O_3$).ಇದು ಛಾಯಾಚಿತ್ರಗ್ರಾಹಕರಿಗೆ ಪರಿಚಿತವಾದ ಲವಣ. ಹೈಪೊ ಎಂಬುದು ಇದರ ವ್ಯವಹಾರ ನಾಮ. ದ್ರಾವ್ಯ ಸಲ್ಫೈಡುಗಳನ್ನು ಗಾಳಿಯಿಂದ ಉತ್ಕರ್ಷಿಸಿ ಅಥವಾ ಸಲ್ಫೈಟುಗಳ ದ್ರಾವಣಗಳೊಡನೆ ಗಂಧಕವನ್ನು ಕುದಿಸಿ ಥಯೊಸಲ್ಫೇಟುಗಳನ್ನು ಮಾಡಿಕೊಳ್ಳಬಹುದು.

$$2K_2S_2 + 3O_2 \rightarrow 2K_2S_2O_3$$

$$Na_2SO_3 + S \rightarrow Na_2S_2O_3$$

ಸೋಡಿಯಂ ಸಲ್ಫೈಡ್ ಮತ್ತು ಸಲ್ಫೈಡುಗಳ ಮಿಶ್ರಣ ಅಯೊಡೀನಿನೊಡನೆ ವರ್ತಿಸಿದಾಗಲೂ ಸೋಡಿಯಂ ಥಯೊ ಸಲ್ಫೈಟು ರೂಪಿತವಾಗುತ್ತದೆ. ಇದನ್ನು ಸ್ಪ್ರಿಂಗನ ಕ್ರಿಯೆ ಎನ್ನುವುದುಂಟು. ವಾಸ್ತವವಾಗಿ ಸೋಡಿಯಂ ಥಯೊ ಸಲ್ಫೇಟಿನ ಎರಡು ಅಣುಗಳು ಸೇರಿ ಅಯೊಡೀನಿನ ಸಮ್ಮುಖದಲ್ಲಿ ಸೋಡಿಯಂ ಟೆಟ್ರಥಯೊ ನೇಟನ್ನು ಕೊಡುವ ಕ್ರಿಯೆಗೆ ಈ ಹೆಸರು. ಸೋಡಿಯಂ ಥಯೊ ಸಲ್ಫೇಟಿನ ದ್ರಾವಣಕ್ಕೆ ಬೆಳ್ಳಿಯ ಹ್ಯಾಲೈಡುಗಳನ್ನು ವಿಲೀನಮಾಡಿಕೊಂಡು ಸಂಕೀರ್ಣ ಲವಣವಾಗಬಲ್ಲ ಸಾಮರ್ಥ್ಯ ಉಂಟು. ಛಾಯಾಚಿತ್ರಗ್ರಹಣ ಕಲೆಯಲ್ಲಿ ಹೈಪೊವಿನ ಬಳಕೆ ಈ ಗುಣವನ್ನು ಅವಲಂಬಿಸಿದೆ. ಅಲ್ಲದೆ ಇದು ಚಿನ್ನದ ಕ್ಲೋರೈಡನ್ನೂ ಹೀಗೆಯೇ ಸಂಕೀರ್ಣ ಲವಣವಾಗಿ ಮಾರ್ಪಡಿಸುವುದು. ಅದಕ್ಕೆ ಸೋಡಿಯಂ ಆರೋಥಯೊಸಲ್ಫೇಟ್ [$Na_3\{AU(S_2O_3)_2\}$] ಎನ್ನುವರು. ಇದನ್ನು ಚುಚ್ಚು ಮದ್ದಿನ ರೂಪದಲ್ಲಿ ಕೊಟ್ಟರೆ ಸಂಧಿವಾತ ರೋಗ ಗುಣವಾಗುವುದು ಕಂಡುಬಂದಿದೆ.

**ಪರ್‌ಸಲ್ಫ್ಯೂರಿಕ್ ಆಮ್ಲಗಳು :** ಇವುಗಳಲ್ಲಿ ಪರ್‌ಮಾನೊಸಲ್ಫ್ಯೂರಿಕ್ ಆಮ್ಲ ($H_2SO_5$) ಮತ್ತು ಪರ್‌ಡೈಸಲ್ಫ್ಯೂರಿಕ್ ಆಮ್ಲ ($H_2S_2O_8$) ಎಂದು ಎರಡು ಬಗೆ. ಈ ಆಮ್ಲಗಳನ್ನು ಪತ್ತೆಹಚ್ಚಿದವರ ಗೌರವಾರ್ಥ ಇವುಗಳಿಗೆ ಅನುಕ್ರಮವಾಗಿ ಕೇರೋ (1898) ಮತ್ತು ಮಾರ್ಷಲ್ಲರ (1891) ಆಮ್ಲಗಳೆಂದು ಹೆಸರಿಸಿದ್ದಾರೆ.

ಪರ್‌ಡೈಸಲ್ಫ್ಯೂರಿಕ್ ಆಮ್ಲವನ್ನು ಪರ್‌ಸಲ್ಫ್ಯೂರಿಕ್ ಆಮ್ಲ ಎಂದೇ ಕರೆಯುವುದು ರೂಢಿ. ಬರ್ಫದ ಶೈತ್ಯದಲ್ಲಿರುವ ಶೇ.50-60 ಸಾರತೆಯ ಸಲ್ಫ್ಯೂರಿಕ್ ಆಮ್ಲವನ್ನು ವಿದ್ಯುದ್ವಿಭಜನೆಗೆ ಗುರಿಪಡಿಸಿದಾಗ ಪರ್‌ಸಲ್ಫ್ಯೂರಿಕ್ ಆಮ್ಲ ಉಂಟಾಗುತ್ತದೆ. ಸಾರರಿಕ್ತ ಸಲ್ಫ್ಯೂರಿಕ್ ಆಮ್ಲವನ್ನು ವಿದ್ಯುದ್ವಿಭಜಿಸಿದಾಗ ಅದರೊಡನಿರುವ ನೀರು ವಿಭಜಿತವಾಗಿ ಕ್ಯಾಥೋಡಿನಲ್ಲಿ ಹೈಡ್ರೊಜನ್ನು ಆನೋಡಿನಲ್ಲಿ ಆಕ್ಸಿಜನ್ನೂ 2 : 1 ಗಾತ್ರ ಪ್ರಮಾಣದಲ್ಲಿ ಬಿಡುಗಡೆಯಾಗುವುವಷ್ಟೆ. ಆದರೆ ದ್ರಾವಣದಲ್ಲಿ ಸಲ್ಫ್ಯೂರಿಕ್ ಆಮ್ಲದ ಅಂಶ ಹೆಚ್ಚಿಸಿದಂತೆ ಆನೋಡಿನಲ್ಲಿ ಹೊರಬೀಳುವ ಆಕ್ಸಿಜನ್ನಿನ ಪರಿಮಾಣ ಕಡಿಮೆಯಾಗುತ್ತ ಹೋಗಿ ಶೇ.50 ಸಲ್ಫ್ಯೂರಿಕ್ ಆಮ್ಲವನ್ನು ಬಳಸಿದಾಗ ಆಕ್ಸಿಜನ್ ಬಿಡುಗಡೆಯಾಗುವಂತೆ ತೋರುವುದೇ

ಇಲ್ಲ. ಹೀಗಾಗಲು ಸಾರತೆಯ ಸಲ್ಫ್ಯೂರಿಕ್‌ಆಮ್ಲ ದ್ರಾವಣದಲ್ಲಿ ಕೆಳಗಿನಂತೆ ಅಯಾನೀಭವಿಸಿರುವುದೇ ಕಾರಣ :

$$H_2SO_4 \rightarrow H^+ + HSO_4^-$$

ನಯವಾದ ಪ್ಲ್ಯಾಟಿನಂ ಆನೋಡನ್ನು ಬಳಸಿ ಉನ್ನತ ವಿದ್ಯುತ್‌ಸಾಂದ್ರತೆಯನ್ನು ಪ್ರಯೋಗಿಸಿದರೆ ದ್ರಾವಣದಲ್ಲಿರುವ ಬೈಸಲ್ಫೇಟಿನ ಅಯಾನುಗಳು ಜೊತೆಗೂಡಿ ಪರ್‌ಸಲ್ಫ್ಯೂರಿಕ್ ಆಮ್ಲವನ್ನು ಕೊಡುತ್ತದೆ.

$$2HSO_4^- \rightarrow H_2S_2O_8 + 2e^-$$

ಕ್ಯಾಥೋಡಿನಲ್ಲಿ ಬಿಡುಗಡೆಯಾಗುವ ಹೈಡ್ರೊಜನ್ ಪರ್‌ಸಲ್ಫ್ಯೂರಿಕ್ ಆಮ್ಲವನ್ನು ಅಪಕರ್ಷಿಸಿ ಬಿಡುವ ಸಾಧ್ಯತೆ ಉಂಟು. ಆದ್ದರಿಂದ ಆನೋಡ್ ಮತ್ತು ಕ್ಯಾಥೋಡ್ ಅಂಕಣಗಳನ್ನು ಒಂದು ಗಾಜಿನ ಸಿಲಿಂಡರಿನಿಂದ ಬೇರ್ಪಡಿಸುತ್ತಾರೆ. ಸಿಲಿಂಡರಿಗೆ ಸುತ್ತಿರುವ ತಾಮ್ರದ ಸುರುಳಿಯೇ ಕ್ಯಾಥೋಡಿನಂತೆ ವರ್ತಿಸುವುದು.

ಪರ್‌ಸಲ್ಫ್ಯೂರಿಕ್ ಆಮ್ಲ ಸ್ಥಿರವೆನ್ನಬಹುದಾದ ಹರಳುರೂಪದ ವಸ್ತು. ದ್ರವನ ಬಿಂದು 60$^{\circ}$ ಸೆಂ. ಬಿಸಿಮಾಡಿದಾಗ ಆಕ್ಸಿಜನ್ನನ್ನು ಕಳೆದುಕೊಳ್ಳುವುದರಿಂದ ಇದು ಉತ್ಕರ್ಷಣಕಾರಿ ಅಯೊಡೈಡುಗಳಿಂದ ಅಯೊಡೀನನ್ನು ಬಿಡುಗಡೆ ಮಾಡುವುದು. ಇಂಡಿಗೋ ಬಣ್ಣವನ್ನು ಚಲುವೆ ಮಾಡಬಲ್ಲದು. ಅನಿಲೀನನ್ನು ಅನಿಲಿನ್ ಕಪ್ಪಾಗಿ ಉತ್ಕರ್ಷಿಸುತ್ತದೆ. ಆದರೆ ಈ ಕ್ರಿಯೆಗಳು ಜರುಗುವುದು ನಿಧಾನ. ಇದರ ದ್ರಾವಣ ಕ್ರಮೇಣವಾಗಿ ಸಲ್ಫ್ಯೂರಿಕ್ ಮತ್ತು ಪರ್‌ಮಾನೋಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣವಾಗಿ ಬಿಡುವುದು. ಇದು ಜಲವಿಭಜನೆಯ ಪರಿಣಾಮ.

$$H_2S_2O_8 + H_2O \rightarrow H_2SO_4 + H_2SO_5$$

ಶೇ.50 ಸಾರತೆಯ ಸಲ್ಫ್ಯೂರಿಕ್ ಆಮ್ಲದಲ್ಲಿ ಪೊಟ್ಯಾಸಿಯಂ ಸಲ್ಫೇಟ್ ಅಥವಾ ಅಮೋನಿಯಂ ಲವಣಗಳು ಸ್ಫಟಿಕೀಕರಿಸುತ್ತವೆ. ಮೂಲ ಆಮ್ಲದಂತೆ ಇವು ಕೂಡ ಪ್ರಬಲ ಉತ್ಕರ್ಷಣಕಾರಿಗಳು. ರಾಸಾಯನಿಕ ವಿಶ್ಲೇಷಣೆಯಲ್ಲಿ ಇವುಗಳಿಗೆ ಪ್ರಾಶಸ್ತ್ಯ ಉಂಟು. ಹೈಡ್ರೊಜನ್ ಪರಾಕ್ಸೈಡಿನ ಉತ್ಪಾದನೆಯಲ್ಲಿ ಅಮೋನಿಯಂ ಪರ್‌ಸಲ್ಫೇಟಿನ ಪಾತ್ರವಿದೆ.

ಪೊಟ್ಯಾಸಿಯಂ ಪರ್‌ಸಲ್ಫೇಟನ್ನು ಶೇ. 40 ಸಲ್ಫ್ಯೂರಿಕ್ ಆಮ್ಲದೊಂದಿಗೆ ಅರೆದು ಒಂದು ಗಂಟೆಯ ಕಾಲ ಶೈತ್ಯ ಮಿಶ್ರಣದಲ್ಲಿಟ್ಟು ಅನಂತರ ಕ್ರಿಯಾಮಿಶ್ರಣವನ್ನು ಬರ್ಫದ ಮೇಲೆ ಸುರಿದರೆ ಕೇರೋ ಆಮ್ಲ ರೂಪುಗೊಳ್ಳುವುದು. ಪರ್‌ಮಾನೋಸಲ್ಫ್ಯೂರಿಕ್ ಆಮ್ಲ ಸಹ ಹರಳುರೂಪದ ಬಿಳಿಯ ಘನ. ಇದರ ದ್ರವನಬಿಂದು 42$^{\circ}$ ಸೆಂ. ಈ ಘನ ಸಾಕಷ್ಟು ಸ್ಥಿರವಾಗಿರುವುದು. ಇದು ಪರ್‌ಸಲ್ಫ್ಯೂರಿಕ್ ಆಮ್ಲಕ್ಕಿಂತ ಪ್ರಬಲ ಉತ್ಕರ್ಷಣಕಾರಿ. ಪೊಟ್ಯಾಸಿಯಂ ಅಯೊಡೈಡಿನ ದ್ರಾವಣದಿಂದ ತತ್‌ಕ್ಷಣ ಅಯೊಡೀನನ್ನು ಬಿಡುಗಡೆ ಮಾಡುವುದು ಇದಕ್ಕೆ ನಿದರ್ಶನ. ಇದರ ಸಂಪರ್ಕ ಪಡೆದ ಹತ್ತಿ ಮತ್ತು ಉಣ್ಣೆಗಳು ಕೂಡಲೇ ಕಾರ್ಬನೀಕರಿಸುತ್ತವೆ. ಅನಿಲೀನು ನೈಟ್ರೋಬೆನ್ಸೀನಾಗುವುದು. ಕ್ಲೋರೋಸಲ್ಫಾನಿಕ್ ಆಮ್ಲ ಮತ್ತು ಹೈಡ್ರೊಜನ್ ಪರಾಕ್ಸೈಡುಗಳ ವರ್ತನೆಯಿಂದ ಇದನ್ನು ಸಂಶ್ಲೇಷಿಸಬಹುದು.

**ಥಯಾನಿಕ್ ಆಮ್ಲಗಳು:** $SO_2.OH$ ಗುಚ್ಛಕ್ಕೆ ಸಲ್ಫಾನಿಕ್ ಗುಚ್ಛವೆಂದು ಹೆಸರು. ಎರಡು ಸಲ್ಫಾನಿಕ್ ಗುಚ್ಛಗಳು ನೇರವಾಗಿ ಅಥವಾ ಗಂಧಕದ ಪರಮಾಣುಗಳ ಮೂಲಕ ಬಂಧಿತವಾಗಿದ್ದರೆ ಅಂಥ ಆಮ್ಲಗಳಿಗೆ ಈ ಹೆಸರುಂಟು. ಇವನ್ನು $H_2S_n{}^{o}{}_6$ ಎಂಬ ಸಾಮಾನ್ಯ ಸೂತ್ರದಿಂದ ಸೂಚಿಸಬಹುದು. ಇಲ್ಲಿ n=2,3,4,5 ಅಥವಾ 6 ಆಗಿರಬಹುದು. ಆಗ ಅವನ್ನು ಅನುಕ್ರಮವಾಗಿ ಡೈ, ಟ್ರೈ, ಟೆಟ್ರ, ಪೆಂಟ ಮತ್ತು ಹೆಕ್ಸ ಥಯಾನಿಕ್ ಆಮ್ಲಗಳು ಎಂದು ಕರೆಯುತ್ತೇವೆ.

**ಥಯಾನಿಕ್ ಆಮ್ಲ:** $H_2S_2{}^{o}{}_6$ ಇದರ ಅಣುವಿನಲ್ಲಿ ಎರಡು ಸಲ್ಫಾನಿಕ್ ಗುಚ್ಛಗಳು ನೇರವಾಗಿ ಬಂಧಿತವಾಗಿವೆ. ಸಾಮಾನ್ಯವಾಗಿ ಈ ಆಮ್ಲವನ್ನು ತಯಾರಿಸಲು ಪೈರೊಲೂಸೈಟಿನ ನುಣುಪು ಪುಡಿಯನ್ನು ತಣ್ಣೀರಿನಲ್ಲಿ ವಿಲಂಬಿಸಿ ಅದರ ಮೂಲಕ ಗಂಧಕದ ಡೈ ಆಕ್ಸೈಡನ್ನು ನಿಧಾನವಾಗಿ ಹಾಯಿಸುವುದು ವಾಡಿಕೆ. ಮೊದಲು ಉತ್ಪತ್ತಿಯಾಗುವ ಮ್ಯಾಂಗನಿಕ್ ಸಲ್ಫೇಟ್ ಸ್ವಯಂ ಉತ್ಕರ್ಷಣ ಮತ್ತು ಅಪಕರ್ಷಣ ಹೊಂದಿ ಮ್ಯಾಂಗನಸ್ ಡೈ ಥಯೋನೇಟ್ ಆಗುತ್ತದೆ. ಹೀಗೆ ಪೈರೊಲೂಸೈಟ್ ಪೂರ್ಣವಾಗಿ ಪರಿವರ್ತಿತವಾದ ಬಳಿಕ ಬೆರೈಟಾ ದ್ರಾವಣ ಕೂಡಿಸಿದರೆ ಬೇರಿಯಂ ಸಲ್ಫೇಟ್ ಮತ್ತು ಮ್ಯಾಂಗನಸ್ ಹೈಡ್ರಾಕ್ಸೈಡುಗಳು ಒತ್ತರಿಸುವುವು. ಹೆಚ್ಚುವರಿ ಬೆರೈಟಾವನ್ನು ಕಾರ್ಬನ್ ಡೈಆಕ್ಸೈಡಿನಿಂದ ಒತ್ತರಿಸಿ ಬೇರ್ಪಡಿಸಲಾಗುವುದು. ಸೋಸಿ ಪಡೆದ ದ್ರಾವಣವನ್ನು ಇಂಗಿಸಿ ಬೇರಿಯಂ ಡೈ ಥಯೋನೇಟಿನ ($BaS_2O_6.2H_2O$) ಹರಳುಗಳನ್ನು ಪಡೆಯಬಹುದು. ಇವನ್ನು ಸಲ್ಫ್ಯೂರಿಕ್ ಆಮ್ಲದಿಂದ ವಿಭಜಿಸಿದರೆ ಡೈ ಥಯಾನಿಕ್ ಆಮ್ಲದ ದ್ರಾವಣ ದೊರೆಯುವುದು. ಡೈ ಥಯಾನಿಕ್ ಆಮ್ಲ ದ್ರಾವಣ ಸ್ಥಿತಿಯಲ್ಲಿ ಮಾತ್ರ ಇರಬಲ್ಲದು. ದ್ರಾವಣವನ್ನು ಜಲತಾಪಕದ ಮೇಲಿಟ್ಟು ಎಚ್ಚರಿಕೆಯಿಂದ ಇಂಗಿಸುತ್ತ ಬಂದರೆ ದ್ರಾವಣ ಸಾಂದ್ರತ 1.347 ಮುಟ್ಟಿದಾಗ ಆಮ್ಲ ವಿಭಜಿಸಿ ಸಲ್ಫ್ಯೂರಿಕ್ ಆಮ್ಲ ಮತ್ತು ಗಂಧಕದ ಡೈ ಆಕ್ಸೈಡುಗಳನ್ನು ಕೊಡುತ್ತದೆ. ಇದರ ಲವಣಗಳೂ ಹೀಗೆಯೇ ವರ್ತಿಸುವುವು. ಈ ಆಮ್ಲ ಉತ್ಕರ್ಷಣಕಾರಿಗಳಿಗೆ ಮಣಿಯದು. ಉದಾಹರಣೆಗೆ ಕ್ಲೋರೀನ್ನಿನ ದ್ರಾವಣ ಅಥವಾ ನೈಟ್ರಿಕ್ ಆಮ್ಲಗಳಿಂದ ಪ್ರಭಾವಿತವಾಗುವುದಿಲ್ಲ. ಅಲ್ಲದೆ ಗಂಧಕದೊಡನೆ ಸಂಯೋಜಿಸದು. ಈ ಎರಡು ಲಕ್ಷಣಗಳಲ್ಲಿ ಇದು ಇತರ ಥಯಾನಿಕ್ ಆಮ್ಲಗಳಿಗಿಂತ ಭಿನ್ನ. ಡೈ ಥಯಾನಿಕ್ ಆಮ್ಲ ದ್ವಿ ಪ್ರತ್ಯಾಮ್ಲೀಯ ಆಮ್ಲವೆಂದು ವಿದ್ಯುದ್ವಹನ ಪ್ರಯೋಗಗಳಿಂದ ಸ್ಥಿರಪಟ್ಟಿದೆ. ಅಂದರೆ ಈ ಆಮ್ಲ ನಾರ್ಮಲ್ ಮತ್ತು ಆಮ್ಲೀಯ ಎಂಬ ಎರಡು ಶ್ರೇಣಿಯ ಲವಣಗಳನ್ನು ಕೊಡಬೇಕು. ಅದರೆ ಆಮ್ಲೀಯ ಡೈಥಯೊನೇಟುಗಳನ್ನು ಇದುವರೆಗೆ ತಯಾರಿಸಲು ಸಾಧ್ಯವಾಗಿಲ್ಲ. ಇಂಥ ಥಯಾನಿಕ್ ಆಮ್ಲಗಳನ್ನು ಪಾಲಿಥಯಾನಿಕ್ ಆಮ್ಲಗಳು ಎಂಬ ವರ್ಗನಾಮದಿಂದ ಕರೆಯುವುದು ರೂಢಿ. ಈ ಆಮ್ಲಗಳು ಸರಾಗವಾಗಿ ಪರಸ್ಪರ ಪರಿವರ್ತಿತವಾಗುವುವು. ಅವುಗಳ ಅಣುರಚನೆಯಲ್ಲಿ ಗಂಧಕದ ಪರಮಾಣುಗಳ ಸರಣಿ ಇರುವುದಾದರೆ ಅಂಥ ಪರಮಾಣು ಸರಣಿ ಸುಲಭವಾಗಿ ಒಡೆದು ಒಂದು ಗಂಧಕದ ಪರಮಾಣುವನ್ನು ಹೊರದೂಡುವುದು ಅಥವಾ ಕೂಡಿಸಿಕೊಳ್ಳುವುದು ಅಸಂಭವ. ಆದ್ದರಿಂದ ಈ ಆಮ್ಲಗಳಿಗೆಲ್ಲ ಟ್ರೈ ಥಯಾನಿಕ್ ಆಮ್ಲವೇ ಜನಕವೆಂದು ಸಲಹೆ ಮಾಡಲಾಗಿದೆ. ಏಕೆಂದರೆ ಇತರ ಥಯಾನಿಕ್ ಆಮ್ಲಗಳಿಂದ ಬರುವುದು ಟ್ರೈ ಥಯಾನಿಕ್ ಆಮ್ಲವೇ ವಿನಾ ಡೈಥಯಾನಿಕ್ ಆಮ್ಲವಲ್ಲ. ಟ್ರೈ ಮತ್ತು ಟೆಟ್ರ ಥಯಾನಿಕ್ ಆಮ್ಲಗಳನ್ನು ಉನ್ನತ ಥಯಾನಿಕ್ ಆಮ್ಲಗಳಿಗೆ ಪರಿವರ್ತಿಸಬಹುದು. ಡೈಥಯಾನಿಕ್ ಆಮ್ಲದಿಂದ ಹೀಗೆ ಮಾಡಲಾಗದು. ಡೈ ಥಯಾನಿಕ್ ಆಮ್ಲವನ್ನು ಸಲ್ಫ್ಯೂರಿಕ್ ಆಮ್ಲಕ್ಕೆ ಉತ್ಕರ್ಷಿಸುವುದು. ಕಷ್ಟ. ಆದರೆ ಪಾಲಿ ಥಯಾನಿಕ್ ಆಮ್ಲಗಳು ಸರಾಗವಾಗಿ ಉತ್ಕರ್ಷಿತವಾಗುತ್ತವೆ.

ಸಲ್ಫ್ಯೂರಸ್ ಆಮ್ಲದೊಡನೆ ನವಜಾತ ಗಂಧಕವನ್ನು ವರ್ತಿಸಿ ಅಥವಾ ಥಯೊಸಲ್ಫೇಟುಗಳ್ನು ಉತ್ಕರ್ಷಿಸಿ ಪಾಲಿಥಯಾನಿಕ್ ಆಮ್ಲಗಳನ್ನು ತಯಾರಿಸಬಹುದು. ವಾಸ್ತವವಾಗಿ ಪಾಲಿಥಯಾನಿಕ್ ಆಮ್ಲಗಳ ಅಸ್ತಿತ್ವ ಬೆಳಕಿಗೆ ಬಂದದ್ದು ವ್ಯಾಕೆನ್ ರಾಡಾರನ ದ್ರಾವಣದ ಪರೀಕ್ಷೆಯಿಂದ 0$^{\circ}$ಸೆಂ.ನಲ್ಲಿರುವ ಸಾರಯುತ ಸಲ್ಫ್ಯೂರಸ್ ಆಮ್ಲದ ಮೂಲಕ ಹೈಡ್ರೊಜನ್ ಸಲ್ಫೈಡನ್ನು ಹಾಯಿಸಿದಾಗ ದ್ರಾವಣದಲ್ಲಿ ಪಾಲಿಥಯಾನಿಕ್ ಆಮ್ಲಗಳ ಮಿಶ್ರಣ ಉಂಟಾಗುತ್ತದೆ. ಇದೇ ವ್ಯಾಕೆನ್ ರಾಡರನ ದ್ರಾವಣ. ಈ ಮಿಶ್ರಣದಿಂದ ಆಮ್ಲಗಳನ್ನು ಪ್ರತ್ಯೇಕಿಸುವ ವಿಶಿಷ್ಟ ವಿಧಾನವೊಂದುಂಟು. ಮೊದಲು ದ್ರಾವಣವನ್ನು ಪೊಟ್ಯಾಷಿಯಂ ಅಸಿಟೇಟಿನಿಂದ ತಟಸ್ಥೀಕರಿಸಿದರೆ ಪೊಟ್ಯಾಷಿಯಂ ಪಾಲಿಥಯೊನೇಟುಗಳ ಮಿಶ್ರಣ ದೊರೆಯುವುದು. ದ್ರಾವಣವನ್ನು ಸ್ವಾಭಾವಿಕವಾಗಿ ಇಂಗಲು ಬಿಟ್ಟರೆ ಟೆಟ್ರ ಮತ್ತು ಪೆಂಟ ಥಯೊನೇಟುಗಳು ಸ್ಫಟಿಕೀಕರಿಸುತ್ತವೆ. ಈ ಸ್ಫಟಿಕ ಮಿಶ್ರಣವನ್ನು 2.2 ಸಾಂದ್ರತೆಯುಳ್ಳ ಬ್ರೊಮೊಫಾರಂ ಮತ್ತು ಕ್ಸೈಲೀನುಗಳ ದ್ರವಮಿಶ್ರಣಕ್ಕೆ ಹಾಕಿದಾಗ ಪೊಟ್ಯಾಸಿಯಂ ಪೆಂಟ ಥಯೊನೇಟು ತೇಲುವುದು. ಟೆಟ್ರ ಥಯೊನೇಟು ತಳವೂರುವುದು. ಟೆಟ್ರ ಮತ್ತು ಪೆಂಟ ಥಯೋನೇಟುಗಳ ಸ್ಫಟಿಕೀಕರಿಸಿದ ಬಳಿಕ ಉಳಿಯುವ ಮಾತೃದ್ರವ ತನ್ನ ಪಾಡಿಗೆ ತಾನು ಇಂಗಿ ಹೆಕ್ಸಥಯೊನೇಟುಗಳ ಹರಳುಗಳನ್ನು ಹೊರಹಾಕುತ್ತದೆ. ಶೇಷದ್ರವಕ್ಕೆ ಆಲ್ಕೋಹಾಲನ್ನು ಸೇರಿಸಿದರೆ ಅತಿದ್ರಾವ್ಯವಾದ ಪೊಟ್ಯಾಷಿಯಂ ಟ್ರೈಥಯೊನೇಟ್ ಕೂಡ ಒತ್ತರಿಸುವುದು. ಥಯೊ ಸಲ್ಫೇಟುಗಳ ಉತ್ಕರ್ಷಣದಿಂದ ದೊರೆಯುವುದು ಪಾಲಿಥಯೊನೇಟುಗಳೇ ವಿನಾ ಆಮ್ಲಗಳಲ್ಲ. ಇವು ಪೊಟ್ಯಾಷಿಯಂ ಲವಣಗಳಾದರೆ ಪರ್‌ಕ್ಲೋರಿಕ್ ಆಮ್ಲದಿಂದ ಬೇರಿಯಂ ಅಥವಾ ಸೀಸದ ಲವಣಗಳಾದರೆ ಸಲ್ಫ್ಯೂರಿಕ್ ಆಮ್ಲದಿಂದ ವಿಭಜಿಸಿ ಆಯಾ ಥಯೊನಿಕ್ ಆಮ್ಲಗಳನ್ನು ಪಡೆಯಲಾಗುವುದು. ಪಾಲಿಥಯಾನಿಕ್ ಆಮ್ಲಗಳು ಅಸ್ಥಿರವಸ್ತುಗಳು. ಇವು ದ್ರಾವಣದಲ್ಲಿ ಮಾತ್ರ ಉಳಿಯಬಲ್ಲವು. ಟೆಟ್ರ ಮತ್ತು ಪೆಂಟ ಥಯಾನಿಕ್ ಆಮ್ಲದ ದ್ರಾವಣಗಳಾದರೆ ದ್ರಾವಣದ ಸಾಂದ್ರತೆ 1.5 ಮುಟ್ಟುವ ವರೆಗೆ ಇಂಗಿಸಿದರೂ ಬಾಧಕವಿಲ್ಲ. ಅವು ವಿಭಜಿಸವು. ಯಾವುದೇ ಥಯಾನಿಕ್ ಆಮ್ಲವನ್ನು ಕೂಡಿಟ್ಟರೆ ಅದು ಅಂತಿಮವಾಗಿ ಸಲ್ಫ್ಯೂರಿಕ್ ಆಮ್ಲ ಗಂಧಕ ಮತ್ತು ಗಂಧಕದ ಡೈಆಕ್ಸೈಡುಗಳನ್ನು ಕೊಡುವುದು. ಉದಾಹರಣೆಗೆ ಟ್ರೈ ಥಯಾನಿಕ್ ಆಮ್ಲ.

$$H_2S_3O_6 \rightarrow H_2SO_4 + SO_2 + S$$

ಉತ್ಪತ್ತಿಯಾದ ಗಂಧಕದ ಒಂದಂಶವನ್ನು ಉಳಿದ ಟ್ರೈಥಯಾನಿಕ್ ಆಮ್ಲ ಹೀರಿಕೊಂಡು ಉನ್ನತ ಆಮ್ಲವಾಗಬಹುದು. ಇದು ವಿಭಜಿಸಿ ಈ ಶ್ರೇಣಿಯ ಕಿರಿಯ ಸದಸ್ಯರಾಗಬಹುದು. ಈಗ ಬಿಡುಗಡೆಯಾದ ಗಂಧಕ ಹಿಂದಿನಂತೆಯೇ ವರ್ತಿಸಬಹುದು. ಆದ್ದರಿಂದ ಯಾವುದೇ ಒಂದು ಥಯಾನಿಕ್ ಆಮ್ಲದ ದ್ರಾವಣವಾದರೂ ಅದು ಕ್ರಮೇಣ ಎಲ್ಲ ಥಯಾನಿಕ್ ಆಮ್ಲಗಳ ಮಿಶ್ರಣವಾಗಿಬಿಡುವುದೆಂಬುದು ಸ್ಪಷ್ಟ.. ಆದರೆ ದ್ರಾವಣಕ್ಕೆ ಸ್ವಲ್ಪ ಖನಿಜಾಮ್ಲವನ್ನು ಸೇರಿಸಿದರೆ ಥಯಾನಿಕ್ ಆಮ್ಲಗಳ ಸ್ಥಿರತೆಯನ್ನು ಹೆಚ್ಚಿಸಬಹುದೆಂದು ಗೊತ್ತಾಗಿದೆ. ಅದೇ ಕ್ಷಾರಗಳು ಈ ಆಮ್ಲಗಳ ಸ್ಥಿರತೆಯನ್ನು ಕಡಿಮೆ ಮಾಡುತ್ತವೆ. ಎಲ್ಲ ಪಾಲಿಥಯಾನಿಕ್ ಆಮ್ಲಗಳು ದ್ವಿಪ್ರತ್ಯಾಮ್ಲೀಯ ಆಮ್ಲಗಳೆಂಬುದು ನಿಜ. ಆದರೆ ಅವುಗಳ ಆಮ್ಲೀಯ ಲವಣಗಳನ್ನು ತಯಾರಿಸಲು ಇದುವರೆಗೆ ಸಾಧ್ಯವಾಗಿಲ್ಲ. ಗಂಧಕದ ಇತರ ಆಕ್ಸಿಆಮ್ಲಗಳನ್ನು ಅವುಗಳ ಸಂಭವನೀಯ ರಚನಾಸೂತ್ರ ಮತ್ತು ಪರಿಚಿತರೂಪಗಳನ್ನು ಮುಂದೆ ಪಟ್ಟಿಮಾಡಲಾಗಿದೆ.

| ಆಮ್ಲದ ಹೆಸರು ಮತ್ತು ಅಣುಸೂತ್ರ | ಸಂಭವನೀಯ ರಚನೆ | ಪರಿಚಿತ ರೂಪಗಳು |
|---|---|---|
| ಸಲ್ಫಾಕ್ಸಿಲಿಕ್ ಆಮ್ಲ $H_2SO_2$ | HO-S-OH | ಲವಣಗಳು ಮತ್ತು ಎಸ್ಟರುಗಳು |
| ಸಲ್ಫೆನಿಕ್ ಆಮ್ಲಗಳು R.SOH ಇಲ್ಲಿ R ಎಂಬುದು ಆಲ್ಕೈಲ್ ಅಥವಾ ಆರೈಲ್ ಗುಚ್ಛ | HO–S–R | ಎಸ್ಟರುಗಳು ಮತ್ತು ಹ್ಯಾಲೈಡುಗಳು |
| ಸಲ್ಫಿನಿಕ್ ಆಮ್ಲಗಳು $R.SO_2H$ | O<br>H O – \| S – R | ಆಮ್ಲಗಳು<br>ಎಸ್ಟರುಗಳು |
| ಸಲ್ಫಾನಿಕ್ ಆಮ್ಲಗಳು $R.SO_3H$ | O<br>\|<br>HO – S – R<br>\|<br>O | ಆಮ್ಲಗಳು ಎಸ್ಟರುಗಳು ಹ್ಯಾಲೈಡುಗಳು ಮತ್ತು ಅಮೈಡುಗಳು |
| ಥಯೊಸಲ್ಫಾನಿಕ್ ಆಮ್ಲಗಳು O<br>\| | ಲವಣಗಳು ಮತ್ತು ಎಸ್ಟರುಗಳ<br>H – S – S – R<br>\|<br>O | $R.S_2O_2H$ |

(ಎಚ್.ಜಿ.ಎಸ್.)

**ಗಂಧಕದ ಟ್ರೈಆಕ್ಸೈಡ್ :** ಅಣುಸೂತ್ರ $SO_3$. ಇದರ ರಚನಾ ಸೂತ್ರ ಇನ್ನೂ ತೀರ್ಮಾನವಾಗಿಲ್ಲ. ಮುಂದೆ ಸೂಚಿಸಿರುವ ಮೂರು ಅನುರಣನೀಯ ರಚನೆಗಳ (ರೆಸೊನೆನ್ಸ್ ಸ್ಟ್ರಕ್ಚರ್ಸ್) ಮಿಶ್ರತಳಿಯಾಗಿರಬೇಕೆಂದು ಭಾವಿಸಲಾಗಿದೆ. ಅಣುವಿನಲ್ಲಿರುವ ಎಲ್ಲ ಪರಮಾಣುಗಳೂ ಒಂದೇ ಸಮತಲದಲ್ಲಿವೆ.



ಗಂಧಕದ ಟ್ರೈ ಆಕ್ಸೈಡನ್ನು ತಯಾರಿಸಲು ಸಾರಯುತ ಸಲ್ಫ್ಯೂರಿಕ್ ಆಮ್ಲವನ್ನು ರಂಜಕದ ಪೆಂಟಾಕ್ಸೈಡಿನೊಡನೆ ಕುದಿಸಬಹುದು. ಇಲ್ಲವೇ ನಿರ್ಜಲ ಫೆರಿಕ್ ಸಲ್ಫೇಟನ್ನು ಕಾಯಿಸಿದರೂ ಸಾಕು.

$$H_2SO_4 + P_2O_5 \rightarrow 2HPO_3 + SO_3\uparrow$$

$$Fe_2(SO_4)_3 \rightarrow Fe_2O_3 + 3SO_3\uparrow$$

ಗಂಧಕದ ಡೈಆಕ್ಸೈಡ್ ಮತ್ತು ಆಕ್ಸಿಜನ್ನುಗಳ ಶುಷ್ಕ ಮಿಶ್ರಣವನ್ನು $400^{\circ}$ ಸೆಂ.ನಲ್ಲಿರುವ ಪ್ಲಾಟಿನೀಕರಿಸಿದ ಕಲ್ನಾರಿನ ಮೇಲೆ ಹಾಯಿಸಿದರೆ ಗಂಧಕದ ಟ್ರೈ ಆಕ್ಸೈಡಿನ ಬಿಳಿಯ ಧೂಮ ಉಂಟಾಗುವುದು.

$$2SO_2+O_2 \rightarrow 2SO_3$$

ಇದನ್ನು ಶೈತ್ಯ ಮಿಶ್ರಣದಲ್ಲಿಟ್ಟಿರುವ U-ನಾಳದ ಮೂಲಕ ಹಾಯಿಸಿದರೆ ಅಲ್ಲಿಯೇ ಘನೀಭವಿಸುತ್ತದೆ. ಕೈಗಾರಿಕಾ ಮೊತ್ತದಲ್ಲಿ ಸಲ್ಫ್ಯೂರಿಕ್ ಆಮ್ಲವನ್ನು ಉತ್ಪಾದಿಸುವ ಸಂಪರ್ಕ ವಿಧಾನವೂ ಇದೇ ತತ್ತ್ವವನ್ನು ಅವಲಂಬಿಸಿದೆ.

ಗಂಧಕದ ಟ್ರೈ ಆಕ್ಸೈಡಿನ ಮೂರು ರೂಪಗಳುಂಟು. ಅದರ ಧೂಮವನ್ನು ತಣಿಸಿದರೆ ದ್ರವವಾಗುತ್ತದೆ. ಇದನ್ನು ಕೆಲಕಾಲ ಬಿಟ್ಟರೆ ಪಾರದರ್ಶಕವಾದ ಬರ್ಫದಂಥ ಗೆಡ್ಡೆ ಹರಳುಗಳಾಗುತ್ತದೆ. ಇವು $16.85^{\circ}$ ಸೆಂ.ನಲ್ಲಿ ಕರಗಿ $44.52^{\circ}$ ಸೆಂ. ನಲ್ಲಿ ಕುದಿಯುತ್ತವೆ. ಈ ಹರಳಿನ ಸಾಂದ್ರತೆ 1.9925 ಅಣುಸೂತ್ರ $SO_3$. ಇದೇ ಆಲ್ಫ ಗಂಧಕದ ಟ್ರೈ ಆಕ್ಸೈಡ್. ಇದನ್ನು ಬಹುಕಾಲ ಕೂಡಿಟ್ಟರೆ. ಇದು ಕಲ್ನಾರನ್ನು ಹೋಲುವ ರೇಷ್ಮೆಯಂಥ ಬೀಟ ಗಂಧಕದ ಟ್ರೈ ಆಕ್ಸೈಡಿನ ಹರಳುಗಳನ್ನು ಕೊಡುವುದು. ಇದೇ ಸ್ಥಿರ ರೂಪ. ಇದರ ದ್ರವನಬಿಂದು $32.5^{\circ}$ ಸೆಂ. ಅಣುಸೂತ್ರ $S_2O_6$. ಇದನ್ನು ಪೂರ್ತಿಯಾಗಿ ಒಣಗಿಸಿದರೆ ಗ್ಯಾಮ ರೂಪ ತಳೆಯುವುದು. ಇದು ಜಲ್ಲಿಯಂಥ ಘನ. ಸಾಮಾನ್ಯ ಒತ್ತಡದಲ್ಲಿ ಕರ್ಪೂರೀಕರಿಸಿದರೂ 2.5 ವಾಯುಮಂಡಲದ ಒತ್ತಡದಲ್ಲಿ $62^{\circ}$ ಸೆಂ.ನಲ್ಲಿ ಕರಗುತ್ತದೆ. ಗಂಧಕದ ಟ್ರೈ ಆಕ್ಸೈಡಿಗೆ ನೀರಿನ ಒಲವು ಹೆಚ್ಚು. ತೇವವಾದ ಗಾಳಿಯಲ್ಲಿ ಹೊಗೆಯಾಡಲು ಇದೇ ಕಾರಣ. ನೀರಿನಲ್ಲಿ ಹಿಸ್ ಎಂದು ಶಬ್ದ ಮಾಡುತ್ತ ವಿಲೀನವಾಗಿ ಸಲ್ಫ್ಯೂರಿಕ್ ಆಮ್ಲವಾಗುತ್ತದೆ. ಹೆಚ್ಚಿನ ಉಷ್ಣ ಹೊರಬೀಳುವುದು. ಸುಮಾರು $1.000^{\circ}$ ಸೆಂ. ಉಷ್ಣತೆಯಲ್ಲಿ ಪೂರ್ತಿಯಾಗಿ ವಿಭಜಿಸುವುದು. ಗಂಧಕದ ಡೈಆಕ್ಸೈಡ್ ಮತ್ತು ಆಕ್ಸಿಜನ್ನುಗಳು ಉತ್ಪನ್ನಗಳು. ಲೋಹದ ಆಕ್ಸೈಡುಗಳೊಡನೆ ಇದು ಸಂಯೋಜಿಸಿದಾಗ ಸಲ್ಫೇಟುಗಳಾಗುತ್ತವೆ. ಬೇರಿಯಂ ಮಾನಾಕ್ಸೈಡಿನೊಂದಿಗೆ ವರ್ತಿಸಿದಾಗ ಬಿಳಿಗಾವಿನಷ್ಟು ಉಷ್ಣ ಉಂಟಾಗಿ ಉತ್ಪನ್ನ ಹೊಳೆಯುತ್ತದೆ.

$$BaO + SO_3 \rightarrow BaSO_4 + \text{ಉಷ್ಣ} \uparrow$$

ಸಾರಯುತ ಸಲ್ಫ್ಯೂರಿಕ್ ಆಮ್ಲದಲ್ಲಿ ಗಂಧಕದ ಟ್ರೈಆಕ್ಸೈಡಿನ ದ್ರಾವಣವೇ ಓಲಿಯಂ ಅಥವಾ ಹೊಗೆಯಾಡುವ ಸಲ್ಫೂರಿಕ್ ಆಮ್ಲ.

$$H_2SO_4 + SO_3 \rightarrow H_2S_2O_7$$

ಅಯೊಡೀನ್ ಮತ್ತು ಟೆಲೂರಿಯಂ ಧಾತುಗಳೊಡನೆ ಗಂಧಕದ ಟ್ರೈಆಕ್ಸೈಡ್ ಸಂಕಲನವಾಗಬಲ್ಲದು. ಫಲಿತ ಸಂಯುಕ್ತಗಳ ಸೂತ್ರ ಹೀಗಿದೆ.

$I_2(SO_3)_6$ ಮತ್ತು $Te\ SO_3$

ಸಲ್ಫ್ಯೂರಿಕ್ ಮತ್ತು ಸಲ್ಫಾನಿಕ್ ಆಮ್ಲಗಳ ತಯಾರಿಕೆಯಲ್ಲಿ ಗಂಧಕದ ಟ್ರೈ ಆಕ್ಸೈಡಿನ ಮುಖ್ಯ ಉಪಯೋಗ ಉಂಟು. (ಎಚ್.ಜಿ.ಎಸ್)

**ಗಂಧಕದ ಡೈ ಆಕ್ಸೈಡ್ :** ಅಣುಸೂತ್ರ $SO_2$. ಪ್ರೀಸ್ಟ್ಲಿ ಎಂಬ ವಿಜ್ಞಾನಿ ಆಲಿವ್ ಎಣ್ಣೆಯನ್ನು ಸಾರಯುತ ಸಲ್ಫ್ಯೂರಿಕ್ ಆಮ್ಲದೊಡನೆ ಕಾಯಿಸಿ ಇದನ್ನು ಮೊದಲು ತಯಾರಿಸಿದ (1775). ಅಗ್ನಿಪರ್ವತಗಳು ಹೊರಹಾಕುವ ಅನಿಲಗಳಲ್ಲಿ ಮತ್ತು ಕೆಲವು ಖನಿಜೋದಕಗಳಲ್ಲಿ ಗಂಧಕದ ಡೈ ಆಕ್ಸೈಡಿದೆ. ಕಲ್ಲಿದ್ದಲಿನಲ್ಲಿ ಗಂಧಕದ ಸಂಯುಕ್ತಗಳು ಇವೆಯಷ್ಟೆ. ಕೈಗಾರಿಕಾ ಉದ್ದೇಶಗಳಿಗಾಗಿ ಕಲ್ಲಿದ್ದಲನ್ನು ಸುಟ್ಟಾಗ ಅದರಲ್ಲಿದ್ದ ಗಂಧಕದ ಸಂಯುಕ್ತಗಳು ಗಂಧಕದ ಡೈ ಆಕ್ಸೈಡಾಗಿ ವಾಯುಮಂಡಲವನ್ನು ಸೇರುವುದು. ನಗರ ಪ್ರದೇಶಗಳ ವಾತಾವರಣದಲ್ಲಿ ಗಂಧಕದ ಡೈ ಆಕ್ಸೈಡ್ ಇರಲು ಅಲ್ಲಿ ಕೈಗಾರಿಕೆಗಳು ಕೇಂದ್ರೀಕೃತವಾಗಿರುವುದೇ ಕಾರಣ. ತಾಮ್ರದ ರೇಕುಗಳನ್ನು ಸಾರಯುತ ಸಲ್ಫ್ಯೂರಿಕ್ ಆಮ್ಲದೊಡನೆ ಕಾಯಿಸಿ ಗಂಧಕದ ಡೈ ಆಕ್ಸೈಡನ್ನು ಪಡೆಯಬಹುದು. ಇದು ಪ್ರಯೋಗಶಾಲೆ ವಿಧಾನ. ಆಗ ಮುಂದೆ ತೋರಿಸಿರುವ ಕ್ರಿಯೆ ನಡೆದು ಗಂಧಕದ ಡೈ ಆಕ್ಸೈಡು ಬಿಡುಗಡೆಯಾಗುವುದು ಎಂಬುದು ಸಾಮಾನ್ಯ ತಿಳಿವಳಿಕೆ.

$$Cu+2H_2SO_4 \rightarrow CuSO_4+2H_2O+SO_2\uparrow$$

ಆದರೆ ಇಲ್ಲಿ ನಡೆಯುವ ಕ್ರಿಯೆಗಳು ಈ ಸಮೀಕರಣ ಸೂಚಿಸವಷ್ಟು ಸರಳವಲ್ಲ. ಪ್ರಾಯಶಃ ಸಲ್ಫ್ಯೂರಿಕ್ ಆಮ್ಲ ತಾಮ್ರವನ್ನು ಏಕಕಾಲದಲ್ಲಿ ಕ್ಯುಪ್ರಸ್ ಸಲ್ಫೈಡ್ ಮತ್ತು ಕ್ಯುಪ್ರಿಕ್ ಆಕ್ಸೈಡುಗಳಾಗಿ ಉತ್ಕರ್ಷಿಸುವುದು. ಅನಂತರ ಕ್ಯುಪ್ರಿಕ್ ಆಕ್ಸೈಡ್ ಮಾತ್ರ ಸಲ್ಫ್ಯೂರಿಕ್ ಆಮ್ಲದಲ್ಲಿ ವಿಲೀನವಾಗಿ ತಾಮ್ರದ ಸಲ್ಫೇಟಾಗುತ್ತದೆ. ನಿವ್ವಳ ಕ್ರಿಯೆಯನ್ನು ಮುಂದೆ ತೋರಿಸಿರುವ ಸಮೀಕರಣ ಸೂಚಿಸುವುದು.

$$6Cu+6H_2SO_4 \rightarrow 4CuSO_4+Cu_2S+6H_2O+SO_2\uparrow$$

ಇದು ಸಂಭವನೀಯ. ಏಕೆಂದರೆ ಪ್ರಯೋಗದ ಬಳಿಕ ಉಪಕರಣದಲ್ಲಿ ಉಳಿಯುವ ಮಿಶ್ರಣ ಕಪ್ಪಾಗಿರುತ್ತದೆ. ಉತ್ಪತ್ತಿಯಾದ ಕ್ಯುಪ್ರಸ್ ಸಲ್ಫೈಡಿನಿಂದ ಹೀಗಾಗುವುದು.

ಸೋಡಿಯಂ ಸಲ್ಫೈಟ್ ಅಥವಾ ಬೈಸಲ್ಫೈಟುಗಳು ಸಾರರಿಕ್ತ ಹೈಡ್ರೊಕ್ಲೋರಿಕ್ ಆಮ್ಲದೊಡನೆ ವರ್ತಿಸಿದಾಗಲೂ ಗಂಧಕದ ಡೈ ಆಕ್ಸೈಡ್ ಬಿಡುಗಡೆಯಾಗುವುದು. ಇದು ಕೂಡ ಪ್ರಯೋಗಶಾಲೆಯ ವಿಧಾನವಾಗಿ ಬಳಸಲು ಯುಕ್ತವಾಗಿದೆ.

ಗಂಧಕದ ಡೈ ಆಕ್ಸೈಡ್ ಬಲು ಉಪಯುಕ್ತ ಅನಿಲ. ಆದ್ದರಿಂದ ಅದರ ಉತ್ಪಾದನೆಗೆ ಪ್ರಾಶಸ್ತ್ಯ ಉಂಟು. ಇದಕ್ಕಾಗಿ ರೂಢಿಯಲ್ಲಿರುವ ವಿಧಾನಗಳು ಹಲವು. ಸಲ್ಫೈಡು ಅದುರುಗಳನ್ನು ಗಾಳಿಯಲ್ಲಿ ಹುರಿದಾಗ ಗಂಧಕದ ಡೈ ಆಕ್ಸೈಡ್ ಗಣನೀಯ ಮೊತ್ತದಲ್ಲಿ ಹೊರಬೀಳುವುದು. ಇದನ್ನು ನೀರಿನಲ್ಲಿ ವಿಲೀನ ಮಾಡುತ್ತಾರೆ. ಅನಂತರ ದ್ರಾವಣವನ್ನು ಕಾಯಿಸಿದರೆ ಗಂಧಕದ ಡೈ ಆಕ್ಸೈಡ್ ಮರಳಿ ಬರುತ್ತದೆ. ಅನಿಲವನ್ನು ಸಾರಯುತ ಸಲ್ಫ್ಯೂರಿಕ್ ಆಮ್ಲದಿಂದ ಶುಷ್ಕಗೊಳಿಸಿ 2.5 ವಾಯುಮಂಡಲದ ಒತ್ತಡಕ್ಕೆ ಗುರಿಪಡಿಸಿದರೆ ದ್ರವೀಕರಿಸುವುದು. ಈ ದ್ರವ್ಯವನ್ನು ಉಕ್ಕಿನ ಕೊಳಾಯಿಗಳಲ್ಲಿ ಕೂಡಿಟ್ಟು ರವಾನಿಸುವರು. ಜಿಪ್ಸಂನಿಂದ ಕೂಡ ಗಂಧಕದ ಡೈ ಆಕ್ಸೈಡನ್ನು ಮಾಡಿಕೊಳ್ಳಬಹುದು. ಒಂದು ಸಿಮೆಂಟ್ ಕುಲುಮೆಯಲ್ಲಿ ಜಿಪ್ಸಮನ್ನು ಪುಡಿಮಾಡಿದ ಇದ್ದಲು ಮತ್ತು ಜೇಡಿಮಣ್ಣುಗಳೊಡನೆ $1200^{\circ}$ ಸೆಂ.ಉಷ್ಣತೆಗೆ ಕಾಯಿಸಿದರೆ ಗಂಧಕದ ಡೈ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡುಗಳ ಮಿಶ್ರಣ ಒದಗುತ್ತದೆ. ಸಿಮೆಂಟು ಇನ್ನೊಂದು ಉತ್ಪನ್ನ.

$$2CaSO_4+C+x.SiO_2.y., Al_2O_3 \rightarrow 2SO_2\uparrow +CO_2\uparrow$$

ಜೇಡಿಮಣ್ಣು $\quad +2CaO.x.SiO_2.y\,Al_2O_3$

ಸಿಮೆಂಟ್

ಕಾರ್ಬನ್ ಡೈ ಆಕ್ಸೈಡಿನಿಂದ ಬೇರ್ಪಡಿಸಿ ಪಡೆದ ಗಂಧಕದ ಡೈ ಆಕ್ಸೈಡನ್ನು ಸಲ್ಫ್ಯೂರಿಕ್ ಆಮ್ಲದ ಉತ್ಪಾದನೆಗೆ ವಿನಿಯೋಗಿಸುವುದು ವಾಡಿಕೆ. ಜಿಪ್ಸಮಿನ ($CaSO_4.2H_2O$) ಬದಲು ಅನ್‌ಹೈಡ್ರೇಟನ್ನು ($CaSO_4$) ಬಳಸಿದರೂ ಬಾಧಕವಿಲ್ಲ.

ಗಂಧಕವನ್ನು ಗಾಳಿಯಲ್ಲಿ ಉರಿಸಿದರೆ ಗಂಧಕದ ಡೈ ಆಕ್ಸೈಡ್ ಮತ್ತು ಟ್ರೈ ಆಕ್ಸೈಡುಗಳ ಮಿಶ್ರಣ ಬರುವುದು. ಸಲ್ಫ್ಯೂರಿಕ್ ಆಮ್ಲದ ತಯಾರಿಕೆಗೆ ಇದು ಪ್ರಶಸ್ತ. ಗಂಧಕದ ಡೈ ಆಕ್ಸೈಡೇ ಬೇಕಾಗಿದ್ದರೆ ಅನಿಲಮಿಶ್ರಣವನ್ನು ಸೋಡಿಯಂ ಹೈಡ್ರಾಕ್ಸೈಡಿನ ದ್ರಾವಣದಿಂದ ಹೀರಿಸಬಹುದು. ಆಗ ಸಲ್ಫೇಟ್ (ಅಥವಾ ಬೈ ಸಲ್ಫೇಟ್) ಮತ್ತು ಸಲ್ಫೈಟುಗಳ (ಅಥವಾ ಬೈ ಸಲ್ಫೇಟ್) ಮಿಶ್ರಣವಾಗುವುದು. ಸಲ್ಫೇಟ್ ಅಥವಾ

ಬೈಸಲ್ಫೇಟುಗಳು ಆಮ್ಲದಿಂದ ವಿಭಜಿತವಾಗುವುದಿಲ್ಲ. ಆದರೆ ಸಲ್ಫೈಟ್ ಮತ್ತು ಬೈ ಸಲ್ಫೈಟುಗಳ ಆಮ್ಲದೊಡನೆ ವರ್ತಿಸಿ ಗಂಧಕದ ಡೈ ಆಕ್ಸೈಡನ್ನು ಕೊಡುತ್ತವೆ ಎಂದು ಹಿಂದೆಯೇ ತಿಳಿಸಿದೆ. ಆದ್ದರಿಂದ ಈ ಲವಣಮಿಶ್ರಣವನ್ನು ಒಳಗೊಂಡ ದ್ರಾವಣಕ್ಕೆ ಸಾರರಿಕ್ತ ಹೈಡ್ರೊಕ್ಲೋರಿಕ್ ಆಮ್ಲವನ್ನು ಸೇರಿಸಿದರೆ ಇವು ಮಾತ್ರ ವರ್ತಿಸಿ ಶುದ್ಧವಾದ ಗಂಧಕದ ಡೈ ಆಕ್ಸೈಡನ್ನು ಬಿಡುಗಡೆ ಮಾಡುವುವು. ಇದನ್ನು ಶುಷ್ಕಗೊಳಿಸಿ ಶೇಖರಿಸಬಹುದು. ದ್ರವ ಗಂಧಕದ ಡೈ ಆಕ್ಸೈಡನ್ನು ತಯಾರಿಸಲು ಮೇಲೆ ವಿವರಿಸಿದ ವಿಧಾನಗಳಿಂದ ಉತ್ಪಾದಿಸಿದ ಅನಿಲ ತಕ್ಕುದಲ್ಲ. ಇದರ ಸಲುವಾಗಿಯೇ ರೂಪಿತವಾದ ಜರ್ಮನ್ ವಿಧಾನವೊಂದಿದೆ. ಓಲಿಯಂ ಎಂಬುದು ಶೇ.22 ಗಂಧಕದ ಟ್ರೈಆಕ್ಸೈಡನ್ನು ವಿಲೀನ ಮಾಡಿಕೊಂಡಿರುವ (ಶೇ.98.3) ಸಲ್ಫ್ಯೂರಿಕ್ ಆಮ್ಲ. ಇದನ್ನು ಗಂಧಕದೊಡನೆ 110ಸೆಂ.ಗೆ ಕಾಯಿಸಿದರೆ ಗಂಧಕ ಟ್ರೈ ಆಕ್ಸೈಡು ಗಂಧಕದ ಡೈ ಆಕ್ಸೈಡಿಗೆ ಅಪಕರ್ಷಿತವಾಗುವುದು.

$$2SO_3+S \rightarrow 3SO_2$$

ಗಂಧಕದ ಟ್ರೈ ಆಕ್ಸೈಡಿನ ಪ್ರಮಾಣ ಶೇ.5-10 ಇಳಿಯುವವರೆಗೆ ಕ್ರಿಯೆಯನ್ನು ಮುಂದುವರಿಸುತ್ತಾರೆ. ಅನಂತರ ಆಮ್ಲಕ್ಕೆ ಸಾಕಷ್ಟು ಗಂಧಕದ ಟ್ರೈ ಆಕ್ಸೈಡನ್ನು ಕೂಡಿಸಿ ಮತ್ತೆ ಓಲಿಯಮನ್ನು ಮಾಡಿಕೊಳ್ಳುವರು. ಇದು ಹಿಂದಿನಂತೆಯೇ ವಿನಿಯೋಗವಾಗುವುದು.

**ಭೌತಲಕ್ಷಣಗಳು:** ಗಂಧಕದ ಡೈ ಆಕ್ಸೈಡ್ ಬಣ್ಣವಿಲ್ಲದ ಅನಿಲ. ಇದಕ್ಕೆ ಘಾಟು ವಾಸನೆ ಉಂಟು. ಇದು ವಿಷವಾಯು. ಗಾಳಿಗಿಂತ 2.2 ರಷ್ಟು ಭಾರವಾಗಿದೆ. ಇದನ್ನು ದ್ರವೀಕರಿಸುವುದು ಸುಲಭ. ಉಪ್ಪು ಮತ್ತು ಮಂಜು ಗೆಡ್ಡೆಯ ಶೈತ್ಯ ಮಿಶ್ರಣದಲ್ಲಿಟ್ಟರೆ ಇದು ದ್ರವವಾಗುವುದು ಇನ್ನೂ ತಣಿಸಿದರೆ ಘನೀಭವಿಸುವುದು. ಇದು ಬಿಳಿಯ ಘನ. ದ್ರವನ ಬಿಂದು-76° ಸೆಂ.ಕುದಿಬಿಂದು –10°ಸೆಂ. ಇದು ವಿದ್ಯುದ್ವಾಹಕವಲ್ಲ. ನೀರಿನಂತೆ ಅನೇಕ ವಸ್ತುಗಳನ್ನು ವಿಲೀನ ಮಾಡಿಕೊಳ್ಳಬಲ್ಲದು. ಫಲಿತ ದ್ರಾವಣಗಳು ವಿದ್ಯುದ್ವಾಹಕಗಳು ದ್ರವ ಗಂಧಕದ ಡೈ ಆಕ್ಸೈಡ್ ಮಾರುಕಟ್ಟೆಯ ವಸ್ತು.

ನೀರು ಹೇಗೆ ಅಕಾರ್ಬನಿಕ ಲವಣಗಳೊಡನೆ ಸಂಕಲನವಾಗಿ ಹೈಡ್ರೇಟುಗಳನ್ನು ಉಂಟುಮಾಡುವುದೋ ಹಾಗೆಯೇ ಸ್ಫಟಿಕಾಂಗವಾಗಿ ಗಂಧಕದ ಡೈ ಆಕ್ಸೈಡಿನ ಅಣುಗಳನ್ನು ಧರಿಸಿರುವ ಲವಣಗಳುಂಟು. ಇವುಗಳಿಗೆ ಸೋಡಿಯಂ ಅಯೋಡೈಡ್, ಅಲ್ಯೂಮಿನಿಯಂ ಕ್ಲೋರೈಡ್ ಮತ್ತು ಪೊಟ್ಯಾಸಿಯಂ ಥಯೊಸಯನೇಟ್ ಉದಾಹರಣೆಗಳು :

$NaI.2SO_2$ $\quad$ $AlCl_3.SO_2$

$NaI.4SO_2$ $\quad$ $9KCNS.SO_2$

ಗಂಧಕದ ಡೈ ಆಕ್ಸೈಡ್ ನೀರಿನಲ್ಲಿ ಅತಿದ್ರಾವ್ಯ. ಸಾಮಾನ್ಯ ಉಷ್ಣತೆಯಲ್ಲಿ ನೀರು ತನ್ನ ಗಾತ್ರದ ಸು. 40ರಷ್ಟು ಅನಿಲವನ್ನು ವಿಲೀನ ಮಾಡಿಕೊಳ್ಳಬಲ್ಲದು. ಆಗ ಸಲ್ಫ್ಯೂರಸ್ ಆಮ್ಲ ಉಂಟಾಗುತ್ತದೆ.

$$H_2O+SO_2 \rightarrow H_2SO_3$$

ಇದನ್ನು ಚಿಲುಮೆ ಪ್ರಯೋಗದಿಂದ ತೋರಿಸಬಹುದು. ದ್ರಾವಣವನ್ನು ಕುದಿಸಿದರೆ ಅನಿಲ ಹೊರಬೀಳುವುದು.

**ರಾಸಾಯನಿಕ ಗುಣಗಳು :** ಗಂಧಕದ ಡೈ ಆಕ್ಸೈಡ್ ದಹನಾನುಕೂಲಿಯಲ್ಲ. ಆದರೆ ಉರಿಯುತ್ತಿರುವ ಮ್ಯಾಗ್ನೆಸಿಯಂ ತಂತಿ ಹಿಂದಿನಂತೆಯೇ ಪ್ರಜ್ವಲಿಸುವುದು. ಈ ಲೋಹ ಉರಿದಾಗ ವಿಪರೀತ ಉಷ್ಣ ಹೊರಬೀಳುತ್ತದೆ. ಇದರ ದೆಸೆಯಿಂದ ಡೈ ಆಕ್ಸೈಡ್ ವಿಭಜಿಸುವುದು. ಬಿಡುಗಡೆಯಾದ ಆಕ್ಸಿಜನ್ನಿನಲ್ಲಿ ಲೋಹದ ದಹನ ಮುಂದುವರಿದು ಮ್ಯಾಗ್ನೀಸಿಯಂ ಆಕ್ಸೈಡಾಗುತ್ತದೆ. ಅನಿಲವಿದ್ದ ಜಾಡಿಯ ಪಾರ್ಶ್ವಗಳಲ್ಲಿ ಗಂಧಕದ ಹಳದಿ ಸಂಗ್ರಹವನ್ನು ಕಾಣಬಹುದು. ಉನ್ನತ ಉಷ್ಣತೆಯಲ್ಲಿ ಎಂದರೆ ಸುಮಾರು 1200°ಸೆಂ. ಸನಿಹದಲ್ಲಿ ಅಥವಾ ವಿದ್ಯುತ್ಕಿಡಿ ಹಾಯಿಸಿದಾಗ ವಿಭಜಿಸಿ ಗಂಧಕದ ಟ್ರೈ ಆಕ್ಸೈಡ್ ಮತ್ತು ಗಂಧಕಗಳನ್ನು ಕೊಡುತ್ತದೆ. ಗಂಧಕದ ಡೈ ಆಕ್ಸೈಡ್ ಅಸಂತೃಪ್ತ ವಸ್ತು. ಆದ್ದರಿಂದ ಯುಕ್ತ ಪ್ರಯೋಗ ಸ್ಥಿತಿಯಲ್ಲಿ ಕ್ಲೋರಿನ್, ಆಕ್ಸಿಜನ್ ಮತ್ತು ಮ್ಯಾಂಗನೀಸ್ ಡೈ ಆಕ್ಸೈಡುಗಳೊಡನೆ ಕೂಡಿಕೊಳ್ಳಬಲ್ಲುದು. ಕ್ಲೋರಿನ್ನಿನೊಡನೆ ಸಂಕಲನವಾಗಲೂ ಸೂರ್ಯಪ್ರಕಾಶವಿರಬೇಕು. ಪಟುಗೊಳಿಸಿದ ಕಾರ್ಬನ್ ಅಥವಾ ಕರ್ಪೂರ ಇದ್ದರೂ ಸಾಕು. ಇವು ವೇಗವರ್ಧಕಗಳು. ಸಲ್ಫ್ಯೂರಿಲ್ ಕ್ಲೋರೈಡ್ ($SO_2Cl_2$) ಉತ್ಪನ್ನ. ಇದು ದ್ರವವಸ್ತು. ಆಕ್ಸಿಜನ್ನಿನೊಡನೆ ಸಂಯೋಜಿಸಲು 450°-500° ಸೆಂ. ಉಷ್ಣತಾ ಮಿತಿಯಲ್ಲಿಟ್ಟಿರುವ ಪ್ಲ್ಯಾಟಿನಂ ವೆನೇಡಿಯಂ ಪೆಂಟಾಕ್ಸೈಡ್ ($V_2O_5$) ವೇಗವರ್ಧಕ ಅಗತ್ಯ. ಗಂಧಕ ಟ್ರೈ ಆಕ್ಸೈಡು ಉತ್ಪನ್ನ. ಮ್ಯಾಂಗನೀಸ್ ಡೈ ಆಕ್ಸೈಡ್ ವಿಲಂಬಿತವಾಗಿರುವ ನೀರಿನ ಮೂಲಕದ ಗಂಧಕದ ಡೈ ಆಕ್ಸೈಡನ್ನು ಹಾಯಿಸಿದರೆ ಮ್ಯಾಂಗನೀಸ್ ಡೈ ಥಯೊನೇಟ್ ($MnS_2O_6$) ಉಂಟಾಗುವುದು. ಗಂಧಕದ ಡೈ ಆಕ್ಸೈಡ್ ಆಮ್ಲೀಯ ಆಕ್ಸೈಡು. ಆದ್ದರಿಂದಲೇ ಕ್ಷಾರೀಯ ದ್ರಾವಣಗಳು ಇದನ್ನು ಹೀರಿಕೊಂಡು ಸಲ್ಫೈಟ್ ಮತ್ತು ಬೈಸಲ್ಫೈಟುಗಳ ಮಿಶ್ರಣವನ್ನು ಕೊಡುವುವು. ಗಂಧಕದ ಡೈ ಆಕ್ಸೈಡ್ ಉತ್ಕರ್ಷಣಕಾರಿ. ಹೈಡ್ರೊಜನ್ ಸಲ್ಫೈಡಿನ ದ್ರಾವಣದಿಂದ ಗಂಧಕವನ್ನು ಒತ್ತರಿಸುವುದು ಮತ್ತು ನವಜಾತ ಹೈಡ್ರೊಜನ್ನನ್ನು ನೀರಿಗೆ ಪರಿವರ್ತಿಸುವುದು ಅದರ ಉತ್ಕರ್ಷಣ ಗುಣಕ್ಕೆ ನಿದರ್ಶನ. ಗಂಧಕದ ಡೈ ಆಕ್ಸೈಡ್ ಸಂದರ್ಭಾನುಸಾರ ಅಪಕರ್ಷಣಕಾರಿಯಾಗಿಯೂ ವರ್ತಿಸುತ್ತದೆ. ಉದಾಹರಣೆಗೆ, ನೀರಿನ ಸಂಪರ್ಕದಲ್ಲಿ ಹ್ಯಾಲೊಜನ್ನುಗಳು (ಫ್ಲೂರಿನ್ ಹೊರತು) ತಮ್ಮ ಹೈಡ್ರಾಮ್ಲಗಳಾಗುತ್ತವೆ. ಆಮ್ಲಮಿಶ್ರಿತ ಪೊಟ್ಯಾಸಿಯಂ ಪರ್ಮ್ಯಾಂಗನೇಟಿನ ಊದಾ ಬಣ್ಣ ಮಾಯವಾಗಿ ಅದು ಮ್ಯಾಂಗನೀಸ್ ಲವಣಕ್ಕೆ ಅಪಕರ್ಷಿತವಾಗುವುದು. ಆಮ್ಲಮಿಶ್ರಿತ ಪೊಟ್ಯಾಸಿಯಂ ಡೈ ಕ್ರೊಮೇಟಿನ ಕಿತ್ತಲೆಹಣ್ಣಿನ ಬಣ್ಣ ಹಸುರು ಬಣ್ಣಕ್ಕೆ ತಿರುಗುವುದು, ಕ್ರೋಮಿಕ್ ಲವಣ ಉಂಟಾಗುವುದರಿಂದ ಹೀಗಾಗುತ್ತದೆ. ಫೆರಿಕ್ ಲವಣಗಳು ಫೆರಸ್ ಸ್ಥಿತಿಗೆ ಅಪಕರ್ಷಿಸಲ್ಪಡುವುವು. ಪ್ರತಿಯೊಂದು ಸಂದರ್ಭದಲ್ಲೂ ಗಂಧಕದ ಡೈ ಆಕ್ಸೈಡ್ ಸಲ್ಫ್ಯೂರಿಕ್ ಆಮ್ಲವಾಗಿ ಉತ್ಕರ್ಷಿತವಾಗುವುದು. ಗಂಧಕದ ಡೈ ಆಕ್ಸೈಡ್ ಚಲುವೆಕಾರಿಯೂ ಹೌದು. ತೇವಾಂಶವಿದ್ದರೆ ಮಾತ್ರ ಇದು ಸಸ್ಯಜನ್ಯ ಬಣ್ಣಗಳನ್ನು ತಾತ್ಕಾಲಿಕವಾಗಿ ಹೋಗಲಾಡಿಸಬಲ್ಲದು. ಇದರ ಕಾರ್ಯವಿಧಾನ ಎರಡು ರೀತಿಯದು. ಗಂಧಕದ ಡೈ ಆಕ್ಸೈಡ್ ನೀರಿನೊಡನೆ ಸೇರಿ ಸಲ್ಫ್ಯೂರಸ್ ಆಮ್ಲ ಕೊಡುವುದಷ್ಟೆ. ಇದು ಮತ್ತಷ್ಟು ನೀರಿನೊಡನೆ ವರ್ತಿಸಿ ಸಲ್ಫ್ಯೂರಿಕ್ ಆಮ್ಲವನ್ನು ಕೂಡುವುದಲ್ಲದೆ ಹೈಡ್ರೊಜನ್ನನ್ನೂ ಉಂಟುಮಾಡುತ್ತದೆ. ವರ್ಣದ್ರವ್ಯ ಹೈಡ್ರೊಜನ್ನಿನಿಂದ ಅಪಕರ್ಷಿತವಾಗಿ ಬಣ್ಣ ಕಳೆದುಕೊಳ್ಳುವುದು.

$$SO_2+H_2O \rightarrow H_2SO_3$$

$$H_2SO_3+H_2O \rightarrow H_2SO_4+2[H]$$

ವರ್ಣದ್ರವ್ಯ +[H] → ನಿರ್ವರ್ಣವಸ್ತು

ಹೀಗೆ ಚಲುವೆಯಾದ ವಸ್ತುವನ್ನು ಗಾಳಿಗೆ ಒಡ್ಡಿದಾಗ ಅಥವಾ ಯಾವುದಾದರೂ ಒಂದು ಉತ್ಕರ್ಷಣಕಾರಿಯ ಸಾರರಿಕ್ತ ದ್ರಾವಣದ ಸಂಪರ್ಕದಲ್ಲಿ ಬಿಟ್ಟಾಗ ಬಣ್ಣ ಮರುಕಳಿಸುತ್ತದೆ. ವರ್ಣದ್ರವ್ಯ ಗಂಧಕದ ಡೈ ಆಕ್ಸೈಡಿನ ಜೊತೆಗೂಡಿ ಸಂಕಲನ ಸಂಯುಕ್ತವಾಗಬಹುದು. ಹೀಗಾಗದಾಗ ಸಾರರಿಕ್ತ ಆಮ್ಲ ಸೇರಿಸಿದರೆ ಸಂಕಲನ ವಿಭಜಿತವಾಗಿ ಬಣ್ಣ ವಾಪಸಾಗುವುದು.

ಸಲ್ಫ್ಯೂರಿಕ್ ಆಮ್ಲದ ಉತ್ಪಾದನೆ ಇದರ ಪ್ರಧಾನ ಉಪಯೋಗ. ವಿಷಕ್ರಿಮಿನಾಶಕವಾಗಿಯೂ ಕಬ್ಬಿನ ಸಕ್ಕರೆಯ ಸಂಸ್ಕರಣಕಾರಿಯಾಗಿಯೂ ಇದು ಬೇಕು. ಉಣ್ಣೆ, ರೇಷ್ಮೆ, ಕೂದಲು, ಹುಲ್ಲು ಇತ್ಯಾದಿಗಳನ್ನು ಕ್ಲೋರಿನ್ನಿನಿಂದ ಚಲುವೆ ಮಾಡುವಂತಿಲ್ಲ. ಏಕೆಂದರೆ ಇವನ್ನು ಕ್ಲೋರಿನ್ ಗಾಸಿಪಡಿಸುವುದು. ಇದಕ್ಕಾಗಿ ಗಂಧಕದ ಡೈ ಆಕ್ಸೈಡನ್ನು ಬಳಸುವುದು ಕ್ಷೇಮ. ಕ್ಲೋರಿನ್ನಿನಿಂದ ಚಲುವೆ ಮಾಡಿದ ಬಟ್ಟೆಗಳ ಮೇಲೆ ಹೆಚ್ಚುವರಿಯಾದ ಕ್ಲೋರಿನ್ ಉಳಿದಿರುತ್ತದೆ. ಇದರಿಂದ ನೂಲು ಹಾಳಾಗುವುದು. ಈ ಅನಗತ್ಯ ಕ್ಲೋರಿನ್ನನ್ನೇ ತೆಗೆದುಹಾಕುವುದು ಗಂಧಕದ ಡೈ ಆಕ್ಸೈಡಿನಿಂದ. ಇಂಥ ವಸ್ತುಗಳಿಗೆ ಕ್ಲೋರಿನ್ ಹಾರಕಗಳು (ಆಂಟಿಕ್ಲೋರ್ಸ್) ಎಂದು ಹೆಸರು. ಅಯೋಡೀನ್, ರಂಜಕ ಮತ್ತು ಗಂಧಕಗಳಿಗೆ ಲೀನಕಾರಿಯಾಗಿ ಶೈತ್ಯಕಾರಕ ಯಂತ್ರಗಳಲ್ಲಿ ಮತ್ತು ಪೆಟ್ರೋಲಿಯಮಿನ ಶುದ್ಧೀಕರಣಕ್ಕೆ ದ್ರವ ಗಂಧಕದ ಡೈ ಆಕ್ಸೈಡು ವಿನಿಯೋಗವಾಗುತ್ತಿದೆ. ಅಪಕರ್ಷಣಕಾರಿಯಾದ ಸೋಡಿಯಂ ಸಲ್ಫೈಟ್, ಕಾಗದದ ಪಲ್ಪನ್ನು ಚಲುವೆ ಮಾಡಲು ಅಗತ್ಯವಾದ ಕ್ಯಾಲ್ಸಿಯಂ ಬೈ ಸಲ್ಫೈಟ್ ಇವನ್ನು ತಯಾರಿಸಲು ಗಂಧಕದ ಡೈ ಆಕ್ಸೈಡ್ ಉಪಯುಕ್ತ. (ಎಚ್.ಜಿ.ಎಸ್.)

**ಗಂಧಕಾಮ್ಲ : ನೋಡಿ – ಸಲ್ಫ್ಯೂರಿಕ್ ಆಮ್ಲ**

**ಗಂಧಗರಿಗೆ : ನೋಡಿ – ಕಂಡಗರಿಗೆ**

**ಗಂಧದ ಎಣ್ಣೆ :** ಗಂಧದ ಮರದಿಂದ (ಸ್ಯಾಂಟಲಮ್ ಆಲ್ಬಮ್) ಪಡೆಯಲಾಗುವ ಸುಗಂಧಪೂರಿತ ಸಾರ ತೈಲ. ಸುಗಂಧದ್ರವ್ಯಗಳ ತಯಾರಿಕೆಯಲ್ಲೂ ಔಷಧಿಯಾಗೂ ಬಹಳ ಹೆಸರುವಾಸಿಯಾಗಿದೆ. ಪ. ಆಸ್ಟ್ರೇಲಿಯದಲ್ಲಿ ಬೆಳೆಯುವ ಸಾಂಟಲಮ್ ಜಾತಿಯ ಬೇರೆ ಪ್ರಭೇದಗಳಿಂದಲೂ ಗಂಧದ ಎಣ್ಣೆಯನ್ನು ತೆಗೆಯಬಹುದಾದರೂ ಇವುಗಳಿಂದ ಪಡೆಯುವ ಎಣ್ಣೆ ಭಾರತದಲ್ಲಿಯ ಗಂಧದ ಮರದ ಎಣ್ಣೆಗಿಂತ ಕೊಂಚ ಭಿನ್ನಬಗೆಯದು. ಗುಣದಲ್ಲೂ ಕೊಂಚ ಕೆಳಮಟ್ಟದ್ದು.

ಗಂಧದಮರದ ಕಾಂಡ ಹಾಗೂ ಬೇರುಗಳಲ್ಲಿ ಹೆಚ್ಚು ಪರಿಮಾಣದಲ್ಲೂ ಎಲೆ, ಕಾಯಿ ಮತ್ತಿತರ ಭಾಗಗಳಲ್ಲಿ ಕೊಂಚ ಪರಿಮಾಣದಲ್ಲೂ ಎಣ್ಣೆ ಇದೆ. ಬೇರು ಮತ್ತು ಕಾಂಡದ ಚೇಗುಭಾಗದಲ್ಲಿಯ ಪರಿಮಾಣವೇ ಅತಿ ಹೆಚ್ಚು.. ಗಂಧದೆಣ್ಣೆಯನ್ನು ಲಾಭದಾಯಕ ಪ್ರಮಾಣದಲ್ಲಿ ಪಡೆಯಲು ಚೇಗುಭಾಗ ಕನಿಷ್ಠ 8 ಸೆಂ ಮೀ. ದಪ್ಪವಾದರೂ ಇರಬೇಕು. ಈ ಗಾತ್ರಕ್ಕೆ ಬೆಳೆಯಲು ಮರಕ್ಕೆ ಸು. 30 ವರ್ಷ ಬೇಕಾಗುತ್ತದೆ.

**ತಯಾರಿಕೆ :** ಮೊದಲು ಗಂಧದ ಮರವನ್ನು ವಿದ್ಯುತ್ ಕೊಡಲಿಯಿಂದ ಸಣ್ಣ ಸಣ್ಣ ಚೂರುಗಳಾಗಿಯೂ ಅನಂತರ ಸಣ್ಣ ಸಣ್ಣ ಬಿಲ್ಲೆಗಳಾಗಿಯೂ ಕೊನೆಗೆ ಈ ಯಂತ್ರದ ಸಹಾಯದಿಂದ ಪುಡಿಯಾಗಿಯೂ ಮಾಡುತ್ತಾರೆ. ಹೀಗೆ ತಯಾರಿಸಿದ ಪುಡಿಯನ್ನು ಬಟ್ಟಿ ಇಳಿಸುವ ಅನೇಕ ಪಾತ್ರೆಗಳಿಗೆ ಹಾಕಿ ಆವಿ ಆಸವೀಕರಣಕ್ಕೆ ಒಳಪಡಿಸುತ್ತಾರೆ. ಇದರಿಂದಾಗಿ ಪುಡಿಯಲ್ಲಿರುವ ಎಣ್ಣೆ ಬೇರ್ಪಡುತ್ತದೆ. ತೈಲಮಿಶ್ರಿತ ಆವಿಯನ್ನು ಸಾಂದ್ರೀಕರಣಯಂತ್ರಗಳಿಗೆ ಹಾಯಿಸುತ್ತಾರೆ. ಅಲ್ಲಿ ನೀರಿನ ಆವಿ ಮತ್ತು ಎಣ್ಣೆಯ ಆವಿ ತಣ್ಣಗಾಗಿ ಅವುಗಳ ಮಿಶ್ರಣ ಸಂಗ್ರಹ ಪಾತ್ರೆಯಲ್ಲಿ ಶೇಖರವಾಗುತ್ತದೆ. ಮಿಶ್ರಣದಲ್ಲಿಯ ಎಣ್ಣೆಯ ಭಾಗ ಮೇಲೆ ತೇಲುತ್ತಿರುತ್ತದೆ ಆಗಿಂದಾಗ್ಗೆ ಈ ಭಾಗವನ್ನು ಮಾತ್ರ ಬೇರೆ ತೆಗೆದು ನಿರ್ವಾತ ಪಾತ್ರೆಯಲ್ಲಿ ಕಾಸಿ ಶೋಧಿಸಿ, ಶುದ್ಧಿ ಮಾಡುತ್ತಾರೆ.

ಆನಂತರ ಶುದ್ಧಿ ಮಾಡಿದ ಎಣ್ಣೆಯನ್ನು ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸಿ ಗುಣಗಳೆಲ್ಲ ಸರಿ ಕಂಡುಬಂದಮೇಲೆ ಮಾರುವುದಕ್ಕೆ ಬೇಕಾದ ಶೀಸೆ ಇಲ್ಲವೆ



ಚಿತ್ರ1 ಗಂಧದ ಮರವನ್ನು ಕೊರಡನ್ನು ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡುವ ಯಂತ್ರ. ಮೈಸೂರಿನಲ್ಲಿರುವ ಸರ್ಕಾರೀ ಶ್ರೀಗಂಧದ ಎಣ್ಣೆ ಕಾರ್ಖಾನೆಯ ಒಂದು ಭಾಗ

ಅಲ್ಯೂಮಿನಿಯಮ್ ಡಬ್ಬಗಳಲ್ಲಿ ತುಂಬಿ ಮಾರುಕಟ್ಟೆಗಳಿಗೆ ಆಗ್‌ಮಾರ್ಕ್ ಸರ್ಟಿಫಿಕೇಟಿನೊಡನೆ ಕಳಿಸುತ್ತಾರೆ.

ಗಂಧದ ಎಣ್ಣೆ ನಸುಹಳದಿ ಬಣ್ಣದ ಇಲ್ಲವೆ ಬಣ್ಣವಿಲ್ಲದ ಸ್ನಿಗ್ಧ ದ್ರವ. ತುಂಬ ಸುವಾಸನೆಯೂ ಕಟುರುಚಿಯೂ ಇದಕ್ಕೆ ಉಂಟು. ಆಲ್ಕೊಹಾಲಿನಲ್ಲಿ ವಿಲೀನವಾಗುತ್ತದೆ.



ಚಿತ್ರ 2 ಗಂಧದ ಎಣ್ಣೆಯನ್ನು ಪುನರಾಸವನಕ್ಕೆ ಒಳಪಡಿಸುವ ಯಂತ್ರ, ಮೈಸೂರಿನ ಶ್ರೀಗಂಧದ ಎಣ್ಣೆ ಕಾರ್ಖಾನೆಯ ಒಂದು ಭಾಗ

ಗಂಧದೆಣ್ಣೆಯ ಇತರ ಗುಣಗಳು ಈ ರೀತಿ ಇವೆ–ಸಾಪೇಕ್ಷ ಸಾಂದ್ರತೆ : 0.973–0.985, ದ್ಯುತಿ ಆವರ್ತನೆ $-15^{\circ}$ ಯಿಂದ $-20^{\circ}$ ರಿಫ್ರೇಕ್ಷಣಾಂಕ 1.500–1.510, ಕುದಿಬಿಂದು $300^{\circ}$ ಸೆಂ.

ಗಂಧದೆಣ್ಣೆ ಹಲವಾರು ಬಗೆಯ ಆಲ್ಕೋಹಾಲುಗಳು ಮತ್ತು ಅವುಗಳ ಆಲ್ಡಿಹೈಡುಗಳ ಮಿಶ್ರಣ. ಇವುಗಳಲ್ಲೆಲ್ಲ ಅತಿ ಪ್ರಮುಖವಾದುದು ಸ್ಯಾಂಟಲಾಲ್ ಎಂಬ ಆಲ್ಕೊಹಾಲ್. ಇದು ಸು. ಶೇ.90 ಕಿಂತಲೂ ಹೆಚ್ಚಿನ ಪರಿಮಾಣದಲ್ಲಿದೆ. ಗಂಧದೆಣ್ಣೆಯ ಗುಣಮಟ್ಟಕ್ಕೆ ಇದೇ ಕಾರಣ. ಸ್ಯಾಂಟಲಾಲ್ ಅಲ್ಫ ಮತ್ತು ಬೀಟ ಎಂಬ ಎರಡು ಬಗೆಗಳನ್ನು ಒಳಗೊಂಡಿವೆ. ಗಂಧದೆಣ್ಣೆಯಲ್ಲಿನ ಮಿಕ್ಕ ವಸ್ತುಗಳ ಪೈಕಿ ಮುಖ್ಯವಾದವು ಸ್ಯಾಂಟಲೋನ್ ($C_{11}H_{16}O$), ಸ್ಯಾಂಟಿನಾಲ್ ($C_9H_{16}O$) ಮತ್ತು ಸ್ಯಾಂಟೀನ್ ($C_9H_{14}$).

ಪ್ರಪಂಚದಲ್ಲಿ ಉತ್ಪಾದನೆಯಾಗುವ ಗಂಧದೆಣ್ಣೆಯಲ್ಲಿ ಬಹುಪಾಲು ಕರ್ನಾಟಕ ರಾಜ್ಯದ್ದೇ. 1916ರಲ್ಲಿ ಅಂದಿನ ಮೈಸೂರು ಸರ್ಕಾರ ಬೆಂಗಳೂರಿನಲ್ಲಿ ಪ್ರಥಮ ಗಂಧದೆಣ್ಣೆಯ ಕಾರ್ಖಾನೆಯನ್ನು ಸ್ಥಾಪಿಸಿತು. ಅನಂತರ ಮೈಸೂರು ನಗರದಲ್ಲೂ ಶಿವಮೊಗ್ಗದಲ್ಲೂ ಒಂದೊಂದು ಕಾರ್ಖಾನೆಗಳು ಸ್ಥಾಪಿತವಾದುವು. ಈಗ ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ಮಾತ್ರ ಸರ್ಕಾರೀ ಸ್ವಾಮ್ಯದ ಗಂಧದೆಣ್ಣೆ ಕಾರ್ಖಾನೆಗಳಿವೆ. ಗಂಧದೆಣ್ಣೆಯನ್ನು ತೆಗೆಯಲು ಬೇಕಾಗುವ ಎಲ್ಲ ರೀತಿಯ ಯಂತ್ರಸೌಲಭ್ಯಗಳೂ ಮೈಸೂರಿನ ಕಾರ್ಖಾನೆಯಲ್ಲಿದ್ದು ಇದು ಪ್ರಪಂಚದ ಅತಿ ದೊಡ್ಡ ಹಾಗೂ ಸುಸಜ್ಜಿತ ಗಂಧದೆಣ್ಣೆ ಕಾರ್ಖಾನೆ ಎನಿಸಿದೆ. ಅತ್ಯಂತ ಆಧುನಿಕವಾದ ಗುಣನಿಯಂತ್ರಣ ಪ್ರಯೋಗಾಲಯವೂ ಇಲ್ಲಿದೆ. ಮುಂಬಯಿ, ಕನೂಜ್, ಕಾನ್ಪುರ, ಕುಪ್ಪಂ, ರೇಣಿಗುಂಟ, ಮೆಟ್ಟೂರು, ಸೇಲಂ, ತಿರುಪತ್ತೂರು ಮೊದಲಾದ ಕಡೆಗಳಲ್ಲೂ ಸಣ್ಣ ಪ್ರಮಾಣದ ಕಾರ್ಖಾನೆಗಳಿವೆ. ಭಾರತದಲ್ಲಿ ಸುಮಾರು 300,000 ಪೌಂಡುಗಳಿಗೂ ಹೆಚ್ಚಿನ ಪರಿಮಾಣದಲ್ಲಿ ಗಂಧದೆಣ್ಣೆ ತಯಾರಾಗುತ್ತದೆ. ಇದರಲ್ಲಿ ಅರ್ಧದಷ್ಟು ಮೈಸೂರು ನಗರದ ಕಾರ್ಖಾನೆಯಲ್ಲಿ ತಯಾರಾಗುತ್ತದೆ. ಭಾರತದ ತಯಾರಿಕೆಯ ಶೇ.60 ರಷ್ಟು ಎಣ್ಣೆ ಹೊರದೇಶಗಳಿಗೆ ಮುಖ್ಯವಾಗಿ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಜರ್ಲೆಂಡ್, ಇಟಲಿ, ಜಪಾನ್, ಆಸ್ಟ್ರೇಲಿಯ ಮತ್ತು ಜರ್ಮನಿಗಳಿಗೆ ರಫ್ತಾಗುತ್ತದೆ. ಅಲ್ಲದೆ ಮೈಸೂರಿನಿಂದ ಅಮೆರಿಕಕ್ಕೆ ಕೊಂಚ ಪ್ರಮಾಣದಲ್ಲಿ ಗಂಧದ ಮರವೂ ರಫ್ತಾಗುತ್ತದೆ.

**ಉಪಯೋಗಗಳು :** ಗಂಧದ ಎಣ್ಣೆಯನ್ನು ಸುಗಂಧ ದ್ರವ್ಯಗಳ ಕೈಗಾರಿಕೆಯಲ್ಲಿ ಹೇರಳವಾಗಿ ಉಪಯೋಗಿಸುತ್ತಾರೆ. ಅತ್ಯಂತ ಹೆಸರುವಾಸಿಯಾದ ಪರಿಮಳಗಳ ತಯಾರಿಕೆಗೆ ಇದು ಬಹು ಉಪಯುಕ್ತವಾದ ಮೂಲವಸ್ತು. ಒಳ್ಳೆಯ ಪೂತಿನಾಶಕವೆಂದು ಹೆಸರಾಗಿರುವ ಇದನ್ನು ಔಷಧಿ ರೂಪದಲ್ಲೂ ಬಳಸಲಾಗುತ್ತದೆ. ಗೊನೊರೀಯ ಮುಂತಾದ ಮೇಹರೋಗಗಳಲ್ಲಿ ಇದರ ಬಳಕೆ ಇದೆ. ಸಾಲ್ವರ್‌ಸಾನ್ ಎಂಬ ಔಷಧಿಯಲ್ಲಿ ಗಂಧದೆಣ್ಣೆಯಿದ್ದೇ ಇದೆ. ಅಜ್ವಾನದ ನೀರು ಇಲ್ಲವೆ ಶುಂಠಿ ಕಷಾಯದೊಂದಿಗೆ ಗಂಧದೆಣ್ಣೆಯನ್ನು ಸೇರಿಸಿ ಶ್ವಾಸನಾಳದ ಶೀತಕ್ಕೆ ಔಷಧಿಯಾಗಿ ಬಳಸುತ್ತಾರೆ. ಕಜ್ಜಿಗೂ ಇದು ಉತ್ತಮ ಔಷಧಿ. ಬಿಟ್ಟುಬಿಟ್ಟು ಬರುವ ಜ್ವರಗಳಲ್ಲಿ ಇದನ್ನು ಸ್ವೇದಕಾರಿಯಾಗಿ ಉಪಯೋಗಿಸುತ್ತಾರೆ. (ಎಂ.ಎಸ್.ಎಸ್.ಕೆ.)

**ಗಂಧದ ಮರ :** ಸುವಾಸನೆಯುಳ್ಳ ಹಾಗೂ ಔಷಧೀಯ ಮಹತ್ತ್ವವುಳ್ಳ ಎಣ್ಣೆಯನ್ನು ಕೊಡುವ ಒಂದು ಸುಪ್ರಸಿದ್ಧ ವೃಕ್ಷ. ಶ್ರೀಗಂಧದ ಮರ ಮತ್ತು ಚಂದನದ ಮರ ಇದರ ಪರ್ಯಾಯನಾಮಗಳು. ಸ್ಯಾಂಟಲೇಸೀ ಕುಟುಂಬಕ್ಕೆ ಸೇರಿದೆ. ಸ್ಯಾಂಟಲಂ ಆಲ್ಬಂ ಇದರ ವೈಜ್ಞಾನಿಕ ಹೆಸರು. ಭಾರತದ ಮೂಲವಾಸಿಯಾದ ಇದು ಹೆಚ್ಚು ಕಡಿಮೆ ದಕ್ಷಿಣಭಾರತಕ್ಕೆ ಮಾತ್ರ ಸೀಮಿತವಾಗಿದೆ. ಸು. 125,000 ಚ.ಕಿಮೀ. ಪ್ರದೇಶದಲ್ಲಿ ಬೆಳೆಯುತ್ತಿದೆ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಬಹುಪಾಲು ಬೆಳೆಯಿರುವುದು (ದಕ್ಷಿಣ ಭಾರತದಲ್ಲಿನ ಒಟ್ಟು ವ್ಯಾಪ್ತಿಯಲ್ಲೆ ಶೇ. 85ರಷ್ಟು) ಕರ್ನಾಟಕ ರಾಜ್ಯದಲ್ಲಿ. ಸಮುದ್ರ ಮಟ್ಟದಿಂದ ಹಿಡಿದು ಸು. 1200′ ಮೀ. ಎತ್ತರದವರೆಗಿನ ಬೆಟ್ಟ ಪ್ರದೇಶಗಳಲ್ಲಿ ಹುಲುಸಾಗಿ ಬೆಳೆಯುವ ಗಂಧದಮರ ಕರ್ನಾಟಕ ರಾಜ್ಯದ ಕೊಡಗು, ಮೈಸೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೇರಳವಾಗಿಯೂ ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಗಳ ಕುರುಚಲು ಕಾಡುಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯ ಸಂಡೂರಿನ ಸಮೀಪದಲ್ಲಿ ಕೊಂಚಪ್ರಮಾಣದಲ್ಲೂ ಬೆಳೆಯುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲೂ ಇದನ್ನು ಕಾಣಬಹುದು. ತಮಿಳುನಾಡಿನ ಕೊಯಮತ್ತೂರು. ಸೇಲಂ ಮತ್ತು ನೀಲಗಿರಿ ಜಿಲ್ಲೆಗಳಲ್ಲೂ ಮಹಾರಾಷ್ಟ್ರ, ಆಂಧ್ರ ಮತ್ತು ಕೇರಳಗಳ ಕೆಲವು ಭಾಗಗಳಲ್ಲೂ ಇದರ ವ್ಯಾಪ್ತಿಯಿದೆ.

ಅತ್ಯಂತ ಸುಗಂಧಪೂರಿತ ಮರವನ್ನು ಮತ್ತು ಅತಿಮುಖ್ಯವಾದ ಸಾರತೈಲವನ್ನು (ಗಂಧದೆಣ್ಣೆ) ಕೊಡುವುದರಿಂದ ಗಂಧದ ಮರ ಬಹುಬೆಲೆಬಾಳುವ ವೃಕ್ಷವಾಗಿದ್ದು ಮೈಸೂರಿನ ರಾಜವೃಕ್ಷ ಎನಿಸಿದೆ. ಮೈಸೂರು ರಾಜ್ಯದಲ್ಲಿ ಎಲ್ಲಿ ಬೆಳೆದರೂ ಇದು ಸರ್ಕಾರದ ಸ್ವತ್ತೇ ಆಗಿದೆ ಮತ್ತು ಸರ್ಕಾರದ ಅನುಮತಿಯಿಲ್ಲದೆ ಇದನ್ನು ಕತ್ತರಿಸುವುದನ್ನು, ಸಾಗಿಸುವುದನ್ನು, ಕೆತ್ತನೆ ಕೆಲಸಗಳಿಗೆ ಉಪಯೋಗಿಸುವುದನ್ನು ಮತ್ತು ಇದರಿಂದ ಎಣ್ಣೆಯನ್ನು ಹೊರತೆಗೆಯುವುದನ್ನು ನಿಷೇಧಿಸಲಾಗಿದೆ.

ಗಂಧದಮರದ ಹತ್ತಿರದ ಸಂಬಂಧಿಗಳಾದ ಮತ್ತು ಅದನ್ನೆ ಹೋಲುವ ಕೆಲವು ಮರಗಳು ಪ್ರಪಂಚದ ಬೇರೆಡೆಯಲ್ಲೂ ಬೆಳೆಯುತ್ತವೆ. ಉದಾಹರಣೆಗೆ ಸ್ಯಾಂಟಲಮ್ ಯಾಸಿ ಎಂಬುದು ಫೀಜಿ ದ್ವೀಪಗಳಲ್ಲೂ ಸ್ಯಾ. ಲ್ಯಾನ್ಸಿಯೋಲೇಟಂ, ಆಬ್ಟುಸಿಫೋಲಿಯಂ, ಡೆನ್ಸಿಫ್ಲೋರಂ, ಮೆಗಕಾರ್ಪಂ ಎಂಬುವು ಆಸ್ಟ್ರೇಲಿಯದಲ್ಲೂ ಸ್ಯಾ. ಮಾರ್ಗರೆಟೀ ಎಂಬುದು ಪಾಲಿನೇಷಿಯದಲ್ಲೂ ಬೆಳೆಯುತ್ತವೆ.

ಗಂಧದ ಮರ ಅರ್ಧಪರಾವಲಂಬಿ ಸಸ್ಯ. ತನ್ನ ಸುತ್ತಮುತ್ತ ಬೆಳೆಯುವ ಇತರ ಜಾತಿಯ ಗಿಡಮರಗಳ ಬೇರುಗಳೊಂದಿಗೆ ತನ್ನ ಬೇರುಗಳ ಮೂಲಕ ಸಂಪರ್ಕ ಕಲ್ಪಿಸಿಕೊಂಡು, ವಿಶೇಷ ರೀತಿಯ ಹೀರುಬೇರುಗಳನ್ನು ಆಶ್ರಯದಾತ ಸಸ್ಯಗಳ ಬೇರುಗಳೊಳಕ್ಕೆ ಕಳಿಸಿ ತನ್ನ ಬೆಳವಣಿಗೆಗೆ ಅತ್ಯಗತ್ಯವಾದ ಖನಿಜಾಂಶಗಳನ್ನು ಹೀರಿಕೊಳ್ಳುತ್ತದೆ. ಹೀಗೆ ಹೀರಿಕೊಂಡ ಖನಿಜಗಳನ್ನು ಬಳಸಿಕೊಂಡು ತನ್ನ ಹಸಿರಲೆಗಳ ಸಹಾಯದಿಂದ

ತನಗೆ ಬೇಕಾದ ಆಹಾರಪದಾರ್ಥಗಳನ್ನು ದ್ಯುತಿಸಂಶ್ಲೇಷಣೆಯಿಂದ ತಯಾರಿಸುವ ಸಾಮರ್ಥ್ಯ ಮಾತ್ರ ಇದಕ್ಕೆ ಇದೆ. ಈ ಬಗೆಯ ಜೀವನಕ್ರಮದಿಂದಾಗಿ ಗಂಧದ ಮರದ ತಾಯಿ ಬೇರು ಹೆಚ್ಚು ಆಳಕ್ಕೆ ಬೆಳೆಯವುದಿಲ್ಲ. ಆದರೆ ಕವಲುಬೇರುಗಳು ಆಶ್ರಯದಾತ ಗಿಡಗಳ ಬೇರುಗಳನ್ನು ಅರಸಿಕೊಂಡು ನೂರಾರು ಅಡಿ ದೂರದ ವರೆಗೂ ಬೆಳೆಯುತ್ತವೆ.

ಮಧ್ಯಮಪ್ರಮಾಣದ ನಿತ್ಯಹರಿದ್ವರ್ಣ ಮರ ಇದು. 30′–40′ ಎತ್ತರಕ್ಕೆ ಬೆಳೆಯುತ್ತದೆ. ನೆಲ ಉತ್ತಮವಾಗಿದ್ದರೆ 60′ ಎತ್ತರದ ವರೆಗೂ ಬೆಳೆಯಬಹುದು. ಮುಖ್ಯಕಾಂಡದ ಸುತ್ತಳತೆ ಸು. 3–3 1/2′ ಇರುತ್ತದೆ. ಎಲೆಗಳ ಜೋಡಣೆ ಅಭಿಮುಖ ಮಾದರಿಯದು; ಆಕಾರ ಅಂಡದಂತೆ. ಅವುಗಳ ಮೇಲ್ಮೈ ಹೊಳೆಯುತ್ತಿರುತ್ತದೆ. ಹೂಗಳು ಮಧ್ಯಾರಂಭಿ ಮಾದರಿಯ ಸಂಕೀರ್ಣ ಹೂ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಬಲು ಚಿಕ್ಕಗಾತ್ರದವು ಇವು. ವಾಸನೆಯಿಲ್ಲ. ಹೂಗಳ ಬಣ್ಣ ಊದಾಮಿಶ್ರಿತ ಕಂದು. ಪ್ರತಿಹೂವಿನಲ್ಲಿ 4 ಪೆರಿಯಾಂತ್ ಹಾಲೆಗಳು, 4 ಕೇಸರಗಳು ಮತ್ತು ನೀಚಸ್ಥಾನದ ಅಂಡಾಶಯ ಇವೆ. ಫಲ ಅಷ್ಟಿಫಲ ಮಾದರಿಯದು, ಗುಂಡಗಿದೆ. ಮಾಗಿದಾಗ ಊದಾಮಿಶ್ರಿತ ಕಪ್ಪು ಬಣ್ಣಕ್ಕೆ ತಿರುಗುತ್ತದೆ.

ಕಬ್ಬಿಣದ ಅಂಶ ಹೆಚ್ಚಾಗಿರುವ ಗೋಡುಮಣ್ಣಿನಲ್ಲಿ ಗಂಧದ ಮರ ಚೆನ್ನಾಗಿ ಬೆಳೆಯುತ್ತದೆ. ಲ್ಯಾಟರೈಟ್ ಮಣ್ಣಿನಲ್ಲೂ ಬೆಳೆಯಬಲ್ಲದು. ನೆಲದಲ್ಲಿ ನೀರು ಚೆನ್ನಾಗಿ ಇಂಗಿಹೋಗುವಂತಿರಬೇಕು. ಬಿಸಿಲು ಚೆನ್ನಾಗಿ ಬೀಳುವಂಥ ಬೆಟ್ಟದ ಇಳಿಜಾರುಗಳು ಇದರ ಬೆಳವಣಿಗೆಗೆ ಉತ್ತಮ. ವಾರ್ಷಿಕ ಮಳೆ 510–640 ಮಿಮೀ. ಇರಬೇಕು. ಮಳೆ ಕಡಿಮೆ ಇದ್ದಷ್ಟೂ ಉತ್ತಮ. ಶುಷ್ಕವಾತಾವರಣದಲ್ಲಿ ಬೆಳೆದ ಮರದಲ್ಲಿನ ಎಣ್ಣೆಯ ಪರಿಮಾಣ ಬೇರೆಡೆ ಬೆಳೆದ ಮರಗಳಲ್ಲಿನ ಪರಿಮಾಣಕ್ಕಿಂತ ಅತಿ ಹೆಚ್ಚು. ಮಳೆಗಾಲಕ್ಕೆ ಮುಂಚೆ ಬೀಜಗಳನ್ನು ಮಡಿಗಳಲ್ಲಿ ಬಿತ್ತಿ ಸಸಿಗಳು ಹುಟ್ಟಿದ ಮೇಲೆ ಮಾರನೆಯ ವರ್ಷ ನಾಟಿ ಮಾಡಲಾಗುತ್ತದೆ. ಜೊತೆಯಲ್ಲಿ ಆಶ್ರಯದಾತ ಸಸ್ಯಗಳನ್ನು ಬೆಳೆಸಲಾಗುತ್ತದೆ. ಮರದ ಬೆಳವಣಿಗೆ ಮೊದಲ ಹಂತಗಳಲ್ಲಿ ಚೆನ್ನಾಗಿ ನೆರಳು ಬೇಕು. ಗಿಡಗಳು ಎಳೆಯವಿದ್ದಾಗ ದನಕರುಗಳಿಗೆ, ಮೇಕೆ, ಜಿಂಕೆಗಳಿಗೆ ಗಂಧದ ಎಲೆಗಳು ಅಚ್ಚುಮೆಚ್ಚಿನ ಆಹಾರ. ಎಳೆಯ ಸಸಿಗಳನ್ನು ಇಲಿ, ಮೊಲ ಇತ್ಯಾದಿಗಳು ನಾಶಮಾಡುವುದುಂಟು. ಕಾಳ್ಗಿಚ್ಚಿಗೆ ಗಂಧದ ಮರ ಸುಲಭವಾಗಿ ಈಡಾಗುತ್ತದೆ. ಇವೆಲ್ಲ ಕಾರಣಗಳಿಂದಾಗಿ ಗಿಡಗಳು ಚಿಕ್ಕವಿದ್ದಾಗ ಹೆಚ್ಚು ಆರೈಕೆ ಮಾಡಬೇಕು.

ಗಂಧದ ಮರಕ್ಕೆ ಹಲವಾರು ರೋಗಗಳು ಬರುತ್ತವೆ. ಇವುಗಳೆಲ್ಲೆಲ್ಲ ಅತಿಮುಖ್ಯವಾದ್ದು ಸ್ಪೈಕ್ ರೋಗ. ರೋಗ ತಗುಲಿ ಉಲ್ಬಣವಾದಾಗ ಎಲೆಗಳು ಸಣ್ಣದಾಗುತ್ತ ಹೋಗಿ ಕೊನೆಕೊನೆಗೆ ಮೊನಚಾಗಿ ಗಡುಸಾಗಿ ಕೊಂಬೆಗಳು ಬಾಗಿಕೊಂಡು ಬಿಡುತ್ತವೆ. ಕ್ರಮೇಣ ಮರಗಳು ಒಣಗಿನಿಲ್ಲುತ್ತವೆ. ಮೊಟ್ಟಮೊದಲಿಗೆ 1899ರಲ್ಲಿ ಮೆಕಾರ್ಥಿ ಎಂಬುವನು ಈ ರೋಗವನ್ನು ಕೊಡಗಿನ ಕಾಡುಗಳಲ್ಲಿನ ಗಂಧದ ಮರಗಳಲ್ಲಿ ವಿವರಿಸಿದ. ಈ ರೋಗಕ್ಕೆ ಕಾರಣವಾದ ಜೀವಿಯೇನೆಂಬುದನ್ನು ಇನ್ನೂ ಪತ್ತೆಹಚ್ಚಲಾಗಿಲ್ಲ. ಒಂದು ಅಭಿಪ್ರಾಯದ ಪ್ರಕಾರ ವೈರಸ್ಸುಗಳಿಂದ ಸ್ಪೈಕ್ ರೋಗ ಉಂಟಾಗುತ್ತದೆ. ಹಲವಾರು ವರ್ಷಗಳಿಂದ ಈ ರೋಗದ ಬಗ್ಗೆ ಸಂಶೋಧನೆ ನಡೆಯುತ್ತಲೇ ಇದೆ. ಈ ರೋಗದಿಂದ ಅಪಾರ ಪ್ರಮಾಣದ ನಷ್ಟ ಉಂಟಾಗುತ್ತಿದೆ. ವಾರ್ಷಿಕ ನಷ್ಟ ಸು. 10 ಲಕ್ಷ ರೂಪಾಯಿಗಳಿಗೂ ಹೆಚ್ಚು ಎಂದು ಅಂದಾಜು ಮಾಡಲಾಗಿದೆ. ರೋಗ ತಗುಲಿದ ಮರಗಳನ್ನು ತೆಗೆದುಹಾಕುವುದೂ ತೊಗಟೆಯನ್ನು ಹೆರೆದುಹಾಕುವುದೂ ನಿವಾರಣೋಪಾಯಗಳಲ್ಲಿ ಕೆಲವು. ಇತ್ತೀಚಿಗೆ ಆರ್ಸೆನಿಕ್ ಇರುವ ಕೆಲವು ರಾಸಾಯನಿಕಗಳ ಬಳಕೆಯಿಂದ ರೋಗವನ್ನು ತಡೆಗಟ್ಟಬಹುದು ಎಂದು ಖಚಿತಪಡಿಸಲಾಗಿದೆ. ರೋಗನಿರೋಧ ಶಕ್ತಿಯಿರುವ ಮರಗಳನ್ನು ತಳಿಯೆಬ್ಬಿಕೆ ಪ್ರಯೋಗಗಳಿಂದ ಪಡೆಯುವ ಕಾರ್ಯಕ್ರಮವೂ ಈಗ ಆರಂಭವಾಗಿದೆ. ಗಂಧದ ಮರಕ್ಕೆ ಎಲೆಮುರುಟು ರೋಗವೆಂಬ ವೈರಸ್ ರೋಗವೂ ಬರುತ್ತದೆ.

ಭಾರತದ ಬಹಳ ಪ್ರಾಚೀನಕಾಲದಿಂದಲೂ ಶ್ರೀಗಂಧ ಬಳಕೆಯಲ್ಲಿದೆ. ಮಲಯಪರ್ವತವೆಂದು ಪುರಾಣಗಳಲ್ಲೂ ಕಾವ್ಯಗಳಲ್ಲೂ ಪ್ರಶಂಸನೆಗೆ ಪಕ್ಕಾಗಿರುವ ಭಾಗ ದಕ್ಷಿಣ ಭಾರತದ ಪೂರ್ವಪಶ್ಚಿಮ ಘಟ್ಟಗಳೇ ಆಗಿವೆ. ಅಲ್ಲಿ ಗಂಧದ ಮರ ವಿಶೇಷವಾಗಿ ಬೆಳೆಯುತ್ತಿತ್ತೆಂದು ಪ್ರತೀತಿ. ಕವಿಸಮಯವಾಗಿರುವ ಮಲಯ ಮಾರುತಕ್ಕೆ ಸುಗಂಧ

ಗಂಧದ ಮರದಲ್ಲಿ ಸಾಲಂಕೃತ ವಿಗ್ರಹಗಳ ಕೆತ್ತನೆ

ಬಂದಿರುವುದು ಆ ಪ್ರದೇಶದಲ್ಲಿನ ಗಂಧದ ಮರಗಳಿಂದಲೇ. ದಕ್ಷಿಣದ ಗಾಳಿಯ ಮೂರು ವಿಶಿಷ್ಟಗುಣಗಳೆಂದರೆ ಶೈತ್ಯ, ಸೌರಭ ಮತ್ತು ಮಾಂದ್ಯ. ಗಂಧ ಪ್ರಸಿದ್ಧ ಸುಗಂಧ ದ್ರವ್ಯಗಳಲ್ಲೊಂದು. ಚೇಗಿನ ತುಂಡನ್ನು ಸಾಣೆಯ ಕಲ್ಲಿನಮೇಲೆ ತೇದು ನುಣುಪಾದ ಗಂಧ ಸರಿಯನ್ನು ತಯಾರಿಸಿ ಅದಕ್ಕೆ ಕೇಸರಿ, ಪಚ್ಚಕರ್ಪೂರಾದಿಗಳನ್ನು ಬೆರೆಸಿ ದೇವತಾರ್ಚನೆಯಲ್ಲಿ ಬಳಸುವ ವಾಡಿಕೆ ಇದೆ. ದೇವಾರ್ಪಿತವಾದ ಗಂಧವನ್ನು ಭಕ್ತಾದಿಗಳು ಮೈಗೆ ಲೇಪನ ಮಾಡಿಕೊಳ್ಳುತ್ತಾರೆ. ಹಿಂದೆ ಸ್ತ್ರೀಯರು ಅಲಂಕರಣದ ಒಂದು ವಿಧಿಯಾಗಿ

ಗಂಧವನ್ನು ಬಳಸುತ್ತಿದ್ದುದರ ಉಲ್ಲೇಖ ಕಾವ್ಯಗಳಲ್ಲೇ ಬರುತ್ತದೆ. ತೇದ ನುಣುಪಾದ ಗಂಧದಿಂದ ಹೆಣ್ಣುಮಕ್ಕಳು ತಮ್ಮ ಗಲ್ಲ, ಮೊಲೆಗಳ ಮೇಲೆ ಚಿತ್ರಗಳನ್ನು ಬರೆದುಕೊಳ್ಳುತ್ತಿದ್ದರಂತೆ. ಗಂಧಲೇಪನ ದೇಹಕ್ಕೆ ಸುವಾಸನೆಯನ್ನು ಕೊಡುತ್ತದೆ. ಅದರ ನಸು ಹಳದಿ ಬಣ್ಣದಿಂದ ಅಂಗಕಾಂತಿ ಹೆಚ್ಚುತ್ತದೆ. ಅದು ತಂಪು. ಉಷ್ಣದ ಧಗೆಯನ್ನದು

ಬೇಲೂರಿನ ಶಿಲಾಬಾಲಿಕೆಯರ ಮಾದರಿಗಳನ್ನು ಮರದಲ್ಲಿ ಕೆತ್ತಿರುವುದು

ತತ್ಕಾಲದಲ್ಲಿ ನಿವಾರಿಸುವುದಲ್ಲದೆ ಉಷ್ಣಮೂಲವಾದ ರೋಗಗಳನ್ನು ಶಮನಮಾಡುತ್ತದೆ. ಅದು ಚರ್ಮರೋಗ ನಿವಾರಕ. ದೇವರ ತೀರ್ಥದಲ್ಲಿ ಗಂಧವನ್ನು ಮಿಶ್ರಮಾಡಿ ಹೊಟ್ಟೆಗೂ ತೆಗೆದುಕೊಳ್ಳುವುದುಂಟು. ಇದರಿಂದ ಕ್ರಿಮಿಶುದ್ಧಿಯಾಗುತ್ತದೆ. ಈಚೆಗೆ ಅನೇಕ ಚರ್ಮರೋಗ ಔಷಧಿಗಳಿಗೆ ಶ್ರೀಗಂಧದ ವಾಸನೆ ಕಟ್ಟುತ್ತಿದ್ದಾರೆ. ಟ್ಯಾಲ್ಕಂ ಹುಡಿ, ವ್ಯಾನಿಷಿಂಗ್ ಕ್ರೀಮ್, ಕೋಲ್ಡ್‌ಕ್ರೀಮ್, ಮೈತೊಳೆಯುವ ಸೋಪುಗಳು–ಇವೆಲ್ಲಕ್ಕೂ ಶ್ರೀಗಂಧವನ್ನು ಸೇರಿಸುತ್ತಿದ್ದಾರೆ. ಜಗತ್ ಪ್ರಸಿದ್ಧವಾದ ಮೈಸೂರು ಗಂಧದ ಸಾಬೂನಿಗೆ ಶ್ರೀಗಂಧದ ಒಳ್ಳೆಯ ತೈಲವನ್ನೂ ಗುಲಾಬಿಯ ಸಾರವನ್ನೂ ಸೇರಿಸುತ್ತಾರೆ.

ಗಂಧದ ಚೇಗು ಕೆತ್ತನೆಗೆ ಬಹು ಯೋಗ್ಯ ಮರವೆನಿಸಿದೆ ಆದರಿಂದ ಚಿಕ್ಕ ದೊಡ್ಡ ವಿಗ್ರಹಗಳೂ ಇತರ ಕಲಾವಸ್ತುಗಳು, ಹಣಿಗೆ, ಲೆಕ್ಕಣಿ, ಕಾಗದ ಕತ್ತರಿಸುವ ಚಾಕು ಮೊದಲಾದ ನಿತ್ಯೋಪಯೋಗಿ ಸಾಮಾನುಗಳೂ ತಯಾರಾಗುತ್ತವೆ. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗಂಧದ ಕೆತ್ತನೆಗೆ ಪ್ರಸಿದ್ಧರಾದ ಗುಡಿಗಾರರು ಇಂದಿಗೂ ಈ ಕಲೆಯನ್ನು ಒಂದು ಕಸಬಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಗಂಧದ ಕಲಾಕೃತಿಗಳು ಸ್ವದೇಶದಲ್ಲಿ ಮಾತ್ರವಲ್ಲದೆ ಪರದೇಶಗಳಲ್ಲೂ ಒಳ್ಳೆಯ ಮಾರುಕಟ್ಟೆ ಪಡೆದಿವೆ. ಗಂಧದ ಮರದ ಯಾವ ಭಾಗವೂ ನಿರುಪಯೋತಿಯಲ್ಲ. ಕೆತ್ತನೆಯ ಕೆಲಸದಲ್ಲಿ ಉಳಿಯುವ ಪುಡಿಯನ್ನು ಧೂಪವಾಗಿ ಉಪಯೋಗಿಸುತ್ತಾರೆ. ಊದುಬತ್ತಿ ಮಾಡಲು ಬಳಸುತ್ತಾರೆ.
(ಎ.ಕೆ.ಎಸ್.)

**ಗಂಧಮಾದನ :** ಬದರಿಕಾಶ್ರಮದ ಹತ್ತಿರವಿರುವ ಒಂದು ಬೆಟ್ಟ. ರಾಜಸೂಯಯಾಗದ ಸಂದರ್ಭದಲ್ಲಿ ಅರ್ಜುನ ಇದರ ಸುತ್ತಮುತ್ತಣ ಅರಸರನ್ನು ಗೆದ್ದು ಬಂದನೆಂದೂ ಪಾಂಡವರು ತೀರ್ಥಯಾತ್ರೆಯ ಸಂದರ್ಭದಲ್ಲಿ ಇಲ್ಲಿಗೆ ಹೋಗಿದ್ದರೆಂದೂ ಸೌಗಂಧಿಕ ಪುಷ್ಪವನ್ನು ತರಲು ಕುಬೇರನ ಉದ್ಯಾನಕ್ಕೆ ಹೋಗುವ ಮಾರ್ಗದಲ್ಲಿ ಭೀಮಸೇನ ಇದನ್ನು ಸಂದರ್ಶಿಸಿದ್ದನೆಂದೂ ಮಹಾಭಾರತದಲ್ಲಿ ಉಲ್ಲೇಖಿಸಿದೆ.

ಹಿಮಾಲಯ ಪರ್ವತದ ಒಂದು ಶಿಖರಕ್ಕೂ ಈ ಹೆಸರಿದೆ. ಪಾಂಡವರು ವನವಾಸ ಸಮಯದಲ್ಲಿ ಇಲ್ಲಿ ವಾಸಿಸುತ್ತಿದ್ದರೆಂದೂ ಇಂದ್ರಕೀಲ ಪರ್ವತದಿಂದ ದೇವಲೋಕಕ್ಕೆ ಹೋಗಿದ್ದ ಅರ್ಜುನ ಇಲ್ಲಿಗೆ ಬಂದು ತನ್ನ ಸಹೋದರರನ್ನು ಸಂಧಿಸಿದನೆಂದೂ ಭಾರತದ ವನಪರ್ವದಿಂದ ತಿಳಿದುಬರುತ್ತದೆ.

ರಾಮಾಯಣದ ಪ್ರಕಾರ ಗಂಧಮಾದನ ಸುಗ್ರೀವನ ಕಪಿಸೇನಾ ನಾಯಕರಲ್ಲಿ ಒಬ್ಬ. ಕುಂಭಕರ್ಣನನ್ನು ಯುದ್ಧದಲ್ಲಿ ಇದಿರಿಸಿದ ವೀರ.
*

**ಗಂಧರ್ವರು :** ಇತಿಹಾಸ ಪುರಾಣಗಳಲ್ಲಿ ಕಿನ್ನರರು, ಕಿಂಪುರುಷರಂತೆ ಪ್ರಸಿದ್ಧರಾದವರು. ಇವರನ್ನು ದೇವಯೋನಿಗಳು, ದೇವಗಾಯಕರು, ದೇವೀಮೂಲವುಳ್ಳವರು ಎಂದು ಕರೆಯುತ್ತಾರೆ. ಗಂಧರ್ವ ಶಬ್ದ ಋಗ್ವೇದದಲ್ಲಿ ಹಲವೆಡೆಗಳಲ್ಲಿ ಬರುತ್ತದೆ. ಅದರ ಪ್ರಕಾರ ವಿಶ್ವಾವಸು ಅಲ್ಲಿಯ ಗಂಧರ್ವ. ಈತನಿಗೆ ವಾಯುಕೇಶನೆಂತಲೂ ಹೆಸರು. ಆಕಾಶ, ಈತನ ನೆಲೆ. ಸ್ವರ್ಗಲೋಕದ ಸೋಮರಸದ ರಕ್ಷಣೆಯ ಭಾರ ಈತನದು. ಕೆಲವು ಕಡೆ ಸ್ವರ್ಗದ ಗಂಧರ್ವ ಚಂದ್ರನೇ(ಸೋಮ) ಎಂಬ ಭಾವನೆಯೂ ಬರುತ್ತದೆ. ಪ್ರಪ್ರಥಮ ಮಾನವವ್ಯಕ್ತಿಗಳಾದ ಯಮಯಮಿಯರಿಗೆ ತಂದೆ ಗಂಧರ್ವ. ಅಥರ್ವವೇದದ ಪ್ರಕಾರ ಹೆಂಗಸರ ವಶೀಕರಣ ಈತನ ಅಪೂರ್ವಶಕ್ತಿ. ಈ ಕಾರಣದಿಂದಲೇ ವೈವಾಹಿಕ ಸಂದರ್ಭಗಳಲ್ಲಿ ಗಂಧರ್ವನನ್ನು ಸ್ತುತಿಸಿ ಆಹ್ವಾನಿಸುತ್ತಿದ್ದರು. ಇವೇ ಗಂಧರ್ವರ ಸಾಮಾನ್ಯ ಗುಣಗಳು.

ವೇದಗಳಲ್ಲಿ ವರುಣ ಗಂಧರ್ವರಾಜ. ಸೋಮ ಅಪ್ಸರೆಸೆಯರು ಇವನ ಅಧೀನ. ಗಂಧರ್ವರು ಅನೇಕ ದೈವಿಕರಹಸ್ಯಗಳನ್ನು ಬಲ್ಲವರೆಂದೂ ಬ್ರಹ್ಮಾಂಡವನ್ನು ಅಳತೆಮಾಡಿ

ಜಾವದ ಶಿವದೇವಾಲಯವೊಂದರಲ್ಲಿನ ಗಂಧರ್ವರ ಶಿಲ್ಪ

ದೇವತೆಗಳ ಸಂಚಾರಕ್ಕೆ ಆಗಮಾಡಿದವರೆಂದೂ ಹೇಳಲಾಗಿದೆ. ಅಥರ್ವವೇದದಲ್ಲಿ ಗಂಧರ್ವರೂ ಅಪ್ಸರಸೆಯರೂ ಹೆಸರಿಸಲ್ಪಟ್ಟಿದ್ದಾರೆ. ಅಥರ್ವವೇದದ ಪ್ರಕಾರ ಇವರು ಅನೇಕ ಔಷಧಿಗಳನ್ನು ಬಲ್ಲವರು. ತಪಃಶಕ್ತಿಯ ಮಾರ್ಗದರ್ಶಕರು. ಕನ್ಯೆಯರನ್ನು ಹಿಂಬಾಲಿಸುವುದು ಇವರ ಚಟ. ಋತುಮತಿಯಾದ ಕನ್ಯೆಯರು ಇವರ ಅಧೀನ. ಪಿಶಾಚರು, ರಾಕ್ಷಸರು ಮುಂತಾದವರಿಗೆ ಹೆದರುವಂತೆ ಗಂಧರ್ವರಿಗೂ ಜನ ಹೆದರುತ್ತಿದ್ದರು. ಭಯ ನಿವಾರಣೆಗಾಗಿ ತಾಯಿತ ಕಟ್ಟಿಕೊಳ್ಳುತ್ತಿದ್ದರು. ಇವರನ್ನು ಸುಂದರಾಂಗರೆಂದೂ ಕುಬ್ಜರೆಂದೂ ಮೃಗಸ್ವರೂಪಿಗಳೆಂದೂ ವರ್ಣಿಸಲಾಗಿದೆ.

ಇತಿಹಾಸ, ಪುರಾಣಗಳಲ್ಲಿ ಬರುವ ಇವರು ಸ್ವರ್ಗದ ಗಾಯಕರು. ಇಂದ್ರನ ಸಭೆಯಲ್ಲಿಯ ವಾದ್ಯಗೋಷ್ಠಿ ಇವರದು. ಇವರ ಕಲೆ ಸಂಗೀತ. ಇದೇ ಗಾಂಧರ್ವವೆಂಬ ಉಪವೇದವೆನಿಸಿದೆ. ಚಿತ್ರರಥ ಇವರ ಪ್ರಭು. ಜೈನಾಗಮಗಳ ಅಷ್ಟಗಣಗಳಲ್ಲಿ ಗಂಧರ್ವರೂ ಒಂದು ಗುಣ. ಹದಿನೇಳನೆಯ ತೀರ್ಥಂಕರನ ಕಿಂಕರ ಒಬ್ಬ ಗಂಧರ್ವ. ಕೆಲವು ಪುರಾಣಗಳಲ್ಲಿ ಇವರನ್ನು ಕಶ್ಯಪಮುನಿಯ ಮಕ್ಕಳೆನ್ನಲಾಗಿದೆ.

ಗಂಧರ್ವರು ಸರಸಿಗಳು, ಇವರ ಸ್ತ್ರೀಯರು ಅಪ್ಸರಸೆಯರು. ರಂಭೆ, ಊರ್ವಶಿ, ತಿಲೋತ್ತಮೆ, ಮೇನಕೆ, ಘೃತಾಚೀ ಮುಂತಾದ ಸಪ್ತಕನ್ನಿಕೆಯರು ಗಂಧರ್ವಸ್ತ್ರೀಯರಲ್ಲಿ ಪ್ರಸಿದ್ಧರು. ಇಂದ್ರ ಇವರನ್ನು ಹಲವು ವೇಳೆ ವಿಶ್ವಾಮಿತ್ರನೇ ಮುಂತಾದ ಉಗ್ರತಪಸ್ವಿಗಳ ತಪೋಭಂಗಕ್ಕೆ ಉಪಯೋಗಿಸಿಕೊಂಡನೆಂದೂ ಐತಿಹ್ಯ. ಇವರ ಪ್ರೇಮಸಂಬಂಧ ಗಾಂಧರ್ವವೆಂದು ಪ್ರಸಿದ್ಧವಾಗಿದೆ. ಆದ್ದರಿಂದಲೆ ತಾಯಿ ತಂದೆಯರ ಅಥವಾ ನಂಟರಿಷ್ಟರ ಮಧ್ಯಸ್ತಿಕೆ ಇಲ್ಲದೆ ಪ್ರೇಮವೇ ಬುನಾದಿಯಾಗಿ ಆಗುವ ವಿವಾಹ ಸಂಬಂಧವನ್ನು ಗಾಂಧರ್ವ ಎಂದು ಮನುಸ್ಮೃತ್ಯಾದಿಗಳು ವಿವರಿಸುತ್ತವೆ.
(ಸಿ.ಜಿ.ಪಿ.)

**ಗಂಧಹಾರಕಗಳು :** ಅಸಹ್ಯ ವಾಸನೆಗಳನ್ನು ನಾಶಪಡಿಸುವ, ಅವುಗಳ ಉತ್ಪತ್ತಿಯನ್ನು ತಡೆಗಟ್ಟುವ ಇಲ್ಲವೇ ಅವನ್ನು ಮರೆಸುವ ವಸ್ತುಗಳು (ಡೀಓಡರೈಸರ್ಸ್). ಸಾಮಾನ್ಯವಾಗಿ ಗಂಧಹಾರಕಗಳಿಗೆ ಪೂತಿನಾಶಕ ಅಥವಾ ಸೋಂಕು ನಿವಾರಕ ಸಾಮರ್ಥ್ಯವಿರುವುದುಂಟು. ಆದರೆ ಹೀಗಿರಲೇ ಬೇಕೆಂಬ ನಿಯಮವಿಲ್ಲ. ದುರ್ಗಂಧಗಳ ವಿರುದ್ಧ ಹೋರುವುದರ ಬದಲು ಅವು ಉತ್ಪತ್ತಿಯಾಗದಂತೆ ತಡೆಯುವುದೇ ಜಾಣತನ. ಇದಕ್ಕಾಗಿ ಅನುಸರಿಸಬಹುದಾದ ಸರಳ ಕ್ರಮಗಳೆಂದರೆ ಪರಿಸರವನ್ನು ಸ್ವಚ್ಛವಾಗಿಟ್ಟಿರುವುದು. ಬೆವರು, ಹೇನು ಸೀರುಗಳು ಸೇರದಂತೆ ದೇಹವನ್ನು ತಲೆಗೂದಲನ್ನು ದಿನವೂ ತೊಳೆದು ಶುಚಿಯಾಗಿಟ್ಟುಕೊಳ್ಳುವುದು, ಬೆವರು ದೂಳು ಹತ್ತಿ ಕೊಳೆಯಾದ ಬಟ್ಟೆ ಬರೆಗಳನ್ನು ಆಗಾಗಲೇ ಒಗೆದು ಶುಭ್ರಗೊಳಿಸುವುದು, ಬಾಯಿ ದುರ್ಗಂಧವಾಗದಂತೆ ನೋಡಿಕೊಳ್ಳುವುದು, ಮನೆಯ ಒಳ ಹೊರ ಜಾಗಗಳನ್ನು ಪದೇ ಪದೇ ತೊಳೆದು ಶುಚಿಗೊಳಿಸುವುದು. ಮುಖ್ಯವಾಗಿ ಬಚ್ಚಲು ಮತ್ತು ಕಕ್ಕಸುಗಳನ್ನು ಫಿನೈಲು ಮೊದಲಾದವುಗಳಿಂದ ದಿನವೂ ತೊಳೆಯುವುದು– ಈ ಎಲ್ಲ ಎಚ್ಚರಿಕೆ ಕ್ರಮಗಳಿಂದ ಸಾಮಾನ್ಯವಾಗಿ ದುರ್ಗಂಧವನ್ನು ತಡೆಗಟ್ಟಬಹುದು. ಮೇಲಾಗಿ ದುರ್ಗಂಧಕಾರಕಗಳಾದ ಗೊಬ್ಬರ, ಕೊಳೆತ ಆಹಾರ ಪದಾರ್ಥ ಮೊದಲಾದವುಗಳ ಯುಕ್ತ ವಿಲೇವಾರಿ ಅಷ್ಟೇ ಅಗತ್ಯ. ಆಹಾರ ಪದಾರ್ಥಗಳನ್ನು ಶೈತ್ಯಕಾರಕ ಯಂತ್ರದಲ್ಲಿಟ್ಟಿದ್ದರೆ ಅವು ಕೆಟ್ಟು ದುರ್ವಾಸನೆ ಬೀರುವುದಿಲ್ಲ. ಕಸಕುಪ್ಪೆಗಳ ಸಕಾಲಿಕ ವಿನಿಯೋಗದಿಂದ ವಾತಾವರಣ ದುರ್ಗಂಧಮಯವಾಗುವುದು ತಪ್ಪುತ್ತದೆ. ಧಾರಾಳವಾಗಿ ಗಾಳಿ ಸಂಚರಿಸುವ ಮತ್ತು ಸೂರ್ಯ ಪ್ರಕಾಶವಿರುವ ಸ್ಥಳಗಳಲ್ಲಿ ಕೆಟ್ಟವಾಸನೆಗಳಿಗೆ ಅವಕಾಶವಿಲ್ಲ. ಆದರೆ ಮೀನು ಮಾಂಸ ಮೊದಲಾದ ಆಹಾರ ಪದಾರ್ಥಗಳನ್ನು ಬೇಯಿಸುವಾಗ, ತಂಬಾಕಿನ ಚಟವಿರುವವರು ಬೀಡಿ, ಸಿಗರೇಟು, ಚುಟ್ಟ ಇತ್ಯಾದಿಗಳನ್ನು ಸೇದುವಾಗ ಮತ್ತು ರೋಗರುಜಿನಗಳ ದೆಸೆಯಿಂದ ಉದ್ಭವಿಸುವ ವಾಸನೆಗಳು ಅನಿವಾರ್ಯವಷ್ಟೆ. ತಂಬಾಕಿನ ಮತ್ತು ಕೆಲವು ಆಹಾರ ಪದಾರ್ಥಗಳ ವಾಸನೆ ಅವುಗಳ ಹವ್ಯಾಸಿಗಳಿಗೆ ಹಿತವೆನಿಸಿದರೆ ಇತರರಿಗೆ ಅಸಹ್ಯವಾಗಿರಬಹುದು. ಹೀಗಾಗಿ ನಿರ್ದಿಷ್ಟ ವಾಸನೆಯನ್ನು ಸಹಿಸಲು ಸಾಧ್ಯವಿಲ್ಲದವರು ಅದರ ವಿರುದ್ಧ ಬಳಸಲು ಅನುಕೂಲಿಸುವಂತೆ ಅನೇಕಾನೇಕ ಗಂಧಹಾರಕಗಳು ಮಾರುಕಟ್ಟೆಯಲ್ಲಿವೆ.

ಇವುಗಳಲ್ಲಿ ಗ್ಲೈಕಾಲುಗಳ ಪಾತ್ರ ವಿಶಿಷ್ಟ. ವಾಯುಗತವಾಗಿರುವ ಹಲವು ಗಂಧಯುಕ್ತ ವಸ್ತುಗಳನ್ನು ಇವು ವಿಲೀನ ಮಾಡಿಕೊಳ್ಳಬಲ್ಲವು. ಇವನ್ನು ಸಿಂಪಡಿಸಿದಾಗ ಉಂಟಾಗುವ ಗ್ಲೈಕಾಲಿನ ಸಣ್ಣ ಹನಿಗಳು ಗಂಧ ಬೀರುವ ವಸ್ತುಗಳ ಅಣುಗಳನ್ನು ಹೀರಿಕೊಂಡು ನಿಷ್ಕ್ರಿಯಗೊಳಿಸುತ್ತವೆ. ಆವಿರೂಪದಲ್ಲಿ ಬಳಸಿದಾಗ ಅವು ಕ್ರಿಮಿನಾಶಕಗಳಂತೆ ವರ್ತಿಸಿ ವಾಸನೆಗೆ ಕಾರಣವಾದ ಸೂಕ್ಷ್ಮಜೀವಾಣುಗಳನ್ನೇ ನಾಶಪಡಿಸುವುವು. ಅಲ್ಪ ಪರಿಮಾಣದಲ್ಲಿ ಪ್ರಯೋಗಿಸಿದಾಗ್ಯೂ ಗ್ಲೈಕಾಲುಗಳು ವಾಯುಗತ ಬ್ಯಾಕ್ಟೀರಿಯಗಳಿಗೆ ಮಾರಕವಾಗಿರುವುದು ವ್ಯಕ್ತಪಟ್ಟಿದೆ.

ದುರ್ಗಂಧಯುಕ್ತ ಅನಿಲಗಳು ಮತ್ತು ಆವಿಗಳನ್ನು ಹೀರಲು ಪಟುಗೊಳಿಸಿದ ಇಂಗಾಲ ಅತಿ ಪ್ರಶಸ್ತ. ಇದರಲ್ಲಿರುವ ಅಸಂಖ್ಯಾತ ರಂಧ್ರಗಳಲ್ಲಿ ಗಂಧಹಾರಕ ಅಣುಗಳು ಸೆರೆಯಾಗಿ ವಾಸನೆ ಮಾಯವಾಗಿ ಬಿಡುತ್ತದೆ. ಹೀಗೆ ವಾಸನೆಯನ್ನು ಗ್ರಹಿಸಬಲ್ಲ ಇತರ ವಸ್ತುಗಳೆಂದರೆ ಸಿಲಿಕ ಜಲ್ಲಿ, ಕೀಸಲ್‌ಗರ್ ಮತ್ತು ಫುಲ್ಲರ್ ಮೃತ್ತಿಕೆ. ಫಾರ್ಮಲ್ಡಿಹೈಡ್, ಅಸಿಟಾಲ್ಡಿಹೈಡ್ ಮುಂತಾದ ಆವಿಶೀಲ ವಸ್ತುಗಳ ನೀರಿನ ದ್ರಾವಣಗಳಿಗೂ ಗಂಧಗ್ರಹಣಗುಣ ಉಂಟು. ಆದರೆ ಇವುಗಳ ಕಾರ್ಯ ವಿಧಾನವೇ ಬೇರೆ. ಈ ಸಂಯುಕ್ತಗಳ ಅಣುಗಳು ಗಂಧಜನಕ ಅಣುಗಳನ್ನು ವೈಯಕ್ತಿಕವಾಗಿ ಆಕರ್ಷಿಸುತ್ತವೆ. ಅವೆರಡರ ಮಿಲನದಿಂದ ಪರಿಮಳದ ಸಂಕೀರ್ಣ ಅಣುವೊಂದು ರೂಪುಗೊಳ್ಳುವುದು. ಇಲ್ಲದಿದ್ದರೆ ಈ ರಾಸಾನಿಕಗಳು ಮೂಗಿನ ಒಳಪೊರೆಯನ್ನು ಉದ್ರೇಕಿಸಬಲ್ಲವಾದ್ದರಿಂದ ಗಂಧವಾಹಕ ನರ ನಿಶ್ಚೇಷ್ಟಿತವಾಗಬಹುದು. ಆಗ ಎಂಥ ತೀಕ್ಷ್ಣವಾಸನೆಯೂ ನಮ್ಮ ಮೂಗಿಗೆ ಹತ್ತುವುದಿಲ್ಲ. ಮಾರುಕಟ್ಟೆಯಲ್ಲಿರುವ ಗಂಧಹಾರಕಗಳಲ್ಲಿ ಇಷ್ಟು ಪರಿಮಾಣದಲ್ಲಿ ಈ ರಾಸಾಯನಿಕಗಳನ್ನು ಸೇರಿಸಿರುವುದಿಲ್ಲ. ಅಲ್ಲದೆ ಗಂಧಹಾರಕಗಳೊಡನೆ ಚಂಚಲ ತೈಲಗಳನ್ನು ಕೂಡಿಸಿ ಅವುಗಳಿಗೆ ಸುವಾಸನೆ ಉಂಟಾಗುವಂತೆ ಮಾಡಿರುತ್ತಾರೆ. ಪರಿಮಳಗಳ ಉಪಯೋಗಕ್ಕೆ ನಾಂದಿಯಾದುದು ಹೀಗೆ. ಆದರೆ ಇವು ದುರ್ನಾತವನ್ನು ಮರೆ ಮಾಡಬಲ್ಲುವೇ ವಿನಾ ನಿವಾರಿಸುವುದಿಲ್ಲ.

ದುರ್ಗಂಧವನ್ನು ಹುಟ್ಟಿಸುತ್ತಿರುವ ಸೂಕ್ಷ್ಮಜೀವಾಣುಗಳನ್ನು ಕೊಂದು ಮೂಲವನ್ನೇ ಚಿವುಟಿ ಹಾಕುವುದು ಯುಕ್ತಕ್ರಮ. ಪೂತಿನಾಶಕಗಳು ಮತ್ತು ಸೋಂಕು ನಿವಾರಕಗಳು ಕಾರ್ಯನಿರ್ವಹಿಸುವುದು ಹೀಗೆ. ಉದಾಹರಣೆಗಳು ಹಲವು. ಇವುಗಳಲ್ಲಿ ಕಲ್ಲಿದ್ದಲ ಡಾಂಬರಿನಿಂದ ಪಡೆಯಬಹುದಾದ ಫೀನಾಲ್ ಮತ್ತು ಕ್ರೆಸಾಲ್, ಹೈಡ್ರೋಜನ್ ಪರಾಕ್ಸೈಡ್ ಮತ್ತು ಪೊಟ್ಯಾಸಿಯಂ ಪರ್ಮ್ಯಾಂಗನೇಟುಗಳಂಥ ಉತ್ಕರ್ಷಣಕಾರಿಗಳು, ಬೋರಿಕ್ ಮತ್ತು ಸ್ಯಾಲಿಸಿಲಿಕ್ ಆಮ್ಲಗಳು, ಹ್ಯಾಲೋಜನ್ನುಗಳಾದ ಕ್ಲೋರಿನ್ ಬ್ರೋಮಿನ್ ಮತ್ತು ಅಯೊಡೀನುಗಳು; ಬೆಳ್ಳಿಯ ನೈಟ್ರೇಟ್, ರಸಕರ್ಪೂರ (ಮರ್ಕ್ಯೂರಿಕ್ ಕ್ಲೋರೈಡ್) ಮುಂತಾದ ಲೋಹ ಲವಣಗಳು ಮುಖ್ಯವಾದವು.

ಪ್ರತಿನಿತ್ಯ ದಂತಧಾವನಕ್ಕೆ ಬಳಸುವ ಹಲ್ಲುಸರಿ (ಟೂತ್‌ಪೇಸ್ಟು) ಗಳಲ್ಲಿ ಒಂದಲ್ಲ ಒಂದು ಗಂಧಹಾರಕ ಇದ್ದೇ ಇರುತ್ತದೆ. ಹೆಕ್ಸಕ್ಲೋರೋಫಿನ್ ಇರುವ ಸರಿಯಿಂದ ಹಲ್ಲುಜ್ಜಿದರೆ ಬಾಯವಾಸನೆ ತಾತ್ಕಾಲಿಕವಾಗಿ ಹೋಗುತ್ತದೆ. **(ಎಚ್.ಜಿ.ಎಸ್.)**

**ಗಂಭೀರ ನಾಟಕ :** ರೂಪಕ ಪ್ರಪಂಚದ ಎರಡು ಮುಖ್ಯ ವಿಭಾಗಗಳಲ್ಲೊಂದು (ಟ್ರಾಜಡಿ.), ಇನ್ನೊಂದು ಹರ್ಷನಾಟಕ (ಕಾಮೆಡಿ). ಟ್ರ್ಯಾಜಡಿ ಎಂಬ ಮಾತಿನ ವ್ಯಾಖ್ಯಾನದಲ್ಲಿ ಬಂದಿರುವ ಗಾಂಭೀರ್ಯ ಕೇವಲ ನಾಟಕಗಳಿಗೆ ಮಾತ್ರ ಅನ್ವಯವಾಗುತ್ತದೆಯೆ, ಇತರ ಪ್ರಕಾರಗಳಲ್ಲೂ ಅದಿದ್ದು ಅದನ್ನೂ ಟ್ರ್ಯಾಜಡಿ ಎಂದು ಕರೆಯಬಹುದೆ, ನಿಜವಾಗಿ ಟ್ರ್ಯಾಜಡಿಯ ತತ್ತ್ವ ಏನು ಎಂಬ ವಿಚಾರ ಈ ಲೇಖನದಲ್ಲಿ ಬಂದಿದೆ. ತತ್ತ್ವದ ಹಿನ್ನೆಲೆಯಲ್ಲಿ ಗಂಭೀರ ನಾಟಕದ ಸ್ಥೂಲ ಇತಿಹಾಸವೂ ಇದೆ.

ಟ್ರ್ಯಾಜಡಿ ಎಂಬ ಪದಕ್ಕೆ ಅರ್ಥ ನಿರ್ದಿಷ್ಟವಾದದ್ದು ಈಚೆಗೆ. ಹಿಂದೆ ಅದನ್ನು ನಾಟಕಕ್ಕೇ ಅಲ್ಲದೆ ಕಾವ್ಯಕ್ಕೂ ಅನ್ವಯಿಸುವ ವಾಡಿಕೆಯಿತ್ತು. ಹೋಮರನ ಭವ್ಯ ಕಾವ್ಯಗಳೆರಡೂ ಪ್ಲೇಟೋವಿನ ದೃಷ್ಟಿಯಲ್ಲಿ ಟ್ರ್ಯಾಜಡಿ ; ಏಕೆಂದರೆ ಅವುಗಳಲ್ಲಿ ಉದಾತ್ತ ಗಾಂಭೀರ್ಯ ತುಂಬಿದೆ. 450ರಲ್ಲಿ ಹೊರಬಂದ ಒಂದು ಕಥನಕಾವ್ಯ ಒರೆಸ್ಟೀಸ್ ಎಂಬುದಕ್ಕೆ ಅದರ ಕವಿ ಇರಿಸಿದ ಅಂಕಿತ ಟ್ರ್ಯಾಜಡಿ. ಬಹಳ ಕಾಲ ಓವಿಡ್ ಮುಂತಾದವರನ್ನು ಟ್ರ್ಯಾಜಿಕ್ ಕವಿಗಳೆಂದೆ ಕರೆದರು. 11 – 12 ನೆಯ ಶತಮಾನಗಳಲ್ಲಿ ಬಂದ ಸ್ಕ್ಯಾಂಡನೇವಿಯದ ರಾಷ್ಟ್ರಕಾವ್ಯಗಳಾದ ಎಡ್ಡಗಳೂ ಟ್ರ್ಯಾಜಡಿಯೆಂದೇ ಹಲವು ವಿದ್ವಾಂಸರಿಗೆ ತೋರಿಬಂತು ; ಅವುಗಳಲ್ಲಿ ವರ್ಣಿತವಾಗಿರುವ ವೀರ ವ್ಯಕ್ತಿಗಳಿಗೆ ಅಗಾಧ ಸಾಮರ್ಥ್ಯವೂ ವಿಧಿಯನ್ನು ಎದುರಿಸಿ ನಗುವ ಕೆಚ್ಚೆದೆಯೂ ಉಂಟು. ಮಧ್ಯಯುಗದ ಪೂರ್ತ, ಟ್ರ್ಯಾಜಡಿಯೆಂದರೆ ಒಂದು ಬಗೆಯ ಕಥೆ ; ಅತ್ಯುನ್ನತಿಗೆ ಏರಿ ಅದೃಷ್ಟದ ಗೊಡ್ಡಾಟಕ್ಕೆ ಪಕ್ಕಾಗಿ ಅಧೋಗತಿಗೊ ಸರ್ವ ನಾಶಕ್ಕೊ ಇಳಿಯುವ ಹತಭಾಗ್ಯನ ಅಖ್ಯಾನ. ಮಧ್ಯಯುಗದ ಮೂರು ನಾಲ್ಕು ವಿಧದ ನಾಟಕ ಯಾವುದಕ್ಕೂ ಟ್ರ್ಯಾಜಡಿ, ಕಾಮೆಡಿ ಎಂಬ ಹೆಸರಿರಲಿಲ್ಲ. ಪ್ರಾಚೀನ ಶಿಷ್ಟ ಸಾಂಪ್ರದಾಯಿಕ ಟ್ರ್ಯಾಜಡಿಗೂ ಮಧ್ಯಯುಗದ ಕಥಾ ಟ್ರ್ಯಾಜಡಿಗೂ ವ್ಯತ್ಯಾಸ ತೋರಿಸುವುದಕ್ಕೆ ಎರಡನೆಯದನ್ನು ಗಾಥಿಕ್ ಟ್ರ್ಯಾಜಡಿ ಎನ್ನಬೇಕು ಎಂದು ಒಬ್ಬ ಪಂಡಿತನ ಸಲಹೆ.

ಆದರೂ ಹೊಸಹುಟ್ಟಿನಿಂದ ಈಚಿನ ಆಧುನಿಕ ಅವಧಿಗಳಲ್ಲಿ ಕಥೆ ಕಾದಂಬರಿಗಳನ್ನು ಟ್ರ್ಯಾಜಡಿ ಎಂದು ನಿರ್ದೇಶಿಸುವ ಪದ್ಧತಿ ಎಂದೂ ಕಂಡುಬರಲಿಲ್ಲ; ಸಾಹಿತ್ಯ ಪ್ರಭೇದಗಳಲ್ಲಿ ಒಂದಾದ ರೂಪಕಕ್ಕೇ ಅದು ಮೀಸಲು. ಅರಿಸ್ಟಾಟಲ್ ಭವ್ಯಕಾವ್ಯ, ಟ್ರ್ಯಾಜಡಿ, ಕಾಮೆಡಿ, ಚರಿತ್ರೆ– ಎಂಬ ಸಾಹಿತ್ಯ ಪ್ರಕಾರಗಳನ್ನು ವಿಂಗಡಿಸಿ ಅವುಗಳ ಬೇರೆ ಬೇರೆ ಗುಣಧರ್ಮವನ್ನು ಸ್ಥಾಪಿಸಿ ಸೂತ್ರೋಚ್ಚಾರಣೆ ಮಾಡಿದ. ಪಾಶ್ಚಾತ್ಯ ಲೋಕದಲ್ಲಿ ಅದಕ್ಕಿರುವ ಮರ್ಯಾದೆ ಪ್ರಭಾವಗಳು ಇನ್ನೂ ಕುಗ್ಗಿಲ್ಲ. ಇತರ ಸಾಹಿತ್ಯಪ್ರಕಾರ ಅಲ್ಲಲ್ಲಿ ಟ್ರ್ಯಾಜಡಿಯನ್ನು ನೆನಪಿಗೆ ತಂದರೆ ಅದನ್ನು ಟ್ರ್ಯಾಜಿಕ್ ಕಾವ್ಯ ಅಥವಾ ಟ್ರ್ಯಾಜಿಕ್ ಕಾದಂಬರಿ ಎನ್ನುತ್ತಾರೆಯೇ ವಿನಾ ಖಚಿತವಾಗಿ ಟ್ರ್ಯಾಜಡಿ ಎನ್ನಲಾರರು. ಟ್ರ್ಯಾಜಿಕ್ ಎಂಬ ವಿಶೇಷಣವನ್ನು ಕಥೆ, ಭಾವಗೀತೆ, ಪ್ರಬಂಧ ಯಾವುದಕ್ಕೆ ಬೇಕಾದರೂ ಅಂಟಿಸಬಹುದು; ಘಟನೆ, ದೃಶ್ಯ, ಅನುಭವ ಮೊದಲಾದುವಕ್ಕೂ ಅಂಟಿಸಬಹುದು–ಕಾರಣವಿದ್ದರೆ.

ಗಂಭೀರನಾಟಕದ ಲಕ್ಷಣ ನಿರೂಪಣೆಯನ್ನು ಅರಿಸ್ಟಾಟಲ್ ಹೀಗೆ ಮಾಡಿದ : ಟ್ರ್ಯಾಜಡಿ ಎಂಬುದು ಗಂಭೀರವೂ ಸಮಗ್ರವೂ ಬೃಹತ್ತುಳ್ಳದ್ದೂ ಆದ ಒಂದು ಘಟನಾವಳಿಯ ಪ್ರತಿರೂಪ ; ಭಾಷೆ ಅಂದಗೊಳಿಸಿದ್ದೂ ವೈವಿಧ್ಯ ಪೂರ್ಣವಾದ್ದೂ ಆಗಿರಬೇಕು; ನಿರೂಪಣೆಯ ವಿಧಾನ–ಕಥನವಲ್ಲ–ಅಭಿನಯ. ಮರುಕ ಭೀತಿಗಳ ಮೂಲಕ ಅಂಥ ಭಾವಗಳ ಉಲ್ಬಣ ಮತ್ತು ಉಪಶಮನ ಉಂಟಾಗುತ್ತವೆ. ನಾಟಕಕ್ಕೆ ಆರು ಅಂಗಗಳು. ಅವುಗಳಲ್ಲಿ ಕ್ರಮವಾಗಿ ವಸ್ತುಸಂವಿಧಾನ, ಪಾತ್ರ ವರ್ಗ, ಚಿಂತನೆಗಳು, ಭಾಷೆ, ಸಂಗೀತ ಮತ್ತು ವಸನ ಭೂಷಣಾದಿ ರಂಗಸಜ್ಜುಗಳಿಗೆ ಯಥೋಚಿತಸ್ಥಾನ. ಅವನ ಅಭಿಮತದಂತೆ ಕಡೆಯದಾದ ಅಲಂಕರಣ ಅಷ್ಟೇನೂ ಮುಖ್ಯವಲ್ಲ. ಈ ಹೇಳಿಕೆಗೆ ಮೊದಲೇ ಭವ್ಯಕಾವ್ಯವೂ ಟ್ರ್ಯಾಜಡಿಯೂ ಉಚ್ಚಮಟ್ಟದ ವ್ಯಕ್ತಿಗಳ ಚಲನೆ ವಲನೆಯನ್ನು ಪ್ರತಿಪಾದಿಸುತ್ತವಾಗಿ ಆ ಗುಣದಲ್ಲಿ ಅವೆರಡಕ್ಕೂ ಸಮಾನತೆ ಎಂದು ತಿಳಿಸಿದ್ದಾನೆ. ಅಲ್ಲದೆ ಪಾತ್ರಕ್ಕಿಂತ ಘಟನಾವಳಿಯೇ ಪ್ರಧಾನವೆಂದೂ ಅವನ ದೃಢಾಭಿಪ್ರಾಯವಾದ್ದರಿಂದ ವಸ್ತುಸಂವಿಧಾನವೇ ಗಂಭೀರ ನಾಟಕದ ಆತ್ಮ ಅಥವಾ ಸರ್ವಸ್ವ. ಅರಿಸ್ಟಾಟಲನ ತರುವಾಯ ಬಂದವರು ಅವನಿಂದ ಸೂಚಿತವಾಗಿವೆಯೆಂದು ಬಗೆದು ವಚನಿಸಿದ ಮೂರು ಏಕತೆಗಳು (ಕಾರ್ಯಾವಳಿ, ಸ್ಥಳ, ಕಾಲಗಳ ವಿಚಾರವಾದ ಹ್ರಸ್ವತೆ) ಎಂಬುದನ್ನು ಅವನ ತಲೆಗೇ ಕಟ್ಟಿದರು. ಪ್ರಾಚೀನ ಗ್ರೀಕ್ ಗಂಭೀರನಾಟಕಕ್ಕೆ ಹೊಂದಿಕೊಳ್ಳುವ ಈ ನಿಯಮಾವಳಿಯಲ್ಲಿ ಕಾಲಪುರುಷನ ವಿರೋಧಕ್ಕೆ ಬಗ್ಗದೆ ಉಳಿದು ನಿಲ್ಲಬಲ್ಲ ಅಂಶ. ಸರಿಸುಮಾರಾಗಿ ಸಕಲ ಗಂಭೀರನಾಟಕಕ್ಕೂ ಅನ್ವಯಿಸಬಲ್ಲ ಅಂಶ, ಎರಡೇ ಎರಡು: ನಾಟಕದ ವಿಷಯಗಾಂಭೀರ್ಯ ಮತ್ತು ಗಂಭೀರಪರಿಣಾಮ. ನಾನಾ ಮುಖವಾಗಿ ಅನಿವಾರ್ಯವಾಗಿಯೂ ತರ್ಕಸಮ್ಮತವಾಗಿಯೂ ಸಹಜವಾಗಿಯೂ ಬಲಿಷ್ಠವಾಗಿಯೂ ಗಂಭೀರ ನಾಟಕ ಬೆಳೆದು ಅರಿಸ್ಟಾಟಲನ ಆಜ್ಞೆಗಳಲ್ಲಿ ಹಲವನ್ನು ಒತ್ತಟ್ಟಿಗೆ ನೂಕಿ ಬಿಟ್ಟಿತು. ಅದು ನ್ಯಾಯವೆಂದೇ ಒಪ್ಪಬೇಕು. ಅರಿಸ್ಟಾಟಲ್ ಜೀವಶಾಸ್ತ್ರದ ಅಧ್ಯಯನಿಯಾದ್ದರಿಂದ ಟ್ರ್ಯಾಜಡಿ ಮುಂದೆ ಯಾವ ಯಾವ ರೂಪಾಂತರಗಳಿಸುವುದೊ

ಹೇಳಲಾಗದೆಂದು ಭವಿಷ್ಯ ನುಡಿದಿದ್ದ. ಯಾವುದನ್ನು ಕುರಿತು ಮಾನವನೊಬ್ಬ ಶಾಶ್ವತವೂ ವಿಶ್ವವ್ಯಾಪಕವೂ ಆದ ಲಕ್ಷಣನಿರೂಪಣೆಯನ್ನು ನಿರ್ಮಿಸಲಾರ. ಸೌಖ್ಯದಿಂದ ಪ್ರಾರಂಭಗೊಂಡು ಅಸೌಖ್ಯದಲ್ಲಿ ಕೊನೆಗೊಳ್ಳುವುದೇ ಟ್ರ್ಯಾಜಡಿಯೆಂದು ಡಾಂಟೆ ಮತ್ತು ಚಾಸರ್ ಒತ್ತಿಹೇಳಿದರು. ಕಾಳಗವಿದ್ದರೆ ಟ್ರ್ಯಾಜಡಿ, ಇಲ್ಲದಿದ್ದರೆ ಕಾಮೆಡಿ ಎಂದು ಹ್ಯಾನ್ಸ್ ಸ್ಯಾಕ್ಸ್ ಸಾರಿದ. ಉನ್ಮಾದಕ್ಕೆ ಸಮನಾದ ತೀವ್ರಾವೇಶವೇ ಟ್ರ್ಯಾಜಡಿಯನ್ನು ಹೆರುವ ತಾಯಿ ಎಂಬುದರಲ್ಲಿ ನೀಷೆಗೆ ನಿಸ್ಸಂದೇಹ. ಅದೂ ಸರಿ ಇದೂ ಸರಿ ಎಂಬ ಎರಡು ನ್ಯಾಯಗಳ ಪರಸ್ಪರ ಸೆಣಸಾಟವೇ ಆದರ್ಶ ಟ್ರ್ಯಾಜಡಿ ಎಂದು ಹೆಗಲ್ ವಾದಿಸಿದ. ಹೀಗೆ ಗುಣಲಕ್ಷಣಗಳನ್ನು ಹೇಳುವ ಸಿದ್ಧಾಂತಿಗಳೆಲ್ಲ ತಮತಮಗೆ ಅಚ್ಚುಕಟ್ಟಾಗಿ ಹಿಡಿಸಿದ ಗಂಭೀರನಾಟಕವನ್ನು ಮಾತ್ರ ಕಣ್ಣ ಮುಂದೆ ಇಟ್ಟುಕೊಂಡಿದ್ದಂತೆ ಭಾಸವಾಗುತ್ತದೆ. ಆದ್ದರಿಂದ ಇದಾವುದನ್ನೂ ಸಮಗ್ರವಾದ ಲಕ್ಷಣ ನಿರೂಪಣೆಯೆಂದು ಒಪ್ಪುವುದು ಕಷ್ಟ.

ಪ್ರ. ಶ.ಪೂ. 5ನೆಯ ಶತಮಾನದಿಂದ ಪ್ರಾಯಶಃ 19ನೆಯದರ ವರೆಗೂ ಗಂಭೀರನಾಟಕದ ಮುಖ್ಯ ಪಾತ್ರಗಳು ರಾಜರೋ ದಂಡಾಧೀಶರೋ ಉನ್ನತ ಪದವಿಯವರೋ ಆಗಿರಲೇಬೇಕಾಗಿತ್ತು. ಆಗಾಗ ಹೊರಬಂದ ಕೆಲವು ಗೃಹಕೃತ್ಯ ನಾಟಕಗಳಲ್ಲಿ ಮಧ್ಯಮ ವರ್ಗದವರಿಗೆ ನಾಯಕಸ್ಥಾನ ದೊರಕಿದರೂ ಅದು ಪ್ರಭಾವ ಬೀರದೇ ಹೋಯಿತು. 19ನೆಯ ಶತಮಾನದಲ್ಲಿ ವಾಸ್ತವತೆ ಸ್ವಾಭಾವಿಕತೆಗಳು ಹಬ್ಬಿ, ಹರಡಿ, ರೈತ, ಕಾರ್ಮಿಕ ಮುಂತಾದವರ ಜೀವನವೂ ಗಂಭೀರನಾಟಕಕ್ಕೆ ಕಥಾವಸ್ತು ಆಗಬಹುದೆಂಬ ನಿಜಾಂಶ ಪ್ರಾಯೋಗಿಕ ಸಮರ್ಥನೆ ಪಡೆಯಿತು. ಇಬ್ಸನ್, ಸ್ಟ್ರಿಂಡ್‌ಬರ್ಗರ ಗಂಭೀರ ನಾಟಕಗಳ ತುಂಬ ಮಧ್ಯಮವರ್ಗದ ಪಾತ್ರಗಳೇ ಇವೆ. ಟಾಲ್‌ಸ್ಟಾಯ್, ಹಾಪ್‌ಮನ್, ಗಾರ್ಕಿ ಮೊದಲಾದವರಿಗೆ ಸಾಮಾನ್ಯ ಜನರೇ ಸಾಕು. ಇನ್ನು ಕೆಲವು ರೂಪಕಗಳಲ್ಲಿ ಕುಲವೃತ್ತಿ, ಯಾವುದೋ ಗೋಚರಿಸದ, ಕೊನೆಗೆ ಹೆಸರೂ ಇಲ್ಲದ ಶ್ರೀಮಾನ್ ಸೊನ್ನೆ, ಮಾನವ, ಮಗ, ಬೂದುಬಟ್ಟೆಯವ ಮುಂತಾದ ವ್ಯಕ್ತಿಗಳ ದುಃಖದಲ್ಲಿ ನಾವು ಸಹಭಾಗಿಗಳಾಗುತ್ತೇವೆ. ಪದಚ್ಯುತನಾದ ಭೂಪಾಲನ ಶೋಕ ಎಷ್ಟು ಅಪಾರವೋ ಗಳಿಸಿದ್ದ ಹಲವು ಕಾಸುಗಳನ್ನು ಕಳೆದುಕೊಂಡ ಬಡ ಯಾಚಕಿಯ ಅಳಲೂ ಅಷ್ಟೇ ಅಪಾರ; ಅವನು ಸಾಲಂಕೃತ ಶೈಲಿಯಲ್ಲಿ ಪ್ರೌಢವಾಗಿ ರೋದಿಸಬಹುದು, ಇವಳು ಪುನರುಕ್ತಿಯ, ಮಾತಾಡುವ ರೀತಿಯಲ್ಲಿ ಗೋಳಿಡಬಹುದು; ಅಳು ಆಳುವೇ ಒಟ್ಟಿನಲ್ಲಿ.

ಪ್ರ.ಶ.ಪೂ. 5ನೆಯ ಶತಮಾನದ ಅನ್ಯಾದೃಶ ಗ್ರೀಕ್ ಗಂಭೀರ ನಾಟಕ ದುರಂತದಿಂದ ಕೊನೆಗೊಳ್ಳಬಹುದಾಗಿತ್ತು; ಇಲ್ಲವೆ ಸುಖಾಂತವಾಗಿ ಕೊನೆಗೊಳ್ಳಬಹುದಾಗಿತ್ತು. ಅದನ್ನು ಕಂಡ ಅರಿಸ್ಟಾಟಲನೇ ಗಂಭೀರನಾಟಕದ ಕಥಾವಸ್ತು ವಿನ್ಯಾಸಕ್ಕೆ ಒಂದು ಸ್ಪಷ್ಟ ಸ್ಥಿತಿಬದಲಾವಣೆ (ಪೆರಿಪೆಟೈಯ) ಅತ್ಯವಶ್ಯಕವೆಂದು ನಮೂದಿಸಿ, ಆ ಬದಲಾವಣೆ ಸೌಭಾಗ್ಯದಿಂದ ದೌರ್ಭಾಗ್ಯಕ್ಕೂ ದೌರ್ಭಾಗ್ಯದಿಂದ ಸೌಭಾಗ್ಯಕ್ಕೂ ತಿರುಗಬಹುದೆಂದು ಟಿಪ್ಪಣಿಬರೆದ. ಮರಣ ಇಲ್ಲವೆ ಸರ್ವನಾಶ ಕಡ್ಡಾಯವಾಗಿ ಒದಗಲೇಬೇಕೆಂದು ಅವನೆಂದೂ ಹಠ ಹಿಡಿಯಲಿಲ್ಲ. ಆದರೆ ಮಧ್ಯಯುಗದ ಮತ್ತು ಹೊಸ ಹುಟ್ಟಿನ ನಾಟಕಕಾರರಿಗೆ ಸಮಯ ಸಂದರ್ಭ ಒತ್ತಡದ ಫಲವಾಗಿ ದುರಂತವೇ ಟ್ರ್ಯಾಜಡಿಗೆ ಯುಕ್ತವೂ ಸಮರ್ಪಕವೂ ಆದ ಸಮಾಪ್ತಿಯೆಂದು ಸ್ವತಸ್ಸಿದ್ಧ ಸೂತ್ರವಾಯಿತು. ಪಾಶ್ಚಾತ್ಯರಿಗೆ ಅದೇತಕ್ಕೊ ಕೇಡು ಹಾನಿಗಳಿಂದ ಮುಕ್ತಾಯವಾಗುವ ಕಥೆ ಕಾದಂಬರಿ ರೂಪಕಗಳೇ ಹೆಚ್ಚು ಪ್ರಿಯವಾದುವು; ಹೆಚ್ಚು ಸ್ವಾರಸ್ಯವುಳ್ಳವೂ ಹೆಚ್ಚು ಸತ್ತ್ವಮಯವೂ ಆಗಿ ಕಂಡುವು; ಅಷ್ಟೇ ಅಲ್ಲದೆ, ಅದೇ ಗಂಭೀರನಾಟಕ ಎಂದು ಅವರು ತಿಳಿದರು. ತದ್ವಿರುದ್ಧವಾದ ಅಂತ್ಯವುಳ್ಳದ್ದು ಗಂಭೀರ ನಾಟಕವಲ್ಲ ಎಂದು ಅವರಲ್ಲಿ ಅನೇಕರ ಘೋಷಣೆ. ಹಾಗು ಪೂರ್ವವಲಯದಲ್ಲಿ ಗಂಭೀರನಾಟಕ ಕಾಣಲೇ ಇಲ್ಲ. ಏತಕ್ಕೆಂದರೆ ಅಲ್ಲಿನ ಜನರಿಗೆ ಘನವಿಪತ್ತಿನ ವಿಷಾದವನ್ನು ಸಹಿಸುವ ತ್ರಾಣವಿಲ್ಲ– ಎಂದು ಹಂಗಿಸಿದ್ದಾರೆ, ಕೆಲವು ವಿದ್ವಾಂಸರು. ವಿಷಯಗಳನ್ನು ಚೆನ್ನಾಗಿ ಪರಿಶೀಲಿಸದೆ ಪೂರ್ವದೇಶದ ಕೆಲವು ಪಂಡಿತರು ಆ ಆರೋಪಕ್ಕೆ ತಲೆಬಾಗಿಸಿದ್ದಾರೆ. ದಿಟವಾಗಿ ಈ ಬಗೆಯ ಉಕ್ತಿ ಸತ್ಯಾಂಶದಿಂದ ದೂರ. ಗ್ರೀಕ್ ಗಂಭೀರ ನಾಟಕದ ಪ್ರತ್ಯಕ್ಷ ಪ್ರಮಾಣ, ಅರಿಸ್ಟಾಟಲನ ಅಸಂದಿಗ್ಧ ವಚನ, ಹಾಗಿರಲಿ; ಜರ್ಮನಿಯ ಸುಖಾಂತ ಟ್ರ್ಯಾಜಡಿ ಮತ್ತು ಫ್ರಾನ್ಸಿನ ಸುಖಾಂತ ಟ್ರ್ಯಾಜಡಿ ಕಣ್ಣಿದುರಿಗೆ ಇಲ್ಲವೆ ಸಾವನ್ನಿಡದೆ ಟ್ರ್ಯಾಜಡಿ ಕಟ್ಟುತ್ತಾನೆ ರಾಸೀನ್ –ಎಂಬ ಹೇಳಿಕೆ ಇಲ್ಲವೆ ಚೆಕಾಫ್, ಸ್ಟ್ರಿಂಡಬರ್ಗ ಮೊದಲಾದವರ ಹಲವು ಗಂಭೀರ ನಾಟಕಗಳಲ್ಲಿ ಅಂತ್ಯದ ಪರಿಸ್ಥಿತಿ ಆದಿಯಲ್ಲಿ ಇದ್ದುದಕ್ಕೇ ಹಿಮ್ಮರಳುತ್ತದೆ, ಅನೇಕ ಆಗುಹೋಗಿನ ಕೊನೆಯಲ್ಲಿ. ನಾಟಕದ ನಿಜರೂಪವನ್ನು ಅಭಿವ್ಯಕ್ತಿಸುವುದು ಅದರ ಅಂತ್ಯವಲ್ಲ ಆದಿಯೂ ಅಲ್ಲ, ಅದರ ಸುದೀರ್ಘ ಮಧ್ಯಭಾಗ. ನಿಷ್ಪಕ್ಷಪಾತ ದೃಷ್ಟಿಯಿಂದ ಪರಾಮರ್ಶೆ ನಡೆಸಿ ನೋಡಿದಲ್ಲಿ ಗಂಭೀರ ನಾಟಕದ ಅಂತ್ಯ ಸುಖವೂ ಅಲ್ಲ, ಅಸುಖವೂ ಅಲ್ಲ, ಒಂದು ಬಗೆಯ ವಿಚಿತ್ರ ಮಿಶ್ರಣದ ಸಮಾಧಾನ, ಗಂಭೀರ ಶಾಂತಿ, ಅದರ ಬಗ್ಗೆ ಇನ್ನೆರಡು ಮಾತು ಮುಂದೆ ಬರುತ್ತದೆ.

ಗಂಭೀರ ನಾಟಕದ ಮುಖ್ಯವೂ ರಸವತ್ತೂ ಆದ ಭಾಗ ನಾಯಕ ನಾಯಕಿಯರ ವಿಶಿಷ್ಟ ಸೊಬಗಿನ ಕಥೆ ಅಥವಾ ಕಥಾನಕ. ಅದು ಸಾಮಾನ್ಯವಾಗಿ ಸಂತಸ ಪ್ರಮುಖವಲ್ಲ; ಸಂಕಟಪ್ರಮುಖ. ಅಡ್ಡಿ ಅಡಚಣೆಗಳ ಎದುರು ಹೋರಾಟ, ಆಶಾಭಂಗ, ಮಬ್ಬು, ಮಬ್ಬು ಕತ್ತಲೆ, ಅಸಹಾಯಕತೆ, ನರಳಿಕೆ, ನೋವು ಇತ್ಯಾದಿ ಅಹಿತಸಂಗತಿಗಳ ಇರುಕಿನಲ್ಲಿ ಸಿಕ್ಕಿಕೊಂಡು ಸ್ತ್ರೀಪುರುಷರು ತಡವರಿಸುತ್ತಾರೆ, ತೊಳಲುತ್ತಾರೆ ಮತ್ತೆ ಪ್ರಯತ್ನಿಸುತ್ತಾರೆ, ಗೆಲ್ಲುತ್ತಾರೆ, ಸೋಲುತ್ತಾರೆ. ಅವರ ಬಾಳಿನ ವೈಯಕ್ತಿಕ ವಿದ್ಯಮಾನಗಳನ್ನೇ ಅಲ್ಲದೆ ಅವುಗಳ ಹಿಂದೆ ಸುಳಿದಾಡುವ ಮಾನವಿಕ ಸಮಸ್ಯೆಗಳನ್ನೂ ನಾವು ಲಕ್ಷಿಸುತ್ತೇವೆ. ಇಂಥ ಕಷ್ಟನಷ್ಟ ಏತಕ್ಕೆ ಬಂತು, ಅದಕ್ಕೆ ಯಾರು ಕಾರಣ. ಈ ಸೌಖ್ಯ ಸಂತೋಷ ಮೊದಲೇ ಏತಕ್ಕೆ ಬರಲಿಲ್ಲ. ಇಷ್ಟೊಂದು ರಂಪ ರಾದ್ಧಾಂತ ಆಗಲೇಬೇಕಾಗಿತ್ತೆ, ಎಲ್ಲಕ್ಕೂ ಜವಾಬ್ದಾರ ಮನುಷ್ಯನೆ ಅಥವಾ ಮನುಷ್ಯೇತರ ಶಕ್ತಿಗಳೆ ಮುಂತಾದ ಪ್ರಶ್ನೆಗಳು ಆಕೃತಿಗೊಂಡು ಅಡ್ಡಾಡುತ್ತವೆ, ನಮ್ಮ ಮುಂದೆ. ಒಳ್ಳೆಯದು ಕೆಟ್ಟದು, ಅನ್ಯಾಯ ನ್ಯಾಯ, ರಾಗಾವೇಶ ವಿವೇಕ–ಇತ್ಯಾದಿ ದ್ವಂದ್ವ ತತ್ತ್ವಗಳೂ ನಮ್ಮ ಮನಸ್ಸಿಗೆ ಹೊಳೆಯದೇ ಇರುವು. ಸಾಧಾರಣ ನಾಟಕಕಾರರು ತಮ್ಮ ಜನಾಂಗದ ಮತ್ತು ತಮ್ಮ ಕಾಲದ ಧಾರ್ಮಿಕ ನಂಬಿಕೆ ಎಂತೊ ಅಂತೆಯೇ ವಿಸ್ತರಿಸುತ್ತಾರೆ, ನಾಟಕದ ಕಥಾಸರಣಿಯನ್ನು. ಪುಷ್ಕಳ ದೀಕಶಕ್ತಿಯುತರೂ ಪ್ರಚಂಡ ಪ್ರತಿಭಾಶಾಲಿಗಳೂ ಆದ ಕವಿವರರಾದರೊ ತಮ್ಮದೇ ಆದ ಆಲೋಚನಾ ಜಾಲವನ್ನು ಇಡುತ್ತಾರೆ, ನಮ್ಮ ಮುಂದೆ. ದೇವತೆಗಳು ಮತ್ಸರಗ್ರಸ್ತರು, ನರರಿಗೆ ಹುಚ್ಚುಹಿಡಿಸಿ ಕೇಡಿಗೆಳೆದು ಅವರನ್ನು ಕೊಲ್ಲುತ್ತಾರೆ ಎಂಬುದು ಪ್ರಚಾರದಲ್ಲಿದ್ದಾಗ, ಈಸ್ಕಿಲಸ್ ಅಹಂಕಾರಮತ್ತರು ಅತಿರೇಕಕ್ಕೆ ಹೋಗಿ ಪಾತಕಿಗಳಾಗಿ ತಮ್ಮ ಪತನಕ್ಕೆ ತಾವೇ ಕಾರಣರಾಗುತ್ತಾರೆ; ಮಿತಿಯನ್ನು ಅರಿತ ನಮ್ರ ಮನುಷ್ಯರಿಗೆ ಸದಾ ನೆಮ್ಮದಿ ಎಂದು ಘಂಟಾಘೋಷವಾಗಿ ಹೇಳಿದ. ವಿಧಿಯ ಚಾಂಚಲ್ಯ, ಗ್ರಹಗಳ ವಕ್ರ ದೃಷ್ಟಿಗಳನ್ನು ಸ್ವಲ್ಪಮಟ್ಟಿಗೆ ಒಪ್ಪಿಕೊಂಡರೂ ಷೇಕ್ಸ್‌ಪಿಯರ್ ಅವರವರ ಸ್ವಭಾವದೋಷದಿಂದಲೇ ಅವರವರಿಗೆ ಅನರ್ಥ, ಏನೆಂದರೂ ವೇದನೆ ಬರುವ ವಿಚಾರ ಒಂದು ರಹಸ್ಯ ಎಂದು ಬೋಧಿಸಿದ. 19ನೆಯ ಶತಮಾನದಿಂದ ಈಚೆಗೆ ಅದೃಷ್ಟದ ಸ್ಥಾನ ಸಾಮಾಜಿಕ ಕಟ್ಟುಕಟ್ಟಳೆಗೆ ಕೊಡಲ್ಪಟ್ಟಿದೆ; ಸ್ವತಂತ್ರವಾಗಿ ವರ್ತಿಸಬಯಸುವ ವ್ಯಕ್ತಿ ಆ ಬಲು ಕಠಿಣವೂ ಕನಿಕರಶೂನ್ಯವೂ ಆದ ಗೋಡೆಯನ್ನು ಗುದ್ದಿ ಗುದ್ದಿ ವ್ಯರ್ಥವಾಗಿ, ಗಾಯಗೊಳ್ಳುತ್ತಾನೆ; ಯಾವೊಂದನ್ನು ಹೆಚ್ಚಾಗಿ ಚಿತ್ತಕ್ಕೆ ತಗೆದುಕೊಳ್ಳದೆ ಜಡ್ಡುಹಿಡಿದ ಮಾಂದ್ಯದಲ್ಲಿ ದಿವಸ ನೂಕುವುದೇ ಮನುಷ್ಯರಿಗೆ ಉಳಿದಿರುವ ಉಪಾಯ ಎಂದು ಚೆಕಾಫನ ಚಿಂತನೆ. ಮೇಲಿನಿಂದ ಭೂಮಿಯವರನ್ನು ಆಳುವುದು ದೈವವಲ್ಲ. ಗ್ರಹಗತಿಯಲ್ಲ. ಒಂದು ಪೈಶಾಚಿಕ ಯಂತ್ರ ಅದು ಗಣಿತಶಾಸ್ತ್ರದ ಲೆಕ್ಕಾಚಾರದಂತೆ ನಿರ್ಬಲ ನರನನ್ನು ತುಂಡು ತುಂಡಾಗಿ ಕತ್ತರಿಸಿಹಾಕುತ್ತದೆ ಎಂದು ಜೀನ್ ಕಾಕ್ಟೊ ಉಚ್ಚರಿಸಿದ. ಆದರೆ ಜೀನ್ ಪಾಲ್ ಸಾರ್ತ್ರನ ಯೋಚನೆಯಂತೆ ನಷ್ಟ, ನಾಶ ಹತಾಶೆ–ಅಲ್ಲಿಂದಾಚೆಯೇ ಮನುಜನ ನೈಜ ಜೀವನ. ಹೀಗೆ ಗಂಭೀರನಾಟಕಕಾರರ ಗಂಭೀರ ದರ್ಶನ ವಿಧವಿಧವಾಗಿದೆ, ಮನನೀಯವಾಗಿದೆ, ಬುದ್ಧಿ ಕುದುರಿಸುವಂತಿದೆ, ರಮಣೀಯವಾಗಿದೆ.

ನವಶಿಷ್ಟತೆಯ 17 ಮತ್ತು 18ನೆಯ ಶತಮಾನದಲ್ಲಿ, ಗಂಭೀರನಾಟಕ ಉದ್ದಕ್ಕೂ ಗಂಭೀರವಾಗಿಯೇ ಇರತಕ್ಕದ್ದು, ಲಾಘವಕ್ಕೆ ಎಳ್ಳಷ್ಟೂ ಅವಕಾಶ ಕೊಡಕೂಡದು ಎಂದು ಪಂಡಿತರು ಅಭಿಪ್ರಾಯಪಟ್ಟರು. ಹಾಗೂ ಅಂಗೀಕೃತವಾಗಿರುವ ನಿಯಮಾವಳಿಯನ್ನು ಅದು ಎಲ್ಲೂ ಉಲ್ಲಂಘಿಸಬಾರದು–ಎಂದೂ ಅವರು ಹೇಳಿದರು, ಷೇಕ್ಸ್‌ಪಿಯರ್ ತನ್ನ ಕೆಲವು ಗಂಭೀರನಾಟಕಗಳಲ್ಲಿ ಬಿಗಿಯನ್ನು ಸಡಿಲಿಸಿದ್ದಾನೆ. ಸಾಕ್ಷಾತ್ ವಿದೂಷಕನನ್ನೇ ತಂದಿಟ್ಟಿದ್ದಾನೆ. ಒಂದೇ ಪ್ರಸ್ತಾವದಲ್ಲಿ ಕಂಬಳಿ (ಬ್ಲ್ಯಾಂಕೆಟ್) ಮತ್ತು ಚೂರಿ (ನೈಫ್) ಎಂಬ ಗ್ರಾಮ್ಯ ಶಬ್ದಗಳನ್ನಿಟ್ಟು ಗಂಭೀರಭಾಷೆಗೆ ಕಳಂಕ ಎಸಗಿದ್ದಾನೆ ಎಂದು ಅವರ ಖಂಡನೆ. ಇಂಥ ನುಡಿಗಳಿಂದ ನಮಗೆ ಕೇವಲ ಪರಿಹಾಸ. ಟ್ರ್ಯಾಜಡಿಯ ಜನಕ ಈಸ್ಕಿಲಸ್ ಹರುಕು ಬಟ್ಟೆಯ ಕೊಳಕು ಮುಖದ ನಾಯಕನನ್ನು ರಂಗದಮೇಲೆ ತಂದದ್ದನ್ನೂ ಯೂರಿಪಿಡೀಸ್ ಅರಸುಕುಮಾರಿ ಎಲೆಕ್ಟ್ರಳಿಗೆ ಗುಡಿಸಲು ವಾಸದ ಉಳುವವನೊಬ್ಬ ಗಂಡನಾಗುವಂತೆ ನಿಯಂತ್ರಿಸಿದ್ದನ್ನೂ ಅವರೇಕೊ ಗಮನಿಸಲಿಲ್ಲ. ಗಂಭೀರ ನಾಟಕಕ್ಕೆ ಹಲವು ತರಹೆಯ ಮಿಶ್ರಣ ಸಂದು ಬಂದು ಎಷ್ಟೊ ಕಾಲವಾಯಿತು. ಇತ್ತೀಚಿಗೆ ವಿನೋದಕ್ಕಿಂತ ಹೆಚ್ಚು ಹಗುರವಾದ ಅಬದ್ಧಕ್ಕೂ ಗಾಂಭೀರ್ಯಕ್ಕೂ ನಿಕಟ ಸಂಬಂಧವುಂಟು ಎಂಬ ಅಭಿಪ್ರಾಯ ಮೂಡಿ ಬಲಗೊಂಡಿದೆ. ಷೇಕ್ಸ್‌ಪಿಯರನ್ನು ಕಂಡು ಕೆಲವು ವಿದ್ವಾಂಸರಿಗೆ ಆಶ್ಚರ್ಯಕ್ಕೆ ಸಮನಾದ ಹೆಗ್ಗೌರವ; ಏತಕ್ಕೆಂದರೆ ಆತ ತನ್ನ ದಿವ್ಯದೃಷ್ಟಿಯಿಂದ ಆಗಲೇ ಈ ವಿಸ್ಮಯ ತತ್ತ್ವವನ್ನು ಪರಿಭಾವಿಸಿ, ಲಿಯರ್ ಪ್ರಭುವಿಗೆ ಒಬ್ಬ ಹಾಸ್ಯಗಾರನನ್ನು ಸಂಗಾತಿಯಾಗಿಸಿದೆ. ಬಾಹ್ಯವಾಗಿ ಆಭಾಸವೆಂದು ತೋರುವ ಅಬದ್ಧವೂ ಗಾಂಭೀರ್ಯದೊಡನೆ ಮೇಳಗೊಳ್ಳಬಲ್ಲುದು ಎಂಬುದರ ದೃಢೀಕರಣವೇ ಆ ಮಹಾಕವಿಯ ಉದ್ದೇಶ. ಕಾರ್ನೀಲನ ನಾಟಕದಲ್ಲಿ ಐದಾರು ಗಂಟೆ ಅಧಿಕವಾಯ್ತೆಂದು ಹಗರಣ ಎಬ್ಬಿಸದ ಪಂಡಿತರು ಪ್ರಾಮಾಣಿಕರೆ ಆದರೆ ಅವರ ವಿವೇಚನೆಯಲ್ಲಿ ಕೊರೆ ಇದೆ, ಅಷ್ಟೆ.

ಗಂಭೀರ ನಾಟಕ ಪ್ರೇಕ್ಷಕರ ಅಥವಾ ಓದುಗರ ಮೇಲೆ ಬೀರುವ ಪರಿಣಾಮ ಏನು? ಮರುಕ ಭೀತಿಗಳ ಪ್ರಚೋದನೆ, ಅದರ ಮೂಲಕ ನೋಟಕರ ಮನಸ್ಸಿನ ಶುದ್ಧೀಕರಣ (ಕೆಥಾರ್ಸಿಸ್). ಈ ಮಾತು ಪಾಶ್ಚಾತ್ಯರಲ್ಲಿ ಹೆಚ್ಚು ಕಡಿಮೆ ಎಲ್ಲರ ಬಾಯಿಯಲ್ಲೂ ಬಂದಿದೆ. ಅವರಿಗೆ ಅದೊಂದು ಸ್ವಯಂವೇದ್ಯ ಸಿದ್ಧಾಂತ. ಅದು ಅಷ್ಟೊಂದು ನೇರ್ಪಾದದ್ದಲ್ಲ ಎಂಬ ಶಂಕೆ ಹಲವು ಯೋಚನಾಪರರಿಗೆ ಹಿಂದಾಗಲೇ ಹೊಳೆದಿತ್ತು. ಕೆಲವರು ಮರುಕ ಭೀತಿಗಳ ಜೊತೆಗೆ ಅಚ್ಚರಿ, ಮೆಚ್ಚಿಕೆಯನ್ನು ಸೇರಿಸಬೇಕು ಎಂದು ಹೇಳಿದರು. ಅಷ್ಟೇ

ಸಾಕೆ? ಗಂಭೀರನಾಟಕವನ್ನು ನೋಡುವಾಗಲೊ ಪಠಿಸುವಾಗಲೊ ನಮ್ಮ ಆಂತರ್ಯದಲ್ಲಿ ಸದಾಗ್ರಹ, ವ್ಯಸನ, ಹರ್ಷೋಲ್ಲಾಸ, ಆಶಾಭಂಗ, ನಿರಾಶೆ ಮತ್ತು ಆಶೆ ಇತ್ಯಾದಿ ಭಾವಗಳು ಏಳುತ್ತ ಬೀಳುತ್ತ ನರ್ತನಗೈಯುವುದಿಲ್ಲವೇ? ಹೀಗೆ ಭಾವಗಳ ಪಟ್ಟಿಯನ್ನು ಲಂಬಿಸಬಹುದಲ್ಲವೇ? ಲಂಬಿಸಿದರೆ ಉಪಯೋಗವುಂಟೆ? ಅಲ್ಲದೆ ಯಾರ ಯಾರಲ್ಲಿ ಯಾವ ಯಾವ ಭಾವಗಳು ಪ್ರಮುಖವಾಗಿ ಕಾಣಬರುತ್ತವೊ ಹೇಳಿ ಮುಗಿಸಲಾದೀತೇ? ಹಲವು ರಾಗಗಳನ್ನು ಉದ್ರೇಕಗೊಳಿಸಿ ಹೊರಗೆಳೆದು ತನ್ಮೂಲಕ ಅವನ್ನು ಶಮನ ಮಾಡಿ, ಕೊನೆಗೆ ಚಿತ್ತಸ್ಥೈರ್ಯ ಸಮಾಧಾನ ಪ್ರಶಾಂತ ಸ್ಥಿತಿಗೆ ಬರುವಂತೆ ಮಾಡುವುದೇ ಗಂಭೀರ ನಾಟಕದ ಮಹೋಪಕಾರ. ಆ ಕಾರಣದಿಂದಲೇ ನಾವು ಅದನ್ನು ತಿರುತಿರುಗಿ ವೀಕ್ಷಿಸುತ್ತೇವೆ, ಓದುತ್ತೇವೆ.

ಜಪಾನಿನ ನೋ ನಾಟಕಗಳನ್ನು ಬಿಟ್ಟರೆ ಪೂರ್ವವಲಯದಲ್ಲಿ ಗಂಭೀರ ನಾಟಕವೇ ಇಲ್ಲ-ಎಂಬ ದರ್ಪದ ಅಭಿಶಾಪವಿದೆ. ಆ ಸಂಕುಚಿತ ದೃಷ್ಟಿಗೆ ಗಂಭೀರ ನಾಟಕ ಒಂದೇ ಬಗೆಯದು ಎಂಬ ಅರ್ಧ ತಿಳಿವಳಿಕೆ ಕಾರಣ. ನಾಟಕದ ಅಂತ್ಯ ಮುಖ್ಯವಲ್ಲ ಎಂಬ ಮಾತನ್ನು ಹಿಂದೆಯೇ ನಿರೂಪಿಸಿದ್ದಾಗಿದೆ. ಆದ್ದರಿಂದ ಭಾಸ ಭವಭೂತಿ ಕಾಳಿದಾಸರ ಹಲವು ನಾಟಕಗಳು ನಿಶ್ಚಯವಾದ ಅರ್ಥದಲ್ಲಿ ಟ್ರ್ಯಾಜಡಿ-ಗಂಭೀರ ನಾಟಕ. ರಾಮ ಸೀತೆ, ದುಷ್ಯಂತ ಶಕುಂತಲೇ, ವತ್ಸರಾಜ ವಾಸವದತ್ತೆಯರು ಆ ಕವಿಗಳ ಶಿಲ್ಪದಂತೆ ಗಂಭೀರ ನಾಯಕ ನಾಯಿಕೆಯರೆ. ಹಾಗೆ ಹೇಳಲು ಯಾವ ಹೆದರಿಕೆ ಹಿಂಜರಿಕೆಗಳೂ ಇಲ್ಲ. 'ಗದಾಯುದ್ಧ ನಾಟಕಂ' ರನ್ನನ ಆಶಯದಂತೆ ಭೀಮಸೇನನ ಸಿಂಹಾಸನ ಆರೋಹಣೆಯಿಂದ ಸಮಾಪ್ತಿಗೊಂಡಿದ್ದರೆ ಅದರ ಗಂಭೀರನಾಟಕತ್ವಕ್ಕೆ ಯಾವ ಲೋಪವೂ ಉಂಟಾಗುತ್ತಿರಲಿಲ್ಲ. ಹುಟ್ಟು ಸಾವು-ಅಷ್ಟಕ್ಕೇ ಪರ್ಯವಸಾನಗೊಳ್ಳುವುದು ಒಂದು ರೀತಿಯ ಗಂಭೀರನಾಟಕ; ಹುಟ್ಟು ಸಾವು ಮರುಹುಟ್ಟು-ಅಷ್ಟನ್ನೂ ಉಳ್ಳದ್ದು ಇನ್ನೊಂದು ರೀತಿಯ ಗಂಭೀರನಾಟಕ.

(ಎಸ್.ವಿ.ಆರ್.)

ಸಾಹಿತ್ಯ ವಿಮರ್ಶೆ ಅದರ ವ್ಯಾಖ್ಯಾನಗಳು ದೇಶದ ಅಥವಾ ಜಗತ್ತಿನ ಆಗು-ಹೋಗುಗಳ ಪ್ರಭಾವಕ್ಕೆ ಒಳಗಾಗುವುದು ವಿರಳವಲ್ಲ (ಎರಡನೆಯ ಮಹಾಯುದ್ಧವು ಮಿಲ್ಟನನ ಸೇಟನನ ಪಾತ್ರದ ವ್ಯಾಖ್ಯಾನದ ಮೇಲೆ ಪ್ರಭಾವ ಬೀರಿದ್ದು, ರಷ್ಯದಲ್ಲಿ ಕಮ್ಯೂನಿಸ್ಟ್ ಆಡಳಿತ ಬಂದ ಅನಂತರ ಬಂದ ಸಾಹಿತ್ಯ ವಿಮರ್ಶೆ ಇವು ಉದಾಹರಣೆಗಳು). ನಾಟ್ಸಿ ಜರ್ಮನಿಯಲ್ಲಿ, ಸ್ಟಾಲಿನನ ರಷ್ಯದಲ್ಲಿ ನಡೆದ ಘೋರ ಪಾತಕಗಳು ಗಂಭೀರ ನಾಟಕದ ಪರಿಕಲ್ಪನೆಯ ಮೇಲೆ ಪ್ರಭಾವ ಬೀರಿತು. ಪೀಟರ್ ಮರ್ಸರ್‌ನಂಥ ವಿಮರ್ಶಕರು, ಮನುಷ್ಯನಿಗೆ ತನ್ನ ಮಾನವೀಯ ಸ್ವಭಾವ ಮತ್ತು ನಾಗರಿಕತೆಗಳಿಗೆ ಸದಾ ವಿಧಿಯ ತರ್ಕರಹಿತ ಆಕಸ್ಮಿಕಗಳು ಮತ್ತು ತನ್ನೊಳಗೆ ಇರುವ ಬರ್ಬರತೆ ಇವುಗಳಿಂದ ಅಪಾಯವಿದೆ ಎಂಬ ಅರಿವಿದೆ, ಈ ಅರಿವು ಗಂಭೀರ ನಾಟಕದಲ್ಲಿ ಪ್ರಕಟವಾಗುತ್ತದೆ ಎನ್ನುತ್ತಾರೆ.

ದುಃಖ, ನೋವುಗಳನ್ನು ಪ್ರದರ್ಶಿಸುವ ಗಂಭೀರ ನಾಟಕವನ್ನು ಮನುಷ್ಯ ನೋಡಲು ಬಯಸುವುದೇಕೆ ಎಂಬ ಪ್ರಶ್ನೆಗೆ ಮನೋವಿಜ್ಞಾನಿಗಳು ಬೇರೆ ಬೇರೆ ಉತ್ತರಗಳನ್ನು ಕೊಟ್ಟಿದ್ದಾರೆ. ಪ್ರೇಕ್ಷಕನಿಗೆ, ತನಗೆ ಈ ಕಷ್ಟ ನೋವುಗಳು ಪ್ರಾಪ್ತವಾಗಲಿಲ್ಲವಲ್ಲ ಎಂಬ ಸಮಾಧಾನವಿರುತ್ತದೆ ಎನ್ನುವುದು ಒಂದು ವಿವರಣೆ. ಮನುಷ್ಯನಲ್ಲಿ 'ಸ್ಯಾಡಿಸಂ' ಅಥವಾ ಇನ್ನೊಬ್ಬರ ನೋವನ್ನು ಕಂಡು ಸಂತೋಷ ಪಡುವ ಪ್ರವೃತ್ತಿ ಇದೆ. ಇದರಿಂದ ಗಂಭೀರ ನಾಟಕವನ್ನು ನೋಡಲು ಬಯಸುತ್ತಾನೆ ಎನ್ನುವುದು ಮತ್ತೊಂದು ವಿವರಣೆ. ಗಂಭೀರನಾಟಕದಲ್ಲಿ ಕಷ್ಟ ನೋವುಗಳ ಪ್ರದರ್ಶನವಿದ್ದರೂ ಕೇಂದ್ರ ಪಾತ್ರಗಳಲ್ಲಿ ಯಾವುದಾದರೂ ವಿಶಿಷ್ಟವಾದ ಮೆಚ್ಚಬೇಕಾದ ಗುಣ ಇರುತ್ತದೆ. ಇತರ ಪಾತ್ರಗಳಲ್ಲಿಯೂ ನಮ್ಮ ಮೆಚ್ಚಿಕೆಯನ್ನು ಅಥವಾ ಅನುಕಂಪವನ್ನು ಪಡೆಯುವ ಗುಣ ಇರಬಹುದು(ಕುವೆಂಪು ಅವರ 'ಬೆರಳ್-ಗೆ-ಕೊರಳ್'ನಲ್ಲಿ ಏಕಲವ್ಯ ನಮ್ಮ ಮೆಚ್ಚಿಕೆಯನ್ನು ಪಡೆಯುತ್ತಾನೆ, ದ್ರೋಣ ಅನುಕಂಪವನ್ನು ಪಡೆಯುತ್ತಾನೆ). ನಾವೂ ಮನುಷ್ಯರಾದುದರಿಂದ, ಕಷ್ಟ-ನೋವುಗಳ ದೃಶ್ಯದಲ್ಲಿಯೂ ಮನುಷ್ಯನ ಘನತೆ, ಒಳ್ಳೆಯತನಗಳು ಪ್ರಕಟಿತವಾಗುವುದರಿಂದ ನಮಗೆ ಮೆಚ್ಚಿಕೆ ಸಮಾಧಾನಗಳಾಗುತ್ತವೆ. ಇದರಿಂದ ಗಂಭೀರ ನಾಟಕವನ್ನು ನೋಡಲು ಬಯಸುತ್ತೇವೆ ಎನ್ನುವುದು ಸಮರ್ಪಕವಾದ ವಿವರಣೆ.

*

**ಗಗನಚುಂಬಿ ಕಟ್ಟಡಗಳು :** ಅನೇಕ ಅಂತಸ್ತುಗಳುಳ್ಳ, ಗಗನವನ್ನೇ ಮುಟ್ಟುವುವೋ ಎಂಬಷ್ಟು ಎತ್ತರದ ಬೃಹದಾಕಾರದ ಕಟ್ಟಡಗಳಿಗೆ ಈ ಹೆಸರಿದೆ (ಸ್ಕೈಸ್ಕ್ರೇಪರ್ಸ್). ಇವು ಮಾನವ ಮುಟ್ಟಿರುವ ನಾಗರಿಕತೆಯ ಉನ್ನತ ಮಟ್ಟದ ಗುರುತಾಗಿ, ಇಂಜಿನಿಯರಿಂಗ್‌ನ ಪ್ರಗತಿಯ ಪರಮಾವಧಿಯಾಗಿ ಶೋಭಿಸುತ್ತಿವೆ. ಇತ್ತೀಚಿನ ಶತಮಾನಗಳಲ್ಲಿ ಉಕ್ಕು, ಸಿಮೆಂಟ್ ಕಾಂಕ್ರೀಟ್ ಮತ್ತು ಕಂಪನ ನಿರೋಧಕ ಸಾಮಗ್ರಿಗಳು ಬಳಕೆಗೆ ಬಂದಮೇಲೆ ಕಟ್ಟಡಗಳ ರಚನಾಕ್ರಮದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಬಲವಾದ ಉಕ್ಕಿನ ಕಂಬಗಳನ್ನೂ ತೊಲೆಗಳನ್ನೂ ಪರಸ್ಪರ ಜೋಡಿಸುವುದರ ಮೂಲಕ ಕಟ್ಟಡವನ್ನು ಬಹು ಎತ್ತರದ ಮಟ್ಟಕ್ಕೆ ಕೊಂಡೊಯ್ಯಬಹುದು. ಹೀಗೆಯೇ, ಪ್ರಬಲಿತ ಸಿಮೆಂಟ್ ಕಾಂಕ್ರೀಟಿನ ಕಂಬಗಳನ್ನೂ ತೊಲೆಗಳನ್ನೂ ಕ್ರಮವಾಗಿ ಜೋಡಿಸಿ ಅನೇಕ ಅಂತಸ್ತುಗಳುಳ್ಳ ಕಟ್ಟಡವನ್ನು ನಿರ್ಮಿಸಬಹುದು. ಇವಲ್ಲದೆ ಬಹು ಭಾರವಾದ ಸಾಮಾನುಗಳನ್ನು, ಅತ್ಯಂತ ಸುಲಭವಾಗಿ ನೂರಾರು ಅಡಿಗಳ ಮೇಲ್ಮಟ್ಟಕ್ಕೆ ಸಾಗಿಸುವ ಸಲಕರಣೆಗಳೂ ಯಂತ್ರಗಳೂ ಇಂಥ ಕಟ್ಟಡಗಳ ರಚನೆಯನ್ನು ಅತಿ ಶೀಘ್ರವಾಗಿ ಒಪ್ಪವಾಗಿಯೂ ಸುಭದ್ರವಾಗಿಯೂ ಪೂರೈಸಲು

ನ್ಯೂಯಾರ್ಕ್‌ನಲ್ಲಿರುವ ಎಂಪೈರ್ ಸ್ಟೇಟ್ ಬಿಲ್ಡಿಂಗ್ (ಎತ್ತರ : 1,250 ಅಡಿ)

ಅನುಕೂಲಗಿವೆ. ಈ ರೀತಿ ಕಟ್ಟಲ್ಪಟ್ಟಿರುವ ಗಗನ ಚುಂಬಿ ಕಟ್ಟಡಗಳು ಅಮೆರಿಕದ ನ್ಯೂಯಾರ್ಕಿನ ಮ್ಯಾನ್ ಹಾಟನ್ ಪ್ರದೇಶದಲ್ಲಿ ಹೇರಳವಾಗಿಯೂ ನಿಬಿಡವಾಗಿಯೂ ಇದ್ದು ಇನ್ನಿತರ ಕಡೆಗಳಲ್ಲಿಯೂ ಇವೆ. ಪ್ರಪಂಚದ ಇನ್ನಿತರ ಮುಖ್ಯಪಟ್ಟಣಗಳಲ್ಲಿ ಇಂಥ ಕಟ್ಟಡಗಳು ನಿರ್ಮಾಣಗೊಂಡಿವೆ.

ನಗರಗಳಲ್ಲಿ ಸೌಧಗಳು ಎತ್ತರವಾಗಿ ಬೆಳೆಯುವುದಕ್ಕೆ ಸ್ಥಳಸಂಕೋಚವೇ ಕಾರಣ. ಅನೇಕ ಅಂತಸ್ತಿನ ಕಟ್ಟಡವೊಂದರಲ್ಲಿ ದೊರಕುವ ವಸತಿಯ ಜಾಗವನ್ನು ಏಕ ಅಂತಸ್ತಿನ ಕಟ್ಟಡದಲ್ಲಿ ದೊರಕಿಸಿಕೊಳ್ಳಬೇಕಾದರೆ ಕಟ್ಟಡವನ್ನು ಅತಿ ಅಗಲವಾಗಿಯೂ ಉದ್ದವಾಗಿಯೂ ಹರಡಬೇಕಾಗುತ್ತದೆ. ಇಂಥ ಏಕ ಅಂತಸ್ತಿನ ಕಟ್ಟಡಗಳು ಹಲವಾರು ಇದ್ದಪಕ್ಷದಲ್ಲಿ ಅವೆಲ್ಲಕ್ಕೂ ಬೇಕಾಗುವ ಪ್ರದೇಶ ಅತಿವಿಸ್ತಾರವಾಗಿರಬೇಕಾಗುತ್ತದೆ. ಕೆಲವೆಡೆಗಳಲ್ಲಿ ವಿಶಾಲಪ್ರದೇಶ ಸಿಕ್ಕದೆ ಇರಬಹುದು. ಅಥವಾ ಸಿಕ್ಕಿದರೂ ವಿಶಾಲವಾಗಿ ಹರಡಿರುವ ಬಡಾವಣೆಯ ಎಲ್ಲ ಕಟ್ಟಡಗಳಿಗೂ ತಲಪುವಂತೆ ಮಾಡಬೇಕಾಗುವ ಒಳಚರಂಡಿ, ವಿದ್ಯುತ್ ವ್ಯವಸ್ಥೆ, ನೀರು ಸರಬರಾಜು, ರಸ್ತೆಗಳು ಇತ್ಯಾದಿ ನಾಗರಿಕ ಸೌಲಭ್ಯಗಳ ವ್ಯವಸ್ಥೆಗಾಗಿ ಖರ್ಚು ವಿಪರೀತವಾಗುತ್ತದೆ. ಈ ಪರಿಸ್ಥಿತಿಯಲ್ಲಿ ಕಟ್ಟಡಗಳನ್ನು ಎತ್ತರವಾಗಿಯೂ ಅನೇಕ ಅಂತಸ್ತುಗಳನ್ನು ಉಳ್ಳವಾಗಿಯೂ ಕಟ್ಟುವುದು ಅನಿವಾರ್ಯವಾಗುತ್ತದೆ. ಹೀಗಾಗಿಯೇ ಗಗನಚುಂಬಿ ಕಟ್ಟಡಗಳು ರೂಪುಗೊಂಡಿವೆ.

ಗಗನಚುಂಬಿ ಕಟ್ಟಡಗಳ ರಚನೆಯಲ್ಲಿಯೂ ಮತ್ತು ಬಳಕೆಯಲ್ಲಿಯೂ ಉದ್ಭವಿಸಿದ ಅನೇಕ ವಿಧವಾದ, ಅಸಾಧಾರಣ ಸಮಸ್ಯೆಗಳಿಗೆಲ್ಲ ಯುಕ್ತವಾದ ಪರಿಹಾರಗಳನ್ನು ಹುಡುಕಲಾಗಿದೆ. ನೂರು ಅಥವಾ ನೂರಿಪ್ಪತ್ತು ಅಂತಸ್ತುಗಳುಳ್ಳ ಎತ್ತರವಾದ ಕಟ್ಟಡಗಳಿಗೆ ಅಡಿಪಾಯ ಅತ್ಯಂತ ಸಾಮರ್ಥ್ಯಯುತವಾದ್ದಾಗಿರಬೇಕೆಂಬುದು ನಿರ್ವಿವಾದ ವಿಷಯ. ಇದಕ್ಕಾಗಿ ಇಂಥ ಕಟ್ಟಡಗಳನ್ನು ಭದ್ರವಾದ ಕಾರ್ಗಲ್ಲಿನ ಅಡಿಪಾಯದ ಮೇಲೆಯೆ ನಿಲ್ಲಿಸಬೇಕಾಗುತ್ತದೆ. ಎಷ್ಟು ಆಳ ತೋಡಿದರೂ ಕಲ್ಲು ಸಿಕ್ಕದ ಕಡೆಗಳಲ್ಲಿ ಅಡಿಪಾಯವನ್ನು ವಿಸ್ತಾರವಾಗಿ ಹರಡಿದ ಮತ್ತು ಪ್ರಬಲಿತ ಕಾಂಕ್ರೀಟಿನ ಹಾಸುಗಲ್ಲಿನ ಮೇಲೆ

ಕೂರಿಸಬೇಕಾಗುತ್ತದೆ. ಸ್ಥಳ ಸಂಕೋಚದಿಂದ ಈ ವಿಧಾನವೂ ಸಾಧ್ಯವಾಗದಿದ್ದಲ್ಲಿ ಉಕ್ಕು ಅಥವಾ ಪ್ರಬಲಿತ ಕಾಂಕ್ರೀಟಿನಿಂದ ತಯಾರಿಸಿದ ದಸಿಗಳನ್ನು (ಪೈಲ್) ನೆಲದೊಳಗೆ ಇಳಿಸಿ, ಅವುಗಳ ಮೇಲೆ ಕಟ್ಟಡವನ್ನು ರಚಿಸಬೇಕಾಗುತ್ತದೆ.

ಅತ್ಯಂತ ಎತ್ತರವಾದ ಕಟ್ಟಡಗಳು ಸುಲಭವಾಗಿ ನಲುಗಿಸಬಲ್ಲ ಕಂಪನ, ವಾಯು ಒತ್ತಡ, ಉಷ್ಣದ ಏರುಪೇರಿನಿಂದುಂಟಾಗುವ ವಿನಾಶಕ ಶಕ್ತಿ–ಇವೆಲ್ಲವನ್ನೂ ಎದುರಿಸಿ ಸುಭದ್ರವಾಗಿರಬೇಕಾದರೆ ಅವನ್ನು ಕಂಬಗಳು ಮತ್ತು ತೊಲೆಗಳಿಂದ ಬಿಗಿಯಲ್ಪಟ್ಟ ಚೌಕಟ್ಟಿನ ರೂಪದಲ್ಲಿಯೇ ಅಡಿಯಿಂದ ಮೇಲಿನವರೆಗೂ ರಚಿಸಬೇಕಾಗುತ್ತದೆ(**ನೋಡಿ– ಒಳಪಟ್ಟು ಕಟ್ಟಡ**).

ಹೀಗೆ ರಚಿಸಲ್ಪಟ್ಟ ಉಕ್ಕು ಇಲ್ಲವೆ ಪ್ರಬಲಿತ ಕಾಂಕ್ರೀಟಿನ ಅಸ್ಥಿಪಂಜರದ ಸುತ್ತು ಒಳಗೆ ಯುಕ್ತವಾದ ತೆಳುಗೋಡೆಗಳನ್ನು ನಿರ್ಮಿಸಿ ಅವುಗಳಲ್ಲಿ ಗಾಜಿನ ಕಿಟಕಿ, ಬಾಗಿಲು ಮುಂತಾದುವನ್ನು ಕೂರಿಸುತ್ತಾರೆ. ಈಚೆಗೆ ಕಿಟಕಿ ಅಥವಾ ಬಾಗಿಲುಗಳನ್ನೊಳಗೊಂಡ ಪೂರ್ವನಿರ್ಮಿತ (ಪ್ರಿಫ್ಯಾಬ್ರಿಕೇಟೆಡ್) ಗೋಡೆಗಳನ್ನು ಅತಿ ಶೀಘ್ರವಾಗಿ ಜೋಡಿಸುವ



ನ್ಯೂಯಾರ್ಕ್ ನಗರದ ಮ್ಯಾನ್‌ಹಾಟ್ನ್ ದ್ವೀಪದಲ್ಲಿರುವ ವಿಶ್ವವ್ಯಾಪಾರ ಕೇಂದ್ರದ ಭವನ. ವಿಶ್ವದಲ್ಲೇ ಅತ್ಯಂತ ಎತ್ತರವಾದ (1,350′) ಕಟ್ಟಡ

ಕ್ರಮ ಬಳಕೆಯಲ್ಲಿದೆ. ಕಟ್ಟಡಕ್ಕೆ ಬೇಕಾಗುವ, ಅಪಾರವಾದ ಭಾರವುಳ್ಳ ಸಾಮಾನುಗಳನ್ನು ಮೇಲಕ್ಕೆ ಎತ್ತಲು ಮತ್ತು ಕಾರ್ಮಿಕರನ್ನು ಮೇಲಕ್ಕೆ ಕರೆದುಕೊಂಡು ಹೋಗಲು, ಬೃಹದಾಕಾರದ ಎತ್ತುಗ (ಎಲಿವೇಟರುಗಳು) ಮತ್ತು ಕ್ರೇನುಗಳು ಇವೆ.

ಗಗನಚುಂಬಿ ಕಟ್ಟಡಗಳ ಬಳಕೆಯ ಅತಿ ಮುಖ್ಯವಾದ ಸಮಸ್ಯೆಯೆಂದರೆ ಅಂತಸ್ತಿನಿಂದ ಅಂತಸ್ತಿಗೆ ಜನಗಳ ಮತ್ತು ಸಾಮಾನುಗಳು ರವಾನೆ, ಇದಕ್ಕಾಗಿ ವಿದ್ಯುಚ್ಛಕ್ತಿಯಿಂದ ನಡೆಯುವ ಬಲಯುತವಾದ ಎತ್ತುಗಗಳು ಹಲವಾರು ಇರುತ್ತವೆ. ಆಕಸ್ಮಿಕವಾಗಿ ಅವೇನಾದರೂ ನಿಂತು ಹೋದರೆ ಸಾಗಣೆ ಸೌಲಭ್ಯಕ್ಕೋಸ್ಕರ ಸುತ್ತು ಸೋಪಾನುಗಳಿರುತ್ತವೆ. ಆಕಸ್ಮಿಕ ಸನ್ನಿವೇಶಗಳಲ್ಲಿ ಹಠಾತ್ತನೆ ನಿರ್ಗಮನಕ್ಕೆ ಅನುಕೂಲವಾಗುವಂತೆ ತುರ್ತು ಬಾಗಿಲುಗಳು, ಉರಿ ಪಾರುದಾರಿಗಳು, ಇಳಿಜಾರುಗಳು (ಷೂಟುಗಳು)–ಇವುಗಳಲ್ಲಿ ಇರುತ್ತವೆ. ಕೊಠಡಿಯಿಂದ ಕೊಠಡಿಗೂ ಇಲ್ಲವೆ ಕೊಠಡಿಯಿಂದ ಹೊರಕ್ಕೂ ಸಂಪರ್ಕವಿರುವಂತೆ ಅಂತರ ಟೆಲಿಫೋನ್ ವ್ಯವಸ್ಥೆ ಇಂಥ ಕಟ್ಟಡಗಳಲ್ಲಿ ಅಗತ್ಯ ಇರುತ್ತದೆ.

ಇಂಥ ಬೃಹತ್ ಕಟ್ಟಡದ ಪ್ರತಿ ಅಂತಸ್ತಿನಲ್ಲಿಯೂ ಅನೇಕಾನೇಕ ವಸತಿಗೃಹಗಳು. ಕಚೇರಿಗಳು, ಮಾರುಕಟ್ಟೆಗಳು, ವಿದ್ಯಾಲಯ, ಆಟದ ಮೈದಾನಗಳು, ಈಜು ಕೊಳಗಳು, ಸಿನಿಮಾ ನಾಟಕ ಮುಂತಾದ ಮನೋರಂಜನ ಗೃಹಗಳು, ವ್ಯವಹಾರದ ಗೃಹಗಳು; ಆಸ್ಪತ್ರೆಗಳು ಹೂದೋಟಗಳು–ಮುಂತಾದ ನಾಗರಿಕ ಜೀವನಕ್ಕೆ ಬೇಕಾಗುವ ಸೌಲಭ್ಯಗಳೆಲ್ಲವೂ ಅಡಕವಾಗಿದ್ದು, ಈ ಒಂದೊಂದು ಅಂತಸ್ತೂ ದೊಡ್ಡನಗರದಂತಿರುವುದು. ಜನಜೀವನಕ್ಕೆ ಆವಶ್ಯಕವಾದ ವಸ್ತು ಸೌಕರ್ಯಗಳೆಲ್ಲವೂ ಇರುವ ಕಡೆಯಲ್ಲಿಯೇ ದೊರಕುವುದರಿಂದ ಜನರು ದೂರದ ಬೇರೊಂದು ಕಟ್ಟಡಕ್ಕೆ ಹೋಗಿಬರುವ ಅಗತ್ಯವೇ ಇರುವುದಿಲ್ಲ.

ಗಗನಚುಂಬಿ ಕಟ್ಟಡಗಳು ವಾಸ್ತುಶಿಲ್ಪ ಕೌಶಲ್ಯದಲ್ಲಿಯೂ ಇಂಜಿನಿಯರಿಂಗ್ ಕೌಶಲ್ಯದಲ್ಲಿಯೂ ಮಾನವ ಸಾಧಿಸಿರುವ ಪರಮಾವಧಿ ಘಟ್ಟವನ್ನು ಸೂಚಿಸುವ ಹೆಗ್ಗುರುತುಗಳಾಗಿವೆ. (ಕೆ.ಎಸ್.ಕೆ.)

ಅಮೆರಿಕದಲ್ಲಿ ಗಗನಚುಂಬಿ ಕಟ್ಟಡಗಳ ಇತಿಹಾಸ 1883ರಿಂದ ಪ್ರಾರಂಭವಾಯಿತೆನ್ನಬಹುದು. ಆ ವರ್ಷ ವಿಲಿಯಂ ಬ್ಯಾರನ್ ಜೆನಿ ಎಂಬಾತ ಚಿಕಾಗೊ

ಮಾಸ್ಕೋದಲ್ಲಿರುವ ಮಾಸ್ಕೋ ವಿಶ್ವವಿದ್ಯಾಲಯದ ಕಟ್ಟಡ

ನಗರದಲ್ಲಿ 10 ಅಂತಸ್ತಿನ ಗೃಹವೊಂದನ್ನು ನಿರ್ಮಾಣಮಾಡಿದ. ಇದೇ ಅಮೆರಿಕದ ಮೊದಲ ಗಗನಚುಂಬಿ ಕಟ್ಟಡ. ಅನಂತರ ನ್ಯೂಯಾರ್ಕಿನಲ್ಲಿ ಫ್ಯಾಟಿರಾನ್ ಕಟ್ಟಡ (1902), ಮೆಟ್ರೊಪಾಲಿಟನ್ ಲೈಫ್ ಇನ್ಶೂರೆನ್ಸ್ ಕಟ್ಟಡ (1909), ವುಲ್‌ವರ್ತ್ ಕಟ್ಟಡ (1913) ಮತ್ತು ಎಂಪೈರ್ ಸ್ಟೇಟ್ ಬಿಲ್ಡಿಂಗ್ (1930–31) ಇವು ನಿರ್ಮಿತವಾದುವು. ಎಂಪೈರ್

ಮದ್ರಾಸಿನ ಮೌಂಟ್ ರೋಡಿನಲ್ಲಿರುವ ಜೀವ ವಿಮಾ ಸಂಸ್ಥೆಯ ಕಟ್ಟಡ

ಸ್ಟೇಟ್ ಬಿಲ್ಡಿಂಗ್ 379.17 ಮೀ. ಎತ್ತರವಿದ್ದು 102 ಅಂತಸ್ತುಗಳನ್ನೊಳಗೊಂಡಿದ್ದು ಪ್ರಪಂಚದ ಅತಿ ಎತ್ತರದ ಕಟ್ಟಡವೆಂದು ಖ್ಯಾತವಾಗಿತ್ತು. ಅನಂತರ ಶಿಕಾಗೋದ ಸಿಯರ್ಸ್ ಟವರ್ ಎಂಬ ಕಛೇರಿ ಸೌಧ 442 ಮೀ. ಎತ್ತರವಿದ್ದು ಪ್ರಪಂಚ ಅತೀ ಎತ್ತರದ ಸೌಧವೆಂದು 1997ರವರೆಗೂ ರಾರಾಜಿಸಿತು. ಅನಂತರ ರುಲೇನಿಯಾದ ಕೌಲಾಲಂಪೂರಿನ ಪೇಟ್ರೋನ ಟವರ್ಸ್ 452 ಮೀ. ಎತ್ತರವಿದ್ದು ಪ್ರಪಂಚ ಅತೀ

ಎತ್ತರದ ಸೌಧವಾಗಿತ್ತು. ಇದನ್ನು ಈಗ 508 ಮೀ. ಎತ್ತರದ ಟೆಯ್‌ಪೈ 101 ಸೌಧವು 2003ರಲ್ಲಿ ಮೀರಿಸಿದೆ.

ಈಚಿನ ವರ್ಷದಲ್ಲಿ ಭಾರತದ ಪ್ರಮುಖ ಪಟ್ಟಣಗಳಾದ ಮುಂಬಯಿ, ಮದ್ರಾಸು, ಕೋಲ್ಕತ ಮತ್ತು ಬೆಂಗಳೂರು ನಗರಗಳಲ್ಲಿ ಎತ್ತರದ ಕಟ್ಟಡಗಳ ನಿರ್ಮಾಣವಾಗುತ್ತಿವೆ. ಸದ್ಯಕ್ಕೆ ಬೆಂಗಳೂರಿನಲ್ಲಿ ಅತಿ ಎತ್ತರದ ಕಟ್ಟಡವೆಂದರೆ 24 ಮಹಡಿಗಳಿಂದೊಡಗೂಡಿದ 106 ಮೀಟರು ಎತ್ತರದ ಯುಟಿಲಿಟಿ ಬಿಲ್ಡಿಂಗ್. ಭಾರತದ ಅತೀ ಎತ್ತರದ ಗಗನಚುಂಗಬಿ ಕಟ್ಟಡ ಮುಂಬೈನ 153 ಮೀ. ಎತ್ತರದ ಶ್ರೀಪತಿ ಆರ್ಕೇಡ್. *

**ಗಗನೇಂದ್ರನಾಥ ಠಾಕೂರ್ :** 1887–1938. ಬಂಗಾಳದ ಪ್ರಮುಖ ಚಿತ್ರಕಲಾವಿದರಲ್ಲೊಬ್ಬರು. ನಟರೂ ಹೌದು. ಹುಟ್ಟಿದ್ದು ಶ್ರೀಮಂತ ಮನೆತನದಲ್ಲಿ. ರಂಗಭೂಮಿಯ ಹೆಸರಾಂತ ಕಲೆಗಾರರೂ ಕಲೆಗಾರರಿಗೆ ಆಶ್ರಯದಾತರೂ ಆದ



ಗಗನೇಂದ್ರನಾಥ ಠಾಕೂರರ ಒಂದು ಕಲಾ ಕೃತಿ

ಗುಣೇಂದ್ರನಾಥರು ಇವರ ತಂದೆ. ಗಗನೇಂದ್ರನಾಥರ ಪ್ರಧಾನ ಒಲವು ರಂಗಭೂಮಿಯತ್ತ. ಹೀಗಾಗಿ ಚಿಕ್ಕಂದಿನಲ್ಲಿಯೇ ನಾಟಕರಂಗ ಪ್ರವೇಶಿಸಿ ಉತ್ತಮ ನಟರೆಂದು ಹೆಸರು ಗಳಿಸಿದರು.

ಸ್ವಲ್ಪಕಾಲ ಇವರ ವ್ಯಾಸಂಗ ಸೇಂಟ್ ಸ್ಲೇವಿಯರ್ ಶಾಲೆಯಲ್ಲಿ ನಡೆಯಿತು. ಅಲ್ಲೂ ಇವರ ಒಲವು ಚಿತ್ರರಚನೆಯ ಕಡೆಗೆ ಇತ್ತಾಗಿ ಇನ್ನುಳಿದ ಪಾಠಗಳಿಗೆ ಇವರು ಗೈರುಹಾಜರಾಗುತ್ತಿದ್ದರು.

ತಂದೆ ಗುಣೇಂದ್ರನಾಥರು 1896ರಲ್ಲಿ ನಿಧನರಾದರು. ಮನೆತನದ ಆಸ್ತಿಯಾದ ಜರಾಸಂಕೊ ಕಟ್ಟಡದ ಅತಿಥಿಗೃಹ ಇವರ ತಾಯಿಯವರ ವಶಕ್ಕೆ ಬಂತು. ಆಗ ಗಗನೇಂದ್ರನಾಥರಿಗೆ 14 ವರ್ಷ. ಹಿರಿಯ ಮಗನಾದುದರಿಂದ ಮನೆಯ ಜವಾಬ್ದಾರಿ ಇವರ ಮೇಲೆ ಬಿತ್ತು. ಆ ವೇಳೆಗಾಗಲೆ ಕಿರಿಯ ಸೋದರ ಅಬನೀಂದ್ರನಾಥರು ಕಲಾವ್ಯಾಸಂಗದಲ್ಲಿ ಹೆಸರುಗಳಿಸಿದ್ದು ಕಲಾಶಾಲೆಯ ಮುಖ್ಯಸ್ಥರಾದ ಇ.ಬಿ.ಹ್ಯಾವಲರ ಉತ್ತೇಜನದಿಂದ ಭಾರತೀಯ ಕಲೆಯ ಪುನರುಜ್ಜೀವನ ಕಾರ್ಯದಲ್ಲಿ ನಿರತರಾಗಿದ್ದರು. ಗಗನೇಂದ್ರನಾಥರು ತಮ್ಮನ ಕಲಾವ್ಯಾಸಂಗಕ್ಕೆ ತುಂಬ ನೆರವಾದರು.

ಇವರು ಯಾವ ಕಲಾಶಾಲೆಯಲ್ಲಿಯೂ ಕಲಿತವರಲ್ಲ. ಯಾವ ಕಲಾವಿದರಲ್ಲಿಯೂ ಅಭ್ಯಾಸ ಮಾಡಿದವರಲ್ಲ. ರೂಢಿಯಲ್ಲಿದ್ದ ಕ್ರಮಕ್ಕೂ ಕಟ್ಟು ಬಿದ್ದವರಲ್ಲ. ಎಲ್ಲವನ್ನೂ ತಮ್ಮ ವಿಮರ್ಶನ ಬುದ್ಧಿಯಿಂದ ಪರಿಶೀಲಿಸಿ, ಯುಕ್ತವೆನಿಸಿದ್ದನ್ನು ಗ್ರಹಿಸುವುದು, ಗ್ರಹಿಸಿದ್ದನ್ನು ಅಳವಡಿಸಿಕೊಂಡು ತಮಗೆ ಮೆಚ್ಚುಗೆಯಾದ ರೀತಿಯಲ್ಲಿ ಕೃತಿರಚನೆ ಮಾಡುವುದು ಇವರ ಸ್ವಭಾವ. ಹೀಗೆ ಇವರು ನಾನಾ ಶೈಲಿಯಲ್ಲಿ ಅನೇಕ ಚಿತ್ರಗಳನ್ನು ರಚಿಸಿ ಉತ್ತಮ ಶ್ರೇಣಿಯ ಕಲಾವಿದರೆಂದು ಹೆಸರು ಗಳಿಸಿದರು.

ಪೂರ್ವದಿಂದ ಮನೆಯಲ್ಲಿ ಸಂಗ್ರಹವಾಗಿದ್ದ ಮೊಗಲಾಯಿ, ರಜಪೂತ್ ಸಂಪ್ರದಾಯಗಳ ಚಿತ್ರಗಳು, ಚೀನಾ ಜಪಾನುಗಳ ಪ್ರಸಿದ್ಧ ಕಲಾವಿದರು ತಯಾರಿಸಿದ ಕಲಾಕೃತಿಗಳು ಗಗನೇಂದ್ರರ ಕಲಾವಿಕಾಸಕ್ಕೆ ನೆರವಾದುವು. ಇವುಗಳ ಪೈಕಿ ಕಪ್ಪುಶಾಯಿಯಿಂದ (ಇಂಡಿಯ ಇಂಕ್) ರೂಪುಗೊಂಡಿದ್ದ ಚಿತ್ರರಚನಾವಿಧಾನ ಇವರಿಗೆ ತುಂಬಾ ಪ್ರಿಯವೆನಿಸಿತು. ಗಗನೇಂದ್ರರು ವರ್ಣಚಿತ್ರರಚನೆಗಾರಂಭಿಸುವ ಮೊದಲು ಕಪ್ಪು ಶಾಯಿ ಉಪಯೋಗಿಸಿ ಅನೇಕ ಚಿತ್ರಗಳನ್ನು ರಚಿಸಿದರು. 'ನಮ್ಮ ಮನೆಯ ತೋಟ' ಇದಕ್ಕೆ ಒಂದು ಉತ್ತಮ ನಿದರ್ಶನ. ಹೊಸದಾಗಿ ಆಚರಣೆಗೆ ಬಂದ ಘನಾಕೃತಿ ವಿಧಾನ (ಕ್ಯೂಬಿಸಂ) ಮತ್ತು ಪರಿಣಾಮ ವಿಧಾನಗಳಿಂದ (ಇಂಪ್ರೆಷನಿಸಂ) ಪ್ರೇರಣೆಗೊಂಡು ಅನೇಕ ಚಿತ್ರಗಳನ್ನಿವರು ರಚಿಸಿದ್ದಾರೆ. ಇವರು ರಚಿಸಿರುವ ರಾಂಚಿಯ ಸೂರ್ಯಾಸ್ತಮಾನವೆಂಬ ಚಿತ್ರ ಭವ್ಯ ಕಲಾಕೃತಿಯೆಂದು ಭಾರತದಲ್ಲಲ್ಲದೆ ಫ್ರಾನ್ಸ್ ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲೂ ಖ್ಯಾತಿಗೊಂಡಿದೆ. ದೈವತ್ವದೊಂದಿಗೆ ಏಕೀಭಾವದಿಂದ ವರ್ತಿಸುತ್ತಿದ್ದ ಸಾಧು, ಚೈತನ್ಯರ ಆಶ್ರಮ ಮೊದಲಾದ ಇವರ ಚಿತ್ರಗಳು ಯಥಾವತ್ತಾದ ಚಿತ್ರಕ್ರಮಕ್ಕೆ ಒಳ್ಳೆಯ ನಿದರ್ಶನಗಳಾಗಿವೆ.

ಗಗನೇಂದ್ರರಿಗೆ ಸ್ವದೇಶೀ ಚಳವಳಿಯಲ್ಲಿ ಅಪಾರ ಆಸಕ್ತಿ. ಹೀಗಾಗಿ ಹಿರಿಯರು ಸಂಗ್ರಹಿಸಿದ್ದ ವಿಕ್ಟೋರಿಯ ಯುಗದ ಪೀಠೋಪಕರಣಗಳನ್ನು ತ್ಯಜಿಸಿ, ಅವುಗಳ ಸ್ಥಾನದಲ್ಲಿ ಭಾರತೀಯ ಸಂಪ್ರದಾಯದ ಅಣಿಕಟ್ಟುಗಳನ್ನು ಇವರು ತಮ್ಮ ಮನೆಯಲ್ಲಿ ಅಳವಡಿಸಿಕೊಂಡರು.

ಗಗನೇಂದ್ರನಾಥರ ಜೊತೆಗೆ ಸೋದರ ಅಬನೀಂದ್ರನಾಥರೂ ಸೇರಿ ಅನೇಕ ಸ್ವದೇಶಿವಸ್ತುಗಳಿಗೆ ನೂತನ ರೂಪು ಕೊಟ್ಟು ಜನಪ್ರಿಯಗೊಳಿಸಿದರು. ಉಡುಗೆ ತೊಡಗೆಗಳಲ್ಲಿಯೂ ನಾನಾ ಸುಧಾರಣೆಗಳನ್ನು ಮಾಡಿದರು. ತಲೆಯ ಮೇಲೆ ಧರಿಸುತ್ತಿದ್ದ ದಪ್ಪನೆಯ ಮುಂಡಾಸಿಗೆ ಬದಲು ಉದ್ದನೆಯ ಮಕಮಲ್ ಕುಲಾವಿಯನ್ನು ಆಚರಣೆಗೆ ತಂದರು. ರವೀಂದ್ರನಾಥ ಠಾಕೂರರು ಈ ಸುಧಾರಣೆಯನ್ನು ಮೆಚ್ಚಿ ತಾವೂ ಅಂಥ ಕುಲಾವಿಯನ್ನು ಧರಿಸತೊಡಗಿದರು. ರಾಜ್ಯಾಡಳಿತದ ಮೇಲೆ ತಮ್ಮ ಪ್ರಭಾವ ಬೀರಿ ಗಗನೇಂದ್ರರು ದೇಶದ ನಾನಾ ಕೈಕಸುಬುಗಳಿಗೆ, ಗೃಹಕೈಗಾರಿಕೆಗಳಿಗೆ ನೆರವು ನೀಡುವಂತೆ ಮಾಡಿದ್ದನ್ನು ಮರೆಯುವಂತಿಲ್ಲ.

1907ರಲ್ಲಿ ಜನ್ಮತಾಳಿದ ಇಂಡಿಯನ್ ಸೊಸೈಟಿ ಆಫ್ ಆರ್ಟ್ಸ್ ಸಂಸ್ಥೆಯಲ್ಲಿ ಆಸ್ಥೆಯಿಂದ ದುಡಿದವರಲ್ಲಿ ಗಗನೇಂದ್ರನಾಥರೂ ಒಬ್ಬರು. ವಿವಿಧ ಮಾಧ್ಯಮದ ಕಲಾಕೃತಿಗಳಲ್ಲಿ ಉತ್ತಮವಾದುವನ್ನು ಆರಿಸುವುದರಲ್ಲಿ ಗಗನೇಂದ್ರರು ಅಗ್ರಗಣ್ಯರಾಗಿದ್ದರು. ಆದುದರಿಂದ ಸೊಸೈಟಿ ಏರ್ಪಡಿಸುತ್ತಿದ್ದ ವಸ್ತುಪ್ರದರ್ಶನಗಳು ಸಮಾಜದ ಎಲ್ಲ ಅಂತಸ್ತಿನ ಜನರಿಗೂ ಪ್ರಿಯವೆನಿಸಿರುವುವು.

ಗಗನೇಂದ್ರರು ಕಲ್ಲಚ್ಚು ಛಾಪನೆಯಲ್ಲಿಯೂ (ಲಿಥೊ) ವಿಶೇಷ ಆಸ್ಥೆ ತೋರಿ ತಮ್ಮ ಮನೆಯಲ್ಲಿಯೇ ಒಂದು ಛಾಪಖಾನೆಯನ್ನು ಆರಂಭಿಸಿ ಅದರ ಸಹಾಯದಿಂದ ಅನೇಕ ಚಿತ್ರಗಳನ್ನು ಅಚ್ಚುಮಾಡತೊಡಗಿದರು.

1916–18ರ ಅಂತರದಲ್ಲಿ ಗಗನೇಂದ್ರರು ಹಾಸ್ಯ, ವಿನೋದ, ಕುಚೋದ್ಯಗಳನ್ನು ತೋರುವ ವಿವಿಧಬಗೆಯ ವ್ಯಂಗ್ಯ ಚಿತ್ರಗಳನ್ನು ರಚಿಸಿ ಉತ್ತಮ ವ್ಯಂಗ್ಯ ಚಿತ್ರಗಾರರೆಂದು ಹೆಸರು ಗಳಿಸಿದರು. ಮಕ್ಕಳಿಗಾಗಿ ಇವರು ರಚಿಸಿರುವ ಬೋದರ್ ಬಹದ್ದೂರ್ ಎಂಬ ಕಥಾಪುಸ್ತಕ ಚಿತ್ರಲಿಪಿಯಿಂದ ಕೂಡಿದ್ದು ಬಹು ಸುಂದರವಾಗಿದೆ.

ಕೇಂದ್ರ ಲಲಿತಕಲಾ ಅಕಾಡೆಮಿ ಗಗನೇಂದ್ರನಾಥ ಠಾಕೂರರ ಕಲಾಪ್ರತಿಭೆಯನ್ನು ಮೆಚ್ಚಿ ಅವರನ್ನು ಕುರಿತ ಕಿರುಹೊತ್ತಿಗೆಯೊಂದನ್ನು ಪ್ರಕಟಿಸಿದೆ. (ಎ.ಎನ್.ಎಸ್‌ಯು.)

**ಗಗಾರಿನ್, ಯೂರಿ ಅಲೆಕ್ಸಿಯೆವಿಚ್ :** 1934–68 ; ಅಂತರಿಕ್ಷ ಯಾತ್ರೆ ಮಾಡಿದ ಪ್ರಥಮ ಮಾನವ. ಸೋವಿಯತ್ ದೇಶದವ. ಜನನ ಸ್ಮೊಲೆನ್‌ಸ್ಕ್ ಪ್ರಾಂತ್ಯದ ರೈತ ಕುಟುಂಬವೊಂದರಲ್ಲಿ. 1941ರಲ್ಲಿ ಶಾಲೆಗೆ ಸೇರಿದರೂ ನಾಟ್ಸಿಗಳ ಆಕ್ರಮಣ ದಿಂದಾಗಿ ಈತನ ವಿದ್ಯಾಭ್ಯಾಸ ಮೊಟಕಾಯಿತು. ಎರಡನೆಯ ಮಹಾಯುದ್ಧದ ಅನಂತರ

ವೃತ್ತಿ ಶಿಕ್ಷಣ ಮುಗಿಸಿ ಎರಕಗಾರನ ಅರ್ಹತೆ ಪಡೆದ. ಅನಂತರ ಸರಾತೋವ್‌ನ ತಾಂತ್ರಿಕ ಶಾಲೆಯಲ್ಲಿ ಅಭ್ಯಸಿಸಿ 1955ರಲ್ಲಿ ಪದವೀಧರನಾದ. ವಿಮಾನದಲ್ಲಿ ಹಾರಾಡುವ ಉತ್ಕಟ ಆಸೆ ಶಾಲೆಯಲ್ಲಿದ್ದಾಗಲೇ ಇತ್ತಾಗಿ ಸರಾತೋವ್ ಏರೋಕ್ಲಬ್ಬಿಗೆ ಸೇರಿದ. ಅನಂತರ 1955ರಲ್ಲಿ ಓರೆನಬರ್ಗಿನ ವಾಯುದಳದ ಶಾಲೆ ಸೇರಿ ಪದವೀಧರನಾದ (1957).

ಇದೇ ಹೊತ್ತಿಗೆ ಅಂತರಿಕ್ಷ ವಿಜ್ಞಾನದಲ್ಲಿ ಅಗಾಧ ಪ್ರಗತಿ ಆಗುತ್ತಿತ್ತು. 1957ರಲ್ಲಿ ರಷ್ಯ ಸ್ಪುಟ್ನಿಕ್–1ನ್ನು ಹಾರಿಸಿತ್ತು. ಸ್ಪುಟ್ನಿಕ್–2ರಲ್ಲಿ ಲೈಕ ಎಂಬ ನಾಯಿಯನ್ನು ಕಳಿಸಿ ಜೀವವೈಜ್ಞಾನಿಕ ಪ್ರಯೋಗಗಳನ್ನು ನಡೆಸಿತ್ತು. ಮಾನವ ಅಂತರಿಕ್ಷಕ್ಕೆ ಪ್ರಥಮ ಹೆಜ್ಜೆ ಇಡುವ ಕಾಲ ಸಮೀಪಿಸುತ್ತಿತ್ತು. ಹೊಸ ಸಾಹಸಗಳ ಅವಕಾಶಕ್ಕಾಗಿ ಕಾಯುತ್ತಿದ್ದ ಗಗಾರಿನ್ ಅಂತರಿಕ್ಷ ಯಾತ್ರಿಗಳ ಗುಂಪಿಗೆ ಸೇರಲು ಪ್ರವೇಶಪತ್ರ ಕಳಿಸಿ ಯಶಸ್ವಿಯಾದ, ವಿಜ್ಞಾನಿಗಳು ಮತ್ತು ಎಂಜಿನಿಯರುಗಳು ವೊಸ್ಟೋಕ್–1 ಗಗನ ನೌಕೆಯ ನಿರ್ಮಾಣದಲ್ಲಿದ್ದಾಗ ಗಗಾರಿನ್

ಮತ್ತು ಆತನ ಸಂಗಡಿಗರು ಅಂತರಿಕ್ಷ ಯಾತ್ರೆಯ ಕಠಿಣ ತರಬೇತಿಯನ್ನು ಪಡೆದರು. ಈ ವೋಸ್ಟೋಕ್–1ರಲ್ಲಿ ಅಂತರಿಕ್ಷಕ್ಕೆ ಹಾರಲು ಗಗಾರಿನ್ ಆಯ್ಕೆಯಾದ.

1961 ಏಪ್ರಿಲ್ 12, ಬೆಳಿಗ್ಗೆ 9 ಗಂ. 7 ಮಿ. (ಮಾಸ್ಕೊ ಕಾಲ) ವೋಸ್ಟೋಕ್–1 ಬಾಹ್ಯಾಕಾಶ ನೌಕೆಯನ್ನು ರಾಕೆಟ್ಟಿನಿಂದ ಹಾರಿಸಲಾಯಿತು. ನೌಕೆಯ ಪೀಠದಲ್ಲಿ ಗಗಾರಿನ್ ಭದ್ರವಾಗಿದ್ದ. 302 ಕಿಮೀ. ಉಚ್ಚಸ್ಥಾನದ 175 ಕಿಮೀ. ನೀಚಸ್ಥಾನ ಪಥದಲ್ಲಿ 4,725 ಕಿಗ್ರಾಂ. ತೂಕದ ಈ ನೌಕೆ 28,000 ಕಿಮೀ./ಗಂ. ವೇಗದಲ್ಲಿ 108 ಮಿ.ಗಳ ಪ್ರಯಾಣಮಾಡಿ 10 ಗಂ.55 ಮಿ.ಗೆ ಪೂರ್ವನಿಯೋಜಿತ ಪ್ರದೇಶದಲ್ಲಿಳಿಯಿತು. ವೋಸ್ಟೋಕ್–1ರ ಯಶಸ್ವಿ ಉಡ್ಡಯನ ಅಂತರಿಕ್ಷ ಸಂಶೋಧನೆಯ ಪ್ರಮುಖ ಮೈಲುಗಲ್ಲಾಯಿತು. ಭಾರರಹಿತ ಸ್ಥಿತಿಯಲ್ಲಿ ಮಾನವ ತನ್ನ ಕಾರ್ಯಗಳನ್ನು ಸಹಜವಾಗಿ ಮಾಡಬಲ್ಲ ಎನ್ನುವುದು ದೃಢಪಟ್ಟಿತು.

ಗಗಾರಿನನ ಈ ಸಾಹಸಕ್ಕಾಗಿ ರಷ್ಯ ಅವನಿಗೆ ಸೋವಿಯತ್ ದೇಶದ ಧೀರ (ಹಿರೋ ಆಫ್ ದಿ ಸೋವಿಯತ್ ಯೂನಿಯನ್) ಮತ್ತು ಲೆನಿನ್ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿತು. 1968 ಮಾರ್ಚ್ 27ರಂದು ಪರೀಕ್ಷಾರ್ಥ ವಿಮಾನ ಹಾರಾಟದಲ್ಲಿದ್ದಾಗ ಅಪಘಾತಕ್ಕೀಡಾಗಿ ಗಗಾರಿನ್ ಅಸುನೀಗಿದ. (ಎಸ್.ಎಂ.ಎಂ.)

**ಗಜನಿಂಬೆ :** ರೂಟೇಸೀ ಕುಟುಂಬಕ್ಕೆ ಸೇರಿದ ಒಂದು ಉಪಯುಕ್ತ ಮರ. ಸಿಟ್ರಸ್ ಲೈಮನ್ ಇದರ ವೈಜ್ಞಾನಿಕ ಹೆಸರು. ಗಜನಿಂಬೆಯನ್ನು ಹೋಲುವುದಾದರೂ ಹಣ್ಣಿನ ಗಾತ್ರದಲ್ಲಿ ನಿಂಬೆಗಿಂತ ದಪ್ಪ. ಮರವೂ ಹೆಚ್ಚು ದಪ್ಪುಪುಷ್ಟ. ಹಣ್ಣಿನಲ್ಲಿ ಸಿಪ್ಪೆ ಸಡಿಲವಾಗಿಲ್ಲ. ಹಣ್ಣಿನ ರುಚಿ ಹುಳಿ ಇಲ್ಲವೆ ಕೊಂಚ ಒಗರು ; ಆಕಾರ ಅಂಡದಂತೆ ; ತುದಿ ಚೂಚುಕದಂತೆ ಮುಂಚಾಚಿದೆ.

ಗಜನಿಂಬೆ ಉತ್ತರ ಭಾರತದ ಮೂಲವಾಸಿ. ಇದು 10′–20′ ಎತ್ತರ ಬೆಳೆಯುತ್ತದೆ. ಇದರಲ್ಲಿ ಗಟ್ಟಿಯಾದ ಮುಳ್ಳುಗಳಿವೆ. ಎಲೆಗಳ ಬಣ್ಣ ನಸುಹಸುರು : ಆಕಾರ ಆಯತ ಇಲ್ಲವೆ ಕರನೆಯಂತೆ; ಅಂಚು ನಯ. ತುದಿ ಚೂಪಾಗಿರಬಹುದು ಇಲ್ಲವೆ ಮೊಂಡಾಗಿರಬಹುದು. ಎಲೆ ತೊಟ್ಟು ರೆಕ್ಕೆಯಂತೆ ಹರಡಿ ಕೊಂಡಿದೆ. ಹೂಗಳು ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ.

ಗಜನಿಂಬೆ ಉಷ್ಣ ಹವೆಯ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ವರ್ಷಕ್ಕೆ 30′ ಗಿಂತ ಕಡಿಮೆ ಮಳೆ ಬೀಳುವ ಮತ್ತು ಸಮುದ್ರಮಟ್ಟದಿಂದ 3,000 ಅಡಿ ಎತ್ತರವಿರುವ ಪ್ರದೇಶಗಳು ಇದರ ಬೇಸಾಯಕ್ಕೆ ಉತ್ತಮ. ಗಜನಿಂಬೆ ಬೇಸಾಯಕ್ಕೆ 6′–8′ ಆಳದವರೆಗೆ ಒಂದೇ ಸಮನಾದ ರಚನೆಯುಳ್ಳ ಮತ್ತು ನೀರು ಚೆನ್ನಾಗಿ ಇಂಗಿಹೋಗುವಂಥ ಗೋಡು ಮಣ್ಣು ಯೋಗ್ಯವಾದ್ದು.

ಗಜನಿಂಬೆಯಲ್ಲಿ ಹಲವಾರು ಬಗೆಗಳಿವೆ. ಭಾರತದಲ್ಲಿ ಬೆಳೆಯಲಾಗುತ್ತಿರುವ ಕೆಲವು ಮುಖ್ಯವಾದ ಬಗೆಗಳನ್ನು ಮುಂದೆ ವಿವರಿಸಲಾಗಿದೆ.

**1 ಗಾಲ್ಗರ್ (ಬೆಟ್ಟದ ಗಜನಿಂಬೆ):** ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಬೆಳೆಯುವ ಬಗೆ. ಇದರ ಹಣ್ಣು ಮೊಟ್ಟೆಯಾಕಾರದ್ದು. ಬೀಜಗಳ ಸಂಖ್ಯೆ ಕಡಿಮೆ. ಅಧಿಕ ಇಳುವರಿಯನ್ನು ಕೊಡುವ ಬಗೆ ಇದು. ಹಣ್ಣನ್ನು ಉಪ್ಪಿನಕಾಯಿ ಮತ್ತು ತಂಪಾದ ಪಾನೀಯಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

**2 ಇಟಲಿಯ ಗಜನಿಂಬೆ:** ಯುರೋಪಿನಿಂದ ತರಲಾದ ಗಜನಿಂಬೆಯ ಬಗೆಗಳಲ್ಲಿ ಇದು ಬಹು ಮುಖ್ಯವಾದದ್ದು; ಸಾಮಾನ್ಯವಾಗಿ ಎಲ್ಲ ತರಹದ ವಾತಾವರಣಕ್ಕೂ ಹೊಂದಿಕೊಂಡು ಬೆಳೆಯುತ್ತದೆ. ಇದರ ಹಣ್ಣು ಅಂಡಾಕಾರದ್ದು. ಬೀಜಗಳಿರುವುದಿಲ್ಲ. ಹಣ್ಣುಗಳಿಗೆ ಮಂದವಾದ ಸಿಪ್ಪೆ ಮತ್ತು ರಸಭರಿತ ತಿರುಳು ಇರುವುದರಿಂದ ಉಪ್ಪಿನಕಾಯಿ ಮತ್ತು ತಂಪಾದ ಪಾನೀಯಗಳ ತಯಾರಿಕೆಗೆ ಯೋಗ್ಯವಾಗಿವೆ.

**3 ಪಾಟ್ ನಿಂಬು ಅಥವಾ ಅಸ್ಸಾಂ ಗಜನಿಂಬೆ:** ಇದು ಹೆಚ್ಚು ಫಲ ಬಿಡುವ ಬಗೆ. ಇದು ಇಟಲಿಯ ಗಜನಿಂಬೆಗಿಂತ ಕಡಿಮೆ ರುಚಿಯುಳ್ಳದ್ದು.

**4 ಬರಮಾಸಿಯ ಗಜನಿಂಬೆ:** ಇದು ಉತ್ತರ ಪ್ರದೇಶದ ಪೂರ್ವ ಜಿಲ್ಲೆಗಳಲ್ಲಿ ಮತ್ತು ಪಂಜಾಬಿನಲ್ಲಿ ಜನಪ್ರಿಯವಾಗಿದೆ. ಇದು ಮಧ್ಯಮ ಗಾತ್ರದ, ಚೆಂಡಿನಾಕಾರದ ಹಣ್ಣುಗಳನ್ನು ಬಿಡುತ್ತದೆ. ಚೂಚುಕ ಇರುವುದಿಲ್ಲ. ಸಿಪ್ಪೆ ತೆಳು. ತಿರುಳು ರಸಭರಿತವಾಗಿಯೂ ರುಚಿಯಾಗಿಯೂ ಇದೆ. ಇದೂ ಕೂಡ ಅಧಿಕ ಇಳವರಿ ಕೊಡುವಂಥದು.

**5 ಜಿನೋವ ಗಜನಿಂಬೆ:** ಇದನ್ನು ಆಂಧ್ರ ಪ್ರದೇಶದ ಕಡಪ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಇದರ ಹಣ್ಣಿನಲ್ಲಿ ಬೀಜಗಳಿಲ್ಲ.

ಗಜನಿಂಬೆ ನೆಟ್ಟ ನಾಲ್ಕು ವರ್ಷಗಳ ಅನಂತರ ಫಲ ಬಿಡತೊಡಗುತ್ತದೆ. ಬೆಳೆಯುವ ಸ್ಥಳದ ಹವಾಗುಣಕ್ಕನುಸಾರವಾಗಿ ಹಣ್ಣು ಬಿಡುವ ಕಾಲ ಬದಲಾಗುತ್ತದೆ. ಒಂದು ವರ್ಷಕ್ಕೆ ಒಂದು ಮರದಿಂದ 600–800 ಹಣ್ಣುಗಳನ್ನು ಪಡೆಯಬಹುದು.

ಗಜನಿಂಬೆಯನ್ನು ನಿಂಬೆಯಂತೆ ನೇರವಾಗಿಯೇ ಉಪಯೋಗಿಸುವುದಿಲ್ಲ; ತಂಪಾದ ಪಾನೀಯಗಳ ತಯಾರಿಕೆಯಲ್ಲಿ ಬಳಸುವುದೇ ಹೆಚ್ಚು. ಕ್ಯಾಂಡಿ, ಜ್ಯಾಮ್, ಜೆಲಿ ಮುಂತಾದವುಗಳಿಗೆ ವಾಸನೆ ಕಟ್ಟಲು ಉಪಯೋಗಿಸುತ್ತಾರೆ. ಸಿಟ್ರಿಕ್ ಆಮ್ಲ, ಪೆಕ್ಟಿನ್, ನಿಂಬೆಎಣ್ಣೆ ಮುಂತಾದುವುಗಳ ತಯಾರಿಕೆಗೂ ಇದನ್ನು ಬಳಸುವುದಿದೆ. ಕಲೆಗಳನ್ನು ಹೋಗಲಾಡಿಸುವುದಕ್ಕೂ ಚಲುವೆ ಮಾಡುವುದಕ್ಕೂ ಇದನ್ನು ಉಪಯೋಗಿಸುವುದುಂಟು. ಹಣ್ಣಿನ ಸಿಪ್ಪೆಯಿಂದ ನಿಂಬೆಯ ಪಾಕ, ನಿಂಬೆ ಎಣ್ಣೆ ಮತ್ತು ಔಷಧಗಳಿಗೆ ಸುವಾಸನೆ ಕೊಡಲು ಬಳಸುವ ವಸ್ತುಗಳು ಇತ್ಯಾದಿಗಳು ತಯಾರಿಕೆಗೆ ಬಳಸಬಹುದು. ಗುಲ್ಮ ಸಂಬಂಧಿ ರೋಗಗಳಗೆ ಗಜನಿಂಬೆಯ ಉಪ್ಪಿನ ಕಾಯಿ ಒಳ್ಳೆಯ ಮದ್ದು. ಅತಿಸಾರ, ಆಮಶಂಕೆ, ಸಂಧಿವಾತ ಮುಂತಾದ ರೋಗಗಳಲ್ಲಿ ಗಜನಿಂಬೆಯ ರಸವನ್ನು ಬಳಸುತ್ತಾರೆ. (ಎಂ.ಎಚ್.ಎಂ.)

**ಗಜಪತಿ ವಂಶ :** 15–16ನೆಯ ಶತಮಾನಗಳಲ್ಲಿ ಒರಿಸ್ಸದಲ್ಲಿ ಸ್ವತಂತ್ರವಾಗಿ ಆಳಿದ ರಾಜಮನೆತನಗಳಲ್ಲಿ ಒಂದು. ಈ ರಾಜಮನೆತನ ಅಸ್ತಿತ್ವಕ್ಕೆ ಬರುವ ಮೊದಲು ಪೂರ್ವದ ಗಂಗರು ಒರಿಸ್ಸದಲ್ಲಿ ಅಧಿಪತಿಗಳಾಗಿದ್ದರು. ಆ ವಂಶದ ಕೊನೆಯ ಅರಸನಾದ ನಾಲ್ಕನೆಯ ಭಾನುದೇವ, ರಾಜಮಹೇಂದ್ರದ ರೆಡ್ಡಿ ಮನೆತನಕ್ಕೆ ಸೇರಿದ ವೇಮಾರೆಡ್ಡಿ ಮತ್ತು ವೀರಭದ್ರಾರೆಡ್ಡಿಯವರ ವಿರುದ್ಧ ದಂಡೆತ್ತಿಹೋಗಿ ಅವರಿಂದ ಸೋಲಿಸಲ್ಪಟ್ಟ (ಸು.1430).ಆದರೆ ಆತನಿಗೆ ಸ್ವರಾಜ್ಯಕ್ಕೆ ಹಿಂದಿರುಗಿ ಬರಲು ಆಸ್ಪದವಿರಲಿಲ್ಲ. ಇದಕ್ಕೆ ಗಜಪತಿ ವಂಶದ ಕಪಿಲೇಶ್ವರನೇ ಕಾರಣ. ಈತ ಭಾನುದೇವನ ಮಂತ್ರಿಗಳಲ್ಲೊಬ್ಬನಾಗಿದ್ದ. ಅರಸ ರಾಜ್ಯದ ಹೊರಗಡೆ ಕದನ ನಿರತನಾಗಿದ್ದಾಗ, ಈತ ಕಳಿಂಗದಲ್ಲಿ ತನ್ನ ಅನುಯಾಯಿಗಳ ಸಹಾಯದಿಂದ ದಂಗೆಯನ್ನೆಬ್ಬಿಸಿ, ಗಂಗರ ರಾಜ್ಯಕ್ಕೆ ತಾನೇ ಅಧಿಪತಿಯೆಂದು ಸಾರಿಕೊಂಡ. ಭಾನುದೇವನ ಗತಿ ಏನಾಯಿತು ಎಂಬುದು ತಿಳಿಯದು. ಮಾದಲಾಪಾಂಜಿ ಎಂಬ ಪ್ರಾಚೀನ ಕವಿಲೆಯಲ್ಲಿ ಕಪಿಲೇಶ್ವರನನ್ನು ಕುರಿತು ಕೆಲವು ವಿವರಗಳಿವೆ. ಈತ ಅನಾಥ ಬಾಲಕನಾಗಿದ್ದನೆಂದೂ ಮಕ್ಕಳಿಲ್ಲದ ಭಾನುದೇವನಿಗೆ ವಿಮಲಾಲಯದ ಸಮೀಪದಲ್ಲಿ ದೊರೆತನೆಂದೂ ಈತನನ್ನು ಭಾನುದೇವ ಪೋಷಿಸಿದನೆಂದೂ ಭಾನುದೇವನ ಅನಂತರ ಸಹಜವಾಗಿಯೇ ಇವನು ರಾಜನಾದನೆಂದೂ ಹೇಳಿದೆ. ಆದರೆ ಇದನ್ನು ನಂಬಲು ಆಧಾರಗಳಿಲ್ಲ. ಕಪಿಲೇಶ್ವರ ಮೊಮ್ಮಗನಾದ ಪ್ರತಾಪರುದ್ರ ಬರೆದನೆನ್ನಲಾದ ಸರಸ್ವತೀ ವಿಲಾಸದಲ್ಲೂ ಈ ವಂಶದ ಅರಸರ ಶಾಸನಗಳಲ್ಲೂ ಹೇಳಿರುವ ವಿವರಗಳು ಇದಕ್ಕಿಂತ ಭಿನ್ನವಾದಂಥವು. ಅವುಗಳ ಪ್ರಕಾರ ಈ ಮನೆತನದ ಅರಸರು ಸೂರ್ಯ ವಂಶಕ್ಕೆ ಸೇರಿದವರು. ಕಪಿಲೇಶ್ವರನ ತಂದೆ ಜಾಗೇಶ್ವರ. ತಾತ ಕಪಿಲೇಶ್ವರ. ಕಪಿಲೇಶ್ವರನಿಗೆ ಬಲರಾಮನೆಂಬ ಹಿರಿಯ ಮತ್ತು ಪರಶುರಾಮನೆಂಬ ಕಿರಿಯ ಸೋದರರಿದ್ದರು. ಪರಶುರಾಮನ ಮಗ ರಘುದೇವನರೇಂದ್ರಕುಮಾರ. ಈತನ 1456ರ ತಾಮ್ರ ಶಾಸನವೊಂದು ಇತ್ತೀಚೆಗೆ ದೊರಕಿದೆ. ಇವುಗಳ ಆಧಾರದಿಂದ ಈ ವಂಶಾವಳಿಯನ್ನು ಹೀಗೆ ರಚಿಸಲಾಗಿದೆ :




ಈ ಮನೆತನದ ಮೂಲಪುರಷನಾದ ಕಪಿಲೇಶ್ವರ ಉತ್ಕಲದೇಶದ ಒಬ್ಬ ನಾಯಕನಾಗಿದ್ದ. ಅಂತೆಯೇ ತಂದೆಯಾದ ಜಾಗೇಶ್ವರ ಸಹ ಮಹಾಪರಾಕ್ರಮ ಶಾಲಿಯಾಗಿದ್ದ. ಇವರ ಅನುಯಾಯಿಗಳ ಬೆಂಬಲದಿಂದ ಭಾನುದೇವ ರಾಜಧಾನಿಯಲ್ಲಿಲ್ಲದ ಸಮಯವನ್ನು ಸಾಧಿಸಿ. ಕಪಿಲೇಶ್ವರ ರಾಜ್ಯವನ್ನು ಕಸಿದುಕೊಂಡನೆಂದು ತೋರುತ್ತದೆ. ಅಧಿಕಾರಕ್ಕೆ ಬಂದ ಆರಂಭದಲ್ಲಿ ಭಾನುದೇವನ ಸಹಾಯಕ್ಕೆ ಬಂದ ಪೂರ್ವ ಚಾಳುಕ್ಯ ವಂಶದ ವಿಷ್ಣುವರ್ಧನ ಮುಂತಾದವರನ್ನು ಹಿಮ್ಮೆಟ್ಟಿಸಿ, ದಂಡೆತ್ತಿಬಂದ ಬಂಗಾಳದ ಸುಲ್ತಾನನನ್ನು ಹೊಡೆದೋಡಿಸಿ, ತನ್ನ ಅಧಿಕಾರವನ್ನು ಬಲಪಡಿಸಿಕೊಂಡ.

ಆರಂಭದಲ್ಲಿಯ ಈ ತೊಂದರೆಗಳನ್ನು ನೀಗಿಕೊಂಡ ಬಳಿಕ ಕಪಿಲೇಶ್ವರ ದಕ್ಷಿಣದಲ್ಲಿ ವಿಜಯಯಾತ್ರೆಗೆ ಹೊರಟ. 1944ರಲ್ಲಿ ವಿಶಾಖಪಟ್ಟಣದ ಸಮೀಪದ ಕೊರುಕೊಂಡ ದುರ್ಗವನ್ನು ವಶಪಡಿಸಿಕೊಂಡನಾದರೂ ರೆಡ್ಡಿಗಳು ಅವನನ್ನು ಧೈರ್ಯದಿಂದ ಎದುರಿಸಿ

ಹಿಮ್ಮೆಟ್ಟಿಸಿದರು. ವಿಜಯನಗರದ ಇಮ್ಮಡಿ ದೇವರಾಯ ರಾಜಮಹೇಂದ್ರದ ರೆಡ್ಡಿಗಳಿಗೆ ಆಗ ಸಹಾಯ ನೀಡಿದ್ದ. ಇದೇ ಸಮಯದಲ್ಲಿ ಜೌನ್‌ಪುರದ ಷರ್ಕಿ ಸುಲ್ತಾನನಾದ ಮಹಮ್ಮದ್ ಷಹ ಕಳಿಂಗದ ಮೇಲೆ ದಂಡೆತ್ತಿದುದು ಸಹ ಕಪಿಲೇಶ್ವರ ಹಿಮ್ಮೆಟ್ಟಲು ಒಂದು ಕಾರಣವಾಗಿತ್ತು. ದೇವರಾಯನ ಮರಣದಿಂದ(1446) ರೆಡ್ಡಿಗಳ ಶಕ್ತಿ ಕುಗ್ಗಿತು. ಇದರ ಫಲವಾಗಿ ಕಳಿಂಗಾಧಿಪತಿ ಇನ್ನೊಮ್ಮೆ ರೆಡ್ಡಿಗಳ ಮೇಲೇರಿ ಹೋಗಿ ರಾಜಮಹೇಂದ್ರವರವನ್ನು ಆಕ್ರಮಿಸಿದ. ಇದರಲ್ಲಿ ಇವನ ಮಗ ಹಂಮೀರ ಹಾಗೂ ಸೋದರನ ಮಗ ರಘುದೇವಕುಮಾರ ಮಹತ್ತ್ವವಾದ ಪಾತ್ರ ವಹಿಸಿದರು. ಹೊಸದಾಗಿ ಆಕ್ರಮಿಸಲಾದ ರಾಜಮಹೇಂದ್ರ ಪ್ರದೇಶದ ಅಧಿಕಾರಿಯಾಗಿ ರಘುದೇವ ನೇಮಕ ಹೊಂದಿದ. ಕಪಿಲೇಶ್ವರ ಅನಂತರ ಸುಮಾರು ಹತ್ತು ವರ್ಷಗಳವರೆಗೂ ಶಾಂತಿಯಿಂದ ರಾಜ್ಯಪಾಲನೆ ಮಾಡಿಕೊಂಡಿದ್ದು 1455ರಲ್ಲಿ ಪುನಃ ದಕ್ಷಿಣದ ಕಡೆ ಹೊರಟು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಕೊಂಡವೀಡು ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿ ಗಣದೇವನನ್ನು ತನ್ನ ಪ್ರತಿನಿಧಿಯಾಗಿ ನೆಲೆಗೊಳಿಸಿದ. ಈತ ಈ ಸಂದರ್ಭದಲ್ಲಿ ಹಂಪೆಯನ್ನು ಸೂರೆಮಾಡಿದನೆಂದು ಗಂಗಾಧರನ ಗಂಗಾದಾಸ ಪ್ರತಾಪ ವಿಲಾಸದಲ್ಲಿ ಹೇಳಿದೆ.

ಬಹಮನಿ ರಾಜ್ಯದಲ್ಲಿ ಇವನ ಸಮಕಾಲೀನ ಹುಮಾಯುನ್ ಷಹ. ಆತನ ಕಾಲದಲ್ಲಿ ರಾಜ್ಯದಲ್ಲಿ ತಲೆ ಎತ್ತಿದ ವಿಪ್ಲವದಿಂದಾಗಿ ಹಂಮೀರ ತೆಲಂಗಾಣವನ್ನು ಆಕ್ರಮಿಸಲು ಎಡೆ ದೊರಕಿತು. ಬಹಮನಿಯ ವಶದಲ್ಲಿದ್ದ ಓರುಗಲ್ಲು ಕೋಟೆ 1460ರಲ್ಲಿ ಇವನ ವಶವಾಯಿತು. 1461ರಲ್ಲಿ ಹುಮಾಯೂನ ಮರಣ ಹೊಂದಿದ. ಮರುವರ್ಷ ಹಂಮೀರ ಬಿದರೆಯನ್ನು ಮುತ್ತಿದನಾದರೂ ಮಹಮೂದ್ ಗವಾನ ಇವನನ್ನು ಎದುರಿಸಿ ಓಡಿಸಿದ. ಅಲ್ಲಿಂದ ಹಿಂದಿರುಗಿದ ಹಂಮೀರ ವಿಜಯನಗರದ ಮೇಲೆ ದಂಡೆತ್ತಿದ. ಇವನನ್ನು ವಿರೋಧಿಸುವ ಸಾಮರ್ಥ್ಯ ಮಲ್ಲಿಕಾರ್ಜುನನಿಗೆ ಇರಲಿಲ್ಲ. ಉದಯಗಿರಿ, ಚಂದ್ರಗಿರಿ ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡು ತಿರುಚಿನಾಪಳ್ಳಿಯ ಶ್ರೀರಂಗದ ತನಕ ತಡೆಯಿಲ್ಲದೆ ನಡೆದ ಹಂಮೀರ ರಕ್ತಸಿಕ್ತವಾದ ಖಡ್ಗಗಳನ್ನು ದಕ್ಷಿಣ ಸಮುದ್ರದಲ್ಲಿ ತೊಳೆದನೆಂದು ಶಾಸನಗಳು ಅವನನ್ನು ಹೊಗಳಿವೆ. ಈ ವಿಜಯಗಳ ಫಲವಾಗಿ ಕಪಿಲೇಶ್ವರ ಗಜಪತಿ ಗೌಡೇಶ್ವರ ನವಕೋಟಿ ಕರ್ಣಾಟಕಲು ಬರಿಗೇಶ್ವರನೆಂಬ ಬಿರುದನ್ನು ಧರಿಸಿದ (1464).

ಇಷ್ಟೆಲ್ಲ ವಿಜಯಗಳಿಂದ ಕಳಿಂಗ ರಾಜ್ಯವನ್ನು ಬಲಪಡಿಸಿ ಅದರ ಕೀರ್ತಿ ಹರಡುವಂತೆ ಮಾಡಿದ ಕಪಿಲೇಶ್ವರ ತನ್ನ ಅಂತಿಮ ಕಾಲದಲ್ಲಿ ಉತ್ತರಾಧಿಕಾರಿಯನ್ನು ಕುರಿತು ಚಿಂತಿಸಬೇಕಾಯಿತು. ಹಿರಿಯನಾದ ಹಂಮೀರನಂತೆಯೇ ಕಿರಿಯನಾದ ಪುರುಷೋತ್ತಮನು ಪರಾಕ್ರಮಶಾಲಿಯಾಗಿದ್ದ. ಬಹುಶಃ ರಾಜನ ಒಲವು ಪುರುಷೋತ್ತಮನ ಮೇಲೆ ಹೆಚ್ಚಾಗಿತ್ತು. ಅವನಿಗೇ ಯುವರಾಜ ಪದವಿ ನೀಡಬೇಕೆಂದು ಜಗನ್ನಾಥದೇವರು ಇವನಿಗೆ ಸ್ವಪ್ನದಲ್ಲಿ ಸೂಚಿಸಿದನೆಂದು ಪ್ರತೀತಿ. ಹಂಮೀರ ದಂಗೆ ಏಳಲು ಇದು ನಿಮಿತ್ತವಾಯಿತು. ಈ ಅಂತಃ ಕಲಹದ ಸುಸಂಧಿಯನ್ನು ಸಾಧಿಸಿ ಚಂದ್ರಗಿರಿ ಮುಂತಾದ ಪ್ರದೇಶಗಳನ್ನು ಹಂಮೀರನಿಂದ ಮುಕ್ತಗೊಳಿಸಿ, ವಿಜಯನಗರಕ್ಕೆ ಸೇರಿದ ಇತರ ಕೋಟೆಗಳನ್ನೂ ಹಿಂದಕ್ಕೆ ಪಡೆಯಲು ಸಾಳುವ ನರಸಿಂಹ ಹವಣಿಸಿದ. ಪುರುಷೋತ್ತಮನಿಗೆ ಬೆಂಬಲವಾಗಿ ಕಪಿಲೇಶ್ವರ ಸೈನ್ಯವನ್ನು ಒಯ್ದು ಕೃಷ್ಣಾತೀರದಲ್ಲಿ ಬೀಡುಬಿಟ್ಟ.. ಅಲ್ಲಿಯೇ ಮಗನಿಗೆ ಅಧಿಕಾರ ವಹಿಸಿದ. ರಣಾಂಗಣದಲ್ಲಿಯೇ ಕಪಿಲೇಶ್ವರ ತೀರಿಕೊಂಡ (1468).

ಪುರುಷೋತ್ತಮ ಅಧಿಕಾರಕ್ಕೆ ಬಂದಮೇಲೆ 8 ವರ್ಷಗಳ ಕಾಲ ಅಣ್ಣನಾದ ಹಂಮೀರನೊಡನೆ ಹೋರಾಡಬೇಕಾಯಿತು. ಮೊದಲ ಬಹಮನಿ ಸುಲ್ತಾನರ ಸಹಾಯದೊಡನೆ ಹಂಮೀರ ಇವನಿಗೆ ಪ್ರತಿಕೂಲವಾಗಿತ್ತು. ಬಹಮನಿ ಸುಲ್ತಾನರ ಸಹಾಯದೊಡನೆ ಹಂಮೀರ ಇವನನ್ನು ಸೋಲಿಸಿದ. ಆದರೆ ಅನಂತರ ಪುರುಷೋತ್ತಮನ ಸ್ಥಿತಿ ಸುಧಾರಿಸಿತು. ಪುರಷೋತ್ತಮ ದೈವಾಂಶಸಂಭೂತನೆಂಬ ಭಾವನೆ ಪ್ರಜೆಗಳಲ್ಲಿ ತಲೆದೋರಿದ್ದು ಸಹ ಇವನಿಗೆ ಅನುಕೂಲವಾಯಿತು. ಬಹಮನಿ ರಾಜ್ಯದಲ್ಲೂ ಕಲಹಗಳುಂಟಾಗಿ ಅದರ ಸಹಾಯ ಹಂಮೀರನಿಗೆ ದೊರಕದೆ ಇದ್ದದ್ದೂ ಒಂದು ಕಾರಣ. ಇವುಗಳ ಲಾಭ ಪಡೆದ ಪುರುಷೋತ್ತಮ ಅಣ್ಣನನ್ನು ಸೋಲಿಸಿ ರಾಜ್ಯವನ್ನು ಹಿಂದಕ್ಕೆ ಪಡೆದ.

ವಿಜಯನಗರ ರಾಜ್ಯಕ್ಕೆ ಸೇರಿದ್ದು ಶತ್ರುವಶವಾಗಿದ್ದ ಅನೇಕ ಪ್ರಾಂತ್ಯಗಳನ್ನು ಸಾಳುವ ನರಸಿಂಹ ಈ ಸಮಯದಲ್ಲಿ ಪುನಃ ಪಡೆದುಕೊಂಡು ಮಚಲೀಪಟ್ಟಣದವರೆಗೂ ತನ್ನ ಅಧಿಕಾರವನ್ನು ವಿಸ್ತರಿಸಿದ. ಆದರೆ ಪುರಷೋತ್ತಮ ದೊಡ್ಡ ಸೈನ್ಯದೊಡನೆ ಆಂಧ್ರಪ್ರದೇಶದ ಉತ್ತರ ಭಾಗಗಳನ್ನು ವಶಪಡಿಸಿಕೊಳ್ಳಲು ಬಂದ. ಬಹಮನಿಯ ಮಹಮ್ಮದ್ ಷಹನೂ ರಾಜಮಹೇಂದ್ರವರದ ಕೋಟೆಯನ್ನು ರಕ್ಷಿಸಲು, ನಿಜಾಂ ಉಲ್ ಮುಲ್ಕನ ಸಹಾಯಕ್ಕೆ ಧಾವಿಸಿದ. ಈ ಸೈನ್ಯಗಳು ಮುನ್ನುಗ್ಗಿದರೆ ತನಗೆ ಅನುಕೂಲವಾಗದೆಂಬುದನ್ನು ಅರಿತ ನರಸಿಂಹ ಅಲ್ಲಿಂದ ಹಿಂದಿರುಗಿದ. ಪುರುಷೋತ್ತಮನನ್ನು ಮಹಮ್ಮದ್ ಷಹ ಸೋಲಿಸಿದನೆಂದು ಫಿರಿಷ್ತ ಬರೆದಿದ್ದಾನೆ. ಆದರೆ ಮಹಮ್ಮದ್ ಷಹನ ಬಳಿಕ ಬಹಮನಿ ರಾಜ್ಯದಲ್ಲಿ ಅರಾಜಕತೆ ತಲೆದೋರಿ ಅದಿಲ್ ಷಹ, ನಿಜಾಂ ಷಹ ಮುಂತಾದ ಪ್ರಾಂತ್ಯಾಧಿಕಾರಿಗಳು ಸ್ವತಂತ್ರರಾದರು. ಇದರಿಂದಾಗಿ ವಿಜಯನಗರದ ವಿರುದ್ಧ ದಂಡೆತ್ತಿ ಹೋಗಲು ಪುರುಷೋತ್ತಮನಿಗೆ ಅವಕಾಶ ಒದಗಿತು. ಸಾಳುವ ನರಸಿಂಹ ಉದಯಗಿರಿ ಕೋಟೆಯನ್ನು ಕಳೆದುಕೊಂಡ.

ಪುರುಷೋತ್ತಮ 1497ರ ತನಕ ರಾಜ್ಯವಾಳಿದ. ಈತ ಸ್ವತಃ ಪಂಡಿತನೂ ಕವಿಯೂ ಆಗಿದ್ದ. ಇವನು ಅಭಿನವಗೀತಗೋವಿಂದ, ಆಗಮ ಕಲ್ಪತರು, ನಾಮಮಾಲಿಕಾ, ಗೋಪಾಲಾರ್ಚನಾವಿಧಿ ಮುಂತಾದ ಗ್ರಂಥಗಳ ಕರ್ತೃವೆಂದು ಹೇಳಲಾಗಿದೆ. ಇವನ ಕಾಲದಲ್ಲಿ ಸಂಸ್ಕೃತ ಹಾಗೂ ಒರಿಯ ಭಾಷೆಗಳಿಗೆ ಅಮಿತವಾದ ಪ್ರೋತ್ಸಾಹ ದೊರಕಿತು.

ಪುರುಷೋತ್ತಮನ ಅನಂತರ ಪ್ರತಾಮರುದ್ರ ಆಳಿದ (1497–1538). ಸರಸ್ವತೀ ವಿಲಾಸದಲ್ಲಿ ಇವನಿಗೆ 'ಗೌಡೇಂದ್ರ ಮಾನಮರ್ದನ', 'ಯಮುನಾಪುರಾಧೀಶ್ವರ' 'ಹುಸೇನುಷಾಹಿ ಸುರತ್ರಾಣ ಶರಣರಕ್ಷಣ' ಎಂಬ ಬಿರುದುಗಳನ್ನು ಕೊಡಲಾಗಿದೆ. ವಿಜಯನಗರದ ಸಾಳುವ ನರಸಿಂಹನಾಗಲಿ, ತುಳುವ ನರಸನಾಯಕನಾಗಲಿ ಕೊಂಡವೀಡು, ಉದಯಗಿರಿ ಕೋಟೆಗಳನ್ನು ಹಿಂದಕ್ಕೆ ಪಡೆಯಲಾರದೆ ಹೋದರು. ಪ್ರತಾಪರುದ್ರ ಅವುಗಳನ್ನು ರಕ್ಷಿಸಿದನಲ್ಲದೆ ಬಹಮನಿ ಸುಲ್ತಾನರ ವಿರುದ್ಧ ಹೋರಾಡಿ ಓರುಗಲ್ಲು, ಖಂಬಂಮೆಟ್ಟು ಮುಂತಾದ ದುರ್ಗಗಳನ್ನು ಅವರಿಂದ ಕಸಿದುಕೊಂಡ. ಜೌನ್‌ಪುರದ ಷಾರ್ಕಿ ಸುಲ್ತಾನನಾದ ಹುಸೇನ್‌ಷಾಹ ಉತ್ಕಲದ ಮೇಲೆ ದಾಳಿ ನಡೆಸಿದಾಗ ಪ್ರತಾಪರುದ್ರ ಅವನನ್ನು ಸೋಲಿಸಿ ಓಡಿಸಿದ.

ಆದರೆ ಪ್ರತಾಪರುದ್ರ ಮೇಲಿಂದ ಮೇಲೆ ವಿಜಯನಗರದ ವಿರುದ್ಧ ನಡೆಸಿದ ದಾಳಿಗಳಿಂದಾಗಿ ಅದರ ಅರಸರು ಇವನ ಪ್ರಬಲ ವೈರಿಗಳಾದರು. 1509ರಲ್ಲಿ ಕೃಷ್ಣದೇವರಾಯ ಪಟ್ಟಕ್ಕೆ ಬಂದಾಗ ಉದಯಗಿರಿ ಮುಂತಾದ ಕೋಟೆಗಳನ್ನು ಹಿಂದಕ್ಕೆ ಪಡೆಯುವುದೇ ಅಲ್ಲದೆ ಗಜಪತಿಗಳನ್ನು ಸಂಪೂರ್ಣವಾಗಿ ನಾಶಗೊಳಿಸಿಬೇಕೆಂಬ ಆಶಯದಿಂದ ಅವರ ವಿರುದ್ಧ ಸುವ್ಯವಸ್ಥಿತವಾದ ರೀತಿಯಲ್ಲಿ ವಿಜಯಯಾತ್ರೆ ಕೈಗೊಂಡ. 1512 ರಲ್ಲಿ ಉದಯಗಿರಿ ಅವನ ವಶವಾಯಿತು. ಪ್ರತಾಪರುದ್ರನ ಚಿಕ್ಕಪ್ಪನಾದ ರಾಘದೇವರಾಯ ಸೆರೆಸಿಕ್ಕ. ಅನಂತರ ಕೃಷ್ಣದೇವರಾಯ ಕೊಂಡವೀಡನ್ನೂ ಆಕ್ರಮಿಸಿಕೊಂಡ. ಇಲ್ಲಿ ಪ್ರತಾಪರುದ್ರ ಸೋತು ಕೊಂಡಪಲ್ಲಿಗೆ ಓಡಿದ. ಅವನ ಮಗನಾದ ವೀರಭದ್ರನೂ ಇತರ ನಾಯಕರೂ ಬಂಧಿತರಾದರು. ಕೊಂಡಪಲ್ಲಿ, ರಾಜಮಹೇಂದ್ರವರ, ಸಿಂಹಾಚಲ, ಪೋಟ್ನೂರುಗಳು ಒಂದೊಂದಾಗಿ ಕೃಷ್ಣದೇವರಾಯನ ವಶವಾದವು. ಈ ಮಧ್ಯೆ ವೀರಭದ್ರ ಸೆರೆಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ. ಇದು ಪ್ರತಾಪರುದ್ರನ ಧೈರ್ಯವನ್ನು ಉಡುಗಿಸಿತು. ಕಳಿಂಗ ಯಾತ್ರೆಯ ಕೊನೆಯ ಘಟ್ಟದಲ್ಲಿ ಕೃಷ್ಣದೇವರಾಯನ ಸೈನ್ಯ ಕಳಿಂಗ ರಾಜಧಾನಿಯನ್ನಾಕ್ರಮಿಸಿತು. ಪ್ರತಾಪರುದ್ರ ಇದನ್ನೆದುರಿಸಲಾರದೆ ಸೋಲೊಪ್ಪಿ ಕೃಷ್ಣದೇವರಾಯನಿಗೆ ಕಪ್ಪಕಾಣಿಕೆ ಸಲ್ಲಿಸಿದನಲ್ಲದೆ ತನ್ನ ಮಗಳಾದ ಭದ್ರಾದೇವಿಯನ್ನು ಅವನಿಗೆ ವಿವಾಹ ಮಾಡಿಕೊಟ್ಟ.. ಕೃಷ್ಣಾನದಿ ಈ ಎರಡು ರಾಜ್ಯಗಳ ನಡುವಣ ಮೇರೆಯಾಗಿರತಕ್ಕದೆಂದು ಕೃಷ್ಣದೇವರಾಯ ಗೊತ್ತುಮಾಡಿ, ಗಜಪತಿಗೆ ಅವನ ರಾಜ್ಯವನ್ನು ಹಿಂದಕ್ಕೆ ಕೊಟ್ಟು ತಾನು ರಾಜಧಾನಿಗೆ ಹಿಂದಿರುಗಿದ.

ಆಗ ಈ ರಾಜ್ಯಕ್ಕೆ ಕೊಂಡಪಲ್ಲಿ ರಾಜಧಾನಿಯಾಗಿತ್ತು. ಕೃಷ್ಣದೇವರಾಯನ ಮರಣಾನಂತರ ಗಜಪತಿ ಪುನಃ ಪ್ರಬಲಿಸಲು ಯತ್ನಿಸಿದನಾದರೂ ಅಚ್ಯುತದೇವರಾಯ ಇವನನ್ನು ಎದುರಿಸಿ ಹಿಮ್ಮೆಟ್ಟಿಸಿದರಿಂದಲೂ ಕುತುಬ್‌ಷಹ ಇವನ ವಿರುದ್ಧ ದಂಡೆತ್ತಿ ಇವನನ್ನು ಸೋಲಿಸಿದ್ದರಿಂದಲೂ ಇವನ ಆಕಾಂಕ್ಷೆಗಳಿಗೆ ತಡೆ ಬಿತ್ತು. ಅಷ್ಟೇ ಅಲ್ಲ, ಇದು ಗಜಪತಿ ರಾಜ್ಯದ ಅವನತಿಗೆ ಕಾರಣವಾಯಿತು. ಅಧಿಕಾರದಲ್ಲಷ್ಟು ವರ್ಷಗಳೂ ಸೋಲನ್ನನುಭವಿಸಿ ನಿರಾಶೆ ಹೊಂದಿದ ಅರಸ ಆ ವೇಳೆಗೆ ಪುರಿಗೆ ಬಂದಿದ್ದ ಸ್ವಾಮಿ ಚೈತನ್ಯರ ಶಿಷ್ಯನಾಗಿ ತನ್ನ ಕೊನೆಯ ವರ್ಷಗಳನ್ನು ಕಳೆದ.

ಇವನಿಗೆ ಉತ್ತರಾಧಿಕಾರಿಗಳಿರಲಿಲ್ಲ. ಮಕ್ಕಳಾದ ವೀರಭದ್ರ ಮತ್ತು ರಾಮಚಂದ್ರರು ಇವನ ಕಾಲದಲ್ಲೇ ಮರಣ ಹೊಂದಿದರು. ಈ ಪರಿಸ್ಥಿತಿಯಲ್ಲಿ ಇವನ ಮಂತ್ರಿಯಾದ ಗೋವಿಂದ ವಿದ್ಯಾಧರ ಕುಟಿಲೋಪಾಯಗಳಿಂದ ರಾಜ್ಯವನ್ನು ವಶಪಡಿಸಿಕೊಂಡ. ಇದರೊಂದಿಗೆ ಗಜಪತಿ ವಂಶ ಮರೆಯಾಯಿತು.

ಪ್ರತಾಪರುದ್ರನೂ ತನ್ನ ತಂದೆಯಂತೆ ಹಿರಿಯ ವಿದ್ವಾಂಸನಾಗಿದ್ದ. ಕೌತುಕ ಚಿಂತಾಮಣಿ, ನಿರ್ಣಯ ಸಂಗ್ರಹ, ಸರಸ್ವತೀವಿಲಾಸ ಇತ್ಯಾದಿ ಗ್ರಂಥಗಳನ್ನು ರಚಿಸಿದ. ತತ್ತ್ವಚಿಂತಾಮಣಿ, ಅದ್ವೈತ ಮಕರಂದ ಮುಂತಾದ ಗ್ರಂಥಗಳಿಗೆ ವ್ಯಾಖ್ಯಾನವನ್ನು ಬರೆದ. ನವ್ಯನ್ಯಾಯವಿಶಾರದನೆನಿಸಿದ ವಾಸುದೇವ ಸಾರ್ವಭೌಮ ಭಟ್ಟಚಾರ್ಯ, ಲೋಲ್ಲಲಕ್ಷ್ಮೀಧರ್ಮ, ಭಕ್ತಿಭಾಗವತ ಮಹಾಕಾವ್ಯದ ಕರ್ತೃವಾದ ಜೀವದೇವಾಚಾರ್ಯ, ಜಗನ್ನಾಥವಲ್ಲಭ ನಾಟಕವನ್ನು ಬರೆದ ರಾಮಾನಂದರಾಯ ಮುಂತಾದವರು ಇವನ ಆಸ್ಥಾನದಲ್ಲಿದ್ದರು. ಗಜಪತಿಗಳು ಅಧಿಕಾರಕ್ಕೆ ಬರುವ ಮೊದಲು ಕಳಿಂಗದಲ್ಲಿ ಒರಿಯ ಭಾಷೆಗೆ ಹೆಚ್ಚಿನ ಪ್ರೋತ್ಸಾಹವಿರಲಿಲ್ಲ. ಸಂಸ್ಕೃತ ಅವರ ರಾಜಭಾಷೆಯಾಗಿತ್ತು. ಆದರೆ ಗಜಪತಿಗಳ ಕಾಲದಲ್ಲಿ ಒರಿಯ ಭಾಷೆಗೆ ವಿಪುಲವಾದ ಪ್ರೋತ್ಸಾಹ ದೊರಕಿತು. ರಾಮಾಯಣ ಮಹಾಭಾರತಗಳೂ ಪುರಾಣಗಳೂ ಒರಿಯ ಭಾಷೆಗೆ ಅನುವಾದವಾದುವು. ಸ್ವಾಮಿ ಚೈತನ್ಯರು ಗಜಪತಿಗಳ ರಾಜ್ಯಕ್ಕೆ ಬಂದಾಗ ಜನಸಾಮಾನ್ಯರಿಗೆ ಅರ್ಥವಾಗುವಂತೆ ತಮ್ಮ ತತ್ತ್ವಗಳನ್ನು ದೇಶಭಾಷೆಯಲ್ಲಿ

ತಿಳಿಸಿಹೇಳಿದ್ದು ಸಹ ಇದಕ್ಕೊಂದು ಕಾರಣ. ತೆಲುಗು ಭಾಷೆಗೂ ಇವರು ಅಷ್ಟೇ ಪ್ರೋತ್ಸಾಹ ಕೊಟ್ಟರೆಂದು ಹೇಳಲಾಗದು. ಆದರೂ ರೆಡ್ಡಿಗಳ ರಾಜ್ಯದಲ್ಲಿ ಸಾಮಂತರು ಆ ಭಾಷೆಯನ್ನು ಪೋಷಿಸಿದರು. ಪೂಸಪಾಟಿ ಬಸವ ಭೂಪಾಲ, ತೆಲುಗು ಪಂಚತಂತ್ರವನ್ನು ರಚಿಸಿದ ದೂಬಗುಂಟ ನಾರಾಯಣ ಕವಿ, ನಂದಿ ಮಲ್ಲಯ್ಯ, ಘಂಟ ಸಿಗ್ಗಯ್ಯ ಮುಂತಾದವರು ಈ ಕಾಲದ ತೆಲುಗು ಸಾಹಿತಿಗಳು.

ಚೈತನ್ಯನಿಗೆ ಆಶ್ರಯವಿತ್ತ ಗಜಪತಿಗಳು ವೈದಿಕ ಮತ ಸಂಪ್ರದಾಯಗಳನ್ನು ಪೋಷಿಸಿದರು. ಭಕ್ತಿ ಸಂಕೀರ್ತನೆಗಳು ನಾಡಿನಲ್ಲೆಲ್ಲ ಹರಡಿದುವು. ಜನರಲ್ಲಿ ಇದು ಹೊಸ ಚೈತನ್ಯವನ್ನು ಮೂಡಿಸಿತು. (ಜಿ.ಬಿ.ಆರ್.)

**ಗಜಾಂಕುಶ :** ಈತ ಒಬ್ಬ ಕವಿ ಹಾಗೂ ದಂಡನಾಯಕ. ಪಂಪ ಕವಿಯ ಸಮಕಾಲೀನನೆನ್ನಲಾಗಿದೆ. ಕನ್ನಡದಲ್ಲಿ ಈತ ಕಾವ್ಯಗಳನ್ನು ರಚಿಸಿದಂತೆ ತಿಳಿದು ಬಂದಿದ್ದರೂ ಇದುವರೆಗೆ ಯಾವುದೂ ದೊರೆತಿಲ್ಲ. ಮಲ್ಲಿಕಾರ್ಜುನ (ಸು.1245) ತನ್ನ ಸೂಕ್ತಿಸುಧಾರ್ಣವದಲ್ಲಿ ಈತನ ಗ್ರಂಥಗಳಿಂದ ಪದ್ಯಗಳನ್ನು ಉದ್ಧರಿಸಿರುವುದಾಗಿ ಹೇಳಿದ್ದಾನೆ. ನಯನಸೇನ (1112) ಧರ್ಮಾಮೃತದಲ್ಲಿ 'ಗಜಾಂಕುಶನೊಳ್ಪುವೆತ್ತು ರಂಜಿಸುವ ಪದರ್ಥದೃಷ್ಟಿ' ಎಂದು ಸ್ತುತಿಸಿದ್ದಾನೆ. ದುರ್ಗಸಿಂಹ (ಸು.1025) 'ತ್ರಿಜಗನ್ನುತವಾಗ್ವಿಭವದಿನಜಂಗೆ ನೂರ್ಮಡಿಯೆನಿಪ್ಪ ಪೆಂಪಂ ತಳೆದಂ, ವಿಜಿತಾರಿ ದಂಡನಾಯಕ ಗಜಾಂಕುಶಂ ಕುಶಲ ವಾಂಛಿತ ಪ್ರಿಯಶೌರ್ಯಂ' ಎಂದು ಹೇಳಿದ್ದಾನೆ. ರುದ್ರಭಟ್ಟ, ಆಂಡಯ್ಯ, ಕೇಶಿರಾಜ, ಆಚಣ್ಣ, ನಾಗರಾಜ, ಮಧುರ ಮೊದಲಾದ ಕವಿಗಳು ಈತನನ್ನು ಸ್ತುತಿಸಿದ್ದಾರೆ. ಈತನಿಗೆ ಗಜಗ ಎಂಬ ಹೆಸರೂ ಇದ್ದಂತೆ ತಿಳಿದುಬರುತ್ತದೆ.

ಎಪಿಗ್ರಾಫಿಯ ಇಂಡಿಕದ ನಾಲ್ಕನೆಯ ಸಂಪುಟದ 58ನೆಯ ಸಾಲೋಟಗಿಯ ಶಾಸನದಂತೆ ಗಜಾಂಕುಶ ರಾಷ್ಟ್ರಕೂಟ ರಾಜನಾದ ಮೂರನೆಯ ಕೃಷ್ಣರಾಜನಲ್ಲಿ (939–68) ಮಂತ್ರಿಯಾಗಿಯೂ ಸಂಧಿವಿಗ್ರಹಿಯಾಗಿಯೂ ಇದ್ದಾತ. ಮಾಹಿಷ ವಿಷಯದ ಕಾಂಚನ ಮುದುವೊಟಿಲ್ ಎಂಬ ಹಳ್ಳಿಯ ನಿವಾಸಿ. ಈ ಶಾಸನದಲ್ಲಿ ಬರುವ ನಾರಾಯಣೋಭಿದಾನ ನಾರಾಯಣ ಇವಾಪರಃ ವಿಖ್ಯಾತೋ ಭುವಿ ವಿದ್ವಾವಾನ್ ಯೋ ಗಜಾಂಕುಶ ಸಂಜ್ಞಯಾ–ಎಂಬುದರಿಂದ ಸಾಕ್ಷಾತ್ ನಾರಾಯಣನೋ ಎಂಬಂತೆ ಪ್ರಸಿದ್ಧನಾಗಿ, ವಿದ್ಯಾವಂತನಾಗಿದ್ದ ನಾರಾಯಣನೇ ಗಜಾಂಕುಶ ಎಂಬ ಹೆಸರುನ್ನುಳ್ಳವ. ಈತ ರಾಜವಿದ್ಯೆಗಳಲ್ಲಿ ಪಾರಗನೂ ಕವಿಮುಖ್ಯನೂ ಆಗಿದ್ದ. ಈ ಶಾಸನದ ಕಾಲ ಸು. 945 ಆದುದರಿಂದ ಕವಿಯ ಕಾಲ ಸು. 940 ಆಗಿರಬಹುದೆಂದು ಡಿ. ಎಲ್. ನರಸಿಂಹಚಾರ್ಯರು ನಿರ್ಣಯಿಸಿರುತ್ತಾರೆ. ಪಾರ್ಶ್ವನೆಂಬ ಜೈನಕವಿ ಬರೆದ ಕೊಲ್ಹಾಪುರದ ಸಾಮಂತರಾಜರ ಚರಿತೆ ಎಂಬ ಗ್ರಂಥದಲ್ಲಿ ಬರುವ ಎರಡು ಪದ್ಯಗಳಿಂದ ಗಜಾಂಕುಶ ತನ್ನ ಸ್ವಾಮಿಗಾಗಿ ಯುದ್ಧದಲ್ಲಿ ಮಡಿದು ಕೀರ್ತಿಕಾಯನಾದನೆಂದು ಗೊತ್ತಾಗುತ್ತದೆ.

(ಎಸ್.ಬಿ.ಎಸ್.)

**ಗಜಾಸುರ :** ಮಹಿಷಾಸುರನ ಮಗ. ತಪಸ್ಸುಮಾಡಿ ಶಿವನ ಸಂಪ್ರೀತಿಗಳಿಸಿ ಅನೇಕ ವರಗಳನ್ನು ಪಡೆದು ದೇವತೆಗಳಿಗೆ ಹಿಂಸೆ ಕೊಡುತ್ತಿದ್ದ. ಈತನ ಕಾಟ ತಡೆಯಲಾರದೆ ದೇವತೆಗಳೆಲ್ಲ ಸೇರಿ ಶಿವನನ್ನು ಮೊರೆಹೊಕ್ಕರು. ದೇವತೆಗಳಿಗೆ ಅಭಯ ನೀಡಿದ ಶಿವ ಈತನ ಮೇಲೆ ಯುದ್ಧಕ್ಕೆ ಬಂದ. ಸ್ವಯಂ ಶಿವನೇ ತನ್ನ ಮೇಲೆ ಯುದ್ಧಕ್ಕೆ ಬಂದುದನ್ನು ಕಂಡ ಗಜಾಸುರ ತಾನು ಪರಶಿವನಿಂದಲೇ ಸಾಯಬೇಕೆಂದು ಸಂಕಲ್ಪಿಸಿ ಆ ವರೆಗೂ ದೇವತೆಗಳಿಗೆ ಹಿಂಸೆ ಕೊಡುತ್ತಿದ್ದುದಾಗಿಯೂ ತನ್ನನ್ನು ಕೊಂದು ತನ್ನ ಚರ್ಮವನ್ನು ಶಿವ ಧರಿಸುವುದಾದರೆ ತಾನು ಸಾಯಲು ಸಿದ್ಧವೆಂದೂ ತಿಳಿಸಿದಾಗ ಶಿವ ಅದಕ್ಕೆ ಸಮ್ಮತಿ ನೀಡಿ ದಾನವನ ಬಯಕೆಯನ್ನು ಈಡೇರಿಸಿದ. ಮತ್ಸ್ಯ ಹಾಗೂ ಸ್ಕಾಂದಪುರಾಣಗಳಲ್ಲಿ ಇವನ ಉಲ್ಲೇಖವಿದೆ. *

**ಗಜೇಂದ್ರಗಡ :** ಧಾರವಾಡ ಜಿಲ್ಲೆಯ ರೋಣ ತಾಲೂಕಿನಲ್ಲಿರುವ ಒಂದು ಐತಿಹಾಸಿಕ ಸ್ಥಳ. ಉ.ಅ.15°40′, ಪೂ.ರೇ.75°55′ ಮೇಲಿದೆ. ಹುಬ್ಬಳ್ಳಿ–ಸೊಲ್ಲಾಪುರ ಮೀಟರ್ ಗೇಜ್ ರೈಲುಮಾರ್ಗದ ಮೇಲೆ ಇರುವ ಮಲ್ಲಾಪುರ ರೈಲ್ವೆ ನಿಲ್ದಾಣದ ದಕ್ಷಿಣಕ್ಕೆ ಸು. 24 ಮೈ. ದೂರದಲ್ಲಿದೆ. ಗಜೇಂದ್ರಗಡವೆಂದರೆ ಗಜೇಂದ್ರನ ಕೋಟೆ. ಊರ ಬದಿಯಲ್ಲಿರುವ ಬೆಟ್ಟವೊಂದರ ಮೇಲಿರುವ ಭದ್ರವಾದ ಕೋಟೆಯಿಂದಾಗಿ ಊರಿಗೆ ಈ ಹೆಸರು ಬಂದಿದೆ. ಗಜೇಂದ್ರಗಡ ಕೋಟೆಯನ್ನು ಶಿವಾಜಿ ಕಟ್ಟಿಸಿದ. ಇದರ ಒಳಭಾಗದಲ್ಲಿ ಒಂದು ಮದ್ದಿನ ಮನೆಯೂ ಎರಡು ಕೊಳಗಳೂ ಇವೆ.

ಈ ಊರಿನಲ್ಲಿರುವ ವಿರೂಪಾಕ್ಷ ದೇವಾಲಯ ಜೀರ್ಣಸ್ಥಿತಿಯಲ್ಲಿದೆ. ಅದರ ಸಭಾಮಂಟಪ ಅಪೂರ್ಣ. ದೇವಾಲಯ ದ್ವಾರದ ಮೇಲೆ ಸರಸ್ವತಿಯ ವಿಗ್ರಹವುಂಟು. ಊರಿನ ಹೊರಗೆ ದುದ್ದಾದೇವಿಯ ದೇವಾಯಲಯವಿದೆ. ಇದು ಗೋಳಾಕಾರದ ಮುಚ್ಚಿಗೆಯಿಂದಲೂ ದುಂಡನೆಯ ಕಂಬಗಳಿಂದಲೂ ಕೂಡಿದೆ. ಊರಿನ ಶ್ಮಶಾನದ ಹತ್ತಿರ ಇರುವ ಹೊಲದಲ್ಲಿ ಒಂದು ರಾಮಲಿಂಗ ದೇವಾಯಲವಿದೆ. ಅದರಲ್ಲಿ ಮಂಟಪವೂ ದುಂಡನೆಯ ಕಂಬಗಳೂ ಉಂಟು. ನೇಕಾರರ ಕೇರಿಯಲ್ಲಿರುವ ದೇವಾಲಯ ರಾಮನದು. ಇದರಲ್ಲಿ ರಾಮ ಮತ್ತು ಸೀತೆಯ ವಿಗ್ರಹಗಳೂ ಗರ್ಭ ಗುಡಿಯ ಬಾಗಿಲವಾಡದ ಮೇಲೆ ಗಣಪತಿಯ ಮೂರ್ತಿಯೂ ಇವೆ. ಈ ದೇವಸ್ಥಾನವೂ ಅಪೂರ್ಣವಾಗಿದ್ದರೂ ಒಳ್ಳೆಯ ಸ್ಥಿತಿಯಲ್ಲಿದೆ. ಪಾಂಡುರಂಗ ದೇವಾಲಯ ಇನ್ನೊಂದು ಇದೂ ಪಾಳುಬಿದ್ದಿದೆ. ಇದರಲ್ಲಿ ಪಾಂಡುರಂಗ–ರುಕ್ಮಿಣಿಯರ ಮೂರ್ತಿಗಳುಂಟು, ಬಾಗಿಲವಾಡದಮೇಲೆ ದ್ವಾರಕಾಬಾಯಿಯ ಮೂರ್ತಿಯನ್ನು ನೋಡಬಹುದು. ಗಜೇಂದ್ರಗಡದ ಸಮೀಪದಲ್ಲೇ ದೊಡ್ಡ ಗವಿಯೊಂದಿದೆ. ಇದೊಂದು ಯಾತ್ರಾಸ್ಥಳ.

ಸಮೀಪದಲ್ಲೇ ಸದಾ ಪ್ರವಹಿಸುವ ಎರಡು ತೀರ್ಥಗಳುಂಟು. ಅಲ್ಲದೆ ಸು. 15′ ಎತ್ತರದ ಎರಡು ದೀಪಸ್ತಂಭಗಳಿವೆ. ಬಳಿಯಲ್ಲಿರುವ ವೀರಭದ್ರ ಗುಡಿಯ ಬಾಗಿಲುವಾಡದ ಮೇಲೆ ಗಾರೆಯಲ್ಲಿ ರಚಿಸಿದ ವರ್ಣಮಯ ಮೂರ್ತಿಗಳುಂಟು. ಗುಡಿಯ ಮುಂಭಾಗದಲ್ಲಿ ಅಂತರಗಂಗೆ ಎಂಬ ಸಣ್ಣ ಕೊಳವಿದೆ. ವೀರಭದ್ರನ ಗುಡಿಯಲ್ಲಿರುವ ಗವಿಯ ಉತ್ತರಕ್ಕೆ ಮತ್ತೆರಡು ಗವಿಗಳಿವೆ. ಇವೆರಡರ ಮಧ್ಯದಲ್ಲಿ ಗೋಡೆಯಿದೆ. ಈ ಗುಹೆಗಳಲ್ಲಿ ಎಣ್ಣೆಗೊಂಡ ಮತ್ತು ಆರ್ಷಗೊಂಡ ಎಂಬ ಎರಡು ತೀರ್ಥಗಳುಂಟು. ಕಲ್ಲೇಶ್ವರ ದೇವಸ್ಥಾನದಲ್ಲಿ ಬೆಳ್ಳಿಯ ಮುಲಾಮಿನಿಂದ ಕೂಡಿದ ಕಲ್ಲೇಶ್ವರಿ ಲಿಂಗವೂ ಬಾಗಿಲುವಾಡವೂ ಇವೆ. ಈ ಲಿಂಗದ ಎಡಭಾಗದಲ್ಲಿರುವುದು ಪಾತಾಳಗಂಗೆಯೆಂಬ ಹೊಂಡ. ಅಲ್ಲಿಯ ಸಣ್ಣ ಗೂಡೊಂದರಲ್ಲಿ ಬಸವಣ್ಣನ ಅಥವಾ ನಂದಿಯ ವಿಗ್ರಹವಿದೆ. ಇದು ದಿನೇದಿನೇ ಬೆಳೆಯುತ್ತಿದೆಯೆಂದು ಪ್ರತೀತಿ. ಮಕ್ಕಳಿಲ್ಲದ ಹೆಂಗಸರು ಈ ವಿಗ್ರಹಕ್ಕೆ ಹರಕೆ ಹೊತ್ತು ಇದನ್ನು ಪೂಜಿಸುತ್ತಾರೆ. ಇನ್ನೂ ಅನೇಕ ಗೂಡುಗಳಲ್ಲಿ ಲಿಂಗ ನಂದಿಯರ ವಿಗ್ರಹಗಳಿವೆ. ಕಾಲಕಾಲೇಶ್ವರಿ ದೇವಸ್ಥಾನದಲ್ಲಿ ಚಾಲುಕ್ಯ ನಾಲ್ಮಡಿ ಸೋಮೇಶ್ವರ, ಯಾದವ ಸಿಂಘಣ ಮತ್ತು ವಿಜಯನಗರದ ಇಮ್ಮಡಿ ಹರಿಹರದ ಆಳ್ವಿಕೆಗಳ ಕಾಲದ ನಾಲ್ಕು ಶಾಸನಗಳುಂಟು. ಆ ಶಾಸನಗಳಲ್ಲಿ ದೇವಸ್ಥಾನಕ್ಕೆ ಕೊಡಲಾದ ದಾನದತ್ತಿಗಳ ವಿವರಗಳಿವೆ. (ಎಚ್.ಆರ್.ಆರ್.ಬಿ)

**ಗಜೇಂದ್ರಗಡಕರ, ಪ್ರಹ್ಲಾದಾಚಾರ್ಯ ಬಾಳಾಚಾರ್ಯ :** ಭಾರತದ ಮುಖ್ಯ ನ್ಯಾಯಾಧಿಪತಿ (1964–66). ಮುಂಬೈ ವಿಶ್ವವಿದ್ಯಾಲಯದ ಕುಲಪತಿ (1966 ರಿಂದ). 1901 ಮಾರ್ಚ್ 16ರಂದು ಮಹಾರಾಷ್ಟ್ರದ ಸತಾರದಲ್ಲಿ ಜನಿಸಿದರು. ತಂದೆ ಬಾಳಾಚಾರ್ಯ ಅನಂತಾಚಾರ್ಯ. ತಾಯಿ ಲಕ್ಷ್ಮೀಬಾಯಿ. ಉತ್ತಮ ವಿದ್ಯಾರ್ಥಿಯಾಗಿದ್ದ ಇವರು ಮುಂಬೈ ವಿಶ್ವವಿದ್ಯಾಲಯದ ಎಂ.ಎ.,ಎಲ್‌ಎಲ್.ಬಿ. ಪದವೀಧರರು. 1922–24ರಲ್ಲಿ ಇವರು ಡೆಕ್ಕನ್ ಕಾಲೇಜಿನಲ್ಲಿ ದಕ್ಷಿಣ ಫೆಲೊ ಆಗಿದ್ದರು. ಝಾಲ ವೆಂಡಂಟ್ ಬಹುಮಾನವನ್ನೂ ಭಗವಾನ್‌ದಾಸ್ ಪುರುಷೋತ್ತಮದಾಸ್ ಸಂಸ್ಕೃತ ವಿದ್ಯಾರ್ಥಿವೇತನವನ್ನೂ ಗಳಿಸಿದರು (1924). 1926ರಲ್ಲಿ ಮುಂಬೈಯಲ್ಲಿ ವಕೀಲರಾದರು. 1945ರಲ್ಲಿ ಭಾರತ ಸರ್ಕಾರ ಇವರನ್ನು ಮುಂಬೈ ಉಚ್ಚನ್ಯಾಯಾಲಯದ ನ್ಯಾಯಾಧಿಪತಿಯನ್ನಾಗಿ ನೇಮಿಸಿತು.

1957ರಲ್ಲಿ ಇವರು ಪರಮೋಚ್ಚ ನ್ಯಾಯಾಲಯದ ನ್ಯಾಯಾಧಿಪತಿಯಾದರು. 1964 – 1966 ತನಕ ಭಾರತದ ಮುಖ್ಯ ನ್ಯಾಯಾಧಿಪತಿಯಾಗಿ ಕೆಲಸ ಮಾಡಿದರು. ಇದಲ್ಲದೆ ಬ್ಯಾಂಕ್ ಅವಾರ್ಡ್ ಆಯೋಗ (1955), ತುಟ್ಟಿಭತ್ಯೆ ಆಯೋಗ (1966–67), ಕಾರ್ಮಿಕರನ್ನು ಕುರಿತ ರಾಷ್ಟ್ರೀಯ ಆಯೋಗ (1967–69), ಜಮ್ಮು ಮತ್ತು ಕಾಶ್ಮೀರ ವಿಚಾರಣಾ ಆಯೋಗ (1967–68), ಬನಾರಸ್ ಹಿಂದೂ ವಿಶ್ವವಿದ್ಯಾಲಯ ವಿಚಾರಣಾ ಸಮಿತಿ (1968–69) ಇವುಗಳ ಅಧ್ಯಕ್ಷರಾಗಿದ್ದರು. ಇವರು ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ ನಾಮಕರಣ ಸದಸ್ಯರು ಮತ್ತು ರಾಷ್ಟ್ರೀಯ ಐಕ್ಯ ಸಭೆಯ ಸದಸ್ಯರು. ಮುಂಬೈ ಏಷಿಯಾಟಿಕ್ ಸೊಸೈಟಿ, ರಾಮಕೃಷ್ಣ ಮಿಷನ್, ಸ್ವಸ್ತಿಕ್ ಲೀಗ್ ಇವುಗಳ ಅಧ್ಯಕ್ಷರಾಗಿದ್ದಾರೆ. ಇವರು ಅನೇಕ ಸಂಘ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳೊಂದಿಗೆ ಸಂಬಂಧ ಹೊಂದಿದ್ದಾರೆ. ಅಮೆರಿಕ ಸಂಯುಕ್ತಸಂಸ್ಥಾನದ ಮುಖ್ಯ ನ್ಯಾಯಾಧೀಶರ ಆಮಂತ್ರಣದ ಮೇರೆಗೆ 1965ರಲ್ಲಿ ಆ ದೇಶಕ್ಕೆ ಭೇಟಿ ನೀಡಿದ್ದರು. ಅದೇ ವರ್ಷ ಲಂಡನ್ನಿನಲ್ಲಿ ನಡೆದ ಮ್ಯಾಗ್ನಕಾರ್ಟ ಉತ್ಸವಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು, ಭಾರತೀಯ ನಿಯೋಗದ ನಾಯಕರಾಗಿ 1965 ಜುಲೈ ತಿಂಗಳಲ್ಲಿ ಸೋವಿಯತ್ ದೇಶಕ್ಕೂ ಆಗಸ್ಟ್ ತಿಂಗಳಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳ ಸಭೆಯಲ್ಲಿ ಭಾಗವಹಿಸಲು ಆಸ್ಟ್ರೇಲಿಯಕ್ಕೂ ಪ್ರವಾಸ ಕೈಗೊಂಡಿದ್ದರು. ಲಾಲಾ ಲಜಪತರಾಯ್ ಸ್ಮಾರಕ ಉಪನ್ಯಾಸಗಳು (1964), ಸರದಾರ್ ಪಟೇಲ್ ಸ್ಮಾರಕ ಉಪನ್ಯಾಸಗಳು (1966), ನಾಗಪುರ ವಿಶ್ವವಿದ್ಯಾಲಯ ವಿಸ್ತರಣೋಪನ್ಯಾಸಗಳು (1967), ನೈರೋಬಿ ವಿಶ್ವವಿದ್ಯಾಲಯದಲ್ಲಿ ಗಾಂಧೀ ಸ್ಮಾರಕ ಉಪನ್ಯಾಸಗಳು (1968)–ಇವು ಗಜೇಂದ್ರಗಡಕರ್ ನೀಡಿರುವ ಕೆಲವು ಮುಖ್ಯ ಉಪನ್ಯಾಸಗಳು. ಇವುಗಳಲ್ಲೂ ಇತರ ಲೇಖನೋಪನ್ಯಾಸಗಳಲ್ಲೂ ರಾಷ್ಟ್ರದ ನ್ಯಾಯಿಕ ಸಮಸ್ಯೆಗಳನ್ನೂ ಪ್ರಚಲಿತ ವಿಚಾರಗಳನ್ನೂ ವಿವೇಚಿಸಿದ್ದಾರೆ. ಇವರ ತೀರ್ಪುಗಳೂ ನಿರ್ಣಯಗಳೂ ಸಂವಿಧಾನ ನ್ಯಾಯ ಕಾರ್ಮಿಕ ಕಾನೂನು, ಹಿಂದೂ ನ್ಯಾಯ ಇವುಗಳ ವಿಶಿಷ್ಟ ಕೊಡುಗೆಗಳಾಗಿವೆ. 1969ರಲ್ಲಿ ಇವರಿಗೆ ಸರ್ ಜಹಾಂಗೀರ್ ಘಾಂಡಿ ಪದಕ ಪ್ರಾಪ್ತಿಯಾಯಿತು. ಕರ್ನಾಟಕದ ವಿಶ್ವವಿದ್ಯಾಲಯ ಇವರಿಗೆ ಎಲ್‌ಎಲ್.ಡಿ. ಪದವಿಯನ್ನಿತ್ತು ಗೌರವಿಸಿತು.

ಗಾಂಧಿ ತತ್ತ್ವದ ಆಧಾರದ ಮೇಲೆ, ಪರಿವರ್ತಶೀಲ ಹಾಗೂ ಪ್ರಗತಿಪರ ಸ್ವರೂಪದ ನ್ಯಾಯದ ಚೌಕಟ್ಟಿನಲ್ಲಿ, ಸಾಮಾಜಿಕ ಆರ್ಥಿಕ ಸಮಾನತೆಯ, ವ್ಯಕ್ತಿ ಸ್ವಾತಂತ್ರ್ಯನಿಷ್ಠ

ಧರ್ಮಸಹಿಷ್ಣುತೆಯ ಸುಖೀಪ್ರಭುತ್ವದ ಕಲ್ಪನೆ ಇವರ ವೈಚಾರಿಕ ಪ್ರಜ್ಞೆಗೆ ಚೋದಕ ಶಕ್ತಿಯಾಗಿದೆ. ಅಂತೆಯೇ ಮೌಲ್ಯಗಳು ಇವರ ಕಾರ್ಯ ಚಟುವಟಿಕೆಗಳು ಮತ್ತು ಭಾಷಣಗಳಲ್ಲಿ ಹಾಸುಹೊಕ್ಕಾಗಿವೆ.

ನಂದ ಪಂಡಿತನ ದತ್ತಕ ಮೀಮಾಂಸ ಎಂಬ ಸಂಸ್ಕೃತ ಗ್ರಂಥದ ಸಂಪಾದನೆ ಮತ್ತು ಇಂಗ್ಲಿಷ್ ಅನುವಾದ; ಲಾ, ಲಿಬರ್ಟಿ ಅಂಡ್ ಸೋಷಿಯಲ್ ಜಸ್ಟಿಸ್ ; ಕಾಶ್ಮೀರ್–ರೆಟ್ರೊಸ್ಪೆಕ್ಟ್ ಅಂಡ್ ಪ್ರಾಸ್ಪೆಕ್ಟ್ ; ಜವಾಹರ್‌ಲಾಲ್‌ನೆಹ್ರು–ಎ ಗ್ಲಿಂಪ್ಸ್ ಆಫ್ ದಿ ಮ್ಯಾನ್ ಅಂಡ್ ಹಿಸ್ ಟೀಚಿಂಗ್ಸ್; ದಿ ಕಾನ್ಸ್‌ಟಿಟೂಷನ್ ಆಫ್ ಇಂಡಿಯ–ಇಟ್ಸ್ ಫಿಲಾಸೊಫಿ ಅಂಡ್ ಬೇಸಿಕ್ ಪಾಸ್ಚ್ಯುಲೆಟ್ಸ್–ಇವು ಇವರು ಬರೆದಿರುವ ಪುಸ್ತಕಗಳು.

(ಎಲ್.ಎಸ್.ಜಿ.)

**ಗಜೇಂದ್ರ ಮೋಕ್ಷ :** ಆಪತ್ಕಾಲದಲ್ಲಿ ಭಗವಂತನ ನಾಮಸ್ಮರಣೆ ಮಾಡಿದರೆ ಬೆಟ್ಟದಂತೆ ಬಂದ ಕಷ್ಟಗಳು ಮಂಜಿನಂತೆ ಕರಗುವುವು ಎಂಬುದಕ್ಕೆ ಇದೊಂದು ದೃಷ್ಟಾಂತ. ಇದನ್ನು ಭಾಗವತದಲ್ಲಿ ಪ್ರಸ್ತಾಪಿಸಲಾಗಿದೆ.

ಇಂದ್ರದ್ಯುಮ್ನ ಪಾಂಡ್ಯದೇಶದ ರಾಜ. ವಿಷ್ಣುಭಕ್ತ. ಒಮ್ಮೆ ತ್ರಿಕೂಟಾಚಲದ ಕಣಿವೆಯಲ್ಲಿ ಮೌನ ತಪಸ್ಸಿನಲ್ಲಿದ್ದಾಗ ತನ್ನಲ್ಲಿಗೆ ಬಂದ ಅಗಸ್ತ್ಯ ಮಹರ್ಷಿಯನ್ನು ಗೌರವಿಸದ ಕಾರಣ ಋಷಿ ಶಾಪಕ್ಕೆಡೆಯಾಗಿ ಗಜ ಜನ್ಮ ಪಡೆದ. ಹೀಗೆ ಇಂದ್ರದ್ಯುಮ್ನ ಆನೆಯಾಗಿ ಕೊಳದಲ್ಲಿ ನೀರು ಕುಡಿಯುತ್ತಿದ್ದಾಗ ಮೊಸಳೆಯೊಂದು ಬಂದು ಆತನ ಕಾಲು ಹಿಡಿಯಿತು. ಏನು ಮಾಡಿದರೂ ತನ್ನನ್ನು ಮೊಸಳೆ ಬಿಡದೆ ಇದ್ದುದನ್ನು ಕಂಡು ಇಂದ್ರದ್ಯುಮ್ನನಿಗೆ ಪೂರ್ವಜನ್ಮದ ಸ್ಮರಣೆಯುಂಟಾಗಿ ಬಿಡುಗಡೆಯಾಗಿ ವಿಷ್ಣುವನ್ನು ಪ್ರಾರ್ಥಿಸಿದ. ಆಗ ವಿಷ್ಣು ಪ್ರತ್ಯಕ್ಷನಾಗಿ ಮೊಸಳೆಯನ್ನು ಕೊಂದು ಇಂದ್ರದ್ಯುಮ್ನ ಶಾಪಮುಕ್ತನಾಗುವಂತೆ ಮಾಡಿದ. *

**ಗಜೇಶ ಮಸಣಯ್ಯ:** 12ನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಅಕ್ಕಲಕೋಟೆಯ ಸಮೀಪದಲ್ಲಿರುವ ಕರಜಗಿ ಈತನ ಜನ್ಮಸ್ಥಳ. ಈತ ಮನವಳ್ಳಿಯಲ್ಲಿ ಸಮಾಧಿಸ್ಥನಾದನೆಂದು ಪ್ರತೀತಿ. ಇವನ ಕುರುಹಾಗಿ ಗಜೇಶ್ವರ, ಮಸಣಯ್ಯ ಎಂಬ ಹೆಸರಿನ ಎರಡು ದೇವಾಲಯಗಳುಂಟು. ಇವುಗಳಲ್ಲಿ ಒಂದು ಕರಜಗಿಯಲ್ಲೂ ಇನ್ನೊಂದು ಅಳಂದ ತಾಲ್ಲೂಕಿನ ಮನವಳ್ಳಿಯಲ್ಲೂ ಇವೆ. ಈತ ಒಮ್ಮೆ ಗುರುದರ್ಶನಕ್ಕೆಂದು ಹೊರಟು, ದಾರಿಯಲ್ಲಿ ಸಿಕ್ಕಿದ ಹೊಳೆಯಲ್ಲಿ ಶಿವಪೂಜಾಮಗ್ನನಾಗಿರಲು, ಭಯಂಕರವಾದ ಮಳೆ ಬಂದು, ಹೊಳೆ ಉಕ್ಕಿ, ಗಜೇಶ ಮಸಣಯ್ಯನಿದ್ದೆಡೆಯಲ್ಲಿ ಇಬ್ಭಾಗವಾಗಿ ಹರಿಯಿತೆಂಬ ಐತಿಹ್ಯವಿದೆ.

ಈತ ಮಹಾಲಿಂಗ ಗಜೇಶ್ವರ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ 62 ವಚನಗಳು ದೊರೆತಿವೆ. ಇವು ಸತಿಪತಿಭಾವದಿಂದ ಕೂಡಿದವುಗಳಾಗಿವೆ. ಇಲ್ಲಿಯ ನುಡಿಗಳಲ್ಲಿ ತೀಕ್ಷ್ಣತೆಯಿದೆ; ಧ್ವನಿಯಲ್ಲಿ ಮಾರ್ದವತೆಯಿದೆ; ಭಾಷೆಯಲ್ಲಿ ಮೋಹಕತೆಯಿದೆ; ಭಕ್ತಿಯ ಪರಾಕಾಷ್ಠತೆಯಿದೆ. ಈತನ ವಚನಗಳನ್ನು ಹಿಂದಣ ಎಲ್ಲ ವಚನ ಸಂಗ್ರಹಕಾರರೂ ಉದಾಹರಿಸುತ್ತ ಬಂದಿರುವುದು ಇವುಗಳ ಹಿರಿಮೆಗೆ ಸಾಕ್ಷಿಯಾಗಿದೆ.

(ಬಿ.ಎಸ್.ಎಸ್.)

**ಗಜೇನಿಯ :** ಕಂಪಾಸಿಟೀ (ಆಸ್ಟರೇಸೀ) ಕುಟುಂಬಕ್ಕೆ ಸೇರಿದ ಒಂದು ಏಕವಾರ್ಷಿಕ ಇಲ್ಲವೆ ಬಹುವಾರ್ಷಿಕ ಅಲಂಕಾರಸಸ್ಯ. ಸುಂದರವಾದ ಮತ್ತು ಕೆಂಪು, ಕಿತ್ತಳೆ, ಕೆನೆ, ಹಳದಿ, ಬಿಳಿ, ಕಂದು ಮುಂತಾದ ವರ್ಣರಂಜಿತವಾದ ಹೂಗಳು ಇರುವುದರಿಂದ ಇದನ್ನು ತೋಟಗಳಲ್ಲಿ ಶೋಭೆಗೆಂದು ಬೆಳೆಸುತ್ತಾರೆ. ಅಗಲವಾದ ಮಡಿಗಳಲ್ಲಿ ಬೆಳೆಸಲು ಈ ಗಿಡ ಉತ್ತಮವಾದುದಾದರೂ ಈಚೀಚೆಗೆ ಇದರ ಜನಪ್ರಿಯತೆ ಕಡಿಮೆಯಾಗುತ್ತಿದೆ.

ಗಜೇನಿಯ ಸು. 15–25 ಸೆಂಮೀ. ಎತ್ತರಕ್ಕೆ ಬೆಳೆಯುವ ಮೂಲಿಕೆ ಸಸ್ಯ. ಕೆಲವು ಬಗೆಗಳಲ್ಲಿ ಕಾಂಡವೇ ಇಲ್ಲ. ಇನ್ನು ಕೆಲವು ಬಗೆಗಳಲ್ಲಿ ಇದ್ದರೂ ಬಲು ಮೋಟು. ಎಲೆಗಳು ನೆಲದ ಮಟ್ಟದಿಂದಲೇ ಕಮಲದ ರೀತಿಯಲ್ಲಿ ಹರಡಿಕೊಂಡಿರುತ್ತವೆ. ಕೆಲವು ಕಾಂಡದ ಮೇಲೆ ಅಲ್ಲಲ್ಲೆ ಇರುವುದೂ ಉಂಟು. ಹೂಗಳು ಚಂಡು ಮಂಜರಿ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲಿನ ಅಂಚಿನ ಹೂಗಳು ವರ್ಣರಂಜಿತವಾಗಿರುವುದರಿಂದ ಇಡೀ ಗೊಂಚಲು ಸುಂದರವಾಗಿ ಕಾಣುತ್ತದೆ. ಕೆಲವು ಪ್ರಭೇದಗಳಲ್ಲಿ ದಳಗಳ ಬುಡದಲ್ಲಿರುವ ಬಣ್ಣಬಣ್ಣದ ಚುಕ್ಕೆಗಳು ನವಿಲುಗರಿಯ ಕಣ್ಣುಗಳಂತೆ ಕಾಣುತ್ತದೆ. ಗಜೇನಿಯದ ಇನ್ನೊಂದು ವಿಸ್ಮಯಕಾರಕ ಗುಣವೆಂದರೆ ರಾತ್ರಿಯ ಹೊತ್ತು ಹೂದಳಗಳು ಮುಚ್ಚಿಕೊಳ್ಳುವುದು ಮತ್ತು ಎಲೆಗಳೆಲ್ಲ ತಮ್ಮ ಬಿಳಿಯ ಬಣ್ಣದ ತಳಭಾಗ ಎದ್ದು ಕಾಣುವಂತೆ ತಿರುವಿ ಕೊಳ್ಳುವುದು. ಗಜೇನಿಯದ ಫಲ ಎಕೀನ್ ಮಾದರಿಯದು.

ಗಜೇನಿಯದಲ್ಲಿ ಸು. 30 ಪ್ರಭೇದಗಳಿವೆ. ಉದ್ಯಾನಪ್ರಾಮುಖ್ಯವಿರುವವು ಗಜೇನಿಯ ರಿಗೆನ್ಸ್, ಗ.ಸ್ಪ್ಲಂಡೆನ್ಸ್, ಗ. ಪಿನೇಟ, ಗ. ಯೂನಿಫ್ಲೋರ ಮತ್ತು ಗ. ಪ್ಯಾವೋನಿಯ.

ಗಜೇನಿಯದ ವಿವಿಧ ಪ್ರಭೇದಗಳನ್ನು ಬೀಜಗಳಿಂದ, ಕಾಂಡದ ತುಂಡುಗಳಿಂದ ಮತ್ತು ಗೂಟಿ ಕಟ್ಟುವುದರಿಂದ ವೃದ್ಧಿ ಮಾಡಬಹುದು. ಬೀಜಗಳನ್ನು ಮೈದಾನ ಪ್ರದೇಶಗಳಲ್ಲಿ ಸೆಪ್ಟೆಂಬರ್–ಆಕ್ಟೋಬರ್ ತಿಂಗಳಲ್ಲಿಯೂ ಗುಡ್ಡಗಾಡುಗಳಲ್ಲಿ ಮಾರ್ಚ್–ಏಪ್ರಿಲ್ ತಿಂಗಳಲ್ಲಿಯೂ ಬಿತ್ತಬಹುದು. ಬೀಜ ಬಿತ್ತಿದ $3–3\frac{1}{2}$ ತಿಂಗಳ ಅನಂತರ ಗಿಡ ಹೂಬಿಡಲು ಪ್ರಾರಂಭಿಸುತ್ತದೆ. ಚೆನ್ನಾಗಿ ನೀರು ಬಸಿದು ಹೋಗುವಂಥ ಫಲವತ್ತಾದ ಮಣ್ಣು ಇದರ ವೃದ್ಧಿಗೆ ಉತ್ತಮ.

(ಎಂ.ಎಚ್.ಎಂ.)

**ಗಜ್ಜರಿ : ನೋಡಿ – ಕ್ಯಾರೆಟ್**

**ಗಜ್ಜುಗ ಗಿಡ :** ಲೆಗ್ಯೂಮಿನೋಸೀ ಕುಟುಂಬದ ಸೀಸಾಲ್‌ಪಿನಿ ಉಪಕುಟುಂಬಕ್ಕೆ ಸೇರಿದ ಒಂದು ಮುಳ್ಳು ಪೊದರು ಗಿಡ. ಸಾಮಾನ್ಯವಾಗಿ ತನ್ನ ಮುಳ್ಳುಗಳ ಸಹಾಯದಿಂದ ಬೇರೆ ಸಸ್ಯಗಳನ್ನು ಅಡರಿಕೊಂಡು ಬೆಳೆಯುತ್ತದೆ. ಸೀಸಾಲ್‌ಪಿನಿಯ ಬೊಂಡುಸೆಲ ಇದರ ವೈಜ್ಞಾನಿಕ ಹೆಸರು. ಸಾಮಾನ್ಯವಾಗಿ ಇಂಗಿಷಿನಲ್ಲಿ ಫೀವರ್ ನಟ್, ನಿಕಾರ್ ಬೀನ್, ಬೊಂಡುಕ್ ನಟ್ ಎಂದು ಕರೆಯುತ್ತಾರೆ.

ಪ್ರಪಂಚದ ಉಷ್ಣವಲಯಗಳಲ್ಲೆಲ್ಲ ಹರಡಿರುವ ಇದು ಬಯಲುಪ್ರದೇಶಗಳಲ್ಲಿ ಹಾಳುಬಿದ್ದ ನೆಲ ಮತ್ತು ಬೇಲಿ ಮುಂತಾದೆಡೆ ಬೆಳೆಯುತ್ತದೆ. ಸಮುದ್ರತೀರ ಹಾಗೂ ನದೀದಡಗಳು ಇದರ ಅಚ್ಚುಮೆಚ್ಚಿನ ಜಾಗಗಳು. ಬೆಟ್ಟಗಾಡುಗಳಲ್ಲಿ ಬೆಳೆಯುತ್ತದಾದರೂ 2500′ ಗಳಿಗೆ ಮೇಲ್ಪಟ್ಟ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಬರುವುದಿಲ್ಲ.

ಬೂದುಬಣ್ಣದ ರೆಂಬೆಗಳು. 1′–2′ ಉದ್ದದ ಗರಿರೂಪದ ಸಂಯುಕ್ತ ಮಾದರಿಯ ಎಲೆಗಳು. ಕಾಂಡದ ಮೇಲೆಲ್ಲ ಎದ್ದಿರುವ ಗಡುಸಾದ ಚೂಪಾದ, ಮುಳ್ಳುಗಳು ಗಜ್ಜುಗ ಗಿಡದ ಕೆಲವು ಮುಖ್ಯ ಲಕ್ಷಣಗಳು ಹೂಗೊಂಚಲು ರೇಸೀಮ್ ಮಾದರಿಯದು. ಗೊಂಚಲಿಗೆ 6″–10″ ಉದ್ದದ ತೊಟ್ಟಿದೆಯಾಗಿ ಅದು ರೆಂಬೆಗಳಿಂದ ಇಳಿಬಿದ್ದಿರುತ್ತದೆ. ಪ್ರತಿ ಹೂವಿನಲ್ಲಿ 5 ಪತ್ರಗಳು, 5 ಬಿಡಿದಳಗಳು, ಬಿಡಿಬಿಡಿಯಾದ 10 ಕೇಸರಗಳು. ಒಂದೇ ಕಾರ್ಪೆಲಿನಿಂದ ಕೂಡಿದ ಉಚ್ಚಸ್ಥಾನದ ಅಂಡಾಶಯ ಇವೆ. ಫಲ ಪಾಡ್ ಮಾದರಿಯದು; 1–3 ಬೀಜಗಳನ್ನೊಳಗೊಂಡಿದೆ. ಬೀಜವೇ ಗಜ್ಜುಗ. ಬೀಜದ ಹೊರಮೈ ಬಲು ನಯವಾಗಿ, ಹೊಳಪುಳ್ಳದ್ದಾಗಿ, ಗಟ್ಟಿಯಾಗಿ ಇದೆ. ಇದರ ಬಣ್ಣ ಬೂದು.

ಗಜ್ಜುಗ ಗಿಡ ಉಪಯೋಗಗಳು ಹಲವಾರು. ಇದರ ಎಳೆಯ ಎಲೆಗಳನ್ನು ಯಕೃತ್ತಿನ ವ್ಯಾಧಿಗಳನ್ನು ನಿವಾರಿಸಲು ಉಪಯೋಗಿಸುತ್ತಾರೆ. ಎಲೆಯಿಂದ ತಯಾರಿಸಿದ ಲೇಪವನ್ನು ಹಲ್ಲುನೋವಿಗೆ ಬಳಸುವುದಿದೆ. ಊತಗಳನ್ನು ಇಳಿಸಲು ಎಲೆ ಮತ್ತು ಬೀಜಗಳನ್ನು ಬಳಸುತ್ತಾರೆ. ಎಲೆ ಮತ್ತು ತೊಗಟೆಗಳಿಗೆ ಜಂತುನಾಶಕ, ವಾಂತಿಕಾರಕ, ಜ್ವರಶಾಮಕ ಗುಣಗಳಿವೆ. ಬೀಜದಿಂದ ತೆಗೆಯುವ ಎಣ್ಣೆಯನ್ನು ಮುಖದ ಮೇಲೆ ಮೂಡುವ ನಸುಗಂದು ಬಣ್ಣದ ಮಚ್ಚೆಗಳನ್ನು ನಿವಾರಿಸುವುದಕ್ಕೂ ಕಿವಿಯಿಂದ ಸೋರುವ ಕೀವನ್ನು ನಿಲ್ಲಿಸುವುದಕ್ಕೂ ಉಪಯೋಗಿಸುವುದುಂಟು. ಸಂಧಿವಾತ, ಜ್ವರ, ಬಿಟ್ಟು ಬಿಟ್ಟು ಬರುವ ಗೂರಲು, ಸಾಮಾನ್ಯ ದುರ್ಬಲತೆ ಮುಂತಾದ ಕಾಯಿಲೆಗಳಿಗೆ ಈ ಎಣ್ಣೆ ಸಿದ್ಧೌಷಧ ಎನ್ನುತ್ತಾರೆ. ಹುರಿದ ಬೀಜ ಕುಷ್ಠರೋಗಕ್ಕೆ ಒಳ್ಳೆಯ ಮದ್ದು ಎನ್ನಲಾಗಿದೆ. ಬೀಜದಿಂದ ಬಲವರ್ಧಕ ಮತ್ತು ಕಾಂತಿವರ್ಧಕ ಔಷಧಿಗಳನ್ನು ತಯಾರಿಸುತ್ತಾರೆ.

(ಕೆ.ಎಂ.)

**ಗಟಪರ್ಚ :** ಸಪೋಟೇಸೀ ಕುಟುಂಬಕ್ಕೆ ಸೇರಿದ ಪಲೇಕ್ವಿಯಂ ಜಾತಿಯ ಮರಗಳ ಹಾಲ್ಲೊರೆಯನ್ನು ಘನೀಭವಿಸಿ ಪಡೆಯಲಾಗುವ ವಸ್ತು. ರಬ್ಬರನ್ನು ಹೋಲುತ್ತದೆ. ಪಲೇಕ್ವಿಯಂ ಜಾತಿಯ ಹಲವಾರು ಪ್ರಭೇದಗಳು ಮುಖ್ಯವಾಗಿ ಪ.ಗಟ.ಪ. ಆಬ್ಲಾಂಗಿ ಫೋಲಿಯ, ಪ. ಎಲಿಪ್ಟಿಕಂ ಮತ್ತು ಪ. ಆಬ್‌ವೇಟಂಗಳು ಈ ದೃಷ್ಟಿಯಿಂದ ಬಹು ಮುಖ್ಯವಾದವು. ಈ ಮರಗಳು ಮಲಯ ದ್ವೀಪಸ್ತೋಮ, ಬ್ರಜಿಲ್ ಮತ್ತು ಸುತ್ತಮುತ್ತಲ ಭಾಗಗಳಲ್ಲಿ ಹೆಚ್ಚಾಗಿ ಕಾಣಬರುತ್ತವೆ. ಪ. ಗಟ ಪ್ರಭೇದದಿಂದ ದೊರೆಯುವ ಗಟಪರ್ಚ ಉತ್ತಮ ದರ್ಜೆಯದು.

**ಗಟಪರ್ಚ ತಯಾರಿಕೆ:** ಮರಗಳಿಗೆ ಸಾಮಾನ್ಯವಾಗಿ 30 ವರ್ಷ ವಯಸ್ಸಾದ ಅನಂತರ ಹಾಲ್ಲೊರೆ ತೆಗೆಯುವುದು ಯುಕ್ತ. ಹಾಲ್ಲೊರೆಯನ್ನು ಕಾಂಡದಿಂದ ತೆಗೆಯುವುದು ವಾಡಿಕೆಯಾದರೂ ಎಲೆ ಮತ್ತು ಇತರ ಭಾಗಗಳಿಂದಲೂ ತೆಗೆಯಬಹುದು. ಹಿಂದೆ ಒಂದು ಕಾಲದಲ್ಲಿ ಹಾಲ್ಲೊರೆಯನ್ನು ತೆಗೆಯಲು ಇಡೀ ಮರವನ್ನೆ ಕತ್ತರಿಸಿದ ತೊಗಟೆಯ ಮೇಲೆ 1′ ಅಂತರಕ್ಕೊಂದರಂತೆ 6″ ಅಗಲದ ಹಲವಾರು ಕಾಲುವೆಗಳನ್ನು ಕೊರೆದು ಹಾಲ್ಲೊರೆ ಒಸರುವಂತೆ ಮಾಡಿ ಅದು ಗಟ್ಟಿಯಾದ ಮೇಲೆ ಸಂಗ್ರಹಿಸುತ್ತಿದ್ದರು. ಈಗಲೂ ಮಲಯದಲ್ಲಿ ಈ ವಿಧಾನ ಬಳಕೆಯಲ್ಲಿದೆ. ಆದರೆ ಈಚೆಗೆ ರಬ್ಬರ್ ಮರಗಳಿಂದ ರಬ್ಬರ್ ಹಾಲನ್ನು ತೆಗೆಯುವ ರೀತಿಯಲ್ಲಿ ಅಂದರೆ ಮರಗಳ ಮೇಲೆ ಕಾಲುವೆಗಳನ್ನು ಮಾಡಿ ಇವುಗಳಿಂದ ಒಸರುವ ಹಾಲ್ಲೊರೆಯನ್ನು ಸಂಗ್ರಹಿಸುತ್ತಾರೆ. ಅನಂತರ ಇದನ್ನು ಅಗಲವಾದ ಬಾಯುಳ್ಳ ಪಾತ್ರೆಯಲ್ಲಿ ಕುದಿಸಿ ಯುಕ್ತ ದ್ರಾವಣಗಳಿಂದ ಗಟಪರ್ಚವನ್ನು ಬೇರ್ಪಡಿಸುತ್ತಾರೆ. ಹಾಲ್ಲೊರೆ ಬಲು ಗಟ್ಟಿಯಾಗಿದ್ದರೆ ಕುದಿಸುವ ಮುನ್ನ ಕೊಂಚ ನೀರನ್ನು ಸೇರಿಸುವುದುಂಟು.

ಎಲೆಗಳಿಂದ ಗಟಪರ್ಚವನ್ನು ಪಡೆಯಬೇಕಾದರೆ ಬಲಿತ ಎಲೆಗಳನ್ನು ಸಂಗ್ರಹಿಸಿ ಬೀಸುವ ಯಂತ್ರಗಳಲ್ಲಿ ಪುಡಿ ಮಾಡಿ ಕಡ್ಡಿ ಮುಂತಾದುವನ್ನು ಬೇರ್ಪಡಿಸುತ್ತಾರೆ. ಅನಂತರ $70^\circ$ ಸೆಂ. ಉಷ್ಣತೆಯುಳ್ಳ ನೀರಿನಲ್ಲಿ 30 ಮಿನಿಟುಗಳ ಕಾಲ ನೆನೆಸುತ್ತಾರೆ.

ಆಲ್ಕೊಹಾಲ್ ಅಥವಾ ಕ್ರಿಯಾಸೋಟ್ ಮಿಶ್ರಣಗಳನ್ನು ಸೇರಿಸಿ ಗಟಪರ್ಚವನ್ನು ಪ್ರತ್ಯೇಕಿಸುತ್ತಾರೆ. ಶುದ್ಧೀಕರಿಸಲೆಂದು ಗಟಪರ್ಚವನ್ನು ತೊಳೆಯುವುದೂ ಉಂಟು. ಆದರೆ ಈ ವಿಧಾನ ವಾಣಿಜ್ಯ ದೃಷ್ಟಿಯಿಂದ ಲಾಭದಾಯಕವಾಗಿಲ್ಲ.

ಗಟಪರ್ಚದ ಮರಗಳಲ್ಲಿ ಹಾಲ್ನೊರೆಯ ಪರಿಮಾಣ ಮಳೆಗಾಲದಲ್ಲಿ ಮಾತ್ರ ಹೆಚ್ಚಾಗಿರುವುದರಿಂದ ಹಾಲ್ನೊರೆಯನ್ನು ಶೇಖರಿಸುವ ಕೆಲಸ ಈ ಕಾಲದಲ್ಲೆ ಹೆಚ್ಚು. ಪ್ರತಿಯೊಂದು ಮರದಿಂದಲೂ ಸು. 5 ರಿಂದ 6 ಲೀಟರಿನಷ್ಟು ಹಾಲ್ನೊರೆಯನ್ನು ಪಡೆಯಬಹುದು.

ಗಟಪರ್ಚ ಸಾಮಾನ್ಯ ಉಷ್ಣತೆಯಲ್ಲಿ ಗಡುಸಾಗಿರುವ ಒಂದು ಊದಾ ಬಣ್ಣದ ಅಪುಟಿತ ಘನವಸ್ತು. ಬಿಸಿ ಮಾಡಿದಾಗ ಮೃದುವಾಗುತ್ತದೆ. ಈ ಗುಣದಿಂದಾಗಿ ಕೆಲವು ಸುಂದರ ವಸ್ತುಗಳ ತಯಾರಿಕೆಯಲ್ಲಿ ಗಟಪರ್ಚ ಬಹಳ ಉಪಯುಕ್ತವಾಗಿದೆ. ಗಟಪರ್ಚ ವಿದ್ಯುತ್‌ವಾಹಿಯಲ್ಲ. ಇದರ ಕರಗುವ ಬಿಂದು 65° ಸೆಂ. ಈ ಉಷ್ಣತೆಗಿಂತ ಹೆಚ್ಚಿನ ಉಷ್ಣತೆಯಲ್ಲಿ ಮೃದುವಾದ ಆಲ್ಫ ಬಗೆಯ ಪ್ಲಾಸ್ಟಿಕ್ ರೂಪ ತಾಳುತ್ತದೆ. ನಿಧಾನವಾಗಿ ತಂಪು ಮಾಡಿದಲ್ಲಿ ಅದು ತನ್ನ ಮುಂಚಿನ ಘನರೂಪಕ್ಕೆ ಬರುತ್ತದೆ. ಅತಿ ಜಾಗ್ರತೆ ತಂಪು ಮಾಡಿದಲ್ಲಿ ಅದು 56° ಸೆಂ. ನಲ್ಲಿ ಕರಗುವ ಬೇರೆ ರೀತಿಯ ಅಂದರೆ ಬೀಟ ರೂಪದ ಘನವಾಗುತ್ತದೆ. ಈ ಎರಡು ಘನರೂಪಗಳು ನೋಡಲು ಒಂದೇ ರೀತಿಯಲ್ಲಿದ್ದರೂ ಇವನ್ನು ಕ್ಷ-ಕಿರಣಗಳ ಮೂಲಕ ಗುರುತಿಸಬಹುದು.

ಕಾರ್ಬನ್ ಡೈ ಸಲ್ಫೈಡ್ ಬೆಂಜೀನ್ ಮತ್ತು ಕ್ಲೋರೋಫಾರಮುಗಳಲ್ಲಿ ಗಟಪರ್ಚ ಸುಲಭವಾಗಿ ಕರಗುತ್ತದೆ. ಆದರೆ ಆಲ್ಕೊಹಾಲ್ ಮತ್ತು ಇತರ ದುರ್ಬಲ ಆಮ್ಲಗಳು ಇದರ ಮೇಲೆ ಯಾವ ವಿಧದಲ್ಲೂ ಪರಿಣಾಮಕಾರಿಗಳಲ್ಲ. ಸಾಂದ್ರ ಸಲ್ಫ್ಯೂರಿಕ್ ಆಮ್ಲ ಇದನ್ನು ಸುಟ್ಟು ಹಾಕುತ್ತದೆ. ಮತ್ತು ಸಾಂದ್ರ ನೈಟ್ರಿಕ್ ಆಮ್ಲ ಇದನ್ನು ಪೂರ್ತಿ ಉತ್ಕರ್ಷಿಸುತ್ತದೆ. ಗಾಳಿ ಮತ್ತು ಬೆಳಕಿನ ಸಂಪರ್ಕಕ್ಕೆ ಬಂದರೆ ಇದು ಬಹುಬೇಗ ಹಾಳಾಗುತ್ತದೆ. ಅಲ್ಲದೆ ಗಾಳಿಯಲ್ಲಿಯ ಆಮ್ಲಜನಕವನ್ನು ಹೀರಿ ಗಟ್ಟಿಯಾದರಾಳದಂಥ ವಸ್ತುವಾಗಿ ಮಾರ್ಪಡುತ್ತದೆ. ಓಜ್ಹೋನ್ ಕೂಡ ಗಟಪರ್ಚದ ಮೇಲೆ ಹೆಚ್ಚು ಕಡಿಮೆ ಇದೇ ಪ್ರಭಾವವನ್ನು ಬೀರುತ್ತದೆ. ಈ ಕ್ರಿಯೆಯನ್ನು ತಡೆಗಟ್ಟಲು ಕೆಲವು ಉತ್ಕರ್ಷಣ ಪ್ರತಿವಸ್ತುಗಳನ್ನು ಬಳಸುತ್ತಾರೆ.

ರಾಸಾಯನಿಕವಾಗಿ ರಬ್ಬರಿನಂತೆಯೆ ಗಟಪರ್ಚ ಕೂಡ ಒಂದು ಹೈಡ್ರೊ ಕಾರ್ಬನ್. ಈ ಎರಡರ ಸೂತ್ರ ಒಂದೇ ಆಗಿದ್ದರೂ ಇವುಗಳ ಅಣುಗಳ ಜೋಡಣೆಯ ವಿನ್ಯಾಸ ಬೇರೆ ಬೇರೆ. ರಬ್ಬರ್ ಸಿಸ್-ಪ್ರತಿರೂಪವಾದರೆ ಗಟಪರ್ಚ ಟ್ರಾನ್ಸ್-ಪ್ರತಿರೂಪ. ಗಟಪರ್ಚ ಹೈಡ್ರೊ ಕಾರ್ಬನಿನ ಅಣು ತೂಕ 30,000. ರಬ್ಬರಿನ ಜೊತೆ ಗಟಪರ್ಚ ಬಹಳ ಸುಲಭವಾಗಿ ಬೆರೆಯುತ್ತದೆ. ಗಟಪರ್ಚವನ್ನು ವಲ್ಕನೈಸ್ ಮಾಡಿ ರಬ್ಬರಿನಂತೆಯೇ ಉಪಯೋಗಿಸಬಹುದು.

ಗಟಪರ್ಚಕ್ಕೆ ಹಲವಾರು ಉಪಯೋಗಗಳಿವೆ. ವಿದ್ಯುದ್ರೋಧಕವಾದ್ದರಿಂದ ಇದನ್ನು ವಿದ್ಯುದ್ರೋಧಕ ವಸ್ತುಗಳ ತಯಾರಿಕೆಯಲ್ಲಿ ಮುಖ್ಯವಾಗಿ, ಸಬ್‌ಮೆರೀನ್ ಕೇಬಲ್ ಸರ್ವಿಸಿನಲ್ಲಿ ಕೇಬಲುಗಳನ್ನು ವಿದ್ಯದ್ರೋಧಕಗಳಾಗಿ ಮಾಡಲು ಉಪಯೋಗಿಸುತ್ತಾರೆ. ಕೇಬಲ್ ರಕ್ಷಣೆಗೆ ಉಪಯೋಗಿಸಿದ ವಸ್ತು ನೀರಿನ ಉಷ್ಣತೆಯ ವ್ಯತ್ಯಾಸಗಳಿಂದ ಹಾಳಾಗಬಾರದು. ಅಂಥ ಗುಣ ಗಟಪರ್ಚಕ್ಕಿದೆ. ಆದ್ದರಿಂದ ಸಮುದ್ರದಲ್ಲಿ ದೂರವಾಣಿ ಸಂದೇಶಕ್ಕಾಗಿ ಬಳಸುವ ಕೇಬಲ್‌ಗಳನ್ನು ಸುರಕ್ಷಿತವಾಗಿರಲು ಇತ್ತೀಚಿನವರೆಗೂ ಇದನ್ನು ಉಪಯೋಗಿಸುತ್ತಿದ್ದರು. ಆದರೆ ಇತ್ತೀಚೆಗೆ ಕೃತಕ ವಸ್ತುಗಳಾದ ಪಾಲಿಎತಿಲೀನ್. ವೀನೈಲ್‌ರೆಸಿನ್, ನೈಲಾನ್ ಮುಂತಾದವುಗಳ ಬಳಕೆ ಹೆಚ್ಚಾಗುತ್ತಿದ್ದು ಗಟಪರ್ಚದ ಜನಪ್ರಿಯತೆ ಇಳಿಮುಖವಾಗಿದೆ. ಗಾಲ್ಫ್ ಚೆಂಡುಗಳು, ಕೆಲವು ಬಗೆಯ ಪೈಪುಗಳು, ಟೆಲಿಫೋನ್ ರಿಸೀವರ್‌ಗಳು, ವೈದ್ಯಕೀಯ ಉಪಕರಣಗಳು, ಒಂದು ಮಾದರಿಯ ಹಲ್ಲಿನ ಸಿಮೆಂಟ್ ಮತ್ತು ವಾಕಿಂಗ್ ಸ್ಟಿಕ್‌ಗಲ ತಯಾರಿಕೆಯಲ್ಲಿ ಗಟಪರ್ಚವನ್ನು ಬಹುವಾಗಿ ಉಪಯೋಗಿಸುತ್ತಾರೆ. ಕೆಲವು ರೀತಿಯ ಅಂಟು ಪದಾರ್ಥಗಳನ್ನೂ ಚೂಯಿಂಗ್ ಗಮ್ಮನ್ನೂ ಇದರಿಂದ ತಯಾರಿಸುವುದಿದೆ. ಈ ವಸ್ತುಗಳ ತಯಾರಿಕೆಯಲ್ಲಿ ಪ.ಗಟ ಪ್ರಭೇದದಿಂದ ತೆಗೆದ ಗಟಪರ್ಚ ಅತಿ ಉತ್ತಮವಾದದ್ದು. ಆದರೆ ಉತ್ತಮ ಗಟಪರ್ಚದ ಕೊರತೆಯಿರುವುದರಿಂದ ಮಿಕ್ಕ ಪ್ರಭೇದಗಳಿಂದ ಬಂದ ಗಟಪರ್ಚವನ್ನೇ ಇದರ ಜೊತೆ ಮಿಶ್ರಣ ಮಾಡಿ ಉಪಯೋಗಿಸುತ್ತಾರೆ **(ನೋಡಿ-ಪಲೇಕ್ವಿಯಮ್)**.

(ಕೆ.ಎಸ್.ಎನ್.ಎ.)

**ಗಟ್ಟಿಗಣ್ಣು (ಗ್ಲೋಕೋಮಾ) :** ಗ್ಲೋಕೋಮಾ ಕಣ್ಣಿನ ಒಂದು ಗಂಭೀರವಾದ ಕಾಯಿಲೆ. ಸ್ಥೂಲವಾಗಿ ಹೇಳುವುದಾದರೆ ಇದರಲ್ಲಿ ಕಣ್ಣಿನ ಒಳಗಿನ ಒತ್ತಡ ಹೆಚ್ಚಾಗುತ್ತದೆ. ಈ ಕಾಯಿಲೆ ಗಂಭೀರವಾಗಲು ಕಾರಣವೇನೆಂದರೆ ಹೆಚ್ಚಿನ ಸಂದರ್ಭಗಳಲ್ಲಿ ಈ ಕಾಯಿಲೆಯ ಇರುವು ಗೊತ್ತಾಗುವ ಹೊತ್ತಿಗೆ ಕಣ್ಣಿನ ನರವಾದ ಆಪ್ಟಿಕ್ ನರಕ್ಕೆ ಬಹಳಷ್ಟು ತೊಂದರೆ ಉಂಟಾಗಿರುತ್ತದೆ. ಅಲ್ಲದೇ ಕಾಯಿಲೆಯಿಂದ ಹಾಳಾದ ನರವನ್ನು ಮತ್ತೆ ಪುನಶ್ಚೇತನಗೊಳಿಸಲು ಸಾಧ್ಯವಿಲ್ಲ. ಹಾಗಾಗಿ ಈ ಕಾಯಿಲೆಯಿಂದ ನಾಶವಾದ ದೃಷ್ಟಿ ಪುನಃ ಬರುವ ಸಾಧ್ಯತೆ ಇಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ನೋವು ವೇದನೆ ಇಲ್ಲದಿರುವುದರಿಂದ ರೋಗಿ ಕಣ್ಣಿನ ಪೊರೆ ಎಂದು ತಿಳಿದು ವೈದ್ಯರಲ್ಲಿ ಬರುವುದನ್ನು ಮುಂದೆ ಹಾಕುತ್ತಾನೆ.

**ಸಮಸ್ಯೆಯ ಅಗಾಧತೆ :** ನಮ್ಮ ದೇಶದಲ್ಲಿ ಗ್ಲೋಕೋಮಾದ ಸಮಸ್ಯೆ ಹೆಚ್ಚಿರಲು ಕಾರಣ ಬಡತನ. ಅಜ್ಞಾನ ಮತ್ತು ಅಸಮರ್ಪಕ ಆರೋಗ್ಯ ವ್ಯವಸ್ಥೆ. ಒಂದು ಅಂದಾಜಿನ ಪ್ರಕಾರ ಕಣ್ಣಿನ ಆಸ್ಪತ್ರೆಗೆ ಭೇಟಿ ಕೊಡುವ ಪ್ರತಿ ಹತ್ತರಲ್ಲಿ ಒಬ್ಬರಿಗೆ ಗ್ಲೋಕೋಮಾ ಇದೆ ಮತ್ತು ನೂರರಲ್ಲಿ ಒಬ್ಬರು ಈ ಕಾಯಿಲೆಯಿಂದ ಅಂಧರಾಗುತ್ತಾರೆ. ನಮ್ಮ ದೇಶದ ವಿವಿಧ ಭಾಗಗಳಲ್ಲಿ ಕೈಗೊಂಡ ಸಮೀಕ್ಷೆಯ ಪ್ರಕಾರ ಗ್ಲೋಕೋಮಾವು ಶೇ. 14-25 ಸಂದರ್ಭಗಳಲ್ಲಿ ಕಾರಣವಾಗಿರುತ್ತದೆ. ಆದರೆ ಮುಂದುವರಿದ ದೇಶಗಳಾದ ಅಮೆರಿಕ, ಇಂಗ್ಲೆಂಡ್‌ಗಳಲ್ಲಿ ಈ ಪ್ರಮಾಣ ಶೇ. 12-13.

ದೇಹದಲ್ಲಿ ರಕ್ತ ಒತ್ತಡ ಇರುವ ಹಾಗೆಯೇ ಕಣ್ಣಿಗೂ ಒಂದು ನಿರ್ದಿಷ್ಟ ಒತ್ತಡ ಇರುತ್ತದೆ. ಸಾಮಾನ್ಯವಾಗಿ ಕಣ್ಣಿನ ಒತ್ತಡ 10ರಿಂದ 20 ಮಿಮೀ(ಪಾದರಸ) ಇರುತ್ತದೆ. ಈ ಅಂಕಿಗಿಂತ ಒತ್ತಡ ಹೆಚ್ಚಾದಾಗ ಗ್ಲೋಕೊಮಾ ಇರಬಹುದೇ ಎಂದು ನೇತ್ರವೈದ್ಯ ಅನುಮಾನಿಸುವುದು ಸಹಜ. ಕಣ್ಣಿನ ಒತ್ತಡ ಒತ್ತಡಮಾಪಕ ಯಂತ್ರದಿಂದ ಅಳೆಯಲ್ಪಡುತ್ತದೆ.

**ಗ್ಲೋಕೋಮಾದ ಪ್ರಮುಖ ವಿಧಗಳು**

**1.** ತೆರೆದ ಕೋನದ ಗ್ಲೋಕೋಮಾ. 2. ಸಂಕುಚಿತ ಕೋನದ ಗ್ಲೋಕೋಮಾ. 3. ಜನನಾಗತ ಗ್ಲೋಕೋಮಾ

**ತೆರೆದ ಕೋನ್ ಗ್ಲೋಕೋಮಾ :** ಸಾಮಾನ್ಯವಾಗಿ ಹೆಂಗಸರು, ಗಂಡಸರು ಇಬ್ಬರಲ್ಲಿಯೂ ಭೇದವಿಲ್ಲದೆ ಕಾಣಿಸಿಕೊಳ್ಳುವ ಈ ಗ್ಲೋಕೋಮಾ ಹೆಚ್ಚಾಗಿ ಕಾಣಿಸಿಕೊಳ್ಳುವ ವಯಸ್ಸು 60 ರಿಂದ 70 ವರ್ಷಗಳು. ನಮ್ಮ ದೇಶದಲ್ಲಿ ಬೇರೆ ಎಲ್ಲಾ ವಿಧಗಳ ಗ್ಲೋಕೋಮಾಗಳಿಗಿಂತ ಈ ವಿಧದ ಗ್ಲೋಕೋಮಾ ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತದೆ. ಇದರ ಪ್ರಾಮುಖ್ಯತೆ ಹೆಚ್ಚಾಗಲು ಕಾರಣ: ಹೆಚ್ಚಿನ ಯಾವ ಲಕ್ಷಣಗಳೂ ಇಲ್ಲದೆ ಇದು ಕಾಣಿಸಿಕೊಳ್ಳುವುದರಿಂದ ರೋಗವಿದೆಯೆಂದು ಗೊತ್ತಾಗುವ ಸಮಯಕ್ಕೆ ಅದು ಆಪ್ಟಿಕ್ ನರಕ್ಕೆ ಬಹಳಷ್ಟು ಹಾನಿಯನ್ನು ಉಂಟುಮಾಡಿರುತ್ತದೆ. ರೋಗಿಯು ಮುಖ್ಯವಾಗಿ ಅನುಭವಿಸುವ ಲಕ್ಷಣಗಳೆಂದರೆ ಕಣ್ಣು ಮಂಜಾಗುವಿಕೆ, ಓದುವುದು, ಹತ್ತಿರದ ಕೆಲಸ ಕಷ್ಟವಾಗುವುದು, ಪದೇ ಪದೇ ಕನ್ನಡಕ ಬದಲಾವಣೆ ಮಾಡುವ ಅಗತ್ಯ ಮತ್ತು ದೃಷ್ಟಿಯ ಕ್ಷೇತ್ರದಲ್ಲಿ ಆಗುವ ವ್ಯತ್ಯಾಸಗಳು. ಒಟ್ಟಿನಲ್ಲಿ ಹೇಳುವುದಾದರೆ ಈ ರೀತಿಯ ಗ್ಲೋಕೋಮಾ ರೋಗಿಗೆ ತನ್ನ ಇರವು ಗೊತ್ತಾಗುವ ಮೊದಲೇ ಹೆಚ್ಚಿನ ಸಂದರ್ಭಗಳಲ್ಲಿ ಒಂದು ಕಣ್ಣಿನ ನರವನ್ನು ಭಾಗಶಃ ಅಥವಾ ಸಂಪೂರ್ಣನಾಶ ಮಾಡುವುದಲ್ಲದೆ, ಮತ್ತೊಂದು ಕಣ್ಣಿನಲ್ಲಿಯೂ ಸ್ವಲ್ಪ ಪ್ರಮಾಣದ ನಾಶವನ್ನು ಉಂಟುಮಾಡಿರುತ್ತದೆ. ತಡವಾಗಿ ಗೊತ್ತಾಗಲು ಇನ್ನೊಂದು ಕಾರಣವೆಂದರೆ ರೋಗಿಯ ದೃಷ್ಟಿಯ ಮಧ್ಯಭಾಗದ ಕ್ಷೇತ್ರವು, ನರವು ಸಂಪೂರ್ಣ ನಾಶವಾಗುವವರೆಗೂ ಉಳಿದಿರುತ್ತದೆ. ಆದ್ದರಿಂದ ಈ ರೀತಿಯ ಗ್ಲೋಕೋಮಾ ಆದಷ್ಟು ಬೇಗ ಪತ್ತೆ ಹಚ್ಚಲ್ಪಡುತ್ತದೆ. ರೋಗ ಪತ್ತೆ ಹಚ್ಚಲು ಸಹಾಯಕವಾಗುವ ಮುಖ್ಯ ಅಂಶಗಳು :1.ಕಣ್ಣಿನ ಒಳಗಿನ ಒತ್ತಡ, 2.ಆಪ್ಟಿಕ್ ಚಕ್ರದ ಬದಲಾವಣೆಗಳು, 3.ದೃಷ್ಟಿಯ ಕ್ಷೇತ್ರದ ವ್ಯತ್ಯಾಸಗಳು. ವಿವಿಧ ರೀತಿಯ ಕಾಣದಿರುವ ಜಾಗಗಳು, ದೃಷ್ಟಿಯ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುವುದು (ಅಂದರೆ ಕಣ್ಣಿನ ನರದ ಯಾವುದೋ ಒಂದು ನಿರ್ದಿಷ್ಟವಾದ ಭಾಗ ದೃಷ್ಟಿ ನಾಶ ಹೊಂದಿದೆ ಎಂದರ್ಥ). ಆಪ್ಟಿಕ್ ನರದಿಂದ ಉಂಟಾದ ಎಲ್ಲರಲ್ಲಿಯೂ ಇರುವ ಕಾಣದಿರುವ ಜಾಗವು ವಿಸ್ತಾರವಾಗುವುದು, ದೃಷ್ಟಿಯ ಕ್ಷೇತ್ರದ ಪ್ರಮಾಣ ಕ್ರಮೇಣ ಕಿರಿದಾಗುತ್ತಾ ಬರುವುದು.

ಇಲ್ಲಿ ಒತ್ತಡ ಯಾವ ಕಾರಣದಿಂದ ಹೆಚ್ಚಾಗುತ್ತದೆ ಎಂಬ ಅಂಶ ನಿರ್ದಿಷ್ಟವಾಗಿ ಗೊತ್ತಿಲ್ಲ. ಬಹುಶಃ ಏಕ್ವಿಯಸ್ ದ್ರವವು ಹೊರಹೋಗಿ ರಕ್ತಕ್ಕೆ ಹೀರಲ್ಪಡುವ ಮೊದಲು ಅದು ಹೊರ ಹೋಗುವ ಭಾಗದಲ್ಲಿ ಕಂಡುಬರುವ ವಿರೋಧದಿಂದ ಒತ್ತಡ ಹೆಚ್ಚಾಗುತ್ತದೆ ಎಂದು ನಂಬಲಾಗಿದೆ.

ಚಿಕಿತ್ಸೆ : ಔಷಧಗಳಾದ ಪೈಲೋಕಾರ್, ಎಪಿರಿನ್, ಟಿಮೋಲಾಲ್‌ಗಳನ್ನು ಉಪಯೋಗಿಸಬಹುದಾದರೂ ಇವುಗಳನ್ನು ಜೀವನ ಪರ್ಯಂತ ಉಪಯೋಗಿಸ ಬೇಕಾದ್ದರಿಂದ ವೆಚ್ಚದ ದೃಷ್ಟಿಯಿಂದ ಮತ್ತು ಅನುಕೂಲದ ದೃಷ್ಟಿಯಿಂದ ಶಸ್ತ್ರಕ್ರಿಯೆಯನ್ನು ಮಾಡಿ ಒತ್ತಡವನ್ನು ಕಡಿಮೆ ಮಾಡಬೇಕಾಗುತ್ತದೆ.

**ಸಂಕುಚಿತ ಕೋನದ ಗ್ಲೋಕೋಮಾ :** ಮೇಲೆ ತಿಳಿಸಿದ ಗ್ಲೋಕೋಮಾಗೆ ವಿಭಿನ್ನ ರೀತಿಯಲ್ಲಿ ಕಾಣಿಸಿಕೊಳ್ಳುವ ಈ ರೀತಿಯ ಗ್ಲೋಕೋಮಾವು ಹೆಚ್ಚಾಗಿ ಹೆಂಗಸರಲ್ಲಿ ಮಾನಸಿಕ ಒತ್ತಡ ಜಾಸ್ತಿ ಇರುವವರಲ್ಲಿ ಚಿಂತೆ ಹೆಚ್ಚು ಮಾಡುವವರಲ್ಲಿ ಕಾಣಿಸಿಕೊಳ್ಳುತ್ತದೆ. ಸಾಮಾನ್ಯ 50-60 ವರ್ಷಗಳ ವಯಸ್ಸಿನವರಲ್ಲಿ ಕಾಣಿಸಿಕೊಳ್ಳುವ ಇದರಲ್ಲಿ ಮೊದಲು ಕಣ್ಣು ಸ್ವಲ್ಪ ಮಂಜಾಗುತ್ತದೆ. ಬೆಳಕಿನ ಸುತ್ತ ಬಣ್ಣ ಬಣ್ಣದ ಚಕ್ರಗಳು ಕಾಣಿಸುತ್ತವೆ. ಕೆಲವೊಮ್ಮೆ ತಲೆನೋವು ಬರುತ್ತದೆ ಎಂದು ಶುರುವಾಗಿ ನಂತರ ಒಂದು ದಿನ ಇದ್ದಕ್ಕಿದ್ದ ಹಾಗೇ ಕಣ್ಣಿನಲ್ಲಿ ವಿಪರೀತ ನೋವು, ಕಣ್ಣು ಒಂದೇ ಸಾರಿ ಕಾಣುವುದಿಲ್ಲ. ಮಿತಿ ಮೀರಿದ ತಲೆನೋವು, ವಾಂತಿ ಎಂದು ರೋಗಿಯು ವೈದ್ಯರಲ್ಲಿ ಬಂದಾಗ ವಿವರವಾದ ಪರೀಕ್ಷೆಯಿಂದ ಗೊತ್ತಾಗುವ ಅಂಶ ಕಣ್ಣು ಕೆಂಗಣ್ಣು ಆಗಿರುವುದು. ಕಣ್ಣಿನ ದೃಷ್ಟಿ ಬಹಳವಾಗಿ ಕಡಿಮೆಯಾಗಿರುವುದು. ಆಗ ಸರಿಯಾದ ಚಿಕಿತ್ಸಾ ಕ್ರಮ ಕೈಗೊಳ್ಳದಿದ್ದರೆ, ಕಣ್ಣು ಸಂಪೂರ್ಣ ಅಂಧತ್ವ ಹೊಂದುವ ಸಾಧ್ಯತೆಯಿದೆ.

ಈ ರೀತಿಯ ಗ್ಲೊಕೋಮಾದಲ್ಲಿ ಕಣ್ಣಿನ ಒತ್ತಡ ಹೆಚ್ಚಾಗಲು ಕಾರಣ ಏಕ್ವಿಯಸ್ ದ್ರವವು ಹಿಂಭಾಗದ ಗೂಡಿನ ಭಾಗದಿಂದ ಮುಂಭಾಗದ ಗೂಡಿನ ಭಾಗಕ್ಕೆ ಹೋಗುವ ಜಾಗದಲ್ಲಿ ಉಂಟಾಗುವ ಅಡಚಣೆ.

ಚಿಕಿತ್ಸೆ : ಇದರ ಚಿಕಿತ್ಸೆ ಕೊನೆಯಲ್ಲಿ ಶಸ್ತ್ರಕ್ರಿಯೆಯೇ ಸರಿ. ಆದರೆ ಒತ್ತಡ ಹೆಚ್ಚಾಗಿದ್ದಾಗ ಅದನ್ನು ಕಡಿಮೆ ಮಾಡಲು ಔಷಧಿಗಳಾದ ಪೈಲೋಕಾರ್, ಅಸಟಜೋಲಮೈಡ್ ಮಾತ್ರೆಗಳು, ಮ್ಯಾನಿಟಾಲ್ ಇಂಜೆಕ್ಷನ್ ಇತ್ಯಾದಿ. ಶಸ್ತ್ರಕ್ರಿಯೆಯಿಂದ ಹಿಂಭಾಗದ ಮತ್ತು ಮುಂಭಾಗದ ಗೂಡುಗಳ ಮಧ್ಯೆ ಏಕ್ವಿಯಸ್ ದ್ರವವು ಚಲಿಸಲು ಹೊಸ ದಾರಿಯನ್ನು ಮಾಡುವುದು.

ಜನನಾಗತ ಗ್ಲೊಕೋಮಾ (ಗೂಳಿಕಣ್ಣು)

ಮಗು ಜನಿಸುವ ಮೊದಲೇ ಬೆಳವಣಿಗೆಯ ಹಂತದಲ್ಲಿರುವಾಗ ಮುಂಭಾಗದ ಗೂಡಿನ ಕೋನದ ಭಾಗದಲ್ಲಿ ಕೆಲವು ಅಂಗಾಂಶಗಳ ಕೊರತೆಯಿಂದ ಏಕ್ವಿಯಸ್ ದ್ರವದ ಚಲನೆಗೆ ಉಂಟಾಗುವ ತೊಂದರೆಯಿಂದ ಕಣ್ಣಿನ ಒತ್ತಡವು ಹೆಚ್ಚಾಗುತ್ತದೆ. ಹೆಚ್ಚಾದ ಒತ್ತಡವು ಕಣ್ಣಿನ ಎಲ್ಲಾ ಭಾಗಗಳ ಮೇಲೆ ತನ್ನ ಪ್ರಭಾವ ಬೀರುವುದರಿಂದ ಮತ್ತು ಕಣ್ಣಿನ ಹೊರಗಿನ ಕವಚಗಳು ಬಹಳ ತೆಳುವಾಗಿರುವುದರಿಂದ ಆ ಇಡೀ ಕಣ್ಣೇ ದೊಡ್ಡದಾಗಿ ಮಗುವಿನ ಕಣ್ಣು 'ಗೂಳಿಕಣ್ಣು' ಕಾಣುವ ಹಾಗೆ ಕಾಣುವುದರಿಂದ ಇದಕ್ಕೆ ಈ ಹೆಸರು.

ಚಿಕಿತ್ಸೆ : ಮಾಡುವುದು ಕಠಿಣ. ಆದರೂ ಶಸ್ತ್ರಕ್ರಿಯೆಯ ಮೂಲಕ ಪ್ರಯತ್ನಿಸಬಹುದು.

ಹೀಗೆ ದೃಷ್ಟಿಗೆ ಮಾರಕವಾದ 'ಗ್ಲೊಕೋಮಾವು' ಅತೀ ಬೇಗ ಪತ್ತೆ ಹಚ್ಚಲ್ಪಡಬೇಕು ಮತ್ತು ಚಿಕಿತ್ಸೆಯನ್ನು ತೀವ್ರ ರೀತಿಯಲ್ಲಿ ಕೈಗೊಳ್ಳಬೇಕು.

ಮೇಲಿನ ವಿಧಗಳಲ್ಲದೆ, ಕಣ್ಣಿನ ವಿವಿಧ ಅಂಗಗಳ ಕಾಯಿಲೆಗಳ ಕಾರಣದಿಂದ ಅಥವಾ ದೈಹಿಕವಾಗಿ ಇರುವ ಕೆಲವು ಕಾಯಿಲೆಗಳ ಕಾರಣದಿಂದಲೂ ಗ್ಲೊಕೋಮಾ ಕಾಣಿಸಿಕೊಳ್ಳಬಹುದು. ಇವುಗಳ ಚಿಕಿತ್ಸೆ ಎಂದರೆ ಗ್ಲೊಕೋಮಾಕ್ಕೆ ಕಾರಣವಾದ ಮೂಲ ಕಾಯಿಲೆಗಳ ಚಿಕಿತ್ಸೆ. *

**ಗಟ್ಟಿ ನಾಣ್ಯ :** ಒಂದು ದೇಶದಲ್ಲಿ ಶಾಸನಬದ್ಧವಾದ ಹಣ (ನಾಣ್ಯ, ನೋಟುಗಳು ಎರಡೂ ಸೇರಿ)ವನ್ನು ಸಾಮಾನ್ಯವಾಗಿ ನಾಣ್ಯವೆಂದು ಹೆಸರಿಸುವುದು ವಾಡಿಕೆ. ಚಲಾವಣೆಯಲ್ಲಿರುವ ಹಣವನ್ನು ಇಂಗ್ಲಿಷಿನಲ್ಲಿ ಕರೆನ್ಸಿ ಎನ್ನುವರು. ಒಂದು ದೇಶದ ಕರೆನ್ಸಿಯು ಎಷ್ಟು ಗಟ್ಟಿಯೆಂಬುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅದಕ್ಕಿರುವ ಬೇಡಿಕೆ, ಮಹತ್ತ್ವ, ನಂಬಿಕೆ, ವಿಶ್ವಾಸ, ದೇಶದ ದೃಢತೆ, ದೇಶದಲ್ಲಿಯ ಕಡಿಮೆಯಿರುವ ಹಣದುಬ್ಬರ, ಹಣಕಾಸಿನ ಶಾಸನ, ನೀತಿ, ವಿಧಿ, ವಿಧಾನಗಳಲ್ಲಿಯ ದೃಢತೆ ಮೊದಲಾದವುಗಳಿಂದ ಗೊತ್ತಾಗುತ್ತದೆ. ಉತ್ತಮ ಸ್ಥಿತಿಯಲ್ಲಿರುವ ವ್ಯಕ್ತಿಯನ್ನು ನಾವು ಗಟ್ಟಿಕುಳ ಎನ್ನುವುದಿಲ್ಲವೆ? ಹಾಗೆ ಈ ದೇಶದ ಕರೆನ್ಸಿ ಹಲವಾರು ರೀತಿಗಳಿಂದ ದೃಢವಾಗಿದ್ದರೆ ಅದನ್ನು ಗಟ್ಟಿ ಕರೆನ್ಸಿ ಅಥವಾ ಗಟ್ಟಿ ನಾಣ್ಯವೆನ್ನುತ್ತಾರೆ. ಉದಾಹರಣೆಗೆ ಅಮೆರಿಕದ ಡಾಲರ್, ಬ್ರಿಟನ್ನಿನ ಪೌಂಡ್, ಯುರೋಪಿನ ಯುರೋ, ಫ್ರಾನ್ಸಿನ ಫ್ರಾಂಕ್, ಜಪಾನಿನ ಯೆನ್ ಭಾರತದ ರೂಪಾಯಿ ಮೊದಲಾದವುಗಳು ಗಟ್ಟಿ ನಾಣ್ಯಗಳು. ಕೆಲವು ದೇಶಗಳಲ್ಲಿ ಗಟ್ಟಿ ನಾಣ್ಯಗಳನ್ನು ಮಾತ್ರ ವ್ಯವಹಾರದಲ್ಲಿ ಒಪ್ಪುತ್ತಾರೆ. ಏಷಿಯಾ, ಅರಬ್ ಮೊದಲಾದ ದೇಶಗಳಲ್ಲಿ ಅಮೆರಿಕದ ಡಾಲರ್ ಸರ್ವಮಾನ್ಯವಾಗಿ ಚಲಾವಣೆಯಲ್ಲಿರುವ ಗಟ್ಟಿನಾಣ್ಯವಾಗಿದೆ.

ಹೀಗೆ ಒಂದು ದೇಶದ ನಾಣ್ಯಕ್ಕೆ (ಕರೆನ್ಸಿ) ಇತರ ದೇಶಗಳಿಂದ ಬರುವ ಬೇಡಿಕೆಯ ದೃಷ್ಟಿಯಿಂದ ಆ ನಾಣ್ಯದ ಸರಬರಾಯಿ ಸಾಕಷ್ಟು ಇಲ್ಲದಿದ್ದಾಗ ಆ ನಾಣ್ಯವನ್ನು ಗಟ್ಟಿ ನಾಣ್ಯ ಅಥವಾ ಗಟ್ಟಿ ಕರೆನ್ಸಿ (ಹಾರ್ಡ್ ಕರೆನ್ಸಿ) ಎಂದು ಕರೆಯಲಾಗುತ್ತದೆ. ಎರಡನೆಯ ಮಹಾಯುದ್ಧಾನಂತರದ ವರ್ಷಗಳಲ್ಲಿ ಮುಖ್ಯವಾಗಿ ಅಮೆರಿಕದ ಡಾಲರನ್ನು ಹೀಗೆಂದು ಪರಿಭಾವಿಸಲಾಗಿತ್ತು. ಎರಡನೆಯ ಮಹಾಯುದ್ಧದ ವಿನಾಶಕಾರಿ ಪರಿಣಾಮಗಳಿಂದಾಗಿ ಪಶ್ಚಿಮ ಯುರೋಪಿನ ರಾಷ್ಟ್ರಗಳು ತಮ್ಮ ಸ್ವಂತ ಸರಕುಗಳನ್ನು ಅಧಿಕವಾಗಿ ಉತ್ಪಾದಿಸುವುದಾಗಲೀ ನಿರ್ಯಾತಿಸುವುದಾಗಲೀ ಸಾಧ್ಯವಾಗದಿದ್ದುದರಿಂದ ಅಮೆರಿಕದ ನಿರ್ಯಾತ ಸರಕುಗಳಿಗೆ ಅತೀವವಾದ ಬೇಡಿಕೆ ಪ್ರಾಪ್ತವಾಗಿ, ಅದನ್ನು ಕೊಳ್ಳಲು ಅಗತ್ಯವಾದ ಡಾಲರುಗಳ ಸಂಪಾದನೆ ಇಲ್ಲವಾಗಿ ಈ ಪರಿಸ್ಥಿತಿ ತೀವ್ರವಾಗಿತ್ತು. ಪುನಾರಚನೆ-ಅಭಿವೃದ್ಧಿಗಳಿಗೆ ಹಾತೊರೆಯುತ್ತಿದ್ದ ಅನೇಕ ರಾಷ್ಟ್ರಗಳಿಗೆ ಸಮಾನವಾಗಿದ್ದ ಒಂದು ಲಕ್ಷಣವೆಂದರೆ ಅವುಗಳ ಡಾಲರ್ ಹಸಿವು.

ಒಂದನೆಯ ಮಹಾಯುದ್ಧಕ್ಕೆ ಮೊದಲು ಅಂತಾರಾಷ್ಟ್ರೀಯ ಹಣಕಾಸಿನ ವ್ಯವಹಾರಗಳು ಮುಖ್ಯವಾಗಿ ಪೌಂಡ್ ಸ್ಟರ್ಲಿಂಗ್ ಮೂಲಕ ನಡೆಯುತ್ತಿದ್ದವು. ವಿವಿಧ ದೇಶಗಳ ನಾಣ್ಯಗಳ ವಿನಿಮಯ ದರಗಳು ಚಿನ್ನದ ಆಧಾರದ ಮೇಲೆ ನಿರ್ಧರಿಸಲ್ಪಡುತ್ತಿದ್ದವು. ಆದರೆ ಒಂದನೆಯ ಮಹಾಯುದ್ಧವಾದ ಮೇಲೆ ಸಂಭವಿಸಿದ ಆರ್ಥಿಕ ಘಟನೆಗಳ ಪರಿಣಾಮವಾಗಿ ಹಳೆಯ ಅಂತಾರಾಷ್ಟ್ರೀಯ ಹಣಕಾಸಿನ ವ್ಯವಸ್ಥೆ ಸಡಿಲವಾಯಿತು. ಮುರಿದು ಬಿತ್ತು. ಸುವರ್ಣ ಪ್ರಮಿತಿ ಪರಿತ್ಯಕ್ತವಾಯಿತು. ಅನೇಕ ದೇಶಗಳಲ್ಲಿ ನಿಯಂತ್ರಿತ ನಾಣ್ಯಪದ್ಧತಿ ಜಾರಿಗೆ ಬಂತು.

ಸುವರ್ಣ ಪ್ರಮಿತಿ ಕುಸಿದು ಬಿದ್ದ ಮೇಲೆ ಅಮೆರಿಕದ ಡಾಲರ್ ನಾಣ್ಯ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಹೆಚ್ಚಿನ ಮನ್ನಣೆ ಪಡೆಯಿತು. ಅನೇಕ ದೇಶಗಳು ಡಾಲರಿಗೆ ಪ್ರತಿಯಾಗಿ ತಮ್ಮ ವಸ್ತುಗಳನ್ನು ಮಾರಲು ಒಪ್ಪಿಕೊಂಡುವು. ಏಕೆಂದರೆ ಡಾಲರನ್ನು ಚಿನ್ನಕ್ಕೆ ಯಾವಾಗ ಬೇಕಾದರೂ ಅಧಿಕೃತ ಬೆಲೆಯಲ್ಲಿ ಪರಿವರ್ತಿಸಬಹುದಾಗಿತ್ತು. ಇದೇ ರೀತಿ ಉಳಿದ ದೇಶಗಳ ನಾಣ್ಯಗಳನ್ನು ಚಿನ್ನಕ್ಕೆ ಪರಿವರ್ತಿಸಲಾಗುತ್ತಿರಲಿಲ್ಲ. ಹೀಗೆ ಡಾಲರ್ ಸ್ವಲ್ಪ ಹೆಚ್ಚು ಕಡಿಮೆ ಅಂತಾರಾಷ್ಟ್ರೀಯ ನಾಣ್ಯದ ಸ್ಥಾನಮಾನ ಪಡೆಯಿತು. ಆದರೂ ಎರಡನೆಯ ಮಹಾಯುದ್ಧದ ತನಕ ಸ್ಟರ್ಲಿಂಗ್ ನಾಣ್ಯ ಮಿತಪ್ರದೇಶದಲ್ಲಿ ಮಾನ್ಯತೆ ಪಡೆದಿತ್ತು. ಬ್ರಿಟಿಷ್ ಸಾಮ್ರಾಜ್ಯದ ದೇಶಗಳು. ಈಜಿಪ್ಟ್, ಇರಾಕ್, ಯುರೋಪಿನ ಕೆಲವು ದೇಶಗಳು, ತಮ್ಮ ಅಂತಾರಾಷ್ಟ್ರೀಯ ಹಣಕಾಸಿನ ವಹಿವಾಟನ್ನು ಸ್ಟರ್ಲಿಂಗ್ ಮೂಲಕ ನಡೆಸುತ್ತಿದ್ದವು. ಈ ರಾಷ್ಟ್ರಗಳದು ಸ್ಟರ್ಲಿಂಗ್ ವಲಯ.

ಎರಡನೆಯ ಮಹಾಯುದ್ಧ ಆರಂಭವಾದ ಕೂಡಲೇ ಬ್ರಿಟನ್ನು ಸ್ಟರ್ಲಿಂಗಿನ ಬಳಕೆಯ ಮೇಲೆ ಹತೋಟಿ ವಿಧಿಸಿತು. ಯುದ್ಧದ ಅವಧಿಯಲ್ಲಿ ವಸಾಹತುಗಳಿಂದಲೂ ಅಧಿರಾಜ್ಯಗಳಿಂದಲೂ ಯದ್ಧಕ್ಕೆ ಬೇಕಾದ ಸರಕುಸೇವೆಗಳನ್ನು ಕೊಂಡು ಪ್ರತಿಯಾಗಿ ಅವಕ್ಕೆ ತನ್ನ ನಾಣ್ಯವಾದ ಸ್ಟರ್ಲಿಂಗಿನಲ್ಲಿ ಪಾವತಿ ಮಾಡಿತು. ಆದರೆ ಆ ಸ್ಟರ್ಲಿಂಗನ್ನು ಆ ದೇಶಗಳು ಬಳಸಿ ತಮಗೆ ಬೇಕಾದ ಸರಕು ಸೇವೆಗಳನ್ನು ಕೊಳ್ಳುವಂತಿರಲಿಲ್ಲ. ಅವುಗಳ ಬಳಕೆಯ ಮೇಲೆ ನಿಯಂತ್ರಣ ಹೇರಲಾಗಿತ್ತು. ಮಹಾಯುದ್ಧ ವಿಸ್ತಾರ ಗೊಂಡತೆಲ್ಲಾ ಬ್ರಿಟನ್ನಿಗೆ ಯುದ್ಧಸಾಮಗ್ರಿಗಳು ಒದಗುವುದು ಕಷ್ಟವಾಯಿತು. ಅದಕ್ಕೆ ಆವಶ್ಯಕವಾದ ಯುದ್ಧ ಸಾಮಗ್ರಿಗಳು ಮತ್ತು ಇತರ ನಿತ್ಯೋಪಯೋಗಿ ವಸ್ತುಗಳನ್ನು ಒದಗಿಸುವ ಸಾಮರ್ಥ್ಯವನ್ನು ಪಡೆದಿದ್ದ ದೇಶ ಅಮೆರಿಕ. ಆದರೆ ಅಮೆರಿಕದಿಂದ ತನಗೆ ಬೇಕಾದ ಎಲ್ಲ ಸರಕುಗಳನ್ನೂ ಪಡೆಯಬೇಕಾದರೆ ಡಾಲರ್ ರೂಪದಲ್ಲಿ ಹಣ ಪಾವತಿ ಮಾಡಬೇಕಾಗಿತ್ತು. ಡಾಲರ್ ರೂಪದಲ್ಲಿ ಪಾವತಿ ಮಾಡಲು ಬ್ರಿಟನ್ನಿಗೆ ಶಕ್ತಿ ಇಲ್ಲದಿದ್ದುದರಿಂದ ಡಾಲರನ್ನು ಶೇಖರಿಸುವುದಕ್ಕಾಗಿ ಲಂಡನ್ನಿನಲ್ಲಿ ಪ್ರತ್ಯೇಕ ಏರ್ಪಾಡು ಮಾಡಿತು. ಸ್ಟರ್ಲಿಂಗ್ ವಲಯದ ಎಲ್ಲ ರಾಷ್ಟ್ರಗಳೂ ಡಾಲರ್ ವಲಯಕ್ಕೆ ಮಾಡಿದ ಮಾರಾಟಕ್ಕೆ ಪ್ರತಿಯಾಗಿ ಸಂಪಾದಿಸಿದ ಡಾಲರುಗಳನ್ನೆಲ್ಲ ಈ ಸಾಮ್ರಾಜ್ಯ ಡಾಲರ್ ಸಂಕೋಷಕ್ಕೆ (ಎಂಪೈರ್ ಡಾಲರ್ ಪೂಲ್) ಒಪ್ಪಿಸಬೇಕಾಗಿತ್ತು. ಇಡೀ ಸಂಕೋಷ ರಾಷ್ಟ್ರಗಳ ಪೈಕಿ ಯಾವುದಕ್ಕೆ ಹೆಚ್ಚಿನ ಆವಶ್ಯಕತೆಯಿದೆಯೋ ಅದಕ್ಕೆ ಅಗತ್ಯಾನುಗುಣವಾಗಿ ಡಾಲರನ್ನು ವೆಚ್ಚಮಾಡಲು ಅವಕಾಶ ನೀಡಲಾಗುತ್ತಿತ್ತು. ತಮಗಿಷ್ಟ ಬಂದಂತೆ ಡಾಲರನ್ನು ಪಡೆದು ಅದನ್ನು ಬಳಸುವುದು ಕಷ್ಟವಾಗಿ ಕಂಡು ಬಂದುದರಿಂದ ಬ್ರಿಟಿಷ್ ಸಾಮ್ರಾಜ್ಯದ ದೇಶಗಳು ಮತ್ತು ಯುರೋಪಿನ ಕೆಲವು ದೇಶಗಳು ಡಾಲರನ್ನು ಗಟ್ಟಿ ನಾಣ್ಯ ಎಂದು ಕರೆದವು. ಇತರ ಅನೇಕ ದೇಶಗಳ ನಾಣ್ಯಗಳು ಹೇರಳವಾಗಿ ದೊರೆಯುತ್ತಿದ್ದುದರಿಂದ ಮತ್ತು ಅವನ್ನು ಸುಲಭವಾಗಿ ಪಡೆಯಬಹುದಾಗಿದ್ದುದರಿಂದ ಅವು ಮೃದು ನಾಣ್ಯಗಳೆನಿಸಿ ಕೊಂಡಿದ್ದುವು (ಸಾಫ್ಟ್ ಕರೆನ್ಸೀಸ್).

ಎರಡನೆಯ ಮಹಾಯುದ್ಧವಾದ ಮೇಲೂ ಈ ಪರಿಸ್ಥಿತಿ ಮುಂದುವರಿಯಿತು. ಅನೇಕ ಐರೋಪ್ಯ ರಾಷ್ಟ್ರಗಳ ಆರ್ಥಿಕತೆ ಯುದ್ಧದಿಂದಾಗಿ ಜರ್ಝರಿತವಾಗಿತ್ತು. ಅವುಗಳ ಆರ್ಥಿಕ ಪುನಾರಚನೆಗೆ ಬೃಹದ್ಗಾತ್ರದಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳಬೇಕಾಗಿತ್ತು. ಯುದ್ಧ ಮುಗಿದ ಮೇಲೆ ಕೆಲವು ವರ್ಷಗಳ ತನಕ ಯುರೋಪಿನ ದೇಶಗಳಿಗೆ ಬೇಕಾದ ಸರಕುಗಳನ್ನು ಸರಬರಾಯಿ ಮಾಡುವ ಶಕ್ತಿ ಇದ್ದದ್ದು ಅಮೆರಿಕಕ್ಕೆ ಮಾತ್ರ. ಅಮೆರಿಕದಿಂದ ಪಡೆದ ವಸ್ತುಗಳಿಗೆ ಪ್ರತಿಯಾಗಿ ಡಾಲರ್ ರೂಪದಲ್ಲಿ ಹಣ ಪಾವತಿ ಮಾಡುವುದು ಸಾಧ್ಯವಿಲ್ಲವಾಗಿದ್ದ ಪಶ್ಚಿಮ ಐರೋಪ್ಯ ದೇಶಗಳು ಅಮೆರಿಕದ ನೆರವನ್ನು ಕೋರಿದುವು. ಮಾರ್ಷಲ್ ಯೋಜನೆಯನ್ನು ಅಮೆರಿಕ ಜಾರಿಗೆ ತಂದದ್ದು ಇದಕ್ಕಾಗಿ. ಈ ಯೋಜನೆಯ ಅಡಿಯಲ್ಲಿ ಯುರೋಪಿನ ರಾಷ್ಟ್ರಗಳಿಗೆ ಅದು ಆರ್ಥಿಕ ನೆರವು ನೀಡಿತು. ಇದರಿಂದ ಆ ಐರೋಪ್ಯ ದೇಶಗಳಿಗೆ ಡಾಲರ್ ಸಂಗ್ರಹಿಸಿಕೊಳ್ಳುವ ತೊಂದರೆ ತಪ್ಪಿ, ತಮಗೆ ಬೇಕಾದ ವಸ್ತುಗಳನ್ನು ಪಡೆಯುವ ಅನುಕೂಲ ದೊರೆಯಿತು. ಡಾಲರ್‌ಗಿದ್ದ ಈ ವಿಶೇಷ ಬೇಡಿಕೆಯಿಂದಾಗಿ ಅದು ಗಟ್ಟಿ ನಾಣ್ಯ ಎನಿಸಿಕೊಂಡಿತ್ತು.

ಅಮೆರಿಕದ ಡಾಲರ್ ನಾಣ್ಯವನ್ನು ಚಿನ್ನಕ್ಕಾಗಲಿ ಪ್ರಪಂಚದ ಯಾವ ದೇಶದ ನಾಣ್ಯಕ್ಕೇ ಆಗಲಿ ಪರಿವರ್ತಿಸಿಕೊಳ್ಳಬಹುದು. ಆದ್ದರಿಂದ ಅಮೆರಿಕದ ಡಾಲರನ್ನು ಪಡೆದಿದ್ದರೆ ಪ್ರಪಂಚದ ಯಾವುದೇ ಭಾಗದಲ್ಲಾದರೂ ವ್ಯವಹಾರ ನಡೆಸಬಹುದೆಂಬ ಅಭಿಪ್ರಾಯವಿದೆ.

ಒಂದು ನಾಣ್ಯ ಗಟ್ಟಿ ಎನ್ನಲು ಅದಕ್ಕೆ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿರುವ ಸ್ಥಾನಮಾನಗಳು ಮುಖ್ಯಕಾರಣ.ಏನೇ ಆದರೂ ಸದ್ಯದಲ್ಲಿ ಅಮೆರಿಕದ ಡಾಲರ್‌ಗೆ ಇನ್ನೂ ಜಗತ್ತಿನ ಮಾರುಕಟ್ಟೆಯಲ್ಲಿ ಮಹತ್ತ್ವದ ಸ್ಥಾನಮಾನವಿದ್ದೇ ಇದೆ. ಭಾರತದಲ್ಲಂತೂ ಅಮೆರಿಕದ ಡಾಲರ್ ಗಟ್ಟಿ ನಾಣ್ಯವಾಗಿದೆ. ಅಲ್ಲದೆ ಒಂದು ದೇಶದ ನಾಣ್ಯ ಗಟ್ಟಿಯೋ ಅಥವಾ ಮೃದು/ಸುಲಭ ನಾಣ್ಯವೋ ಎಂದು ಇದಮಿತ್ಥಂ ಎಂದು ಹೇಳುವಂತಿಲ್ಲ. ಇಂದು ಮೃದು ಅಥವಾ ಸುಲಭ ನಾಣ್ಯವಾಗಿದ್ದುದು ಪರಿಸ್ಥಿತಿಯ ಅಥವಾ ಹಲವಾರು ಆರ್ಥಿಕ, ರಾಜಕೀಯ ಕಾರಣಗಳಿಂದ ಗಟ್ಟಿ ನಾಣ್ಯವಾಗಬಹುದು. ಅದೇ ರೀತಿ ಇಂದು ಗಟ್ಟಿ

ನಾಣ್ಯವಾಗಿದ್ದುದು ಆರ್ಥಿಕ ಕುಸಿತವೋ ರಾಜಕೀಯ ಅಸ್ಥಿರತೆಯೋ ಜಗತ್ತಿನ ಮಾರುಕಟ್ಟೆಯಲ್ಲಿಯ ಅದರ ವಿಫಲತೆಯ ಕಾರಣದಿಂದಲೋ ನಾಳೆ ಸುಲಭ ನಾಣ್ಯವಾಗಬಹುದು. ಉದಾಹರಣೆಗೆ ಸಂಯುಕ್ತ ರಶಿಯಾ ಗಣರಾಜ್ಯ ಛಿದ್ರಗೊಂಡು ಅದರ ನಾಣ್ಯ ಇಂದು ಗಟ್ಟಿನಾಣ್ಯ ಸ್ಥಾನದಿಂದ ಇಳಿದು ಹೋಗಿರುವುದು ಎಲ್ಲರಿಗೂ ಗೊತ್ತು. ಮೃದು ಅಥವಾ ಸುಲಭ ಕರೆನ್ಸಿ (ನಾಣ್ಯ) ಎಂದರೆ ಒಂದು ದೇಶದ ನಾಣ್ಯವು ಜಗತ್ತಿನ ಮಾರುಕಟ್ಟೆಯಲ್ಲಿ ಮಾನ್ಯವಾಗದ ಆದರೆ ಸುಲಭವಾಗಿ ದೊರಕುವಂತಹ ನಾಣ್ಯ.

ಜಗತ್ತಿನ ಮಾರುಕಟ್ಟೆಯಲ್ಲಿ ಭಾರತ, ಶ್ರೀಲಂಕಾ, ಬಾಂಗ್ಲಾ, ಪಾಕಿಸ್ತಾನ ಮೊದಲಾದ ದೇಶಗಳ ನಾಣ್ಯವು ಮೃದು/ಸುಲಭ ಕರೆನ್ಸಿಗಳಾಗಿವೆ. (ಎನ್.ಪಿ.ಎಸ್.)

**ಗಡಂಗು :** ಗಿರಣಿ, ಕಾರ್ಖಾನೆ ಹಾಗೂ ವ್ಯಾಪಾರಿಗಳು ಮಾರಾಟದ ಸರಕನ್ನು ಅಧಿಕ ಪರಿಮಾಣದಲ್ಲಿ ದಾಸ್ತಾನು ಮಾಡುವ ಆಲಯ ಅಥವಾ ಮಳಿಗೆ. ಗೋದಾಮು (ಗೋಡೌನ್, ವೇರ್ ಹೌಸ್). ಮಾರಾಟಕ್ಕಾಗಿ ಅಥವ ವಿತರಣೆಗಾಗಿ ಅಣಿಯಾಗಿರುವ ಸರಕನ್ನು ವ್ಯವಸ್ಥಿತವಾಗಿ ಶೇಖರಿಸಿಡುವ ಸ್ಥಳ, ಕೊಠಡಿ, ಕಟ್ಟಡ.

ಆಯಾ ದಿನದ ಬೇಡಿಕೆಗನುಗುಣವಾಗಿ ಸರಕನ್ನು ಉತ್ಪಾದಿಸುವುದು ಇಲ್ಲವೆ ಕೊಳ್ಳುವುದು ಆದರ್ಶ ವ್ಯವಸ್ಥೆ. ಆದರೆ ಇದು ವಾಸ್ತವವಾಗಿ ಸಾಧ್ಯವಿಲ್ಲ. ಉತ್ಪಾದನೆ ಸರಳ ಹಾಗೂ ಅವಿಚ್ಛಿನ್ನವಾಗಿರುವ ಕೈಗಾರಿಕೆಗಳಲ್ಲಿರುವಲ್ಲಿ ಈ ಆದರ್ಶಸ್ಥಿತಿಯನ್ನು ಮುಟ್ಟಲು ಪ್ರಯತ್ನಿಸಬಹುದು. ಉತ್ಪಾದಿತ ಸರಕುಗಳ ಬೇಡಿಕೆ ಹಾಗೂ ಬೆಲೆಗಳಲ್ಲಿ ಏರಿಳಿತವಿರುತ್ತದೆ. ಒಂದೆಡೆ ಉತ್ಪಾದನೆಯಾದ ಸರಕನ್ನು ಬೇಡಿಕೆಗನುಗುಣವಾಗಿ ದೂರ ದೂರಕ್ಕೆ ವಿತರಣೆ ಮಾಡಬೇಕಾಗುತ್ತದೆ. ಅನುಕೂಲಕರ ಧಾರಣೆವಾಸಿಯಿರುವಾಗ ಸರಕನ್ನು ಕೊಂಡು ಶೇಖರಿಸಿಟ್ಟುಕೊಳ್ಳುವುದು ಒಳ್ಳೆಯದು. ಗಡಂಗುಗಳಲ್ಲಿ ಇಂಥ ಸರಕನ್ನು ಶೇಖರಿಸಲಾಗುತ್ತದೆ.

ವಿಕ್ರಯದಾರರು ತಮ್ಮ ಬಿಕರಿ ಮಳಿಗೆಗಳಲ್ಲಿ ವಿವಿಧ ಬಗೆಯ ಸರಕನ್ನು ಓರಣವಾಗಿ ಇಡಬೇಕಾಗುತ್ತದೆ. ಅಲ್ಲಿ ಪ್ರತಿ ಬಗೆಯ ಸರಕನ್ನು ಸ್ವಲ್ಪ ಪರಿಮಾಣದಲ್ಲಿ ಮಾತ್ರ ಇಡಲು ಸಾಧ್ಯ. ಅಲ್ಲಿಯ ಸರಕು ತೀರಿದಂತೆಲ್ಲಾ ಅದನ್ನು ಗಡಂಗಿನಿಂದ ತಂದು ತುಂಬಿಕೊಳ್ಳುತ್ತಾರೆ. ಅಧಿಕ ಗಾತ್ರದ ಬೇಡಿಕೆಯನ್ನು ಗಡಂಗಿನಿಂದಲೇ ನೇರವಾಗಿ ಪೂರೈಸುತ್ತಾರೆ. ಕೆಲವು ಠೋಕು ವ್ಯಾಪಾರಿಗಳು ತಮ್ಮ ಬಿಕರಿ ಮಳಿಗೆಯಲ್ಲಿ ಸರಕಿನ ಮೋಸ್ತ್ರಗಳನ್ನು (ಸ್ಯಾಂಪಲ್) ಮಾತ್ರ ಇಟ್ಟುಕೊಂಡಿದ್ದು ಖರೀದಿದಾರರ ಬೇಡಿಕೆಗಳನ್ನೆಲ್ಲ ಗಡಂಗಿನಿಂದಲೇ ನೇರವಾಗಿ ಪೂರೈಸುತ್ತಾರೆ.

ಗಡಂಗು ಬಿಕರಿ ಮಳಿಗೆಗಳ ಹೊಂದಿಕೊಂಡೇ ಇರಬಹುದು. ಚಿಲ್ಲರೆ ವ್ಯಾಪಾರಿಗಳಿಗೆ ಇದು ತುಂಬ ಅನುಕೂಲ. ಕೆಲವು ವೇಳೆ ಬಿಕರಿ ಮಳಿಗೆ ಕೇಂದ್ರಸ್ಥಾನದಲ್ಲಿದ್ದು ಗಡಂಗುಗಳು ದೂರದಲ್ಲಿರುತ್ತವೆ. ಸ್ಥಳಾಭಾವ ಮತ್ತು ಮಿತವ್ಯಯೋದ್ದೇಶ ಇದಕ್ಕೆ ಮುಖ್ಯ ಕಾರಣಗಳು,

ಗಡಂಗು ಭದ್ರವಾದ ಕಟ್ಟಡವಾಗಿರಬೇಕು. ಬೆಂಕಿ, ಮಳೆ, ಗಾಳಿ, ಇಲಿ, ಹೆಗ್ಗಣ, ಕಳ್ಳಕಾಕರ ದಾಳಿ ಇವಕ್ಕೆ ತುತ್ತಾಗದಂತಿರಬೇಕು.

ಗಡಂಗಿನಲ್ಲಿ ಸಂಗ್ರಹಿಸಿಲಾಗಿರುವ ಸರಕನ್ನು ಆಧಾರವಾಗಿಟ್ಟು ಬ್ಯಾಂಕಿನಿಂದ ಅಲ್ಪಾವಧಿ ಸಾಲ ಪಡೆಯುವುದು ಸಾಮಾನ್ಯ. ಇದರಿಂದ ವ್ಯವಹಾರಕ್ಕೆ ಅಗತ್ಯವಾದ ಚಲ ಬಂಡವಾಳ ಸುಲಭವಾಗಿ ದೊರೆಯುತ್ತದೆ. ಸಂಗ್ರಹಿಸಿರುವ ಸರಕಿನ ಮಾರುಕಟ್ಟೆ ಬೆಲೆಯನ್ನು ಬ್ಯಾಂಕು ಅಂದಾಜು ಮಾಡಿ ಅದರ ಮೇಲೆ ನಿರ್ದಿಷ್ಟ ಶೇಕಡವಾರು ಮೊಬಲಗನ್ನು ಸಾಲ ಕೊಡುತ್ತದೆ. ಆಗ ಬ್ಯಾಂಕೇ ಗಡಂಗಿಗೆ ಬೀಗಹಾಕಿ ಬೀಗದ ಕೈಯನ್ನು ಇಟ್ಟುಕೊಳ್ಳುತ್ತದೆ. ಈ ಬಗೆಯ ಸಾಲಕ್ಕೆ ಕೀಲಿಕೈಸಾಲ ಅಥವಾ ಗೋದಾಮು ಸಾಲ ಎನ್ನುತ್ತಾರೆ. ಬ್ಯಾಂಕಿನ ಅನುಮತಿಯೊಡನೆ ಅಂಥ ಗಡಂಗಿನೊಳಕ್ಕೆ ಹೆಚ್ಚಿನ ಸರಕನ್ನು ಸೇರಿಸುವುದೂ ಇರುವ ಸರಕನ್ನು ಹೊರತೆಗೆದು ವಿಕ್ರಯಿಸುವುದೂ ಸಾಧ್ಯವಿದೆ. ಎರಡನೆಯ ಸಂದರ್ಭದಲ್ಲಿ ಕಡಿಮೆಯಾಗುವ ಸರಕಿನ ಪರಿಮಾಣಕ್ಕೆ ಅನುಸಾರವಾಗಿ ಸಾಲವನ್ನು ಮರುಪಾವತಿ ಮಾಡುವುದು ಅಗತ್ಯವಾಗುತ್ತದೆ. (ಡಿ.ಎನ್.ಎಸ್.ಎಂ.)

**ಗಡಕರೀ, ರಾಮ ಗಣೇಶ :** 1885–1919. ಮಹಾರಾಷ್ಟ್ರದ ಸುಪ್ರಸಿದ್ಧ ಕವಿ, ನಾಟಕಕಾರ ಮತ್ತು ಹಾಸ್ಯಲೇಖಕ. ಗುಜರಾತಿನ ನವಸಾರಿ ಎಂಬಲ್ಲಿ ಹುಟ್ಟಿದ. ಹತ್ತು ವರ್ಷ ತುಂಬುವುದರಲ್ಲಿ ತಂದೆ ಕಾಲವಾದರು. ಅನಂತರದ ವಿಷಮ ಪರಿಸ್ಥಿತಿಯನ್ನೆದುರಿಸಿ 19ನೆಯ ವಯಸ್ಸಿನಲ್ಲಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಕಾಲೇಜು ಸೇರಿದ. ಕಾಲೇಜು ವಿದ್ಯೆ ಹಿಡಿಸಲಿಲ್ಲವಾದ್ದರಿಂದ ಕಿರ್ಲೋಸ್ಕರ್ ನಾಟಕ ಮಂಡಳಿಯಲ್ಲಿ ಚಿಕ್ಕಮಕ್ಕಳ ಶಿಕ್ಷಕನಾಗಿ ಸೇರಿದ. ಅಲ್ಲಿ ಕೊಲ್ಹಟ್ಕರರ ಸ್ನೇಹ ಗಳಿಸಿ ನಾಟಕಮಂಡಳಿಯ ಜೊತೆಗೆ ಊರಿಂದೂರಿಗೆ ಪ್ರವಾಸ ಮಾಡುತ್ತ ಅನೇಕ ವಿಷಯಗಳ ಬಗ್ಗೆ ಅನುಭವ ಪಡೆದು ಕವನಗಳನ್ನೂ ವಿನೋದಪರ ಲೇಖನ ಗಳನ್ನೂ ಬರೆದು ಪ್ರಸಿದ್ಧಿ ಹೊಂದಿದ.

1911–16 ರ ಐದು ವರ್ಷಗಳ ಅವಧಿಯಲ್ಲಿ ಈತನ ಉತ್ಕೃಷ್ಟ ಕವನಗಳು ಬೆಳಕಿಗೆ ಬಂದವು. ಗುಲಾಬಿ ಕೋಡೆ, ರಾಜಹಂಸ, ಮುರಲೀ, ಘುಂಗುರವಾಳಾ ಮುಂತಾದ ಕವನಗಳು ಸರಸವಾಗಿವೆ. ಆಧುನಿಕ ಕವಿ ಕೇಶವಸುತ ಈತನನ್ನು ತುಂಬ ಹೊಗಳಿದ್ದಾನೆ. ಗಡಕರೀ ಕೇಶವಸುತನ ಶಿಷ್ಯನೂ ಆಗಿದ್ದ. ಈತನ ಮರಣಾನಂತರ ಈತನ ಎಲ್ಲ ಕವನಗಳೂ ವಾಗ್ವೈಜಯಂತೀ ಎಂಬ ಸಂಕಲನದಲ್ಲಿ ಪ್ರಕಟವಾಗಿವೆ.

ಸಂಪೂರ್ಣ ಬಾಳಕಾರಾಮ ಎಂಬುದು ಈತನ ವಿನೋದಪರ ಲೇಖನಗಳ ಸಂಗ್ರಹ. ಸಕಾಳಚಾ ಅಭ್ಯಾಸ, ಮೂಕನಾಯಕ, ದೀಡಪಾನೀ ಮುಂತಾದವು ಈತನ ಚಿಕ್ಕ ಪ್ರಹಸನಗಳು.

ಗಡಕರೀ ಹೆಚ್ಚು ಪ್ರಸಿದ್ಧಿ ಹೊಂದಿದ್ದು ನಾಟಕಕಾರನಾಗಿ, ಪ್ರೇಮವಿವಾಹ, ಪುನರ್‌ವಿವಾಹ ಮತ್ತು ವಿಷಮವಿವಾಹಗಳಲ್ಲಿ, ಬರುವ ಸಮಸ್ಯೆಗಳನ್ನುಪಯೋಗಿಸಿಕೊಂಡು

ಪ್ರೇಮಸಂನ್ಯಾಸ, ಪತಿವ್ರತೆಯ ಪ್ರಭಾವವನ್ನು ತೋರಿಸುವ ಪುಣ್ಯಪ್ರಭಾವ, ಕುಡಿತದ ದುಷ್ಪರಿಣಾಮವನ್ನು ತೋರಿಸುವ ಏಕಚ ಪ್ಯಾಲ್ಯಾ, ಯಾವುದೇ ಶಿಷ್ಟವಿಷಯವನ್ನು ಪ್ರತಿಪಾದಿಸುವ ಭಾವಬಂಧನ– ಇವು ಈತನ ಶ್ರೇಷ್ಠನಾಟಕಗಳು. ರಾಜಸಂನ್ಯಾಸ ಸಂಭಾಜಿಯ ಚರಿತ್ರೆ ಮತ್ತು ವೇಡ್ಯಾಂಚಾ ಸಂಸಾರ (ಹುಚ್ಚರ ಸಂಸಾರ)–ಇವು ಪೂರ್ಣ ಗೊಳ್ಳದ ಇತರ ನಾಟಕಗಳು. ನಾಟಕಗಳಿಂದ ಈತ ಮರಾಠೀ ಸಾಹಿತ್ಯದಲ್ಲಿ ಅಮಿತ ಲೋಕಪ್ರಿಯತೆಯನ್ನು ಗಳಿಸಿದ. ತರುಣ ಪೀಳಿಗೆಯನ್ನು ಆಕರ್ಷಿಸುವ ಗುಣ ಈತನ ಲೇಖನಗಳಲ್ಲಿದೆ. ಸರಸ ಪ್ರೇಮಗೀತೆಗಳು, ರಹಸ್ಯಪೂರ್ಣವಾದ ನಾಟ್ಯಕಥಾನಕಗಳು, ಕರುಣ–ಹಾಸ್ಯಗಳ ಪರಮೋತ್ಕರ್ಷವನ್ನು ಸಾಧಿಸುವ, ಹೃದಯವನ್ನು ಕದಡಿಸುವ ನಾಟಕದ ಪ್ರಸಂಗಗಳು, ನಿರ್ಗಳವಾದ ಆಲಂಕಾರಿಕ ಭಾಷೆ ಇವುಗಳ ಮೂಲಕ ಈತ ತರುಣ ಪೀಳಿಗೆಯ ಕಣ್ಣು ತೆರೆಸಿದ್ದಾನೆ. ಈತ ಯಾವುದೇ ಉಪದೇಶವನ್ನೂ ಆದರ್ಶಗಳನ್ನೂ ಬೋಧಿಸಹೊರಟವನಲ್ಲ. ಉಜ್ಜ್ವಲ ಕಲ್ಪಕತೆ ಮತ್ತು ಉತ್ಕಟ ಭಾವನೆಗಳನ್ನು ಮೂಡಿಸುವುದರ ಮೂಲಕ ಈತ ಮರಾಠಿ ಸಾಹಿತ್ಯದ ಅತ್ಯಂತ ಜನಪ್ರಿಯ ಬರೆಹಗಾರನಾದ. ಈತನ ಗ್ರಂಥಗಳ ವಿಮರ್ಶನ ಸಾಹಿತ್ಯ ವಿಪುಲವಾಗಿದೆ. ಇಷ್ಟು ಸಾಹಿತ್ಯ ನಿರ್ಮಾಣ ಮರಾಠಿಯಲ್ಲಿ ಬೇರೆ ಯಾವ ಸಾಹಿತಿಯನ್ನು ಕುರಿತೂ ಇಲ್ಲಿಯ ತನಕ ಬಂದಿಲ್ಲ. ಇದು ಈತನ ಪ್ರಾಮುಖ್ಯಕ್ಕೆ ಸಾಕ್ಷಿ. *

**ಗಡಿಯಾರ :** ಕಾಲವನ್ನು ನಿಖರವಾಗಿ ಅಳೆದು ಸೂಚಿಸಲು ಬಳಸುವ ಯಂತ್ರ. ಎಲ್ಲ ಗಡಿಯಾರಗಳೂ ಕಿಸೆಗಡಿಯಾರಗಳೂ (ಪಾಕೆಟ್ ವಾಚಸ್) ಕೈಗಡಿಯಾರಗಳೂ (ರಿಸ್ಟ್ ವಾಚಸ್) ಪ್ರಧಾನವಾಗಿ ಕಾಲಸೂಚಕಯಂತ್ರಗಳು. ಇವು ಕಾರ್ಯನಡೆಸುವುದು ಸ್ಥಿರ ದರದಲ್ಲಿ ಪುನರಾವರ್ತಿಸುವ ಒಂದು ಯಾಂತ್ರಿಕ ಸಾಧನದ ನೆರವಿನಿಂದ. ಉದಾಹರಣೆಗೆ ನಾವು ಮನೆಯಲ್ಲಿ ಬಳಸುವ ತೂಗುಗಡಿಯಾರ. ಇದರಲ್ಲಿ ಆಂದೋಲಿಸುತ್ತಿರುವ ಲೋಲಕ ಸ್ಥಿರದರದಲ್ಲಿ ಪುನರಾವರ್ತಿಸಿ ಕಾಲಗಣನೆಮಾಡುತ್ತದೆ. ಈ ಗಣನೆಯನ್ನು ಎಣಿಸಿ ದಿವಸದ ಯಾವುದೇ ಮುಹೂರ್ತದಲ್ಲಿ ಕಾಲ ಎಷ್ಟೆಂದು ಸೂಚಿಸಲು ಗಡಿಯಾರದ ಇತರ ಯಂತ್ರಭಾಗಗಳೂ ಮುಖಫಲಕವೂ ಮುಳ್ಳುಗಳೂ ಸಹಾಯಮಾಡುತ್ತವೆ. ಅಲ್ಲಿಗೆ ಕಾಲವೆಂಬ ಸ್ಥಿರದರದಿಂದ ಪ್ರವಹಿಸುವ ವಿದ್ಯಮಾನವನ್ನು ಅದೇ ದರದಿಂದ ಕಾರ್ಯವೆಸಗುವ ಒಂದು ಯಂತ್ರರಚನೆಗೆ ಲಗತ್ತಿಸಿ ಅದರ ನೆರವಿನಿಂದ ಕಾಲಗಣನೆ ಮಾಡುವುದೇ ಎಲ್ಲ ಗಡಿಯಾರಗಳ ಮೂಲತತ್ತ್ವ ಎಂದು ವೇದ್ಯವಾಗುತ್ತದೆ. ನಿಸರ್ಗದಲ್ಲಿ ಕಾಲಪ್ರವಾಹದ ಅರಿವು ನಮಗಾಗುವುದು ಸೂರ್ಯ ಚಂದ್ರ ನಕ್ಷತ್ರಗಳ ಉದಯಾಸ್ತಮಾನಗಳಿಂದ, ಹಗಲು ರಾತ್ರಿಗಳೆಂಬ ನಿರಂತರ ಬದಲಾವಣೆಗಳಿಂದ ಹಾಗೂ ಋತುಭೇದಗಳಿಂದ. ಆದ್ದರಿಂದ ಯಾವ ಗಡಿಯಾರವೇ ಆಗಿರಲಿ ಅಂತಿಮವಾಗಿ ನಿಸರ್ಗದ ಕಾಲಸೂಚಕ ವಿದ್ಯಮಾನಗಳನ್ನು ಹೊಂದಿಕೊಂಡು ಇರಬೇಕಾದದ್ದು ಅಗತ್ಯ.

**ನೈಸರ್ಗಿಕ ಸಾಧನಗಳು :** ಪುರಾತನ ಕಾಲದಲ್ಲಿ ಮನುಷ್ಯ ಗುಹಾವಾಸಿಯಾಗಿದ್ದ ದಿನಗಳಂದು ಕಾಲದ ಎಣಿಕೆ ಬಲು ಸರಳವಾಗಿತ್ತು. ಹಸಿವು, ಬಳಲಿಕೆ, ನಿದ್ರೆ ಮೊದಲಾದ ದೈಹಿಕ ಲಕ್ಷಣಗಳೂ ಹಗಲುರಾತ್ರಿಗಳೆಂಬ ನೈಸರ್ಗಿಕ ಬದಲಾವಣೆಗಳೂ ಅಂದಿನ

ಕಾಲಸೂಚಕ ಘಟನೆಗಳಾಗಿದ್ದವು. ಬಹುಶಃ ಅತಿ ಪೂರ್ವ ಕಾಲದ ಮತ್ತು ಅತ್ಯಂತ ಸರಳವಾದ ಕಾಲಮಾಪಿಯೆಂದರೆ ಛಾಯಾ ಗಡಿಯಾರ (ಸನ್ ಡಯಲ್). ಈ ಉಪಕರಣದಲ್ಲಿ ಹಗಲಿನ ತಾಸುಗಳನ್ನು ಗುರುತಿಸಿರುವ ಮಟ್ಟವಾದ ಮೇಲ್ಮೈ ಮೇಲೆ ಅದರ ನೆರಳಿನ ಚಲನೆಯಿಂದ ಕಾಲವನ್ನು ತಿಳಿದುಕೊಳ್ಳಬಹುದು. ಪ್ರತಿ ಹಗಲೂ ಸುಮಾರು ಒಂದೇ ಕಾಲದಲ್ಲಿ ತನ್ನ ಗುಹೆಯ ಮುಂದಿರುವ ಮರಳಿನ ಮೇಲೆ ಮರದ ಕಾಂಡದ ನೆರಳು ಸರಿಯುತ್ತಿದ್ದುದನ್ನು ಬಹುಶಃ ಯಾವನೋ ಒಬ್ಬ ಅತಿ ಪುರಾತನ ಮನುಷ್ಯ ಗುರುತಿಸಿರಬೇಕು. ತನ್ನ ನಿತ್ಯಕರ್ಮಗಳನ್ನು ಆಯಾ ಕಾಲಕ್ಕೆ ಸರಿಯಾಗಿ ಮಾಡಲು ಈ ನೆರಳಿನ ಸ್ಥಾನವನ್ನು ಅನುಸರಿಸ ಬಹುದೆಂದು ಅವನಿಗೆ ಹೊಳೆದಿರ ಬೇಕು. ಇದೇ ಛಾಯಾಗಡಿಯಾರದ ಉಗಮ. ಮುಂದೆ ಮನುಷ್ಯನಲ್ಲಿ ಕಾಲದ ಪ್ರಜ್ಞೆ ಸುಧಾರಿಸಿದಂತೆ ಛಾಯಾಗಡಿಯಾರಗಳಲ್ಲಿ ಮಾರ್ಪಾಡುಗಳೂ ಸೂಕ್ಷ್ಮ ಸುಧಾರಣೆಗಳೂ ಬಂದುವು. ಹೀಗೆ ಸಮಅಂತರವಿರುವ ತಾಸುಗಳನ್ನು ಗುರುತಿಸುವ ಛಾಯಾಗಡಿಯಾರ ಗಳನ್ನು ನಿರ್ಮಿಸಲು ಮನುಷ್ಯ ಪ್ರಯತ್ನಿಸಿದ. ಋತುಗಳು ವ್ಯತ್ಯಾಸವಾದಂತೆಲ್ಲ ಸೂರ್ಯನಿಂದ ಉಂಟಾದ ನೆರಳು ಪ್ರತಿನಿತ್ಯವೂ ಸ್ವಲ್ಪ ವ್ಯತ್ಯಾಸವಾಗುತ್ತದೆಂದೂ ಅದರಿಂದ ತಾಸುಗಳ ನಡುವಣ ಅವಧಿ ವ್ಯತ್ಯಸ್ತಗೊಳ್ಳುವುದೆಂದೂ ಅವನಿಗೆ ತಿಳಿಯಿತು. ಈ ವಿಚಲನೆಯನ್ನು ಸರಿದೂಗಿಸಲು ಛಾಯಾಗಡಿಯಾರ ದಲ್ಲಿ ಯುಕ್ತ ಮಾರ್ಪಾಡುಗಳನ್ನು ಮಾಡಲಾಯಿತು. ಆದರೂ ಛಾಯಾಗಡಿಯಾರ ನಿಷ್ಕೃಷ್ಟ ಕಾಲಸೂಚಕವಾಗಿ ಪರಿಣಮಿಸಲಿಲ್ಲ. ಬಿಸಿಲು ಬೀಳದ ಪ್ರದೇಶಗಳಲ್ಲಿ ಅಥವಾ ಬೀಳದ ಹಗಲುಗಳಲ್ಲಿ ಇವು ನಿರುಪಯುಕ್ತ ಆದ್ದರಿಂದ ಕಾಲವನ್ನು ಸಮಂಜಸವಾಗಿ ತಿಳಿಸುವವರು ಸೂರ್ಯನ ಮೇಲೆ ಅವಲಂಬಿತವಾಗದೇ ಇರುವ ಗಡಿಯಾರಗಳನ್ನು ನಿರ್ಮಿಸಲು ಉದ್ಯುಕ್ತರಾದರು. ಜಲ ಮರಳು ತೈಲ ಗಡಿಯಾರಗಳೂ ಉರಿ ತಾಕಿಸಿದ ಹಗ್ಗ ಮೇಣದ ಬತ್ತಿಗಳೂ ಇಂಥವು **(ನೋಡಿ– ಜಲಗಡಿಯಾರ, ಛಾಯಾಗಡಿಯಾರ, ಮರಳುಗಡಿಯಾರ)**.



ಮಧುರಸ್ವನ ಗಡಿಯಾರ–ಮೈಸೂರಿನ ಶ್ರೀಜಯಚಾಮರಾಜೇಂದ್ರ ಚಿತ್ರಶಾಲೆಯಲ್ಲಿದೆ

**ಯಾಂತ್ರಿಕ ಸಾಧನಗಳು :** ನೈಸರ್ಗಿಕ ಘಟನೆಗಳನ್ನು ಅವಲಂಬಿಸಿ ರಚಿಸಿದ ಕಾಲಮಾಪನಸಾಧನಗಳೆಲ್ಲವೂ ಸೀಮಿತ ಉದ್ದೇಶವನ್ನು ಪರಿಮಿತವಲಯದೊಳಗೆ ಪೂರೈಸುತ್ತಿದ್ದವು ಮಾತ್ರ. ಅವು ಸೂಚಿಸುತ್ತಿದ್ದ ಕಾಲವಾದರೂ ತೀರ ಸ್ಥೂಲ. ವಿಜ್ಞಾನದ ಇತರ ಭಾಗಗಳು ಕ್ರಮೇಣ ಬೆಳೆದು ಬಂದಂತೆ ಯಾಂತ್ರಿಕ ಸಾಧನವೊಂದಕ್ಕೆ ಕಾಲಮಾಪನವನ್ನು ಲಗತ್ತಿಸುವುದು ಸರಿಯಾದ ಕ್ರಮ ಎಂದು ಮಾನವನಿಗೆ ಸ್ಫುರಿಸಿರಬೇಕು. ಈ ರೀತಿ 13ನೆಯ ಶತಮಾನದ ವೇಳೆಗೆ ಯಾಂತ್ರಿಕ ಗಡಿಯಾರ, ಇಂದಿನ ಅತಿ ನಾಜೂಕು ಗಡಿಯಾರಗಳ ಪೂರ್ವಜ, ಮೊತ್ತಮೊದಲಿಗೆ ರಂಗಸ್ಥಳ ಪ್ರವೇಶಿಸಿತು. ಆ ಶತಮಾನದಲ್ಲಿ ಯುರೋಪ್ ಖಂಡದಲ್ಲೆಲ್ಲ ಗೋಪುರ ಗಡಿಯಾರಗಳು (ಟವರ್ ಕ್ಲಾಕ್ಸ್) ಸಾರ್ವತ್ರಿಕವಾಗಿ ಕಾಣಬರುತ್ತಿದ್ದುವು. ಕ್ಲೋಷೆ (ಅರ್ಥ : ಹೊಡೆವ ಗಂಟೆ) ಎಂಬ ಫ್ರೆಂಚ್ ಪದದಿಂದ ಕ್ಲಾಕ್ ಎಂಬ ಪದ ಉತ್ಪನ್ನಗೊಂಡಿತು. ಈ ಗಡಿಯಾರಗಳು ನಿರ್ದಿಷ್ಟ ಅಂತರಗಳಲ್ಲಿ ತಾಸುಗಳನ್ನು ಹೊಡೆದು ಜನರಿಗೆ ಕಾಲದ ಅರಿವನ್ನು ಮೂಡಿಸುತ್ತಿದ್ದುವು. ಈ ನಡುವಣ ಕಾಲವನ್ನು ತಿಳಿಸಲು, ತಾಸನ್ನು ತೋರಿಸುವ, ತಿರುಗುತ್ತಿರುವ ಒಂಟಿ ಮುಳ್ಳು ಇರುವ ಮುಖವನ್ನು (ಡಯಲ್) ಗಡಿಯಾರಕ್ಕೆ ಜೋಡಿಸಲಾಯಿತು. ನಿಖರವಾದ ಕಾಲವನ್ನು ತಿಳಿಸಲು ಸಹಾಯಕವಾಗುವಂತೆ ಮಿನಿಟು ಮುಳ್ಳನ್ನು ಅಳವಡಿಸಲಾದ್ದು ಮತ್ತಷ್ಟು ದಿವಸಗಳು ಸಂದಮೇಲೆ.

ಪ್ರಾರಂಭದ ಗಡಿಯಾರಗಳೆಲ್ಲ ತೂಕದ ಸಹಾಯದಿಂದ ಕೆಲಸಮಾಡುತ್ತಿದ್ದವು. ಒಂದು ತುದಿಗೆ ಭಾರವಾಗಿರುವ ವಸ್ತುವನ್ನು ಕಟ್ಟಿರುವ ಉದ್ದವಾದ ಹಗ್ಗ ಅಥವಾ ಸರಪಣಿಯನ್ನು ಒಂದು ಸಣ್ಣ ಉರುಳೆಗೆ ಸುತ್ತುತ್ತಿದ್ದರು. ನೇತಾಡುತ್ತಿರುವ ತೂಕ ಹಗ್ಗವನ್ನು ಜಗ್ಗುವುದರಿಂದ ಹಗ್ಗವೆಲ್ಲ ಹಿಂದಕ್ಕೆ ಬಿಚ್ಚಿಕೊಳ್ಳುವ ವರೆಗೂ ಆ ಉರುಳೆ ತಿರುಗುವಂತೆ ಮಾಡುತ್ತಿತ್ತು. ಇದಾದಮೇಲೆ ಉರುಳೆಯನ್ನು ಬಿಗಿಯಾಗಿ ಹಿಡಿದು ಹಗ್ಗವನ್ನು ಪುನಃ ಅದಕ್ಕೆ ಸುತ್ತಬೇಕಾಗುತ್ತಿತ್ತು. ಇಲ್ಲವಾದರೆ ಗಡಿಯಾರ ನಿಂತುಹೋಗುತ್ತಿತ್ತು. ಹೀಗೆ ಸುತ್ತುತ್ತಿರುವ ಉರುಳೆಯಿಂದ ಪಡೆದ ಶಕ್ತಿಯನ್ನು ಗಿಯರುಗಳ (ಹಲ್ಲು ಚಕ್ರಗಳು) ಮೂಲಕ, ಗಡಿಯಾರದ ಮುಳ್ಳುಗಳನ್ನು ಅಳವಡಿಸಿರುವ ಅಕ್ಷಗಳಿಗೆ ವರ್ಗಾಯಿಸಿ ಅವನ್ನು ತಿರುಗುವಂತೆ ಮಾಡಲಾಯಿತು. ಹಗ್ಗ ಸುತ್ತಿದ ಉರುಳೆಗೆ ಯಾವುದಾದರೂ ಒಂದು ರೀತಿಯ ನಿಯಂತ್ರಣಕಾರಿ (ರೆಗ್ಯುಲೇಟರ್) ಇಲ್ಲದಿದ್ದರೆ ಕೆಲವೇ ಮಿನಿಟುಗಳಲ್ಲಿ ತೂಕ ಕಟ್ಟಿರುವ ಹಗ್ಗ ಹಿಂದಕ್ಕೆ ಬಿಚ್ಚಿಕೊಂಡು ಬಿಡುವುದು ಸಹಜ. ಈ ನಿಯಂತ್ರಣಕಾರಿಯೇ ಗಡಿಯಾರದ ಹೃದಯ. ಇದನ್ನು ತಪ್ಪಿಸಿಕೊಳ್ಳುವಿಕೆ (ಎಸ್ಕೇಪ್‍ಮೆಂಟ್) ಎಂದು ಕರೆಯುತ್ತಾರೆ. ಎಲ್ಲ ತಪ್ಪಿಸಿಕೊಳ್ಳುವಿಕೆಗಳ ಹಿನ್ನೆಲೆಯಲ್ಲಿರುವ ಕಲ್ಪನೆಯೂ ಒಂದೇ ರೀತಿಯದು. ತೂಕದ ಸಹಾಯದಿಂದ ತಿರುಗುತ್ತಿರುವ ಉರುಳೆಗೆ ಅದರ ಸುತ್ತ ಗಿಯರ್ ಹಲ್ಲುಗಳಿವೆ. ಅಕ್ಕಪಕ್ಕ ಅಥವಾ ಮೇಲಕ್ಕೆ ಕೆಳಕ್ಕೆ ತೂಗಾಡುತ್ತಿರುವ ಸಂತುಲನಕ್ಕೆ (ಬ್ಯಾಲೆನ್ಸ್) ಅದರ ಪ್ರತಿಯೊಂದು ತುದಿಯಲ್ಲಿಯೂ ಒಂದು ತಡೆ ಅಥವಾ ಪ್ಯಾಲೆಟ್ ಉಂಟು. ಉರುಳೆ ಗಿಯರಿನ ಎರಡು ಹಲ್ಲುಗಳ ನಡುವೆ ಒಂದು ಪ್ಯಾಲೆಟ್ ಬಿದ್ದು ಒಂದು ಕ್ಷಣ ಅದನ್ನು ನಿಲ್ಲಿಸುತ್ತದೆ. ಆಗ ಹಲ್ಲಿನ ಬಾಗಿರುವ ಪಾರ್ಶ್ವ ಪ್ಯಾಲೆಟನ್ನು ಮೇಲಕ್ಕೆತ್ತಿ ಉರುಳೆಯನ್ನು ಬಿಡುಗಡೆಮಾಡುತ್ತದೆ. ಅದು ಚಲಿಸಲು ಪ್ರಾರಂಭಿಸಿದಾಗ ಸಂತುಲನದ ಬಾಹು ಉರುಳೆಯ ಹಲ್ಲುಗಳ ನಡುವೆ ಇನ್ನೊಂದು ತುದಿಯಲ್ಲಿರುವ ಪ್ಯಾಲೆಟನ್ನು ಬಲಾತ್ಕರಿಸಿ ಪುನಃ ಅದನ್ನು ನಿಲ್ಲುವಂತೆ ಮಾಡುತ್ತದೆ. ಈ ರೀತಿ ಉರುಳೆ ಪರ್ಯಾಯವಾಗಿ ಬಂಧಿಸಲ್ಪಡುತ್ತದೆ, ವಿಮೋಚನೆ ಹೊಂದುತ್ತದೆ, ಪುನಃ ಬಂಧಿಸಲ್ಪಡುತ್ತದೆ, ಇತ್ಯಾದಿ. ಇದರಿಂದಲೇ ಎಲ್ಲ ಗಡಿಯಾರಗಳೂ ಟಿಕ್–ಟಿಕ್ ಶಬ್ದವಾಡುತ್ತವೆ, ಹಾಗೂ ಉರುಳೆ ಸುತ್ತುವ ವೇಗವೂ ನಿಯಂತ್ರಣಗೊಳಿಸಲ್ಪಡುತ್ತದೆ.

ಬಹಳ ಕಾಲದವರೆಗೆ ಪ್ರತಿಯೊಂದು ಗಡಿಯಾರವನ್ನೂ ತೂಕದ ಸಹಾಯದಿಂದಲೇ ನಡೆಸುತ್ತಿದ್ದರು. ತೂಕ ಇಳಿಬೀಳಲು ಗಡಿಯಾರಗಳ ತಳಭಾಗದಲ್ಲಿ ಹೆಚ್ಚು ಜಾಗ ಬೇಕಾಗುತ್ತಿತ್ತು. ಈ ದಿಶೆಯಲ್ಲಿ ಮೊದಲು ಸುಧಾರಣೆ ಮಾಡಿದ ನಿಶಿತಮತಿ ಗೆಲಿಲಿಯೋನದು (1564–1642). ಇಗರ್ಜಿಯಲ್ಲಿ ಸ್ವೇಚ್ಛೆಯಿಂದ ಆಂದೋಲಿಸುತ್ತಿದ್ದ ತೂಗುದೀಪಗಳ ಚಲನೆ ಈತನ ಗಮನವನ್ನು ಆಕರ್ಷಿಸಿತು. ಇಂಥ ಒಂದು ದೀಪದ ತುಯ್ತ (ಇಂದಿನ ಪರಿಭಾಷೆಯಲ್ಲಿ ಕಂಪನವೈಶಾಲ್ಯ–ಆ್ಯಂಪ್ಲಿಟ್ಯೂಡ್), ಗಾಳಿ ಜೋರಾಗಿ ಬೀಸಿದಾಗ ಬಲು ಹೆಚ್ಚಾಗಿದ್ದದ್ದು, ಕ್ರಮೇಣ ಕಡಿಮೆಯಾಗುತ್ತ ಬರುತ್ತಿತ್ತು ; ಆದರೆ ಪ್ರತಿ ಸಲವೂ ಒಂದು ಪೂರ್ಣ ಆಂದೋಳನವನ್ನು ಮುಗಿಸಲು ಆ ತೂಗುದೀಪ ತೆಗೆದುಕೊಳ್ಳುತ್ತಿದ್ದ ಕಾಲಾವಧಿ ಒಂದೇ ಎಂಬುದು ಗೆಲಿಲಿಯೋನಿಗೆ ಗೋಚರಿಸಿತು. ಅಂದರೆ ತೂಗುದೀಪ ಅಸಮ ಚಾಪಗಳನ್ನು ಸಮಕಾಲದಲ್ಲಿ ರೇಖಿಸುತ್ತದೆ ಎಂಬ ಸಮಕಾಲತ್ವದ (ಐಸೊಕ್ರಾನಿಸಂ) ತತ್ತ್ವವನ್ನು ಅವನು ಗುರುತಿಸಿದ. ಈ ಸಂಶೋಧನೆಯ ಫಲವನ್ನು ಗೆಲಿಲಿಯೋ ಗಡಿಯಾರಸುಧಾರಣೆಗೆ ಬಳಸಿಕೊಳ್ಳದೇ ಹೋದರೂ ಇತರರು ಇದರಿಂದ ಪ್ರಯೋಜನವನ್ನು ಪಡೆದಕೊಂಡರು. 1965ರ ಸುಮಾರಿಗೆ ಕ್ರಿಸ್ಟಿಯನ್ ಹ್ಯೂಜೆನ್ಸ್ ಹಾಗೂ ಹೂಕ್, ಒಬ್ಬೊಬ್ಬನೂ ಪ್ರತ್ಯೇಕವಾಗಿ, ಹೊಸ ಯಾಂತ್ರಿಕ ಸುಧಾರಣೆಯನ್ನು ಗಡಿಯಾರದ ಯಂತ್ರರಚನೆಯಲ್ಲಿ ಅಳವಡಿಸಿದರು. ಇವರ ರಚನೆಗಳಲ್ಲಿ ಸುರುಳಿಸುತ್ತಿದ ಸ್ಪ್ರಿಂಗುಗಳು ಶಕ್ತಿಆಕರಗಳು, ತೂಗುತ್ತಿರುವ ತೂಕಗಳಲ್ಲ. ಈ ಸ್ಪ್ರಿಂಗುಗಳು ಆಕ್ರಮಿಸುವ ಜಾಗ ಸಹಜವಾಗಿ ಕಡಿಮೆ. ಇವು ಬಿಚ್ಚಿಕೊಂಡಂತೆ ಶಕ್ತಿಪೂರೈಕೆ ಆಗುತ್ತದೆ. ತೂಗಾಡುತ್ತಿರುವ ಲೋಲಕ ತಪ್ಪಿಸಿಕೊಳ್ಳುವಿಕೆಯನ್ನು (ಎಸ್ಕೇಪ್‍ಮೆಂಟ್) ಕ್ರಿಯೆ ಎಸಗುವಂತೆ ಮಾಡಿ ಸ್ಪ್ರಿಂಗಿನಿಂದ ಶಕ್ತಿಯನ್ನು ಪಡೆಯುವ ಏರ್ಪಾಡಿದು. ಗೆಲಿಲಿಯೋ ಕಂಡುಹಿಡಿದ ಸಮಕಾಲತ್ವ ನಿಯಮದ ಕಾರಣದಿಂದ ಇಂಥ ಒಂದು ಗಡಿಯಾರ ನಿಷ್ಕೃಷ್ಟವಾಗಿ ಕಾರ್ಯಮಾಡಬಲ್ಲುದು ಎಂದು ಅವರಿಗೆ ಮನವರಿಕೆ ಆಗಿತ್ತು.

ಪುರಾತನಕಾಲದಿಂದಲೂ ಗಡಿಯಾರನಿರ್ಮಾಪಕರು ಗಡಿಯಾರಗಳು ತಾಸುಗಳನ್ನು ತಿಳಿಸುವುದಷ್ಟೇ ಅಲ್ಲ ಬೇರೆ ಇತರ ಅನೇಕ ಮಾಹಿತಿಗಳನ್ನೂ ಒದಗಿಸಬೇಕೆಂದು ಬಯಸಿದ್ದರು. ಕೆಲವು ಗಡಿಯಾರಗಳ ಮುಖಗಳು ದಿನ, ತಿಂಗಳು, ವರ್ಷ, ಚಂದ್ರನ ಕಲೆಗಳು, ನಕ್ಷತ್ರಗಳ ಸ್ಥಾನಗಳು ಮತ್ತು ವಿಷುವತ್‍ಕಾಲಗಳನ್ನು ತೋರಿಸುತ್ತಿದ್ದುವು. ಕೆಲವು ನಿರ್ದಿಷ್ಟ ತಾಸುಗಳಲ್ಲಿ ಬಾಗಿಲುಗಳನ್ನು ತೆರೆದು ಹೊರಕ್ಕೆ ಬಂದು ತಲೆಬಗ್ಗಿಸಿ ನಮಸ್ಕಾರ ಮಾಡಿ ಆಮೇಲೆ ನರ್ತನ ಮಾಡಿ ಪಿಟೀಲು ನುಡಿಸಿ ಕೊಂಬುಗಳನ್ನು ಊದಿ ಅನಂತರ ಅದೃಶ್ಯವಾಗುವ ರಚನೆಗಳು ಕೆಲವು ಗಡಿಯಾರ'ಗಳಲ್ಲಿದ್ದುವು. ಪ್ರತಿ ಕಾಲು ತಾಸಿಗೂ ಸಂಪೂರ್ಣ ಬೊಂಬೆಯಾಟವನ್ನು ಪ್ರದರ್ಶಿಸುವುದೂ ಇತ್ತು. ಇನ್ನು ಬೇರೆ ರೀತಿಯವುಗಳಲ್ಲಿ ಗರಿಗಳನ್ನು ಕೆದರಿಕೊಂಡು ಹಾಡುವ ಪಕ್ಷಿಗಳು, ಒದೆಯುವ ಹೇಸರಕತ್ತೆಗಳು, ಕುದುರೆಯ ಮೇಲೆ ಸವಾರಿಮಾಡುತ್ತಿರುವ ಸರದಾರರು ಮತ್ತು ಧಾರ್ಮಿಕ ಸಂಬಂಧವಾದ ಮೆರವಣಿಗೆಗಳು ಇರುತ್ತಿದ್ದುವು. ಅತ್ಯಂತ ಆಸಕ್ತಿಯನ್ನು ಉಂಟುಮಾಡುವ ಮತ್ತು ಶ್ರಮಸಾಧಿತವಾದ ಪುರಾತನ ಗಡಿಯಾರಗಳಲ್ಲೊಂದು ಫ್ರಾನ್ಸ್ ದೇಶದ ಆಲ್ಸೇಸ್‍ನಲ್ಲಿರುವ ಸುಂದರವಾದ

ಸ್ಟ್ರಾಸ್‌ಬರ್ಗ್ ದೇವಮಂದಿರದ ಹಿಂಭಾಗದ ವಿಶಿಷ್ಟ ಕೋಣೆಯಲ್ಲಿದೆ. ಇದೇ ಮೂರು ಗೋಪುರಗಳುಳ್ಳ ಮೂರು ಅಂತಸ್ತಿನ ಖಗೋಳೀಯ ಗಡಿಯಾರ. ಇದೊಂದು ಆಶ್ಚರ್ಯಕರವಾದ ನಿರ್ಮಾಣ. ಇದರಲ್ಲಿ ಖಗೋಳೀಯ ಗೋಳವೊಂದಿದೆ. ಗೋಳದ ಮೇಲೆ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಸ್ಥಾನ, ಶಾಶ್ವತವಾದ ಪಂಚಾಂಗ, ಮೂರ್ತಿಪೂಜಕರು ಯಾವ ದೇವತೆಗಳ ಹೆಸರಿನಲ್ಲಿ ವಾರದ ದಿವಸಗಳನ್ನು ನಾಮಕರಣಮಾಡಿದ್ದಾರೋ ಆ ದೇವತೆಗಳ ಉತ್ಸವಗಳನ್ನು ಒಳಗೊಂಡಿರುವ ಅನೇಕ ಚಲಿಸುವ ಉತ್ಸವಗಳು, ಒಂಟಿಯಾಗಿರುವ ಅನೇಕ ಬೊಂಬೆಗಳು ಇತ್ಯಾದಿ ಇವೆ. ಇಂಥ ಪ್ರಖ್ಯಾತವಾದ ಗಡಿಯಾರದ ತುದಿಯ ಮೇಲೆ ಒಂದು ಕೊಬ್ಬಿದ ಹುಂಜ ಉಂಟು. ಇದು ತನ್ನ ಪುಕ್ಕಗಳನ್ನು ಕೆದರುವುದು, ರೆಕ್ಕೆಗಳನ್ನು ಬಡಿಯುವುದು ಮತ್ತು ಮೂರಾವರ್ತಿ ಕೋಳಿ ಕೂಗುವುದು ಇವುಗಳನ್ನೆಲ್ಲ ಮಾಡುವಂತೆ ರೂಪಿಸಲಾಗಿದೆ. ನಡುಹಗಲು ಮತ್ತು ನಡುರಾತ್ರಿ ಈ ರೀತಿ ದಿವಸಕ್ಕೆರಡಾವರ್ತಿ ಗಡಿಯಾರಕ್ಕೆ ಚೇತನಮೂಡಿ ಎಲ್ಲ ಗೊಂಬೆಗಳೂ ಪ್ರದರ್ಶನ ನೀಡುವ ವ್ಯವಸ್ಥೆ ಇದರಲ್ಲಿ ಉಂಟು.

16ನೆಯ ಶತಮಾನದ ಮೊದಲು ಜನ ಕಾಲವನ್ನು ತಿಳಿಯಲು ಗೋಪುರ ಗಡಿಯಾರಗಳ ಢೋಂ ನಾದವನ್ನು ಅದು ಕೇಳುವಷ್ಟು ದೂರದ ವರೆಗೂ ಅವಲಂಬಿಸಿದ್ದರು.

ಲಂಡನಿನ ಪಾರ್ಲಿಮೆಂಟ್ ಭವನದ ವೆಸ್ಟ್‌ಮಿನ್ಸ್ಟರ್ ಗಡಿಯಾರ ಗೋಪುರ

ಅದು ಕೇಳದಾದಾಗ ತಮ್ಮೊಡನೆ ಒಯ್ಯಬಲ್ಲ ಒಂದು ಸುಲಭ ಗಡಿಯಾರ ಇದ್ದಿದ್ದರೆ ಎಷ್ಟು ಅನುಕೂಲವಾಗುತ್ತಿತ್ತು ಎಂದು ಕನಸು ಕಾಣುತ್ತಿದ್ದರು. ನ್ಯೂರೆಂಬರ್ಗಿನ ಪೀಟರ್ ಹೆನ್‌ಲೀನ್ ಎಂಬಾತ 16ನೆಯ ಶತಮಾನದ ಆರಂಭದಲ್ಲಿ ಇಂಥ ಕನಸನ್ನು ನನಸಾಗಿ ಮಾಡುವುದರಲ್ಲಿ ತಕ್ಕಮಟ್ಟಿಗೆ ಯಶಸ್ಸು ಗಳಿಸಿದ. ಸ್ವತಃ ಗಡಿಯಾರನಿರ್ಮಾಪಕನಾದ ಹೆನ್‌ಲೀನ್ ಸುರುಳಿ ಸುತ್ತಬಹುದಾದ ಸ್ಪ್ರಿಂಗನ್ನು ಬಳಸಿ ಸಾಗುಗಡಿಯಾರವನ್ನೇನೋ ನಿರ್ಮಿಸಿದ. ಆದರೆ ಈ ಗಡಿಯಾರ ಸಾಕಷ್ಟು ದೊಡ್ಡದಾಗಿಯೇ ಇತ್ತು. ಅದರ ಆಕಾರ ದೊಡ್ಡ ಕೋಳಿಮೊಟ್ಟೆಯಂತೆ ಇದ್ದುದರಿಂದ ಅದಕ್ಕೆ ನ್ಯೂರೆಂಬರ್ಗಿನ ಮೊಟ್ಟೆ ಎಂದು ಜನ ಅಡ್ಡ ಹೆಸರಿಟ್ಟು ಗೇಲಿಮಾಡಿದರು. ಈ ಗಡಿಯಾರ ಕಾಲವನ್ನು ನಿಷ್ಕೃಷ್ಟವಾಗಿ ಸೂಚಿಸುವಲ್ಲಿ ವಿಫಲವಾಯಿತು. ಸುತ್ತಿದ್ದ ಸ್ಪ್ರಿಂಗಿನಿಂದ ಗಡಿಯಾರದ ವಿವಿಧ ಚಕ್ರಗಳ ಚಲನೆಗೆ ಪೂರೈಕೆ ಆಗುತ್ತಿದ್ದ ಶಕ್ತಿಯ ದರ ಏಕರೀತಿ ಇರುತ್ತಿರಲಿಲ್ಲವಾದ್ದರಿಂದ ಕಾಲಸೂಚನೆಯಲ್ಲಿ ಕ್ರಮ ತಪ್ಪುತ್ತಿತ್ತು. ಗಡಿಯಾರರಚನೆಯಲ್ಲಿ ಶಕ್ತಿಯ ಪೂರೈಕೆ ಅದೆಷ್ಟು ಅಗತ್ಯವೋ ಅದರ ಪೂರೈಕೆಯಲ್ಲಿ ಸ್ಥಿರ ದರವೂ ಅಷ್ಟೇ ಅಗತ್ಯ. ಇದನ್ನು ಪರಿಗಣಿಸಿ ಈ ಹಿಂದೆ ಹೇಳಿದ ಹೂಕ್ ಎಂಬ ವಿಜ್ಞಾನಿ ನಿಯಂತ್ರಣಕಾರಿಯನ್ನು ಉಪಜ್ಞಿಸಿದ. ಹಂದಿ ದೊಗಲಿನಿಂದ ಅತಿ ಗಡುಸಾದ ರೋಮವನ್ನು ಕಿತ್ತು ಅದನ್ನು ನಿಯಂತ್ರಣಕಾರಿಯಾಗಿ ಉಪಯೋಗಿಸಿಕೊಂಡ. ಅದನ್ನು ಎಷ್ಟು ತಿರುಚಿದರೂ ಪುನಃ ಅದು ಯಥಾಸ್ಥಿತಿಗೆ ಬರುವಷ್ಟು ಕಾಠಿಣ್ಯ ಪಡೆದಿತ್ತು. ಮುಂದೆ ಈ ರಚನೆಯಲ್ಲಿ ಸುಧಾರಣೆ ಆಗಿ ಹಂದಿರೋಮದ ಬದಲು ಕಠಿನ ಆದರೆ ಬಲು ಸೂಕ್ಷ್ಮ ಉಕ್ಕಿನ ಸ್ಪ್ರಿಂಗುಗಳ ಬಳಕೆ ಬಂತು. ಇದನ್ನು ರೋಮಸ್ಪ್ರಿಂಗುಗಳೆಂದೇ (ಹೇರ್ ಸ್ಪ್ರಿಂಗ್) ಕರೆಯುವುದು ವಾಡಿಕೆ ಆಯಿತು.

1550 ರ ತನಕ ಗಡಿಯಾರ ನಿರ್ಮಾಪಕರು ಗಡಿಯಾರಗಳ ರಚನೆಯಲ್ಲಿ ಕಬ್ಬಿಣವನ್ನೇ ಉಪಯೋಗಿಸುತ್ತಿದ್ದರು. ಆಮೇಲೆ ಹಿತ್ತಾಳೆ ಚಕ್ರಗಳು ಮತ್ತು ಸ್ಕ್ರೂಮೊಳೆಗಳಿಗೆ ತಮ್ಮ ದೃಷ್ಟಿಯನ್ನು ಹರಿಸಿದರು. 1600ರ ಹೊತ್ತಿಗೆ ಗಡಿಯಾರದ ಮುಖಗಳಿಗೆ ಗಾಜಿನ ಹರಳುಗಳನ್ನು ಜೋಡಿಸುವುದು ಆರಂಭವಾಯಿತು. ಅಪರೂಪವಾಗಿ ಮಿನಿಟು ಮುಳ್ಳನ್ನು ಉಪಯೋಗಿಸುತ್ತಿದ್ದರು. ಏಕೆಂದರೆ ಆ ಕಾಲದ ತನಕ ಮಾಡಿದ ಗಡಿಯಾರಗಳು ಕರಾರುವಾಕ್ಕಾದ ಕಾಲವನ್ನು ತೋರಿಸುತ್ತಲೇ ಇರಲಿಲ್ಲ. ಆ ದಿನಗಳಲ್ಲಿ ಸರಿಯಾದ ಕಾಲವನ್ನು ತಿಳಿಯಬೇಕಾದವರು ಪರಸ್ಪರವಾಗಿ ತಾಳೆನೋಡಲು ಎರಡು ಅಥವಾ ಮೂರು ಗಡಿಯಾರಗಳನ್ನು ಒಯ್ಯಬೇಕಾಗಿತ್ತು. ಗಡಿಯಾರವನ್ನು ಕಾಲಸೂಚಕ ಉಪಕರಣಕ್ಕಿಂತಲೂ ಹೆಚ್ಚಾಗಿ ಅಲಂಕಾರದ ಆಭರಣವೆಂದು ಜನ ಪರಿಗಣಿಸುತ್ತಿದ್ದರು. ಆದ್ದರಿಂದ ಗಡಿಯಾರ ನಿರ್ಮಾಪಕರ ಅಧಿಕ ಲಕ್ಷ್ಯ ಕುಸುರಿ ಕೆಲಸಗಳ ಮೇಲೆ ಬೀರಿತೇ ವಿನಾ ಯಂತ್ರ ಸುಧಾರಣೆಯ ಮೇಲಲ್ಲ.

ಕರಾರುವಾಕ್ಕಾದ ಗಡಿಯಾರಗಳನ್ನು ಹೇಗೆ ರೂಪಿಸಬಹುದೆಂಬುದನ್ನು ಗಡಿಯಾರದ ನಿರ್ಮಾಪಕರು ತಿಳಿಯಲು ಆರಂಭಮಾಡಿದ್ದು 18ನೆಯ ಶತಮಾನದ ಆದಿಭಾಗದಲ್ಲಿ. 1704ರಲ್ಲಿ ಸ್ವಿಟ್ಜರ್‌ಲೆಂಡಿನ ನಿಕೊಲಾಸ್ ಫೇಸಿಯೋ ಎಂಬಾತ ಗಡಿಯಾರಗಳಲ್ಲಿ ರತ್ನದ ಆಧಾರಕಗಳನ್ನು (ಬ್ಯಾರಿಂಗ್ಸ್) ಉಪಯೋಗಿಸಿದ. ರತ್ನಪಡಿ ವ್ಯಾಪಾರಿ 7–ರತ್ನ ಅಥವಾ 21–ರತ್ನಗಳ ಗಡಿಯಾರದ ವಿಷಯವಾಗಿ ಮಾತನಾಡಿದಾಗ ಅದರ ತಾಂತ್ರಿಕ ಅರ್ಥವಿಷ್ಟೆ : ಅಷ್ಟು ಸಂಖ್ಯೆಯ ರತ್ನಾಧಾರಕಗಳು ಆ ಗಡಿಯಾರದಲ್ಲಿವೆ ; ಅದರ ವಿವಿಧ ಚಕ್ರಗಳ ಅಕ್ಷಗಳ ಕೊನೆಯಲ್ಲಿ ಈ ಕಠಿನ ರತ್ನಗಳು ಆಧಾರಗಳಾಗಿ ಇವೆ. ಅಗ್ಗವಾದ ಗಡಿಯಾರಗಳಲ್ಲಿ ಈ ಅಕ್ಷಗಳು ಹಿತ್ತಾಳೆ ಆಧಾರಕಗಳಲ್ಲಿಯ ಸಣ್ಣ ರಂಧ್ರಗಳಲ್ಲಿ ಆಂದೋಲಿಸುತ್ತವೆ. ಈ ಕ್ರಿಯೆಯಲ್ಲಿ ಒಂದು ಲೋಹ ಇನ್ನೊಂದರ ಮೇಲೆ ಅವಿಚ್ಛಿನ್ನವಾಗಿ ಉಜ್ಜುವುದರಿಂದ ರಂಧ್ರ ಕ್ರಮೇಣ ದೊಡ್ಡದಾಗಿ ಅಕ್ಷ ಸವೆದುಹೋಗುತ್ತದೆ. ಆಗ ಚಕ್ರಗಳ ಮಾಲುತ್ತ ತಿರುಗುವುದರಿಂದ ಗಡಿಯಾರ ಕರಾರುವಾಕ್ಕಾದ ಕಾಲವನ್ನು ತೋರಿಸುವುದರಲ್ಲಿ ವಿಫಲವಾಗುವುದು. ರತ್ನದ ಆಧಾರಕಗಳು ಬಲು ಕಠಿನ ಮತ್ತು ನುಣುಪು; ಹಲವಾರು ದಶಕಗಳ ಕಾಲ ಅವು ಸ್ವಲ್ಪವೂ ಸವೆದುಹೋಗದೆ ಚಕ್ರಗಳ ಆಂದೋಲನ ಅವಿಚ್ಛಿನ್ನವಾಗಿ ನಡೆಯಬಲ್ಲುದು. ರತ್ನಾಧಾರಕಗಳ ಸಂಖ್ಯೆ ಅಧಿಕವಾಗಿದ್ದಷ್ಟೂ ಆ ಗಡಿಯಾರದ ಆಯುಸ್ಸು, ಬೆಲೆ ಎರಡೂ ಅಧಿಕ.

ಗಡಿಯಾರದ ಒಳಗೆ ಸು. 5 ಬಗೆಯ ರತ್ನಾಧಾರಕಗಳು ಇರುತ್ತದೆ. ಅವು ಹೀಗಿವೆ: ಪ್ಯಾಲೆಟ್, ಕ್ಯಾಪ್, ಹೋಲ್, ಶಾಕ್ ಅಬ್ಸರ್ವರ್, ರೋಲರ್.

ಗೋಡೆ ಗಡಿಯಾರಗಳು ಕಿಸೆಗಡಿಯಾರಗಳು ಮತ್ತು ಕೈಗಡಿಯಾರಗಳು ಎಂಬ ಮೂರುಪ್ರರೂಪಗಳಾಗಿ ಕಾಲಸೂಚಕಯಂತ್ರ ವಿಕಾಸಗೊಂಡು ಬೆಳೆದಿದೆ. ಈ ಶತಮಾನದ ಆದಿಯ ಕಿಸೆಗಡಿಯಾರಗಳಿಗೆ, ಇಂದಿನ ಗೋಡೆ ಗಡಿಯಾರಗಳ ರೀತಿಯಲ್ಲೇ, ಪ್ರತ್ಯೇಕವಾದ ಹಿಡಿಯಿಂದ ಕೀಲಿ ಕೊಡಬೇಕಾಗಿತ್ತು. ಈ ಹಿಡಿಯೂ ಗಡಿಯಾರದ ಒಂದು ಅಂಗವಾಗಿ ರೂಪ ತಳೆದದ್ದು ಮುಂದಿನ ಸುಧಾರಣೆ. ಒಂದನೆಯ ಮಹಾಯುದ್ಧದ ಕಾಲದಲ್ಲಿ ಗಡಿಯಾರಗಳ ಮಾದರಿಗಳಲ್ಲಿ ತೀವ್ರ ಬದಲಾವಣೆಗಳನ್ನು ಮಾಡಲಾಯಿತು. ಗಡಿಯಾರ ಯಂತ್ರಗಳಲ್ಲಿ ಚಕ್ರಗಳನ್ನು ಜೋಡಿಸುವ ನವೀನಮಾರ್ಗಗಳನ್ನು ಉಪಜ್ಞೆಕಾರರು ಕಂಡುಹಿಡಿದುದರಿಂದ ಕಿಸೆಗಡಿಯಾರಗಳು ಹೆಚ್ಚು ಹೆಚ್ಚು ತೆಳು ಆಗುತ್ತ ಬಂದುವು. ಅಲ್ಲಿಯ ತನಕ ಸಾಧಾರಣವಾಗಿ ಪ್ರತಿಯೊಬ್ಬನೂ ಗಡಿಯಾರವನ್ನು ಕಿಸೆಯಲ್ಲೇ ತೆಗೆದುಕೊಂಡು ಹೋಗುತ್ತಿದ್ದ. ಕೈಗಡಿಯಾರದ ಬಳಕೆ ನಾಚಿಕೆಗೇಡಿನದೆಂದು ಅಂದಿನ ಜನ ಭಾವಿಸಿದ್ದರು. ಇಂಥ ಪ್ರಚಲಿತ ನಂಬಿಕೆಗಳನ್ನು ಯುದ್ಧ ವ್ಯತ್ಯಸ್ತಗೊಳಿಸಿತು. ಕಂದಕಗಳಲ್ಲಿದ್ದಾಗ ಸೈನಿಕರಿಗೆ ಕೈಗಡಿಯಾರ ಅತ್ಯಗತ್ಯವಾಗಿತ್ತು. ನಿಲುವಂಗಿ, ಅನಿಲ ಮೊಗವಾಡ ಮತ್ತು ತೋಟಗಳನ್ನು ಸಿಕ್ಕಿಸಿದ ಅಡ್ಡಪಟ್ಟಿಗಳೊಳಗೆ ಹುದುಗಿದ್ದ ಕಿಸೆಗಡಿಯಾರವನ್ನು ಸುಲಭವಾಗಿ ಹೊರಕ್ಕೆ ತೆಗೆಯುವುದಕ್ಕಾಗುತ್ತಿರಲಿಲ್ಲ. ಕತ್ತಲಲ್ಲಿ

ಓದಬಹುದಾದ ಗಡಿಯಾರದ ಮುಖವುಳ್ಳದ್ದು ಅತ್ಯಂತ ಜರೂರಾಗಿ ಬೇಕು ಎಂಬುದನ್ನು ಯುದ್ಧ ತಂದೊಡ್ಡಿತು. ಮುಖದ ಮೇಲಿನ ಸಂಖ್ಯೆಗಳಿಗೆ ರೇಡಿಯಮ್ಮನ್ನು ಲೇಪಿಸಿದರೆ ಅವು ಕತ್ತಲಲ್ಲಿ ಮಿನುಗುಟ್ಟುತ್ತವೆ, ಎಂದು ಗಡಿಯಾರನಿರ್ಮಾಕರು ಕಂಡುಹಿಡಿದರು. ಈ ಉಪಜ್ಞೆ ಕೂಡ ಯುದ್ಧಾವಶ್ಯಕತೆಯಾಗಿಯೇ ಮೊದಲು ಮೈತಳೆದದ್ದು.

(ಆರ್.ವಿ.ಎಂ.;ಎಂ.ಯು.)

**ಆಧುನಿಕ ಗಡಿಯಾರದ ಯಂತ್ರವಿನ್ಯಾಸ :** ಗಡಿಯಾರ ಕಾಲವನ್ನು ಅಳೆದು ಸೂಚಿಸುವುದು ಒಂದು ಆಂದೋಳಕ ವ್ಯವಸ್ಥೆಯ ನೆರವಿನಿಂದ. ಸಂತುಲನ (ಬ್ಯಾಲೆನ್ಸ್) ಮತ್ತು ಸ್ಪ್ರಿಂಗ್ ಎಂಬ ಆಂದೋಲಿಸುತ್ತಿರುವ ರೂಪವನ್ನು ಈ ವ್ಯವಸ್ಥೆ ಪಡೆದಿದೆ. ಆಂದೋಲನ ಕಾಲದಲ್ಲಿ ಸಂತುಲನವನ್ನು ಕಾಪಾಡಿಕೊಂಡು ಬರಲು ಬೇಕಾಗುವ ಶಕ್ತಿ ಪ್ರಧಾನಸ್ಪ್ರಿಂಗಿನಲ್ಲಿ ಶೇಖರವಾಗಿರುತ್ತದೆ. ಗಡಿಯಾರಕ್ಕೆ ಕೀಲಿ ಕೊಡುವುದೆಂದರೆ ಸ್ಪ್ರಿಂಗಿನಲ್ಲಿ ಶಕ್ತಿ ಸಂಚಯನ ಮಾಡುವುದು ಎಂದರ್ಥ. ಗಡಿಯಾರದಲ್ಲಿಯ ವಿವಿಧ ಬಿಡಿಭಾಗಗಳು ಮತ್ತು ಯಂತ್ರವಿನ್ಯಾಸಗಳನ್ನು (ಮೆಕ್ಯಾನಿಸಂಸ್) ಇಬಾಷೆ, ಚಕ್ರಗಳ ಸಾಲು, ತಪ್ಪಿಸಿಕೊಳ್ಳುವಿಕೆ (ಎಸ್ಕೇಪ್‌ಮೆಂಟ್), ನಿಯಂತ್ರಣ ಯಂತ್ರವಿನ್ಯಾಸ (ಕಂಟ್ರೋಲ್ ಮೆಕಾನಿಸಂ), ಚಲನೆಯ ಯಂತ್ರವಿನ್ಯಾಸ, ಕೋಶ (ಕೇಸ್), ಮುಖ ಮತ್ತು ಮುಳ್ಳುಗಳು –ಹೀಗೆ ಎಂಟು ಗುಂಪುಗಳಾಗಿ ವಿಂಗಡಿಸಬಹುದು. ಗಡಿಯಾರದ ಚಲನೆಯ ಕ್ರಿಯಾವಿನ್ಯಾಸದಲ್ಲಿ ವಿವಿಧ ಕಾರ್ಯಗಳನ್ನು ನಡೆಸುವ ಭಾಗಗಳಿರುವ ಪ್ರಧಾನ ಫಲಕವೊಂದಿದೆ. ಇದರಲ್ಲಿ ಗಿಯರು ಚಕ್ರಗಳು, ತಪ್ಪಿಸಿಕೊಳ್ಳುವಿಕೆ ಮತ್ತು ಸಂತುಲನಗಳನ್ನು ಯುಕ್ತ ಆಧಾರಗಳಿಂದ ಅವುಗಳ ಸ್ಥಾನಗಳಲ್ಲಿರಿಸಿದೆ. ಫಲಕ ಮತ್ತು ಆಧಾರಗಳು ಒಂದು ಚೌಕಟ್ಟನ್ನು ರೂಪಿಸುತ್ತವೆ. ಇದನ್ನು ರೂಢಿಯಲ್ಲಿ ಇಬಾಷೆ ಎಂದು ಹೆಸರಿಸುತ್ತಾರೆ.

**ಚಲನೆಯ ಯಂತ್ರವಿನ್ಯಾಸ (ಮೋಟಾರ್ ಮೆಕ್ಯಾನಿಸಂ) :** ಇದರಲ್ಲಿ ಗಾಲಿಯ ಅಚ್ಚು ಮತ್ತು ಪ್ರಧಾನ ಸ್ಪ್ರಿಂಗ್ ಇವುಗಳಿಂದ ಪೂರ್ಣವಾಗಿರುವ ಉರುಳೆಯೊಂದಿದೆ



ಚಿತ್ರ 1 ಪ್ರವರ್ತಕ ಸಾಮರ್ಥ್ಯದಿಂದ ನಿಯಂತ್ರಣ ಯಂತ್ರ ವಿನ್ಯಾಸದವರೆಗಿನ ಯಂತ್ರವಿನ್ಯಾಸ

(ಚಿತ್ರ 2). ಚಲಿಸುತ್ತಿರುವಾಗ ಘರ್ಷಣೆ ಮತ್ತು ಗಾಳಿಯ ರೋಧದಿಂದ ಗಡಿಯಾರದ



ಚಿತ್ರ 2 ಗಡಿಯಾರಕ್ಕೆ ಕೀಲಿಕೊಟ್ಟು ಶಕ್ತಿಪೂರೈಕೆ ಮಾಡುವ ಯಂತ್ರವಿನ್ಯಾಸ

ಸಂತುಲನ ನಿಂತುಹೋಗುವ ಪ್ರವೃತ್ತಿ ಪಡೆದಿದೆ. ಗಡಿಯಾರದ ಚಲನೆ ಮುಂದುವರಿಯಬೇಕಾದರೆ ನಷ್ಟವಾದ ಶಕ್ತಿಯನ್ನು ತುಂಬಿಕೊಡುವುದು ಅಗತ್ಯ. ಉರುಳೆಯಲ್ಲಿ ಶೇಖರವಾಗಿರುವ ಪ್ರವರ್ತಕ ಸಾಮರ್ಥ್ಯದಿಂದ (ಮೋಟಿವ್ ಪವರ್) ನಷ್ಟವಾದ ಶಕ್ತಿ ಪೂರೈಕೆಯಾಗುತ್ತದೆ. ಗಡಿಯಾರಕ್ಕೆ ಕೀಲಿ ಕೊಟ್ಟಾಗ ಪ್ರಧಾನ ಸ್ಪ್ರಿಂಗ್ ಉರುಳೆಯ ಅಚ್ಚಿನ ಸುತ್ತ ಸುರುಳಿ ಸುತ್ತಿಕೊಳ್ಳುತ್ತದೆ. ಇದರಿಂದ ಅಚ್ಚು ತಿರುಗುವ ಸಾಮರ್ಥ್ಯ ಪಡೆದು ಚಕ್ರಗಳ ಸಾಲನ್ನು ಚಲಿಸುವಂತೆ ಮಾಡುತ್ತದೆ. ಗಡಿಯಾರದ ಪ್ರಧಾನ ಸ್ಪ್ರಿಂಗಿನ ಉದ್ದ ಸು. 290 ಮಿ.ಮೀ. ಅಗಲ ಸು. 1.25 ಮಿ.ಮೀ. ದಪ್ಪ ಸು. 0.11 ಮಿ.ಮೀ. ಸ್ಪ್ರಿಂಗನ್ನು ಮೈಕ್ರೊಮೀಟರಿನಿಂದ ಅಳೆಯಬಹುದು. ಇದಕ್ಕಾಗಿಯೇ ವಿಶೇಷವಾಗಿ ತಯಾರಿಸಿದ ವಿಶಿಷ್ಟ ಮಿಶ್ರಲೋಹದಿಂದ ಇದನ್ನು ನಿರ್ಮಿಸಿದೆ. ಪ್ರಧಾನ ಸ್ಪ್ರಿಂಗ್ ಚೆನ್ನಾಗಿ ಕಾರ್ಯ ನಡೆಸಬೇಕಾದರೆ ಅದನ್ನು ನಿರ್ಮಿಸಲು ಉಪಯೋಗಿಸುವ ವಸ್ತುವಿನ ಗುಣವಿಶೇಷ ಮತ್ತು ಅದರ ಮೇಲ್ಮೈಯ ಹೊಳಪಿನ ಅಂಶ ಇವುಗಳೆಲ್ಲ ಹೆಚ್ಚಿನ ಮಟ್ಟದವಾಗಿರಬೇಕಾದ್ದು ಅತಿ ಮುಖ್ಯ.

**ಪ್ರೇಷಣೆ (ಟ್ರಾನ್ಸ್‌ಮಿಷನ್) :** ಗಡಿಯಾರದಲ್ಲಿ ಪ್ರೇಷಣೆ ನಡೆಯುವುದು ಗಿಯರುಗಳು ಸಾಲಿನ ಮೂಲಕ (ಚಿತ್ರ 1). ಗಿಯರು ಚಕ್ರಗಳ ಜೋಡಣೆ ಇಲ್ಲದೆ ಕಾರ್ಯ ನಡೆಸುವ ಯಂತ್ರಗಳ ಸಂಖ್ಯೆ ಅತ್ಯಲ್ಪ. ಗಡಿಯಾರದಲ್ಲಿ ಮುಖ್ಯ ವಿಷಯವೇನೆಂದರೆ ಈ ಭಾಗಗಳ ಅತಿ ಸೂಕ್ಷ್ಮತೆ. ಗಿಯರುಗಳ ಮೇಲಿನ ಅಂಚುಗೆರೆಗಳನ್ನು ಸ್ಫುಟವಾಗಿ ಭೂತಕನ್ನಡಿಯ ಸಹಾಯದಿಂದ ಮಾತ್ರ ನೋಡಬಹುದು. ಗಡಿಯಾರದ ಚಕ್ರಗಳ ಸಾಲನ್ನು ನಿರ್ಮಿಸಲು ಅಧಿವೃತ್ತಜಗಳ (ಎಪಿಸೈಕ್ಲಾಯಿಡ್ಸ್) ಹೊರಗೆರೆಗಳನ್ನು ಆಯ್ಕೆ ಮಾಡಿಕೊಳ್ಳುತಾರೆ. ಹಲ್ಲುಗಳ ಪರಿಮಾಣ ಮಿಲಿಮೀಟರಿನ ಸಾವಿರದಲ್ಲೊಂದು ಪಾಲಿನಷ್ಟು ನಿಷ್ಕೃಷ್ಟವಾಗಿರಬೇಕು; ಚಲಿಸುತ್ತಿರುವ ಭಾಗಗಳ ಕೇಂದ್ರಗಳ ನಡುವಣ ದೂರಕ್ಕೂ ಇದೇ ಅನ್ವಯಿಸುತ್ತದೆ.

**ತಪ್ಪಿಸಿಕೊಳ್ಳುವಿಕೆ (ಎಸ್ಕೇಪ್‌ಮೆಂಟ್) :** ಇದರಲ್ಲಿ ತಪ್ಪಿಸಿಕೊಳ್ಳುವ ಚಕ್ರ ಮತ್ತು ಪ್ಯಾಲೆಟ್ ಕವೆ ಇವೆ (ಚಿತ್ರ 3). ತಪ್ಪಿಸಿಕೊಳ್ಳುವಿಕೆಯಲ್ಲಿ ಹಲವಾರು ರೀತಿಯವುಗಳಿವೆ. ಹೆಚ್ಚು ಬಳಕೆಯಲ್ಲಿರುವುದು ಸನ್ನೆ ತಪ್ಪಿಸಿಕೊಳ್ಳುವಿಕೆ ಮಾದರಿಯದು. ತಪ್ಪಿಸಿಕೊಳ್ಳುವ ಚಕ್ರದ ಹಲ್ಲುಗಳು ಕ್ಯಾಲೆಟುಗಳ ಅಥವಾ ಪ್ಯಾಲೆಟುಗಳ (ರತ್ನದ ಸನ್ನೆ ತಪ್ಪಿಸಿಕೊಳ್ಳುವಿಕೆ ಇದ್ದ ಪಕ್ಷದಲ್ಲಿ) ಮೂಲಕ ಸನ್ನೆ ಅಥವಾ ಕವೆಗಳ ಮೇಲೆ ಕಾರ್ಯ ನಡೆಸುತ್ತವೆ. ರಾಸ್‌ಕಾಫ್ ಗಡಿಯಾರಗಳಲ್ಲಿ ಉಪಯೋಗಿಸುವ ಸೂಜಿ ತಪ್ಪಿಸಿಕೊಳ್ಳುವಿಕೆ ಸರಳವಾದ್ದು. ಇದರಲ್ಲಿ ಪ್ಯಾಲೆಟುಗಳ ಬದಲಾಗಿ ಉಕ್ಕಿನ ಸೂಜಿಗಳು ಅಥವಾ ಗೂಟಗಳನ್ನು ಸನ್ನೆಯ



ಚಿತ್ರ 3 ತಪ್ಪಿಸಿಕೊಳ್ಳುವಿಕೆ

ತಲಕ್ಕೆ ಲಂಬಕೋನದಲ್ಲಿ ಭದ್ರಪಡಿಸಲಾಗಿದೆ. ವರ್ಜ್ ಅಥವಾ ಲಂಬ, ಉರುಳೆ ಅಥವಾ ಕ್ಷಿತಿಜೀಯ, ಡೂಪ್ಲೆ ಮತ್ತು ಕಾಲಮಾಪಿ (ಕ್ರೋನೊಮೀಟರ್) ಅಥವಾ ಕಳಚಿಕೊಳ್ಳುವಿಕೆ (ಡಿಟೆಂಟ್) ಈ ರೀತಿ ಬೇರೆ ಮಾದರಿಯ ತಪ್ಪಿಸಿಕೊಳ್ಳುವಿಕೆಗಳು ಇವೆ. ಆದರೆ ಇವೆಲ್ಲವೂ ಗಡಿಯಾರವನ್ನು ಅಭಿವೃದ್ಧಿಪಡಿಸುತ್ತಿದ್ದ ಮೊದಲ ದಿನಗಳಲ್ಲಿ ಉಪಯೋಗದಲ್ಲಿದ್ದವು. ಈಗ ಇವು ಬಳಕೆಯಲ್ಲಿಲ್ಲ.

**ನಿಯಂತ್ರಣಕಾರೀ ಯಂತ್ರವಿನ್ಯಾಸ (ರೆಗ್ಯುಲೇಟಿಂಗ್ ಮೆಕ್ಯಾನಿಸಂ) :** ಗಡಿಯಾರದ ಮುಖ್ಯ ಮೂಲಭಾಗ ನಿಯಂತ್ರಣಕಾರೀ ಯಂತ್ರವಿನ್ಯಾಸ. ಇದರಲ್ಲಿ ಒಂದು

ಸಂತುಲನವನ್ನು (ಗತಿನಿಯಂತ್ರಕ ಚಕ್ರ ಸಮತೂಕದಲ್ಲಿಟ್ಟು ಇದನ್ನು ಸರ್ಪಿಲವಾಗಿ (ಸ್ಪೈರಲ್) ಸುರುಳಿಸುತ್ತಿರುವ ಸ್ಪ್ರಿಂಗಿಗೂ ಕ್ರಮಪಡಿಸುವ ವಿಧಾನಕ್ಕೂ (ನಿಯಂತ್ರಣಕಾರಿ) ಜೋಡಿಸಿದೆ(ಚಿತ್ರ 1). ಈ ಸ್ಪ್ರಿಂಗನ್ನು ಸಾಮಾನ್ಯವಾಗಿ ರೋಮ ಸ್ಪ್ರಿಂಗ್ (ಹೇರ್



ಚಿತ್ರ 4 ಕೀಲಿಕೊಡುವಿಕೆ ಮತ್ತು ಸರಿಪಡಿಸುವಿಕೆಗಳ ಯಂತ್ರವಿನ್ಯಾಸ

ಸ್ಪ್ರಿಂಗ್) ಎಂದು ಕರೆಯುತ್ತಾರೆ.ಸಂತುಲನವನ್ನು ವಿರಾಮಸ್ಥಾನದಿಂದ ಕದಲಿಸಿ ಅನಂತರ ಅದನ್ನು ಬಿಟ್ಟುಬಿಟ್ಟರೆ ಅದು ಆಂದೋಲಿಸುತ್ತದೆ. 18,000 ವಿಸ್ಪಂದನಗಳು (ಬೀಟ್ಸ್) ಇರುವ ಗಡಿಯಾರದಲ್ಲಿ, ಸಂತುಲನ ಒಂದು ಸೆಕೆಂಡಿಗೆ ಐದು ಅರ್ಧ ಅಂದೋಲನಗಳನ್ನು ಮಾಡುತ್ತದೆ. ಈ ಮೂಲ ಆವರ್ತಾಂಕ (ಫ್ರೀಕ್ವೆನ್ಸಿ) ವ್ಯತ್ಯಾಸವಾದರೆ ಗಡಿಯಾರಕ್ಕೆ



ಚಿತ್ರ 5 ಕೀಲಿಕೊಡುವಿಕೆ ಮತ್ತು ಸರಿಪಡಿಸುವಿಕೆ– ಇನ್ನೊಂದು ದೃಶ್ಯ

**ಕೀಲಿಕೊಡುವುದು ಮತ್ತು ಸರಿಪಡಿಸುವಿಕೆಗಳ ಯಂತ್ರವಿನ್ಯಾಸ :** ಈ ಮಾದರಿಯ ಯಂತ್ರವಿನ್ಯಾಸಗಳಿಗೆ 1000ಕ್ಕಿಂತ ಹೆಚ್ಚು ಏಕಸ್ವಗಳನ್ನು (ಪೇಟೆಂಟ್ಸ್) ಪಡೆದುಕೊಂಡಿದ್ದಾರೆ. ಹೆಚ್ಚು ಸಂಖ್ಯೆಯ ಗಡಿಯಾರಗಳಲ್ಲಿ ಈ ಕ್ರಿಯಾವಿನ್ಯಾಸಕ್ಕೆ ಒಂದು ಶಿಷ್ಟ ಏರ್ಪಾಡನ್ನು ಕಂಡುಹಿಡಿಯಲಾಗಿದೆ. ವಿವರಣೆಯಲ್ಲಿ ಮಾತ್ರ ಕೆಲವು ವ್ಯತ್ಯಾಸಗಳಿರುತ್ತವೆ (ಚಿತ್ರ 4 ಮತ್ತು 5). ಕೀಲಿ ಕೊಡುವ ಕಾಂಡವನ್ನು ಹೊರಕ್ಕೆಳೆದಾಗ, ಮುಳ್ಳುಗಳನ್ನು ನಿಯಂತ್ರಿಸುವ ಚಲನೆಯ ಭಾಗವನ್ನು ತತ್‌ಕ್ಷಣವೇ ಒಂದು ಪಕ್ವಾಂತ (ಪಿನಿಯನ್) ಕಾರ್ಯನಡೆಸುವಂತೆ ಮಾಡುತ್ತದೆ. ಅದು ಸ್ವಸ್ಥಾನದಲ್ಲಿದ್ದಾಗ ಕಾಂಡ ಪ್ರಧಾನಸ್ಪ್ರಿಂಗಿನ ತಿರುಗಿಸುವಿಕೆಯನ್ನು ಪ್ರವೃತ್ತಿಸುತ್ತದೆ. ಸನ್ನೆ, ನೊಗ (ಹಿಡಿಯುವ ಸನ್ನೆ) ಮತ್ತು ಅವುಗಳ ಸ್ಪ್ರಿಂಗುಗಳನ್ನು ಸ್ಥಾನದಲ್ಲಿ ಇಟ್ಟಾಗ ಈ ಎರಡು ಕ್ರಿಯೆಗಳನ್ನು ಮಾಡುತ್ತವೆ. ಚಲಿಸುವ ಭಾಗದಿಂದ ಕೀಲಿ ಕೊಡುವ ಕಾಂಡವನ್ನು ಹೊರಕ್ಕೆ ತೆಗೆದು ಪುನಃ ಸ್ವಸ್ಥಾನದಲ್ಲಿ ಇಡಲು ಸಾಧ್ಯವಾಗಬೇಕು. ಹೀಗೆ ಮಾಡಲು ಮುಖ ಮತ್ತು ಮುಳ್ಳುಗಳನ್ನು ತೆಗೆಯುವುದರ ಅಗತ್ಯವಿರಕೂಡದು. ಉತ್ತಮ ಗಡಿಯಾರದ ಕೀಲಿ ಕೊಡುವ ಯಂತ್ರಭಾಗದ ಕಲ್ಪನೆಯಲ್ಲಿ ಸವೆತದಿಂದ ಉಂಟಾಗುವ ಪರಿಣಾಮವನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳಬೇಕು. ಏಕೆಂದರೆ ಗಡಿಯಾರದ ಈ ಭಾಗದ ಸವೆತ ಮುಖ್ಯವಾಗಿ ಅತಿ ಹೆಚ್ಚು. ಗಡಿಯಾರ ಸರಿಯಾಗಿ ಕಾಲ ತೋರಿಸುವುದರ ಮೇಲೆ ಯಂತ್ರವಿನ್ಯಾಸದ ನೇರಪ್ರಭಾವ ಸ್ಪಷ್ಟವಾಗಿ ಇಲ್ಲದಿದ್ದರೂ ಹಿಂದಿನ ಕಾಲದ ಗಡಿಯಾರನಿರ್ಮಾಪಕರು ಹೆಚ್ಚು ಮರೆಯಲ್ಲಿ ಹುದುಗಿರುವ ಚಲಿಸುವ ಭಾಗಗಳನ್ನು ಕೂಡ ನಯವಾಗಿ ಮತ್ತು ಹೊಳಪಾಗಿರುವಂತೆ ಮಾಡಲು ಶ್ರಮಿಸುತ್ತಿದ್ದರು.

**ರತ್ನಗಳು (ಜುವೆಲ್ಸ್) :** ಎಂಜನಿಯರುಗಳ ಪರಿಭಾಷೆಯಲ್ಲಿ ರತ್ನಗಳು ಎಂದರೆ ಆಧಾರಕಗಳು (ಬ್ಯಾರಿಂಗ್ಸ್) ಎಂದರ್ಥ. ಗಡಿಯಾರ ತಯಾರಿಸುವವರು ರತ್ನಗಳೆಂದರೆ ರಂಧ್ರ ಕೊರೆದು ಸರಿಯಾದ ಆಕಾರಕ್ಕೆ ರೂಪಿಸಿರುವ ಕೆಂಪು ಅಥವಾ ನೀಲ ಮಣಿಗಳು ಎಂದು ತಿಳಿದುಕೊಳ್ಳುತ್ತಾರೆ. ಇವುಗಳೊಳಗೆ ಚಲಿಸುವ ಭಾಗಗಳ ಅಕ್ಷಗಳು ತಿರುಗುತ್ತವೆ. ಸುಮಾರು ನೂರು ವರ್ಷಗಳ ಹಿಂದೆ ಈ ರೀತಿಯ ರತ್ನಗಳನ್ನೆಲ್ಲ ಹಿತ್ತಾಳೆಯ ಆಧಾರಕಗಳು ಮತ್ತು ಫಲಕಗಳೊಳಗೆ ಇಡುತ್ತಿದ್ದರು(ಸೆಟ್). ಫಲಕದಲ್ಲಿ ಮಾಡಿದ ಕೆಲವು ತಗ್ಗುಗಳಲ್ಲಿ ಇವನ್ನು ನೇರವಾಗಿ ಭದ್ರಪಡಿಸಿ ಅನಂತರ ಅವುಗಳ ಮೇಲೆ ಹಿತ್ತಾಳೆಯನ್ನು ಸುತ್ತಿ ಸರಿಯಾದ ಸ್ಥಾನದಲ್ಲಿ ಜೋಡಿಸಲಾಗುತ್ತಿತ್ತು. ಒಂದಾನೊಂದು ಕಾಲದಲ್ಲಿ ಈ ರೀತಿಯ ಇಡುವಿಕೆ (ಸೆಟ್ಟಿಂಗ್) ಗಡಿಯಾರತಯಾರಿಕೆಯಲ್ಲಿ ಒಂದು ಮುಖ್ಯವಾದ ಕಾರ್ಯವಾಗಿತ್ತು. ಈಗಲಾದರೂ ರತ್ನಗಳನ್ನು ಯಂತ್ರಗಳಿಂದ ನಿರ್ಮಿಸಲು ಉತ್ತಮಪಡಿಸಿದ ವ್ಯವಸ್ಥೆಗಳಿರುವುದರಿಂದ ಅವನ್ನು ನೇರವಾಗಿ ಫಲಕ ಮತ್ತು ಆಧಾರಕಗಳೊಳಕ್ಕೆ ನುಗ್ಗಿಸುತ್ತಾರೆ. ಸೀಳಿರುವ ರತ್ನ–ಭೂತಗನ್ನಡಿಯಿಂದ ನೋಡಿದಾಗ ಸೀಳು ಕಾಣಿಸದಷ್ಟು ಸೂಕ್ಷ್ಮವಾಗಿದ್ದಾಗ ಕೂಡ –ಉತ್ತಮ ತರಗತಿಯ ಗಡಿಯಾರದಲ್ಲಿ ಪ್ರವೇಶಿಸಲು ಸಾಧ್ಯವಿಲ್ಲ. ಹೆಚ್ಚು ಒಪ್ಪಾಗುವ ರತ್ನಗಳು ಕೃತಕ ಕೆಂಪುಗಳು. ಪುಡಿ ಅಲ್ಯುಮಿನವನ್ನು ಆಮ್ಲಜನಕ–ಜಲಜನಕ ಅನಿಲಗಳ ಊದುಗೊಳವೆಯ ಜ್ವಾಲೆಯಲ್ಲಿ ಕರಗಿಸಿ ಅನಂತರ ಕೆಂಪು ಕಲ್ಲಿನ ಬಣ್ಣ ಬರುವಂತೆ ಮಾಡಿ ಕೃತಕ ರತ್ನಗಳನ್ನು ತಯಾರಿಸುತ್ತಾರೆ. ಕಚ್ಚಾ ಪದಾರ್ಥಗಳಿಂದ ಅತಿ ಸಣ್ಣದಾಗುವಂತೆ ಸವೆಸಿ ಹೆಚ್ಚು ಹೊಳಪು ಬರುವಂತೆ ಮಾಡುತ್ತಾರೆ. ವಜ್ರಲೇಪಿತ ತಂತಿಗಳಿಂದ ಬೇಕಾಗುವ ಅಳತೆಗಿಂತ ಚಿಕ್ಕ ರಂಧ್ರಗಳನ್ನು ಕೊರೆದು ಅನಂತರ ಹಂತ ಹಂತವಾಗಿ ಸಾಣೆ ಹಿಡಿಯುವ ತಂತಿಯಿಂದ ಸರಿಯಾದ ಅಳತೆಗೆ ಹಿಗ್ಗಿಸುತ್ತಾರೆ. ಅಂತಿಮವಾಗಿ, ಬೇಕಾಗಿದ್ದ ಪಕ್ಷದಲ್ಲಿ, ಘರ್ಷಣೆಯನ್ನು ಕಡಿಮೆ ಮಾಡಲು ಸಾಣೆ ಹಿಡಿಯುವ ತಂತಿಯಿಂದ ಆಲಿವ್‌ಎಣ್ಣೆ ಉಪಯೋಗಿಸಿ ಕಮಾನು ಎಳೆಯುತ್ತಾರೆ.

**ಗಡಿಯಾರದ ನಿಷ್ಕೃಷ್ಟತೆಯ ಲಕ್ಷಣಗಳು :** ಗಡಿಯಾರದ ಅತಿ ಮುಖ್ಯ ಲಕ್ಷಣಗಳೆಂದರೆ ದರ, ವಿವಿಧ ಸ್ಥಾನಗಳಲ್ಲಿ ಮತ್ತು ವ್ಯತ್ಯಾಸವಾಗುತ್ತಿರುವ ಉಷ್ಣತೆಯಲ್ಲಿ ಕಂಪನ ವೈಶಾಲ್ಯ ಹಾಗೂ ಸಂಗುಣಿತವಾದ ಸಮಕಾಲತ್ವ ಮತ್ತು ಉಷ್ಣತಾ ಗುಣಾಂಕ.

**ದರ :** ಶಿಷ್ಟಕಾಲದೊಂದಿಗೆ ಹೋಲಿಸಿದಾಗ ಇರುವ ಕಾಲವ್ಯತ್ಯಾಸವನ್ನು ದರ (ರೇಟ್) ಎನ್ನುತ್ತಾರೆ. ಎರಡು ಗಡಿಯಾರಗಳು ಏಕರೂಪವಾದ ಕಾಲಗಳನ್ನು ತೋರಿಸುವುದು ಏಕೆ ಅತಿ ವಿರಳವೆನ್ನುವುದನ್ನೂ ಆ ಗಡಿಯಾರಗಳ ನಡುವೆ ಅಸಂಖ್ಯಾತ ವ್ಯತ್ಯಾಸಗಳು ಹೇಗೆ ತಲೆದೋರುವುವೆಂಬುದನ್ನೂ ಒಂದು ಗಡಿಯಾರದ ದರದ ಮೇಲೆ ಪ್ರಭಾವ ಬೀರುವ ಅಸಾಧಾರಣ ಮತ್ತು ವಿವಿಧ ಘಟಕಗಳಿಂದ ತಿಳಿಯಬಹುದು. ಗಡಿಯಾರದ ದರವನ್ನು ನಿಯಂತ್ರಿಸುವ ಭೌತವಿಜ್ಞಾನದ ನಿಯಮಗಳನ್ನೂ ದರವನ್ನು ವ್ಯತ್ಯಾಸ ಮಾಡಬಲ್ಲ ಪ್ರಭಾವಗಳನ್ನೂ ಇಲ್ಲಿ ಸ್ಥೂಲವಾಗಿ ಉಲ್ಲೇಖಿಸಬಹುದು. ನಿರ್ದೇಶಿಸುವ ಬಲದ ವಿಭವಶಕ್ತಿಗೆ (ಪೊಟೆನ್ಷಿಯಲ್ ಎನರ್ಜಿ) ಎದುರಾಗಿ ಚಲಿಸುತ್ತಿರುವ ದ್ರವ್ಯರಾಶಿಯ ಚಲನಶಕ್ತಿಯ (ಕೈನೆಟಿಕ್ ಎನರ್ಜಿ) ವಿನಿಮಯದ ಪರಿಣಾಮವಾಗಿ ಯಾಂತ್ರಿಕೀಯ ಆಂದೋಲನ ಸಂಭವಿಸುತ್ತದೆ. ಲೋಲಕ ಗಡಿಯಾರದಲ್ಲಿ ಮೇಲಕ್ಕೇರಿಸಿದ ಲೋಲಕದ ಗುಂಡಿನ ಮೇಲೆ ಗುರುತ್ವ ಬಲದ ಪರಿಣಾಮದಿಂದ ಮತ್ತು ಸಂತುಲನ ಚಕ್ರದ ಗಡಿಯಾರದಲ್ಲಿ

ರೋಮ ಸ್ಪ್ರಿಂಗಿನ ಸೆಳೆತದಿಂದ ಈ ನಿರ್ದೇಶಿಸುವ ಬಲ ಪ್ರತಿನಿಧಿಸಲ್ಪಡುತ್ತದೆ. ನಿರ್ದೇಶಿಸುವ ಬಲ ಡೋಲಾಯಮಾನ ವಸ್ತುವನ್ನು ಕೇಂದ್ರ ಸ್ಥಾನಕ್ಕೆ ಹಿಂತಿರುಗುವಂತೆ ಮಾಡಲು



ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಗಡಿಯಾರ ಗೋಪುರ, ಮೈಸೂರು

ಪ್ರಯತ್ನಿಸುತ್ತದೆ. ಆದರೆ ಅದರ ದ್ರವ್ಯರಾಶಿಯ ಚಲನಶಕ್ತಿ ಆ ಕೇಂದ್ರಸ್ಥಾನವನ್ನು ಮೀರಿ ಮುಂದೆ ಹೋಗುವಂತೆ ಮಾಡುತ್ತದೆ. ಚಲನ ಉತ್ತಮಣವಾಗುವ ಬಿಂದುಗಳಲ್ಲಿ ವಿಭವಶಕ್ತಿ ಮಾತ್ರ ಇರುತ್ತದೆ. ಕೇಂದ್ರಸ್ಥಾನವನ್ನು ದಾಟುವಾಗ ಚಲನಶಕ್ತಿಯೊಂದೇ ಪ್ರವರ್ತಕವಾಗಿದೆ. ದ್ರವ್ಯರಾಶಿ ಮತ್ತು ರೇಖೀಯ ನಿರ್ದೇಶಿತ ಬಲಗಳು ಮಾತ್ರ ಕ್ರಿಯಾತ್ಮಕವಾಗಿರುವ ಆದರ್ಶ ಡೋಲಾಯಮಾನ ವ್ಯವಸ್ಥೆಗೆ ಕಟ್ಟುನಿಟ್ಟಾಗಿ ಸೈನ್ ಉತ್ಪನ್ನವಿರುವ ಸಂಗತ ಚಲನೆ ಇರುತ್ತದೆ.

**ಗಡಿಯಾರದ ಲಕ್ಷಣಗಳನ್ನು ಅಳೆಯುವಿಕೆ :** ಅಳೆಯವುದು ಎಂದರೆ ಒಂದು ಶಿಷ್ಟಮಾನದೊಂದಿಗೆ ಹೋಲಿಸುವುದು ಎಂದರ್ಥ. ಕಾಲಗಣನೆಯಲ್ಲಿ ಆಗುವ ವಿಚಲನೆಗಳನ್ನು ಅಂದಾಜು ಮಾಡಲು ಆಧುನಿಕ ಕಾಲಮಾಪನ ತಂತ್ರಗಳಲ್ಲಿ ಎರಡು ಭಿನ್ನ ವಿಧಗಳ ಶಿಷ್ಟತೆಗಳನ್ನು (ಸ್ಟ್ಯಾಂಡರ್ಡ್ಸ್) ಉಪಯೋಗಿಸುತ್ತಾರೆ. ಮೊದಲನೆಯದು ಲೋಲಕ ಗಡಿಯಾರ ಅಥವಾ ಸೆಕೆಂಡುಗಳನ್ನು ಬಡಿಯುವ ನಿಯಂತ್ರಣಕಾರಿ. ಇದನ್ನು ಉಪಯೋಗಿಸುವವನು ತನ್ನ ಗಡಿಯಾರದ ಮುಳ್ಳುಗಳ ಸ್ಥಾನವನ್ನು ಪ್ರಧಾನ ಗಡಿಯಾರದೊಂದಿಗೆ (ಮಾಸ್ಟರ್ ಕ್ಲಾಕ್) ಹೋಲಿಸಿ ಅವುಗಳ ನಡುವಣ ವ್ಯತ್ಯಾಸವನ್ನು (ಹಿಂದು ಅಥವಾ ಮುಂದು) ಗುರುತಿಸುತ್ತಾನೆ. ಈ ವ್ಯತ್ಯಾಸವೇ ಗಡಿಯಾರದ ಸ್ಥಿತಿ (ಸ್ಟೇಟ್) ಎಂದು ಹೇಳಬಹುದು. ಮಾರನೆಯ ದಿವಸ ಅದೇ ಕಾಲದಲ್ಲಿ ಈ ಪ್ರಕ್ರಿಯೆಯನ್ನು ಪುನರಾವರ್ತಿಸುವುದಲ್ಲದೆ ಇದೇ ರೀತಿ 24 ಗಂಟೆಗಳಲ್ಲೂ ಎಣಿಕೆಯನ್ನು ಮಾಡುತ್ತಾನೆ. ಎರಡು ಅನುಕ್ರಮ ದಿವಸಗಳಲ್ಲಿ ಗಡಿಯಾರದ ಸ್ಥಿತಿಗಳ ವ್ಯತ್ಯಾಸಕ್ಕೆ ದೈನಿಕ ದರ ಎಂದು ಹೆಸರು. ಇದೊಂದೇ ಗಡಿಯಾರ ನಿಷ್ಕೃಷ್ಟತೆಯ ಕಲ್ಪನೆಯನ್ನು ಕೊಡುವುದಿಲ್ಲ. ಏಕೆಂದರೆ ಉತ್ತಮ ದರ್ಜೆಯ ಗಡಿಯಾರ ಪ್ರತಿ ದಿವಸವೂ 10 ರಿಂದ 30 ಸೆಕೆಂಡುಗಳ ತನಕ ಅವಿಚ್ಛಿನ್ನವಾಗಿ ಮುಂದೋ ಹಿಂದೋ ಹೋಗಬಹುದು.

ದರದಲ್ಲಿಯ ದೈನಿಕ ವ್ಯತ್ಯಾಸವನ್ನು ನಿರ್ಧರಿಸಲು ಉಪಯೋಗಿಸುವ ಎರಡನೆಯ ಯಂತ್ರ ಅತಿ ಆಧುನಿಕವಾದದ್ದು. ಇದಕ್ಕೆ ಕಾಲ ಸಂತುಲನ (ಟೈಂ ಬ್ಯಾಲೆನ್ಸ್) ಎಂದು ಹೆಸರು. ಈ ಯಂತ್ರಗಳು ಕಾರ್ಯ ನಡೆಸುವುದು ಎಲೆಕ್ಟ್ರಾನಿಕ್ಸ್‌ನಿಂದ. ಇವುಗಳಲ್ಲಿ ವೀಕ್ಷಣೆಗಳನ್ನು ಅತಿವೇಗದಿಂದ ಮಾಡಬಹುದು. ಅತ್ಯಂತ ಕುಶಲ ಕೆಲಸಗಾರರ ದೃಷ್ಟಿಗೂ ಬೀಳದೆ ಇರುವಂಥ ದೋಷಗಳನ್ನು ಕಂಡುಹಿಡಿದು ಇವಕ್ಕೆ ಕಾರಣಗಳನ್ನು ವಿಶ್ಲೇಷಿಸುವುದು ಇಲ್ಲಿ ಸಾಧ್ಯವಾಗುತ್ತದೆ. ಎಲೆಕ್ಟ್ರಾನಿಕ್ ಯಂತ್ರದಲ್ಲಿ ಪರೀಕ್ಷಿಸಬೇಕಾದ ಗಡಿಯಾರದ ಬಡಿತಗಳ ಆವರ್ತಾಂಕವನ್ನು ಆಂದೋಲಿಸುತ್ತಿರುವ ಬೆಣಚುಕಲ್ಲಿನ (ಕ್ವಾರ್ಟ್ಸ್) ಹರಗಳನ್ನು ಕಾಲಮಾನವಾಗಿಟ್ಟುಕೊಂಡು ಹೋಲಿಸುತ್ತಾರೆ. ಅಳೆದಂಥ ಫಲಿತಾಂಶಗಳನ್ನು ನಕ್ಷೆಯ ಮೇಲೆ ಗುರುತಿಸಿ ಇಲ್ಲವೇ ಮುಳ್ಳಿನಿಂದ ಇಲ್ಲವೆ ಒಮ್ಮೊಮ್ಮೆ ಮಿಣುಕು ಸಂಜ್ಞೆಯಿಂದ ಪಡೆಯುತ್ತಾರೆ.

**ಸ್ಥಾನ ದೋಷ :** ಗಡಿಯಾರವನ್ನು ವಿವಿಧ ದಿಗ್ವಿನ್ಯಾಸಗಳಲ್ಲಿ (ಓರಿಯೆಂಟೇಷನ್ಸ್) ಇಟ್ಟಾಗ ಅಳೆದ ದರದ ವ್ಯತ್ಯಾಸವೇ ಈ ದೋಷ. ಅಳತೆಗಳಿಗೆ ಉಪಯೋಗಿಸುವ ದಿಗ್ವಿನ್ಯಾಸಗಳು ಹೀಗಿವೆ: ಶಿಖರ ಕೆಳಭಾಗದಲ್ಲಿರುವುದು. ಶಿಖರ ಎಡಕ್ಕೆ, ಮುಖ ಮೇಲ್ಭಾಗವನ್ನಾಗಿ ಮಾಡುವುದು.

**ಕಂಪನವೈಶಾಲ್ಯ (ಆ್ಯಂಪ್ಲಿಟ್ಯೂಡ್) :** ಕೇಂದ್ರಸ್ಥಾನದಿಂದ ಉತ್ತಮಣ ಬಿಂದುವೊಂದಕ್ಕೆ ಚಲಿಸುವಾಗ ಸಂತುಲನ ಚಕ್ರದ ಚಾಪಕ್ಕೆ ಈ ಹೆಸರಿದೆ. ಗಡಿಯಾರದ ದರದ ಮೇಲೆ ಪ್ರಭಾವ ಬೀರುವ ಅನೇಕ ವಸ್ತುಸ್ಥಿತಿಗಳು ಈ ವೈಶಾಲ್ಯವನ್ನು ಅವಲಂಬಿಸುತ್ತವೆ. ಆದ್ದರಿಂದ ಗಡಿಯಾರದ ದರದ ಅನಂತರ ಲಕ್ಷಣಗಳಲ್ಲಿ ಸಂತುಲನ ಚಕ್ರದ ವೈಶಾಲ್ಯ ಅತ್ಯಂತ ಮುಖ್ಯವಾದದ್ದು. ವೈಶಾಲ್ಯವನ್ನು ನಿಷ್ಕೃಷ್ಟವಾಗಿ ಅಳೆಯಲು ಎಲೆಕ್ಟ್ರಾನಿಕ್ ಯಂತ್ರಗಳನ್ನು ಉಪಯೋಗಿಸುತ್ತಾರೆ.

**ಸಮಕಾಲತ್ವ (ಐಸೊಕ್ರಾನಿಸಂ) :** ವಾಡಿಕೆಯ ಪ್ರಕಾರ ಚಿಕ್ಕ ವೈಶಾಲ್ಯವಿರಲಿ ಇಲ್ಲವೇ ದೊಡ್ಡ ವೈಶಾಲ್ಯವಿರಲಿ ಎಲ್ಲ ಆಂದೋಲನಗಳನ್ನು ಒಂದೇ ಸಮವಾದ ಕಾಲದಲ್ಲಿ ಮಾಡುವ ಆದರ್ಶ ಆಂದೋಲಕ ವ್ಯವಸ್ಥೆಯ ಗುಣವನ್ನು ಸಮಕಾಲತ್ವವೆಂದು ತಿಳಿಯಬಹುದು. ಆದ್ದರಿಂದ ದರ ಮತ್ತು ವೈಶಾಲ್ಯಗಳ ನಡುವಣ ಸಂಬಂಧವನ್ನು ಸಮಕಾಲತ್ವ ಉಲ್ಲೇಖಿಸುತ್ತದೆ. ಯಾವ ವ್ಯಾವಹಾರಿಕ ಆಂದೋಲನ ವ್ಯವಸ್ಥೆಯೇ ಆಗಲಿ ಯಥಾರ್ಥವಾದ ಸಮಕಾಲತ್ವವನ್ನು ತೋರಿಸುವುದಿಲ್ಲ. ಆದರ್ಶ ಸಮಕಾಲತ್ವದಿಂದ ವ್ಯತ್ಯಾಸವಾಗುವಿಕೆಗೆ ಅಸಮಕಾಲತ್ವ ಅಥವಾ ಸಮಕಾಲತ್ವದ ದೋಷವೆಂದು ಹೆಸರು. ಗಡಿಯಾರದ ಸಮಕಾಲತ್ವದ ದೋಷ ವೈಶಾಲ್ಯದ ವ್ಯತ್ಯಾಸದಿಂದ ಸಂಭವಿಸಿದ ಎಲ್ಲ ದರ ವ್ಯತ್ಯಾಸಗಳ ಮೊತ್ತ. ಗಡಿಯಾರದ ದಿಗ್ವಿನ್ಯಾಸದಿಂದ ಈ ದೋಷ ಉಂಟಾಗುವಂತಿದ್ದರೆ ಸಮಕಾಲತ್ವದ ದೋಷದ ಮೇಲೆ ಉಷ್ಣತೆಯ ಪರಿಣಾಮ ಕೂಡ ಇದೆಯೆಂಬುದನ್ನು ಗಮನಿಸಬೇಕು. ಸಮಕಾಲತ್ವದ ದೋಷವನ್ನು ತನಿಖೆ ಮಾಡಲು ಸಂಪೂರ್ಣವಾಗಿ ಹೊಸಮಾದರಿಯ ಎಲೆಕ್ಟ್ರಾನಿಕ್ ಉಪಕರಣವನ್ನು ಬಳಸುತ್ತಾರೆ.

**ಉಷ್ಣತಾ ಗುಣಕ :** ಗಡಿಯಾರವನ್ನು ಬಳಸುವಾಗ ಅದು ಸಾಧಾರಣವಾಗಿ ಹೆಚ್ಚು ವ್ಯತ್ಯಾಸಗಳಿರುವ ಉಷ್ಣತೆಗೆ ಗುರಿಯಾಗುತ್ತದೆ. ಚಳಿಗಾಲದಲ್ಲಿ ಹಾಸಿಗೆಯ ಪಕ್ಕದ ಮೇಜದ ಮೇಲೆ ಇಟ್ಟಿರುವ ಗಡಿಯಾರ ಕೆಲವು ಪ್ರದೇಶಗಳಲ್ಲಿ ಹೆಪ್ಪುಗಟ್ಟುವ ಬಿಂದುವಿಗಿಂತ ಕೆಳಗಿರುವ ಉಷ್ಣತೆಗೆ ಒಳಪಡಬಹುದು. ಗಡಿಯಾರವನ್ನು ಸದಾ ಧರಿಸಿಕೊಂಡಿದ್ದಾಗಲೂ ಪರಿಸರದ ಉಷ್ಣತೆಗೆ ತೀವ್ರ ವ್ಯತ್ಯಾಸಗಳು ಉಂಟಾಗಬಹುದು. ಸ್ವಯಂಪರಿಹಾರಕ (ಸೆಲ್ಫ್ ಕಾಂಪೆನ್ಸೇಟರಿ) ರೋಮಸ್ಪ್ರಿಂಗುಗಳನ್ನು ಉಪಯೋಗಿಸಿದರೂ ಬಹುಮಟ್ಟಿಗೆ ಉಷ್ಣತೆಯ ಮೇಲೆಯೇ ದರ ಇನ್ನೂ ಅವಲಂಬಿತವಾಗಿರುತ್ತದೆ. ತುಂಬ ಶಿಷ್ಟಮಟ್ಟವಿರುವ ಗಡಿಯಾರಗಳಿಗೆ ನಿವಾರೋಕ್ಸ್ V ರೋಮಸ್ಪ್ರಿಂಗುಗಳನ್ನು ಅಳವಡಿಸುವುದುಂಟು. ಆಂದೋಲನ ಮಾಡುತ್ತಿರುವ ಸಮುದಾಯದ ಮೇಲೆ ಉಷ್ಣತೆ ಪ್ರತ್ಯಕ್ಷ ಪ್ರಭಾವ ಬೀರುವುದರ ಜೊತೆಗೆ ದರದ ಮೇಲೆ ಅಪ್ರತ್ಯಕ್ಷ ಪ್ರಭಾವವನ್ನು ಕೂಡ ಬೀರುತ್ತದೆ. ಉಷ್ಣತೆಗೆ ವ್ಯತ್ಯಾಸವಾದಂತೆಲ್ಲ



ಗೋಡೆ ಗಡಿಯಾರದ ಕೆಲವು ಮಾದರಿಗಳು

ತೈಲದ ಶ್ಯಾನತೆಯೂ ವ್ಯತ್ಯಾಸಹೊಂದಿ ಅದರ ಪರಿಣಾಮವಾಗಿ ಘರ್ಷಣೆ ಮತ್ತು ವೈಶಾಲ್ಯಗಳು ವ್ಯತ್ಯಾಸವಾಗುತ್ತವೆ. ಸಮಕಾಲತ್ವದೋಷದ ಕಾರಣದಿಂದ ಇದು ಇನ್ನೂ ಹೆಚ್ಚು ದರ ವ್ಯತ್ಯಾಸಗಳನ್ನು ಉಂಟುಮಾಡುತ್ತದೆ. ಆದರೆ ಇವೆಲ್ಲ ಪರಿಹಾರಕ ಸ್ವಭಾವದವುಗಳು.

ನೀರನ್ನು ಪ್ರತಿರೋಧಿಸುವ ಗಡಿಯಾರಗಳು : 20 ಮೀ. ಆಳದ ನೀರಿನಲ್ಲಿ 90 ಸೆಕೆಂಡುಗಳ ತನಕ ಮುಳುಗಿಸಿದರೂ ಕೆಡದೆ ಇರುವಂಥ ಕೈಗಡಿಯಾರಕ್ಕೆ ನೀರನ್ನು ಎದುರಿಸುವ ಸಾಮಾರ್ಥ್ಯ ಉಂಟು ಎಂದು ಇಂಡಿಯನ್ ಸ್ಟ್ಯಾಂಡರ್ಡ್ಸ್ ಆರ್ಗನೈಸೇಷನ್ ವ್ಯಾಖ್ಯಿಸಿದೆ. ಗಡಿಯಾರಕ್ಕೆ ಇರಬಹುದಾದ, ನೀರನ್ನು ಪ್ರತಿರೋಧಿಸುವ ಸಾಮರ್ಥ್ಯವನ್ನು ಪರೀಕ್ಷಿಸಲು ಅನೇಕ ವಿಧಾನಗಳನ್ನು ಈಗ ಬಳಸುತ್ತಾರೆ. ನೀರಿನಲ್ಲಿ ಒತ್ತಡದ ಪರೀಕ್ಷೆಗಳನ್ನೂ ವಾಯುವಿನಲ್ಲಿ ಭಾಗಶಃ ನಿರ್ವಾತ ಪರೀಕ್ಷೆಗಳನ್ನೂ ನಡೆಸಲೂ ಉಪಕರಣಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಸಂಪೂರ್ಣವಾಗಿ ವಾಯುವನ್ನು ರೋಧಿಸುವ ಮತ್ತು ನೀರನ್ನು ಒಳಗೆ ಬಿಡಲಾರದಷ್ಟು ಬಿಗಿಯಾಗಿರುವ ಕೋಶ ಯಾವುದೂ ಇಲ್ಲ. ಗಾಜಿನ ಬದಲಾಗಿ ಪಾರದರ್ಶಕ ಪ್ಲಾಸ್ಟಿಕ್‌ವಸ್ತು, ಪ್ಲೆಕ್ಸಿಗ್ಲಾಸ್‌ನಂಥವನ್ನು ಬಳಸುತ್ತಾರೆ. ಆದರೆ ಪ್ರಯೋಗಶಾಲೆಗಳಲ್ಲಿ ನಡೆಸಿದ ಪರೀಕ್ಷೆಗಳಿಂದ ಈ ರೀತಿಯ ವಸ್ತುಗಳು ಹೆಚ್ಚು ಕಡಿಮೆ ಪಾರಗಮ್ಯಗಳೆಂದು(ಪರ್ಮಿಯೆಬಲ್ಸ್) ಗೊತ್ತಾಗಿದೆ. ಕಾಲ ಕಳೆದಂತೆ ಈ ವಸ್ತುಗಳು ವ್ಯತ್ಯಾಸಗಳನ್ನು ಹೊಂದುವುದರಿಂದ ಅವು ತಮ್ಮ ಸಂರಕ್ಷಣಗುಣಗಳನ್ನು ಕಳೆದುಕೊಳ್ಳುತ್ತವೆ.

**ಧಕ್ಕಾ ಪ್ರತಿರೋಧನ (ಷಾಕ್ ರೆಸಿಸ್ಟೆನ್ಸ್) :** ಸಂತುಲನದ ಗೂಟದ ಕೀಲಕಗಳು ರೋಮದ ಗಾತ್ರಕ್ಕೆ ಸರಿಸಮವಾಗಿ ಅಥವಾ ಅದಕ್ಕಿಂತ ಸ್ವಲ್ಪ ದೊಡ್ಡದಾಗಿರುತ್ತವೆ. ಧಕ್ಕೆ ಒದಗಿದಾಗ ಅಥವಾ ಗಡಿಯಾರ ಕೆಳಕ್ಕೆ ಬಿದ್ದ ಸಂದರ್ಭಗಳಲ್ಲಿ ಚಲಿಸುವ ಈ ಭಾಗವೇ ಅಪಾಯಕ್ಕೊಳಗಾಗುತ್ತದೆ. ಅತಿ ಪ್ರಬಲವಾದ ಧಕ್ಕೆ ಉಂಟಾದಾಗ ಕೂಡ ಗಡಿಯಾರವನ್ನು ಪರಿಣಾಮಕಾರಿಯಾಗಿ ರಕ್ಷಿಸುವಂಥ ಅನೇಕ ಧಕ್ಕಾ ಪ್ರತಿರೋಧಕ ವಿಧಾನಗಳ ವ್ಯವಸ್ಥೆಗಳನ್ನು ಪರಿಶೋಧಿಸಿದ್ದಾರೆ.

**ಗಡಿಯಾರದ ಮೇಲೆ ಕಾಂತತ್ವದ ಪರಿಣಾಮ :** ಗಡಿಯಾರ ಸಂಪೂರ್ಣವಾಗಿ ಕಾಂತೀಕರಿಸಲ್ಪಡುವುದಿಲ್ಲ. ಅದರಲ್ಲಿರುವ ಪ್ರಧಾನ ಸ್ಪ್ರಿಂಗ್, ಕೀಲಿಕೊಡುವ ಯಂತ್ರವಿನ್ಯಾಸ, ನಿಯಂತ್ರಣಕಾರಿಯ ಸ್ಕ್ರೂಮೊಳೆಗಳು, ತಪ್ಪಿಸಿಕೊಳ್ಳುವಿಕೆ ಮತ್ತು ಸಂತುಲನ ಇವನ್ನು ಒಳಗೊಂಡಿರುವ ಉಕ್ಕಿನ ಭಾಗಗಳು ಮಾತ್ರ ಇದಕ್ಕೆ ಒಳಪಡುತ್ತವೆ. ಗಡಿಯಾರದ ಮೇಲೆ ಕಾಂತತ್ವದಿಂದ ಆಗುವ ಪರಿಣಾಮವನ್ನು ಊಹಿಸುವುದು ಕಷ್ಟವೇನಲ್ಲ. ಗಡಿಯಾರದ ದರದ ಮೇಲೆ ಕಾಂತತ್ವ ಎರಡು ಮುಖ್ಯವಾದ ಪರಿಣಾಮಗಳನ್ನು ಬೀರುತ್ತದೆ. ಮೊದಲನೆಯದು ಅಲ್ಪಕಾಲದ ಪರಿಣಾಮ. ಇದು ಗಡಿಯಾರ ಕಾಂತ ಕ್ಷೇತ್ರದ ಸಮೀಪಕ್ಕೆ ಬಂದಾಗ, ಉದಾಹರಣೆಗೆ ತೀಕ್ಷ್ಣವಾದ ಕಾಂತದ ಧ್ರುವಗಳಿಂದ ಒಂದು ಅಥವಾ ಎರಡು ಸೆಂ.ಮೀ.ನೊಳಗೆ ಬಂದಾಗ, ಸಂಭವಿಸುವ ಪರಿಣಾಮ. ಹೀಗಾದಾಗ ಗಡಿಯಾರ ಬಹುಶಃ 30 ಅಥವಾ 40 ಗೌಸ್ ಕ್ಷೇತ್ರದೊಳಗೆ ಇಟ್ಟಹಾಗಾಗುತ್ತದೆ. ರೂಢಿಯಲ್ಲಿ ಒಂದು ಗಡಿಯಾರ ಗುರಿಪಡಿಸಲ್ಪಡಬಹುದಾದ ಅತ್ಯಂತ ತೀಕ್ಷ್ಣವಾದ ಕ್ಷೇತ್ರ ಇದೇ. ದ್ವಿಲೋಹರಚಿತ (ಉಕ್ಕು ಮತ್ತು ಹಿತ್ತಾಳೆ) ಸಂತುಲನ ಮತ್ತು ಉಕ್ಕಿನಿಂದ ಮಾಡಿದ ಸಂತುಲನ ಸ್ಪ್ರಿಂಗ್ ಇರುವ ಒಂದು ಗಡಿಯಾರ ಈ ಕ್ಷೇತ್ರದಲ್ಲಿ ನಿಂತೇ ಹೋಗುತ್ತದೆ. ಇದಕ್ಕಿಂತ ದುರ್ಬಲ ಕ್ಷೇತ್ರದಲ್ಲಿ (ಸು. 10 ಗೌಸ್) ಗಡಿಯಾರ ಹೆಚ್ಚು ವ್ಯತ್ಯಾಸಗಳನ್ನು ತೋರಿಸುತ್ತದೆ. ಬಹುಶಃ 24 ಗಂಟೆಗಳಲ್ಲಿ 500 ರಿಂದ 800 ಸೆಕೆಂಡುಗಳಷ್ಟು ಮುಂದೆ ಹೋಗಬಹುದು. ಕ್ಷೇತ್ರದಿಂದ ಹೊರಕ್ಕೆ ತೆಗೆದುಕೊಂಡು ಹೋದಮೇಲೆ ಗಡಿಯಾರ ಸ್ವಲ್ಪ ಮಟ್ಟಿಗೆ ಕಾಂತತ್ವವನ್ನು ಉಳಿಸಿಕೊಂಡಿರುತ್ತದೆ. ಇದು ಗೌಣ. ಈ ಉಳಿಕೆಯ ಪರಿಣಾಮ ಉಳಿದೇ ಹೋಗುವುದರಿಂದ ಗಡಿಯಾರ ಸಾಮಾನ್ಯವಾಗಿ ಹಿಂದೆಹೋಗುತ್ತಲೇ ಇರುತ್ತದೆ. ಗಡಿಯಾರದ ಭಾಗಗಳನ್ನು ಕಾಂತೀಕರಣವಾಗದ ಮಿಶ್ರಲೋಹಗಳಿಂದಾಗಲಿ ಕಾಂತತತ್ವದಿಂದ ಪರಿಣಾಮ ಹೊಂದದಿರುವ ಮಿಶ್ರಲೋಹಗಳಿಂದಾಗಲೀ ತಯಾರು ಮಾಡುವುದೇ ಇಲ್ಲಿ ಬಹು ಸರಳವಾದ ಪರಿಹಾರ. ಇದು ಸಂತುಲನ, ಸಂತುಲನ ಸ್ಪ್ರಿಂಗ್ ಮತ್ತು ಕೆಲವು ಸಂದರ್ಭಗಳಲ್ಲಿ ಸನ್ನೆ ಹಾಗೂ ಪ್ಯಾಲೆಟುಗಳಿಗೆ ಅನ್ವಯಿಸುತ್ತದೆ. ಬೆರಿಲಿಯಂ, ತಾಮ್ರ, ಹಿತ್ತಾಳೆ ಅಥವಾ ನಿವೊರಾಕ್ಸ್‌ನಂಥ ಪರಿಹಾರಕ ಸ್ಪ್ರಿಂಗುಗಳೊಡನೆ ಸಂಗುಣಿತವಾದ ಜರ್ಮನ್ ಸಿಲ್ವರ್ ಇವೇ ಮುಂತಾದ ಮಿಶ್ರಲೋಹದಿಂದ ಸಂತುಲನವನ್ನು ತಯಾರುಮಾಡಬಹುದು. ಚಲನೆಯ ಭಾಗವನ್ನು ಮೃದುಕಬ್ಬಿಣ ಅಥವಾ ಸ್ಟೇನ್‌ಲೆಸ್ ಉಕ್ಕಿನಂಥ ವಸ್ತುವಿನಿಂದ ಮಾಡಿದ ಕೋಶದೊಳಗೆ ಹುದುಗಿಸಿ ಕೂಡ ಕಾಂತತ್ವದ ಪರಿಣಾಮವನ್ನು ತಪ್ಪಿಸಬಹುದು. ಒಂದು ಅರ್ಥದಲ್ಲಿ, ಕೋಶ (ಕೇಸ್) ಕಾಂತಕ್ಷೇತ್ರವನ್ನು ಶೋಷಿಸುವುದರಿಂದ, ಚಲನೆಗೆ ಸಂರಕ್ಷಣಾ ತೆರೆಯೊಂದನ್ನು ರೂಪಿಸುತ್ತದೆ.

**ಕೈ ಗಡಿಯಾರಗಳ ಮಾದರಿಗಳು :** ಕಾಲಲೇಖಿಗಳು (ಕ್ರೋನೋಗ್ರಾಫ್) : ಕಾಲಲೇಖಿ ಒಂದು ಸಂಪೂರ್ಣ ಗಡಿಯಾರ. ಇದು ವ್ಯವಸ್ಥಿತ ಕಾಲದ ತನಕ ನಡೆಯುತ್ತದೆ. ಇದರಲ್ಲಿ ಗಂಟೆಗಳನ್ನು, ಮಿನಿಟುಗಳನ್ನು, ಸೆಕೆಂಡುಗಳನ್ನು ಮತ್ತು ಸೆಕೆಂಡುಗಳ ಭಿನ್ನಾಂಶಗಳನ್ನು ಅಳೆಯಲು ಯಂತ್ರಭಾಗಗಳನ್ನು ಅಳವಡಿಸುತ್ತಾರೆ. ಸೆಕೆಂಡ್ ಮತ್ತು ಅದರ ಭಿನ್ನಾಂಶಗಳನ್ನು ಒಂದು ಉದ್ದವಾದ ಸೆಕೆಂಡ್ ಮುಳ್ಳು ತೋರಿಸುತ್ತದೆ. ಈ ಮುಳ್ಳನ್ನು ಚಲಿಸುವಂತೆ ಮಾಡಬಹುದು, ನಿಲ್ಲಿಸಬಹುದು ಮತ್ತು ಅದರ ಪ್ರಾರಂಭಿಕ ಸೊನ್ನೆ ಸ್ಥಿತಿಗೆ ಹಿಂದಕ್ಕೆ ತರಬಹುದು. ಸೆಕೆಂಡುಗಳನ್ನು ಭಾಗಮಾಡಿರುವ ಕಾಲಲೇಖಿಗಳಲ್ಲಿ

ಕೈಗಡಿಯಾರದ ಕೆಲವು ಮಾದರಿಗಳು

ಎರಡು ಕಾಲಲೇಖೀ ಸೆಕೆಂಡ್ ಮುಳ್ಳುಗಳಿವೆ. ಇವೆರಡೂ ಒಟ್ಟಿಗೆ ಚಲಿಸಲು ಪ್ರಾರಂಭಿಸುತ್ತವೆ. ಅವುಗಳಲ್ಲಿ ಒಂದನ್ನು ನಿಲ್ಲಿಸಿ ಸೂಚ್ಯಂಕವನ್ನು ತೆಗೆದುಕೊಂಡು ಆಮೇಲೆ ಇನ್ನೊಂದನ್ನು ಅನುಸರಿಸಿ ಹೋಗುವಂತೆ ಮಾಡಬಹುದು. ಕಾಲಲೇಖೀಯ ಯಂತ್ರಭಾಗಗಳನ್ನು ಕೈಗಡಿಯಾರಕ್ಕೂ ಉಪಯುಕ್ತವಾಗುವಂತೆ ವ್ಯತ್ಯಾಸಮಾಡಲಾಗಿದೆ. ಜನಸಾಮಾನ್ಯರ ಮನಸ್ಸಿನಲ್ಲಿ ಕಾಲಲೇಖೀ ಹೆಚ್ಚು ಕಡಿಮೆ ಕಾಲಮಾಪಿಗೆ (ಕ್ರೋನೋಮೀಟರ್) ಪರ್ಯಾಯ ಎಂಬ ಭಾವ ಉಂಟು. ಇದು ಸ್ವಲ್ಪ ಗೊಂದಲಕ್ಕೆ ಕಾರಣವಾಗುತ್ತದೆ. ನಿಷ್ಕೃಷ್ಟ ಗಡಿಯಾರಕ್ಕೆ ಕಾಲಮಾಪಿಯೆಂದು ಹೆಸರು. ಇದನ್ನು ಅನೇಕ ರೀತಿಯ ಪರೀಕ್ಷೆಗಳಿಗೆ ಗುರಿಪಡಿಸಿ ಕಾಲಮಾಪೀ ವೀಕ್ಷಣಾಲಯ ಅಥವಾ ಗಡಿಯಾರದ ನಿರ್ಧರಿಸುವ ಕಾರ್ಯಾಲಯದಲ್ಲಿ ಇದಕ್ಕೆ ಒಂದು ಯೋಗ್ಯತಾ ಪತ್ರವನ್ನು ನೀಡುತ್ತಾರೆ. ಸಾಮಾನ್ಯವಾದ ನಿಲ್ಗಡಿಯಾರದಲ್ಲಿ (ಸ್ಟಾಪ್‌ವಾಚ್) ಸರಳಗೊಳಿಸಿರುವ ಯಂತ್ರಭಾಗವಿದೆ. ಇದು ಕೂಡ ಸಾಮಾನ್ಯ ಕಾಲದ ಅಂತರವನ್ನು ಅಳೆಯುತ್ತದೆ. ಆದರೆ ಸಂತುಲನವನ್ನು ಆರಂಭಿಸುವುದರಿಂದ ಚಲನೆಯನ್ನು ಆರಂಭಿಸುವ ಮತ್ತು ನಿಲ್ಲಿಸುವ ಕಾರ್ಯಗಳನ್ನು ನೇರವಾಗಿ ಮಾಡಬಹುದು. ನಿಲ್ಗಡಿಯಾರ



ಮೇಜು ಗಡಿಯಾರದ ಕೆಲವು ಮಾದರಿಗಳು

ಮಾಡುವ ಕಾರ್ಯಗಳಿಗೆ ಕಾಲಲೇಖಿಯಷ್ಟು ಹೆಚ್ಚು ಬೆಲೆಯ ಪದಾರ್ಥಗಳನ್ನು ಉಪಯೋಗಿಸುವ ಅಗತ್ಯವಿಲ್ಲ. ನಿಲ್ಗಡಿಯಾರ ಮತ್ತು ಕಾಲಲೇಖಿಗಳ ನಡುವೆ

ಸಾರಭೂತವಾದ ವ್ಯತ್ಯಾಸವಿಷ್ಟೆ : ನಿಲ್ಗಡಿಯಾರವನ್ನು ನಿಲ್ಲಿಸಿದಾಗ ಮುಂದೆ ಅದು ಏನು ಸೂಚನೆಗಳನ್ನು ಕೊಡುವುದಿಲ್ಲ ; ಆದರೆ ಕಾಲಲೇಖಿ ಸಾಧಾರಣವಾದ ಮುಳ್ಳುಗಳಿಂದ ಕಾಲವನ್ನು ತೋರಿಸುತ್ತ ಮುಂದುವರಿಯುತ್ತದೆ **(ನೋಡಿ– ಕಾಲಲೇಖಿ ಮತ್ತು ಕಾಲಮಾಪಿ)**.

**ಸ್ವಯಂ ಕೀಲಿ ಕೊಟ್ಟುಕೊಳ್ಳುವ ಗಡಿಯಾರ :** ಕೆಲವೇ ಗ್ರಾಮುಗಳಷ್ಟು ತೂಕದ ಒಂದು ಕಿರಿಯ ತೂಕ ಈ ಗಡಿಯಾರಕ್ಕೆ ಲಗತ್ತಾಗಿರುವುದು. ಇದರಲ್ಲಿ ಒಂದು ತೆಳುವಾದ ತಟ್ಟೆ ಅಳವಡಿಸಲಾಗಿದೆ. ಈ ತಟ್ಟೆ ಆಧಾರಕಗಳ ರಂಧ್ರಗಳಲ್ಲಿ ಚಲನಭಾಗಗಳ ನೇರ ಮೇಲೆ ಮುಕ್ತವಾಗಿ ಆಂದೋಲಿಸುತ್ತ ಕಾರ್ಯ ನಡೆಸುತ್ತದೆ. ಇದೇ ಸ್ವಯಂ ಕೀಲಿಕೊಟ್ಟುಕೊಳ್ಳುವ ಗಡಿಯಾರದ ಕ್ರಿಯಾವಿನ್ಯಾಸ. ತೋಳನ್ನು ಅತ್ಯಲ್ಪವಾಗಿ ಅಲುಗಾಡಿಸಿದರೂ ಈ ತೂಕ ಆಂದೋಲಿಸುತ್ತದೆ ಇಲ್ಲವೇ ತಿರುಗುತ್ತದೆ. ಗಿಯರು ಚಕ್ರಗಳ ಸಮುದಾಯದಿಂದ ಈ ಚಲನೆ ಉರುಳೆ ಅರ್ಬರಿಗೆ ವರ್ಗಾಯಿಸಲ್ಪಟ್ಟು ಅಲ್ಲಿಂದ ಗಡಿಯಾರದ ಪ್ರಧಾನ ಸ್ಪ್ರಿಂಗಿಗೆ ತಲಪುತ್ತದೆ. ಗಡಿಯಾರವನ್ನು ಧರಿಸಿರುವವನ ತೋಳಿನ ಪ್ರತಿಯೊಂದು ಚಲನೆಯಿಂದಲೂ ಪ್ರಧಾನ ಸ್ಪ್ರಿಂಗ್ ನಿಧಾನವಾಗಿ, ಆದರೆ ಖಂಡಿತವಾಗಿ, ಸುತ್ತಿಕೊಳ್ಳುತ್ತ ಹೋಗುತ್ತದೆ. ಅದು ಸಂಪೂರ್ಣವಾಗಿ ಸುತ್ತಿಕೊಂಡ ಮೇಲೆ ಒಂದು ಬುದ್ಧಿವಂತಿಕೆಯ ಹಂಚಿಕೆಯಿಂದ ಅದು ಉರುಳೆಯೊಳಕ್ಕೆ ಸುತ್ತಿಕೊಳ್ಳುವಂತೆ ಮಾಡುತ್ತದೆ. ಹೀಗಾಗುವುದರಿಂದ ಪ್ರತಿನಿತ್ಯ ಗಡಿಯಾರಕ್ಕೆ ಕೀಲಿಕೊಡುವ ಆವಶ್ಯಕತೆ ಇಲ್ಲ. ಈ ಗಡಿಯಾರಗಳಲ್ಲಿ, ಕಡೇ ಪಕ್ಷ ಹಗಲಿನಲ್ಲಾದರೂ ಪ್ರಧಾನಸ್ಪ್ರಿಂಗ್ ಹೆಚ್ಚು ಕಡಿಮೆ ಸಂಪೂರ್ಣವಾಗಿ ಸುತ್ತಿರುತ್ತದೆ. ಇದು ಗಡಿಯಾರ ಸರಿಯಾದ ಕಾಲವನ್ನು ತೋರಿಸುವುದನ್ನು ಉತ್ತಮಗೊಳಿಸುತ್ತದೆ. ಏಕೆಂದರೆ ಇದು ಸಂತುಲನದ ವೈಶಾಲ್ಯವನ್ನು ಅತ್ಯಂತ ಅಲ್ಪವಾಗಿರುವಂತೆ ಪೋಷಿಸುತ್ತದೆ. ಸ್ವಯಂ ಕೀಲಿ ಗಡಿಯಾರಕ್ಕೆ ಒಂದು ಶಿಖರ ಮತ್ತು ಗೂಟಗಳನ್ನು ಸಹ ಅಳವಡಿಸಲಾಗಿದೆ. ಇವುಗಳಿಂದ ಮುಳ್ಳುಗಳನ್ನು ತಿರುಗಿಸಬಹುದು.

**ಅಲಾರಂ ಹೊಡೆಯುವ ಕೈಗಡಿಯಾರ :** ಕೈಗಡಿಯಾರದೊಳಗೆ ಇರುವ ಸ್ಥಳಾವಕಾಶ ಅತ್ಯಲ್ಪ. ಇದರಲ್ಲಿ ಗಂಟೆ ಬಾರಿಸುವ ಸಾಧನ ಅಂದರೆ ಗಂಟೆ ಮತ್ತು ಕೊಡತಿ. ಇವನ್ನು ಜೋಡಿಸುವುದು ಕಷ್ಟ. ಆದರೂ ಆಧುನಿಕ ಕೈಗಡಿಯಾರಗಳಿಗೆ ಅಲಾರಂ ಯಂತ್ರವಿನ್ಯಾಸವನ್ನು ಸಹ ಪೋಣಿಸುವುದು ಸಾಧ್ಯವಾಗಿದೆ. ಇದರ ಸಮಸ್ಯೆಗಳನ್ನು ನಿಭಾಯಿಸಲು ಅನೇಕ ಪರಿಹಾರಗಳನ್ನು ಕಂಡುಹಿಡಿದಿದ್ದಾರೆ. ಅವುಗಳಲ್ಲಿ ಸ್ಪರ್ಶೇಂದ್ರಿಯದ ಪ್ರಯೋಜನವನ್ನು ಉದಾರಿಸಬಹುದು. ಮುಂಗೈಯನ್ನು ಮುಚ್ಚಿಕೊಂಡಿರುವ ಕೋಶದ ಹಿಂಭಾಗದಲ್ಲಿ ಮುಂದಕ್ಕೆ ಚಾಚಿಕೊಂಡಿರುವ ಸ್ವಲ್ಪಮಟ್ಟಿಗೆ ಚೂಪಾಗಿರುವ ಗುಂಡಿ ಅಥವಾ ಸಣ್ಣ ಇಕ್ಕಳ ಇವು ಅಲಾರಂ ಬಿಡುಗಡೆಯಾದಾಗ ಚಲಿಸಲು ಉಪಕ್ರಮಿಸುತ್ತವೆ. ಚರ್ಮದೊಂದಿಗೆ ಸಂಪರ್ಕ ಹೊಂದಿರುವ ಇಕ್ಕಳ ಅಥವಾ ಗುಂಡಿಯ ಚಲನೆ ಗಡಿಯಾರವನ್ನು ಕಟ್ಟಿಕೊಂಡವನಿಗೆ ಎಚ್ಚರಿಕೆ ನೀಡುತ್ತವೆ. ಇದು ಅಲಾರಮಿನ ಕೆಲಸವನ್ನೇ ಮಾಡಿದಂತಾಯಿತು. ಆದರೆ ಈ ತರಹದವುಗಳು ಅಷ್ಟೇನೂ ಫಲಕಾರಿಯಾಗಿಲ್ಲ. ಬೇರೆ ಮಾದರಿಯವುಗಳನ್ನು ನಿರ್ಮಿಸಿದ್ದಾರೆ. ಈ ರೀತಿಯವುಗಳಲ್ಲಿ ಝೇಂಕಾರ ಮಾಡುವಂಥವು ಜನಪ್ರಿಯವಾಗಿವೆ. ಇಂಥ ಒಂದು ಸಾಂಪ್ರದಾಯಿಕ ಗಡಿಯಾರದಲ್ಲಿ ಇರುವ ಭಾಗಗಳಿವು : ಶಕ್ತಿ ಆಕರ, ಎಲೆಕ್ಟ್ರಾನಿಕ್ ಸಂರಕ್ಷಕ ಮಂಡಲ, ಆಂದೋಳಕ (ರೋಮ ಸ್ಪ್ರಿಂಗ್ ಸಮೇತ ಸಂತುಲನ) ಮತ್ತು ಎಣಿಸುವ ಹಾಗೂ ಸೂಚಿಸುವ ಯಾಂತ್ರಿಕ ವ್ಯವಸ್ಥೆ ; ತಾರೀಖುಪಟ್ಟಿಗೆ ಬೇಕಾದ ಯಾಂತ್ರಿಕ ವ್ಯವಸ್ಥೆ ಸಹ ಇರಬಹುದು.

**ಎಲೆಕ್ಟ್ರಾನಿಕ್ ಶ್ರುತಿ–ಕವಲು ಗಡಿಯಾರ :** ಇದರಲ್ಲಿ ಸಂತುಲನವೇ ಇರುವುದಿಲ್ಲ. ಒಂದು ಶ್ರುತಿಕವಲನ್ನು (ಟ್ಯೂನಿಂಗ್ ಫೋರ್ಕ್) ಅನುನಾದಕವಾಗಿ (ರೆಸೋನೇಟರ್) ಇಲ್ಲಿ ಉಪಯೋಗಿಸಿದೆ. ಆದರೆ ಈ ಶ್ರುತಿ–ಕವಲು ಬಳಕೆಯಲ್ಲಿರುವ ಸರಳವಾದ ಕವಲಿನಂತಿಲ್ಲ. ಇದರ ರಚನೆ ಹೆಚ್ಚು ಜಟಿಲವಾದ್ದು. ಇದನ್ನು ದಿಕ್ಪಲ್ಲಟ (ಡಿಫ್ಲೆಕ್ಷನ್) ಅನುವಾದಕನೆಂದು ಕರೆಯುವುದು ಹೆಚ್ಚು ಸಮಂಜಸ. ಇದು ಚಲಿಸುವ ಅಂಗವಾಗಿಯೂ ಕೆಲಸ ಮಾಡುತ್ತದೆ. ಎಲೆಕ್ಟ್ರಾನಿಕ್ ಮಂಡಲವೊಂದು ಶ್ರುತಿ–ಕವಲಿನ ಆಂದೋಲನಗಳನ್ನು ಪೋಷಿಸುತ್ತದೆ.

ಈ ಮಾದರಿಯ ಗಡಿಯಾರದ ಕಾರ್ಯರೂಪದ ನಕ್ಷೆ ಮುಂದೆ ಬರೆದಂತಿದೆ:

ಶಕ್ತಿಯ ಆಕರ
(ಕೋಶ)
↓
ಪೋಷಿಸುವ ಅಂಗ
(ಎಲೆಕ್ಟ್ರಾನಿಕ್ ಪೋಷಣ ಮಂಡಲ)
↓
ವಿದ್ಯುತ್ ಗತಿಕ ಟ್ರಾನ್ಸ್‌ಡ್ಯೂಸರ್
(ಸುರುಳಿಗಳು ಮತ್ತು ಕಾಂತಗಳು)
↓
ಅನುವಾದಕ ಮತ್ತು ಚಾಲಕ (ಮೋಟರ್)
(ಶ್ರುತಿ–ಕವಲು) ಕಾಲವನ್ನು ಕ್ರಮಪಡಿಸುವಿಕೆ
↓ ↓
ಎಣಿಸುವ ಅಂಗ ಸೂಚಕ ಅಂಗ
(ಟಿಕ್ ಟಿಕ್ ಶಬ್ದಗಳು, ಎಣಿಕೆ ಚಕ್ರ ಮತ್ತು ಸಾಲು) → (ಮುಳ್ಳುಗಳು, ಮುಖ, ತಾರೀಖು ಕಿಂಡಿಯೊಡನೆ)
↑
ತಾರೀಖನ್ನು ಕ್ರಮಪಡಿಸುವಿಕೆ

ಎಲೆಕ್ಟ್ರಾನಿಕ್ ಪೋಷಣ ಮಂಡಲ (ಮೇಂಟನೆನ್ಸ್ ಸರ್ಕ್ಯೂಟ್) ಮತ್ತು ಯಾಂತ್ರಿಕ ಅನುನಾದಕಗಳ ನಡುವಣ ಸಂಬಂಧ ವಿದ್ಯುದ್ಗತಿಕ (ಎಲೆಕ್ಟ್ರೊಡೈನಮಿಕ್)




ಚಿತ್ರ 6 ಕ್ವಾರ್ಟ್ಸ್ ಗಡಿಯಾರದ ಕಾರ್ಯನಿರೂಪಣೆ 1 ಕೋಶ–ಶಕ್ತಿಯ ಆಕರ, 2 ಕ್ವಾರ್ಟ್ಸ್ ಪೋಷಕ ಮಂಡಲ, ಕೋಶದಿಂದ ಕ್ವಾರ್ಟ್ಸಿಗೆ ಶಕ್ತಿ ಪೂರೈಕೆ ಆಗುವುದರಿಂದ ಕ್ವಾರ್ಟ್ಸ್ ಕಂಪಿಸುವುದು, 3 ಕ್ವಾರ್ಟ್ಸ್. ಇದನ್ನು ನಿರ್ವಾತ ಹಾಗೂ ಮೊಹರು ಮಾಡಿದ ಕವಚದೊಳಗೆ ಇಡಲಾಗಿದೆ. ದಕ್ಷೆಯಿಂದ ಪ್ರಭಾವಿತವಾಗದಿರಲು ಕ್ವಾರ್ಟ್ಸನ್ನು ಪುಟಿತ ದಾರದಿಂದ ತೂಗಿದೆ. 4 ಕ್ವಾರ್ಟ್ಸ್ ಕಂಪನದ ಆವರ್ತಾಂಕ 8.192 Hz, 5 ಈ ಕಂಪನವನ್ನು ಒಂದು ಫ್ರೀಕ್ವೆನ್ಸಿ ಡಿವೈಸರ್ ಸರ್ಕ್ಯೂಟಿನಿಂದ ಕಡಿಮೆ ಮಾಡಲಾಗುತ್ತದೆ. 6. ಈ ಫ್ರೀಕ್ವೆನ್ಸಿ ಸರ್ಕ್ಯೂಟಿನಿಂದ ಹೊರಬರುವಾಗ ಆವರ್ತಾಂಕ ಕೇವಲ 256 Hz ಇದನ್ನು ಒಂದು ಕಮಾಂಡ್ ಸರ್ಕ್ಯೂಟ್ ಮೂಲಕ (7ಕ್ಕೆ) ವರ್ಗಾಯಿಸಲಾಗುವುದು, 7 ಅನುನಾದೀ ಸೂಕ್ಷ್ಮ ಮೋಟರ್ (ರೆಸೋನೇಟಿಂಗ್ ಮೈಕ್ರೊಮೋಟರ್ಸ್). ಇದರಲ್ಲಿಯ ತಂತಿಯ ದಪ್ಪ 1/50 ಮಿ.ಮೀ. (ಮನುಷ್ಯರೋಮ 7/100 ಮಿ.ಮೀ). 8 ಕಂಪನಗಳನ್ನು ಮೋಟರಿನಿಂದ 256– ಹಲ್ಲುಗಳಿರುವ ಮತ್ತು ಒಂದು ಸೆಕೆಂಡಿನಲ್ಲಿ ಒಂದು ಪೂರ್ಣ ಸುತ್ತನ್ನು ಪೂರೈಸುವ ಚಕ್ರಕ್ಕೆ ವರ್ಗಾಯಿಸಲಾಗುವುದು, 9 ಅತಿವೇಗದ ಈ ಆವರ್ತನೆಗಳನ್ನು ಮುಳ್ಳುಗಳನ್ನೂ ನಡೆಸುವ ಒಂದು ಗಿಯರು ಸಮುದಾಯ ಮಂದಗೊಳಿಸುತ್ತದೆ. ಕಾಲ ಹಾಗೂ ತಾರೀಖು ಸರಿಪಡಿಸುವಿಕೆಯನ್ನು ನಿಷ್ಕೃಷ್ಟವಾಗಿ ಮಾಡಲು ಒಂದು ವಿಶಿಷ್ಟ ಸಾಧನ ಸಹ ಉಂಟು.

ಟ್ರಾನ್ಸ್‌ಡ್ಯೂಸರಿನಿಂದ ಕಲ್ಪಿಸಿದೆ. ಎಣಿಕೆಯ ಅಂಗ ಶ್ರುತಿ–ಕವಲಿನ ಸಮಾನ ಉದ್ದದ ಕಂಪನಗಳನ್ನು ಎಣಿಸುತ್ತದೆಯಲ್ಲದೆ ಈ ಸಂಖ್ಯೆಯನ್ನು ಗಂಟೆಗಳು, ಮಿನಿಟುಗಳು ಮತ್ತು ಸೆಕೆಂಡುಗಳಾಗಿ ಮಾರ್ಪಡಿಸುತ್ತದೆ. ಈ ಸಮೂಹದಲ್ಲಿ ಪಂಚಾಂಗದ ಯಂತ್ರವಿನ್ಯಾಸವೂ ಉಂಟು.

**ಎಲೆಕ್ಟ್ರಾನಿಕ್ ಬೆಣಚುಕಲ್ಲು ಗಡಿಯಾರ :** ಸಂದು ಹೋಗುವ ಕಾಲವನ್ನು ಅಳೆಯಲು ನಾವು ಅದನ್ನು ಸಮವಾದ ಅಂತರಗಳಾಗಿ ವಿಭಾಗಿಸಿ ಅವನ್ನು ಗೊತ್ತಾದ ಪ್ರಾರಂಭ ಬಿಂದುವಿನಿಂದ ಎಣಿಕೆ ಮಾಡುತ್ತೇವೆ (ನಡುಹಗಲು ಅಥವಾ ಮಧ್ಯರಾತ್ರಿ). ಪ್ರತಿಯೊಂದು ಗಡಿಯಾರದಲ್ಲಿಯ ಕಾಲವನ್ನು ಭಾಗಮಾಡುವ ಅಂಗವಿದೆ. ಇದರ ಜೊತೆಗೆ ಅಂತರಗಳನ್ನು ವಿಭಾಗಿಸುವ ಇನ್ನೊಂದು ಉಪಕರಣವೂ ಉಂಟು. ಹೀಗಾಗಿ ಕಾಲ, ಮುಳ್ಳುಗಳ ಮೂಲಕ ಮುಖದ ಮೇಲೆ ಪ್ರದರ್ಶಿತವಾಗುತ್ತದೆ. ಕಾಲವನ್ನು ವಿಭಾಗಿಸುವ ಅಂಗವೇ ಅನುನಾದಕ ; ಅಂದೋಲಿಸುವ ದರವೇ ಅದರ ಆವರ್ತಾಂಕ (ಫ್ರೀಕ್ವೆನ್ಸಿ), ಅನುನಾದಕದ ಗುಣಮಟ್ಟ ಏರಿದಷ್ಟೂ ಗಡಿಯಾರದ ದರ ಹೆಚ್ಚು ಯಥಾರ್ಥವಾಗುತ್ತದೆ. ಪರಮಾಣುವೊಂದನ್ನು ಬಿಟ್ಟರೆ ಬೇರೆ ಯಾವ ಅನುನಾದಕ್ಕೂ ಬೆಣಚುಕಲ್ಲಿನಷ್ಟು ಗುಣಮಟ್ಟ ಉನ್ನತವಾಗಿಲ್ಲ.

ಆದ್ದರಿಂದ ನಿಷ್ಕೃಷ್ಟತೆಯಲ್ಲಿ ಇದರ ಸ್ಥಾನ ಅತಿ ಮೇಲಿನದು. ಪರಮಾಣು ಗಡಿಯಾರವಾದ ಬಳಿಕ ಇದೇ ಎರಡನೆಯದು. **(ನೋಡಿ– ಕ್ವಾರ್ಟ್ಸ್ ಗಡಿಯಾರ)**. ಭಿನ್ನ ಮಾದರಿಯ ಗಡಿಯಾರಗಳ ಆಂದೋಳನ ಸಂಖ್ಯೆಗಳನ್ನು ಹೋಲಿಸಿ ಮುಂದೆ ಬರೆದಿದೆ. ಈ ಯಾದಿಯಿಂದ ಕ್ವಾರ್ಟ್ಸ್ ಅಥವಾ ಬೆಣಚುಕಲ್ಲು ಗಡಿಯಾರ ಏಕೆ ಉತ್ಕೃಷ್ಟವಾದದ್ದು ಎಂದು ತಿಳಿಯುತ್ತದೆ.

| | |
|---|---|
| ಸಾಧಾರಣವಾದ ಯಾಂತ್ರಿಕ ಗಡಿಯಾರ | : ಸೆಕೆಂಡಿಗೆ 2.5 ಮತ್ತು 5 ಆಂದೋಲನಗಳು |
| ನಡುವೆ ಧ್ವನಿ ಅನುನಾದಕ (ಶ್ರುತಿ–ಕವಲು) | |
| ಇರುವ ಎಲೆಕ್ಟ್ರಾನಿಕ್ ಗಡಿಯಾರ | : ಸೆಕೆಂಡಿಗೆ 300ರಿಂದ 720 ಆಂದೋಲನಗಳು |
| ಅಂತರದಲ್ಲಿ ನಮ್ಮ ಬೆಣಚುಕಲ್ಲು ಕಂಬಿ ಇರುವ | |
| ಎಲೆಕ್ಟ್ರಾನಿಕ್ ಗಡಿಯಾರ | : ಸೆಕೆಂಡಿಗೆ 8,192 ಆಂದೋಲನಗಳು |
| ಕಡಿಮೆ ಒಪ್ಪ ನೀಡಿದ ಬೆಣಚುಕಲ್ಲಿರುವ ಎಲೆಕ್ಟ್ರಾನಿಕ್ | |
| ಗಡಿಯಾರ | : ಸೆಕೆಂಡಿಗೆ 2,359,296 ಆಂದೋಲನಗಳು |
| ಸೀಸಿಯಂ ಪರಮಾಣು ಗಡಿಯಾರ | : ಸೆಕೆಂಡಿಗೆ 9,192,631,700 ಆಂದೋಲನಗಳು |

**ಪರಮಾಣು ಗಡಿಯಾರ :** ಇದು ಸಹ ಒಂದು ಎಲೆಕ್ಟ್ರಾನಿಕ್ ಗಡಿಯಾರವೇ. ಇದರ ಆವರ್ತಾಂಕದ ಪೂರೈಕೆ ಮಾಡುವುದು ಅಥವಾ ನಿಯಂತ್ರಣಯುಕ್ತ ಪದಾರ್ಥಗಳ ಪರಮಾಣುಗಳ ಇಲ್ಲವೇ ಅಣುಗಳ ಸಹಜ ಅನುನಾದ ಆವರ್ತಾಂಕಗಳು. ಇಂದು ಬಳಸುವ ಗಡಿಯಾರಗಳಲ್ಲಿ ಈ ಆವರ್ತಾಂಕಗಳು ಸಾಮಾನ್ಯ ಸೂಕ್ಷ್ಮ ತರಂಗಗಳ (ಮೈಕ್ರೋವೇವ್ಸ್) ವ್ಯಾಪ್ತಿಯಲ್ಲಿ ಇವೆ ; ಎಂದರೆ ಸುಮಾರು 1,400 MHzನಿಂದ (ಸೆಕೆಂಡಿಗೆ 1,400,000,000 ಚಕ್ರಗಳು) 24,000 MHz ವರೆಗೆ ಇವೆ. ಪರಮಾಣು ಗಡಿಯಾರಗಳು ಅತ್ಯಂತ ನಿಷ್ಕೃಷ್ಟವಾದವು. ಈಗ ಬಳಕೆಯಲ್ಲಿರುವ ಇಂಥ ಕೆಲವು ಗಡಿಯಾರಗಳ ದೋಷದ ಸಂಭಾವ್ಯತೆ ಎಷ್ಟೆಂದರೆ 30,000 ವರ್ಷಗಳ ದೀರ್ಘಾವಧಿಯಲ್ಲಿ ಅವು 1 ಸೆಕೆಂಡಿನ ಅಲ್ಪಾಂಶವನ್ನು ಕಳೆದುಕೊಳ್ಳಬಹುದು ಇಲ್ಲವೇ ಗಳಿಸಬಹುದು. ಈಗ ಅಂತಾರಾಷ್ಟ್ರೀಯವಾಗಿ ಸ್ವೀಕೃತವಾಗಿರುವ ಕಾಲದ ಏಕಮಾನ ಪರಮಾಣ್ವಿಕ ಸೆಕೆಂಡ್. ಇದು ಪರಮಾಣು ಗಡಿಯಾರದ ಮೇಲೆ ಆಧರಿತವಾಗಿದೆ. (ಎಂ.ಜಿವಿ.;ಎಸ್.ವಿಐಎಸ್.)

**ಗಡಿಯಾರ ನಿಯಂತ್ರಣ ವ್ಯವಸ್ಥೆಗಳು :** ಕಾಲಸೂಚಕ ಉಪಕರಣದ ಬಳಕೆಯಿಂದ ನಿಯಂತ್ರಣಕಾರ್ಯವನ್ನು ನಿರ್ವಹಿಸುವ ವ್ಯವಸ್ಥೆಗಳು (ಕ್ಲಾಕ್ ಕಂಟ್ರೋಲ್ ಸಿಸ್ಟಮ್ಸ್). ಕಾಲನಿಯಂತ್ರಿತ ವ್ಯವಸ್ಥೆಗಳೆಂದೂ ಕರೆಯುವುದುಂಟು. ಮನೆಯಲ್ಲಿ ಬಳಸುವ ಅಲಾರಂ ಗಡಿಯಾರ ಒಂದು ಉದಾಹರಣೆ. ಇಲ್ಲಿ ಅಲಾರಂ ಗಂಟೆ ಯಾವಾಗ ಹೊಡೆಯಬೇಕೆಂಬುದನ್ನು ನಿಯಂತ್ರಿಸುವುದು ಗಡಿಯಾರ. ಗೋಡೆ ಗಡಿಯಾರ. ಗೋಪುರ ಗಡಿಯಾರ ಮುಂತಾದವುಗಳಲ್ಲಿ ಇರುವ, ತಾಸು ಅರ್ಧ ತಾಸುಗಳಿಗೆ ಗಂಟೆ ಬಾರಿಸುವ ಏರ್ಪಾಡು ಸಹ ಕಾಲನಿಯಂತ್ರಿತ ವ್ಯವಸ್ಥೆಯೇ. ಎಲ್ಲ ಕಾರ್ಯ ಗಡಿಯಾರ ನಿಯಂತ್ರಣ ವ್ಯವಸ್ಥೆಗಳೂ ಕಾರ್ಯ ನಡೆಸುವುದು ಎರಡು ಮುಖ್ಯ ಘಟಕಗಳ ನೆರವಿನಿಂದ: ಕಾಲಸೂಚಕ ಉಪಕರಣ ಹಾಗೂ ನಿಯಂತ್ರಿತ ಉಪಕರಣ. ಅಲಾರಂ ಗಡಿಯಾರ ತೊಡಗಿ ದಿಙ್ನಿರ್ದೇಶಿತ ಕ್ಷಿಪಣಿಗಳವರೆಗೂ ಗಡಿಯಾರ ನಿಯಂತ್ರಣ ವ್ಯವಸ್ಥೆಗಳ ಉಪಯೋಗ ಉಂಟು.

**ಗಡಿಯಾರಂ ವೇಂಕಟಶೇಷಶಾಸ್ತ್ರೀ :** 1897–1981. ಶಿವಭಾರತಂ ಎಂಬ ಮಹಾಕಾವ್ಯವನ್ನು ರಚಿಸಿ ಆಂಧ್ರಪ್ರದೇಶದಲ್ಲೆಲ್ಲ ಪ್ರಸಿದ್ಧರಾದ ಕವಿಗಳು. ರೂಪವತಾರಂ ಶೇಷಶಾಸ್ತ್ರಿಗಳ ಶಿಷ್ಯರಾಗಿ ತೆಲುಗು–ಸಂಸ್ಕೃತ ಭಾಷೆಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಗಳಿಸಿಕೊಂಡರು. ಬಾಲ್ಯದಲ್ಲಿಯೇ ಇವರಿಗೆ ಅಷ್ಟಾವಧಾನದ ಕಡೆ ಗೀಳು. ಕವಿತೆ ರಚಿಸುವುದು ಇವರಿಗೆ ಹುಟ್ಟಿನಿಂದ ಬಂದ ಕಲೆ. ದುರ್ಭಾಕಂ ರಾಜಶೇಖರ ಅವಧಾನಿಗಳ ಸ್ನೇಹ ಲಭಿಸಿತಾಗಿ ಅವರ ಜೊತೆಗೂಡಿ ಅನೇಕ ಅವಧಾನಗಳನ್ನು ನಡೆಸಿ ಕೀರ್ತಿಗಳಿಸಿ ಅವಧಾನಿ ಪಂಚಾನನ ಎಂಬ ಬಿರುದು ಪಡೆದರು. ಕಡಪ ಜಿಲ್ಲೆಯ ಪ್ರೊದ್ದುಟೂರಿನ ಪುರಸಭೆಯ ಪ್ರೌಢಶಾಲೆಯಲ್ಲಿ ಅನೇಕ ವರ್ಷಗಳ ಕಾಲ ತೆಲುಗು ಪಂಡಿತರಾಗಿದ್ದು ಸಾವಿರಾರು ಜನ ಶಿಷ್ಯರಿಗೆ ವಿದ್ಯಾದಾನ ಮಾಡಿದರು.

ಶಿವಭಾರತಂ ಕಾವ್ಯ ಎಂಟು ಆಶ್ವಾಸಗಳಿಂದ ಕೂಡಿದೆ. ದೇಶಭಕ್ತನೂ ಧೀರಾಗ್ರೇಸರನೂ ಭವಾನೀಭಕ್ತನೂ ಆದ ಶಿವಾಜಿ ಮಹಾರಾಜನ ವೀರಚರಿತ್ರೆಯೇ ಈ ಕಾವ್ಯದ ವಸ್ತು. ಜಟಿಲವಾದ ಚರಿತ್ರೆಯ ವಿಷಯಗಳನ್ನು ಶಾಸ್ತ್ರಿಗಳು ತಮ್ಮ ಭಾವನಾ ಶಕ್ತಿಯಿಂದ ಎಲ್ಲರ ಮನಃಪಟಲದಲ್ಲಿ ಚಿತ್ರಿತವಾಗುವಂತೆ ಮಾಡಿದ್ದಾರೆ. ಇವರ ವರ್ಣನಾಕುಶಲತೆ ಪ್ರಶಂಸಾರ್ಹ. ಶಾಸ್ತ್ರಿಗಳದ್ದು ದೃಶ್ಯ ಸಾಕ್ಷಾತ್ಕಾರವಾಗುವಂತೆ ಬರೆಯಬಲ್ಲ ಅಸಾಧಾರಣ ಪ್ರತಿಭೆ. ಅಚ್ಚತೆಲುಗಿನ ಮಾತುಗಳಲ್ಲಿಯೇ ಗಹನ ವಿಚಾರಗಳನ್ನು ಬಹಳ ಸುಲಭವಾಗಿವರು ಹೇಳಬಲ್ಲವರು. ತಾನಾಜಿ ದುರ್ಗವನ್ನು ಗೆದ್ದು ಯುದ್ಧದಲ್ಲಿ ಪ್ರಾಣಾರ್ಪಣೆ ಮಾಡಿದ ಸನ್ನಿವೇಶವನ್ನು ಓದುಗರು ಎಂದೂ ಮರೆಯಲಾಗದ ರೀತಿಯಲ್ಲಿ ಶಾಸ್ತ್ರಿಗಳು ವರ್ಣಿಸಿದ್ದಾರೆ. ಅಂಥ ಅವಿಸ್ಮರಣೀಯವಾದ ಎಷ್ಟೋ ವರ್ಣನೆಗಳು ಶಿವಭಾರತದಲ್ಲಿ ಸಿಗುತ್ತವೆ. ಭಾಷೆ, ಛಂದಸ್ಸುಗಳಲ್ಲಿ ಇವರು ತೆಲುಗು ಭಾಷೆಯ ಹಿರಿಯ ಕವಿಗಳ ದಾರಿಯಲ್ಲಿಯೇ ನಡೆದು ಪುರಾತನ ಪದ್ಯಜಾತಿಗಳನ್ನೇ ಬಳಸಿಕೊಂಡಿದ್ದಾರೆ. ಭಾಷೆ ಸರಳವಾಗಿದ್ದು ಆಕರ್ಷಕವಾಗಿದೆ. ಪಾಂಡಿತ್ಯದೊಂದಿಗೆ ರಸವಂತಿಕೆ ಹಾಳತವಾಗಿ ಬೆರೆತು ಬಂದಿರುವುದನ್ನಿಲ್ಲಿ ಕಾಣಬಹುದು. ತೆಲುಗಿನ ಕಡೆ ಹೆಚ್ಚಿನ ಒಲವಿದ್ದರೂ ಅಲ್ಲಲ್ಲಿ ಉಚಿತವಾಗಿ ಸಂಸ್ಕೃತವನ್ನು ಬಳಸಿರುವುದರಿಂದ ಇಲ್ಲಿಯ ಶೈಲಿ ಮನೋಜ್ಞವಾಗಿದೆ.

ಶಿವಭಾರತವನ್ನು ಮೆಚ್ಚದ ತೆಲುಗರೇ ಇಲ್ಲ. ವಿದ್ವಾಂಸರು ಈ ಮಹಾಕಾವ್ಯವನ್ನು ಬಾಯಿತುಂಬ ಹೊಗಳಿ, ಕವಿಗೆ ಕವಿವಸಂತ, ಕವಿಸಿಂಹ ಮೊದಲಾದ ಬಿರುದುಗಳನ್ನು ಕೊಟ್ಟು ಗೌರವಿಸಿದ್ದಾರೆ. 1944ರಲ್ಲಿ ಹಿಂದೂಪುರದಲ್ಲಿ ಸಭೆ ಸೇರಿದ್ದ ಶ್ರೀಕೃಷ್ಣದೇವರಾಯ ಪರಿಷತ್ತು ಶಾಸ್ತ್ರೀಗಳಿಗೆ 'ಕವಿಗಂಡಪೆಂಡೆಯ' ವನ್ನು ಕೊಟ್ಟು ವಿಶೇಷ ಮನ್ನಣೆ ಸಲ್ಲಿಸಿತು. ಶಿವ ಭಾರತ ಕೃತಿಗೆ ಅಂದಿನ ಮದ್ರಾಸು ಪ್ರಭುತ್ವ ಬಹುಮಾನ ನೀಡಿತು. (ಕೆ.ವಿ.ಇ.)

**ಗಢಮುಕ್ತೇಶ್ವರ :** ಉತ್ತರಪ್ರದೇಶದ ಮೀರತ್ ಜಿಲ್ಲೆಗೆ ಸೇರಿದ ಒಂದು ಪುರಾತನ ತೀರ್ಥಕ್ಷೇತ್ರ, ಮಹಾಭಾರತ ಕಾಲದ ಹಸ್ತಿನಾಪುರದ ಒಂದು ಭಾಗವಾಗಿತ್ತೆಂದು ಸ್ಥಳಪುರಾಣ. ಈಗ ಇದರಿಂದ ಸು. 40 ಕಿ.ಮೀ. ದೂರದ ಪ್ರದೇಶವೊಂದನ್ನು ಹಸ್ತಿನಾಪುರವಿದ್ದ ಸ್ಥಳವೆಂದು ಗುರುತಿಸುತ್ತಾರೆ. ಅಗಸ್ತ್ಯ ಋಷಿಯ ಶಾಪದಿಂದ ಸರ್ಪವಾದ ನಹುಷ ಧರ್ಮರಾಯನಿಂದ ಶಾಪವಿಮುಖನಾದ್ದು ಇಲ್ಲಿಯೇ ಎಂದು ಮಹಾಭಾರತದ ಉಲ್ಲೇಖ. ಇಲ್ಲಿ ಮಹಾದೇವನ ಏಳು ದೇವಸ್ಥಾನಗಳಿವೆ: ಗಣ ಮುಕ್ತೇಶ್ವರನಾಥ ಕೇದಾರನಾಥ, ಗಂಗೇಶ್ವರನಾಥ, ಭೂತೇಶ್ವರನಾಥ, ಅಮಲೀಶ್ವರನಾಥ, ಮುಕ್ತೇಶ್ವರನಾಥ ಮತ್ತು ಮುಕ್ತಿನಾಥ. ಇವುಗಳಲ್ಲಿ ಗಣಮುಕ್ತೇಶ್ವರ ದೇವಾಲಯವೇ ಪ್ರಧಾನವಾದದ್ದು. ಪ್ರದೇಶದ ಅರಾಧ್ಯದೇವತೆ ಗಂಗಾದೇವಿಯಾದ್ದರಿಂದ ಇಲ್ಲಿ ಆಕೆಯ ನಾಲ್ಕು ಪೂಜಾ ಮಂದಿರಗಳಿವೆ. ಇಲ್ಲಿ ಅನೇಕ ತೀರ್ಥಗಳೂ ಇವೆ. ಕಾರ್ತಿಕ ಪೌರ್ಣಿಮಿಯಂದು ಇಲ್ಲಿ ವಿಶೇಷ ಉತ್ಸವ ನಡೆಯುತ್ತದೆ. ಸಹಗಮನಮಾಡಿದ ಸಾಧ್ವಿಯರ 80ಕ್ಕೂ ಹೆಚ್ಚು ಮಾಸ್ತಿಕಲ್ಲುಗಳು ಗಢಮುಕ್ತೇಶ್ವರದಲ್ಲಿವೆ. ಹದಿಮೂರನೆಯ ಶತಮಾನದಲ್ಲಿ ಗಿಯಾಸುದ್ದೀನ್ ಬಲ್ಬನ್ ಕಟ್ಟಿಸಿದ ಒಂದು ಮಸೀದಿ ಇಲ್ಲಿದೆ. ಇಂದು ಗಢಮುಕ್ತೇಶ್ವರ ಮರಮುಟ್ಟುಗಳ, ಬೊಂಬುಗಳ ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. (ಬಿ.ಎಸ್.ಎಚ್.)

**ಗಣ :** ಗಣ ಎಂಬ ಪದಕ್ಕೆ ವಿವಿಧ ಶಾಸ್ತ್ರಗಳಲ್ಲಿರುವ ವಿವರಗಳಿಲ್ಲಿವೆ:

1 ಚತುರಂಗ ಸೇನೆಯಲ್ಲಿ ಒಂದು ನಿಯತಪ್ರಮಾಣ. ಒಂದು ಆನೆ ಒಂದು ರಥ ಮೂರು ಕುದುರೆಗಳು ಮತ್ತು ನಾಲ್ಕು ಕಾಲಾಳುಗಳಿರುವ ಒಂದು ಗುಂಪಿಗೆ ಪತ್ತಿ ಎಂದು ಹೆಸರು. ಮೂರು ಪತ್ತಿಗಳು ಸೇರಿದರೆ ಒಂದು ಸೇನಾಮುಖ. ಮೂರು ಸೇನಾ ಮುಖಗಳು ಒಂದು ಗುಲ್ಮ. ಮೂರು ಗುಲ್ಮಗಳು ಸೇರಿದರೆ ಒಂದು ಗಣವಾಗುತ್ತದೆ. ಇಪ್ಪತ್ತೇಳು ಆನೆಗಳು ಇಪ್ಪತ್ತೇಳು ರಥಗಳು ಎಂಬತ್ತೊಂದು ಕುದುರೆಗಳು ಮತ್ತು ನೂರಮೂವತ್ತೈದು ಕಾಲಾಳುಗಳಿರುವ ಸೇನೆಯ ಗುಂಪಿಗೆ ಗಣ ಎಂದು ಹೆಸರು.

2 ಜ್ಯೋತಿಶ್ಶಾಸ್ತ್ರದಲ್ಲಿ ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳನ್ನು ದೇವ ಮನುಷ್ಯ ರಾಕ್ಷಸ ಎಂದು ಮೂರು ಗಣಗಳನ್ನಾಗಿ ವಿಭಾಗಿಸಿದ್ದಾರೆ. ಅಶ್ವಿನಿ ಮೃಗಶಿರ ಪುನರ್ವಸು ಪುಷ್ಯ ಹಸ್ತ ಸ್ವಾತಿ ಅನುರಾಧ ಶ್ರವಣ ರೇವತಿ ಈ ಒಂಬತ್ತು ನಕ್ಷತ್ರಗಳು ದೇವಗಣಕ್ಕೂ ಭರಣಿ ರೋಹಿಣಿ ಆರ್ದ್ರಾ ಪುಬ್ಬ ಉತ್ತರ ಪೂರ್ವಾಷಾಢ ಉತ್ತರಾಷಾಢ ಪೂರ್ವಾಭಾದ್ರ ನಕ್ಷತ್ರಗಳು ಮನುಷ್ಯಗಣಕ್ಕೂ ಕೃತ್ತಿಕೆ ಆಶ್ಲೇಷ ಮಖ ಚಿತ್ತ ವಿಶಾಖ ಜ್ಯೇಷ್ಠ ಮೂಲ ಧನಿಷ್ಠ ಶತಭಿಷ ನಕ್ಷತ್ರಗಳು ರಾಕ್ಷಸಗಣಕ್ಕೂ ಸೇರಿವೆ. ಜನ್ಮ ನಕ್ಷತ್ರದ

ಗಣವೇ ಆ ವ್ಯಕ್ತಿಯ ಗಣವೆಂದು ಹೇಳಲಾಗಿದೆ. ಕನ್ಯಾವರರ ವಿವಾಹಕ್ಕಾಗಿ ನಕ್ಷತ್ರಾನುಕೂಲವನ್ನು ಪರಿಶೀಲಿಸುವಾಗ ನೋಡುವ ಹನ್ನೆರಡು ಕೂಟಗಳಲ್ಲಿ ಗಣಕೂಟವೆಂಬುದು ಒಂದು. ಕನ್ಯಾವರರ ನಕ್ಷತ್ರಗಳೆರಡೂ ಒಂದೇ ಗಣಕ್ಕೆ ಸೇರಿದರೆ ಗಣಕೂಟವಿರುತ್ತದೆ. ಗಣಗಳು ಭಿನ್ನವಾದಾಗ ಗಣಕೂಟ ಇರುವುದಿಲ್ಲ. ದೇವಮಾನುಷ ಗಣವಾದರೂ ಸಾಮಾನ್ಯ ಪಕ್ಷದಲ್ಲಿ ಗ್ರಾಹ್ಯ. ಈ ಗಣಕೂಟಕ್ಕೆ ಇರುವ ಗುಣಸಂಖ್ಯೆ 6.

3 ಅಭಿಜಿತ್ ಎಂಬ ದೈತ್ಯನ ಹೆಂಡತಿ ಗುಣವತಿ ಎಂಬುವಳಲ್ಲಿ ಹುಟ್ಟಿದವ. ಈತ ಮಹಾದೇವನ ವರಬಲದಿಂದ ಮೂರು ಲೋಕಗಳನ್ನೂ ಗೆದ್ದು ಕಪಿಲ ಮುನಿಯ ಚಿಂತಾಮಣಿಯನ್ನು ಅಪಹರಿಸಿದ. ಇದರಿಂದ ಕುಪಿತನಾದ ಮುನಿ ಗಣೇಶನನ್ನು ಪ್ರಾರ್ಥಿಸಲು ಪ್ರಸನ್ನನಾದ ಗಣಪತಿ ಅವನನ್ನು ಸಂಹರಿಸಿದ.

4 ಮೂವತ್ತಾರು ಕೋಟಿ ಶಿವಪರಿವಾರ. ಇವರನ್ನು ಪ್ರಮಥ ಗಣಗಳೆಂದು ಕರೆಯುತ್ತಾರೆ. ಇವರು ಭಿನ್ನ ಭಿನ್ನ ರೂಪಗಳಿಂದ ಕೂಡಿರುತ್ತಾರೆ. ಜಟಾಧಾರಿಗಳಾದ ಇವರು ಮದಮಾತ್ಸರ್ಯದಂಭಾಹಂಕಾರ ರಹಿತರು. ಶಂಭುವಿಗೆ ಪ್ರಿಯವಾದುದನ್ನು ಮಾಡುವ ಆತನ ಅನುಯಾಯಿಗಳು, ಸಂಸಾರವಿಮುಖರು. ಇವರಲ್ಲಿ ಕೆಲವರು ಅರ್ಧನಾರೀ ಶರೀರದಿಂದ ಕೂಡಿ ದ್ವಾರಪಾಲಕರಾಗಿರುತ್ತಾರೆ.

5 ವೀರಶೈವ ಪ್ರತಿಕ್ರಿಯೆಯಂತೆ ಶಿವಭಕ್ತವೃಂದ ಪುರಾತನ ಮತ್ತು ನೂತನ ಎಂದು ಗಣಗಳಲ್ಲಿ ಎರಡು ಬಗೆ. ಪುರಾತನ ಗಣಸಂಖ್ಯೆ ಒಂದು ಸಾವಿರ. ಇದರಲ್ಲಿ ಏಳನೂರು ಎಪ್ಪತ್ತು ಅಮರಗಣಗಳು. ಇದರಲ್ಲೂ ಪ್ರಥಮ. ರುದ್ರ, ಯೋಗಾಚಾರ್ಯ, ತೇರಸ ಎಂಬ ವಿಭಾಗಗಳಿವೆ. ನೂತನ ಗಣಗಳ ಸಂಖ್ಯೆ ಆರುನೂರು.

6 ಛಂದಶ್ಶಾಸ್ತ್ರದಲ್ಲಿ ಅಕ್ಷರಗಣ ಮಾತ್ರಾಗಣ ಅಂಶಗಣ ಎಂದು ಮೂರು ಬಗೆ. ಇವುಗಳ ವಿವರಗಳು ಛಂದಶ್ಶಾಸ್ತ್ರಕ್ಕೆ ಸಂಬಂಧಿಸಿದ ಲೇಖನಗಳಲ್ಲಿವೆ.

7 ಗಣಿತವಿಜ್ಞಾನದಲ್ಲಿ ಗಣ ಎಂಬುದೊಂದು ಪರಿಕಲ್ಪನೆ. ಇದನ್ನು ಕುರಿತ ವಿವರಗಳಿಗೆ **(ನೋಡಿ– ಗಣ ಸಿದ್ಧಾಂತ)**.

(ಎಸ್.ಎನ್.ಕೆ.)

# ಇಂಗ್ಲಿಷ್ ಪದಸೂಚಿ

**ಇದು ಮುಖ್ಯ ವಿಷಯಗಳ ಸೂಚಿ ಮಾತ್ರ. ಸಂಖ್ಯೆ ಪುಟವನ್ನೂ ಎ ಎಡಭಾಗವನ್ನೂ ಬ ಬಲಭಾಗವನ್ನೂ ಸೂಚಿಸುತ್ತವೆ.**


Acne Rosacea – ಕೆಂಜು ಮೊಡವೆ ೧೪೦ಎ
Adam's Apple – ಗಂಟಲ ಮಣಿ ೮೪೬ಎ
Agricultural Botany – ಕೃಷಿ ಸಸ್ಯವಿಜ್ಞಾನ ೧೦೫ಬ
Agricultural Chemistry – ಕೃಷಿ ರಸಾಯನವಿಜ್ಞಾನ ೮೮ಬ
Agricultural Co-operation – ಕೃಷಿ ಸಹಕಾರ ೧೦೬ಬ
Agricultural Credit – ಕೃಷಿ ಉದ್ದರಿ ೬೧ಬ
Agricultural Economics – ಕೃಷಿ ಅರ್ಥಶಾಸ್ತ್ರ ೫೩ಬ
Agricultural Engineering – ಕೃಷಿ ಶಿಲ್ಪವಿಜ್ಞಾನ ೯೯ಬ
Agricultural Extension – ಕೃಷಿ ವಿಸ್ತರಣಾಕಾರ್ಯ ೯೬ಎ
Agricultural Implements – ಕೃಷಿ ಉಪಕರಣಗಳು ೬೩ಎ
Agricultural Labourers – ಕೃಷಿ ಕಾರ್ಮಿಕರು ೬೮ಬ
Agricultural Marketing – ಕೃಷಿ ಉತ್ಪನ್ನ ಮಾರಾಟ ೫೮ಎ
Agricultural Organisation – ಕೃಷಿ ಸಂಘಟನೆ ೧೦೦ಬ
Agricultural Pests and their control – ಕೃಷಿ ಪೀಡಕಗಳು ಮತ್ತು ಅವುಗಳ ನಿಯಂತ್ರಣ ೨೭ಎ
Agricultural Statistics – ಕೃಷಿ ಅಂಕಿ ಅಂಶಗಳು ೪೯ಎ
Agricultural Wages – ಕೃಷಿ ಕೂಲಿ ೨೦ಎ
Agriculture – ಕೃಷಿ ೪೬ಬ
Agronomy – ಕೃಷಿ ವಿದ್ಯೆ ೯೧ಬ
Alkali – ಕ್ಷಾರ ೬೯೧ಬ
Alkali Industry – ಕ್ಷಾರ ಕೈಗಾರಿಕೆ ೬೯೭ಎ
Amia calva – ಕೆಸರು ಮೀನು ೧೯೫ಎ
Apothecary – ಗಂದಿಗ ೮೬೪ಬ
Aquilaria agallocha – ಕೃಷ್ಣ ಅಗರು ಮರ ೧೧೩ಎ
Artificial Diamond – ಕೃತಕ ವಜ್ರ ೩೯ಎ
Artificial Gems – ಕೃತಕ ರತ್ನಗಳು ೩೮ಬ
Artificial Insemination – ಕೃತಕ ಗರ್ಭಧಾರಣೆ ೭೯ಎ
Artificial Languages – ಕೃತಕ ಭಾಷೆಗಳು ೩೨ಎ
Artificial Manures – ಕೃತಕ ಗೊಬ್ಬರಗಳು ೭೯ಬ
Artificial Organs – ಕೃತಕ ಅಂಗಗಳು ೧೨ಬ
Artificial Rain – ಕೃತಕ ಮಳೆ ೩೮ಎ
Artificial Respiration – ಕೃತಕ ಉಸಿರಾಟ ೭೪ಬ
Artificial Teeth – ಕೃತಕ ಹಲ್ಲುಗಳು ೩೯ಎ
Asteroids – ಕ್ಷುದ್ರಗ್ರಹಗಳು ೨೦೪ಬ
Astronomical Distance Units and Distance Measurement – ಖಗೋಳ ದೂರಮಾನಗಳು ಮತ್ತು ದೂರಮಾಪನ ೨೪೮ಬ
Astronomical Instruments – ಖಗೋಳೀಯ ಉಪಕರಣಗಳು ೨೫೫ಎ
Astronomical Survey – ಖಗೋಳ ಸರ್ವೇಕ್ಷಣ ೨೫೪ಬ
Astronomy – ಖಗೋಳವಿಜ್ಞಾನ ೨೫೦ಬ
Astrophysics – ಖಭೌತ ವಿಜ್ಞಾನ ೨೨೫ಬ
Avoirdupois weight – ಗಂದಿಗೆಗಾರನ ತೂಕ ೮೬೫ಬ
Beak – ಕೊಕ್ಕು ೩೩೮ಬ
Bell – ಗಂಟೆ ೮೫೫ಎ
Bell Bird – ಗಂಟೆ ಹಕ್ಕಿ ೮೫೨ಎ
Bittern – ಕೆಂಪು ಕೊಕ್ಕರೆ ೧೪೬ಎ
Bore well – ಕೊಳವೆ ಬಾವಿ ೩೮೬ಎ
Borer Beetles – ಕೊರಕ ಜೀರುಂಡೆಗಳು ೩೬೭ಎ
Boring – ಕೊರೆತ ೩೨೦ಎ
Bottle-Brush – ಕ್ಯಾಲಿಸ್ಟೀಮಾನ್ ೫೦೬ಎ
Cable Transfer – ಕೇಬಲ್ ವರ್ಗಾವಣೆ ೭೩೭ಎ
Cadaverine – ಕ್ಯಾಡಾವೆರೀನ್ ೪೨೬ಬ
Caddis Flies – ಕ್ಯಾಡಿಸ್ ನೊಣಗಳು ೪೨೬ಬ
Cadmium – ಕ್ಯಾಡ್ಮಿಯಂ ೪೨೬ಬ
Caesalpinia bonducella – ಗಜ್ಜುಗದ ಗಿಡ ೮೮೩ಎ
Caffeine – ಕ್ಯಾಫೀನ್ ೪೮೨ಬ
Caiman – ಕೇಮಾನ್ ಮೊಸಳೆ ೭೩೭ಎ
Calabar Bean – ಕೆಲಬಾರ್ ಬೀಜ ೧೮೭ಬ
Calamites – ಕ್ಯಾಲಮೈಟಿಸ್ ೫೦೦ಬ
Calathea – ಕ್ಯಾಲತೀಯ ೫೦೦ಎ
Calceolaria – ಕ್ಯಾಲ್ಸಿಯೊಲೇರಿಯ ೫೧೧ಎ
Calcite – ಕ್ಯಾಲ್ಸೈಟ್ ೫೧೧ಎ
Calcium – ಕ್ಯಾಲ್ಸಿಯಂ ೫೧೦ಎ
Calcium carbonate – ಕ್ಯಾಲ್ಸಿಯಂ ಕಾರ್ಬೋನೇಟ್ ೫೧೦ಬ
Calendering – ಕ್ಯಾಲೆಂಡರಿಂಗ್ ೫೦೬ಬ
Calgon – ಕ್ಯಾಲಗಾನ್ ೫೦೦ಎ
Calico – ಕ್ಯಾಲಿಕೊ ೫೦೧ಸಿ
Californium – ಕ್ಯಾಲಿಫೋರ್ನಿಯಂ ೫೦೪ಎ
Calla – ಕ್ಯಾಲ ೪೯೯ಬ
Callistemon – ಕಾಲಿಸ್ಟೀಮಾನ್ ೫೦೬ಎ
Calomel Electrode – ಕ್ಯಾಲೊಮೆಲ್ ಎಲೆಕ್ಟ್ರೋಡ್ ೫೦೨ಎ
Calorie – ಕೆಲೊರಿ ೧೮೮ಎ
Cambium – ಕೇಂಬಿಯಮ್ ೭೧೩ಎ
Cambrain – ಕೇಂಬ್ರಿಯನ್ ೭೧೯ಬ
Cambric – ಕೇಂಬ್ರಿಕ್ ೭೧೪ಎ
Cambridge School (of Economics) – ಕೇಂಬ್ರಿಜ್ ಪಂಥ ೭೧೫ಬ
Camelopardus – ಕ್ಯಾಮೆಲೊಪಾರ್ಡಸ್ ೪೯೦ಬ
Canadabalsam – ಕೆನಡಬಾಲ್ಸಂ ೧೬೫ಬ

Canary grass – ಕ್ಯಾನರಿ ಹುಲ್ಲು ೪೭೯ಎ
Candytuft – ಕ್ಯಾಂಡಿಟಫ್ಟ್ ೪೭೦ಎ
Canker worm – ಕ್ಯಾಂಕರ್ ಹುಳು ೪೬೬ಬ
Canning – ಕ್ಯಾನಿಂಗ್ ೪೭೯ಎ
Cannizzaro's Reaction – ಕ್ಯಾನೀತ್ಸಾರೊ ಕ್ರಿಯೆ ೪೮೧ಎ
Cantharide – ಕ್ಯಾಂಥರಿಡೀ ೪೭೦ಬ
Canyon – ಕೊರಕಲು ೩೬೨ಬ
Capparidaceae – ಕ್ಯಾಪರಿಡೇಸೀ ೪೮೬ಎ
Capsten Lathe – ಕ್ಯಾಪ್‌ಸ್ಟನ್ ಚರಕಿಯಂತ್ರ ೪೮೭ಎ
Capybara – ಕ್ಯಾಪಿಬಾರ ೪೮೬ಬ
Carabidae – ಕೆರಾಬಿಡೀ ೧೮೦ಬ
Caracal – ಕ್ಯಾರಕ್ಯಾಲ್ ೪೯೦ಬ
Caraway Oil – ಕ್ಯಾರವೆ ಎಣ್ಣೆ ೪೯೨ಬ
Caricatures, Cartons – ಕ್ಯಾರಿಕೇಚರುಗಳು, ಕಾರ್ಟೂನುಗಳು ೪೯೨ಎ
Carinatae – ಕ್ಯಾರಿನೇಟಿ ೪೯೬ಬ
Caro's Acid – ಕೇರೋ ಆಮ್ಲ ೨೪೩ಬ
Carotenoids – ಕೆರೊಟಿನಾಯ್ಡುಗಳು ೧೮೨ಎ
Carrageenin – ಕ್ಯಾರಾಜೀನೀನ್ ೪೯೨ಬ
Carrot – ಕ್ಯಾರೆಟ್ ೪೯೦ಬ
Carving – ಕೆತ್ತನೆ ಕೆಲಸ ೧೫೨ಎ
Casein – ಕೇಸೀನ್ ೨೫೭ಎ
Cashmere – ಕ್ಯಾಶ್ಮೀಯರ್ ೫೧೨ಬ
Cassiopea – ಕೆಶ್ಶಿಯೋಪಿಯ ೧೯೫ಎ
Cassiterite – ಕ್ಯಾಸ್ಸಿಟರೈಟ್ ೫೧೫ಬ
Cassowary – ಕ್ಯಾಸೊವರಿ ೫೧೪ಎ
Catalases – ಕ್ಯಾಟಲೇಸುಗಳು ೪೭೨ಬ
Catarrhinae – ಕ್ಯಾಟರೈನಿ ೮೭೨ಬ
Catechol – ಕ್ಯಾಟಿಕಾಲ್ ೪೭೩ಎ
Categories and Functions – ಕ್ಯಾಟಿಗೊರಿಗಳು ಮತ್ತು ಫಂಕ್ಟರುಗಳು ೪೭೩ಎ
Catenary – ಕ್ಯಾಟೆನರಿ ೪೭೫ಬ
Cathedral – ಕೆಥೀಡ್ರಲ್ ೧೫೩ಬ
Cathode – ಕ್ಯಾಥೋಡ್ ೪೭೮ಬ
Cattleya – ಕ್ಯಾಟ್ಲೆಯ ೪೭೬ಬೆ
Cauchy Distribution – ಕೋಷಿ ವಿತರಣೆ ೪೫೨ಎ
Cauchy Results – ಕೋಷಿ ಫಲಿತಾಂಶಗಳು ೪೫೧ಬ
Cavy – ಕೇವಿ ೨೪೫ಬ
Celestial Sphere – ಖಗೋಳ ೭೪೧ಬ
Cell, Electric – ಕೋಶ, ವಿದ್ಯುತ್ ೪೩೮ಬ
Celtic Languages – ಕೆಲ್ಟಿಕ್ ಭಾಷೆಗಳು ೧೯೦ಬ
Celts – ಕೆಲ್ಟ್ ಜನವರ್ಗ ೧೮೮ಬ
Cenchrus ciliaris – ಕೊಳಕಟ್ಟಿಹುಲ್ಲು ೩೮೫ಎ
Central Advisory Board of Education – ಕೇಂದ್ರ ಶಿಕ್ಷಣ ಸಲಹಾ ಮಂಡಲಿ ೨೦೨ಎ
Central Bank – ಕೇಂದ್ರೀಯ ಬ್ಯಾಂಕು ೨೦೮ಎ
Centralisation – ಕೇಂದ್ರೀಕರಣ ೨೦೪ಎ
Central Laboratories – ಕೇಂದ್ರೀಯ ಪ್ರಯೋಗಾಲಯಗಳು ೨೦೫ಬ
Central Limit Theorem – ಕೇಂದ್ರಾಭಿಮತಿ ಪ್ರಮೇಯ ೨೦೨ಬ
Central Schools – ಕೇಂದ್ರೀಯ ಪಾಠಶಾಲೆ ೨೦೫ಎ
Central Universities – ಕೇಂದ್ರೀಯ ವಿಶ್ವವಿದ್ಯಾನಿಲಯಗಳು ೨೧೧ಬ
Centre – ಕೇಂದ್ರ ೨೦೦ಬ
Centripetal and Centrifugal Forces – ಕೇಂದ್ರಾಭಿಮುಖ ಮತ್ತು ಕೇಂದ್ರಾಪಗಾಮಿ ಬಲಗಳು ೨೦೩ಬ
Ceylon Oak – ಕೆಂದಾಳೆ ೧೪೪ಎ
Chamaedora – ಕ್ಯಾಮಿಡೋರಿಯ ೪೯೦ಎ
Chameleon – ಕ್ಯಾಮೀಲಿಯನ್ ೪೯೦ಎ
Cheiranthus – ಕೈರ್ಯಾಂತಸ್ ೩೨೦ಎ
Chimera – ಕೈಮೀರ ೩೧೨ಬ
Chimera (Fish) – ಕೈಮೀರಮೀನು ೩೧೩ಎ
Chironomidae – ಕೈರೊನಾಮಿಡೀ ೩೧೭ಬ
Chiroptera – ಕೈರಾಪ್ಟರ ೩೧೫ಎ
Chi-square test – ಕೈ–ವರ್ಗ ಪರೀಕ್ಷೆ ೩೨೩ಬ
Chitin – ಕೈಟನ್ ೩೧೧ಎ
Chloral – ಕ್ಲೋರಾಲ್ ೬೨೧ಎ
Chloral hydrate – ಕ್ಲೋರಾಲ್ ಹೈಡ್ರೇಟ್ ೬೨೧ಬ
Chloramine-T – ಕ್ಲೋರಮೀನ್-T ೬೨೦ಬ
Chlorates – ಕ್ಲೋರೇಟುಗಳು ೬೨೩ಎ
Chloride – ಕ್ಲೋರೈಡ್ ೬೨೩ಬ
Chlorite – ಕ್ಲೋರೈಟ್ ೬೨೩ಬ
Chlorine – ಕ್ಲೋರಿನ್ ೬೨೨ಎ
Chloroacetic Acid – ಕ್ಲೋರೊಅಸಿಟಿಕ್ ಆಮ್ಲ ೬೨೪ಎ
Cholorabenzene – ಕ್ಲೋರೊಬೆಂಜ಼ೀನ್ ೬೨೭ಎ
Chlorodifluromethane – ಕ್ಲೋರೊಡೈಫ್ಲೂರೊಮೀಥೇನ್ ೬೨೪ಬ
Chloroform – ಕ್ಲೋರೊಫಾರಂ ೬೨೫ಎ
Chloramphenicol – ಕ್ಲೋರ್ಯಾಂಫೆನಿಕಾಲ್ ೬೨೮ಎ
Chlorohydrin – ಕ್ಲೋರೊಹೈಡ್ರಿನ್ ೬೨೭ಎ
Chloropidae – ಕ್ಲೋರೊಪಿಡೀ ೬೨೭ಬ
Chlorophyll – ಕ್ಲೋರೊಫಿಲ್ ೬೨೫ಎ
Chloropicrin – ಕ್ಲೋರೊಪಿಕ್ರಿನ್ ೬೨೪ಬ
Chloroplatinic Acid – ಕ್ಲೋರೊಪ್ಲಟಿನಿಕ್ ಆಮ್ಲ ೬೨೪ಬ
Chlorosulfonic Acid – ಕ್ಲೋರೊಸಲ್‌ಫಾನಿಕ್ ಆಮ್ಲ ೬೨೭ಎ
Chlorpromazine – ಕ್ಲೋರ್‌ಪ್ರಾಮಜ಼ೀನ್ ೬೨೭ಬ
Chlortetracycline – ಕ್ಲೋರ್‌ಟೆಟ್ರಸೈಕ್ಲಿನ್ ೬೨೭ಬ

Cholesky Method – ಕೊಲೆಸ್ಕಿ ವಿಧಾನ ೪೩೨ಬ
Cholestrol – ಕೊಲೆಸ್ಟಿರಾಲ್ ೩೭೯ಎ
Cholic Acid – ಕೋಲಿಕ್ ಆಮ್ಲ ೪೨೮ಎ
Choline – ಕೋಲೀನ್ ೪೩೦ಎ
Choline esterase – ಕೋಲೀನ್ ಎಸ್ಟರೇಸ್ ೪೩೦ಬ
Christianity – ಕ್ರೈಸ್ತಧರ್ಮ ೫೭೯ಬ
Christian Socialism – ಕ್ರೈಸ್ತ ಸಮತಾವಾದ ೫೮೫ಬ
Chromatography – ಕ್ರೋಮಟಾಗ್ರಫಿ ೫೯೩ಬ
Chromite – ಕ್ರೋಮೈಟ್ ೫೯೭ಬ
Chromium – ಕ್ರೋಮಿಯಂ ೫೯೫ಬ
Chromophore – ಕ್ರೋಮೋಫೋರ್ ೫೯೮ಬ
Chromosomes – ಕ್ರೋಮೊಸೋಮುಗಳು ೫೯೮ಬ
Chrysalidacarpus – ಕ್ರೈಸಲಿಡೊಕಾರ್ಪಸ್ ೫೭೮ಎ
Chrysamine, G. – ಕ್ರೈಸಮೀನ್, ಜಿ. ೫೭೮ಎ
Chrysoidin – ಕ್ರೈಸಾಯ್ಡಿನ್ ೫೭೮ಬ
Chrysomelidae – ಕ್ರೈಸೊಮೆಲಿಡೀ ೫೭೮ಬ
Chrysopidae – ಕ್ರೈಸಾಪಿಡೀ ೫೭೮ಎ
Chymotripsin – ಕೈಮೊಟ್ರಿಪ್ಸಿನ್ ೩೧೩ಎ
Churches of Chirst – ಕ್ರಿಸ್ತನ ಚರ್ಚುಗಳು ೫೫೭ಬ
Chysis – ಕೈಸಿಸ್ ೩೨೬ಎ
Citrus limon – ಗಜನಿಂಬೆ ೮೮೦ಎ
Clapeyron Equation – ಕ್ಲ್ಯಾಪೆರಾನ್ ಸಮೀಕರಣ ೬೨೯ಎ
Clarihew – ಕ್ಲೇರಿಹ್ಯೂ ೬೧೭ಬ
Clarkia – ಕ್ಲಾರ್ಕಿಯ ೬೧೩ಎ
Clathrate Compounds – ಕ್ಲ್ಯಾತ್ರೇಟ್ ಸಂಯುಕ್ತಗಳು ೬೨೮ಬ
Claviceps – ಕ್ಲ್ಯಾವಿಸೆಪ್ಸ್ ೬೨೯ಬ
Clematis – ಕ್ಲೆಮಾಟಿಸ್ ೬೧೫ಬ
Cleome – ಕ್ಲಿಯೋಮೀ ೬೧೩ಬ
Clevite – ಕ್ಲೀವೈಟ್ ೬೧೪ಬ
Cleyera – ಕ್ಲೆಯಿರ ೬೧೬ಬ
Clinostat – ಕ್ಲೈನೋಸ್ಟ್ಯಾಟ್ ೬೧೮ಎ
Clivia – ಕ್ಲೈವಿಯ ೬೧೯ಬ
Clock Control Systems – ಗಡಿಯಾರ ನಿಯಂತ್ರಣ ವ್ಯವಸ್ಥೆಗಳು ೪೯೪ಬ
Clubs – ಕ್ಲಬ್ಬುಗಳು ೬೦೬ಬ
Clutch – ಕ್ಲಚ್ಚು ೬೦೫ಎ
Coal Tar – ಕೋಲ್ ಟಾರ್ ೪೧೩ಬ
Coati – ಕೊಆಟಿ ೩೩೬ಬ
Cobaea – ಕೋಬೀಯ ೪೦೯ಎ
Cobalt – ಕೋಬಾಲ್ಟ್ ೪೦೮ಎ
Cobaltite – ಕೋಬಾಲ್ಟೈಟ್ ೪೦೯ಎ
Coca – ಕೋಕೇನ್ ಗಿಡ ೩೯೩ಬ
Cocoa – ಕೋಕೋ ೩೯೪ಎ
Cocaine – ಕೋಕೇನ್ ೩೯೩ಎ
Codeine – ಕೋಡೀನ್ ೪೦೨ಬ
Codon – ಕೋಡಾನ್ ೪೦೧ಬ
Co-enzyme – ಕೋಎನ್‌ಜೈಮು ೩೯೨ಬ
Coma Berenices – ಕೋಮ ಬೆರಿನೈಸೀಸ್ ೪೧೯ಬ
Comitia – ಕೊಮಿಷಿಯ ೩೬೦ಬ
Commiphora caudata – ಕೊಂಡಮಾವು ೩೩೨ಬ
Coniferales – ಕೋನಿಫೆರೇಲಿಸ್ ೪೦೫ಎ
Conjuctivitis – ಕೂಡುಪೊರೆಯೂತ ೪ಬ
Connective and Supporting Tissues – ಕೂಡಿಸುವ, ಆನಿಸುವ ಅಂಗಾಂಶಗಳು ೨ಬ
Connecive Tissue, Diseases of – ಕೂಡಿಸುವ ಅಂಗಾಂಶರೋಗಗಳು ೨ಎ
Consolidation – ಕ್ರೋಡೀಕರಣ ೫೯೦ಬ
Continental Climate, Middle Latitude – ಖಂಡಾಂತರ ವಾಯುಗುಣ ಪ್ರದೇಶ ೭೩೯ಎ
Continental Dirft – ಖಂಡಗಳ ಅಲೆತ ೭೩೦ಎ
Continental Shelf and Slope – ಖಂಡಾವರಣ ವಲಯ ಮತ್ತು ಇಳುಕಲು ೭೩೯ಬ
Continents and Continent Formation – ಖಂಡಗಳು ಮತ್ತು ಖಂಡರೂಪಣೆ ೭೩೪ಬ
Control of Industries – ಕೈಗಾರಿಕೆಗಳ ನಿಯಂತ್ರಣ ೩೦೬ಎ
Cony – ಕೋನಿ ೪೦೪ಬ
Cola – ಕೋಲ ೪೧೯ಬ
Colax – ಕೊಲ್ಯಾಕ್ಸ್ ೩೮೦ಬ
Colembola – ಕೊಲೆಂಬೋಲ ೩೭೯ಎ
Coleoptera – ಕೋಲಿಯಾಪ್ಟರ ೪೨೮ಬ
Coleus – ಕೋಲಿಯಸ್ ೪೨೮ಎ
Collodion – ಕೊಲಾಡಿಯನ್ ೩೭೭ಬ
Colocasia antiquorum – ಕೆಸವು ೧೯೫ಎ
Colominic Acid – ಕೊಲಾಮಿನಿಕ್ ಆಮ್ಲ ೩೭೮ಎ
Colugo – ಕೊಲೂಗೊ ೩೭೮ಬ
Columba – ಕೊಲಂಬ ೩೭೧ಬ
Colvillea – ಕೋಲ್ವಿಲಿಯ ೪೩೩ಬ
Coordination Compound – ಕೋಆರ್ಡಿನೇಷನ್ ಸಂಯುಕ್ತ ೩೮೯ಬ
Copepoda – ಕೋಪಿಪೋಡ ೪೦೬ಎ
Copernicia – ಕೋಪರ್‌ನಿಷಿಯ ೪೦೬ಎ
Copernicus Theory – ಕೊಪರ್ನಿಕಸ್ ವಾದ ೩೫೩ಬ
Copper head snake – ಕೆಂದಲೆ ಹಾವು ೧೪೩ಬ
Copyright – ಕೃತಿಸ್ವಾಮ್ಯ ೪೨ಎ
Coreopsis – ಕೋರಿಯಾಪ್ಸಿಸ್ ೪೧೧ಎ
Coriander – ಕೊತ್ತಂಬರಿ ೩೫೧ಬ
Coriolis effects – ಕೋರಿಯೋಲಿಸ್ ಪರಿಣಾಮಗಳು ೪೧೧ಬ

Corona australis – ಕೊರೋನ ಆಸ್ಟ್ರೇಲಿಸ್ ೩೭೧ಎ
Corona borealis – ಕೊರೋನ ಬೋರಿಯೇಲಿಸ್ ೩೭೧ಎ
Corvus – ಕೋರ್ವಸ್ ೪೧೨ಬ
Coucal – ಕೆಂಬೂತ ೧೫೧ಎ
Cough – ಕೆಮ್ಮು ೧೭೯ಎ
Coyote Blasting – ಕೈಯೋಟ್ ಸಿಡಿತ ೩೧೫ಎ
Cramer-Rao inequality – ಕ್ರೇಮರ್–ರಾವ್ ಅಸಾಮ್ಯ ೫೭೪ಎ
Cramer's rule – ಕ್ರೇಮರ್ ಸೂತ್ರವಿಧಿ ೫೭೫ಎ
Crane – ಕೊಕ್ಕರೆ ೩೩೭ಬ
Crassula – ಕ್ರ್ಯಾಸ್ಯುಲ ೬೦೪ಬ
Crassulaceae – ಕ್ರ್ಯಾಸ್ಯುಲೇಸೀ ೬೦೫ಎ
Crater – ಕ್ರೇಟರ್ ೫೭೩ಎ
Creatine and Creatinine – ಕ್ರಿಯಾಟಿನ್ ಮತ್ತು ಕ್ರಿಯಾಟಿನಿನ್ ೫೪೬ಎ
Creosote – ಕ್ರಿಯೋಸೋಟ್ ೫೫೧ಎ
Crepe – ಕ್ರೇಪ್ ೫೭೩ಎ
Crepe-de-chine – ಕ್ರೇಪ್–ಡಿ–ಷನ್ ೫೭೩ಬ
Cresol – ಕ್ರಿಸಾಲ್ ೫೫೫ಎ
Cretaceous – ಕ್ರೀಟೆಷಸ್ ೫೪೦ಬ
Creton – ಕ್ರೀಟಾನ್ ೫೬೩ಎ
Cricket – ಕ್ರಿಕೆಟ್ ೫೩೫ಬ
Crimean war – ಕ್ರಿಮಿಯ ಯುದ್ಧ ೫೪೫ಬ
Criminal procedure code – ಕ್ರಿಮಿನಲ್ ಪ್ರೊಸೀಜರ್ ಕೋಡ್ ೫೪೪ಬ
Crimper – ಕ್ರಿಂಪರ್ ೫೩೫ಬ
Crinoidea – ಕ್ರೈನಾಯ್ಡಿಯ ೫೭೬ಬ
Crinoline – ಕ್ರಿನೊಲೀನ್ ೫೪೨ಬ
Crinum – ಕ್ರೈನಮ್ ೫೭೬ಎ
Cromagnon man – ಕ್ರೋಮ್ಯಾಗ್ನನ್ ಮಾನವ ೬೦೩ಬ
Crops and weather – ಕೃಷಿ ಮತ್ತು ಹವೆ ೭೮ಎ
Crossbill – ಕ್ರಾಸ್‌ಬಿಲ್ ೫೩೫ಎ
Crotalaria – ಕ್ರೋಟಲೇರಿಯ ೫೮೯ಬ
Crotalidae – ಕ್ರೋಟಾಲಿಡೀ ೫೯೦ಎ
Croton – ಕ್ರೋಟನ್ ೫೮೮ಎ
Crotonaldehyde – ಕ್ರೋಟನಾಲ್ಡಿಹೈಡ್ ೫೮೯ಬ
Crotonic Acid – ಕ್ರೋಟಾನಿಕ್ ಆಮ್ಲ ೫೯೦ಎ
Crow Pheasant – ಕೆಂಬೂತ ೧೫೧ಎ
Cruciferae – ಕ್ರೂಸಿಫೆರೀ ೫೯೬ಬ
Crux – ಕ್ರಕ್ಸ್ ೫೨೬ಎ
Cryptanthus – ಕ್ರಿಪ್ಟ್ಯಾಂತಸ್ ೫೪೩ಬ
Cryptomera – ಕ್ರಿಪ್ಟೊಮೀರಿಯ ೫೪೩ಬ
Cryptozoon – ಕ್ರಿಪ್ಟೊಝೋವಾನ್ ೫೪೨ಬ
Cryolite – ಕ್ರೈಯೊಲೈಟ್ ೫೭೭ಬ
Cuckoo – ಕೋಗಿಲೆ ೩೯೬ಎ
Culex – ಕ್ಯೂಲೆಕ್ಸ್ ಸೊಳ್ಳೆ ೫೨೨ಎ
Culicidae – ಕ್ಯೂಲಿಸಿಡೀ ೫೨೨ಎ
Cuneiform – ಕ್ಯೂನಿಫಾರಂ ಲಿಪಿ ೫೧೬ಎ
Cuphea – ಕ್ಯೂಫಿಯ ೫೧೬ಬ
Curare – ಕ್ಯುರೇರ್ ೫೧೬ಎ
Curie – ಕ್ಯೂರಿ ೫೧೯ಬ
CurieW-eiss law – ಕ್ಯೂರಿ–ವೀಸ್ ನಿಯಮ ೫೨೧ಬ
Curium – ಕ್ಯೂರಿಯಂ ೫೨೦ಬ
Cynocephalus – ಕೊಲೂಗೊ ೩೭೮ಬ
Cyperus rotundus – ಕೊನ್ನಾರಿಗೆಡ್ಡೆ ೩೫೨ಎ
Date Plam – ಖರ್ಜೂರದ ಮರ ೭೮೪ಬ
Daucus carota – ಕ್ಯಾರಟ್ ೪೯೦ಬ
Defict financing – ಕೊರತೆಯ ಹಣಕಾಸು ೩೬೩ಬ
Degeneration – ಕ್ಷೀಣತೆ ೭೦೩ಎ
Dehorning – ಕೊಂಬು ತೆಗೆತ ೩೩೬ಎ
Deodourizers – ಗಂಧ ಹಾರಕಗಳು ೮೭೫ಎ
Diphtheria – ಗಂಟಲಮಾರಿ ೮೪೬ಎ
Depilatory – ಕೇಶನಾಶ ೨೫೦ಬ
Depression – ಖಿನ್ನತೆ ೮೦೪ಬ
Diseases, Defects and Disabilities of the hand – ಕೈಯ ರೋಗಗಳು, ಊನಗಳು ಮತ್ತು ನಿರುಪಯುಕ್ತತೆಗಳು ೩೧೩ಬ
Dragon fly – ಕೊಡತಿಕೀಟ ೩೪೮ಎ
Dussumiera hasseltii – ಕೊಂಡನ್ ಮೀನು ೩೩೨ಬ
Ecliptic – ಕ್ರಾಂತಿವೃತ್ತ ೫೩೨ಎ
Education of the Adolescent – ಕೌಮಾರ್ಯದ ಶಿಕ್ಷ ೪೬೩ಬ
Engrauils commersonianus – ಕೆಮ್ಮೀನು ೧೭೯ಎ
Ephemeris – ಖಗೋಳ ಕೋಷ್ಟಕ ೭೪೬ಬ
Equus quagga – ಕ್ವ್ಯಾಗ ೬೮೨ಬ
Erythroxylon coca – ಕೋಕೇನ್ ಗಿಡ ೩೯೩ಬ
Etch figuress – ಕೆತ್ತು ಗುರುತುಗಳು ೧೫೨ಬ
Eudynamys scolopacia – ಕೋಗಿಲೆ ೩೬೬ಎ
Euphobia tirucalli – ಕೋಲುಕಳ್ಳಿ ೪೩೧ಎ
Famine – ಕ್ಷಾಮ ೬೯೦ಬ
Federations of Industries – ಕೈಗಾರಿಕೆಗಳ ಸಂಯುಕ್ತ ಸಂಘಗಳು ೩೦೮ಎ
Fevernut – ಗಜ್ಜುಗದ ಗಿಡ ೮೮೩ಬ
Ficus krishnae – ಕೃಷ್ಣ ಆಲ ೧೧೩ಬ
Field, Algebraic – ಕ್ಷೇತ್ರ, ಬೀಜಗಣಿತೀಯ ೭೧೩ಬ
Fieldcraft – ಕ್ಷೇತ್ರಕೌಶಲ ೭೧೨ಎ
Field work – ಕ್ಷೇತ್ರಕಾರ್ಯ ೭೦೭ಎ
Field theories – ಕ್ಷೇತ್ರ ಸಿದ್ಧಾಂತಗಳು ೭೨೦ಎ
Flame thrower – ಕೊಳ್ಳಿ ಎಸೆಯುವ ಯಂತ್ರ ೩೮೮ಬ
Forgery – ಕೃತಿಚೌರ್ಯ ೪೧ಎ
Fort – ಕೋಟೆ ೩೯೬ಬ

Fowl – ಕೋಳಿ ೪೫೫ಎ
Fowl, Diseases of – ಕೋಳಿ, ರೋಗಗಳು ೪೫೮ಬ
Functionalism – ಕ್ರಿಯಾವಾದ ೫೪೭ಎ
Functional Literacy – ಕ್ರಿಯಾತ್ಮಕ ಸಾಕ್ಷರತೆ ೫೪೬ಎ
Fundamentalism – ಕ್ರೈಸ್ತವೇದಪ್ರಾಮಾಣ್ಯವಾದ ೫೮೫ಎ
Gall Fly – ಗಂಟು ನೊಣ ೮೫೫ಎ
Galls – ಗಂಟುಗಳು ೮೫೪ಬ
Gauntlet – ಕೈಕಾಪು ೨೭೧ಎ
Gazania – ಗಜ಼ೇನಿಯ ೮೮೩ಬ
Gift – ಕೊಡುಗೆ ೩೪೮ಬ
Gift Cupons – ಕೊಡುಗೆ ಚೀಟಿಗಳು ೩೪೯ಎ
Gift Tax – ಕೊಡಗೆ ತೆರಿಗೆ ೩೪೯ಎ
Glaucoma – ಗಟ್ಟಿಗಣ್ಣು ೮೮೪ಬ
Godown – ಗಡಂಗು ೮೮೬ಎ
Goitre – ಗಂಡಮಾಲೆ ೮೫೯ಎ
Goniometer – ಕೋನಮಾಪಕ ೪೦೪ಎ
Gutta-Percha – ಗಟಚರ್ಪ ೮೮೩ಬ
Halphytes – ಕ್ಷಾರಸಸ್ಯಗಳು ೬೯೩ಬ
Hammer Toe – ಕೊಡತಿ ಬೆಟ್ಟು ೩೪೮ಎ
Hand Axe – ಕೈಗೊಡಲಿ ೩೧೦ಬ
Handedness – ಕೈಬಳಕೆ ೩೧೨ಬ
Hard Currency – ಗಟ್ಟಿನಾಣ್ಯ ೮೮೫ಎ
Hearing – ಕೇಳುವಿಕೆ ೨೫೯ಎ
Hearing Aids – ಕೇಳುವಿಕೆಗೆ ಸಹಾಯಕಗಳು ೨೬೯ಎ
Helicteres isora – ಕೌರಿ ೪೬೪ಬ
Henbane – ಖುರಾಸಾನಿ ಓಮ ೮೦೭ಬ
Hexachloroplatinic Acid – ಕ್ಲೋರೊಪ್ಲಾಟಿನಿಕ್ ಆಮ್ಲ ೬೨೪ಬ
Holarrhena Antidysenterica – ಕೊರಸಿಗನ ಮರ ೩೬೬ಎ
Hook Worm – ಕೊಕ್ಕೆಹುಳು ೩೫೯ಬ
Hookworm Disease – ಕೊಕ್ಕೆಹುಳು ರೋಗ ೩೪೦ಎ
Horizon – ಕ್ಷಿತಿಜ ೬೯೩ಬ
Horn – ಕೊಂಬು ೩೩೬ಎ
Hygrophila spinosa – ಕೊಳವಳಿಕೆ ೩೮೫ಬ
Hypothalamus – ಕೆಳತಲೆಯರೆ ೧೫೯ಎ
Iberis – ಕ್ಯಾಂಡಿಟಫ್ಟ್ ೪೭೦ಬ
Industrial Accidents – ಕೈಗಾರಿಕಾ ಅಪಘಾತಗಳು ೨೭೨ಎ
Industrial Archtecture – ಕೈಗಾರಿಕಾ ವಾಸ್ತುಶಿಲ್ಪ ೨೯೧ಬ
Industrial Bank – ಕೈಗಾರಿಕಾ ಬ್ಯಾಂಕು ೨೮೨ಎ
Industrial Chemistry – ಕೈಗಾರಿಕಾ ರಸಾಯನವಿಜ್ಞಾನ ೨೮೮ಬ
Industrial Councils – ಕೈಗಾರಿಕಾ ಮಂಡಳಿಗಳು ೨೮೪ಎ
Industrial Democracy – ಕೈಗಾರಿಕಾ ಪ್ರಜಾಪ್ರಭುತ್ವ ೨೮೧ಬ
Industrial Design – ಕೈಗಾರಿಕಾ ಆಲೇಖ್ಯ ೨೭೨ಬ
Industrial Drying – ಕೈಗಾರಿಕಾ ಶುಷ್ಕೀಕರಣ ೩೦೧ಬ
Industrial Engineering – ಕೈಗಾರಿಕಾ ಶಿಲ್ಪ ೩೦೦ಬ
Industrial Fatigue – ಕೈಗಾರಿಕಾ ದಣಿವು ೨೭೭ಬ
Industrial Finance – ಕೈಗಾರಿಕಾ ಹಣಕಾಸು ೩೦೪ಎ
Industrialisation – ಕೈಗಾರಿಕಾಕರಣ ೩೭೩ಬ
Industrialism – ಕೈಗಾರಿಕಾ ಪದ್ಧತಿ ೨೮೦ಬ
Industrial Management – ಕೈಗಾರಿಕಾ ವ್ಯವಸ್ಥಾಪನ ೨೫೯ಎ
Industrial Medicine – ಕೈಗಾರಿಕಾ ವೈದ್ಯ ೨೯೩ಬ
Industrial Policy – ಕೈಗಾರಿಕಾ ನೀತಿ ೨೭೯ಎ
Industrial Psychology – ಕೈಗಾರಿಕಾ ಮನೋವಿಜ್ಞಾನ ೨೮೫ಎ
Industrial Society – ಕೈಗಾರಿಕಾ ಸಂಬಂಧಗಳು ೩೦೨ಬ
Industrial Revolution – ಕೈಗಾರಿಕಾ ಕ್ರಾಂತಿ ೨೭೫ಬ
Industrial Workers of the World – ಕೈಗಾರಿಕಾ ಕಾರ್ಮಿಕರು ವಿಶ್ವದ ೨೭೫ಎ
Industry – ಕೈಗಾರಿಕೆ ೩೦೫ಎ
Job Analysis – ಕೆಲಸದ ವಿಶ್ಲೇಷಣೆ ೧೮೫ಎ
Job Evalution – ಕೆಲಸದ ಮೌಲ್ಯನಿರ್ಣಯ ೧೮೪ಎ
Kalanchoe – ಕ್ಯಾಲ್ಯಾಂಕೋಯಿ ೫೦೮ಬ
Katabatic Wind – ಕ್ಯಾಟಬ್ಯಾಟಿಕ್ ಮಾರುತ ೪೭೨ಎ
Kelvin Bridge – ಕೆಲ್ವಿನ್ ಬ್ರಿಜ್ ೧೯೩ಎ
Kelvin Scale of Temperature Measurment – ಕೆಲ್ವಿನ್ ಉಷ್ಣತಾಮಾನ ಪದ್ಧತಿ ೧೬೨ಬ
Kempperia – ಕೆಂಫೆರಿಯ ೧೫೧ಎ
Kep – ಕೆಪ್ ೧೭೯ಎ
Kepler's Equation – ಕೆಪ್ಲರನ ಸಮೀಕರಣ ೧೭೮ಬ
Kepler's Laws – ಕೆಪ್ಲರನ ನಿಯಮಗಳು ೧೭೭ಬ
Keratitis – ಕೆರಟೈಟಿಸ್ ೧೭೯ಬ
Keratins – ಕೆರಾಟಿನ್‌ಗಳು ೧೮೦ಎ
Keratomalacia – ಕೆರಟೊಮಲಶಿಯ ೧೮೦ಎ
Keynes plan – ಕೇನ್ಸ್ ಯೋಜನೆ ೨೨೬ಬ
Kew Gardens – ಕ್ಯೂಸಸ್ಯೋದ್ಯಾನ ೫೨೨ಬ
Khadi – ಖಾದೀ ೭೯೪ಬ
Khaki – ಖಾಕಿಬಟ್ಟೆ ೭೯೩ಎ
Khandalite – ಖಾಂಡಲೈಟ್ ೭೯೧ಬ
Khedda – ಖೆಡ್ಡ ೮೧೯ಎ
Kjeldahl Method – ಕೇಲ್ಡಾಲ್ ವಿಧಾನ ೨೪೫ಎ
Knot – ಗಂಟು ೮೫೧ಬ
Koala – ಕೊಆಲ ೩೩೬ಬ
Kochia – ಕೋಕಿಯ ೩೫೩ಎ
Koel – ಕೋಗಿಲೆ ೩೫೯ಎ
Kra – ಕ್ರಾ ಕೋತಿ ೫೩೩ಬ
Kreb's Cycle – ಕ್ರೆಬ್ಸ್ ಚಕ್ರ ೫೭೦ಎ
Kreb's Urea Cycle – ಕ್ರೆಬ್ಸ್ ಯೂರಿಯಾ ಚಕ್ರ ೫೭೧ಎ
Kremlin – ಕ್ರೆಮ್ಲಿನ್ ೫೭೨ಎ
Krypton – ಕ್ರಿಪ್ಟಾನ್ ೫೪೩ಎ

K-Theory – ಕೆ–ಸಿದ್ಧಾಂತ ೧೯೬ಎ
Kyasanur Forest Disease – ಕ್ಯಾಸನೂರು ಕಾಡಿನ ಕಾಯಿಲೆ ೫೧೩ಎ
Kwashiorkar – ಕ್ವಾಷಿಯೋರ್ಕರ್ ೬೭೩ಎ
Lathyrus sativus – ಕೇಸರಿಬೇಳೆ ಗಿಡ ೨೫೫ಬ
Lemon – ಗಜನಿಂಬೆ ೮೮೦ಎ
Lexicography – ಕೋಶವಿಜ್ಞಾನ ೪೩೪ಎ
Liturgy – ಕ್ರೈಸ್ತ ಆರಾಧನಾ ವಿಧಿ ೫೭೯ಬ
Localisation of Industries – ಕೈಗಾರಿಕೆಗಳ ಸ್ಥಾನೀಕರಣ ೩೦೮ಎ
Loxia – ಕ್ರಾಸ್‌ಬಿಲ್ ೫೩೫ಎ
Lower-Jaw – ಕೆಳದವಡೆ ೧೯೯ಬ
Macaca irus – ಕ್ರಾ ಕೋತಿ ೫೩೩ಬ
Machines Built on the Principle of Centrifugal Force – ಕೇಂದ್ರಾಪಗಾಮಿ ಬಲವನ್ನು ಉಪಯೋಗಿಸಿ ಕೊಳ್ಳುವ ಯಂತ್ರಗಳು ೨೦೧ಎ
Man made Fibres, Synthetics – ಕೃತಕ ಎಳೆಗಳು ೨೬ಬ
Margarine – ಕೃತಕ ಬೆಣ್ಣೆ ೩೬ಬ
Mastites – ಕೆಚ್ಚಲು ರೋಗ ೧೫೧ಬ
Mensuration – ಕ್ಷೇತ್ರಗಣಿತ ೭೧೨ಬ
Mexican Sword Tail – ಖಡ್ಗ ಬಾಲ ಮೀನು ೮೬೩ಎ
Mineral – ಖನಿಜ ೭೬೪ಬ
Mineral Deposits – ಖನಿಜ ನಿಕ್ಷೇಪಗಳು ೭೬೬ಬ
Mineral Fillers – ಖನಿಜ ಪೂರಕಗಳು ೭೬೮ಬ
Mineral Pigments – ಖನಿಜ ವರ್ಣದ್ರವ್ಯಗಳು ೭೭೯ಬ
Mineral Prospecting – ಖನಿಜಾನ್ವೇಷಣೆ ೭೭೧ಎ
Mineralogy – ಖನಿಜವಿಜ್ಞಾನ ೭೭೦ಬ
Mineral Oil – ಖನಿಜ ತೈಲ ೮೬೬ಬ
Mischief – ಕೇಡು ೨೨೨ಬ
Missile – ಕ್ಷಿಪಣಿ ೬೯೪ಎ
Mock-Leno – ಕೃತಕ ಜಾಲರಿಬಟ್ಟೆ ೩೩ಬ
Mystus vittatus – ಕೆಳತಿ ಮೀನು ೧೯೯ಎ
Mytus – ಕೆತ್ತಲು ಮೀನು ೧೫೨ಎ
Nodule – ಗಂತಿ[1] ೮೬೦ಎ
Nut Grass – ಕೊನ್ನಾರಿಗೆಡ್ಡೆ ೩೫೨ಎ
Oil of Cassia – ಕ್ಯಾಸಿಯ ಎಣ್ಣೆ ೫೧೪ಎ
Opal – ಕ್ಷೀರಸ್ಫಟಿಕ ೭೦೩ಬ
Ophiocephalus punctatus – ಕೊರವ ಮೀನು ೩೬೬ಬ
Order Statistics – ಕ್ರಮನಿದರ್ಶಜಗಳು ೫೨೭ಬ
Osteochilus – ಕೊಂಟಿ ಮೀನು ೩೩೨ಎ
Oxyacids of Sulphur – ಗಂಧಕದ ಆಕ್ಸಿ ಆಮ್ಲಗಳು ೮೬೮ಬಿ
Pandanus odoratissimus – ಕೇದಗೆ ೨೨೨ಬ
Parapet – ಕೈಪಿಡಿಗೋಡೆ ೩೧೨ಎ
Passivity – ಕ್ರಿಯಾರಹಿತತ್ವ ೫೪೭ಎ
Pasturellosis – ಗಂಟಲು ಬೇನೆ ೮೫೧ಬ
Pedodontics – ಕೂಸುಗಳು ದಂತವಿಜ್ಞಾನ ೧೬ಬ
Phalaris arundinacea – ಕ್ಯಾನರಿ ಹುಲ್ಲು ೪೭೯ಎ
Phoneix dactylifera – ಖರ್ಜೂರದ ಮರ ೮೮೪ಬ
Pipelines – ಕೊಳವೆ ಮಾರ್ಗಗಳು ೩೮೬ಎ
Pleiades – ಕೃತ್ತಿಕಾ ೪೪ಎ
Plumbing – ಕೊಳಾಯಿ ಕೆಲಸ ೩೮೭ಬ
Porphyria – ಕೆನ್ನೀಲಿಕೆ[2] ೧೭೫ಎ
Poultry Farming – ಕೋಳಿಸಾಕಣೆ ೪೫೭ಎ
Private Educational Institutions – ಖಾಸಗಿ ಶಿಕ್ಷಣ ಸಂಸ್ಥೆಗಳು ೮೦೨ಎ
Private Enterprise – ಖಾಸಗಿ ಉದ್ಯಮ ೮೦೧ಎ
Produce Exchange – ಕೃಷಿ ಉತ್ಪನ್ನ ವಿನಿಮಯ ಕೇಂದ್ರ ೬೦ಎ
Protection of Industries – ಕೈಗಾರಿಕೆಗಳ ರಕ್ಷಣೆ ೩೦೬ಎ
Psoriasis – ಕೆಂಗಲೆ ಸುಂಡು ೧೪೦ಎ
Puntius kolus – ಕೊರಚ ಮೀನು ೩೬೩ಎ
Purpura – ಕೆನ್ನೀಲಿಕೆ[1] ೧೭೫ಎ
Put and Call – ಕ್ರಯ ಮತ್ತು ವಿಕ್ರಯ ಆಯ್ಕೆ ಹಕ್ಕು ೫೨೮ಬ
Q Fever – ಕ್ಯು ಜ್ವರ ೫೧೫ಬ
Quagga – ಕ್ವ್ಯಾಗ ೬೮೨ಬ
Quaker Movement – ಕ್ವೇಕರ್ ಚಳವಳಿ ೬೮೧ಎ
Quantization – ಕ್ವಾಂಟೀಕರಣ ೬೯೯ಬ
Quantum – ಕ್ವಾಂಟಂ ೬೩೩ಎ
Quantum chemistry – ಕ್ವಾಂಟಂ ರಸಾಯನವಿಜ್ಞಾನ ೬೪೨ಎ
Quantum electrodynamics – ಕ್ವಾಂಟಂ ವೈದ್ಯುತ ಚಲನ ಶಾಸ್ತ್ರ ೬೪೯ಬ
Quantum Field Theory – ಕ್ವಾಂಟಂ ಕ್ಷೇತ್ರ ಸಿದ್ಧಾಂತ ೬೩೪ಬ
Quantum mechanics – ಕ್ವಾಂಟಂ ಬಲವಿಜ್ಞಾನ ೬೩೬ಬ
Quantum numbers – ಕ್ವಾಂಟಂ ಸಂಖ್ಯೆಗಳು ೬೫೭ಎ
Quantum Statistics – ಕ್ವಾಂಟಂ ಸಂಖ್ಯಾಕಲನ ವಿಜ್ಞಾನ ೬೪೯ಬ
Quantum theory, nonrelativistic – ಕ್ವಾಂಟಂ ಸಿದ್ಧಾಂತ, ಅಸಾಪೇಕ್ಷಿಕ ೬೫೮ಎ
Quantum theory, relativistic – ಕ್ವಾಂಟಂ ಸಿದ್ಧಾಂತ, ಸಾಪೇಕ್ಷಿಕ ೬೬೭ಎ
Quartz – ಕ್ವಾರ್ಟ್ಸ್ ೬೭೧ಬ
Quartz Clock – ಕ್ವಾರ್ಟ್ಸ್ ಗಡಿಯಾರ ೬೭೨ಬ
Quartzite – ಕ್ವಾರ್ಟ್‌ಜೈಟ್ ೬೭೧ಬ
Quasar – ಕ್ವೇಸಾರ್ ೬೮೧ಬ
Quaternary – ಕ್ವಾಟರ್ನರಿ ೬೭೦ಎ
Quaternion – ಕ್ವಟರ್ನಿಯನ್ ೬೩೦ಎ
Queue Theory – ಕ್ಯೂ ಸಿದ್ಧಾಂತ ೫೨೩ಬ
Quinine – ಕ್ವಿನೀನ್ ೬೭೫ಎ
Quinol – ಕ್ವಿನಾಲ್ ೬೭೪ಬ
Quinoline – ಕ್ವಿನೋಲಿನ್ ೬೭೬ಎ
Quinone – ಕ್ವಿನೋನ್ ೬೭೫ಬ
Quorum – ಕೋರಂ ೪೧೦ಎ

Quo Warranto – ಕ್ವೋ ವಾರಂಟೋ ೬೮೨ಬ
Red algae – ಕೆಂಪು ಆಲ್ಗೆ ೧೪೪ಬ
Red ant – ಕೆಂಜಿಗ ೧೪೦ಎ
Red deer – ಕೆಂಪು ಸಾರಂಗ ೧೪೮ಬ
Red fish – ಕೆಮ್ಮೀನು ೧೭೯ಎ
Regulators and Governors – ಕ್ರಮಕಾರಕಗಳು ಮತ್ತು ನಿಯಾಮಕಗಳು ೫೨೬ಎ
Revolutions – ಕ್ರಾಂತಿಗಳು ೫೩೦ಎ
Rhinoceros – ಖಡ್ಗಮೃಗ ೭೬೩ಎ
Rhinoceros Beetles – ಖಡ್ಗ ಜೀರುಂಡೆಗಳು ೭೬೨ಬ
Rhinomugil corsula – ಕೊರವ ಮೀನು ೩೬೬ಎ
Room and Pillar Method – ಕೋಣೆಮತ್ತು ಆಸರೆ ಕಂಬ ಪದ್ಧತಿ ೪೦೩ಎ
Ruby – ಕೆಂಪು ೧೪೪ಎ
Sandalwood tree – ಗಂಧದ ಮರ ೮೭೨ಬ
Santalum Album – ಗಂಧದ ಮರ ೮೭೩ಬ
Satellite Instructional Television Experiment – ಖಂಡವ್ಯಾಪಿ ತರಗತಿ ೭೩೮ಬ
Scarlet Fever – ಕೆಂಜ್ವರ ೧೪೦ಬ
Schleichera trijuga – ಕೆಂದಾಳೆ ೧೪೪ಎ
Screw-Pine – ಕೇದಗೆ ೨೨೨ಬ
Sebastes marinus – ಕೆಮ್ಮೀನು ೧೭೯ಎ
Sillago – ಖಂಡಿಗೆ ಮೀನು ೭೪೦ಎ
Skates – ಕೊರಕೆಗಳು ೩೬೩ಎ
Sky Scrapers – ಗಗನಚುಂಬಿ ಕಟ್ಟಡಗಳು ೮೭೭ಬ
Solipsism – ಕೇವಲಸ್ವಾತ್ಮೇಕವಾದ ೨೪೫ಎ
Spillway – ಕೋಡಿ ೪೦೨ಬ
Sports – ಕ್ರೀಡೆಗಳು ೫೬೬ಎ
Stadium – ಕ್ರೀಡಾಂಗಣ ೫೬೩ಬ
Statistical Methods in Industry – ಕೈಗಾರಿಕಾರಂಗದಲ್ಲಿ ಸಂಖ್ಯಾಶಾಸ್ತ್ರದ ವಿಧಾನಗಳು ೨೮೮ಎ
Stencil Printing – ಕೊರೆಯಚ್ಚು ಮುದ್ರಣ ೩೭೦ಬ
Sterculia urens – ಕೆಂಪುದಾಳೆ ೧೪೭ಬ
Sulphur – ಗಂಧಕ ೮೬೫ಬ
Sulphur Dioxide – ಗಂಧಕದ ಡ್ರೈ ಆಕ್ಸೈಡ್ ೮೭೦ಬ
Sulphur Trioxide – ಗಂಧಕದ ಟ್ರೈ ಆಕ್ಸೈಡ್ ೮೭೦ಎ
Surge Tank – ಕೊಳ, ಹೊಯ್ದಾಟದ ೩೮೭ಬ
Sword Tail – ಖಡ್ಗಬಾಲ ಮೀನು ೮೬೩ಎ
Taro – ಕೆಸವು ೧೯೫ಎ
Thanks Giving Day – ಕೃತಜ್ಞತಾ ಸಮರ್ಪಣದಿನ ೪೦ಎ
Theobroma cacao – ಕೋಕೋ ೩೯೪ಎ
Theories of Wages – ಕೂಲಿ ಸಿದ್ಧಾಂತಗಳು ೧೩ಎ
Theory of Games – ಕ್ರೀಡಾ ಸಿದ್ಧಾಂತ ೫೬೫ಎ
Throat – ಗಂಟಲು ೮೪೯ಬ
Throat, Diseases of – ಗಂಟಲಿನ ರೋಗಗಳು ೮೪೮ಬ
Topographical Surveying and Mapping – ಕ್ಷೇತ್ರ ಸ್ವರೂಪ ಸರ್ವೇಕ್ಷಣ ಮತ್ತು ಚಿತ್ರಣ ೭೨೫ಎ
Tragedy – ಗಂಭೀರ ನಾಟಕ ೮೭೫ಎ
Treasury – ಖಜಾನೆ ೭೫೭ಎ
Treasury Bill – ಖಜಾನೆ ಹುಂಡಿ ೭೫೯ಎ
Treasury Deposit Receipt – ಖಜಾನೆ ಠೇವಣಿ ರಸೀತಿ ೭೫೯ಎ
Trogoderma granaria – ಖಪ್ರ ಜೀರುಂಡೆ ೭೭೫ಎ
Tuberculin – ಕ್ಷಯಾಣುಸಾರ ೬೯೦ಬ
Tuberculosis – ಕ್ಷಯ[೧]+[೨] ೬೮೫ಎ/ಬ
Tube Worm – ಕೊಳವೆ ಹುಳು ೩೮೬ಬ
Tumour – ಗಂತಿ[2] ೮೬೦ಬ
Undershot Wheels – ಕೆಳಗೆ ತಳ್ಳಲ್ಪಡುವ ನೀರುಚಕ್ರಗಳು ೧೯೮ಬ
Vericose Vein – ಕೊಂಕಿದ ಸಿರ ೩೩೦ಬ
Virgin's Bower – ಕ್ಲೆಮಾಟಿಸ್ ೬೧೫ಬ
Warehouse – ಗಡಂಗು ೮೮೬ಎ
Workers, Training of – ಕೆಲಸಗಾರರ ತರಪೇತು ೧೮೩ಬ
Wrist Watch – ಕೈಗಡಿಯಾರ ೨೭೧ಬ
Watch – ಗಡಿಯಾರ ೮೮೬ಬ


## ಲೇಖಕಸೂಚಿ


**ಎ.** ಅನಂತರಾಮಯ್ಯ, ಎಂ.ವಿ. (ದಿ)
ಸೂಪರಿಂಟೆಂಡೆಂಟ್, ಪ್ರಾಣಿ ಸಂಗ್ರಹಾಲಯ
ಮೈಸೂರು

**ಎಬಿ.ಎ.** ಅಬ್ದುಲ್ ಅಜೀಸ್
ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಎಸಿ.** ಚಂದ್ರಶೇಖರಯ್ಯ, ಎ.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ನ್ಯಾಷನಲ್ ಎಂಜಿನಿಯರಿಂಗ್ ಕಾಲೇಜು, ಮೈಸೂರು

**ಎ.ಜಿ.ಕೆ.ಆರ್.** ಕೃಷ್ಣ, ಎ.ಜಿ.
ಪ್ರಾಧ್ಯಾಪಕ, ವೈದ್ಯವಿಜ್ಞಾನ ವಿಭಾಗ
ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು

**ಎ.ಕೆ.ಕೆ.** ಆನಂದ ಕಾರಂತ ಕಿಲಿಂಜರ್
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎ.ಕೆ.ಎಸ್.** ಸ ಕೃಷ್ಣಸ್ವಾಮಿ, ಎ.
ಜಿಲ್ಲಾ ಅರಣ್ಯಾಧಿಕಾರಿ (ವಿ)
74, 3ನೆಯ ಮುಖ್ಯರಸ್ತೆ, ಬಿ.ಎಸ್.ಸಿ.ಎಸ್. ಲೇಔಟ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು

**ಎ.ಎಂ.ಎ.** ಅಣ್ಣಿಗೇರಿ, ಎ.ಎಂ.
ಸಹಾಯಕ ಸಂಶೋಧಕ (ವಿ)
ಪ್ರಾಕ್ತನಶಾಸ್ತ್ರ ಇಲಾಖೆ, ಧಾರವಾಡ

**ಎ.ಎಂ.ಆರ್.** ರಾಜಶೇಖರಯ್ಯ, ಎ.ಎಂ.
ರೀಡರ್, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| | |
|---|---|
| **ಎ.ಎನ್‌ಎ.** | ನಾರಾಯಣಪ್ಪ, ಎ.<br>ವೈದ್ಯ, ಬೇಲೂರು ರೋಡ್<br>ಚಿಕ್ಕಮಗಳೂರು |
| **ಎ.ಎನ್.ಎಸಿ.** | ಆಚಾರ್ಯ, ಎ.ಎನ್.<br>ಸ್ಕೂಲ್ ಆಫ್ ಮ್ಯಾಥಮ್ಯಾಟಿಕ್ಸ್<br>ಟಿ.ಐ.ಎಫ್.ಆರ್., ಮುಂಬಯಿ–5 |
| **ಎ.ಎನ್.ಕೆ.** | ಕೃಷ್ಣಮೂರ್ತಿ, ಎ.ಎನ್.<br>ಸಹಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ<br>ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು |
| **ಎ.ಎನ್.ಎಸ್.ಐ.** | ಶ್ರೀನಿವಾಸ ಐಯ್ಯಂಗಾರ್, ಎ.ಎನ್.<br>ಭೂವಿಜ್ಞಾನಿ, ಶ್ರೀ ಶಾನುದಾಸ ಗ್ರಂಥಮಾಲಾ<br>ಮೇಲುಕೋಟೆ |
| **ಎ.ಎನ್.ಎಸ್.** | ಸುಬ್ಬರಾವ್, ಎ.ಎನ್.<br>ನಿರ್ದೇಶಕ, ಕಲಾಮಂದಿರ<br>ಬಸವನಗುಡಿ, ಬೆಂಗಳೂರು |
| **ಎ.ಎನ್.ಯು.** | ಉಪಾಧ್ಯೆ, ಎ.ಎನ್. (ದಿ)<br>ಪ್ರಾಧ್ಯಾಪಕ, ಜೈನಾಲಜಿ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎ.ಪಿಆರ್.** | ಅಲೋಷಿಯಸ್ ಪ್ರಭು<br>ಸೇಂಟ್ ಜೋಸೆಫ್ಸ್ ಸೆಮಿನರಿ, ಮಂಗಳೂರು |
| **ಎ.ಪಿ.ಎಸ್.** | ಶ್ರೀನಿವಾಸಮೂರ್ತಿ, ಎ.ಪಿ.<br>ರೀಡರ್ (ವಿ), ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎ.ಆರ್.ಸಿ.ಪಿ.** | ಚಿಕ್ಕಪಾಪಯ್ಯ, ಎ.ಆರ್.<br>ಗೌರವ ಕಾರ್ಯದರ್ಶಿ<br>ಮೈಸೂರು ರಾಜ್ಯ ಒಲಿಂಪಿಕ್ ಅಸೋಸಿಯೇಷನ್<br>6ನೆಯ ಬ್ಲಾಕು, ಜಯನಗರ, ಬೆಂಗಳೂರು |
| **ಎ.ಆರ್.ಜಿ.** | ಗೋವಿಂದರಾವ್, ಎ.ಆರ್.<br>ಪ್ರಾಧ್ಯಾಪಕ (ವಿ), ಔಷಧವಿಜ್ಞಾನ ವಿಭಾಗ<br>ಜೆ.ಜೆ.ಎಂ. ಕಾಲೇಜು, ದಾವಣಗೆರೆ |
| **ಎ.ಆರ್.ಪಿ.** | ರಾಜೇಂದ್ರಪ್ರಸಾದ್, ಎ.<br>ಪ್ರಾಧ್ಯಾಪಕ, ವಕ್ರದಂತ ನಿವಾರಣಾ ವಿಭಾಗ<br>ಡೆಂಟಲ್ ಕಾಲೇಜು, ಬೆಂಗಳೂರು |
| **ಎ.ಎಸ್.ಎಚ್.** | ಹಾದಿಮನಿ, ಎ.ಎಸ್.<br>ಅಸೋಸಿಯೇಟ್ ಪ್ರೊಫೆಸರ್, ಕೃಷಿ ವಿಶ್ವವಿದ್ಯಾಲಯ<br>ಹೆಬ್ಬಾಳ, ಬೆಂಗಳೂರು |
| **ಎ.ಎಸ್.ಆರ್.** | ಸುಬ್ಬರಾವ್, ಎ.<br>ಪ್ರಾಧ್ಯಾಪಕ (ವಿ), ಜೀವರಸಾಯನವಿಜ್ಞಾನ ವಿಭಾಗ<br>ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ |
| **ಎ.ಎಸ್.ಆರ್.ಎ.** | ಸುಬ್ಬರಾವ್, ಎ. (ದಿ)<br>ಶಿವಮೊಗ್ಗ |
| **ಎ.ಎಸ್‌ಯು.** | ಸುಂದರ, ಎ.<br>ಪ್ರಾಧ್ಯಾಪಕ (ವಿ), ಹಿಮಶೃಂಗ<br>ಶಾರದಾನಗರ, ಶೃಂಗೇರಿ |
| **ಎ.ವಿ.ಜಿ.** | ಗೋಪಾಲರಾವ್, ಎ.ವಿ.<br>ಭೌತಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಎ.ವಿ.ಎನ್.** | ನರಸಿಂಹಮೂರ್ತಿ, ಎ.ವಿ.<br>ಪ್ರಾಧ್ಯಾಪಕ (ವಿ), ದೇವಗಿರಿ<br>ಗೋಕುಲಂ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು |
| **ಎ.ವಿ.ವಿ.** | ವೆಂಕಟರತ್ನಂ, ಎ.ವಿ. (ದಿ)<br>ಪ್ರಾಧ್ಯಾಪಕ, ಮೈಸೂರು |
| **ಬಿ.ಎ.ಸಿ.** | ಚನ್ನಪ್ಪಗೌಡ, ಬಿ.ಎ.<br>ತಾಂತ್ರಿಕ ಸಹಾಯಕ, ತೋಟಗಾರಿಕೆ ಇಲಾಖೆ<br>ಲಾಲ್‌ಬಾಗ್, ಬೆಂಗಳೂರು |
| **ಬಿ.ಎ.ವಿ.ಆರ್.** | ವಿವೇಕ ರೈ, ಬಿ.ಎ.<br>ಅಧ್ಯಾಪಕ, ಕನ್ನಡ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ<br>ಮಂಗಳೂರು |
| **ಬಿ.ಬಿ.ಬಿ.** | ಬಾಗಿ, ಬಿ.ಬಿ.<br>ಪ್ರಾಧ್ಯಾಪಕ (ವಿ), ಮಾಳಮಡ್ಡಿ, ಧಾರವಾಡ |
| **ಬಿ.ಬಿ.ಕೆ.** | ಕಣವಿ, ಬಿ.ಬಿ.<br>ಅಧ್ಯಾಪಕ, ಕರ್ನಾಟಕ ಆರ್ಟ್ಸ್ ಕಾಲೇಜು, ಧಾರವಾಡ |
| **ಬಿ.ಸಿ.ಎ.** | ಅಕ್ಕಿ, ಬಿ.ಸಿ.<br>ಪ್ರಾಂಶುಪಾಲರು, ಬಸವೇಶ್ವರ ಕಾಲೇಜು<br>ಬಾಗಲಕೋಟೆ |
| **ಬಿ.ಡಿ.ಜಿ.** | ಗಣಪತಿ, ಬಿ.ಡಿ.<br>ಸಂಪಾದಕ, 'ಕೊಡಗು', ಮಡಿಕೇರಿ |
| **ಬಿ.ಡಿ.ಎಚ್.** | ಹೆಗಡೆ, ಬಿ.ಡಿ.<br>ಅಡ್ವೊಕೇಟ್, ಸಿರ್ಸಿ (ಉ.ಕ.) |
| **ಬಿ.ಜಿ.** | ಬ್ರಹ್ಮಪ್ಪ, ಜಿ.<br>ಪ್ರಾಂಶುಪಾಲರು (ವಿ)<br>ಸಿದ್ಧಾರ್ಥ ಲೇಔಟ್, ಮೈಸೂರು |
| **ಬಿ.ಜಿ.ಟಿ.ಎ.** | ತಮಸ್ಕರ್, ಬಿ.ಜಿ.<br>ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ<br>ವಿದರ್ಭ ಮಹಾವಿದ್ಯಾಲಯ, ಅಮರಾವತಿ |
| **ಬಿಎಚ್.ಕೆ.** | ಭದ್ರಿರಾಜು ಕೃಷ್ಣಮೂರ್ತಿ (ದಿ)<br>ಪ್ರಾಧ್ಯಾಪಕ (ವಿ), ಭಾಷಾವಿಜ್ಞಾನ ವಿಭಾಗ<br>ಉಸ್ಮಾನಿಯ ವಿಶ್ವವಿದ್ಯಾನಿಲಯ, ಹೈದರಾಬಾದು |
| **ಬಿ.ಎಚ್.ಎಂ.** | ಮನೋಹರರಾಮ್, ಬಿ.ಎಚ್.<br>ಸಹಪ್ರಾಧ್ಯಾಪಕ, ಮತ್ಸ್ಯವಿಜ್ಞಾನ ಕಾಲೇಜು<br>ಮಂಗಳೂರು |
| **ಬಿ.ಎಚ್.ಎಸ್.** | ಶ್ರೀಧರ, ಬಿ.ಎಚ್.<br>ಪ್ರಾಂಶುಪಾಲರು (ವಿ)<br>ಗಾಂಧಿ ಸೆಂಟಿನರಿ ಮೆಮೋರಿಯಲ್ ಕಾಲೇಜು<br>ಸಿದ್ಧಾಪುರ |
| **ಬಿ.ಕೆಎ.** | ಕಮಲ, ಬಿ.<br>ಕರ್ನಾಟಕ ಸೈನ್ಸ್ ಕಾಲೇಜು, ಧಾರವಾಡ |
| **ಬಿ.ಕೆ.ಜಿ.** | ಗುರುರಾಜರಾವ್, ಬಿ.ಕೆ. (ದಿ)<br>ಪ್ರಾಧ್ಯಾಪಕ<br>ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಬಿ.ಕೆ.ಎಸ್.** | ಶಿವರಾಮಯ್ಯ, ಬಿ.ಕೆ. (ದಿ)<br>ಉಪನ್ಯಾಸಕ, ಸಂಸ್ಕೃತ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **ಬಿ.ಕೆ.ವಿ.** | ವಸಂತ, ಬಿ.ಕೆ.<br>ಡೆಂಟಲ್ ಸರ್ಜನ್, ಡೆಂಟಲ್ ಕಾಲೇಜು<br>ಬೆಂಗಳೂರು |
| **ಬಿ.ಎಲ್.** | ಲಕ್ಷ್ಮೀಕಾಂತ, ಬಿ. (ದಿ)<br>ಪ್ರಾಧ್ಯಾಪಕ, ಎಸ್.ಜೆ.ಪಿ. ಇನ್‌ಸ್ಟಿಟ್ಯೂಟ್<br>ಬೆಂಗಳೂರು |
| **ಬಿ.ಎಲ್.ಆರ್.** | ರಾಮಸ್ವಾಮಿ, ಬಿ.ಎಲ್.<br>ಸಹಾಯಕ ನಿರ್ದೇಶಕ, ದೈಹಿಕ ಶಿಕ್ಷಣ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |

# ಲೇಖಕಸೂಚಿ

| | |
|---|---|
| ಬಿ.ಎಂ. | ಮುದ್ದಾಚಾರಿ, ಬಿ. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎನ್. | ಬಸವಯ್ಯ, ಎನ್.<br>ವಿಶೇಷಾಧಿಕಾರಿ, ಮೀನುಗಾರಿಕೆ ಇಲಾಖೆ<br>ಮಲ್ಲೇಶ್ವರಂ, ಬೆಂಗಳೂರು |
| ಬಿ.ಎನ್ಎಆರ್. | ನರಸಿಂಹಯ್ಯ, ಬಿ.<br>34, ಮಹಿಷಿ ರೋಡ್, ಧಾರವಾಡ |
| ಬಿ.ಎನ್.ಬಿ. | ಬೋಳೇಗೌಡ, ಬಿ.ಎನ್. (ದಿ)<br>ರೀಡರ್, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎನ್.ಸಿ. | ಚಂದ್ರಯ್ಯ, ಬಿ.ಎನ್.<br>ಅಧ್ಯಾಪಕ, ಕನ್ನಡ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| ಬಿ.ಎನ್.ಸಿಎಚ್. | ಚತುರ್ವೇದಿ, ಬಿ.ಎನ್.<br>ಸುಭದ್ರಾ ಭವನ, 120ಎ, ನೆಹರೂನಗರ<br>ಸಿಕಂದರಾಬಾದ್ |
| ಬಿ.ಪಿ. | ಪಾಲಾಕ್ಷ, ಬಿ.<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಬಿ.ಪಿ.ಜಿ. | ಗೋಪಾಲಕೃಷ್ಣ, ಬಿ.ಪಿ.<br>ಪ್ರಾಂಶುಪಾಲರು (ವಿ)<br>231–1, ಶ್ರೀರಾಮ, 5ನೆಯ ರಸ್ತೆ<br>ಚಾಮರಾಜಪೇಟೆ, ಬೆಂಗಳೂರು |
| ಬಿ.ಪಿ.ಆರ್. | ರಾಧಾಕೃಷ್ಣ, ಬಿ.ಪಿ.<br>ನಿರ್ದೇಶಕ<br>ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು |
| ಬಿ.ಆರ್.ಬಿ. | ಭಟ್ಟ, ಬಿ.ಆರ್.<br>ರೀಡರ್ (ವಿ), ಸಂಖ್ಯಾವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಬಿ.ಆರ್.ಸಿ.ಆರ್. | ರಮೇಶಚಂದ್ರರಾವ್, ಬಿ.<br>ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಶ್ರೀಮಹಾವೀರ ಕಾಲೇಜು, ಮೂಡಬಿದ್ರಿ (ದ.ಕ.) |
| ಬಿ.ಆರ್.ಪಿ. | ಪ್ರಾಣೇಶರಾವ್, ಬಿ.ಆರ್.<br>ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ<br>ಶಾರದಾವಿಲಾಸ ಕಾಲೇಜು, ಮೈಸೂರು |
| ಬಿ.ಎಸ್. | ಶಿವಮೂರ್ತಿಶಾಸ್ತ್ರೀ, ಬಿ. (ದಿ)<br>ಸಂಪಾದಕ, ಶರಣಸಾಹಿತ್ಯ, ಬೆಂಗಳೂರು |
| ಬಿ.ಎಸ್.ಎ. | ಷೇಕ್ ಆಲಿ, ಬಿ.<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಸ್ಎಚ್. | ಶಾಮಸುಂದರ, ಬಿ.<br>ಕನ್ನಡ ವಿಶ್ವಕೋಶ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಸ್.ಕೆ. | ಕೃಷ್ಣಸ್ವಾಮಿ ಅಯ್ಯಂಗಾರ್, ಬಿ.ಎಸ್. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಬಿ.ಎಸ್.ಎಂ. | ಮಯೂರ, ಬಿ.ಎಸ್.<br>ಪ್ರಾಧ್ಯಾಪಕಿ (ವಿ)<br>ಭೌತವಿಜ್ಞಾನ ವಿಭಾಗ<br>ಮಹಾರಾಣಿ ಕಾಲೇಜು, ಮೈಸೂರು |
| ಬಿ.ಎಸ್.ಎನ್.ಪಿ. | ಪ್ರಸಾದ್, ಬಿ.ಎಸ್.ಎನ್.<br>ಅಧ್ಯಾಪಕ, ಭೌತವಿಜ್ಞಾನ ವಿಭಾಗ<br>ಕರ್ನಾಟಕ ರೀಜನಲ್ ಎಂಜಿನಿಯರಿಂಗ್ ಕಾಲೇಜು<br>ಸುರತ್ಕಲ್ (ದ.ಕ.) |
| ಬಿ.ಎಸ್.ಪಿ. | ಪಾಟೀಲ, ಬಿ.ಎಸ್.<br>ಅಧ್ಯಾಪಕ, ಇತಿಹಾಸ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| ಬಿ.ಎಸ್.ಆರ್.ಆರ್. | ರಾಮರಾವ್, ಬಿ.ಎಸ್. (ದಿ)<br>ಪ್ರಜಾವಾಣಿ, ಬೆಂಗಳೂರು |
| ಬಿ.ಎಸ್.ಎಸ್. | ಸಣ್ಣಯ್ಯ, ಬಿ.ಎಸ್.<br>ಸಹಾಯಕ ನಿರ್ದೇಶಕ (ವಿ)<br>ಸಂಪಾದನಾ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಸ್.ಎಸ್.ಎ. | ಶ್ರೀಕಂಠಾರಾಧ್ಯ, ಬಿ.ಎಸ್.<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎಸ್ಯು. | ಬಾಟ್ನಿ ಸುಬ್ಬರಾವ್<br>ಅಧ್ಯಾಪಕ, ರಸಾಯನಶಾಸ್ತ್ರ ವಿಭಾಗ<br>ಸರ್ಕಾರಿ ಕಾಲೇಜು, ಕೋಲಾರ |
| ಬಿ.ಎಸ್ಯುಬಿ. | ಸುಬ್ಬರಾಮಯ್ಯ, ಬಿ.<br>ಸರ್ಜನ್ (ವಿ), ಗೌರೀಶಂಕರ ನಿಲಯ<br>ನೆಹರೂ ನಗರ, ಬೆಂಗಳೂರು |
| ಬಿ.ಟಿಎಚ್. | ತಿರುಮಲಾಚಾರ್, ಬಿ.<br>3ನೆಯ ಮೇನ್, ಚಾಮರಾಜಪೇಟೆ, ಬೆಂಗಳೂರು |
| ಬಿ.ವಿ.ಜಿ. | ಗೋವಿಂದರಾಜುಲು, ಬಿ.ವಿ. (ದಿ)<br>ಪ್ರಾಧ್ಯಾಪಕ, ಭೂವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ವಿ.ಕೆ. | ಕೃಷ್ಣಸ್ವಾಮಿ, ಬಿ.ವಿ.<br>ವ್ಯಾಯಾಮ ಶಿಕ್ಷಕ<br>ಪಿ.ಇ.ಎಸ್. ಎಂಜಿನಿಯರಿಂಗ್ ಕಾಲೇಜು<br>ಮಂಡ್ಯ |
| ಬಿ.ವಿ.ಎಸ್. | ಸುಬ್ಬರಾಯಪ್ಪ, ಬಿ.ವಿ.<br>ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡಮಿ<br>ಬಹದ್ದೂರ್ ಷಾ ಜಫರ್ ಮಾರ್ಗ, ನವದೆಹಲಿ |
| ಬಿ.ವಿ.ವಿ. | ವೆಂಕಟರಾವ್, ಬಿ.ವಿ.<br>ಕಾರ್ಯದರ್ಶಿ, ಪ್ರಕಾಶನ ವಿಭಾಗ<br>ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು |
| ಬಿ.ವೈ.ಎಂ.ಜಿ. | ಗೌಂಡರ್, ಬಿ.ವೈ.ಎಂ.<br>ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಸಿ | ಚಿದಂಬರ ಕುಲಕರ್ಣಿ<br>ಅಧ್ಯಾಪಕ, ಭವಾನ್ಸ್ ಕಾಲೇಜು<br>ಅಂಧೇರಿ, ಮುಂಬಯಿ |
| ಸಿ.ಬಿ.ಪಿ. | ಪ್ರಭುದೇವಸ್ವಾಮಿ, ಸಿ.ಬಿ.<br>ಭೂಗೋಳವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಸಿ.ಸಿ.ಪಿ. | ಪಟ್ಟಣಶೆಟ್ಟಿ, ಸಿ.ಸಿ.<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಸಿ.ಜಿ. | ಗುಂಡೂರಾವ್, ಸಿ.<br>ಸೀನಿಯರ್ ಸೈಂಟಿಫಿಕ್ ಆಫೀಸರ್ (ವಿ)<br>ರಿಸರ್ಚ್ ಅಂಡ್ ಟ್ರೇನಿಂಗ್ ಇನ್ಸ್ಟಿಟ್ಯೂಟ್<br>ಡೆಹರಾಡೂನ್ |

**ಸಿ.ಜಿ.ಕೆ.** ಕೃಷ್ಣಮೂರ್ತಿ, ಸಿ.ಜಿ. (ದಿ)
ಸಹಾಯಕ ನಿರ್ದೇಶಕ, ಮೀನುಗಾರಿಕೆ ಇಲಾಖೆ
ಬೆಂಗಳೂರು ಡಿವಿಷನ್, ಬೆಂಗಳೂರು

**ಸಿ.ಜಿ.ಪಿ.** ಪುರುಷೋತ್ತಮ, ಸಿ.ಜಿ. (ದಿ)
ಪ್ರಾಧ್ಯಾಪಕ (ವಿ), ಇಂಡಾಲಜಿ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಸಿ.ಕೆ.ಆರ್.** ರೇಣುಕಾರ್ಯ, ಸಿ.ಕೆ.
ಪ್ರಾಧ್ಯಾಪಕ (ವಿ), ನಿರ್ದೇಶಕರು
ಮಹಾಜನ ಸ್ನಾತಕೋತ್ತರ ಕೇಂದ್ರ
ಕೆ.ಆರ್.ಎಸ್. ರಸ್ತೆ, ಮೈಸೂರು

**ಸಿ.ಕೆ.ವಿ.** ವೆಂಕಟನರಸಿಂಹಯ್ಯ, ಸಿ.ಕೆ.
ರೀಡರ್, ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಸಿ.ಎಂ.** ಮ್ಯಾಕ್‌ಫ್ಯಾಡನ್, ಸಿ.
ಅಧ್ಯಕ್ಷ, ಭೂಗೋಳವಿಜ್ಞಾನ ವಿಭಾಗ
ಲಾಸ್‌ಏಂಜಲಿಸ್, ಕ್ಯಾಲಿಫೋರ್ನಿಯ, ಯು.ಎಸ್.ಎ.

**ಸಿ.ಎನ್.ಎಸ್.** ಶ್ರೀನಿವಾಸ ಐಯ್ಯಂಗಾರ್, ಸಿ.ಎನ್. (ದಿ)
ಪ್ರಾಧ್ಯಾಪಕ (ವಿ), ಗಣಿತವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಸಿ.ಆರ್.ಎ.** ರಾಮಾಚಾರಿ, ಸಿ.
ಅಧ್ಯಾಪಕ, ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಸಿ.ಎಸ್.ಜೆ.** ಜಲದೆ, ಸಿ.ಎಸ್.
ಹೆಡ್‌ಮಾಸ್ಟರ್, ಮಹಾದೇವಿ ಗರ್ಲ್ಸ್ ಹೈಸ್ಕೂಲು
ಗುಲ್ಬರ್ಗ

**ಸಿ.ಎಸ್.ಪಿ.** ಪೂರ್ಣಿಮಾ, ಸಿ.ಎಸ್.
ಸಹಾಯಕ ಪ್ರಾಧ್ಯಾಪಕಿ (ಇಂಗ್ಲಿಷ್)
ಮಹಾರಾಜ ಕಾಲೇಜು, ಮೈಸೂರು

**ಸಿ.ವಿ.ಆರ್.** ರಂಗಸ್ವಾಮಿ, ಸಿ.ವಿ.
ಪ್ರಾಂಶುಪಾಲರು, ಜೆ.ಟಿ. ಕಾಲೇಜು
ಗದಗ

**ಡಿ.ಬಿ.ಆರ್.** ರಾಮಚಂದ್ರಾಚಾರ್, ಡಿ.ಬಿ.
ಅಧ್ಯಾಪಕ, ಕನ್ನಡ ವಿಭಾಗ
ಕಾವೇರಿ ಕಾಲೇಜು, ಗೋಣಿಕೊಪ್ಪಲು
ಕೊಡಗು

**ಡಿ.ಸಿ.** ಚಾಮರಾಜ್, ಡಿ.
ವೈಸ್ ಡೀನ್, ಮಿಂಟೋ ಕಣ್ಣಾಸ್ಪತ್ರೆ
ಬೆಂಗಳೂರು

**ಡಿ.ಇ.** ಏಕಾಂತಪ್ಪ, ಡಿ.
ಪ್ರಾಧ್ಯಾಪಕ (ವಿ), ಶರೀರಕ್ರಿಯಾವಿಜ್ಞಾನ ವಿಭಾಗ
ಮೆಡಿಕಲ್ ಕಾಲೇಜು, ಮೈಸೂರು

**ಡಿ.ಜಿ.** ಗಣೇಶ್, ಡಿ.
ಕ್ಯೂರೇಟರ್ (ವಿ), ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಡಿ.ಕೆ.** ಧೀರೇಂದ್ರಕುಲಕರ್ಣಿ
ಭೂಗೋಳವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆನಗರ, ಧಾರವಾಡ

**ಡಿ.ಕೆ.ಎ.** ಕೃಷ್ಣ ಅಯ್ಯಂಗಾರ್, ಡಿ.
ನೋಂದಣಿ ತನಿಖಾಧಿಕಾರಿ (ವಿ), ಮೈಸೂರು

**ಡಿ.ಎಲ್.** ಲಿಂಗಯ್ಯ, ಡಿ.
ಮುಖ್ಯಸ್ಥ, ಕನ್ನಡ ವಿಭಾಗ
ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು
ವಿಶ್ವೇಶ್ವರಪುರಂ, ಬೆಂಗಳೂರು

**ಡಿ.ಎಂ.** ಮುನಿಸ್ವಾಮಿ, ಡಿ.
ಸಹಾಯಕ ಪ್ರಾಧ್ಯಾಪಕ, ಪ್ರಕಟನ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

**ಡಿ.ಎನ್.ಎಸ್.ಎಂ.** ಶ್ರೀನಿವಾಸಮೂರ್ತಿ, ಡಿ.ಎನ್.
ಅಧ್ಯಾಪಕ, ವಾಣಿಜ್ಯವಿಜ್ಞಾನ ವಿಭಾಗ
ಡಿ.ಆರ್.ಎಂ. ಕಾಲೇಜು, ದಾವಣಗೆರೆ

**ಡಿ.ಪಿ.ಜೆ.** ಜಯರಾಮ್, ಡಿ.ಪಿ.
ಪ್ರಾಧ್ಯಾಪಕ (ವಿ), ಚರ್ಮರೋಗ ವಿಭಾಗ
ಕೆ.ಆರ್. ಆಸ್ಪತ್ರೆ, ಮೈಸೂರು

**ಡಿ.ಪಿ.ಎನ್.** ನರಸಿಂಹಮೂರ್ತಿ, ಡಿ.ಪಿ.
ಜಿಲ್ಲಾ ಆರೋಗ್ಯಾಧಿಕಾರಿ, ತುಮಕೂರು

**ಡಿ.ಆರ್.** ರಂಗಯ್ಯ, ಡಿ.
ಪ್ರಾಧ್ಯಾಪಕ, ಭೂವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಡಿ.ಆರ್.ಎ.** ರಾಜು, ಡಿ. (ದಿ)
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಡಿ.ಆರ್.ಎನ್.** ನಾಗಪಾಲ್, ಡಿ.ಆರ್.
ನಿರ್ದೇಶಕ, ರಾಷ್ಟ್ರೀಯ ಕ್ಷಯ ಸಂಶೋಧನ ಸಂಸ್ಥೆ
ಬಳ್ಳಾರಿ ರೋಡ್, ಬೆಂಗಳೂರು

**ಡಿ.ಎಸ್.** ಶೇಷಗಿರಿರಾವ್, ಡಿ. (ದಿ)
ಕೀಟವಿಜ್ಞಾನಿ, ಪಾರಿಜಾತ
ವೆಸ್ಟ್ ಪಾರ್ಕ್ ರೋಡ್, ಮಲ್ಲೇಶ್ವರಂ
ಬೆಂಗಳೂರು

**ಡಿ.ಎಸ್.ಜಿ.** ಗುರುಬಸವಪ್ಪ, ಡಿ.ಎಸ್. (ದಿ)
ನಿರ್ದೇಶಕ, ಸರ್ಕಾರಿ ಮುದ್ರಣಾಲಯ
ಬೆಂಗಳೂರು

**ಡಿ.ಎಸ್.ಎಂ.** ಮಹದೇವಪ್ಪ, ಡಿ.ಎಸ್.
ಪ್ರಾಧ್ಯಾಪಕ, ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಡಿ.ಎಸ್.ಎಸ್.** ಶಿವಪ್ಪ, ಡಿ.ಎಸ್. (ದಿ)
ಪ್ರಾಧ್ಯಾಪಕ (ವಿ), ಔಷಧವಿಜ್ಞಾನ ವಿಭಾಗ
ಮೈಸೂರು ಮೆಡಿಕಲ್ ಕಾಲೇಜು, ಮೈಸೂರು

**ಡಿ.ವಿ.ಡಬ್ಲ್ಯು.** ಡಿಸೋಜ ವೆಲೆರಿನ್ ವಿಲಿಯಂ
ಅಧ್ಯಾಪಕ, ಕನ್ನಡ ವಿಭಾಗ
ಸೆಂಟ್ ಫಿಲೋಮಿನ ಕಾಲೇಜು, ಮೈಸೂರು

**ಇ.ಎನ್.ಎಸ್.ಜೆ.** ಎಡ್ವರ್ಡ್ ನರೋನ್ಹಾ, ಎಸ್.ಜೆ. (ದಿ)
ಪ್ರಾಧ್ಯಾಪಕ (ವಿ), ಸರ್ ಎಂವಿ ಸ್ನಾತಕೋತ್ತರ ಕೇಂದ್ರ
ತೂಬಿನಕೆರೆ, ಮೈಸೂರು ವಿಶ್ವವಿದ್ಯಾನಿಲಯ
ಮಂಡ್ಯ ಕೇಂದ್ರ

**ಎಫ್.ಜೆ.ಎನ್.** ನರೋನ್ಹಾ, ಎಫ್.ಜೆ.
ಪ್ರಾಧ್ಯಾಪಕ, ಗಣಿತವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಜಿ.ಬಿ.** ಬೋರಯ್ಯ, ಜಿ. (ದಿ)
ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಕೃಷಿ ಕಾಲೇಜು, ಹೆಬ್ಬಾಳ, ಬೆಂಗಳೂರು

**ಜಿ.ಬಿ.ಕೆ.** ಕಡೇಮನಿ, ಜಿ.ಬಿ.
ಅಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಜಿ.ಬಿ.ಆರ್.** ಗೋಪಾಲ್, ಬಿ.ಆರ್.
ಶಾಸನತಜ್ಞ, ಎಪಿಗ್ರಾಫಿಯ ಕರ್ನಾಟಿಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಜಿ.ಸಿ.ಎ.** ಗುಂಡ್ಮಿ ಚಂದ್ರಶೇಖರ ಐತಾಳ (ದಿ)
ಪ್ರವಾಚಕ, ಕನ್ನಡ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ
ಮಂಗಳೂರು

**ಜಿ.ಜಿ.ಎಂ.** ಮಂಜುನಾಥನ್, ಜಿ.ಜಿ.
ಸಂಶೋಧನ ಸಹಾಯಕ (ವಿ)
ಸಂಪಾದಕ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಜಿ.ಎಚ್.** ಹನುಮಂತರಾವ್, ಜಿ. (ದಿ)
ಅಧ್ಯಕ್ಷ, ತತ್ತ್ವಶಾಸ್ತ್ರ ಉಪಸಮಿತಿ
ಕನ್ನಡ ವಿಶ್ವಕೋಶ, ಮೈಸೂರು

**ಜಿ.ಎಚ್.ಆರ್.** ರಾಮರಾವ್, ಜಿ.ಎಚ್. (ದಿ)
ಪ್ರಕಾಶಕ
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

**ಜಿ.ಕೆ.ಯು.** ಗಣೇಶ್ ಕುರ್ಡಿ
1, ಅಪ್ಪಾವೂ ಗ್ರಾಮಿಣಿ
ಮಂದವಲ್ಲಿ ಪಕ್ಕಮ್, ಮದ್ರಾಸು

**ಜಿ.ಕೆ.ಎಚ್.** ಗುರುಪಾದ ಕೆ. ಹೆಗಡೆ
ಅಧ್ಯಾಪಕ, ಸಂಸ್ಕೃತ ವಿಭಾಗ
ಲಾಲ್ ಬಹಾದ್ದೂರ್ ಕಾಲೇಜು, ಸಾಗರ

**ಜಿ.ಎಂ.ಬಿ.** ಬಸವರಾಜ್, ಜಿ.ಎಂ. (ದಿ)
ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಸಹ್ಯಾದ್ರಿ ಕಾಲೇಜು, ಶಿವಮೊಗ್ಗ

**ಜಿ.ಎನ್.** ನರಸಿಂಹನ್, ಜಿ.
ವ್ಯವಸ್ಥಾಪಕ ಸಂಪಾದಕ, 'ದಿ ಹಿಂದೂ' ದಿನಪತ್ರಿಕೆ
ಮೌಂಟ್ ರೋಡ್, ಮದ್ರಾಸು

**ಜಿ.ಪಿ.ಸಿ.** ಚಿನ್ನಬಸವಣ್ಣ, ಜಿ.ಪಿ.
ಪ್ರಾಧ್ಯಾಪಕ, ಕೀಟವಿಜ್ಞಾನ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

**ಜಿ.ಆರ್.** ರಾಜಗೋಪಾಲ್, ಜಿ.
ರೀಡರ್, ಇಂಗ್ಲಿಷ್ ವಿಭಾಗ
ಕಲ್ಪತರು ಕಾಲೇಜು, ತಿಪಟೂರು

**ಜಿ.ಆರ್.ಕೆ.** ಕುಪ್ಪುಸ್ವಾಮಿ ಅಯ್ಯಂಗಾರ್, ಜಿ.ಆರ್.
ಅಧ್ಯಾಪಕ
ಬಿ.ವಿ. ಬಾಳಿಗಾ ಕಾಲೇಜ್ ಆಫ್ ಆರ್ಟ್ಸ್ ಅಂಡ್ ಸೈನ್ಸ್
ಕುಮಟ

**ಜಿ.ಆರ್.ಆರ್.** ರಂಗಸ್ವಾಮಯ್ಯ, ಜಿ.ಆರ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ಆರ್.ಆರ್.ಎಸ್.** ರಾಜಶೇಖರಯ್ಯ, ಜಿ.ಆರ್.
ಪ್ರಾಧ್ಯಾಪಕ, ಪರೋಪಜೀವವಿಜ್ಞಾನ
ಪಶುವೈದ್ಯ ಕಾಲೇಜು, ಹೆಬ್ಬಾಳ, ಬೆಂಗಳೂರು

**ಜಿ.ಎಸ್.ಸಿ.** ಚಂದ್ರಶೇಖರ್, ಜಿ.ಎಸ್.
ಸಹಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

**ಜಿ.ಎಸ್.ಎಚ್.** ಹಾಲಪ್ಪ, ಜಿ.ಎಸ್. (ದಿ)
ಪ್ರಾಧ್ಯಾಪಕ, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಜಿ.ಎಸ್.ಕೆ.ಆರ್.** ಕೃಷ್ಣರಾಜು, ಜಿ.ಎಸ್.
ವಿಜ್ಞಾನ ಸಮಾಲೋಚಕ
ಮಡಿಕೇರಿ

**ಜಿ.ಎಸ್.ಆರ್.** ಶ್ರೀರಾಮರೆಡ್ಡಿ, ಜಿ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ಎಸ್.ಎಸ್.ಐ.** ಸಿದ್ದಪ್ಪ, ಜಿ.ಎಸ್.
ಕೇಂದ್ರ ಆಹಾರ ಸಂಶೋಧನಾಲಯ, ಮೈಸೂರು

**ಜಿ.ಎಸ್.ಎಸ್.ಎಸ್.** ಶಿವಶಂಕರ್, ಜಿ.ಎಸ್.
ಅಧ್ಯಾಪಕ, ಭೌತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಜಿ.ಟಿ.** ತಿಪ್ಪಯ್ಯ, ಜಿ.
1ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು

**ಜಿ.ಟಿ.ಜಿ.** ಗುಬ್ಬಣ್ಣ, ಜಿ.ಟಿ.
ಪ್ರಾಂಶುಪಾಲರು
ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು
ಮೈಸೂರು

**ಜಿ.ಟಿ.ಎಚ್.** ಹುಚ್ಚಪ್ಪ, ಜಿ.ಟಿ. (ದಿ)
ಪ್ರಾಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜಿ.ವಿ.ಎನ್.** ನಾರಾಯಣಮೂರ್ತಿ, ಜಿ.ವಿ.
ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ

**ಎಚ್.ಎ.ಆರ್.** ರಂಗನಾಥ, ಎಚ್.ಎ.
ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಬಿ.ಡಿ.** ದೇವರಾಜ ಸರ್ಕಾರ್, ಎಚ್.ಬಿ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಸಿ.ಕೆ.** ಕಪನೀಪತಿಭಟ್ಟ, ಎಚ್.ಸಿ. (ದಿ)
ಪ್ರಾಂಶುಪಾಲರು, ಎಸ್.ಜೆ. ಪಾಲಿಟೆಕ್ನಿಕ್
ಬೆಂಗಳೂರು

**ಎಚ್.ಡಿ.ಎಲ್.ಎ.** ಏಬ್ರಹಾಂ, ಎಚ್.ಡಿ.ಎಲ್.
ದಕ್ಷಿಣ ಇಂಡಿಯ ಚರ್ಚು, ಬಳ್ಳಾರಿ

**ಎಚ್.ಜಿ.ಆರ್.** ರಂಗಸ್ವಾಮಿ ಅಯ್ಯಂಗಾರ್, ಎಚ್.ಜಿ.
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಸರ್ಕಾರಿ ಕಾಲೇಜು, ಮಂಡ್ಯ

**ಎಚ್.ಜಿ.ಎಸ್.** ಸುಬ್ಬರಾವ್, ಎಚ್.ಜಿ.
ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಚ್.ಕೆ.ಎಂ.** ಮಲ್ಲಿಕಾರ್ಜುನಪ್ಪ, ಎಚ್.ಕೆ. (ದಿ)
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಗುಲಬರ್ಗಾ

**ಎಚ್.ಕೆ.ಆರ್.** ರಾಮಚಂದ್ರಮೂರ್ತಿ, ಎಚ್.ಕೆ.
ಸಂಪಾದಕ, ಇಂಗ್ಲಿಷ್–ಕನ್ನಡ ನಿಘಂಟು ಪರಿಷ್ಕರಣ ಕಚೇರಿ
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

**ಎಚ್.ಕೆ.ಆರ್.ಜಿ.** ರಾಜೇಗೌಡ, ಎಚ್.ಕೆ.
ಸಂಶೋಧನ ಸಹಾಯಕ, ಸಂಪಾದನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಲ್.ಕೆ.** ಕೇಶವಮೂರ್ತಿ, ಎಚ್.ಎಲ್.
ಅಧ್ಯಾಪಕ
ಪಿ.ಇ.ಎಸ್. ಎಂಜಿನಿಯರಿಂಗ್ ಕಾಲೇಜು, ಮಂಡ್ಯ

**ಎಚ್.ಎಂ.ಎನ್.** ನಾಯಕ, ಎಚ್.ಎಂ. (ದಿ)
ಪ್ರಾಧ್ಯಾಪಕ ಮತ್ತು ನಿರ್ದೇಶಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಂ.ಎಸ್.** ಸದಾಶಿವಯ್ಯ, ಎಚ್.ಎಂ.
ಪ್ರವಾಚಕ (ವಿ), ಸಮಾಜಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಂ.ಎಸ್.ಎನ್.** ಶಂಕರನಾರಾಯಣರಾವ್, ಎಚ್.ಎಂ.
ಪ್ರಾಧ್ಯಾಪಕ, ಕನ್ನಡ ವಿಭಾಗ
ಶಾರದಾವಿಲಾಸ ಕಾಲೇಜು, ಮೈಸೂರು

**ಎಚ್.ಎನ್.ಸಿ.** ಚಾಮಯ್ಯ, ಎಚ್.ಎನ್. (ದಿ)
ಪ್ರಾಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಚ್.ಆರ್.ಸಿ.ಎ.** ಕಾಮ, ಎಚ್.ಆರ್.
ಪ್ರಾಧ್ಯಾಪಕ, ಜೀವರಸಾಯನವಿಜ್ಞಾನ ವಿಭಾಗ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್
ಬೆಂಗಳೂರು

**ಎಚ್.ಆರ್.ಡಿ.** ದಾಸೇಗೌಡ, ಎಚ್.ಆರ್.
ಉಪ ಪರೀಕ್ಷಾಧಿಕಾರಿ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಚ್.ಆರ್.ಡಿಎಚ್.** ಧ್ರುವನಾರಾಯಣ, ಎಚ್.ಆರ್.
ಸಹಾಯಕ ಪ್ರಾಧ್ಯಾಪಕ, ಶರೀರಕ್ರಿಯಾಶಾಸ್ತ್ರ ವಿಭಾಗ
ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು

**ಎಚ್.ಆರ್.ಡಿಒ.** ದೊರೆಸ್ವಾಮಿ, ಎಚ್.ಆರ್.
ಸಂಶೋಧನ ಸಹಾಯಕ, ಹರಿದಾಸ ಸಾಹಿತ್ಯ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಆರ್.ಆರ್.ಬಿ.** ರಘುನಾಥ ಭಟ್, ಎಚ್.ಆರ್. (ದಿ)
ಪ್ರಾಧ್ಯಾಪಕ, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಎಚ್.ಎಸ್.** ಸುಮಿತ್ರ ಎಚ್. ಪಾದ್ರಿ
ಡಿ.ಡಿ. ಚರ್ಚ್ ಆಫ್ ಸೌತ್ ಇಂಡಿಯ, ಬಳ್ಳಾರಿ

**ಎಚ್.ಎಸ್.ಎ.** ಅನಂತನಾರಾಯಣ, ಎಚ್.ಎಸ್.
ಪ್ರಾಧ್ಯಾಪಕ (ವಿ), ಭಾಷಾವಿಜ್ಞಾನ ವಿಭಾಗ
ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಾಬಾದು

**ಎಚ್.ಎಸ್.ಎಚ್.** ಹರಿಶಂಕರ್, ಎಚ್.ಎಸ್.
ಅಧ್ಯಾಪಕ, ಭಾಷಾಂತರ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್.ಐ.** ಈಶ್ವರ್, ಎಚ್.ಎಸ್.
ಅಧ್ಯಾಪಕ, ಮನೋವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್.ಎನ್.** ನಾಗರಾಜಯ್ಯ, ಎಚ್.ಎಸ್.
ರೀಡರ್, ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್ಆರ್.** ಶ್ರೀನಿವಾಸಯ್ಯ, ಎಚ್.
ಎಂಜಿನಿಯರ್, ರೇಲ್‌ಕೋಚ್ ಡಿವಿಷನ್
ಭಾರತ್ ಅರ್ತ್ ಮೂವರ್ಸ್ ಲಿ., ಬೆಂಗಳೂರು

**ಎಚ್.ಎಸ್.ಎಸ್.** ಶೇಷಾದ್ರಿ, ಎಚ್.ಎಸ್.
ಉಪಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಚ್.ಎಸ್.ಎಸ್ಎಚ್.** ಶಾಮಾಶಾಸ್ತ್ರಿ, ಎಚ್.
ನಿರ್ದೇಶಕ (ವಿ)
ಸಾರ್ವಜನಿಕ ಆರೋಗ್ಯ ಇಲಾಖೆ, ಬೆಂಗಳೂರು

**ಎಚ್.ಎಸ್.ಎಸ್.ಕೆ.** ಶಾಂತಕುಮಾರಿ, ಎಚ್.ಎಸ್.
ಅಧ್ಯಾಪಕಿ, ಸಸ್ಯವಿಜ್ಞಾನ ವಿಭಾಗ
ಎಂ.ಡಿ.ಟಿ.ಡಿ.ಬಿ. ಕಾಲೇಜು, ಮೈಸೂರು

**ಎಚ್.ಎಸ್.ಎಸ್.ಎನ್.** ಸೂರ್ಯನಾರಾಯಣ, ಎಚ್.ಎಸ್.
ಸಂಪಾದಕ, ಕ್ರೀಡಾವಿಭಾಗ
ಸುಧಾ ವಾರಪತ್ರಿಕೆ, ಮಹಾತ್ಮಗಾಂಧಿ ರಸ್ತೆ
ಬೆಂಗಳೂರು

**ಎಚ್.ಎಸ್.ವಿ.** ವೆಂಕಟರಾಮಯ್ಯ, ಎಚ್.ಎಸ್.
ಪ್ರಾಧ್ಯಾಪಕ, ಭೌತಶಾಸ್ತ್ರ ವಿಭಾಗ
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

**ಎಚ್.ಟಿ.** ತಿಪ್ಪೇರುದ್ರಸ್ವಾಮಿ, ಎಚ್. (ದಿ)
ಪ್ರಾಧ್ಯಾಪಕ ಮತ್ತು ನಿರ್ದೇಶಕ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು

**ಎಚ್.ವಿ.** ವೆಂಕಟಸುಬ್ಬಯ್ಯ, ಎಚ್.
ವಿಶೇಷ ಪ್ರತಿನಿಧಿ, ಹಿಂದೂ ಪತ್ರಿಕೆ
ರಫಿ ರೋಡ್, ನವದೆಹಲಿ

**ಎಚ್.ವಿ.ಎಸ್.** ಸಾವಿತ್ರಮ್ಮ, ಎಚ್.ವಿ.
ಮಲ್ಲೇಶ್ವರಂ, ಬೆಂಗಳೂರು

**ಐ.ಆರ್.** ರಿಬೆಲ್ಲೋ, ಐ.
ಇತಿಹಾಸ ವಿಭಾಗ, ಸೇಂಟ್ ಅಲೋಷಿಯಸ್ ಕಾಲೇಜು
ಮಂಗಳೂರು

**ಐ.ಎಸ್.** ಇಂದಿರಾ ಶ್ರೀಕಂಠಯ್ಯ
ಜಯಲಕ್ಷ್ಮೀಪುರಂ ವಿಸ್ತರಣೆ
ವಿ.ವಿ. ಮೊಹಲ್ಲ, ಮೈಸೂರು

**ಜೆ.ಇ.ಸಿ.** ಜೇಮ್ಸ್ ಇ. ಕಾಲಿಯರ್
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಇಲಿನಾಯ್ ವಿಶ್ವವಿದ್ಯಾಲಯ, ಇಲಿನಾಯ್
ಯು.ಎಸ್.ಎ.

**ಜೆ.ಕೆ.ಐ.** ಇರಾನಿ, ಜೆ.ಕೆ.
ಪ್ರಾಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಜೆ.ಆರ್.ಎಲ್.** ಲಕ್ಷ್ಮಣರಾವ್, ಜೆ.ಆರ್.
ಪ್ರಧಾನ ಸಂಪಾದಕ, ಇಂಗ್ಲಿಷ್–ಕನ್ನಡ ನಿಘಂಟು
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

**ಜೆ.ಆರ್.ಪಿ.** ಜಯತೀರ್ಥರಾಜಪುರೋಹಿತ (ದಿ)
ಕಾರ್ಯದರ್ಶಿ, ವಿದ್ಯಾ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು

**ಜೆ.ಎಸ್.ಸಿ.** ಶಶಿಕಲಾ ಚಂದ್ರಶೇಖರ್, ಜೆ.
ಕುಲಪತಿ ಭವನ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಜೆ.ಎಸ್.ಎಂ.** ಜಡೆ ಶ್ರೀನಿವಾಸಮೂರ್ತಿ
ಸಹಪ್ರಾಧ್ಯಾಪಕ, ಕೃಷಿ ವಿಸ್ತರಣಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

**ಜೆ.ಎಸ್.ಪಿ.ಎಂ.** ಪರಮಶಿವಮೂರ್ತಿ, ಜೆ.ಎಸ್.
ನಿರ್ದೇಶಕ (ವಿ)
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಜೆ.ಎಸ್.ಎಸ್.** ಸಾಯಿನಾಥ್, ಜೆ.ಎಸ್.
ಸಹಾಯಕ ಗ್ರಂಥಪಾಲ (ವಿ)
ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು

**ಜೆ.ವಿ.ಎನ್.** ನೀರಜಾಕ್ಷಿ, ಜೆ.ವಿ.
ಅಧ್ಯಾಪಕಿ, ಪ್ರಾಣಿವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

# ಲೇಖಕಸೂಚಿ

**ಕೆ.** ಕೃಷ್ಣಪ್ಪಗೌಡ
ಉಪನಿರ್ದೇಶಕ, ತೋಟಗಾರಿಕೆ ಇಲಾಖೆ, ಮಡಿಕೇರಿ

**ಕೆ.ಎ.** ಅನಂತರಾಮಯ್ಯ, ಕೆ. (ದಿ)
ಇಂಗ್ಲಿಷ್ ಪ್ರಾಧ್ಯಾಪಕ, ಬೆಂಗಳೂರು

**ಕೆ.ಬಿ.** ಬಸವಯ್ಯ, ಕೆ.
ಪ್ರಾಂಶುಪಾಲರು
ಸೇಂಟ್ ಜೋಸೆಫ್ಸ್ ಶಿಕ್ಷಕರ ಕಾಲೇಜು, ಮೈಸೂರು

**ಕೆ.ಬಿ.ಎನ್.** ಬಾಲಕೃಷ್ಣ ನಾಯರ್, ಕೆ.
ಪ್ರಧಾನ ಸಂಚಾಲಕ, ಗಾಂಧೀ ಶಾಂತಿ ಪ್ರತಿಷ್ಠಾನ
ಕೋಳಿಕ್ಕೋಡ್ ಕೇಂದ್ರ, ಕೋಳಿಕ್ಕೋಡ್

**ಕೆ.ಬಿ.ಪಿ.** ಪ್ರಭುಪ್ರಸಾದ್, ಕೆ.ಬಿ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಕೆ.ಬಿ.ಆರ್.** ರಾಮಕೃಷ್ಣರಾವ್, ಕೆ.ಬಿ. (ದಿ)
ಪ್ರಾಧ್ಯಾಪಕ (ವಿ), ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಕೆ.ಸಿ.ಎನ್.** ನಾಯಕ್, ಕೆ.ಸಿ.
ಕುಲಪತಿ, ಕೃಷಿ ವಿಶ್ವವಿದ್ಯಾಲಯ
ಬೆಂಗಳೂರು

**ಕೆ.ಜಿಎ.** ಗಾಯಿತ್ರಿ, ಕೆ.
ಅಧ್ಯಾಪಕಿ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಕೆ.ಜಿ.** ಗೋಪಾಲ್, ಕೆ.
ಕುಲಪತಿ (ವಿ)
ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

**ಕೆ.ಜಿ.ಬಿ.** ಗೋವಿಂದಭಟ್ಟ, ಕೆ.
ಅಡ್ವೊಕೇಟ್, ಮಂಗಳೂರು

**ಕೆ.ಜಿ.ಎನ್.** ಗೋಪಿನಾಥ್, ಕೆ.
ಪ್ರಾಣಿವಿಜ್ಞಾನ ವಿಭಾಗ, ಮಾನಸಗಂಗೋತ್ರಿ
ಮೈಸೂರು

**ಕೆ.ಜಿ.ಆರ್.** ರಾಮಕೃಷ್ಣ, ಕೆ.ಜಿ.
ಅಧಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಸೇಂಟ್ ಫಿಲೋಮಿನ ಕಾಲೇಜು, ಮೈಸೂರು

**ಕೆ.ಜಿ.ಎಸ್.** ಗವಿಶೆಟ್ಟಿ, ಕೆ.
ಜನರಲ್ ಮ್ಯಾನೇಜರ್
ಬೋರ್ಡ್ ಆಫ್ ಮಿನರಲ್ ಡೆವಲಪ್‌ಮೆಂಟ್
ಹೈಗ್ರೌಂಡ್ಸ್, ಬೆಂಗಳೂರು

**ಕೆ.ಜಿ.ಟಿ.** ತಂತ್ರಿ, ಕೆ.ಜಿ.
ಅಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಶ್ರೀ ಪೂರ್ಣಪ್ರಜ್ಞ ಕಾಲೇಜು, ಉಡುಪಿ

**ಕೆ.ಎಚ್.** ಹನುಮಂತಪ್ಪ, ಕೆ.
ಅಧ್ಯಾಪಕ, ವಾಣಿಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಕೆ.ಜೆ.** ಜೀವಣ್ಣರಾವ್, ಕೆ.
ಪತ್ರಿಕೋದ್ಯಮಿ, ಬೆಂಗಳೂರು

**ಕೆ.ಕೆ.** ಕೃಷ್ಣಮೂರ್ತಿ, ಕೆ. (ದಿ)
ಪ್ರಾಧ್ಯಾಪಕ, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಕೆ.ಕೆ.ಜಿ.** ಕೆಂಪೇಗೌಡ, ಕೆ.
ಪ್ರಾಧ್ಯಾಪಕ ಮತ್ತು ನಿರ್ದೇಶಕ (ವಿ)
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಕೆ.ಕೆ.ಆರ್.** ಕುಲರತ್ನಂ, ಕೆ.
ಫಾರೆಸ್ಟ್ ವೀವ್, 28
ವೆಲಚೆರ್ರಿ ಮಧು ವೆಂಗರ್ರೈ ರೋಡು, ಮದ್ರಾಸು

**ಕೆ.ಕೆ.ಎಸ್.** ಕರುಣಾಕರನ್, ಕೆ.ಎಸ್.
ಅಧ್ಯಾಪಕ, ಕನ್ನಡ ವಿಭಾಗ
ಕಲ್ಪತರು ಕಾಲೇಜು, ತಿಪಟೂರು

**ಕೆ.ಎಂ.** ಮುನಿಯಪ್ಪ, ಕೆ.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಪ್ರಥಮ ದರ್ಜೆ ಕಾಲೇಜು, ಉರಿಗಾಂ, ಕೆ.ಜಿ.ಎಫ್.

**ಕೆ.ಎಂಎಎನ್.** ಮಂಜುನಾಥಯ್ಯ, ಕೆ.
ಪ್ರಾಧ್ಯಾಪಕ, ಗಣಿತ ವಿಭಾಗ
ಮಲನಾಡು ಎಂಜಿನಿಯರಿಂಗ್ ಕಾಲೇಜು, ಹಾಸನ

**ಕೆ.ಎಂ.ಸಿ.** ಕಾರ್ಯಪ್ಪ, ಕೆ.ಎಂ.
ವಿಶ್ರಾಂತ ಜನರಲ್, ಮಡಿಕೇರಿ

**ಕೆ.ಎಂ.ವಿ.** ವೀರಪ್ಪ, ಕೆ.ಎಂ.
ರೀಡರ್, ಪ್ರಾಣಿಶಾಸ್ತ್ರ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಕೆ.ಎನ್.ಸಿ.** ಚೈತನ್ಯಪಂಡಿತಾರಾಧ್ಯ, ಕೆ.ಎನ್.
(ಉದಯಕುಮಾರ್, ಕೆ.ಎನ್.)
ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಕೆ.ಎನ್.ವಿ.** ವೆಂಕಟರಾಯಪ್ಪ, ಕೆ.ಎನ್. (ದಿ)
ಪ್ರಾಧ್ಯಾಪಕ, ಸಮಾಜಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಕೆ.ಪಿ.** ಪುಟ್ಟಸ್ವಾಮಯ್ಯ, ಕೆ.
ಉಪನಿರ್ದೇಶಕ, ಮೌಲ್ಯ ನಿರ್ಧಾರಣ ವಿಭಾಗ
ಯೋಜನಾ ಇಲಾಖೆ, ವಿಧಾನಸೌಧ, ಬೆಂಗಳೂರು

**ಕೆ.ಪಿಎ.** ಪದ್ಮಾವತಮ್ಮ, ಕೆ.
ಅಧ್ಯಾಪಕಿ, ಇತಿಹಾಸ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಕೆ.ಪಿಎಎನ್.** ಪಾಂಡುರಂಗಾಚಾರ್, ಕೆ.
ಸಹಾಯಕ ಸಂಶೋಧನಾಧಿಕಾರಿ
ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಕೆ.ಪಿ.ಆರ್.** ಪಾಂಡುರಂಗ, ಕೆ.
ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಕೆ.ಆರ್.** ರಂಗನಾಥ, ಕೆ.
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಕೆ.ಆರ್ಎಎಂ.** ರಾಮಸ್ವಾಮಿ, ಕೆ.
ಅಸಿಸ್ಟೆಂಟ್ ಕೆಮಿಸ್ಟ್, ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು

**ಕೆ.ಆರ್.ಡಿ.** ರಾಮದಾಸ್, ಕೆ. (ದಿ)
ಪ್ರಾಧ್ಯಾಪಕ, ಕನ್ನಡ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಕೆ.ಆರ್.ಜಿ.** ಕುಲಕರ್ಣಿ, ಆರ್.ಜಿ.
ಅಧ್ಯಾಪಕ, ಸಾಯಿಬಾಬಾ ಕಾಲೇಜು
ವೈಟ್‌ಫೀಲ್ಡ್, ಬೆಂಗಳೂರು

**ಕೆ.ಆರ್.ಜಿಎ.** ಗಣಪತಿ, ಕೆ.ಆರ್.
ಸಹಾಯಕ ಸಂಪಾದಕ, ಪ್ರಕಾಶನ ವಿಭಾಗ
ಕೃಷಿ ವಿಶ್ವವಿದ್ಯಲಯ, ಹೆಬ್ಬಾಳ, ಬೆಂಗಳೂರು

| | | 
|---|---|
| ಕೆ.ಆರ್.ಎಂಬಿ. | ಮೋಹನ್, ಕೆ.ಆರ್.<br>ಅಧ್ಯಾಪಕ, ಯಂತ್ರಶಿಲ್ಪ ವಿಭಾಗ<br>ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು<br>ಬೆಂಗಳೂರು |
| ಕೆ.ಆರ್.ಆರ್. | ರಂಗಾಚಾರ್, ಕೆ.ಆರ್.<br>ಉಪಾಧ್ಯಾಯ, ಶಿಕ್ಷಕರ ತರಬೇತಿ ಕೇಂದ್ರ<br>ಮೈಸೂರು |
| ಕೆ.ಎಸ್.ಜೆ. | ಜಗದೀಶಚಂದ್ರ, ಕೆ.ಎಸ್.<br>ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಎಸ್.ಕೆ. | ಕೃಷ್ಣಸ್ವಾಮಿ, ಕೆ.ಎಸ್. (ದಿ)<br>ಪ್ರಾಂಶುಪಾಲರು<br>ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು<br>ಬೆಂಗಳೂರು |
| ಕೆ.ಎಸ್.ಕೆ.ಎಂ. | ಕೃಷ್ಣಮೂರ್ತಿ, ಕೆ.ಎಸ್.<br>ಪ್ರಾಧ್ಯಾಪಕ, ಕನ್ನಡ ವಿಭಾಗ<br>ಸೇಂಟ್ ಫಿಲೋಮಿನ ಕಾಲೇಜು, ಮೈಸೂರು |
| ಕೆ.ಎಸ್.ಕೆ.ಎಸ್. | ಕೃಷ್ಣಶಾಸ್ತ್ರಿ, ಕೆ.ಎಸ್.<br>ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು |
| ಕೆ.ಎಸ್.ಎಲ್. | ಲಕ್ಷ್ಮಣರಾವ್, ಕೆ.ಎಸ್.<br>ರೀಡರ್, ರಸಾಯನವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಕೋಲಾರ |
| ಕೆ.ಎಸ್.ಎನ್.ಎ. | ಸೂರ್ಯನಾರಾಯಣ, ಕೆ.<br>ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಎಸ್.ಆರ್ಎ. | ಕೊರಟಿ ಶ್ರೀನಿವಾಸರಾವ್<br>ಪ್ರಾಧ್ಯಾಪಕ, ಕನ್ನಡ ವಿಭಾಗ<br>ಆಚಾರ್ಯ ಪಾಠಶಾಲಾ ಕಾಲೇಜು, ಬೆಂಗಳೂರು |
| ಕೆ.ಎಸ್ಆರ್ಐ. | ಶ್ರೀನಿವಾಸನ್, ಕೆ.<br>ಪ್ರಾಧ್ಯಾಪಕ, ಭೌತಶಾಸ್ತ್ರ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಎಸ್.ಎಸ್. | ಶಿವಣ್ಣ, ಕೆ.ಎಸ್.<br>ಇತಿಹಾಸ ಪ್ರಾಧ್ಯಾಪಕ (ವಿ)<br>787, ಟಿ.ಕೆ. ಬಡಾವಣೆ<br>ಸರಸ್ವತಿಪುರಂ, ಮೈಸೂರು |
| ಕೆ.ಎಸ್.ಎಸ್.ಎಸ್ಎಚ್. | ಸದಾಶಿವಯ್ಯ, ಕೆ.ಎಸ್.<br>ಅಧ್ಯಾಪಕ, ಶಿಕ್ಷಣ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಎಸ್.ವಿ. | ವರದಾಚಾರ್ಯ, ಕೆ.ಎಸ್.<br>ಸಂಶೋಧನ ಸಹಾಯಕ (ವಿ)<br>ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು |
| ಕೆ.ಟಿ. | ಥಂಕಮ್, ಕೆ.<br>ಪ್ರಧಾನ ಉಪಸಂಪಾದಕಿ, ಮಾತೃಭೂಮಿ<br>ಕೋಳಿಕ್ಕೋಡ್, ಕೇರಳ |
| ಕೆ.ಟಿ.ಆರ್. | ರಾಮಸ್ವಾಮಿ, ಕೆ.ಟಿ.<br>ರೀಡರ್, ಇತಿಹಾಸ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಕೆ.ಟಿ.ಎಸ್. | ಶ್ಯಾಮಸುಂದರ, ಕೆ.ಟಿ.<br>ಮ್ಯಾನೇಜರ್, ಪರಮಾಲಿ ವಾಲೇಸ್ ಲಿ.,<br>ಭೂಪಾಲ್, ಮಧ್ಯಪ್ರದೇಶ |
| ಕೆ.ವಿಇ. | ವೆಂಕಟರಾಮಪ್ಪ, ಕೆ.<br>ವಿಶ್ರಾಂತ ಕನ್ನಡ ರೀಡರ್<br>ಕೃಷ್ಣಮೂರ್ತಿಪುರಂ, ಮೈಸೂರು |
| ಕೆ.ವಿ.ಜಿ. | ಘೋರ್ಪಡೆ, ಕೆ.ವಿ.<br>ಪ್ರಾಧ್ಯಾಪಕ, ಪೆಥಾಲಜಿ ವಿಭಾಗ<br>ಬೌರಿಂಗ್ ಆಸ್ಪತ್ರೆ, ಬೆಂಗಳೂರು |
| ಕೆ.ವಿ.ಜಿಬಿ. | ವೀರಪ್ಪಗೌಡ, ಕೆ.<br>ಕೋಳಿಸಾಕಣೆ ಅಭಿವೃದ್ಧಿ ಅಧಿಕಾರಿ<br>ಪಶುವೈದ್ಯ ಕಾಲೇಜು, ಹೆಬ್ಬಾಳ, ಬೆಂಗಳೂರು |
| ಕೆ.ವಿ.ಐ. | ಐಯ್ಯರ್, ಕೆ.ವಿ.<br>ನಿರ್ದೇಶಕ, ವ್ಯಾಯಾಮಶಾಲೆ, ಬೆಂಗಳೂರು |
| ಕೆ.ವಿ.ಎಂ. | ವಿಠ್ಠಲಮಲ್ಲಿ, ಕೆ.<br>ಪ್ರಾಧ್ಯಾಪಕ, ಶಸ್ತ್ರವೈದ್ಯ ವಿಭಾಗ<br>ಪಶುವೈದ್ಯ ಕಾಲೇಜು, ಹೆಬ್ಬಾಳ, ಬೆಂಗಳೂರು |
| ಕೆ.ವಿ.ಆರ್. | ರಮೇಶ್, ಕೆ.ವಿ.<br>ಡೆಪ್ಯುಟಿ ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್ (ವಿ)<br>7, 'ಜೆ' ಬ್ಲಾಕ್, ರಮಣಮಹರ್ಷಿ ರಸ್ತೆ<br>ಕುವೆಂಪುನಗರ, ಮೈಸೂರು |
| ಕೆ.ವಿ.ಎಸ್. | ಸುಬ್ಬರಾಯ, ಕೆ.ವಿ.<br>ಅಧ್ಯಾಪಕ<br>ಬೆಂಗಳೂರು ವಿಶ್ವವಿದ್ಯಾಲಯ ಎಂಜಿನಿಯರಿಂಗ್ ಕಾಲೇಜು<br>ಬೆಂಗಳೂರು |
| ಕೆ.ವಿ.ಎಸ್.ಟಿ. | ಶ್ರೀನಿವಾಸ ತಾತಾಚಾರ್, ಕೆ.ವಿ.<br>ಸಂಪಾದಕ, ಇಂಗ್ಲಿಷ್–ಕನ್ನಡ ನಿಘಂಟು<br>ಮಾನಸಗಂಗೋತ್ರಿ, ಮೈಸೂರು |
| ಕೆ.ವಿ.ವಿ. | ವಿಶ್ವನಾಥಯ್ಯ, ಕೆ.ವಿ.<br>ರೀಡರ್, ರಾಜ್ಯಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎಲ್.ಎ.ಆರ್. | ಅನಂತರೆಡ್ಡಿ, ಎಲ್.<br>ಅಧ್ಯಾಪಕ, ರಸಾಯನವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಎಲ್.ಎ.ಆರ್.ಡಿ. | ರಾಮದಾಸ್, ಎಲ್.ಎ.<br>14, ಇಂದರಪುರಿ, ನವದೆಹಲಿ |
| ಎಲ್.ಡಿ.ಎಂ. | ಮೆರ್‌ವಾಡೆ, ಎಲ್.ಡಿ.<br>ಅಧ್ಯಾಪಕ, ರಸಾಯನವಿಜ್ಞಾನ ವಿಭಾಗ<br>ಶ್ರೀಮಹಾವೀರ ಕಾಲೇಜು, ಮೂಡಬಿದ್ರಿ (ದ.ಕ.) |
| ಎಲ್.ಎಸ್. | ಶ್ರೀಕಂಠಯ್ಯ, ಎಲ್. (ದಿ)<br>ನ್ಯಾಯವಾದಿ, 15, ಜಯಲಕ್ಷ್ಮಿಪುರಂ ವಿಸ್ತರಣೆ<br>ವಾಣಿವಿಲಾಸ ಮೊಹಲ್ಲ, ಮೈಸೂರು |
| ಎಲ್.ಎಸ್.ಜೆ. | ಜಾಗೀರ್‌ದಾರ್, ಎಲ್.ಎಸ್.<br>ವಿಭಾಗಾಧಿಕಾರಿ, ನ್ಯಾಯಾಂಗ ವಿಭಾಗ<br>ವಿಧಾನಸೌಧ, ಬೆಂಗಳೂರು |
| ಎಲ್.ಎಸ್.ಎಸ್. | ಶೇಷಗಿರಿರಾವ್, ಎಲ್.ಎಸ್.<br>ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಎಂ. | ಮೆಣಸಿನಕಾಯಿ, ಎಸ್.ಡಬ್ಲ್ಯು.<br>ಪ್ರಾಧ್ಯಾಪಕ (ವಿ), ಕೃಷಿ ಕಾಲೇಜು, ಧಾರವಾಡ<br>(ಅಧ್ಯಕ್ಷ, ಕೃಷಿ ಉಪಸಮಿತಿ, ಕನ್ನಡ ವಿಶ್ವಕೋಶ) |
| ಎಂಎಚ್. | ಮಹದೇವಯ್ಯ<br>ಸಹಾಯಕ ಗ್ರಂಥಪಾಲ,<br>ವಿಶ್ವವಿದ್ಯಾನಿಲಯ ಗ್ರಂಥಾಲಯ<br>ಮಾನಸಗಂಗೋತ್ರಿ, ಮೈಸೂರು |
| ಎಂಎಚ್ಇ. | ಮಹೇಶ್ವರಪ್ಪ<br>ಶಿಕ್ಷಕ, ಸರ್ಕಾರಿ ಉನ್ನತ ಪ್ರೌಢಶಾಲೆ<br>ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ |

ಎಂಎ.ಎಂ. ಮಾದಯ್ಯ, ಎಂ.
ಕುಲಪತಿ (ವಿ)
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಂ.ಬಿ.ಇ. ಎಮೆನೊ, ಎಂ.ಬಿ.
ಪ್ರಾಧ್ಯಾಪಕ, ಭಾಷಾವಿಜ್ಞಾನ ಮತ್ತು ಸಂಸ್ಕೃತ ವಿಭಾಗ
ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯ
ಬರ್ಕಲಿ, ಯು.ಎಸ್.ಎ.

ಎಂ.ಬಿ.ಆರ್.ಯು. ರುದ್ರೇಗೌಡ, ಎಂ.ಬಿ.
ರೀಡರ್, ರಾಜ್ಯಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಂ.ಬಿ.ಟಿ. ತಿಪ್ಪಣ್ಣನವರ್, ಎಂ.ಬಿ.
ಉಪನಿರ್ದೇಶಕ, ಕೃಷಿ ವಿಭಾಗ
ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳು
ಧಾರವಾಡ

ಎಂ.ಸಿಎಚ್. ಚನ್ನವೀರಯ್ಯ, ಎಂ.
ರೀಡರ್, ಇಂಗ್ಲಿಷ್ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಎಂ.ಸಿ.ಆರ್. ಚಿನ್ನಸ್ವಾಮಿರೆಡ್ಡಿ, ಎಂ.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎಂ.ಸಿ.ವಿ. ವಸಂತಕುಮಾರ್, ಎಂ.ಸಿ.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಂ.ಡಿ. ದಯಾಕರ, ಎಂ.
ಪ್ರಾಧ್ಯಾಪಕ, ಅಂಗರಚನಾವಿಜ್ಞಾನ ವಿಭಾಗ
ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು

ಎಂ.ಡಿ.ಕೆ. ಕೃಷ್ಣನ್, ಎಂ.ಡಿ.
ಸಹಾಯಕ ಪ್ರಾಧ್ಯಾಪಕ
ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

ಎಂಡಿ.ಪಿ. ಪಾರ್ಥಸಾರಥಿ, ಎಂ.ಡಿ.
ಪ್ರವಾಚಕ, ಪ್ರಾಣಿವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

ಎಂ.ಜಿ. ಮಾದೇಗೌಡ
ಅಧ್ಯಾಪಕ, ಇತಿಹಾಸ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಂ.ಜಿ.ಬಿ. ಭಾಸಿನ್, ಎಂ.ಜಿ.
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ದಯಾನಂದ ಕಾಲೇಜು, ಸೋಲಾಪುರ

ಎಂ.ಜಿ.ಕೆ.ಎಂ. ಮೂರ್ತಿ, ಎಂ.ಜಿ.ಕೆ.
ಕ್ಯಾಪ್ಟನ್, 36–ಇ, ಕರ್ಣಿಕ್ ರಸ್ತೆ
ಶಂಕರಪುರಂ, ಬೆಂಗಳೂರು

ಎಂ.ಎಚ್. ಹನುಮಂತರಾವ್, ಎಂ. (ದಿ)
ಎಪಿಗ್ರಾಫಿಯ ಕರ್ನಾಟಿಕ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಂ.ಎಚ್.ಎಂ. ಮರಿಗೌಡ, ಎಂ.ಎಚ್.
ನಿರ್ದೇಶಕ, ತೋಟಗಾರಿಕೆ ಇಲಾಖೆ
ಬೆಂಗಳೂರು
(ಅಧ್ಯಕ್ಷ, ತೋಟಗಾರಿಕೆ ಉಪಸಮಿತಿ, ಕನ್ನಡ ವಿಶ್ವಕೋಶ)

ಎಂ.ಎಚ್.ಎನ್. ನಾಯಕ್, ಎಂ.ಎಚ್.
ಜಂಟಿ–ನಿರ್ದೇಶಕ, ಪಠ್ಯಪುಸ್ತಕ ವಿಭಾಗ
ವಿದ್ಯಾ ಇಲಾಖೆ, ಬೆಂಗಳೂರು

ಎಂ.ಜೆ. ಜಗನ್ನಾಥ್, ಎಂ.
ಎಂಜಿನಿಯರ್, ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ
ಬೆಂಗಳೂರು

ಎಂ.ಜೆ.ಬಿ. ಜಯಂತಿಬಾಯಿ, ಎಂ. (ದಿ)
ಸಹಾಯಕ ಭಾಷಾಂತರಕಾರರು
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಂ.ಜೆ.ಎಸ್.ಆರ್. ಸುಂದರರಾಮ್, ಎಂ.ಜೆ.
ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ವಿಜಯ ಕಾಲೇಜು, ಜಯನಗರ
ಬೆಂಗಳೂರು

ಎಂ.ಕೆ.ಬಿ. ಕೇಶವಭಟ್ಟ, ಎಂ.
ಪ್ರಧಾನ ಭಾಷಾಂತರಕಾರ, ಮೈಸೂರು ಸರ್ಕಾರ
ವಿಧಾನಸೌಧ, ಬೆಂಗಳೂರು

ಎಂ.ಕೆ.ಬಿಎ. ಬಡಿಗೇರ, ಎಂ.ಕೆ.
ಸಹಪ್ರಾಧ್ಯಾಪಕ
ರಸಾಯನವಿಜ್ಞಾನ ಮತ್ತು ಮಣ್ಣು ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಎಂ.ಕೆ.ಬಿ.ಆರ್. ಭಾರತೀರಮಣಾಚಾರ್ಯ, ಎಂ.ಕೆ.
ರೀಡರ್, ಹಿಂದೀ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಂ.ಕೆ.ಕೆ. ಕೇಶವಸ್ವಾಮಿ, ಎಂ.ಕೆ.
ಅಧ್ಯಾಪಕ, ಇಂಗ್ಲಿಷ್ ವಿಭಾಗ
ವಿಜಯ ಕಾಲೇಜು, ಬಸವನಗುಡಿ, ಬೆಂಗಳೂರು

ಎಂ.ಕೆ.ಎನ್. ನಾಯಕ್, ಎಂ.ಕೆ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಂ.ಕೆ.ಆರ್. ಕೃಷ್ಣರೆಡ್ಡಿ, ಎಂ.
ರೀಡರ್ (ವಿ), ರಾಜ್ಯಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು

ಎಂ.ಎಂ.ಪಿ. ಪ್ರಭು, ಎಂ.ಎಂ.
ಕದ್ರಿ, ಬಜ್ಜೆ ಹೊಸ ರಸ್ತೆ, ಮಂಗಳೂರು

ಎಂ.ಎನ್.ಸಿಎಚ್. ಚೌಡಪ್ಪ, ಎಂ.ಎನ್.
ಪತ್ರಿಕೋದ್ಯಮಿ, 3ನೆಯ ಬ್ಲಾಕ್
ಜಯನಗರ, ಬೆಂಗಳೂರು

ಎಂ.ಎನ್.ಎಚ್. ಹೆಗ್ಡೆ, ಎಂ.ಎನ್.
ಅಧ್ಯಾಪಕ, ಮನಶ್ಶಾಸ್ತ್ರ ವಿಭಾಗ
ಅಖಿಲಭಾರತ ವಾಕ್‌ಶ್ರವಣ ಸಂಸ್ಥೆ, ಮೈಸೂರು

ಎಂ.ಎನ್.ಕೆ. ಕಟ್ಟಿ, ಎಂ.ಎನ್.
ಡೆಪ್ಯುಟಿ ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್
ಚೀಫ್ ಎಪಿಗ್ರಫಿಸ್ಟ್‌ರವರ ಕಚೇರಿ, ಮೈಸೂರು

ಎಂ.ಎನ್.ಎಂ. ಮಾಲೂರ್, ಎಂ.ಎನ್.
ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎನ್.ಎಂಎ. ಮಹಿಷಿ, ಎಂ.ಎನ್.
ಮುಖ್ಯ ಉಪಸಂಪಾದಕ, ಕಸ್ತೂರಿ
ಕನ್ನಡ ಮಾಸಪತ್ರಿಕೆ, ಹುಬ್ಬಳ್ಳಿ

ಎಂ.ಎನ್.ವಿ. ವಿಶ್ವನಾಥಯ್ಯ, ಎಂ.ಎನ್. (ದಿ)
ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಎಂ.ಎನ್.ವಿ.ಎಂ. ವ್ಯಾಸಮೂರ್ತಿ, ಎಂ.ಎನ್.
ಅಧ್ಯಾಪಕ, ಶ್ರವಣಶಾಸ್ತ್ರ ವಿಭಾಗ
ಅಖಿಲಭಾರತ ವಾಕ್‌ಶ್ರವಣ ಸಂಸ್ಥೆ, ಮೈಸೂರು

ಎಂ.ಪಿ. ಪ್ರಸನ್ನಕುಮಾರ್, ಎಂ.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಎಂಪಿ.ಪಿಎ. ಪಾಥರಾಜಯ್ಯ, ಎಂ.ಪಿ.
ಅಸೋಸಿಯೇಟ್ ಪ್ರೊಫೆಸರ್
ಹೆರಿಗೆ ಮತ್ತು ಸ್ತ್ರೀರೋಗ ವಿಭಾಗ
ಮೆಡಿಕಲ್ ಕಾಲೇಜು, ಮೈಸೂರು

ಎಂ.ಆರ್.ಸಿ. ರಾಮಚಂದ್ರ, ಎಂ.
ರೀಡರ್, ರಸಾಯನವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಮಡಿಕೇರಿ

ಎಂ.ಆರ್.ಜಿ. ಗವಿರಾಯಪ್ಪ, ಎಂ.ಆರ್.
ವರದಿಗಾರ, ಆಕಾಶವಾಣಿ, ಕೊಹಿಮ

ಎಂ.ಆರ್.ಆರ್. ರಾಘವೇಂದ್ರರಾವ್, ಎಂ.ಆರ್.
ಜೀವರಸಾಯನವಿಜ್ಞಾನ ವಿಭಾಗ
ಕೇಂದ್ರ ಆಹಾರ ಸಂಶೋಧನಾಲಯ, ಮೈಸೂರು

ಎಂ.ಆರ್.ಎಸ್ಎ. ಸತೀಶ್, ಎಂ.ಆರ್.
ಅಧ್ಯಾಪಕ, ಸಮಾಜವಿಜ್ಞಾನ ವಿಭಾಗ
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಂ.ಎಸ್. ಶಿವಲಿಂಗಯ್ಯ, ಎಂ.
ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎಸ್.ಬಿ.ಆರ್. ಬಸವರಾಜಯ್ಯ, ಎಂ.ಎಸ್.
ಪ್ರಾಚ್ಯವಿದ್ಯ ಸಂಶೋಧನ ಸಂಸ್ಥೆ, ಮೈಸೂರು

ಎಂ.ಎಸ್ಎಚ್ಐ. ಶಿವರಾಮ್ ಎಂ. ವೈದ್ಯ
ಸಿಟಿ ಡಿಸ್ಪೆನ್ಸರಿ, ಕೆಂಪೇಗೌಡ ಸರ್ಕಲ್
ಬೆಂಗಳೂರು

ಎಂ.ಎಸ್.ಕೆ. ಕೃಷ್ಣಮೂರ್ತಿ, ಎಂ.ಎಸ್.
ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎಸ್.ಕೆಆರ್. ಕೃಷ್ಣಮೂರ್ತಿ, ಎಂ.ಎಸ್.
ಅಧ್ಯಾಪಕ, ಹಿಂದೀ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎಸ್.ಎಂಎ. ಮಾಧವ, ಎಂ.ಎಸ್.
ಅಧ್ಯಾಪಕ, ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎಸ್.ಪಿ. ಪುಟ್ಟಣ್ಣಯ್ಯ, ಎಂ.ಎಸ್.
ಭೂವಿಜ್ಞಾನ ವಿಭಾಗ, ಕರ್ನಾಟಕ ಸೈನ್ಸ್ ಕಾಲೇಜು
ಧಾರವಾಡ

ಎಂ.ಎಸ್.ಆರ್. ರಾಮರಾವ್, ಎಂ.ಎಸ್.
ಅಧ್ಯಾಪಕ (ವಿ)
ಶಾರದಾವಿಲಾಸ ಲಾ ಕಾಲೇಜು, ಮೈಸೂರು

ಎಂ.ಎಸ್.ಎಸ್. ಸದಾಶಿವಯ್ಯ, ಎಂ.ಎಸ್.
ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಂ.ಎಸ್.ಎಸ್.ಕೆ. ಶ್ರೀಕಂಠ, ಎಂ.ಎಸ್.
ಜನರಲ್ ಮ್ಯಾನೇಜರ್
ಸರ್ಕಾರಿ ಶ್ರೀಗಂಧದ ಎಣ್ಣೆ ಕಾರ್ಖಾನೆ, ಶಿವಮೊಗ್ಗ

ಎಂ.ಎಸ್.ಎಸ್.ಆರ್. ರಾವ್, ಎಂ.ಎಸ್.ಎಸ್.
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಬಸವೇಶ್ವರ ಸೈನ್ಸ್ ಕಾಲೇಜು
ಬಾಗಲಕೋಟೆ

ಎಂ.ಎಸ್ಯು. ಸುಬ್ರಹ್ಮಣ್ಯಂ, ಎಂ.
ನಿರ್ದೇಶಕ, ಗಣಿ ರಕ್ಷಣಾ ವಿಭಾಗ, ಧನ್‌ಬಾದ್

ಎಂ.ಎಸ್.ವಿ. ವರ್ದ್ಯ, ಎಂ.ಎಸ್.
ಟಾಟಾ ಮೂಲಸಂಶೋಧನ ಸಂಸ್ಥೆ
ಹೋಮಿ ಭಾಭಾ ರೋಡು, ಮುಂಬಯಿ

ಎಂ.ಎಸ್.ವಿಇ. ವೀಣಾ, ಎಂ.ಎಸ್.
ಸಹಾಯಕ ಪ್ರಾಧ್ಯಾಪಕಿ
ಶ್ರೀ ಸರ್ವಜ್ಞ ಶಿಕ್ಷಣ ಕಾಲೇಜು, ಬೆಂಗಳೂರು

ಎಂಯು. ಮುನಿರಾಂಸಿಂಗ್
ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿ
ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ, ಬೆಂಗಳೂರು

ಎಂ.ವಿ. ವಾಸುದೇವರಾವ್, ಎಂ.
ಮುಖ್ಯೋಪಾಧ್ಯಾಯ
ವಿದ್ಯಾದಾಯಿನಿ ಪ್ರೌಢಶಾಲೆ, ಸುರತ್ಕಲ್

ಎಂ.ವಿ.ಎ.ಎಸ್. ಅರುಣಾಚಲಶಾಸ್ತ್ರಿ, ಎಂ.ವಿ.
ಪೇಲಿಯೆಂಟಾಲಜಿಸ್ಟ್
ಜಿಯಲಾಜಿಕಲ್ ಸರ್ವೇ ಆಫ್ ಇಂಡಿಯ, ಕಲ್ಕತ್ತ

ಎಂ.ವಿ.ಜೆ. ಜಂಬುನಾಥನ್, ಎಂ.ವಿ.
ಪ್ರಾಧ್ಯಾಪಕ (ವಿ), ಅಧ್ಯಕ್ಷ
ಸಂಖ್ಯಾಶಾಸ್ತ್ರ ಉಪಸಮಿತಿ, ಕನ್ನಡ ವಿಶ್ವಕೋಶ
ಮಾನಸಗಂಗೋತ್ರಿ, ಮೈಸೂರು

ಎಂ.ವಿ.ಕೆ. ಕೃಷ್ಣರಾವ್, ಎಂ.ವಿ. (ದಿ)
ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಎಂ.ವಿ.ಕೆ.ಎ. ಅಪ್ಪಾರಾವ್, ಎಂ.ವಿ.ಕೆ.
ಟಾಟಾ ಮೂಲ ಸಂಶೋಧನ ಸಂಸ್ಥೆ
ಹೋಮಿ ಭಾಭಾ ರೋಡು, ಮುಂಬಯಿ

ಎಂ.ವಿ.ಎಸ್ಆರ್. ಶ್ರೀನಿವಾಸ್, ಎಂ.ವಿ.
ಅಧ್ಯಾಪಕ, ಇತಿಹಾಸ ವಿಭಾಗ
ಸರ್ಕಾರಿ ಕಾಲೇಜು, ಬೆಂಗಳೂರು

ಎಂ.ವೈ. ಯಾಮುನಾಚಾರ್ಯ, ಎಂ. (ದಿ)
ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎನ್.ಎ. ಅನಂತಪದ್ಮನಾಭನ್, ಎನ್.
ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಪ್ರೆಸಿಡೆನ್ಸಿ ಕಾಲೇಜು, ಮದ್ರಾಸು

ಎನ್.ಬಿ. ಬಸವಾರಾಧ್ಯ, ಎನ್. (ದಿ)
ಉಪನಿರ್ದೇಶಕ, ಸಂಪಾದನ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎನ್.ಬಿ.ಕೆ. ಕೃಷ್ಣಮೂರ್ತಿ, ಎನ್.ಬಿ.
ರೀಡರ್, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎನ್.ಜಿ.ಪಿ. ಪುಟ್ಟಸ್ವಾಮಿ, ಎನ್.ಜಿ.
ರೀಡರ್, ಭೌತವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎನ್.ಕೆ. ನಾಡಿಗ ಕೃಷ್ಣಮೂರ್ತಿ
ಪ್ರಾಧ್ಯಾಪಕ, ಪತ್ರಿಕೋದ್ಯಮ ವಿಭಾಗ
(ಅಧ್ಯಕ್ಷ, ಪತ್ರಿಕೋದ್ಯಮ ಉಪಸಮಿತಿ, ಕನ್ನಡ ವಿಶ್ವಕೋಶ)
ಮಾನಸಗಂಗೋತ್ರಿ, ಮೈಸೂರು

ಎನ್.ಕೆ.ಕೆ. ಕುಲಕರ್ಣಿ, ಎನ್.ಕೆ.
ಹರಪನಹಳ್ಳಿ ಕಾಂಪೌಂಡ್
ಯು.ಬಿ. ಹಿಲ್ ರೋಡ್, ಧಾರವಾಡ

**ಎನ್.ಕೆ.ಎಸ್.** ಕೃಷ್ಣಸ್ವಾಮಿ, ಎನ್.
ಹಿರಿಯ ಸಂಶೋಧನಾಧಿಕಾರಿ
ಎಲ್.ಆರ್.ಡಿ.ಇ., ಬೆಂಗಳೂರು

**ಎನ್.ಎಂ.** ಮುನಿಯಪ್ಪ, ಎನ್.
ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎನ್.ಎನ್.ಎಂ.** ಮೂರ್ತಿ, ಎನ್.ಎನ್.
ಅಧ್ಯಾಪಕ, ಸಿವಿಲ್ ಎಂಜಿನಿಯರಿಂಗ್ ವಿಭಾಗ
ಡಿ.ಆರ್.ಆರ್. ಪಾಲಿಟೆಕ್ನಿಕ್, ದಾವಣಗೆರೆ

**ಎನ್.ಪಿ.ಎಸ್.** ಪ್ರಭುಸ್ವಾಮಿ, ಎನ್.
ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎನ್.ಆರ್.ಆರ್.** ರಂಗನಾಥಯ್ಯ, ಎನ್.ಆರ್.
ಗ್ರಂಥಪಾಲ, ಲಾಲ್‌ಬಾಗ್, ಬೆಂಗಳೂರು

**ಎನ್.ಆರ್.ವಿ.** ವಿಶ್ವನಾಥನ್, ಎನ್.ಆರ್.
ಸಹಾಯಕ ನಿರ್ದೇಶಕ, ತೋಟಗಾರಿಕೆ ಇಲಾಖೆ
ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ

**ಎನ್.ಎಸ್.ಬಿ.** ಶ್ರೀಶ ಬಲ್ಲಾಳ, ಎನ್.
ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಎಂ.ಜಿ.ಎಂ. ಕಾಲೇಜು, ಉಡುಪಿ

**ಎನ್.ಎಸ್.ಜಿ.** ಗೋವಿಂದರಾವ್, ಎನ್.ಎಸ್.
ಪ್ರಾಧ್ಯಾಪಕ
ಸಿವಿಲ್ ಮತ್ತು ಹೈಡ್ರಾಲಿಕ್ ಎಂಜಿನಿಯರಿಂಗ್ ವಿಭಾಗ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು

**ಎನ್.ಎಸ್.ಕೆ.** ಶ್ರೀಕಂಠ, ಎನ್.
ಪ್ರಾಧ್ಯಾಪಕ, ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎನ್.ಎಸ್.ಕೆ.ಎ.** ಕಾಯ್ಕಿಣಿ, ಎನ್.ಎಸ್.
ಚೀಫ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್ (ವಿ)
ಟಿಂಬರ್ ಅಡ್ವೈಸರ್ ದಾಂಡೇಲಿ ಪೇಪರ್ ಮಿಲ್ಸ್
ದಾಂಡೇಲಿ

**ಎನ್.ಎಸ್.ಎಲ್.** ಲಕ್ಷ್ಮೀನಾರಾಯಣಭಟ್ಟ, ಎನ್.ಎಸ್.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎನ್.ಎಸ್.ಎಸ್.ಪಿ.** ಶಾರದಾಪ್ರಸಾದ್, ಎನ್.ಎಸ್.
ಭಾಷಾಂತರ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎನ್.ಎಸ್.ವಿ.** ವೀರಪ್ಪ, ಎನ್.ಎಸ್.
ಗೌರವ ಸಂಪಾದಕ, ಜೀವವಿಜ್ಞಾನ ವಿಭಾಗ
ಕನ್ನಡ ವಿಶ್ವಕೋಶ, ಮೈಸೂರು

**ಎನ್.ವಿ.ಎ.** ಅಶ್ವತ್ಥನಾರಾಯಣ, ಎನ್.ವಿ.
ರೀಡರ್, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎನ್.ವಿ.ಎಂ.** ಮಧುಸೂದನ, ಎನ್.ವಿ.
ರಾಮನ್ ಸಂಶೋಧನ ಸಂಸ್ಥೆ, ಬೆಂಗಳೂರು

**ಪಿ.ಎ.ಆರ್.** ರಾಮಕೃಷ್ಣ ಅಯ್ಯರ್, ಪಿ.ಎ.
ರೀಡರ್, ಪ್ರಾಣಿವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಪಿ.ಬಿ.ಡಿ.** ದೇಸಾಯಿ, ಪಿ.ಬಿ.
ನಿರ್ದೇಶಕ (ವಿ)
ಕನ್ನಡ ಸಂಶೋಧನ ಸಂಸ್ಥೆ
ಧಾರವಾಡ

**ಪಿ.ಜಿ.ಬಿ.** ಗುರುರಾಜಭಟ್ಟ, ಪಿ.
ಪ್ರಿನ್ಸಿಪಾಲ್, ಮಿಲಾಗ್ರೇಸ್ ಕಾಲೇಜು
ಕಲ್ಯಾಣಪುರ (ದ.ಕ.)

**ಪಿ.ಜಿ.ಡಿ.** ಪ್ರಧಾನ್ ಗುರುದತ್ತ
ಅಧ್ಯಕ್ಷರು, ಕುವೆಂಪು ಭಾಷಾಭಾರತಿ
ಬೆಂಗಳೂರು

**ಪಿ.ಜಿ.ಆರ್.** ರಾಮಪ್ಪ, ಪಿ.ಜಿ.
ಅಧ್ಯಾಪಕ, ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಪಿ.ಎಚ್.** ಹಲಗೇಗೌಡ, ಪಿ.
ಅಧ್ಯಾಪಕ
ಡಿ. ಬನುಮಯ್ಯ ಕಾಲೇಜು, ಮೈಸೂರು

**ಪಿ.ಎಂ.** ಪುಟ್ಟರುದ್ರಯ್ಯ, ಎಂ.
ನಿರ್ದೇಶಕ, ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು

**ಪಿ.ಎಂ.ಯು.ಎಸ್.** ಉಮಾಕಾಂತಶಾಸ್ತ್ರಿ, ಪಿ.ಎಂ.
ಪ್ರಾಂಶುಪಾಲರು
ಶ್ರೀ ಗವಿಸಿದ್ದೇಶ್ವರ ವಿ.ವಿ. ಟ್ರಸ್ಟ್ ಕಾಲೇಜು, ಕೊಪ್ಪಳ

**ಪಿ.ಪಿ.ಯು.** ಉಂಡಲೆ, ಪಿ.ಪಿ.
ಸಹಾಯಕ ನಿರ್ದೇಶಕ
ಕೈಗಾರಿಕೆ ಮತ್ತು ವಾಣಿಜ್ಯ ವಿಭಾಗ, ಕಾರವಾರ

**ಪಿ.ಆರ್.ಟಿ.** ತಿಪ್ಪೇಸ್ವಾಮಿ, ಪಿ.ಆರ್. (ದಿ)
ಕ್ಯೂರೇಟರ್, ಜಾನಪದ ವಸ್ತುಸಂಗ್ರಹಾಲಯ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಪಿ.ಎಸ್.ಆರ್‌ಎ.** ಸತ್ಯೇಂದ್ರರಾವ್, ಪಿ.
ಡೈರಿ ಅಭಿವೃದ್ಧಿ ಅಧಿಕಾರಿ
ಕಾರ್ಲ್‌ಟನ್ ಹೌಸ್, ಬೆಂಗಳೂರು

**ಪಿ.ಎಸ್.ಎಸ್.** ಶಂಕರ, ಪಿ.ಎಸ್.
ಪ್ರಾಧ್ಯಾಪಕ, ವೈದ್ಯವಿಜ್ಞಾನ ವಿಭಾಗ
ಮೆಡಿಕಲ್ ಕಾಲೇಜು, ಗುಲ್ಬರ್ಗ

**ಪಿ.ಟಿ.ಎನ್.** ನರಸಿಂಹಾಚಾರ್, ಪಿ.ಟಿ.
ಸಂಪಾದಕ (ವಿ)
ಇಂಗ್ಲಿಷ್–ಕನ್ನಡ ನಿಘಂಟು
ಮಾನಸಗಂಗೋತ್ರಿ, ಮೈಸೂರು

**ಪಿ.ವಿ.** ವೆಂಕಟರಾಮಯ್ಯ, ಪಿ.
ಕುಲಪತಿಗಳು (ವಿ)
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ಆರ್.** ಕ್ಯಾತನಹಳ್ಳಿ ರಾಮಣ್ಣ
ಸಂಶೋಧನ ಸಹಾಯಕ (ವಿ), ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಆರ್‌ಎ.ಎ.** ರಂಗಣ್ಣ, ಎ.
ರೀಡರ್, ಭೌತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಆರ್.ಬಿ.ಎನ್.** ಬಾಲಚಂದ್ರನಾಯರ್, ಆರ್.
ಬಿ.ವಿ.ಬಿ. ಎಂಜಿನಿಯರಿಂಗ್ ಕಾಲೇಜು, ಮೈಸೂರು

**ಆರ್.ಡಿ.ಆರ್.** ದಿನೇಶರಾವ್, ಆರ್.
ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಆರ್.ಎಫ್.ಪಿ.** ಪಾಟೀಲ, ಆರ್.ಎಫ್.
ಪ್ರಾಧ್ಯಾಪಕ, ಬ್ಯಾಕ್ಟೀರಿಯಾಲಜಿ ವಿಭಾಗ
ಪಶುವೈದ್ಯ ಕಾಲೇಜು, ಬೆಂಗಳೂರು

**ಆರ್.ಜಿ.** ರಾಮೇಗೌಡ
ಪ್ರಾಧ್ಯಾಪಕ (ವಿ), ಚಿತ್ರಕೂಟ
ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು

**ಆರ್.ಜಿ.ಆರ್.** ಗುರುರಾಜರಾವ್, ಆರ್.
ರೀಡರ್, ಗಣಿತವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಕೋಲಾರ

**ಆರ್.ಜಿ.ಎಸ್.** ಶಿವಣ್ಣ, ಆರ್.ಜಿ.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು

**ಆರ್.ಎಲ್.ಎ.** ಅನಂತರಾಮಯ್ಯ, ಆರ್.ಎಲ್ (ದಿ)
ಉಪನಿರ್ದೇಶಕ, ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು

**ಆರ್.ಎಲ್.ಎನ್.** ನರಸಿಂಹಯ್ಯ, ಆರ್.ಎಲ್. (ದಿ)
ಭೌತವಿಜ್ಞಾನ ವಿಭಾಗ, ಸೆಂಟ್ರಲ್ ಕಾಲೇಜು
ಬೆಂಗಳೂರು

**ಆರ್.ಎಂ.ಆರ್.** ರಾಮಸ್ವಾಮಿ, ಎಂ.ಆರ್.
ಮುಖ್ಯೋಪಾಧ್ಯಾಯ
ಸರ್ಕಾರಿ ಉನ್ನತ ಪ್ರೌಢಶಾಲೆ, ಮಡಿಕೇರಿ

**ಆರ್.ಎನ್.ಎ.** ನಾರಾಯಣ, ಆರ್.
ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್ಸ್ ಬೇಸಿಕ್ ಸೈನ್ಸಸ್
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

**ಆರ್.ಪಿ.** ಪರಿಮಳ, ಆರ್.
ಅಧ್ಯಾಪಕಿ, ಇತಿಹಾಸ ವಿಭಾಗ
ಎಂ.ಇ.ಎಸ್. ಕಾಲೇಜು, ಬೆಂಗಳೂರು

**ಆರ್.ಪಿ.ಪಿ.** ಪಕ್ಷಿರಾಜನ್, ಆರ್.ಪಿ.
ಪ್ರಾಧ್ಯಾಪಕ, ಸಂಖ್ಯಾಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಆರ್.ಪಿ.ಎಸ್.** ರಾಮ್‌ಪ್ರಬೇಶ್ ಸಿಂಗ್
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಪಾಟ್ನ ವಿಶ್ವವಿದ್ಯಾಲಯ, ಪಾಟ್ನ

**ಆರ್.ಆರ್‌ಎಂ.** ರಾಮಣ್ಣ, ಆರ್.
ಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

**ಆರ್.ಆರ್.ಕೆ.** ರಾಮಕೃಷ್ಣ, ಆರ್.
ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಆರ್.ಎಸ್.ಬಿ.** ರಾಜಶೇಖರ ಭೂಸನೂರಮಠ
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಕರ್ನಾಟಕ ಸೈನ್ಸ್ ಕಾಲೇಜು, ಧಾರವಾಡ

**ಆರ್.ಎಸ್.ಎನ್.** ಸತ್ಯನಾರಾಯಣ, ಆರ್.
ಅಧ್ಯಾಪಕ, ರಸಾಯನವಿಜ್ಞಾನ ವಿಭಾಗ
ಶಾರದಾವಿಲಾಸ ಕಾಲೇಜು, ಮೈಸೂರು

**ಆರ್.ಎಸ್.ಆರ್.** ರಾಮರಾವ್, ಆರ್.ಎಸ್.
ಸಂಪಾದಕ, ಪ್ರಕಟಣ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ
ಬೆಂಗಳೂರು

**ಆರ್.ಎಸ್.ವಿ.** ರಾಮರಾವ್, ಎಸ್.ವಿ.
ಪ್ರಾಧ್ಯಾಪಕ, ವೈದ್ಯವಿಜ್ಞಾನ ವಿಭಾಗ
ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು

**ಆರ್.ವಿ.ಎಚ್.** ಹೆಗಡೆ, ಆರ್.ವಿ.
ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ
ಭದ್ರಾ ಕಾಲೇಜು, ಭದ್ರಾವತಿ

**ಆರ್.ವಿ.ಎಂ.** ವಿಶ್ವಮೂರ್ತಿ, ಆರ್.
ಮ್ಯಾನೇಜರ್
ಮೆಟೀರಿಯಲ್ ಎಂಜಿನಿಯರಿಂಗ್ ವಿಭಾಗ
ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ, ಬೆಂಗಳೂರು

**ಎಸ್.ಎ.ಕೆಯು.** ಆನಂದಕುಮಾರ್, ಎಸ್.
ಕರ್ನಾಟಕ ಥಿಯೊಲಾಜಿಕಲ್ ಕಾಲೇಜು
ಬಲ್ಮಠ, ಮಂಗಳೂರು

**ಎಸ್.ಎ.ಎಂ.** ಸಿಂಧುವಳ್ಳಿ ಅನಂತಮೂರ್ತಿ
ಅಧ್ಯಾಪಕ
ಲಲಿತಕಲೆಗಳ ಕಾಲೇಜು
ಮಾನಸಗಂಗೋತ್ರಿ, ಮೈಸೂರು

**ಎಸ್‌ಎಆರ್.** ಸರಸ್ವತಿ
ಅಧ್ಯಾಪಕಿ, ರಾಜ್ಯಶಾಸ್ತ್ರ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಎಸ್.ಬಿ.** ಸಿಂಧುವಳ್ಳಿ ಬಾಲಸುಬ್ರಹ್ಮಣ್ಯಂ
ಅಧ್ಯಾಪಕ
ಡಿ. ಬನುಮಯ್ಯ ಸಂಜೆ ಕಾಲೇಜು, ಮೈಸೂರು

**ಎಸ್.ಬಿ.ಎಲ್.** ಶ್ರೀನಿವಾಸ್, ಬಿ.ಎಲ್.
ಅಧ್ಯಾಪಕ, ಭೂವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

**ಎಸ್.ಬಿ.ಎಸ್.** ಸಣ್ಣಯ್ಯ, ಬಿ.ಎಸ್.
ಸಹಾಯಕ ನಿರ್ದೇಶಕ, ಸಂಪಾದನ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಸಿ.ಎಚ್.** ಹಿರೇಮಠ, ಎಸ್.ಸಿ.
ಸಹಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ಕಾಲೇಜು, ಧಾರವಾಡ

**ಎಸ್.ಡಿ.ಕೆ.** ಸಬಿತಾದೇವಿ, ಕೆ.
ಅಧ್ಯಾಪಕಿ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

**ಎಸ್.ಡಿ.ಪಿ.** ಪುಣೇಕರ್, ಎಸ್.ಡಿ.
ಮುಖ್ಯಸ್ಥ, ಸಂಶೋಧನ ವಿಭಾಗ
ಟಾಟಾ ಸಮಾಜವಿಜ್ಞಾನಗಳ ಸಂಸ್ಥೆ, ಮುಂಬಯಿ

**ಎಸ್.ಜಿ.ಕೆ.** ಕದರಮಂಡಲಗಿ, ಎಸ್.ಜಿ.
ಭೂಗೋಳಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ
ಧಾರವಾಡ

**ಎಸ್‌ಎಚ್‌ಐ.** ಶಿವಣ್ಣ
ಸಂಶೋಧನ ಸಹಾಯಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್‌ಎಚ್.ಎಂ.** ಶಾಂತಾದೇವಿ ಮಾಳವಾಡ
ಪ್ರಶಾಂತ, ಹತ್ತಿಕೊಳ್ಳ ರಸ್ತೆ, ಧಾರವಾಡ

**ಎಸ್.ಎಚ್‌ಒ.** ಹೊನ್ನಯ್ಯ, ಎಸ್.
ಪ್ರಾಧ್ಯಾಪಕ, ಜೀವವಿಜ್ಞಾನ ವಿಭಾಗ
ಸ್ನಾತಕೋತ್ತರ ಕೇಂದ್ರ, ಮಂಗಳೂರು

**ಎಸ್‌ಎಚ್.ಪಿ.** ಶಾಂತಾ ಪ್ರಭುಶಂಕರ (ದಿ)
ವೈದ್ಯಾಧಿಕಾರಿ (ವಿ)
ವಿಶ್ವವಿದ್ಯಾನಿಲಯ ಆರೋಗ್ಯಕೇಂದ್ರ
ಮಾನಸಗಂಗೋತ್ರಿ, ಮೈಸೂರು

**ಎಸ್.ಐ.ಕೆ.** ಸೈಯದ್ ಇಕ್ಬಾಲ್ ಖಾದ್ರಿ
ಅಧ್ಯಾಪಕ, ಪತ್ರಿಕೋದ್ಯಮ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಜೆ.ಎಸ್. ಸಮರ್ಥ, ಎಸ್.ಜೆ.
16, ಮಿಲ್ಲರ್ಸ್ ರೋಡ್, ಬೆಂಗಳೂರು

ಎಸ್.ಕೆ.ಇ. ಏಕಾಂಬರಂ, ಎಸ್.ಕೆ.
ಪ್ರಾಧ್ಯಾಪಕ
ಭಾರತೀಯ ಆಡಳಿತ ಸಿಬ್ಬಂದಿ ಕಾಲೇಜು, ಹೈದರಾಬಾದು

ಎಸ್.ಕೆ.ಎಚ್. ಕೃಷ್ಣನ್ ಹರವೆ, ಎಸ್.
ಪ್ರಾಧ್ಯಾಪಕ
ಮೈಸೂರು ಮೆಡಿಕಲ್ ಕಾಲೇಜು, ಮೈಸೂರು

ಎಸ್.ಕೆ.ಕೆ. ಕಿಟ್ಟಮ್ಮ, ಎಸ್.ಕೆ.
ಅಧ್ಯಾಪಕಿ, ಇತಿಹಾಸ ವಿಭಾಗ
ಮಹಾರಾಣಿ ಕಾಲೇಜು, ಬೆಂಗಳೂರು

ಎಸ್.ಕೆ.ಆರ್. ರಾಮಚಂದ್ರರಾವ್, ಎಸ್.ಕೆ.
ಜಯನಗರ, ಬೆಂಗಳೂರು
(ಅಧ್ಯಕ್ಷ, ಲಲಿತಕಲಾ ಉಪಸಮಿತಿ, ಕನ್ನಡ ವಿಶ್ವಕೋಶ)

ಎಸ್.ಕೆ.ಎಸ್. ಶಿವಣ್ಣ, ಕೆ.ಎಸ್.
ಅಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಕೆ.ಟಿ. ಶಿವಶಂಕರ್, ಕೆ.ಟಿ.
ಪ್ರಾಧ್ಯಾಪಕ, ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು

ಎಸ್.ಕೆಯು. ಸಂಪತ್‌ಕುಮಾರ್
ಅಧ್ಯಾಪಕ, ಗಣಿತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಕೆ.ವಿ. ಸೂರ್ಯನಾರಾಯಣರಾವ್, ಕೆ.ವಿ.
ರೀಡರ್
ವೆಂಕಟೇಶ್ವರ ವಿಶ್ವವಿದ್ಯಾಲಯ, ತಿರುಪತಿ

ಎಸ್.ಕೆ.ವಿ.ಎಲ್. ವಿಜಯಲಕ್ಷ್ಮಮ್ಮ, ಎಸ್.ಕೆ.
501, ಸರಸ್ವತಿ, ಗುರತ್‌ಮಾನ್ ಪಾರ್ಕ್
ಬೆಂಗಳೂರು

ಎಸ್.ಎಲ್.ಎ. ಲಕ್ಷ್ಮೀನಾರಾಯಣ ಅರೋರ, ಎಸ್.
ಪ್ರಾಧ್ಯಾಪಕ (ವಿ), ಭಾಷಾಂತರ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಎಲ್.ಡಿ. ದಾಸ್, ಎಸ್.ಎಲ್.
ಸೀನಿಯರ್ ಸೈಂಟಿಫಿಕ್ ಆಫಿಸರ್
ರೈಲ್ವೆ ಬೋರ್ಡ್, ನವದೆಹಲಿ

ಎಸ್.ಎಲ್.ಕೆ. ಕಾಯಸ್ಥ, ಎಸ್.ಎಲ್.
ರೀಡರ್, ಭೂಗೋಳವಿಜ್ಞಾನ ವಿಭಾಗ
ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ

ಎಸ್.ಎಲ್.ಆರ್. ಸೀತಾಲಕ್ಷ್ಮೀ ರಂಗನಾಥನ್
ರೀಡರ್, ಅರ್ಥಶಾಸ್ತ್ರ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಎಸ್.ಎಂ. ಶೇಷಾದ್ರಿ, ಎಂ.
ಮೈಸೂರು

ಎಸ್.ಎಂ.ಕೆ. ಕೃಷ್ಣರಾಯ, ಎಸ್.ಎಂ.
ಸಾಹಿತ್ಯಸದನ, 500, 11ನೆಯ ತಿರುವು
2ನೆಯ ಹಂತ, ಗಿರಿನಗರ, ಬೆಂಗಳೂರು

ಎಸ್.ಎಂ.ಎಂ. ಮಾಧವ, ಎಸ್.ಎಂ.
ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಂಒ. ಸೈಯದ್ ಮೊಹಿಯುದ್ದೀನ್
ಪ್ರಾಧ್ಯಾಪಕ, ಮೈಸೂರು ಪಶುವೈದ್ಯ ಕಾಲೇಜು
ಹೆಬ್ಬಾಳ, ಬೆಂಗಳೂರು

ಎಸ್.ಎಂ.ಎಸ್. ಶೈಲ, ಎಂ.ಎಸ್.
ಸಂಶೋಧಕಿ, ಅಣುಜೀವವಿಜ್ಞಾನ ವಿಭಾಗ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು

ಎಸ್.ಎಂ.ವಿ. ವೀರರಾಘವಾಚಾರ್, ಎಸ್.ಎಂ.
ರೀಡರ್, ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್. ನಾಗರಾಜು, ಎಸ್.
ಪ್ರಾಧ್ಯಾಪಕ (ವಿ), ಪ್ರಾಕ್ತನಶಾಸ್ತ್ರ ವಿಭಾಗ
ಕೃಷ್ಣದೇವರಾಯ ವಿಶ್ವವಿದ್ಯಾಲಯ, ಅನಂತಪುರ (ಆಂ.ಪ್ರ)

ಎಸ್.ಎನ್ಎ. ನಾಗರಾಜು, ಎಸ್.
ರೀಡರ್, ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್ಎಆರ್. ನಾರಾಯಣ, ಎಸ್.
ಅಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಸ್.ಎನ್.ಕೆ. ಕೃಷ್ಣಜೋಯಿಸ್, ಎಸ್.ಎನ್. (ದಿ)
ಸಂಪಾದನ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್.ಕೆವಿ. ಸೂರ್ಯನಾಥ ಕಾಮತ್
ಪ್ರಾಧ್ಯಾಪಕರು (ವಿ), ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಸ್.ಎನ್.ಕೆಯು. ನಿರ್ಮಲಕುಮಾರಿ, ಜಿ.ಎಸ್.
ರೀಡರ್, ಪ್ರಾಣಿವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಎಸ್.ಎನ್.ಎಲ್. ಲಕ್ಷ್ಮೀನಾರಾಯಣ, ಎಸ್.ಎನ್.
ಪ್ರಲೇಖನಾಧಿಕಾರಿ
ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್.ಆರ್.ಕೆ. ನಾರಾಯಣರಾವ್ ಕುಟ್ನಿಕರ್, ಎಸ್.
ರಾಮ್‌ನಾರಾಯಣ ಚೆಲ್ಲಾರಾಂ ಕಾಮರ್ಸ್ ಕಾಲೇಜು
ಪ್ಯಾಲೇಸ್ ರೋಡ್, ಬೆಂಗಳೂರು

ಎಸ್.ಎನ್.ಎಸ್.ವಿ. ಶಾಂತವೀರಪ್ಪ, ಎಸ್.ಎನ್. (ದಿ)
ಇಂಗ್ಲಿಷ್ ಪ್ರಾಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಪಿಯು. ಸಿದ್ದಯ್ಯ ಪುರಾಣಿಕ (ದಿ)
ಸಾರಿಗೆ ಕಮೀಷನರ್
4,5ಎ, ಆಲಿ ಆಸ್ಕರ್ ರಸ್ತೆ, ಬೆಂಗಳೂರು

ಎಸ್.ಆರ್ಎಎನ್. ರಂಗಾಚಾರ್, ಎಸ್.
ಸಂಸ್ಕೃತ ರೀಡರ್ (ವಿ)
1040, ಚಾಮರಾಜಪುರಂ, ಮೈಸೂರು

ಎಸ್.ಆರ್.ಸಿ. ರಾಮಚಂದ್ರ, ಎಸ್.
ಪ್ರಿನ್ಸಿಪಾಲ್, ಡೆಂಟಲ್ ಕಾಲೇಜು
ಬೆಂಗಳೂರು

ಎಸ್.ಆರ್.ಜಿ. ಸಿದ್ದರಾಮೇಗೌಡ
ಅಧ್ಯಾಪಕ, ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಆರ್.ಎಂ.**
ಮಾಧೂರಾವ್, ಎಸ್.ಆರ್.
ಮುಖ್ಯಸ್ಥ, ಗಣಿತ ವಿಭಾಗ
ಜೆ.ಎಸ್.ಎಸ್. ಕಾಲೇಜು, ಮೈಸೂರು

**ಎಸ್.ಆರ್.ಎನ್.**
ನರಸಿಂಹಮೂರ್ತಿ, ಎಸ್.ಆರ್.
ಭೂವಿಜ್ಞಾನಿ
ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯ
ಪೆಟ್ರೋಲೊಜಿ ಲ್ಯಾಬ್, ಹೈದರಾಬಾದು

**ಎಸ್.ಆರ್.ಆರ್.**
ರಾಮರಾವ್, ಎಸ್.
ಸಹಪ್ರಾಧ್ಯಾಪಕ (ವಿ)
ಶರೀರಕ್ರಿಯಾವಿಜ್ಞಾನ ವಿಭಾಗ
ಮೆಡಿಕಲ್ ಕಾಲೇಜು, ಮೈಸೂರು

**ಎಸ್.ಎಸ್.ಡಿ.**
ದೇಸಾಯಿ, ಎಸ್.ಎಸ್.
ಸಹಪ್ರಾಧ್ಯಾಪಕ, ಕೃಷಿ ಕಾಲೇಜು
ಧಾರವಾಡ

**ಎಸ್.ಎಸ್‌ಎಚ್‌ಎ.**
ಶಾಮಣ್ಣ, ಎಸ್.
ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು

**ಎಸ್.ಎಸ್‌ಐ.**
ಸಿಲ್ವ, ಎಸ್.
ಅಡ್ವೊಕೇಟ್
ಹಿಲ್‌ಸೈಡ್, ಕಾರವಾರ

**ಎಸ್.ಎಸ್.ಜೆಎ.**
ಜಾಗೀರ್‌ದಾರ್, ಎಸ್.ಎಸ್
ಶಾಸನತಜ್ಞ (ವಿ), ಎಪಿಗ್ರಾಫಿಯ ಕರ್ನಾಟಿಕ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ಎಸ್.ಕೆ.**
ಶ್ರೀಕಂಠಯ್ಯ, ಎಸ್.
ರೀಡರ್, ವಾಣಿಜ್ಯಶಾಸ್ತ್ರ ವಿಭಾಗ
ಬರೋಡ ವಿಶ್ವವಿದ್ಯಾಲಯ, ಬರೋಡ

**ಎಸ್.ಎಸ್.ಆರ್.**
ರಾಘವಾಚಾರ್, ಎಸ್.ಎಸ್.
ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ಟಿ.**
ಶ್ರೀವೆಂಕಟರಮಣ, ಟಿ.
ಅಧ್ಯಾಪಕ, ಸಂಖ್ಯಾಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್.ಟಿ.ಪಿ.**
ಪುಟ್ಟಣ್ಣ, ಎಸ್.ಟಿ.
ನಿರ್ದೇಶಕ (ವಿ)
ಮಿಂಟೊ ಆಸ್ಪತ್ರೆ, ಬೆಂಗಳೂರು

**ಎಸ್‌ಯು.**
ಸುಧಾಕರ (ದಿ)
ರೀಡರ್ (ವಿ)
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಎಸ್.ವಿ.ಡಿ.**
ವೆಂಕಟದೇಶಿಕಾಚಾರ್, ಎಸ್.
5, ಕಾರ್ನ್‌ವಾಲ್ ರಸ್ತೆ, ನವದೆಹಲಿ

**ಎಸ್.ವಿಐ.**
ವಿಜಯಲಕ್ಷ್ಮೀ, ಎಸ್.
ಭೌತವಿಜ್ಞಾನ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

**ಎಸ್.ವಿಐಜೆ.**
ವಿಜಯಾ, ಎಸ್.
ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಎಸ್.ವಿಐಎಸ್.**
ವಿಶ್ವನಾಥ್, ಎಸ್.
ಫೋರ್‌ಮನ್
ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ, ಬೆಂಗಳೂರು

**ಎಸ್.ವಿ.ಎಲ್.**
ವೈದ್ಯಲಿಂಗಂ, ಎಸ್.
ನ್ಯೂ ಪಂಡಿತ್ಸ್ ಕ್ವಾರ್ಟರ್ಸ್
ಅಣ್ಣಾಮಲೈನಗರ (ದ. ಆರ್ಕಾಟು)

**ಎಸ್.ವಿ.ಪಿಎ.**
ಪಾಟೀಲ, ಎಸ್.ವಿ.
ಸಹಾಯಕ ಸಂಪಾದಕ
ಕರ್ಮವೀರ ವಾರಪತ್ರಿಕೆ, ಹುಬ್ಬಳ್ಳಿ

**ಎಸ್.ವಿ.ಆರ್.**
ರಂಗಣ್ಣ, ಎಸ್.ವಿ. (ದಿ)
ಇಂಗ್ಲಿಷ್ ಪ್ರಾಧ್ಯಾಪಕ
(ಅಧ್ಯಕ್ಷ, ಸೌಂದರ್ಯತತ್ತ್ವ ಉಪಸಮಿತಿ,
ಕನ್ನಡ ವಿಶ್ವಕೋಶ), ಮೈಸೂರು

**ಟಿ.ಸಿ.ಸಿ.**
ಚಂದ್ರಶೇಖರ, ಟಿ.ಸಿ.
ಅಸೋಸಿಯೇಟ್ ಪ್ರೊಫೆಸರ್
ಶಸ್ತ್ರವೈದ್ಯ ವಿಭಾಗ, ಮೆಡಿಕಲ್ ಕಾಲೇಜು
ಬಳ್ಳಾರಿ

**ಟಿ.ಇ.ಎಚ್.**
ಹಿಲ್ಟನ್, ಟಿ.ಇ.
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಯೂನಿವರ್ಸಿಟಿ ಕಾಲೇಜು
ಅಕ್ಲುಮೋಟ, ಘಾನ (ಆಫ್ರಿಕ)

**ಟಿ.ಎಚ್.ಎನ್.**
ನಾರಾಯಣರಾವ್, ಟಿ.ಎಚ್.
ಪ್ರಾಧ್ಯಾಪಕ
ರೇಣುಕಾಚಾರ್ಯ ಕಾಮರ್ಸ್ ಕಾಲೇಜು
ಬೆಂಗಳೂರು

**ಟಿ.ಎನ್.ಆರ್.**
ರಾಮಚಂದ್ರನ್, ಟಿ.ಆರ್.
ಅಧ್ಯಾಪಕ, ಸಂಖ್ಯಾಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

**ಟಿ.ಆರ್.ಎನ್.**
ನಾಗಪ್ಪ, ಟಿ.ಆರ್.
ಸಂಶೋಧನ ಸಹಾಯಕ
ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

**ಟಿ.ಆರ್.ಪಿ.**
ತಲ್ಲೂರು ರಾಯನಗೌಡ ಪಾಟೀಲ
ತಲ್ಲೂರು, ರಾಜಗೋಕಾಕ
ಬೆಳಗಾಂವಿ ಜಿಲ್ಲೆ

**ಟಿ.ಎಸ್.**
ಶಿವಣ್ಣ, ಟಿ.
ಅಧ್ಯಾಪಕ
ಸರ್ಕಾರಿ ಕಾಲೇಜು, ಬೆಂಗಳೂರು

**ಟಿ.ಟಿ.**
ತಿಮ್ಮಯ್ಯ, ಟಿ.
ನಿರ್ದೇಶಕ, ಸ್ಕೂಲ್ ಆಫ್ ಮೈನ್ಸ್
ಕೋರಮಂಡಲ, ಕೆ.ಜಿ.ಎಫ್.

**ಟಿ.ಟಿ.ಎಸ್.**
ತಿರುಮಲೆ ತಾತಾಚಾರ್ಯ ಶರ್ಮ
ಪತ್ರಿಕೋದ್ಯಮಿ
54, ಶಂಕರವನ, ಶಂಕರಪುರ
ಬೆಂಗಳೂರು

**ಟಿ.ವಿ.ಎಸ್.**
ಸುಬ್ರಹ್ಮಣ್ಯಂ, ಟಿ.ವಿ.
ಅಧ್ಯಾಪಕ, ಗ್ರಂಥಾಲಯ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಟಿ.ವಿ.ಎಸ್‌ಎಚ್.**
ಶಿವರುದ್ರಪ್ಪ, ಟಿ.ವಿ.
ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ಟಿ.ವಿ.ವಿ.**
ವೆಂಕಟಾಚಲಶಾಸ್ತ್ರೀ, ಟಿ.ವಿ.
ಪ್ರಾಧ್ಯಾಪಕ ಹಾಗೂ ನಿರ್ದೇಶಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಯು.ಜೆ.ಎಂ.** ಜಮಾಲ್ ಮೊಹಮ್ಮದ್, ಯು.
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಪ್ರೆಸಿಡೆನ್ಸಿ ಕಾಲೇಜು, ಮದ್ರಾಸು

**ಯು.ಎಲ್.ಎ.** ಆಚಾರ್, ಯು.ಎಲ್.
ರೀಡರ್, ಭೌತವಿಜ್ಞಾನ ವಿಭಾಗ
ಎಂ.ಜಿ.ಎಂ. ಕಾಲೇಜು, ಉಡುಪಿ

**ಯು.ಪಿ.ಯು.** ಉಪಾಧ್ಯಾಯ, ಯು.ಪಿ.
ಪ್ರಾಧ್ಯಾಪಕ (ವಿ)
ಎಂ.ಜಿ.ಎಂ. ಕಾಲೇಜು, ಉಡುಪಿ

**ವಿ.ಬಿ.** ಭಾಸ್ಕರ್, ವಿ.
ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ವಿ.ಸಿ.ಎಚ್.** ಹಿತ್ತಲಮನಿ, ವಿ.ಸಿ.
ಪ್ರಾಧ್ಯಾಪಕ (ವಿ), ಪ್ರಕಟನ ವಿಭಾಗ
ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು

**ವಿಇ.ಎಸ್.** ವೆಂಕಟರಾಮ್, ಎಸ್.
ಸಂಪಾದಕ, 'ಉತ್ಥಾನ ಗವಿಪುರಂ ರಸ್ತೆ'
ಕೆಂಪೇಗೌಡನಗರ, ಬೆಂಗಳೂರು

**ವಿ.ಜಿ.** ವರದರಾಜರಾವ್, ಜಿ. (ದಿ)
ಪ್ರಾಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ವಿ.ಜಿ.ಕೆ.** ಕೃಷ್ಣಮೂರ್ತಿ, ವಿ.ಜಿ. (ದಿ)
ಭಾಷಾಂತರಕಾರ, ಭಾಷಾಂತರ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ವಿ.ಕೆಯು.** ವಸಂತಕುಮಾರಿ
ಅಧ್ಯಾಪಕಿ, ಇತಿಹಾಸ ವಿಭಾಗ
ಮುನಿಸಿಪಲ್ ಕಾಲೇಜು, ಮೈಸೂರು

**ವಿ.ಕೆ.ವಿ.** ಕೆಂಪವೀರಯ್ಯ, ವಿ.
ಅಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಎಂ.ಡಿ.ಟಿ.ಡಿ.ಬಿ. ಕಾಲೇಜು, ಮೈಸೂರು

**ವಿ.ಎಂ.ಐ.** ಇನಾಂದಾರ್, ವಿ.ಎಂ. (ದಿ)
45, 6ನೆಯ ಮೇನ್
ಮಲ್ಲೇಶ್ವರಂ, ಬೆಂಗಳೂರು

**ವಿ.ಆರ್.ಎಚ್.** ರಘುಚಂದ್ರ ಹೆಬ್ಬಾರ್, ವಿ.
ಅಧ್ಯಾಪಕ, ಇತಿಹಾಸ ವಿಭಾಗ
ಸೇಂಟ್ ಅಲೋಷಿಯಸ್ ಕಾಲೇಜು
ಮಂಗಳೂರು

**ವಿ.ಆರ್.ಆರ್.** ರಾಮರತ್ನಂ, ವಿ.
ಪ್ರಾಂಶುಪಾಲರು (ವಿ), ಲಲಿತಕಲೆಗಳ ಕಾಲೇಜು
ಮಾನಸಗಂಗೋತ್ರಿ, ಮೈಸೂರು

**ವಿ.ಆರ್.ಎಸ್.** ರಾಮಕೃಷ್ಣಶರ್ಮ, ವಿ.
9, ಬ್ಲಾಕ್ 12
ಕುಮಾರ್‌ಪಾರ್ಕ್ (ಪಶ್ಚಿಮ), ಬೆಂಗಳೂರು

**ವಿ.ಆರ್.ವಿ.ಎಚ್.** ರವಿವರ್ಮ ಹೆಗಡೆ, ವಿ.
ಪ್ರಾಧ್ಯಾಪಕ, ಪಶುವೈದ್ಯ ಕಾಲೇಜು
ಹೆಬ್ಬಾಳ, ಬೆಂಗಳೂರು

**ವಿ.ಎಸ್.ಬಿ.** ಶ್ರೀನಿವಾಸ ಭಟ್ಟ, ವಿ.
ಅಧ್ಯಾಪಕ, ಕನ್ನಡ ವಿಭಾಗ
ಎಂ.ಜಿ.ಎಂ. ಕಾಲೇಜು, ಉಡುಪಿ

**ವಿ.ಎಸ್.ಜೆ.** ಜಯರಾಮ್, ವಿ.ಎಸ್.
ಪ್ರಾಧ್ಯಾಪಕ, ಸೂಕ್ಷ್ಮಜೀವವಿಜ್ಞಾನ ವಿಭಾಗ
ಬೌರಿಂಗ್ ಆಸ್ಪತ್ರೆ, ಬೆಂಗಳೂರು

**ವಿ.ಎಸ್.ಕೆಆರ್.** ಕೃಷ್ಣನ್, ವಿ.ಎಸ್.
ಪ್ರಾಧ್ಯಾಪಕ, ಗಣಿತವಿಜ್ಞಾನ ವಿಭಾಗ
ಮದ್ರಾಸು ವಿಶ್ವವಿದ್ಯಾಲಯ, ಚೆನ್ನೈ

**ವಿ.ಎಸ್.ಎಸ್.** ಸಂಪತ್ಕುಮಾರಾಚಾರ್ಯ, ವಿ.ಎಸ್.
ಮುನಿಸಿಪಲ್ ಹೈಯರ್ ಸೆಕೆಂಡರಿ ಸ್ಕೂಲು
ಶ್ರೀರಂಗಪಟ್ಟಣ

**ವಿ.ಎಸ್.ವಿ.** ವೆಂಕಟರಾಮ್, ವಿ.ಎಸ್.
ಸಹಪ್ರಾಧ್ಯಾಪಕ
ಎಸ್.ಕೆ.ಎಸ್.ಜೆ. ಇನ್‌ಸ್ಟಿಟ್ಯೂಟ್, ಬೆಂಗಳೂರು

**ಡಬ್ಲ್ಯೂ.ಎಂ.** ವಿಲ್ಯಮ್ ಮಾಡ್ತಾ (ದಿ)
ಪ್ರಾಧ್ಯಾಪಕ, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ವೈ.ಆರ್.** ರಾಜಶೇಖರ, ವೈ.
ಶಸ್ತ್ರವೈದ್ಯ
ಎಸ್.ಡಿ.ಎಸ್. ಸ್ಯಾನಿಟೋರಿಯಂ, ಬೆಂಗಳೂರು

**ವೈ.ವಿ.ಎ.** ಅಯ್ಯ, ವೈ.ವಿ.
ಶಿವಕೃಪ, 162, 5ನೆಯ ಬ್ಲಾಕ್
ಜಯನಗರ, ಬೆಂಗಳೂರು

## ಕೃತಜ್ಞತೆ

ಕೆಳಕಂಡ ಕಲಾವಿದರು ವಿಶ್ವಕೋಶದ ಐದನೆಯ ಸಂಪುಟಕ್ಕೆ ಚಿತ್ರಗಳನ್ನು ಬರೆದುಕೊಟ್ಟು ಉಪಕರಿಸಿದ್ದಾರೆ

ಇಟಗಿ, ಎನ್.ಎಚ್., ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್, ಮಾನಸಗಂಗೋತ್ರಿ, ಮೈಸೂರು

ಇಟಿಗಟ್ಟಿ, ಸಿ.ವಿ., ಭೂವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಕುಲಕರ್ಣಿ, ಕೆ.ಬಿ., ಕಲಾವಿದ, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ

ತಿಪ್ಪೇಸ್ವಾಮಿ, ಪಿ.ಆರ್., ಕ್ಯೂರೇಟರ್, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಬಾಲಕೃಷ್ಣ, ಎಲ್., ಸಸ್ಯವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ರಘುನಾಥಭಟ್, ಎಚ್.ಆರ್. (ದಿ), ಪ್ರಾಧ್ಯಾಪಕ, ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ರಾಮಕೃಷ್ಣರಾಜು, ಕಲಾವಿದ ಮತ್ತು ಛಾಯಾಚಿತ್ರಗ್ರಾಹಕ, ಪ್ರಾಣಿಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಲಕ್ಷ್ಮೀಗೌಡ, ಬಿ.ಟಿ., ಡ್ರಾಫ್ಟ್ಸ್‌ಮನ್, ಪ್ರಾಕ್ತನಶಾಸ್ತ್ರ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು

ವೆಂಕಟೇಶ್, ಕೆ.ಎಲ್., ಕಲಾವಿದ, ಕಿರಣ ಆರ್ಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಶಶಿಕಲಾ, ಎ., ಪ್ರಾಧ್ಯಾಪಕಿ (ವಿ), ಪ್ರಾಣಿವಿಜ್ಞಾನ ವಿಭಾಗ, ಶಾರದಾವಿಲಾಸ ಕಾಲೇಜು, ಮೈಸೂರು

ಐದನೆಯ ಸಂಪುಟದ ಚಿತ್ರಗಳಿಗಾಗಿ ವಿವಿಧ ಗ್ರಂಥಗಳಿಂದ ನೆರವು ಒದಗಿದೆ ಅಂಥವನ್ನು ಕೆಳಗೆ ಕೃತಜ್ಞತೆಯಿಂದ ನೆನೆಯಲಾಗಿದೆ

ಆನ್ಯುಯಲ್ ರಿಪೋರ್ಟ್ ಆಫ್ ದಿ ಆರ್ಕಿಯೊಲಾಜಿಕಲ್ ಸರ್ವೇ ಆಫ್ ಮೈಸೂರು (1936, 40, 42)

ಆನ್ಯುಯಲ್ ರಿಪೋರ್ಟ್ ಆಫ್ ದಿ ಮೈಸೂರ್ ಆರ್ಕಿಯೊಲಾಜಿಕಲ್ ಡಿಪಾರ್ಟ್‌ಮೆಂಟ್ 1932, 37, 39, 64

ಆಸ್ಟ್ರೇಲಿಯನ್ ಎನ್‌ಸೈಕ್ಲೊಪೀಡಿಯ

ಇಂಡಿಯನ್ ಕ್ರಿಕೆಟ್ (1970). ಸಂ: ಪಿ.ಎನ್. ಸುಂದರೇಶನ್

ಇಂಡಿಯನ್ ಪೇಂಟಿಂಗ್ (1970). ಲೇ: ಸಿ. ಶಿವರಾಮಮೂರ್ತಿ

ಎನ್ ಇನ್‌ಟ್ರೊಡಕ್ಷನ್ ಟು ದಿ ಬಾಟನಿ ಆಫ್ ಟ್ರಾಪಿಕಲ್ ಕ್ರಾಪ್ಸ್ (1967). ಲೇ: ಲೆಸ್ಲೀ ಎಸ್. ಕಾಬ್ಲಿ

ಎನ್‌ಸೈಕ್ಲೊಪೀಡಿಯ ಆಫ್ ಮೈಥಾಲಜಿ (1959). ಲಾರೂಸ್ ಪ್ರಕಟಣೆ

ಎನ್‌ಸೈಕ್ಲೊಪೀಡಿಯ ಆಫ್ ವರ್ಲ್ಡ್ ಜಿಯೋಗ್ರಫಿ (1964). ಲಾರೂಸ್ ಪ್ರಕಟಣೆ

ಎಪಿಗ್ರಾಫಿಯ ಕರ್ನಾಟಿಕ. ಸಂ. 3 (1894), ಸಂ. 9 (1905)

ಎವ್ವೆರಿಮನ್ಸ್ ಎನ್‌ಸೈಕ್ಲೊಪೀಡಿಯ (1967)

ಏನ್ಷಂಟ್ ಸ್ಕಲ್ಪಚರ್ ಫ್ರಂ ಇಂಡಿಯ (1964). ದಿ ಕ್ಲೀವ್‌ಲೆಂಡ್ ಮ್ಯೂಸಿಯಂ ಆಫ್ ಆರ್ಟ್ ಪ್ರಕಟಣೆ

ಕಾಲಿಯರ್ಸ್ ಎನ್‌ಸೈಕ್ಲೊಪೀಡಿಯ (1956)

ಗೈಡ್ ಟು ಶ್ರವಣಬೆಳಗೊಳ. ಲೇ: ಕೆ. ನೀಲಕಂಠಶಾಸ್ತ್ರೀ

ಚೇಂಬರ್ಸ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್‌ಟಿಸ್ಟ್ಸ್ (1961). ಲೇ: ಎ.ವಿ. ಹೋವಾರ್ಡ್

ಜೈನ: ಲೈಫ್ ವರ್ಲ್ಡ್ ಲೈಬ್ರರಿ (1965)

ಜರ್ನಲ್ ಆಫ್ ದಿ ಜಿಯೊಲಾಜಿಕಲ್ ಕರ್ನಾಟಕ. ಸರ್ವೇ ಆಫ್ ಇಂಡಿಯ (1970). ಸಂಪುಟ 11, ಸಂಖ್ಯೆ 2

ಜಿಯೋಗ್ರಫಿ ಆಫ್ ದಿ ವರ್ಲ್ಡ್ (1959). ಪ್ರ: ದಿ ಮ್ಯಾಕ್‌ಮಿಲನ್ ಕಂಪನಿ, ನ್ಯೂ ಯಾರ್ಕ್

ಝೂ ಕಮೆಮೊರೇಷನ್ ವಾಲ್ಯೂಮ್ (1937). ಪೂನ ಓರಿಯಂಟಲ್ ಸೀರೀಸ್, ನಂ. 39

ದಿ ಇಂಡಿಯನ್ ಆಂಟಿಕ್ವೇರಿ (1901). ಸಂಪುಟ XXX ಸಂ: ರಿಚರ್ಡ್ ಕರ್ನಾಟಕ್ ಟೆಂಪಲ್

ದಿ ಎಕ್ಸ್‌ಕವೇಷನ್ಸ್ ಆಫ್ ಕೌಶಾಂಬಿ (1957–59). ಲೇ.: ಜಿ.ಆರ್. ಶರ್ಮ

ದಿ ಕೆಲ್ಟ್ಸ್ (1967). ಲೇ: ಟಿ.ಜಿ.ಇ. ಪೊವೆಲ್

ದಿ ನ್ಯೂ ಕ್ಯಾಕ್ಸ್‌ಟನ್ ಎನ್‌ಸೈಕ್ಲೊಪೀಡಿಯ (1969)

ದಿ ಫಿಯರ್‌ಫುಲ್ ಫಿಫ್ಟೀಸ್ (1960). ಲೇ.: ಡೇವಿಡ್ ಲೋ

ದಿ ಫ್ರೆಂಚ್ ರೆವೆಲ್ಯೂಷನ್ (1969). ಲೇ.: ಎಂ.ಜೆ. ಸಿಂಡೆನ್‌ಹ್ಯಾಮ್

ದಿ ರಾಯಲ್ ಬೊಟ್ಯಾನಿಕ್ ಗಾರ್ಡನ್ಸ್: ಕ್ಯೂ. (1959). ಲೇ: ಡಬ್ಲ್ಯೂ ಬಿ. ಟರಿಲ್

ದಿ ಲ್ಯಾಂಡ್ ಅಂಡ್ ವೈಲ್ಡ್ ಲೈಫ್ ಆಫ್ ಟ್ರಾಪಿಕಲ್ ಏಷ್ಯ (1965). ಲೈಫ್ ನ್ಯಾಚುರಲ್ ಲೈಬ್ರರಿ ಸೀರಿಸ್

ದಿ ವರ್ಟಿಬ್ರೇಟ್ ಸ್ಟೋರಿ (1959). ಲೇ: ಆಲ್ಫ್ರೆಡ್ ಎಸ್. ರೋಮರ್ ಪಂಚ್ (12–18 ಏಪ್ರಿಲ್ 1972)

ಪಿಯರ್ಸ್ ಮೆಡಿಕಲ್ ಎನ್‌ಸೈಕ್ಲೊಪೀಡಿಯ–ಇಲಸ್ಟ್ರೇಟೆಡ್ (1971). ಪರಿಷ್ಕರಣೆ: ಜೆ.ವಿ.ಸಿ. ಬ್ರೌನ್

ಪೋರ್ಟ್ರೇಟ್ ಆಫ್ ಇಂಡಿಯನ್ ಸ್ಪೋರ್ಟ್ (1959). ಲೇ.: ಅಂತೊನಿ ಡಿ ಮೆಲೊ

ಫೈನ್ ಆರ್ಟ್ ಇನ್ ಇಂಡಿಯ ಅಂಡ್ ಸಿಲೋನ್ (1930). ಲೇ.: ವಿನ್ಸೆಂಟ್ ಸ್ಮಿತ್

ಮ್ಯಾಕ್‌ಗ್ರಾ–ಹಿಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ (1960) ಯು ಸೆಡ್ ಇಟ್ (1964). ಲೇ.: ಆರ್.ಕೆ. ಲಕ್ಷ್ಮಣ್

ರಷ್ಯ: ಲೈಫ್ ವರ್ಲ್ಡ್ ಲೈಬ್ರರಿ (1960)

ರಿವರ್ಸ್ ಆಫ್ ಇಂಡಿಯ (1970). ಲೇ.: ಎಸ್.ಡಿ. ಮಿಶ್ರ

ವಿಜ್ಞಾನ ಸರ್ವಸ್ವಮು, ತೆಲುಗು ವಿಜ್ಞಾನ ವಿಶ್ವಕೋಶ (1959)

ಸಿಕ್ಸ್ ಅಂಡ್ ಔಟ್–ದಿ ಲೆಜೆಂಡ್ ಆಫ್ ಆಸ್ಟ್ರೇಲಿಯನ್ ಕ್ರಿಕೆಟ್ (1965), ಸಂ.: ಜ್ಯಾಕ್ ಪೊಲ್ಲಾರ್ಡ್

ಸಿಲೋನ್: ಇಟ್ಸ್ ಪೀಪಲ್ಸ್ ಅಂಡ್ ಇಟ್ಸ್ ಹೋಮ್ಸ್ (1961). ಲೇ.: ರೇ ಬ್ಲೇಜ಼

ಸ್ಪೋರ್ಟ್ ಅಂಡ್ ಪ್ಯಾಸ್‌ಟೈಮ್ ಸಂಪುಟ XXI, ಸಂಖ್ಯೆ 41. 14 ಅಕ್ಟೋಬರ್ 1967

ಹಿಮಾಲಯ ದರ್ಶನ 1961) ಲೇ.: ಕೃಷ್ಣನಾರಾಯಣ ಗೋಸಾವಿ

ಹೋಲಿ ಸಿಟೀಸ್ ಆಫ್ ಇಂಡಿಯ (1961). ಲೇ.: ಕುನ್ವರ್ ಲಾಲ್

## ಕೃತಜ್ಞತೆ

### ಚಿತ್ರ, ಛಾಯಾಚಿತ್ರ ಮತ್ತು ಪಡಿಯಚ್ಚುಗಳನ್ನು ಒದಗಿಸಿ ಉಪಕರಿಸಿದ ಮಹನೀಯರು ಮತ್ತು ಸಂಘ–ಸಂಸ್ಥೆಗಳು


ಅಬು ಏಬ್ರಹಾಂ, ವ್ಯಂಗ್ಯಚಿತ್ರಕಾರ, ಇಂಡಿಯನ್ ಎಕ್ಸ್‌ಪ್ರೆಸ್, ಬಹದ್ದೂರ್ ಷಾ ಜಫರ್ ಮಾರ್ಗ್, ನವದೆಹಲಿ

ಆಮ್ಕೊ ಬ್ಯಾಟರೀಸ್ ಲಿಮಿಟೆಡ್, ಯೂನಿಟಿ ಬಿಲ್ಡಿಂಗ್ಸ್, ಶ್ರೀ ನರಸಿಂಹರಾಜ ಚೌಕ, ಬೆಂಗಳೂರು

ಆಸ್ಟ್ರೇಲಿಯ ರಾಯಭಾರ ಕಚೇರಿ, ವಾರ್ತಾ ಇಲಾಖೆ, 1–50, ಜಿ. ಶಾಂತಿಪಥ, ಚಾಣಕ್ಯಪುರಿ, ನವದೆಹಲಿ

ಉಮಾನಾಥ್, ಎ., ಎಂಜಿನಿಯರಿಂಗ್ ವಿದ್ಯಾರ್ಥಿ, ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು, ಮೈಸೂರು

ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ, ಬೆಂಗಳೂರು

ಕುಟ್ಟಪ್ಪ, ಎ.ಎ. (ಡಾ)., ದಂತವೈದ್ಯ, ವಿಶ್ವೇಶ್ವರಯ್ಯ ಭವನ, ಮೈಸೂರು

ಕೆನಡಿಯನ್ ಹೈ ಕಮಿಷನ್, ವಾರ್ತಾ ವಿಭಾಗ, ಚಾಣಕ್ಯಪುರಿ, ನವದೆಹಲಿ

ಕೇಸರಸಿಂಗ್, ಬಿ., ಛಾಯಾಚಿತ್ರಗ್ರಾಹಕ, 124, ಹನುಮಂತನಗರ, ಬೆಂಗಳೂರು

ಕೃಷ್ಣಮೂರ್ತಿ, ಎನ್.ಬಿ. (ಡಾ) ಮತ್ತು ನಿರ್ಮಲಾ ಸಜ್ಜನ್ (ಕುಮಾರಿ), ಪ್ರಾಣಿವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಕೃಷ್ಣೇಗೌಡ, ಸಿ.ಡಿ., ಕ್ಯೂರೇಟರ್, ಪ್ರಾಣಿಸಂಗ್ರಹಾಲಯ, ಮೈಸೂರು

ಕ್ಯೂರೇಟರ್, ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆ, ಜಗನ್ಮೋಹನ ಅರಮನೆ, ಮೈಸೂರು

ಗಣಪತಿ, ಕೆ.ಆರ್., ಸಹಾಯಕ ಸಂಪಾದಕ, ಪ್ರಕಾಶನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಗುರುಪಾದಪ್ಪ, ಎ.ವಿ., ಮಾಲೀಕರು, ರೇಣುಕಾ ಆರ್ಟ್ಸ್ ಅಂಡ್ ಕ್ರ್ಯಾಫ್ಟ್ಸ್, ದೇವರಾಜ ಮಾರ್ಕೆಟ್, ಮೈಸೂರು

ಗೋವಿಂದರಾಜು, ಡಿ.ಪಿ., ಪ್ರಿನ್ಸಿಪಾಲ್, ಶಿವಾರಗುಡ್ಡ ವಿದ್ಯಾಪೀಠ, ಮಂಡ್ಯ ಜಿಲ್ಲೆ

ಚೀಫ್ ಎಂಜಿನಿಯರ್, ಇರಿಗೇಷನ್ (ನಾರ್ತ್), ಮೈಸೂರ ಲೋಕೋಪಯೋಗಿ ಇಲಾಖೆ, ಧಾರವಾಡ

ಟಿಪ್‌ಸನ್ ವಾಚ್ ಕಂಪನಿ, ಮೈಸೂರು

ತಿಮ್ಮಪ್ಪ, ಬಿ.ಕೆ., ಅಧ್ಯಾಪಕ, ಸರ್ಕಾರಿ ಕಾಲೇಜು, ಕಾಸರಗೋಡು

ದಿ ಅಫಿಷಿಯೇಟಿಂಗ್ ಕಮಾಂಡೆಂಟ್, ಆರ್ಟಿಫಿಷಿಯಲ್ ಲಿಂಬ್ ಸೆಂಟರ್, ಪುಣೆ

ದಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್, ಡೆಲ್ಲಿ ಕೋಚಿಂಗ್ ಸೆಂಟರ್, ನ್ಯಾಷನಲ್ ಸ್ಟೇಡಿಯಂ, ನವದೆಹಲಿ

ದೀಪಕ್ ವಾಚ್ ಕಂಪನಿ, ಕೃಷ್ಣರಾಜೇಂದ್ರ ಸರ್ಕಲ್, ಮೈಸೂರು

ದೇವರಾಜ ಅರಸ್, ವಸುಮತಿ ಕೋಳಿ ಸಾಕಣೆ ಕೇಂದ್ರ, ತೊಣಚಿಕೊಪ್ಪಲು, ಮೈಸೂರು

ದೇವೇಂದ್ರಪ್ಪ, ಬಿ., ಸಂಗೀತ ವಿದ್ವಾಂಸರು, ಮಾರುತಿ ಸೇವಾಮಂದಿರ, ನಾರಾಯಣಶಾಸ್ತ್ರೀ ರಸ್ತೆ, ಮೈಸೂರು

ದೇಶಪಾಂಡೆ, ಕೆ.ಎಸ್., ಗ್ರಂಥಪಾಲ, ಕರ್ನಾಟಕ ವಿಶ್ವವಿದ್ಯಾಲಯ, ಗ್ರಂಥಾಲಯ, ಧಾರವಾಡ

ನಾಗರಾಜು, ಎಸ್., ಅಧ್ಯಾಪಕ, ಪ್ರಾಕ್ತನಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ನಾರಾಯಣ, ಜಿ., ಸಂಪಾದಕ, 'ವಿನೋದ', ಚಾಮರಾಜಪೇಟೆ, ಬೆಂಗಳೂರು

ನ್ಯೂ ಜೀಲೆಂಡ್ ರಾಯಭಾರ ಕಚೇರಿ, 39, ಗಾಲ್ಫ್ ಲಿಂಕ್ಸ್, ನವದೆಹಲಿ

ಪತ್ರಿಕಾ ಮತ್ತು ವಾರ್ತಾ ವಿಭಾಗ, ಯುನೈಟೆಡ್ ಸ್ಟೇಟ್ಸ್ ಇನ್ಫರ್ಮೇಶನ್ ಸರ್ವೀಸ್, ಮೌಂಟ್ ರೋಡ್, ಮದ್ರಾಸು

ಪಬ್ಲಿಕ್ ರೊಲೇಷನ್ಸ್ ಡಿಪಾರ್ಟ್‌ಮೆಂಟ್, ಕೇರಳ ಸರ್ಕಾರ, ತಿರುವನಂತಪುರ

ಪುರಾತತ್ತ್ವ ಇಲಾಖೆ, ಆಂಧ್ರಪ್ರದೇಶ ಸರ್ಕಾರ, ಹೈದರಾಬಾದ್

ಪೊನ್ನಪ್ಪ, ಬಿ.ಎಂ. ಬ್ಲಾಕ್ ಡೆವಲಪ್‌ಮೆಂಟ್ ಆಫಿಸರ್, ಮೈಸೂರು

ಪ್ರಿನ್ಸಿಪಾಲ್, ಅಯ್ಯನಾರ್ ಸಂಗೀತ ಕಲಾಶಾಲೆ, ಬಿಡಾರ ಕೃಷ್ಣಪ್ಪ ಮಂದಿರ, ನಾರಾಯಣಶಾಸ್ತ್ರೀ ರಸ್ತೆ, ಮೈಸೂರು

ಬೋರಯ್ಯ, ಟಿ., ಚೇತನ ಗಾರ್ಡನ್ಸ್, ರೇಸ್‌ಕೋರ್ಸ್ ಬಳಿ, ಮೈಸೂರು

ಬ್ರಿಟಿಷ್ ಉಪರಾಯಭಾರ ಕಚೇರಿ, 150ಎ, ಮೌಂಟ್ ರೋಡ್, ಮದ್ರಾಸು

ಭಿಡೆ, ಜಿ.ಆರ್., ಸಂಪಾದಕ, ಅಭಿನವ ಮರಾಠಿ ಜ್ಞಾನಕೋಶ, ಕೊಲ್ಹಾಪುರ

ಬ್ರಿಸ್ಟಲ್ ಫೋಟೋಗ್ರಾಫಿಕ್ ಸ್ಟೋರ್ಸ್, ಲಕ್ಷ್ಮೀ ಬಿಲ್ಡಿಂಗ್ಸ್, ಸರ್ ಫಿರೋಜ್ ಷಾ ಮೆಹತಾ ರಸ್ತೆ, ಫೋರ್ಟ್, ಮುಂಬಯಿ

ಮಲೇಷ್ಯ ರಾಯಭಾರ ಕಚೇರಿ, 3, ಲಿಂಕ್ ರಸ್ತೆ, ಜಂಗ್‌ಪುರ ಬಡಾವಣೆ, ನವದೆಹಲಿ

ಮುತ್ತಣ್ಣ, ಸಿ.ಟಿ., ಕೃಷಿ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ

ಮೂರ್ತಿ, ಎಂ.ಜಿ.ಕೆ. (ಕ್ಯಾ)., ಕರ್ಣಿಕ್ ರಸ್ತೆ, ಶಂಕರಪುರಂ, ಬೆಂಗಳೂರು

ಮೈಸೂರು ತಾಲ್ಲೂಕು ಕೋಳಿ ಸಾಕುವವರ ಸಹಕಾರ ಸಂಘ, ಲಿ., ಮೈಸೂರು ಫೈರ್‌ಬ್ರಿಗೇಡ್, ಮೈಸೂರು

ರಷ್ಯ ರಾಯಭಾರ ಕಚೇರಿ, ವಾರ್ತಾ ಇಲಾಖೆ, 25, ಬಾರಾಖಾಂಬ ರಸ್ತೆ, ನವದೆಹಲಿ

ರಾಮರಾಜ್, ಭೂದೇವಿ ಫಾರಂ, ಮೈಸೂರು

ರಾಯಭಾರ ಕಚೇರಿ, ದಿ ಅರಬ್ ರಿಪಬ್ಲಿಕ್ ಆಫ್ ಈಜಿಪ್ಟ್, ಸುಂದರನಗರ, ನವದೆಹಲಿ

ರೇವಣ್ಣ, ಎಂ.ಎಸ್., ಮಾಲೀಕರು, ಮೈಸೂರ್ ನಾವೆಲ್ಟಿ ಹೌಸ್, ದೇವರಾಜ ಮಾರ್ಕೆಟ್, ಮೈಸೂರು

ಲಕ್ಷ್ಮಣಪ್ಪ, ಛಾಯಾಚಿತ್ರಗ್ರಾಹಕ, ಗೀತಾ ಸ್ಟೂಡಿಯೊ, ಬನುಮಯ್ಯ ಚೌಕ, ಮೈಸೂರು

ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯ, ಮೌಂಟ್ ರೋಡು, ಮದ್ರಾಸು

ವಾರ್ತಾ ಮತ್ತು ಪ್ರಸಾರ ಇಲಾಖೆ, ಮೈಸೂರು ಸರ್ಕಾರ, ಬೆಂಗಳೂರು

ವೆಂಕಟರಾಮ್, ಎಸ್., ವೈದ್ಯರು, 2ನೆಯ ಮೇನ್ ರಸ್ತೆ, ಸರಸ್ವತೀಪುರಂ, ಮೈಸೂರು

ವ್ಯವಸ್ಥಾಪಕರು, ಇ.ಜಿ.ಕೆ. ಅಂಡ್ ಸೈನ್ಸ್, 3, ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು

ಶರಚ್ಚಂದ್ರ, ಎಸ್.ಸಿ., ವಿದ್ಯಾರ್ಥಿ, ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಶಿವರಾಂ, ಎಂ., 401, 6ನೆಯ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಶ್ರೀನಿವಾಸನ್, ಸಿ.ಎಸ್., ಛಾಯಾಚಿತ್ರಗ್ರಾಹಕ, ಪ್ರಾಚ್ಯವಿದ್ಯಸಂಶೋಧನಾಲಯ, ಮೈಸೂರು

ಶ್ರೀ ವರಲಕ್ಷ್ಮಿ, ಲಲಿತಕಲಾ ಅಕೆಡಮಿ, ಕಾಶೀಪತಿ ಅಗ್ರಹಾರ, ಮೈಸೂರು

ಷಣ್ಮುಗಂ, ಸದಸ್ಯ, ಕೋಳಿ ಸಾಕಣೆ ಸಂಘ, ಬೆಂಗಳೂರು

ಸಂಪಾದಕ, ಇಂಡಿಯನ್ ಎಕ್ಸ್‌ಪ್ರೆಸ್, ಕ್ವೀನ್ ರಸ್ತೆ, ಬೆಂಗಳೂರು

ಸಂಪಾದಕ, ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ, ಮುಂಬಯಿ

ಸಂಪಾದಕ, ಮಯೂರ, ಬೆಂಗಳೂರು

ಸಂಪಾದಕ, ಶಂಕರ್ಸ್ ವೀಕ್ಲಿ, ಓಡಿಯನ್ ಬಿಲ್ಡಿಂಗ್ಸ್, ಕನಾಟ್ ಪ್ಲೇಸ್, ನವದೆಹಲಿ

ಸರ್ಕಾರಿ ಶ್ರೀ ಗಂಧದೆಣ್ಣೆ ಕಾರ್ಖಾನೆ, ಮೈಸೂರು

ಸಿಲ್ವಿಕಲ್ಚರಿಸ್ಟ್, ರಾಜ್ಯ ಸಿಲ್ವಿಕಲ್ಚರಿಸ್ಟ್ ಕಚೇರಿ, ಮಲ್ಲೇಶ್ವರಂ, ಬೆಂಗಳೂರು

ಸುಂದರರಾಜ್, ಕೆ.ಆರ್., ಛಾಯಾಚಿತ್ರಗ್ರಾಹಕ ಮತ್ತು ಕಲಾವಿದ, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಸುಬ್ರಹ್ಮಣ್ಯಾಚಾರ್, ಎಂ., ಶ್ರೀ ಲಕ್ಷ್ಮೀ ಫೈನ್ ಆರ್ಟ್ಸ್ ಅಂಡ್ ಕ್ರಾಫ್ಟ್ಸ್, ಮಂಡಿಮೊಹಲ್ಲ, ಮೈಸೂರು

ಸೂಪರಿಂಟೆಂಡೆಂಟ್, ಕೃಷಿ ಸಂಶೋಧನ ಸಂಸ್ಥೆ, ನಾಗನಹಳ್ಳಿ, ಮೈಸೂರು

ಮುದ್ರಕರು:

ನಿರ್ದೇಶಕ, ಸರ್ಕಾರಿ ಮುದ್ರಣಾಲಯ, ಬೆಂಗಳೂರು.

## ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಶ್ವಕೋಶ

## ಸಂಪುಟ ಆರು

**ಗಣಕ :** ಪೀಠಿಕೆ : ಮನುಷ್ಯನ ಸಾಧನೆಗಳನ್ನು ಸ್ಥೂಲವಾಗಿ ಎರಡು ವಿಭಾಗಗಳಾಗಿ ವರ್ಗೀಕರಿಸಬಹುದು– ದೈಹಿಕ ಪರಿಶ್ರಮವನ್ನು ಬಯಸುವಂಥವು, ಮಾನಸಿಕ ಪರಿಶ್ರಮವನ್ನು ಅವಲಂಬಿಸುವಂಥವು. ಮೊದಲನೆಯ ಕೈಗಾರಿಕಾಕ್ರಾಂತಿಯು ದೈಹಿಕ ಪರಿಶ್ರಮವನ್ನು ಕಡಿಮೆ ಮಾಡುವ ವಿದ್ಯಮಾನವಾದದ್ದನ್ನು ಕಂಡಿದ್ದೇವೆ. ಕಾಲಕ್ರಮದಲ್ಲಿ ಇದು ಮಾನಸಿಕ ಶ್ರಮವನ್ನು ಕಡಿಮೆಮಾಡುವ ಉದ್ದೇಶವನ್ನುಳ್ಳ ಎರಡನೆಯ ಕೈಗಾರಿಕಾಕ್ರಾಂತಿಗೆ ಯುಕ್ತ ವೇದಿಕೆಯನ್ನು ಸಿದ್ಧಗೊಳಿಸಿತು. ಗಣಕದ ಜನ್ಮ ಆದದ್ದು ಈ ಸನ್ನಿವೇಶದಲ್ಲಿ.

ತಂತಿಗಳು, ಟ್ರಾನ್ಸಿಸ್ಟರುಗಳು, ಕಾಂತಪಟ್ಟಿಗಳು (ಮ್ಯಾಗ್ನೆಟಿಕ್ ಟೇಪ್ಸ್), ಕಾಂತಕೋಶಗಳು (ಮ್ಯಾಗ್ನೆಟಿಕ್ ಕೋರ್ಸ್) ಇವೇ ಮೊದಲಾದ ಘಟಕಗಳ ಸಂಕಲಿತ ಯಂತ್ರವೇ ಗಣಕ (ಕಂಪ್ಯೂಟರ್). ಇವುಗಳ ಜೋಡಣೆ ಒಂದು ನಿರ್ದಿಷ್ಟ ಕ್ರಮದಲ್ಲಿ ಉಂಟು. ತತ್ಪರಿಣಾಮವಾಗಿ ಗಣಕಕ್ಕೆ ಉಣಿಸಿದ (ಉಣಿಸು=ಫೀಡಿಂಗ್) ಸಂಖ್ಯೆಗಳನ್ನು ಅದು ನೆನಪಿನಲ್ಲಿಟ್ಟುಕೊಂಡು ಅವನ್ನು ಕೂಡುವ, ಕಳೆಯುವ, ಗುಣಿಸುವ, ಭಾಗಿಸುವ, ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ವರ್ಗಾಯಿಸುವ ಇವೇ ಮುಂತಾದ ಕುಶಲ ಪರಿಕರ್ಮಗಳನ್ನು (ಆಪರೇಷನ್ಸ್) ನಿರ್ವಹಿಸಬಲ್ಲುದು. ಮೇಲೆ ಹೇಳಿರುವ ಮೂರು ಪರಿಕರ್ಮಗಳ–ಎಂದರೆ, ಜ್ಞಾಪಕೀಕರಣಸಾಮರ್ಥ್ಯ (ಮೆಮೊರೈಸೆಬಿಲಿಟಿ), ಅಂಕಪರಿಕರ್ಮಗಳು, ಸಂಖ್ಯೆಗಳನ್ನು ವರ್ಗಾಯಿಸಬಲ್ಲ ಸಾಮರ್ಥ್ಯ–ನಿರ್ವಹಣೆ ಮಾತ್ರ ಒಂದು ಗಣಕದ ಪ್ರಧಾನಸಿದ್ಧಿ ಎಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಮಿಕ್ಕುಳಿದ ಪ್ರತಿಯೊಂದು ಸಿದ್ಧಿಯೂ ಮಾನವಗಣಕಕ್ಕೆ ಒದಗಿಸುವ ಕ್ರಮವಿಧಿಯ (ಪ್ರೋಗ್ರಾಂ) ಪರಿಣಾಮವಾದದ್ದು. ಒಂದು ನಿರ್ದಿಷ್ಟವಾದ ಸರಣಿಯನ್ನು ಅನುಸರಿಸಿ ಮೇಲಿನ ಮೂರು ವಿಧಾನಗಳಲ್ಲಿ ಗಣಕಕ್ರಿಯೆ ಎಸಗುವಂತೆ ಮನುಷ್ಯ ಅದಕ್ಕೆ ನಿರ್ದೇಶನಗಳನ್ನು ವಿಧಿಸುತ್ತಾನೆ. ಈ ತರಹದ ಮಾನವ–ಯಂತ್ರ ಅಂತರಕ್ರಿಯೆಗಳಿಂದ ನಮಗೆ ಅನ್ನಿಸುವುದಿಷ್ಟು: ತನ್ನ ಯಜಮಾನನನ್ನೇ ಸೋಲಿಸುವಷ್ಟು ಚಾಕಚಕ್ಯದಿಂದ ಗಣಕ ಚದುರಂಗವನ್ನು ಆಡಬಲ್ಲುದು; ಮನುಷ್ಯ ಎಂದೂ ಬಿಡಿಸಲಾಗದ ಒಂದು ಜಟಿಲ ಅರೇಖೀಯ ಅವಕಲ ಸಮೀಕರಣವನ್ನು (ನಾನ್ ಲೀನಿಯರ್ ಡಿಫರೆನ್ಸಿಯಲ್ ಇಕ್ವೇಷನ್) ಗಣಕ ಬಿಡಿಸಬಲ್ಲುದು; ಸಂಗೀತವನ್ನು ಅದು ರಚಿಸಬಲ್ಲುದು; ಷೇಕ್ಸ್‌ಪಿಯರನ ಹೆಸರಿನಲ್ಲಿರುವ ಸಮಸ್ತ ಕೃತಿಗಳನ್ನೂ ಒಬ್ಬ ವ್ಯಕ್ತಿ ರಚಿಸಿದನೇ ಅಥವಾ ಭಿನ್ನ ವ್ಯಕ್ತಿಗಳು ರಚಿಸಿದರೇ ಎಂದು ಗಣಕ ವಿಶ್ಲೇಷಿಸಬಲ್ಲುದು. ಗಣಕಗಳ ಸಾಮರ್ಥ್ಯ ವನ್ನು ಕುರಿತು ತೀರ ಸುಶಿಕ್ಷಿತರಲ್ಲೂ ಇರುವ ಭಾವ ಬೆರಗು; ಪ್ರಾಸಾನುಪ್ರಾಸಗಳು ಸಂಗತವಾಗಿರುವ ಗಣಕರಚಿತ ಪದ್ಯವನ್ನು ಕೇಳುವಾಗ ಇಂಥವರು ಆಶ್ಚರ್ಯಚಕಿತ ರಾಗುತ್ತಾರೆ. ಇನ್ನು ಸಾಮಾನ್ಯ ವ್ಯಕ್ತಿಗಳಿಗೆ ಗಣಕವನ್ನು ಕುರಿತು ಇರುವ ಭಾವ ಒಂದೇ–ಭಯಮಿಶ್ರಿತ ಗೌರವ. ಈಗೀಗ ಭಯ ಕಡಿಮೆಯಾಗಿ ಅದು ಜೀವನದ ಒಂದುಭಾಗವಾಗಿಬಿಟ್ಟಿದೆ. ತಿಳಿವಿದ್ದಲ್ಲಿ ಅಚ್ಚರಿಗೆ ಸ್ಥಾನವಿಲ್ಲ, ವಿಶ್ಲೇಷಣೆಯಿದ್ದಲ್ಲಿ ಮೂಢನಂಬಿಕೆಗೆ ಸ್ಥಾನವಿಲ್ಲ ಎಂಬುದೊಂದು ಹಳೆಯ ಹೇಳಿಕೆ.

ಗಣಕವನ್ನು ಕುರಿತಂತೆ ಇಂಥ ತಿಳಿವನ್ನೂ ವಿಶ್ಲೇಷಣೆಯನ್ನೂ ಕೊಡಲು ಪ್ರಯತ್ನಿಸಿದೆ. ಮೊದಲಾಗಿ ಗಣಕತಂತ್ರ ವಿಜ್ಞಾನದ ಐತಿಹಾಸಿಕ ಬೆಳೆವಣಿಗೆಯನ್ನು ಅವಲೋಕಿಸಲಾಗಿದೆ.




**ಚಿತ್ರ 1. ಸ್ಲೈಡ್ ರೂಲ್**

**ಗಣಕಗಳ ಇತಿಹಾಸ :** ಕಾಲಾನುಕ್ರಮದಲ್ಲಿ ಬಳಕೆಗೆ ಬಂದಂಥ ನೋಮೋಗ್ರಾಮುಗಳು, ಸ್ಲೈಡ್‌ರೂಲುಗಳು ಮುಂತಾದ ಗಣನಸಹಾಯಕಗಳು ಕೂಡ ಸಾದೃಶ್ಯೋಪಕರಣಗಳೇ. ಕಾರಣ, ಸರ್ವೇಕ್ಷಣಕಾರನ ಸಾಧನಗಳಂತೆ ಇವು ಸಹ ಆಧರಿಸಿರುವುದು ಬೀಜಗಣಿತೀಯ ಇಲ್ಲವೇ ಲಘುಗಣಕೀಯ ಉತ್ಪನ್ನಗಳಂಥ (ಆಲ್ಜಿಬ್ರೇಕ್ ಆರ್ ಲಾಗರಿಥ್ಮಿಕ್ ಫಂಕ್ಷನ್ಸ್) ಅವಿಚ್ಛಿನ್ನ ರಾಶಿಗಳನ್ನು. ಇಂಥ ಉಪಕರಣಗಳನ್ನು ಸಾದೃಶ್ಯಗಣನ ಸಹಾಯಕಗಳು (ಅನಲಾಗ್ ಕಂಪ್ಯೂಟಿಂಗ್ ಏಡ್ಸ್) ಎಂದು ವರ್ಗೀಕರಿಸಲಾಗಿದೆ.

ಮನುಷ್ಯ ತನ್ನ ಹತ್ತು ಬೆರಳುಗಳ ನೆರವಿನಿಂದ ಎಣಿಸಲು ತೊಡಗಿದಾಗಲೇ ಗಣಕದ ಜನನ ಆಯಿತು. ಬೆರೆಳೆಣಿಕೆಯ ವಿಧಾನ ಪ್ರ.ಶ. ಪೂ. 600 ರಷ್ಟು ಹಿಂದೆಯೇ ಮಣಿಚೌಕಟ್ಟಿನ (ಅಬಕಸ್) ಉಪಜ್ಞೆಗೆ ಕಾರಣವಾಯಿತು. ಇದು ಅಂಕಗಣನ ಸಹಾಯಕಗಳ (ಡಿಜಿಟಲ್ ಕಂಪ್ಯೂಟಿಂಗ್ ಏಡ್ಸ್) ಪ್ರಾರಂಭ. ಸಂಖ್ಯೆಗಳಂಥ ಪೃಥಕ್ಕಾದ ರಾಶಿಗಳ ಗಣನೆಗೆ ಇವು ನೆರವಾಗುತ್ತವೆ.

ಮೇಲಿನ ಎರಡು ಉದಾಹರಣೆಗಳು ಗಣಕಗಳ ವಿಕಾಸ ಎರಡು ಸ್ವತಂತ್ರ ಮೂಲಗಳಿಂದ ಆದುವೆಂಬುದನ್ನು ನಿದರ್ಶಿಸುತ್ತವೆ. ಒಂದು ಅವಿಚ್ಛಿನ್ನ ರಾಶಿಗಳಿಗೆ ಸಂಬಂಧಿಸಿದಂತೆಯೂ (ಸಾದೃಶ್ಯ) ಇನ್ನೊಂದು ಪೃಥಕ್ಕಾದ ರಾಶಿಗಳಿಗೆ ಸಂಬಂಧಿಸಿದಂತೆಯೂ (ಅಂಕ) ಉಂಟು. ಗಣಕತಂತ್ರವಿಜ್ಞಾನದ ಇವೆರಡು ಶಾಖೆಗಳ ಚಾರಿತ್ರಿಕ ವಿಕಾಸವನ್ನು ಪ್ರತ್ಯೇಕವಾಗಿ ಮುಂದೆ ಬರೆದಿದೆ.

ಸಾದೃಶ್ಯ ಗಣನೆ (ಅನಲಾಗ್ ಕಾಂಪ್ಯುಟೇಶನ್): ಒಂದು ಮಾನಕದ (ಸ್ಕೇಲ್) ಮೇಲಿರುವ ಎರಡು ಗುರುತುಗಳ ನಡುವಿನ ಅಂತರದಂಥ ಪರಿಣಾಮವನ್ನು ಅಳತೆ ಮಾಡುವ ಮೂಲಕ ಒಂದು ಸಾದೃಶ್ಯ ಅಥವಾ ಅವಿಚ್ಛಿನ್ನ ಗಣನ ಸಹಾಯಕ ಒಂದು ಸಂಖ್ಯೆಯನ್ನು ನಿಗದಿಗೊಳಿಸುತ್ತದೆ. ಉದಾಹರಣೆಗೆ ಒಂದು ಸ್ಲೈಡ್ ರೂಲಿನಲ್ಲಿ ಸಂಖ್ಯೆಗಳ ಲಘುಗಣಕಗಳನ್ನು ಒಂದು ದೃಢಮಾನಕದ ನೇರ ಅನುಪಾತೀಯ ದೂರಗಳಾಗಿ ಗುರುತಿಸಲಾಗುವುದು. ಈ ಉಪಕರಣದಲ್ಲಿ ಒಂದು ಸರಿಕೆ(ಸ್ಲೈಡ್) ಉಂಟು. ಇದು ಮಾನಕದ ನೇರ ಯಾವುದೇ ಸ್ಥಾನವನ್ನು ಪಡೆಯಬಲ್ಲುದು. ಮಾನಕದ ನೇರ ಇರುವ ಪ್ರತಿಯೊಂದು ದೂರಕ್ಕೂ ಅನುವರ್ತಿಯಾದಂಥ ಒಂದು ನೈಜ ಸಂಖ್ಯೆ ಉಂಟು. ಅಂದರೆ, ಮಾನಕದ ಮೇಲಿನ ದೂರದಲ್ಲಿ ಆ ಸಂಖ್ಯೆಗೆ ಅನುವರ್ತಿಯಾದ ಒಂದು ಪ್ರಾತಿನಿಧ್ಯವಿದೆ. ಹೀಗೆ ಸ್ಲೈಡ್‌ರೂಲ್ ಸಾದೃಶ್ಯ ಗಣಕಕ್ಕೆ ಒಂದು ಲಾಕ್ಷಣಿಕ ನಿದರ್ಶನ. ಈಗ ತಾಳುಗಳು (ಷಾಫ್ಟ್), ಗಿಯರುಗಳು ಇವೇ ಮುಂತಾದ ಯಾಂತ್ರಿಕ ಘಟಕಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಸಂಕಲಿಸಿ ಪುಟ್ಟ ಯಂತ್ರವೊಂದನ್ನು ರಚಿಸಿದ್ದೇವೆಂದು ಭಾವಿಸೋಣ. ಇದರಲ್ಲಿ ನಿವೇಶತಾಳನ್ನು (ಇನ್ ಪುಟ್ ಷ್ಯಾಫ್ಟ್) ಒಂದು ನಿರ್ದಿಷ್ಟ ಮಾನಕದ ಅನುಸಾರ $x$ ಸೆಂಮೀನಷ್ಟು ದೂರತಳ್ಳಿದಾಗ ಒಂದು ನಿರ್ಗಮತಾಳು (ಔಟ್‌ಪುಟ್ ಷ್ಯಾಫ್ಟ್) $x2$ ಸೆಂಮೀನಷ್ಟು ದೂರ ಇಲ್ಲವೇ $x$ನ ಬೇರೆ ಯಾವುದೇ ಉತ್ಪನ್ನದಷ್ಟು (ಫಂಕ್ಷನ್) ದೂರ ಚಲಿಸುವಂತೆ ಯಂತ್ರದ ರಚನೆ ಆಗಿದೆ ಎಂದು ಭಾವಿಸೋಣ. $x$ನ ಬೆಲೆ ಯಾವುದೇ ಇರಬಹುದು. ಇಲ್ಲಿ ನಮಗೆ ದೊರೆಯುವುದು ಒಂದು ಸಾದೃಶ್ಯ ಉಪಕರಣ. ಇದಕ್ಕೆ ಉತ್ಪನ್ನಗಣಕ (ಫಂಕ್ಷನ್ ಕಂಪ್ಯೂಟರ್) ಎಂದು ಹೆಸರು. ಚಾರಿತ್ರಿಕವಾಗಿ ಹೇಳುವದಾದರೆ ಗೆರೆಪಟ್ಟಿ ಮತ್ತು ದಿಕ್ಸೂಚಿಗಳಿಗಿಂತ ಹೆಚ್ಚು ನಾಜೂಕಾದ ಪ್ರಪ್ರಥಮ ಸಾದೃಶ್ಯ ಗಣಕಗಳೆಲ್ಲವೂ ಉತ್ಪನ್ನ ಗಣಕಗಳೇ.

ಔಟ್ರೆಡ್ (1574?–1660) ಎಂಬಾತ ಮೊದಲು ತಯಾರಿಸಿದ ಒಂದು ಸಾಧನ X=YZ ಎಂಬ ಉತ್ಪನ್ನವನ್ನು ಗಣಿಸಬಲ್ಲುದಾಗಿತ್ತು. ಈ ಆದಿಮ ಸಾಧನದಿಂದ ಸ್ಲೈಡ್ ರೂಲ್ ಕ್ರಮೇಣ ವಿಕಾಸಗೊಂಡಿತು. ಮುಂದೆ ಬಂದದ್ದು ನೋಮೋಗ್ರಾಂ. ಈ ಸಾಧನದ ಮೂಲವನ್ನು ಡೇಕಾರ್ಟ (1596–1650) ಆವಿಷ್ಕರಿಸಿದ ವಿಶ್ಲೇಷಣ ಜ್ಯಾಮಿತಿಯಲ್ಲಿ ಕಾಣಬಹುದು. ಎರಡು ಚರಗಳ ನಡುವೆ ಬೀಜಗಣಿತೀಯ ಸಮೀಕರಣಗಳು ವ್ಯಾಖ್ಯಿಸುವ ಸರಳ ಉತ್ಪನ್ನ ಸಂಬಂಧಗಳನ್ನು ಸೂಚಿಸುವಂಥ ಕೆಲವು ನೋಮೋಗ್ರಾಮುಗಳನ್ನು ಸ್ವತಃ ಡೇಕಾರ್ಟನೇ ರಚಿಸಿದ. ಆತನ ಈ ಭಾವನೆಗಳನ್ನು ಮೂರು ಚರಗಳಿಗೆ ಮಾರ್ಗೆಟ್ಸ್ 1791ರಲ್ಲಿ ವಿಸ್ತರಿಸಿದ. ಈತನ ನೋಮೋಗ್ರಾಮುಗಳು ನಾವಿಕರಿಗೆ ರೇಖಾಂಶಗಳನ್ನೂ ಇತರ ಇಂಥ ರಾಶಿಗಳನ್ನೂ ಗಣಿಸುವಲ್ಲಿ ಬಲು ನೆರವಾದವು. ಆದರೆ ಪರಿಕರ್ಮಿಸುವಾಗ ಇವು ಅತಿ ತೊಡಕಿನವು ಆಗಿದ್ದುದು ಮಾತ್ರವಲ್ಲ ಅಷ್ಟೊಂದು ನಿಷ್ಕೃಷ್ಟವಾಗಿಯೂ ಇರುತ್ತಿರಲಿಲ್ಲ. ವಕ್ರರೇಖೆಗಳ ಒಂದು ಕುಟುಂಬವನ್ನು ಸರಳರೇಖೆಗಳ ಸಾದೃಶ್ಯ ಕುಟುಂಬಗಳಿಗೆ ಪರಿವರ್ತಿಸಬಲ್ಲ ಸಾದೃಶ್ಯ ಸಾಧನಗಳನ್ನು 1842ರಲ್ಲಿ ಲ್ಯಲಾನೆ ಆರಂಭಿಸಿದ. ಈ ವರ್ಗದ ಸಾದೃಶ್ಯ ಸಾಧನೆಗಳಿಗೆ ನೋಮೋಗ್ರಾಂ ಎಂಬ ಹೆಸರನ್ನಿತ್ತವ ಮಾರಿಸ್ ಡಿ ಓಕಾಗ್ನೆ. ಈತ ಇಂಥ ಸಾಧನಗಳ ಹಿನ್ನೆಲೆಯಲ್ಲಿನ ಸಾರ್ವತ್ರಿಕ ಸಿದ್ಧಾಂತವನ್ನು 1890ರಲ್ಲಿ ಮಂಡಿಸಿದ. ಇದರಿಂದ ನೋಮೋಗ್ರಾಫಿಗೆ ಒಂದು ವಿಜ್ಞಾನಪ್ರಕಾರ ಎಂಬ ಅಂತಸ್ತು ಪ್ರಾಪ್ತವಾಯಿತು.

ಬೀಜಗಣಿತೀಯ ಮತ್ತು ತ್ರಿಕೋನಮಿತೀಯ ಉತ್ಪನ್ನಗಳನ್ನು ಗಣಿಸಬಲ್ಲ ಗಣಿತಯಂತ್ರಗಳ ಜೊತೆಗೆ ಅನುಕಲಗಳನ್ನು (ಇಂಟೆಗ್ರಲ್ಸ್) ಹಾಗೂ ಅವಕಲಗಳನ್ನು (ಡಿಫ಼ರೆನ್ಶಿಯಲ್) ಗಣಿಸಬಲ್ಲ ಯಂತ್ರಗಳ ಅವಶ್ಯಕತೆ ಸದಾ ಎದ್ದು ತೋರುತ್ತಿತ್ತು. ಅತಿಸರಳ ಅನುಕಲನ ಪರಿಕರ್ಮವೆಂದರೆ (ಇಂಟೆಗ್ರೇಷನ್ ಆಪರೇಷನ್) ಒಂದು ಸಂವೃತ ವಕ್ರರೇಖೆಯ (ಕ್ಲೋಸ್ಡ್ ಕರ್ವ್) ಸಲೆಯ ನಿರ್ಧರಣೆ. ಇಂತಹ ಪರಿಕರ್ಮವನ್ನು ಮಾಡಬಲ್ಲ ಒಂದು ಸಾಧನದ ನಿರ್ಮಾಣ ಜೆ. ಎಚ್. ಹರ್ಮಾನನ ಗಮನವನ್ನು ಆಕರ್ಷಿಸಿತು. ಅನುಕಲಿಸುವ ಗಣಕವನ್ನು (ಇಂಟೆಗ್ರೇಟಿಂಗ್ ಕಂಪ್ಯೂಟರ್) ಆವಿಷ್ಕರಿಸಿದವನು ಇವನೇ. 1815ರ ಸುಮಾರಿಗೆ ಈತ ಒಂದು ಉಪಕರಣವನ್ನು ರೂಪಿಸಿದ. ಇದರಲ್ಲಿ ಶಂಕುವಿನ ಮೇಲೆ ಉರುಳುವ ಒಂದು ಚಕ್ರ ಉಂಟು; ಒಂದು ವಕ್ರರೇಖೆಯನ್ನು ರೇಖಿಸುವ ಒಂದು ಸೂಚಿಯು ಸ್ಥಿರಕೇಂದ್ರವೊಂದರಿಂದ ದೂರಕ್ಕೆ ಚಲಿಸಿದಾಗ ಚಕ್ರಶಂಕುವಿನ ಬುಡದೆಡೆಗೆ ಚಲಿಸುವುದು ಮತ್ತು ಆಗ ಅದು ಅಧಿಕ ತೀವ್ರತೆಯಿಂದ ಉರುಳುತ್ತದೆ. ಈ ಯಂತ್ರಕ್ಕಿಂತ ಹೆಚ್ಚು ನಾಜೂಕಾದ ಒಂದು ಪ್ಲಾನಿಮೀಟರನ್ನು ಜೆ.ಸಿ. ಮ್ಯಾಕ್ಸ್ ವೆಲ್ 1855ರಲ್ಲಿ ಸೂಚಿಸಿದ. ಉರುಳುವ ಶಂಕುವಿನ ಬದಲು ಉರುಳುವ ಬಿಲ್ಲೆಯನ್ನು ಬಳಸಬಹುದು ಎಂಬುದು ಅವನು ಮುಂದಿಟ್ಟ ಸುಧಾರಣೆ. ಮ್ಯಾಕ್ಸ್‌ವೆಲ್ಲನ ಈ ಭಾವನೆ ಎಂದೂ ಕಾರ್ಯರೂಪಕ್ಕೆ ಇಳಿಯಲಿಲ್ಲ. ಆದರೆ ಸರಳತರವಾದ ಮತ್ತು ಅಧಿಕ ದಕ್ಷತೆಯ ಪ್ಲಾನಿಮೀಟರಿನ ಅಭಿವೃದ್ಧಿಗೆ ಇದು ಅಡಿಪಾಯ ಹಾಕಿತು. ಇಂಥ ಒಂದು ಯಂತ್ರವನ್ನು ಆವಿಷ್ಕರಿಸಿದವನು ಜೇಮ್ಸ್ ಥಾಮ್ಸನ್. ಈತನ ಯಂತ್ರದಲ್ಲಿ ಒಂದು ಬಿಲ್ಲೆ, ಗೋಳ ಹಾಗೂ ಉರುಳೆ ಇದ್ದುವು. ಇವನ ಸಹೋದರನಾದ ಲಾರ್ಡ್ ಕೆಲ್ವಿನ್ ಸಂಗತ ವಿಶ್ಲೇಷಕವನ್ನು (ಹಾರ್ಮಾನಿಕ್ ಅನಲೈಸರ್) ರಚಿಸುವಾಗ ಅನುಕಲನಕಾರಿಯ (ಇಂಟೆಗ್ರೇಟರ್) ತತ್ತ್ವವನ್ನು ಅನ್ವಯಿಸಿದ. ಸಮುದ್ರದ ಭರತ ಇಳಿತಗಳನ್ನು ಮುನ್ನುಡಿಯುವಲ್ಲಿ ಈ ಉಪಕರಣವನ್ನು ಈತ ಬಳಸಿದ. ಮ್ಯಾಕ್ಸ್‌ವೆಲ್ಲನ ಸಾಧನವು ತಯಾರಾದ ವರ್ಷದಲ್ಲಿಯೇ ಪೋಲಾರ್ ಪ್ಲಾನಿಮೀಟರ್ ಎಂಬ ಅತ್ಯಂತ ಯಶಸ್ವಿಯಾದ ಇನ್ನೊಂದು ಸಾಧನದ ಅಭಿವೃದ್ಧಿಯೂ ಆಯಿತು. ಒಡನೆ ಇಂಥ 12,000 ಯಂತ್ರಗಳನ್ನು ನಿರ್ಮಿಸಿ 1855–1885 ಅಂತರದಲ್ಲಿ ಉಪಯೋಗಕ್ಕೆ ತಂದರು. ಇಂದಿಗೂ ಈ ಯಂತ್ರದ ಮೂಲಭೂತ ರಚನೆಯನ್ನು ಬದಲು ಮಾಡಿಲ್ಲ. ಅಬ್ ಡಾಂಕ್ ಅಬಕ್ ನೋವಿಸ್ 1878ರಲ್ಲೂ ಸಿ.ವಿ ಬಾಯ್ಸ್ 1882ರಲ್ಲೂ ಅನುಕಲಲೇಖಿಯನ್ನು (ಇಂಟೆಗ್ರಾಫ್) ರಚಿಸಿದರು. ಒಂದು ಸ್ವೇಚ್ಛಾಉತ್ಪನ್ನದ (ಆರ್ಬಿಟ್ರೆರಿ ಫಂಕ್ಷನ್) ಅನುಕಲವನ್ನು ಇದು ರೇಖಿಸಬಲ್ಲುದಾಗಿತ್ತು. ಕೆಲವು ಸರಳ ಅವಕಲಸಮೀಕರಣಗಳನ್ನು ಬಿಡಿಸಲು ಅನುಕೂಲವಾಗುವಂತೆ ಅನುಕಲಲೇಖಿಯನ್ನು ರಚಿಸಿದ್ದರು.

ವಿಕಾಸದ ಹಂತದಲ್ಲಿ ಅನುಕಲಿಸುವ ಗಣಕಗಳು ಉತ್ಪನ್ನ ಗಣಕಗಳ ತರುವಾಯ ಬಂದುವು. ಅನುಕಲಲೇಖಿಯ ಉದಾಹರಣೆಯನ್ನು ಅನುಸರಿಸುತ್ತ ಮುಂದುವರಿದ ಅನುಕಲಿಸುವ ಗಣಕಗಳು ಅವಕಲಸಮೀಕರಣಗಳನ್ನು ಬಿಡಿಸುವ ಗಣಕಗಳನ್ನು ರಚಿಸುವ ದಿಶೆಯಲ್ಲಿ ಪ್ರಯತ್ನಗಳಿಗೆ ಎಡೆಮಾಡಿಕೊಟ್ಟವು. ಅವಕಲಸಮೀಕರಣಗಳ ಬಿಡಿಸುವಿಕೆಯಲ್ಲಿ ಅನುಕಲಲೇಖಿಯು ಬಲು ಮಂದಗತಿಯದು ಮತ್ತು ತೊಡಕಿನದು ಎಂದು ವೇದ್ಯವಾಯಿತು. 1930ರಲ್ಲಿ ಅಮೆರಿಕದ ಸಂಯುಕ್ತಸಂಸ್ಥಾನಗಳ ವಾನ್ನೆವರ್ ಬುಷ್ ಎಂಬಾತ ಅವಕಲವಿಶ್ಲೇಷಕಗಳ ಆಲೇಖ್ಯದ ರಚನೆಯನ್ನು ಮೊದಲು ಮಾಡಿದ. ಬಿಲ್ಲೆಗಳ ಹಾಗೂ ಚಕ್ರಗಳ ಒಂದು ವಿಸ್ತೃತ ಯಾಂತ್ರಿಕ ರಚನೆಯನ್ನು ಮಾಡಿ ಬುಷ್ ನಿಷ್ಕೃಷ್ಟ ಅನುಕಲಕಾರಿಗಳನ್ನು ನಿರ್ಮಿಸಿದ; ತಾಳುಗಳು, ಗಿಯರುಗಳು ಮತ್ತು ಸಂಯೋಜಕಗಳು (ಕಪ್ಲಿಂಗ್ಸ್) ಇರುವ ಒಂದು ಚೌಕಟ್ಟಿಗೆ ಈ ಅನುಕಲನಕಾರಿಗಳನ್ನು ಜೋಡಿಸಿದ. ಇದರಿಂದ ಅವಕಲಸಮೀಕರಣಗಳ ಸಾದೃಶ್ಯ ಪರಿಹಾರಗಳನ್ನು (ಅನಲಾಗ್ ಸೊಲ್ಯೂಷನ್ಸ್) ಪಡೆಯುವುದು ಸಾಧ್ಯವಾಯಿತು. ನಿವೇಶ ರಾಶಿಗಳನ್ನು (ಇನ್‌ಪುಟ್ ಕ್ವಾಂಟಿಟೀಸ್) ಉಣಿಸುವಲ್ಲಿ ಕೈಚಕ್ರಗಳನ್ನೂ ನಿರ್ಗಮ ಪರಿಹಾರಗಳನ್ನು (ಔಟ್‌ಪುಟ್ ಸೊಲ್ಯೂಷನ್ಸ್) ದಾಖಲೆ ಮಾಡುವಲ್ಲಿ ದಾಖಲೆ ಲೇಖನಿಗಳನ್ನೂ ಆತ ಬಳಸಿದ. ಅವಕಲ ವಿಶ್ಲೇಷಕಗಳ (ಡಿಫರೆನ್ಶಿಯಲ್ ಅನಲೈಸರ್ಸ್) ಬೆಳವಣಿಗೆಯಲ್ಲಿ ಮುಂದಿನ ಘಟ್ಟದ ಕಾರಣಕರ್ತರು ಬುಷ್ ಮತ್ತು ಕಾಲ್ಡ್ ವೆಲ್. ಟೆಲಿಫೋನಿನಲ್ಲಿ ಪರಿಚಿತವಾಗಿರುವ ಮಜಲು ಪ್ರರೂಪದ ಸ್ವಿಚ್ಚಿಕೆಯನ್ನು (ರಿಲೇಟೈಪ್ ಸ್ವಿಚ್ಚಿಂಗ್) ಇವರು ಉಪಯೋಗಿಸಿಕೊಂಡು ಯಾಂತ್ರಿಕ ವಿಶ್ಲೇಷಕಗಳ (ಮೆಕ್ಯಾನಿಕಲ್ ಅನಲೈಸರ್ಸ್) ನಡುವೆ ವಿದ್ಯುತ್ ಸಂಯೋಜನೆಯನ್ನು ಅಳವಡಿಸಿದರು. ಹೆಚ್ಚು ನಾಜೂಕಾದ ನಿವೇಶ–ನಿರ್ಗಮ ಸೌಕರ್ಯಗಳನ್ನು, ಉದಾಹರಣೆಗೆ ರಂಧ್ರಿತ–ಕಾಗದ ಪಟ್ಟಿಕೆಯನ್ನು (ಪಂಚ್ಡ್–ಪೇಪರ್ ಟೇಪ್), ಇವರು ಬಳಸಿದರು. ಈ ಉಪಜ್ಞೆ ಅದೆಷ್ಟು ಯಶಸ್ವಿಯಾಯಿತೆಂದರೆ ಎರಡನೆಯ ಮಹಾಯುದ್ಧದ ವೇಳೆಯಲ್ಲಿ ಈ ಯಂತ್ರವನ್ನು ಉಪಯೋಗಿಸಿಕೊಂಡು ವಿಕ್ಷೇಪಿತಾಯುಧಗಳ ಪಥಗಣನೆಗಳನ್ನು ವ್ಯಾಪಕವಾಗಿ ಮಾಡುವುದು ಲಾಭದಾಯಕವೆನಿಸಿತು.



ಚಿತ್ರ 2. ಮಣಿಚೌಕಟ್ಟು

ಅಂಕಗಣನೆ (ಡಿಜಿಟಲ್ ಕಾಂಪ್ಯುಟೇಷನ್): ಸಾದೃಶ್ಯ ಹಾಗೂ ಅಂಕಗಣಕಗಳ ವಿಕಾಸ ಸರಿಸುಮಾರಾಗಿ ಸಮಾನಾಂತರವಾಗಿಯೇ ಆಗಿದ್ದರೂ ಅಂಕಗಣಕಗಳ ಮೂಲವು ಕಾಲಾಕ್ಷದಲ್ಲಿ ಬಲು ಹಿಂದೆ ಉಂಟು. ಈ ತಂತ್ರವಿಜ್ಞಾನದ ಆದಿಯನ್ನು ಮಣಿಚೌಕಟ್ಟಿನಲ್ಲಿ ಕಾಣುತ್ತೇವೆ. ಇದು ಪ್ರ.ಶ.ಪೂ.ಸು. 600ರಲ್ಲಿ ಬಳಕೆಗೆ ಬಂತು. ಆಯಾ ಕಾರದ ಒಂದು ಚೌಕಟ್ಟು ಕ್ಷಿತಿಜೀಯ ಸರಳುಗಳ ಮೇಲೆ ಸರಿಯಬಲ್ಲ ಮರದ ಮಣಿಗಳ ಸಮೂಹಗಳು ಇವಿಷ್ಟು ಮಣಿಚೌಕಟ್ಟಿನ

ರಚನೆ. ಪ್ರತಿಯೊಂದು ಸರಳು, ತನ್ನ ಮಣಿ ಸಮೂಹದ ಸಮೇತ ಒಂದೊಂದು ಅಂಕಿಯನ್ನು ಸೂಚಿಸುತ್ತದೆ. ಅದರ ಬೆಲೆಯನ್ನು ಸರಳಿನ ಮೇಲೆ ಮಣಿಗಳ ಸ್ಥಾನಗಳು ನಿರ್ಧರಿಸುತ್ತವೆ. ಮಣಿಚೌಕಟ್ಟಿನ ಹೆಚ್ಚು ನಾಜೂಕು ರೂಪಗಳಲ್ಲಿ ಪೂರ್ಣಾಂಕಗಳನ್ನು ಕೂಡಿಸುವುದು, ಕಳೆಯುವುದು, ಗುಣಿಸುವುದು ಮತ್ತು ಭಾಗಿಸುವುದು ಸಾಧ್ಯ.

ಲಘುಗಣಕಗಳ(ಲಾಗರಿತಂಸ್) ಆವಿಷ್ಕರ್ತೃವಾದ ಸ್ಕಾಟ್ಲೆಂಡಿನ ಜಾನ್ ನೇಪಿಯರ್ 1600ರಲ್ಲಿ ನೇಪಿಯರನ ಸರಳುಗಳು (ನೇಪಿಯರ್ಸ್ ಬೋನ್ಸ್) ಎಂಬುದನ್ನು ಉಪಜ್ಞಿಸಿದ. ಅನುಕೂಲವಾದ ಒಂದು ಗುಣಾಕಾರ ಕೋಷ್ಟಕವನ್ನು ಇದರಲ್ಲಿ ಅಳವಡಿಸಲಾಗಿತ್ತು. ಇದನ್ನು ಅನುಸರಿಸಿ ಫ್ರಾನ್ಸಿನ ಬ್ಲೇಸ್ ಪಾಸ್ಕಲ್ ಸಂಖ್ಯೆಗಳನ್ನು ಕೂಡಿಸಬಲ್ಲ ಒಂದು ಯಂತ್ರವನ್ನು 1642ರಲ್ಲಿ ರಚಿಸಿದ. ಆತನ ತಂದೆಯ ಉದ್ಯಮದಲ್ಲಿ ಲೆಕ್ಕಪತ್ರಗಳನ್ನು ಇಡಲು ಈ ಯಂತ್ರವನ್ನು ಪಾಸ್ಕಲ್ ಉಪಯೋಗಿಸುತ್ತಿದ್ದ.




ಚಿತ್ರ 3. ಪಾಸ್ಕಲನ ಗಣನಯಂತ್ರ

1694ರಲ್ಲಿ ಸ್ವತಂತ್ರವಾಗಿ ಜಿ. ಡಬ್ಲ್ಯು. ಲೈಪ್ನಿಟ್ಸ್ ಕೂಡ ಒಂದು ಸಂಕಲನ ಯಂತ್ರವನ್ನು ತಯಾರಿಸಿದ. ಇದು ಪಾಸ್ಕಲನ ಯಂತ್ರಕ್ಕಿಂತ ಉತ್ತಮವಾಗಿತ್ತು. ಎಲ್ಲ ಗಣನಸಮಸ್ಯೆಗಳನ್ನೂ ಪ್ರತೀಕ ಕೈವಾಡಗಳ (ಸಿಂಬಲ್ ಮೆನಿಪ್ಯುಲೇಷನ್ಸ್) ಒಂದು ವಿಧಾನಕ್ಕೆ ಇಳಿಸಬಹುದೆಂದು ಅವನು ಮನಗಂಡಿದ್ದ. ಹೀಗಿದ್ದರೂ ಲೈಫ್ ನಿಟ್ಸ್ ರಚಿಸಿದ ಯಂತ್ರವನ್ನು ಒಂದು ಸ್ವಯಂಚಲಿ ಯಂತ್ರವೆಂದು ಪರಿಗಣಿಸುವುದು ಸಾಧ್ಯವಿಲ್ಲ. ಇಂಥ ಒಂದು ಯಂತ್ರದ ನಿರ್ಮಾಣದ ಕೀರ್ತಿ ಜೆ. ಎಚ್. ಮಿಲ್ಲರ್‌ನಿಗೆ ಸಲ್ಲುತ್ತದೆ. ಇದನ್ನು ಪ್ರತ್ಯಕ್ಷವಾಗಿ ನಿರ್ವಹಿಸಲು ಈತ 1786ರಲ್ಲಿ ಪ್ರಯತ್ನಿಸಿದ. ಹದಿನೆಂಟನೆಯ ಶತಮಾನದ ತಂತ್ರವಿಜ್ಞಾನ ಆಗ ಇನ್ನೂ ಶೈಶವಾಸ್ಥೆಯಲ್ಲಿತ್ತು. ಮಿಲ್ಲರನ ಭಾವನೆಗಳಾದರೋ ಆಗ ಇನ್ನೂ ಕಾರ್ಯರಂಗಕ್ಕೆ ಇಳಿಯಲು ಸಾಧ್ಯವಾಗದಷ್ಟು ಉನ್ನತ ಸ್ತರದಲ್ಲಿದ್ದುವು.

ಇಂದಿನ ಯಂತ್ರಗಳ ಪ್ರಮುಖ ಸೌಕರ್ಯಗಳಾದ ಕ್ರಮವಿಧಾಯ (ಪ್ರೋಗ್ರಾಮಿಂಗ್) ಮತ್ತು ಸ್ವಯಂಚಾಲನಗಳನ್ನು ಒಳಗೊಂಡ ಗಣಕಯಂತ್ರ ಚಾರ್ಲ್ಸ್‌ಬಾಬೇಜ್ ಎಂಬ ವಿಖ್ಯಾತ ಇಂಗ್ಲಿಷ್ ಗಣಿತವಿಜ್ಞಾನಿಯ ಬುದ್ಧಿಜನ್ಯ ಶಿಶು. ಈತ ಈ ದಿಶೆಯಲ್ಲಿ ಕಾರ್ಯೋದ್ಯುಕ್ತನಾದದ್ದು 1812ರಲ್ಲಿ, ತನ್ನ ಇಪ್ಪತ್ತರ ಹರೆಯದಲ್ಲಿ. ಮನುಷ್ಯನ ಉಸ್ತುವಾರಿ ಇಲ್ಲದೇ ಗಣಿತೋಷ್ಟಕಗಳನ್ನು ರಚಿಸಬಲ್ಲ ಒಂದು ಯಂತ್ರವನ್ನು ತಯಾರಿಸುವುದು ಈತನ ಉದ್ದೇಶ. ಇದನ್ನು ಇವನು ವ್ಯತ್ಯಾಸ ಯಂತ್ರವೆಂದು (ಡಿಫರೆನ್ಸ್ ಎಂಜಿನ್) ಹೆಸರಿಸಿದ. ಅಂಕಗಣಕಗಳ ಉಪಯೋಗದೊಡನೆ ಬಲು ನಿಕಟ ಸಂಬಂಧ ಇರುವ ಸಾಂಖ್ಯಿಕ ವಿಶ್ಲೇಷಣೆಯ (ನ್ಯೂಮರಿಕಲ್ ಅನಾಲಿಸಿಸ್) ಧಾತುಗಳನ್ನು (ಎಲಿಮೆಂಟ್ಸ್) ಉಪಯೋಗಿಸುವಂತೆ ಈ ಯಂತ್ರದ ಆಲೇಖ್ಯವನ್ನು (ಡಿಸೈನ್) ಸಿದ್ಧಪಡಿಸಲಾಗಿತ್ತು. ಇಂಥ ಒಂದು ಯಂತ್ರವನ್ನು ತಯಾರಿಸುವ ಹಾದಿಯಲ್ಲಿ ಬಾಬೇಜ್ ಹೊಸ ಗಿಯರುಗಳನ್ನೂ ಅವನ್ನು ತಯಾರಿಸಬಲ್ಲ ಯಂತ್ರಗಳ ಆಲೇಖ್ಯಗಳನ್ನೂ ರಚಿಸಿ ಮುಂದುವರಿಯಬೇಕಾಯಿತು. 1822ರಲ್ಲಿ ವ್ಯತ್ಯಾಸಯಂತ್ರದ ಸ್ಥೂಲ ರೂಪವೊಂದು ರಚನೆಗೊಂಡಿತು. ಇದು ಬಾಬೇಜನ ಬಹುಮುಖ ಪ್ರತಿಭೆಯ ಪ್ರತ್ಯಕ್ಷರೂಪ. ಈ ಪ್ರಾರಂಭಿಕ ಯಶಸ್ಸಿನಿಂದ ಉದ್ದೀಪನಾಗಿ ಈತ ಪೂರ್ಣಗಾತ್ರದ ವ್ಯತ್ಯಾಸಯಂತ್ರದ ನಿರ್ಮಾಣಕ್ಕೆ ಬೇಕಾಗುವ ಆರ್ಥಿಕ ನೆರವನ್ನು ತನಗೆ ನೀಡುವಂತೆ ಬ್ರಿಟಿಷ್ ಸರ್ಕಾರವನ್ನು ಒಪ್ಪಿಸಿದ. ಬಳಿಕ ಹತ್ತು ವರ್ಷಗಳ ಕಾಲ ತನ್ನ ಸಂಶೋಧನೆಯ ಬಗ್ಗೆ ಕೆಲಸ ಮಾಡಿದ. ಈ ಅವಧಿಯಲ್ಲಿ ನೂರಾರು ಹೊಸ ಯಾಂತ್ರಿಕ ಹತ್ಯಾರುಗಳನ್ನೂ ಸಲಕರಣೆಗಳನ್ನೂ ಆತ ಆವಿಷ್ಕರಿಸಿಕೊಳ್ಳಬೇಕಾಯಿತು. ಬ್ರಿಟಿಷ್ ಸರ್ಕಾರವು ಧೈರ್ಯವಾಗಿ ಮುಂದೆಬಂದು ಈ ಸಾಹಸದಲ್ಲಿ ಇಂದಿನ ಮೌಲ್ಯದ ಪ್ರಕಾರ, ಸುಮಾರು ಒಂದು ಕೋಟಿ ರೂಪಾಯಿಗಳನ್ನು ಹೂಡಿ ಬಾಬೇಜನ ಪ್ರಯತ್ನವನ್ನು ಬೆಂಬಲಿಸಿತು. ಆದರೆ ಅಂತಿಮ ಫಲಿತಾಂಶ ದುರದೃಷ್ಟವಶಾತ್ ಹಿತಕರವಾಗಿರಲಿಲ್ಲ. ಬಾಬೇಜ್ ಹುಟ್ಟಿದ್ದು ಒಂದು ಶತಮಾನದಷ್ಟು ಮೊದಲೇ ಆಗಿತ್ತು. ವ್ಯತ್ಯಾಸ ಯಂತ್ರ ವಿಫಲವಾಯಿತು. ಇದು ಹಾಗಿರಲಿ. ಒಂದು ನೂರುವರ್ಷಗಳ ತರುವಾಯ ಆಗಮಿಸಲಿದ್ದ ದೈತ್ಯ ಮಿದುಳುಗಳ ಯುಗವನ್ನು ಆವಾಹಿಸಲು ಬೇಕಾದ ಸಕಲ ಭಾವನೆಗಳನ್ನೂ ವ್ಯತ್ಯಾಸ ಯಂತ್ರ ಒದಗಿಸಿತ್ತು. ಆಶ್ಚರ್ಯವೆಂದರೆ ಆಧುನಿಕ ಯುಗದ ಒಂದು ಕ್ರಮವಿಧಿಶೀಲ ಅಂಕಗಣಕದ (ಪ್ರೋಗ್ರಾಮೆಬಲ್ ಡಿಜಿಟಲ್ ಕಂಪ್ಯೂಟರ್) ಆಧಾರಭಾವನೆಗಳು ಬಾಬೇಜ್ ಚಿಂತಿಸಿದ ಭಾವನೆಗಳಿಗಿಂತ ತೀರ ಭಿನ್ನವಾಗಿಲ್ಲದಿರುವುದು. ಗಣಕಕ್ರಮ ವಿಧಾಯ (ಕಂಪ್ಯೂಟರ್ ಪ್ರೋಗ್ರಾಮಿಂಗ್)ಎಂಬ ಪರಿಕಲ್ಪನೆಯನ್ನು ಮೊದಲಿಗೆ ನೀಡಿದವ ಬಾಬೇಜ್. ಹೀಗೆಂದರೆ ಗಣಕ ಅನುಕ್ರಮವಾಗಿ ನಿರ್ವಹಿಸಬಲ್ಲ ನಿರ್ದೇಶನಗಳ (ಇನ್ಸ್‌ಟ್ರಕ್ಷನ್ಸ್) ಒಂದು ಸರಣಿ. ದೀರ್ಘಕಾಲಾನಂತರ ಸ್ವೀಡನ್ನಿನಲ್ಲಿ ಜಾರ್ಜ್‌ಶ್ಯೂಟ್ಸ್ ಎಂಬಾತ ಬಾಬೇಜ್ ನಿರ್ಮಿಸಲು ಹೊರಟ ಯಂತ್ರ ವ್ಯಾವಹಾರ್ಯ ಎಂದು ತೋರಿಸಿದ.

ಇನ್ನೊಂದು ಮುಖ್ಯ ಬೆಳವಣಿಗೆ ಆರಂಭವಾದದ್ದು ಬಾಬೇಜನ ಮರಣದ ತರುಣದಲ್ಲಿ. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಜನಗಣತಿಯ ಸಂಸ್ಥೆಯಲ್ಲಿದ್ದ ಹರ್ಮನ್ ಹಾಲ್‌ರಿತ್ ಎಂಬಾತ 1890ರಲ್ಲಿ ರಂಧ್ರಿತಪತ್ರ (ಪಂಚ್ಡ್ ಕಾರ್ಡ್) ವಿಧಾನವನ್ನು ಶೋಧಿಸಿದ. ಗಣತಿಯನ್ನು ಕುರಿತ ಲೆಕ್ಕಾಚಾರಗಳು ಈ ಸಂಸ್ಥೆಯಲ್ಲಿ ದಶಕದಿಂದ ದಶಕಕ್ಕೆ ಏರುತ್ತಿದ್ದವು. 1890ರ ವೇಳೆಗೆ ಇವು ಗಾಬರಿ ಹುಟ್ಟಿಸುವ ಗಾತ್ರವನ್ನು ಮುಟ್ಟಿದವು. ಗಣನೆಯನ್ನು ಸುಲಭಗೊಳಿಸಲು ಸಂಖ್ಯೆಗಳನ್ನು ರಂಧ್ರಿತ ಪತ್ರಗಳಿಂದ ಸೂಚಿಸುವ ಭಾವನೆಯನ್ನು ಹಾಲ್‌ರಿತ್ ಬಳಕೆಗೆ ತಂದ. ಸಂಖ್ಯೆಗಳ ಓದುವಿಕೆ, ಬಟವಾಡೆ ಮತ್ತು ಕೂಡಿಕೆಗಳನ್ನು ವಿದ್ಯುತ್ಕಾಂತ ಸಾಧನಗಳಿಂದ ಸ್ವಯಂಚಲಿಯಾಗಿ ನಡೆಸುವುದು ಈ ವಿಧಾನದಿಂದ ಸಾಧ್ಯವಾಯಿತು. ಇಂದು ನಾವು ಬಳಸುವ ಏಕಮಾನ ವರದಿ ಯಂತ್ರಗಳು (ಯೂನಿಟ್ ರಿಕಾರ್ಡ್‌ಮಷೀನ್ಸ್) ಹಾಲ್‌ರಿತ್ ಯಂತ್ರಗಳ ಪರಿವರ್ತಿತ ರೂಪಗಳಷ್ಟೆ. ಬಾಬೇಜ್ ಹಾಗೂ ಹಾಲ್‌ರಿತ್ ಇವರ ಭಾವನೆಗಳನ್ನು ಒಟ್ಟು ಸೇರಿಸಿ ಉನ್ನತ ಯಾಂತ್ರಿಕ ನಿಷ್ಕೃಷ್ಟತೆ ಇರುವ ಮೇಜು ಗಣನಕಾರಿಗಳನ್ನು (ಡೆಸ್ಕ್ ಕ್ಯಾಲ್ಕುಲೇಟರ್ಸ್) ರಚಿಸಲಾಯಿತು.

ಈ ಎಲ್ಲ ಉಪಜ್ಞೆಗಳ ಸಂಯುಕ್ತ ಫಲವಾಗಿ ಕ್ರಮವಿಧಿಶೀಲ ಸ್ವಯಂಚಲಿ ಅಂಕಗಣಕದ ಜನಕಕ್ಕೆ ವೇದಿಕೆ ಸಿದ್ಧವಾಯಿತು. ಇಂಥ ಒಂದು ಗಣಕವನ್ನು ನಿರ್ಮಿಸುವ ದಿಶೆಯಲ್ಲಿ ಅಮೆರಿಕದ ಹೊವಾರ್ಡ್ ಐಟ್ಕೆನ್ ಎಂಬಾತ 1937ರಲ್ಲಿ ಕಾರ್ಯೋದ್ಯುಕ್ತನಾದ. ವಿದ್ಯುತ್ಕಾಂತ ಮಜಲುಗಳನ್ನು (ಎಲೆಕ್ಟ್ರೊಮ್ಯಾಗ್ನೆಟಿಕ್ ರಿಲೇಸ್) ಇವನು ಬಳಸಿಕೊಂಡ. ಇಂಟರ್‌ನ್ಯಾಷನಲ್ ಬಿಸಿನೆಸ್ ಮಷೀನ್ಸ್ ಕಾರ್ಪೊರೇಷನ್ ಎಂಬ ಸಂಸ್ಥೆ ಇವನಿಗೆ ಬೆಂಬಲ ನೀಡಿತು. ಹೀಗೆ ನಿರ್ಮಾಣವಾದ ಗಣಕದ ಹೆಸರು ಮಾರ್ಕ್–1 ಇದನ್ನು 1943ರಲ್ಲಿ ಉಪಯೋಗಕ್ಕೆ ತರಲಾಯಿತು. ಕೆಲವು ವರ್ಷಗಳ ಬಳಿಕ 1944ರ ಸುಮಾರಿಗೆ, ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಕೆಲವು ಎಂಜಿನಿಯರುಗಳು ಜೆ.ಪಿ.ಎಕ್ಕಾರ್ಟನ ಮಾರ್ಗದರ್ಶನದಲ್ಲಿ ಎನೀಯಾಕ್(*ENIAC*–*E*lectronic *N*umerical *I*ntegrator *A*nd *C*omputer) ಎಂಬ ಹೆಸರಿನ ಗಣಕವನ್ನು ನಿರ್ಮಿಸಿದರು. ಇದರಲ್ಲಿ ಅವರು ಸಾವಿರಾರು ಎಲೆಕ್ಟ್ರಾನಿಕ್ ನಾಳಗಳನ್ನು ಉಪಯೋಗಿಸಿದುದರಿಂದ ಈ ಯಂತ್ರದ ಗಣನವೇಗ ಮಾರ್ಕ್–1 ರದಕ್ಕಿಂತ ಅದೆಷ್ಟೋ ನೂರು ಪಟ್ಟು ಹೆಚ್ಚಿಗೆ ಇತ್ತು. ಶಾಕ್ಲಿ, ಬ್ರಾಟೇನ್ ಮತ್ತು ಬಾರ್ಡೀನ್ ಇವರಿಂದ ಉಪಜ್ಞಿಸಲ್ಪಟ್ಟ ಟ್ರಾನ್ಸಿಸ್ಟರ್ ಅತಿ ತೀವ್ರವೇಗದ ಗಣಕಗಳ ನಿರ್ಮಾಣ ಸಾಧ್ಯತೆಯನ್ನು ಎದುರಿಟ್ಟಿತು. ಸೂಕ್ಷ್ಮ ಎಲೆಕ್ಟ್ರಾನಿಕ್ಸ್(ಮೈಕ್ರೋ ಎಲೆಕ್ಟ್ರಾನಿಕ್ಸ್) ಕ್ಷೇತ್ರದಲ್ಲಿ ಈಚೆಗೆ ಆಗಿರುವ ಪ್ರಗತಿಗಳ ಪರಿಣಾಮವಾಗಿ ಗಣಕಗಳು ಚಿಕ್ಕವೂ ಚುರುಕಿನವೂ ಹೆಚ್ಚು ನಾಜೂಕಿನವೂ ಆಗಿವೆ. ಇಂದು ಪ್ರಚಲಿತವಿರುವ ಅಂಕಗಣಕಗಳು ಒಂದು ಸೆಕೆಂಡಿನಲ್ಲಿ ಒಂದು ದಶಲಕ್ಷಕ್ಕಿಂತಲೂ ಹೆಚ್ಚು ಸಂಖ್ಯೆಗಳನ್ನು ಕೂಡಬಲ್ಲವು, ಗುಣಿಸಬಲ್ಲವು ಹಾಗೂ ಭಾಗಿಸಬಲ್ಲವು.

ಇಲ್ಲಿಯವರೆಗೆ ಗಣಕಗಳ ಎರಡು ವರ್ಗಗಳ–ಸಾದೃಶ್ಯ ಹಾಗೂ ಅಂಕ–ಇತಿಹಾಸವನ್ನು ನೋಡಿದ್ದಾಯಿತು. ಇವುಗಳ ಪೈಕಿ ಅಂಕಗಣಕವು ಹೆಚ್ಚು ನಿಷ್ಕೃಷ್ಟವೂ ಬಹುಮುಖಿಯೂ ಆದದ್ದು. ಆದ್ದರಿಂದ ಇಂದು ಗಣಕ ಎಂಬುದು ಹೆಚ್ಚು ಕಡಿಮೆ ಅಂಕಗಣಕದ ಪರ್ಯಾಯ ಪದ. ಹಾಗಿದ್ದರೂ ಸಾದೃಶ್ಯಗಣಕಗಳು ಕೂಡ ನಿರ್ವಹಿಸಬಲ್ಲ ಪಾತ್ರ (ಅದೆಷ್ಟೇ ಚಿಕ್ಕದಾದರೂ) ಇದ್ದೇ ಇದೆ.

**ಸಾದೃಶ್ಯ ಗಣಕ:** ಆಧುನಿಕ ಸಾದೃಶ್ಯ ಗಣಕವೊಂದು ಬಹುಮುಖೀ ಎಲೆಕ್ಟ್ರಾನ್ ಯಂತ್ರ. ಎಲೆಕ್ಟ್ರಾನ್ಸ್‌ನ ಪರಿಚಯವಿಲ್ಲದವರೂ ಈ ಯಂತ್ರದ ಪರಿಕರ್ಮವನ್ನು ತಿಳಿದುಕೊಳ್ಳುವುದು ಸಾಧ್ಯ. ಗಣಕದ ಧಾತುಗಳನ್ನು ಪೆಟ್ಟಿಗೆಗಳೆಂದೂ ಈ ಪೆಟ್ಟಿಗೆಗಳ

ನಿರ್ಗಮನ ವರ್ತನೆ (ಔಟ್‌ಪುಟ್ ಬಿಹೇವಿಯರ್) ನಿವೇಶಗಳ ಒಂದು ಉತ್ಪನ್ನವೆಂದೂ (ಎ ಫಂಕ್ಷನ್ ಆಫ್ ದಿ ಇನ್‌ಪುಟ್ಸ್) ಭಾವಿಸುವುದರಿಂದ ಇದು ಸಾಧ್ಯವಾಗುತ್ತದೆ.

ಚಿತ್ರದಲ್ಲಿ ಒಂದು ಸರಳ, ಸಾರ್ವತ್ರಿಕೋದ್ದೇಶದ ಗಣಕವನ್ನು ತೋರಿಸಿದೆ. ಇಲ್ಲಿ ನಿವೇಶಾಂಗ (ಇನ್‌ಪುಟ್ ಯೂನಿಟ್) ಸಾಮಾನ್ಯವಾಗಿ ಸ್ಪಂದನ (ಪಲ್ಸ್) ಹಾಗೂ ಉತ್ಪನ್ನಜನಕಗಳ (ಫಂಕ್ಷನ್ ಜನರೇಟರ್ಸ್) ಗಣ. ಈಗಣ (ಸೆಟ್) ಯಾವುದೇ ಇಚ್ಛಿತ ಅವಧಿಯುತ ಅಲೆರೂಪವನ್ನು ಉತ್ಪಾದಿಸಬಲ್ಲುದು. ಪ್ರಧಾನ ಗಣನ ಘಟಕದಲ್ಲಿ ಪರಿಕರ್ಮ ಪ್ರವರ್ಧಕಗಳ (ಆಪರೇಷನಲ್ ಆಂಪ್ಲಿಫೈಯರ್ಸ್) ಒಂದು ತಂಡ (*OA*),




ಚಿತ್ರ 4

ರೇಖೀಯ ವಿಭವ ಮಾಪಕಗಳ (ಲೀನಿಯರ್ ಪೊಟೆನ್ಷಿಯೋಮೀಟರ್ಸ್) ಒಂದು ತಂಡ (*PM*) ಮತ್ತು ಗುಣಿಸುವ/ಭಾಗಿಸುವ (ಮಲ್ಟಿಪ್ಲೈಯರ್/ಡಿವೈಡರ್) ಅಂಗಗಳ




ಚಿತ್ರ 5

ಒಂದು ತಂಡ (*M/D*) ಇವೆ. ಘಟಕಗಳ ನಿವೇಶ ಹಾಗೂ ನಿರ್ಗಮ ಅಂತಿಮಗಳನ್ನು (ಇನ್‌ಪುಟ್ ಅಂಡ್ ಔಟ್‌ಪುಟ್ ಟರ್ಮಿನಲ್ಸ್) ಒಂದು ಸರ್ವಸಾಮಾನ್ಯ ಘಟಕಕ್ಕೆ ತರೆದ ಕೊನೆಗಳಿರುವ ಕುಳಿಗಳಾಗಿ (ಓಪನ್ ಎಂಡೆಡ್ ಸಾಕೆಟ್ಸ್) ರೂಪಿಸಲಾಗಿದೆ. ಘಟಕಗಳ ನಿವೇಶ ಮತ್ತು ನಿರ್ಗಮ ಅಂತಿಮಗಳನ್ನು, ಚಿತ್ರದಲ್ಲಿ ತೋರಿಸಿರುವ ಪ್ರಕಾರ ನಮ್ಯ (ಫ್ಲೆಕ್ಸಿಬಲ್) ರಬ್ಬರೀಕೃತ ತಂತಿ ಸಂಯೋಜಕಗಳಿಂದ ಜೋಡಿಸಲ್ಪಟ್ಟಿರುವ ಬೆಣೆಗಳನ್ನು ಇಷ್ಟಬಂದಂತೆ ಯಾವುದೇ ರೀತಿಯಲ್ಲಿ ಪೋಣಿಸುವುದರ ಮೂಲಕ, ಜೋಡಿಸಬಹುದು.

ನಿರ್ಗಮ ಏಕಮಾನವು ಕ್ಯಾಥೋಡ್ ಕಿರಣ ಆಂದೋಳನಲೇಖಕ (ಆಸಿಲೋಸ್ಕೋಪ್) ಆಗಿರಬಹುದು ಇಲ್ಲವೇ ಒಂದು X-Y ಆಲೇಖಕ (ಪ್ಲಾಟರ್) ಆಗಿರಬಹುದು. ಬೆಣೆಗಳಿಗೆ ಒಂದು ಪಾರ್ಶ್ವರಂಧ್ರ ಸಹ ಉಂಟು. ಇದಕ್ಕೆ ಇತರ ಸಂಯೋಜಕಗಳನ್ನು ಪೋಣಿಸಬಹುದು. ಈ ಘಟಕಗಳ ಗುಣಗಳನ್ನು ಮುಂದೆ ಬರೆದಿದೆ.

ಈ ಮೊದಲೇ ತಿಳಿಸಿರುವಂತೆ ಪರಿಕರ್ಮ ಪ್ರವರ್ಧಕವೇ (ಆಪರೇಷನಲ್ ಆಂಪ್ಲಿಫೈಯರ್) ಪ್ರಧಾನ ಘಟಕ. ಇದೊಂದು ಅತ್ಯುಚ್ಚ ಲಾಭವಿರುವ (ಗೇನ್) ಎಲೆಕ್ಟ್ರಾನಿಕ್ ಪ್ರವರ್ಧಕ. ಇದನ್ನು ಚಿತ್ರ 6ರಲ್ಲಿ ತೋರಿಸಿರುವಂತೆ F ಎಂದು ಗುರುತಿಸಿರುವ ಇದರ ಪುನರ್ನಿವಿಷ್ಟ ಪಥ (ಫೀಡ್‌ಬ್ಯಾಕ್ ಪಾತ್) ಮತ್ತು *I* ಎಂದು ಗುರುತಿಸಿರುವ ನಿವೇಶಪಥ (ಇನ್‌ಪುಟ್ ಪಾತ್)–ಇವುಗಳಲ್ಲಿ ಸಮರ್ಪಕ ಪ್ರತಿಬಾಧೆಗಳ ಬಗೆಗಳನ್ನು (ಟೈಪ್ಸ್ ಆಫ್ ಇಂಪೆಡೆನ್ಸಸ್) ಪೋಣಿಸುವುದರ ಮೂಲಕ ಹಲವಾರು ವಿಧಾನಗಳನ್ನು ಉಪಯೋಗಿಸಬಹುದು. *F* ಮತ್ತು *I* ಎರಡೂ ಸಮನಿರೋಧಕಗಳಾಗಿದ್ದರೆ (ಈಕ್ವಲ್




ಚಿತ್ರ 6

ರೆಸಿಸ್ಟರ್ಸ್) ಇದೊಂದು ಚಿಹ್ನಾಪರಿವರ್ತಕವಾಗಿ (ಸೈನ್ ಚೇಂಜರ್) ವರ್ತಿಸುತ್ತದೆ. ಅಸಮವಾಗಿದ್ದರೆ ಇದೊಂದು ಚಿಹ್ನಾಮಾನಕ ಪರಿವರ್ತಕವಾಗಿ (ಸೈನ್ ಸ್ಕೇಲ್ ಚೇಂಜರ್) ವರ್ತಿಸುತ್ತದೆ. *F* ಒಂದು ಏಕಮಾನಮೌಲ್ಯದ ನಿರೋಧಕವಾಗಿದ್ದು ಅಲ್ಲಿ ಏಕಮಾನ ಮೌಲ್ಯದ *n* ನಿವೇಶ ನಿರೋಧಕಗಳಿದ್ದರೆ ಈ *n* ಅಂತಿಮಗಳಲ್ಲಿ ನಿರ್ಗಮ ನಿವೇಶಗಳ ಒಂದು ಸಂಕಲನವಾಗುತ್ತದೆ. ನಿವೇಶ ನಿರೋಧಕಗಳು ಅಸಮವಾಗಿದ್ದರೆ ನಿರ್ಗಮವು ನಿವೇಶಗಳನ್ನು ಅನುಪಾತೀಯವಾಗಿ ಕೂಡಿರುತ್ತದೆ. ನಿವೇಶ ಪ್ರತಿಬಾಧೆ (ಇನ್‌ಪುಟ್ ಇಂಪೆಡೆನ್ಸ್) ಒಂದು ನಿರೋಧಕವೂ ಪುನರ್ನಿವಿಷ್ಟ ಪ್ರತಿಬಾಧೆ ಒಂದು ಸಂಧಾರಿತ್ರವೂ (ಕೆಪಾಸಿಟರ್) ಆಗಿದ್ದರೆ ಆಗ ನಿರ್ಗಮವು ನಿವೇಶ ಅಲೆರೂಪದ ಕಾಲಾನುಕಲ(ಟೈಂ ಇಂಟೆಗ್ರಲ್) ಆಗಿರುತ್ತದೆ.

ನಿವೇಶವನ್ನು ಒಂದು ಪ್ರಮಾಣದಷ್ಟು ಕುಗ್ಗಿಸಲೆಂದು ಒಂದು ರೇಖೀಯ ವಿಭವಮಾಪಕವನ್ನು(ಲೀನಿಯರ್ ಪೊಟೆನ್ಷಿಯೋಮೀಟರ್) ಉಪಯೋಗಿಸಲಾಗುತ್ತದೆ. ಇದಕ್ಕೆ ಲಗತ್ತಿಸಿದ ಒಂದು ಸೂಚಕದಲ್ಲಿ (ಇಂಡಿಕೇಟರ್) ಈ ಪ್ರಮಾಣವನ್ನು ಅಳವಡಿಸಬಹುದು. ಕಾಲದ ಪ್ರತಿಯೊಂದು ಕ್ಷಣದಲ್ಲೂ ಗುಣಾಕಾರಿ (ಮಲ್ಟಿಪ್ಲೈಯರ್) ಎರಡು ನಿವೇಶ ಅಲೆರೂಪಗಳ ಮೌಲ್ಯಗಳನ್ನು ಗುಣಿಸುತ್ತದೆ.

ಮೇಲೆ ವಿವರಿಸಿದ ಎಲ್ಲ ಪರಿಕರ್ಮಗಳಲ್ಲೂ ನಿವೇಶಗಳಾದ $i, i_1, i_2, \ldots\ldots. i_n$ಗಳು ಕಾಲದ ಅವಿಚ್ಛಿನ್ನ ಉತ್ಪನ್ನಗಳೆಂಬುದನ್ನು ಇಲ್ಲಿ ಹೇಳಬೇಕು. ತತ್ಪರಿಣಾಮವಾಗಿ ನಿರ್ಗಮ ಕೂಡ ಕಾಲದ ಒಂದು ಅವಿಚ್ಛಿನ್ನ ಉತ್ಪನ್ನವಾಗಿರುತ್ತದೆ. ಇದನ್ನು ಚಿತ್ರ 7ರಲ್ಲಿ ಕಾಣಿಸಿದೆ.




ಚಿತ್ರ 7

ಒಂದು ಸರಳ ಸಮಸ್ಯೆಯನ್ನು ಆಯ್ದುಕೊಂಡು ಅದನ್ನು ಪರಿಹರಿಸಲು ಸಾದೃಶ್ಯ ಗಣಕವನ್ನು ಹೇಗೆ ಯೋಜಿಸಬಹುದೆಂಬುದನ್ನು ಪರಿಶೀಲಿಸೋಣ. ದ್ರವ್ಯರಾಶಿ m ಇರುವ ಒಂದು ಕಣ ಗುರುತ್ವ ವೇಗೋತ್ಕರ್ಷದ ಪರಿಣಾಮವಾಗಿ ನಿರೋಧೀ ಮಾಧ್ಯಮ ವೊಂದರಲ್ಲಿ ಬೀಳುವ ಚಲನೆಯನ್ನು ಅವಕಲಸಮೀಕರಣದಿಂದ ಪ್ರತಿನಿಧಿಸಬಲ್ಲೆವು.




ಚಿತ್ರ 8

ನಿರೋಧ (ರೆಸಿಸ್ಟೆನ್ಸ್) ಶ್ಯಾನವೆಂದು (ವಿಸ್ಕಸ್)ಭಾವಿಸುತ್ತೇವೆ; ಅಂದರೆ ಅದು ವೇಗ $\frac{dx}{dt}$ಗೆ ಅನುಪಾತೀಯವಾಗಿದೆ. ಇಲ್ಲಿ $x$ ಆ ಕಣವು ಚಲಿಸಿದ ದೂರ. ಇದರ ಜೊತೆಗೆ ಅಲ್ಪವಾದ ಅರೇಖೀಯ ಘಟಕವೊಂದು ಸಹ ಇದೆಯೆಂದೂ ಅದು ದೂರದ ವರ್ಗಾನುಪಾತದಲ್ಲಿದೆಯೆಂದೂ ಭಾವಿಸುತ್ತೇವೆ. ಆಗ ಈ ಚಲನೆಯನ್ನು ಪ್ರತಿನಿಧಿಸುವ ಅವಕಲಸಮೀಕರಣ ಅರೇಖೀಯವಾಗಿರುತ್ತದೆ. ಅದನ್ನು

$$\frac{d^2x}{dt^2} = -\frac{c}{m}\frac{dx}{dt} + \frac{e}{m}x^2 + g$$

ವಿಶ್ಲೇಷಣ ವಿಧಾನಗಳು ಬಲು ಜಟಿಲ. ಹಾಗಿದ್ದರೂ ಇದನ್ನು ಒಂದು ಸಾದೃಶ್ಯ ಗಣಕಕ್ಕೆ ಈ ಕೆಳಗಿನ ನಾಲ್ಕು ಸರಳ ಹೆಜ್ಜೆಗಳಲ್ಲಿ ಕ್ರಮವಿಧಿಸಬಹುದು (ಚಿತ್ರ 8).

ಮೊದಲಾಗಿ, ಸಮೀಕರಣದ ಎಡಪಾರ್ಶ್ವಕ್ಕೆ (ಅಂದರೆ $\frac{d^2x}{dt^2}$) ಅನುಪಾತೀಯ ವಾಗಿ $o$ ಬಿಂದುವಿನಲ್ಲಿ ಒಂದು ವೋಲ್ಟೇಜ್ ಉಂಟೆಂದು ಭಾವಿಸೋಣ. ಅನುಕಲಕಾರಿ ಯನ್ನು (ಇಂಟೆಗ್ರೇಟರ್) ಉಪಯೋಗಿಸಿಕೊಂಡು ಇದನ್ನು ಅನುಕಲಿಸಿದಾಗ ಒಂದು ನಿರ್ಗಮ $\left(-\frac{dx}{dt}\right)$ ದೊರೆಯುತ್ತದೆ.

ಇದಕ್ಕೆ ಪ್ರಾರಂಭಿಕ ನಿರ್ಬಂಧದ ಮೌಲ್ಯವನ್ನು ($-v_0$) ಕೂಡಿಸಬೇಕು. ಆಗ ಸಂಕಲಿತ ನಿರ್ಗಮವನ್ನು B ಬಿಂದುವಿನಲ್ಲಿ $\left.\frac{dx}{dt}\right|_i$ ಆಗಿ ಪಡೆಯಬಹುದು. ಒಂದು ವಿಭವಮಾಪಕವನ್ನು c/m ಪ್ರಮಾಣದಲ್ಲಿ ಅಳವಡಿಸಿ ಅದನ್ನು ಸರಣಿಯಲ್ಲಿ ಒಂದು ಪ್ರತಿಲೋಮಕಕ್ಕೆ (ಇನ್ವರ್ಟರ್) ಜೋಡಿಸಿದೆ. ಪ್ರತಿಲೋಮಕದ ನಿರ್ಗಮ, $-\frac{c}{m}\frac{dx}{dt}$. ಇದು ಅವಕಲಸಮೀಕರಣದ ಬಲಪಾರ್ಶ್ವದ ಪ್ರಥಮ ಪದ. ಬಲಪಾರ್ಶ್ವದ ಎರಡನೆಯ ಪದವನ್ನು ಪಡೆಯುವುದು ಎರಡನೆಯ ಹೆಜ್ಜೆಯ ಉದ್ದೇಶ. ಹೆಜ್ಜೆ 1ರಲ್ಲಿನ B ಬಿಂದುವಿನಲ್ಲಿ ವೋಲ್ಟೇಜ್ $\left.\frac{dx}{dt}\right|_i$ ಗೆ ಅನುಪಾತೀಯವಾಗಿದೆ. ಅನುಕಲಕಾರಿ ಯನ್ನು ಉಪಯೋಗಿಸಿಕೊಂಡು ಇದನ್ನು ಅನುಕಲಿಸಬೇಕು. ಇಲ್ಲಿ ದೊರೆಯುವ ನಿರ್ಗಮ $-x$ ಗೆ ಪ್ರಾರಂಭಿಕ ನಿರ್ಬಂಧವೆಂದರೆ $-v_0$ಯನ್ನು ಕೂಡಿಸಬೇಕು. ಪ್ರತಿಲೋಮಕ–ಸಂಕಲನದ (ಇನ್ವರ್ಟರ್ ಆ್ಯಡರ್) ನಿರ್ಗಮ $x|i$. ಇದು ಗುಣಾಕಾರಿ M ನ ಎರಡು ನಿವೇಶ ಅಂತಿಮಗಳನ್ನು ಪೋಷಿಸುತ್ತದೆ. ಒಂದು ಪ್ರಮಾಣ $e/m$ಗೆ ಅಳವಡಿಸಿದ ವಿಭವಮಾಪಕವು ಆ ತರುವಾಯ ಮಾಡುವ ಮಾನಕ–ಪರಿವರ್ತನೆ ಅವಕಲಸಮೀಕರಣದ ಎರಡನೆಯ ಪದವನ್ನು ಕೊಡುತ್ತದೆ. ಮೂರನೆಯ ಪದ ಸ್ಥಿರಾಂಕ, g.

ಮೊದಲಿನ ಎರಡು ಹೆಜ್ಜೆಗಳ ಪ್ರಕಾರ C ಮತ್ತು Eಗಳಲ್ಲಿ ನಿರ್ಗಮಗಳನ್ನು ಮೂರನೆಯ ಹೆಜ್ಜೆಯಲ್ಲಿ g ಯೊಡನೆ ಕೂಡಿಸಲಾಗುವುದು. ಈ ಕ್ರಿಯೆಗೆ ಮೂರು ನಿವೇಶ ಸಂಕಲಕ–ಪ್ರತಿಲೋಮಕವೊಂದನ್ನು ಉಪಯೋಗಿಸುತ್ತೇವೆ. ಇದರ ನಿರ್ಗಮ ಬಲಪಾರ್ಶ್ವದ ಋಣವಾಗಿರುತ್ತದೆ. ಒಂದು ಪ್ರತಿಲೋಮಕವನ್ನು ಉಪಯೋಗಿಸಿ ಚಿಹ್ನೆಯನ್ನು ಬದಲಾಯಿಸಬಹುದು. F ಬಿಂದುವಿನಲ್ಲಿ ವೋಲ್ಟೇಜು ಸಮೀಕರಣದ ಬಲಪಾರ್ಶ್ವಕ್ಕೆ ಅನುಪಾತೀಯವಾಗಿರುತ್ತದೆ.

A ಯಲ್ಲಿನ ವೋಲ್ಟೇಜ್ ಎಡಪಾರ್ಶ್ವಕ್ಕೂ F ನಲ್ಲಿನದು ಬಲಪಾರ್ಶ್ವಕ್ಕೂ ಅನುಪಾತೀಯವಾಗಿದೆಯೆಂದು ಭಾವಿಸಲಾಗಿತ್ತು. ಸಮೀಕರಣ ಸಾಧುವಾಗಲು ಎಡಪಾರ್ಶ್ವ ಬಲಪಾರ್ಶ್ವಕ್ಕೆ ಸಮವಾಗಬೇಕು. ಅಂದರೆ, Aಮತ್ತು F ನಲ್ಲಿನ ವೋಲ್ಟೇಜು ಗಳು ಒಂದೇ ಆಗಿರಬೇಕು. A ಮತ್ತು Fಗಳನ್ನು, ಹೆಜ್ಜೆಯಲ್ಲಿ ತೋರಿಸಿರುವಂತೆ, ಲಘುಮಂಡಲಗೊಳಿಸಿದರೆ(ಶಾರ್ಟ್ ಸರ್ಕ್ಯೂಟೆಡ್) ಇದು ಸಿದ್ಧವಾಗುವುದು. ನಾಲ್ಕು ಹೆಜ್ಜೆಗಳನ್ನೂ ಒಟ್ಟುಗೂಡಿಸಿ ಒಂದೇ ಚಿತ್ರವಾಗಿ ರೂಪಿಸಬಹುದು (ಚಿತ್ರ 9).

ಈ ಚಿತ್ರಕ್ಕೆ ಸಾದೃಶ್ಯ ಕ್ರಮವಿಧಿ (ಅನಲಾಗ್ ಪ್ರೋಗ್ರಾಂ) ಎಂದು ಹೆಸರು. ಚಿತ್ರ 4ರಲ್ಲಿ ಕಾಣಿಸಿರುವ ಯಂತ್ರದಲ್ಲಿ ತೇಪೆ ಫಲಕದ (ಪ್ಯಾಚ್–ಪ್ಯಾನೆಲ್) ಕುಳಿಗಳನ್ನು, ಘಟಕಗಳು ಒಂದಕ್ಕೊಂದು ಈ ಯೋಜನೆಗೆ ಬೇಕಾಗುವ ರೀತಿಯಲ್ಲಿ ಸಂಬಂಧಿಸಿರು




ಚಿತ್ರ 9

ಎಂಬುದಾಗಿ ಬರೆಯಬಹುದು. ಇಲ್ಲಿ ಪ್ರಾರಂಭಿಕ ನಿರ್ಬಂಧಗಳು $t = 0$ ಆಗಿರುವಾಗ $x = x_0$ ಮತ್ತು $\frac{dx}{dt} = v_0$. ಈ ಸಮೀಕರಣವನ್ನು ಪರಿಹರಿಸುವ

ವಂತೆ, ಬೆಣೆ ಸಂಯೋಜಕಗಳಿಂದ ಜೋಡಿಸಲಾಗಿದೆ. D ಬಿಂದುವಿನಲ್ಲಿ ವೋಲ್ಟೇಜ್ xಗೆ ಅನುಪಾತೀಯವಾಗಿದೆ. ಇದು ಅವಕಲ ಸಮೀಕರಣದ ಪರಿಹಾರ. ಆದ್ದರಿಂದ

ಈ ಬಿಂದುವನ್ನು ನಿರ್ಗಮಾಂಗಕ್ಕೆ ಸಂಯೋಜಿಸಲಾಗಿದೆ. ಇದೊಂದು ಆಂದೋಳನ ಲೇಖಿಕ ಆಗಿರಬಹುದು ಇಲ್ಲವೇ X—Y ನಿರ್ದೇಶಕಗಳಲ್ಲಿ ವಕ್ರರೇಖೆಯನ್ನು ರೇಖಿಸುವ ಒಂದು ಆಲೇಖಿಕ (ಪ್ಲಾಟರ್) ಆಗಿರಬಹುದು.

ಮೇಲಿನ ವಿವರಣೆಯಿಂದ ತಿಳಿಯುವುದಿಷ್ಟು, ಜಟಿಲವಾದ ಒಂದು ಅರೇಖೀಯ ಅವಕಲ ಸಮೀಕರಣವನ್ನು ಗಣಕದ ನೆರವಿನಿಂದ ಬಿಡಿಸಲು ಒಬ್ಬಾತನಿಗೆ ಎಲೆಕ್ಟ್ರಾನಿಕ್ಸ್ ವಿಷಯವೂ ತಿಳಿಯಬೇಕಾಗಿಲ್ಲ, ಅವಕಲಸಮೀಕರಣಗಳ ಸಿದ್ಧಾಂತವೂ ತಿಳಿಯಬೇಕಾಗಿಲ್ಲ. ಹೀಗಾಗಿ, ಭೌತ ಸಮಸ್ಯೆಗಳ ಅನುರೂಪ ಅವಕಲಸಮೀಕರಣಗಳನ್ನು ರಚಿಸಿರುವಲ್ಲೆಲ್ಲ ಪರಿಹಾರದಲ್ಲಿ ಸಾದೃಶ್ಯ ಗಣಕಗಳ ಉಪಯೋಗ ನಿತ್ಯಗಟ್ಟಲೆಯ ವ್ಯವಹಾರವಾಗಿದೆ.

ಸಾದೃಶ್ಯ ಗಣಕಗಳಲ್ಲಿ ಸಾಕಷ್ಟು ಅಸೌಕರ್ಯಗಳಿವೆ-ಕಡಿಮೆ ಮಟ್ಟದ ನಿಷ್ಕೃಷ್ಟತೆ, ವೋಲ್ಟೇಜ್ ಸೆಳೆತ ಇತ್ಯಾದಿ. ಹೀಗಿದ್ದರೂ ರೇಡಾರ್ ನಿಯಂತ್ರಣ ಮತ್ತು ಮರಳಿಕೆಯ ಸಾಧನಗಳು (ಹೋಮಿಂಗ್ ಡಿವೈಸಸ್) ಇವೇ ಮುಂತಾದ ಆನ್–ಲೈನ್ (ಸಂಪರ್ಕಸಹಿತ) ಪರಿಕರ್ಮಗಳಲ್ಲಿ ಸಾದೃಶ್ಯ ಗಣಕಗಳ ಉಪಯೋಗ ಉಂಟು. ಇದು ಹೇಗಿದ್ದರೂ ಅಂಕಗಣಕಗಳು ಇವುಗಳ ಪ್ರಾಮುಖ್ಯವನ್ನು ಕ್ರಮೇಣ ತಗ್ಗಿಸುತ್ತವೆ. 1980ರ ವೇಳೆಗೆ ಸಾದೃಶ್ಯ ಗಣಕಗಳು ಪೂರ್ಣವಾಗಿ ಅಂತರ್ಧಾನವಾಗುವ ನಿರೀಕ್ಷೆ ಇತ್ತು.

**ಅಂಕಗಣನೆಯ ತಳಹದಿ:** ಘಟಕಗಳ ಕೆಲವು ಮೂಲಭೂತ ಮಾದರಿಗಳನ್ನು ಉಪಯೋಗಿಸಿಕೊಂಡು ರಚಿಸಬಹುದಾದ ಯಂತ್ರವೇ ಅಂಕಗಣಕ(ಡಿಜಿಟಲ್ ಕಂಪ್ಯೂಟರ್). ಹೋಲಿಕೆಯಿಂದ ಸರಳವಾಗಿರುವ ಒಂದು ಯಂತ್ರ ಬಲು ಸಂಕೀರ್ಣ ಗಣನೆಗಳನ್ನು ಮಾಡಬಲ್ಲುದೆಂಬುದೇ ಅಂಕಗಣನೆಯ (ಡಿಜಿಟಲ್ ಕಾಂಪ್ಯೂಟೇಷನ್) ತಳಹದಿ. ಅತಿ ಸರಳವಾದ ರಚನೆ ಇರುವ ಮತ್ತು ಅಂಕಗಣನೆಯ ತತ್ತ್ವವನ್ನು ನಿದರ್ಶಿಸಬಲ್ಲ ಒಂದು ಅಂಕಯಂತ್ರವನ್ನು (ಡಿಜಿಟಲ್ ಮಶೀನ್) ಬ್ರಿಟಿಷ್ ಗಣಿತವಿಜ್ಞಾನಿ ಎ.ಎಂ ಟ್ಯೂರಿಂಗ್ ಪ್ರಸ್ತಾಪಿಸಿದ. ಟ್ಯೂರಿಂಗ್ ಯಂತ್ರವೆಂದೇ ಇದರ ಹೆಸರು. ಇದನ್ನು ಇಲ್ಲಿ ವಿವರಿಸಿದೆ.

**ಟ್ಯೂರಿಂಗ್ ಯಂತ್ರದ ಬಿಡಿ ಭಾಗಗಳು:**

1. ಒಂದು ಪಟ್ಟಿಕೆ (ಟೇಪ್). ಇದನ್ನು ಚೌಕಗಳಾಗಿ ವಿಭಾಗಿಸಿದೆ.
2. ಪಟ್ಟಿಕೆಯನ್ನು ಚಲಿಸಲು ಒಂದು ಮೋಟಾರ್.
3. ಪಟ್ಟಿಕೆಯ ಮೇಲೆ ಏನು ಬರೆದಿದೆ ಎನ್ನುವುದನ್ನು ಓದಲು ಒಂದು ಕ್ರಮವೀಕ್ಷಣ (ಸ್ಕ್ಯಾನಿಂಗ್) ಸಾಧನ.
4. Xಗಳನ್ನು ಅಥವಾ 1 ಗಳನ್ನು ಬರೆಯಬಲ್ಲ ಇಲ್ಲವೇ ಅಳಿಸಬಲ್ಲ ಒಂದು ಲೇಖನಿ.
5 ಯಂತ್ರ ಏನು ಮಾಡಬೇಕೆಂಬುದನ್ನು ವಿಧಿಸುವ ಒಂದು ನಿಯಂತ್ರಣಾಂಗ (ಕಂಟ್ರೋಲ್ ಯೂನಿಟ್).




4 ಮತ್ತು 2ನ್ನು ಕೂಡಿಸಲು ಪಟ್ಟಿ ಮೇಲಿನ ಬಾಬತುಗಳು

**ಚಿತ್ರ 10**

**ಈ ಕೆಳಗಿನ ಸರಳಕ್ರಿಯೆಗಳನ್ನು ಮಾತ್ರ ಯಂತ್ರ ನಿರ್ವಹಿಸಬಲ್ಲುದು:**

1. ಒಂದು ಖಾಲಿ ಚೌಕದಲ್ಲಿ ಅದು ಒಂದು X ನ್ನು ಇಲ್ಲವೇ ಒಂದು 1 ನ್ನು ಬರೆಯಬಲ್ಲುದು.
2. ಆಗಲೇ ಇರುವ ಒಂದು Xನ್ನು ಇಲ್ಲವೇ ಒಂದು 1 ನ್ನು ಅದು ಅಳಿಸಬಲ್ಲುದು.
3. ಅದು ಪಟ್ಟಿಕೆಯನ್ನು ಒಂದು ಚೌಕದಷ್ಟು ಎಡಕ್ಕೋ ಬಲಕ್ಕೋ ಸರಿಸಬಲ್ಲುದು.
4. ತನ್ನ ಕಾರ್ಯವಾದ ಬಳಿಕ ಅದು ಒಂದು ಸಂಜ್ಞೆಯನ್ನು ಮಿನುಗಿಸಿ ನಿಲ್ಲಬಲ್ಲುದು.

ನಿಯಂತ್ರಣಾಂಗ ಒಂದು ಕೋಷ್ಟಕದಂತೆ ಇದೆ. ಇದನ್ನು ಓದಿ ಯಂತ್ರ ನೀಡುವ ನಿರ್ದೇಶನವನ್ನು ಪಡೆಯಬಹುದು.

ಪ್ರಯೋಗಕ್ಕೋಸ್ಕರ, ಒಂದು ಟ್ಯೂರಿಂಗ್ ಯಂತ್ರವನ್ನು ಚಿತ್ರ 10ರಲ್ಲಿ ಇರುವಂತೆ ರಚಿಸಬಹುದು. ಅದರಲ್ಲಿ ಒಂದು ಪೆನ್ಸಿಲ್, ಒಂದು ಅಳಿಸುವ ರಬ್ಬರ್, ಚೌಕಗಳಾಗಿ ವಿಭಾಗಿಸಲ್ಪಟ್ಟ ಕಾಗದದ ಒಂದು ಕಿರಿಯಗಲದ ಹಾಳೆ, ಮುಖಫಲಕವಾಗಿ (ಡಯಲ್) ವರ್ತಿಸಲು ಕಾಗದದ ಒಂದು ಖಾಲಿ ಹಾಳೆ ಮತ್ತು ಒಂದು ಸೂಚಕ (ಇಂಡಿಕೇಟರ್) ಇವಿಷ್ಟು ಇರುತ್ತವೆ. ಕ್ರಮವೀಕ್ಷಕದ (ಸ್ಕ್ಯಾನರ್) ನೆಲೆಯನ್ನು ಭದ್ರಗೊಳಿಸಲು ಸೂಚಕ ನೆರವಾಗುತ್ತದೆ. ಸೂಚಕದ ಕೆಳಗೆ ಇರುವ ಚೌಕವೇ ಕ್ರಮವೀಕ್ಷಿಸಲ್ಪಡುವ ಚೌಕವಾಗುವಂತೆ ಸೂಚಕವನ್ನು ಪಟ್ಟಿಕೆಯ ಮೇಲೆ ನೆಲೆಗೊಳಿಸಬೇಕು.

ಸಂಖ್ಯೆಗಳನ್ನು 1ಗಳ ಒಂದು ಸರಣಿ ಆಗುವಂತೆ ಅತ್ಯಂತ ಸರಳವಿಧಾನದಲ್ಲಿ ಸೂಚಿಸಲಾಗುವುದು. ಸಂಖ್ಯೆಯ ಪ್ರಾರಂಭ ಮತ್ತು ಕೊನೆಯನ್ನು ಸೂಚಿಸಲು ಅದರ ಎರಡು ಕೊನೆಗಳಲ್ಲೂ X ಎಂದು ಬರೆಯುತ್ತೇವೆ. 4 ಮತ್ತು 2 ಸಂಖ್ಯೆಗಳನ್ನು ಚಿತ್ರ 10ರಲ್ಲಿ ತೋರಿಸಿರುವಂತೆ ಬರೆಯುತ್ತೇವೆ. ಪ್ರಾರಂಭದಲ್ಲಿ ಸೂಚಕವನ್ನು ಪಟ್ಟಿಕೆಯ ಮೇಲೆ ಬಲಕೊನೆಯಲ್ಲಿರುವ 1ನ್ನು ಕ್ರಮವೀಕ್ಷಿಸುವಂತೆ ಇಡುತ್ತೇವೆ.

ಟ್ಯೂರಿಂಗ್ ಯಂತ್ರದಲ್ಲಿ ಯಾವುದೇ ಎರಡು ಸಂಖ್ಯೆಗಳನ್ನು ಕೂಡಿಸಲು ಬೇಕಾಗುವ ಕ್ರಮವಿಧಿಯನ್ನು (ಪ್ರೋಗ್ರಾಂ) ಮುಂದಿನ ಪುಟದ ಕೋಷ್ಟಕ 1 ರಲ್ಲಿ ಕೊಟ್ಟಿದೆ, ಮೊದಲನೆಯ ನೀಟಸಾಲು ಯಂತ್ರದ ಮುಖಫಲಕ ಅಳವಡಿಕೆಗಳನ್ನು (ಡಯಲ್ ಸೆಟ್ಟಿಂಗ್ಸ್) ಪ್ರತಿನಿಧಿಸುತ್ತದೆ. ☐, 1 ಮತ್ತು x ಪ್ರತೀಕಗಳು ಕ್ರಮವೀಕ್ಷಕ ನೋಡಬಹುದಾದ್ದನ್ನು ಅನುಸರಿಸಿ ಇವೆ. ಈ ಕ್ರಮವಿಧಿಯ ಒಂದು ನಿರ್ದೇಶನವನ್ನು ಕಾರ್ಯಗತ ಮಾಡಲು ಮುಖಫಲಕ ಅಳವಡಿಕೆ ಸೂಚಿಸುವ ಅಡ್ಡ ಸಾಲಿನಲ್ಲಿ ಮತ್ತು ಗಣಕ ನೋಡುವ ನೀಟಸಾಲು ಸೂಚಿಕೆಯಲ್ಲಿ ಕೋಷ್ಟಕವನ್ನು ಪ್ರವೇಶಿಸಬೇಕು. ಪ್ರಾರಂಭದ ಸ್ಥಾನದಲ್ಲಿ ಮುಖಫಲಕ ಅಳವಡಿಕೆ 1 ಆಗಿದೆ. ಕ್ರಮವೀಕ್ಷಕ ನೋಡುವುದು ಒಂದು 1ನ್ನು. ಅಡ್ಡಸಾಲು 1 ಮತ್ತು ನೀಟಸಾಲು 1 ಎಂದು ಗುರುತು ಮಾಡಿರುವಲ್ಲಿ ನಿರ್ದೇಶನಗಳನ್ನು ಗಮನಿಸಬೇಕು. ಪಟ್ಟಿಕೆಯನ್ನು ಬಲಕ್ಕೆ ಚಲಿಸು ಮತ್ತು ಫಲಕವನ್ನು 1 ರಲ್ಲಿ ಅಳವಡಿಸು' ಎಂಬುದಾಗಿ ಅಲ್ಲಿ ನಿರ್ದೇಶನ ಉಂಟು. ಈಗ ನಮ್ಮ ಫಲಕ ಅಳವಡಿಕೆ ಪುನಃ 1 ಮತ್ತು ಕ್ರಮವೀಕ್ಷಕ ನೋಡುವುದು ಇನ್ನೊಂದು 1 ನ್ನು. ನಿರ್ದೇಶನ ಪುನಃ ಬಲಕ್ಕೆ ಚಲಿಸು 1 ನ್ನು ಅಳವಡಿಸು' ಎಂಬುದಾಗಿ ಇದೆ. ಮುಂದಿನ ನಡೆಯಲ್ಲಿ ಫಲಕ ಅಳವಡಿಕೆ 1 ಆಗಿದ್ದರೆ ಕ್ರಮವೀಕ್ಷಕ ನೋಡುವುದು ಒಂದು x ನ್ನು. ಹೊಸ ನಿರ್ದೇಶನ x ನ್ನು ಅಳಿಸು 2 ನ್ನು ಅಳವಡಿಸು' ಎಂದಿದೆ. ಮುಂದಿನ ನಡೆಯಲ್ಲಿ ಕ್ರಮವೀಕ್ಷಕ ನೋಡುವುದು ಒಂದು ಖಾಲಿ ಚೌಕವನ್ನು. ಇಲ್ಲಿನ ಅನುರೂಪ ನಿರ್ದೇಶನ ಬಲಕ್ಕೆ ಚಲಿಸು 2 ನ್ನು ಅಳವಡಿಸು ಎಂದಿದೆ. ಈ ಮುನ್ನಡೆಯನ್ನು ನಿಲ್ಲಿಸು ನಿರ್ದೇಶನ ಬರುವವರೆಗೂ ಮುಂದುವರಿಸಿದರೆ ಆಗ ಪಟ್ಟಿಕೆಯ ಮೇಲೆ ಉತ್ತರವನ್ನು ಕಾಣಬಹುದು. ಎಲ್ಲಾದರೂ ಒಂದು ತಪ್ಪಾದ ನಡೆಯಾಗಿ ಇದ್ದರೆ ಆಗ 'ದೋಷ-ಪುನಃ ಮಾಡು' ಎಂಬ ನಿರ್ದೇಶನದಲ್ಲಿ ನಮ್ಮ ನಡೆ ನಿಲ್ಲುತ್ತದೆ.

ಕೋಷ್ಟಕ I

| ಮುಖ ಫಲಕದ ಅಳವಡಿಕೆ | | ☐ | X | 1 |
|---|---|---|---|---|
| | 1 | 1 ನ್ನು ಬರೆ<br>6 ನ್ನು ಅಳವಡಿಸು | X ನ್ನು ಅಳಿಸು<br>2 ನ್ನು ಅಳವಡಿಸು | ಬಲಕ್ಕೆ ಚಲಿಸು<br>1 ನ್ನು ಅಳವಡಿಸು |
| | 2 | ಬಲಕ್ಕೆ ಚಲಿಸು<br>2 ನ್ನು ಅಳವಡಿಸು | X ನ್ನು ಅಳಿಸು<br>3 ನ್ನು ಅಳವಡಿಸು | ದೋಷ<br>ಪುನಃ ಮಾಡು |
| | 3 | ಬಲಕ್ಕೆ ಚಲಿಸು<br>3 ನ್ನು ಅಳವಡಿಸು | X ನ್ನು ಅಳಿಸು<br>4 ನ್ನು ಅಳವಡಿಸು | 1 ನ್ನು ಅಳಿಸು<br>5 ನ್ನು ಅಳವಡಿಸು |
| | 4 | ಎಡಕ್ಕೆ ಚಲಿಸು<br>4 ನ್ನು ಅಳವಡಿಸು | ದೋಷ<br>ಪುನಃ ಮಾಡು | ಬಲಕ್ಕೆ ಚಲಿಸು<br>6 ನ್ನು ಅಳವಡಿಸು |
| | 5 | ಎಡಕ್ಕೆ ಚಲಿಸು<br>5 ನ್ನು ಅಳವಡಿಸು | ದೋಷ<br>ಪುನಃ ಮಾಡು | ಬಲಕ್ಕೆ ಚಲಿಸು<br>1 ನ್ನು ಅಳವಡಿಸು |
| | 6 | X ನ್ನು ಅಳಿಸು<br>6 ನ್ನು ಅಳವಡಿಸು | ನಿಲ್ಲಿಸು | ಬಲಕ್ಕೆ ಚಲಿಸು<br>3 ನ್ನು ಅಳವಡಿಸು |

ಈ ಮೇಲಿನದು ಯಾವುದೇ ಎರಡು ಸಂಖ್ಯೆಗಳನ್ನು ಯಾಂತ್ರಿಕವಾಗಿ ಕೂಡಿಸುವ ಒಂದು ವಿಧಾನ. ಟ್ಯೂರಿಂಗ್ ಯಂತ್ರವನ್ನು ಗುಣಾಕಾರ, ಭಾಗಾಕಾರ ಘಾತಾರೋಪಣ (ಎಕ್ಸ್ ಪೋನೆನ್ಶಿಯೇಷನ್) ಇವೇ ಮುಂತಾದ ಕೈವಾಡ ಪರಿಕರ್ಮಗಳಲ್ಲಿ (ಮೆನಿಪ್ಯುಲೇಷನ್ ಆಪರೇಷನ್ಸ್) ಬಳಸಬಹುದು. ಇದು ಹೇಗೂ ಇರಲಿ. ಟ್ಯೂರಿಂಗ್ ಯಂತ್ರ ಆರ್ಥಿಕವಾಗಿ ಸಾಧುವಾದ ರಚನೆ ಅಲ್ಲ. ಅಲ್ಲದೇ ಇದು ಬಲು ಕಾಲಾವಕಾಶವನ್ನು ಕಬಳಿಸುವಂಥದು. ಗಣಿತದ ಲೆಕ್ಕಾಚಾರಗಳನ್ನು ನಡೆಸಲು ಹೇಗೆ

ಒಂದು ಯಾಂತ್ರಿಕ ವ್ಯವಸ್ಥೆಯನ್ನು ಏರ್ಪಡಿಸಬಹುದು ಎಂಬುದನ್ನು ನಿದರ್ಶಿಸಲು ಈ ಯಂತ್ರದ ಉಲ್ಲೇಖವನ್ನು ಇಲ್ಲಿ ಮಾಡಿದೆ ಅಷ್ಟೆ.

ಗೂಡುಗಳಿರುವ ಯಂತ್ರ (ಪಿಜನ್ ಹೋಲ್ ಮಶೀನ್) ; ಇಂದು ಬಳಕೆಯಲ್ಲಿರುವ ಅಂಕಗಣಕಗಳಿಗೆ ಸಂಖ್ಯೆಗಳನ್ನು ಜ್ಞಾಪಕಕ್ಕೆ ತಂದುಕೊಂಡು ಬೇಕಾದಷ್ಟು ಕಾಲ ಅವನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಉಂಟು. ಈ ಸಂಖ್ಯೆಗಳನ್ನು ಗಣಕದ ಜ್ಞಾಪಕಾಂಗದ (ಮೆಮರಿ ಯೂನಿಟ್) ಪೂರ್ವನಿರ್ಧರಿತ ಸ್ಥಳಗಳಲ್ಲಿ ದಾಸ್ತಾನಿಸಲಾಗುತ್ತದೆ. ಅವಶ್ಯವಾದಾಗ ಇವನ್ನು ಒಂದು ನಿರ್ದಿಷ್ಟಜ್ಞಾಪಕ ವಿಳಾಸದಲ್ಲಿ ಹುಡುಕಿ ಪ್ರಕಾಶಕ್ಕೆ ತರಬಹುದು. ಸಾರಭೂತವಾಗಿ ಈ ಜ್ಞಾಪಕ ನೆಲೆಗಳು ಅಂಚೆ ಕಚೇರಿಯಲ್ಲಿನ ವಿಳಾಸಯುತವಾದ ಗೂಡುಗಳಂತಿವೆ.

ಒಂದು ಗಣಕದಲ್ಲಿನ ಜ್ಞಾಪಕಾಂಗಗಳ ಕ್ರಿಯೆಯನ್ನು ಈ ಕೆಳಗಿನ ಉದಾಹರಣೆಯಿಂದ ವಿವರಿಸಬಹುದು. ಈ ಪರಿಕರ್ಮವನ್ನು ಮಾಡಲು ಯಂತ್ರದ ಭಾಗವಾಗಿ ಇಬ್ಬರು ವ್ಯಕ್ತಿಗಳು ಅವಶ್ಯ. ಇವರ ಪೈಕಿ ಒಬ್ಬ A ಆಗಿರಲಿ. ಇವನು ಸ್ವತಃ ಯೋಚಿಸಲಾರದ ಆದರೆ ದೊರೆತ ಒಂದು ನಿರ್ದೇಶನವನ್ನು ಲೋಪರಹಿತವಾಗಿ ನಿರ್ವಹಿಸಬಲ್ಲ ಒಬ್ಬ ಮಡ್ಡಿ ಎಂದು ಭಾವಿಸೋಣ. ಇದರೊಂದಿಗೆ ಈತನಿಗೆ ಕೂಡಿಸಲು, ಕಳೆಯಲು, ಗುಣಿಸಲು, ಭಾಗಿಸಲು, ಓದಲು ಮತ್ತು ಬರೆಯಲು ಬರುವುದೆಂದೂ ತಿಳಿಯೋಣ. ಎರಡನೆಯ ವ್ಯಕ್ತಿ B. ಇವನೊಬ್ಬ ಬುದ್ಧಿವಂತ. ಈತ A ಗೆ ಯೋಗ್ಯ ನಿರ್ದೇಶನಗಳನ್ನು ಕೊಡಬಲ್ಲ. ವ್ಯಕ್ತಿ A ಯಂತ್ರದ ಒಳಗೆ ಇರುತ್ತಾನೆ. ಒಂದು ಬಡುವಿನಲ್ಲಿರುವ ಗೂಡುಗಳು ಗಣಕದ ಜ್ಞಾಪಕ ನೆಲೆಗಳು ಎಂದು ಭಾವಿಸೋಣ. ಬಡುವಿನಲ್ಲಿರುವ ಪ್ರತಿಯೊಂದು ಗೂಡಿಗೂ ಸಂಖ್ಯೆಯನ್ನು ಕೊಡಲಾಗಿದೆ. ಈಗ A ಯ ಅನುಸರಣೆಗಾಗಿ B ನಿರ್ದೇಶನಗಳ ಒಂದು ಸಮುದಾಯವನ್ನೇ ತಯಾರಿಸುತ್ತಾನೆ. ಅವನು ಭಿನ್ನಪತ್ರಗಳ ಮೇಲೆ ಬೆರಳಚ್ಚಿಸಿ ಗೂಡುಗಳಲ್ಲಿ ಅನುಕ್ರಮವಾಗಿ ಇಡುವಂತೆ ತನ್ನ ಕಾರ್ಯದರ್ಶಿಗೆ B ವಿಧಿಸುತ್ತಾನೆ. ಒಂದು ವಾಸ್ತವ ಗಣಕದಲ್ಲಿ ಕಾರ್ಯದರ್ಶಿಯ ಬದಲಾಗಿ ಒಬ್ಬ ರಂಧ್ರಕ ಪರಿಕರ್ಮಿ (ಪಂಚ್ ಆಪರೇಟರ್) ನಿರ್ದೇಶನಪತ್ರಗಳ ಒಂದು ಸಮುದಾಯವನ್ನೇ ತಯಾರಿಸುತ್ತಾನೆ; ಮತ್ತು ಒಬ್ಬ ಕಾಂತಪತ್ರ ಓದುಗ (ಮ್ಯಾಗ್ನೆಟಿಕ್ ಕಾರ್ಡ್ ರೀಡರ್) ಅವನ್ನು ಒಂದಾದ ಬಳಿಕ ಇನ್ನೊಂದರಂತೆ ಓದುತ್ತ ಯೋಗ್ಯವಾದ ಜ್ಞಾಪಕಕೋಶಗಳಲ್ಲಿ ಇಡುತ್ತಾನೆ.

ಮೊದಲಲ್ಲಿ, B ಯು A ಗೆ ಪ್ರತಿಯೊಂದು ಹೊಸ ಕೆಲಸವನ್ನು ಒಂದನೆಯ ಸಂಖ್ಯೆಯ ಗೂಡಿನಲ್ಲಿ ಪ್ರಾರಂಭಿಸುವಂತೆ ನಿರ್ದೇಶಿಸುತ್ತಾನೆ. A ಒಂದನೆಯ ಪತ್ರವನ್ನು ಓದುತ್ತಾನೆ. ಅದು ಅವನಿಗೆ ಹೇಳುವ ಸಂಗತಿಗಳಿವು: (1) ನಿರ್ವಹಿಸಬೇಕಾಗಿರುವ ಪರಿಕರ್ಮದ ಬಗೆ (ಟೈಪ್ ಆಫ್ ಆಪರೇಷನ್): (2) ಪರಿಕರ್ಮವನ್ನು ಮಾಡಲು ಬೇಕಾದ ಮಾಹಿತಿಯನ್ನು ಇವನಿಗೆ ಒದಗಿಸಬಲ್ಲ ಗೂಡಿನ ಸಂಖ್ಯೆ; ಮತ್ತು (3) ಮುಂದಿನ ನಿರ್ದೇಶನವನ್ನು ಪಡೆಯಲು ಯಾವ ಗೂಡಿಗೆ ಹೋಗಬೇಕು. ಈ ಸನ್ನಿವೇಶದಿಂದ ಮುಂದಕ್ಕೆ ನಡೆ ಯಾಂತ್ರಿಕ. ಏಕೆಂದರೆ ಪ್ರತಿಸಲವೂ ಮೂರನೆಯ ಮಾಹಿತಿ ಆತನಿಗೆ ಮುಂದಿನ ನಿರ್ದೇಶನವನ್ನು ಪಡೆಯಬಲ್ಲ ಮುಂದಿನ ಗೂಡಿನ ವಿಳಾಸವನ್ನು ತಿಳಿಸುತ್ತದೆ. ಮೂರನೆಯ ಆಜ್ಞೆಯ ಗೈರು ಹಾಜರಿಯಲ್ಲಿ ಆತ ಮುಂದಿನ ಗೂಡಿಗೆ, ಅಂದರೆ 2, ತಾನಾಗಿಯೇ ತೆರಳುತ್ತಾನೆ.

A ಗೆ ಬೇರೆ ಬೇರೆ ಬಗೆಗಳ ನಿರ್ದೇಶನಗಳನ್ನು B ನೀಡಬೇಕಾಗಿರುವುದರಿಂದ ಇಂಥವುಗಳಿಗಾಗಿ ಭಿನ್ನವರ್ಣಗಳ ಪತ್ರಗಳನ್ನು B ಯ ಕಾರ್ಯದರ್ಶಿ ಉಪಯೋಗಿಸುವುದು ಹೆಚ್ಚು ಅನುಕೂಲ. ಮೇಲಿನ ಮೂರು ಆಜ್ಞೆಗಳನ್ನು ಒಳಗೊಂಡಿರುವ, ಮೇಲೆ ವಿವರಿಸಿದಂಥ ಒಂದು ನಿರ್ದೇಶನದ ಬಗ್ಗೆ ಹಸುರು ಪತ್ರವನ್ನು ಉಪಯೋಗಿಸಬಹುದು. ದತ್ತಾಂಶವಾಗಿ (ಡ್ಯಾಟ) ಕೊಟ್ಟ ಸಂಖ್ಯೆಗಳನ್ನು ಒಳಗೊಂಡಿರುವ ಪತ್ರಗಳು ಕೆಂಪು ಬಣ್ಣದವಾಗಿರಬಹುದು. ಗೂಡು 1ರಲ್ಲಿನ ಹಸುರು ನಿರ್ದೇಶನ ಪಾತ್ರ A ಯನ್ನು ಇನ್ನೊಂದು ಗೂಡಿನೆಡೆಗೆ (587ಕ್ಕೆ ಎನ್ನೋಣ) ಆಜ್ಞಾಪಿಸುತ್ತದೆ. ಅಲ್ಲಿಗೆ ಆತ ಹೋಗಿ ಕೆಂಪು ದತ್ತಾಂಶ ಪತ್ರವನ್ನು ಪಡೆದುಕೊಳ್ಳಬೇಕು. ಆ ಪತ್ರದಲ್ಲಿ ಅವನೊಂದು ಸಂಖ್ಯೆಯನ್ನು, 3755, ನೋಡುತ್ತಾನೆ. ಅದನ್ನು ತನ್ನ ಟಿಪ್ಪಣಿ ಪುಸ್ತಕದಲ್ಲಿ ಗುರುತಿಸಿಕೊಳ್ಳುತ್ತಾನೆ. ಬಳಿಕ ಅವನು ಗೂಡು 2ಕ್ಕೆ ಮುನ್ನಡೆದು ಅಲ್ಲಿ ಮುಂದಿನ ನಿರ್ದೇಶನವನ್ನು ಪಡೆಯುತ್ತಾನೆ. ಅದು ಆತನಿಗೆ ಗೂಡು 45ಕ್ಕೆ ಹೋಗಿ ಅಲ್ಲಿ ದೊರೆಯುವುದನ್ನು ಈಗಾಗಲೇ ಟಿಪ್ಪಣಿ ಪುಸ್ತಕದಲ್ಲಿ ಗುರುತಿಸಿಕೊಂಡಿರುವುದಕ್ಕೆ ಕೂಡಿಸಬೇಕೆಂದು ಆಜ್ಞಾಪಿಸುತ್ತದೆ. ಅವನು ಗೂಡು 45ಕ್ಕೆ ಹೋಗುತ್ತಾನೆ ಮತ್ತು ಅಲ್ಲಿ 2244 ಬರೆದಿರುವ ಒಂದು ಕೆಂಪು ಪತ್ರವನ್ನು ಕಾಣುತ್ತಾನೆ. ಎರಡೂ ಸಂಖ್ಯೆಗಳನ್ನು ಅವನು ಕೂಡಿಸಿ 5999 ನ್ನು ಪಡೆಯುತ್ತಾನೆ. ಹಸುರು ಮತ್ತು ಕೆಂಪು ಪತ್ರಗಳ ಜೊತೆಗೆ ಬೇರೆ ಒಂದು ಬಗೆಯ ನಿರ್ದೇಶನವನ್ನು ಸಹ ನಾವು ಸೇರಿಸಬಹುದು. ಉದಾಹರಣೆಗೆ ನೀಲಪತ್ರಗಳ ಮೇಲೆ A ಹಲವಾರು ಸಂಕಲನ ವ್ಯವಕಲನ, ಗುಣಾಕಾರ ಹಾಗೂ ಭಾಗಾಕಾರಗಳನ್ನು ಮಾಡಿದ ತರುವಾಯ ಫಲಿತ ಸಂಖ್ಯೆಯಾಗಿ X ನ್ನು ಪಡೆಯುತ್ತಾನೆಂದು ಭಾವಿಸೋಣ. ಇದೇ ಪ್ರಕಾರ ಅವನು ಇನ್ನೊಂದು ಸಂಖ್ಯೆ Y ಯನ್ನು ಪಡೆಯುತ್ತಾನೆ. ಮುಂದಿನ ನಿರ್ದೇಶನಕ್ಕಾಗಿ ಗೂಡು 75 ಕ್ಕೆ ಹೋಗಬೇಕೆಂದು ಆಜ್ಞಾಪಿಸಲ್ಪಟ್ಟಾಗ ಅವನೆದುರು ಒಂದು ನೀಲಪತ್ರ ಬರುತ್ತದೆಂದು ಭಾವಿಸೋಣ. ಅದರಲ್ಲಿ 'x,y ಗಿಂತ ಅಧಿಕವಾಗಿದ್ದರೆ ಮುಂದಿನ ನಿರ್ದೇಶನ ಪಡೆಯಲು ಗೂಡು 84ಕ್ಕೆ ಹೋಗು' ಎಂದಿರುವುದು. x,y ಗಿಂತ ಅಧಿಕವಲ್ಲದಿದ್ದರೆ –ಅನುಕ್ರಮ ಸರಣಿಯಲ್ಲಿ ಮುಂದಿನ ಗೂಡಿಗೆ ಹೋಗಬೇಕು ಎಂಬುದು ಆತನ ತಿಳಿವಳಿಕೆ. ಆದ್ದರಿಂದ ನೀಲಪತ್ರದ ಮೇಲೆ ಒಂದು ನಿರ್ಬಂಧಿತ ನಿರ್ದೇಶನ (ಕಂಡಿಷನಲ್ ಇನ್ಸ್‌ಟ್ರಕ್ಷನ್) ಉಂಟೆಂದೂ ಅದು A ಯನ್ನು ಎರಡು ನಿರ್ದಿಷ್ಟ ಪಥಗಳಲ್ಲಿ ಒಂದರ ಮೇಲೆ ಮಾತ್ರ ಸಾಗಲು ಅನುವುಮಾಡಿಕೊಡುವುದೆಂದು ಸ್ಪಷ್ಟವಾಗುತ್ತದೆ. ಕೊನೆಯದಾಗಿ ನಿರ್ದೇಶನಗಳ ಇನ್ನೊಂದು ವರ್ಗವನ್ನೇ, ಬಿಳಿ ಪತ್ರದ ಮೇಲೆನ್ನೋಣ, ಸೇರಿಸಬಹುದು. A ಈ ಪತ್ರವನ್ನು ಸಂಧಿಸುತ್ತಾನೆ ಎನ್ನೋಣ. ಅದರಲ್ಲಿ ಗೂಡು 235ರಲ್ಲಿ ಕಾಣುವ ಮೌಲ್ಯವನ್ನು P= ಎದುರು ಮುದ್ರಿಸು' ಎಂದಿರುವದೆಂದು ಭಾವಿಸೋಣ. ಆತ ಗೂಡು 235ಕ್ಕೆ ತೆರಳಿದಾಗ ಅಲ್ಲಿ ಒಂದು ಕೆಂಪು ಪತ್ರವನ್ನು ನೋಡುತ್ತಾನೆ. ಅದರ ಮೇಲೆ 73.53 ಸಂಖ್ಯೆ ಇರುವುದು. ಆತ ತನ್ನ ಟಿಪ್ಪಣಿ ಪುಸ್ತಕದಿಂದ ಒಂದು ಹಾಳೆಯನ್ನು ತೆರೆದು P= 73.53 ಎಂದು ಬರೆದು ಅದನ್ನು ಗಣಕದಿಂದ ಹೊರಕ್ಕೆ ಎಸೆಯುತ್ತಾನೆ.

ಇದು ಆಶ್ಚರ್ಯವೆಂದು ತೋರಬಹುದು. ಒಂದು ಎಲೆಕ್ಟ್ರಾನಿಕ್ ಅಂಕಗಣಕ ತನ್ನ ಕಾರ್ಯವನ್ನು ನಿರ್ವಹಿಸುವುದು ಮೇಲಿನ ವಿಧಾನದಂತೆಯೇ. ಒಂದೇ ಒಂದು ವ್ಯತ್ಯಾಸ ಎಂದರೆ A ಯು ಗಣಕದ ಅಂಕಗಣಿತೀಯ (ಅರಿತ್‌ಮೆಟಿಕ್) ಹಾಗೂ ನಿಯಂತ್ರಣ ಅಂಗಗಳನ್ನು ಪ್ರತಿನಿಧಿಸುತ್ತದೆ. ಈ ಯಾಂತ್ರಿಕ A ವ್ಯಕ್ತಿ A ಗಿಂತ ಲಕ್ಷಾಂತರ ಪಟ್ಟು ಚುರುಕಾಗಿ ಕಾರ್ಯವನ್ನು ನಡೆಸುವುದು. ವ್ಯಕ್ತಿ B ಯೇ ಕ್ರಮವಿಧಾಯಕ(ಪ್ರೋಗ್ರಾಮರ್) ಮತ್ತು ಆತನ ಕಾರ್ಯದರ್ಶಿ ರಂಧ್ರಕ ಪರಿಕರ್ಮಿ. ಸಮುಚಿತವಾದ ಗೂಡುಗಳಲ್ಲಿ ಬೇರೆ ಬೇರೆ ಬಣ್ಣದ ಪತ್ರಗಳನ್ನು ಇಡುವ ಕಾರ್ಯದರ್ಶಿಯ ಕೆಲಸ ಗಣಕದಲ್ಲಿ ಒಬ್ಬ ಪತ್ರ ಓದುಗ ಅಥವಾ ನಿವೇಶಾಂಗ ಒಂದು ಕ್ರಮವಿಧಿಯ ಸಜ್ಜನ್ನು ಕಾಂತೀಯವಾಗಿ ಓದಿ ಅದನ್ನು ವಿದ್ಯುತ್ ಸ್ಪಂದನಗಳಾಗಿ ಪರಿವರ್ತಿಸಿ ಫೆರ್ರೈಟ್ ಕೋಶಗಳಂಥ (ಫೆರ್ರೈಟ್ ಕೋರ್ಸ್) ಜ್ಞಾಪಕಕೋಶಗಳಲ್ಲಿ ಸಂಗ್ರಹಿಸಿಡುವುದಕ್ಕೆ ಸಮಾನವಾಗಿದೆ. ಸಂಕೇತೀಕೃತ ನಿರ್ದೇಶನಗಳನ್ನು (ಕೋಡೆಡ್ ಇನ್ಸ್‌ಟ್ರಕ್ಷನ್) ಒಳಗೊಂಡಿರುವ ಸಂಖ್ಯೆಗಳ ಮತ್ತು ದತ್ತಾಂಶಗಳಾಗಿರುವ ಸಂಖ್ಯೆಗಳ ನಡುವಿನ ವ್ಯತ್ಯಾಸ ಹಸುರು ಮತ್ತು ಕೆಲವು ಪತ್ರಗಳ ನಡುವಿನ ವ್ಯತ್ಯಾಸವನ್ನು ಪ್ರತಿನಿಧಿಸುತ್ತದೆ. ಒಂದು ಕ್ರಮವಿಧಿಯಲ್ಲಿನ ನಿರ್ಬಂಧಿತ ನಿರ್ದೇಶನವನ್ನು (ಕಂಡೀಷನಲ್ ಇನ್ಸ್‌ಟ್ರಕ್ಷನ್) ನೀಲಪತ್ರ ಪ್ರತಿನಿಧಿಸುತ್ತದೆ. Aಯ ಟಿಪ್ಪಣಿ ಪುಸ್ತಕ ಒಂದು ಅಂಕ ರಿಜಿಸ್ಟರಿಗೆ ಸಮಾನ. ಈ ಟಿಪ್ಪಣಿ ಪುಸ್ತಕದ ಒಂದು ಹಾಳೆಯನ್ನು ಹೊರಕ್ಕೆಸೆಯುವ ಕ್ರಿಯೆಗೆ ಸಮಾನವಾದದ್ದು. ಗಣಕದಲ್ಲಿ ಫಲಿತಾಂಶಗಳನ್ನು ಮುದ್ರಿಸುವುದು, ಈ ಉಪಮಾನವನ್ನು ಚೆನ್ನಾಗಿ ಚಿತ್ರಿಸಿಕೊಂಡು ಮುಂದುವರಿದಾಗ ಒಂದು ಅಂಕಗಣಕದ ಸಂಘಟನೆಯ ಚೌಕಟ್ಟು (ಆರ್ಗನೈಸೇಷನಲ್ ಫ್ರೇಮ್ ವರ್ಕ್) ಸ್ಪಷ್ಟವಾಗಿ ವೇದ್ಯವಾದೀತು.

**ಅಂಕಗಣಕದ ಸಂಘಟನೆ:** ಅಂಕಗಣಕದ ಯಾವ ತತ್ತ್ವಗಳ ಮೇಲೆ ಕ್ರಿಯೆ ನಡೆಸುತ್ತದೆ ಎನ್ನುವುದನ್ನು ಈಗ ವಿವರಿಸಿದ ಗೂಡು ಯಂತ್ರ ಎತ್ತಿ ತೋರಿಸುತ್ತದೆ. ಅಂಕಗಣಕದ ಭಾಗಗಳು ಹೇಗೆ ಸಂಘಟಿಸಲ್ಪಟ್ಟಿವೆ (ಆರ್ಗನೈಸ್ಡ್) ಎಂಬುದನ್ನು ಈ ವಿವರಣೆಯ ಹಿನ್ನೆಲೆಯಲ್ಲಿ ಸ್ಥೂಲನಕ್ಷೆಗಳನ್ನು (ಬ್ಲಾಕ್ ಡಯಾಗ್ರಂಸ್) ಬರೆದು ವಿವರಿಸಬಹುದು. ಒಂದು ಗಣಕದ ಆಂತರಿಕ ರಚನೆಯನ್ನು ಐದು ಹಂತಗಳಲ್ಲಿ ನಿರೂಪಿಸಬಹುದು.




**ಚಿತ್ರ 11**

ಹಂತ 1 : ಈ ಮೊದಲೇ ನೋಡಿರುವಂತೆ ಒಂದು ಅಂಕಗಣಕದ ಸಂಖ್ಯೆಗಳೊಡನೆ ವ್ಯವಹರಿಸುತ್ತದೆ. ಅದಕ್ಕೆ ಉಣಿಸಿದ ಸಂಖ್ಯೆಗಳನ್ನು ಅದು ಸ್ವೀಕರಿಸಿ ಅವುಗಳ ಮೇಲೆ ಪರಿಕರ್ಮಿಸುತ್ತದೆ(ಆಪರೇಟ್ಸ್). ಈ ಪ್ರಕ್ರಮದಲ್ಲಿ (ಪ್ರೋಸೆಸ್) ಹೊಸ ಸಂಖ್ಯೆಗಳು ಉಂಟಾಗುತ್ತವೆ. ಇವುಗಳ ಹೆಸರು ನಿರ್ಗಮ ಸಂಖ್ಯೆಗಳು. ಒಂದು ಗಣಕದ ಸರಳತಮ ಸ್ಥೂಲ ನಕ್ಷೆಯನ್ನು ಚಿತ್ರ 11ರಲ್ಲಿ ಕಾಣಿಸಿದೆ.

ಸಂಖ್ಯೆಗಳ ಮೇಲೆ ಗಣಕ ಬೇರೆ ಬೇರೆ ಬಗೆಯ ಪರಿಕರ್ಮಗಳನ್ನು ಮಾಡಬಲ್ಲುದು. ಹೆಚ್ಚಿನ ಪರಿಕರ್ಮಗಳು ವಾದಗಳು (ಆರ್ಗ್ಯುಮೆಂಟ್ಸ್) ಎಂದು ಕರೆಯಲ್ಪಡುವ ಎರಡು ಸಂಖ್ಯೆಗಳನ್ನು ಸಂಯೋಜಿಸಿ ಮೂರನೆಯ ಫಲಿತಾಂಶ(ರಿಸಲ್ಟೆಂಟ್) ಎಂಬ ಹೆಸರಿನ ಒಂದು ಸಂಖ್ಯೆಯನ್ನು ಉಂಟುಮಾಡುತ್ತವೆ. ಇಂಥ ಪರಿಕರ್ಮಗಳು ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಇಲ್ಲವೇ ಘಾತಾರೋಪಣ(ಎಕ್ಸ್‌ಪೊನೆನ್ಶಿಯೇಷನ್) ಆಗಿರಬಹುದು. ಗಣಕದ ಮೇಲೆ ಒಂದು ನಿರ್ಬಂಧ ಉಂಟು–ಅದು ಒಮ್ಮೆಗೆ ಒಂದು ಪರಿಕರ್ಮವನ್ನು ಮಾತ್ರ ನಿರ್ವಹಿಸಬಲ್ಲುದು. ಹಲವಾರು ಪರಿಕರ್ಮಗಳನ್ನು ಮಾಡ ಬೇಕಾದಾಗ ಗಣಕ ಅವನ್ನು ಒಂದು ನಿರ್ದಿಷ್ಟ ಸರಣಿಯಲ್ಲಿ ನಿರ್ವಹಿಸುತ್ತದೆ. ಅದು ಮಾಡಬೇಕಾದ ಪರಿಕರ್ಮಗಳಿಗೆ ನಿರ್ದೇಶನಗಳು (ಇನ್ಸ್‌ಟ್ರಕ್ಷನ್ಸ್) ಎಂದು ಹೆಸರು.

ಉದಾಹರಣೆಗೆ ಈ ಕೆಳಗಿನದರ ಮೌಲ್ಯವನ್ನು ಗಣಿಸಬೇಕಾಗಿದೆ (ಕಂಪ್ಯೂಟ್) ಎಂದು ಭಾವಿಸೋಣ.

$$z = \left(a^2 - b\right)\left(b + \frac{c}{\sqrt{b}}\right)$$

ಕೋಷ್ಟಕ; ಆಗ ಒಂದು ಗಣಕದಲ್ಲಿ ಇದನ್ನು ಮಾಡಲು ನೀಡುವ ನಿರ್ದೇಶನದ ಸರಣಿ ಈ ಕೆಳಗಿನ ಕೋಷ್ಟಕದಲ್ಲಿ ಬರೆದಂತಿದೆ.

**ಕೋಷ್ಟಕ 2**

| | ಪರಿಕರ್ಮ | ವಾದ1 | ವಾದ2 | ಫಲಿತಾಂಶ |
|---|---|---|---|---|
| ನಿರ್ದೇಶನ 1 | ಘಾತಾರೋಪಣ | a | 2 | $d=a^2$ |
| ನಿರ್ದೇಶನ 2 | ವ್ಯವಕಲನ | b | b | e=d-b |
| ನಿರ್ದೇಶನ 3 | ಘಾತಾರೋಪಣ | c | 0.5 | $f=b^{0.5}$ |
| ನಿರ್ದೇಶನ 4 | ಭಾಗಾಕಾರ | d | f | g=c/f |
| ನಿರ್ದೇಶನ 5 | ಸಂಕಲನ | e | g | h=b+g |
| ನಿರ್ದೇಶನ 6 | ಗುಣಾಕಾರ | f | H | z=e.h |

ನಿರ್ದೇಶನ 1ನ್ನು ಗಣಕ ಮೊದಲು ಕಾರ್ಯಗತಗೊಳಿಸುತ್ತದೆ. ಬಳಿಕ ಅದು 2, 3, 4, 5, 6 ಈ ನಿರ್ದೇಶನಗಳನ್ನು ಇದೇ ಕ್ರಮದಲ್ಲಿ ಕಾರ್ಯಗತಗೊಳಿಸುತ್ತದೆ.




ಚಿತ್ರ 12

ಹಂತ 2 : ಗಣಕವನ್ನು ಎರಡು ಪ್ರಧಾನ ಭಾಗಗಳಾಗಿ ವಿಭಾಗಿಸಬಹುದು; ಚಿತ್ರ 12ರಲ್ಲಿ ತೋರಿಸಿರುವಂತೆ ಜ್ಞಾಪಕಾಂಗ (ಮೆಮೊರಿ ಯೂನಿಟ್) ಮತ್ತು ಗಣನಾಂಗ (ಕಂಪ್ಯೂಟಿಂಗ್ ಯೂನಿಟ್). ಜ್ಞಾಪಕಾಂಗ ಸಂಖ್ಯೆಗಳನ್ನೂ ನಿರ್ದೇಶನಗಳನ್ನೂ ದಾಸ್ತಾನಿಸಿಕೊಳ್ಳುತ್ತದೆ. ಉದಾಹರಣೆಗೆ, ಮೇಲಿನ ನಿರ್ದೇಶನ 1ಕ್ಕೆ ಬೇಕಾಗಿರುವ ವಾದಗಳಾದ a ಮತ್ತು 2ನ್ನು ಜ್ಞಾಪಕಾಂಗ ದಾಸ್ತಾನಿಸುವುದರ ಜೊತೆಗೆ ಫಲಿತಾಂಶ dಯನ್ನು ಸಹ ದಾಸ್ತಾನಿಸಿಕೊಳ್ಳುತ್ತದೆ. ನಿರ್ದೇಶನ 1ನ್ನು ನೆರವೇರಿಸಿದ ಬಳಿಕ ನಿರ್ದೇಶನ 2 ಸುಲಭವಾಗಿ ಜ್ಞಾಪಕದಲ್ಲಿ ದೊರೆಯುತ್ತದೆ. ಈ ನಿರ್ದೇಶನದ ಒಂದು ವಾದ d. ಜ್ಞಾಪಕಾಂಗದಲ್ಲಿ ಕೂಡ ನಿರ್ದೇಶನಗಳು ದಾಸ್ತಾನಾಗಿರುತ್ತವೆ. ಗೂಡುಯಂತ್ರದಲ್ಲಿ ವ್ಯಕ್ತಿ A ಹೇಗೆ ವರ್ತಮಾನ ನಿರ್ದೇಶನದ ಒಂದು ಅಂಶವಾಗಿ ಮುಂದಿನ ನಿರ್ದೇಶನದ ಸ್ಥಾನಕ್ಕೆ ಮುನ್ನಡೆಸಲ್ಪಟ್ಟನೋ ಹಾಗೆ ಗಣಕದಲ್ಲಿ ಪ್ರತಿಯೊಂದು ನಿರ್ದೇಶನವೂ ಅದರ ನಿರ್ವಹಣೆ ಆಗಬೇಕಾದಾಗ ಗಣನಾಂಗಕ್ಕೆ ಪ್ರೇಷಿಸಲ್ಪಡುತ್ತದೆ (ಟ್ರಾನ್ಸ್‌ಮಿಟೆಡ್). ಮೇಲಿನ ಉದಾಹರಣೆಯಲ್ಲಿ, ಮೊದಲಾಗಿ ನಿರ್ದೇಶನ 1 ಜ್ಞಾಪಕಾಂಗದಿಂದ ಗಣನಾಂಗಕ್ಕೆ ಪ್ರೇಷಿಸಲ್ಪಡುತ್ತದೆ. ಇದು ನಿರ್ವಹಿಸಲ್ಪಟ್ಟ ಬಳಿಕ ನಿರ್ದೇಶನ 2 ಪ್ರೇಷಿಸಲ್ಪಡುತ್ತದೆ. ಈ ಮುನ್ನಡೆ ನಿರ್ದೇಶನ ನಿರ್ವಹಿಸಲ್ಪಡುವವರೆಗೂ ಮುಂದುವರಿಯುವುದು.

ಗಣಕದ ಒಳಗೆ ಜ್ಞಾಪಕಾಂಗವನ್ನು ನೆಲೆಗೊಳಿಸುವುದರಿಂದ ಸ್ಪಷ್ಟವಾದ ಒಂದು ಅನುಕೂಲತೆ ಉಂಟು. ಇಂಥ ಜ್ಞಾಪಕಾಂಗ ಹಾಗೂ ಗಣನಾಂಗಗಳ ನಡುವೆ ಸಂಖ್ಯೆಗಳನ್ನೂ ನಿರ್ದೇಶನಗಳನ್ನೂ ಅತ್ಯುಚ್ಚ ವೇಗದಲ್ಲಿ ಪ್ರೇಷಿಸಬಹುದು. ಆಧುನಿಕ ಗಣಕದಲ್ಲಿ ಇಂಥ ಪ್ರೇಷಣಗಳು ಪ್ರತಿ ಸೆಕೆಂಡಿಗೆ ಹತ್ತು ಲಕ್ಷಕ್ಕಿಂತಲೂ ಹೆಚ್ಚು ನೆರವೇರಬಲ್ಲುವು. ಇದರಿಂದಾಗಿ ಗಣನೆ ತೀವ್ರ ವೇಗದಿಂದ ಉತ್ತರೋತ್ತರವಾಗಿ ನಡೆಯುವುದು ಸಾಧ್ಯವಾಗುತ್ತದೆ.

ಗಣಕ ಸಂಕೀರ್ಣವೊಂದರ ಜ್ಞಾಪಕಾಂಗ ಮತ್ತು ನಿಯಂತ್ರಣ ಫಲಕ

ಹಂತ 3; ಗಣಕ ನಿರ್ವಹಿಸುವ ಎರಡು ಪಾತ್ರಗಳನ್ನು ಹಂತ 2 ಸೂಚಿಸುತ್ತದೆ; ಎಂದರೆ (1) ಜ್ಞಾಪಕಾಂಗದಿಂದ ನಿರ್ದೇಶನಗಳನ್ನು ಪಡೆಯುವುದು ಹಾಗೂ ಅರ್ಥವಿಸುವುದು, ಮತ್ತು (2) ವಾಸ್ತವ ಪರಿಕರ್ಮಗಳನ್ನು ನಿರ್ವಹಿಸುವುದು. ಇವೆರಡು ಕ್ರಿಯೆಗಳಲ್ಲಿ ಮೊದಲಿನದನ್ನು ಗಣನಾಂಗದ (ಕಂಪ್ಯೂಟಿಂಗ್ ಯೂನಿಟ್) ಒಂದು ಭಾಗ ಮಾಡುತ್ತದೆ. ಇದರ ಹೆಸರು ನಿಯಂತ್ರಣಾಂಗ (ಕಂಟ್ರೋಲ್ ಯೂನಿಟ್). ಉಳಿದ ಭಾಗ ಎರಡನೆಯ ಕ್ರಿಯೆಯನ್ನು ಮಾಡುವುದು. ಇದರ ಹೆಸರು ಅಂಕ ಗಣಿತಾಂಗ (ಅರಿತ್‌ಮೆಟಿಕಲ್ ಯೂನಿಟ್). ಇದನ್ನು ಚಿತ್ರ 13ರಲ್ಲಿ ತೋರಿಸಿದೆ.




ಚಿತ್ರ 13

ಅಂಕಗಣಿತಾಂಗ ಜ್ಞಾಪಕಾಂಗದಿಂದ ವಾದವನ್ನು ತೆಗೆದುಕೊಂಡು ಫಲಿತಾಂಶವನ್ನು ಜ್ಞಾಪಕಾಂಗಕ್ಕೆ ಮರಳಿಸುತ್ತದೆ. ನಿಯಂತ್ರಣಾಂಗ ಜ್ಞಾಪಕಾಂಗದಿಂದ ನಿರ್ದೇಶನವನ್ನು ತೆಗೆದುಕೊಂಡು ಜ್ಞಾಪಕಾಂಗದಿಂದ ಸಂಖ್ಯೆಗಳನ್ನು ಹಿಂದೆ ಮತ್ತು ಮುಂದೆ ನಿಯಂತ್ರಿಸು ವುದಲ್ಲದೆ ಅಂಕಗಣಿತಾಂಗದಲ್ಲಿನ ಗಣಿತ ಪರಿಕರ್ಮಗಳ ಆಯ್ಕೆಯನ್ನೂ ನಿಯಂತ್ರಿಸುತ್ತದೆ.

ಹಂತ 4 : ನಿಯಂತ್ರಣಾಂಗ ಸ್ವತಃ ಎರಡು ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಹಂತ 3 ರಿಂದ ಸ್ಪಷ್ಟವಾಗುತ್ತದೆ; (1) ನಿರ್ದೇಶನವನ್ನು ಅರ್ಥವಿಸುವುದು, ಮತ್ತು (2) ಈ ನಿರ್ದೇಶನಾನುಸಾರ ಗಣಕಾಂಗವನ್ನು ನಿಯಂತ್ರಿಸುವುದು. ಮೊದಲಿನ ಕ್ರಿಯೆಯನ್ನು ನಿರ್ದೇಶನದ ವಿಸಂಕೇತವೂ (ಇನ್ಸ್‌ಟ್ರಕ್ಷನ್ ಡಿಕೋಡರ್) ಎರಡನೆಯದನ್ನು ನಿಯಂತ್ರಣ ಜನಕವೂ (ಕಂಟ್ರೋಲ್ ಜನರೇಟರ್) ನಿರ್ವಹಿಸುತ್ತದೆ.

ಒಂದು ನಿರ್ದೇಶನವನ್ನು, ಉದಾಹರಣೆಗೆ ಮೇಲಿನ ನಿರ್ದೇಶನ– 1, ನಿರ್ದೇಶನ ವಿಸಂಕೇತಕಕ್ಕೆ ಒಯ್ಯಲಾಗುತ್ತದೆ. ಇಲ್ಲಿ ವಿಸಂಕೇತಿಕರಣದ ಪರಿಕರ್ಮ ನಿರ್ದೇಶನವನ್ನು ಹಲವಾರು ಪ್ರಾಥಮಿಕ ಕರ್ತವ್ಯಗಳಾಗಿ ಒಡೆಯುತ್ತದೆ. ಈ ಕರ್ತವ್ಯಗಳಿಗೋಸ್ಕರ

ಗಣಕದಲ್ಲಿ ನಿರ್ದಿಷ್ಟವಾದ ಎಲೆಕ್ಟ್ರಾನಿಕ್ ಯಂತ್ರಾಂಶಗಳಿವೆ (ಎಲೆಕ್ಟ್ರಾನಿಕ್ ಹಾರ್ಡ್‌ವೇರ್ಸ್). ವಿವಿಧ ಪ್ರಾಥಮಿಕ ಪರಿಕರ್ಮಗಳಲ್ಲಿ ನಿರ್ದೇಶನ ಯಾವುವುಗಳನ್ನು ಮತ್ತು ಯಾವ ಅನುಕ್ರಮದಲ್ಲಿ ಉದ್ದೇಶಿಸಿದೆ ಎಂಬುದನ್ನು ನಿಯಂತ್ರಣ ಜನಕ ವಾಸ್ತವಿಕವಾಗಿ ಅರಿತುಕೊಳ್ಳುತ್ತದೆ. ಬಳಿಕ ಅದು ಸಂಕೇತೀಕೃತ ಸಂಜ್ಞೆಗಳನ್ನು (ಕೋಡೆಡ್ ಸಿಗ್ನಲ್ಸ್) ಉತ್ಪಾದಿಸುವುದು. ಇವು ದತ್ತ ಅನುಕ್ರಮದಲ್ಲಿ ವಿವಿಧ ಅಂಕಗಣಿತ ಪರಿಕರ್ಮಗಳಿಗೆ ಪಥಗಳನ್ನು ತೆರೆಯುತ್ತವೆ. ನಿಯಂತ್ರಣಜನಕ ಜ್ಞಾಪಕನೆಲೆಗಳನ್ನು ಕುರಿತ ವಿಳಾಸಗಳನ್ನು ಸಂಜ್ಞೆಗಳ ರೂಪದಲ್ಲಿ ಉತ್ಪಾದಿಸುತ್ತದೆ ಕೂಡ. ಇವು ಅನುರೂಪ ಜ್ಞಾಪಕಕೋಶಗಳಿಂದ ಗಣನಾಂಗಕ್ಕೆ ಇಲ್ಲವೇ ವಿಪರ್ಯವಾಗಿ (ವೈಸಿ ವರ್ಸ) ಪಥಗಳನ್ನು ತೆರೆಯುತ್ತವೆ. ಮುಂದಿನ ನಿರ್ದೇಶನವನ್ನು ನಿಯಂತ್ರಣಾಂಗಕ್ಕೆ ಯಾವಾಗ ಒಯ್ಯಬಹುದೆಂಬುದನ್ನು ಸಹ ನಿಯಂತ್ರಣಜನಕ ಅರಿಯಬಲ್ಲುದು. ಪರಿಕರ್ಮದಲ್ಲಿನ ಈ ವ್ಯತ್ಯಾಸಗಳನ್ನು ಸೂಚಿಸುವ ಸ್ಥೂಲನಕ್ಷೆಯನ್ನು ಚಿತ್ರದಲ್ಲಿ ಕಾಣಿಸಿದೆ.

ಹಂತ 5; ಹಂತ 4 ಒಂದು ಅಂಕಗಣಕದ ಹೊರವಲಯದ ಅಂಗಗಳನ್ನುಳಿದು (ಎಂದರೆ ನಿವೇಶಾಂಗ ಮತ್ತು ನಿರ್ಗಮಾಂಗಗಳನ್ನುಳಿದು) ಮಿಕ್ಕ ಎಲ್ಲ ಆಧಾರಾಂಗ ಗಳನ್ನೂ ವಿವರಿಸುತ್ತದೆ.

ಗೂಡುಯಂತ್ರದಲ್ಲಿ Bಯ ಕಾರ್ಯದರ್ಶಿ ಹಸುರು ಮತ್ತು ಕೆಂಪು ಪತ್ರಗಳನ್ನು ಸೂಕ್ತ ಗೂಡುಗಳಲ್ಲಿ ಇಡುವಾಗ ಮಾಡುವ ಕ್ರಿಯೆಗೆ ಸಂವಾದಿಯಾಗಿ ಗಣಕದಲ್ಲಿ ನಿವೇಶಾಂಗ ಉಂಟೆಂಬುದನ್ನು ಇಲ್ಲಿ ನೆನೆಯಬಹುದು. ವ್ಯಕ್ತಿ A ಉತ್ತರವನ್ನು ತನ್ನ ಟಿಪ್ಪಣಿ ಪುಸ್ತಕದ ಒಂದು ಹಾಳೆಯ ಮೇಲೆ ಬರೆದು ಅದನ್ನು B ಗೆ ಕೊಡುವ ಕ್ರಿಯೆಗೆ ಸಂವಾದಿಯಾಗಿ ನಿರ್ಗಮಾಂಗ ಉಂಟು. ಎಷ್ಟು ಸಾಧ್ಯವೋ ಅಷ್ಟೂಪರಿಕರ್ಮ ಗಳನ್ನು ಯಾಂತ್ರಿಕವಾಗಿ ನಡೆಸಬೇಕಾಗಿರುವುದರಿಂದ ಮೇಲಿನ ಕ್ರಿಯೆಗಳನ್ನು ಕೂಡ ಯಂತ್ರಗಳೇ ಸ್ವತಃ ನಿರ್ವಹಿಸುವುದು ಯೋಗ್ಯ. ನಿರ್ದೇಶನಗಳನ್ನೂ ನಿವೇಶಸಂಖ್ಯೆ ಗಳನ್ನೂ ಒಳಗೊಂಡಿರುವ ರಂಧ್ರಿತ ಪತ್ರಗಳನ್ನು ತಯಾರಿಸಿದ ಬಳಿಕ ಮಾಹಿತಿಯ ಪ್ರೇಷಣೆ (ಟ್ರಾನ್ಸ್‌ಮಿಶನ್ ಆಫ್ ಇನ್‌ಫರ್ಮೇಷನ್) ಗಣಕಕ್ಕೂ ಗಣಕದಿಂದ ಹೊರಕ್ಕೂ ವಿದ್ಯುದ್ಯಾಂತ್ರಿಕ ಯಂತ್ರಗಳಿಂದ ನಿರ್ವಹಿಸಲ್ಪಡುತ್ತದೆ.




ಚಿತ್ರ 14

ಮೇಲೆ ವಿವರಿಸಿದ ಮಾದರಿಯ ಯಂತ್ರಸಂಘಟನೆಯ ಪ್ರಕಾರ ಒಂದು ನಿರ್ದೇಶನ ನಿರ್ವಹಿಸಲ್ಪಡುವಾಗ ಪರಿಕರ್ಮದ ಪ್ರಾವಸ್ಥೆಗಳನ್ನು (ಫೇಸಸ್ ಆಫ್ ಆಪರೇಷನ್) ಗುರುತಿಸುವುದು ಉಪಯುಕ್ತ ಇದನ್ನು ವಿಶಾಲವಾಗಿ ಐದು ಬಗೆಗಳಾಗಿ ವರ್ಗೀಕರಿಸಬಹುದು.

ಪ್ರಾವಸ್ಥೆ 1 : ಜ್ಞಾಪಕಾಂಗದಿಂದ ಭಿನ್ನವಾದ ಒಂದು ಪುಟ್ಟ ತಾತ್ಕಾಲಿಕ ಜ್ಞಾಪಕ ಗಣನಾಂಗದಲ್ಲಿ ಉಂಟು. ಇದರ ಹೆಸರು ನಿರ್ದೇಶನ ರಿಜಿಸ್ಟರ್ (ಇನ್‌ಸ್ಟ್ರಕ್ಷನ್ ರಿಜಿಸ್ಟರ್). ನಿರ್ದೇಶನ ಈ ರಿಜಿಸ್ಟರಿಗೆ ಪ್ರೇಷಿಸಲ್ಪಡುತ್ತದೆ.

ಪ್ರಾವಸ್ಥೆ 2 : ಮೊದಲಿನ ವಾದ ಜ್ಞಾಪಕಾಂಗದಿಂದ ಒಂದು ಪದದಷ್ಟು ಉದ್ದವಿರುವ ಇನ್ನೊಂದು ತಾತ್ಕಾಲಿಕ ಜ್ಞಾಪಕಕ್ಕೆ ಪ್ರೇಷಿಸಲ್ಪಡುತ್ತದೆ. ಇದಕ್ಕೆ ಸಂಗ್ರಾಹಕ (ಅಕ್ಯುಮ್ಯುಲೇಟರ್) ಎಂದು ಹೆಸರು. ಈ ಪ್ರೇಷಣೆ ನಿರ್ದೇಶನ ವಿಸಂಕೇತದಿಂದ (ಇನ್‌ಸ್ಟ್ರಕ್ಷನ್ ಡೀಕೋಡರ್) ಸಾಧ್ಯವಾಗುತ್ತದೆ. ನಿರ್ದೇಶನ ವಿಸಂಕೇತಕ ನಿರ್ದೇಶನ ರಿಜಿಸ್ಟರಿನಲ್ಲಿ ದಾಸ್ತಾನಿಸಲ್ಪಟ್ಟ ನಿರ್ದೇಶನದಿಂದ ಮೊದಲಿನ ವಾದದ ವಿಳಾಸವನ್ನು ನಿರ್ಧರಿಸುತ್ತದೆ. ಆಗ, ಈ ವಿಳಾಸವನ್ನು ಒಳಗೊಂಡಿರುವ ಜ್ಞಾಪಕಕೋಶದ ಒಳಪಿಡಿಗಳನ್ನು (ಕಂಟೆಂಟ್ಸ್) ಸಂಗ್ರಾಹಕಕ್ಕೆ ಪ್ರೇಷಿಸುವ ನಿಯಂತ್ರಣ ಸಂಜ್ಞೆಗಳನ್ನು ನಿಯಂತ್ರಣಜನಕ ಉತ್ಪಾದಿಸುವುದು.

ಪ್ರಾವಸ್ಥೆ 3 : ಎರಡನೆಯ ವಾದವನ್ನು ಅಂಕಗಣಿತಾಂಗಕ್ಕೆ ತರಲಾಗುತ್ತದೆ ಮತ್ತು ನಿರ್ದಿಷ್ಟವಾದ ಅಂಕಗಣಿತ ಪರಿಕರ್ಮವನ್ನು ಈ ಎರಡನೆಯ ವಾದ ಬಂದ ಒಡನೆ ಮಾಡಲಾಗುತ್ತದೆ. ಅಂದರೆ, ಎರಡನೆಯ ವಾದವನ್ನು ಮೊದಲಿನ ವಾದದಂತೆ ದಾಸ್ತಾನಿಸುವುದಿಲ್ಲ. ನಿರ್ದೇಶನ ವಿಸಂಕೇತದಿಂದ ಇದು ಸಾಧ್ಯವೆನಿಸುತ್ತದೆ. ಈ ವಿಸಂಕೇತ ನಿರ್ದೇಶನದಿಂದ ಎರಡನೆಯ ವಾದದ ವಿಳಾಸವನ್ನೂ ನಿರ್ವಹಿಸಬೇಕಾದ ಪರಿಕರ್ಮದ ಪ್ರರೂಪವನ್ನೂ (ಟೈಪ್) ಕಂಡುಕೊಳ್ಳುತ್ತದೆ. ಆಗ ನಿಯಂತ್ರಣಜನಕ ಸಂಜ್ಞೆಗಳನ್ನು ಉತ್ಪಾದಿಸುವುದು. ಇವು ಅಂಕಗಣಿತಾಂಗವನ್ನು ಪರಿಕರ್ಮ ಮಾಡಲು ಸಿದ್ಧಗೊಳಿಸುತ್ತವೆ. ಆ ಬಳಿಕ ಅದು ಎರಡನೆಯ ವಾದದ ಒಳಪಿಡಿಗಳನ್ನು ಅಂಕಗಣಿತಾಂಗಕ್ಕೆ ಪ್ರೇಷಿಸುತ್ತದೆ. ಮುಂದಕ್ಕೆ ಅಂಕಗಣಿತಾಂಗ ಪರಿಕರ್ಮವನ್ನು ತನಗೆ ದೊರೆತ ನಿರ್ದೇಶನಾನುಸಾರ ನಡೆಸುತ್ತದೆ. ಫಲಿತಾಂಶವನ್ನು ಸಂಗ್ರಾಹಕದ ಒಳಪಿಡಿಯಾಗಿ ಬಿಡಲಾಗುವುದು.

ಪ್ರಾವಸ್ಥೆ 4 : ಫಲಿತಾಂಶ ಎಲ್ಲಿಗೆ ಹೋಗಬೇಕೆನ್ನುವುದನ್ನು ಕೂಡ ನಿರ್ದೇಶನ ನಿರ್ದಿಷ್ಟಗೊಳಿಸಬಹುದು. ನಿರ್ದೇಶನ ಇದನ್ನು ಜ್ಞಾಪಕಕೋಶದ ವಿಳಾಸವಾಗಿ ಕೊಡುತ್ತದೆ. ನಿಯಂತ್ರಣಜನಕ ಈ ವಿಳಾಸಕ್ಕೆ ಫಲಿತಾಂಶದ ಪ್ರೇಷಣೆಯನ್ನು ಹೋಗಬಿಡುತ್ತದೆ.

ಪ್ರಾವಸ್ಥೆ 5 : ಮುಂದಿನ ನಿರ್ದೇಶನವಿರುವ ಜ್ಞಾಪಕನೆಲೆಯ ವಿಳಾಸವನ್ನು ಕಂಡುಕೊಳ್ಳಬೇಕು. ಒಂದು ಪದದಷ್ಟು ಉದ್ದದ ಇನ್ನೊಂದು ತಾತ್ಕಾಲಿಕ ಜ್ಞಾಪಕ ಉಂಟು. ಇದರ ಹೆಸರು ಪ್ರಚಲಿತ ವಿಳಾಸ ರಿಜಿಸ್ಟರ್ (ಕರೆಂಟ್ ಅಡ್ರೆಸ್ ರಿಜಿಸ್ಟರ್). ವರ್ತಮಾನ ನಿರ್ದೇಶನವನ್ನು ಎಲ್ಲಿಂದ ಪಡೆಯಲಾಯಿತೋ ಆ ಪ್ರಧಾನ ಜ್ಞಾಪಕ ನೆಲೆಯ ವಿಳಾಸವನ್ನು ಈ ರಿಜಿಸ್ಟರ್ ಸದಾ ದಾಸ್ತಾನಿಸಿರುತ್ತದೆ. ಪ್ರಾವಸ್ಥೆ 5 ರಲ್ಲಿ ಹಳೆಯ ವಿಳಾಸವನ್ನು ಅಳಿಸಿ ಮುಂದಿನ ನಿರ್ದೇಶನದ ವಿಳಾಸವನ್ನು ದಾಸ್ತಾನಿಸಲಾಗುವದು.

ಬಳಿಕ ಹೊಸ ವಿಳಾಸದ ಒಳಪಿಡಿಗಳನ್ನು ನಿರ್ದೇಶನ ರಿಜಿಸ್ಟರಿಗೆ ಈ ಹಿಂದಿನಂತೆ ಒಯ್ಯಲಾಗುತ್ತದೆ. ಮತ್ತು ಈ ಐದು ಪ್ರಾವಸ್ಥೆಗಳ ಚಕ್ರ (ಫೈವ್–ಫೇಸ್ ಸೈಕಲ್) ಪುನರಾವರ್ತಿಸುತ್ತದೆ.

**ಅಂಕಗಣಕದ ಭಾಷೆ:** ಗಣಕಕ್ಕೆ ಒಂದು ಕ್ರಮವಿಧಿಯನ್ನು ನಿರ್ದೇಶನಗಳ ಸರಣಿಯ ರೂಪದಲ್ಲಿ ಒಬ್ಬ ವ್ಯಕ್ತಿ ಉಣಿಸಿದಾಗ ಮಾತ್ರ ಅದು ಕೆಲಸ ಮಾಡಬಲ್ಲುದು ಎಂದು ಹಿಂದಿನ ಎರಡು ಖಂಡಗಳಲ್ಲಿ ನೋಡಿದ್ದೇವೆ. ನಾವು ಯಾರಿಗಾದರೂ ಒಂದು ಆಜ್ಞೆ ನೀಡುವಾಗ ಅದು ಆತನಿಗೆ ಅರ್ಥವಾಗುವ ಭಾಷೆಯಲ್ಲಿ ಇರಬೇಕೆಂದು ಅಪೇಕ್ಷಿಸುವುದು ಸಹಜ. ಇದೇ ಪ್ರಕಾರ ಒಂದು ಗಣಕಕ್ಕೆ ಕೊಡುವ ನಿರ್ದೇಶನ ಅದಕ್ಕೆ ಅರ್ಥವಾಗುವ ಒಂದು ಭಾಷೆಯಲ್ಲಿ ಇರಬೇಕಾದದ್ದು ಅನಿವಾರ್ಯ. ಈ ಭಾಷೆಗೆ ದ್ವಿಮಾನಭಾಷೆ (ಬೈನರಿ ಲ್ಯಾಂಗ್ವೇಜ್) ಎಂದು ಹೆಸರು.

ಒಂದು ವಿಧದ ದ್ವಿಮಾನಭಾಷೆ ನಮಗೆ ಪರಿಚಿತವಾಗಿದೆ–ಮಾರ್ಸ್ ಸಂಕೇತ (ಮಾರ್ಸ್ ಕೋಡ್). ಟೆಲಿಗ್ರಾಫಿಕ್ ಸಂಪರ್ಕದಲ್ಲಿ (ಟೆಲಿಗ್ರಾಫಿಕ್ ಕಮ್ಯುನಿಕೇಶನ್) ಉಪಯೋಗಿಸುವ ಮಾರ್ಸ್ ಸಂಕೇತದಲ್ಲಿ ಗೀಟು (ಡೇಶ್) ಮತ್ತು ಚುಕ್ಕಿ (ಡಾಟ್) ಎಂದು ಎರಡು ಪ್ರತೀಕಗಳನ್ನು (ಸಿಂಬಲ್ಸ್) ಯಾವುದೇ ಸಂಕೇತೀಕೃತ ಮಾಹಿತಿಯನ್ನು ಸೂಚಿಸಲು ಬಳಸುತ್ತೇವೆ. ಗಣಕ ಉಪಯೋಗಿಸುವುದು ಇಂಥದೇ ಒಂದು ಭಾಷೆಯನ್ನು. 0 ಮತ್ತು 1 ಇದರಲ್ಲಿನ ಎರಡು ಪ್ರತೀಕಗಳು. ಇಂಗ್ಲಿಷ್ ಅಕ್ಷರಮಾಲೆಯ ಯಾವುದೇ ಅಕ್ಷರವನ್ನು ಇಲ್ಲವೇ ಯಾವುದೇ ಸಂಖ್ಯೆಯನ್ನು ದ್ವಿಮಾನಭಾಷೆಯ ಸೊನ್ನೆಗಳಿಗೂ ಒಂದುಗಳಿಗೂ ಭಾಷಾಂತರಿಸಬಹುದು. ನಮ್ಮ ದೈನಂದಿನ ವ್ಯವಹಾರದ ಸಂಖ್ಯೆಗಳು ದಶಮಾನ ಪದ್ಧತಿಯಲ್ಲಿವೆ. ನಮಗೆ ಹತ್ತು ಬೆರಳುಗಳಿರುವುದರಿಂದ ಇದು ಒದಗಿದೆ ಎಂಬುದನ್ನು ಗಮನಿಸಬೇಕು. ನಮ್ಮ ಬ್ರಹ್ಮಾಂಡದಲ್ಲಿಯೇ ಇರುವ, ದೂರದ ಯಾವುದೋ ಒಂದು ನಕ್ಷತ್ರವನ್ನು ಸುತ್ತುತ್ತಿರುವ, ಒಂದು ಗ್ರಹದಲ್ಲಿ ತಮ್ಮ ಒಂದೊಂದು ಕೈಯಲ್ಲೂ ನಾಲ್ಕು ಬೆರಳುಗಳಿರುವಂಥ ಬುದ್ಧಿಜೀವಿಗಳಿದ್ದರೆ ಅವರ ಅಂಕಗಣಿತದ ಆಧಾರ ಸಂಖ್ಯೆ ಎಂಟಾಗಬಹುದು. ತಂತ್ರವಿಜ್ಞಾನದ ಕಾರಣಗಳಿಂದ ಹಾಗೂ ಅವಶ್ಯಕತೆಗಳಿಂದ ಗಣಕದ ಅಂಕಗಣಿತದ ಆಧಾರಸಂಖ್ಯೆ ಎರಡು. ಗಣಕ ಅದೆಷ್ಟೇ ನಾಜೂಕಾಗಿದ್ದರೂ ಅದೊಂದು ಬಹು ದೊಡ್ಡ ಸಂಖ್ಯೆಯ ಸ್ವಿಚ್ಚುಗಳ ಸಂಗ್ರಹ. ಒಂದು ಸ್ವಿಚ್ಚಿನಲ್ಲಿ ಎರಡೇ ಸ್ಥಿತಿಗಳಿರುವುದು–ನಂದಿಸು (ಆಫ್), ಹೊತ್ತಿಸು (ಆನ್). ಆದ್ದರಿಂದ ದ್ವಿಮಾನ ಭಾಷೆಯಲ್ಲಿ ನಂದಿಸು 0 ಗೂ ಹೊತ್ತಿಸು 1 ಕ್ಕೂ ಸಂವಾದಿಯಾಗಿದೆ.

ಒಂದು ದಶಮಾನ ಸಂಖ್ಯೆಯನ್ನು ಈ ಕೆಳಗಿನಂತೆ ಬರೆಯುತ್ತೇವೆ;

$$45319=4.10^4+5.10^3+3.10^2+1.10^1+9.10^0$$

ಇಲ್ಲಿ ಆಧಾರ ಸಂಖ್ಯೆ ಹತ್ತು ಎಂದು ಅಂಗೀಕರಿಸಿದ್ದೇವೆ. ಈಗ 0, 1, 2, 3, 4, 5, 6, 7, 8, 9 ಈ ಹತ್ತು ಪ್ರತೀಕಗಳ ಬದಲು ನಮಗೆ 0 ಮತ್ತು 1 ಎಂಬ ಎರಡೇ ಎರಡು ಪ್ರತೀಕಗಳು ಇವೆಯೆಂದು ಭಾವಿಸೋಣ. ಶೂನ್ಯವನ್ನು 0 ಯಿಂದಲೂ ಒಂದು ವಸ್ತುವನ್ನು 1 ರಿಂದಲೂ ಪ್ರತಿನಿಧಿಸಬಹುದು. ಆಗ ಎರಡು ವಸ್ತುಗಳ ವಿಚಾರ ಏನು? ದಶಮಾನ ಪದ್ಧತಿಯಲ್ಲಿ ಪ್ರತೀಕಗಳು ಮುಗಿದುಹೋದ ಬಳಿಕ ಹತ್ತನ್ನು ಸೂಚಿಸಲು ಯಾವ ಕ್ರಮವನ್ನು ಅನುಸರಿಸಿದೆವೋ ಅದೇ ಕ್ರಮವನ್ನು ಇಲ್ಲಿ ಅನುಸರಿಸಬೇಕಾಗುತ್ತದೆ. ಅವೇ ಪ್ರತೀಕಗಳನ್ನು ಒಂದು ಕ್ರಮದಲ್ಲಿ ಜೋಡಿಸುವುದು

$$10 = 1\times10^1 + 0\times10^0$$

ಇಲ್ಲಿನ ಪದ್ಧತಿ. ಅಂದರೆ ಇದೇ ಕ್ರಮವನ್ನು ದ್ವಿಮಾನಪದ್ಧತಿಯಲ್ಲೂ ಅನುಸರಿಸುತ್ತೇವೆ. ಆಧಾರ ಸಂಖ್ಯೆ ಎರಡಾಗಿರುವಾಗ ಸಂಖ್ಯೆಗಳನ್ನು ಹೀಗೆ ಬರೆಯಬಹುದು.

$$10 = 1\times 2^1 + 0\times 2^0$$

ಇದೇ ಪ್ರಕಾರ $11 = 1\times 2^1 + 1\times 2^0$

$$100 = 1\times 2^2 + 0\times 2^1 + 0\times 2^0$$

$$101 = 1\times 2^2 + 0\times 2^1 + 1\times 2^0$$

ದ್ವಿಮಾನ ಸಂಖ್ಯಾಪದ್ಧತಿಯಲ್ಲಿನ ಮೊದಲ ಕೆಲವು ಸಂಖ್ಯೆಗಳು 0, 1, 10, 11, 100, 101, 110, 111, 1000, 1001, 1010, 1011, 1100 . . . . . . . . . . . ..

ಮೇಲೆ ಉದಾಹರಿಸಿರುವ ದಶಮಾನ ಸಂಖ್ಯೆ 45319 ದ್ವಿಮಾನ ಭಾಷೆಯಲ್ಲಿ

1110000010001101

ಎಂದಾಗುವುದು. ಹೊತ್ತಿಸು–ನಂದಿಸು ಎಲೆಕ್ಟ್ರಾನಿಕ್ ಸ್ವಿಚ್ಚುಗಳನ್ನು ಉಪಯೋಗಿಸಿ ಈ ಸಂಖ್ಯೆಯನ್ನು ಹೇಗೆ ನಿರೂಪಿಸುವುದೆನ್ನುವುದನ್ನು ಚಿತ್ರ 15ರಲ್ಲಿ ತೋರಿಸಿದೆ. 32ರಷ್ಟು ಹೊತ್ತಿಸು–ನಂದಿಸು ಸ್ವಿಚ್ಚುಗಳ ನೆರವಿನಿಂದ ನಾವು, 4,294,967,295 ರಷ್ಟು ($2^{32}$ –1) ವರೆಗಿನ ದೊಡ್ಡ ದಶಮಾನ ಸಂಖ್ಯೆಗಳನ್ನೂ ದ್ವಿಮಾನ ಪದ್ಧತಿಯಲ್ಲಿ ನಿರೂಪಿಸಬಲ್ಲವು. ನಮ್ಮ ಹೆಚ್ಚಿನ ವ್ಯಾವಹಾರಿಕ ಉದ್ದೇಶಗಳಿಗೆ ಇದು ಸಾಕು.

ಗಣಕದಲ್ಲಿ ಟ್ರಾನ್ಸಿಸ್ಟರ್ ಹೊತ್ತಿಸು–ನಂದಿಸು ಸ್ವಿಚ್ಚೊಂದು ತಂತಿಯ ಮೂಲಕ ಒಂದು ವಿದ್ಯುತ್ ಸ್ಪಂದನವನ್ನು ರವಾನಿಸುತ್ತದೆ. ಸ್ಪಂದದ ಹಾಜರಿ 1 ನ್ನೂ ಗೈರುಹಾಜರಿ 0 ಯನ್ನೂ ಪ್ರತಿನಿಧಿಸುತ್ತದೆ.




ಚಿತ್ರ 15. ಚಿತ್ರದಲ್ಲಿ ON–ಹೊತ್ತಿಸು; OFF–ನಂದಿಸು

ಮೇಲೆ ಬರೆದಿರುವ ಸಂಖ್ಯೆ 45319ಕ್ಕೆ ಸಂವಾದಿಯಾಗಿ ತಂತಿಯ ಮೂಲಕ ಹರಿಯುವ ಸ್ಪಂದಮಾಲೆಯನ್ನು ಚಿತ್ರ 16ರಲ್ಲಿ ತೋರಿಸಿದೆ.

ಈ ಸಂಖ್ಯೆಗೆ 16–ತುಣುಕುಗಳ (ಬಿಟ್ಸ್) ಪದ ಎಂದು ಹೆಸರು. ಇಂಥ ಹಲವಾರು ಪದಗಳನ್ನು ಗಣಕಕ್ಕೆ ಒಂದಾದ ಬಳಿಕ ಇನ್ನೊಂದರಂತೆ ಉಣಿಸಿದರೆ ಅವು ತಂತಿಯ ನೇರ ಒಂದನ್ನು ಇನ್ನೊಂದು ಅನುಸರಿಸುತ್ತವೆ. ಸೈದ್ಧಾಂತಿಕವಾಗಿ ಇವುಗಳ ವೇಗ, ಎಂದರೆ ಸೆಕೆಂಡಿಗೆ 186,000 ಮೈಲಿಗಳು.




ಚಿತ್ರ 16

ಈ ವೇಗ ಅತಿ ಹೆಚ್ಚಿನದಾದ್ದರಿಂದಲೇ ಗಣಕ ಅಷ್ಟೊಂದು ವೇಗವಾಗಿ ಕೆಲಸ ನಿರ್ವಹಿಸುತ್ತದೆ.

ಲೈನ್ ಪ್ರಿಂಟರ್ ನಿರ್ಗಮಾಂಗ

ಪ್ರತಿಯೊಂದು ಪದದ ಉದ್ದವೂ ಒಂದೇ ಆಗಿದ್ದರೆ, ಉದಾಹರಣೆಗೆ 32 ತುಣುಕುಗಳಷ್ಟಿದ್ದರೆ, ಪ್ರತಿಯೊಂದು ಸ್ಪಂದವನ್ನೂ ಎಣಿಸಿ ಒಂದು ಪದವನ್ನು ಇನ್ನೊಂದರಿಂದ ಪ್ರತ್ಯೇಕಿಸುವುದು ಸಾಧ್ಯ. ಅಂಕಗಣಿತದ ಪರಿಕರ್ಮಗಳನ್ನು ದ್ವಿಮಾನ ಪದ್ಧತಿಯಲ್ಲಿ ಹೇಗೆ ಮಾಡಬಹುದೆನ್ನುವುದನ್ನು ಮುಂದಿನ ಖಂಡದಲ್ಲಿ ನೋಡುತ್ತೇವೆ.

ಸಂಖ್ಯೆಗಳನ್ನು ಪ್ರತಿನಿಧಿಸಲು ಮಾತ್ರ ದ್ವಿಮಾನ ಪದ್ಧತಿಯನ್ನು ಬಳಸುವುದಲ್ಲ, ಅಕ್ಷರಗಳನ್ನು ಪ್ರತಿನಿಧಿಸಲು ಕೂಡ ಬಳಸುತ್ತಾರೆ. ಇಂಥ ವಿಧಾನಕ್ಕೆ ಪರಿಚಿತ ಉದಾಹರಣೆ ಎಂದರೆ ಮಾರ್ಸ್ ಸಂಕೇತ. ಅಂತಾರಾಷ್ಟ್ರೀಯ ಟೆಲಿಪ್ರಿಂಟರ್ ಸೇವಾಸಂಸ್ಥೆ ಉಪಯೋಗಿಸುವ ಸಾಮಾನ್ಯ ಐದು ತುಣುಕಿನ ದ್ವಿಮಾನ ಸಂಕೇತವನ್ನು ಇಲ್ಲಿ ಬರೆದಿದೆ.

| | | | |
|---|---|---|---|
| A= 11000, | B= 10011, | C= 01110, | D= 10010, |
| E= 10000, | F= 10110, | G= 01011, | H= 00101, |
| I = 01100, | J= 11010, | K= 11110, | L= 01001, |
| M= 00111, | N= 00110, | O= 00011, | P= 01101 |
| Q= 11101, | R= 01010, | S= 10100, | T= 00001, |
| U= 11100, | V= 01111, | W= 11001, | X= 10111, |
| Y= 10101, | Z= 10001. | | |

ಮೇಲಿನ ಸಂಕೇತಗಳಲ್ಲಿ KANNADA ಪದದ ಸ್ಪಂದಮಾಲೆ 11110 11000 00110 00110 11000 10010 11000. ಕೆಲವು ಗಣಕಗಳು ಈ ಸಂಕೇತವನ್ನು ಅನುಸರಿಸಿವೆಯಾದರೂ ಹೆಚ್ಚಿನವು ಪಾಲಿಸುವುದು ಬೇರೆಯೇ ಒಂದು ಸಂಕೇತವನ್ನು. ಅಕ್ಷರಗಳ ಜೊತೆಗೆ ಕೆಲವು ಪ್ರತೀಕಗಳಿಗೆ, [ಉದಾಹರಣೆಗೆ( , ),=,*,+,–,. ,/ ಮತ್ತು ,] ಸಹ ಸಂಕೇತಗಳನ್ನು ಸ್ವೀಕರಿಸಬೇಕಾಗುತ್ತದೆ. ರಂಧ್ರಿತ ಪತ್ರಗಳ ಮೂಲಕ ಗಣಕವನ್ನು ಉಣಿಸುವ ಹಾಗೂ ಹೆಚ್ಚಿನ ಗಣಕಗಳು ಬಳಸುವ ಸಂಕೇತವನ್ನು ಈಗ ಪರೀಕ್ಷಿಸೋಣ.



ಪತ್ರವಾಚನ ನಿವೇಶಾಂಗ

ಚಿತ್ರ 17ರಲ್ಲಿ ಒಂದು ರಂಧ್ರಿತ ಪತ್ರವನ್ನು ಕಾಣಿಸಿದೆ. ಅದರಲ್ಲಿ ಸಂಖ್ಯೆಗಳ ಒಂದು ಮಾತೃಕೆಯನ್ನು (ಮ್ಯಾಟ್ರಿಕ್ಸ್) ಮುದ್ರಿಸಿದೆ. ಈ ಪತ್ರದಲ್ಲಿ 80 ನೀಟಸಾಲುಗಳೂ 10 ಅಡ್ಡಸಾಲುಗಳೂ ಇವೆ. ಪ್ರತಿಯೊಂದು ಅಡ್ಡದಲ್ಲೂ ಒಂದೇ ಸಂಖ್ಯೆ 80 ಸಲ ಪುನರಾವರ್ತಿಸುತ್ತದೆ. ಪ್ರತಿಯೊಂದು ನೀಟದಲ್ಲೂ 0123456789 ಸಂಖ್ಯಾ ಶ್ರೇಣಿಯನ್ನು ಮುದ್ರಿಸಿದೆ. ಮನುಷ್ಯ ಮತ್ತು ಯಂತ್ರದ ನಡುವಿನ ಸಂಪರ್ಕದ (ಕಮ್ಯುನಿಕೇಷನ್) ಈ ಘಟ್ಟದಲ್ಲಿ ಎರಡರ ನಡುವಿನ ಒಂದು ಒಡಂಬಡಿಕೆಯನ್ನು (ಕಾಂಪ್ರೊಮೈಸ್) ಸಿದ್ಧಪಡಿಸಬಹುದು. ಯಂತ್ರಕ್ಕೆ ಅರ್ಥವಾಗುವುದು ದ್ವಿಮಾನ ಭಾಷೆ ಮಾತ್ರ. ಆದರೆ ಮನುಷ್ಯನಾದರೋ ದಶಮಾನ ಸಂಖ್ಯೆಗಳನ್ನು ಉಪಯೋಗಿಸುವಲ್ಲಿ ಹೆಚ್ಚು ಸೌಕರ್ಯವನ್ನು ಕಾಣುತ್ತಾನೆ. ಪತ್ರಗಳ ಮೇಲೆ ರಂಧ್ರಗಳನ್ನು ಮಾಡಲು ಬಳಸುವ ಯಂತ್ರವನ್ನು (ಪಂಚಿಂಗ್ ಮಶೀನ್) ರೂಪಿಸಿ ನಿರ್ಮಿಸುವಲ್ಲಿ ಮೇಲೆ ಹೇಳಿದ ಒಡಂಬಡಿಕೆಯನ್ನು ತರುವುದು ಸಾಧ್ಯ. ಈ ನಿರ್ದೇಶನವನ್ನು ಗಣಕಕ್ಕೆ ವಿಧಿಸುವುದನ್ನು ಪರಿಶೀಲಿಸಬಹುದು:

580 FORMAT (* KANNADA ENCYCLOPAEDIA 0123456789*) PRINT 580

ಈ ನಿರ್ದೇಶನಗಳನ್ನು ರಂಧ್ರಿಸಲು ರಂಧ್ರಕ ಯಂತ್ರದಲ್ಲಿ ಬೆರಳಚ್ಚು ಯಂತ್ರದಲ್ಲಿರುವುದಕ್ಕೆ ಸಮರೂಪವಾದ, ಒಂದು ಕೀಲಿಮಣೆ ಉಂಟು. ಪ್ರತಿಯೊಂದು ಅಕ್ಷರವೂ ಎಲ್ಲಿ ಬರತಕ್ಕದೆಂಬುದನ್ನು ಗಮನಿಸಿ ಇಡೀ ವಾಕ್ಯವನ್ನು ಬೆರಳಚ್ಚಿಸಿದಾಗ ರಂಧ್ರೀಕರಣ ಮುಗಿಯುತ್ತದೆ. ಒಂದು ರಂಧ್ರಕ ಯಂತ್ರಕ್ಕೂ ಬೆರಳಚ್ಚು ಯಂತ್ರಕ್ಕೂ ನಡುವೆ ಇರುವ ಸಾದೃಶ್ಯ ಇಲ್ಲಿಗೇ ಅಂತ್ಯ. ರಂಧ್ರಕ ಯಂತ್ರ ಹೆಚ್ಚು ಜಟಿಲ ಕಾರ್ಯವನ್ನು

ಮಾಡುತ್ತದೆ. ರಂಧ್ರಿಪತ್ರದ ಮೇಲುಭಾಗದಲ್ಲಿ ಅದು ನಿರ್ದೇಶನವನ್ನು ಬೆರಳಚ್ಚಿಸುತ್ತದೆ. ಅದೇ ವೇಳೆ, ಅಂತರ್ಗತ (ಬಿಲ್ಟ್ ಇಂಟು ಇಟ್) ಸಂಕೇತಾನುಸಾರ ರಂಧ್ರಕಯಂತ್ರ ರಂಧ್ರಗಳನ್ನು ಚಿತ್ರ 17ರಲ್ಲಿ ತೋರಿಸಿರುವಂತೆ ರಂಧ್ರಿಸುತ್ತದೆ. (ಮ್ಯಾಗ್ನೆಟಿಕ್ ಹೆಡ್) ವರ್ಗಾಯಿಸುತ್ತದೆ. ರಂಧ್ರಿತಪತ್ರದ ಮೇಲೆ ರಂಧ್ರಕದ ರಂಧ್ರ (ಪಂಚ್ ಹೋಲ್) ಇರುವ ಸ್ಥಳಗಳಲ್ಲೆಲ್ಲ ಕಾಂತತ್ವದ ಪುಟ್ಟ ವಲಯಗಳನ್ನು ಏರ್ಪಡಿಸುವುದರ ಮೂಲಕ ಕಾಂತಶಿರದ ಮೇಲೆ ರಂಧ್ರಿತಪತ್ರದ ಒಂದು ಬಿಂಬವನ್ನು ಪಡೆಯಲಾಗುವುದು.




ಚಿತ್ರ 17

ಚಿತ್ರ 17ರ ಪತ್ರದಲ್ಲಿರುವ ದ್ವಿಮಾನ ಸಂಕೇತಗಳನ್ನು ಗಮನಿಸಬೇಕು. ಪ್ರತಿಯೊಂದು ಅಕ್ಷರದ ಅಥವಾ ಸಂಖ್ಯೆಯ ಸಂಕೇತ ಹತ್ತು ನೆಲೆಗಳಿರುವ ಒಂದು ಇಡೀ ನೀಟವನ್ನು ಆಕ್ರಮಿಸುತ್ತದೆ. ಒಂದು ಅಂಕೆಯನ್ನು ಸೂಚಿಸಲು ಅದರ ಕೆಳಗಿನ ನೀಟದಲ್ಲಿನ nನೆಯ ಅಡ್ಡವನ್ನು ರಂಧ್ರಿಸುತ್ತೇವೆ. ಉದಾಹರಣೆಗೆ 5 ಎಂಬ ಸಂಖ್ಯೆಯನ್ನು ನೀಟ 20ರಲ್ಲಿ ಐದನೆಯ ಅಡ್ಡ ಹಾಗೂ ಇಪ್ಪತ್ತನೆಯ ನೀಟಗಳ ಛೇದನ ಬಿಂದುವಿನಲ್ಲಿ ಒಂದು ರಂಧ್ರವನ್ನು ಕೊರೆಯುವ ಮೂಲಕ ಸಂಕೇತೀಕರಿಸುತ್ತೇವೆ. ಅಕ್ಷರಗಳಿಗೂ ಪ್ರತೀಕಗಳಿಗೂ ಬೇರೆಯೇ ಸಂಕೇತಗಳನ್ನು ಕೊಡಲಾಗಿದೆ. ಇಲ್ಲಿ ಪ್ರತಿಯೊಂದೂ ಈಗಾಗಲೇ ತೋರಿಸಿದಂತೆ ಪೂರ್ಣವಾಗಿ ಒಂದು ನೀಟವನ್ನು ಆಕ್ರಮಿಸುತ್ತದೆ. ಇದರ ಸಾರಾಂಶವಿಷ್ಟು. ನಮಗೆ ಪರಿಚಿತವಾಗಿರುವ ಒಂದು ದ್ವಿಮಾನ ಸಂಕೇತ ಭಾಷೆಯಲ್ಲಿ ರಂಧ್ರಿಸಿದ್ದೇವೆ. ಹಾಗಿದ್ದರೂ ಈ ಒಡಂಬಡಿಕೆಯ ದ್ವಿಮಾನ ಭಾಷೆಯಲ್ಲಿನ ಸಂಖ್ಯೆಗಳು ದ್ವಿಮಾನ ಅಂಕಗಣಿತದ ಸಂಖ್ಯಾವಸ್ಥೆಗೆ ಸಮಾನವಾಗಿಲ್ಲ. ದ್ವಿಮಾನ ಸಂಕೇತಗಳನ್ನು ಗಣಕ ಹೇಗೆ ಪುನರರ್ಥವಿಸುತ್ತದೆ ಎಂಬುದನ್ನು ಈಗ ನೋಡೋಣ.



ಕಾಗದಪಟ್ಟಿ ವಾಚನ ನಿವೇಶಾಂಗ

ರಂಧ್ರಿತಪತ್ರಗಳನ್ನು ಗಣಕಕ್ಕೆ ಒಂದು ನಿವೇಶಾಂಗದ ಮೂಲಕ ಉಣಿಸಲಾಗುವುದು. ಇದರ ಹೆಸರು ಪತ್ರವಾಚಕ (ಕಾರ್ಡ್ ರೀಡರ್). ಇದು ನಿರ್ವಾತಚೂಷಣ (ವ್ಯಾಕೂಂ ಸಕ್ಷನ್) ಏರ್ಪಾಡೊಂದರ ಮೂಲಕ ಸ್ವಯಂಚಲಿಯಾಗಿ ಪತ್ರವನ್ನು ಒಂದು ಕಾಂತಶಿರಕ್ಕೆ

ಈ ಕಾಂತ ಮುದ್ರೆ (ಮ್ಯಾಗ್ನೆಟಿಕ್ ಇಂಪ್ರೆಶನ್) ಒಡನೆಯೇ ವಿದ್ಯುತ್ ಸ್ಪಂದವಾಗಿ ಪರಿವರ್ತಿಸಲ್ಪಟ್ಟು ತಂತಿಗಳ ಮೂಲಕ ಒಂದು ಜ್ಞಾಪಕಾಂಗಕ್ಕೆ ಪ್ರೇಷಿಸಲ್ಪಡುತ್ತದೆ. ಜ್ಞಾಪಕಾಂಗವನ್ನು ಫೆರೈಟ್ ಕೋಶಗಳಿಂದ ಅಥವಾ ಕಾಂತಪಟ್ಟಿಯಿಂದ ಮಾಡಿರುತ್ತಾರೆ. ಈ ವರ್ಗಾವಣೆಯನ್ನು ಮಾಡುತ್ತಿರುವಾಗ ರಂಧ್ರಿತ ಪತ್ರವನ್ನು ಒಂದು ಪೂರ್ವ ನಿರ್ಧರಿತ ಪ್ರರೂಪದ (ಪ್ಯಾಟರ್ನ್) ಅನುಸಾರ ಕ್ರಮವೀಕ್ಷಣೆ ಮಾಡಲಾಗುವುದು. ಹೀಗೆ ಒಂದು ರಂಧ್ರಿತ ಪತ್ರದಲ್ಲಿರುವ ಮಾಹಿತಿಯನ್ನು ವರ್ಗಾಯಿಸಿದ ಬಳಿಕ ಇನ್ನೊಂದು ಪತ್ರ ಚೂಷಿಸಲ್ಪಡುತ್ತದೆ ಮತ್ತು ಈ ಮುನ್ನಡೆ ಪುನರಾವರ್ತಿಸುತ್ತಲೇ ಇರುವುದು.

ಖಂಡ 4ರಲ್ಲಿ ಪ್ರಸ್ತಾವಿಸಿರುವಂತೆ ಸಂಖ್ಯೆಗಳ ರೂಪದಲ್ಲಿರುವ ದ್ವಿಮಾನ ಸಂಕೇತಗಳನ್ನು ಅಕ್ಷರಗಳ ಅಥವಾ ಪ್ರತೀಕಗಳ ರೂಪದಲ್ಲಿರುವ ದ್ವಿಮಾನ ಸಂಕೇತಗಳಿಂದ ಪ್ರತ್ಯೇಕಿಸಿ ತಿಳಿಯುವುದು ಅಗತ್ಯವಾಗಿದೆ. ನೀಟಸಾಲುವಾರು ನೋಡಿದಾಗ ಸಂಕೇತ 0000010000 ಎಂದಿರುವ ಒಂದು ಸಂಖ್ಯೆ ಎದುರಾದಾಗ ವಿಸಂಕೇತಕ (ಡಿಕೋಡರ್) ಎಂಬ ಹೆಸರಿನ ಒಂದು ಎಲೆಕ್ಟ್ರಾನಿಕ್ ಸ್ವಿಚ್ಚಿಕೆ ಮಂಡಲ (ಸ್ವಿಚ್ಚಿಂಗ್ ಸರ್ಕ್ಯೂಟ್) ಇದನ್ನು 00000101 ಎಂಬ ಒಂದು ದ್ವಿಮಾನ ಸಂಖ್ಯೆಯಾಗಿ ಪರಿವರ್ತಿಸಿ ಆ ಸ್ಥಿತಿಯಲ್ಲಿ ಅದನ್ನು ಉದ್ದೇಶಿತ ಜ್ಞಾಪಕಕೋಶದಲ್ಲಿ ದಾಸ್ತಾನಿಸುತ್ತದೆ. ಹೆಚ್ಚಿನ ಗಣಕಗಳಲ್ಲಿ ಅಕ್ಷರಗಳಿಗೂ ಪ್ರತೀಕಗಳಿಗೂ ಒದಗಿಸಲಾಗಿರುವ ಸಂಕೇತವನ್ನು ಏನೂ ಬದಲಾವಣೆಯಿಲ್ಲದೇ ಸ್ವೀಕರಿಸಲಾಗುವುದು.

**ಗಣಕದ ಯಂತ್ರಾಂಶ (ಹಾರ್ಡ್‌ವೇರ್) :** ಹಿಂದಿನ ಖಂಡದಲ್ಲಿ ಒಂದು ಗಣಕವೆಂದರೆ ಮೂಲತಃ ಬಹುಸಂಖ್ಯಾತ ಎಲೆಕ್ಟ್ರಾನಿಕ್ ಸ್ವಿಚ್ಚುಗಳ ಸಂಕಲನ ಎಂದು ಹೇಳಲಾಗಿದೆ. ಈಗಾಗಲೇ ವಿವರಿಸಿರುವ ಮೂಲಭೂತ ಪರಿಕರ್ಮಗಳನ್ನು ಸ್ವಿಚ್ಚುಗಳ ಒಂದು ಸಂಯೋಜನೆಯಿಂದ ಹೇಗೆ ಮಾಡಬಹುದು ಎಂಬುದನ್ನು ಈ ಖಂಡದಲ್ಲಿ ನೋಡಬಹುದು. ಒಂದು ಲಾಕ್ಷಣಿಕ ಉದಾಹರಣೆಯಾಗಿ ದ್ವಿಮಾನ ಸಂಖ್ಯೆಗಳನ್ನು ಹೇಗೆ ಸ್ವಿಚ್ಚುಗಳ ಸಂಯೋಜನೆಯಾಗಿ ಕೂಡಿಸಬಹುದು ಎಂಬುದನ್ನು ಪರಿಶೀಲಿಸೋಣ.

ದ್ವಿಮಾನ ಸಂಕಲನ: 8–ತುಣುಕುಗಳ ಮೂರು ದ್ವಿಮಾನ ಸಂಖ್ಯೆಗಳ ಸಂಕಲನ ಹೀಗಿರುತ್ತದೆ.

$$\begin{array}{r} 11011001 \\ 0010111 \\ \underline{00011101} \\ \underline{110001101} \end{array}$$

ಈಗ ಸಂಕಲನ ಕೋಷ್ಟಕವನ್ನು ತಯಾರಿಸುತ್ತೇವೆ. ಇದು ಸಂಕಲನದ ಆಧಾರನಿಯಮಗಳನ್ನು ನೀಡುತ್ತದೆ.

| + | 0 | 1 |
|---|---|---|
| 0 | 00 | 01 |
| 1 | 01 | 10 |

ಎಂದರೆ, 0+0=0
1+0=0+1=1
1+1=10

1+1 ರಲ್ಲಿ ಒಂದು 1 ನ್ನು 'ಸಾಗಿಸ'ಬೇಕಾಗುತ್ತದೆ. ಇತರೆಡೆಗಳಲ್ಲಿ ಇದು 0. ಈ ನಿಯಮಗಳನ್ನು ಉಪಯೋಗಿಸಿ ಮೇಲಿನ ಉದಾಹರಣೆಯ ಮೂರು ಸಂಖ್ಯೆಗಳನ್ನು ಕೂಡಿಸಬಹುದು. ಮೊದಲಿನ ನೀಟದಲ್ಲಿ ಸಂಕಲನ 1+1+1. ಈಗ 1+1=10 ಆಗಿರುವುದರಿಂದ ಇದು 10+1 ಆಗುತ್ತದೆ. 0+1=1+0=1 ನಿಯಮಾನುಸಾರ

 10
 01
 11

ಆದ್ದರಿಂದ ಮೊದಲನೆಯ ನೀಟಸಾಲಿಗೆ ಫಲಿತ ಅಂಕ 1 ಮತ್ತು ಒಂದು 1 ಮುಂದಿನ ನೀಟಸಾಲಿಗೆ 'ಸಾಗು' ಈಗ ಎರಡನೆಯ ನೀಟದಲ್ಲಿನ ಸಂಕಲನ 1+0+1+0=10. ಇದೇ ವಿಧಾನವನ್ನು ಉತ್ತರೋತ್ತರ ನೀಟಗಳಲ್ಲಿ ಮುಂದುವರಿಸ ಲಾಗುವುದು. ಹೀಗೆ ಕೂಡಲ್ಪಟ್ಟ ದ್ವಿಮಾನ ಸಂಖ್ಯೆ ಈಗ 110001101.




ಚಿತ್ರ 18

ಇಂಥ ಸಂಕಲನಗಳನ್ನು ಮಾಡಬಲ್ಲ ಸ್ವಿಚ್ಚುಗಳ ಏರ್ಪಾಡನ್ನು ವಿವರಿಸುವ ಮೊದಲು ಸ್ವಿಚ್ಚುಗಳ ಸರಳ ಸಂಯೋಜನೆಗಳನ್ನು ಹೇಗೆ ತಯಾರಿಸುವುದು ಎಂಬುದನ್ನು ತಿಳಿದಿರಬೇಕು.




ಚಿತ್ರ 19

ದ್ವಿಮಾನ ಸ್ವಿಚ್ಚುಗಳು: ಒಂದು ಹೊತ್ತಿಸು–ನಂದಿಸು ಸ್ವಿಚ್ಚನ್ನು 'ಹೊತ್ತಿಸು' ಮತ್ತು 'ನಂದಿಸು' ಸ್ಥಾನಗಳಲ್ಲಿರುವುದನ್ನು ಚಿತ್ರ 18ರಲ್ಲಿ ಗಮನಿಸಬಹುದು. ಎರಡು ಬೆಲೆಗಳಲ್ಲಿ ಯಾವುದೋ ಒಂದನ್ನು, ಎಂದರೆ 0 ಅಥವಾ 1, ತೆಗೆದುಕೊಳ್ಳಬಲ್ಲಂಥ ಒಂದು ದ್ವಿಮಾನ ಚರ s ನ್ನು ವ್ಯಾಖ್ಯಿಸಬೇಕು. ಸ್ವಿಚ್ ತೆರೆದಿರುವಾಗ s=O ಎಂದೂ ಮುಚ್ಚಿರುವಾಗ s=1 ಎಂದೂ ಭಾವಿಸುತ್ತೇವೆ. ಚರ s ಇತರ ಯಾವುದೇ ಬೀಜಗಣಿತೀಯ ಚರದಂತೆ ಒಂದು ಚರ. ಆದರೆ ಇದು ಅವಿಚ್ಛಿನ್ನ ಬೆಲೆಗಳನ್ನು ಪಡೆಯುವುದಿಲ್ಲ, ಪೃಥಕ್ಕಾದ ಬೆಲೆಗಳನ್ನು ಮಾತ್ರ ತೆಗೆದುಕೊಳ್ಳುತ್ತದೆ. ಈಗ ಚಿತ್ರದಲ್ಲಿ ತೋರಿಸಿರುವಂತೆ ಒಂದು ಶ್ರೇಣಿಯಲ್ಲಿರುವ ಎರಡು ಸ್ವಿಚ್ಚುಗಳನ್ನು ಗಮನಿಸಬೇಕು. s ಮತ್ತು r ಚರಗಳು ಎರಡೂ ಒಂದಕ್ಕೆ ಸಮವಾಗಿದ್ದರೆ ಮತ್ತು ಆಗಿದ್ದರೆ ಮಾತ್ರ, ಎಂದರೆ ಎರಡು ಸ್ವಿಚ್ಚುಗಳೂ ಮುಚ್ಚಲ್ಪಟ್ಟಿದ್ದಾಗ, ಒಂದು ವಿದ್ಯುತ್‌ಪ್ರವಾಹ Aಯಿಂದ Bಗೆ ಹರಿಯಬಲ್ಲುದು. ಈಗ ಹೊಸ ಒಂದು ದ್ವಿಮಾನ ಚರ pಯನ್ನು ಈ ಪ್ರಕಾರ ವ್ಯಾಖ್ಯಿಸಬಹುದು; Aಯಿಂದ Bಗೆ ಪ್ರವಾಹ ಹರಿದಾಗ pಯ ಬೆಲೆ 1, ಹರಿಯದಿದ್ದಾಗ 0. ಈ ಚರ p ಯನ್ನು s ಮತ್ತು r ಗಳ ಒಂದು ಉತ್ಪನ್ನವಾಗಿ ಮುಂದಿನ ಕೋಷ್ಟಕದಂತೆ ನಿರೂಪಿಸಬಹುದು.

| s | r | p=s.r |
|---|---|---|
| 1 | 1 | 1 |
| 1 | 0 | 0 |
| 0 | 1 | 0 |
| 0 | 0 | 0 |

ಉತ್ಪನ್ನ pಗೆ ತಾರ್ಕಿಕ ಗುಣಾಕಾರ ಇಲ್ಲವೇ 'ಮತ್ತು –ಉತ್ಪನ್ನ' (ಆ್ಯಂಡ್–ಫಂಕ್ಷನ್) ಎಂದು ಹೆಸರು. ಇದನ್ನು ಪ್ರತೀಕಾತ್ಮವಾಗಿ ಚಿತ್ರದ ಬಲಪಾರ್ಶ್ವದಲ್ಲಿ ತೋರಿಸಿದೆ. ಈಗ ಸಮಾಂತರವಾಗಿರುವ ಎರಡು ಸ್ವಿಚ್ಚುಗಳನ್ನು ಪರಿಶೀಲಿಸಬೇಕು (ಚಿತ್ರ 20).

s ಮತ್ತು r ಎರಡೂ ಸೊನ್ನೆಗೆ ಸಮವಾಗಿರುವಾಗ ಮತ್ತು ಆಗಿರುವಾಗ ಮಾತ್ರ A ಮತ್ತು Bಗಳ ನಡುವೆ ಒಂದು ಪ್ರವಾಹ ಹರಿಯಲಾರದು. ಈ ಹಿಂದಿನಂತೆ ಹೊಸ ಒಂದು ಚರ qವನ್ನು ಈ ಕೆಳಗಿನಂತೆ ವ್ಯಾಖ್ಯಿಸಬಹುದು: A ಮತ್ತು Bಗಳ ನಡುವೆ ಒಂದು ಪ್ರವಾಹ ಹರಿದರೆ qವಿನ ಬೆಲೆ 1, ಹರಿಯದಿದ್ದರೆ 0. ಈ ಚರ




ಚಿತ್ರ 20

qವನ್ನು s ಮತ್ತು r ಗಳ ಒಂದು ಉತ್ಪನ್ನವಾಗಿ ನಿರೂಪಿಸಬಹುದು. ಅದನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಿದೆ.

| s | r | q=s+r |
|---|---|---|
| 1 | 1 | 1 |
| 1 | 0 | 1 |
| 0 | 1 | 1 |
| 0 | 0 | 0 |

ಈ ಉತ್ಪನ್ನ qಗೆ ತಾರ್ಕಿಕ ಸಂಕಲನ ಇಲ್ಲವೇ 'ಅಥವಾ–ಉತ್ಪನ್ನ' (ಆರ್_ಫಂಕ್ಷನ್) ಎಂದು ಹೆಸರು. ಇದನ್ನು ಪ್ರತೀಕಾತ್ಮಕವಾಗಿ ಚಿತ್ರ 21ರ ಬಲಪಾರ್ಶ್ವದಲ್ಲಿ ತೋರಿಸಿದೆ.




ಚಿತ್ರ 21

ಕೊನೆಯದಾಗಿ ಚಿತ್ರ 21(a) ಮತ್ತು (b) ಗಳಲ್ಲಿ ತೋರಿಸಿರುವ ಸ್ವಿಚ್ ಪ್ರರೂಪಗಳನ್ನು ನೋಡಬಹುದು. A ಮತ್ತು B ನಡುವಿನ ಜೋಡಣೆಯನ್ನು ದ್ವಿಮಾನ ಚರ S; ಹಾಗೂ A ಮತ್ತು C ನಡುವಿನ ಜೋಡಣೆಯನ್ನು ದ್ವಿಮಾನ ಚರ s' ಸೂಚಿಸುತ್ತವೆ. A ಮತ್ತು B ನಡುವೆ ಒಂದು ಪ್ರವಾಹ ಹರಿಯಬಲ್ಲುದಾದರೆ ಅದು A ಮತ್ತು C ನಡುವೆ ತುಂಡಾಗಿ ಹೋಗುತ್ತದೆ; ಮತ್ತು ವಿಪರ್ಯಯವಾಗಿ. ಅಂದರೆ S=1 ಆಗಿದ್ದರೆ ಆಗ S'=0 ಮತ್ತು S=0 ಆಗಿದ್ದರೆ ಆಗ S'= 1. ಈ ಎರಡು ಚರಗಳು S ಮತ್ತು S' ಪರಸ್ಪರ ಪೂರಕ (ಕಾಂಪ್ಲಿಮೆಂಟರಿ) ಆಗಿವೆ ಎನ್ನುತ್ತೇವೆ. ಇದರ ಅರ್ಥ S, S' ಹಾಗೂ S', S ನ ಪೂರಕ. ಇದನ್ನು ಚಿತ್ರ 21(c)ಯಲ್ಲಿ ಪ್ರತೀಕಗಳ ಮೂಲಕ ತೋರಿಸಲಾಗಿದೆ.

ಸ್ವಿಚ್ಚುಗಳ ಹೆಚ್ಚು ಸಂಕೀರ್ಣವಾದ ಒಂದು ಏರ್ಪಾಡನ್ನು ಈಗ ಪರಿಶೀಲಿಸೋಣ. ಈ ಏರ್ಪಾಡು ಅದೆಷ್ಟೇ ಸಂಕೀರ್ಣವಾಗಿದ್ದರೂ ಅದನ್ನು 'ಮತ್ತು', 'ಅಥವಾ' ಮತ್ತು 'ಪೂರಕ' ಉತ್ಪನ್ನಗಳಲ್ಲಿ ನಿರೂಪಿಸಬಹುದೆಂದು ತೋರಿಸೋಣ.




ಚಿತ್ರ 22

ಬೂಲಿಯನ್ ಉತ್ಪನ್ನ; ಚಿತ್ರ 22ರಲ್ಲಿ ತೋರಿಸಿರುವ ಸ್ವಿಚ್ಚಿಕೆಜಾಲವನ್ನು (ಸ್ವಿಚ್ಚಿಂಗ್ ನೆಟ್‌ವರ್ಕ್) ಪರಿಶೀಲಿಸಬೇಕು. p ಮತ್ತು qಗೆ ಅನುರೂಪವಾದ ಎರಡು ಸ್ವಿಚ್ಚುಗಳು ಸಮಾಂತರವಾಗಿರುವುದನ್ನು ಗಮನಿಸಿದಾಗ ಒಂದು ತಾರ್ಕಿಕ ಸಂಕಲನ p+q ವು

C ಮತ್ತು D ನಡುವೆ ಪ್ರವಾಹದ ಹರಿವಿನ ನಿರ್ಬಂಧವನ್ನು ಪರಿಣಾಮಕಾರಿಯಾಗಿ ವಿವರಿಸಬಲ್ಲುದು. ಅರ್ಥಾತ್ ಅ ಮತ್ತು ಆ ನಡುವಿನ ಈ ಸಮಾಂತರ ಸಂಯೋಜನೆಯನ್ನು p+q ಚರ ವಿವರಿಸುವ ಒಂದು ಒಂಟಿ ಸ್ವಿಚ್ಚಿನಿಂದ ಪ್ರತಿಸ್ಥಾಪಿಸಬಹುದು. ಇದೇ ಪ್ರಕಾರ r ಮತ್ತು ಗಳನ್ನು r+s ಆಗಿ ಸಂಯೋಜಿಸಬಹುದು.

ಚಿತ್ರ 22(b)ಯಲ್ಲಿ ಈ ಸರಳೀಕೃತ ಸಮಾನ ಜಾಲವನ್ನು (ಈಕ್ವಿವಲೆಂಟ್ ನೆಟ್‌ವರ್ಕ್) ಕಾಣಿಸಿದೆ. ಚಿತ್ರ 22(b)ಯಲ್ಲಿರುವ ಶಾಖೆಗಳಲ್ಲಿನ ಮೊದಲಿನದರಲ್ಲಿ ಎರಡು ಸ್ವಿಚ್ಚುಗಳು ಶ್ರೇಣಿಯಲ್ಲಿವೆ. ಅವನ್ನು ತಾರ್ಕಿಕ ಗುಣಾಕಾರದಿಂದ ಒಂದು ಒಂಟಿ ಸ್ವಿಚ್ಚಿಗೆ ಪರಿವರ್ತಿಸಬಹುದು. ಇದು (p+q). (r+s) ಉತ್ಪನ್ನ. ಇದೇ ಪ್ರಕಾರ ಎರಡನೆಯ ಶಾಖೆಯನ್ನು (t,u) ಉತ್ಪನ್ನದಿಂದ ವಿವರಿಸಬಹುದು. ಈ ಸರಳೀಕರಣದಿಂದ ಪಡೆಯುವ ಸಮಾನ ಜಾಲವನ್ನು ಚಿತ್ರ 22(c) ತೋರಿಸುತ್ತದೆ. ಈಗ ಚಿತ್ರದಲ್ಲಿನ ಮೂರು ಸಮಾಂತರ ಶಾಖೆಗಳಲ್ಲಿ ತಲಾ ಒಂದು ಸ್ವಿಚ್ ಇರುವುದರಿಂದ ಅದನ್ನು ತಾರ್ಕಿಕ ಸಂಕಲನದಿಂದ ಒಂದು ಒಂಟಿ ಸ್ವಿಚ್ಚಾಗಿ ಸಂಯೋಜಿಸಬಹುದು. ಇದನ್ನು ಚಿತ್ರ 22(d) ಯಲ್ಲಿ ತೋರಿಸಿದೆ. ಫಲಿತ ಉತ್ಪನ್ನವೀಗ

$$x=v+t.u+(p+q).(r+s)$$




ಚಿತ್ರ 23

X ಉತ್ಪನ್ನಕ್ಕೆ A ಮತ್ತು B ನಡುವಿನ ಸ್ವಿಚ್ಚಿಕೆಯ ನಿರ್ಬಂಧಗಳನ್ನು ವಿವರಿಸುವ ಬೂಲಿಯನ್ ಉತ್ಪನ್ನವೆಂದು ಹೆಸರು. ಇದನ್ನೇ ಪ್ರತೀಕಗಳ ರೀತಿಯಲ್ಲಿ ಚಿತ್ರದಲ್ಲಿ ತೋರಿಸಿದೆ.

ಸಂಕಲಕ (ಆ್ಯಡರ್); ಮೇಲೆ ಬರೆದಿರುವ ಸಂಕಲನ ಕೋಷ್ಟಕವನ್ನು ಈಗ ಪುನರವಲೋಕಿಸೋಣ. ಇದನ್ನು ಮೊತ್ತ (ಸಮ್) ಮತ್ತು ಸಾಗು (ಕ್ಯಾರಿ) ಪದಗಳಲ್ಲಿ ಈ ಕೆಳಗಿನಂತೆ ಪುನರ್ನಿರೂಪಿಸಬಹುದು.

| p | q | s | c |
|---|---|---|---|
| | | ಮೊತ್ತ | ಸಾಗು |
| 1 | 1 | 1 | 1 |
| 1 | 0 | 1 | 0 |
| 0 | 1 | 1 | 0 |
| 0 | 0 | 0 | 0 |

s ಮತ್ತು c ಗಳಿಗೆ ಪ್ರತ್ಯೇಕವಾಗಿ p ಮತ್ತು q ದ್ವಿಮಾನ ಚರಗಳಲ್ಲಿ ಬೂಲಿಯನ್ ಉತ್ಪನ್ನಗಳನ್ನು ರಚಿಸಬಲ್ಲೆವು. ಮೇಲಿನ ಕೋಷ್ಟಕದಲ್ಲಿ 1 ಮತ್ತು 0 ಗಳನ್ನು ಸಂಯೋಜಿಸಿ ಈ ಉತ್ಪನ್ನಗಳು

$$S=p'.q+p.q'$$

$$c = p \cdot q$$

ಎಂದು ತಾಳೆ ಮಾಡಬಹುದು. ಆದ್ದರಿಂದ ಮೇಲಿನ ಉದಾಹರಣೆಯ ದಾರಿಯಲ್ಲಿ ಪ್ರತೀಕಗಳ ಒಂದು ಚಿತ್ರವನ್ನು ಬಿಡಿಸುವ ಒಂದು ಸರಳ ಸಮಸ್ಯೆ ಮಾತ್ರ ಈಗ ಉಳಿದಿರುವುದು. ಇದನ್ನು ಚಿತ್ರ 24ರಲ್ಲಿ ತೋರಿಸಿದೆ. ಚಿತ್ರದಲ್ಲಿನ ಜಾಲ ಸಂಕಲನ ಕೋಷ್ಟಕವನ್ನು ಪ್ರತಿನಿಧಿಸುತ್ತದೆ.

ಎರಡು ದ್ವಿಮಾನ ಸಂಖ್ಯೆಗಳನ್ನು ಸಂಕಲಿಸಲು ಒಂದು ನೀಟಸಾಲಿನಲ್ಲಿನ ಅನುರೂಪ ಅಂಕೆಗಳನ್ನು ಜೊತೆಯಲ್ಲಿ ತಂದು ಮೇಲಿನ ಜಾಲದಿಂದ ಕೂಡಿಸಲಾಗುತ್ತದೆ. ಬಳಿಕ ಇದರ ಮೊತ್ತವನ್ನು 'ಸಾಗು' ವಿಗೆ ಹಿಂದಿನ ನೀಟಸಾಲಿನಿಂದ ಇಂಥ ಇನ್ನೊಂದು ಜಾಲವನ್ನು ಉಪಯೋಗಿಸಿಕೊಂಡು ಕೂಡಿಸಲಾಗುತ್ತದೆ. ಈ ಎರಡು ಫಲಿತ ಸಂಖ್ಯೆಗಳನ್ನು ತಾರ್ಕಿಕವಾಗಿ ಕೂಡಿಸಿ ಪರಿಶೀಲನೆಯಲ್ಲಿರುವ ನೀಟಸಾಲಿನ ಅಂತಿಮ ಫಲಿತ ಅಂಕೆಯನ್ನು ಪಡೆಯಲಾಗುತ್ತದೆ.

ಮೇಲಿನ ವಿವರಣೆಯಲ್ಲಿ ಸ್ವಿಚ್ಚಿಕೆಯ ಜಾಲಗಳ ಆಲೇಖ್ಯದ ಒಂದು ಲಾಕ್ಷಣಿಕ ಉದಾಹರಣೆಯಾಗಿ ಸಂಕಲನ ಪರಿಕರ್ಮವನ್ನು ಮಾತ್ರ ನಿರೂಪಿಸಿದೆ. ಒಂದು ಅಂಕಗಣಕದ ಅಂಕಗಣಿತಾಂಗದ ವಾಸ್ತವ ಮುಖ್ಯ ಭಾಗಗಳೆಂದರೆ ಸ್ವಿಚ್ಚುಗಳೇ.




ಚಿತ್ರ 24

ವ್ಯವಕಲನ, ಗುಣಾಕಾರ, ಭಾಗಾಹಾರ, ಇಲ್ಲವೇ ಘಾತಾರೋಪಣಗಳನ್ನು ಕುರಿತಂತೆ ಸ್ವಿಚ್ಚಿಕೆಯ ಜಾಲಗಳನ್ನು ರೂಪಿಸುವಲ್ಲಿ ಇದೇ ತತ್ವಗಳನ್ನು ಬಳಸಬಹುದು.

**ಗಣಕದ ತಂತ್ರಾಂಶ (ಸಾಫ್ಟ್‌ವೇರ್)** ; ಮಾನವ ಪರಿಕರ್ಮಿಯೊಬ್ಬ ಗಣಕಕ್ಕೆ ಉಣಿಸುವ ನಿರ್ದೇಶನಗಳ ಸರಣಿಯನ್ನು ಸ್ವೀಕರಿಸಿ ನಿರ್ವಹಿಸುವ ಸಾಮರ್ಥ್ಯ ಆ ಗಣಕದ ಅತ್ಯಂತ ಪ್ರಮುಖ ಲಕ್ಷಣಗಳಲ್ಲಿ ಒಂದು. ಕ್ರಮವಿಧಿಯನ್ನು (ಪ್ರೋಗ್ರಾಂ) ತಯಾರುಮಾಡುವ ವ್ಯಕ್ತಿಯ ಸಹಭಾಗಿತ್ವವಿಲ್ಲದೇ ಗಣಕಕ್ರಿಯೆ ನಡೆಸಲಾರದು. ಗಣಕಕ್ಕೆ ಸ್ವತಃ ಜ್ಞಾಪಕಶಕ್ತಿ ಇರುವುದರಿಂದ ಮನುಷ್ಯ ಮತ್ತು ಗಣಕದ ನಡುವೆ ಎರಡು ವಿಧದ ಅಂತರಕ್ರಿಯೆಯ ಸಾಧ್ಯತೆಗಳುಂಟು. ಗಣಕದ ಜ್ಞಾಪಕದಲ್ಲಿ ದೀರ್ಘಕಾಲ ಉಳಿಯುವಂಥ ಕೆಲವು ಕ್ರಮವಿಧಿಗಳನ್ನು ಅದಕ್ಕೆ ಉಣಿಸಿ ಅದರ ಕೆಲವು ಪರಿಕರ್ಮಗಳನ್ನು ನಿರ್ಬಂಧಗೊಳಿಸುವುದು ಮೊದಲ ಸಾಧ್ಯತೆ. ಕೆಲವು ಸಮಸ್ಯೆಗಳ ಪರಿಹಾರಗಳನ್ನು ಗಣಕ ಮುದ್ರಿಸಬೇಕಾಗುವ ಅವಶ್ಯಕತೆ ಇರುತ್ತದೆ. ಅಂಥ ಸಮಸ್ಯೆಗಳ ಕ್ರಮವಿಧಿಗಳನ್ನು ಗಣಕಕ್ಕೆ ಉಣಿಸುವುದು ಎರಡನೆಯ ಸಾಧ್ಯತೆ. ಪರಿಹಾರ ಮುದ್ರಣವಾದೊಡನೆಯೇ ಕ್ರಮವಿಧಿಯನ್ನು ಗಣಕದ ಜ್ಞಾಪಕದಿಂದ ಅಳಿಸಿ ಹಾಕಲಾಗುತ್ತದೆ. ಎರಡನೆಯ ಮಾದರಿಗೆ ಒಂದು ಉದಾಹರಣೆಯನ್ನು ಈಗ ಕೊಡುತ್ತೇವೆ. ಬಳಿಕ ಮೊದಲನೆಯ ಮಾದರಿಯನ್ನು ಸಂಕ್ಷೇಪವಾಗಿ ವಿವರಿಸುತ್ತೇವೆ.

**ಸಾಂಖ್ಯಿಕ ವಿಶ್ಲೇಷಣೆ (ನ್ಯೂಮರಿಕಲ್ ಅನಾಲಿಸಿಸ್)**: ಎರಡನೆಯ ಮಾದರಿಯ ಹಲವಾರು ಸಮಸ್ಯೆಗಳ ಪರಿಶೀಲನೆಗೆ ಸಾಂಖ್ಯಿಕ ವಿಶ್ಲೇಷಣೆ ಎನ್ನುವ ಗಣಿತ ವಿಭಾಗದ ಅವಶ್ಯಕತೆ ಇದೆ. ಈ ವಿಭಾಗಕ್ಕೆ ಗಣಕವಿಜ್ಞಾನದೊಡನೆ ನಿಕಟಸಂಬಂಧ ಉಂಟು. ಸಾಂಖ್ಯಿಕ ವಿಶ್ಲೇಷಣೆಯ ವಿಧಾನದ ಒಂದು ಸರಳ ಆದರೂ ಲಾಕ್ಷಣಿಕ ಉದಾಹರಣೆಯನ್ನು ಇಲ್ಲಿ ಬರೆದಿದೆ.

ಯಾವುದೇ ದತ್ತ ಧನ ನೈಜಸಂಖ್ಯೆಯ ವರ್ಗಮೂಲವನ್ನು ನೀಡುವಂತೆ ಗಣಕವನ್ನು ಕ್ರಮವಿಧಿಸಬೇಕಾಗಿದೆಯೆಂದು ಭಾವಿಸೋಣ. ಈ ಗಣಕಕ್ಕೆ ಕೂಡಿಸಲು, ಕಳೆಯಲು, ಗುಣಿಸಲು, ಭಾಗಿಸಲು ಯಂತ್ರಾಂಶ (ಹಾರ್ಡ್‌ವೇರ್) ಸೌಕರ್ಯಗಳು ಇವೆಯೆಂದು ಅಂಗೀಕರಿಸೋಣ.

ವರ್ಗಮೂಲ ಬೇಕಾಗಿರುವ ಸಂಖ್ಯೆ a ಆಗಿರಲಿ. a ಯ ವರ್ಗಮೂಲ x ಆಗಿದ್ದರೆ ಅದು $x^2 = a$ ಅಥವಾ $x = \frac{a}{x}$ ಸಮೀಕರಣವನ್ನು ತಾಳೆ ಮಾಡಬೇಕು. ಇದನ್ನು $2x = x + \frac{a}{x}$ ಅಥವಾ ತತ್ಸಮಾನವಾಗಿ $x = \frac{1}{2}\left(x + \frac{a}{x}\right)$

ಎಂಬುದಾಗಿ ಕೂಡ ಬರೆಯಬಹುದು. xಗೆ ಒಂದು ಅಂದಾಜನ್ನು ಮಾಡಿ ಅದನ್ನು ಮೇಲಿನ ಸಮೀಕರಣದ ಬಲಭಾಗದಲ್ಲಿ ಆದೇಶಿಸಿದರೆ ಫಲಿತಾಂಶ x ಆಗಬೇಕು. ಅಂದಾಜು ತಪ್ಪಾಗಿದ್ದರೆ ಎಡಭಾಗಕ್ಕಿಂತ ಭಿನ್ನವಾದ ಒಂದು ಬೆಲೆ ದೊರೆಯುತ್ತದೆ. ಈ ವ್ಯತ್ಯಾಸಕ್ಕೆ ಅವಕಾಶ ನೀಡಲು ಎಡಭಾಗವನ್ನು ಬೇರೆ ಒಂದು ಚರ yಯಿಂದ ಸೂಚಿಸೋಣ. ಹೀಗೆ ಮಾಡುವಾಗ, ಅಂದಾಜು ಸರಿಯಾಗಿದ್ದರೆ y = x ಎಂಬುದು ಅಧ್ಯಾಹಾರ. ಆದ್ದರಿಂದ

$$y = \frac{1}{2}\left(x + \frac{a}{x}\right)$$

x, a ಯ ವರ್ಗಮೂಲವಾಗಿದ್ದರೆ y = x. a = 15 ಎಂಬ ಉದಾಹರಣೆಯಲ್ಲಿ 15ರ ವರ್ಗಮೂಲ 4 ಎಂಬುದಾಗಿ ಅಂದಾಜು ಮಾಡೋಣ. ಈ ಬೆಲೆಗಳನ್ನು ಆದೇಶಿಸಿದರೆ

$$y_1 = \frac{1}{2}\left(4 + \frac{15}{4}\right) = 3.875$$

ಈ ಬೆಲೆಗಳನ್ನು ಹೊಸ ಅಂದಾಜು ಎಂಬುದಾಗಿ ತೆಗೆದುಕೊಂಡು

$$y_2 = \frac{1}{2}\left(3.875 + \frac{15}{3.875}\right) = 3.873$$

ಸಮೀಕರಣದಲ್ಲಿ ಆದೇಶಿಸಿ ಪುನಃ ಈ ಬೆಲೆಯನ್ನು ಹೊಸ ಅಂದಾಜಾಗಿ ತೆಗೆದುಕೊಳ್ಳುತ್ತೇವೆ:

$$y_3 = \frac{1}{2}\left(3.873 + \frac{15}{3.873}\right) = 3.873$$

ಮುಂದೆ ನಾವು ಮಾಡುವ ಯಾವ ಆದೇಶವೂ ದಶಮಾಂಶದ ಮೂರು ಸ್ಥಾನಗಳವರೆಗೆ ಏನೂ ಬದಲಾವಣೆ ಮಾಡುವುದಿಲ್ಲ ಎಂಬುದಾಗಿ ನೋಡಬಹುದು. ಅಂದರೆ ನಮ್ಮ ಅಂದಾಜು ಅಭಿಸರಿಸಿದೆ (ಕನ್ವರ್ಜ್‌ಡ್). ಆದ್ದರಿಂದ 15ರ ವರ್ಗಮೂಲ 3. 873. ಸಾಂಖ್ಯಿಕ ವಿಶ್ಲೇಷಣೆಯಲ್ಲಿ ಈ ಮುನ್ನಡೆಗೆ ಪುನರಾವೃತ್ತಿ ವಿಧಾನ (ಇಟರೇಟಿವ್ ಮೆಥಡ್) ಎಂದು ಹೆಸರು. ಇದನ್ನು ನಿರ್ವಹಿಸುವಂತೆ ಗಣಕವನ್ನು ಹೇಗೆ ನಿರ್ದೇಶಿಸ ಬಹುದು ಎಂಬುದನ್ನು ಈಗ ನೋಡೋಣ.

ಪ್ರವಾಹ ಚಿತ್ರ (ಫ್ಲೋ ಡಯಾಗ್ರಂ): ಪುನರಾವೃತ್ತಿಗಳ ಸಂಖ್ಯೆಯು ಪದಗಳಲ್ಲಿ ಮೇಲಿನ ಸಮೀಕರಣವನ್ನು ಈ ಕೆಳಗಿನಂತೆ ಬರೆಯಬಹುದು: $i = 1, 2, 3, 4, \ldots\ldots$ ಮೊದಲ ಪುನರಾವೃತ್ತಿಗೆ

$$x_1 = \frac{1}{2}\left(x_0 + \frac{a}{x_0}\right)$$ ಇಲ್ಲಿ $x_0$ ಪ್ರಾರಂಭಿಕ ಅಂದಾಜು.

ಮೇಲೆ ವಿವರಿಸಿರುವ ಪುನರಾವೃತ್ತಿ ವಿಧಾನವನ್ನು ಮೂಲಭೂತ ಅಂಕಗಣಿತ ಪರಿಕರ್ಮಗಳಲ್ಲಿ ಒಂದು ಪ್ರವಾಹ ನಕ್ಷೆಯ ಮೂಲಕ ತೋರಿಸಬಹುದು. ಸೌಕರ್ಯಕ್ಕೋಸ್ಕರ ರಂಧ್ರಪತ್ರ ಯಂತ್ರದಲ್ಲಿನ (ಪಂಚ್‌ಕಾರ್ಡ್ ಮಶೀನ್) ಅಕ್ಷರಗಳೆಲ್ಲವನ್ನೂ ಇಂಗ್ಲಿಷ್ ವರ್ಣಮಾಲೆಯ ದೊಡ್ಡ ಅಕ್ಷರಗಳಾಗಿ ಆಯುತ್ತೇವೆ. ಪ್ರವಾಹ ನಕ್ಷೆಗೆ ಇದೇ ಸಂಪ್ರದಾಯವನ್ನು ಅನುಸರಿಸುತ್ತೇವೆ. ಉದಾಹರಣೆಗೆ ಮೇಲಿನ ಸಮೀಕರಣದಲ್ಲಿ aಯ ಬದಲು A ಯನ್ನು ಬರೆಯಬಹುದು. ಅಲ್ಲದೇ $x_i$ ಮತ್ತು $x_{i-1}$ ರಂಥ ಉಪಾಕ್ಷರಿತ (ಸಬ್ ಸ್ಕ್ರಿಪ್ಟೆಡ್) ಚರಗಳನ್ನು ಅನುಕ್ರಮವಾಗಿ X(I) ಮತ್ತು X (I-1) ಎಂದು ಬರೆಯುತ್ತೇವೆ. ಪ್ರವಾಹ ನಕ್ಷೆ 25ರಲ್ಲಿ ಆಯ–1ರಲ್ಲಿ ಕೊಟ್ಟಿರುವ "ಪ್ರಾರಂಭಿಸು" ಗಣಕಕ್ಕೆ ಗಣನೆಯನ್ನು ಪ್ರಾರಂಭಿಸಲು ನಿರ್ದೇಶಿಸುತ್ತದೆ. ಎರಡನೆಯ ನಿರ್ದೇಶನ (ಆಯ –2) a, $x_0$ ಮತ್ತು n ಸಂಖ್ಯೆಗಳನ್ನು 'ಓದು' ಎಂದು ಇದೆ. ಇಲ್ಲಿ n ಎಂಬುದು ಗಣಕ ಮಾಡ ಬೇಕೆಂದು ನಾವು ಬಯಸುವ ಪುನರಾವೃತ್ತಿಗಳ ಸಂಖ್ಯೆ (ಉದಾಹರಣೆಗೆ 10 ಆಗಿರಲಿ). ಮೂರನೆಯ ನಿರ್ದೇಶನ ಪ್ರಾರಂಭಿಕವಾಗಿ i=0 ಎಂದು ಅಳವಡಿಸಲು ಇದೆ.




ಚಿತ್ರ 25

ಗಣಕದ ಪರಿಕರ್ಮಗಳನ್ನು ಪ್ರವಾಹ ನಕ್ಷೆಯ ಮೂಲಕ ಗುರುತಿಸುವಲ್ಲಿ ಈ ಕೆಳಗಿನ ಸೂತ್ರವಿಧಿಯನ್ನು ಗಮನಿಸುವುದು ಅವಶ್ಯ: ಸದಾ ಪ್ರವಾಹ ರೇಖೆಯ ದಿಶೆಯಲ್ಲಿ (ಬಾಣ ಗುರುತು) ಹೋಗಬೇಕು, ಅದಕ್ಕೆ ಎದುರಾಗಿ ಎಂದೂ ಹೋಗಬಾರದು. ಆದ್ದರಿಂದ ಈಗ ಆಯ–4ಕ್ಕೆ ಬರುತ್ತೇವೆ. ಇದು i = i + 1 ಎನ್ನುತ್ತದೆ. ಇಲ್ಲಿ ಬಲಪಾರ್ಶ್ವದಲ್ಲಿರುವ iಯನ್ನು ನಿರ್ದೇಶನದ ನಿರ್ವಹಣೆಯ ಮೊದಲು ಇರುವ ಬೆಲೆಯೆಂದೂ ಎಡಪಾರ್ಶ್ವದಲ್ಲಿರುವ iಯನ್ನು ಬಲಪಾರ್ಶ್ವದಲ್ಲಿ ಕಾಣಿಸಿರುವ ಪರಿಕರ್ಮದ ಫಲಿತವೆಂದೂ ಭಾವಿಸಬೇಕು. ಮೊದಲಿನ ಪುನರಾವೃತ್ತಿಯಲ್ಲಿ ಬಲಪಾರ್ಶ್ವದ ಬೆಲೆ 0 ಮತ್ತು ಎಡಪಾರ್ಶ್ವದ ಬೆಲೆ 1. ಐದನೆಯ, ಆರನೆಯ ಮತ್ತು ಏಳನೆಯ ನಿರ್ದೇಶನಗಳು ಈ ಕೆಳಗಿನವನ್ನು ಗಣಿಸುತ್ತವೆ;

$$P = a/x_0, \quad Q = P + x_0, \quad x_1 = Q/2$$

ಎಂದರೆ $x_1 = \frac{1}{2}\left(x_0 + \frac{a}{x_0}\right)$

$x_1$ ರ ಗಣನ ಬೆಲೆಯನ್ನು (ಕಂಪ್ಯೂಟೆಡ್ ವೇಲ್ಯೂ) ಒಂದು ನಿರ್ದಿಷ್ಟ ಜ್ಞಾಪಕಕೋಶದಲ್ಲಿ ದಾಸ್ತಾನಿಸಲಾಗುವುದು.

ಎಂಟನೆಯ ಆಯ ವಿಶಿಷ್ಟವಾದ ಒಂದು ಪ್ರರೂಪದ್ದು. ಅದಕ್ಕೆ ಎರಡು ನಿಷ್ಕ್ರಮಣ ರೇಖೆಗಳಿವೆ. ಈಗ ಮೇಲಿನ ಸೂತ್ರವಿಧಿಯಂತೆ ಪ್ರವಾಹದ ದಿಶೆಯಲ್ಲಿ ಸಾಗಬೇಕಾದರೆ ನಮಗಿರುವುದು ಎರಡು ದಾರಿ. ಇವುಗಳ ಪೈಕಿ ಯಾವುದನ್ನು ಆಯಬೇಕು ಎನ್ನುವುದು i n ಆಗಿದೆಯೇ ಎನ್ನುವ ಆಯದಲ್ಲಿನ ಪ್ರಶ್ನೆಯಿಂದ ಇತ್ಯರ್ಥವಾಗುತ್ತದೆ.

ಮೊದಲಿನ ಪುನರಾವೃತ್ತಿಯಲ್ಲಿ i =1. ಆದ್ದರಿಂದ ಇದು n ಗಿಂತ ದೊಡ್ಡದಾಗಿಲ್ಲ, ಅದಕ್ಕೆ ಸಮವಾಗಿಯೂ ಇಲ್ಲ. ಇಲ್ಲಿ ಉತ್ತರ ಅಲ್ಲ ಎಂದಾಗಿರುವುದರಿಂದ ನಾವು ಎಡ ಪ್ರವಾಹವನ್ನು ತೆಗೆದುಕೊಂಡು R ಬಿಂದುವಿಗೆ ಮರಳಬೇಕು. ಮತ್ತು ಆಯ–4ಕ್ಕೆ ಪುನಃ ಮುಂದುವರಿಯಬೇಕು. ಈಗ ಎರಡನೆಯ ಪುನರಾವೃತ್ತಿಗೆ ಸಿದ್ಧರಾಗಿದ್ದೇವೆ. ನಾಲ್ಕನೆಯ ನಿರ್ದೇಶನವನ್ನು ನಿರ್ವಹಿಸಿದ ಬಳಿಕ iಯ ಬೆಲೆ 2. ಆಯಗಳು 5, 6 ಮತ್ತು 7 ಒಟ್ಟಾಗಿ ಈ ಕೆಳಗಿನ ಬೆಲೆಯನ್ನು ಗಣಿಸುತ್ತವೆ:

$$x_2 = \frac{1}{2}\left(x_1 + \frac{a}{x_1}\right)$$

4 ರಿಂದ 8ರ ವರೆಗಿನ ಆಯಗಳ ಚಕ್ರಾವರ್ತನೆ (ಸ್ಯೆಕ್ಲಿಂಗ್) ಅಥವಾ ಕುಣಿಕೆ ಕಟ್ಟುವಿಕೆ (ಲೂಪಿಂಗ್) i, n ಆಗುವವರೆಗೂ ಮುಂದುವರೆಯುತ್ತಿರುತ್ತದೆ. ಆಗುವ i n ಆಗಿದೆಯೇ ಎನ್ನುವ ಪ್ರಶ್ನೆಗೆ ಉತ್ತರ ಹೌದು. ಈಗ ಪ್ರವಾಹ ದಿಶೆ ಆಯ–9 ರ ಕಡೆಗೆ ಉಂಟು. ಆದ್ದರಿಂದ ಗಣನೆ ಮೇಲೆ ವಿವರಿಸಿದ ಕುಣಿಕೆಯಿಂದ ತುಂಡಾಗಿ ಹೊರಕ್ಕೆ ಹೋಗುತ್ತದೆ. ನಿರ್ದೇಶನ 9 ಗಣಕಕ್ಕೆ a ಮತ್ತು $x_n$ ನ ಬೆಲೆಗಳನ್ನು ಮುದ್ರಿಸಲು ವಿಧಿಸುತ್ತದೆ. n ಪುನರಾವೃತ್ತಿಗಳಾದ ಬಳಿಕ ಅಂದಾಜಿನ ಬೆಲೆ a ಯ ವರ್ಗಮೂಲದೆಡೆಗೆ ಅಭಿಸರಿಸುವುದು. ಆದ್ದರಿಂದ $x_n$, a ಯ ವರ್ಗಮೂಲದ ಬೆಲೆಯನ್ನು ಕೊಡುತ್ತದೆ. ಹೀಗೆ ಪ್ರವಾಹ ನಕ್ಷೆ ನಿರ್ದೇಶನಗಳ ಒಂದು ಸಾಂಕೇತಿಕತೆಯನ್ನು (ಸ್ಕೀಮ್ಯಾಟಿಕ್) ಮತ್ತು ಅವುಗಳ ಪರಿಕರ್ಮದ ಸರಣಿಯನ್ನು ಕೊಡುತ್ತದೆ. ಗಣಕ n =10000 ಎಂದು ಓದಿದರೆ 4 ರಿಂದ 8 ರವರೆಗಿನ ಆಯಗಳಲ್ಲಿರುವ ನಿರ್ದೇಶನಗಳು 10,000 ಸಲ ನಿರ್ವಹಿಸಲ್ಪಡುತ್ತವೆ. ಹಾಗಿದ್ದರೂ ಇವೆಲ್ಲವೂ, ಪ್ರವಾಹ ನಕ್ಷೆಯಲ್ಲಿ ಕಾಣಿಸಿರುವಂತೆ, ಕೇವಲ 10 ನಿರ್ದೇಶನಗಳನ್ನು ನಮೂದಿಸುವುದರಿಂದ ನಿರ್ವಹಿಸಲ್ಪಡುತ್ತವೆ. ಕ್ರಮವಿಧಾಯದ (ಪ್ರೋಗ್ರಾಮಿಂಗ್) ಸೌಕರ್ಯ ಇರುವುದು ಇಲ್ಲಿ. ಪ್ರವಾಹ ನಕ್ಷೆಯನ್ನು ಶಿಷ್ಟಭಾಷೆಗಳ ಪೈಕಿ ಒಂದರಲ್ಲಿ ಬರೆಯಲ್ಪಟ್ಟಿರುವ ಕ್ರಮವಿಧಿಗೆ ಅನುವಾದಿಸುವುದರಿಂದ ಇನ್ನೂ ಹೆಚ್ಚು ಸ್ಪಷ್ಟ ಚಿತ್ರ ನಮಗೆ ದೊರೆಯುವುದು.

ಕ್ರಮವಿಧಾಯದ ಭಾಷೆ (ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್); ಕ್ರಮವಿಧಾಯದ ಭಾಷೆಗಳು ಹಲವಾರು. ಪ್ರತಿಯೊಂದಕ್ಕೂ ಒಂದೊಂದು ವಿಶಿಷ್ಟ ಹೆಸರಿದೆ; ಆರಂಭದಲ್ಲಿ ಫೋರ್ಟ್ರಾನ್ (FORTRAN) ಕೋಬಾಲ್ (COBOL), ಆಲ್ಗಾಲ್ (ALGOL), ಗೋಟ್ರಾನ್ (GOTRAN), ಲಿಸ್ಪ್ (LISP) ಇತ್ಯಾದಿ ಭಾಷೆಗಳು ಗಣಕಗಳಲ್ಲಿ ಬಳಕೆಗೆ ಬಂದು ಫೋರ್ಟ್ರಾನ್ (FORMULA TRANSLATION) ಜನಪ್ರಿಯವಾಯಿತು. ಮುಂದುವರೆದು ಸಿ, ಸಿ++, ಜಾವಾ, ಎಚ್‌ಟಿಎಂಎಲ್ ಇತ್ಯಾದಿ ಭಾಷೆಗಳು ಬೇರೆ ಬೇರೆ ಕಾರ್ಯಾಚರಣ ವ್ಯವಸ್ಥೆಗಳಲ್ಲಿ, ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸಲ್ಪಡುತ್ತಿವೆ. ಮೇಲಿನ ಪ್ರವಾಹ ನಕ್ಷೆಗೆ ಸಮಾನವಾಗಿರುವ ಫೋರ್ಟ್ರಾನಿನಲ್ಲಿ ಬರೆಯಲಾಗಿರುವ ಕ್ರಮವಿಧಿಯನ್ನು ಇಲ್ಲಿ ತೋರಿಸಿದೆ.

```
ಕ್ರಮವಿಧಿ ವರ್ಗಮೂಲ
ಆಯಾಮ X (100)
11 ರೂಪಾಂಶ (3 F9.3, I1)
ಓದು 11, A, X(O), N
I = O
21 I = I+ 1
P =A/X( I–1)
Q=P+X ( I– 1)
X ( I )=Q/2
(I. GE. N) ಆಗಿದ್ದರೆ 21 ಕ್ಕೆ ಹೋಗು
ಮುದ್ರಿಸು, 11, A, N, X(I)
ಮುಗಿಸು
```


ಉತ್ಪಾದನ ಮತ್ತು ಅಂಕಅಂಶಗಳು
ಅರಣ್ಯೋದ್ಯಮ
ಗಣಿಗಾರಿಕೆ
ಮೀನುಗಾರಿಕೆ
ಮಾರಾಟ
ಎಂಜಿನಿಯರಿಂಗ್ ಸಂಶೋಧನ ಮತ್ತು ಅಭಿವೃದ್ಧಿ
ಸಂಪರ್ಕಸಹಿತ ಕಾರ್ಯ
ಸಂಶೋಧನೆ
ಮಾಹಿತಿ ಪ್ರಲೇಖನ
ಸಾರ್ವಜನಿಕ ಆರೋಗ್ಯ
ರೋಗಿಗಳು
ವೈದ್ಯರು
ಆಸ್ಪತ್ರೆಗಳು
ಆರ್ಥಿಕ ಸೂಚ್ಯಂಕಗಳು
ಉಳಿತಾಯಗಳು
ಋಣ
ಜನಾಂಗಸ್ಥಿತಿ ವಿವರಣೆ
ಮಾನವಸಾಮರ್ಥ್ಯ
ಜನತೆಯ ಚಲನಗಳು
ಯೋಜನೆ
ಕೈಗಾರಿಕಾ
ಸಾಮಾಜಿಕ-ಆರ್ಥಿಕ
ಆಡಳಿತ
ವಿಮೆ
ವಾಹನ ನೋಂದಣಿ
ಸಿಬ್ಬಂದಿ ದಾಖಲೆಗಳು
ವಿರಾಮ ವೇತನ
ಆಯವ್ಯಯ
ನಿಯಂತ್ರಣ
ಸಾಗಣೆ
ಹೆದ್ದಾರಿಗಳು
ವಾಯುಮಾರ್ಗಗಳು
ರಾಷ್ಟ್ರೀಯ ಕೈಗಾರಿಕೆಗಳು
ನೀರು ಸರಬರಾಜು
ಉಪಯುಕ್ತ ಸೇವೆಗಳು
ಸಂಪರ್ಕ
ವಿದ್ಯುಚ್ಛಕ್ತಿ
ಶೈಕ್ಷಣಿಕ ಆಡಳಿತ
ಪರೀಕ್ಷೆಗಳು
ಫಲಿತಾಂಶ ವರದಿ
ವೇಳಾಸಂಯೋಜನೆ
ಸಂಪರ್ಕಸಹಿತ ಕಾರ್ಯ
ಪ್ರಲೇಖನಗಳು
ಲೆಕ್ಕಾಚಾರಗಳು
ಸಂಶೋಧನೆ
ಉಪಾಧ್ಯಾಯರು
ವಿದ್ಯಾರ್ಥಿಗಳು
ಶಾಲೆಗಳು
ಶೈಕ್ಷಣಿಕ ಅಂಕಿಅಂಶಗಳು

ಚಿತ್ರ 26

ಪ್ರವಾಹ ನಕ್ಷೆಗೂ ಮೇಲಿನ ಫೋರ್ಟ್ರಾನ್ ನಿರ್ದೇಶನಗಳಿಗೂ ನಡುವೆ ಇರುವ ಸಾದೃಶ್ಯವನ್ನು ಸುಲಭವಾಗಿ ಗಮನಿಸಬಹುದು. ಜ್ಞಾಪಕಕೋಶದಲ್ಲಿ X(1), X(2),....., X (100) ಗಳಿಗೆ ಒಂದು ನೂರು ವಿಳಾಸವನ್ನು ಮೀಸಲಿಡುವುದು ಆಯಾಮ ಹೇಳಿಕೆಯ ಉದ್ದೇಶ. ಓದು ಹೇಳಿಕೆ A, N ಮತ್ತು X (0) ಸಂಖ್ಯೆಗಳನ್ನು ನಿರ್ದೇಶನ ಚೀಟಿ 11 ನಿರ್ದಿಷ್ಟಗೊಳಿಸಿರುವ ಒಂದು ವಿಶಿಷ್ಟ ರೂಪಾಂಶದ (ಫಾರ್ಮೆಟ್) ಅನುಸಾರ ಓದುತ್ತದೆ. ಆದರೆ ಕೆಲವು ಯಂತ್ರಗಳು X (0) ಯಲ್ಲಿನಂತೆ ಒಂದು ಉಪಾಕ್ಷರ (ಸಬ್ ಸ್ಕ್ರಿಪ್ಟ್) 0ಗೆ ಪ್ರವೇಶಗೊಡುವುದಿಲ್ಲ. ಈ ಸಂದರ್ಭದಲ್ಲಿ i ಯ ಆರಂಭ ಬೆಲೆ 0 ಯ ಬದಲು 1 ಆಗಿರಬೇಕು. ಪ್ರವಾಹನಕ್ಷೆಯಲ್ಲಿನ ಎಂಟನೆಯ ಆಯ ಒಂದು ನಿರ್ಧಾರ ಪೆಟ್ಟಿಗೆ (ಡಿಸಿಷನ್ ಬಾಕ್ಸ್). ಇದನ್ನು ಈ ಕೆಳಗಿನ ನಿರ್ದೇಶನದಿಂದ ಪ್ರತಿಸ್ಥಾಪಿಸುತ್ತೇವೆ;

(I, GE.N ) ಆಗಿದ್ದರೆ 21 ಕ್ಕೆ ಹೋಗು

ಅಂದರೆ, I N ಹೇಳಿಕೆ ನಿಜವಾಗಿದ್ದರೆ ಅದು ಗಣಕಕ್ಕೆ 21 ಎಂಬ ಗುರುತಿನ ನಿರ್ದೇಶನಕ್ಕೆ ಹಿನ್ನೆಗೆಯಬೇಕೆಂದು ವಿಧಿಸುತ್ತದೆ. ಇಲ್ಲವಾದರೆ ಮುಂದಿನ ನಿರ್ದೇಶನವನ್ನು ತೆಗೆದುಕೊಳ್ಳಲಾಗುವುದು.

ಸಂಗ್ರಹಣ ಕ್ರಮವಿಧಿಗಳು (ಕಂಪೈಲರ್ ಪ್ರೋಗ್ರಾಂಸ್) : ಮೇಲಿನ ಫೋರ್ಟ್ರಾನ್ ಯೋಜನೆಯನ್ನು ಪರೀಕ್ಷಿಸಿದರೆ ಅದರಲ್ಲಿರುವ ನಿರ್ದೇಶನಗಳು ವ್ಯಾವಹಾರಿಕ ಇಂಗ್ಲಿಷ್ ಭಾಷೆಯಲ್ಲಿವೆ ಎಂದು ತಿಳಿಯುತ್ತದೆ. – Go To (ಇಂಥಲ್ಲಿಗೆ ಹೋಗು), If (ಆಗಿದ್ದರೆ), ಇತ್ಯಾದಿ. ಇವುಗಳ ಅರ್ಥ ಮಾನವ ಕ್ರಮವಿಧಾಯಕನಿಗೆ ಸ್ಪಷ್ಟ ಉಂಟು. ಆದರೆ ಒಂದು ಗಣಕವನ್ನು ಕುರಿತು ಪ್ರಸ್ತಾವಿಸುವಾಗ ಅದಕ್ಕೆ ತಿಳಿಯುವ ದೃಷ್ಟಿಯಿಂದ ಇಂಥ ಪದಗಳು ಅನುಕೂಲವಾಗಿಲ್ಲ. ಗಣಕಕ್ಕೆ ಅರ್ಥವಾಗುವ ಭಾಷೆಗೆ ಮೇಳೈಸಿದ ಭಾಷೆ (ಅಸೆಂಬಲ್ಡ್ ಲ್ಯಾಂಗ್ವೇಜ್) ಎಂದು ಹೆಸರು. ಫೋರ್ಟ್ರಾನಿನಲ್ಲಿ ನಿರ್ದೇಶನಗಳನ್ನು ಬರೆಯುವಲ್ಲಿ ಮಾನವ ಕ್ರಮವಿಧಾಯಕನಿಗೆ ಒದಗುವ ಸೌಕರ್ಯ ಅಪಾರ. ಆದ್ದರಿಂದ ಆಧುನಿಕ ಗಣಕವೊಂದು ವಿಧಾಯಕನಿಗೂ ಅದಕ್ಕೂ ಸಮಾನ ಸೌಕರ್ಯವನ್ನು ಒದಗಿಸುವಂತೆ ರಚಿಸಲ್ಪಟ್ಟಿರುತ್ತದೆ. ಆ ಗಣಕದೊಳಗೆ ಫೋರ್ಟ್ರಾನನ್ನು ಮೇಳೈಸಿದ ಭಾಷೆಗೆ ಅನುವಾದಿಸಲು ಒಂದು ಏರ್ಪಾಡು ಉಂಟು.

ಫೋರ್ಟ್ರಾನಿನಂಥ ಮೇಲು ಮಟ್ಟದ ಭಾಷೆಗಳಿಗೂ ಯಂತ್ರ ಭಾಷೆಯಂಥ ಕೆಳಮಟ್ಟದ ಭಾಷೆಗಳಿಗೂ ನಡುವೆ ಒಂದು ಮುಖ್ಯ ವ್ಯತ್ಯಾಸವಿದೆ. ಗಣಕ ದಾಸ್ತಾನಿಸಿರುವ ನಿರ್ದೇಶನಗಳಲ್ಲಿ ಪ್ರತಿಯೊಂದಕ್ಕೂ ವಿಧಾಯಕ ಒಂದೊಂದು ನಿರ್ದೇಶನವನ್ನು ಬರೆಯುವುದು ಕೆಳಮಟ್ಟದ ಭಾಷೆಯಲ್ಲಿ ಮೂಲಭೂತವಾಗಿ ಅವಶ್ಯ. ಮೇಲುಮಟ್ಟದ ಭಾಷೆಗಳಲ್ಲಿ ಏಕಮಾನ ಕ್ರಮವಿಧಿ (ಯೂನಿಟ್ ಪ್ರೋಗ್ರಾಂ) ಶಬ್ದಗಳಲ್ಲಿರುವ ಒಂದು ಹೇಳಿಕೆಯಾಗಿರಬಹುದು. ಇಲ್ಲವೇ ಗಣಿತೀಯವಾದ ಒಂದು ಹೇಳಿಕೆಯಾಗಿರಬಹುದು. ಗಣಕ ಇದನ್ನು ಪರೀಕ್ಷಿಸಿ ಯಂತ್ರ ಸಂಕೇತ ನಿರ್ದೇಶನಗಳ ಗಣವಾಗಿ (ಸೆಟ್ ಆಫ್ ಮಶೀನ್ ಕೋಡ್ ಇನ್ಸ್ಟ್ರಕ್ಷನ್) ಅನುವಾದಿಸುತ್ತದೆ. ಹೀಗೆ ಒಂಟಿ ಹೇಳಿಕೆಯೊಂದು ಗಣಕದಿಂದ ಬಲು ದೊಡ್ಡ ಸಂಖ್ಯೆಯ ಯಂತ್ರಸಂಕೇತ ನಿರ್ದೇಶನಗಳಾಗಿ ಒಡೆಯಲ್ಪಟ್ಟು ತತ್‌ಕ್ಷಣದ ಉಪಯೋಗಕ್ಕೋಸ್ಕರ ದಾಸ್ತಾನಿಸಲ್ಪಟ್ಟಿರಬಹುದು.

ಮೇಲುಮಟ್ಟದ ಭಾಷೆಯಲ್ಲಿ ಲಿಖಿತವಾಗಿರುವ ಕ್ರಮವಿಧಿಯನ್ನು ಓದಿದ ಒಡನೆ ವಿಶೇಷವಾದ ಒಂದು ಅನುವಾದ ಕ್ರಮವಿಧಿಯನ್ನು ಗಣಕ ಉಪಯೋಗಿಸಿಕೊಳ್ಳುತ್ತದೆ. ಅದಾವುದೆಂದರೆ ಪ್ರತಿಯೊಂದು ನಿರ್ದೇಶನವನ್ನು ಕೆಳಮಟ್ಟದ ಕ್ರಮವಿಧಿಯಲ್ಲಿನ ನಿರ್ದೇಶನಗಳ ಒಂದು ಗಣವಾಗಿ ಪರಿವರ್ತಿಸಲು ಒಂದು ಸಂಗ್ರಹ ಕ್ರಮವಿಧಿ (ಕಂಪೈಲರ್ ಪ್ರೋಗ್ರಾಂ). ಗಣಕದ ಮುಂದಿನ ಯಾವುದೇ ಪರಿಕರ್ಮ ಈ ಕೆಳಮಟ್ಟದ ಕ್ರಮವಿಧಿಯ ನಿರ್ದೇಶನಗಳ ಸರಣಿಯನ್ನು ಅನುಸರಿಸುವುದರ ಮೂಲಕ ನೆರವೇರುತ್ತದೆ.

**ಗಣಕಗಳ ಅನ್ವಯಗಳು** : ಗಣಕಗಳ ಅನ್ವಯಗಳನ್ನು ವರ್ಗೀಕರಿಸುವುದೆಂದರೆ ಮಾನವ ಪ್ರಯತ್ನವನ್ನು ವರ್ಗೀಕರಿಸಿದಷ್ಟೇ ಸಿಕ್ಕುಸಿಕ್ಕಾದದ್ದು. ನಮಗೆ ತಿಳಿದಿರುವ ಪ್ರತಿಯೊಂದು ಜ್ಞಾನಪ್ರಕಾರವನ್ನು ಗಣಕವಿಜ್ಞಾನ ಒಳಪ್ರವೇಶಿಸಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಉಪಯುಕ್ತವಾಗುವಂಥ ಗಣಕಗಳ ಅನ್ವಯಗಳು ಇರುವ ಕ್ಷೇತ್ರಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ಸಂಯುಕ್ತರಾಷ್ಟ್ರಗಳ ಸಂಸ್ಥೆ ನೇಮಿಸಿತು. ಸ್ಥೂಲವಾದ ಒಂದು ವರ್ಗೀಕರಣವನ್ನು ಈ ಸಂಸ್ಥೆ ಮಾಡಿದೆ. ಇಂಥ ಒಂದು ವರ್ಗೀಕರಣವನ್ನು ಚಿತ್ರದಲ್ಲಿನ ಮರ ತೋರಿಸುತ್ತದೆ. ಕೆಲವು ಪ್ರಾತಿನಿಧ್ಯಾತ್ಮಕ ಅನ್ವಯಗಳನ್ನು ವಿವರಿಸಲು ಇಲ್ಲಿ ಪ್ರಯತ್ನಿಸಿದೆ.

**1. ಲೇಖಾರೇಖನ (ಅಕೌಂಟಿಂಗ್):** ಲೇಖಾರೇಖನ ವಿಧಾನವನ್ನು ಯಾಂತ್ರೀಕರಿಸಿದ್ದು ಗಣಕದ ಪ್ರಮುಖ ಅನ್ವಯಗಳಲ್ಲಿ ಒಂದು. ಸಾಮಾನ್ಯವಾಗಿ ಹೇಳುವುದಾದರೆ ಲೇಖಾರೇಖನ ಖಚಿತ ಲಕ್ಷಣದಿಂದ ಕೂಡಿರುವ ಸೂತ್ರವಿಧಿಗಳ ಹಾಗೂ ಮಟ್ಟಗಳ ಒಂದು ಗಣದ ಮೇಲೆ ಆಧರಿತವಾಗಿದೆ. ಆದ್ದರಿಂದ ಅದು ಯಾಂತ್ರೀಕರಣಕ್ಕೆ ಸುಲಭವಾಗಿ ಒಗ್ಗುವುದು. ಒಂದು ಕ್ರಮವಿಧಿ ಹಲವಾರು ವಿಶಿಷ್ಟ ಸಂದರ್ಭಗಳನ್ನೂ ಸಾಮಾನ್ಯ ಮಟ್ಟಗಳಿಂದ ವಿಚಲನೆಗಳನ್ನೂ, ಇಂಥವುಗಳ ಸಂಖ್ಯೆ ಮಿತಿಮೀರುವಷ್ಟು ದೊಡ್ಡದಾಗಿಲ್ಲದಿದ್ದರೆ, ಒಳಗೊಳ್ಳಬಹುದು. ಉದಾಹರಣೆಗೆ ಸಂಬಳಯಾದಿಯ ಪರಿಷ್ಕರಣದ ಯಾಂತ್ರೀಕರಣ.

ಪ್ರತಿಯೊಬ್ಬ ಕೆಲಸಗಾರನ ದೈನಂದಿನ ವರದಿಯಲ್ಲಿ ಇರುವ ಮಾಹಿತಿಯನ್ನು ಪತ್ರಗಳ ಮೇಲೆ ರಂಧ್ರಿಸಲಾಗುವುದು. ಅವನ್ನು ಕುರಿತ ಮಾಹಿತಿಗಳ ಒಂದು ಸಮುದಾಯವೇ – ಉದಾಹರಣೆಗೆ ಅವನ ಹೆಸರು, ಸಂಕೇತ ಸಂಖ್ಯೆ, ವೃತ್ತಿ ನಾಮ, ಪ್ರತಿತಿಂಗಳೂ ಮಾಡಬೇಕಾದ ಸ್ಥಿರ ವಜಾಗಳು (ಡಿಡಕ್ಷನ್ಸ್) ಶಾಶ್ವತವಾಗಿ ಭೂತಕಾಲವನ್ನು ಪ್ರತಿನಿಧಿಸುವ ಒಂದು ಕಾಂತಪಟ್ಟಿಕಾಜ್ಞಾಪಕದಲ್ಲಿ ದೊರೆಯುತ್ತದೆ. ಸಂಬಳಯಾದಿಯ ಯೋಜನೆಯಲ್ಲಿ ಸಂಕೇತ ಸಂಖ್ಯೆಯಿಂದ ಮತ್ತು ಸಂಬಳ ವಿವರಗಳಿಂದ ತೆರಿಗೆಯನ್ನು ಲೆಕ್ಕಾಚಾರ ಮಾಡಲು ಬೇಕಾಗುವ ಸೂತ್ರಗಳಿವೆ. ಪ್ರಚಲಿತ ತೆರಿಗೆಗೂ ಹಿಂದಿನ ತಿಂಗಳಿನದಕ್ಕೂ ಇರುವ ವ್ಯತ್ಯಾಸ ಈ ತಿಂಗಳು ವಜಾಮಾಡಬೇಕಾದ ತೆರಿಗೆಯನ್ನು ನಿರ್ಧರಿಸುತ್ತದೆ. ಸಂಬಳದ ಎಲ್ಲ ವಿವರಗಳ ಲೆಕ್ಕಾಚಾರವೂ ಮುಗಿದ ಬಳಿಕ ಒಂದು ಸಂಬಳಚೀಟಿ ಮುದ್ರಿಸಲ್ಪಡುತ್ತದೆ ಮತ್ತು ಪ್ರಸಕ್ತ ತಾರೀಖಿನವರೆಗೆ ಪರಿಷ್ಕೃತವಾದ ಮಾಹಿತಿಯನ್ನು ಒಂದು ಭೂತಜ್ಞಾಪಕದಲ್ಲಿರುವ ಹೊಸ ನಾಯಕದಫ್ತರದ (ಮಾಸ್ಟರ್‌ಫೈಲ್) ಬರೆಯಲ್ಪಡುತ್ತದೆ. ಆ ಬಳಿಕ ಗಣಕದ ಪರಿಕರ್ಮ ಮುಂದಿನ ಕೆಲಸಗಾರನೆಡೆಗೆ ಸಾಗುವುದು. ಲೇಖಾರೇಖನದ ಇತರ ಪ್ರರೂಪಗಳನ್ನು ಸಹ– ಉದಾಹರಣೆಗೆ ಮಾರಾಟದ ಲೆಕ್ಕಾಚಾರ, ಗಿರಾಕಿಗಳಿಂದ ಬರಬೇಕಾದ ಬಾಕಿಯ ವಿವರ, ಆರ್ಥಿಕ ಲೆಕ್ಕಾಚಾರ ಮತ್ತು ಆಕ್ಚುಯರಿ ವಿಧಾನ ಲೇಖಾರೇಖನ–ಗಣಕಗಳ ನೆರವಿನಿಂದ ಯಾಂತ್ರೀಕರಿಸಬಹುದು.

**2. ಬ್ಯಾಂಕ್ ವ್ಯವಹಾರ:** ವ್ಯಾಪಕವಾದ ಅಡ್ಡತಾಳೆಗಳು (ಕ್ರಾಸ್‌ಚೆಕ್ಸ್) ಬೇಕಾಗಿರುವಂಥ ಬ್ಯಾಂಕಿಂಗಿನ ಕೆಲವು ಪ್ರಕ್ರಮಗಳನ್ನು ಸ್ವಯಂಚಾಲಿತಗೊಳಿಸಬಹುದು. ಚೆಕ್ ವ್ಯವಹಾರಗಳನ್ನು ಗಣಕೀಕರಿಸಿ ನಿಭಾಯಿಸುವುದು ಇವುಗಳ ಪೈಕಿ ಒಂದು. ಬ್ಯಾಂಕಿನ ಒಂದು ಶಾಖೆಗೆ ಇಂದು ಚೆಕ್ ಬಂದಾಗ ಅದರ ವಿವರಗಳನ್ನು ಒಂದು ಟೆಲಿಟೈಪ್‌ರೈಟರ್ ಮುದ್ರಿಸುತ್ತದೆ. ಪ್ರತಿದಿನವೂ ಆಯಾ ದಿವಸದ ಚೆಕ್ಕುಗಳನ್ನೂ ಕಾಗದಪತ್ರಗಳನ್ನೂ ಗಣಕಕ್ಕೆ ಉಣಿಸಿ ಪ್ರತಿಯೊಂದು ಖಾತೆಯನ್ನೂ ಅಧುನಾತನಗೊಳಿಸಲಾಗುವುದು (ಅಪ್‌ಡೇಟೆಡ್). ಹೀಗೆ ಅಧುನಾತನಗೊಳಿಸಲ್ಪಟ್ಟ ಖಾತೆಯನ್ನು ಗಣಕದ ಜ್ಞಾಪಕದಲ್ಲಿರುವ ಒಂದು ದಫ್ತರದಲ್ಲಿನ ಅಂಕಿಅಂಶಗಳೊಡನೆ ಹೋಲಿಸಿ ಪ್ರತಿಯೊಂದು ಖಾತೆಯನ್ನೂ ಅಡ್ಡತಾಳೆ ನೋಡಲಾಗುವುದು. ಬಾಕಿನಿಂತ ಪಾವತಿಗಳು (ಔಟ್‌ಸ್ಟ್ಯಾಂಡಿಂಗ್ ಪೇಮೆಂಟ್ಸ್) ಮೀರೆಳೆತಗಳು (ಓವರ್ ಡ್ರ್ಯಾಫ್ಟ್ಸ್) ಇವೇ ಮೊದಲಾದವುಗಳ ವರದಿಗಳು ಈ ದಫ್ತರದಲ್ಲಿ ಇವೆ. ಯಾವುದೇ ಖಾತೆಯಲ್ಲಿ ನಿರ್ದಿಷ್ಟ ಸಂಖ್ಯೆಯ ವ್ಯವಹಾರಗಳು ವರದಿಯಾದಾಗ ಅವುಗಳ ಒಂದು ಪಟ್ಟಿಯನ್ನೂ ಸಂದಾಯವಾಗಬೇಕಾದ ಬಡ್ಡಿಯನ್ನೂ ಆ ಖಾತೆದಾರನ ಹೆಸರು ವಿಳಾಸ ಸಮೇತ ಒಂದು ಲೆಕ್ಕ ತಃಖ್ತೆಯಲ್ಲಿ (ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್) ಮುದ್ರಿಸಲಾಗುವುದು. ಗಣಕದಲ್ಲಿ ಈ ಪ್ರಕಾರ ದೊರೆಯುವ ಮಾಹಿತಿಯನ್ನು ಬ್ಯಾಂಕಿನ ಪ್ರತಿಯೊಂದು ಶಾಖೆಯ ಹಾಗೂ ಶಾಖೆಗಳ ಜಾಲದ ಸಂಖ್ಯಾಕಲನೀಯ (ಸ್ಟ್ಯಾಟಿಸ್ಟಿಕಲ್) ಮತ್ತು ಲೇಖಾವಿಶ್ಲೇಷಣೆಗೆ ಬಳಸಬಹುದು. ಇಂದು ರಾಷ್ಟ್ರದ ಬಹುತೇಕ ಬ್ಯಾಂಕಿಂಗ್ ವ್ಯವಸ್ಥೆ ಗಣಕಗಳ ಮೂಲಕವೇ ಕಾರ್ಯಗಳನ್ನು ನಿರ್ವಹಿಸುತ್ತಿದೆ ಎಂಬುದನ್ನು ಗಮನಿಸಬಹುದು.

**3. ತಪಶೀಲುಪಟ್ಟಿ ನಿಯಂತ್ರಣ (ಇನ್ವೆಂಟರಿ ಕಂಟ್ರೋಲ್):** ಭಾರತದ ವಾರ್ಷಿಕ ಕೈಗಾರಿಕಾ ಸಾಮಗ್ರಿಗಳ ಮೌಲ್ಯ ಸಾವಿರ ಕೋಟಿ ರೂಪಾಯಿಗಳಷ್ಟಾಗುವುದು. ಇಷ್ಟೊಂದು ಮೌಲ್ಯದ ಸಾಮಗ್ರಿಗಳನ್ನು ಭರಿಸಲು ತಾಗುವ ವೆಚ್ಚ ಕೆಲವು ನೂರು ಕೋಟಿ ರೂಪಾಯಿಗಳೇ ಆಗಬಹುದು. ನಷ್ಟವಾದ ಬಡ್ಡಿ, ಬಂಧಿತವಾದ ಬಂಡವಾಳ, ಸವಕಳಿ, ಲುಪ್ತತೆ, ನಾಶ, ಉಗ್ರಾಣ ಶುಲ್ಕ ಇವೇ ಮೊದಲಾದವು ಈ ವೆಚ್ಚದ ಕಾರಣಗಳು. ವಿದೇಶೀ ವಿನಿಮಯ ಪ್ರವೇಶಿಸದ ಬಾಬುಗಳಲ್ಲಿ ಗಣಕನಿಯಂತ್ರಿತ ತಪಶೀಲುಪಟ್ಟಿ ಸಾಮಗ್ರಿಗಳ ಸಂಖ್ಯೆಯನ್ನೂ ನಿರ್ವಹಣ ವೆಚ್ಚವನ್ನೂ ಶೇ. 25ರಷ್ಟು ಕಡಿಮೆ ಮಾಡಬಲ್ಲುದು. ಗಿರಾಕಿಯ ಖಾತೆ ಪುಸ್ತಕ, ಸಾಮಗ್ರಿಗಳ ಉತ್ಪನ್ನಮಟ್ಟದ ವಿವರಗಳು, ಉತ್ಪನ್ನದ ವೆಚ್ಚ, ಕಚ್ಚಾಸಾಮಗ್ರಿಗಳ ತಪಶೀಲುಪಟ್ಟಿಗಳ ಖಾತೆ ಪುಸ್ತಕ, ಸಾಮಗ್ರಿಗಳ ಪೂರೈಕೆ ಮಾಡುವವರ ಖಾತೆ ಪುಸ್ತಕ – ಇವೇ ಮುಂತಾದವುಗಳಲ್ಲಿ ಆಗುವ ಬದಲಾವಣೆಗಳ ಜಾಡನ್ನು ಒಂದು ಗಣಕ ಗಮನಿಸಬಲ್ಲುದು. ಆ ಬಳಿಕ ಅದು ತಪಶೀಲುಪಟ್ಟಿಯ ಮಟ್ಟದಲ್ಲಿ ತೋರುವ ಏರಿಳಿತಗಳನ್ನೂ ಬೇಡಿಕೆ ಮತ್ತು ಪೂರೈಕೆಗಳನ್ನು ಗಣನೆ ಮಾಡಿ ಅವುಗಳಿಗೆ ಅನುಕೂಲತಮವಾಗಿ ನಿರ್ದೇಶಕಗಳನ್ನು (ಕೋಆರ್ಡಿನೇಟ್ಸ್) ಒದಗಿಸುತ್ತದೆ; ಯಾವ ಯಾವ ಸಾಮಗ್ರಿಗಳನ್ನು ಎಷ್ಟೆಷ್ಟು ಗಾತ್ರದಲ್ಲಿ

ಯಾವ ಯಾವ ಕಾಲಗಳಲ್ಲಿ ಪೂರೈಕೆ ಮಾಡಬೇಕು, ದಾಸ್ತಾನುಗಳನ್ನು ಹೇಗೆ ಭರ್ತಿಮಾಡಬೇಕು ಎಂಬಿವೇ ಮೊದಲಾದ ವಿವರಗಳನ್ನು ಒಳಗೊಂಡ ನಿಯತಕಾಲಿಕ ಯಾದಿಗಳನ್ನು ಗಣಕ ಮುದ್ರಿಸುತ್ತದೆ. ಪೂರೈಕೆದಾರನಿಂದ ಪ್ರತಿಸಲವೂ ಬಿಲ್, ವರದಿ ಇಲ್ಲವೇ ರಶೀತಿ ಬಂದಾಗ ಆತನ ದಫ್ತರವನ್ನು ಅಧುನಾತನಗೊಳಿಸಲಾಗುವುದು. ಪೂರೈಕೆದಾರರಿಗೆ ಪಾವತಿಸಲು ಆಜ್ಞೆಗಳನ್ನು ಸಹ ಗಣಕ ನೀಡುತ್ತದೆ.

**4. ಜನಗಣತಿ ವಿಶ್ಲೇಷಣೆ:** ಭಾರತದಲ್ಲಿ ಸಮಸ್ತ ಜನರ ಗಣತಿಯನ್ನು ಪ್ರತಿ ಹತ್ತು ವರ್ಷಗಳಿಗೆ ಒಂದಾವರ್ತಿ ನಡೆಸುತ್ತಾರೆ. ಇನ್ನು ಆಯ್ದ ಪ್ರತಿಚಯ (ಸ್ಯಾಂಪಲ್) ಜನಗಳನ್ನು ಕುರಿತ ಗಣತಿಯನ್ನು ನಿರಂತರವಾಗಿ ಮಾಡುತ್ತಿರುವರು. ದಶವಾರ್ಷಿಕ ದತ್ತಾಂಶಗಳಲ್ಲಿನ ಕಚ್ಚಾ ಮಾಹಿತಿಗಳು ನೂರಾರು ಲಕ್ಷ ಜನರನ್ನು ಕುರಿತು ಇವೆ. ಇವನ್ನು ಸಾರಾಂಶ ದತ್ತಾಂಶಗಳಾಗಿ (ಸಮ್ಮರಿ ಡ್ಯಾಟ) ಒಮ್ಮೆ ಕ್ರೋಡೀಕರಿಸಿತೋ ಒಡನೆ ಮೂಲ ಕಚ್ಚಾ ದತ್ತಾಂಶಗಳನ್ನು ತೊರೆಯುತ್ತಾರೆ. ಇಲ್ಲವೇ ಅಲಕ್ಷಿಸುತ್ತಾರೆ. ಈ ಪ್ರವೃತ್ತಿ ಭವಿಷ್ಯದ ಸಂಖ್ಯಾಕಲನತಜ್ಞರಿಗೆ ಅಪಾರ ನಷ್ಟವನ್ನು ಉಂಟುಮಾಡುತ್ತದೆ. ಏಕೆಂದರೆ ಇದು ಅಂಗೀಕರಿಸಲಾಗುವ ಕೆಲವು ಅಭಿಗೃಹೀತಗಳ (ಅಸ್ಸಂಪ್ಷನ್ಸ್) ಆಧಾರದ ಮೇಲೆ ಸಾರಾಂಶಗಳನ್ನು ಪಡೆಯುತ್ತಾರೆ; ಈ ಅಭಿಗೃಹೀತಗಳ ಸಾಧುತ್ವವನ್ನೇ ಮುಂದೊಂದು ದಿವಸ ಪ್ರಶ್ನಿಸುವ ಅವಕಾಶ ಒದಗಬಹುದು. ಹೀಗಾಗಿ ಕಚ್ಚಾ ದತ್ತಾಂಶಗಳನ್ನು ದತ್ತಾಂಶ ಬ್ಯಾಂಕುಗಳಲ್ಲಿ– ಎಂದರೆ ಕಾಂತಪಟ್ಟಿಕೆಗಳ ಒಂದು ಬ್ಯಾಂಕ್ –ದಾಸ್ತಾನಿಸುವುದು ಬಲು ಮುಖ್ಯ. ಇಂಥ ಒಂದು ಬ್ಯಾಂಕ್ ಅನ್ವೇಷಕರಿಗೆ ಒದಗಬಲ್ಲುದಾದರೆ ದೇಶದಲ್ಲಿ ನಡೆಯುವ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಕುರಿತಂತೆ ಹಲವಾರು ಸಂಖ್ಯಾಕಲನೀಯ ಗಣನೆಗಳನ್ನು ಮಾಡುವುದು ಸಾಧ್ಯ. ಈ ಬಗೆಯ ಗಣನೆಗಳು ರಾಷ್ಟ್ರೀಯ ಯೋಜನೆಗೆ (ಪ್ಲಾನಿಂಗ್) ಬೇರೆ ಬೇರೆ ಮಟ್ಟಗಳಲ್ಲಿ –ಜಿಲ್ಲೆ, ರಾಜ್ಯ ಅಥವಾ ರಾಷ್ಟ್ರ–ಸಹಾಯ ಒದಗಿಸಬಲ್ಲುವು. ಜನಾಂಗ ವಿವರಣೆಯಲ್ಲಿ (ಡೆಮಾಗ್ರಫಿ) ಪ್ರತಿಚಯ ಸರ್ವೇಕ್ಷಣೆಯ (ಸ್ಯಾಂಪಲ್ ಸರ್ವೇ) ಅಭ್ಯಾಸಗಳನ್ನು ಗಣಕಗಳ ನೆರವಿನಿಂದ ವಿಶ್ಲೇಷಿಸುತ್ತಾರೆ.

**5. ವಾಯುಯಾನದಲ್ಲಿ ಆಸನ ಕಾದಿರಿಸುವಿಕೆ:** ಇಂಡಿಯನ್ ಏರ್‌ಲೈನ್ಸ್‌ನಂಥ ರಾಷ್ಟ್ರವ್ಯಾಪಕವಾಗಿ ಹಬ್ಬಿರುವ ವಾಯುಯಾನ ವ್ಯವಸ್ಥೆಯಲ್ಲಿ ಆಸನಗಳನ್ನು ಕಾದಿರಿಸುವುದು ಒಂದು ದೊಡ್ಡ ಸಮಸ್ಯೆಯೇ. ಬೇರೆ ಬೇರೆ ಟಿಕೆಟ್ ಕಚೇರಿಗಳಲ್ಲಿ ಮಾರಾಟವಾಗಿರುವ ಆಸನಗಳ ವಿವರಗಳು, ಒಮ್ಮೆ ಮಾರಾಟವಾಗಿ ಬಳಿಕ ರದ್ದು ಆದ ಆಸನಗಳ ವಿವರಗಳು, ಪೂರೈಸಲಾಗದ ಬೇಡಿಕೆಗಳು ಇವೇ ಮೊದಲಾದ ನೂರಾರು ಪ್ರಾಚಲಗಳನ್ನು ಇಲ್ಲಿ ಕ್ರಮೀಕರಿಸಬೇಕಾಗುತ್ತದೆ. ದೇಶದಲ್ಲಿರುವ ಪ್ರತಿಯೊಂದು ಟಿಕೇಟ್ ಕಚೇರಿಯೂ ಕೇಂದ್ರೀಯವಾಗಿ ಸ್ಥಾಪಿತವಾಗಿರುವ ಗಣಕವನ್ನು ಪ್ರಶ್ನಿಸಿ ಪ್ರತಿಯೊಂದು ವಿಮಾನಯಾನದಲ್ಲಿಯೂ ದೊರೆಯಬಹುದಾದ ಆಸನಗಳ ಸಂಖ್ಯೆ ಎಷ್ಟು ಎನ್ನುವುದನ್ನು ತಿಳಿದುಕೊಂಡು ಹೊಸ ಆಸನಗಳ ಕಾದಿರಿಸುವಿಕೆಯನ್ನು ನಿರ್ಧರಿಸುವಂತಿರಬೇಕು. ಇಂಥ ಪ್ರತಿಯೊಂದು ಪ್ರಶ್ನೆಗೂ ಉತ್ತರ ಕೆಲವೇ ಸೆಕೆಂಡುಗಳ ಒಳಗೆ ದೊರೆಯುವಂತಿರಬೇಕು. ಈ ರೀತಿಯ ಒಂದು ಗಣಕೀಕೃತ ವ್ಯವಸ್ಥೆಯ ಒಂದು ಮುಖ್ಯ ಅನುಕೂಲವೆಂದರೆ ಗಿರಾಕಿಗೆ ತತ್‌ಕ್ಷಣ ಕಾದಿರಿಸುವಿಕೆಯ ಸೌಕರ್ಯವನ್ನು ಒದಗಿಸುವುದು. ಅಲ್ಲದೇ ವಾಯುಮಾನ ಮಂಡಳಿಗೆ ಹೆಚ್ಚು ಕಡಿಮೆ ದೋಷರಹಿತವಾದ ಒಂದು ತಪಶೀಲುಪಟ್ಟಿಯ ವ್ಯವಸ್ಥೆಯೂ (ಇನ್ವೆಂಟರಿ ಸಿಸ್ಟಂ) ದೊರೆಯುವುದು.

**6. ಸ್ವಯಂಚಾಲಿತ ವ್ಯವಸ್ಥೆಗಳ ಆಲೇಖ್ಯ:** ಸಂಕೀರ್ಣ ಎಂಜಿನಿಯರಿಂಗ್ ವ್ಯವಸ್ಥೆಗಳ ಆಲೇಖ್ಯವನ್ನು ತಯಾರಿಸುವಾಗ ಗಣನೆಗಳನ್ನು ಮಾಡಲು ಗಣಕಗಳು ತೀರ ಅಗತ್ಯ. ಒಂದು ನಿರ್ದಿಷ್ಟವಾದ ವ್ಯವಸ್ಥಾವರ್ತನೆಯನ್ನು (ಸಿಸ್ಟಂ ಬಿಹೇವಿಯರ್) ಒದಗಿಸುವ ಪರ್ಯಾಯ ಆಲೇಖ್ಯಗಳ ಸಂಖ್ಯೆ ಬಹಳಷ್ಟು ಇರಬಹುದು. ಅವುಗಳ ಪೈಕಿ ಒಂದು ಮಾತ್ರ ಬಹಳ ಆರ್ಥಿಕವಾದದ್ದಾಗಿರಬಹುದು. ಈ ಆರ್ಥಿಕ ಆಲೇಖ್ಯ ಯಾವುದೆಂದು ಪತ್ತೆ ಮಾಡುವಾಗ ಎದುರಾಗುವ ಗಣನೆಗಳ ಸಂಖ್ಯೆ ಮನುಷ್ಯ ಪ್ರಯತ್ನದಿಂದ ಅತೀತವಾದದ್ದು. ಉದಾಹರಣೆಗೆ ಒಂದು ಸೇತುವೆಯ ಆಲೇಖ್ಯವನ್ನು (ಡಿಸೈನ್) ತಯಾರಿಸಲು ಬಹುಸಂಖ್ಯೆಯ ಗಣನೆಗಳನ್ನು ಮಾಡಬೇಕಾಗುತ್ತದೆ. ಇವನ್ನು ಒಂದು ಗಣಕದ ನೆರವಿನಿಂದ ಬಲು ಬೇಗ ಮಾಡುವುದು ಸಾಧ್ಯ. ಹೊರೆಯ(ಲೋಡ್) ಬೇರೆ ಬೇರೆ ಸಂದರ್ಭಗಳಲ್ಲಿ ಸೇತುವೆಯ ಮೇಲೆ ಉಂಟಾಗುವ ಒತ್ತಾಯವನ್ನು (ಸ್ಟ್ರೆಸ್) ಗಣಕ ಗಣಿಸುವುದಲ್ಲದೇ ಹೊರೆಯಲ್ಲಿ ಉಂಟಾಗಬಹುದಾದ ಹಠಾತ್ ಬದಲಾವಣೆಯಿಂದ ಸೇತುವೆಯಲ್ಲಿ ಸಂಭವಿಸುವ ಕಂಪನಗಳನ್ನು ಸಹ ಅದು ಗಣಿಸುತ್ತದೆ.

ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್‌ನಂಥ ಸಂಸ್ಥೆಗಳಲ್ಲಿ ಪವರ್ ಟ್ರಾನ್ಸ್‌ಫಾರ್ಮರ್ಸ್, ನ್ಯೂಕ್ಲಿಯರ್ ಟರ್ಬೋಆಲ್ಟರ್ನೇಟರ್ಸ್ ಇವೇ ಮುಂತಾದ ಬೃಹತ್ ಸ್ಥಾವರಗಳ ಆಲೇಖ್ಯಗಳನ್ನು ತಯಾರಿಸುವಲ್ಲಿ ಗಣಕಗಳ ಉಪಯುಕ್ತತೆ ವಿಪುಲವಾಗಿ ಉಂಟು. ವಿದ್ಯುತ್ಕಾಂತ ಕ್ಷೇತ್ರಗಳನ್ನು ಕುರಿತ ಬಲು ಸಂಕೀರ್ಣ ಗಣನೆಗಳನ್ನು ಇಲ್ಲಿ ಮಾಡಬೇಕಾಗುತ್ತದೆ. ಪೂರ್ವಸಿದ್ಧ ಸೂತ್ರಗಳಾವುವೂ ಇಲ್ಲಿ ನೆರವಿಗೆ ಬರುವುದಿಲ್ಲ. ಇಷ್ಟು ಮಾತ್ರವಲ್ಲ, ಆಂಶಿಕವಾಗಿ ಸಂತೃಪ್ತವಾದ (ಪಾರ್ಶಿಯಲಿ ಸ್ಯಾಚುರೇಟೆಡ್) ಕಬ್ಬಿಣದ ಕೋಶದ ಅರೇಖೀಯ ಲಕ್ಷಣಗಳನ್ನು (ನಾನ್‌ಲೀನಿಯರ್ ಕ್ಯಾರೆಕ್ಟರಿಸ್ಟಿಕ್ಸ್) ಕೂಡ ಗಣನೆಗಳಲ್ಲಿ ಪರಿಗಣಿಸಬೇಕಾಗುತ್ತದೆ. ಈ ಮೊದಲಿಗೆ ವಿದ್ಯುತ್ ಎಂಜಿನಿಯರುಗಳು ಕ್ರಮರಹಿತ ಆಕಾರಗಳು ಇದ್ದಾಗ್ಯೂ ಅವನ್ನು ಸನ್ನಿಹಿತಗೊಳಿಸಿ ಆಲೇಖ್ಯ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಇಂಥ ಸಮಸ್ಯೆಗಳಿಗೆ ಗಣಕಗಳು ಬಲು ನಿಖರವಾದ ಪರಿಹಾರಗಳನ್ನು ಒದಗಿಸುತ್ತವೆ.

ಇನ್ನಷ್ಟು ದಕ್ಷವಾದ ಗಣಕಗಳ ಆಲೇಖ್ಯವನ್ನು ತಯಾರಿಸುವ ದಿಶೆಯಲ್ಲಿ ಕೂಡ ಗಣಕಗಳನ್ನು ಉಪಯೋಗಿಸಲಾಗಿದೆ ಎಂಬುದೊಂದು ಕುತೂಹಲಕಾರಿ ಅಂಶ.

**7. ಪ್ರಕ್ರಮ ನಿಯಂತ್ರಣ (ಪ್ರೋಸೆಸ್ ಕಂಟ್ರೋಲ್):** ಹಲವಾರು ಕಾರ್ಖಾನೆಗಳಲ್ಲಿ ಕಚ್ಚಾ ಸಾಮಗ್ರಿಗಳನ್ನು ಪ್ರಕ್ರಮಿಸಬೇಕಾದಾಗ ನಿರ್ಧಾರಗಳ ಒಂದು ಸರಣಿಯನ್ನೇ ಅನುಸರಿಸಬೇಕಾಗುತ್ತದೆ. ಹೀಗೆ ಮಾಡುವಾಗ ಎಲ್ಲ ವಿಧವಾದ ಪರ್ಯಾಯ ಸಾಧ್ಯತೆಗಳೂ ಗೊತ್ತಿರಬೇಕಾದದ್ದು ಅನಿವಾರ್ಯ. ಸಮಗ್ರ ಪ್ರಕ್ರಮವನ್ನೂ ಅಂಕಗಣಕಗಳ ನೆರವಿನಿಂದ ಸಂಪೂರ್ಣವಾಗಿ ಸ್ವಯಂಚಾಲಿತವಾಗಿಸಬಹುದು. ಈ ತೆರನಾದ ನಿಯಂತ್ರಣಕ್ಕೆ ಒಂದು ಸೌಕರ್ಯ ಉಂಟು: ನಿರ್ಧರಣ ಪ್ರಕ್ರಮಗಳನ್ನು (ಡಿಸಿಷನ್ ಪ್ರೋಸೆಸಸ್) ಎಲೆಕ್ಟ್ರಾನಿಕ್ ವಿಧಾನದಿಂದ ನಿರ್ವಹಿಸಿದಾಗ ಅವು ಇನ್ನಷ್ಟು ನಂಬಿಕೆಗೆ ಅರ್ಹವಾಗುತ್ತವೆ. ಮತ್ತು ಈ ಕಾರಣದಿಂದ ಹೆಚ್ಚು ಜಟಿಲವಾದ ಪ್ರಕ್ರಮಗಳ ಆಲೇಖ್ಯ ಪ್ರಾಯೋಗಿಕವಾಗುತ್ತದೆ.

ಇದೇ ತೆರನಾಗಿ ಯಂತ್ರೋಪಕರಣಗಳ (ಮಶೀನ್–ಟೂಲ್ಸ್) ಪರಿಕರ್ಮಗಳ ಮೇಲೂ ನಿಯಂತ್ರಣವನ್ನು ಇಟ್ಟುಕೊಳ್ಳಬಹುದು.

**8. ಮಾನವ–ಯಂತ್ರ ಅನುಕರಣೆ (ಮ್ಯಾನ್–ಮಶೀನ್ ಸಿಮ್ಯುಲೇಶನ್):** ಎಲೆಕ್ಟ್ರಾನಿಕ್ ಮತ್ತು ಮನುಷ್ಯಚಾಲಿತ ನಿಯಂತ್ರಣಗಳಿರುವ ಸಂಕೀರ್ಣ ಸ್ವಯಂಚಾಲಿತ ವ್ಯವಸ್ಥೆಗಳ ಬೆಳವಣಿಗೆಗೆ ಮಾನವ–ಯಂತ್ರ ಅನುಕರಣೆ ಅತ್ಯಗತ್ಯವಾದ ಪರಿಕರ ಎಂದು ಈಗ ಪರಿಗಣಿಸಲಾಗಿದೆ. ಉದಾಹರಣೆಗೆ ವಾಯುಸಂಚಾರ ನಿಯಂತ್ರಣ, ವಿಮಾನ ನಡುಪಡೆಗಳನ್ನು (ಇಂಟರ್‌ಸೆಪ್ಟರ್ಸ್) ನೆಲದಿಂದ ನಿಯಂತ್ರಿಸುವುದು, ವಿಮಾನಗಳು ನೆಲದ ಮೇಲೆ ಇಳಿಯುವುದನ್ನು ನೆಲದಿಂದಲೇ ನಿಯಂತ್ರಿಸುವುದು, ಕ್ಷಿಪಣಿ ಮಾರ್ಗದರ್ಶನ ವ್ಯವಸ್ಥೆಗಳು–ಇವುಗಳಲ್ಲಿ ಮೇಲೆ ಹೇಳಿದಂಥ ಪರಿಸ್ಥಿತಿ ಉಂಟು. ಆಲೇಖಿಸಲಾಗುತ್ತಿರುವ ಒಂದು ಎಲೆಕ್ಟ್ರಾನಿಕ್ ನಿಯಂತ್ರಣ ವ್ಯವಸ್ಥೆಗೂ ಅದರ ಮೇಲೆ ಪರಿಕರ್ಮಿಸುವ ಮಾನವ ಪರಿಕರ್ಮಿಗಳಿಗೂ ನಡುವಿನ ಅಂತರಕ್ರಿಯೆಗಳನ್ನು, ಆ ವ್ಯವಸ್ಥೆ ನಿರ್ಮಾಣವಾಗುವ ಮೊದಲೇ, ಗಣಕ ಅನುಕರಣ ವಿಧಾನಗಳನ್ನು ಉಪಯೋಗಿಸಿ ಕಂಡುಹಿಡಿಯಬಹುದು ಎನ್ನುವುದೊಂದು ಕುತೂಹಲಕಾರಿ ಅಂಶ. ಇದರಿಂದಾಗಿ ಅತ್ಯುತ್ತಮವಾದ ಆಲೇಖ್ಯವನ್ನು ಪಡೆಯಲೋಸುಗ ಪರ್ಯಾಯ ಮಾದರಿಗಳನ್ನು ನಿರ್ಮಿಸುವಲ್ಲಿ ತಾಗುವ ಅತಿಯಾದ ಖರ್ಚು ಉಳಿತಾಯವಾಗುತ್ತದೆ. ಇಂಥ ಅನುಕರಣೆಗಳನ್ನು ಸಾಮಾನ್ಯವಾಗಿ ಸಾಧಿಸುವುದು ಸಾದೃಶ್ಯ ಹಾಗೂ ಅಂಕಗಣಕಗಳ ಸಂಯೋಜನೆಯಿಂದ. ಈ ತೆರನಾದ ಗಣಕಗಳಿಗೆ ಸಂಕರ ಗಣಕಗಳು (ಹೈಬ್ರಿಡ್ ಕಂಪ್ಯೂಟರ್ಸ್) ಎಂದು ಹೆಸರು.

**9. ವೈದ್ಯಕೀಯ ರೋಗನಿದಾನ:** ರೋಗನಿದಾನದ ಕೆಲವು ಮುಖಗಳಲ್ಲಿ ಗಣಕಗಳು ನೆರವು ನೀಡಬಲ್ಲುವು. ಒಬ್ಬ ರೋಗಿ ಗಣಕಕ್ಕೆ ಉಣಿಸುವ ರೋಗ ಚಿಹ್ನೆಗಳ ಒಂದು ದತ್ತ ಗಣವನ್ನು ಅದು ವೈದ್ಯಕೀಯ ಜ್ಞಾನಕ್ಕೆ ಸಂಗತವಾಗಿ ಪರಿಶೀಲಿಸಿ ಸಾಧ್ಯವಾಗುವ ರೋಗನಿದಾನಗಳ ಒಂದು ಯಾದಿಯನ್ನೇ ಕೊಡಬಲ್ಲುದು. ಅಲ್ಲದೇ ಮುಂದೆ ಯಾವ ವಿಧವಾದ ಪರೀಕ್ಷೆಗಳನ್ನು ಮಾಡಬೇಕೆಂಬುದನ್ನು ಅದು ಖಚಿತವಾಗಿ ನಿರ್ದೇಶಿಸಬಲ್ಲುದು. ಪರ್ಯಾಯ ರೋಗನಿದಾನ ಕ್ರಮಗಳನ್ನು ಕುರಿತು ಅದು ಚರ್ಚಿಸಬಲ್ಲುದು, ವ್ಯಾಪಕವಾಗಿ ವೈದ್ಯಕೀಯ ಅಂಕಿ ಅಂಶಗಳ ಮತ್ತು ಚರಿತ್ರೆಗಳ ಮೇಲೆ ಆಧರಿತವಾಗಿರುವ ಚಿಕಿತ್ಸಾಯೋಜನೆಗಳೊಂದಿಗೆ ಸಂಗತವಾಗಿರಬಹುದಾದ ಉಪಯುಕ್ತ ನಿರ್ಧಾರಗಳ ಕರಾರುವಕ್ಕಾದ ವಿಶ್ಲೇಷಣೆಗಳನ್ನು ಅದು ಮಾಡಬಲ್ಲುದು. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿಯೂ ಸೋವಿಯೆತ್ ರಾಷ್ಟ್ರಗಳಲ್ಲಿಯೂ ಇತ್ತೀಚೆಗೆ ಕೇಂದ್ರೀಯವಾಗಿ ಸ್ಥಾಪಿಸಿರುವ ಗಣಕಗಳಿಂದ ಅನೇಕ ಆಸ್ಪತ್ರೆಗಳಿಗೂ ಖಾಸಗಿ ವೈದ್ಯರುಗಳಿಗೂ ಸಹಾಯಗಳನ್ನು ಒದಗಿಸಿ ಅಧಿಕ ವ್ಯಾಪ್ತಿಯ ರೋಗ ಪರೀಕ್ಷಾ ಕಾರ್ಯಗಳನ್ನು ನಡೆಸಲು ಒಂದು ಸುವ್ಯವಸ್ಥಿತ ಪ್ರಯತ್ನವನ್ನು ನಡೆಸುತ್ತಿದ್ದಾರೆ. ಒಂದು ಕ್ಷೇತ್ರದಲ್ಲಿ ಟೆಲಿಫೋನ್ ಅಥವಾ ಟೆಲಿಗ್ರಾಫ್ ಸೌಕರ್ಯಗಳಿರುವ ವೈದ್ಯ ತಾನು ಚಿಕಿತ್ಸೆ ನಡೆಸುತ್ತಿರುವ ರೋಗಿಯೊಬ್ಬನ ಕಾಯಿಲೆಗಳ ವಿವರವಾದ ಲಕ್ಷಣಗಳನ್ನು ಕೇಂದ್ರ ರೋಗ ಪರೀಕ್ಷಾಲಯಕ್ಕೆ ವರದಿ ಮಾಡುತ್ತಾನೆ. ಇವನ್ನು ಇಲ್ಲಿರುವ ಗಣಕಕ್ಕೆ ಉಣಿಸಿದಾಗ ಅದು ರೋಗದ ಸ್ವರೂಪವನ್ನು ತಿಳಿಸುವುದಲ್ಲದೆ ಅನುಮಾನ ಬಂದಾಗ

ವರದಿಯಲ್ಲಿ ಉಕ್ತವಾಗಿರದಂಥ ಇತರ ಲಕ್ಷಣಗಳನ್ನು ತಿಳಿಸುವಂತೆ ಕೋರುತ್ತದೆ ಕೂಡ. ವೈದ್ಯರ ಮತ್ತು ರೋಗಿಗಳ ಸಂಖ್ಯಾ ಪ್ರಮಾಣ ಅತ್ಯಲ್ಪವಾಗಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇಂಥ ಕೇಂದ್ರೀಕರಣಕ್ಕೆ ಉತ್ತಮ ಭವಿಷ್ಯ ಉಂಟು. ಆದರೆ ಪ್ರಕೃತದಲ್ಲಿ ಕೆಲವು ತೊಂದರೆಗಳಿವೆ. ವೈದ್ಯ ಹಾಗೂ ಕೇಂದ್ರಾಲಯದ ನಡುವೆ ಶೀಘ್ರ ಸಂಪರ್ಕ ದೊರೆಯುವುದೆಂದು ಇಲ್ಲಿ ಭಾವಿಸಲಾಗಿದೆ; ಅಲ್ಲದೇ ಗಣಕಗಳ ಯೋಜನೆಗಳು ಲಭ್ಯವಾಗುತ್ತವೆಂದೂ ಇವುಗಳಿಗೆ ರೋಗ ಚರಿತ್ರೆ, ರೋಗಲಕ್ಷಣಗಳ ಮಾಹಿತಿ ಮತ್ತು ಔಷಧಗಳನ್ನು ಕುರಿತ ದೋಷರಹಿತ ದತ್ತಾಂಶಗಳನ್ನು ಉಣಿಸಬಹುದೆಂದೂ ಭಾವಿಸಲಾಗಿದೆ. ವಾಸ್ತವ ಪರಿಸ್ಥಿತಿ ಹೀಗಿರಬೇಕಾಗಿಲ್ಲ. ಗಣಕ ರೋಗನಿದಾನ ಕ್ರಮ ಈಗ ಅಷ್ಟೇನೂ ಜನಪ್ರಿಯವಾಗಿಲ್ಲದಿದ್ದರೂ ಇದಕ್ಕೆ ಉಜ್ವಲ ಭವಿಷ್ಯ ಉಂಟೆನ್ನುವುದರಲ್ಲಿ ಏನೂ ಸಂದೇಹವಿಲ್ಲ.

**10. ಮಾಹಿತಿ ಪುನಸ್ಸಂಪಾದನೆ (ಇನ್‌ಫರ್ಮೇಶನ್ ರಿಟ್ರೀವಲ್):** ಈ ಶೀರ್ಷಿಕೆಯ ಅಡಿಯಲ್ಲಿ ಬರುವಂಥ ಚಟುವಟಿಕೆಗಳೆಂದರೆ ಗ್ರಂಥಭಂಡಾರದ ಪರಿಕರ್ಮಗಳು, ದಸ್ತಾವೇಜು ಸಂಸ್ಕರಣ, ಯಂತ್ರ ಅನುವಾದ, ಮಾಹಿತಿ ವಿಂಗಡಣೆ ಹಾಗೂ ಶೋಧನೆ ಮತ್ತು ಸೂಚಿ ತಯಾರಿಕೆ (ಇಂಡೆಕ್ಸ್ ಪ್ರಿಪರೇಶನ್). ಇಂದಿನ ಜ್ಞಾನಸ್ಫೋಟದ ಯುಗದಲ್ಲಿ ಪ್ರಕಟವಾಗುತ್ತಿರುವ ನಿಯತಕಾಲಿಕೆಗಳ ಸಂಖ್ಯೆ 30,000ವನ್ನೂ ಮಿಕ್ಕಿದೆ. ಪ್ರಬಂಧಗಳ ಸಂಖ್ಯೆ ಇದರ ಸುಮಾರು ಹತ್ತರಷ್ಟು. ಆದ್ದರಿಂದ ಯಾವುದೇ ಒಂದು ವಿಷಯದ ಮೇಲೆ ನಮಗೆ ಬೇಕಾಗುವ ಮಾಹಿತಿಯನ್ನು ನಾವು ಕ್ಲುಪ್ತ ಸಮಯದಲ್ಲಿ ಪೂರ್ಣವಾಗಿ ಪಡೆಯುವುದು ಬಲು ಕಷ್ಟ. ಇಂಥಲ್ಲಿ ನಡೆಯಬೇಕಾದ ಶೋಧನೆ ಮಾನವಸಾಮರ್ಥ್ಯದ ಎಲ್ಲೆಯನ್ನು ಮೀರಿರುವುದೇ ಇದರ ಕಾರಣ.

ಮಾಹಿತಿ ಪುನಸ್ಸಂಪಾದನೆಯನ್ನು ಒಬ್ಬ ಮನುಷ್ಯ ಮಾಡಲಿ ಅಥವಾ ಒಂದು ಯಂತ್ರ ಮಾಡಲಿ ಅದರ ಮೂಲ ಸಮಸ್ಯೆ ಒಂದು ನಿರ್ದಿಷ್ಟ ಕೋರಿಕೆಗೆ ಒಂದು ನಿರ್ದಿಷ್ಟ ದಸ್ತಾವೇಜಿನ (ಡಾಕ್ಯುಮೆಂಟ್) ಔಚಿತ್ಯವನ್ನು ನಿರ್ಧರಿಸುವುದೇ ಆಗಿದೆ. ಇಲ್ಲಿ ವ್ಯಾಪಕವಾಗಿ ಬಳಸುತ್ತಿರುವ ಒಂದು ವಿಧಾನ ಉಭಯಸಾಮಾನ್ಯ ಪದಗಳು ಉಭಯಸಾಮಾನ್ಯ ತಾರ್ಕಿಕ ಸಂಬಂಧದಲ್ಲಿ ಕಂಡು ಬರುವುದನ್ನು ಅವಲಂಬಿಸಿದೆ. ಮಾಹಿತಿ ಪುನಸ್ಸಂಪಾದನೆಗಾಗಿ ನಡೆಸುವ ಇಂದಿನ ಎಲ್ಲ ಗಣಕ ಕ್ರಮವಿಧಿಗಳಲ್ಲೂ ಈ ವಿಧಾನದ ರಚನೆ ಅಡಕವಾಗಿದೆ. ಔಚಿತ್ಯಕ್ಕೆ ಇರುವ ಗಮನಾರ್ಹ ಪ್ರಭಾವಗಳಲ್ಲಿ ಒಂದೆಂದರೆ ದಸ್ತಾವೇಜುಗಳ ವ್ಯವಸ್ಥೀಕರಣದಲ್ಲಿ ಅದರ ಪರಿಣಾಮ. ಅಂದರೆ, ಔಚಿತ್ಯದ ಮಾನಕದ ಅನುಸಾರ ದಸ್ತಾವೇಜುಗಳ ಸಾಪೇಕ್ಷ ಸಮರೂಪತೆ ಆ ದಸ್ತಾವೇಜುಗಳನ್ನು ಗುಂಪುಗೂಡಿಸಲು ಇದರ ಪರಿಣಾಮವಾಗಿ ಸಮರೂಪತೆಯ ಮೇಲೆ ಆಧರಿಸಿದ ವರ್ಗೀಕರಣಗಳನ್ನು ಮಾಡಲೂ ಒಂದು ಪರೀಕ್ಷೆಯನ್ನು ಒದಗಿಸುತ್ತದೆ. ಇಂಥ ಪರೀಕ್ಷೆ ಕಾರಣ –ಕಾರ್ಯ ತೀರ್ಮಾನದ ಮೇಲೆ ಆಧರಿತವಾಗಿಲ್ಲ.

ಮಾಹಿತಿ ಪುನಸ್ಸಂಪಾದನೆ ಎಂದರೆ ಒಂದು ದಫ್ತರದ ಭೌತ ಅಳವಡಿಕೆಯನ್ನು (ಫಿಸಿಕಲ್ ಅರೇಂಜ್‌ಮೆಂಟ್) ಆ ದಫ್ತರದ ಮೇಲಿನ ಪಟುತ್ವದ ಪ್ರರೂಪಕ್ಕೆ (ಪ್ಯಾಟರ್ನ್ ಆಫ್ ಆಕ್ಟಿವಿಟಿ) ಹೊಂದಿಸುವ ಕಾರ್ಯ. ಹೀಗೆ ಮಾಡಿದಾಗ ಸೂಚೀಕರಣದಲ್ಲಿ (ಇಂಡೆಕ್ಸಿಂಗ್) ನಮಗೆ ಎದುರಾಗುವ ಸಮಸ್ಯೆ ಎಂದರೆ ಕ್ರಮವೀಕ್ಷಣೆಗೆ ಒಳಪಡಬೇಕಾದ ದಫ್ತರದ ಖಂಡಗಳನ್ನು ಯಾಂತ್ರಿಕವಾಗಿ ಗುರುತಿಸುವುದಕ್ಕೆ ಒಂದು ದಕ್ಷ ಯಂತ್ರ ವಿನ್ಯಾಸದ ಅನ್ವೇಷಣೆ. ಇಂಥ ಒಂದು ದಕ್ಷ ಭೌತವ್ಯವಸ್ಥೆ ಒಂದು ಯಾಂತ್ರಿಕ ಸಮಸ್ಯೆಯಾಗಿರುವುದರಿಂದ ಇದು ಗಣಕದ ಪ್ರಕ್ರಮಕ್ಕೆ ವಿಶಿಷ್ಟವಾಗಿ ಹೊಂದುತ್ತದೆ.

**11. ಯಂತ್ರ ಅನುವಾದ:** ಸ್ವತಂತ್ರವಾದ ಒಂದು ವಿಜ್ಞಾನ ಪ್ರಕಾರವೇ ಇದು ಎಂಬ ಮಟ್ಟಕ್ಕೆ ವಿಕಸಿಸಿರುವ ಗಣಕಾನ್ವಯಗಳ ವಿಭಾಗ ಎಂದರೆ ಯಂತ್ರ ಅನುವಾದ. ದತ್ತ ಭಾಷೆಯೊಂದರಲ್ಲಿರುವ ಪಾಠವನ್ನು ಗಣಕಕ್ಕೆ ನಿವೇಶವಾಗಿ ಉಣಿಸಲಾಗುವುದು. ಅಲ್ಲಿ ಒಂದು ಭಾಷಾನುವಾದ ಕ್ರಮವಿಧಿ ಒಂದೊಂದು ವಾಕ್ಯವನ್ನೂ ಪರೀಕ್ಷಿಸಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ದತ್ತ ಭಾಷೆಯ ಹಾಗೂ ಅನುವಾದ ಭಾಷೆಯ ವ್ಯಾಕರಣ ನಿಯಮಗಳನ್ನು ಆ ಪಾಠದ ಮೇಲೆ ಪ್ರಯುಕ್ತಿಸುತ್ತದೆ. ತರುವಾಯ ಮುದ್ರಣಾಂಗ ಅನುವಾದಿತ ಪಾಠವನ್ನು ಹೊಸ ಭಾಷೆಯಲ್ಲಿ ಮುದ್ರಿಸುತ್ತದೆ. ಇಂಥ ಒಂದು ಕ್ರಮವಿಧಿ ಭಾರತದಂಥ ಬಹುಭಾಷಾ ದೇಶಕ್ಕೆ ಒದಗಿಸುವ ಸೌಕರ್ಯ ಅಪಾರ. ಉದಾಹರಣೆಗೆ ವಿವಿಧ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಕಾರಗಳಲ್ಲಿ ಪರಿಣಿತರಾದವರನ್ನು ಇಂಗ್ಲಿಷ್ ಭಾಷೆಯಲ್ಲಿ ಅತಿ ನಿಷ್ಕೃಷ್ಟ ವಿವರಗಳ ಸಮೇತ ಪ್ರಬಂಧಗಳನ್ನು ತಯಾರಿಸಿ ಮಾಡಲು ಕೋರಬಹುದು. ಬಳಿಕ ಈ ಪ್ರಬಂಧಗಳನ್ನು, ಸಂವಿಧಾನ ಪುರಸ್ಕರಿಸುವ ಎಲ್ಲ ಭಾಷೆಗಳಿಗೂ ಏಕಕಾಲದಲ್ಲಿ, ಒಂದು ಗಣಕ ಅನುವಾದಿಸಬಹುದು. ಇಂಥ ಒಂದು ಕ್ರಮವಿಧಿಯಲ್ಲಿ ಭಾಗವಹಿಸಲು ಅತ್ಯುತ್ತಮ ಪರಿಣಿತರನ್ನೇ ಬಹು ವಿಶಾಲವಾದ ಕ್ಷೇತ್ರದಿಂದ ಆಯಬಹುದು. ಆದ್ದರಿಂದ ಇದರ ಪ್ರಭಾವ ಕನ್ನಡ ವಿಶ್ವಕೋಶದಂಥ ಮಹಾರಚನೆಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಮಾಡುವಲ್ಲಿ ಪರಿಣಾಮಕಾರಿಯಾಗಿರುತ್ತದೆ. ಇಂಥ ಒಂದು ಪ್ರಯತ್ನದಲ್ಲಿ ಮುಂದಿನ ಸಾಲಿನಲ್ಲಿರುವವರು ಜಪಾನಿನ ಗಣಕ ವಿಜ್ಞಾನಿಗಳು, ಇಂಗ್ಲೀಷಿನಿಂದ ಸ್ವಯಂಚಾಲಿತವಾಗಿ ಜಪಾನೀ ಭಾಷೆಗೆ ಅನುವಾದಿಸುವ ಒಂದು ಕ್ರಮವಿಧಿ ಅದರಲ್ಲಿ ಉಂಟು. ಯಂತ್ರಾನುವಾದ ಚಟುವಟಿಕೆಗೆ ಗಂಭೀರವಾದ ಪರಿಮಿತಿಯನ್ನು ವಿಧಿಸುವುದು ಗಣಕದ ಜ್ಞಾಪಕ ಸಾಮರ್ಥ್ಯ. ಎರಡು ಭಾಷೆಗಳಲ್ಲಿನ ನಿಘಂಟುಗಳನ್ನೂ ಪದಾನುರೂಪತೆಗಳನ್ನೂ ಗಣಕಕ್ಕೆ ಉಣಿಸಬೇಕಾಗುತ್ತದೆ. ಎರಡೂ ಭಾಷೆಗಳಲ್ಲಿನ ವ್ಯಾಕರಣ ನಿಯಮಗಳನ್ನು ಸಹ ಉಣಿಸಬೇಕು. ಇದಲ್ಲದೇ ಈ ಜಟಿಲ ಕ್ರಮವಿಧಿ ತ್ವರಿತ ಪ್ರವೇಶವಿರುವ ಒಂದು ಜ್ಞಾಪಕದಲ್ಲಿ ಒಡನೆ ದೊರೆಯುವಂತಿರಬೇಕು. ಫೆರೈಟ್ ಕೋಶ ಜ್ಞಾಪಕಗಳಿಗಿಂತ ಸಾಪೇಕ್ಷವಾಗಿ ನಿಧಾನ ಪ್ರವೇಶವಿರುವ ಕಾಂತ ಪಟ್ಟಿಕೆಗಳು ಅನುವಾದ ಕಾಲವನ್ನು ಅನಪೇಕ್ಷಣೀಯವಾಗುವಷ್ಟು ಲಂಬಿಸಬಹುದು. ದೋಷರಹಿತವಾದ ಮತ್ತು ಸುಲಲಿತವಾದ ಒಂದು ಅನುವಾದ ದೊರೆಯಬೇಕಾದರೆ 1,00,000 ಪದಗಳಷ್ಟು ಸಾಮರ್ಥ್ಯವಿರುವ ಫೆರೈಟ್ ಕೋಶ–ಜ್ಞಾಪಕ ಬೇಕಾಗುತ್ತದೆ. 1970ರ ವೇಳೆಗೆ ಭಾರತದಲ್ಲಿದ್ದ ಅತ್ಯುತ್ತಮ ಯಂತ್ರದಲ್ಲೂ ಇದ್ದ ಕೋಶ–ಜ್ಞಾಪಕ 32,000 ಪದಗಳದ್ದು ಮಾತ್ರ. ಆದ್ದರಿಂದ ಭಾರತೀಯ ಭಾಷೆಗಳಿಗೆ ಇಂಗ್ಲೀಷ್ ಪಾಠದ ಯಂತ್ರಾನುವಾದ ಒಂದು ನಿರ್ದಿಷ್ಟ ಸಾಧ್ಯತೆ ಹೌದಾದರೂ ಅದನ್ನು ನಿರ್ವಹಿಸಲು ಬಹಳಷ್ಟು ದೈತ್ಯ ಗಣಕಗಳೇ ಬೇಕಾಗುತ್ತವೆ.

**12. ವೈಜ್ಞಾನಿಕ ಸಂಶೋಧನೆ:** ಗಣಕಗಳು ವಿಜ್ಞಾನಿಗಳಿಗೆ ಎರಡು ವಿಧಗಳಲ್ಲಿ ನೆರವನ್ನು ಒದಗಿಸುತ್ತವೆ. ಇದೊಂದು ಸಂಪರ್ಕ ರಹಿತ (ಆಫ್–ಲೈನ್) ಉಪಕರಣವಾಗಿ ತನಗೆ ಒದಗಿಸಿದ ವಿಶ್ಲೇಷಣಸಮಸ್ಯೆಗಳ ಮೇಲೆ ಗಣನೆಗಳನ್ನು ಮಾಡಬಹುದು: ಈ ಗಣನೆಗಳನ್ನು ವಿಜ್ಞಾನಿಗಳು ತಮ್ಮ ಪ್ರಯೋಗಗಳಲ್ಲಿ ಬಳಸಬಹುದು. ಇದೊಂದು ಸಂಪರ್ಕ ಸಹಿತ (ಆನ್–ಲೈನ್) ಉಪಕರಣವೂ ಆಗಿ ಪ್ರಯೋಗಗಳ ಮಾಲಿಕೆಗೆ ನೇರವಾಗಿ ಸಂಯೋಜಿಸಲ್ಪಟ್ಟಿರಬಹುದು. ಇದಕ್ಕೊಂದು ಲಾಕ್ಷಣಿಕ ನಿದರ್ಶನವೆಂದರೆ ಗುಳ್ಳೆ ಮಂದಿರಗಳಲ್ಲಿ (ಬಬಲ್ ಚೇಂಬರ್ಸ್) ತೋರುವ ಕಣಜಾಡುಗಳನ್ನು (ಪಾರ್ಟಿಕಲ್ ಟ್ರ್ಯಾಕ್ಸ್) ವಿಶ್ಲೇಷಿಸುವಲ್ಲಿ ಗಣಕಗಳ ಉಪಯೋಗ.

ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸಂಶೋಧಕರ ಒಂದು ತಂಡ ಮಿದುಳಿನ ಅಲೆಗಳ ಅಭ್ಯಾಸಕ್ಕಾಗಿ ದೊಡ್ಡ ಗಣಕವೊಂದಕ್ಕೆ ಸಂತತ ಕ್ರಮವಿಧಿಯನ್ನು (ಕಂಟಿನ್ಯೂಯಿಂಗ್ ಪ್ರೋಗ್ರಾಂ) ಅಳವಡಿಸಿದ್ದಾರೆ. ಈ ಅಲೆಗಳು ವಿದ್ಯುತ್ ಸಂಜ್ಞೆಗಳನ್ನು (ಎಲೆಕ್ಟ್ರಿಕಲ್ ಸಿಗ್ನಲ್ಸ್) ಪ್ರತಿನಿಧಿಸುತ್ತವೆ. ಇವನ್ನು ನೆತ್ತಿ ಭಾಗಕ್ಕೆ ಲಗತ್ತಿಸಿದ ಎಲೆಕ್ಟ್ರೊ ಎನ್ಸೆಫಲೋಗ್ರಾಫ್ ಎಂಬ ಉಪಕರಣದ ಎಲೆಕ್ಟ್ರೋಡುಗಳು ಸಂಗ್ರಹಿಸುತ್ತವೆ. ಈ ಸಂಜ್ಞೆಗಳು ಮಿದುಳಿನ ವಿದ್ಯುತ್ ಚಟುವಟಿಕೆಗಳನ್ನು ಬಿಂಬಿಸುತ್ತವೆ. ಆದರೂ, ಕೆಲವು ಅಧ್ಯಾರೋಪಿತ ಯಾದೃಚ್ಛಿಕ ವಿದ್ಯುತ್ ಸಂಜ್ಞೆಗಳು (ಸೂಪರಿಂಪೋಸ್ಡ್ ರ್‍ಯಾಂಡಂ ಎಲೆಕ್ಟ್ರಿಕಲ್ ಸಿಗ್ನಲ್ಸ್) ಇರುವುದರಿಂದ ಅಲೆಯ ಲಕ್ಷಣಗಳು ಮತ್ತು ಮಿದುಳಿನ ಹೊದಿಕೆಯ (ಸೆರೆಬ್ರಲ್ ಕಾರ್ಟೆಕ್ಸ್) ಕೆಲಸ ಮಾಡುವಿಕೆ ಇವುಗಳ ನಡುವೆ ಉತ್ತಮ ಸಹ ಸಂಬಂಧಗಳನ್ನು (ಕಾರಿಲೇಷನ್ಸ್) ಸ್ಥಾಪಿಸುವುದು ಶರೀರ ವಿಜ್ಞಾನಿಗಳಿಗೆ ಕಷ್ಟಸಾಧ್ಯ ಕಾರ್ಯವಾಗಿದೆ. ಮಿದುಳಲೆಯ ವರದಿಗಳಿಂದ ಯಾದೃಚ್ಛಿಕ ಪರಿಣಾಮಗಳನ್ನು ಅಳಿಸಿಹಾಕಲು ಎಂ. ಐ. ಟಿ. ವಿಜ್ಞಾನಿಗಳು ಸಂಪರ್ಕಸಹಿತ (ಆನ್–ಲೈನ್) ಗಣಕಗಳನ್ನು ಉಪಯೋಗಿಸುತ್ತಾರೆ. ಹೀಗೆ, ಎಲೆಕ್ಟ್ರೊ ಎನ್ಸೆಫಲೋಗ್ರಾಫ್, ಮಿದುಳು ಮತ್ತು ಗಣಕ ಒಂದು ಸಂವೃತ ಕುಣಿಕೆಯಲ್ಲಿ (ಕ್ಲೋಸ್ಡ್ ಲೂಪ್) ಸಂಯೋಜಿತವಾಗಿ ಈ ಪ್ರಯೋಗ ಸಿದ್ಧವಾಗುತ್ತದೆ.

ಶುದ್ಧ ಗಣಿತದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪರೋಕ್ಷವಾಗಿ ಗಣಕಗಳ ನೆರವನ್ನು ಪಡೆಯಲಾಗಿದೆ. ಯು.ಎಸ್.ಎ. ಯ ಪ್ರೊಫೆಸರ್ ಲೇಮರ್ 46 ಮಿಲಿಯನ್‌ಗಿಂತ ಕಡಿಮೆ ಇರುವ ಎಲ್ಲ ಅವಿಭಾಜ್ಯ ಸಂಖ್ಯೆಗಳ (ಪ್ರೈಂ ನಂಬರ್ಸ್) ಒಂದು ಸರಣಿಯನ್ನು ತಯಾರಿಸುವ ಯೋಜನೆಯನ್ನು ಗಣಕಕ್ಕೆ ಉಣಿಸಿದರು. ಈ ಸರಣಿಯನ್ನು ವಿಶ್ಲೇಷಿಸಿದಾಗ ಅವಿಭಾಜ್ಯ ಸಂಖ್ಯೆಗಳನ್ನು ಕುರಿತ ಹಲವಾರು ಊಹೆಗಳು ನಿಜವೆನ್ನಿಸಿದುವು. ಫರ್ಮಾನ ಅಂತಿಮ ಪ್ರಮೇಯವನ್ನು ಪರೀಕ್ಷಿಸಲು ಕೂಡ ಗಣಕ ಕ್ರಮವಿಧಿಗಳನ್ನು ತಯಾರಿಸಲಾಗಿದೆ. ಪ್ರತೀಕ ಕೈವಾಡ ತಂತ್ರಗಳನ್ನು (ಸಿಂಬಲ್ ಮನಿಪ್ಯುಲೇಟಿಂಗ್ ಟೆಕ್ನೀಕ್ಸ್) ಉಪಯೋಗಿಸಿಕೊಂಡು ಶುದ್ಧ ಗಣಿತದಲ್ಲಿನ ಪ್ರಮೇಯಗಳನ್ನು ಸಾಧಿಸುವ ದಿಶೆಯಲ್ಲಿ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಗಣಕಗಳ ನೂರಾರು ಅನ್ವಯಗಳನ್ನು ನಾವು ಮೇಲಿನ ಯಾದಿಗೆ ಜಮಾಯಿಸುತ್ತ ಹೋಗಬಹುದು. ಅದು ಹೀಗಿದ್ದರೂ ಇಲ್ಲಿ ಇನ್ನೊಂದು ಅನ್ವಯ ಕ್ಷೇತ್ರವನ್ನು ಕುರಿತು ಮಾತ್ರ ಪ್ರಸ್ತಾವಿಸುತ್ತೇವೆ–ಪರಿಕರ್ಮಗಳ ಸಂಶೋಧನೆ (ಆಪರೇಷನ್ಸ್ ರಿಸರ್ಚ್). ಇದು ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬಲು ಮುಖ್ಯವಾದದ್ದು.

**ಪರಿಕರ್ಮಗಳ ಸಂಶೋಧನೆ ಹಾಗೂ ಯೋಜನೆ (ಆಪರೇಷನ್ಸ್ ರಿಸರ್ಚ್ ಅಂಡ್ ಪ್ಲಾನಿಂಗ್):** 1970ರಲ್ಲಿ ಭಾರತ ಸರ್ಕಾರ ಗಣಕ ಉಪಯೋಗದಿಂದ ಪಡೆದ ಶಿಫಾರಸುಗಳ ಮೇಲೆ ಆಧರಿತವಾದ ಒಂದು ಇತಿಹಾಸ ಪ್ರವರ್ತಕ ನಿರ್ಧಾರವನ್ನು ಕೈಗೊಂಡಿತು. ಅದರ ಪ್ರಕಾರ 700 ಕೋಟಿ ರೂಪಾಯಿಯಷ್ಟು ಬಂಡವಾಳವನ್ನು ಯೋಜನೆಯ (ಪ್ಲಾನಿಂಗ್) ಮೇಲೆ ಹೂಡುವುದೆಂದಿತ್ತು. ಉತ್ತರಭಾರತದ ವಿದ್ಯುಜ್ಜಾಲದ ವ್ಯಾಪ್ತಿಯಲ್ಲಿ ಬರುವ ಪಂಜಾಬ್, ರಾಜಸ್ತಾನ, ಹರಿಯಾಣ, ಉತ್ತರಪ್ರದೇಶ, ದೆಹಲಿ, ಹಾಗೂ ಜಮ್ಮು ಮತ್ತು ಕಾಶ್ಮೀರ ಇಲ್ಲಿನ ವಿದ್ಯುದುತ್ಪಾದನಾಗಾರಗಳಲ್ಲಿ ಜಲವಿದ್ಯುತ್, ಉಷ್ಣವಿದ್ಯುತ್, ಹಾಗೂ ನ್ಯೂಕ್ಲಿಯರ್‌ವಿದ್ಯುತ್ ಯೋಜನೆಗಳನ್ನು ಯಾವ ಪ್ರಮಾಣದಲ್ಲಿ ಸ್ಥಾಪಿಸಿದರೆ ಅತ್ಯಂತ ಲಾಭದಾಯಕವಾಗುತ್ತದೆ ಎಂಬುದು ಇಲ್ಲಿ ಎದುರಾದ ಸಮಸ್ಯೆ. ಇದಕ್ಕೆ ಅನುಕೂಲತಮ ಪರಿಹಾರವನ್ನು ಗಣಕಾಧಾರಿತವಾಗಿ ಶೋಧಿಸುವ ಒಂದು ತಂತ್ರವನ್ನು ರೂಪಿಸಲಾಯಿತು. ಎನ್. ಶೇಷಗಿರಿಯವರು ಈ ಕಾರ್ಯದಲ್ಲಿ ಉದ್ಯುಕ್ತರಾದ ತಂಡದ ನಾಯಕರಾಗಿದ್ದರು. ಇಲ್ಲಿ ಆ ತಂಡ ಪರಿಶೀಲಿಸಬೇಕಾಗಿ ಬಂದದ್ದು ಆರುನೂರರಷ್ಟು ಚರಗಳ–ಅವುಗಳಿಗೆ ಹೋಲಿಸುವಾಗ ಬಲು ದೊಡ್ಡ ಸಂಖ್ಯೆಯ ನಿರ್ಬಂಧಗಳಿಂದ ಪ್ರಭಾವಿತವಾದ–ನಡುವಿನ ಅಂತರಪ್ರಭಾವವನ್ನು. ಈ ಗಣಕ ಕ್ರಮವಿಧಿಯನ್ನು ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನ CDC–3600 ಗಣಕದ ಮೇಲೆ ನಡೆಸಲಾಯಿತು. ಇಲ್ಲಿ ದೊರೆತ ಫಲಿತಾಂಶಗಳು ಒಂದು ಆರ್ಥಿಕ ಪರಿಹಾರವನ್ನು ನೀಡಿದುವು. ಇದರ ಪ್ರಕಾರ ಪ್ರತಿಭಾನದಿಂದ ನಿರ್ಧರಿಸಿದ ಯಾವುದೇ ಮಿಶ್ರಕ್ಕಿಂತ ವಾರ್ಷಿಕವಾಗಿ 40 ಕೋಟಿ ರೂಪಾಯಿಗಳನ್ನು ರಾಷ್ಟ್ರಕ್ಕೆ ಉಳಿಸುವಂಥ ಒಂದು ಪರಿಹಾರ ದೊರೆಯಿತು. ಇದೂ ಇದರಂತೆ ಆಡಳಿತದ ಸಮಸ್ಯೆಗಳ ಇಂಥ ನೂರಾರು ವೈಜ್ಞಾನಿಕ ವಿಶ್ಲೇಷಣೆಗಳೂ ವಿಜ್ಞಾನದ ಕ್ರಾಂತಿಕಾರೀ ಶಾಖೆಯಾದ ಪರಿಕರ್ಮಗಳ ಸಂಶೋಧನೆಯ ಉಪಶಾಖೆಗಳು. ಇದರ ಸಂಕ್ಷೇಪರೂಪ OR. ಇದೊಂದು ಅಂತರ ಪ್ರಕಾರ (ಇಂಟರ್ ಡಿಸಿಪ್ಲಿನರಿ) ಲಕ್ಷಣವಿರುವ ವಿಜ್ಞಾನ ವಿಭಾಗ. ಗಣಿತ, ಅರ್ಥಶಾಸ್ತ್ರ, ಸಮಾಜವಿಜ್ಞಾನ, ಮನೋವಿಜ್ಞಾನ ಹಾಗೂ ಇತರ ಹಲವು ಪ್ರಕಾರಗಳನ್ನು OR ಅಡ್ಡ ಹಾಯ್ದಿದೆ. ಇಲ್ಲವೇ ಒಂದು ಪುಟ್ಟ ಕೈಗಾರಿಕೆಯ ಮಟ್ಟದಲ್ಲಿ ಆಗಲೀ ಭಾರಿ ಕೈಗಾರಿಕೆಗಳ ಜಾಲದ ಮಟ್ಟದಲ್ಲಿ ಆಗಲೀ ಎದುರಾಗುವ ಹಲವಾರು ಆಡಳಿತೆಯ ಸಮಸ್ಯೆಗಳನ್ನು ORನ ಅನ್ವಯಗಳು ಒಳಗೊಳ್ಳುತ್ತವೆ. ಒಂದು ಸ್ಥೂಲ ಅಂದಾಜನ್ನು ಮಾಡಬಹುದಾದರೆ ಕಳೆದ ಒಂದು ದಶಕದಲ್ಲಿ ಯು. ಎಸ್. ಎ., ಯು. ಎಸ್. ಎಸ್. ಆರ್., ಯು. ಕೆ. ಹಾಗೂ ಜರ್ಮನ್ ರಾಷ್ಟ್ರಗಳಲ್ಲಿ ORನ ಎಲ್ಲ ಮುಖಗಳ ಅನ್ವಯದ ಪರಿಣಾಮವಾಗಿ ಸಾಧಿಸಲಾದ ಉಳಿತಾಯ ಭಾರತದ ಪಂಚವಾರ್ಷಿಕ ಯೋಜನೆಗಳ ಅಂದಾಜು ವೆಚ್ಚದ ಮೊತ್ತಕ್ಕಿಂತಲೂ ಹೆಚ್ಚು. ಆದ್ದರಿಂದ ರಾಷ್ಟ್ರದಲ್ಲಿರುವ ವ್ಯವಸ್ಥಾಪಕರಲ್ಲೂ (ಮ್ಯಾನೇಜರ್ಸ್) ಯೋಜಕರಲ್ಲೂ (ಪ್ಲಾನರ್ಸ್) OR ನಲ್ಲಿ ಅಡಕವಾಗಿರುವ ವಿಭವತೆಗಳನ್ನು (ಪೊಟೆನ್ಶಿಯಾಲಿಟೀಸ್) ಕುರಿತ ಅರಿವು ರಾಷ್ಟ್ರದ ಆರ್ಥಿಕತೆಯನ್ನು ಗಮನಾರ್ಹವಾಗಿ ಎತ್ತರಿಸಬಲ್ಲುದು ಎಂಬುದು ಸ್ಪಷ್ಟ.

ಪರಿಕರ್ಮಗಳ ಸಂಶೋಧನೆಯ (OR) ಇತಿಹಾಸ; ತಾಂತ್ರಿಕವಾಗಿ ಹೇಳುವುದಾದರೆ ವ್ಯವಸ್ಥಾಪನಾ ವಿಜ್ಞಾನ (ಸೈನ್ಸ್ ಆಫ್ ಮ್ಯಾನೇಜ್ಮೆಂಟ್)–ಇದರ ಜನಪ್ರಿಯ ಹೆಸರು ಪರಿಕರ್ಮಗಳ ಸಂಶೋಧನೆ–ಮೊದಲು ಉಗಮಿಸಿದ ಸ್ಥಳಗಳಲ್ಲಿ ಭಾರತವೂ ಒಂದು. 1922ರಲ್ಲಿ ಬಂಗಾಳದ ಉತ್ತರ ಭಾಗ ತೀವ್ರ ಪ್ರವಾಹ ಪೀಡಿತವಾಗಿತ್ತು. ಪ್ರವಾಹವೇಗವನ್ನು ತಡೆ ಹಿಡಿದಿಡಬಲ್ಲ ಹಲವಾರು ಬೋಗುಣಿಗಳ ನಿರ್ಮಾಣವನ್ನು ಸರ್ಕಾರ ನೇಮಿಸಿದ ತಜ್ಞರ ಒಂದು ಸಮಿತಿ ಸಲಹೆ ಮಾಡಿತು. ಇದು ಅತಿ ಖರ್ಚಿನ ಬಾಬು. ಈ ಸಮಸ್ಯೆಯನ್ನು ಆಗ ಕೇವಲ ಇಪ್ಪತ್ತೊಂಬತ್ತು ವರ್ಷ ವಯಸ್ಸಿನ ತರುಣ ವಿಜ್ಞಾನಿಯಾಗಿದ್ದ ಪಿ. ಸಿ. ಮಹಲನೋಬಿಸ್ ಅವರಿಗೆ ಸಹ ಒಪ್ಪಿಸಲಾಯಿತು. (ಇವರೇ ಮುಂದೆ ಭಾರತವನ್ನು ಸಂಖ್ಯಾಕಲನೀಯ ಅಧ್ಯಯನಗಳಲ್ಲಿ ಮುಂಚೂಣಿಯಲ್ಲಿರುವಂತೆ ಮಾಡಿದವರೆನ್ನುವುದನ್ನು ಇಲ್ಲಿ ಸ್ಮರಿಸಬಹುದು.) ಅವರು ಇಡೀ ಪ್ರದೇಶದ ಮೇಲೆ ಬೀಳುವ ಮಳೆಯ ವಿಚಾರ ವ್ಯಾಪಕವಾದ ಅನ್ವೇಷಣೆಯನ್ನು ನಡೆಸಿ ಹಲವಾರು ಪರಿಹಾರಗಳನ್ನು ಶಿಫಾರಸು ಮಾಡಿದರು. ಇವುಗಳಲ್ಲಿ ಕೆಲವನ್ನು ಕಾರ್ಯಗತಗೊಳಿಸಲಾಯಿತು. ಅಂತೂ ತಡೆಹಿಡಿದ ಬೋಗುಣಿಗಳ ನಿರ್ಮಾಣವನ್ನು ಮಾಡಲಿಲ್ಲ. ಮಹಲನೋಬಿಸ್ ಅವರು ಮಾಡಿದ ನಿದಾನ (ಡಯಗ್ನೋಸಿಸ್) ಸರಿಯಾದದ್ದೆಂದು ಮುಂದೆ ಸಿದ್ಧವಾಯಿತು. ಈ ತರಹದ ಸನ್ನಿವೇಶಗಳನ್ನು ವಿಶ್ಲೇಷಿಸಲು 1922–27ರ ಅವಧಿಯಲ್ಲಿ ಅವರು ಕೆಲವು ವಿಧಾನಗಳನ್ನು ರೂಪಿಸಿದರು. ಪೂರ್ವೇಕ್ಷಣೆ (ರಿಟ್ರಾಸ್ಪೆಕ್ಟ್) ಮಾಡಿ ಪರಿಶೀಲಿಸುವಾಗ ಈ ವಿಧಾನಗಳು ಯುದ್ಧೋತ್ತರ ದಿವಸಗಳಂದು OR ನಲ್ಲಿ ಆದ ಬೆಳವಣಿಗೆಗಳ ಸ್ವಭಾವದ್ದೇ ಎಂದು ವೇದ್ಯವಾಯಿತು.

1928ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಫಾನ್ ನ್ಯೂಮನ್ ಎಂಬಾತ ಯುದ್ಧ ಕೌಶಲದ ವಿಜ್ಞಾನವನ್ನು ಅಧ್ಯಯನಮಾಡುತ್ತಿದ್ದಾಗ ಕೆಲವು ವಿಧಾನಗಳನ್ನು ಅಭಿವೃದ್ಧಿಪಡಿಸಿದ. ಇವನ್ನು ಮುಂದೆ ರೇಖೀಯ ಕ್ರಮವಿಧಾಯ (ಲೀನಿಯರ್ ಪ್ರೋಗ್ರಾಮಿಂಗ್) ಎಂಬ ಹೆಚ್ಚು ವ್ಯಾಪಕವಾದ ಒಂದು ವಿಜ್ಞಾನ ಪ್ರಕಾರದೊಡನೆ ಹೊಂದಿಸಲಾಯಿತು. 1947ರ ಬಳಿಕ ರೇಖೀಯ ಕ್ರಮವಿಧಾಯ ಒಂದು ಪ್ರತ್ಯೇಕ ವಿಷಯವಾಗಿ ವಿಕಸಿಸಿದೆ. ಎರಡನೆಯ ಮಹಾಯುದ್ಧದ ಮೊದಲ ವರ್ಷಗಳಲ್ಲಿ ಯು. ಕೆ ಯಲ್ಲಿ ಸೇನಾಬಲಗಳ ಮೂರು ವಿಭಾಗಗಳಲ್ಲೂ ವೈಜ್ಞಾನಿಕ ವ್ಯವಸ್ಥಾಪನೆಯನ್ನು (ಸೈಂಟಿಫಿಕ್ ಮ್ಯಾನೇಜ್ಮೆಂಟ್) ಪಿ. ಎಂ. ಎಸ್. ಬ್ಲ್ಯಾಕೆಟ್ಟನ ಪ್ರಯತ್ನಗಳ ಫಲವಾಗಿ ಪ್ರಾರಂಭಿಸಲಾಯಿತು.

ಐತಿಹಾಸಿಕವಾಗಿ ಹೇಳುವುದಾದರೆ ರೇಖೀಯ ಕ್ರಮವಿಧಾಯಕ್ಕೂ ಆ ಕಾರಣದಿಂದ ಸ್ವಂತ ಹಕ್ಕುಗಳ ಮೇಲೆಯೇ OR ಒಂದು ವಿಜ್ಞಾನ ಪ್ರಕಾರವೆಂದು ಪಡೆದ ಪರಿಗಣನೆಗೂ ಕಾರಣರು ಜಾರ್ಜ್ ಬಿ. ಡಾಂಟ್ಸಿಗ್ ಹಾಗೂ ಯು. ಎಸ್. ವಾಯುಸೇನಾ ವಿಭಾಗದ ಆತನ ಸಹೋದ್ಯೋಗಿಗಳು. ಈ ತಂಡಕ್ಕೆ 1947ರಲ್ಲಿ ಸೇನಾ ವ್ಯವಸ್ಥಾಪನೆಗೆ (ಮಿಲಿಟರಿ ಮ್ಯಾನೇಜ್ಮೆಂಟ್) ಗಣಿತೀಯ ವಿಧಾನಗಳನ್ನು ಅನ್ವಯಿಸುವ ವಿಧಾನಗಳನ್ನು ಅನ್ವೇಷಿಸಲು ಆದೇಶ ನೀಡಲಾಯಿತು. ಇದರ ಪರಿಣಾಮವಾಗಿ ಆ ತಂಡದವರು ರೇಖೀಯ ಕ್ರಮವಿಧಿಯನ್ನು ಪ್ರತ್ಯೇಕವಾದ ಒಂದು ವಿಜ್ಞಾನ ಪ್ರಕಾರವಾಗಿ ಬೆಳೆಸಿದರು. ಅವರಿಗೆ ಈ ದಿಶೆಯಲ್ಲಿ ಲಭಿಸಿದ ಯಶಸ್ಸಿನಿಂದ ಉತ್ತೇಜಿತವಾದ ಯು. ಎಸ್. ವಾಯುಸೇನಾ ವಿಭಾಗ ಸಂಶೋಧಕರ ಒಂದು ತಂಡವನ್ನೇ ಸಂಘಟಿಸಿತು. ಅದಕ್ಕೆ ಪ್ರಾಜೆಕ್ಟ್ ಸ್ಕೂಪ್ (ಸೈಂಟಿಫಿಕ್ ಕಂಪ್ಯುಟೇಷನ್ ಆಫ್ ಆಪರೇಷನಲ್ ಪ್ರೋಗ್ರಾಮ್ಸ್ ಎಂಬುದರ ಪ್ರಥಮಾಕ್ಷರ ಸಂಕಲಿತ ರೂಪ) ಎಂದು ಹೆಸರಿಟ್ಟರು. ಇದರಿಂದ ಹಳೆಯ ವಿಜ್ಞಾನಕ್ಕೆ ಈಗ ಹೊಸ ನೋಟ ಹಾಗೂ ಗೌರವ ಪ್ರಾಪ್ತವಾದುವು. ಹೀಗೆ ರಕ್ಷಣಾ ವ್ಯವಸ್ಥಾಪನೆಗೋಸ್ಕರ ತಯಾರಾದ ತಂತ್ರಗಳನ್ನು ಯುದ್ಧೋತ್ತರ ದಿವಸಗಳಲ್ಲಿ ವಾಣಿಜ್ಯ ವ್ಯವಸ್ಥಾಪನೆಗೂ ಆರ್ಥಿಕ ಯೋಜನೆಗೂ ಒಯ್ಯಲಾಯಿತು. ORಗೆ ಹೆಚ್ಚಿನ ಕುಮ್ಮಕ್ಕು ದೊರೆತದ್ದು ಪ್ರಾಯಶಃ ಅಂಕಗಣಕಗಳ ಬೆಳವಣಿಗೆಯಿಂದ. ಪ್ರಾರಂಭದ ದಿನಗಳಲ್ಲಿ ORನ್ನು ಯು.ಎಸ್.ಎ. ಮತ್ತು ಯು.ಕೆ. ರಾಷ್ಟ್ರಗಳು ಮಾತ್ರ ತಮ್ಮ ಅನುಕೂಲತೆಗೋಸ್ಕರ ಉಪಯೋಗಿಸಿಕೊಂಡಿದ್ದರೂ ಗಣಕಗಳು ಪ್ರಬುದ್ಧಾವಸ್ಥೆಗೆ ಬಂದ ಬಳಿಕ ಅನ್ವಯದ ವ್ಯಾಪ್ತಿ ಮತ್ತಷ್ಟು ದೊಡ್ಡದಾದ ಆರ್ಥಿಕ ಸಮಸ್ಯೆಗಳಿಗೆ ವಿಸ್ತರಿಸಿತು. ಅದು ಶಿಖರಾಗ್ರವನ್ನು ತಲುಪಿದ್ದು 1961ರಲ್ಲಿ. ಆ ವರ್ಷ ರಷ್ಯದ ಮೂವರು ವಿಜ್ಞಾನಿಗಳು ಬರ್ಗ್‌ಕಿಟಾಫ್ ಮತ್ತು ಲ್ಯಾಪುನಾಫ್ ಗಲಭೆಯಿಲ್ಲದೇ ಒಂದು ಹೊಸ ಆಂದೋಳನವನ್ನು ಪ್ರಾರಂಭಿಸಿದರು. ಇದರಿಂದಾಗಿ ಪರಿಕರ್ಮಗಳ ಸಂಶೋಧನೆ ಯು. ಎಸ್. ಎಸ್. ಆರ್.ನ ಆರ್ಥಿಕ ರಚನೆಗೆ ಹೇಳಿದ್ದಲ್ಲ ಎಂಬ ಪ್ರಚಲಿತ ಭಾವನೆ ನಿರ್ಮೂಲವಾಯಿತು. ಇಂದು ಯು.ಎಸ್.ಎ ಮತ್ತು ಯು.ಎಸ್.ಎಸ್.ಆರ್. ರಾಷ್ಟ್ರಗಳೆರಡೂ ತಮ್ಮ ಆರ್ಥಿಕ ರಚನೆಗಳನ್ನು ORನ (ಅದರ ಎಲ್ಲ ನಿಯಮಗಳ ಹಾಗೂ ವಿಧಾನಗಳ ಸಮೇತ) ಅಡಿಪಾಯಗಳ ಮೇಲೆ ಭದ್ರವಾಗಿ ನೆಲೆಗೊಳಿಸಿವೆ. ಈ ಪ್ರಕಾರವಾಗಿ ಗಣಕಸಜ್ಜಿತ ವ್ಯವಸ್ಥಾಪನೆಯಿರುವ ಮತ್ತು ಅದರೊಂದಿಗೆ ಹೊಸ ದೃಷ್ಟಿಕೋನದ ವ್ಯವಸ್ಥಾಪಕರ ಒಂದು ಸಮುದಾಯವಿರುವ ನೂತನ ಯುಗ ಆವಾಹಿಸಲ್ಪಟ್ಟಿತು. ಇವರಿಗೆ ಲಭಿಸಿದ ಯಶಸ್ಸುಗಳು ವ್ಯವಸ್ಥಾಪನೆಯನ್ನು ಕುರಿತ ಅವೈಜ್ಞಾನಿಕ ನಿಲುವನ್ನು ನಿಧಾನವಾಗಿ, ಆದರೂ ಖಂಡಿತವಾಗಿ, ನಿರ್ನಾಮಗೊಳಿಸಿದುವು.

ಹೊಸ ವ್ಯವಸ್ಥಾಪಕರು: ದಕ್ಷರೆನಿಸಿಕೊಂಡ ಎಲ್ಲ ವ್ಯವಸ್ಥಾಪಕರೂ ವ್ಯವಸ್ಥಾಪನೆಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಆಧುನಿಕ ವಿಶ್ಲೇಷಣೆಯ ನಾಜೂಕು ವಿಧಾನಗಳನ್ನು ಬಳಸದೇ ಇದ್ದರೂ ಆ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಅವುಗಳಿಗೆ ತರ್ಕಸಮ್ಮತ ಪರಿಹಾರಗಳನ್ನು (ರ್‍ಯಾಷನಲ್ ಸೊಲ್ಯೂಷನ್ಸ್) ಮುಂದೊಡ್ಡಿದವರೇ ಎಂಬುದು ಸ್ಪಷ್ಟವಾದ ಸಂಗತಿ. ಪ್ರತಿಯೊಬ್ಬ ಯಶಸ್ವೀ ವ್ಯವಸ್ಥಾಪಕನೂ ಅನುಭವದಿಂದ ವ್ಯವಸ್ಥಾಪನೆಯ ಪಂಚ ಪ್ರಜ್ಞೆಗಳನ್ನು ಉಪಯುಕ್ತತೆಯ ಭಿನ್ನಮಟ್ಟಗಳವರೆಗೆ ಬೆಳೆಸಿಕೊಂಡಿರುತ್ತಾನೆ; ವ್ಯವಸ್ಥಾಪನೆಯ ಪ್ರಜ್ಞೆ, ಅಂಕಗಣಿತೀಯ ಪ್ರಜ್ಞೆ, ಅಂಕಿಅಂಶಗಳ ಪ್ರಜ್ಞೆ, ಅನುಕೂಲತಮ–ಗ್ರಹಣ (ಆಪ್ಟಿಮಾಲಿಟಿ–ಪರ್ಸೆಪ್ಷನ್) ಪ್ರಜ್ಞೆ ಹಾಗೂ ವ್ಯವಸ್ಥಾಗ್ರಹಣ (ಸಿಸ್ಟಮ್ ಪರ್ಸೆಪ್ಷನ್) ಪ್ರಜ್ಞೆ.

ಸಮಗ್ರವಾಗಿ ನೋಡಿ ಹೇಳುವುದಾದರೆ OR ಎಂದರೆ ಈ ಪ್ರಜ್ಞೆಗಳನ್ನು ರಾಶ್ಯಾತ್ಮಕ ಪದಗಳಲ್ಲಿ ಮಾರ್ಗದರ್ಶಿಸುವ ತತ್ತ್ವವನ್ನು ನಿರೂಪಿಸಲು, ಈ ತತ್ತ್ವದ ಹಿನ್ನೆಲೆಯಲ್ಲಿರುವ ನಿಯಮಗಳನ್ನು ಅನ್ವೇಷಿಸಲು ಮತ್ತು ಈ ನಿಯಮಗಳ ಮೇಲೆ ಇಚ್ಛಾಪೂರ್ವಕವಾಗಿ ಕೈವಾಡ ನಡೆಸುವ ವಿಧಾನಗಳನ್ನು ಅಭಿವೃದ್ಧಿಪಡಿಸಲು ಇರುವ ಒಂದು ವಿಜ್ಞಾನವೆಂದು ವರ್ಣಿಸಬಹುದು.

ಪಂಚಪ್ರಜ್ಞೆಗಳಲ್ಲಿ ಮೊದಲನೆಯದನ್ನು ಪರಿಶೀಲಿಸೋಣ. ಭಾರತದಲ್ಲಿರುವ ವ್ಯವಸ್ಥಾಪಕರಲ್ಲಿ ಅತ್ಯುತ್ತಮವಾಗಿ ಅಭಿವೃದ್ಧಿಗೊಂಡಿರುವ ಪ್ರಜ್ಞೆ ಎಂದರೆ ಪ್ರಾಯಶಃ ಇದೇ. ಇದರಲ್ಲಿ ಧುರೀಣತ್ವ, ಸಂಘಟನಾ ಸಾಮರ್ಥ್ಯ, ಚಟುವಟಿಕೆಗಳನ್ನು ಸರಿಹೊಂದಿಸುವ ಸಾಮರ್ಥ್ಯ, ಮಾನವಾಕಾರಗಳನ್ನು ಕುರಿತು ಭಾವಾತಿರೇಕರಹಿತ

ನಿಲುವು ಮತ್ತು ಇತರ ಹಲವಾರು ಸದ್ಗುಣಗಳು ಅಡಕವಾಗಿವೆ. ವ್ಯವಸ್ಥಾಪನೆಯಲ್ಲಿ ತಲೆದೋರುವ ಸಮಸ್ಯೆಗಳನ್ನು ಕುರಿತು ಗುಣಾತ್ಮಕ ತೀರ್ಪುಗಳನ್ನು (ಕ್ವಾಲಿಟೇಟಿವ್ ಜಡ್ಜ್‌ಮೆಂಟ್ಸ್) ಕೊಡುವಲ್ಲಿ ಮೇಲಿನ ಪ್ರಜ್ಞೆಯೇ ಪ್ರಧಾನವಾಗಿ ಮಾರ್ಗದರ್ಶಿಸುವುದು. ಇದನ್ನು ರಾಶ್ಯಾತ್ಮಕ (ಕ್ವಾಂಟಿಟೇಟಿವ್) ತೀರ್ಪುಗಳನ್ನು ಮೂಲ ಮಟ್ಟದಲ್ಲೇ ಅಂಕಗಣಿತೀಯ ಲೆಕ್ಕಾಚಾರಗಳಿಂದ ಮಾಡಲಾಗುತ್ತದೆ.

ಒಂದು ವ್ಯವಸ್ಥಾಪನ ನಿರ್ಧಾರಣೆಯನ್ನು (ಮ್ಯಾನೇಜ್‌ಮೆಂಟ್ ಡಿಸಿಷನ್) ಮಾಡುವಲ್ಲಿ, ಹಲವು ವೇಳೆ ಗಣಕಗಳೇ ಬೇಕಾಗುವಂಥ ಬಲು ದೊಡ್ಡ ರಾಶ್ಯಾತ್ಮಕ ಫಲಿತಾಂಶಗಳು ತಲೆದೋರುವಾಗ, ನಿರಪೇಕ್ಷ ನಿರ್ಧಾರಣೆಗಳನ್ನು ಸರಳ ಅಂಕಗಣಿತದ ಮೂಲಕ ಪರಿಣಾಮಕಾರಿಯಾಗಿ ಪಡೆಯಲು ಸಾಧ್ಯವಾಗದು ಎಂಬ ತಿಳಿವಳಿಕೆ ಉನ್ನತ ಮಟ್ಟದ ಅರಿವು. ಅನೇಕ ಸಲ ಹೆಚ್ಚಿನ ಅನುಭವಸ್ಥ ವ್ಯವಸ್ಥಾಪಕರು ಕೂಡ ಒಂದೇ ಸನ್ನಿವೇಶದಿಂದ ಬರುವ ಸಂಖ್ಯೆಗಳನ್ನು ಎದುರಿಸುವಾಗ ಅವು ತಮ್ಮ ಮೌಲ್ಯಗಳನ್ನು ಆಗೀಗ ಅದು ಹೇಗೆ ಬದಲಾಯಿಸುತ್ತವೆ ಎಂದು ಅಚ್ಚರಿಪಡುತ್ತಾರೆ. ಸಂಖ್ಯಾಕಲನ ವಿಜ್ಞಾನ ಚೆನ್ನಾಗಿ ಅಭಿವೃದ್ಧಿಗೊಂಡಿರುವ ಅವರ ಅಂಕಗಣಿತದ ಪ್ರಜ್ಞೆ ಎಲ್ಲ ಸಂಖ್ಯೆಗಳ ಸರಾಸರಿಯನ್ನು ಪಡೆಯುವಂತೆ ಅವರನ್ನು ಒತ್ತಾಯಿಸುತ್ತದೆ. ಸಂಖ್ಯಾಕಲನಶಾಸ್ತ್ರವೆಂಬ ಚೆನ್ನಾಗಿ ಪರೀಕ್ಷಿಸಲ್ಪಟ್ಟ ವಿಜ್ಞಾನ ಪ್ರಕಾರ ಉಂಟು, ಅದು ಅವರಿಗೆ ಅತ್ಯಂತ ತೃಪ್ತಿಕರ ಹಾಗೂ ಲಾಭದಾಯಕ ಉತ್ತರವನ್ನು ನೀಡಬಲ್ಲುದು ಎಂಬ ವಿಷಯವೇ ಅವರಿಗೆ ತಿಳಿದಿರುವುದಿಲ್ಲ.

ಯಾವುದೇ ಆರ್ಥಿಕ ತಳಹದಿಯ, ಅದರ ಮೂಲ ಏನೇ ಇರಲಿ, ಬೆಳೆವಣಿಗೆಗೆ ಅನುಕೂಲತಮ ಗ್ರಹಣ (ಆಪ್ಟಿಮಾಲಿಟಿ ಪರ್ಸೆಪ್ಷನ್) ಪ್ರಜ್ಞೆಯ ಕಾರಕದ ಕೊಡುಗೆ ಬಲು ಮುಖ್ಯವಾದದ್ದು. ಅದನ್ನು ಈ ಮುಂದಿನ ಸೂಕ್ತಿಯಲ್ಲಿ ನಿರೂಪಿಸಬಹುದು: ಅನುಕೂಲತಮ ನಿರ್ಧಾರಣೆಯನ್ನು ಅನುಕೂಲತಮ ಮೂಲಗಳಿಂದ ಅನುಕೂಲತಮ ವೇಳೆಯಲ್ಲಿ ಅನುಕೂಲತಮವಲ್ಲದ ಸಂದರ್ಭಗಳಿಗೆ ಸರಿಯಾಗುವಂತೆ ನಿರ್ವಹಿಸು. ಆದ್ದರಿಂದ, ಆರ್ಥಿಕ ಇಲ್ಲವೇ ಸಂಘಟನೆಯ ಆಯಕಟ್ಟನ್ನು (ಆರ್ಗನೈಸೇಷನಲ್ ಸ್ಟ್ರಾಟಿಜಿ) ತಯಾರಿಸುವಾಗ ಸನ್ನಿವೇಶಗಳು ವಿಧಿಸುವ ನಿರ್ಬಂಧಗಳ ಮಿತಿಯಲ್ಲಿ ಕಾಲ, ವೆಚ್ಚ ಮತ್ತು ಮನುಷ್ಯ ಸಾಮರ್ಥ್ಯವೆಂಬ ರಾಶಿಗಳ ಅನುಕೂಲತಮೀಕರಣ ವಿಧಾನಗಳ (ಆಪ್ಟಿಮೈಸೇಷನ್ ಮೆಥಡ್ಸ್) ಮೇಲೆ ಗರಿಷ್ಠ ಅವಧಾರಣೆ ಉಂಟು.

ಕೊನೆಯ ಮತ್ತು ಅತಿಮುಖ್ಯವಾದ ಪ್ರಜ್ಞೆ ಎಂದರೆ ವ್ಯವಸ್ಥೆಗಳ ಪ್ರಜ್ಞೆ (ಸಿಸ್ಟಮ್ಸ್ ಸೆನ್ಸ್). ಭಾರತದ ಬಹುಪಾಲು ವ್ಯವಸ್ಥಾಪಕರಲ್ಲಿ ಅತ್ಯಂತ ಉಪೇಕ್ಷಿತ ಪ್ರಜ್ಞೆ ಎಂದರೆ ಪ್ರಾಯಶಃ ಇದೇ. ವ್ಯವಸ್ಥಾಗ್ರಹಣ ಪ್ರಜ್ಞೆ ಎಂದರೆ ಸಮಗ್ರ ಸಂಘಟನೆಯನ್ನೂ ಅದರ ಸರ್ವ ಅಂತರಕ್ರಿಯೆಗಳ ಸಮೇತ ಒಂದು ಪ್ರಪಂಚ ಸಮಸ್ಯೆಯಾಗಿ ಅರಿಯುವ ಸಾಮರ್ಥ್ಯ. ಉದಾಹರಣೆಗೆ, ಬೇರೆ ಬೇರೆ ಇಲಾಖೆಗಳ ಸಂಪನ್ಮೂಲಗಳನ್ನೂ ಮನುಷ್ಯ ಸಾಮರ್ಥ್ಯವನ್ನೂ ಒದಗಿಸುವುದು ಮತ್ತು ಬೇರೆ ಬೇರೆ ವಿಭಾಗಗಳಲ್ಲಿನ ಚಟುವಟಿಕೆಗಳನ್ನು ಸರಿಹೊಂದಿಸುವುದು ಈ ಪ್ರಜ್ಞೆಯ ವ್ಯಾಪ್ತಿಗೆ ಸೇರಿದೆ. ಈ ಒದಗಿಸುವಿಕೆಯನ್ನಾಗಲಿ ಸರಿಹೊಂದಿಸುವಿಕೆಯನ್ನಾಗಲಿ ನಿರ್ವಹಿಸುವಾಗ ಒಂದು ಖಾಸಗಿ ಉದ್ಯಮವಾದರೆ ಅದು ತನ್ನ ಲಾಭ ಮತ್ತು ಉತ್ಪನ್ನದ ಗುಣಮಟ್ಟ ಗರಿಷ್ಠವಾಗಿರುವಂತೆ, ಒಂದು ಸರ್ಕಾರಿ ಉದ್ಯಮವಾದರೆ ಅದು ತನ್ನ ಸ್ಥಿರ ಹಾಗೂ ಚರ ವೆಚ್ಚ ಕನಿಷ್ಠವಾಗಿರುವಂತೆ ಮತ್ತು ಇಡೀ ರಾಷ್ಟ್ರವಾದರೆ ಅದು ತನ್ನ ಸ್ಥೂಲ ರಾಷ್ಟ್ರೀಯ ಉತ್ಪನ್ನ (ಗ್ರಾಸ್ ನ್ಯಾಷನಲ್ ಪ್ರೊಡಕ್ಟ್) ಅಥವಾ ಸಾಮಾಜಿಕಾರ್ಥಿಕ ಸೂಚಿ (ಸೋಶಿಯೋ-ಇಕನಾಮಿಕ್ ಇಂಡೆಕ್ಸ್) ಗರಿಷ್ಠವಾಗಿರುವಂತೆ ಮಾಡಬೇಕಾಗುತ್ತದೆ.

ಆದ್ದರಿಂದ ಸಿಂಹಾವಲೋಕಿಸಿ ಈಗ ಪರಿಕರ್ಮಗಳ ಸಂಶೋಧನೆಯನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಬಹುದು: OR ಗಣಕಗಳ ಮೇಲೆ ಅವಲಂಬಿಸಿರುವ ಒಂದು ವೈಜ್ಞಾನಿಕ ಸಾಧನ; ಅದು ಸಂಖ್ಯಾಕಲನೀಯ ಕಾರಕಗಳನ್ನು ಕುರಿತು ನಿಷ್ಪಷ್ಟ ರಾಶ್ಯಾತ್ಮಕ ಮಾಹಿತಿಯನ್ನೂ ಅನುಕೂಲತಮೀಕರಿಸಿದ ಕಾರಕಗಳನ್ನೂ ವ್ಯವಸ್ಥಾಪನೆಗೆ ಒದಗಿಸಲು ನೆರವಾಗುತ್ತದೆ; ಇದರಿಂದ ವ್ಯವಸ್ಥಾಪಕರು ಅಧಿಕೋಪಯುಕ್ತ ನಿರ್ಧಾರಣೆಗಳನ್ನು ಕೈಗೊಳ್ಳಬಹುದು.

ಮೇಲೆ ವಿವರಿಸಿದ ಎರಡು ಪ್ರಜ್ಞೆಗಳಿಗೆ ಇನ್ನೂ ಹೆಚ್ಚಿನ ವಿವರಣೆ ಅಗತ್ಯವಿಲ್ಲ. ಆದ್ದರಿಂದ ಇಲ್ಲಿ ಮುಂದಕ್ಕೆ ಉಳಿದ ಮೂರನ್ನು ಮಾತ್ರ ಉದಾಹರಣೆಗಳ ಸಮೇತ ವಿವರಿಸಿದೆ. ಹೀಗೆ ಮಾಡುವಾಗ ಪ್ರತಿಭಾನ (ಇಂಟ್ಯೂಷನ್) ಎಲ್ಲಿ ವಿಫಲವಾಗುತ್ತದೆ ಮತ್ತು ಗಣಕಸಜ್ಜಿತ ವಿಜ್ಞಾನಗಳು ಎಲ್ಲಿ ನೆರವಿಗೆ ಬರುತ್ತವೆ ಎಂಬುದನ್ನು ತೋರಿಸಿದೆ.

ಕ್ರೀಡಾ ಸಿದ್ಧಾಂತ (ಗೇಮ್ ಥಿಯೊರಿ); ಮಾರುಕಟ್ಟೆ ಸಂಶೋಧನೆಯನ್ನು ಪ್ರೇರಿಸಿದ್ದು ಸಂಖ್ಯಾಕಲನವಿಜ್ಞಾನದ ಪ್ರಜ್ಞೆ, ಗ್ರಾಹಕನ ಅವಶ್ಯಕತೆಗಳು, ಆತ ವಿಧಿಸುವ ನಿರ್ಬಂಧಗಳು ಮತ್ತು ವ್ಯಾಪಾರ ಕ್ಷೇತ್ರದಲ್ಲಿರುವ ಸ್ಪರ್ಧಿಗಳು ಮಂಡಿಸುವ ಮಾರಾಟ ಆಯಕಟ್ಟುಗಳು (ಸೇಲ್ಸ್ ಸ್ಟ್ರಾಟೆಜೀಸ್) ಇವನ್ನೆಲ್ಲ ಇಲ್ಲಿ ಪರಿಗಣಿಸಬೇಕಾಗುತ್ತದೆ.

ಕೈಗಾರಿಕಾ ಬೆಳೆವಣಿಗೆಗೆ ಕಾರ್ಖಾನೆಗಳ ಸಾಮಗ್ರಿಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಮಾತ್ರ ಅವಲಂಬಿಸಿಲ್ಲ; ಗ್ರಾಹಕರ ಅವಶ್ಯಕತೆಗಳನ್ನು ಮತ್ತು ಅಭಿರುಚಿಗಳನ್ನು ಸಹ ಅವಲಂಬಿಸಿವೆ. ಬೇಡಿಕೆ ಏರಿಳಿತಗಳ ಸಮಸ್ಯೆಗಳು ಒಂದು ಕೈಗಾರಿಕೆಯ ವ್ಯವಸ್ಥಾಪಕನನ್ನು ಸದಾ ಮುತ್ತಿಕೊಂಡಿರುವುವು. ಒಬ್ಬ ಗ್ರಾಹಕನ ಅಭಿರುಚಿಯಲ್ಲಿ ಗಮನಾರ್ಹ ಏರಿಳಿತ ಕಾಣಬಹುದಾದರೂ ಅಧಿಕ ಸಂಖ್ಯೆಯ ಜನರ ಅಭಿರುಚಿಗಳಲ್ಲಿನ ಏರಿಳಿತ ಅತ್ಯಲ್ಪವಾಗಿರುವುದು ಬಲು ಕುತೂಹಲಕಾರಿ. ಗ್ರಾಹಕರ ಒಟ್ಟು ಅಭಿರುಚಿಯ ಅಧ್ಯಯನ ಮಾರುಕಟ್ಟೆ ಸಂಶೋಧನೆಯ ಬಲು ಮುಖ್ಯ ವಿಭಾಗ. ಈ ಒಟ್ಟನ್ನು ಅರಿಯಲು ಒಬ್ಬೊಬ್ಬ ಗ್ರಾಹಕನನ್ನೂ ಸಂದರ್ಶಿಸುವುದು ಅಗತ್ಯವಿಲ್ಲ. ಒಬ್ಬ ಸಂಶೋಧಕ ಗ್ರಾಹಕರ ಒಟ್ಟು ಸಂಖ್ಯೆಯ ಅಲ್ಪಾಂಶದ ಅಭಿರುಚಿಗಳನ್ನು ವಿಶ್ಲೇಷಿಸಿ ಮಾರುಕಟ್ಟೆಯ ಪ್ರವೃತ್ತಿಗಳನ್ನು ಕುರಿತ ತನ್ನ ತೀರ್ಮಾನಗಳನ್ನು ಪಡೆಯಬಹುದು ಎನ್ನುವುದೊಂದು ಸಂಖ್ಯಾಕಲನವಿಜ್ಞಾನದ ಸಾಧಿತ ಅಭಿಗೃಹೀತ (ಅಸಂಪ್ಷನ್).

ಪರಿಶೀಲನೆಯಲ್ಲಿರುವ ಕೈಗಾರಿಕೆ ಒಂದು ಏಕಸ್ವಾಮ್ಯವಾಗಿದ್ದರೆ (ಮನಾಪಲಿ) ಸಂಖ್ಯಾಕಲನವಿಜ್ಞಾನದ ವಿಧಾನಗಳ ಮೂಲಕ ಪಡೆದ ದತ್ತಾಂಶಗಳಿರುವ ತೀರ್ಮಾನಗಳನ್ನು ಪಡೆದರೆ ಸಾಕು. ಹಾಗಲ್ಲದೇ ಆ ಕೈಗಾರಿಕೆ ಸ್ಪರ್ಧೆಯನ್ನು ಎದುರಿಸುವುದಾದಲ್ಲಿ ಸ್ವಂತ ಮಾರಾಟಗಳ ಮೇಲೆ ಸ್ಪರ್ಧಿಯ ಮಾರಾಟ ಆಯಕಟ್ಟುಗಳ ಪರಿಣಾಮವನ್ನು ಅಂದಾಜು ಮಾಡುವ ಕಡೆಗೆ ಸಹ ಮಾರುಕಟ್ಟೆ ಸಂಶೋಧನೆಯನ್ನು ತಿರುಗಿಸಲಾಗುತ್ತದೆ. ಈ ಪ್ರಕಾರವಾಗಿ ಪಡೆದ ಮಾಹಿತಿಯನ್ನು ಪರಿಕರ್ಮಗಳ ಸಂಶೋಧನೆಯ ಒಂದು ಶಾಖೆ ಪ್ರಕ್ರಮಗೊಳಿಸುತ್ತದೆ. ಇದಕ್ಕೆ ಕ್ರೀಡಾ ಸಿದ್ಧಾಂತ ಎಂದು ಹೆಸರು.

ಕ್ರೀಡಾ ಸಿದ್ಧಾಂತ ಆವರಿಸಿರುವ ಸಮಸ್ಯೆಗಳ ಸ್ವಭಾವವನ್ನು ವಿವರಿಸಲು ಬಲು ಸರಳವಾದ ಒಂದು ಉದಾಹರಣೆಯನ್ನು ನೀಡಬಹುದು. ಒಬ್ಬನಿಗೆ ನಾಲ್ಕು ನಿರ್ದಿಷ್ಟ ಮಾರಾಟ ಆಯಕಟ್ಟುಗಳು A,B,C,D ಇವೆಯೆಂದೂ ಆತನ ಸ್ಪರ್ಧಿಗೆ ಐದು ನಿರ್ದಿಷ್ಟ ಮಾರಾಟ ಆಯಕಟ್ಟುಗಳು a,b,c,d,e ಇವೆಯೆಂದೂ ಭಾವಿಸೋಣ. ಆತನಿಗೆ ತನ್ನ ಆಯಕಟ್ಟುಗಳನ್ನು ಮಾತ್ರವಲ್ಲ ತನ್ನ ಸ್ಪರ್ಧಿಯ ಆಯಕಟ್ಟುಗಳನ್ನು ಕೂಡ ಮೌಲ್ಯೀಕರಿಸಲು ಬೇಕಾದ ವಿಧಾನ ತಿಳಿದಿದೆ ಎಂದು ಭಾವಿಸೋಣ. ಇವನ್ನು ಉಪಯುಕ್ತ ಮೌಲ್ಯಗಳೆಂದು (ಯುಟಿಲಿಟಿ-ವ್ಯಾಲ್ಯೂಸ್) ಕರೆದು ಹೀಗೆ ನಕ್ಷೀಕರಿಸಬಹುದು.

ಅವನ ಸ್ಪರ್ಧಿಯ ಮಾರಾಟ ಆಯಕಟ್ಟುಗಳು

| ವ್ಯಕ್ತಿ ಮಾರಾಟ ಆಯಕಟ್ಟುಗಳು | a | b | c | d | e |
|---|---|---|---|---|---|
| A | 3 | −2 | −4 | 3 | 6 |
| B | 1 | −4 | 7 | 4 | 2 |
| C | 2 | 1 | 3 | −5 | 0 |
| D | −3 | 3 | 2 | 4 | 1 |

ವ್ಯಕ್ತಿ ಆಯಕಟ್ಟು C ಯನ್ನು ತಳೆದಾಗ ಸ್ಪರ್ಧಿ a ಮತ್ತು e ಆಯಕಟ್ಟುಗಳನ್ನು ತಳೆದರೆ ಆಗ ವ್ಯಕ್ತಿ ಎರಡು ಗುಣಗಳನ್ನು ಗಳಿಸುತ್ತಾನೆ (ಎಂದರೆ, a ಮತ್ತು e ಕೆಳಗೆ C ಯ ಬಲಕ್ಕೆ ಇರುವ ಸಂಖ್ಯೆಗಳನ್ನು ಕೂಡಿಸುವುದರಿಂದ). ವ್ಯಕ್ತಿ ಆಯಕಟ್ಟು Cಯನ್ನೂ ಸ್ಪರ್ಧಿ ಆಯಕಟ್ಟುಗಳು b ಮತ್ತು d ಗಳನ್ನೂ ತಳೆದಾಗ ವ್ಯಕ್ತಿ 4 ಗುಣಗಳನ್ನು ಕಳೆದುಕೊಳ್ಳುತ್ತಾನೆ. ಸ್ಪರ್ಧಿ b ಯನ್ನು ಡಿಗ್ರಿ ಒಂದಕ್ಕೂ e ಯನ್ನು ಡಿಗ್ರಿ ಅರ್ಧಕ್ಕೂ ತಳೆದಾಗ ವ್ಯಕ್ತಿ A ಯನ್ನು ಡಿಗ್ರಿ ಒಂದಕ್ಕೂ Cಯನ್ನು ಡಿಗ್ರಿ ಎರಡಕ್ಕೂ ತಳೆದರೆ ಆಗ ವ್ಯಕ್ತಿಗೆ ಲಾಭ

$$1\,X\,(-2\,X\,1+6\,X\,\frac{1}{2})+2\,X\,(1\,X\,1+0\,X\,\frac{1}{2})=3 \text{ ಗುಣಗಳು.}$$

ಸ್ಪರ್ಧಿಯ ಸಂಯುಕ್ತ ಆಯಕಟ್ಟನ್ನು ಎದುರಿಸಿ ವ್ಯಕ್ತಿ ಆದಷ್ಟು ಹೆಚ್ಚಿನ ಗೆಲ್ಲಂಕವನ್ನು (ಸ್ಕೋರ್) ಪಡೆಯಬೇಕಾದರೆ ವ್ಯಕ್ತಿಯ ಆಯಕಟ್ಟುಗಳ ಸಂಯೋಜನೆಯನ್ನು ಸೂಕ್ತ ಡಿಗ್ರಿಗಳಲ್ಲಿ ಕಂಡುಹಿಡಿಯುವುದು ಕ್ರೀಡಾ ಸಿದ್ಧಾಂತದ ಹಲವಾರು ಮುಖಗಳಲ್ಲಿ ಒಂದು.

ಈ ಗಾತ್ರದ ಒಂದು ಸಮಸ್ಯೆಗೆ ಅತ್ಯುತ್ತಮ ಸಂಯೋಜನೆಯನ್ನು ಕಂಡು ಹಿಡಿಯುವುದು ಸುಲಭದ ಸಂಗತಿ. ಆದರೆ ಬಲು ದೊಡ್ಡ ಸಂಖ್ಯೆಯ ಪ್ರತ್ಯೇಕ ಆಯಕಟ್ಟುಗಳು ಇರುವಾಗ– ವ್ಯಾಪಾರ ಸಮಸ್ಯೆಗಳಲ್ಲಿ ಇದು ತೀರ ಸಾಮಾನ್ಯ ಮನುಷ್ಯನ ಪ್ರತಿಭಾನ ವಿಫಲಗೊಳ್ಳುತ್ತದೆ. ಗಣಿತದ ಹಾಗೂ ಗಣಕವಿಜ್ಞಾನಗಳ ನಾಜೂಕುಗಳು (ಸಾಫಿಸ್ಟಿಕೇಶನ್ಸ್) ಇಲ್ಲಿ ಬರಬೇಕಾಗುವುದು.

ಮೇಲಿನ ವಿವರಣೆಯಿಂದ ತಿಳಿಯುವುದಿಷ್ಟೆ. ಸ್ಪರ್ಧೆ ಇರುವ ವ್ಯವಹಾರಗಳಲ್ಲಿ ಮಾರಾಟಗಳ ಆಯಕಟ್ಟುಗಳನ್ನು ಆಲೇಖಿಸಲು ಕ್ರೀಡಾ ಸಿದ್ಧಾಂತ ಬಲು ಮೌಲ್ಯವಿರುವ

ಒಂದು ಸಾಧನ. ಉದಾಹರಣೆಗೆ ನಿರ್ಯಾತ ಪ್ರವರ್ತನ ಮಂಡಲಿ (ಎಕ್ಸ್‌ಪೋರ್ಟ್ ಪ್ರಮೋಷನ್ ಬೋರ್ಡ್) ಕ್ರೀಡಾ ಸಿದ್ಧಾಂತವನ್ನು ಬುದ್ಧಿವಂತಿಕೆಯಿಂದ ಪ್ರಯುಕ್ತಿಸಿ ತನ್ನ ವಿದೇಶಿ ವಿನಿಮಯ ಗಳಿಕೆಗಳನ್ನು ಹೆಚ್ಚಿಸಿಕೊಳ್ಳಬಹುದು.

ರೇಖೀಯ ಕ್ರಮವಿಧಾಯ (ಲೀನಿಯರ್ ಪ್ರೋಗ್ರಾಮಿಂಗ್); ಅನುಕೂಲತಮ ಗ್ರಹಣದ ಪ್ರಜ್ಞೆ.ಬಹುಮಟ್ಟಿಗೆ ವ್ಯವಸ್ಥಾಪನೆಯ ಗಣಿತೀಯ ದಕ್ಷತೆಯನ್ನು ಅವಲಂಬಿಸಿದೆ. ಪ್ರತಿಭಾನವನ್ನು ಉಲ್ಲಂಘಿಸುವ ಸಾಮಾನ್ಯ ವ್ಯವಸ್ಥಾಪನ ಸಮಸ್ಯೆಗಳು ಇವೆ ಎನ್ನುವುದು ಈ ಕೆಳಗೆ ನಿದರ್ಶಿಸಿರುವ ಸಮಸ್ಯೆಯಿಂದ (ಚಿತ್ರ 27) ಸುವಿದಿತವಾಗುವುದು.




ಚಿತ್ರ 27

ವಿತರಣೆಯ ಒಂದು ಜಾಲವನ್ನು (ಡಿಸ್ಟ್ರಿಬ್ಯೂಷನ್ ನೆಟ್‌ವರ್ಕ್) ಪರಿಶೀಲಿಸೋಣ. A, B ಮತ್ತು C ಎಂಬ ಮೂರು ಉತ್ಪಾದನ ಕೇಂದ್ರಗಳನ್ನು a, b, c, d ಮತ್ತು e ಎಂಬ ಐದು ಚಿಲ್ಲರೆ ಅಂಗಡಿಗಳಿಗೆ ಚಿತ್ರದಲ್ಲಿ ಕಾಣಿಸಿರುವಂತೆ ಜೋಡಿಸಲಾಗಿದೆ. ಪ್ರತಿಯೊಂದು ಅಂಗಡಿಗೂ ಪ್ರತಿದಿನವೂ ಬೇಕಾಗುವ ಸಾಮಗ್ರಿ ಏಕಮಾನಗಳ ಕನಿಷ್ಠ ಒಂದುಂಟು; ಪ್ರತಿಯೊಂದು ಉತ್ಪಾದನ ಕೇಂದ್ರವೂ ದಿನವಹಿ ಪೂರೈಸಬಲ್ಲ ಸಾಮಗ್ರಿ ಏಕಮಾನಗಳ ಪ್ರಮೋಷನ್ ಬೋರ್ಡ್) ಕ್ರೀಡಾ ಸಿದ್ಧಾಂತವನ್ನು ಬುದ್ಧಿವಂತಿಕೆಯಿಂದ ಪ್ರಯುಕ್ತಿಸಿ ತನ್ನ ವಿದೇಶಿ ವಿನಿಮಯ ಗಳಿಕೆಗಳನ್ನು ಹೆಚ್ಚಿಸಿಕೊಳ್ಳಬಹುದು.

ರೇಖೀಯ ಕ್ರಮವಿಧಾಯ (ಲೀನಿಯರ್ ಪ್ರೋಗ್ರಾಮಿಂಗ್); ಅನುಕೂಲತಮ ಗ್ರಹಣದ ಪ್ರಜ್ಞೆ.ಬಹುಮಟ್ಟಿಗೆ ವ್ಯವಸ್ಥಾಪನೆಯ ಗಣಿತೀಯ ದಕ್ಷತೆಯನ್ನು ಅವಲಂಬಿಸಿದೆ. ಪ್ರತಿಭಾನವನ್ನು ಉಲ್ಲಂಘಿಸುವ ಸಾಮಾನ್ಯ ವ್ಯವಸ್ಥಾಪನ ಸಮಸ್ಯೆಗಳು ಇವೆ ಎನ್ನುವುದು ಈ ಕೆಳಗೆ ನಿದರ್ಶಿಸಿರುವ ಸಮಸ್ಯೆಯಿಂದ (ಚಿತ್ರ 27) ಸುವಿದಿತವಾಗುವುದು.

ವಿತರಣೆಯ ಒಂದು ಜಾಲವನ್ನು (ಡಿಸ್ಟ್ರಿಬ್ಯೂಷನ್ ನೆಟ್‌ವರ್ಕ್) ಪರಿಶೀಲಿಸೋಣ. A, B ಮತ್ತು C ಎಂಬ ಮೂರು ಉತ್ಪಾದನ ಕೇಂದ್ರಗಳನ್ನು a, b, c, d ಮತ್ತು e ಎಂಬ ಐದು ಚಿಲ್ಲರೆ ಅಂಗಡಿಗಳಿಗೆ ಚಿತ್ರದಲ್ಲಿ ಕಾಣಿಸಿರುವಂತೆ ಜೋಡಿಸಲಾಗಿದೆ. ಪ್ರತಿಯೊಂದು ಅಂಗಡಿಗೂ ಪ್ರತಿದಿನವೂ ಬೇಕಾಗುವ ಸಾಮಗ್ರಿ ಏಕಮಾನಗಳ ಕನಿಷ್ಠ ಒಂದುಂಟು; ಪ್ರತಿಯೊಂದು ಉತ್ಪಾದನ ಕೇಂದ್ರವೂ ದಿನವಹಿ ಪೂರೈಸಬಲ್ಲ ಸಾಮಗ್ರಿ ಏಕಮಾನಗಳ ಗರಿಷ್ಠ ಒಂದುಂಟು. ಈ ಸನ್ನಿವೇಶವನ್ನು ಕೆಳಗಿನ ನಕ್ಷೆಯಿಂದ ವಿವರಿಸಬಲ್ಲೆವು.

| | | ಚಿಲ್ಲರೆ ಅಂಗಡಿಗಳು | | | | | | |
|---|---|---|---|---|---|---|---|---|
| | | a | b | c | d | e | | |
| ಉತ್ಪಾದನ ಕೇಂದ್ರಗಳು | A | ಸಂಖ್ಯಾ ವೆಚ್ಚ/ ಏಕಮಾನ | ಸಂಖ್ಯಾ ವೆಚ್ಚ/ ಏಕಮಾನ | – | – | – | P | ಪೂರೈಸಲು ಸಾಧ್ಯವಾಗುವ ಏಕಮಾನಗಳ ಗರಿಷ್ಠ |
| | B | – | – | – | – | – | Q | |
| | C | – | – | – | – | ಸಂಖ್ಯಾ ವೆಚ್ಚ/ ಏಕಮಾನ | R | |
| | | m | n | p | q | r | | |
| | | ಅಂಗಡಿಗಳಿಗೆ ಬೇಕಾಗುವ ಏಕಮಾನಗಳು ಕನಿಷ್ಠ | | | | | | |

ಈ ನಕ್ಷೆಯಲ್ಲಿ ಒಂದೊಂದು ಪೆಟ್ಟಿಗೆಗೂ ಎರಡು ಸಂಖ್ಯೆಗಳಿವೆ. ಮೇಲಿನದು ಅದರ ಎಡಕ್ಕಿರುವ ಉತ್ಪಾದನ ಕೇಂದ್ರದಿಂದ ಅದರ ಮೇಲಕ್ಕಿರುವ ಚಿಲ್ಲರೆ ಅಂಗಡಿಗೆ ಸಾಗಿಸಬೇಕಾದ ಏಕಮಾನಗಳ ಸಂಖ್ಯೆಯನ್ನು ಕೊಡುತ್ತದೆ. ಪೆಟ್ಟಿಗೆಯ ತಳದಲ್ಲಿರುವ ಸಂಖ್ಯೆ ಸಾಗಣೆಯ ಏಕಮಾನಕ್ಕೆ ಸಂವಾದೀ ವೆಚ್ಚವನ್ನು ಕೊಡುತ್ತದೆ. ಪ್ರತಿಯೊಂದು ಪೆಟ್ಟಿಗೆಯ ಮೇಲು ಸಂಖ್ಯೆಯನ್ನು ಈ ಕೆಳಗಿನ ರೀತಿಯಲ್ಲಿ ಆಯುವುದು ಸಾಮಗ್ರಿಗಳನ್ನು ವಿತರಿಸಲು ಇರುವ ದಕ್ಷತಮ ವಿಧಾನ;

1. ಚಿತ್ರದಲ್ಲಿ ಕಾಣಿಸಿರುವ ಪ್ರತಿಯೊಂದು ಚಿಲ್ಲರೆ ಅಂಗಡಿಯ ಕೆಳಗಿನ ಎಲ್ಲ ಪೆಟ್ಟಿಗೆಗಳಲ್ಲಿನ ಮೇಲು ಸಂಖ್ಯೆಗಳ ಮೊತ್ತ ಅದೇ ಅಂಗಡಿಗೆ ಬೇಕಾಗುವ ಸಂವಾದೀ ಏಕಮಾನಗಳ ಕನಿಷ್ಠ ಸಂಖ್ಯೆಗಿಂತ ದೊಡ್ಡದು.

2. ಚಿತ್ರದಲ್ಲಿ ಕಾಣಿಸಿರುವ ಉತ್ಪಾದನಕೇಂದ್ರದ ನೇರದ ಎಲ್ಲ ಪೆಟ್ಟಿಗೆಗಳಲ್ಲಿನ ಮೇಲು ಸಂಖ್ಯೆಗಳ ಮೊತ್ತ ಉತ್ಪಾದನ ಕೇಂದ್ರ ಪೂರೈಸಬಲ್ಲ ಸಂವಾದೀ ಏಕಮಾನಗಳ ಗರಿಷ್ಠ ಸಂಖ್ಯೆಗಿಂತ ಕಡಿಮೆ.

3. ಸಾಗಣೆಯ ಒಟ್ಟು ವೆಚ್ಚ ಕನಿಷ್ಠ. ಎಂದರೆ, ಹದಿನೈದು, ಪೆಟ್ಟಿಗೆಗಳಲ್ಲಿ ಒಂದೊಂದಕ್ಕೂ ಪಡೆದ ಮೇಲು ಸಂಖ್ಯೆ ಮತ್ತು ತಳ ಸಂಖ್ಯೆಯ ಗುಣಲಬ್ಧದ ಒಟ್ಟು ಮೊತ್ತಕ್ಕೆ ಸಾಧ್ಯವಾಗುವಷ್ಟೂ ಕಡಿಮೆ ಬೆಲೆ ಇರಬೇಕು.

ಇದು ರೇಖೀಯ ಕ್ರಮವಿಧಾಯದ ಸಮಸ್ಯೆಯ ಒಂದು ವಿಶೇಷ ಪರಿಸ್ಥಿತಿ.

ಅತ್ಯಂತ ದಕ್ಷನಾದ ಒಬ್ಬ ವ್ಯವಸ್ಥಾಪಕನ ಪ್ರತಿಭಾನವೂ ಈ ಸಮಸ್ಯೆಗೆ ಉತ್ತರ ಕೊಡುವಲ್ಲಿ ವಿಫಲವಾಗುವುದು. ಇದು ಆಶ್ಚರ್ಯವಲ್ಲ. ಏಕೆಂದರೆ ಅತ್ಯಂತ ದಕ್ಷವಾದ ಒಂದು ಗಣಿತೀಯ ವಿಧಾನವೂ ವಿತರಣೆಯ ಒಂದು ದಕ್ಷ ಏರ್ಪಾಡನ್ನು ಪಡೆಯುವ ಮೊದಲು ಕೂಡಿಸುವುದು ಗುಣಿಸುವುದು ಇವೇ ಮೊದಲಾದ ಸಾವಿರಾರು ಅಂಕಗಣಿತೀಯ ಪರಿಕರ್ಮಗಳನ್ನು ಮಾಡಿರಬೇಕಾಗುತ್ತದೆ. ಒಬ್ಬ ವ್ಯವಸ್ಥಾಪಕ ಸಾಧ್ಯವಾಗುವ ಪ್ರತಿಯೊಂದು ಸಂಯೋಜನೆಯನ್ನೂ ತನ್ನ ಕೈ ಚಳಕದಿಂದ ಮಾಡುತ್ತಾನೆಂದು ಭಾವಿಸಿದರೆ ಅತ್ಯಂತ ದಕ್ಷವಾದ ಸಂಯೋಜನೆಯನ್ನು ಪಡೆಯಲು ಆತನ ಜೀವಮಾನಕಾಲವೂ ಸಾಲದಾಗುವುದು. ಆದ್ದರಿಂದ ನಮಗೆ ಗಣಕಗಳ ಅವಲಂಬನೆ ಅನಿವಾರ್ಯ.

ಉಪಯೋಗದಲ್ಲಿರುವ ರೇಖೀಯ ಕ್ರಮವಿಧಾಯದ ವಿಧಾನಗಳ ಹರವಿನೊಳಗೆ ಈ ಹದಿನೈದು ಪೆಟ್ಟಿಗೆಗಳ ಸಮಸ್ಯೆ ಕೂಡ ಕ್ಷುದ್ರ ಎಂದು ಪರಿಗಣಿಸಲ್ಪಡುತ್ತದೆ. ಆಧುನಿಕ ಗಣಕ ಕ್ರಮವಿಧಿಗಳು ಇಂಥ ಹಲವಾರು ಸಾವಿರ ಪೆಟ್ಟಿಗೆಗಳಿರುವ ಸಮಸ್ಯೆಗಳನ್ನು ನಿಭಾಯಿಸಬಲ್ಲವು. ಈ ಸಮಸ್ಯೆಗಳಲ್ಲಿ ಎದುರಾಗುವ ಸಂಯೋಜನೆಗಳ ಸಂಖ್ಯೆ, ವಿಶ್ವದಲ್ಲಿ ಇರಬಹುದೆಂದು ಐನ್‌ಸ್ಟೈನ್ ಅಂದಾಜು ಮಾಡಿದ ಪರಮಾಣುಗಳ ಒಟ್ಟು ಸಂಖ್ಯೆಯನ್ನು ಬಹುವಾಗಿ ಮೀರಬಹುದು !

ಗಣಕಸಜ್ಜಿತ ರಾಷ್ಟ್ರೀಯ ಯೋಜನೆ (ಕಂಪ್ಯೂಟರ್ ಏಡೆಡ್ ನ್ಯಾಷನಲ್ ಪ್ಲಾನಿಂಗ್); ಲಭ್ಯ ಮೂಲಗಳ, ಕಾಲ ಹಾಗೂ ಜನಸಾಮರ್ಥ್ಯದ ಬಳಕೆಯ ಯೋಜನೆ ಮತ್ತು ಯೋಜನೆಯ ಇಡೀ ಸಂಕೀರ್ಣ (ಕಾಂಪ್ಲೆಕ್ಸ್) ಅವಲಂಬಿಸಿರುವುದು ವ್ಯವಸ್ಥಾಗ್ರಹಣದ ಪ್ರಜ್ಞೆಯನ್ನು. ಮಧ್ಯಮಗಾತ್ರದ ಒಂದು ಕೈಗಾರಿಕೆಯಿಂದ ತೊಡಗಿ ಒಂದು ರಾಜ್ಯದ ಅಥವಾ ರಾಷ್ಟ್ರದ ಆರ್ಥಿಕತೆಯನ್ನು ಯೋಜಿಸುವವರೆಗಿನ ತೀರ ವ್ಯಾಪಕವಾದ ಮತ್ತು ಭಿನ್ನವಾದ ಆರ್ಥಿಕತೆಯ ಮಟ್ಟಗಳಲ್ಲೂ ಯೋಜನೆಗೆ ವ್ಯವಸ್ಥಾಗ್ರಹಣದೃಷ್ಟಿ (ಅಪ್ರೋಚ್) ಪರಿಣಾಮಕಾರಿ ಎಂದು ತಿಳಿದುಬಂದಿದೆ. ಆದ್ದರಿಂದ ಒಂದು ರಾಷ್ಟ್ರದ ಆರ್ಥಿಕತೆಯನ್ನು ಯೋಜಿಸುವಲ್ಲಿ ಈ ದೃಷ್ಟಿ ಹೇಗಿರುವುದು ಎಂಬುದನ್ನು ಇಲ್ಲಿ ನಿದರ್ಶನವಾಗಿ ಆಯಲಾಗಿದೆ.

ರಾಷ್ಟ್ರೀಯ ಯೋಜನೆಯನ್ನು ತಯಾರಿಸುವಾಗ ಅನುಕೂಲತಮ ಆಯಕಟ್ಟುಗಳನ್ನು (ಆಪ್ಟಿಮಲ್ ಸ್ಟ್ರಾಟಜೀಸ್) ಶೋಧಿಸುವುದು ಸರಿಯಷ್ಟೆ ಹೀಗೆ ಮಾಡುವಾಗ ಯೋಜನಾ ಪ್ರಕ್ರಮದ ಪ್ರತಿಯೊಂದು ಘಟ್ಟದಲ್ಲೂ ಆಯಾ ಸಮಸ್ಯೆಗಳನ್ನು ಕುರಿತ ಸಾಂಖ್ಯಿಕ ದತ್ತಾಂಶಗಳ ಆಧಾರದ ಮೇಲೆ ನಿರ್ಧಾರಣೆಗಳನ್ನು ತಳೆದರೆ ಈ ಶೋಧನೆ ಕಡಿಮೆ ಶ್ರಮದ್ದಾದೀತು. ಇಂಥ ದತ್ತಾಂಶಗಳು ಸಂಕೀರ್ಣತೆಯ (ಕಾಂಪ್ಲೆಕ್ಸಿಟಿ) ಎಲ್ಲ ಮಟ್ಟಗಳಲ್ಲೂ ಬೇಕಾಗುತ್ತವೆ; ಇದರ ಪರಿಮಿತಿ (ಲಿಮಿಟ್) ಎಂದರೆ ರಾಷ್ಟ್ರದೊಳಗಿನ ಹಲವಾರು ಕೈಗಾರಿಕಾ ಹಾಗೂ ಕೃಷಿ ವಿಭಾಗಗಳ ಅಂತರಾವಲಂಬನವನ್ನು ಕುರಿತ ರಾಶ್ಯಾತ್ಮಕ ಮಾಹಿತಿ. ಈ ಅಂತರಾವಲಂಬನ ಜಾಲದ ಅರಿವು ಮತ್ತು ಅದರ ವಿಶ್ಲೇಷಣೆ ವ್ಯವಸ್ಥಾದೃಷ್ಟಿಯ (ಸಿಸ್ಟಮ್ಸ್ ಅಪ್ರೋಚ್) ಸೀಮೆಯೊಳಗೆ ಉಂಟು.

ರಾಷ್ಟ್ರದ ಮಟ್ಟದಲ್ಲಿ ಈ ಜಾಲ ಅನಿವಾರಣೀಯವೆನ್ನುವಷ್ಟು ಸಂಕೀರ್ಣ ಎಂದು ವ್ಯವಹಾರದಲ್ಲಿ ತಿಳಿದು ಬಂದಿದೆ. ಆದ್ದರಿಂದ ಈ ಜಾಲಗಳನ್ನು ಸೂಚಿಸಲು ಕೆಲವು ಸಾಧನಗಳನ್ನು ಬಳಸಬೇಕಾಗುವುದು. ಬಲು ಪರಿಷ್ಕಾರವಾದ ಇಂಥ ಒಂದು ಸಾಧನವೆಂದರೆ ವ್ಯವಸ್ಥೆಯ ಮಾತೃಕಾ ಪ್ರಾತಿನಿಧ್ಯ (ಮ್ಯಾಟ್ರಿಕ್ಸ್ ರೆಪ್ರೆಸೆಂಟೇಷನ್).

ಇಲ್ಲಿ ವಲಯಗಳ (ಎಂದರೆ ಸಂಪಾತ ಬಿಂದುಗಳು–ನೋಡ್ಸ್) ಹೆಸರುಗಳನ್ನು ಎಡದಿಂದ ಬಲಕ್ಕೆ ಅನುಭೋಗೀವಲಯಗಳೆಂದೂ ಮೇಲಿನಿಂದ ಕೆಳಕ್ಕೆ ಉತ್ಪಾದಕ ವಲಯಗಳೆಂದೂ ಮುಂದಿನ ಕೋಷ್ಟಕದಲ್ಲಿ ಕಾಣಿಸಿರುವಂತೆ ಬರೆಯಲಾಗುವುದು.

ಕೋಷ್ಟಕ; ಭಾರತೀಯ ಆರ್ಥಿಕತಾ ಸಮೀಚೀನ ದೃಷ್ಟಿಯಲ್ಲಿ (ಪರ್ಸ್ ಪೆಕ್ಟಿವ್) 1970–71 ನೆಯ ಸಾಲಿಗೆ ಅಂತರ ಆರ್ಥಿಕತಾ ಹರಿವುಗಳು (1960–61 ರಲ್ಲಿದ್ದ ಉತ್ಪಾದಕ ಬೆಲೆಗಳಲ್ಲಿ ಮತ್ತು ಮಿಲಿಯನ್ ರೂಪಾಯಿಗಳಲ್ಲಿ)

6. ವಿದೇಶೀವಿನಿಮಯದ ಗಳಿಕೆಯನ್ನು ಗರಿಷ್ಠಗೊಳಿಸಲು ಅನುಕೂಲವಾಗುವಂತೆ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಅತ್ಯುತ್ತಮ ಸ್ಪರ್ಧಾ ಆಯಕಟ್ಟುಗಳನ್ನು ಯೋಜಿಸುವುದು.

7. ಸಂಶೋಧನೆಗೆ ಹಾಗೂ ಅಭಿವೃದ್ಧಿಗೆ ಮನುಷ್ಯಸಾಮರ್ಥ್ಯವನ್ನೂ ಬಂಡವಾಳವನ್ನೂ ನಿಗದಿ ಮಾಡುವುದು.

8. ದತ್ತ ಸಂಖ್ಯೆಯ ಸಂಚಾರೀ ವಿಕ್ರಯಾಧಿಕಾರಿಗಳು ದತ್ತಸಂಖ್ಯೆಯ ಗಿರಾಕಿಗಳನ್ನು ಭೇಟಿ ಮಾಡಲು ದಕ್ಷವಿಧಾನವನ್ನು ಅಳವಡಿಸುವುದು.

| ಅನುಭೋಗೀ ವಲಯಗಳು / ಉತ್ಪಾದಕ ವಲಯಗಳು | ರಚನೆ | ವಿದ್ಯುತ್ ಸಲಕರಣೆ | ಅವಿದ್ಯುತ್ ಸಲಕರಣೆ | ಸಾಗಾಣಿಕೆಯ ಸಲಕರಣೆ | ಲೋಹ ಉತ್ಪಾದನೆಗಳು | ಕಬ್ಬಿಣ ಮತ್ತು ಉಕ್ಕು | ಕಬ್ಬಿಣದ ಅದಿರು | ಸಿಮೆಂಟ್ | ಕಬ್ಬಿಣೇತರ ಲೋಹಗಳು | ಇತರ ಖನಿಜಗಳು |
|---|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 | 10 |
| 1 ರಚನೆ | | | | | | | | | | |
| 2 ವಿದ್ಯುತ್ ಸಲಕರಣೆ | | 435 | 53 | 24 | | | | | | |
| 3 ಅವಿದ್ಯುತ್ ಸಲಕರಣೆ | | 24 | 368 | 32 | | | 8 | | | 22 |
| 4 ಸಾಗಾಣಿಕೆಯ ಸಲಕರಣೆ | | | 29 | 1043 | | | | | | |
| 5 ಲೋಹ ಉತ್ಪಾದನೆಗಳು | 1175 | 38 | 38 | 8 | 7 | 18 | | | 10 | |
| 6 ಕಬ್ಬಿಣ ಮತ್ತು ಉಕ್ಕು | 4242 | 287 | 671 | 1058 | 1593 | 2105 | | 10 | 43 | |
| 7 ಕಬ್ಬಿಣದ ಅದಿರು | | | | | | 120 | | | | |
| 8 ಸಿಮೆಂಟ್ | 1632 | | | | | | | 43 | | |
| 9 ಕಬ್ಬಿಣೇತರ ಲೋಹಗಳು | 294 | 851 | 100 | 178 | 686 | 168 | | | 824 | |
| 10 ಇತರ ಖನಿಜಗಳು | | 5 | | | | 102 | | 185 | 102 | |

ಒಂದು ಉತ್ಪಾದನಾ ವಲಯದಿಂದ ಒಂದು ಅನುಭೋಗೀವಲಯಕ್ಕೆ ಇರುವ ಬೇಡಿಕೆಯ ಹರಿವಿನ ಪರಿಮಾಣವನ್ನು ಆ ಉತ್ಪಾದನಾ ವಲಯದ ನೇರಕ್ಕೆ, ಆದರೆ ಆ ಅನುಭೋಗೀವಲಯದ ಕೆಳಗೆ ಬರೆಯಲಾಗುವುದು. ವ್ಯವಸ್ಥೆಯ ಹೆಚ್ಚಿನ ವಿಶ್ಲೇಷಣೆಯಲ್ಲಿ ಈ ರೀತಿ ತಯಾರಿಸಲಾದ ಮಾತೃಕೆ ಪ್ರಾರಂಭದ ಬಿಂದು: ಮತ್ತು ಗಣಕಕ್ಕೆ ಉಣಿಸಲು ಇದು ಆದರ್ಶಪ್ರಾಯವಾಗಿದೆ.

1970ನೆಯ ಸಾಲಿಗೆ ಯೋಜನಾಯೋಗದ ಸಮೀಚೀನ ಯೋಜನಾ ವಿಭಾಗ (ಪರ್ಸ್‌ಪೆಕ್ಟಿವ್ ಪ್ಲಾನಿಂಗ್ ಡಿವಿಷನ್) ತಯಾರಿಸಿದ ಅಂತರಕೈಗಾರಿಕಾ ಹರಿವು ಮಾತೃಕೆಯ ಒಂದು ಅಂಶವನ್ನು ಕೋಷ್ಟಕ ತೋರಿಸುತ್ತದೆ. ಸಮೀಚೀನ ಯೋಜನಾ ವಿಭಾಗ ಪರಿಶೀಲಿಸಿದ ವಾಸ್ತವಿಕ ಮಾತೃಕೆ ಹೆಚ್ಚು ಸಂಕೀರ್ಣ. ಅಲ್ಲದೇ ಇದು ಭಾರತೀಯ ಆರ್ಥಿಕತೆಯ ಎಪ್ಪತ್ತರಷ್ಟು ವಲಯಗಳನ್ನು ಒಳಗೊಂಡಿದೆ. ಈ ಮಾತೃಕೆಯ ವಿಶ್ಲೇಷಣೆ ಅದೆಷ್ಟು ಜಟಿಲವಾಗಿದೆ ಎಂದರೆ ಇದನ್ನು ಹೆಚ್ಚು ನಾಜೂಕಾದ ಗಣಕಗಳು ಮಾತ್ರ ನಿರ್ವಹಿಸಬಲ್ಲವು.

ಗಣಕದಲ್ಲಿ ವ್ಯವಸ್ಥಾ ವಿಶ್ಲೇಷಣೆಯನ್ನು ಒಬ್ಬಾತ ಮಾಡುವಾಗ ಅವನು ಪರ್ಟ್ (ಪ್ರೋಗ್ರಾಮ್ ಇವ್ಯಾಲ್ಯುಯೇಷನ್ ಅಂಡ್ ರಿವ್ಯೂ ಟೆಕ್ನಿಕ್‌ಎನ್ನುವುದರ ಪ್ರಥಮಾಕ್ಷರ ಸಂಕಲಿತ ರೂಪ), ಕಾಲ ಶ್ರೇಣಿ ವಿಶ್ಲೇಷಣೆ (ಟೈಂ ಸೀರೀಸ್ ಅನಾಲಿಸಿಸ್), ರೇಖೀಯ ಕ್ರಮ ವಿಧಾಯ ಹಾಗೂ ಗತಿ ವೈಜ್ಞಾನಿಕ ಕ್ರಮ ವಿಧಾಯ (ಡೈನಮಿಕ್ ಪ್ರೋಗ್ರಾಮಿಂಗ್)– ಇವೇ ಮುಂತಾದ ಪರಿಕರ್ಮಗಳ ಸಂಶೋಧನೆಯ ವಿಧಾನಗಳನ್ನು ಬಳಸಿಕೊಳ್ಳುತ್ತಾನೆ.

ಇತರ ಅನ್ವಯಗಳು: ಪರಿಕರ್ಮಗಳ ಸಂಶೋಧನೆಯ ಅನ್ವಯಗಳು ಅಸಂಖ್ಯಾತವಾಗಿವೆ. ಪ್ರಾತಿನಿಧ್ಯಾತ್ಮಕವಾದ ಒಂದು ಸಣ್ಣ ಯಾದಿಯನ್ನು ಇಲ್ಲಿ ಬರೆದಿದೆ.

1. ವಾಹನ ನಿಬಿಡತೆಯನ್ನು ಕಡಿಮೆ ಮಾಡುವಂಥ ಸ್ವಯಂಚಲಿ ವಾಹನ ಸಂಖ್ಯೆಗಳ ಕಾಲವನ್ನೂ ಸರಣಿಯನ್ನೂ ನಿರ್ಧರಿಸುವುದು.

2. ದೊಡ್ಡದಾದ ಬಸ್ ವ್ಯವಸ್ಥೆ ಅಥವಾ ರೈಲು ವ್ಯವಸ್ಥೆಯಲ್ಲಿ ಹಾದಿಗಳನ್ನು ನಿರ್ಧರಿಸುವುದು ಮತ್ತು ಬಂಡಿಗಳ ಹಾಗೂ ಚಾಲಕ ವರ್ಗದ ಯಾದಿಗಳನ್ನು ಸಿದ್ಧಪಡಿಸುವುದು.

3. ಬೇಡಿಕೆಗಳು, ಬೆಲೆಗಳು ಮೊದಲಾದವುಗಳನ್ನು ಮುನ್ನುಡಿಯುವುದು. ಹವೆಯನ್ನು ಮುನ್ನುಡಿಯುವುದು.

4. ಅದಿರುಗಳನ್ನು ನಿರ್ವಹಿಸುವ ಬಂದರುಗಳಲ್ಲಿ ಹಡಗುಗಳನ್ನು ಖಾಲಿ ಮಾಡುವ ಸೂಚಿಯನ್ನು ತಯಾರಿಸುವುದು.

5. ತಪಶೀಲುಪಟ್ಟಿಯ ನಿಯಂತ್ರಣ, ಉತ್ಪಾದನ ನಿಯಂತ್ರಣ, ಇತ್ಯಾದಿ.

9. ಶಾಲೆ ಕಾಲೇಜುಗಳಿಗೆ ಅತ್ಯಂತ ಸಮರ್ಪಕವಾದ ವೇಳಾಪಟ್ಟಿಗಳನ್ನು ತಯಾರು ಮಾಡುವುದು.

10. ಯುದ್ಧದ ಕ್ರೀಡೆಗಳನ್ನು ಗಣಕದಲ್ಲಿ ಅನುಕರಿಸುವುದು.

11. ರಾಷ್ಟ್ರದ ಗಡಿರೇಖೆಯ ಉದ್ದಕ್ಕೂ ಶತ್ರು ವಿಮಾನಗಳನ್ನು ಗರಿಷ್ಠ ಸಂಖ್ಯೆಯಲ್ಲಿ ಪತ್ತೆ ಹಚ್ಚಲು ಅನುಕೂಲವಾಗುವಂತೆ ರಾಡಾರ್ ಉಪಕರಣಗಳನ್ನು ನೆಲೆಗೊಳಿಸುವುದು.

12. ಯುದ್ಧ ರಂಗದ ಮುನ್ನೆಲೆಗೆ ಆಹಾರ ಮತ್ತು ಆಯುಧಗಳನ್ನು ಸಾಗಿಸುವಾಗ ಅವು ನಾಶಗೊಳ್ಳಬಹುದಾದ ಸಂಭಾವ್ಯತೆ ಕನಿಷ್ಠವಾಗಿರುವಂತೆ ಆ ಪದಾರ್ಥಗಳ ಗುಣವನ್ನೂ ಸಾಗಾಣಿಕೆಯ ಪಥವನ್ನೂ ನಿರ್ಧರಿಸುವುದು.

13. ಒಂದು ರಾಸಾಯನಿಕ ಸಂಯೋಜನೆಯಲ್ಲಿ ಘಟಕಗಳ ಅನುಕೂಲತಮ ಮಿಶ್ರವನ್ನು ನಿರ್ಧರಿಸುವುದು.

14. ಪ್ರದೇಶವಾರು ಇಲ್ಲವೇ ರಾಷ್ಟ್ರಮಟ್ಟದಲ್ಲಿ ಜಲವಿದ್ಯುತ್, ಉಷ್ಣವಿದ್ಯುತ್, ಮತ್ತು ನ್ಯೂಕ್ಲಿಯರ್ ವಿದ್ಯುತ್ ಕೇಂದ್ರಗಳ ಅನುಕೂಲತಮ ಮಿಶ್ರವನ್ನು ನಿರ್ಧರಿಸುವುದು.

ಮೇಲೆ ನಮೂದಿಸಿರುವ ಪ್ರತಿಯೊಂದು ಸಮಸ್ಯೆಯೂ ಹತ್ತಾರು, ಇಲ್ಲವೇ ನೂರಾರಷ್ಟು ಕೂಡ, ಚರಗಳನ್ನೂ ಪ್ರತಿಬಂಧಗಳನ್ನೂ ಒಳಗೊಳ್ಳುತ್ತದೆ. ಪರಿಕರ್ಮಗಳ ಸಂಶೋಧನೆಯಲ್ಲಿನ ಸರಳತಮ ಪ್ರಾಯೋಗಿಕ ಪ್ರಶ್ನೆಗಳನ್ನು ಬಿಡಿಸುವುದು ಕೂಡ ಒಬ್ಬ ಮನುಷ್ಯನ ಸಾಮರ್ಥ್ಯಕ್ಕೆ ಮೀರಿದ್ದು. ಅವನ್ನು ಬಿಡಿಸಲು ಇರುವ ಒಂದೇ ಒಂದು ವಿಧಾನವೆಂದರೆ ತೀವ್ರ ವೇಗದ ಅಂಕಗಣಕಗಳ ಉಪಯೋಗ. ಈ ಕಾರಣದಿಂದಾಗಿ ಪರಿಕರ್ಮಗಳ ಸಂಶೋಧನೆ, ಸಾಂಖ್ಯಿಕ ವಿಶ್ಲೇಷಣೆ ಮತ್ತು ಗಣಕ ವಿಜ್ಞಾನವನ್ನು ಒಂದೇ ವಿಜ್ಞಾನ ಪ್ರಕಾರದ ವಿವಿಧ ಮುಖಗಳೆಂದು ಭಾವಿಸಬೇಕಾಗುತ್ತದೆ.

**ಗಣಕಯುಗದಲ್ಲಿ ಭಾರತ:** ಗಣಕವನ್ನು ಕುರಿತ ವಿಜ್ಞಾನ ಹಾಗೂ ತಂತ್ರವಿಜ್ಞಾನದಲ್ಲಿ ಚಟುವಟಿಕೆಯನ್ನು ಪ್ರಾರಂಭಿಸಿದ ಮೊದಲ ಕೆಲವು ರಾಷ್ಟ್ರಗಳಲ್ಲಿ ಭಾರತವು ಒಂದು. ಅಂಕತರ್ಕ ಉಪಭಾಗಗಳನ್ನು (ಡಿಜಿಟಲ್ ಲಾಜಿಕ್ ಸಬ್ ಅಸೆಂಬ್ಲೀಸ್) ನಿರ್ಮಿಸುವ ದಿಶೆಯಲ್ಲಿ ಸ್ವಲ್ಪ ಪೂರ್ವಭಾವೀ ಪ್ರಯತ್ನಗಳನ್ನು ಮಾಡಿದ ಬಳಿಕ 1954ರ ಕೊನೆಯ ಹೊತ್ತಿಗೆ ಪೂರ್ಣ ಪ್ರಮಾಣದ, ಸಾರ್ವತ್ರಿಕ ಉದ್ದೇಶದ, ಒಂದು ಎಲೆಕ್ಟ್ರಾನಿಕ್ ಅಂಕಗಣಕವನ್ನು ಮುಂಬಯಿಯ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯಲ್ಲಿ ತಯಾರಿಸಬೇಕೆಂಬ ನಿರ್ಧಾರವನ್ನು ತಳೆಯಲಾಯಿತು. ಈ ಮೊದಲ ಪರೀಕ್ಷಣ ಯಂತ್ರದ ಆಲೇಖ್ಯ ಹಾಗೂ ರಚನೆಯಲ್ಲಿ ತೊಡಗಿದ್ದು 1955ರ ತರುಣದಲ್ಲಿ. ಅಕ್ಟೋಬರ್ 1956ರ ವೇಳೆಗೆ ಇದು ಕಾರ್ಯಶೀಲವಾಗಿತ್ತು. ಪೂರ್ಣಪ್ರಮಾಣದ ಯಂತ್ರದ ಆಲೇಖ್ಯವನ್ನು ಸಿದ್ಧಪಡಿಸಿದ್ದು 1957ರ ಪ್ರಾರಂಭದಲ್ಲಿ.

1959ರ ಪ್ರಾರಂಭದಲ್ಲಿ ಇದರ ರಚನೆ ಪೂರ್ಣಗೊಂಡಿತ್ತು ಇದನ್ನು ಪರಿಪೂರ್ಣ ಪರೀಕ್ಷೆಗೆ ಒಳಪಡಿಸಿದ ಬಳಿಕ ಭಾರತದಲ್ಲಿ ನಿರ್ಮಿಸಲಾದ ಪ್ರಥಮ ಗಣಕವನ್ನು ಫೆಬ್ರುವರಿ 1960ರಲ್ಲಿ ಬಿಡುಗಡೆ ಮಾಡಲಾಯಿತು. ಇದರ ಹೆಸರು ಟಿಫ್ರಾಕ್ (TIFRAC).



**ಭಾರತ ನಿರ್ಮಿಸಿದ ಮೊತ್ತಮೊದಲ ಗಣಕ –TIFRAC**

ಪ್ರಪಂಚದಲ್ಲಿ ಗಣಕ ತಂತ್ರವಿಜ್ಞಾನದ ಕಲೆಯ ಸ್ಥಿತಿಯೊಡನೆ ಭಾರತದ ಪ್ರಯತ್ನವನ್ನು ಹೋಲಿಸುವಾಗ ಭಾರತ ಈ ತಂತ್ರವಿಜ್ಞಾನದಲ್ಲಿ ಅಷ್ಟೇನೂ ಹಿಂದೆ ಉಳಿದಿಲ್ಲ ಎಂದು ವೇದ್ಯವಾಗುವುದು. 1945–55ರ ದಶಕದಲ್ಲಿ ನಿರ್ವಾತ ನಳಿಕೆಗಳು, ಅರೆವಾಹಕ ಡಯೋಡುಗಳು ಮತ್ತು ಫೆರೈಟ್ ಕೋಶಜ್ಞಾಪಕಗಳು ಇವುಗಳಿಂದ ರಚಿಸಲಾದ



**LDC –3600 ಗಣಕ KANNADA ಎಂಬ ಪದವನ್ನು ಉಚ್ಚರಿಸಿದಾಗ ಮೂಡುವ ವಾಗ್ರೋಹಿತಲೇಖ**

ಗಣಕಗಳ ಮೊದಲ ತಲೆಮಾರನ್ನು ಪರಿಪೂರ್ಣ ಸ್ಥಿತಿಗೆ ತರಲಾಯಿತು. IBM–701 ಯಂತ್ರಗಳ ಉತ್ಪಾದನೆಯೊಡನೆ 1953ರಲ್ಲಿ ಗಣಕಗಳ ತಯಾರಿಕೆ (ಮ್ಯಾನ್ಯುಫಾಕ್ಚರ್) ಆರಂಭವಾಯಿತು. ಈ ಯಂತ್ರಗಳೊಡನೆ ಟಿಫ್ರಾಕನ್ನು ಯಶಸ್ವಿಯಾಗಿ ಹೋಲಿಸಬಹುದು.

1960ರಿಂದ 1964ರವರೆಗೆ ನಾಲ್ಕು ವರ್ಷಗಳ ಕಾಲ ಟಿಫ್ರಾಕ್ ಕಾರ್ಯೋದ್ಯುಕ್ತವಾಗಿತ್ತು. ಭಾರತದಲ್ಲಿನ ಹಲವಾರು ಗಣಕೋಪಯೋಗಕಾರರಿಗೆ ಪ್ರಥಮವಾಗಿ ಕ್ರಮವಿಧಾಯಕ್ಕೆ ಪ್ರವೇಶ ದೊರೆತದ್ದು ಇದೇ ಯಂತ್ರದಿಂದ. ಇದರಿಂದಾಗಿ ಸಂಶೋಧಕ ವಿಜ್ಞಾನಿಗಳಲ್ಲಿ ಗಣಕ ಪ್ರಜ್ಞೆ ಬೆಳೆಯಿತು. ಗಣಕದ ಯಂತ್ರಾಂಶಗಳ ತಯಾರಿಕೆಯಲ್ಲಿ ನಿಪುಣರಾದ ತಂತ್ರ ವಿಜ್ಞಾನಿಗಳ ಒಂದು ಬಲಿಷ್ಠ ತಂಡವನ್ನೇ (ಹಾರ್ಡ್ ಕೋರ್) ಟಿಫ್ರಾಕ್ ಸೃಜಿಸಿತು. ತಕ್ಕಷ್ಟು ಆರ್ಥಿಕ ಸೌಲಭ್ಯವಿದ್ದರೆ ಇವರು ಗಣಕವನ್ನು ರಚಿಸಬಲ್ಲ ಸಮರ್ಥರು.

ಹೆಚ್ಚು ಸಾಮರ್ಥ್ಯವಿರುವ ಯಂತ್ರದ ಆವಶ್ಯಕತೆ ಉತ್ಕಟವಾದಂಥ ಘಟ್ಟಕ್ಕೆ ಟಿಫ್ರಾಕ್ 1964ರ ವೇಳೆಯಲ್ಲಿ ಮುಟ್ಟಿತ್ತು. ಅದೇ ವರ್ಷ ಭಾರತ ಸರ್ಕಾರ ಟಾಟಾ ಇನ್ಸಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಎರಡನೆಯ ತಲೆಮಾರಿನ ಟ್ರಾನ್ಸಿಸ್ಟರೀಕೃತ ಗಣಕವನ್ನು (ಎಂದರೆ CDC–3600 ಗಣಕ) ಸ್ಥಾಪಿಸುವುದರ ಮೂಲಕ ರಾಷ್ಟ್ರೀಯ ಗಣಕಕೇಂದ್ರವನ್ನು (ನ್ಯಾಷನಲ್ ಕಂಪ್ಯೂಟರ್ ಸೆಂಟರ್) ಪ್ರಾರಂಭಿಸಿದರು. ಈ ವ್ಯವಸ್ಥೆಯ ಸಂಪೂರ್ಣ ಪೋಷಣೆ ಹಾಗೂ ದುರಸ್ತಿ ಕೆಲಸಗಳನ್ನು ಭಾರತೀಯ ಎಂಜಿನಿಯರುಗಳೇ ವಹಿಸಿಕೊಂಡರು. ಅಲ್ಲಿಂದೀಚೆಗೆ ಈ ಕೇಂದ್ರದಿಂದ ಉಪಯೋಗ ಪಡೆದವರು ಸಾವಿರಾರು ಮಂದಿ. ಹೀಗೆ ಭಾರತ ಗಣಕಯುಗಕ್ಕೆ ಅದರ ಸರ್ವಮುಖಗಳಲ್ಲೂ ಪ್ರವೇಶ ಮಾಡಿದೆ.

1966ರಲ್ಲಿ ಓಲ್ಡ್ಯಾಪ್ (OLDAP) ಎಂಬ ಹೆಸರಿನ ಸಂಪರ್ಕರಹಿತ (ಆನ್–ಲೈನ್) ಗಣಕದ ಆಲೇಖ್ಯ ಹಾಗೂ ನಿರ್ಮಾಣದ ಪ್ರಾರಂಭದೊಡನೆ ದೇಶೀಯ ಯಂತ್ರಾಂಶಗಳ ತಯಾರಿಕೆಯಲ್ಲಿ ಇನ್ನೊಂದು ಚಟುವಟಿಕೆ ತಲೆದೋರಿತು. ಇದೇ ಸುಮಾರಿಗೆ ಸಂಪೂರ್ಣವಾಗಿ ಟ್ರಾನ್ಸಿಸ್ಟರೀಕೃತವಾದ ಐಸಿಜು (ISIJU) ಎಂಬ ಹೆಸರಿನ ಒಂದು ಗಣಕವನ್ನು ಜಾದವಪುರ ವಿಶ್ವವಿದ್ಯಾಲಯದ ಸಿಬ್ಬಂದಿ ಕೊಲ್ಕತದ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟಿನವರ ಸಹಾಯದಿಂದ ರಚಿಸಿದರು. ಇತರ ಹಲವಾರು



**ಭಾರತದ ಮೊಟ್ಟಮೊದಲ ಸಂಪರ್ಕಸಹಿತ ಗಣಕ – OLDAP**

ತಂಡಗಳವರು ಸಹ ಸಾಕಷ್ಟು ಗಣಕ ನಿರ್ಮಾಣ ಕ್ರಿಯೆಯಲ್ಲಿ ಉದ್ಯುಕ್ತರಾಗಿದ್ದರು. ಇಂಟರ್‌ನ್ಯಾಷನಲ್ ಬಿಸಿನೆಸ್ ಮಶೀನ್ಸ್ ಕಾರ್ಪೋರೇಷನ್ (IBM) ಎಂಬ ಸಂಸ್ಥೆ ಭಾರತದಲ್ಲಿ ಐಬಿಎಂ–1401 ಪ್ರರೂಪದ ಗಣಕಗಳನ್ನು, ಅವುಗಳಿಗೆ ಬೇಕಾಗುವ ಯಂತ್ರಾಂಶದ ಸಾಕಷ್ಟು ಘಟಕಗಳನ್ನು ಯು.ಎಸ್.ಎ.ಯಿಂದ ತರಿಸಿಕೊಂಡು, ನಿರ್ಮಿಸುತ್ತಿದೆ. ಮುಂಬಯಿಯಲ್ಲಿರುವ ಭಾಭಾ ಪರಮಾಣು ಸಂಶೋಧನ ಕೇಂದ್ರ (ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್) ಮತ್ತು ಮುಂದಕ್ಕೆ ಹೈದರಾಬಾದಿನಲ್ಲಿರುವ ಅದರ ಶಾಖೆ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯ ಲಿಮಿಟೆಡ್ (ECIL) ಪಿಡಿಪಿ–ಪ್ರರೂಪದ ಗಣಕಗಳ ಉತ್ಪಾದನೆಯನ್ನು ಪ್ರಾರಂಭಿಸಿದವು. ಮೂರನೆಯ ಪೀಳಿಗೆಯ ಗಣಕಗಳನ್ನು ಸೂಕ್ಷ್ಮ ಎಲೆಕ್ಟ್ರಾನಿಕ್ ಮಂಡಲಗಳಿಂದ ಕಟ್ಟಲು ಯೋಜನೆಗಳು ಭರದಿಂದ ನಡೆದವು. ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯ ಲಿಮಿಟೆಡ್ ಮತ್ತು ಬೆಂಗಳೂರಿನ ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಇವೆರಡು ಸಂಸ್ಥೆಗಳೂ ಸೌಕರ್ಯಗಳನ್ನು ಬೆಳೆಸಿ ಭಾರತದಲ್ಲೇ ಪೂರ್ಣ ಪ್ರಮಾಣದ ಗಣಕ ತಯಾರಿಕಾ ಕಾರ್ಖಾನೆಗೆ ಬೇಕಾಗುವ ಅಧೋರಚನೆ (ಇನ್‌ಫ್ರಾಸ್ಟ್ರಕ್ಚರ್) ಸಿದ್ಧವಾದ ಹಾಗಾಯಿತು. ಒಂದು ಮುಖ್ಯ ವಿಷಯವೆಂದರೆ ಭಾರತದಲ್ಲಿರುವ ಐಬಿಎಂ ಸಂಸ್ಥೆ ಗಣಕ ಸಂಸ್ಥಾಪನೆಗಾಗಿ ಕೀಲಿರಂಧ್ರಿಸುವ ಯಂತ್ರಗಳನ್ನು (ಕೀ ಪಂಚ್ ಮಷೀನ್ಸ್) ತಯಾರಿಸುತ್ತದೆ; ಅಲ್ಲದೇ ಅವನ್ನು ಆಗ್ನೇಯ ಏಷ್ಯದಲ್ಲಿನ ರಾಷ್ಟ್ರಗಳಿಗೆ ನಿರ್ಯಾತ ಮಾಡಿ ಗಮನಾರ್ಹ ಮಟ್ಟದ ವಿದೇಶೀವಿನಿಮಯವನ್ನು ಕೂಡ ಗಳಿಸುತ್ತಿದೆ. ಐ ಬಿ ಎಂ ಈಗ ಒಮ್ಮೆ ಭಾರತದಿಂದ ಹೊರಹೋಗಿ ಪುನಃ ಬಂದು ದೊಡ್ಡ ಸಂಸ್ಥೆಯಾಗಿ ಇಲ್ಲಿ ನೆಲೆಗೊಂಡಿದೆ ಎಂಬುದನ್ನು ಗಮನಿಸಬೇಕು.

ಸ್ಥಳೀಯ ಸಾಮರ್ಥ್ಯ ಹಾಗೂ ವಸ್ತುಗಳಿಂದ ಈ ದೇಶದಲ್ಲಿಯೇ ಗಣಕಗಳನ್ನು ತಯಾರಿಸಲು ಮಾಡಿರುವ ಮೇಲಿನ ಪ್ರಯತ್ನಗಳು ಅವೆಷ್ಟೇ ಇದ್ದರೂ ಗಣಕಗಳಿಗೆ ಬೇಡಿಕೆ ಅದೆಷ್ಟು ತ್ವರಿತಗತಿಯಿಂದ ಏರುತ್ತಿದೆ ಎಂದರೆ ನಮ್ಮ ಎಲ್ಲ ಅವಶ್ಯಕತೆಗಳನ್ನೂ ಇವುಗಳಿಂದ ಪೂರೈಸಲು ಸಾಧ್ಯವಾಗುತ್ತಿಲ್ಲ; ವಿದೇಶದಿಂದ ಗಣಕಗಳನ್ನು ಆಮದು ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಈ ಸಂದರ್ಭದಲ್ಲಿ ಒಂದು ವಿಚಾರ

ಹೇಳಬೇಕು. ಗಣನ ಸಾಮರ್ಥ್ಯ ನಿರ್ಧರಿತವಾಗುವುದು ಗಣಕಗಳ ಸಂಖ್ಯೆಯಿಂದ ಮಾತ್ರವಲ್ಲ, ಅವುಗಳ ಕಾರ್ಯವೇಗ ಹಾಗೂ ಜ್ಞಾಪಕ ಗಾತ್ರವೂ ಇಲ್ಲಿ ಪಾತ್ರ ವಹಿಸುತ್ತವೆ. ಗಣಕಗಳ ಆರ್ಥಿಕತೆ ಹೇಗೆಂದರೆ ಸುಮಾರು 500 ಲಕ್ಷ ರೂಪಾಯಿ ಬೆಲೆ ಬಾಳುವ ಒಂದು ಬಲು ದೊಡ್ಡ ಗಣಕ ಪ್ರತಿಯೊಂದೂ 50 ಲಕ್ಷ ರೂಪಾಯಿ ಬೆಲೆಬಾಳುವ ಹದಿನೈದು ಮಧ್ಯಮ ಗಾತ್ರದ ಗಣಕಗಳಿಗಿಂತ ಅಧಿಕ ಸಂಖ್ಯೆಯ ಸಮಸ್ಯೆಗಳನ್ನು ಸ್ವೀಕರಿಸಬಲ್ಲುದು. ಆರ್ಥಿಕತೆಯ ಒಲವು ಸದಾ ಬೃಹದ್ಯಂತ್ರಗಳ ಕಡೆಗೇ ಇರುತ್ತದೆ. ಈ ಕಾರಣದಿಂದಾಗಿ ಭಾರತದಂಥ ದೇಶಗಳಲ್ಲಿ ಕೆಲವೇ ಅತಿ ದೊಡ್ಡ ಗಣಕಗಳನ್ನಾದರೂ ಪ್ರಾದೇಶಿಕ ಕೇಂದ್ರಗಳಲ್ಲಿ – ಪ್ರಾಯಶಃ ಒಂದೊಂದು ರಾಜ್ಯಕ್ಕೆ ಒಂದೊಂದರಂತೆ – ಸಂಸ್ಥಾಪಿಸಲು ಅವಕಾಶ ಉಂಟು. ಇಂಥ ಯಂತ್ರಗಳ ತಂತ್ರ ವಿಜ್ಞಾನ ಬಲು ಸಂಕೀರ್ಣ. ಆದ್ದರಿಂದ ನಮ್ಮ ಗಣಕ ಕಾರ್ಖಾನೆ ವಿದೇಶಿ ಕಾರ್ಖಾನೆಗಳ ಹೆಗಲೆತ್ತರವನ್ನು ತಲುಪುವವರೆಗಾದರೂ ವಿದೇಶಗಳಿಂದ ಬೃಹತ್ ಸಂಸ್ಥಾಪನೆಗಳನ್ನು ಕೊಳ್ಳುವುದು ಇಲ್ಲವೇ ವಿದೇಶೀ ಸಹಯೋಗದಿಂದ (ಫಾರಿನ್ ಕೊಲಾಬೊರೇಷನ್) ಅವನ್ನು ಸ್ಥಳೀಯವಾಗಿ ತಯಾರಿಸುವುದು ಹೆಚ್ಚು ಮಿತವ್ಯಯವಾದ ಮಾರ್ಗ. ಆದರೆ ರಕ್ಷಣೆಯಲ್ಲೂ ಕೈಗಾರಿಕಾ ಸಂಸ್ಥೆಗಳಲ್ಲೂ ಎದುರಾಗುವ ಕೆಲವು ಅನ್ವಯಗಳಲ್ಲಿ ಚಿಕ್ಕ ಪ್ರಮಾಣದ ಒಳಮನೆ ಗಣಕ ಸೌಕರ್ಯಗಳ (ಇನ್–ಹೌಸ್ ಕಂಪ್ಯೂಟಿಂಗ್ ಫೆಸಿಲಿಟೀಸ್) ಉಪಯೋಗ ಪ್ರಯೋಜನಕಾರಿ. ಇಂಥ ಅವಶ್ಯಕತೆಗಳನ್ನು ಸ್ಥಳೀಯ ಕೈಗಾರಿಕೆ ಮಿತವ್ಯಯದಿಂದ ಪೂರೈಕೆ ಮಾಡಬಲ್ಲದು. ಒಂದು ಅಂದಾಜಿನ ಪ್ರಕಾರ 1980ರಲ್ಲಿ ಗಣಕಗಳ ಅವಶ್ಯಕತೆಯ ಮೌಲ್ಯ ರೂ. 75–500 ಲಕ್ಷದ ವೆಚ್ಚದ ವ್ಯಾಪ್ತಿಯಲ್ಲಿ ಸುಮಾರು 20 ಆಯಾತ ಮಾಡಿದ ಬೃಹದ್ಯಂತ್ರಗಳು ಮತ್ತು ರೂ. 10–75 ಲಕ್ಷ ವೆಚ್ಚದ ವ್ಯಾಪ್ತಿಯಲ್ಲಿ ಸುಮಾರು 700 ಸ್ಥಳೀಯ ಯಂತ್ರಗಳು ಎಂದು ತಿಳಿದು ಬಂದಿದೆ. 1970–80ರ ದಶಕದಲ್ಲಿ ಗಣಕಗಳ ಮೇಲೆ ಹೂಡಲಾಗುವ ಒಟ್ಟು ಬಂಡವಾಳ ರೂ. 200 ಕೋಟಿಗಳೆಂದು ಅಂದಾಜು ಮಾಡಲಾಗಿದೆ. 1990ರ ವೇಳೆಗೆ ಬಂಡವಾಳ ಹೂಡಿಕೆಯ ಈ ಅಂದಾಜು ರೂ. 1000 ಕೋಟಿಗಳವರೆಗೂ ಏರಿತು. ಮೇಲಿನ ವಿವರಣೆಯಿಂದ ಭಾರತ ಈ ಬಲು ಮುಖ್ಯ ಕ್ಷೇತ್ರದಲ್ಲಿ ತನ್ನ ತಂತ್ರವೈಜ್ಞಾನಿಕ ಅಧೋರಚನೆಯನ್ನು ಬೆಳೆಸಲು ಬಲು ಕಾತರತೆಯಿಂದ, ಆದರೆ ಯಶಸ್ವಿಯಾಗಿ, ಪ್ರಯತ್ನಿಸುತ್ತಿದೆಯೆಂದು ಸ್ಪಷ್ಟವಾಗುವುದು.

ಗಣಕವನ್ನು ಉಪಯೋಗಿಸುವ ಮುನ್ನ ಸಾರ್ವತ್ರಿಕೋದ್ದೇಶ ಕ್ರಮವಿಧಿಗಳು, ವಿಶೇಷೋದ್ದೇಶ ಕ್ರಮವಿಧಿಗಳು ಮತ್ತು ಸಂಗ್ರಾಹಕಗಳಂಥ (ಕಂಪೈಲರ್ಸ್) ಗಣಕ ವ್ಯವಸ್ಥೆ ಕ್ರಮವಿಧಿಗಳು ಇವೇ ಮೊದಲಾದ ಗಣಕ ತಂತ್ರಾಂಶದ ಬೆಳವಣಿಗೆಯಲ್ಲಿ ಸಾಕಷ್ಟು ಚಟುವಟಿಕೆ ಅಗತ್ಯ. ಈ ಬೆಳವಣಿಗೆಗೆ ಮನುಷ್ಯ ಸಾಮರ್ಥ್ಯ ವಿಪುಲವಾಗಿ ಬೇಕು. ಆದ್ದರಿಂದ ಭಾರತದಂಥ ದೇಶಕ್ಕೆ ಇದು ಆದರ್ಶಮಾನವಾಗಿ ಹೊಂದುತ್ತದೆ. ಈ ಕ್ಷೇತ್ರದಲ್ಲಿ ಕೂಡ ಭಾರತ ಹಿಂದೆ ಬಿದ್ದಿಲ್ಲ. ತಂತ್ರಾಂಶದ ಬೆಳವಣಿಗೆಗೆ ಸಾಕಷ್ಟು ಸಂವೇಗ (ಮೊಮೆಂಟಂ) ಲಭಿಸಿದೆ. ದೇಶದಲ್ಲಿ ಸಾಕಷ್ಟು ದೀರ್ಘಕಾಲದ ಬೌದ್ಧಿಕ ಅನ್ವೇಷಣೆ ನಡೆದಿರುವುದರಿಂದ ಗಣಿತದ ಒಂದು ಪರಂಪರೆ ಇರುವುದೇ ಇದರ ಕಾರಣ. ಅಧಿಕ ಸಂಖ್ಯೆಯಲ್ಲಿ ಎಂಜಿನಿಯರುಗಳೂ ವಿಜ್ಞಾನಿಗಳೂ ಗಣಕದ ಉಪಯೋಗದಿಂದ ಲಾಭ ಪಡೆಯುತ್ತಿವೆ. ತಂತ್ರಾಂಶಗಳನ್ನು ತಯಾರಿಸುವ ಉದ್ಯಮಗಳು ದೇಶದಲ್ಲಿ ಬೆಳೆಯುತ್ತಿವೆ. ಜಾಗತಿಕ ಖ್ಯಾತಿ ಪಡೆದು ದೇಶಕ್ಕೆ ಅಮೂಲ್ಯವಾದ ವಿದೇಶಿ ವಿನಿಮಯವನ್ನು ಗಳಿಸಿಕೊಟ್ಟಿವೆ.

ಈ ಪ್ರವೃತ್ತಿಗಳನ್ನು ಬಹಿರ್ವೇಶಿಸಿ (ಎಕ್ಸ್‌ಟ್ರಾಪೊಲೇಟಿಂಗ್) ಯಂತ್ರಾಂಶ ಹಾಗೂ ತಂತ್ರಾಂಶಗಳ ಬೆಳವಣಿಗೆಗಳಲ್ಲಿ ಭಾರತ ಪ್ರಪಂಚದ ಗಣಕಗಳ ಪಟದಲ್ಲಿ ತನ್ನ ಸ್ಥಾನ ಪಡೆಯುತ್ತಿದೆ ಎಂದು ಭವಿಷ್ಯ ನುಡಿಯಬಹುದು.

**ಗಣಕಗಳ ಸಾಮಾಜಿಕ ಪರಿಣಾಮಗಳು:** ಸ್ವಯಂಚಾಲಿತ್ವದ ಸಮಸ್ಯೆಯನ್ನು ಸ್ಪಷ್ಟವಾಗಿ ಒಡ್ಡಿರುವುದು ವಿರಳ ಮತ್ತು ನಿರಪೇಕ್ಷವಾಗಿ ವಿಶ್ಲೇಷಿಸಿರುವುದು ಅತ್ಯಪೂರ್ವ. ಇತರ ಯಂತ್ರಗಳನ್ನು ನಿಯಂತ್ರಿಸಲು ಉಪಯೋಗಿಸುವ ಗಣಕಗಳಂಥ ಯಂತ್ರಗಳನ್ನೂ ಆ ಮೊದಲೇ ಮನುಷ್ಯ ಸಾಮರ್ಥ್ಯ ನಿರ್ವಹಿಸಿದ ಪ್ರಕ್ರಮ ಹಾಗೂ ಗಣನೆಗಳನ್ನೂ ಕುರಿತು ಸ್ವಯಂಚಾಲಿತ್ವ, ಈ ಮೊದಲೇ ಖಂಡ 1ರಲ್ಲಿ ನೋಡಿರುವಂತೆ ವಿಚಾರ ಮಾಡುವುದು. ಸ್ವಯಂಚಾಲಿತ್ವದಲ್ಲಿ ಹಲವಾರು ವರ್ಗಗಳಿವೆ. ಆದ್ದರಿಂದ ಗಣಕಗಳ ಸಾಮಾಜಿಕ ಪರಿಣಾಮಗಳನ್ನು ವಿಶ್ಲೇಷಿಸುವಾಗ ಇವುಗಳ ನಡುವೆ ಸ್ಪಷ್ಟವಾಗಿ ವ್ಯತ್ಯಾಸವನ್ನು ಕಾಣುವುದು ತೀರ ಅನಿವಾರ್ಯ. ಈ ವರ್ಗಗಳು ಪ್ರಧಾನವಾಗಿ (1) ಕಾರ್ಖಾನೆ ಸ್ವಯಂಚಾಲಿತ್ವ, (2) ಕಚೇರಿ ಸ್ವಯಂಚಾಲಿತ್ವ, (3) ಆಲೇಖ್ಯ ಸ್ವಯಂಚಾಲಿತ್ವ ಮತ್ತು (4) ನಿರ್ಧರಣೆ ಸ್ವಯಂಚಾಲಿತ್ವ (ಡಿಸಿಷನ್ ಆಟೊಮೇಷನ್).

ಪರಿಕರ್ಮಗಳ ಸಂಶೋಧನೆಯ ವಿಧಾನಗಳಂಥ ಗಣಕಸಜ್ಜಿತ ನಿರ್ಧರಣೆ ಕೈಗೊಳ್ಳುವ ಪ್ರಕ್ರಮಗಳು ಭಾರತದಂಥ ಅಭಿವೃದ್ಧಿಶೀಲ ದೇಶಗಳಿಗೆ ಒದಗಿಸುವ ಅವಕಾಶವನ್ನು ಈ ಮೊದಲೇ ಚರ್ಚಿಸಲಾಗಿದೆ. ಯಾವ ದೇಶದಲ್ಲೂ ನಿರ್ಧರಣೆ ಕೈಗೊಳ್ಳುವಿಕೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಪೂರ್ಣವಾಗಿ ಸ್ವಯಂಚಾಲನ ಗೊಳಿಸಿರುವುದಿಲ್ಲ. ಪ್ರಸಕ್ತ ಕಾಲದಲ್ಲಿ ಇಂಥ ಒಂದು ಯೋಜನೆಯನ್ನು ಯಾರೂ ಗಂಭೀರವಾಗಿ ಪ್ರತಿಪಾದಿಸುತ್ತಲೂ ಇಲ್ಲ. ಅವಧಾರಣೆ ಇರುವುದು ಗಣಕಗಳನ್ನು ನಿರ್ಧರಣೆ–ಕೈಗೊಳ್ಳುವಿಕೆಯಲ್ಲಿ ಪರಿಣಾಮಕಾರಿ ಹತ್ಯಾರುಗಳಾಗಿ ಉಪಯೋಗಿಸುವುದರಲ್ಲಿ. ಇದೇ ಪ್ರಕಾರ ಆಲೇಖ್ಯ ಸ್ವಯಂಚಾಲಿತ್ವ (ಡಿಸೈನ್ ಆಟೋಮೇಷನ್) ಗಣಕಗಳನ್ನು ಅನುಕೂಲತಮ ಆಲೇಖ್ಯಗಳನ್ನು ಪಡೆಯುವ ಪರಿಣಾಮಕಾರೀ ಹತ್ಯಾರುಗಳಾಗಿ ಪಡೆಯುವುದನ್ನು ಕುರಿತು ಇದೆ; ಎಂಜಿನಿಯರಿಂಗ್ ಆಲೇಖ್ಯಗಳು, ವಾಸ್ತು ಶಿಲ್ಪದ ಆಲೇಖ್ಯಗಳು, ಇತ್ಯಾದಿ. ಆಲೇಖ್ಯ ಎಂಜಿನಿಯರನನ್ನು ಇದು ವಿಸ್ಥಾಪಿಸಲಾರದು. ಆದರೆ ಇದು ಆತನಿಗೆ ಯಾವ ಮನುಷ್ಯನೂ ತನ್ನ ಕೈ ಗಣನೆಗಳಿಂದ ಮಾಡಲಾಗದಂಥ ವ್ಯಾಪಕ ಗಣನೆಗಳನ್ನು ಒದಗಿಸಿ ಅವನು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ನೆರವಾಗಬಲ್ಲುದು. ಗಣಕಗಳ ಈ ಎರಡು ಅನ್ವಯಗಳಲ್ಲೂ ಮನುಷ್ಯರನ್ನು ವಿಸ್ಥಾಪಿಸುವ ಸಮಸ್ಯೆ ಎದುರಾಗುವುದಿಲ್ಲ ಎಂಬುದು ಸ್ಪಷ್ಟ. ಈ ಸನ್ನಿವೇಶಗಳಲ್ಲಿ ಗಣಕಗಳು ವಿಶ್ಲೇಷಣೆಗಳನ್ನು, ಅಭ್ಯಾಸಗಳನ್ನು, ಹಾಗೂ ಅನುಕರಣೆಗಳನ್ನು (ಸಿಮ್ಯುಲೇಷನ್ಸ್) ನಿರ್ವಹಿಸುವುದರಲ್ಲಿ ನೆರವಾಗುತ್ತವೆ. ಕೇವಲ ಮನುಷ್ಯರಿಂದ ಇವನ್ನು ಆಗಗೊಳಿಸುವುದು ಅಸಾಧ್ಯ.

ಭಾರತದಲ್ಲಿ ಹೆಚ್ಚಿನ ಮತಭೇದ ತಲೆದೋರಿರುವ ವಿವಾದವೆಂದರೆ ಕಚೇರಿ ಸ್ವಯಂಚಾಲಿತ್ವ. ಸಮಸ್ಯೆಯ ಗಾತ್ರವನ್ನು ರಾಶೀಕರಿಸುವ (ಕ್ವಾಂಟಿಫೈ) ಒಂದು ವಿಶ್ಲೇಷಣೆಯನ್ನು ಈಗ ವರದಿ ಮಾಡುತ್ತೇವೆ. ಲೆಕ್ಕಣಿಗರು (ವೈಟ್ ಕಾಲರ್ಡ್ ವರ್ಕರ್ಸ್) ಮಾಡಬಹುದಾದಂಥ ಕೆಲಸಗಳನ್ನು ಮಾಡುವ ಆಡಳಿತದ ಮತ್ತು ವ್ಯಾಪಾರದ ದತ್ತಾಂಶ –ಪ್ರಕ್ರಮೀಕರಣ (ಡ್ಯಾಟಾ–ಪ್ರೋಸೆಸ್ಸಿಂಗ್) ಚೌಕಟ್ಟಿನೊಳಗೆ 1970ರಲ್ಲಿ ಸುಮಾರು 100 ಸಂಸ್ಥಾಪನೆಗಳು ಮಾತ್ರ ಕೆಲಸ ಮಾಡುತ್ತಿದ್ದುವು. ಇವುಗಳ ಪೈಕಿ ಜೀವವಿಮಾ ಕಾರ್ಪೋರೇಷನ್, ಬ್ಯಾಂಕುಗಳು ಮತ್ತು ರೈಲ್ವೇಗಳಲ್ಲಿದ್ದ ಸಂಸ್ಥಾಪನೆಗಳ ಸಂಖ್ಯೆ ಸುಮಾರು 20. ಈ ಸಂಸ್ಥೆಗಳಲ್ಲೇ ಸ್ವಯಂಚಾಲಿತ್ವವನ್ನು ಕುರಿತ ವಿವಾದ ಇರುವುದು. ಇದೇ ವೇಳೆ 80 ಇತರ ಸಂಸ್ಥೆಗಳು ಕಚೇರಿಸ್ವಯಂಚಾಲಿತ್ವ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದುವು. ಅವುಗಳಲ್ಲಿ ಯಾವುದೇ ವಿಧವಾದ ವಿವಾದ ಎದ್ದಿರಲಿಲ್ಲ ಎಂಬುದನ್ನು ಗಮನಿಸಬೇಕು. ಆದ್ದರಿಂದ ಗಣಕಗಳನ್ನು ಉಪಯೋಗಿಸುತ್ತಿರುವ ಉದ್ಯಮಗಳು, ಕಾರ್ಮಿಕರಿಗೆ ಪ್ರಪಂಚದ ನೆರವಿನಲ್ಲಿ ಸ್ವಯಂಚಾಲಿತ್ವದ ಲಾಭ ನಷ್ಟಗಳನ್ನು ಕುರಿತು ಶಿಕ್ಷಣ ನೀಡಿ, ದೀರ್ಘಕಾಲದಲ್ಲಿ ಹೇಗೆ ಗಣಕಗಳ ಉಪಯೋಗ ಉದ್ಯೋಗದ ವಿಭವವನ್ನು (ಎಂಪ್ಲಾಯ್ಮೆಂಟ್ ಪೊಟೆನ್ಷಿಯಲ್) ಹೆಚ್ಚಿಸಬಲ್ಲುದು ಎಂಬುದನ್ನು ಶ್ರುತಪಡಿಸಬೇಕಾದದ್ದು ಅಗತ್ಯ ಎಂದು ಇದರಿಂದ ಅರ್ಥವಾಗುತ್ತದೆ.

ಕಚೇರಿ ಉದ್ಯೋಗದ ಮೇಲೆ ಗಣಕಗಳ ಪರಿಣಾಮವನ್ನು ಯು. ಕೆ ಸರ್ಕಾರದ ಕಾರ್ಮಿಕ ಸಚಿವಾಲಯದ ಒಂದು ಹೊತ್ತಗೆ (ಮ್ಯಾನ್ ಪವರ್ ಸ್ಟಡೀಸ್ ನಂ 4, 1965) ಸಾಕಷ್ಟು ಆಳವಾಗಿ ಚರ್ಚಿಸಿದೆ. ಕಚೇರಿ ನೌಕರಿಗಳ ಮೇಲೆ ಎಡಿಪಿಯ ಸಂಘಟ್ಟನೆ (ಅಡ್ಮಿನಿಸ್ಟ್ರೇಟಿವ್ ಡಾಟಾ ಪ್ರೋಸೆಸಿಂಗ್– ಆಡಳಿತೆಯ ದತ್ತಾಂಶಗಳ ಪ್ರಕ್ರಮೀಕರಣ) ಮತ್ತು ಎಡಿಪಿ ಕೆಲಸದ ಸ್ವಭಾವಗಳನ್ನು ಒಂದು ಹೊಸ ಉದ್ಯೋಗ ರೂಪ ಎಂಬುದಾಗಿ ಆ ವರದಿ ಪರಿಶೀಲಿಸುತ್ತದೆ. ಈ ವರದಿ ಮುಖ್ಯಾಂಶಗಳನ್ನು ಇಲ್ಲಿ ಕ್ರೋಡೀಕರಿಸಿದೆ. 'ಪರಿವಾರ ವ್ಯವಸ್ಥೆಗಳನ್ನೂ ಸರಂಜಾಮುಗಳನ್ನೂ ಒಳಗೊಂಡಂತೆ ಒಂದು ಗಣಕ ಇಂದಿಗೂ ಕಚೇರಿಯಲ್ಲಿನ ಒಂದು ಯಂತ್ರಾವಳಿಗಿಂತ ಬೇರೆಯಾದ ವಸ್ತುವೇನೂ ಅಲ್ಲ. ಹಲವಾರು ಸಂಖ್ಯೆಯ ಸವಿವರ ಅಂಶಗಳೂ ಗಣನೆಗಳೂ ಇದ್ದು ಅವನ್ನು ಅಧಿಕ ವೇಗ ಹಾಗೂ ನಿಷ್ಕೃಷ್ಟತೆಗಳಿಂದ ವಿಶ್ಲೇಷಿಸಿ ಒಪ್ಪ ಮಾಡಬೇಕಾದಲ್ಲಿ ಗಣಕ ಬಲು ಯಶಸ್ವಿಯಾಗಿ ಉತ್ಕರ್ಷ ಹೊಂದುತ್ತದೆ. ವೈಯಕ್ತಿಕವಾಗಿ ನಡೆಸಲೇಬೇಕಾದ ಕಚೇರಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಉಂಟು–ಬಿಕರಿ, ವ್ಯಾಪಾರದ ಚರ್ಚೆ, ವೈಯಕ್ತಿಕ ಕಾಗದಗಳನ್ನು ಬರೆದು ಬೆರಳಚ್ಚಿಸುವುದು, ಕಾರ್ಯನಿರ್ವಹಣೆಯ ಕೆಲಸ (ಸೆಕ್ರೆಟೇರಿಯಲ್ ವರ್ಕ್) ಇವೂ ಈಗ ಗಣಕೀಕರಣಗೊಂಡಿವೆ.

ಕಚೇರಿಯ ಮೇಲೆ ಗಣಕಗಳ ಪರಿಣಾಮ ಬೇರೆಯೇ ಮತ್ತು ಅದೊಂದು ಬಲು ಸಂಕೀರ್ಣವಾದ ಪ್ರಮೇಯ. ಏಕೆಂದರೆ ಈ ಎಡಿಪಿ ವ್ಯವಸ್ಥೆಗಳು ತಮ್ಮ ಸಂಸ್ಥಾಪನೆಗೆ ಮೊದಲು ಇದ್ದ ಹಲವಾರು ಕೆಲಸಗಳನ್ನು (ಜಾಬ್ಸ್) ಮಾತ್ರವಲ್ಲದೇ ಆಮೇಲೂ ಸಾಕಷ್ಟು ಕಾರ್ಯವನ್ನು ತಾವೇ ಮಾಡುತ್ತವೆ. ಬೇರೆ ಸನ್ನಿವೇಶಗಳಲ್ಲಿ ಇಂಥ ಕಾರ್ಯ ಜನರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುತ್ತಿತ್ತು.

ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ ಗಣಕೀಕರಣವು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಹೊಸ ಹೊಸ ಹುದ್ದೆಗಳನ್ನು ನಿರ್ಮಿಸಿದೆ–ಉದಾಹರಣೆಗೆ ದತ್ತಾಂಶಗಳನ್ನು ಪ್ರಕ್ರಮಿಸುವ ವ್ಯವಸ್ಥಾಪಕರು, ವ್ಯವಸ್ಥಾವಿಶ್ಲೇಷಕರು, ಕ್ರಮವಿಧಾಯಕರು ಮತ್ತು ಯಂತ್ರ ಪರಿಕರ್ಮಿಗಳು. ಒಂದು ವಿಶಾಲವಾದ ಅಂದಾಜಿನ ಪ್ರಕಾರ ಗಣಕೀಕರಣದ ನಿವ್ವಳ ಪರಿಣಾಮವೆಂದರೆ ಕಚೇರಿ ಉದ್ಯೋಗಿಗಳ ಒಟ್ಟು ಸಂಖ್ಯೆಯಲ್ಲಿ ಆದ ಖೋತ ಸುಮಾರು ಶೇಕಡ 1.

ಮೇಲಿನ ವಿವರಣೆಯಿಂದ ಗ್ರಹಿಸಬೇಕಾದ ಸಂಗತಿ ಸ್ಪಷ್ಟವಾಗಿಯೇ ಇದೆ. ಲೆಕ್ಕಿಣಿಗರ ಸಂಖ್ಯೆಯ ವಿಭವದಲ್ಲಿ ಖೋತ ಆದೀತೆಂಬ ಅಂಜಿಕೆ ಹಲವಾರು ರಾಷ್ಟ್ರಗಳಲ್ಲಿ ಇದ್ದದ್ದು ಉಂಟು. ಇದು ಈಗ ಒಪ್ಪಿತವಾದ ಮೌಲ್ಯವಾಗಿ ಉಳಿದಿಲ್ಲ.

ಕಾರ್ಖಾನೆಯ ಸ್ವಯಂಚಾಲನೆಯ ಸಮಸ್ಯೆ ಕೂಡ ಇದೇ ವರ್ಗಕ್ಕೆ ಸೇರಿದೆ. ಆದರೆ ಒಂದು ಮುಖ್ಯ ವ್ಯತ್ಯಾಸ ಉಂಟು. ಯಂತ್ರ ಸ್ವಯಂಚಾಲನೆಗೆ ಗಣಕಗಳನ್ನು ಉಪಯೋಗಿಸುವುದರಿಂದ ಫಲಿಸುವ ಪ್ರಯೋಜನಗಳು ಒಡನೆಯೇ ಉತ್ಪನ್ನದ ಹೆಚ್ಚುವರಿಯಿಂದ ಸಿದ್ಧಿಸುತ್ತವೆ; ಮತ್ತು ಉತ್ಪನ್ನದ ಉತ್ತಮ ಗುಣಮಟ್ಟದಲ್ಲಿ ಇವು ಕಂಡುಬರುತ್ತವೆ. ಇದರಿಂದಾಗಿ ಕೈಗಾರಿಕೆಗಳು ವಿಸ್ತಾರಗೊಳ್ಳುತ್ತವೆ ಇಲ್ಲವೇ ವಿಭಿನ್ನಗೊಳ್ಳುತ್ತವೆ. ಇಂಥಲ್ಲಿ ಹೊಸ ಉದ್ಯೋಗಾವಕಾಶಗಳು ತಲೆದೋರಿ ಗಣಕಗಳು ವಿಸ್ಥಾಪಿಸುವುದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ನೌಕರರನ್ನು ನೇಮಕ ಮಾಡುವುದು ಸಾಧ್ಯವಾಗುತ್ತದೆ.

**ಜ್ಞಾನಮೀಮಾಂಸೀಯ ಪ್ರಶ್ನೆಗಳು :** ಗಣಕಗಳನ್ನು ಕುರಿತು ಒಂದು ವಿಶ್ವಕೋಶದಲ್ಲಿ ಬರಬೇಕಾದ ನಿರೂಪಣೆ ಜ್ಞಾನಮೀಮಾಂಸೀಯ ಪ್ರಶ್ನೆಯೊಂದನ್ನು ಪರಿಶೀಲಿಸದಿದ್ದರೆ ಪೂರ್ಣವೆನಿಸದು. ಯಂತ್ರಗಳು ಮನುಷ್ಯರಷ್ಟು ಚೆನ್ನಾಗಿ ಚಿಂತಿಸಬಲ್ಲವೇ? ಈಚೆಗೆ ಜನಿಸಿದ ಜ್ಞಾನಮೀಮಾಂಸೆ (ಎಪಿಸ್ಟೀಮಾಲೊಜಿ) ಎನ್ನುವ ಶಾಸ್ತ್ರ ಜ್ಞಾನದ ರಚನೆ ಹಾಗೂ ಬೆಳವಣಿಗೆಯ ಸಿದ್ಧಾಂತವನ್ನು ಕುರಿತು ಇದೆ. ಈ ಶಾಸ್ತ್ರದಲ್ಲಿನ ಮುಖ್ಯ ವಿವಾದವೆಂದರೆ ಜ್ಞಾನದ ಸೃಷ್ಟ್ಯಾತ್ಮಕ ಬೆಳವಣಿಗೆಗೆ ಮನುಷ್ಯ ಅನಿವಾರ್ಯವೇ ಎಂದು. ಮನುಷ್ಯನ ಮಾನಸಿಕ ಕಾರ್ಯವನ್ನು ಯಂತ್ರಗಳು ವಿಸ್ಥಾಪಿಸುವ ಗಣಕವಿಜ್ಞಾನ ಈ ವಿವಾದದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

ಮೊದಲಾಗಿ, ಬುದ್ಧಿ ಎಂಬ ಪರಿಕಲ್ಪನೆಯನ್ನು ಪರಿಶೀಲಿಸೋಣ. ಇದನ್ನು ಎರಡು ಹಾದಿಗಳಲ್ಲಿ ಚರ್ಚಿಸಬಹುದು– ಕಾರಣ ಮತ್ತು ಪರಿಣಾಮ. ಉಷ್ಣ ಮತ್ತು ವಿದ್ಯುತ್ತಿನಂಥ ಭೌತರಾಶಿಗಳಲ್ಲಿನಂತೆ ಬುದ್ಧಿಯ ಪರಿಣಾಮಗಳನ್ನು ಅಧ್ಯಯನ ಮಾಡುವುದರ ಮೂಲಕ ಅದರ ಲಕ್ಷಣೀಕರಣವನ್ನು ಮಾಡಬಹುದು. ಆದ್ದರಿಂದ ಬುದ್ಧಿಯ ಪರಿಣಾಮಗಳ ಚರ್ಚೆಯನ್ನು ಈಗ ಮಾಡೋಣ.

ಮನೋವಿಜ್ಞಾನಿಗಳು ಮಾಡುವ ಬುದ್ಧಿ ಗುಣಾಂಕ (ಇಂಟಲ್ಲಿಜನ್ಸ್ ಕ್ವೋಶಂಟ್, IQ) ಪರೀಕ್ಷಣಗಳು ಪರಿಣಾಮದ ಒಂದು ಮಾನ. ಏಕೆಂದರೆ ಅಲ್ಲಿನ ಗುರಿ ಅನುಕ್ರಿಯೆಗಳ (ರೆಸ್ಪಾನ್ಸಸ್) ಗಣ (ಸೆಟ್) ಮತ್ತು ಪ್ರಚೋದನೆಗಳ (ಸ್ಟಿಮ್ಯೂಲೈ) ಗಣ– ಇವನ್ನು ಕುರಿತು ಮಾತ್ರ ಉಂಟು. ಎದುರಿಟ್ಟ ಪ್ರಶ್ನೆಗಳ ರೂಪದಲ್ಲಿ ಪ್ರಚೋದನೆಗಳಿವೆ; ಅನುಕ್ರಿಯೆಗಳು ಇವುಗಳಿಗೆ ಉತ್ತರಗಳು. IQವಿನ ಗಣನೆ ಎರಡು ಅಂಕಗಳನ್ನು ಅವಲಂಬಿಸಿದೆ. ಇವುಗಳಿಗೆ ಮಾನಸಿಕಪ್ರಾಯ ಮತ್ತು ದೈಹಿಕಪ್ರಾಯ ಎಂದು ಹೆಸರು. ಇದು ಹೇಗೂ ಇರಲಿ. ಇವುಗಳ ಪೈಕಿ ಒಂದನ್ನು–ದೈಹಿಕ ಪ್ರಾಯವನ್ನು–ಮನುಷ್ಯನ ಸಂದರ್ಭದಲ್ಲಿ ತಂದಿರುವುದು ಕಲಿಕೆಯಲ್ಲಿನ ಬೇರೆ ಬೇರೆ ಮಟ್ಟಗಳನ್ನು ಗಮನಿಸುವುದಕ್ಕಾಗಿ. ಈ ಮಟ್ಟಗಳು ವ್ಯಕ್ತಿ ಬೆಳೆದಂತೆ ಸಾಮಾನ್ಯವಾಗಿ ಏರುತ್ತವೆ. ಸವಾಲೊಡ್ಡಿದ ಪ್ರಶ್ನೆಗಳಿಗೆ ನಿರ್ದಿಷ್ಟ ಕಾಲಾವಧಿಯೊಳಗೆ ಉತ್ತರ ನೀಡುವ ಮೆದುಳಿನ ಸಾಮರ್ಥ್ಯವನ್ನು ಮಾನಸಿಕಪ್ರಾಯ ತಿಳಿಸುತ್ತದೆ. ಈ ಪರೀಕ್ಷಣಗಳು ಭಾಷಾಮಾಧ್ಯಮಗಳನ್ನು ಅವಲಂಬಿಸಿಲ್ಲ; ಅದೇ ರೀತಿ ಯಾರು ಅವುಗಳಿಗೆ ಉತ್ತರ ಹೇಳುವರೆನ್ನುವುದನ್ನೂ ಅಲ್ಲ. ಆದ್ದರಿಂದ IQ ಪರೀಕ್ಷಣಗಳ ಮಿತಿಯೊಳಗೆ ಈ ಕೆಳಗಿನ ಪ್ರಯೋಗವನ್ನು ಮಾಡಬಹುದು.

ಒಂದು ಕೋಣೆಯನ್ನು ಮೂರು ಖಂಡಗಳಾಗಿ ಅಪಾರದರ್ಶಕ ಮತ್ತು ಶಬ್ದಬಂಧಕ ಪರದೆಗಳಿಂದ ವಿಭಾಗಿಸಲಾಗಿದೆ. ಈ ಖಂಡಗಳು ಒಂದಕ್ಕೊಂದು ಟೆಲಿಪ್ರಿಂಟರುಗಳಿಂದ, ಚಿತ್ರ 28ರಲ್ಲಿ ಕಾಣಿಸಿರುವಂತೆ, ಜೋಡಿಸಲ್ಪಟ್ಟಿವೆ. ಖಂಡಗಳ ಪೈಕಿ ಒಂದಾದ A ಯಲ್ಲಿ ಒಬ್ಬ ಮನೋವಿಜ್ಞಾನಿ ಕೂತಿರುತ್ತಾನೆ. ಪ್ರಬುದ್ಧ ಮಾನವರಿಗೆ ನೀಡುವ IQ ಪರೀಕ್ಷಣಗಳ ಒಂದು ಪ್ರಶ್ನಾವಳಿ ಅವನ ಹತ್ತಿರ ಇರುವುದು. ಅವನು ಸ್ವಯಂಚಾಲಿತವಾಗಿ ಪ್ರಶ್ನೆಗಳನ್ನು ಒಂದು ಸರಣಿಯಲ್ಲಿ ಬೆರಳಚ್ಚಿಸಬಲ್ಲ. ಇನ್ನೊಂದು ಖಂಡ Bಯಲ್ಲಿ ಒಬ್ಬ ಮನುಷ್ಯ ಇದ್ದಾನೆ. ಖಂಡ Cಯಲ್ಲಿ ಒಂದು ಗಣಕ ಉಂಟು. ಆದರೆ ಮನೋವಿಜ್ಞಾನಿಗೆ ಯಾರು ಯಾವ ಖಂಡದಲ್ಲಿ ಇದ್ದಾರೆ ಎಂಬುದು ತಿಳಿದಿಲ್ಲ. ಪರೀಕ್ಷಣಗಳನ್ನು ಖಂಡಗಳು B ಮತ್ತು C ಯಲ್ಲಿ ಮುದ್ರಿಸಲಾಗುವುದು. ಮನುಷ್ಯ ದೃಶ್ಯ ಮುದ್ರಣವನ್ನು ಓದಿದರೆ ಗಣಕ ಕಾಂತ ಮುದ್ರಣವನ್ನು ಓದುತ್ತದೆ. ಮನೋವಿಜ್ಞಾನಿ ಪೂರ್ವನಿರ್ಧರಿಸಿ ರುವ ಒಂದು ಕ್ಷಣದಲ್ಲಿ ಮಾತ್ರ ಉತ್ತರಗಳನ್ನು ಒದಗಿಸಬೇಕು ಎಂಬ ಷರತ್ತು ಉಂಟು.

ಮನುಷ್ಯನ ಹಾಗೂ ಗಣಕದ ಉತ್ತರ ನೈಸರ್ಗಿಕ ಭಾಷೆಯಲ್ಲಿ ಇರುವುದು–ಉದಾಹರಣೆಗಾಗಿ ಇಂಗ್ಲಿಷ್ ಅಥವಾ ಕನ್ನಡ. ಭಾಷಾದೃಷ್ಟಿಯಿಂದ ಇವು ದೋಷರಹಿತವಾಗಿರುತ್ತವೆ. ಮನೋವಿಜ್ಞಾನಿ ತನಗೆ ದೊರೆಯುವ ಉತ್ತರಗಳನ್ನು ಕಾಗದದ ಎರಡು ಬೇರೆ ಬೇರೆ ಹಾಳೆಗಳಲ್ಲಿ ಬರೆಯುತ್ತಾನೆ. ಈ ಉತ್ತರಗಳನ್ನು ವಿಶ್ಲೇಷಿಸಿದ ಬಳಿಕ ಅವನಿಗೆ ಯಾರು ಯಾವ ಖಂಡದಲ್ಲಿ ಇರುವರೆನ್ನುವುದನ್ನು ನಿರ್ಧರಿಸಲು ಸಾಧ್ಯವಾಗದಿದ್ದರೆ ಆಗ, ಪರಿಶೀಲನೆಯಲ್ಲಿರುವ IQ ಪರೀಕ್ಷಾ ಗಣಕ್ಕೆ ಸಾಪೇಕ್ಷವಾಗಿ ಗಣಕಕ್ಕೆ ಮನುಷ್ಯ ಸದೃಶ ಚಿಂತನೆ ಸಾಧ್ಯ ಉಂಟೆಂದು ತೀರ್ಮಾನಿಸುವುದು ತಾರ್ಕಿಕವಾಗಿದೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಪ್ರತಿಯೊಬ್ಬರ (ಮನುಷ್ಯ ಮತ್ತು ಗಣಕ) ಉತ್ತರಗಳಲ್ಲಿ ತೋರುವ ವ್ಯತ್ಯಾಸಗಳಿಂದ ಅವರ ಮಧ್ಯೆ ವಿಭೇದೀಕರಣ ಸಾಧ್ಯವೇ? ಇದಕ್ಕೆ ಉತ್ತರವಿಷ್ಟೆ. ಕಡಿಮೆ IQ ವ್ಯಕ್ತಿಯೊಬ್ಬ ಪರೀಕ್ಷಣದಲ್ಲಿ ಭಾಗವಹಿಸಬಾರದೆಂಬ ಪ್ರಾರಂಭಿಕ ಷರತ್ತೇನೂ ಇಲ್ಲ. ಆದ್ದರಿಂದ ನಿಜವಾದ ಪ್ರಶ್ನೆ ಎಂದರೆ IQ ಪರೀಕ್ಷಣದ ಅವಧಿಯಲ್ಲಿ ಯಾವ ಮನುಷ್ಯನ ನೆರವನ್ನೂ ಪಡೆಯದೇ ಗಣಕ ಒಬ್ಬ ಕಡಿಮೆ ಮಟ್ಟದ IQ ಇರುವ ವ್ಯಕ್ತಿಗಿಂತ ಹೆಚ್ಚು ಅಂಕ ಗಳಿಸುವಂತೆ ಒಂದು ಗಣಕವನ್ನು ಆಲೇಖೀಸಿ ಕ್ರಮವಿಧಿಸಬಹುದೇ ಎಂಬುದಾಗಿದೆ. IQ ಪರೀಕ್ಷಣಗಳಿಗೆ ಉತ್ತರ ನೀಡುವಾಗ ನಡೆಯುವ ಚಿಂತನ ಪ್ರಕ್ರಮಗಳನ್ನು ನಿಷ್ಕೃಷ್ಟವಾಗಿ ಬಿಡಿ ಬಿಡಿಯಾಗಿ ವಿಭಾಗಿಸುವುದರಲ್ಲಿ ಮತ್ತು ಈ ಲಕ್ಷಣಗಳನ್ನು ಪ್ರದರ್ಶಿಸುವುದರಲ್ಲಿ ಯಂತ್ರಗಳು ಇದುವರೆಗೆ ಹೇಗೆ ಒಂಟಿಯಾಗಿಯೋ ಸಂಯೋಜಿತವಾಗಿಯೋ ಕಾರ್ಯ ನಡೆಸಿವೆ ಎನ್ನುವುದರಲ್ಲಿ ಮೇಲಿನ ಪ್ರಶ್ನೆಗೆ ಉತ್ತರ ಉಂಟು. ಇದನ್ನು ಇಲ್ಲಿ ಮುಂದೆ ಸಂಕ್ಷೇಪವಾಗಿ ಪರೀಕ್ಷಿಸಿದೆ.



ಚಿತ್ರ 28

1 ನಿರ್ಗಮನಾತ್ಮಕ ಅನುಮಾನ (ಡಿಡಕ್ಟಿವ್ ಇನ್ಫರೆನ್ಸ್): ಸಮಸ್ಯೆಗಳ ಒಂದು ವರ್ಗಕ್ಕೆ ಸಾರ್ವತ್ರಿಕವಾಗಿ ಅನ್ವಯವಾಗುವ ಸೂತ್ರವಿಧಿಗಳ (ರೂಲ್ಸ್) ಒಂದು ಗಣ ದತ್ತವಾಗಿರುವಾಗ ನಿಗಮನಾತ್ಮಕ ಅನುಮಾನ ಈ ಸೂತ್ರವಿಧಿಗಳ ಒಂದು ಉಪಗಣವನ್ನು ಸರಿಯಾದ ಒಂದು ಶ್ರೇಣಿಯಲ್ಲಿ ಉಪಯೋಗಿಸಿಕೊಂಡು ನಿರ್ದಿಷ್ಟವಾದ ಒಂದು ಅನುಮಾನವನ್ನು ಪಡೆಯಲು ಪ್ರಯತ್ನಿಸುತ್ತದೆ. ಆದ್ದರಿಂದ ಉತ್ಪನ್ನ, ಭಾಗಾಕಾರ, ವರ್ಗಮೂಲಗಳ ಸಂಸ್ಕರಣ ಇಲ್ಲವೇ ಬಿಡಿಸುವಿಕೆಯ ಸರಳತೆ ಗರಿಷ್ಠವಾಗಿರುವಂತೆ ವಿಧಾನಗಳ ಒಂದು ಗಣವನ್ನು ತಾರತಮ್ಯ ಜ್ಞಾನವರಿತು ಬಳಸುವುದು ಇವೇ ಮುಂತಾದ ಕ್ರಿಯೆಗಳ ಹಿನ್ನೆಲೆಯಲ್ಲಿ ನಿಗಮನಾತ್ಮಕ ಅನುಮಾನ ಉಂಟು. ಅರ್ಥಶಾಸ್ತ್ರ, ಎಂಜಿನಿಯರಿಂಗ್ ಅಥವಾ ವಿಜ್ಞಾನಗಳ ಹೆಚ್ಚು ಕಡಿಮೆ ಪ್ರತಿಯೊಂದು ಜಟಿಲ ಸಮಸ್ಯೆಯಲ್ಲಿಯೂ ಒಂದು ಗಣಕ ತನ್ನ ಜ್ಞಾಪಕಕ್ಕೆ ಉಣಿಸಿದ ಸೂತ್ರವಿಧಿಗಳ ಗಣವನ್ನು ಇಂಥ ತಾರತಮ್ಯವರಿತು ಬಳಸುತ್ತದೆ.

2 ಕಲಿಕೆ: ಹೊಸ ಸಂಗತಿಗಳನ್ನು ಜ್ಞಾಪಕಕ್ಕೆ ಸೇರಿಸಿ ಅವನ್ನು ಹಿಂದಿನ ಸಂಗತಿಗಳ ದಾಸ್ತಾನಿಗೆ ಸಹಸಂಬಂಧಿಸುವ (ಕಾರಿಲೇಟ್) ಪ್ರಕ್ರಮಕ್ಕೆ ಕಲಿಕೆ ಎಂದು ಹೆಸರು. ಈ ವ್ಯಾಖ್ಯೆಯ ಪರಿಧಿಯೊಳಗೆ ಅನೇಕ ಗಣಕಗಳಿಗೆ ಈಗಾಗಲೇ ಕಲಿಕೆಯನ್ನು ಬೋಧಿಸಲಾಗಿದೆ. ಪ್ರಚೋದನೆ–ಅನುಕ್ರಿಯೆ ವಿಧಾನದಿಂದ ನಾಯಿಗಳ ಕಲಿಕೆ ವರ್ತನೆಯ ಮೇಲೆ ಪಾವ್ಲಾಫ್ ಮಾಡಿರುವ ಪ್ರಯೋಗಗಳು ಒಂದು ಮಾರ್ಗದರ್ಶೀ ನಿದರ್ಶನ. ಪಾವ್ಲಾಫನ ಪ್ರಯೋಗಗಳ ಯಂತ್ರ ಸಾಮ್ಯವೆಂದರೆ ಕ್ಲೌಡ್ ಇ. ಷ್ಯಾನ್ನನ್ ಉಪಜ್ಞಿಸಿದ ಸುವಿಖ್ಯಾತ ಇಲಿ ಮತ್ತು ಚಕ್ರವ್ಯೂಹ (ರ್‍ಯಾಟ್ ಅಂಡ್ ಮೇಜ್) ಯಂತ್ರ. ಈತನೇ ಮಾಹಿತಿ ಸಿದ್ಧಾಂತ (ಇನ್ಫರ್ಮೇಶನ್ ಥಿಯೊರಿ) ಮತ್ತು ಮಜಲು ಬೀಜಗಣಿತಗಳ (ರಿಲೇಆಲ್ಜಿಬ್ರ) ಜನಕ. ಷ್ಯಾನ್ನನನ ಪ್ರಯೋಗದ ಆಧುನಿಕ ರೂಪವೊಂದರಲ್ಲಿ ಸೂಕ್ಷ್ಮ ಎಲೆಕ್ಟ್ರಾನಿಕ್ ಮಂಡಲವಿರುವ ಒಂದು ಯಾಂತ್ರಿಕ ಇಲಿ ಉಂಟು. ಈ ಮಂಡಲವನ್ನು ಒಂದು ಗಣಕ ದೂರನಿಯಂತ್ರಣ ಮಾಡುತ್ತದೆ. ಇಲಿ ಒಂದು ಚಕ್ರವ್ಯೂಹದಲ್ಲಿ ಓಡಬಹುದು. ಈ ವ್ಯೂಹದ ಒಂದು ಕೊನೆಯಲ್ಲಿ ಓಡಬಹುದು. ಈ ವ್ಯೂಹದ ಒಂದು ಕೊನೆಯಲ್ಲಿ ವಿದ್ಯುದ್ಯಾಂತ್ರಿಕ ಸಂವೇದಕದ (ಎಲೆಕ್ಟ್ರೊಮೆಕಾನಿಕಲ್ ಸೆನ್ಸರ್)

ರೂಪದಲ್ಲಿರುವ ಒಂದು ಗುರಿ (ಗೋಲ್) ಉಂಟು. ಗುರಿಯನ್ನು ತಲುಪಿದಾಗ ಇಲಿಯನ್ನು ಪ್ರಾರಂಭ ಬಿಂದುವಿಗೆ ವರ್ಗಾಯಿಸಲಾಗುವುದು. ಆ ಬಳಿಕ ಅದು ಇನ್ನೊಂದು ಓಟವನ್ನು ತೊಡಗಬೇಕಾಗುತ್ತದೆ. ಕೈವಿಸಕ ವಿಧಾನದಿಂದ (ಟ್ರಯಲ್–ಅಂಡ್–ಎರರ್) ಇಲಿ ತನ್ನ ಹಾದಿಯಲ್ಲಿರುವ ಪ್ರತಿಯೊಂದು ತಿರುವನ್ನೂ ಸ್ಥಗಿತ ಕೊನೆಗಳನ್ನೂ ಜ್ಞಾಪಕಕ್ಕೆ ತಂದುಕೊಳ್ಳುತ್ತದೆ; ಮತ್ತು ಗುರಿಯತ್ತ ಅತ್ಯಂತ ನೇರವಾದ ಹಾದಿಯಿಂದ ಸಾಗಲು ಹಂತ ಹಂತವಾಗಿ ಕಲಿಯುತ್ತದೆ.

3 ಕ್ರೀಡೆಯನ್ನು ಆಡುವುದು: ಕಲಿಕೆಯ ಇನ್ನೊಂದು ಪ್ರರೂಪದ ಹೆಸರು ಸ್ಪರ್ಧಾತ್ಮಕ ಕಲಿಕೆ. ಇಲ್ಲಿ ಗಣಕ ಒಬ್ಬ ಮನುಷ್ಯನೊಡನೆ ಅವಿಚ್ಛಿನ್ನವಾಗಿ ಅಂತರಕ್ರಿಯೆ ನಡೆಸಿ, ತಪ್ಪುಗಳನ್ನು ಮಾಡಿ, ಪುನಃ ಅವನ್ನು ಮಾಡದಂತೆ ಕಲಿಯುತ್ತದೆ. ಕುತೂಹಲಕಾರಿಯಾದ ಒಂದು ಉದಾಹರಣೆ ಎಂದರೆ ಗಣಕವನ್ನು ಒಬ್ಬ ಮನುಷ್ಯನೊಡನೆ ಚದುರಂಗದಾಟ ಆಡುವಂತೆ ಕ್ರಮವಿಧಿಸುವಿಕೆ. ಪ್ರತಿಯೊಂದು ನಡೆಯನ್ನೂ 25 ಸಾಧ್ಯ ಬಗೆಗಳಲ್ಲಿ ಮಾಡಬಹುದೆಂದೂ ಒಂದು ಆಟ ಸುಮಾರು 60 ನಡೆಗಳವರೆಗೆ ಸಾಗುತ್ತದೆಂದೂ ಅಂಗೀಕರಿಸಿದರೆ ಸಾಧ್ಯ ಆಟಗಳ ಸಂಖ್ಯೆ ಸುಮಾರು $10^{170}$. ಖಂಡ 10ರಲ್ಲಿ ಬರೆದಿರುವ ಉಪಮೆಯನ್ನು ಸ್ಮರಿಸಿಕೊಂಡರೆ ಈ ಸಂಖ್ಯೆ ಖಗೋಳೀಯ ಮಾನಕವನ್ನು ಮೀರುತ್ತದೆ. ಐನ್‌ಸ್ಟೈನರ ಪ್ರಕಾರ ಸಮಗ್ರ ವಿಶ್ವದಲ್ಲಿರುವ ಪರಮಾಣುಗಳ ಸಂಖ್ಯೆ $10^{85}$. ಈಗ $10^{170}$ ಎನ್ನುವ ಸಂಖ್ಯೆ ಐನ್‌ಸ್ಟೈನರ ಕಲ್ಪನೆಯ ವಿಶ್ವದಲ್ಲಿ ಎಷ್ಟು ಪರಮಾಣುಗಳಿವೆಯೋ ಅಷ್ಟು ವಿಶ್ವಗಳಲ್ಲಿರುವ ಒಟ್ಟು ಪರಮಾಣುಗಳ ಸಂಖ್ಯೆ ಆಗುತ್ತದೆ; ನಿಜಕ್ಕೂ ಇದೊಂದು ಬೃಹತ್ ಸಂಖ್ಯೆ. ಭವಿಷ್ಯದಲ್ಲಿ ಸಾಧ್ಯವಾಗಬಹುದಾದ ಎಲ್ಲ ನಡೆಗಳನ್ನೂ ಪರಿಶೀಲಿಸುತ್ತ ಪ್ರತಿಯೊಂದು ನಡೆಯನ್ನೂ ಪರೀಕ್ಷಿಸುವಂತೆ ಒಂದು ಗಣಕವನ್ನು ಕ್ರಮವಿಧಿಸಿ ಆಟವನ್ನು ಆಡುವುದು ನಿಜಕ್ಕೂ ಒಂದು ಅಸಾಧ್ಯ ಕಾರ್ಯ. ಒಂದೇ ಒಂದು ಪರ್ಯಾಯವೆಂದರೆ ಮನುಷ್ಯ ಆಟಗಾರರು ಪ್ರಯುಕ್ತಿಸುವ ಆಯಕಟ್ಟುಗಳಿಗೆ ಸಮರೂಪವಾದಂಥ ಬುದ್ಧಿವಂತಿಕೆಯನ್ನು ಗಣಕ ಪ್ರದರ್ಶಿಸುವಂತೆ ಮಾಡುವುದು. ಮನುಷ್ಯರೊಡನೆ ಅವಿಚ್ಛಿನ್ನವಾಗಿ ಆಟವಾಡುತ್ತ ಮತ್ತು ಹಿಂದಿನ ತಪ್ಪುಗಳಿಂದ ಕಲಿಯುತ್ತ ಮನುಷ್ಯರು ಪ್ರದರ್ಶಿಸುವ ಆಯಕಟ್ಟುಗಳನ್ನು ಕಲಿಯಬಲ್ಲಂಥ ಒಂದು ಗಣಕ ಕ್ರಮವಿಧಿಯನ್ನು ಬೆಳೆಸಿದುದರ ಕೀರ್ತಿ ಷ್ಯಾನ್ನನಿಗೆ ಸಲ್ಲಬೇಕು. ಚದುರಂಗದಾಟವನ್ನು ಮಾಡಲು ಕ್ರಮವಿಧಿಗಳನ್ನು ಯು. ಎಸ್. ಎ ಯಲ್ಲೂ ಯು. ಎಸ್. ಎಸ್. ಆರ್. ನಲ್ಲೂ ಬೆಳೆಸಲಾಗಿದೆ. 1968ರಲ್ಲಿ ಯು.ಎಸ್.ಎ. ಮತ್ತು ಯು.ಎಸ್.ಎಸ್.ಆರ್.ಗಳ ನಡುವೆ ಗಣಕಚದುರಂಗದಾಟದಲ್ಲಿ ಪಂದ್ಯದ ಒಂದು ಶ್ರೇಣಿಯನ್ನೇ ಏರ್ಪಡಿಸಲಾಗಿತ್ತು. ಆ ಮೊದಲು ಗಣಕಗಳು ಆಯಾ ರಾಷ್ಟ್ರಗಳಲ್ಲಿನ ಮಾನವ ಆಟಗಾರರಿಂದ ಆಯಕಟ್ಟುಗಳನ್ನು ಕಲಿತಿದ್ದುವು.

4 ಕಲಿಯುವುದನ್ನು ಕಲಿಯುವುದು: ಕಲಿಕೆಯ ಸೂತ್ರ ವಿಧಿಗಳ (ಲರ್ನಿಂಗ್ ರೂಲ್ಸ್) ಒಂದು ಗಣದಿಂದ ಮಾರ್ಗದರ್ಶಿತವಾಗಿ ಮಾನವನ ಮಿದುಳು ಕಲಿಯುತ್ತದೆ ಮಾತ್ರವಲ್ಲ, ಅದು ಹೊಸ ಕಲಿಕೆಯ ಸೂತ್ರವಿಧಿಗಳನ್ನು ಸಹ ಕಲಿಯುತ್ತದೆ. ಈ ವೀಕ್ಷಣೆಯ ಆಧಾರದ ಮೇಲೆ ಎಸ್. ಅಮರೆಲ್ ಒಂದು ಸಿದ್ಧಾಂತವನ್ನು ರೂಪಿಸಿದ್ದಾರೆ. ಇದರ ಪ್ರಕಾರ ಖಚಿತವಾಗಿ ನಿರ್ದಿಷ್ಟಗೊಳಿಸಿದ ಸನ್ನಿವೇಶಗಳಲ್ಲಿ ಮನುಷ್ಯರು ಹೇಗೆ ಕಲಿಕೆಯ ಸೂತ್ರವಿಧಿಗಳನ್ನು ಕಲಿಯುತ್ತಾರೆ ಎನ್ನುವುದನ್ನು ವಿಶ್ಲೇಷಿಸಿ, ಗಣಕಗಳು ಕಲಿಯುವುದನ್ನು ಕಲಿಯಬಹುದು. ಆದರೆ ಈ ನಿರ್ದಿಷ್ಟಗೊಳಿಸಿಕೆ ಮಬ್ಬಾದಾಗ ಕಲಿಕೆ ದೋಷಪೂರ್ಣವಾಗುತ್ತದೆ. ಇಲ್ಲಿ ಮನುಷ್ಯನ ಬಹುಶ್ರುತತ್ವ ಗಣಕದ ಮೇಲೆ ವಿಜಯ ಸ್ಥಾಪಿಸುತ್ತದೆ. ಇದು ಹೇಗೂ ಇರಲಿ. ಗಣಕ ವಿಜ್ಞಾನಿಗಳು ಈ ಮುಂದಿನ ಒಂದು ಸೂಕ್ತಿಯ ಮೇಲೆ ತಮ್ಮ ಆಶಯಗಳನ್ನು ನೆಲೆಗೊಳಿಸಿದ್ದಾರೆ: ಬಹುಶ್ರುತತ್ವದಲ್ಲಿ ಆದ ನಷ್ಟ ವೇಗದಲ್ಲಿ ಭರ್ತಿ ಮಾಡಬಹುದು. ಹೀಗಿದ್ದರೂ ಸದ್ಯ ಗಣಕದ ವಿರುದ್ಧವಿರುವ ತೊಡಕುಗಳು ಅಧಿಕವಾಗಿವೆ. ಮಾನವನ ಮಿದುಳಿನಲ್ಲಿ $10^{10}$ ನ್ಯೂರಾನ್ ಕೋಶಗಳಿವೆ; ಆದರೆ ಅತ್ಯಂತ ದೊಡ್ಡ ಗಣಕದಲ್ಲೂ ಇರುವ ಕೋಶಗಳು ಕೆಲವೇ ಲಕ್ಷಗಳು. ಇಂಥ ಸುಮಾರು ಹತ್ತು ಗಣಕಗಳನ್ನು ಒಟ್ಟುಗೂಡಿಸಿದಾಗ ಕೂಡ ಅದು ಪರಿಮಾಣದಲ್ಲಿ ನಾಲ್ಕು ದರ್ಜೆಗಳಷ್ಟು ಕಡಿಮೆಯೇ ಇರುತ್ತದೆ. ಇದಕ್ಕೆ ಎದುರಾಗಿ ಮಾನವನ ಮಿದುಳಿನ ಕೋಶಗಳ ಕ್ರಿಯಾಕಾಲ ಸುಮಾರು 1 ಮಿಲಿ ಸೆಕೆಂಡ್; ಇದು ಗಣಕದ ಕ್ರಿಯಾಕಾಲಕ್ಕಿಂತ ಸುಮಾರು ಮೂರು ದರ್ಜೆಗಳಷ್ಟು ಮಾತ್ರ ಕಡಿಮೆ. ಈಗ ಮಿದುಳು ಮತ್ತು ಗಣಕದ ನಡುವೆ ಒಂದು ರೇಖೀಯ ಕೊಡುಕೊಳುವಿಕೆಯನ್ನು (ಲೀನಿಯರ್ ಬಾರ್ಟರ್) ಊಹಿಸಿಕೊಂಡ ಮೇಲೆ ಕೂಡ ಮನುಷ್ಯ ಯಂತ್ರಕ್ಕಿಂತ ಹತ್ತು ಪಟ್ಟು ಶ್ರೇಷ್ಠನಾಗುತ್ತಾನೆ. ಒಂದು ನೂರು ದೈತ್ಯಕಣಗಳು ಒಬ್ಬ ಮನುಷ್ಯನಿಗೆ ಸರಿಯಾದ ಸವಾಲಾಗಬಹುದೆಂದು ಅಂದಾಜು ಮಾಡಲಾಗಿದೆ. ಆದರೆ ಇಂಥ ಯೋಜನೆ ಅತಿ ದುಬಾರಿಯದು–1970ರ ಬೆಲೆಗಳಲ್ಲಿ ಸುಮಾರು 800 ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಇದರ ಮೇಲೆ ಹೂಡಬೇಕಾದೀತು. ಆದ್ದರಿಂದ, ಮನುಷ್ಯ–ಯಂತ್ರ ಕೊಡುಕೊಳುವಿಕೆಯ ವಾದವನ್ನು ವ್ಯಾವಹಾರಿಕವಾಗಿ ಯಾರಾದರೂ ಪರೀಕ್ಷಿಸಿದರೆ ಕೂಡ ಮುಂದಿನ ದಶಕಗಳವರೆಗೆ ಸೃಷ್ಟಿಶೀಲ ಮಾನವಚಿಂತನೆಗೆ ಅಪಾಯವೇನೂ ಇಲ್ಲ.

5 ಪ್ರಮೇಯ ಸಾಧನೆ : ಹೆಚ್ಚಿನ IQ ಪರೀಕ್ಷಣಗಳ ಸ್ವರೂಪ ಸಂಖ್ಯೆಗಳ ಮತ್ತು ಪದಗಳ ನಡುವೆ ಒಂದು ಪ್ರತಿರೂಪವನ್ನು (ಪ್ಯಾಟರ್ನ್) ಗುರುತಿಸುವುದು ಇಲ್ಲವೇ ಒಂದು ಸಂಬಂಧವನ್ನು ಸಾಧಿಸುವುದು. ಇಂಥ ಪ್ರಶ್ನೆಗಳನ್ನು ಉತ್ತರಿಸುವಲ್ಲಿ ನಿಗಮನಾತ್ಮಕ ಅನುಮಾನ, ಅನುಗಮನಾತ್ಮಕ ಅನುಮಾನ ಮತ್ತು ಸ್ವಯಂಶೋಧನಶಾಸ್ತ್ರ (ಹ್ಯೂರಿಸ್ಟಿಕ್ಸ್) ಇವನ್ನು ಅವಲಂಬಿಸಬೇಕಾಗುತ್ತದೆ. ಉದಾಹರಣೆಗೆ, ಅನುಗಮನಾತ್ಮಕ ಅನುಮಾನ ವಿಶೇಷ ಅನುಮಾನಗಳ ಗಣದಿಂದ ಒಂದು ಗಣದಿಂದ ಸಾರ್ವತ್ರಿಕ ಅನುಮಾನಗಳನ್ನು ಪಡೆಯುವ ಸಾಮರ್ಥ್ಯವನ್ನು ಬೇಡುತ್ತದೆ. ಪ್ರಮೇಯಗಳನ್ನು (ಥಿಯೊರಂಸ್) ಸಾಧಿಸುವಾಗ ಅವಶ್ಯವಾಗುವ ಆಧಾರ ಗುಣಗಳು ಏನು ಎಂಬುದರ ವಿಶ್ಲೇಷಣೆಯನ್ನು ಪೋಳ್ಯ ಎನ್ನುವವರು ವ್ಯಾಪಕವಾಗಿ ಮಾಡಿದ್ದಾರೆ. ಇವು ಮತ್ತು ಇತರ ಇಂಥ ಅನ್ವೇಷಣೆಗಳು ಯು.ಎಸ್.ಎ. ಯ ಗಣಕವಿಜ್ಞಾನಿಗಳಾದ ನೆವೆಲ್, ಸೈಮನ್ ಮತ್ತು ಷಾ ಅವರಿಗೆ ಸಮಸ್ಯಾ ಪರಿಹಾರ ಮಾಡಲು ಗಣಕಕ್ರಮವಿಧಿಗಳನ್ನು ತಯಾರಿಸುವ ದಿಶೆಯಲ್ಲಿ ಸಾಕಷ್ಟು ನೆರವು ನೀಡಿವೆ. ಸಾರ್ವತ್ರಿಕ ಸಮಸ್ಯಾ ಪರಿಹಾರಕ (ಜನರಲ್ ಪ್ರಾಬ್ಲೆಮ್ ಸಾಲ್ವರ್) ಎಂಬ ಅವರ ಕ್ರಮವಿಧಿ ಪ್ರತೀಕಗಳ ಮೇಲೆ, ಒಬ್ಬ ಕಾಲೇಜ್ ವಿದ್ಯಾರ್ಥಿ ಒಂದು ಉತ್ಪನ್ನವನ್ನು ವಿಶ್ಲೇಷಣಾತ್ಮವಾಗಿ ಅನುಕಲಿಸುವಾಗ ಮಾಡುವಂತೆ, ಕೈವಾಡ ನಡೆಸಬಲ್ಲುದು. ಅದು ಸಂಪೂರ್ಣವಾಗಿ ಹೊಸ, ಕೆಲವು ವೇಳೆ ಉದ್ದುದ್ದವಾದುದಾಗಿದ್ದರೂ ಸಾಧನೆಗಳನ್ನು ಜ್ಯಾಮಿತಿಯ ಹಾಗೂ ಬೀಜಗಣಿತದ ಕೆಲವು ಸಮಸ್ಯೆಗಳಿಗೆ ನೀಡಿದೆ. ಇವು ಈ ಕ್ರಮವಿಧಿಯನ್ನು ತಯಾರಿಸಿದವರನ್ನು ಕೂಡ ಚಕಿತಗೊಳಿಸಿವೆ.

6 ಸಂಭಾಷಣೆಯಲ್ಲಿ ವರ್ತನೆ : ಗಣಕ ಒಬ್ಬ ಮನುಷ್ಯನೊಡನೆ ಅರ್ಥಪೂರ್ಣವಾದ ಸಂಭಾಷಣೆಯನ್ನು ನಡೆಸಬಲ್ಲುದೇ? ಇದೊಂದು ಬಹುಮುಖ್ಯ ಪ್ರಶ್ನೆ. ಇದಕ್ಕೆ ಒಂದು ಆಂಶಿಕ ಉತ್ತರವನ್ನು ಮಾತ್ರ ಕೊಡಬಹುದಷ್ಟೆ. ಮೊದಲಾಗಿ, ಸಂಭಾಷಣೆಯ ವಿಧಾನವನ್ನು ವಿವರಿಸೋಣ.

ಟೆಲಿಟೈಪ್‌ರೈಟರುಗಳು ಸುಲಭವಾಗಿ ದೊರೆಯುವ ಒಂದು ಸಂಪರ್ಕ ಮಾಧ್ಯಮ. ಮನುಷ್ಯ ತನ್ನ ಪ್ರಶ್ನೆಗಳನ್ನು ಬೆರಳಚ್ಚಿಸಬಹುದು; ಅವನ್ನು ಗಣಕ ಬೆರಳಚ್ಚಿಸಿ ಉತ್ತರಿಸಬಹುದು. ಇದು ಹೇಗೂ ಇರಲಿ. ವಿದ್ಯುತ್ಕಾಂತ ಸಲಕರಣೆಗಳನ್ನು ಅಭಿವೃದ್ಧಿಸುವ ದಿಶೆಯಲ್ಲಿ ಸಾಕಷ್ಟು ಪ್ರಯತ್ನವನ್ನು ಮಾಡಲಾಗಿದೆ. ಅವನ್ನು ಗಣಕದೊಡನೆ ಉಪಯೋಗಿಸಿದಾಗ ಕೃತಕ ವಾಕ್ಕನ್ನು ಉಂಟುಮಾಡಬಲ್ಲವು– ಎಂದರೆ ಗಣಕವೇ ಸ್ವತಃ ಉತ್ಪಾದಿಸಿದ ಮಾತು, ಕಾಂತಪಟ್ಟಿಕಾ ಪುನರುತ್ಪಾದನೆ ಅಲ್ಲ. ಮಾತಿನಲ್ಲಿ ಬಳಸುವ ಪದಗಳ ವಾಗ್ರೋಹಿತ ಪ್ರತಿರೂಪಗಳ (ಸ್ಪೀಚ್–ಸ್ಪೆಕ್ಟ್ರೊಗ್ರಾಫ್ ಪ್ಯಾಟರ್ನ್ಸ್) ಒಂದು ಅರಿವಿನಿಂದ ಧ್ವನಿಪೆಟ್ಟಿಗೆಯ (ಲ್ಯಾರಿಂಕ್ಸ್) ಕ್ರಿಯೆಯನ್ನು ಅನುಕರಿಸುವುದರ ಮೂಲಕ ಇದನ್ನು ಮಾಡುವುದು ಸಾಧ್ಯವಾಗಿದೆ. ಇಂಥ ಒಂದು ಅನುಕರಣಕಾರಿಯನ್ನು, ಉದಾಹರಣೆಗೆ ಮುಂಬಯಿಯ ಟಿ. ಐ. ಎಫ್. ಆರ್.ನಲ್ಲಿ ರಚಿಸಲಾಗಿದೆ. ಇದು CDC–3600 ಗಣಕಕ್ಕೆ ಮನುಷ್ಯನ ಸ್ವರವನ್ನೇ ಹೋಲುವಂಥ ಸ್ವರದಿಂದ ಮಾತಾಡಲು ಸಹಾಯಕವಾಗಿದೆ. ಈ ಗಣಕವನ್ನು ಸಮರ್ಪಕವಾಗಿ ಕ್ರಮವಿಧಿಸಿದರೆ ಇದು, ಉದಾಹರಣೆಗೆ, ಕನ್ನಡ, ತಮಿಳು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತಾಡಬಲ್ಲುದು. ಕರ್ನಾಟಕ ಸಂಗೀತದ ರಾಗಗಳನ್ನು ಸಮರ್ಪಕವಾಗಿ ಫೋರ್ಟ್ರಾನ್ ಭಾಷೆಯಲ್ಲಿ ಸಂಕೇತೀಕರಿಸಿದರೆ ಈ ಗಣಕ ಕರ್ನಾಟಕ ಸಂಗೀತವನ್ನು ಕೂಡ ಹಾಡಬಲ್ಲುದು. ಆದರೆ ವಿಪರ್ಯಯ ಸಮಸ್ಯೆ, ಎಂದರೆ ಮನುಷ್ಯರು ಮಾತಾಡುವ ಪದಗಳನ್ನು ಅರ್ಥವಿಸುವ ಪ್ರಶ್ನೆ, ಬಲು ಹೆಚ್ಚು ಕಷ್ಟತರವಾದದ್ದು. ಗಣಕ ಕಿವಿಯನ್ನು ಅನುಕರಿಸುವಂತೆ ಮಾಡಲು ಪ್ರಪಂಚದಾದ್ಯಂತ ಬಹುಸಂಖ್ಯೆಯ ಸಂಶೋಧನ ಯೋಜನೆಗಳು ಪ್ರಚಲಿತವಾಗಿವೆ. ಯಶಸ್ವಿಯಾದ ಇಂಥ ಒಂದು ಮಾದರಿಯನ್ನು, ಅದು ಬಲು ದುಬಾರಿಯದಾಗಿದ್ದರೂ, ಯು.ಎಸ್.ಎ. ಯ ಬೆಲ್ ಟೆಲಿಫೋನ್ ಪ್ರಯೋಗಮಂದಿರದಲ್ಲಿ ರಚಿಸಲಾಗಿದೆ.

ಇನ್ನೊಂದು ಇಂದ್ರಿಯ ಸಂಪರ್ಕಾವಶ್ಯಕತೆಯೆಂದರೆ ಕಣ್ಣಿನ ಅನುಕರಣೆ. ಗಣಕವಿಜ್ಞಾನದಲ್ಲಿ ಈ ಉದ್ದೇಶವಿರುವ ಅನ್ವೇಷಣೆಗಳನ್ನು ಪ್ರತಿರೂಪವನ್ನು ಗುರುತಿಸುವ ಪ್ರಯೋಗಗಳು (ಪ್ಯಾಟರ್ನ್ ರೆಕಗ್ನಿಷನ್ ಎಕ್ಸ್‌ಪೆರಿಮೆಂಟ್ಸ್) ಎಂಬುದಾಗಿ ವರ್ಗೀಕರಿಸಲಾಗಿದೆ. ದೃಶ್ಯ ಬಿಂಬವನ್ನು ಕ್ರಮವೀಕ್ಷಿಸಿ ಗಣಕಕ್ಕೆ ಸುಪರಿಚಿತವಾದ ಭಾಷೆಗೆ ಸಂಕೇತೀಕರಿಸಲು ಟೆಲಿವಿಷನ್ನಿನ ತತ್ತ್ವವನ್ನು ಬಳಸುವ ಸಾಧ್ಯತೆ ಹೇಗೂ

ಉಂಟು. ತರುವಾಯ ಗಣಕ ಆ ಮೊದಲೇ ಅದಕ್ಕೆ ಮಾತುಗಳಲ್ಲಿ ವಿವರಿಸಿ ಪೂರೈಕೆ ಮಾಡಿರುವಂಥ ಚಿತ್ರಗಳಿಂದ ಮಾರ್ಗದರ್ಶಿತವಾಗಿ ಸಂಕೇತಗಳಿಂದ ಚಿತ್ರಗಳನ್ನು ಪುನಾರಚಿಸಿ ಅರ್ಥವಿಸುತ್ತದೆ. ಅವಿಚ್ಛಿನ್ನವಾದ ಹಾಗೂ ಚಲಿಸುತ್ತಿರುವ ಪ್ರತಿರೂಪಗಳನ್ನು ನೋಡಿ ಗುರುತಿಸಿ ಸಂಶಯಾತೀತವಾಗಿ ಅವನ್ನು ಅರ್ಥವಿಸಬಲ್ಲ ಯಂತ್ರಗಳು ದೂರದ ಭವಿಷ್ಯದಲ್ಲಿ ಹುದುಗಿವೆ ಎಂದು ಇದುವರೆಗಿನ ಸಮಸ್ತ ಪ್ರಯತ್ನಗಳೂ ಸೂಚಿಸುತ್ತವೆ. ಆದರೂ ದೃಷ್ಟಿ ಗ್ರಹಣೆಯ ಕೆಲವು ಯಶಸ್ವೀ 'ಅಣಕ'ಗಳನ್ನು ತಯಾರಿಸಲಾಗಿದೆ. ಇವುಗಳ ಪೈಕಿ ಒಂದು ಲೈಟ್ ಪೆನ್ ಮತ್ತು ಸಿ. ಆರ್. ಟಿ. ಡಿಸ್‌ಪ್ಲೇ 'ಎಕ್ವಿಪ್‌ಮೆಂಟ್' (ಚಿತ್ರ 29). ಈ ಸರಂಜಾಮುಗಳಲ್ಲಿನ ಲೈಟ್-ಪೆನ್ನಿನಿಂದ ಕೆಲವು ದೃಕ್ ಪ್ರತಿರೂಪಗಳನ್ನು (ವಿಶುವಲ್ ಪ್ಯಾಟರ್ನ್ಸ್) ಟೆಲಿವಿಷನ್ ಪ್ರರೂಪದ ಒಂದು ತೆರೆಯ ಮೇಲೆ ಬಿಡಿಸಬಹುದು. ಈ ತೆರನಾಗಿ ರಚಿತವಾದ ಪ್ರತಿದೀಪ್ತಿಶೀಲಬಿಂಬ (ಫ್ಲೂರೆಸೆಂಟ್ ಇಮೇಜ್) ಸಂಕೇತಿಕೃತವಾಗಿ ಗಣಕದ ಜ್ಞಾಪಕಕ್ಕೆ ವರ್ಗಾಯಿಸಲ್ಪಡುತ್ತದೆ. ಇಲ್ಲಿ ಒಂದು ಕ್ರಮವಿಧಿ ಬಿಂಬವನ್ನು ಅರ್ಥವಿಸುತ್ತದೆ. ಕ್ರಮವಿಧಿಯಲ್ಲಿನ ಒಂದು ನಿರ್ದೇಶನ ಗಣಕಕ್ಕೆ ಆಜ್ಞೆ ವಿಧಿಸಿದಾಗ ಅದು ಒಂದು ದೃಕ್ಚಿತ್ರವನ್ನು ಕೂಡ ತೆರೆಯ ಮೇಲೆ ಪ್ರದರ್ಶಿಸಬಲ್ಲುದು. ಇದನ್ನು ಮನುಷ್ಯ ಪರೀಕ್ಷಿಸಿ ಸರಿಪಡಿಸಬಹುದು.

ಆದ್ದರಿಂದ ಪ್ರಾಥಮಿಕ ಸ್ವರೂಪದಲ್ಲಿ ಕೆಲವು ದೃಷ್ಟಿಗ್ರಹಣ ಅನುಕರಣಕಾರಿಗಳು ಈಗಾಗಲೇ ದೊಡ್ಡ ಗಣಕಗಳಲ್ಲಿ ಇವೆ ಎಂಬುದು ಸ್ಪಷ್ಟವಾಗುತ್ತದೆ. ಇಂಥವುಗಳಿದ್ದಲ್ಲಿ ಗಣಕ ವಾಸ್ತವವಾಗಿ ಮಾತಿನ ಸಂಭಾಷಣೆಯನ್ನು ನಡೆಸಬಲ್ಲುದು. ಅರ್ಥಪೂರ್ಣವಾದ ಸಂಭಾಷಣೆಯ ವರ್ತನೆಯನ್ನು ಗಣಕ ಪ್ರದರ್ಶಿಸಬೇಕಾದರೆ ಅದಕ್ಕೆ ಮನುಷ್ಯರ



**ಚಿತ್ರ 29. ಲೈಟ್‌ಪೆನ್ ಉಪಕರಣವನ್ನು ಉಪಯೋಗಿಸಿ ಒಂದು ಚೌಕಕೃತಿಯ ಪ್ರತಿರೂಪವನ್ನು ಗಣಕದ ಜ್ಞಾಪಕಾಂಗಕ್ಕೆ ವರ್ಗಾಯಿಸುವುದು**

ನೈಸರ್ಗಿಕ ಭಾಷೆಯನ್ನೂ ಅವರ ಕೆಲವು ಅನುಭವ ಕ್ಷೇತ್ರಗಳಿಗೆ ಸಂಬಂಧಿಸಿದ ಭಾವನೆಗಳನ್ನೂ ಕಲಿಸಲೇಬೇಕು. ಎಲಿಜಾ (ELIZA) ಎನ್ನುವ ಹೆಸರಿನ ಒಂದು ಕ್ರಮವಿಧಿ ಉಂಟು. ಅದು ಒಂದು ಗಣಕವನ್ನು ಒಬ್ಬ ಮನುಷ್ಯನೊಡನೆ ಅರ್ಥಪೂರ್ಣವಾಗಿ ಸಂಭಾಷಣೆಯನ್ನು ಮುಂದುವರೆಸಿಕೊಂಡು ಹೋಗುವಂತೆ ಸಿದ್ಧಮಾಡಬಲ್ಲುದು. ಈ ಯೋಜನೆಯನ್ನು ಬಳಸಿಕೊಂಡು ಟಿ. ಐ. ಎಫ್. ಆರ್. ನಲ್ಲಿ ಒಂದು ಪ್ರಯೋಗವನ್ನು ನಡೆಸಲಾಯಿತು. CDC-3600 ಗಣಕ ಮತ್ತು ಟಿ. ಐ. ಎಫ್. ಆರ್. ನ ಒಬ್ಬರು ವಿಜ್ಞಾನಿಯ ನಡುವೆ ಇಂಗ್ಲಿಷ್ ಭಾಷೆಯಲ್ಲಿ ನಡೆದ ಸಂಭಾಷಣೆಯ ಒಂದು ಅಂಶವನ್ನು ಕನ್ನಡಕ್ಕೆ ಅನುವಾದಿಸಿ ಮುಂದೆ ಬರೆದಿದೆ:

A : ನಾನು ಬಹಳಷ್ಟು ಕಾಲ ನಿರುತ್ಸಾಹಿ ಆಗಿರುತ್ತೇನೆ.

B : ನೀನು ನಿರುತ್ಸಾಹಿ ಆಗಿದ್ದೀಯ ಎಂದು ಕೇಳಲು ನನಗೆ ವಿಷಾದವಾಗುತ್ತದೆ.

A : ಅದು ನಿಜ. ನಾನು ಅಸುಖಿ.

B : ಇಲ್ಲಿಗೆ ಬರುವುದರಿಂದ ನಿನಗೆ ಅಸುಖಿಯಾಗದಂತೆ ನೆರವು ದೊರೆಯುವುದೆಂದು ನೀನು ಭಾವಿಸುವೆಯಾ?

A : ನನಗೆ ಸ್ವಲ್ಪ ನೆರವು ಬೇಕು. ಅದಂತೂ ಖಂಡಿತವೆಂದು ತೋರುತ್ತದೆ.

B : ನಿನಗೆ ಸ್ವಲ್ಪ ನೆರವು ದೊರೆತರೆ ಅದರ ಪರಿಣಾಮವೇನಾದೀತು ?

A : ಪ್ರಾಯಶಃ ನಾನು ನನ್ನ ತಾಯಿಯೊಡನೆ ಹೊಂದಿಕೊಂಡಿರಲು ಕಲಿತೇನು.

B : ನಿನ್ನ ಕುಟುಂಬದ ವಿಚಾರ ನನಗೆ ಹೆಚ್ಚಿಗೆ ಹೇಳು.

A : ತಾಯಿ ನನ್ನ ವಿಷಯ ಎಚ್ಚರ ತೆಗೆದುಕೊಳ್ಳುತ್ತಾಳೆ.

B : ನಿನ್ನ ಕುಟುಂಬದಲ್ಲಿ ಬೇರೆ ಯಾರು ನಿನ್ನ ವಿಷಯ ಎಚ್ಚರ ತೆಗೆದುಕೊಳ್ಳುತ್ತಾರೆ?

A : ನನ್ನ ತಂದೆ.

B : ನಿನ್ನ ತಂದೆ ?

A : ಕೆಲವು ವಿಷಯಗಳಲ್ಲಿ ನೀನು ನನ್ನ ತಂದೆಯಂತೆ.

B : ಏನು ಹೋಲಿಕೆಯನ್ನು ನೀನು ನೋಡುವೆ ?

A : ನೀನು ಹೆಚ್ಚು ಜಗಳಗಂಟಿಯಲ್ಲ.

B : ನಾನು ಹೆಚ್ಚು ಜಗಳಗಂಟಿಯಲ್ಲ ಎಂದು ನೀನು ಯೋಚಿಸಲು ಕಾರಣವೇನು?

(ಮೇಲಿನ ಸಂಭಾಷಣೆಯಲ್ಲಿ A ಮನುಷ್ಯ, B ಗಣಕ. ಈ ಸಂಭಾಷಣೆಯಲ್ಲಿ ಗಣಕ ಒಬ್ಬ ಹವ್ಯಾಸಿ ಮನೋವಿಜ್ಞಾನಿಯನ್ನು ಅನುಕರಿಸುವಂತೆ ಅದನ್ನು ಕ್ರಮವಿಧಿಸಲಾಗಿತ್ತು. ಸಂಭಾಷಣೆಯ ಪೂರ್ತಿ ಕಾಲ ಗಣಕಕ್ಕೆ ಯಾವ ಮನುಷ್ಯನಿಂದಲೂ ನೆರವು ದೊರೆಯಲಿಲ್ಲ.)

ಗಣಕಗಳ ಈ ಮೇಲಿನ ಸಿದ್ಧಿಗಳು ಮೂಲಭೂತ ಜ್ಞಾನಮೀಮಾಂಸೀಯ ವಿವಾದವನ್ನು ಇನ್ನೂ ಪರಿಹಿಸಲಾರವು. ಹೆಚ್ಚೆಂದರೆ, ಮೊದಲಿಗೆ ಮಾನವ ಚಿಂತನೆಯಿಂದ ಮಾತ್ರ ಸಾಧ್ಯವಾಗುತ್ತಿದ್ದ ಹಲವಾರು ಕ್ರಿಯೆಗಳನ್ನು ಗಣಕಗಳು ದಕ್ಷವಾಗಿ ನಿರ್ವಹಿಸಬಲ್ಲವು ಎಂದು ಹೇಳಬಹುದು, ಅಷ್ಟೆ. ಸ್ಪಷ್ಟವಾಗಿ ಗುರುತಿಸಲಾಗುವ ಮತ್ತು ನಿಸ್ಸಂದಿಗ್ಧವಾಗಿ ವ್ಯಾಖ್ಯಾನಿಸಬಲ್ಲ ನಿರ್ವಹಣ ಕ್ಷೇತ್ರಗಳಿಗೆ ಪರೀಕ್ಷಣಗಳು ಸೀಮಿತವಾಗಿರುವಾಗ ಮಾತ್ರ ಒಂದು ಗಣಕ ಮತ್ತು ಒಬ್ಬ ಮನುಷ್ಯನ ನಡುವೆ ತುಲನೆಗಳನ್ನು ಮಾಡಬಹುದು. ಆದ್ದರಿಂದ ಒಂದು ಯಂತ್ರವನ್ನು ಮನುಷ್ಯನ ಪೂರ್ಣ ಸೌಕರ್ಯಗಳೊಡನೆ, ಈ ಪೂರ್ಣತೆಯ ಘಟಕ ಸೌಕರ್ಯಗಳೊಡನೆ, ಈ ಪೂರ್ಣತೆಯ ಘಟಕ ಸೌಕರ್ಯಗಳನ್ನು ನಿಸ್ಸಂದಿಗ್ಧವಾಗಿ ವ್ಯಾಖ್ಯಾಸಿದ ವಿನಾ, ಹೋಲಿಸುವುದು ಅತಾರ್ಕಿಕವೆನ್ನಿಸುತ್ತದೆ.

ಜ್ಞಾನಮೀಮಾಂಸೆಗೆ ಕೆಲವು ಮಾನವಲಕ್ಷಣಗಳ ಔಚಿತ್ಯದ ಪ್ರಶ್ನೆಯೂ ಉಂಟು. ಬೀಳುತ್ತಿದ್ದ ಸೇಬು ನ್ಯೂಟನನಲ್ಲಿ ಪ್ರತಿಭೆಯ ಕಿಡಿಯನ್ನು ಕುದುರಿಸಲು ಪ್ರೇರಕವಾಗಿರಬಹುದು. ಈ ಪ್ರಚೋದನೆ ನ್ಯೂಟನನಲ್ಲಿ ಚಿಂತನಾಪ್ರಕ್ರಮಗಳ ಒಂದು ಶೃಂಖಲಾ ಪ್ರತಿಕ್ರಿಯೆಯನ್ನೇ ಪ್ರಾರಂಭಿಸಿ ಒಂದು ಅನುಕ್ರಿಯೆಯಲ್ಲಿ ಅಂತ್ಯ ಕಂಡಿತು- ಎಂದರೆ ಗುರುತ್ವಾಕರ್ಷಣ ಸಿದ್ಧಾಂತ. ಇಲ್ಲಿ ಮೂಡುವ ಪ್ರಶ್ನೆ ಎಂದರೆ, ಜೈವಿಕ ಅವಶ್ಯಕತೆಯಾಗಿರುವ ಈ 'ಪ್ರೇರಣೆ' ಒಂದು ಅಜೈವಿಕ ವಸ್ತುವಾಗಿರುವ ಗಣಕವನ್ನು ಕುದುರಿಸಲು ಅವಶ್ಯಕವೇ ಎನ್ನುವುದು. ನಾವು ಅಪೇಕ್ಷಿಸುವ ಅಂತಿಮ ಫಲಿತಾಂಶ ಗುರುತ್ವಾಕರ್ಷಣೆಯ ಒಂದು ಸಿದ್ಧಾಂತವಾದರೆ ಅದನ್ನು ಪ್ರಯತ್ನಿಸುವಂತೆ, ತಾತ್ವಿಕವಾಗಿ, ಒಂದು ಗಣಕವನ್ನು ಕ್ರಮವಿಧಿಸಬಹುದು. ಆದರೆ ಅಂತಿಮ ಫಲಿತಾಂಶವನ್ನು ಅಪೇಕ್ಷಿಸದಿರುವಾಗ-ನ್ಯೂಟನನ ಸಂದರ್ಭದಲ್ಲಿ ನಡೆದದ್ದು ಇದೇ ತಾನೇ- ಪ್ರತಿರೂಪವನ್ನು ಪರಿಪೂರ್ಣವಾಗಿ ಗುರುತು ಹಿಡಿಯಬಲ್ಲ ವಿಭಾಗವಿರುವ ಒಂದು ಗಣಕವನ್ನು ಅದು ತಿಳಿಯಬಲ್ಲ ಪ್ರತಿಯೊಂದು ದೃಕ್ ಪ್ರತಿರೂಪವನ್ನು ವಿಶ್ಲೇಷಿಸಿ ಅನುಗಮನಾತ್ಮಕ ಅನುಮಾನಗಳನ್ನು ಪಡೆಯುವ ದಿಶೆಯಲ್ಲಿ ಕೆಲಸ ಮಾಡುವಂತೆ ಕ್ರಮವಿಧಿಸಬಹುದು; ಹೀಗೆ ಮಾಡುವಾಗ ಅನುಮಾನ ಸಂತೃಪ್ತಸ್ಥಿತಿಗೆ ಬರುವವಲ್ಲಿವರೆಗೆ ಒಂದೊಂದು ಸಲವೂ ಗಣಕ ಸಾರ್ವತ್ರೀಕರಣವನ್ನು ಪ್ರಯತ್ನಿಸಬೇಕು. ಸಾಕಷ್ಟು ದೊಡ್ಡದಾದ ಗಣಕಗಳನ್ನು ಪರಿಪೂರ್ಣ ಅನುಗಮನಾತ್ಮಕ ಅನುಮಾನಗಳನ್ನು ಪಡೆಯುವಂತೆ ಕ್ರಮವಿಧಿಸಬಹುದಾದರೆ ಅವು ಏಕೆ ವಿಶ್ವ ಸಿದ್ಧಾಂತಗಳನ್ನು ರಚಿಸಲು ಕಲಿಯುವುದನ್ನು ಕಲಿಯಬಾರದು ಎನ್ನುವುದಕ್ಕೆ ಯಾವ ಕಾರಣವೂ ಇಲ್ಲ. ಪ್ರಸಕ್ತ ಖಂಡದ ಪ್ರಾರಂಭದಲ್ಲಿ ಎತ್ತಿದ ಮೂಲಭೂತ ಜ್ಞಾನಮೀಮಾಂಸೀಯ ಪ್ರಶ್ನೆಯನ್ನು ಪರಿಹರಿಸಲು ಮಿದುಳಿನ ಅಂಗರಚನೆ ಮತ್ತು ಗಣಕ ಆಲೇಖ್ಯಗಳು ಇವೇ ಮೊದಲಾದ ಕಾರಣಗಳ, ಅವು ಅರ್ಥಪೂರ್ಣವಾಗಿಯೇ ಇದ್ದರೂ, ತುಲನೆ ಅಲ್ಲ ಬದಲು ಪ್ರಚೋದನೆ -ಅನುಕ್ರಿಯೆ ಸಂಬಂಧಗಳಂಥ ಪರಿಣಾಮಗಳು ಎಂಬುದನ್ನು ಮೇಲಿನ ಚರ್ಚೆಗಳು ತೋರಿಸುತ್ತವೆ. ಇಂದು ಈ ಚರ್ಚೆಗಳು ಬೇರೆಯೇ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಏಕೆಂದರೆ ಇಂದು ಮನುಷ್ಯ ತನ್ನೊಳಗೆಯೇ ಗಣಕದ ಭಾಗಗಳನ್ನು ಜೋಡಿಸಿಕೊಂಡು ತಾನು ಮತ್ತು ಗಣಕ ಎರಡೂ ಒಟ್ಟೊಟ್ಟಿಗೆ ಚಿಂತಿಸಿ ನಿರ್ಧಾರ ತೆಗೆದುಕೊಳ್ಳಬಹುದಾದ ನಿದರ್ಶನಗಳು ನಮ್ಮ ಮುಂದಿವೆ. ಮೂಲಭೂತ ಜ್ಞಾನಮೀಮಾಂಸೀಯ ಪ್ರಶ್ನೆಗಳು ಎಂದಿಗಿಂತ ಹೆಚ್ಚು ಸಂಕೀರ್ಣವಾಗುತ್ತಿವೆ ಎಂದು ಮಾತ್ರ ಹೇಳಬಹುದು. (ಎನ್.ಎಸ್.)

**ಗಣಕ ಕ್ಯಾಬಿನೆಟ್‌ಗಳು:** ಗಣಕವನ್ನು ಆಯ್ಕೆ ಮಾಡುವಾಗ, ಸೂಕ್ತವಾದ ಗಣಕ ಕ್ಯಾಬಿನೆಟ್‌ಅನ್ನು ಆರಿಸುವುದು ಅತ್ಯಗತ್ಯವಾಗಿದೆ. ಕೇವಲ ಹೊರ ವಿನ್ಯಾಸ, ಬೆಲೆ, ಬಣ್ಣ ಅಥವಾ ಆಕರ್ಷಣೆಯ ಆಧಾರದ ಮೇಲೆ ಗಣಕದ ಕ್ಯಾಬಿನೆಟ್ ಆಯ್ಕೆ ಮಾಡುವುದಕ್ಕಿಂತ ಕ್ಯಾಬಿನೆಟ್‌ನ ವಿನ್ಯಾಸ, ವಿಸ್ತರಣೆಗಿರುವ ಸ್ಥಳಾವಕಾಶ, ತಾಪಮಾನ ನಿಯಂತ್ರಣ ವ್ಯವಸ್ಥೆ, ವಿದ್ಯುತ್ ಬಳಕೆ ಮೊದಲಾದ ವಿಷಯಗಳ ಬಗ್ಗೆ ಹೆಚ್ಚಿನ ಮಹತ್ವ ನೀಡುವುದು ಅಗತ್ಯವಾಗಿದೆ.

ಕ್ಯಾಬಿನೆಟ್‌ಗಳಲ್ಲಿ ನಾಲ್ಕು ಪ್ರಮುಖ ಮಾದರಿಗಳು ದೊರೆಯುತ್ತವೆ.

1. ಪೂರ್ಣ ಟವರ್ ಮಾದರಿ (ಫುಲ್ ಟವರ್ ಮಾಡೆಲ್) :

ಮಾರುಕಟ್ಟೆಯಲ್ಲಿ ಈ ಮಾದರಿಯ ಕ್ಯಾಬಿನೆಟ್‌ಗಳು ಹೆಚ್ಚಾಗಿ ಸಿಗುತ್ತವೆ. ಈ ಮಾದರಿಯಲ್ಲಿ, ಅಧಿಕ ಸಂಖ್ಯೆಯಲ್ಲಿ ಡ್ರೈವ್‌ಗಳನ್ನು ಅಳವಡಿಸಲು ಸಾಧ್ಯವಾಗುವಂತೆ ಹಲವಾರು ಡ್ರೈವ್ ಸ್ಥಾನಗಳು (ಡ್ರೈವ್ ಬೆ) ಲಭ್ಯವಿರುತ್ತದೆ ಮತ್ತು ಈ ಡ್ರೈವ್‌ಗಳಿಗೆ ಅಗತ್ಯವಾದ ವಿದ್ಯುತ್ ಪೂರೈಕೆ ಸಾಧನಗಳು ಲಭ್ಯವಿರುತ್ತವೆ.

2. ಮಿನಿ ಟವರ್ ಮಾದರಿ (ಮಿನಿ ಟವರ್ ಮಾಡೆಲ್):

ಈ ಮಾದರಿಯ ಕ್ಯಾಬಿನೆಟ್‌ಗಳು ಹೆಚ್ಚು ಜನಪ್ರಿಯವಾಗಿವೆ. ಸುಲಭವಾಗಿ ಬಳಸಬಹುದಾದ ವಿನ್ಯಾಸ ಮತ್ತು ಡೆಸ್ಕ್ ಟಾಪ್ ಮಾದರಿ ಕ್ಯಾಬಿನೆಟ್‌ಗಳಿಗಿಂತ ಹೆಚ್ಚು ಸ್ಥಳಾವಕಾಶವನ್ನು ಈ ಮಾದರಿಯ ಕ್ಯಾಬಿನೆಟ್‌ಗಳು ಹೊಂದಿವೆ. ಈ ಕ್ಯಾಬಿನೆಟ್‌ಗಳಲ್ಲಿ ತಾಪಮಾನ ನಿಯಂತ್ರಣ ವ್ಯವಸ್ಥೆ ಉತ್ತಮವಾಗಿದೆ.

3. ಮಧ್ಯಮ ಟವರ್ ಮಾದರಿ (ಮಿಡ್ ಟವರ್ ಮಾಡೆಲ್):

ಈ ಮಾದರಿಯ ಕ್ಯಾಬಿನೆಟ್‌ಗಳು ಪೂರ್ಣ ಟವರ್ ಮಾದರಿಯ ಕ್ಯಾಬಿನೆಟ್‌ಗಳಿಗಿಂತ ಎತ್ತರ ಮತ್ತು ಗಾತ್ರದಲ್ಲಿ ಕಡಿಮೆಯದಾಗಿರುತ್ತವೆ. ಮಿನಿ ಟವರ್ ಮಾದರಿಯ ಕ್ಯಾಬಿನೆಟ್‌ಗಳಿಗಿಂತ ಈ ಮಾದರಿಯ ಕ್ಯಾಬಿನೆಟ್‌ಗಳಲ್ಲಿ ಸ್ಥಳಾವಕಾಶ ಅಧಿಕವಾಗಿರುತ್ತದೆ. ಆದ್ದರಿಂದ ಮಿನಿ ಟವರ್ ಮಾದರಿ ಕ್ಯಾಬಿನೆಟ್‌ಗಿಂತ ಹೆಚ್ಚು ಸ್ಥಳಾವಕಾಶ ಬೇಕು; ಆದರೆ ಪೂರ್ಣ ಟವರ ಮಾದರಿಯ ಕ್ಯಾಬಿನೆಟ್ ಬೇಡವೆನ್ನುವ ಗ್ರಾಹಕರು, ಮಧ್ಯಮ ಟವರ್ ಮಾದರಿಯ ಕ್ಯಾಬಿನೆಟ್‌ಗಳನ್ನು ಬಯಸುತ್ತಾರೆ.

4. ಡೆಸ್ಕ್ ಟಾಪ್ ಮಾದರಿ (ಡೆಸ್ಕ್ ಟಾಪ್ ಮಾಡೆಲ್):

ಈ ಮಾದರಿಯ ಕ್ಯಾಬಿನೆಟ್‌ನ್ನು ಅಡ್ಡವಾಗಿ ಇರಿಸಿ, ಇದರ ಮೇಲೆ ಗಣಕ ಮಾನಿಟರ್ ಇರಿಸಿ, ಕಂಪ್ಯೂಟರ ಬಳಸಲಾಗುತ್ತದೆ. ಈ ಮಾದರಿಯ ಕ್ಯಾಬಿನೆಟ್‌ಗಳಲ್ಲಿ ಉತ್ತಮವಾದ ತಾಪನಿಯಂತ್ರಣ ವ್ಯವಸ್ಥೆ ಇಲ್ಲದಿರುವುದು ಕೊರತೆಯಾಗಿದೆ.

ಪ್ರಸ್ತುತವಾಗಿ ಗಣಕ ಮದರ್ ಬೋರ್ಡ್ ಪ್ರಮುಖವಾಗಿ ATX ಮತ್ತು Micro ATX ವಿನ್ಯಾಸದಂತೆ ಲಭ್ಯವಾಗಿರುವುದರಿಂದ ಅದಕ್ಕೆ ಪೂರಕವಾಗಿ ATX ಮತ್ತು Micro ATX ಕ್ಯಾಬಿನೆಟ್‌ಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. Micro ATX ಕ್ಯಾಬಿನೆಟ್‌ಗಳು ಗಾತ್ರದಲ್ಲಿ ಮತ್ತು ಬೆಲೆಯಲ್ಲಿ ATX ಕ್ಯಾಬಿನೆಟ್‌ಗಳಿಗಿಂತ ಕಡಿಮೆ ಇರುತ್ತವೆ. ಗಣಕ ಮದರ್ ಬೋರ್ಡ್ ತಂತ್ರಜ್ಞಾನ ಅಭಿವೃದ್ಧಿ ಹೊಂದಿದಂತೆ, ಹೊಸ ಮಾದರಿಯ ಕ್ಯಾಬಿನೆಟ್‌ಗಳ ತಯಾರಿಕೆ ಮತ್ತು ಬಳಕೆ ಅಗತ್ಯವಾಗುತ್ತದೆ.

ಗಣಕ ಕ್ಯಾಬಿನೆಟ್ ಆರಿಸುವುದು ಹೇಗೆ: ಕಂಪ್ಯೂಟರ ಬಳಕೆ ಖಾಸಗಿ ಬಳಕೆಗಾಗಿರಬಹುದು, ಕಛೇರಿ ಬಳಕೆಗಿರಬಹುದು, ಗಣಕ ಆಧಾರಿತ ಮನರಂಜನೆ, ಕ್ರೀಡೆಗಳಿಗಾಗಿರಬಹುದು, ಗ್ರಾಫಿಕ್ಸ್ ಕೆಲಸದ ಸಲುವಾಗಿರಬಹುದು, ಸಾಫ್ಟವೇರ್ ಅಭಿವೃದ್ಧಿಗಾಗಿರಬಹುದು, ಮಿಲಿಟರಿ, ರೈಲ್ವೆ, ಟೆಲಿಕಾಂ ಮೊದಲಾದ ಬಳಕೆಗಾಗಿರ ಬಹುದು. ಹೀಗೆ ವಿವಿಧ ರೀತಿಯ ಬಳಕೆಗಾಗಿ ಸೂಕ್ತವಾದ ಗಣಕ ಆಯ್ಕೆ ಮಾಡಿದಂತೆ, ಸೂಕ್ತವಾದ ಗಣಕ ಕ್ಯಾಬಿನೆಟ್ ಆಯ್ಕೆ ಮಾಡಬೇಕಾಗುತ್ತದೆ.

ಕಂಪ್ಯೂಟರ ಕ್ಯಾಬಿನೆಟ್‌ನ ಆಯ್ಕೆ ವಿಧಾನದ ಬಗ್ಗೆ ಪರಾಮರ್ಶೆ ಮಾಡಿದಾಗ, ಈ ಕೆಳಕಂಡ ಪ್ರಶ್ನೆಗಳು ಉದ್ಭವಿಸುತ್ತವೆ.

ಕ್ಯಾಬಿನೆಟ್‌ನಲ್ಲಿ ಗಣಕದ ಮದರ್ ಬೋರ್ಡ್ ಅಳವಡಿಸಲು ಅಗತ್ಯವಾದ ಸ್ಥಳಾವಕಾಶವಿದೆಯೇ?, ಹೆಚ್ಚುವರಿ ಹಾರ್ಡ್ ಡಿಸ್ಕ್‌ಗಳು ಅಥವಾ ಸಿ.ಡಿ/ ಡಿ.ವಿ.ಡಿ ಡ್ರೈವ್‌ಗಳನ್ನು ಅಳವಡಿಸಲು ಅಗತ್ಯವಾದ ಸ್ಥಳಾವಕಾಶವಿದೆಯೇ?, ಕ್ಯಾಬಿನೆಟ್ ತೆರೆಯಲು ಸ್ಕ್ರೂಡ್ರೈವರ್ ಬಳಕೆ ಅನಿವಾರ್ಯವಾಗುವಂತಹ ಸ್ಕ್ರೂಗಳನ್ನು ಬಳಸಲಾಗಿದೆಯೇ ಅಥವಾ ಕೇವಲ ಕೈಬೆರಳುಗಳನ್ನು ಬಳಸಿ ಸುಲಭವಾಗಿ ತಗೆಯಬಲ್ಲ ಹೊಸ ಮಾದರಿಯ ಸ್ಕ್ರೂಗಳನ್ನು ಬಳಸಲಾಗಿದೆಯೇ ಅಥವಾ ಸುಲಭವಾದ ಪ್ಲಾಸ್ಟಿಕ್ ಲೆವರ್‌ಗಳನ್ನು ಬಳಸಲಾಗಿದೆಯೇ? ಮತ್ತು ಹಾರ್ಡ್ ಡಿಸ್ಕ್‌ಗಳನ್ನು ಅಳವಡಿಸಲು ಸೂಕ್ತವಾದ ಡ್ರೈವ್ ರೇಲ್‌ಗಳನ್ನು ಕ್ಯಾಬಿನೆಟ್‌ನಲ್ಲಿ ಒದಗಿಸಲಾಗಿದೆಯೇ? (ಡ್ರೈವ್ ರೇಲ್‌ಗಳೆಂದರೆ, ಅಡಕ ಮುದ್ರಿಕೆಗಳನ್ನು ಸುಲಭವಾಗಿ ಅಳವಡಿಸಲು ಅಥವಾ ಹೊರತೆಗೆಯಲು ಒದಗಿಸಲಾಗಿರುವ ಮತ್ತು ರೈಲ್ವೆ ಹಳಿಯಂತೆ ಕ್ಯಾಬಿನೆಟ್‌ನಲ್ಲಿ ಅಳವಡಿಸಲಾಗಿರುವ ಲೋಹದಿಂದ ಮಾಡಿರುವ ಪಟ್ಟಿಗಳು). ಅದೇ ರೀತಿ, ಸಾಮಾನ್ಯವಾಗಿ ಆಡಿಯೋ, ಯುಎಸ್‌ಬಿ, ಹೆಡ್‌ಫೋನು, ಮೈಕ್ರೋಫೋನ್ ಮೊದಲಾದ ಪೋರ್ಟ್‌ಗಳು ಕ್ಯಾಬಿನೆಟ್‌ನ ಹಿಂಭಾಗದಲ್ಲಿ ಲಭ್ಯವಿರುವಂತೆ, ಕೆಲವು ಕ್ಯಾಬಿನೆಟ್‌ಗಳಲ್ಲಿ ಈ ಪೋರ್ಟ್‌ಗಳನ್ನು ಕ್ಯಾಬಿನೆಟ್‌ನ ಮುಂಭಾಗದಲ್ಲಿ ಕೊಟ್ಟಿರುತ್ತಾರೆ. ಹೊಸ ಮಾದರಿಯ ಕ್ಯಾಬಿನೆಟ್‌ಗಳಲ್ಲಿ, ಗಣಕದ ಮದರ್ ಬೋರ್ಡ್ ಟ್ರೇಯನ್ನು ಮಾತ್ರ ಹೊರತಗೆಯಲು ಸಾಧ್ಯವಾಗುವಂತಹ ವ್ಯವಸ್ಥೆ ಲಭ್ಯವಿದೆ.

ಸದೃಢವಾದ ಕ್ಯಾಬಿನೆಟ್ ಹೆಚ್ಚು ಬಾಳಿಕೆ ಬರುತ್ತದೆ ಮತ್ತು ಗಣಕ ಬಳಸುವಾಗ ಕ್ಯಾಬಿನೆಟ್‌ನಲ್ಲಿ ಉಂಟಾಗುವ ಶಾಖವನ್ನು ಹೊರಹಾಕಲು ಮತ್ತು ಸೂಕ್ತವಾದ ತಾಪಮಾನವನ್ನು ನಿಯಂತ್ರಣದಲ್ಲಿ ಹೊಂದಿರಲು ಶಕ್ಯವಾಗುತ್ತದೆ; ಇದರಿಂದಾಗಿ ಕ್ಯಾಬಿನೆಟ್ ಒಳಗೆ ಅಳವಡಿಸಲಾದ ಸಾಧನಗಳನ್ನು ರಕ್ಷಿಸುತ್ತದೆ. ಕ್ಯಾಬಿನೆಟ್‌ನ ಬೆಲೆ ಕಡಿಮೆ ಮಾಡಲು ಕಳಪೆ ದರ್ಜೆಯ ವಸ್ತುವಿನಿಂದ ಕೆಲವರು ಕ್ಯಾಬಿನೆಟ್ ತಯಾರಿಸುತ್ತಾರೆ. ಇಂತಹ ಕಳಪೆ ಕ್ಯಾಬಿನೆಟ್‌ಗಳ ಬಳಕೆಯಿಂದ ಗ್ರಾಹಕನಿಗಾಗುವ ಹಾನಿಯೇ ಹೆಚ್ಚಾಗಿರುತ್ತದೆ.

ಹೊರಗಿನಿಂದ ಬರುವ ದೂಳಿನಿಂದ ಮಾತ್ರವಲ್ಲ, ರೇಡಿಯೋ ಅಥವಾ ವಿದ್ಯುನ್ಮಾನ ತರಂಗಗಳಿಂದ ಕ್ಯಾಬಿನೆಟ್‌ನಲ್ಲಿರುವ ಸಾಧನಗಳನ್ನು ಸಂರಕ್ಷಿಸುವುದು ಅತ್ಯಗತ್ಯವಾಗಿದೆ. ಕ್ಯಾಬಿನೆಟ್‌ನಲ್ಲಿ ಉಂಟಾಗುವ ಶಾಖವನ್ನು ಹೊರಹಾಕಲು ಬೇರೆ ರೀತಿಯ ಫ್ಯಾನುಗಳು ಮತ್ತು ಹೊರಗಿನಿಂದ ತಣ್ಣನೆಯ ಗಾಳಿ ಕ್ಯಾಬಿನೆಟ್‌ನಲ್ಲಿ ಪಸರಿಸುವಂತೆ ಮಾಡಲು ಬೇರೆ ರೀತಿಯ ಫ್ಯಾನುಗಳು, ಹೀಗೆ ಹಲವಾರು ಫ್ಯಾನುಗಳನ್ನು ಕ್ಯಾಬಿನೆಟ್‌ನಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ, ಸಿಪಿಯು ಫ್ಯಾನ್, ಗ್ರಾಫಿಕ್ಸ್ ಕಾರ್ಡ್ ಫ್ಯಾನ್ ಇತ್ಯಾದಿ. ಹೀಗೆ ಬಳಸಲಾಗುವ ಫ್ಯಾನುಗಳು ಉಂಟುಮಾಡುವ ಶಬ್ದವು ಕ್ಯಾಬಿನೆಟ್‌ನ ಹೊರಗೆ ಕೇಳಿಸದಂತಿರಲು ಗಣಕ ಬಳಕೆಯನ್ನಾಧರಿಸಿ ಸೂಕ್ತವಾದ ಫ್ಯಾನುಗಳ ಆಯ್ಕೆ, ಫ್ಯಾನುಗಳ ಗುಣಮಟ್ಟ, ಕ್ಯಾಬಿನೆಟ್‌ನಲ್ಲಿ ಅವುಗಳನ್ನು ಆಳವಡಿಸಿರುವ ಸ್ಥಳ ಮತ್ತು ಕ್ಯಾಬಿನೆಟ್‌ನಲ್ಲಿ ಗಾಳಿ ಪಸರಿಸಲು ಇರುವ ಸ್ಥಳಾವಕಾಶ ಮುಂತದವುಗಳ ಬಗ್ಗೆ ಗಮನ ಕೊಡಬೇಕಾಗುತ್ತದೆ. ಕೆಲವೊಮ್ಮೆ ಕ್ಯಾಬಿನೆಟ್‌ನಲ್ಲಿರುವ ಸಾಧನಗಳು ಮತ್ತು ವೈರಿಂಗ್/ಕೇಬಲ್‌ಗಳು ಸ್ಥಾನ ಪಲ್ಲಟಗೊಂಡು ಫ್ಯಾನ್‌ಗಳ ಸಂಪರ್ಕಕ್ಕೆ ಬಂದು ಹಾಳಾಗುವ ಸಂಭವವಿರುತ್ತದೆ. ಹೀಗಾಗದಿರಲು ಕೆಲವು ಫ್ಯಾನುಗಳಿಗೆ ಸೂಕ್ತವಾದ ರಕ್ಷಣಾ ಜಾಲರಿಗಳನ್ನು ಬಳಸಲಾಗುತ್ತದೆ. ಕ್ಯಾಬಿನೆಟ್‌ನಲ್ಲಿ ತಾಪಮಾನ ನಿಯಂತ್ರಣ ವೈಫಲ್ಯವಾದರೆ ಕ್ಯಾಬಿನೆಟ್‌ನಲ್ಲಿರುವ ಸಾಧನಗಳ ಕಾರ್ಯಕ್ಷಮತೆ ಮತ್ತು ಬಾಳಿಕೆಯ ಮೇಲೆ ದುಷ್ಪರಿಣಾಮವಾಗುತ್ತದೆ ಮತ್ತು ಅನಗತ್ಯ ವೆಚ್ಚಕ್ಕೆ ಕಾರಣವಾಗುತ್ತದೆ.

ಕ್ಯಾಬಿನೆಟ್‌ನಲ್ಲಿ ಬಳಸಲಾಗುವ ವಿದ್ಯುತ್ ಪೂರೈಕೆ ಸಾಧನಗಳು (ಪವರ್ ಸಪ್ಲೈಸ್) ಉತ್ತಮ ಗುಣಮಟ್ಟದಾಗಿರಬೇಕು. ಇದರಿಂದ ಉತ್ತಮ ಗುಣಮಟ್ಟದ ವಿದ್ಯುತ್ ನಿರಂತರವಾಗಿ ಗಣಕಕ್ಕೆ ದೊರೆಯುವುದು ಸಾಧ್ಯವಾಗುತ್ತದೆ ಮತ್ತು ವಿದ್ಯುತ್ ನಷ್ಟವನ್ನು ತಡೆಯಬಹುದು. ವಿದ್ಯುತ್ ಕೇಬಲ್‌ಗಳು (ಕನೆಕ್ಟರ್) ಉತ್ತಮ ಗುಣಮಟ್ಟದ್ದಾಗಿದ್ದರೆ ಹೆಚ್ಚು ಬಾಳಿಕೆ ಮತ್ತು ರಕ್ಷಣೆ ಪಡೆಯಬಹುದಾಗಿದೆ. ಹೊಸ ವಿನ್ಯಾಸದ ವಿದ್ಯುತ್ ಪೂರೈಕೆ ಸಾಧನಗಳು ಈಗ Serial-ATA ಮಾದರಿಯ ಕನೆಕ್ಟರ್‌ಗಳನ್ನು ನೀಡುತ್ತಿವೆ.

ಗಣಕ ಕ್ಯಾಬಿನೆಟ್‌ಗಳು ಹೆಚ್ಚು ಆಕರ್ಷಕವಾಗಿ ಕಾಣುವಂತೆ ಮಾಡಲು, ಅದರ ಹೊರಮೈಗೆ ನಿಮಗೆ ಇಷ್ಟವಾದ ಬಣ್ಣದಿಂದ ಪೇಂಟಿಂಗ್ ಮಾಡಿಸಬಹುದು. ಕೆಲವು ಕ್ಯಾಬಿನೆಟ್ ತಯಾರಕರು ಪಾರದರ್ಶಕವಾದ ಪ್ಲಾಸ್ಟಿಕ್ (ಅಕ್ರಿಲಿಕ್ ಪ್ಲಾಸ್ಟಿಕ್) ಬಳಸಿ, ಕ್ಯಾಬಿನೆಟ್‌ನ ಹೊರಮೈನಲ್ಲಿ ಕಿಟಕಿಗಳನ್ನು ಮಾಡಿರುತ್ತಾರೆ. ಕೆಲವು ಕ್ಯಾಬಿನೆಟ್ ತಯಾರಕರು ಈ ರೀತಿಯ ಪಾರದರ್ಶಕ ಪ್ಲಾಸ್ಟಿಕ್ ಕಿಟಕಿಗಳನ್ನು ಮಾಡುವುದರ ಜೊತೆಗೆ ಕ್ಯಾಬಿನೆಟ್‌ಗಳಿಗೆ ಎಲ್‌ಇಡಿ ದೀಪಗಳ ಅಲಂಕಾರವನ್ನು ಮಾಡಿರುತ್ತಾರೆ. ಈ ದೀಪಗಳು ಅತ್ಯಂತ ಕಡಿಮೆ ವಿದ್ಯುತ್ ಬಳಸುತ್ತವೆ ಮತ್ತು ಅತ್ಯಂತ ಆಕರ್ಷಕವಾಗಿ ಕಾಣುತ್ತವೆಯೆಂದು ಅವರು ಹೇಳುತ್ತಾರೆ. ಕ್ಯಾಬಿನೆಟ್‌ಗಳಲ್ಲಿ ವಿಶೇಷವಾದ ಕ್ಯಾಥೋಡ್ ಟ್ಯೂಬ್‌ಲೈಟ್ ಬಳಸಿ ಕ್ಯಾಬಿನೆಟ್ ಹೆಚ್ಚು ಸುಂದರವಾಗಿ ಕಾಣುವಂತೆ ಕೆಲವು ತಯಾರಕರು ಮಾಡಿದ್ದಾರೆ.

ಸೂಕ್ತವಾಗಿ ಆಯ್ಕೆ ಮಾಡುವುದರಿಂದ, ಕಡಿಮೆ ವೆಚ್ಚ ಮತ್ತು ಕಡಿಮೆ ಗಾತ್ರದ ಉಪಯುಕ್ತವಾದ ಮತ್ತು ದೀರ್ಘಕಾಲ ಬಾಳಿಕೆ ಬರುವ ಕ್ಯಾಬಿನೆಟ್ ಅನ್ನು ಪಡೆಯಬಹುದಾಗಿದೆ.

ಈಗ ಗಣಕ ಮತ್ತು ಕ್ಯಾಬಿನೆಟ್ ಎರಡೂ ಒಂದೇ ಘಟಕದಲ್ಲಿ ಸೇರಿಹೋಗಿರುವು ದನ್ನು ಕಾಣಬಹುದು. ಕೀಲಿಮಣೆ ಮತ್ತು ಮೌಸುಗಳನ್ನು ಹೊರತುಪಡಿಸಿದರೆ ಇಂತಹ ಗಣಕಗಳಲ್ಲಿ ಪ್ರತ್ಯೇಕ ಕ್ಯಾಬಿನೆಟ್ಟು ಇರುವುದಿಲ್ಲ. ಕೇವಲ ಪ್ರದರ್ಶಕ ಮಾತ್ರ ಸ್ವಲ್ಪಮಟ್ಟಿಗೆ ದಪ್ಪನಾಗಿರುತ್ತದೆ. ಇದರಲ್ಲಿಯೇ ಅಡಕ(ಸಿ ಡಿ ಅಥವಾ ಡಿವಿಡಿ)ಮುದ್ರಿಕೆಯ ಚಾಲಕ ಅಥವ ಬರೆಹಸೌಲಭ್ಯಗಳು ಇರುತ್ತವೆ. ಹೊಸದಾಗಿ ಬಂದಿರುವ ಪೆನ್‌ಡ್ರೈವ್‌ಗಳಿಗೂ ಸ್ಥಳಾವಕಾಶವಿರುತ್ತದೆ. ಇದನ್ನು ಗಮನಿಸಿದಾಗ ಕ್ಯಾಬಿನೆಟ್ಟುಗಳ ಆಯುಸ್ಸು ಬಹು ದೀರ್ಘವಾದುದಲ್ಲ ಎನಿಸುತ್ತದೆ. (ಯು.ಪಿ.)

**ಗಣಕಗಳ ಯಂತ್ರಾಂಶ ಬೆಳವಣಿಗೆ :** ಗಣಿತವು ಮಾನವನ ಬದುಕಿನ ಎಲ್ಲಾ ಹೆಜ್ಜೆಗಳಲ್ಲೂ ಉಪಯುಕ್ತವಾದುದು ಎಂದು ಈಗ ಎಲ್ಲರಿಗೂ ತಿಳಿದಿರುವ ಸಂಗತಿ. ಅನಾದಿ ಕಾಲದಿಂದಲೂ ಮಾನವನು ತನ್ನ ವ್ಯವಹಾರಗಳಿಗೆ ಅಗತ್ಯವಾದ ಲೆಕ್ಕಾಚಾರಗಳನ್ನು ಮಾಡಲು ಒಂದಲ್ಲ ಒಂದು ಸುಲಭ ಉಪಾಯವನ್ನು ಕಂಡುಕೊಳ್ಳುತ್ತಾ ಬಂದಿದ್ದಾನೆ. ಸಾಮಾನ್ಯವಾಗಿ ದೊಡ್ಡ ಅಂಕಿಗಳನ್ನು ಕೂಡಲು, ಕಳೆಯಲು, ಗುಣಿಸಲು ಅಥವಾ ಇನ್ನಿತರೆ ಗಣಿತಕ್ರಿಯೆಗಳನ್ನು ಮಾಡಲು ಬಹಳ ಸಮಯ ತೆಗೆದುಕೊಳ್ಳುವುದು ಅಥವಾ ಕೆಲಮೊಮ್ಮೆ ತಪ್ಪಾಗುವುದು ಸಹಜ. ಈ ಸಮಸ್ಯೆಗಳನ್ನು ನಿವಾರಿಸಲು ಸುಮಾರು ನಾಲ್ಕು ಶತಮಾನಗಳ ಹಿಂದೆಯೇ ಆಲೋಚಿಸಿ, ಯಾಂತ್ರಿಕ ಉಪಕರಣಗಳನ್ನು ರೂಪಿಸಿದ ಮಾನವನು ಅವುಗಳನ್ನು ಬಳಸುವ ನೈಪುಣ್ಯತೆಯನ್ನು ಸಾಧಿಸಿ ತನ್ನ ದಿನನಿತ್ಯದ ವ್ಯವಹಾರಗಳನ್ನು ಸುಲಭಗೊಳಿಸುತ್ತಾ ಸಾಗಿದ್ದಾನೆ. ಈ ಹಾದಿಯಲ್ಲಿ ವಿಧವಿಧವಾದ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಗಳು ನಡೆದು ಅಂತಿಮವಾಗಿ ಕಳೆದ 60 ವರ್ಷಗಳ ಹಿಂದೆ ವಿದ್ಯುದ್ಯಾಂತ್ರಿಕ (ಎಲೆಕ್ಟ್ರೋ–ಮೆಕ್ಯಾನಿಕಲ್) ಗಣಕ ಯಂತ್ರಗಳು ರೂಪುಗೊಂಡವು. ಇಂದು ಗಣಕಯಂತ್ರಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳೇ ಅಲ್ಲದೆ, ಆಡಳಿತ, ವಾಣಿಜ್ಯ, ಸಾಹಿತ್ಯ, ಮಕ್ಕಳ ವಿದ್ಯಾಭ್ಯಾಸ ಮತ್ತು ಮನರಂಜನೆ ಮುಂತಾದ ಎಲ್ಲ ವ್ಯವಹಾರಗಳಿಗೂ ಅನಿವಾರ್ಯವೆಂಬಂತಾಗಿದೆ.

ಸಂಪೂರ್ಣ ಗಣಕಯಂತ್ರ ಉಪಕರಣಗಳ ಇತಿಹಾಸವನ್ನು ಪರಿಶೀಲಿಸಿದರೆ, ಪ್ರ.ಶ.ಪೂ.ಸು. 3000 ಇಸವಿಯ ಕಾಲದಲ್ಲಿ ಪ್ರಾಚೀನ ಚೀನಿಯರು ವಿನ್ಯಾಸಮಾಡಿದ ಮಣಿಚೌಕಟ್ಟು ಅಬಾಕಸ್.

1805ರ ಜಾಕ್ವರ್ಡ್ ಲೂಮ್ ಮತ್ತು 1834ರ ಚಾರ್ಲ್ಸ್ ಬಾಬೇಜ್‌ರವರ ಅನಲಟಿಕಲ್ ಎಂಜಿನ್ ಪ್ರಮುಖವಾಗಿ ಕಂಡುಬರುತ್ತವೆ. ಇದರಲ್ಲಿ ಯಾಂತ್ರಿಕ (ಮೆಕ್ಯಾನಿಕಲ್), ಸಾದೃಶ್ಯಕ (ಅನಲಾಗ್) ಮತ್ತು ಅಂಕಿಕ (ಡಿಜಿಟಲ್) ಲೆಕ್ಕಾಚಾರ ಯಂತ್ರಗಳ ವಿನ್ಯಾಸಗಳ ಬಗ್ಗೆ ಚರ್ಚೆಗಳೂ ಒಳಗೊಂಡಿವೆ. 1960ರ ಸುಮಾರಿಗೆ ಯಾಂತ್ರಿಕ ಉಪಕರಣವಾದ ಮರ್ಚೆಂಟ್ ಕ್ಯಾಲ್ಕ್ಯುಲೇಟರ್ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಚಲಿತವಾಗಿ ವಿವಿಧ ವಿಜ್ಞಾನ ಕ್ಷೇತ್ರಗಳಲ್ಲಿ ಸಾಕಷ್ಟು ಬಳಕೆಯಾಗಿ ಉಪಯುಕ್ತತೆಯನ್ನು ಕಂಡಿತು. ಇದಕ್ಕೆ ಮುನ್ನ ಸಾದೃಶ್ಯಕ ಮತ್ತು ಅಂಕಿಕ ಗಣಕಯಂತ್ರಗಳಲ್ಲಿ ಯಾವುದು ಹೆಚ್ಚಿಗೆ ಉಪಯುಕ್ತವಾಗಿದೆ ಎಂಬ ಬಗ್ಗೆ ಬಹಳಷ್ಟು ಚರ್ಚೆಗಳಾದವು. 1960ರ ಸಮಯದಲ್ಲಿ ತೈಲ ಸಂಗ್ರಹಣಾ ಉಗ್ರಾಣಗಳ ವಿನ್ಯಾಸಗಳಿಗಾಗಿ (ಆಯಿಲ್ ರಿಸರ್ವಾಯರ್ ಮಾಡೆಲಿಂಗ್) ಗಣಿತೀಯವಾಗಿ ರಚಿಸಿದ ಸಮೀಕರಣಗಳನ್ನು (ಫಿನೈಟ್ ಈಕ್ವೇಷನ್ಸ್) ಬಿಡಿಸಲು ಉದ್ಭವಿಸುತ್ತಿದ್ದ ಸಮಸ್ಯೆಗಳನ್ನು ನಿವಾರಿಸಲು ಸಾದೃಶ್ಯಕ ಗಣಕಯಂತ್ರಗಳು ಸದಾ ಬಳಕೆಯಾಗುತ್ತಿದ್ದವು. ಅಂತಿಮವಾಗಿ, ಅಂಕಿಕ ಗಣಕ ಉಪಕರಣಗಳು ದೊಡ್ಡ ಪ್ರಮಾಣದ ಲೆಕ್ಕಾಚಾರಗಳನ್ನು ಮಾಡಲು ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಹೊಂದಿರುವುದನ್ನೂ, ಸುಲಭವಾಗಿ ಹಾಗೂ ಅತ್ಯಂತ ಸರಳವಾಗಿ ಕಾರ್ಯ ನಿರ್ವಹಿಸುವಂತಿದ್ದುದನ್ನೂ ಕಂಡುಕೊಳ್ಳಲಾಯಿತು. ಆದ್ದರಿಂದಲೇ, ಅಂಕಿಕ ಗಣಕ ಯಂತ್ರಗಳು ಇಂದು ವಿಶ್ವಾದ್ಯಂತ ಎಲ್ಲ ಗಣಕ ಕ್ಷೇತ್ರಗಳಲ್ಲೂ, ಅಂದರೆ ಕಲನಯಂತ್ರಗಳಿಂದ (ಕ್ಯಾಲ್ಕ್ಯುಲೇಟರ್) ಹಿಡಿದು ಪರಮ (ಸೂಪರ್) ಗಣಕಗಳು ಎಲ್ಲ ವ್ಯವಹಾರ ಕ್ಷೇತ್ರಗಳಲ್ಲೂ ಪೂರ್ಣವಾಗಿ ಬಳಸಲ್ಪಡುತ್ತಿವೆ.

ಗಣಕಯಂತ್ರಗಳ ತಯಾರಿಕೆ, ತಂತ್ರಾಂಶಗಳ (ಸಾಫ್ಟ್‌ವೇರ್) ರಚನೆ ಹಾಗೂ ದತ್ತಾಂಶ ಸಂಗ್ರಹಣೆಯಲ್ಲಿ (ಡಾಟ ಸ್ಟೋರೇಜ್) – ಮುಂತಾದ ಗಣಕವಿಜ್ಞಾನ ಕ್ಷೇತ್ರದ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲೂ ಹಿಂದಿನ ತಲೆಮಾರುಗಳಿಗಿಂತ ಗಣಕ ತಂತ್ರಜ್ಞಾನದಲ್ಲಿ ನಾಟಕೀಯವಾಗಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಾ ಬಂದಿವೆ. ಇದನ್ನು ಗಮನದಲ್ಲಿರಿಸಿಕೊಂಡು ಗಣಕಯಂತ್ರಗಳನ್ನು ಹಲವು ದಶಕಗಳ ಹಂತವಾಗಿ ಗುರುತಿಸಲಾಗಿದೆ.

ಗಣಿತದ ಸಮಸ್ಯೆಗಳನ್ನು ಬಿಡಿಸಲು ಯಂತ್ರಗಳನ್ನು ಬಳಸಲು 17ನೇ ಶತಮಾನದಲ್ಲೇ (ಸು. 1623) ಚಿಂತಿಸಲಾಯಿತು. ಈ ಸಮಯವನ್ನು ಯಾಂತ್ರಿಕ ಯುಗ ಎಂದು ಕರೆಯಲಾಗುತ್ತದೆ. ಗಣಕತಜ್ಞರು ತಮ್ಮ ಗಣಿತದ ಸಮಸ್ಯೆಗೆ ಲೆಕ್ಕಾಚಾರಯಂತ್ರಗಳನ್ನು (ಕ್ಯಾಲ್ಕ್ಯುಲೇಟರ್ಸ್) ವಿನ್ಯಾಸಗೊಳಿಸಿ ಅದನ್ನು ಉಪಯೋಗಿಸತೊಡಗಿದರು. ಇವರಲ್ಲಿ ವಿಲ್‌ಹೆಲ್ಮ್ ಷಿಕ್ವಾರ್ಡ್, ಬ್ಲೇಸಿ ಪಾಸ್ಕಲ್ ಮತ್ತು ಗಾಟ್‌ಫ್ರಿಡ್ ಲಿಬ್ನಿಟ್ಜ್ ಮೊದಲಿಗರು ಎನ್ನಬಹುದು. ಗಣಕೀಕರಣಕ್ಕೆ ಪಾಸ್ಕಲ್ಸ್ ಗಮನಾರ್ಹ ಕೆಲಸವನ್ನು ಮೆಚ್ಚಿ 1972ರಲ್ಲಿ ಹಿರಿಯ ವಿಜ್ಞಾನಿ ನಿಕಾಲಸ್ ವಿರ್ತ್ ಅವರು ಇವನ ಕ್ರಮವಿಧಿ ಭಾಷೆಗೆ (ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್) ಪಾಸ್ಕಲ್ ಎಂದು ಹೆಸರಿಸಿ, ಈ ಹೆಸರನ್ನು ಪಾಸ್ಕಲ್ ಎಂದೇ ಉಚ್ಚರಿಸಬೇಕೇ ಹೊರತು PASCAL ಎಂದಲ್ಲ ಎಂದು ಒತ್ತಾಯಪಡಿಸಿದ್ದಾರೆ.

ಮೊದಲನೆಯ ಬಹೂಪಯೋಗಿ ಲೆಕ್ಕಾಚಾರ ಯಂತ್ರ ಎಂದರೆ ಕ್ರಮವಿಧಿಕಾರಕ (ಪ್ರೋಗ್ರಾಮಬಲ್) ಉಪಕರಣವಾದ ಚಾರ್ಲ್ಸ್ ಬಾಬೇಜ್ ಅವರ ಡಿಫರೆನ್ಸ್ ಎಂಜಿನ್. ಇದು 1823ನೆಯ ಇಸವಿಯಲ್ಲಿಯೇ ಪ್ರಾರಂಭವಾಗಿ ಉಪಯೋಗಕ್ಕೆ ಬರುವಷ್ಟರಲ್ಲಿ, 1842ರಲ್ಲಿ ಬಾಬೇಜ್ ಇದರ ತಂತ್ರಜ್ಞಾನವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಿ, ಅನಲಟಿಕಲ್ ಎಂಜಿನ್ ಎಂದು ಕರೆಯಲ್ಪಟ್ಟಿತು. ಆದರೆ ದುರದೃಷ್ಟದಿಂದ ಇದೂ ಕೂಡ ಪೂರ್ಣವಾಗದೆ ಚಾಲನೆಗೆ ಬರಲಿಲ್ಲ. ಇದಕ್ಕೆ ಆಗಿನ, ಅಷ್ಟೇನೂ ಮುಂದುವರೆಯದಿದ್ದ ತಂತ್ರಜ್ಞಾನ ಒಂದು ಕಡೆ ಕಾರಣವಾದರೆ, ಮತ್ತೊಂದೆಡೆ ಸಂಪನ್ಮೂಲದ ಕೊರತೆಯೂ ಕಾರಣವಾಗಿತ್ತು. ಏನೇ ಆದರೂ, ಈ ದಿಸೆಯಲ್ಲಿ ಬ್ಯಾಬೇಜ್‌ನ ಚಿಂತನೆ ಮತ್ತು ಪ್ರಯತ್ನ ಆಗಿನ ಕಾಲಕ್ಕೆ ಬಹಳ ಉತ್ಕೃಷ್ಟವಾದುದು ಹಾಗೂ ಪ್ರಶಂಸಾರ್ಹವಾದುದು. ಅನಂತರ ಬ್ಯಾಬೇಜ್ ಮತ್ತು ಅವನ ಸಹೋದ್ಯೋಗಿಗಳು ಸೇರಿ ಒಂದು ಕ್ರಮವಿಧಿ ಭಾಷೆಯನ್ನು ಕಂಡುಹಿಡಿದು ಅದಕ್ಕೆ ADA ಎಂದು ಹೆಸರಿಸಿದರು. ಆಗಿನಕಾಲದಲ್ಲಿ ಒಬ್ಬ ವ್ಯಕ್ತಿಯ ಹೆಸರನ್ನು, ಅವನು ಗಣಕ ವಿಜ್ಞಾನ ಕ್ಷೇತ್ರದಲ್ಲಿ ಸಾಧಿಸಿದ ಕೆಲಸಕ್ಕೆ ಇಡುವುದು ಗಣಕ ತಜ್ಞರಿಗೆ ಒಂದು ಸಂಪ್ರದಾಯವಾಗಿಬಿಟ್ಟಿತ್ತು. ಅನಂತರ ಇದೇ ಹಾದಿಯಲ್ಲಿ ರಸೆಲ್, ಯೂಕ್ಲಿಡ್, ಟ್ಯೂರಿಂಗ್ ಮತ್ತು ಗೊಡೆಲ್ ಎಂಬ ಕ್ರಮವಿಧಿ ಭಾಷೆಗಳು ಬಳಕೆಗೆ ಬಂದವು. ಈ ಮೇಲಿನ ಗಣಕ ಭಾಷೆಗಳು ಮುಖ್ಯವಾಗಿ ಕ್ರಮವಿಧಿ ತಂತ್ರಜ್ಞಾನದಲ್ಲಿ, ಷರತ್ತಿಗೆ ಅನುಗುಣವಾಗಿ ಕವಲು ಲೆಕ್ಕಾಚಾರದಲ್ಲಿ (ಕಂಡೀಷನಲ್ ಬ್ರಾಂಚಿಂಗ್) ತೊಡಗುವ, ಊಹಾತ್ಮಕ ಉತ್ತರದಿಂದ ಆರಂಭಿಸಿ ಪುನರಾವರ್ತನೆಯ ಲೆಕ್ಕಾಚಾರದ (ಇಟರೇಟಿವ್ ಲೂಪ್ಸ್) ವಿಧಾನವನ್ನು ಅನುಸರಿಸುವ ಮತ್ತು ಸೂಚೀಕೃತ ಚಲಾಂಕಗಳ (ಇಂಡೆಕ್ಸಡ್ ವೇರಿಯಬಲ್ಸ್) ಬಳಕೆಯಲ್ಲಿ ಯಶಸ್ಸನ್ನು ಸಾಧಿಸಿ ಬಹಳ ಪ್ರಾಮುಖ್ಯತೆಯನ್ನು ಪಡೆದವು.

ಬಾಬೇಜ್‌ನ ಡಿಫರೆನ್ಸ್ ಎಂಜಿನ್‌ನ ವಿನ್ಯಾಸದಿಂದ ಉತ್ತೇಜನಗೊಂಡ ಜಾರ್ಜ್ ಷೂಟ್ಸ್ ತನ್ನ ಮಗನ ಜೊತೆಗೂಡಿ 1833ರಲ್ಲಿ ಚಿಕ್ಕದಾಗಿಯೇ ಒಂದು ಉಪಕರಣವನ್ನು ನಿರ್ಮಿಸಿದನು. ಇದೂ ಕೂಡ ಡಿಫರೆನ್ಸ್ ಎಂಜಿನ್ ಎಂದೇ ಕರೆಯಲ್ಪಟ್ಟಿತು. ಈ ಉಪಕರಣವು ಗಣಕವಿಜ್ಞಾನದಲ್ಲಿ ಮೊದಲನೆಯದಾಗಿ ಉಪಯೋಗಕ್ಕೆ ಬಂದದ್ದು ಎನ್ನಲಾಗಿದೆ. 1853ರಲ್ಲಿ ಇವರಿಬ್ಬರು 15 ಅಂಕಿಗಳನ್ನು ಬಳಸಿ ಲೆಕ್ಕಾಚಾರ ಮಾಡಬಹುದಾದ ಹಾಗೂ ನಾಲ್ಕನೇ ಹಂತದ ವ್ಯವಕಲನಗಳನ್ನು (ಫೋರ್ತ್ ಆರ್ಡರ್ ಡಿಫರೆನ್ಸಸ್) ಮಾಡಬಹುದಾದ ಯಂತ್ರವನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾದರು. ಈ ಡಿಫರೆನ್ಸ್ ಎಂಜಿನ್‌ಗೆ 1855ರಲ್ಲಿ ಪ್ಯಾರಿಸ್ಸಿನಲ್ಲಿ ನಡೆದ ಪ್ರದರ್ಶನದಲ್ಲಿ ಚಿನ್ನದ ಪದಕ ಲಭಿಸಿತು. ನಂತರ ಇವರು ಈ ಯಂತ್ರವನ್ನು ನ್ಯೂಯಾರ್ಕಿನ ಆಲ್ಬನಿಯಲ್ಲಿರುವ ಡುಡ್ಲಿ ವೀಕ್ಷಣಾಲಯ ಎಂಬ ಸಂಸ್ಥೆಗೆ ಮಾರಿದರು. ಅಲ್ಲಿ ಈ ಯಂತ್ರವನ್ನು ಮಂಗಳಗ್ರಹದ ಕಕ್ಷೆಯನ್ನು ಲೆಕ್ಕಹಾಕುವುದಕ್ಕೆ ಬಳಸಿಕೊಳ್ಳಲಾಗುತ್ತಿತ್ತು.

ಇಂತಹ ಯಾಂತ್ರಿಕ ಗಣಕಯಂತ್ರಗಳು ಮೊದಲ ಬಾರಿಗೆ ಅಮೆರಿಕದ ಜನಗಣತಿ ಬ್ಯೂರೋದಲ್ಲಿ ವಾಣಿಜ್ಯ ವ್ಯವಹಾರಕ್ಕೆ ಬಳಕೆಗೆ ಬಂದವು. ಈ ಗಣಕ ಯಂತ್ರವನ್ನು, ಅಲ್ಲಿನ ಉದ್ಯೋಗಿಯಾದ ಹರ್ಮನ್ ಹೋಲೆರಿತ್ ಎಂಬಾತನು ವಿನ್ಯಾಸಪಡಿಸಿದನು. ಪಂಚ್‌ಕಾರ್ಡುಗಳ ಸಹಾಯದಿಂದ 1890ರಲ್ಲಿ ಅಮೆರಿಕಾ ದೇಶದ ಜನಗಣತಿಗೆ ದತ್ತಾಂಶಗಳನ್ನು ಸಂಗ್ರಹಿಸಲು ಇದನ್ನು ಬಳಸಲಾಯಿತು. ಈ ಯಂತ್ರಗಳನ್ನು ತಯಾರಿಸಲೆಂದು ಸ್ಥಾಪಿಸಿದ ಸಂಸ್ಥೆಯು ಇಂದು ಇಂಟರ್ ನ್ಯಾಷನಲ್ ಬಿಸಿನೆಸ್ ಮಷೀನ್ (IBM) ಕಾರ್ಪೋರೇಷನ್ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ.

ಮುಂದಿನ ತಲೆಮಾರಿನಲ್ಲಿ ಸಿದ್ಧವಾದ ಮೂರು ಯಂತ್ರಗಳನ್ನು ಮೊಟ್ಟ ಮೊದಲನೆಯ ವಿದ್ಯುನ್ಮಾನ ಗಣಕಯಂತ್ರಗಳು ಎಂದು ಗುರುತಿಸಲಾಗಿದೆ. ಈ ಯಂತ್ರಗಳಲ್ಲಿ ವಿದ್ಯುದ್ಯಾಂತ್ರಿಕ ಸರದಿಕಾರಕಗಳ (ಎಲೆಕ್ಟ್ರೊ ಮೆಕ್ಯಾನಿಕಲ್ ರಿಲೇಸ್) ಬದಲಿಗೆ ನಿರ್ವಾತ ಕೊಳವೆಗಳ (ವ್ಯಾಕ್ಯೂಮ್ ಟ್ಯೂಬ್ಸ್) ರೂಪದಲ್ಲಿ ವಿದ್ಯುನ್ಮಾನ ಸ್ವಿಚ್ಚುಗಳನ್ನು ಉಪಯೋಗಿಸಲಾಗಿತ್ತು. ಅಲ್ಲದೆ, ಈ ವಿದ್ಯುನ್ಮಾನ ಸ್ವಿಚ್ಚುಗಳಲ್ಲಿ ಯಾವುದೇ ಕೆಡಬಹುದಾದಂತಹ ಚಲಿಸುವ ಭಾಗಗಳು ಇರದಿದ್ದ ಕಾರಣದಿಂದ ಹಾಗೂ ಇವು ತಂತ್ರಜ್ಞಾನದಲ್ಲಿ ಬಹಳ ಹೊಸದಾಗಿದ್ದುದರಿಂದ ಸರದಿಕಾರಕಗಳಿಗಿಂತ ನಿರ್ವಾತ ಕೊಳವೆಗಳೇ ಬಹಳ ವಿಶ್ವಾಸಾರ್ಹವಾಗಿದ್ದವು.

ಪ್ರಾರಂಭಿಕ ವಿದ್ಯುನ್ಮಾನ ಗಣಕಯಂತ್ರವನ್ನು 1937ರಲ್ಲಿ ಐಯೋವ ರಾಜ್ಯದ ಭೌತವಿಜ್ಞಾನ ಮತ್ತು ಗಣಿತಶಾಸ್ತ್ರದ ಪ್ರೊಫೆಸರ್ ಆದ ಜೆ ವಿ ಅಟನಾಸಾಫ್ ಎಂಬುವರು ಅಭಿವೃದ್ಧಿಪಡಿಸಿದರು. ಪದವಿ ವಿದ್ಯಾರ್ಥಿಗಳಿಗೆ ಕಲನಶಾಸ್ತ್ರ (calculus) ಸಂಬಂಧಿ ಗಣಿತೀಯ ಸಮೀಕರಣಗಳನ್ನು ಬಿಡಿಸಲು ಪ್ರಯೋಜನವಾಗಲೆಂದು ಅಟನಾಸಾಫ್ ಅವರು ಈ ಗಣಕಯಂತ್ರವನ್ನು ರೂಪಿಸಿದರು. 1941ರಲ್ಲಿ ತನ್ನ ವಿದ್ಯಾರ್ಥಿಯಾದ ಕ್ಲಿಫೋರ್ಡ್ ಬೆರಿಯ ಜೊತೆಗೂಡಿ ಇವರು 29 ಏಕಕಾಲಿಕ ಸಮೀಕರಣಗಳನ್ನು

(ಸೈಮಲ್ಟೇನಿಯನ್ ಈಕ್ವೇಷನ್ಸ್) ಬಿಡಿಸಿ, 29 ಚಲಸಂಖ್ಯೆಗಳ (ವೇರಿಯಬಲ್ಸ್) ಬೆಲೆಗಳನ್ನು ಕಂಡುಹಿಡಿಯಬಲ್ಲ ಗಣಕಯಂತ್ರವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾದರು. ಈ ಗಣಕಯಂತ್ರವು ಅಟನ್‌ಸಾಫ್ ಬೆರ್ರಿ ಕಂಪ್ಯೂಟರ್ (Atansoff-Berry Computer-ABC) ಎಂದು ಕರೆಯಲ್ಪಟ್ಟಿತು. ಆದರೂ, ಈ ಯಂತ್ರವನ್ನು ಬಳಸಿಕೊಂಡು ಕ್ರಮವಿಧಿಗಳನ್ನು ರಚಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದಲೇ ಇವುಗಳಿಂದ ವಿದ್ಯುನ್ಮಾನ ಕಲನಯಂತ್ರಗಳಿಗಿಂತ ಹೆಚ್ಚು ಪ್ರಯೋಜನವಾಗುತ್ತಿರಲಿಲ್ಲ. ಈ ಸಮಯದಲ್ಲಿ ತಯಾರಿಸಿದ ಗಣಕಯಂತ್ರಗಳನ್ನು ಮೊದಲನೆಯ ತಲೆಮಾರಿನ ಗಣಕಯಂತ್ರಗಳೆಂದು ಕರೆಯಲಾಗುತ್ತದೆ.

ಎರಡನೆಯ ಪ್ರಯತ್ನವಾಗಿ ಬ್ರಿಟಿಷರ ಸೈನ್ಯದಲ್ಲಿದ್ದ ಅಲನ್ ಟೂರಿಂಗ್ ಎಂಬಾತನು 1943ರಲ್ಲಿ ಕೊಲಾಸಸ್ ಎಂಬ ವಿದ್ಯುನ್ಮಾನ ಗಣಕಯಂತ್ರವನ್ನು ವಿನ್ಯಸಿಸಿದರು. ಈ ಯಂತ್ರವು ಎರಡನೆಯ ಮಹಾಯುದ್ಧದಲ್ಲಿ ಜರ್ಮನ್ ಸೈನ್ಯದಲ್ಲಿ ಬಳಸುತ್ತಿದ್ದ ರಹಸ್ಯ ಸಂಕೇತಗಳನ್ನು ಭೇದಿಸಲು ಬಹು ಪ್ರಮುಖ ಪಾತ್ರವಹಿಸಿತು. ಟೂರಿಂಗ್‌ನ ಟೂರಿಂಗ್ ಮಷೀನ್ ಗಣಕ ವಿಜ್ಞಾನಕ್ಕೆ ಪ್ರಮುಖ ಕೊಡುಗೆಯಾಗಿದೆ. ಕೊಲಾಸಸ್ ಸೃಷ್ಟಿಯಾದುದನ್ನು ಯುದ್ಧ ಮುಗಿಯುವವರೆಗೆ ಗೌಪ್ಯವಾಗಿಡಲಾಗಿತ್ತು. ಇದರಿಂದ ಟೂರಿಂಗ್ ಮತ್ತು ಅವನ ಸಹೋದ್ಯೋಗಿಗಳು ವಿನ್ಯಸಿಸಿದ ಪ್ರಥಮ ಕಾರ್ಯನಿರ್ವಹಣಾ ವಿದ್ಯುನ್ಮಾನ ಗಣಕಯಂತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮೊದಲ, ಸಾಮಾನ್ಯ ಬಳಕೆಯ ಕ್ರಮವಿಧಿಕಾರಕ ವಿದ್ಯುನ್ಮಾನ ಗಣಕಯಂತ್ರವು ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದ ಪ್ರೆಫ಼ರ್ ಎಕರ್ಟ್ ಮತ್ತು ಜಾನ್ ಮಾಕ್‌ಲಿ ವಿನ್ಯಸಿಸಿದ ಎಲೆಕ್ಟ್ರಾನಿಕ್ ನ್ಯೂಮರಿಕಲ್ ಇಂಟಗ್ರೇಟರ್ ಅಂಡ್ ಕಂಪ್ಯೂಟರ್ (ENIAC) ಆಗಿತ್ತು. ಇದರ ಬಳಕೆ 1943ರಲ್ಲಿ ಅಮೆರಿಕದ ಆಯುಧ ತಯಾರಿಕಾ ಇಲಾಖೆಯ ಧನಸಹಾಯ ಪಡೆದು ಎರಡನೆಯ ಮಹಾಯುದ್ಧದ ಸಮಯದಲ್ಲಿ ಪ್ರಾರಂಭವಾಯಿತು. ಇದನ್ನು, 1945ರ ವರೆಗೆ ಪೂರ್ಣವಾಗದಿದ್ದರೂ, ಜಲಜನಕ ಬಾಂಬನ್ನು ತಯಾರಿಸಲು ಅಗತ್ಯವಾಗಿದ್ದ ಗಣಿತೀಯ ಲೆಕ್ಕಾಚಾರಗಳಿಗೆಂದು ಬಳಸಲಾಗಿತ್ತು. ಈ ಯಂತ್ರದ ಬಳಕೆಯನ್ನು 1955ರ ವೇಳೆಗೆ ವಾಯುಸುರಂಗದ (ವಿಂಡ್ ಟನಲ್) ವಿನ್ಯಾಸಕ್ಕೆ ಮತ್ತು ಸಂಶೋಧನೆಗೆ, ಅನಿಯಮಿತ (ರ‍್ಯಾಂಡಮ್) ಸಂಖ್ಯೆಗಳನ್ನು ಪಡೆಯುವುದಕ್ಕಾಗಿ ಮತ್ತು ಹವಾಮಾನ ಮುನ್ಸೂಚನೆಯ ಲೆಕ್ಕಾಚಾರಗಳಿಗೆ ವಿಸ್ತರಿಸಲಾಗಿತ್ತು. ENIAC ಗಣಕಯಂತ್ರವು ನಿರ್ವಾತ ಕೊಳವೆಗಳಿಂದ ನಿರ್ಮಿಸಲ್ಪಟ್ಟಿದ್ದು ಕಾರ್ಯವಿಧಿಗಳನ್ನು ಬದಲಿಸಲು ವಿದ್ಯುನ್ಮಾನ ಸ್ವಿಚ್‌ಗಳನ್ನು ತಂತಿಗಳ ಜೋಡಣೆ ಮತ್ತು ತೆಗೆಯುವುದರಿಂದ ನಿಯಂತ್ರಿಸಲಾಗುತ್ತಿತ್ತು. ENIAC ಬಳಕೆಯು ಮುಗಿಯುವಷ್ಟರಲ್ಲಿ, ಎಕರ್ಟ್‌ನು, ENIAC ಯೋಜನೆಯ ಸಲಹೆಗಾರನಾಗಿದ್ದ ಮಾಕ್‌ಲಿ ಮತ್ತು ಜಾನ್ ನಾಯ್‌ಮನ್ ಅವರುಗಳ ಜೊತೆಗೂಡಿ EDVAC ಎಂಬ ಇನ್ನೊಂದು ಗಣಕಯಂತ್ರವನ್ನು ತಯಾರಿಸಿದನು. ಇದು ENIACಗಿಂತ ಕಾರ್ಯಕ್ಷಮತೆಯಲ್ಲಿ ಬಹಳಷ್ಟು ಉತ್ಕೃಷ್ಟವಾಗಿತ್ತು ಮತ್ತು ಇದರಲ್ಲಿ ಬಹಳಷ್ಟು ಕಾರ್ಯವಿಧಿಗಳನ್ನು ಬಳಸಬಹುದಿತ್ತು ಹಾಗೂ ಹೆಚ್ಚಿನ ದತ್ತಾಂಶಗಳನ್ನು ಸಂಗ್ರಹಿಸಬಹುದಾಗಿತ್ತು. ಈ ತಂತ್ರಜ್ಞಾನದ ಬಳಕೆಯಲ್ಲಿ ವಿನ್ಯಾಸಗಾರರು ಬಾಹ್ಯ ನಿಯಂತ್ರಣಾ ವೇಗದತ್ತ ಗಮನ ಹರಿಸುವ ಬದಲು ಗಣಕ ಯಂತ್ರದ ಆಂತರಿಕ ರಚನೆಯ ಬಗ್ಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಯಿತು.

ಈ ಕಾಲಕ್ಕೆ ತಂತ್ರಾಂಶಗಳ ರಚನೆ ಮತ್ತು ಗಣಕಗಳಲ್ಲಿ ಅವುಗಳ ಬಳಕೆಯ ತಂತ್ರಜ್ಞಾನವು ತೀರ ಆರಂಭದ ಪರಿಸ್ಥಿತಿಯಲ್ಲಿತ್ತು. ಮೊದಲ ಕ್ರಮವಿಧಿಗಳನ್ನು ನೇರವಾಗಿ ಯಾಂತ್ರಿಕ ಸಂಕೇತಗಳಲ್ಲಿ (ಮಷೀನ್ ಕೋಡ್) ಬರೆಯುತ್ತಿದ್ದರು, ಅಂದರೆ ಕ್ರಮವಿಧಿಗಳನ್ನು ನೇರವಾಗಿ ನೆನಪಿನಕೋಶದಲ್ಲಿ (ಮೆಮರಿ) ಸಂಗ್ರಹವಾಗುತ್ತಿದ್ದ ಸಂಕೇತಗಳಲ್ಲಿ ಬರೆಯುತ್ತಿದ್ದರು. 1950ರ ನಂತರ ಕ್ರಮವಿಧಿಗಳ ರಚನೆಯಲ್ಲಿ ಸಂಗ್ರಹ (ಅಸೆಂಬ್ಲಿ) ಭಾಷೆ ಎಂಬ ಸಾಂಕೇತಿಕ ಸೂಚನೆಗಳ ಭಾಷೆಯನ್ನು ಉಪಯೋಗಿಸಿ ನಂತರ ಅದನ್ನು ಯಾಂತ್ರಿಕ ಸಂಕೇತವನ್ನಾಗಿ ಪರಿವರ್ತಿಸುತ್ತಿದ್ದರು. ಮತ್ತೂ ಕೆಲವು ವರ್ಷದ ನಂತರ ಸಂಗ್ರಾಹಕಗಳೆಂಬ (ಅಸೆಂಬ್ಲರ್) ಕ್ರಮವಿಧಿಗಳು ಈ ಸಂಗ್ರಹ ಭಾಷೆಯಿಂದ ಯಾಂತ್ರಿಕ ಸಂಕೇತಗಳಿಗೆ ಪರಿವರ್ತಿಸಲು ಆರಂಭವಾಯಿತು.

ಈ ಪ್ರಪ್ರಥಮ ವಿದ್ಯುನ್ಮಾನ ಗಣಕಯಂತ್ರಗಳು ಕೆಲವು ನಿರ್ದಿಷ್ಟ ಕಾರ್ಯಗಳಿಗೆ ಸೀಮಿತವಾಗಿದ್ದರೂ ಇವನ್ನು ಆನ್ವಯಿಕ (ಅಪ್ಲಿಕೇಷನ್) ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳ ಹಲವು ಸಮಸ್ಯೆಗಳ ಪರಿಹಾರಕ್ಕಾಗಿ ಬಳಕೆ ಮಾಡುತ್ತಿದ್ದರು. ನಂತರ ಮರ್ಚೆಂಟ್ ಕ್ಯಾಲ್ಕ್ಯುಲೇಟರ್ ಎಂಬುದ ರಲ್ಲಿ ಅಟಾನಾಸಾಫ್ ಎಂಬಾತನು 29 ಸಮೀಕರಣಗಳನ್ನು ಬಿಡಿಸಿ 29 ಚಲಾಂಕಗಳ ಬೆಲೆಗಳನ್ನು ಪಡೆಯಲು 381 ಗಂಟೆಗಳು ತಗಲುತ್ತದೆಂದು ಅಂದಾಜು ಮಾಡಿದನು. ಆದರೆ ಅಟಾನಾಸಾಫ್–ಬೆರ್ರಿ ವಿನ್ಯಸಿಸಿದ ಗಣಕ ಯಂತ್ರದಲ್ಲಿ ಇಂತಹ ಕಾರ್ಯವನ್ನು ಒಂದು ಗಂಟೆಯೊಳಗಾಗಿ ಪೂರ್ಣಗೊಳಿಸಬಹುದಾಗಿತ್ತು. ENIAC ಅನ್ನು ಉಪಯೋಗಿಸಿ ಜಲಜನಕ ಬಾಂಬಿನ ವಿನ್ಯಾಸಕ್ಕೆ ಬೇಕಾದ ನಿರ್ದಿಷ್ಟ ಸಾಂಖ್ಯಿಕ (ಸ್ಟ್ಯಾಟಿಸ್ಟಿಕಲ್) ಸಮಸ್ಯೆಗಳನ್ನು ಮೊದಲ ಬಾರಿಗೆ ಬಿಡಿಸಲು 20 ಸೆಕೆಂಡುಗಳು ಅಗತ್ಯವಾಗುತ್ತಿತ್ತು. ಇದೇ ಸಮಸ್ಯೆಯನ್ನು ಯಾಂತ್ರಿಕ ಕಲನಯಂತ್ರದಲ್ಲಿ (ಮೆಕ್ಯಾನಿಕಲ್ ಕ್ಯಾಲ್ಕ್ಯುಲೇಟರ್) ಬಿಡಿಸಿಲು ಪ್ರಯತ್ನಿಸಿದಾಗ ಅದು 40 ಗಂಟೆಗಳ ಸಮಯವನ್ನು ತೆಗೆದುಕೊಳ್ಳುತ್ತಿದ್ದುದು ಕಂಡುಬಂದಿತು. ನಂತರ ಎಕರ್ಟ್ ಮತ್ತು ಮಾಕ್‌ಲಿ UNIVAC (ಯೂನಿವರ್ಸಲ್ ಆಟೋಮೆಟಿಕ್ ಕಂಪ್ಯೂಟರ್) ಎಂಬ ಸುಧಾರಿತ ಗಣಕಯಂತ್ರವನ್ನು ನಿರ್ಮಿಸಿದರು. ಇದು ಪ್ರಥಮಬಾರಿಗೆ ಆಸಕ್ತರು ಕೊಳ್ಳಬಹುದಾದ ವಾಣಿಜ್ಯ ವಸ್ತುವಾಗಿ, ಯಶಸ್ವಿ ಗಣಕ ಯಂತ್ರವೆಂದು ಪ್ರಸಿದ್ಧಿಯಾಯಿತು. ಇದನ್ನು ಪ್ರಥಮಬಾರಿಗೆ ಅಮೆರಿಕದ 1952ನೆಯ ಚುನಾವಣೆಯಲ್ಲಿ ಬಳಸಲಾಯಿತು. ಇದರ ಫಲವಾಗಿ, ಮತದಾನ ಮುಗಿದ 45 ನಿಮಿಷಗಳಲ್ಲಿ, ಶೇ.7 ಮತದಾನ ಮಾಹಿತಿಯನ್ನು ಆಧರಿಸಿ ಐಸನ್‌ಹೋವರ್ ಅವರು ಸ್ಟೀವನ್‌ಸನ್ ವಿರುದ್ಧ 438 ಮತಗಳ ಅಂತರದಿಂದ ಗೆಲ್ಲುತ್ತಾರೆಂದು ಮುನ್ಸೂಚನಾ ಫಲಿತಾಂಶವನ್ನು ನೀಡಿತು. ಕೊನೆಗೆ ಐಸನ್‌ಹೋವರ್ 442 ಮತಗಳ ಅಂತರದಲ್ಲಿ ವಿಜಯಿಯಾದರು. UNIVAC-I ಅನ್ನು ಬಳಸಿ ಪ್ರಥಮ ಬಾರಿಗೆ ಜನರಲ್ ಎಲೆಕ್ಟ್ರಿಕ್ ಕಂಪನಿ ಎಂಬ ಸಂಸ್ಥೆಯು, ನೌಕರರ ಸಂಬಳ ಲೆಕ್ಕಾಚಾರದ ಗಣಕೀಕರಣದಲ್ಲಿ ಸಫಲವಾಗಿ ಈ ಗಣಕವನ್ನು ವಾಣಿಜ್ಯವಾಗಿ ಉಪಯೋಗಿಸತೊಡಗಿತು.

1954ರ ಅನಂತರ ಗಣಕಯಂತ್ರದ ಜಗತ್ತಿನಲ್ಲಿ ಬಹಳ ಮಹತ್ವದ ಬೆಳವಣಿಗೆಗಳು ಕಂಡುಬಂದವು. ಈ ಸಮಯವನ್ನು ಸಾಮಾನ್ಯವಾಗಿ ಗಣಕಗಳ ಬೆಳವಣಿಗೆಯ ಎರಡನೆಯ ತಲೆಮಾರೆಂದು ಕರೆಯಲಾಗುತ್ತದೆ. ಇದರಲ್ಲಿ ಮೂಲ ವಿದ್ಯುನ್ಮಂಡಲಗಳನ್ನು ವಿನ್ಯಸಿಸಲು ಬೇಕಾದ ತಂತ್ರಜ್ಞಾನದಿಂದ ಹಿಡಿದು ವೈಜ್ಞಾನಿಕ ಅನ್ವಯಗಳಿಗೆ ಬೇಕಾಗುವ ಕ್ರಮವಿಧಿ ಭಾಷೆಗಳಲ್ಲಿ ಅಭಿವೃದ್ಧಿ ಕಂಡುಬಂದಿತು.

**ಪಾರಸ್ಥಕ (ಟ್ರಾನ್ಸಿಸ್ಟರ್)**: ನಿರ್ವಾತ ಕೊಳವೆಗಳನ್ನು ಬಳಸುತ್ತಿದ್ದ ಗಣಕಯಂತ್ರಗಳು ಬಹಳಷ್ಟು ಶಾಖವನ್ನುಂಟುಮಾಡುತ್ತಿದ್ದುದರಿಂದ ಹವಾನಿಯಂತ್ರಣವು ಅತ್ಯಂತ ಅನಿವಾರ್ಯವಾಗಿತ್ತು. ಇದು ತೀವ್ರತರ ಸಮಸ್ಯೆಯೇ ಆಗಿತ್ತು. ಮುಂದೆ ಈ ನಿರ್ವಾತ ಕೊಳವೆಗಳ ಬದಲಾಗಿ ಪಾರಸ್ಥಕಗಳು (ಟ್ರಾನ್ಸಿಸ್ಟರ್) ಮತ್ತು ಡಯೋಡುಗಳು ಬಳಕೆಗೆ ಬಂದವು. ಮೊದಲನೆಯದಾಗಿ, 1954ರಲ್ಲಿ ಬೆಲ್ ಪ್ರಯೋಗಾಲಯದಿಂದ ತಯಾರಾದ TRADIC ಮತ್ತು MIT ವಿದ್ಯಾಲಯದ ಲಿಂಕನ್ ಪ್ರಯೋಗಾಲಯದಲ್ಲಿ ತಯಾರಾದ TX-0 ಯಂತ್ರಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಿ ಕೊಳ್ಳಲಾಯಿತು. ಕಾಂತೀಯ ಕೋಶಗಳ (ಮ್ಯಾಗ್ನೆಟಿಕ್ ಕೋರ್ಸ್) ಆಧಾರದಮೇಲೆ ದತ್ತಾಂಶಗಳನ್ನು ಅಥವಾ ಮಾಹಿತಿಗಳನ್ನು ಸಂಚಯ ಮಾಡುವಂತಹ ಜ್ಞಾಪಕಾಂಗ ತಂತ್ರಜ್ಞಾನವನ್ನು ಇಲ್ಲಿ ಬಳಸಲು ಆರಂಭಿಸಲಾಯಿತು. ದತ್ತಸಂಚಯದಿಂದ ಪ್ರತಿಬಾರಿಯೂ ದತ್ತಾಂಶಗಳನ್ನು ಸರದಿಯ ಪ್ರಕಾರವಾಗಿ ಹುಡುಕಿ ಸಂಸ್ಕರಣೆಗೆ (ಪ್ರೋಸೆಸಿಂಗ್) ಅಥವಾ ನಿರ್ಗಮಾಂಗಕ್ಕೆ (ಔಟ್‌ಪುಟ್ ಯೂನಿಟ್) ಪಡೆದುಕೊಳ್ಳುವ ಬದಲು ಅವುಗಳನ್ನು ಅನಿಯತವಾಗಿ ಹೆಕ್ಕಿ ತೆಗೆಯುವ ತಂತ್ರಜ್ಞಾನವನ್ನೂ ಈ ಸಂದರ್ಭದಲ್ಲಿ ಸಾಧಿಸಲಾಯಿತು. ಈ ಮೊದಲು ಪಾದರಸ ಸರದಿಕಾರಕ ಮಂಡಲಗಳನ್ನು (ಮರ್ಕ್ಯುರಿ ಡಿಲೆ ಲೈನ್ಸ್) ಬಳಸಿದ ನೆನಪಿನ ಕೋಶಗಳಲ್ಲಿ ದತ್ತಾಂಶಗಳನ್ನು ಸಂಗ್ರಹಿಸಿ, ದತ್ತ ಸಂಚಯಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಹೀಗೆ ಸಂಗ್ರಹವಾದ ದತ್ತಾಂಶಗಳನ್ನು ಹೊರತೆಗೆಯಲು ಸರದಿ ಪ್ರಕಾರ ಅಂದರೆ ನಮಗೆ ಬೇಕಾದ ಮಾಹಿತಿ ಪಡೆಯಲು, ದತ್ತಸಂಚಯದಲ್ಲಿ ಆರಂಭದಿಂದ ಅನುಕ್ರಮವಾಗಿ ಹುಡುಕಬೇಕಾಗಿತ್ತು. ಅದೂ ಅಲ್ಲದೆ, ನೂತನ ಕಾಂತೀಯ ನೆನಪಿನ ಕೋಶಗಳು ಗಾತ್ರದಲ್ಲಿ ಚಿಕ್ಕದಾಗಿದ್ದು, ಕಡಮೆ ಶಾಖದ ಉತ್ಪತ್ತಿಯೊಂದಿಗೆ ವೇಗವಾಗಿ ಕೆಲಸ ನಿರ್ವಹಿಸಬಲ್ಲವಾಗಿದ್ದು ಅವುಗಳ ಬೆಲೆಯಲ್ಲೂ ಗಮನಾರ್ಹ ಇಳಿಕೆ ಕಂಡುಬಂತು.

ಪ್ರಮುಖ ಆವಿಷ್ಕಾರವಾಗಿ, ಗಣಕಗಳ ಒಳರಚನೆಯನ್ನು ಗಮನಿಸಿದರೆ, ಸೂಚೀ ಸಂಖ್ಯೆಗಳ ರಿಜಿಸ್ಟರುಗಳಿಂದ (ಇಂಡೆಕ್ಸ್ ರಿಜಿಸ್ಟರ್), ಕ್ರಮವಿಧಿಗಳು ಸೂಚಿಸುವ, ಲೆಕ್ಕಾಚಾರಗಳನ್ನು ಪುನರಾವೃತ್ತವಾಗಿ (ಲೂಪ್) ಮಾಡಬೇಕಾದ ಸಂದರ್ಭಗಳನ್ನು ನಿಯಂತ್ರಿಸಲು ಮತ್ತು ಹಲವಾರು ದಶಮಾಂಶ ಸಂಖ್ಯೆಗಳನ್ನು (ಡೆಸಿಮಲ್ ನಂಬರ್ಸ್) ಬಳಸಿ ಗಣಿತೀಯ ಲೆಕ್ಕಾಚಾರಗಳನ್ನು ಮಾಡುವ ಅವಕಾಶವೂ ಲಭ್ಯವಾಯಿತು. ಈ ಮೊದಲು, ಯಾವುದೇ ಸಂಖ್ಯೆಗೆ ಸಂಬಂಧಿಸಿದಂತೆ ಇರುವ ಬಿಡಿ ಅಂಕಿಗಳನ್ನು ಬಳಸಲು ಅನುಕ್ರಮವಾದ ನೆನಪಿನ ಕೋಶಗಳನ್ನು ಬಳಸಬೇಕಾದ ಸಂದರ್ಭವಿದ್ದು ಈ ಕ್ರಮವು ಕ್ರಮವಿಧಿ ರಚನೆಯ ದೃಷ್ಟಿಯಿಂದ ಕ್ಲಿಷ್ಟತಮವಾಗಿತ್ತು. ಅಲ್ಲದೆ, ಕ್ರಮವಿಧಿಯ ಚಾಲನೆಯಲ್ಲಿರುವಾಗಲೇ ಬದಲುಗೊಳ್ಳುವ ಅನಿವಾರ್ಯ ಪರಿಸ್ಥಿತಿಯೂ ಇತ್ತು. ಇದು, ದತ್ತಾಂಶಗಳನ್ನೂ ಕ್ರಮವಿಧಿಗಳನ್ನೂ ಮೂಲಭೂತವಾಗಿ ಒಂದೇ ಎಂಬ ತತ್ತ್ವವನ್ನು ಒಪ್ಪಿದಂತಾಗಿತ್ತು. ಆಗಿನ ಕಾಲಕ್ಕೆ ಈ ಯೋಚನೆಯ ಸಮರ್ಪಕವಾಗಿ ಕಂಡರೂ, ಆಧುನಿಕ ಗಣಕ ತಂತ್ರಜ್ಞಾನದ ದೃಷ್ಟಿಯಿಂದ ಈ ವಿಧಾನವು ಅತ್ಯಂತ ಕ್ಲಿಷ್ಟವೆಂಬುದೂ, ಗಣಕವು ಚಾಲನೆಯಲ್ಲಿರುವಾಗ ಲೆಕ್ಕಾಚಾರಗಳಲ್ಲಿ ಉಂಟಾಗುವ ದೋಷಗಳನ್ನು ತಿಳಿಯುವಿಕೆಯು ಕಷ್ಟ ಅಥವಾ ಸಾಧ್ಯವಿಲ್ಲವೆಂಬುದೂ ಈಗ ಸಾಬೀತಾಗಿದೆ. ಹೀಗೆ, ದಶಮಾಂಶ ಸಂಖ್ಯೆಗಳನ್ನು ನೆನಪಿನ ಕೋಶಗಳಲ್ಲಿ ಶೇಖರಿಸುವ

ತಂತ್ರವನ್ನು ಸಾಧಿಸಿದ ನಂತರ, ಆರಂಭಿಕ ಗಣಕಗಳಲ್ಲಿ ಅವುಗಳಿಗೆ ಸಂಬಂಧಿಸಿದ ಲೆಕ್ಕಾಚಾರಗಳನ್ನು ಮಾಡಲು ಕ್ರಮವಿಧಿಕೋಶಗಳನ್ನು (ಲೈಬ್ರರೀಸ್ ಆಫ್ ಪ್ರೋಗ್ರಾಂ ಸಬ್‌ರೊಟೀನ್ಸ್) ರಚಿಸಿ, ಗಣಕಗಳಲ್ಲಿ ಶೇಖರಿಸಿಟ್ಟು ಅವುಗಳನ್ನು ಆನ್ವಯಿಕ ಕ್ರಮವಿಧಿಗಳ ಮೂಲಕ ಕರೆದು ಬಳಸಿಕೊಳ್ಳುವ ಪರಿಪಾಠ ಆರಂಭವಾಯಿತು. ಆದರೆ ಮುಂದಿನ ಸುಧಾರಣೆಗಳಲ್ಲಿ ಈ ಕೆಲವು ಕಾರ್ಯಗಳನ್ನು ಗಣಕಗಳ ಯಂತ್ರಾಂಶಗಳಲ್ಲೇ ಅಳವಡಿಸುವಲ್ಲಿ ತಂತ್ರಜ್ಞರು ಸಫಲರಾದರು.

ಈ ಎಲ್ಲ ಬೆಳವಣಿಗೆಗಳನ್ನು ಕಂಡ ಗಣಕಗಳ ತಲೆಮಾರಿನಲ್ಲಿ, ಬಳಕೆದಾರರ ಕೈಗೆಟಕುವಂತಹ ರಚನೆಯ, ಉನ್ನತ ಮಟ್ಟದ ಕ್ರಮವಿಧಿ ಭಾಷೆಗಳನ್ನು ಪರಿಚಯಿಸಲಾಯಿತು. ಇದರಲ್ಲಿ ಪ್ರಮುಖವಾಗಿ 1956ರಲ್ಲಿ FORTRAN, 1958ರಲ್ಲಿ ALGOL ಮತ್ತು 1959 ರಲ್ಲಿ COBOL ಬಳಕೆಗೆ ಬಂದವು. IBM 704 ಮತ್ತು ಅದರ ಸುಧಾರಿತ ಗಣಕಗಳಾದ IBM 709 (ಚಿತ್ರ 4) ಮತ್ತು IBM 9074 ಈ ಕಾಲದ ಮುಖ್ಯ ಗಣಕಯಂತ್ರಗಳು. ಗಣಕಸಂಸ್ಕಾರಕಗಳೊಡನೆ ಪ್ರವೇಶಾಂಗ ಹಾಗೂ ನಿರ್ಗಮಾಂಗಗಳ (ಇನ್‌ಪುಟ್ ಆಂಡ್ ಔಟ್‌ಪುಟ್ ಯೂನಿಟ್ಸ್) ಮೂಲಕ ಸುಗಮ ಮತ್ತು ಶೀಘ್ರ ಮಾಹಿತಿ ವಿನಿಮಯವಾಗಬಲ್ಲ ಸುಧಾರಣೆಗಳನ್ನೂ ಈ ಗಣಕಗಳ ಮೂಲಕ ಜಾರಿಗೊಳಿಸಲಾಯಿತು.

ವೈಜ್ಞಾನಿಕ ಕ್ಷೇತ್ರದ ಅನ್ವಯಗಳಿಗಾಗಿ ಅಗತ್ಯವಾದ ಅಗಾಧ ಪ್ರಮಾಣದ ಸಂಖ್ಯಾಸಂಸ್ಕರಣೆಗಳಿಗಾಗಿ ಎರಡು **ಪರಮಗಣಕ**ಗಳನ್ನೂ (ಸೂಪರ್ ಕಂಪ್ಯೂಟರ್ಸ್) ಈ ಅವಧಿಯಲ್ಲಿ ವಿನ್ಯಸಿಸಲಾಯಿತು. ಆ ಕಾಲದಲ್ಲಿದ್ದ ಇತರೆ ಗಣಕ ಗಳಿಗೆ ಹೋಲಿಸಿದರೆ ಇವು ಹೆಚ್ಚು ಮಾಹಿತಿಗಳನ್ನು ಭರಿಸುವ ಮತ್ತು ಅತಿ ಹೆಚ್ಚುವೇಗದಲ್ಲಿ ಕಾರ್ಯಗಳನ್ನು ನಿರ್ವಹಿಸುವ ಶಕ್ತಿಯನ್ನು ಪಡೆದಿದ್ದುದರಿಂದ ಸಹಜವಾಗಿಯೇ ಪರಮಗಣಕಗಳೆಂದು ಹೆಸರು ಪಡೆದವು. ಆದರೆ ಈ ಹೆಸರಿಗೆ ಈಗ ಬೇರೆಯೇ ಅರ್ಥವಿದೆ. 1950ರ ದಶಕದ ಲಿವ್‌ಮೋರ್ ಅಟಾಮಿಕ್ ರಿಸರ್ಚ್ ಕಂಪ್ಯೂಟರ್ (LARC) ಮತ್ತು IBM 7030 ಗಣಕಗಳು ಆ ಕಾಲದ ಪರಮಗಣಕಗಳಿಗೆ ಉದಾಹರಣೆಗಳು. ಇವುಗಳು ನೆನಪಿನ ಕೋಶದ ಹಾಗೂ ಸಂಸ್ಕರಣಾ ಚಟುವಟಿಕೆಗಳನ್ನು ಸಮಾಂತರವಾಗಿ ನಡೆಸಬಲ್ಲ ಆರಂಭಿಕ ಪ್ರಯತ್ನ.

ಗಣಕ ಲೆಕ್ಕಾಚಾರ ಕ್ರಿಯೆಗಳ ವೇಗ ಮತ್ತು ಸಾಮರ್ಥ್ಯಗಳಲ್ಲಿ ಅಸಾಧಾರಣ ಹೆಚ್ಚಳವನ್ನು 1963ರ ಅನಂತರದ ಗಣಕಯಂತ್ರಗಳಲ್ಲಿ ಸಾಧಿಸಲಾಯಿತು. ಈ ಹಿಂದಿನ ದಶಕಗಳಲ್ಲಿ ವಿದ್ಯುನ್ಮಾನ ಕ್ಷೇತ್ರದಲ್ಲಿ ಅಭಿವೃದ್ಧಿಗೊಂಡಿದ್ದ ಸಮಗ್ರ ಮಂಡಲಗಳನ್ನು (ಇಂಟಿಗ್ರೇಟೆಡ್ ಸರ್ಕ್ಯೂಟ್ಸ್) ಈ ದಶಕದ ಯಂತ್ರ ಭಾಗಗಳಿಗಾಗಿ ಬಳಸುವ ಪ್ರಕ್ರಿಯೆಗಳು ಆರಂಭವಾಯಿತು. ಇದರಿಂದಾಗಿ ಗಣಕಗಳು ಸೂಕ್ಷ್ಮವಾಗುತ್ತಾ ಬಂದವು.

ನೆನಪಿನಕೋಶಗಳಿಗಾಗಿ ಕಾಂತೀಯ ಭಾಗಗಳನ್ನು ಬಿಟ್ಟು ಅರೆವಾಹಕಗಳನ್ನು (ಸೆಮಿಕಂಡಕ್ಟರ್) ಬಳಸುವ ತಂತ್ರಜ್ಞಾನವನ್ನು ಅಳವಡಿಸಲಾಯಿತು. ಸಂಕೀರ್ಣ ಸಂಸ್ಕಾರಕಗಳ (ಪ್ರೋಸೆಸರ್) ಉತ್ತಮ ಚಟುವಟಿಕೆಗೆ ಅಗತ್ಯವಾದ ಸಮರ್ಥ ವಿನ್ಯಾಸಕ್ಕಾಗಿ ಸೂಕ್ಷ್ಮ ಕ್ರಮವಿಧಿಗಳನ್ನು (ಮೈಕ್ರೋ ಪ್ರೋಗ್ರಾಮ್ಸ್) ರಚಿಸುವ ತಂತ್ರವನ್ನು ಕಂಡುಕೊಳ್ಳ ಲಾಯಿತು. ಈ ಬೆಳವಣಿಗೆಗಳ ಪರಿಣಾಮವಾಗಿ ಏಕಕಾಲಿಕ ಸಂಸ್ಕರಣೆ (ಪ್ಯಾರಲಲ್ ಪ್ರೋಸೆಸಿಂಗ್), ಕಾರ್ಯನಿರ್ವಾಹಕಗಳ ಮತ್ತು ಗಣಕದ ಸಂಸ್ಕರಣೆಯಲ್ಲಿ ಕಾಲಸಂಯೋಜನೆ (ಟೈಮ್‌ಶೇರಿಂಗ್) ಮುಂತಾದ ನೂತನ ವಿಚಾರಗಳನ್ನು ಯಶಸ್ವಿ ಯಾಗಿ ಅನುಷ್ಠಾನಗೊಳಿಸಲಾಯಿತು.

ಆರಂಭದಲ್ಲಿ ತಯಾರಿಸಿದ ಸಮಗ್ರಮಂಡಲಗಳಲ್ಲಿ ಪ್ರತಿ ಮಂಡಲಕ್ಕೂ ಸುಮಾರು 10 ಚಿಕ್ಕದಾದ ವಿದ್ಯುನ್ಮಂಡಲಗಳನ್ನು ಒಳಗೊಂಡ ಸಂಕೀರ್ಣ ವಿದ್ಯುನ್ಮಾನ ಬಿಲ್ಲೆಗಳನ್ನು(ಚಿಪ್) ಬಳಸಲಾಗುತ್ತಿದ್ದು, ಕ್ರಮೇಣ 100 ಮಂಡಲಗಳುಳ್ಳ ಮಧ್ಯಮ ಅಳತೆಯ ಸಮಗ್ರಮಂಡಲ ಗಳು ಸಿದ್ಧಗೊಂಡವು. ಗಣಕತಜ್ಞರು, ಹಲವಾರು ಪದರಗಳ ಇಂತಹ ಮುದ್ರಿತ ಮಂಡಲಗಳಿಂದ (ಪ್ರಿಂಟೆಡ್ ಸರ್ಕ್ಯೂಟ್ಸ್) ತಯಾರಿಸಲ್ಪಟ್ಟ ನೆನಪಿನಕೋಶಗಳನ್ನು ಗಣಕಗಳಲ್ಲಿ ಅಳವಡಿಸಲಾರಂಭಿಸಿದರು. ಈ ಘನಸ್ಥಿತಿ (ಸಾಲಿಡ್ ಸ್ಟೇಟ್) ನೆನಪಿನಕೋಶಗಳ ಬಳಕೆಯಿಂದ ಸಮಾನಾಂತರವಾದ ಗಣಕಕ್ರಿಯೆಗಳು ಸುಲಭಸಾಧ್ಯವಾದವು. ಇದರಿಂದಾಗಿ ಕೇಂದ್ರ ಸಂಸ್ಕರಣಾಂಗ ಮತ್ತು ಪ್ರವೇಶಾಂಶ/ ನಿರ್ಗಮಾಂಶ (I/O data) ಕ್ರಿಯೆಗಳು ಒಟ್ಟಾಗಿ ನಡೆಯಲು ಸಾಧ್ಯವಾಯಿತು. 1964ರಲ್ಲಿ ನಿರ್ಮಾಣಗೊಂಡ CDC 6600 ಹೆಸರಿನ ಗಣಕವು ಸಮಾನಾಂತರ ಗಣಕಕ್ರಿಯಾಶೀಲವಾದ ಪ್ರಪ್ರಥಮ ಗಣಕ ವಿನ್ಯಾಸವಾಗಿ ಯಶಸ್ವಿಯಾಯಿತು. ಇದರಲ್ಲಿ 10 ಸ್ವತಂತ್ರ ಕ್ರಿಯಾಸರಣಿಗಳು (ಪ್ರೋಗ್ರಾಮ್ ರೊಟೀನ್ಸ್) ಏಕಕಾಲಿಕವಾಗಿ ಕಾರ್ಯ ನಿರ್ವಹಿಸುವಂತಿದ್ದು ನೆನಪಿನಕೋಶದಲ್ಲಿ 32 ಪ್ರತ್ಯೇಕ ನೆನಪಿನ ವಿಭಾಗಗಳನ್ನು ಹೊಂದಿದ್ದವು. ಈ ಸೌಲಭ್ಯಗಳಿಂದಾಗಿ ಗಣಕವು ದಶಮಾಂಶ ಅಂಕಿಗಳನ್ನೊಳಗೊಂಡ 1 ದಶಲಕ್ಷ (ಮಿಲಿಯನ್) ಗಣಿತಕ್ರಿಯೆಗಳನ್ನು ಕೇವಲ ಒಂದು ಸೆಕೆಂಡಿನಲ್ಲಿ ಮಾಡುವಷ್ಟು ಸಮರ್ಥವಾಗಿತ್ತು.

ಐದುವರ್ಷದ ಅನಂತರ ತಯಾರಾದ CDC 7600 ಗಣಕಯಂತ್ರವು ಒಂದೇ ಸೆಕೆಂಡಿನಲ್ಲಿ 10 ದಶಲಕ್ಷ ಗಣಿತಕ್ರಿಯೆಗಳನ್ನು ನಡೆಸುವಷ್ಟು ಪ್ರಬಲವಾಗಿತ್ತು. ಇದೇ ಸಮಯದಲ್ಲಿ ಹೊರಬಂದ IBM 360/91 ಎಂಬ ಗಣಕವು CDC 6600 ಗಣಕಕ್ಕೆ ಹೋಲಿಸಿದಂತೆ ಎರಡರಷ್ಟು ಸಮರ್ಥವಾಗಿತ್ತು. ಕಾರ್ಯನಿರ್ದೇಶಕಗಳನ್ನು ಪ್ರತ್ಯೇಕವಾಗಿ ಪರಿಗಣಿಸಬಲ್ಲ, ದಶಮಾಂಶ ಸಂಖ್ಯೆಗಳು ಮತ್ತು ಪೂರ್ಣಾಂಕಗಳ ಲೆಕ್ಕಾಚಾರಗಳನ್ನು ಪ್ರತ್ಯೇಕವಾಗಿ ಮಾಡಬಲ್ಲ ವ್ಯವಸ್ಥೆಗಳನ್ನು ಈ ಗಣಕದಲ್ಲಿ ಅಳವಡಿಸಲಾಗಿತ್ತು. ಇದಾದನಂತರ ಬಳಕೆಗೆ ಬಂದ IBM 360–195 ಗಣಕವು CDC 7600ಕ್ಕೆ ಸರಿಸಾಟಿಯಾಗಿ ಕೆಲಸಮಾಡುತ್ತಿತ್ತು. ಅಮೆರಿಕದ ವೆಸ್ಟಿಂಗ್ ಹೌಸ್ ಕಾರ್ಪೋರೇಷನ್ ತಯಾರಿಸಿದ SOLOMON ಗಣಕ ಮತ್ತು ಇಲಿನಾಯ್ ವಿಶ್ವವಿದ್ಯಾನಿಲಯದ ILLIAC–4 (ಚಿತ್ರ 5) ಗಣಕಗಳು ಪ್ರಪ್ರಥಮ ಏಕಕಾಲಿಕ ಗಣಕಗಳಾಗಿ ಪ್ರಸಿದ್ಧಿಗೊಂಡವು. ಟೆಕ್ಸಾಸ್ ಇನ್ಸ್‌ಟ್ರುಮೆಂಟ್ ಕಂಪನಿಯ TI-ASC (ಟೆಕ್ಸಾಸ್ ಇನ್ಸ್ಟ್ರುಮೆಂಟ್ ಅಡ್ವಾನ್ಸ್‌ಡ್ ಸೈಂಟಿಫಿಕ್ ಕಂಪ್ಯೂಟರ್) ಗಣಕ ಮತ್ತು CDC ಕಂಪನಿಯ STAR-100 ಗಣಕಗಳು ಸದಿಶ ಸಂಸ್ಕಾರಕಗಳ (ವೆಕ್ಟರ್ ಪ್ರೋಸೆಸ್) ಬಳಕೆಯ ಸಾಧ್ಯತೆಗಳನ್ನು ಸಾಧಿಸಿ ತೋರಿಸಿದ್ದಲ್ಲದೆ, ಮುಂದಿನ ಇಂತಹ ಸಂಸ್ಕಾರಕಗಳಿಗೆ ಶಿಷ್ಟತೆಗಳನ್ನು ನಿರ್ಧರಿಸಲು ಸಹಕಾರಿಯಾಯಿತು.

1963ರಲ್ಲಿ ಕೇಂಬ್ರಿಜ್ ಮತ್ತು ಲಂಡನ್ ವಿಶ್ವವಿದ್ಯಾನಿಲಯಗಳು ಪರಸ್ಪರ ಸಹಕರಿಸಿ CPL (ಕಂಬೈನ್ಡ್ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್) ಎಂಬ ಕ್ರಮವಿಧಿಭಾಷೆಯನ್ನು ಅಭಿವೃದ್ಧಿಪಡಿಸಿತು. ಆ ವೇಳೆಗಾಗಲೇ ಪ್ರಚಲಿತವಿದ್ದ ALGOLಅನ್ನು ಹೋಲುತ್ತಿದ್ದ ಈ ಕ್ರಮವಿಧಿಭಾಷೆಯು ಅನೇಕ ಕ್ಲಿಷ್ಟ ವಿಚಾರಗಳನ್ನು ಒಳಗೊಂಡಿತ್ತು. ಇದನ್ನು ಸರಳಗೊಳಿಸಿದ BCPL (Basic CPL) ಎಂಬ ಭಾಷೆಯು 1967ರವೇಳೆಗೆ ಅಭಿವೃದ್ಧಿಗೊಂಡಿತು. ಬೆಲ್ ಪ್ರಯೋಗಾಲಯಗಳಲ್ಲಿದ್ದ ಕೆನ್ ಥಾಮ್ಸನ್ ಎಂಬಾತನು 1970ರಲ್ಲಿ CPLಅನ್ನು ಸರಳಗೊಳಿಸಿ **'B'** ಎಂಬ ಮತ್ತೊಂದು ಭಾಷೆಯನ್ನು ಬಳಕೆಗೆ ತಂದನು. ಇದು ಮುಂದೆ UNIX ಎಂಬ ಗಣಕ ಕಾರ್ಯನಿರ್ವಾಹಕ ವ್ಯವಸ್ಥೆಯನ್ನು ಜಾರಿಗೆ ತರಲು ಸಹಕಾರಿಯಾಯಿತು.

1970ರ ಅನಂತರ ಗಣಕಕ್ಷೇತ್ರದ ಅತಿ ಪ್ರಮುಖ ಬೆಳವಣಿಗೆಯಾಗಿ ಗಣಕ ಯಂತ್ರಾಂಶಗಳ (ಹಾರ್ಡ್‌ವೇರ್) ಇಂದಿನ ರೀತಿಯ ವಿನ್ಯಾಸಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಅತಿಸಮಗ್ರ ಮಂಡಲಗಳ (ಲಾರ್ಜ್ ಸ್ಕೇಲ್ ಇಂಟಿಗ್ರೇಟೆಡ್ ಸರ್ಕ್ಯೂಟ್– LSI); ಪ್ರತಿ ಬಿಲ್ಲೆಯಲ್ಲಿ 1000 ವಿದ್ಯುನ್ಮಂಡಲಗಳು, ಬಳಕೆಯಾಯಿತು. ಇಲ್ಲಿ ಅನೇಕ ಪಾರಸ್ಪಕಗಳುಳ್ಳ ಅರೆವಾಹಕ ಉಪಕರಣಗಳನ್ನು ಒಂದೇ ಯಂತ್ರಾಂಶ ಭಾಗದಲ್ಲಿ ಅಳವಡಿಸಲಾಗಿದ್ದು, ಗಣಕಗಳ ಗಾತ್ರದಲ್ಲಿ ಹಾಗೂ ಬೆಲೆಯಲ್ಲಿ ಇಳಿತ ಕಂಡಿತು. ಈ ಸಮಗ್ರಮಂಡಲಗಳನ್ನು ಉಪಯೋಗಿಸಿದಾಗ ಮೈಕ್ರೋ ಗಣಕಗಳು ಸೃಷ್ಟಿಯಾದವು. ಇವು ವಿದ್ಯುತ್ತನ್ನು ಬಹಳ ಕಡಮೆ ಪ್ರಮಾಣದಲ್ಲಿ ಉಪಯೋಗಿಸಿ, ಹೆಚ್ಚಿನ ಹವಾ ನಿಯಂತ್ರಣದ ಅಗತ್ಯವನ್ನು ಸಾಕಷ್ಟು ಕಡಮೆಗೊಳಿಸಿದವು.

ಈ ವೇಳೆಗೆ ಪ್ರಚಲಿತವಿದ್ದ ಎಲ್ಲಾ ಗಣಕಗಳ ನೆನಪಿನಕೋಶಗಳನ್ನು ಅರೆವಾಹಕ ನೆನಪಿನಕೋಶಗಳಿಂದ ಬದಲಾಯಿಸಲಾಯಿತು. ಇಲ್ಲಿಯವರೆಗೆ ಅರೆವಾಹಕಗಳನ್ನು ಗಣಕದ ರಿಜಿಸ್ಟರುಗಳಿಗೆ ಬಳಸಲಾಗುತ್ತಿತ್ತು. ಈ ಅವಧಿಯಲ್ಲಿ ಅತಿ ಹೆಚ್ಚು ವೇಗದ ಸದಿಶ ಸಂಸ್ಕಾರಕಗಳಾದ (ವೆಕ್ಟರ್ ಪ್ರೋಸೆಸಿಂಗ್) ಕ್ರೇ1, ಕ್ರೇ X-MP ಮತ್ತು ಸೈಬರ್ 205 ಗಣಕಗಳು ಗಣಕ ಕ್ಷೇತ್ರದಲ್ಲಿ ಮೇಲುಗೈ ಪಡೆದವು. ಅತಿ ಹೆಚ್ಚು ನೆನಪಿನಕೋಶದ ಕ್ರೇ2 ಗಣಕವು ಸಿದ್ಧವಾಗಲಾರಂಭಿಸಿತು. ಏಕಕಾಲಿಕ ಸಂಸ್ಕರಣಾ ಕಾರ್ಯಗಳಿಗೆ ಅನುವುಮಾಡುವ ಹಲವಾರು ವಿಧದ ಸೂಕ್ಷ್ಮ ಯಂತ್ರಾಂಶಗಳನ್ನು ಈ ಸಮಯದಲ್ಲಿ ನಿರ್ಮಿಸಲಾಯಿತು. ಆದರೆ ಏಕಕಾಲಿಕ ಗಣಕ ಸಂಸ್ಕರಣೆಯು ಬಹುಮಟ್ಟಿಗೆ ಪ್ರಯೋಗಾತ್ಮಕವಾಗಿದ್ದಿತು. ಈ ಸಮಯದಲ್ಲೇ ಸೂಕ್ಷ್ಮಗಣಕಗಳು ಹಾಗೂ ಕಾರ್ಯ ತಾಣಗಳು (ವರ್ಕ್ ಸ್ಟೇಷನ್ಸ್) ಬಳಕೆಗೆ ಬಂದು, ದೊಡ್ಡ ಗಣಕಗಳು ಕಾಲಸಂಯೋಜನಾ ಕಾರ್ಯದಲ್ಲಿ ತೊಡಗುವುದಕ್ಕೆ ಪರ್ಯಾಯ ಗಣಕ ಉಪಕರಣಗಳಾಗಿ ಪರಿಣಮಿಸಿದವು.

ಈ ದಶಕದಲ್ಲೇ FP (ಫಂಕ್ಷನ್ ಪ್ರೋಗ್ರಾಮಿಂಗ್) ಮತ್ತು Prolog (ಪ್ರೋಗ್ರಾಮಿಂಗ್ ಇನ್ ಲಾಜಿಕ್) ಮುಂತಾದ ಹಲವಾರು ಉನ್ನತಕಾರ್ಯಗಳನ್ನು ನಿರ್ವಹಿಸಬಲ್ಲ ಕಾರ್ಯವಿಧಿ ಭಾಷೆಗಳ ಆವಿಷ್ಕಾರವಾಯಿತು. ಕೇವಲ ತರ್ಕವನ್ನು ಬಳಸುವ, ಸಹಜ ಭಾಷಾ ಸಂಸ್ಕರಣೆಗೆ ಅನುವು ಮಾಡಿಕೊಡುವ Prolog ಹಲವಾರು ನೂತನ ಕಾರ್ಯವಿಧಿ ವಿಧಾನಗಳಿಗೆ ನಾಂದಿಹಾಡಿತು. Pascal, Fortran, C ಮುಂತಾದ ಗಣಕ ಕ್ರಮವಿಧಿ ಭಾಷೆಗಳನ್ನು ಯಂತ್ರಭಾಷೆಗೆ (ಮೆಷಿನ್ ಲ್ಯಾಂಗ್ವೇಜ್) ಪರಿವರ್ತಿಸುವಲ್ಲಿ ಹೊಸಹೊಸ ತಂತ್ರಗಳನ್ನೂ, ಸುಲಭ ಮಾರ್ಗಗಳನ್ನೂ, ಸದಿಶ ಸಂಸ್ಕರಣಾ ವಿಧಾನಗಳನ್ನೂ ಬಳಸಲಾಯಿತು. ಈ ಸುಧಾರಣೆಗಳಿಂದಾಗಿ ಗಣಕ ಕ್ರಮವಿಧಿಗಳಿಂದ ಸಮಸ್ಯೆಗಳ ಪರಿಹಾರದ ದಾರಿ ಸುಗಮಗೊಳಿಸಲ್ಪಟ್ಟಿತು.

1971ರಲ್ಲಿ ಇಂಟೆಲ್ ಕಾರ್ಪೊರೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಸೂಕ್ಷ್ಮ ಗಣಕಗಳಲ್ಲಿ ಅಳವಡಿಸಲು ಅಗತ್ಯವಾದ, ಅತ್ಯಂತ ಕಿರಿದಾದ ಅಳತೆಯ ಎಲೆಕ್ಟ್ರಾನಿಕ್ ಬಿಲ್ಲೆಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಈ ಸಂಸ್ಥೆಯು ಯಶಸ್ವಿಯಾಯಿತು. ಹೀಗೆ ತಯಾರಾದ, ಕೈಬೆರಳಿನ ಉಗುರಿನಷ್ಟು ಅಳತೆಯ, ಕೆಲವೇ ಓಲ್ಟ್ ಗಳಷ್ಟು ವಿದ್ಯುತ್ ಬಳಸುವ ಇಂಟೆಲ್ 4004 ಎಂಬ ಅತಿಸೂಕ್ಷ್ಮ ಎಲೆಕ್ಟ್ರಾನಿಕ್ ಮಂಡಲ ಬಿಲ್ಲೆಯು, ಏಕಕಾಲಕ್ಕೆ ನಾಲ್ಕು ದ್ವಿಮಾನಾಂಕ ಅಂಕಿಗಳಿಗೆ ಸಂಬಂಧಿಸಿದ ಮಾಹಿತಿ ಗಳನ್ನು ಸಂಸ್ಕರಿಸಬಲ್ಲ ಸಾಮರ್ಥ್ಯವನ್ನು ತೋರ್ಪಡಿಸಿತು. ಈ ಬೆಳೆವಣಿಗೆಯ ವೈಶಿಷ್ಟ್ಯವೆಂದರೆ ಇಂತಹ ಬಿಲ್ಲೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ತಯಾರುಮಾಡಬಲ್ಲ ತಂತ್ರಜ್ಞಾನವೂ ಅಭಿವೃದ್ಧಿಗೊಂಡಿತು.

1972ರ ಅವಧಿಯಲ್ಲಿ ಬೆಲ್ ಪ್ರಯೋಗಾಲಯದಲ್ಲಿ 'C' ಕ್ರಮವಿಧಿ ಭಾಷೆ ಹಾಗೂ UNIX ಕಾರ್ಯಾಚರಣ ವ್ಯವಸ್ಥೆಗಳನ್ನು (ಆಪರೇಟಿಂಗ್ ಸಿಸ್ಟಮ್) ಅಭಿವೃದ್ಧಿಗೊಳಿಸಲಾಯಿತು. ಡೆನಿಸ್ ರಿಚಿ ಎಂಬಾತನು ಅ ಭಾಷೆಯನ್ನು ಅಭಿವೃದ್ಧಿ ಗೊಳಿಸಿದನಂತರ ಥಾಮ್ಸನ್ ಎಂಬುವನೊಡನೆ ಸೇರಿ ಅ ಭಾಷೆಯನ್ನು ಬಳಸಿಕೊಂಡು DEC PDP-11 ಗಣಕಕ್ಕೆಂದು UNIXಅನ್ನು ಸಿದ್ಧಪಡಿಸಿದನು. ಈ UNIX ಕಾರ್ಯಾಚರಣ ವ್ಯವಸ್ಥೆಯನ್ನು ಇನ್ನಿತರ ಅನೇಕ ಗಣಕಗಳಿಗೆ ಅಳವಡಿಸಲಾಯಿತು. ಬೇರೆಬೇರೆ ಯಂತ್ರಾಂಶಗಳ ಬೇರೆಬೇರೆ ಗಣಕಗಳಿಗೆ ಪ್ರತ್ಯೇಕವಾದ ಕಾರ್ಯಾಚರಣ ವ್ಯವಸ್ಥೆ ತಂತ್ರಾಂಶಗಳನ್ನು ಬಳಸುವ ಬದಲು UNIX ಕಾರ್ಯಾಚರಣ ವ್ಯವಸ್ಥೆಯನ್ನು ಎಲ್ಲದರಲ್ಲೂ ಬಳಸಲು ಸಾಧ್ಯವಾಯಿತು. ಇದರಿಂದಾಗಿ UNIX ವ್ಯವಸ್ಥೆಯನ್ನು ಬಳಸುವ ಹಲವಾರು ಗಣಕಗಳ ನಡುವೆ ಮಾಹಿತಿಗಳ, ದತ್ತಸಂಚಯಗಳ (ಡಾಟಬೇಸ್) ಸುಲಭ ವಿನಿಮಯವು ಸಾಧ್ಯವಾಯಿತು.

1974ರಲ್ಲಿ ತಯಾರಾಗಿ ಬಂದ ಇಂಟೆಲ್ 8080 ಎಲೆಕ್ಟ್ರಾನಿಕ್ ಬಿಲ್ಲೆಯು ಸಾಕಷ್ಟು ವೇಗ ಮತ್ತು ಸಾಮರ್ಥ್ಯಗಳಿಂದ ಕೂಡಿದ್ದು, ಇವುಗಳಿಂದ ನಿಜವಾದ ವೈಯಕ್ತಿಕ ಗಣಕಗಳನ್ನು (ಪರ್ಸನಲ್ ಕಂಪ್ಯೂಟರ್) ರೂಪಿಸಲಾಯಿತು. ತದನಂತರ ಅತಿಹೆಚ್ಚು ಸಾಮರ್ಥ್ಯವುಳ್ಳ ಹಾಗೂ ವೇಗವಾಗಿ ಕಾರ್ಯವೆಸಗಬಲ್ಲ, ಇಂಟೆಲ್ ಕಂಪನಿಯ 8086 (1978), 80286(1982), 80386 DX (1985), 80486(1991) ಮತ್ತು 1993ರಲ್ಲಿ ಪೆಂಟಿಯಂ ಸೂಕ್ಷ್ಮ ಗಣಕಗಳನ್ನು ಗ್ರಾಹಕರಿಗೆ ಪರಿಚಯಿಸಲಾಯಿತು. ಸ್ಟೀವನ್ ಜಾಬ್ಸ್ ಮತ್ತು ಸ್ಟೀಫನ್ ವಾಜ್‌ನಿಕ್ ಅವರು ತಮ್ಮ ಗ್ಯಾರೇಜಿನಲ್ಲೇ ಆ್ಯಪಲ್ ಕಂಪ್ಯೂಟರ್ ಕಾರ್ಪೊರೇಷನ್‌ಅನ್ನು ಪ್ರಾರಂಭಿಸಿ 1977 ವರ್ಷದಲ್ಲಿ ಇಲ್ಲಿಯೇ ದರ್ಶಕಪರದೆ (ಮಾನಿಟರ್) ಮತ್ತು ಕೀಲಿಮಣೆಗಳೊಂದಿಗೆ (ಕೀಬೋರ್ಡ್) ಜೋಡನೆ ಮಾಡಿದ ಸೂಕ್ಷ್ಮ ಗಣಕವು ಅನೇಕ ಸಂಖ್ಯೆಗಳಲ್ಲಿ ಮಾರಾಟವಾಯಿತು. ಈ ವರ್ಷದಲ್ಲೇ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನಡೆದ ವೆಸ್ಟ್‌ಕೊಸ್ಟ್ ಗಣಕ ಮೇಳದಲ್ಲಿ ಈ ಆ್ಯಪಲ್–II ಗಣಕವನ್ನು ಪ್ರದರ್ಶಿಸಲಾಯಿತು. ಹೆಚ್ಚು ಸ್ಪಷ್ಟವಾದ ಬಣ್ಣಗಳನ್ನು ನೀಡಬಲ್ಲ ಪ್ರದರ್ಶಕತೆರೆ (ಸ್ಕ್ರಿನ್), ಚಿತ್ರಗಳನ್ನು ಮೂಡಿಸಲು ಬೇಕಾದ ನಿರ್ದೇಶನಗಳನ್ನು ಸಂಸ್ಕರಿಸಬಲ್ಲ ಕಾರ್ಯಾಚರಣ ವ್ಯವಸ್ಥೆ, ಗಣಕದ ಯಂತ್ರಾಂಶದೊಳಗೇ BASIC ಗಣಕ ಭಾಷೆಯ ಅಳವಡಿಕೆ ಮುಂತಾದ ವಿಶೇಷತೆಗಳಿಂದ ಈ ಗಣಕವು ಇಂದಿನ ಮೇಜುಗಣಕಗಳಿಗೆ ಉತ್ತಮ ಆರಂಭವನ್ನು ನೀಡಿದವು. ಇದರಲ್ಲಿ 6 ಕಿಲೋಬೈಟ್ ಪ್ರಮಾಣದ ನೆನಪಿನ ಕೋಶಗಳಿದ್ದು, ಫ್ಲಾಪಿ ಡಿಸ್ಕ್‌ಅನ್ನು ಅಳವಡಿಸಲು ಪ್ರಥಮ ಬಾರಿಗೆ ಪ್ರಯತ್ನಿಸಲಾಯಿತು.

ಪ್ರಪಂಚದಲ್ಲೆಲ್ಲಾ ಬಳಕೆದಾರರಿಗೆ ಒಪ್ಪಿಗೆಯಾದ ಇಂಟೆಲ್ 8086 ಮೈಕ್ರೋ ಸಂಸ್ಕಾರಕವು 1978ರಲ್ಲಿ ಸಿದ್ಧವಾಯಿತು. ಮರುವರ್ಷವೇ, 8 ಬಿಟ್‌ಗಳ ಮಾಹಿತಿಗಳನ್ನು ಸಂಸ್ಕರಿಸಬಲ್ಲ, ಸುಲಭ ಬೆಲೆಯ 8088 ಸೂಕ್ಷ್ಮ ಸಂಸ್ಕಾರಕವು ಬಿಡುಗಡೆಯಾಯಿತು. 1982ರಲ್ಲಿ ಐಬಿಎಂ ಕಂಪನಿಯು ತನ್ನ ಮೊದಲ ವೈಯಕ್ತಿಕ ಗಣಕಗಳಿಗಾಗಿ (ಪಿಸಿ–ಪರ್ಸನಲ್ ಕಂಪ್ಯೂ ಟರ್) ಇಂಟೆಲ್8088 ಬಿಲ್ಲೆಗಳನ್ನು ಬಳಸಿಕೊಂಡಿತು. ವ್ಯಾಪಾರಿ ಹಾಗೂ ಬಳಕೆದಾರರ ವಲಯಗಳಲ್ಲಿ ಈ ಪಿಸಿ ಹಲವಾರು ಮಾನಕಗಳಿಗೆ

| | 1951–1958 | 1958–1964 | 1964–1971 | 1971ರ ಅನಂತರ |
|---|---|---|---|---|
| **ಯಂತ್ರಾಂಶ ತಾಂತ್ರಿಕತೆ** | ನಿರ್ವಾತ ಕೊಳವೆಗಳು | ಟ್ರಾನ್ಸಿಸ್ಟರುಗಳು ಮತ್ತು ಡಯೋಡುಗಳು | ಚಿಕ್ಕ ಪರಿಮಾಣದ ಸಮಗ್ರ ಮಂಡಲಗಳು (ICs) | ದೊಡ್ಡ ಪರಿಣಾಮದ ಸಮಗ್ರ ಮಂಡಲಗಳು |
| **ನೆನಪಿನಕೋಶ ಸಾಮರ್ಥ್ಯ** | 2 KB | 64 KB | 4 MB | 16 MB |
| **ಆಂತರಿಕ ಕಾರ್ಯವೇಗ (ಆವರ್ತವೇಗ)** | 100 ಮಿಲಿಸೆಕೆಂಡು | 10ಮೈಕ್ರೋಸೆಕೆಂಡು | 500 ನ್ಯಾನೋಸೆಕೆಂಡು | 800 ಪಿಕೋಸೆಕೆಂಡು |
| **ಸಂಸ್ಕರಣಾ ವೇಗ** | ಸೆಕೆಂಡಿಗೆ ಹಲವು ಸಹಸ್ರ ನಿರ್ದೇಶನಗಳು | ಸೆಕೆಂಡಿಗೆ 10 ಲಕ್ಷ ನಿರ್ದೇಶನಗಳು | ಸೆಕೆಂಡಿಗೆ 100 ಲಕ್ಷ ಸಹಸ್ರ ನಿರ್ದೇಶನಗಳು | ಸೆಕೆಂಡಿಗೆ 100 ದಶಲಕ್ಷ ಸಹಸ್ರ ನಿರ್ದೇಶನಗಳು |
| **ಕೇಂದ್ರ ನೆನಪಿನಕೋಶ** | ಪಾದರಸ ಸರದಿಕಾರಕ ಮಂಡಲಗಳು | ಕಾಂತೀಯ ಕೋಶಗಳು | ಕಾಂತೀಯ ಕೋಶಗಳು, ಅರೆವಾಹಕ ನೆನಪಿನ ಕೋಶಗಳ ಬಗ್ಗೆ ಸಂಶೋಧನೆಗಳು | ನೆನಪಿನ ಕೋಶಗಳನ್ನು MOS ಮತ್ತು CMOS ಅರೆವಾಹಕ ಹಾಗೂ CCD, ಬಬಲ್ ನೆನಪಿನ ಕೋಶಗಳು |
| **ಸಂಗ್ರಹಣಾ ಉಪಕರಣ** | ಪೇಪರ್ ಟೇಪುಗಳು, ರಂಧ್ರಿತ ಪತ್ರಗಳು ಹಾಗೂ ಕಾಂತೀಯ ಟೇಪುಗಳು | ಪೇಪರ್ ಟೇಪುಗಳು, ರಂಧ್ರಿತ ಪತ್ರಗಳು ಹಾಗೂ ಕಾಂತೀಯ ಟೇಪುಗಳು ಮತ್ತು ಡಿಸ್ಕುಗಳು | ಟೆಲಿ–ಟೈಪ್ ರೈಟರುಗಳು, ದೃಶ್ಯ ಪರದೆಗಳು(VDU), ಕಾಂತೀಯ ಅಕ್ಷರಜಾಣ (ಮ್ಯಾಗ್ನೆಟಿಕ್ ಇಂಕ್ ಕ್ಯಾರೆಕ್ಟರ್ ರೆಕಾಗ್ನಿಷನ್: MICR), ದ್ಯುತಿ ಅಕ್ಷರಜಾಣ (OCR) | VDU, OCR, MICR, ವಿಸ್ತರಿಸಿದ ನೆನಪಿನ ಕೋಶಗಳು (ECS) ಹಾಗೂ ಬಾಹ್ಯ ಸಂಗ್ರಹಣೆ |
| **ಸಾಮಾನ್ಯ ವಿವರಣೆ** | ಅತಿ ಬೆಲೆ, ಗಾತ್ರದಲ್ಲಿ ಮತ್ತು ತೂಕದಲ್ಲಿ ಅತಿ ದೊಡ್ಡದು, ಬಹಳ ನಿಧಾನ, ನಂಬಿಕೆಗೆ ಅನರ್ಹ, ಅತಿ ಹೆಚ್ಚಿನ ಶಾಖೋತ್ಪತ್ತಿ, ಹವಾ ನಿಯಂತ್ರಣದ ದೊಡ್ಡ ಸಮಸ್ಯೆ | ಗಾತ್ರ ಮತ್ತು ತೂಕದ ಉಳಿತಾಯ, ವಿಶ್ವಾಸಾರ್ಹತೆಯ ಸುಧಾರಣೆ, ಕಾರ್ಯ ವೇಗದ ಹೆಚ್ಚಳ, ವಿದ್ಯುಚ್ಛಕ್ತಿ ಬಳಕೆಯಲ್ಲಿ ಕಡಿತ | ಕಿರುಗಾತ್ರ, ಹೆಚ್ಚಿದ ಕಾರ್ಯವೇಗ, ಹೆಚ್ಚಿದ ದಕ್ಷತೆ, ತಂತ್ರಾಂಶದ ತಾಂತ್ರಿಕತೆಯಲ್ಲಿ ಸುಧಾರಣೆಗಳು, ಸೂಕ್ಷ್ಮ ಗಣಕಗಳ ಬಳಕೆ, ದತ್ತಾಂಶಗಳ ಪ್ರಸರಣದಲ್ಲಿ ಸುಧಾರಣೆಗಳು | ಅತಿಚಿಕ್ಕ ಅಳತೆ ಮತ್ತು ವಿಶ್ವಾಸಾರ್ಹತೆ, ಕನಿಷ್ಠ ವಿದ್ಯುತ್ತಿನ ಬಳಕೆ, ಅತಿಹೆಚ್ಚಿನ ಕಾರ್ಯವೇಗ ಕಾಲಸಂಯೋಜನೆ ಮತ್ತು ಸಮಾಂತರ ಕಾರ್ಯನಿರ್ವಹಣಾ ವ್ಯವಸ್ಥೆಗಳು |
| **ಸರಾಸರಿ ಬೆಲೆ** | \$25 ಲಕ್ಷ | \$2.50 ಲಕ್ಷ | \$25 ಸಾವಿರ | \$2.5 ಸಾವಿರ |

ಕಾರಣವಾದವು. ಪ್ರಥಮ ಬಾರಿಗೆ ಗಣಕ ಪ್ರಕ್ರಿಯೆಗಳನ್ನು ಕೇವಲ ಗಣಕ ತಂತ್ರಜ್ಞರೇ ಅಲ್ಲದೆ ಇತರ ಗ್ರಾಹಕರೂ ಬಳಸುವಂತಾಯಿತು. ಈ ಪಿಸಿಗಳು 64 ಕಿಲೋಬೈಟ್ RAM ಮತ್ತು 5.25 ಅಂಗುಲ ಫ್ಲಾಪಿಗಳನ್ನು ಹೊಂದಿದ್ದವು. ಮುದ್ರಕಕ್ಕೆ ಹಾಗೂ ಕಪ್ಪು–ಬಿಳುಪು ಪ್ರದರ್ಶಕಕ್ಕೆ ಸಂಪರ್ಕಗಳು ಈ ಪಿಸಿಯ ಮತ್ತಷ್ಟು ವಿಶೇಷಗಳಾದವು.

1980ರ ದಶಕದ ಮತ್ತಷ್ಟು ಬೆಳವಣಿಗೆಗಳೆಂದರೆ, ಗಣಕಗಳ ನಡುವೆ ಜಾಲಸಂಪರ್ಕ ಮತ್ತು ಸ್ವತಂತ್ರ ಬಳಕೆಯ ಗಣಕಗಳ ಅಭಿವೃದ್ಧಿ. 1985ರ ಮೊದಲ ಏಕಕಾಲಿಕ ಗಣಕ ಸಂಸ್ಕರಣೆಯು ಕೇವಲ ಸಂಶೋಧನಾ ಕಾರ್ಯಕ್ರಮವಾಗಿದ್ದರೂ ಈ ಕಾರ್ಯತಂತ್ರವನ್ನು ಅಳವಡಿಸಿದ ಎರಡು ಗಣಕಗಳು ಏಕಕಾಲಿಕ ಸಂಸ್ಕರಣಾ ಗಣಕಗಳ ಪ್ರಪ್ರಥಮ ಮಾದರಿಗಳಾದವು. ಸುಮಾರು 20 ಸಂಸ್ಕಾರಕ ಘಟಕಗಳನ್ನು ಒಂದೇ ನೆನಪಿನಕೋಶ ಘಟಕಕ್ಕೆ ಸಂಪರ್ಕ ಹೊಂದುವಂತೆ ಏರ್ಪಡಿಸಿ ಅವುಗಳೆಲ್ಲವೂ ನೆನಪಿನಕೋಶದ ಬಳಕೆ ಮಾಡಿಕೊಳ್ಳುವ ವ್ಯವಸ್ಥೆಯು ಸಿದ್ಧವಾಯಿತು. ನಿರ್ದಿಷ್ಟ ಕಾರ್ಯಮಾಡಬಲ್ಲ ಕಾರ್ಯವಿಧಿ ಘಟಕಗಳನ್ನು ಕಾರ್ಯವಿಧಿರಚನಕಾರರು (ಪ್ರೋಗ್ರಾಮರ್ಸ್) ಬಳಸಿಕೊಳ್ಳುವಂತಹ ವ್ಯವಸ್ಥೆ ಈ ಗಣಕದಲ್ಲಿ ಸಾಧ್ಯವಾಯಿತು.

1966ರಲ್ಲಿ ಬಳಕೆಗೆ ಬಂದಿದ್ದ CDC 6600 ಗಣಕ ಮತ್ತು ನಂತರದ ಸುಧಾರಿತ ಗಣಕಗಳು ಸೆಕೆಂಡಿಗೆ 3 ದಶಲಕ್ಷ ಭಿನ್ನರಾಶಿಗಳ ಕಲನವನ್ನು (3 Megaflops-3 ಮಿಲಿಯನ್ ಫ್ಲೋಟಿಂಗ್ ಪಾಯಿಂಟ್ ಆಪರೇಷನ್ಸ್ ಪರ್ ಸೆಕೆಂಡ್) ಮಾಡಬಲ್ಲದ್ದಾಗಿದ್ದವು. ಇದಕ್ಕೆ ಹೋಲಿಸಿದರೆ ಈ ದಶಮಾನದ (1990 ದಶಮಾನ) ಗಣಕಗಳು ಸೆಕೆಂಡಿಗೆ ನೂರುಕೋಟಿಯಿಂದ (1 ಗಿಗಾಫ್ಲಾಸ್ = 1000 ಮೆಗಾಫ್ಲಾಪ್) ಹಿಡಿದು ಒಂದು ಲಕ್ಷಕೋಟಿ (ಟೆರಾಫ್ಲಾಪ್ = 1 ಮಿಲಿಯನ್ ಮೆಗಾಫ್ಲಾಪ್) ಗಣಿತ ಕ್ರಿಯೆಗಳನ್ನು ನಿರ್ವಹಿಸಬಲ್ಲದ್ದಾಗಿದ್ದು ಗಣಕ ವಿಜ್ಞಾನದಲ್ಲಾಗಿರುವ ಅಗಾಧ ಪ್ರಗತಿಯನ್ನು ಸೂಚಿಸುತ್ತದೆ. ಹೀಗೆ ಹೆಚ್ಚುತ್ತಿರುವ ಗಣಕ ಕಲನಶಕ್ತಿಯನ್ನು (ಕಂಪ್ಯೂಟರ್ ಕೇಪಬಿಲಿಟಿ) ಗಮನಿಸಿದರೆ, 'ಸೂಪರ್ ಗಣಕಗಳು' ಎಂಬ ಶಬ್ದವು ಕಾಲಕಳೆದಂತೆ ಹೊಸಹೊಸ ಅರ್ಥಗಳನ್ನು ಪಡೆಯುತ್ತಾ ಹೋಗುತ್ತದೆ. ಈ ಅರ್ಥವು ಗಣಕದ ಕ್ರಿಯಾವೇಗವೇ ಅಲ್ಲದೆ ಗಣಕದ ನೆನಪಿನ ಕೋಶದ ಪರಿಮಾಣವನ್ನೂ ಒಳಗೊಳ್ಳುತ್ತದೆ. ಆದ್ದರಿಂದ ಇತ್ತೀಚೆಗೆ 'ಸೂಪರ್ ಗಣಕ' ಎಂಬ ಪದವನ್ನು 'ಉನ್ನತ ಸಾಮರ್ಥ್ಯದ ಗಣಕ' ಅಥವಾ 'ಉನ್ನತ ಸಾಮರ್ಥ್ಯದ ಗಣನ ವ್ಯವಸ್ಥೆ' ಎಂದು ಬದಲಾಯಿಸಿ ಕರೆಯಲಾಗುತ್ತಿದೆ. ಕೆಳಗಿನ ಪಟ್ಟಿಯಲ್ಲಿ ಕೆಲವು ಪ್ರಮುಖ ಗಣಕಗಳ ಉನ್ನತಸ್ಥಿತಿಯಲ್ಲಿನ ಕಲನ ಕಾರ್ಯಕ್ಷಮತೆಯ (ಪೀಕ್ ಪರ್ಫಾರ್ಮೆನ್ಸ್) ತುಲನಾತ್ಮಕ ಅಂಶಗಳನ್ನು ನೀಡಲಾಗಿದೆ.

| **ಗಣಕಯಂತ್ರ** | **ಉನ್ನತ ಕಾರ್ಯಕ್ಷಮತೆಯಲ್ಲಿ ಕಲನವೇಗ (Mflops)** |
|---|---|
| CDC 6600 | 3 |
| CDC 7600 | 10 |
| CRAY 1 | 160 |
| IBM 3090/VF | 686 |
| CRAY X-MP | 940 |
| CRAY Y-MP | 2664 |

**ಆಯ್ಕೆಮಾಡಿದ ಕೆಲವು ಗಣಕಗಳ ಉನ್ನತ ಕಾರ್ಯಕ್ಷಮತೆಯಲ್ಲಿನ ಕಲನವೇಗ**

ಈಗ ಬರುತ್ತಿರುವ ಗಣಕಗಳು ಮೇಲೆ ತಿಳಿಸಿರುವ ಪರಮಗಣಕಗಳಿಗಿಂತಲೂ ವೇಗವಾಗಿ ಕೆಲಸ ಮಾಡಬಲ್ಲುವಾಗಿವೆ. ಪರಮಗಣಕಗಳ ಸ್ವರೂಪ ಪೂರ್ಣವಾಗಿ ಬೇರೆಯದಾಗಿದೆ. ಅತ್ಯಂತ ಚತುರ ಚದುರಂಗದ ಆಟಗಾರರಿಗೆ ಸ್ಪರ್ಧೆಯೊಡ್ಡಬಲ್ಲ ಪರಮಗಣಕಗಳು ಸಿದ್ಧವಾಗಿವೆ.

ಗಣಕದಲ್ಲಿ ಕೇವಲ ಕೇಂದ್ರ ಸಂಸ್ಕರಣಾಂಗವೇ ಅಲ್ಲದೆ, ಇತರ ಯಂತ್ರಾಂಶ, ತಂತ್ರಾಂಶಗಳೂ ಬಳಕೆದಾರನ ಸಮಸ್ಯೆಯ ಪರಿಹಾರಕ್ಕಾಗಿ ತಮ್ಮ ಉಪಯುಕ್ತ ಕೊಡುಗೆಗಳನ್ನು ನೀಡುವುದರಿಂದ ಒಟ್ಟು ವ್ಯವಸ್ಥೆಯ ಹೆಸರನ್ನು ಬದಲಿಸುವುದು ಸೂಕ್ತವೇ ಆಗಿದೆ. ಇಷ್ಟೇ ಅಲ್ಲದೆ ಅತಿ ವೇಗವಾದ ದತ್ತಾಂಶ ವಿನಿಮಯ ಮುಂತಾದ ಲಕ್ಷಣಗಳೊಡನೆ ಅತಿವೇಗದ ಜಾಲಸಂಪರ್ಕ, ನಂಬಿಕೆಗೆ ಅರ್ಹವಾದ ತಂತ್ರಾಂಶಗಳು, ದಾಖಲೆಗಳ ಬಳಕೆಯ ಸೌಲಭ್ಯ ಮತ್ತಿತರ ಸಹಾಯಗಳ ಅಗತ್ಯ ಮುಂತಾದವುಗಳ ಒಟ್ಟು ವ್ಯವಸ್ಥೆಯೇ ಸೂಪರ್ ಗಣಕ ಎನ್ನಬೇಕಾಗುತ್ತದೆ.

**ಇತ್ತೀಚಿನ ಬೆಳವಣಿಗೆಗಳು:** ಅಂದಿನ ಗಣಕಗಳಿಗೆ ಹೋಲಿಸಿದರೆ ಇಂದು ಗಣಕ ಯಂತ್ರಗಳು ಊಹಿಸಲೂ ಅಸಾಧ್ಯವಾದ ಬೆಳವಣಿಗೆಯನ್ನು ಕಂಡಿವೆ. ವಿದ್ಯುನ್ಮಾನ ಹಾಗೂ ಗಣಕ ಕ್ಷೇತ್ರದಲ್ಲಿನ ಅಗಾಧ ಸಂಶೋಧನೆ ಮತ್ತು ಅಭಿವೃದ್ಧಿಯ ಪರಿಣಾಮವಾಗಿ ಗಣಕದ ಕೀಲಿಮಣೆಯ ಮೂಲಕ ಕೀಲಿಸಿದ ಮಾಹಿತಿಗಳ ಜೊತೆಗೆ ದೃಶ್ಯ ಹಾಗೂ ಶ್ರವ್ಯ ಮಾಹಿತಿಗಳೂ ಸಮ್ಮಿಳಿತಗೊಂಡು ಬಹುಮಾಧ್ಯಮ ರೂಪಗಳನ್ನು ತಳೆಯಲು ಇಂದು ಸಾಧ್ಯವಾಗಿದೆ. ಇತ್ತೀಚೆಗೆ ವಿದ್ಯುನ್ಮಾನ ಅಂಚೆ ಹಾಗೂ ಅಂತರಜಾಲ ವ್ಯವಸ್ಥೆಗಳಂತೂ ಎಲ್ಲರ ಕೈಗೆಟಕುವಂತೆ ಅತ್ಯಲ್ಪ ಖರ್ಚಿನ ಅಳವಿಗೆ ಬಂದಿವೆ. ಈಗ ಉಪಗ್ರಹಗಳ ಮೂಲಕ ಮಾಹಿತಿ ಪ್ರಸಾರ ಮತ್ತು ದೃಶ್ಯ ಮಾಧ್ಯಮವಾಗಿ ದೂರದರ್ಶನದ ತಾಂತ್ರಿಕತೆಯ ಆವಿಷ್ಕಾರದಿಂದ ದೃಶ್ಯ ಹಾಗೂ ಶ್ರವ್ಯ ಮಾಹಿತಿಗಳ ಪ್ರಸಾರವಾಗುತ್ತಿದೆ. ಇದು ಗಣಕಕ್ಷೇತ್ರದಲ್ಲೂ ಕಾಲಿಟ್ಟು ಅಂತರಜಾಲ, ವೆಬ್ ಕ್ಯಾಮೆರಾ ಮುಂತಾದವುಗಳ ಬಳಕೆಯೂ ಸಾಮಾನ್ಯವಾಗುತ್ತಿದೆ. ಅಲ್ಲದೆ ದೂರದರ್ಶನ ಮುಂತಾದ ವೀಡಿಯೋ ಮಾಧ್ಯಮದ ಹಲವಾರು ಅನಾನುಕೂಲತೆಗಳನ್ನು ತೊಡೆದು ಹಾಕಿ, ಬಳಕೆದಾರರ ಸ್ನೇಹಿಯಾಗಿ ಎಲ್ಲ ಬಗೆಯ ಬಹುಮಾಧ್ಯಮ ತಂತ್ರಗಳನ್ನು ಮೈಗೂಡಿಸಿಕೊಂಡಿರುವ ಗಣಕಾಧಾರಿತ ಮಾಹಿತಿ ತಂತ್ರಜ್ಞಾನವು ಮೇಲುಗೈ ಸಾಧಿಸುತ್ತಿದೆ. ಇದಕ್ಕೆ ಅಗತ್ಯವಾದ ಅನೇಕಾನೇಕ ವಿದ್ಯುನ್ಮಾನ ಆಧಾರಿತ ಯಂತ್ರಾಂಶಗಳು ಗಣಕದೊಳಗೆ ಅಳವಡಿಸಲ್ಪಡುತ್ತಿವೆ. ಗಣಕ ತಂತ್ರಜ್ಞರು ಸಿದ್ಧಪಡಿಸಿ ನೀಡುವ ತಂತ್ರಾಂಶಗಳು ಈ ಯಂತ್ರಾಂಶಗಳ ಬಳಕೆಗೆ ಅಸಾಧಾರಣ ಸಾಧ್ಯತೆಗಳನ್ನು ಒದಗಿಸಿವೆ. ಗಣಕಗಳಲ್ಲಿ ಬಳಸುವಂತೆ ಸಿದ್ಧವಾಗುವ ದೃಶ್ಯ–ಶ್ರವ್ಯ–ಪಠ್ಯ ಪರಿಪೂರಿತವಾದ ಇಂತಹ ತಂತ್ರಾಂಶಗಳ ಅಭಿವೃದ್ಧಿ ಕಾರ್ಯಕ್ರಮಗಳು ಸೃಜನಶೀಲತೆಗೆ, ಸ್ವಂತಿಕೆಗೆ ಅಪಾರ ಅವಕಾಶಗಳನ್ನು ನೀಡುತ್ತಿವೆ. ಮೊದಲ ತಲೆಮಾರಿನ ಗಣಕ ಯಂತ್ರಗಳ ಬಳಕೆಗೆ ವಿಶೇಷ ಕಾರ್ಯವಿಧಿಗಳನ್ನು (ಪ್ರೋಗ್ರಾಮ್) ಬರೆಯಬೇಕಾದ ಸಮಸ್ಯೆ ಇತ್ತು. ಆದರೆ ಕಳೆದ ಎರಡು ದಶಕಗಳಿಂದ ಬಳಕೆಗೆ ಬಂದಿರುವ ವೈಯಕ್ತಿಕ ಗಣಕಗಳಲ್ಲಿ ಡಾಸ್, ವಿಂಡೋಸ್, ಯುನಿಕ್ಸ್ ಮುಂತಾದ ಕಾರ್ಯಾಚರಣ ವ್ಯವಸ್ಥೆಗಳು (ಆಪರೇಟಿಂಗ್ ಸಿಸ್ಟಮ್ಸ್) ಗಣಕ ತಜ್ಞರನ್ನಲ್ಲದೆ ಬಳಕೆದಾರರನ್ನೂ ಗಮನದಲ್ಲಿರಿಸಿಕೊಂಡು ಅಗತ್ಯವಾದ ಮೂಲಭೂತ ತಂತ್ರಾಂಶಗಳನ್ನು ರೂಪಿಸಿವೆ. ಗಣಕದ ಸ್ವಿಚ್ ಹಾಕಿದ ಕೂಡಲೇ ತೆರೆಯ ಮೇಲೆ ಮೂಡುವ ಲಾಂಛನಗಳನ್ನು (ಐಕಾನ್‌ಗಳು – ಚಿತ್ರಾತ್ಮಕ ಸಂಕೇತಗಳು). ಕ್ಲಿಕ್ಕಿಸಿದರೆ ನಮಗೆ ಬೇಕಾದ ಆನ್ವಯಿಕ, ಬಳಕೆಯ ತಂತ್ರಾಂಶಗಳನ್ನು ಚಾಲನೆಗೊಳಿಸಬಹುದು. ಒಟ್ಟಿನಲ್ಲಿ ಎಲ್ಲವೂ ಬಳಕೆದಾರರ ಮಿತ್ರರಾಗಿವೆ.

ಕಾಲಾನುಕ್ರಮವಾಗಿ ವಿದ್ಯುನ್ಮಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಆದ/ಆಗುತ್ತಿರುವ ಶೀಘ್ರ ಆವಿಷ್ಕಾರಗಳ ಪರಿಣಾಮವಾಗಿ ಗಣಕಗಳ ಗಾತ್ರ ಹಾಗೂ ಕಾರ್ಯ ನಿರ್ವಹಣಾ ಸಮಯ ಕುಗ್ಗುತ್ತಾ ಬಂದಿವೆ. ಈಗಂತೂ ಟೇಬಲ್‌ಟಾಪ್‌ನಿಂದ ಲ್ಯಾಪ್‌ಟಾಪ್, ಪಾಮ್‌ಟಾಪ್‌ಗಳಾಗಿ ಅಭಿವೃದ್ಧಿಗೊಂಡಿರುವ ಗಣಕಗಳು ಗಾತ್ರದಲ್ಲಿ ಕಿರಿದಾದರೂ ಕಾರ್ಯ ನಿರ್ವಹಣೆಯಲ್ಲಿ ಅಸಾಧಾರಣವೆನಿಸಿವೆ. ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಮುಂದುವರೆಯುತ್ತಿರುವ ಸಂಶೋಧನೆಗಳ ಪರಿಣಾಮವು ಇನ್ನಷ್ಟು ಸುಲಭವೂ ಸರಳವೂ ಆದ ಗಣಕ ಯಂತ್ರಾಂಶಗಳ ನಿರ್ಮಿತಿಗೆ ಕಾರಣವಾಗಲಿದೆ.

ಈ ಮೊದಲು, ಗಣಕವೊಂದರಲ್ಲಿ ಊಡಿಸಿದ ಮಾಹಿತಿಗಳನ್ನು ಇನ್ನೊಂದು ಗಣಕಕ್ಕೆ ಒಯ್ಯುವುದಕ್ಕಾಗಿ ಸಿದ್ಧವಾದ ಯಂತ್ರಾಂಶ ಸೌಲಭ್ಯವಾದ ಫ್ಲಾಪಿ ಡಿಸ್ಕ್‌ಗಳಲ್ಲಿ ದಾಖಲಿಸಬಹುದಾದ ಮಾಹಿತಿಗಳ ಪ್ರಮಾಣವು ಸೀಮಿತ. ಅನಂತರದಲ್ಲಿ ಬಳಕೆಗೆ ಬಂದಿರುವ ಸಿಡಿಗಳು (ಕಾಂಪಾಕ್ಟ್ ಡಿಸ್ಕ್) ಅಂದರೆ ಅಡಕಮುದ್ರಿಕೆಗಳು ಅಗಾಧವಾದ ಮಾಹಿತಿಗಳ ಸಂವಹನಾ ಕ್ರಿಯೆಯಲ್ಲಿ ಬಹಳಷ್ಟು ಉಪಯುಕ್ತ ಯಂತ್ರಾಂಶ ಪರಿಕರಗಳು. ಇವುಗಳಲ್ಲಿ ದಾಖಲಿಸಿದ ಮಾಹಿತಿಗಳನ್ನು ಅಳಿಸಿ ಮತ್ತೆ ಬೇರೆ ಮಾಹಿತಿಗಳನ್ನು ಬರೆಯಬಲ್ಲ ಸೌಲಭ್ಯವನ್ನು ಒದಗಿಸಲಾಗಿದೆ. ಈ ಮಾಹಿತಿ ಸಂವಹನ ಮಾಧ್ಯಮದಲ್ಲಿ ಇತ್ತೀಚೆಗೆ ಮತ್ತಷ್ಟು ಸುಧಾರಣೆಗಳುಂಟಾಗಿ ಪೆನ್ ಡ್ರೈವ್, ಪಾಮ್ ಡ್ರೈವ್ ಎಂಬ ಅಂಗೈಯಲ್ಲಿ ಹಿಡಿಯಬಹುದಾದ ಅತಿಪುಟ್ಟ ಯಂತ್ರಾಂಶ ಸಾಧನಗಳು ಸಿಡಿಗಳಿಗಿಂತಲೂ ಅತಿಹೆಚ್ಚಿನ ಮಾಹಿತಿ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿವೆ. **USB** (ಯೂನಿವರ್ಸಲ್ ಸೀರಿಯಲ್ ಬಸ್) ಎಂಬ ಸರಳ ಅಳವಡಿಕೆಯಿಂದ ಈ ಅಂಗೈ ಸಾಧನಗಳ ಮೂಲಕ ಅತಿಸುಲಭವಾಗಿ ಮಾಹಿತಿ ಸಂವಹನೆ ಸಾಧ್ಯ. ಈಗ ಯು ಎಸ್ ಬಿ ಮುದ್ರಿಕೆಗಳು (ಯು ಎಸ್ ಬಿ ಡ್ರೈವ್) ಹೆಚ್ಚು ಜನಪ್ರಿಯವಾಗಿವೆ. ಇವುಗಳ ಸಂಗ್ರಹ ಸಾಮರ್ಥ್ಯ ಅನೇಕ ಪಟ್ಟು ಹೆಚ್ಚಾಗಿದೆ. ಜೊತೆಗೆ ಕಿರು ದೃಢಮುದ್ರಿಕೆಗಳು ಗಣಕಗಳಲ್ಲಿ ಇರುವ ಸಂಗ್ರಹಸಾಮರ್ಥ್ಯಕ್ಕಿಂತ ಹೆಚ್ಚಾದ ಸ್ಥಳಾವಕಾಶವನ್ನು ಹೊಂದಿರುತ್ತವೆ. ಇವುಗಳಲ್ಲಿ ಅಗಾಧ ಗಾತ್ರದ ಮಾಹಿತಿಯನ್ನು ಸಂಗ್ರಹಿಸಬಹುದಾಗಿದೆ. ಉದಾಹರಣೆಗೆ ಒಂದು ಟೆರಾ ಬೈಟ್ ಸಂಗ್ರಹಸಾಮರ್ಥ್ಯದ ಕಿರು ದೃಢಮುದ್ರಿಕೆಯಲ್ಲಿ ಸುಮಾರು ಹತ್ತು ಲಕ್ಷ ಪುಸ್ತಕಗಳ ಮಾಹಿತಿಯನ್ನು ಸಂಗ್ರಹಿಸಬಹುದಾಗಿದೆ. ಈ ಬಗೆಯ ಸಾಧನಗಳು ಬಂದಮೇಲೆ ನಮ್ಯ (ಫ್ಲಾಪಿ) ಮುದ್ರಿಕೆಗಳು ಬಳಕೆಯಿಂದ ಹಿಂದೆ ಸರಿದಿವೆ. ಹೊಸದಾಗಿ ಬರುವ ಗಣಕಗಳಲ್ಲಿ ನಮ್ಯ ಮುದ್ರಿಕೆಯನ್ನಿರಿಸಲು ಸಾಧನವೇ ಇರುವುದಿಲ್ಲ. ತಂತ್ರಜ್ಞಾನ ಕ್ಷೇತ್ರದಲ್ಲಿ ಎಲ್ಲ ಆವಿಷ್ಕಾರಗಳ ಆಯುಸ್ಸು ಬಹಳ ಕಡಿಮೆ ಎಂಬುದು ಪದೇ ಪದೇ ಋಜುವಾತಾಗುತ್ತಿರುತ್ತದೆ. ಹೊಸ ಬಗೆಯ ಸಾಧನಗಳ ಸಂಗ್ರಹ ಸಾಮರ್ಥ್ಯವನ್ನು ಮತ್ತಷ್ಟು ವಿಸ್ತರಿಸಲು ಪ್ರಯತ್ನಗಳು ಸಾಗುತ್ತಿವೆ.

ಇನ್ನು ಕೇವಲ ಅಂಕಿ, ಅಕ್ಷರ ಮಾಹಿತಿಗಳೇ ಅಲ್ಲದೆ ಧ್ವನಿಮುದ್ರಣ ಮಾಧ್ಯಮಗಳು ಅಂದರೆ ಆಡಿಯೋ ಟೇಪು, ಡಿಸ್ಕ್ ಇತ್ಯಾದಿಗಳು ಹಾಗೂ ಕ್ಯಾಮೆರಾ ಮುಂತಾದ ಹಲವಾರು ದೃಶ್ಯಗ್ರಹಣಾ ಮಾಧ್ಯಮಗಳಿಂದ ಬರುವ ಮಾಹಿತಿಗಳನ್ನು ಗಣಕದೊಳಗೆ

ನೇರವಾಗಿ ದಾಖಲಿಸಬಲ್ಲ, ಗಣಕಗಳಿಂದ ಹಿಂಪಡೆಯಬಲ್ಲ ಯಂತ್ರಾಂಶ ಸೌಲಭ್ಯಗಳೂ ಈಗ ದೊರೆಯುತ್ತಿವೆ. ಡಿಜಿಟಲ್ ಕ್ಯಾಮೆರಾಗಳು ಇಂದು ಸರ್ವವ್ಯಾಪಿಯಾಗಿ ಬಳಕೆಗೆ ಬಂದಿವೆ; ಚಿತ್ರಗಳ ಸಂಸ್ಕರಣೆ ಹಾಗೂ ಮುದ್ರಣಗಳು ಗಣಕೀಕೃತಗೊಂಡಿವೆ. ಒಟ್ಟಿನಲ್ಲಿ ಗಣಕಗಳ ಈ ಶತಮಾನದಲ್ಲಿ ಗಣಕ ಯಂತ್ರಾಂಶಗಳಲ್ಲಿ ಅಪೂರ್ವ ಸಾಧನೆಗಳಾಗುತ್ತಿವೆ.

ಅನೇಕ ಬಗೆಯ ಕ್ರೀಡಾಸಾಧನಗಳು, ಬೇರೆ ಬೇರೆ ಸಾಧನಗಳು ಗಣಕದ ಜೊತೆಯಲ್ಲಿ ಬಳಕೆಗೆ ಬರುತ್ತಿವೆ. ಈಗ ಗಣಕದ ಗಾತ್ರವೂ ಅಂಗೈ ಅಗಲಕ್ಕೆ ಕುಗ್ಗಿದೆ. ಬೇರೆ ಬೇರೆ ಹೆಸರುಗಳಲ್ಲಿ ಅವು ಪ್ರವೇಶಿಸುತ್ತಿವೆ. ಲ್ಯಾಪ್‌ಟಾಪ್ ಎಲ್ಲೆಂದರಲ್ಲಿ ಒಯ್ಯಬಲ್ಲ ಗಣಕವಾಗಿದೆ. ಇವುಗಳ ಸಾಮರ್ಥ್ಯ ಯಾವುದೇ ಗಣಕದ ಸಾಮರ್ಥ್ಯದಂತೆಯೇ ಇರುತ್ತದೆ. ಬೇರೆ ಬಗೆಯ ಗಣಕಗಳೆಂದರೆ ನೋಟ್‌ಬುಕ್ (ಪುಸ್ತಕಗಾತ್ರದ ಗಣಕ) ಮತ್ತು ಕಿರುಗಣಕ ಅಥವಾ ನೆಟ್‌ಬುಕ್‌ಗಳು. ನೆಟ್‌ಬುಕ್ ಪ್ರೌಢಶಾಲಾ ವಿದ್ಯಾರ್ಥಿಗಳು ಬಳಸುವ ನೋಟ್‌ಪುಸ್ತಕದ ಗಾತ್ರದಲ್ಲಿರುತ್ತದೆ. ಇದರಲ್ಲಿ ಸಿಡಿ ಮತ್ತು ಡಿವಿಡಿ ಮುದ್ರಿಕೆಯ ಚಾಲಕ ಇರುವುದಿಲ್ಲ ಎನ್ನುವುದನ್ನು ಬಿಟ್ಟರೆ ಉಳಿದಂತೆ ಯವುದೇ ಗಣಕದಂತೆ ಕಾರ್ಯ ನಿರ್ವಹಿಸಬಲ್ಲುದು. ಅಗತ್ಯವೆನಿಸಿದರೆ ಹೊರಗಡೆಯಿಂದ ಸಿಡಿ/ಡಿವಿಡಿ ಚಾಲಕವನ್ನು ಇದಕ್ಕೆ ಜೋಡಿಸಿಕೊಳ್ಳಲು ಅವಕಾಶವಿರುತ್ತದೆ. ಗಣದಂತೆಯೇ ಕಾರ್ಯ ನಿರ್ವಹಿಸಬಲ್ಲ ಮೊಬೈಲ್ ದೂರವಾಣಿ ಸಾಧನಗಳು ಈಗ ಹೇರಳವಾಗಿ ಲಭ್ಯವಿದೆ. ಆದರೆ ಇದು ದೂರವಾಣಿ ಮತ್ತು ಅಂತರಜಾಲ ವೀಕ್ಷಣೆ ಮತ್ತು ಕೆಲವು ಪದಸಂಸ್ಕಾರಕ ಕಾರ್ಯಗಳಿಗೆ ಮಾತ್ರ ಒದಗಿಬರುತ್ತವೆ. ಇವನ್ನು ಟ್ಯಾಬ್ಲೆಟ್( ಅಂಗೈ ಗಣಕ), ಸ್ಲೇಟ್( ಹಲಗೆ ಗಣಕ) ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಈಗೀಗ ಮೊಬೈಲ್ ದೂರವಾಣಿ ಮತ್ತು ಸಂಪೂರ್ಣ ಸಾಮರ್ಥ್ಯದ ಗಣಕ ಎರಡೂ ಒಟ್ಟಿಗೆ ದೊರೆಯುವ ಸಾಧನಗಳೂ ಬರಲಾರಂಭಿಸಿವೆ. ವಿಂಡೋಸ್–8 ಆವೃತ್ತಿ ಇಂತಹ ಗಣಕಗಳ ಮೊದಲ ಆವೃತ್ತಿಯನ್ನು ಹೊರತರಲು ಪ್ರೇರಣೆಯನ್ನು ನೀಡಿದೆ. ಒಟ್ಟಾರೆ ಒಂದು ಜೇಬಲ್ಲಿರಿಸಿಕೊಳ್ಳಬಹುದಾದ ಅಥವಾ ಅಂಗೈಯಲ್ಲಿ ಇರಿಸಿಕೊಳ್ಳಬಹುದಾದ ಸಾಧನಗಳು ನಮ್ಮ ಸಂವಹನ ಮತ್ತು ಗಣಕಗಳ ಎಲ್ಲ ಅಗತ್ಯಗಳನ್ನೂ ಪೂರೈಸಿಕೊಡುತ್ತವೆ ಎಂದು ಹೇಳಬಹುದಾಗಿದೆ. (ವಿ.ಎಸ್.ಎನ್.)

**ಗಣಜಿಲೆ :** ಆರೋಗ್ಯ ಏರುಪೇರಾಗದೆ, ತಂಡ ತಂಡಗಳಲ್ಲಿ ದದ್ದುಗಳೇಳುವ ಕೂರಾದ ಒಂದು ಅಂಟು ರೋಗ (ಚಿಕನ್ ಪಾಕ್ಸ್). ಇದನ್ನು ಕೊಟ್ಲೆ, ನೀರು ಕೊಟ್ಲೆ, ಚಿಕ್ಕಮ್ಮ, ಸೀತಾಳ ಸಿಡುಬು ಎಂದು ಸಹ ಕರೆಯುತ್ತಾರೆ. ಸಿಡುಬಿನ ಹಾಗೆ ದದ್ದುಗಳು ಏಳುವುದನ್ನು ಬಿಟ್ಟರೆ ಸಿಡುಬಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಒಂದು ಊರು, ಕೇರಿಯಲ್ಲಿ ಗಣಜಿಲೆ ತಲೆಹಾಕಿದರೆ ಸಣ್ಣ ಸಾಂಕ್ರಾಮಿಕದ ಹಾಗೆ ಅದು ಅಲ್ಲೆಲ್ಲ ಹರಡುತ್ತದೆ. ನಗರದಲ್ಲಿ ನೆಲೆಸಿದರೆ ಒಂದೊಂದು ಕಡೆ ಒಮ್ಮೊಮ್ಮೆ ತಲೆ ಹಾಕುತ್ತ ವರ್ಷವಿಡೀ ಉಳಿದಿರುತ್ತದೆ. 2–6 ವರ್ಷದ ಮಕ್ಕಳಿಗೆ ಅಂಟುವುದು ಸಾಮಾನ್ಯವಾದರೂ ಎಳೆಗೂಸುಗಳೂ ಇದಕ್ಕೆ ಹೊರತಲ್ಲ. ಹಸುಗೂಸಿನ ಮೊದಲ ಆರು ತಿಂಗಳ ತನಕ ಅದನ್ನು ತಾಯಿಯಲ್ಲಿರುವ ರೋಗ ತಡೆವ ಬಲವಿರುವ ಪ್ರತಿವಸ್ತು (ಆಂಟಿಬಾಡಿ) ರಕ್ಷಿಸುತ್ತದೆ. ಎಳೆಯದರಲ್ಲಿ ಇದರ ಕಾಟ ತಪ್ಪಿಸಿಕೊಂಡು ಬೆಳೆದ ದೊಡ್ಡವರಿಗೆ ರೋಗ ತಾಕಿದರೆ ಅದರ ಪರಿಣಾಮ ಜೋರಾಗಿರುತ್ತದೆ. ಒಂದು ಬಾರಿ ಗಣಜಿಲೆ ತಾಕಿದರೆ ಸಾಮಾನ್ಯವಾಗಿ ಸಾಯುವ ತನಕ ಮತ್ತೆ ಇದರ ತೊಂದರೆ ಇರುವುದಿಲ್ಲ.

ಗಣಜಿಲೆ ರೋಗಾಣು ಮೂಗು ಗಂಟಲುಗಳ ಮೂಲಕ ಮೈಯಲ್ಲೆಲ್ಲ ಹರಡಿಕೊಳ್ಳುವುದು. ರೋಗಕ್ಕೊಡ್ಡಿದ 14–16 ದಿವಸಗಳಲ್ಲಿ ರೋಗ ತಲೆದೋರುತ್ತದೆ. ಅದರಲ್ಲೂ ಚಟುವಟಿಕೆಯಿಂದ ಆಡುತ್ತಿರುವ ಮಕ್ಕಳಲ್ಲಿ ತುಸು ಜ್ವರ ಬಂದಿದ್ದೂ ಗೊತ್ತಾಗದೆ ಮೊದಲು ದದ್ದುಗಳು ಏಳುವುದರಿಂದ ಬೇನೆ ಗೊತ್ತಾಗುತ್ತದೆ. ಜ್ವರ $101^{0}$ಫ್ಯಾ. ಮೇಲೇರದು. ಕೆಲವು ವೇಳೆ ಮಕ್ಕಳಲ್ಲಿ ವಾಂತಿ, ಸೆಳವು, ಏರುಜ್ವರಗಳೊಂದಿಗೆ ಗಣಜಿಲೆ ಕಾಲಿಡಬಹುದು. ದೊಡ್ಡವರಿಗೆ ಬಂದರೆ ತಲೆನೋವು, ಚಳಿ, ಮೈಕಾಲು ನೋವು, ತುಸು ಬೆನ್ನು ನೋವು, ಪೂರಾ ಜ್ವರ ಹೆಚ್ಚಿ ಮಲಗಿಸುತ್ತದೆ. ಮುಂದೆ ನ್ಯೂಮೋನಿಯ ಆದರೆ ಅಪಾಯಕರ. ಕೆಲವರಂತೂ 2–3 ದಿವಸಗಳಲ್ಲೇ ಸಾಯುತ್ತಾರೆ. ಮುಂಡದ ಮೇಲೆದ್ದ ದದ್ದುಗಳು ಮುಖ, ನೆತ್ತಿ, ತೋಳು, ತೊಡೆಗಳಿಗೆ ಹರಡುತ್ತವೆ. ಕೈಕಾಲುಗಳಿಗಿಂತ ಮುಂಡದ ಮೇಲೂ ಅವಯವಗಳ ಕೊನೆಗಳಿಗಿಂತ ಬುಡ ಭಾಗಗಳಲ್ಲೂ ದದ್ದುಗಳು ಹೆಚ್ಚಾಗಿರುತ್ತವೆ. ಬೇರೆ ಕಡೆ ಎಷ್ಟೇ ಜೋರಾಗಿದ್ದರೂ ಅಂಗೈ, ಅಂಗಾಲುಗಳಲ್ಲಿ ದದ್ದುಗಳೇಳವು. ಗುಳ್ಳೆಗಳು ಒಂದುಗೂಡವು. ದದ್ದುಗಳು ಏಳುತ್ತಿರುವ ತನಕ ಜ್ವರ ಇದ್ದೇ ಇರುವುದು. ದುಂಡಾಗಿಯೋ ಇಲ್ಲವೇ ಚುಕ್ಕಿಯಾಗಿಯೋ ಇದ್ದ ದದ್ದುಗಳು ಕೆಲವೇ ತಾಸುಗಳಲ್ಲಿ ಗುಳ್ಳೆಗಳಾಗುತ್ತವೆ. ಗುಳ್ಳೆಗಳಲ್ಲಿ ಮೊದಲು ತಿಳಿನೀರಿದ್ದು ಆಮೇಲೆ ಸಣ್ಣಮಣಿಗಳನ್ನು ಚರ್ಮದ ಮೇಲಿಟ್ಟ ಹಾಗೆ ತೋರುವುವು. ಒಂದೆರಡು ದಿವಸಗಳಲ್ಲಿ ಗುಳ್ಳೆಗಳಲ್ಲಿನ ನೀರು ಹಿಂಡಿದಂತಾಗಿ ಒಡೆದುಕೊಂಡು ಸಣ್ಣ ತೆಳುಸಿಪ್ಪೆ ಉಳಿಯುತ್ತದೆ. ಇದೂ ಒಣಗುತ್ತ ಬಿದ್ದು ಹೋಗುವುದು. ಇದರಿಂದ ಬೇರೆಯವರಿಗೆ ಸೋಂಕು ಅಂಟದು. ಗಣಜಿಲೆ ದದ್ದುಗಳೂ ಗುಳ್ಳೆ ಸಿಪ್ಪೆಗಳೂ ಅಲ್ಲಲ್ಲಿರುತ್ತವೆ. ದದ್ದುಗಳಲ್ಲಿ ನವೆ, ಕೆರೆತ ಹೆಚ್ಚು. ಅವನ್ನು ಕೆರೆದುಕೊಂಡರೆ ಮಾತ್ರ ಕೀವುಗೂಡಿ ಮುಂದೆ ಕಲೆ ಉಳಿವುದು. ರೋಗಿಯಲ್ಲಿ ದದ್ದುಗಳು ಅಲ್ಲಿ ಇಲ್ಲಿ ಒಂದೊಂದಿರಬಹುದು. ಇಲ್ಲವೇ ನೂರಾರಿರಬಹುದು.

ಬಹುಮಟ್ಟಿಗೆ ಗಣಜಿಲೆ ತೊಂದರೆ ಕೊಡುವ ರೋಗವಲ್ಲ. ಆ ಮೇಲಿನ ತೊಡಕುಗಳೂ ಅಷ್ಟಕಷ್ಟೆ. ಗಣಜಿಲೆಗೂ ಉಡಿತದ್ದಿಗೂ (ಷಿಂಗಲ್ಸ್, ಹರ್ಪಿಸ್) ನಿಕಟ ಸಂಬಂಧ ಇರುವುದು ಬಹುಕಾಲದಿಂದ ಗೊತ್ತಿತ್ತು. ಇವೆರಡು ಬೇನೆಗಳಿಗೂ ಒಂದೇ ವೈರಸ್ ಕಾರಣ ಎನ್ನುವುದರಲ್ಲಿ ಈಗ ಅನುಮಾನವಿಲ್ಲ. ಏಕೆಂದರೆ ಉಡಿತದ್ದಿನ ವಿಷಕಣವನ್ನು ಅದಕ್ಕೀಡಾಗುವ ಮಕ್ಕಳಿಗೆ ಚುಚ್ಚಿದರೆ ಗಣಜಿಲೆ ಏಳುವುದಲ್ಲದೆ ಬೇರೆ ಮಕ್ಕಳಲ್ಲೂ ಅದೇ ರೋಗವನ್ನು ಉಂಟುಮಾಡುತ್ತದೆ. ಉಡಿತದ್ದು ಗಣಜಿಲೆಯಷ್ಟು ಅಂಟುರೋಗವಾಗಿ ಹರಡದು. ಇಷ್ಟಾದರೂ ಉಡಿತದ್ದು ದೊಡ್ಡವರ ಕಾಯಿಲೆ, ಗಣಜಿಲೆ ಕೂಸುಗಳ ಬೇನೆ. ದೊಡ್ಡವರಲ್ಲಿನ ಉಡಿತದ್ದು ಮಕ್ಕಳಿಗೆ ತಾಕಿದರೆ ಗಣಜಿಲೆಯಾಗಿ ಮೈದೋರುವುದು.

ಗಣಜಿಲೆ ಅಂಟುರೋಗವಾಗಿ ಶಾಲೆಗಳಲ್ಲಿ ಬಲು ಬೇಗ ಹರಡುವುದು. ರೋಗಿಯಿಂದ ನೇರವಾಗಿಯೂ ಸೀನು, ಕಫ, ಉಗುಳು ಮೂಲಕವೂ ಬಟ್ಟೆಬರೆಗಳ ಮೂಲಕವೂ ಸುಲಭವಾಗಿ ಅಂಟುತ್ತದೆ. ದದ್ದುಗಳು ಏಳುವ 24 ತಾಸುಗಳ ಮೊದಲೇ ರೋಗಿ ಇತರರಿಗೆ ಸೋಂಕು ಅಂಟಿಸಬಹುದು. ಗಣಜಿಲೆಗೆ ಯಾವ ಲಸಿಕೆ ಮದ್ದೂ ಇಲ್ಲ. ಗಣಜಿಲೆ ರೋಗಿಯ ಬಳಿ ಇದ್ದವರನ್ನು 20 ದಿವಸಗಳಾದರೂ ಬೇರೆ ಇರಿಸಿ ನೋಡಬೇಕು. ಹಾಗೇ ಶಾಲಾಮಕ್ಕಳೂ 20 ದಿವಸಗಳ ತನಕ ಶಾಲೆಗೆ ಹೋಗಬಾರದು. (ಡಿ.ಎಸ್.ಎಸ್.;ವಿ.ಎನ್.ಕೆ.)

**ಗಣತಂತ್ರ :** ಸೌಗಾಂಗಿನಿಂದ ಪ್ರಕಟವಾಗುವ ಅಸ್ಸಾಮಿ ವಾರಪತ್ರಿಕೆ. 1962ರಲ್ಲಿ ಪ್ರಾರಂಭವಾಯಿತು. ಸಂಪಾದಕ ಪೂರ್ಣಚಂದ್ರ ಶರ್ಮಾ. ಎನ್.ಸಿ.ಶರ್ಮಾ ಮತ್ತು ಇತರರು ಮಾಲೀಕರು. ಗಣತಂತ್ರ ಮುದ್ರಣಾಲಯದಲ್ಲಿ ಮುದ್ರಿತವಾಗುತ್ತದೆ. ಜಿತೇಂದ್ರ ಶರ್ಮಾ ಪ್ರಕಾಶಕ. ಸುದ್ದಿ ಮತ್ತು ಪ್ರಚಲಿತ ವಿಚಾರಗಳನ್ನು ಪ್ರಕಟಿಸುತ್ತಿರುವ ಈ ಪತ್ರಿಕೆಯ ಪ್ರಸಾರ 12,948 (1969). ಬಿಡಿ ಪ್ರತಿಯ ಬೆಲೆ 25 ಪೈಸೆ. (ಕೆ.ಆರ್.ಡಿ.)

**ಗಣದಾಸಿ ವೀರಣ್ಣ :** ಸು.1160. ಶಿವಶರಣ ಹಾಗೂ ವಚನಕಾರ. ಅಲ್ಲಮಪ್ರಭು, ಬಸವೇಶ್ವರ, ಅಕ್ಕಮಹಾದೇವಿ ಮೊದಲಾದ ಮಹಾಶರಣಶರಣೆಯರ ಸಮಕಾಲೀನ. ಪಾಲ್ಕುರಿಕೆ ಸೋಮನಾಥನ (ಸು.1299) 'ಸಹಸ್ರಗಣನಾಮ'ದಲ್ಲಿ ಈತನ ಹೆಸರು ಉಲ್ಲೇಖಿತವಾಗಿರುವುದರಿಂದ ಅಮರಗಣದಲ್ಲಿ ಪೂಜ್ಯಸ್ಥಾನವನ್ನು ಪಡೆದುಕೊಂಡಿದ್ದನೆಂದು ತಿಳಿಯುತ್ತದೆ. ಈತ ಹಲವಾರು ವಚನಗಳನ್ನು ಬರೆದಿದ್ದಾನೆ. ನಮ್ಮ ಶಾಂತ ಕೂಡಲಸಂಗಮದೇವ ಎಂಬುದು ಈತನ ವಚನಗಳ ಅಂಕಿತ. ಇವನ ವಚನಗಳಲ್ಲಿ ಆಳವಾದ ಚಿಂತನೆ ಹಾಗೂ ಅನುಭವ ಘನೀಭೂತವಾಗಿದೆ. 'ಗಾಳಿಯಿಲ್ಲದ ದೀಪದಂತೆ' ಈತನ ವಚನಗಳು ಅರ್ಥಶ್ರೀಮಂತಿಕೆಯಿಂದ ಸದಾ ಪ್ರಜ್ವಲಿಸುತ್ತವೆ. ಭಾವದೃಢತೆ ವಚನಗಳಲ್ಲಿ ವ್ಯಕ್ತವಾಗಿ ಈತನ ವ್ಯಕ್ತಿತ್ವಕ್ಕೆ ಸ್ಪಷ್ಟವಾದ ನಿಲುವನ್ನು ಕೊಡುತ್ತದೆ. (ಸಿ.ಕೆ.ಎನ್.)

**ಗಣಪತಿ :** ಶಿವ, ವಿಷ್ಣು ಮುಂತಾದ ದೇವತೆಗಳಿಗಿಂತಲೂ ಹೆಚ್ಚು ಜನಪ್ರಿಯವಾಗಿ ಪೂಜೆಯಲ್ಲಿ ಅಗ್ರಸ್ಥಾನ ಪಡೆದ ದೇವತೆ. ಜನಜೀವನದ ಎಲ್ಲ ಶುಭಕಾರ್ಯಗಳಲ್ಲೂ– ವಿದ್ಯಾಭ್ಯಾಸ, ವಿವಾಹ, ಉಪನಯನ, ಗೃಹಪ್ರವೇಶ, ಇತ್ಯಾದಿ–ಮೊದಲ ಪೂಜೆಯನ್ನು ಇಂದಿಗೂ ಭಾವುಕರು ಗಣಪತಿಗೆ ಸಲ್ಲಿಸುತ್ತಾರೆ. ಅಷ್ಟೇ ಅಲ್ಲ; ಮಿಕ್ಕ ದೇವತಾ ಕಾರ್ಯಗಳನ್ನು ಮಾಡುವಾಗಲೂ ನಿರ್ವಿಘ್ನತಾ ಸಿದ್ಧಿಗಾಗಿ ಮೊದಲ ಪೂಜೆ ಗಣಪತಿಗೇ ಮೀಸಲು. ಗಣಪತಿಗೆ ಸಿದ್ಧಿವಿನಾಯಕ, ಗಣೇಶ, ಗಜಮುಖ, ಏಕದಂತ, ವಕ್ರತುಂಡ, ಲಂಬೋದರ, ಹೇರಂಬ, ಮೂಷಕವಾಹನ ಮುಂತಾದ ಹೆಸರುಗಳೂ ಇವೆ. ಈ ಒಂದೊಂದು ಹೆಸರೂ ಗಣಪತಿಯ ಒಂದೊಂದು ಗುಣಲಕ್ಷಣವನ್ನು ಸೂಚಿಸುತ್ತದೆ. ಕರ್ನಾಟಕವಷ್ಟೇ ಅಲ್ಲ, ಭಾರತದಲ್ಲೆಲ್ಲ ಊರ ಕೋಟೆಗಳಲ್ಲಿ, ಗಣಪತಿಯ ಮೂರ್ತಿಯನ್ನು ಇಂದೂ ನೋಡಬಹುದು. ಎಲ್ಲ ದೇವಾಲಯಗಳಲ್ಲೂ ಶಿವನ ಪರಿವಾರವರ್ಗದಲ್ಲಿ ಗಣಪತಿಯ ಮೂರ್ತಿಯಿದ್ದೇ ಇರುತ್ತದೆ. ಗಣಪತಿ ವಿಶಿಷ್ಟ ಜಾತಿಗಳ ದೇವತೆಯೆನಿಸದೆ ಹಿಂದೂ ಧರ್ಮವನ್ನು ನಂಬುವ ಎಲ್ಲ ಜಾತಿಪಂಥಗಳೂ ಸಮಾನವಾಗಿ ಪೂಜಿಸುವ ದೇವತೆಯಾಗಿ ಈಗಲೂ ಮಹಿಮೆ ಪಡೆದಿದ್ದಾನೆ. (ಕೆ.ಕೆ.; ಬಿ.ಎಸ್.)

ಮಹಾಗಣಪತಿ, ಶಿರಸಿ

ಋಗ್ವೇದದಲ್ಲಿ ಗಣಾನಾಂ ತ್ವಾ ಗಣಪತಿಂ ಹವಾಮಹೇ ಎಂಬ ಋಕ್ಕು ಇದ್ದು ಇದು ಗಣಪತಿಯ ಪೂಜೆಯ ಮುಖ್ಯಮಂತ್ರವಾಗಿ ಇಂದಿಗೂ ಪುರಸ್ಕೃತವಾಗಿದೆ ಯಾದರೂ ವಿದ್ವಾಂಸರು ಇಲ್ಲಿನ ಗಣಪತಿ ಶಬ್ದಕ್ಕೆ ಬೃಹಸ್ಪತಿ ಅಥವಾ ಬ್ರಹ್ಮಣಸ್ಪತಿಯೆಂದೇ ಅರ್ಥಮಾಡುತ್ತಾರೆ. ನಮಗೆ ಇಂದು ಪ್ರಸಿದ್ಧವಿರುವ ಗಣಪತಿಯ ಮೂರ್ತಿಕಲ್ಪನೆ ಪುರಾಣಕಾಲದ್ದು. ಪುರಾಣಗಳಿಗೂ ಪೂರ್ವದ ಋಗ್ವೇದದಲ್ಲಿ ಆನೆಯ ಮುಖ, ಇಲಿಯ ವಾಹನ, ದೊಡ್ಡ ಹೊಟ್ಟೆ ಮುಂತಾದ ಯಾವ ಪೌರಾಣಿಕ ಕಲ್ಪನೆಗಳೂ ಇಲ್ಲ. ಆತ ಕೇವಲ ವಾಗಭಿಮಾನಿಯಾದ ಮತ್ತೊಬ್ಬ ದೇವನಂತೆ ತೋರುತ್ತಾನೆ. ಅಷ್ಟೇ ಅಲ್ಲದೆ ಇಡೀ ರಾಮಾಯಣದಲ್ಲಿ ಹಾಗೂ ಮಹಾಭಾರತದ ಮೂಲರೂಪದಲ್ಲಿ ಗಣಪತಿಯ ನಾಮಸ್ಮರಣೆ ಕೂಡ ಬಾರದು. ಕಾಳಿದಾಸನಿಗೆ ಸಹ ಗಣಪತಿಯ ಅರಿವಿದ್ದಂತೆ ಕಾಣಿಸುವುದಿಲ್ಲ. ಮಹಾಭಾರತವನ್ನು ಬರೆಯಲು ವ್ಯಾಸರು ಗಣೇಶನನ್ನು ಲಿಪಿಕಾರನನ್ನಾಗಿ ಮಾಡಿಕೊಂಡ ಕಥೆ ಈಚೆಗೆ ಮಹಾಭಾರತಕ್ಕೆ ಯಾರೋ ಸೇರಿಸಿದ್ದೆಂದು ವಿದ್ವಾಂಸರು ಭಾವಿಸುತ್ತಾರೆ. ಈ ಕೆಲವು ಕಾರಣಗಳಿಂದ ಗಣಪತಿ ಆರ್ಯರ ದೇವತೆಯಾಗಿರದೆ ಮೊಟ್ಟಮೊದಲಿಗೆ ದ್ರಾವಿಡ ಜನಾಂಗಗಳ ಗ್ರಾಮಭಿಮಾನಿ ದೇವತೆಯಾಗಿದ್ದಿರಬಹುದೆಂದು ಕೆಲವರು ಸಂಶೋಧಕರು ಊಹಿಸುತ್ತಾರೆ. ಕಾಲಾಂತರದಲ್ಲಿ ಈ ಕ್ಷುದ್ರ ದೇವತೆಯನ್ನು ಸಂಸ್ಕರಿಸಿಕೊಂಡು ಆರ್ಯರು ತಮ್ಮ ದೇವತಾವರ್ಗದಲ್ಲಿ ಸೇರಿಸಿ ಕೊಂಡಿರಬಹುದೆಂದು ಅವರ ಅಭಿಪ್ರಾಯ. ಆದರೆ ಈ ವಾದವನ್ನು ಒಪ್ಪದ ಸಂಶೋಧಕರೂ ಉಂಟು. ಅವರು ಹೇಳುವ ಕಾರಣಗಳಿವು: ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ನಮೋ ಗಣೇಭ್ಯೋ ಗಣಪತಿಭ್ಯಶ್ಚವೋ ನಮಃ (5–4–1) ಎಂಬ ಮಂತ್ರದಲ್ಲಿ ಅನೇಕ ಗಣಪತಿಗಳ ಉಲ್ಲೇಖವಿದೆ. ಅತ್ಯಂತ ಪ್ರಾಚೀನವಾದ (ಪ್ರ.ಶ.ಪೂ.ಸು. 4ನೆಯ ಶತಮಾನದ) ಮಾನವಗೃಹ್ಯಸೂತ್ರದಲ್ಲಿ ವಿನಾಯಕರ ಸಂಖ್ಯೆ ನಾಲ್ಕೆಂದಿರುವುದಲ್ಲದೆ ಇವರ ಹೆಸರು ಕ್ರಮವಾಗಿ ಸಾಲಕಟಂಟಕ. ಕೂಶ್ಮಾಂಡ, ರಾಜಪುತ್ರ ಉಸ್ಮಿತ, ಮತ್ತು ದೇವಯಜನ ಎಂಬುದನ್ನು ತಿಳಿಸಿ ಇವರ ಪೀಡಾಪರಿಹರಕ್ಕಾಗಿ ಶಾಂತಿ ಕರ್ಮಗಳನ್ನು ವಿಧಿಸಿದೆ. ಮುಂದೆ ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಈ ವಿನಾಯಕರ ತಾಯಿ ಅಂಬಿಕೆಯೆಂದೂ ಇವರನ್ನು ತೃಪ್ತಿಪಡಿಸದೆ ಪೀಡೆ ಪರಿಹಾರವಾಗದೆಂದೂ ಹೇಳಿದೆ. ಪ್ರಸಕ್ತಶಕಾರಂಭದಲ್ಲಿ ರಚಿತವಾದ ಬೋಧಾಯನ ಗೃಹ್ಯಸೂತ್ರ, ಗೋಭಿಲಸ್ಮೃತಿಗಳಲ್ಲಿಯೂ ಹಾಲನ (ಸಾತವಾಹನ) ಗಾಥಾ ಸಪ್ತಶತಿಯಲ್ಲಿಯೂ ಗಜಮುಖನ ಉಲ್ಲೇಖದಂತೆ ಅವನ ಅಗ್ರಪೂಜಾರ್ಹತೆಯೂ ನಿರ್ದಿಷ್ಟವಾಗಿವೆ. ಬಾಣಭಟ್ಟ, ಭವಭೂತಿಗಳು ಗಣಪತಿಯ ಸ್ತೋತ್ರ ಮಾಡಿದ್ದಾರೆ.

ನೃತ್ಯ ಗಣಪತಿಯ ಶಿಲ್ಪ

ಹೀಗೆ ಗಣಪತಿಯ ಅತ್ಯಂತ ಪ್ರಾಚೀನ ಸ್ವರೂಪ ಸಂಶಯಾಸ್ಪಾಗಿದ್ದರೂ ಅದು ಪ್ರ.ಶ. ಆರನೆಯ ಶತಮಾನದ ವೇಳೆಗೆ ಇಂದು ಪ್ರಸಿದ್ಧವಾಗಿರುವ ಸ್ವರೂಪಕ್ಕೆ ಬಂದು ಮುಟ್ಟಿಯಾಗಿತ್ತೆಂದು ಊಹಿಸಬಹುದು. ಏಕೆಂದರೆ ಇದೇ ಕಾಲದ ಪ್ರಾಚೀನ ಶಿಲಾಮೂರ್ತಿಗಳು ಕೂಡ ಜೋಧಪುರದ ಬಳಿ ಘಾಟಿಯಾಲ, ಐಹೊಳೆ ಹಾಗು ಬಾದಾಮಿ ದೇವಾಲಯಗಳಲ್ಲಿ ಈಗಲೂ ಕಾಣಸಿಗುತ್ತವೆ. ಗಣಪತಿಯ ಮಹಿಮೆಯನ್ನು ವಿಸ್ತಾರವಾಗಿ ಪ್ರತಿಪಾದಿಸುವ ಪುರಾಣಗಳೂ ಇಲ್ಲಿಂದ ಮುಂದೆ ರಚಿತವಾದುವೆಂದು ಊಹಿಸಬಹುದು.

ಸಾಸಿವೆಕಾಳು ಗಣಪತಿ, ಹಂಪಿ, ಎತ್ತರ 8'

ಪುರಾಣಗಳ ಪ್ರಕಾರ ಗಣಪತಿ ಶಿವ ಪಾರ್ವತಿಯರ ಮಗ. ಕೇವಲ ಪಾರ್ವತಿಯ ಮುದ್ದುಮಗನೆನ್ನುವುದೇ ಹೆಚ್ಚು ಸಮರ್ಪಕ ವೆನಿಸುತ್ತದೆ. ಏಕೆಂದರೆ ಅವಳ ಸ್ನಾನ ಚೂರ್ಣದಿಂದ ಈತ ಮೈದಾಳಿ, ಅವಳ ಸ್ನಾನಜಲದೊಂದಿಗೆ ಗಂಗಾಮುಖವನ್ನು ಸೇರಿ. ಅಲ್ಲಿ ಗಜಮುಖಳಾದ ಮಾಲಿನಿಯೆಂಬ ದೇವತೆಯ ಗರ್ಭವನ್ನು ಸೇರಿ ಚತುರ್ಭುಜ ಮತ್ತು ಪಂಚಗಜಮುಖಗಳಿಂದ ಜನಿಸಿದನಂತೆ. ಗಂಗೆ ಅವನನ್ನು ತನ್ನ ಸುತನೆಂದರೂ ಶಿವ ಅವನನ್ನು ಪಾರ್ವತೀಸುತನೆಂದೂ ತೀರ್ಮಾನಿಸಿ ಅವನನ್ನು ಏಕಮುಖನನ್ನಾಗಿ ಮಾಡಿದನಂತೆ. ಅಂಜನಗಿರಿಯಲ್ಲಿ ಅವನನ್ನು ವಿಘ್ನವಿನಾಶಕ ದೇವನೆಂದು ಈಶ್ವರ ಪಟ್ಟಗಟ್ಟಿದನಂತೆ. ಈ ವಿವರಗಳು ಕಾಶ್ಮೀರಕವಿಯಾದ ಜಯರಥನ ಹರಚರಿತ ಚಿಂತಾಮಣಿಯಲ್ಲಿ (13ನೆಯ ಶತಮಾನ) ದೊರೆಯುತ್ತದೆ. ಬ್ರಹ್ಮವೈವರ್ತ ಪುರಾಣದಲ್ಲಿ ಗಣೇಶನ ಜನ್ಮವೃತ್ತಾಂತ ವಿಸ್ತಾರವಾಗಿ ಬಂದಿದೆ. ಅಲ್ಲಿಯ ಕಥೆ ಬೇರೆ ರೀತಿಯಾಗಿದೆ. ಪಾರ್ವತಿ ತನ್ನ ಕಂದನನ್ನು ತೋರಿಸಲು ಎಲ್ಲರೊಂದಿಗೆ ಶನಿಯನ್ನೂ ಕರೆಸಿದ್ದಳಂತೆ. ಶನಿಯ ವಕ್ರದೃಷ್ಟಿ ಬಿದ್ದೊಡನೆ ಗಣಪತಿಯ ತಲೆ ಬಿದ್ದು ಹೋಯಿತಂತೆ. ಆಮೇಲೆ ವಿಷ್ಣು ಅವನಿಗೆ ಆನೆಯ ತಲೆಯನ್ನು ತಂದು ಅಂಟಿಸಿದನಂತೆ. ಗಣೇಶನಿಗೆ ಇರುವುದು ಒಂದೇ ದಂತ. ಇನ್ನೊಂದು ದಂತ ಕಳೆದುದು ಹೇಗೆನ್ನಲು ಬೇರೆ ಬೇರೆ ಕಥೆಗಳಿವೆ. ಅದನ್ನು ರಾವಣ ಮುರಿದನೆಂದು ಮಾಘಕವಿ (ಶಿಶುಪಾಲವಧ) ಹೇಳಿದರೆ, ಪರಶುರಾಮನೊಡನೆ ಯುದ್ಧದಲ್ಲಿ ಅದು ಮುರಿಯಿತೆಂದು ಬ್ರಹ್ಮವೈವರ್ತಪುರಾಣ ತಿಳಿಸುತ್ತದೆ. ಯಾರು ಜಗವನ್ನೆಲ್ಲ ಬೇಗ ಪ್ರದಕ್ಷಿಣೆ ಮಾಡುವರೆಂದು ಗಣೇಶನಿಗೂ ಕುಮಾರಸ್ವಾಮಿಗೂ ಸ್ಪರ್ಧೆ ಬಂದ ಕಾಲದಲ್ಲಿ ದಂತ ಮುರಿಯಿತೆಂದು ಹರಚರಿತಚಿಂತಾಮಣಿಯಲ್ಲಿ ಹೇಳಲಾಗಿದೆ. ಶಿವ ಪುರಾಣದ ಪ್ರಕಾರ ಶಿವನೇ ಪಾರ್ವತಿಯ ಸ್ನಾನಗೃಹದ ಬಾಗಿಲ್ಲಲಿ ಕಾವಲಿದ್ದ ಗಣೇಶನ ತಲೆಯನ್ನು ಕಡಿದು ಅದಕ್ಕೆ ಬದಲಾಗಿ ಆನೆಯ ತಲೆಯನ್ನು ಜೋಡಿಸಿದನೆನ್ನಲಾಗಿದೆ. ಗಣಪತಿಗೆ ಮದುವೆಯೇ ಇಲ್ಲವೆನ್ನುವ ಕೆಲವು ಪುರಾಣಗಳಿದ್ದರೆ, ಅವನಿಗೆ ಸಿದ್ಧಿ, ಬುದ್ಧಿ ಎಂಬ ಇಬ್ಬರು ಹೆಂಡಿರನ್ನು ಹೇಳುವ ಪುರಾಣಗಳುಂಟು; ಸಿದ್ಧಿಯಲ್ಲಿ ಹುಟ್ಟಿದ ಕ್ಷೇಮ ಮತ್ತು ಬುದ್ಧಿಯಲ್ಲಿ ಹುಟ್ಟಿದ ಲಾಭ ಎಂಬ ಮಕ್ಕಳನ್ನು ಹೇಳುವ ಪುರಾಣಗಳೂ ಉಂಟು. ಗಣಪತಿಯ ವಿಗ್ರಹಗಳಲ್ಲಿ ಕೆಲವು ಇಂದಿನ ಸುಂದರಾಕೃತಿಯ ಬದಲು ಒರಟು ವಿಕಾರರೂಪದಲ್ಲಿ ಯೂ ಇರುವುದನ್ನು ಕಾಣುತ್ತೇವೆ (ಉದಾ: ನಾಸಿಕದ ಮೋದಕೇಶ್ವರ ಗಣಪತಿ, ವಾರ್ಧದ ಸ್ವಯಂಭೂ ಗಣಪತಿ). ಕೆಲವು ಕೇವಲ ಸ್ಥೂಲ ಆನೆಯ ತಲೆಯಂತಿರುವ ಕಲ್ಲುಗಳೇ ಇರುತ್ತವೆ. (ಉದಾ: ಜುನ್ನಾರದ ಸಾರ್ವಜನಿಕ ಗಣಪತಿ). ಕೆಲವೆಡೆ ದ್ವಿಭುಜ ಗಣಪತಿಗಳಿವೆ (ಉದಾ: ಗೋಕರ್ಣ ಮತ್ತು ಇಡಗುಂಜಿಯ ಮೂರ್ತಿಗಳು). ಪಲ್ಲವರ ಕಾಲಕ್ಕೆ ಮುಂಚೆ ದಕ್ಷಿಣದಲ್ಲಿ ಗಣಪತಿ ವಿಗ್ರಹಗಳು ಸಿಕ್ಕಿಲ್ಲ. ಮುಂದೆ ಅನೇಕ ತಂತ್ರ ಆಗಮಗಳ ನಿರ್ದೇಶನದಂತೆ ಗಣಪತಿಯ ಮೂರ್ತಿ ಕಲ್ಪನೆಯಲ್ಲೂ ನಾನಾಭುಜಗಳು, ಮುಖಗಳು, ಅಲಂಕಾರಗಳು ಬೆಳೆದು ಬಂದುದನ್ನು ನೋಡಬಹುದು. ಹೊಯ್ಸಳರ ಕಾಲದಿಂದೀಚೆಗೆ ಈ ಪರಿಷ್ಕೃತ ರೂಪಗಳು ಕನ್ನಡ ನಾಡಿನಲ್ಲೆಲ್ಲ ಕಾಣಬರುತ್ತವೆ.

ಬೆಂಗಳೂರಿನ ನರಹರಿ ಗುಡ್ಡದ ಪಂಚಮುಖಿ ಗಣಪತಿ

ಭಾರತದಲ್ಲಿ ಮಾತ್ರವೇ ಅಲ್ಲ, ಪ್ರಾಚೀನ ಭಾರತೀಯರು ತಮ್ಮ ಸಂಸ್ಕೃತಿಯನ್ನು ಹರಡಿದ ಸಾಗರೋತ್ತರ ದೇಶಗಳಲ್ಲಿ ಕೂಡ ಗಣಪತಿವಿಗ್ರಹಗಳು ಜನಪ್ರಿಯವಾಗಿದ್ದುವು. ಜಾವ, ಕಾಂಬೋಡಿಯ, ಬೋರ್ನಿಯೊ ಮೊದಲಾದ ಆಗ್ನೇಯ ಏಷ್ಯ ರಾಷ್ಟ್ರಗಳಲ್ಲಿ ಹಿಂದೂ ಸಂಪ್ರದಾಯದ ಗಣಪತಿಯಿದ್ದರೆ, ಚೀನ, ಜಪಾನ್, ಸಿಂಹಳಗಳಲ್ಲಿ ಬೌದ್ಧರ ಪ್ರಭಾವದಿಂದ ಮಾರ್ಪಟ್ಟ ರೂಪದಲ್ಲಿ ಗಣಪತಿ ವಿಗ್ರಹಗಳು ಇಂದಿಗೂ ಕಾಣಸಿಗುತ್ತವೆ.

ಈಗ ಕೇವಲ ಗಣಪತಿಯೊಬ್ಬನನ್ನೇ ಪರಮ ದೈವತವೆಂದು ಭಜಿಸುವ ಹಿಂದೂ ಸಂಪ್ರದಾಯ ಎಲ್ಲಿಯೂ ಹೆಚ್ಚಾಗಿ ಕಾಣದಿದ್ದರೂ ಪ್ರಾಚೀನ ಭಾರತದಲ್ಲಿ ಅಂಥ ಒಂದು ಸಂಪ್ರದಾಯ ಊರ್ಜಿತದಲ್ಲಿದ್ದುದು ಸ್ಪಷ್ಟವಾಗಿ ಕಾಣಬರುತ್ತದೆ. ಅದಕ್ಕೆ ಗಾಣಾಪತ್ಯ ಸಂಪ್ರದಾಯವೆಂದು ಹೆಸರಿದ್ದಿತು. ಆನಂದಗಿರಿಯ ಶಂಕರವಿಜಯವೆಂಬ ಗ್ರಂಥದಲ್ಲಿ (ಪ್ರಾಯಃ 10ನೆಯ ಶತಮಾನಕ್ಕಿಂತ ಇನ್ನೂ ಎಷ್ಟೋ ಈಚಿನ ಗ್ರಂಥ) ಗಾಣಾಪತ್ಯರ ಆರು ಪಂಥಗಳನ್ನು ಉಲ್ಲೇಖಿಸಲಾಗಿದೆ: 1. ಮಾಹಾಗಣಪತಿ; 2.ಹರಿದ್ರಾ ಗಣಪತಿ; 3. ಉಚ್ಛಿಷ್ಟ ಗಣಪತಿ; 4. ನವನೀತ ಗಣಪತಿ; 5. ಸ್ವರ್ಣ ಗಣಪತಿ ಮತ್ತು 6. ಸಂತಾನ ಗಣಪತಿ. ಈ ದೇವತೆಗಳ ಅವಾಹನಾಮಂತ್ರ ಹಾಗೂ ಪೂಜಾ ವಿಧಿಗಳಲ್ಲಿ

ವ್ಯತ್ಯಾಸಗಳಿರುತ್ತಿದ್ದುವು. ಇವು ಬೇರೆ ಬೇರೆ ತಂತ್ರ ಆಗಮ ಗ್ರಂಥಗಳನ್ನು ಅವಲಂಭಿಸುತ್ತಿದ್ದುವು. ಆದರೂ ಆರೂ ಪಂಥದವರು ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರಕ್ಕೆಲ್ಲ ಮೂಲಕಾರಣ ಗಣಪತಿಯೇ ಹೊರೆತು ಶಿವನಲ್ಲವೆಂದು ನಂಬುತ್ತಿದ್ದರು. ಬ್ರಹ್ಮಾದಿಗಳೆಲ್ಲ ಗಣಪತಿಯ ಮಾಯೆಯ ಮೂಲಕ ಜನಿಸಿದವರೆಂದೇ ಅವರ ಹೇಳಿಕೆ. ಹೀಗೆ ಇವರು ವೇದಾಂತದ ಪರಮತತ್ತ್ವಕ್ಕೆ ಅಥವಾ ಪರಬ್ರಹ್ಮವಸ್ತುವಿಗೆ ಪ್ರತೀಕವಾಗಿಯೇ ಗಣಪತಿಯನ್ನು ಆರಾಧಿಸುತ್ತಿದ್ದರೆನ್ನಬಹುದು. ಶಂಕರಾಚಾರ್ಯರು ಇವರೆಲ್ಲರೊಡನೆ ವಾದಮಾಡಿ, ಜಯಿಸಿ ತಾವು ಪಂಚಾಯತನ–ದೇವತಾ ಪೂಜಾವಿಧಿಯ ನೂತನ ಉಪಕ್ರಮವನ್ನು ಆರಂಭಿಸಿ ಷಣ್ಮತಸ್ಥಾಪನಾ ಚಾರ್ಯರೆನಿಸಿದರೆಂದು ಶಂಕರವಿಜಯದಲ್ಲಿ ವರ್ಣಿಸಲಾಗಿದೆ.

ಮೇಲೆ ಹೇಳಲಾದ ಪಂಥಗಳಲ್ಲಿ ಉಚ್ಛಿಷ್ಟ ಗಣಪತಿ ಪೂಜಾವಿಧಿ ಮಾತ್ರ ಅವೈದಿಕವಿದ್ದು ನಿಷಿದ್ಧ ವಾಮಾಚಾರಕ್ಕೆ ಎಡವಾಡಿಕೊಟ್ಟಿದಂತೆ ಕಾಣುತ್ತದೆ. ಉಚ್ಛಿಷ್ಟವೆಂದರೆ ಎಂಜಲು. ಎಂಜಲು, ಮಾಂಸ, ಮದ್ಯ, ಮೈಥುನ ಇತ್ಯಾದಿ ವಾಮಾಚಾರಗಳ ಅತಿರೇಕವನ್ನು ಈ ರಹಸ್ಯತಾಂತ್ರಿಕಪಂಥ ಸಾಧನೆಗಳಲ್ಲಿ ಕಾಣಬಹುದು. ಇವರು ಜಾತಿವ್ಯವಸ್ಥೆ, ವಿವಾಹನಿಯಮ ಮುಂತಾದುವನ್ನೆಲ್ಲ ಭಂಗಿಸಿ ಸಮಾಜಘಾತಕ ಪ್ರವೃತ್ತಿಯವರಾಗಿದ್ದಂತೆ ಸಾಹಿತ್ಯದಲ್ಲಿ ಇವರ ವರ್ಣನೆಗಳು ಬರುತ್ತವೆ.

ಪುಣೆಯ ಬಳಿಯಲ್ಲಿರುವ ಚಿಂಚವಾಡದಲ್ಲಿ ಏಳು ತಲೆಗಳವರೆಗೆ ಒಂದು ಮನೆಯವರ ಮೇಲೆ ಗಣೇಶನ ಆವೇಶವಾಗಿ ಮನುಷ್ಯರೇ ಪೂಜೆಗೊಳ್ಳುತ್ತಿದ್ದ ಐತಿಹಾಸಿಕ ಉಲ್ಲೇಖ ಇಲ್ಲಿ ಸ್ಮರಣೀಯವಾಗಿವೆ. 1810ರಲ್ಲಿ ಏಳನೆಯ ತಲೆಯವ ಮಕ್ಕಳಿಲ್ಲದೆ ಸತ್ತಮೇಲೂ ಅವನ ದಾಯದಿಗಳು ಈಗಲೂ ಅಲ್ಲಿ ಪೂಜ್ಯರಾಗಿದ್ದಾರೆ. ಮೊದಲನೆಯ ಗಣೇಶಭಕ್ತನ ಹೆಸರು ಮೋರೋಬಾ. ಔರಂಗಜೇಬ್ ಕೂಡ ಈ ಮನೆತನಕ್ಕೆ ಎಂಟು ಹಳ್ಳಿಗಳ ದತ್ತಿಯತ್ತಿದ್ದನೆನ್ನಲಾಗಿದೆ. (ಕೆ.ಕೆ.)

**ಗಣಪತಿಶಾಸ್ತ್ರಿ, ಟಿ. :** 1860–1926. ಭಾಸನ ನಾಟಕಗಳನ್ನು ಸಂಸ್ಕೃತ ಜಗತ್ತಿಗೆ ಪ್ರಪ್ರಥಮವಾಗಿ ಅರ್ಪಿಸಿದ ಮತ್ತು ಸಂಸ್ಕೃತದ ಮತ್ತೊಂದು ಅಮರಕೃತಿ ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ವಿದ್ವತ್‌ಪೂರ್ಣ ವ್ಯಾಖ್ಯಾನ ಬರೆದ ಕೀರ್ತಿಗೆ ಭಾಜನರಾದ ದೊಡ್ಡ ವಿದ್ವಾಂಸರು. ಹದಿನಾರನೆಯ ಶತಮಾನದ ಪ್ರಸಿದ್ಧ ಸಂಸ್ಕೃತ ಪಂಡಿತ ಅಪ್ಪಯ್ಯ ದೀಕ್ಷಿತರ ವಂಶದಲ್ಲಿ ಜನಿಸಿದ ರಾಮಸುಬ್ಬಯ್ಯರ್ ಇವರ ತಂದೆ. ಹದಿನಾರನೆಯ ವಯಸ್ಸಿನಲ್ಲಿ ತಿರುವನಂತಪುರಕ್ಕೆ ಬಂದು ಆಗ ತಿರುವಾಂಕೂರ್ ಮಹಾರಾಜರ ಧರ್ಮಾಧಿಕಾರಿಯಾಗಿದ್ದ ಕರಮನ್ಯೆ ಸುಬ್ರಹ್ಮಣ್ಯ ಶಾಸ್ತ್ರಿಯವರಲ್ಲಿ ತಮ್ಮ ಸಂಸ್ಕೃತ ವ್ಯಾಸಂಗ ಮುಂದುವರಿಸಿದರು. ಗಣಪತಿ ಶಾಸ್ತ್ರಿಗಳದು ಅಸಾಧಾರಣ ಪ್ರತಿಭೆ, ಪಾಂಡಿತ್ಯ. ಹದಿನೇಳನೆಯ ವಯಸ್ಸಿನಲ್ಲೇ ಮಾಧವೀವಸಂತಮ್ ಎಂಬ ನಾಟಕವನ್ನು ಬರೆದು ಯುವರಾಜ ವಿಶಾಖಂ ತಿರುನಾಳ್ ಅವರಿಂದ ವಜ್ರದುಂಗುರವನ್ನು ಬಹುಮಾನವಾಗಿ ಪಡೆದರು. ಅರ್ಥಚಿತ್ರ ಮಣಿಮಾಲಾ ಎಂಬ ಅಲಂಕಾರ ಗ್ರಂಥ ಸೇತುಯಾತ್ರಾ ವರ್ಣನಂ ಎಂಬ ಗದ್ಯ ಗ್ರಂಥ, ಮರ್ಚೆಂಟ್ ಆಫ್ ವೆನಿಸ್ ನಾಟಕದ ಸಂಸ್ಕೃತಾನುವಾದ–ಇವು ಇವರ ಚೊಚ್ಚಲ ಕೃತಿಗಳು. ಹದಿನೆಂಟನೆಯ ವಯಸ್ಸಿನಲ್ಲೇ ತಿರುವಾಂಕೂರ್ ಉಚ್ಚ ನ್ಯಾಯಾಲಯದಲ್ಲಿ

ಉದ್ಯೋಗವೊಂದು ಸಿಕ್ಕಿತಾದರೂ ಅದನ್ನು ತ್ಯಜಿಸಿ ಮಹಾರಾಜ ವಿಶಾಖಂ ತಿರುನಾಳ್ ಅವರ ಕೋರಿಕೆಯ ಮೇಲೆ ಅರಮನೆಯ ಸರಸ್ವತೀ ಭಂಡಾರದ ಗ್ರಂಥಪಾಲರಾಗಿ ಕೇರಳವರ್ಮ, ವಲಿಯ ಕೋಯಿಲ್ ತಂಪುರಾನ್, ಎಳತ್ತೂರ್ ರಾಮಸ್ವಾಮಿಶಾಸ್ತ್ರಿಯವರಂಥ ಪ್ರಸಿದ್ಧ ಸಂಸ್ಕೃತಜ್ಞರ ನಿಕಟ ಸಂಪರ್ಕದಿಂದ ಪುರಾತನ ಹಸ್ತಪ್ರತಿಗಳ ಅಧ್ಯಯನಕ್ಕೆ ತೊಡಗಿದರು. 1889 ರಲ್ಲಿ ಸ್ಥಾಪಿತವಾದ ತಿರುವನಂತಪುರ ಸಂಸ್ಕೃತ ಮಹಾಪಾಠ ಶಾಲೆಗೆ 1899 ರಲ್ಲಿ ಮುಖ್ಯಾಧಿಕಾರಿಗಳಾದರು. ಇಷ್ಟಾದರೂ ಅರಮನೆಯ ಗ್ರಂಥಾಲಯದ ಅಧ್ಯಕ್ಷರಾಗಿಯೇ ಉಳಿದುಕೊಂಡು ತಿರುವಾಂಕೂರ್ ಸಂಸ್ಕೃತ ಗ್ರಂಥಮಾಲೆಯ ಸಂಪಾದಕತ್ವವನ್ನು ಮುಂದುವರಿಸಿದರು. ಇವರ ನೇತೃತ್ವದಲ್ಲಿ ಆ ಮಾಲೆಯಲ್ಲಿ ಎಂಬತ್ತೇಳು ಸುಪ್ರಸಿದ್ಧ ಗ್ರಂಥಗಳು ಅಚ್ಚಾಗಿ ಬೆಳಕು ಕಂಡುವು. ಈ ಮಧ್ಯೆ ಸಮಯಾವಕಾಶ ಕಲ್ಪಿಸಿಕೊಂಡು ಶಾಸ್ತ್ರಿಗಳು ಅನೇಕ ಸಂಸ್ಕೃತ ಪಠ್ಯ ಗ್ರಂಥಗಳನ್ನಲ್ಲದೇ ಇಂದಿಗೂ ಪ್ರಸಿದ್ಧವಾಗಿರುವ ಸ್ತೋತ್ರ ಗ್ರಂಥ ಅಪರ್ಣಾಸ್ತವವನ್ನೂ ಬರೆದರು. ಸಿಲ್ವೇನ್ ಲೀವೀ ಅವರ ಕೇಳಿಕೆಯ ಪ್ರಕಾರ ಭಾರತಾನುವರ್ಣನಂ ಎಂಬ ಭಾರತೀಯ ಸಂಸ್ಕೃತಿಯನ್ನು ಕುರಿತ ಒಂದು ಗ್ರಂಥವನ್ನೂ ಸಿದ್ಧಪಡಿಸಿದರು. 1908 ರಲ್ಲಿ ತಿರುವಾಂಕೂರು ಸರ್ಕಾರ ಶಾಸ್ತ್ರಿಗಳ ಗ್ರಂಥ ಸಂಪಾದನ ಸಾಮರ್ಥ್ಯ, ಹಸ್ತಪ್ರತಿಗಳ ವಿಮರ್ಶನ ಪಾಂಡಿತ್ಯಗಳನ್ನು ಪರಿಗಣಿಸಿ ಹಸ್ತ ಪ್ರತಿಗಳ ಸಂಗ್ರಹಣಕ್ಕಾಗಿಯೇ ಒಂದು ಇಲಾಖೆಯನ್ನು ಸ್ಥಾಪಿಸಿತು. ಗಣಪತಿ ಶಾಸ್ತ್ರಿಗಳು ಅದರ ಅಧ್ಯಕ್ಷರಾಗಿ 1,400 ಹಸ್ತ ಪ್ರತಿಗಳನ್ನು ಸಂಗ್ರಹಿಸಿದರು. 1910 ಶಾಸ್ತ್ರಿಗಳ ಜೀವನದ ಮುಖ್ಯ ವರ್ಷ. ಆಗ ಶಾಸ್ತ್ರಿಗಳಿಗೆ ಭಾಸನ ನಾಟಕಗಳ ಹಸ್ತಪ್ರತಿಗಳು ದೊರೆತುವು. 1912 ರಲ್ಲವು ಮುದ್ರಿತವಾಗಿ ಬೆಳಕು ಕಂಡು ವಿಶ್ವದ ಮೂಲೆ ಮೂಲೆಗಳ ಸಂಸ್ಕೃತಜ್ಞರ ಕೈ ಸೇರಿದುವು. ಪಾಶ್ಚಾತ್ಯ ಪೌರಸ್ತ್ಯವಿದ್ವಾಂಸರು ಒಕ್ಕೊರಲಿಂದ ಶಾಸ್ತ್ರಿಗಳನ್ನು ಶ್ಲಾಘಿಸಿದರು. ಅಲಹಾಬಾದಿನಲ್ಲಿ ನಡೆದ ಅಖಿಲ ಭಾರತೀಯ ಪ್ರಾಚ್ಯವಿದ್ಯಾ ಸಮ್ಮೇಳನದ ಅಧ್ಯಕ್ಷ ಪಟ್ಟ ಶಾಸ್ತ್ರಿಗಳ ಪಾಲಿಗೆ ಬಂತು. 1920 ರಲ್ಲಿ ಪ್ಯಾರಿಸ್ಸಿನಲ್ಲಿ ನಡೆದ ವಿಶ್ವ ಪ್ರಾಚ್ಯ ವಿದ್ಯಾ ಸಮ್ಮೇಳನ ಇವರಿಗೆ ಅಭಿನಂದನಾ ಸಮಾರಂಭವೊಂದನ್ನೇರ್ಪಡಿಸಿತು. ಲಂಡನ್ನಿನ ರಾಯಲ್ ಏಷ್ಯಾಟಿಕ್ ಸಂಘದ ಗೌರವ ಸದಸ್ಯತ್ವ, ಜರ್ಮನಿಯ ಟೂಬಿಂಗೆನ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪ್ರಶಸ್ತಿ ಮತ್ತು ಇವೆಲ್ಲಕ್ಕೂ ಕಿರೀಟಪ್ರಾಯವಾಗಿ ಭಾರತ ಸರ್ಕಾರದ ಮಹಾಮಹೋಪಾಧ್ಯಾಯ ಪ್ರಶಸ್ತಿ–ಇವೆಲ್ಲ ಶಾಸ್ತ್ರಿಗಳಿಗೆ ಲಭಿಸಿದುವು.

1924–26 ರ ವೇಳೆಗೆ ಶಾಸ್ತ್ರಿಗಳು ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ವ್ಯಾಖ್ಯಾನ ಬರೆಯಲು ತೊಡಗಿದರು. ಇದೇ ವೇಳೆಗೆ ಬರೋಡದ ಸಂಸ್ಕೃತ ಗ್ರಂಥಮಾಲೆಯಲ್ಲಿ ಭೋಜನ ಸಮರಾಂಗಣ ಸೂತ್ರಧಾರವೆಂಬ ಗ್ರಂಥ ಶಾಸ್ತ್ರಿಗಳಿಂದ ಸಂಪಾದಿಸಲ್ಪಟ್ಟು ಅಚ್ಚಾಯಿತು. ತಮಗೆ ಪರಮಾಶ್ರಯದಾತರಾಗಿದ್ದ ಮಹಾರಾಜ ಮೌಲಂತಿರುನಾಳ್ ಅವರೂ ತೀರಿಕೊಂಡದ್ದು ಶಾಸ್ತ್ರಿಗಳ ಮನಸ್ಸಿನ ಮೇಲೆ ದೊಡ್ಡ ಆಘಾತವನ್ನುಂಟುಮಾಡಿತು.

ಸತತವಾಗಿ, ಅರ್ಧ ಶತಮಾನಕ್ಕೂ ಮೀರಿ, ಸಂಸ್ಕೃತಕ್ಕಾಗಿ, ಹಸ್ತಪ್ರತಿಗಳ ವಿಮರ್ಶಾತ್ಮಕ ಸಂಪಾದನೆಗಾಗಿ ಅಹರ್ನಿಶಿ ದುಡಿದ ಗಣಪತಿಶಾಸ್ತ್ರಿಗಳು 1926 ಏಪ್ರಿಲ್ ಮೂರರಂದು ಇಹಲೋಕವನ್ನು ತ್ಯಜಿಸಿದರು. ಇಂದು ಭಾಸನ ನಾಟಕಗಳನ್ನು ಓದುವ, ಅಭ್ಯಾಸ ಮಾಡುವ ಯಾರಾದರೂ ಇವರ ಹೆಸರನ್ನು ಸ್ಮರಿಸದಿರಲಾರರು. (ಸಿ.ಜಿ.ಪಿ.)

**ಗಣರಾಜ್ಯ :** ಒಂದು ಜನಸಮೂಹದ (ಚುನಾಯಕ ಸಮುದಾಯ) ವಶದಲ್ಲಿ ಪರಮಾಧಿಕಾರವಿರುವ, ಅವರಿಂದ ಚುನಾಯಿತರಾಗಿ ಮತ್ತು ಅವರಿಗೆ ತಾತ್ತ್ವಿಕವಾಗಿ ಯಾದರೂ ಜವಾಬ್ದಾರರಾಗಿರುವಂಥ ಪ್ರತಿನಿಧಿಗಳು ಆ ಪರಮಾಧಿಕಾರವನ್ನು ಚಲಾಯಿಸುತ್ತಿರುವ, ಒಂದು ರಾಷ್ಟ್ರ; ಅಂಥ ರಾಷ್ಟ್ರದ ಸರ್ಕಾರ (ರಿಪಬ್ಲಿಕ್). ಸಂವೈಧಾನಿಕಾಗಿ ಬಹಳಮಟ್ಟಿಗೆ ಭಿನ್ನವಾದ ಹಲಬಗೆಯ ರಾಷ್ಟ್ರಗಳನ್ನು ಗಣರಾಜ್ಯವೆಂದು ಸಂಬೋಧಿಸುವ ವಾಡಿಕೆಯಿದೆ. ಪ್ರಾಚೀನ ರೋಮನ್ ಗಣರಾಜ್ಯವೆಂದು ಸಂಬೋಧಿಸುವ ವಾಡಿಕೆಯಿದೆ. ಪ್ರಾಚೀನ ರೋಮನ್ ಗಣರಾಜ್ಯ ಮೂಲತಃ ಒಂದು ಶ್ರೀಮಂತಪ್ರಭುತ್ವವಾಗಿತ್ತು (ಅರಿಸ್ಟಾಕ್ರಸಿ); ಇದು ಉತ್ತಮ ಕುಲಜ ವರ್ಗದ (ಪೆಟ್ರಿಷನ್ ಕ್ಲಾಸ್) ನಿಯಂತ್ರಣಕ್ಕೆ ಒಳಪಟ್ಟಿತ್ತು. ಪ್ರಾಚೀನ ಗ್ರೀಸಿನ ಮತ್ತು ಆಧುನಿಕ ಸ್ವಿಟ್ಜರ್ಲೆಂಡಿನ ಗಣರಾಜ್ಯಗಳು ರಾಜಕೀಯಾಧಿಕಾರ ಎಲ್ಲ ಪ್ರಜೆಗಳಲ್ಲೂ ನಿಹಿತವಾಗಿರುವಂಥ ಪ್ರಜಾಪ್ರಭುತ್ವಗಳಿಗೆ ಉದಾಹರಣೆಗಳು. ಪ್ರಾಚೀನ ಗ್ರೀಸಿನ ಪ್ರಜಾಪ್ರಭುತ್ವಗಳಲ್ಲಿ ಪ್ರಜೆತನವಿದ್ದದ್ದು ಆಯ್ದ ಕೆಲವೇ ಜನರ ವರ್ಗಕ್ಕೆ; ಸ್ವಿಟ್ಜರ್ಲೆಂಡಿನಲ್ಲಿ ಸ್ವತಂತ್ರವಾಗಿರುವ ಎಲ್ಲ ಜನರೂ ಪ್ರಜೆಗಳು. ಮಧ್ಯಯುಗದ ಇಟಾಲಿಯನ್ ಗಣರಾಜ್ಯಗಳು ಪರಿಮಿತವಾದ ಸ್ವಲ್ಪಜನಾಧಿಪತ್ಯಗಳು (ಆಲಿಗಾರ್ಕಿ). ಭಾರತ, ಫ್ರಾನ್ಸ್ ಮುಂತಾದ ಆಧುನಿಕ ಪ್ರಜಾಪ್ರಭುತ್ವಗಳು ಮೂಲಭೂತವಾಗಿ ಸ್ವತಂತ್ರ ಗಣರಾಜ್ಯಗಳು. ಯಾವ ವರ್ಗಕ್ಕೂ ವಿಶಿಷ್ಟವಾದ ರಾಜಕೀಯ ಹಕ್ಕುಗಳಿಲ್ಲದಂಥ, ಅಲ್ಲಿ ವಾಸವಾಗಿರುವ ಸರ್ವ ವಯಸ್ಕರಿಗೂ (ಅಥವಾ ಬಹುತೇಕ ಎಲ್ಲ ವಯಸ್ಕರಿಗೂ) ಸಂವಿಧಾನದ ನಿಬಂಧನೆಗಳಿಗೆ ಒಳಪಟ್ಟಂತೆ ಮತಾಧಿಕಾರವಿರುವಂಥ ಸ್ವತಂತ್ರ ಜನತಾ ಸರ್ಕಾರವನ್ನು ಇಂದು ಗಣರಾಜ್ಯವೆಂದು ಕರೆಯಲಾಗುತ್ತದೆ. ತಮ್ಮದು ವರ್ಗರಹಿತವಾದ, ಸರ್ವಜನರ ಸರ್ಕಾರವೆಂಬುದನ್ನು ಸುವ್ಯಕ್ತಗೊಳಿಸುವ ಸಲುವಾಗಿ ಕಮ್ಯೂನಿಸ್ಟ್ ರಾಷ್ಟ್ರಗಳು ತಮ್ಮನ್ನು ಜನತಾ ಗಣರಾಜ್ಯಗಳೆಂದು ಕರೆದುಕೊಳ್ಳುತ್ತವೆ.

ಗ್ರೀಕ್ ತತ್ತ್ವಜ್ಞಾನಿ ಪ್ಲೇಟೊ ರಾಜ್ಯಶಾಸ್ತ್ರದ ಆದಿಗ್ರಂಥವೆನಿಸಿಕೊಂಡಿರುವ ತನ್ನ ಅತ್ಯುನ್ನತ ಗ್ರಂಥಕ್ಕೆ ರಿಪಬ್ಲಿಕ್ (ಗಣರಾಜ್ಯ) ಎಂಬ ಹೆಸರನ್ನಿಟ್ಟಿದ್ದಾನೆ. ಬ್ರಿಟನಿನಲ್ಲಿ ಆಲಿವರ್ ಕ್ರಾಮ್ವೆಲ್ ಅಧಿಕಾರಕ್ಕೆ ಬಂದಾಗ ಅದನ್ನು ಕಾಮನ್ ವೆಲ್ತ್ (ಸಮಾನ ಕಲ್ಯಾಣ) ಎಂದು ಕರೆದ. ಇದು ಇಂಗ್ಲೀಷ್ ವಿಶ್ವದ ಪ್ರಥಮ ಗಣರಾಜ್ಯ. ಮುಖ್ಯವಾಗಿ ಜನತಾಹಿತ, ಸಮಾನ ಕಲ್ಯಾಣ ಮುಂತಾದ ತತ್ತ್ವಗಳಿಗೆ ಪ್ರಾಮುಖ್ಯ ಕೊಡುವುದೇ ಇಂಥ ಸರ್ಕಾರ ಪದ್ಧತಿಯ ಮುಖ್ಯೋದ್ದೇಶ.

ಎಟ್ರಸ್ಕನ್ ದೊರೆಗಳನ್ನೂ ಟಾರ್ಕ್ವಿನರನ್ನೂ ಉಚ್ಚಾಟನೆ ಮಾಡಿದ ಮೇಲೆ, ಆದರೆ ಆಗಸ್ಟಸನ ಚಕ್ರಾಧಿಪತ್ಯ ಸ್ಥಾಪನೆ ಆಗುವುದಕ್ಕೆ ಮುಂಚೆ, ಇದ್ದ ಪ್ರಾಚೀನ ರೋಮ್ ಸರ್ಕಾರವನ್ನು ಇತಿಹಾಸಕಾರರು ಪ್ರಪ್ರಥಮ ಗಣರಾಜ್ಯವೆಂದು ಕರೆದಿದ್ದಾರೆ.

ರಾಜತ್ವವಿಲ್ಲದ್ದೂ ಸಾಮೂಹಿಕ ಸರ್ಕಾರಿ ಹಿತವಿದ್ದದ್ದೂ ಅದರ ಎರಡು ಮುಖ್ಯ ಲಕ್ಷಣ. ಕೆಲವು ಇತಿಹಾಸಜ್ಞರು ಪ್ರಾಚೀನ ಗ್ರೀಸಿನ ನಗರ ರಾಷ್ಟ್ರವನ್ನು ಗಣರಾಜ್ಯವೆಂದು ಕರೆದಿದ್ದಾರೆ. ಅಧಿಕಾರವನ್ನು ಎಷ್ಟು ಜನರು ಚಲಾಯಿಸುತ್ತಾರೆಂಬ ಆಧಾರದ ಮೇಲೆ ಸರ್ಕಾರಗಳನ್ನು, ರಾಜಪ್ರಭುತ್ವ, ಶ್ರೀಮಂತ ಪ್ರಭುತ್ವ, ಪ್ರಜಾಪ್ರಭುತ್ವ ಎಂದು ವಿಂಗಡಿಸಲಾಗಿದೆ. ನಿರಂಕುಶ ಪ್ರಭುತ್ವ, ಸ್ವಲ್ಪ ಜನಾಧಿಪತ್ಯ ಮತ್ತು ದೊಂಬಿಜನಪ್ರಭುತ್ವ (ಆಕ್ಲಾಕ್ರಸಿ) ಇವು ಮೇಲ್ಕಂಡ ಸರ್ಕಾರ ಪದ್ಧತಿಗಳ ಅಪಭ್ರಂಶಗಳು. ಇವು ಅವಿಚಾರಕ ಆಡಳಿತಗಳು, ಆದಾಗ್ಯೂ, ಗ್ರೀಕ್ ನಗರ ರಾಜ್ಯಗಳಲ್ಲಿ ಗಣರಾಜ್ಯದ ಮೂಲ ತತ್ತ್ವಗಳಾದ ಸಮಾನಹಿತ, ಅಧಿಕಾರದಲ್ಲಿ ಜನತೆಯ ಪಾಲ್ಗೊಳ್ಳುವಿಕೆ ಇವೆರಡು ತತ್ತ್ವಗಳೂ ಅಡಕವಾಗಿದ್ದುವು. ಗ್ರೀಕೇತರ ಅನಾಗರಿಕ ಚಕ್ರಾಧಿಪತ್ಯಗಳ ರಾಜರ ಬೇಜವಾಬ್ದಾರಿ ವರ್ತನೆ, ಜನತೆಯ ಗುಲಾಮಗಿರಿ ಮುಂತಾದವು ಗ್ರೀಕ್ ನಗರ ರಾಜ್ಯಗಳಲ್ಲಿ ಕಂಡುಬರುತ್ತಿರಲಿಲ್ಲವಾದ್ದರಿಂದ ಅಲ್ಲಿ ಗಣರಾಜ್ಯ ತತ್ತ್ವವನ್ನು ಮನ್ನಿಸಲಾಗಿದೆಯೆಂದೂ ಹೇಳಬಹುದು.

ಗಣರಾಜ್ಯ ತತ್ತ್ವ ಕೇವಲ ಪಾಶ್ಚಾತ್ಯರಾಜ್ಯ ವ್ಯವಸ್ಥೆಗೆ ಸೀಮಿತವಾದ್ದಲ್ಲ. ಪೌರಸ್ತ್ಯ ದೇಶಗಳಲ್ಲಿ, ಅದರಲ್ಲೂ ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ, ಗಣರಾಜ್ಯ ತತ್ತ್ವಕ್ಕೆ ಮಾನ್ಯತೆ ಇತ್ತೆಂದು ಹೇಳಲು ಅನೇಕ ಆಧಾರಗಳುಂಟು. ಪ್ರಾಚೀನ ಭಾರತದ ರಾಜ್ಯ ವ್ಯವಸ್ಥೆಯ ಬಗ್ಗೆ ಆಮೂಲಾಗ್ರ ಸಂಶೋಧನೆ ನಡೆಸಿರುವ ಡಾ. ಜಯಸ್ವಾಲ್, ಡಾ ಘೋಷಾಲ್ ಮತ್ತು ಡಾ ಎ.ಎಸ್.ಅಳ್ತೇಕರ್ ಇವರು ಈ ಬಗ್ಗೆ ಖಚಿತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಸಂಶೋಧಕರು ಪ್ರಾಚೀನ ಭಾರತದಲ್ಲಿ ಪ್ರಜಾಪ್ರಭುತ್ವ ಪದ್ಧತಿಯೊಂದೇ ಪ್ರಚಲಿತ ಸರ್ಕಾರ ಪದ್ಧತಿಯಾಗಿತ್ತೆಂದು ಹೇಳುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ರಾಜರಹಿತ ಪ್ರಭುತ್ವಗಳೆನಿಸಿಕೊಂಡಿರುವ ಶ್ರೀಮಂತ ಪ್ರಭುತ್ವ, ಪ್ರಜಾಪ್ರಭುತ್ವ ಅಥವಾ ಗಣರಾಜ್ಯ ಇವು ವೇದಗಳ ಕಾಲದಲ್ಲಿ ಪ್ರಚಲಿತವಿದ್ದುವು. ಮಾಲವ ಗಣ ಮತ್ತು ಯಾಹುದೇಯ ಗಣಗಳು ಹಿಂದುಳಿದ ಪಂಗಡಗಳ ರಾಜ್ಯಗಳಾಗಿರದೆ ಅವು ಸುವ್ಯವಸ್ಥಿತ ರಾಜ್ಯ ಪದ್ಧತಿಗಳೆನಿಸಿಕೊಂಡಿದ್ದವು. ಪ್ರಾಚೀನ ಭಾರತದಲ್ಲಿ ಗಣ ಎಂಬ ಪದಕ್ಕೆ ಖಚಿತವಾದ ರಾಜಕೀಯ ಹಾಗೂ ಸಂವೈಧಾನಿಕ ಅರ್ಥವಿತ್ತು. ಗಣವೆಂಬುದು ಸರ್ಕಾರದ ಒಂದು ಪ್ರಭೇದವಾಗಿತ್ತು. ಅದರಲ್ಲಿ ರಾಜ್ಯಾಧಿಕಾರ ಒಬ್ಬ ವ್ಯಕ್ತಿಯ ಕೈಯಲ್ಲಿರದೆ ಗಣ ಅಥವಾ ಜನಸಮೂಹದ ಕೈಯಲ್ಲಿರುತ್ತಿತ್ತು. ಗಣ ಎಂಬುದೇ ಅಲ್ಲದೇ ಸಂಘ ಅಥವಾ ಸಮಿತಿ ಎಂಬ ಪದಗಳೂ ಪ್ರಾಚೀನ ಭಾರತದಲ್ಲಿ ಬಳಕೆಯಲ್ಲಿದ್ದುವು.

ಮಧ್ಯ ಯುಗದಲ್ಲಿ ಅಲ್ಲಲ್ಲಿ ಕೆಲವು ಗಣರಾಜ್ಯಗಳು ತಲೆ ಎತ್ತಿದುವು. ಆದರೆ 14–16ನೆಯ ಶತಮಾನಗಳ ಅವಧಿಯಲ್ಲಿ ಉಂಟಾದ ಪುನರುಜ್ಜೀವನ ಕಾಲದಲ್ಲಿ ಇಟಲಿಯ ನಗರ ರಾಜ್ಯಗಳಾದ ವೆನಿಸ್ ಮತ್ತು ಫ್ಲಾರೆನ್ಸ್‌ಗಳಲ್ಲಿ ಗಣರಾಜ್ಯ ಸರ್ಕಾರಗಳು ಹೆಚ್ಚು ಸತ್ವಶಾಲಿ ಸರ್ಕಾರ ಪ್ರಭೇದಗಳಾಗಿ ಅಸ್ತಿತ್ವಕ್ಕೆ ಬಂದುವು. ಇವುಗಳಲ್ಲೂ ರಾಜರಹಿತ ಪ್ರಭುತ್ವವೇ ಪ್ರಮುಖ ಅಂಶವಾಗಿತ್ತು. ವೆನಿಸ್ ಮತ್ತು ಫ್ಲಾರೆನ್ಸ್‌ಗಳಲ್ಲಿ ಅಧಿಕಾರ ಹಲವು ಶ್ರೀಮಂತರ ಕೈಯಲ್ಲಿತ್ತು. ಸರ್ಕಾರವನ್ನು ಚುನಾಯಿತ ಅಥವಾ ಆಯ್ದ ಪ್ರತಿನಿಧಿಗಳ ಸಮಿತಿ ನಡೆಸುತ್ತಿತ್ತು. ಇದರಲ್ಲಿ ಪ್ರಜಾಪ್ರಭುತ್ವ ತತ್ವಕ್ಕೆ ಅಷ್ಟೊಂದು ಮಹತ್ವವಿರಲಿಲ್ಲ.

ಇಂಗ್ಲೆಂಡಿನಲ್ಲಿ ಸ್ಥಾಪಿತವಾದ ಕ್ರಾಮ್ವೆಲ್ ಆಡಳಿತ ಅರಸೊತ್ತಿಗೆಯ ವಿರುದ್ಧ ಎದ್ದ ಬಂಡಾಯದ ಫಲ. ಆ ಅವಧಿಯಲ್ಲಿ ಗಣರಾಜ್ಯ ತತ್ತ್ವವನ್ನು ಎತ್ತಿ ಹಿಡಿಯಲಾಯಿತು. ಡಚ್ ಗಣರಾಜ್ಯದಲ್ಲಿ ಒಬ್ಬನ ಕೈಯಲ್ಲಿ ಅಧಿಕಾರವಿದ್ದರೂ ಅದು ಆಳರಸರ ವಿರುದ್ಧ ರಚಿತವಾದ ಅಧ್ಯಕ್ಷೀಯ ಸರ್ಕಾರ. ಇದೇ ರೀತಿ ಸ್ವಿಟ್ಜರ್ಲೆಂಡಿನಲ್ಲಿ ಕೂಡ ಗಣರಾಜ್ಯ ಪದ್ಧತಿ ರೂಪುಗೊಂಡಿತು. ಅಮೆರಿಕದ ಕ್ರಾಂತಿ ಮತ್ತು ಫ್ರಾನ್ಸಿನ ಕ್ರಾಂತಿಗಳು ರಾಜಪ್ರಭುತ್ವದ ವಿರುದ್ಧ ಎದ್ದ ಬಂಡಾಯಗಳು. ಅಲ್ಲಿ ಗಣರಾಜ್ಯಗಳು ಸ್ಥಾಪಿತವಾದುವು. ಅಮೆರಿಕನ್ ಮತ್ತು ಫ್ರೆಂಚ್ ಕ್ರಾಂತಿಗಳಲ್ಲಿ ರಾಜ್ಯಾಧಿಕಾರ ಜನತೆಯ ಒಪ್ಪಿಗೆಯಂತೆ ರೂಪುಗೊಂಡು ಚಲಾಯಿಸಲ್ಪಡಬೇಕು ಮತ್ತು ಅದು ಮಾನವೀಯ ಮೂಲಭೂತ ಹಕ್ಕುಗಳಿಗೆ ಅನುಗುಣವಾಗಿರಬೇಕು ಎಂಬ ತತ್ತ್ವಗಳು ಪ್ರಮುಖವಾಗಿದ್ದುವು. ಸಮೂಹದಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಧಿಕಾರ ಪಡೆದು, ಜನತೆಯ ಇಚ್ಛೆಗನುಗುಣವಾಗಿ, ನಿಯಮಿತ ಅವಧಿಯಲ್ಲಿ ಮಾತ್ರ ಆ ಅಧಿಕಾರವನ್ನು ಚಲಾಯಿಸುವ ಸರ್ಕಾರ ಪದ್ಧತಿಯೇ ಗಣರಾಜ್ಯವೆಂದು ಮ್ಯಾಡಿಸನ್ ಹೇಳಿದ್ದಾನೆ. ಇಂಥ ವ್ಯವಸ್ಥೆಯಲ್ಲಿ ಅಧಿಕಾರವನ್ನು ಹಲವೇ ಜನರಿಂದ ಪಡೆಯದೆ ಇಡೀ ಜನತೆಯಿಂದ ಪಡೆಯುವುದು ಬಹು ಮುಖ್ಯವಾದ ಅಂಶ. ಈ ಅರ್ಥದಲ್ಲಿ ಗಣರಾಜ್ಯವೆಂದರೆ ಇಂದಿನ ಪ್ರಜಾಪ್ರಭುತ್ವ ಪದ್ಧತಿ. ಅಮೆರಿಕದಲ್ಲಿ ಗಣರಾಜ್ಯ ಸ್ಥಾಪನೆಯಾದಂದಿನಿಂದ ಜಗತ್ತಿನ ಅನೇಕ ರಾಷ್ಟ್ರಗಳು ಗಣರಾಜ್ಯಗಳಾಗಿವೆ. ಸ್ವತಂತ್ರಭಾರತವೂ ತನ್ನ ಸಂವಿಧಾನದಲ್ಲಿ ಭಾರತವನ್ನು ಸರ್ವತಂತ್ರ ಸ್ವತಂತ್ರ ಗಣರಾಜ್ಯವೆಂದು ಸಾರಿದೆ.

ಇಪ್ಪತ್ತನೆಯ ಶತಮಾನದಲ್ಲಿ ಗಣರಾಜ್ಯ ಪದ್ಧತಿಯ ಸರ್ಕಾರ ರಚನೆಗೆ ಎಲ್ಲೆಲ್ಲೂ ಪ್ರೋತ್ಸಾಹ ದೊರೆತಿದ್ದು ಸಹಜವೇ ಆದರೂ 1914–18ರಲ್ಲಿ ಜರುಗಿದ ಒಂದನೆ ಮಹಾಯುದ್ಧದ ತರುವಾಯ ಗಣರಾಜ್ಯದ ಹೆಸರಿನಲ್ಲಿ ಅನೇಕ ಐರೋಪ್ಯ ರಾಷ್ಟ್ರಗಳಲ್ಲಿ ಸರ್ವಾಧಿಕಾರಿಗಳು ಅಧಿಕಾರಕ್ಕೆ ಬಂದರು. ಜರ್ಮನಿ, ಇಟಲಿ, ಸ್ಪೇನ್, ಸೋವಿಯೆತ್ ದೇಶ ಮುಂತಾದ ರಾಷ್ಟ್ರಗಳಲ್ಲಿ ಈ ಸರ್ವಾಧಿಕಾರಿಗಳು ರಾಜಪ್ರಭುತ್ವವನ್ನು ಮಾನ್ಯ ಮಾಡಲೂ ಇಲ್ಲ, ಗಣರಾಜ್ಯ ತತ್ತ್ವವನ್ನು ಅಲ್ಲಗಳೆಯಲೂ ಇಲ್ಲ. ತಮ್ಮದೇ ಆದ ರೀತಿಯಲ್ಲಿ ಅವರು ತಮ್ಮ ಕೈಯಲ್ಲಿ ರಾಜ್ಯಾಧಿಕಾರವನ್ನು ಇಟ್ಟುಕೊಂಡರು. ಅಂದಿನಿಂದ ಸರ್ಕಾರಗಳನ್ನು ಸಂವೈಧಾನಿಕ ಸರ್ಕಾರಗಳು ಮತ್ತು ಸರ್ವಾಧಿಕಾರ ಸರ್ಕಾರಗಳೆಂದು ವರ್ಗೀಕರಿಸಬೇಕಾಯಿತು. ಎರಡನೆಯ ಮಹಾಯುದ್ಧದ ಅನಂತರವೂ ಅನೇಕ ದೇಶಗಳು ಹೆಸರಿನಲ್ಲಿ ಮಾತ್ರ ಗಣರಾಜ್ಯಗಳಾಗಿ ಉಳಿದುವು. ಆದರೆ ಅನೇಕ ಗಣರಾಜ್ಯಗಳು ಯಶಸ್ವಿಯಾಗಿ ಮುಂದುವರೆಯುತ್ತಿವೆ. (ಎ.ಎಂ.ಆರ್.)

**ಗಣ ಸಿದ್ಧಾಂತ :** ಆಧುನಿಕ ಗಣಿತದಲ್ಲಿ ಅತ್ಯಂತ ಮುಖ್ಯವೂ ಮೂಲಭೂತವೂ ಆದ ಪರಿಕಲ್ಪನೆ (ಸೆಟ್ ಥಿಯೊರಿ). ಗಣವೆಂದರೆ ನಿರ್ದಿಷ್ಟವಾದ ವಸ್ತುಗಳ ಅಥವಾ ಪರಿಕಲ್ಪನೆಗಳ ಒಂದು ಸಮೂಹ ಅಥವಾ ಗುಂಪು ಎಂದು ತಿಳಿಯಬೇಕು. ಗಣದ ಪರಿಕಲ್ಪನೆ ಮೂಲಭೂತವಾಗಿರುವುದರಿಂದ ಇದನ್ನು ಇನ್ನೂ ಸುಲಭವಾದ ಬೇರೆ ಮಾತುಗಳಿಂದ ವರ್ಣಿಸುವುದು ಅಸಾಧ್ಯ. ಏಕೆಂದರೆ ಗಣವನ್ನು ಸಮೂಹ ಎಂದೂ, ಸಮೂಹವನ್ನು ಸಮುಚ್ಚಯ ಎಂದೂ ಮುಂತಾಗಿ ವ್ಯಾಖ್ಯಾನಿಸುತ್ತ ಸಾಗಿದರೆ ನಮ್ಮ ಶಬ್ದಭಂಡಾರ ಎಷ್ಟು ವಿಪುಲವಾಗಿದ್ದರೂ ಸಾಂತವಾಗಿರುವುದರಿಂದ ಯಾವುದೋ ಒಂದು ಘಟ್ಟದಲ್ಲಿ ಗಣ ಎಂಬ ಪದವನ್ನೇ ಮತ್ತೆ ಬಳಸಬೇಕಾಗುತ್ತದೆ. ಆದ್ದರಿಂದ ಈ ಶಬ್ದವನ್ನು ನಿಖರವಾಗಿ ವ್ಯಾಖ್ಯಿಸುವ ಪ್ರಯತ್ನ ಮೇಲೆ ಹೇಳಿದ ಪದ ಪರಂಪರೆಯಲ್ಲಿ ನಮ್ಮನ್ನು ಚಕ್ರೀಯವಾಗಿ ಒಯ್ಯುತ್ತದೆಯೇ ವಿನಾ ನಿಖರವಾದ ವ್ಯಾಖ್ಯೆಯನ್ನು ನೀಡುವುದರಲ್ಲಿ ಕೊನೆಗೊಳ್ಳುವುದಿಲ್ಲ. ಹೀಗಾಗಿ ಇದರ ಅರ್ಥವನ್ನು ನಮ್ಮ ನಿತ್ಯ ಜೀವನದ ಅನುಭವದ ಆಧಾರದ ಮೇಲೆ ಪ್ರತಿಭಾನದಿಂದಲೇ ಅರಿತುಕೊಳ್ಳಬೇಕು.

ಗಣವೆಂದರೆ ನಮ್ಮ ಪ್ರತಿಭಾನಕ್ಕೆ ಅಥವಾ ಮನಸ್ಸಿಗೆ ತೋರುವ ಪರಸ್ಪರ ವಿಶಿಷ್ಟವಾದ ವಸ್ತುಗಳ ಇಲ್ಲವೇ ಅಂಶಗಳ ಸಮೂಹ ಅಥವಾ ಸಮಾಹಾರವೆಂದು ತಿಳಿಯತಕ್ಕದ್ದು ಎಂದು ಜಾರ್ಜ್ ಕ್ಯಾಂಟರ್ (**ನೋಡಿ– ಕ್ಯಾಂಟರ್, ಜಾರ್ಜ್**) ಹೇಳಿದ್ದಾನೆ. ಈತನನ್ನೇ ಗಣಸಿದ್ಧಾಂತದ ಜನಕ ಎಂದು ಭಾವಿಸುವುದು ವಾಡಿಕೆ. ಒಂದು ಗಣದೊಳಗಿನ ವಸ್ತು ಅಥವಾ ಅಂಶಗಳಿಗೆ ಆ ಗಣದ ಧಾತುಗಳು (ಎಲಿಮೆಂಟ್ಸ್) ಎಂದು ಹೆಸರು. ಒಂದು ಗಣದಲ್ಲಿ ಇರಬಹುದಾದ ಧಾತುಗಳಿಗೆ ಇನ್ನು ಯಾವ ವಿಧವಾದ ನಿರ್ಬಂಧಗಳೂ ಇರುವುದಿಲ್ಲ. ಉದಾಹರಣೆಗೆ,

$A$ = {ಭಾರತದ ಎಲ್ಲ ಪ್ರಜೆಗಳ ಸಮೂಹ}

ಇದೊಂದು ಗಣ. ಒಂದು ಗಣದಲ್ಲಿರುವ ಎಲ್ಲ ಧಾತುಗಳನ್ನು ಪುಷ್ಪಾವರಣಗಳ ಒಳಗೆ ಬರೆಯುವುದು ವಾಡಿಕೆ. ಗಣಗಳಿಗೆ ಇನ್ನೂ ಕೆಲವು ಉದಾಹರಣೆಗಳನ್ನು ಮುಂದೆ ಬರೆದಿದೆ:

$B$ = { ಒಬ್ಬ ಹುಡುಗನ ಜೇಬಿನಲ್ಲಿರುವ ವಸ್ತುಗಳು}

$N$ = { 1, 2, 3, .....ನೈಸರ್ಗಿಕ ಸಂಖ್ಯೆಗಳು }

$T$ = { ದತ್ತ ಸಮತಲದಲ್ಲಿರುವ ಎಲ್ಲ ತ್ರಿಭುಜಗಳು }

ಸಾಧಾರಣವಾಗಿ ಗಣಗಳನ್ನು $A, B, C$ ಮುಂತಾದ ಇಂಗ್ಲಿಷ್ ದೊಡ್ಡ ಅಕ್ಷರಗಳಿಂದಲೂ ಧಾತುಗಳನ್ನು $a, b, c, x, y, z$ ಮುಂತಾದ ಇಂಗ್ಲಿಷ್‌ನ ಸಣ್ಣ ಅಕ್ಷರಗಳಿಂದಲೂ ಸೂಚಿಸುವುದು ವಾಡಿಕೆ. $A$ ಒಂದು ಗಣವೂ $a$ ಅದರ ಒಂದು ಧಾತುವೂ ಆಗಿದ್ದರೆ ಈ ಸಂಬಂಧವನ್ನು $a \in A$ ಎಂದು ಬರೆದು ತಿಳಿಸುತ್ತೇವೆ. ಇದನ್ನು $a$, $A$ಗೆ ಸೇರಿದೆ ಎಂದು ಓದುತ್ತೇವೆ. $p$, $A$ಯ ಧಾತುವಲ್ಲದಿದ್ದಾಗ $p \notin A$ ಎಂದು ಬರೆಯುತ್ತೇವೆ; ಮತ್ತು $p$, $A$ ಗೆ ಸೇರಿಲ್ಲ ಎಂದು ಓದುತ್ತೇವೆ.

ಒಂದು ಗಣವನ್ನು ಸೂಚಿಸಬೇಕಾದರೆ ಅದರ ಎಲ್ಲ ಧಾತುಗಳನ್ನೂ ಬರೆದು ಪುಷ್ಪಾವರಣಗಳಲ್ಲಿ, ಅಂದರೆ { }, ಅವನ್ನು ಅಡಕಗೊಳಿಸುವುದು ಒಂದು ಮಾರ್ಗ. ಉದಾಹರಣೆಗೆ { ಸೀಸದ ಕಡ್ಡಿ, ಬಳಪ, ಬುಗುರಿ, ಗೋಲಿ} ಎಂದು ಬರೆದು ಒಬ್ಬ ಹುಡುಗನ ಕಿಸೆಯಲ್ಲಿರಬಹುದಾದ ವಸ್ತುಗಳ ಗಣವನ್ನು ಸೂಚಿಸಬಹುದು. ಆದರೆ ಒಂದು ಗಣದಲ್ಲಿರುವ ಧಾತುಗಳ ಸಂಖ್ಯೆ ಬಲು ದೊಡ್ಡದು ಇಲ್ಲವೇ ಅನಂತವಾದಾಗ ಹೀಗೆ ಬರೆಯುವುದು ಕಷ್ಟಸಾಧ್ಯ. ಇದಕ್ಕೆ ಬದಲು ಅನುಕೂಲವಾದ ಬೇರೊಂದು ಮಾರ್ಗವನ್ನು ಅನುಸರಿಸುತ್ತೇವೆ. ಉದಾಹರಣೆಗೆ ಭಾರತದ ಸಮಸ್ತ ಪ್ರಜೆಗಳ ಗಣ $A$ ಯನ್ನು

$A$={ $x$ | $x$ ಭಾರತದ ಪ್ರಜೆಯಾಗಿರಬೇಕು }

ಎಂದು ಬರೆದು ಸೂಚಿಸಬಹುದು. ಇಲ್ಲಿ $x$ ಎಂಬ ಅಜ್ಞಾತ ಭಾರತದ ಪ್ರತಿಯೊಬ್ಬ ಪ್ರಜೆಗೂ ಅನ್ವಯಿಸುತ್ತದೆ. ಅದರ ಪಕ್ಕದಲ್ಲಿ ನೀಟಗೆರೆಯೊಂದನ್ನು ಎಳೆದು, ಅದರ ಬಲಪಾರ್ಶ್ವದಲ್ಲಿ $x$ ಪಾಲಿಸಬೇಕಾದ ನಿಯಮ ಅಥವಾ ನಿರ್ಬಂಧವನ್ನು ತಿಳಿಸುವ ವಾಕ್ಯವನ್ನು ಬರೆಯುತ್ತೇವೆ. ಈ ವಾಕ್ಯ $A$ ಗೆ ಸೇರಿದ ಧಾತುಗಳನ್ನು ಇನ್ನಿತರ ಎಲ್ಲವುಗಳಿಂದ ಬೇರ್ಪಡಿಸುತ್ತದೆ. ಉದಾಹರಣೆಗೆ $y$ ಒಬ್ಬ ಬ್ರಿಟಿಷ್ ಪ್ರಜೆಯಾದರೆ $y \notin A$. ಈ ರೀತಿ ಪ್ರತಿಯೊಂದು ಗಣವನ್ನು ನಿರ್ದಿಷ್ಟವಾಗಿ ನಿರೂಪಿಸಲು ಸಾಧ್ಯವೆಂಬುದು ಗಣಸಿದ್ಧಾಂತದ ಒಂದು ಮುಖ್ಯ ತತ್ತ್ವ. ಇದಕ್ಕೆ ನಿರ್ದಿಷ್ಟೀಕರಣ ಆದ್ಯುಕ್ತಿ (ಆ್ಯಕ್ಸಿಯಂ ಆಫ್ ಸ್ಪೆಸಿಫಿಕೇಷನ್) ಎಂದು ಹೆಸರು. ಇದನ್ನು ನಿಖರವಾಗಿ ಹೀಗೆ ಬರೆಯಬಹುದು : $A$ ಒಂದು ಗಣವೂ $S(x)$ ಒಂದು ನಿರ್ಬಂಧವೂ ಆಗಿದ್ದರೆ $S(x)$ ನ್ನು ಪಾಲಿಸುವ $A$ ಯ ಧಾತುಗಳಿಂದಲೇ ಏರ್ಪಟ್ಟ ಒಂದು ಗಣ $B$ ಯು $A$ ಮತ್ತು $S(x)$ ಗಳಿಗೆ ಅನ್ವಯಿಸುತ್ತದೆ. ಪ್ರತೀಕಗಳಲ್ಲಿ ಇದನ್ನು

$$B = \{ x \mid x \in A,\ S(x) \}$$

ಎಂದು ಸೂಚಿಸಬಹುದು. ಉದಾಹರಣೆಗೆ

$A = N = \{1, 2, 3 \ldots\ldots\}$

ಎಂಬುದು ನೈಸರ್ಗಿಕ ಸಂಖ್ಯೆಗಳ ಗಣವೂ $S(x)$ ಎಂಬುದು $x$ ಮೂರರ ಒಂದು ಅಪವರ್ತ್ಯ ಎಂಬ ನಿರ್ಬಂಧವೂ ಆಗಿದ್ದರೆ ಆಗ

$B = \{x \in N \mid S(x)\}$

$= \{x \in N \mid x = 3n,\ n \in N\}$

$= \{3, 6, 9 \ldots\ldots\}$

ಎಂಬ ಗಣ ಆಗುತ್ತದೆ.

**ಉಪಗಣಗಳು :** $A$ ಮತ್ತು $S$ಗಳು ಎರಡು ಗಣಗಳಾಗಿದ್ದು $A$ ಯ ಪ್ರತಿಯೊಂದು ಧಾತುವೂ $S$ ಗೆ ಸೇರಿದ್ದರೆ ಎಂದರೆ $x \in S$ ಎಂಬ ಸಂಬಂಧ ನಿಲ್ಲುವುದಾದರೆ ಆಗ $A$ ಯು $S$ ನ ಒಂದು ಉಪಗಣವೆಂದು ಹೇಳುತ್ತೇವೆ. ಇದನ್ನು $A \in S$ ಎಂದು ಬರೆಯುತ್ತೇವೆ; ಮತ್ತು $A$ ಯು $S$ ನಲ್ಲಿ (ಉಪಗಣವಾಗಿ) ಇದೆ ಎಂದು ಈ ಚಿಹ್ನೆಯನ್ನು ಓದುತ್ತೇವೆ.

ಉದಾಹರಣೆಗಳು:

1. $A \subset A$ ಎಂಬ ಸಂಗತಿ ವ್ಯಾಖ್ಯೆಯಿಂದಲೇ ಸ್ಪಷ್ಟ.

2. $E = \{ 2, 4, 6, \ldots.\}$ ಎಂಬ ಸರಿಸಂಖ್ಯೆಗಳ ಗಣ.

$N = \{1, 2, 3 \ldots\ldots\}$ ಎಂಬ ನೈಸರ್ಗಿಕ ಸಂಖ್ಯೆಗಳ ಗಣದ ಒಂದು ಉಪಗಣ.

$F = \{1, 3, 5 \ldots\ldots\}$ ಎಂಬ ಬೆಸ ಸಂಖ್ಯೆಗಳ ಗಣವೂ $N$ನ ಒಂದು ಉಪಗಣ. ಎಂದರೆ $E \subset N$ ಮತ್ತು $F \subset N$.

1 $p$ ಒಂದು ದತ್ತ ಸಮತಲ

$T_2$ = { $p$ ಯಲ್ಲಿರುವ ಎಲ್ಲ ಸಮದ್ವಿಭುಜ ತ್ರಿಭುಜಗಳು }, ಮತ್ತು

$T$ = { $p$ ಯಲ್ಲಿರುವ ಎಲ್ಲ ತ್ರಿಭುಜಗಳು }

ಆಗಿದ್ದರೆ ಆಗ $T_2$ $T$.

$A$ ಯು $S$ ನ ಒಂದು ಉಪಗಣವಾಗಿದ್ದರೆ ಆಗ $S$ ಗಣ $A$ ಯನ್ನು ಉಪಗಣವಾಗಿ ಒಳಗೊಂಡಿದೆ ಎಂದು ಹೇಳುತ್ತೇವೆ; ಮತ್ತು ಈ ಸಂಬಂಧವನ್ನು $S \supset A$ ಎಂಬ ಪ್ರತೀಕದಿಂದ ನಿರೂಪಿಸುತ್ತೇವೆ. $S$ ಗೆ $A$ ಯ ಮಾತೃಗಣ ಎಂದು ಹೆಸರು. ಈಗ $\subset$ ಮತ್ತು $\supset$ ಪ್ರತೀಕಗಳನ್ನು ಪರಸ್ಪರ ವಿಲೋಮವಾದ ಅರ್ಥಗಳಲ್ಲಿ ಉಪಯೋಗಿಸುತ್ತೇವೆ.

ಸಮತೆ: ಒಂದೇ ಧಾತುಗಳನ್ನು ಒಳಗೊಂಡ ಎರಡು ಗಣಗಳು ಪರಸ್ಪರ ಸಮ ಎನ್ನುತ್ತೇವೆ. ಈ ವ್ಯಾಖ್ಯೆಗೆ ಗಣಸಿದ್ಧಾಂತದ ವಿಸ್ತರಣದ ಆದ್ಯುಕ್ತಿ (ಆ್ಯಕ್ಸಿಯಂ ಆಫ್ ಎಕ್ಸ್‌ಟೆನ್ಷನ್) ಎಂದು ಹೆಸರು. $A$ ಮತ್ತು $B$ ಗಳು ಪರಸ್ಪರ ಸಮವಾಗಿದ್ದರೆ $A = B$ ಎಂದು ಬರೆಯುತ್ತೇವೆ. ಈಗ $A$ ಯ ಧಾತುಗಳೆಲ್ಲ $B$ ಯಲ್ಲೂ $B$ ಯ ಧಾತುಗಳೆಲ್ಲ $A$ ಯಲ್ಲೂ ಇರುವುದರಿಂದ $A \subset B$ ಮತ್ತು $B \subset A$; ಮತ್ತು ಹೀಗಿರುವಾಗಲೆಲ್ಲ $A = B$.

ಹೀಗಾಗಿ $A \subset B$ ಮತ್ತು $B \subset A$ ಆದಾಗ ಮತ್ತು ಆದಾಗ ಮಾತ್ರ $A = B$ ಇದನ್ನು ಪ್ರತೀಕಗಳಲ್ಲಿ

$A \subset B$ ಮತ್ತು $B \subset A \Leftarrow \Rightarrow A = B$ ಎಂದು ಬರೆಯುತ್ತೇವೆ.

$S$ ಒಂದು ಗಣವೂ $A, B, C$ಗಳು ಅದರ ಕೆಲವು ಉಪಗಣಗಳೂ ಆಗಿರಲಿ. ಈಗ $A \subset B$ ಮತ್ತು $B \subset C$ ಆಗಿದ್ದರೆ $A$ ಯ ಎಲ್ಲ ಧಾತುಗಳು $B$ ಯಲ್ಲೂ $B$ ಯ ಎಲ್ಲ ಧಾತುಗಳು $C$ ಯಲ್ಲೂ ಇರುವುದರಿಂದ $A$ ಯ ಎಲ್ಲ ಧಾತುಗಳು $C$ ಯಲ್ಲಿ ಇರುತ್ತವೆ. ಆದ್ದರಿಂದ $A \subset C$. ಇದನ್ನು ಪ್ರತೀಕಗಳಲ್ಲಿ $A \subset B$ ಮತ್ತು $B \subset C \Rightarrow A \subset C$ ಎಂದು ಬರೆಯುತ್ತೇವೆ. ಹೀಗಾಗಿ $S$ನಲ್ಲಿರುವ ಉಪಗಣಗಳ $\subset$ ಮತ್ತು $\supset$ ಸಂಬಂಧಗಳು ಮುಂದೆ ಹೇಳಿರುವ ನಿಯಮಗಳನ್ನು ಪಾಲಿಸುತ್ತವೆ:

1. ಪ್ರತಿಫಲನ ನಿಯಮ $A \subset A$
2. $A \subset B$ ಮತ್ತು $B \subset C \Leftrightarrow A \subset C$ (ವಾಹಕ ನಿಯಮ)
3. $A \subset B \Leftarrow \Rightarrow B \supset C$ (ವಿರೋಧ ಸಮಾಂಗತೆಯ ನಿಯಮ)

ಸಂಯೋಗ : $A$ ಮತ್ತು $B$ಗಳು ಎರಡು ಗಣಗಳಾಗಿದ್ದರೆ ಇವೆರಡರಲ್ಲಿರುವ ಎಲ್ಲ ಧಾತುಗಳನ್ನೂ ಸೇರಿಸಿ ಒಂದು ಗಣವನ್ನು ರಚಿಸಬೇಕೆಂಬ ಅಭಿಲಾಷೆ ಸ್ವಾಭಾವಿಕವಾಗಿಯೇ ಮೂಡುತ್ತದೆ. ಇಂಥ ಒಂದು ದೊಡ್ಡ ಗಣದಲ್ಲಿ $A$ ಮತ್ತು $B$ ಗಳೆರಡೂ ಉಪಗಣಗಳಾಗಿರುತ್ತವೆ. ಈಗ ಇದರಲ್ಲಿರುವ ಪ್ರತಿಯೊಂದು ಧಾತುವೂ $A$ ಮತ್ತು $B$ ಗಳಲ್ಲಿ ಒಂದಕ್ಕಾದರೂ ಸೇರಿಸಬೇಕಾಗುತ್ತದೆ. ಈ ಅಭಿಪ್ರಾಯವನ್ನು ಸಾರ್ವತ್ರೀಕರಿಸುವ ತತ್ತ್ವಕ್ಕೆ ಸಂಯೋಗದ ಆದ್ಯುಕ್ತಿ (ಆ್ಯಕ್ಸಿಯಂ ಆಫ್ ಯೂನಿಯನ್) ಎಂದು ಹೆಸರು. ಇದನ್ನು ಅನುಸರಿಸಿದರೆ $A$ ಯಲ್ಲಿರುವ ಎಲ್ಲ ಧಾತುಗಳನ್ನೂ $B$ ಯಲ್ಲಿರುವ ಎಲ್ಲ ಧಾತುಗಳನ್ನೂ ಒಳಗೊಂಡಿರುವ ಒಂದು ಗಣ ಲಭಿಸುತ್ತದೆ. ಈ ಗಣದಲ್ಲಿ $A$ ಮತ್ತು $B$ ಗಳಲ್ಲಿ ಉಭಯಸಾಮಾನ್ಯವಾಗಿರುವ ಧಾತುಗಳನ್ನು ಒಂದು ಸಲ ಮಾತ್ರ ಆಯ್ದಿರುತ್ತೇವೆ. ಹೀಗೆ ಉಂಟಾದ ಹೊಸ ಗಣಕ್ಕೆ $A$ ಮತ್ತು $B$ ಗಳ ಸಂಯೋಗ (ಯೂನಿಯನ್) ಎಂದು ಹೆಸರು. ಪ್ರತೀಕಗಳಲ್ಲಿ $A \cup B$ ಎಂದು ಬರೆದು $A$ ಸಂಯೋಗ $B$ ಎಂದು ಓದುತ್ತೇವೆ. ಈಗ $A \cup B = \{x \mid x \in A$ ಅಥವಾ $x$ $B\}$ ಎಂದು ನಿಖರವಾಗಿಯೂ ಸಂಕ್ಷೇಪವಾಗಿಯೂ ಬರೆಯಬಹುದು.

ಈಗ $\Sigma$ ಎಂಬುದು $A, B, C$ ಮುಂತಾದ ಗಣಗಳ ಒಂದು ಸಮೂಹವಾದರೆ ಕನಿಷ್ಠ ಪಕ್ಷ ಈ ಗಣಗಳಲ್ಲಿ ಒಂದಕ್ಕಾದರೂ ಸೇರಿರುವಂಥ ಎಲ್ಲ ಧಾತುಗಳಿಂದಲೇ ಏರ್ಪಟ್ಟ ಒಂದು ಗಣವಿರುತ್ತದೆ ಎಂದು ಸಂಯೋಗದ ಆದ್ಯುಕ್ತಿ ಹೇಳುತ್ತದೆ.

ಇದನ್ನು ಸೂತ್ರ $\overline{x \in \Sigma}$ ಎಂದು ನಿರೂಪಿಸುತ್ತೇವೆ.

ಉದಾಹರಣೆ: 1 $A = \{ a, b, c, d, k \}$ ಮತ್ತು

$B = \{ b, c, e, f, k \}$ ಆಗಿದ್ದರೆ ಆಗ

$A \cup B = \{ a, b, c, d, e, f, k \}$

2 $T$ = ದತ್ತ ಸಮತಲದಲ್ಲಿರುವ ಎಲ್ಲ ಆಯತಗಳ ಗಣ, $S$ = ಅದರಲ್ಲಿರುವ ಎಲ್ಲ ಚೌಕಗಳ ಗಣ ಆಗಿದ್ದರೆ ಆಗ $T \cup S = T$. ಇಲ್ಲಿ $S \subset T$ ಎಂಬುದನ್ನು ಗಮನಿಸಬೇಕು.

3 $E$ = ಎಲ್ಲ ಸರಿಸಂಖ್ಯೆಗಳ ಗಣ

$F$ = ಎಲ್ಲ ಬೆಸ ಸಂಖ್ಯೆಗಳ ಗಣ ಆಗಿದ್ದರೆ ಆಗ $E \cup F = N$. ಇಲ್ಲಿ $N$ ಎಲ್ಲ ನೈಸರ್ಗಿಕ ಸಂಖ್ಯೆಗಳ ಗಣ.

ಛೇದನ : ಈಗ $A, B$ ಗಳು ಎರಡು ಗಣಗಳಾಗಿದ್ದರೆ ಅವೆರಡಕ್ಕೂ ಉಭಯ ಸಾಮಾನ್ಯವಾಗಿರುವ ಧಾತುಗಳನ್ನೆಲ್ಲ ಸೇರಿಸಿ ಒಂದು ಗಣವನ್ನು ರಚಿಸಬಹುದು. ಈ ಗಣವನ್ನು $A$ ಮತ್ತು $B$ ಗಳ ಛೇದನವೆಂದು ಕರೆಯುತ್ತೇವೆ; ಮತ್ತು $A \cap B$ ಎಂದು ಬರೆಯುತ್ತೇವೆ.

ಉದಾಹರಣೆ : 1 $A = \{a, b, c, d, k, \}$ ಮತ್ತು

$B = \{b, c, f, k\}$ ಆಗಿದ್ದರೆ ಆಗ

$A \cap B = \{ b, c, k \}$

2 $T$ = ದತ್ತ ಸಮತಲದಲ್ಲಿರುವ ಎಲ್ಲ ಆಯತಗಳ ಗಣ, $S$ = ಅದೇ ಸಮತಲದಲ್ಲಿರುವ ಎಲ್ಲ ಚೌಕಗಳ ಗಣ ಆಗಿದ್ದರೆ ಆಗ $T \cap S = S$. $S \subset T$ ಎಂಬುದನ್ನು ಗಮನಿಸಬೇಕು.

3 $E$ = ಎಲ್ಲ ಸರಿಸಂಖ್ಯೆಗಳ ಗಣ ಮತ್ತು

$F$ = ಎಲ್ಲ ಬೆಸಸಂಖ್ಯೆಗಳ ಗಣ ಆಗಿದ್ದರೆ ಆಗ $E \cap F$ನಲ್ಲಿ ಯಾವ ಧಾತುವೂ ಇಲ್ಲ. ಏಕೆಂದರೆ ಪ್ರತಿ ನೈಸರ್ಗಿಕ ಸಂಖ್ಯೆಯೂ ಸರಿ ಇಲ್ಲವೇ ಬೆಸ ಆಗಿರುತ್ತದೆ. ಹೀಗಾಗಿ $E$ ಮತ್ತು $F$ ಗಳಿಗೆ ಉಭಯಸಾಮಾನ್ಯವಾದ ಯಾವ ಒಂದು ಸಂಖ್ಯೆಯೂ ಇಲ್ಲ. ಈ ವಿಶೇಷ ಪರಿಸ್ಥಿತಿಯಲ್ಲೂ $E \cap F$ನ್ನು ಒಂದು ಗಣವಾಗಿ ಪರಿಗಣಿಸುತ್ತೇವೆ. ಇದಕ್ಕೆ ಶೂನ್ಯ ಗಣವೆಂದು ಹೆಸರು. ಇದನ್ನು $\phi$ ಎಂಬ ಚಿಹ್ನೆಯಿಂದ ನಿರೂಪಿಸುತ್ತೇವೆ.

4 ಹೀಗೆಯೇ $T$ ಎಂಬುದು ದತ್ತ ಸಮತಲದಲ್ಲಿರುವ ಎಲ್ಲ ತ್ರಿಕೋನಗಳ ಗಣವೂ $Q$ ಎಂಬುದು ಅದೇ ಸಮತಲದಲ್ಲಿರುವ ಎಲ್ಲ ಚತುಷ್ಕೋನಗಳ ಗಣವೂ ಆಗಿದ್ದರೆ ಆಗ $T \cap Q = \phi$

ಈ ಶೂನ್ಯಗಣ ಪ್ರತಿಯೊಂದು ಗಣಕ್ಕೂ ಒಂದು ಉಪಗಣವಾಗಿದೆಯೆಂದು ಭಾವಿಸುತ್ತೇವೆ. $A$ ಒಂದು ಗಣವಾಗಿದ್ದರೆ $A \cap \phi = A$ ಮತ್ತು $A \cap \phi = \phi$ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

$A \cap B = \phi$ ಆಗಿದ್ದರೆ ಆಗ $A$ ಮತ್ತು $B$ ಗಳನ್ನು ವಿಯೋಜಿತ ಗಣಗಳೆಂದು ಹೇಳುತ್ತೇವೆ.

ವಿಶ್ವಗಣ : ಯವುದೇ ಗಣಿತ ವಿಚಾರಸರಣಿಯಲ್ಲಿ ಬರುವ ಎಲ್ಲ ಗಣಗಳೂ ಯಾವುದೋ ಒಂದು ಗಣ $S$ ನ ಉಪಗಣಗಳಾಗಿದ್ದರೆ ಈ ವಿಚಾರಸರಣಿಯಲ್ಲಿ $S$ ನ್ನು ವಿಶ್ವಗಣವೆಂದು (ಯೂನಿವರ್ಸಲ್ ಸೆಟ್) ಕರೆಯುತ್ತೇವೆ. ಈಗ $A \subset S$ ಮತ್ತು $B \subset S$ ಆಗಿದ್ದರೆ ಆಗ $A \cup B \subset S$ ಮತ್ತು $A \cap B \subset S$. ಈ ವಿಶ್ವಗಣ $S$ ನೊಂದಿಗೆ ಅದರ ಯಾವ ಉಪಗಣ $A$ ಯನ್ನೂ ಸಂಯೋಗ ಮತ್ತು ಛೇದನ ಮಾಡಬಹುದು.

ಇಲ್ಲಿ $S \cup A = S$ ಮತ್ತು $S \cap A = A$ ಎಂದು ಸುಲಭವಾಗಿ ತೋರಿಬರುತ್ತದೆ.

**ಆಯ್ಲರ್–ವೆನ್ ಚಿತ್ರಗಳು:** ಜ್ಯಾಮಿತೀಯ ರೀತಿಯಲ್ಲಿ ಗಣಗಳನ್ನೂ ಅವುಗಳ ಸಂಯೋಗ, ಛೇದನ ಇತ್ಯಾದಿ ಸಂಬಂಧಗಳನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಗಳ ರೂಪದಲ್ಲಿ ತೋರಿಸುವುದು ವಾಡಿಕೆ. ಇಂಥ ಚಿತ್ರಗಳಿಗೆ ಆಯ್ಲರ್ ಚಿತ್ರಗಳು ಅಥವಾ ವೆನ್ ಚಿತ್ರಗಳು ಎಂದು ಹೆಸರು. ಸಾಮಾನ್ಯವಾಗಿ ವಿಶ್ವಗಣವನ್ನು ಒಂದು ದೊಡ್ಡ ಆಯತ ಪ್ರತಿನಿಧಿಸುವಂತೆಯೂ ಅದರ ಉಪಗಣಗಳನ್ನು ಆಯತದ ಒಳಗಿನ ವೃತ್ತಗಳು ಪ್ರತಿನಿಧಿಸುವಂತೆಯೂ ಚಿತ್ರಿಸುವುದು ವಾಡಿಕೆ.




ಚಿತ್ರ 1




ಚಿತ್ರ 2

ಇಲ್ಲಿ ತೋರಿಸಿರುವ ಚಿತ್ರಗಳಲ್ಲಿ $S$ ವಿಶ್ವಗಣ, $A$ ಮತ್ತು $B$ ಅದರ ಎರಡು ಉಪಗಣಗಳು; ಎಂದರೆ $A \subset S, B \subset S$. ಚಿತ್ರ (1) ರಲ್ಲಿ $A \cup B$ ಯನ್ನು $A$ ಮತ್ತು $B$ ಎರಡನ್ನೂ ನಿರೂಪಿಸುವ ವೃತ್ತಗಳ ಭಾಗಗಳಿಂದ ಆವೃತವಾಗಿರುವ ಭಾಗ ತೋರಿಸುತ್ತದೆ; ಚಿತ್ರದಲ್ಲಿ ಇದನ್ನು ಓರೆಗಳಿಂದ ಗುರುತಿಸಿದೆ. ಹಾಗೆಯೇ ಚಿತ್ರ 2 ರಲ್ಲಿ $A \cap B$ ಯನ್ನು ಕ್ಷಿತಿಜೀಯ ಗೆರೆಗಳು ತುಂಬಿರುವ ಭಾಗ ತೋರಿಸುತ್ತದೆ.

ಸಂಯೋಗ ಮತ್ತು ಛೇದನಗಳ ಮುಖ್ಯ ಸಂಬಂಧಗಳು : ಸಂಯೋಗ ಮತ್ತು ಛೇದನಗಳು ಪಾಲಿಸುವ ಮುಖ್ಯ ನಿಯಮಗಳನ್ನು ಇಲ್ಲಿ ಕ್ರೋಡೀಕರಿಸಿದೆ. ಸಂಯೋಗ:

1. $A \cup \phi = A$
2. $A \cup B = B \cup A$ (ವ್ಯತ್ಯಯ ನಿಯಮ)
3. $A \cup (B \cup C) = (A \cup B) \cup C$ (ಸಾಹಚರ್ಯ ನಿಯಮ)
4. $A \cup A = A$ (ವರ್ಗಸಮ ನಿಯಮ – ಐಡೆಂಪೋಟೆಂಟ್ ಲಾ)
5. $A \subset B \Leftarrow \Rightarrow A \cup B = B$

ಛೇದನ:

1 $A \cap \phi = \phi$

2 $A \cap B = B \cap A$ (ವ್ಯತ್ಯಯ ನಿಯಮ)

3 $A \cap (B \cap C) = (A \cap B) \cap C$ (ಸಾಹಚರ್ಯ ನಿಯಮ)

4 $A \cap A = A$ (ವರ್ಗಸಮ ನಿಯಮ)

5 $A \subset B \Leftarrow \Rightarrow A \cap B = A$

ವಿತರಣ ನಿಯಮಗಳು : ಸಂಯೋಗ ಮತ್ತು ಛೇದನ ಕ್ರಿಯೆಗಳು ಪರಸ್ಪರವಾಗಿ ವಿತರಣ ನಿಯಮಗಳನ್ನು (ಡಿಸ್ಟ್ರಿಬ್ಯೂಟಿವ್ ಲಾಸ್) ಅನುಸರಿಸುತ್ತವೆ.

$A \cup (B \cap C) = (A \cup B) \cap (A \cup C)$

$A \cap (B \cup C) = (A \cap B) \cup (A \cap C)$

ಸೂಕ್ತವಾದ ವೆನ್ ಚಿತ್ರಗಳನ್ನು ರಚಿಸಿ ಮೇಲಿನ ಎಲ್ಲ ನಿಯಮಗಳನ್ನೂ ತಾಳೆ ನೋಡಬಹುದು.

**ಪೂರಕಗಳು (ಕಾಂಪ್ಲಿಮೆಂಟ್ಸ್) :** $A$ ಮತ್ತು $B$ಗಳು ಎರಡು ಗಣಗಳಾದರೆ $B$ ಯಲ್ಲಿದ್ದು $A$ ಯಲ್ಲಿಲ್ಲದ ಎಲ್ಲ ಧಾತುಗಳು ಒಂದು ಗಣವನ್ನು ಏರ್ಪಡಿಸುತ್ತವೆ. ಇದನ್ನು $B$ ಯಲ್ಲಿ $A$ ಯ ಪೂರಕ ಎಂದು ಕರೆಯುತ್ತೇವೆ ; ಮತ್ತು $B - A$ ಎಂದು ಬರೆಯುತ್ತೇವೆ.

$$B - A = \{x \in B \mid x \notin A\}$$




ಚಿತ್ರ 3

ಚಿತ್ರ (3) ರಲ್ಲಿ $B–A$ ಯನ್ನು ಓರೆಗೆರೆಗಳಿಂದ ತುಂಬಿಸಿರುವ ಭಾಗ ತೋರಿಸುತ್ತದೆ. ಅದೇ ಚಿತ್ರದಲ್ಲಿ $B - A = B - (A \cap B)$ ಎಂದು ಸುಲಭವಾಗಿ ತಿಳಿಯುವುದು.

ಈಗ $S$ ವಿಶ್ವಗಣವೂ $A$ ಅದರ ಒಂದು ಉಪಗಣವೂ ಆಗಿದ್ದರೆ $S$-$A$ ಯನ್ನು $S$ ನಲ್ಲಿ $A$ ಯ ಪೂರಕವೆಂದು ಹೇಳುವುದಕ್ಕೆ ಬದಲು ಸಂಕ್ಷೇಪವಾಗಿ $A$ ಯ ಪೂರಕವೆಂದು ºÉÃ¸ÁªÀÄ£ÀÁV EzÀ£ÀÄß $A'$ ಎಂಬ ಪ್ರತೀಕದಿಂದ ಸೂಚಿಸುತ್ತೇವೆ. ಪೂರಕಗಳು ಪಾಲಿಸುವ ಮೂಲ ಸಂಬಂಧಗಳನ್ನು ಇಲ್ಲಿ ಬರೆದಿದೆ.

1 $(A')' = A$

2 $\phi' = S$

3 $S' = \phi$

4 $A \cup A' = S$

5 $A \cap A' = \phi$

6 $A \subset B \Rightarrow B' \subset A'$

7 $(A \cup B)' = A' \cap B'$

8 $(A \cap B)' = A' \cup B'$

ಮೇಲಿನ ಪ್ರತಿಯೊಂದು ಸಂಬಂಧವನ್ನೂ ಆಯ್ಲರ್–ವೆನ್ ಚಿತ್ರಗಳ ಮೂಲಕ ಸುಲಭವಾಗಿ ತಿಳಿದುಕೊಳ್ಳಬಹುದು. ಕೊನೆಯ ಎರಡಕ್ಕೆ ಡಿಮಾರ್ಗನ್‌ನ ನಿಯಮಗಳೆಂದು ಹೆಸರು.

ಸಮಾಂಗ ವ್ಯತ್ಯಾಸ : $A$ ಮತ್ತು $B$ ಎರಡು ಗಣಗಳಾಗಿದ್ದರೆ $(A–B) \cup (B–A)$ ಗೆ $A$ ಮತ್ತು $B$ ಗಳ ಸಮಾಂಗ ವ್ಯತ್ಯಾಸವೆಂದು ಹೆಸರು. ಇದನ್ನು $A + B$ ಎಂದು ನಿರೂಪಿಸುತ್ತೇವೆ.

ಎಂದರೆ $A + B = (A–B) \cup (B–A)$ ............(1)

ಚಿತ್ರ (4) ರಲ್ಲಿ ಓರೆಗೆರೆ ತುಂಬಿರುವ ಭಾಗ ($A+B$) ಯನ್ನು ಸೂಚಿಸುತ್ತದೆ.

ಮೇಲಿನ ಸಮೀಕರಣ (1) ರ ಬಲಭಾಗ ದಲ್ಲಿ $A$ ಮತ್ತು $B$ ಗಳನ್ನು ಪರಸ್ಪರವಾಗಿ ಪರಿವರ್ತಿಸಿದರೆ ಸಮೀಕರಣ ಬದಲಾಗುವುದಿಲ್ಲ. ಎಂದರೆ $A + B = B + A$. ಈ ಕಾರಣದಿಂದ $A+B$ ಗೆ ಸಮಾಂಗ (ಸಿಮೆಟ್ರಿಕ್) ಎಂಬ ವಿಶ್ಲೇಷಣ ಚೆನ್ನಾಗಿ ಒಪ್ಪುತ್ತದೆ.

$A, B, C$ ಗಳು ಯಾವ ಮೂರು ಗಣಗಳಾದರೂ $(A + B) + C = A + (B + C)$, $A + \phi = A$ ಮತ್ತು $A + A = \phi$ ಎಂದು ಸುಲಭವಾಗಿ ತೋರಿಸಬಹುದು. ಹೀಗಾಗಿ + ಎಂಬ ದ್ವಿಗುಣ ಪರಿಕರ್ಮದಲ್ಲಿ $S$ ವಿಶ್ವಗಣದ ಎಲ್ಲ ಉಪಗಣಗಳೂ ಮುಂದೆ ಪಟ್ಟಿಮಾಡಿರುವ ನಿಯಮಗಳನ್ನು ಪಾಲಿಸುತ್ತವೆ. ಇದರಿಂದ $S$ ನ ಎಲ್ಲ ಉಪಗಣಗಳು ಒಂದು ವ್ಯತ್ಯಯ ಗ್ರೂಪ್ (ಕಾಮ್ಯುಟೇಟಿವ್ ಗ್ರೂಪ್) ಎಂದು ತೋರಿಬರುತ್ತದೆ. ಏಕೆಂದರೆ




ಚಿತ್ರ 4

1 $A, B \subset S$ ಆಗಿದ್ದರೆ ಆಗ $A + B \subset S$.

2 $(A + B) + C = A + (B + C)$ (ಸಾಹಚರ್ಯ ನಿಯಮ)

3 $A + B = B + A$ (ವ್ಯತ್ಯಯ ನಿಯಮ)

4 $A + \phi = A$ ಎಂದರೆ ಈ ಪರಿಕರ್ಮಕ್ಕೆ $\phi$ ಎಂಬುದೇ ಏಕಾಂಶ

5 $A + A = \phi$ ಎಂದರೆ ಪ್ರತಿಯೊಂದು $A$ಗೂ ಅದೇ ಗಣ ವ್ಯಸ್ತ (ಇನ್ವರ್ಸ್)

ಘಾತಗಣಗಳು : ಈ ವರೆಗೆ ದತ್ತಗಣ $S$ ನ ಎಲ್ಲ ಉಪಗಣಗಳನ್ನು ಕುರಿತು ಪ್ರಸ್ತಾವಿಸುತ್ತಿದ್ದೆವು. ಇವೆಲ್ಲ ಉಪಗಣಗಳನ್ನೂ ಧಾತುಗಳಾಗಿ ಪಡೆದಿರುವ ಒಂದು ಗಣವುಂಟೇ ಎಂಬ ಪ್ರಶ್ನೆಗೆ ಉತ್ತರ ಮುಂದೆ ಉಕ್ತವಾಗಿರುವ ಧಾತುಗಳ ಆದ್ಯುಕ್ತಿಯಲ್ಲಿ ಸಿಕ್ಕುತ್ತದೆ.

$S$ ಒಂದು ಗಣವಾಗಿದ್ದರೆ ಇದರ ಸಮಸ್ತ ಉಪಗಣಗಳನ್ನೂ ಒಳಗೊಂಡಿರುವ ಒಂದು ಗಣ ಉಂಟು. ಈಗ ಈ ಗಣದಲ್ಲಿ $S$ ನ ಉಪಗಣಗಳೇ ಅಲ್ಲದೆ ಇತರ ಧಾತುಗಳೂ ಇರುವುದಕ್ಕೆ ಅವಕಾಶವಿದೆ. ಈ ತೊಂದರೆಯನ್ನು ನಿವಾರಿಸಲು

$P(S) = \{X \mid X \subset S\}$

ಎಂದು ವಿಶಿಷ್ಟೀಕರಿಸಿದರೆ $P(S)$ ನಲ್ಲಿ $S$ ನ ಉಪಗಣಗಳು ಮಾತ್ರ ಧಾತುಗಳಾಗಿರುತ್ತವೆ. $P(S)$ ಗೆ $S$ ನ ಘಾತಗಣವೆಂದು ಹೆಸರು.

ಉದಾಹರಣೆ : $S = \{1, 2\}$ ಆಗಿದ್ದರೆ ಆಗ

$P(S) = \{\phi, \{1\}, \{2\}, \{1, 2\}\}$

ಹೀಗೆ $P(S)$ ನಲ್ಲಿ $2^2$ ಧಾತುಗಳಿವೆ. ಹೀಗೆಯೇ $S$ ನಲ್ಲಿ $n$ ಧಾತುಗಳಿದ್ದರೆ $P(S)$ ನಲ್ಲಿ $2^n$ ಧಾತುಗಳಿರುತ್ತವೆ. $S$ ಸಾಂತಗಣವಾಗಿದ್ದರೆ $p(s)$ ನಲ್ಲಿರುವ ಧಾತುಗಳ ಸಂಖ್ಯೆ 2ರ ಒಂದು ಘಾತ. ಇಂಥ ಗಣಗಳನ್ನು ಘಾತಗಣಗಳೆಂದು ಕರೆಯುವುದು ಈ ಕಾರಣದಿಂದ.

$E$ ಮತ್ತು $F$ ಗಳು ಯಾವ ಎರಡು ಗಣಗಳಾದರೂ

$P(E) \cap P(F) = P(E \cap F)$ ಮತ್ತು

$P(E) \cup P(F) \subset P(E \cup F)$ ಎಂಬ ಸಂಬಂಧಗಳು ದೊರೆಯುತ್ತವೆ.

**ಬೂಲಿಯನ್ ಬೀಜಗಣಿತ :** ದತ್ತಗಣ $S$ನ ಸಮಸ್ತ ಉಪಗಣಗಳ ಸಂಯೋಗ (U) ಮತ್ತು ಛೇದನ ($\cap$) ಪರಿಕರ್ಮಗಳಿಗೆ ಅನುಸಾರವಾಗಿ ಪಾಲಿಸುವ ಕೆಲವು ನಿಯಮಗಳನ್ನು ಅಮೂರ್ತೀಕರಿಸಿ ಅವುಗಳಿಂದ ದೊರೆಯುವ ಸಂಬಂಧಗಳನ್ನೇ ಆದ್ಯುಕ್ತಿಗಳಾಗಿ (ಪಾಸ್ಟ್ಯುಲೇಟ್ಸ್) ತೆಗೆದುಕೊಂಡು ಅವುಗಳ ಆಧಾರಗಳ ಮೇಲೆ ರಚಿತವಾಗಿರುವ ಗಣಿತಶಾಖೆಗೆ ಬೂಲಿಯನ್ ಬೀಜಗಣಿತವೆಂದು ಹೆಸರು. ತರ್ಕಶಾಸ್ತ್ರದಲ್ಲಿ ಬರುವ ವರ್ಗಸಿದ್ಧಾಂತದಲ್ಲಿ (ಥಿಯೊರಿ ಆಫ್ ಕ್ಲಾಸಸ್) ಬೀಜಗಣಿತದ ಸೂತ್ರಗಳನ್ನು ಅನ್ವಯಿಸಲು ಹೊರಟವರಲ್ಲಿ ಮೊದಲಿಗನಾದ ಜಾರ್ಜ್ ಬೂಲ್ (**ನೋಡಿ- ಬೂಲ್, ಜಾರ್ಜ್**) ಎಂಬ ಇಂಗ್ಲಿಷ್ ತರ್ಕ ಮತ್ತು ಗಣಿತಶಾಸ್ತ್ರಜ್ಞನ ಹೆಸರಿನಲ್ಲಿ ಈ ಬೀಜಗಣಿತ ಪ್ರಸಿದ್ಧವಾಗಿದೆ. ಬೂಲಿಯನ್ ಬೀಜಗಣಿತ ಗಣಿತಸಿದ್ಧಾಂತವೊಂದೇ ಅಲ್ಲದೆ ಇನ್ನೂ ಅನೇಕ ವಾಸ್ತವಿಕ ಸನ್ನಿವೇಶಗಳಲ್ಲಿ ಅರ್ಥಪೂರಿತವಾಗಿ ಅನ್ವಯವಾಗಿದೆ. $S$ ಒಂದು ವಿಶ್ವಗಣವೂ $P(S)$ ಇದರ ಘಾತಗಣವೂ ಆಗಿರಲಿ. ಈಗ $A, B, C$ ಗಳು $P(S)$ ಗೆ ಸೇರಿರುವ ಯಾವ ಧಾತುಗಳಾದರೂ ಸಂಯೋಗ ಮತ್ತು ಛೇದನ ಕ್ರಿಯೆಗಳಲ್ಲಿ ಅವು ಮುಂದೆ ಕಾಣಿಸಿರುವ ಸಂಬಂಧಗಳನ್ನು ಏರ್ಪಡಿಸುವುದನ್ನು ಹಿಂದೆಯೇ ನೋಡಿದ್ದೇವೆ.

1 $A \cup B = B \cup A$, $A \cap B = B \cap A$

2 $A \cup \phi = A$, $A \cap S = A$

3 $A \cup (B \cap C) = (A \cup B)\ (A \cup C)$

$A \cap (B \cup C) = (A \cap B) \cup (A \cap C)$

4 $A \cup A' = S$, $A \cap A' = \phi$

ಈಗ ಮೇಲಿನ ಪರಿಕಲ್ಪನೆಗಳನ್ನು ಅಮೂರ್ತೀಕರಿಸೋಣ.

$B$ ಒಂದು ಗಣವನ್ನೂ $V$ ಮತ್ತು $\Lambda$ ಎಂಬ ಚಿಹ್ನೆಗಳು $B$ ಯಲ್ಲಿ ವ್ಯಾಖ್ಯಿಸಿರುವ ಎರಡು ದ್ವಿಗುಣ ಪರಿಕರ್ಮಗಳನ್ನೂ ಸೂಚಿಸಲಿ. ಈ ಪರಿಕರ್ಮಗಳು $B$ ಗೆ ಸೇರಿದ ಎಲ್ಲ ಧಾತು **a, b, c....**ಗಳಿಗೂ ಮುಂದೆ ಹೇಳಿರುವ ಆದ್ಯುಕ್ತಿಗಳನ್ನು ಪಾಲಿಸುವಂತಿದ್ದರೆ $B(v, \Lambda)$ ಎಂಬ ವ್ಯವಸ್ಥೆಯನ್ನು (ಸಿಸ್ಟಂ) ಒಂದು ಬೂಲಿಯನ್ ಬೀಜಗಣಿತವೆಂದು ಕರೆಯುತ್ತೇವೆ.

1 ವ್ಯತ್ಯಯ ನಿಯಮ

$a V b = b V a$

$a \Lambda b = b \Lambda a$

2 $V$ ಎಂಬ ಪರಿಕರ್ಮಕ್ಕೆ $z$ ಎಂಬ ಒಂದು ಏಕಾಂಶವೂ $\Lambda$ ಎಂಬುದಕ್ಕೆ $u$ ಎಂಬ ಒಂದು ಏಕಾಂಶವೂ $B$ ಯಲ್ಲಿರುತ್ತವೆ. ಇವು ಪರಸ್ಪರ ಪ್ರತ್ಯೇಕ. ಎಂದರೆ

$a V Z = a$, $a \Lambda u = a$, $Z \neq u$

3 ಪ್ರತಿಯೊಂದು ಪರಿಕರ್ಮವೂ ಇನ್ನೊಂದರೊಂದಿಗೆ ವಿತರಣ ನಿಯಮವನ್ನು ಅನುಸರಿಸುತ್ತದೆ.

$a v (b \Lambda c) = (a v b) \Lambda (a v c)$

$a \Lambda (b v c) = (a \Lambda b) v (a \Lambda c)$

4 $B$ ಯ ಪ್ರತಿಯೊಂದು ಧಾತು a ಗೂ

$a v a' = u$ ಮತ್ತು $a \Lambda a' = z$ ಆಗುವಂತೆ $a'$ ಎಂಬ ಒಂದು ಧಾತು $B$ಯಲ್ಲಿರುತ್ತದೆ.

ಇಲ್ಲಿ ಹೇಳಿರುವ ಸನ್ನಿವೇಶಗಳು $P(S)$ ನ ಧಾತುಗಳಾದ $S$ ನ ಸಮಸ್ತ ಉಪಗಣಗಳು $U$ ಮತ್ತು $\cap$ ಪರಿಕರ್ಮಗಳಿಗೆ ಹೇಗೆ ಹೊಂದಿಕೊಂಡಿವೆ ಎಂಬುದನ್ನು ಗಮನಿಸಬೇಕು. $z$ ಮತ್ತು $u$ ಗಳು ಅನುಕ್ರಮವಾಗಿ $\phi$ ಮತ್ತು $s$ ಗಳಿಗೆ ಅನ್ವಯವಾಗುತ್ತವೆ. ಹೀಗೆ ಬೂಲಿಯನ್ ಬೀಜಗಣಿತದ ಆದ್ಯುಕ್ತಿಗಳಿಗೆ ಸರಿಹೊಂದುವ ಒಂದು ಮೂರ್ತ ಪ್ರತಿರೂಪ (ಕಾಂಕ್ರೀಟ್ ಮಾಡೆಲ್) ಇರುವುದರಿಂದ ಮೇಲಿನ ಆದ್ಯುಕ್ತಿಗಳ ಸಮೂಹ ಸಂಗತವಾಗಿದೆ.

ಬೂಲಿಯನ್ ಬೀಜಗಣಿತದ ಕೆಲವು ಮುಖ್ಯ ಗುಣಗಳು. ದ್ವೈತ ತತ್ತ್ವ (ಪ್ರಿನ್ಸಿಪಲ್ ಆಫ್ ಡ್ಯೂಆಲಿಟಿ): ಮೇಲಿನ ಆದ್ಯುಕ್ತಿಗಳಲ್ಲಿ ಉದ್ದಕ್ಕೂ $v$ ಮತ್ತು $\Lambda$ ಪರಿಕರ್ಮಗಳನ್ನೂ ಏಕಾಂಶಗಳಾದ $z$ ಮತ್ತು $u$ ಗಳನ್ನೂ ಪರಸ್ಪರವಾಗಿ ವ್ಯತ್ಯಯಿಸಿದರೆ ಪುನಃ ಇವೇ ಆದ್ಯುಕ್ತಿಗಳನ್ನು ಪಡೆಯುತ್ತೇವೆ. ಆದ್ದರಿಂದ ಈ ಕೆಳಗಿನ ಪ್ರಮೇಯಗಳು ದೊರೆಯುತ್ತವೆ.

1 ಬೂಲಿಯನ್ ಬೀಜಗಣಿತದ ಯಾವ ಪ್ರಮೇಯದಲ್ಲೇ ಆಗಲಿ $v$ ಮತ್ತು $\Lambda$ ಗಳನ್ನೂ $z$ ಮತ್ತು $u$ ಗಳನ್ನೂ ಪರಸ್ಪರ ವ್ಯತ್ಯಯಿಸಿದರೆ ದೊರೆಯುವ ವಾಕ್ಯವೂ ಒಂದು ಸತ್ಯವಾದ ಪ್ರಮೇಯ.

2 $a v a = a$ ಮತ್ತು $a \Lambda a = a$ ಎಂಬ ವರ್ಗಸಮ ನಿಯಮಗಳನ್ನು ಪ್ರತಿಯೊಂದು ಧಾತುವೂ ಪಾಲಿಸುತ್ತದೆ.

3 $a v u = u$ ಮತ್ತು $a \Lambda z = z$

4 $a \Lambda (a v b) = a$ ಮತ್ತು $a v (a \Lambda b) = a$ (ವಿಲೀನಕ ನಿಯಮಗಳು– ಅಬ್ಸಾರ್ಪ್ಷನ್ ಲಾಸ್)

5 $a v (b v c) = (a v b) v c$ ಮತ್ತು

$a \Lambda (b \Lambda c) = (a \Lambda b) \Lambda c$ (ವಿತರಣ ನಿಯಮಗಳು)

6 ದತ್ತ a ಗೆ ಅನ್ವಯಿಸುವ $a'$ ಏಕೈಕವಾದುದು. ಎಂದರೆ

$a v a' = u$, $a v a'' = u$ ಮತ್ತು

$a \Lambda a' = z$, $a \Lambda a'' = z$ ಆಗಿದ್ದರೆ ಆಗ

$a'' = a'$

7 ಡಿಮಾರ್ಗನ್‌ನ ನಿಯಮಗಳು :

$(a v b)' = a' \Lambda b'$ ಮತ್ತು

$(a \Lambda b)' = a' v b'$

ವ್ಯಾಖ್ಯೆ : $a$ ಮತ್ತು $b$ ಗಳು $B$ ಗೆ ಸೇರಿದ ಧಾತುಗಳಾಗಿದ್ದು $a v b = b$ ಆದಾಗ ಮತ್ತು ಆದಾಗ ಮಾತ್ರ $a < b$ ($a$ ಯು $b$ ಗಿಂತ ಚಿಕ್ಕದು) ಎಂದು ವ್ಯಾಖ್ಯಿಸುತ್ತೇವೆ. ಇದನ್ನು $B$ ಯ ಅನುಕ್ರಮ ಸಂಬಂಧವೆನ್ನುತ್ತೇವೆ. ಇದರ ಸಂಬಂಧದಲ್ಲಿ ಕೆಲವು ಪ್ರಮೇಯಗಳನ್ನು ಮುಂದೆ ಬರೆದಿದೆ.

8 $B$ ಯ ಎಲ್ಲ $a$ ಗಳೂ $a<a$,

9 $a < b$ ಮತ್ತು $b < a$ ಆಗಿದ್ದರೆ ಆಗ $a = b$

10 $a < b$ ಮತ್ತು $b < c$ ಆಗಿದ್ದರೆ ಆಗ $a<c$ (ವಾಹಕ ನಿಯಮ)

11 $B$ ಯ ಪ್ರತಿಯೊಂದು $a$ ಗೂ $z < a < u$

12 $a < x$ ಮತ್ತು $b < x$ ಆಗಿದ್ದರೆ ಆಗ $(a v b( < x$

**ಸಂಬಂಧಗಳು ಮತ್ತು ಉತ್ಪನ್ನಗಳು.** 1 ಕಾರ್ಟೀಸಿಯನ್ ಗುಣಲಬ್ಧಗಳು (ಕಾರ್ಟೀಸಿಯನ್ ಪ್ರಾಡಕ್ಟ್ಸ್): $S\ (\neq \phi)$ ಮತ್ತು $T\ (\neq \phi)$ ಎರಡು ದತ್ತ ಗಣಗಳಾಗಿರಲಿ. ಈಗ $s \in S$ ಮತ್ತು $t \in T$ ಆಗಿರುವಂತೆ $(s, t)$ ರೂಪದಲ್ಲಿರುವ ಎಲ್ಲ ಕ್ರಮಯುಕ್ತ ಧಾತುಯುಗ್ಮಗಳನ್ನು ನಿರ್ಮಿಸೋಣ. ಇವುಗಳಿಂದಲೇ ಕೂಡಿರುವ ಗಣವನ್ನು S ಮತ್ತು T ಗಳ ಕಾರ್ಟೀಸಿಯನ್ ಗುಣಲಬ್ಧ ಎಂದು ಕರೆಯುತ್ತೇವೆ; ಹಾಗೂ ಇದನ್ನು $S X T$ ಎಂದು ನಿರೂಪಿಸುತ್ತೇವೆ.

$S X T = \{(s, t) \mid \forall^{s} \in S$ ಮತ್ತು $t \in T\}$

ಉದಾಹರಣೆ : $S = \{1, 2, 3, 4\}$ ಮತ್ತು $T = \{a, b, c\}$

ಆಗಿದ್ದರೆ ಆಗ $S X T = \{(1, a), (1, b), (1, c), (2, a), (2, b), (2, c), (3, a), (3, b), (3, c), (4, a), (4, b), (4, c)\}$

ಇದರಲ್ಲಿ 4 X 3 = 12 ಧಾತುಗಳಿವೆ. ಹೀಗೆ $S$ ಮತ್ತು $T$ ಗಳು ಸಾಂತ ಗಣಗಳಾಗಿದ್ದು $S$ ನಲ್ಲಿ $m$ ಧಾತುಗಳೂ $T$ ಯಲ್ಲಿ $n$ ಧಾತುಗಳೂ ಇದ್ದರೆ ಆಗ $S X T$ ಯಲ್ಲಿ $mn$ ಧಾತುಗಳಿರುತ್ತವೆ.

ಹೀಗೆಯೇ $S_1, S_2, \ldots\ldots, S_n$ ಗಳು $n$ ಅಶೂನ್ಯ ಗಣಗಳಾಗಿದ್ದರೆ ಆಗ $\{(s_1, s_2, \ldots\ldots, s_n) \mid s_i \in s_i, \forall = 1, 2, 3 \ldots\ldots n\}$ ಎಂಬ ಗಣವನ್ನು $s_1, s_2 \ldots\ldots, s_n$ ಗಳ ಕಾರ್ಟೀಸಿಯನ್ ಗುಣಲಬ್ಧವೆಂದು

ಕರೆಯುತ್ತೇವೆ. ಇದನ್ನು $s_1 X s_2 X ... X s_n$ ಎಂದು ನಿರೂಪಿಸುತ್ತೇವೆ. $S_1, S_2, ...S_n$ಗಳು ಅಶೂನ್ಯಗಣಗಳಾಗಿದ್ದರೆ $s_1 X s_2 X ... X s_n$ ಸಹ ಅಶೂನ್ಯ ಗಣ ಎಂಬ ನಿರೂಪಣೆಗೆ ಆಯ್ಕೆಯ ಆದ್ಯುಕ್ತಿ (ಆಕ್ಸಿಯಂ ಆಫ್ ಚಾಯ್ಸ್) ಎಂದು ಹೆಸರು. ಇದನ್ನೂ ಇದರ ಬೇರೊಂದು ರೂಪವಾದ ಸ್ಸೋರ್ನ್‌ನ ಉಪಪ್ರಮೇಯವನ್ನೂ ಪ್ರೌಢಗಣಿತದಲ್ಲಿ ಅನೇಕ ಕಡೆ ಬಳಸುತ್ತೇವೆ.

ಸಂಬಂಧಗಳು : $S$ ಮತ್ತು $T$ ಗಳು ಎರಡು ಗಣಗಳಾಗಿದ್ದರೆ $S{\times}T$ ಯ ಪ್ರತಿಯೊಂದು ಉಪಗಣವನ್ನೂ $S$ ನಿಂದ $T$ ಗಿರುವ ಒಂದು ಸಂಬಂಧ (ರಿಲೇಷನ್) ಎಂದು ಕರೆಯುತ್ತೇವೆ.

ಉದಾಹರಣೆ : $S = \{1, 2, 3, 4\}$ ಮತ್ತು $T = \{a, b, c\}$ ಆಗಿದ್ದರೆ ಆಗ $R = \{(1, b), (1, c), (2, b), (3, b)\}$ ಯು $S$ ನಿಂದ $T$ ಗಿರುವ ಒಂದು ಸಂಬಂಧ. ಈ ಸಂಬಂಧದಲ್ಲಿ $S$ ನಲ್ಲಿರುವ 1 ಕ್ಕೆ $T$ ಯಲ್ಲಿನ $b$ ಮತ್ತು $c$ ಗಳೆರಡೂ ಅನ್ವಯಿಸುತ್ತವೆ. ಹೀಗೆಯೇ 2ಕ್ಕೆ $c$ಯೂ 3 ಕ್ಕೆ $b$ಯೂ ಅನ್ವಯಿಸುತ್ತವೆ. ಆದರೆ $S$ ನಲ್ಲಿರುವ 4 ಕ್ಕೆ $T$ ಯ ಯಾವ ಧಾತುವೂ ಅನ್ವಯವಾಗಿಲ್ಲ. ಹೀಗೆಯೇ $T$ ಯಲ್ಲಿರುವ $a$ ಯು $S$ ನಲ್ಲಿರುವ ಯಾವ ಧಾತುವಿಗೂ ಅನ್ವಯಿಸಿಲ್ಲ.

ಚಿತ್ರಣಗಳು ಅಥವಾ ಉತ್ಪನ್ನಗಳು (ಮ್ಯಾಪಿಂಗ್ಸ್ ಆರ್ ಫಂಕ್ಷನ್ಸ್) : $S$ ನಲ್ಲಿರುವ ಪ್ರತಿಯೊಂದು ಧಾತು $s$ ನ್ನೂ ಮೊದಲನೆಯ ಘಟಕವಾಗಿ ಪಡೆದಿರುವ ಎಲ್ಲ $(s, t)$ ಗಳಿಂದ ಏರ್ಪಟ್ಟ $S X T$ ಯ ಒಂದು ಗಣ $f$ ನ್ನು ತೆಗೆದುಕೊಳ್ಳೋಣ. ಈಗ $t_1 = t_2$ ಆದಾಗ ಮತ್ತು ಆದಾಗ ಮಾತ್ರ $(s, t_1)$ ಮತ್ತು $(s, t_2)$ ಗಳೆರಡೂ $f$ ನಲ್ಲಿರುವಂತಿದ್ದರೆ $f$ ನ್ನು $S$ ನಿಂದ $T$ ಗೆ ವ್ಯಾಖ್ಯಿಸಿರುವ ಒಂದು ಚಿತ್ರಣ ಅಥವಾ ಉತ್ಪನ್ನವೆಂದು ಕರೆಯುತ್ತೇವೆ ; ಮತ್ತು $f: S\rightarrow T$ ಎಂದು ಬರೆಯುತ್ತೇವೆ. ಇದರಿಂದ $S$ ನಲ್ಲಿರುವ ಪ್ರತಿಯೊಂದು $s$ ಗೂ $T$ ಯಲ್ಲಿ ಒಂದು ನಿರ್ದಿಷ್ಟವಾದ ಧಾತು $t$ ಅನ್ವಯವಾಗಿರುತ್ತದೆ.

ಉದಾಹರಣೆ : $S= \{1, 2, 3, 4\}$ ಮತ್ತು $T = \{a, b, c, d\}$ ಆಗಿರಲಿ. ಈಗ $f = \{(1, a), (2, a), (3, b), (4, c)\}$ ಎಂಬುದು $S$ ನಿಂದ $T$ ಗೆ ಚಿತ್ರಿಸುವ ಒಂದು ಉತ್ಪನ್ನ. ಇಲ್ಲಿ $S$ ನ ಪ್ರತಿಯೊಂದು ಧಾತುವಿಗೂ $T$ ಯಲ್ಲಿ ಒಂದು ಧಾತು ಸಂವಾದಿಯಾಗಿದೆ. ಈ ಸಂವಾದಿತ್ವವನ್ನು ಚಿತ್ರ 5 ರಲ್ಲಿ ತೋರಿಸಿದೆ. ಇದನ್ನು ಸಮೀಕರಣಗಳ ರೂಪದಲ್ಲಿ ಮುಂದೆ ಕೊಟ್ಟಿರುವ ಹಾಗೆ ತೋರಿಸುವುದು ವಾಡಿಕೆ. $f(1) = a, f(2) =a, f(3)=b$ ಮತ್ತು $f(4) = c$. $T$ ಯಲ್ಲಿರುವ $a$ ಯು $f$ ಉತ್ಪನ್ನ ಅಥವಾ ಚಿತ್ರಣದಲ್ಲಿ $S$ ನಲ್ಲಿರುವ 1ರ ಮತ್ತು 2ರ ಬಿಂಬ; $b$ ಯು 3ರ ಬಿಂಬ; $c$ ಯು 4ರ ಬಿಂಬ. ಹೀಗೆ ಉತ್ಪನ್ನಗಳಲ್ಲಿ $S$ ನಲ್ಲಿರುವ ಎರಡು ಅಥವಾ ಹೆಚ್ಚು ಧಾತುಗಳಿಗೂ $T$ ಯಲ್ಲಿ ಒಂದೇ ಬಿಂಬವಿರಬಹುದು.



ಚಿತ್ರ 5

ಆದರೆ $T$ ಯಲ್ಲಿರುವ $d$ ಯು $S$ ನಲ್ಲಿರುವ ಯಾವ ಧಾತುವಿನೊಂದಿಗೂ ಅನ್ವಯವಾಗುವುದಿಲ್ಲ. ಆದ್ದರಿಂದ $T$ ಯಲ್ಲಿರುವ ಧಾತುಗಳ $f$ ಬಿಂಬಗಳಿಂದ ಏರ್ಪಡುವ ಗಣ $\{a, b, c\}$ ಯು $T$ ಯನ್ನೆಲ್ಲ ಆಕ್ರಮಿಸುವುದಿಲ್ಲ; ಅದರ ಒಂದು ಸಮುಚಿತ (ಪ್ರಾಪರ್) ಉಪಗಣ ಮಾತ್ರ. ಇದನ್ನು $f(S)$ ಅಥವಾ $I_m(f)$ [ಬಿಂಬ (f)] ಎಂದು ಕರೆಯುತ್ತೇವೆ. $S$ನಲ್ಲಿರುವ ಪ್ರತಿಯೊಂದು ಗಣ $s$ ನೊಂದಿಗೆ ಅನ್ವಯವಾಗಿರುವ $f(s)$ ಎಂಬ $T$ಯ ಧಾತುವನ್ನು $f$ ಉತ್ಪನ್ನ $S$ ಧಾತುವಿಗೆ $T$ ಯಲ್ಲಿ ಪಡೆಯುವ ಮೌಲ್ಯವೆಂದು ಹೆಸರು. ಇಲ್ಲಿ $S$ನ್ನು $f$ನ (ವ್ಯಾಖ್ಯೆಯ) ಪ್ರಾಂತ (ಡೊಮೇನ್) ಎಂದೂ $Im(f)$ನ್ನು $f$ನ (ಮೌಲ್ಯಗಳ) ವ್ಯಾಪ್ತಿ (ರೇಂಜ್) ಎಂದೂ ಕರೆಯುತ್ತೇವೆ.

ಮೇಲ್ಚಿತ್ರಣಗಳು, ಒಳಚಿತ್ರಣಗಳು ಮತ್ತು ದ್ವೈಚಿತ್ರಣಗಳು. 1 $f(S) = T$ ಆಗಿದ್ದರೆ $f$ ನ್ನು $S$ ನಿಂದ $T$ ಗೆ ವ್ಯಾಖ್ಯಿಸಿರುವ ಒಂದು ಮೇಲ್ಚಿತ್ರಣ (ಸರ್ಜೆಕ್ಷನ್) ಎಂದು ಹೇಳುತ್ತೇವೆ.

ಉದಾಹರಣೆ : $Z = \{..., -2, -1, 0, 1, 2...\}$ ಪೂರ್ಣಾಂಕಗಳ ಗಣವೂ $Z' =\{0, 1^2, 2^2, 3^2, ......\} = \{0, 1, 4, 9.....\}$ ಎಲ್ಲ ಪೂರ್ಣಾಂಕ ವರ್ಗಸಂಖ್ಯೆಗಳ ಗಣವೂ ಆಗಿದ್ದರೆ $Z$ ನ ಎಲ್ಲ ಧಾತು $n$ ಗಳಿಗೂ $f(n) =n^2$ ಎಂದು ವ್ಯಾಖ್ಯಿಸೋಣ. ಈಗ $f : Z\rightarrow Z'$ಎಂಬುದು $Z$ ನಿಂದ $Z'$ ಗೆ ವ್ಯಾಖ್ಯಿಸುವ ಒಂದು ಮೇಲ್ಚಿತ್ರಣ.

2 $f : S\rightarrow T$ ಎಂಬ ಉತ್ಪನ್ನದಲ್ಲಿ $s1\neq s2$ ಗಳು $S$ನ ಧಾತುಗಳಾದಾಗಲೆಲ್ಲ $f(s_1)\neq f(s2)$ ಆಗಿದ್ದರೆ ಎಂದರೆ $f(s) = f(s')$ ಆದಾಗಲೆಲ್ಲ $s1=s'$ ಆಗುವಂತಿದ್ದರೆ $f : S\rightarrow T$ ಯನ್ನು $S$ ನಿಂದ $T$ ಗೆ ವ್ಯಾಖ್ಯಿಸಿರುವ ಒಂದು ಒಳ ಚಿತ್ರಣ (ಇಂಜೆಕ್ಷನ್) ಎಂದು ಹೇಳುತ್ತೇವೆ.

ಉದಾಹರಣೆ : 1. $N = \{0, 1, 2, 3, ...\}$ ಮತ್ತು $N' =\{1, 2, 3, ...\}$ ಆಗಿದ್ದು $f(n) = 2n + 3$ ಆಗುವಂತಿದ್ದರೆ $f: N\rightarrow N'$ ಎಂಬುದು $N$ ನಿಂದ $N'$ ಗೆ ವ್ಯಾಖ್ಯಿಸಿರುವ ಒಂದು ಒಳಚಿತ್ರಣ. ಏಕೆಂದರೆ $2n_1+3=2n_2+3$ ಆಗಿದ್ದರೆ ಆಗ $n_1=n_2$ ಎಂಬುದು ಸ್ಪಷ್ಟ.

2. $f : S\rightarrow T$ ಒಂದು ಮೇಲ್ಚಿತ್ರಣವೂ ಒಂದು ಒಳಚಿತ್ರಣವೂ ಆಗಿದ್ದರೆ ಅದನ್ನು $S$ ನಿಂದ $T$ ಗೆ ವ್ಯಾಖ್ಯಿಸಿರುವ ಒಂದು ದ್ವೈಚಿತ್ರಣವೆಂದು ಕರೆಯುತ್ತೇವೆ.

ಉದಾಹರಣೆ : 1 $E = \{0, 2, 4, 6......\}$ ಮತ್ತು

$F = \{1, 3, 5, 7....\}$ ಆಗಿದ್ದರೆ

ಆಗ $f(s) = s + 1, \forall s \in E$ ಎಂಬುದು $E$ ಯಿಂದ $F$ ಗೆ ವ್ಯಾಖ್ಯಿಸಿರುವ ಒಂದು ದ್ವೈಚಿತ್ರಣ.

ಈಗ $F$ ನಲ್ಲಿರುವ ಪ್ರತಿಯೊಂದು ಧಾತುವೂ $E$ ಯಲ್ಲಿರುವ ಒಂದೇ ಒಂದು ಧಾತುವಿನ ಬಿಂಬವಾಗಿರುತ್ತದೆ. ಹೀಗೆ $f{:}E\rightarrow F$ ಒಂದು ದ್ವೈಚಿತ್ರಣವಾದರೆ $F$ ನಲ್ಲಿರುವ ಪ್ರತಿಯೊಂದು ಧಾತುವಿಗೂ $E$ಯಲ್ಲಿರುವ ಒಂದೇ ಒಂದು ಧಾತು ಅನ್ವಯವಾಗಿರುತ್ತದೆ. ಆದ್ದರಿಂದ ಈ ಅನ್ವಯ $F$ ನಿಂದ $E$ ಗೆ ಒಂದು ದ್ವೈಚಿತ್ರಣವನ್ನು ನಿರ್ಮಿಸುತ್ತದೆ. ಇದನ್ನು $f$ ನ ವ್ಯಸ್ತವೆನ್ನುತ್ತೇವೆ; ಮತ್ತು $f^{-1}$ ಎಂದು ಬರೆಯುತ್ತೇವೆ. ಈಗ $f^{-1}: F\rightarrow E$ ಒಂದು ದ್ವೈಚಿತ್ರಣ. ಈ ಉದಾಹರಣೆಯಲ್ಲಿ $f^{-1}{:}F\rightarrow E$ ಚಿತ್ರಣವನ್ನು $f^{-1}(s) = s^{-1}, \forall s \in F$ ಎಂದು ವ್ಯಾಖ್ಯಿಸಬಹುದು.

2. $S$ ಒಂದು ಗಣವಾಗಿದ್ದರೆ $\varepsilon : S\rightarrow S$ ನ್ನು $\varepsilon(s)=s, \forall s\in S$ ಎಂದು ವ್ಯಾಖ್ಯಿಸಿದರೆ $\varepsilon : S\rightarrow S$ ಒಂದು ದ್ವೈಚಿತ್ರಣ. ಇದಕ್ಕೆ $S$ ನ ಸರ್ವಸಮತ್ವ ಚಿತ್ರಣವೆಂದು ಹೆಸರು.

ಚಿತ್ರಣಗಳ ಸಂಯೋಜನೆ : $f: R\rightarrow S$ ಮತ್ತು $g: S\rightarrow T$ ಗಳು ಎರಡು ಚಿತ್ರಣಗಳಾಗಿರಲಿ. ಈಗ $r \in R$ ಆಗಿದ್ದರೆ $f(r)$ ಎನ್ನುವುದು $S$ ನಲ್ಲಿರುವ ಒಂದು ಧಾತು $s$; ಎಂದರೆ $f(r) =s$. ಈಗ $g(s)$, $T$ ಯ ಒಂದು ಧಾತು $t$; ಎಂದರೆ $g(s) = t$. ಆದರೆ $s =f(r)$. ಆದ್ದರಿಂದ $g(f(r))=t$. ಇದನ್ನು ಸಂಕ್ಷೇಪವಾಗಿ $(gf)(r) =t$ ಎಂದು ಬರೆಯುತ್ತೇವೆ. ಹೀಗೆ $R$ ನಲ್ಲಿರುವ ಪ್ರತಿ $r$ ಗೂ $T$ ಯಲ್ಲಿರುವ ಒಂದು ಧಾತುವನ್ನು $gf$ ಅನ್ವಯಿಸುತ್ತದೆ. ಆದ್ದರಿಂದ $gf: R\rightarrow T$ಯು $R$ ನಿಂದ $T$ಗೆ ವ್ಯಾಖ್ಯಿಸಿರುವ ಒಂದು ಚಿತ್ರಣ. ಇದಕ್ಕೆ $f$ ಮತ್ತು $g$ ಗಳ ಸಂಯೋಜನೆ ಎಂದು ಹೆಸರು.

$f$ ಮತ್ತು $g$ ಗಳೆರಡೂ ದ್ವೈಚಿತ್ರಣಗಳಾಗಿದ್ದರೆ $fg$ ಸಹ ಒಂದು ದ್ವೈಚಿತ್ರಣವೇ. ಈಗ $f^{-1}$ ಮತ್ತು $g^{-1}$ ಗಳು $f, g$ ಗಳ ವ್ಯಸ್ತಗಳಾದರೆ $(gf)^{-1} =g^{-1} f^{-1}$ ಎಂದಾಗುತ್ತದೆ.

ವ್ಯಸ್ತ ಬಿಂಬಗಳು (ಇನ್ವರ್ಸ್ ಇಮೇಜಸ್) : $f: S\rightarrow T$ ಒಂದು ಚಿತ್ರಣವಾಗಿರಲಿ. ಈಗ $P(T)$ ಮತ್ತು $P(S)$ ಗಳು $T$ ಮತ್ತು $S$ ನ ಘಾತಗಣಗಳಾದರೆ $P(T)$ ಯಿಂದ $P(S)$ ಗೆ $f$ ನ ಮೂಲಕ ಒಂದು ವ್ಯಸ್ತಚಿತ್ರಣವನ್ನು ಹೀಗೆ ವ್ಯಾಖ್ಯಿಸುತ್ತೇವೆ: $B$ □$P(T)$ ಆಗಿದ್ದರೆ ಆಗ $A = \{s$ □$S|f(s)$ □$B\}$. ಈಗ $A$ ಯು $P(S)$ ನಲ್ಲಿರುವ ಒಂದು ನಿರ್ದಿಷ್ಟವಾದ ಧಾತು. ಇದನ್ನು $f^{-1}(B)$ ಎಂದು ನಿರೂಪಿಸುತ್ತೇವೆ. $f^{-1}$ ಎಂಬದು $P(T)$ ಯಿಂದ $P(S)$ ಗೆ ವ್ಯಾಖ್ಯಿಸುವ ಒಂದು ಚಿತ್ರಣ. ಇದನ್ನು $f$ ನ ವ್ಯಸ್ತ ಎಂದು ಕರೆಯುವುದೇ ವಾಡಿಕೆ. $f^{-1}(B)$ ಯನ್ನು $f$ ಚಿತ್ರಣದಲ್ಲಿ $B$ ಯ ವ್ಯಸ್ತಬಿಂಬವೆಂದು ಕರೆಯುತ್ತೇವೆ. ವ್ಯಸ್ತಚಿತ್ರಣ ಮತ್ತು ಬಿಂಬಗಳಿಗೆ ಸಂಬಂಧಿಸಿದ ಕೆಲವು ಪ್ರಮೇಯಗಳನ್ನು ಮುಂದೆ ಬರೆದಿದೆ:

1 $B \subset T$ ಆಗಿದ್ದರೆ ಆಗ $f(f^{-1}(B)) \subset B$

2 $f: S\rightarrow T$ ಒಂದು ಮೇಲ್ಚಿತ್ರಣವಾದರರೆ ಆಗ $f(f^{-1}(B)) =B$

3 $A \subset S$ ಆಗಿದ್ದರೆ ಆಗ $A \subset f^{-1}(f(A))$

4 $f$ ಒಳ ಚಿತ್ರಣವಾಗಿದ್ದರೆ ಆಗ $A=f^{-1}(f(A))$

5 $\{B_i\}$ ಎಂಬುದು $T$ ಯ ಉಪಗಣಗಳ ಒಂದು ಸಮೂಹವಾಗಿದ್ದರೆ ಆಗ $f-1(\bigcup_i B_i) = \bigcup_i f^{-1}(B_i)$ ಮತ್ತು $\{B_i)$ ಸಾಂತ ಸಮೂಹವಾಗಿದ್ದರೆ ಆಗ $f-1(\bigcap_i B_i) = \bigcap_i f-1(B_i)$

**ಗಣಗಳು ಮತ್ತು ಸಂಖ್ಯಾವ್ಯವಸ್ಥೆ :** ಗಣಸಿದ್ಧಾಂತದ ತತ್ತ್ವಗಳನ್ನು ಸಂಖ್ಯೆಗಳ ವ್ಯಾಖ್ಯೆಗೆ ಮತ್ತು ಸಂಖ್ಯಾವ್ಯವಸ್ಥೆಯ ರಚನೆಗೆ ಹೇಗೆ ಬಳಸಿಕೊಂಡಿದ್ದಾರೆಂದು ಇನ್ನು ನೋಡೋಣ. ಈ ದಿಶೆಯಲ್ಲಿ ಮೊದಲ ಹೆಜ್ಜೆ ಇಟ್ಟವ ಕ್ಯಾಂಟರ್. ನಮಗೆ ಬಲು ಪರಿಚಿತವಾಗಿರುವ 1, 2, 3....... ಮುಂತಾದ ನೈಸರ್ಗಿಕ ಸಂಖ್ಯೆಗಳನ್ನೂ ಅವುಗಳ

ಮೇಲೆ ನಡೆಸಬಹುದಾದ ಸಂಕಲನ ಮತ್ತು ಗುಣಾಕಾರಗಳೆಂಬ ಮೂಲ ಪರಿಕರ್ಮಗಳನ್ನೂ ಗಣಸಿದ್ಧಾಂತದ ಪರಿಕಲ್ಪನೆಗಳ ಮೂಲಕ ಈತ ವ್ಯಾಖ್ಯಿಸಿದ್ದಾನೆ. ಇದರಿಂದ ಗಣಿತಶಾಸ್ತ್ರದ ರಚನೆಗೆ ಸಂಖ್ಯಾಸಿದ್ಧಾಂತಕ್ಕಿಂತಲೂ ಆಳವಾಗಿರುವ ಒಂದು ಭದ್ರವಾದ ತಳಹದಿಯನ್ನು ಕೊಟ್ಟಂತಾಯಿತು. ಇದರ ಸ್ಥೂಲ ವಿವರಣೆಯನ್ನು ಇಲ್ಲಿ ಕೊಟ್ಟಿದೆ.

ಒಂದು-ಒಂದು ಸಂವಾದಿತ್ವ : $f:S\rightarrow T$ ಒಂದು ದ್ವೈಚಿತ್ರಣವಾದರೆ $S$ ನಲ್ಲಿರುವ ಪ್ರತಿಯೊಂದು $s$ ನೊಂದಿಗೂ $T$ ಯಲ್ಲಿರುವ ಒಂದು ನಿರ್ದಿಷ್ಟವಾದ ಧಾತು $t$ ಸಂವಾದಿಯಾಗಿರುತ್ತದೆ. ಹಾಗೆಯೇ $f$ ನ ವ್ಯಸ್ತವಾದ $f^{-1}:T\rightarrow S$ ನಿಂದ $T$ ಯಲ್ಲಿರುವ ಪ್ರತಿಯೊಂದು ಧಾತು $t$ ಯೊಂದಿಗೂ $S$ ನಲ್ಲಿರುವ ಒಂದು ನಿರ್ದಿಷ್ಟವಾದ ಧಾತು $s$ ಸಂವಾದಿಯಾಗಿರುತ್ತದೆ. $S$ ಮತ್ತು $T$ ಗಳಿಗಿರುವ ಇಂಥ ಪರಸ್ಪರ ಸಂಬಂಧಕ್ಕೆ ಒಂದು-ಒಂದು ಸಂವಾದಿತ್ವ (ಒನ್-ಒನ್ ಕರೆಸ್ಪಾಂಡೆನ್ಸ್) ಎಂದು ಹೆಸರು.

ಉದಾಹರಣೆ : *1* $S=\{1, 2, 3, 4, 5, 6, 7\}$ ಎಂಬುದು ಮೊದಲನೆಯ ಏಳು ನೈಸರ್ಗಿಕ ಸಂಖ್ಯೆಗಳ ಗಣಕ್ಕೂ $T$ = {ಸ, ರಿ, ಗ, ಮ, ಪ, ಧ, ನಿ,} ಎಂಬ ಸಪ್ತಸ್ವರಗಳ ಗಣಕ್ಕೂ ಒಂದು ಒಂದು-ಒಂದು ಸಂವಾದಿತ್ವನ್ನು ಮುಂದೆ ಸೂಚಿಸಿರು ವಂತೆ ಕಲ್ಪಿಸಬಹುದು :

$f(1)$ = ಸ, $f(2)$ = ರಿ, $f(3)$ = ಗ, $f(4)$ = ಮ, $f(5)$ = ಪ, $f(6)$ = ಧ, $f(7)$ = ನಿ. ಇದನ್ನೇ ಸಂಕ್ಷೇಪವಾಗಿ ಹೀಗೆ ತೋರಿಸಬಹುದು:

1 ←→ ಸ, 2 ←→ ರಿ, 3 ←→ ಗ, 4 ←→ ಮ, 5 ←→ ಪ, 6 ←→ ಧ, 7 ←→ ನಿ. ಹೀಗೆಯೇ 1 ←→ ರಿ, 2 ←→ ಗ, 3 ←→ ಮ, 4 ←→ ಪ, 5 ←→ ಧ, 6 ←→ ನಿ, 7 ←→ ಸ ಎಂಬ ಸಂವಾದಿತ್ವವೂ $S$ ಮತ್ತು $T$ ಗಳ ನಡುವೆ ಒಂದು ಒಂದು-ಒಂದು ಸಂವಾದಿತ್ವ.

2 $N=\{1, 2, 3, 4, ......\}$ ನೈಸರ್ಗಿಕ ಸಂಖ್ಯೆಗಳ ಗಣವೂ $M=\{1, 4, 9, 16, ....\}$ ವರ್ಗಸಂಖ್ಯೆಗಳ ಗಣವೂ ಆಗಿದ್ದರೆ ಆಗ $f(n) = n^2, \forall n \in N$ ಎಂಬ ಚಿತ್ರಣ $N$ ಮತ್ತು $M$ ಗಳ ನಡುವೆ ಒಂದು ಸಂವಾದಿತ್ವವನ್ನು ರೂಪಿಸುತ್ತದೆ. ಈ ಸಂಬಂಧವನ್ನು

1 ←→ 1, 2 ←→ 4, 3 ←→ 9, 4 ←→ 16, ..........$n$ ←→ $n^2$, .......... ಎಂದು ಸಹ ಸೂಚಿಸಬಹುದು.

ವ್ಯಾಖ್ಯೆ : A ಮತ್ತು B ಗಣಗಳ ನಡುವೆ ಒಂದು ಒಂದು-ಒಂದು ಸಂವಾದಿತ್ವವನ್ನು ಕಲ್ಪಿಸಬಹುದಾದರೆ ಅವೆರಡನ್ನೂ ಸಮಗಣನಾಸಂಖ್ಯಾ (ಈಕ್ವಿಪೊಲ್ಲೆಂಟ್) ಗಣಗಳೆಂದೂ ಅವೆರಡಕ್ಕೂ ಒಂದೇ ಗಣನಸಂಖ್ಯೆ (ಕಾರ್ಡಿನಲ್ ನಂಬರ್) ಉಂಟೆಂದೂ ಹೇಳುತ್ತೇವೆ. A ಯು B ಗೆ ಸಮಾನವೆಂಬುದನ್ನು A ~ B ಎಂಬುದಾಗಿ ಬರೆಯುತ್ತೇವೆ. A ಯ ಗಣನಸಂಖ್ಯೆಯನ್ನು C(A) ಎಂದು ಸೂಚಿಸೋಣ.

ಹೀಗಾಗಿ ಮೇಲಿನ ಉದಾಹರಣೆಗಳಲ್ಲಿ

1 C (S) = C (T), ಮತ್ತು

2 C (N) = C (M)

ಗಣಗಳ ಗಣನಸಂಖ್ಯೆಗಳ ಮೂಲಕ ನೈಸರ್ಗಿಕ ಸಂಖ್ಯೆಗಳನ್ನು ವ್ಯಾಖ್ಯಿಸುತ್ತೇವೆ. ಒಂಟಿ ಧಾತುವಿರುವ $\{a\}, \{b\}, \{c\}$ ಮುಂತಾದ ಗಣಗಳು ಪರಸ್ಪರ ಸಮಗಣನ ಸಂಖ್ಯಾಗಣಗಳೆಂಬುದು ಸ್ಪಷ್ಟ. ಇವುಗಳ ಗಣನಸಂಖ್ಯೆಯನ್ನು 'ಒಂದು' ಎಂಬ ನೈಸರ್ಗಿಕ ಸಂಖ್ಯೆಯೆಂದು ವ್ಯಾಖ್ಯಿಸುತ್ತೇವೆ; ಮತ್ತು ಅದನ್ನು 1 ಎಂಬ ಪ್ರತೀಕದಿಂದ ನಿರೂಪಿಸುತ್ತೇವೆ. $\{a, b\} \{c, d\}$ ಮುಂತಾದ ಸಮಗಣನಸಂಖ್ಯಾಗಣಗಳ ಗಣನಸಂಖ್ಯೆ ಯನ್ನು ನೈಸರ್ಗಿಕ ಸಂಖ್ಯೆ 'ಎರಡು' ಎಂದು ಕರೆಯುತ್ತೇವೆ: ಮತ್ತು ಅದನ್ನು 2 ಎಂಬ ಪ್ರತೀಕದಿಂದ ನಿರೂಪಿಸುತ್ತೇವೆ. ಹೀಗೆಯೇ $C\{a, b, c\}= C\{p, q, r\}$ = ಮೂರು = 3 ಇತ್ಯಾದಿ. ಮೇಲಿನ ಉದಾಹರಣೆ (1) ರಲ್ಲಿ $C(S) = C(T) = 7$.

ಗಣನಸಂಖ್ಯೆಗಳ ಮೇಲೆ ಮೂಲಪರಿಕರ್ಮಗಳು : $\alpha$ ಮತ್ತು $\beta$ ಗಳು ಎರಡು ಗಣನ ಸಂಖ್ಯೆಗಳೂ $A$ ಮತ್ತು $B$ ಗಳು ಈ ಗಣನಸಂಖ್ಯೆಗಳನ್ನು ಹೊಂದಿರುವ ಎರಡು ಗಣಗಳೂ ಆಗಿರಲಿ. $A$ ಗೆ ಸಮಗಣನ ಸಂಖ್ಯೆಯಲ್ಲಿರುವ ಎಲ್ಲ ಗಣಗಳ ಗಣನ ಸಂಖ್ಯೆಯೂ ಒಂದೇ ಆಗಿರುವುದರಿಂದ, ಸಾಮಾನ್ಯವಾಗಿ $A$ ಮತ್ತು $B$ ಗಳಿಗೆ ಯಾವ ಸಾಮಾನ್ಯ ಗಣವೂ ಇಲ್ಲದಂತೆ, ಎಂದರೆ $A \cap B=\emptyset$ ಆಗುವಂತೆ, ಇವನ್ನು ಆರಿಸಿಕೊಳ್ಳಬಹುದು. ಈಗ $A \cup B$ ಗಣದ ಗಣನ ಸಂಖ್ಯೆಯನ್ನು $\alpha$ ಮತ್ತು $\beta$ ಗಳ ಮೊತ್ತವೆಂದು ಕರೆಯುತ್ತೇವೆ. ಮತ್ತು ಇದನ್ನು $C(A \cup B)= \alpha + \beta = C(A) + C(B)$ ಎಂದು ಬರೆಯುತ್ತೇವೆ. $\alpha$ ಮತ್ತು $\beta$ ಗಳಿಂದ ಹೊರಟು $\alpha + \beta$ ವನ್ನು ಪಡೆಯುವ ಈ ಕ್ರಿಯೆಯನ್ನು ಗಣನ ಸಂಖ್ಯೆಗಳ ಸಂಕಲನವೆಂದು ಕರೆಯುತ್ತೇವೆ. ಹೀಗೆಯೇ $A$ ಮತ್ತು $B$ ಗಳ ಕಾರ್ಟೀಸಿಯನ್ ಗುಣಲಬ್ಧವಾದ $A \times B$ ಗಣದ ಗಣನ ಸಂಖ್ಯೆಯನ್ನು $\alpha$ ಮತ್ತು $\beta$ ಗಳ ಗುಣಲಬ್ಧವೆಂದು ಕರೆಯುತ್ತೇವೆ. ಇದನ್ನು $\alpha . \beta$ ಎಂದು ಬರೆಯುತ್ತೇವೆ. ಎಂದರೆ,

$C(A \times B) = C(A). C(B) = \alpha . \beta$

$\alpha$ ಮತ್ತು $\beta$ ಗಳಿಂದ ಹೊರಟು $\alpha . \beta$ ವನ್ನು ಪಡೆಯುವ ಈ ಕ್ರಿಯೆಗೆ ಗಣನಸಂಖ್ಯೆಗಳ ಗುಣಾಕಾರವೆಂದು ಹೆಸರು. ಈ ವ್ಯಾಖ್ಯೆಗಳಿಂದ $\alpha$ ಮತ್ತು $\beta$ ಗಳು ಗಣನಸಂಖ್ಯೆಗಳಾದರೆ $\alpha + \beta$ ಮತ್ತು $\alpha \ \beta$ ಗಳೂ ಗಣನಸಂಖ್ಯೆಗಳೇ ಎಂಬುದು ಸ್ಪಷ್ಟ.

ಎಲ್ಲ ಗಣನಸಂಖ್ಯೆಗಳ ಗಣ $C$ ಯಲ್ಲಿ ಸಂಕಲನ ಮತ್ತು ಗುಣಾಕಾರಗಳು ಮುಂದೆ ಕೊಟ್ಟಿರುವ ನಿಯಮಗಳನ್ನು ಪಾಲಿಸುತ್ತವೆ : $\alpha, \beta, \gamma$ ಗಳು ಗಣನ ಸಂಖ್ಯೆಗಳಾಗಿರಲಿ. ಆಗ

I. ಸಾಹಚರ್ಯ ನಿಯಮ : $(\alpha + \beta) + \gamma = \alpha + (\beta + \gamma)$

$(\alpha \ \beta) \gamma = \alpha (\beta \gamma)$

II. ವ್ಯತ್ಯಯ ನಿಯಮ : $\alpha + \beta = \beta + \gamma$

$\alpha \ \beta = \beta \ \alpha$

III. $1.\alpha = \alpha$

IV. ವಿತರಣ ನಿಯಮ : $\alpha (\beta + \gamma) = \alpha . \beta + \alpha . \gamma$

ಸಾಂತ, ಅನಂತ ಮತ್ತು ಗಣನೀಯ ಗಣಗಳು (ಫೈನೈಟ್, ಇನ್‌ಫಿನಿಟ್ ಅಂಡ್ ಎನ್ಯೂಮರಬಲ್ ಸೆಟ್ಸ್) : 1 $A$ ಒಂದು ಗಣವಾಗಿದ್ದು ಅದರ ಗಣನಸಂಖ್ಯೆ $C(A) = n$ ಒಂದು ನೈಸರ್ಗಿಕ ಸಂಖ್ಯೆಯಾಗಿದ್ದರೆ $A$ ಯನ್ನು ಸಾಂತ ಗಣವೆಂದು ಹೇಳುತ್ತೇವೆ. ಈಗ $A$ ಯು $\{1, 2, 3, .............n\}$ ಗಣಕ್ಕೆ ಸಮಗಣನ ಸಂಖ್ಯಾಗಣವೆಂಬುದನ್ನು ಗಮನಿಸಬೇಕು. ಉದಾಹರಣೆಗೆ $T$ = { ಸ, ರಿ, ಗ, ಮ, ಪ, ಧ, ನಿ} ಎಂಬ ಗಣ {1, 2, 3, .......7} ಎಂಬುದಕ್ಕೆ ಸಮಗಣನ ಸಂಖ್ಯಾಗಣ. ಆದ್ದರಿಂದ $T$ ಸಾಂತ ಗಣ. ಮೇಲಿನ ವ್ಯಾಖ್ಯೆಗೆ ಅನುಗುಣವಾಗಿ ಪ್ರತಿಯೊಂದು ನೈಜಸಂಖ್ಯೆ $n$ ಗೂ $\{1, 2, .........n\}$ ಗಣ ಸಾಂತ. ಅದರ ಗಣನಸಂಖ್ಯೆ ಅಲ್ಲಿರುವ ಧಾತುಗಳ ಒಟ್ಟು ಸಂಖ್ಯೆಯೇ ಆಗಿದೆ ಎಂಬುದನ್ನು ಗಮನಿಸಬೇಕು.

2 $A$ ಒಂದು ಗಣವಾಗಿದ್ದು, ಅದರಲ್ಲೇ ಇರುವ ಒಂದು ಸಮುಚಿತ ಉಪಗಣ $B$ ಗೆ $A$ ಯು ಸಮಗಣನ ಸಂಖ್ಯೆಯುಳ್ಳದ್ದಾಗಿದ್ದರೆ ಎಂದರೆ $C(A) = C(B)$ ಆಗುವಂತಿದ್ದರೆ $A$ ಯನ್ನು ಒಂದು ಅನಂತ ಗಣವೆಂದು ವ್ಯಾಖ್ಯಿಸುತ್ತೇವೆ. ಈ ಸಂದರ್ಭ ದಲ್ಲಿ $C(A) =n$ ಆಗುವಂತೆ ನೈಸರ್ಗಿಕ ಸಂಖ್ಯೆ $n$ ಎಂಬುದೂ ದೊರೆಯುವುದಿಲ್ಲ.

ಉದಾಹರಣೆ : 1 $N = \{1, 2, 3 ......\}$ ಎಲ್ಲ ನೈಸರ್ಗಿಕ ಸಂಖ್ಯೆಗಳ ಗಣ $M =\{1, 4, 9.......\}$ ಎಲ್ಲ ಪೂರ್ಣಾಂಕ ವರ್ಗಸಂಖ್ಯೆಗಳ ಗಣ ಆಗಿದ್ದರೆ ಆಗ $N \sim M$ ಎಂದರೆ $C(N) = C(M)$. ಆದರೂ $M$, $N$ ನ ಒಂದು ಸಮುಚಿತ ಉಪಗಣ ಎನ್ನುವುದು ಸ್ಪಷ್ಟ. ಆದ್ದರಿಂದ $N$ ಅನಂತ. ಅದೇ ರೀತಿ $M$ ಕೂಡ ಅನಂತ. ಏಕೆಂದರೆ $C(M)$ ಒಂದು ನೈಸರ್ಗಿಕ ಸಂಖ್ಯೆ $m$ ಆಗಿದ್ದರೆ $C(N) =m$ ಎಂದರೆ $N$ ಸಾಂತ. ಇದು $N$ ನ ಗುಣವನ್ನು ವಿರೋಧಿಸುತ್ತದೆ.

2 $Q$ ಎಲ್ಲ ಪರಿಮೇಯ ಸಂಖ್ಯೆಗಳ ಗಣವೂ $T = \{x^1 - 1 \leq x \leq 1$, x ಪರಿಮೇಯ ಸಂಖ್ಯೆ} ಎಂಬ ಗಣವೂ ಆಗಿರಲಿ. ಈಗ $f:T\rightarrow S$ ಚಿತ್ರಣವನ್ನು $f(0) =0$ ಮತ್ತು $f(x) = 1/x, \forall x \in T, x \neq 0$ ಎಂದು ವ್ಯಾಖ್ಯಿಸಿದರೆ $f : T\rightarrow Q$ ಒಂದು ದ್ವೈಚಿತ್ರಣವೆಂದು ಸುಲಭವಾಗಿ ತೋರಿಬರುತ್ತದೆ. ಆದ್ದರಿಂದ $T \sim Q$ ಎಂದರೆ $C(T) = C(Q)$. ಆದರೆ ಇಲ್ಲಿ $T$ ಯು $Q$ ನ ಒಂದು ಸಮುಚಿತ ಉಪಗಣ. ಅದ್ದರಿಂದ $Q$ ಅನಂತ ಹಾಗೂ $T$ ಕೂಡ ಅನಂತ.

ಇದೇ ರೀತಿ ಎಲ್ಲ ನೈಜ ಸಂಖ್ಯೆಗಳ ಗಣವನ್ನು ಕೂಡ ಅನಂತವೆಂದು ತೋರಿಸಬಹುದು.

ಸಾಂತಾತೀತ ಸಂಖ್ಯೆಗಳು (ಟ್ರಾನ್ಸ್ ಫೈನೈಟ್ ನಂಬರ್ಸ್) : ನೈಸರ್ಗಿಕ ಸಂಖ್ಯೆಗಳ ಗಣ $N = \{ 1, 2, 3...\}$ ಅನಂತವೆಂದು ಹಿಂದೆಯೇ ನೋಡಿದ್ದೇವೆ. ಇದಕ್ಕೆ ಸಮಗಣನ ಸಂಖ್ಯೆಯುಳ್ಳ ಎಲ್ಲ ಗಣಗಳನ್ನೂ ಗಣನೀಯ ಗಣಗಳು ಎಂದು ಕರೆಯುತ್ತೇವೆ. ಎಂದರೆ ಅಂಥ ಗಣದ ಧಾತುಗಳನ್ನು ಒಂದನೆಯದು, ಎರಡನೆಯದು, ಮೂರನೆಯದು, ಎಂದು ಮುಂತಾಗಿ ಎಣಿಸಲು ಸಾಧ್ಯ. ಈ ಪರಿಕಲ್ಪನೆಯನ್ನೇ ಎಣಿಸುವಿಕೆ ಎಂದು ವ್ಯಾಖ್ಯಿಸಬಹುದು. ಇಂಥ ಒಂದು ಗಣದ ಧಾತುಗಳನ್ನು $\{s1, s2, s3.....\}$ ಎಂದು ಸೂಚಿಸಲು ಸಾಧ್ಯ. ಒಂದು ಗಣನೀಯ ಗಣದ ಧಾತುಗಳನ್ನು ಮೇಲೆ ವಿವರಿಸಿದ ಅನುಕ್ರಮದಲ್ಲಿ $\{ s1, s2, s3.....\}$ ಎಂದು ಜೋಡಿಸಿ ಬರೆದರೆ ನಮಗೆ ಒಂದು ಶ್ರೇಢಿ (ಸೀಕ್ವೆನ್ಸ್) ದೊರೆಯುತ್ತದೆ.

ಎಲ್ಲ ಪರಿಮೇಯ ಸಂಖ್ಯೆಗಳ ಗಣ *Q*ವನ್ನು ಕೂಡ ಒಂದು ಗಣನೀಯ ಗಣವೆಂದು ಸುಲಭವಾಗಿ ತೋರಿಸಬಹುದು: ಎಂದಮೇಲೆ $C(Q) = C(N)$. ಆದರೆ, ಇವು ಸಾಂತಗಣಗಳಲ್ಲ. ಆದ್ದರಿಂದ $C(Q) = C(N) = d$ ಎಂಬುದು ಒಂದು ನೈಸರ್ಗಿಕ ಸಂಖ್ಯೆಯಲ್ಲ. ಹೀಗೆಯೇ *R* ಎಂಬುದು ಎಲ್ಲ ನೈಜಸಂಖ್ಯೆಗಳ ಗಣವಾದರೆ $C(R) = R$ ಗಣನ ಸಂಖ್ಯೆಯೂ ನೈಸರ್ಗಿಕ ಸಂಖ್ಯೆಯಲ್ಲ. ಹೀಗೆ ನೈಸರ್ಗಿಕ ಸಂಖ್ಯೆಗಳಲ್ಲದ ಗಣನ ಸಂಖ್ಯೆಗಳೂ ಇವೆ. ಇಂಥ ಗಣನ ಸಂಖ್ಯೆಗಳಿಗೆ ಸಾಂತಾತೀತ ಸಂಖ್ಯೆಗಳೆಂದು ಹೆಸರು.

$C(N) = d$ ಯನ್ನು ಸಾಮಾನ್ಯವಾಗಿ ℵ ಆಕಾರದಲ್ಲಿರುವ ಅಲೆಫ್ ಎಂಬ ಹೀಬ್ರೂ ಅಕ್ಷರವನ್ನು ಉಪಯೋಗಿಸಿ $\aleph$ (ಅಲೆಫ್ ಶೂನ್ಯ) ಎಂಬ ಸಂಜ್ಞೆಯಿಂದ ನಿರೂಪಿಸುವುದು ವಾಡಿಕೆ. $C(R) = c$ ಗೆ ಅವಿಚ್ಛಿನ್ನತೆಯ ಗಣನ ಸಂಖ್ಯೆ (ಕಾರ್ಡಿನಲ್ ನಂಬರ್ ಆಫ್ ದಿ ಕಂಟಿನ್ಯೂವಂ) ಎಂದು ಹೆಸರು. ಈಗ *R* ಎಂಬುದು ಗಣನೀಯ ಗಣವಲ್ಲವೆಂದು ಸುಲಭವಾಗಿ ತೋರಿಸಿಕೊಡಬಹುದು. ಈ ಕಾರಣದಿಂದ *d* ಯು *c* ಗಿಂತ ಚಿಕ್ಕದು ಎಂದು ಭಾವಿಸಲಾಗಿದೆ. ಇದನ್ನು $d < c$ ಎಂದು ಬರೆಯುತ್ತೇವೆ.

ಎಲ್ಲ ಏಕಮೌಲ್ಯದ ನೈಜ ಉತ್ಪನ್ನಗಳ (ಸಿಂಗಲ್ ವ್ಯಾಲ್ಯೂಡ್ ರಿಯಲ್ ಫಂಕ್ಷನ್ಸ್) ಗಣದ ಗಣನ ಸಂಖ್ಯೆ *f*, *C* ಗಿಂತಲೂ ದೊಡ್ಡದು ಎಂದು ಕಂಡುಹಿಡಿಯಲಾಗಿದೆ. ಎಂದರೆ $d < c < f$ ಎಂದಾಯಿತು. *c*ಗಿಂತ ಚಿಕ್ಕದಾಗಿಯೂ *d*ಗಿಂತ ದೊಡ್ಡದಾಗಿಯೂ ಇರುವ ಗಣನ ಸಂಖ್ಯೆಯನ್ನು ಪಡೆದಿರುವ ಯಾವುದಾದರೂ ಗಣವಿದೆಯೇ ಎಂಬ ಪ್ರಶ್ನೆಗೆ ಇನ್ನೂ ಉತ್ತರ ದೊರೆತಿಲ್ಲ. ಅಂಥ ಒಂದು ಗಣವಿರಲಾರದು ಎಂಬ ಭಾವನೆಯನ್ನು ಅವಿಚ್ಛಿನ್ನತೆಯವಾದ (ಕಂಟಿನ್ಯುವಂ ಹೈಪಾಥಿಸಿಸ್) ಎಂದು ಕರೆಯುತ್ತೇವೆ. ಇದನ್ನು ಗಣಸಿದ್ಧಾಂತದ ಆಧಾರಗಳಿಂದಲೇ ಸಾಧಿಸಲು ಅಸಾಧ್ಯವೆಂಬುದು ಕೆಲವು ವಿದ್ವಾಂಸರ ಮತ.

ಅನಂತ ಗಣಗಳ ಗಣನಸಂಖ್ಯೆಯನ್ನು ಅನಂತಗಳು (ಇನ್ಫಿನಿಟೀಸ್) ಎಂದು ಕರೆಯುವುದು ವಾಡಿಕೆ. ಹೀಗೆ *d*, *c*, *f* ಗಳು ಅನಂತಗಳು. ಈ ಅನಂತಗಳಲ್ಲೇ ಒಂದು ಸ್ವಾಭಾವಿಕವಾದ ದರ್ಜೆ–ಸಂಬಂಧ (ಆರ್ಡರ್ – ರಿಲೇಷನ್) ಇರುವುದು ಗಮನಾರ್ಹ. ಏಕೆಂದರೆ $d < c < f$ ಹೀಗೆ ಒಂದಕ್ಕಿಂತ ಒಂದು ಹೆಚ್ಚಿನ ದರ್ಜೆಯಲ್ಲಿರುವ ಅನಂತಗಳನ್ನು ಅನಂತವಾಗಿ ಪಡೆಯಬಹುದೆಂದೂ ತೋರಿಸಬಹುದು.

**ಉಪಸಂಹಾರ** : ಗಣಸಿದ್ಧಾಂತದ ಬೆಳವಣಿಗೆಯಿಂದ ಗಣಿತದ ಎಲ್ಲ ಪ್ರಕಾರಗಳಲ್ಲೂ ಬಹು ಮುಖ್ಯವೂ ಗಮನಾರ್ಹವೂ ಆದ ನವೀನ ವಿಧಾನಗಳೂ ಹೊಸ ಹೊಸ ದೃಷ್ಟಿಕೋನಗಳೂ ಮೂಡಿಬಂದುವು; ಹೊಸ ಶಾಖೆಗಳೇ ಬೆಳೆಯತೊಡಗಿದುವು. ಬೀಜಗಣಿತಕ್ಕೂ ಗಣಿತ ವಿಶ್ಲೇಷಣೆಗೂ ಆಧಾರವಾಗಿರುವ ನೈಸರ್ಗಿಕ ಸಂಖ್ಯಾ ವ್ಯವಸ್ಥೆಯನ್ನು ಗಣಸಿದ್ಧಾಂತದ ಪರಿಕಲ್ಪನೆಗಳಿಂದ ಹೇಗೆ ರಚಿಸಿದ್ದಾರೆಂದು ಈಗ ತಾನೇ ನೋಡಿದ್ದೇವೆ. ಆಧುನಿಕ ಬೀಜಗಣಿತದ ಪ್ರಗತಿ ಗಣಸಿದ್ಧಾಂತದ ಪರಿಕಲ್ಪನೆಗಳನ್ನೂ ವಿಧಾನಗಳನ್ನೂ ಅನುಸರಿಸುತ್ತದೆ. ಒಂದು ಗಣದಲ್ಲಿ ಒಂದು ಅಥವಾ ಇನ್ನೂ ಅಧಿಕ ಸಂಖ್ಯೆಯಲ್ಲಿ ದ್ವಿಗುಣ ಪರಿಕರ್ಮಗಳನ್ನು ವ್ಯಾಖ್ಯಿಸಿ ಅವು ಅನುಸರಿಸಬೇಕಾಗಿರುವ ಕೆಲವು ನಿಯಮಗಳನ್ನು ಆದ್ಯುಕ್ತಿಗಳಾಗಿಟ್ಟುಕೊಂಡು ತರ್ಕಯುಕ್ತವಾದ ವಾದಸರಣಿಯಿಂದ ಸಾಧ್ಯವಾಗುವಷ್ಟು ಪ್ರಮೇಯ ಮತ್ತು ಉಪಪ್ರಮೇಯ ಮುಂತಾದ ಎಲ್ಲ ಫಲಗಳನ್ನೂ ಪಡೆಯುತ್ತ ಹೋಗುವ ಸೃಷ್ಟಿಶೀಲ ಪದ್ಧತಿಯೇ ಆಧುನಿಕ ಬೀಜಗಣಿತದ ಮುಖ್ಯ ಮಾರ್ಗ.

ಜ್ಯಾಮಿತಿಯ ಪ್ರಗತಿಯಲ್ಲಿ ಗಣಸಿದ್ಧಾಂತದ ಕೊಡುಗೆ ಅತ್ಯಂತ ಗಮನಾರ್ಹವಾದ ವಿಷಯ. ಗ್ರೀಕರ ಕಾಲದಲ್ಲಿ ಯೂಕ್ಲಿಡೀಯ ಜ್ಯಾಮಿತಿಯಲ್ಲಿ ವಿವಿಧ ರೇಖಾಕೃತಿಗಳು ವಿಶ್ವದಲ್ಲಿ ಚಲಿಸುವ ಬಿಂದುಗಳ ಪಥಗಳು ಎಂದು ಪರಿಗಣಿಸಲಾಗಿತ್ತು. ಅವುಗಳ ಪರಸ್ಪರ ಸರ್ವಸಮತೆ (ಕಾಂಗ್ರುಯೆನ್ಸ್) ವಿಚಾರವೇ ಇಲ್ಲಿನ ಪ್ರಧಾನ ವಿಷಯವಾಗಿತ್ತು. ಇದಕ್ಕೆ ಸಂಬಂಧಿಸಿದ ಆಕೃತಿಗಳ ಗುಣವಿಶೇಷಗಳ ಅಧ್ಯಯನವೇ ಈ ಗಣಿತದ ಮುಖ್ಯ ಗುರಿಯಾಗಿತ್ತು. ಕಾಲಕ್ರಮೇಣ ಎರಡು ಸರ್ವಸಮವಾಗಿರುವ ರೇಖಾಕೃತಿ ಕೊಟ್ಟರೆ ಒಂದನ್ನೊಂದಕ್ಕೆ ಪರಸ್ಪರವಾಗಿ ಪರಿವರ್ತಿಸುವ ಎಲ್ಲ ಚಿತ್ರಣಗಳಿಂದ ಏರ್ಪಡುವ ಗ್ರೂಪುಗಳ ಅಧ್ಯಯನ ಜ್ಯಾಮಿತಿಯ ಪ್ರಧಾನ ವಿಷಯವಾಯಿತು. ಈ ವಿವಿಧ ಗ್ರೂಪುಗಳ ಹೆಸರುಗಳಲ್ಲೇ ಯೂಕ್ಲಿಡೀಯ ಜ್ಯಾಮಿತಿಯ ಜೊತೆಗೆ ಇನ್ನೂ ಅನೇಕ ಪ್ರಕಾರದ ಜ್ಯಾಮಿತಿಗಳು ರೂಪುಗೊಂಡವು. ಈಚೆಗೆ ಜ್ಯಾಮಿತಿಯ ಅಧ್ಯಯನದಲ್ಲಿ ಗಣಸಿದ್ಧಾಂತ ತನ್ನದೇ ಆಧ ಹೊಸವಿಧಾನಗಳನ್ನು ರೂಢಿಗೆ ತಂದಿದೆ. ಹೀಗಾಗಿ ಬಲು ಅನಿರ್ದಿಷ್ಟವಾಗಿ ಹೆಸರಿಸಲಾಗಿದ್ದ ವಿಶ್ವ ಎಂಬುದನ್ನು ಒಂದು ದತ್ತ ವಿಶ್ವಗಣವೆಂದು ಭಾವಿಸಲಾಯಿತು. ಇದರ ಧಾತುಗಳನ್ನು ಬಿಂದುಗಳೆಂದು ಕರೆದರು. ಇದರಲ್ಲಿನ ಒಂದು ಬಗೆಯ ಸಮುಚಿತ ಉಪಗಣಗಳನ್ನು (ಸರಳ) ರೇಖೆಗಳೆಂದೂ ಇನ್ನೊಂದು ಬಗೆಯ ಸಮುಚಿತ ಉಪಗಣಗಳನ್ನು ಸಮತಲಗಳೆಂದೂ ಕರೆಯಲಾಯಿತು. ವಿಶಿಷ್ಟಗುಣಗಳನ್ನು ಹೊಂದಿರುವ ಬೇರೆ ಬೇರೆ ಸಮುಚಿತ ಉಪಗಣಗಳನ್ನು ರೇಖಾಕೃತಿಗಳು ಎಂದು ವ್ಯಾಖ್ಯಿಸಲಾಯಿತು. ಇಲ್ಲಿನ ಬಿಂದು, ರೇಖೆ, ಮತ್ತು ಸಮತಲಗಳಿಗೆ ಇರಬಯಸಲಾದ ಪರಸ್ಪರ ಸಂಬಂಧಗಳನ್ನು ಆದ್ಯುಕ್ತಿಗಳೆಂದು ಕರೆದು ಅವುಗಳ ಮೂಲಕ ತಾರ್ಕಿಕವಾದ ವಾದಸರಣಿಯಿಂದ ದೊರೆಯುವ ಪ್ರಮೇಯಗಳ ವ್ಯವಸ್ಥೆಯನ್ನೇ ಒಂದು ಜ್ಯಾಮಿತಿ ಎಂದು ಹೇಳಲಾಯಿತು. ಮೂಲಭಾವನೆಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡುತ್ತ ಹೋದರೆ ಬೇರೆ ಬೇರೆ ಜ್ಯಾಮಿತಿಗಳು ದೊರೆಯುತ್ತವೆ. ಇದರಿಂದ ಯೂಕ್ಲಿಡೀಯ ಜ್ಯಾಮಿತಿಯ ಜೊತೆಗೆ ಅಯೂಕ್ಲಿಡೀಯ, ವಿಕ್ಷೇಪ, ಅಫೈನ್, ಸರ್ವಸಮತೆ ಮುಂತಾದ ಅನೇಕ ಬಗೆಯ ಜ್ಯಾಮಿತಿಗಳು ಮೂರ್ತಿವೆತ್ತುವು. ಟಾಪಾಲಜಿ ಎಂಬ ಒಂದು ನವೀನಪ್ರಕಾರದ ಗಣಿತಶಾಖೆ ಬೆಳೆಯಿತು. ಈ ಶಾಖೆಯಲ್ಲಿ ಬೀಜಗಣಿತ, ಗಣಿತ ವಿಶ್ಲೇಷಣೆ ಹಾಗೂ ಜ್ಯಾಮಿತಿಗಳ ಸಂಯೋಗವನ್ನು ಕಾಣಬಹುದು.

ಹೀಗೆ ಗಣಸಿದ್ಧಾಂತದ ಪರಿಕಲ್ಪನೆಗಳು, ವಿಧಾನಗಳು ಮತ್ತು ಪರಿಭಾಷೆ ಗಣಿತದ ಎಲ್ಲ ಶಾಖೆಗಳಿಗೂ ಒಂದು ಸಾಮಾನ್ಯ ಭಾಷೆ ಮತ್ತು ಅಧ್ಯಯನ ಕ್ರಮವನ್ನು ಅಳವಡಿಸಿಕೊಟ್ಟಿವೆ. (ಡಿ.ವಿ.ಆರ್.)

**ಗಣಿ** : ನೆಲದ ಅಡಿಯಲ್ಲಿ ಇರಬಹುದಾದ ಖನಿಜವನ್ನು ಅರಸಲೆಂದು ಮತ್ತು ಖನಿಜ ದೊರೆತಾಗ ಅದನ್ನು ಹೊರತೆಗೆಯಲೆಂದು ತೋಡಿದ ಕೂಪ (ಮೈನ್). ಖನಿಜದ ಸ್ವರೂಪ, ಅದು ದೊರೆಯುವ ಆಕರ ಮುಂತಾದವನ್ನು ಆಧರಿಸಿ ಗಣಿ ಅನಾವೃತವಾಗಿರಬಹುದು ಇಲ್ಲವೇ ಭೂಗತವಾಗಿರಬಹುದು ಇಲ್ಲವೇ ಮಿಶ್ರವಾಗಿರಬಹುದು. ಇವನ್ನು ಅನುಸರಿಸಿ ಗಣಿ ಕೆಲಸದಲ್ಲೂ ಮೂರು ಮುಖ್ಯ ಪ್ರಭೇದಗಳು ಇವೆ (**ನೋಡಿ– ಗಣಿಗಾರಿಕೆ**). (ಎಂ.ಎಸ್‌ಯು.)

**ಗಣಿ ಅಪಘಾತ** : ಕೈಗಾರಿಕಾ ಅಪಘಾತಗಳಲ್ಲೆಲ್ಲ ಅತ್ಯಂತ ಅಪಾಯಕಾರಿಯೂ ತೀವ್ರ ಸ್ವರೂಪದ್ದೂ ಆದ್ದು ಗಣಿಗಳಲ್ಲಿಯ ಅಪಘಾತ. ಇದಕ್ಕೆ ಈ ಕೈಗಾರಿಕೆಯ ಸ್ವರೂಪವೇ ಮುಖ್ಯವಾದ ಕಾರಣ. ಗಣಿಗಾರಿಕೆಯಲ್ಲಿ ಅಪಘಾತದಿಂದ ಮೃತರಾಗುವವರ ಸಂಖ್ಯೆ ಕೂಡ ಇತರ ಕೈಗಾರಿಕೆಗಳಿಗೆ ಹೋಲಿಸಿದರೆ ಹೆಚ್ಚು, ನೆಲದಡಿಯಲ್ಲಿರುವ ಅದಿರು ತೆಗೆಯುವ ಕೆಲಸದಲ್ಲಿ ತೊಡಗಿದಾಗ ಅನಿರೀಕ್ಷಿತವಾದ ಅಪಾಯಗಳು ಬಂದೊದಗುವುದು ಸಹಜ. ಅಪಘಾತದ ಸ್ವರೂಪ ಗಣಿಯಿಂದ ಗಣಿಗೆ ಭಿನ್ನವಾಗಿರುತ್ತದೆ. ಸ್ಫೋಟ, ಮಣ್ಣಿನ ಕುಸಿತ, ಮೇಲಿನಿಂದ ಭಾರವಾದ ವಸ್ತುವಿನ ಪತನ–ಇಂಥ ಅಪಘಾತಗಳಿಗೆ ಕಾರ್ಮಿಕರು ಈಡಾಗಬೇಕಾಗುತ್ತದೆ.

ಗಣಿಗಾರಿಕೆಯಲ್ಲಿ ಅಪಘಾತಗಳ ಸಾಧ್ಯತೆ ಹೆಚ್ಚಾಗಿರುವುದರಿಂದ ಇತರ ಕೈಗಾರಿಕೆಗಳಿಗಿಂತ ಇದರಲ್ಲಿ ಇವುಗಳ ವಿರುದ್ಧ ಹೆಚ್ಚಿನ ರಕ್ಷಣೆಯನ್ನೊದಗಿಸುವುದು ಅತ್ಯಂತ ಅವಶ್ಯಕ. ಎಲ್ಲ ರಾಷ್ಟ್ರಗಳೂ ಗಣಿ ಕಾನೂನುಗಳ ಮೂಲಕ ಅಪಘಾತಗಳ ವಿರುದ್ಧ ಕಾರ್ಮಿಕನಿಗೆ ರಕ್ಷಣೆಯನ್ನೊದಗಿಸುತ್ತಿವೆ. ಗಣಿಗಳಲ್ಲಿ ಅಪಘಾತ ನಡೆಯದಂತೆ ವಿಶೇಷವಾದ ಎಚ್ಚರಿಕೆ ವಹಿಸುವುದು ಅಗತ್ಯ. ಗಣಿಯೊಳಗೆ ಉತ್ತಮವಾದ ಬೆಳಕಿರುವಂತೆ ನೋಡಿಕೊಳ್ಳುವುದು, ಆಸ್ಫೋಟಕಗಳನ್ನು ಎಚ್ಚರಿಕೆಯಿಂದ ಉಪಯೋಗಿಸುವುದು, ಗಣಿ ಉತ್ಪಾದಿತ ವಸ್ತುಗಳನ್ನು ಜಾಗರೂಕತೆಯಿಂದ ಮೇಲಕ್ಕೆ ಸಾಗಿಸುವುದು, ಶೋಧಪ್ರದೇಶಗಳನ್ನು ಉತ್ತಮವಾಗಿಟ್ಟಿರುವುದು– ಈ ಕ್ರಮಗಳನ್ನು ಪ್ರತಿಯೊಂದು ಗಣಿಯಲ್ಲೂ ಅನುಸರಿಸಬೇಕಾಗುತ್ತದೆ. ಎಷ್ಟೇ ಎಚ್ಚರಿಕೆಯಿಂದಿದ್ದರೂ ಅಪಘಾತಗಳು ಸಂಭವಿಸುವುದರಿಂದ ಅವಕ್ಕೆ ಈಡಾದವರಿಗೆ ಕಾನೂನಿನ ಮೂಲಕ ಪರಿಹಾರ ದೊರಕಿಸಿಕೊಡಲಾಗುತ್ತದೆ. ಗಣಿ ಅಪಘಾತಗಳು ಮತ್ತು ಅವುಗಳ ಪರಿಣಾಮವಾಗಿ ಉಂಟಾಗುವ ಸಾವು, ಹಾನಿ ಇವುಗಳ ಬಗ್ಗೆ ಪ್ರತಿಯೊಂದು ರಾಷ್ಟ್ರದಲ್ಲೂ ಕರಾರುವಾಕ್ಕಾದ ಅಂಕಿ ಅಂಶಗಳನ್ನು, ಅಪಘಾತದ ವಿರುದ್ಧ ರಕ್ಷಣೆ ದೊರಕಿಸಿಕೊಡುವ ಉದ್ದೇಶದಿಂದ, ಸಂಗ್ರಹಿಸಲಾಗುತ್ತಿದೆ.

ಅಂಕಿ ಅಂಶಗಳಿಂದ ವ್ಯಕ್ತವಾಗುವಂತೆ ಅನೇಕ ಸುರಕ್ಷಣೆಯ ಕ್ರಮಗಳಿಂದಾಗಿ ಗಣಿ ಅಪಘಾತದಿಂದ ತೀವ್ರವಾಗಿ ಅಪಾಯಕ್ಕೀಡಾಗುವವರ ಸಂಖ್ಯೆ ಕಡಿಮೆಯಾಗುತ್ತ ಬಂದಿದೆ. ಭಾರತದಲ್ಲಿ ಕಲ್ಲಿದ್ದಲು ಗಣಿಗಳಲ್ಲಿ ಅತ್ಯಂತ ಹೆಚ್ಚಿನ ಅಪಘಾತಗಳು ನಡೆಯುತ್ತವೆ. ಚಾವಣಿ ಕುಸಿತ ಹೆಚ್ಚಿನ ಅಪಘಾತಗಳಿಗೆ ಕಾರಣವಾಗಿದೆ. ಅನಂತರದ ಕಾರಣಗಳೆಂದರೆ ಆಸ್ಫೋಟನೆಗಳು, ಗಣಿಯ ಒಳಗಣ ಸಾರಿಗೆ ಅಪಘಾತಗಳು, ವಿದ್ಯುತ್ ಅಪಾಯಗಳು ಇತ್ಯಾದಿ.

1952ರ ಗಣಿ ಕಾಯಿದೆ ಭಾರತದಲ್ಲಿ ಗಣಿ ಕಾರ್ಮಿಕರಿಗೆ ಅಪಘಾತಗಳ ವಿರುದ್ಧ ಅನೇಕ ರಕ್ಷಣೆಗಳನ್ನೊದಗಿಸಿಕೊಡುತ್ತಿದೆ. ಈ ಕಾಯಿದೆ ಗಣಿಗಳಲ್ಲಿ ಕಾರ್ಮಿಕರನ್ನು ಅಪಘಾತದಿಂದ ರಕ್ಷಿಸಲು ಯಾವ ಯಾವ ಸೌಲಭ್ಯಗಳನ್ನು ಅವರಿಗೆ ದೊರಕಿಸಿಕೊಡಬೇಕು ಎಂಬುದನ್ನು ವಿವರವಾಗಿ ಗೊತ್ತುಪಡಿಸಿದೆ. ಇದಲ್ಲದೆ 1963ರ ಜುಲೈಯಲ್ಲಿ ಗಣಿಗಳಲ್ಲಿ ಕಾರ್ಮಿಕ ಸಂರಕ್ಷಣೆಗಾಗಿ ಒಂದು ರಾಷ್ಟ್ರೀಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಗಣಿ ಮಾಲೀಕರು, ಗಣಿ ಕಾರ್ಮಿಕರು ಮತ್ತು

ವ್ಯವಸ್ಥಾಪಕರು ಪ್ರಾತಿನಿಧ್ಯ ಪಡೆದಿರುತ್ತಾರೆ. ಅಪಘಾತಗಳ ವಿರುದ್ಧ ಸಂರಕ್ಷಣೆಯ ಕ್ರಮಗಳ ಬಗ್ಗೆ ಕಾರ್ಮಿಕರಿಗೆ ತಿಳಿವಳಿಕೆ ನೀಡುವುದು ಈ ಸಮಿತಿಯ ಮುಖ್ಯ ಕಾರ್ಯ. ಗಣಿ ಅಪಘಾತಗಳ ಬಗ್ಗೆ ಪ್ರಸಾರ ಕಾರ್ಯ ಕೈಗೊಳ್ಳುವುದಲ್ಲದೆ, ಗಣಿ ಉದ್ಯಮಿಗಳಿಗೆ ಸರಿಯಾದ ತಿಳಿವಳಿಕೆ ಉಂಟಾಗುವಂತೆ ತರಬೇತಿ ಕೂಡ ನೀಡುತ್ತದೆ. ಈ ಬಗ್ಗೆ ಒಂದು ಮಾಸಿಕೆಯನ್ನೂ ಇದು ಪ್ರಕಟಿಸುತ್ತಿದೆ.

ಕಲ್ಲಿದ್ದಲು ಗಣಿಗಳ ನಿಯಮಗಳ ಪ್ರಕಾರ ಕಲ್ಲಿದ್ದಲು ಗಣಿಗಳಲ್ಲಿ ಅಪಾಯದ ವಿರುದ್ಧ ರಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇವು ಕಲ್ಲಿದ್ದಲು ಗಣಿಯಲ್ಲಿಯ ಸ್ಫೋಟ, ಬೆಂಕಿ ಮುಂತಾದ ಅಪಾಯಗಳ ವಿರುದ್ಧ ತತ್‍ಕ್ಷಣ ರಕ್ಷಣೆಯನ್ನೊದಗಿಸುತ್ತವೆ. 1923ರ ಕಾರ್ಮಿಕ ಪರಿಹಾರ ಕಾಯಿದೆ, 1948ರ ಉದ್ಯೋಗಿಗಳ ರಾಜ್ಯ ವಿಮಾ ಕಾಯಿದೆ ಇವು ತಮ್ಮ ವ್ಯಾಪ್ತಿಯೊಳಗೆ ಬರುವ ಗಣಿ ಕಾರ್ಮಿಕರಿಗೆ ಕೈಗಾರಿಕಾ ಅಪಘಾತದ ವಿರುದ್ಧ ಧನ ಪರಿಹಾರವನ್ನು ಒದಗಿಸುತ್ತವೆ. ಗಣಿ ಕಾರ್ಮಿಕ ರಕ್ಷಣೆಯ ಕ್ರಮಗಳನ್ನು ಜಾಗರೂಕತೆಯಿಂದ ಅನುಸರಿಸಿದಲ್ಲಿ ಗಣಿ ಅಪಘಾತಗಳ ಸಂಖ್ಯೆಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು ಎನ್ನುವ ಅಂಶ ಅನೇಕ ಅಧ್ಯಯನಗಳಿಂದಲೂ ಅನುಭವದಿಂದಲೂ ಬೆಳಕಿಗೆ ಬಂದಿದೆ (**ನೋಡಿ– ಕೈಗಾರಿಕಾ ಅಪಘಾತಗಳು**). (ಸಿ.ಕೆ.ಆರ್.)

**ಗಣಿ ಕಾರ್ಮಿಕರು :** ಭೂಮಿಯ ಮೇಲೆ ಅಥವಾ ಒಳಗೆ ಇರುವ ಪ್ರಕೃತಿದತ್ತವಾದ ಖನಿಜ ಮತ್ತು ಇತರ ಸ್ವಾಭಾವಿಕ ಸಂಪತ್ತನ್ನು ಹೊರಕ್ಕೆ ತೆಗೆಯುವ ಕಾರ್ಯದಲ್ಲಿ ನೆರವಾಗಲು ಕೂಲಿಯ ಆಧಾರದ ಮೇಲೆ ನೇಮಕ ಹೊಂದುವ ದುಡಿಮೆಗಾರರು. ಕೃಷಿಯಂತೆ ಗಣಿ ಉದ್ಯಮವೂ ಪುರಾತನವಾದದ್ದು. ಹತ್ತೊಂಬತ್ತನೆಯ ಶತಮಾನಕ್ಕೆ ಮುಂಚೆ ಗಣಿಗಾರಿಕೆ ಅಲ್ಪಗಾತ್ರದ ಉದ್ಯಮವಾಗಿದ್ದು ಅದರಲ್ಲಿದ್ದ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿರುತ್ತಿತ್ತು. ಆದರೆ ಕೈಗಾರಿಕಾ ಕ್ರಾಂತಿಯಿಂದಲೂ 20ನೆಯ ಶತಮಾನದ ಪ್ರಥಮಾರ್ಧದಲ್ಲಿ ಉಂಟಾದ ಎರಡು ಮಹಾಯುದ್ಧಗಳಿಂದಾಗಿಯೂ ವಿಶ್ವರಾಷ್ಟ್ರಗಳ ಆರ್ಥಿಕ ಬೆಳವಣಿಗೆಯಿಂದಾಗಿಯೂ ಖನಿಜಗಳಿಗಾಗಿ ಬೇಡಿಕೆ ಬಹಳ ಅಧಿಕವಾದ್ದರಿಂದ ಗಣಿ ಉದ್ಯಮ ಬೃಹದ್ಗಾತ್ರ ಉದ್ಯಮವಾಗಿ ಪರಿವರ್ತನೆ ಹೊಂದಿ ಗಣಿ ಕಾರ್ಮಿಕರ ಸಂಖ್ಯೆಯೂ ಅನೇಕ ಪಟ್ಟು ಹೆಚ್ಚಾಯಿತು. ಇಂದು ಗಣಿ ಉದ್ಯಮದಲ್ಲಿ ಯಾಂತ್ರೀಕರಣ ಬಹಳವಾಗಿ ಬಳಕೆಗೆ ಬಂದಿದ್ದರೂ ಗಣಿ ಕಾರ್ಮಿಕರ ಸಂಖ್ಯೆ ಕುಗ್ಗಿಲ್ಲ.

ಗಣಿ ಕಾರ್ಮಿಕರು ಕೃಷಿ ಮತ್ತು ಕೈಗಾರಿಕಾ ಉದ್ಯಮಗಳಲ್ಲಿಯ ಕಾರ್ಮಿಕರಂತಲ್ಲ. ಅವರ ವೈಶಿಷ್ಟ್ಯ, ಅವರು ಕೆಲಸ ಮಾಡುವ ಸ್ಥಳ, ಅವರ ಕೆಲಸದ ಲಕ್ಷಣ ಇವು ಅವರ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ. ಗಣಿಗಳನ್ನು ತೋಡುವುದಕ್ಕೆ ಉಪಯೋಗಿಸುವ ಸ್ಫೋಟಕ ವಸ್ತುಗಳನ್ನು ಉಪಯೋಗಿಸುವುದರಿಂದ ಹಿಡಿದು, ಅದಿರನ್ನು ಹೊರಕ್ಕೆ ತೆಗೆಯುವವರೆಗೆ ಗಣಿಯಲ್ಲಿಯ ಎಲ್ಲ ಕೆಲಸಗಳಿಗೂ ನೈಪುಣ್ಯ ಇರಬೇಕಾದ್ದ ರಿಂದ ಗಣಿ ಕಾರ್ಮಿಕರು ತಂತಮ್ಮ ಕೆಲಸಗಳಲ್ಲಿ ಅನುಭವ ಹೊಂದಿದವರಾಗಿರಬೇಕು.

ಗಣಿ ಕಾರ್ಮಿಕರಿಗೆ ಇತರ ಉದ್ಯಮಗಳಲ್ಲಿಯ ಕಾರ್ಮಿಕರ ಸಂಪರ್ಕ ಹೆಚ್ಚಾಗಿರುವುದಿಲ್ಲ. ಅವರು ವಿಶೇಷವಾಗಿ ಭೂಮಿಯಡಿಯಲ್ಲಿ ಕೆಲಸ ಮಾಡುತ್ತಾರೆ. ಗಣಿಯೊಳಗೆ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಒಟ್ಟು ಗಣಿ ಕಾರ್ಮಿಕರ ಸಂಖ್ಯೆಯ ಶೇ. 60–70 ರಷ್ಟಿರುತ್ತದೆ. ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಗಣಿಯೊಳಗಡೆ ಹೆಂಗಸರು ಮತ್ತು ಮಕ್ಕಳನ್ನು ಕೆಲಸಕ್ಕೆ ನೇಮಿಸುವುದನ್ನು ನಿಷೇಧಿಸಲಾಗಿದೆ.

ಭೂಮಿಯೊಳಗಡೆ, ಕತ್ತಲೆಯಲ್ಲಿ, ಗಾಳಿಸಂಚಾರವಿಲ್ಲದಿರುವಲ್ಲಿ ಹಾಗೂ ಅಧಿಕ ಉಷ್ಣತೆಯಲ್ಲಿ ಕೆಲಸ ಮಾಡುವುದು ಶ್ರಮದಾಯಕವಾದದ್ದು. ಜೊತೆಗೆ ಅದು ಅಪಾಯಕಾರಿಯೂ ಹೌದು. ಗಣಿಗಳಲ್ಲಿ ವಿಷವಾಯು ಉತ್ಪಾದನೆ, ಉಸಿರು ಕಟ್ಟುವುದು, ಭೂ ಕುಸಿತ ಇತ್ಯಾದಿ ಘಟನೆಗಳು ಆಗಾಗ್ಗೆ ಸಂಭವಿಸುತ್ತಲೇ ಇರುತ್ತವೆ. ಅದರಿಂದ ಗಣಿ ಕಾರ್ಮಿಕರು ಸಾವು ನೋವುಗಳಿಗೆ ಈಡಾಗುವುದುಂಟು. ಅನೇಕ ಗಣಿಗಳಲ್ಲಿ ಕಾರ್ಮಿಕರು ಪ್ರತಿನಿಮಿಷವೂ ಸಾವನ್ನು ಎದುರು ನೋಡುತ್ತ ಕೆಲಸದಲ್ಲಿ ನಿರತರಾಗಿರುತ್ತಾರೆ. ಇತ್ತೀಚೆಗೆ ಪ್ರತಿಯೊಂದು ದೇಶದಲ್ಲೂ ಸರ್ಕಾರ ಮತ್ತು ಗಣಿ ಮಾಲೀಕರು ಕಾರ್ಮಿಕರ ರಕ್ಷಣೆಗಾಗಿ ಅನೇಕ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿರುವುದರಿಂದ ಅಪಘಾತಗಳ ಸಂಖ್ಯೆ ಇಳಿಯುತ್ತಿದೆ. ಆದರೂ ಅವನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿಲ್ಲ. ಗಣಿಗಳಲ್ಲಿಯ ಅಪಘಾತಗಳ ಭೀಕರ ಪರಿಣಾಮವನ್ನು ತಗ್ಗಿಸಲು ಕೈಗೊಂಡಿರುವ ಮುಂಜಾಗ್ರತೆ ಕ್ರಮಗಳಲ್ಲಿ ಅಪಘಾತ ವಿಮೆ ಮುಖ್ಯವಾದದ್ದು.

ಗಣಿ ಕೆಲಸ ಕೆಲವು ಆರ್ಥಿಕ ಮತ್ತು ಸಾಮಾಜಿಕ ವೈಲಕ್ಷಣ್ಯಗಳಿಂದ ಕೂಡಿದ್ದು. ಗಣಿ ಕಾರ್ಮಿಕರಿಗೆ ಇತರ ಎಲ್ಲ ಉದ್ಯಮಗಳ ಕಾರ್ಮಿಕರಿಗಿಂತ ಹೆಚ್ಚು ವೇತನ ಮತ್ತು ಸೌಲಭ್ಯಗಳನ್ನೊದಗಿಸಿ ಅವರನ್ನು ಆಕರ್ಷಿಸಬೇಕಾಗುತ್ತದೆ. ಗಣಿ ಉದ್ಯಮದಲ್ಲಿ ಕಾರ್ಮಿಕರ ಸರಬರಾಯಿ ಮತ್ತು ಬೇಡಿಕೆಗಳನ್ನು ಸರಿದೂಗಿಸುವುದು ಅನೇಕ ವೇಳೆ ಕಷ್ಟ. ಈ ಮಾತು ಗಣಿ ಉದ್ಯಮವಿರುವ ಎಲ್ಲ ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅನ್ವಯಿಸುತ್ತದೆ. ಗಣಿ ಕಾರ್ಮಿಕರು ಅತ್ಯಂತ ಪ್ರತಿಕೂಲಕರ ಸನ್ನಿವೇಶದಲ್ಲಿ ಕೆಲಸ ಮಾಡುವುದರಿಂದ ಅವರಲ್ಲಿ ಜೀವದ ಹಾಗೂ ಜೀವನದ ಮೇಲಿನ ವ್ಯಾಮೋಹ ಅಷ್ಟಾಗಿ ಇರದೆ ಒಂದು ವಿಧವಾದ ಅಸಡ್ಡೆಯ ಮನೋಭಾವ ಉಂಟಾಗುವುದು ಸಹಜ. ಇದರಿಂದಾಗಿ ಅವರು ಸಾಮಾಜಿಕ ದೃಷ್ಟಿಯಿಂದ ಅನಪೇಕ್ಷಣೀಯವೆಂದು ಪರಿಗಣಿಸಲಾದ – ಉದಾಹರಣೆಗೆ ಮದ್ಯಪಾನ, ಜೂಜು ಮುಂತಾದ– ಚಟುವಟಿಕೆಗಳಲ್ಲಿ ನಿರತರಾಗುವುದುಂಟು. ಅಷ್ಟೇ ಅಲ್ಲದೆ ಗಣಿ ಕಾರ್ಮಿಕರು ಸೀಮಿತ ಸ್ಥಳಗಳಲ್ಲಿ ಹೆಚ್ಚು ಸಂಖ್ಯೆಗಳಲ್ಲಿ ಕೆಲಸ ಮಾಡುವುದರಿಂದ ಕೃಷಿ ಕಾರ್ಮಿಕರಿಗಿಂತಲೂ ಅವರಲ್ಲಿ ಸಂಘಟನೆಯ ಶಕ್ತಿ ಮಿಗಿಲಾಗಿರುತ್ತದೆ. ಗಣಿಕಾರ್ಮಿಕರ ಸಂಘಗಳು ಕೃಷಿ ಕಾರ್ಮಿಕರ ಸಂಘಗಳಿಗಿಂತಲೂ ಬಲಿಷ್ಠವಾಗಿರುತ್ತವೆ. ಸಾಮಾನ್ಯವಾಗಿ ಗಣಿ ಕಾರ್ಮಿಕರಲ್ಲಿ ತೀವ್ರವಾದಿಗಳೇ ಹೆಚ್ಚು ಸಂಖ್ಯೆಯಲ್ಲಿ ಇರುವುದುಂಟು.

ಮೇಲಿನ ಎಲ್ಲ ಕಾರಣಗಳಿಂದಾಗಿ ಗಣಿ ಕಾರ್ಮಿಕರನ್ನು ವಿಶ್ವದ ಎಲ್ಲ ದೇಶಗಳಲ್ಲೂ ಇತರ ಕಾರ್ಮಿಕ ವರ್ಗಗಳಿಂದ ಪ್ರತ್ಯೇಕಿಸಿ, ಅವರಿಗೆ ಅನ್ವಯವಾಗುವಂತೆ ಪ್ರತ್ಯೇಕವಾದ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಈ ಕಾನೂನುಗಳು ಗಣಿ ಕಾರ್ಮಿಕರ ಕ್ಷೇಮಾಭಿವೃದ್ಧಿಯನ್ನೇ ಮೂಲ ಉದ್ದೇಶವಾಗಿಟ್ಟುಕೊಂಡು, ಅವರು ತಮ್ಮ ಜೀವನದಲ್ಲಿ ಹತಾಶ ಮನೋಭಾವ ತೋರೆದು ತಮ್ಮ ಉದ್ಯಮದಲ್ಲಿ ದಕ್ಷತೆಯಿಂದ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿವೆ. ಅಮೆರಿಕ, ಗ್ರೇಟ್ ಬ್ರಿಟನ್, ಜರ್ಮನಿ ಮುಂತಾದ ದೇಶಗಳಲ್ಲಿ ಪ್ರತ್ಯೇಕ ಗಣಿ ಕಾರ್ಮಿಕ ಕಾಯಿದೆಗಳು ಬಹಳ ಹಿಂದಿನಿಂದಲೂ ಜಾರಿಯಲ್ಲಿವೆ. ಭಾರತದಂಥ ದೇಶಗಳಲ್ಲಿ ಅವು ಇತ್ತೀಚಿನ ವರ್ಷಗಳಲ್ಲಿ ಜಾರಿಗೆ ಬಂದಿವೆ. ಭಾರತದಲ್ಲಿ 1901ರಲ್ಲಿ ಭಾರತದ ಗಣಿಗಳ ಕಾಯಿದೆ ಮೊದಲು ಜಾರಿಗೆ ಬಂತು. ಗಣಿಗಳೊಳಗೆ ಕೆಲವು ಸುರಕ್ಷತಾ ಕ್ರಮಗಳನ್ನು ಜಾರಿಗೆ ತರುವುದೇ ಈ ಕಾಯಿದೆಯ ಮುಖ್ಯ ಉದ್ದೇಶವಾಗಿತ್ತು. ಇದರ ಹಲವಾರು ನ್ಯೂನತೆಗಳನ್ನು ಹೋಗಲಾಡಿಸಿ ಗಣಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಾಧಿಸುವ ದೃಷ್ಟಿಯಿಂದ ಒಂದು ಸಮಗ್ರ ಗಣಿ ಕಾಯಿದೆಯನ್ನು ಜಾರಿಗೆ ತರುವುದಕ್ಕಾಗಿ ಭಾರತ ಸರ್ಕಾರ ಅನೇಕ ಸಲ – ಎಂದರೆ 1919, 1935, 1949, 1951 ಮತ್ತು 1959ರಲ್ಲಿ–ಗಣಿಗಳ ಕಾಯಿದೆಯನ್ನು ಪರಿಷ್ಕರಿಸಿತು. 1959ರ ಭಾರತದ ಗಣಿಗಳ ಕಾಯಿದೆ ಹೆಚ್ಚು ವ್ಯಾಪಕವಾದ್ದು. ಇದರಲ್ಲಿ ಅನೇಕ ಸುಧಾರಣಾ ಮತ್ತು ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗಿದೆ. ಹೆಂಗಸರು, 15 ವರ್ಷಗಳೊಳಗಿರುವ ಮಕ್ಕಳು– ಇವರನ್ನು ಗಣಿಯೊಳಗೆ ಕೆಲಸಕ್ಕೆ ನೇಮಿಸುವುದನ್ನು ನಿಷೇಧಿಸಲಾಗಿದೆ. ಹೆಂಗಸರನ್ನು ರಾತ್ರಿಯ ವೇಳೆಯಲ್ಲಿ ಗಣಿಯ ಹೊರಗಿನ ಕೆಲಸದಲ್ಲಿ ನೇಮಿಸುವುದನ್ನು ನಿಷೇಧಿಸಲಾಗಿದೆ. ವಾರಕ್ಕೆ ಒಟ್ಟು 48 ಗಂಟೆಗಳ ಕಾಲ ಕೆಲಸ– ಎಂದರೆ ನಡುವೆ ದಿನಕ್ಕೆ ಕನಿಷ್ಠ ಅರ್ಧ ಗಂಟೆ ವಿರಾಮವೂ ಸೇರಿ ಗಣಿಯೊಳಗಿನ ಕಾರ್ಮಿಕರಿಗೆ ದಿನಕ್ಕೆ 8 ಗಂಟೆಯಂತೆಯೂ, ಗಣಿಯ ಮೇಲಿನ ಕಾರ್ಮಿಕರಿಗೆ ದಿನಕ್ಕೆ 9 ಗಂಟೆಯಂತೆಯೂ ಕೆಲಸದ ವೇಳೆಯನ್ನು ನಿರ್ಧರಿಸಲಾಗಿದೆ. ವಾರದ ರಜಾ ದಿನದ ಜೊತೆಗೆ ಇತರ ರಜಾ ಸೌಲಭ್ಯಗಳುಂಟು. 1948ರ ಕಾರ್ಖಾನೆ ಕಾಯಿದೆಯ ಮಾದರಿಯಲ್ಲಿ ಗಣಿ ಕಾರ್ಮಿಕರಿಗೂ ಸುರಕ್ಷತೆ, ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯನ್ನು ಉತ್ತೇಜಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿಧಿಸಲಾಗಿದೆ. ಗಣಿ ಕಾರ್ಮಿಕರಿಗೆ ಉಪಾಹಾರ ಗೃಹ, ಶಿಶುಪಾಲನಾ ಗೃಹ, ಸ್ನಾನ ಗೃಹ, ಆಂಬ್ಯುಲೆನ್ಸ್, ಪ್ರಥಮ ಚಿಕಿತ್ಸೆಯ ಕೊಠಡಿ ಮುಂತಾದ ಸೌಕರ್ಯಗಳನ್ನೊದಗಿಸಬೇಕು. ಈ ಕ್ರಮಗಳನ್ನೆಲ್ಲ ಗಣಿ ಕಾರ್ಮಿಕರ ಹಿತದೃಷ್ಟಿಯಿಂದ ಜಾರಿಗೆ ತರಲು 1959ರ ಭಾರತದ ಗಣಿಗಳ ಕಾಯಿದೆ ಗಣಿ ಮಾಲೀಕರನ್ನು ಒತ್ತಾಯಪಡಿಸುತ್ತದೆ.

ಗಣಿ ಕಾರ್ಮಿಕರಿಗೆಲ್ಲ ಸಾಮೂಹಿಕವಾಗಿ ಅನ್ವಯಿಸುವ ಭಾರತದ ಗಣಿಗಳ ಕಾಯಿದೆಯ ಜೊತೆಗೆ ಬೇರೆ ಬೇರೆ ಗಣಿಗಳ ಕಾರ್ಮಿಕರಿಗೆ ವಿಶಿಷ್ಟವಾಗಿ ಅನ್ವಯಿಸುವ ಕೆಲವು ಪ್ರತ್ಯೇಕ ಗಣಿ ಕಾಯಿದೆಗಳೂ ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಜಾರಿಗೆ ಬಂದಿವೆ. ಉದಾಹರಣೆಗಾಗಿ, ಅಭ್ರಕ ಗಣಿ ಕಾರ್ಮಿಕರ ಯೋಗಕ್ಷೇಮ ಕಾಯಿದೆ (1946). ಕಲ್ಲಿದ್ದಲು ಗಣಿ ಕಾರ್ಮಿಕರ ಯೋಗಕ್ಷೇಮ ಕಾಯಿದೆ (1947), ಕಬ್ಬಿಣ ಅದಿರು ಗಣಿ ಕಾರ್ಮಿಕರ ಯೋಗಕ್ಷೇಮ ಕಾಯಿದೆ (1947), ಕಬ್ಬಿಣ ಅದಿರು ಗಣಿ ಕಾರ್ಮಿಕರ ಯೋಗಕ್ಷೇಮ ತೆರಿಗೆ ಕಾಯಿದೆ (1961)– ಇವು ಆಯಾ ಗಣಿ ಕಾರ್ಮಿಕರ ವಸತಿ ಸೌಕರ್ಯ, ವಿದ್ಯಾಭ್ಯಾಸ, ಮನೋರಂಜನೆ, ಸಾಂಸ್ಕೃತಿಕ ಚಟುವಟಿಕೆಗಳು ಮುಂತಾದ ಕಾರ್ಮಿಕ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು, ಆವಶ್ಯಕವಾದ ನಿಧಿಯನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿವೆ. ಇವೆಲ್ಲ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಭಾರತದಲ್ಲೂ ಗಣಿಕಾರ್ಮಿಕರ ಕ್ಷೇಮಸಾಧನೆಯ ಸಲುವಾಗಿ ಕೈಗೊಂಡಿರುವ ಪ್ರಯತ್ನಗಳಾಗಿವೆ. ಇಂದು ಗಣಿ ಕಾರ್ಮಿಕರ ಹಿತಸಾಧನೆಯಲ್ಲಿ ಸರ್ಕಾರ ದೃಢವಾದ ಆಸಕ್ತಿ ತಳೆದಿದೆ. (ಎಸ್.ಎನ್.ಎ.)

**ಗಣಿಗಲ ತೋರ :** ಲೆಸಿಥಿಡೇಸೀ ಕುಟುಂಬಕ್ಕೆ ಸೇರಿದ ಬ್ಯಾರಿಂಗ್‌ಟೋನಿಯ ರೇಸಿಮೋಸ ಎಂಬ ಶಾಸ್ತ್ರೀಯ ಹೆಸರಿನ ಮರ. ನೀವಾರ ಎಂಬುದು ಇದರ ಪರ್ಯಾಯ ನಾಮ. ಭಾರತ, ಮಲಯ, ಪಾಲಿನೇಷ್ಯ ದ್ವೀಪಸ್ತೋಮಗಳು, ಅಂಡಮಾನ್ ದ್ವೀಪಗಳು – ಇಲ್ಲೆಲ್ಲ ಇದರ ವ್ಯಾಪ್ತಿಯಿದೆ. ಸ್ವಾಭಾವಿಕವಾಗಿ ನದೀದಂಡೆಗಳಲ್ಲಿ ತಾನೇತಾನಾಗಿ ಬೆಳೆಯುತ್ತದೆ. ಭಾರತದಲ್ಲಿ ಹೆಚ್ಚು ಕಡಿಮೆ ಎಲ್ಲ ಕಡೆಗಳಲ್ಲೂ ಇದನ್ನು ಕಾಣಬಹುದು. ಸದಾ ಹಸುರಾಗಿರುವ ಜೋಲುರೆಂಬೆಗಳು ಈ ಮರದ ವೈಶಿಷ್ಟ್ಯ. ನಸುಗೆಂಪು ಬಣ್ಣದ

ಹೂ ಬಿಡುತ್ತದೆ. ಬೀಜಗಳಲ್ಲಿರುವ ಪಿಷ್ಟದ ಪರಿಣಾಮ ಹೆಚ್ಚು. ಈ ಪಿಷ್ಟವನ್ನು ಸಂಗ್ರಹಿಸಿ ಆಹಾರ ಪದಾರ್ಥವಾಗಿ ಬಳಸುವ ಪದ್ಧತಿ ಮಲಯದಲ್ಲಿ ಉಂಟು. ಅಲ್ಲದೆ ಮರದ ಎಳೆ ಎಲೆಗಳನ್ನು ಸಹ ತಿನ್ನುವುದಿದೆ. ಗಣಿಗಲ ತೋರ ಸಾಧಾರಣ ಗಾತ್ರದ ಸುಂದರ ಮರ. ಇದನ್ನು ಉದ್ಯಾನರಸ್ತೆಗಳ ಅಕ್ಕ ಪಕ್ಕಗಳಲ್ಲಿ ಬೆಳೆಸುತ್ತಾರೆ. ಇದರ ವೃದ್ಧಿ ಬೀಜಗಳ ಮೂಲಕ. ಬೀಜ, ಕಾಯಿ ಮತ್ತು ಬೇರುಗಳಿಗೆ ಔಷಧೀಯ ಗುಣಗಳಿವೆ. ಕಾಯಿಯನ್ನು ಕೆಮ್ಮು, ಉಬ್ಬಸ, ಅತಿಸಾರ ಮುಂತಾದ ಕಾಯಿಲೆಗಳ ನಿವಾರಣೆಗೂ ಬೀಜಗಳನ್ನು ಹಸುವಿನ ತುಪ್ಪದೊಂದಿಗೆ ಸೇರಿಸಿ ಅರೆದು ಕಾಡಿಗೆಯ ರೂಪದಲ್ಲಿ ಹಲವು ಬಗೆಯ ಕಣ್ಣುಬೇನೆಗಳಿಗೂ ಬಳಸುವುದಿದೆ. ಇದರ ಬೀಜ, ತೊಗಟೆಗಳಲ್ಲಿ ಮೀನು ಮತ್ತು ಕಾಡುಹಂದಿಗಳಿಗೆ ಮಾರಕವಾದ ವಿಷವಿರುವುದರಿಂದ ಆ ಪ್ರಾಣಿಗಳನ್ನು ಕೊಲ್ಲಲು ಇವನ್ನು ಉಪಯೋಗಿಸುತ್ತಾರೆ. (ಎಸ್.ಐ.ಎಚ್.)

**ಗಣಿಗಾರಿಕೆ :** ಭೂಮೇಲ್ಮೈಯಿಂದ ಹಾಗೂ ಭೂಮಿಯ ಒಳಗಿನಿಂದ ಖನಿಜಗಳನ್ನು ಹೊರತೆಗೆಯುವ ಕ್ರಿಯೆ (ಮೈನಿಂಗ್). ಸಾಮಾನ್ಯವಾಗಿ ಖನಿಜತೈಲ ಹಾಗೂ ಅನಿಲವನ್ನು ಪಡೆಯುವ ಉದ್ಯಮವನ್ನು ಪ್ರತ್ಯೇಕ ಕೈಗಾರಿಕೆ ಎಂದೇ ಪರಿಗಣಿಸುವುದು ವಾಡಿಕೆ. **(ನೋಡಿ– ಖನಿಜ ತೈಲ; ನೈಸರ್ಗಿಕಾನಿಲ).**

ಪ್ರಾಚೀನ ಮಾನವ ಮೊದಲಿಗೆ ಉಪಯೋಗಿಸಿದ ಭೂವಸ್ತುಗಳೆಂದರೆ ಬೆಣಚು ಕಲ್ಲು ಮತ್ತು ಚಕಮಕಿಕಲ್ಲು. ಬೆಂಕಿ ಹೊತ್ತಿಸುವುದಕ್ಕೆ ಇವು ಬೇಕಾಗಿದ್ದುವು. ಜೇಡಿಮಣ್ಣಿನಿಂದ ಮಡಕೆ ಇಟ್ಟಿಗೆ ಮಾಡುವುದೂ ಅತಿ ಪ್ರಾಚೀನವಾದ ಕೈಗಾರಿಕೆಯಾಗಿತ್ತು. ಕಟ್ಟಡಕ್ಕಾಗಿ ಕಲ್ಲುಗಳನ್ನು ಬಂಡೆಯಿಂದ ಪ್ರತ್ಯೇಕಿಸಿ ಅವುಗಳಿಗೆ ಆಕಾರ ಕೊಟ್ಟು ಜೋಡಿಸುವ ಕೈಗಾರಿಕೆ ಆಮೇಲೆ ಬೆಳೆಯಿತು. ಈಜಿಪ್ಟಿನಲ್ಲಿರುವ ಪಿರಮಿಡ್ ಒಂದಕ್ಕೆ ಸುಮಾರು ಒಂದೊಂದೂ 2–2.5 ಟನ್ ತೂಕದ 23,00,000 ಕಲ್ಲು ಚಪ್ಪಡಿಗಳು ಬೇಕಾಗಿದ್ದುವು. ಇವನ್ನು ಪಡೆಯಬೇಕಾದರೆ ಕಲ್ಲುಗಣಿಗಾರಿಕೆ ಎಷ್ಟು ಮುಂದುವರಿದಿತ್ತೆನ್ನುವುದನ್ನು ಊಹಿಸಬಹುದು. ಭಾರತದ ಪ್ರಾಚೀನ ದೇವಸ್ಥಾನಗಳು ವಿಶೇಷವಾಗಿ ಕಲ್ಲಿನಿಂದ ಕಡೆದವು. ಬಹು ತೂಕದ ಮತ್ತು ಕುಂದಿಲ್ಲದಂಥ ಕಲ್ಲನ್ನು ಬಂಡೆಯಿಂದ ಬೇರೆ ಮಾಡಿ ಅದನ್ನು ದೂರ ಸಾಗಿಸಿರುವುದನ್ನು ನೋಡಿದರೆ ಪ್ರಾಚೀನ ಭಾರತೀಯರು ಗಣಿಗಾರಿಕೆಯಲ್ಲಿ ಬಹಳ ಪರಿಣಿತರಾಗಿದ್ದರೆನ್ನುವುದು ಮನದಟ್ಟಾಗುತ್ತದೆ. ನಾಗರಿಕತೆ ಹೆಚ್ಚಿದಂತೆ ವಜ್ರ ವೈಡೂರ್ಯ ಮುಂತಾದ ರತ್ನಗಳಿಗೂ ಬೆಳ್ಳಿ ಬಂಗಾರದಂಥ ಲೋಹಗಳಿಗೂ ಪ್ರಾಮುಖ್ಯ ಬಂದಿತು. ರತ್ನಗಳು ಎಲ್ಲಿ ಹೇಗೆ ದೊರೆಯುತ್ತವೆ ಮತ್ತು ಅವುಗಳ ಜಾಡನ್ನು ಹಿಡಿದು ಸಾಗಿ ಅವುಗಳನ್ನು ಪಡೆಯುವುದು ಹೇಗೆ ಎನ್ನುವ ಕಲೆ ಬೆಳೆಯಿತು. ಪ್ರಾಚೀನ ಜನಾಂಗಗಳಲ್ಲಿ ಭಾರತೀಯರು, ಈಜಿಪ್ಷಿಯನ್ನರು, ಬ್ಯಾಬಿಲೋನಿಯರು ಮತ್ತು ಅಸ್ಸೀರಿಯನರು ಗಣಿಗಾರಿಕೆಯಲ್ಲಿ ತುಂಬ ಪರಿಶ್ರಮ ಗಳಿಸಿದ್ದರು. ವಜ್ರಕ್ಕಾಗಿಯೂ ಮಣಿ ರತ್ನಗಳಿಗಾಗಿಯೂ ಅನೇಕ ಕಡೆ ಅವರು ಕೂಪಗಳನ್ನು ತೋಡಿದ್ದರು. ಮೊದಲಿಗೆ ಚಿನ್ನ ಮತ್ತು ತಾಮ್ರ ಲೋಹಗಳು ನದಿಯ ಮೆಕ್ಕಲು ಮಣ್ಣಿನಲ್ಲಿ ಗಟ್ಟಿಗಳ ರೂಪದಲ್ಲಿ ಅವರಿಗೆ ದೊರೆತಿರಬೇಕು. ಇವುಗಳ ಜಾಡನ್ನು ಹಿಡಿದು ಅವು ಹುದುಗಿರುವ ಮೂಲಶಿಲೆಗಳನ್ನು ಪುರಾತನರು ಗುರುತಿಸಿದರು. ಗಣಿಗಾರಿಕೆ ಹೀಗೆ ಆರಂಭವಾಯಿತು. ಭಾರತದಲ್ಲಿ ಕಾಣುವ ಅನೇಕ ಪುರಾತನ ಗಣಿಗಳು ಎರಡು ಸಾವಿರ ವರ್ಷಗಳಿಗೂ ಹಳೆಯವು. ರಾಯಚೂರಿನ ಹಟ್ಟಿಯ ಬಳಿ ಪುರಾತನ ಚಿನ್ನದ ಗಣಿ 182 ಮೀ ಆಳಕ್ಕೂ ಹೆಚ್ಚು ಇಳಿದಿತ್ತು. ಭಾರತದಲ್ಲಿ ಮೌರ್ಯರ ಕಾಲದಲ್ಲಿ ಗಣಿಗಾರಿಕೆ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆ ಕಾಲದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಗಣಿಗಾರಿಕೆಯನ್ನು ಯಾವ ರೀತಿ ನಡೆಸಬೇಕು, ಕಲ್ಲಿನಿಂದ ಲೋಹವನ್ನು ಪ್ರತ್ಯೇಕಗೊಳಿಸುವ ಬಗೆ ಹೇಗೆ, ಗಣಿಗಳಿಂದ ರಾಜಾದಾಯವನ್ನು ಹೇಗೆ ಪಡೆಯಬೇಕು ಇವೇ ಮುಂತಾದ ವಿವರಗಳಿವೆ. ಈ ರೀತಿ ಬಹುಮುಖವಾಗಿ ಭಾರತದಲ್ಲಿ ಬೆಳೆದಿದ್ದ ಗಣಿಗಾರಿಕೆ ಮುಂದೆ ಹೇಳ ಹೆಸರಿಲ್ಲದಂತೆ ಮಾಯವಾಗಿ ಹೋದುದರ ಖಚಿತ ಕಾರಣ ತಿಳಿಯದು. ಪ್ರಾಯಶಃ ದಂಡೆತ್ತಿ ಬಂದ ಮುಸಲ್ಮಾನರಿಗೆ ಗಣಿಗಳಿರುವ ಸ್ಥಳ ಗೊತ್ತಾಗಬಾರದೆಂದು ಎಲ್ಲವನ್ನು ಮುಚ್ಚಿಬಿಟ್ಟರೋ ಏನೋ. ಆಗ ನೆಲಸಮವಾದ ಗಣಿಗಾರಿಕೆ ಭಾರತದಲ್ಲಿ ಮತ್ತೆ ಬಹುಕಾಲದವರೆಗೆ ತಲೆ ಎತ್ತಲೇ ಇಲ್ಲ.

ಹಿರೋಡಾಟಸ್, ಪ್ಲೀನಿ ಮೊದಲಾದ ಚರಿತ್ರಕಾರರು ಯುರೋಪಿನ ಅನೇಕ ಹಳೆಯ ಗಣಿಗಳ ವಿವರಗಳನ್ನು ಕೊಟ್ಟಿದ್ದಾರೆ. ಖನಿಜಗಳ ಲಕ್ಷಣ ಅವುಗಳ ಶೋಧನೆ ಈ ವಿಷಯವಾಗಿ ಬಹುಮಟ್ಟಿನ ಜ್ಞಾನ 17, 18ನೆಯ ಶತಮಾನಗಳಲ್ಲಿ ಶೇಖರವಾಗಿ 19, 20ನೆಯ ಶತಮಾನಗಳಲ್ಲಿ ಗಣಿಗಾರಿಕೆ ವಿಶೇಷವಾಗಿ ಬೆಳೆಯಿತು. ಯಂತ್ರೋಪಕರಣಗಳ ಸಹಾಯದಿಂದ ಅಗಾಧ ಮೊತ್ತದಲ್ಲಿ ಖನಿಜಗಳನ್ನು ಪಡೆಯಲು ಅವಕಾಶವಾಯಿತು. ಲೋಹಗಳ ಮತ್ತು ಖನಿಜಗಳ ಬಳಕೆ ದಿನದಿನ ಹೆಚ್ಚುತ್ತ ಹೋಯಿತು.

**ಸ್ಥಾನ ನಿರ್ಧರಣೆ :** ಒಂದು ಸ್ಥಳದಲ್ಲಿ ಗಣಿ ಕೆಲಸವನ್ನು ಕೈಗೊಳ್ಳಬೇಕಾದರೆ ಮೊದಲು ನಿರ್ಧರಿಸಬೇಕಾದ ಅಂಶಗಳಿವು : 1 ಒಂದು ಗಣಿಕೆಲಸದ ಖರ್ಚು ಅಥವಾ ಕ್ವಾರೀ ಕೆಲಸದ ವೆಚ್ಚ. 2 ಗಣಿಯಿಂದ ತೆಗೆಯುವ ಖನಿಜದಲ್ಲಿರುವ ಉಪಯುಕ್ತ ಅದಿರಿನ ಪ್ರಮಾಣ. 3 ಅದಿರನ್ನು ಅದರೊಡನೆ ಬೆರೆತಿರುವ ಕಲ್ಲು, ಮಣ್ಣು ಮೊದಲಾದ ಕಶ್ಮಲಗಳಿಂದ ಬೇರ್ಪಡಿಸಲು ಆಗುವ ವೆಚ್ಚ. 4 ಗಿರಾಕಿಗಳಿಗೆ ಬೇಕಾದ ರೂಪದಲ್ಲಿ ಅದಿರನ್ನು ಸಿದ್ಧಪಡಿಸಲು ಆಗುವ ವೆಚ್ಚ. 5 ಅದಿರನ್ನು ಗಣಿಯಿಂದ ಗಿರಾಕಿಗೆ ತಲಪಿಸಲು ಆಗುವ ಸಾಗಣೆ ವೆಚ್ಚ.

ಇವುಗಳಲ್ಲಿ ಮೊದಲು ತಿಳಿಸಿರುವ ಗಣಿ ಕೆಲಸದ ಖರ್ಚನ್ನು ಅನೇಕ ಅಂಶಗಳು ನಿರ್ಧರಿಸುತ್ತವೆ. ಅನಾವೃತ ಗಣಿ (ಓಪನ್ ಕ್ಯಾಸ್ಟ್ ಮೈನ್) ವಿಧಾನಗಳಲ್ಲಿ ಖರ್ಚು ಒಂದು ತೆರನಾದರೆ ಭೂಗತಗಣಿ (ಅಂಡರ್‌ಗ್ರೌಂಡ್ ಮೈನ್) ವಿಧಾನಗಳಲ್ಲಿ ಅದು ಬೇರೆಯೇ ಆಗಿರುತ್ತದೆ. ಭೂತಲದಲ್ಲಿ ಕೆಲಸ ಮಾಡಿದರೆ (ತೆರೆದಗಣಿ) ಸಾಮಾನ್ಯವಾಗಿ ಬಹಳ ಖರ್ಚಾಗದೆ ಇದ್ದರೂ ಅದಿರಿನ ಮೇಲಿರುವ ಹೊದಿಕೆ, (ಹೊರೆ, ಟೋಪಿ) ಸಾಕಷ್ಟು ದಪ್ಪವಾಗಿದ್ದರೆ ಇಲ್ಲವೇ ಗಟ್ಟಿಯಾಗಿದ್ದರೆ ಗಣಿಯಿಂದ ತೆಗೆಯುವ ಅದಿರಿನ ಪ್ರತಿ ಟನ್ನಿಗೂ ಬೆಲೆ ಹೆಚ್ಚುತ್ತದೆ. ಭೂಗತ ಗಣಿ ಕೆಲಸದಲ್ಲಿ ಗಣಿಯ ಆಳ, ಅಲ್ಲಿರುವ ಶಿಲೆಯ ಕಠಿಣತೆ, ಅಲ್ಲಿ ಮಾಡಬೇಕಾದ ನೀರ್ಗಾಲುವೆ ವ್ಯವಸ್ಥೆ, ಮೇಲ್ಛಾಗಕ್ಕೆ ಅಗತ್ಯವಾದ ಆಧಾರ ಕೊಡಲು ತಗಲುವ ವೆಚ್ಚ, ಗಣಿಯೊಳಕ್ಕೆ ವಾಯು, ಬೆಳಕು ಸರಬರಾಜು ಮಾಡಲು ಆಗುವ ಖರ್ಚು, ಗಣಿಯೊಳಕ್ಕೆ ಇಳಿದು ಕೆಲಸಮಾಡುವ ಜನರ ಸೌಕರ್ಯಗಳು ಮತ್ತು ರಕ್ಷಣೆಗೆ ತಗಲುವ ಖರ್ಚು, ಗಣಿ ಪ್ರದೇಶಕ್ಕೆ ಆಹಾರ ಇತ್ಯಾದಿ ಅವಶ್ಯ ವಸ್ತುಗಳ ಸರಬರಾಜಿನ ಖರ್ಚು, ಕೆಲಸಗಾರರ ವೇತನ ಇವನ್ನೆಲ್ಲ ಗಮನಿಸಬೇಕು.

**ಖನಿಜಗಳು ಸಿಕ್ಕುವ ರೀತಿ :** ಖನಿಜಗಳು ಪದರಗಳಂತೆ ಮತ್ತು ಸಿರಗಳಂತೆ ಸಿಕ್ಕುತ್ತವೆ. ಪದರಗಳಂತೆ ಹಬ್ಬಿರುವ ನಿಕ್ಷೇಪಗಳಲ್ಲಿ ಕಬ್ಬಿಣದ ಅದಿರುಗಳು, ಕಲ್ಲಿದ್ದಲು ಮತ್ತು ಅದರ ಪ್ರಭೇದಗಳು, ಕಲ್ಲುಪ್ಪು, ಮೊದಲಾದ ಲವಣಗಳು, ಕಲ್ಲೆಣ್ಣೆ ಇರುವ ಷೇಲ್ ಶಿಲೆ ಇವು ಮುಖ್ಯವಾದುವು. ಕಲ್ಲುಬಂಡೆಗಳ ಮಧ್ಯ ಎಳೆಗಳಂತೆ ರೇಕುಗಳಂತೆ

ನಾಳಗಳಂತೆ ಮತ್ತು ಸಿರಗಳಂತೆ ಚಿನ್ನ, ಬೆಳ್ಳಿ, ತಾಮ್ರ, ಸೀಸ, ಸತು ಮೊದಲಾದ ಲೋಹಖನಿಜಗಳು ಹೀಗೆ ಸಿಕ್ಕುತ್ತವೆ. ಕಲ್ನಾರು, ಗ್ರಾಫೈಟ್ ಮೊದಲಾದ ಅಲೋಹ ಖನಿಜಗಳೂ ಹೀಗೆ ಸಿಕ್ಕುತ್ತವೆ. ಪದರಗಳ ಮೇಲಿರುವ ಹೊರೆಯನ್ನು ಮೊದಲು ತೆಗೆದು ದೂರಕ್ಕೆ ಸಾಗಿಸಿ, ಅದಿರಿರುವ ನಿಕ್ಷೇಪದಲ್ಲಿ ಗುಂಡಿಗಳನ್ನು ತೋಡಿ ಕಬ್ಬಿಣದ ಅದಿರು, ಸುದ್ದೆ ಮಣ್ಣು, ಸುಣ್ಣಕಲ್ಲು, ಮೊದಲಾದವನ್ನು ತೆಗೆಯಬಹುದು. ಖನಿಜ ಸಿರ ಮತ್ತು ಎಳೆಗಳನ್ನು ಅವು ಸಿಕ್ಕುವ ಕಲ್ಲಿನ ಬಂಡೆಯನ್ನು ಒಡೆದು ಬೇರ್ಪಡಿಸ ಬೇಕಾಗುತ್ತದೆ. ಕೆಲವು ನಿಕ್ಷೇಪಗಳಲ್ಲಿ ಖನಿಜಗಳ ಹರಳುಗಳು ಚದರಿ ಹೋಗಿರುತ್ತವೆ ಅಥವಾ ಲೋಹಗಳು ಸೂಕ್ಷ್ಮ ಕಣಗಳಂತೆ ಸಿಕ್ಕುತ್ತವೆ. ಸಾಮಾನ್ಯವಾಗಿ ಚಿನ್ನದ ಗಣಿಗಳಲ್ಲಿ ಕೆಲಸ ಮಾಡುವವರು ತಾವು ತೋಡಿ ತೆಗೆಯುವ ಚಿನ್ನವನ್ನೇ ನೋಡಿರುವುದಿಲ್ಲ. ಬಹಳ ಸಾಮರ್ಥ್ಯಯುತವಾದ ಸೂಕ್ಷ್ಮದರ್ಶಕ ಯಂತ್ರಗಳ ಸಹಾಯದಿಂದ ಮಾತ್ರ ಆ ಚಿನ್ನದ ಕಣಗಳನ್ನು ನೋಡಬಹುದಷ್ಟೆ. ಅಂಥ ಸಂದರ್ಭಗಳಲ್ಲಿ ಲೋಹಕ್ಕೂ ಶಿಲೆಗೂ ಇರುವ ಪ್ರಮಾಣ ಅತ್ಯಲ್ಪ. ತಾಮ್ರದ ಗಣಿಗಳಲ್ಲಿ ಸಾಮಾನ್ಯವಾಗಿ ಲೋಹಾಂಶ ಶೇ.2 ಕ್ಕಿಂತ ಕಡಿಮೆ ಇರುತ್ತದೆ. ಶೇ.0.7 ತಾಮ್ರವಿದ್ದರೆ 1 ಟನ್ ಲೋಹವನ್ನು ಪಡೆಯಲು ಸುಮಾರು 140 ಟನ್ ಶಿಲೆಯನ್ನು ತೋಡಬೇಕಾಗುತ್ತದೆ. ಅಂಥ ಅದಿರನ್ನು ತೆಗೆದು ದೂರದೇಶಗಳಿಗೆ ಸಾಗಿಸುವ ವೆಚ್ಚ ದುಬಾರಿ ಆಗುವುದರಿಂದ ಅನೇಕ ಲೋಹದ ಅದಿರುಗಳನ್ನು ಗಣಿಯಲ್ಲಿ ಇಲ್ಲವೇ ಅದರ ಸಮೀಪದಲ್ಲಿ ಬೇಡದ ಶಿಲಾವಸ್ತುಗಳಿಂದ ಬೇರ್ಪಡಿಸಿ ಸಾಂದ್ರೀಕರಿಸಿ ಕಳುಹಿಸುತ್ತಾರೆ. ಇದಕ್ಕೆ ಲೋಹವಿದ್ಯೆಯ ಸಹಕಾರ ಅತ್ಯಗತ್ಯ.

ಖನಿಜಗಳ ಶುದ್ಧೀಕರಣ : ಕೆಲವು ಮುಖ್ಯ ವಿಧಾನಗಳನ್ನು ಇಲ್ಲಿ ವಿವರಿಸಿದೆ.

**1 ಸಾರವರ್ಧನೆ :** ಖನಿಜಗಳನ್ನು ನೀರಿನಲ್ಲಿ ಕೈಯಿಂದಾಗಲಿ ಯಂತ್ರದಿಂದಾಗಲಿ ತೊಳೆದು ಅವುಗಳ ಜೊತೆಯಲ್ಲಿರುವ ಕಲ್ಲು, ಮಣ್ಣು ಮೊದಲಾದ ವಸ್ತುಗಳನ್ನು ಬೇರ್ಪಡಿಸಬಹುದು. ಗಣಿಯ ಹೊರಗೆ ಗಂಡಸರೂ ಹೆಂಗಸರೂ ಕೈಯಿಂದಲೇ ದಪ್ಪ ದಪ್ಪ ಅದಿರಿನ ಚೂರುಗಳನ್ನು ಅನುಪಯುಕ್ತ ವಸ್ತುಗಳಿಂದ ಆರಿಸಿ ಬೇರ್ಪಡಿಸಬಹುದು; ಅಥವಾ ಜಂದರಿಗಳಿಂದ ಸೋಸಿ ಬೇರೆ ಬೇರೆ ದರ್ಜೆಗಳಿಗೆ ವಿಂಗಡಿಸಬಹುದು. ಗಣಿಯ ಒಳಗೆ ಅದಿರನ್ನು ಗಂಡಸರು ಆರಿಸಿ ಮೇಲಕ್ಕೆ ಸಾಗಿಸಬಹುದು.

**2 ಚೂರ್ಣೀಕರಣ :** ಅದಿರು ಸಿಕ್ಕುವ ಶಿಲೆಯನ್ನು ಜಜ್ಜಿ ಪುಡಿಮಾಡಿ ತೊಳೆದರೆ ಹಗುರವಾದ ಮಣ್ಣು ಕೊಚ್ಚಿಕೊಂಡು ಹೋಗುವುದು; ಅದಿರಿನ ತೂಕವಾದ ಕಣಗಳು ಉಳಿಯುತ್ತವೆ. ಜಾಂಬಿಯದ ತಾಮ್ರಗಣಿಗಳಲ್ಲಿ ಹೀಗೆ ಮಾಡುತ್ತಾರೆ.

**3 ಪ್ಲವನ (ಫ್ಲೊಟೇಷನ್) :** ಚೆನ್ನಾಗಿ ಅರೆದು ಪುಡಿ ಮಾಡಿದ ಅದಿರನ್ನು ಎಣ್ಣೆಯಂತಿರುವ ನೊರೆಯಿಂದ ಕೂಡಿದ ರಾಸಾಯನಿಕ ದ್ರವವಸ್ತುವಿನಲ್ಲಿ ಹಾಕಿ ಕಲಕುತ್ತಾರೆ. ಆಗ ಮಣ್ಣಿನಂತಿರುವ ವಸ್ತು ತಳಕ್ಕೆ ಮುಳುಗುತ್ತದೆ. ಅದಿರಿನ ಕಣಗಳು ಮೇಲಕ್ಕೆ ಬರುವ ನೊರೆಯ ರಾಶಿಗೆ ಅಂಟಿಕೊಳ್ಳುತ್ತವೆ. ಈ ಮುದ್ದೆಯನ್ನು ಕೆನೆಯಂತೆ ತೆಗೆದು ತೊಳೆದು ಒಣಗಿಸುತ್ತಾರೆ. ಕಶ್ಮಲಗಳಿಂದ ಅದಿರನ್ನು ಈ ಪ್ರಕಾರ ಬೇರ್ಪಡಿಸಿದರೆ ಲೋಹಾಂಶ ಹೆಚ್ಚುತ್ತದೆ. ಇದಕ್ಕೆ ಸಾರವರ್ಧಿತ ಅದಿರು (ಓರ್ ಕಾನ್ಸೆಂಟ್ರೇಟ್) ಎಂದು ಹೆಸರು. ಪ್ಲವನ ವಿಧಾನದಲ್ಲಿ ಬೇರೆ ಬೇರೆ ರಾಸಾಯನಿಕ ವಸ್ತುಗಳನ್ನು ಉಪಯೋಗಿಸಿ ಎರಡು ಮೂರು ಲೋಹಗಳನ್ನು ಬೇರ್ಪಡಿಸಬಹುದು. ಮಿಶ್ರಲೋಹದ ಅದಿರುಗಳ ಬಳಕೆಯಲ್ಲಿ ಇದಕ್ಕೆ ಪ್ರಾಶಸ್ತ್ಯ ಉಂಟು. ತಕ್ಕ ಇಂಧನ ಅಥವಾ ವಿದ್ಯುಚ್ಛಕ್ತಿ ಗಣಿಯ ಬಳಿಯಲ್ಲೇ ದೊರೆತರೆ ಈ ಅದಿರಿನ ಸಾರವನ್ನು ಕುಲುಮೆಯಲ್ಲಿ ಕರಗಿಸಿ ಲೋಹವನ್ನು ಬೇರ್ಪಡಿಸಬಹುದು. ಬಳಿಕ ಇದನ್ನು ಶುದ್ಧಿ ಮಾಡಿ, ಸಂಸ್ಕರಿಸಿ ಬೇಕಾದಂತೆ ಬಳಸಿಕೊಳ್ಳಬಹುದು.

**ಇತರ ವಿಧಾನಗಳು :** ಇವುಗಳಲ್ಲದೆ ವಾಯು ಇಲ್ಲವೇ ಸೂಜಿಗಲ್ಲು ಇಲ್ಲವೇ ರಾಸಾಯನಿಕ ವಿಧಾನಗಳಿಂದ ಕೂಡ ಅದಿರಿನ ಲೋಹಾಂಶವನ್ನು ಹೆಚ್ಚಿಸಬಹುದು.

**ಪ್ರಪಂಚದ ಮಾರುಕಟ್ಟೆ ಮತ್ತು ಗಣಿಗಾರಿಕೆಗೆ ಇರುವ ಸಂಬಂಧ :** ಪ್ರಪಂಚದ ಮಾರುಕಟ್ಟೆಯಲ್ಲಿ ಒಂದು ಲೋಹದ ಬೆಲೆಯಲ್ಲಿ ಆಗುವ ವ್ಯತ್ಯಾಸಗಳಿಂದ ಅತ್ಯಲ್ಪ ಪ್ರಮಾಣದ ಲೋಹಾಂಶವಿರುವ ಅದಿರಿನ ಗಣಿಯನ್ನು ಮುಚ್ಚಬೇಕಾಗಿಬರಬಹುದು; ಅಥವಾ ಅಲ್ಲಿ ಮತ್ತೆ ಕೆಲಸಮಾಡುವ ಅವಕಾಶ ಒದಗಬಹುದು. ಹಿಂದೆ ಉಪೇಕ್ಷಿಸಿದ್ದ ನಿಕ್ಷೇಪಗಳನ್ನು ಅದಿರುಗಳ ಸಾರವರ್ಧನ ಮತ್ತು ಸಂಸ್ಕರಣ ವಿಧಾನಗಳಲ್ಲಿ ಇತ್ತೀಚೆಗೆ ಆಗಿರುವ ಸಂಶೋಧನೆಗಳಿಂದ ಬಳಸುವ ಅವಕಾಶ ಉಂಟಾಗಬಹುದು. ಅನೇಕ ಅದಿರುಗಳಲ್ಲಿ ರಂಜಕ ಮೊದಲಾದ ಕಶ್ಮಲಗಳನ್ನು ಸುಲಭವಾಗಿ ಬೇರ್ಪಡಿಸುವಂಥ ಹೊಸ ರಾಸಾಯನಿಕ ವಿಧಾನಗಳು ಈಚೆಗೆ ಪ್ರಕಟವಾಗಿವೆ. ಬೇರೆ ಹೊಸ ವಿಧಾನಗಳು ಮುಂದೆಯೂ ಬೆಳಕಿಗೆ ಬರಬಹುದು. ಅವನ್ನು ಅನುಸರಿಸಿ ಹಿಂದೆ ಕಸವೆಂದು ಕೈ ಬಿಟ್ಟಿದ್ದ ಅದಿರುಗಳನ್ನು ಬಳಸುವ ಯೋಗ ಒದಗಬಹುದು.

ಚಿನ್ನ, ಯುರೇನಿಯಂ, ಪ್ಲಾಟಿನಂ ಮುಂತಾದ ಪ್ರಶಸ್ತ ಲೋಹಗಳ ಅದಿರುಗಳಲ್ಲಿ ಅತ್ಯಲ್ಪ ಲೋಹಾಂಶವಿದ್ದರೂ ಲಾಭವುಂಟು. ದಕ್ಷಿಣ ಆಫ್ರಿಕದ ರ್‍ಯಾಂಡ್ ಗಣಿಗಳಲ್ಲಿ ಒಂದು ಟನ್ ಶಿಲೆಯಲ್ಲಿ ಸರಾಸರಿ 1/3 ಔನ್ಸ್ ಚಿನ್ನವಿದ್ದರೂ ಅಲ್ಲಿ ಗಣಿಗಾರಿಕೆ ಲಾಭದಾಯಕವಾಗಿದೆ. ಅಲಾಸ್ಕದ ಒಂದು ಗಣಿಯಲ್ಲಿ ಒಂದು ಔನ್ಸ್ ಚಿನ್ನಕ್ಕೆ 25 ಟನ್ ಶಿಲೆಯನ್ನು ಬಳಸಿಯೂ ಲಾಭ ಬರುತ್ತಿದೆ. ಹೀಗೆಯೇ ಒಂದು ಖನಿಜಕ್ಕೆಂದು ಆರಂಭಿಸಿದ ಗಣಿ ಕಾಲಗತಿಯಲ್ಲಿ ಮತ್ತೊಂದು ಖನಿಜಕ್ಕೆ ಪ್ರಮುಖ ಆಕರವಾಗಬಹುದು. ಉದಾಹರಣೆಗೆ ಕಾರ್ನ್‌ವಾಲ್ ತಾಮ್ರದ ಗಣಿಗಳ ಮೇಲ್ಭಾಗದಲ್ಲಿ ತಾಮ್ರ ಹೆಚ್ಚು ಸಿಕ್ಕುತ್ತಿತ್ತು. ನಡುವೆ ತಾಮ್ರ-ತವರಗಳ ಮಿಶ್ರ ಅದಿರು ದೊರಕಿತು. ಆಳದಲ್ಲಿ ತವರವೇ ಹೆಚ್ಚಾಗಿತ್ತು. ಹಿಂದೆ ಲಾಭದಾಯಕವಲ್ಲವೆಂದೋ ಅನುಪಯುಕ್ತವೆಂದೋ ಕೈ ಬಿಟ್ಟಿದ್ದ ಲೋಹ ಖನಿಜಗಳಿಗೆ ಮುಂದೆ ಗಿರಾಕಿ ದೊರೆಯಬಹುದು. ಉದಾಹರಣೆಗೆ ಬೊಲಿವಿಯದಲ್ಲಿದ್ದ ಹಿಂದಿನ ಚಿನ್ನದ ಗಣಿಗಳು ಈಗ ತವರವನ್ನು ಸರಬರಾಜು ಮಾಡುತ್ತಿವೆ. ಗಾಳಿ ಬಿಸಿಲಿಗೆ ಜಗ್ಗದೆ ಕುಗ್ಗದೆ ತಮ್ಮ ಹೊಳಪನ್ನು ಸದಾ ಉಳಿಸಿಕೊಳ್ಳುವ ಚಿನ್ನ ಬೆಳ್ಳಿಗಳಿಗೆ ಬಹಳ ಕಾಲದಿಂದಲೂ ಬೆಲೆ ಹೆಚ್ಚು. ಚಿನ್ನ ಪತ್ತೆಯಾದ್ದರಿಂದಲೇ ದಕ್ಷಿಣ ಆಫ್ರಿಕದಲ್ಲಿ ಗಣಿಗಳಿಂದ ಬಂದರುಗಳಿಗೆ ಹೊಗೆಬಂಡಿಯ ಸಂಪರ್ಕ ಉಂಟಾಯಿತು. ಚಿನ್ನಕ್ಕಾಗಿಯೇ ಯುರೋಪಿನಿಂದ ಜನರು ಆಸ್ಟ್ರೇಲಿಯಕ್ಕೆ ವಲಸೆ ಹೋದರು. ಚಿನ್ನದಿಂದಲೇ ಕ್ಯಾಲಿಫೋರ್ನಿಯ ಶ್ರೀಮಂತವಾದ ರಾಷ್ಟ್ರವಾಯಿತು. ಕರ್ನಾಟಕ ಚಿನ್ನದ ನಾಡು ಎಂಬ ಹೆಸರನ್ನು ಗಳಿಸಿತು. ಚಿನ್ನಕ್ಕಾಗಿ ಅತ್ಯಂತ ಶೀತ ಪ್ರದೇಶಗಳಲ್ಲೂ ಮರುಭೂಮಿಗಳಲ್ಲೂ ಬಹಳ ಆಳವಾದ ಪ್ರದೇಶಗಳಲ್ಲೂ (ಉದಾಹರಣೆಗೆ ಕೋಲಾರದ ಮತ್ತು ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ್‌ನ ಚಿನ್ನದ ಗಣಿಗಳು) ಜನರು ದುಡಿಯುತ್ತಾರೆ. ಚಿನ್ನದೊಡನೆ ಮತ್ತು ಸೀಸ, ತವರ, ತಾಮ್ರದ ಅದಿರುಗಳೊಡನೆ ಬೆಳ್ಳಿ ಸಿಕ್ಕುತ್ತವೆ. ಪ್ಲಾಟಿನಂ ದಕ್ಷಿಣ ಆಫ್ರಿಕದ ಚಿನ್ನದ ಗಣಿಗಳಲ್ಲಿ ಸಿಕ್ಕುತ್ತದೆ. ಇಂಥ ಅಮೂಲ್ಯ ಖನಿಜಗಳಿಗೆ ಗಿರಾಕಿ ಯಾವಾಗಲೂ ಹೆಚ್ಚಾಗಿರುತ್ತದೆ.

**ವರ್ಗೀಕರಣ :** ಖನಿಜ ಸಂಪತ್ತಿನ ವರ್ಗೀಕರಣ ಪರಿಪರಿಯಾಗಿದೆ. ಖನಿಜಗಳು ಪ್ರಕೃತಿಯಲ್ಲಿ ಸಿಕ್ಕುವ ರೀತಿ, ಅವುಗಳ ರಾಸಾಯನಿಕ ಸ್ವಭಾವ ಮತ್ತು ಸಹಚರ ಖನಿಜಗಳು, ಅವುಗಳ ಉತ್ಪತ್ತಿ ಇತ್ಯಾದಿ ನಾನಾಂಶಗಳನ್ನು ಅನುಸರಿಸಿ ಅವನ್ನು ವಿಂಗಡಿಸಬಹುದು. ಸರ್ವ ಸಾಮಾನ್ಯವಾಗಿ ಕೈಗಾರಿಕೆಗೆ ಉಪಯೋಗವಾಗುವಂಥ ಒಂದು ರೀತಿಯಲ್ಲಿ ಭೂಮಿಯ ಮೇಲ್ಮೈಯ ಸಂಪತ್ತನ್ನು ಕೆಳಗೆ ವಿಂಗಡಿಸಿದೆ :

**1 ಲೋಹ ಖನಿಜಗಳು :** ಚಿನ್ನ, ಬೆಳ್ಳಿ, ಪ್ಲಾಟಿನಂ, ತಾಮ್ರ, ಕಬ್ಬಿಣ, ಸೀಸ, ತವರ, ಸತು, ಆಂಟಿಮೊನಿ, ಮ್ಯಾಂಗನೀಸ್, ಕ್ರೋಮಿಯಂ, ಟಂಗ್‌ಸ್ಟನ್ ಮೊದಲಾದ ಲೋಹಗಳ ಅದಿರುಗಳು. ಇವುಗಳಲ್ಲಿ ಕಬ್ಬಿಣಕ್ಕೆ ಸಂಬಂಧಪಟ್ಟ ಅದಿರುಗಳೆಂದೂ ಎರಡು ಮುಖ್ಯ ವಿಭಾಗಗಳು ಬಳಕೆಯಲ್ಲಿವೆ.

**2 ಅಲೋಹ ಖನಿಜಗಳು :** ಕೈಗಾರಿಕೆಗೆ ಉಪಯುಕ್ತವಾದ ಖನಿಜಗಳು. ಕಲ್ಲಿದ್ದಲು, ಲಿಗ್ನೈಟ್ ಪೆಟ್ರೋಲಿಯಂ, ಜಿಪ್ಸಂ, ಸುಣ್ಣಕಲ್ಲು, ಸುದ್ದೆ ಮಣ್ಣು, ಇತರ ಮಣ್ಣುಗಳು, ಪಮಿಸ್, ಕ್ಯಾಲ್ಸೈಟ್, ಫೆಲ್ಡ್‌ಸ್ಪಾರ್, ಟಾಲ್ಕ್, ಬಳಪದ ಕಲ್ಲು, ಬೆಣಚುಕಲ್ಲು, ಮ್ಯಾಗ್ನಸೈಟ್, ಡಾಲೊಮೈಟ್, ಘರ್ಷಕ ದ್ರವ್ಯಗಳಾದ ಕೊರಂಡಂ, ಗಾರ್ನೆಟ್, ಸ್ಟಾರೊಲೈಟ್ ಮೊದಲಾದವೂ ಕಲ್ನಾರು, ಅಭ್ರಕ ಬ್ಯಾರೈಟಿಸ್, ಗ್ರಾಫೈಟ್, ಫ್ಲೋರಸ್ಪಾರ್, ಗಂಧಕ, ಪಿರೈಟಿಸ್ (ಸುವರ್ಣ ಮುಖಿ) ಮತ್ತು ಉಪ್ಪುಗಳು.

**3 ಕಟ್ಟಡದ ಕಲ್ಲುಗಳು ಮತ್ತು ಅಲಂಕಾರಶಿಲೆಗಳು :** ಇವನ್ನು ಕ್ವಾರಿಗಳಲ್ಲಿ ತೆರೆದ ಗಣಿ ವಿಧಾನಗಳಿಂದ ತೆಗೆದು ಬಳಸುತ್ತಾರೆ. ಒಳ್ಳೆಯ ಮೆರುಗು ಕೊಡಬಹುದಾದ ಗ್ರಾನೈಟ್‌ನೈಸ್, ಅಮೃತ ಶಿಲೆ ಮೊದಲಾದವನ್ನು ಉಜ್ಜಿ ನಯವಾಗಿ ಹೊಳೆಯುವಂತೆ ಮಾಡಿ ಹೊರದೇಶಗಳಿಗೆ ಕಳುಹಿಸುತ್ತಾರೆ.

4 ನವರತ್ನಗಳು ಮತ್ತು ಆಭರಣಗಳಿಗೆ ಬಳಸುವ ಇತರ ಖನಿಜಗಳು.

**ಗಣಿಕೆಲಸದ ವಿಧಾನಗಳು :** ಗಣಿಗಾರಿಕೆಯ ರೀತಿ ಖನಿಜ ನಿಕ್ಷೇಪಗಳನ್ನು ಅನುಸರಿಸಿ ಇದೆ. ಇವುಗಳಲ್ಲಿ ತೆರೆದ ಗಣಿ ವಿಧಾನಗಳು, ಭೂಗತ ಗಣಿ ವಿಧಾನಗಳು ಮತ್ತು ಮಿಶ್ರ ವಿಧಾನಗಳು ಎಂಬ ಮೂರು ಬಗೆಗಳುಂಟು.

**ತೆರೆದ ಗಣಿ :** ಭೂಮಿಯ ಮೇಲ್ಮೈ ಅಥವಾ ಅದಕ್ಕಿಂತ ಸ್ವಲ್ಪವೇ ಆಳದಲ್ಲಿ ಸಿಕ್ಕುವ ಖನಿಜಗಳನ್ನು ಹೊರತೆಗೆಯಲು ಇಂಥ ಗಣಿಗಳನ್ನು ತೋಡುತ್ತಾರೆ. ಕೆಲವು ವೇಳೆ ಗುಡ್ಡಗಾಡು ಪ್ರದೇಶಗಳಲ್ಲಿ ಕಬ್ಬಿಣ, ಮ್ಯಾಂಗನೀಸ್ ಮುಂತಾದ ಅದಿರು ನಿಕ್ಷೇಪಗಳು ಸಿಗುವ ಸಾಧ್ಯತೆ ಉಂಟು. ಇಂಥ ನಿಕ್ಷೇಪಗಳನ್ನು ಕ್ಷಿತಿಜಕ್ಕೆ $70^0$ ಬಾಗುವಿನಲ್ಲಿ ಅಗೆಯುತ್ತಾರೆ. ಭೂಗತ ಗಣಿಯ ಕೆಲಸಕ್ಕಿಂತಲೂ ತೆರೆದ ಗಣಿ ಕೆಲಸ ಬಹು ಲಾಭದಾಯಕ, ಸರಳ, ಮತ್ತು ಸುರಕ್ಷಿತ. ಇದನ್ನು ಭೂಗತ ಗಣಿಗೆ ಹೋಲಿಸಿದಾಗ

ಇದರ ಮುಖ್ಯ ಉಪಯೋಗಗಳು ಹೀಗೆ ಇವೆ; 1. ನೆಲದ ಕೆಳಗೆ ಉಂಟಾಗಬಹುದಾದ ಭೂಕುಸಿತ ಅಥವಾ ಬಂಡೆ ಸಿಡಿತ ಇವು ಯಾವುವೂ ಇಲ್ಲಿಲ್ಲ; 2. ಕೃತಕ ವಾಯುಸಂಚಾರ ಇಲ್ಲಿ ಅನಾವಶ್ಯಕ; 3. ಹಗಲು ಹೊತ್ತಿನಲ್ಲಿ ಕೃತಕ ಬೆಳಕು ಇಲ್ಲಿ ಅನಾವಶ್ಯಕ; 4.

**ಗಣಿಯ ಒಳಗೆ ಯಂತ್ರಚಾಲಿತ ಬೈರಿಗೆಗಳಿಂದ ಕೊರೆಯುವಿಕೆ**

ಸಾಮಾನ್ಯವಾಗಿ ಭೂಗತ ಕಲ್ಲಿದ್ದಲು ಗಣಿಯಲ್ಲಿ ಕಂಡುಬರುವ ಮಿಥೇನ್ ಅಥವಾ ಕಲ್ಲಿದ್ದಲು ದೂಳಿನ ಆಸ್ಫೋಟನೆ ಇಲ್ಲಿಲ್ಲ; 5. ಪ್ರಕೃತಿಯ ಒಳ್ಳೆಯ ವಾಯು ಮತ್ತು ಬೆಳಕಿನ ಪರಿಣಾಮವಾಗಿ ಹೆಚ್ಚಿನ ಕಾರ್ಯಾಚರಣೆ ಇಲ್ಲಿ ಸಾಧ್ಯ.

ಮಳೆಗಾಲದಲ್ಲಿ ತೆರೆದ ಗಣಿಗಳಲ್ಲಿ ಸರಿಯಾದ ಕೆಲಸ ನಡೆಸಲಾಗದಿರುವುದು ಒಂದು ಮುಖ್ಯ ಅನನುಕೂಲ.

ತೆರೆದ ಗಣಿ ಕಾರ್ಯಾಚರಣೆಯನ್ನು ಸಾಮಾನ್ಯವಾಗಿ ತೋಳ್ಬಲ ಎಂದರೆ ಕರಚಲ (ಮ್ಯಾನುವಲ್) ಮತ್ತು ಯಂತ್ರಚಲ (ಮೆಕಾನಿಕಲ್) ಎಂಬುದಾಗಿ ವಿಭಾಗಿಸಬಹುದು. ಅನಾವಶ್ಯಕ ವಸ್ತುಗಳ ವಿನಿಯೋಗ, ಖನಿಜವನ್ನು ಹೊರತೆಗೆಯುವುದು ಸುರಂಗ ರಂಧ್ರ ಕೊರೆಯುವುದು ಇವೇ ಮುಂತಾದ ಕೆಲಸಗಳನ್ನು ಕರಚಲವಾಗಿಯೇ ನಡೆಸಲಾಗುವುದು. ಇಂಥ ಗಣಿಯಲ್ಲಿ ಅದಿರಿನ ಉತ್ಪಾದನೆ ಬಹಳ ಕಡಿಮೆ ಮತ್ತು ಇದು ಅಷ್ಟು ಲಾಭದಾಯಕವಲ್ಲ. ಪೂರ್ಣ ಯಂತ್ರಚಲ ಅನಾವೃತಗಣಿಯಲ್ಲಿ ಸುರಂಗರಂಧ್ರ ಕೊರೆಯುವುದರಿಂದ ಆರಂಭವಾಗಿ ಖನಿಜವನ್ನು ರೈಲು ಅಥವಾ ಹಡಗಿಗೆ ತುಂಬುವವರೆಗಿನ ಪ್ರತಿಯೊಂದು ಕೆಲಸವೂ ಯಂತ್ರಗಳಿಂದಲೇ ಆಗುತ್ತದೆ.

ಈ ಕೆಲಸಕ್ಕಾಗಿ ಉಪಯೋಗಿಸುವ ಮುಖ್ಯ ಯಂತ್ರಗಳೆಂದರೆ ಡ್ರ್ಯಾಗ್ ಲೈನ್ಸ್, ವ್ಯಾಗನ್ ಡ್ರಿಲ್ಸ್, ಡಂಪಿಂಗ್ ಟ್ರಕ್ಸ್, ಬಕೆಟ್ ವ್ಹೀಲ್ ಎಕ್ಸ್‌ಕವೇಟರ್ಸ್ ಇತ್ಯಾದಿ. ಒಂದು ತೆರೆದ ಗಣಿಯಲ್ಲಿ ಸಮಗ್ರ ಖನಿಜ ನಿಕ್ಷೇಪವನ್ನು ಒಂದೇ ಬಾರಿಗೆ ತೆಗೆಯುವುದು ಅಸಾಧ್ಯ.




**ಬೆಂಚುಗಳ ನಿರ್ಮಾಣವನ್ನು ತೋರಿಸುವ ಚಿತ್ರ. 1. ಅನಾವಶ್ಯಕ ವಸ್ತು, 2. ಸುರಂಗ ರಂಧ್ರ, 3.ಅದಿರು, 4.ಬೆಂಚು, 5. ಮುಖ, 6. ನಲ**

ಸುರಕ್ಷಿತತೆಯ ದೃಷ್ಟಿಯಿಂದ ಈ ನಿಕ್ಷೇಪವನ್ನು ಹಲವು ಬೆಂಚುಗಳನ್ನಾಗಿ (ಬೆಂಚಿಂಗ್) ವಿಂಗಡಿಸಿದ ಬಳಿಕ ಆ ಬೆಂಚುಗಳಲ್ಲಿ ಖನಿಜವನ್ನು ಏಕಕಾಲದಲ್ಲಿ ತೆಗೆಯಲಾಗುವುದು. ಈ ಕಾರಣಕ್ಕಾಗಿ ಇದನ್ನು ಬೆಂಚಿನ ಗಣಿ ಎಂದು ಸಹ ಕರೆಯುವುದುಂಟು.

**ಸುರಂಗ ಪದ್ಧತಿ :** ತೆರೆದ ಗಣಿಗಳಲ್ಲಿ ಸುರಂಗ ಪದ್ಧತಿ ಬಹಳ ಬಿರುಸು. ಇಲ್ಲಿ ಭೂಗತ ಗಣಿಯಲ್ಲಿ ಇರುವಂತೆ ಅಡ್ಡಿ ಆತಂಕಗಳು ಇಲ್ಲ. ಬಾವಿ ಕೊರೆಯುವ ಬೈರಿಗೆಯನ್ನು ಉಪಯೋಗಿಸಿ ಅತಿ ದೊಡ್ಡ ವ್ಯಾಸವುಳ್ಳ ರಂಧ್ರಗಳನ್ನು ಕೊರೆದು ಸಿಡಿಮದ್ದನ್ನು ತುಂಬಿ ಹೊಡೆಯುತ್ತಾರೆ. ಇದಕ್ಕೆ ಪ್ರಾಥಮಿಕ ಸುರಂಗ ಪದ್ಧತಿ ಎಂದು ಹೆಸರು. ಇಂಥ ಸುರಂಗ ಪದ್ಧತಿಯಲ್ಲಿ ಒಂದು ಬಾರಿಗೆ 500 ರಿಂದ 1000 ಟನ್ ಖನಿಜವನ್ನು ಬೇರ್ಪಡಿಸಬಹುದು. ಇದರಲ್ಲಿ ದೊರೆಯುವ ಬಲುದೊಡ್ಡ ಶಿಲಾಖಂಡ ಗಳನ್ನು ಸಣ್ಣ ಸಿಡಿಮದ್ದನ್ನು ಇಟ್ಟು ದ್ವಿತೀಯಕ ಸುರಂಗ ಪದ್ಧತಿಯಿಂದ ಸಣ್ಣ ಚೂರುಗಳನ್ನಾಗಿ ಮಾಡುತ್ತಾರೆ.

ಲೋಹಾಂಶ ಕಡಿಮೆ ಇರುವ ಖನಿಜಗಳಿಂದ ಲೋಹವನ್ನು ಲಾಭದಾಯಕವಾಗಿ ಪಡೆಯಬೇಕಾದರೆ ಅಗಾಧ ಗಾತ್ರದಲ್ಲಿ ಕೆಲಸ ಮಾಡಬೇಕಾಗುತ್ತದೆ. ಹೇರಳವಾಗಿ



**ಅದಿರನ್ನು ಹೊರತೆಗೆಯಲು ಬಳಸುವ ಆವರ್ತಕ ಯಂತ್ರ ಮತ್ತು ಅದಿರು ತುಂಬಿರುವ ತೊಟ್ಟಿಗಳು – ಕೋಲಾರದ ಚಿನ್ನದ ಗಣಿ**

ಖನಿಜಗಳನ್ನು ಸುಲಭ ವೆಚ್ಚದಲ್ಲಿ ತೆಗೆಯಲು ತೆರೆದ ಗಣಿ ವಿಧಾನದಿಂದ ಮಾತ್ರ ಸಾಧ್ಯ. ಇಂಥ ಗಣಿಗಳಲ್ಲಿ ಕೆಲಸ ನಡೆಯುವ ವಿಧಾನವನ್ನು ಮುಂದೆ ವಿವರಿಸಿದೆ.

**ಗುಂಡಿಗಳು, ಟ್ರೆಂಚುಗಳು :** ಭೂಮಿಯ ಮೇಲು ಭಾಗದಲ್ಲಿಯೇ ಸ್ವಲ್ಪ ಮೊತ್ತದಲ್ಲಿ ಸಿಕ್ಕುವ ಖನಿಜಗಳನ್ನು ತೆಗೆಯಲು ಸಣ್ಣ ಗುಂಡಿಗಳನ್ನೂ ಅಡ್ಡ ಕಾಲುವೆಯಂಥ ಟ್ರೆಂಚುಗಳನ್ನೂ ತೋಡುತ್ತಾರೆ. ಈ ಕಾರ್ಯಕ್ಕೆ ಅಂಥ ಯಂತ್ರೋಪಕರಣಗಳು ಬೇಕಿಲ್ಲ.

**ಕಲ್ಲರೆ ಅಥವಾ ಕ್ವಾರಿ :** ಕಲ್ಲುಬಂಡೆಗಳನ್ನು ತೆಗೆಯಲು ದೊಡ್ಡದಾದ ಬಂಡೆಯನ್ನು ಹಂತ ಹಂತವಾಗಿ ಕಡೆಯುತ್ತಾರೆ. ಈ ಹಂತಗಳನ್ನು ಬಿಡಿಸುವುದಕ್ಕೆ ಸಿಡಿಮದ್ದಿನ ಉಪಯೋಗ ಉಂಟು. ಬೆಂಗಳೂರಿನ ಸುತ್ತಮುತ್ತ ಸುಟ್ಟಕಲ್ಲಿಗಾಗಿ ತೆಗೆದಿರುವ ಕ್ವಾರಿಗಳು ಈ ರೀತಿಯವು. ಇವು ಸಣ್ಣ ಗಾತ್ರದವಾಗಿರಬಹುದು, ಅಥವಾ ರೈಲುಮಾರ್ಗಗಳನ್ನೊಳ ಗೊಂಡು ಭೂತಾಕಾರದ ಕ್ರೇನುಗಳು ಮತ್ತು ಷೊವೆಲ್ಲುಗಳ ಸಹಾಯದಿಂದ ಕಲ್ಲುಮಣ್ಣನ್ನು ದೂರಸಾಗಿಸುವ ಬೃಹದಾಕಾರದ ಗಣಿಗಳಾಗಿಯೂ ಇರಬಹುದು. ಬಾಬಾಬುಡನ್ ಶ್ರೇಣಿಯ ಕೆಮ್ಮಣ್ಣು ಗುಂಡಿಯಲ್ಲಿನ ಕಬ್ಬಿಣದ ಗಣಿ, ಹೊಸಪೇಟೆಯ ಬಳಿಯ ಕಬ್ಬಿಣದ ಗಣಿ, ಷಹಬಾದ್ ಮತ್ತು ದಾಡಿ ಬಳಿ ಇರುವ ಸುಣ್ಣಕಲ್ಲಿನ ಗಣಿ ಈ ಬಗೆಯವು.

ಭೂಮಿಯ ಮೇಲು ಪದರದಲ್ಲಿ ಸಿಕ್ಕುವ ಕಲ್ಲಿದ್ದಲು, ಅಲ್ಯುಮಿನಿಯಂ ಲೋಹದ ಅದಿರಾದ ಬಾಕ್ಸೈಟ್ ಇವೇ ಮುಂತಾದವನ್ನು ತೆಗೆಯಲು ಖನಿಜ ಪದರದ ಮೇಲಿರುವ ಕಳಪೆ ಕಲ್ಲಿನ ಹೊದಿಕೆಯನ್ನು ತೆಗೆದು ಹೊರಹಾಕಬೇಕಾಗುತ್ತದೆ. ಇದಕ್ಕೆ ಉದ್ದದ ತೋಳುಳ್ಳ ಷೊವೆಲ್ಲುಗಳನ್ನು ಉಪಯೋಗಿಸುತ್ತಾರೆ. ಮೊದಲಿಗೆ ಈ ಷೊವೆಲ್ಲು ಕಾಲುವೆಯ ತರಹದ ಒಂದು ಟ್ರೆಂಚನ್ನು ತೋಡುತ್ತದೆ. ಆಮೇಲೆ ಅದೇ ಷೊವೆಲ್ಲಿನ ಸಹಾಯದಿಂದ ಕಾಲುವೆಯ ಗೋಡೆಗಳನ್ನು ಹಿಂದೆ ಸರಿಸುತ್ತ ಹೋಗುತ್ತಾರೆ. ಈ ರೀತಿ ಮೇಲಿನ ಪದರವನ್ನು ತೆಗೆದಾದ ಬಳಿಕ ಕೆಳಗಿರುವ ಕಲ್ಲಿದ್ದಲಿನ ಪದರವನ್ನು ಷೊವೆಲ್ಲಿನ ಮೂಲಕ ತೋಡಿ ರೈಲುಬಂಡಿಗಳಿಗೆ ತುಂಬಿ ಹೊರಗಡೆ ಕಳಿಸುತ್ತಾರೆ. ಷೊವೆಲ್ಲುಗಳ ತೋಳಿನ ತುದಿಯಲ್ಲಿರುವ ಬಾಲ್ದಿಗಳು ಒಂದು ಸಲ ಹಲ್ಲೂರಿದರೆ ಹತ್ತು ಟನ್ನುಗಳವರೆಗೂ ತೆಗೆಯಬಲ್ಲವು. ಮದರಾಸಿನ ದಕ್ಷಿಣಕ್ಕಿರುವ ನೈವೇಲಿಯ ಬಳಿ ಕಂದುಬಣ್ಣದ ಇದ್ದಲನ್ನು ತೆಗೆಯುವ ಬೃಹದಾಕಾರದ ಬಯಲು ಗಣಿ ಇದೆ. ಕಬ್ಬಿಣದ ಗಣಿಯಲ್ಲಿ ಮೇಲಿನ ಹೊರಹೊದಿಕೆಯನ್ನು ತೆಗೆದು ಹಾಕುವ ಬೇರೆ ಬೇರೆ ಹಂತಗಳನ್ನು ಚಿತ್ರ 1ರಲ್ಲಿ ತೋರಿಸಿದೆ.

**ಬಯಲು ಗಣಿಗಳು :** ಭೂಮಿಯ ಮೇಲೆ ವಿಶಾಲವಾದ ಪ್ರದೇಶದಲ್ಲಿ ಹರಡಿರುವ ಸುಲಭ ಬೆಲೆಯ ಕಬ್ಬಿಣದ ಅದಿರು ಅಥವಾ ತೀರ ಅಲ್ಪ ಲೋಹಾಂಶವಿರುವ ತಾಮ್ರದ ಅದಿರು ಮುಂತಾದವನ್ನು ಪಡೆಯಲು ಬೃಹದಾಕಾರದ ಗಣಿಗಳನ್ನು ತೋಡಬೇಕಾಗುತ್ತದೆ. ಇಂಥ ಗಣಿಗಳು ಸಾವಿರಾರು ಮೀಟರು ಉದ್ದ ಅಗಲವಿರುತ್ತವೆ. ಇವು ಹಂತ ಹಂತವಾಗಿ ಕೆಳಗೆ ಇಳಿದಿರುತ್ತವೆ. ದಿನಂಪ್ರತಿ ಇಂಥ ಗಣಿಗಳಿಂದ



**ಚಿತ್ರ 1. ಬಯಲು ಗಣಿಯಲ್ಲಿ ಮೇಲಿನ ಹೊದಿಕೆಯನ್ನು ಷೊವೆಲ್ ಸಹಾಯದಿಂದ ತೆಗೆದು ಹಾಕುವ ಬಗೆ**

20,000 ಟನ್ನುಗಳಿಗೂ ಹೆಚ್ಚು ಅದಿರನ್ನು ಪಡೆಯಲಾಗುವುದು. ಪ್ರಪಂಚದಲ್ಲಿ ಅತಿದೊಡ್ಡ ಬಯಲುಗಣಿಯಾದ ಯೂಟಾದಲ್ಲಿನ ಬೆಂಗಾಮ್ ಗಣಿ ಪ್ರತಿ ದಿವಸ ಒಂದೂವರೆ ಲಕ್ಷ ಟನ್ನಿಗೂ ಮೀರಿದ ಕಳಪೆ ಕಲ್ಲನ್ನು ಕಿತ್ತೆಸೆದು ದೂರ ಒಗೆಯುತ್ತದೆ. ತಾತಾ ಕಂಪನಿಯ ಕಬ್ಬಿಣದ ಗಣಿಗಳು, ಅಸೋಸಿಯೇಟೆಡ್ ಸಿಮೆಂಟ್ ಕಂಪನಿಯ ಸುಣ್ಣ ಕಲ್ಲಿನ ಗಣಿಗಳು ಈ ಬಗೆಯ ಬಯಲು ಗಣಿಗಳಿಗೆ ಉತ್ತಮ ನಿದರ್ಶನಗಳು. ಬಯಲು ಗಣಿ ನೆಲ ಮಟ್ಟದಿಂದ ನೂರಿನ್ನೂರು ಮೀಟರು ಆಳಕ್ಕೂ ಇಳಿದಿರಬಹುದು. ಹಂತ ಹಂತವಾಗಿ ಮೆಟ್ಟಿಲಾಕಾರದಲ್ಲಿ ಗಣಿ ಕೆಳಗೆ ಇಳಿದಿರುತ್ತದೆ. ಒಂದೊಂದು ಹಂತವೂ 6–9 ಮೀ. ಎತ್ತರವಿರಬಹುದು. ಒಂದು ಹಂತದಿಂದ ಮೇಲಿನ ಹಂತಕ್ಕೆ ಏರುವುದಕ್ಕೆ ಮತ್ತು ಇಳಿಯುವುದಕ್ಕೆ ಇಳಿದಾರಿಗಳಿರುತ್ತವೆ. ಕಲ್ಲುಗಳನ್ನು ಹೊತ್ತಿರುವ ಟ್ರಕ್ಕುಗಳು ಈ ಇಳಿದಾರಿಗಳ ಮೂಲಕ ಅವನ್ನು ಮೇಲಕ್ಕೆ ಒಯ್ಯುತ್ತವೆ.



**ಚಿತ್ರ 2. ಖನಿಜ ಸಿರದಿಂದ ಅದಿರನ್ನು ಪಡೆಯುವ ಬಗೆ. 1. ಲೋಹ ಅಡಗಿರುವ ಸಿರ, 2. ಅಡ್ಡ ಸುರಂಗಗಳು, 3. ಮುಖ್ಯ ಕೂಪ, 4. ಮುಖ್ಯ ಕೂಪದ ಮೇಲಿನ ಗೋಪುರ, 5. ನೂರು ಅಡಿ ಅಂತರವಿಟ್ಟು ತೋಡಿರುವ ಮಟ್ಟಗಳು**

**ಭೂಗತ ಗಣಿ :** ಹೆಸರೇ ಸೂಚಿಸುವಂತೆ ಈ ಬಗೆಯ ಗಣಿ ಭೂಮಿಯೊಳಗೆ ವ್ಯಾಪಿಸಿರುತ್ತದೆ. ಇದರ ಒಳಗೆ ಇಳಿಯುವುದಕ್ಕೆ ಹತ್ತು ಹನ್ನೆರಡು ಅಡಿ ವ್ಯಾಸವಿರುವ ಕೂಪ ಉಂಟು. ಇದು ನೇರವಾಗಿಯಾದರೂ ಇರಬಹುದು. ಇಳಿಕಲಾಗಿಯಾದರೂ ಇರಬಹುದು. ಇಂಥ ಒಂದು ಕೂಪದಿಂದ ನೂರು ಅಥವಾ ಇನ್ನೂರು ಅಡಿ ಅಂತರದಲ್ಲಿ ಮಟ್ಟಗಳನ್ನು ಕೊರೆದಿರುತ್ತಾರೆ. ಈ ರೀತಿಯಾಗಿ ಸಾವಿರಾರು ಮೀಟರುಗಳವರೆಗೂ ಗಣಿಯನ್ನು ಬೆಳೆಸಿ ಎರಡು ಮಟ್ಟಗಳ ನಡುವಿರುವ ಲೋಹಮಯ ಕಲ್ಲನ್ನು ತೆಗೆದು ಕೂಪದ ಹತ್ತು ಸಾವಿರ ಅಡಿಗಳವರೆಗೂ ಗಣಿಯನ್ನು ಬೆಳೆಸಿ ಎರಡು ಮಟ್ಟಗಳ ನಡುವಿರುವ ಲೋಹಮಯ ಕಲ್ಲನ್ನು ತೆಗೆದು ಕೂಪದ ಮೂಲಕ ಮೇಲಕ್ಕೆ ಸಾಗಿಸುತ್ತಾರೆ. ಕಲ್ಲನ್ನು ಮೇಲಕ್ಕೆ ಒಯ್ಯುವುದಕ್ಕೆ ಪಂಜರಗಳಿರುತ್ತವೆ. ಇವುಗಳಲ್ಲಿ ಒಂದರಿಂದ ಐದು



**ಚಿತ್ರ 3. ಅಂತರ್ಗಣಿಯೊಂದರ ಸೀಳು ನೋಟ 1. ಮುಖ್ಯ ಕೂಪ, 2. ನೂರು ಅಡಿ ಅಂತರವಿಟ್ಟು ತೋಡಿರುವ ಮಟ್ಟಗಳು, 3. ಎರಡು ಮಟ್ಟಗಳ ನಡುವೆ ಸಂಪರ್ಕ ಕಲ್ಪಿಸಿರುವ ವಿನ್ಸ್, 4. ಲೋಹಾಂಶ ಹೆಚ್ಚಿ ಕುಡಿಯೊಡೆದಿರುವ ಉತ್ತಮ ಅದಿರಿನ ಹರವು**

ಟನ್ ತೂಕದಷ್ಟು ಕಲ್ಲನ್ನು ಮೇಲಕ್ಕೆ ರವಾನಿಸಬಹುದು. ರಾಟೆ ಯಂತ್ರಗಳು ಪಂಜರಗಳನ್ನು ಮಿನಿಟಿಗೆ 303 ಮೀ. ಮೇಲಕ್ಕೆ ಎತ್ತುತ್ತಲೊ ಇಳಿಸುತ್ತಲೊ ಇರುತ್ತವೆ. ಗಣಿ ಸುರಂಗಗಳಲ್ಲಿ ಸರಿಯಾಗಿ ವಾಯು ಆಡುವಂತೆ ಮೇಲಿನಿಂದ ತಣ್ಣನೆಯ ವಾಯುವನ್ನು ವಿದ್ಯುತ್ ಬೀಸಣಿಗೆಗಳ ಮೂಲಕ ಒಳಗೆ ರವಾನಿಸುತ್ತಾರೆ. ಅದಿರನ್ನು ತೆಗೆದಾಗ ಮೇಲೆ ಗೋಡೆ ಕುಸಿಯದಂತೆ ಮರದ ತೊಲೆಗಳನ್ನು ಕೊಟ್ಟು ಇಲ್ಲವೇ ಕಲ್ಲುಗೋಡೆಗಳನ್ನು ಅಥವಾ ಕಾಂಕ್ರೀಟು ಕಂಬಗಳನ್ನು ಕಟ್ಟಿ ಭದ್ರಪಡಿಸುತ್ತಾರೆ.

ನೆಲದಲ್ಲಿ ಹುದುಗಿರುವ ಅಗಲ ಕಿರಿದಾದ ಖನಿಜ ಸಿರವನ್ನು ಯಾವ ರೀತಿ ಗಣಿ ತೋಡಿ ಪಡೆಯುತ್ತಾರೆನ್ನುವುದನ್ನು ಚಿತ್ರದ (2) ರಿಂದ (5)ರವರೆಗೆ ತೋರಿಸಿದೆ. ಈ ಚಿತ್ರದಲ್ಲಿ ಮುಖ್ಯ ಕೂಪವೊಂದನ್ನು ಅದರ ಮೂಲಕ ಮೂವತ್ತು ಮೀಟರುಗಳ


**ಚಿತ್ರ 4. ಗುಡ್ಡದ ಮಗ್ಗುಲಿನಿಂದ ಕೊರೆದ ಅಡ್ಡ ಸುರಂಗ**

ಅಂತರದಲ್ಲಿ ಅಡ್ಡ ಸುರಂಗಗಳನ್ನು ತೋಡಿ ಖನಿಜದ ಸಿರ ಮುಟ್ಟಿರುವುದನ್ನೂ ತೋರಿಸಿದೆ. ಚಿತ್ರ(3)ರಲ್ಲಿ ಗಣಿಯ ಸೀಳು ನೋಟ ಕೊಟ್ಟಿದೆ. ನೂರು ಅಡಿ ಅಂತರದಲ್ಲಿ ಅನೇಕ ಮಟ್ಟಗಳನ್ನು ಕಾಣಬಹುದು. ಒಂದು ಮಟ್ಟದಿಂದ ಇನ್ನೊಂದು ಮಟ್ಟಕ್ಕೆ

ಸಂಬಂಧ ಕಲ್ಪಿಸುವ ಕೂಪಕ್ಕೆ ವಿನ್ಸ್ ಎಂದು ಹೆಸರು. ದಟ್ಟ ಚುಕ್ಕೆಗಳಿಂದ ತೋರಿಸಿರುವ ಭಾಗದಲ್ಲಿ ಲೋಹಾಂಶ ಹೆಚ್ಚು. ಇಂಥವುಗಳಿಗೆ ಕುಡಿಗಳೆಂದು (ಶೂಟ್ಸ್) ಹೆಸರು. ಈ ರೀತಿ ಗಣಿಯನ್ನು ಅನೇಕ ಖಂಡಗಳಾಗಿ ವಿಂಗಡಿಸುತ್ತ ಹೋಗುತ್ತಾರೆ. ಹೀಗೆ ಗಣಿಯನ್ನು ಸಿದ್ಧಪಡಿಸಿದ ಮೇಲೆ ಅದಿರನ್ನು ತೆಗೆಯುವ ಮುಖ್ಯ ಕೆಲಸ ಮೊದಲಾಗುತ್ತದೆ. ಇದರಲ್ಲಿಯೂ ಸಿರದ ಆಕಾರ ಯಾವ ರೀತಿ ಇದೆ ಎನ್ನುವುದನ್ನು ಅನುಸರಿಸಿ ನಾನಾತರದ ವಿಧಾನಗಳು ಬಳಕೆಯಲ್ಲಿವೆ. ಯಾವ ವಿಧಾನವನ್ನು ಬಳಸಿದರೂ ಕೆಲಸ ಮಾಡುವವರಿಗೆ ಅಪಾಯವಾಗದಂತೆ ನೋಡಿಕೊಳ್ಳಬೇಕಾದದ್ದು ಮುಖ್ಯ. ಎಲ್ಲ ರಾಜ್ಯಗಳಲ್ಲಿಯೂ ಗಣಿ ಕೆಲಸಗಾರರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕಾಗಿ ಕಟ್ಟುನಿಟ್ಟಾದ ನಿಯಮಗಳಿವೆ. ಯಾವ ಗಣಿ ಮಾಲೀಕನೂ ಅವನ್ನು ಉಲ್ಲಂಘಿಸುವಂತಿಲ್ಲ.

ಎರಡು ಮಟ್ಟಗಳ ನಡುವಿನ ಕಲ್ಲನ್ನು ತೆಗೆಯಲು ಸ್ಟೋಪಿಂಗ್ ಎನ್ನುವ ವಿಧಾನವನ್ನು ಬಳಸುತ್ತಾರೆ. ಇಂಥ ವಿಧಾನವನ್ನು ಚಿತ್ರ(6)ರಲ್ಲಿ ತೋರಿಸಿದೆ. ಇಲ್ಲಿ ಹಂತ ಹಂತವಾಗಿ ರಂಧ್ರಗಳನ್ನು ಕೊರೆದು ಸಿಡಿಮದ್ದನ್ನು ಉಪಯೋಗಿಸಿ ಅದಿರನ್ನು ತೆಗೆಯುವ ವಿಧಾನವನ್ನು ಗುರುತಿಸಬಹುದು. ಈ ರೀತಿ ಒಡೆದು ತೆಗೆದ ಕಲ್ಲನ್ನು

**ಚಿತ್ರ 5. ಭೂಮಿಯೊಳಗೆ ಕೊರೆದಿರುವ ಸುರಂಗಮಾರ್ಗದ ನೋಟ**

ಮುಖ್ಯ ಕೂಪಗಳ ಮೂಲಕ ಮೇಲಕ್ಕೆ ಸಾಗಿಸುತ್ತಾರೆ. ಕಲ್ಲು ಮೇಲಕ್ಕೆ ಬಂದು ಅಲ್ಲಿ ನಿಂತಿರುವ ಬಂಡಿಗಳಿಗೆ ಸುರಿಯುವಂತೆ ಅನುಕೂಲಿಸಲು ಕೂಪಗಳ ಮೇಲೆ ಉಕ್ಕಿನಿಂದ ತಯಾರಾದ ಒಂದು ಗೋಪುರ ಉಂಟು. ಇಂಥ ಗೋಪುರಗಳನ್ನು ಭೂಗತ ಗಣಿಗಳಿರುವ ಎಲ್ಲ ಪ್ರದೇಶಗಳಲ್ಲಿಯೂ ಗುರುತಿಸಬಹುದು.

ಅಮೆರಿಕ ಮತ್ತು ರಷ್ಯ ದೇಶಗಳು ಗಣಿಗಾರಿಕೆಯಲ್ಲಿ ಬಹು ಮುಂದುವರಿದ ದೇಶಗಳಾಗಿವೆ. ಅತ್ಯಂತ ಆಧುನಿಕ ವಿಧಾನಗಳನ್ನು ಬಳಸಿ ಹೇರಳವಾಗಿ ಅದಿರನ್ನು ನೆಲದಿಂದ ತೆಗೆಯುವ ಕಲೆಯಲ್ಲಿ ಆ ದೇಶಿಗರು ಪರಿಣತರಾಗಿದ್ದಾರೆ. ಪ್ರಪಂಚದ ಮುಖ್ಯ ಗಣಿಗಳಿರುವುದೆಲ್ಲ ಈ ದೇಶಗಳಲ್ಲಿ. ಈಚಿನ ವರ್ಷಗಳಲ್ಲಿ ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಜಪಾನ್, ಜರ್ಮನಿ, ಇಂಗ್ಲೆಂಡ್ ಈ ರಾಜ್ಯಗಳಲ್ಲಿ ಗಣಿಗಾರಿಕೆ ಏಳ್ಗೆ ಹೊಂದುತ್ತಿದೆ. ಪ್ರಾಚೀನ ಕಾಲದಲ್ಲಿ ಭಾರತ ಗಣಿಗಾರಿಕೆಗೆ ಹೆಸರಾಗಿದ್ದರೂ ಈಗ ಇನ್ನೂ ಹಿಂದುಳಿದಿದೆಯೆಂದೇ ಹೇಳಬೇಕು. ಪ್ರಪಂಚದ ಮುಖ್ಯ ಗಣಿಗಳ ಸಾಲಿಗೆ ಸೇರುವಂಥ ಗಣಿ ಎಂದರೆ ಕೋಲಾರದ ಚಿನ್ನದ ಗಣಿ ಒಂದೇ. ಇಲ್ಲಿನ ಗಣಿ 3660 ಮೀ ಆಳದವರೆಗೂ ಇಳಿದು ಪ್ರಪಂಚದಲ್ಲೆಲ್ಲ ಅತ್ಯಂತ ಆಳವಾದ ಗಣಿಯೆಂದು ಹೆಸರು ಗಳಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಆಧುನಿಕ ವಿಧಾನಗಳನ್ನು ಬಳಸಿ ದೊಡ್ಡ ಗಾತ್ರದಲ್ಲಿ ಕಬ್ಬಿಣ ಅದಿರು ಮತ್ತು ಕಲ್ಲಿದ್ದಲಿನ ಗಣಿಗಳು ಕೆಲಸ ಮಾಡುತ್ತಿವೆ. ಗಣಿಗಾರಿಕೆಯಲ್ಲಿ ಭಾರತ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಬೇಕಾಗಿದೆ.

**ಮಿಶ್ರ ವಿಧಾನಗಳು :** ಬಹಳ ದೊಡ್ಡ ಗಾತ್ರದಲ್ಲಿ ಗಣಿಗಳನ್ನು ತೋಡುವಾಗ ಸಂದರ್ಭವನ್ನು ಅನುಸರಿಸಿ ತೆರೆದ ಮತ್ತು ಭೂಗತ ವಿಧಾನಗಳೆರಡನ್ನೂ ಸೂಕ್ತವಾಗಿ ಆರಿಸಿಕೊಂಡು ಕೆಲಸ ನಡೆಸುತ್ತಾರೆ.

ಸಮುದ್ರ ತೀರದಲ್ಲಿ ಕೊಲ್ಲಿ ಖಾರಿಗಳ ಬಳಿ ಬೆಟ್ಟಗಳ ಪಕ್ಕದಲ್ಲಿ ತಪ್ಪಲಿನಲ್ಲಿ ಮತ್ತು ನದೀಮುಖಜ ಭೂಮಿಗಳ ಹತ್ತಿರ ಮತ್ತು ಭೂಮಿಯ ಮೇಲೆ ಅದಿರು ಎಲ್ಲಿ ಗೋಚರವಾಗುವುದೋ ಅಲ್ಲೆಲ್ಲ ತೆರೆದ ಗಣಿ ವಿಧಾನದಿಂದ ಕೆಲಸ ಮಾಡಬಹುದು. ಬಹಳ ಆಳವಾಗಿ ಹಬ್ಬಿರುವ ನಿಕ್ಷೇಪಗಳಿಗೂ ಕಡಿದಾಗಿರುವ ಲೋಹಸಿರಗಳಿಗೂ ಭೂಗತಗಣಿವಿಧಾನಗಳನ್ನು ಬಳಸಬೇಕು. ಖನಿಜ ನಿಕ್ಷೇಪಗಳನ್ನು ಪರಿಶೀಲಿಸಿ, ಬಹಳ ಎತ್ತರವಾದ ಮೇಲು ಹೊದಿಕೆಯಿಲ್ಲದೆ ಇರುವ ಪದರಗಳ ರೂಪದಂತಿರುವ ನಿಕ್ಷೇಪಗಳಿಗೆ (ಕಬ್ಬಿಣದ ಅದಿರುಗಳು, ಕಲ್ಲಿದ್ದಲು ಇತ್ಯಾದಿ,) ತೆರೆದ ಗಣಿ ವಿಧಾನಗಳೇ ಅತ್ಯುಪಯುಕ್ತವಾದವು. ಬೈರಪುರ ಕ್ರೋಮಿಯಂ ಗಣಿಗಳಲ್ಲಿ ಮೊದಲು ಈ ವಿಧಾನಗಳಿಂದಲೇ ಅದಿರನ್ನು ತೆಗೆಯುತ್ತಿದ್ದರು. ಈಚೆಗೆ ನಡೆಸಿದ ಸಂಶೋಧನೆಗಳಿಂದ ಒಳ್ಳೆಯ ಅದಿರು ಹೇರಳವಾಗಿ ಆಳದಲ್ಲಿದೆ ಎಂದು ತಿಳಿದು ಬಂದ ಮೇಲೆ ಭೂಗತ ಗಣಿ ವಿಧಾನಗಳನ್ನು ಬಳಸುತ್ತಿದ್ದಾರೆ. ಸಣ್ಣ ಗಣಿಗಳಲ್ಲಿ, ಕೆಲಸವನ್ನು ಆರಂಭಿಸುವಾಗ




**ಚಿತ್ರ 6. ಎರಡು ಮಟ್ಟಗಳ ನಡುವಿನ ಕಲ್ಲನ್ನು ತೆಗೆಯಲು ಸ್ಟೋಪಿಂಗ್ ವಿಧಾನ**

ಅಲ್ಲದೇ, ಮೇಲು ಹೊರೆ ಬಹಳ ಗಟ್ಟಿಯಾಗಿಲ್ಲದೆ ಮರಳು, ಮಣ್ಣು, ಗರಸು, ಮರಳುಕಲ್ಲು, ಸ್ಲೇಟ್ ಮೊದಲಾದ ವಸ್ತುಗಳಿಂದ ನಿರ್ಮಿತವಾಗಿದ್ದರೆ ಮನುಷ್ಯರೇ ಹಾರೆ ಪಿಕಾಸಿಗಳಿಂದ ಕಡಿದು ಗುದ್ದಲಿಯಿಂದ ಬಾಣಲೆಗಳಲ್ಲಿ ತುಂಬಿ ಕೈಗಾಡಿಗಳ ಮೂಲಕ ಸಾಗಿಸಬಹುದು. ಗಟ್ಟಿಯಾದ ಗ್ರಾನೈಟ್, ನೀಸ್, ಬೆಸಾಲ್ಟ್ ಮೊದಲಾದ ಶಿಲೆಗಳಿದ್ದರೆ ರಂಧ್ರಗಳನ್ನು ಕೊರೆದು ಸಿಡಿಮದ್ದನ್ನು ಬಳಸಿ ಗಟ್ಟಿ ಕಲ್ಲನ್ನು ಒಡೆಯಬೇಕು.

**ಉತ್ಖನನ ವಿಧಾನಗಳು :** ದೊಡ್ಡ ದೊಡ್ಡ ಗಣಿಗಳಲ್ಲಿ ದಿನಕ್ಕೆ ಸಾವಿರಾರು ಟನ್ ಮೇಲ್ಮಣ್ಣನ್ನೂ ಅದಿರನ್ನೂ ತೋಡಿ ತೆಗೆಯಬೇಕಾಗಿರುವುದರಿಂದ ಆಧುನಿಕ ಉತ್ಖನನ ಯಂತ್ರೋಪಕರಣಗಳನ್ನು ಬಳಸುತ್ತಾರೆ. ಕ್ರಮಬದ್ಧವಾಗಿ ನಡೆಸುವ ದೊಡ್ಡ ಗಣಿಗಳಲ್ಲಿ ತೋಡುವುದಕ್ಕೆ ಬಳಸಲು, ತೋಡಿದ ಮಣ್ಣನ್ನು ತುಂಬಲು ಮತ್ತು ಅದನ್ನು ದೂರ ಸಾಗಿಸಲು ಬೇರೆ ಬೇರೆ ಯಂತ್ರಗಳಿವೆ. ಇವುಗಳ ಸಹಾಯದಿಂದ, ಮೊದಲಿಗೆ ಸಾಧ್ಯವೆಂದು ಊಹಿಸಲೂ ಆಗದಷ್ಟು ಎತ್ತರವಾಗಿರುವ ಮೇಲ್ಮಣ್ಣನ್ನು ಬಹಳ ಬೇಗ ಕಡಿದು ಸಾಗಿಸಬಹುದು. ಅನೇಕ ಕೆಲಸಗಾರರ ಗುಂಪುಗಳು ಬಹಳ ಕಾಲದಲ್ಲಿ ಮಾಡುತ್ತಿದ್ದ ಕೆಲಸವನ್ನು ಎಕ್ಸ್‌ವೇಟರ್, ಬುಲ್ಡೋಜರ್, ಡಂಪರ್ ಎಂಬ ನವೀನ ಯಂತ್ರೋಪಕರಣಗಳು ಅತ್ಯಲ್ಪ ಕಾಲದಲ್ಲಿ ಮುಗಿಸುತ್ತವೆ. ಎಕ್ಸ್‌ವೇಟರಿನ ಬಾಲ್ದಿಯಲ್ಲಿ ಒಂದು ಮೋಟಾರ್ ಕಾರಿನಲ್ಲಿ ತುಂಬುವಷ್ಟು ಸಾಮಾನನ್ನು ತುಂಬಬಹುದು ಮತ್ತು ದಾರಿಮಾಡಿಕೊಂಡು ಮುಂದೆ ನುಗ್ಗಬಹುದು. ಈಗ ಕಲ್ಲಿದ್ದಲು, ಕಬ್ಬಿಣ ಮ್ಯಾಂಗನೀಸ್ ಮೊದಲಾದ ಅದಿರುಗಳನ್ನು ತೆಗೆಯಲು ರಷ್ಯದಲ್ಲಿ ವಿಶೇಷವಾಗಿ ತೆರೆದ ಗಣಿ ವಿಧಾನಗಳನ್ನು ಬಳಸುತ್ತಿದ್ದಾರೆ. ವರ್ಷಕ್ಕೆ ಒಂದು ಕೋಟಿ ಟನ್ ಕಬ್ಬಿಣದ ಅದಿರುಗಳನ್ನು ತೆಗೆಯುತ್ತಿದ್ದಾರೆ; 3,000 ಗುಂಡಿಗಳಲ್ಲಿ 60 ಕೋಟಿ ಟನ್ ಶಿಲೆ ಜಲ್ಲಿಕಲ್ಲು ಮರಳು ಮತ್ತು ಕಟ್ಟಡದ ಕಲ್ಲು ದೊರೆಯುತ್ತಿವೆ. ಗಯಾನಾ ಬಾಕ್ಸೈಟುಗಳಲ್ಲಿ ವರ್ಷಕ್ಕೆ 30 ಲಕ್ಷ ಘನಮೀಟರುಗಳಿಗಿಂತ ಹೆಚ್ಚು ಗಾತ್ರದಲ್ಲಿ ಮೇಲ್ಮಣ್ಣನ್ನು ಡ್ರಾಗ್ ಲೈನ್ ಎಕ್ಸ್‌ವೇಟರ್ ಸಹಾಯದಿಂದ ತೆಗೆಯುತ್ತಾರೆ. ಪುಡಿ ಮಾಡಿದ ಶಿಲೆ ಅಥವಾ ಅದಿರನ್ನು ವಾಹನಗಳಲ್ಲಿ ತುಂಬಿ ಬೇರೆ ಕಡೆ ಸಾಗಿಸಿ ರಾಶಿ ಮಾಡಲು ಬೇಕಾಗುವ ಕಾಲ, ಸರಾಸರಿ ವೇಗ ಇದೆಲ್ಲವನ್ನೂ ನಿರ್ಧರಿಸಿ ಎಲ್ಲದರ ಖರ್ಚನ್ನು ವಿಮರ್ಶಿಸಿ ಮೇಲು ಹೊದಿಕೆಯನ್ನು ಕಡಿದು ಸಾಗಿಸುವ ವ್ಯವಸ್ಥೆಯನ್ನು ಮಾಡುತ್ತಾರೆ.

**ಗಣಿ ಕೆಲಸಗಾರರಿಗೆ ಬೇಕಾದ ಸೌಲಭ್ಯಗಳು :** ಕೆಲಸ ಮಾಡುವಾಗ ತಲೆಗೂ ಕಾಲಿಗೂ ಅಪಾಯವಾಗದಂತೆ ರಕ್ಷೆಯನ್ನು ನೀಡುವ ಟೋಪಿ ಮತ್ತು ಪಾದರಕ್ಷೆಗಳನ್ನು ಕೆಲಸಗಾರರಿಗೆ ಒದಗಿಸಬೇಕು. ಸಿಡಿಮದ್ದನ್ನು ಬಳಸುವಾಗ ನಾನಾ ಅನಿಲಗಳು ಉತ್ಪನ್ನವಾಗುತ್ತವೆ; ಅವುಗಳಿಂದಲೂ ಗಣಿಯೊಳಗೆ ಇರುವ ಕೆಟ್ಟ ವಾಯುವಿನಿಂದಲೂ

ಅಪಾಯವಾಗದಂತೆ ಕೆಲಸಗಾರರು ಶ್ವಾಸ ಶೋಧಕಗಳನ್ನು ಉಪಯೋಗಿಸಬೇಕು. ಸಿಡಿಮದ್ದಿನಿಂದ ಒಡೆದ ಕಲ್ಲಿನ ಅಥವಾ ಅದಿರಿನ ಚೂರುಗಳು ಕಣ್ಣಿಗೆ ತಗಲದಂತೆ ಅವರು ವಿಶೇಷ ರೀತಿಯ ಕನ್ನಡಕಗಳನ್ನು ಹಾಕಿಕೊಳ್ಳಬೇಕು. ಗಣಿಯ ಒಳಗೆ ಇಳಿದಂತೆ ಕಾವು ಹೆಚ್ಚುತ್ತಾ ಹೋಗುತ್ತದೆ. ದಕ್ಷಿಣ ಆಫ್ರಿಕದ ಚಿನ್ನದ ಗಣಿಗಳಲ್ಲೂ ಕೋಲಾರದ ಚಿನ್ನದ ಗಣಿಗಳಲ್ಲೂ ಭೂತಲದಿಂದ 3050 ಮೀ ಕೆಳಗೆ ಒಂದು ಮೈಲಿಗಿಂತ ಹೆಚ್ಚು ಆಳದಲ್ಲಿ ಜನರು ಕೆಲಸ ಮಾಡುತ್ತಾರೆ. ಕೆಲಸ ಮಾಡುವವರಿಗೆ ಉಲ್ಲಾಸವಾಗುವಂತೆ ತಂಗಾಳಿಯನ್ನು ಒದಗಿಸಬೇಕು.

ಚಿತ್ರ 7. ಗಣಿಯ ಮೇಲಿನ ಗೋಪುರ

**ಅಪಘಾತಗಳು ಮತ್ತು ಗಣಿಕೆಲಸಗಾರರ ರೋಗಗಳು :** ಗಣಿ ಕೆಲಸ ಬಲು ಅಪಾಯಕರವೆಂಬುದು ಸ್ಪಷ್ಟ. ಇಲ್ಲಿನ ಕೆಲಸಗಾರರಿಗೆ ಅಪಾಯವಾಗದಂತೆ ನೋಡಿಕೊಳ್ಳುವ ಕೆಲಸಕ್ಕೆ ಗಣಿ ಇಲಾಖೆಯ ಅಧಿಕಾರಿಗಳು ವಿಶೇಷ ಗಮನ ಕೊಡುತ್ತಿದ್ದಾರೆ. ಭೂಗತ ಗಣಿಗಳಲ್ಲಿ ಒಳ್ಳೆಯ ವಾಯು ಬೆಳಕಿನ ವ್ಯವಸ್ಥೆಯಿದ್ದು, ಎಲ್ಲರೂ ಎಚ್ಚರಿಕೆಯಿಂದ ಭದ್ರತಾ ಸೂತ್ರಗಳನ್ನು ನೆನಪಿನಲ್ಲಿಟ್ಟುಕೊಂಡು ಕೆಲಸಗಾರರೂ ಮೇಲ್ವಿಚಾರಕರೂ ಸಹಕರಿಸಿ ಕೆಲಸ ಮಾಡಿದರೆ ಎಷ್ಟೋ ಅಪಘಾತಗಳನ್ನು ನಿಲ್ಲಿಸಬಹುದು. ಕಾರ್ಮಿಕರು ರಕ್ಷಾವಿಧಾನಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು. ಕೆಲಸಗಾರರಿಗೆ ಅವುಗಳ ಬಗ್ಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕು. ಕಲ್ಲಿದ್ದಲಿನ ಮತ್ತು ಕಲ್ಲಿನಪುಡಿಯ ದೂಳಿನಿಂದ ಮತ್ತು ಸಿಡಿಮದ್ದನ್ನು ಬಳಸುವಾಗ ಉಂಟಾಗುವ ಅನಿಲಗಳಿಂದ ಕಾರ್ಮಿಕರಿಗೆ ಅಪಾಯವಾಗದಂತೆ ಅವರಿಗೆ ರಕ್ಷೆಯನ್ನು ನೀಡಬೇಕು. ಕಲ್ಲಿದ್ದಲಿನ ಗಣಿಗಳಲ್ಲಿ ತೆರೆದ ದೀಪಗಳನ್ನು ಬಳಸಲೇಕೂಡದು. ಭೂಗತ ಗಣಿಗಳಲ್ಲಿ ವಿದ್ಯುದ್ದೀಪಗಳನ್ನು ಬಳಸುವುದೇ ಮೇಲು. ಲೋಹದ ಗಣಿಗಳಲ್ಲಿ ಬೆಂಕಿಯ ಅಪಘಾತವಾದಾಗ ಮೊದಲು ಕೆಲಸಗಾರರನ್ನೆಲ್ಲ ಬೇಗ ಹೊರಕ್ಕೆ ಕಳುಹಿಸಿ ಬೆಂಕಿಯನ್ನು ಆರಿಸಬೇಕು. ಆಮ್ಲಜನಕವನ್ನು ಒಳಕ್ಕೆ ಬಿಟ್ಟು ಒಳಗಿನ ವಾಯುಸೇವನೆಗೆ ಅರ್ಹವಾಗುವಂತೆ ಮಾಡಬೇಕು. ಕೆಲವು ಜನರಿಗೆ ಪ್ರಥಮ ಚಿಕಿತ್ಸೆಯಲ್ಲಿ ಶಿಕ್ಷಣ ಕೊಡಬೇಕು. ಗಣಿಯ ಮೇಲ್ಗಡೆ ತುರ್ತು ಆಸ್ಪತ್ರೆಯಂತಿರುವ ಒಂದು ವಿಶೇಷ ಕೋಣೆ ಇರಬೇಕು. ಕೆಲಸಮಾಡುವಾಗ ಅಂಗವಿಕಲರಾದವರಿಗೆ ಪರಿಹಾರ, ವಿಶ್ರಾಂತಿ ವೇತನಗಳನ್ನು ಕೊಡಬೇಕಾಗುತ್ತದೆ; ಸತ್ತು ಹೋದವರ ಕುಟುಂಬಕ್ಕೆ ಜೀವನ ಸೌಕರ್ಯವನ್ನು ಕಲ್ಪಿಸಬೇಕಾಗುತ್ತದೆ. ನ್ಯುಮೋನಿಯಾ, ಸಂಧಿವಾತ, ಕ್ಷಯ, ಕಲ್ಲಿದ್ದಲು ಮತ್ತು ಬೆಣಚುಕಲ್ಲಿನ ದೂಳಿನ ಸೇವನೆಯಿಂದ ಬರುವ ರೋಗಗಳು, ಕೊಕ್ಕೆಹುಳುವಿನ ರೋಗ, ವಿಷವಸ್ತುಗಳು ಆಹಾರ ಅಥವಾ ದೂಳಿನಲ್ಲಿ ಸೇರಿರುವುದು, ಟೈಫಾಯಿಡ್ ಮತ್ತು ಮಲೇರಿಯ ಇವು ಸಾಮಾನ್ಯವಾಗಿ ಗಣಿಗಾರಿಕೆಗೆ ಸಂಬಂಧಿಸಿದ ರೋಗಗಳು. ಗಣಿಯಿಂದ ಮೇಲಕ್ಕೆ ಬಂದೊಡನೆ ಜನರು ಮಿಂದು ಆಹಾರವನ್ನು ಸೇವಿಸಿದರೆ ಎಷ್ಟೋ ರೋಗಗಳನ್ನು ನಿವಾರಿಸಬಹುದು. (ಬಿ.ಪಿ.ಆರ್.;ಎ.ಎನ್.ಎಸ್.ಐ.;ಡಿ.ಎನ್.ಆರ್.)

**ಗಣಿಗಾರಿಕೆ, ಅಲೋಹ ಖನಿಜಗಳ :** ಕಲ್ಲಿದ್ದಲು, ಕೈಗಾರಿಕೆಗಳಿಗೆ ಬಳಸುವ ಖನಿಜಗಳು, ಕಲ್ಲುಪ್ಪು ಮೊದಲಾದ ಉಪ್ಪುಗಳು, ಗಂಧಕ ಮತ್ತು ಗೊಬ್ಬರದ ಖನಿಜಗಳು, ಕಲ್ಲೆಣ್ಣೆ (ಪೆಟ್ರೋಲಿಯಂ, ಖನಿಜತೈಲ), ಕಟ್ಟಡಗಳಿಗೆ ಬೇಕಾಗುವ ಸಾಮಗ್ರಿಗಳು ಇವೇ ಮೊದಲಾದ ಅಲೋಹ ಖನಿಜಗಳನ್ನು ಕುರಿತ ಗಣಿಗಾರಿಕೆ. ಖನಿಜದ ಉತ್ಪನ್ನ ಹೆಚ್ಚುತ್ತ ಬಂದಂತೆ ಕಲ್ಲಿದ್ದಲು ಮತ್ತು ಇತರ ನಿಕ್ಷೇಪಗಳನ್ನು ಕತ್ತರಿಸುವುದಕ್ಕೂ ಒಡೆದ ಖನಿಜಗಳನ್ನು ತುಂಬಿ ಸಾಗಿಸುವುದಕ್ಕೂ ವಿಶೇಷ ಯಂತ್ರಗಳು ನಿರ್ಮಿತವಾದುವು. ಕಲ್ಲಿದ್ದಲು, ಕಲ್ಲುಪ್ಪು, ಟಾಲ್ಕ್, ಚಿಪ್ಪುಗಳಿರುವ ಸುಣ್ಣದ ಕಲ್ಲುಗಳನ್ನು ಕತ್ತರಿಸಲು ಬೇರೆ ಬೇರೆ ಯಂತ್ರಗಳಿವೆ. ಇವು ಒತ್ತಡದ ವಾಯು ಅಥವಾ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡುತ್ತವೆ. ಕಲ್ಲಿದ್ದಲಿನ ಸ್ತರಗಳು ಬಹಳ ತೆಳುವಾಗಿರಬಹುದು; ಅರ್ಧ ಮೀಟರಿನಿಂದ ಮೂರು ಮೀಟರ್ ಅಥವಾ ಇನ್ನೂ ಹೆಚ್ಚು ದಪ್ಪವಾಗಿರಬಹುದು. ಹೀಗೆ ನಾನಾ ರೀತಿಯಲ್ಲಿ ಸಿಕ್ಕುವ ಸ್ತರಗಳನ್ನು ಕತ್ತರಿಸಿ ಸಾಗಿಸಲು ಬೇರೆ ಬೇರೆ ಯಂತ್ರಗಳೂ ವಿಧಾನಗಳೂ ಇವೆ. ಸ್ತರಗಳ ಎತ್ತರ, ಇಳಿವೋರೆ, ರಚನೆ, ಮೇಲೆ ಮತ್ತು ಕೆಳಗಿರುವ ಶಿಲೆಗಳ ಸ್ವಭಾವ, ಮೀಥೇನ್ ಅನಿಲದ ಇರುವಿಕೆ ಇತ್ಯಾದಿ ಅಂಶಗಳನ್ನು ಪರಿಶೀಲಿಸಿ ಆಯಾ ಸ್ಥಳಕ್ಕೆ ತಕ್ಕ ವಿಧಾನವನ್ನು ಆರಿಸಿಕೊಳ್ಳಬೇಕು. ಕಲ್ಲಿದ್ದಲನ್ನು ಒಡೆದು ಪುಡಿಮಾಡಿ ಸಾಗಿಸಿದ ಮೇಲೆ ತಡಮಾಡದೆ ಆ ಖಾಲಿ ಜಾಗವನ್ನು ಕೆಲಸಕ್ಕೆ ಬಾರದ ವಸ್ತುಗಳಿಂದ ತುಂಬಿ ಮುಚ್ಚಿಬಿಡಬೇಕು; ಅಥವಾ ಮರದ ಮತ್ತು ಕಬ್ಬಿಣದ ತೊಲೆಗಳ ಆಧಾರವನ್ನು ಕೊಡಬೇಕು. ಇಲ್ಲದಿದ್ದರೆ ಮೇಲಿರುವ ಶಿಲೆ ಕುಸಿದು ಬಹಳ ನಷ್ಟವೂ ಅಪಾಯವೂ ಆಗಬಹುದು.

ಮೊದಮೊದಲು ಕಲ್ಲಿದ್ದಲನ್ನು ಜನರು ಕೈಗಳಿಂದಲೇ ಒಡೆದು ತುಂಬಿ ಕೈಗಾಡಿಗಳಲ್ಲಿ ಸಾಗಿಸುತ್ತಿದ್ದರು. 20ನೆಯ ಶತಮಾನದ ಆದಿಯಲ್ಲಿ ಗಣಿಗಳ ಯಾಂತ್ರೀಕರಣ ಮೊದಲಾಯಿತು. ಕಲ್ಲಿದ್ದಲಿನ ಸ್ವಭಾವವನ್ನು ಪರಿಶೀಲಿಸಿ, ಗಿರಾಕಿಗೆ ಬೇಕಾದ ಗಾತ್ರದಲ್ಲಿ ಸರಬರಾಜು ಮಾಡುವಂತೆ, ನಿಯತವಾದ ಅಂತರದಲ್ಲಿ ಸ್ತರಗಳಲ್ಲಿ ಗುಳಿಗಳನ್ನು ಕೊರೆದು ಗೊತ್ತಾದ ಗಾತ್ರದಲ್ಲಿ ಸಿಡಿಮದ್ದನ್ನು ತುಂಬಿ ಹೊತ್ತಿಸಬೇಕು. ಅದಕ್ಕೆ ಮೊದಲು ಒಳಗೆ ಇರುವ ಕೆಲಸಗಾರರನ್ನೆಲ್ಲ, ವಾಯು ಬೆಳಕು ಚೆನ್ನಾಗಿ ಇದ್ದು ಮೇಲ್ಚಾವಣಿ ಕುಸಿಯದಂತೆ ಇರುವ ಮತ್ತು ಸಿಡಿದ ಖನಿಜಗಳ ಚೂರುಗಳು ಹಾರಿಬರದಂತೆ ಇರುವ, ಭದ್ರವಾದ ಜಾಗಕ್ಕೆ ಕಳುಹಿಸಿರಬೇಕು. ಕಲ್ಲಿದ್ದಲಿನ ಸ್ತರಗಳು ಕಡಿದಾಗಿದ್ದರೆ ಅದರ ಚೂರುಗಳು ಕೆಳಕ್ಕೆ ಜಾರಿಬೀಳುತ್ತವೆ. ಸ್ಕ್ರೇಪರುಗಳ ಮೂಲಕ ಅವನ್ನು ತುಂಬಿ ಹೊರಕ್ಕೆ ಸಾಗಿಸಬಹುದು. ಬಹಳ ದಪ್ಪವಾದ ಪದರುಗಳಿದ್ದರೆ ಅವನ್ನು ಭಾಗಶಃ ಕತ್ತರಿಸಿ ತೆಗೆಯುತ್ತಾರೆ. ಕಲ್ಲಿದ್ದಲಿನ ಎರಡು ಸ್ತರಗಳ ನಡುವೆ ಅಂತರ ಹೆಚ್ಚಾಗಿದ್ದರೆ ಅವನ್ನು ಬೇರೆ ಬೇರೆಯಾಗಿ ಹೇಗೆ ಬೇಕಾದರೂ ತೋಡಿ ತೆಗೆಯಬಹುದು. ಬಹಳ ಆಳವಾದ ಗಣಿಗಳಲ್ಲಿ ಆಗಾಗ ಶಿಲೆಗಳು ಬಹಳ ದೂರದವರೆಗೆ ಅಲ್ಲಾಡುತ್ತವೆ. ಕಲ್ಲಿದ್ದಲಿನ ಮತ್ತು ಶಿಲೆಯ ದೂಳು ಏಳುತ್ತದೆ. ಮೇಲಿರುವ ಶಿಲೆಯ ತೂಕದಿಂದ ಆಧಾರದ ಕಂಬಗಳಲ್ಲಿ ಸಂಚಿತವಾದ ಶಕ್ತಿ ರೂಪಾಂತರ ಹೊಂದಿದಾಗ ಈ ಸಿಡಿತಗಳು ಉಂಟಾಗುತ್ತವೆ.

1953 ರಿಂದ ಈಚೆಗೆ ರಷ್ಯ ಮೊದಲಾದ ದೇಶಗಳಲ್ಲಿ ಜಲಧಾರಾವಿಧಾನ ಮತ್ತು ಅನಿಲೀಕರಣಗಳು ಬಳಕೆಗೆ ಬಂದಿವೆ. ಮಾನಿಟರ್ ಎಂಬ ಯಂತ್ರಗಳ ಸಹಾಯದಿಂದ ಜಲಧಾರೆಯನ್ನು ಕಲ್ಲಿದ್ದಲಿನ ಪದರಗಳ ಮೇಲೆ ಹಾಯಿಸುತ್ತಾರೆ. ಕಲ್ಲಿದ್ದಲು ಮತ್ತು ನೀರಿನ ಮಿಶ್ರಣ (ಕುಸುರಿ, ಪಲ್ಪ್) ಗಣಿಯಿಂದ ಹೊರಕ್ಕೆ ಬರುತ್ತದೆ. ಅದನ್ನು ಪಂಪುಗಳಿಂದ ಮೇಲಕ್ಕೆ ಎತ್ತುತ್ತಾರೆ. ನೀರನ್ನು ಬೇರ್ಪಡಿಸಿ ಮತ್ತೆ ಬಳಸುತ್ತಾರೆ. ಈ ವಿಧಾನದಲ್ಲಿ ಗಂಟೆಯೊಂದಕ್ಕೆ 450 ಟನ್ ಕಲ್ಲಿದ್ದಲನ್ನು ಪಡೆಯಬಹುದು. 1941ರಿಂದ ಈಚೆಗೆ ಕಲ್ಲಿದ್ದಲನ್ನು ಉರಿಯುವ ಅನಿಲಗಳ ರೂಪಕ್ಕೆ ಮಾರ್ಪಡಿಸಿ ಕೊಳಾಯಿಗಳ ಮೂಲಕ ಬಹುದೂರಕ್ಕೆ ಸಾಗಿಸುತ್ತಾರೆ. ಈ ವಿಧಾನದಿಂದ ಬಹಳ ಸಣ್ಣ ಸಣ್ಣ ಕಲ್ಲಿದ್ದಲಿನ ಸ್ತರಗಳನ್ನೂ ಉಪಯೋಗಿಸಿಕೊಳ್ಳಬಹುದು. ಈಗ ಇದು ರಷ್ಯ, ಅಮೆರಿಕ, ಯುರೋಪ್ ಖಂಡಗಳ ನಾನಾ ದೇಶಗಳಲ್ಲಿ ಬಳಕೆಯಲ್ಲಿದೆ. ಪೆಟ್ರೋಲಿಯಂ ಸಂಶೋಧನೆ ಮತ್ತು ಉತ್ಪತ್ತಿಯ ವಿಧಾನಗಳು ಬಹಳ ಮುಂದುವರೆದಿವೆ. ಅವನ್ನು ಬೇರೆಯಾಗಿಯೇ ಪರಿಶೀಲಿಸಬೇಕು.

ಇತರ ಅಲೋಹ ಖನಿಜಗಳನ್ನು ಲೋಹದ ಅದಿರುಗಳಂತೆಯೇ ತೋಡಿ ತೆಗೆಯುತ್ತಾರೆ. ಸಾಧ್ಯವಾದ ಸ್ಥಳಗಳಲ್ಲೆಲ್ಲ ಅನಾವೃತಗಣಿ ವಿಧಾನವನ್ನು ಅನುಸರಿಸುತ್ತಾರೆ. ಆದರೆ ಅನೇಕ ಸ್ಥಳಗಳಲ್ಲಿ ನಿಕ್ಷೇಪಗಳು ಬಹಳ ಆಳದಲ್ಲಿ ಸಿಕ್ಕುವುದರಿಂದ ಭೂಗತ ಗಣಿ ವಿಧಾನಗಳನ್ನು ಬಳಸಬೇಕಾಗುತ್ತದೆ. ಉಪ್ಪು, ಜಿಪ್ಸಂ. ಸುಣ್ಣಕಲ್ಲು, ಮರಳು, ಪೊಟಾಷ್ ಇವನ್ನು ಭೂಗತ ಗಣಿ ವಿಧಾನಗಳಿಂದ ತೆಗೆಯುವುದುಂಟು. ಆಧಾರಕ್ಕೆ ಬಿಡುವ ಕಂಬಗಳಲ್ಲಿ ಶೇ. 20 – ಶೇ. 25 ಖನಿಜ ನಿಂತು ಹೋಗುತ್ತದೆ. ಮಣ್ಣು, ಫಾಸ್ಫೇಟ್ ಶಿಲೆಗಳನ್ನು ಕೆಲವು ವೇಳೆ ಮೇಲಿಂದ ಕತ್ತರಿಸುವ ವಿಧಾನದಲ್ಲಿ ತೋಡಿ ಸಂಪೂರ್ಣವಾಗಿ ತೆಗೆಯುತ್ತಾರೆ. ಟಾಲ್ಕ್, ಫ್ಲೋರ್ ಸ್ಪಾರ್, ಬ್ಯಾರೈಟಿಸ್, ಫೆಲ್ಡ್‌ಸ್ಪಾರ್ ಇವನ್ನು ಕಂಬಗಳ ಆಧಾರದೊಡನೆ ಪರುವು ವಿಧಾನದಿಂದ ತೋಡಿ ತೆಗೆಯುತ್ತಾರೆ. ಸುಣ್ಣಕಲ್ಲು ಮತ್ತು ಸುದ್ದೆಮಣ್ಣು ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಇವೆ. ಕಬ್ಬಿಣದ ಅದಿರನ್ನು ಕುಲುಮೆಯಲ್ಲಿ ಕರಗಿಸಲು ಸುಣ್ಣ ಕಲ್ಲು ಬೇಕು. ಪಿಂಗಾಣಿ, ಕಾಗದ, ಬಟ್ಟೆ, ರಬ್ಬರ್ ಕೈಗಾರಿಕೆಗಳಿಗೆ ಸುದ್ದೆಮಣ್ಣು ಬೇಕು. ಕೈಗಾರಿಕೆಗಳಿಗೆ ಬೇಕಾದ ಗಂಧಕ

ಅಗ್ನಿಪರ್ವತಗಳ ಬಳಿ ಸಿಕ್ಕುತ್ತದೆ. ಅದು ಖನಿಜಗಳ ರೂಪದಲ್ಲೂ ಸಿಕ್ಕುತ್ತದೆ. ಲೂಸಿಯಾನದಲ್ಲಿ 152 ಮೀ. ಆಳದಲ್ಲಿರುವ ಗಂಧಕವನ್ನು ಶಿಲೆಯ ಕಂಡಿಗಳನ್ನು ಕೊರೆದು ಕೊಳಾಯಿಗಳ ಮೂಲಕ ಹೆಚ್ಚು ಕಾಸಿದ ನೀರನ್ನು ಪಂಪ್‌ಮಾಡಿ ಕೆಳಕ್ಕೆ ಕಳುಹಿಸುತ್ತಾರೆ. ಕಾವಿನಿಂದ ಗಂಧಕ ಕರಗಿ ಕಂಡಿಯ ತಳವನ್ನು ಸೇರುತ್ತದೆ. ಅಲ್ಲಿಂದ ವಾಯು ಯಂತ್ರದಿಂದ ಮೇಲಕ್ಕೆ ಸಾಗಿಸಿ ವಿಶಾಲವಾದ ಆಯತಾಕಾರದ ಕಡಾಯಿಗಳಲ್ಲಿ ಶೇಖರಿಸುತ್ತಾರೆ. ಅಮೆರಿಕದ ಟೆಕ್ಸ್‌ಸ್ ಸಂಸ್ಥಾನದಲ್ಲಿ ಲಕ್ಷ ಟನ್‌ಗಟ್ಟಲೆ ಪ್ರಮಾಣದಲ್ಲಿ ಪ್ರತಿವರ್ಷವೂ ಗಂಧಕ ಉತ್ಪನ್ನವಾಗುತ್ತದೆ.

ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿಯೂ ಮನೆ ಕಟ್ಟಲು ಬೇಕಾದ ಬಗೆ ಬಗೆಯ ಸುಣ್ಣಕಲ್ಲು, ಮರಳು ಕಲ್ಲು, ಸ್ಲೇಟ್, ಗ್ರಾನೈಟ್ ಮತ್ತು ನೈಸ್ ಮೊದಲಾದ ಶಿಲೆಗಳಲ್ಲಿ ಕೆಲವಾದರೂ ಸಿಕ್ಕುತ್ತವೆ. ಕೆಲವು ಶಿಲೆಗಳಲ್ಲಿ ಸಹಜವಾಗಿಯೇ ಬಿರುಕುಗಳಿರುವವು. ಪದರಗಳ ಉದ್ದಕ್ಕೂ ಅವನ್ನು ಬಿಡಿಸಿ ತೆಗೆಯಬಹುದು. ಸಿಡಿಮದ್ದನ್ನು ಬಳಸಿ ಗಟ್ಟಿಯಾದ ಗ್ರಾನೈಟ್, ನೈಸ್ ಶಿಲೆಗಳ ಚಪ್ಪಡಿಗಳನ್ನು ಎಬ್ಬಿಸಬಹುದು. ಸ್ಲೇಟ್ ಒಂದು ರೂಪಾಂತರ ಶಿಲೆ, ಅದನ್ನು ಮೇಲ್ಹಾವಣಿಗೆ ಬಳಸಬಹುದು. ಹಾಗೂ ನೆಲಕ್ಕೆ ಹಾಸಬಹುದು. ಗ್ರಾನೈಟ್, ನೈಸ್ ಮತ್ತು ಪಾರ್ಫಿರಿ ಎಂಬ ಶಿಲೆಗಳು ಗಟ್ಟಿಯಾಗಿ ಬಾಳಿಕೆಗೆ ಬರುತ್ತವೆ. ಇವಕ್ಕೆ ಒಳ್ಳೆಯ ಮೆರಗನ್ನೂ ಕೊಡಬಹುದು. ಮನೆ ಕಟ್ಟಲು ಅಧಿಕ ಮೊತ್ತದಲ್ಲಿ ಕಲ್ಲನ್ನು ಬಳಸಿದರೂ ಅದಕ್ಕಿಂತ ಹೆಚ್ಚಾಗಿ ಕಲ್ಲನ್ನು ಪುಡಿಮಾಡಿ ರಸ್ತೆ ಕೆಲಸದಲ್ಲಿಯೂ ಕಾಂಕ್ರೀಟ್ ತಯಾರಿಸುವುದರಲ್ಲಿಯೂ ಬಳಸುತ್ತಾರೆ. ಇಟ್ಟಿಗೆ ಮಣ್ಣು ಸಾಮಾನ್ಯವಾಗಿ ಎಲ್ಲೆಲ್ಲೂ ಸಿಕ್ಕುತ್ತದೆ. ಉಷ್ಣದೇಶಗಳಲ್ಲಿ ಇಟ್ಟಿಗೆಯನ್ನು ಕೊಯ್ದು ಬಿಸಿಲಿನಲ್ಲಿ ಒಣಗಿಸುತ್ತಾರೆ. ಗೂಡುಗಳನ್ನು ಕಟ್ಟಿ ಮರಗಳನ್ನಿಟ್ಟು ಬೆಂಕಿಹಾಕಿ ಸುಡುವುದೂ ಉಂಟು. ಕಾರ್ಖಾನೆಗಳಲ್ಲಿ ಕುಲುಮೆಗಳನ್ನು ಕಟ್ಟಲು ಬಗೆಬಗೆಯ ವಿಶೇಷ ಪರಿಸ್ಥಿತಿಯ ಕಾವಿಟ್ಟಿಗೆಗಳು ಬೇಕು. ಇವನ್ನು ತಯಾರಿಸಲು ಬೇಕಾದ ಕ್ರೋಮೈಟ್, ಬಳಪದ ಕಲ್ಲು, ಮಣ್ಣು ಮೊದಲಾದ ಸಾಮಗ್ರಿಗಳು ನಮ್ಮ ದೇಶದಲ್ಲಿವೆ. ಮರಳು ಮತ್ತು ಗರಸು ನದೀಪಾತ್ರಗಳಲ್ಲಿ ಮತ್ತು ಕಡಲಕರೆಯಲ್ಲಿ ಸಿಕ್ಕುತ್ತವೆ. ಗುಂಡಿಗಳನ್ನು ತೋಡಿ ಇವನ್ನು ತೆಗೆಯುತ್ತಾರೆ. ಅನೇಕ ದಶಲಕ್ಷ ಘನ ಮೀಟರುಗಳ ಗಾತ್ರದಲ್ಲಿ ಇವು ನಮ್ಮ ದೇಶಕ್ಕೆ ಪ್ರತಿವರ್ಷವೂ ಬೇಕು. ಸಿಮೆಂಟ್, ಸುಣ್ಣಕಲ್ಲು, ಮಣ್ಣು ಮತ್ತು ಮರಳುಗಳನ್ನು ಬೆರಕೆ ಮಾಡಿ ತಯಾರಿಸಿದ ವಸ್ತು. ಇದಕ್ಕೆ ಹೆಚ್ಚಿನ ಗಿರಾಕಿ ಇದೆ. (ಎ.ಎಸ್.ಎಸ್.ಐ.)

**ಗಣಿಗಾರಿಕೆ ಕಾನೂನುಗಳು :** ಖನಿಜ ನಿಕ್ಷೇಪಗಳ ಪೂರ್ವೇಕ್ಷಣ ಕಾರ್ಯ ವಿಧಾನ; ಪೂರ್ವೇಕ್ಷಕನ ಹಕ್ಕು ಬಾಧ್ಯತೆಗಳು; ಗಣಿಗಾರಿಕೆ ಕಾರ್ಯ ನಿಯಂತ್ರಣ; ಗಣಿ ಉದ್ಯೋಗಿಗಳ ಸುರಕ್ಷತೆ, ಆರೋಗ್ಯ, ದುಡಿಮೆ, ವೇತನ ಇತ್ಯಾದಿ ವಿಚಾರಗಳನ್ನು ಕುರಿತ ನಿಬಂಧನೆಗಳು ಮುಂತಾದವನ್ನೊಳಗೊಂಡ ಕಾಯಿದೆಗಳು (ಮೈನಿಂಗ್ ಲಾಸ್). ಒಂದು ಪ್ರದೇಶದಲ್ಲಿ ಖನಿಜ ನಿಕ್ಷೇಪ ಇರುವ ಸಾಧ್ಯತೆಯ ಮತ್ತು ಅದನ್ನು ವಾಣಿಜ್ಯಕ ಗಾತ್ರದಲ್ಲಿ ಹೊರತೆಗೆಯುವ ಬಗ್ಗೆ ಸಾಮಾನ್ಯವಾಗಿ ಖಾಸಗಿ ಉದ್ಯಮವಲಯಕ್ಕೆ ಅವಕಾಶ ಇರುವ ಎಲ್ಲ ದೇಶಗಳಲ್ಲೂ ವ್ಯಾಪಕವಾದ ಕಾನೂನುಗಳಿರುತ್ತವೆ. ಇವನ್ನು ಸಂಬಂಧಪಟ್ಟವರು ಕಟ್ಟುನಿಟ್ಟಾಗಿ ಅನುಸರಿಸುವುದು ಅಗತ್ಯ.

ಗಣಿ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳು ಸ್ಥೂಲವಾಗಿ ಎರಡು ಬಗೆ: 1 ರಿಯಾಯಿತಿ ಪದ್ಧತಿ (ಕನ್ಸೆಷನ್ ಸಿಸ್ಟಂ,) 2 ಗೊತ್ತುಗಾರಿಕೆ ಪದ್ಧತಿ (ಕ್ಲೇಮ್ ಸಿಸ್ಟಂ). ರಿಯಾಯಿತಿ ಪದ್ಧತಿ ಪ್ರಾಚೀನ ನಾಗರಿಕತೆಗಳಿರುವ ಬಹುತೇಕ ಎಲ್ಲ ದೇಶಗಳಲ್ಲೂ ಜಾರಿಯಲ್ಲಿದೆ. ಒಂದು ಪ್ರದೇಶದಲ್ಲಿಯ ಖನಿಜ ತೆಗೆಯುವ ಹಕ್ಕನ್ನು ಅಥವಾ ರಿಯಾಯಿತಿಯನ್ನು ಅಲ್ಲಿಯ ಸರ್ಕಾರವೋ ಆ ಪ್ರದೇಶದ ಒಡೆತನ ಹೊಂದಿರುವ ಖಾಸಗಿ ವ್ಯಕ್ತಿಯೋ ತನ್ನ ಸ್ವಂತ ವಿವೇಚನೆಗೆ ಅನುಗುಣವಾಗಿ ಮತ್ತು ಕೆಲವು ಸ್ಥೂಲ ನಿಬಂಧನೆಗಳಿಗೆ ಒಳಪಟ್ಟು ವ್ಯಕ್ತಿಗಳಿಗೋ ಸಂಸ್ಥೆಗಳಿಗೋ ಗುತ್ತಿಗೆಯಾಗಿ ಕೊಡುವುದು ರಿಯಾಯಿತಿ ಪದ್ಧತಿ. ನೆಲ ಹಿಂದೆ ರಾಜರ ಅಥವಾ ಊಳಿಗ ಮಾನ್ಯ ಪ್ರಭುಗಳ ಸ್ವತ್ತಾಗಿತ್ತು. ಆ ಕಾಲದಿಂದಲೂ ಈ ಪದ್ಧತಿ ಹಲವಾರು ಮಾರ್ಪಾಡುಗಳಿಗೆ ಒಳಪಟ್ಟು ಬೆಳೆದುಕೊಂಡುಬಂದಿದೆ. ಸರ್ಕಾರವೋ ಗಣಿ ಹಕ್ಕುಗಳ ಒಡೆತನ ಹೊಂದಿದವನೋ ತನಗೆ ಸೂಕ್ತವೆನಿಸದಂಥವರನ್ನು ಆರಿಸಿ ಅಂಥವರಿಗೆ ಗಣಿಗಾರಿಕೆ ಹಕ್ಕು ನೀಡಬಹುದಾದ್ದು ಈ ಪದ್ಧತಿಯ ಅನುಕೂಲ. ಗಣಿ ಕೆಲಸ ನಡೆಸುವ ಹಕ್ಕು ಪಡೆದವರು ಅದಕ್ಕೆ ಪ್ರತಿಯಾಗಿ ಬಾಡಿಗೆಯನ್ನು, ತೆರಿಗೆಯನ್ನು ಅಥವಾ ಸ್ವಾಮಿಸ್ವವನ್ನು (ರಾಯಲ್ಟಿ) ಪಾವತಿ ಮಾಡಬೇಕು. ಒಳ್ಳೆಯ ವ್ಯವಸ್ಥೆ, ವಸೂಲಿ ಕಾರ್ಯದಲ್ಲಿ ಮಿತವ್ಯಯ, ಗಣಿಕಾರ್ಯದಲ್ಲಿ ಸ್ಥಿರತೆ–ಇವನ್ನು ಸಾಧಿಸಬಹುದೆಂಬುದು ಈ ಪದ್ಧತಿಯ ಅನುಕೂಲ. ಆದರೆ ಈ ಪದ್ಧತಿಯಲ್ಲಿ ಪ್ರತಿಕೂಲಗಳಿಲ್ಲದೆಯೂ ಇಲ್ಲ. ಸ್ವತ್ತಿಗೆ ಸಂಬಂಧಿಸಿದಂತೆ ಅಗಾಧ ಅಧಿಕಾರಗಳು ಕೆಲವೇ ಜನರ ಹಸ್ತಗಳಲ್ಲಿ ಕೇಂದ್ರೀಕೃತವಾಗುತ್ತವೆ. ಸ್ಪರ್ಧೆಗೆ ಎಡೆಯಿರುವುದಿಲ್ಲ. ಕೆಲವೇ ಜನರು ಭಾರಿ ಲಾಭ ಗಳಿಸುತ್ತಾರೆ. ಗಣಿಕಾರ್ಯದ ಹಕ್ಕು ಪಡೆದುಕೊಂಡವರು ತಮ್ಮ ಅನುಕೂಲಕ್ಕೆ ತಕ್ಕಂತೆ ಅದಿರನ್ನು ಅತಿಯಾಗಿ ತೆಗೆದು ಗಣಿಯನ್ನು ಶೀಘ್ರವಾಗಿ ಬರಿದು ಮಾಡುವ, ಅಥವಾ ಸಾಕಷ್ಟು ಅದಿರನ್ನು ತೆಗೆಯದೆ ಇರುವ ಸಂಭವವುಂಟು. ಆದರೆ ಗಣಿಯನ್ನು ಅಭಿವೃದ್ಧಿ ಸ್ಥಿತಿಯಲ್ಲಿಟ್ಟಿರುವ ಬಗ್ಗೆ ಸೂಕ್ತ ವಿಧಿಗಳನ್ನು ಕರಾರಿನಲ್ಲಿ ಸೇರಿಸುವುದರ ಮೂಲಕ ಈ ಸಂಭವವನ್ನು ನಿವಾರಿಸಿಕೊಳ್ಳಬಹುದು. ಇಂಥ ಗಣಿ ಕಂಪನಿಗಳ ಹಣಕಾಸಿನ ವಹಿವಾಟುಗಳ ಮೇಲೆ ಮತ್ತು ಬಂಡವಾಳ ನಿರ್ಮಾಣದ ಮೇಲೆ ಸರ್ಕಾರ ಸೂಕ್ತ ಹತೋಟಿ ಪಡೆಯಬಹುದು. ದೊಡ್ಡ ಕಂಪನಿಗಳು ಗಣಿಕಾರ್ಯದ ಹಕ್ಕು ಪಡೆಯುವುದರಿಂದ ಅವುಗಳ ನಿರ್ವಹಣೆಯಲ್ಲಿ ಮತ್ತು ಗಣಿಗಳ ಪೂರ್ವೇಕ್ಷಣೆಯಲ್ಲಿ ಮಿತವ್ಯಯವೂ ದಕ್ಷತೆಯೂ ಸಾಧಿಸಬಹುದೆಂದೂ ವಾದಿಸಲಾಗಿದೆ.

ಗೊತ್ತುಗಾರಿಕೆ ಪದ್ಧತಿ ಉಗಮಿಸಿದ್ದು ಅಮೆರಿಕ ಸಂಯುಕ್ತಸಂಸ್ಥಾನದಂಥ ನೂತನ ದೇಶಗಳಲ್ಲಿ ಗಣಿಗಾರಿಕೆ ಆರಂಭವಾದ ಸಮಯದಲ್ಲಿ. ಕ್ಯಾಲಿಫೋರ್ನಿಯದಲ್ಲೂ ಆಸ್ಟ್ರೇಲಿಯದಲ್ಲೂ ಹೊಸದಾಗಿ ಬೆಳಕಿಗೆ ಬಂದ ಚಿನ್ನದ ಗಣಿಗಳೆಡೆಗೆ ಪೂರ್ವೇಕ್ಷಕರು ಧಾವಿಸಿದರು. ಚಿನ್ನದ ಆಸೆಯಿಂದ ಹೀಗೆ ಹೋದವರಲ್ಲೇ ಪರಸ್ಪರ ಬಡಿದಾಟ ಉಂಟಾದಾಗ ಅದನ್ನು ನಿವಾರಿಸಲು ಗೊತ್ತುಗಾರಿಕೆ ಕಾನೂನುಗಳು ಸೃಷ್ಟಿಯಾದುವು. ಯಾರು ಯಾವ ಸ್ಥಳದಲ್ಲಿ ಖನಿಜ ನಿಕ್ಷೇಪಗಳನ್ನು ಪತ್ತೆ ಹಚ್ಚುತ್ತಾರೋ ಆ ಸ್ಥಳದಲ್ಲಿ ಗಣಿ ಕಾರ್ಯ ಕೈಗೊಳ್ಳುವ ಹಕ್ಕು ಅವರದಾಗುತ್ತದೆ ಎಂಬುದು ಸ್ಥೂಲವಾಗಿ ಇವುಗಳ ತತ್ತ್ವ. ಸಣ್ಣಪುಟ್ಟ ಹಕ್ಕುಗಳು ಉದ್ಭವಿಸಿದಾಗ ಅವನ್ನೆಲ್ಲ ಕ್ರೋಡೀಕರಿಸುವುದು ಅವಶ್ಯವಾಗುತ್ತದೆ. ಇಲ್ಲದಿದ್ದರೆ ಗಣಿಕಾರ್ಯ ಲಾಭದಾಯಕವಾಗದಿರಬಹುದು ; ಬಂಡವಾಳ ವ್ಯರ್ಥವಾಗಬಹುದು.

ಮೇಲಣ ವಿವೇಚನೆಯ ದೃಷ್ಟಿಯಲ್ಲಿ ಒಟ್ಟಿನಲ್ಲಿ ಗಣಿಗಾರಿಕೆ ಕಾನೂನುಗಳಿಗೆ ಸಂಬಂಧಿಸಿದಂತೆ ಎರಡು ಮೂಲಭೂತ ತತ್ತ್ವಗಳನ್ನು ಗುರುತಿಸಬಹುದು: 1) ಗಣಿ ನಿರ್ವಾಹಕರು ತಮ್ಮ ಕಾರ್ಯಾಚರಣೆಗೆ ಒಳಪಟ್ಟ ಭೂ ಸ್ವತ್ತಿನ ಮೇಲೆ ರದ್ದು ಮಾಡಲಾಗದಂಥ ಸ್ವಸ್ವ (ಟೈಟ್ಲ್) ಪಡೆಯುವ ಹಕ್ಕು. ಇದಕ್ಕೆ ಪ್ರತಿಯಾಗಿ ನಿರ್ದಿಷ್ಟವಾದ ಮತ್ತು ಅವರ ಕಾರ್ಯವ್ಯಾಪ್ತಿಗೆ ಒಳಪಟ್ಟ ಕೆಲವು ಷರತ್ತುಗಳನ್ನು ಅವರು ಪೂರೈಸಬೇಕಾಗುತ್ತದೆ. 2) ಗಣಿಯಿಂದ ಬರುವ ಲಾಭದ ಮೇಲೆ ಗೊತ್ತಾದ ಬಾಡಿಗೆ, ಸ್ವಾಮಿಸ್ವ ಅಥವಾ ತೆರಿಗೆಯನ್ನು ಪಡೆಯಲು ಸರ್ಕಾರಕ್ಕೆ ಅಥವಾ ಸ್ವತ್ತಿನ ಒಡೆಯನಿಗೆ ಹಕ್ಕು ಇರುತ್ತದೆ. ಸ್ವತ್ತು ಹಾಗೂ ಕಾರ್ಮಿಕರ ರೂಪದಲ್ಲಿರುವ ಬಂಡವಾಳ ವಿನಾಕಾರಣವಾಗಿ ಅನುಪಯೋಗಿಯಾಗಿರದಂತೆ ಗಣಿಯಲ್ಲಿ ನಿರಂತರವಾಗಿ ನ್ಯಾಯವಾದ ಹಾಗೂ ಪರಿಣಾಮಕಾರಿಯಾದ ಕಾರ್ಯ ನಡೆಯುವುದಾಗಿ ನಿರೀಕ್ಷಿಸುವ ಹಕ್ಕೂ ಸರ್ಕಾರಕ್ಕೆ ಅಥವಾ ಸ್ವತ್ತಿನ ಒಡೆಯರಿಗೆ ಉಂಟು. ಎಲ್ಲ ದೇಶಗಳ ಕಾನೂನುಗಳಲ್ಲೂ ಸ್ಥೂಲವಾಗಿ ಈ ಎರಡು ತತ್ತ್ವಗಳು ಅಂತರ್ಗತವಾಗಿರುತ್ತವೆ.

ಗಣಿ ಕಾರ್ಮಿಕರಿಗೆ ಸೂಕ್ತವಾದ ವೇತನ ಪಾವತಿ, ಅವರ ಕೆಲಸದ ಕಾಲದ ನಿಯಂತ್ರಣ, ಅಪಘಾತ ಪರಿಹಾರ ಮತ್ತು ವಿಮೆ, ವಿರಾಮವೇತನ, ಸಹಾಯಾರ್ಥ ನಿಧಿ, ಕಾರ್ಮಿಕ–ವ್ಯವಸ್ಥಾಪಕ ಸಂಬಂಧಗಳು, ಕಾರ್ಮಿಕ ವ್ಯಾಜ್ಯಗಳ ಇತ್ಯರ್ಥ, ಕಾರ್ಮಿಕ ಕಲ್ಯಾಣ, ಕಾರ್ಮಿಕ ಸೌಲಭ್ಯಗಳು, ಆರೋಗ್ಯ ರಕ್ಷಣೆ, ನೈರ್ಮಲ್ಯ ಸಾಧನೆ, ಕೆಲಕೆಲವು ಗಣಿಗಳಿಗೆ ವಿಶಿಷ್ಟವಾದ ಕಾಯಿಲೆಗಳ ನಿವಾರಣೆ ಮುಂತಾದ ಅನೇಕ ವಿಚಾರಗಳನ್ನು ಕುರಿತ ಕಾನೂನುಗಳೂ ಜಾರಿಯಲ್ಲಿವೆ.

ಪ್ರಪಂಚದ ಇತರ ಹಲವು ದೇಶಗಳಂತೆ ಭಾರತದಲ್ಲೂ ಮೇಲ್ಕಂಡ ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾದ ಕಾನೂನುಗಳುಂಟು. ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಗಣಿಗಳ ಅಭಿವೃದ್ಧಿಗಾಗಿ ಅವುಗಳ ಕಾರ್ಯವನ್ನು ಅಂಕೆಯಲ್ಲಿಡುವ ಬಗ್ಗೆ 1957ರಲ್ಲಿ ಗಣಿಗಳು ಮತ್ತು ಖನಿಜಗಳ ನಿಬಂಧನೆ ಮತ್ತು ಅಭಿವೃದ್ಧಿ ಕಾಯಿದೆ ಜಾರಿಗೆ ಬಂತು. ಈ ಶಾಸನದ ಅಥವಾ ಇದಕ್ಕೆ ಅನುಗುಣವಾಗಿ ರಚಿತವಾದ ನಿಯಮಗಳ ಪ್ರಕಾರ ಪೂರ್ವೇಕ್ಷಣ ಕಾರ್ಯದ ಅನುಜ್ಞೆ ಅಥವಾ ಗುತ್ತಿಗೆ ಪಡೆಯದೆ ಯಾರಿಗೂ ಪೂರ್ವೇಕ್ಷಣಕಾರ್ಯ ಅಥವಾ ಗಣಿ ಕಾರ್ಯದಲ್ಲಿ ಕೈ ಹಚ್ಚಲು ಸಾಮಾನ್ಯವಾಗಿ ಸಾಧ್ಯವಿಲ್ಲ. ಭಾರತೀಯ ಪ್ರಜೆಗಳಿಗೆ ಅಥವಾ ಭಾರತೀಯರೇ ಹೆಚ್ಚಿನ ಪಾಲು ಪಡೆದಿರುವ ಸಂಸ್ಥೆಗಳಿಗೆ ಮಾತ್ರ ಇದನ್ನು ಪಡೆಯುವ ಅರ್ಹತೆಯುಂಟು.

ಒಂದು ರಾಜ್ಯದಲ್ಲಿ ಒಬ್ಬನಿಗೆ ಪೂರ್ವೇಕ್ಷಣೆಗೆ 50 ಚ.ಮೈ.ಗಿಂತ, ಗುತ್ತಿಗೆಗೆ 10 ಚ.ಮೈ.ಗಿಂತ ಹೆಚ್ಚು ಸ್ಥಳ ಸಿಗಲಾರದು. ಆದರೆ ಕೇಂದ್ರ ಸರ್ಕಾರ ಗಣಿಯ ಅಭಿವೃದ್ಧಿಗಾಗಿ ಹೆಚ್ಚು ಸ್ಥಳವನ್ನು ಕೊಡಬೇಕೆಂದು ಅಭಿಪ್ರಾಯಪಟ್ಟಲ್ಲಿ ಈ ಪರಿಮಿತಿಗಿಂತ ಹೆಚ್ಚಿಗೆ ಸ್ಥಳ ಕೊಡಬಹುದು. ಅನುಜ್ಞೆಯ ಮತ್ತು ಗುತ್ತಿಗೆಯ ಅವಧಿ, ಅರ್ಜಿಯನ್ನು ಮಾಡುವ

ಕ್ರಮ, ಕೊಡಬೇಕಾದ ಸ್ವಾಮಿಸ್ವ ಮುಂತಾದವುಗಳ ಬಗ್ಗೆ ಕಾಯಿದೆಯಲ್ಲಿ ಸೂಕ್ತ ವಿಧಿಗಳಿವೆ. ಅನುಜ್ಞೆ ಮತ್ತು ಗುತ್ತಿಗೆಗಳನ್ನು ಈ ಕಾಯಿದೆಗೆ ವಿರೋಧವಾಗಿ ಕೊಟ್ಟಲ್ಲಿ ಅವು ಸಂಪೂರ್ಣವಾಗಿ ಶೂನ್ಯವಾಗುತ್ತವೆ. ರಾಜ್ಯ ಸರ್ಕಾರದ ಅಭಿಪ್ರಾಯ ಪಡೆದುಕೊಂಡು ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರವೇ ಸ್ವತಃ ಗಣಿ ಕಾರ್ಯ ಕೈಗೊಳ್ಳಬಹುದು. ಆದರೆ ಆ ಸಂದರ್ಭದಲ್ಲಿ ಅದು ಕೊಡಬೇಕಾದ ಸ್ವಾಮಿಸ್ವ ಇತ್ಯಾದಿಗಳನ್ನು ಖಾಸಗಿ ವ್ಯಕ್ತಿಗಳಂತೆಯೆ ಕೊಡಬೇಕಾಗುತ್ತದೆ.

1952ರಲ್ಲಿ ಭಾರತದಲ್ಲಿ ಜಾರಿಗೆ ಬಂದ ಗಣಿಗಳ ಕಾಯಿದೆ ಗಣಿನಿರ್ವಹಣೆ, ಕಾರ್ಮಿಕರ ಹಿತರಕ್ಷಣೆ ಮುಂತಾದವುಗಳ ದೃಷ್ಟಿಯಿಂದ ಅತ್ಯಂತ ಮುಖ್ಯವಾದ್ದು. ಗಣಿ ಎಂಬ ಶಬ್ದಕ್ಕೆ ಕಾನೂನಿನ ದೃಷ್ಟಿಯಿಂದ ಇಲ್ಲಿ ವ್ಯಾಖ್ಯಾನ ನೀಡಲಾಗಿದೆ. ಈ ಕಾಯಿದೆಯ ಉದ್ದೇಶಕ್ಕಾಗಿ ಯಾವ ಉದ್ಯಮವನ್ನು ಗಣಿಗಾರಿಕೆ ಎನ್ನಬೇಕು ಎಂಬುದರ ಬಗ್ಗೆ ನಿರ್ಣಯಾಧಿಕಾರ ಸರ್ಕಾರದ್ದು.

ಗಣಿಯಲ್ಲಿ ಕೆಲಸಮಾಡುವ ಕಾರ್ಮಿಕರ ಆರೋಗ್ಯವನ್ನು ಕಾಪಾಡಲು, ಗಣಿಗಳಲ್ಲಿ ಬರ ಬಹುದಾದ ಅಪಾಯಗಳನ್ನು ತಡೆಯಲು ಅನೇಕ ನಿಬಂಧನೆಗಳಿವೆ. ಈ ಉದ್ದೇಶದ ಸಾಧನೆಗಾಗಿ ಗಣಿಗಳ ಮೇಲ್ವಿಚಾರಣೆ ನಡೆಯಿಸಲು ನಿರೀಕ್ಷಕರು, ಪ್ರಮಾಣಪತ್ರ ನೀಡಬಲ್ಲ ವೈದ್ಯರು, ಗಣಿ ಮಂಡಲಿ, ಸಮಿತಿ ಮುಂತಾದವುಗಳ ನೇಮಕಕ್ಕೆ ಸೂಕ್ತ ವಿಧಿಗಳಿದ್ದು ಅವರ ಮತ್ತು ಅವುಗಳ ಅಧಿಕಾರ ವ್ಯಾಪ್ತಿಯ ನಿರ್ದೇಶವಿದೆ.

ಗಣಿಗಳ ಕಾಯಿದೆಯ ನಿಬಂಧನೆಗಳು, ನಿಯಮಗಳು ಉಪನಿಯಮಗಳು ಸರಿಯಾಗಿ ಪರಿಪಾಲಿಸಲ್ಪಡುವುವೋ ಇಲ್ಲವೋ ಎಂಬುದನ್ನು ನಿರ್ಧರಿಸಲು ಅಗತ್ಯವಾದ ನಿರೀಕ್ಷಣ ಮತ್ತು ತನಿಖೆ ಮಾಡುವ ಅಧಿಕಾರ ಮುಖ್ಯ ನಿರೀಕ್ಷಕ, ಅವನ ಕೈ ಕೆಳಗೆ ಕೆಲಸ ಮಾಡುವ ನಿರೀಕ್ಷಕರು-ಇವರಿಗೆ ಇದೆ. ಹಗಲೇ ಆಗಲಿ, ರಾತ್ರಿಯೇ ಆಗಲಿ ಗಣಿಯ ಕೆಲಸಕ್ಕೆ ತೊಂದರೆಯಾಗದ ರೀತಿಯಲ್ಲಿ ತಮ್ಮ ಸಹಾಯಕರೊಂದಿಗೆ ಗಣಿಯನ್ನು ಪ್ರವೇಶಿಸಲು ಅವರಿಗೆ ಹಕ್ಕಿದೆ. ಗಣಿಗಳ ಪರಿಸ್ಥಿತಿ, ಗಾಳಿಯ ಕಿಂಡಿ, ಉಪನಿಯಮಗಳ ಪರ್ಯಾಪ್ತತೆ, ಕೆಲಸಗಾರರ ಸುರಕ್ಷಣೆ, ನೆಮ್ಮದಿ, ಆರೋಗ್ಯ ಈ ದೃಷ್ಟಿಯಿಂದ ಅವರು ಪರಿಶೀಲನೆ ಅಥವಾ ತನಿಖೆ ನಡೆಸಬಹುದು. ತತ್ಸಂಬಂಧವಾಗಿ ಹೇಳಿಕೆಗಳನ್ನು ಪಡೆದುಕೊಳ್ಳಬಹುದು. ಕಾಯಿದೆಯ ಉಲ್ಲಂಘನೆಯಾಗಿದೆಯೆಂಬುದು ಸಿದ್ಧ ಪಟ್ಟರೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಸ್ಥಳವನ್ನು ಶೋಧಿಸುವ, ಸ್ವತ್ತನ್ನು ಸ್ವಾಧೀನಪಡಿಸಿ ಕೊಳ್ಳುವ ಅಧಿಕಾರ ಅವರಿಗಿರುತ್ತದೆ.

ಗಣಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ನಿರತರಾದವರ, ಅಪಾಯಕಾರಿ ಉದ್ಯೋಗ ಅಥವಾ ಕೆಲಸಗಳಲ್ಲಿ ತೊಡಗಿಸಲಾದವರ ಪರೀಕ್ಷೆ, ಕೆಲಸದಿಂದ ಅಥವಾ ಕೆಲಸದ ಸ್ವರೂಪದಿಂದ ಅಸ್ವಸ್ಥತೆ ಬಂದುದಾಗಿ ಶಂಕೆ ಇದ್ದವರ ಪರೀಕ್ಷೆ, ಪ್ರಮಾಣಪತ್ರ ನೀಡಿಕೆ ಮುಂತಾದ ಉದ್ದೇಶಗಳಿಗಾಗಿ ವೈದ್ಯರನ್ನು ನೇಮಿಸುವ ಅಧಿಕಾರ ಸರ್ಕಾರಕ್ಕಿರುತ್ತದೆ. ಕಾಯಿದೆಗೆ ಸಂಬಂಧಿಸಿದಂತೆ ಯಾವುದೇ ಪ್ರದೇಶಕ್ಕೆ ಅಥವಾ ಗಣಿಗಳ ಸಮುದಾಯಕ್ಕೆ ಅಥವಾ ಒಂದೇ ತೆರನಾದ ಹಲವು ಗಣಿಗಳಿಗೆ ಒಂದು ಗಣಿ ಮಂಡಳಿಯನ್ನು ಸರ್ಕಾರ ರಚಿಸಬಹುದು. ಸರ್ಕಾರ, ಮಾಲೀಕರು, ಕಾರ್ಮಿಕರು-ಇವರ ಪ್ರತಿನಿಧಿಗಳನ್ನೊಳಗೊಂಡ ಮಂಡಲಿಯೊಂದು ಗಣಿ ಸಂಬಂಧವಾದ ವಿಚಾರಗಳ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಒಪ್ಪಿಸಬಹುದು. ಆ ವರದಿಗೆ ಅನುಗುಣವಾಗಿ ಸರ್ಕಾರ ನಿರ್ಧಾರ ಕೈಗೊಳ್ಳುತ್ತದೆ.

ಕೆಲಸಗಾರರ ಆರೋಗ್ಯ ಮತ್ತು ಸುರಕ್ಷಣೆಗಾಗಿ ಕಾಯಿದೆಯಲ್ಲಿ ಅನೇಕ ವಿಧಿಗಳಿವೆ. ಕುಡಿಯುವ ನೀರಿನ ಸರಬರಾಯಿ, ಶೌಚಗೃಹಗಳ ನಿರ್ಮಾಣ, ಶುಚಿತ್ವ, ಪ್ರಥಮ ಚಿಕಿತ್ಸೆಯ ವ್ಯವಸ್ಥೆ-ಇವನ್ನು ಒದಗಿಸುವ ಬಗ್ಗೆ ವಿಶೇಷ ವಿಧಿಗಳುಂಟು. ಅನುಚಿತವಾದ ಅಥವಾ ಅಪಾಯಕಾರಿ ಗಣಿ ಕೆಲಸದಲ್ಲಿ ಕಾರ್ಮಿಕರನ್ನು ತೊಡಗಿಸಿರುವುದು ಕಂಡು ಬಂದರೆ ತಕ್ಕ ಕ್ರಮವನ್ನು ಕೈಗೊಂಡು ಗಣಿ ವ್ಯವಸ್ಥಾಪಕರಿಗೆ ಸೂಕ್ತ ಆದೇಶವನ್ನು ಕೊಡುವ ಹಕ್ಕು ಮುಖ್ಯ ನಿರೀಕ್ಷಕನಿಗೆ ಅಥವಾ ನಿರೀಕ್ಷಕರಿಗೆ ಇರುತ್ತದೆ. ನಿರೀಕ್ಷಕನ ಆದೇಶಗಳ ಮೇಲೆ ಆಕ್ಷೇಪಣೆಯನ್ನು ಗಣಿಯ ಆಡಳಿತದವರು ತಂದಲ್ಲಿ ಅದನ್ನು ವಿಚಾರಿಸಲು ಪ್ರತ್ಯೇಕವಾಗಿ ಗಣಿ ಸಮಿತಿಯಿದೆ. ಸುತ್ತಮುತ್ತ ಮರಣ ಅಥವಾ ಬೇರೆ ಯಾವುದಾದರೂ ವಿಪರೀತಗಳು ಸಂಭವಿಸಿದಲ್ಲಿ ಅವನ್ನು ಗಣಿ ವ್ಯವಸ್ಥಾಪಕರು ಸೂಕ್ತ ಅಧಿಕಾರಿಗಳಿಗೆ ತಿಳಿಸಬೇಕಲ್ಲದೆ ಪ್ರಕಟನೆ ಹಲಗೆಯ ಮೇಲೆ ಅದನ್ನು ಪ್ರಕಟಿಸಬೇಕು. ಕಾಯಿದೆಯಲ್ಲಿ ಹೇಳಲಾದ ಅಪಘಾತಗಳು ಸಂಭವಿಸಿದರೆ ಕೇಂದ್ರ ಸರ್ಕಾರ ಅದರ ತನಿಖೆಯ ಬಗ್ಗೆ ವಿಚಾರಣಾ ನ್ಯಾಯಾಲಯವನ್ನು ನೇಮಿಸಬಹುದು. ಕೆಲವೊಂದು ಕಾಯಿಲೆಗಳು ಗಣಿಸಂಬಂಧದವುಗಳೆಂದು ಕೇಂದ್ರ ಸರ್ಕಾರ ಪ್ರಕಟಿಸುತ್ತದೆ. ಅಂಥ ಕಾಯಿಲೆ ಬಂದದ್ದು ಕಂಡುಬಂದರೆ ಗಣಿ ವ್ಯವಸ್ಥಾಪಕರು ಮತ್ತು ರೋಗಿಗೆ ಚಿಕಿತ್ಸೆ ಮಾಡುತ್ತಿರುವ ವೈದ್ಯರು ಅದರ ವಿವರಗಳನ್ನು ಮುಖ್ಯ ನಿರೀಕ್ಷಕನಿಗೆ ಕಳುಹಿಸಬೇಕು. ಆ ಕಾಯಿಲೆ ಗಣಿಸಂಬಂಧಿಯಾದ್ದು ಎಂಬುದು ಮುಖ್ಯ ನಿರೀಕ್ಷಕನಿಗೆ ಮನವರಿಕೆಯಾದಲ್ಲಿ ಆತ ಅದರ ವೈದ್ಯಕೀಯ ಖರ್ಚನ್ನು ಕೊಡುತ್ತಾನೆ ಮತ್ತು ಆ ಹಣವನ್ನು ಮಾಲೀಕನಿಂದ ಬಳಿಕ ವಸೂಲು ಮಾಡಲಾಗುವುದು. ಗಣಿಯಿಂದಾಗಿ ಬಂದ ಕಾಯಿಲೆಯಾಗಿದ್ದರೆ ಅಥವಾ ಹಾಗೆಂದು ಊಹಿಸಲು ಆಸ್ಪದವಿದ್ದರೆ ಕೇಂದ್ರ ಸರ್ಕಾರ ಅದರ ತನಿಖೆಗೆ ಏರ್ಪಾಡು ಮಾಡಬಹುದು. ಸಮಿತಿಯ ಮತ್ತು ರೋಗದ ತನಿಖೆಯ ವರದಿಯನ್ನು ಸರ್ಕಾರ ಪ್ರಕಟಿಸಬಹುದು; ವಿಚಾರಣಾ ನ್ಯಾಯಾಲಯದ ವರದಿಯನ್ನು ಅದು ಪ್ರಕಟಿಸಲೇಬೇಕು.

ಕೆಲಸಗಾರರ ಸ್ವಾಸ್ಥ್ಯ ದೃಷ್ಟಿಯಿಂದ, ಅವರು ಕೆಲಸ ಮಾಡಬೇಕಾದ ಸಮಯದ ಪರಿಮಿತಿಯನ್ನು ಕಾಯಿದೆಯಲ್ಲಿ ನಿಗದಿಗೊಳಿಸಲಾಗಿದೆ. ವಾರಕ್ಕೆ ಆರು ದಿನಗಳಿಗಿಂತ ಹೆಚ್ಚು ಯಾರೂ ಕೆಲಸ ಮಾಡಕೂಡದು. ಕಾರ್ಮಿಕರಿಗೆ ಕೊಡಬೇಕಾದ ವಿಶ್ರಾಂತಿಯ ದಿನ, ವೇಳೆ, ನೆಲದ ಮೇಲೆ ಮತ್ತು ಗಣಿಯ ಒಳಗೆ ಕೆಲಸ ಮಾಡುವ ಸಮಯದ ನಿಗದಿ, ನಿಗದಿಯಾದ ಸಮಯದಿಂದ ಹೆಚ್ಚು ಸಮಯ ಕೆಲಸ ಮಾಡಿದರೆ ಅದಕ್ಕೆ ವೇತನ ಕ್ರಮ, ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಕೆಲಸ, ಅಪ್ರಾಪ್ತ ವಯಸ್ಕರನ್ನು ಗಣಿಯಲ್ಲಿ ತೊಡಗಿಸುವುದು, ಅವರಿಗೆ ಇರಬೇಕಾದ ಪ್ರಮಾಣಪತ್ರ, ಕೆಲಸಗಾರರ ರಜೆ, ಸಂಬಳ, ಮುಂಗಡ-ಇತ್ಯಾದಿಗಳನ್ನು ಕ್ರಮಪಡಿಸಲು ವಿವಿಧ ವಿಧಿಗಳನ್ನು ಗಣಿ ಕಾಯಿದೆಯಲ್ಲಿ ಅಳವಡಿಸಲಾಗಿದೆ. ಈ ಕಾಯಿದೆಯನ್ನು ಅನ್ವಯಿಸಿ ಸೂಕ್ತ ನಿಬಂಧನೆಗಳನ್ನು ಮಾಡುವ ಅಧಿಕಾರವೂ ಕೇಂದ್ರ ಸರ್ಕಾರಕ್ಕಿದೆ.

ಅಪಘಾತಗಳನ್ನು ತಡೆದು, ಗಣಿಯಲ್ಲಿ ಕೆಲಸ ಮಾಡುವವರ ಭದ್ರತೆ, ಸೌಕರ್ಯ ಮತ್ತು ಶಿಸ್ತು ರಕ್ಷಣೆಗಾಗಿ ಗಣಿಯನ್ನು ನಡೆಯಿಸುವವರಿಗೆ ಮತ್ತು ಕೆಲಸ ಮಾಡುವವರಿಗೆ ಸರಿಯಾದ ಮಾರ್ಗದರ್ಶನ ನೀಡಲು ಅಗತ್ಯವಾದ ಉಪನಿಬಂಧನೆಗಳನ್ನು ಮಾಡಲು ಗಣಿಗಳ ಮಾಲೀಕರು, ನಿಯೋಗಿಗಳು ಅಥವಾ ವ್ಯವಸ್ಥಾಪಕರಿಗೆ ಅಧಿಕಾರವುಂಟು. ಅವರು ಇಂಥ ಉಪನಿಬಂಧನೆಗಳನ್ನು ಎರಡು ತಿಂಗಳುಗಳ ಒಳಗೆ ರಚಿಸದಿದ್ದಲ್ಲಿ ಅಥವಾ ಅಂಥ ಉಪನಿಬಂಧನೆಗಳು ಮುಖ್ಯ ನಿರೀಕ್ಷಕನ ದೃಷ್ಟಿಯಲ್ಲಿ ಸರಿಯೆನಿಸದಿದ್ದಲ್ಲಿ ಆತ ಅಗತ್ಯವಾದ ಉಪನಿಬಂಧನೆಗಳನ್ನು ರಚಿಸಿ ಅಥವಾ ಅದಕ್ಕೆ ಸೂಕ್ತ ತಿದ್ದುಪಡಿ ಮಾಡಿ ಗಣಿಗಳ ನಿರ್ವಾಹಕರಿಗೆ ಕಳುಹಿಸಿಕೊಡಬೇಕು. ಇವು ಗಣಿ ನಿರ್ವಾಹಕರಿಗೆ ಒಪ್ಪಿಗೆಯಾಗದಿದ್ದಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ಕೇಂದ್ರ ಸರ್ಕಾರದ್ದು. ಗಣಿ ಕಾಯಿದೆಯಲ್ಲಿ ಕಾರ್ಮಿಕರಿಗೆ ಅನ್ವಯವಾಗುವ ಭಾಗಗಳನ್ನೂ ನಿಬಂಧನೆ ಉಪನಿಬಂಧನೆಗಳನ್ನೂ ಕಾರ್ಮಿಕರಿಗೆ ತಿಳಿಯುವಂತೆ ಗಣಿ ಪ್ರಕಟಿಸಬೇಕು. ಕಾಯಿದೆಯ ಪಾಲನೆ ಮಾಡದಿದ್ದರೆ ಸೂಕ್ತ ಶಿಕ್ಷೆಗಳೂ ಸೂಚಿತವಾಗಿವೆ.

ಕಾಯಿದೆಯ ವಿಧಿಗಳ ಮತ್ತು ನಿಯಮಗಳ ಪರಿಪಾಲನೆ ಸರಿಯಾಗಿ ನಡೆದಿದೆಯೋ ಇಲ್ಲವೋ ಎಂದು ಪರಿಶೀಲಿಸುವ ಬಗ್ಗೆ ಯಾವುದೇ ಗಣಿಯ ತನಿಖೆಯ ವ್ಯವಸ್ಥೆ ಮಾಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆ.

ಸ್ತ್ರೀ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕಾಯಿದೆಯಿದೆ. ಹೆರಿಗೆ, ಶಿಶುಪೋಷಣೆ ಮುಂತಾದವುಗಳಿಗಾಗಿ ಸ್ತ್ರೀ ಕಾರ್ಮಿಕರಿಗೆ ರಜ ಮತ್ತು ಇತರ ಸೌಲಭ್ಯಗಳು ಕಡ್ಡಾಯ. ದುಡಿಮೆಗಾರ್ತಿಯರನ್ನು ಹೆರಿಗೆಯ ಸಮಯದಲ್ಲಿ ಕೆಲಸದಿಂದ ತೆಗೆಯುವುದಕ್ಕೆ ನಿಷೇಧವುಂಟು.

ಭಾರತದ ಕಾರ್ಖಾನೆ ಕಾಯಿದೆಯ 3 ಮತ್ತು 4 ನೆಯ ಪರಿಚ್ಛೇದಗಳನ್ನು ಗಣಿಗಳಿಗೆ ವಿಸ್ತರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ರಾಜ್ಯ ಸರ್ಕಾರದ ಗಣಿಗಳನ್ನು ವಶಪಡಿಸಿಕೊಳ್ಳುವ ಅಧಿಕಾರವೂ ಕೇಂದ್ರಕ್ಕೆ ಉಂಟು **(ನೋಡಿ- ಗಣಿಕಾರ್ಮಿಕರು).**

(ಕೆ.ಜಿ.ಬಿ)

**ಗಣಿಗಾರಿಕೆಯ ಅರ್ಥಶಾಸ್ತ್ರ :** ಗಣಿಗಳು ನೈಸರ್ಗಿಕ ಸಂಪನ್ಮೂಲಗಳು. ಪ್ರತಿಯೊಂದು ರಾಷ್ಟ್ರದ ಆರ್ಥಿಕ ಬೆಳವಣಿಗೆಯೂ ನೈಸರ್ಗಿಕ ಸಂಪನ್ಮೂಲಗಳನ್ನೆ ಬಹಳಮಟ್ಟಿಗೆ ಅವಲಂಬಿಸಿದೆ. ಆರ್ಥಿಕ ಅಭಿವೃದ್ಧಿಗೆ ಗಣಿಗಾರಿಕೆ ನಾನಾ ಬಗೆಯಲ್ಲಿ ಉಪಯುಕ್ತವಾಗಿದೆ : 1. ರಾಷ್ಟ್ರದ ಬೆಳವಣಿಗೆಗೆ ಉಪಯುಕ್ತವಾದ ಅನೇಕ ವಸ್ತುಗಳು ಒದಗುವುದು ಗಣಿಗಳಿಂದ. 2. ಗಣಿಗಾರಿಕೆಯಿಂದ ಸ್ಥಳೀಯ ಕಾರ್ಮಿಕರಿಗೆ ಉದ್ಯೋಗವಕಾಶ ಒದಗುವುದಲ್ಲದೆ ಅವರು ಕಾರ್ಯಕುಶಲರಾಗಿ ತರಬೇತು ಪಡೆಯುತ್ತಾರೆ. 3. ಇದರಿಂದ ನಾನಾ ಬಗೆಯ ಸೌಲಭ್ಯಗಳು ಲಭ್ಯವಾಗುವುವಲ್ಲದೆ ಮಾರುಕಟ್ಟೆಗಳು ಬೆಳೆದು ರಾಷ್ಟ್ರದ ಅಥವಾ ನಿರ್ದಿಷ್ಟ ಪ್ರದೇಶಗಳ ಅಭಿವೃದ್ಧಿ ಸಾಧಿಸುತ್ತದೆ. 4. ಉತ್ಪನ್ನ, ಉದ್ಯೋಗ, ವಾಣಿಜ್ಯ ವರ್ಧಿಸುವುದರಿಂದ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಸಾಧಿತವಾಗುತ್ತದೆ. 5. ಉದ್ಯಮದಿಂದ ನಿರ್ಯಾತ ಸಾಮಗ್ರಿ ಅಧಿಕ ವಾಗುವುದರಿಂದ ವಿದೇಶಿ ವಿನಿಮಯ ಸಂಪಾದನೆ ಸಾಧ್ಯ. ಆರ್ಥಿಕ ಅಭಿವೃದ್ಧಿಗೆ

ಬೇಕಾಗುವ ಬಂಡವಾಳದ ಸಂಪಾದನೆಗೆ ಅಥವಾ ಅವಶ್ಯವಾದ ವಸ್ತುಗಳನ್ನು ಆಯಾತ ಮಾಡಿಕೊಳ್ಳುವುದಕ್ಕೆ ಇದು ಸಾಧಕ. 6. ಗಣಿ ಉದ್ಯಮದಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸರ್ಕಾರದ ಆದಾಯ ಹೆಚ್ಚಿ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲು ಸರ್ಕಾರಕ್ಕೆ ಅನುಕೂಲವಾಗುತ್ತದೆ.

ವಿಶ್ವದ ನಾನಾ ರಾಷ್ಟ್ರಗಳಲ್ಲಿ ಖನಿಜ ನಿಕ್ಷೇಪಗಳು ಹರಡಿರುವ ಬಗೆಯನ್ನು ಗಮನಿಸಿದಾಗ, ಅಭಿವೃದ್ಧಿ ಹೊಂದಿದ ಅನೇಕ ರಾಷ್ಟ್ರಗಳು ತಮ್ಮ ಕೈಗಾರಿಕೆಗಳಿಗಾಗಿ ಹಿಂದುಳಿದ ರಾಷ್ಟ್ರಗಳ ಖನಿಜ ಸಂಪತ್ತನ್ನು ಅವಲಂಬಿಸಬೇಕಾಗಿ ಬಂದಿರುವುದು ವ್ಯಕ್ತವಾಗುತ್ತದೆ. ವಸಾಹತುಗಳ ನಿರ್ಮಾಣ, ರಾಷ್ಟ್ರಗಳ ನಡುವೆ ಸ್ಪರ್ಧೆ, ವಿರಸ, ಅಶಾಂತಿಗಳಿಗೆ ಇದೂ ಕಾರಣ. ಅನೇಕ ಹಿಂದುಳಿದ ರಾಷ್ಟ್ರಗಳಿಗೆ ಅವುಗಳ ಖನಿಜ ಸಂಪತ್ತೇ ವಿದೇಶಿ ವಿನಿಮಯ ಗಳಿಕೆಯ ಸಾಧನವಾಗಿದೆ.

ಕೃಷಿ, ಅರಣ್ಯಗಾರಿಕೆಗಳಂತೆ ಗಣಿಗಾರಿಕೆಯೂ ನಿಸರ್ಗದಿಂದ ಸಂಪತ್ತನ್ನು ನೇರವಾಗಿ ತೆಗೆಯುವುದರಲ್ಲಿ ಮಗ್ನವಾಗಿರುತ್ತದೆ. ಆದರೆ ಕೃಷಿ-ಅರಣ್ಯಗಾರಿಕೆಗಳಿಗೂ ಗಣಿಗಾರಿಕೆಗೂ ಕೆಲವು ಮೂಲಭೂತ ವ್ಯತ್ಯಾಸಗಳುಂಟು. ಕೃಷಿಯ ಉತ್ಪಾದಕತೆಯನ್ನು ಅನೇಕ ಕ್ರಮಗಳಿಂದ ಬೆಳೆಸಬಹುದು. ಕಾಡು ಕಡಿದಂತೆ ಹೊಸ ಕಾಡು ಬೆಳೆಯಿಸಬಹುದು. ಆದರೆ ಖನಿಜ ನಿಕ್ಷೇಪ ಪರಿಮಿತವಾದ್ದು. ಅದು ಕೆಲವು ಕ್ಷೇತ್ರಗಳಲ್ಲಿ ಸಾಂದ್ರೀಕೃತ ವಾಗಿರುತ್ತದೆ. ಕೃಷಿ ಉತ್ಪಾದನೆಯ ಮೂಲವಾದ ಭೂಮಿ ಎಲ್ಲ ಕಡೆಗೂ ವಿಪುಲವಾಗಿ ಹರಡಿರುವಂತೆ, ಖನಿಜಗಳು ಹರಡಿರುವುದಿಲ್ಲ. ಇದರ ಪರಿಣಾಮವಾಗಿ ದೊಡ್ಡ ದೊಡ್ಡ ಉದ್ಯಮಗಳನ್ನು ಗಣಿಪ್ರದೇಶಗಳ ಹತ್ತಿರ ಸ್ಥಾಪಿಸುವುದು ಸಹಜ. ಗಣಿಯಿಂದ ತೆಗೆದ ಅದಿರುಗಳು ಕೃಷಿವಸ್ತುಗಳಿಗಿಂತ ಹೆಚ್ಚು ಭಾರವಾಗಿದ್ದು, ದೊಡ್ಡ ಗಾತ್ರವುಳ್ಳವಾಗಿರುವುದರಿಂದ ಅವುಗಳ ಸಾರಿಗೆ ವೆಚ್ಚ ದುಬಾರಿ.

ಗಣಿ ಕೆಲಸ ಶ್ರಮದಾಯಕ ಮತ್ತು ಅಪಾಯಕರ. ಗಣಿಗಳಲ್ಲಿ ಕೆಲಸ ಮಾಡಲು ಕಾರ್ಮಿಕರಿಗೆ ಪ್ರತ್ಯೇಕ ಸವಲತ್ತುಗಳನ್ನು ಮತ್ತು ಹೆಚ್ಚಿನ ಸಂಬಳವನ್ನು ಕೊಟ್ಟು ಅವರನ್ನು ಆಕರ್ಷಿಸಬೇಕು. ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಒಂದೇ ಕಡೆ ನೆಲಸಿರುವುದರಿಂದ ಅವರು ಹೆಚ್ಚು ಸಂಘಟಿತರಾಗಿರುತ್ತಾರೆ. ಭಾರತದಲ್ಲೂ ಬೇರೆ ದೇಶಗಳಲ್ಲಿಯ ಹಾಗೆ ಗಣಿ ಕಾರ್ಮಿಕ ಸಂಘಗಳು ಉಳಿದ ಕಾರ್ಮಿಕ ಸಂಘಗಳಿಗಿಂತ ಬಲಯುತ ವಾಗಿರುತ್ತವೆ **(ನೋಡಿ- ಗಣಿಗಾರಿಕೆಯಪಾತ್ರ, ರಾಷ್ಟ್ರಆರ್ಥಿಕತೆಯಲ್ಲಿ; ಗಣಿಗಾರಿಕೆ ಕಾನೂನುಗಳು; ಗಣಿ ಕಾರ್ಮಿಕರು).** (ಟಿ.ಕೆ.ಎಂ.)

**ಗಣಿಗಾರಿಕೆಯ ಪಾತ್ರ, ರಾಷ್ಟ್ರ ಆರ್ಥಿಕತೆಯಲ್ಲಿ :** ಭೂಮಿಯ ಮೇಲ್ಮೈಯಲ್ಲಿ ಅಥವಾ ಒಳಗೆ ಅಡಗಿರುವ ಖನಿಜವನ್ನು ಹೊರತೆಗೆದು ಮಾನವನ ಬಳಕೆಗೆ ಉಪಯುಕ್ತವಾದ ವಿವಿಧ ಸರಕುಗಳ ತಯಾರಿಕೆಗೆ ಅವಶ್ಯವಾದ ಕೆಲವು ಕಚ್ಚಾ ಸಾಮಗ್ರಿಗಳನ್ನು ಒದಗಿಸುವ ಕಾರ್ಯಾಚರಣೆಯಾದ ಗಣಿಗಾರಿಕೆಯಲ್ಲಿ ಸ್ಥೂಲವಾಗಿ ಮೂರು ಬಗೆಯ ಪ್ರತ್ಯೇಕ ಕಾರ್ಯಾಚರಣೆಗಳುಂಟು. ಅನೇಕ ವಿಧದ ಮಣ್ಣುಗಳು, ಸುಣ್ಣಕಲ್ಲು ಮತ್ತು ಇತರ ಕಲ್ಲುಗಳು, ಉಪ್ಪು ಇತ್ಯಾದಿಗಳನ್ನು ಸಾಮಾನ್ಯವಾಗಿ ಭೂಮಿಯ ಮೇಲ್ಭಾಗದಿಂದಲೆ ಅಗೆದು ಅಥವಾ ಕಡಿದು ಇತರ ಉತ್ಪಾದನ ಕಾರ್ಯಗಳಿಗೆ ಒದಗಿಸಬಹುದು. ಈ ಬಗೆಯ ಕಾರ್ಯಾಚರಣೆಯನ್ನು ತೆರೆದ ಗಣಿಗಾರಿಕೆ ಎಂದು ಹೇಳಬಹುದು. ಬಾವಿ ಮಾರ್ಗಗಳನ್ನೂ ಕೆಳಗಡೆ ಸುರಂಗ ಮಾರ್ಗಗಳನ್ನೂ ಕಲ್ಪಿಸಿ, ಭೂಮಿಯಲ್ಲಿ ಆಳವಾಗಿ ಹುದುಗಿರುವ ಖನಿಜಗಳನ್ನು ಬೇರ್ಪಡಿಸಿ, ಮೇಲಕ್ಕೆತ್ತಿ ಪಡೆಯುವ ಕಾರ್ಯ ಭೂಗತ ಗಣಿಗಾರಿಕೆ. ಚಿನ್ನ, ಕಲ್ಲಿದ್ದಲು ಮುಂತಾದವನ್ನು ಪಡೆಯುವುದು ಹೀಗೆ. ವಿವಿಧ ತೈಲಗಳನ್ನು ಭೂಮಿಯ ಆಳದಿಂದ ಪಂಪುಗಳ ಮೂಲಕ ಹೊರಗೆ ಎಳೆದುಕೊಳ್ಳುವುದು ಇನ್ನೊಂದು ವಿಧದ ಗಣಿಗಾರಿಕೆ. ಈ ವಿವಿಧ ರೀತಿಯ ಗಣಿ ಉದ್ಯಮಗಳು ಆಧುನಿಕ ಕೈಗಾರಿಕೆಗೆ ಅವಶ್ಯಕವಾದ ಕಚ್ಚಾ ಸಾಮಗ್ರಿಗಳನ್ನೂ ಶಕ್ತಿಮೂಲಗಳನ್ನೂ ಒದಗಿಸುವುದರಿಂದ ಗಣಿಗಾರಿಕೆಯನ್ನು ಆರ್ಥಿಕ ಚಟುವಟಿಕೆಗಳ ವಿಂಗಡಣೆಯಲ್ಲಿ ಸಾಮಾನ್ಯವಾಗಿ ಮೂಲ ಆರ್ಥಿಕೋದ್ಯಮವೆಂದು ಪರಿಗಣಿಸಲಾಗಿದೆ. ಇತರ ಮೂಲ ಆರ್ಥಿಕ ಉದ್ಯಮಗಳಾದ ಕೃಷಿ, ಅರಣ್ಯಗಾರಿಕೆ, ಮೀನುಗಾರಿಕೆಗಳಂತೆಯೇ ಗಣಿಗಾರಿಕೆಯೂ ಆಧುನಿಕ ಆರ್ಥಿಕ ಜೀವನದ ಅವಶ್ಯ ಸರಕುಸೇವೆಗಳ ತಯಾರಿಕೆಗೆ ಮುಖ್ಯ ತಳಹದಿಯಾಗಿದೆ.

ಆಧುನಿಕ ಕೈಗಾರಿಕಾಯುಗಕ್ಕೆ ಮುನ್ನವೂ ವಜ್ರ, ಚಿನ್ನ, ಬೆಳ್ಳಿ, ತಾಮ್ರ ಮತ್ತು ಇತರ ಅನೇಕ ಉತ್ಪನ್ನಗಳಿಗೆ ಪ್ರಪಂಚದ ಎಲ್ಲ ಭಾಗಗಳಲ್ಲೂ ಪ್ರಾಮುಖ್ಯವಿತ್ತು. ಉಪಕರಣ, ಆಯುಧ, ಪಾತ್ರೆ, ಕಟ್ಟಡ ಇವಕ್ಕೆ ಖನಿಜಗಳನ್ನು ಹಿಂದಿನ ಕಾಲದಲ್ಲೂ ಉಪಯೋಗಿಸಲಾಗುತ್ತಿತ್ತು. ಖನಿಜಗಳ ಈ ಉಪಯೋಗ ಈಗಲೂ ಇರುವುದಾದರೂ ಯಂತ್ರ, ಶಕ್ತಿ, ರಾಸಾಯನಿಕ ಕೈಗಾರಿಕೆಗಳಿಗೆ ಖನಿಜಗಳ ಉಪಯೋಗ ಇಂದು ಹೆಚ್ಚು ಮುಖ್ಯ. ಇಂಗ್ಲೆಂಡಿನಲ್ಲಿ 18ನೆಯ ಶತಮಾನದಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಯ ಕಾಲದಿಂದ ಈಚೆಗೆ ಗಣಿಗಾರಿಕೆಯ ಪ್ರಾಮುಖ್ಯ ಏಕಪ್ರಕಾರವಾಗಿ ಅಧಿಕವಾಗುತ್ತ ಬಂದಿದೆ. ಅಂದಿನ ಕೈಗಾರಿಕಾಕ್ರಾಂತಿ ಬಹುಮಟ್ಟಿಗೆ ಕಲ್ಲಿದ್ದಲು ಹಾಗೂ ಕಬ್ಬಿಣವನ್ನು ಅವಲಂಬಿಸಿತ್ತು. ಇವುಗಳ ಉಪಯೋಗದಿಂದ ಆಧುನಿಕಶಕ್ತಿ ಮತ್ತು ಯಂತ್ರಯುಗದ ಉಗಮವಾಯಿತು. ಅಂದಿನಿಂದ ಕೈಗಾರಿಕೆ, ಸಾರಿಗೆ, ಸಂಪರ್ಕ ಇತ್ಯಾದಿ ಉದ್ಯಮ ಶಾಖೆಗಳು ಬಹುಮುಖವಾಗಿ ಬೆಳೆದಿವೆ. ಈ ಬೆಳವಣಿಗೆಗಳ ಜೊತೆಗೆ ಅನೇಕ ಖನಿಜಗಳಿಗೆ ಹೊಸ ಮೌಲ್ಯ ಉಂಟಾಗಿದೆ. ರೈಲು, ಮೋಟಾರು, ನೌಕೆ, ವಿಮಾನ ಮುಂತಾದ ಸಾರಿಗೆ ಸೌಲಭ್ಯಗಳು ವಿಸ್ತರಿಸಿದುದೂ ಆಧುನಿಕ ನಾಗರಿಕ ಜೀವನಕ್ಕೆ ಅವಶ್ಯವೆನಿಸುವ ವಿವಿಧ ಸರಕು ಸೇವೆಗಳ ಉತ್ಪಾದನೆ ಬೃಹತ್ ಗಾತ್ರದಲ್ಲಿ ಹೆಚ್ಚಿದುದೂ ಎರಡು ಮಹಾಯುದ್ಧಗಳಿಗಾಗಿ ಮತ್ತು ಆತ್ಮರಕ್ಷಣೆಗಾಗಿ ಅನೇಕ ರಾಷ್ಟ್ರಗಳು ಆಯುಧೋಪಕರಣಗಳ ಮತ್ತು ಇತರ ರಕ್ಷಣ ಕೈಗಾರಿಕೆಗಳನ್ನು ಬೃಹತ್ತಾಗಿ ಬೆಳೆಸಿ ಕೊಂಡಿದ್ದೂ ಬಾಹ್ಯಾಕಾಶ ಶೋಧನೆಯ ಕಾರ್ಯಕ್ಕಾಗಿ ಕೆಲವು ರಾಷ್ಟ್ರಗಳು ವಿಸ್ತಾರವಾದ ತಾಂತ್ರಿಕ ವ್ಯವಸ್ಥೆ ನಿರ್ಮಿಸಿಕೊಂಡಿದ್ದೂ ಅನೇಕ ವಿಧದ ಗಣಿ ಉತ್ಪನ್ನಗಳ ಬೇಡಿಕೆ ತೀವ್ರವಾಗಿ ಹೆಚ್ಚಿರುವುದಕ್ಕೆ ಕಾರಣಗಳಾಗಿವೆ. ಆಧುನಿಕ ನಾಗರಿಕತೆಗೆ ಖನಿಜಗಳು ಅತ್ಯಗತ್ಯ ಎಂಬುದನ್ನು ತೋರಿಸಲು ನಿದರ್ಶನಗಳು ಸಾಕು. ಅನೇಕ ಯಂತ್ರೋಪಕರಣ ಗಳು ಕಬ್ಬಿಣ-ಉಕ್ಕುಗಳನ್ನು ಅವಲಂಬಿಸಿವೆ. ಮುದ್ರಣಾಲಯಗಳಿಗೆ ಆಂಟಿಮನಿ, ಸ್ವಯಂಚಾಲಿತ ಯಂತ್ರೋಪಕರಣಗಳಿಗೆ ಟಂಗ್‌ಸ್ಟನ್, ವೆನೇಡಿಯಂ ಮತ್ತು ಕ್ರೋಮಿಯಂ, ವಿದ್ಯುಚ್ಛಕ್ತಿ, ಕೈಗಾರಿಕೆಗೆ ತಾಮ್ರ, ಬ್ಯಾಟರಿಗಳಿಗೆ ಸೀಸ, ಫೌಂಟನ್‌ಪೆನ್ನುಗಳಿಗೆ ಇರಿಡಿಯಂ, ವಿಮಾನಗಳಿಗೆ ಅಲ್ಯೂಮಿನಿಯಂ ಹೀಗೆ ಆಧುನಿಕ ನಾಗರಿಕ ಜೀವನಕ್ಕೆ ಬೇಕಾದ ಅನೇಕ ಸರಕುಗಳಿಗೆ ವಿವಿಧ ಖನಿಜಗಳು ಅತ್ಯಾವಶ್ಯಕವಾಗಿರುವುದನ್ನು ಗಮನಿಸಿದರೆ ಪ್ರಪಂಚದ ಆರ್ಥಿಕತೆಯಲ್ಲಿ ಖನಿಜಗಳ ಮೂಲಭೂತ ಪ್ರಾಮುಖ್ಯ ಸ್ಪಷ್ಟವಾಗುತ್ತದೆ.

ಚಿನ್ನ, ಬೆಳ್ಳಿ ಇತ್ಯಾದಿ ಅಮೂಲ್ಯ ಲೋಹಗಳಿಗೆ ಪ್ರಾಚೀನ ಕಾಲದಿಂದಲೂ ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯವಿದೆ. ಅನೇಕ ಜನಾಂಗಗಳು ಇವನ್ನು ಆಭರಣಗಳಿಗಾಗಿ ಬಹು ಹಿಂದಿನಿಂದಲೂ ಬಯಸುತ್ತ ಬಂದಿವೆ. ಇದರ ಜೊತೆಗೆ ಬೆಳ್ಳಿ ಮತ್ತು ಚಿನ್ನ ಹಣವಸ್ತುವಾಗಿಯೂ ಹಣಪದ್ಧತಿಗೆ ಆಧಾರವಾಗಿಯೂ ಬಳಕೆಯಲ್ಲಿವೆ. ಆಧುನಿಕ ಯುಗದಲ್ಲಿ ಈ ಅಮೂಲ್ಯ ಲೋಹಗಳ ಪ್ರಾಮುಖ್ಯ ವಿಶೇಷವಾಗಿ ಬೆಳೆದಿದೆ. 19ನೆಯ ಶತಮಾನದಲ್ಲಿ ಪ್ರಪಂಚದ ಅನೇಕ ರಾಷ್ಟ್ರಗಳು ಸ್ವರ್ಣಪ್ರಮಿತಿ ಹಣ ಪದ್ಧತಿಯನ್ನು ಜಾರಿಗೆ ತಂದದ್ದರಿಂದ ಚಿನ್ನದ ಗಣಿಗಾರಿಕೆಗೆ ವಿಶೇಷ ಪ್ರಚೋದನೆ ದೊರಕಿತು. ಚಿನ್ನ ಹಾಗೂ ನೋಟುಗಳ ಪರಸ್ಪರ ಪರಿವರ್ತನೆಯ ಅವಕಾಶವನ್ನು ರದ್ದುಗೊಳಿಸಿದ ಅನಂತರವೂ, ಚಲಾವಣೆಯ ಹಣಕ್ಕೆ ಚಿನ್ನದ ಬೆಂಬಲವಿದೆಯೆಂಬ ಸಾರ್ವತ್ರಿಕ ನಂಬಿಕೆ ಹಣಪದ್ಧತಿಗೆ ಭದ್ರತೆಯನ್ನು ತಂದಿತು. ಅಂತರರಾಷ್ಟ್ರೀಯ ಹಣ ನಿಧಿಯ ಸ್ಥಾಪನೆಯಿಂದಾಗಿ ಈಚೆಗೆ ಜಾರಿಯಲ್ಲಿರುವ ಪ್ರಪಂಚದ ಹಣಪದ್ಧತಿಯಲ್ಲೂ ಚಿನ್ನಕ್ಕೆ ವಿಶೇಷ ಸ್ಥಾನವಿದೆ. ತನಗೆ ಸಲ್ಲಬೇಕಾದ ಹಣವನ್ನು ಚಿನ್ನದ ರೂಪದಲ್ಲಿ ಪಡೆಯಲು ಯಾವ ರಾಷ್ಟ್ರವೂ ಸಾಮಾನ್ಯವಾಗಿ ನಿರಾಕರಿಸುವುದಿಲ್ಲ. ಇಂಥ ಗೌರವಸ್ಥಾನ ಉಳಿಸಿಕೊಂಡಿರುವುದರಿಂದಲೂ, ಆಭರಣ ಹಾಗೂ ಕೆಲವು ಕೈಗಾರಿಕೆಗಳ ದೃಷ್ಟಿಯಿಂದಲೂ ಚಿನ್ನದ ಗಣಿಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯವಿದ್ದೇ ಇದೆ. ಚಲಾವಣೆ ನಾಣ್ಯಗಳಿಗೆ ಬೇಕಾದ ಇತರ ಲೋಹಗಳಿಗೂ ಬೇಡಿಕೆ ಹೆಚ್ಚಿದೆ.

ಸುಮಾರು 19ನೆಯ ಶತಮಾನದ ಆರಂಭದಿಂದೀಚೆಗೆ ಕೆಲವು ಮುಖ್ಯ ಖನಿಜಗಳ ಪ್ರಾಮುಖ್ಯ ಎಷ್ಟು ತೀವ್ರವಾಗಿ ಹೆಚ್ಚಿದೆ. ಎಲ್ಲ ಖನಿಜಗಳನ್ನೂ ಒಳಗೊಂಡ ಗಣಿಗಾರಿಕೆಯ ಶೇ. 90ರಷ್ಟು ಕಳೆದ ಸುಮಾರು 150ವರ್ಷಗಳಲ್ಲಿ ಬೆಳೆದು ಬಂದದ್ದೆಂದು ಅಂದಾಜು ಮಾಡಲಾಗಿದೆ. ಗಣಿ ಉತ್ಪನ್ನಗಳ ಗಾತ್ರ ಹೆಚ್ಚಿರುವುದೇ ಅಲ್ಲದೆ ಈ ಅವಧಿಯಲ್ಲಿ ಇವುಗಳ ಉಪಯೋಗದಲ್ಲಿ ತುಂಬ ಮಿತವ್ಯಯವೂ ಉಂಟಾಗಿದೆ. ಉದಾಹರಣೆಗೆ, ಅರ್ಧ ಕಿಲೋಗ್ರಾಂ ಕಲ್ಲಿದ್ದಲಿನಿಂದ 1919ರಲ್ಲಿ ಪಡೆದುದಕ್ಕಿಂತಲೂ ತುಂಬ ಹೆಚ್ಚಿನ ಪ್ರಯೋಜನವನ್ನು ಈಗ ಪಡೆಯಲಾಗುತ್ತಿದೆ. ಆಧುನಿಕ ಯುಗದಲ್ಲಿ ಖನಿಜಗಳ ಉಪಯೋಗದಿಂದ ಮಾನವ ಶ್ರಮದ ಉತ್ಪಾದಕತೆ ಗಣನೀಯವಾಗಿ ಹೆಚ್ಚಲು ಸಾಧ್ಯವಾಗಿದೆ.

ರಾಷ್ಟ್ರೀಯ ವರಮಾನದಲ್ಲಿ ಗಣಿ ಉತ್ಪನ್ನದ ಶೇಕಡ ಭಾಗವೂ ಕೈಗಾರಿಕೋದ್ಯೋಗಿಗಳ ಒಟ್ಟು ಸಂಖ್ಯೆಯಲ್ಲಿ ಗಣಿ ಉದ್ಯೋಗಿಗಳ ಶೇಕಡ ಭಾಗವೂ ಅಲ್ಪವಾಗಿ 1953 ಮತ್ತು 1963ರ ಅವಧಿಯಲ್ಲಿ ಭಾರತವನ್ನು ಬಿಟ್ಟರೆ ಉಳಿದ ರಾಷ್ಟ್ರಗಳಲ್ಲಿ ಈ ಶೇಕಡ ಭಾಗಗಳು ಇಳಿದಿವೆ. ಈ ರಾಷ್ಟ್ರಗಳ ಆರ್ಥಿಕತೆಯಲ್ಲಿ ಇತರ ಉದ್ಯಮ ಚಟುವಟಿಕೆಗಳು ಹೆಚ್ಚುತ್ತಿರುವುದರಿಂದ ಸಾಪೇಕ್ಷವಾಗಿ ಗಣಿಗಾರಿಕೆಯ ಪ್ರಾಮುಖ್ಯ ಕಡಿಮೆಯಾದಂತೆ ಆಗಿದೆ. ಆರ್ಥಿಕಾಭಿವೃದ್ಧಿಯೊಡನೆ ಯಾವುದೇ ರಾಷ್ಟ್ರದ ತಯಾರಿಕೋದ್ಯಮ ಹಾಗೂ

ಸೇವಾ ಉದ್ಯಮ ಕ್ಷೇತ್ರಗಳ ಸಾಪೇಕ್ಷ ಪ್ರಾಮುಖ್ಯ ಹೆಚ್ಚುವುದೂ ಪ್ರಾಥಮಿಕ ಉದ್ಯಮಗಳಾದ ಕೃಷಿ ಮತ್ತು ಗಣಿಗಾರಿಕೆಗಳ ಸಾಪೇಕ್ಷ ಪ್ರಾಮುಖ್ಯ ಹೆಚ್ಚುವುದೂ ಪ್ರಾಥಮಿಕ ಉದ್ಯಮಗಳಾದ ಕೃಷಿ ಮತ್ತು ಗಣಿಗಾರಿಕೆಗಳ ಸಾಪೇಕ್ಷ ಪ್ರಾಮುಖ್ಯ ಕಡಿಮೆಯಾಗುವುದೂ ಅನುಭವಸಿದ್ಧವಾದ ಒಂದು ಐತಿಹಾಸಿಕ ಪ್ರವೃತ್ತಿ. ಆದರೆ, ವಾಸ್ತವ ಉತ್ಪನ್ನದ ಪರಿಮಾಣವನ್ನು ಪರಿಗಣಿಸಿದರೆ ಈ ಅವಧಿಯಲ್ಲಿ ಗಣಿ ಉತ್ಪನ್ನದ ಗಾತ್ರ ಬಹಳ ಮಟ್ಟಿಗೆ ಹೆಚ್ಚಿರುವುದನ್ನು ಕಾಣಬಹುದು. ಉದಾಹರಣೆಗೆ, ಅಮೆರಿಕದ ಗಣಿ ಉತ್ಪನ್ನಗಳ ಒಟ್ಟು ಮೌಲ್ಯ 1953ರಲ್ಲಿ 5.4 ಸಾವಿರ ದಶಲಕ್ಷ ಡಾಲರುಗಳಷ್ಟು ಇದ್ದದ್ದು, 1963ರಲ್ಲಿ 6.0 ಸಾವಿರ ದಶಲಕ್ಷ ಡಾಲರುಗಳಿಗೂ ಗ್ರೇಟ್ ಬ್ರಿಟನ್ನಿನಲ್ಲಿ ಇದೇ ವರ್ಷಗಳಲ್ಲಿ ಕ್ರಮವಾಗಿ 546 ದಶಲಕ್ಷ ಪೌಂಡಗಳಿಂದ 740 ದಶಲಕ್ಷ ಪೌಂಡುಗಳಿಗೂ ಹೆಚ್ಚಿವೆ. ಜರ್ಮನಿ, ಫ್ರಾನ್ಸ್‌ಗಳಲ್ಲಿ ಗಣಿ ಉತ್ಪನ್ನ ಈ ಅವಧಿಯಲ್ಲಿ ದ್ವಿಗುಣವಾಯಿತು. ಜಪಾನ್, ಆಸ್ಟ್ರೇಲಿಯ, ಭಾರತಗಳಲ್ಲೂ ಇದೇ ರೀತಿ ಉತ್ಪನ್ನ ಹೆಚ್ಚಾಗಿದೆ. ಈ ರಾಷ್ಟ್ರಗಳ ಗಣಿಗಾರಿಕೆ ವಿಸ್ತರಣೆಯಾಗಿದೆಯೆಂಬ ಅಂಶ ವ್ಯಕ್ತಪಡುತ್ತದೆ.

ಆರ್ಥಿಕವಾಗಿ ಮುಂದುವರಿದಿರುವ ರಾಷ್ಟ್ರಗಳಲ್ಲಿ ಹೇಗೋ ಹಾಗೆಯೆ ಆರ್ಥಿಕವಾಗಿ ಒಟ್ಟಿನಲ್ಲಿ ಹಿಂದುಳಿದಿರುವ ಅನೇಕ ರಾಷ್ಟ್ರಗಳಲ್ಲಿಯೂ ಗಣಿ ಉದ್ಯಮ ಆಧುನಿಕ ರೀತಿಯಲ್ಲಿ ವ್ಯವಸ್ಥಿತವಾಗಿರುವುದೇ ಅಲ್ಲದೆ, ಮುಂದುವರಿದಿರುವ ರಾಷ್ಟ್ರಗಳಿಗಿಂತ ಅವುಗಳ ಆರ್ಥಿಕತೆಗಳಲ್ಲಿ ಗಣಿಗಾರಿಕೆ ಸಾಪೇಕ್ಷವಾಗಿ ಹೆಚ್ಚು ಪ್ರಾಮುಖ್ಯಗಳಿಸಿದೆ. ಆಫ್ರಿಕ, ಏಷ್ಯ ಮತ್ತು ದಕ್ಷಿಣ ಅಮೆರಿಕದ ಅನೇಕ ಅಭಿವೃದ್ಧಿ ಹೊಂದದ ರಾಷ್ಟ್ರಗಳು ಇತ್ತೀಚಿನ ವರ್ಷಗಳವರೆಗೆ ಸಾಮಾನ್ಯವಾಗಿ ಮುಂದುವರಿದ ರಾಷ್ಟ್ರಗಳ ವಸಾಹತುಗಳಾಗಿ ಅಥವಾ ಅಧೀನರಾಷ್ಟ್ರಗಳಾಗಿ ಇದ್ದು, ಅವುಗಳ ಗಣಿ ಉದ್ಯಮಗಳು ಮುಖ್ಯವಾಗಿ ಹಿರಿಯ ರಾಷ್ಟ್ರಗಳ ಆವಶ್ಯಕತೆಗಳ ಪೂರೈಕೆಗಾಗಿ ವಿದೇಶೀ ಉದ್ಯಮ ಸಾಹಸ ಹಾಗೂ ಬಂಡವಾಳಗಳ ಸಹಾಯದಿಂದ ಬೆಳೆದುವು. ಮುಂದುವರಿದ ರಾಷ್ಟ್ರಗಳ ಅನೇಕ ಕೈಗಾರಿಕೆಗಳು ಈ ರಾಷ್ಟ್ರಗಳ ಖನಿಜೋತ್ಪನ್ನಗಳನ್ನು ಅವಲಂಬಿಸಿವೆ. ಬಹುಸಂಖ್ಯೆಯಲ್ಲಿ ರುವ ಈ ಹಿಂದುಳಿದ ದೇಶಗಳ ರಾಷ್ಟ್ರೀಯ ಉತ್ಪನ್ನದಲ್ಲಿ ಒಂದು ಅಥವಾ ಎರಡು ಖನಿಜಗಳ ಉತ್ಪನ್ನ ಗಣನೀಯ ಭಾಗವಾಗಿದೆ. ಇವುಗಳಲ್ಲಿ ಕೈಗಾರಿಕೆ ಅಭಿವೃದ್ಧಿಯಾಗಿಲ್ಲ, ಕೃಷಿ ಉತ್ಪಾದಕತೆ ಕೆಳಮಟ್ಟದಲ್ಲಿದೆ. ಸಾರಿಗೆ ಸಂಪರ್ಕ ಹಾಗೂ ಇತರ ಸೇವಾ ಉದ್ಯಮ ಗಳು ಬೆಳೆದಿಲ್ಲ. ಆದ್ದರಿಂದ ಇಲ್ಲಿ ಅಭಿವೃದ್ಧಿಯಾಗಿರುವ ಗಣಿಗಾರಿಕೆ ವಲಯ ಇವುಗಳ ಆರ್ಥಿಕತೆಯಲ್ಲಿ ಸಾಪೇಕ್ಷವಾಗಿ ಹೆಚ್ಚು ಮುಖ್ಯಸ್ಥಾನ ಹೊಂದಿದೆ. ಪೆಟ್ರೋಲಿಯಂ, ತವರ, ನೈಟ್ರೇಟು, ತಾಮ್ರ, ಸತು ಮುಂತಾದ ಖನಿಜಗಳಲ್ಲಿ ಒಂದು ಅಥವಾ ಎರಡರಿಂದಲೇ ಈ ರಾಷ್ಟ್ರಗಳು ತಮ್ಮ ವಿದೇಶ ವಿನಿಮಯ ಸಂಪಾದನೆಯ ಬಹುಭಾಗವನ್ನು ಪಡೆಯುತ್ತಿವೆ.

ಎರಡನೆಯ ಮಹಾಯುದ್ಧದ ತರವಾಯ ಹಿಂದಿನ ವಸಾಹತುಗಳು ಮತ್ತು ಅಧೀನ ರಾಷ್ಟ್ರಗಳು ರಾಜಕೀಯ ಸ್ವಾತಂತ್ರ್ಯ ಪಡೆದಿವೆ. ಅವುಗಳಲ್ಲೂ ಕೈಗಾರಿಕಾಭಿವೃದ್ಧಿಯ ಹಂಬಲ ಬೆಳೆಯುತ್ತಿದೆ. ಅವುಗಳ ಆರ್ಥಿಕಾಭಿವೃದ್ಧಿಯಿಂದ ಸಾಧ್ಯವಾಗುವ ಆರ್ಥಿಕ ವರಮಾನವೃದ್ಧಿಯಿಂದ ಅಲ್ಲಿಯ ಜನತೆಯ ಆರ್ಥಿಕ ಜೀವನಮಟ್ಟವೂ ಏರುತ್ತದೆ. ಈ ಕಾರಣಗಳಿಂದ ಮುಂದೆ ಖನಿಜಗಳ ಬೇಡಿಕೆಯೂ ಹೆಚ್ಚುವುದೆಂದು ಹೇಳಬಹುದು.

ಖನಿಜಗಳ ಬೇಡಿಕೆ ಹಿಂದೆ ವಿವರಿಸಿರುವ ಅನೇಕ ಕಾರಣಗಳಿಂದ ಹೆಚ್ಚಿರುವುದರಿಂದ ಹಾಗೂ ಇನ್ನೂ ಹೆಚ್ಚುವ ಸಂಭವವಿರುವುದರಿಂದ ಇದಕ್ಕೆ ಸರಿಸಮವಾಗಿ ಉತ್ಪಾದನೆಯನ್ನು ಹೆಚ್ಚಿಸಲು ಈಚಿನ ದಶಕಗಳಲ್ಲಿ ಅನೇಕ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನಗಳಲ್ಲಿ ತಾಂತ್ರಿಕ ಪ್ರಗತಿ ಮುಖ್ಯವಾದ್ದು. ಗಣಿಗಳಲ್ಲಿ ಬಾವಿಮಾರ್ಗ ತೋಡುವುದು, ಸುರಂಗ ಕೊರೆಯುವುದು, ಅದಿರು ಕಡಿಯುವುದು, ಅದಿರನ್ನು ಹೊರಕ್ಕೆ ಸಾಗಿಸುವುದು ಇತ್ಯಾದಿ ಕಾರ್ಯಾಚರಣೆಗಳಲ್ಲಿ ಬಹುಮಟ್ಟಿಗೆ ಸ್ವಯಂಚಾಲಿತ ಯಂತ್ರಗಳನ್ನು ಬಳಸುವ ತಂತ್ರ ಬೆಳೆದು, ಗಣಿತಂತ್ರದಲ್ಲಿ ಹೊಸ ಕ್ರಾಂತಿಯೇ ಉಂಟಾಗಿದೆ. ಕಡಿಮೆ ದರ್ಜೆ ಅದಿರನ್ನು ಉಪಯೋಗಿಸುವುದರಲ್ಲೂ ಅದಿರನ್ನು ಶುದ್ಧಗೊಳಿಸುವುರಲ್ಲೂ ಖನಿಜಗಳನ್ನು ಬಳಸುವುದರಲ್ಲೂ ಹೆಚ್ಚು ಮಿತವ್ಯಯ ಸಾಧಿಸುವ ಮಾರ್ಗಗಳನ್ನು ಕಂಡುಹಿಡಿಯಲಾಗಿದೆ. ಈ ಕ್ರಮದಿಂದ ಗಣಿಗಾರಿಕೆಯ ಉತ್ಪಾದನೆಯ ದಕ್ಷತೆ ಹೆಚ್ಚಿರುವುದರಿಂದ ಉತ್ಪಾದನವೆಚ್ಚದಲ್ಲಿ ಇಳಿಕೆಯಾಗುವುದು ಸಾಧ್ಯವಾಗಿದೆ. ಆದರೆ ಇದಕ್ಕೆ ಪ್ರತಿಯಾದ, ಅಂದರೆ ಗಣಿಗಾರಿಕೆ ಉತ್ಪಾದನವೆಚ್ಚ ಹೆಚ್ಚಿಸುವ ಕೆಲವು ಅಂಶಗಳೂ ಪ್ರಬಲವಾಗಿವೆ. ಕಾಲಕ್ರಮದಲ್ಲಿ ಅನೇಕ ಗಣಿಗಳಲ್ಲಿ ಹೆಚ್ಚು ಆಳದಿಂದ ಅದಿರುಗಳನ್ನು ಅಗೆದು ಹೊರತರಬೇಕಾಗುತ್ತದೆ. ಅಲ್ಲದೆ ಉತ್ತಮದರ್ಜೆಯ ಅದಿರು ಮುಗಿದು ಕಡಿಮೆ ದರ್ಜೆಯ ಅದಿರುಗಳನ್ನು ಉಪಯೋಗಿಸಿಕೊಳ್ಳಬೇಕಾದ ಸಂದರ್ಭ ಒದಗಬಹುದು. ಆಕಸ್ಮಿಕವಾಗಿ ಹೆಚ್ಚು ಉತ್ತಮವಾದ ಅದಿರು ಲಭಿಸಲೂಬಹುದು. ಇದು ಅನಿಶ್ಚಿತ ಅಂಶ. ಸಾಮಾನ್ಯವಾಗಿ ನಿರ್ದಿಷ್ಟ ಕಾಲಾವಧಿಯ ಅನಂತರ ಒಂದು ಪ್ರದೇಶದ ಖನಿಜ ಸಂಪತ್ತು ಬರಿದಾಗುವುದರಿಂದ ಅಲ್ಲಿಯ ಗಣಿಗಳನ್ನು ಮುಚ್ಚಬೇಕಾಗಬಹುದು. ಅಲ್ಲದೆ ಭೂಮಿಯಲ್ಲಿ ಖನಿಜ ಸಂಪತ್ತು ಹುದುಗಿರುವ ಹೊಸ ಪ್ರದೇಶಗಳನ್ನು ಶೋಧಿಸಿ ಸೂಕ್ತ ಸ್ಥಳಗಳಲ್ಲಿ ಹೊಸ ಗಣಿಗಳನ್ನು ನಿರ್ಮಿಸಬೇಕಾಗಬಹುದು. ಗಣಿಗಾರಿಕೆ ಉದ್ಯಮದ ಪ್ರಥಮ ಹಂತದ ಕಾರ್ಯವಾದ ಈ ಶೋಧನೆಯ ಫಲ ಬಹುಮಟ್ಟಿಗೆ ಆಕಸ್ಮಿಕ ಹಾಗೂ ಅನಿಶ್ಚಿತ. ಖನಿಜಗಳ ಭವಿಷ್ಯ ಸರಬರಾಯಿ ಪರಿಸ್ಥಿತಿಯ ಬಗ್ಗೆ ನಿರ್ದಿಷ್ಟ ಅಂದಾಜುಗಳನ್ನು ಹಾಕುವುದು ಕಷ್ಟ. ಆದರೆ ಪ್ರಪಂಚದಲ್ಲಿ ಅನೇಕ ಖನಿಜಗಳಿಗೆ–ಮುಖ್ಯವಾಗಿ ಶಕ್ತಿಮೂಲಗಳಾದ ಪೆಟ್ರೋಲಿಯಂ ಮತ್ತು ಅನಿಲಗಳಿಗೂ ಹೊಸ ಲೋಹ ಕೈಗಾರಿಕೆ ಮತ್ತು ಯಂತ್ರ ಕೈಗಾರಿಕೆಗಳಿಗೆ ಬೇಕಾದ ಅಲ್ಯೂಮಿನಿಯಂ, ತಾಮ್ರ, ತವರ ಇತ್ಯಾದಿಗಳಿಗೂ–ಈಗ ಸರಬರಾಯಿಗೂ ಮೀರಿದ ಪ್ರಮಾಣದಲ್ಲಿ ಬೇಡಿಕೆ ಹೆಚ್ಚಿದೆ. ಬರಲಿರುವ ದಶಕಗಳಲ್ಲಿ ಇಂದಿನ ಅನೇಕ ಹಿಂದುಳಿದ ರಾಷ್ಟ್ರಗಳು ಅಭಿವೃದ್ಧಿಯಾಗುವುದರಿಂದ ಈ ಖನಿಜಗಳಿಗೆ ಬೇಡಿಕೆ ಇನ್ನೂ ತೀವ್ರವಾಗಿ ಹೆಚ್ಚುವ ಸಂಭವವಿದೆ. ಹೀಗೆ ಹೆಚ್ಚುತ್ತಿರುವ ಬೇಡಿಕೆಗೆ ಸಮವಾದ ವೇಗದಲ್ಲಿ ಸರಬರಾಯಿ ಬೆಳೆಯುವಂತೆ ಮಾಡುವುದು ಗಣಿಗಾರಿಕೆಯ ಮುಖ್ಯ ಸಮಸ್ಯೆ. ಆಧುನಿಕ ವೈಜ್ಞಾನಿಕ ಗಣಿ ಶೋಧನ ತಂತ್ರಗಳ ಪ್ರಯೋಗದಿಂದ ವಿವಿಧ ಖನಿಜಗಳ ಸರಬರಾಯಿ ಮೂಲಗಳ ಬಗ್ಗೆ ನಮ್ಮ ತಿಳಿವಳಿಕೆ ಹೆಚ್ಚುತ್ತಿರುವುದರಿಂದಲೂ ಹಳೆಯ ಗಣಿಗಳನ್ನು ಮುಚ್ಚಬೇಕಾಗ ಬಹುದಾದ್ದರಿಂದಲೂ ಗಣಿ ಫಲವತ್ತತೆ ಬಗ್ಗೆ ಅನಿಶ್ಚಯತೆ ಇರುವುದರಿಂದಲೂ ಗಣಿಗಾರಿಕೆ ವಿಶೇಷತಃ ಗತಿಶೀಲ ಆರ್ಥಿಕ ಚಟುವಟಿಕೆಯಾಗಿದೆ. ಈ ಕಾರಣದಿಂದ ರಾಷ್ಟ್ರಗಳ ಆರ್ಥಿಕತೆಗಳಲ್ಲಿ ಗಣಿಗಾರಿಕೆಯ ಪಾತ್ರ ಆಗಿಂದಾಗ್ಗೆ ಸ್ವಲ್ಪ ವ್ಯತ್ಯಾಸಗೊಳ್ಳ ಬಹುದಾದ ಸಂಭವವಿದೆ.

ಗಣಿಗಾರಿಕೆ ಹೆಚ್ಚು ಸ್ಥಾನೀಕರಣವಾದ ಉದ್ಯಮ. ಕೃಷಿ ಉದ್ಯಮದಂತೆ ಒಂದೊಂದು ದೇಶದಲ್ಲೂ ವಿಸ್ತಾರವಾಗಿ ಹರಡದೆ, ಗಣಿಗಾರಿಕೆ ಕೇವಲ ಕೆಲವು ಸ್ಥಳಗಳಲ್ಲಿ ಮಾತ್ರ ಸ್ಥಾನೀಕರಣವಾಗಿರುವ ಉದ್ಯಮವಾಗಿದೆ. ಅನೇಕ ತಯಾರಿಕೋದ್ಯಮಗಳೊಡನೆ ಹೋಲಿಸಿದರೂ ಗಣಿ ಉದ್ಯಮ ಪ್ರಪಂಚದಲ್ಲಿ ಹೆಚ್ಚು ಸ್ಥಾನೀಕರಣವಾಗಿರುವ ಉದ್ಯಮವಾಗಿದೆ. ಖನಿಜಗಳ ಪ್ರಾಕೃತಿಕ ಹಾಗೂ ಭೌಗೋಳಿಕ ವಿತರಣೆಯ ವಿನ್ಯಾಸ ಇದಕ್ಕೆ ಏಕೈಕ ಕಾರಣ. ಕೈಗಾರಿಕೆಗೆ ಉಪಯುಕ್ತವಾದ ಕೆಲವು ವಿಧದ ಮಣ್ಣುಗಳು ಮತ್ತು ಕಲ್ಲುಗಳನ್ನು ಬಿಟ್ಟರೆ ಅನೇಕ ಖನಿಜಗಳು ದೊರಕುವ ಪ್ರದೇಶಗಳು ಸಾಮಾನ್ಯವಾಗಿ ವಿರಳವಾಗಿವೆ. ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರುಗಳು ಪ್ರಪಂಚದಲ್ಲಿ ಸಾಪೇಕ್ಷವಾಗಿ ಹೆಚ್ಚು ವಿಸ್ತಾರವಾಗಿ ವಿತರಣೆಯಾಗಿರುವ ಗಣಿವಸ್ತುಗಳು. ಆದರೂ ಪ್ರಪಂಚದ ಕಲ್ಲಿದ್ದಲಿನ ಒಟ್ಟು ಉತ್ಪತ್ತಿಯಲ್ಲಿ ಸುಮಾರು $^2/_3$ರಷ್ಟು ಜರ್ಮನಿ, ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಇಂಗ್ಲೆಂಡಿನಲ್ಲೆ ಆಗುತ್ತದೆ. ಕಬ್ಬಿಣದ ಅದಿರಿನ ಒಟ್ಟು ಉತ್ಪತ್ತಿಯಲ್ಲಿ ಶೇ. 50ರಷ್ಟು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಶೇ. 42ರಷ್ಟು ಫ್ರಾನ್ಸ್, ರಷ್ಯ, ಸ್ವೀಡನ್, ಇಂಗ್ಲೆಂಡ್ ಮತ್ತು ಜರ್ಮನಿಗಳಲ್ಲೂ ಉಳಿದ ಶೇ. 8ರಷ್ಟು ಮಾತ್ರ ಪ್ರಪಂಚದ ಇತರ ಕಡೆಗಳಲ್ಲೂ ಆಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳು, ವೆನಿಜ್ವೀಲ ಮತ್ತು ಪಶ್ಚಿಮ ಏಷ್ಯ ರಾಷ್ಟ್ರಗಳು ಪ್ರಪಂಚದ ಒಟ್ಟು ಪೆಟ್ರೋಲಿಯಂ ಉತ್ಪಾದನೆಯ ಶೇ. 85ಕ್ಕೂ ಹೆಚ್ಚು ಭಾಗಕ್ಕೆ ಕಾರಣವಾಗಿವೆ. ವಜ್ರದ ಸುಮಾರು ಮುಕ್ಕಾಲು ಭಾಗದ ಉತ್ಪಾದನೆ ಕಾಂಗೋ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಆಗುತ್ತದೆ. ಚಿನ್ನದ ಗಣಿಗಳು ಬಹುಮಟ್ಟಿಗೆ ದಕ್ಷಿಣ ಆಫ್ರಿಕ, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಕೆನಡ, ರಷ್ಯ, ಆಸ್ಟ್ರೇಲಿಯಗಳಲ್ಲಿ ಸಾಂದ್ರೀಕೃತವಾಗಿವೆ. ಇವೆಲ್ಲವೂ ಸೇರಿ ಪ್ರಪಂಚದ ಒಟ್ಟು ಚಿನ್ನದ ಸುಮಾರು 4/5 ರಷ್ಟು ಉತ್ಪತ್ತಿಗೆ ಕಾರಣವಾಗಿವೆ. ಇದರಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಬರುವುದು ದಕ್ಷಿಣ ಆಫ್ರಿಕದ ಗಣಿಗಳಿಂದ. ಪ್ಲಾಟಿನಂ ಉತ್ಪಾದನೆಗೆ ಕೆನಡ, ದಕ್ಷಿಣ ಆಫ್ರಿಕ, ರಷ್ಯ ಹಾಗೂ ಕೊಲಂಬಿಯಗಳಿಗೆ ಸೀಮಿತವಾಗಿದೆ. ಪ್ರಪಂಚದ ಬೆಳ್ಳಿ ಸರಬರಾಯಿಯ ಸುಮಾರು ಅರ್ಧದಷ್ಟು ಭಾಗ ಮೆಕ್ಸಿಕೋ, ಪೆರು ಮತ್ತು ಬೊಲಿವಿಯಗಳಿಂದಲೂ ಉಳಿದುದರ ಬಹುಭಾಗ ಅಮೆರಿಕದ ಸಂಯುಕ್ತಸಂಸ್ಥಾನಗಳು, ಕೆನಡ, ಆಸ್ಟ್ರೇಲಿಯಗಳಿಂದಲೂ ಬರುತ್ತವೆ. ಬಾಕ್ಸೈಟ್ ಗಣಿಗಳು ಬಹುಮಟ್ಟಿಗೆ ಉತ್ತರ ಹಾಗೂ ದಕ್ಷಿಣ ಅಮೆರಿಕ, ಆಫ್ರಿಕ ಮತ್ತು ದಕ್ಷಿಣ ಐರೋಪ್ಯ ಪ್ರದೇಶಗಳಲ್ಲೂ ತವರ ಉತ್ಪಾದನೆ ಮುಖ್ಯವಾಗಿ ಮಲಯ ಹಾಗೂ ಕೆಲವು ದೂರಪ್ರಾಚ್ಯ ದ್ವೀಪಗಳಲ್ಲೂ ಸಾಂದ್ರೀಕೃತವಾಗಿವೆ. ಸತುವಿನಲ್ಲಿ ಸುಮಾರು ಅರ್ಧದಷ್ಟು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲೂ ಉಳಿದದ್ದು ಬಹುಮಟ್ಟಿಗೆ ಕೆನಡ, ರಷ್ಯ, ಬೆಲ್ಜಿಯಂ, ಆಸ್ಟ್ರೇಲಿಯ, ಇಂಗ್ಲೆಂಡ್‌ಗಳಲ್ಲಿಯೂ ಉತ್ಪಾದನೆಯಾಗುತ್ತವೆ. ಸೀಸದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳು ಮತ್ತು ಕೆನಡ ಸೇರಿ ಸುಮಾರು $^2/_5$ ರಷ್ಟನ್ನೂ ಆಸ್ಟ್ರೇಲಿಯ, ಮೆಕ್ಸಿಕೋ ಮತ್ತು ರಷ್ಯಗಳು ಉಳಿದದ್ದರಲ್ಲಿ ಬಹುಭಾಗವನ್ನೂ ಉತ್ಪಾದಿಸುತ್ತಿವೆ. ನಿಕ್ಕಲ್, ಮ್ಯಾಂಗನೀಸ್, ಕ್ರೋಮಿಯಂ, ಟಂಗ್‌ಸ್ಟನ್, ಕೋಬಾಲ್ಟ್, ಯೂರೇನಿಯಂ ಮುಂತಾದ ಖನಿಜಗಳ ಉತ್ಪಾದನೆಗಳು ಕೂಡ ಪ್ರಪಂಚ ಕೆಲವೇ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ.

ವಿವಿಧ ಖನಿಜಗಳ ಉತ್ಪಾದನೆ ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ವಿವಿಧ ಪರಿಮಾಣಗಳಲ್ಲಿ ವಿತರಣೆಯಾಗಿರುವುದರಿಂದ ರಾಷ್ಟ್ರಗಳ ಆರ್ಥಿಕತೆಯಲ್ಲಿ ಗಣಿಗಾರಿಕೆಯ ಸ್ಥಾನಮಾನ ಏಕರೀತಿ ಇಲ್ಲ. ಆಯಾ ರಾಷ್ಟ್ರಗಳ ಖನಿಜಗಳ ಮೂಲಗಳು ಯಾವುವೆಂಬುದೂ ಎಷ್ಟರಮಟ್ಟಿಗೆ ಆ ರಾಷ್ಟ್ರಗಳು ಈ ಮೂಲಗಳನ್ನು ಶೋಧಿಸಿ ಗಣಿಗಾರಿಕೆಯನ್ನು ಅಭಿವೃದ್ಧಿಪಡಿಸಿಕೊಂಡಿವೆಯೆಂಬುದೂ ಆ ರಾಷ್ಟ್ರಗಳ ಆರ್ಥಿಕತೆಗಳಲ್ಲಿ ಗಣಿಗಾರಿಕೆಯ ಪಾತ್ರವೇನೆಂಬುದನ್ನು ನಿರ್ಣಯಿಸುತ್ತವೆ. ಗಣಿಗಾರಿಕೆಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸ್ಥಾನ ಗಮನಾರ್ಹವಾದ್ದು. ಪ್ರಪಂಚದ ಒಟ್ಟು ಖನಿಜೋತ್ಪತ್ತಿಯಲ್ಲಿ ಅಮೆರಿಕದ ಪಾಲು ಈ ರೀತಿ ಇದೆ; ಪೆಟ್ರೋಲಿಯಂ ಶೇ.60 ಕ್ಕಿಂತ ಅಧಿಕ, ಕಬ್ಬಿಣದ ಅದಿರು ಶೇ.50, ಕಲ್ಲಿದ್ದಲು ಶೇ.24, ಸತು ಶೇ.47, ಸೀಸ, ಶೇ.27, ತಾಮ್ರ ಶೇ.20, ಬೆಳ್ಳಿ ಶೇ.16, ಚಿನ್ನ ಶೇ.15. ಇನ್ನೂ ಅನೇಕ ಖನಿಜಗಳನ್ನು ಗಮನಾರ್ಹ ಗಾತ್ರಗಳಲ್ಲಿ ಅಲ್ಲಿ ನೆಲದಿಂದ ತೆಗೆಯಲಾಗುತ್ತಿದೆ. ಪ್ರಪಂಚದ ಗಣಿಗಾರಿಕೆಯಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳಿಗೆ ಹೀಗೆ ಅತ್ಯಂತ ಮುಖ್ಯವಾದ ಸ್ಥಾನವುಂಟು. ಪ್ರಪಂಚದ ಆರ್ಥಿಕತೆಯಲ್ಲಿ ಅಮೆರಿಕಕ್ಕೆ ಪ್ರಾಧಾನ್ಯ ಲಭ್ಯವಾಗಲು ಇದು ಒಂದು ಮುಖ್ಯ ಕಾರಣ. ಆದರೆ ಒಟ್ಟಿನಲ್ಲಿ ಖನಿಜ ವೈವಿಧ್ಯ ಹೊಂದಿರುವ ರಾಷ್ಟ್ರಗಳು ಪ್ರಪಂಚದಲ್ಲಿ ವಿರಳ; ಕೇವಲ ಕೆಲವೇ ಖನಿಜಗಳನ್ನು ವಿಶೇಷವಾಗಿ ಹೊಂದಿರುವ ರಾಷ್ಟ್ರಗಳು ಹೆಚ್ಚಾಗಿವೆ.

ಒಂದು ದೇಶದಲ್ಲಿರುವ ಖನಿಜ ನಿಕ್ಷೇಪಗಳ ವೈವಿಧ್ಯ ದೃಷ್ಟಿಯಿಂದ ಅಮೆರಿಕ ಸಂಯುಕ್ತ ಸಂಸ್ಥಾನಗಳು. ಸೋವಿಯೆತ್ ದೇಶ ಇವುಗಳ ಜೊತೆಗೆ ಭಾರತವನ್ನೂ ಸೇರಿಸಬಹುದು. ಹುದುಗಿರುವ ಖನಿಜ ಸಂಪತ್ತನ್ನು ಭಾರತ ಸಾಕಷ್ಟು ಹೊರ ತೆಗೆಯುತ್ತಿಲ್ಲವಾದರೂ ಇಲ್ಲಿ ಅನೇಕ ಬಗೆಯ ಖನಿಜಗಳು ಗಣನೀಯ ಪ್ರಮಾಣಗಳಲ್ಲಿವೆ ಎಂಬುದು ಈಚೆಗೆ ನಡೆಸಿರುವ ಶೋಧನೆಗಳಿಂದ ವ್ಯಕ್ತವಾಗುತ್ತದೆ. ಈಚಿನ ಅಂದಾಜಿನ ಪ್ರಕಾರ ಇಲ್ಲಿ ಹುದುಗಿರುವ ಕಬ್ಬಿಣದ ಅದಿರಿನ ಪ್ರಮಾಣ ಪ್ರಪಂಚದಲ್ಲಿರುವ ಒಟ್ಟು ನಿಕ್ಷೇಪದ ಕಾಲುಭಾಗದಷ್ಟಿದೆಯೆಂದು ಹೇಳಲಾಗಿದೆ. ಒರಿಸ್ಸ, ಬಿಹಾರ, ಮಧ್ಯಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಗೋವಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ಯೋಜನಾನುಗುಣವಾಗಿ ತೀವ್ರವಾಗಿ ಬೆಳೆಯುತ್ತಿದೆ. ದೇಶದ ಉಕ್ಕಿನ ಕೈಗಾರಿಕೆಗೆ ಅದಿರನ್ನು ಒದಗಿಸುವುದೇ ಅಲ್ಲದೆ ಕೆಲವು ರಾಷ್ಟ್ರಗಳಿಗೆ–ಮುಖ್ಯವಾಗಿ ಜಪಾನಿಗೆ–ಕಬ್ಬಿಣದ ಅದಿರನ್ನು ರಫ್ತು ಮಾಡಲಾಗುತ್ತಿದೆ. ಝರಿಯ, ರಾಣಿಗಂಜ್ ಮತ್ತು ಬೊಕಾರೊಗಳಲ್ಲಿ ದೇಶದ ಕಲ್ಲಿದ್ದಲು ಗಣಿಗಾರಿಕೆ ಸ್ಥಾನೀಕರಣವಾಗಿದೆ. ಅಸ್ಸಾಂ, ತ್ರಿಪುರ, ಮಣಿಪುರ, ಪಶ್ಚಿಮ ಬಂಗಾಳ, ಪಂಜಾಬ್, ಹಿಮಾಚಲ ಪ್ರದೇಶ, ಕ್ಯಾಂಬೇ–ಕಚ್ ಪ್ರದೇಶಗಳಲ್ಲಿ ತೈಲಗಣಿಗಳನ್ನು ಅಭಿವೃದ್ಧಿಪಡಿಸಬಹುದೆಂಬುದು ವ್ಯಕ್ತಪಟ್ಟಿದೆ. ಪ್ರಪಂಚದ ಮ್ಯಾಂಗನೀಸ್ ಉತ್ಪಾದಿಸುವ ರಾಷ್ಟ್ರಗಳಲ್ಲಿ ಭಾರತದ್ದು ಮುಖ್ಯ ಸ್ಥಾನ. ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಗೋವದಲ್ಲಿ ದೇಶದ ಮ್ಯಾಂಗನೀಸ್ ಅದಿರಿನ ಬಹುಭಾಗ ದೊರಕುತ್ತಿದೆ. ದೇಶದಲ್ಲಿ ಬೆಳೆಯುತ್ತಿರುವ ಕೈಗಾರಿಕೆಗೆ ಇದು ಸಹಾಯವಾಗಿರುವುದೇ ಅಲ್ಲದೆ ರಫ್ತು ಮೂಲಕ ವಿದೇಶಿ ವಿನಿಮಯದ ಗಳಿಕೆಗೂ ಸಹಾಯಕವಾಗಿದೆ. ಉತ್ತಮದರ್ಜೆಯ ಅಭ್ರಕ ಉತ್ಪಾದನೆಯಲ್ಲೂ ಪ್ರಪಂಚದಲ್ಲಿ ಭಾರತಕ್ಕೆ ಗಣ್ಯಸ್ಥಾನವುಂಟು. ಪರಮಾಣುಶಕ್ತಿಗೆ ಅವಶ್ಯಕವಾದ ಯೂರೇನಿಯಂ ನಿಕ್ಷೇಪ ಭಾರತದಲ್ಲಿ ಉಂಟು. ಇವುಗಳೇ ಅಲ್ಲದೆ ಚಿನ್ನ, ವಜ್ರ, ತಾಮ್ರ, ಸೀಸ, ಸತು, ಬಾಕ್ಸೈಟ್, ಇಲ್ಮೆನೈಟ್, ಜಿಪ್ಸಮ್, ಕ್ರೋಮೈಟ್, ಫ್ಲೂರೈಟ್ ಮುಂತಾದ ವಿವಿಧ ಖನಿಜನಿಕ್ಷೇಪಗಳು ದೇಶದಲ್ಲಿವೆ. ಈಚೆಗೆ ಬೆಳೆಯುತ್ತಿರುವ ಆಧುನಿಕ ಕೈಗಾರಿಕೆಗಳಿಗೆ ಖನಿಜ ಮೂಲಗಳಿಂದ ಅವಶ್ಯಕವಾದ ಮೂಲ ಸಾಮಗ್ರಿಗಳು ಒದಗುತ್ತಿವೆ. ಭಾರತದ ನಾಲ್ಕು ಪಂಚವಾರ್ಷಿಕ ಯೋಜನೆಗಳಲ್ಲಿ ಗಣಿಗಾರಿಕೆಯ ಅಭಿವೃದ್ಧಿಗಾಗಿ ಒಟ್ಟು 1,550 ಕೋಟಿ ರೂ. ಬಂಡವಾಳ ಹೂಡಲಾಗಿತ್ತು. ಈ ಯೋಜನೆಗಳಲ್ಲಿ ಅನೇಕ ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇವುಗಳಲ್ಲಿ ಕೆಲವು ತೈಲಶುದ್ಧೀಕರಣ ಕೇಂದ್ರಗಳು, ಭಾರತದ ಯೂರೇನಿಯಂ ಕಾರ್ಪೊರೇಷನ್, ನೈವೇಲಿ ಲಿಗ್ನೈಟ್ ಕಾರ್ಪೊರೇಷನ್, ಬೈಲದಿಲ ಹಿಂದುಸ್ತಾನ್ ಸತು ಕಂಪನಿ, ಖೇತ್ರಿ ತಾಮ್ರ ಯೋಜನೆ, ಕೋರ್ಬ ಹಾಗೂ ಕೊಯ್ನಾ ಅಲ್ಯೂಮಿನಿಯಂ ಯೋಜನೆ ಇವು ಮುಖ್ಯವಾದ ಕೆಲವು. ದೇಶದ ಗಣಿಗಾರಿಕೆಯ ಅಭಿವೃದ್ಧಿಗಾಗಿ ಆರ್ಥಿಕ ಯೋಜನಾಯುಗ ಆರಂಭವಾದ ಅನಂತರ ಹೊಸ ವ್ಯವಸ್ಥೆಯೊಂದು ನಿರ್ಮಿತವಾಗಿದೆ. ಭಾರತದ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ ಮತ್ತು ಭಾರತದ ಗಣಿಗಳ ಬ್ಯೂರೊ ಇವು ನಡೆಸುತ್ತಿರುವ ಸರ್ವೇಕ್ಷಣ, ಸಂಶೋಧನ, ವ್ಯವಸ್ಥಾಪನ ಕಾರ್ಯಾಚರಣೆಗಳು ಹೆಚ್ಚಾಗಿ ಬೆಳೆದಿವೆ. ರಾಷ್ಟ್ರೀಯ ಖನಿಜ ಅಭಿವೃದ್ಧಿ ಕಾರ್ಪೊರೇಷನ್ ಒಂದನ್ನು 1958ರಲ್ಲಿ ಸ್ಥಾಪಿಸಲಾಯಿತು. ಅನೇಕ ಗಣಿಗಳ ಅಭಿವೃದ್ಧಿಕಾರ್ಯನಿರ್ವಹಣೆ ಈ ಸಂಸ್ಥೆಯ ವ್ಯಾಪ್ತಿಗೆ ಸೇರಿದ್ದು. ತೈಲ ಹಾಗೂ ನೈಸರ್ಗಿಕ ಅನಿಲ ಆಯೋಗ ದೇಶದ ನಾನಾ ಭಾಗಗಳಲ್ಲಿ ಶೋಧನೆಯ ಕಾರ್ಯನಿರ್ವಹಿಸುತ್ತಿದೆ. ಸರ್ಕಾರ ಪ್ರತ್ಯೇಕ ಗಣಿಶಾಖೆಯ ಮೂಲಕ ಗಣಿಗಾರಿಕೆ ಅಭಿವೃದ್ಧಿಯನ್ನು ವೀಕ್ಷಿಸಿ ಸೂಕ್ತ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಿದೆ. ಹೀಗೆ ಯೋಜನೆ ಪ್ರಾರಂಭವಾದಾಗಿನಿಂದ ದೇಶದಲ್ಲಿ ಗಣಿಗಾರಿಕೆಯ ಬಗ್ಗೆ ಕೈಗೊಂಡಿರುವ ಕ್ರಮಗಳ ಫಲವಾಗಿ ಖನಿಜೋತ್ಪನ್ನಗಳ ಒಟ್ಟು ಮೌಲ್ಯ (ಪೆಟ್ರೋಲಿಯಂ ಬಿಟ್ಟು) 1951ರಲ್ಲಿ 89 ಕೋಟಿ ರೂ. ಇದ್ದದ್ದು 1961ರಲ್ಲಿ 182 ಕೋಟಿ ರೂ. ಗೂ 1968ರಲ್ಲಿ 415 ಕೋಟಿ ರೂ. ಗೂ ಹೆಚ್ಚಿತು. ಹೀಗೆ ರಾಷ್ಟ್ರದ ಆರ್ಥಿಕತೆಯಲ್ಲಿ ಗಣಿಗಾರಿಕೆಯ ಪಾತ್ರ ವಿಸ್ತರಿಸುತ್ತಿದೆ. ಆರ್ಥಿಕಾಭಿವೃದ್ಧಿ ಪಥದಲ್ಲಿರುವ ರಾಷ್ಟ್ರವೊಂದರ ಸಹಜ ಪ್ರವೃತ್ತಿಯ ನಿದರ್ಶನವಿದು.

ಆರ್ಥಿಕಾಭಿವೃದ್ಧಿಯೊಡನೆ ದೇಶದ ಆರ್ಥಿಕತೆಯಲ್ಲಿ ಗಣಿಗಾರಿಕೆಯ ಪಾತ್ರ ನಿಸರ್ಗದತ್ತ ಖನಿಜಮೂಲಗಳಿಗೆ ಅನುಗುಣವಾಗಿ ಬೆಳೆಯುವುದಾದರೂ ಗಣಿ ಉದ್ಯಮಗಳು ಕೆಲವೇ ಸ್ಥಳಗಳಲ್ಲಿ ಸ್ಥಾಪನೆಯಾಗಿ ಇವು ತಮ್ಮವೇ ಆದ ವಿಶೇಷ ಲಕ್ಷಣಗಳುಳ್ಳ ನಗರಗಳಾಗುತ್ತವೆ. ಈ ಗಣಿನಗರಗಳು ಸಾಮಾನ್ಯವಾಗಿ ಇತರ ಕಡೆಗಳಿಂದ ಬರುವ ಗಣಿ ಸಿಬ್ಬಂದಿ ಮತ್ತು ಜನರಿಂದ ಕೂಡಿರುತ್ತವೆ. ಗಣಿಗಾರಿಕೆಗೇ ವಿಶಿಷ್ಟವಾದ ಆರ್ಥಿಕ, ತಾಂತ್ರಿಕ, ಮಾನವೀಯ ಹಾಗೂ ಸಾಮಾಜಿಕ ಸಮಸ್ಯೆಗಳುಂಟು. ಇವನ್ನು ಪರಿಹರಿಸಲು ಆಧುನಿಕ ಸರ್ಕಾರಗಳು ಸದಾ ಶ್ರಮಿಸುತ್ತಿವೆ; ನಾನಾ ಕ್ರಮಗಳನ್ನು ಕೈಕೊಂಡಿವೆ. (ಎ.ಪಿ.ಎಸ್.)

**ಗಣಿಗಾರಿಕೆಯ ಶಿಲ್ಪ :** ಗಣಿಗಾರಿಕೆಯ ಉದ್ಯಮಕ್ಕೆ ಶಿಲ್ಪ ವಿಜ್ಞಾನವನ್ನು ಅನ್ವಯಿಸಿ ಬೆಳೆಸಿದ ವಿಜ್ಞಾನವಿಭಾಗ (ಮೈನಿಂಗ್ ಎಂಜಿನಿಯರಿಂಗ್). ಖನಿಜಾನ್ವೇಷಣೆಯಿಂದ ತೊಡಗಿ ಗಣಿಗಾರಿಕೆಯ ಸಮಸ್ತ ಅಂಗಗಳಲ್ಲೂ ಇದರ ಅನ್ವಯ ಉಂಟು. ವಿಶಿಷ್ಟೀಕರಣದ ಈ ದಿವಸಗಳಲ್ಲಿ ಗಣಿಗಾರಿಕೆಯ ಶಿಲ್ಪದಲ್ಲೂ ಹಲವಾರು ವಿಭಾಗಗಳು ತಲೆದೋರಿ, ಪ್ರತ್ಯೇಕ ಪ್ರಕಾರಗಳಾಗಿ ಬೆಳೆಯುತ್ತಿವೆ– ಸ್ಫೋಟನೆ, ಬೈರಿಗೆಯಂತ್ರಗಳು, ವಾಯುಯಂತ್ರಗಳು, ರಸ್ತೆ ಮತ್ತು ಕಟ್ಟಡ ನಿರ್ಮಾಣ, ಇತ್ಯಾದಿ.

19ನೆಯ ಶತಮಾನದವರೆಗೆ ಗಣಿಗಾರಿಕೆ ಈಗಿನಂತೆ ನವೀಕರಣ ಅಂದರೆ ಯಾಂತ್ರೀಕರಣಗೊಂಡಿರಲಿಲ್ಲ. ಮಾನವನ ತೋಳ್ಬಲವೇ ಮುಖ್ಯ ಆಧಾರವೆನಿಸಿತ್ತು. ಖನಿಜ ಹುದುಗಿದ್ದ ಬಂಡೆಯನ್ನು ದೊಡ್ಡ ದೊಡ್ಡ ಚಿಮ್ಮಟಿಗೆಗಳಿಂದ ಕುಟ್ಟಿ ಪುಡಿಮಾಡಿ ಖನಿಜವನ್ನು ಒಪ್ಪಮಾಡುತ್ತಿದ್ದುದೇ ಸಾಮಾನ್ಯ. ಆದರೆ ಅಲ್ಲಿಂದೀಚೆಗೆ ಕೈಗಾರಿಕಾಯುಗ ತೊಡಗಿದ ಬಳಿಕ ಲೋಹಖನಿಜಗಳು ಕೈಗಾರಿಕಾ ಖನಿಜಗಳು ಹಾಗೂ ನೈಸರ್ಗಿಕ ಇಂಧನಗಳಿಗೆ ಹೆಚ್ಚಿನ ಬೇಡಿಕೆಯುಂಟಾಗಿ ಖನಿಜ ನಿಕ್ಷೇಪಗಳಿಗೆ ಸಂಬಂಧಿಸಿದ ಗಣಿಯ ಉದ್ಯಮವೂ ಹೆಚ್ಚು ಸುಧಾರಿತಗೊಂಡಿತು. ಶ್ರಮಪೂರಿತ ಕೆಲಸಗಳಿಗಾಗಿ ಯಂತ್ರಗಳ ಬಳಕೆ ಮೊದಲಾಯಿತು. ಹೀಗೆ ಯಾಂತ್ರೀಕರಣಗೊಂಡ ಗಣಿಗಳಿಗೆ ಸಂಬಂಧಿಸಿದಂತೆ ಅನೇಕ ಎಂಜಿನಿಯರಿಂಗ್ ಸಮಸ್ಯೆಗಳೂ ತಲೆದೋರಿದವು.

ಗಣಿಗಾರಿಕೆಯಲ್ಲಿ ಎರಡು ಪ್ರಮುಖ ಭಾಗಗಳಿವೆ. ನೆಲಮಟ್ಟದಲ್ಲೇ ಅಥವಾ ಹೆಚ್ಚು ಆಳವನ್ನು ಮುಟ್ಟದೆ ಖನಿಜ ನಿಕ್ಷೇಪದ ಸ್ವರೂಪವನ್ನು ಅನುಸರಿಸಿ ಕೂಪಗಳನ್ನು ತೋಡುವುದು ಒಂದು ವಿಧಾನ. ಇದೇ ತೆರೆದಗಣಿ ವಿಧಾನ. ವಿಶಾಲವಾದ ಕೂಪಗಳಲ್ಲಿ ಆಳಕ್ಕೆ ಇಳಿಯಲು ಅಲ್ಲಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಿ ಗಣಿಯ ಕೆಲಸವನ್ನು ಮುಂದುವರಿಸಲಾಗುತ್ತದೆ. ಇದರ ವ್ಯವಸ್ಥೆ ಅಷ್ಟು ಕ್ಲಿಷ್ಟವಾಗಿರುವುದಿಲ್ಲ. ಉದಾಹರಣೆಗೆ, ಕರ್ನಾಟಕದ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಳು. ಎರಡನೆಯ ವಿಧಾನದ ಹೆಸರು ಭೂಗತ ಗಣಿಗಾರಿಕೆ. ಇಲ್ಲಿ ನೆಲಮಟ್ಟದಿಂದ ನೂರಾರು ಮೀಟರುಗಳ ಆಳದಲ್ಲಿ ಕಿರಿದಾದ ಕೂಪಗಳನ್ನು ತೋಡಿ ಅದಿರಿನ ಶೇಖರಣೆ ಮುಂದುವರಿಯುತ್ತದೆ. ಲೋಹಕಣಗಳೋ ಎಳೆಗಳೋ ಇರುವ ಜಾಡನ್ನು ಅನುಸರಿಸಿ ಸುರಂಗಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಇದನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಸುವುದು ಬಹಳ ಕಷ್ಟ. ಉದಾಹರಣೆಗೆ, ಕೋಲಾರದ ಚಿನ್ನದ ಗಣಿಗಳು, ಹಟ್ಟಿ ಚಿನ್ನದ ಗಣಿಗಳು, ಇಂಗಳದ ಹಾಲಿನ ತಾಮ್ರದ ಅದಿರು ಗಣಿಗಳು ಇತ್ಯಾದಿ. ಈ ತೆರನಾದ ಗಣಿಗಳಲ್ಲಿ ಸುರಂಗಗಳು, ಅಡ್ಡಸುರಂಗಗಳು, ತೋಡುಗಳು ಹೀಗೆ ವಿವಿಧ ಭಾಗಗಳಿಂದ ಹೊರ ತೆಗೆದ ಅದಿರನ್ನು ಮುಖ್ಯ ಕೂಪದ ವಿವಿಧ ಹಂತಗಳ ಬಳಿ ಶೇಖರಿಸಿ ಮೇಲಕ್ಕೆ ಸಾಗಿಸಬೇಕು. ಈ ರೀತಿಯ ಅದಿರು ಸಾಗಣೆ ಹಾಗೂ ಗಣಿಯ ಕೆಲಸಗಳಿಗಾಗಿ ಉತ್ತಮ ರಸ್ತೆಗಳು ಅತ್ಯಾವಶ್ಯಕ. ಅದಿರು ಸಾಗಣೆಗಂತೂ ಕೈಗಾಡಿ ಅಥವಾ ಯಂತ್ರಚಾಲಿತ ಟ್ರಕ್ಕುಗಳ ಓಡಾಟಕ್ಕೆ ಹಳಿಗಳಿಂದ ಕೂಡಿದ ಮಾರ್ಗಗಳು ಉತ್ತಮ ರೀತಿಯಲ್ಲಿ ವ್ಯವಸ್ಥಿಗೊಳ್ಳಬೇಕು.

ಖನಿಜ ಹುದುಗಿರುವ ಬಂಡೆಯಲ್ಲಿ ಕುಳಿಗಳನ್ನು ತೋಡಿ ಅವನ್ನು ಸ್ಫೋಟಕ ವಸ್ತುಗಳಿಂದ ತುಂಬಿಸಿ ಸಿಡಿಸಿ ಚೂರುಮಾಡಿ ಅದಿರನ್ನು ಪಡೆಯಲು ಪ್ರಾರಂಭಿಸುತ್ತಾರೆ. ಶಿಲೆಯ ಲಕ್ಷಣವನ್ನು ಗಡುಸೋ ಮೆದುವೋ ಅನುಸರಿಸಿ ಸಾಧಾರಣ ಅಥವಾ ತೀವ್ರಸ್ಫೋಟಕವಸ್ತುಗಳನ್ನು ಬಳಸಲಾಗುತ್ತದೆ. ಹೀಗೆ ಪಡೆದ ಶಿಲಾಚೂರುಗಳನ್ನು

ಯಾಂತ್ರಿಕ ಸ್ಕ್ರೇಪರುಗಳ ಸಹಾಯದಿಂದ ರಾಶಿ ಮಾಡುತ್ತಾರೆ. ಅನಂತರ ಇವನ್ನು ಯಾಂತ್ರಿಕ ಲೋಡರುಗಳನ್ನು ಉಪಯೋಗಿಸಿಕೊಂಡು ವ್ಯಾಗನ್ನುಗಳಿಗೆ ಅಥವಾ ಟ್ರಕ್ಕುಗಳಿಗೆ ಸುರಿಯುತ್ತಾರೆ. ವ್ಯಾಗನ್ನುಗಳನ್ನು ಡೀಸೆಲ್ ಅಥವಾ ವಿದ್ಯುಚ್ಛಾಲಿತ ಎಂಜಿನ್ನಿಗೆ ಲಗತ್ತಿಸಿ ಮುಖ್ಯಕೂಪದ ಸಮೀಪಕ್ಕೆ ಸಾಗಿಸಲಾಗುವುದು. ಅಲ್ಲಿಂದ ಉಪಕೂಪಗಳು ಹಾಗೂ ಅಡ್ಡ ಸುರಂಗಗಳನ್ನು ಹಾದು ಅದಿರನ್ನು ಮೇಲಕ್ಕೆ ಸಾಗಿಸುತ್ತಾರೆ. ಸೂಕ್ತ ಸುರಕ್ಷಣಾ ಕ್ರಮಗಳನ್ನು ಅನುಸರಿಸದಿದ್ದಲ್ಲಿ ಇಂಥ ಗಣಿಗಾರಿಕೆ ಬಹು ಅಪಾಯಕಾರಿ ಯಾದ ಉದ್ಯಮವಾದೀತು.

ಸುರಂಗ ಮತ್ತು ಅಡ್ಡ ಸುರಂಗಗಳ ನಿರ್ಮಾಣ ಮುಂದುವರಿದಂತೆ ಅವು ಕುಸಿದುಬೀಳದಂತೆ ಮರದ ದಿಮ್ಮಿಗಳನ್ನು ಮತ್ತು ಕಂಬಗಳನ್ನು ಅಲ್ಲಲ್ಲೆ ನಿಲ್ಲಿಸಿ ಬಂದೋಬಸ್ತು ಮಾಡಬೇಕು. ಕೆಲವು ವೇಳೆ ಇಟ್ಟಿಗೆಗಾರೆ ಅಥವಾ ಸಿಮೆಂಟು ಕಾಂಕ್ರೀಟಿನಿಂದಲೂ ಇವನ್ನು ನಿರ್ಮಿಸುವುದುಂಟು. ದಿಮ್ಮಿಗಳನ್ನು ಚಚ್ಚೌಕವಾಗಿ ನೆಲಮಟ್ಟದಿಂದ ಚಾವಣಿಯವರೆಗೂ ಕ್ರಮವರಿತ ರೀತಿಯಲ್ಲಿ ಜೋಡಿಸಿ ಗಣಿಯಲ್ಲಿ ಬಿದ್ದಿರುವ ಅನಾವಶ್ಯಕ ಶಿಲಾ ಚೂರುಗಳಿಂದ ತುಂಬಿ ಭದ್ರಪಡಿಸುವುದೂ ಉಂಟು. ಗಣಿಯಲ್ಲಿ ಆಳಕ್ಕೆ ಹೋದಂತೆ ಭೂಜಲ ಸೀಳು ಮತ್ತು ಬಿರುಕುಗಳಲ್ಲಿ ಜಿನುಗಲು ಮೊದಲಾಗುತ್ತದೆ. ಅಲ್ಲದೆ ಆಳದಲ್ಲಿ ಜಲಮಟ್ಟವನ್ನು ಮುಟ್ಟುವ ಕಾರಣವೂ ನೀರಿನ ಶೇಖರಣೆ ಹೆಚ್ಚಿ ಗಣಿಯ ಕೆಲಸಕ್ಕೆ ತೊಂದರೆಯಾಗುವುದು ಅನಿವಾರ್ಯ. ಈ ನೀರನ್ನು ಹೊರಹಾಕದೆ ಈ ಅಡಚಣೆಯನ್ನು ನಿವಾರಿಸುವಂತಿಲ್ಲ. ಇದಕ್ಕಾಗಿ ಗಣಿಯ ತಳಭಾಗದಲ್ಲಿ ಸುರಂಗಗಳನ್ನು ಕೊರೆದು ಶೇಖರವಾದ ನೀರು ಆಳಕ್ಕೆ ಹರಿದು ಹೋಗುವಂತೆ ಮಾಡಬಹುದು. ಹಾಗಿಲ್ಲವಾದಲ್ಲಿ ವಿದ್ಯುತ್ ಪಂಪುಗಳ ಮೂಲಕ ನೀರನ್ನು ಹೊರಕ್ಕೆ ಹಾಯಿಸುತ್ತಾರೆ. ಇದು ಸಹ ಕ್ರಮವರಿತ ರೀತಿಯಲ್ಲಿ ಮುಂದುವರಿಯಬೇಕು.

ನೆಲಮಟ್ಟದಿಂದ ಆಳಕ್ಕೆ ಹೋದಂತೆ ಉಷ್ಣತೆ ಕ್ರಮೇಣ ಹೆಚ್ಚುತ್ತ ಹೋಗುತ್ತದೆ. ಸುಮಾರು ಪ್ರತಿ 60' ಗೆ $1^0$ ಸೆಂ. ನಷ್ಟು ಉಷ್ಣತೆಯ ಏರಿಕೆಯನ್ನು ಗುರುತಿಸಲಾಗಿದೆ. ಇದನ್ನು ನಿವಾರಿಸುವುದಂತೂ ಅಸಾಧ್ಯದ ಮಾತು. ಆದರೆ ಉಷ್ಣತೆಯನ್ನು ಕಡಿಮೆಮಾಡುವ ಹಲವಾರು ಕ್ರಮಗಳನ್ನು ಕೈಗೊಳ್ಳುವುದು ಸಾಧ್ಯ. ಇದಲ್ಲದೆ ಕೆಲವು ಗಣಿಗಳಲ್ಲಿ ವಿಷಮಯ ಹಾಗೂ ಕೆಟ್ಟ ಅನಿಲಗಳು ಹೊಮ್ಮುವುದುಂಟು. ಇವುಗಳ ನಿವಾರಣೆಗೆ ಹಾಗೂ ಗಣಿಕೆಲಸಗಾರರ ಉಸಿರಾಟಕ್ಕೆ ಪರಿಶುದ್ಧವಾದ ವಾಯುವಿನ ಸರಬರಾಜು ಅತ್ಯಾವಶ್ಯಕ. ಇದಕ್ಕಾಗಿ ತಣ್ಣನೆಯ ಪರಿಶುದ್ಧವಾದ ವಾಯುವನ್ನು ಗಣಿಯ ಮೂಲೆ ಮೂಲೆಗೂ ವಾಯುಯಂತ್ರಗಳ ಮೂಲಕ ಸತತವಾಗಿ ಕಳುಹಿಸುತ್ತಿರುತ್ತಾರೆ. ಅಲ್ಲದೆ ಗಣಿಯೊಳಗಿಂದ ಹೊಮ್ಮುವ ಕೆಟ್ಟ ಅನಿಲಗಳನ್ನು ಹೀರಿ ಹೊರಹಾಕುವ ವ್ಯವಸ್ಥೆಯೂ ಇರುತ್ತದೆ. ಗಣಿಯ ಯಾವುದೋ ಮೂಲೆಯಲ್ಲಿ ಒದಗಿದ ಅಥವಾ ಒದಗಬಹುದಾದ ಅಪಾಯವನ್ನು ಸೂಚಿಸಲು ಒಳಗೆ ಕಳುಹಿಸುವ ವಾಯುವಿಗೆ ನೀಲಗಿರಿ ತೈಲ ಮುಂತಾದ ವಿಶಿಷ್ಟ ವಾಸನೆಯನ್ನು ಕೊಡಬಲ್ಲ ವಸ್ತುವನ್ನು ಬೆರೆಸುವುದೂ ಉಂಟು. ಅಲ್ಲದೆ ಗಣಿಯ ನಾನಾಕಡೆ ವಿದ್ಯುತ್ ಬೀಸಣಿಗೆಗಳ ಮೂಲಕವೂ ಹವೆಯನ್ನು ನಿಯಂತ್ರಿಸುತ್ತಾರೆ. ಬೆಳಕಿಗಾಗಿ ಸೂಕ್ತಸ್ಥಳಗಳಲ್ಲಿ ಗವಾಕ್ಷಿಗಳನ್ನು ನಿರ್ಮಿಸಿರುವುದಲ್ಲದೆ ವಿದ್ಯುತ್ ದೀಪಗಳ ಮೂಲಕವೂ ಉತ್ತಮ ಬೆಳಕಿನ ವ್ಯವಸ್ಥೆಯನ್ನು ಏರ್ಪಡಿಸಿರುವುದುಂಟು. ಶಿಲೆಗಳನ್ನು ಸಿಡಿಸಿದಾಗ ಮತ್ತು ಗಣಿಯ ಇತರ ಕೆಲಸಗಳನ್ನು ಮಾಡುವಾಗ ಸಾಕಷ್ಟು ದೂಳು ಹೊರಬಂದು ಕೆಲಸಕಾರ್ಯಗಳಿಗೆ ಅಡಚಣೆ ಯುಂಟಾಗುವುದೇ ಅಲ್ಲದೇ ಅಲ್ಲಿಯ ಕೆಲಸಗಾರರ ಆರೋಗ್ಯವನ್ನು ಹಾಳುಮಾಡಲು ಕಾರಣವಾದೀತು, ಇದನ್ನು ಕೊಳವೆಗಳಲ್ಲಿ ನೀರನ್ನು ಸಿಂಪಡಿಸುವ ಮೂಲಕ ಸಾಕಷ್ಟು ತಗ್ಗಿಸಲಾಗುತ್ತದೆ. ಜತೆಗೆ ಗಣಿಯೊಳಕ್ಕೆ ಕಳುಹಿಸುವ ವಾಯುವಿನಲ್ಲಿ ಸಾಕಷ್ಟು ತೇವಾಂಶವನ್ನು ಇಟ್ಟಿರುವುದರ ಮೂಲಕವೂ ದೂಳಿನ ಹಾವಳಿಯನ್ನು ನಿವಾರಿಸುತ್ತಾರೆ.

ಈ ಎಲ್ಲ ಕಾರ್ಯಗಳ ವ್ಯವಸ್ಥೆಯೇ ಗಣಿಗಾರಿಕೆಯ ಶಿಲ್ಪ. **(ಟಿ.ಟಿ.;ಬಿ.ವಿ.ಜಿ.)**

**ಗಣಿಗಾರಿಕೆ, ಸಮುದ್ರಗತ :** ಸಮುದ್ರದ ನೀರಿನಿಂದಲೂ ಸಮುದ್ರ ತಳದಲ್ಲಿನ ನಿಕ್ಷೇಪಗಳಿಂದಲೂ ಖನಿಜ ಸಂಪತ್ತನ್ನು ಪಡೆಯುವ ಪ್ರಕ್ರಮ (ಮೈನಿಂಗ್ ಅಂಡರ್‌ಸೀ). ಸಮುದ್ರದ ನೀರಿನಲ್ಲೂ ಅದರ ತಳದಲ್ಲೂ ಇರುವ ಅಪಾರ ಖನಿಜಸಂಪತ್ತನ್ನು ಹೊರತೆಗೆಯುವುದು ಅಷ್ಟು ಸುಲಭವಲ್ಲ. ಇಲ್ಲಿ ಎದುರಾಗುವ ಪರಿಸರದ ಅಡ್ಡಿ ಆತಂಕಗಳು ನೆಲದ ಅಡಿಯಿಂದ ಖನಿಜವನ್ನು ಹೊರ ತೆಗೆಯುವಾಗ ಎದುರಾಗುವ ಅಡ್ಡಿ ಆತಂಕಗಳಿಗಿಂತ ಅವೆಷ್ಟೊ ಹೆಚ್ಚು. ಸಮುದ್ರದಲ್ಲಿರುವ ಖನಿಜನಿಕ್ಷೇಪಗಳು ಒಂದೇ ಭಾಗಕ್ಕೆ ಸೀಮಿತವಾಗಿಲ್ಲ. ಇವುಗಳ ಹರವನ್ನು ಅಧ್ಯಯಿಸಲು ಸಮುದ್ರವನ್ನು ನಾಲ್ಕು ಪ್ರದೇಶಗಳಾಗಿ ವಿಂಗಡಿಸಬಹುದು : ನೀರಿನ ಪ್ರದೇಶ, ಸಮುದ್ರದ ಆಳದ ನೆಲ, ಭೂಖಂಡದ ಮುಂಚಾಚಿನ ಪ್ರದೇಶ ಮತ್ತು ಇಳಿಜಾರು ಹಾಗೂ ತೀರಪ್ರದೇಶ. ಇವುಗಳ ಪೈಕಿ ಸಮುದ್ರದ ನೀರು ಖನಿಜಾಂಶ ಮತ್ತು ಖನಿಜ ಸಂಯೋಜನಗುಣದಲ್ಲಿ ಅತಿಮುಖ್ಯವಾದದ್ದು.

ಸಮುದ್ರದ ಖನಿಜಸಂಪತ್ತು ಮೂರು ಮೂಲ ರೀತಿಗಳಲ್ಲಿದೆ : 1. ಖನಿಜಗಳು ಕರಗಿರುವ ಸಮುದ್ರದ ನೀರು; 2. ಸಮುದ್ರದ ದಂಡೆಯಲ್ಲಿರುವ ಗಟ್ಟಿಯಾದ ಖನಿಜ ನಿಕ್ಷೇಪ, ಭೂಖಂಡದ ಮುಂಚಾಚಿನ ಪ್ರದೇಶದ ಮತ್ತು ಆಳ ಸಮುದ್ರ ನೆಲದ ನಿಕ್ಷೇಪ; 3. ಸಮುದ್ರದ ಅಡಿಯ ತಳಬಂಡೆಯಲ್ಲಿರುವ ಗಟ್ಟಿಯಾದ ಖನಿಜ ನಿಕ್ಷೇಪ.

ಈ ಮೂರು ರೀತಿಯ ಸಾಗರ ಸಂಪತ್ತಿನಲ್ಲಿ ಸಿಗುವ ಹಲವಾರು ಖನಿಜಗಳು ಹೀಗಿವೆ: 1. ಮೆಗ್ನೀಷಿಯಂ, ಸೋಡಿಯಂ, ಕ್ಯಾಲ್ಸಿಯಂ, ಬ್ರೋಮಿನ್, ಪೊಟ್ಯಾಸಿಯಂ, ಗಂಧಕ, ಸ್ಟ್ರಾನ್ಸಿಯಂ, ಬೋರಾನ್, ಯುರೇನಿಯಂ ಮತ್ತು ಜ಼ಿರ್‌ಕೋನಿಯಂ ಖನಿಜಗಳು ಮತ್ತು ಖನಿಜಲವಣಗಳು. ಇವಲ್ಲದೆ ಯಥೇಚ್ಛವಾದ ಸಿಹಿ ನೀರು.

2. ಭಾರವಾದ ಖನಿಜ ಮರಳು, ಕಬ್ಬಿಣದ ಮರಳು, ಸಿಲಿಕ ಮರಳು, ಸುಣ್ಣದ ಮರಳು, ಮರಳು ಮತ್ತು ನೊರಜು, ಮ್ಯಾಂಗನೀಸ್ ಉಂಡೆಗಳು, ರಂಜಕಯುಕ್ತ ಉಂಡೆಗಳು, ರಂಜಕ ಮರಳು, ಗ್ಲಾಕೊನೈಟ್ ಖನಿಜಗಳು, ಸಮುದ್ರದ ದಂಡೆ ಮತ್ತು ತೀರ ಪ್ರದೇಶದ ಗರಸು ನಿಕ್ಷೇಪಗಳು. ಸಮುದ್ರದ ಅತಿ ಆಳ ಪ್ರದೇಶದ ತಳಭಾಗದಲ್ಲಿ ಕೆಂಪು ಸುದ್ದೆ, ಕ್ಯಾಲ್ಕೇರಿಯಸ್ ಊಜ್, ಸಿಲಿಕಾಂಶದ ಊಜ್ ಮತ್ತು ಲೋಹಾಂಶದ ಊಜ್, ಇವೆಲ್ಲ ಗಟ್ಟಿಯಾಗದೆ ಸಮುದ್ರದ ತಳದ ಮೇಲೆ ಸಿಗುವ ಖನಿಜ ನಿಕ್ಷೇಪಗಳು. ಅದೇ ರೀತಿಯಲ್ಲಿ, ಆದರೆ ನದಿಯ ಗರಸು ನಿಕ್ಷೇಪಗಳಲ್ಲಿ ವಜ್ರ, ಚಿನ್ನ, ಪ್ಲಾಟಿನಂ, ತವರ, ಭಾರವಾದ ಖನಿಜಗಳಾದ ಮ್ಯಾಗ್ನಟೈಟ್, ಇಲ್ಮನೈಟ್, ರೂಟೈಲ್, ಜ಼ಿರ್‌ಕಾನ್, ಮೊನಜೈಟ್, ಕ್ರೋಮೈಟ್, ಮತ್ತು ವುಲ್‌ಫ್ರಮೈಟ್ ಇತ್ಯಾದಿ ಖನಿಜಗಳು ದೊರೆಯುತ್ತವೆ.


ಚಿತ್ರ 1. ಸಮುದ್ರಗತ ಗಣಿಗಾರಿಕೆಯಲ್ಲಿ ಆಧುನಿಕ ಯಂತ್ರ ಮತ್ತು ತಂತ್ರಗಳ ಉಪಯೋಗ

3. ಕಲ್ಲಿದ್ದಲು, ಕಬ್ಬಿಣದ ಅದಿರು, ಸುಣ್ಣಶಿಲೆ, ಮ್ಯಾಂಗನೀಸ್ ಆಕ್ಸೈಡ್, ಕೋಬಾಲ್ಟ್, ನಿಕ್ಕಲ್ ಇತ್ಯಾದಿ ಖನಿಜಗಳು ಹೊರ ಕಾಣುತ್ತಿರುವ ಪದರ ನಿಕ್ಷೇಪಗಳಾಗಿಯೂ ಚಿನ್ನ, ತವರ, ಗಂಧಕ, ಉಪ್ಪುಗಳು ಮತ್ತು ಕಲ್ಲಿದ್ದಲು ನೆಲೆ ನಿಕ್ಷೇಪಗಳಾಗಿಯೂ ದೊರೆಯುತ್ತವೆ.

ಸಮುದ್ರದ ಖನಿಜ ನಿಕ್ಷೇಪಗಳನ್ನು ಕಂಡುಹಿಡಿಯುವುದು, ಅವುಗಳ ರೀತಿ, ಮೌಲ್ಯವನ್ನು ಲೆಕ್ಕಾಚಾರ ಮಾಡುವುದು, ಗಣಿಗಾರಿಕೆ ಹಾಗೂ ಉಪಯೋಗಾರ್ಹವಾಗಿ ಅವನ್ನು ಸಂಸ್ಕರಿಸಿ ಮಾರುವವರೆಗಿನ ಕಾರ್ಯದ ಎಲ್ಲ ಹಂತಗಳೂ ಭೂಭಾಗದ ನಿಕ್ಷೇಪಗಳಂತೆಯೇ ನಡೆಯುತ್ತವೆ. ನಿಕ್ಷೇಪಗಳ ಅನ್ವೇಷಣೆಗೆ ಮೊದಲು ಭೂಭಾಗದ ಮುಂಚಾಚು ಮತ್ತು ಅದರ ಅಕ್ಕ ಪಕ್ಕದ ತೀರಗಳ ಸೂಕ್ಷ್ಮ ಪರಿಶೀಲನೆ ಮತ್ತು ಭೂವಿಜ್ಞಾನ ವೃತ್ತಾಂತ ಅಲ್ಲದೇ ಖನಿಜಗಳ ಹಂಚಿಕೆಯ ಅರಿವು ಅವಶ್ಯ. ಇದರಿಂದ ಕೆಲವು ಕಡೆ ಸೀಮಿತವಾಗಿರುವ ಖನಿಜ ನಿಕ್ಷೇಪಗಳ ಸ್ಥೂಲ ಪರಿಶೀಲನೆಗೆ ಅವಕಾಶ ವಾಗುವುದು. ಅನಂತರ ಭೂಭೌತ ಮತ್ತು ಇತರ ರೀತಿಯಲ್ಲಿ ನಿಕ್ಷೇಪಗಳನ್ನು ಪರಿಶೀಲಿಸಬಹುದು. ಹಲವಾರು ವೇಳೆ ಸಮುದ್ರದಲ್ಲಿ ಬೇರೆ ಕಾರ್ಯ ಚಟುವಟಿಕೆಗಳಲ್ಲಿ

ತೊಡಗಿರುವಾಗ ಆಕಸ್ಮಿಕವಾಗಿ ಖನಿಜ ನಿಕ್ಷೇಪಗಳನ್ನು ಕಂಡು ಹಿಡಿಯುವುದೂ ಉಂಟು. ಸಮುದ್ರದಲ್ಲಿ ಇವನ್ನು ಕಂಡುಹಿಡಿಯುವುದಕ್ಕೆ ಮೊದಲು ಅಥವಾ ಅನಂತರ ಮೂರು ಮುಖ್ಯ ಕಾರ್ಯಗಳುಂಟು. ಅವು ನೌಕಾಯಾನ, ಸಮೀಕ್ಷೆ ಮತ್ತು ಖನಿಜ



ಚಿತ್ರ 2. ಸಮುದ್ರಗತ ಗಣಿಗಾರಿಕೆಯಲ್ಲಿ ಆಧುನಿಕ ಯಂತ್ರ ಮತ್ತು ತಂತ್ರಗಳ ಉಪಯೋಗ–ಇನ್ನೊಂದು ಚಿತ್ರ

ಮಾದರಿಗಳ ಪರಿಶೀಲನೆ. ನಿತ್ಯ ಉಪಯೋಗಿಸುತ್ತಿರುವ ನೌಕೆಗಳಲ್ಲಿಯೇ ಅನ್ವೇಷಕ ಸಾಧನಸಲಕರಣೆಗಳನ್ನು ಅಳವಡಿಸಿ ಕಾರ್ಯ ನಡೆಸಲಾಗುತ್ತದೆ. ಸಾಗರದಲ್ಲಿ ಮುಳುಗಿಸಿ

ಮುಖ್ಯ ಸಾಧನವೆಂದರೆ ವ್ಯವಸ್ಥಿತವಾದ ನೌಕಾಯಾನ. ಖನಿಜನಿಕ್ಷೇಪಗಳನ್ನು ಸಂಪೂರ್ಣವಾಗಿ ನಿರ್ಧರಿಸಬೇಕು. ನಡೆಸಬೇಕಾದ ಸಮೀಕ್ಷೆ ಕಾರ್ಯರೂಪದ ಸ್ಥಿತಿಯನ್ನು ಆಧರಿಸಿರುತ್ತದೆ. ಆಳವನ್ನು ನಿರ್ಧರಿಸುವಾಗ ಸುಮಾರು 305ಮೀ ಗಳವರೆಗಿನ ವ್ಯತ್ಯಾಸವನ್ನು ಆರಂಭದಲ್ಲಿ ಬಿಡಬಹುದು. ಆದರೆ ನಿಕ್ಷೇಪವಿರುವುದು ತಿಳಿದ ಬಳಿಕ 30.5ಮೀಗಳಿಗಿಂತಲೂ ಕಡಿಮೆ ವ್ಯತ್ಯಾಸವಿರುವಂತೆ ನಿರ್ಧರಿಸುವುದು ಅನುಕೂಲ. ಈ ವ್ಯತ್ಯಾಸ ಕೊನೆಗೆ ಸೂಕ್ಷ್ಮ ಪರಿಶೀಲನೆಯಲ್ಲಿ ಕೆಲವು ಮೀಟರ್‌ಗಳಷ್ಟಕ್ಕೆ ನಿಲ್ಲುವುದು.

ನೌಕಾಯಾನಕ್ಕೆ ಹಲವಾರು ಎಲೆಕ್ಟ್ರಾನಿಕ್ ಸಾಧನಗಳಿವೆ. ಇವನ್ನು 1–915ಮೀ ಆಳದಲ್ಲೂ ನಿಖರವಾಗಿ ಉಪಯೋಗಿಸಬಹುದು. ಪ್ರಪಂಚದ ಹಲವಾರು ಕಡೆ ಇಂಥ ಸಾಧನಗಳನ್ನು ಖಾಯಂ ಆಗಿ ಇರಿಸಲಾಗಿದೆ. ಇದೇ ರೀತಿ ಸಾಗಿಸಲು ಅನುಕೂಲವಾದ ಸಣ್ಣ ಯಂತ್ರಗಳೂ ಇವೆ. ಇವು ಕೂಡ ನಿಖರವಾಗಿ ಕೆಲಸಮಾಡುವಂಥವು. ಇತ್ತೀಚೆಗೆ ಆಳ ಸಾಗರದ ಸಮೀಕ್ಷೆ ನಡೆಸುವ ದಿಶೆಯಲ್ಲಿ ಕೃತಕ ಉಪಗ್ರಹಗಳ ನೆರವನ್ನು ವಿಶೇಷವಾಗಿ ಪಡೆಯಲಾಗುತ್ತದೆ. ಇಂಥ ಒಂದು ಸಮಶ್ಥರ ಉಪಗ್ರಹ ಆಕಾಶದಲ್ಲಿ ಒಂದೇ ಕಡೆ ನಿಂತು ಸಮುದ್ರದ ಸೀಮಿತವಲಯವನ್ನು ಸಾಕಷ್ಟು ಕಾಲ ವೀಕ್ಷಿಸಿ ವಿವರಗಳನ್ನು ಸಂಗ್ರಹಿಸಬಲ್ಲುದು.

ಚಿತ್ರ 3. ಸಮುದ್ರಗತ ಭೂವಿಜ್ಞಾನಿಯೊಬ್ಬ ನಮೂನೆಗಳನ್ನು ಸಂಗ್ರಹಿಸುತ್ತಿರುವ ದೃಶ್ಯ

ಗಣಿಗಾರಿಕೆಯ ವೇಳೆಯಲ್ಲಿ ನೌಕೆಯನ್ನು ಭದ್ರವಾಗಿ ಒಂದು ಕಡೆ ನಿಲ್ಲಿಸಿರುವುದು ತೀರ ಅಗತ್ಯ. ಕಡಿಮೆ ಅಲುಗಾಟ ಇರುವ ಸಮುದ್ರ ಭಾಗಗಳಲ್ಲಿ ಸೋನಾರ್ ಟ್ರಾನ್ಸ್





ಚಿತ್ರ 4. ತೀರದಾಚೆಯ ಗಟ್ಟಿಯಾಗಿರುವ ಖನಿಜ ನಿಕ್ಷೇಪಗಳನ್ನು ಪಡೆಯಲು ಹೂಳೆತ್ತುವ ವಿಧಾನಗಳು

ಕಾರ್ಯನಡೆಸುವ ಸಲಕರಣೆಗಳು ಮುಂದೆ ಹೆಚ್ಚು ಫಲಪ್ರದವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ ಸಲಕರಣೆಗಳು ಇನ್ನೂ ಅಷ್ಟು ಪರಿಷ್ಕಾರವಾಗದಿರುವುದರಿಂದ ಹೆಚ್ಚು ಬಳಕೆಯಲ್ಲಿಲ್ಲ. ಸಾಗರದಡಿಯಲ್ಲಿನ ಖನಿಜನಿಕ್ಷೇಪಗಳನ್ನು ಗುರುತಿಸಲು

ಪಾಂಡರುಗಳನ್ನು ಮುಳುಗಿಸಿ ನೌಕೆಯನ್ನು ನಿಲ್ಲಿಸಬಹುದು. ಅಥವಾ ಸಮುದ್ರ ತೀರದ ತಾಣಗಳಲ್ಲಿಯೇ ಅದನ್ನು ಬಂಧಿಸಿ ಇಡಬಹುದು. ಇಂಥ ಒಂದು ನೌಕೆಯ ಕಾರ್ಯವನ್ನು ಗಣಕದಿಂದ ನಿರ್ದೇಶಿಸುವುದು ಕೂಡ ಸಾಧ್ಯ.

ಸಮುದ್ರ ತಳದಲ್ಲಿ ಖನಿಜನಿಕ್ಷೇಪಗಳ ಅನ್ವೇಷಣೆ ಮಾಡಲು ಮುಖ್ಯ ಸಲಕರಣೆಗಳೆಂದರೆ ಆಳವನ್ನು ಅಳೆಯುವ ಯಂತ್ರಗಳು, ಸಮುದ್ರತಳದ ಹೊರ ರೇಖಾಕೃತಿ ಚಿತ್ರಣಯಂತ್ರಗಳು, ಕಾಂತ ಬಲಮಾಪಕಗಳು ಮತ್ತು ಆಳದಲ್ಲಿನ ನಿಕ್ಷೇಪಮಾದರಿಗಳನ್ನು ತೆಗೆಯುವ ಸಲಕರಣೆಗಳು. ಇವುಗಳ ಉಪಯೋಗ ಅದಿರಿನ ನಿಕ್ಷೇಪವನ್ನು ಅನುಸರಿಸಿರುತ್ತದೆ. ಉದಾಹರಣೆಗೆ, ಭಾರ ಖನಿಜದ ಗರಸು ನಿಕ್ಷೇಪಗಳನ್ನು ಗುರುತಿಸುವಾಗ ಹೊರ ರೇಖಾಚಿತ್ರಣ ಯಂತ್ರಗಳು (ಪ್ರೊಫೈಲರ್ಸ್) ಅತಿಮುಖ್ಯ ಸಾಧನಗಳು. ಕಂಪನ ರೇಖಾಚಿತ್ರಣ ಯಂತ್ರಗಳು ಕಲ್ಲೆಣ್ಣೆಯ ಅನ್ವೇಷಣೆಯಲ್ಲಿ ಉಪಯುಕ್ತವಾಗಿವೆ. ಅದೇ ರೀತಿ ವಿದ್ಯುತ್ ಕಿಡಿ, ಒತ್ತಡಗಾಳಿ, ಅನಿಲಸಿಡಿಕೆ ಮತ್ತು ವಿದ್ಯುದ್ಯಾಂತ್ರಿಕ ಸ್ಫೋಟನೆ ಮುಂತಾದವನ್ನು ಈ ಕಾರ್ಯದಲ್ಲಿ ಬಳಸಲಾಗುತ್ತಿದೆ. ಇದರಿಂದ ಹೊರಟ ಶಕ್ತಿ ಸಮುದ್ರ ತಳವನ್ನು ಸೇರಿ ಅಲ್ಲಿಯ ವಸ್ತುಗಳಿಂದ ಪ್ರತಿಫಲನ ಹೊಂದಿ ಬಂದಾಗ ಅವುಗಳ ನೆಲೆಯನ್ನು ನಿರ್ಧರಿಸಿ ಸಮುದ್ರತಳದಲ್ಲಿರುವ ಮಣ್ಣಿನ ಪದರ, ತಳಬಂಡೆಯ ಬಾಹ್ಯಾಕಾರ, ಸ್ತರಭಂಗಗಳು ಮುಂತಾದ ಲಕ್ಷಣಗಳನ್ನು ಬಹು ಸುಲಭವಾಗಿ ತಿಳಿಯಬಹುದು. ಹಾಗೆಯೇ ಸಮುದ್ರತಳದಲ್ಲಿರುವ ನಿಕ್ಷೇಪಗಳ ಬಗ್ಗೆಯೂ ಮಾಹಿತಿ ದೊರೆಯುತ್ತದೆ. ಈ ರೀತಿಯ ಸ್ಫೋಟನೆಗಳ ಶಕ್ತಿ ಅಲೆ ಅಲೆಯಾಗಿ ಸಮುದ್ರತಳದಿಂದ ಹಲವು ಕಿಲೋಮೀಟರ್‌ವರೆಗೆ ಪ್ರಸರಿಸುತ್ತದೆ.




**ಚಿತ್ರ 5. ತೀರಾದಚೆಯ ಗಟ್ಟಿಯಾಗಿರುವ ಖನಿಜ ನಿಕ್ಷೇಪಗಳನ್ನು ಪಡೆಯಲು ಗಣಿಗಾರಿಕೆಯ ವಿಧಾನಗಳು: a–ನೆಲದಲ್ಲಿ ಹುಗಿದ ತಾಳು, ಸುರಂಗದ ಮೂಲಕ ಪ್ರವೇಶ; b–ಸಮುದ್ರದಲ್ಲಿನ ಕೃತಕ ದ್ವೀಪದಲ್ಲಿ ಹುಗಿದ ತಾಳು; c–ತೀರದಾಚೆ ರಂಧ್ರ ಕೊರೆದು ಸ್ಥಳದಲ್ಲೇ ಗಣಿಗಾರಿಕೆ**

ಈ ಪ್ರಸರಣೆ ಸಿಡಿತದ ಕಂಪನ ಕಾಲ ಮತ್ತು ಅಲೆಗಳ ಪ್ರಸಾರ ವೇಗವನ್ನು ಆಧರಿಸಿರುತ್ತದೆ. ಮತ್ತೊಂದು ಸಿಡಿತಕ್ಕೆ ಮೊದಲೇ ಪ್ರತಿಫಲನದ ಅಲೆಗಳನ್ನು ಗ್ರಹಿಸಬೇಕು. ಇತ್ತೀಚೆಗೆ ಕಂಡುಹಿಡಿದ ಫ್ಲಕ್ಸ್‌ಗೇಟ್, ಪ್ರೋಟಾನ್ ಪ್ರಿಸೆಷನ್ ಮತ್ತು ರುಬಿಡಿಯಂ ಕಾಂತ ಬಲಮಾಪಕ ಮುಂತಾದವು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗದಲ್ಲಿವೆ.

ಖನಿಜ ನಿಕ್ಷೇಪವನ್ನು ಕಂಡುಹಿಡಿದ ಬಳಿಕ ಮುಂದಿನ ಕಾರ್ಯವೆಂದರೆ ಅದರ ನಮೂನೆ ತೆಗೆಯುವುದು. ಇದರಲ್ಲಿ ಎರಡು ವಿಧಾನಗಳಿವೆ : 1. ಅನ್ವೇಷಣೆ ಅಥವಾ ಗುಣಾತ್ಮಕವಾದ ನಮೂನೆ ಪಡೆಯುವುದು. ಇದರಲ್ಲಿ ಸ್ನಾಪರ್, ಡ್ರಾಪ್ ಕೋರ್ಸ್, ಡ್ರಾಗ್ ಡ್ರೆಡ್ಜರ್ಸ್ ಮತ್ತು ಡೈವರ್ಸ್ (ಮುಳುಗಿ) ಮುಂತಾದ ಸುಲಭ ನಮೂನೆ ಪಡೆಯುವ ವಿಧಾನಗಳನ್ನು ಬಳಸುತ್ತಾರೆ. 2. ಗಣನಾತ್ಮಕ ನಮೂನೆ: ಇದಕ್ಕೆ ಆಧುನಿಕ ಯಂತ್ರ ಸಲಕರಣೆ ಇದ್ದರೆ ಉತ್ತಮ. ಈಗಿರುವ ಸಲಕರಣೆಗಳಿಂದಲೇ ಕಾರ್ಯ ನಡೆಸಲೂಬಹುದು. ಸಮುದ್ರತಳದ ಪರಿಸರಕ್ಕೆ ಅನುಸಾರವಾಗಿ ಸಮುದ್ರದಲ್ಲಿ ಮುಳುಗಿ ಪಡೆಯುವ ಸಲಕರಣೆಗಳ ಕಡೆಯೇ ಹೆಚ್ಚು ಗಮನವಿದೆ. ಈ ದಿಶೆಯಲ್ಲಿ ಗೋರುವುದು ಮತ್ತು ಛಾಯಾಗ್ರಹಣೆ ಬಳಕೆಯಲ್ಲಿವೆ.

ಇಲ್ಲಿಯವರೆಗೆ ಸಮುದ್ರಗತ ಗಣಿಗಾರಿಕೆಯಲ್ಲಿ ಹೆಚ್ಚು ಆಸಕ್ತಿ ಉಂಟಾಗಿದ್ದರೂ ಹೊಸಹೊಸ ಚಟುವಟಿಕೆಗಳು ಮಾತ್ರ ಹೆಚ್ಚಾಗಿ ಅನ್ವೇಷಣೆ ಮತ್ತು ಭಾವನಾತ್ಮಕ ಅಧ್ಯಯನದಲ್ಲಿ ಮಾತ್ರ ಇವೆ. ಆದ್ದರಿಂದ ಉತ್ಪಾದನೆಯಲ್ಲಿ ಸ್ವಲ್ಪ ವ್ಯತ್ಯಾಸವೂ ಕಾಣುವುದಿಲ್ಲ. ಇದುವರೆಗೆ ಬಂದಿರುವ ಖನಿಜ ಉತ್ಪಾದನೆಯೆಲ್ಲ ತೀರ ಪ್ರದೇಶದಿಂದ ಸಮುದ್ರದ ನೀರು, ದಡ, ಮತ್ತು ಅಂಚಿನಲ್ಲಿರುವ ಗರಸು ನಿಕ್ಷೇಪ ಮತ್ತು ಸ್ವಲ್ಪ ಗಟ್ಟಿಯಾದ ನಿಕ್ಷೇಪಗಳಿಂದ ಮಾತ್ರ. ಸಮುದ್ರದ ನೀರಿನಿಂದ ಉತ್ಪಾದನೆಯೆಂದರೆ, ನೀರನ್ನು ರಾಸಾಯನಿಕವಾಗಿ ಹೆಪ್ಪುಗಟ್ಟಿಸುವುದು, ಶೋಧಿಸುವುದು, ಸೂರ್ಯ ರಶ್ಮಿಯಿಂದ ಆವಿಯಾಗಿಸುವುದು. ಇದರಿಂದ ಮೆಗ್ನೀಷಿಯಂ ಹಾಗೂ ಬ್ರೋಮಿನ್ ಉಪ್ಪುಗಳು ಮತ್ತು ಅಡುಗೆ ಉಪ್ಪುಗಳು ಉತ್ಪಾದನೆಯಾಗುತ್ತವೆ. ಆದರೆ ಇತ್ತೀಚಿನ ಬೃಹತ್ ಪ್ರಮಾಣದ ಕಾರ್ಯವೆಂದರೆ ಸಮುದ್ರದ ನೀರಿನಿಂದ ಸಿಹಿ ನೀರನ್ನು ಉತ್ಪಾದಿಸುವುದು. ಈ ದಿಶೆಯಲ್ಲಿ ಸಂಶೋಧನೆಗಳನ್ನು ನಡೆಸುವಾಗ ಇತರ ಖನಿಜಗಳನ್ನು ಹೊರ ತೆಗೆಯುವುದನ್ನೂ ಸಾಧಿಸಲಾಗಿದೆ. ಉಪ್ಪಿನ ಉತ್ಪತ್ತಿ ವರ್ಷಕ್ಕೆ ಸರಾಸರಿ 450,000,000 ರೂಪಾಯಿಗಳಷ್ಟು ಎಂದು ತಿಳಿದುಬಂದಿದೆ. ಇದೇ ರೀತಿ ಮೆಗ್ನೀಷಿಯಂ, ಬ್ರೋಮಿನ್, ಸಿಹಿ ನೀರು ಉತ್ಪಾದನೆಯಾಗಿವೆ.

ಖನಿಜಗಳಲ್ಲೆಲ್ಲ ಸೋಡಿಯಂ, ಮೆಗ್ನೀಷಿಯಂ ಮತ್ತು ಬ್ರೋಮಿನ್‌ಗಳದೇ ಅಧಿಕ ಉತ್ಪತ್ತಿ. ತೀರದಿಂದ ದೂರದಲ್ಲಿರುವ ಈ ನಿಕ್ಷೇಪಗಳ ಗಣಿಗಾರಿಕೆ, ಸಮುದ್ರಗತ ಗಣಿಗಾರಿಕೆಯಲ್ಲಿ ಅತಿ ಪ್ರಚಲಿತವಾಗಲು ಕಾರಣವೆಂದರೆ ಇಲ್ಲಿ ಸಿಗುವ ಮ್ಯಾಂಗನೀಸ್ ಉಂಡೆಗಳು ಮತ್ತು ನೈಋತ್ಯ ಆಫ್ರಿಕದ ಸಮುದ್ರದೊಳಗಿನಿಂದ ಹೊರತೆಗೆಯಲಾದ ವಜ್ರಗಳು. ಇದರಲ್ಲಿ ಉಪಯೋಗಿಸುವ ಸಾಧನಗಳೆಂದರೆ ಗೋರುವುದು, ಕಾಮ್‌ಶೆಲ್ಸ್, ಗೋರುವ ಬಾಲ್ದಿ, ನೀರಿನ ಒತ್ತಡದ ಗೋರುಯಂತ್ರ ಅಥವಾ ವಾಯುವಿನಿಂದ ಎತ್ತುವ ಯಂತ್ರಗಳು. ಇವುಗಳಿಂದ 61–91.5ಮೀ ಆಳದ ವರೆಗೆ ಅಗೆಯಲು ಸಾಧ್ಯವಾಗಿದೆ. 1968ರಲ್ಲಿ 70ಕ್ಕೂ ಹೆಚ್ಚು ಗೋರು ಕಾರ್ಯಗಳಲ್ಲಿ ತೀರದಿಂದಾಚೆಗೆ ಗಟ್ಟಿಯಾದ ಮರಳು ಮತ್ತು ನುರುಜು ಹೊರತೆಗೆಯಬೇಕಾಯ್ತು. ಈ ಉತ್ಪಾದನೆಯ ಒಟ್ಟು ಖರ್ಚನ್ನು ಭೂಮಿಯ ಮೇಲಿನ ಗಣಿಗಾರಿಕೆಗೆ ಹೋಲಿಸಿದರೆ ಸ್ವಲ್ಪ ಹೆಚ್ಚೆಂದೇ ಹೇಳಬಹುದು. ಆದರೂ ಆದಷ್ಟು ಶೀಘ್ರವಾಗಿ ಈ ನಿಕ್ಷೇಪಗಳನ್ನು ಹೊರತೆಗೆಯ ಬೇಕಾಗುತ್ತದೆ. ಕಾರಣ ಭೂಮಿಯ ಮೇಲಿನ ಖನಿಜ ಸಂಪತ್ತು ಎಲ್ಲ ದೇಶಗಳಲ್ಲಿಯೂ ಅನಿರ್ಬಂಧಿತವಾಗಿ ಸದಾಕಾಲ ಸಿಗಲು ಸಾಧ್ಯವೇ ಇಲ್ಲ. ಇದಕ್ಕಾಗಿಯೇ ಹಲವಾರು ರಾಷ್ಟ್ರಗಳು ತೀರದಿಂದಾಚೆಗೆ ಸಮುದ್ರತಳದಲ್ಲಿರುವ ನಿಕ್ಷೇಪಗಳ ಅನ್ವೇಷಣೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿವೆ. ಅದಕ್ಕೆ ಅನುಸಾರವಾಗಿ ಹಲವಾರು ಕಾಯಿದೆ ಕಾನೂನುಗಳನ್ನು ಕೂಡ ರೂಪಿಸುತ್ತಿವೆ. ಈಗಲೂ ನಡೆಯುತ್ತಿರುವ ಮುಖ್ಯವಾದ ಉತ್ಪಾದನೆ ವಜ್ರಗಳು. ಪ್ರಪಂಚದ ಶೇ.70ಕ್ಕೂ ಹೆಚ್ಚು ಭಾಗದ ಭಾರ ಖನಿಜ ಉತ್ಪಾದನೆ ತೀರ ಪ್ರದೇಶದ ನಿಕ್ಷೇಪಗಳಿಂದಾಗಿದೆ. ಇದು ಆಸ್ಟ್ರೇಲಿಯ, ಶ್ರೀಲಂಕ ಮತ್ತು ಭಾರತದ ತೀರಪ್ರದೇಶಗಳಿಂದ. ಇದರಂತೆಯೇ ಇಂಡೋನೇಷ್ಯ. ಥೈಲೆಂಡ್, ಜಪಾನ್, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಐಸ್‌ಲೆಂಡ್, ಬ್ರಿಟನ್, ಫಿನ್‌ಲೆಂಡ್, ನ್ಯೂ ಫೌಂಡ್‌ಲೆಂಡ್, ನೊವಸ್ಕೋಷಿಯ, ಟೈವಾನ್ ಮತ್ತು ಟರ್ಕಿದೇಶಗಳೂ ಹಲವಾರು ರೀತಿಯಲ್ಲಿ ಸಮುದ್ರಗತ ಗಣಿಗಾರಿಕೆಯಲ್ಲಿ ಆಸಕ್ತಿ ವಹಿಸುತ್ತಿವೆ.

ಗಟ್ಟಿಯಾದ ಖನಿಜ ನಿಕ್ಷೇಪಗಳಲ್ಲಿ ಬಹು ಮುಖ್ಯವಾದದ್ದು ಕಲ್ಲಿದ್ದಲು. ಜಪಾನಿನ ಕಲ್ಲಿದ್ದಲಿನ ಒಟ್ಟು ಉತ್ಪಾದನೆಯಲ್ಲಿ ಶೇ.30 ಭಾಗ ಸಮುದ್ರತಳದಿಂದ ಬರುತ್ತಿದೆ. ಬ್ರಿಟನ್ನಿನಲ್ಲಿ ಇದು ಸುಮಾರು ಶೇ.10. ಈ ರೀತಿಯ ಉತ್ಪಾದನೆಯಲ್ಲಿ ಹೆಚ್ಚಿನ ಖರ್ಚು ತಗಲುವುದು ಕೇವಲ ಅನ್ವೇಷಣೆಗಾಗಿ ಮಾತ್ರ. ಉಳಿದ ಕಾರ್ಯ ಹಾಗೂ ವೆಚ್ಚ ಭೂಮಿಯ ಮೇಲೆ ಆಗುವಂತೆಯೇ ಇವೆ. ಜಪಾನ್, ನೊವಸ್ಕೋಷಿಯ, ಟೈವಾನ್, ಬ್ರಿಟನ್, ಟರ್ಕಿ ರಾಷ್ಟ್ರಗಳು 1965 ರಲ್ಲಿ 33,500,000 ಟನ್ನು ಕಲ್ಲಿದ್ದಲನ್ನು

ಉತ್ಪಾದಿಸಿವೆ. ಫಿನ್‌ಲೆಂಡ್ ಮತ್ತು ನ್ಯೂ ಫೌಂಡ್‌ಲೆಂಡ್ 1965 ರಲ್ಲಿ 1,700,000 ಟನ್ನು ಕಬ್ಬಿಣದ ಅದಿರನ್ನು ಹೊರತೆಗೆದಿವೆ. ಅಮೆರಿಕ ಸಂಯುಕ್ತ ಸಂಸ್ಥಾನ 1965 ರಲ್ಲಿ 600,000 ಟನ್ನಿನಷ್ಟು ಗಂಧಕವನ್ನು ಉತ್ಪಾದಿಸಿದೆ. ಸ್ತರ ನಿಕ್ಷೇಪಗಳನ್ನು ಹೊರತೆಗೆಯಲು ಸಾಧಾರಣವಾಗಿ ಗಣಿ ಒಳಕ್ಕೆ ಇಳಿಯಲು ಕೊಡುದಾರಿಯನ್ನು ಕೊರೆದು ಅಲ್ಲಿಂದ ಅಡ್ಡಲಾಗಿ ಸಮುದ್ರ ಕೆಳಗಡೆ ನಿಕ್ಷೇಪದವರೆಗೆ ಸುರಂಗ ತೋಡಬೇಕಾಗುತ್ತದೆ. ಹಾಗೆಯೇ ಸಮುದ್ರದಲ್ಲಿ ಕೃತಕ ದ್ವೀಪಗಳನ್ನು ನಿರ್ಮಿಸಿ ಅಲ್ಲಿಂದ ಕೊಡುದಾರಿಯನ್ನು ಕೊರೆದು ಗಣಿಗಾರಿಕೆಯನ್ನೂ ಮಾಡುವುದುಂಟು. ಈ ಎರಡು ಬಗೆಯಲ್ಲೂ ಮೇಲ್ಚಾವಣಿಯ ಭದ್ರತೆ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಬೇಕು; ಇನ್ನುಳಿದ ಗಣಿ ಕಾರ್ಯಗಳೆಲ್ಲ ಭೂಭಾಗದ ವಿಧಾನಗಳಂತಿರುತ್ತವೆ. ತೀರದಿಂದಾಚೆ ನಡೆಸಿರುವ ತೈಲಾನ್ವೇಷಣೆಯ ಕಾರ್ಯಗಳಲ್ಲಿ ಸಾಮಾನ್ಯವಾಗಿ ಕೃತಕ ದ್ವೀಪಗಳನ್ನು ಸೃಷ್ಟಿಸಿ ಅಲ್ಲಿಂದ ಭೂ ಕೊರೆತ ನಡೆಸಿರುವುದೇ ಹೆಚ್ಚು. ಮತ್ತೊಂದು ರೀತಿಯ ತೈಲಾನ್ವೇಷಣೆಯೆಂದರೆ ಸಮುದ್ರದ ನೀರಿನ ಮೇಲೆ ತೇಲುವ ತೆಪ್ಪಗಳನ್ನು ಕಟ್ಟಿ ಅದು ತೇಲುತ್ತಿರುವ ಭೂಕೊರೆತದ ಯಂತ್ರಗಳಿಂದ ಮಾಡುವಂತಹ ತೈಲಾನ್ವೇಷಣೆಯಾಗಿದೆ. (ಎಂ.ಎಸ್.ಎಂ.)

**ಗಣಿತ ಆದರ್ಶಗಳು :** ಗಣಿತದಲ್ಲಿ ಸಾಧಾರಣವಾಗಿ ಎರಡು ರೀತಿಯ ಆದರ್ಶಗಳನ್ನು ಬಳಸುತ್ತೇವೆ. ನಿತ್ಯ ಜೀವನದಲ್ಲಿ ಹಾಗೂ ವಿಜ್ಞಾನ, ಮಾನವಿಕ ಮುಂತಾದ ಶಾಸ್ತ್ರ ಪ್ರಕಾರಗಳಲ್ಲಿ ಗಣಿತಶಾಸ್ತ್ರದ ಆಧಾರ, ಪದ್ಧತಿ ಮತ್ತು ಸಹಾಯಗಳಿಂದ ಪರಿಹರಿಸಬಹುದಾದ ಮತ್ತು ಪರಿಹರಿಸಬೇಕಾದ ಸಮಸ್ಯೆಗಳು ಹೇರಳವಾಗಿ ದೊರೆಯುತ್ತಿರುತ್ತವೆ. ಇಂಥ ಪ್ರತಿಯೊಂದು ಸಂದರ್ಭದಲ್ಲಿಯೂ ವಿಚಾರ ಮಂಥನ ದಲ್ಲಿರುವ ಸಮಸ್ಯೆ p ಉದ್ಭವಿಸಿದ ಸನ್ನಿವೇಶ $\Sigma$ ವನ್ನು ಒಂದೊಂದು ಅಂಶದಲ್ಲಿಯೂ ಹೋಲುವಂಥ ಒಂದು ಗಣಿತ ವ್ಯವಸ್ಥೆ $\sigma$ ವನ್ನು ನಿರ್ಮಿಸಿ ಅದರಲ್ಲಿ ನಮ್ಮ ಸಮಸ್ಯೆ p ಗೆ ಅನ್ವಯಿಸುವ ಗಣಿತ ಸಮಸ್ಯೆ p ಯನ್ನು ರೂಪಿಸಿಕೊಂಡು ಅದರ ಪರಿಹಾರವನ್ನು ಗಣಿತಮಾರ್ಗದ ಸೌಲಭ್ಯದಿಂದ ಪಡೆಯುತ್ತೇವೆ. ಇದರಿಂದ ನಮ್ಮ ಮೊದಲಿನ ಸಮಸ್ಯೆ p ಗೆ $\Sigma$ ದಲ್ಲಿ ತಕ್ಕ ಪರಿಹಾರ ದೊರೆತಂತಾಯಿತು. ಇಲ್ಲಿ $\acute{o}$ ವನ್ನು ಮೂರ್ತ ಸನ್ನಿವೇಶ $\Sigma$ದ ಗಣಿತ ಆದರ್ಶ (ಮ್ಯಾತಿಮ್ಯಾಟಿಕಲ್ ಐಡಿಯಲ್) ಎಂದು ಕರೆಯುತ್ತೇವೆ. ಇಂಥವು ಒಂದು ರೀತಿಯ ಗಣಿತ ಆದರ್ಶಗಳು. ಶುದ್ಧ ಗಣಿತದಲ್ಲಿ ಅತ್ಯಂತ ಅಮೂರ್ತರೂಪದಲ್ಲಿರುವ ಕೆಲವು ಸನ್ನಿವೇಶಗಳನ್ನು ಅನೇಕವೇಳೆ ಬೇರೆ ಬೇರೆ ಕಾರಣಗಳಿಗಾಗಿ ಗಣಿತದ ಕೆಲವು ವಿಶೇಷ ಪರಿಸ್ಥಿತಿಗಳ ಮೂಲಕ ಚಿತ್ರೀಕರಿಸಿ ಮೂರ್ತರೂಪಕ್ಕೆ ತರಬೇಕಾಗುತ್ತದೆ. ಇಂಥ ಚಿತ್ರಣಗಳ ಬಿಂಬಗಳನ್ನು ಅಮೂರ್ತ ಗಣಿತದ ಮೂರ್ತ ಆದರ್ಶಗಳು ಎಂದು ಕರೆಯುತ್ತೇವೆ. ಇವು ಎರಡನೆಯ ರೀತಿಯ ಆದರ್ಶಗಳು.

**ಮೂರ್ತ ಸನ್ನಿವೇಶಗಳ ಗಣಿತ ಆದರ್ಶಗಳು :** (ಮ್ಯಾತಿಮ್ಯಾಟಿಕಲ್ ಐಡಿಯಲ್ಸ್ ಆಫ್ ಕಾಂಕ್ರೀಟ್ ಸಿಚುಯೇಷನ್ಸ್). ಗಣಸಿದ್ಧಾಂತದ ಪರಿಭಾಷೆ : ನಿತ್ಯ ಜೀವನದಲ್ಲೂ ವಿಜ್ಞಾನವೇ ಮುಂತಾದ ಶಾಸ್ತ್ರಪ್ರಕಾರಗಳ ಅಧ್ಯಯನದಲ್ಲೂ ಎಷ್ಟೋ ವೇಳೆ ಕೆಲವು ವಸ್ತು ಅಥವಾ ಭಾವನೆಗಳ ಸಮೂಹಗಳನ್ನೂ ಅವುಗಳಲ್ಲಿ ಅಡಕವಾಗಿರುವ ಬಿಡಿ ಅಂಶಗಳನ್ನೂ ಕುರಿತು ವಿಚಾರ ಮಾಡಬೇಕಾಗುತ್ತದೆ. ಉದಾಹರಣೆಗೆ, ಒಂದು ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳನ್ನೋ ಒಂದು ದೇಶದ ಎಲ್ಲ ಪ್ರಜೆಗಳನ್ನೋ ಒಂದು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುತ್ತಿರುವ ಎಲ್ಲ ರಾಸಾಯನಿಕ ವಸ್ತುಗಳನ್ನೋ ಒಂದು ವಿಶಿಷ್ಟ ಲಕ್ಷಣವನ್ನು ಸಾಮಾನ್ಯವಾಗಿ ಪಡೆದಿರುವ ಎಲ್ಲ ಪ್ರಾಣಿಗಳನ್ನೋ ಕುರಿತು ವಿಚಾರ ಮಾಡಬೇಕಾದ ಪರಿಸ್ಥಿತಿಗಳು ಸಾಧಾರಣವಾಗಿ ಉಂಟಾಗುತ್ತಿರುತ್ತವೆ. ಇಂಥ ವಿವಿಧ ಸನ್ನಿವೇಶಗಳಿಗೆಲ್ಲ ಸಾಮಾನ್ಯವಾಗಿ ಅನ್ವಯಿಸುವಂತೆ ಗಣಿತದಲ್ಲಿ ಗಣಸಿದ್ಧಾಂತವೆಂಬ ಒಂದು ಅಮೂರ್ತ ಗಣಿತ ಆದರ್ಶವನ್ನು ನಿರ್ಮಿಸಿರುತ್ತಾರೆ. ಗಣವೆಂದರೆ ಸ್ಪಷ್ಟವಾಗಿ ನಿರ್ದಿಷ್ಟವಾಗಿರುವ ವಸ್ತು ಅಥವಾ ಭಾವನೆಗಳ ಸಮೂಹ, ಗುಂಪು ಅಥವಾ ವರ್ಗವೆಂದು ಅರಿತುಕೊಳ್ಳಬೇಕು. ಈ ವಿಚಾರಸರಣಿಯಲ್ಲಿ ಗಣವೆಂಬುದೇ ಮೂಲವಾದ ಶಬ್ದವಾಗಿರುವುದರಿಂದ ಇದನ್ನು ನಿಖರವಾಗಿ ವ್ಯಾಖ್ಯಿಸಲು ಹೊರಟರೆ ವರ್ತುಲೀಯತೆಯಲ್ಲಿ ಸಿಲುಕಿ ಬೀಳುವ ಪರಿಸ್ಥಿತಿ ಅನಿವಾರ್ಯ. ಈ ಕಾರಣದಿಂದಲೇ ಗಣವೆಂಬ ಶಬ್ದದ ಅರ್ಥವನ್ನು ಸಮೂಹ, ಸಮುಚ್ಚಯ, ಸಮಾಹಾರ, ವರ್ಗ ಮುಂತಾದ ಹಲವು ಪರ್ಯಾಯ ಪದಗಳ ಮೂಲಕ ಸೂಚಿಸಿ ಅಂತರ್ಬೋಧೆಯಿಂದ ಅರಿತುಕೊಳ್ಳಲು ಬಿಡುವುದೇ ವಾಡಿಕೆ; ಮತ್ತು ಇಷ್ಟೇ ಸಾಧ್ಯ **(ನೋಡಿ– ಗಣಸಿದ್ಧಾಂತ)**.

ಗಣಸಿದ್ಧಾಂತದ ಪರಿಕರ್ಮಗಳನ್ನು ಉಪಯೋಗಿಸಿಕೊಂಡು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಒದಗುವ ವಸ್ತು ಅಥವಾ ಭಾವನೆಗಳ ಸಮೂಹಗಳಲ್ಲಿ ಕಂಡುಬರುವ ಹಲವು ಬಗೆಯ ಸಮಸ್ಯೆಗಳಿಗೆಲ್ಲ ಏಕ ರೀತಿಯ ಪರಿಹಾರವನ್ನು ಅದೇ ಪರಿಭಾಷೆಯಲ್ಲಿ ಪಡೆಯಬಹುದು. ಈ ಕೆಳಗಿನ ಸಮಸ್ಯೆಯಿಂದ ಇದನ್ನು ಸ್ಪಷ್ಟಪಡಿಸಬಹುದು. ಒಂದು ತರಗತಿಯಲ್ಲಿರುವ 51 ವಿದ್ಯಾರ್ಥಿಗಳಲ್ಲಿ 20 ಮಂದಿ ಚರಿತ್ರೆಯಲ್ಲೂ 44 ಮಂದಿ ಗಣಿತದಲ್ಲೂ ಪ್ರವೀಣರಾದರೆ ಇವೆರಡರಲ್ಲೂ ಎಷ್ಟು ಮಂದಿ ಪ್ರವೀಣರು? A ಎಂಬುದು ಚರಿತ್ರೆಯಲ್ಲಿ ಪ್ರವೀಣರ ಗಣವನ್ನೂ B ಎಂಬುದು ಗಣಿತದಲ್ಲಿ ಪ್ರವೀಣರ ಗಣವನ್ನೂ ಸೂಚಿಸಿದರೆ AUB ಎಂಬುದು ತರಗತಿಯಲ್ಲಿನ ಎಲ್ಲ 51 ಹುಡುಗರ ಗಣವನ್ನೂ $A\cap B$ ಎಂಬುದು ಚರಿತ್ರೆ ಮತ್ತು ಗಣಿತಗಳೆರಡರಲ್ಲೂ ಪ್ರವೀಣರ ಗಣವನ್ನು ತೋರಿಸುತ್ತವೆ. ಈಗ A ಯ ಧಾತುಗಳ ಸಂಖ್ಯೆಯನ್ನು $\eta(A)$,B ಯ ಧಾತುಗಳ ಸಂಖ್ಯೆಯನ್ನು $\eta(B)$ ಇತ್ಯಾದಿಗಳಿಂದ ನಿರೂಪಿಸೋಣ. ಈಗ $n(A) = 20$, $n(B)=44$ ಮತ್ತು $n(A\cup B)= 51$. ಇಲ್ಲಿ $n(A\cap B)= x$ ಎಂದು ತೆಗೆದುಕೊಂಡರೆ

$$n(A\cup B)=n(A-B)+n(B-A)+n(A\cap B)$$

ಏಕೆಂದರೆ A–B ಎಂಬುದು ಗಣಿತವನ್ನು ಬಿಟ್ಟು ಚರಿತ್ರೆಯಲ್ಲಿ ಮಾತ್ರ ಪ್ರವೀಣರ ಗಣವನ್ನೂ B–A ಎಂಬುದು ಚರಿತ್ರೆಯನ್ನು ಬಿಟ್ಟು ಗಣಿತದಲ್ಲಿ ಮಾತ್ರ ಪ್ರವೀಣರ ಗಣವನ್ನೂ ಸೂಚಿಸುತ್ತವೆ.

$$\therefore\ 51 = (20 - x) + (44 - x) + x$$

$$\therefore\ x = 13$$

ಆದ್ದರಿಂದ ಚರಿತ್ರೆ, ಗಣಿತಗಳೆರಡರಲ್ಲೂ ಪ್ರವೀಣರ ಸಂಖ್ಯೆ 13. ವೆನ್ ಚಿತ್ರದ ಮೂಲಕ ಕೂಡ ಈ ಸಮೀಕರಣವನ್ನು ಪಡೆಯಬಹುದು.

ಹೀಗೆಯೇ ಇನ್ನೂ ಹೆಚ್ಚು ಹೆಚ್ಚು ಕ್ಲಿಷ್ಟವಾದ ಅನೇಕ ಬಗೆಯ ಸಮಸ್ಯೆಗಳಿಗೆಲ್ಲ ಗಣಸಿದ್ಧಾಂತದ ಪರಿಭಾಷೆಯಿಂದ ಸುಲಭವಾಗಿ ಪರಿಹಾರ ದೊರೆಯುತ್ತದೆ. ಈಗಿನ ಸ್ಥಿತಿಯಲ್ಲಿ ಗಣಸಿದ್ಧಾಂತ ಗಣಿತದ ಒಂದು ಬಹು ದೊಡ್ಡ ಮತ್ತು ಪ್ರಮುಖ ಶಾಖೆಯಾಗಿರುವುದು ಮಾತ್ರವಲ್ಲದೆ ಈ ಸಿದ್ಧಾಂತದ ಪರಿಭಾಷೆ ಆಧುನಿಕ ಗಣಿತವೆಲ್ಲಕ್ಕೂ ವ್ಯಾವಹಾರಿಕ ಭಾಷೆಯಾಗಿ ಪರಿಣಮಿಸಿ, ಗಣಿತದ ಬೇರೆ ಬೇರೆ ಶಾಖೆಗಳನ್ನೆಲ್ಲ ಒಂದೇ ಧಾಟಿಯಲ್ಲಿ ಅಭ್ಯಸಿಸುವಂತೆ ಮಾಡಿಕೊಟ್ಟಿದೆ.

**ಸಂಬಂಧಗಳು ಮತ್ತು ಉತ್ಪನ್ನಗಳು:** ಅನೇಕ ಸಂದರ್ಭಗಳಲ್ಲಿ ಒಂದು ಗಣದ ಕೆಲವು ಧಾತುಗಳೊಂದಿಗೆ, ಅದೇ ಗಣದ ಅಥವಾ ಬೇರೊಂದು ಗಣದ ಕೆಲವು ಧಾತುಗಳನ್ನು ಯಾವುದೋ ಒಂದು ರೀತಿಯಲ್ಲಿ ಅನ್ವಯಗೊಂಡಿರುವ ಪರಿಸ್ಥಿತಿಗಳು ಉದ್ಭವಿಸುತ್ತವೆ. ಉದಾಹರಣೆಗೆ, ಒಂದು ಶಾಲೆಯ ಎಲ್ಲ ವಿದ್ಯಾರ್ಥಿಗಳ ಗಣ s ಗೂ ಈ ವಿದ್ಯಾರ್ಥಿಗಳ ಪೋಷಕರ ಗಣ T ಗೂ ಮುಂದೆ ಹೇಳಿರುವಂತೆ ಒಂದು ಅನ್ವಯವನ್ನು ಕಲ್ಪಿಸಬಹುದು. ಈ ಶಾಲೆಯಲ್ಲಿ s ಒಬ್ಬ ವಿದ್ಯಾರ್ಥಿಯಾಗಿದ್ದರೆ, ಎಂದರೆ $s\in S$ ಆಗಿದ್ದರೆ ಆಗ s ನೊಂದಿಗೆ ಇವನ ಪೋಷಕನನ್ನು ಸೂಚಿಸುವ T ಗಣದಲ್ಲಿರುವ ಒಂದು ಧಾತು t ನೊಂದಿಗೆ ಇವನ ಪೋಷಕನನ್ನು ಸೂಚಿಸುವ T ಗಣದಲ್ಲಿರುವ ಒಂದು ಧಾತು t ಯನ್ನು ಹೊಂದಿಸೋಣ. ಹೀಗೆ s ನೊಂದಿಗೆ t ಗಿರುವ ಅನ್ವಯವನ್ನು $t=\phi(s)$ ಎಂಬ ರೂಪದಲ್ಲೋ ಕ್ರಮಯುಕ್ತ ಧಾತುಯುಗ್ಮವಾಗಿ (s,t) ರೂಪದಲ್ಲೋ ನಿರೂಪಿಸುವುದು ವಾಡಿಕೆ. ಇಲ್ಲಿ Sಗೆ ಸೇರಿದ ಬೇರೆ ಬೇರೆ $s_1$, $s_2$ ಗಳಿಗೆ T ಯಲ್ಲಿರುವ ಒಂದೇ t ಅನ್ವಯವಾಗಬಹುದೆಂಬುದನ್ನು ಗಮನಿಸಬೇಕು. ಏಕೆಂದರೆ $s_1$, $s_2$ ವಿದ್ಯಾರ್ಥಿಗಳಿಬ್ಬರಿಗೆ ಪೋಷಕ t ಒಬ್ಬರೇ ಇರಬಹುದಲ್ಲವೆ? ಹೀಗೆಯೇ ಎಲ್ಲ ನೈಸರ್ಗಿಕ ಸಂಖ್ಯೆಗಳ ಗಣ N ನಲ್ಲಿ ಪ್ರತಿಯೊಂದು ಸಂಖ್ಯೆ n ನೊಂದಿಗೂ ಅದರ ಉತ್ತರಾಂಶ (ಸಕ್ಸೆಸ್ಸರ್) ಎಂದರೆ ಅದರ ಮುಂದಿನ ಸಂಖ್ಯೆ (n+1) ನ್ನು ಅನ್ವಯಿಸಬಹುದು. ಇದನ್ನು (n, n+1) ಎಂಬ ರೂಪದ ಕ್ರಮಯುಕ್ತ ಸಂಖ್ಯಾಯುಗ್ಮಗಳಿಂದ ಸೂಚಿಸಬಹುದು. ಈ ಬಗೆಯ ಮೂರ್ತ ಸನ್ನಿವೇಶಗಳಿಗೆ ಹೊಂದುವ ಗಣಿತ ಆದರ್ಶಗಳಿಗೆ ಸಂಬಂಧಗಳು (ರಿಲೇಷನ್ಸ್) ಮತ್ತು ಚಿತ್ರಣಗಳು (ಮ್ಯಾಪಿಂಗ್ಸ್) ಅಥವಾ ಉತ್ಪನ್ನಗಳು (ಫಂಕ್ಷನ್ಸ್) ಎನ್ನುತ್ತೇವೆ. ಇಂಥ ಗಣಿತ ಆದರ್ಶಗಳ ವಿವರಗಳಿಗೆ **ನೋಡಿ– ಗಣಸಿದ್ಧಾಂತ.**

ದ್ವಿಗುಣ ಪರಿಕರ್ಮಗಳು (ಬೈನರಿ ಆಪರೇಷನ್ಸ್): p ಒಂದು ಗಣವೂ $f:(p \times p)\rightarrow P$ ಒಂದು ಉತ್ಪನ್ನವೂ ಆಗಿದ್ದರೆ f ನ್ನು p ಮೇಲೆ ವ್ಯಾಖ್ಯಿಸಿರುವ ಒಂದು ದ್ವಿಗುಣಪರಿಕರ್ಮವೆಂದು ಕರೆಯುತ್ತೇವೆ.

ಈಗ $\alpha$: $(N \times N)\rightarrow N$ನ್ನು (ನೈಸರ್ಗಿಕ ಸಂಖ್ಯೆಗಳ ಗಣ) $\alpha(m,n)=(m+n)$, $(m,n\in N)$ ಎಂದರೆ m ಗೆ nನ್ನು ಸಂಕಲನ ಮಾಡಿದರೆ ಬರುವ ಮೊತ್ತ ಎಂದು ವ್ಯಾಖ್ಯಿಸಿದರೆ $\alpha$ ಒಂದು ದ್ವಿಗುಣ ಪರಿಕರ್ಮ. ಇದನ್ನೇ N ಮೇಲೆ ವ್ಯಾಖ್ಯಿಸಿರುವ ಸಾಧಾರಣ ಸಂಕಲನವೆನ್ನುವುದು.

ಹೀಗೆಯೇ ಗುಣಾಕಾರವನ್ನು $\beta$ : $(N\times N)\rightarrow N$ನ್ನು $\beta(m,n)=m\times n$ ಎಂಬ ದ್ವಿಗುಣ ಪರಿಕರ್ಮವಾಗಿ ವ್ಯಾಖ್ಯಿಸಬಹುದು.

ದ್ವಿಗುಣ ಪರಿಕರ್ಮಗಳಿಗೆ ಇನ್ನೂ ಒಂದು ಉದಾಹರಣೆ: ಒಂದು ದೃಢವಸ್ತು (ರಿಜಿಡ್ ಬಾಡಿ) ಒಂದು ಅಕ್ಷದ ಸುತ್ತಲೂ ಆವರ್ತಿಸಲು ಸಾಧ್ಯವಿದೆ ಎಂದು ಭಾವಿಸೋಣ. ಈ ಅಕ್ಷದ ಮೂಲಕ ಹಾದುಹೋಗುವ ಒಂದು ಸಮತಲವನ್ನು ಆರಂಭ ಸಮತಲವಾಗಿ ನಿರ್ದೇಶಿಸಿಕೊಂಡರೆ ಈ ವಸ್ತುವಿನ ಬೇರೆ ಬೇರೆ ಆವರ್ತನೆಗಳನ್ನು (ರೊಟೇಷನ್ಸ್) ಈ ವಸ್ತುವಿನಲ್ಲಿ ಸ್ಥಿರಗೊಂಡಿದ್ದು ಅದೇ ಅಕ್ಷದ ಮೂಲಕ ಹಾದುಹೋಗುವ ಇನ್ನೊಂದು ಸಮತಲ $\beta$ ಹಿಂದೆ ಹೇಳಿದ ಸಮತಲ $\alpha$ ದೊಂದಿಗೆ ಉಂಟುಮಾಡುವ ಕೋನಗಳ ಮೂಲಕ ನಿರೂಪಿಸಬಹುದು. ಈಗ $P_1$ ಮತ್ತು $P_2$ ಗಳು $\theta_1$ ಮತ್ತು ಅಲ್ಲಿಂದ ಮುಂದಕ್ಕೆ $\theta_2$ ಕೋನಗಳಷ್ಟು ಆವರ್ತಿಸುವಂಥ ಆವರ್ತನೆಗಳಾದರೆ $P_1 P_2$ ಎಂದರೆ ವಸ್ತುವಿನ ಮೇಲೆ ಮೊದಲು $P_1$ ಆವರ್ತನೆಯನ್ನು ಅನ್ವಯಿಸಿ ತರುವಾಯ $P_2$ ಆವರ್ತನೆಯನ್ನು ಅನ್ವಯಿಸುವುದರ ಪರಿಣಾಮವನ್ನು $\theta_1+\theta_2$ ಎಂಬ ಅಳತೆಯ ಕೋನದ ಮೂಲಕ ನಿರೂಪಿಸಬಹುದು. ಆದ್ದರಿಂದ $P_1$ ಮತ್ತು $P_2$ ಗಳು ಎರಡು ಆವರ್ತನೆಗಳಾದರೆ $P_1 P_2$ ಸಹ ಒಂದು ಆವರ್ತನೆಯೇ, $P_1$ ಮತ್ತು $P_2$ ಗಳಿಂದ $P_1 P_2$ ನ್ನು ಪಡೆಯುವ ಪರಿಕರ್ಮವನ್ನು ಆವರ್ತನೆಗಳ ಗಣದ ಮೇಲೆ ವ್ಯಾಖ್ಯಿಸಿರುವ ಒಂದು ಬಗೆಯ ದ್ವಿಗುಣಪರಿಕರ್ಮವೆಂದು ಗಣಿಸಬೇಕಾಗುತ್ತದೆ. ಈ ಪರಿಕರ್ಮಕ್ಕೆ ಆವರ್ತನೆಗಳ ಸಂಕಲನ ಎಂದು ಹೆಸರು.

ಹೀಗೆ ಒಂದು ಗಣದ ಎರಡು ಧಾತುಗಳಿಂದ ಹೊರಟು ಅವನ್ನು ಯಾವುದೋ ಒಂದು ರೀತಿ ಪರಸ್ಪರ ಸಂಯೋಜನೆ ಮಾಡುವುದರಿಂದ ಅದೇ ಗಣದ ಒಂದು ಧಾತು ದೊರಕುವ ಸನ್ನಿವೇಶಗಳು ಅನೇಕ ಕಡೆ ಕಾಣಸಿಕ್ಕುತ್ತವೆ. ಇಂಥ ಪರಿಸ್ಥಿತಿಗಳನ್ನೆಲ್ಲ ಅಮೂರ್ತರೂಪದಲ್ಲಿ ವ್ಯಕ್ತಪಡಿಸುವ ಪ್ರಯತ್ನದಲ್ಲಿ ದೊರೆತ ಒಂದು ಬಗೆಯ ಗಣಿತ ಆದರ್ಶವೇ ದ್ವಿಗುಣ ಪರಿಕರ್ಮವೆಂಬ ಪರಿಕಲ್ಪನೆ ಎಂದು ತಿಳಿಯಬೇಕು.

ಪರಿವರ್ತನೆಗಳು (ಟ್ರಾನ್ಸ್‌ಫರ್ಮೇಷನ್ಸ್): S ಒಂದು ಗಣವೂ $\phi: S \rightarrow S$ ಒಂದು ದ್ವೈಚಿತ್ರಣವೂ ಆಗಿದ್ದರೆ $\phi$ ನ್ನು S ನ ಒಂದು ಪರಿವರ್ತನೆ ಎನ್ನುತ್ತೇವೆ.

ಉದಾಹರಣೆ: 1 R ಎನ್ನುವುದು ಎಲ್ಲ ನೈಜಸಂಖ್ಯೆಗಳ ಗಣವಾಗಿರಲಿ. ಈಗ $\phi: R \rightarrow R$ನ್ನು $\phi(x)=x+3$ ಎಂದು R ನ ಎಲ್ಲ x ಗಳಿಗೂ ವ್ಯಾಖ್ಯಾಸಿದರೆ $\phi : R \rightarrow R$ ಒಂದು ದ್ವೈಚಿತ್ರಣ. ಏಕೆಂದರೆ $y \in R$ ಆಗಿದ್ದರೆ $y = \phi$ (y-3). ಆದ್ದರಿಂದ $\phi$ ಒಂದು ಮೇಲ್ಚಿತ್ರಣ. ಹಾಗೆಯೇ $x_1+3=X_2+3$ ಆಗಿದ್ದರೆ $X_1 = X_2$. ಎಂದರೆ $\phi(x_1) = \phi(x_2) \Rightarrow x_1 = x_2$

$\therefore$ $\phi$ ಒಂದು ಒಳಚಿತ್ರಣ: $\therefore$ $\phi$ ಒಂದು ದ್ವೈಚಿತ್ರಣ: $\therefore$ ಅದು Rನ ಒಂದು ಪರಿವರ್ತನೆ.

2 $\alpha$ ಒಂದು ಸಮತಲವೂ t ಅದರಲ್ಲಿರುವ ಒಂದು ಸರಳರೇಖೆಯೂ ಆಗಿರಲಿ. ಈಗ $p \in \alpha$, $\alpha$ ದಲ್ಲಿರುವ ಒಂದು ಬಿಂದುವಾಗಿದ್ದರೆ PM ಗೆ 1ನ್ನು ಲಂಬವಾಗಿ ಎಳೆದು PM=MP' ಆಗುವಂತೆ PM ನ್ನು P' ಗೆ ವೃದ್ಧಿಸಿದರೆ 1 ರೇಖೆಯ ಮೇಲೆ ಒಂದು ಸಮತಲದರ್ಪಣವನ್ನು ಇಟ್ಟಾಗ Pಯ ಬಿಂಬ ಬೀಳುವ ಬಿಂದುವೇ P' ಆಗುತ್ತದೆ. ಈ ರಚನೆಯಿಂದ a ದಲ್ಲಿ 1 ರೇಖೆಯ ಒಂದು ಪಾರ್ಶ್ವದಲ್ಲಿರುವ ಪ್ರತಿ ಯೊಂದು ಬಿಂದುವಿಗೂ ಅದರ ವಿರುದ್ಧ ಪಾರ್ಶ್ವದಲ್ಲಿರುವ ಒಂದು ಬಿಂದುವನ್ನು ಅನ್ವಯಿಸಬಹುದು. ಈ ಅನ್ವಯವನ್ನು $\lambda$: $a \rightarrow \alpha$ ಎಂದು ಬರೆದು $\lambda(P)=P'$ ಎಂದು ವ್ಯಾಖ್ಯಿಸಿದರೆ ಈ $\lambda$ ಎಂಬುದು $\alpha$ ದ ಒಂದು ಪರಿವರ್ತನೆ ಎಂದು ಸುಲಭವಾಗಿ ತಿಳಿದುಬರುತ್ತದೆ. ಏಕೆಂದರೆ $P \in \alpha$ ಆಗಿದ್ದರೆ $\lambda(\lambda(P)=P$ ಎಂದು ಸುಲಭವಾಗಿ ತಿಳಿದುಬರುತ್ತದೆ. ಈಗ ಇದರಿಂದ $\lambda$ ಚಿತ್ರಣ ಮೇಲ್ಚಿತ್ರಣವೆಂಬುದು ಸ್ಪಷ್ಟವಾಯಿತು. ಮೇಲಾಗಿ $\lambda(P) = \lambda(Q)$ ಎಂದಿದ್ದರೆ $\lambda(\lambda(P)= \lambda(\lambda(Q))$




ಚಿತ್ರ 1

$\therefore$ P = Q

$\therefore$ $\lambda$ ಒಂದು ಒಳಚಿತ್ರಣ; $\therefore$ ಅದು ಒಂದು ದ್ವೈಚಿತ್ರಣ; $\therefore$ ಅದು ಸಮತಳ $\alpha$ ದ ಒಂದು ಪರಿವರ್ತನೆ. ಇದನ್ನು ಪ್ರತಿಫಲನ ಚಿತ್ರಣ (ರಿಫ್ಲೆಕ್ಷನ್ ಮ್ಯಾಪ್ಪಿಂಗ್) ಎಂದು ಕರೆಯುತ್ತೇವೆ.

3 ದತ್ತಸಮತಳ *a* ದಲ್ಲಿ $o_x$, $o_y$ ಅಕ್ಷರಗಳಿಗೆ ಅನುಸಾರವಾಗಿ x ಮತ್ತು y ಗಳನ್ನು ದತ್ತಬಿಂದು P ಯ ಕಾರ್ಟೀಸಿಯನ್ ನಿರ್ದೇಶಕಗಳೆಂದು ಭಾವಿಸೋಣ. ಎಂದರೆ *a* ದಲ್ಲಿರುವ ಪ್ರತಿಯೊಂದು ಬಿಂದುವಿನೊಂದಿಗೂ ಒಂದು ಕ್ರಮಯುಕ್ತ ನೈಜಸಂಖ್ಯಾಯುಗ್ಮ (x,y) ಏಕೈಕವಾಗಿ ಹೊಂದಾಣಿಕೆಯಾಗಿದೆ ಎಂದು ಅರ್ಥ h ಮತ್ತು k ಗಳು ದತ್ತ ನೈಜಸಂಖ್ಯೆಗಳಾಗಿರಲಿ.

ಈಗ a ದಿಂದ a ಕ್ಕೆ ಒಂದು ಚಿತ್ರಣ $\theta$ ವನ್ನು ಹೀಗೆ ವ್ಯಾಖ್ಯಿಸೋಣ.

$\theta : a \rightarrow \alpha$ ಚಿತ್ರಣವನ್ನು $\theta(x,y) = (x+h, y+k)$ ಎಂದು ವ್ಯಾಖ್ಯಿಸೋಣ.

$\therefore$ (x,y) = $\theta$ (x-h, y-k) ಎಂದು ಸುಲಭವಾಗಿ ವೇದ್ಯವಾಗುತ್ತದೆ.

ಏಕೆಂದರೆ $\theta$ (x-h, y-k) = ( (x-h) + h, (y-k) +k)

= (x,y)

$\therefore$ $\theta$ : $a \rightarrow a$ ಒಂದು ಮೇಲ್ಚಿತ್ರಣ.

ಮೇಲಾಗಿ $\theta(x,y) = \theta(x', y')$ ಆಗಿದ್ದರೆ ಆಗ

[(x+h, y+k) = (x'+ h, y'+k)]

[ಎಂದರೆ x+h = x' +h]

ಆದ್ದರಿಂದ x = x' ಹಾಗೂ y+k = y'+k. ಆದ್ದರಿಂದ y = y'.

[ಎಂದರೆ (x,y) = (x', y') ಎಂದಾಯಿತು.]

ಆದ್ದರಿಂದ $\theta$ : $a \rightarrow a$ ಒಂದು ಒಳಚಿತ್ರಣ : ಆದ್ದರಿಂದ ಅದು ಒಂದು ದ್ವೈಚಿತ್ರಣ : ಆದ್ದರಿಂದ a ದ ಒಂದು ಪರಿವರ್ತನೆ. ಇದು ಸರಳ ಚಲನೆಗೆ (ಟ್ರಾನ್ಸ್‌ಲೇಷನ್) ಒಂದು ನಿದರ್ಶನ.

ಗ್ರೂಪುಗಳು : ಜ್ಯಾಮಿತಿ, ಗತಿಶಾಸ್ತ್ರ, ಭೌತಶಾಸ್ತ್ರದ ವಿವಿಧ ಪ್ರಕಾರಗಳು ಮುಂತಾದ ಕಡೆಗಳಲ್ಲಿ ಪ್ರತಿಫಲನಗಳು, ಆವರ್ತನೆಗಳು, ಸರಳಚಲನೆಗಳು. ವಿಕ್ಷೇಪಗಳು (ಪ್ರೊಜೆಕ್ಷನ್ಸ್), ವಿಕಸನಗಳು (ಡೈಲೇಟೇಷನ್ಸ್), ಸ್ಪರ್ಶ ಪರಿವರ್ತನೆಗಳು ಮುಂತಾದುವನ್ನು ಬಳಸಬೇಕಾಗುವುದು ನಿತ್ಯಕರ್ತವ್ಯ. ಒಂದು ದತ್ತ ವ್ಯವಸ್ಥೆಯ (ಎಂದರೆ ಒಂದು ಗಣ ಮತ್ತು ಅದರ ಮೇಲೆ ವ್ಯಾಖ್ಯಿತವಾಗಿರುವ ಒಂದೋ ಎರಡೋ ದ್ವಿಗುಣ ಪರಿಕರ್ಮಗಳು ಮತ್ತು ಆ ಗಣದ ಕೆಲವು ನಿರ್ದಿಷ್ಟ ಗುಣಗಳು–ಇವುಗಳ ಒಂದು ಸಮಾಹಾರ) ಮೇಲೆ ಒಂದರ ತರುವಾಯ ಮತ್ತೊಂದರಂತೆ ಹಲವಾರು ಪರಿವರ್ತನೆಗಳನ್ನು ಅನುಕ್ರಮವಾಗಿ ಅನ್ವಯಿಸುವ ಪರಿಸ್ಥಿತಿ ಈ ಶಾಸ್ತ್ರಗಳಲ್ಲಿ ಸರ್ವಸಾಧಾರಣ. ಈ ವಿವಿಧ ವಿಶೇಷ ಪರಿವರ್ತನೆಗಳ ಒಂದೊಂದು ವ್ಯವಸ್ಥೆಯನ್ನೂ ಅದರ ರಚನೆ ಮತ್ತು ಅದರ ಬೇರೆ ಬೇರೆ ಧಾತುಗಳ ಪರಸ್ಪರ ಸಂಯೋಜನೆ ಹೊಂದುವ ಸಂಬಂಧಗಳನ್ನೂ ದೃಷ್ಟಿಸಿ ಸೂಕ್ಷ್ಮವಾಗಿ ಪರಿಶೀಲಿಸಿದರೆ ಕೆಲವು ಗೌಣವಾದ ವಿವರಗಳನ್ನು ಬಿಟ್ಟು ಪ್ರಮುಖವಾದ ಲಕ್ಷಣಗಳಲ್ಲಿ ಪರಸ್ಪರ ಸಾಮ್ಯ ಎದ್ದು ಕಾಣುತ್ತದೆ. ಈ ಬೇರೆ ಬೇರೆ ವಿಶೇಷ ಪ್ರಕೃತಿಯ ವ್ಯವಸ್ಥೆಗಳು ಅವುಗಳಿಗೂ ಅವುಗಳಲ್ಲಿರುವ ಧಾತು ಮತ್ತು ಪರಿಕರ್ಮಗಳಿಗೂ ಕೊಟ್ಟಿರುವ ಕೇವಲ ನಾಮವಿಶೇಷಗಳಲ್ಲಿ ಮಾತ್ರ ವ್ಯತ್ಯಾಸವನ್ನು ಪಡೆದಿದ್ದು ಇವೆಲ್ಲವುಗಳಲ್ಲೂ ಅಂತರ್ಗಾಮಿಯಾಗಿ ಪ್ರವಹಿಸುವ ಹಲವು ಮುಖ್ಯ ಲಕ್ಷಣಗಳಿಂದ ಏಕರೂಪೀಯವಾಗಿರುತ್ತವೆ. ಈ ತೆರನಾದ ಎರಡು ವ್ಯವಸ್ಥೆಗಳು ನಾಮಮಾತ್ರದಲ್ಲಿ ವೈವಿಧ್ಯವನ್ನು ಹೊಂದಿದ್ದು ರೂಪದಲ್ಲಿ ಮತ್ತು ರಚನೆಯಲ್ಲಿ ಏಕೈಕತ್ವವನ್ನು ಪಡೆದಿರುತ್ತವೆ ಎಂದು ಹೇಳಬಹುದು.

ಈ ಮುಖ್ಯ ಲಕ್ಷಣಗಳನ್ನು ಸಾರ್ವತ್ರೀಕರಿಸುವುದರಿಂದ ದೊರೆಯುವ ಅಮೂರ್ತ ಪರಿಕಲ್ಪನೆಗೆ ಗ್ರೂಪುಗಳು ಎಂದು ಹೆಸರು (**ನೋಡಿ– ಗ್ರೂಪ್‌ಸಿದ್ಧಾಂತ**).

ವಲಯಗಳು ಮತ್ತು ಕ್ಷೇತ್ರಗಳು (ರಿಂಗ್ಸ್ ಅಂಡ್ ಫೀಲ್ಡ್ಸ್) : ಚಿರಪರಿಚಿತವಾದ ಪೂರ್ಣಾಂಕಗಳ ಗಣ Z ನಲ್ಲಿ ಸಂಕಲನ (+) ಮತ್ತು ಗುಣಾಕಾರ (X) ಎಂಬ ಎರಡು ದ್ವಿಗುಣ ಪರಿಕರ್ಮಗಳಿರುವುದು ತಿಳಿದೇ ಇದೆ; ಇವು ಕೆಲವು ನಿಯಮಗಳನ್ನು ಅನುಸರಿಸುತ್ತವೆ. ಇದರಿಂದ ಸಂಕಲನಪರಿಕರ್ಮದಲ್ಲಿ Z ಒಂದು ಸಾಹಚರ್ಯ ಗ್ರೂಪ್. ಎಂದರೆ

1 Zನ ಎಲ್ಲ X,Y,Z ಗಳಿಗೂ ಸಾಹಚರ್ಯ ನಿಯಮ :

(x+y) + z = x + (y+z) ಸಲ್ಲುತ್ತದೆ.

2 x+y = y+x ಎಂಬ ವ್ಯತ್ಯಯ ನಿಯಮ ನಿಲ್ಲುತ್ತದೆ.

3 Zನಲ್ಲಿರುವ ಎಲ್ಲ ಧಾತು x ನೊಂದಿಗೂ 0 + x =x=x+0 ಆಗುವಂತೆ Z ನಲ್ಲಿ ಶೂನ್ಯ o ಇರುತ್ತದೆ.

4 $x \in Z$ ಆಗಿದ್ದರೆ ಇದರೊಂದಿಗೆ (-x) + x = 0 =x+(-x) ಎಂಬ ಸಮೀಕರಣಗಳನ್ನು ಪಾಲಿಸುವ ಒಂದು ಪೂರ್ಣಾಂಕ (-x) ಸಹ Z ನಲ್ಲಿರುತ್ತದೆ.

ಗುಣಾಕಾರ ಪರಿಕರ್ಮದಲ್ಲಿ ಸಾಹಚರ್ಯ ನಿಯಮವಾದ a X (bXc) = (aXb) X c ಎಂಬ ಸಂಬಂಧ Z ನ ಎಲ್ಲ a,b,c ಗಳಿಗೂ ಅನ್ವಯಿಸುತ್ತದೆ. ಹಾಗೆ ಇವೆರಡು ಪರಿಕರ್ಮಗಳು ವಿತರಣ ನಿಯಮಗಳೆಂದು ಕರೆಯಲಾಗುವ

a X (b+c) = aXb+aXc ಮತ್ತು

(b+c) X a = bXa+cXa

ಎಂಬ ಸಂಬಂಧಗಳಲ್ಲಿ ಪರಸ್ಪರ ಬಂಧಿತವಾಗಿವೆ.

ಈ ಬಗೆಯ ಪರಿಸ್ಥಿತಿಗಳು ಪರಿಮೇಯ ಸಂಖ್ಯೆಗಳ, ನೈಜ ಸಂಖ್ಯೆಗಳ ಮತ್ತು ಮಿಶ್ರ ಸಂಖ್ಯೆಗಳ ವ್ಯವಸ್ಥೆಗಳಲ್ಲಿಯೂ ಕಂಡುಬರುತ್ತವೆ. ಈ ಸಂಖ್ಯಾವ್ಯವಸ್ಥೆಗಳಲ್ಲಿ ಮಾತ್ರವಲ್ಲದೆ ಇನ್ನೂ ಅನೇಕ ಬೇರೆ ಬೇರೆ ವಿಧವಾದ ಗಣಿತ ವ್ಯವಸ್ಥೆಗಳಲ್ಲೂ ಇದೇ ಬಗೆಯ ಪರಿಸ್ಥಿತಿಗಳು ಎದ್ದುಕಾಣುತ್ತವೆ. ಇವನ್ನೆಲ್ಲ ಕ್ರೋಡೀಕರಿಸಿ ಮುಖ್ಯ ಭಾವನೆಗಳನ್ನು ಮಾತ್ರ ಲೆಕ್ಕಿಸಿಕೊಂಡು ಗೌಣವಾದ ವಿವರಗಳನ್ನು ಕೈಬಿಟ್ಟು ಸಾರ್ವತ್ರೀಕರಿಸುವುದರಿಂದ ವಲಯಗಳು ಎಂಬ ಭಾವನೆ ಮೂಡಿ ಬರುತ್ತದೆ (**ನೋಡಿ– ಕ್ಷೇತ್ರ, ಬೀಜಗಣಿತೀಯ; ವಲಯಗಳು**).

ಸದಿಶ ಆಕಾಶಗಳು (ವೆಕ್ಟರ್ ಸ್ಪೇಸಸ್) : ಭೌತಶಾಸ್ತ್ರ, ಗತಿಶಾಸ್ತ್ರ, ಸಮಸ್ಥಿತಿಶಾಸ್ತ್ರ ಮುಂತಾದ ಶಾಸ್ತ್ರಪ್ರಕಾರಗಳಲ್ಲಿ ಪ್ರತಿಪಾದಿತವಾಗುವ ವೇಗ, ವೇಗೋತ್ಕರ್ಷ, ಬಲ, ಸಂವೇಗ ಮುಂತಾದ ಭೌತರಾಶಿಗಳನ್ನೂ ಜ್ಯಾಮಿತಿಯಲ್ಲಿ ಪ್ರತಿಪಾದಿಸಲ್ಪಡುವ ಸರಳಚಲನೆ, ಆವರ್ತನೆ ಮುಂತಾದ ಪರಿವರ್ತನೆಗಳನ್ನೂ ಪರಿಶೀಲಿಸಿದರೆ ಅವನ್ನು ನಿರೂಪಿಸಲು ಅವುಗಳ ರಾಶಿಗಳನ್ನು ಸೂಚಿಸುವ ಸಂಖ್ಯೆಗಳು ಮಾತ್ರ ಸಾಲವು; ಅವು ವರ್ತಿಸುವ ದಿಶೆಗಳೂ ಅವುಗಳ ರಾಶಿಗಳಷ್ಟೇ ಮುಖ್ಯ. ಹೀಗೆ ದಿಶೆ ಮತ್ತು ಅಳತೆಗಳನ್ನು ಪ್ರಾಮುಖ್ಯವಾಗಿ ಹೊಂದಿರುವ ರಾಶಿಗಳನ್ನೆಲ್ಲ ಏಕರೀತಿಯಲ್ಲಿ ವ್ಯಾಸಂಗ ಮಾಡಲು ಅನುಕೂಲವಾಗುವಂತೆ ಸೃಷ್ಟಿಸಿರುವ ಗಣಿತ ಆದರ್ಶಗಳಿಗೆ ಸದಿಶಗಳು ಎಂದು ಹೆಸರು. ಜ್ಯಾಮಿತೀಯವಾಗಿ ಇವನ್ನು ಬಾಣದ ಗುರ್ತಿನಿಂದ ದಿಶೆಯನ್ನು ಸೂಚಿಸಿರುವ ರೇಖಾಖಂಡಗಳ ಮೂಲಕ ನಿರೂಪಿಸುವುದು ಸುಲಭವೂ ವಾಡಿಕೆಯಲ್ಲಿರುವ ಮಾರ್ಗವೂ ಆಗಿದೆ. ದತ್ತ ಅಳತೆಯುಳ್ಳ ಗೊತ್ತಾದ ದಿಶೆಯಲ್ಲಿ ಎಳೆದ ಎಲ್ಲ ರೇಖಾಖಂಡಗಳೂ ಒಂದೇ ಒಂದು ಸದಿಶವನ್ನು ನಿರೂಪಿಸುವುವೆಂದು ಭಾವಿಸುತ್ತೇವೆ. ಹೀಗಾಗಿ ಒಂದು ಸದಿಶಕ್ಕೆ ಅಳತೆ ಮತ್ತು ದಿಶೆಗಳು ಮಾತ್ರ ಇರುತ್ತವೆ; ಸ್ಥಾನನಿರ್ಬಂಧ ಇರುವುದಿಲ್ಲ (**ನೋಡಿ– ಸದಿಶಗಳು**).

**ಅಮೂರ್ತಗಣಿತದ ಮೂರ್ತ ಆದರ್ಶಗಳು**. ಅಭಿಗೃಹೀತ ಇಲ್ಲವೇ ಆದ್ಯುಕ್ತೀಯ ವ್ಯವಸ್ಥೆಯ ಸಾಮಂಜಸ್ಯ (ಕನ್ಸಿಸ್ಟೆನ್ಸಿ ಆಫ್ ಎ ಪಾಸ್ಟ್ಯುಲೇಟ್ ಸಿಸ್ಟಂ). ಒಂದು ಗಣಿತ ವ್ಯವಸ್ಥೆಯನ್ನು ಪಡೆಯಲು ಬೇಕಾದ ಸಾಮಗ್ರಿಗಳಿವು: 1. ಮೂಲ ಭಾವನೆಗಳು ಎಂಬ ವ್ಯಾಖ್ಯಿಸಲಾಗದ ಮೂಲಭೂತವಾದ ಕೆಲವು (ಪಾರಿಭಾಷಿಕ) ಶಬ್ದಗಳು; 2. ಇವುಗಳಿಗೆ ಸಂಬಂಧಿಸಿದಂತೆ ಇವುಗಳ ಅರ್ಥವನ್ನು ಪರೋಕ್ಷವಾಗಿ ವಿವರಿಸುವ ಹಲವು ಮೂಲವಾಕ್ಯಗಳು ಇವನ್ನು ಅಭಿಗೃಹೀತಗಳು ಎನ್ನುತ್ತೇವೆ. (ಸೂಚನೆ: ಇವು ಸರಿಯೇ ತಪ್ಪೇ ಅಥವಾ ಇವನ್ನು ಸಾಧಿಸಬೇಕೇ ಎಂಬ ಪ್ರಶ್ನೆಗಳು ಏಳುವುದಕ್ಕೂ ಮಾರ್ಗವಿಲ್ಲ.) ಇನ್ನು ಮುಂದೆ ಬೇಕಾದ ಪಾರಿಭಾಷಿಕ ಶಬ್ದಗಳನ್ನು (1) ಮತ್ತು (2) ರ ಆಧಾರದ ಮೇಲೆ ವ್ಯಾಖ್ಯಿಸಬಹುದು. ಇನ್ನು ಬೇರೆ ಬೇರೆ ಸಂಬಂಧಗಳನ್ನು ತಾರ್ಕಿಕ ನಿಗಮನದಿಂದ (ಲಾಜಿಕಲ್ ಡಿಡಕ್ಷನ್) ಈ ಚೌಕಟ್ಟಿನಲ್ಲಿ ಪಡೆಯುತ್ತೇವೆ. ಇವನ್ನು ಪ್ರಮೇಯಗಳು ಎನ್ನುತ್ತೇವೆ. ಇವೆಲ್ಲ ಸೇರಿ ದೊರೆಯುವ ವ್ಯವಸ್ಥೆಗೆ ಒಂದು ಗಣಿತವ್ಯವಸ್ಥೆ ಎಂದು ಹೆಸರು. ಹೀಗಾಗಿ ಒಂದು ಗಣಿತವ್ಯವಸ್ಥೆ ನಿರ್ಮಿತವಾಗಿರುವ ಅಭಿಗೃಹೀತಗಳು ಆ ವ್ಯವಸ್ಥೆಗೆ ಬಹು ಪ್ರಧಾನವಾದ ಘಟಕಗಳು. ಇವು ಹಲವು ಲಕ್ಷಣಗಳನ್ನು ಪಡೆದಿರಬೇಕು. ಅವುಗಳಲ್ಲಿ ಪ್ರಮುಖವಾದ ಲಕ್ಷಣವೇನೆಂದರೆ ಸಾಮಂಜಸ್ಯ ಎಂದರೆ ಅಭಿಗೃಹೀತಗಳ ಒಂದು ಸಮಾಹಾರದ ಚೌಕಟ್ಟಿನಲ್ಲಿ ಪರಸ್ಪರ ನಿಷೇಧಗಳಾದ ಎರಡು ಪ್ರಮೇಯಗಳು ಸಿದ್ಧಿಸಬಾರದು. ಹಾಗಾದರೆ ದತ್ತ ಗಣಿತವ್ಯವಸ್ಥೆಯ ಅಭಿಗೃಹೀತಗಳು ಸಮಂಜಸವೇ ಅಲ್ಲವೇ ಎಂದು ನಿರ್ಧರಿಸುವುದು ತಾನೇ ಹೇಗೆ? ಕುರ್ಟ್‌ಗೊಯ್ಡಲ್ ಎಂಬ ಪ್ರಖ್ಯಾತನಾದ ಗಣಿತಶಾಸ್ತ್ರಜ್ಞ ದತ್ತ ಅಭಿಗೃಹೀತಗಳ ಸಾಮಂಜಸ್ಯವನ್ನು ಪರಿಪೂರ್ಣವಾಗಿ ನಿರ್ಧರಿಸುವುದು ಅಸಾಧ್ಯವೆಂದು ಸಾಧಿಸಿದ್ದಾನೆ (1931).

ಇದಕ್ಕೋಸ್ಕರ ಸಾಪೇಕ್ಷ ಸಾಮಂಜಸ್ಯ (ರಿಲೆಟಿವ್ ಕನ್ಸಿಸ್ಟೆನ್ಸಿ) ಎಂಬ ಒಂದು ನವೀನ ಪರಿಕಲ್ಪನೆಯನ್ನು ಕಲ್ಪಿಸಲಾಗಿದೆ. ದತ್ತಗಣಿತ ವ್ಯವಸ್ಥೆಯನ್ನು ಒಂದೊಂದು ಅಂಶದಲ್ಲೂ ಹೋಲುವಂಥ ಒಂದು ಮೂರ್ತ ಸನ್ನಿವೇಶವನ್ನು ನಿರ್ಮಿಸಿಕೊಳ್ಳುತ್ತೇವೆ. ಇದಕ್ಕೆ ದತ್ತ ಗಣಿತವ್ಯವಸ್ಥೆಯ ಒಂದು ಮೂರ್ತ ಆದರ್ಶ (ಕಾಂಕ್ರೀಟ್ ಐಡಿಯಲ್) ಎಂದು ಹೆಸರು. ಈಗ ಈ ಆದರ್ಶ ಎಷ್ಟರ ಮಟ್ಟಿಗೆ ಸಮಂಜಸವಾಗಿರುವುದೋ ಅಷ್ಟರ ಮಟ್ಟಿಗೆ ದತ್ತ ವ್ಯವಸ್ಥೆಯೂ ಸಾಪೇಕ್ಷವಾಗಿ ಸಮಂಜಸವಾಗಿರುತ್ತದೆ ಎಂದು ಹೇಳುತ್ತೇವೆ.

ಅಯೂಕ್ಲಿಡೀಯ ಜ್ಯಾಮಿತಿಗಳ ಆವಿರ್ಭಾವ : ಅಲೆಕ್ಸಾಂಡ್ರಿಯ ವಿಶ್ವವಿದ್ಯಾಲಯದ ಪ್ರಥಮ ಗಣಿತ ಪ್ರಾಧ್ಯಾಪಕನಾಗಿದ್ದ ಯೂಕ್ಲಿಡ್ ತನ್ನ ಸುಲಭ ಪಾಠಗಳು (ಎಲಿಮೆಂಟ್ಸ್) ಎಂಬ 13 ಭಾಗಗಳಿಂದ ಕೂಡಿದ ಬೃಹತ್ ಗ್ರಂಥದಲ್ಲಿ ಆಗಿನ ಕಾಲದವರೆಗೆ ಪ್ರಚಾರದಲ್ಲಿದ್ದ ಗಣಿತವೆಲ್ಲವನ್ನೂ ಕ್ರೋಡೀಕರಿಸಿ ಆಧುನಿಕ ಗಣಿತದಲ್ಲಿ ಈಗ ಪ್ರಚಲಿತವಾಗಿರುವ ಮಾರ್ಗದಲ್ಲಿಯೇ ವಿಷಯಗಳನ್ನೆಲ್ಲ ತರ್ಕಬದ್ಧವಾಗಿ ಅಳವಡಿಸಿದ. ಈ ಸುಲಭ ಪಾಠ ಗ್ರಂಥದಲ್ಲಿ ಅಂಕಗಣಿತ, ಜ್ಯಾಮಿತಿ ಮುಂತಾದ ಶುದ್ಧ ಗಣಿತದ ಪ್ರಕಾರಗಳೂ ಇವುಗಳ ಸುಲಭಪ್ರಯುಕ್ತಿಗಳೂ ಪ್ರತಿಪಾದಿತವಾಗಿವೆ. ಇದರಲ್ಲಿ ಹೇಳಿರುವ ಜ್ಯಾಮಿತಿಗೆ ಯೂಕ್ಲಿಡೀಯ ಜ್ಯಾಮಿತಿ ಎಂದು ಈಚೆಗೆ ನಾಮಕರಣವಾಗಿದೆ. ಇದಕ್ಕೆ ಮೂಲಾಧಾರವಾಗಿ ಯೂಕ್ಲಿಡ್ 23 ವ್ಯಾಖ್ಯೆಗಳು (ಡಿಫಿನಿಷನ್ಸ್), 5 ಅಭಿಗೃಹೀತಗಳು ಮತ್ತು 5 ಆದ್ಯುಕ್ತಿಗಳನ್ನು (ಆಕ್ಸಿಯಂಸ್) ತೆಗೆದುಕೊಂಡಿರುತ್ತಾನೆ. ಇವುಗಳ ಆಧಾರದ ಮೇಲೆ ಜ್ಯಾಮಿತಿಯ ಎಲ್ಲ ಪ್ರಮೇಯಗಳನ್ನು ತಾರ್ಕಿಕವಾಗಿ ತಾನು ಸಾಧಿಸಿರುವುದಾಗಿ ಆತ ಭಾವಿಸಿದ್ದ. ಈ ದಿಶೆಯಲ್ಲಿ ಮೊದಲ ಪ್ರಯತ್ನದ ಫಲವಾದ ಸುಲಭಪಾಠಗಳಲ್ಲಿ ಪ್ರಮಾದವಶಾತ್ ಕೆಲವು ಲೋಪದೋಷಗಳು ನುಸುಳಿಕೊಂಡು ಬಂದಿರುವುದೇನೂ ಆಶ್ಚರ್ಯದ ಸಂಗತಿಯಲ್ಲ. ಇವನ್ನು ಸರಿಪಡಿಸಲು ಕಾಲಕ್ರಮದಲ್ಲಿ ಅನೇಕ ಮಂದಿ ಗಣಿತಜ್ಞರು ಗಮನಾರ್ಹವಾದ ಪ್ರಯತ್ನಗಳನ್ನು ನಡೆಸಿದರು. ಇವರಲ್ಲಿ ಅಗ್ರಗಣ್ಯನಾದ ಡೇವಿಡ್ ಹಿಲ್ಬರ್ಟ್ (**ನೋಡಿ– ಹಿಲ್ಬರ್ಟ್, ಡೇವಿಡ್**) ಎಂಬಾತ ಯೂಕ್ಲಿಡೀಯ ಜ್ಯಾಮಿತಿಗೆ ತಾರ್ಕಿಕವಾಗಿ ಲೋಪದೋಷರಹಿತವಾದ ಭದ್ರ ಅಡಿಪಾಯವನ್ನು ನಿರ್ಮಿಸಿ ಇದನ್ನು ತನ್ನ 'ಜ್ಯಾಮಿತಿಯ ಅಡಿಪಾಯಗಳು' (ಫೌಂಡೇಶನ್ಸ್ ಆಫ್ ಜಮಿಟ್ರಿ) ಎಂಬ ಗ್ರಂಥದಲ್ಲಿ ಪ್ರಕಟಿಸಿದ. ಆದರೆ ಯೂಕ್ಲಿಡನ ಮಹಾಕೃತಿಯನ್ನು ಈ ದೃಷ್ಟಿಯಿಂದ ವಿಮರ್ಶಿಸುವುದಕ್ಕೆ ಬಹಳ ಹಿಂದೆ, ಎಂದರೆ 1200–1800 ಕಾಲದಲ್ಲಿ, ಗಣಿತಜ್ಞರ ಗಮನ ಯೂಕ್ಲಿಡನ 5ನೆಯ ಅಭಿಗೃಹೀತದ ಕಡೆಗೆ ಸೆಳೆಯಲ್ಪಟ್ಟಿತ್ತು. ಅದರ ನಿರೂಪಣೆ ಹೀಗಿದೆ : ಎರಡು ಸರಳರೇಖೆಗಳನ್ನು ಮೂರನೆಯ ಒಂದು ಸರಳರೇಖೆ ಸಂಧಿಸಿದಾಗ ಅದರ ಒಂದೇ ಪಾರ್ಶ್ವದ ಎರಡು ಒಳಕೋನಗಳ ಮೊತ್ತ ಎರಡು ಲಂಬಕೋನಗಳಿಗಿಂತ ಕಡಿಮೆ ಆಗಿದ್ದರೆ ಆ ಸರಳರೇಖೆಗಳನ್ನು ಈ ಒಳಕೋನಗಳಿರುವ ಪಾರ್ಶ್ವದಲ್ಲಿಯೇ ಅವಿಚ್ಛಿನ್ನವಾಗಿ ವಿಸ್ತರಿಸಿದಾಗ ಅವು ಪರಸ್ಪರ ಸಂಧಿಸುತ್ತವೆ. ಇದನ್ನು, ಒಂದು ಬಿಂದುವಿನಿಂದ ಇನ್ನೊಂದು ಯಾವ ಬಿಂದುವಿನ ಕಡೆಗಾದರೂ ಒಂದು ಸರಳ ರೇಖೆಯನ್ನು ಎಳೆಯಬಹುದು ಎಂದು ಹೇಳುವ 1ನೆಯ ಅಭಿಗೃಹೀತದೊಂದಿಗೋ, ಎಲ್ಲ ಲಂಬಕೋನಗಳೂ ಪರಸ್ಪರ ಸಮ ಎನ್ನುವ 4ನೆಯ ಅಭಿಗೃಹೀತದೊಂದಿಗೋ ಹೋಲಿಸಿದರೆ 5ನೆಯ ಅಭಿಗೃಹೀತ ಇವುಗಳಷ್ಟು ಸರಳವಾಗಿ ಕಂಡುಬರುವುದಿಲ್ಲ. ಆಗಿನ ಕಾಲದಲ್ಲಿ ಗಣಿತದ ಅಡಿಪಾಯಗಳು ಭೌತ ಪ್ರಪಂಚದ ಪರಿಪೂರ್ಣ ಸತ್ಯಗಳೆಂದೂ ಅವು ಬಲು ಸರಳವೂ ಅಂತರ್ಬೋಧೆಯಿಂದ ಸುಲಭ ಮತ್ತು ಶೀಘ್ರಗ್ರಾಹ್ಯವಾಗಿರ ಬೇಕೆಂದೂ ಭಾವಿಸಿದ್ದರು. ಆದ್ದರಿಂದ ಕ್ಲಿಷ್ಟವಾಗಿದ್ದಂತೆ ಕಂಡುಬಂದ 5ನೆಯ ಅಭಿಗೃಹೀತವನ್ನು ಉಳಿದವುಗಳ ಸಹಾಯದಿಂದ ಸಾಧಿಸಲು ಅನೇಕರು ಮುಂದೆ ಪ್ರಯತ್ನಿಸಿ ವಿಫಲರಾದರು. ಜಾನ್ ಪ್ಲೇಫೇರ್ (1748–1819) ಎಂಬಾತ ಇದಕ್ಕೆ ಪ್ರತಿಯಾಗಿ ಇದಕ್ಕೆ ಸಮಾನವಾದ ಇನ್ನೊಂದು ವಾಕ್ಯವನ್ನು 5ನೆಯ ಅಭಿಗೃಹೀತವಾಗಿ ತೆಗೆದುಕೊಂಡ. ಇದು, ದತ್ತಸರಳರೇಖೆಗೆ ಸಮಾಂತರವಾಗಿ, ಅದರ ಮೇಲೆ ಇಲ್ಲದ ದತ್ತಬಿಂದುವಿನ ಮೂಲಕ, ಏಕೈಕವಾದ ಒಂದು ಸರಳರೇಖೆ ಉಂಟು ಎಂದು ಹೇಳುತ್ತದೆ. ಇದನ್ನೂ ಉಳಿದ ಅಭಿಗೃಹೀತಗಳ ನೆರವಿನಿಂದ ಸಾಧಿಸಲಾಗುವುದಿಲ್ಲ.

ಇದನ್ನು ಸಾಧಿಸಲು 18–19ನೆಯ ಶತಮಾನಗಳಲ್ಲಿ ಕೆಲವರು ಬೇರೆ ಮಾರ್ಗವನ್ನು ಹಿಡಿದರು. ಈ ಅಭಿಗೃಹೀತಕ್ಕೆ ಪ್ರತಿಯಾಗಿ ಅದನ್ನು ವಿರೋಧಿಸುವಂತೆ ದತ್ತರೇಖೆಯನ್ನು ಛೇದಿಸದಂತೆ ಅದರ ಮೇಲೆ ಇಲ್ಲದ ದತ್ತಬಿಂದುವಿನ ಮೂಲಕ ಕನಿಷ್ಠ ಪಕ್ಷ ಎರಡು ಸರಳರೇಖೆಗಳು ಉಂಟು ಎಂದೂ ಅಂಥ ರೇಖೆ ಯಾವುದೂ ಇಲ್ಲ ಎಂದೂ ಬೇರೆ ಬೇರೆ ರೀತಿಯಾಗಿ ತೆಗೆದುಕೊಂಡು ತಾರ್ಕಿಕ ನಿಗಮನದಿಂದ ಅಸಾಮಂಜಸ್ಯವನ್ನು ಪಡೆಯುವುದರ ಮೂಲಕ ಇವೆರಡೂ ಅಸಂಬದ್ಧವೆಂದು ವರ್ಜಿಸಿ ತನ್ಮೂಲಕ ಯೂಕ್ಲಿಡೀಯ ಅಭಿಗೃಹೀತ ಅನಿವಾರ್ಯವೆಂದು ತೋರಿಸಲು ಪ್ರಯತ್ನಗಳು ನಡೆದುವು.

ಮೊದಲನೆಯ ಮಾರ್ಗದಲ್ಲಿ ಹೊರಟವರಲ್ಲಿ ಜರ್ಮನಿಯ ಗೌಸ್ (1777–1855) ಹಂಗರಿಯ ಬೋಲ್ಯಾಯ್ (1802–60) ಮತ್ತು ರಷ್ಯದ ಗಣಿತಜ್ಞ ಲೊಬಚೇವ್ಸ್ಕಿ (1773–1856) ಎಂಬವರು ಅಗ್ರಗಣ್ಯರು. ಆದರೆ ಇವರು ಯೋಚಿಸಿದಂತೆ ಅಸಾಮಂಜಸ್ಯ ವೇನೂ ಕಂಡುಬರಲಿಲ್ಲ; ಬದಲಾಗಿ ಯೂಕ್ಲಿಡೀಯವಲ್ಲದ, ಆದರೆ ಅದರಷ್ಟೇ ಸಮಂಜಸ ವಾದ, ಒಂದು ಹೊಸ ಜ್ಯಾಮಿತಿ ಈ ಪ್ರಯತ್ನಗಳಿಂದ ದೊರೆಯಿತು: ಇದನ್ನು ಲೊಬಚೇವ್ಸ್ಕಿಯ ಹೈಪರ್‌ಬಾಲಿಕ್ ಅಯೂಕ್ಲಿಡೀಯ ಜ್ಯಾಮಿತಿ ಎಂದು ಕರೆಯುತ್ತೇವೆ. ಹೀಗೆಯೇ ಎರಡನೆಯ ಮಾರ್ಗದಲ್ಲಿ ಹೊರಟ ರೀಮಾನ್ (1826–66) ಎಂಬ

ಜರ್ಮನ್ ಗಣಿತಶಾಸ್ತ್ರಜ್ಞ ಮತ್ತೊಂದು ಬಗೆಯ ಅಯೂಕ್ಲಿಡೀಯ ಜ್ಯಾಮಿತಿಯನ್ನು ಪ್ರಚಾರಪಡಿಸಿದ; ಈತ ಯೂಕ್ಲಿಡೀಯ ಅಡಿಪಾಯಗಳಲ್ಲಿ ಎರಡು ಮುಖ್ಯವಾದ ಬದಲಾವಣೆಗಳನ್ನು ಮಾಡಿದ.

1 ರೇಖೆಗಳಿಗೆ ಆದ್ಯಂತವಿಲ್ಲ : ಪ್ರತಿ ಸರಳರೇಖೆಯ ಉದ್ದವೂ ಸಾಂತ.

2 ದತ್ತರೇಖೆಯನ್ನು ಸಂಧಿಸದಂತೆ ಅದರ ಮೇಲೆ ಇಲ್ಲದ ದತ್ತಬಿಂದುವಿನ ಮೂಲಕ ಯಾವ ರೇಖೆಯೂ ಇರುವುದಿಲ್ಲ.

ಈತನ ಪ್ರಯತ್ನದಲ್ಲೂ ಅಸಾಮಂಜಸ್ಯ ತೋರಲಿಲ್ಲ. ಆದರೆ ಬದಲಾಗಿ ಒಂದು ಹೊಸ ಜ್ಯಾಮಿತಿ ಉದ್ಭವಿಸಿತು. ಇದನ್ನು ರೀಮಾನನ ಜ್ಯಾಮಿತಿ ಎಂದು ಹೇಳುತ್ತೇವೆ. ಈಗ ಲೊಬಚೇವ್ಸ್ಕಿ ಮತ್ತು ರೀಮಾನರ ಜ್ಯಾಮಿತಿಗಳಿಗೆ ಹೊಂದುವ ಪ್ರಸಿದ್ಧವಾದ ಆದರ್ಶಗಳನ್ನು ಸಂಕ್ಷೇಪವಾಗಿ ವಿವರಿಸಿ ಇವುಗಳಿಂದ ಜ್ಯಾಮಿತಿಗಳ ಸಾಪೇಕ್ಷ ಸಾಮಂಜಸ್ಯವನ್ನು ಹೇಗೆ ನಿರ್ಧರಿಸಿದ್ದಾರೆಂದು ನೋಡೋಣ.

ಲೊಬಚೇವ್ಸ್ಕಿಯ ಅಯೂಕ್ಲಿಡೀಯ ಜ್ಯಾಮಿತಿಗೆ ಹೆನ್ರಿ ಪೋಂಕಾರೆಯ ವೃತ್ತ ಆದರ್ಶ : Σ ಎಂಬುದು ದತ್ತವೃತ್ತವಾಗಿರಲಿ (ಚಿತ್ರ 2).



ಚಿತ್ರ 2

ಇದಕ್ಕೆ ಮೂಲವೃತ್ತವೆಂದು ಹೆಸರು. ಲೊಬಚೇವ್ಸ್ಕಿಯ ಸಮತಳದ (L – ಸಮತಳದ) ಬಿಂದುಗಳನ್ನು ಈ ವೃತ್ತದ ಒಳಭಾಗದಲ್ಲಿರುವ ಬಿಂದುಗಳಿಂದ ನಿರೂಪಿಸುತ್ತೇವೆ. ಇವನ್ನು L – ಬಿಂದುಗಳೆಂದು ಕರೆಯುತ್ತೇವೆ. ಮೂಲವೃತ್ತವನ್ನು ಲಂಬವಾಗಿ ಸಂಧಿಸಿ ಅದರ ಒಳಗೆ ಸೇರಿರುವ ಸರಳರೇಖೆ ಅಥವಾ ವೃತ್ತಗಳ ಖಂಡಗಳಿಂದ L– ಸಮತಳದ ರೇಖೆಗಳನ್ನು ಸೂಚಿಸುತ್ತೇವೆ. ಇವನ್ನು ಆದರ್ಶದಲ್ಲಿ L - ಸರಳರೇಖೆಗಳೆಂದು ಕರೆಯುತ್ತೇವೆ. A ಮತ್ತು Bಗಳು ಎರಡು L ಬಿಂದುಗಳಾದರೆ ಇವೆರಡರ ನಡುವಿನ L– ಉದ್ದವನ್ನು ಹೀಗೆ ವ್ಯಾಖ್ಯಿಸುತ್ತೇವೆ: A ಮತ್ತು B ಗಳ ಮೂಲಕ ಹಾಯ್ದು Σ ವನ್ನು ಲಂಬವಾಗಿ ಸಂಧಿಸುವಂತೆ ಒಂದೇ ಒಂದು ವೃತ್ತವಿರುತ್ತದೆ. ಇದು Σ ವನ್ನು S ಮತ್ತು Tಗಳಲ್ಲಿ ಸಂಧಿಸಲಿ. ಈಗ A ಮತ್ತು Bಗಳ ನಡುವಿನ L – ಉದ್ದವನ್ನು AB ಎಂದು ನಿರೂಪಿಸೋಣ.

$$\overline{AB} = \log\,(AB\,.\,TS\,)$$

$$= \log\left(\frac{AT}{TB}\cdot\frac{SB}{AS}\right)$$

ಎಂದು ವ್ಯಾಖ್ಯಿಸೋಣ. ಇಲ್ಲಿ AT ಮುಂತಾದವನ್ನು ಆಯಾ ಖಂಡದ ಯೂಕ್ಲಿಡೀಯ ಉದ್ದಗಳೆಂದು ಭಾವಿಸಿದೆ. ಪರಸ್ಪರ ಛೇದಿಸುವ ಎರಡು L– ರೇಖೆಗಳ ನಡುವಿನ ಸಾಧಾರಣ ಕೋನದ ಅಳತೆಯನ್ನೇ L – ಕೋನದ L– ಅಳತೆ ಎಂದು ವ್ಯಾಖ್ಯಿಸುತ್ತೇವೆ. ಎರಡು L – ರೇಖಾಖಂಡಗಳ L– ಉದ್ದಗಳು ಒಂದೇ ಆಗಿದ್ದರೆ ಅವೆರಡು ರೇಖಾಖಂಡಗಳು ಪರಸ್ಪರ ಸರ್ವಸಮವೆಂದು (ಕಾಂಗ್ರುಯೆಂಟ್) ಹೇಳುತ್ತೇವೆ. ಹೀಗೆಯೇ ಒಂದೇ L– ಅಳತೆಯುಳ್ಳ ಎರಡು ಕೋನಗಳು ಪರಸ್ಪರ ಸರ್ವಸಮವೆಂದು ಹೇಳುತ್ತೇವೆ. ಈಗ L– ಸಮತಳದ ಅಯೂಕ್ಲಿಡೀಯ ಜ್ಯಾಮಿತಿಗೆ ಯೂಕ್ಲಿಡೀಯ ಧಾತುಗಳ ಉಪಯೋಗಿಸಿ ಒಂದು ಆದರ್ಶವನ್ನು ರಚಿಸಿದ್ದಾಯಿತು.

ಈ ಸನ್ನಿವೇಶಗಳಲ್ಲಿ ಲೊಬಚೇವ್ಸ್ಕಿಯ ಸಮತಳ ಜ್ಯಾಮಿತಿಯ ಒಂದೊಂದು ಅಂಶಕ್ಕೂ ಹೊಂದಿದಂತೆ ನಮ್ಮ ಆದರ್ಶದಲ್ಲಿ ಅದಕ್ಕೆ ಅನುಸಾರವಾದ ಒಂದು ಅಂಶ ಅನ್ವಯವಾಗಿದೆ. ಈ ಅರ್ಥವಿಶೇಷಗಳಲ್ಲಿ ಲೊಬಚೇವ್ಸ್ಕಿಯ ಜ್ಯಾಮಿತಿಯ ಅಭಿಗೃಹೀತಗಳೆನ್ನೆಲ್ಲ ಈ ಆದರ್ಶದ ವಿವಿಧ ಅಂಶಗಳು ಪಾಲಿಸುತ್ತವೆ ಎಂದು ತೋರಿಸಿಕೊಡಬಹುದು. ಹೀಗಾದ ಮೇಲೆ ಈ ಅಯೂಕ್ಲಿಡೀಯ ಜ್ಯಾಮಿತಿಯ ಒಂದೊಂದು ಪ್ರಮೇಯಕ್ಕೂ ಅನುಸಾರವಾದ ಯೂಕ್ಲಿಡೀಯ ಜ್ಯಾಮಿತಿಯ ಒಂದೊಂದು ಪ್ರಮೇಯ ನಮ್ಮ ಆದರ್ಶದಲ್ಲಿ ದೊರೆಯುತ್ತದೆ. ಆದ್ದರಿಂದ ಯೂಕ್ಲಿಡಿಯ ಜ್ಯಾಮಿತಿಯ ಅಡಿಪಾಯಗಳು ಎಷ್ಟರಮಟ್ಟಿಗೆ ಸಮಂಜಸವಾಗಿರುತ್ತವೆಯೋ ನಿಖರವಾಗಿ ಅಷ್ಟರ ಮಟ್ಟಿಗೆ ಲೊಬಚೇವ್ಸ್ಕಿಯ ಜ್ಯಾಮಿತಿಯ ಅಡಿಪಾಯಗಳೂ ಸಮಂಜಸವಾಗಿ ರುತ್ತವೆ ; ಎಂದರೆ ಪೋಂಕಾರೆಯ ವೃತ್ತ ಆದರ್ಶದ ಸಹಾಯದಿಂದ ಲೊಬಚೇವ್ಸ್ಕಿಯ ಸಮತಲೀಯ ಅಯೂಕ್ಲಿಡೀಯ ಜ್ಯಾಮಿತೀಯ ಅಭಿಗೃಹೀತಗಳ ಸಾಪೇಕ್ಷ ಸಾಮಂಜಸ್ಯವನ್ನು ಸಾಧಿಸಿದಂತಾಯಿತು.

ರೀಮಾನ್‌ನ ಅಯೂಕ್ಲಿಡೀಯ ಜ್ಯಾಮಿತಿಗೆ ಗೋಳ ರೇಖಾಗಣಿತದ ಮೂರ್ತ ಆದರ್ಶ: ರೀಮಾನನ ಸಮತಳವನ್ನು (R–ಸಮತಳವನ್ನು) ದತ್ತಗೋಳದ ಮೇಲ್ಮೈ S ಮೂಲಕ ನಿರೂಪಿಸುತ್ತೇವೆ. R- ಸಮತಳದ ಬಿಂದುಗಳನ್ನು S ಮೇಲಿನ ಬಿಂದುಗಳು ಸೂಚಿಸುತ್ತವೆ. ಗೋಳದ ಕೇಂದ್ರ O ಮೂಲಕ ಹೋಗುವ ಯೂಕ್ಲಿಡೀಯ ಸಮತಳಗಳು ಗೋಳವನ್ನು ಅತ್ಯಂತ ದೊಡ್ಡ ವ್ಯಾಸವುಳ್ಳ ವೃತ್ತಗಳಲ್ಲಿ ಛೇದಿಸುತ್ತವೆ.



ಚಿತ್ರ 3

ಇವುಗಳಿಗೆ ಯೂಕ್ಲಿಡೀಯ ಜ್ಯಾಮಿತಿಯಲ್ಲಿ ಮಹಾವೃತ್ತಗಳು (ಗ್ರೇಟ್ ಸರ್ಕಲ್ಸ್) ಎಂದು ಹೆಸರು.

ಇವುಗಳಿಂದ R–ಸಮತಳದ ರೇಖೆಗಳನ್ನು ನಿರೂಪಿಸುತ್ತೇವೆ. P ಮತ್ತು Qಗಳು ಎರಡು R–ಬಿಂದುಗಳನ್ನು ಗೋಳದ ಮೇಲೆ ಸೂಚಿಸಿದರೆ P,Qಗಳ ಮೂಲಕ ಹೋಗುವ ಗೋಳದ ಮೇಲಿನ ಮಹಾವೃತ್ತದ ಲಘುಖಂಡದ ಯೂಕ್ಲಿಡೀಯ ಉದ್ದವನ್ನು P ಮತ್ತು Qಗಳ ನಡುವಿನ R-ದೂರವೆಂದು ವ್ಯಾಖ್ಯಿಸುತ್ತೇವೆ. ಹೀಗೆ ತ್ರಿಕೋನ ಮುಂತಾದ ಆಕೃತಿಗಳಿಗೂ ಪ್ರತಿನಿಧಿಗಳು ಈ ಆದರ್ಶದಲ್ಲಿ ದೊರೆಯುತ್ತವೆ. ಈ ಪ್ರಕಾರ R ಅಯೂಕ್ಲಿಡೀಯ ಜ್ಯಾಮಿತಿಗೆ ಯೂಕ್ಲಿಡೀಯ ಜ್ಯಾಮಿತಿಯ ಒಂದು ಮೂರ್ತಾದರ್ಶ ದೊರೆಯುತ್ತದೆ. ಈ ಆದರ್ಶದಲ್ಲಿ R-ಜ್ಯಾಮಿತಿಯ ಸಮತಳ ಕೃತಿಗಳಿಗೆ ಸಂಬಂಧಿಸಿದ ಎಲ್ಲ ಅಭಿಗೃಹೀತಗಳೂ ಪಾಲಿತವಾಗುತ್ತವೆ. ಆದ್ದರಿಂದ R- ಸಮತಲೀಯ ಜ್ಯಾಮಿತಿ ಯೂಕ್ಲಿಡೀಯ ಜ್ಯಾಮಿತಿಯಷ್ಟೇ ಸಮಂಜಸವಾಗಿದೆ; ಅರ್ಥಾತ್ ರೀಮಾನನ ಸಮತಲೀಯ ಅಯೂಕ್ಲಿಡೀಯ ಜ್ಯಾಮಿತಿಯ ಅಭಿಗೃಹೀತಗಳ ಸಾಪೇಕ್ಷ ಸಾಮಂಜಸ್ಯ ವನ್ನು ಈ ಆದರ್ಶದ ನೆರವಿನಿಂದ ಸಾಧಿಸಲಾಯಿತು. (ಡಿ.ವಿ.ಆರ್.)

**ಗಣಿತ ಕೋಷ್ಟಕಗಳು :** ಗಣಿತ ನಿಯಮಿತ ಪರಿಕರ್ಮಗಳಿಂದ ದೊರೆಯುವ ಬೆಲೆಗಳನ್ನು ಒದಗಿಸುವ ಶಿಷ್ಟಯಾದಿಗಳು (ಮ್ಯಾತ್‌ಮ್ಯಾಟಿಕಲ್ ಟೇಬಲ್ಸ್). ಉದಾಹರಣೆಗಾಗಿ ಜ್ಯಾ (ಸೈನ್) ಕೋಷ್ಟಕಗಳು, ಲಘುಗಣಕ ಕೋಷ್ಟಕಗಳು ಇತ್ಯಾದಿ. ಚರಸಂಖ್ಯೆಯನ್ನೂ ಅದರ ಉತ್ಪನ್ನವನ್ನೂ ಕೋಷ್ಟಕದಲ್ಲಿ ಅಡ್ಡವಾಗಿಯೂ ನೀಟವಾಗಿಯೂ ಜೋಡಿಸಲಾಗಿರುವುದು. ಕೋಷ್ಟಕಗಳ ತಯಾರಿಕೆಗೆ ಅಧಿಕವಾದ ಕಾಲ ಹಾಗೂ ಶ್ರಮ ವೆಚ್ಚವಾಗುವುವಾದರೂ ಒಮ್ಮೆ ಅವನ್ನು ರಚಿಸಿದ ಬಳಿಕ ಅವು ಗಣಿತದ ಅನೇಕ ಶಾಖೆಗಳಲ್ಲೂ ಇತರ ವಿಜ್ಞಾನಶಾಸ್ತ್ರಗಳಲ್ಲಿಯೂ ಬಹುವಾಗಿ ಕಾಲ ಮತ್ತು ಶ್ರಮಗಳನ್ನು ಇಳಿಸಿ ಸದಾ ಉಪಯೋಗಕ್ಕೆ ಬರುವುವು. ವಿಜ್ಞಾನ ಪ್ರಪಂಚದ ಇಂದಿನ ಮುನ್ನಡೆಯಲ್ಲಿ ಕೋಷ್ಟಕಗಳಿಗೆ ಒಂದು ಮುಖ್ಯ ಸ್ಥಾನ ಉಂಟು. ಕೋಷ್ಟಕಗಳಲ್ಲಿ ಸಾಮಾನ್ಯವಾಗಿರುವ ಕೆಲವನ್ನು ಇಲ್ಲಿ ನಿರೂಪಿಸಿದೆ. ನೇಪಿಯರ್ ಮತ್ತು ಬ್ರಿಗ್ಸ್ ತಯಾರಿಸಿದ ಲಘುಗಣಕ (ಲಾಗರಿತಂಸ್) ಕೋಷ್ಟಕಗಳು ಸಂಖ್ಯೆಗಳ ಗುಣಾಕಾರ, ಭಾಗಾಕಾರಗಳಿಗೂ ಅಲ್ಲದೇ ಮೂಲಗಳನ್ನು ಪಡೆಯಲು ಕೂಡ ಸಹಾಯಕವಾಗುತ್ತವೆ. ಲಘುಗಣಕಗಳ ಗುಣಗಳ ಸಹಾಯದಿಂದ ಈ ಕ್ರಿಯೆಗಳು ಸಣ್ಣ ಸಂಖ್ಯೆಗಳ ಸಂಕಲನ, ವ್ಯವಕಲನ ಮತ್ತು ಭಾಗಾಕಾರಕ್ಕೆ ಪರಿವರ್ತಿತವಾಗುತ್ತವೆ. ತ್ರಿಕೋಣಮಿತಿಯಲ್ಲಿ ಬರುವ ಸೈನ್, ಕೊಸೈನ್, ಟ್ಯಾಂಜೆಂಟ್, ಲಾಗರಿತ್ಮಿಕ್ ಸೈನ್ ಇತ್ಯಾದಿ ಕೋಷ್ಟಕಗಳು ಭೌತಶಾಸ್ತ್ರ, ಶಿಲ್ಪಶಾಸ್ತ್ರ ಮುಂತಾದ ಅನೇಕ ಶಾಸ್ತ್ರಗಳಲ್ಲಿ ಅವಶ್ಯಕವಾಗಿವೆ. ಸಂಖ್ಯಾಕಲನಶಾಸ್ತ್ರದಲ್ಲಿ ಉಪಯೋಗಿಸುವ ಪ್ರಸಾಮಾನ್ಯ ರೇಖೆಯ (ನಾರ್ಮಲ್ ಕರ್ವ್) ಸಲೆ ಮತ್ತು ಕೋಟಿಗಳನ್ನು (ಆರ್ಡಿನೇಟ್ಸ್) ಸೂಚಿಸುವ ಕೋಷ್ಟಕಗಳು, ಸ್ಟೂಡೆಂಟರ t–ಕೋಷ್ಟಕಗಳು, $x^2$– ಕೋಷ್ಟಕಗಳು ಬಹು ಮುಖ್ಯವಾದುವು. ಇವೆಲ್ಲವೂ ಬೀಟ ಮತ್ತು ಗ್ಯಾಮ ಉತ್ಪನ್ನಗಳಿಗೆ ಸಂಬಂಧಪಟ್ಟಿರುವುವು. ಈ ಉತ್ಪನ್ನಗಳ ಕೋಷ್ಟಕಗಳೂ ಬೆಸೆಲ್ ಉತ್ಪನ್ನಗಳು, ಲಝಾಂಡರ್ ಉತ್ಪನ್ನಗಳು ಮುಂತಾದ ಅನೇಕಾನೇಕ ಕೋಷ್ಟಕಗಳೂ ಗಣಿತದ ಹಾಗೂ ಇತರ ಶಾಸ್ತ್ರಗಳ ಅನೇಕ ಶಾಖೆಗಳಲ್ಲಿ ಅಗತ್ಯವಾಗಿ ಕಂಡುಬಂದಿವೆ.

ಇತಿಹಾಸದ ಅತಿ ಪ್ರಾಚೀನ ದಾಖಲೆಗಳಲ್ಲೂ ಗಣಿತಕೋಷ್ಟಕಗಳು ಕಂಡುಬಂದಿವೆ. ಪ್ರ.ಶ.ಪೂ 2000ದಷ್ಟು ವರ್ಷಗಳ ಹಿಂದಿನ ಬ್ಯಾಬಿಲೋನಿಯನ್ನರ ದಾಖಲೆಗಳಲ್ಲಿ ಗುಣಾಕಾರದ ಹಾಗೂ ವ್ಯುತ್ಕ್ರಮದ(ರೆಸಿಪ್ರೋಕಲ್) ಬೆಲೆಗಳನ್ನು ನೀಡುವ ಕೋಷ್ಟಕಗಳನ್ನು

ಕಾಣಲಾಗಿದೆ. ಆಧುನಿಕ ಅರ್ಥದ ಮೊದಲಿನ ಕೋಷ್ಟಕವನ್ನು ಕ್ಲಾಡಿಯಸ್ ಟಾಲೆಮಿ (ಪ್ರ.ಶ.ಸು. 127–151ರಲ್ಲಿ ಇದ್ದನೆಂದು ಊಹೆ) ತಯಾರಿಸಿದ ಆಲ್ಮಾಜೆಸ್ಟ್ (**ನೋಡಿ**) ಎಂಬ ಗ್ರಂಥದಲ್ಲಿ ನೋಡಬಹುದು. ವೃತ್ತದ ಜ್ಯಾಗಳ ಬೆಲೆಗಳನ್ನು, ಅರ್ಧ ಡಿಗ್ರಿ ಅಂತರದಲ್ಲಿ, ಆರು ಸ್ಥಳಗಳ ಸನ್ನಿಹಿತತೆವರೆಗೆ ಈ ಗ್ರಂಥದ ಕೋಷ್ಟಕದಲ್ಲಿ ಕೊಡಲಾಗಿದೆ. ಟಾಲೆಮಿ ಉಪಯೋಗಿಸಿದ್ದು ಸಂಖ್ಯೆಗಳ ಷಷ್ಟಕ ವ್ಯವಸ್ಥೆಯನ್ನು (ಸೆಕ್ಸಜೆಸಿಮಲ್ ಸಿಸ್ಟಂ). ಭಾರತೀಯ ಗಣಿತದಲ್ಲಿಯೂ ಖಗೋಳ ವಿಜ್ಞಾನದಲ್ಲಿಯೂ ವ್ಯಾಪಕವಾಗಿ ತ್ರಿಕೋಣಮಿತೀಯ ಉತ್ಪನ್ನಗಳಿಗೆ ಸಂಬಂಧಿಸಿದ ಕೋಷ್ಟಕಗಳನ್ನು ಬಳಸುತ್ತಿದ್ದರು. ಇಂಥವು ಪಂಚಸಿದ್ಧಾಂತಿಕ (ಪ್ರ.ಶ. ಸು 505) ಹಾಗೂ ಆರ್ಯಭಟೀಯ (ಪ್ರ.ಶ. ಸು 500) ಗ್ರಂಥಗಳಲ್ಲಿವೆ. ಈ ಬೆಲೆಗಳು ಆಧುನಿಕ ಗಣಿತದ ನಿಷ್ಕೃಷ್ಟ ಗಣನೆಗಳಿಂದ ದೊರೆತ ಬೆಲೆಗಳೊಂದಿಗೆ ಅವೆಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತವೆಂಬುದಕ್ಕೆ ಕೆಲವು ಉದಾಹರಣೆಗಳನ್ನು ಇಲ್ಲಿ ಬರೆದಿದೆ.

| ಕೋನಗಳು θ | ಪಂಚದರ್ಶಿಕ ರೀತ್ಯಾ ಗಣಿಸಿದ sinθ ದ ಬೆಲೆ | ಆರ್ಯಭಟೀಯ ರೀತ್ಯಾ ಗಣಿಸಿದ sin θ ದ ಬೆಲೆ | ಆಧುನಿಕ ರೀತ್ಯಾ sin θ ದ ಬೆಲೆ |
|---|---|---|---|
| $3^0$ 45’ | 0.06542 | 0.06545 | 0.0654 |
| $11^0$ 15’ | 0.1951 | 0.1952 | 0.1951 |
| $15^0$ | 0.2589 | 0.2589 | 0.2588 |
| $22^0$ 30’ | 0.3827 | 0.3824 | 0.3827 |
| $30^0$ | 0.5000 | 0.5000 | 0.5000 |
| $45^0$ | 0.7071 | 0.7071 | 0.7071 |
| $52^0$ 30’ | 0.7934 | 0.7936 | 0.7934 |
| $86^0$ 15’ | 0.9979 | 0.9979 | 0.9979 |
| $90^0$ | 1.0000 | 1.0000 | 1.0000 |

ಹೀಗೆ ಗಣಿತ ಕೋಷ್ಟಗಳಿಗೆ ಅತಿ ಪ್ರಾಚೀನವಾದ ಇತಿಹಾಸವಿದ್ದರೂ ಇವುಗಳ ವ್ಯಾಪಕ ನಿರ್ಮಾಣ ಹಾಗೂ ಕ್ರೋಡೀಕರಣ ವ್ಯವಸ್ಥಿತವಾಗಿ ಆರಂಭವಾದದ್ದು 15ನೆಯ ಶತಮಾನದಲ್ಲಿ. ನೈಸರ್ಗಿಕ ತ್ರಿಕೋಣಮಿತೀಯ ಉತ್ಪನ್ನಗಳ ಕೋಷ್ಟಕಗಳನ್ನು ರಚಿಸಲು ಪ್ರಾರಂಭಿಸಿದ ಜಾರ್ಜ್ ಪೂರ್ಬಾಕ್ (1423–61), ಸೈನ್ ಉತ್ಪನ್ನದಲ್ಲಿ ಕೋನದ ಒಂದೊಂದು ಮಿನಿಟ್ ಅಂತರಕ್ಕೂ ಬೆಲೆಯನ್ನು ನಿಷ್ಕೃಷ್ಟವಾಗಿ ಗಣಿಸಿದ ಈತನ ಶಿಷ್ಯ ಯೋಹಾನ್ ಮ್ಯುಲ್ಲರ್(1436–76), ಸೈನ್ ಉತ್ಪನ್ನದ ಬೆಲೆಯನ್ನು ದಶಮಾಂಶದ ಐದು ಸ್ಥಾನಗಳವರೆಗೂ ಗಣಿಸಿದ ನಿಕೋಲಸ್ ಕೊಪರ್ನಿಕಸ್ (1473–1543) ಇವರ ಹೆಸರುಗಳು ಉಲ್ಲೇಖಾರ್ಹ. ಟ್ಯಾಂಜೆಂಟುಗಳ ಬೆಲೆಗಳನ್ನು ಕೊಡುವ ಮೊದಲ ಕೋಷ್ಟಕ ಪ್ರಕಟವಾದದ್ದು 1553ರಲ್ಲಿ. ಅದೇ ಸುಮಾರಿಗೆ ಸೀಕೆಂಟುಗಳ ಬೆಲೆಗಳನ್ನು ಕೊಡುವ ಕೋಷ್ಟಕವೂ ಪ್ರಕಟವಾಯಿತು. ಕೋಷ್ಟಕನಿರ್ಮಾಣದಲ್ಲಿ ಹಿಮಾಲಯಸದೃಶ ಕಾರ್ಯವನ್ನು ಆರಂಭಿಸಿ ಅದರ ಬಹುಪಾಲನ್ನು ಪೂರೈಸಿದವರು ರ್ಹೆಟಿಕಸ್, ಅತ್ತೋ ಮತ್ತು ಪಿಟಿಸ್ಕಸ್. ಕೊಪರ್ನಿಕಸ್‌ನ ಶಿಷ್ಯ ಜಾರ್ಜ್ ಜೋಕಿಮನನ್ನು (1514–76) ರ್ಹೆಟಿಕಸ್ ಎಂದು ಕರೆಯುತ್ತಿದ್ದರು. ತ್ರಿಕೋಣಮಿತೀಯ ಉತ್ಪನ್ನಗಳಿಗೆ ಕಂಸದ ಪ್ರತಿ 10 ಸೆಕೆಂಡುಗಳ ಅಂತರಕ್ಕೆ 15 ದಶಮಾಂಶ ಸ್ಥಳಗಳಿಗೆ ಸರಿಯಾಗಿ ಬೆಲೆಗಳನ್ನು ಗಣಿಸುವ ಮಹಾಕಾರ್ಯವನ್ನು ಈತ ಕೈಗೊಂಡ. ಇಷ್ಟು ಮಾತ್ರವಲ್ಲ. ಪಾದದ (ಕ್ವಾಡ್ರಂಟ್) ಮೊದಲ ಮತ್ತು ಕೊನೆಯ ಡಿಗ್ರಿಗಳ ಒಂದೊಂದು ಸೆಕೆಂಡ್ ಅಂತರಕ್ಕೂ ಈ ಬೆಲೆಗಳನ್ನು ಗಣಿಸುವುದು ಕೂಡ ಅವನ ಉದ್ದೇಶವಾಗಿತ್ತು. ಈತ ಸೈನ್ ಕೋಷ್ಟಕವನ್ನು ಪೂರೈಸಿ ಟ್ಯಾಂಜೆಂಟ್ ಹಾಗೂ ಸೀಕೆಂಟ್ ಕೋಷ್ಟಕ ನಿರ್ಮಾಣಕ್ಕೆ ಕೈ ಹಾಕಿದ. ಆದರೆ ಇದು ಮುಗಿವ ಮೊದಲೇ ತೀರಿಕೊಂಡ. ಹಲವಾರು ಗಣನಕಾರರನ್ನು ಹನ್ನೆರಡು ವರ್ಷಗಳ ಕಾಲ ರ್ಹೆಟಿಕಸ್ ನೇಮಿಸಿಕೊಂಡಿದ್ದನಂತೆ. (ಇಂದಾದರೆ ಇಂಥ ಮತ್ತು ಇನ್ನೂ ಬಲು ಜಟಿಲ ಗಣನೆಗಳನ್ನು ನಿಷ್ಕೃಷ್ಟವಾಗಿಯೂ ಚುರುಕಾಗಿಯೂ ಗಣಕಯಂತ್ರಗಳು ಮಾಡಬಲ್ಲವು.) ರ್ಹೆಟಿಕಸ್‌ನ ಶಿಷ್ಯ ಮತ್ತು ಸಹೋದ್ಯೋಗಿ ವ್ಯಾಲೆಂಟೀನ್ ಆತ್ತೋ (ಸು. 1550–1605) ಈ ಕಾರ್ಯವನ್ನು ಪೂರ್ತಿಗೊಳಿಸಿದ.

ಜಾನ್ ನೇಪಿಯರ್ (1550–1617) ಲಘುಗಣಕಗಳ (ಲಾಗರಿತಂಸ್) ಕೋಷ್ಟಕವನ್ನು ಸ್ಕಾಟ್ಲೆಂಡಿನಲ್ಲಿ ಪ್ರಕಟಿಸಿದ (1614). ಇಲ್ಲಿ ಬಳಸಿದ ಆಧಾರ ಸಂಖ್ಯೆ *e*. ಜೂಸ್ಟ್ ಬೂರ್ಗಿ (1552 – 1632) ಪ್ರತಿಲಘುಗಣಕಗಳ (ಆ್ಯಂಟಿ ಲಾಗರಿತಂಸ್) ಒಂದು ಸಂಕ್ಷೇಪ ಕೋಷ್ಟಕವನ್ನು ಪ್ರೇಗಿನಲ್ಲಿ ಪ್ರಕಟಿಸಿದ (1620) ಈ ಕೋಷ್ಟಕಗಳಿಂದ ಗಣಿತೀಯ ಗಣನೆಗೆ ಲಭಿಸಿ ಕುಮ್ಮಕ್ಕು ಅಸಾಧಾರಣ ಮಟ್ಟದ್ದು. ಇವನು ಆಧಾರಸಂಖ್ಯೆಯಾಗಿ 10 ನ್ನು ಉಪಯೋಗಿಸಿಕೊಂಡ. ಲಘುಗಣಕಗಳ ಕೋಷ್ಟಕವನ್ನು ರಚಿಸಿದವ ಹೆನ್ರಿ ಬ್ರಿಗ್ಸ್ (1561–1631). 1624ರಲ್ಲಿ ಈ ಕೋಷ್ಟಕ ಪ್ರಕಟವಾಯಿತು.

ವಿಜ್ಞಾನ ಬೆಳೆದಂತೆ, ನವ ಉತ್ಪನ್ನಗಳು ಸೃಷ್ಟಿಯಾದಂತೆ, ನೂತನ ದತ್ತಾಂಶಗಳ ಸಂಗ್ರಹಣೆ ಮುಂದುವರಿದಂತೆ ಕೋಷ್ಟಕಗಳ ಸಂಖ್ಯೆ ತೀವ್ರವಾಗಿ ಏರತೊಡಗಿತು. ಒಂದು ಶತಮಾನದಿಂದ ಮುಂದಿನ ಶತಮಾನಕ್ಕೆ ಈ ಏರಿಕೆ ಕಡಿದಾಗಿದೆ. ಪ್ರಸಕ್ತ ಶತಮಾನದಲ್ಲಿ ನಿರ್ಮಿಸಲ್ಪಟ್ಟಿರುವ ಕೋಷ್ಟಕಗಳ ಸಂಖ್ಯೆ ಈ ಹಿಂದೆ ರಚಿತವಾಗಿರುವ ಕೋಷ್ಟಕಗಳ ಸಮಗ್ರ ಸಂಖ್ಯೆಗಿಂತ ಹಲವಾರು ಪಟ್ಟು ಹೆಚ್ಚು. ವಿಜ್ಞಾನದಲ್ಲಿ ಹೇಗೋ ಹಾಗೆ ಕೋಷ್ಟಕಗಳಲ್ಲೂ ಈಗ ವಿಶಿಷ್ಟೀಕರಣ ತಲೆದೋರಿದೆ. ಇಂಥ ಸನ್ನಿವೇಶದಲ್ಲಿ ಕೋಷ್ಟಕಗಳ ಗ್ರಂಥಸೂಚಿ ತೀರ ಆವಶ್ಯಕ. ಅಮೆರಿಕ ಸಂಯುಕ್ತ ಸಂಸ್ಥಾನಗಳ ನ್ಯಾಷನಲ್ ರಿಸರ್ಚ್ ಕೌನ್ಸಿಲ್ ಒಂದು ತ್ರೈಮಾಸಿಕವನ್ನು (ಮ್ಯಾಥಿಮ್ಯಾಟಿಕಲ್ ಟೇಬಲ್ಸ್ ಅಂಡ್ ಅದರ್ ಏಡ್ಸ್ ಟು ಕಾಂಪ್ಯುಟೇಷನ್) ಪ್ರಕಟಿಸುತ್ತಿದೆ. ಇದಲ್ಲದೆ ಆಗಾಗ ಪ್ರಕಟವಾಗುವ ವಿಶಿಷ್ಟವಾದ ಗ್ರಂಥಗಳಲ್ಲೂ ಕೋಷ್ಟಕಗಳನ್ನು ಕುರಿತ ವಿವರಗಳು ದೊರೆಯುತ್ತವೆ.

(ಆರ್.ಆರ್.ಯು.)

**ಗಣಿತ ತರ್ಕಶಾಸ್ತ್ರ :** ವಿವೇಚನ ಕ್ರಿಯೆಯ ಸಾರ್ವತ್ರಿಕ ಸೂತ್ರಗಳನ್ನು ಭಾವಲೇಖಗಳ (ಐಡಿಯೋಗ್ರಾಫ್) ಹಾಗೂ ಪ್ರತೀಕಗಳ (ಸಿಂಬಲ್ಸ್) ನೆರವಿನಿಂದ ಅನ್ವೇಷಿಸುವ ವಿಜ್ಞಾನ ವಿಭಾಗ; ಪ್ರತೀಕಾತ್ಮಕ ತರ್ಕಶಾಸ್ತ್ರ ಎಂದು ಸಹ ಹೆಸರುಂಟು (ಮ್ಯಾತಿಮ್ಯಾಟಿಕಲ್ ಲಾಜಿಕ್; ಸಿಂಬಾಲಿಕ್ ಲಾಜಿಕ್). ಈ ಶಾಸ್ತ್ರದಲ್ಲಿನ ಪ್ರಧಾನ ವಿಷಯ ತರ್ಕಶಾಸ್ತ್ರ. ಆದರೆ ಸಾಂಪ್ರದಾಯಿಕ ತರ್ಕಶಾಸ್ತ್ರದಲ್ಲಿ ಬಳಸುವ ಪದಗಳನ್ನು (ಪದಗಳನ್ನೂ ಪದಸಮೂಹಗಳಾದ ವಾಕ್ಯಗಳನ್ನೂ ಉಚ್ಚರಿಸಿ ಇಲ್ಲವೇ ಬರೆದು ಭಾವನೆಗಳನ್ನು ವ್ಯಕ್ತಪಡಿಸುವ ಕ್ರಮ; ಉದಾಹರಣೆಗೆ – ನಾಲ್ಕನ್ನು ಮೂರರಿಂದ ಗುಣಿಸಿದರೆ ಆಗ ಹನ್ನೆರಡು ಗುಣಲಬ್ಧವಾಗಿ ದೊರೆಯುತ್ತದೆ.) ಪ್ರತೀಕಾತ್ಮಕ ತರ್ಕಶಾಸ್ತ್ರದಲ್ಲಿ ಬಳಸುವುದಿಲ್ಲ. ಇಲ್ಲಿ ಮಾತಾಡಬೇಕಾದ ವಿಷಯವನ್ನು ನೇರವಾಗಿ ಪ್ರತೀಕೀಕರಿಸುವ ಭಾವಲೇಖಗಳನ್ನು ಬಳಸಲಾಗುವುದು. ಉದಾಹರಣೆಗೆ, $\wedge$, $\vee$, $\rightarrow$, $\sim$ ಮುಂತಾದ ಭಾವಲೇಖಗಳು; ಮತ್ತು *p, q, r, s* ಮುಂತಾದ ಉಕ್ತಿ ನಿರೂಪಕ ಪ್ರತೀಕಗಳು. ಇವುಗಳ ಉಪಯೋಗವನ್ನು ತಿಳಿಯುವ ಮೊದಲು ಹೇಳಿಕೆ ಮತ್ತು ಉಕ್ತಿ ಎನ್ನುವ ಎರಡು ಸ್ಪಷ್ಟ ವರ್ಗೀಕರಣವನ್ನು ಕುರಿತು ಒಂದು ಮಾತು ಹೇಳಬೇಕು. ಯಾವುದೇ ಭಾವನೆ, ಅಭಿಪ್ರಾಯ ಮುಂತಾದವನ್ನು ನಿರೂಪಿಸುವ ವಾಕ್ಯ ಇಲ್ಲವೇ ಉದ್ಗಾರ ಹೇಳಿಕೆ; ಸುವ್ಯಾಖ್ಯಿತ ಪರಿಸರದಲ್ಲಿ ನಿಜ ಇಲ್ಲವೇ ಸುಳ್ಳು ಆಗಿರುವ ಹೇಳಿಕೆ ಮಾತ್ರ ಉಕ್ತಿ.

1. ತುಂಬ ಸಂತೋಷ
2. ಸಿದ್ಧಾರ್ಥ ಬುದ್ಧನಾಗುವ ರಾತ್ರಿ
3. ಸೋಮವಾರದ ಮರುದಿನ ಮಂಗಳವಾರ
4. ಮೂರಕ್ಕೆ ನಾಲ್ಕನ್ನು ಕೂಡಿಸಿದರೆ ಫಲ ಒಂಬತ್ತು
5. ಮೈಸೂರು ಭಾರತದಲ್ಲಿದೆ

ಮೇಲಿನ ಐದು ಹೇಳಿಕೆಗಳಲ್ಲಿ (3), (4), (5) ಮಾತ್ರ ಉಕ್ತಿಗಳು. ಇವುಗಳ ಪೈಕಿ (4)ನೆಯದು (ದಶಮಾನದ ಪರಿಸರದಲ್ಲಿ) ಸುಳ್ಳು ಎಂಬುದನ್ನು ಗಮನಿಸಬೇಕು. ಇಂಥ ಉಕ್ತಿಗಳನ್ನು ಆಡುಮಾತಿನಲ್ಲಿ ನಿರೂಪಿಸುವುದರಿಂದ ಎರಡು ವಿಧದ ತೊಂದರೆಗಳಿವೆ: ಒಂದು ಉಕ್ತಿಯಲ್ಲಿ ಅಂತರ್ಗತವಾಗಿರುವ ಅಮೂರ್ತ ಭಾವದ ಕಡೆಗೆ ಲಕ್ಷ್ಯ ಸಾಕಷ್ಟು ಹರಿಯುವುದಿಲ್ಲ: ಹೀಗಾಗಿ ಗಣಿತದ ವಿಕಾಸ ಆಗಲಾರದು. ಎರಡು, ನಿರೂಪಣೆಯಲ್ಲಿ ಸಂಕ್ಷಿಪ್ತತೆ ಲುಪ್ತವಾಗಿ ಹೋಗುತ್ತದೆ. ಆದ್ದರಿಂದ ಉಕ್ತಿಗಳು ಪ್ರತೀಕಗಳ ನೆರವಿನಿಂದ ಸೂಚಿಸುವುದು ವಾಡಿಕೆ. ಹೀಗೆ ಗಣಿತ ತರ್ಕಶಾಸ್ತ್ರದಲ್ಲಿ *p, q, r, s* ಮುಂತಾದ ಪ್ರತೀಕಗಳು ಉಕ್ತಿಗಳನ್ನು ಪ್ರತಿನಿಧಿಸುತ್ತವೆ. ಇದರ ಪ್ರಕಾರ (3)ನ್ನು *p* ಯೂ (4)ನ್ನು *q* ವೂ (5)ನ್ನು *r* ಸೂಚಿಸಬಹುದು. ಈಗ ಈ ಕೆಳಗಿನ ಹೊಸ ಉದಾಹರಣೆಗಳನ್ನು ಪರಿಶೀಲಿಸೋಣ.

*p* : ನಾಲ್ಕು ಐದಕ್ಕಿಂತ ಚಿಕ್ಕ ಸಂಖ್ಯೆ

*q* : ಐದಕ್ಕೆ ಆರನ್ನು ಕೂಡಿಸಿದರೆ ಫಲ ಹನ್ನೆರಡು

*r* : ಒಂದು ವಾರದಲ್ಲಿ ಏಳು ದಿವಸಗಳಿವೆ

*s* : ವಾಲ್ಮೀಕಿಯನ್ನು ಆದಿಕವಿ ಎಂದು ಕರೆಯುತ್ತಾರೆ

ಇಲ್ಲಿ p ನಿಜ, q ಸುಳ್ಳು, r ನಿಜ, s ನಿಜ. ಒಂದು ಉಕ್ತಿಯ ಸತ್ಯಾಸತ್ಯತೆಗೆ ಅದರ ನಿಜಮೌಲ್ಯ (ಟ್ರೂತ್ ವ್ಯಾಲ್ಯೂ) ಎಂದು ಹೆಸರು. ನಿಜಮೌಲ್ಯ ನಿಜವಾದಾಗ

ಅದನ್ನು 1 (ಒಂದು) ಪ್ರತೀಕದಿಂದಲೂ, ಸುಳ್ಳಾದಾಗ ಅದನ್ನು 0 (ಸೊನ್ನೆ) ಪ್ರತೀಕದಿಂದಲೂ ಸೂಚಿಸುತ್ತೇವೆ. ಆದ್ದರಿಂದ p ಯ ನಿಜಮೌಲ್ಯ 1, q ನ ನಿಜಮೌಲ್ಯ 0, r ನ ನಿಜ ಮೌಲ್ಯ 1 ಮತ್ತು s ನ ನಿಜಮೌಲ್ಯ 1.

ಗಣಿತ ತರ್ಕಶಾಸ್ತ್ರದಲ್ಲಿ ಬಳಸುವ ಭಾವಲೇಖಗಳು ಮತ್ತು ಪ್ರತೀಕಗಳು ಹೊಸ ಒಂದು ಲೋಕವನ್ನೇ ಸೃಷ್ಟಿಸುತ್ತವೆ. ಅಲ್ಲಿನ ವಿವಿಧ ಗಣಿತ ಪರಿಕರ್ಮಗಳು ಹಾಗೂ ಅವುಗಳಿಂದ ಲಭಿಸುವ ಅನುಮಾನಗಳು (ಇನ್ಫರೆನ್ಸ್) ಮತ್ತು ತೀರ್ಮಾನಗಳು (ಕನ್‌ಕ್ಲೂಷನ್ಸ್) ಈ ಶಾಸ್ತ್ರಕ್ಕೆ ಹೊಸ ಆಯಾಮಗಳನ್ನು ಒದಗಿಸಿವೆ. ಗಣಿತ ತರ್ಕಶಾಸ್ತ್ರದ ಸಾರಭೂತವಾದ ಲಕ್ಷಣಗಳಲ್ಲಿ ಒಂದು ಎಂದರೆ ಅದರ ಸಾರ್ವತ್ರಿಕತೆ (ಜನರ್‍ಯಾಲಿಟಿ). ಈ ಶಾಸ್ತ್ರದ ತತ್ತ್ವಗಳು ಯಾವುದೇ ಅರ್ಥದಲ್ಲೂ ಕೇವಲ ಸಂಖ್ಯೆಗಳೊಡನೆ ಹಾಗೂ ರಾಶಿಯೊಡನೆ (ಕ್ವಾಂಟಿಟಿ) ವ್ಯವಹರಿಸುವ ಪರಿಮೇಯ ಪ್ರಕ್ರಮಕ್ಕೆ (ರ್‍ಯಾಷನಲ್ ಪ್ರೊಸೀಜರ್) ಮಾತ್ರ ಸೀಮಿತವಾಗಿಲ್ಲ. ಹೀಗೆ ಪ್ರತೀಕಾತ್ಮಕ ತರ್ಕಶಾಸ್ತ್ರವನ್ನು ನಿರ್ದಿಷ್ಟಗೊಳಿಸುವ ಗುರುತು ಅದರ ಕ್ರಮೀಕೃತ ಯಂತ್ರಾವಳಿಯಾದರೂ (ಫಾರ್ಮಲ್ ಮಷಿನರಿ) ಈ ಪ್ರತೀಕಗಳೂ ಪ್ರತೀಕಾತ್ಮಕ ಪ್ರಕ್ರಮಗಳೂ ವಾಸ್ತವವಾದ ಹಾಗೂ ಪ್ರಬಲವಾದ ಸೌಕರ್ಯಗಳನ್ನು ಒದಗಿಸುತ್ತವೆ. ಸಂಜ್ಞೀಕರಣದಲ್ಲಿ (ನೊಟೇಷನ್) ಸಾಧಿಸಲಾದ ಸುಧಾರಣೆಗಳಿಂದ ಗಣಿತಶಾಸ್ತ್ರದ ಮುನ್ನಡೆಯ ಮೇಲೆ ಮಹತ್ತರವಾದ ಪರಿಣಾಮವಾಗಿದೆ. ಶೂನ್ಯವನ್ನು ಪ್ರತಿನಿಧಿಸುವ ಒಂಟಿ ಪ್ರತೀಕ 0 ಯಿಂದ ಅಂದಿನ ಗಣಿತದ ಮೇಲೆ ಆದ ಪ್ರಭಾವದಷ್ಟೇ ಪರಿಣಾಮಕಾರಿಯಾದದ್ದು ಪ್ರತೀಕಾತ್ಮಕ ತರ್ಕಶಾಸ್ತ್ರದ ಪ್ರಭಾವ ಸಾಂಪ್ರದಾಯಿಕ ಗಣಿತದ ಮೇಲೆ. ಇದರಿಂದ ದೊರೆತ ಹೊಸ ಆಯುಧಗಳ ನೆರವಿನಿಂದ ಹೊಸ ಕ್ಷೇತ್ರಗಳನ್ನು ಅನ್ವೇಷಿಸಿ ನೂತನ ಫಲಿತಾಂಶಗಳನ್ನು ಪಡೆಯುವುದು ಸಾಧ್ಯವಾಗಿದೆ. ಗಣಸಿದ್ಧಾಂತ, ಗ್ರೂಪ್ ಸಿದ್ಧಾಂತ, ಸಂಖ್ಯಾಸಿದ್ಧಾಂತ, ವಿಶ್ಲೇಷಣಶಾಸ್ತ್ರ, ಟಾಪಾಲಜಿ ಇಲ್ಲೆಲ್ಲ ಗಣಿತತರ್ಕಶಾಸ್ತ್ರದ ವಿಧಾನಗಳು ಹಾಸುಹೊಕ್ಕಾಗಿ ಬೆರೆತು ಹೋಗಿವೆ.

ಗಣಿತಶಾಸ್ತ್ರದ ಇನ್ನಿತರ ವಿಭಾಗಗಳನ್ನು ನಿಗಮನ ಅಥವಾ ಸಿದ್ಧಾಂತ ವ್ಯವಸ್ಥೆಯಾಗಿ ನಿರೂಪಿಸಲು ಮತ್ತು ಅವುಗಳ ಮೂಲಭೂತ ಸ್ವರೂಪವನ್ನು ಕಂಡುಹಿಡಿಯಲು ಆಧುನಿಕ ಗಣಿತಜ್ಞರು ನಿರತರಾಗಿದ್ದಾಗ ಗಣಿತಶಾಸ್ತ್ರದ ವಿವೇಚನೆಯ ಜಟಿಲ ಸ್ವರೂಪದ ತೀರ್ಮಾನವನ್ನು ಪಡೆಯಲು ಮತ್ತು ತೀರ್ಮಾನದ ಸಾಧುತ್ವವನ್ನು ಪರೀಕ್ಷಿಸಲು, ಆರಿಸ್ಟಾಟಲನ ತಾರ್ಕಿಕ ಪರೀಕ್ಷಾ ಕ್ರಮಗಳು (ಸಿಲ್ಲಿಜಿಸಂಸ್) ಮತ್ತು 19ನೆಯ ಶತಮಾನದ ಉತ್ತರಾರ್ಧಕ್ಕೂ ಮುನ್ನ ವಿವರಿಸಿದ ತರ್ಕ ತತ್ತ್ವಗಳು ಮತ್ತು ತೀರ್ಮಾನ ವಿಧಾನಗಳು ಸಾಲವು ಎಂಬುವುದನ್ನು ಮನಗಂಡರು. ಈ ಪರಿಸ್ಥಿತಿಯಿಂದಾಗಿ ಇನ್ನೂ ಹೆಚ್ಚಿನ ತತ್ತ್ವಗಳನ್ನು ಮತ್ತು ಹೊಸ ತೀರ್ಮಾನ ವಿಧಾನಗಳನ್ನು ಕಂಡುಹಿಡಿದು ರೂಪಿಸುವುದರಲ್ಲಿ ಗಣಿತ ಮತ್ತು ತರ್ಕಶಾಸ್ತ್ರಜ್ಞರು ತೊಡಗಿದರು. ವಿಶೇಷ ಭಾವಲೇಖಗಳನ್ನು ವಿಪುಲವಾಗಿ ಮತ್ತು ವ್ಯಾಪಕಾರ್ಥದಲ್ಲಿ ಬಳಸಿ ಪ್ರತೀಕಾತ್ಮಕವಾಗಿಯೇ ತಾರ್ಕಿಕ ಭಾವನೆಗಳನ್ನು, ಸೂತ್ರಗಳನ್ನು ಮತ್ತು ವಿವೇಚನಾಪರಂಪರೆಯನ್ನು ನಿರೂಪಿಸಿ ಗಣಿತ ತರ್ಕಶಾಸ್ತ್ರಕ್ಕೆ ಪೀಠಿಕೆ ಹಾಕಿದರು. ಜರ್ಮನಿಯ ಗಣಿತಶಾಸ್ತ್ರಜ್ಞ ಗೋಟ್ಲಬ್ ಫ್ರೇಜ್ (1848–1925) ಎಂಬಾತನನ್ನು ಈ ಶಾಸ್ತ್ರದ ಪಿತಾಮಹ ಎನ್ನುವರು. ಇದರ ಬೆಳವಣಿಗೆಗೆ ಜಿ. ಪಿಯಾನೊ (1858–1932), ಬರ್ಟ್ರಂಡ್ ರಸಲ್ (1872–1970), ಜಾರ್ಜ್ ಬೂಲ್ (1815–64), ಕುರ್ಟ್ ಗೊಯ್ಡಲ್ (1906–78), ಡೇವಿಡ್ ಹಿಲ್ಬರ್ಟ್ (1862–1943) ಮತ್ತು ಎ. ಟಾರ್ಸ್ಕಿ ಇವರ ಕೊಡುಗೆಗಳು ಮಹತ್ತ್ವವಾದವು. ಭಾವಲೇಖೀಯ ನಿರೂಪಣೆಯಿಂದ ಕ್ಲಿಷ್ಟ ಮತ್ತು ಜಟಿಲವಾದ ವಿವೇಚನೆಗಳನ್ನು ಅಡಕವಾಗಿ ರೂಪಿಸಲು ಮತ್ತು ಸುಲಭವಾಗಿ ಗ್ರಹಿಸಲು ಸಾಧ್ಯ. ಅಲ್ಲದೆ ಭಾಷಾನಿರೂಪಣೆಯ ಪದಗಳಲ್ಲಿ ಮತ್ತು ವಾಕ್ಯಗಳಲ್ಲಿ ಕಾಣಬರುವ ದ್ವಂದ್ವಾರ್ಥ ಮತ್ತು ಅಸ್ಪಷ್ಟತೆಯನ್ನು ಇಲ್ಲಿ ಸಂಪೂರ್ಣವಾಗಿ ತಡೆಗಟ್ಟಬಹುದು. ಅರ್ಥವಾಗಿದೆಯೆಂದು ಅಂಗೀಕರಿಸಿದ ಕೆಲವು ಮೂಲ ಪರಿಕಲ್ಪನೆಗಳಿಂದ ಉಳಿದೆಲ್ಲ ತಾರ್ಕಿಕ ಪರಿಕಲ್ಪನೆ ಮತ್ತು ಸೂತ್ರಗಳನ್ನು ಗಣಿತ ತರ್ಕಶಾಸ್ತ್ರದಲ್ಲಿ ವ್ಯಾಖ್ಯಿಸುತ್ತಾರೆ. ಕೇವಲ ಕೆಲವನ್ನು ಆದ್ಯುಕ್ತಿಗಳೆಂದು (ಆ್ಯಕ್ಸಿಯಂಸ್) ಅಂಗೀಕರಿಸಿ ಪ್ರಮೇಯಗಳು ಎಂದು ಹೇಳುವ ತಾರ್ಕಿಕವಾದ ನಿಜ ಹೇಳಿಕೆಗಳನ್ನು ನಿರೂಪಿತವಾದ ತೀರ್ಮಾನ ನಿಯಮಗಳಿಂದ ಪಡೆಯುವುದು ಈ ಶಾಸ್ತ್ರದ ವಿಧಾನ. ಇಂಥ ಒಂದು ಸಿದ್ಧಾಂತ ವ್ಯವಸ್ಥೆಗೆ ಲಾಜಿಸ್ಟಿಕ್ ವ್ಯವಸ್ಥೆ ಎಂದು ಹೆಸರು. ವಾಸ್ತವವಾಗಿ ಕೆಲವು ಅವ್ಯಾಖ್ಯಿತ ಮೂಲ ಭಾವಲೇಖಗಳು, ಸುರೂಪಿತ ಸೂತ್ರಗಳು ಎಂದು ಕರೆಯಲ್ಪಡುವ ನಿರ್ದಿಷ್ಟ ಸಂಖ್ಯೆಯ ಪ್ರತೀಕಗಳು, ಆದ್ಯುಕ್ತಿಗಳು ಮತ್ತು ಒಂದು ಅಥವಾ ಹೆಚ್ಚಿನ ಅನುಮಾನ ನಿಯಮಗಳು ಒಂದು ಲಾಜಿಸ್ಟಿಕ್ ವ್ಯವಸ್ಥೆಯನ್ನು ನಿರ್ಧರಿಸುತ್ತವೆ. ಈ ವ್ಯವಸ್ಥೆಯಲ್ಲಿ ಸಾಧಿಸಬಹುದಾದ ಒಂದು ಸುರೂಪಿತ ಸೂತ್ರಕ್ಕೆ ಪ್ರಮೇಯ ಎಂದು ಹೆಸರು. ಸಾಧನೆ ಸುರೂಪಿತ ಸೂತ್ರಗಳ ಒಂದು ಪರಂಪರೆ. ಈ ಪರಂಪರೆಯ ಸೂತ್ರಗಳು ಅಂಗೀಕೃತ ಭಾವನೆಗಳು ಇಲ್ಲವೇ ಪೂರ್ವಸಾಧಿತ ಸೂತ್ರಗಳಿಗೆ ತೀರ್ಮಾನ ನಿಯಮದ ಅನ್ವಯದಿಂದ ದೊರೆತ ಸುರೂಪಿತ ಸೂತ್ರಗಳು. ಈ ಪರಂಪರೆಯ ಅಂತ್ಯವಾಕ್ಯವೇ ಪ್ರಮೇಯ. ಮೊದಲನೆಯ ಲಾಜಿಸ್ಟಿಕ್ ವ್ಯವಸ್ಥೆಯನ್ನು ರಚಿಸಿದಾತ ಜಿ. ಫ್ರೇಜ್. ಈತ ಅಂಕಗಣಿತದ ಎಲ್ಲ ಪದಗಳನ್ನೂ (ಟರ್ಮ್ಸ್) ತಾರ್ಕಿಕ ಪದಗಳಲ್ಲಿ ಮಾತ್ರ ನಿರೂಪಿಸಿ ಕೇವಲ ಆದ್ಯುಕ್ತಿಗಳಿಂದಲೇ ಅಂಕಗಣಿತದ ಎಲ್ಲ ಪ್ರಮೇಯಗಳನ್ನೂ ಸಾಧಿಸಬಹುದೆಂದು ತೋರಿಸಿದ. ಈ ದೃಷ್ಟಿಯಲ್ಲಿ ಅಂಕಗಣಿತವನ್ನು ತರ್ಕಶಾಸ್ತ್ರದ ಒಂದು ಶಾಖೆ ಎಂದು ಪರಿಗಣಿಸಬಹುದು. ಈತನ ಸಂಶೋಧನೆಗಳನ್ನು ಮುಂದುವರಿಸಿದ ರಸಲ್ ಮತ್ತು ವೈಟ್‌ಹೆಡ್ ಎಂಬ ಗಣಿತಶಾಸ್ತ್ರಜ್ಞರು ತಮ್ಮ ಪ್ರಿನ್ಸಿಪಿಯಾ ಮ್ಯಾತ್‌ಮ್ಯಾಟಿಕಾ (1910–13) ಗ್ರಂಥದಲ್ಲಿ ಇಡೀ ಗಣಿತಶಾಸ್ತ್ರವನ್ನು ತರ್ಕಶಾಸ್ತ್ರವನ್ನಾಗಿ ಮಾರ್ಪಡಿಸಬಹುದೆಂದು ತೋರಿಸಿದ್ದಾರೆ. ಹೀಗೆ ಒಂದು ದೃಷ್ಟಿಕೋನದಲ್ಲಿ ಗಣಿತಶಾಸ್ತ್ರವು ತರ್ಕಶಾಸ್ತ್ರದ ಅಂಗವೆಂದೂ ಮತ್ತೊಂದು ದೃಷ್ಟಿಕೋನದಲ್ಲಿ ತರ್ಕಶಾಸ್ತ್ರವನ್ನು ಅಮೂರ್ತ ಬೀಜಗಣಿತ ಅಥವಾ ಆಧುನಿಕ ಬೀಜಗಣಿತದ ಒಂದು ಅಂಗವೆಂದೂ ಪರಿಗಣಿಸಬಹುದಾಗಿದೆ.

ಉಕ್ತಿಗಳ ಕಲನಶಾಸ್ತ್ರ: ಈ ಹಿಂದೆ ಹೇಳಿದಂತೆ *p, q, r, s* ಇತ್ಯಾದಿಗಳು ವಿವಿಧ ಉಕ್ತಿಗಳು. ಇವು ಸರಳ ಉಕ್ತಿಗಳೆಂದು –ಎಂದರೆ ನೇರವಾದ ಒಂದು ಪರಿಕಲ್ಪನೆಯನ್ನು ಮಾತ್ರ ಒಳಗೊಂಡಿರುವ, ಆಡುಮಾತಿನಲ್ಲಿ ಸರಳ ವಾಕ್ಯಕ್ಕೆ ಸಮಾನವಾಗಿರುವ ಉಕ್ತಿಗಳೆಂದು ಭಾವಿಸುತ್ತೇವೆ. ಇಂಥ ಸರಳೋಕ್ತಿಗಳನ್ನು ಈ ಕೆಳಗಿನ ಭಾವಲೇಖಗಳ ಮೂಲಕ ಸಂಯೋಜಿಸಿ ಇಲ್ಲವೇ ಮಾರ್ಪಡಿಸಿ ಸಂಯುಕ್ತೋಕ್ತಿಗಳನ್ನು ಪಡೆದು ಅವುಗಳ ನಿಜಮೌಲ್ಯಗಳನ್ನು ಅಭ್ಯಸಿಸುವುದು ಉಕ್ತಿಗಳ ಕಲನಶಾಸ್ತ್ರದ ವಿಧಾನ.

$\wedge$ ... ಮತ್ತು (ಸಮುಚ್ಚಯ)

$\vee$ ... ಅಥವಾ (ಪರ್ಯಾಯ)

$\sim$ ... ಇಲ್ಲ/ ಅಲ್ಲ/ ಆಗಿಲ್ಲ (ನಿಷೇಧಾತ್ಮಕ)

$\rightarrow$ ... ಆಗಿದ್ದರೆ ಆಗ (ನಿಬಂಧಿತ)

$\longleftrightarrow$ ... ಆಗಿದ್ದರೆ ಮತ್ತು ಆಗಿದ್ದರೆ ಮಾತ್ರ (ಸಮತೆ)

ಮೇಲಿನ ಭಾವಲೇಖಗಳ (ಇವುಗಳಿಗೆ ಸಂಯೋಜಕಗಳೆಂಬ ಹೆಸರೂ ಉಂಟು) ಪ್ರಕಾರ ರಚಿಸಿದ ಸಂಯುಕ್ತೋಕ್ತಿಗಳನ್ನು ಕೆಳಗೆ ಬರೆದಿದೆ:

$p \wedge q$ ...$p$ ಮತ್ತು q

$p \vee q$ ... p ಅಥವಾ q

$\sim p, \sim q$ ... p ಅಲ್ಲ, q ಅಲ್ಲ

$p \rightarrow q$ ... p ಆಗಿದ್ದರೆ ಆಗ q

$p \longleftrightarrow q$ ... p ಆಗಿದ್ದರೆ ಮತ್ತು ಆಗಿದ್ದರೆ ಮಾತ್ರ q

ಈಗ p, q ಗಳ ನಿಜಮೌಲ್ಯಗಳಲ್ಲಿ ತಲೆದೋರಬಹುದಾದ ಭಿನ್ನತೆಗಳನ್ನು ಅನುಲಕ್ಷಿಸಿ $p \wedge q$ ಸಂಯುಕ್ತೋಕ್ತಿಯ ನಿಜಮೌಲ್ಯದಲ್ಲಿ ತಲೆದೋರುವ ಭಿನ್ನತೆಗಳನ್ನು ಮುಂದಿನ ನಿಜಮೌಲ್ಯ ಕೋಷ್ಟಕದಲ್ಲಿ ಕಾಣಿಸಿದೆ.

**ಸಮುಚ್ಚಯ**

| p | q | p∧q |
|---|---|---|
| 1 | 1 | 1 |
| 1 | 0 | 0 |
| 0 | 1 | 0 |
| 0 | 0 | 0 |

ಅಂದರೆ, ಸಮುಚ್ಚಯದಲ್ಲಿ ಎರಡೂ ಬಿಡಿ ಉಕ್ತಿಗಳ ನಿಜಮೌಲ್ಯಗಳು 1 ಆಗಿದ್ದಾಗ ಮಾತ್ರ ಸಂಯುಕ್ತೋಕ್ತಿಯ ನಿಜಮೌಲ್ಯ 1 ಆಗಿರುವುದು; ಮಿಕ್ಕ ಎಲ್ಲ ಸಂದರ್ಭಗಳಲ್ಲೂ ಅದು 0 ಆಗಿರುವುದು.

ಇತರ ಸಂಯುಕ್ತೋಕ್ತಿಗಳನ್ನು ಕುರಿತುನಿಜಮೌಲ್ಯ ಕೋಷ್ಟಕಗಳನ್ನು ಮುಂದೆ ಬರೆದಿದೆ.

**ಪರ್ಯಾಯ**

| p | q | pVq |
|---|---|---|
| 1 | 1 | 1 |
| 1 | 0 | 1 |
| 0 | 1 | 1 |
| 0 | 0 | 0 |

ಅಂದರೆ, ಪರ್ಯಾಯದಲ್ಲಿ ಎರಡೂ ಬಿಡಿ ಉಕ್ತಿಗಳ ನಿಜಮೌಲ್ಯಗಳು 0 ಆಗಿದ್ದಾಗ ಮಾತ್ರ ಸಂಯುಕ್ತೋಕ್ತಿಯ ಮೌಲ್ಯ 0 ಆಗಿರುವುದು; ಮಿಕ್ಕ ಎಲ್ಲ ಸಂದರ್ಭಗಳಲ್ಲೂ ಅದು 1 ಆಗಿರುವುದು.

**ನಿಷೇಧ**

| p | q | ~p | ~q |
|---|---|---|---|
| 1 | 1 | 0 | 0 |
| 1 | 0 | 0 | 1 |
| 0 | 1 | 1 | 0 |
| 0 | 0 | 1 | 1 |

ಅಂದರೆ, ಒಂದು ನಿಷೇಧಾತ್ಮಕ ಉಕ್ತಿಯ ನಿಜಮೌಲ್ಯ ಅದರ ಬಿಡಿ ಉಕ್ತಿಯ ನಿಜ ಮೌಲ್ಯದ ವಿರುದ್ಧವಾಗಿರುವುದು.

**ನಿಬಂಧಿತ**

| p | q | p→q |
|---|---|---|
| 1 | 1 | 1 |
| 1 | 0 | 0 |
| 0 | 1 | 1 |
| 0 | 0 | 1 |

ಅಂದರೆ, ನಿಬಂಧಿತ ಪೂರ್ವೋಕ್ತಿಯ ನಿಜಮೌಲ್ಯ 1 ಉತ್ತರೋಕ್ತಿಯ ನಿಜಮೌಲ್ಯ 0 ಆಗಿರುವಾಗ ಮಾತ್ರ ಸಂಯುಕ್ತೋಕ್ತಿ ನಿಜಮೌಲ್ಯ 0 ಆಗಿರುವುದು; ಮಿಕ್ಕ ಎಲ್ಲ ಸಂದರ್ಭಗಳಲ್ಲೂ ಅದು 1 ಆಗಿರುವುದು.

**ಸಮತೆ**

| p | q | p←→q |
|---|---|---|
| 1 | 1 | 1 |
| 1 | 0 | 0 |
| 0 | 1 | 0 |
| 0 | 0 | 1 |

ಅಂದರೆ, ಸಮತೆಯಲ್ಲಿ ಬಿಡಿ ಉಕ್ತಿಗಳೆರಡರ ನಿಜಮೌಲ್ಯಗಳೂ ಒಂದೇ ಆಗಿರುವಾಗ (1, 1 ಇಲ್ಲವೇ 0, 0) ಮಾತ್ರ ಸಂಯುಕ್ತೋಕ್ತಿಯ ನಿಜಮೌಲ್ಯ 1 ಆಗಿರುವುದು; ಮಿಕ್ಕ ಎಲ್ಲ ಸಂದರ್ಭಗಳಲ್ಲೂ ಅದು 0 ಆಗಿರುವುದು.

ಮೇಲಿನ ನಿಯಮಗಳನ್ನು ಕ್ರೋಡೀಕರಿಸಿ ಸಮಗ್ರ ಕೋಷ್ಟಕವನ್ನು ಇಲ್ಲಿ ಬರೆದಿದೆ.

| p | q | ~q | ~q | p∧q | p∨q | p→q | p←→q |
|---|---|---|---|---|---|---|---|
| 1 | 1 | 0 | 0 | 1 | 1 | 1 | 1 |
| 1 | 0 | 0 | 1 | 0 | 1 | 0 | 0 |
| 0 | 1 | 1 | 0 | 0 | 1 | 1 | 0 |
| 0 | 0 | 1 | 1 | 0 | 0 | 1 | 1 |

ಒಂದಕ್ಕಿಂತ ಹೆಚ್ಚು ಸಂಯೋಜಕಗಳ (ಭಾವಲೇಖಗಳ) ಸಹಾಯದಿಂದ ಜಟಿಲ ಸಂಯುಕ್ತೋಕ್ತಿಗಳನ್ನು ರಚಿಸಬಹುದು. ಇನ್ನು ಮುಂದೆ ವಿಶದಪಡಿಸದಿದ್ದರೆ ಉಕ್ತಿಯನ್ನು ಸಂಯುಕ್ತೋಕ್ತಿ ಎಂದು ಪರಿಗಣಿಸಬೇಕು. ಎರಡು ಸಂಯುಕ್ತೋಕ್ತಿಗಳ ಸಮಾನತೆಯ ಪರಿಕಲ್ಪನೆ ಮುಖ್ಯವಾದದ್ದು. ಇದರಿಂದ ವಾದಗಳಲ್ಲಿ ಮತ್ತು ಸಾಧನೆಗಳಲ್ಲಿ ಬರುವ ಉಕ್ತಿಗಳನ್ನು ಸಂಕ್ಷಿಪ್ತ ಅಥವಾ ಅನುಕೂಲವಾದ ರೂಪಗಳಲ್ಲಿ ನಿರೂಪಿಸಲು ಸಾಧ್ಯ. ಸಮಾನತೆಯ ವ್ಯಾಖ್ಯೆ ಹೀಗಿದೆ: ಒಂದೇ ಬಗೆಯ ಬಿಡಿ ಉಕ್ತಿಗಳನ್ನು ಹೊಂದಿರುವ ಎರಡು ಸಂಯುಕ್ತೋಕ್ತಿಗಳ ನಿಜ ಮೌಲ್ಯಗಳು, ಆ ಬಿಡಿ ಉಕ್ತಿಗಳ ನಿಜ ಮೌಲ್ಯಗಳ ಪ್ರತಿಯೊಂದು ಜೋಡಣೆಗೂ ಸರ್ವಸಮವಾದರೆ, ಆ ಸಂಯುಕ್ತೋಕ್ತಿಗಳು ತಾರ್ಕಿಕವಾಗಿ ಸಮಾನವಾಗಿವೆ ಎನ್ನುತ್ತೇವೆ. ಇದರ ಸಂಜ್ಞೆ ≡ .

ಉದಾಹರಣೆಗೆ

$$\sim(P \wedge q) \equiv \sim P \vee \sim q$$
$$\sim(P \vee q) \equiv \sim P \wedge \sim q$$

ಇವುಗಳಿಗೆ ಡಿಮಾರ್ಗನ್ನನ ನಿಯಮಗಳೆಂದು ಹೆಸರು. ಈ ಉಕ್ತಿಗಳ ಸಮಾನತೆಯನ್ನು ಎರಡೂ ಪಾರ್ಶ್ವಗಳ ನಿಜಮೌಲ್ಯ ಕೋಷ್ಟಕಗಳನ್ನು ರಚಿಸಿ ತಾಳೆ ನೋಡಬಹುದು.

ಒಂದು ಸಂಯುಕ್ತೋಕ್ತಿ a ಯ ಬಿಡಿ ಉಕ್ತಿಗಳ ನಿಜಮೌಲ್ಯಗಳು ಯಾವುದೇ ಆಗಿದ್ದರೂ a ಯ ನಿಜಮೌಲ್ಯ ಮಾತ್ರ 1 ಆಗಿದ್ದರೆ ಆಗ a ಗೆ ಒಂದು ನಿತ್ಯ ಸತ್ಯ(ಟಾಟಾಲಜಿ) ಎಂದು ಹೆಸರು. ಪ್ರತೀಕಾತ್ಮಕವಾಗಿ ಇದನ್ನು $\models$ ಎಂದು ನಿರೂಪಿಸುತ್ತೇವೆ. ನಿತ್ಯ ಸತ್ಯ ಉಕ್ತಿಗಳು ಸಾಧುವಾದ (ವ್ಯಾಲಿಡ್) ಉಕ್ತಿಗಳು. ಇವನ್ನು ಪ್ರಮೇಯಗಳೆಂದು ಪರಿಗಣಿಸುತ್ತೇವೆ. ತರ್ಕಶಾಸ್ತ್ರದ ಮುಖ್ಯ ಉದ್ದೇಶಗಳಲ್ಲಿ ಒಂದಾದ ಅನುಮಾನದ ಸಾಧುತ್ವದ ಪರೀಕ್ಷೆಯಲ್ಲಿ ಮತ್ತು ಸಾಧನೆಗಳಲ್ಲಿ ಇವುಗಳ ಪಾತ್ರ ಹಿರಿದಾದುದು. $\sim(p \wedge q) \vee (q \longleftrightarrow p)$ ಎಂದು ನಿತ್ಯ ಸತ್ಯವೆಂಬುದನ್ನು ಮುಂದಿನ ನಿಜಮೌಲ್ಯ ಕೋಷ್ಟಕದ ಕೊನೆಯ ನೀಟಸಾಲಿನಲ್ಲಿ ಕಾಣಬಹುದು.

| p | q | p∧q | ~(p∧q) | q←→p | (p∧q)V (q←→p) |
|---|---|---|---|---|---|
| 1 | 1 | 1 | 0 | 1 | 1 |
| 1 | 0 | 0 | 1 | 0 | 1 |
| 0 | 1 | 0 | 1 | 0 | 1 |
| 0 | 0 | 0 | 1 | 1 | 1 |

ಒಂದು ಸಂಯುಕ್ತೋಕ್ತಿಯ ನಿತ್ಯಸತ್ಯವನ್ನು ನಿಜಮೌಲ್ಯ ಕೋಷ್ಟಕದಿಂದ ನಿರ್ಧರಿಸುವುದು ಯಾವಾಗಲೂ ಅನುಕೂಲವಾಗುವುದಿಲ್ಲ. ನಿತ್ಯಸತ್ಯಗಳಿಂದ ನಿತ್ಯಸತ್ಯಗಳನ್ನು ಪಡೆಯುವ ನಿಯಮಗಳ ಹಾಗೂ ಮಿತಸಂಖ್ಯೆಯ ಸರಳ ನಿತ್ಯಸತ್ಯಗಳ ಪರಿಜ್ಞಾನದಿಂದ ದತ್ತ ಸಂಯುಕ್ತೋಕ್ತಿಯ ನಿತ್ಯಸತ್ಯವನ್ನು ನಿರ್ಧರಿಸಲು ಮತ್ತು ಅನೇಕ ಬಗೆಯ ಸಾಧು ಉಕ್ತಿಗಳನ್ನು ಪಡೆಯುವುದು ಸುಲಭ ಸಾಧ್ಯ.

ನಿಯಮ 1 : $\models p$ ಆಗಿದ್ದರೆ ಅದರ ಒಂದು ಬಿಡಿ ಉಕ್ತಿ q ಗಳೆಲ್ಲಕ್ಕೂ ಉಕ್ತಿ r ನ್ನು ಆದೇಶಿಸಿದಾಗ ಬರುವ ಉಕ್ತಿ ನಿತ್ಯಸತ್ಯವಾಗಿರುವುದು.

ನಿಯಮ 2 : $p \equiv q$ ಆಗಿದ್ದರೆ ಮತ್ತು ಆಗಿದ್ದರೆ ಮಾತ್ರ $\models p \leftrightarrow q$ . ಆದ್ದರಿಂದ ಒಂದು ಉಕ್ತಿಯ ಸ್ಥಾನದಲ್ಲಿ ಅದರ ಸಮಾನ ಉಕ್ತಿಯನ್ನು ಆದೇಶಿಸಬಹುದು.

ನಿಯಮ 3 : $\models p$ ಮತ್ತು $\models p \rightarrow q$ ಆಗಿದ್ದರೆ $\models q$. $p_1, p_2 \ldots p_m$ ಪ್ರಾರಂಭಿಕ ನಿಜ ಉಕ್ತಿಗಳಿಂದ ಪಡೆದ ಸಾಧು ಅನುಮಾನ ಉಕ್ತಿ p ಎಂಬುದನ್ನು ಒಂದು ನಿರ್ದಿಷ್ಟ ಸಂಖ್ಯೆಯ ಉಕ್ತಿಗಳ ಪರಂಪರೆಯಾಗಿ ತೋರಿಸಬಹುದು. ಇದರ ಕೊನೆಯ ಉಕ್ತಿಯೇ p. ಈ ಪರಂಪರೆಗೆ ಸಾಧನೆ ಎಂದು ಹೆಸರು; ಮತ್ತು ಇದರ ಪ್ರತಿಯೊಂದು ಉಕ್ತಿ q ವನ್ನು ಅನುಮಾನ ನಿಯಮಗಳಿಂದ ದೃಢಪಡಿಸಬಹುದು.

(ಎಂ.ಕೆ.ಐ.)

**ಗಣಿತ ಪ್ರತಿರೂಪಗಳು :** ಸಮತಲ ಮತ್ತು ಘನ ಜ್ಯಾಮಿತಿಯಲ್ಲಿ ಕೆಲವು ಗುಣಗಳನ್ನು ಸ್ಪಷ್ಟಪಡಿಸಲು ಮತ್ತು ಸಾಧ್ಯವಾದರೆ ಹೊಸ ಗುಣಗಳನ್ನು ಪ್ರೇರಿಸುವಂತೆ ಮಾಡಲು ಬಳಸುವ ಘನವಸ್ತುಗಳು. ಉದಾಹರಣೆಗೆ ಗೋಳ, ಶಂಕು, ಘನಾಕೃತಿ ಇತ್ಯಾದಿ. ಮಾನವನಿಗೆ ಗಣಿತಶಾಸ್ತ್ರದ ಪರಿಕಲ್ಪನೆಗಳು ಮೊತ್ತಮೊದಲಿಗೆ ಪ್ರಾಯಶಃ ಮಕ್ಕಳ ಆಟಿಕೆ ಘನಗಳಿಂದ ಮೂಡಿರಬಹುದೆಂದು ಊಹಿಸಬಹುದು. ಎಣಿಕೆಯ ಮಣಿಚೌಕಟ್ಟು ಮಕ್ಕಳಲ್ಲಿ ಗಣಿತದ ಆಸಕ್ತಿಯನ್ನು ಕೆರಳಿಸುವುದಷ್ಟೆ. ಅದೇ ರೀತಿ



**ತಂತಿಯಿಂದ ಮಾಡಿದ ಪ್ರತಿರೂಪಗಳು**

ಘನಾಕೃತಿ, ಅಶ್ರಕ, ಉರುಳೆ ಮುಂತಾದವು ಹೆಚ್ಚಿನ ಕುತೂಹಲವನ್ನು ಉಂಟುಮಾಡುತ್ತವೆ. ಇಂಥ ಗಣಿತ ಪ್ರತಿರೂಪಗಳು ಒಂದು ಪರಿಕಲ್ಪನೆಯನ್ನು ಚೆನ್ನಾಗಿ ತಿಳಿಯಲು ಸಹಾಯಕಗಳು. ಅವು ಸಾಧನೆಗಳನ್ನು ಪ್ರೇರಿಸಬಹುದೇ ವಿನಾ ಅವೇ ಸಾಧನೆಗಳಾಗ ಲಾರವು. ಗಣಿತಪ್ರತಿರೂಪಗಳ ಉಗಮ ಪ್ರ.ಶ.ಪೂ 3ನೆಯ ಶತಮಾನವೆಂದು ಗ್ರೀಸ್

ದೇಶದ ಗಣಿತಶಾಸ್ತ್ರಜ್ಞ ಯೂಕ್ಲಿಡನ ಕೆಲವು ಲೇಖನಗಳ ಆಧಾರದಿಂದ ತಿಳಿಯಬಹುದು. ಕೌಲೆ ಎಂಬ ಮತ್ತೊಬ್ಬ ಗಣಿತಶಾಸ್ತ್ರಜ್ಞ 1752ರಷ್ಟು ಹಿಂದೆಯೇ ಪ್ರತಿರೂಪಗಳ ಉಪಯುಕ್ತತೆಯನ್ನು ಕುರಿತು ಬರೆದುದೇ ಮಾತ್ರವಲ್ಲ ಅವುಗಳ ರಚನೆಗೆ ಸಂಬಂಧಿಸಿದ ವಿವರಗಳನ್ನು ಕೂಡ ನಿರೂಪಿಸಿದ್ದ.



ಘನಾಕೃತಿ ಪ್ರತಿರೂಪಗಳು

ಪ್ರತಿರೂಪಗಳ ನಿರ್ಮಾಣ : ರಟ್ಟಿನ ಹಾಳೆಯಲ್ಲಿ ಒಂದೇ ಅಳತೆಯ ಅನೇಕ ಸರ್ವಸಮ ಸಮಭುಜ ತ್ರಿಭುಜಗಳನ್ನು ಕತ್ತರಿಸಿ ಅನುರೂಪ ಭುಜಗಳು ಸಮತಲೀಯವಾಗಿರುವಂತೆಯೂ ಅನುರೂಪ ಶೃಂಗಗಳು ಏಕರೇಖಸ್ಥವಾಗಿರುವಂತೆಯೂ ಅಳವಡಿಸಿದಾಗ ತ್ರಿಭುಜೀಯ ಅಶ್ರಕ ದೊರೆಯುತ್ತದೆ. ನಾಲ್ಕು ಸರ್ವಸಮ



ದ್ವಿಘಾತೀಯ ಮೈಗಳ ರೇಖಾಚಿತ್ರ : 1 ದೀರ್ಘವೃತ್ತೀಯ ಪರವಲಯಕಲ್ಪ. 2 ಅತಿಪರವಲಯಕ ಪರವಲಯಕಲ್ಪ, 3 ಒಂದು ಹಾಳೆಯ ಅತಿಪರವಲಯಕಲ್ಪ, 4 ಎರಡು ಹಾಳೆಗಳ ಅತಿಪರವಲಯಕಲ್ಪ, 5 ದೀರ್ಘವೃತ್ತಕಲ್ಪ

ಸಮಭುಜ ತ್ರಿಭುಜಗಳಲ್ಲಿ ಒಂದನ್ನು ಪಾದವಾಗಿಟ್ಟು ಉಳಿದ ಮೂರು ತ್ರಿಭುಜಗಳನ್ನು ಮೊದಲನೆಯ ತ್ರಿಭುಜದ ಭುಜಗಳ ಮೇಲೆ ಪ್ರತಿ ಎರಡು ತ್ರಿಭುಜಗಳ ಅಂಚುಗಳು ಐಕ್ಯವಾಗುವಂತೆ ಇಟ್ಟಾಗ ಉಂಟಾಗುವ ಘನ ಸಮಚತುಷ್ಫಲಕವಾಗುತ್ತದೆ. ಗಣಿತಾನುಮಿತಿಯ ಸಹಾಯದಿಂದ ಐದು ಚಾರಿತ್ರಿಕ ಸಮಘನಾಕೃತಿಗಳ ರಚನೆಯನ್ನು ಅರಿಯಬಹುದು. ಅವು ಸಮಚತುಷ್ಫಲಕ, ಸಮಷಷ್ಫಲಕ (ಘನಾಕೃತಿ), ಸಮ ಅಷ್ಟಫಲಕ, ಸಮದ್ವಾದಶ ಫಲಕ ಮತ್ತು ಸಮವಿಂಶತಿ ಫಲಕ. ಈರೀತಿಯ ಸರಳವಾದ ಪ್ರತಿರೂಪಗಳ ಅವಲೋಕನದಿಂದ ಕನಿಷ್ಠಮಿತಿ ಹಾಗೂ ಗರಿಷ್ಠ ಮಿತಿಗಳಿಗೆ ಸಂಬಂಧಪಟ್ಟ ಕೆಲವು ಸಮಸ್ಯೆಗಳನ್ನು ಬಗೆಹರಿಸಬಹುದು. ಉದಾಹರಣೆಗೆ, ಒಂದು ನಿಶ್ಚಿತ ಪರಿಧಿಯ ತ್ರಿಭುಜ ಸಮಭುಜ ತ್ರಿಭುಜವಾದಲ್ಲಿ ಮಾತ್ರ ಅದರ ಸಲೆ ಗರಿಷ್ಠವಾಗಿರುತ್ತದೆ. ನಿಶ್ಚಿತ ಮೇಲ್ಮೈ ಸಲೆಯುಳ್ಳ ಚತುಷ್ಫಲಕದ ಗಾತ್ರ ಗರಿಷ್ಠವಾಗಬೇಕಾದರೆ ಅದು ಸಮಚತುಷ್ಫಲಕವಾಗಿರಬೇಕು.

ಬಹುಫಲಕಗಳು: ಬಹುಭುಜಗಳು ಫಲಕಗಳಾಗಿ ಇರುವ ಘನಗಳಿಗೆ ಈ ಹೆಸರುಂಟು. ಒಂದು ಬಹುಫಲಕದ ಎಲ್ಲ ಘಟಕಗಳು ಸಮಫಲಕಗಳಾಗಿದ್ದು ಎಲ್ಲ ಶೃಂಗಕೋನಗಳು ಸಮವಾಗಿದ್ದರೆ ಆ ಘನಕ್ಕೆ ಸಮಬಹುಫಲಕ ಎಂದು ಹೆಸರು. ಸರಳ ಬಹುಫಲಕವನ್ನು ಸತತವಾಗಿ ಹಿಗ್ಗಿಸಿದಾಗ ಅದು ಒಂದು ಗೋಳದ ಮೇಲ್ಮೈ ಆಗುತ್ತದೆ ಮತ್ತು ಸತತವಾಗಿ ಕುಗ್ಗಿಸಿದಾಗ ಒಂದು ಬಿಂದುವಾಗುತ್ತದೆ. ಇದು ಸರಳ ಬಹುಫಲಕಗಳ ವಿಶೇಷಗುಣ. ಸಾಮಾನ್ಯ ಬಹುಫಲಕದಲ್ಲಿ ಅದರ ಶೃಂಗ (V), ಅಂಚು (E) ಮತ್ತು ಫಲಕಗಳ (F) ನಡುವೆ ಒಂದು ಸಂಬಂಧ ಉಂಟು. ಈ ಸೂತ್ರ ಎಲ್ಲ ಸರಳ ಬಹುಫಲಕಗಳಿಗೂ ಅನ್ವಯಿಸುತ್ತದೆ.



ಅಸರಳ ಬಹುಫಲಕ

ಗ್ರೀಕ್ ಜ್ಯಾಮಿತಿಯಲ್ಲಿ ಬಹುಫಲಕಗಳ ಅಭ್ಯಾಸ ಅಗ್ರಸ್ಥಾನ ಪಡೆದಿದ್ದರೂ ಮೇಲೆ ಸೂಚಿಸಿರುವ ಸೂತ್ರವನ್ನು ಡೇಕಾರ್ಟೆ ಕಂಡುಹಿಡಿಯುವ ತನಕ ಯಾವ ಗ್ರೀಕ್ ಗಣಿತಶಾಸ್ತ್ರಜ್ಞನಿಗೂ ಗೊತ್ತಿರಲಿಲ್ಲ. ಈ ಸೂತ್ರಕ್ಕೆ ಕೆಲವು ಕಾಲದ ಬಳಿಕ ಸ್ವಿಸ್ ಗಣಿತಜ್ಞ ಆಯ್ಲರ್ (1707–83) ಸಮರ್ಪಕ ಸಾಧನೆಯನ್ನು ಒದಗಿಸಿದ. ಆದ್ದರಿಂದಲೇ $V+F=E+2$ ಸೂತ್ರಕ್ಕೆ ಆಯ್ಲರನ ಸೂತ್ರವೆಂದೇ ಹೆಸರು ಬಂದಿದೆ. **(ನೋಡಿ– ಗಣಿತಶಾಸ್ತ್ರ ಲೇಖನದಲ್ಲಿ ಜ್ಯಾಮಿತಿ ವಿಭಾಗ)** ಅಸರಳ ಬಹುಫಲಕಕ್ಕೆ (ನಾನ್‌ಸಿಂಪಲ್ ಪಾಲಿಹೆಡ್ರನ್) ಈ ಸೂತ್ರ ಅನ್ವಯವಾಗುವುದಿಲ್ಲ. ಇಂಥ ಫಲಕಕ್ಕೆ ಅನ್ವಯಿಸುವ ಸೂತ್ರ $V+F=E$.

ಪ್ರತಿರೂಪಗಳನ್ನು ಮರ, ತಗಡು, ರಟ್ಟು, ದಾರ, ಪ್ಲಾಸ್ಟರ್ ಆಫ್ ಪ್ಯಾರಿಸ್, ಪ್ಲಾಸ್ಟಿಕ್ ಇವೇ ಮುಂತಾದ ಸಾಮಗ್ರಿಗಳಿಂದ ತಯಾರಿಸಬಹುದು. ಇಂಥ ಪ್ರತಿರೂಪಗಳಲ್ಲಿ ಹಲವನ್ನು ಚಿತ್ರಗಳಲ್ಲಿ ತೋರಿಸಿದೆ. (ಸಿ.ಪಿಯು.)

**ಗಣಿತ ಪ್ರತೀಕಗಳು :** ರಾಶಿಗಳನ್ನು (ಕ್ವಾಂಟಿಟೀಸ್) ಮತ್ತು ಪರಿಕಲ್ಪನೆಗಳನ್ನು (ಕಾನ್ಸೆಪ್ಟ್ಸ್) ಹಾಗೂ ಅವುಗಳ ನಡುವಿನ ಪರಿಕರ್ಮಗಳನ್ನು (ಆಪರೇಷನ್ಸ್) ಮತ್ತು ಸಂಬಂಧಗಳನ್ನು ಅಮೂರ್ತೀಕರಿಸಿ ಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ ನಿರೂಪಿಸುವ ಭಾಷಾ ಸಾಮಗ್ರಿಗಳು (ಮ್ಯಾತಿಮ್ಯಾಟಿಕಲ್ ಸಿಂಬಲ್ಸ್).

ಉದಾಹರಣೆಗಳು:

1) ಸೊನ್ನೆಯಿಂದ ತೊಡಗಿ ಒಂಬತ್ತರವರೆಗಿನ ಅಂಕಿಗಳು ಮತ್ತು ಅವು ರಚಿಸುವ ಅಸಂಖ್ಯಾತ ಸಂಖ್ಯೆಗಳು:

$0,1,2,3,4,5,6,7,8,9; 27^5, \sqrt[3]{9}$, 34675 ಇತ್ಯಾದಿ.

2) ವರ್ಣಮಾಲೆಗಳಿಂದ ಆಯ್ದ ವಿವಿಧ ಅಕ್ಷರಗಳು

a, b, c, x, y ,z, $\alpha, \beta, \gamma$ ಇತ್ಯಾದಿ.

3) +, –, x, ÷, $\cap, \cup$, >, <, =, $\sum$, II ಇತ್ಯಾದಿ ಸಂಜ್ಞೆಗಳು (ಸೈನ್ಸ್).

4) $\pi$, e, sin, cos, log, mod, f(x) ಇತ್ಯಾದಿ ಪರಿಕಲ್ಪನೆಗಳು.

ಇವುಗಳ ನಡುವೆ ದತ್ತವ್ಯವಸ್ಥೆಯ ವಿಧಿನಿಯಮಗಳ ಅನುಸಾರ ಗಣಿತ ಪರಿಕರ್ಮಗಳನ್ನು ನಡೆಸಿ ಫಲಿತಾಂಶಗಳನ್ನು ಪಡೆದು ಅವನ್ನು ಅರ್ಥವಿಸುವುದು ಈ ಪ್ರತೀಕಗಳು ಒದಗಿಸುವ ಗಣಿತ ಭಾಷೆಯಿಂದ ಸಾಧ್ಯವಾಗುತ್ತದೆ.

ಉದಾಹರಣೆಗಳು: $e^{i\pi} = -1$

$$\sin 60° + \cos 60° = \frac{\sqrt{3+1}}{2}$$

$$\{a,b,c,d,e\} \cup \{p,q,r\} = \{a,b,c,d,e,p,q,r\}$$

$$\{a,b,c,d,e\} \cap \{p,q,r\} = \phi$$

| p | q | p∧q | p∨q | p→q | ~p |
|---|---|---|---|---|---|
| 1 | 1 | 1 | 1 | 1 | 0 |
| 1 | 0 | 0 | 1 | 0 | 0 |
| 0 | 1 | 0 | 1 | 1 | 1 |
| 0 | 0 | 0 | 0 | 1 | 1 |

ಪ್ರಾರಂಭ ಮತ್ತು ವಿಕಾಸ: ಆಧುನಿಕ ಗಣಿತವನ್ನು ಕುರಿತಂತೆ ಗಣಿತ ಪ್ರತೀಕಗಳು ಬೆಳೆದು ಬಂದಿರುವ ಜಾಡು ಯಾವುದೇ ಭಾಷೆಯ ಜಾಡಿನಂತೆಯೇ ಸ್ವಾರಸ್ಯ ಪೂರ್ಣವಾಗಿದೆ. ಆದರೆ ಭಾಷೆ ಮೊದಲು ವಿಕಾಸಗೊಂಡು ಮನುಷ್ಯನ ಚಿಂತನೆ ಸಾಕಷ್ಟು ಉನ್ನತ ಮಟ್ಟವನ್ನು ತಲುಪಿದ ಬಳಿಕ ಗಣಿತಚಿಂತನೆ ಪ್ರಾರಂಭವಾಗಿರಬೇಕು. ಮೊದಮೊದಲು ಸಂಕ್ಷೇಪ ನಿರೂಪಣೆಗಳೂ ಪದಗಳ ಮೊದಲಿನ ಅಕ್ಷರಗಳೂ ಪರಿಕಲ್ಪನೆಗಳನ್ನಾಗಲೀ ಪರಿಕರ್ಮಗಳನ್ನಾಗಲೀ ನಿರೂಪಿಸಲು ಬಳಸಲ್ಪಟ್ಟವು. ಇವು ಒಂದು ರೀತಿಯ ಒಳದಾರಿಗಳು. ಎರಡು ರಾಶಿಗಳು ಪರಸ್ಪರ ಸಮ ಎನ್ನುವ ಹೇಳಿಕೆಯನ್ನು ಅವೆರಡರ ನಡುವೆ = ಗುರುತನ್ನು ಬರೆಯುವುದರ ಮೂಲಕ ಮೊದಲಿಗೆ ಸೂಚಿಸಿದವ (1557) ರಾಬರ್ಟ್ ರಿಚರ್ಡ್. ಉದಾಹರಣೆಗೆ 4 = 12/3. 15ರಿಂದ 17ನೆಯ ಶತಮಾನದ ಅಂತರದಲ್ಲಿ ಅಜ್ಞಾತ ರಾಶಿಗಳನ್ನು, ಅವುಗಳ ಘಾತಗಳನ್ನು, ಅವುಗಳ ಮೇಲೆ ಪರಿಕರ್ಮಗಳನ್ನು ಮೊದಲಾದವನ್ನು ಪ್ರತಿನಿಧಿಸಲು ಹೊಸ ಹೊಸ ಪ್ರತೀಕಗಳ ಶೋಧನೆಯ ಕೆಲಸ ಭರದಿಂದ ಸಾಗಿತು. ಸಾಕಷ್ಟು ಅಭಿಪ್ರಾಯವಿನಿಮಯ ಕ್ಷಿಪ್ರವಾಗಿ ನಡೆಯದಿದ್ದ ಆ ದಿವಸಗಳಲ್ಲಿ ಬೇರೆ ಬೇರೆ ದೇಶಗಳ ಸಂಶೋಧಕರು ಒಂದೇ ಪರಿಕರ್ಮವನ್ನು ಅಥವಾ ಪರಿಕಲ್ಪನೆಯನ್ನು ಬೇರೆ ಬೇರೆ ಪ್ರತೀಕಗಳಿಂದ ಸೂಚಿಸುತ್ತಿದ್ದುದು ಅಸಾಧಾರಣವಾಗಿರಲಿಲ್ಲ. ಇದರಿಂದ ಮುಂದೆ ಗಣಿತಾಭ್ಯಾಸಿಗಳಿಗೆ ಒದಗುತ್ತಿದ್ದ ಗೊಂದಲವನ್ನು ಊಹಿಸಿಕೊಳ್ಳಬಹುದು. ಪ್ರತೀಕಗಳ ಒಂದು ಸಂಗ್ರಾಮವೇ ನಡೆಯುತ್ತಿದ್ದಂಥ ಪರಿಸ್ಥಿತಿ ಅಂದಿನದು. ಇವುಗಳ ವಿಪುಲಸೃಷ್ಟಿಯಲ್ಲಿ ಹೆಸರಾಂತ ರಾದವರೆಂದರೆ 16–17ನೆಯ ಶತಮಾನಗಳ ಫ್ರಾನ್ಸೊವಾವ್ಯೇಟ, ವಿಲಿಯಂ ಔಟ್‌ರೆಡ್, ರೆಣೆ ಡೇಕಾರ್ಟೆ ಮತ್ತು ಗಾಟ್‌ಫ್ರೆಡ್ ವಿಲ್ಹೆಲ್ಮ್ ಲೈಬ್‌ನಿಟ್ಸ್. ಇಂಗ್ಲಿಷ್ ವರ್ಣಮಾಲೆಯ ಮೊದಲ ಕೆಲವು ಅಕ್ಷರಗಳನ್ನು (*a, b, c,* ಇತ್ಯಾದಿ) ಜ್ಞಾತಗಳ ಪ್ರತೀಕಗಳಾಗಿಯೂ ಕೊನೆಯ ಕೆಲವು ಅಕ್ಷರಗಳನ್ನು (*u, v, w,* ಇತ್ಯಾದಿ) ಅಜ್ಞಾತಗಳ ಪ್ರತೀಕಗಳಾಗಿಯೂ ಬಳಸಲು ಮೊದಲು ಮಾಡಿದವ ಡೇಕಾರ್ಟೆ. 17ನೆಯ ಶತಮಾನದ ಅಂತ್ಯಭಾಗದಲ್ಲಿ ಲೈಬ್‌ನಿಟ್ಸ್ ಅಂದು ಬಳಕೆಯಲ್ಲಿದ್ದ ಎಲ್ಲ ಗಣಿತ ಪ್ರತೀಕಗಳನ್ನೂ, ವಿಶೇಷವಾಗಿ ಮುದ್ರಣ ಸೌಕರ್ಯದ ದೃಷ್ಟಿಕೋನದಿಂದ, ಪರಿಶೀಲಿಸಿದ. ಬಹು ಸಂಖ್ಯೆಯಲ್ಲಿ ಪ್ರತೀಕಗಳನ್ನು ಸೃಷ್ಟಿಸಿ ಗಣಿತವಿಜ್ಞಾನದಲ್ಲಿ ಚಿರಕಾಲ ಅವು ಉಳಿಯುವಂತೆ ಮಾಡಿದವನೆಂದರೆ 18ನೆಯ ಶತಮಾನದ ಲಿಯೊನ್ಹಾರ್ಡ್ ಆಯ್ಲರ್. X ಎಂಬ ಚರದ ಒಂದು ಬೀಜೋಕ್ತಿಯನ್ನು (ಉದಾಹರಣೆಗೆ $ax^2+bx+c$) ನಿರೂಪಿಸಲು $f(x)$ (ಎಂದರೆ $x$ನ ಒಂದು ಉತ್ಪನ್ನ), ನೈಸರ್ಗಿಕ ಲಘುಗಣಕದ ಆಧಾರವನ್ನು ಸೂಚಿಸಲು $e$, ಸಂತತ ಸಂಕಲನ ಕ್ರಿಯೆಯನ್ನು ಪ್ರತಿನಿಧಿಸಲು $\Sigma$, –1ರ ವರ್ಗಮೂಲವನ್ನು, ಎಂದರೆ $\sqrt{-1}$ ನ್ನು, ಪ್ರತಿನಿಧಿಸಲು $i$ ಇವೇ ಮುಂತಾದವು ಆಯ್ಲರನ ಮಹತ್ತ್ವಪೂರ್ಣ ಕೊಡುಗೆಗಳು. ಪ್ರತೀಕಗಳ ವಿಕಾಸದಲ್ಲಿ ಮುಂದಿನ ಗಮನಾರ್ಹ ಬೆಳವಣಿಗೆಯನ್ನು ಜಾರ್ಜ್ ಬೂಲನ ತರ್ಕವಿಶ್ಲೇಷಣೆ ಪ್ರಕಟವಾದ ಬಳಿಕ (1847) ಕಾಣುತ್ತೇವೆ. 20ನೆಯ ಶತಮಾನದ ಪ್ರಥಮಾರ್ಧದಲ್ಲಿ ಗಣಿತವಿಜ್ಞಾನದ ರಚನೆಯ ಅಧ್ಯಯನಕ್ಕೆ ಬಹಳ ಪ್ರಾಮುಖ್ಯ ಲಭಿಸಿದ್ದರಿಂದ ಎಲ್ಲ ಪ್ರತೀಕಗಳೂ ತೀವ್ರ ವಿಮರ್ಶೆಗೆ ಒಳಪಟ್ಟದ್ದು ಮಾತ್ರವಲ್ಲ, ಹೊಸ ಪ್ರತೀಕಗಳ ಸೃಷ್ಟಿಯೂ ವಿಪುಲವಾಗಿ ನಡೆಯಿತು. ಒಂದು ಬೀಜಗಣಿತವಲ್ಲ, ಒಂದು ಜ್ಯಾಮಿತಿಯಲ್ಲ, ಒಂದು ಕಲನಶಾಸ್ತ್ರವಲ್ಲ– ಅಂಥ ಹಲವಾರು ಬೀಜಗಣಿತಗಳಿವೆ, ಜ್ಯಾಮಿತಿಗಳಿವೆ, ಕಲನಶಾಸ್ತ್ರಗಳಿವೆ–ಎಂಬ ದಿಶೆಯಲ್ಲಿ ಗಣಿತಚಿಂತನೆ ಹರಿದದ್ದರಿಂದ ಆಧುನಿಕ ಗಣಿತದ ಪರಿಕಲ್ಪನೆಗಳಾದ ಗಣ, ಗ್ರೂಪ್, ವಲಯ, ಕ್ಷೇತ್ರ, ಗಣಿತತರ್ಕ ಮುಂತಾದವು ಪ್ರವರ್ಧಿಸಿದುವು ಹಾಗೂ ಹೊಸ ಪ್ರತೀಕಗಳ ಉಗಮಕ್ಕೆ ಹೇತುಗಳಾದವು. ಒಂದು ಉದಾಹರಣೆಯನ್ನು ಪರಿಶೀಲಿಸಬಹುದು. ಭಾರತದ ಸಮಸ್ತ ಪ್ರಜೆಗಳ ಗಣವನ್ನು *A* ಎಂದು ಕರೆಯೋಣ. ಈ ಗಣ ಸಾಂತವಾಗಿದ್ದರೂ ಇದರ ಪೂರ್ಣ ರಚನೆ ಭೌತವಾಗಿ ಬಲು ಕಠಿಣ ಕಾರ್ಯ, ಅಸಾಧ್ಯವೆನಿಸುವಷ್ಟೇ ಕಠಿಣವಿದು. ಏಕೆಂದರೆ ಈ ಕ್ರಿಯೆಯಲ್ಲಿ

$$A=\{a_1,a_2,a_3,.................\}$$

ಎಂದು ಬರೆಯಬೇಕಾಗುತ್ತದೆ. ಇಲ್ಲಿ ಒಂದೊಂದು *a*ಯೂ ಒಬ್ಬ ಭಾರತೀಯನನ್ನು ಪ್ರತಿನಿಧಿಸುತ್ತದೆ. ಇದನ್ನೇ *A*={ x|x ಓರ್ವ ಭಾರತೀಯ} ಎಂದು ಬರೆದುದಾದರೆ ಮೊದಲಿನ ವಿಧಾನದಲ್ಲಿ ವ್ಯರ್ಥವಾಗುವ ಕಾಲ, ಶ್ರಮ ಎರಡೂ ಉಳಿದು ಸಂಕ್ಷೇಪವೂ ನಿಖರವೂ ಆದ ಒಂದು ನಿರೂಪಣೆ ಸಿದ್ಧಿಸುತ್ತದೆ. ಇಂಥ ನಿರೂಪಣೆಗಳಿಂದ ಶಾಸ್ತ್ರದ ಬೆಳವಣಿಗೆಗೆ ಹೊಸ ಹಾದಿ ಲಭಿಸುತ್ತದೆ.

ಮುಂದೆ ಕೆಲವು ಮುಖ್ಯ ಪ್ರತೀಕಗಳನ್ನು ವಿವರಣೆಯ ಸಮೇತ ಬರೆದಿದೆ.

| | | |
|---|---|---|
| **p, q, r** | . . . | ಉಕ್ತಿಗಳು (ಪ್ರಾಪೊಸಿಷನ್ಸ್) |
| $\wedge$ | . . . | ಸಮುಚ್ಚಯ (ಕಂಜಂಕ್ಷನ್) |
| $\vee$ | . . . | ಪರ್ಯಾಯ (ಡಿಸ್ಜಂಕ್ಷನ್) |
| $\rightarrow$ | . . . | ನಿಬಂಧಿತ (ಇಂಪ್ಲಿಕೇಷನ್) |
| $\sim$ | . . . | ನಿಷೇಧ (ನೇಗೇಷನ್) |
| **P*(x)*** | . . . | x ಎಂಬ ಚರದಿಂದ ಕೂಡಿರುವ ಆಖ್ಯಾತ (ಪ್ರೆಡಿಕೇಟ್) |
| **T*[p(x)]*** | . . . | P(x) ನ ನಿಜಮೌಲ್ಯಗಳ ಗಣ |
| $\forall$ | . . . | ಎಲ್ಲ, ಪ್ರತಿಯೊಂದು (ಸಾರ್ವತ್ರಿಕ ಸಂಖ್ಯಾವಾಚಕ) |
| $\exists$ | . . . | ಕೆಲವು (ಅಸ್ತಿತ್ವ ಸಂಖ್ಯಾವಾಚಕ) |
| | | ಗಣ ಸಿದ್ಧಾಂತ, ಸಂಬಂಧಗಳು, ಉತ್ಪನ್ನಗಳು |
| **A, B, C** | . . . | ಗಣಗಳು (ಸೆಟ್ಸ್) |
| $a\in A$ | . . . | aಯು Aಗೆ ಸೇರಿದೆ; aಯು Aಯ ಧಾತು |
| $a\notin A$ | . . . | aಯು Aಗೆ ಸೇರಿಲ್ಲ; aಯು Aಯ ಧಾತುವಲ್ಲ |
| $A\subset B$ | . . . | Aಯು Bಯ ಉಪಗಣ; Aಯು Bಯಲ್ಲಿ ಅಡಕವಾಗಿದೆ |
| $A\bigcup B$ | . . . | A ಸಂಯೋಗ B |
| $A\bigcap B$ | . . . | A ಛೇದನ B |
| $\bigcup A_i$ | . . . | ಎಲ್ಲ $A_i$ ಗಣಗಳ ಸಂಯೋಗ |
| $\bigcap A_i$ | . . . | ಎಲ್ಲ $A_i$ ಗಣಗಳ ಛೇದನ |
| A X B | . . . | A,B ಗಣಗಳ ಕಾರ್ಟೇಸಿಯನ್ ಗುಣಲಬ್ಧ |
| A – B | . . . | A, B ಗಣಗಳ ವ್ಯತ್ಯಾಸ |
| $\chi$Ry, R{x,y} | . . . | ಸಂಬಂಧ |
| $f:x\rightarrow Y, X\xrightarrow{f} Y$ | . . . | ಉತ್ಪನ್ನ, ಚಿತ್ರಣ |
| $X\rightarrow Y, f\in Y^X$ | . . . | ಪರಿವರ್ತನೆ |
| f(x) | . . . | f ನಿಂದ Xನ ಬಿಂಬ |
| $f^{-1}(X)$ | . . . | ವ್ಯಸ್ತ ಬಿಂಬಗಣ |
| 1-1 | . . . | ಒಂದು–ಒಂದು ಸಂವಾದಿತ್ವ |
| ಸಂಖ್ಯೆ, ಸಾಂಖ್ಯಿಕ ಉತ್ಪನ್ನಗಳು | | |
| X/y | . . . | X, y ಯನ್ನು ಭಾಗಿಸುತ್ತದೆ |
| $x\equiv y \mod p$ | . . . | Y ಮಾಡ್ Pಗೆ x ಸಮಶೇಷ |
| [a, b] | . . . | ಸಂವೃತ ಅಂತರ |
| [a, b), [a,b[ | . . . | ಅರ್ಧವಿವೃತ ಅಂತರ (ಬಲಗಡೆ ವಿವೃತ) |
| (a,b), ] a,b[ | . . . | ವಿವೃತ ಅಂತರ |
| lim f(x)=b | . . . | x, $a^-$ ಗಾಮಿಯಾದಂತೆ |
| x→a | . . . | *f*(x)ನ ಪರಿಮಿತಿ b |
| $\frac{dy}{dx}$ | . . . | xನ್ನು ಕುರಿತು yಯ ಅವಕಲನಾಂಕ |
| $\int y dx$ | . . . | xನ್ನು ಕುರಿತು y ಯ ಅನುಕಲನಾಂಕ |

(ಆರ್.ಆರ್.ಯು)

# ಗಣಿತ ಬೋಧನ ಕ್ರಮ

**ಗಣಿತಬೋಧನ ಕ್ರಮ :** ಯಾವ ವಿಷಯದ ಬೋಧನೆಯಲ್ಲೇ ಆಗಲಿ ಅಧ್ಯಾಪಕರು, ವಿದ್ಯಾರ್ಥಿಯ ದೈಹಿಕ ಬೆಳೆವಣಿಗೆ, ಮಾನಸಿಕ ಶಕ್ತಿ ಸಾಮರ್ಥ್ಯಗಳು, ವಿಷಯದ ಸ್ವರೂಪ, ಅದನ್ನು ಬೋಧಿಸುವ ಸಾಮಾನ್ಯ ಮತ್ತು ವಿಶಿಷ್ಟ ಉದ್ದೇಶಗಳು– ಈ ಅಂಶಗಳನ್ನು ಆಧಾರ ಮಾಡಿಕೊಂಡು ಬೋಧನಕ್ರಮವನ್ನು ರೂಪಿಸಿಕೊಳ್ಳ ಬೇಕಾಗುತ್ತದೆ. ಆದ್ದರಿಂದ ಇತರ ವಿಷಯಗಳ ಬೋಧನೆಯಲ್ಲಿ ಹೇಗೋ ಹಾಗೆ ಗಣಿತ ಬೋಧನೆಯಲ್ಲೂ ಸಂದರ್ಭಕ್ಕೆ ತಕ್ಕಂತೆ ಸೂಕ್ತವಾದ ಬೋಧನವಿಧಾನವನ್ನು ಅನುಸರಿಸಬೇಕಾಗುತ್ತದೆ.

ಕಾಲೇಜು ಮಟ್ಟದವರೆಗಿನ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಇಲ್ಲಿ ವಿವೇಚಿಸಲಾಗಿದೆ. ಪ್ರಚಾರದಲ್ಲಿರುವ ಬೋಧನಕ್ರಮಗಳನ್ನು ವೈಯಕ್ತಿಕ ಬೋಧನಕ್ರಮಗಳು, ಸಾಮೂಹಿಕ ಬೋಧನ ಕ್ರಮಗಳು ಮತ್ತು ಪಠ್ಯ ವಿಷಯವನ್ನು ಆಧಾರಮಾಡಿಕೊಂಡಿರುವ ಬೋಧನ ಕ್ರಮಗಳು ಎಂದು ಸ್ಥೂಲವಾಗಿ ಮೂರು ವರ್ಗಗಳನ್ನಾಗಿ ವಿಂಗಡಿಸಬಹುದು. ಪ್ರತಿಯೊಂದು ವರ್ಗದಲ್ಲೂ ಮುಖ್ಯವೆನಿಸಿರುವ ಕ್ರಮಗಳನ್ನು ಇಲ್ಲಿ ವಿವರಿಸಿದೆ.

**ವೈಯಕ್ತಿಕ ಬೋಧನ ಕ್ರಮ :** ಒಬ್ಬೊಬ್ಬ ವಿದ್ಯಾರ್ಥಿಗೂ ಪ್ರತ್ಯೇಕ ಗಮನ ಕೊಟ್ಟು ಅವನ ಸಾಧನೆ, ಆಸಕ್ತಿ ಮತ್ತು ಶಕ್ತಿ ಸಾಮರ್ಥ್ಯಗಳಿಗೆ ಅನುಕೂಲಿಸುವಂತೆ ಕಲಿಸಲು ಅವಕಾಶವೀಯುವ ಈ ಕ್ರಮಗಳಲ್ಲಿ ಪ್ರಾಜೆಕ್ಟ್ ಅಥವಾ ಯೋಜನೆಯ ವಿಧಾನ ಮತ್ತು ಸಂಶೋಧನ ವಿಧಾನ ಎಂಬ ಎರಡು ಕ್ರಮಗಳು ಮುಖ್ಯವಾದವು.

ಯೋಜನೆಯ ವಿಧಾನ : ಬ್ಯಾಂಕು ವ್ಯವಹಾರ, ಸಾಲ, ಪಾಲುಗಾರಿಕೆ ಮುಂತಾದ ಅಂಕಗಣಿತದ ಕೆಲವು ವಿಷಯಗಳನ್ನು ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬೋಧಿಸಲು ಇದು ಉಪಯುಕ್ತವೆನಿಸುವ ಕ್ರಮ. ಪ್ರತಿ ವಿದ್ಯಾರ್ಥಿಗೂ ಒಂದೊಂದು ಸರಳ ಯೋಜನೆಯನ್ನೂ ಅದರ ಟಿಪ್ಪಣಿಯನ್ನೂ ಕೊಟ್ಟು ಪೂರ್ಣಗೊಳಿಸುವಂತೆ ಕೇಳುವರು. ಅದು ತನ್ನ ಯೋಜನೆಯೆಂಬ ಆಸಕ್ತಿಯಿಂದ ವಿದ್ಯಾರ್ಥಿ ಅದಕ್ಕೆ ಸಂಬಂಧಿಸಿದಂತೆ ಪೂರ್ಣಜ್ಞಾನವನ್ನು ಗ್ರಹಿಸಿ ತನ್ನ ಮುಂದಿನ ಗಣಿತ ಸಮಸ್ಯೆಯನ್ನು ಪೂರ್ಣಗೊಳಿಸಿ ಉತ್ತರವನ್ನು ತಿಳಿಸುವನು. ಅಧ್ಯಾಪಕರು ಅದನ್ನು ಪರೀಕ್ಷಿಸಿ ಸರಿಯಾಗಿದ್ದರೆ ಮುಂದಿನ ಹೊಸ ಯೋಜನೆ ಹಾಕಿಕೊಡುವರು. ಇಲ್ಲವಾದರೆ ತಪ್ಪಿರುವ ಹಂತವನ್ನು ಗುರುತಿಸಿ ಸೂಕ್ತ ಮಾರ್ಗದರ್ಶನ ನೀಡುವರು. ಪ್ರತಿಭಾವಂತರು ವೇಗವಾಗಿಯೂ ಸಾಧಾರಣ ಮಕ್ಕಳು ನಿಧಾನವಾಗಿಯೂ ಸಾಗಲೂ ಅವಕಾಶವಿರುವ ಈ ಕ್ರಮ ಎಲ್ಲ ಮಟ್ಟದ ಬುದ್ಧಿಶಕ್ತಿಯವರಿಗೂ ಅನುಕೂಲಿಸುತ್ತದೆ. ಆದರೆ ಇಷ್ಟರಿಂದಲೇ ಅವರು ಗಣಿತದ ಮುಖ್ಯ ತತ್ತ್ವಗಳ ಮತ್ತು ವಿಧಾನಗಳ ಪರಿಚಯವನ್ನು ಪಡೆದುಕೊಳ್ಳಲಾರರು. ಅಲ್ಲದೆ, ಸಾಮೂಹಿಕ ಬೋಧನೆಯಲ್ಲಿ ದೊರಕತಕ್ಕ ಸಮಸ್ಯೆಯಲ್ಲಿರುವ ದತ್ತಾಂಶಗಳ ಪರೀಕ್ಷೆ, ತತ್ತ್ವ ನಿಯಮಗಳ ಬಳಕೆ, ನೂತನ ಅಂಶಗಳ ಸಮೀಕರಣ, ಚರ್ಚೆ ಇತ್ಯಾದಿ ಸೌಲಭ್ಯಗಳು ಅವರ ಭಾಗಕ್ಕೆ ಇಲ್ಲವಾಗುತ್ತವೆ. ತೀರ ಪ್ರತಿಭಾವಂತ ಮಕ್ಕಳು ಮಾತ್ರ ಅವನ್ನೆಲ್ಲ ತಾವೇ ಗ್ರಹಿಸಿಕೊಳ್ಳಬಲ್ಲರಾದ್ದರಿಂದ ಈ ಕ್ರಮ ಅವರಿಗೆ ಹೆಚ್ಚು ಉಪಯುಕ್ತವೆನಿಸಬಹುದು. ಈ ಯೋಜನೆಯ ಕ್ರಮವನ್ನು ಮಾರ್ಪಡಿಸಿಕೊಂಡು ಪ್ರಾಯೋಗಿಕ ವಿಧಾನವೊಂದನ್ನು ರೂಪಿಸಲಾಗಿದೆ. ಇದಕ್ಕೆ ಲ್ಯಾಬೊರೇಟರಿ ವಿಧಾನವೆಂಬ ಹೆಸರೂ ಉಂಟು. ಒಂದು ವಿಶೇಷ ಕೊಠಡಿ ಅಥವಾ ಪ್ರಯೋಗಾಲಯದಲ್ಲಿ ಇಟ್ಟಿರುವ ವಿವಿಧ ಅಳತೆಯ ಸಲಕರಣೆಗಳನ್ನು ಬಳಸಿಕೊಂಡು, ಗಣಿತಶಾಸ್ತ್ರದ ಪ್ರಮೇಯಗಳನ್ನು ತಾಳೆಹಾಕಿ ನೋಡಿ, ಅವುಗಳ ಸತ್ಯಾಂಶವನ್ನು ವಿದ್ಯಾರ್ಥಿಗಳು ಮನನ ಮಾಡಿಕೊಳ್ಳುವರು. ಅಧ್ಯಾಪಕರ ನೇತೃತ್ವದಲ್ಲಿ ವಿದ್ಯಾರ್ಥಿಗಳು ಈ ವಿಧಾನದ ಮೂಲಕ ರೇಖಾಗಣಿತದ ತತ್ತ್ವಗಳನ್ನೂ ಅವುಗಳ ಉಪಯುಕ್ತತೆಯನ್ನೂ ಅರಿತುಕೊಳ್ಳಲು ಸಹಕಾರಿಯಾಗುವುದು. ಗಣಿತ ಒಂದು ಉಪಯುಕ್ತ ವಿಷಯವೆಂಬುದನ್ನೂ ವಿಜ್ಞಾನ, ಕೈಗಾರಿಕೆ, ಯಂತ್ರಗಳ ಕಾರ್ಯ ಮೊದಲಾದವುಗಳಲ್ಲಿ ಅದು ವಹಿಸುವ ಪಾತ್ರವನ್ನೂ ಚೆನ್ನಾಗಿ ಮನದಟ್ಟು ಮಾಡಿಕೊಳ್ಳುವರು. ಗಣಿತದಲ್ಲಿ ತಕ್ಕಷ್ಟು ಪರಿಶ್ರಮ ದೊರೆಯದವರು, ಅಳತೆಯ ಸಲಕರಣೆಗಳ ಬಗ್ಗೆ ತಕ್ಕಷ್ಟು ಪರಿಚಯವಿಲ್ಲದವರು, ಹಾಗೂ ಸಾಮೂಹಿಕ ಬೋಧನ ಕ್ರಮದಿಂದ ತಕ್ಕಷ್ಟು ಲಾಭ ಪಡೆಯದವರು ಈ ವಿಧಾನದಿಂದ ತುಂಬ ಉಪಯೋಗ ಪಡೆಯಬಲ್ಲರು. ಆದರೆ ಇದು ಹೆಚ್ಚು ಕಾಲವ್ಯಯವಾಗುವ ಕ್ರಮ. ಹಲವರು ಸುಮ್ಮನೆ ಸಲಕರಣೆಗಳೊಡನೆ ಆಡಿಕೊಂಡು ಕಾಲಹರಣ ಮಾಡಿಬಿಡಬಹುದು. ದಕ್ಷರೂ ನುರಿತವರೂ ಆದ ಅಧ್ಯಾಪಕರು ಸೂಕ್ತವೆನಿಸುವ ವಿಷಯಗಳ ಬೋಧನೆಗೆ ಮಾತ್ರ ಈ ವಿಧಾನವನ್ನು ಬಳಸಿಕೊಳ್ಳುವುದು ಅಗತ್ಯ.

ಸಂಶೋಧನ ವಿಧಾನ : ಯೋಜನೆ ಮತ್ತು ಪ್ರಾಯೋಗಿಕ ವಿಧಾನಗಳಲ್ಲಿ ವಿದ್ಯಾರ್ಥಿಗಳು ಮೊದಲಿಂದ ಕೊನೆಯವರೆಗೆ ಅಧ್ಯಾಪಕರ ನಿರ್ದೇಶನದಲ್ಲಿ ಮುಂದುವರಿದರೆ, ಸಂಶೋಧನ ವಿಧಾನದಲ್ಲಿ ಅವರು ಅಧ್ಯಾಪಕರಿಂದ ಆರಂಭದಲ್ಲಿ ಮಾತ್ರ ತೀರ ಅಗತ್ಯವಾದ ಕೆಲವು ನಿರ್ದೇಶನಗಳನ್ನು ಪಡೆದು ತಮ್ಮ ಯತ್ನದಿಂದಲೇ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವರು. ಅಧ್ಯಾಪಕರು ನೀಡುವ ಸಲಹೆ ನೇರವಾಗಿರದೆ, ಸೂಕ್ತಮಾರ್ಗದಲ್ಲಿ ವಿದ್ಯಾರ್ಥಿಗಳ ಆಲೋಚನೆಯನ್ನು ಪ್ರಚೋದಿಸು ವಂತಿರುವ ಪ್ರಶ್ನೆಗಳ ರೂಪದಲ್ಲಿದ್ದು ಮುಂದುವರಿಯಲು ಅನುಸರಿಸಬೇಕಾದ ಮಾರ್ಗವನ್ನು ಅವರು ಪರಿಚಯಮಾಡಿಕೊಳ್ಳಲು ಸಹಾಯಮಾಡುತ್ತದೆ. ಈ ವಿಧಾನದಲ್ಲಿ ಮುಂದುವರಿಯುವುದು ನಿಧಾನವಾದರೂ ಅವರ ಮನಶ್ಶಕ್ತಿಗಳು ಚೆನ್ನಾಗಿ ಅಭಿವೃದ್ಧಿಯಾಗಿ ಮುಂದಿನ ಕಲಿವನ್ನು ವೇಗವಾಗಿ ಸಾಧಿಸಬಲ್ಲ ಹಿನ್ನೆಲೆ ಸಿದ್ಧವಾಗುತ್ತದೆ. ಅಲ್ಲದೆ ತಾವೇ ಸಮಸ್ಯೆಯನ್ನು ಬಿಡಿಸುತ್ತೇವೆಂಬ ಅಭಿಮಾನವೂ ವೈಜ್ಞಾನಿಕ ಮತ್ತು ಸಂಶೋಧನ ಚಿತ್ತವೃತ್ತಿಯೂ ಅವರಲ್ಲಿ ವರ್ಧಿಸುತ್ತವೆ. ಆದರೆ ಈ ವಿಧಾನದಲ್ಲಿ ಪ್ರಧಾನವಾದ ಹಲವು ನ್ಯೂನತೆಗಳುಂಟು. ಪ್ರತಿಭಾವಂತರೂ ನಿಸ್ಪೃಹರೂ ಆದ ವಿದ್ಯಾರ್ಥಿಗಳು ನಿಷ್ಠೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸಬಹುದಾದರೂ ಮಂದಬುದ್ಧಿಯ ಹಾಗೂ ಸೋಮಾರಿ ವಿದ್ಯಾರ್ಥಿಗಳು ಮಹಾಸಂಶೋಧಕರಂತೆ ನಟಿಸುತ್ತ ಕಾಲಹರಣ ಮಾಡಿಬಿಡಬಹುದು. ಅಂಥವರಿಗೆ ಬೋಧಕರೇ ಸಮಸ್ಯೆಯ ಪರಿಹಾರ ಹುಡುಕಿಕೊಡಬೇಕಾಗುತ್ತದೆ. ತರಗತಿಯಲ್ಲಿ ಹೆಚ್ಚು ಮಂದಿ ಇರುವುದಾದರೆ ಅಧ್ಯಾಪಕರು ಎಲ್ಲರ ಕಡೆಯೂ ಗಮನವೀಯುವುದು ಅಸಾಧ್ಯವಾಗಿ ಕೆಲವು ವಿದ್ಯಾರ್ಥಿಗಳು ಇತರರು ಮಾಡಿದ್ದನ್ನು ಕದ್ದು ತಮ್ಮ ಸಾಧನೆಯೆಂದು ತೋರಿಸಲು ಯತ್ನಿಸುವ ಸಂಭವವೂ ಉಂಟು. ಆದ್ದರಿಂದ ದಕ್ಷರೂ ಅನುಭವಿಗಳೂ ಆದ ಉಪಾಧ್ಯಾಯರು ಮಾತ್ರ ಈ ಕ್ರಮವನ್ನು ಅನುಸರಿಸಬಹುದು. ಸರಿಯಾದ ರೀತಿಯಲ್ಲಿ ನಡೆದರೆ ಈ ವಿಧಾನದಿಂದ ವಿದ್ಯಾರ್ಥಿಗಳಲ್ಲಿ ತಮ್ಮ ಸಾಮರ್ಥ್ಯವನ್ನೇ ಅವಲಂಬಿಸಿ ಕೆಲಸಮಾಡುವ ಅಭ್ಯಾಸವನ್ನು ರೂಢಿಸಬಹುದು.

**ಸಾಮೂಹಿಕ ಬೋಧನಕ್ರಮಗಳು :** ವೈಯಕ್ತಿಕ ಬೋಧನವಿಧಾನಗಳು ಸಣ್ಣ ಮಟ್ಟ ತರಗತಿಗಳಿಗೆ ಸರಿ. ಸಾರ್ವತ್ರಿಕ ಶಿಕ್ಷಣ ಬಳಕೆಗೆ ಒಂದು ತರಗತಿಯಲ್ಲಿ ಹೆಚ್ಚು ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು ಅನಿವಾರ್ಯವಾಗಿರುವ ಈಚಿನ ಕಾಲದಲ್ಲಿ ಸಾಮೂಹಿಕ ಬೋಧನವಿಧಾನಗಳನ್ನು ಅನುಸರಿಸುವುದು ಹೆಚ್ಚು ಪ್ರಚಾರದಲ್ಲಿದೆ. ಅವುಗಳಲ್ಲಿ ಕೆಲವನ್ನು ಮುಂದೆ ವಿವರಿಸಿದೆ.

**ಅನುಕ್ರಮ ವಿಧಾನ :** ಶಿಕ್ಷಣದ ಎಲ್ಲ ಹಂತಗಳಲ್ಲೂ ಗಣಿತದ ಯಾವುದೇ ವಿಷಯವನ್ನಾದರೂ ಇಡೀ ತರಗತಿಗೆ ಅನುಕ್ರಮವಾಗಿ ಅದರ ವ್ಯವಸ್ಥಿತ ಸ್ವರೂಪದಲ್ಲಿ ಬೋಧಿಸಲು ಬಳಸುವ ಈ ವಿಧಾನದಲ್ಲಿ ಅಧ್ಯಾಪಕರು ಸೂಕ್ತ ಪ್ರಶ್ನೆ, ಸಲಹೆ ಇತ್ಯಾದಿಗಳ ಮೂಲಕ ಕಲಿಯಬೇಕಾದ ನೂತನ ವಿಷಯದಲ್ಲಿ ವಿದ್ಯಾರ್ಥಿಗಳು ಆಸಕ್ತಿ ಹರಿಸುವಂತೆ ಮಾಡುವರು. ಇದು ಪಾಠಕ್ಕೆ ಪೀಠಿಕೆಯಾಗುತ್ತದೆ. ವಿಷಯದ ಬಗ್ಗೆ ವಿದ್ಯಾರ್ಥಿಗಳ ಮನೋರಂಗದಲ್ಲಿ ಈ ಸಿದ್ಧತೆ ಏರ್ಪಟ್ಟ ಮೇಲೆ ಪಠ್ಯಪುಸ್ತಕದಿಂದ ಆ ವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ಗ್ರಹಿಸಲು ಅವಕಾಶಕೊಟ್ಟು ಅನಂತರ ಅಧ್ಯಾಪಕರು ಇಡೀ ತರಗತಿಗೆಲ್ಲ ಸಮಸ್ಯೆಯೊಂದನ್ನು ಉದಾಹರಣೆಯಾಗಿ ಬಿಡಿಸಿ ತೋರಿಸಿ, ಬೋಧಿಸುವರು. ಇಲ್ಲವೆ ಆ ವಿಷಯಕ್ಕೆ ಸಂಬಂಧಿಸಿದ ತತ್ತ್ವ ಇಲ್ಲವೆ ನಿಯಮವನ್ನು ಮೊದಲು ಪ್ರಶ್ನೆ, ಸಲಹೆ ಇತ್ಯಾದಿಗಳ ಮೂಲಕ ವಿದ್ಯಾರ್ಥಿಗಳಲ್ಲಿ ಮೂಡಿಸುವರು. ಅನಂತರ ಪಠ್ಯಪುಸ್ತಕದಲ್ಲಿರುವ ಅಂಶ ಇಲ್ಲವೆ ಸಮಸ್ಯೆಯನ್ನು ವಿದ್ಯಾರ್ಥಿಗಳೇ ಉತ್ತರಿಸುವಂತೆ ಇಡೀ ತರಗತಿಯನ್ನು ಕೇಳಬಹುದು. ಅಥವಾ, ಆ ಸಮಸ್ಯೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಚರ್ಚೆ ನಡೆಯುವಂತೆ ಏರ್ಪಡಿಸಿ ಆ ವಿಷಯಕ್ಕೆ ಸಂಬಂಧಿಸಿದ ಸಂಪ್ರತ್ಯಯ, ನಿಯಮ, ಸೂತ್ರ, ತತ್ತ್ವ–ಇತ್ಯಾದಿಗಳನ್ನು ಇಡೀ ತರಗತಿ ಅರಿತುಕೊಳ್ಳುವಂತೆ ಮಾಡಬಹುದು. ಅನಂತರ ಸಮಸ್ಯೆಗಳನ್ನು ತೆಗೆದುಕೊಂಡು ಬಿಡಿಸಲು ಆ ಜ್ಞಾನವನ್ನು ಬಳಸಬಹುದು. ಈ ವಿಧಾನದಿಂದ ಆಗಲೇ ಕಲಿತಿರುವ ಗಣಿತದ ವಿಷಯಗಳಿಗೆ ಹೊಂದಿಸಿಕೊಂಡಂತೆ ವ್ಯವಸ್ಥಿತ ಜ್ಞಾನವನ್ನು ಅನುಕ್ರಮವಾಗಿಯೂ ಪರಣಾಮಕಾರಿ ಯಾಗಿಯೂ ಆಕರ್ಷಕವಾಗಿಯೂ ಬೋಧಿಸಬಹುದು.

**ಉಪನ್ಯಾಸ ವಿಧಾನ :** ಪ್ರೌಢಶಾಲೆಯ ಅನಂತರದ ಗಣಿತದ ಯಾವುದೇ ವಿಷಯವನ್ನಾದರೂ ಬೋಧಿಸಲು ಬಳಸಬಹುದಾದ ಈ ವಿಧಾನ ಬಹುಮಟ್ಟಿಗೆ ಉಪನ್ಯಾಸದ ರೂಪದಲ್ಲಿರುತ್ತದೆ. ಆದರೆ ಆಗಾಗ ಅಧ್ಯಾಪಕರು ಕಪ್ಪುಹಲಗೆಯ ಮೇಲೆ ಚಿತ್ರ, ನಕ್ಷೆ, ಆಕೃತಿ, ತತ್ತ್ವಗಳ ಸೂಕ್ಷ್ಮ ರೂಪ, ಚಿಹ್ನೆ, ಸಮೀಕರಣ, ಸಂಕೇತ ಇತ್ಯಾದಿಗಳನ್ನು ಬರೆಯುತ್ತ ಅಗತ್ಯವಾದಾಗ ಮಾದರಿ ಮುಂತಾದ ಉಪಕರಣಗಳನ್ನು ನಿದರ್ಶಿಸುತ್ತ ವಿಷಯವನ್ನು ಪೋಷಿಸುವರು. ಈ ವಿಧಾನ ಫಲಪ್ರದವಾಗಬೇಕಾದರೆ ಬೋಧಿಸುವ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ತಕ್ಕಷ್ಟು ಪೂರ್ವಭಾವಿ ಪರಿಚಯವಿರಬೇಕು; ಆಲೋಚನಾಸರಣಿಯನ್ನು ಗ್ರಹಿಸುವಷ್ಟು ಮನಸ್ಸು ಬೆಳೆದಿರಬೇಕು; ಅವಧಾನ ಕಾಲಾವಧಿಯ (ಅಟೆನ್ಷನ್ ಸ್ಪ್ಯಾನ್) ತಕ್ಕಷ್ಟು ಹೆಚ್ಚಾಗಿರಬೇಕು. ಎಂದಮೇಲೆ ಪ್ರಾಥಮಿಕ

ಮತ್ತು ಪ್ರೌಢಶಾಲೆಗಳಲ್ಲಿ ಇದನ್ನು ಅಷ್ಟಾಗಿ ಬಳಸುವಂತಿಲ್ಲ. ಅಲ್ಲದೆ ಈ ವಿಧಾನವನ್ನು ಬಳಸುವ ಅಧ್ಯಾಪಕರಿಗೆ ಪಠ್ಯವಿಷಯದಲ್ಲಿ ಪಾಂಡಿತ್ಯ, ವಿಷಯಗಳ ಅನುಕ್ರಮ ಜೋಡಣೆಯ ಮತ್ತು ವ್ಯವಸ್ಥಿತ ಸ್ವರೂಪದ ಪರಿಜ್ಞಾನ, ಅವುಗಳ ತತ್ತ್ವಾರ್ಥಗಳ ವಿಮರ್ಶಾ ಜ್ಞಾನ ಮತ್ತು ಅವುಗಳ ಉಪಯುಕ್ತತೆಗಳ ಬಗ್ಗೆ ಖಚಿತಾಭಿಪ್ರಾಯ – ಇವೆಲ್ಲ ಚೆನ್ನಾಗಿ ಇರಬೇಕು. ಬೋಧಿಸುವ ವಿಷಯದ ಬಗ್ಗೆ ಸ್ವಲ್ಪಮಟ್ಟಿಗಾದರೂ ವಿದ್ಯಾರ್ಥಿಗಳು ಪರಿಚಯಮಾಡಿಕೊಂಡಿದ್ದರೆ ಉಪನ್ಯಾಸವನ್ನು ಅರ್ಥಮಾಡಿಕೊಳ್ಳುವುದು ಸರಾಗವಾಗುವುದು. ವಿಷಯಕ್ಕೆ ಸಂಬಂಧಿಸಿದ ತತ್ತ್ವ, ಮೂಲಭೂತ ವಿಧಾನ, ಭಾವನೆ, ಪಾರಿಭಾಷಿಕ ಪದ, ಚಾರಿತ್ರಿಕ ವಿಷಯ ಇತ್ಯಾದಿಗಳ ಪರಿಚಯ ಈ ವಿಧಾನದ ಬೋಧನೆಯಿಂದ ಚೆನ್ನಾಗಿ ಆಗುವುದರಿಂದ ಗಣಿತದ ಬೇರೆ ಬೇರೆ ಘಟಕಗಳಲ್ಲಿರುವ ಹೊಂದಾಣಿಕೆ, ಗಣಿತಕ್ಕೂ ಇತರ ಪಠ್ಯ ವಿಷಯಗಳ ವ್ಯಾಸಂಗವಿಷಯಗಳಿಗಿರುವ ಅನ್ಯೋನ್ಯ ಸಂಬಂಧ–ಇವೆಲ್ಲ ಅವರಿಗೆ ಗೊತ್ತಾಗುವುದು. ಉಪನ್ಯಾಸವಾದ ಮೇಲೆ ಆಯಾ ಉಪನ್ಯಾಸದ ಸಾರಾಂಶವನ್ನು ಮುದ್ರಿಸಿ ಅಂದಿಗಂದಿಗೆ ವಿದ್ಯಾರ್ಥಿಗಳಿಗೆ ಹಂಚುವುದು ಕೆಲವೆಡೆ ಪ್ರಚಾರದಲ್ಲಿದೆ. ಅದರಲ್ಲಿ ಮುಖ್ಯಸೂತ್ರಗಳು, ತತ್ತ್ವಗಳು, ನಕ್ಷೆಗಳು, ಸಮೀಕರಣಗಳು ಮುಂತಾದ ಅಂಶಗಳನ್ನು ಸೇರಿಸಿರಬೇಕು. ಗಣಿತ ಬೋಧನೆಯ ಇತರ ವಿಧಾನಗಳ ಜೊತೆಗೆ ಈ ವಿಧಾನವನ್ನೂ ಅನುಸರಿಸಿದರೆ ವಿದ್ಯಾರ್ಥಿಗಳಿಗೆ ಆಕರ್ಷಕ ಹಿನ್ನೆಲೆಯಲ್ಲಿ ವಿಷಯದ ವ್ಯವಸ್ಥಿತ ಜ್ಞಾನವನ್ನು ಪರಿಚಯ ಮಾಡಿಕೊಡಬಹುದು.

**ಅಭ್ಯಾಸದ ವಿಧಾನ :** ಗಣಿತದಲ್ಲಿ ಕಲಿತ ತತ್ತ್ವ, ವಿಧಾನ, ಅನುಭವ ಇತ್ಯಾದಿಗಳನ್ನು ವಿದ್ಯಾರ್ಥಿಗಳು ಪುನಃ ಪುನಃ ಉಪಯೋಗಿಸಿ ಅವು ಸಿದ್ಧ ಪ್ರತಿಕ್ರಿಯೆಗಳಾಗುವಂತೆ ಮಾಡಿಕೊಡುವುದಕ್ಕೆ ಪ್ರಾಧಾನ್ಯವುಳ್ಳ ಈ ವಿಧಾನವನ್ನು ಒಂದು ಬೋಧಿಸುವ ಕ್ರಮವೆನ್ನುವುದಕ್ಕಿಂತ ಬೋಧಿಸಿದ್ದನ್ನು ಚೆನ್ನಾಗಿ ರೂಢಿಸಿಕೊಡುವ ಕ್ರಮ ಎಂದು ಹೇಳಬಹುದು. ಮಗ್ಗಿ, ತೂಕ, ಅಳತೆ ಮುಂತಾದವುಗಳ ಕೋಷ್ಟಕಗಳು, ಸೂತ್ರಗಳು, ನಿಯಮಗಳು, ಸಮೀಕರಣಗಳು ಮುಂತಾದುವನ್ನು ಮೊದಲು ಕಲಿತ ಮೇಲೆ ಅವನ್ನು ಸುಲಭವಾಗಿ ಬಳಸಲು ಅನುಕೂಲಿಸಬೇಕಾದರೆ ಅವು ಚೆನ್ನಾಗಿ ಅಭ್ಯಾಸಕ್ಕೆ ಬರಬೇಕು. ಅದರಿಂದ ಗಣಿತದ ಸಮಸ್ಯೆಗಳಲ್ಲಿ ಅವನ್ನು ಸರಾಗವಾಗಿ ಬಳಸಿಕೊಂಡು ಮುಂದುವರಿಯುವುದು ಸಾಧ್ಯವಾಗುವುದು. ಅವನ್ನು ಮುಖ್ಯವಾಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅಗತ್ಯವಾಗಿ ವಿದ್ಯಾರ್ಥಿಗಳು ಸಾಧಿಸಬೇಕು. ಗಣಿತಬೋಧನೆಗೆ ಯಾವ ಕ್ರಮವನ್ನೇ ಅನುಸರಿಸಲಿ ಅಭ್ಯಾಸ ಕಾರ್ಯಕ್ರಮಕ್ಕೆ ಅವಕಾಶ ಇದ್ದೇ ಇರಬೇಕು. ಅಂಕಗಣಿತದ ಯಾವ ಪ್ರತಿಕ್ರಿಯೆಯಲ್ಲೇ ಆಗಲಿ ಅವು ಪಾತ್ರವಹಿಸುವುದರಿಂದ ಆ ಕೌಶಲಗಳನ್ನು ಸಾಧಿಸುವುದು ಅಗತ್ಯ. ಅಂಕಗಣಿತದ ನಾಲ್ಕು ಮೂಲ ಕೌಶಲಗಳೆಲ್ಲ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಾಲೆಯನ್ನು ಬಿಡುವ ವೇಳೆಗೆ ಚೆನ್ನಾಗಿ ಸಿದ್ಧಿಸಿರಬೇಕು. ಪ್ರೌಢಶಾಲೆಯಲ್ಲೂ ಈ ಕೌಶಲಗಳು ವೃದ್ಧಿಯಾಗಬೇಕು. ಉನ್ನತ ಶಿಕ್ಷಣದ ಹಂತದಲ್ಲೂ ಗಣಿತದ ಅನೇಕ ವಿಧಾನಗಳನ್ನೂ ಪ್ರಕ್ರಿಯೆಗಳನ್ನೂ ಅಭ್ಯಸಿಸಿ ರೂಢಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಗಣಿತದ ಯಾವ ಬೋಧನ ಕ್ರಮವೇ ಆಗಲಿ ಅದರ ಅಂಗವಾಗಿ ಅಭ್ಯಾಸಕ್ಕೂ ಅವಕಾಶ ಕಲ್ಪಿಸಿಕೊಳ್ಳಬೇಕಾಗುತ್ತದೆ.

ಈಚೆಗೆ ಹಲವಾರು ಕಾರಣಗಳಿಂದ ಅಭ್ಯಾಸ ಪಾಠಕ್ಕೆ ಶಾಲಾ ಕಾಲೇಜುಗಳಲ್ಲಿ ಅವಕಾಶ ಕಡಿಮೆಯಾಗುತ್ತಿದೆ. ಗಣಿತದ ಶಿಕ್ಷಣದಲ್ಲಿ ಗುಣಮಟ್ಟವಿಳಿಯಲು ಇದೂ ಒಂದು ಕಾರಣವೆಂದು ತೋರುತ್ತದೆ.

**ಪ್ರಶ್ನೋತ್ತರ ವಿಧಾನ :** ಇದನ್ನು ಒಂದು ವಿಶಿಷ್ಟ ಬೋಧನಕ್ರಮವೆನ್ನುವುದಕ್ಕಿಂತ ಎಲ್ಲ ಬೋಧನಕ್ರಮಗಳಲ್ಲೂ ವಿದ್ಯಾರ್ಥಿಗಳ ಆಲೋಚನೆಯನ್ನು ನಿರ್ದೇಶಿಸಲು ಬಳಸಬಹುದಾದ ಒಂದು ತಂತ್ರವೆಂದು ಪರಿಗಣಿಸಬಹುದು. ಆದರೆ ಪಾಠದ ಎಲ್ಲ ಹಂತಗಳಲ್ಲೂ ಈ ತಂತ್ರವನ್ನು ಬಳಸಬೇಕಾಗುವುದರಿಂದ ಇದೂ ಒಂದು ವಿಶಿಷ್ಟ ಬೋಧನಕ್ರಮವೆಂದು ಕೆಲವರು ಭಾವಿಸುವರು. ಪಾಠದ ಪೀಠಿಕಾಹಂತದಲ್ಲಿ ಆ ವಿಷಯಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ಪೂರ್ವಾನುಭವಗಳನ್ನು ಕುರಿತ, ವಿಶಾಲ ಅರ್ಥ ನಿರೀಕ್ಷಿಸುವ, ಪ್ರಶ್ನೆ ಹಾಕುವರು. ಆಗ ಬರುವ ಉತ್ತರಗಳನ್ನು ನಿರ್ದೇಶಿಸಿಕೊಂಡು ಮುಂದಿನ ಸಮಸ್ಯೆಯ ಕಡೆ ಅವರು ಉದ್ದೇಶವನ್ನು ಕೇಂದ್ರೀಕರಿಸುವಂತೆ ಮಾಡುವರು. ಅನಂತರ ವಿಷಯ ಪರಿಚಯದ ಅಂತಸ್ತಿನಲ್ಲಿ ತಿಳಿಸಬೇಕಾದ ಅಂಶಗಳನ್ನು ಸ್ವಲ್ಪ ಸ್ವಲ್ಪವಾಗಿ ವಿದ್ಯಾರ್ಥಿಗಳು ಅರಿತುಕೊಳ್ಳುವಂತೆ ಮಾಡಲು ಸಣ್ಣ ಸಣ್ಣ ಉತ್ತರ ಬಯಸುವ ಪ್ರಶ್ನೆಗಳನ್ನು ಬಳಸುವರು. ಅವುಗಳ ಸಹಾಯದಿಂದ ವಿದ್ಯಾರ್ಥಿಗಳು ಚಟುವಟಿಕೆಯಿಂದಿದ್ದು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವರು. ಪ್ರಶ್ನೆಗಳನ್ನು ಇಡೀ ತರಗತಿಗೆ ಕೇಳಿ ಕೆಲವು ಕ್ಷಣಗಳ ವಿರಾಮದ ಅನಂತರ ಒಬ್ಬ ನಿರ್ದಿಷ್ಟ ವಿದ್ಯಾರ್ಥಿಯನ್ನು ನಿರ್ದೇಶಿಸಿ ಉತ್ತರ ಹೇಳಿಸುವುದು ವಾಡಿಕೆ. ಇದರಿಂದ ಇಡೀ ತರಗತಿಯೇ ಆ ಬಗ್ಗೆ ಆಲೋಚನೆಯಲ್ಲಿ ತೊಡಗಿ ಚಟುವಟಿಕೆಯಿಂದಿರುತ್ತದೆ. ಜೊತೆಗೆ, ವಿದ್ಯಾರ್ಥಿಗಳು ತಮ್ಮ ತಮ್ಮ ಪ್ರಯತ್ನದಿಂದಲೇ ತಾವು ಕಲಿಯುತ್ತಿರುವುದಾಗಿಯೂ ಭಾವಿಸಿ ಉತ್ತೇಜಿತರಾಗುತ್ತಾರೆ. ಉದ್ದೇಶಿತ ವಿಷಯವನ್ನು ಪರಿಚಯ ಮಾಡಿಕೊಂಡಮೇಲೆ ಪುನರಾವರ್ತನೆಗಾಗಿ ಮತ್ತೆ ಪ್ರಶ್ನೆ ಹಾಕಿ ಉತ್ತರ ಹೇಳಿಸುವುದುಂಟು. ಪಾಠಮುಗಿದ ಮೇಲೆ ಪರೀಕ್ಷಾರ್ಥ ಮನೆಗೆಲಸಕ್ಕೂ ಪ್ರಶ್ನೆಗಳನ್ನು ಕೊಡಬಹುದು. ಈ ವಿಧಾನದಲ್ಲಿ ಗಣಿತದ ಪಾಠ ಬೋಧಿಸುವುದು ಪ್ರಾಥಮಿಕ ಹಂತದಲ್ಲಿ ಹೆಚ್ಚಾಗುತ್ತಲೂ ಮೇಲ್ವರ್ಗದ ಶಿಕ್ಷಣ ಸಂಸ್ಥೆಗಳಲ್ಲಿ ಕಡಿಮೆಯಾಗುತ್ತಲೂ ಹೋಗುತ್ತದೆ.

**ನಿರ್ದೇಶಿತ ಅಧ್ಯಯನ ವಿಧಾನ :** ಗಣಿತವನ್ನು ಸಾಮೂಹಿಕವಾಗಿ ಬೋಧಿಸಿದರೂ ವೈಯಕ್ತಿಕ ಗಮನವನ್ನು ಕೊಡಲು ಅಧ್ಯಾಪಕರಿಗೆ ಅವಕಾಶವಾಗುವಂತೆ ರೂಪಿಸಿರುವ ಒಂದು ವಿಶಿಷ್ಟ ಕ್ರಮ. ಇಡೀ ತರಗತಿಗೆ ಗಣಿತದ ಸಮಸ್ಯೆಗಳನ್ನು ಕೊಟ್ಟು ವಿದ್ಯಾರ್ಥಿಗಳು ಅವನ್ನು ಬಿಡಿಸಲು ನಿರತರಾಗಿರುವಾಗ ಬೇಕೆನಿಸಿದವರಿಗೆ ಅಗತ್ಯ ನೆರವು ನೀಡುತ್ತ ಅಧ್ಯಾಪಕರು ಇಡೀ ತರಗತಿಯನ್ನು ನಿರ್ದೇಶಿಸುವರು. ಅವರವರ ಶಕ್ತಿಸಾಮರ್ಥ್ಯಗಳಿಗನುಗುಣವಾಗಿ ವಿದ್ಯಾರ್ಥಿಗಳು ಸಮಸ್ಯೆಗಳನ್ನು ಬಿಡಿಸುತ್ತ ಹೋಗಬಹುದು. ತರಗತಿಯಲ್ಲಿ ಪ್ರತಿಭಾವಂತರು ಹೆಚ್ಚು ಸಮಸ್ಯೆಗಳನ್ನೂ ಮಿಕ್ಕವರು ಕಡಿಮೆ ಸಮಸ್ಯೆಗಳನ್ನೂ ಪೂರೈಸಬಲ್ಲರು. ಕೊಟ್ಟಿರುವ ಸಮಸ್ಯೆಗಳನ್ನು ತರಗತಿಯಲ್ಲೇ ಮಾಡಿ ಮುಗಿಸಲಾಗದವರು ಮನೆಯಲ್ಲಿ ಮುಗಿಸಬಹುದು. ಈ ವಿಧಾನದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಅಗತ್ಯವೆನಿಸಿದಾಗ ಅಧ್ಯಾಪಕರು ಸಹಾಯ ಮಾಡಲು ಕಾದೇ ಇರುತ್ತಾರೆ. ಕಷ್ಟವಿರುವೆಡೆ ಅವರ ಸಹಾಯದಿಂದ ಮುಂದುವರಿಯುವಾಗ ವಿದ್ಯಾರ್ಥಿಗಳು ಗಣಿತದ ತತ್ತ್ವ, ವಿಧಾನ, ಕೌಶಲ –ಇವನ್ನೆಲ್ಲ ಚೆನ್ನಾಗಿ ಪರಿಚಯ ಮಾಡಿಕೊಳ್ಳುವರು. ಒಂದೇ ತತ್ತ್ವದ ಆಧಾರದ ಮೇಲೆ ರೂಪುಗೊಂಡಿರುವ ಹಲವಾರು ಸಮಸ್ಯೆಗಳನ್ನು ಬಿಡಿಸುವ ಅವಕಾಶವಿರುವುದರಿಂದ ವಿದ್ಯಾರ್ಥಿಗಳಿಗೆ ಆ ಮುಖವಾದ ಅಭ್ಯಾಸವೂ ಆದ ಹಾಗಾಗುತ್ತದೆ. ಸಾಮೂಹಿಕ ಬೋಧನೆಯಲ್ಲಿ ವೈಯಕ್ತಿಕ ಗಮನವೀಯುವುದು ಅಸಾಧ್ಯವೆಂಬ ಟೀಕೆಯನ್ನು ಈ ವಿಧಾನ ನಿವಾರಿಸುತ್ತದೆ. ಜೊತೆಗೆ ವೈಯಕ್ತಿಕ ವಿಧಾನದ ಉತ್ತಮಾಂಶಗಳನ್ನೆಲ್ಲ ಹೊಂದಿಸಿಕೊಳ್ಳುತ್ತದೆ.

ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಗಣಿತಬೋಧನೆಗೆ ಈ ವಿಧಾನ ತುಂಬ ಉಪಯಕ್ತವೆನಿಸಿದೆ. ಉನ್ನತ ಪ್ರೌಢಶಾಲೆಗಳಲ್ಲೂ ಇದನ್ನು ಸ್ವಲ್ಪಮಟ್ಟಿಗೆ ಬಳಸಬಹುದು.

ತರಗತಿಯಲ್ಲಿ ಅಧ್ಯಾಪಕರು ಹಿಂದುಳಿದ ಬಾಲಕರಿಗೆ ನೆರವು ನೀಡುತ್ತ ಮಿಕ್ಕವರನ್ನು ಮರೆಯುವುದುಂಟು. ಆಗ ಪ್ರತಿಭಾವಂತ ಮಕ್ಕಳಿಗೆ ಬೇಸರವಾಗಬಹುದು. ಅವರ ಬುದ್ಧಿಶಕ್ತಿ ಫಲದಾಯಕ ಮಾರ್ಗದಲ್ಲಿ ಪ್ರವಹಿಸದೆ ಅಡ್ಡದಾರಿ ಹಿಡಿಯಬಹುದು. ಆದ್ದರಿಂದ ಅಂದಿಗಂದಿಗೆ ಅವರ ಕಾರ್ಯವನ್ನೂ ನೋಡುತ್ತ ಸೂಕ್ತ ಉತ್ತೇಜನಾದಿ ನಿರ್ದೇಶನ ನೀಡುವುದು ಅಗತ್ಯ. ಈ ಬೋಧನಕ್ರಮ ನುರಿತ ಅಧ್ಯಾಪಕರ ನಿರ್ದೇಶನದಲ್ಲಿ ಬಹು ಪರಿಣಾಮಕಾರಿಯಾಗಬಲ್ಲುದು.

**ಪಠ್ಯ ವಿಷಯವನ್ನು ಆಧಾರ ಮಾಡಿಕೊಂಡಿರುವ ಬೋಧನಕ್ರಮ :** ಇದು ಒಂದು ಪ್ರತ್ಯೇಕವೂ ವಿಶಿಷ್ಟವೂ ಆದ ಬೋಧನ ಕ್ರಮವಲ್ಲವಾದರೂ ಗಣಿತದ ಯಾವ ಯಾವ ವಿಷಯಬೋಧನೆಗೆ ಯಾವ ಯಾವ ಕ್ರಮ ಪರಿಣಾಮಕಾರಿಯಾಗುವುದೆಂದು ನಿರ್ಧರಿಸಿಕೊಂಡು ಆ ವಿಧಾನದಲ್ಲಿ ಆಯಾ ವಿಷಯವನ್ನು ಬೋಧಿಸುವುದು ಈ ವಿಧಾನದ ಉದ್ದೇಶ. ಅವುಗಳಲ್ಲಿ ಮುಖ್ಯವಾದ ಎರಡನ್ನು ಇಲ್ಲಿ ವಿವರಿಸಿದೆ.

ವಿಕಾಸ (ಅಭಿವೃದ್ಧಿ) ವಿಧಾನ (ಡೆವಲಪ್‌ಮೆಂಟಲ್ ಮೆಥಡ್) : ಗಣಿತದ ಒಂದು ನಿರ್ದಿಷ್ಟ ವಿಷಯಬೋಧನೆಗೆ ಯಾವ ವಿಧಾನ ಪರಿಣಾಮಕಾರಿಯಾಗಬಲ್ಲದು ಎಂಬುದನ್ನು ನಿರ್ಧರಿಸಿಕೊಂಡು ಆ ವಿಧಾನವನ್ನು ಆ ವಿಷಯಬೋಧನೆಗೆ ಅನುಸರಿಸುವುದೇ ಈ ವಿಧಾನದ ವೈಶಿಷ್ಟ್ಯ. ಎಂದಮೇಲೆ ಇದು ಒಂದು ಪ್ರತ್ಯೇಕ ಬೋಧನವಿಧಾನವೇ ಅಲ್ಲ. ವಿಷಯವನ್ನು ಆಧಾರಮಾಡಿಕೊಂಡು ಸೂಕ್ತ ಬೋಧನಕ್ರಮವನ್ನು ಆರಿಸಿಕೊಳ್ಳುವ ಒಂದು ವಿವೇಚನೆ ಮಾತ್ರ. ಉದಾ : ಗೋಳದ ಗಾತ್ರ= $^{3}/_{4}\pi r^2$ ಎಂಬ ಸೂತ್ರವನ್ನು ಬೋಧಿಸಬೇಕಾದರೆ ಅನುಕ್ರಮ ವಿಧಾನ ಉತ್ತಮ; ಆ ಸೂತ್ರವನ್ನು ಕಲಿಯುವಾಗ ವಿದ್ಯಾರ್ಥಿಗಳು ಪ್ರತಿಯೊಂದು ಹಂತವನ್ನೂ ಅರಿತಿರುವರೇ ಎಂದು ಪರೀಕ್ಷಿಸಲು ಪ್ರಶ್ನೋತ್ತರ ವಿಧಾನ ಅನುಕೂಲ. ಅದರ ಉಪಯೋಗವನ್ನು ಮಕ್ಕಳು ಅರಿತಿದ್ದಾರೆಯೆ ಎಂದು ದೃಢಪಡಿಸಿಕೊಳ್ಳಲು ನಿರ್ದೇಶಿತ ವ್ಯಾಸಂಗ ವಿಧಾನ ಸಹಕಾರಿಯಾಗಬಲ್ಲದು. ಹೀಗೆಯೇ ಇತರ ವಿಷಯಗಳ ಬೋಧನೆಗೂ ಸೂಕ್ತವೆನಿಸುವ ಬೋಧನವಿಧಾನಗಳನ್ನು ಗುರುತಿಸಬಹುದು. ಒಂದೇ ಬೋಧನವಿಧಾನದಿಂದ ಕಲಿಯುವ ಮಕ್ಕಳಿಗೆ ಅದರಿಂದ ಹುಟ್ಟಿಕೊಳ್ಳಬಹುದಾದ ಬೇಸರವನ್ನು ಈ ವಿಧಾನ ನಿವಾರಿಸುತ್ತದೆ.

**ಘಟಕ ಪದ್ಧತಿ (ಯೂನಿಟ್ ಪ್ಲಾನ್)** : ಒಂದು ಅಥವಾ ಹೆಚ್ಚು ತರಗತಿಯ ಕಾಲಾವಧಿಗಳಿಗೆ ಸಾಕಾಗುವಂತೆ, ಹಾಗೂ ಉದ್ದೇಶಿತ ಜ್ಞಾನ, ಮನೋಭಾವ, ಕೌಶಲ್ಯ ಇತ್ಯಾದಿಗಳನ್ನು ಆ ವಿಷಯ ಬೋಧನೆಯಿಂದ ಸಾಧಿಸಲು ಸಾಧ್ಯವಾಗುವಂತೆ ಪಠ್ಯವಿಷಯವನ್ನು ವಿಶಿಷ್ಟ ಭಾಗ ಇಲ್ಲವೇ ಘಟಕವನ್ನಾಗಿ ವಿಭಾಗಿಸಿಕೊಂಡು ಬೋಧನೆಗೆ ಅಳವಡಿಸಿಕೊಳ್ಳುವುದೇ ಈ ವಿಧಾನದ ವೈಶಿಷ್ಟ್ಯ. ಇದು ಅಮೆರಿಕದ ಪ್ರೌಢಶಾಲೆಗಳಲ್ಲಿ ಈಚೆಗೆ ಪ್ರಚಾರಕ್ಕೆ ಬರುತ್ತಿರುವ ಒಂದು ಬೋಧನ ಕ್ರಮ. ಒಂದು ಘಟಕ ಒಂದು ತರಗತಿಯ ಕಾಲಾವಧಿಗೆ ಮುಗಿಯಬಹುದು; ಅಥವಾ ಹಲವು ಕಾಲಾವಧಿಗಳಲ್ಲಿ ಅದನ್ನು ಬೋಧಿಸಬೇಕಾಗಬಹುದು. ಮೊದಲು ಅಧ್ಯಾಪಕರು ಮಕ್ಕಳಲ್ಲಿ ಸಾಧಿಸಬೇಕಾದ ಉದ್ದೇಶಗಳನ್ನು ನಿರ್ಧರಿಸಿಕೊಂಡು ಅವನ್ನು ಸಾಧಿಸಲು ನೆರವಾಗುವಂತೆ ವಿಷಯ ಘಟಕವನ್ನು ಆರಿಸಿಕೊಳ್ಳುವರು. ಅದಕ್ಕೆ ನೆರವಾಗುವಂತೆ ವಿಷಯದ ವಿವರಗಳನ್ನು ಜೋಡಿಸಿಕೊಂಡು ವಿದ್ಯಾರ್ಥಿಗಳ ಅಭಿರುಚಿ ಆಸಕ್ತಿಗಳಿಗೂ ಪೂರ್ವ ಜ್ಞಾನ ಮತ್ತು ಬುದ್ಧಿಮಟ್ಟಕ್ಕೂ ಅನುಗುಣವಾಗುವಂಥ ಶೈಕ್ಷಣಿಕ ಚಟುವಟಿಕೆಗಳನ್ನು ಜೋಡಿಸಿಕೊಳ್ಳುವರು. ಗಣಿತದ ಕೋಷ್ಟಕಗಳ ರಚನೆ, ರೇಖಾಗಣಿತದ ನಕ್ಷೆಗಳ ರಚನೆ, ಕ್ಷೇತ್ರಫಲಗಳನ್ನೂ ಘನಫಲಗಳನ್ನೂ ಕಂಡುಹಿಡಿಯುವುದು, ದತ್ತಾಂಶಗಳ ಸಹಾಯದಿಂದ ಸಮಸ್ಯೆ ಬಿಡಿಸುವುದು ಇತ್ಯಾದಿಗಳು ಘಟಕಗಳಿಗೆ ಉದಾಹರಣೆಗಳು. ಈ ವಿಧಾನದಲ್ಲಿ ಹಲವು ನಿರ್ದಿಷ್ಟ ಹಂತಗಳನ್ನೂ (ಸ್ಟೆಪ್ಸ್) ಗುರುತಿಸಬಹುದು. ಮೊದಲು ಅಧ್ಯಾಪಕರು ಘಟಕಕ್ಕೆ ಸಂಬಂಧಿಸಿದಂತೆ ಪೂರ್ವಜ್ಞಾನ ಪರಿಚಯ ಮಾಡಿಕೊಡುವರು; ಅನಂತರ ವಿಷಯವನ್ನು ಪ್ರದರ್ಶಿಸಿ ಪೋಷಿಸುವರು; ಆಮೇಲೆ ಚರ್ಚೆ, ವ್ಯಾಖ್ಯಾನ, ವಿವರಣೆ, ಪ್ರಶ್ನೋತ್ತರ – ಇವುಗಳ ಸಹಾಯದಿಂದ ವಿಷಯವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ನೆರವಾಗುವರು. ಅನಂತರ ವಿಷಯದ ಬೇರೆ ಬೇರೆ ಅಂಶಗಳಿಗೆ ಸಂಬಂಧ ಕಲ್ಪಿಸಿಕೊಳ್ಳುವಂತೆ ಮಾಡುವರು; ಕೊನೆಗೆ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಉದ್ದೇಶಿತ ಗುರಿ ಸಾಧಿಸುವರು, ಎಷ್ಟರಮಟ್ಟಿಗೆ ಕಲಿತದ್ದು ಅವರಿಗೆ ಉಪಯುಕ್ತವೆನಿಸುವುದು ಎಂಬುದನ್ನು ಪರೀಕ್ಷಿಸಿ ನೋಡುವರು. ಈ ಐದು ಹಂತಗಳು ಒಂದೇ ಕಾಲಾವಧಿಯಲ್ಲಿ ಮುಗಿಯಬಹುದು ಅಥವಾ ಹಲವು ಕಾಲಾವಧಿಗಳಿಗೆ ವಿಸ್ತರಿಸಬಹುದು. ನುರಿತ ಬೋಧಕರು ಈ ವಿಧಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಬಹುದಾದರೂ ಸಾಮಾನ್ಯ ಅಧ್ಯಾಪಕರ ನೇತೃತ್ವದಲ್ಲಿ ವಿದ್ಯಾರ್ಥಿಗಳು ವಿಷಯದ ವ್ಯವಸ್ಥಿತ ಸ್ವರೂಪದ ಜ್ಞಾನವನ್ನು ಸಾಧಿಸಲಾಗದವರಾಗಬಹುದು. (ಎಸ್.ಎಸ್.ಕೆ.)

**ಗಣಿತ ಭೌತವಿಜ್ಞಾನ** : ಭೌತವಿಜ್ಞಾನದ ಆಧಾರ ನಿಯಮಗಳನ್ನು ಅಂಗೀಕರಿಸಿಕೊಂಡು ಅದರ ಸಿದ್ಧಾಂತಗಳಿಗೂ ಅವುಗಳಿಂದ ಉದ್ಭವಿಸುವ ಸಮಸ್ಯೆಗಳಿಗೂ ಗಣಿತ ವಿಧಾನಗಳಿಂದ ಅರ್ಥ ಮತ್ತು ಪರಿಹಾರಗಳನ್ನು ಅನ್ವೇಷಿಸುವ ಶಾಸ್ತ್ರ (ಮ್ಯಾತ್‌ಮ್ಯಾಟಿಕಲ್ ಫಿಸಿಕ್ಸ್). ಸೈದ್ಧಾಂತಿಕ ಭೌತವಿಜ್ಞಾನವೆಂದು ಸಹ ಕರೆಯುವುದುಂಟು. ವಿಜ್ಞಾನಿಗಳು ಅನೇಕ ವರ್ಷಗಳಿಂದಲೂ ಪ್ರಯೋಗಗಳ ಮೂಲಕ ಪಡೆದಿರುವ ಸಮಸ್ತ ಫಲಿತಾಂಶಗಳನ್ನೂ ಕ್ರೋಡೀಕರಿಸಿ ಅವುಗಳೊಡನೆ ಸಂಬಂಧ ಬೆಳೆಸುವುದು, ಪ್ರಯೋಗಶಾಲೆಯಲ್ಲಿ ಮುಂದೆ ಪಡೆಯುವ ಫಲಿತಾಂಶಗಳು ಸಂಖ್ಯಾಕಲನೀಯವಾಗಿ ಎಷ್ಟಿರಬೇಕು ಎಂಬುದರ ಬಗ್ಗೆ ಭವಿಷ್ಯ ನುಡಿಯುವುದು, ವೈವಿಧ್ಯಪೂರ್ಣ ಫಲಿತಾಂಶಗಳನ್ನು ಸಮಂಜಸವಾದ ಒಂದೇ ಒಂದು ವಿವರಣೆಯೊಳಗೆ ಸುತ್ತುಗಟ್ಟಲು ಸಹಾಯಕವಾಗುವ ಮೂಲಭೂತವಾದ ಕೆಲವೇ ಕೆಲವು ಪರಿಕಲ್ಪನೆಗಳನ್ನು ಮಾಡಿಕೊಂಡು, ಅವುಗಳ ಮೂಲಕ ಭೌತವಿಜ್ಞಾನದ ವಿವಿಧ ಭಾಗಗಳನ್ನು ಒಟ್ಟುಗೂಡಿಸುವುದು ಇವೇ ಮುಂತಾದವು ಸೈದ್ಧಾಂತಿಕ ಭೌತವಿಜ್ಞಾನದ ಧ್ಯೇಯಗಳು.

ಸೈದ್ಧಾಂತಿಕ ಭೌತವಿಜ್ಞಾನ ಮೊಟ್ಟಮೊದಲಿಗೆ ಗತಿವಿಜ್ಞಾನದ ಅಧ್ಯಯನದೊಡನೆ ಪ್ರಾರಂಭಿಸಿ ಲಗ್ರಾಂಜ್ ಮತ್ತು ಹ್ಯಾಮಿಲ್ಟನ್ನರ ಚಲನ ಸಮೀಕರಣದಲ್ಲಿ ಕೊನೆಗೊಂಡಿತು. ಯಾವುದೇ ವಿದ್ಯುತ್ಕಾಂತ ಕ್ಷೇತ್ರಕ್ಕೆ ಸಲ್ಲುವ ಮ್ಯಾಕ್ಸ್‌ವೆಲ್ ಸಮೀಕರಣಗಳನ್ನು ಹ್ಯಾಮಿಲ್ಟನ್ ಸಮೀಕರಣಗಳ ರೂಪದಲ್ಲಿ ಬರೆದಾಗ ವಿದ್ಯುತ್ಕಾಂತ ಮತ್ತು ಗತಿಶಾಸ್ತ್ರಗಳೆರಡೂ ಸಮನ್ವಯಗೊಂಡವು. ಹಾಗೆಯೇ ಉಷ್ಣತೆ, ಪುಟಿತತೆ, ವಿದ್ಯುದ್ವಾಹಕತ್ವ ಇವೇ ಮೊದಲಾದ ವಸ್ತುಗಳ ಸ್ಥೂಲ ಲಕ್ಷಣಗಳನ್ನು ಸೂಕ್ಷ್ಮಕಣಗಳಾದ ಪರಮಾಣು ಮತ್ತು ಅಣುಗಳ ನಿರಂತರ ಚಲನೆ ಮತ್ತು ಲಕ್ಷಣಗಳನ್ನು ಒಳಗೊಂಡಂತೆ ವರ್ಣಿಸುವುದು ಸಾಧ್ಯವಾಗಿದೆ. ಭೌತವಿಜ್ಞಾನದಲ್ಲಿ ಸತತವಾಗಿ ನಡೆಯುತ್ತಿರುವ ಈ ಪ್ರಯತ್ನ ಸಿದ್ಧಾಂತರೂಪದಲ್ಲಿ ಮಾರ್ಪಟ್ಟಾಗ ಸೈದ್ಧಾಂತಿಕ ಭೌತವಿಜ್ಞಾನ ಬೆಳೆಯುತ್ತದೆ.

ದ್ರವ್ಯದ ಮೂಲಕಣಗಳಿಗೆ ಕಣಗಳ ಲಕ್ಷಣಗಳು ಮಾತ್ರವೇ ಅಲ್ಲ, ಅಲೆ ಲಕ್ಷಣಗಳೂ ಇರುತ್ತವೆ ಎಂದು ಪ್ರಯೋಗಗಳು ತೋರಿಸಿಕೊಟ್ಟ ವಿಷಯಗಳಿಂದ ಆಧುನಿಕ ಭೌತವಿಜ್ಞಾನದಲ್ಲಿ ಕ್ವಾಂಟಮ್ ಗತಿವಿಜ್ಞಾನ ಎಂಬ ಒಂದು ಹೊಸ ಅಧ್ಯಾಯ 20ನೆಯ ಶತಮಾನದ ಪ್ರಾರಂಭದಿಂದಲೂ ಬೆಳೆದುಬಂದಿದೆ. ಹೀಗೆ ಪ್ರಕೃತಿಯ ರಹಸ್ಯಗಳನ್ನು ಕೂಲಂಕಷವಾಗಿ ಕೆಲವೇ ಕೆಲವು ಪರಿಕಲ್ಪನೆಗಳ ಮೂಲಕ–ಉದಾಹರಣೆಗೆ ಸೂಕ್ಷ್ಮಕಣ ಮತ್ತು ಅವುಗಳ ಲಕ್ಷಣಗಳ ಮೂಲಕ–ಅರ್ಥಮಾಡಿಕೊಳ್ಳಲು ಭೌತವಿಜ್ಞಾನಿ ಸತತವಾಗಿ ಪ್ರಯತ್ನಿಸುತ್ತಿರುತ್ತಾನೆ. ಅಂದರೆ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ಭೌತವಿಜ್ಞಾನಗಳು ತೀವ್ರವಾಗಿ ಪರಸ್ಪರ ಪ್ರಭಾವ ಬೀರುತ್ತವೆ. ಸಿದ್ಧಾಂತವನ್ನು ಮಾರ್ಪಡಿಸಲು ಹೊಸ ಪ್ರಯೋಗಗಳೇ ಕಾರಣ; ಅಲ್ಲದೆ ಸಿದ್ಧಾಂತದ ಪರಿಕಲ್ಪನೆಗಳನ್ನು ಪ್ರಯೋಗಗಳೇ ಸಮರ್ಥಿಸಬೇಕು.

ಅನೇಕ ವೇಳೆ ಸೈದ್ಧಾಂತಿಕ ಭೌತವಿಜ್ಞಾನಿ ಕಾಲ್ಪನಿಕ ಪ್ರಯೋಗಗಳನ್ನು ಊಹಿಸಿಕೊಳ್ಳುತ್ತಾನೆ. ಹೈಸನ್‌ಬರ್ಗ್‌ನ $\gamma$–ಕಿರಣ ಸೂಕ್ಷ್ಮದರ್ಶಕ ಇಂಥ ಕಾಲ್ಪನಿಕ ಉಪಕರಣಗಳಲ್ಲಿ ಒಂದು. ಇಲ್ಲಿ ಅತ್ಯಂತ ಸೂಕ್ಷ್ಮವಾದ ಒಂದು ಕಣದ ಸ್ಥಾನವನ್ನು ನಿರ್ಧರಿಸಬೇಕಾದಾಗ ಅದನ್ನು ಸೂಕ್ತವಾದ ಬೆಳಕಿನಿಂದ ಬೆಳಗಿಸಿ ಅದು ಚದರಿಸಿ ಕಳಹುವ ಬೆಳಕನ್ನು ಸೂಕ್ಷ್ಮದರ್ಶಕದ ಮೂಲಕ ಗ್ರಹಿಸಬೇಕು. ಹೀಗೆ ಮಾಡಿದರೂ ಬೆಳಕಿನ ಅಲೆಯುದ್ದದ ಕಣದ ಸ್ಥಾನನಿರ್ಧರಣೆಯಲ್ಲಿ ಒಂದು ಅನಿಶ್ಚಿತತೆಯನ್ನು ಉಂಟುಮಾಡುತ್ತದೆ. ಆದರೆ ಅಲೆಯುದ್ದ ಕಡಿಮೆಯಾದಷ್ಟೂ ಹೀಗೆ ಸ್ಥಾನ ನಿರ್ಧರಣೆಯಲ್ಲಿ ಉಂಟಾಗುವ ದೋಷ ಕಡಿಮೆ. ಹೀಗೆಂದು ಸ್ಥಾನವನ್ನು ಖಚಿತವಾಗಿ ನಿರ್ಧರಿಸುವ ಉದ್ದೇಶದಿಂದ ಅಲೆಯುದ್ದ ಅತ್ಯಂತ ಕಡಿಮೆಯಾದ ಬೆಳಕಿನಿಂದ (ಅಂದರೆ $\gamma$ ಕಿರಣದಿಂದ) ಸೂಕ್ಷ್ಮಕಣವನ್ನು ಬೆಳಗಿಸಿದರೆ ಕಣವೇ ಚದರಿ ಸೂಕ್ಷ್ಮದರ್ಶಕದ ಕಡೆಗೆ ರವಾನಿಸುವ ಬೆಳಕಿನ ಕಣದ ಸಂವೇಗ ಹೆಚ್ಚುತ್ತದೆ. ಅಂದರೆ ಕಣ ಕಳೆದುಕೊಳ್ಳುವ ಸಂವೇಗ ಹೆಚ್ಚುತ್ತದೆ. ಆದ್ದರಿಂದ ಯಾವ ದೋಷವೂ ಇಲ್ಲದೆ ಕಣದ ಸ್ಥಾನವನ್ನು ಕಂಡುಹಿಡಿಯುವ ಯತ್ನದಲ್ಲಿ ಕಣದ ಸಂವೇಗವನ್ನು ಪಲ್ಲಟಗೊಳಿಸಿದಂತಾಯಿತು. ಅಂದರೆ ಅದರ ಸ್ಥಾನವನ್ನು ಖಚಿತವಾಗಿ ನಿರ್ಧರಿಸುವ ಕಾಲದಲ್ಲಿ ಅಷ್ಟೇ ಖಚಿತವಾಗಿ ಕಣದ ಸಂವೇಗ ಎಷ್ಟೆಂದು ತಿಳಿಯಲಾಗುವುದಿಲ್ಲ. ಹೀಗೆ ಪರಸ್ಪರ ಸಂಬಂಧವಿರುವ ಕೆಲವು ಲಕ್ಷಣಗಳನ್ನು ಯಾವ ದೋಷವೂ ಇಲ್ಲದೆ ಏಕಕಾಲದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ ಎಂಬ ಅನಿಶ್ಚಿತಾತತ್ತ್ವ ಎಂಬ ಒಂದು ತತ್ತ್ವವೊಂದನ್ನು ಸೈದ್ಧಾಂತಿಕ ಭೌತವಿಜ್ಞಾನಿ ಈ ಕಾಲ್ಪನಿಕ ಪ್ರಯೋಗದಿಂದ ಬೆಳೆಸಿರುತ್ತಾನೆ.

ಗಣಿತ ಭೌತವಿಜ್ಞಾನ ಎಂಬ ಪದ ಬಹುಮಟ್ಟಿಗೆ ಸೈದ್ಧಾಂತಿಕ ಭೌತವಿಜ್ಞಾನ ಎಂಬ ಪದದೊಡನೆ ಸಮಾನಾರ್ಥಕ ಪದ. ಆದರೆ ಅವುಗಳ ನಡುವೆ ಸಾಕಷ್ಟು ವ್ಯತ್ಯಾಸ ಉಂಟು. ವಿದ್ಯುತ್ಕಾಂತ ಕ್ಷೇತ್ರದಲ್ಲಿನ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳಲು ಮೈಕೇಲ್ ಫ್ಯಾರಡೆ (1791–1867) ಮತ್ತು ಮ್ಯಾಕ್ಸ್‌ವೆಲ್ (1831–1879) ಎಂಬ ವಿಜ್ಞಾನಿಗಳು ಅನುಸರಿಸಿದ ವಿಧಾನಗಳು ಈ ಎರಡು ಭೌತ ವಿಜ್ಞಾನಗಳಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ. ವಿದ್ಯುತ್ಕಾಂತ ಪ್ರೇರಕತ್ವದ ನಿಯಮದ ಸಂಶೋಧನೆ, ವಸ್ತುಗಳ ಅನುಕಾಂತತ್ವ ಮತ್ತು ಪ್ರತಿಕಾಂತತ್ವ ಇವೇ ಮೊದಲಾದ ಗುಣಗಳನ್ನು ಗಣಿತಶಾಸ್ತ್ರದ ಸಹಾಯವಿಲ್ಲದೆ ವಿದ್ಯುತ್ ಮತ್ತು ಕಾಂತಕ್ಷೇತ್ರಗಳನ್ನು ವಾಸ್ತವವಾಗಿಯೂ ಬಲರೇಖೆಗಳು ಆವರಿಸಿವೆ ಎಂದು ಭಾವಿಸಿ ಫ್ಯಾರಡೆ ವಿವರಿಸಿದ. ಆದರೆ ಈ ಚಿತ್ರವನ್ನು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವಂತೆ ಮ್ಯಾಕ್ಸ್‌ವೆಲ್ ಗಣಿತರೂಪಕ್ಕೆ ಪರಿವರ್ತಿಸಿದ. 1855ರಲ್ಲಿ ಈತ 'ಆನ್ ಫ್ಯಾರಡೇಸ್ ಲೈನ್ಸ್ ಆಫ್ ಫೋರ್ಸ್' ಎಂಬ ಲೇಖನ ಒಂದನ್ನು ಬರೆದ. ಗೌಸ್, ವೆಬರ್, ರೀಮಾನ್, ಫ್ರಾನ್ಸ್ ಮತ್ತು ಕಾರ್ಲ್ ನಾಯ್‌ಮಾನರು ಬಲರೇಖೆಗಳು ವಿದ್ಯುತ್ ಮತ್ತು ಕಾಂತಕ್ಷೇತ್ರಗಳಲ್ಲಿ ಸಂಚರಿಸುತ್ತಿವೆ ಎಂಬುದಾಗಿ ಕಲ್ಪಿಸಿಕೊಂಡು ಆಕಾಶದಲ್ಲಿ ದೂರದಿಂದ ಆಕರ್ಷಣೆಯನ್ನು ಉಂಟು ಮಾಡುವ ಬಲದ ಕೇಂದ್ರವೊಂದನ್ನು ಮಾತ್ರ ಭಾವಿಸಿಕೊಂಡರು. ಹೀಗೆ ಫ್ಯಾರಡೆಯ ಅಭಿಪ್ರಾಯಗಳನ್ನು ಗಣಿತರೂಪಕ್ಕೆ ಭಾಷಾಂತರಿಸಿದಾಗ ಈ ಎರಡು ವಿಧಾನಗಳಿಂದಲೂ ಬಂದ ಫಲಿತಾಂಶಗಳು ಐಕ್ಯಗೊಂಡವು. ಈ ಗಣಿತ ವಿಧಾನವನ್ನು ಅನುಸರಿಸಿ 1873ರಲ್ಲಿ ದ್ಯುತಿ ವಿಜ್ಞಾನ ಮತ್ತು ವಿದ್ಯುತ್ ಗತಿಶಾಸ್ತ್ರಗಳೆರಡನ್ನೂ ಒಟ್ಟುಗೂಡಿಸಿವಂಥ ಒಂದು ಗ್ರಂಥವನ್ನು ಮ್ಯಾಕ್ಸ್‌ವೆಲ್ ಬರೆದ. ಹೀಗೆ ಇದುವರೆಗೂ ಬೇರೆ ಬೇರೆ ಎಂದು ತಿಳಿದಿದ್ದ ಭೌತವಿಜ್ಞಾನದ ಎರಡು ಪ್ರಮುಖ ಭಾಗಗಳನ್ನು ಗಣಿತ ಭಾಷೆ ಒಟ್ಟುಗೂಡಿಸಿತು.

ಕ್ಷೇತ್ರದ ತುಣುಕು ಮತ್ತು ನಿತ್ಯ ಅನುಭವದಲ್ಲಿ ಕಂಡುಬರುವ ಯಾಂತ್ರಿಕ ಪ್ರತಿರೂಪಗಳ–ಉದಾಹರಣೆಗೆ ಎಳೆದು ಕಟ್ಟಿದ ದಾರಗಳು ಅದುಮಿರಿಸಿದ ಪ್ರವಾಹಿಗಳು, ಅವುಗಳ ಆವರ್ತ ಚಲನೆ ಇತ್ಯಾದಿ–ನಡುವೆ ಸಾದೃಶ್ಯಗಳನ್ನು ಭಾವಿಸಿಕೊಂಡು ಸೈದ್ಧಾಂತಿಕ ಭೌತವಿಜ್ಞಾನ ಬೆಳೆಯುತ್ತದೆ. ಅಭಿಜಾತ ಭೌತವಿಜ್ಞಾನದ ಅಭಿಪ್ರಾಯಗಳನ್ನು ಗಣಿತೀಯವಾಗಿ ಸ್ಪಷ್ಟಪಡಿಸಿದರೂ ಅವೆಲ್ಲ ಯಾಂತ್ರಿಕ ಪ್ರತಿರೂಪಗಳನ್ನು ಅವಲಂಬಿಸಿರುತ್ತವೆ. ಪರಮಾಣು ಮತ್ತು ಅವುಗಳ ನಡುವೆ ಇರುವ ಪ್ರತಿಕ್ರಿಯೆಗಳು ವಾಸ್ತವವಾಗಿಯೂ ಅಸ್ತಿತ್ವವುಳ್ಳವು ಎಂದು ಭಾವಿಸಿ ಭೌತ ವಿದ್ಯಮಾನಗಳನ್ನೆಲ್ಲ ವಿವರಿಸಲಾಗುತ್ತದೆ. ಗಣಿತವನ್ನು ಬಳಸಿ ವಿವರಣೆಯನ್ನು ಒದಗಿಸಿದರೂ ಅದು ಕೇವಲ ಒಂದು ಉಪಕರಣ, ವಿವರಣೆಗೆ ಬೇಕಾದ

ಭಾಷೆ ಮಾತ್ರ ಎಂದು ಅದನ್ನು ಪರಿಗಣಿಸುತ್ತೇವೆ. ಸಿದ್ಧಾಂತವನ್ನು ಈ ರೀತಿ ಬೆಳೆಸಿದಾಗ ಪರಮಾಣುಗಳನ್ನು ವಿವರಿಸುವುದು ಅಗತ್ಯವಿಲ್ಲ. ಅವನ್ನು ಭೌತ ಪ್ರಪಂಚದ ಅಡಿಗೊರಡುಗಳು ಎಂದು ಮಾತ್ರ ಭಾವಿಸಬೇಕು. ಹೀಗೆ ಮಾಡಿ ಅಭಿಜಾತ ಪರಮಾಣ್ವಿಕ ಸಿದ್ಧಾಂತವನ್ನು ಭೌತವಿಜ್ಞಾನಿಗಳು ಬೆಳೆಸಿರುತ್ತಾರೆ. ಈ ಪರಿಕಲ್ಪನೆಗಳ ಮೂಲಕ ಸ್ಥೂಲ ಭೌತವಿಜ್ಞಾನದಲ್ಲಿ ಕಂಡುಬರುವ ಲಕ್ಷಣಗಳೆಲ್ಲವನ್ನೂ ವಿವರಿಸಲು ಸಾಧ್ಯವಾಗಿದೆ.

ಇದಕ್ಕೆ ವಿರುದ್ಧವಾಗಿ ಐನ್‌ಸ್ಟೈನನ ಸಾಪೇಕ್ಷತಾ ಸಿದ್ಧಾಂತ ಚಾರಿತ್ರಿಕವಾಗಿ ಗಣಿತ ಭೌತವಿಜ್ಞಾನದ ಅತ್ಯಂತ ಘನವಾದ ಒಂದು ಉದಾಹರಣೆ. ಇಲ್ಲಿ ಮಿಂಕೋವಿಸ್ಕಿ ನಾಲ್ಕು-ಸದಿಶಗಳು, ರೀಮಾನಿಯನ್ ಸದಿಶಗಳು ಇವೇ ಮೊದಲಾದ ಗಣಿತದ ಅಮೂರ್ತ ಭಾವನೆಗಳನ್ನು ಶುದ್ಧ ಗಣಿತಶಾಸ್ತ್ರಜ್ಞರು ನಿತ್ಯವೂ ಬಳಸುವ ಸಾಮಗ್ರಿಗಳಿಂದ ಸೃಷ್ಟಿಸಿ ಪಡೆಯಲಾಯಿತು. ಅಷ್ಟೇ ಅಲ್ಲದೆ ಪ್ರಾಯೋಗಿಕ ಅಂಶಗಳು ದೊರಕಿಸಿಕೊಡುವ ವೇಗ, ಬಲ, ಕ್ಷೇತ್ರಚರಗಳು ಇವೇ ಮೊದಲಾದವುಗಳೊಡನೆ ಈ ಅಮೂರ್ತ ಭಾವನೆಗಳ ವಿಶ್ಲೇಷಕ ಗುಣಗಳು ಸರಿಹೊಂದುತ್ತವೆ ಎಂದು ತಿಳಿದುಕೊಳ್ಳಲಾಯಿತು. ಹೀಗೆ ಮಾಡಿ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತವನ್ನು ಐನ್‌ಸ್ಟೈನ್ ಬೆಳೆಸಿರುತ್ತಾನೆ. ಈ ಅಮೂರ್ತ ಭಾವನೆಗಳ ನಡುವೆ ಗಣಿತ ಸಂಬಂಧಗಳನ್ನು ಸ್ಥಾಪಿಸಿದಾಗ ಪ್ರಯೋಗಗಳು ಆಗಲೇ ತೋರಿಸಿಕೊಟ್ಟಿರುವ ಅಥವಾ ಇನ್ನೂ ತೋರಿಸದೇ ಮತ್ತು ನಿರೀಕ್ಷಿಸಲಾಗದ ಅಂಶಗಳನ್ನು ಅವು ಒದಗಿಸುತ್ತವೆ. ಹೀಗೆ ಯಾವುದೇ ರೀತಿಯ ಕಾಲ್ಪನಿಕ ಅಡಿಗೊರಡುಗಳನ್ನು ಕೋರದೆ ಭೌತ ವಿದ್ಯಮಾನಗಳನ್ನೆಲ್ಲ ಸ್ಪಷ್ಟಪಡಿಸುವ ಸ್ವಸಮಂಜಸವಾದ ಗಣಿತ ವಿವರಣೆ ಗಣಿತ ಭೌತವಿಜ್ಞಾನದ ಉದ್ದೇಶ; ಮತ್ತು ಅದನ್ನು ಸೈದ್ಧಾಂತಿಕ ಭೌತ ವಿಜ್ಞಾನದಿಂದ ಬೇರ್ಪಡಿಸುತ್ತದೆ.

ಗಣಿತ ಭೌತವಿಜ್ಞಾನಿಗಳು ತಮ್ಮ ನಿರಂತರ ಚಟುವಟಿಕೆಗಳಲ್ಲಿ ಪಡೆದ ಹಲವಾರು ಅಮೂರ್ತ ಭಾವನೆಗಳನ್ನು ಅತಾರ್ಕಿಕ ಎಂದು ಶುದ್ಧ ಗಣಿತಶಾಸ್ತ್ರಜ್ಞರು ಅನೇಕ ವೇಳೆ ತಳ್ಳಿಹಾಕುವುದುಂಟು. ಆದರೆ ಈಚೆಗೆ ಅವು ಶುದ್ಧ ಗಣಿತಶಾಸ್ತ್ರದ ಶಬ್ದ ಸಂಪತ್ತಿನಲ್ಲಿ ಒಂದು ಗಣ್ಯಸ್ಥಾನವನ್ನು ಪಡೆದಿವೆ. ಆಲಿವರ್ ಹೆವಿಸೈಡ್‌ನ ಪರಿಕರ್ಮಕ ಕಲನಶಾಸ್ತ್ರ (ಆಪರೇಶನ್ ಕ್ಯಾಲ್ಕುಲಸ್), ವಿಲಾರ್ಡ್ ಗಿಬ್ಬನ ಸದಿಶ ವಿಶ್ಲೇಷಣೆ ಮತ್ತು ಪಿ.ಎ.ಎಂ. ಡಿರಾಕನ ಡೆಲ್ಟ ಉತ್ಪನ್ನ ತಂತ್ರಗಳು ಕೆಲವು ಉದಾಹರಣೆಗಳು ಮಾತ್ರ. ಹೀಗೆಯೇ, ಯಾವ ಉದ್ದೇಶವೂ ಇಲ್ಲದೆ ಬೆಳೆಸಿದ ಶುದ್ಧ ಗಣಿತಶಾಸ್ತ್ರದ ಭಾಗಗಳು ಭೌತವಿದ್ಯಮಾನಗಳನ್ನು ವಿವರಿಸಲು ಅತ್ಯಂತ ಉಪಯುಕ್ತ ಮತ್ತು ಗಮನಾರ್ಹವಾದ ಉಪಕರಣಗಳೆಂದು ಗಣಿತ ಭೌತವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ವಿಶ್ವ ವಿಜ್ಞಾನದ ಸಮಸ್ಯೆಗಳನ್ನು ವಿಶ್ಲೇಷಿಸುವುದರಲ್ಲಿ ಅಯೂಕ್ಲಿಡೀಯ ಜ್ಯಾಮಿತಿ, ಆಧುನಿಕ ಕ್ವಾಂಟಮ್ ಗತಿವಿಜ್ಞಾನದಲ್ಲಿ ಉತ್ಪನ್ನ ಆಕಾಶ, ಕ್ವಾಂಟಮ್ ಕ್ಷೇತ್ರ ಸಿದ್ಧಾಂತದಲ್ಲಿ ಸ್ಪಿನಾರ್ ಅಥವಾ ದ್ವಿಚರ ರೂಪಗಳ ವಿಶ್ಲೇಷಣೆ ಕೆಲವು ಉದಾಹರಣೆಗಳು. ಪುನಃ ಗಣಿತ ಭೌತವಿಜ್ಞಾನಿ ಮತ್ತು ಶುದ್ಧ ಗಣಿತ ಶಾಸ್ತ್ರಜ್ಞರ ನಡುವೆ ಸಹೋದ್ಯಮ ಗಣಿತಶಾಸ್ತ್ರದ ಅಮೂಲ್ಯವಾದ ಕೆಲವು ಭಾಗಗಳನ್ನು ಬೆಳೆಸಿವೆ. ಗ್ರೂಪ್ ಸಿದ್ಧಾಂತ, ಪರಿಕರ್ಮಕ ವಿಶ್ಲೇಷಣೆ, ಯಾದೃಚ್ಛಿಕ ಉತ್ಪನ್ನಗಳ ಸಿದ್ಧಾಂತಗಳು ಹೀಗೆ ಬೆಳೆದು ಬಂದಿರುವ ಗಣಿತಶಾಸ್ತ್ರದ ಭಾಗಗಳು.

ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದಾಗ ಗಣಿತ ಭೌತವಿಜ್ಞಾನ ಮತ್ತು ಅನ್ವಯ ಗಣಿತಶಾಸ್ತ್ರಗಳನ್ನು ಪ್ರತ್ಯೇಕಿಸಿ ತಿಳಿಯುವುದು ಕಷ್ಟವಾಗುತ್ತದೆ. ಅನೇಕ ವೇಳೆ ಒಬ್ಬ ವಿದ್ವಾಂಸನೇ ಎರಡು ಕ್ಷೇತ್ರಗಳಲ್ಲಿಯೂ ನಡೆದಿರುವ ಸಂಶೋಧನೆಗಳಿಗೆ ಕಾರಣನಾಗಿರುತ್ತಾನೆ. ಐಸಾಕ್ ನ್ಯೂಟನ್, ಲಪ್ಲಾಸ್, ಗೌಸ್, ಪಾಂಕಾರೆ, ಡೇವಿಡ್ ಹಿಲ್ಬರ್ಟ್, ಅರ್ನ್‌ಸ್ಟ್ ಮಾಕ್ ಇಂಥ ವಿದ್ವಾಂಸರಲ್ಲಿ ಕೆಲವರು.

ಯಾವುದಾದರೊಂದು ಕಾಲದಲ್ಲಿ ಫಲದಾಯಕವಾದ ದಿಶೆಯಲ್ಲಿ ಗಣಿತ ಭೌತ ವಿಜ್ಞಾನಿಗಳ ಚಟುವಟಿಕೆಗಳು ಗುಂಪುಗೂಡಿಕೊಳ್ಳುವ ಪ್ರವೃತ್ತಿಯುಳ್ಳವಾಗುತ್ತವೆ ಎಂದು ಗಣಿತ ಭೌತವಿಜ್ಞಾನದ ಚರಿತ್ರೆ ಸ್ಪಷ್ಟಪಡಿಸುತ್ತದೆ. ಈಚಿನ ವರ್ಷಗಳಲ್ಲಿ ಉನ್ನತ ಶಕ್ತಿ ಭೌತವಿಜ್ಞಾನದ ವಿದ್ಯಮಾನಗಳನ್ನು ಅಂದರೆ ಸೂಕ್ಷ್ಮಕಣಗಳ ಸೃಷ್ಟಿ ಮತ್ತು ನಾಶ ಇವೇ ಮೊದಲಾದವನ್ನು ವಿವರಿಸಲು ಬೆಳೆಸಿದ ಕ್ವಾಂಟಮ್ ಕ್ಷೇತ್ರದ ಸೈದ್ಧಾಂತಿಕ ವಿಧಾನಗಳನ್ನು ಘನಸ್ಥಿತಿ ಭೌತವಿಜ್ಞಾನ ಮತ್ತು ಸಂಖ್ಯಾಕಲನೀಯ ಗತಿಶಾಸ್ತ್ರಗಳಲ್ಲಿ ಬಳಸುತ್ತಿದ್ದಾರೆ. ಈ ಚಟುವಟಿಕೆಗಳೊಡನೆ ಗಣಿತ ಭೌತವಿಜ್ಞಾನದ ದರ್ಶನ ವಿಕಾಸಗೊಳ್ಳುತ್ತಿದೆ. (ಸಿ.ಕೆ.ವಿ.)

**ಗಣಿತವಿಜ್ಞಾನ :** ಪ್ರಗತಿಪಥದಲ್ಲಿರುವ ಯಾವುದೇ ಶಾಸ್ತ್ರದ ಚಟುವಟಿಕೆಗಳನ್ನಾಗಲಿ ಸ್ಥಿರೀಕೃತ ವ್ಯಾಖ್ಯೆಯೊಂದರ ಚೌಕಟ್ಟಿನೊಳಗೆ ಬಂಧಿಸಿಡಲು ಸಾಧ್ಯವಿಲ್ಲ. ಗಣಿತಶಾಸ್ತ್ರದ ಚಟುವಟಿಕೆಗಳಾದರೂ ಈ ಮಾತಿಗೆ ಅಪವಾದವಾಗದೆ ಇರುವುದರಲ್ಲಿ ಅಚ್ಚರಿಯೇನಿಲ್ಲ. ಅನೇಕ ಸಹಸ್ರಮಾನಗಳ ದೀರ್ಘ ವೈವಿಧ್ಯಮಯ ಇತಿಹಾಸದುದ್ದಕ್ಕೂ ಈ ಶಾಸ್ತ್ರದ ಚೈತನ್ಯಪೂರ್ಣತೆ ಅವಿಚ್ಛಿನ್ನವಾಗಿ ವರ್ಧಿಸುತ್ತಲೇ ಬಂದಿದೆ. ಏನನ್ನೋ ಎಣಿಸುವ ಸಲುವಾಗಿ ಪ್ರಾಣಿಗಳ ಎಲುಬುಗಳ ಮೇಲೆ ಆದಿಮಾನವ ಕಚ್ಚುಗಳ ಸಾಲುಗಳನ್ನು ಕೆತ್ತಿಟ್ಟಿರುವ ಗತಕಾಲದ ದಾಖಲೆಗಳು ಇಂದಿಗೂ ಅಲ್ಲಲ್ಲಿ ಉಳಿದಿವೆ; ಮೊರೇವಿಯದಲ್ಲಿ (ಜೆಕೊಸ್ಲೊವಾಕಿಯ) ದೊರೆತ ಅಂಥ ಒಂದು ಮೂಳೆಯ ಮೇಲೆ (ಅದು ಮರಿತೋಳವೊಂದರ ಅಸ್ಥಿ) ಐವತ್ತೈದು ಕಚ್ಚುಗಳಿದ್ದವು. ಈ ದಾಖಲೆಗಳು ಸುಮಾರು ಮೂವತ್ತು ಸಹಸ್ರ ವರ್ಷಗಳಷ್ಟು ಪ್ರಾಚೀನವಾದವು. ಅಲ್ಲಿಗೆ ಮಾನವನಲ್ಲಿ ನಿರ್ದಿಷ್ಟ ಗಣಿತಪ್ರಜ್ಞೆ ಉಗಮಿಸಿದ್ದು ಮೂಲತಃ ಎಣಿಕೆಯ ದಾಖಲೆಗಳ ನಿರ್ಮಾಣದೊಂದಿಗೆ ಎಂದು ಭಾವಿಸಬಹುದಾದರೆ ಆ ಉಗಮ ನಮಗೆ ತಿಳಿದಿರುವ ಎಲ್ಲ ನಾಗರಿಕತೆಗಳಿಗಿಂತ ಕನಿಷ್ಠ ಕೆಲವು ದಶಸಹಸ್ರ ವರ್ಷಗಳಷ್ಟು ಹಿಂದೆಯೇ ಜರುಗಿದ ಘಟನೆ ಎಂದಾಯಿತು. ತರುವಾಯ ಪ್ರಾಚೀನ ನಾಗರಿಕತೆಗಳ ಕಾಲದಲ್ಲಿ ಗಣಿತಶಾಸ್ತ್ರದ ಅಧ್ಯಯನ ವಸ್ತು ವಿಶಿಷ್ಟವಾಗಿ ಎಣಿಕೆಯ ಸಂಖ್ಯೆಗಳು, ಅಳತೆಯ ರಾಶಿಗಳು ಹಾಗೂ ದೃಗ್ಗೋಚರ ಆಕೃತಿಗಳು ಎಂಬ ಭಾವನೆ ರೂಪುಗೊಂಡಿತು. ಇದೇ ಮನೋಭಿಪ್ರಾಯ ಗಣಿತರಂಗದಿಂದ ತುಸು ದೂರ ಉಳಿದಿರುವ ಅನೇಕ ಜನರಲ್ಲಿ ಇಂದೂ ಬೇರೂರಿಯೇ ಇದೆ. ಆದರೆ ಹತ್ತೊಂಬತ್ತನೆಯ ಶತಮಾನದಲ್ಲಿ ಕುಡಿಯೊಡೆದ ಅಯೂಕ್ಲಿಡೀಯ ಜ್ಯಾಮಿತಿ (ನಾನ್-ಯೂಕ್ಲಿಡಿಯನ್ ಜೊಮಿಟ್ರಿ), ಬೂಲೀಯ ಬೀಜಗಣಿತ (ಬೂಲಿಯನ್ ಆಲ್ಜಿಬ್ರ) ಮುಂತಾದ ಕೆಲ ನವ್ಯ ಶಾಖೆಗಳು ಗಣಿತಶಾಸ್ತ್ರದ ವ್ಯಾಪ್ತಿಗೆ ಅನಿರೀಕ್ಷಿತ ಆಯಾಮಗಳನ್ನು ನೀಡತೊಡಗಿದವು. ಅಲ್ಲಿಂದೀಚೆಗೆ ಸಂಖ್ಯೆ, ರಾಶಿ ಮತ್ತು ಗೋಚರಾಕೃತಿಗಳ ವ್ಯಾಸಂಗ ಗಣಿತಾಭ್ಯಾಸದ ಮೊದಲ ಹೆಜ್ಜೆಯಾಗಬಲ್ಲದೆ ವಿನಾ ಸಮಗ್ರ ಗಣಿತವಾಗಲಾರದು ಎಂಬ ಅಭಿಪ್ರಾಯಪಲ್ಲಟ ಅಧಿಕೃತ ಗಣಿತವಲಯಗಳಲ್ಲಿ ಕ್ರಮೇಣ ಮೂಡಿಬಂದಿತು. ತಾತ್ತ್ವಿಕ ಮನೋವೃತ್ತಿಯ ಹಲವಾರು ಗಣಿತಜ್ಞರು ತಮ್ಮ ಶಾಸ್ತ್ರದ ನಿಷ್ಕೃಷ್ಟ ಸ್ವರೂಪವನ್ನು ಈ ಬೆಳವಣಿಗೆಯ ಹೊಸ ಬೆಳಕಿನಲ್ಲಿ ಪುನರ್ನಿರ್ಣಯಿಸುವ ಪ್ರಯತ್ನಗಳನ್ನು ಸ್ವಾಭಾವಿಕವಾಗಿಯೇ ಕೈಗೊಂಡರು. ತತ್ಫಲವಾಗಿ ಗಣಿತದ ನೈಜಸ್ವರೂಪ ಅಡಗಿರುವುದು ಬಹುಮಟ್ಟಿಗೆ ಅದರ ಚಿಂತನಮಾರ್ಗದಲ್ಲೇ ಹೊರತು ವಸ್ತುವಿನಲ್ಲಲ್ಲ ಎಂಬ ಅಂಶ ಹೆಚ್ಚು ಹೆಚ್ಚು ಮಂದಿ ಗಣಿತಜ್ಞರಿಗೆ ಮನವರಿಕೆಯಾಗತೊಡಗಿತು. ಯಾವ ಯಾವ ಉಕ್ತಿಗಳನ್ನು ಸತ್ಯವೆಂದು ಅಂಗೀಕರಿಸಿದಲ್ಲಿ ಮತ್ತೆ ಯಾವ ಯಾವ ಉಕ್ತಿಗಳು ಸತ್ಯವೆಂದು ಸಿದ್ಧಪಡುತ್ತವೆ ಎಂದು ಜನರು ವಿವೇಚಿಸುವಾಗಲೆಲ್ಲ ಗಣಿತ ಅಂಕುರಿಸುತ್ತದೆ, ಹಾಗೂ ಗಣಿತದ ಬಹುಭಾಗವೆಲ್ಲ ಅಂಕುರಿಸಿರುವುದು ಇಂಥ ವಿವೇಚನೆಯ ಪರಿಣಾಮವಾಗಿಯೇ. ಆದಿಯಲ್ಲಿ ಅಂಗೀಕರಿಸಲಾಗುವ ಉಕ್ತಿಗಳೇ ಆದ್ಯುಕ್ತಿಗಳು (ಆಕ್ಸಿಯಂಸ್/ ಪಾಸ್ಟುಲೇಟ್ಸ್), ಅವುಗಳಿಂದ ಸಿದ್ಧಪಡುವ ಉಕ್ತಿಗಳೇ ಪ್ರಮೇಯಗಳು (ಥಿಯರಂಸ್). ಹೀಗೆಂದ ಮಾತ್ರಕ್ಕೆ ಗಣಿತದ ದೃಷ್ಟಿಯಲ್ಲಿ ಪರಿಕಲ್ಪನೆಗಳನ್ನು (ಕಾನ್‌ಸೆಪ್ಟ್ಸ್) ಕುರಿತ ಅರ್ಥ ಪ್ರಜ್ಞೆ ಯಾವ ಪಾತ್ರವನ್ನೂ ವಹಿಸುವುದಿಲ್ಲವೆಂದಾಗಲಿ, ಇಲ್ಲವೇ ಯಾವುದೋ ಒಂದು ಗೌಣವಾದ ಪಾತ್ರವನ್ನು ವಹಿಸುತ್ತದೆಂದಾಗಲಿ ಬಗೆಯಲಾಗದು. ಉತ್ತಮ ಆದ್ಯುಕ್ತಿಗಳ ಆಯ್ಕೆಗೂ ವಿಶ್ವಾಸಾರ್ಹ ಸಾಧನಕ್ರಮಗಳ ರೂಪಣೆಗೂ ಹಿಂದಾಗಲಿ, ಇಂದಾಗಲಿ ಪರಿಕಲ್ಪನೆಗಳ ಅರ್ಥಪ್ರಜ್ಞೆಯೇ ಪ್ರಧಾನ ನಿರ್ಣಾಯಕ; ಅನಂತರ ಬರುವ ಯಾಂತ್ರಿಕ ಪರಿಕರ್ಮಗಳ ನಿರ್ವಹಣೆಯಲ್ಲಿ ಮಾತ್ರ ಅರ್ಥ ಹಿನ್ನೆಲೆಗೆ ಹಿಮ್ಮೆಟ್ಟಬಹುದು, ಅಷ್ಟೆ.

ಪ್ರಸಕ್ತ ಲೇಖನದ ವಿಷಯವನ್ನು ಕೆಳಗಿನ ಏಳು ಉಪಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗುವುದು: 1) ಧನ ಪೂರ್ಣಾಂಕಗಳು; 2) ಪರಿಮೇಯಗಳು ಮತ್ತು ಸರಳ ಬೀಜಗಣಿತ; 3) ಜ್ಯಾಮಿತಿ; 4) ವಿಶ್ಲೇಷಣೆ; 5) ಟಾಪಾಲಜಿ; 6) ಬೀಜಗಣಿತ ಮತ್ತು 7 ಗಣಿತಶಾಸ್ತ್ರದ ತಳಹದಿ.

**1 ಧನ ಪೂರ್ಣಾಂಕಗಳು :** ಆದಿಮಾನವ ಎಣಿಕೆಯ ಧನ ಪೂರ್ಣಾಂಕಗಳನ್ನು ಕಚ್ಚುಗಳು, ಬೊಟ್ಟುಗಳು ಮುಂತಾದ ಏಕರೂಪ ಪ್ರತೀಕಗಳ ಸಾಲುಗಳಿಂದ ವ್ಯಕ್ತಪಡಿಸುತ್ತಿದ್ದನಷ್ಟೆ. ಹಿಂದೂ-ಅರ್ಯಾಬಿಕ್ ದಶಮಾನ ಪದ್ಧತಿ ಎಂದು ಪ್ರಸಿದ್ಧವಾಗಿರುವ ಆಧುನಿಕ ಪ್ರತೀಕಯೋಜನೆಯಲ್ಲಾದರೋ ಈ ಸಂಖ್ಯೆಗಳನ್ನು 0, 1, 2, 3, 4, 5, 6, 7, 8, 9, ಎಂಬ ಹತ್ತು ಪ್ರತೀಕಗಳ ವಿವಿಧ ಕ್ರಮಸಂಯೋಜನೆಗಳಿಂದ ಸೂಚಿಸಲಾಗುತ್ತದೆ. ಧನ ಪೂರ್ಣಾಂಕಗಳ ಆಧುನಿಕ ಲಿಖಿತರೂಪಗಳು ಪ್ರತೀಕ ಭಾಷೆಯೊಂದರ ಪದ ಅಥವಾ ವಾಕ್ಯಗಳೆಂದೂ 0, 1, 2, .......... 9 ಎಂಬ ಗುರುತುಗಳು (ಅಂಕಿಗಳು) ಆ ವಾಕ್ಯಗಳಲ್ಲಿ ಕಾಣಿಸಿಕೊಳ್ಳುವ ಬಿಡಿ ಬಿಡಿ ಅಕ್ಷರಗಳೆಂದೂ ಭಾವಿಸಬಹುದು. ಆದಿಮಾನವನ ಲಿಖಿತಸಂಖ್ಯೆಗಳೂ ವಾಕ್ಯಗಳೇ ; ಆದರೆ ಅವೆಲ್ಲವೂ ಒಂದೇ ಒಂದು ಅಕ್ಷರದಿಂದ ರಚಿತವಾದ ವಾಕ್ಯಗಳು. ಆದಿಮಾನವ ನಿಯೋಜಿಸಿಕೊಂಡ ಸರಳ ಸಂಖ್ಯಾಭಾಷೆಗೆ ಇಂದೂ ಮೂಲಭೂತ ತಾತ್ತ್ವಿಕ ಮಹತ್ತ್ವವಿರುವುದರಿಂದ ಅದಕ್ಕೂ ಧನ ಪೂರ್ಣಾಂಕಗಳ ಆಧುನಿಕ ಅಭಿವ್ಯಕ್ತಿ ವ್ಯವಸ್ಥೆಗೂ ಇರುವ ಸಂಬಂಧವನ್ನು ಗುರುತಿಸುವುದು ಅತಿ ಮುಖ್ಯ. ಈ ಸಲುವಾಗಿ ಕಚ್ಚು ಅಥವಾ ಬೊಟ್ಟಿನ ಗುರುತನ್ನು T ಎಂದು ಬರೆಯೋಣ. ತತ್ಫಲವಾಗಿ ಒಂದು, ಎರಡು, ಮೂರು ಇತ್ಯಾದಿ ಸಂಖ್ಯೆಗಳು

ಆದಿಮಾನವನ ಪ್ರತೀಕಯೋಜನೆಯಲ್ಲಿ T, TT, TTT ಮೊದಲಾದ ರೂಪಗಳನ್ನು ತಾಳುತ್ತವೆ. ಇವೇ ಧನ ಪೂರ್ಣಾಂಕಗಳ ಆದಿಮರೂಪಗಳು. ಆದಿಮಾನವನ TTTTTTTTTT ಇಂದು 10 ಎಂಬ ಹೊಸ ರೂಪವನ್ನು ತಾಳಿದೆಯಷ್ಟೆ ; ಎಂತಲೇ TTTTTTTTTT ಎಂಬುದು ಆಧುನಿಕ ಸಂಖ್ಯಾಭಿವ್ಯಕ್ತಿ ಪದ್ಧತಿಯ ಪಾದ (ರ್‍ಯಾಡಿಕ್ಸ್/ ಬೇಸ್) ಎಂದು ಹೇಳುತ್ತೇವೆ. ಮಿಕ್ಕ ಧನ ಪೂರ್ಣಾಂಕಗಳೆಲ್ಲವನ್ನೂ ಬಿಟ್ಟು ಇದನ್ನೇ ಆಧುನಿಕ ಪದ್ಧತಿಯ ಪಾದವನ್ನಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಈ TTTTTTTTTT ಎಣಿಸಲು ಸಹಜವಾಗಿ ಒಗ್ಗಿಬರುವ ಮಾನವನ ಕೈಬೆರಳುಗಳ ಸಂಖ್ಯೆಯಾಗಿರುವುದೇ ಚಾರಿತ್ರಿಕ ಕಾರಣವಾಯಿತೆಂದು ನಂಬಲಾಗಿದೆ. ಆದರೆ ಶುದ್ಧ ಗಣಿತದ ದೃಷ್ಟಿಯಿಂದ ಇದು ಅನಂತ ಸಂಖ್ಯೆಯಷ್ಟು ಸಾಧ್ಯ ಆಯ್ಕೆಗಳ ಪೈಕಿ ಒಂದು ಮಾತ್ರ. ಪ್ರಸಕ್ತ ವಿವರಣೆಯ ದೃಷ್ಟಿಕೋನದಿಂದ TTTTTTTTTT ಯ ಉದ್ದ ತೀರ ಪ್ರತಿಕೂಲಕರವಾಗುವ ಕಾರಣ ಆಧುನಿಕ ದಶಮಾನ ಪದ್ಧತಿಯ (ಡೆಸಿಮಲ್ ಸಿಸ್ಟಮ್) ಬದಲಾಗಿ ಪ್ರಧಾನಾಂಶಗಳಲ್ಲಿ ಅದನ್ನೇ ಹೋಲುವ, ಆದರೆ ಲಾಂಬಿಕ TTTTTTTTTT ಯ ಬದಲು ಸಾಕಷ್ಟು ಮೊಟಕಾಗಿರುವ TTT ಯಷ್ಟನ್ನೇ ಪಾದವಾಗಿ ಉಳ್ಳ, ತ್ರಿಮಾನ ಪದ್ಧತಿಯನ್ನು (ಟರ್ನರಿ ಸಿಸ್ಟಮ್) ಕುರಿತು ಮೊದಲು ವಿವೇಚಿಸೋಣ. ಈ ತ್ರಿಮಾನ ಪದ್ಧತಿಯಲ್ಲಿ ಆದಿಮಾನವನ TTT ಯನ್ನು 10ಎಂದೂ ಅದಕ್ಕಿಂತ ಕಡಿಮೆಯಾದ TT ಮತ್ತು T ಗಳನ್ನು ಅನುಕ್ರಮವಾಗಿ 2 ಮತ್ತು 1 ಎಂದೂ ಬರೆಯಲಾಗುವುದು. (ಇಲ್ಲಿ ಕಾಣಿಸಿಕೊಂಡಿರುವ 0, 2 ಮತ್ತು 1 ಯಾವುದಾದರೂ ಮೂರು ಯಾದೃಚ್ಛಿಕ ಗುರುತುಗಳು ; ಅವಕ್ಕೆ ಬದಲು ಬೇರೆ ಯಾವುದಾದರೂ ಮೂರು ಗುರುತುಗಳನ್ನು ಸುಸಂಗತ ರೀತಿಯಲ್ಲಿ ಬಳಸಲು ಅಡ್ಡಿಯಿಲ್ಲ.) ಈಗ ಆದಿಮಾನವನ ಧನ ಪೂರ್ಣಾಂಕಗಳಿಗೆ (ಅಂದರೆ T ಗಳ ಸಾಲುಗಳಿಗೆ) ಅನುರೂಪವಾದ ತ್ರಿಮಾನ ಪೂರ್ಣಾಂಕಗಳನ್ನು ನಿರ್ಧರಿಸಲು ಕೆಳಗಿನ ನಾಲ್ಕು ವಿಧಿಗಳ ಮಾರ್ಕಫ್ ಅಲ್ಗಾರಿತಂ **(ನೋಡಿ)** ವಿಧಾನವನ್ನು ಪ್ರಯೋಗಿಸಬಹುದು:

ವಿಧಿ 1 : OTTT ಯನ್ನು TO ಎಂದು ಬದಲಾಯಿಸಿ.
ವಿಧಿ 2 : OTT ಯನ್ನು 2 ಎಂದು ಬದಲಾಯಿಸಿ.
ವಿಧಿ 3 : OT ಯನ್ನು 1 ಎಂದು ಬದಲಾಯಿಸಿ.
ವಿಧಿ 4 : ಪರಿಶೀಲಿತ ವಾಕ್ಯದ ಅತ್ಯಂತ ಎಡಗಡೆಯಲ್ಲಿ T ಇರುವುದಾದರೆ ಅದನ್ನು OT ಎಂದು ಬದಲಾಯಿಸಿ.

ಈ ವಿಧಿಗಳನ್ನು ಎಲ್ಲಿಯವರೆಗೆ ಸಾಧ್ಯವಾಗುತ್ತದೋ ಅಲ್ಲಿಯವರೆಗೆ ಅವನ್ನು ಬರೆದಿರುವ ಕ್ರಮದ ಆದ್ಯತೆಗೆ ಅನುಗುಣವಾಗಿ ಪ್ರಯೋಗಿಸುತ್ತ ಹೋಗುವುದೇ ಪ್ರಸ್ತುತ ಅಲ್ಗಾರಿತಂ ಕ್ರಿಯೆ. ಉದಾಹರಣೆಗೆ ಆದಿಮಾನವನ

TTT TTT TTT TTT TTT

ಸಂಖ್ಯೆಗೆ ಅನುರೂಪವಾದ ತ್ರಿಮಾನಾಭಿವ್ಯಕ್ತಿಯನ್ನು ಕಂಡುಹಿಡಿಯುವ ಮಾರ್ಗವನ್ನು ಪರಿಶೀಲಿಸಬಹುದು. ಮೇಲಿನ ವಾಕ್ಯದಲ್ಲಿ ಇರದ ಕಾರಣ O ಅದರ ಮೇಲೆ 1,2 ಮತ್ತು 3ನೆಯ ವಿಧಿಗಳ ಪ್ರಯೋಗ ಅಸಾಧ್ಯ. ಆದ್ದರಿಂದ ಅದನ್ನು ಮೊದಲಿಗೆ 4ನೆಯ ವಿಧಿ ಪ್ರಯೋಗಕ್ಕೆ ಗುರಿಪಡಿಸಬೇಕು.

<u>OTTT</u> TTT TTT TTT TTT

ಯನ್ನು ಪಡೆಯುತ್ತೇವೆ. ಇದರಲ್ಲಿ ಅಡಿಗೆರೆ ಹಾಕಿ ಸೂಚಿಸಿರುವ ವಿಭಾಗವನ್ನು ಗಮನಿಸಿದಾಗ ಇದರ ಮೇಲೆ 1,2 ಮತ್ತು 3ನೆಯ ವಿಧಿಗಳ ಪೈಕಿ ಯಾವೊಂದನ್ನು ಬೇಕಿದ್ದರೂ ಪ್ರಯೋಗಿಸಲು ಶಕ್ಯವಿದೆಯೆಂದು ಗೊತ್ತಾಗುವುದು. ಆದರೆ 1ನೆಯ ವಿಧಿ 2 ಮತ್ತು 3ನೇ ವಿಧಿಗಿಂತ ಮುಂಚೆ ನಮೂದಾಗಿರುವುದರಿಂದ ಆದ್ಯತೆ ಅದರ ಪ್ರಯೋಗಕ್ಕೆ ಸಲ್ಲುತ್ತದೆ. ಈಗ ಈ 1ನೆಯ ವಿಧಿಯ ಪ್ರಯೋಗದಿಂದ ನಮಗೆ T <u>OTTT</u> TTT TTT TTT ಎಂಬ ವಾಕ್ಯ ಲಭಿಸುವುದು. ನಮೂದಾಗಿರುವ ಎಲ್ಲಾ ವಿಧಿಗಳನ್ನೂ ಇದರ ಮೇಲೆ ಪ್ರಯೋಗಿಸಲು ಶಕ್ಯವಿರುವುದಾದರೂ ಆಗಲೇ ತಿಳಿಸಿರುವುದರಿಂದ ಪ್ರಯೋಗದ ಆದ್ಯತೆ ಸಲ್ಲುವುದು ಮೊದಲನೆಯ ವಿಧಿಗೇ. ಈ ಪ್ರಕಾರ ಮತ್ತೆ ಮತ್ತೆ 1ನೆಯ ವಿಧಿಯನ್ನೇ ಬಳಸುತ್ತ ಹೋದರೆ ಕ್ರಮವಾಗಿ TT <u>OTTT</u> TTT TTT:

TTT <u>OTTT</u> TTT ;

TTTT <u>OTTT</u> ಮತ್ತು

TT TTTO

ಎಂಬ ವಾಕ್ಯಗಳು ಫಲಿಸುತ್ತವೆ. ಕೊನೆಯ ವಾಕ್ಯವನ್ನು 1, 2 ಮತ್ತು 3ನೆಯ ವಿಧಿಪ್ರಯೋಗಗಳಿಗೆ ಗುರಿಪಡಿಸಲು ಸಾಧ್ಯವಿಲ್ಲದ ಕಾರಣ ಅದರ ಮೇಲೆ 4ನೆಯ ವಿಧಿಯನ್ನು ಪ್ರಯೋಗಿಸಿ <u>OTTT</u> TTOವನ್ನೂ ಬಳಿಕ 1ನೆಯ ವಿಧಿಯ ಪ್ರಯೋಗದಿಂದ T <u>OTT</u> O ವನ್ನೂ ರಚಿಸುತ್ತೇವೆ. T <u>OTT</u> O ನ ಮೇಲೆ 1ನೆಯ ವಿಧಿಪ್ರಯೋಗ ಅಸಾಧ್ಯ, ಮಿಕ್ಕೆಲ್ಲ ವಿಧಿಗಳ ಪ್ರಯೋಗ ಸಾಧ್ಯ. ನಿಷ್ಕರ್ಷಿತ ಆದ್ಯತೆಯಂತೆ ಅದರ ಮೇಲೆ 2ನೆಯ ವಿಧಿಯನ್ನು ಪ್ರಯೋಗಿಸಿ ಈಗ T20 ಎಂಬ ವಾಕ್ಯವನ್ನು ಪಡೆಯುತ್ತೇವೆ. ಇನ್ನೂ ಕೊನೆಯ ಎರಡು ಹೆಜ್ಜೆಗಳಲ್ಲಿ ಮೊದಲು 4ನೆಯ ವಿಧಿಯನ್ನು ಉಪಯೋಗಿಸಿ <u>OT</u> 20ಯನ್ನೂ ತರುವಾಯ 3ನೆಯ ವಿಧಿಯನ್ನು ಉಪಯೋಗಿಸಿ 120 ಯನ್ನೂ ರಚಿಸಬಹುದಷ್ಟೆ. ನಮೂದಾಗಿರುವ ಯಾವೊಂದು ವಿಧಿಯನ್ನೂ ಈ 120 ಮೇಲೆ ಪ್ರಯೋಗಿಸಲು ಸಾಧ್ಯವಿಲ್ಲದ ಕಾರಣ ಅಲ್ಗಾರಿತಂ ಕ್ರಿಯೆ ಇಲ್ಲಿಗೆ ಕೊನೆಗೊಂಡಿತು. ಅಂದ ಮೇಲೆ ಆದಿಮಾನವನ TTT TTT TTT TTT TTT ಗೆ ಅನುರೂಪವಾದ ತ್ರಿಮಾನ ಪದ್ಧತಿಯ ಸಂಖ್ಯಾಪ್ರತೀಕ 120. ಇದೇ ಪ್ರಕಾರ ಆದಿಮಾನವನ ಇತರ ಎಲ್ಲ ಸಂಖ್ಯಾಪ್ರತೀಕಗಳನ್ನೂ ತ್ರಿಮಾನ ಪದ್ಧತಿಗೆ ರೂಪಾಂತರಿಸಬಹುದು. ತ್ರಿಮಾನ ಪದ್ಧತಿಯ ಧನ ಪೂರ್ಣಾಂಕ (ಸೂಚಕ) ಪ್ರತೀಕಗಳೆಲ್ಲವೂ 0,1,2 ಎಂಬ ಮೂರೇ ಗುರುತುಗಳ ಕ್ರಮಸಂಯೋಜನೆಗಳಾಗಿರುತ್ತವೆ.

ಆದಿಮಾನವ ಸಂಖ್ಯಾಪ್ರತೀಕಗಳನ್ನು ಆಧುನಿಕ ದಶಮಾನ ಪದ್ಧತಿಗೆ ಪರಿವರ್ತಿಸಲು ಅನುಸರಿಸಬೇಕಾದ ಮಾರ್ಗವೂ ಈಗ ತಿಳಿಸಿರುವ ವಿಧಾನಕ್ಕೆ ಸದೃಶವಾದುದೇ. ಈ ಸಂದರ್ಭದಲ್ಲಿ ಮೇಲೆ ನಮೂದಿಸಿರುವ ನಾಲ್ಕೇ ವಿಧಿಗಳ ಅಲ್ಗಾರಿತಂನ ಬದಲು ಕೆಳಗಿನ ಹನ್ನೊಂದು ವಿಧಿಗಳ ಹೊಸ ಅಲ್ಗಾರಿತಮನ್ನು ಬಳಸಬೇಕಾಗುತ್ತದೆ, ಅಷ್ಟೆ:

ವಿಧಿ 1 : OTTTTTTTTTT ಯನ್ನು TO ಎಂದು ಮಾರ್ಪಡಿಸಿ.
ವಿಧಿ 2 : OTTTTTTTTT ಯನ್ನು 9 ಎಂದು ಬದಲಿಸಿ.
ವಿಧಿ 3: OTTTTTTTTಯನ್ನು 8 ಎಂದು ಬದಲಿಸಿ.
..........................................
ವಿಧಿ 9 : OTTಯನ್ನು 2 ಎಂದು ಬದಲಿಸಿ.
ವಿಧಿ 10 : OTಯನ್ನು 1 ಎಂದು ಬದಲಿಸಿ.
ವಿಧಿ 11 : ಪರಿಶೀಲಿತ ವಾಕ್ಯದ ಅತ್ಯಂತ ಎಡಗಡೆಯಲ್ಲಿ T ಇರುವುದಾದರೆ ಅದನ್ನು OT ಎಂದು ಮಾರ್ಪಡಿಸಿ.

ದಶಮಾನ ಮತ್ತು ತ್ರಿಮಾನಗಳಂಥ ಸಂಖ್ಯಾಪ್ರತೀಕ ಪದ್ಧತಿಗಳ ನಿಯೋಜನೆಯಲ್ಲಿ O ಚಿಹ್ನೆ ಅತಿ ಮುಖ್ಯವಾದ ಪಾತ್ರವನ್ನು ವಹಿಸಿರುವುದು ಇದೀಗ ಸ್ಪಷ್ಟವಾಗಿರಬೇಕು. ಪ್ರ.ಶ. ಸುಮಾರು 5 ರಿಂದ 8 ನೆಯ ಶತಮಾನಗಳ ನಡುವೆ ಹಿಂದೂ ಗಣಿತಜ್ಞರು ಈ ಚಿಹ್ನೆಯ ಅಗತ್ಯತೆಯನ್ನು ಪರಿಪೂರ್ಣವಾಗಿ ಮನಗಂಡು ಅದನ್ನು ಏನೂ ಇಲ್ಲದಿರುವಿಕೆ ಎಂಬ ಅಭಿಪ್ರಾಯದ ಶೂನ್ಯ ಪದದಿಂದ ನಿರ್ದೇಶಿಸಿದರು. ಅದಕ್ಕೂ ಕೆಲ ಶತಮಾನಗಳ ಹಿಂದೆ ಪ್ರಾಚೀನ ಬ್ಯಾಬಿಲೋನಿಯನ್ನರೂ ಮಧ್ಯ ಅಮೆರಿಕದ ಮಾಯ ಜನಾಂಗದವರೂ o ಗೆ ಸಮಾನವಾದ ಚಿಹ್ನೆಗಳನ್ನು ಅಲ್ಲಲ್ಲಿ ಬಳಸಿರುವ ದಾಖಲೆಗಳಿವೆ. ಬ್ಯಾಬಿಲೋನಿಯನ್ನರು ಶೂನ್ಯ ಚಿಹ್ನೆಯನ್ನು ಅವರ ಸಂಖ್ಯಾಪ್ರತೀಕಗಳ ಮಧ್ಯಸ್ಥಾನಗಳಲ್ಲಿ (ಉದಾಹರಣೆಗೆ 120) ಬಳಸುತ್ತಿದ್ದರೇ ವಿನಾ ಪ್ರಾಯಶಃ ತುದಿಗಳಲ್ಲಲ್ಲ. ಅವರ ಪ್ರತೀಕಪದ್ಧತಿ ಹತ್ತು ಮತ್ತು ಅರವತ್ತು ಎಂಬ ಎರಡೆರಡು ಪಾದಗಳನ್ನು ಅವಲಂಬಿಸುವ ಮಿಶ್ರತಳಿಯಾಗಿತ್ತು. ಮಾಯ ಜನಾಂಗದವರು ಬಳಸುತ್ತಿದ್ದ ಶೂನ್ಯ ಪ್ರತೀಕಗಳ ಪೈಕಿ ಕೆಲವಷ್ಟು ಇಪ್ಪತ್ತನ್ನೂ ನಿರ್ದೇಶಿಸುತ್ತಿದ್ದವು. ಅವರ ಪ್ರತೀಕಪದ್ಧತಿಯಲ್ಲಿ ಐದು, ಇಪ್ಪತ್ತು ಹಾಗೂ ಹದಿನೆಂಟು ಎಂಬ ಮೂರು ಪಾದಗಳ ಕೈವಾಡವಿರುತ್ತಿತ್ತು. ಇಂಥ ಕ್ಲಿಷ್ಟತೆಗಳಿಲ್ಲದೆ ಶೂನ್ಯ ಪ್ರತೀಕದ ಪೂರ್ಣ ಸುಸಂಗತ ಬಳಕೆಯನ್ನೂ ಜೊತೆಗೆ ಹತ್ತು ಮಾತ್ರವೇ ಪಾದವಾಗಿರುವ ಶುದ್ಧ ದಶಮಾನ ಪದ್ಧತಿಯನ್ನೂ ರೂಢಿಗೆ ತರುವಲ್ಲಿ ಮೊಟ್ಟಮೊದಲಿಗೆ ಹಿಂದೂ ಗಣಿತಜ್ಞರು ಯಶಸ್ವಿಯಾದರು. 9ನೆಯ ಶತಮಾನದಲ್ಲಿ ಹಿಂದೂ ಗಣಿತವನ್ನು ಅರಬ್ಬರು ಕಲಿತು ಅದನ್ನು ಮತ್ತಷ್ಟು ಸಂಸ್ಕರಿಸಿ ಯುರೋಪಿಗೂ ರವಾನಿಸಿದರು. ಧನಪೂರ್ಣಾಂಕಗಳ ಆಧುನಿಕ ದಶಮಾನ ಸಂಜ್ಞಾಪದ್ಧತಿಗೆ ಹಿಂದೂ–ಅರ್‍ಯಾಬಿಕ್ ಪದ್ಧತಿ ಎಂದು ಹೆಸರಾಗಲು ಇದೇ ಕಾರಣ.

ಆದಿಮಾನವನ ಧನಪೂರ್ಣಾಂಕಗಳಿಗೆ ಅನುರೂಪವಾದ ತ್ರಿಮಾನ ಹಾಗೂ ದಶಮಾನ ಪ್ರತೀಕಗಳನ್ನು ಗೊತ್ತುಮಾಡಿದಂತೆ ತ್ರಿಮಾನ, ದಶಮಾನಗಳಂಥ ಪದ್ಧತಿಗಳ ಧನಪೂರ್ಣಾಂಕಗಳನ್ನು ಆದಿಮಾನವನ ಪ್ರತೀಕಗಳಾಗಿ ಪುನಾರೂಪಾಂತರಿಸುವುದೂ ಅಪೇಕ್ಷಣೀಯವಷ್ಟೆ. ಈ ದಿಶೆಯಲ್ಲೂ ಸರಳ ಅಲ್ಗಾರಿತಮುಗಳ ನಿಯೋಜನೆ ಸಾಧ್ಯ. ಉದಾಹರಣೆಗೆ ತ್ರಿಮಾನ ಪದ್ಧತಿಯ ಧನಪೂರ್ಣಾಂಕಗಳನ್ನು T ಗುರುತುಗಳ ಸಾಲುಗಳನ್ನಾಗಿ ಮರುಪರಿವರ್ತಿಸಲು ಕೆಳಗಿನ ಆರು ವಿಧಿಗಳ ಮಾರ್ಕಫ್ ಅಲ್ಗರಿತಂ ಉಪಯುಕ್ತವಾಗುತ್ತದೆ. (ಇಲ್ಲಿ S ಒಂದು ಸಹಾಯಕ ಅಕ್ಷರ).

ವಿಧಿ 1 : TSನ್ನು STTT ಎಂದು ಬದಲಾಯಿಸಿ.
ವಿಧಿ 2 : OSನ್ನು SS ಎಂದು ಮಾರ್ಪಡಿಸಿ.
ವಿಧಿ 3 : 1Sನ್ನು SST ಎಂದು ಮಾರ್ಪಡಿಸಿ.

ವಿಧಿ 4 : 2Sನ್ನು SSTT ಎಂದು ಮಾರ್ಪಡಿಸಿ.

ವಿಧಿ 5 : ಎಲ್ಲ Sಗಳನ್ನೂ ಅಳಿಸಿಬಿಡಿ.

ವಿಧಿ 6 : ಪರಿಶೀಲಿತ ವಾಕ್ಯದ ಅತ್ಯಂತ ಬಲಗಡೆಯಲ್ಲಿ O ಇದ್ದರೆ ಅದನ್ನು OS ಎಂದೂ 1ಇದ್ದರೆ ಅದನ್ನು 1S ಎಂದೂ 2 ಇದ್ದರೆ ಅದನ್ನು 2S ಎಂದೂ ಬದಲಾಯಿಸಿ.

ಈ ಅಲ್ಗಾರಿತಂ ಮೇರೆಗೆ ತ್ರಿಮಾನ ಪದ್ಧತಿಯ 122 ಎಂಬ ಧನಪೂರ್ಣಾಂಕವನ್ನು Tಗಳ ಸಾಲನ್ನಾಗಿ ರೂಪಾಂತರಿಸುವ ಹೆಜ್ಜೆಗಳನ್ನು ಕೆಳಗೆ ತೋರಿಸಲಾಗಿದೆ. (ಒಂದೊಂದು ಹೆಜ್ಜೆಯ ವಾಕ್ಯದ ಮೇಲೂ ಪ್ರಯೋಗಿಸಬೇಕಾದ ವಿಧಿಯ ವಿವರವನ್ನು ಆವರಣದಲ್ಲಿ ನಮೂದಿಸಿದೆ.)

122 [ದತ್ತತ್ರಿಮಾನ ಧನಪೂರ್ಣಾಂಕ ; ಇದರ ಮೇಲೆ 6ನೆಯ ವಿಧಿಯನ್ನು ಪ್ರಯೋಗಿಸಬೇಕು.]

122 S [ಈಗ ವಿಧಿ 4]
12 S STT [ ಪುನ: ವಿಧಿ 4]
1SS TTS TT [ಈಗ ವಿಧಿ1]
1SS TST TTT T [ ಪುನಃ ವಿಧಿ 1]
1SS STTTT TT TT [ ವಿಧಿ 3]
SST SS TTTT TT T T [ ವಿಧಿ 1]
SSS TTT STTT TTT TT [ ಮತ್ತೆ ವಿಧಿ 1]
SSS TTS TTT TTT TTT TT [ ಮತ್ತೆ ವಿಧಿ 1]
SSS TST TTT TTT TTT TTT T [ ಪುನ: ವಿಧಿ 1]
SSSSTTT TTT TTT TTT TTT TT [ ಕೊನೆಗೆ ವಿಧಿ 5]
TTT TTT TTT TTT TTT TT [ಪರಿಸಮಾಪ್ತಿ]

ಮೇಲಿನ ವ್ಯುತ್ಪತ್ತಿಯನ್ನು ಗಮನಿಸಿದರೆ 122ರ ಬಲತುದಿಯಲ್ಲಿರುವ 2 ಎಂಬ ಅಂಕೆ ಮೂರನೆಯ ಹೆಜ್ಜೆಯಲ್ಲಿ TTಗೂ ಮಧ್ಯದ 2 ಆರನೆಯ ಹೆಜ್ಜೆಯಲ್ಲಿ TTT TTTಗೂ ಎಡತುದಿಯ 1 ಹನ್ನೊಂದನೆಯ ಹೆಜ್ಜೆಯಲ್ಲಿ ಇನ್ನುಳಿದ TTTTTTTTT ಗೂ ಜನ್ಮ ನೀಡಿರುವುದು ವೇದ್ಯವಾಗುತ್ತದೆ. ಈ ಫಲಿತಾಂಶಗಳನ್ನು ಹೀಗೆ ವ್ಯಕ್ತಪಡಿಸಬಹುದು:

122 = TTT TTT TTT (1 ರ ಕೊಡುಗೆ) TTT TTT (ಮಧ್ಯದ 2 ರ ಕೊಡುಗೆ) TT (ಬಲತುದಿಯ 2ರ ಕೊಡುಗೆ)

(ತ್ರಿಮಾನ ಪದ್ಧತಿ)

ಮಧ್ಯದ 2ರ ಕೊಡುಗೆ ಬಲತುದಿಯ 2ರ ಕೊಡುಗೆಗಿಂತ ಅಧಿಕವಾಗಿರುವುದನ್ನು ಗಮನಿಸಬೇಕು. ಅಂದಮೇಲೆ ತ್ರಿಮಾನ ಪದ್ಧತಿಯ ಸಂಖ್ಯಾಪ್ರತೀಕಗಳಲ್ಲಿ ಬಿಡಿ ಅಂಕೆಗಳ ಮೌಲ್ಯ ಆ ಅಂಕೆಗಳಷ್ಟನ್ನೇ ಅಲ್ಲದೆ ಅವುಗಳ ಸ್ಥಾನವನ್ನೂ ಅವಲಂಬಿಸಿದೆ ಎಂದಾಯಿತು. ಈ ಲಕ್ಷಣವಿರುವ ಸಂಖ್ಯಾಸೂಚಕಪದ್ಧತಿಗಳಿಗೆ ಸ್ಥಾನಿಕ ಮೌಲ್ಯ ವ್ಯವಸ್ಥೆಗಳು (ಪೊಸಿಷನ್ ವ್ಯಾಲ್ಯು ಸಿಸ್ಟಮ್ಸ್) ಎಂದು ಹೆಸರು. ತ್ರಿಮಾನ ಪದ್ಧತಿಯಂತೆ ದಶಮಾನ ಪದ್ಧತಿಯೂ ಒಂದು ಸ್ಥಾನಿಕ ಮೌಲ್ಯ ವ್ಯವಸ್ಥೆಯೇ. ಪ್ರ.ಶ.ಪೂ. 20–25ನೆಯ ಶತಮಾನಗಳಷ್ಟು ಹಿಂದೆಯೇ ಯೂಫ್ರಟಿಸ್–ಟೈಗ್ರಿಸ್ ಕಣಿವೆಯ ಸುಮೇರಿಯನ್ ಜನರು ಅರವತ್ತನ್ನು ಪ್ರಧಾನ ಪಾದವಾಗಿ ಉಳ್ಳ, ಆದರೆ ಶೂನ್ಯ ಚಿಹ್ನೆಯಿಲ್ಲದ ಸ್ಥಾನಿಕ ಮೌಲ್ಯ ಸಂಖ್ಯಾಸೂಚನ ವ್ಯವಸ್ಥೆಯೊಂದನ್ನು ನಿಯೋಜಿಸಿ ಬಳಸುತ್ತಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಅದಕ್ಕಿಂತ ತುಸು ಪ್ರಾಚೀನ ಕಾಲದ ಈಜಿಪ್ಟಿನ ಹೈರೊಗ್ಲಿಫಿಕ್ ಬರಹಗಾರರಾದರೋ ಬಿಡಿ, ಹತ್ತು, ನೂರು ಇತ್ಯಾದಿಗಳನ್ನು (ಕೋಟಿಯವರೆಗೆ ಮಾತ್ರ) ಸೂಚಿಸಲು ಚಿತ್ರ (1)ರಲ್ಲಿ ಕಾಣಿಸಿರುವ ಕೆಲವು ಭಿನ್ನ ಚಿಹ್ನೆಗಳನ್ನೇ ಇಟ್ಟುಕೊಂಡಿದ್ದರು. ಉದಾಹರಣೆಗೆ ಇನ್ನೂರಿಪ್ಪತ್ತೆರಡು ಎಂಬ ಸಂಖ್ಯೆಯನ್ನು ಅವರು ಚಿತ್ರ (2)ರಲ್ಲಿ ಕಾಣಿಸಿರುವಂತೆ ಬರೆಯುತ್ತಿದ್ದರು; ಮತ್ತು ಇದನ್ನೇ ಚಿತ್ರ (3) ಮತ್ತು ಚಿತ್ರ (4)ರಲ್ಲಿನಂತೆ ಹಲವಾರು ಪರ್ಯಾಯ ಕ್ರಮಗಳಲ್ಲಿ ಬರೆದರೂ ಸಲ್ಲುತ್ತಿತ್ತು.



ಚಿತ್ರ 1 ಚಿತ್ರ 2 ಚಿತ್ರ 3 ಚಿತ್ರ 4

ವ್ಯಾವಹಾರಿಕ ಲೆಕ್ಕಾಚಾರಗಳಿಗೆ ದಶಮಾನ ಪದ್ಧತಿ ಕಲ್ಪಿಸಿಕೊಟ್ಟಿರುವ ಉತ್ತೇಜಕ ಸೌಲಭ್ಯಗಳು ನಿಜಕ್ಕೂ ಅಪಾರ. ಧನಪೂರ್ಣಾಂಕಗಳ ಅಭಿವ್ಯಕ್ತಿಗಾಗಿ ಇಂಥದೊಂದು ಪದ್ಧತಿ ನಿಯೋಜಿತವಾಗದಿದ್ದಲ್ಲಿ ಸಂಖ್ಯಾಕಲನಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್), ಆನ್ವಯಿಕ ಅರ್ಥಶಾಸ್ತ್ರ (ಅಪ್ಲೈಡ್ ಇಕನಾಮಿಕ್ಸ್), ವಾಣಿಜ್ಯೋದ್ಯಮ (ಕಾಮರ್ಸ್), ತಂತ್ರವಿಜ್ಞಾನ (ಟೆಕ್ನಾಲಜಿ) ಮುಂತಾದ ನವನಾಗರಿಕತೆಯ ಅವಶ್ಯ ಚಟುವಟಿಕೆಗಳಾವುವೂ ಹೆಚ್ಚು ಪ್ರವರ್ಧಿಸಲು ಅವಕಾಶವೇ ಆಗುತ್ತಿರಲಿಲ್ಲ. ಆದಾಗ್ಯೂ ಶುದ್ಧ ಗಣಿತದ (ಪ್ಯೂರ್ ಮ್ಯಾತಿಮ್ಯಾಟಿಕ್ಸ್) ದೃಷ್ಟಿಯಿಂದ ದಶಮಾನ, ತ್ರಿಮಾನ, ದ್ವಿಮಾನ (ಈ ಕೊನೆಯದರ ಪಾದ TT) ಮುಂತಾದ ಪ್ರತೀಕ ಯೋಜನೆಗಳ ನಿರ್ಮಾಣ ಕೇವಲ ಒಂದು ತಾಂತ್ರಿಕ ಪ್ರಗತಿಯೋ ಇಲ್ಲವೇ ನಿಜವಾದ ತಾತ್ತ್ವಿಕ ಪ್ರಗತಿಯೋ ಎಂಬ ಪ್ರಶ್ನೆ ಪರಿಶೀಲನಾರ್ಹ. ಬಹುಸಂಖ್ಯಾತ ಗಣಿತಜ್ಞರಲ್ಲಿ ಇಂದಿನವರೆಗೆ ಬೆಳೆದು ಬಂದಿರುವ ಚಿಂತನ ಪ್ರವೃತ್ತಿಗಳ ಪ್ರಕಾರ ಅದು ತಾಂತ್ರಿಕ ಪ್ರಗತಿ ಮಾತ್ರ ಆದೀತೇ ಹೊರತು ತಾತ್ತ್ವಿಕವಲ್ಲ (ಕೊನೆಯ ಪಕ್ಷಕ್ಕೆ ಇದು ಈ ಬಹುಸಂಖ್ಯಾತ ಗಣಿತಜ್ಞರ ಸುಪ್ತ ಅಥವಾ ಪ್ರಬುದ್ಧ ಮನೋಭಿಪ್ರಾಯ). ಏಕೆಂದರೆ ಆಧುನಿಕ ದಶಮಾನಾಂಕಗಳನ್ನು ಬಳಸಿ ನಾವಿಂದು ಯಾವ ಯಾವ ಗಣಿತ ಚಟುವಟಿಕೆಗಳಲ್ಲಿ ತೊಡಗಬಹುದೋ ಅವೆಲ್ಲವನ್ನೂ ಆದಿಮಾನವನ ಕಚ್ಚು, ಬೊಟ್ಟುಗಳ ನೆರವಿನಿಂದಲೇ ನಿರ್ವಹಿಸಲು ತತ್ತ್ವಶಃ ಸಾಧ್ಯವಿದೆ. ಉದಾಹರಣೆಗೆ 4 ನ್ನೂ 3ನ್ನೂ ಕೂಡುವುದಕ್ಕೆ ಪ್ರತಿಯಾಗಿ TTTT ಯನ್ನೂ TTT ಯನ್ನೂ ಒಟ್ಟುಗೂಡಿಸಿ TTTTTTT ಯನ್ನು ರಚಿಸಬಹುದಷ್ಟೆ; ಅಂದರೆ ಎರಡು T ಸಾಲುಗಳನ್ನು ಕೂಡಲು ಅವುಗಳ ನಡುವಿನ + ಚಿಹ್ನೆಯನ್ನು ಕೈಬಿಟ್ಟರಾಯಿತು:

TTTT + TTT = TTTTTTT

ಮತ್ತೆ TTTT × TTT ಮಾದರಿಯ ಎರಡು T ಸಾಲುಗಳ ಗುಣಲಬ್ಧವನ್ನು ರಚಿಸಲು ಕೆಳಗಿನ ಏಳು ವಿಧಿಗಳ ಮಾರ್ಕಫ್ ಅಲ್ಗಾರಿತಮನ್ನೂ ಬಳಸಿಕೊಳ್ಳಬಹುದು (ಇಲ್ಲಿ × ಗುಣಾಕಾರದ ಚಿಹ್ನೆ, Q, R,S ಸಹಾಯಕ ಅಕ್ಷರಗಳು) :

ವಿಧಿ 1 : Q × TT ಯನ್ನು R ×T ಎಂದು ಬದಲಾಯಿಸಿ.

ವಿಧಿ 2 : Q × T ಯನ್ನು ಅಳಿಸಿಬಿಡಿ.

ವಿಧಿ 3 : TR ನ್ನು RST ಎಂದು ಬದಲಾಯಿಸಿ.

ವಿಧಿ 4 : SR ನ್ನು RSಎಂದು ಮಾರ್ಪಡಿಸಿ.

ವಿಧಿ 5 : TX ನ್ನು TQX ಎಂದು ಬದಲಾಯಿಸಿ.

ವಿಧಿ 6 : Sಗಳನ್ನೆಲ್ಲ Tಗಳಾಗಿ ಪರಿವರ್ತಿಸಿ.

ವಿಧಿ 7 : Rಗಳನ್ನೆಲ್ಲ ಅಳಿಸಿಬಿಡಿ.

ಈ ಅಲ್ಗಾರಿತಮನ್ನು TTTT × TTTಯ ಮೇಲೆ ಪ್ರಯೋಗಿಸಿದಾಗ TTTTTTTTTTTT ಎಂಬ ಸರಿಯದ ಗುಣಲಬ್ಧ ಫಲಿಸುತ್ತದೆ. ಇದೇ ಪ್ರಕಾರ ಅಂಕಗಣಿತದ ಇತರ ಎಲ್ಲ ಲೆಕ್ಕಾಚಾರಗಳನ್ನೂ ಯಶಸ್ವಿಯಾಗಿ T ಸಾಲುಗಳ ಮಾಧ್ಯಮದಲ್ಲೇ ತತ್ತ್ವಶ: ಕೈಗೊಳ್ಳಬಹುದು ಎಂದೆನಿಸುವುದು ಸಹಜ. ಮೇಲಾಗಿ ಆದಿಮಾನವನ T ಸಾಲುಗಳಿಗೆ, ಹಾಗೂ ಅವನ್ನೊಳಗೊಳ್ಳುವ ಲೆಕ್ಕಾಚಾರ ಕ್ರಮಗಳಿಗೆ, ಪ್ರಶ್ನಾತೀತ ತಾತ್ತ್ವಿಕ ಸರಳತೆ ಸಹ ಇರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೂ ಧನಪೂರ್ಣಾಂಕಗಳ ಗಣಿತವನ್ನು ಆದಿಮಾನವನ ಪ್ರತೀಕಗಳಿಂದಲೇ ನಿರ್ಮಾಣಮಾಡುವ ಕಾರ್ಯಕ್ರಮ ನಿಜಕ್ಕೂ ಒಂದು ಅಪ್ರಕಟಿತ ವಿಶ್ವಾಸವನ್ನು ಅವಲಂಬಿಸಿ ನಿಂತಿದೆ: ಮನಬಂದಷ್ಟು ಉದ್ದುದ್ದವಾದ T (ಹಾಗೂ ಇತರ) ಗುರುತುಗಳ ಸಾಲುಗಳನ್ನು ರಚಿಸಿಡಲು ಯಾವ ತಾತ್ತ್ವಿಕ ಆತಂಕವೂ ಇಲ್ಲ ಎಂಬುದೇ ಆ ಅಪ್ರಕಟಿತ ವಿಶ್ವಾಸ. (ದಶಮಾನ ಪ್ರತೀಕಗಳಿಂದ ಇಲ್ಲವೇ ಮತ್ತಾವುದೇ ಪೂರ್ವನಿಶ್ಚಿತ ಸಾಲುಗುರುತು ಪ್ರತೀಕಗಳಿಂದ, ಧನ ಪೂರ್ಣಾಂಕಗಳ ಸಂಪೂರ್ಣ ಗಣಿತವನ್ನು ನಿರ್ಮಿಸುವ ಪ್ರೌಢತರ ಕಾರ್ಯಕ್ರಮಗಳಿಗೆ ಸಹ ಈ ಮಾತು ಅನ್ವಯಿಸದೆ ಇಲ್ಲ). ಇತ್ತೀಚೆಗೆ (ಮುಖ್ಯವಾಗಿ ಮಾಹಿತಿ ಸಿದ್ಧಾಂತದ –––– ಇನ್‌ಫರ್ಮೇಷನ್ ಥಿಯರಿ –––– ಸಂಸ್ಥಾಪನೆಯ ಬಳಿಕ) ಈ ವಿಶ್ವಾಸದ ಬಗ್ಗೆ ತುಸು ಪುನರಾಲೋಚನೆ ನಡೆಸುವ ಅಗತ್ಯ ಕಂಡುಬರುತ್ತದೆ. ಇಲ್ಲಿ ಉದ್ಭವಿಸುವ ಪ್ರಶ್ನೆಗಳು ಎರಡು. ಮೊದಲನೆಯದಾಗಿ, ಒಂದು ಪಕ್ಷ ಇಡೀ ವಿಶ್ವದಲ್ಲಿರುವ ಮೂಲಭೂತ ದ್ರವ್ಯಕಣಗಳೆಲ್ಲ ಸ್ವಭಾವತಃ ಅವಿಭಾಜ್ಯವೂ ಅವುಗಳ ಒಟ್ಟು ಸಂಖ್ಯೆ ಸ್ವಭಾವತಃ ಸಾಂತವೂ (ಫೈನೈಟ್) ಆಗಿದ್ದಲ್ಲಿ ಆ ಸಂಖ್ಯೆಗಿಂತಲೂ ಉದ್ದವಾದ T ಸಾಲುಗಳನ್ನು ರಚಿಸಬಹುದೆಂಬ ಕಲ್ಪನೆಗೆ ತಾತ್ತ್ವಿಕ ಆಸರೆ ಉಳಿದೀತೇ? ಎರಡನೆಯದಾಗಿ, ಯಾವುದೇ ನಿರ್ದಿಷ್ಟ ಗುರುತುಗಳ ತೀರ ಉದ್ದವಾದ ಸಾಲೊಂದನ್ನು ರಚಿಸತೊಡಗಿದರೂ ಅಂಥ ಸಾಲಿನ ಪ್ರಾರಂಭದಲ್ಲಿ ಲಿಖಿತವಾದ ಗುರುತುಗಳು ಕಾಲಕ್ರಮೇಣ ಮಸುಕಾಗುತ್ತ ಬಂದು ರಚನೆ ಪೂರ್ಣಗೊಳ್ಳುವ ಮುನ್ನವೇ ಪರಿಸರದೊಂದಿಗೆ ಲೀನವಾಗಿಬಿಡುವುದಿಲ್ಲವೇ? ನಾವು ಮೂವತ್ತನಾಲ್ಕನ್ನು 34 ಎಂಬ ದಶಮಾನ ರೂಪದಲ್ಲಿ ಯಾವ ಪ್ರಯಾಸವೂ ಇಲ್ಲದೆ ನೆನಪಿಟ್ಟು ಕೊಳ್ಳಬಲ್ಲೆವಾದರೂ ಅದನ್ನು TTTTTTTTTTTTTTTTTT TTTTTTTTTTTTTTTT ಎಂಬ ರೂಪದಲ್ಲಿ ಗ್ರಹಿಸಲು ಲೇಖನಿ, ಕಾಗದ

ಗಳನ್ನು ಮರೆಹೋಗದೆ ವಿಧಿಯಿಲ್ಲ. ಇಷ್ಟೊಂದು ಉದ್ದವಿರುವ T ಸಾಲಿನ ರಚನೆ ನಮ್ಮ ಮಿದುಳಿನೊಳಗಡೆಯಲ್ಲಿ ಇನ್ನೂ ಅಪೂರ್ಣವಾಗಿರುವಾಗಲೇ ಆದಿಯ Tಗಳು ಆಳಿಸುತ್ತ ಬರುವುದು ಇದಕ್ಕೆ ಕಾರಣ. ಇದೇ ಪ್ರಕಾರ 9999,9999999999,99999 999999,999999999 ಎಂಬ ದಶಮಾನ ಪೂರ್ಣಾಂಕದ ವ್ಯಾಪ್ತಿಯನ್ನು ಗ್ರಹಿಸಬೇಕಾದರೂ ನಮಗೆ ಕಾಗದ, ಲೇಖನಿಗಳು ಅಗತ್ಯವಾಗುವುವು. ಈಗ ಈ ದಶಮಾನ ಪೂರ್ಣಾಂಕವನ್ನು ಒಂದು ಅನುರೂಪ T ಸಾಲನ್ನಾಗಿ ಬರೆಯತೊಡಗಿದರೆ ಸೆಕೆಂಡ್ ಒಂದಕ್ಕೆ ಹಲವಾರು ಸಹಸ್ರಕೋಟಿ T ಗಳನ್ನು ಬರೆದರೂ ಸಾಲಿನ ರಚನೆ ಪೂರ್ಣವಾಗುವುದಕ್ಕೆ ಒಂದಷ್ಟು ಕೋಟಿಕೋಟಿ ವರ್ಷಗಳು ಅವಶ್ಯವಾಗುತ್ತವೆ. ರಚನೆಯ ಅವಧಿ ಇಷ್ಟೊಂದು ದೀರ್ಘವಿರುವಾಗ ಮಿದುಳಿನೊಳಗಡೆ ನಡೆದಂಥ ವಿದ್ಯಮಾನವೇ ಅತ್ಯುತ್ತಮ ದಾಖಲೆ ಮಾಧ್ಯಮಗಳಲ್ಲಿಯೂ ಸಂಭವಿಸುವುದು ಅನಿವಾರ್ಯ. ಅಂದಮೇಲೆ ಮೇಲಿನ ದಶಮಾನ ಪೂರ್ಣಾಂಕಕ್ಕೆ ಅನುರೂಪವಾದ T ಸಾಲನ್ನು ಬಹುಶಃ ಎಲ್ಲೂ ರಚಿಸಲು ಸಾಧ್ಯವಾಗುವುದಿಲ್ಲ. ಇನ್ನು ಇದೇ ಬಗೆಯ ತೊಡಕು ಸಾಕಷ್ಟು ದೊಡ್ಡವಾದ A, B ಎಂಬ ದಶಮಾನ ಧನ ಪೂರ್ಣಾಂಕಗಳೆರಡರ ಚರಘಾತಾಂಕೀಯ ಸಂಯೋಜನೆ (ಎಕ್ಸ್‌ಪೊನೆನ್ಷಿಯಲ್ ಕಾಂಪೊಸಿಷನ್) $A^B$ ಯನ್ನು ಒಂದು ನೇರ ದಶಮಾನ ಪೂರ್ಣಾಂಕವಾಗಿ ಬರೆಯ ಹೊರಟಾಗಲೂ ಉದ್ಭವಿಸಿಯೇ ತೀರುವುದು. ಅಲ್ಲಿಗೆ ನಾವು ಯವುದೇ ಪ್ರತೀಕಯೋಜನೆಯನ್ನು ಅನುಸರಿಸಿದರೂ ಎಲ್ಲ ಧನ ಪೂರ್ಣಾಂಕಗಳ ಎಲ್ಲ ಸುಸಂಬದ್ಧ ಸಂಯೋಜನೆಗಳನ್ನೂ ಮತ್ತೆ ಪೂರ್ಣಾಂಕಗಳ ಮೂಲರೂಪಕ್ಕೆ ಪರಿವರ್ತಿಸುವುದು ಬಹುಶಃ ಅಸಾಧ್ಯವೇ ಆಗುತ್ತದೆ ಎಂದಾಯಿತು. ಮೊದಲ ನೋಟಕ್ಕೆ ಈ ತೊಡಕುಗಳು ತಾತ್ತ್ವಿಕ ಚರ್ಚೆಗೆ ಅಪ್ರಕೃತವಾದ ವ್ಯಾವಹಾರಿಕ ಸ್ವರೂಪವೆನಿಸಿದರೂ ಇವುಗಳಲ್ಲಿ ನಿಜಕ್ಕೂ ಮೂಲಭೂತ ನಿಸರ್ಗ ನಿಯಮಗಳ ಕೈವಾಡವಿರುವ ಸಾಧ್ಯತೆಯನ್ನು ನಾವು ಅಲಕ್ಷಿಸುವಂತಿಲ್ಲ. ಆದಾಗ್ಯೂ ಇಂಥ ಸಂಕೀರ್ಣತೆಗಳನ್ನೆಲ್ಲ ಗಣನೆಗೆ ತೆಗೆದುಕೊಂಡು ಗಣಿತವನ್ನು ಸಮರ್ಪಕವಾಗಿ ಪುನಾರಚಿಸಲು ಇದುವರೆಗೆ ಯಾರಿಂದಲೂ ಸಾಧ್ಯವಾಗಿಲ್ಲ. ಇಂತಿರುವಾಗ ತಾತ್ಕಾಲಿಕವಾಗಿಯಾದರೂ ಕ್ಲಿಷ್ಟತೆಯಿಂದ ಪಾರಾಗುವ ವಿಮೋಚನ ಮಾರ್ಗಗಳನ್ನು ಅರಸುವುದು ಸೂಕ್ತವಷ್ಟೆ. T ಹಾಗೂ ಇತರ ಗುರುತುಗಳ ಸಾಲುಗಳನ್ನು ಮನಬಂದಷ್ಟು ದೀರ್ಘವಾಗಿ ವೃದ್ಧಿಸುತ್ತ ಹೋಗುವ ಸೌಲಭ್ಯವುಂಟೆಂಬ ಸಾಂಪ್ರದಾಯಿಕ ವಿಶ್ವಾಸ ಅಂಥ ಒಂದು ಸರಳ ವಿಮೋಚನ ಮಾರ್ಗವನ್ನು ನಮ್ಮ ಪಾಲಿಗೆ ಕಲ್ಪಿಸಿಕೊಡುತ್ತದೆ. ಎಂತಲೇ ಇನ್ನು ಹೆಚ್ಚಿನ ಚರ್ಚೆಯಿಲ್ಲದೆ ನಾವು ಅದನ್ನು ಈ ಲೇಖನದಲ್ಲಿ ಮುಂದೆ ಎಲ್ಲೆಡೆಯಲ್ಲೂ ಅಂಗೀಕರಿಸುತ್ತೇವೆ. [ಈ ಮಾತುಗಳಲ್ಲಿ ಅನಪೇಕ್ಷಣೀಯ ಕ್ಷಮಾಯಾಚಕ ಧ್ವನಿ ಇದೆಯೆಂದು ಕಳವಳಪಡುವವರು ಧನಪೂರ್ಣಾಂಕಗಳು ನಿಜಕ್ಕೂ ಮಾನವರ ಚಟುವಟಿಕೆಗಳನ್ನೇ ಅವಲಂಬಿಸದ ಒಂದು ಸ್ವತಂತ್ರ ಆದರ್ಶಲೋಕದ ಸಾಮಗ್ರಿಗಳೆಂದಾಗಲಿ, ಇಲ್ಲವೆ ಮಾನವರ ಸೃಷ್ಟೇ ಆದಾಗ್ಯೂ ಅವರ ಅಂತರ್ಬೋಧೆಯ ಅಮೂರ್ತ ಸೃಷ್ಟಿಫಲಗಳೆಂದಾಗಲಿ ಘೋಷಿಸಿ, ಅವುಗಳ ದಿವ್ಯಸ್ವರೂಪವನ್ನು T ಸಾಲುಗಳಂಥ ಪಾಮರ ಪ್ರತೀಕಗಳ ಮೂಲಕ ಪರಿಪೂರ್ಣವಾಗಿ ಪ್ರತಿನಿಧಿಸಲು ಸಾಧ್ಯವಾಗದೆ ಹೋಗುವುದರಲ್ಲಿ ಅಚ್ಚರಿಯಿಲ್ಲವೆಂದು ಸಮಾಧಾನ ತಂದು ಕೊಳ್ಳಬಹುದು. ಸಾಕಷ್ಟು ಗೌರವ ಗಳಿಸಿರುವ ಇವೆರಡು ದೃಷ್ಟಿಕೋನಗಳಿಗೆ ಕ್ರಮವಾಗಿ ಪ್ಲೇಟೋವಾದ (ಪ್ಲೇಟಾನಿಸಂ) ಮತ್ತು ಅಂತರ್ಬೋಧನವಾದ (ಇಂಟ್ಯುಇಷನಿಸಂ) ಎಂಬ ಹೆಸರುಗಳು ಬಂದಿವೆ]

ಸಾಲು ಪ್ರತೀಕಗಳ ಉದ್ದದ ಕ್ಲಿಷ್ಟಪ್ರಶ್ನೆಯನ್ನು ಹೀಗೆ ಸ್ಥಗಿತಗೊಳಿಸಿದ ತರುವಾಯ ಆದಿಮಾನವನ T ಸಾಲುಗಳು ಮಾಧ್ಯಮದಲ್ಲಿ ಧನಪೂರ್ಣಾಂಕಗಳ ಸಮಸ್ತ ಗಣಿತವನ್ನೂ ನಿರ್ಮಿಸುವ ಕಾರ್ಯಕ್ರಮವನ್ನು ನಾವೀಗ ಚಿತ್ರಿಸಬಹುದು. ಇದರ ವಿವರಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡುವುದು ವಾಡಿಕೆ:

I T ಯನ್ನು ಒಂದು ಧನಪೂರ್ಣಾಂಕವೆಂದು ಸ್ವೀಕರಿಸುವುದು.

II $x$ ಯಾವುದೇ ಪ್ರತೀಕವಾಗಿರಲಿ ಅದರ ನಕಲಿನ ಮುಂದೆ T ಗುರುತನ್ನು ಬರೆದು $x$T ಎಂಬ ಪ್ರತೀಕವನ್ನು ರಚಿಸುವ ಶಕ್ಯತೆಯನ್ನು ಒಪ್ಪುವುದು; ಹಾಗೂ $x$ ಧನಪೂರ್ಣಾಂಕವೆಂದು ಸ್ವೀಕೃತವಾಗಿರುವ ಸಂದರ್ಭಗಳಲ್ಲೆಲ್ಲ $x$T ಯನ್ನು ಮತ್ತೆ ಒಂದು ಧನಪೂರ್ಣಾಂಕವೆಂದು ಸ್ವೀಕರಿಸುವುದು; (ಇದರ ಪ್ರಕಾರ TT, TTT ಮುಂತಾದ T ಸಾಲುಗಳೆಲ್ಲವೂ ಧನಪೂರ್ಣಾಂಕಗಳಾಗುತ್ತವೆ).

III T $\neq$ $x$T ಎಂದು ಅಂಗೀಕರಿಸುವುದು ($x$ ಚರ ಧನಪೂರ್ಣಾಂಕ, $\neq$ ಅಸಮತೆಯ ಚಿಹ್ನೆ).

IV $X \neq y$ ಆದಾಗ $x$T $\neq$ $y$T ಎಂದು ಅಂಗೀಕರಿಸುವುದು ($x$, $y$ ಚರ ಧನಪೂರ್ಣಾಂಕಗಳು.)

V $x$ ಗೆ ಇದ್ದೊಡನೆ $x$T ಗೂ ಇರಲೇಬೇಕಾಗಿ ಬರುವಂಥ ಪ್ರತಿಯೊಂದು ಲಕ್ಷಣವೂ T ಗೆ ಇದ್ದೊಡನೆ ಸಮಸ್ತ ಧನಪೂರ್ಣಾಂಕಗಳಿಗೂ ಇದ್ದೇ ಇರುತ್ತದೆಂದು ತರ್ಕಿಸುವುದು ($x$ ಚರ ಧನಪೂರ್ಣಾಂಕ).

ಈ ತತ್ತ್ವಗಳು ಇಂದು ಪಿಯಾನೋ ಆದ್ಯುಕ್ತಿಗಳು (ಪಿಯಾನೋ ಆ್ಯಕ್ಸಿಯಂಸ್, 1899) ಎಂದು ಪ್ರಸಿದ್ಧವಾಗಿರುವವುಗಳಿಗೆ ವಸ್ತುತಃ ಸಮಾನವಾದವು. ರಿಚರ್ಡ್ ಡೆಡೆಕಿಂಟ್ (1831 – 1916) ಎಂಬ ಗಣಿತಜ್ಞನಿಂದ ಪ್ರಭಾವಿತನಾದ ಗ್ಯೆಸೆಪೆ ಪಿಯಾನೋ (1858 – 1932) ಇವನ್ನು ನಿರ್ದಿಷ್ಟ ಆದ್ಯುಕ್ತಿರೂಪದಲ್ಲಿ ಮೊಟ್ಟ ಮೊದಲಿಗೆ ಪ್ರಕಟಿಸಿದ. ಇವುಗಳಲ್ಲಿ ಕೊನೆಯದಕ್ಕೆ (V) ಗಣಿತಾನುಮಿತಿ ತತ್ತ್ವ (ಪ್ರಿನ್ಸಿಪಲ್ ಆಫ್ ಮ್ಯಾತಿಮ್ಯಾಟಿಕಲ್ ಇಂಡಕ್ಷನ್) ಎಂದು ಹೆಸರು. ಇದನ್ನು ಕುರಿತು ತುಸು ಚಿಂತನೆ ಅವಶ್ಯ. A ಎಂಬುದು $x$ಗೆ ಇದ್ದೊಡನೆ $x$T ಗೂ ಇರಲೇಬೇಕಾಗಿರುವ ಯಾವುದಾದರೊಂದು ಲಕ್ಷಣವಾಗಿರಲಿ. ಈ ಲಕ್ಷಣ Tಗೆ ಇರುವುದಾದರೆ TTಗೂ ಇರಲೇಬೇಕಷ್ಟೆ. ಅದು ಯಾವಾಗ TTಗೆ ಪ್ರಾಪ್ತವಾಗಬೇಕಾಯಿತೋ TTTಗೂ ಪ್ರಾಪ್ತವಾಗದೆ ವಿಧಿಯಿಲ್ಲ (ಇದನ್ನು ಮನಗಾಣಲು T T ಯನ್ನು $X$ ಎಂದು ಪರಿಗಣಿಸಬೇಕು); ಇತ್ಯಾದಿ. ಹೀಗೆಯೇ ಮುಂದುವರಿದರೆ ಪರಿಶೀಲಿತ A ಲಕ್ಷಣ ಸಮಸ್ತ T ಸಾಲುಗಳಿಗೂ ಇದ್ದೇ ತೀರಬೇಕೆಂದು ನಮಗೆ ಮನವರಿಕೆಯಾಗುವುದು. ಆದ್ದರಿಂದ T ಸಾಲುಗಳ ವಿನಾ ಬೇರಾವ ಧನಪೂರ್ಣಾಂಕಗಳೂ ಇಲ್ಲವೆಂಬ ಬೆಳಕಿನಲ್ಲಿ ಆಲೋಚಿಸುವವರಿಗೆ ಎಲ್ಲ ಧನಪೂರ್ಣಾಂಕಗಳಿಗೂ A ಲಕ್ಷಣ ಇದ್ದೇ ಇರುವ ಸಂಗತಿ ಒಡನೆಯೇ ಗೋಚರಿಸಿ ಗಣಿತಾನುಮಿತಿ ತತ್ತ್ವದ ಆದ್ಯುಕ್ತೀಕರಣ ಅನವಶ್ಯವಾಗುವುದು. ಆದರೆ ಆದ್ಯುಕ್ತೀಯ ಮನೋಧರ್ಮದ ಪ್ರಕಾರ ಸಮಸ್ತ ಚಿಂತನೆಗಳೂ ಪ್ರಕಟಿತ ಆದ್ಯುಕ್ತಿಗಳ ಚೌಕಟ್ಟಿನೊಳಗೆ ಸಾಗಬೇಕೇ ವಿನಾ ಆ ಚೌಕಟ್ಟಿನ ಹೊರಗಡೆ ಉಗಮಿಸುವ ಬೆಳಕನ್ನು ಆಶ್ರಯಿಸುವಂತಿಲ್ಲ. ಈ ಮನೋಧರ್ಮದ ಒತ್ತಡಕ್ಕೆ ಸಿಲುಕಿದ ಗಣಿತಜ್ಞರು ಧನಪೂರ್ಣಾಂಕಗಳ ವ್ಯಾಪ್ತಿಯನ್ನು ಆದ್ಯುಕ್ತಿ ಮಾರ್ಗದಿಂದಲೇ ನಿಖರಗೊಳಿಸುವ ಸಲುವಾಗಿ ಗಣಿತಾನುಮಿತಿ ತತ್ತ್ವವನ್ನು ಮೇಲಿನಂತೆ ಆದ್ಯುಕ್ತೀಕರಿಸಿಟ್ಟರು. ಹೀಗೆ ಮಾಡುವಾಗ ಪಿಯಾನೋ ಆದ್ಯುಕ್ತಿಗಳಿಗೆ ಬದ್ಧವಾಗಿರುವ ಯಾವುದೇ ಬಗೆಯ ಗಣಿತೀಯ ಧಾತುಗಳಾಗಲಿ ವಸ್ತುತಃ T ಗಳ ಸಾಲುಗಳಿಗೇ ಸಮಾನವಾಗಿರುತ್ತವೆಂಬುದು ಅವರ ಎಣಿಕೆಯಾಗಿತ್ತು. ಇತ್ತೀಚಿನ ಸಂಶೋಧನೆಗಳ ಫಲವಾಗಿ ಈ ಎಣಿಕೆಯಲ್ಲಿ ಕೆಲ ನಿಗೂಢ ಅಸಮರ್ಪಕತೆಗಳಿರುವುದು ಗೋಚರಕ್ಕೆ ಬಂದಿದೆ. ಆದಾಗ್ಯೂ ಆ ಅಸಮರ್ಪಕತೆಗಳು ಇಂದು ಗಣಿತದ ಪ್ರಗತಿಯನ್ನು ಕುಂಠಿತಗೊಳಿಸುವುದಕ್ಕೆ ಪ್ರತಿಯಾಗಿ ಶಿಷ್ಟೇತರ ವಿಶ್ಲೇಷಣೆ (ನಾನ್ – ಸ್ಟ್ಯಾಂಡರ್ಡ್ ಅನ್ಯಾಲಿಸಿಸ್) ಮುಂತಾದ ನವ್ಯ ಅಧ್ಯಯನಗಳಿಗೆ ಮೂಲ ಪ್ರೇರಣೆಯಾಗಿ ನಿಂತಿರುವ ವಿಚಾರ ಗಮನಾರ್ಹ.

T, TT, TTT ಮೊದಲಾದ ಧನಪೂರ್ಣಾಂಕಗಳ ಅರ್ಥವೇನು ಎಂಬ ಪ್ರಶ್ನೆ ಹಲವಾರು ತಾತ್ತ್ವಿಕರನ್ನೂ ತಾರ್ಕಿಕರನ್ನೂ ಕಾಡಿ ನಾನಾ ಬಗೆಯ ಉತ್ತರಗಳನ್ನು ಹೊರಗೆಡಹಿದೆ. ಎಫ್. ಎಲ್. ಜಿ. ಫ್ರೇಜ್ (1848–1925) ಎಂಬಾತನ ದೃಷ್ಟಿಯಲ್ಲಿ ಎಲ್ಲ ಏಕಧಾತು ಗಣಗಳ ಸಮುದಾಯವೇ T, ಎಲ್ಲ ದ್ವಿಧಾತು ಗಣಗಳ ಸಮುದಾಯವೇ TT, ಎಲ್ಲ ತ್ರಿಧಾತು ಗಣಗಳ ಸಮುದಾಯವೇ TTT, ಇತ್ಯಾದಿ ಆದುವು. ಅರ್ನ್‌ಸ್ಟ್ ಟ್ಸರ್‌ಮಲೋಜ್ (1871–1956)ಎಂಬಾತನ ಪಾಲಿಗೆ T ಶೂನ್ಯಗಣವನ್ನೊಳಗೊಂಡ ಏಕಧಾತುಗಣ, TT ಶೂನ್ಯಗಣವನ್ನೊಳಗೊಂಡ ಏಕಧಾತುಗಣವನ್ನೊಳಗೊಂಡ ಏಕಧಾತುಗಣ, TTT ಶೂನ್ಯಗಣವನ್ನೊಳಗೊಂಡ ಏಕಧಾತುಗಣವನ್ನೊಳಗೊಂಡ ಏಕಧಾತುಗಣವನ್ನೊಳಗೊಂಡ ಏಕಧಾತುಗಣ, ಹೀಗೆಲ್ಲ ಆಗಿ ನಿಂತವು. ವಾಸ್ತವವಾಗಿ ಎಲುಬುಗಳ ಮೇಲೆ ಕಚ್ಚುಗಳನ್ನು ಕೆತ್ತಿದಾಗ ಆದಿಮಾನವ ಗಣಸಿದ್ಧಾಂತದ ಅಂತರ್ಬೋಧೆಗಾಗಲಿ, ಬಹಿರ್ಬೋಧೆಗಾಗಲಿ ಗುರಿಯಾಗಿದ್ದಿರಲಾರನಷ್ಟೆ. ಅಮೂರ್ತ ಸ್ವರೂಪದ ಕೆಲ ನಿರ್ದಿಷ್ಟ ಮಾಹಿತಿಗಳನ್ನು ದಾಖಲೆ ಮಾಡಿಸುವುದಕ್ಕಾಗಿ ಆತ ಬಳಸಿದ ಪದಗಳೇ ಈ T, TT ಮುಂತಾದ ಧನಪೂರ್ಣಾಂಕಗಳು. ಪದಗಳ ವಿಚಾರದಲ್ಲಿ ನಿಜವಾದ ತರಬೇತಿಯ ಅಗತ್ಯವಿರುವುದು ಅವು ನೀಡುವ ಮಾಹಿತಿಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ಮಾತ್ರವೇ. ಇದಕ್ಕೆ ಬದಲು ಪದಗಳನ್ನು ಮತ್ತಷ್ಟು ಪದಗಳ ಮೂಲಕ ವರ್ಣಿಸತೊಡಗಿದರೆ ನಾವು ಅನತಿ ಕಾಲದಲ್ಲೇ ವಿಷವರ್ತುಲಕ್ಕೆ (ವಿಷಸ್ ಸರ್ಕಲ್) ಸಿಲುಕಿ ನರಳಬೇಕಾಗುವುದು. ಸಿಹಿಯ ನಿಜವಾದ ಅರ್ಥ ಬೇಕಿದ್ದರೆ ಸಕ್ಕರೆಯನ್ನು ತಿನ್ನುವುದು ಜಾಣತನ, ನಿಘಂಟನ್ನು ಶೋಧಿಸಿ ಸಿಹಿ = ಸಕ್ಕರೆಯ ರುಚಿ. ಸಕ್ಕರೆ = ಸಿಹಿಯಾದ ಪದಾರ್ಥ ಎಂಬಂಥ ವರ್ಣನೆಗಳನ್ನು ಆವಿಷ್ಕರಿಸುವುದು ಹಾಸ್ಯಾಸ್ಪದ. ದರ್ಜಿಯೊಬ್ಬ ತನ್ನ ಗಿರಾಕಿಯ ಹಸ್ತಗಳನ್ನು ವೀಕ್ಷಿಸಿ TT (ಎರಡು ಕೈಗಳಿವೆ) ಎಂದು ಮನದಟ್ಟು ಮಾಡಿಕೊಂಡು ಆತನಿಗಾಗಿ TTಯಷ್ಟೇ (ಎರಡೇ)

ತೋಳುಗಳಿರುವ ಅಂಗಿಯನ್ನು ಹೊಲಿದುಕೊಡಬಲ್ಲನಾದರೆ TTಯಿಂದ ಅಭಿವ್ಯಕ್ತವಾದ ಮಾಹಿತಿಯನ್ನು ಸದುಪಯೋಗ ಮಾಡಿಕೊಂಡಂತಾಗುವುದು, ಮತ್ತು TTಯ ನಿಜವಾದ ಅರ್ಥ ಅಡಗಿರುವುದು ಅಂಥ ಸದುಪಯೋಗದಲ್ಲೇ. ಇನ್ನು ಇಂಥ ಅರ್ಥಪ್ರಜ್ಞೆಯ ಆವಶ್ಯಕತೆ ಹೊಲಿಗೆ ಮುಂತಾದ ಪ್ರಾಪಂಚಿಕ ಉದ್ಯಮಗಳಿಗೆ ಮಾತ್ರ ಸೀಮಿತವೋ ಇಲ್ಲವೆ ಶುದ್ಧ ಗಣಿತದ ಪಾಲಿಗೂ ಉಂಟೋ ಎಂಬ ಪ್ರಶ್ನೆ ಸಹ ಇದೇ ಸಂದರ್ಭದಲ್ಲಿ ಪರಿಶೀಲನಾರ್ಹ. ಗಣಿತ ಪರಿಕಲ್ಪನೆಗಳ ಸುತ್ತ ಗಣಿತಜ್ಞರು ಹೆಣೆಯಬಹುದಾದ ಆದ್ಯುಕ್ತಿಗಳ ಚೌಕಟ್ಟಿನಿಂದ ಹೊರತಾಗಿಯೇ ಆ ಪರಿಕಲ್ಪನೆಗಳ ಅರ್ಥ ಉಳಿದುಹೋಗುವುದರಿಂದ ಶುದ್ಧಗಣಿತದಲ್ಲಿ ಅರ್ಥ ಪ್ರಜ್ಞೆಯ ಕೈವಾಡವಿರುವುದನ್ನೇ ಆದ್ಯುಕ್ತಿಮಾರ್ಗಿಗಳು ಮೊದಲಲ್ಲಿ ವಿರೋಧಿಸತೊಡಗಿದರು. ಆದ್ಯುಕ್ತೀಯ ದೃಷ್ಟಿಕೋನದ ಪ್ರಕಾರ ಗಣಿತೀಯ ಪ್ರತೀಕಗಳ ಅರ್ಥದ ಪಾತ್ರವೇನಿದ್ದರೂ ಸೂಕ್ತ ಆದ್ಯುಕ್ತಿಗಳ ಆಯ್ಕೆಯವರೆಗೆ ಮಾತ್ರವೇ; ಅನಂತರ ಅವುಗಳ ಅರ್ಥ ಅಪ್ರಕೃತವಾಗಬೇಕು. ಅವುಗಳಿಂದ ನೆರವೇರುವ ಆದ್ಯುಕ್ತಿ ಪಾಲನೆಯೇ ಸರ್ವಸ್ವವಾಗಬೇಕು; ಅನೇಕ ವೇಳೆ ಆದ್ಯುಕ್ತಿಗಳ ಆಯ್ಕೆ ಕೂಡ ಅರ್ಥಸಾಧ್ಯತೆಗಳನ್ನು ಲೇಶಮಾತ್ರವೂ ಅವಲಂಬಿಸದೆ ಸೌಂದರ್ಯಸೃಷ್ಟಿ ಮೊದಲಾದ ಉನ್ನತ ಉದ್ದೇಶಗಳಿಂದಷ್ಟೇ ಪ್ರೇರಿತವಾಗಬೇಕು. ಈ ವಿಪರೀತ ಮನೋಧರ್ಮವನ್ನು ಧನಪೂರ್ಣಾಂಕಗಳಿಗೆ ಅನ್ವಯಿಸುವುದಾದರೆ ಶುದ್ಧ ಗಣಿತದ ಪಾಲಿಗೆ ಆ ಪೂರ್ಣಾಂಕ ಪ್ರತೀಕಗಳ ಅರ್ಥದ ಗೊಡವೆ ಅನವಶ್ಯ. ಅವು ಪಿಯಾನೋ ಆದ್ಯುಕ್ತಿಗಳನ್ನು ಪರಿಪಾಲಿಸುತ್ತವೆಂಬ ವಿಶ್ವಾಸವಷ್ಟೇ ಸಾಕು ಎಂದಾಗುತ್ತದೆ. ಅಲ್ಲಿಗೆ ಆ ಆದ್ಯುಕ್ತಿಗಳ ಆಧಾರದಿಂದಲೇ ಧನಪೂರ್ಣಾಂಕಗಳನ್ನು ಕುರಿತ ಪ್ರಮೇಯಗಳೆಲ್ಲವನ್ನೂ ಶುದ್ಧ ಗಣಿತಜ್ಞ ಸಾಧಿಸಬೇಕಾಗುವುದು. ಆದರೆ ಸಮಸ್ತ ಗಣಿತವನ್ನೂ ಆದ್ಯುಕ್ತೀಕರಿಸಬೇಕೆಂಬ ಆದ್ಯುಕ್ತೀಮಾರ್ಗಿಗಳ ಈ ಬಗೆಯ ತೀವ್ರಗಾಮಿ ಚಳವಳಿ ಸಲ್ಲುವಂತದ್ದಲ್ಲವೆಂದು ಕಳೆದ ಕೆಲವು ದಶಕಗಳಲ್ಲಿ ನಡೆದಿರುವ ಗಣಿತತರ್ಕಶಾಸ್ತ್ರದ ಕೆಲ ಮಹತ್ತ್ವಪೂರ್ಣ ಸಂಶೋಧನೆಗಳು ತೋರಿಸಿಕೊಟ್ಟಿವೆ. ವಿಶಿಷ್ಟವಾಗಿ, ಧನಪೂರ್ಣಾಂಕಗಳ ಅರ್ಥವನ್ನು ಆಧರಿಸಿ ಅವುಗಳ ಬಗ್ಗೆ ನಾವು ಮನಗಾಣಬಹುದಾದ ಸತ್ಯಾಂಶಗಳೆಲ್ಲವನ್ನೂ ವ್ಯುತ್ಪಾದಿಸಿ ಕೊಡುವಂಥ ಆದ್ಯುಕ್ತಿ ವ್ಯವಸ್ಥೆಯೊಂದನ್ನು ಯಾರಾದರೂ ನಿಯೋಜಿಸ ಹೊರಟರೆ ವಿರೋಧಾಭಾಸಗಳ ಅನಿವಾರ್ಯ ಪ್ರವೇಶದಿಂದ ಆ ವ್ಯವಸ್ಥೆ ಕುಸಿದು ಬೀಳಬೇಕಾಗಿ ಬರುವುದು (ಗೊಯ್ಡಲ್ ಪ್ರಮೇಯ, 1931 ; ವಿವರಗಳಿಗೆ ಈ ಲೇಖನದ ಅಂತಿಮ ವಿಭಾಗವನ್ನು ನೋಡಿ). ಅಂದಮೇಲೆ ಧನಪೂರ್ಣಾಂಕಗಳ ಬಗ್ಗೆ ನೇರ ಅರ್ಥ ಪ್ರಜ್ಞೆ ಚೆಲ್ಲುವಷ್ಟು ಬೆಳಕನ್ನು ಯಾವೊಂದು ಸುಸಂಗತ ಆದ್ಯುಕ್ತಿ ವ್ಯವಸ್ಥೆಯೂ ಚೆಲ್ಲಲಾರದು ಎಂದಾಯಿತು. ಇದರಿಂದ ಶುದ್ಧ ಗಣಿತಕ್ಕೂ ಅರ್ಥದ ಆವಶ್ಯಕತೆ ಇರುವುದು ಸ್ಪಷ್ಟವಾಗುತ್ತದೆ. ಆದರೆ ನಿರ್ದಿಷ್ಟ ಪರಿಮಿತಿಗಳೊಳಗಡೆ ಆದ್ಯುಕ್ತಿಯ ಪ್ರವೃತ್ತಿಯಿಂದ ಗಣಿತದ ಬೆಳವಣಿಗೆಗೆ ಒಳ್ಳೆಯ ಲಾಭವಾಗಿದೆ ಎಂಬುದೂ ನಿಜವೇ. ಗಣಿತದ ಸರ್ವತೋಮುಖ ಪ್ರಗತಿ ಸಿದ್ಧಿಸುವುದು ಅರ್ಥಪ್ರಜ್ಞೆ ಹಾಗೂ ಆದ್ಯುಕ್ತಿ ವಿಧಾನಗಳ ಸೂಕ್ತ ಸಮನ್ವಯದಿಂದಲೇ. (ಎಸ್.ಆರ್.ಎಂ.)

**2 ಪರಿಮೇಯಗಳು ಮತ್ತು ಸರಳ ಬೀಜಗಣಿತ :** (ರ್‍ಯಾಷನಲ್ಸ್ ಅಂಡ್ ಸಿಂಪಲ್ ಆಲ್ಜಿಬ್ರ) ಧನ ಪೂರ್ಣಾಂಕಗಳನ್ನು ಮಾನವ T ಸಾಲು ಮತ್ತು ಇತರ ರೂಪಗಳಲ್ಲಿ ಉಪಜ್ಞಿಸಿ ಪದಾರ್ಥಗಳನ್ನು ಎಣಿಸಲು ಸಮರ್ಥನಾದನಷ್ಟೆ. ಕಾಲಕ್ರಮೇಣ ಆತನ ದೈನಂದಿನ ವ್ಯವಹಾರಗಳಲ್ಲಿ ಎಣಿಕೆಯೊಂದಿಗೆ ಅಳತೆಯ ಆವಶ್ಯಕತೆಯೂ ಉಂಟಾಯಿತು. ಅಳತೆಗಳನ್ನು ಕೇವಲ ಧನ ಪೂರ್ಣಾಂಕಗಳ ಮಾಧ್ಯಮದಲ್ಲಿ ನಿರ್ವಹಿಸಲು ಸಾಧ್ಯವಿಲ್ಲ. ಉದಾಹರಣೆಗೆ ಹಾಲಿನ ಅಳತೆಯನ್ನು ಪರಿಶೀಲಿಸಬಹುದು. ಇದಕ್ಕಾಗಿ ನಿರ್ದಿಷ್ಟ ಗಾತ್ರದ ಪಾತ್ರೆಯೊಂದನ್ನು ಮೂಲ ಮಾನವನ್ನಾಗಿ (ಯೂನಿಟ್) ಆಯ್ಕೆ ಮಾಡಿಕೊಳ್ಳಬಹುದು. ನಮ್ಮ ಬಳಿ ಇಂಥ ಮೂರು ಮಾನಪಾತ್ರೆಗಳ ತುಂಬಾ ಹಾಲು ಇದೆಯೆಂದು ಭಾವಿಸೋಣ. ಈ ಹಾಲಿನ ರಾಶಿಯನ್ನೇನೋ TTT ಇಲ್ಲವೆ 3ಎಂಬ ಧನ ಪೂರ್ಣಾಂಕ ವ್ಯಕ್ತಪಡಿಸಬಲ್ಲದು. ಆದರೆ ಇದೇ ಹಾಲನ್ನು ಇಬ್ಬರು ಸಮವಾಗಿ ಹಂಚಿಕೊಂಡಾಗ ಒಬ್ಬೊಬ್ಬರಿಗೂ ದೊರಕುವ ಹಾಲಿನ ರಾಶಿಯನ್ನು ನಮ್ಮ ಅಂಗೀಕೃತ ಮನದಲ್ಲಿ ಯಾವ ಧನ ಪೂರ್ಣಾಂಕವೂ ಸೂಚಿಸಲಾರದು. ಈ ಮಾಹಿತಿಯ ಅಭಿವ್ಯಕ್ತಿಗೆ TTT/TT ಅಥವಾ 3/2ಎಂಬ ಭಿನ್ನರಾಶಿಯ ಉಪಜ್ಞೆ ಅವಶ್ಯ. ಇದೇ ಮೇರೆಗೆ p ಮತ್ತು q ಎರಡು ಧನಪೂರ್ಣಾಂಕಗಳಾದಲ್ಲಿ p ಮಾನಗಳನ್ನು q ಸಮಭಾಗಗಳಾಗಿ ವಿಭಜಿಸಿದಾಗ ಫಲಿಸುವ ಪ್ರತಿಯೊಂದು ಭಾಗದ ಅಳತೆಯನ್ನೂ ವ್ಯಕ್ತಪಡಿಸುವುದಕ್ಕಾಗಿ ಮಾನವ p/q ಭಿನ್ನರಾಶಿ ಪ್ರತೀಕವನ್ನು ಸೃಷ್ಟಿಸಬೇಕಾಯಿತು. ಧನ ಪೂರ್ಣಾಂಕಗಳನ್ನು (ಉದಾಹರಣೆಗೆ TT, TTT) ಒಂದೇ T ಅಕ್ಷರದಿಂದಾದ ಪದಗಳು ಎಂಬುದಾಗಿ ಪರಿಗಣಿಸಬಹುದೆಂದು ಆಗಲೇ ಮನಗಂಡಿದ್ದೇವೆ. ಇದೇ ದೃಷ್ಟಿಕೋನದಿಂದ ನೋಡಿದಾಗ ಭಿನ್ನರಾಶಿಗಳು (ಉದಾಹರಣೆಗೆ TTT/TT) T ಮತ್ತು / ಎಂಬ ಎರಡು ಅಕ್ಷರಗಳಿಂದಾದ ಪದಗಳಾಗುತ್ತವೆ. (ಅಂತ ಒಂದೊಂದು ಪದದಲ್ಲೂ / ಪ್ರತೀಕದ ಪ್ರವೇಶ ಒಂದು ಸಲಕ್ಕೆ ಮಾತ್ರವೇ ಸೀಮಿತವಾಗಿರಬೇಕು. p/q ಭಿನ್ನರಾಶಿಯಲ್ಲಿ p ಗೆ ಅಂಶ (ನ್ಯೂಮರೇಟರ್) ಎಂದೂ q ಗೆ ಛೇದ (ಡಿನಾಮಿನೇಟರ್) ಎಂದೂ ಹೆಸರು. ಪ್ರಾಚೀನ ಗಣಿತಜ್ಞರು ಕೇವಲ 1ನ್ನು ಅಂಶವಾಗಿ ಉಳ್ಳ ಏಕಮಾನ ಭಿನ್ನರಾಶಿಗಳನ್ನು (ಯೂನಿಟ್ ಫ್ರ್ಯಾಕ್ಷನ್ಸ್) ಮಾತ್ರ ಮೊದಲು ಬಳಕೆಗೆ ತಂದರು. ಇಂದಿನ 1/3ನ್ನು (ಅಥವಾ 1/3) ಪುರಾತನ ಈಜಿಪ್ಟಿಯನ್ನರು ಮತ್ತು ಗ್ರೀಕರು ಅನುಕ್ರಮವಾಗಿ ಚಿತ್ರದಲ್ಲಿ ತೋರಿಸಿರುವಂತೆ ಬರೆಯುತ್ತಿದ್ದರು. 1/3 ರಲ್ಲಿನ ಅಡ್ಡ ಗೀಟಿನ ಬಳಕೆಯನ್ನು ಅರಬ್ಬರು ರೂಢಿಗೆ ತಂದರು. ಪ್ರಾಚೀನ ಹಿಂದೂ ಗಣಿತಜ್ಞರು ಅದನ್ನು 1/3 ಎಂಬ ರೂಪದಲ್ಲಿ ಪ್ರದರ್ಶಿಸುತ್ತಿದ್ದರು.

ಭಿನ್ನರಾಶಿಗಳ ಸೃಷ್ಟಿಯ ಬಳಿಕ ಅವನ್ನು ಕುರಿತ ವಿವಿಧ ಪರಿಕರ್ಮಗಳ ನಿಯೋಜನೆಯೂ ಅವಶ್ಯವಾಯಿತು. ಮೂರು ಮಾನಪಾತ್ರೆಗಳ ಹಾಲನ್ನೂ ಇಬ್ಬರಿಗೆ ಸಮವಾಗಿ ಹಂಚಲು ಎಲ್ಲ ಹಾಲನ್ನೂ ಒಟ್ಟಿಗೆ ಬೆರೆಸಿ ಎರಡು ಸಮ ಭಾಗಗಳನ್ನು ಮಾಡುವುದು ಒಂದು ಕ್ರಮವಾದರೆ ಒಂದೊಂದು ಪಾತ್ರೆಯ ಹಾಲನ್ನೂ ಎರಡೆರಡು ಸಮಭಾಗಗಳನ್ನಾಗಿ ಪ್ರತ್ಯೇಕಿಸಿ ಒಬ್ಬೊಬ್ಬನಿಗೂ ಅಂಥ ಮೂರು ಭಾಗಗಳನ್ನು ಕೊಡುವುದು ಇನ್ನೊಂದು ಕ್ರಮ. ಅಲ್ಲದೆ ಇವೆರಡಕ್ಕೂ ಪರ್ಯಾಯವಾಗಿ ಒಂದೊಂದು ಪಾತ್ರೆಯ ಹಾಲನ್ನು ಇಪ್ಪತ್ತಿಪ್ಪತ್ತು ಸಮಭಾಗಗಳನ್ನಾಗಿ ಪ್ರತ್ಯೇಕಿಸಿ ಒಬ್ಬೊಬ್ಬ ವ್ಯಕ್ತಿಗೂ ಅಂಥ ಮೂವತ್ತು ಭಾಗಗಳನ್ನು ಕೊಟ್ಟರೂ ಸಲ್ಲುತ್ತದಷ್ಟೆ. ಆದರೆ ಈ ಕೊನೆಯ ಕ್ರಮದ ಅಳತೆಯನ್ನು ಅಭಿವ್ಯಕ್ತಿಸುವ ಭಿನ್ನರಾಶಿ 30/20. ಇದರಿಂದ $(3/2 = (30/20) = [(3 \times 10)/(2 \times 10)]$ ಎಂದು ಸ್ಪಷ್ಟವಾಗುವುದು. ಇದೇ ಪ್ರಕಾರ p, q ಮತ್ತು n ಯಾವುದೇ ಮೂರು ಧನ ಪೂರ್ಣಾಂಕಗಳಾಗಿರಲಿ $p/q = (p \times n) / (q \times n)$ ಆಗುವುದು. p/q ಮತ್ತು r/s ಎಂಬ ಎರಡು ಭಿನ್ನರಾಶಿಗಳು ಸಮವಾಗಬೇಕಾದರೆ $p \times s = r \times q$ ಆದರೆ ಸಾಕೆಂದು ತೋರಿಸಬಹುದು. ಈಗ p/q ಮತ್ತು r/s ಗಳನ್ನು ಕೂಡಿಸುವ ಬಗೆಯನ್ನು ಕುರಿತು ವಿವೇಚಿಸೋಣ. $p/q = (ps) / (qs)$ ಹಾಗೂ $r/s = (rq) / (sq)$ ಆದಕಾರಣ $(p/q + (r/s)$ ಗೆ ಬದಲು $[(p \times s) / (q \times s)] + [(r \times q) / (q \times s)]$ನ್ನು ಪರಿಶೀಲಿಸಬಹುದೆಂದು ನಮಗೆ ಹೊಳೆಯುತ್ತದೆ. ಒಂದು ಮಾನವನ್ನು $(q \times s)$ ಸಮಭಾಗಗಳನ್ನಾಗಿ ವಿಭಜಿಸಿ ಅಂಥ $(p \times s)$ ಭಾಗಗಳನ್ನು ಒಟ್ಟುಗೂಡಿಸಿದಾಗ $(p \times s) / (q \times s)$ ರಾಶಿಯೂ ಅಂಥ $(r \times q)$ ಭಾಗಗಳನ್ನು ಒಟ್ಟುಗೂಡಿಸಿದಾಗ $(r \times q) / (q \times s)$ ರಾಶಿಯೂ ಲಭಿಸುತ್ತವೆ. ಇವೆರಡು ರಾಶಿಗಳನ್ನು ಕೂಡಿಸಿದಾಗ $(p \times s) + (r \times q)$ ಭಾಗಗಳನ್ನು ಒಟ್ಟುಗೂಡಿಸಿದಂತಾಗುತ್ತದೆ. ತತ್ಫಲವಾಗಿ ಲಭಿಸುವ ರಾಶಿ $[(p \times s) + (r \times q)] / (q \times s)$ ಆದ್ದರಿಂದ

$$(p/q) + (r/s) = [(p \times s) + (r \times q)] / (q \times s) \ldots (1)$$

ಎಂಬ ಸೂತ್ರವನ್ನು ವ್ಯಾಖ್ಯೆಯಾಗಿ ಅಂಗೀಕರಿಸಬಹುದು. ಇನ್ನು ಗುಣಾಕಾರದ ಪ್ರಶ್ನೆ. ಒಂದು ಮಾನವನ್ನು s ಸಮಭಾಗಗಳನ್ನಾಗಿ ವಿಭಜಿಸಿ ಅಂಥ r ಭಾಗಗಳನ್ನು ಒಟ್ಟುಗೂಡಿಸಿದಾಗ r/s ಫಲ ಲಭಿಸುತ್ತದಷ್ಟೆ. ಈ ಫಲವನ್ನು ಮತ್ತೆ q ಸಮಭಾಗಗಳನ್ನಾಗಿ ವಿಭಜಿಸಿ ಅಂಥ p ಭಾಗಗಳನ್ನು ಒಟ್ಟುಗೂಡಿಸಿದಾಗ ದೊರೆಯುವ ರಾಶಿಯೇ $(p/q) \times (r/s)$ ಗುಣಲಬ್ಧ ಎಂದು ಅರ್ಥವಿಸಬಹುದು. ತುಸು ಚಿಂತನೆಯಿಂದ ಮೇಲೆ ವಿವರಿಸಿರುವ ಕ್ರಿಯೆಗಳ ಅಂತಿಮ ಫಲಿತಾಂಶ $(p \times r) / (q \times s)$ ಆಗುತ್ತದೆಂದು ಮನಗಾಣಲು ಶಕ್ಯವಿದೆ. ಎಂತಲೇ ಕೆಳಗಿನ ವ್ಯಾಖ್ಯೆ ಅಂಗೀಕಾರ ಯೋಗ್ಯ :

$$(p/q) \times (r/s) = (p \times r) / (q \times s) \ldots\ldots.(2)$$

ನಿತ್ಯ ವ್ಯವಹಾರದಲ್ಲಿ ಜಮಾ, ಖರ್ಚು, ಲಾಭ ನಷ್ಟ, ಭೂತಕಾಲ, ಭವಿಷ್ಯತ್ಕಾಲ, ಹಿಂಚಲನೆ ಮುಂಚಲನೆ ಇವೇ ಮೊದಲಾದ ಪರಸ್ಪರ ವಿರುದ್ಧ ರಾಶಿಗಳು ಪದೆ ಪದೇ ಉದ್ಭವಿಸುತ್ತಿರುತ್ತವೆ. ಒಂದು ಸಹಸ್ರರೂಪಾಯಿ ಲಾಭವನ್ನೂ ಅಷ್ಟೇ ನಷ್ಟವನ್ನೂ 1000 ಎಂಬ ಒಂದೇ ಪ್ರತೀಕದಿಂದ ಸೂಚಿಸುವ ಬದಲು ಅನೇಕ ವೇಳೆ ಲಾಭವನ್ನು ಮಾತ್ರ ಈ ಪ್ರತೀಕದಿಂದ ಸೂಚಿಸಿ ನಷ್ಟವನ್ನು (–1000) (ಋಣ ಸಹಸ್ರ ಎಂದು ಓದಬೇಕು) ಎಂಬ ಪರಿವರ್ತಿತ ಪ್ರತೀಕದಿಂದ ಅಭಿವ್ಯಕ್ತಿಸಿದ್ದಲ್ಲಿ ನಿರ್ದಿಷ್ಟ ಸೌಲಭ್ಯಗಳು ಒದಗಿಬರುತ್ತವೆ. ಇತರ ವಿರುದ್ಧ ರಾಶಿಗಳ ವಿಚಾರದಲ್ಲೂ ಅಂತೆಯೇ. (–1000) ದಂಥ ಪ್ರತೀಕಗಳಿಗೆ ಋಣಸಂಖ್ಯೆಗಳು (ನೆಗೆಟಿವ್ ನಂಬರ್ಸ್) ಎಂದು ಹೆಸರು. [ಇವು ಭಿನ್ನರಾಶಿಗಳೂ ಆಗಲು ಸಾಧ್ಯ. ಉದಾ, (–3/2); ಇಂಥವಕ್ಕೆ ಋಣ ಭಿನ್ನರಾಶಿಗಳು ಎಂದು ಹೆಸರು.] ಈಗ ಋಣ ಹಾಗೂ ಮಾಮೂಲು (ಧನ) ಸಂಖ್ಯೆಗಳನ್ನೊಳಗೊಳ್ಳುವ ಕೆಲವು ಪರಿಕರ್ಮಗಳನ್ನು ಉದಾಹರಿಸುತ್ತೇವೆ. 5 ರೂಪಾಯಿ



ಚಿತ್ರ 5

ನಷ್ಟ ಹಾಗೂ 3ರೂಪಾಯಿ ಲಾಭ ಇವುಗಳ ನಿವ್ವಳ ಫಲ 2 ರೂಪಾಯಿ ನಷ್ಟವಷ್ಟೆ. ಈ ಸನ್ನಿವೇಶವನ್ನು (−5)+3=(− 2)ಎಂಬ ಸಂಕಲನ ಪರಿಕರ್ಮ ವ್ಯಕ್ತಪಡಿಸುತ್ತದೆ. ಅಂತೆಯೇ 5+ (−3)=2 ಮತ್ತು (−5)+(−3)= (−8). ವ್ಯವಕಲನದ ನಿದರ್ಶನವಾಗಿ (−2)ರಲ್ಲಿ (−5)ನ್ನು ಕಳೆಯೋಣ. ಇದಕ್ಕಾಗಿ (−5) ಕ್ಕೆ ಏನನ್ನು ಕೂಡಿಸಿದರೆ (−2) ಲಭಿಸುತ್ತದೆ ಎಂದು ಆಲೋಚಿಸಬೇಕು. 5 ರೂಪಾಯಿಯಷ್ಟು ನಷ್ಟವನ್ನು 2 ರೂಪಾಯಿಯಷ್ಟು ನಷ್ಟಕ್ಕೆ ತಗ್ಗಿಸಲು 3 ರೂಪಾಯಿ ಲಾಭಗಳಿಸಬೇಕೆಂಬುದು ಸುಸ್ಪಷ್ಟ. ಎಂತಲೇ (−2)−(−5)=3. (ಇಲ್ಲಿ ಗೋಚರಿಸುವ ಮೂರು − ಚಿಹ್ನೆಗಳ ಪೈಕಿ ಮಧ್ಯದ್ದು ವ್ಯವಕಲನ ಸೂಚಕ. ತುದಿಯವು ನಷ್ಟಸೂಚಕ; ಇವೆರಡು ಭಿನ್ನ ಪರಿಕಲ್ಪನೆಗಳಿಗೆ ಒಂದೇ ಪ್ರತೀಕವನ್ನು ಬಳಸುವ ರೂಢಿ ಬೋಧನೆಯ ದೃಷ್ಟಿಕೋನದಿಂದ ಮೊದಮೊದಲು ಗೊಂದಲಕಾರಿಯೆನಿಸಿದರೂ ಬರುಬರುತ್ತ ಉಪಯುಕ್ತವೇ ಆಗುವುದು.) ಇದೇ ಪ್ರಕಾರ 2−5=(−3) ; (−2) −5=(−7) ; ಮತ್ತು 2− (−5) = 7. ಇನ್ನು ಗುಣಾಕಾರವನ್ನು ಕುರಿತು ವಿವೇಚಿಸುವ ಸಲುವಾಗಿ ವಾಹನಸಂಚಾರಕ್ಕೆ ಸಂಬಂಧಿಸಿದ ವೇಗ × ಪ್ರಯಾಣದ ಅವಧಿ = ಕ್ರಮಿಸಿದ ದೂರ ಎಂಬ ಸೂತ್ರವನ್ನು ಪರಿಶೀಲಿಸಬೇಕು. ಇದರಂತೆ ಗಂಟೆಗೆ v ಕಿಲೋಮೀಟರು ವೇಗದಿಂದ ಚಲಿಸುತ್ತಿರುವ ವಾಹನವೊಂದು $t_1$ ವೇಳೆಯಲ್ಲಿ $s_1$ಕಿಮೀ. ಕಲ್ಲನ್ನೂ $t_2$ ವೇಳೆಯಲ್ಲಿ $s_2$ ಕಿಮೀ. ಕಲ್ಲನ್ನೂ ಹಾದುಹೋದರೆ $v \times (t_2 - t_1) = (s_2 - s_1)$ ಆಗಬೇಕು. ವಾಹನ ಚಲಿಸುವ ದಿಕ್ಕಿನಲ್ಲಿ ಕಿಮೀ. ಕಲ್ಲುಗಳ ಮೇಲೆ ನಮೂದಾಗಿರುವ ಸಂಖ್ಯೆಗಳು ಏರುತ್ತ ಹೋದರೆ ವಾಹನದ ವೇಗವನ್ನು ಧನಾತ್ಮಕವೆಂದೂ ಆ ಸಂಖ್ಯೆಗಳು ಇಳಿಯುತ್ತ ಹೋದರೆ ಅದರ ವೇಗವನ್ನು ಋಣಾತ್ಮಕವೆಂದೂ ಪರಿಗಣಿಸುವುದು ಸ್ವಾಭಾವಿಕ. ಈಗ $v = -50$, $t_1 =$ ಸಂಜೆ 5 ಗಂಟೆ, $t_2 =$ ಅಪರಾಹ್ನ 2 ಗಂಟೆ, $s_2 = 400$ ಎಂದು ಭಾವಿಸೋಣ. ಈ ಉದಾಹರಣೆಯಲ್ಲಿ ಗಂಟೆಗೆ 50ಕಿಮೀ. ಗಳಂತೆ ಅಪರಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯ ವರೆಗಿನ 3 ಗಂಟೆಗಳ ಅವಧಿಯಲ್ಲಿ ವಾಹನ 150 ಕಿಮೀ. ದೂರವನ್ನು ಕ್ರಮಿಸಿ, 400 ನೆಯ ಕಿಮೀ. ಕಲ್ಲಿನಿಂದ 250 ನೆಯ ಕಿಮೀ. ಕಲ್ಲಿಗೆ ಚಲಿಸಿರುತ್ತದೆ. (ವೇಗ ಋಣಾತ್ಮಕವಿರುವುದರಿಂದ ಕಿಮೀ. ಕಲ್ಲಿನ ಕ್ರಮಸಂಖ್ಯೆ ಕಡಿಮೆಯಾಗಬೇಕು). ಆದ್ದರಿಂದ $s_1 = 250$. ಈ ಬೆಲೆಗಳನ್ನು $v \times (t_2 - t_1) = (s_2 - s_1)$ ಸೂತ್ರದಲ್ಲಿ ಆದೇಶಿಸಿದರೆ $(-50) \times (2-5) = (400-250)$ ಅಥವಾ $(-50) \times (-3) = 150$ ಆಗುತ್ತದೆ. ಅಂದಮೇಲೆ ಎರಡು ಋಣ ಸಂಖ್ಯೆಗಳ ಗುಣಲಬ್ಧವನ್ನು ಮಾಮೂಲು ಧನ ಸಂಖ್ಯೆ ಎಂದೇ ಪರಿಗಣಿಸುವುದು ಉಪಯುಕ್ತವೆಂದಾಯಿತು; ಇದನ್ನೇ ಶಾಲಾ ಬೀಜಗಣಿತದಲ್ಲಿ $(-) \times (-) = (+)$ ಎಂಬುದಾಗಿ ಸೂತ್ರೀಕರಿಸುತ್ತಾರೆ. ವಾಹನಸಂಚಾರದ ನಿದರ್ಶನವನ್ನೇ ಬಳಸಿಕೊಂಡು $(-50) \times 3 = (-150)$, $50 \times (-3) = (-150)$ ಎಂದು ಸಹ ಸುಲಭವಾಗಿ ಮನಗಾಣಬಹುದು. ಶಾಲಾಬೀಜಗಣಿತದ ಸೂತ್ರೀಕರಣದಲ್ಲಿ, $(-) \times (+) = (-)$ ಮತ್ತು $(+) \times (-) = (-)$. ಕೊನೆಯದಾಗಿ ಭಾಗಾಹಾರ ಪರಿಕರ್ಮ ಗುಣಾಕಾರದ ವ್ಯುತ್ಕ್ರಮವಾದ್ದರಿಂದ $[(-50) \times (-3) = 150$ ಆದಕಾರಣ $150 \div (-50) = (-3)$ ; $(-50) \times 3 = (-150)$ ಆದಕಾರಣ $(-150) \div 50 = -3$ ; $50 \times (-3) = -150$ ಆದಕಾರಣ $(-150) \div 50 = (-3)]$ ಇಂಥವೇ ಸೂತ್ರಗಳು ಭಾಗಾಹಾರಕ್ಕೂ ಅನ್ವಯಿಸುತ್ತವೆ ; $(-) \div (-) = (+)$ ; $(-) \div (+) = (-)$ ; $(+) \div (-) = (-)$ .

ಇದೇ ಸಂದರ್ಭದಲ್ಲಿ ಸೊನ್ನೆಯ ಪರಿಕಲ್ಪನೆಯ ಬಗ್ಗೆ ಒಂದೆರಡು ಮಾತುಗಳು ಅವಶ್ಯ. (−2) +2 ಎಂಬ ಸಂಕಲನವನ್ನು ಪರಿಶೀಲಿಸಬೇಕು. ಇಲ್ಲಿ ಲಾಭ ಮತ್ತು ನಷ್ಟಗಳು ಪರಸ್ಪರ ಸಮವಾಗಿರುವುದರಿಂದ ಒಟ್ಟಿನಲ್ಲಿ ಲಾಭವೂ ಇಲ್ಲ ನಷ್ಟವೂ ಇಲ್ಲ ಎಂಬುದು ಸುವೇದ್ಯ. ಇಂಥ ಸನ್ನಿವೇಶವನ್ನು ಅಭಿವ್ಯಕ್ತಿಸಲು ನಾವು ಸೊನ್ನೆಯನ್ನು ಉಪಜ್ಞಿಸುತ್ತೇವೆ (−2) +2=0. ಯಾವುದೇ ರಾಶಿಯನ್ನು ಸೊನ್ನೆಯೊಂದಿಗೆ ಕೂಡಿದಾಗ ಅದೇ ರಾಶಿ ಬರುತ್ತದೆ ಹಾಗೂ ಸೊನ್ನೆಯಿಂದ ಗುಣಿಸಿದಾಗ ಸೊನ್ನೆಯೇ ಬರುತ್ತದೆ: $a+0=a=0+a$ ; $a \times 0 = 0 = 0 \times a$. ಸೊನ್ನೆಯ ಇನ್ನು ಕೆಲವು ಗಮನಾರ್ಹ ಗುಣಗಳೆಂದರೆ $a - 0 = 0$, $0 - a = -a$, $a - a = 0$ ; ಮತ್ತು a ಯೂ ಸೊನ್ನೆ ಅಲ್ಲದೆ ಇರುವಾಗ $0 \div a = 0$. ಸೊನ್ನೆಯಿಂದ ಯಾವುದೇ ಸಂಖ್ಯೆಯ ಭಾಗಾಕಾರ ನಿಷಿದ್ಧ. ಸೊನ್ನೆ ಮಾಮೂಲು ಧನವೂ ಅಲ್ಲ, ಋಣವೂ ಅಲ್ಲ ; ಆದರೆ ಅದನ್ನು ಒಂದು ಪೂರ್ಣಾಂಕವೆಂದು ಪರಿಗಣಿಸಲಾಗುವುದು.

ಧನ ಭಿನ್ನರಾಶಿಗಳು, ಋಣ ಭಿನ್ನರಾಶಿಗಳು ಹಾಗೂ ಸೊನ್ನೆ ಇವಿಷ್ಟನ್ನೂ ಒಟ್ಟಾಗಿ ಗಣಿತಜ್ಞರು ಪರಿಮೇಯಗಳು (ರ್‍ಯಾಷನಲ್ ನಂಬರ್ಸ್)ಎಂದು ಕರೆಯುತ್ತಾರೆ. ಪರಿಮೇಯಗಳ ಸಾರ್ವತ್ರಿಕ ರೂಪ p/q; ಇಲ್ಲಿ q ಒಂದು ಧನ ಅಥವಾ ಋಣ ಪೂರ್ಣಾಂಕ, p ಒಂದು ಧನ ಅಥವಾ ಋಣ ಪೂರ್ಣಾಂಕ ಅಥವಾ ಸೊನ್ನೆ. p, q ಧನ ಪೂರ್ಣಾಂಕಗಳಾದಲ್ಲಿ (−p) / (− q)ವನ್ನು ಮಾಮೂಲು ಧನ ಭಿನ್ನರಾಶಿ (p/q) ವಿನೊಂದಿಗೂ (−p) / q ಹಾಗೂ p / (−q) ಗಳನ್ನು ಋಣ ಭಿನ್ನರಾಶಿ [−(p/q] ವಿನೊಂದಿಗೂ ಸಮೀಕರಿಸುತ್ತೇವೆ. p ಯಾವುದೇ ಪೂರ್ಣಾಂಕವಾದಲ್ಲಿ p/1 = p ಆಗುವ ಕಾರಣ (ಸೊನ್ನೆಯೂ ಸೇರಿದಂತೆ) ಪೂರ್ಣಾಂಕಗಳೆಲ್ಲವೂ ಪರಿಮೇಯಗಳೇ. ಯಾವುದೇ ಪರಿಮೇಯ p/q ವಿನಲ್ಲಿ ಛೇದ q ಸೊನ್ನೆ ಆಗುವುದು ನಿಷಿದ್ಧ. ps=qr ಆದಲ್ಲಿ (p/q) = (r/s) ಎಂದು ಅಂಗೀಕರಿಸುತ್ತೇವೆ. ಯಾವುದೇ ಎರಡು ಪರಿಮೇಯ p/q ಮತ್ತು r/s ಗಳನ್ನು ಮೇಲೆ ಪ್ರದರ್ಶಿಸುವ (1) ಮತ್ತು (2) ಸೂತ್ರಗಳ ಮೇರೆಗೆ ಕೂಡಿಸಬಹುದು ಹಾಗೂ ಗುಣಿಸಬಹುದು (ಈಗ p, q, r, s ಧನ ಪೂರ್ಣಾಂಕಗಳಾಗಿರಬೇಕಾದುದೇನಿಲ್ಲ). ಅಲ್ಲದೆ ಕೆಳಗಿನ ಸೂತ್ರದಂತೆ ಅವನ್ನು ವ್ಯವಕಲನ ಪರಿಕರ್ಮಕ್ಕೆ ಸಹ ಗುರಿಪಡಿಸಲು ಸಾಧ್ಯವಿದೆ :

$(p/q) - (r/s) = [(p \times s) - (r \times q)]/(q \times s)$

ಕೊನೆಯದಾಗಿ r ಸೊನ್ನೆಯಲ್ಲದಿರುವಾಗ p/q ವನ್ನು r/s ನಿಂದ ಭಾಗಿಸಲೂಬಹುದು : $(p/q) \div (r/s) = (p \times s) / (q \times r)$ ಈ ಪರಿಕರ್ಮಗಳು $[(p/q) \div (r/s] \times (r/s) = p/q$

$(p/q) \times [(r/s) + (t/u)] = [(p/q) \times (r/s)] + [(p/q) \times (t/u)]$ ಮುಂತಾದ ಕೆಲವು ವಿಶಿಷ್ಟ ನಿಯಮಗಳನ್ನು ಪರಿಪಾಲಿಸುವುದರಿಂದ ಪರಿಮೇಯಗಳ ವ್ಯವಸ್ಥೆ ಒಂದು ಕ್ಷೇತ್ರ (ಫೀಲ್ಡ್) ಎಂದೆನಿಸಿಕೊಂಡಿದೆ **(ನೋಡಿ– ಕ್ಷೇತ್ರ, ಬೀಜಗಣಿತೀಯ)**.

ನಿರ್ದಿಷ್ಟ ಮೌಲ್ಯಗಳಿರುವ 0, 1, (−2), (3/2) ಮುಂತಾದ ಪ್ರತೀಕಗಳೊಂದಿಗೆ ಚರ ಅಥವಾ ಅಜ್ಞಾತ ಮೌಲ್ಯಗಳನ್ನು ಸೂಚಿಸುವ ಇತರ ಪ್ರತೀಕ ಇಲ್ಲವೆ ಪದಗುಚ್ಛಗಳನ್ನು ಗಣಿತಜ್ಞರು ಬಳಸತೊಡಗಿದಾಗ ಸರಳ ಬೀಜಗಣಿತದ (ಎಲಿಮೆಂಟರಿ ಆಲ್ಜಿಬ್ರ) ಉದ್ಭವವಾಯಿತು. ಡಯೊಫಾಂಟಸ್ (ಗ್ರೀಸ್, ಪ್ರ. ಶ. 250), ಆರ್ಯಭಟ್ಟ (ಭಾರತ, ಪ್ರ.ಶ. 628), ಆಲ್‌ಖ್ವಾರಿಜ್ಮೀ (ಅರೇಬಿಯ, ಪ್ರ. ಶ. 825), ಮಹಾವೀರ (ಭಾರತ ಪ್ರ. ಶ. 850), ಭಾಸ್ಕರಾಚಾರ್ಯ (ಭಾರತ, ಪ್ರ. ಶ. 1150) ಮುಂತಾದ ಪ್ರಾಚೀನ ಗಣಿತಶಾಸ್ತ್ರಜ್ಞರ ಕೊಡುಗೆ ಈ ದಿಶೆಯಲ್ಲಿ ಮಹತ್ತರವಾದುದು. ಇವರು ಸಮಸ್ಯೆಗಳನ್ನು ಸಮೀಕರಣಗಳನ್ನಾಗಿ ರೂಪಿಸಿ ಅವನ್ನು ಬಿಡಿಸುವುದರ ಮುಲಕ ಅಜ್ಞಾತ ಉತ್ತರಗಳನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾದರು. ಅನಂತರ ಯುರೋಪಿನ ಗಣಿತಜ್ಞರು ಸರಳ ಬೀಜಗಣಿತದ ತಂತ್ರಗಳನ್ನು ಇನ್ನಷ್ಟು ವಿಸ್ತರಿಸಿ ಸಂಸ್ಕರಿಸಿದರು. ಇಂದು ಚರ ಅಥವಾ ಅಜ್ಞಾತ ರಾಶಿಗಳನ್ನು x, y ಮುಂತಾದ ಅಕ್ಷರ ಪ್ರತೀಕಗಳಿಂದ ಸೂಚಿಸುವ ಪದ್ಧತಿ ರೂಢಿಗೆ ಬಂದಿದೆ. $x \times y$ ಗುಣಲಬ್ಧವನ್ನು ಸಂಕ್ಷೇಪವಾಗಿ x, y ಅಥವಾ ಕೇವಲ x y ಎಂದು ಈಗ ಸೂಚಿಸುತ್ತೇವೆ. x X x, x X x X x ಮುಂತಾದ ಗುಣಲಬ್ಧಗಳನ್ನು ಅಭಿವ್ಯಕ್ತಿಸಲು ಅನುಕ್ರಮವಾಗಿ $x^2$, $x^3$ ಮುಂತಾದ ಹ್ರಸ್ವ ಪ್ರತೀಕಗಳು ರೂಪಿತವಾಗಿವೆ. ಸರಳ ಬೀಜಗಣಿತದಲ್ಲಿ ಬಹಳಷ್ಟು ವೇಳೆ x. y ಗಳಂಥ ಚರ ಇಲ್ಲವೆ ಅಜ್ಞಾತಗಳಿಗೆ ಸಂದಾಯವಾಗುವ ಬೆಲೆಗಳು ಪರಿಮೇಯಗಳೇ ಆಗಿರುತ್ತವೆ. ಉದಾಹರಣೆಗೆ $(x + y)^2 = x^2 + 2xy + y^2$ ಎಂಬುದು ಸರಳ ಬೀಜಗಣಿತದ ಒಂದು ಸುಪರಿಚಿತ ಸೂತ್ರ : x, y ಗಳಿಗೆ (ಮುಖ್ಯವಾಗಿ) ಯಾವುದೋ ಪರಿಮೇಯ ಬೆಲೆಗಳನ್ನು ಕೊಟ್ಟರೂ ಇದು ಒಂದು ನಿತ್ಯ ಸಮತ್ವವನ್ನು ವ್ಯಕ್ತಪಡಿಸುತ್ತದೆಂಬುದೇ ಈ ಸೂತ್ರೀಕರಣದ ಅಭಿಪ್ರಾಯ. 2 x + 5 = 12 ಎಂಬುದು ಒಂದು ಸರಳ ಸಮೀಕರಣ; ಇಲ್ಲಿ x ಅಜ್ಞಾತ; ಸಮೀಕರಣ ಸತ್ಯವಾಗಲು ಈ ಅಜ್ಞಾತಕ್ಕೆ (7/2) ಎಂಬ ಪರಿಮೇಯ ಬೆಲೆ ಸಲ್ಲಬೇಕಾಗುತ್ತದೆ. $x^2 - 2x = 1$ $x^2 + 4x + 5 = 0$ ಮುಂತಾದ ವರ್ಗಾತ್ಮಕ ಸಮೀಕರಣಗಳನ್ನು (ಕ್ವಾಡ್ರ್ಯಾಟಿಕ್ ಈಕ್ವೇಷನ್ಸ್) ಪ್ರಸ್ತಾವಿಸುವಾಗ ಮಾತ್ರ ಸರಳ ಬೀಜಗಣಿತದ ಅಧ್ಯಯನ ವ್ಯಾಪ್ತಿ ಪರಿಮೇಯಗಳ ಎಲ್ಲೆಯನ್ನು ದಾಟಿ $1+\sqrt{2}$ ರಂಥ ಅಪರಿಮೇಯಗಳನ್ನೂ (ಇರ್‍ಯಾಷನಲ್ಸ್) $\sqrt{-1}$-2 ರಂಥ ಮಿಶ್ರ ಸಂಖ್ಯೆಗಳನ್ನೂ (ಕಾಂಪ್ಲೆಕ್ಸ್ ನಂಬರ್ಸ್) ಒಳಗೊಳ್ಳಬೇಕಾಗುವುದು. (ಎಸ್.ವಿ.ಆರ್.ಎಸ್.)

**3.ಜ್ಯಾಮಿತಿ :** ಸಂಖ್ಯೆಗಳು ಪ್ರಾಚೀನ ಗಣಿತಾಧ್ಯಯನದ ಒಂದು ಮುಖವಾದರೆ ಆಕೃತಿಗಳು ಅದರ ಇನ್ನೊಂದು ಮುಖ. ಆದಿಮಶಿಲಾಯುಗದ ಮಾನವನಿಗೆ (ಪ್ರ.ಶ.ಪೂ. 25,000) ಜ್ಯಾಮಿತಿಯ ವಿನ್ಯಾಸಗಳ ಪ್ರಜ್ಞೆ ಇತ್ತು. ಇನ್ನು ಪುರಾತನ ನಾಗರಿಕತೆಗಳ ಕಾಲವನ್ನು ಸಮೀಕ್ಷಿಸಿದರೆ ಈಜಿಪ್ಟಿನಲ್ಲಿ ಅದ್ಭುತ ಪಿರಮಿಡ್ಡುಗಳನ್ನು ಕಟ್ಟಿದ್ದು ಪ್ರ.ಶ.ಪೂ. 3,000 ವೇಳೆಗೆ. ಅದಕ್ಕೂ ಹಿಂದೆ ಮಡಕೆಗಳನ್ನು ತಯಾರಿಸುವಲ್ಲಿ ಹಾಗೂ ವಾಹನಗಳನ್ನು ನಿರ್ಮಿಸುವಲ್ಲಿ, ಚಕ್ರಗಳ ಉಪಯೋಗವನ್ನು ಜನರು ಅರಿತಿದ್ದರು. ಪ್ರ.ಶ.ಪೂ 2,000ದ ವೇಳೆಗೆ ಕೆಲವಷ್ಟು ಏಕತಲಾಕೃತಿಗಳ ಸಲೆಗಳನ್ನೂ (ಏರಿಯಾಸ್)

ಘನಾಕೃತಿಗಳ ಘನಗಾತ್ರಗಳನ್ನೂ (ವಾಲ್ಯೂಮ್ಸ್) ಲೆಕ್ಕಮಾಡಲು ಈಜಿಪ್ಷಿಯನರು ಕಲಿತಿದ್ದರು. ಪೈಥಾಗೊರಸ್ ಪ್ರಮೇಯ ಮತ್ತು ತಾಲಿಸ್ ಪ್ರಮೇಯ ಎಂಬುದಾಗಿ ಇಂದು ಪ್ರಸಿದ್ಧವಾಗಿರುವ ಜ್ಯಾಮಿತೀಯ ಫಲಿತಾಂಶಗಳು ಪ್ರ.ಶ.ಪೂ. 1500 ಕ್ಕೂ ಮುಂಚೆ ಬ್ಯಾಬಿಲೋನಿಯನ್ನರಿಗೆ ಪರಿಚಿತವಾಗಿದ್ದವು. ABC ತ್ರಿಭುಜದಲ್ಲಿ A ಲಂಬಕೋನಗಳು $BC^2 = AB^2 + AC^2$ ಆಗಬೇಕೆಂಬ ಸಂಗತಿಯೇ ಪೈಥಾಗೊರಸ್ ಪ್ರಮೇಯ. ಅರ್ಧವೃತ್ತವೊಂದರೊಳಗಿನ ಕೋನಗಳೆಲ್ಲವೂ ಲಂಬಕೋನಗಳು ಎಂಬುದು ತಾಲಿಸ್ ಪ್ರಮೇಯ. ತಾಲಿಸ್ ಮತ್ತು ಪೈಥಾಗೊರಸ್ ಈ ಪ್ರಮೇಯಗಳನ್ನು ಪ್ರಪ್ರಥಮವಾಗಿ ಅವಿಷ್ಕರಿಸಿದವರೇನಲ್ಲ. ನಿಜಕ್ಕೂ ಅವರಿಬ್ಬರೂ ಪ್ರ.ಶ.ಪೂ. 6ನೆಯ ಶತಮಾನದ ತಾತ್ತ್ವಿಕರು.

ಭಾರತದಲ್ಲಿ ಪ್ರ.ಶ.ಪೂ. 8ನೆಯ ಶತಮಾನದ ವೇಳೆಗೆ ದೇವಸ್ಥಾನಗಳ ವಿನ್ಯಾಸ, ಯಜ್ಞಯಾಗಾದಿಗಳ ನಿರ್ವಹಣೆ ಮೊದಲಾದ ಸಂಬಂಧಗಳಲ್ಲಿ ಅನೇಕ ರೀತಿಯ ವಿಶಿಷ್ಟೀಕೃತ ಜ್ಯಾಮಿತೀಯ ರಚನಾವಿಧಿಗಳು ಅನುಷ್ಠಾನಕ್ಕೆ ಬಂದಿದ್ದವು. ಈ ವಿಧಿಗಳನ್ನು ಆಪಸ್ತಂಬ (ಶುಲ್ವ ಸೂತ್ರಗಳು) ಎಂಬ ಕೃತಿಯಲ್ಲಿ ಶ್ಲೋಕಗಳ ಮೂಲಕ ವರ್ಣಿಸಲಾಗಿದೆ. (ಆಪಸ್ತಂಬರದೂ ಸೇರಿದಂತೆ ಏಳು ಶುಲ್ವ ಸೂತ್ರಗಳು ಇಂದು ತಿಳಿದಿವೆ). ಶುಲ್ವ ಸೂತ್ರಗಳಲ್ಲೂ ಪೈಥಾಗೊರಸ್ ಪ್ರಮೇಯದ ವ್ಯಾಪಕ ಬಳಕೆ ಕಂಡುಬರುವುದು. ಇಷ್ಟೆಲ್ಲ ಆದರೂ ಪ್ರ.ಶ.ಪೂ. 6ನೆಯ ಶತಮಾನದಕ್ಕಿಂತ ಹಿಂದಿನ ಜ್ಯಾಮಿತಿ ಭೌತವಿಜ್ಞಾನದಂತೆ ಪ್ರಧಾನತಃ ಒಂದು ಅನುಭವಜನ್ಯ (ಎಂಪಿರಿಕಲ್) ವಿಜ್ಞಾನವಾಗಿದ್ದಿತೇ ವಿನಾ ತರ್ಕಮಾರ್ಗವನ್ನು ಅನುಸರಿಸುವ ವ್ಯವಸ್ಥಿತ ಗಣಿತವಾಗಿರಲಿಲ್ಲ. ವಾಸ್ತವಿಕ ರಚನೆಗಳ ಅನುಭವದಿಂದ ಸಿದ್ಧಿಸಿದ ಉಕ್ತಿಗಳೇ ಆ ಭೌತ ಜ್ಯಾಮಿತಿಯ ಪ್ರಮೇಯಗಳು. ಪ್ರಮೇಯಗಳ ಸತ್ಯತೆಯನ್ನು ಸ್ಪಷ್ಟೀಕರಿಸುವ ಸಲುವಾಗಿ ಅದರಲ್ಲಿ ಅಪರೂಪಕ್ಕೆ ಅಲ್ಲೊಮ್ಮೆ ಇಲ್ಲೊಮ್ಮೆ ಕೆಲವೊಂದು ಸಮರ್ಥ ವಾದಗಳನ್ನು ಹೂಡಿರಬಹುದಾದರೂ ಅಂಥ ವಾದಗಳು ಆ ಜ್ಯಾಮಿತಿಯ ಅವಿಭಾಜ್ಯ ಅಂಗಗಳೆನಿಸಿರಲಿಲ್ಲ. ಬದಲು, ಆಕೃತಿಗಳ ಪರಿಧಿ (ಪೆರಿಮಿಟರ್), ಸಲೆ ಮೊದಲಾದವನ್ನು ಅಳತೆ ಮಾಡಿ ಸಂಖ್ಯೆಗಳ ಮೂಲಕ ವ್ಯಕ್ತಪಡಿಸುವ ಕಾರ್ಯವಾದರೋ ಭೌತ ಜ್ಯಾಮಿತಿಯ ಮೂಲಭೂತ ಪರಿಪಾಠವಾಗಿತ್ತು. ವ್ಯಾವಹಾರಿಕ ಅಳತೆಗಳು ಸರಿಸುಮಾರಾಗಿರಬಲ್ಲವೇ ವಿನಾ ಪೂರ್ಣ ನಿಖರವಾಗಲಾರ ವೆಂಬುದು ಆ ಜ್ಯಾಮಿತಿಯ ಕೃಷಿಕಾರರ ದೃಷ್ಟಿಯಲ್ಲಿ ತಾತ್ತ್ವಿಕ ಮಹತ್ತ್ವವಿಲ್ಲದ ಒಂದು ಗೌಣ ಅಂಶವಾಗಿ ತೋರಿತು. ತತ್ಫಲವಾಗಿ ಜ್ಯಾಮಿತಿಯ ಅನ್ವೇಷಣೆಗಳೆಲ್ಲವನ್ನೂ ಸಂಖ್ಯೆಗಳ (ಅಂದರೆ ಧನಪೂರ್ಣಾಂಕಗಳ, ಇಲ್ಲವೆ ಪರಿಮೇಯಗಳ) ಮಾಧ್ಯಮದಲ್ಲೇ ಕೈಗೊಳ್ಳಬಹುದೆಂಬ ದೃಢವಿಶ್ವಾಸಕ್ಕೆ ಅವರಲ್ಲಿ ಮೂಡಿತು. (ಆಧುನಿಕ ಯುಗದಲ್ಲೂ ಈ ವಿಶ್ವಾಸಕ್ಕೆ ಮನ್ನಣೆ ಉಂಟು; ಆದರೆ ಕನಿಷ್ಠ ಪಕ್ಷ ನೈಜ ಸಂಖ್ಯೆಗಳನ್ನು–ರಿಯಲ್ ನಂಬರ್ಸ್–ಒಳಗೊಳ್ಳುವ ಆಧುನಿಕ ಸಂಖ್ಯಾಮಾಧ್ಯಮದ ವ್ಯಾಪ್ತಿ ಪರಿಮೇಯಗಳಿಗಷ್ಟೇ ಸೀಮಿತವಲ್ಲ. ಪ್ರಾಚೀನ ಕಾಲ ದಲ್ಲಾದರೋ ನೈಜಸಂಖ್ಯೆಯ ಪರಕಲ್ಪನೆ ಇಲ್ಲದಿದ್ದ ಕಾರಣ ಸಂಖ್ಯೆ ಎಂದರೆ ಪೂರ್ಣಾಂಕ ಇಲ್ಲವೆ ಪರಿಮೇಯ ಎಂದು ಮಾತ್ರ ಅರ್ಥವಿಸ ಬೇಕಾಗಿತ್ತು.) ಗ್ರೀಕ್ ತಾತ್ತ್ವಿಕ ಪೈಥಾಗೊರಸ್ ಮತ್ತು ಅವನ ಅನುಯಾಯಿಗಳಾದರೂ ಈ ವಿಶ್ವಾಸದಲ್ಲಿ ಪಾಲ್ಗೊಂಡವರೇ ಆಗಿದ್ದರು. ಆದರೆ ಪ್ರ.ಶ.ಪೂ. 6 ಮತ್ತು 4ನೆಯ ಶತಮಾನಗಳ ನಡುವೆ ಕೊನೆಯ ಪಕ್ಷ ಗ್ರೀಕ್ ಜ್ಯಾಮಿತಿಶಾಸ್ತ್ರಜ್ಞರ ಮಟ್ಟಿಗೆ ಇಂಥ ಸಂಖ್ಯಾಶ್ರದ್ಧೆಯನ್ನು ಬುಡಮೇಲಾಗಿಸುವ ಕೆಲವು ಸಂಗತಿಗಳು ಆವಿಷ್ಕೃತವಾದುವು.



ಚಿತ್ರ 6

ಚಿತ್ರ (6)ರ ABC ತ್ರಿಭುಜ ಈ ಬಗೆಯ ಆಂದೋಲಕ ವಿದ್ಯಮಾನವೊಂದನ್ನು ನಿದರ್ಶಿಸುತ್ತದೆ. ಇದರಲ್ಲಿ ABC ಕೋನಗಳು ಅನುಕ್ರಮವಾಗಿ $36^0$, $72^0$, $72^0$, ಆಗಿವೆ. (ಇಂಥ ತ್ರಿಭುಜಗಳನ್ನು ರಚಿಸಲು ನಿಜಕ್ಕೂ ಸಾಧ್ಯವುಂಟೆಂದು ಗ್ರೀಕರಿಗೆ ವೇದ್ಯವಾಗಿತ್ತು). AB, BC ಗಳೆರಡರ ಉದ್ದಗಳನ್ನೂ ಪರಿಮೇಯಗಳಿಂದ ವ್ಯಕ್ತಪಡಿಸಲು ಸಾಧ್ಯವೇ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ. ಪರ್ಯಾಲೋಚನೆಯ ದೃಷ್ಟಿಯಿಂದ ಅದು ಸಾಧ್ಯವೆಂದು ಕಲ್ಪಿಸಿಕೊಳ್ಳೋಣ. ಆಗ ಅಳತೆಯ ಮೂಲಮಾನವನ್ನು ಸೂಕ್ತವಾಗಿ ಬದಲಿಸುವುದರಿಂದ AB, BC ಗಳ ಉದ್ದಗಳು (ಧನ) ಪೂರ್ಣಾಂಕಗಳಾಗುವಂತೆ ಏರ್ಪಡಿಸಲೂ ಸಾಧ್ಯವಾಗುವುದು. (ಉದಾಹರಣೆಗೆ ಯಾವುದೋ ಒಂದು ಅಳತೆಯ ಮೂಲಮಾನವನ್ನಿಟ್ಟುಕೊಂಡಾಗ ABಯ ಉದ್ದ 29/3, BCಯ ಉದ್ದ 32\5 ಆಗಿರಬಹುದು. ಈ ಮೂಲಮಾನದ 1/(3X5)= 1/15 ಭಾಗವನ್ನು ಹೊಸ ಮೂಲಮಾನವನ್ನಾಗಿ ಆಯ್ಕೆ ಮಾಡಿದಲ್ಲಿ AB=15X29/3=145, BC=15X32/5=96 ಆಗುತ್ತವೆ. 145 ಮತ್ತು 96 ಎರಡೂ ಪೂರ್ಣಾಂಕಗಳು.) ಆದ್ದರಿಂದ AB= ಒಂದು ಧನಪೂರ್ಣಾಂಕ $n_1$, BC= ಅದಕ್ಕಿಂತ ಕಿರಿದಾದ ಇನ್ನೊಂದು ಧನಪೂರ್ಣಾಂಕ $n_2$ ಎಂದು ಭಾವಿಸಬಹುದು. ಇದಾದ ಬಳಿಕ CD=BC ಆಗುವಂತೆ D ಬಿಂದುವನ್ನು AB ಯ ಮೇಲೆ ಗುರುತಿಸೋಣ. ತತ್ಫಲವಾಗಿ $AD=BC=n_2$ ಎಂದೂ $BD = AB-AD=n_1-n_2-=n_3$ ಎಂದು ಕರೆಯಬಹುದಾದ ಮತ್ತೊಂದು ಧನಪೂರ್ಣಾಂಕ ಎಂದೂ ಮನಗಾಣುವುದು ಸುಲಭ. ಅಲ್ಲದೆ CBDಯು ABCಗೆ ಸಮರೂಪವಾಗಿರುವುದರಿಂದ (ಸಿಮಿಲರ್) AB/BC = CB/BD ಅಥವಾ $n_1/n_2=n2/n_3$ ಎಂದಗ ಬೇಕಾಗುವುದು. ಇಲ್ಲಿ $n1>n_2>n_3$ ಎಂಬುದನ್ನು ಗಮನಿಸಬೇಕು. ಈಗ CBD ಯೂ ABC ಯಂಥದೇ ತ್ರಿಭುಜವಾದ್ದರಿಂದ ABCಯ ಮೇಲೆ ಎಸಗಿದ ರಚನೆಯನ್ನೇ CBDಯನ್ನು ಕುರಿತಂತೆಯೂ ಪುನರಾವರ್ತಿಸಲು ಅಡ್ಡಿಯೇನಿಲ್ಲ. ಹಾಗೆ ಮಾಡಿದಲ್ಲಿ ಮತ್ತೆ ಇನ್ನೊಂದು ಧನಪೂರ್ಣಾಂಕ $n_4$ ಗೆ $n_2>n_3>n_4$ ಹಾಗೂ $n_2/n_3=n_3/n_4$ ಆಗಬೇಕಾಗುವುದು. ಹೀಗೆಯೇ ಮುಂದುವರಿದರೆ ಧನಪೂರ್ಣಾಂಕಗಳ ಒಂದು ಅನಂತಶ್ರೇಣಿ $\{n_1,n_2,n_3,n_4,n_5,n6........\}$ ಫಲಿಸಿ ಅದರ ಉದ್ದಕ್ಕೂ $n_1>n_2>n_3>n_4>n_5>n_6>$....... ಆಗಬೇಕಾಗುವುದು. ಇದು ಸ್ಪಷ್ಟವಾಗಿ ಅಸಾಧ್ಯ. ಆದ್ದರಿಂದ ಚಿತ್ರ 6ರ AB, BC ಉದ್ದಗಳೆರಡನ್ನೂ ಪರಿಮೇಯಗಳಿಂದ ಅಳೆಯಬಹುದೆಂಬ ನಮ್ಮ ಕಲ್ಪನೆ ಮಿಥ್ಯೆಯೇ ಸರಿ. ಪೈಥಾಗೊರಸನ ಅನಂತರ ಜ್ಯಾಮಿತಿಯನ್ನು ಅಭ್ಯಸಿಸಿದ ಅನೇಕ ಗ್ರೀಕ್ ಸಂಶೋಧಕರು ಇಂಥ ವಿದ್ಯಮಾನಗಳ ಫಲವಾಗಿ ರೇಖಾಖಂಡಗಳು (ಲೈನ್ ಸೆಗ್‌ಮೆಂಟ್ಸ್) ವೃತ್ತಚಾಪಗಳು (ಸರ್ಕ್ಯುಲರ್ ಆರ್ಕ್ಸ್), ಸಲೆಗಳೇ ಮೊದಲಾದ ಜ್ಯಾಮಿತೀಯ ಧಾತುಗಳು ನಿಜಕ್ಕೂ ಸಂಖ್ಯೆಗಳಿಗಿಂತ ಮೂಲಭೂತ ಸಾಮಗ್ರಿಗಳೆಂಬ ಪ್ರಾಮಾಣಿಕ ತೀರ್ಮಾನಕ್ಕೆ ಬಂದರು. ಅವರ ಅಭಿಮತದ ಪ್ರಕಾರ ಈ ಜ್ಯಾಮಿತೀಯ ಧಾತುಗಳ ಮಾಧ್ಯಮದಲ್ಲಿ ಸಂಖ್ಯೆಗಳನ್ನು ವ್ಯಕ್ತಪಡಿಸಬಹುದೇ ವಿನಾ ಸಂಖ್ಯೆಗಳಿಂದ ಜ್ಯಾಮಿತೀಯ ಧಾತುಗಳನ್ನಲ್ಲ. (ಇಂದಿನ ನೈಜಸಂಖ್ಯೆಗಳು ಆಧುನಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳತ್ತ ಪ್ರಪ್ರಥಮವಾಗಿ ಇಣುಕಿ ನೋಡುವುದಾದರೂ ಕಪ್ಪುಹಲಗೆಯ ಮೇಲೆ ಎಳೆದ ಸರಳರೇಖೆಯೊಂದರ ಆಶ್ರಯವನ್ನು ಗಳಿಸಿದ ಬಳಿಕವೇ: ಆದ್ದರಿಂದ ಪ್ರಾಚೀನ ಗ್ರೀಕರ ಅಭಿಮತಕ್ಕೆ ಇಂದೂ ಕನಿಷ್ಠ ಪಕ್ಷ ಶೈಕ್ಷಣಿಕ ಸಲುವಳಿ ಇದೆ ಎನ್ನಬಹುದು.) (ಎಸ್.ಆರ್.ಎಂ.)

ಜ್ಯಾಮಿತಿಯನ್ನು ಸ್ಥೂಲವಾಗಿ ಯೂಕ್ಲಿಡೀಯ ಜ್ಯಾಮಿತಿ ಮತ್ತು ಅಯೂಕ್ಲಿಡೀಯ ಜ್ಯಾಮಿತಿ ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಜ್ಯಾಮಿತಿ ನಡೆದುಬಂದ ದಾರಿಯಲ್ಲಿ ಯೂಕ್ಲಿಡನ ಸ್ಥಾನ ಮಹತ್ತ್ವದ್ದು ಎನ್ನುವುದು ಇದರಿಂದ ಅರಿವಾಗುತ್ತದೆ. ಗಮನಾರ್ಹವಾದ ಹೆಚ್ಚಿನ ಅನ್ವೇಷಣೆಗಳನ್ನು ಯೂಕ್ಲಿಡ್ ಮಾಡದಿದ್ದರೂ ಅವನ ಹೆಸರು ಜ್ಯಾಮಿತಿಯೊಂದಿಗೆ ಸೇರಿಹೋಗಿರುವುದು ಅವನಿಗೆ ಸಂದಾಯವಾದ ಸರಿಯಾದ ಪುರಸ್ಕಾರವಾಗಿದೆ. ತನಗೆ ತಿಳಿದದ್ದನ್ನು ಅನ್ಯರಿಗೆ ಅರ್ಥವಾಗುವ ರೀತಿಯಲ್ಲಿ ತಿಳಿಯ ಪಡಿಸುವ ಅಪೂರ್ವ ಸಾಮರ್ಥ್ಯ ಅವನಿಗಿತ್ತು. 'ದಿ ಎಲಿಮೆಂಟ್ಸ್' ಎಂಬ ಆತನ ಗಣಿತಗ್ರಂಥ ಇದರ ಪ್ರತ್ಯಕ್ಷ ನಿದರ್ಶನ. ತನ್ನ ಕಾಲದ ವರೆಗೂ ಗಣಿತಶಾಸ್ತ್ರದಲ್ಲಿ ನಡೆದಿದ್ದ ಚಟುವಟಿಕೆಗಳನ್ನು ಸುಲಭ ಪಾಠಗಳು ('ದಿ ಎಲಿಮೆಂಟ್ಸ್'), ಆಕೃತಿಗಳ ವಿಭಾಗೀಕರಣ (ದಿ ಡಿವಿಷನ್ ಆಫ್ ಫಿಗರ್ಸ್) ಇವೇ ಮುಂತಾದ ಗ್ರಂಥಗಳಲ್ಲಿ ಅವನು ಅಳವಡಿಸಿದ್ದಾನೆ. ಸುಲಭ ಪಾಠಗಳು ಎನ್ನುವ ಪುಸ್ತಕ ಯೂಕ್ಲಿಡ್‌ಗಿಂತ ಮುಂಚೆ ಆಗಿಹೋದವರ ಬೌದ್ಧಿಕ ಹಿರಿಮೆಗಳ ಫಲಗಳನ್ನು ಒಳಗೊಂಡ ಒಂದು ಸಂಕಲನವೇ



ಚಿತ್ರ 7

ವಿನಾ ಒಂದು ಸಂಶೋಧನ ಗ್ರಂಥವಲ್ಲ. ಅದರಲ್ಲಿ ಅಂದಿನ ಗಣಿತಶಾಸ್ತ್ರದ ಪ್ರತಿಯೊಂದು ಉಕ್ತಿಯ ಸ್ಥಾನವನ್ನು ಗುರುತಿಸಿ, ಆಯಾ ಸ್ಥಾನಗಳಲ್ಲಿ ಅದನ್ನು ಅಳವಡಿಸಲಾಗಿದೆ: ಅಲ್ಲದೆ ಸಾಧನೆಗಳಿಲ್ಲದೆ ಉಕ್ತಿಗಳಿಗೆ ಹೊಸ ಸಾಧನೆಗಳನ್ನು ಸಹ ನಿರೂಪಿಸಲಾಗಿದೆ. ಹೀಗೆ ಜ್ಯಾಮಿತಿಯ ಪುನರುಜ್ಜೀವನಕ್ಕೆ ಯೂಕ್ಲಿಡ್ ಮುಖ್ಯ ಕಾರಣನಾದ.

ಸಾಧನೆಗಳನ್ನು ರೂಪಿಸಲು ಚಿತ್ರಗಳು ಸಹಾಯಕವಾಗಬಲ್ಲವೇ ವಿನಾ ಸಾಧನೆಗಳ ಸತ್ಯತೆಗೆ ಅವು ಅನಿವಾರ್ಯವಲ್ಲ ಎನ್ನುವುದು ಯೂಕ್ಲಿಡನಿಗೆ ತಿಳಿದಿತ್ತು. ಸಾಧನೆಗಳನ್ನು ಅರ್ಥಮಾಡಿಕೊಳ್ಳಲು ಚಿತ್ರಗಳು ಕೇವಲ ಸಹಾಯಕವಾಗುತ್ತವೆ ಮಾತ್ರ. ಸರಿಯಾದ ಪರಿಕಲ್ಪನೆ ಇಲ್ಲದೆ ಚಿತ್ರಗಳನ್ನು ರಚಿಸುವುದರಿಂದ ಕೆಲವು ವೇಳೆ ಅಸಂಬದ್ಧತೆಗಳನ್ನು ಸಮರ್ಥಿಸಬಹುದು. ಉದಾಹರಣೆಗೆ ತ್ರಿಭುಜಗಳೆಲ್ಲವೂ ಸಮಬಾಹು ತ್ರಿಭುಜಗಳು ಎಂಬುದಕ್ಕೆ ಒಂದು ಅಣಕಸಾಧನೆ ಈ ರೀತಿ ಇದೆ.

$\Delta MRA \equiv \Delta MPA$

$\therefore MR=MP$

$AR=AP$ .... (1)

ಈಗ $MB=MC$ ಮತ್ತು

$\angle MRB = \angle MPC = 90^0$

$\therefore \Delta MBR \equiv \Delta MCP$

$\therefore RB=PC$ .... (2)

(1) ಮತ್ತು (2) ರಿಂದ $AB = AC$

ಇದೇ ರೀತಿ $AB=BC$ ಎಂದೂ ಸಾಧಿಸಬಹುದು. M ಬಿಂದು ತ್ರಿಭುಜದ ಒಳಗಡೆ ಇರುವಂತೆ ಚಿತ್ರವನ್ನು ರಚಿಸಿರುವುದು ಗಮನಾರ್ಹ. ಆದರೆ ಅದು ನಿಜವಾಗಿ ತ್ರಿಭುಜದ ಹೊರಗಡೆ ಇರುತ್ತದೆ. ಮೇಲಿನ ಸಾಧನೆಗೆ ಅಸ್ತಿತ್ವವಿರಬೇಕಾದರೆ M ತ್ರಿಭುಜದ ಒಳಗಡೆ ಇರುತ್ತದೆ. ಎಂದು ಸಾಧಿಸಬೇಕು. ಇದು ಅಸಾಧ್ಯ.

ಯಾವುದೇ ಒಂದು ಶಾಸ್ತ್ರದ ತಳಪಾಯದಲ್ಲಿ ಅದರ ಬೆಳವಣಿಗೆಗೆ ಅನಿವಾರ್ಯವಾದ ಮತ್ತು ಸಾಧಿಸಲು ಸಾಧ್ಯವಾಗದ ಕೆಲವು ಮೂಲ ಉಕ್ತಿಗಳು ಇರಬೇಕು. ಶಾಸ್ತ್ರದ ಬೆಳವಣಿಗೆಯಲ್ಲಿ ಅಡ್ಡ ಸಿಕ್ಕುವ ಎಲ್ಲ ನಿರೂಪಣೆಗಳೂ ಈ ಮೂಲ ಉಕ್ತಿಗಳಿಂದ ನಿರೂಪಿತವಾಗಿರುತ್ತವೆ. ಜ್ಯಾಮಿತಿ ಕೂಡ ಇದಕ್ಕೆ ಹೊರತಾದುದಲ್ಲ. ಅಂತೆಯೇ ಮೊದಲನೆಯ ಅಧ್ಯಾಯದಲ್ಲಿ ಇಪ್ಪತ್ತುಮೂರು ವ್ಯಾಖ್ಯೆಗಳಾದ ಬಳಿಕ ಐದು ಆದ್ಯುಕ್ತಿಗಳನ್ನು (ಪಾಸ್ಚ್ಯುಲೇಟ್ಸ್) ಮತ್ತು ಐದು ಸಾಮಾನ್ಯ ಗ್ರಹಿಕೆಗಳನ್ನು (ಕಾಮನ್ ನೋಷನ್ಸ್) ಯೂಕ್ಲಿಡ್ ಅಂಗೀಕರಿಸುತ್ತಾನೆ. ಆದ್ಯುಕ್ತಿಗಳು ಜ್ಯಾಮಿತಿಗೆ ಮಾತ್ರ ಸೀಮಿತವಾಗಿದ್ದರೆ ಸಾಮಾನ್ಯ ಗ್ರಹಿಕೆಗಳು ಎಲ್ಲ ಶಾಸ್ತ್ರಗಳಿಗೂ ಅನ್ವಯಿಸುತ್ತವೆ. ಆದ್ದರಿಂದಲೇ, ಮೂಲ ಉಕ್ತಿಗಳನ್ನು ಆದ್ಯುಕ್ತಿಗಳು ಮತ್ತು ಸಾಮಾನ್ಯ ಗ್ರಹಿಕೆಗಳು ಎಂದು ಎರಡು ಗುಂಪುಗಳಾಗಿ ವಿಂಗಡಿಸಿದ್ದಾನೆ. (ಇಂದಾದರೋ ಇಂಥ ವಿಂಗಡಣೆಗೆ ಅಷ್ಟೇನೂ ಮಾನ್ಯತೆ ಇಲ್ಲ; ಎಲ್ಲ ಮೂಲ ಉಕ್ತಿಗಳನ್ನೂ ಆದ್ಯುಕ್ತಿಗಳೆಂದೇ ಪರಿಗಣಿಸುವುದು ವಾಡಿಕೆ ಆಗಿದೆ. ಅಲ್ಲದೆ ತರ್ಕಬದ್ಧತೆಯ ಇಂದಿನ ಮಾನಕಗಳಿಗೆ ಸರಿಹೊಂದಲು ಈ ಹತ್ತೇ ಉಕ್ತಿಗಳು ಸಾಲುವುದೂ ಇಲ್ಲ.) ನೇರ ಅಂಚು (ಸ್ಟ್ರೇಟ್ ಎಡ್ಜ್) ಮತ್ತು ಕೈವಾರಗಳ ನೆರವಿನಿಂದ ಮಾಡಬಹುದಾದಂಥ ರಚನೆಗಳು, ತ್ರಿಕೋನಗಳ ಸರ್ವಸಮತೆ, ಸಮಾಂತರ ಸರಳರೇಖೆಗಳ ಲಕ್ಷಣಗಳು (ತ್ರಿಕೋನದಲ್ಲಿನ ಕೋನಗಳ ಮೊತ್ತ ಎರಡು ಲಂಬಕೋನಗಳಿಗೆ ಸಮ ಎನ್ನುವುದೂ ಸೇರಿದಂತೆ), ಸಮಾಂತರ ಚತುರ್ಭುಜಗಳು (ಒಂದು ತ್ರಿಭುಜ ಅಥವಾ ಒಂದು ಸರಳರೇಖಾಕೃತಿಯ ಸಲೆಗೆ ಸಮವಾಗಿರುವಂತೆ ಮತ್ತು ಗೊತ್ತಾದ ಕೋನಗಳಿರುವಂತೆ ಒಂದು ಸಮಾಂತರ ಚತುರ್ಭುಜದ ರಚನೆಯೂ ಸೇರಿದಂತೆ) ಇವಕ್ಕೆ ಸಂಬಂಧಿಸಿದ ಪ್ರಮೇಯಗಳು ಮೊದಲನೆಯ ಅಧ್ಯಾಯದಲ್ಲಿವೆ. ಈ ಅಧ್ಯಾಯ ಪೈಥಾಗೊರಸನ ಪ್ರಮೇಯ ಮತ್ತು ಅದರ ವಿಲೋಮದ




ಚಿತ್ರ 8

ಸಾಧನೆಗಳೊಂದಿಗೆ ಪೂರ್ಣಗೊಳ್ಳುತ್ತದೆ. ಲಂಬಕೋನ ತ್ರಿಕೋನದ ವಿಕರ್ಣಕ್ಕೆ ಶಿರದಿಂದ ಲಂಬವನ್ನು ಎಳೆಯುವುದರಿಂದ ಉಂಟಾಗುವ ಸಮರೂಪ ತ್ರಿಕೋನಗಳಲ್ಲಿ ಸರಳ ಅನುಪಾತದ ಬಳಕೆಯಿಂದ ಪೈಥಾಗೊರಸನ ಪ್ರಮೇಯವನ್ನು ಸಾಧಿಸಬಹುದು. ಈಚಿನ ಬಹಳಷ್ಟು ಪುಸ್ತಕಗಳಲ್ಲಿ ಈ ರೀತಿಯ ಸಾಧನೆಯನ್ನು ಕಾಣಬಹುದು. ಆದರೆ ಯೂಕ್ಲಿಡನ ಸಾಧನೆ ಇದಕ್ಕೆ ಹೊರತಾಗಿದೆ. ಆತನ ಸಾಧನೆ ಈ ರೀತಿ ಇದೆ :

DE ಗೆ CL ಲಂಬವಾಗಿದೆ.

$\Delta CBE \equiv \Delta ABK = 1/2\ BK \,.\, HK = 1/2\ CB^2$

$\therefore CB^2 = 2\,\Delta CBE =$ ಆಯತ BL

ಇದೇ ರೀತಿ $AC^2 =$ ಆಯತ AL

ಈಗ ಆಯತ BL+ ಆಯತ AL $= AB^2$

$\therefore AB^2 + CB^2 = AB^2$

ಈ ಸಾಧನೆಯಲ್ಲಿ ವಿಕರ್ಣದ ವರ್ಗವನ್ನು ವಿಕರ್ಣದ ಉದ್ದದ ಅಂಕಗಣಿತ ರೀತಿಯ ಸಾಮಾನ್ಯವರ್ಗವೆಂದು ಪರಿಗಣಿಸದೆ ಅದರ ಮೇಲೆ ರಚಿಸಿದ ಒಂದು ವರ್ಗದ ಸಲೆಯೆಂದು ತಿಳಿದು ಅದನ್ನು ಇನ್ನೆರಡು ಬಾಹುಗಳ ಮೇಲೆ ರಚಿಸಿದ ವರ್ಗಗಳ ಸಲೆಗೆ ಸಮವಾದ ಎರಡು ಆಯತಗಳ ಸಲೆಗಳ ಮೊತ್ತಕ್ಕೆ ಸಮವೆಂದು ಸಾಧಿಸಿರುವುದು ಗಮನಾರ್ಹವಾದ ಅಂಶ.

a ಮತ್ತು b ಸಂಖ್ಯೆಗಳ ಗುಣಲಬ್ಧವೆಂದರೆ a ಮತ್ತು b ಗಳು ಬಾಹುಗಳಾಗಿ ಇರುವ ಒಂದು ಆಯತದ ಸಲೆ ಎಂಬುದಾಗಿ ಗ್ರೀಕರು ತಿಳಿದಿದ್ದರು. ಅವರು ಇಂಥ ಜ್ಯಾಮಿತೀಯ ಬೀಜಗಣಿತವನ್ನು ಬೆಳೆಸಿದರು. ಸುಲಭಪಾಠಗಳು (ದಿ ಎಲಿಮೆಂಟ್ಸ್) ಪುಸ್ತಕದ ಎರಡನೆಯ ಅಧ್ಯಾಯದಲ್ಲಿ ಜ್ಯಾಮಿತೀಯ ಬೀಜಗಣಿತವನ್ನು ಚರ್ಚಿಸಿದೆ. ಮೂರು ಮತ್ತು ನಾಲ್ಕನೆಯ ಅಧ್ಯಾಯಗಳು ವೃತ್ತದ ಜ್ಯಾಮಿತಿಗೆ ಮೀಸಲಾಗಿದ್ದರೆ ಪ್ರಮಾಣ ಮತ್ತು ಅನುಪಾತದ ಚರ್ಚೆಯನ್ನು ಸಾಕಷ್ಟು ಮುಂದೂಡಿ ಐದನೆಯ ಅಧ್ಯಾಯದಲ್ಲಿ ಸಾಧ್ಯವಾದಷ್ಟುಮಟ್ಟಿಗೆ ವಿಶದವಾಗಿ ವಿವರಿಸಿದೆ. ಈ ಅಧ್ಯಾಯದಲ್ಲಿ ಇಪ್ಪತ್ತು ಪ್ರಮೇಯಗಳಿವೆ. ಏಳು, ಎಂಟು ಮತ್ತು ಒಂಬತ್ತನೆಯ ಅಧ್ಯಾಯಗಳು ಸಂಖ್ಯಾಸಿದ್ಧಾಂತವನ್ನು (ಥಿಯರಿ ಆಫ್ ನಂಬರ್ಸ್) ಕುರಿತು ಇವೆ. ಆಗಲೇ ತಿಳಿಸಿರುವಂತೆ ನೈಜ ಸಂಖ್ಯೆಗಳ ಪರಿಕಲ್ಪನೆ ಇಲ್ಲದಿದ್ದ ಕಾರಣ ಗ್ರೀಕರು ಪ್ರತಿಯೊಂದನ್ನೂ ಜ್ಯಾಮಿತೀಯ ಪರಿಧಿಯೊಳಗೆ ಅಳವಡಿಸಿಕೊಳ್ಳುತ್ತಿದ್ದರು. ಅವರಿಗೆ ಸಂಖ್ಯೆಗಳಿಗಿಂತ ಜ್ಯಾಮಿತೀಯ ಆಕೃತಿಗಳೇ ಮೂಲಭೂತವಾಗಿ ಕಾಣುತ್ತಿದ್ದವು. ಕರಣಿಗಳಿಗೆ(ಸರ್ಡ್ಸ್) ಜ್ಯಾಮಿತೀಯ ಸಮಾನಗಳನ್ನು ಒದಗಿಸುವ ಪ್ರಮೇಯಗಳನ್ನು ಹತ್ತನೆಯ ಅಧ್ಯಾಯದಲ್ಲಿ ಕೊಟ್ಟಿದೆ. ಹನ್ನೊಂದನೆಯ ಅಧ್ಯಾಯದಲ್ಲಿ ಒಂದು ಘನಾಕೃತಿಯನ್ನು ಉದ್ದ, ಅಗಲ ಮತ್ತು ದಪ್ಪಗಳಿರುವ ಒಂದು ಆಕೃತಿ ಎಂದೂ ಅದರ ಎಲ್ಲೆಯನ್ನು ಮೇಲ್ಮೈ ಎಂದೂ ನಿರೂಪಿಸಿದೆ. ಹನ್ನೆರಡನೆಯ ಅಧ್ಯಾಯದಲ್ಲಿ ಆಕೃತಿಗಳಿಗೆ ಸಂಬಂಧಿಸಿದ ಸಲೆ ಮುಂತಾದ ಅಳತೆಗಳ ಮಾಪನವನ್ನು ನಿಶ್ಶೇಷೀಕರಣ ವಿಧಾನದಿಂದ (ಮೆಥಡ್ ಆಫ್ ಎಕ್ಸಾಷನ್) ತಿಳಿಸಲಾಗಿದೆ. ಹದಿಮೂರನೆಯ (ಕೊನೆಯ) ಅಧ್ಯಾಯ ಐದು ಕ್ರಮ ಘನಾಕೃತಿಗಳ ಲಕ್ಷಣಗಳ ಚರ್ಚೆಗೆ ಮೀಸಲಾಗಿದೆ.




**ಚಿತ್ರ 9. ಐದು ಕ್ರಮ ಘನಾಕೃತಿಗಳು: 1. ಚತುಷ್ಫಲಕ, 2. ಘನ ಅಥವಾ ಷಷ್ಠಫಲಕ, 3. ಅಷ್ಟಫಲಕ, 4. ವಿಂಶತಿಫಲಕ, 5. ದ್ವಾದಶ ಫಲಕ**

ಕೊನೆಯ ಪ್ರಮೇಯಗಳು ಪ್ರತಿಯೊಂದು ಕ್ರಮ ಘನಾಕೃತಿಯ ಅಳತೆಗಳನ್ನು ಪರಿಗೋಲದ (ಸರ್ಕಮ್‌ಸ್ಫಿಯರ್) ಅಳತೆಗಳ ಚೌಕಟ್ಟಿನಲ್ಲಿ ಹುದುಗಿಸುವ ಧ್ಯೇಯವನ್ನು ಇಟ್ಟುಕೊಂಡಿವೆ. ಕ್ರಮ ಚತುಷ್ಫಲಕ (ರೆಗ್ಯುಲರ್ ಟೆಟ್ರಹೆಡ್ರನ್), ಘನ (ಕ್ಯೂಬ್ ಅಥವಾ

ರೆಗ್ಯುಲರ್ ಹೆಕ್ಸಹೆಡ್ರನ್), ಕ್ರಮ ಅಷ್ಟಫಲಕ (ರೆಗ್ಯುಲರ್ ಆಕ್ಟಹೆಡ್ರನ್), ಕ್ರಮ ದ್ವಾದಶಫಲಕ (ರೆಗ್ಯುಲರ್ ಡೊಡೆಕಹೆಡ್ರನ್) ಮತ್ತು ಕ್ರಮವಿಂಶತಿ ಫಲಕ (ರೆಗ್ಯುಲರ್ ಐಕೊಸಹೆಡ್ರನ್) ಇವೇ ಐದು ಕ್ರಮ ಘನಾಕೃತಿಗಳು. ಇದನ್ನು ಕುರಿತು ಕೆಲವು ಮಾಹಿತಿಗಳನ್ನು ಕೆಳಗೆ ಕೋಷ್ಟೀಕರಿಸಲಾಗಿದೆ.

| ಕ್ರ. ಸಂ. | ಬಹುಫಲಕದ ಹೆಸರು | ಅಂಚುಗಳ ಸಂಖ್ಯೆ E | ಶೃಂಗಗಳ ಸಂಖ್ಯೆ V | ಫಲಕಗಳ ಸಂಖ್ಯೆ F | ಫಲಕದ ಆಕಾರ |
|---|---|---|---|---|---|
| 1 | ಚತುಷ್ಫಲಕ | 6 | 4 | 4 | ತ್ರಿಭುಜ |
| 2 | ಘನ ಅಥವಾ ಷಷ್ಠಫಲಕ | 12 | 8 | 6 | ಚೌಕ |
| 3 | ಅಷ್ಟಫಲಕ | 12 | 6 | 8 | ತ್ರಿಭುಜ |
| 4 | ದ್ವಾದಶಫಲಕ | 30 | 20 | 12 | ಪಂಚಭುಜ |
| 5 | ವಿಂಶತಿಫಲಕ | 30 | 12 | 20 | ತ್ರಿಭುಜ |

ಪ್ರತಿಯೊಂದರಲ್ಲೂ $V + F = E + 2$ ಎಂಬುದನ್ನು ಗಮನಿಸಬಹುದು. ಇದಕ್ಕೆ ಆಯ್ಲರ್ ಸೂತ್ರ ಎಂದು ಹೆಸರು. ಈ ಸೂತ್ರ ಎಲ್ಲ ಸರಳ ಸಂಯೋಜಿತ (ಸಿಂಪ್ಲಿ ಕನೆಕ್ಟೆಡ್) ಬಹುಫಲಕಗಳಿಗೂ ಅನ್ವಯಿಸುತ್ತದೆ.

ಯಾವುದಾದರೂ ಶಂಕುವನ್ನು ಒಂದು ತಲದಿಂದ ಛೇದಿಸಿದಾಗ ಏರ್ಪಡುವ ಈ ವಕ್ರರೇಖೆಗಳಿಗೆ (ಕರ್ವ್ಸ್) ಶಂಕುಜಗಳು (ಕಾನಿಕ್ಸ್) ಎಂದು ಹೆಸರು. ಇವುಗಳ ಪರಿಚಯ ಯೂಕ್ಲಿಡ್ ಮುಂತಾದವರಿಗೆ ಇದ್ದರೂ ಇವನ್ನು ಕ್ರಮವಾಗಿ ಅಭ್ಯಸಿಸಿದಾತ ಆ ತುರುವಾಯ ಬಂದ ಅಪಲೋನಿಯಸ್. ಶಿರಃಕೋನಗಳು ವಿಶಾಲ, ಲಂಬ ಮತ್ತು ಲಘುಕೋನಗಳಿರುವಂತೆ ಮೂರು ಲಂಬವೃತ್ತೀಯ ಶಂಕುಗಳನ್ನು ಆಯ್ದು ಒಂದೊಂದರ ಅಕ್ಷದೊಡನೆಯೂ $45^0$ ಕೋನವನ್ನುಂಟುಮಾಡುವ ಒಂದು ತಲದಿಂದ ಆ ಶಂಕುವನ್ನು ಛೇದಿಸಿದಾಗ ಅನುಕ್ರಮವಾಗಿ ದೀರ್ಘವೃತ್ತ, ಪರವಲಯ ಮತ್ತು ಅತಿಪರವಲಯಗಳು ದೊರೆಯುತ್ತವೆಂದು ಅಪಲೋನಿಯಸನ ಪೂರ್ವಜರು ತಿಳಿದಿದ್ದರು. ಆದರೆ ಛೇದಕತಲದ ಬಾಗುವನ್ನೇ ಸೂಕ್ತವಾಗಿ ಬದಲಾವಣೆ ಮಾಡುವುದರಿಂದ ಒಂದೇ ಶಂಕುವಿನಿಂದ ಈ ಮೂರು ಶಂಕುಜಗಳನ್ನು ಪಡೆಯಬಹುದು ಮತ್ತು ಶಂಕು ಲಂಬವೃತ್ತೀಯವಾಗಿರದೆ ಕೇವಲ ವೃತ್ತೀಯ ಶಂಕುವಾಗಿದ್ದರೆ ಸಾಕೆಂದು ಅಪಲೋನಿಯಸ್ ತೋರಿಸಿಕೊಟ್ಟ. ಮೇಲಾಗಿ ಅಪಲೋನಿಯಸ್ ಶಂಕುವಿನ ಪರಿಕಲ್ಪನೆಯನ್ನು ಮಾರ್ಪಡಿಸಿ ಅತಿಪರವಲಯ ನಿಜಕ್ಕೂ ಎರಡು ಕವಲುಗಳ ವಕ್ರರೇಖೆ ಎಂದು ತೋರಿಸಿಕೊಟ್ಟ. ಅಪಲೋನಿಯಸ್ ನಿರ್ದೇಶಕ ಜ್ಯಾಮಿತಿಗೆ ಬಹಳ ಹತ್ತಿರ ಬಂದಿದ್ದ. ಆದರೆ ಅದನ್ನು ಶಾಸ್ತ್ರೀಯವಾಗಿ ನಿರೂಪಿಸಲು ಮಾತ್ರ ಆತನಿಗೆ ಸಾಧ್ಯವಾಗಲಿಲ್ಲ.

ಜ್ಯಾಮಿತಿಯು ಆಕೃತಿಗಳ ಲಕ್ಷಣಗಳನ್ನು ಅಭ್ಯಸಿಸುತ್ತದೆ. ಈ ಲಕ್ಷಣಗಳು ಅಸಂಖ್ಯಾತವಾದುವು. ಆದ್ದರಿಂದ ಜ್ಯಾಮಿತಿಯ ಅಧ್ಯಯನದಲ್ಲಿ ಒಂದು ವ್ಯವಸ್ಥೆಯನ್ನು ತರಬೇಕಾದರೆ ಈ ಲಕ್ಷಣಗಳ ವಿಂಗಡಣೆ ಅನಿವಾರ್ಯವಾಗುತ್ತದೆ. ಉದಾಹರಣೆಗೆ




**ಚಿತ್ರ 10 A: ಶಂಕು; B : ಶಂಕುಗಳೆರಡರ ಶಿರಃಕೋನಗಳು ಒಂದಕ್ಕೊಂದು ಕೂಡಿರುವ ಆಕೃತಿ; C: ಶಂಕುಜಗಳ ಬಗೆಗಳನ್ನು ನಿರೂಪಿಸುವ ಚಿತ್ರ. ಚಿತ್ರ Cಯಲ್ಲಿ 1: ಅತಿಪರವಲಯದ ಎರಡು ಶಾಸನಗಳು; 2: ದೀರ್ಘವೃತ್ತ; 3: ಪರವಲಯ**

ಮೆದುಮರದ ಒಂದು ಆಯತಾಕಾರದ ಘನಾಕೃತಿಯ ಮೇಲೆ ಒಂದು ವೃತ್ತವನ್ನೂ ಪರಸ್ಪರ ಲಂಬವಾಗಿರುವ ಅದರ ವ್ಯಾಸಗಳನ್ನೂ ರಚಿಸಬೇಕು. ಇದನ್ನು ಒಂದು ಬಲವಾದ ತಿರಿಡಿನಲ್ಲಿ (ವೈಸ್) ಸಿಕ್ಕಿಸಿ ಘನಾಕೃತಿಯ ಅಗಲ ಮೊದಲಿನ ಅಗಲದ ಅರ್ಧದಷ್ಟಾಗುವ ತನಕ ಅದುಮಿದರೆ ರಚಿಸಿದ್ದ ವೃತ್ತ ದೀರ್ಘವೃತ್ತವಾಗಿ ಪರಿವರ್ತನೆಯಾಗುತ್ತದೆ ಮತ್ತು ಆಗ ಅದರ ವ್ಯಾಸಗಳು ಪರಸ್ಪರ ಲಂಬವಾಗಿರುವುದಿಲ್ಲ. ಘನಾಕೃತಿಗೆ ಇದ್ದ ಮೊದಲಿನ ಎಲ್ಲ ಜ್ಯಾಮಿತೀಯ ಲಕ್ಷಣಗಳೂ ನಾಶವಾದಂತೆ ಕಾಣುತ್ತವೆ. ಆದರೆ ಇದು ಪೂರ್ಣ ಸತ್ಯವಲ್ಲ; ಉದಾಹರಣೆಗೆ ಕೇಂದ್ರ ವ್ಯಾಸವನ್ನು ಅರ್ಧಿಸುತ್ತದೆ ಎನ್ನುವ ಗುಣ ವೃತ್ತ ಮತ್ತು ದೀರ್ಘವೃತ್ತ ಎರಡಕ್ಕೂ ಅನ್ವಯಿಸುತ್ತದೆ. ಅಂದರೆ ಈ ಕ್ರಿಯೆಯಲ್ಲಿ ಆಕೃತಿಗಳ ಮೂಲ ಅಳತೆಗಳು ವ್ಯತ್ಯಾಸವಾದರೂ ಕೆಲವು ಲಕ್ಷಣಗಳು ಹಾಗೆಯೇ ಉಳಿಯುತ್ತವೆ. ಈ ರೀತಿಯ ಪರಿವರ್ತನೆಯಲ್ಲಿ ಜ್ಯಾಮಿತೀಯ ಲಕ್ಷಣಗಳನ್ನು ಬದಲಾಗುವ ಲಕ್ಷಣಗಳು ಎಂದು ವಿಂಗಡಿಸಬೇಕಾಗುತ್ತದೆ. ಪರಿವರ್ತನೆಯಲ್ಲಿ ಬದಲಾಗುವ ಲಕ್ಷಣಗಳನ್ನು ಕುರಿತಾದ ಜ್ಯಾಮಿತಿಯನ್ನು ಪರಿವರ್ತನ ಜ್ಯಾಮಿತಿ ಎಂದು ಕರೆಯಬಹುದು. ಫೆಲಿಕ್ಸ್ ಕ್ಲೈನ್ (1849–1925) ಎಂಬಾತ 1872ರಲ್ಲಿ ಮಾಡಿದ ಪ್ರಮುಖ ಭಾಷಣ ಒಂದರಲ್ಲಿ ಪರಿವರ್ತನ ಜ್ಯಾಮಿತಿಯ ಮುನ್ನುಡಿಯನ್ನು ಕೊಟ್ಟಿದ್ದ.

ಮೂಲ ಮೂರ್ತಿಯೊಂದುಂಟು; ಕಾಗದದ ಹಾಳೆಯ ಮೇಲೆ ಅದರ ಚಿತ್ರ ಉಂಟು ಎಂದು ಭಾವಿಸೋಣ. ಈ ಚಿತ್ರವನ್ನು, ಹಾಳೆಯ ಮೇಲೆ ಮೂರ್ತಿಯ ವಿಕ್ಷೇಪ (ಪ್ರೊಜೆಕ್ಷನ್) ಎಂದು ಭಾವಿಸಬಹುದು. ಮೂಲಮೂರ್ತಿಯ ಅಳತೆಗಳು ಈ ವಿಕ್ಷೇಪ ಕ್ರಿಯೆಯಲ್ಲಿ ವ್ಯತ್ಯಾಸವಾಗಿವೆ. ಇದರಲ್ಲೂ ಮೂಲದ ಕೆಲವು ಜ್ಯಾಮಿತೀಯ ಲಕ್ಷಣಗಳು ಇದ್ದಂತೆಯೇ ಇರುತ್ತವೆ ಎಂದು ತೋರಿಸಬಹುದು. ವಿಕ್ಷೇಪ ಕ್ರಿಯೆಯಲ್ಲಿ ಬದಲಾಗದ ಲಕ್ಷಣಗಳನ್ನು ಕುರಿತಾದ ಜ್ಯಾಮಿತಿಗೆ ವಿಕ್ಷೇಪ ಜ್ಯಾಮಿತಿ (ಪ್ರೊಜೆಕ್ಟಿವ್ ಜ್ಯಾಮಿತಿ) ಎಂದು ಹೆಸರು. ಅಂದರೆ ಈ ಜ್ಯಾಮಿತಿಯಲ್ಲಿನ ಪ್ರಮೇಯಗಳು ಆಕೃತಿಗಳ ಉದ್ದ, ಕೋನಗಳು ಅಥವಾ ಸರ್ವಸಮತೆ ಮುಂತಾದವನ್ನು ಕುರಿತಾಗಿರುವುದಿಲ್ಲ. ಹದಿನೇಳನೆಯ ಶತಮಾನದ ಹೊತ್ತಿಗೆ ವಿಕ್ಷೇಪ ಜ್ಯಾಮಿತಿ ಜನಿಸಿದ್ದರೂ ಅದು ಪ್ರೌಢಿಮೆಯನ್ನು ಗಳಿಸಿದ್ದು ಹದಿನೆಂಟನೆಯ ಶತಮಾನದ ಕೊನೆ ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ. ಮೊದಮೊದಲು ಸಂಖ್ಯೆಗಳು ಮತ್ತು ಬೀಜಗಣಿತದ ಬಳಕೆಯಿಲ್ಲದೆ ಜ್ಯಾಮಿತಿಯನ್ನು ಅದರದೇ ಆದ ಪರಿಸರದಲ್ಲಿ ಬೆಳೆಸಬೇಕೆಂಬ ಮನೋಭಾವ ಬೆಳೆದು ಬಂದಿತ್ತು. ಆದರೆ ಜ್ಯಾಮಿತಿಯ ಪರಿಧಿ ಬೆಳೆದಂತೆ ಅದಕ್ಕೆ ಸಂಖ್ಯೆಗಳು ಮತ್ತು ಬೀಜಗಣಿತ ಇವುಗಳ ಸಂಬಂಧ ಅನಿವಾರ್ಯವಾಗುತ್ತ ಬಂತು. ಗಣಿತಶಾಸ್ತ್ರದಲ್ಲಿನ ಚಿಂತನೆಗಳು ಸಂಖ್ಯಾ ಪರಿಕಲ್ಪನೆಯನ್ನು ಅವಲಂಬಿಸಿರಬೇಕೆಂಬ ಹೊಸ ರೀತಿಯ ಚಿಂತನಮಾರ್ಗ ಫರ್ಮಾ (1601–1665) ಮತ್ತು ಡೇ ಕಾರ್ಟೆ (1596–1650) ಅವರಿಂದ ಪ್ರಾರಂಭವಾಯಿತು. ಇದು ನಿರ್ದೇಶಕ ಜ್ಯಾಮಿತಿಯ ಜನನಕ್ಕೆ ಕಾರಣ ವಾಯಿತು. ಒಂದು ಜ್ಯಾಮಿತಿಯ ವಸ್ತುವನ್ನು ಏಕೈಕವಾಗಿ (ಯೂನಿಕ್‌ಲಿ) ಗುರುತಿಸಲು ನೆರವಾಗುವ ಯಾವುದಾದರೂ ಒಂದು ಸಂಖ್ಯಾಗಣಕ್ಕೆ ನಿರ್ದೇಶಕಗಳ ಗಣವೆಂದು ಹೆಸರು. ಒಂದು ತಲದಲ್ಲಿನ ಯಾವುದಾದರೂ ಬಿಂದು P ಗೆ ಎರಡು ನಿರ್ದೇಶಕಗಳಿವೆ.




**ಚಿತ್ರ 11**

ತಲದಲ್ಲಿನ ಯಾವುದಾದರೂ ಎರಡು ಸರಳರೇಖೆಗಳು O ಬಿಂದುವಿನಲ್ಲಿ ಪರಸ್ಪರ ಛೇದಿಸಲಿ. ಇವನ್ನು x- ಅಕ್ಷ ಮತ್ತು y- ಅಕ್ಷ ಎಂದು ಕರೆಯೋಣ. Pಯ ಮೂಲಕ y- ಅಕ್ಷಕ್ಕೆ ಎಳೆದ ಸಮಾಂತರ x- ಅಕ್ಷವನ್ನು L ನಲ್ಲೂ x- ಅಕ್ಷಕ್ಕೆ ಎಳೆದ ಸಮಾಂತರ y- ವನ್ನು M ನಲ್ಲೂ ಸಂಧಿಸಲಿ. OL ದೂರವನ್ನು Pಯ x- ನಿರ್ದೇಶಕ ವೆಂದೂ OM ದೂರವನ್ನು y- ನಿರ್ದೇಶಕವೆಂದೂ ಕರೆಯ ಬಹುದು. ಅಂದರೆ x- ಅಕ್ಷದ ಮೇಲೆ OL ದೂರವನ್ನು ಗಮಿಸಿ ಅಲ್ಲಿಂದ y- ಅಕ್ಷಕ್ಕೆ ಸಮಾಂತರವಾಗಿ $OM = LP$ ದೂರ ಸಾಗಿದರೆ P ಬಿಂದು ಸಿಕ್ಕುತ್ತದೆ. P ಯನ್ನು ನಿರ್ದೇಶಕ ಜ್ಯಾಮಿತಿಯಲ್ಲಿ $P(x, y)$ ಎಂದು ಬರೆಯುತ್ತೇವೆ. (ಇಲ್ಲಿ x ಮತ್ತು y ಗಳು P ಯ ನಿರ್ದೇಶಕಗಳು). $ax+by+c = 0$ ಸಮೀಕರಣದಲ್ಲಿ x, y ಚರ ನಿರ್ದೇಶಕಗಳು ಮತ್ತು a, b, c ನೈಜಸಂಖ್ಯೆಗಳು. ಒಂದು ಬಿಂದುವಿನ ನಿರ್ದೇಶಕಗಳನ್ನು ಈ ಸಮೀಕರಣದ x ಮತ್ತು y ಜಾಗಗಳಲ್ಲಿ ಅನುಕ್ರಮವಾಗಿ ಆದೇಶಿಸಿದಾಗ ಅದರ ಸತ್ಯತೆ ನಾಶವಾಗದಿದ್ದರೆ ಅಂಥ ಬಿಂದುವಿನ ಪಥ ಸರಳರೇಖೆ ಆಗಿರುತ್ತದೆ. x ಗೆ ಬೆಲೆಗಳನ್ನು ಕೊಡುವುದರಿಂದ yಯ ಬೆಲೆಗಳನ್ನು $ax+by+c = 0$ ಸಮೀಕರಣದಿಂದ ಪಡೆದು ಒಂದು ನಿರ್ದಿಷ್ಟ ಸರಳರೇಖೆಯನ್ನು ಗುರುತಿಸಬಹುದು. ಅಂದರೆ $ax+by+c = 0$ ಸಮೀಕರಣ ಒಂದು ಸರಳರೇಖೆಯನ್ನು ಸಂಪೂರ್ಣವಾಗಿ ನಿರ್ಧರಿಸುತ್ತದೆ. ಹೀಗೆಯೇ $x^2/a^2 + y^2/b^2 = 1$

ದೀರ್ಘವೃತ್ತವನ್ನೂ $x^2/a^2 - y^2/b^2 = 1$ ಅತಿಪರವಲಯವನ್ನೂ $y^2 = 4ax$ ಪರವಲಯವನ್ನೂ ನಿರ್ಧರಿಸುತ್ತವೆ. ಒಟ್ಟಿನಲ್ಲಿ x, y ಚರಗಳಿರುವ ಒಂದು ಸಮೀಕರಣ ಒಂದು ಗೊತ್ತಾದ ವಕ್ರರೇಖೆಯನ್ನು ನಿರ್ಧರಿಸುತ್ತದೆ. ಜ್ಯಾಮಿತೀಯ ವಸ್ತುಗಳ ಎಲ್ಲ ಲಕ್ಷಣಗಳನ್ನೂ ನಿರ್ದೇಶಕ ಜ್ಯಾಮಿತಿಯ ಸಹಾಯದಿಂದ ಅಭ್ಯಸಿಸಬಹುದು.

ಗ್ರೀಕರಿಗೆ ಜ್ಯಾಮಿತಿ ಮನುಷ್ಯನ ಸಾಮಾನ್ಯ ಅನುಭವಗಳಿಂದ ಉದ್ಭವಿಸಿದ ಶಾಸ್ತ್ರವಾಗಿತ್ತು ಮತ್ತು ಜ್ಯಾಮಿತಿಯಲ್ಲಿನ ಯಾವುದೇ ಉಕ್ತಿಯ ಸತ್ಯತೆಯನ್ನು ಇದೇ ರೀತಿಯ ಅನುಭವಗಳಿಂದ ಸ್ಪಷ್ಟೀಕರಿಸಬೇಕಾಗಿತ್ತು. ಅಂದರೆ ಜ್ಯಾಮಿತಿ ಒಂದು ಸ್ವತಂತ್ರ ಶಾಸ್ತ್ರವಾಗಿರದೆ ಅದು ಮನುಷ್ಯನ ಅನುಭವಗಳನ್ನು ಬಹಳಷ್ಟು ಅವಲಂಬಿಸಿತ್ತು. ಈ ರೀತಿಯ ಪರಿಕಲ್ಪನೆ 18ನೆಯ ಶತಮಾನದವರೆಗೂ ನಡೆದುಬಂದಿತ್ತು. ಆ ಶತಮಾನದ ಕೊನೆಯ ಮತ್ತು 19ನೆಯ ಶತಮಾನದ ಆದಿಯ ಕೆಲವು ಗಣಿತಶಾಸ್ತ್ರಜ್ಞರು ಜ್ಯಾಮಿತಿ ತನ್ನದೇ ಆದ ಒಂದು ಚೌಕಟ್ಟಿನಲ್ಲಿ ಮಾನವನ ಅನುಭವಗಳಿಂದ ಸ್ವತಂತ್ರವಾಗಿ ಇರಬಲ್ಲುದು ಎನ್ನುವ ಚಿಂತನೆಗೆ ದಾರಿ ಮಾಡಿಕೊಟ್ಟರು. ಇಂದು ಬಳಕೆಯಲ್ಲಿರುವ ನಾನಾರೀತಿಯ ಆಕಾಶಗಳು (ಸ್ಪೇಸಸ್) ಈ ಧಾಟಿಯ ಚಿಂತನೆಯ ಫಲವಾಗಿ ಜನಿಸಿದವುಗಳು. ಯೂಕ್ಲಿಡ್ ತನ್ನ ಜ್ಯಾಮಿತಿಗೆ ತಳಪಾಯವಾಗಿ ಐದು ಆದ್ಯುಕ್ತಿಗಳನ್ನು ಮತ್ತು ಐದು ಮೂಲ ಗ್ರಹಿಕೆಗಳನ್ನು ಸ್ವೀಕರಿಸಿದ್ದನಷ್ಟೆ. ಐದನೆಯ ಆದ್ಯುಕ್ತಿ ಇತರ ಆದ್ಯುಕ್ತಿಗಳಿಗಿಂತ ಮಹತ್ತರವಾದ ಸ್ಥಾನವನ್ನು ಗಳಿಸಿಕೊಂಡಿದೆ. ಏಕೆಂದರೆ ಈ ಆದ್ಯುಕ್ತಿ ಗಣಿತಶಾಸ್ತ್ರಜ್ಞರ ಚಿಂತನೆಯ ಮಾರ್ಗವನ್ನೇ ಬದಲಾಯಿಸಿತು. ಒಂದು ದತ್ತ ಸರಳರೇಖೆಯ ಮೇಲಿನ ಒಂದು ದತ್ತಬಿಂದುವಿನ ಮೂಲಕ ಒಂದಕ್ಕಿಂತ ಹೆಚ್ಚು ಸರಳರೇಖೆಗಳನ್ನು ದತ್ತ ಸರಳರೇಖೆಗೆ ಸಮಾಂತರವಾಗಿರುವಂತೆ ಎಳೆಯಲು ಸಾಧ್ಯವಿಲ್ಲ. ಇದು ಯೂಕ್ಲಿಡನ ಐದನೆಯ ಆದ್ಯುಕ್ತಿಯ ಆಧುನಿಕ ರೂಪ. ಇಲ್ಲಿ ಒಂದು ಸಮಸ್ಯೆ ಹುಟ್ಟುತ್ತದೆ – ದತ್ತ ಬಿಂದುವಿನ ಮೂಲಕ ಎಳೆದ ಸರಳರೇಖೆ ದತ್ತ ಸರಳರೇಖೆಗೆ ಸಮಾಂತರವಾಗಿದೆ ಎಂದು ತಿಳಿಯುವ ಬಗೆ ಯಾವುದು? ಇದನ್ನು ಪರಿಹರಿಸಲು ಈ ಎರಡು ಸರಳರೇಖೆಗಳನ್ನು ಎರಡು ದಿಶೆಗಳಲ್ಲಿಯೂ ಅನಂತವಾಗಿ ವೃದ್ಧಿಸಬೇಕು. ಇವು ಒಂದನ್ನೊಂದನ್ನು ಛೇದಿಸದಿದ್ದರೆ ಆಗ ಅವು ಸಮಾಂತರವಾಗಿವೆ ಎಂದು ಹೇಳಬಹುದು. ಆದರೆ ಇದು ಪ್ರಯೋಗಾತೀತ. ಇದನ್ನು ಪರಿಹರಿಸುವ ಸಲುವಾಗಿ ಐದನೆಯ ಆದ್ಯುಕ್ತಿಯನ್ನು ಒಂದು ಪ್ರಮೇಯವೆಂದು ಪರಿಗಣಿಸಿ ಇನ್ನುಳಿದ ಆದ್ಯುಕ್ತಿಗಳು ಮತ್ತು ಮೂಲ ಉಕ್ತಿಗಳ ಸಹಾಯದಿಂದ ಅದಕ್ಕೆ ಸಾಧನೆಯನ್ನು ಒದಗಿಸುವ ಮಾರ್ಗದಲ್ಲಿ ಚಿಂತನೆ ಮಾಡಲು 18ನೆಯ ಶತಮಾನದ ಕೊನೆಯ ಮತ್ತು 19ನೆಯ ಶತಮಾನದ ಆದಿಯ ಗಣಿತಶಾಸ್ತ್ರಜ್ಞರು ಪ್ರಾರಂಭಿಸಿದರು. ಬಹಳಷ್ಟು ಸಾಧನೆಗಳೂ ಬಂದವು. ಆದರೆ ಅವೆಲ್ಲವೂ ಒಂದಲ್ಲ ಒಂದು ಅಪ್ರಕಟಿತ ಉಕ್ತಿಯನ್ನು ಸಮರ್ಥನೆ ಇಲ್ಲದೆ ಬಳಸಿಕೊಂಡಿರುತ್ತಿದ್ದವು. ಹೀಗೆ ಬಳಸಿಕೊಂಡಂಥ ಉಕ್ತಿಗಳಿಗೆ ಸಾಧನೆಗಳನ್ನು ಒದಗಿಸುವುದು ಐದನೆಯ ಆದ್ಯುಕ್ತಿಗೆ ಸಾಧನೆಯನ್ನು ಸೃಷ್ಟಿಸುವಷ್ಟೇ ಕಷ್ಟವಾಗಿರುತ್ತಿತ್ತು. ಸಮಾಂತರ ಸರಳರೇಖೆಗಳ ಸಿದ್ಧಾಂತ 19 ನೆಯ ಶತಮಾನದ ಗಣಿತಶಾಸ್ತ್ರದ ಒಂದು ಪ್ರಮುಖ ಸಮಸ್ಯೆಯಾಗಿ ಗೌಸ್, ಲಗ್ರಾಂಜ್, ಡಾಲಂಬರ್ಟ್, ಲಝಾಂಡರ್ ಮುಂತಾದ ಗಣಿತಶಾಸ್ತ್ರಜ್ಞರನ್ನು ಆಕರ್ಷಿಸಿತು. ಆದರೂ ಐದನೆಯ ಆದ್ಯುಕ್ತಿಗೆ ಸಮರ್ಪಕ ಸಾಧನೆ ಮಾತ್ರ ದೊರೆಯಲೇ ಇಲ್ಲ. ಆ ಬಳಿಕ ಗಣಿತಶಾಸ್ತ್ರಜ್ಞರು ಸಾಧನೆಯ ದೃಷ್ಟಿಯ ಕಡೆಗಿದ್ದ ತಮ್ಮ ಗಮನವನ್ನು ಸಮಸ್ಯೆಯ ನಿರೂಪಣೆ ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ತಿಳಿಯಲು ಹರಿಯಬಿಟ್ಟರು. ಈ ರೀತಿಯ ಚಿಂತನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು ಗೌಸ್, ಸ್ವೈ ಇಕಾರ್ಟ್ ಮತ್ತು ಟೌರಿನಸ್. ಐದನೆಯ ಆದ್ಯುಕ್ತಿಯನ್ನು ಗೌಸ್ ಪೂರ್ತಿಯಾಗಿ ಕೈಬಿಟ್ಟು ಅದಕ್ಕೆ ವಿರುದ್ಧವಾಗಿರುವಂತೆ ಕೆಲವು ಪ್ರಮೇಯಗಳನ್ನು ಸೃಷ್ಟಿಸಿ ಯಾವ ಕಾರಣಕ್ಕೋ ಏನೋ ಗುಪ್ತವಾಗಿರಿಸಿದ್ದ. ಆದರೆ ಟೌರಿನಸ್ ಮಾತ್ರ ಐದನೆಯ ಆದ್ಯುಕ್ತಿಯ ಅಸತ್ಯತೆಯನ್ನು ಅವಲಂಬಿಸಿದ ಹೊಸ ಜ್ಯಾಮಿತಿಯನ್ನು ಸೃಷ್ಟಿಸಲು ಪ್ರಯತ್ನ ಪಟ್ಟು ಅದು ಅಸಾಧ್ಯವೆಂದು ತಪ್ಪಾಗಿ ತಿಳಿದ. ಅಂದರೆ ಇವರ್‍ಯಾರೂ ಸಮಸ್ಯೆಯನ್ನು ಬಿಡಿಸಲಿಲ್ಲ. ಆದರೆ ಲೊಬಾಚೆವ್ಸ್ಕಿ (1793–1856) ಮಾತ್ರ ಈ ಸಮಸ್ಯೆಯನ್ನು ಒಂದು ನೂತನ ಧಾಟಿಯಲ್ಲಿ ವೀಕ್ಷಿಸಿ ಅದನ್ನು ಬಿಡಿಸುವುದಲ್ಲದೆ ಜ್ಯಾಮಿತಿ ಮತ್ತು ಗಣಿತಶಾಸ್ತ್ರದ ಇತರ ವಿಭಾಗಗಳ ಬಗ್ಗೆ ಇದ್ದ ಪರಿಕಲ್ಪನೆಯನ್ನೇ ಬದಲಾಯಿಸಿದ. ಯೂಕ್ಲಿಡನ ಐದನೆಯ ಆದ್ಯುಕ್ತಿಗೆ ವಿರುದ್ಧ ಆಗುವಂತೆ, ಒಂದು ದತ್ತ ಸರಳರೇಖೆಯ ಮೇಲಿಂದ ಒಂದು ದತ್ತ ಬಿಂದುವಿನ ಮೂಲಕ ಕಡೆಯ ಪಕ್ಷ ಎರಡು ಸರಳರೇಖೆಯನ್ನು ದತ್ತ ಸರಳರೇಖೆಗೆ ಸಮಾಂತರವಾಗಿರುವಂತೆ ಎಳೆಯಬಹುದೆಂಬ ಆದ್ಯುಕ್ತಿಯನ್ನು ಊಹಿಸಿಕೊಂಡ. ಈ ಹೊಸ ಆದ್ಯುಕ್ತಿ ಒಂದು ವೇಳೆ ಜ್ಯಾಮಿತಿಯ ಇತರ ಉಕ್ತಿಗಳೊಂದಿಗೆ ಹೊಂದಿಕೊಳ್ಳದಿದ್ದರೆ ಅಸಂಬದ್ಧವಾದ ಉಕ್ತಿಗಳನ್ನು ಸೃಷ್ಟಿಸಲು ಸಾಧ್ಯವಾಗಬೇಕು. ಈ ಅಸಂಬದ್ಧತೆಗಳ ಸೃಷ್ಟಿ ಐದನೆಯ ಆದ್ಯುಕ್ತಿಗೆ ವಿರುದ್ಧವಾಗಿರುವ ಲೊಬಾಚೆವ್ಸ್ಕಿಯ ಹೊಸ ಆದ್ಯುಕ್ತಿಯ ಅಸ್ತಿತ್ವವನ್ನು ಅಳಿಸಿಹಾಕುವುದರ ಮೂಲಕ ಪರೋಕ್ಷವಾಗಿ ಯೂಕ್ಲಿಡನ ಐದನೆಯ ಆದ್ಯುಕ್ತಿಯನ್ನು ಸ್ಥಾಪಿಸುತ್ತದೆ. ಆದರೆ ಲೊಬಾಚೆವ್ಸ್ಕಿ ಎಣಿಸಿದಂತೆ ಯಾವ ರೀತಿಯ ಅಸಂಬದ್ಧತೆಗಳೂ ಜನಿಸಲಿಲ್ಲ. ಆದ್ದರಿಂದ ಆತ ಎರಡು ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಯಿತು : (1) ಯೂಕ್ಲಿಡನ ಐದನೆಯ ಆದ್ಯುಕ್ತಿಯನ್ನು ಸಾಧಿಸಲು ಸಾಧ್ಯವಿಲ್ಲ (ನಾಟ್ ಪ್ರೂವಬಲ್), (2) ಐದನೆಯ ಆದ್ಯುಕ್ತಿಗೆ ವಿರುದ್ಧವಾದ ಒಂದು ಆದ್ಯುಕ್ತಿಯನ್ನು ಜ್ಯಾಮಿತಿಯ ಮೂಲ ಉಕ್ತಿಗಳೊಂದಿಗೆ ಬಳಸಿಕೊಂಡು ಹೊಸ ರೀತಿಯ ಸುಸಂಬದ್ಧವಾದ ಕೆಲವು ಉಕ್ತಿಗಳನ್ನು ಸೃಷ್ಟಿಸಬಹುದು. ಈ ಹೊಸ ಉಕ್ತಿಗಳ ಜನನಕ್ಕೆ ನೈಜವಾದ ಒಂದು ಅರ್ಥವನ್ನು ಒದಗಿಸಲು ಆತ ಅಸಮರ್ಥನಾಗಿದ್ದರಿಂದ ಅವನ್ನು ಕಾಲ್ಪನಿಕ ಎಂದು ಪರಿಗಣಿಸಿದ್ದ. ಆದರೆ ಈ ಹೊಸ ಕಾಲ್ಪನಿಕ ಉಕ್ತಿಗಳಿಂದ ಪ್ರಾರಂಭವಾದ ಜ್ಯಾಮಿತಿಯೇ ಇಂದು ಬಳಕೆಯಲ್ಲಿರುವ ಅಯೂಕ್ಲಿಡೀಯ ಜ್ಯಾಮಿತಿ. ಯೂಕ್ಲಿಡನ ಐದನೆಯ ಆದ್ಯುಕ್ತಿಗೆ ಹೊಸ ರೀತಿಯ ಜ್ಯಾಮಿತಿಯ ಸೃಷ್ಟಿಗೆ ಕಾರಣವಾಯಿತು.

ಕೇವಲ ಪ್ರಮೇಯಗಳ ಸೃಷ್ಟಿ ಅಯೂಕ್ಲಿಡೀಯ ಜ್ಯಾಮಿತಿಯ ಇರುವಿಕೆಗೆ ಬುನಾದಿ ಆಗುವುದಿಲ್ಲ. ಈ ಪ್ರಮೇಯಗಳನ್ನು ಒಳಗೊಳ್ಳುವಂಥ ಜ್ಯಾಮಿತಿಯ ಪ್ರಪಂಚ ಅಥವಾ ಪ್ರತಿರೂಪಗಳನ್ನೂ (ಮೋಡಲ್ಸ್) ಒದಗಿಸಬೇಕಾಗುತ್ತದೆ. ಫೆಲಿಕ್ಸ್ ಕ್ಲೈನ್ ಮತ್ತು ಹೆನ್ರಿ ಪಾನ್‌ಕ್ವಾರೆಯವರು (1854–1912) ಇಂಥ ಎರಡು ಪ್ರತಿರೂಪಗಳನ್ನು ಸೃಷ್ಟಿಸಿದರು. ಯೂಕ್ಲಿಡೀಯ ಜ್ಯಾಮಿತಿಯ ವಸ್ತುಗಳನ್ನು ತೆಗೆದುಕೊಂಡು ಅವನ್ನು ಅಯೂಕ್ಲಿಡೀಯ ಜ್ಯಾಮಿತೀಯ ಅಸ್ತಿತ್ವಕ್ಕೆ ಸೂಕ್ತವಾಗುವಂತೆ ಹೊಸದಾಗಿ ನಿರೂಪಿಸಿದರು. ಕ್ಲೈನ್ ಮಾದರಿಯಲ್ಲಿ ತಲ ಒಂದು ಯೂಕ್ಲಿಡೀಯ ವೃತ್ತದ ಅಭ್ಯಂತರ ಭಾಗ (ಇಂಟೀರಿಯರ್) ಎಂದು ಆಗಿದೆ. ವೃತ್ತದ ಒಳಗಿನ ಪ್ರತಿಯೊಂದು ಬಿಂದುವನ್ನೂ ಅಯೂಕ್ಲಿಡೀಯ ಬಿಂದು ಎಂದೂ ಪ್ರತಿಯೊಂದು ಜ್ಯಾ ಅಯೂಕ್ಲಿಡೀಯ ಸರಳರೇಖೆ ಎಂದೂ ಪರಿಗಣಿಸಲಾಗಿದೆ.

ಅಯೂಕ್ಲಿಡೀಯ ಬಿಂದುಗಳನ್ನು ಸೇರಿಸುವುದು ಮತ್ತು ಅಯೂಕ್ಲಿಡೀಯ ಸರಳರೇಖೆಗಳ ಪರಸ್ಪರ ಛೇದನೆ ಇವು ಕ್ಲೈನ್ ಪ್ರತಿರೂಪದಲ್ಲಿ ಯೂಕ್ಲಿಡೀಯ ಜ್ಯಾಮಿತಿಯ ಧಾಟಿಯಲ್ಲೇ ಇವೆ. ಈ ಪ್ರತಿರೂಪ ಯೂಕ್ಲಿಡನ ಐದನೆಯ ಆದ್ಯುಕ್ತಿಯನ್ನುಳಿದು ಇವೆಲ್ಲವನ್ನೂ ಒಳಗೊಂಡಿರುತ್ತದೆ ಎಂದು ತೋರಿಸಬಹುದು. ಪಾನ್‌ಕ್ವಾರೆ ಪ್ರತಿರೂಪದಲ್ಲೂ ತಲ ಒಂದು ಯೂಕ್ಲಿಡೀಯ ವೃತ್ತ C ಯ ಅಭ್ಯಂತರ ಭಾಗವಾಗಿದೆ. C ಮತ್ತು C' ಎರಡು ಲಂಬಕೋನೀಯ ವೃತ್ತಗಳು (ಆರ್ಥಾಗನಲ್ ಸರ್ಕಲ್ಸ್); R ಮತ್ತು S ಅವುಗಳ ಛೇದನಬಿಂದುಗಳು (ಚಿತ್ರ 12). ಈ ಪ್ರತಿರೂಪದಲ್ಲಿ ಅಯೂಕ್ಲಿಡೀಯ ಬಿಂದುಗಳು C ವೃತ್ತದ ಅಭ್ಯಂತರ ಭಾಗದ ಯೂಕ್ಲಿಡೀಯ ಬಿಂದುಗಳಾಗಿವೆ. C ವೃತ್ತದ ಅಭ್ಯಂತರ ಭಾಗ ಮತ್ತು C' ರೀತಿಯ ಯಾವುದಾದರೂ ವೃತ್ತ ಇವೆರಡರ ಛೇದನವನ್ನು ಯೂಕ್ಲಿಡೀಯ ಸರಳರೇಖೆ ಎಂದು ಪರಿಗಣಿಸಿದೆ. ಈ ಪ್ರತಿರೂಪ ಯೂಕ್ಲಿಡನ ಐದನೆಯ ಆದ್ಯುಕ್ತಿಯನ್ನು ಉಳಿದು ಇನ್ನೆಲ್ಲವನ್ನೂ ಒಳಗೊಂಡಿದೆ ಎಂದು ತೋರಿಸಬಹುದು. ಲೊಬಾಚೆವ್ಸ್ಕಿಯ ಈ ಜ್ಯಾಮಿತಿಗೆ ಹೈಪರ್‌ಬೋಲಿಕ್ ಜ್ಯಾಮಿತಿ ಎಂದು ಹೆಸರು. ರೀಮಾನ್ ಕೂಡ ಐದನೆಯ ಆದ್ಯುಕ್ತಿಗೆ ಬದಲಾಗಿ ಒಂದೇ ತಲದಲ್ಲಿರುವ ಯಾವ ಎರಡು ಸರಳರೇಖೆಗಳೂ ಸಮಾಂತರವಾಗಿರುವುದಿಲ್ಲ ಎಂದು ಇಟ್ಟುಕೊಂಡು ಬೇರೊಂದು ಅಯೂಕ್ಲಿಡೀಯ ಜ್ಯಾಮಿತಿಯನ್ನು ಸೃಷ್ಟಿಸಿದ. ಇದಕ್ಕೆ ಎಲಿಪ್ಟಿಕ್ ಅಥವಾ ರೀಮಾನಿಯನ್ ಜ್ಯಾಮಿತಿ ಎಂದು ಹೆಸರು.



ಚಿತ್ರ 12

**4 ವಿಶ್ಲೇಷಣೆ :** ಅನಂತ ಕ್ರಿಯೆ ಅಥವಾ ಪರಿಮಿತಿಗಳಿಗೆ ಸಂಬಂಧಿಸಿದ್ದುದನ್ನು ವಿಶ್ಲೇಷಿಸುವ ಗಣಿತಶಾಸ್ತ್ರದ ಶಾಖೆಯೇ ವಿಶ್ಲೇಷಣೆ (ಅನಾಲಿಸಿಸ್). ಇದರ ಉಗಮ ಪರೋಕ್ಷವಾಗಿ ಆರ್ಕಿಮಿಡೀಸ್ ಮತ್ತು ಯುಡೋಕ್ಸಸ್ ಅವರ ಕಾಲದಲ್ಲಿಯೇ ಆಗಿತ್ತು. ಅನಂತರ ಬಹಳಷ್ಟು ಮಂದಿ ಅದರ ಬಗ್ಗೆ ಚಿಂತನೆ ಮಾಡಿದರೂ ಅದು ಒಂದು ನಿರ್ದಿಷ್ಟರೂಪಕ್ಕೆ ಬಂದದ್ದು 19ನೆಯ ಶತಮಾನದಲ್ಲಿಯೇ. ವಿಶ್ಲೇಷಣೆಯ ಉತ್ಪನ್ನ (ಫಂಕ್ಷನ್) ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. A ಮತ್ತು B ಎರಡು ಗಣಗಳಾಗಿರಲಿ. x, A ಯ ಒಂದು ಧಾತುವನ್ನೂ y, B ಯ ಒಂದು ಧಾತುವನ್ನೂ ಸೂಚಿಸಲಿ. ಪ್ರತಿಯೊಂದು $x \in A$ ಗೆ ಗೊತ್ತಾದ ಒಂದು $y \in B$ ಯನ್ನು ನಿಗದಿಮಾಡಲು ಸಾಧ್ಯವಾದರೆ ಆಗ A ಯಿಂದ B ಗೆ ಒಂದು ಉತ್ಪನ್ನ ಇದೆ ಎಂದು ಹೇಳುತ್ತೇವೆ. ಈ

ಪರಿಕಲ್ಪನೆಗೆ ಬಹಳಷ್ಟು ಹತ್ತಿರ ಬರುವಂತೆ ಪಿ.ಜಿ.ಎಲ್.ಡೀರಿಕ್‌ಲೇ (1805–1859) ಎಂಬಾತ ಉತ್ಪನ್ನವನ್ನು ಹೀಗೆ ನಿರೂಪಿಸುತ್ತಾನೆ: $x$ ಮತ್ತು $y$ಗಳು ಎರಡು ಚರಗಳು; $x$ ಗೆ ಒಂದು ಸಂಖ್ಯಾಬೆಲೆಯನ್ನು ಆದೇಶಿಸಿದಾಗ $y$ಯ ಬೆಲೆಯನ್ನು ಏಕೈಕವಾಗಿ ನಿರ್ಧರಿಸುವ $x$ ನ್ನು ಒಳಗೊಂಡ ಒಂದು ಸೂತ್ರವಿದ್ದರೆ ಆಗ $y$ಯು $x$ ಎಂಬ ಸ್ವತಂತ್ರ ಚರದ ಉತ್ಪನ್ನವಾಗಿರುತ್ತದೆ. ಡೀರಿಕ್‌ಲೇಯ ಈ ಕೆಳಗಿನ ಉದಾಹರಣೆಯಿಂದ $y$ ಯ ಬೆಲೆಯನ್ನು ನಿರ್ಧರಿಸುವ ಸೂತ್ರ ಯಾವುದೇ ಅಭಿಜಾತ (ಕ್ಲ್ಯಾಸಿಕಲ್) ಸೂತ್ರೀಕರಣಕ್ಕೂ ಒಳಪಡಬೇಕಾಗಿಲ್ಲ ಎನ್ನುವುದು ಅರಿವಾಗುತ್ತದೆ. $x$ ಪರಿಮೇಯ ಆಗಿದ್ದರೆ $y=c$ ಆಗಿರಲಿ; ಮತ್ತು $x$ ಅಪರಿಮೇಯ ಆಗಿದ್ದರೆ $y=d\neq c$ ಆಗಿರಲಿ. $c$ ಮತ್ತು $d$ ಗಳು ಎರಡು ನಿರ್ದಿಷ್ಟ ಸಂಖ್ಯೆಗಳು. ಸಂಖ್ಯಾಸಿದ್ಧಾಂತ ಸಾಮಾನ್ಯವಾಗಿ ಪರಿಮೇಯಗಳ ಚರ್ಚೆಯನ್ನು ಮಾಡುತ್ತದೆ. ಪರಿಮೇಯ $ax+b=0$ ಎಂಬ ಸಮೀಕರಣದ ಮೂಲ ಆಗಿರುತ್ತದೆ. ಇಲ್ಲಿ $a,b$ ಪೂರ್ಣಾಂಕಗಳು. ನೈಜ ವಿಶ್ಲೇಷಣೆ (ರಿಯಲ್ ಅನಾಲಿಸಿಸ್) ಪರಿಮೇಯ ಮತ್ತು ಅಪರಿಮೇಯ ಎರಡರೊಂದಿಗೂ ವ್ಯವಹರಿಸುತ್ತದೆ. $ax^2+bx+c=0$ ($a,b$ ಮತ್ತು $c$ ಗಳು ಪೂರ್ಣಾಂಕಗಳು) ಎಂಬ ಸಮೀಕರಣದ ಮೂಲಗಳಿಗೆ ಯೂಕ್ಲಿಡೀಯ ಸಲಕರಣೆಗಳಿಂದ (ನೇರ ಅಂಚು ಮತ್ತು ಕೈವಾರ) ಜ್ಯಾಮಿತೀಯ ಸಮಾನಗಳನ್ನೂ ಕೊಡಬಹುದು. ಆದರೆ ಸಮೀಕರಣದ ಡಿಗ್ರಿ ಎರಡಕ್ಕಿಂತ ಹೆಚ್ಚಾದರೆ ಈ ಸಲಕರಣೆಗಳಿಂದ ಮೂಲಗಳಿಗೆ ಜ್ಯಾಮಿತಿಯ ಸಮಾನಗಳನ್ನು ನಿರ್ಧರಿಸಲು ಸಾಧ್ಯವಿಲ್ಲ. ಪರಿಮೇಯ ಗುಣಾಂಕಗಳುಳ್ಳ (ಕೋಎಫಿಷೆಂಟ್ಸ್) ಯಾವುದೇ ಬೀಜಗಣಿತೀಯ ಸಮೀಕರಣದ (ಆಲ್ಜಿಬ್ರೇಕ್ ಇಕ್ವೇಷನ್) ಮೂಲಗಳಿಗೆ ಬೀಜಗಣಿತೀಯ ಸಂಖ್ಯೆಗಳು ಎಂದು ಹೆಸರು. ಎಲ್ಲ ಪರಿಮೇಯಗಳೂ ಬೀಜಗಣಿತೀಯ ಸಂಖ್ಯೆಗಳು; ಆದರೆ ಎಲ್ಲ ಅಪರಿಮೇಯಗಳೂ ಬೀಜಗಣಿತದ ಸಂಖ್ಯೆಗಳಲ್ಲ. ಏಕೆಂದರೆ $\pi$ ಮತ್ತು $e$ ಗಳು ಎರಡು ಅಪರಿಮೇಯಗಳು; ಇವು ಬೀಜಗಣಿತೀಯ ಸಂಖ್ಯೆಗಳಲ್ಲ ಎಂದು ಸಾಧಿಸಬಹುದು. ಬೀಜಗಣಿತೀಯ ಅಲ್ಲದ ಅಪರಿಮೇಯ ಸಂಖ್ಯೆಗಳಿಗೆ ಬೀಜಾತೀತ (ಟ್ರಾನ್ಸೆಂಡೆಂಟಲ್) ಸಂಖ್ಯೆಗಳೆಂದು ಹೆಸರು. $e^{\pi}$, $\pi e$, $\pi+e$ ಮತ್ತು $\pi^e$ ಗಳಲ್ಲಿ $e$ ಮಾತ್ರ ಬೀಜಾತೀತ ಎಂದು ಸಾಧಿಸಲು ಸಾಧ್ಯವಾಗಿದೆ. ಇನ್ನುಳಿದ ಮೂರರ ಸ್ವರೂಪ ಇನ್ನೂ ನಿರ್ಧರಿತವಾಗಿಲ್ಲ. $\pi^e$ ಮತ್ತು $\pi+e$ ಗಳಲ್ಲಿ ಕೊನೆಯ ಪಕ್ಷ ಯಾವುದಾದರೂ ಒಂದು ಬೀಜಾತೀತ ಎಂದು $x^2-(\pi+e)x+\pi e=0$ ಎಂಬ ಸಮೀಕರಣದ ಸಹಾಯದಿಂದ ಸುಲಭವಾಗಿ ನಿರ್ಧರಿಸಬಹುದು. ಆದರೆ $\pi e$ ಮತ್ತು $\pi+e$ ಗಳಲ್ಲಿ ಯಾವೊಂದು ಅಥವಾ ಎರಡೂ ಬೀಜಾತೀತ ಎಂದು ತೋರಿಸುವುದು ಸಾಧ್ಯವಾಗದೆ ಹಾಗೆಯೇ ಇಂದು ಉಳಿದಿದೆ.

ಗಣಿತಶಾಸ್ತ್ರದ ಶೈಶವಾವಸ್ಥೆಯಲ್ಲಿ ಕಲನಶಾಸ್ತ್ರ ಮತ್ತು ವಿಶ್ಲೇಷಣೆ ಎರಡೂ ಒಂದೇ ಆಗಿ ಕಾಣುತ್ತಿದ್ದವು. ಕಲನಶಾಸ್ತ್ರಕ್ಕೂ ಜ್ಯಾಮಿತಿಗೂ ಇದ್ದ ನಿಕಟ ಸಂಬಂಧವನ್ನು ಬೇರ್ಪಡಿಸಿ ಕಲನಶಾಸ್ತ್ರ ನೈಜಸಂಖ್ಯೆಗಳನ್ನು ಅವಲಂಬಿಸಿರುವಂತೆ ಮಾರ್ಪಾಡು ಮಾಡಲು ಹೊರಟಾಗ ಕಲನಶಾಸ್ತ್ರ ವಿಶ್ಲೇಷಣೆಯ ಒಂದು ಅಂಗ ಮಾತ್ರ ಎಂದು ಗೋಚರವಾಯಿತು (**ನೋಡಿ– ಕಲನಶಾಸ್ತ್ರ**). ಈ ದಿಶೆಯಲ್ಲಿ ಕೆಲಸ ಮಾಡಿದ ಪ್ರಮುಖರು ಕಾರ್ಲ್ ವೈರ್‌ಸ್ಟ್ರಾಸ್ (1815–1897), ಬಾರ್ನರ್ಡ್ ಬೊಲ್ಜನೋ (1781–1848) ಮುಂತಾದವರು. ಮೊಟ್ಟಮೊದಲು ನೈಜಸಂಖ್ಯೆಗಳ ಸರಿಯಾದ ನಿರೂಪಣೆಯ ಆವಶ್ಯಕತೆ ಇತ್ತು. ಈ ಕೊರತೆಯನ್ನು ತುಂಬಿದವ ಜೆ. ಡಬ್ಲ್ಯು. ಆರ್. ಡೆಡಿಕೆಂಟ್ (1831–1916). ಈತನ ಹೆಸರಿನ ವಿಭಜನೆಗಳು ನೈಜಸಂಖ್ಯೆಗಳನ್ನು ನಿರೂಪಿಸುತ್ತವೆ. ಡೆಡಿಕೆಂಟ್ ವಿಭಜನೆಗಳಿಗೆ ಸಮವಾದ ಮತ್ತು ಅದಕ್ಕಿಂತ ಸುಲಭರೂಪದ ರಸಲ್‌ನ ನಿರೂಪಣೆ ಈ ರೀತಿ ಇದೆ: ಪರಿಮೇಯ ಸಂಖ್ಯೆಗಳ ಗಣ $R$ ನ ನೀಚಖಂಡ (ಲೋಯರ್ ಸೆಗ್‌ಮೆಂಟ್) ಈ ಕೆಳಗೆ ನಮೂದಿಸಿರುವ ಲಕ್ಷಣಗಳಿರುವ $L$ ಗಣ ಎಂದು ತಿಳಿಯೋಣ:

1. $L$ ಅಶೂನ್ಯ ಗಣ.

2. $x\in L$ ಮತ್ತು $y<x$ ಆಗಿದ್ದರೆ $y$ ಕೂಡ $L$ ನಲ್ಲಿ ಇರುತ್ತದೆ.

3. $x\in L$ ಆದಾಗ $z>x$ ಮತ್ತು $Z\in L$ ಆಗುವಂತೆ ಮತ್ತೊಂದು $x$ ನ್ನು ಕಂಡುಹಿಡಿಯಬಹುದು.

ಇದೇ ರೀತಿ ಉಚ್ಚಖಂಡ (ಅಪ್ಪರ್ ಸೆಗ್ಮೆಂಟ್) $U$ ನ ಲಕ್ಷಣಗಳು ಇಂತಿವೆ:

1 $U$ ಅಶೂನ್ಯ ಗಣ.

2 $x\in U$ ಮತ್ತು $y>x$ ಆಗಿದ್ದರೆ $y$ ಕೂಡ $U$ ನಲ್ಲಿ ಇರುತ್ತದೆ.

3 $x\in U$ ಆದಾಗ $z<x$ ಮತ್ತು $z\in U$ ಆಗುವಂತೆ ಮತ್ತೊಂದು $z$ ನ್ನು ಕಂಡುಹಿಡಿಯಬಹುದು. ಇಂಥ ಖಂಡಗಳು ನೈಜಸಂಖ್ಯೆಗಳನ್ನು ನಿರ್ಧರಿಸುತ್ತವೆ.

ಉದಾಹರಣೆಗಳು: 1 $U=\{x \mid x>2\}$ ಎನ್ನುವ ಉಚ್ಚಖಂಡ 2 ಎಂಬ ನೈಜಸಂಖ್ಯೆಯನ್ನು ನಿರ್ಧರಿಸುತ್ತದೆ.

2 $U=\{x \mid x^2>2$ ಮತ್ತು $x>0\}$

ಎನ್ನುವ ಉಚ್ಚಖಂಡದ $\sqrt{2}$ ಎಂಬ ನೈಜಸಂಖ್ಯೆಯನ್ನು (ಅಪರಿಮೇಯ) ನಿರ್ಧರಿಸುತ್ತದೆ. ನೈಜಸಂಖ್ಯೆಯ ಈ ನಿರೂಪಣೆಯಲ್ಲಿ ಕೂಡಿಸುವುದು, ಗುಣಿಸುವುದು ಮುಂತಾದ ಪರಿಕರ್ಮಗಳನ್ನು ಸೂಕ್ತವಾಗಿ ನಿರೂಪಿಸಬಹುದು.

ನೈಜಸಂಖ್ಯೆಯನ್ನು ಕೌಷಿ ಲಕ್ಷಣವಿರುವ ಪರಿಮೇಯಗಳ ಒಂದು ಶ್ರೇಢಿ ಎಂದು ನಿರೂಪಿಸುವುದು ಉಂಟು. ಕೌಷಿ ಲಕ್ಷಣ ಈ ರೀತಿ ಇದೆ: $(R_n)$ ಪರಿಮೇಯಗಳ ಒಂದು ಶ್ರೇಢಿಯಾಗಿರಲಿ. ಪ್ರತಿಯೊಂದು $\varepsilon>0$ಗೆ ($\varepsilon$ ಪರಿಮೇಯ) $m,n>N$ ಆದಾಗಲೆಲ್ಲ $-\varepsilon<R_m-R_n<\varepsilon$ ಆಗುವಂತೆ $N$ ನ್ನು ಗೊತ್ತುಮಾಡಲು ಸಾಧ್ಯವಾಗುವುದಾದರೆ $(R_n)$ ಗೆ ಕೌಷಿ ಶ್ರೇಢಿ ಎಂದು ಹೆಸರು. ಈ ನಿರೂಪಣೆಯಲ್ಲೂ ಸಮತೆ ಮತ್ತು ಎಲ್ಲ ಪರಿಕರ್ಮಗಳನ್ನು ಸೂಕ್ತವಾಗಿ ನಿರೂಪಿಸಲು ಸಾಧ್ಯ.

ನೈಜಸಂಖ್ಯೆಗಳ ಹೊಸ ಪರಕಲ್ಪನೆ ಪರಿಮಿತಿ ಮುಂತಾದ ಪರಿಕಲ್ಪನೆಗಳನ್ನು ಜ್ಯಾಮಿತಿಯ ಆಧಾರವಿಲ್ಲದೆಯೇ ಚರ್ಚಿಸಲು ಅವಕಾಶ ಮಾಡಿಕೊಟ್ಟಿತು. ಈ ತಳಹದಿಯ ಮೇಲೆ ವಿಶ್ಲೇಷಣೆ ಬೆಳೆಯುತ್ತ ಬಂದು ಇದರಿಂದಾಗಿ ಸಮ್ಮಿಶ್ರ ಸಂಖ್ಯಾ ಚರಗಳ ವಿಶ್ಲೇಷಣೆ ಮತ್ತು ಅವಕಲನ ಸಮೀಕರಣ ಸಿದ್ಧಾಂತ ಇವು ಹುಟ್ಟಿಕೊಂಡವು. ಇಂದು ಅನ್ವಯ ಗಣಿತಕ್ಕೆ ವಿಶ್ಲೇಷಣೆ ಅನಿವಾರ್ಯವಾಗಿದೆ. (**ನೋಡಿ– ವಿಶ್ಲೇಷಣೆ, ಗಣಿತೀಯ**)

5 **ಟಾಪಾಲಜಿ** : 19ನೆಯ ಶತಮಾನದ ಮಧ್ಯಭಾಗದಲ್ಲಿ ಜ್ಯಾಮಿತಿಯ ಕ್ಷೇತ್ರದಲ್ಲಿ ಒಂದು ಹೊಸಬಗೆಯ ಬೆಳವಣಿಗೆ ಅಂಕುರಿಸಿತು. ಇದು ಜ್ಯಾಮಿತಿಯಿಂದ ಸ್ವತಂತ್ರವಾಗಿ ನಿಂತು ಟಾಪಾಲಜಿ (**ನೋಡಿ**) ಎಂಬ ಹೆಸರಿನಿಂದ ಗಣಿತಶಾಸ್ತ್ರದ ಒಂದು ಶಾಖೆಯಾಗಿ ಬೆಳೆಯುತ್ತ ಬಂದಿದೆ. ಆದ್ಯುಕ್ತಿಗಳನ್ನು ಪ್ರಾರಂಭದಲ್ಲಿ ಅವಲಂಬಿಸಲು ಇದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬದಲು ಇದು ಮನುಷ್ಯನ ಜ್ಯಾಮಿತೀಯ ಅಂತರ್ಬೋಧೆಯನ್ನು ಬಹಳವಾಗಿ ಅವಲಂಬಿಸಿತ್ತು. ಇದರ ಉಗಮ ಕಳೆದ ನೂರು ವರ್ಷಗಳಲ್ಲಿ ಅದಂತೆ ಅನಿಸಿದರೂ ಬಹು ಫಲಕಗಳ ಭುಜಗಳು, ಶೃಂಗಗಳು ಮತ್ತು ಮುಖಗಳು ಇವುಗಳ ಪರಸ್ಪರ ಸಂಬಂಧವನ್ನು ಡೇಕಾರ್ಟೆ (1596–1650) ಮತ್ತು ಆಯ್ಲರ್ (1707–1783) ಅಭ್ಯಸಿಸಿದ್ದರಿಂದ 17 ಮತ್ತು 18ನೆಯ ಶತಮಾನದಲ್ಲಿ ಟಾಪಾಲಜಿಯ ಸುಳಿವು ಇವರಿಗೆ ಸಿಕ್ಕಿತು. ಇದರ ಕ್ಷೇತ್ರದಲ್ಲಿ ಪ್ರಮುಖನಾದ ಪಾನ್‌ಕ್ವಾರೆ (1854–1912) ಎಂಬಾತ ಡೇಕಾರ್ಟೆ ಮತ್ತು ಆಯ್ಲರ್ ಅವರ ಅನಿಸಿಕೆಗಳನ್ನು ಟಾಪಾಲಜಿಯ ಕೇಂದ್ರ ಪ್ರಮೇಯವನ್ನಾಗಿ ಪರಿವರ್ತಿಸಿದ್ದಾನೆ. ವಸ್ತುವಿನ ಒಂದು ಭಾಗಕ್ಕೂ ಅದರ ಪಕ್ಕದ ಭಾಗಕ್ಕೂ ಇರುವ ದೈಹಿಕ ಪಾರ್ಶ್ವಸಂಪರ್ಕ ವಸ್ತುವಿನ ಒಂದು ಪ್ರಮುಖ ಲಕ್ಷಣ. ಲೊಬಾಚೆವ್ಸ್ಕಿ (1793 – 1856) ಈ ಪಾರ್ಶ್ವ ಸಂಪರ್ಕವನ್ನು ಒಂದು ಜ್ಯಾಮಿತೀಯ ಲಕ್ಷಣ ಎಂದು ಪರಿಗಣಿಸಿದ್ದ; $A$ ಮತ್ತು $B$ ಗಳು ಒಂದಕ್ಕೊಂದು ಅಂಟಿಕೊಂಡು $C$ ಎಂಬ ಜ್ಯಾಮಿತೀಯ ಆಕೃತಿ ಆಗಿದೆ. ವಿಲೋಮವಾಗಿ $C$ ಎಂಬ ಆಕೃತಿಯನ್ನು ವಿಭಜಿಸಿದಾಗ $A$ ಮತ್ತು $B$ ಗಳೆಂಬ ಎರಡು ಭಾಗಗಳಾಗುತ್ತವೆ. $C$ಯನ್ನು ಒಂದೇ ಆಕೃತಿ ಎಂದು ಪರಿಗಣಿಸಿದಾಗ $A$ ಮತ್ತು $B$ ಗಳಿಗೆ ಪಾರ್ಶ್ವಸಂಪರ್ಕ ಇರುತ್ತದೆ. ಜ್ಯಾಮಿತೀಯ ವಸ್ತುಗಳನ್ನು ಪರಿವರ್ತನೆಗೆ ಒಳಪಡಿಸಿದಾಗ ವಸ್ತುಗಳ ಪಾರ್ಶ್ವಸಂಪರ್ಕ ನಾಶವಾಗದಿದ್ದರೆ ಆ ಪರಿವರ್ತನೆಗೆ ಅವಿಚ್ಛಿನ್ನ ಪರಿವರ್ತನೆಯೆಂದೂ ಪಾರ್ಶ್ವ ಸಂಪರ್ಕಗಳು ನಾಶವಾಗದಿರುವ ಜೊತೆಗೆ ವಸ್ತುವಿನಲ್ಲಿ ಹೊಸ ಪಾರ್ಶ್ವ ಸಂಪರ್ಕಗಳು ಉಂಟಾಗದಿದ್ದರೆ ಅಂಥ ಪರಿವರ್ತನೆಗಳಿಗೆ ಟಾಪಾಲಜೀಯ ಪರಿವರ್ತನೆ ಯೆಂದೂ ಹೆಸರು. ಅಂದರೆ ಟಾಪಾಲಜೀಯ ಪರಿವರ್ತನೆಯಲ್ಲಿ ವಸ್ತುವಿನ ಭಾಗಗಳ ವಿಭಜನೆ ಅಥವಾ ಬೆಸುಗೆಗಳು ಆಗುವುದಿಲ್ಲ. ಆದ್ದರಿಂದ ಇಂಥ ಪರಿವರ್ತನೆಗಳು ಒಂದು–ಒಂದು ಸಂವಾದಿತ್ವವನ್ನು ವ್ಯಾಖ್ಯಿಸುತ್ತವೆ. ರಬ್ಬರಿನ ಒಂದು ವರ್ತುಲ ಉಂಗುರವನ್ನು ತೆಗೆದುಕೊಳ್ಳಬೇಕು. ಅದನ್ನು ನಿರಂತರ ಪರಿವರ್ತನೆಗೆ ಗುರಿಪಡಿಸಿದಾಗ ಚಿತ್ರದಲ್ಲಿ ಕೊಟ್ಟಿರುವ ನಮೂನೆಯ ಆಕೃತಿಗಳು ದೊರೆಯುತ್ತವೆ. ಇವುಗಳಲ್ಲಿ ($d$)ಯನ್ನುಳಿದು ಇನ್ನೆಲ್ಲವೂ ಟಾಪಾಲಜೀಯ ಪರಿವರ್ತನೆಗಳು. ಈ ಚಿತ್ರ ಅಡ್ಡಲಾದ 8ರ ಆಕಾರದಲ್ಲಿದೆ. ಇದರ ನಡುವೆ ಇರುವ ಗಂಟಿನಲ್ಲಿ ಹೊಸ ಸಂಪರ್ಕ ಏರ್ಪಟ್ಟಿದೆ. ಆದ್ದರಿಂದ ಇದು ಅವಿಚ್ಛಿನ್ನ ಪರಿವರ್ತನೆಯೇ ಹೊರತು ಟಾಪಾಲಜೀಯ ಪರಿವರ್ತನೆ ಅಲ್ಲ. ಒಂದು ವಸ್ತುವನ್ನು ಟಾಪಾಲಜಿಯ ಪರಿವರ್ತನೆಗಳಿಗೆ ಗುರಿಪಡಿಸಿದಾಗ ಅದರ ಕೆಲವು ಲಕ್ಷಣಗಳು ನಾಶವಾಗದೆ ಹಾಗೆಯೇ ಇರುತ್ತವೆ. ಇಂಥವುಗಳಿಗೆ ವಸ್ತುವಿನ



ಚಿತ್ರ 13

ಟಾಪಾಲಜೀಯ ಲಕ್ಷಣಗಳೆಂದು ಹೆಸರು. ಉದಾಹರಣೆಗೆ ಒಂದು ವಸ್ತುವಿನಲ್ಲಿ A ಮತ್ತು B ಬಿಂದುಗಳು ಅಕ್ಕಪಕ್ಕದಲ್ಲಿದ್ದರೆ ಯಾವುದೇ ಟಾಪಾಲಜೀಯ ಪರಿವರ್ತನೆಗಳಲ್ಲಿ ಅವು ಅಕ್ಕಪಕ್ಕದಲ್ಲಿಯೇ ಇರುತ್ತವೆ.




ಚಿತ್ರ 14

ಹೀಗೆ A ಮತ್ತು B ಗಳ ಪರಸ್ಪರ ಅಕ್ಕಪಕ್ಕದಲ್ಲಿರುವಿಕೆ ವಸ್ತುವಿನ ಒಂದು ಟಾಪಾಲಜೀಯ ಲಕ್ಷಣ. ಹಿಟ್ಟಿನಿಂದ ಮಾಡಿದ ಒಂದು ಮಿದುವಾದ ಗೋಳವನ್ನು ತೆಗೆದುಕೊಳ್ಳಬೇಕು. ಚಿತ್ರ(15)ರಲ್ಲಿ ತೋರಿಸಿರುವ ಯಾವುದಾದರೂ ರೂಪಕ್ಕೆ ಈ



ಚಿತ್ರ 15

ಗೋಳವನ್ನು ಮುರಿಯದೇ ಬದಲಾಯಿಸಬಹುದು. ಇದು ಒಂದು ಟಾಪಾಲಜೀಯ ಪರಿವರ್ತನೆ ಯಾಗಿದೆ. ಗೋಳವನ್ನು ಒಂದು ಘನವನ್ನಾಗಿ ಪರಿವರ್ತಿಸೋಣ. ಈಗ ಗೋಳಕ್ಕೆ ಅಂಚುಗಳಿಲ್ಲ. ಆದರೆ ಘನಕ್ಕೆ ಅಂಚುಗಳಿವೆ. ಅಂಚುಗಳಿರುವುದು ಅಥವಾ ಅಂಚು ಗಳಿಲ್ಲದಿರುವುದು ಟಾಪಾಲಜೀಯ ಲಕ್ಷಣಗಳಲ್ಲ. ಏಕೆಂದರೆ ಪರಿವರ್ತನೆಯಲ್ಲಿ ಈ ಲಕ್ಷಣಗಳು ಬದಲಾಗಿವೆ. ಮೇಲಿನ ಯಾವುದೇ ಆಕೃತಿ ಮತ್ತು ಗೋಳ ಟಾಪಾಲಜೀಯವಾಗಿ ಸಮವಾಗಿವೆಯೆಂದು ತಿಳಿಯಬಹುದು. ಎರಡು ವಸ್ತುಗಳಲ್ಲಿ ಒಂದನ್ನು ಇನ್ನೊಂದಕ್ಕೆ ಟಪಾಲಜೀಯ ಪರಿವರ್ತನೆಯಿಂದ ಮಾರ್ಪಾಡು ಮಾಡಲು ಸಾಧ್ಯವಾದರೆ ಅಂಥ ವಸ್ತುಗಳು ಪರಸ್ಪರ ಹೋಮಿಯೋಮಾರ್ಫಿಕ್ ಆಗಿವೆ ಅನ್ನುತ್ತೇವೆ. ಈಗ ಒಂದು ಪ್ರಶ್ನೆ ಏಳುತ್ತದೆ: ಯಾವುದಾದರೂ ಒಂದು ವಸ್ತುವಿನ ಮೇಲ್ಮೈಗೆ ಒಂದೇ ಪಾರ್ಶ್ವ ಇರುವುದು ಸಾಧ್ಯವೇ ? ಇದಕ್ಕೆ ಉತ್ತರ ಹೌದು. ಉದಾಹರಣೆಗೆ ಮೋಬಿಯಸ್ ಪಟ್ಟಿ (ಚಿತ್ರ 16).

ಇದೊಂದು ಆಯತಾಕಾರದ ಕಾಗದದ ಪಟ್ಟಿ ABCD. ಇದರಲ್ಲಿ D ಬಿಂದು Bಯೊಂದಿಗೆ C ಬಿಂದು A ಯೊಂದಿಗೆ ಐಕ್ಯವಾಗುವಂತೆ CD ತುದಿಯನ್ನು AB ತುದಿಯ ಮೇಲೆ ಅಂಟಿಸಬೇಕು. ಈ ಆಕೃತಿಗೆ ಒಂದೇ ಪಾರ್ಶ್ವವಿರುವ ಮೇಲ್ಮೈ ಇರುತ್ತದೆ. ಇದನ್ನು ಖಚಿತಪಡಿಸುವುದು ಬಹಳ ಸುಲಭ. ಪಟ್ಟಿಯ ಮಧ್ಯರೇಖೆಯ ಮೇಲೆ E ಯಾವುದಾದರೂ ಒಂದು ಬಿಂದು ಆಗಿರಲಿ. E ಯಿಂದ ಪ್ರಾರಂಭಿಸಿ ಮಧ್ಯರೇಖೆಯ ಮೇಲೆ ಹೋದರೆ ಕೊನೆಗೆ ಆಯತಾಕಾರದ ಪಟ್ಟಿಯ ಎರಡು ಪಾರ್ಶ್ವಗಳನ್ನೂ ಬಳಸಿಕೊಂಡು ಇನ್ನೊಂದು ಪಟ್ಟಿಯ ಇನ್ನೊಂದು ಮೇಲ್ಮೈಯಲ್ಲಿ




ಚಿತ್ರ 16

ಬಂದು ಸೇರುತ್ತವೆ. ಒಂದು ವೇಳೆ ಮೋಬಿಯಸ್ ಪಟ್ಟಿಗೆ ದ್ವಿಪಾರ್ಶ್ವ ಮೇಲ್ಮೈ ಇದ್ದಿದ್ದರೆ E ಬಿಂದುವನ್ನೂ ಅದು ಇರುವ ಪಾರ್ಶ್ವದಲ್ಲಿಯೇ ತಲುಪಬೇಕಾಗಿದ್ದಿತು. ಇದೇ ರೀತಿ ಏಕಪಾರ್ಶ್ವ ಮೇಲ್ಮೈ ಇರುವುದರೊಂದಿಗೆ ಸಂವೃತ ಸಹ ಆಗಿರುವ ಆಕೃತಿಗೆ ಕ್ಲೈನ್‌ಕುಪ್ಪಿ ಒಂದು ಉದಾಹರಣೆ ಆಗಿದೆ. ಎರಡು ಮೋಬಿಯಸ್ ಪಟ್ಟಿಗಳ ಭುಜಗಳನ್ನು ಒಂದಕ್ಕೊಂದು ಅಂಟಿಸುವುದರಿಂದ ಏರ್ಪಡುವ ಆಕೃತಿಯೇ ಕ್ಲೈನ್‌ಕುಪ್ಪಿ ಚಿತ್ರ 17.



ಚಿತ್ರ 17

6 **ಬೀಜಗಣಿತ :** 19ನೆಯ ಶತಮಾನ ಗಣಿತಶಾಸ್ತ್ರದ ಇತಿಹಾಸದಲ್ಲಿ ಒಂದು ಮಹತ್ತರವಾದ ಕಾಲ. ಈ ಶತಮಾನದಲ್ಲಿ ಗಣಿತಶಾಸ್ತ್ರಕ್ಕೆ ಚಿಂತನೆಯ ಚೌಕಟ್ಟು ಲಭಿಸಿತಲ್ಲದೆ ಆ ಶಾಸ್ತ್ರದ ಪ್ರತಿಯೊಂದು ಶಾಖೆಯಲ್ಲಿಯೂ ಅತೀವವಾದ ಬೆಳವಣಿಗೆ ಉಂಟಾಯಿತು. ಒಟ್ಟಿನಲ್ಲಿ ಗಣಿತಶಾಸ್ತ್ರ ಈ ಕಾಲದಲ್ಲಿ ಒಂದು ಆರೋಗ್ಯಕರವಾದ ಪ್ರೌಢಿಮೆಯನ್ನು ಗಳಿಸಿ ವಿವಿಧ ಶಾಖೆಗಳಲ್ಲಿ ತನ್ನ ಮುಂದಿನ ಗತಿಯನ್ನು ನಿರ್ಧರಿಸಿಕೊಂಡಿತು. 19ನೆಯ ಶತಮಾನದಲ್ಲಿ ಬೀಜಗಣಿತದ ಪರಿಸರವನ್ನು ಬೆಳೆಸಿ ಅದರಿಂದ ಉಂಟಾದ ಬೀಜಗಣಿತಕ್ಕೆ ಆಧುನಿಕ ಬೀಜಗಣಿತ (ಮಾಡರ್ನ್ ಆಲ್ಜಿಬ್ರ) ಎಂದು ಕರೆಯುವ ವಾಡಿಕೆ ಇತ್ತು. ಆಧುನಿಕ ಬೀಜಗಣಿತದ ಅಂಗವಾಗಿ ಅಮೂರ್ತ ಬೀಜಗಣಿತವೂ ಸೇರಿಕೊಂಡಿದೆ. 19ನೆಯ ಶತಮಾನದ ಕಾಲದಲ್ಲಿ ಆಧುನಿಕ ಬೀಜಗಣಿತ ಆಧುನಿಕ ಆಗಿದ್ದಿತೇ ವಿನಾ ಇಂದು ಆಧುನಿಕ ಎಂಬ ಪದವನ್ನು ಬಿಟ್ಟು ಕೇವಲ ಬೀಜಗಣಿತ ಎಂದು ಕರೆಸಿಕೊಳ್ಳುವಷ್ಟು ಹಳೆಯದಾಗಿದೆ. ಇನ್ನು ಮುಂದೆ ಬೀಜಗಣಿತ ಅಂದರೆ ಆಧುನಿಕ ಬೀಜಗಣಿತ ಎಂದು ಭಾವಿಸಬೇಕು. ಜಾರ್ಜ್ ಪೀಕಾಕ್ (1791–1858), ವಿಲಿಯಂ ಹ್ಯಾಮಿಲ್ಟನ್ (1805–1865), ಆರ್ಥರ್ ಕೇಲೀ (1821–1895), ಸಿಲ್ವೆಸ್ಟರ್ (1814–1897), ಜಾರ್ಜ್ ಬೂಲ್ (1815–1864) ಮತ್ತು ಗ್ಯಾಲ್ವ (1811–1832) ಇವರು ಬೀಜಗಣಿತದ ಕ್ರಾಂತಿ ಪುರುಷರು. ಋಣಸಂಖ್ಯೆಗಳಿಗೆ ಬೆಲೆ ಇದೆ ಎಂದು ಹೇಳುವುದು ಅಪರಾಧವೆಂದು ತಿಳಿಯುತ್ತಿದ್ದ ಕಾಲವದು. ಹೊಸ ಚಿಂತನೆಗೆ ಅವಕಾಶ ಮಾಡಿಕೊಳ್ಳಲು ಬಯಸದೆ ಹಳೆಯದಕ್ಕೆ ಇನ್ನಷ್ಟು ಬಲವಾಗಿ ಅಂಟಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದ ಗಣಿತಶಾಸ್ತ್ರಜ್ಞರಿಂದ ಕೂಡಿದ ವಾತಾವರಣವಿತ್ತು. ಅಂಥ ಕಾಲದಲ್ಲಿ ಪೀಕಾಕ್ ಕೇಂಬ್ರಿಜಿನ ಟ್ರಿನಿಟಿ ಕಾಲೇಜಿನ ಅಧಿಕಾರವರ್ಗದಲ್ಲಿದ್ದು ಕೊಂಡು ಬೀಜಗಣಿತದ ಬೆಳವಣಿಗೆಗೆ ಬಹಳಷ್ಟು ಶ್ರಮಿಸಿದ. ಟ್ರೀಟೈಸ್ ಆನ್ ಆಲ್ಜಿಬ್ರ

ಎನ್ನುವ ಗ್ರಂಥವನ್ನು ಬರೆದು (1830) ಬೀಜಗಣಿತಕ್ಕೆ ತಾರ್ಕಿಕ ಸ್ವರೂಪವನ್ನು ಕೊಡಲು ಪ್ರಯತ್ನಪಟ್ಟ. ವ್ಯತ್ಯಯ ನಿಯಮ (ಕಾಮ್ಯೂಟೇಟಿವ್ ಲಾ), ಸಾಹಚರ್ಯ ನಿಯಮ (ಅಸೋಸಿಯೇಟಿವ್ ಲಾ) ಇತ್ಯಾದಿ ಮೂಲ ನಿಯಮಗಳನ್ನು ಇಂದು ಬಳಕೆಯಲ್ಲಿರುವ ರೀತಿಯಲ್ಲಿ ನಿರೂಪಿಸಲು ಈತನಷ್ಟು ಯಶಸ್ವಿಯಾಗಿ ಯಾರೂ ಪ್ರಯತ್ನಿಸಲಿಲ್ಲ. ಮೊದಲು ಈ ನಿಯಮಗಳನ್ನು ಸಂಖ್ಯೆಗಳ ಮೇಲೆ ಪ್ರಯೋಗಿಸಿದ. ಹೀಗೆಯೇ ಮುಂದುವರಿದು ಇವನ್ನು ಸಾಮಾನ್ಯ ರಾಶಿಗಳ ಮೇಲೂ ಪ್ರಯೋಗಿಸಿ ಪ್ರತೀಕಾತ್ಮಕ ಬೀಜಗಣಿತದ (ಸಿಂಬಾಲಿಕ್ ಆಲ್ಜಿಬ್ರ) ಜನನಕ್ಕೆ ಕಾರಣನಾದ. ಮುಂಚೆ ಈ ನಿಯಮಗಳನ್ನು ಸಂಖ್ಯೆಗಳ ಮೇಲೆ ಪ್ರಯೋಗಿಸಿದಾಗ + ಮತ್ತು – ಚಿಹ್ನೆಗಳಿಗೆ ಅವುಗಳ ಸರ್ವೇಸಾಮಾನ್ಯವಾದ ಅರ್ಥವಿತ್ತು. ಉದಾಹರಣೆಗೆ: 2–1ಕ್ಕೆ ಅರ್ಥವಿರುತ್ತಿತ್ತೇ ವಿನಾ 1–2ಕ್ಕೆ ಅಲ್ಲ. ಆದರೆ ಪ್ರತೀಕಾತ್ಮಕ ಬೀಜಗಣಿತದಲ್ಲಿ ಪರಿಮಾಣಗಳ (ಮ್ಯಾಗ್ನಿಟ್ಯೂಡ್ಸ್) ಮೇಲೆ ನಿಬಂಧನೆಗಳನ್ನು ಹಾಕದೆ ಚಿಹ್ನೆಗಳನ್ನು ಬಳಸಬಹುದೆಂದು ಪ್ರತಿಪಾದಿಸಲಾಯಿತು. ಪೀಕಾಕ್ + ಮತ್ತು – ಚಿಹ್ನೆಗಳ ಈ ರೀತಿಯ ವಿಸ್ತಾರವಾದ ಬಳಕೆ ಯಾವ ಸಮಜಾಯಿಸಿಕೆಯನ್ನೂ ಕೊಡಲಿಲ್ಲ. ಆತನ ಹೊಸ ಚಿಂತನಮಾರ್ಗಕ್ಕೆ ಬೆಂಬಲ ಕೊಟ್ಟವ ಭಾರತದಲ್ಲಿ ಜನಿಸಿ ಇಂಗ್ಲೆಂಡಿನಲ್ಲಿ ಬೆಳೆದ ಡಿ' ಮಾರ್ಗನ್ (1806–1871). ಚಿಹ್ನೆಗಳು ಪೀಕಾಕನಿಗೆ ಸಂಖ್ಯೆಗಳು ಅಥವಾ ಪರಿಮಾಣಗಳು ಆಗಿದ್ದರೆ ಡಿ' ಮಾರ್ಗನನಿಗೆ ಅವು ಅಮೂರ್ತವಾಗಿದ್ದವು. ತಾನು ಬಳಸಿದ ಪರಿಕರ್ಮಗಳ ಪ್ರತೀಕಗಳನ್ನೂ ಅಕ್ಷರಗಳನ್ನೂ ಆತ ಅಮೂರ್ತವಾಗಿರಿಸಿದ. ನೈಜ ಸಂಖ್ಯೆಗಳ ಮತ್ತು ಮಿಶ್ರ ಸಂಖ್ಯೆಗಳ ಬೀಜಗಣಿತ ಎರಡಕ್ಕೂ ಒಂದೇ ಬಗೆಯ ಪರಿಕರ್ಮ ಪದ್ಧತಿಗಳ ಇರುವಿಕೆಯನ್ನು ಕಂಡುಕೊಂಡ. ಬೀಜಗಣಿತದ ಮೂಲ ನಿಯಮಗಳು ಎಲ್ಲ ಬೀಜಗಣಿತೀಯ ವ್ಯವಸ್ಥೆಗಳಿಗೂ ಹೊಂದಿಕೊಳ್ಳುವುವು ಎಂಬ ಪರಿಕಲ್ಪನೆಗೆ ಬಹಳ ಹತ್ತಿರ ಬಂದರೂ ಆತ ನೈಜ ಸಂಖ್ಯೆಗಳ ಬೀಜಗಣಿತ ಮತ್ತು ಸಂಖ್ಯೆಗಳ ಬೀಜಗಣಿತ ಎಂಬ ಎರಡು ಬೀಜಗಣಿತಗಳು ಮಾತ್ರ ಇರಬಲ್ಲವು ಎಂದು ನಂಬಿದ್ದ. ಡಿ' ಮಾರ್ಗನನ ಈ ಗ್ರಹಿಕೆ ತಪ್ಪು ಎಂದು ಡಬ್ಲಿನ್ನಿನ ಟ್ರಿನಿಟಿ ಕಾಲೇಜಿನಲ್ಲಿದ್ದ ಹ್ಯಾಮಿಲ್ಟನ್ ತೋರಿಸಿದ. ಈತ ನೈಜಸಂಖ್ಯೆಗಳ ಸಕ್ರಮಯುಗ್ಮಗಳ ಬೀಜಗಣಿತವನ್ನು ಸೃಷ್ಟಿಸಿದ. (a,b) ಮತ್ತು $(\alpha,\beta)$ ಎಂಬ ನೈಜಸಂಖ್ಯೆಗಳ ಎರಡು ಸಕ್ರಮ ಯುಗ್ಮಗಳ ಗುಣಲಬ್ಧವನ್ನು $(a,b),(\alpha,\beta)= (a\alpha-b\beta, a\beta +b\alpha)$ ಎಂದು ನಿರೂಪಿಸುತ್ತಾನೆ. ಈ ಸಕ್ರಮಯುಗ್ಮಗಳ ಮಾಧ್ಯಮದಲ್ಲಿ ಇಡೀ ಮಿಶ್ರಸಂಖ್ಯೆಗಳ ಪರಿಕರ್ಮಗಳನ್ನು ಅಳವಡಿಸಲು ಅವನಿಗೆ ಸಾಧ್ಯವಾಯಿತು. ಇನ್ನೂ ಮುಂದುವರಿದು ನೈಜಸಂಖ್ಯೆಗಳ ಸಕ್ರಮಯುಗ್ಮಗಳನ್ನು ಒಂದೇ ತಲದಲ್ಲಿರುವ ಸದಿಶ ಪರಿಮಾಣಗಳು ಎಂದು ಗ್ರಹಿಸಿ ಇದೇ ಪರಿಕಲ್ಪನೆಯನ್ನು ಮೂರು ಅಯಾಮಗಳ ಆಕಾಶಕ್ಕೂ ಮುಂದುವರಿಸಿದ. ಮೂರು ಆಯಾಮಗಳ ಆಕಾಶದಲ್ಲಿ ಸದಿಶ ಪರಿಮಾಣವನ್ನು ಮೂರು ನೈಜ ಸಂಖ್ಯೆಗಳ ಸಕ್ರಮಗಣಗಳಿಂದ ಸೂಚಿಸುತ್ತಾನೆ: (a+bi+cj) ಅಥವಾ (a,b,c). ಆದರೆ ಮೂರು ನೈಜಸಂಖ್ಯೆಗಳ ಸಕ್ರಮಗಣಗಳ ಗುಣಲಬ್ಧವನ್ನು ನಿರೂಪಿಸುವುದು ಆತನಿಗೆ ಕೂಡಲೇ ಸಾಧ್ಯವಾಗಲಿಲ್ಲ. 10ವರ್ಷಗಳ ಬಳಿಕ ಒಂದು ದಿವಸ ಮೂರು ನೈಜಸಂಖ್ಯಾಸಕ್ರಮಗಣದ ಬದಲು 4 ನೈಜ ಸಂಖ್ಯಾಸಕ್ರಮಗಣವನ್ನು ಉಪಯೋಗಿಸಿ $i^2=j^2=k^2= -1$ ಮತ್ತು $ij=k=ji, jk=i=-kj$ ಮತ್ತು $ki=j=-ik$ ಎಂದು ಊಹಿಸಿಕೊಂಡರೆ (a+bi+cj+dk) ರೂಪದ ಪರಿಮಾಣಗಳ ಗುಣಲಬ್ಧವನ್ನು ನಿರೂಪಿಸಬಹುದು ಎಂದು ತಿಳಿಸಿದ. ಈ ಸಂದರ್ಭದಲ್ಲಿ ವ್ಯತ್ಯಯ ನಿಯಮವನ್ನು ಆತ ಕೈಬಿಟ್ಟಿರುವುದು ಗಮನಾರ್ಹ. ಉದಾಹರಣೆಗೆ $ij \neq ji$. ಯೂಕ್ಲಿಡನ ಐದನೆಯ ಆದ್ಯುಕ್ತಿಯನ್ನು ಕೈಬಿಟ್ಟು ಲೊಬಾಚೆವ್ಸ್ಕಿ ಹೊಸ ಜ್ಯಾಮಿತಿಗೆ ಜನನವಿತ್ತರೆ ಹ್ಯಾಮಿಲ್ಟನ್ ವ್ಯತ್ಯಯ ನಿಯಮವನ್ನು ಕೈಬಿಟ್ಟು ಒಂದು ಹೊಸ ಬೀಜಗಣಿತವನ್ನು ಸೃಷ್ಟಿಸಿದ. ನಾಲ್ಕು ನೈಜಸಂಖ್ಯೆಗಳ ಗಣಗಳ ಬೀಜಗಣಿತ ವ್ಯತ್ಯಯ ನಿಯಮವಿಲ್ಲದ ಒಂದು ಬೀಜಗಣಿತ (**ನೋಡಿ– ಕ್ವಟರ್ನಿಯನ್**). ಪರಿವರ್ತನ ಸಿದ್ಧಾಂತದಿಂದ ಉದ್ಭವಿಸಿದ ಮಾತೃಕೆಗಳ ಬೀಜಗಣಿತ ಇನ್ನೊಂದು ಉದಾಹರಣೆ. ಇದರ ಕರ್ತೃ ಕೇಲಿ. ಜಾರ್ಜ್ ಬೂಲ್ ಎಂಬ ಬ್ರಿಟಿಷ್ ಗಣಿತಜ್ಞ ಇನ್ನೊಂದು ಬಗೆಯ ಬೀಜಗಣಿತವನ್ನು ಸೃಷ್ಟಿಸಿದ. ಯಾವುದೇ ವಿಷಯ ತನ್ನ ಅಸ್ತಿತ್ವಕ್ಕೆ ಬೇಕಾಗುವ ಸೂಕ್ತ ಪರಿಕರ್ಮ ಸೂತ್ರಗಳು ಮತ್ತು ಇವುಗಳಿಗೆ ಗುರಿಯಾಗುವ ಪ್ರತೀಕಗಳು ಇವನ್ನು ಇಟ್ಟುಕೊಂಡರೆ ಅದು ಗಣಿತಶಾಸ್ತ್ರದ ಒಂದು ಅಂಗವಾಗಿರುತ್ತದೆ ಎನ್ನುವ ಗಣಿತಶಾಸ್ತ್ರದ ಸರಿಯಾದ ಪರಿಕಲ್ಪನೆಯನ್ನು ಆತ ಗ್ರಹಿಸಿದ. ಇಂದು ಗಣಿತಶಾಸ್ತ್ರದ ಪ್ರತಿಯೊಂದು ಶಾಖೆಯಲ್ಲಿಯೂ ಮೂಲಭೂತವಾಗಿ ಕಾಣುವ ಗಣ ಎಂಬ ಪರಿಕಲ್ಪನೆಯನ್ನು ಮೊದಲು ಗ್ರಹಿಸಿದಾತ ಬೂಲ್. A ಮತ್ತು B ಗಳು ಯಾವುದಾದರೂ ಒಂದು ವಿಶ್ವಗಣ U ವಿನ ಎರಡು ಉಪಗಣಗಳಾದರೆ A U B ಅನ್ನುವುದು ಇನ್ನೊಂದು ಗಣ; ಇದರಲ್ಲಿ A ಯಲ್ಲಿರುವ ಎಲ್ಲ ಧಾತುಗಳು B ಯಲ್ಲಿರುವ ಎಲ್ಲ ಧಾತುಗಳೂ ಇವೆ. A U B ಅನ್ನುವುದು ಮತ್ತೊಂದು ಗಣ. ಇದರಲ್ಲಿ A ಮತ್ತು B ಎರಡಕ್ಕೂ ಉಭಯಸಾಮಾನ್ಯವಾಗಿರುವ ಧಾತುಗಳು ಮಾತ್ರ ಇವೆ. O ಪ್ರತೀಕವನ್ನು ಧಾತುಗಳೇ ಇಲ್ಲದ ಗಣವನ್ನು ಸೂಚಿಸಲು ಬಳಸುತ್ತಾನೆ. ಇದಕ್ಕೆ ಶೂನ್ಯಗಣ ಎಂದು ಹೆಸರು (ಇದಕ್ಕೆ ಪ್ರಚಲಿತ ಪ್ರತೀಕ $\phi$). ಇಂದು ಬಳಕೆಯಲ್ಲಿರುವ U ಮತ್ತು ∩ ಚಿಹ್ನೆಗಳ ಬದಲು + ಮತ್ತು × ಚಿಹ್ನೆಗಳನ್ನು ಬೂಲ್ ಬಳಸುತ್ತಿದ್ದ. + ಮತ್ತು × ಗಳನ್ನೊಳಗೊಂಡ ಗಣಗಳನ್ನು ಕುರಿತ ಬೂಲೀಯ ಬೀಜಗಣಿತವನ್ನು ಆತ ಸೃಷ್ಟಿಸಿದ. ವ್ಯತ್ಯಯ ನಿಯಮ, ಸಾಹಚರ್ಯ ನಿಯಮ ತುತ್ತು ವಿತರಣ ನಿಯಮಗಳು ಈ ಬೀಜಗಣಿತದಲ್ಲಿ ಸಿದ್ಧಿಸುತ್ತವೆ. ಕೆಳಗೆ ಕೊಟ್ಟಿರುವ ಈ ಬೀಜಗಣಿತದ ಕೆಲವು ವಿಶೇಷ ಲಕ್ಷಣಗಳನ್ನು ಗಮನಿಸಬೇಕು.

1. A+A=A, (2A ಅಲ್ಲ).

2. $A \times B=A \times C, A \neq 0$ ಆಗಿದ್ದರೆ B=C ಆಗಬೇಕಾದ ಆವಶ್ಯಕತೆ ಇಲ್ಲ.

3. $A \times B = 0$ ಆಗಿದ್ದರೆ A ಅಥವಾ B ಯಾವುದಾದರೂ ಶೂನ್ಯಗಣ ಆಗಲೇಬೇಕಾದ ಆವಶ್ಯಕತೆ ಇಲ್ಲ. (A=B ಅಂದರೆ A ಮತ್ತು B ಯಲ್ಲಿರುವ ಧಾತುಗಳು ಒಂದೇ ಆಗಿವೆ ಎಂದು ಅರ್ಥ).

ಇದು (ಅಮೂರ್ತ) ಬೀಜಗಣಿತದ ಕಡೆಗಿಟ್ಟ ಮೊದಲ ಹೆಜ್ಜೆ ಆಗಿದೆ. ಗ್ರೂಪ್, ವಲಯ (ರಿಂಗ್) ಮತ್ತು ಕ್ಷೇತ್ರ (ಫೀಲ್ಡ್) ಎಂಬ ಪರಿಕಲ್ಪನೆಗಳು ಬೆಳೆದು ಬಂದು ಅಮೂರ್ತಬೀಜಗಣಿತ ಬೃಹದಾಕಾರವಾಗಿ ಬೆಳೆಯುತ್ತ ಇದೆ. **(ನೋಡಿ– ಬೀಜಗಣಿತ)**

(ಜಿ.ಎನ್.ಎಂ.ಡಿ.)

7 **ಗಣಿತಶಾಸ್ತ್ರದ ತಳಹದಿ** : ಶಾಸ್ತ್ರವೊಂದರ ಆಯಕಟ್ಟಿನಲ್ಲಿ ಪರಸ್ಪರ ವ್ಯತಿರಿಕ್ತವಾದ ಫಲಿತಾಂಶಗಳನ್ನು ಸಮರ್ಥಿಸಲು ಶಕ್ಯವಾಗುವುದಾದರೆ ಅಂಥ ಶಾಸ್ತ್ರ ಅಸಂಗತ (ಇನ್‌ಕನ್ಸಿಸ್ಟೆಂಟ್) ಎನಿಸುವುದು. ಗಣಿತಶಾಸ್ತ್ರದಲ್ಲಿ ಈ ಬಗೆಯ ಸನ್ನಿವೇಶ ಉದ್ಭವಿಸಲು ಸಾಧ್ಯವಿಲ್ಲವೆಂದು ನಂಬಲಾಗಿದೆ. ಈ ನಂಬಿಕೆಯನ್ನೇ ಒಂದು ಖಚಿತ ಪ್ರಮೇಯವಾಗಿ ಸಾಧಿಸಬಹುದೇ ಎಂಬ ಪ್ರಶ್ನೆ ವಿವೇಚನಾರ್ಹ. ಗಣಿತದ ಸುಸಾಂಗತ್ಯವನ್ನು (ಕನ್ಸಿಸ್ಟೆನ್ಸಿ) ಸಾಧಿಸುವ ಪ್ರಯತ್ನಗಳು ವಸ್ತುತಃ ಗಣಿತೀಯ ಮಾರ್ಗಗಳನ್ನೇ ಅನುಸರಿಸ ಬೇಕಾಗುವುದರಿಂದ ಅಂಥ ಸಾಧನೆಗಳ ವಿಶ್ವಸನೀಯತೆಗೆ ಭಂಗ ತಗಲುವುದು ಅನಿವಾರ್ಯ. ಆದಾಗ್ಯೂ ಹೆಚ್ಚು ವಿಶ್ವಸನೀಯವೆಂದು ತೋರುವ ಒಂದು ಗಣಿತಶಾಖೆಯ ಆಧಾರದ ಮೇಲೆ ಪ್ರಾರಂಭದಲ್ಲಿ ಕಡಿಮೆ ವಿಶ್ವಸನೀಯವೆನಿಸಬಹುದಾದ ಮತ್ತೊಂದು ಗಣಿತಶಾಖೆಯ ಸುಸಾಂಗತ್ಯವನ್ನು ಸಮರ್ಥಿಸುವ ಪ್ರಯತ್ನಗಳು ನಡೆಯದೆ ಇಲ್ಲ. ಬಹಳಷ್ಟು ಮಂದಿ ಕಾರ್ಯನಿರತ ಗಣಿತಜ್ಞರಾದರೋ (ವರ್ಕಿಂಗ್ ಮ್ಯಾತಿಮ್ಯಾಟಿಷಿಯನ್ಸ್) ಗಣಿತದ ಸುಸಾಂಗತ್ಯವನ್ನು ಅನುಭವಸಿದ್ಧವೆಂದು ಪರಿಗಣಿಸಿ ತಮ್ಮ ದೈನಂದಿನ ಸಂಶೋಧನೆಗಳನ್ನು ಮುಂದುವರಿಸುತ್ತಾರೆ. ಗಣಿತದಲ್ಲಿ ಒಂದು ವೇಳೆ ಗೌಣ ಅಸಾಂಗತ್ಯಗಳು ತಲೆದೋರಿದರೂ ಅವು ಸಂಶೋಧನೆಗಳ ಅಪರಿಪೂರ್ಣತೆಯನ್ನು ಪ್ರತಿಫಲಿಸುತ್ತವೆಂದೂ ಚಿಕ್ಕಪುಟ್ಟ ಸುಧಾರಣೆಗಳಿಂದ ಅವನ್ನೆಲ್ಲ ನಿವಾರಿಸ ಬಹುದೆಂದೂ ಅವರು ದೃಢವಾಗಿ ನಂಬುತ್ತಾರೆ.

ಗಣಿತಮಾರ್ಗಗಳ ಬಗ್ಗೆ ಜನಸಾಮಾನ್ಯರ ನಿಲುವು ಇಂದು ನಿಜಕ್ಕೂ ಭಕ್ತಿಪೂರ್ಣವಾಗಿದೆ. ಶಾಶ್ವತ ಸತ್ಯಗಳ ಆಗಾರ ಎಂದು ಕಲ್ಪಿಸಲಾಗಿರುವ ಗಣಿತವನ್ನು ಕುರಿತಂತೆ ಅದಾವ ಸಂಶಯಗಳು ತಾನೆ ಜನಿಸಲು ಶಕ್ಯ ಎಂದು ಅವರು ಅಚ್ಚರಿಪಡುವುದು ಸಹಜ. ಇದಕ್ಕೆ ಉತ್ತರವಾಗಿ ನಾವು ಪ್ರಧಾನತಃ ಮೂರು ಪರಿಕಲ್ಪನೆಗಳ ಕಡೆ ಬೆರಳು ತೋರಿಸಬೇಕಾಗಿಬರುತ್ತದೆ. ಅನಂತ (ಇನ್‌ಫಿನಿಟಿ), ಸಾರ್ವತ್ರಿಕತೆ (ಜನರ್ಯಾಲಿಟಿ)ಮತ್ತು ನಿಷೇಧ (ನೆಗೇಷನ್). ಆಧುನಿಕ ಪ್ರೌಢ ಗಣಿತದಲ್ಲಿ ಚರ್ಚೆಗೆ ಬರುವ ಬಹಳಷ್ಟು ಗಣಗಳೆಲ್ಲ ಅನಂತವಾದವು (ಉದಾಹರಣೆಗೆ ಸಮಸ್ತ ಧನಪೂರ್ಣಾಂಕಗಳ ಗಣ); ಇವುಗಳಲ್ಲಿನ ಧಾತುಗಳನ್ನು ಬಿಡಿಬಿಡಿಯಾಗಿ ಎಣಿಸುವುದಕ್ಕಾಗಲಿ, ವಿಶಿಷ್ಟ ಪರೀಕ್ಷೆಗಳಿಗೆ ಗುರಿಪಡಿಸುವುದಕ್ಕಾಗಲಿ ಸಾಧ್ಯವಾಗುವುದಿಲ್ಲ. ಒಂದು ಚೀಲದಲ್ಲಿ ಕೆಂಪು ಬಣ್ಣದ ಹತ್ತು ಗೋಲಿಗಳಿವೆಯೆಂದು ಭಾವಿಸೋಣ. ಈಗ

(A) ಚೀಲದಲ್ಲಿರುವ ಯಾವುದೇ ಗೋಲಿಯ ಬಣ್ಣ ಕೆಂಪು (ಅರ್ಥಾತ್ ಚೀಲದಲ್ಲಿರುವ ಗೋಲಿಗಳೆಲ್ಲ ಕೆಂಪುಬಣ್ಣದವು) ಎಂಬ ಉಕ್ತಿಯನ್ನು

(B) ಯಾವುದೇ ಧನ ಪೂರ್ಣಾಂಕಕ್ಕೆ ಅದರ ಮುಂದಿನ ಪೂರ್ಣಾಂಕವನ್ನು ಕೂಡಿಸಿದಾಗ ಬರುವ ಫಲ ಒಂದು ಬೆಸ ಪೂರ್ಣಾಂಕ.

ಎಂಬುದರೊಡನೆ ಹೋಲಿಸಿ ನೋಡಬೇಕು. (A)ಯನ್ನು ಸಮರ್ಥಿಸಲು ಚೀಲದಲ್ಲಿರುವ ಗೋಲಿಗಳನ್ನು ಒಂದೊಂದಾಗಿ ತೆಗೆದು ಪ್ರದರ್ಶಿಸಬಹುದು. (B)ಯ ಸತ್ಯತೆಯನ್ನು ಮನಗಾಣಲು 1+2=3= ಬೆಸ ಪೂರ್ಣಾಂಕ, 2+3=5= ಬೆಸ

ಪೂರ್ಣಾಂಕ, 3+4=7= ಬೆಸ ಪೂರ್ಣಾಂಕ ಎಂದು ಮುಂತಾಗಿ ಧನಪೂರ್ಣಾಂಕಗಳನ್ನು ಬಿಡಿಬಿಡಿ ಪರೀಕ್ಷೆಗಳಿಗೆ ಗುರಿಮಾಡುತ್ತ ಸಾಗಲು ಸಾಧ್ಯವಿಲ್ಲ. ಬದಲು ಅದಕ್ಕೆ ಗಣಿತೀಯ ಮಾರ್ಗದ ಒಂದು ಸಮಗ್ರ ಸಾಧನೆಯೇ ಬೇಕು. ಆದ್ದರಿಂದ ನಾವು ಬಳಸುವ ಭಾಷೆಯ ಅಪರಿಪೂರ್ಣತೆಯಿಂದಾಗಿ (A). (B) ಗಳೊಂದೊಂದೂ ಉಕ್ತಧಾತುಗಳನ್ನು ಕುರಿತ ಒಂದೊಂದು ಲಕ್ಷಣದ ಸಾರ್ವತ್ರಿಕತೆಯನ್ನು ತಿಳಿಯಪಡಿಸುವಂತೆ ತೋರಿದಾಗ್ಯೂ (A)ಯಲ್ಲಿರುವ ಸಾರ್ವತ್ರಿಕತೆಯ ಸ್ವರೂಪವೇ ಬೇರೆ, (B) ಯಲ್ಲಿರುವ ಸಾರ್ವತ್ರಿಕತೆಯ ಸ್ವರೂಪವೇ ಬೇರೆ. ಇವೆರಡು ಸಂದರ್ಭಗಳಲ್ಲೂ ಸಾರ್ವತ್ರಿಕತೆ ಎಂಬ ದ್ವಂದ್ವಾರ್ಥಯುಕ್ತ ಏಕಪದವನ್ನೇ ಪ್ರಯೋಗಿಸುವುದು ನಮ್ಮ ವಾಗ್ಭಂಡಾರದ ದಾರಿದ್ರ್ಯವನ್ನು ಪ್ರತಿಬಿಂಬಿಸುತ್ತದೆ. ಆದಾಗ್ಯೂ ಗಣಿತಶಾಸ್ತ್ರದ ಸಾಂಪ್ರದಾಯಿಕದ ಭೋಧನೆಯಲ್ಲಿ ಇಂಥ ದಾರಿದ್ರ್ಯವನ್ನೇ ಒಂದು ಸೌಲಭ್ಯವನ್ನಾಗಿ ಸ್ವೀಕರಿಸಿ (B)ಯಂಥ ಸನ್ನಿವೇಶಗಳಲ್ಲೂ (A) ಮಾದರಿ ಸಾರ್ವತ್ರಿಕತೆಯ ಅರ್ಥಛಾಯೆಯನ್ನು ವಿಕ್ಷೇಪಿಸುವ ಮೂಲಕ ವಿವಿಧ ಪ್ರಮೇಯಗಳನ್ನು ಸಾಧಿಸಲಾಗುವುದು. ಈ ಬಗೆಯ ಪ್ರಶ್ನಾಸ್ಪದ ಸಾಧನಕ್ರಮಗಳಲ್ಲಿ ಬಳಸಲಾಗುವ ಕೇಂದ್ರೀಯ ಉಪಕರಣವೆಂದರೆ ನಾವು ಹೆಸರಿಸಿರುವ ಮೂರನೆಯ ಪರಿಕಲ್ಪನೆ ನಿಷೇಧ. ಅಂಥ ಸಾಧನೆಗಳಿಗೆ ನಿಷೇಧದಿಂದ ಒದಗಿಬರುವ ಆಸರೆಯನ್ನು ಬಹಿರಂಗಪಡಿಸುವ ಸಲುವಾಗಿ ಪೆಟ್ಟಿಗೆಯೊಂದರಲ್ಲಿ ಕೆಂಪು ಸೇರಿದಂತೆ ವಿವಿಧ ಬಣ್ಣಗಳ ಗೋಲಿಗಳಿವೆಯೆಂದೂ, ಆ ಪೆಟ್ಟಿಗೆಯಿಂದ ಬಣ್ಣವನ್ನು ನೋಡದೆ ಎರಡು ಮೂರು ಗೋಲಿಗಳನ್ನು ಮೇಲೆ ಹೇಳಿದ ಚೀಲಕ್ಕೆ ವರ್ಗಾಯಿಸುತ್ತೇವೆಂದೂ ಭಾವಿಸೋಣ. ಈಗ ಕೆಳಗಿನ ಉಕ್ತಿಗಳನ್ನು ಪರಶೀಲಿಸಬೇಕು.

(~A) ಚೀಲದಲ್ಲಿರುವ ಗೋಲಿಗಳೆಲ್ಲ ಕೆಂಪು ಬಣ್ಣದವಲ್ಲ

(C) ಕೆಂಪು ಬಣ್ಣವಿರದ ಒಂದು ಗೋಲಿಯಾದರೂ ಚೀಲದಲ್ಲಿ ಇದೆ

(D) $n-1+10^{1000}$ ಮತ್ತು $n+1+10^{1000}$ ಇವುಗಳ ಪೈಕಿ ಒಂದನ್ನಾದರೂ ವಿಭಾಜ್ಯ ಪೂರ್ಣಾಂಕವನ್ನಾಗಿಸುವ ಗುಣ ಎಲ್ಲ ಧನಪೂರ್ಣಾಂಕ $n$ ಗಳಿಗೂ ಇದೆ. [ ಸೂಚನೆ: ಒಂದು ಪೂರ್ಣಾಂಕ $m$ ಗೆ $\pm m$ ಹಾಗೂ $\pm 1$ ಇವುಗಳಲ್ಲದೆ ಬೇರೆ ಅಪವರ್ತನಗಳೂ ಇರುವುದಾದರೆ ಆ $m$ ವಿಭಾಜ್ಯ ಪೂರ್ಣಾಂಕ (ಕಾಂಪೊಸಿಟ್ ಇಂಟಿಜರ್) ಎನಿಸುತ್ತದೆ.]

(~D) $n-1+10^{1000}$ ಮತ್ತು $n+1+10^{1000}$ ಇವುಗಳ ಪೈಕಿ ಒಂದನ್ನಾದರೂ ವಿಭಾಜ್ಯ ಪೂರ್ಣಾಂಕವನ್ನಾಗಿಸುವ ಗುಣ ಎಲ್ಲ ಧನಪೂರ್ಣಾಂಕ $n$ ಗಳಿಗೂ ಇಲ್ಲ.

(E) $n-1+10^{1000}$ ಮತ್ತು $n+1+10^{1000}$ ಇವುಗಳ ಪೈಕಿ ಒಂದನ್ನಾದರೂ ವಿಭಾಜ್ಯ ಪೂರ್ಣಾಂಕವನ್ನಾಗಿಸದೆ ಹೋಗುವಂಥ ಕನಿಷ್ಠಪಕ್ಷ ಒಂದು ಧನಪೂರ್ಣಾಂಕ $n$ ಇದೆ.

(~A) ಉಕ್ತಿ (A) ಉಕ್ತಿಯ ನಿಷೇಧ; ಅಂತೆಯೇ (~D) ಉಕ್ತಿ (D) ಉಕ್ತಿಯ ನಿಷೇಧ. (A)ಯನ್ನಾಗಲಿ (~A)ಯನ್ನಾಗಲಿ ಸಮರ್ಥಿಸಬೇಕಾದರೆ ಚೀಲದಲ್ಲಿರುವ ಗೋಲಿಗಳನ್ನೆಲ್ಲ ಒಂದೊಂದಾಗಿ ತೆಗೆದು ಪ್ರದರ್ಶಿಸಿದರಾಯಿತು. ಆಗ ಕೊನೆಯವರೆಗೂ ಕೆಂಪು ಗೋಲಿಗಳೇ ಗೋಚರಿಸುತ್ತಲಿರುತ್ತವೆ. ಇಲ್ಲವೆ ಒಂದಲ್ಲ ಒಂದು ಸಲ ಕೆಂಪಲ್ಲದ ಗೋಲಿಯೊಂದು ಕಣ್ಣಿಗೆ ಬೀಳುತ್ತದೆ ಎನ್ನುವುದು ಅನುಭವವೇದ್ಯ. ಪ್ರಥಮ ಪ್ರಸಂಗದಲ್ಲಿ (A)ಯೂ ಎರಡನೆಯ ಪ್ರಸಂಗದಲ್ಲಿ (~A)ಯೂ ಸಮರ್ಥಿತವಾಗುವುವು. ಒಂದು ವೇಳೆ (~A) ಸಮರ್ಥಿತವಾಗುವುದಾದರೆ ಅದಕ್ಕೂ ಮುಂಚೆ (ಅಂದರೆ ಕೆಂಪಲ್ಲದ ಗೋಲಿ ಕಾಣಿಸಿದ ತತ್‌ಕ್ಷಣವೇ) (C) ಸಮರ್ಥಿತವಾಗಿರುತ್ತದೆಂಬ ಅಂಶವನ್ನು ಗಮನಿಸಬೇಕು. (~A) ಊರ್ಜಿತವಾಗುವುದು (C) ಮೂಲಕವೇ. ಈ ಅನುಭವದಿಂದ ನಾವು ಎರಡು ತೀರ್ಮಾನಗಳಿಗೆ ಬರುತ್ತೇವೆ: (1) (A) ಮತ್ತು (~A) ಗಳ ಪೈಕಿ ಒಂದಲ್ಲ ಒಂದು ಸಮರ್ಥಿತವಾಗಲೇಬೇಕು; (2) (C) ಮತ್ತು (~A) ಸಮಾನಾರ್ಥಕ ಉಕ್ತಿಗಳು. ಈಗ ಸಾದೃಶ್ಯತರ್ಕದಿಂದ ಸಾಂಪ್ರದಾಯಿಕ ಗಣಿತ ಕೆಳಗಿನ ಎರಡು ಶ್ರದ್ಧೆಗಳನ್ನು ಅಂಗೀಕರಿಸುತ್ತದೆ; (1) (D) ಮತ್ತು (~D) ಗಳ ಪೈಕಿ ಒಂದಲ್ಲ ಒಂದು ಸಮರ್ಥಿತವಾಗಲೇಬೇಕು. ;(2) (E) ಮತ್ತು (~D) ಸಮಾನಾರ್ಥಕ ಉಕ್ತಿಗಳು. ಅವುಗಳ ಪೈಕಿ ಒಂದು ಸಮರ್ಥಿತವಾದರೆ ಇನ್ನೊಂದು ಸಮರ್ಥಿತವಾದಂತೆಯೇ. ಗೋಲಿಗಳ ವಿಚಾರದಲ್ಲಿ (1), (2) ಆ ಗೋಲಿಗಳನ್ನು ಒಂದೊಂದಾಗಿ ಪರೀಕ್ಷಿಸುವ ಸಾಧ್ಯತೆಯ ನೇರ ಫಲಿತಾಂಶಗಳು. ಧನಪೂರ್ಣಾಂಕಗಳನ್ನು ಹಾಗೆ ಪರೀಕ್ಷಿಸುವ ಸಾಧ್ಯತೆ ಇಲ್ಲದಿರುವುದರಿಂದ ಅವನ್ನು ಕುರಿತ (1), (2) ಕೇವಲ ಭಾಷಾಸಾದೃಶ್ಯದಿಂದ ಜನಿಸಿದ ಮಿಥ್ಯೆಗಳಿರಬಹುದು. ನಿಜಕ್ಕೂ (D) ಯನ್ನಾಗಲಿ (~D)ಯನ್ನಾಗಲಿ ಸಮರ್ಥಿಸಲು ಗಣಿತೀಯ ಮಾರ್ಗದ ಸಾಧನೆಯನ್ನೇ ನಿಯೋಜಿಸ ಬೇಕಾಗುವುದು. (D)ಗೆ ಇಲ್ಲವೆ (~D)ಗೆ ಸಾಧನೆಯೊಂದನ್ನು ನಿಯೋಜಿಸಲು ಸಾಧ್ಯವಾಗಲೇಬೇಕೆಂಬ ನಿಸರ್ಗನಿಯಮ ಎಲ್ಲಿದೆ? ಒಂದು ನಿರ್ದಿಷ್ಟ ಗಣಿತಶಾಖೆಯ ಆಯಕಟ್ಟಿನಲ್ಲಿ (D)ಯನ್ನು ಸಾಧಿಸಲೂ ಸಾಧ್ಯವಾಗದಿರಬಹುದು; (~D)ಯನ್ನು ಸಾಧಿಸಲೂ ಸಾಧ್ಯವಾಗದಿರಬಹುದು. ವಾಸ್ತವವಾಗಿ ಇದುವರೆಗೆ ಯಾರೂ (D)ಯನ್ನಾಗಲಿ (~D)ಯನ್ನಾಗಲಿ ಸಾಧಿಸಿಯೂ ಇಲ್ಲವೆಂಬ ಸಂಗತಿಯನ್ನು ಇಲ್ಲಿ ಪ್ರಾಸಂಗಿಕವಾಗಿ ಗಮನಿಸಬಹುದಾಗಿದೆ. ಒಂದು ಪಕ್ಷ ಮುಂದೆ ಯಾವಾಗಲಾದರೂ (~D)ಯನ್ನು ಪರೋಕ್ಷ ಮಾರ್ಗದಲ್ಲಿ (ಇಂಡೈರೆಕ್ಟ್ ಮೆಥಡ್) ಸಾಧಿಸಲಾಗುವುದೆಂದು ಭಾವಿಸೋಣ. ಗೋಲಿಗಳನ್ನು ಕುರಿತಾಗಿ ನೇರಮಾರ್ಗದಲ್ಲಿ (C) ಮೂಲಕ (~A) ಫಲಿಸಿದಂತೆ ಧನ ಪೂರ್ಣಾಂಕಗಳನ್ನು ಕುರಿತ ಅಂಥ ಪರೋಕ್ಷ ಸಾಧನೆಯಲ್ಲಿ (E) ಮೂಲಕ (~D) ಸಿದ್ಧಿಸಿರುವುದಿಲ್ಲ; ಆ ಪರೋಕ್ಷ ಸಾಧನೆಯ ಪೂರ್ಣ ಅಧ್ಯಯನದ ಬಳಿಕವೂ $n \pm 1+10^{1000}$ ಗಳೆರಡನ್ನೂ ಅವಿಭಾಜ್ಯವಾಗಿಸುವ ಒಂದು ಧನ ಪೂರ್ಣಾಂಕ $n$ ನ್ನು ಗೊತ್ತುಮಾಡಿ ತೋರಿಸಲು ಸಾಧ್ಯವಾಗದಿರಬಹುದು. ಅಂದಮೇಲೆ (~D) ಗೆ (ಪರೋಕ್ಷ) ಸಾಧನೆಯೊಂದು ಇದ್ದಾಗಲೂ (E)ಗೆ ಸಾಧನೆ ಇಲ್ಲದೆ ಹೋಗಬಹುದು. ಇಂತಿರುವಾಗ (E) ಮತ್ತು (~D) ಗಳನ್ನು ಸಮಾನಾರ್ಥಕ ಉಕ್ತಿಗಳು ಎಂದು ಬಗೆಯಲು ಆಧಾರವಾದರೂ ಏನಿದೆ?

ಆದರೆ ಮೇಲಿನ ಟೀಕೆಗಳು ಬಹುಸಂಖ್ಯಾತ ಗಣಿತಜ್ಞರನ್ನು ತೀವ್ರವಾಗಿ ಬಾಧಿಸಿವೆಯೆಂದು ತಿಳಿಯಲಾಗದು. ಕಾರ್ಯನಿರತ ಗಣಿತಜ್ಞರನೇಕರಿಗೆ ಇವುಗಳ ಬಗ್ಗೆ ನಿರ್ದಿಷ್ಟ ಅರಿವೇ ಇಲ್ಲದಿರುವುದು ಹೆಚ್ಚು ಸಂಭವನೀಯ. ಸಾಂಪ್ರದಾಯಿಕ ಗಣಿತವನ್ನು ಕುರಿತ ಈ ಟೀಕೆಗಳು ಪ್ರಧಾನವಾಗಿ ಅಂತರ್ಬೋಧನವಾದಿಗಳೆಂಬ (ಇಂಟ್ಯುಇಷನಿಸ್ಟ್ಸ್) ಕೆಲ ಗಣಿತ ತಾತ್ತ್ವಿಕರ ಅಭಿಮತವನ್ನು ಪ್ರತಿನಿಧಿಸುತ್ತವೆ. ಲಿಯೊಪೋಲ್ಡ್ ಕ್ರೋನೆಕರ್ (1823–1891) ಎಂಬ ಗಣಿತಜ್ಞನ ಆಲೋಚನೆಗಳಿಂದ ಅಸ್ಪಷ್ಟವಾಗಿ ಪ್ರಾರಂಭವಾದ ಅಂತರ್ಬೋಧನವಾದವನ್ನು 20ನೆಯ ಶತಮಾನದ ಆದಿಯಲ್ಲಿ ಎಲ್.ಇ.ಜೆ. ಬ್ರುವರ್ (1882–1966)ಸ್ಫುಟ ರೂಪರೇಖೆಗಳಿನ್ನಿತ್ತು ಬೆಳೆಸಿದ. ಅಂತರ್ಬೋಧನವಾದಿಗಳ ಟೀಕೆಗಳನ್ನು ಸಾಂಪ್ರದಾಯಿಕ ಗಣಿತಜ್ಞರು ಸಾಧಾರಣವಾಗಿ ಅಲಕ್ಷಿಸಿದರೂ ಅವರಲ್ಲಿ ಅತಿ ಪ್ರಮುಖನಾಗಿದ್ದ ಡೇವಿಡ್ ಹಿಲ್ಬರ್ಟ್‌ನಿಗೆ (1862–1943) ಮಾತ್ರ ಅವು ತಕ್ಕ ಉತ್ತರವನ್ನು ಕೊಡಬೇಕಾದ ಸವಾಲುಗಳೆನಿಸಿದ್ದು ಗಮನಾರ್ಹ. ಈ ಸಂಬಂಧದಲ್ಲಿ ಹಿಲ್ಬರ್ಟ್‌ನ ಮನೋಭಿಪ್ರಾಯ ಹೀಗಿದ್ದಿತು: ಧನ ಪೂರ್ಣಾಂಕಗಳೇ ಮೊದಲಾದ ಅನಂತ ಗಣಗಳ ಧಾತುಗಳನ್ನು ಕುರಿತಂತೆ (1), (2) ರಂಥ ಸಾಂಪ್ರದಾಯಿಕ ಶ್ರದ್ಧೆಗಳು ಮಿಥ್ಯಾ ಸಾದೃಶ್ಯ ತರ್ಕದ ಫಲಗಳೇ ಇರಬಹುದು. ಆದರೆ ಅಂಥ ಶ್ರದ್ಧೆಗಳ ಪರಿಣಾಮವಾಗಿ ಗಣಿತದಲ್ಲಿ ಅಸಾಂಗತ್ಯಗಳು ಜನಿಸದೆ ಇರುವ ಪಕ್ಷದಲ್ಲಿ ಅವನ್ನು ಅಂಗೀಕರಿಸುವ ಜನ್ಮಸಿದ್ಧ ಹಕ್ಕಿನಿಂದ ಗಣಿತಜ್ಞರನ್ನು ಯಾರೂ ವಂಚಿಸಲಾಗದು; ಆದ್ದರಿಂದ ಟೀಕೆಗೆ ಗುರಿಯಾಗಿರುವ ಶ್ರದ್ಧೆಗಳಿಂದ ಅಸಾಂಗತ್ಯಗಳು ತಲೆದೋರುವುದಿಲ್ಲ ಎಂಬುದನ್ನು ಒಂದು ನಿರ್ದಿಷ್ಟ ಪ್ರಮೇಯ ರೂಪದಲ್ಲಿ ಸರ್ವಸಮ್ಮತವಾಗುವಂತೆ ಸಮರ್ಥಿಸುವುದೇ ಅಂತರ್ಬೋಧನವಾದಿಗಳ ಸವಾಲಿಗೆ ಸಾಂಪ್ರದಾಯಿಕರು ನೀಡಬೇಕಾದ ಉತ್ತರ. (ಈ ವಿಶ್ಲೇಷಣೆಯನ್ನೂ ಬ್ರುವರ್ ಒಪ್ಪಲಿಲ್ಲ; ಅರ್ಥಕ್ಕೆ ವಿಮುಖವಾದ ಚಿಂತನೆಗಳು ಸುಸಂಗತವಾಗಿದ್ದಾಗ್ಯೂ ಅಪರಿಗ್ರಾಹ್ಯ ಎಂಬುದು ಬ್ರುವರ್ ವಾದ. ಆದರೆ ನಮ್ಮ ಪ್ರಸಕ್ತ ಚರ್ಚೆಗೆ ಇದು ಅನವಶ್ಯ.) ಹೀಗೆಂದು ಆಲೋಚಿಸಿ ಸಾಂಪ್ರದಾಯಿಕ ಗಣಿತವನ್ನು ಸಂರಕ್ಷಿಸುವ ಗಂಭೀರ ಪ್ರಯತ್ನಕ್ಕೆ (1920ರ ವೇಳೆ) ಹಿಲ್ಬರ್ಟ್ ಕೈಹಾಕಿದ. ಧನಪೂರ್ಣಾಂಕಗಳನ್ನು ಕುರಿತ ಸಾಂಪ್ರದಾಯಿಕ ಗಣಿತದ ಶಾಖೆ ಮಿಕ್ಕೆಲ್ಲವಕ್ಕೂ ಮೂಲಭೂತವಾದ ಕಾರಣ ಮೊದಲಿಗೆ ಇದೊಂದು ಶಾಖೆಯ ಸುಸಾಂಗತ್ಯವನ್ನು ಶ್ರುತಪಡಿಸುವಂತೆ ಗಣಿತಜ್ಞರಿಗೆ ಅವರು ಸಹಜವಾಗಿಯೇ ಕರೆಯಿತ್ತರು. ಈ ಕಾರ್ಯದಲ್ಲಿ ಸಮರ್ಪಕ ಯಶಸ್ಸು ಲಭಿಸಬಹುದೆಂಬ ಪೂರ್ಣ ವಿಶ್ವಾಸ ಅಂದು ಅವರಿಗೆ ಇದ್ದಂತಿತ್ತು. ಆದರೆ ಹಿಲ್ಬರ್ಟ್‌ನ ಈ ಎಣಿಕೆ ತಪ್ಪು ಎಂಬ ಅನಿರೀಕ್ಷಿತ ಫಲಿತಾಂಶ 1931ರಲ್ಲಿ ಕುರ್ಟ್ ಗೊಯ್ಡೆಲ್‌ನ (1906–) ಸಂಶೋಧನೆಗಳಿಂದ ಬೆಳಕಿಗೆ ಬಂದಿತು.

ಧನಪೂರ್ಣಾಂಕಗಳನ್ನು ಕುರಿತ ಸಾಂಪ್ರದಾಯಿಕ ಗಣಿತಶಾಖೆಯನ್ನು ಇನ್ನು ಮುಂದೆ N ಎಂದು ಸಂಕ್ಷೇಪವಾಗಿ ಸೂಚಿಸೋಣ. ಈ N ಒಂದು ಆದ್ಯುಕ್ತೀಯ ಸಿದ್ಧಾಂತ (ಆಕ್ಸಿಯಮ್ಯಾಟಿಕ್ ಥಿಯೊರಿ); ಅದು ಪಿಯಾನೊ ಆದ್ಯುಕ್ತಿಗಳನ್ನೂ (ಪುಟ 74 ಮತ್ತು 90) ಧನ ಪೂರ್ಣಾಂಕಗಳ ಬಗ್ಗೆ (1), (2)ರಂಥ ಶ್ರದ್ಧೆಗಳನ್ನೂ ಅವಲಂಬಿಸಿ ನಿಲ್ಲುತ್ತದೆ. ಆದರೆ N ನ್ನು ಕನ್ನಡದಂಥ ಯಾವುದಾದರೊಂದು ನಿತ್ಯ ವ್ಯವಹಾರದ

ಭಾಷೆಯಲ್ಲಿ ನಿರೂಪಿಸಹೊರಟರೆ ಆದಿಯಲ್ಲೇ ಅಸಾಂಗತ್ಯಗಳು ಕಾಣಿಸಿಕೊಂಡು ಸಿದ್ಧಾಂತವನ್ನು ಕೈಬಿಡಬೇಕಾಗಿ ಬರಬಹುದು. ಉದಾಹರಣೆಗೆ (V) ಪಿಯಾನೊ ಆದ್ಯುಕ್ತಿಯಲ್ಲಿ ಸುಳಿದಿರುವ ಲಕ್ಷಣ ಎಂಬ ಪದವನ್ನು ಗಮನಿಸಬೇಕು. ಯಾವುದಾದರೊಂದು ಲಕ್ಷಣ a ಎಲ್ಲ ಧನಪೂರ್ಣಾಂಕಗಳಿಗೂ ಇಲ್ಲದಿರುವ ಪಕ್ಷದಲ್ಲಿ ಆ a ಲಕ್ಷಣವಿರದ ಧನಪೂರ್ಣಾಂಕಗಳ ಗಣದಲ್ಲಿ ಒಂದು ಕನಿಷ್ಠ ಧಾತು ಇರುತ್ತದೆ ಎಂದು ಪಿಯಾನೊ ಆದ್ಯುಕ್ತಿಗಳನ್ನೂ ಸಾಧಾರಣ ಗಣಪರಿಕಲ್ಪನೆಗಳನ್ನೂ ಆಧರಿಸಿ ತೋರಿಸಬಹುದು. ಈಗ ಹತ್ತಕ್ಕಿಂತ ಕಡಿಮೆ ಕನ್ನಡ ಪದಗಳಲ್ಲಿ ವ್ಯಕ್ತಪಡಿಸಲು ಶಕ್ಯವಿರುವುದೂ ಕೆಲ ಧನ ಪೂರ್ಣಾಂಕಗಳಿರುವ ಒಂದು ಲಕ್ಷಣವಷ್ಟೆ. ಕನ್ನಡ ಪದಗಳ ಗಣ ಸಾಂತ; ಧನ ಪೂರ್ಣಾಂಕಗಳ ಗಣವಾದರೋ ಅನಂತ. ಆದ್ದರಿಂದ ಈ ಲಕ್ಷಣ ಎಲ್ಲ ಧನಪೂರ್ಣಾಂಕಗಳಿಗೂ ಇರಲು ಸಾಧ್ಯವಿಲ್ಲ. ತತ್ಫಲವಾಗಿ ಹತ್ತಕ್ಕಿಂತ ಕಡಿಮೆ ಕನ್ನಡ ಪದಗಳಲ್ಲಿ ವ್ಯಕ್ತಪಡಿಸಲು ಶಕ್ಯವಾಗದೆ ಇರುವ ಧನಪೂರ್ಣಾಂಕಗಳ ಗಣದಲ್ಲಿ ಒಂದು ಕನಿಷ್ಠ ಧಾತು b ಇರಬೇಕು. ಆದರೆ ಕನ್ನಡ ಭಾಷೆಯ ಮಾಧ್ಯಮದಲ್ಲಿ ಇದೇ b ಯನ್ನು

ಹತ್ತಕ್ಕಿಂತ ಕಡಿಮೆ ಕನ್ನಡ ಪದಗಳಲ್ಲಿ ವ್ಯಕ್ತಪಡಿಸಲು
1 2 3 4 5
ಶಕ್ಯವಾಗದ ಕನಿಷ್ಠ ಧನ ಪೂರ್ಣಾಂಕ
6 7 8 9

ಎಂಬುದಾಗಿ ವ್ಯಕ್ತಪಡಿಸಬಹುದು. ಈ ಅಭಿವ್ಯಕ್ತಿಯಲ್ಲಿರುವ ಪದಗಳನ್ನು ಅವುಗಳ ಅಡಿಯಲ್ಲೇ ಎಣಿಸಿದ್ದೇವೆ. ಆ ಪದಗಳ ಸಂಖ್ಯೆ ಒಂಬತ್ತು ಮಾತ್ರವೇ ಆಗಿದೆ (ಜಿ. ಜಿ. ಬೆರಿ ಎಂಬಾತನ ಆಭಾಸ). ಇಂಥ ಅಸಾಂಗತ್ಯವನ್ನು ವ್ಯುತ್ಪಾದಿಸುವುದಕ್ಕಾಗಿ ವ್ಯಾವಹಾರಿಕ ಭಾಷೆಯೊಂದರ ವಾಕ್ಯರಚನಾ ಶೈಲಿಯ (ಸಿಂಟ್ಯಾಕ್ಸ್) ಸ್ವಚ್ಛಂದತೆಯನ್ನೂ ಅದರ ಪದಗಳನ್ನು ಕುರಿತು ನಮಗಿರುವ ಅರ್ಥಪ್ರಜ್ಞೆಯನ್ನೂ ನಾವು ಇಲ್ಲಿ ಬಳಸಿಕೊಂಡಿದ್ದೇವೆ. ಆದ್ದರಿಂದಲೇ ಅಸಾಂಗತ್ಯಗಳ ಬಹಿಷ್ಕರಣ ದೃಷ್ಟಿಯಿಂದ ಗಣಿತಶಾಖೆ N ನ ನಿರೂಪಣಮಾಧ್ಯಮ ಆಖ್ಯಾತಕಲನದಂಥ (ಪ್ರೆಡಿಕೇಟ್ ಕ್ಯಾಲ್ಕ್ಯುಲಸ್; ತಾರ್ಕಿಕ ಕಲನಕ್ರಿಯೆಗಳು) ಶಿಸ್ತಿನ ಭಾಷೆಯೇ ಆಗಬೇಕು. ಮತ್ತು ಆ ನಿರೂಪಣೆಯಲ್ಲಿ ಅರ್ಥಪ್ರಜ್ಞೆಗೆ ಎಡೆಯಿರಲೇಬಾರದು ಎಂಬ ನಿಬಂಧನೆಗಳನ್ನು ಹಿಲ್ಬರ್ಟ್ ಹಾಕಿಕೊಳ್ಳುತ್ತಾನೆ. ಹೀಗೆ ರೂಪಿತವಾಗುವ N ನಲ್ಲಿ ಪ್ರಮೇಯಗಳ ಸಾಧನೆಗಳೆಲ್ಲವೂ ಕೆಲನಿರ್ದಿಷ್ಟ ವಿಧಿಗಳ ಮೇರೆಗೆ ಆಡಿದ ಕೆಲ ನಿರ್ದಿಷ್ಟ ಪ್ರತೀಕಗಳ ಆಟದಂತೆ ಕಾಣಿಸುತ್ತವೆ. ಇಂಥ N ನಲ್ಲಿ ಯಾವ ಅಸಾಂಗತ್ಯಗಳೂ ಇದುವರೆಗೆ ಗೋಚರಿಸಿಲ್ಲ;' ಇನ್ನು ಮುಂದೆಯೂ ಗೋಚರಿಸಲಾರವು ಎಂಬ ವ್ಯಾಪಕವಾದ ಒಂದು ನಂಬಿಕೆ ಗಣಿತಜ್ಞವಲಯಗಳಲ್ಲಿದೆ. ಈಗ ಈ N ನ ಚೌಕಟ್ಟಿನೊಳಗೇ (ಪ್ರತೀಕಗಳ ಒಂದು ವಿಧ್ಯುಕ್ತ ಕ್ರೀಡೆಯಾಗಿ) ಅದರ ಸುಸಾಂಗತ್ಯವನ್ನು ಒಂದು ಪಕ್ಷ ಸಾಧಿಸಿದರೆ ಸಾಧನೆಗೆ ಮುಂಚೆಯೇ ಸಾಧಿಸ ಬೇಕಾದುದನ್ನು ಅಂಗೀಕರಿಸಿದಂತಾಗುತ್ತದಷ್ಟೆ. ಇದು ನಿಷ್ಪ್ರಯೋಜಕವಾದ ಕಾರಣ N ನ ಸುಸಾಂಗತ್ಯದ ಸಮರ್ಥನೆ ಮಾತ್ರ ಶುದ್ಧ ಅರ್ಥಪ್ರಜ್ಞೆಯನ್ನೇ ಅನುಸರಿಸಬೇಕೆಂದೂ (1). (2)ರಂಥ ವಿವಾದಾಸ್ಪದ ಶ್ರದ್ಧೆಗಳನ್ನು ಕಟ್ಟುನಿಟ್ಟಾಗಿ ತೊರೆದೇ ಅದು ಸಾಗಬೇಕೆಂದೂ ಹಿಲ್ಬರ್ಟ್ ಉದ್ದೇಶಿಸಿದ. N ನೊಳಗಡೆ ನಡೆಯುವ ಪ್ರತೀಕಗಳ ಅರ್ಥವಿಮುಖಕ್ರೀಡೆ ಗಣಿತವಾದರೆ ಆ ಕ್ರೀಡೆಯ ಸುಸಾಂಗತ್ಯವನ್ನು ಕುರಿತು N ನ ಹೊರಗಡೆ ನಡೆಯುವ ಅರ್ಥಾವಲಂಬಿ ವಿವೇಚನೆ ಹಿಲ್ಬರ್ಟ್‌ನ ಪರಿಭಾಷೆಯಲ್ಲಿ ಅಧಿಗಣಿತ (ಮೆಟಮ್ಯಾಥಿ ಮ್ಯಾಟಿಕ್ಸ್) ಎಂದೆನಿಸುತ್ತದೆ.

1931ರ ಗೊಡ್ಡಲ್ ಸಂಶೋಧನೆಗಳ ಬಗ್ಗೆ ಒಂದು ಸ್ಥೂಲಪರಿಚಯವನ್ನು ಈಗ ಕಲ್ಪಿಸಿಕೊಡಬಹುದು. ಈ ಸಂಬಂಧದಲ್ಲಿ ಗೊಡ್ಡಲ್‌ನ ಮೂಲ ನಿರೂಪಣೆಯನ್ನು ಅನುಸರಿಸುವ ಬದಲು ಪ್ರಸಕ್ತ ಲೇಖನದಲ್ಲಿ ಒದಗಿಬಂದಿರುವ ಸಿದ್ಧತೆಗಳ ಪರಿಮಿತಿಯನ್ನು ಗಮನಿಸಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತೇವೆ. N ನಲ್ಲಿ ಕಾಣಿಸಿಕೊಳ್ಳುವ ಬಿಡಿ ಪ್ರತೀಕ (ಅಕ್ಷರ)ಗಳ ಮಾಲೆ ಸಾಂತವಾದ ಕಾರಣ ಅವೆಲ್ಲಕ್ಕೂ ನಾವು ಯಾವುದಾದರೊಂದು ಸರಣಿಯಲ್ಲಿ ಕ್ರಮಾಂಕಗಳನ್ನು ಆರೋಪಿಸಬಹುದು. ಉದಾಹರಣೆಗೆ, N ನ ಅಕ್ಷರಮಾಲೆಯಲ್ಲಿ S, T, X ಎಂಬ ಮೂರೇ ಅಕ್ಷರಗಳಿವೆಯೆಂದು ಭಾವಿಸೋಣ. (ನಿಜಕ್ಕೂ ಅದರಲ್ಲಿ ಇನ್ನೂ ಹೆಚ್ಚು ಅಕ್ಷರಗಳಿರಬಹುದು; ಇದರಿಂದ ತಾತ್ತ್ವಿಕ ವ್ಯತ್ಯಾಸವೇನೂ ಉಂಟಾಗುವುದಿಲ್ಲ.) ಇವಕ್ಕೆ ಅನುಕ್ರಮವಾಗಿ 0,1,2, ಎಂಬ ಕ್ರಮಾಂಕಗಳನ್ನು ನೀಡಬಹುದಷ್ಟೆ. N ನ ಸೂತ್ರಗಳು, ಸಾಧನೆಗಳು, ಪ್ರಮೇಯಗಳು, ಮಾರ್ಕಫ್ ಆಲ್ಗಾರಿತಂಗಳು (**ನೋಡಿ– ಆಲ್ಗಾರಿತಂ**) ಮುಂತಾದವೆಲ್ಲವೂ S, T, X ಅಕ್ಷರಗಳ ಸಾಂತಕ್ರಮ ಸಂಯೋಜನೆಗಳಾಗಿರುತ್ತವೆ. (ಫೈನೈಟ್ ಸ್ಟ್ರಿಂಗ್ಸ್) ಉದಾಹರಣೆಗೆ

TTSTTTXXSTSTXSSSTSSTTX

ಎಂಬುದು N ನ ಯಾವುದೇ ಒಂದು ಸೂತ್ರವಾಗಿರಬಹುದು. ಇದರಲ್ಲಿ ಅಕ್ಷರಗಳಿಗೆ ಬದಲು ಆಯಾ ಕ್ರಮಾಂಕಗಳನ್ನು ಆದೇಶಿಸಿದರೆ

1101112201012000100112

ಎಂಬ ಪ್ರತೀಕ ಲಭಿಸುತ್ತದೆ. ಈ ಕೊನೆಯ ಪ್ರತೀಕವನ್ನು ಒಂದು ತ್ರಿಮಾನ; ಪೂರ್ಣಾಂಕವೆಂದು ಪರಿಗಣಿಸಬಹುದು. N ನಲ್ಲಿಯಾದರೂ ಧನ ಪೂರ್ಣಾಂಕಗಳನ್ನು ಇಂಥ ತ್ರಿಮಾನ ಪ್ರತೀಕಯೋಜನೆಯಿಂದ ಸೂಚಿಸಿರುವುದಿಲ್ಲ. ಪ್ರಾಯಶಃ ಅಲ್ಲಿ ಅವನ್ನು T, TT, TTT ಮೊದಲಾದ T ಸಾಲುಗಳಿಂದ ವ್ಯಕ್ತಪಡಿಸುವ ಪರಿಪಾಠ ಅಂಗೀಕೃತವಾಗಿರಬಹುದು. ಹಾಗಿದ್ದಲ್ಲಿ ಮೇಲಿನ ತ್ರಿಮಾನ ಪೂರ್ಣಾಂಕವನ್ನು ಒಂದು ಉದ್ದವಾದ T ಸಾಲನ್ನಾಗಿ (ತತ್ತ್ವಶಃ) ಪರಿವರ್ತಿಸಿಡಬಹುದಷ್ಟೆ. (ಈ ಸರಳ ನಿದರ್ಶನದಲ್ಲೇ ತ್ರಿಮಾನ ಪೂರ್ಣಾಂಕದ ಅನುರೂಪ T ಸಾಲು ಒಂದು ಸಹಸ್ರ ಕೋಟಿಗಿಂತಲೂ ಹೆಚ್ಚು T ಗಳನ್ನೊಳಗೊಳುತ್ತದೆ; ಆದರೆ ನಮ್ಮ ಚರ್ಚೆ ತಾತ್ತ್ವಿಕ ತಲಕ್ಕೆ ಸೀಮಿತವಾಗಿರುವ ಕಾರಣ ಇಂಥ ಬೃಹತ್ಸರಣಿಗಳನ್ನು ನೆನೆದು ಧೃತಿಗೆಡಬೇಕಾಗಿಲ್ಲ). ಆ ಪ್ರಕಾರ ಫಲಿಸುವ T ಸಾಲನ್ನು ಮೇಲೆ ನಮೂದಿಸಿರುವ TTS... ... TX ಸೂತ್ರದ ಗೊಡ್ಡಲ್ ಸಂಖ್ಯೆ ಎಂದು ಕರೆಯೋಣ. (ಮೂಲಸಂಶೋಧನೆಯ ಗೊಡ್ಡಲ್ ಸಂಖ್ಯೆಗಳು ಬೇರೆ ರೀತಿಯವಾಗಿದ್ದವು.) ಹೀಗೆ N ನ ಒಂದೊಂದು ಸೂತ್ರ, ಸಾಧನೆ, ಪ್ರಮೇಯ ಮಾರ್ಕಫ್ ಆಲ್ಗಾರಿತಂಗೂ N ನ ಅಕ್ಷರಮಾಲೆಯಲ್ಲೇ ವ್ಯಕ್ತಪಡಿಸಿದ ಒಂದೊಂದು ನಿರ್ದಿಷ್ಟ ಗೊಡ್ಡಲ್ ಸಂಖ್ಯೆ ಇರುತ್ತದೆ, ಹಾಗೂ ಯಾವುದಾದರೊಂದು ಗೊಡ್ಡಲ್ ಸಂಖ್ಯೆಯನ್ನು ಕೊಟ್ಟಾಗ ಅದಕ್ಕೆ ಅನುರೂಪವಾದ ಸೂತ್ರ ಮುಂತಾದವನ್ನು (ತತ್ತ್ವಶಃ) ಯಾಂತ್ರಿಕವಾಗಿ ಗೊತ್ತುಮಾಡಬಹುದು. N ನಲ್ಲಿ ನಿಯೋಜಿಸಲು ಸಾಧ್ಯವಿರುವ ವಿವಿಧ ಉಕ್ತಿಗಳ ವಿವಿಧ ಸಾಧನೆಗಳೆಲ್ಲವನ್ನೂ ಅವುಗಳ ಗೊಡ್ಡಲ್ ಸಂಖ್ಯೆಗಳನ್ನು ಆಧರಿಸಿ ಒಂದನೆಯ ಸಾಧನೆ, ಎರಡನೆಯ ಸಾಧನೆ, ಮೂರನೆಯ ಸಾಧನೆ ಎಂದು ಮೊದಲಾಗಿ ಒಂದು ನಿರ್ದಿಷ್ಟ ಅನುಕ್ರಮದಲ್ಲಿ ಬರೆಯುತ್ತ ಹೋಗಬಹುದು. ಹಾಗೆ ಬರೆಯುವಾಗ ಒಂದೊಂದು ಹೆಜ್ಜೆಯಲ್ಲೂ N ನ ಯಾವುದೇ ದತ್ತಸೂತ್ರ (ಉಕ್ತಿ)ಗಳು ಸಾಧಿತವಾದವೋ ಇಲ್ಲವೋ ಎಂಬುದನ್ನು ತಾಳೆ ನೋಡುತ್ತಲೂ ಹೋಗಬಹುದು. ಈ ಕಾರ್ಯ ಕೇವಲ ಯಾಂತ್ರಿಕವಾದ್ದರಿಂದ ಇದನ್ನು ನಿರ್ವಹಿಸಬಲ್ಲ ಮಾರ್ಕಫ್ ಆಲ್ಗಾರಿತಂಗಳನ್ನು ನಿಯೋಜಿಸಲು ಸಾಧ್ಯವಾಗಬೇಕು; ನಿಜಕ್ಕೂ ಅಂಥ ನಿಯೋಜನೆ ಶಕ್ಯವೆಂಬುದಕ್ಕೆ ಅಧಿಗಣಿತದಲ್ಲಿ ನಿಷ್ಕೃಷ್ಟ ಸಮರ್ಥನೆಯನ್ನು ನೀಡಬಹುದು.

N ವ್ಯವಸ್ಥೆಯನ್ನು ಕುರಿತಂತೆ ಅದರ ಇಂಥಿಂಥ ಸೂತ್ರಗಳಿಗೆ ಇಂಥಿಂಥ ಸಾಧನೆಗಳಿವೆ; ಮತ್ತೆ ಇಂಥಿಂಥ ಸೂತ್ರಗಳನ್ನು ಸಾಧಿಸುವುದು ಅಸಾಧ್ಯ. ಇಂಥಿಂಥ ವಾಕ್ಯ (ಪದ)ಗಳ ಮೇಲೆ ಇಂಥಿಂಥ ಮಾರ್ಕಫ್ ಆಲ್ಗಾರಿತಂಗಳನ್ನು ಪ್ರಯೋಗಿಸಿದಾಗ ಇಂಥಿಂಥ ಫಲಿತಾಂಶಗಳು ಲಭಿಸುತ್ತವೆ ಎಂದು ಮುಂತಾಗಿ ಮಾತನಾಡಿಕೊಳ್ಳಬಹುದಷ್ಟೆ. ಈ ಬಗೆಯ ವರ್ಣನೆಗಳೆಲ್ಲವೂ ಅಧಿಗಣಿತದ ಪ್ರಾಂತಕ್ಕೆ ಸೇರಿದವು. ನಮ್ಮ ದೃಷ್ಟಿಯನ್ನು ಇವುಗಳಲ್ಲಿ ಉಲ್ಲೇಖವಾಗುವ ಸೂತ್ರ, ಸಾಧನೆ, ಮಾರ್ಕಫ್ ಆಲ್ಗಾರಿತಂ ಮುಂತಾದವುಗಳಿಂದ ಅವುಗಳ ಅನುರೂಪ ಗೊಡ್ಡಲ್ ಸಂಖ್ಯೆಗಳತ್ತ ಹೊರಳಿಸಿದರೆ ಈ ವಿದ್ಯಮಾನಗಳೆಲ್ಲ ಆ ಗೊಡ್ಡಲ್ ಸಂಖ್ಯೆಗಳ ನಡುವೆ ಏರ್ಪಡುವ ಕೆಲವಷ್ಟು ಸಂಬಂಧಗಳಾಗಿ ಗೋಚರಿಸುತ್ತವೆ. ಗೊಡ್ಡಲ್ ಸಂಖ್ಯೆಗಳು ಕೇವಲ ಧನ ಪೂರ್ಣಾಂಕ ಗಳಾದ ಕಾರಣ N ವ್ಯವಸ್ಥೆ ಸಾಕಷ್ಟು ಸತ್ತ್ವಯುತವಾಗಿದ್ದಲ್ಲಿ ಅವುಗಳ ನಡುವಿನ ಇಂಥ ಸಂಬಂಧಗಳನ್ನು N ನ ಪ್ರತೀಕಾತ್ಮಕ ಅಂತರ್ಭಾಷೆಯಲ್ಲೇ ಅಭಿವ್ಯಕ್ತಿಸಲು ಶಕ್ಯವಾಗಬೇಕು. N ಭಾಷೆಗೆ ನಿಜಕ್ಕೂ ಈ ರೀತಿಯ ಸಾಮರ್ಥ್ಯವಿದೆಯೆಂದು ಇನ್ನು ಮುಂದೆಲ್ಲ ಭಾವಿಸುತ್ತೇವೆ. ಅಂದಮೇಲೆ, ಮೇಲೆ ನಿದರ್ಶಿಸಿರುವಂಥ ಸುಸ್ಪಷ್ಟ ಅರ್ಥದ ಅಧಿಗಣಿತೀಯ ವರ್ಣನೆಗಳೊಂದೊಂದಕ್ಕೂ ಅನುರೂಪವಾಗಿ N ಭಾಷೆಯಲ್ಲಿ ನಿರ್ದಿಷ್ಟ ಗೊಡ್ಡಲ್ ಸಂಖ್ಯೆಗಳನ್ನು ಕುರಿತ ಒಂದೊಂದು ಪ್ರತೀಕಾತ್ಮಕ ಸೂತ್ರ (ಉಕ್ತಿ) ಇರುತ್ತದೆಂದಾಯಿತು. ಪ್ರತೀಕಾತ್ಮಕ ಸೂತ್ರಗಳನ್ನು ಆಯಾ ಅಧಿಗಣಿತೀಯ ವರ್ಣನೆಗಳ ಗೊಡ್ಡಲ್ ರೂಪಾಂತರಗಳು ಎಂದು ಕರೆಯೋಣ. ಸ್ಪಷ್ಟಾರ್ಥಯುಕ್ತ ಅಧಿಗಣಿತೀಯ ವರ್ಣನೆಯೊಂದರ ಬಗ್ಗೆ ನಿತ್ಯವ್ಯವಹಾರದ ಕನ್ನಡ ಭಾಷೆಯಲ್ಲಿ ಒಂದು ಸಮರ್ಥನೆ ಯನ್ನು ನೀಡಲು ಸಾಧ್ಯವಾಗುವ ಸಂದರ್ಭಗಳಲ್ಲೆಲ್ಲ ಅದರ ಗೊಡ್ಡಲ್ ರೂಪಾಂತರ ವನ್ನು ಕುರಿತು N ನಲ್ಲಿ ಒಂದು ವಿಧ್ಯುಕ್ತ ಸಾಧನೆಯನ್ನು ರೂಪಿಸುವುದಕ್ಕೂ ಸಾಧ್ಯವಾಗುವು ದೆಂದು ಭಾವಿಸುತ್ತೇವೆ. ಈಗ x ಎಂಬುದು N ನ ಯಾವುದಾದರೊಂದು ವಾಕ್ಯ(ಪದ) ವೂ M ಎಂಬುದು ಇದೇ ವ್ಯವಸ್ಥೆಯ ಒಂದು ಮಾರ್ಕಫ್ ಆಲ್ಗಾರಿತಮೂ ಆದಲ್ಲಿ

(Mx). xನ ಮೇಲೆ Mನ್ನು ಪ್ರಯೋಗಿಸಿದಾಗ ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರುತ್ತದೆ

(~Mx). xನ ಮೇಲೆ Mನ್ನು ಪ್ರಯೋಗಿಸಿದಾಗ ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರುವುದಿಲ್ಲ

ಎಂಬ ಎರಡು ಅಧಿಗಣಿತೀಯ ವರ್ಣನೆಗಳಿಗೆ ವಿಶೇಷ ಪ್ರಾಶಸ್ತ್ಯವುಂಟು. ಇವುಗಳ ಗೊಯ್ಡಲ್ ರೂಪಾಂತರಗಳನ್ನು ಅನುಕ್ರಮವಾಗಿ M (x) ಮತ್ತು ~M(x) ಎಂಬುದಾಗಿ ಸೂಚಿಸೋಣ. (Mx), (~Mx) ಕನ್ನಡದ ವಾಕ್ಯಗಳು ; M(x), ~M(x) ಆದರೋ N ನ ಸಂಕೇತಗಳ ಸರಪಣಿಗಳು ಎಂಬುದನ್ನು ಗಮನಿಸಬೇಕು. ಅಷ್ಟೇ ಅಲ್ಲದೆ M(x), ~M(x) ಗಳಿಗೆ ಅಧಿಗಣಿತ ಪ್ರಾಂತದಲ್ಲಿ ಅರ್ಥ ಕಲ್ಪಿಸಿದರೂ ಅವು (Mx), (~Mx) ಆಗಿ ಮರುಪರಿವರ್ತಿತವಾಗುವ ಬದಲು ಒಂದಷ್ಟು ಧನಪೂರ್ಣಾಂಕಗಳ ನಡುವಿನ ಕೆಲವು ನಿರ್ದಿಷ್ಟ ಸಂಬಂಧಗಳನ್ನು ಮಾತ್ರವೇ ಪ್ರತಿಫಲಿಸುತ್ತವೆ. M(x) ಇಲ್ಲವೇ ~M(x)ನ್ನು N ನಲ್ಲಿ ಸಾಧಿಸಲು ಸಾಧ್ಯವಾದರೂ ಆಗಬಹುದು, ಇಲ್ಲದಿದ್ದರೂ ಇಲ್ಲ; ಒಂದು ವೇಳೆ ಅಲ್ಲಿ ಅವೆರಡನ್ನೂ ಸಾಧಿಸಲು ಶಕ್ಯವಾದರೆ N ಅಸಂಗತವೆನಿಸಿಕೊಳ್ಳುತ್ತದೆ.

ಈಗ x ಎಂಬುದು N ನ ಅಕ್ಷರಮಾಲೆಯಲ್ಲಿ ವ್ಯಕ್ತಪಡಿಸಿರುವ ಒಂದು ಧನ ಪೂರ್ಣಾಂಕವಾಗಿರಲಿ. ಈ x ಯಾವುದಾದರೂ ಒಂದು ಮಾರ್ಕಫ್ ಆಲ್ಗಾರಿತಂನ ಗೊಯ್ಡಲ್ ಸಂಖ್ಯೆ ಆಗಿರಬಹುದು ; ಅಂಥ ಸಂದರ್ಭದಲ್ಲಿ ಆ ನಿರ್ದಿಷ್ಟ ಮಾರ್ಕಫ್ ಆಲ್ಗಾರಿತಂನ್ನು $x^*$ ಎಂಬ ಪ್ರತೀಕದಿಂದ ಸೂಚಿಸೋಣ. ಒಂದು ವೇಳೆ x ಯಾವೊಂದು ಮಾರ್ಕಫ್ ಆಲ್ಗಾರಿತಂನ ಗೊಯ್ಡಲ್ ಸಂಖ್ಯೆಯೂ ಆಗಿಲ್ಲದಿದ್ದರೆ $x^*$ ಎಂಬುದು ಯಾವುದೇ ಪದ yಯನ್ನು yT, yTT, yTTT ಎಂದು ಮೊದಲಾಗಿ ಕೊನೆಯೇ ಇಲ್ಲದಂತೆ ಲಂಬಿಸುತ್ತ ಹೋಗುವ ಮಾರ್ಕಫ್ ಆಲ್ಗಾರಿತಂನ್ನು ನಿರ್ದೇಶಿಸಲಿ. ಅಧಿಗಣಿತೀಯ ಉಕ್ತಿಗಳಾದ

($x^*x$). x ಮೇಲೆ $x^*$ ವನ್ನು ಪ್ರಯೋಗಿಸಿದಾಗ ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರುತ್ತದೆ ;

($\sim x^*x$). x ಮೇಲೆ $x^*$ ವನ್ನು ಪ್ರಯೋಗಿಸಿದಾಗ ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರುವುದಿಲ್ಲ

ಎಂಬವಕ್ಕೆ ಅನುರೂಪವಾಗಿ N ನಲ್ಲಿ $x^*(x)$ ಮತ್ತು $\sim x^*(x)$ ಎಂಬ ಗೊಯ್ಡಲ್ ರೂಪಾಂತರಗಳಿರುತ್ತವಷ್ಟೆ. ಆಗಲೇ ತಿಳಿಸಿರುವಂತೆ Nನ ಸಾಧನೆಗಳೆಲ್ಲವನ್ನೂ ಒಂದು ವ್ಯವಸ್ಥಿತ ಅನುಕ್ರಮದಲ್ಲಿ ಬರೆಯುತ್ತ ಹೋದಾಗ $x^*(x)$ ಮತ್ತು $\sim x(^*x)$ಗಳ ಸಾಧನೆಗಳು ಗೋಚರಕ್ಕೆ ಬರುತ್ತವೋ ಇಲ್ಲವೋ ಎಂಬ ಬಗ್ಗೆ ಹೆಜ್ಜೆ ಹೆಜ್ಜೆಗೂ ಯಾಂತ್ರಿಕವಾಗಿ ತನಿಖೆ ನಡೆಸಬಹುದು. ಹೀಗೆ ಮಾಡುವಾಗ $x^*(x)$ ನದಕ್ಕಿಂತ ಮುನ್ನ $\sim x^*(x)$ನ ಒಂದು ಸಾಧನೆ ಕಾಣಿಸಿಕೊಂಡರೆ ನಮ್ಮ ತನಿಖೆಯನ್ನು ಅಷ್ಟಕ್ಕೇ ನಿಲ್ಲಿಸೋಣ. ಬದಲು $\sim x^*(x)$ ನದಕ್ಕಿಂತ ಮುಂಚೆ $x^*(x)$ನ ಸಾಧನೆ ಕಣ್ಣಿಗೆ ಬಿದ್ದರೆ ಆ ಸಾಧನೆಯ ಮುಂದೆ T, TT, TTT ಎಂದು ಮೊದಲಾಗಿ ಕೊನೆಯೇ ಇಲ್ಲದಂತೆ ಬರೆಯುತ್ತ ಹೋಗೋಣ. ಯಾಂತ್ರಿಕವಾದ ಈ ಕಾರ್ಯವನ್ನೂ x ಮೇಲೆ ಪ್ರಯೋಗಿಸಬಹುದಾದ ಒಂದು ಮಾರ್ಕಫ್ ಆಲ್ಗಾರಿತಂ L ನಿಂದ ನಿರ್ವಹಿಸಲು ಶಕ್ಯವಾಗುವುದು. x ಮೇಲೆ L ನ್ನು ಪ್ರಯೋಗಿಸಿದಾಗ ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರಬೇಕಿದ್ದರೆ N ನ ಸಾಧನೆಗಳ ಅನುಕ್ರಮದಲ್ಲಿ $\sim x^*(x)$ ನ ಒಂದು ಸಾಧನೆ ಇರಬೇಕಲ್ಲದೆ ಆ ಸಾಧನೆಗಿಂತ ಮುಂಚೆ $x^*(x)$ನ ಯಾವ ಸಾಧನೆಯೂ ಕಾಣಿಸಿಕೊಳ್ಳಬಾರದು. (ಗೊಯ್ಡಲ್‌ನ ಮೂಲ ಸಂಶೋಧನೆಯಲ್ಲಿ ಈ Lಗೆ ಅನುರೂಪವಾದ ಪರಿಕರ್ಮಕ್ಕೆ ಬದಲಾಗಿ ಬೇರೊಂದು ಪರಿಕರ್ಮ ಪ್ರಮುಖ ಪಾತ್ರವನ್ನು ವಹಿಸಿತ್ತು; L ಗೆ ಅನುರೂಪವಾದ ಪರಿಕರ್ಮಕ್ಕೆ ಅಧಿಕತರ ಉಪಯುಕ್ತತೆ ಇರುವುದನ್ನು 1936ರಲ್ಲಿ ಬಾರ್ಕ್ಲೆ ರಾಸೆಕ್ ಪತ್ತೆ ಹಚ್ಚಿದ.) ಈ Lನ ಗೊಯ್ಡಲ್ ಸಂಖ್ಯೆ g ಆಗಿರಲಿ. ಅಂದಮೇಲೆ L ಎಂದರೂ ಒಂದೇ, $g^*$ ಎಂದರೂ ಒಂದೇ : $g^* = L$. ಸ್ವಾರಸ್ಯಕರ ಪ್ರಶ್ನೆಯೊಂದು ಈಗ ನಮ್ಮ ಮುಂದೆ ಏಳುತ್ತದೆ : $L(g) = g^*(g)$ ಮತ್ತು $\sim L(g) = \sim g^*(g)$ ಇವೆರಡು ಉಕ್ತಿಗಳ ಪೈಕಿ N ವ್ಯವಸ್ಥೆಯಲ್ಲಿ ಯಾವುದನ್ನು ಸಾಧಿಸಲು ಸಾಧ್ಯ ? ಈ ಬಗ್ಗೆ ವಿವೇಚಿಸಲು $g^*(g)$ ಗೆ ಒಂದು ಸಾಧನೆ P ಯನ್ನು ರೂಪಿಸುವುದಕ್ಕೆ ಸಾಧ್ಯವಾಗುವುದೆಂದು ಭಾವಿಸೋಣ. N ನ ಸಾಧನೆಗಳ ಅನುಕ್ರಮದೊಳಗೆ ಈ P ಯಾವುದೋ ಒಂದು ಸ್ಥಾನದಲ್ಲಿ ಕಾಣಿಸಿಕೊಳ್ಳುತ್ತದೆ. ಆಗ ಆದಿಯಿಂದ Pವರೆಗಿನ ಸಾಧನೆಗಳನ್ನು (ಇವುಗಳ ಸಂಖ್ಯೆ ಸಾಂತವೆನ್ನುವುದನ್ನು ಗಮನಿಸಬೇಕು) ಒಂದೊಂದಾಗಿ ಪರಿಶೀಲಿಸಿ N ಸಾಧನೆಗಳ ಅನುಕ್ರಮದಲ್ಲಿ ಮೊದಲು ಸಾಧಿತವಾಗುವುದು $g^*(g)$ಯೋ ಇಲ್ಲವೇ $\sim g^*(g)$ ಯೋ ಎಂಬುದನ್ನು ನಿರ್ಧರಿಸಬಹುದಷ್ಟೆ. ಹಾಗೆ ಮೊದಲು ಸಾಧಿತವಾಗುವುದು $\sim g^*(g)$ ಆದ ಪಕ್ಷದಲ್ಲಿ N ನೊಳಗೆ $g^*(g)$ ಮತ್ತು $\sim g^*(g)$ ಗಳೆರಡರ ಸಾಧನೆಗಳೂ ಕಾಣಿಸಿಕೊಂಡು N ಅಸಂಗತವಾಗುವುದು. ಇದಕ್ಕೆ ಪ್ರತಿಯಾಗಿ ಮೊದಲು ಸಾಧಿತವಾಗುವುದು $g^*(g)$ ಎಂದು ಭಾವಿಸಿದರೆ g ಯ ಮೇಲೆ L ನ್ನು ಪ್ರಯೋಗಿಸಿದಾಗ ಸಾಧನೆಗಳ ತನಿಖೆಯಲ್ಲಿ $g^*(g)$ ಯ ಸಾಧನೆ ಮುಂಚಿತವಾಗಿ ಗೋಚರಕ್ಕೆ ಬಂದು L ಕ್ರಿಯೆಯಿಂದ ಆ ಸಾಧನೆಯ ಮುಂದೆ T, TT, TTT ಇತ್ಯಾದಿ ಅಕ್ಷರಗಳು ಕೊನೆಯೇ ಇಲ್ಲದಂತೆ ಲಿಖಿತವಾಗುತ್ತ ಹೋಗುವುವು. ಅಂದ ಮೇಲೆ ಈ ಸಂದರ್ಭದಲ್ಲಿ g ಯನ್ನು ಕುರಿತಂತೆ L ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರುವುದೇ ಇಲ್ಲ. ಇದರಿಂದ ಅಧಿಗಣಿತೀಯ ಉಕ್ತಿ (~Lg) ಸಮರ್ಥಿತವಾದಂತಾಯಿತು. N ವ್ಯವಸ್ಥೆ ಸಾಕಷ್ಟು ಸತ್ತ್ವಯುತವಿರುವಾಗ ಇದೇ ಸಮರ್ಥನೆಯನ್ನು N ನ ಅಧಿಕೃತ ಭಾಷೆಯಲ್ಲಿ $\sim L(g)$ [ $= \sim g^*(g)$] ಉಕ್ತಿಯ ಸಾಧನೆಯನ್ನಾಗಿ ಪರಿವರ್ತಿಸಬಹುದು. ಅಂದರೆ ಈಗಲೂ N ನೊಳಗೆ $g^*(g)$ ಮತ್ತು $\sim g^*(g)$ ಗಳೆರಡರ ಸಾಧನೆಗಳೂ ಗೋಚರಿಸಿ N ಅಸಂಗತವಾಗುತ್ತದೆ ಎಂದಾಯಿತು. ಅಲ್ಲಿಗೆ N ನಲ್ಲಿ $g^*(g)$ಗೆ ಸಾಧನೆಯೊಂದನ್ನು ನಿಯೋಜಿಸಲು ಶಕ್ಯವಿರುವಾಗಲೆಲ್ಲ N ಅಸಂಗತವಾಗಿಯೇ ತೀರುವುದು. ಇದೇ ಮೇರೆಗೆ N ನಲ್ಲಿ $\sim g^*(g)$ಯನ್ನು ಕುರಿತು ಸಾಧನೆ ನೀಡಲು ಶಕ್ಯವಾದಾಗಲೂ N ಅಸಂಗತವಾಗುತ್ತದೆಂದು ಸುಲಭವಾಗಿ ತೋರಿಸಬಹುದು. N ನಿಜಕ್ಕೂ ಸುಸಂಗತ ಎಂಬ ವಿಶ್ವಾಸ ನಮಗಿದ್ದರೆ ಅದರ ಚೌಕಟ್ಟಿನೊಳಗೆ $g^*(g)$ ಯನ್ನೂ ಸಾಧಿಸಲು ಶಕ್ಯವಿಲ್ಲ, $\sim g^*(g)$ ಯನ್ನೂ ಸಾಧಿಸಲು ಶಕ್ಯವಿಲ್ಲ ಎಂದು ನಂಬಲು ಸಹ ನಾವು ಸಿದ್ಧರಿರಬೇಕು. ಒಂದು ಉಕ್ತಿ ಮತ್ತು ಅದರ ನಿಷೇಧ ಇವೆರಡರ ಪೈಕಿ ಒಂದಲ್ಲ ಒಂದನ್ನು ಸಾಧಿಸಲು ಸಾಧ್ಯವಾಗಲೇಬೇಕೆಂಬ ಎಣಿಕೆ ಇಲ್ಲಿ ತಪ್ಪಾಗಿಬಿಟ್ಟಿತು. ಇದೇ ಗೊಯ್ಡಲ್‌ನ ಸುಪ್ರಸಿದ್ಧ ಪ್ರಥಮ ಪ್ರಮೇಯ.

ಮೇಲಿನ ಪರಿಸ್ಥಿತಿಗೆ ಒಂದು ಸ್ಥೂಲ ಉಪಮಾನವನ್ನು ನೀಡುವ ಸಲುವಾಗಿ (F). ಕೆಳಗೆ ಲಿಖಿತವಾಗಿರುವ (~ F) ಉಕ್ತಿಯನ್ನು ಸಾಧಿಸಲು ಸಾಧ್ಯವಿದೆ; (~ F). (~ F) ಎಂಬ ಈ ಉಕ್ತಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬ ನಿತ್ಯವ್ಯಾವಹಾರಿಕ ಭಾಷೆಯ ವಾಕ್ಯಗಳನ್ನು ಆಯ್ಕೆಮಾಡಿಕೊಳ್ಳುವುದು ಜನಪ್ರಿಯವಾಗಿದೆ. ಇವುಗಳ ಪೈಕಿ (F)ಗೆ ಸಾಧನೆಯೊಂದನ್ನು ರೂಪಿಸಬೇಕಾದಲ್ಲಿ (~ F) ನ್ನು ಹೇಗೆ ಸಾಧಿಸಬಹುದೆಂದು ಅದರಲ್ಲಿ ತಿಳಿಸಬೇಕಾಗುವ ಕಾರಣ ಆ (F)ನ ಸಾಧನೆಯಲ್ಲಿ (~ F)ನ ಸಾಧನೆಯೂ ಅಡಕವಾಗಿ ಅಸಾಂಗತ್ಯ ತಲೆದೋರುವುದು; ಬದಲು (~ F) ಗೆ ಸಾಧನೆ ಕೊಡಲು ಶಕ್ಯವಿದ್ದಲ್ಲಿ ಆ ಸಾಧನೆಯೇ (F)ನ ಸಾಧನೆಯೂ ಆಗಿ ಪರಿಣಮಿಸಿ ಮತ್ತೆ ಅಸಾಂಗತ್ಯ ಉದ್ಭವಿಸುತ್ತದೆ. ಆದರೆ ನಿಜಕ್ಕೂ ಈ ಉಪಮಾನ ತೀರ ಸರಳೀಕೃತವೆನ್ನದೆ ವಿಧಿಯಿಲ್ಲ. ಇದರ ಪರಿಶೀಲನೆಯಿಂದ ಗೊಯ್ಡಲ್ ಪ್ರಮೇಯ ಪೂರ್ಣಾಂಕಗಳ ಗಣಿತಕ್ಕೆ ದೂರವೂ ಮಹತ್ತ್ವರಹಿತವೂ ಆದ ಕೇವಲ ಒಂದು ಚಮತ್ಕಾರಿಕ ಭಾಷಾಶ್ಲೇಷೆ (ಕ್ವಿಬ್ಲಿಂಗ್) ಎಂಬ ಅಭಿಪ್ರಾಯ ಮೂಡಬಹುದು. (F) ಮತ್ತು (~ F) ಗಳು ಹೆಚ್ಚೆಂದರೆ ಅಧಿಗಣಿತೀಯ ($g^*g$) ಮತ್ತು ($\sim g^*g$)ಗಳಿಗೆ ಸದೃಶ್ಯವಾಗಬಹುದೇ ವಿನಾ ಅವುಗಳ ಗೊಯ್ಡಲ್ ರೂಪಾಂತರ $g^*(g)$ ಮತ್ತು $\sim g^*(g)$ಗಳಿಗಿಲ್ಲ. ಅಧಿಗಣಿತ ಪ್ರಾಂತದಲ್ಲಿ ಈ $g^*(g)$ ಮತ್ತು $\sim g^*(g)$ಗಳಿಗೆ ಮತ್ತೆ ಅರ್ಥಕಲ್ಪಿಸಿದಾಗ ಅವು ಯಾವುದೇ ಶ್ಲೇಷೆಯ ಸೋಂಕಿಲ್ಲದೆ ಧನಪೂರ್ಣಾಂಕಗಳ ನಡುವಿನ ನೂರಕ್ಕೆ ನೂರರಷ್ಟು ಅಪ್ಪಟ ಗಣಿತ ಸಂಬಂಧಗಳನ್ನು ಮಾತ್ರ ವ್ಯಕ್ತಪಡಿಸುವುವು. ಇಂಥ ಸದಭಿವ್ಯಕ್ತಿ ಸಂಬಂಧಗಳನ್ನು N ನಲ್ಲಿ ವಿಧ್ಯುಕ್ತವಾಗಿ ಸಾಧಿಸಲು ಇಲ್ಲವೆ ನಿರಾಕರಿಸಲು ಪ್ರಯತ್ನಿಸುವುದೂ ಒಂದೇ, N ವ್ಯವಸ್ಥೆಯೇ ಅಸಂಗತ ಎಂದು ತೋರಿಸಲು ಯತ್ನಿಸುವುದೂ ಒಂದೇ ಎಂಬ ಅನಿರೀಕ್ಷಿತ ಆವಿಷ್ಕಾರ ಇಪ್ಪತ್ತನೆಯ ಶತಮಾನದ ಆದಿಭಾಗದವರೆಗೂ ಗಣಿತಜ್ಞ ವಲಯಗಳಲ್ಲಿ ಬೇರೂರಿ ನಿಂತಿದ್ದ ಪ್ರಬಲ ತಾತ್ತ್ವಿಕ ಶ್ರದ್ಧೆಯೊಂದನ್ನು ಬುಡಮೇಲಾಗಿಸಿತು.

ಕೊನೆಯದಾಗಿ ಈಗ

(G) N ವ್ಯವಸ್ಥೆ ನಿಜಕ್ಕೂ ಸುಸಂಗತ

ಎಂಬ ಅಧಿಗಣಿತೀಯ ಉಕ್ತಿಯಲ್ಲಿ ವಿಶ್ವಾಸವಿರಿಸಿ $g^*(g)$, $\sim g^*(g)$ಗಳ ಗೊಯ್ಡಲ್‌ಪೂರ್ವ ರೂಪಗಳಾದ $g^*g$, $\sim g^*g$ ಗಳ ಬಗ್ಗೆ ತುಸು ಆಲೋಚಿಸೋಣ:

($g^*g$). g ಮೇಲೆ $g^*$[ = L] ಎಂಬ ಮಾರ್ಕಫ್ ಆಲ್ಗಾರಿತಂನ್ನು ಪ್ರಯೋಗಿಸಿದಾಗ ; ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರುತ್ತದೆ ;

($\sim g^*g$). g ಮೇಲೆ $g^*$ [ = L ] ನ್ನು ಪ್ರಯೋಗಿಸಿದಾಗ ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರುವುದಿಲ್ಲ.

x ಮೇಲೆ L ನ್ನು ಪ್ರಯೋಗಿಸಿದಾಗ ಆಲ್ಗಾರಿತಂ ಕ್ರಿಯೆ ನಿಲುಗಡೆಗೆ ಬರಬೇಕಿದ್ದಲ್ಲಿ N ನೊಳಗೆ ~x*(x)ನ ಒಂದು ಸಾಧನೆ ಇರಬೇಕೆಂಬ ಅಂಶವನ್ನು ಸ್ಮರಿಸಿಕೊಳ್ಳಬೇಕು. ಆದ್ದರಿಂದ ಮೇಲಿನ ಉಕ್ತಿಗಳ ಪೈಕಿ g*(g) ಸಮರ್ಥನೀಯವಾದಲ್ಲಿ ಒಂದು ಕಡೆ ಆ ಮೂಲಕ ಅದರ ಗೊಯ್ಡಲ್ ರೂಪಾಂತರ g*(g) ಸಾಧಿತವಾಗುವುದಲ್ಲದೆ ಇನ್ನೊಂದು ಕಡೆ Nನ ಸಾಧನೆಗಳ ಅನುಕ್ರಮದಲ್ಲಿ ~g*(g)ಯ ಸಾಧನೆಯೂ ಗೋಚರಿಸಬೇಕಾಗುತ್ತದೆ. ನಮ್ಮ ವಿಶ್ವಾಸ (G) ಗೆ ಇದು ವ್ಯತಿರಿಕ್ತವಾದ ಕಾರಣ (g*g) ನಿರಾಕರಣೀಯ, (~g*g) ಸಮರ್ಥನೀಯ. ಅಂದಮೇಲೆ (G) ಸಮರ್ಥನೀಯವಾದಲ್ಲಿ (~g*g) ಕೂಡ ಸಮರ್ಥನೀಯ ಎಂದಾಯಿತು. ಇದರಿಂದ N ವ್ಯವಸ್ಥೆಯೊಳಗೆ (G)ಯ ಗೊಯ್ಡಲ್ ರೂಪಾಂತರವನ್ನು ಸಾಧಿಸಲು ಸಾಧ್ಯವಾಗುವುದಾದರೆ ~g*(g)ನ ಗೊಯ್ಡಲ್ ರೂಪಾಂತರ ~g*(g) ಯನ್ನೂ ಅಲ್ಲಿ ಸಾಧಿಸಲು ಶಕ್ಯವಾಗುತ್ತದೆಂದು ತೀರ್ಮಾನಿಸಬಹುದು. ಆದರೆ ಪ್ರಥಮ ಗೊಯ್ಡಲ್ ಪ್ರಮೇಯದಿಂದ ~g*(g) ಸಾಧಿತವಾದೊಡನೆಯೇ N ಅಸಂಗತವಾಗಿ ಬಿಡುವುದು. ಆದ್ದರಿಂದ ನಾವು (G)ಯನ್ನು ಸಾಧಿಸಲು ಪ್ರಯತ್ನಿಸುವುದೂ ಒಂದೇ [ಅಧಿಗಣಿತದಲ್ಲಿ (G) ಸಮರ್ಥಿತವಾದ ಕೂಡಲೇ N ನಲ್ಲಿ ಅದರ ಗೊಯ್ಡಲ್ ರೂಪಾಂತರವೂ ಸಾಧಿತವಾಗುವುದು] N ವ್ಯವಸ್ಥೆ ಅಸಂಗತವೆಂದು ತೋರಿಸಲು ಯತ್ನಿಸುವುದೂ ಒಂದೇ. ಈ ಅನಿರೀಕ್ಷಿತ ಫಲಿತಾಂಶವೇ ಗೊಯ್ಡಲ್ ದ್ವಿತೀಯ ಪ್ರಮೇಯ. ಹಿಲ್ಬರ್ಟ್ ಸಂಶಯಾತೀತವಾದ ಅರ್ಥಾವಲಂಬಿ ಮಾರ್ಗಗಳಿಂದ N ನ ಸುಸಾಂಗತ್ಯವನ್ನು [ಅಂದರೆ (G) ಉಕ್ತಿಯನ್ನು] ಸಮರ್ಥಿಸ ಹೊರಟನಷ್ಟೆ. ಅವನು ಆಲೋಚಿಸಿದಂಥ ಮಾರ್ಗಗಳಿರಲಿ, ಅವುಗಳ ಜೊತೆಗೆ N ನಲ್ಲಿ ಅಂಗೀಕೃತವಾಗಿರುವ ಇನ್ನುಳಿದ ಸಂದೇಹಪೀಡಿತ ಮಾರ್ಗಗಳೆಲ್ಲವನ್ನೂ ಬಳಸಿಕೊಂಡರೂ N ನಿಜಕ್ಕೂ ಸುಸಂಗತವಾಗಿರುವುದಾದರೆ ಅದರ ಸುಸಾಂಗತ್ಯವನ್ನು ಯಾರೂ ಸಾಧಿಸಲು ಸಾಧ್ಯವಾಗುವುದಿಲ್ಲ. ಇದಾವುದೇ ಮಾರ್ಗಗಳಿಂದ (G) ಸಾಧಿತವಾಗುವುದಾದರೆ ಏಕಕಾಲೀಯವಾಗಿ (~ G). N ವ್ಯವಸ್ಥೆ ನಿಜಕ್ಕೂ ಅಸಂಗತ ಎಂಬುದೂ ಸಾಧಿತವಾಗಿಬಿಡುವುದು.

N ನಲ್ಲಿ g*(g), ~g*(g) ಯ ಗೊಯ್ಡಲ್ ರೂಪಾಂತರ ಇವೇ ಮೊದಲಾದ ಉಕ್ತಿಗಳಿಗೆ ಅನಿರ್ಧರಣೀಯ ಸೂತ್ರಗಳು (ಅನ್‌ಡಿಸೈಡಬಲ್ ಫಾರ್ಮ್ಯುಲೇ) ಎಂದು ಹೆಸರು. ಇವುಗಳ ನಿರುಪಾಧಿಕ ಸತ್ಯಾಸತ್ಯತೆಗಳ ಬಗ್ಗೆ ವಿವಾದ ತಲೆದೋರುವುದು ಸ್ವಾಭಾವಿಕ. ಧನ ಪೂರ್ಣಾಂಕಗಳಿಗೆ ಅವನ್ನು ಕುರಿತು ಚಿಂತಿಸುವ ಯಾವುದೇ ಬುದ್ಧಿಶಕ್ತಿಯಿಂದ ಸ್ವತಂತ್ರವಾದ ಅಸ್ತಿತ್ವವುಂಟು ಎಂದು ಗೊಯ್ಡಲ್‌ನೂ ಸೇರಿದಂತೆ ಒಂದು ಗುಂಪಿನ ಗಣಿತ ತಾತ್ತ್ವಿಕರು ನಂಬುತ್ತಾರೆ. ಇಂಥವರಿಗೆ ಪ್ಲೇಟೋವಾದಿಗಳು ಎನ್ನಬಹುದು. ಇವರ ಪ್ರಕಾರ ಅನಿರ್ಧರಣೀಯ ಸೂತ್ರಗಳೂ ದಿಟ ಇಲ್ಲವೆ ಸಟೆ ಆಗಿರಲೇಬೇಕು; N ನಂಥ ವ್ಯವಸ್ಥೆಗಳ ಚೌಕಟ್ಟಿನಲ್ಲಿ ಅವು ದಿಟವೊ ಸಟೆಯೊ ತೀರ್ಮಾನಿಸಲು ಸಾಧ್ಯವಾಗದೆ ಇರುವುದಕ್ಕೆ ಆ ವ್ಯವಸ್ಥೆಗಳು ಒಳಗೊಳ್ಳುವ ಆದ್ಯುಕ್ತಿಗಳ ಹಾಗೂ ಸಾಧನಮಾರ್ಗಗಳ ಅಪರಿಪೂರ್ಣತೆಯೇ ಕಾರಣ. ಉದಾಹರಣೆಗೆ (G) ಉಕ್ತಿಯಲ್ಲಿ ವಿಶ್ವಾಸವಿರಿಸಿ ಮೇಲಿನ ~g*(g) ಸಮರ್ಥನೀಯವೆಂದು ಮನಗಂಡೆವಷ್ಟೆ. ಇದು ನೇರ ಅರ್ಥ ಪ್ರಜ್ಞೆಯ ಫಲ ಎಂದು ಪರಿಗಣಿಸಿ ಆ ಮೂಲಕ ನಿಜವಾದ ಧನ ಪೂರ್ಣಾಂಕಗಳನ್ನು ಕುರಿತಂತೆ ~g*(g) ಸತ್ಯವೆಂದೂ g*(g) ಅಸತ್ಯವೆಂದೂ ಈ ಮೊದಲನೆಯ ಗುಂಪಿನ ತಾತ್ತ್ವಿಕರು ನಂಬಬಹುದು. ನೇರ ಅರ್ಥಪ್ರಜ್ಞೆ ಚೆಲ್ಲುವಷ್ಟು ಬೆಳಕನ್ನು N ವ್ಯವಸ್ಥೆಯ ಆದ್ಯುಕ್ತೀಯ ಸಾಧನಮಾರ್ಗಗಳು ಚೆಲ್ಲಲಾರವೇ ಹೊರತಾಗಿ ಆ ಬೆಳಕೇ ಇಲ್ಲವೆನ್ನಲಾಗದು ಎಂಬುದು ಇವರ ಅಭಿಮತ. ಮತ್ತೊಂದು ಗುಂಪಿನ ಗಣಿತತಾತ್ತ್ವಿಕರಾದರೋ ಅನಂತದ ಪ್ರಾಂತದಲ್ಲಿ ಮೇಲಿನಂಥ ನೇರ ಅರ್ಥಪ್ರಜ್ಞೆಯ, ಹಾಗೂ ನಿರುಪಾಧಿಕ ಸತ್ಯಾಸತ್ಯತೆಗಳ, ಪರಿಕಲ್ಪನೆಯೇ ಮಿಥ್ಯ ಎಂದು ಅಭಿಪ್ರಾಯ ಪಡುತ್ತಾರೆ. ಇವರ ಪ್ರಕಾರ ಧನ ಪೂರ್ಣಾಂಕಗಳು ಕೇವಲ ಒಂದು ಬೌದ್ಧಿಕ ಉಪಜ್ಞೆಯೇ (ಇನ್‌ವೆನ್ಷನ್) ಹೊರತು ಸ್ವತಂತ್ರ ಅಸ್ತಿತ್ವವಿರುವ ಧಾತುಗಳಲ್ಲ ; ಅವು ನಾವು ಹೇಗೆ ನಿರ್ಮಿಸುತ್ತೇವೋ ಹಾಗೆ ರೂಪತಾಳುತ್ತವೆ. ಮೇಲಾಗಿ ಅನಂತ ಪ್ರಾಂತದಲ್ಲಿ ಮಾನವನ ಸೃಷ್ಟಿಕ್ರಿಯೆ ಎಂದೂ ಪೂರ್ಣಗೊಳ್ಳುವುದೇ ಇಲ್ಲ. ಅಪೂರ್ಣ ಕಾದಂಬರಿಯೊಂದರಲ್ಲಿ ನಾಯಕನ ಭವಿಷ್ಯವನ್ನು ಕುರಿತು ಪ್ರಶ್ನೆ ಇನ್ನೂ ಅನಿರ್ಧರಿತವಾಗಿಯೇ ಉಳಿದಿರಬಹುದಷ್ಟೆ. ಅಂತೆಯೇ N ನಂಥ ಉಪಜ್ಞಿತ ವ್ಯವಸ್ಥೆಗಳಲ್ಲೂ ~g*(g) ಮಾದರಿಯ ಅನಿರ್ಧರಣೀಯ ಸೂತ್ರಗಳು ಗೋಚರಿಸುವುದರಲ್ಲಿ ಅಚ್ಚರಿಯೇನಿಲ್ಲ. ಧನಪೂರ್ಣಾಂಕಗಳ ಕಾದಂಬರಿಯನ್ನು ಕನ್ನಡದಂಥ ನಿತ್ಯವ್ಯಾವಹಾರಿಕ ಭಾಷೆಯಲ್ಲಿ ರಚಿಸತೊಡಗಿದಾಗ ಪಿಯಾನೊ ಆದ್ಯುಕ್ತಿಗಳು ಅದನ್ನು ಅಂತಿಮ ಪರಿಸಮಾಪ್ತಿಯವರೆಗೂ ಕೊಂಡೊಯುತ್ತವೆಂಬ ಮಿಥ್ಯೆ ಉದ್ಭವಿಸುತ್ತದೆ. ಆದರೆ ಹಾಗೆ ರಚಿಸಿದ ಕಾದಂಬರಿ ಅಸಂಗತವೂ ಆಗುವ ಅಪಾಯವನ್ನು ಈಗಾಗಲೇ ಮನಗಂಡಿದ್ದೇವೆ. ವ್ಯಾವಹಾರಿಕ ಭಾಷೆಗೆ ಪ್ರತಿಯಾಗಿ ಸೂಕ್ತ ಪ್ರತೀಕಾತ್ಮಕ ಭಾಷೆಯೊಂದನ್ನು (ಸಿಂಬಾಲಿಕ್ ಲ್ಯಾಂಗ್ವೇಜ್) ಬಳಸಿ ಈ ಅಪಾಯವನ್ನು ತಡೆಗಟ್ಟಲು ಪ್ರಯತ್ನಿಸಿದಾಗ ಕಾದಂಬರಿ ಎಂದೆಂದೂ ಅಪೂರ್ಣವಾಗಿಯೇ ಉಳಿದುಕೊಳ್ಳುವುದು. ಅಪೂರ್ಣ ಕಾದಂಬರಿಯನ್ನು ಬೇರೆ ಬೇರೆ ರೀತಿಗಳಲ್ಲಿ ಮುಂದುವರಿಸಬಹುದಷ್ಟೆ. ಎಂತಲೇ N ನ್ನೂ ವಿವಿಧ ಮಾರ್ಗಗಳಲ್ಲಿ ವಿಸ್ತರಿಸಬಹುದು. ಅಂಥ ಕೆಲವು ವಿಸ್ತರಣೆಗಳಲ್ಲಿ ~g*(g)ಯನ್ನು ಸಾಧಿಸಲು ಶಕ್ಯವಾಗಬಹುದು, ಇನ್ನು ಕೆಲವು ವಿಸ್ತರಣೆಗಳಲ್ಲಿ g*(g)ಯನ್ನು ಸಾಧಿಸಲು ಶಕ್ಯವಾಗಬಹುದು. ಮತ್ತೆ ಕೆಲವಲ್ಲಿ ಇವೆರಡೂ ಮುಂಚಿನಂತೆ ಅನಿರ್ಧರಣೀಯವಾಗಿಯೇ ಉಳಿದುಕೊಳ್ಳಬಹುದು. ಅಂದಮೇಲೆ ಪಿಯಾನೊ ಆದ್ಯುಕ್ತಿಗಳ ಚೌಕಟ್ಟಿನಲ್ಲೇ ಒಂದಕ್ಕೊಂದು ಐಸೊಬಿಂಬಗಳಾಗದೆ ಇರುವಂಥ ಬೇರೆ ಬೇರೆ ಧನಪೂರ್ಣಾಂಕ ವ್ಯವಸ್ಥೆಗಳನ್ನು ರೂಪಿಸಲು ಸಾಧ್ಯವೆಂದಾಯಿತು. [ಎರಡು ಗಣಿತೀಯ ವ್ಯವಸ್ಥೆಗಳಿಗೆ ಏಕರೀತಿಯ ರಚನೆ ಇದ್ದಲ್ಲಿ ಅಂಥವನ್ನು ಪರಸ್ಪರ ಐಸೊಬಿಂಬಗಳೆಂದು (ಐಸೊಮಾರ್ಫಿಕ್ ಇಮೇಜಸ್) ಹೇಳುತ್ತೇವೆ, ಉದಾಹರಣೆಗೆ T ಸಾಲುಗಳ ವ್ಯವಸ್ಥೆ ಮತ್ತು ದಶಮಾನ ಧನ ಪೂರ್ಣಾಂಕಗಳ ವ್ಯವಸ್ಥೆ.] ಇದೇ ಮೇರೆಗೆ ಪರಸ್ಪರ ಐಸೊಬಿಂಬಗಳಾಗದೆ ಇರುವ ಬೇರೆ ಬೇರೆ ನೈಜಸಂಖ್ಯಾವ್ಯವಸ್ಥೆಗಳನ್ನು ಸಹ ರೂಪಿಸಲು ಸಾಧ್ಯ. ಈ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು ಅಬ್ರಹಾಂ ರಾಬಿನ್‌ಸನ್ ಸಾಂಪ್ರದಾಯಿಕ ಗಣಿತ ವಿಶ್ಲೇಷಣೆಯನ್ನೂ (ನೈಜಸಂಖ್ಯೆಗಳ ಸಿದ್ಧಾಂತ) ವಿಸ್ತರಿಸಿ ಶಿಷ್ಟೇತರ ವಿಶ್ಲೇಷಣೆ (ನಾನ್‌ಸ್ಟ್ಯಾಂಡರ್ಡ್ ಅನ್ಯಾಲಿಸಿಸ್) ಎಂಬ ಹೊಸ ಗಣಿತ ಶಾಖೆಯನ್ನು ಸೃಷ್ಟಿಸಿದ (1966). ಈಚೆಗೆ ಗಣಿತಜ್ಞರ ಒಲವು, ನವರೂಪವಾದಿಗಳು (ನಿಯೊಫಾರ್ಮಲಿಸ್ಟ್ಸ್) ಎಂದು ಕರೆಯಬಹುದಾದ, ಈ ಎರಡನೆಯ ಗುಂಪಿನ ತಾತ್ತ್ವಿಕರ ಪರ ತುಸು ಹೆಚ್ಚಾಗಿ ಒಲಿದಿರುವಂತಿದೆ.

ಗಣಿತಶಾಸ್ತ್ರದ ತಳಹದಿಯನ್ನು ಕುರಿತ ನಮ್ಮ ವಿವೇಚನೆ ಈ ಶಾಸ್ತ್ರದ ಒಂದು ಉಕ್ತಿ (D) ಮತ್ತು ಅದರ ನಿಷೇಧರೂಪ (~ D) ಇವುಗಳ ಪೈಕಿ ಒಂದಲ್ಲ ಒಂದನ್ನು ಸಾಧಿಸಲು ಶಕ್ಯವಿರಲೇಬೇಕೆಂಬ ಸಾಂಪ್ರದಾಯಿಕ ಶ್ರದ್ಧೆಯನ್ನು ಪ್ರಶ್ನಿಸುವ ಮೂಲಕ ಪ್ರಾರಂಭವಾಯಿತಷ್ಟೆ. ಒಂದು ದೃಷ್ಟಿಯಲ್ಲಿ 1931ರ ಗೊಯ್ಡಲ್ ಸಂಶೋಧನೆಗಳು ಹಾಗೆ ಪ್ರಶ್ನಿಸುವುದರ ಸಾಧುತ್ವವನ್ನು ಪುರಸ್ಕರಿಸುತ್ತವೆನ್ನುವುದು ಸ್ಪಷ್ಟವಾಗಿದೆ. ಆದರೆ ಪ್ಲೇಟೋವಾದಿ ಗಣಿತಜ್ಞರು ಉಕ್ತಿಗಳ ಅನಿರ್ಧರಣೀಯತೆಗೆ N ನಂಥ ವ್ಯವಸ್ಥೆಯಲ್ಲಿನ ಸಾಧನಾಮಾರ್ಗಗಳ ಸತ್ತ್ವಹೀನತೆ ಕಾರಣವೇ ವಿನಾ ಆ ಉಕ್ತಿಗಳಲ್ಲ ಎಂದು ಸಾರಿ ಸಾಂಪ್ರದಾಯಿಕ ಶ್ರದ್ಧೆಯನ್ನು ಎತ್ತಿ ಹಿಡಿಯಬಯಸುತ್ತಾರೆ. ಅತ್ತ ನವರೂಪವಾದಿಗಳೂ ಬೇರೊಂದು ನಿಗೂಢ ರೀತಿಯಲ್ಲಿ ಸಾಂಪ್ರದಾಯಿಕ ಶ್ರದ್ಧೆಗೆ ಬೆಂಬಲ ನೀಡುತ್ತಾರೆ. ಅವರ ಪ್ರಕಾರ (D) ಮತ್ತು (~D) ಗಳಲ್ಲಿ ಒಂದಲ್ಲ ಒಂದನ್ನು ಸಾಧಿಸಲು ಸಾಧ್ಯವಾಗಬೇಕೆಂಬ ನಿಯಮವಿಲ್ಲದಿದ್ದಾಗ್ಯೂ (D) ಇಲ್ಲವೆ (~D) ಸತ್ಯವಾಗಿರಬೇಕು. ಇಲ್ಲಿ ಉದ್ಧರಣ ಚಿಹ್ನೆಗಳಲ್ಲಿರುವ ಇಲ್ಲವೆ ಹಾಗೂ ಸತ್ಯ ಎಂಬ ಪದಗಳಿಗೆ ನಿತ್ಯ ವ್ಯಾವಹಾರಿಕ ಅರ್ಥವನ್ನು ಆರೋಪಿಸಬಾರದು: ಅವು ಗಣಿತ ಕ್ರೀಡೆಯ ಅರ್ಥವಿಮುಖ ಪಗಡೆಕಾಯಿಗಳು ಮಾತ್ರ. [ಉದಾಹರಣೆಗೆ (D) ಸತ್ಯವೋ (~D) ಸತ್ಯವೋ ಎಂದು ಪ್ರಶ್ನಿಸುವಂತಿಲ್ಲ; ಹಾಗೆ ಪ್ರಶ್ನಿಸಿದರೆ ಇಲ್ಲವೆ ಎಂಬ ಪದಕ್ಕೆ ಸಲ್ಲದ ರೂಢಿಯ ಅರ್ಥ ಕೊಟ್ಟಂತಾಗುತ್ತದೆ.] ಈ ಪಗಡೆ ಕಾಯಿಗಳನ್ನು ಅಂಗೀಕೃತ ನಿಯಮಗಳ ಪ್ರಕಾರ ನಡೆಸುತ್ತ ಹೋದಾಗ (D), (~D) ಗಳೆರಡೂ ಸತ್ಯವಾಗಿರಬೇಕು ಎಂಬ ಮಾದರಿಯ ಅಸಾಂಗತ್ಯ ಎಂದೂ ತಲೆದೋರದೆ ಇರುವುದೇ ರೂಪವಾದಿಗಳ ಪಾಲಿಗೆ ಗಣಿತಕ್ರೀಡೆಯ ಸಾರ್ಥಕ್ಯ ನಿರ್ಣಾಯಕ. ಪ್ರಸಕ್ತ ವಿಭಾಗದ ಆದಿಯಲ್ಲೇ ಹೆಸರಿಸಿದ ಅಂತರ್ಬೋಧನ ವಾದಿಗಳಾದರೋ ರೂಪವಾದಿಗಳ ಅಂತರ್ವಿಮುಖ ಸತ್ಯವನ್ನೂ ಪ್ಲೇಟೋವಾದಿಗಳ ನಿರುಪಾಧಿಕ ಸತ್ಯವನ್ನೂ ತಿರಸ್ಕರಿಸಿ ಯಾವುದನ್ನು ಶುದ್ಧ ಅರ್ಥಪ್ರಜ್ಞೆಯ ಆಧಾರದಿಂದ ಸಾಧಿಸಲು ಶಕ್ಯವೋ ಅದು ಮಾತ್ರವೇ ಸತ್ಯ ಎಂದು ನಿಶ್ಚಯಿಸುತ್ತಾರೆ. ಇಂಥ ಹಲವಾರು ತಾತ್ತ್ವಿಕ ಪಂಥಗಳಲ್ಲಿ ಗಣಿತಜ್ಞನೊಬ್ಬನ ಒಲವು ಯಾವೆಡೆಗೇ ಇದ್ದರೂ ಆತನ ಗಣಿತ ಚಟುವಟಿಕೆಗಳಲ್ಲಿ ಅಸಾಂಗತ್ಯಗಳು ಉದ್ಭವಿಸುವುದಿಲ್ಲ ಎಂಬ ವಿಶ್ವಾಸಕ್ಕೆ ಆತನ ಅನುಭವ ಮಾತ್ರ ಆಸರೆಯಾಗಬಲ್ಲದೇ ವಿನಾ ಅಂಥ ವಿಶ್ವಾಸವನ್ನು ಗಣಿತೀಯ ಮಾರ್ಗಗಳಿಂದ ಸಾಧಿಸಲು ಎಂದೆಂದೂ ಸಾಧ್ಯವಾಗುವುದಿಲ್ಲ. ಗೊಯ್ಡಲ್ ನೆರವೇರಿಸಿದ ಈ ಅನಿರೀಕ್ಷಿತ ಪರಿಸ್ಥಿತಿಯ ಆವಿಷ್ಕಾರ ಗಣಿತಶಾಸ್ತ್ರದ ತಳಹದಿಯ ಇತಿಹಾಸದಲ್ಲಿ ಒಂದು ಅತ್ಯಂತ ಮಹತ್ತ್ವಪೂರ್ಣ ಮೈಲಿಗಲ್ಲಾಗಿ ಬಹುಕಾಲ ಉಳಿಯಲಿದೆ.

(ಎಸ್.ಆರ್.ಎಂ.)

**ಗಣಿತ ಸಂಘಗಳು :** ಗಣಿತಜ್ಞರು ಸಮಾನ ಆಸಕ್ತಶೀಲ ಗಣಿತಜ್ಞರೊಡನೆ ಅಭಿಪ್ರಾಯಗಳನ್ನೂ ಸಂಶೋಧನೆಗಳನ್ನೂ ವಿನಿಮಯಿಸಿಕೊಳ್ಳಲು ಸ್ಥಾಪಿಸಿಕೊಂಡಿರುವ ವಿಚಾರವೇದಿಕೆಗಳು. ಗಣಿತಜ್ಞರಲ್ಲಿ ಸಂಸರ್ಗ ಕಲ್ಪಿಸುವುದೇ ಇವುಗಳ ಮುಖ್ಯೋದ್ದೇಶ. 17ನೆಯ ಶತಮಾನದವರೆಗೆ ಅಭಿಪ್ರಾಯವಿನಿಮಯಗಳು ಪರಸ್ಪರ ಭೇಟಿ ಮತ್ತು

ಪತ್ರ ವ್ಯವಹಾರಗಳಲ್ಲಿ ನಡೆಯುತ್ತಿತ್ತು. ಗಣಿತಜ್ಞರ ಸಂಖ್ಯೆ ಹೆಚ್ಚಾದಾಗ ಗಣಿತಸಂಘಗಳ ಸ್ಥಾಪನೆ ಅನಿವಾರ್ಯವಾಯಿತು. ಸಭೆ ಸಮ್ಮೇಳನಗಳನ್ನು ನಡೆಸಿ, ಸಂಶೋಧನೆಗಳ ಲೇಖನಗಳಿರುವ ನಿಯತಕಾಲಿಕಗಳನ್ನು ಪ್ರಕಟಿಸಿ ಗಣಿತಸಂಘಗಳು ಈ ಸಂಸರ್ಗವನ್ನು ಸಾಧಿಸಿವೆ. ಗ್ರಂಥಾಲಯಗಳನ್ನು ಸ್ಥಾಪಿಸಿ ವಿದೇಶೀವಿನಿಮಯದ ನಿರ್ಬಂಧವಿರುವ ರಾಷ್ಟ್ರಗಳಲ್ಲಿ ನಿಯತಕಾಲಿಕಗಳನ್ನು ಬದಲಾಯಿಸಿಕೊಂಡು ಜ್ಞಾನಪ್ರಸಾರ ನಿಜವಾಗಿಯೂ ಅಂತಾರಾಷ್ಟ್ರೀಯವಾಗುವಂತೆ ಮಾಡುವುದರಲ್ಲಿ ಗಣಿತಸಂಘಗಳು ಯಶಸ್ವಿಯಾಗಿವೆ. ಇದಲ್ಲದೆ ಸದಸ್ಯರಿಗೆ ಉದ್ಯೋಗಾವಕಾಶ ಮಾಹಿತಿಯನ್ನು ಒದಗಿಸಿಕೊಡುವುದು, ಸಾಮೂಹಿಕ ಜೀವವಿಮೆ ಇಳಿಸುವುದರಲ್ಲಿ ನೆರವಾಗುವುದು ಇವೇ ಮೊದಲಾದ ಕಾರ್ಯಕ್ರಮಗಳನ್ನು ಅಮೆರಿಕದ ಕೆಲವು ಗಣಿತಸಂಘಗಳು ಇಟ್ಟುಕೊಂಡಿವೆ. ಹೆಚ್ಚಿನ ಸಂಘಗಳು ಮೊದಲಿಗೆ ಒಂದು ವಿಶ್ವವಿದ್ಯಾಲಯಕ್ಕಾಗಲಿ ಒಂದು ನಗರಕ್ಕಾಗಲಿ ಸೀಮಿತಗೊಂಡಿದ್ದು ಪ್ರಾದೇಶಿಕ ಸಂಘಗಳಾಗಿಯೇ ಹುಟ್ಟಿಕೊಂಡರೂ ಅವುಗಳ ಪೈಕಿ ಹೆಚ್ಚಿನವು ಬೇಗನೆ ಪ್ರಗತಿ ಹೊಂದಿ ರಾಷ್ಟ್ರೀಯ ಸಂಘಗಳಾಗಿ ಪ್ರವರ್ಧಿಸಿದವು. ಕೆಲವು ಅಂತಾರಾಷ್ಟ್ರೀಯ ಸಂಘಗಳೂ ಇವೆ. ಆದರೆ ಇವು ರಾಷ್ಟ್ರೀಯ ಸಂಘಗಳಷ್ಟು ಯಶಸ್ವಿಯಾಗಿಲ್ಲ. ಚರ್ಚಾತೀತವಾದ, ಸಮರ್ಪಕ ಸಂಶೋಧನ ಫಲಿತಾಂಶಗಳಿರುವ ಲೇಖನಗಳನ್ನಷ್ಟೇ ಗಣಿತಸಂಘಗಳು ಸಮ್ಮೇಳನಗಳಲ್ಲಿ ಮಂಡಿಸುವುದು ಸಂಪ್ರದಾಯ. ಕಡಿಮೆ ಓದುಗರಿಂದ ಮತ್ತು ವ್ಯಾವಹಾರಿಕವಾಗಿ ಲಾಭದಾಯಕವಲ್ಲದ ನಿಯತಕಾಲಿಕಗಳನ್ನು ಗಣಿತಸಂಘಗಳು ಪ್ರಕಟಿಸಬೇಕಾಗಿದೆ. ಈ ಕಾರ್ಯಕ್ಕೆ ಕೆಲವೊಮ್ಮೆ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಧನಸಹಾಯ ನೀಡಿ ನೆರವಾಗುವುದುಂಟು.

ಈಗಿರುವ ಗಣಿತಸಂಘಗಳಲ್ಲಿ ಅತ್ಯಂತ ಪ್ರಾಚೀನವಾದುದು ಮ್ಯಾತಿಮ್ಯಾಟಿಶೆ ಗೆಜ಼ೆಲ್ ಶಾಫ್ಟ್, ಜರ್ಮನಿಯ ಹಾಂಬುರ್ಗ್ ನಗರದಲ್ಲಿ 1690ರಲ್ಲಿ ಇದರ ಸ್ಥಾಪನೆ. 1881ರಿಂದ ಇದು ಮಿಟ್ಟೈಲೂಗೆನ್ (ನಿವೇದನೆ) ಪ್ರಕಟಿಸುತ್ತದೆ. 1717ರಲ್ಲಿ ಲಂಡನ್ನಿನಲ್ಲಿ ರೂಪಗೊಂಡ ಚರ್ಚಾಕೂಟ (ಡಿಸ್ಕಷನ್ ಸರ್ಕಲ್) ಇನ್ನೊಂದು ಪ್ರಾಚೀನ ಸಂಘ. 1845ರ ವರೆಗೆ ಇದರ ಅಸ್ತಿತ್ವವಿತ್ತು. ಬಳಿಕ ಇದು ರಾಯಲ್ ಅಸ್ಟ್ರನಾಮಿಕಲ್ ಸೊಸೈಟಿಯೊಡನೆ ವಿಲೀನಗೊಂಡಿತು. ವಿಸ್ಕೊಂಡಿಶ್ ಗೆನೋಟ್ ಶಾಪ್ಟ್ ಸಂಘ 1778ರಲ್ಲಿ ಆಮ್‌ಸ್ಟರ್‌ಡಾಮ್ ನಗರದಲ್ಲಿ ಸ್ಥಾಪಿಸಲ್ಪಟ್ಟಿತು. ಉಳಿದೆಲ್ಲ ರಾಷ್ಟ್ರೀಯ ಸಂಘಗಳ ಉದಯ 19ನೆಯ ಶತಮಾನದ ಉತ್ತರಾರ್ಧದ ತರುವಾಯವೇ. ರಾಷ್ಟ್ರೀಯ ಸಂಘಗಳಲ್ಲಿ ಅತ್ಯಂತ ಹಳೆಯದು ಮಾಸ್ಕೋ ಗಣಿತಸಂಘ. ಇದರ ಕಾರ್ಯಾರಂಭವಾದದ್ದು 1864ರಲ್ಲಿ. 1867ರಲ್ಲಿ ವಿಶಾಲ ತಳಹದಿಯ ಮೇಲೆ ಇದನ್ನು ತಿರುಗಿ ಸ್ಥಾಪಿಸಲಾಯಿತು. ಇದು ಮುಖ್ಯವಾಗಿ ಎರಡು ನಿಯತಕಾಲಿಕಗಳನ್ನು ಪ್ರಕಟಿಸುತ್ತದೆ. 1952ರಿಂದ ಪ್ರಕಟವಾಗುತ್ತಿರುವ ಟ್ರಾನ್ಸಾಕ್ಷನ್ಸ್ ಇವುಗಳಲ್ಲೊಂದು. ರಷ್ಯದಲ್ಲಿ ಇನ್ನೂ ಅನೇಕ ಗಣಿತಸಂಘಗಳಿವೆ. ಇವುಗಳಲ್ಲಿ 1879ರಲ್ಲಿ ಪ್ರಾರಂಭವಾದ ಕಾರ್ಖೋಫ್‌ನ ಗಣಿತ ಸಂಘ ಉಲ್ಲೇಖಾರ್ಹ. ಲಂಡನ್ ವಿಶ್ವವಿದ್ಯಾಲಯದಲ್ಲಿ 1865ರಲ್ಲಿ ಪ್ರಾದೇಶಿಕ ಸಂಸ್ಥೆಯಾಗಿ ಹುಟ್ಟಿದ ಲಂಡನ್ ಗಣಿತ ಸಂಘ ಶೀಘ್ರವೇ ಪ್ರಗತಿ ಹೊಂದಿ ಇಂಗ್ಲೆಂಡಿನ ರಾಷ್ಟ್ರೀಯ ಗಣಿತಸಂಘವೆಂದು ಪರಿಗಣಿಸಲ್ಪಟ್ಟಿದೆ. ದೊಡ್ಡ ಗಾತ್ರದ ಪ್ರಬಂಧಗಳನ್ನು ಇದು ಪ್ರೊಸೀಡಿಂಗ್ಸ್‌ನಲ್ಲಿಯೂ (1865 ರಿಂದ) ಸಣ್ಣವನ್ನು ಜರ್ನಲ್‌ನಲ್ಲಿಯೂ (1926 ರಿಂದ) ಪ್ರಕಟಿಸುತ್ತಿದೆ. ಎಡಿನ್‌ಬರೋ ಗಣಿತಸಂಘದ ಸ್ಥಾಪನೆ 1883 ರಲ್ಲಿ. ಅದೇ ವರ್ಷ ಪ್ರೊಸೀಡಿಂಗ್ಸ್‌ನ ಪ್ರಕಟಣೆ ಆರಂಭವಾಯಿತು. 1909 ರಿಂದ ನೋಟ್ಸ್‌ನ್ನು ಪ್ರಕಟಿಸುತ್ತಿದೆ. ಫ್ರಾನ್ಸಿನ ಗಣಿತಸಂಘವನ್ನು 1872 ರಲ್ಲಿ ಸ್ಥಾಪಿಸಲಾಯಿತು. ಅದೇ ವರ್ಷ ಬುಲೆಟಿನ್ ಪ್ರಕಟಣೆ ಆರಂಭವಾಯಿತು. 1890 ರಲ್ಲಿ ಜರ್ಮನಿಯ ಡಾಯ್ಕೆ ಮ್ಯಾತಿಮ್ಯಾಟಿಶೆ ಫೆರೈನ್ ಗುಂಗ್ ಸ್ಥಾಪನೆ. 1892 ರಿಂದ ಪ್ರಕಟವಾಗುತ್ತಿರುವ ಈ ಸಂಘದ ಯಾರೆಬೆರಿಷ್ಟೆಯಲ್ಲಿ (ವಾರ್ಷಿಕ ಸರದಿ) ಗಣಿತದ ಬೆಳವಣಿಗೆಯನ್ನು ಸೂಚಿಸುವ ಅಮೂಲ್ಯ ಲೇಖನಗಳನ್ನೂ ಸಮೀಕ್ಷೆಯ ರೂಪದಲ್ಲಿರುವ ದೀರ್ಘ ಪ್ರಬಂಧಗಳನ್ನೂ ಕಾಣಬಹುದು. ಈ ವರದಿಗಳು ಇತ್ತೀಚೆಗೆ ಎರಡು ಸಂಪುಟಗಳಲ್ಲಿ ಪುನರ್ಮುದ್ರಣ ಗೊಂಡಿವೆ. ಇಟಲಿಯ ಸರ್ಕೊಲೊ ಮ್ಯಾತಿಮಾಟಿಕೊ ಡಿ ಪಾಲೆರ್ಮೊ 1884 ರಲ್ಲಿ ಸ್ಥಾಪನೆಯಾಯಿತು. ಶೀಘ್ರವೇ ಇದಕ್ಕೆ ಅಂತಾರಾಷ್ಟ್ರೀಯ ಮನ್ನಣೆ ದೊರೆಯಿತು. 1887 ರಿಂದ ಪ್ರಕಟವಾಗುತ್ತಿರುವ ರೆಂಡಿಕೋಂಟಿ ಅನೇಕ ವರ್ಷಗಳವರೆಗೆ ಪ್ರಪಂಚದ ಪ್ರಮುಖ ನಿಯತಕಾಲಿಕವೆಂದು ಪರಿಗಣಿಸಲ್ಪಟ್ಟಿತ್ತು. ಯೂನಿಯನ್ ಮ್ಯಾತಿಮ್ಯಾಟಿಕಾ ಇಟಾಲಿಯಾನಾ 1922 ರಲ್ಲಿ ಸ್ಥಾಪನೆ. ಅದೇ ವರ್ಷದಿಂದ ಇದು ಬುಲೆಟಿನೊವನ್ನು ಪ್ರಕಟಿಸುತ್ತಿದೆ. 1888 ರಲ್ಲಿ ಸ್ಥಾಪಿತವಾದ ನ್ಯೂಯಾರ್ಕ್ ಗಣಿತ ಸಂಘ 1894 ರಲ್ಲಿ ಅಮೆರಿಕನ್ ಮ್ಯಾತಿಮ್ಯಾಟಿಕಲ್ ಸೊಸೈಟಿಯಾಗಿ ಪರಿವರ್ತನೆಗೊಂಡಿತು. ಇದು ಜಗತ್ತಿನಲ್ಲೇ ಹೆಸರುವಾಸಿಯಾದ ಸಂಘ. 1891 ರಿಂದ ಉಪನ್ಯಾಸಗಳು, ಪ್ರಬಂಧಗಳು ಮತ್ತು ಸಂಘದ ಕಾರ್ಯಕಲಾಪಗಳ ವಿವರಣೆಗಳನ್ನು ಒಳಗೊಂಡ ಬುಲೆಟಿನನ್ನು ಇದು ಪ್ರಕಟಿಸುತ್ತಿದೆ. ಇದಲ್ಲದೆ ದೀರ್ಘ ಲೇಖನಗಳನ್ನು ಟ್ರಾನ್ಸಾಕ್ಷನ್ಸ್‌ನಲ್ಲಿ (1900 ರಿಂದ), ಸುದೀರ್ಘ ಪ್ರಬಂಧಗಳನ್ನು ಮೆಮ್ವಾರ್ಸ್‌ನಲ್ಲಿ (1950 ರಿಂದ), ಸಣ್ಣ ಲೇಖನಗಳನ್ನು ಪ್ರೊಸೀಡಿಂಗ್ಸ್‌ನಲ್ಲಿ 1940ರಿಂದ ಲೇಖನಗಳ ವಿಮರ್ಶೆಗಳನ್ನು ಮ್ಯಾತಿಮ್ಯಾಟಿಕಲ್ ರಿವ್ಯೂನಲ್ಲಿ ಪ್ರಕಟಿಸುತ್ತಿದೆ. ಇದೇ ಸಂಘ ಪ್ರಪಂಚದ ಇತರ ಕೆಲವು ಗಣಿತಸಂಘಗಳ ಸಹಕಾರದಿಂದ ಪ್ರಕಟಿಸುತ್ತಿದೆ. 1938 ರಲ್ಲಿ ಸಂಘದ ಚರಿತ್ರೆಯನ್ನೂ 1950 ರಲ್ಲಿ ಹಿರಿಯ ಗಣಿತಜ್ಞರಾದ ಜಾರ್ಜ್ ಬಿರ್ಕಾಫರ ಲೇಖನಗಳನ್ನೂ ಮೂರು ಸಂಪುಟಗಳಲ್ಲಿ ಪ್ರಕಟಿಸಿದೆ. ಮ್ಯಾತಿಮ್ಯಾಟಿಕಲ್ ಅಸೋಸಿಯೇಷನ್ ಆಫ್ ಅಮೆರಿಕದ ಸ್ಥಾಪನೆ ಆದದ್ದು 1915 ರಲ್ಲಿ. ಸದಸ್ಯಸಂಖ್ಯೆಯಲ್ಲಿ ಈ ಸಂಘಕ್ಕೆ ಅಗ್ರಸ್ಥಾನ. ಅಮೆರಿಕನ್ ಮ್ಯಾತಿಮ್ಯಾಟಿಕಲ್ ಮಂತ್ಲಿ, ಕೇರಸ್ ಮೊನೊಗ್ರಾಫ್, ಸ್ಲಾಟ್ ಮೆಮೋರಿಯಲ್ ಪೇಪರ್ಸ್ ಇದರ ಪ್ರಕಟಣೆಗಳು. ಅನ್ವಯ ಗಣಿತಕ್ಕೆ ಮೀಸಲಾದ ಸಂಘ ಸಿಯಾಂ. ಇದರ ಸ್ಥಾಪನೆ 1952 ರಲ್ಲಿ. ಇದು ರಿವ್ಯೂ ಜರ್ನಲ್ ಆಫ್ ಅಪ್ಲೈಡ್ ಮ್ಯಾತಿಮ್ಯಾಟಿಕ್ಸ್‌ನ್ನು ಮೊದಲ್ಗೊಂಡು ಏಳು ನಿಯತಕಾಲಿಕಗಳನ್ನು ಪ್ರಕಟಿಸುತ್ತಿದೆ. 1960ರ ಹೊತ್ತಿಗೆ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲೂ ಗಣಿತಸಂಘಗಳ ಸ್ಥಾಪನೆಯಾಗಿತ್ತು. ಇವುಗಳಲ್ಲಿ ವಿಖ್ಯಾತವಾದವು ಭಾರತದ ಮತ್ತು ಜಪಾನಿನ ಗಣಿತ ಸಂಘಗಳು. ಎರಡನೆಯ ಜಾಗತಿಕ ಯುದ್ಧಾನಂತರ ಸ್ಥಾಪನೆಯಾದ ಜಪಾನಿನ ಸಂಘ ಜರ್ನಲ್‌ನ್ನು ಪ್ರಕಟಿಸುತ್ತಿದೆ. ಭಾರತೀಯ ಗಣಿತಸಂಘ 1907 ರಲ್ಲಿ ಮದ್ರಾಸಿನಲ್ಲಿ ರೂಪುಗೊಂಡಿತು. ಸ್ಥಾಪಿಸಿದವರು ವಿ. ರಾಮಸ್ವಾಮಿ ಅಯ್ಯರ್. ಜರ್ನಲ್ ಮತ್ತು ಸ್ಟೂಡೆಂಟ್ ಎಂಬ ಎರಡು ನಿಯತಕಾಲಿಕಗಳು ಇದರ ಪ್ರಕಟಣೆಗಳು. ಇದಲ್ಲದೆ ವಾರ್ಷಿಕ ಸಮ್ಮೇಳನಗಳಲ್ಲಿ ಓದಲ್ಪಡುವ ಲೇಖನಗಳ ಸಾರಸಂಗ್ರಹವನ್ನು ಈ ಸಂಘ ಬಿಡಿಯಾಗಿ ಪ್ರಕಟಿಸುತ್ತದೆ. ಇದರ ಪ್ರಧಾನ ಕಾರ್ಯಾಲಯ ದೆಹಲಿ ವಿಶ್ವವಿದ್ಯಾಲಯ ದಲ್ಲೂ, ಗ್ರಂಥಾಲಯ ಮದ್ರಾಸ್ ವಿಶ್ವವಿದ್ಯಾಲಯದ ರಾಮಾನುಜಂ ಸಂಸ್ಥೆಯಲ್ಲೂ ಇವೆ. ಲಕ್ನೋದ ಭಾರತೀಯ ಗಣಿತಪರಿಷತ್ ಗಣಿತವನ್ನೂ ಸಂಘ ಬುಲೆಟಿನನ್ನೂ ಪ್ರಕಟಿಸುತ್ತಿವೆ. ಇವಲ್ಲದೆ ಅಲಹಾಬಾದ್ ಗಣಿತಸಂಘ, ದೆಹಲಿಯ ಆಪರೇಷನ್ ರಿಸರ್ಚ್ ಸಂಘಗಳನ್ನು ಕೂಡ ಇಲ್ಲಿ ಉಲ್ಲೇಖಿಸಬಹುದು. ಕೆಲವು ವಿಶ್ವವಿದ್ಯಾಲಯಗಳ ಗಣಿತಸಂಘಗಳು ಅಂತಾರಾಷ್ಟ್ರೀಯ ಖ್ಯಾತಿ ಪಡೆದಿವೆ. ಟೊರೊಂಟೊ ವಿಶ್ವವಿದ್ಯಾಲಯದ ಕೆನಡಿಯನ್ ಜರ್ನಲ್, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಜರ್ನಲ್, ಸ್ವೀಡನ್ನಿನ ಉಪ್ಸಲಾ ವಿಶ್ವವಿದ್ಯಾಲಯದ ಆಕ್ಟಾ ಮ್ಯಾತಿಮ್ಯಾಟಿಕಾ ಇಂಥವು. ಇವಲ್ಲದೆ ಗಣಿತದ ವಿಶಿಷ್ಟ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಲಕೆಲವು ಸಂಘಗಳಿವೆ. ಈ ಸಂಘಗಳ ಪ್ರಕಟಣೆಗಳನ್ನು ಆವರಣದಲ್ಲಿ ಕೊಟ್ಟಿದೆ. ಅಮೆರಿಕದ ಸಿಂಬಾಲಿಕ್ ಲಾಜಿಕ್ ಸಂಸ್ಥೆ (ಜರ್ನಲ್), ಬಯೋಮೆಟ್ರಿಕ್ ಸಂಸ್ಥೆ (ಬಯೋಮೆಟ್ರಿಕ್), ಇಕೊನೊ ಮೆಟ್ರಿಕ್ ಸಂಘ (ಇಕೊನೊಮೆಟ್ರಿಕ), ಸಂಖ್ಯಾಕಲನಶಾಸ್ತ್ರಜ್ಞರ ಸಂಘ (ಅನ್ನಲ್ ಆಫ್ ಮ್ಯಾತಿಮ್ಯಾಟಿಕಲ್ ಸ್ಟ್ಯಾಟಿಸ್ಟಿಕ್ಸ್), ಫಿಬೋನಾಚೀ ಸಂಘ (ಫಿಬೋನಾಚೀ ಕ್ವಾರ್ಟರ್ಲಿ), ಜಪಾನಿನ ಟೆನ್ಸರ್ ಸಂಘ (ಟೆನ್ಸರ್) ಇವನ್ನು ಉಲ್ಲೇಖಿಸಬಹುದು.

ಅಂತಾರಾಷ್ಟ್ರೀಯ ಗಣಿತ ಸಮ್ಮೇಳನಗಳು 19ನೆಯ ಶತಮಾನದಲ್ಲಿ ಕೆಲವೊಮ್ಮೆ ನಡೆದುವು. ಮೊದಲಿಗೆ 1897 ರಲ್ಲಿ ಅಂತಾರಾಷ್ಟ್ರೀಯ ಗಣಿತ ಕಾಂಗ್ರೆಸ್ ಜ್ಯೂರಿಚ್ ನಗರದಲ್ಲಿ ನಡೆಯಿತು. 1900 ರಲ್ಲಿ ಪ್ಯಾರಿಸ್‌ನಲ್ಲಿ ನಡೆಯಿತು. ತದನಂತರ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ (ಯುದ್ಧಾವಧಿಯ ಹೊರತು) ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಈ ಸಭೆ ಸೇರುತ್ತಿದೆ. 1954ರಲ್ಲಿ ಆಮ್‌ಸ್ಟರ್‌ಡಾಮ್ ನಗರದಲ್ಲಿ ಸೇರಿದ ಸಭೆ ರಷ್ಯನ್, ಇಟಾಲಿಯನ್, ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾದ ಸಂಶೋಧನ ಲೇಖನಗಳು ಮಾತ್ರ ಅಭಿಜಾತವೆಂಬ ನಿರ್ಣಯವನ್ನು ಅಂಗೀಕರಿಸಿದೆ. ಅಂತಾರಾಷ್ಟ್ರೀಯ ಗಣಿತಸಂಘಗಳ ಒಕ್ಕೂಟಕ್ಕೆ ಪ್ರಯತ್ನಗಳು ನಡೆಯುತ್ತಲೇ ಇದ್ದು 1950ರಲ್ಲಿ ಒಕ್ಕೂಟ ಅಸ್ತಿತ್ವಕ್ಕೆ ಬಂತು. ವಿಶ್ವಸಂಸ್ಥೆಯ ವಿಜ್ಞಾನ ಮತ್ತು ಸಾಂಸ್ಕೃತಿಕ ಸಂಘಕ್ಕೆ ಇದರ ಪ್ರವೇಶ 1952 ರಲ್ಲಾಯಿತು. ರಾಷ್ಟ್ರಗಳ ಪ್ರತಿನಿಧಿಗಳೇ ಈ ಸಂಘದ ಸದಸ್ಯರು.

ಪ್ರಪಂಚದ ಸಮಸ್ತ ರಾಷ್ಟ್ರಗಳ ಗಣಿತಸಂಘಗಳು ಪ್ರಕಟಿಸುವ ನಿಯತಕಾಲಿಕಗಳ ಸಂಖ್ಯೆ 1200ನ್ನೂ ಮಿಕ್ಕಿದೆ. (ಎಚ್.ವಿ.ಕೆ.)

**ಗಣಿತಾನುಮಿತಿ :** ನಿರ್ದಿಷ್ಟವಾದ ನಿದರ್ಶನಗಳ ಸಹಾಯದಿಂದ ಒಂದು ಸಾರ್ವತ್ರಿಕ ಕ್ರಮವಿಧಿಗೆ ಅಥವಾ ಸೂತ್ರಕ್ಕೆ ಅಥವಾ ಪ್ರಮೇಯಕ್ಕೆ ಸಾಧನೆ ಒದಗಿಸುವ ಗಣಿತ ವಿಧಾನ (ಮ್ಯಾತಿಮ್ಯಾಟಿಕಲ್ ಇಂಡಕ್ಷನ್). ಜಾನ್ ಸ್ಟೂವರ್ಟ್ ಮಿಲ್ ಎಂಬಾತನ ಪ್ರಕಾರ ಸಾರ್ವತ್ರಿಕ ನಿಯಮಗಳ ಅನ್ವೇಷಣೆ ಮತ್ತು ಸಮರ್ಥನೆ ಮಾಡುವ ಪರಿಕರ್ಮವೇ ಅನುಮಿತಿ. ಆದ್ದರಿಂದ ಕೆಲವು ನಿರ್ದಿಷ್ಟ ನಿದರ್ಶನಗಳಲ್ಲಿ ಅನ್ವಯವಾಗುವ ಒಂದು ನಿಯಮ ಈ ನಿದರ್ಶನಗಳನ್ನು ಕೆಲವು ರೀತಿಗಳಲ್ಲಿ ಹೋಲುವ ಇತರ ಎಲ್ಲ ಸಂದರ್ಭ

ಗಳಿಗೂ ಅನ್ವಯವಾಗಬೇಕೆಂದು ಊಹಿಸುವ ಬುದ್ಧಿಯ ಕಾರ್ಯವೇ ಅನುಮಿತಿ ಎನ್ನಿಸಿಕೊಳ್ಳುವುದು. ಕೆಲವು ನಿರ್ದಿಷ್ಟವಾದ ಉದಾಹರಣೆಗಳ ಮೂಲಕ ಈ ವಿಷಯವನ್ನು ಸ್ಪಷ್ಟಪಡಿಸಬಹುದು.

ಉದಾಹರಣೆ 1 $B = \{ 1, 3, 5, 7, 9, \dots \dots \dots \}$

ಎಂಬ ಬೆಸ ಸಂಖ್ಯೆಗಳ ಗಣವನ್ನು ತೆಗೆದುಕೊಳ್ಳೋಣ.

$1 = 1^2$ ಮೊದಲನೆಯ ಒಂದು ಬೆಸ ಸಂಖ್ಯೆಯ ಮೊತ್ತ

$1 + 3 = 4 = 2^2$ ಮೊದಲ ಎರಡು ಬೆಸ ಸಂಖ್ಯೆಗಳ ಮೊತ್ತ

$1 + 3 + 5 = 9 = 3^2$ ಮೊದಲ ಮೂರು ಬೆಸ ಸಂಖ್ಯೆಗಳ ಮೊತ್ತ

$1 + 3 + 5 + 7 = 16 = 4^2$ ಮೊದಲ ನಾಲ್ಕು ಬೆಸ ಸಂಖ್ಯೆಗಳ ಮೊತ್ತ

ಅಂದ ಮೇಲೆ ಮೊದಲ ಐದು ಬೆಸ ಸಂಖ್ಯೆಗಳ ಮೊತ್ತ $5^2 = 25$ ಆದೀತು ಎಂದು ಮನಸ್ಸು ಸಂದೇಹಿಸುವುದು. ಇವನ್ನು ವಾಸ್ತವಿಕವಾಗಿ ಆ ಸಂಖ್ಯೆಗಳನ್ನು ಬರೆದು ನೋಡಿ ತಾಳೆ ಮಾಡಬಹುದು. $1+ 3+ 5+ 7+ 9 = 25$, ನಿಜ. ನಿರ್ದಿಷ್ಟವಾದ ಈ ಹಲವಾರು ಸಂದರ್ಭಗಳ ಪರಿಶೀಲನೆ ಮೊದಲ $n$ ಬೆಸ ಸಂಖ್ಯೆಗಳ ಮೊತ್ತಕ್ಕೆ $n^2$ ಕ್ಕೆ ಸಮ ಎಂಬ ಸೂತ್ರದ ನಿರೂಪಣೆಗೆ ಸ್ಫೂರ್ತಿಯನ್ನು ಕೊಡುತ್ತದೆ. ಎಂದರೆ, $S(n) = 1+ 3+ 5+ \dots + (2n - 1) = n^2$. ಈ ಸೂತ್ರವನ್ನು $n = 1, 2, 3$ ಮುಂತಾದ ಎಷ್ಟೇ ನಿರ್ದಿಷ್ಟ ಸಂದರ್ಭಗಳಲ್ಲಿ ತಾಳೆ ನೋಡಿದರೂ ಇದನ್ನು nನ ಎಲ್ಲ ಧನಪೂರ್ಣಾಂಕ ಮೌಲ್ಯಗಳಿಗೂ ಸಾಧಿಸಿದಂತಾಗುವುದಿಲ್ಲ. ಏಕೆಂದರೆ nನ ಯಾವುದಾದರೂ ಒಂದು ಬೆಲೆಗೆ, ಅದು ಎಷ್ಟೇ ದೊಡ್ಡದಾಗಿರಲಿ, ಈ ಸೂತ್ರ ಸುಳ್ಳಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಉದಾಹರಣೆ 2 $P(n) = 2^{2^n} + 1$ ಎಂಬ ಉಕ್ತಿಯನ್ನು ಪರಿಶೀಲಿಸೋಣ.

ಇದರಲ್ಲಿ

$n = 1$ ಆದಾಗ $P(1) = 2^{2^2} + 1 = 4+1=5$

$n = 2$ ಆದಾಗ $P(2) = 2^{2^2} + 1 = 16+1=17$

$n = 3$ ಆದಾಗ $P(3) = 2^{2^3} + 1 = 256+1=257$

$n = 4$ ಆದಾಗ $P(4) = 2^{2^4} + 1 = 65536+1=65537$

$P(n)$ ನಲ್ಲಿ 1, 2, 3, 4, ಮುಂತಾದ ಬೆಲೆಗಳನ್ನು ಆದೇಶಿಸಿದಾಗ ಬರುವ 5, 17, 257, 65537 ಮುಂತಾದ ಸಂಖ್ಯೆಗಳೆಲ್ಲವೂ ಅವಿಭಾಜ್ಯಗಳೇ (ಪ್ರೈಮ್ಸ್). ಈಗ $P(1), P(2), P(3), P(4)$ ಎಲ್ಲವೂ ಅವಿಭಾಜ್ಯ ಸಂಖ್ಯೆಗಳನ್ನು ಕೊಡುವುದರಿಂದ $P(n) = 2^{2^n} + 1$ ಎಂಬ ಸೂತ್ರ $n$ ನ ಎಲ್ಲ ಧನಪೂರ್ಣಾಂಕ ಬೆಲೆಗಳಿಗೆ ಅವಿಭಾಜ್ಯ ಸಂಖ್ಯೆಗಳನ್ನು ಕೊಡಬಹುದು ಎಂದು ಫರ್ಮಾ (1601 – 1665) ಎಂಬ ಸುಪ್ರಸಿದ್ಧ ಗಣಿತಜ್ಞ ಊಹಿಸಿದ. ಆದರೆ $n = 5$ ಆದಾಗ $P(5) = 2^{2^5} + 1 = 4294967297$. ಈ ಸಂಖ್ಯೆ ಅವಿಭಾಜ್ಯವಲ್ಲ. ಏಕೆಂದರೆ $4294967297 = 641 X 6700417$. ಈ ಕಾರಣದಿಂದ ಫರ್ಮಾನ ಊಹೆ ತಪ್ಪಾಗುತ್ತದೆ.

ಉದಾಹರಣೆ 3 $P(n) = 991 n^2 + 1$ ಆಗಿರಲಿ.

$n = 1$ ಆದಾಗ $P(1) = 991 . 1^2 + 1 = 992$

$n = 2$ ಆದಾಗ $P(2) = 991 . 2^2 + 1 = 3965$

$n = 3$ ಆದಾಗ $P(3) = 991 . 3^2 + 1 = 8920$

ಈಗ 992, 3965, 8920 ಸಂಖ್ಯೆಗಳು ಯಾವುದೇ ಧನಪೂರ್ಣಾಂಕದ ವರ್ಗ ಅಲ್ಲ. ಆದ್ದರಿಂದ $P(n) = 991n^2 + 1$ ಸೂತ್ರ $n$ ನ ಪ್ರತಿಯೊಂದು ಧನಪೂರ್ಣಾಂಕ ಬೆಲೆಗೆ ಪೂರ್ಣವರ್ಗವಲ್ಲದ ಸಂಖ್ಯೆಯನ್ನೇ ಕೊಡುವುದೆಂದು ಊಹಿಸಿದರೆ ಅದು ತಪ್ಪಾಗುತ್ತದೆ. ಏಕೆಂದರೆ $n = 12\ 055\ 735\ 790\ 331\ 359\ 447\ 442\ 538\ 767$ ಆದಾಗ $P(n)$ ಪೂರ್ಣವರ್ಗವಾಗುತ್ತದೆ.

ಹಲವೊಂದು ನಿರ್ದಿಷ್ಟ ಸಂದರ್ಭಗಳ ಪರಿಶೀಲನೆಯಿಂದ ಪ್ರಭಾವಿತರಾಗಿ ಕೆಲವು ಸೂತ್ರಗಳನ್ನು ನಾವು ರೂಪಿಸಿದರೂ ಅವು ಎಲ್ಲ ಸಂದರ್ಭಗಳಲ್ಲಿಯೂ ಸತ್ಯವಾಗಿರುವುವೆಂದು ತೀರ್ಮಾನಿಸಬೇಕಾದಾಗ ಬಹಳ ಜಾಗರೂಕರಾಗಿರಬೇಕೆಂದು ಮೇಲಿನ ನಿದರ್ಶನಗಳಿಂದ ತಿಳಿಯುವುದು. $n$ ನ ಕೆಲವು ಬೆಲೆಗಳಿಗೆ ಒಂದು ಲಕ್ಷಣ ಅನ್ವಯಿಸಿದ ಮಾತ್ರಕ್ಕೆ $n$ ನ ಎಲ್ಲ ಬೆಲೆಗಳಿಗೂ ಈ ಲಕ್ಷಣ ಅನ್ವಯಿಸಿಯೇ ತೀರುವುದೆಂದು ಹೇಳುವುದು ತಪ್ಪಾಗುವುದು. ಅಂದಮಾತ್ರಕ್ಕೆ ಕೆಲವು ನಿರ್ದಿಷ್ಟ ಸಂದರ್ಭಗಳ ಪರಿಶೀಲನೆಯಿಂದ ಸಾರ್ವತ್ರಿಕ ಸೂತ್ರಗಳ ಅಸ್ತಿತ್ವವನ್ನು ಊಹಿಸುವುದೇ ತಪ್ಪು ಎಂದು ಹೇಳಲಾಗದು. ಅನೇಕ ಪ್ರಮೇಯಗಳ ಇರುವಿಕೆಯ ಸೂಚನೆ ಶಾಸ್ತ್ರಜ್ಞರಿಗೆ ಮೊದಮೊದಲು ಈ ಕ್ರಮದಲ್ಲಿಯೇ ತಿಳಿಯಿತು ಎಂದು ಹೇಳಬಹುದು. ಶಾಸ್ತ್ರದ ಬೆಳವಣಿಗೆಗೆ ಇಂಥ ನಿರ್ದಿಷ್ಟ ಸಂದರ್ಭಗಳ ಪರಿಶೀಲನೆ ಮಹತ್ತ್ವವಾದ ಕೊಡುಗೆಯನ್ನು ನೀಡಿದೆ. ಆದರೆ ಹೀಗೆ ಊಹಿಸಿದ ಸಾರ್ವತ್ರಿಕ ಸೂತ್ರ $n = 1, 2, 3, \dots$ ಮುಂತಾದ ಕೆಲವು ಬೆಲೆಗಳಿಗೆ ನಿಜವಾಗುವುದರ ಜೊತೆಗೆ $n$ ನ ಎಲ್ಲ ಧನಪೂರ್ಣಾಂಕ ಬೆಲೆಗಳಿಗೂ ನಿಸ್ಸಂದಿಗ್ಧವಾಗಿ ಅನ್ವಯಿಸುವುದು ಎಂಬುದನ್ನು ಸ್ಥಾಪಿಸುವ ಅಗತ್ಯವುಂಟು. ಇದಕ್ಕಾಗಿ ಗಣಿತಾನುಮಿತಿಯ ಕ್ರಮವನ್ನು ಅನುಸರಿಸುತ್ತೇವೆ. ಈ ಕ್ರಮವನ್ನು ಊಹಿಸಿದ ಸೂತ್ರಕ್ಕೆ ಅನ್ವಯಿಸಿ ಅದು $n$ ನ ಎಲ್ಲ ಬೆಲೆಗಳಿಗೂ ನಿಸ್ಸಂದೇಹವಾಗಿ ಅನ್ವಯಿಸುವುದೇ ಇಲ್ಲವೇ ಎಂಬುದನ್ನು ತಿಳಿಯಬಹುದು.

ಪದಾರ್ಥಗಳನ್ನು ಎಣಿಸಿದಾಗ ಸಹಜವಾಗಿಯೇ ಉದ್ಭವವಾಗುವ $1, 2, 3, 4, 5, 6, 7, \dots\dots n, n+1 \dots$ ಇವುಗಳಿಗೆ ನೈಸರ್ಗಿಕ ಸಂಖ್ಯೆಗಳು ಎಂದು ಹೆಸರು. ಪಿಯಾನೋ ಎಂಬ ಗಣಿತಶಾಸ್ತ್ರಜ್ಞ ಇವುಗಳ ಲಕ್ಷಣವನ್ನು ಮೂರು ಪಾರಿಭಾಷಿಕ ಪದಗಳ ಮತ್ತು ಐದು ಆದ್ಯುಕ್ತಿಗಳ ಮೂಲಕ ವಿವರಿಸಿದ.

1, ನೈಸರ್ಗಿಕ ಸಂಖ್ಯೆ, ಮತ್ತು ಉತ್ತರ ಪದ – ಇವೇ ಆ ಮೂರು ಪಾರಿಭಾಷಿಕ ಶಬ್ಧಗಳು. (ಈ ಲೇಖನದಲ್ಲಿ ಇನ್ನು ಮುಂದೆ ಸಂಖ್ಯೆಗಳು ಎಂದರೆ ನೈಸರ್ಗಿಕ ಸಂಖ್ಯೆಗಳು ಎಂದರ್ಥ) ಪಿಯಾನೋ ಮಂಡಿಸಿದ ಐದು ಆದ್ಯುಕ್ತಿಗಳನ್ನು ಮುಂದೆ ಬರೆದಿದೆ.

ಆದ್ಯುಕ್ತಿ 1 : 1 ಎಂಬುದು ಒಂದು ಸಂಖ್ಯೆ

ಆದ್ಯುಕ್ತಿ 2 : 1 ಸಂಖ್ಯೆಯ ಉತ್ತರ ಪದವೂ ಒಂದು ಸಂಖ್ಯೆ

ಆದ್ಯುಕ್ತಿ 3 : 1 ಎಂಬ ಸಂಖ್ಯೆ ಬೇರೆ ಯಾವ ಸಂಖ್ಯೆಗೂ ಉತ್ತರ ಪದವಲ್ಲ.

ಆದ್ಯುಕ್ತಿ 4 : ಬೇರೆ ಬೇರೆ ಸಂಖ್ಯೆಗಳ ಉತ್ತರ ಪದಗಳೂ ಬೇರೆ ಬೇರೆ ಸಂಖ್ಯೆಗಳೇ ಆಗಿರುವುವು.

ಆದ್ಯುಕ್ತಿ 5 : ಒಂದು ಲಕ್ಷಣ ಯಾವುದೇ ಸಂಖ್ಯೆಗೆ ಅನ್ವಯವಾದಾಗಲೆಲ್ಲ ಅದನ್ನು ಅದರ ಉತ್ತರ ಪದಕ್ಕೂ ಅನ್ವಯಿಸಿ ಅದೇ ಲಕ್ಷಣ 1 ಎಂಬ ಸಂಖ್ಯೆಗೂ ಅನ್ವಯವಾಗುವುದಾದರೆ ಆ ಲಕ್ಷಣ ಎಲ್ಲ ಸಂಖ್ಯೆಗಳಿಗೂ ಅನ್ವಯವಾಗುವುದು.

ಐದನೆಯ ಆದ್ಯುಕ್ತಿಗೆ ಗಣಿತಾನುಮಿತಿ ಎಂದು ಹೆಸರು.

ನೈಸರ್ಗಿಕ ಸಂಖ್ಯೆಗಳನ್ನು ಅಥವಾ ಸಂಖ್ಯೆಗಳ ಗಣವನ್ನು $N$ ಎಂದು ಕರೆದರೆ ಗಣಸಿದ್ಧಾಂತದ ಪ್ರತೀಕಗಳಲ್ಲಿ ಈ ಆದ್ಯುಕ್ತಿಗಳನ್ನು ಹೀಗೆ ಬರೆಯುವುದು ವಾಡಿಕೆ :

ಆದ್ಯುಕ್ತಿ 1 : $1 \in N$

ಎಂದರೆ ನಮ್ಮ ಸಂಖ್ಯೆಗಳ ಗಣವಾದ N ಶೂನ್ಯಗಣವಲ್ಲ. ಏಕೆಂದರೆ ಇದರಲ್ಲಿ 1 ಎಂಬ ಸಂಖ್ಯೆ ಉಂಟು.

ಆದ್ಯುಕ್ತಿ 2 : $x \in n$ ಆಗಿದ್ದರೆ ಪ್ರತಿಯೊಂದು $x$ ಗೆ ಸಂಬಂಧಿಸಿದಂತೆಯೂ ಅದರ ಉತ್ತರಪದವೆಂದು ಕರೆಯಲ್ಪಡುವ $x' \in N$ ಇದ್ದೇ ಇರುವುದು.

ಆದ್ಯುಕ್ತಿ 3 : $x' \neq 1, x' \in N$ ಎಂದರೆ 1ಎಂಬುದು ಬೇರೆ ಯಾವ ಸಂಖ್ಯೆಗೂ ಉತ್ತರಪದವಲ್ಲ.

ಆದ್ಯುಕ್ತಿ 4 : $x' = y'$ ಆಗಿದ್ದರೆ ಆಗ $x = y$. ಇದರ ಅರ್ಥ ಬೇರೆ ಬೇರೆ ಸಂಖ್ಯೆಗಳ ಉತ್ತರಪದಗಳೂ ಬೇರೆ ಬೇರೆ ಸಂಖ್ಯೆಗಳೇ.

ಆದ್ಯುಕ್ತಿ 5 : $p$ ಎಂಬ ಒಂದು ಲಕ್ಷಣ ಅನ್ವಯವಾಗುವ ಸಂಖ್ಯೆಗಳ ಗಣ M ಆಗಿರಲಿ.

ಈಗ ($a$) $1 \in M$ ಆಗಿದ್ದು (b) $x \in M$ ಆದಾಗಲೆಲ್ಲ $x' \in M$ ಆಗಿದ್ದರೆ $M = N$ ಆಗುವುದು.

ಒಂದನೆಯ ಆದ್ಯುಕ್ತಿಯ ಪ್ರಕಾರ 1 ಎಂಬುದು ನೈಸರ್ಗಿಕ ಸಂಖ್ಯೆಗಳ ಗಣವಾದ $N$ ನಲ್ಲಿದೆ. 1 ರ ಉತ್ತರ ಪದ 2 ಎಂಬ ಸಂಖ್ಯೆ ಆಗಿರಲಿ. 2 ರ ಉತ್ತರ ಪದ 3 ಎಂಬ ಸಂಖ್ಯೆ ಆಗಿರಲಿ. ಹೀಗೆಯೇ ಮುಂದೆ ಸಾಗುತ್ತ ಹೋದಾಗ ಬರುವ $n$ ಸಂಖ್ಯೆಯ ಉತ್ತರ ಪದ n+1 ಎಂಬ ಸಂಖ್ಯೆ ಆಗಿರಲಿ. ಪ್ರತೀಕಗಳಲ್ಲಿ ಹೇಳುವುದಾದರೆ $1' = 2, 2' = 3, \dots n' = n+1$. 1 ರಿಂದ ಆರಂಭಿಸಿ ಅದರ ಉತ್ತರ ಪದ 2, ಅದರ ಉತ್ತರ ಪದ 3 ಹೀಗೆಯೇ ಸಾಗುತ್ತ ಮುಂದೆ ಹೋದರೆ ಬೇರೆ ಬೇರೆ ಸಂಖ್ಯೆಗಳು ಉದ್ಭವವಾಗುವುವೇ ವಿನಾ ಈ ಶ್ರೇಣಿಯಲ್ಲಿ ಒಂದೇ ಸಂಖ್ಯೆ ಎರಡು ಸಾರಿ ಬರುವುದಿಲ್ಲ. ಏಕೆಂದರೆ ಎರಡನೆಯ ಆದ್ಯುಕ್ತಿಯ ಪ್ರಕಾರ ಒಂದು ಸಂಖ್ಯೆಯ ಉತ್ತರ ಪದವೂ ಒಂದು ಸಂಖ್ಯೆ ಮತ್ತು ನಾಲ್ಕನೆಯ ಆದ್ಯುಕ್ತಿಯ ಪ್ರಕಾರ ಬೇರೆ ಬೇರೆ ಸಂಖ್ಯೆಗಳ ಉತ್ತರ ಪದಗಳೂ ಬೇರೆ ಬೇರೆ ಸಂಖ್ಯೆಗಳೇ. ಆದ್ದರಿಂದ ಈ ಶ್ರೇಣಿಯಲ್ಲಿ ಒಂದೇ ಸಂಖ್ಯೆ ಎರಡು ಸಾರಿ ಬರುವುದಿಲ್ಲ. ಮೂರನೆಯ ಆದ್ಯುಕ್ತಿಯ ಪ್ರಕಾರ 1 ಎಂಬ ಸಂಖ್ಯೆ ಬೇರೆ ಯಾವ ಸಂಖ್ಯೆಗೂ ಉತ್ತರ ಪದವಲ್ಲ. ಎಂದರೆ ಈ ಸಂಖ್ಯೆಗಳ ಶ್ರೇಣಿಯಲ್ಲಿ 1 ಎಂಬುದೇ ಮೊದಲನೆಯ ಸಂಖ್ಯೆ. ಈಗ ಐದನೆಯ ಆದ್ಯುಕ್ತಿಯನ್ನು ಅನ್ವಯಿಸೋಣ.

($a$) 1 ಎಂಬುದು ಸಂಖ್ಯೆಗಳ ಗಣದಲ್ಲಿದೆ

($b$) $n$ ಎಂಬ ಸಂಖ್ಯೆ ಈ ಗಣದಲ್ಲಿದ್ದಾಗಲೆಲ್ಲ ಅದರ ಉತ್ತರ ಪದವಾದ $n+1$ ಎಂಬ ಸಂಖ್ಯೆಯೂ ಈ ಗಣದಲ್ಲಿದೆ.

ಆದ್ದರಿಂದ ಈ ಆದ್ಯುಕ್ತಿಗಳು ಅನ್ವಯವಾಗುವ ಸಂಖ್ಯೆಗಳ ಗಣದಲ್ಲಿ ಎಲ್ಲ ನೈಸರ್ಗಿಕ ಸಂಖ್ಯೆಗಳೂ ಇರುತ್ತವೆ.

$\therefore N = \{1, 2, 3, ...... n, n+1, ........\}$

ಈಗ ಪಿಯಾನೋನ ಐದನೆಯ ಆದ್ಯುಕ್ತಿ ಪ್ರತಿಪಾದಿಸುವ ಗಣಿತಾನುಮಿತಿಯನ್ನು ಅನ್ವಯಿಸಿ ಒಂದು ಸಾರ್ವತ್ರಿಕ ಸೂತ್ರ ಎಲ್ಲ ಸಂಖ್ಯೆಗಳಿಗೂ ನಿಜವಾಗುತ್ತದೆ. ಎಂದು ಸ್ಥಿರಪಡಿಸುವ ಕ್ರಮವನ್ನು ಚರ್ಚಿಸೋಣ. ಈ ಕ್ರಮದ ಪ್ರಕಾರ ಒಂದು ಸೂತ್ರದ ಸಾರ್ವತ್ರಿಕ ಸತ್ಯತೆಯನ್ನು ಎರಡು ಹಂತಗಳಲ್ಲಿ ಸ್ಥಾಪಿಸುತ್ತೇವೆ.

ಮೊದಲನೆಯ ಹಂತ : n = 1 ಆದಾಗ ಸೂತ್ರ ನಿಜವೆಂದು ಸ್ಥಾಪಿಸುವುದು.

ಎರಡನೆಯ ಹಂತ: ಸೂತ್ರ $n$ ಸಂಖ್ಯೆಗೆ ನಿಜವಾದಾಗಲೆಲ್ಲ ಅದರ ಉತ್ತರಪದ $n+1$ ಸಂಖ್ಯೆಗೂ ನಿಜವೆಂದು ಸ್ಥಾಪಿಸುವುದು.

ಯಾವುದಾದರೂ ಒಂದು ಪೂರ್ಣಾಂಕಕ್ಕೆ ಒಂದು ಸೂತ್ರ ನಿಜವಾದಾಗಲೆಲ್ಲ ಅದರ ಮುಂದಿನ ಪೂರ್ಣಾಂಕಕ್ಕೂ (ಉತ್ತರ ಪದಕ್ಕೂ) ನಿಜವಾಗುವುದೆಂದು ಸ್ಥಾಪಿಸುವ ($b$) ಹಂತದಲ್ಲಿ ಮಹತ್ತರವಾದ ತಾರ್ಕಿಕಶಕ್ತಿ ಅಡಗಿದೆ ಎನ್ನಬಹುದು. ($b$) ಹಂತವನ್ನು ಸ್ಥಾಪಿಸಿದ ಬಳಿಕ ($a$) ಹಂತವನ್ನು ಜೊತೆಗೆ ಅನ್ವಯಿಸಿದಾಗ ಸೂತ್ರ ಎಲ್ಲ ನೈಸರ್ಗಿಕ ಸಂಖ್ಯೆಗಳಿಗೂ ಅನ್ವಯವಾಗುವುದೆಂದು ಸಿದ್ಧಿಸುವುದು. ($a$) ಹಂತದ ಪ್ರಕಾರ $n=1$ ಆದಾಗ ಸೂತ್ರ ನಿಜ. ($b$) ಹಂತದ ಪ್ರಕಾರ $n$ ಸಂಖ್ಯೆಗೆ ಸೂತ್ರ ನಿಜವಾದಾಗಲೆಲ್ಲ $n+1$ ಸಂಖ್ಯೆಗೂ ನಿಜ . 1 ಎಂಬ ಸಂಖ್ಯೆಗೆ ಸೂತ್ರ ನಿಜವಾದ್ದರಿಂದ ಅದರ ಉತ್ತರಪದ 2 ಎಂಬ ಸಂಖ್ಯೆಗೂ ನಿಜ. 2 ಎಂಬ ಸಂಖ್ಯೆಗೆ ಸೂತ್ರ ನಿಜವಾದ್ದರಿಂದ ಅದರ ಉತ್ತರಪದವಾದ 3 ಎಂಬ ಸಂಖ್ಯೆಗೂ ನಿಜ. ಹೀಗೆಯೇ ವಾದ ಮಾಡುತ್ತ ಹೋದರೆ, $n = 1,2,3,..........n, n+1$ ಎಂಬ ಎಲ್ಲ ಸಂಖ್ಯೆಗಳಿಗೂ ಸೂತ್ರ ನಿಜವಾಗಿರುವುದೆಂದು ಸ್ಥಾಪಿಸಿದಂತಾಗುವುದು.

ಒಂದನೆಯ ಉದಾಹರಣೆಯಲ್ಲಿ ಚರ್ಚಿಸಿದ ಸೂತ್ರವನ್ನು ತೆಗೆದುಕೊಂಡು ಕೆಲವು ನಿರ್ದಿಷ್ಟ ಸಂದರ್ಭಗಳನ್ನು ಪರಿಶೀಲಿಸೋಣ.

ಮೊದಲನೆಯ $n$ ಬೆಸ ಸಂಖ್ಯೆಗಳ ಮೊತ್ತ $n^2$ಕ್ಕೆ ಸಮ.

ಅಥವಾ

$S(n)=1+3+5+.....+(2n-1) = n^2$

ಎಂಬ ಸೂತ್ರವನ್ನು ಊಹಿಸಿದೆವು. ಇದು ಸಾರ್ವತ್ರಿಕವಾಗಿ $n$ನ ಎಲ್ಲ ಮೌಲ್ಯಗಳಿಗೂ ಅನ್ವಯಿಸುವುದೇ ಎಂಬುದನ್ನು ಸ್ಥಿರಪಡಿಸಿಕೊಳ್ಳಲು ಗಣಿತಾನುಮಿತಿ ಕ್ರಮವನ್ನು ಅನ್ವಯಿಸೋಣ.

($a$) ಮೊದಲನೆಯ ಹಂತ: $S(n) = 1+3+5+.... +(2n-1) = n^2$

$n=1$ ಆದಾಗ $S(1) = 1 = 1^2$

$\therefore n=1$ ಆದಾಗ ಸೂತ್ರ ನಿಜ.

ಎರಡನೆಯ ಹಂತ: $S(n) = 1+3+5+....+(2n-1) = n^2$ ಎಂಬ ಸೂತ್ರ $n$ ಸಂಖ್ಯೆಗೆ ಅನ್ವಯಿಸಿದಂತೆ ನಿಜವೆಂದು ಭಾವಿಸೋಣ.

ಈಗ $S(n+1)$ = ಮೊದಲನೆಯ $n+1$ ಬೆಸ ಸಂಖ್ಯೆಗಳ ಮೊತ್ತ = $(n+1)^2$ ಎಂದು ಸಾಧಿಸಿದರೆ ಸೂತ್ರ $n$ಗೆ ನಿಜವಾದಾಗಲೆಲ್ಲ $n+1$ ಕ್ಕೂ ನಿಜವೆಂದು ತೋರಿಸಿದಂತಾಗುವುದು.

n ನೆಯ ಬೆಸ ಸಂಖ್ಯೆ $=2n-1$

$\therefore (n+1)$ ನೆಯ ಬೆಸ ಸಂಖ್ಯೆ $= 2n-1+2 = 2n+1$

$\therefore S(n+1) = \{1+3+5+......+(2n-1)\}+(2n+1)$

$= S(n)+(2n+1)$

$= n^2+2n+1, \because S(n) = n^2$

$=(n+1)^2$

ಆದ್ದರಿಂದ $S(n)$ ಸೂತ್ರ $n$ ಸಂಖ್ಯೆಗೆ ನಿಜವಾದಾಗಲೆಲ್ಲ $n+1$ ಸಂಖ್ಯೆಗೂ ನಿಜ. ಆದರೆ $n=1$ ಆದಾಗ ಸೂತ್ರ ನಿಜವೆಂದು ($a$) ಹಂತದಲ್ಲಿ ತೋರಿಸಿದ್ದೇವೆ. ಆದ್ದರಿಂದ 1+1 =2 ಕ್ಕೆ ಸಹ ಸೂತ್ರ ನಿಜ. 2 ಎಂಬ ಸಂಖ್ಯೆಗೆ ಸೂತ್ರ ನಿಜವಾದ್ದರಿಂದ ಅದರ ಉತ್ತರಪದ 2+1 = 3 ಕ್ಕೆ ಸಹ ನಿಜ. ಹೀಗೆಯೇ ವಾದ ಮಾಡುತ್ತ ಹೋದರೆ

$S(n) = 1+3+5+.....+(2n-1) = n^2$

ಎಂಬ ಸೂತ್ರ $n$ ನ ಎಲ್ಲ ಬೆಲೆಗಳಿಗೂ ನಿಜವೆಂದು ಸಿದ್ಧಿಸುತ್ತದೆ.

ಒಂದು ಸೂತ್ರಕ್ಕೆ ಸಂಬಂಧಿಸಿದಂತೆ ($a$) ಮತ್ತು ($b$) ಎಂಬ ಎರಡು ಹಂತಗಳಿಗೂ ಗಣಿತಾನುಮಿತಿಯನ್ನು ಅನ್ವಯಿಸಿ ಸಾಧಿಸಿದಾಗ ಮಾತ್ರ ಆ ಸೂತ್ರ ಸಾರ್ವತ್ರಿಕ ಎಂದೆನ್ನಿಸುವುದು. ಇವೆರಡು ಹಂತಗಳಲ್ಲಿ ಯಾವುದೇ ಒಂದು ಹಂತ ಸಾಧಿತವಾಗದಿದ್ದರೂ ಸೂತ್ರದ ಸಾರ್ವತ್ರಿಕತೆ ಏರ್ಪಡುವುದಿಲ್ಲ.

ಎರಡನೆಯ ಉದಾಹರಣೆಯಲ್ಲಿ, $P(n) = 2^{2^n}+1$ ಎಂಬುದು ಅವಿಭಾಜ್ಯ ಸಂಖ್ಯೆ ಎಂಬ ಲಕ್ಷಣ n = 1 ಆದಾಗ ನಿಜವಾದ್ದರಿಂದ ($a$) ಹಂತ ಸಾಧಿತವಾದಂತಾಯಿತು. $P(n)$ ಅವಿಭಾಜ್ಯವಾದಾಗಲೆಲ್ಲ $P(n+1)$ ಅವಿಭಾಜ್ಯವೆಂದು ಇಲ್ಲಿ ತೋರಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ($b$) ಹಂತ ಸಾಧಿತವಾಗಲಿಲ್ಲ. ಆದ್ದರಿಂದ $P(n)$ ಒಂದು ಅವಿಭಾಜ್ಯ ಸಂಖ್ಯೆ ಎಂಬ ಲಕ್ಷಣ ಸಾರ್ವತ್ರಿಕವಾಗಿ ನಿಜವಲ್ಲ.

ಮೂರನೆಯ ಉದಾಹರಣೆಯಲ್ಲಿ, $P(n) = 991n^2+1$ ಪೂರ್ಣವರ್ಗವಲ್ಲ, ಎಂಬುದು $n=1$ ಆದಾಗ ನಿಜ. ಎಂದರೆ ($a$) ಹಂತ ಸಾಧಿತವಾದಂತಾಯಿತು. $P(n)$ ಪೂರ್ಣವರ್ಗವಲ್ಲದಿದ್ದರೆ $P(n+1)$ ಕೂಡ ಪೂರ್ಣವರ್ಗವಲ್ಲ ಎಂದು ಇಲ್ಲಿ ಸಾಧಿಸಲಾಗುವುದಿಲ್ಲ. ಎಂದರೆ ($b$) ಹಂತ ಸಾಧಿತವಾಗಲಿಲ್ಲ. ಆದ್ದರಿಂದ $P(n) = 991n^2+1$ ಒಂದು ವರ್ಗವಲ್ಲ ಎಂಬ ಉಕ್ತಿ ಸಾರ್ವತ್ರಿಕವಾಗಿ ಸತ್ಯವಲ್ಲ.

ಗಣಿತಾನುಮಿತಿಯ ($b$) ಹಂತ ಸಾಧಿತವಾಗಿ ($a$) ಹಂತ ಸಾಧಿತವಾಗದಿದ್ದಾಗ ಕೂಡ ಸೂತ್ರ ಸಾರ್ವತ್ರಿಕವಾಗಿ ಸತ್ಯವಾಗಲಾರದು. ಒಂದು ನಿದರ್ಶನವನ್ನು ನೋಡಬಹುದು. ಒಂದು ಪೂರ್ಣಾಂಕ ಅದರ ಮುಂದಿನ ಪೂರ್ಣಾಂಕಕ್ಕೆ ಸಮ ಎಂಬ ಉಕ್ತಿ. $n$ ಒಂದು ಸಂಖ್ಯೆಯಾದರೆ ಅದರ ಉತ್ತರಪದ $n+1$ ಆಗುವುದು. ಪ್ರತೀಕಗಳಲ್ಲಿ ಇದು

$n = n+1$ ...(1)

ಎಂದಾಗುವುದು. (1) ರ ಎರಡು ಕಡೆಗೂ 1 ನ್ನು ಕೂಡಿಸಿದಾಗ

$n+1 = (n+1)+1$ ...(2)

ಎಂದಾಗುವುದು. (1) ಮತ್ತು (2) ರಿಂದ ಈ ಸೂತ್ರ $n$ ಸಂಖ್ಯೆಗೆ ನಿಜವಾದಾಗಲೆಲ್ಲ $(n+1)$ ಸಂಖ್ಯೆಗೆ ಸಂಬಂಧಿಸಿದಂತೆಯೂ ನಿಜವಾಗುವುದೆಂದು ಸಿದ್ಧಿಸುವುದು. ಎಂದರೆ ಅನುಮಿತಿಯ ($b$) ಹಂತ ಸಾಧಿತವಾಯಿತು.

ಈಗ $n = n+1$ ...(1)

ಈ ಉಕ್ತಿಯಲ್ಲಿ $n = 1$ ಆದಾಗ 1 = 1+ 1. ಅಥವಾ 1 = 2 ಎಂದಾಗುವುದು. ಇದು ಸರಿಯಲ್ಲ. ಆದ್ದರಿಂದ ($a$) ಹಂತ ಸಾಧಿತವಾಗಲಿಲ್ಲ. ಹೀಗಾಗಿ $n = n+1$ ಎಂಬ ಉಕ್ತಿ ಸಾರ್ವತ್ರಿಕವಾಗಿ ಸತ್ಯವಲ್ಲ.

ಇಲ್ಲಿ ಮತ್ತೊಂದು ವಿಷಯವನ್ನು ಸ್ಪಷ್ಟಪಡಿಸಬೇಕಾಗಿದೆ. ಒಂದು ಸೂತ್ರ $1,2,3,.........p-1$ ಈ ಬೆಲೆಗಳಿಗೆ ನಿಜವಲ್ಲದೆ ಇದ್ದರೂ ($a$) ಹಂತದಲ್ಲಿ $n = p$ ಆದಾಗ ಸೂತ್ರ ನಿಜವೆಂದು ತೋರಿಸಿ, ಬಳಿಕ ($b$) ಹಂತದಲ್ಲಿ $n$ಗೆ ಸೂತ್ರ ನಿಜವಾದಾಗಲೆಲ್ಲ $n+1$ ಕ್ಕೂ ನಿಜವೆಂದು ಸಾಧಿಸಿದರೆ ಸೂತ್ರ $p$ ಯಿಂದ ಮುಂದೆ ಬರುವ ಪೂರ್ಣಾಂಕಗಳೆಲ್ಲಕ್ಕೂ ($p$ಯನ್ನೂ ಸೇರಿಸಿ) ನಿಜವೆಂದು ಸಾಧಿಸಿದಂತಾಗುವುದು.

$n$ ಬಾಹುಗಳುಳ್ಳ ಬಹುಭುಜಾಕೃತಿಗೆ ಸಂಬಂಧಿಸಿದ ಪ್ರಮೇಯಗಳೆಲ್ಲ $n \geq 3$ ಆದಾಗ ನಿಜವಾಗುತ್ತವೆ; ಎಂದರೆ $n = 3,4,5,.....$ ಆದಾಗ ನಿಜ. ಏಕೆಂದರೆ ಕನಿಷ್ಠ ಬಾಹುಗಳುಳ್ಳ ಬಹುಭುಜಾಕೃತಿ ಎಂದರೆ ತ್ರಿಭುಜ. (ಎಲ್.ಎನ್.ಪಿ.)

**ಗಣಿತೋಪಕರಣಗಳು :** ದೂರ, ಸಲೆ, ಘನಗಾತ್ರ, ಒತ್ತಡ, ಉಷ್ಣತೆ, ವೇಗ, ತೂಕ ಮೊದಲಾದ ಭೌತರಾಶಿಗಳನ್ನು ಅಳೆಯಲು ಬಳಸುವ ಉಪಕರಣಗಳು. ಉದಾಹರಣೆಗೆ, ಅಳತೆಪಟ್ಟಿ, ಕೋನಮಾಪಕ, ವಾಯುಭಾರಮಾಪಕ ಇವೇ ಮುಂತಾದವು. ಭೌತರಾಶಿಗಳನ್ನೂ (ಫಿಸಿಕಲ್ ಕ್ವಾಂಟಿಟೀಸ್) ಅವುಗಳ ಗುಣಗಳನ್ನೂ ಅಮೂರ್ತೀಕರಿಸಿ ಸೂಕ್ತ ಗಣಿತರಾಶಿಗಳಾಗಿ ಪರಿವರ್ತಿಸಿ ಅವುಗಳ ಮೇಲೆ ಗಣಿತ ನಿಯಮಾನುಸಾರ ಪರಿಕರ್ಮಗಳನ್ನು ನಡೆಸಿ ಅಳತೆಯನ್ನು ಮಾಡುವುದು ಇಲ್ಲಿನ ಸೂತ್ರ. ಉದಾಹರಣೆಗೆ, ಜವ (ವೇಗ) ಅನ್ನುವುದು ಒಂದು ಭೌತರಾಶಿ. ಗಮಿಸಿದ ದೂರವನ್ನು, ತೆಗೆದುಕೊಂಡ ಕಾಲದಿಂದ ಭಾಗಿಸಿದಾಗ ಇದು ದೊರೆಯುವುದು. ಆದ್ದರಿಂದ ಜವಮಾಪಕದಲ್ಲಿ (ವೇಗಮಾಪಕ) ದೂರದ ಹಾಗೂ ಕಾಲದ ಅಳತೆಗಳೂ ಅವುಗಳ ಭಾಗಲಬ್ಧದ ಅಳತೆಯೂ ಆಗುವಂಥ ಏರ್ಪಾಡಿರಬೇಕಾಗುತ್ತದೆ. ಈ ಮೂಲಸೂತ್ರವನ್ನು ಒಮ್ಮೆ ಗಮನಿಸಿದರೆ ಬಳಿಕ ಇದರ ಅನುಸಾರ ಉಪಕರಣದ ರಚನೆ ಕೇವಲ ಯಂತ್ರವಿಜ್ಞಾನವನ್ನು ಅವಲಂಬಿಸುವುದು.

ಹಲವಾರು ಬಗೆಯ ಸರಳ ಹಾಗೂ ಜಟಿಲ ಗಣಿತೀಯ ಉಪಕರಣಗಳಿದ್ದರೂ ವಿಶಾಲವಾಗಿ ಅವನ್ನು ಮೂರು ಭಿನ್ನ ವರ್ಗಗಳಲ್ಲಿ ಸೇರಿಸಬಹುದು :

1. ಸಾಂತ ಸಮೀಕರಣಗಳನ್ನು ಬಿಡಿಸುವ ಉಪಕರಣಗಳು. ಬೀಜಗಣಿತೀಯ ಮತ್ತು ಬೀಜಾತೀತ (ಟ್ರಾನ್ಸೆಂಡೆಂಟಲ್) ಸಮೀಕರಣಗಳು ಇಂಥ ಸಮೀಕರಣಗಳಲ್ಲಿ ಸೇರಿವೆ. ಕ್ಯಾಮುಗಳು, ಬಂಧಕಗಳು, ಗಿಯರುಗಳು ಇವೇ ಮುಂತಾದ ಬಿಡಿ ಭಾಗಗಳನ್ನು ನಿರ್ದಿಷ್ಟ ಆಲೇಖ್ಯಾನುಸಾರ ಜೋಡಿಸಿ ಈ ಸಮೀಕರಣಗಳನ್ನು ಬಿಡಿಸಲಾಗುತ್ತದೆ. ಕಡಲ ತೀರಪ್ರದೇಶಗಳಲ್ಲಿ ಉಬ್ಬರವಿಳಿತಗಳನ್ನು ನಿರ್ಧರಿಸುವ ಭೌತ ಬಲಗಳನ್ನೂ ಪ್ರಾಚಲಗಳನ್ನೂ ವಿಶ್ಲೇಷಿಸಿ ಉಬ್ಬರದ ಎತ್ತರವನ್ನು ಒಂದು ತ್ರಿಕೋಣಮಿತೀಯ ಮೊತ್ತವಾಗಿ ನಿರೂಪಿಸಬಹುದು ಎಂದು ತಿಳಿಯಲಾಯಿತು. ಈ ತತ್ತ್ವವನ್ನು ಆಧರಿಸಿ ಲಾರ್ಡ್ ಕೆಲ್ವಿನ್ 1872ರಲ್ಲಿ ಒಂದು ಉಬ್ಬರ ಮುನ್ಸೂಚಕ (ಟೈಡ್ ಪ್ರೆಡಿಕ್ಟರ್) ಉಪಕರಣವನ್ನು ನಿರ್ಮಿಸಿದ. ಇದು ಈ ವರ್ಗದ ಉಪಕರಣಕ್ಕೆ ಉದಾಹರಣೆ.

2. ಅನುಕಲನಾಂಕಗಳನ್ನೂ ಅವಕಲನಾಂಕಗಳನ್ನೂ ಮೌಲ್ಯೀಕರಿಸುವಂಥ ಉಪಕರಣಗಳು. ಬೇರೆ ಬೇರೆ ಆಕಾರಗಳಿರುವ ಮೈಗಳ ಮೇಲೆ ಚಕ್ರಗಳು ಉರುಳುವ ಮೂಲಕ, ವಿದ್ಯುನ್ಮಂಡಲಗಳಲ್ಲಿನ ಆವೇಶ ಹಾಗೂ ಪ್ರವಾಹಗಳ ಮೂಲಕ ಅಥವಾ ವಿಶೇಷವಾಗಿ ರಚಿತವಾದ ದೃಙ್ಮಾಧ್ಯಮದ ಮೂಲಕ ಪ್ರೇಷಿತವಾದ ಬೆಳಕಿನ ರಾಶಿಯ ಮೂಲಕ ಈ ಮೌಲ್ಯೀಕರಣವನ್ನು ಮಾಡಲಾಗುತ್ತದೆ. ಕ್ಷೇತ್ರಫಲಮಾಪಕ (ಪ್ಲಾನಿಮೀಟರ್) ಎಂಬ ಉಪಕರಣ ಈ ವರ್ಗಕ್ಕೆ ಸೇರಿದೆ. $y=f(x)$ ಒಂದು ಸಮತಲ ವಕ್ರರೇಖೆ ಆಗಿದ್ದರೆ ಈ ವಕ್ರರೇಖೆ ಹಾಗೂ $x=a$, $x=b$, $y=0$ ಸರಳರೇಖೆಗಳು ಒಳಗೊಳ್ಳುವ ಸಲೆಯ (ಕ್ಷೇತ್ರಫಲದ) ಮೌಲ್ಯ $A=\int_a^b y\,dx$ ಎಂದು ಅನುಕಲನಶಾಸ್ತ್ರ ತಿಳಿದಿದೆ. ಕ್ಷೇತ್ರಫಲಮಾಪಕದ ರಚನೆ ಈ ತತ್ತ್ವದ ಆಧಾರದ ಮೇಲೆ ಉಂಟು. ಅನುಕಲನಕಗಳು (ಇಂಟೆಗ್ರೇಟರ್ಸ್), ಅನುಕಲನ ಲೇಖಿಗಳು (ಇಂಟೆಗ್ರಾಫ್ಸ್), ಸಂಗತ ವಿಶ್ಲೇಷಕಗಳು (ಹಾರ್ಮಾನಿಕ್ ಅನಲೈಸರ್ಸ್), ಅವಕಲ ವಿಶ್ಲೇಷಕಗಳು (ಡಿಫರೆನ್ಷಿಯಲ್ ಅನಲೈಸರ್ಸ್) ಇವು ಕೂಡ ಇದೇ ವರ್ಗಕ್ಕೆ ಸೇರುತ್ತವೆ.

3. ಆಂಶಿಕ ಅವಕಲ ಸಮೀಕರಣಗಳನ್ನು ಬಿಡಿಸುವ ಉಪಕರಣಗಳು. ಒಂದು ಅರ್ಥದಲ್ಲಿ ಎಲ್ಲ ಗಣಿತೀಯ ಉಪಕರಣಗಳು ಅವು ಯಾವ ಭೌತ ಸನ್ನಿವೇಶಕ್ಕೆ ಪರಿಹಾರವನ್ನು ಪಡೆಯಲು ನಿಯೋಜಿಸಲ್ಪಟ್ಟಿವೆಯೋ ಆ ಸನ್ನಿವೇಶದ ಸದೃಶ ರೂಪಗಳು. ಈ ತಾದ್ರೂಪತೆ ಆಂಶಿಕ ಅವಕಲ ಸಮೀಕರಣಗಳ ಪರಿಹಾರವನ್ನು ಅರಸಲು ಬಳಸುವ ಉಪಕರಣಗಳಲ್ಲಿ ತೀರ ಎದ್ದು ಕಾಣುವಂತಿದೆ. ಎಲೆಕ್ಟ್ರಾನಿಕ್ ನಳಿಕೆಗಳಲ್ಲಿನ ವಿಭವದ (ಪೊಟೆನ್ಷಿಯಲ್) ಆಂಶಿಕ ಸಮೀಕರಣಗಳನ್ನು ಬಿಡಿಸಿ ಆ ವಿಭವದ ಪ್ರಭಾವದಲ್ಲಿ ಎಲೆಕ್ಟ್ರಾನುಗಳ ಅನುಸರಿಸುವ ಪಥಗಳನ್ನು ಮುನ್ನುಡಿಯಲು ಬಳಸುವ ಉಪಕರಣ ಒಂದು ಉದಾಹರಣೆ. (ಆರ್.ಆರ್.ಯು.)

**ಗಣೇಕಲ್ ಸಂಗವಿಭು:** ಹತ್ತೊಂಬತ್ತನೆಯ ಶತಮಾನದ ವೀರಶೈವ ಕವಿ. 'ಲಕ್ಷ್ಮೀಶ ನನ್ನ ತಮ್ಮ, ಷಡಕ್ಷರಿ ಅಣ್ಣ' ಎಂದು ಈತ ಹೇಳಿಕೊಂಡಿರುವುದನ್ನು ನೋಡಿದರೆ ಆ ಇಬ್ಬರು ಜನಪ್ರಿಯ ಕವಿಗಳ ಕಾವ್ಯಗಳನ್ನು ಈತ ವಿಶೇಷ ಅಭ್ಯಾಸ ಮಾಡಿ ಮೈಗೂಡಿಸಿಕೊಂಡಿದ್ದನೆಂದು ಧ್ವನಿತವಾಗುತ್ತದೆ. ಈತ ತನ್ನ ಹುಟ್ಟೂರನ್ನಾಗಲೀ ಗಣೇಕಲ್ಲಿನ ವಿಚಾರವನ್ನಾಗಲೀ ಸ್ಪಷ್ಟವಾಗಿ ತನ್ನ ಕಾವ್ಯಗಳಲ್ಲಿ ಹೇಳಿಕೊಂಡಿಲ್ಲವಾದರೂ ಈತನ ಕುಮಾರವಿಜಯದಲ್ಲಿನ ಕೆಲವು ಆಧಾರಗಳ ಮೇಲೆ ಇಷ್ಟು ಹೇಳಬಹುದು. ಸಂಗವಿಭು ಅಥವಾ ಸಂಗಪ್ಪ ಆದವಾನಿ ತಾಲ್ಲೂಕಿನ ನಂದವಾರ ಗ್ರಾಮದ ನಾಡಗೌಡ ಮನೆತದವನಾಗಿದ್ದ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಣೇಕಲ್ ನಾಡಗೌಡರ ಮನೆತನದ ಹೆಣ್ಣನ್ನು ಮಾಡಿಕೊಂಡು ಸಂಸ್ಥಾನದ ರಾಜ್ಯಕಾರಭಾರ ಮಾಡುತ್ತ ತನ್ನ ಜೀವಿತದ ಬಹುಕಾಲವನ್ನು ಗಣೇಕಲ್ಲಿನಲ್ಲಿ ಕಳೆದ. ಪ್ರ.ಶ. ಸುಮಾರು 1832 ರಿಂದ 1856ರ ಅವಧಿಯಲ್ಲಿ ಈತ ತನ್ನ ಕಾವ್ಯಗಳನ್ನು ರಚಿಸಿರಬೇಕು. ಈ ಕಾವ್ಯಗಳ ಹಸ್ತಪ್ರತಿಗಳೆಲ್ಲ ಹುಟ್ಟೂರಾದ ನಂದವಾರದ ಪರಿಸರದಲ್ಲಿ ಸಿಗದೆ ರಾಯಚೂರು ಜಿಲ್ಲೆಯಲ್ಲಿಯೇ ದೊರೆತಿವೆ. ಗಣೇಕಲ್ ಸುತ್ತಣ ಪ್ರದೇಶದಲ್ಲಿ ಈತ ರಚಿಸಿದ ಶತಕಗಳನ್ನೂ ಚಂಪೂಕಾವ್ಯಗಳನ್ನೂ ವಿವಿಧ ಜಾತಿಯ ಸಹೃದಯರು ಓದುವ ಪರಿಪಾಠವಿದೆ.

ಇದುವರೆಗೆ ದೊರೆತ ಸಂಗವಿಭುವಿನ ಕಾವ್ಯಗಳು ನಾಲ್ಕು: ಭುವನೈಕ ನಾಯಕೀಶತಕ, ಬಸವಶತಕ, ಪಂಪಾಶತಕ, ಕುಮಾರವಿಜಯ ಚಂಪೂಮಹಾಕಾವ್ಯ.

ಕುಮಾರವಿಜಯದಲ್ಲಿ ಮಹಾಕಾವ್ಯದ ಲಕ್ಷಣಗಳೆಲ್ಲ ಇವೆ. ಸತ್ಕವಿ ಕಾಳಿದಾಸ ತಾಂ ಪೇಳಿದ ಸತ್ಕಥಾಸರಣಿ ವೈಖರಿಯಿಂ ಬಣ್ಣಿಪೆಂ ಎಂದು ಕುಮಾರ ಸಂಭವದತ್ತ ಈ ಕವಿ ಬೆರಳು ಮಾಡಿ ತೋರಿಸಿದರೂ ಇದು ಕಾಳಿದಾಸನ ಯಥಾವತ್ ಅನುವಾದವೇನಲ್ಲ. ಷಡಕ್ಷರಿಯ ಕಾಲಕ್ಕೇ ನಿಂತುಹೋಗಿದ್ದ ಚಂಪೂಯುಗವನ್ನು ತನ್ನವರೆಗೂ ನಡೆಸಿಕೊಂಡು ಬಂದ ಕೀರ್ತಿ ಸಂಗವಿಭುಗೆ ಸಲ್ಲುತ್ತದೆ.

ಸಂಗವಿಭುವಿನ ಶತಕಗಳಲ್ಲಿ ಶುಷ್ಕನೀತಿಯಿಲ್ಲ. ಹೇಳುವುದನ್ನು ರಸವತ್ತಾಗಿ ಹೇಳಿದ್ದಾನೆ. ಈ ಪದ್ಯ ಕವಿಯ ಚಮತ್ಕಾರಕ್ಕೊಂದು ಉದಾಹರಣೆ:

ಬಾಣನ ಭಕ್ತಿಯಂ ಮನೆಯ ಬಾಗಿಲು ಬಲ್ಲುದು ಪಾರ್ಥಭಕ್ತಿಯಂ
ಬಾಣವು ಬಲ್ಲುದೊಂದಡಿಯು ಬಲ್ಲುದು ಕಣ್ಣಪ್ಪನೊಪ್ಪ ಭಕ್ತಿಯಂ ।
ಮಾಣದ ನಿಮ್ಮ ಭಕ್ತಿಯನು ಚಿತ್ತವು ಬಲ್ಲುದು ಚಿನ್ಮಯಾತ್ಮಕ
ಲ್ಯಾಣ ಪುರಪ್ರಸಿದ್ಧ ಶರಣಾ ಶರಣಾಗತವಜ್ರಪಂಜರಾ ॥

ಭುವನೈಕನಾಯಕೀಶತಕದಲ್ಲಿ ಪಾರ್ವತಿಯ ವರ್ಣನೆ ಮಾಡುವುದರಲ್ಲಿ ಕವಿಯ ಭಕ್ತಿ, ಗೌರವಗಳ ಜೊತೆಗೆಯೇ ಅವನ ದೃಷ್ಟಿ ಆಕೆಯ ಅಲೌಕಿಕ ಸೌಂದರ್ಯವನ್ನೂ ಕಂಡಿದೆ. ಪಂಪಾಶತಕವಂತೂ ತುಂಬಿ ಹರಿಯುವ ಪ್ರವಾಹದಂತೆ ನಿರರ್ಗಳವಾಗಿ ಸಾಗುತ್ತದೆ.

ಸಂಸ್ಕೃತ ಭೂಯಿಷ್ಠವಾದ ಭಾಷೆಯಷ್ಟೇ ಸಮರ್ಥವಾಗಿ ಅಚ್ಚಗನ್ನಡ ಮತ್ತು ಪ್ರಾದೇಶಿಕ ಶಬ್ದಗಳನ್ನು ಸಂಗವಿಭು ಸುಂದರವಾಗಿ ಬಳಸುತ್ತಾನೆ.

ತೊಗೆಯುಂಟಾದೊಡೆ ತುಪ್ಪಮೆಂಬ ನೆರೆತುಪ್ಪಂ ನೀಡಲೇನಿಬರೇ
ಯಗುಳೆಂತುಂಬುವೆನೆಂದು ಸಾರುತರವೇಳಲ್ಲಿಂದು ನೀಡಲ್ಕೆ ಮ ।
ಜ್ಜಿಗೆ ಬೇಕೆಂಬುವನಪ್ಪು ಗೂಡಿ ಮನುಜಂಗೇನಿರ್ದರೇನಪ್ಪುದೇ
ಮಿಗೆ ತೃಪ್ತಿತ್ವಕ್ಕೆ ಸಾಲದೆಂಬನಭವಾ ಪಂಪಾಪುರಾಧೀಶ್ವರಾ ॥

ಅಶಾಂತಿ, ಅವ್ಯವಸ್ಥೆಗಳ ಕಾಲದಲ್ಲಿದ್ದವನಾದರೂ ಕವಿ ಮನಸ್ಸಿನ ಸ್ತಿಮಿತವನ್ನು ಬೋಧಿಸುವ ಶತಕಗಳನ್ನೂ ಚಂಪೂಕಾವ್ಯವನ್ನೂ ರಚಿಸಬಲ್ಲಂಥ ರಸಪ್ರಜ್ಞೆಯನ್ನೂ ಸೃಜನಶೀಲತೆಯನ್ನೂ ಕಾಯ್ದುಕೊಂಡಿರುವುದು ಮೆಚ್ಚತಕ್ಕ ವಿಷಯ. (ಜಿ.ಆರ್.ಪಿ.)

**ಗಣೇಶ ದೈವಜ್ಞ :** ಪ್ರಾಚೀನ ಭರತಖಂಡದ ಪ್ರಸಿದ್ಧ ಜ್ಯೋತಿಷ್ಕರಲ್ಲಿ ಒಬ್ಬ. ಪಶ್ಚಿಮ ಸಮುದ್ರತೀರದಲ್ಲಿರುವ ನಂದಗಾವ್ ಎಂಬುದು ಈತನ ಊರು. ತಂದೆ ಕೇಶವ ದೈವಜ್ಞ, ತಾಯಿ ಲಕ್ಷ್ಮಿ. ಕೌಶಿಕ ಗೋತ್ರದವ. ಕಾಲ ಪ್ರ.ಶ.ಸು. 1500. ಗ್ರಹ ಲಾಘವ (ಪ್ರ.ಶ. 1520), ಲಘುತಿಥಿ ಚಿಂತಾಮಣಿ (ಪ್ರ.ಶ. 1525). ಬೃಹತ್ತಿಥಿ ಚಿಂತಾಮಣಿ, ಸಿದ್ಧಾಂತ ಶಿರೋಮಣಿ ಟೀಕೆ, ಲೀಲಾವತಿ ಟೀಕೆ (ಪ್ರ.ಶ. 1545), ವಿವಾಹ ಬೃಂದಾವನ ಟೀಕೆ, ಮುಹೂರ್ತತತ್ತ್ವ ಟೀಕೆ, ಶ್ರಾದ್ಧ ನಿರ್ಣಯ, ಛಂದೋರ್ಣವ ಟೀಕೆ, ತರ್ಜನೀಯಂತ್ರ, ಕಷ್ಣಾಷ್ಟಮೀ ನಿರ್ಣಯ, ಹೋಲಿಕಾ ನಿರ್ಣಯ, ಲಘೂಪಾಯ ಪಾಕ (ಪಾತ ಸರಣಿ ಪ್ರ.ಶ. 1538)–ಈ ಕೃತಿಗಳನ್ನು ಗಣೇಶ ದೈವಜ್ಞ ರಚಿಸಿದ್ದಾನೆ. ಇಷ್ಟಲ್ಲದೆ ಪರ್ವನಿರ್ಣಯ ಎಂಬ ಗ್ರಂಥದ ಕರ್ತೃ ಈತನೇ ಎಂದು ಕೆಲವರ ಅಭಿಪ್ರಾಯ. ಈತನ ಜನ್ಮವಿಚಾರದಲ್ಲಿ ಒಂದು ದಂತಕಥೆ ಇದೆ. ತಂದೆಯಾದ ಕೇಶವ ದೈವಜ್ಞ ಒಮ್ಮೆ ಮಾಡಿದ ಗ್ರಹಣ ಗಣಿತ ತಾಳೆಯಾಗಲಿಲ್ಲ. ಅದನ್ನು ಗಮನಿಸಿದ ರಾಜ ಅವನನ್ನು ಹಾಸ್ಯ ಮಾಡಿದ. ನೊಂದ ಕೇಶವ ನಂದಿಗ್ರಾಮಕ್ಕೆ ಹೋಗಿ ಗಣಪತಿ ದೇವಾಲಯದಲ್ಲಿ ಏಕಮನಸ್ಕನಾಗಿ ಗಣೇಶನನ್ನು ಕುರಿತು ತಪಸ್ಸು ಮಾಡಿದ. ತಪಸ್ಸಿಗೆ ಮೆಚ್ಚಿದ ಗಣಪತಿ ಸ್ವಪ್ನದಲ್ಲಿ ಬಂದು ದೃಕ್ಸಮವಾದ ಗ್ರಹಣಗಣಿತ ಆತನಿಂದ ಸಾಧ್ಯವೆಂತಲೂ ಗಣಪತಿಯ ಅಂಶದಿಂದ ಹುಟ್ಟುವ ಮಗ ಅದನ್ನು ಸಾಧಿಸುತ್ತಾನೆ ಎಂತಲೂ ತಿಳಿಸಿ ಅದೃಶ್ಯನಾದ. ಕೇಶವನ ಮಗ ಗಣೇಶ ದೈವಜ್ಞ ಈಶ್ವರಾಂಶದಿಂದ ಹುಟ್ಟಿದವನೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ ಈತ ದೈವಜ್ಞ; ದೈವಾಂಶಸಂಭೂತನೆಂಬುದು ಸರ್ವಸಮ್ಮತ.

ಸೂರ್ಯ ಸಿದ್ಧಾಂತ, ಆರ್ಯಭಟ ಸಿದ್ಧಾಂತ, ಬ್ರಹ್ಮ ಸಿದ್ಧಾಂತಗಳಿಂದ ಮೂಲಭೂತ ಅಂಶಗಳನ್ನು ಸ್ವೀಕರಿಸಿ ದೃಗ್ಗಣಿತೈಕ್ಯ ಸಾಧನೆಗಾಗಿ ಅಲ್ಪ ಮಾರ್ಪಾಡುಗಳನ್ನು ಮಾಡಿಕೊಂಡು ದೈವಜ್ಞ ಗ್ರಹಲಾಘವ ಗ್ರಂಥವನ್ನು ಸುಲಭ ಶೈಲಿಯಲ್ಲಿ ರಚಿಸಿದ್ದಾನೆ. ಈ ಕೃತಿ ಆಸೇತುಹಿಮಾಚಲಪರ್ಯಂತ ಜ್ಯೋತಿಷ ಸಿದ್ಧಾಂತ ಗಣಿತಜ್ಞರಿಗೆ ಅತ್ಯುಪಯುಕ್ತವಾಗಿದೆ. ಇದಕ್ಕೆ ಗಂಗಾಧರ (ಪ್ರ.ಶ. 1586), ಮಲ್ಲಾರಿ (ಪ್ರ.ಶ. 1602), ವಿಶ್ವನಾಥ್ (ಪ್ರ.ಶ. 1612)– ಇವರು ಟೀಕೆಗಳನ್ನು ರಚಿಸಿದ್ದಾರೆ. ಈ ಗ್ರಂಥದಲ್ಲಿ 14 ಅಧಿಕಾರಗಳಿವೆ. ಮಲ್ಲಾರಿ ಮತ್ತು ವಿಶ್ವನಾಥರ ಟೀಕೆಗಳಿಂದ ಇದರಲ್ಲಿ 15 ಅಧಿಕಾರಗಳಿರುವಂತೆ ತಿಳಿದುಬರುತ್ತದೆ. ಒಟ್ಟು ಶ್ಲೋಕಸಂಖ್ಯೆ 187.

ತಿಥಿ, ನಕ್ಷತ್ರ, ಯೋಗ, ಕರಣಗಳನ್ನು ಸುಲಭಕ್ರಮದಲ್ಲಿ ಗಣಿತ ಮಾಡುವ ವಿಧಾನ ಲಘು ಮತ್ತು ಬೃಹಚ್ಚಿಂತಾಮಣಿ ಗ್ರಂಥಗಳಲ್ಲಿದೆ.

ತರ್ಜನೀ ಯಂತ್ರ ಎಂಬ ಕೃತಿಯಲ್ಲಿ ಕಾಲ ಸಾಧನ ವಿಚಾರ ಉಕ್ತವಾಗಿದೆ. ಇದಕ್ಕೆ ಪ್ರತೋದಯ ಎಂಬ ಹೆಸರೂ ಉಂಟು. ಸಖಾರಾಮ ನೃಪ ಎಂಬಾತನೂ ಸಂಗಮೇಶ್ವರದ ಗೋಪೀನಾಥ ಎಂಬಾತನೂ ಇದಕ್ಕೆ ಟೀಕೆ ಬರೆದಿದ್ದಾರೆ. ಈ ಕೃತಿಗಳ ಅವಲೋಕನದಿಂದ ಗಣೇಶ ದೈವಜ್ಞನ ಗಣಿತ ಪ್ರೌಢಿಮೆ, ಜ್ಯೋತಿಷ, ಧರ್ಮಶಾಸ್ತ್ರಗಳಲ್ಲಿನ

ವಿದ್ವತ್ತು ಮತ್ತು ಗ್ರಂಥರಚನಾ ಸಾಮರ್ಥ್ಯಗಳು ಯಾವ ಮಟ್ಟದವು ಎಂಬುದು ತಿಳಿಯುತ್ತದೆ.

ಇದೇ ಹೆಸರಿನ ಬೇರೆ ಇಬ್ಬರು ದೈವಜ್ಞರ ಹೆಸರಗಳೂ ಪ್ರಚಾರದಲ್ಲಿವೆ. ತಾಜಕಭೂಷಣ ಮತ್ತು ಜಾತಕಾಲಂಕಾರ ಇವರ ಕೃತಿಗಳು. (ಎಸ್.ಎನ್.ಕೆ.)

**ಗಣೇಶನ್ :** ಒಂದು ತಮಿಳು ಮಾಸಪತ್ರಿಕೆ. 1965ರಲ್ಲಿ ಆರಂಭವಾಯಿತು. ವಿ.ಎಸ್. ಗಣೇಶನ್ ಸ್ಥಾಪಕ–ಸಂಪಾದಕ, ಪ್ರಕಾಶಕ, ಮಾಲೀಕ. ಮಧುರೆಯ ತಿರುಮಲ ಅಚಗಮ್‌ನಲ್ಲಿ ಮುದ್ರಿತಗೊಂಡು ಟಿ. ವಡಿಪಟ್ಟಿಯಿಂದ ಪ್ರಕಟವಾಗುತ್ತಿದೆ. ಚಲನಚಿತ್ರ ವಾರ್ತೆಗಳಿಗೆ ಮೀಸಲಾದ ಪತ್ರಿಕೆಯಿದು. (ಕೆ.ಆರ್.ಡಿ.)

**ಗಣೇಶ್, ಎಂ.ಪಿ. :** 1946–. ಒಲಂಪಿಕ್ಸ್‌ನಲ್ಲಿ ಭಾಗವಹಿಸಿದ ಪ್ರಸಿದ್ಧ ಹಾಕಿ ಆಟಗಾರ. 1946 ಜುಲೈ 8ರಂದು ಮಡಿಕೇರಿಯಲ್ಲಿ ಜನಿಸಿದರು. ಪ್ರಾರಂಭದ ದಿನಗಳಲ್ಲಿ ಫುಟ್‌ಬಾಲ್ ಆಟವನ್ನು ಆಡುತ್ತಿದ್ದ ಇವರು 1964ರಲ್ಲಿ ಸೈನ್ಯಕ್ಕೆ ಸೇರಿದ ಅನಂತರ ಹಾಕಿ ಆಟವನ್ನು ಮೈಗೂಡಿಸಿಕೊಂಡರು. ರಾಷ್ಟ್ರೀಯ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ಸರ್ವಿಸಸ್ ತಂಡದ ಆಟಗಾರರಾಗಿ 1968–73ರ ತನಕ ಮುಂಬಯಿಯನ್ನು ಪ್ರತಿನಿಧಿಸಿದರು. ಆಟದ ಶೈಲಿ ಹಾಗೂ ಸಾಧನೆಯಿಂದಾಗಿ 1970ರಲ್ಲಿ ಭಾರತ ಹಾಕಿ ತಂಡದ ಆಟಗಾರರಾಗಿ ಆಯ್ಕೆಗೊಂಡರು. ಇವರು ಏಷ್ಯನ್ ಕ್ರೀಡೆಗಳಲ್ಲಿ ಎರಡು ಬಾರಿ ಭಾರತವನ್ನು ಪ್ರತಿನಿಧಿಸಿದರು. 1970ರಲ್ಲಿ ಬ್ಯಾಂಕಾಕ್, 1974ರಲ್ಲಿ ತೆಹರಾನ್ ಈ ಎರಡೂ ಸಂದರ್ಭಗಳಲ್ಲಿ ಭಾರತ ತಂಡ ಪಾಕಿಸ್ತಾನಕ್ಕೆ ಸೋತು ಬೆಳ್ಳಿಯ ಪದಕದೊಂದಿಗೆ ಹಿಂದಿರುಗಿತು. 1969–74ರ ತನಕ ಹಲವಾರು ಪ್ರದರ್ಶನ ಹಾಗೂ ಟೆಸ್ಟ್

ಪಂದ್ಯಾಟಗಳನ್ನು ಆಡಿದ ಇವರು 1971ರಲ್ಲಿ ಬಾರ್ಸಿಲೋನದಲ್ಲಿ ನಡೆದ ಮೊದಲನೆಯ ವಿಶ್ವಕಪ್ ಪಂದ್ಯಾಟದಲ್ಲಿ ಆಟಗಾರರಾಗಿ ಭಾಗವಹಿಸಿ ಭಾರತಕ್ಕೆ ಕಂಚಿನ ಪದಕವನ್ನು ತಂದುಕೊಟ್ಟರು. 1972ರ ವಿಶ್ವಕಪ್ ಪಂದ್ಯಾಟದಲ್ಲಿ ಮತ್ತೊಮ್ಮೆ ಭಾರತ ಬೆಳ್ಳಿಯ ಪದಕ ಪಡೆಯಲು ನೆರವಾದರು. ಇವರು 1972ರ ಮ್ಯೂನಿಚ್ ಒಲಂಪಿಕ್ಸ್‌ನಲ್ಲಿ ಭಾರತ ತಂಡದ ಆಟಗಾರರಾಗಿದ್ದರು. ಭಾರತಕ್ಕೆ ಆಗ ಕಂಚಿನ ಪದಕ ದೊರಕಿತು. ಇಷ್ಟಲ್ಲದೆ 1972ರ ವಿಶ್ವ 11ರ ತಂಡದಲ್ಲಿ ಇವರು ಸ್ಥಾನ ಗಳಿಸಿದ್ದರು. 1970–74ರ ತನಕ ಏಷ್ಯ 11ರ ತಂಡದ ಆಟಗಾರರಾಗಿದ್ದರು.

ಗಣೇಶ್ ಒಬ್ಬ ಒಳ್ಳೆಯ ತರಬೇತುದಾರರು. 1974–77ರಲ್ಲಿ ಇವರು ಇಟಲಿಯ ತಂಡವೊಂದಕ್ಕೆ ತರಬೇತುದಾರರಾಗಿ ಸೇವೆ ಸಲ್ಲಿಸಿದರು. ಇವರು 1980ರ ಮಾಸ್ಕೋ ಒಲಂಪಿಕ್ ತಂಡದ ಹಾಕಿ ತರಬೇತುದಾರರಾಗಿದ್ದರು. ಆಗ ಭಾರತಕ್ಕೆ ಚಿನ್ನದ ಪದಕ ದೊರಕಿತು. ಭಾರತದ ಕಿರಿಯರ ತಂಡಕ್ಕೆ ಇವರು 1981–85ರಲ್ಲಿ ರಾಷ್ಟ್ರೀಯ ತರಬೇತುದಾರರಾಗಿದ್ದರು.

ಕರ್ನಾಟಕ ಸರ್ಕಾರ 1981ರಲ್ಲಿ ಇವರನ್ನು ಕ್ರೀಡೆಯ ಬೆಳವಣಿಗೆಗಾಗಿ ವಿಶೇಷ ಅಧಿಕಾರಿಯಾಗಿ ನೇಮಿಸಿತು. ಅನಂತರ 1986ರಲ್ಲಿ ಭಾರತೀಯ ಕ್ರೀಡಾ ಪ್ರಾಧಿಕಾರದ ಉಪನಿರ್ದೇಶಕರಾಗಿ, ಪ್ರಾಂತೀಯ ನಿರ್ದೇಶಕರಾಗಿ (1991), ದೈಹಿಕ ಶಿಕ್ಷಣದ ಕಾರ್ಯನಿರ್ವಾಹಕ ನಿರ್ದೇಶಕರಾಗಿ (1996) ಜವಾಬ್ದಾರಿಯನ್ನು ಹೊತ್ತು ಕೆಲಸ ನಿರ್ವಹಿಸಿದರು. ಅನಂತರ ದೆಹಲಿಯ ಭಾರತೀಯ ಕ್ರೀಡಾಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸಿದರು. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷಿನಲ್ಲಿ ಎಂ.ಎ. ಪದವಿಯನ್ನೂ ಅಳಗಪ್ಪ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನೂ ಪಡೆದಿದ್ದಾರೆ.

ಇವರಿಗೆ ಕರ್ನಾಟಕ ಸರ್ಕಾರದ ಹಲವು ಪ್ರಶಸ್ತಿಗಳು ಮತ್ತು ಭಾರತ ಸರ್ಕಾರದ ಅರ್ಜುನ ಪ್ರಶಸ್ತಿಯೂ (1973) ಲಭಿಸಿವೆ. (ಎಸ್.ಆರ್.ಯು.)

**ಗಣೇಶ, ರಾಜಾ :** ಬಂಗಾಳವನ್ನಾಳುತ್ತಿದ್ದ ಸುಲ್ತಾನರಿಂದ ರಾಜ್ಯ ಸೂತ್ರಗಳನ್ನು ಕಸಿದುಕೊಂಡಿದ್ದ ಒಬ್ಬ ಹಿಂದೂ ಪ್ರಮುಖ. ಮುಸ್ಲಿಂ ದೊರೆಗಳಿಂದ ಹಿಂದೂ ಆದವನೊಬ್ಬ ರಾಜ್ಯಾಡಳಿತ ಕಸಿದುಕೊಂಡ ವಿರಳ ಪ್ರಸಂಗವಿದಾದ್ದರಿಂದ ಇದಕ್ಕೆ ಪ್ರಾಮುಖ್ಯವುಂಟು. ಈ ಘಟನೆ ನಡೆದದ್ದುಂಟೆಂಬುದು ನಿಸ್ಸಂದೇಹವಾದರೂ ಇದರ ಬಗ್ಗೆ ಖಚಿತವಾದ ವಿವರಗಳು ತಿಳಿದಿಲ್ಲ. ಇವನನ್ನು ಮುಸ್ಲಿಂ ಇತಿಹಾಸಕಾರರು ರಾಜಾ ಕಾನ್ಸ್ ಅಥವಾ ಕಾನ್ಸಿ ಎಂದು ಕರೆದಿದ್ದಾರೆ. ಕೆಲವು ಹಿಂದೂ ಆಧಾರಗಳಿಂದ ಈತನ ಹೆಸರು ಗಣೇಶ ಎಂದು ತಿಳಿದುಬರುತ್ತದೆ. ಇದೇ ಈತನ ನಿಜವಾದ ಹೆಸರು ಎಂಬುದು ಈಗ ಬಹುತೇಕ ನಿಸ್ಸಂದೇಹ. ಈತ ಉತ್ತರ ಬಂಗಾಳದ ಒಬ್ಬ ಜಮೀನ್ದಾರ. 400 ವರ್ಷಗಳಿಗೂ ಹಳೆಯ ವಂಶವೊಂದರಲ್ಲಿ ಹುಟ್ಟಿದಾತ. 1389–1393ರ ನಡುವೆ ಸಿಂಹಾಸನವೇರಿದ್ದಿರಬಹುದಾದ ಘಿಯಾಸುದ್ದೀನ್ ಆಜ಼ಂ ಷಹನ ಕಾಲದಲ್ಲಿ ಈತ ಪ್ರಾಮುಖ್ಯ ಗಳಿಸಿದ. ಆಜ಼ಂ ಷಹನನ್ನು ಇವನು ಕೊಲ್ಲಿಸಿದನೆಂದು 1788ರಲ್ಲಿ ರಚಿಸಲಾದ ರಿಯಾಜ಼್ ಎಂಬ ಮುಸ್ಲಿಂ ಉದಂತವೊಂದರಲ್ಲಿ ಹೇಳಲಾಗಿದೆಯಾದರೂ ಇದಕ್ಕೆ ಬೇರಾವ ಆಧಾರವೂ ಸಿಗುವುದಿಲ್ಲ. ಅಂತೂ ಅಜ಼ಂ ಷಹನ ಅನಂತರ ಸೈಫುದ್ದೀನ್ ಹಂಜ಼ಾ ಷಹ ಪಟ್ಟಕ್ಕೆ ಬಂದ. ಈತ ತುಂಬ ದುರ್ಬಲ ಅರಸ. ಇವನ ಆಳ್ವಿಕೆಯ ಕಾಲದಲ್ಲಿ ಆಸ್ಥಾನಿಕರೂ ಸೇನಾ ನಾಯಕರೂ ಪ್ರಬಲರಾದರು. ಇವರ ಪೈಕಿ ಗಣೇಶ ಪ್ರಮುಖ. ಹಂಜ಼ಾ ಷಹನ ಅನಂತರ ಬಂದ ಸುಲ್ತಾನನಾದ ಷಿಹಾಬುದ್ದೀನನ ಮರಣಾನಂತರ (ಅವನನ್ನು ಕೊಲ್ಲಿಸಿದವನು ಗಣೇಶನೇ ಎಂಬುದಾಗಿಯೂ ಒಂದು ಮೂಲ ತಿಳಿಸುತ್ತದೆ) ಗಣೇಶ ಅಧಿಕಾರ ಗಳಿಸಿಕೊಂಡನೆಂದೂ ಹೇಳಲಾಗಿದೆ. ಗಣೇಶ ವಾಸ್ತವವಾಗಿ ರಾಜ ನಿರ್ಮಾಪಕನಾಗಿದ್ದನೆಂಬುದಂತೂ ನಿಜ. ಈತನೇ ಸಿಂಹಾಸನವನ್ನೇರಿದನೆಂದೂ ಕೆಲವರು ಹೇಳುತ್ತಾರೆ. ರಾಜಾ ಗಣೇಶನ ನಾಣ್ಯಗಳು ಯಾವುವೂ ಇದುವರೆಗೂ ಸಿಕ್ಕಿಲ್ಲ. ಇವನಿಗೆ ಹಿಂದಿನ ಮತ್ತು ಮುಂದಿನ ಸುಲ್ತಾನರ ನಾಣ್ಯಗಳಿವೆ. ರಾಜಾ ಗಣೇಶ ರಾಜ್ಯವಾಳಿದನೆಂದೂ ಸಿಂಹಾಸನವನ್ನೇರಿದ ಮೇಲೆ ದನುಜಮರ್ದನದೇವ, ಮಹೇಂದ್ರದೇವ ಎಂಬ ಹೆಸರುಗಳನ್ನೂ ತಳೆದನೆಂದೂ ಕೆಲವರು ಊಹಿಸಿದ್ದಾರೆ. ಇದೇ ರೀತಿ ಇನ್ನೂ ಅನೇಕ ಊಹೆಗಳಿವೆ.

ಅಂತೂ ಈತ 15ನೆಯ ಶತಮಾನದ ಆದಿಯಲ್ಲಿ ಅಧಿಕೃತವಾಗಿಯೋ ಅನಧಿಕೃತವಾಗಿಯೋ ಆಡಳಿತ ನಡೆಸಿದ್ದು ನಿಜ. ಗಣೇಶ ಏಳು ವರ್ಷಗಳ ಕಾಲ ರಾಜ್ಯವಾಳಿದನೆಂದೂ ಇವನ ಅನಂತರ ಇವನ ಎರಡನೆಯ ಮಗ ಜಲಾಲುದ್ದೀನ್ ಸಿಂಹಾಸನವನ್ನೇರಿದನೆಂದೂ ಫಿರಿಷ್ತಾನಿಂದ ತಿಳಿದುಬರುತ್ತದೆ. ಈತ 1415 ರಿಂದ 1431ರ ವರೆಗೆ ಆಳಿದ. ರಾಜಾ ಗಣೇಶನ ಕಾಲದಲ್ಲಿ ಮುಸ್ಲಿಮರ ಒತ್ತಡದಿಂದಾಗಿ ಅವನ ಎರಡನೆಯ ಮಗ ಮುಸ್ಲಿಮನಾದನೆಂಬುದು ಒಂದು ವಾದ. ಗಣೇಶ ಸ್ವತಃ ಅಧಿಕಾರವನ್ನು ತನ್ನ ಮಗ ಜಾದುವಿಗೆ ವಹಿಸಿಕೊಟ್ಟನೆಂದೂ ಅವನು ಅನಂತರ ಮುಸ್ಲಿಂ ಮತಕ್ಕೆ ಪರಿವರ್ತನೆ ಹೊಂದಿ ಜಲಾಲುದ್ದೀನ್ ಮುಹಮ್ಮದ್ ಷಹ ಎಂಬ ಹೆಸರಿನಿಂದ ರಾಜ್ಯವಾಳಿದನೆಂದೂ ಕೆಲವು ಮುಸ್ಲಿಂ ಇತಿಹಾಸಕಾರರು ಹೇಳಿದ್ದಾರೆ. ಜಲಾಲುದ್ದೀನನ ಮರಣಾನಂತರ ಅವನ ಮಗ 1435ರ ವರೆಗೆ ಆಳಿದ. ಈತ ಕೊಲೆಗೆ ಗುರಿಯಾದ. ರಾಜಾ ಗಣೇಶನ ವಂಶದ ಅಧಿಕಾರ ಕೊನೆಗೊಂಡಿತು. ಸ್ವಲ್ಪ ಕಾಲಾನಂತರ ರಾಜ್ಯಸೂತ್ರ ಮತ್ತೆ ಹಿಂದಿನ ಸುಲ್ತಾನವಂಶಕ್ಕೆ ಹೋಯಿತು. (ಎ.ವಿ.ವಿ.)

**ಗಣೇಶ ಶಂಕರ ವಿದ್ಯಾರ್ಥಿ :** 1890–1931. ಹಿಂದೀ ಸಾಹಿತಿ ಮತ್ತು ಸಾರ್ವಜನಿಕ ಕಾರ್ಯಕರ್ತ. ಉತ್ತರ ಪ್ರದೇಶದ ನನಿಹಾಲ್ ಪ್ರಯಾಗನಲ್ಲಿ ಜನಿಸಿದ. ತಂದೆಯ ಹೆಸರು ಜಯನಾರಾಯಣ. ಮುಂಗಾವಲಿ (ಗ್ವಾಲೀರ್) ಎಂಬಲ್ಲಿ ಶಿಕ್ಷಣ ನಡೆಯಿತು. ಅನಂತರ ಕಾನ್‌ಪುರದಲ್ಲಿ ಸರ್ಕಾರಿ ನೌಕರಿ ಹಿಡಿದನಾದರೂ ಅಲ್ಲಿನ ಇಂಗ್ಲಿಷ್ ಅಧಿಕಾರಿಗಳ ಜೊತೆಗೆ ಹೊಂದಿಕೊಳ್ಳಲು ಆಗದ್ದರಿಂದ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟ. ಅನಂತರ ಸರಸ್ವತಿ, ಅಭ್ಯುದಯ ಇತ್ಯಾದಿ ನಿಯತಕಾಲಿಕ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯತೊಡಗಿದ. ಪ್ರಭಾ ಪತ್ರಿಕೆಯ ಸಂಪಾದಕನಾದ. 1913ರಲ್ಲಿ ಪ್ರತಾಪ ವಾರಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡ ಮೇಲೆ ಒಂದುಕಡೆ ನೆಲೆ ನಿಲ್ಲಲು ಸಾಧ್ಯವಾಯಿತು. ಕ್ರಮೇಣ ಪತ್ರಕರ್ತ, ನಿಬಂಧ ಲೇಖಕ ಮತ್ತು ವಿಶಿಷ್ಟ ಶೈಲಿಯ ಬರೆಹಗಾರ ಎಂದು ಹಿಂದೀ ಸಾಹಿತ್ಯದಲ್ಲಿ ಈತ ಪ್ರಸಿದ್ಧಿ ಗಳಿಸಿದ. ಒಕ್ಕಲಿಗರ ಚಳವಳಿಗಳಲ್ಲಿ, ಸಾಮಾಜಿಕ ಮತ್ತು ರಾಜಕೀಯ ಚಳವಳಿಗಳಲ್ಲಿ ನಿರ್ಭಯದಿಂದ ಈತ ಸಕ್ರಿಯವಾಗಿ ಭಾಗವಹಿಸಿದ. ಕಾನ್‌ಪುರದಲ್ಲಿ ನಡೆದ ಹಿಂದೂ–ಮುಸ್ಲಿಂ ದುರಂತದಲ್ಲಿ ನೊಂದವರಿಗೆ ಸಹಾಯ ಮಾಡುತ್ತಿರುವ ಸಮಯದಲ್ಲಿ ಗುಂಡಿನೇಟಿಗೆ ಬಲಿಯಾಗಿ ಈತ ಅಕಾಲ ಮರಣಕ್ಕೆ ತುತ್ತಾದ. *

**ಗಣೇಶ್ವರ :** ರಾಜಸ್ತಾನ ರಾಜ್ಯದ ಸೀಕರ್ ಜಿಲ್ಲೆಯ ನೀಮ್-ಕ-ಥಾಣ ತಾಲ್ಲೂಕಿನಲ್ಲಿರುವ ಪ್ರಾಚೀನ ನೆಲೆ. ಇಲ್ಲಿ ದೊರೆತ ಪ್ರಾಚ್ಯಾವಶೇಷಗಳು ವಿಭಿನ್ನವೂ ವಿಶಿಷ್ಟವೂ ಆಗಿವೆ. ಇಲ್ಲಿ ಪ್ರತಿನಿಧಿತವಾದ ಸಂಸ್ಕೃತಿಯನ್ನು ಗಣೇಶ್ವರ ಸಂಸ್ಕೃತಿ ಎಂಬ ಹೆಸರಿನಿಂದ ಕರೆಯಲಾಗಿದೆ. ಗಣೇಶ್ವರದ ಸುತ್ತಮುತ್ತ ನಡೆಸಿದ ಸರ್ವೇಕ್ಷಣೆಯಲ್ಲಿ ಹಾಗೂ ಗಣೇಶ್ವರದಲ್ಲಿ ನಡೆದ ಉತ್ಖನನದಲ್ಲಿ ಸು. 1000 ತಾಮ್ರದ ಉಪಕರಣಗಳು ಸಿಕ್ಕವು. ಭಾರತದ ಇತರ ಯಾವ ಪುರಾತತ್ತ್ವ ನೆಲೆಯಲ್ಲೂ ಈ ಸಂಖ್ಯೆಯಲ್ಲಿ ತಾಮ್ರೋಪಕರಣಗಳು ದೊರೆತಿಲ್ಲ. ಇದೇ ಗಣೇಶ್ವರ ನೆಲೆಯ ಮತ್ತು ಸಂಸ್ಕೃತಿಯ ವಿಶೇಷತೆ. ಈ ಸಂಸ್ಕೃತಿ ಪ್ರ.ಶ. 20ನೆಯ ಶತಮಾನದ 70ರ ದಶಕದಲ್ಲಿ ಬೆಳಕಿಗೆ ಬಂದಿತು. ಚಪ್ಪಟೆಯಾದ ಕೊಡಲಿ, ಬಾಣದ ಮೊನೆ, ಭರ್ಜಿಯ ಮೊನೆ, ಅಲಗು, ಮೀನಿನ ಗಾಳದ ಕೊಕ್ಕೆ, ತಂತಿ, ಮೊಳೆ, ಉಳಿ-ಹೀಗೆ ಹಲವಾರು ಬಗೆಯ ಉಪಕರಣಗಳು ಈ ಸಂಸ್ಕೃತಿಯ ನೆಲೆಗಳಲ್ಲಿ ದೊರೆತಿವೆ. ಇವುಗಳಲ್ಲಿ ಅಲಗು, ಬಾಣದ ಮೊನೆ, ಗಾಳದ ಕೊಕ್ಕೆ ಮುಂತಾದ ನಮೂನೆಗಳು ಹರಪ್ಪ ಸಂಸ್ಕೃತಿಯ ನೆಲೆಗಳಲ್ಲೂ ಸಾಮಾನ್ಯವಾಗಿ ಕಂಡುಬರುತ್ತವೆ. ಮೀನುಗಾರಿಕೆ ಮತ್ತು ಬೇಟೆ ಗಣೇಶ್ವರ ಸಂಸ್ಕೃತಿಯ ಜೀವನಾಧಾರಗಳಾಗಿದ್ದವೆಂಬುದು ಉಪಕರಣಗಳ ನಮೂನೆಗಳಿಂದ ಸೂಚಿತವಾಗುತ್ತದೆ. ಈ ಸಂಸ್ಕೃತಿಯನ್ನು ಸಮಕಾಲೀನ – ತಾಮ್ರಶಿಲಾ, ತಾಮ್ರೋಪಕರಣ ಗುಡ್ಡೆ ಅಥವಾ ಹರಪ್ಪ ಯಾವ ಸಂಸ್ಕೃತಿಗೆ ಸೇರಿಸಬೇಕೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಗಣೇಶ್ವರದ ಉಪಕರಣಗಳಿಗೂ ಗಂಗಾ-ಯಮುನ ನದಿ ಬಯಲಿನಲ್ಲಿ ದೊರೆಯುವ ತಾಮ್ರೋಪಕರಣ ಗುಡ್ಡೆ ಸಂಸ್ಕೃತಿಯ ಉಪಕರಣಗಳಿಗೂ ಯಾವುದೇ ಸಾಮ್ಯವಿಲ್ಲ ಎಂಬುದು ಗಮನಿಸಬೇಕಾದ ವಿಷಯ. ಬ್ರಿಜೆಟ್ ಮತ್ತು ರೇಮಂಡ್ ಆಲ್ಚಿನ್ ಅವರ ಪ್ರಕಾರ ಗಣೇಶ್ವರ ಮತ್ತು ಆಹಾರ್ ಸಂಸ್ಕೃತಿಗಳು ಸ್ವತಂತ್ರ ಪ್ರಾದೇಶಿಕ ಸಂಸ್ಕೃತಿಗಳಾಗಿದ್ದವು. ಆದರೆ ಇವು ನಗರೀಕೃತ ಹರಪ್ಪ ಸಂಸ್ಕೃತಿಯೊಂದಿಗೆ ವ್ಯಾಪಾರ ಸಂಬಂಧವನ್ನಿಟ್ಟು ಕೊಂಡಿದ್ದವು. ಗಣೇಶ್ವರದ ಸಿದ್ಧ ಉಪಕರಣಗಳನ್ನು ಹರಪ್ಪ ಮತ್ತು ಅಹಾರ್ ಸಂಸ್ಕೃತಿಯ ವಸತಿಗಳು ಪ್ರಾಯಶಃ ತರಿಸಿಕೊಳ್ಳುತ್ತಿದ್ದವು. ಗಣೇಶ್ವರ ಮತ್ತು ಕಾಲಿಬಂಗನ್ ನಡುವೆ ಹರಪ್ಪ ಪೂರ್ವ ಮತ್ತು ಹರಪ್ಪ ಕಾಲಗಳಲ್ಲಿದ್ದ ಸಂಪರ್ಕಕ್ಕೆ ಸಾಕಷ್ಟು ಪುರಾವೆಗಳಿವೆ.

ಗಣೇಶ್ವರ ಖೇತ್ರಿ ತಾಮ್ರಗಣಿಗಳಿಂದ 75ಕಿಮೀ ದೂರದಲ್ಲಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಗಣೇಶ್ವರ ಸಂಸ್ಕೃತಿಗೆ ಸೇರುವ 5,000ಕ್ಕೂ ಹೆಚ್ಚು ತಾಮ್ರ ಉಪಕರಣಗಳು ಈ ವಲಯದಿಂದ ಲಭಿಸಿವೆ. ಆರ್.ಸಿ. ಅಗ್ರವಾಲರ ಅಭಿಪ್ರಾಯದಲ್ಲಿ ಗಣೇಶ್ವರ ಸಂಸ್ಕೃತಿಯ ಜನರೇ ಖೇತ್ರಿ ಪ್ರದೇಶದ ಮೂಲ ನಿವಾಸಿಗಳು. ಗಣೇಶ್ವರ ಸಂಸ್ಕೃತಿಯ ನಿವೇಶನಗಳು ಖೇತ್ರಿ ಗಣಿಗಳನ್ನು ಆರ್ಥಿಕವಾಗಿ ಅವಲಂಬಿಸಿದ್ದವು ಎಂಬುದನ್ನು ಆಲ್ಚಿನ್ ದಂಪತಿಗಳೂ ಸಮರ್ಥಿಸುತ್ತಾರೆ.

ತಾಮ್ರ ಉಪಕರಣಗಳ ಜತೆಗೆ ಮಣ್ಪಾತ್ರೆಗಳೂ ಈ ನಿವೇಶನಗಳಲ್ಲಿ ಸಿಕ್ಕಿವೆ. ಇವನ್ನು ಗಣೇಶ್ವರ ಪಾತ್ರೆಗಳೆಂದೇ ಹೇಳಲಾಗುತ್ತದೆ. ಇವು ಹೆಚ್ಚಾಗಿ ಸೀಕರ್ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಗಣೇಶ್ವರ ಸಂಸ್ಕೃತಿ ಪ್ರ.ಶ.ಪೂ. 3000–2800ರ ಅವಧಿಯಲ್ಲಿ ಆರಂಭವಾಗಿರಬೇಕೆಂದು ಮಣ್ಪಾತ್ರೆಗಳ ತೌಲನಿಕ ಅಧ್ಯಯನದಿಂದ ತಿಳಿದುಬಂದಿದೆ. ಈ ಮಣ್ಪಾತ್ರೆಗಳು ಇಲ್ಲಿಂದ 40 ಕಿಮೀ ದೂರದಲ್ಲಿರುವ ಜೋಧಪುರದಲ್ಲಿ ದೊರೆತ ಕಾವಿಬಣ್ಣದ ಮಣ್ಪಾತ್ರೆಗಳನ್ನು ಹೋಲುತ್ತವೆ. ಜೋಧಪುರದ ಪಾತ್ರೆಗಳು ಇಂಗಾಲ14ರ ಕಾಲನಿರ್ಣಯಕ್ಕೆ ಒಳಗಾಗಿವೆ. ಈ ಕಾಲಮಾನವನ್ನು ನಿರ್ಣಯಿಸಿದ ಡಿ.ಪಿ. ಅಗ್ರವಾಲರು ಇದೇ ಆಧಾರದ ಮೇಲೆ ಗಣೇಶ್ವರ ಸಂಸ್ಕೃತಿ ಪ್ರ.ಶ.ಪೂ. 3000ದ ಆಸುಪಾಸಿನಲ್ಲಿ ಪ್ರಾರಂಭವಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ. (ಪಿ.ಎಸ್.ಜಿ.)

**ಗತಿ ಅರ್ಥಶಾಸ್ತ್ರ :** ಬದಲಾವಣೆಯೇ ಎಲ್ಲ ವಾಸ್ತವ ಪರಿಸ್ಥಿತಿಗಳ ಲಕ್ಷಣ–ಎಂಬ ಸಂಗತಿಯನ್ನಾಧರಿಸಿದ ಆರ್ಥಿಕ ಸಿದ್ಧಾಂತ (ಡೈನಾಮಿಕ್ ಎಕನಾಮಿಕ್ಸ್). ಅಸ್ತವ್ಯಸ್ತಗೊಳಿಸುವ ಬದಲಾವಣೆಗಳು ಯಾವುವೂ ಸಂಭವಿಸುವುದಿಲ್ಲವೆಂಬುದಾಗಿ ಸಿದ್ಧಾಂತದ ಸಲುವಾಗಿ ಊಹೆಯನ್ನಾಧರಿಸಿರುವ ಸ್ಥಿರ ಅರ್ಥಶಾಸ್ತ್ರದಿಂದ (ಸ್ಟ್ಯಾಟಿಕ್ ಎಕನಾಮಿಕ್ಸ್) ಇದು ಭಿನ್ನವಾದ್ದು. ಯಾವುದಾದೊಂದು ವಿದ್ಯಮಾನದ ಮೇಲೆ ಪ್ರಭಾವ ಬೀರಬಹುದಾದ ಕೆಲವು ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ, ಅವನ್ನು ಬದಲಾವಣೆಗೆ ಗುರಿಪಡಿಸಬಹುದಾದ ಇತರ ಅಂಶಗಳು. ಬಲಗಳು ಅಥವಾ ಪ್ರಾಚಲಗಳು ಸದ್ಯಕ್ಕೆ ತಟಸ್ಥವಾಗಿವೆಯೆಂದು, ಇದ್ದಂತೆಯೇ ಇರುತ್ತವೆಂದು, ಊಹಿಸಿ ಕೊಂಡು ಮುಂದುವರಿಯುವುದು ಸ್ಥಿರ ವಿಶ್ಲೇಷಣೆಯ ವಿಧಾನ. ಇದು ಸಮಸ್ಯೆಯನ್ನು ಸರಳೀಕರಿಸುವ ಒಂದು ಬಗೆ. ಉದಾಹರಣೆಗೆ, ಒಂದು ಪದಾರ್ಥದ ಬೇಡಿಕೆ–ಸರಬರಾಯಿಗಳಿಂದ ಅದರ ಬೆಲೆ ಹೇಗೆ ನಿಷ್ಕರ್ಷಿಸಲ್ಪಡುತ್ತದೆಯೆಂಬುದನ್ನು ಪರಿಶೀಲಿಸುವಾಗ ಜನಸಂಖ್ಯೆ, ಸಂಪನ್ಮೂಲಗಳು, ತಂತ್ರ ಮುಂತಾದ ಇತರ ಅಂಶಗಳಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲವೆಂದು ಭಾವಿಸಿಕೊಳ್ಳುವುದುಂಟು. ಕಾಲದ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಯಾವುದೋ ದತ್ತ ಕ್ಷಣದಲ್ಲಿ ಬೇಡಿಕೆ–ಸರಬರಾಯಿ–ಬೆಲೆಗಳ ನಡುವಣ ಬಾಂಧವ್ಯ ಯಾವ ರೀತಿ ಇರುತ್ತದೆಯೆಂಬುದನ್ನು ಇಲ್ಲಿ ಪರಿಶೀಲಿಸಲಾಗುತ್ತದೆ. ಅಸ್ಥಿರತೆಗೆ ಕಾರಣವಾದ ಅನೇಕಾನೇಕ ಬಲಗಳ ಪೈಕಿ ಒಂದೊಂದನ್ನೇ ಎತ್ತಿಕೊಂಡು ಅವುಗಳ ವ್ಯತ್ಯಾಸದಿಂದ ಏನು ಪರಿಣಾಮ ಉಂಟಾಗುವುದೆಂಬುದು ಸ್ಥಿರ ಅರ್ಥಶಾಸ್ತ್ರದ ಅಧ್ಯಯನ ವಿಷಯ. ಹೀಗೆಂದ ಮಾತ್ರಕ್ಕೆ ಆರ್ಥಿಕತೆಯಲ್ಲಿ ಚಲನೆಯೇ ಇಲ್ಲವೆಂದು ಅದು ಹೇಳವುದಿಲ್ಲ. ಆರ್ಥಿಕತೆಯಲ್ಲಿ ಬದಲಾವಣೆಗಳಾಗುವುದನ್ನು ಕೂಡ ಅದು ಒಪ್ಪಿಕೊಂಡರೂ ಆ ಬದಲಾವಣೆ ಒಂದು ಸ್ಥಿರವಾದ ದರದಲ್ಲಿ ಆಗುತ್ತಿದೆಯೆಂಬುದು ಅದರ ಪರಿಭಾವನೆ. ಈ ಊಹೆಯ ಮೇಲೆಯೇ ಆ ಸಿದ್ಧಾಂತದ ರಚನೆಯಾಗಿದೆ.

ಚಲನಾತ್ಮಕವಾದ, ವ್ಯತ್ಯಾಸಕ್ಕೆ ಒಳಗಾಗಿರುವ ಆರ್ಥಿಕತೆಯ ಅಧ್ಯಯನವೇ ಗತಿ ಅರ್ಥಶಾಸ್ತ್ರದ ಗುರಿ. ಒಂದಾದ ಮೇಲೊಂದರಂತೆ ಸಂಭವಿಸುವ ಬದಲಾವಣೆಗಳ ಅನಂತರ ಸ್ಥಾಪಿತವಾದ ಸಮತೋಲಗಳನ್ನು ತೌಲನಿಕ ಸ್ಥಿತಿಶಾಸ್ತ್ರ ಪರಿಶೀಲಿಸುತ್ತದೆ. ಆದರೆ ಒಂದು ತೌಲನಿಕ ಸ್ಥಿತಿ ಮಟ್ಟದಿಂದ ಇನ್ನೊಂದು ತೌಲನಿಕ ಸ್ಥಿತಿ ಮಟ್ಟವನ್ನು ತಲಪುವಾಗ ಒಂದು ವ್ಯವಸ್ಥೆ ಅನುಸರಿಸುವ ಮಾರ್ಗವನ್ನು ಅಧ್ಯಯನ ಮಾಡುವುದು ಗತಿ ವಿಶ್ಲೇಷಣೆಯ ಉದ್ದೇಶ. ವ್ಯತ್ಯಾಸಕಾರಕವಾದ ಒಂದೊಂದೇ ಅಥವಾ ಕೆಲವೇ ಅಂಶಗಳನ್ನು ಪ್ರತ್ಯೇಕಿಸಿ, ಇತರ ಅಂಶಗಳು ಸಮನಾಗಿವೆಯೆಂದು ಭಾವಿಸಿ ಮುಂದುವರಿಯು ವುದು ಇದರ ವಿಧಾನವಲ್ಲ. ಎಲ್ಲ ಬದಲಾವಣೆಗಳನ್ನೂ ಗತಿವಿಲಂಬಗಳನ್ನೂ ಕ್ರಮಾನುಗತಿ ಗಳನ್ನೂ ಸಂಚಿತ ಪರಿಮಾಣಗಳನ್ನೂ ನಿರೀಕ್ಷೆಗಳನ್ನೂ ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಇದು ಹೆಚ್ಚು ವಾಸ್ತವವಾದ ವಿಧಾನ. ಇದು ಅತ್ಯಂತ ವ್ಯಾಪಕವಾದ ವಿಧಾನ. ಈ ವಿಶ್ಲೇಷಣೆಯಲ್ಲಿ ಯಾವ ಅಂಶವನ್ನೂ, ಅದು ಎಷ್ಟೇ ಸಣ್ಣದಾಗಿರಲಿ, ಪರಿಗಣನೆಗೆ ತೆಗೆದು ಕೊಳ್ಳದೆ ಇರುವುದಿಲ್ಲ. ಆದ್ದರಿಂದ ಇದು ಅತ್ಯಂತ ಸಂಕೀರ್ಣವಾದ ವಿಶ್ಲೇಷಣ ವಿಧಾನ.

ಕಾಲವನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳುವುದು ಅವಶ್ಯ. ಅದಿಲ್ಲದಿದ್ದರೆ ಚಿತ್ರ ಸಂಪೂರ್ಣವಾಗದು. ಉದಾಹರಣೆಗೆ, ಒಂದು ಅವಧಿಯಲ್ಲಿ ಆಗುವ ಉತ್ಪತ್ತಿ ಅದಕ್ಕೆ ಹಿಂದಿನ ಅವಧಿಯಲ್ಲಿ ಕೈಗೊಳ್ಳಲಾದ ಅನೇಕ ತೀರ್ಮಾನಗಳ ಪರಿಣಾಮ. ಒಂದು ಪದಾರ್ಥದ ಸರಬರಾಯಿಯಾದರೂ ಆ ಸಮಯದಲ್ಲಿ ಮಾರುಕಟ್ಟೆಯಲ್ಲಿರುವ ಬೆಲೆಯನ್ನು ಮಾತ್ರವೇ ಅವಲಂಬಿಸಿರುವುದಿಲ್ಲ. ಭವಿಷ್ಯದಲ್ಲಿಯ ಬೆಲೆಗಳ ಬಗ್ಗೆ ಉತ್ಪಾದಕರ ನಿರೀಕ್ಷೆ ಏನೆಂಬುದನ್ನೂ ಅದು ಅವಲಂಬಿಸಿರುತ್ತದೆ.

ಆರ್ಥಿಕ ವಿಶ್ಲೇಷಣೆಯ ಇತಿಹಾಸದ ಆರಂಭದ ಕಾಲದಲ್ಲಿ ಸ್ಥಿತಿ ಮತ್ತು ಗತಿ ವಿಶ್ಲೇಷಣೆಗಳ ನಡುವೆ ಯಾವ ಖಚಿತ ವ್ಯತ್ಯಾಸವೂ ಇರಲಿಲ್ಲ. ಆಡಳಿತಗಾರರಿಗೆ ಉಪಯುಕ್ತವಾದ ಸಲಹೆ ನೀಡುವುದಷ್ಟೇ ಅರ್ಥಶಾಸ್ತ್ರಜ್ಞರ ಉದ್ದೇಶವಾಗಿತ್ತು. ವೈಜ್ಞಾನಿಕ ವಿಶ್ಲೇಷಣೆಯ ಆಧಾರದ ಮೇಲೆ ಕ್ರಮಬದ್ಧವಾದ ಅಧ್ಯಯನ ನಡೆಸುವುದು ಅವರ ಪದ್ಧತಿಯಾಗಿರಲಿಲ್ಲ. ಆದ್ಯ ಅಭಿಜಾತ ಅರ್ಥಶಾಸ್ತ್ರಜ್ಞರು ಇವೆರಡೂ ವಿಶ್ಲೇಷಣ ವಿಧಾನಗಳ ನಡುವೆ ಸಂಲಗ್ನವನ್ನು ಸಾಧಿಸಿದ್ದರು. ಮಾಲ್ಥಸ್, ರಿಕಾರ್ಡೊ, ಜೆ. ಎಸ್. ಮಿಲ್ ಈ ವಿಧಾನ ಅನುಸರಿಸಿದ್ದರು. ಕೂಲಿ, ಲಾಭ, ಗೇಣಿ ಇವನ್ನು ಕುರಿತ ಶುದ್ಧ ಸ್ಥಿರ ಸಿದ್ಧಾಂತವನ್ನು ಬಂಡವಾಳ ಮತ್ತು ಜನಸಂಖ್ಯೆ ಬೆಳವಣಿಗೆಯ ದರಗಳಿಗೆ ಕಾರಣವಾದ ಕ್ರಿಯಾವಿನ್ಯಾಸಕ್ಕೆ ಹೊಂದಿಸಲಾಗಿತ್ತು. ಆ ಮಾದರಿಯನ್ನು ಹೀಗೆ ವಿವರಿಸಬಹುದು: ಅಲ್ಪಾವಧಿಯಲ್ಲಿ ಕಾರ್ಮಿಕರಿಗಾಗಿ ಇರುವ ಬೇಡಿಕೆಯೇ ಕೂಲಿಯನ್ನು ನಿರ್ಣಯಿಸುತ್ತದೆ. ಬಂಡವಾಳದ ಸರಬರಾಯಿ ಅಧಿಕವಾದಂತೆ ಈ ಬೇಡಿಕೆಯೂ ಅಧಿಕವಾಗುತ್ತದೆ. ಕಾರ್ಮಿಕರಿಗಾಗಿ ಬೇಡಿಕೆ ಅಧಿಕವಾದಾಗ ಕೂಲಿಯೂ ಅಧಿಕವಾಗುತ್ತದೆ; ಇದರಿಂದ ಜನಸಂಖ್ಯೆಯ ಬೆಳವಣಿಗೆಗೆ ಪ್ರೋತ್ಸಾಹ ದೊರಕುತ್ತದೆ. ಇದರಿಂದ ಕಾರ್ಮಿಕರ ಸರಬರಾಯಿ ಹೆಚ್ಚುತ್ತದೆ. ಇದು ಕೂಲಿಯ ಇಳಿತಾಯಕ್ಕೆ ಕಾರಣ. ಆಗ ಲಾಭ ಅಧಿಕವಾಗಬೇಕು. ಅದರ ಫಲ ಬಂಡವಾಳದ ಸರಬರಾಯಿ ಹೆಚ್ಚಳ. ಹೀಗೆ ಕಾಲಾನುಕ್ರಮದಲ್ಲಿ ಬಂಡವಾಳದ ಸರಬರಾಜು, ಜನಸಂಖ್ಯೆ ಮತ್ತು ಕಾರ್ಮಿಕರ ಸರಬರಾಯಿ ಈ ಮೂರೂ ಅಧಿಕವಾಗುತ್ತವೆ. ತತ್ಪರಿಣಾಮವಾಗಿ ಕೂಲಿಯೂ ಅಧಿಕವಾಗಬೇಕು. ಆದರೆ ಈ ಪ್ರವೃತ್ತಿ ಅನಿರ್ದಿಷ್ಟಕಾಲ ಮುಂದುವರಿಯಲಾರದು. ಏಕೆಂದರೆ ನೆಲ ಮತ್ತು ಇತರ ನಿಸರ್ಗ ಸಾಧನಗಳು ಅಮಿತವಾಗಿಲ್ಲ. ಜನಸಂಖ್ಯೆ ಅಧಿಕವಾದಾಗ ನಿಸರ್ಗ ಸಾಧನಗಳು ಅಮಿತವಾಗಿಲ್ಲ. ಜನಸಂಖ್ಯೆ ಅಧಿಕವಾದಾಗ ನಿಸರ್ಗ ಸಾಧನಗಳ ದೃಷ್ಟಿಯಲ್ಲಿ ಕಾರ್ಮಿಕ ಸರಬರಾಜಿನ ಪ್ರಮಾಣ ಅಧಿಕವಾಗುತ್ತದೆ. ನಿಸರ್ಗ ಸಾಧನಗಳು ಅಚಲವಾಗಿದ್ದು ಕಾರ್ಮಿಕ ಸರಬರಾಜು ಅಧಿಕವಾದರೆ ತತ್‌ಕ್ಷಣವೋ ಸ್ವಲ್ಪ ಕಾಲಾ ನಂತರವೋ ಅಂಚಿನ ಪ್ರತಿಫಲ

ಇಳಿಮುಖವಾಗುವುದೆಂಬ ನಿಯಮ–ಇಳಿಮುಖ ಪ್ರತಿಫಲ ನಿಯಮ–ಪ್ರವೇಶಿಸುತ್ತದೆ. ಆದ್ದರಿಂದ ಜನಸಂಖ್ಯೆ ಬೆಳೆವಣಿಗೆಯ ಪ್ರಕ್ರಿಯೆಯಿಂದಾಗಿ ಉತ್ಪತ್ತಿ ಕಡಿಮೆಯಾಗಿ, ಲಾಭ ಇಳಿದು, ಬಂಡವಾಳ ಶೇಖರಣೆ ತಗ್ಗಿ, ಕಾರ್ಮಿಕರಿಗೆ ಬೇಡಿಕೆಯೂ ಇಳಿಯುತ್ತದೆ, ಕೂಲಿ ತಗ್ಗುತ್ತದೆ. ಆಗ ಜನಸಂಖ್ಯೆಯ ಬೆಳೆವಣಿಗೆಗೆ ತಡೆ ಉಂಟಾಗುತ್ತದೆ. ಹೀಗೆ ಇಳಿಮುಖ ಪ್ರತಿಫಲ ನಿಯಮದಿಂದಾಗಿ ಆರ್ಥಿಕತೆ ಸ್ಥಿತವಾಗಿರುತ್ತದೆ, ಕೂಲಿ ಲಾಭಗಳು ತಗ್ಗಿನಲ್ಲಿರುತ್ತವೆ; ಒಟ್ಟು ಜನರ ಕಲ್ಯಾಣ ಸಾಧಿಸದು.

ಈ ಬಗೆಯ ಚಿಂತನದಿಂದಾಗಿ ಆಗ ಅನೇಕ ನೀತಿಗಳು ರೂಪಿತವಾದುವು. ಎಲ್ಲೆಲ್ಲೂ ನಿರಾಶೆ ಹಬ್ಬಲು ಇದು ಕಾರಣವಾಯಿತು. ಸ್ಥಿರ–ಗತಿ ದೃಷ್ಟಿಗಳ ಅವೈಜ್ಞಾನಿಕ ಬೆರಕೆಯೇ ಇಂಥ ತೀರ್ಮಾನಗಳಿಗೆ ಕಾರಣ. ಆದರೆ 19ನೆಯ ಶತಮಾನದ ಅಂತ್ಯದ ವೇಳೆಗೆ ಆರ್ಥಿಕ ವಿಶ್ಲೇಷಣೆಯಲ್ಲಿ ವೈಜ್ಞಾನಿಕ ವಿಧಾನವನ್ನನುಸರಿಸಲು ಆರಂಭವಾಯಿತು. ಸ್ಥಿರ ಮತ್ತು ಗತಿ ವಿಧಾನಗಳನ್ನು ಖಚಿತಗೊಳಿಸಿ ಪ್ರತ್ಯೇಕಿಸಲಾಯಿತು. ಮೊದಮೊದಲು ಕ್ರಮಬದ್ಧವಾದ ಗತಿ ವಿಶ್ಲೇಷಣೆಯನ್ನು ಬಹುತೇಕ ತ್ಯಜಿಸಲಾಯಿತು. ಗಮನ ಹೆಚ್ಚಾಗಿ ಸಂದದ್ದು ಸ್ಥಿರ ವಿಶ್ಲೇಷಣೆಗೆ. ಆದರೆ ಈಚಿನ ಕೆಲವು ದಶಕಗಳಲ್ಲಿ ಗತಿ ವಿಶ್ಲೇಷಣೆಯನ್ನು ಸ್ವತಂತ್ರವಾಗಿ ಬೆಳೆಸಲಾಗಿದೆ. ಇದು ಸಂಕೀರ್ಣವಾಗಿ ಪರಿಣಮಿಸಿದೆ. ಗತಿ ವಿಶ್ಲೇಷಣೆಯ ಬೆಳೆವಣಿಗೆಗೆ ಮೊದಲು ಬಳಕೆಗೆ ಬಂದ ವಿಧಾನವೇ ತೌಲನಿಕ ಸ್ಥಿತಿಶಾಸ್ತ್ರ. ಇಂದು ಗತಿ ವಿಶ್ಲೇಷಣ ವಿಧಾನ ಬಹಳಮಟ್ಟಿಗೆ ಗಣಿತವನ್ನವಲಂಬಿಸಿದೆ. ಬದಲಾಗುವ ಹಲವಾರು ಪ್ರಾಚಲಗಳನ್ನೆಲ್ಲ ಒಳಗೊಂಡ ವಿಶ್ಲೇಷಣೆಗೆ ಇದು ಅತ್ಯಂತ ಅವಶ್ಯಕ. ವ್ಯಾಪಾರ ಆವರ್ತ, ಜನಸಂಖ್ಯೆ, ದೀರ್ಘಾವಧಿಯ ಆರ್ಥಿಕ ಬೆಳೆವಣಿಗೆ ಮುಂತಾದವುಗಳ ವಿಶ್ಲೇಷಣೆಗೆ ಈ ವಿಧಾನವನ್ನು ಅನ್ವಯಿಸಲಾಗಿದೆ. ಇವಕ್ಕಾಗಿ ಆಧುನಿಕ ಅರ್ಥಶಾಸ್ತ್ರಜ್ಞರು ತಂತಮ್ಮವೇ ಆದ ಅನೇಕ ಮಾದರಿಗಳನ್ನು ರಚಿಸಿದ್ದಾರೆ. ಜೆ.ಎಂ. ಕ್ಲಾರ್ಕ್, ರ್‍ಯಾಗ್ನಾರ್ ಫ್ರಿಶ್, ಸಿ.ಎಫ್. ಹೂಸ್, ಟಿನ್ ಬರ್ಗ್‌ನ್, ಕಾಲೆಕಿ, ರಾಬರ್ಟ್ ಸನ್, ಕೇನ್ಸ್, ಹೆಬರ್ಲರ್, ಗುನ್ನಾರ್ ಮಿರ್ಡಾಲ್, ಬರ್ಟಿಲ್ ಓಹ್ಲಿನ್, ಲಿಂಡ್ಹಾಲ್, ಲುನ್‌ಬರ್ಗ್, ಸಾಮ್ಯುಯೆಲ್ ಸನ್, ಗುಡ್‌ವಿನ್, ಸ್ಮಿಥೀಸ್, ಡೋಮರ್, ಮೆಟ್ಸ್‌ಲರ್, ಬಾವೆಲ್ಮೋ, ರಾಬರ್ಟ್ ಕೈನ್, ಜೆ. ಆರ್. ಹಿಕ್ಸ್, ಆಸ್ಕರ್ ಲಾಂಜ್, ಕೂಪ್ಮನ್ಸ್ ಮತ್ತು ಟಿಂಟರ್ ಗತಿ ಅರ್ಥಶಾಸ್ತ್ರದ ಅಭಿವೃದ್ಧಿಗೆ ಮಹತ್ತ್ವಪೂರ್ಣ ಕಾಣಿಕೆ ನೀಡಿದ್ದಾರೆ. (ಎನ್.ಪಿ.ಎಸ್.)

**ಗತಿವಿಜ್ಞಾನ :** ವಸ್ತುವಿಗೆ ಸ್ಥಾಯೀಸ್ಥಿತಿ ಇಲ್ಲವೇ ಚಲನಸ್ಥಿತಿ ಕೊಡುವ ಅಥವಾ ಅದರ ಚಲನೆಯಲ್ಲಿ ವ್ಯತ್ಯಾಸವುಂಟುಮಾಡುವ ಬಲಗಳ ವರ್ತನೆಯನ್ನು ಅಭ್ಯಸಿಸುವ ವಿಜ್ಞಾನ ವಿಭಾಗ; ವಿಶೇಷವಾಗಿ, ಬಲಗಳಿಂದ ಪ್ರಯುಕ್ತವಾದ ಹಾಗೂ ಬದಲಾಗುತ್ತಿರುವ ವೇಗವಿರುವ ವಸ್ತುಗಳ ವರ್ತನೆಯ ಅಭ್ಯಾಸ (ಡೈನಮಿಕ್ಸ್). ಇದು ಬಲವಿಜ್ಞಾನದ (ಮೆಕ್ಯಾನಿಕ್ಸ್) ಒಂದು ಅಂಗ. ಇತರ ಎರಡು ಅಂಗಗಳು ಸ್ಥಿತಿವಿಜ್ಞಾನ (ಸ್ಟ್ಯಾಟಿಕ್ಸ್) ಹಾಗೂ ಶುದ್ಧಗತಿವಿಜ್ಞಾನ (ಕೈನ್‌ಮ್ಯಾಟಿಕ್ಸ್). ವಿರಾಮದಲ್ಲಿ ಇಲ್ಲವೇ ಸಮತೋಲ ಬಲಗಳ ಪ್ರಭಾವದಲ್ಲಿ ಇರುವ ವಸ್ತುಗಳ ಅಧ್ಯಯನ ಸ್ಥಿತಿವಿಜ್ಞಾನ. ಚಲನೆಯನ್ನು ಉಂಟುಮಾಡುವ ಬಲಗಳ ಗೊಡವೆಗೆ ಹೋಗದೆ ಕೇವಲ ಚಲನೆಯ ಜ್ಯಾಮಿತಿಯನ್ನು ಮಾತ್ರ ಶುದ್ಧಗತಿವಿಜ್ಞಾನದಲ್ಲಿ ಅಧ್ಯಯಿಸುತ್ತೇವೆ (**ನೋಡಿ– ಬಲವಿಜ್ಞಾನ; ಸ್ಥಿತಿ ವಿಜ್ಞಾನ; ಶುದ್ಧಗತಿ ವಿಜ್ಞಾನ**).

ಗತಿವಿಜ್ಞಾನದ ಪರಿಭಾಷೆಯನ್ನು ಪ್ರವೇಶಿಸುವ ಮುನ್ನ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಸುಪ್ತವಾಗಿರುವ ಚಿಂತನೆಯ ಎರಡು ವಿಧಾನಗಳನ್ನು ಕುರಿತು ತಿಳಿದಿರುವುದು ಒಳ್ಳೆಯದು. ಮೊದಲನೆಯದು, ಭೌತವಿಧಾನ. ಈ ವಿಧಾನದಲ್ಲಿ ಕಾಗದದ ಮೇಲೆ ಗುರುತಿಸಿರುವ ಚುಕ್ಕಿ ಬಿಂದು; ನೇರ ಅಂಚಿನ ಮೇಲೆ ಪೆನ್ಸಿಲಿನ ಚೂಪು ಮೊನೆಯಿಂದ ಮಾಡಿದ ಗೀರು ಸರಳರೇಖೆ; ಕೈವಾರ ರೇಖಿಸುವ ಆಕೃತಿ ವೃತ್ತ ಇತ್ಯಾದಿ. ಎರಡನೆಯದು ಆದರ್ಶ ಅಥವಾ ಗಣಿತವಿಧಾನ. ಇಲ್ಲಿ ಬಿಂದು ಕಾಗದದ ಮೇಲಿನ ಚುಕ್ಕಿ ಅಲ್ಲ, ಬದಲು ಚುಕ್ಕಿ ಪ್ರೇರಿಸುವ ಒಂದು ಆದರ್ಶವಸ್ತು. ಭೌತವಿಧಾನದಲ್ಲಿ ವಾಸ್ತವ ವಸ್ತುಗಳನ್ನು – ನೈಸರ್ಗಿಕ ಅಥವಾ ಮನುಷ್ಯನಿರ್ಮಿತ ಕುರಿತು – ಯೋಚಿಸುತ್ತೇವೆ. ಅವುಗಳ ವರ್ತನೆಯನ್ನು ನಿಯಂತ್ರಿಸುವ ನಿಯಮಗಳನ್ನು ಅರಿತು ದತ್ತ ಸನ್ನಿವೇಶಗಳಲ್ಲಿ ಆ ವಸ್ತುಗಳು ಹೇಗೆ ವರ್ತಿಸಬಹುದೆಂದು ಮುನ್ನುಡಿಯುತ್ತೇವೆ. ಆದರೆ ಅದೆಷ್ಟೊ ಸಲ ಓರ್ವ ಭೌತವಿಜ್ಞಾನಿ ಇಲ್ಲವೇ ಎಂಜಿನಿಯರ್ ತನ್ನ ಅರಿವೇ ಇಲ್ಲದೆ ಭೌತವಿಧಾನದ ಚಿಂತನೆಯಿಂದ ಗಣಿತವಿಧಾನದ ಚಿಂತನೆಗೆ ಜಾರಿರುತ್ತಾನೆ. ಉದಾಹರಣೆಗೆ ಭೂಮಿ ಒಂದು ಪೂರ್ಣ ಗೋಳವೆಂದು ಒಬ್ಬ ಖಗೋಳವಿಜ್ಞಾನಿ ಭಾವಿಸಬಹುದು. ಇದೊಂದು ಅಮೂರ್ತ ಗಣಿತಭಾವನೆ. ನಿಸರ್ಗದಲ್ಲಿ ಇದಕ್ಕೆ ಅಸ್ತಿತ್ವವಿಲ್ಲ. ಭೌತವಿಧಾನದಿಂದ ಗಣಿತವಿಧಾನಕ್ಕೆ ಬದಲಿಸುವ ಮತ್ತು ಮರಳುವ ಕ್ರಿಯೆ ಬಲುಸುಲಭವೇನೂ ಅಲ್ಲ. ಆದರೆ ಈ ಕ್ರಿಯೆ ಶಾಸ್ತ್ರದ ಬೆಳೆವಣಿಗೆಗೆ ತೀರ ಅನಿವಾರ್ಯ. ಭೌತವಿಧಾನದ ಚಿಂತನೆ ಹೆಚ್ಚು ಸಹಜವಾದದ್ದು, ನಿಜ. ಹಾಗೆಂದು ಅದನ್ನೇ, ಅನುಸರಿಸಿದರೆ ಪ್ರಗತಿ ಕುಂಠಿತವಾಗುವುದು. ಭೌತವಸ್ತುಗಳು ಅತಿ ಸಂಕೀರ್ಣ. ಅವನ್ನು ಕಲ್ಪಿಸಿಕೊಂಡು ಅವುಗಳ ಆವಶ್ಯಕ ಗುಣಗಳೇನು ಆನುಷಂಗಿಕ ಗುಣಗಳೇನು ಎಂದು ಮುಂತಾಗಿ ಅರಿತುಕೊಂಡು ಮುಂದುವರಿಸುವುದು ಬಲು ಕಠಿಣ. ಹೀಗಾಗಿ ಗತಿವಿಜ್ಞಾನದಲ್ಲಿ ನಿಸರ್ಗದ ಒಂದು ಗಣಿತ ಪ್ರತಿರೂಪವನ್ನು (ಮ್ಯಾಥಿಮ್ಯಾಟಿಕಲ್ ಮಾಡೆಲ್) ಕಲ್ಪಿಸಿಕೊಂಡು ಅದರ ಮೇಲೆ, ಪರಿಶೀಲನೆಯಲ್ಲಿರುವ ಸನ್ನಿವೇಶದ ನಿಯಮಗಳನ್ನೂ ಬಲಗಳನ್ನೂ ಪ್ರಯುಕ್ತಿಸಿ, ಆ ಪ್ರತಿರೂಪದ ವರ್ತನೆಯನ್ನು ಅಭ್ಯಸಿಸುತ್ತೇವೆ. ವಾಸ್ತವಿಕವಾಗಿ ಗಣಿತದಲ್ಲಿ ಆಡುವ ಒಂದು ಕಣ್ಣಟ್ಟಿನ ಆಟವಿದು. ಉದಾಹರಣೆಗೆ, ಭೂಮಿ ಒಂದು ಸಮಸಾಂದ್ರತೆಯ (ಹೊಮೊಜೀನಿಯಸ್) ದೃಢ ದೀರ್ಘವೃತ್ತಕಲ್ಪ ಆಗಿದ್ದು ಅದರ ಮೇಲೆ ಅಂಥಿಂಥ ಬಲಗಳು ವರ್ತಿಸಿದ್ದರೆ ಅದು ಹೇಗೆ ನಡೆದು ಕೊಳ್ಳುತ್ತಿತ್ತು? ಈ ಗಣಿತ ಪ್ರಶ್ನೆಯನ್ನು ಬಿಡಿಸಿ ಲಭ್ಯವಾದ ಉತ್ತರವನ್ನು ವೀಕ್ಷಣೆಯಿಂದ ದೊರೆತ ಉತ್ತರಗಳೊಡನೆ ಹೋಲಿಸುತ್ತೇವೆ. ಅವು ತಾಳೆಯಾದರೆ ನಮ್ಮ ಪ್ರತಿರೂಪ ಸರಿಯಾದದ್ದೆಂದೂ, ಆಗದಿದ್ದರೆ ಅಲ್ಲಿನ ವಿಚಲನೆಯನ್ನು ಅನುಸರಿಸಿ ಪರಿಷ್ಕೃತ ಪ್ರತಿರೂಪವನ್ನು ರಚಿಸಬೇಕೆಂದೂ ತೀರ್ಮಾನಿಸುತ್ತೇವೆ.

ಈಗ ಗತಿವಿಜ್ಞಾನದ ಪರಿಭಾಷೆಯನ್ನು ಕುರಿತು ನಾಲ್ಕು ಮಾತುಗಳನ್ನು ಬರೆಯುವುದು ಸಮರ್ಪಕವಾಗಿದೆ.

**ಜಡತೆ :** ಯಾವುದೇ ವಸ್ತುವಿನ ಮೇಲೆ ಬಲಪ್ರಯೋಗ ಮಾಡಿದಾಗ, ವಸ್ತುವಿನ ವೇಗದ ಬದಲಾವಣೆಯನ್ನು ವಿರೋಧಿಸುವ ಗುಣಕ್ಕೆ ಜಡತೆ (ಇನರ್ಷಿಯ) ಎಂದು ಹೆಸರು. ಒಂದೇ ಬಲದ ಪ್ರಯೋಗವಾದಾಗ ಎರಡು ಬೇರೆ ಬೇರೆ ನಿಶ್ಚಲವಸ್ತುಗಳು ಭಿನ್ನವಾದ ವೇಗವನ್ನು ಹೊಂದುವುವು. ನಿಧಾನವಾಗಿ ಚಲಿಸುವ ವಸ್ತುವಿನ ಜಡತೆ ಹೆಚ್ಚು ಎಂದು ಹೇಳಬೇಕಾಗುತ್ತದೆ. ಎಂದರೆ ಜಡತೆ ವಸ್ತುವಿನಲ್ಲಿ ಅಡಕವಾಗಿರುವ ದ್ರವ್ಯವನ್ನು (ಮ್ಯಾಟರ್) ಅವಲಂಬಿಸುತ್ತದೆ. ಬಾಹ್ಯ ಬಲದ ಪ್ರಭಾವವಿಲ್ಲದಿರುವಾಗ ತಾನಿರುವ ನಿಶ್ಚಲ ಸ್ಥಿತಿಯನ್ನಾಗಲೀ ಏಕರೀತಿವೇಗದ ಸರಳರೇಖಾ ಚಲನೆಯನ್ನಾಗಲಿ ವ್ಯತ್ಯಯಿಸದಿರುವ ವಸ್ತುವಿನ ಗುಣ.

**ರಾಶಿ :** ಒಂದು ವಸ್ತುವಿನಲ್ಲಿರುವ ಜಡತೆಯ ಅಳತೆಯೇ ಎಂದರೆ ಜಡತೆಯ ಮಾನವೇ ರಾಶಿ (ಮಾಸ್).

**ಕಣ :** ಜ್ಯಾಮಿತಿಯಲ್ಲಿ ಹೇಗೆ ಒಂದು ಬಿಂದುವನ್ನು ಕಲ್ಪಿಸಿಕೊಂಡು ಗಣಿತಶಾಸ್ತ್ರವನ್ನು ಪ್ರಾರಂಭಿಸುತ್ತೇವೆಯೋ ಹಾಗೆಯೇ ಗತಿವಿಜ್ಞಾನದಲ್ಲಿ ರಾಶಿ ಇರುವ ಆದರೆ ಗಾತ್ರವಿಲ್ಲದ ಅಂದರೆ ಆಯಾಮರಹಿತ ಒಂದು ಆದರ್ಶ ವಸ್ತುವನ್ನು ಕಲ್ಪಿಸಿಕೊಂಡು ಅದನ್ನು ಕಣ ಎಂದು ಕರೆಯುತ್ತೇವೆ. ಇಂಥ ಕಾಲ್ಪನಿಕ ಕಣವನ್ನು ಒಂದು ಬಿಂದುವಿನಿಂದ ಸೂಚಿಸುತ್ತೇವೆ. ಸಾಮಾನ್ಯವಾಗಿ ಕಣದ ರಾಶಿಯನ್ನು $m$ ಎಂಬ ಅಕ್ಷರದಿಂದ ನಿರೂಪಿಸುತ್ತೇವೆ.

**ಕಾಲ :** ಘಟನೆಗಳ ನಡುವಿನ ಅವಧಿ ($t$). ಯಾವುದೇ ಘಟನೆಯ ಅಥವಾ ಪ್ರಯೋಗದ ಪ್ರಾರಂಭ ಮತ್ತು ಅಂತ್ಯಗಳು ಕೇವಲ ಸ್ಥಾನ ಬದಲಾವಣೆಯಿಂದಲ್ಲದೆ, ಕಾಲ ಬದಲಾವಣೆಯಿಂದಲೂ ಸೂಚಿಸಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಪ್ರಾರಂಭಿಕ ಕಾಲ 0 ಎಂದೂ, ವರ್ತಮಾನ ಕಾಲ $t$ ಎಂದೂ ಸೂಚಿಸುತ್ತೇವೆ. ಆದ್ದರಿಂದ ಪ್ರಾರಂಭಿಕ ಕಾಲದಿಂದ ವರ್ತಮಾನ ಕಾಲಕ್ಕೆ ಸಂದ ಕಾಲ $t$.

**ಸ್ಥಾನಾಂತರಣ :** ಒಂದು ಕಣ ಅಥವಾ ವಸ್ತು ಕಾಲ ಬದಲಾದಂತೆ ತಾನಿರುವ ಬಿಂದುವಿನಿಂದ (ಸ್ಥಾನದಿಂದ) ಬೇರೊಂದು ಬಿಂದುವಿಗೆ (ಸ್ಥಾನಕ್ಕೆ) ಹೋದರೆ ಆ ಬಿಂದುಗಳ (ಸ್ಥಾನಗಳ) ನಡುವಿನ ದೂರಕ್ಕೆ ಸ್ಥಾನಾಂತರಣ ಎಂದು ಹೆಸರು. ಇಂಥ ಸ್ಥಾನಾಂತರದ ಪರಿಮಾಣ (ಮ್ಯಾಗ್ನಿಟ್ಯೂಡ್) ಹಾಗೂ ದಿಶೆ ಎರಡೂ ಮುಖ್ಯ. ಇವೆರಡನ್ನೂ ಸೂಚಿಸುವ ಗಣಿತೋತ್ಪನ್ನಕ್ಕೆ ಸದಿಶ (ವೆಕ್ಟರ್) ಎಂದು ಹೆಸರು.

**ಮಾನಗಳು :** ಕಾಲ, ರಾಶಿ ಮತ್ತು ದೂರ ಇವನ್ನು ಅಳೆಯಲು ಪ್ರಚಲಿತವಾಗಿರುವ ಮೂರು ಮುಖ್ಯ ವಿಧಗಳು ಈ ರೀತಿ ಇವೆ.

| ವಿವರ | ಸಿ.ಜಿ.ಎಸ್ | ಎಫ್.ಪಿ.ಎಸ್. | ಎಸ್‌ಐ |
|---|---|---|---|
| ದೂರ | ಸೆಂಟಿಮೀಟರ್ | ಫುಟ್ | ಮೀಟರ್ |
| ರಾಶಿ | ಗ್ರಾಂ | ಪೌಂಡ್ | ಕಿಲೋಗ್ರಾಮ್ |
| ಕಾಲ | ಸೆಕೆಂಡ್ | ಸೆಕೆಂಡ್ | ಸೆಕೆಂಡ್ |

ಮೂರು ವ್ಯವಸ್ಥೆಯಲ್ಲಿಯೂ ಕಂಡುಬರುವ 1 ಸೆಕೆಂಡಿಗೆ ಒಂದು ಸೌರ ಮಾಧ್ಯದಿವಸದ 86164.09 ನೆಯ ಭಾಗ.

**ಸರಳರೇಖೆಯ ನೇರ ಕಣದ ಚಲನೆ :** ಒಂದು ಸರಳರೇಖೆಯಲ್ಲಿ ಚಲಿಸುವ ಕಣವನ್ನು ಪರಿಶೀಲಿಸೋಣ. ರೇಖೆಯ ಮೇಲೆ ಯಾವುದೋ ಒಂದು ಬಿಂದು O ಆಗಿರಲಿ. ಕಣ t ಕಾಲದಲ್ಲಿ A ಬಿಂದುವಿನಲ್ಲೂ $t+\delta t$ ಕಾಲದಲ್ಲಿ B ಬಿಂದುವಿನಲ್ಲೂ ಇರಲಿ. OA $= x$ ಮತ್ತು OB $= x+\delta x$ ಆಗಿರಲಿ. OA ಗೆ ಕಣದ $x$- ನಿರ್ದೇಶಕ ಎಂದು ಹೆಸರು. ಅಲ್ಲದೆ x ಎಂಬುದು ಕಾಲದ ಒಂದು ಫಲನವಾಗಿರುತ್ತದೆ; ಎಂದರೆ $x = f(t)$.



ಚಿತ್ರ 1

**ವೇಗ ಮತ್ತು ವೇಗೋತ್ಕರ್ಷ :** ಚಿತ್ರ(1)ರಲ್ಲಿ Aಯಲ್ಲಿದ್ದ ಕಣ $\delta t$ ಕಾಲದಲ್ಲಿ $\delta x$ ದೂರವನ್ನು ಚಲಿಸಿರುತ್ತದೆ.

ಆಗ $\lim_{\delta t \to 0} \frac{\delta x}{\delta t} = \frac{dx}{dt}$ ಎಂಬುದು A ಬಿಂದುವಿನಲ್ಲಿ ಕಣದ ವೇಗ. ವೇಗ ಒಂದು ಸದಿಶ ಪರಿಮಾಣ.

ಒಂದು ಕಣದ ವೇಗ Aಯಲ್ಲಿ (ಕಾಲ t) v ಆಗಿದ್ದು B ಯಲ್ಲಿ (ಕಾಲ $t+\delta t$) $v+\delta v$ ಆಗಿದ್ದರೆ

$\lim_{\delta t \to 0} \frac{\delta v}{\delta t} = \frac{dv}{dt} = \frac{d^2x}{dt^2}$ = f ಎಂಬುದು A ಬಿಂದುವಿನಲ್ಲಿ ಕಣದ ವೇಗೋತ್ಕರ್ಷ. ವೇಗದಂತೆಯೇ ವೇಗೋತ್ಕರ್ಷವೂ ಒಂದು ಸದಿಶ ಪರಿಮಾಣ.

**ಸದಿಶ ಮತ್ತು ಅದಿಶ ಪರಿಮಾಣಗಳು :** ಸ್ಥಾನಾಂತರಣ, ವೇಗ ಮತ್ತು ವೇಗೋತ್ಕರ್ಷ ಇವುಗಳಿಗೆ ಕೇವಲ ಪರಿಮಾಣಗಳನ್ನು ಹೇಳಿದರೆ ಅವನ್ನು ನಿಶ್ಚಿತವಾಗಿ ಗುರುತಿಸಲಾಗುವುದಿಲ್ಲ. ಪರಿಮಾಣದ ಜೊತೆಗೆ ದಿಶೆಯನ್ನು ಸಹ ಹೇಳಿದರೆ ನಿರ್ದಿಷ್ಟತೆ ಬರುತ್ತದೆ. ಇಂಥವಕ್ಕೆ ಸದಿಶ ಪರಿಮಾಣಗಳು ಎಂದು ಹೆಸರು. ದಿಶೆಯನ್ನು ಹೇಳದೆ ಕೇವಲ ಪರಿಮಾಣಗಳಿಂದ ಮಾತ್ರ ಉಕ್ತವಾದ ವುಗಳಿಗೆ ಅದಿಶ ಪರಿಮಾಣ ಗಳೆಂದು ಹೆಸರು. ಉದಾಹರಣೆಗೆ : ರಾಶಿ, ಉಷ್ಣತೆ, ಜವ (ಸ್ಪೀಡ್) ಇತ್ಯಾದಿಗಳು ಅದಿಶಗಳು. ಸದಿಶ ಪರಿಮಾಣಗಳನ್ನು ಬಾಣ ಗುರುತಿನಿಂದ ಇಲ್ಲವೆ ದಪ್ಪ ಅಕ್ಷರದಿಂದ ಸೂಚಿಸುತ್ತೇವೆ.



ಚಿತ್ರ 2

ಚಿತ್ರ 2 (a)ಯಲ್ಲಿ OP ರೇಖೆಯ ಉದ್ದ ಸದಿಶದ ಪರಿಮಾಣ ವನ್ನೂ O ನಿಂದ Pಗೆ ಸಾಗುವ ದಿಶೆ ಸದಿಶದ ದಿಶೆಯನ್ನೂ ಸೂಚಿಸುತ್ತವೆ. ಈ ಸದಿಶ ವನ್ನು $\overrightarrow{OP}$ ಎಂಬುದಾಗಿ ಬರೆಯುತ್ತೇವೆ. 2 (b), (c) ಚಿತ್ರಗಳಲ್ಲಿ OP = O' P' (ಉದ್ದಗಳು ಸಮ). ಈಗ $\overrightarrow{OP}$ = A ಎಂಬ ಸದಿಶವಾದರೆ $\overrightarrow{O'P'} = -A$ ಆಗುತ್ತದೆ. Aಸದಿಶದ ಪರಿಮಾಣವನ್ನು |A| ಎಂಬ ಪ್ರತೀಕದಿಂದ ಸೂಚಿಸುತ್ತೇವೆ (ಸದಿಶವನ್ನು A ಅಥವಾ ದಪ್ಪ ಅಕ್ಷರ **A** ಯಿಂದ ಸೂಚಿಸುವುದು ವಾಡಿಕೆ).



ಚಿತ್ರ 3

ಎರಡು ಸದಿಶಗಳ ಮೊತ್ತ: $\overrightarrow{OP}$ = **A**, $\overrightarrow{PQ}$ = **B** ಆಗಿದ್ದರೆ ಆಗ **A, B** ಗಳ ಮೊತ್ತ $A+B=C$ ಎಂಬ ಸದಿಶ. $\overrightarrow{OQ}$ ಇದನ್ನು ಪ್ರತಿನಿಧಿಸು ತ್ತದೆ. A ಮತ್ತು B ಗಳಿಗೆ Cಯ ಘಟಕಗಳೆಂದು ಹೆಸರು.



ಚಿತ್ರ 4

ಚಿತ್ರ (4) ರಲ್ಲಿ $\overrightarrow{OP}$ = A ಆಗಿರಲಿ. ಈಗ c. OP = OQ ಆಗಿರಲಿ. ಆಗ c. $\overrightarrow{OP}$ = c.A. ಚಿತ್ರ(5)ರಲ್ಲಿ Ox, Oy, Oz ಮೂರೂ ಆಯಾಮಗಳಲ್ಲಿ ಪರಸ್ಪರ ಲಂಬವಾಗಿರುವ ಅಕ್ಷಗಳು. i, j, k ಗಳು ಅನುಕ್ರಮವಾಗಿ ಈ ಅಕ್ಷಗಳ ನೇರ ಏಕಮಾನ ಸದಿಶಗ ಳಾಗಿರಲಿ. ಆಗ ಯಾವುದೇ ಸದಿಶ

$A = A_1 i + A_2 j + A_3 k$

ಇಲ್ಲಿ $A_1$, $A_2$, $A_3$ ಗಳು ಅನುಕ್ರಮವಾಗಿ ಅಕ್ಷಗಳ ದಿಶೆಗಳಲ್ಲಿ A ಯ ಘಟಕಗಳು ಮತ್ತು ($A_1$, $A_2$, $A_3$), P ಯ ನಿರ್ದೇಶಕಗಳು. ಅಲ್ಲದೆ $|A| = \sqrt{A_1^2 + A_2^2 + A_3^2}$. ಚಿತ್ರ(5)ರಲ್ಲಿ $\overrightarrow{OP}$ = A.



ಚಿತ್ರ 5

**ಸದಿಶಗಳ ಅದಿಶ ಗುಣಲಬ್ಧ :** $A = A_1.i + A_2.j + A_3.k$ ಮತ್ತು $B = B_1.i + B_2.j + B_3.k$ ಆಗ $A.B = A_1B_1 + A_2B_2 + A_3B_3$. ಇದೇ ಗುಣಲಬ್ಧವನ್ನು ಬೇರೆ ರೀತಿಯಿಂದಲೂ ವ್ಯಾಖ್ಯೆ ಮಾಡುವ ರೂಢಿ ಉಂಟು. A ಮತ್ತು B ಗಳು OP ಮತ್ತು OQ ಎಂಬ ಸದಿಶಗಳಿಂದ ಸೂಚಿತವಾದರೆ

$A.B = |A||B| \cos\theta$ .ಜ್ಯಾಮಿತಿಯ ಜ್ಞಾನದಿಂದ

$|A||B| \cos\theta = A_1B_1 + A_2B_2 + A_3B_3$

**ವಕ್ರರೇಖೆಯ ನೇರಕಣದ ಚಲನೆ:** ಚಿತ್ರ (7) ರಲ್ಲಿ P ಮತ್ತು Q ಒಂದು ಕಣದ ಎರಡು ಸಮೀಪ ಸ್ಥಾನಗಳು. ಕಾಲ t ಯಲ್ಲಿ ಕಣ P ಯಲ್ಲಿಯೂ ಕಾಲ $t+\delta t$ ಯಲ್ಲಿ Q ನಲ್ಲಿಯೂ ಇದ್ದರೆ ಆಗ OP = r, $\overrightarrow{O}$ = $r+\delta r$, PQ = $\delta s$. $\delta t$ ಕಾಲದಲ್ಲಿ ಸ್ಥಾನಾಂತರ $\delta r$.

$v = \lim_{\delta t \to 0} \frac{\delta r}{\delta t} = \frac{dr}{dt}$

ಎಂಬುದು Bಯಲ್ಲಿ ಕಣದ ವೇಗ.



ಚಿತ್ರ 6

v ಎಂಬ ಸದಿಶ ಪರಿಮಾಣ $|V| = \lim_{\delta t\to 0} \frac{|PQ|}{\delta t} = \lim_{\delta t\to 0} \frac{|PQ|}{\delta s}\frac{\delta s}{\delta t} = 1 \times \frac{ds}{dt} = \frac{ds}{dt}$

$\frac{|PQ|}{\delta t}$ ನ ದಿಶೆಯೂ $\overrightarrow{PQ}$ ವಿನ ದಿಶೆಯೂ ಆಗಿರುವುದರಿಂದ Q ಬಿಂದು P ಯನ್ನು ಸಮೀಪಿಸಿದಂತೆ PQ ಜ್ಯಾ P ಬಿಂದುವಿನಲ್ಲಿ ಸ್ಪರ್ಶರೇಖೆಯಾಗು ತ್ತದೆ. ವೇಗನಿರೂಪಣೆ ಮಾಡಿ ದಂತೆಯೇ ವೇಗೋತ್ಕರ್ಷ ಕೂಡ ಒಂದು ಏಕಮಾನ ಕಾಲದಲ್ಲಿ ಆಗುವ ವೇಗದ ಬದಲಾವಣೆಯಾದ್ದರಿಂದ f ವೇಗೋತ್ಕರ್ಷ

$$\frac{dv}{dt} = \frac{d^2r}{dt^2}$$



ಚಿತ್ರ 7

**ಕೋಣೀಯ ವೇಗ ಮತ್ತು ವೇಗೋತ್ಕರ್ಷ :** O$x$ ಒಂದು ಸ್ಥಿರ ಸರಳರೇಖೆ. ಒಂದು ಕಣ AB ವಕ್ರರೇಖೆಯ ಮೇಲೆ ಚಲಿಸುತ್ತಿದೆ. (ಚಿತ್ರ 8) t ಕಾಲದಲ್ಲಿ p ಯಲ್ಲೂ $t+\delta t$ ಕಾಲದಲ್ಲಿ Q ನಲ್ಲೂ ಇರುತ್ತದೆ. $\angle xoP = \theta$ , $\angle xoQ = \theta + \delta\theta$ ಆಗಿದ್ದರೆ

$$\lim_{\delta t \to 0} \frac{\delta\theta}{\delta t} = \frac{d\theta}{dt} = \dot{\theta} = \omega$$

ಉತ್ಪನ್ನಕ್ಕೆ ಕಣದ ಕೋನೀಯ ವೇಗ ಎಂದು ಹೆಸರು. ಪುನಃ $\frac{d^2\theta}{dt^2} = \ddot{\theta} = \dot{\omega}$




ಚಿತ್ರ 8

ಕಣದ ಕೋನೀಯ ವೇಗೋತ್ಕರ್ಷ ಎಂದು ಹೆಸರು.

**ಸಂವೇಗ (ಮೊಮೆಂಟಂ):** ವಸ್ತುವಿನ ರಾಶಿ m ಹಾಗೂ ವೇಗ V ಇವುಗಳ ಗುಣಲಬ್ಧಕ್ಕೆ ವಸ್ತುವಿನ ಸಂವೇಗ (P) ಎಂದು ಹೆಸರು. mv ಇವನ್ನು ಸೂಚಿಸುತ್ತದೆ. ಇದೊಂದು ಸದಿಶೋತ್ಪನ್ನ. ಇದು ರೇಖೀಯ ಸಂವೇಗ

**ಮಹತ್ವ ಅಥವಾ ಭ್ರಮಣಾಂಕ (ಮೊಮೆಂಟ್) :** ಒಂದು ಬಲ F ನ ವರ್ತನರೇಖೆ ಮತ್ತು ಒಂದು ಸ್ಥಿರ ಸರಳ ರೇಖೆ $l$ ಇವುಗಳ ನಡುವಿನ ಕನಿಷ್ಠ ದೂರ d (ಷಾರ್ಟೆಸ್ಟ್ ಡಿಸ್ಟೆನ್ಸ್) ಆಗಿರಲಿ. ಆಗ Fd ಉತ್ಪನ್ನಕ್ಕೆ $l$ ನ್ನು ಕುರಿತು F ನ ಭ್ರಮಣಾಂಕ ಎಂದು ಹೆಸರು. ಇದೊಂದು ಸದಿಶೋತ್ಪನ್ನ. ಸಮತಲ ಚಲನೆಯಲ್ಲಿ o ಎಂಬುದು F ನೆಲೆಸಿರುವ ಸಮತಲದ ಮೇಲಿರುವ ಒಂದು ಬಿಂದು ಆಗಿರಲಿ. O ನಿಂದ F ನ ವರ್ತನರೇಖೆಗೆ ಎಳೆದ ಲಂಬದ ಉದ್ದ d ಆಗಿದ್ದರೆ ಆಗ O ವನ್ನು ಕುರಿತು F ನ ಭ್ರಮಣಾಂಕ Fd ಆಗುತ್ತದೆ. ಇದು ಸಹ ಒಂದು ಸದಿಶೋತ್ಪನ್ನ.

ಗತಿವಿಜ್ಞಾನದ ಕಟ್ಟಡ ನ್ಯೂಟನ್ನನ ಮೂರು ಚಲನ ನಿಯಮಗಳ ಅಡಿಪಾಯದ ಮೇಲೆ ನೆಲೆಸಿದೆ. ಇವುಗಳ ನಿರೂಪಣೆ ಹೀಗಿದೆ :

1 ಬಾಹ್ಯಬಲ ಪ್ರಯೋಗವಿಲ್ಲದಿದ್ದರೆ, ವಿರಾಮಸ್ಥಿತಿಯಲ್ಲಿರುವ ವಸ್ತು ಅದೇ ಸ್ಥಿತಿಯಲ್ಲಿರುವುದು; ಏಕರೀತಿ ವೇಗದಿಂದ ಚಲಿಸುತ್ತಿರುವ ವಸ್ತು ಅದೇ ವೇಗದಿಂದ ಸರಳರೇಖೆಯ ಮೇಲೆ ಚಲಿಸುತ್ತ ಇರುವುದು.

2 ಒಂದು ವಸ್ತುವಿನ ಸಂವೇಗದ ದರದಲ್ಲಿಯ ವ್ಯತ್ಯಯ ಪ್ರಯುಕ್ತ ಬಲಕ್ಕೆ ಸರಳಾನುಪಾತದಲ್ಲಿರುವುದು; ಮತ್ತು ಈ ಬದಲಾವಣೆ ಪ್ರಯುಕ್ತಬಲದ ದಿಶೆಯಲ್ಲಿಯೇ ಆಗುತ್ತದೆ.

3 ಪ್ರತಿಯೊಂದು ಕ್ರಿಯೆಗೂ ಅದಕ್ಕೆ ಸಮ ಮತ್ತು ವಿರುದ್ಧ ಪ್ರತಿಕ್ರಿಯೆ ಇರುವುದು.

ಮೊದಲನೆಯ ನಿಯಮ ಚಲನೆಯಲ್ಲಾಗುವ ಬದಲಾವಣೆಗೆ ಕಾರಣವಾದ ಬಲದ ಲಕ್ಷಣವನ್ನು ನಿರೂಪಿಸಿದರೆ ಎರಡನೆಯದು ಬಲವನ್ನು ಅಳೆಯುವ ಕ್ರಮವನ್ನು ನಿರೂಪಿಸುತ್ತದೆ.




ಚಿತ್ರ 9

ಒಂದು ಕಣದ ರಾಶಿ m ಮತ್ತು ವೇಗ V ಇರಲಿ, ಆಗ ಅದರ ಸಂವೇಗ $P = mV$. ಆದ್ದರಿಂದ ಬಲ $F = k\frac{d}{dt}(mV)$, ಇಲ್ಲಿ k ಅನುಪಾತದ ಸ್ಥಿರಾಂಕ. m ಸಾಮಾನ್ಯವಾಗಿ ಸ್ಥಿರಾಂಕವಾದ್ದರಿಂದ $F = kmf$ ಸೂಕ್ತ ಏಕಮಾನಗಳ ಆಯ್ಕೆಯಿಂದ k ಯನ್ನು 1 ಎಂದು ಭಾವಿಸಬಹುದು. ಆಗ $F = mf$. ಈ ಬಲು ಮುಖ್ಯ ಸೂತ್ರ ವಸ್ತುಗಳನ್ನು ಕುರಿತ ಚಲನ ಸಮೀಕರಣಗಳನ್ನು ಬರೆಯಲು ಬಲು ಸಹಾಯಕವಾಗಿದೆ. F ಬಲದ ಅಕ್ಷೀಯ ಘಟಕಗಳು ಅನುಕ್ರಮವಾಗಿ

X, Y,Z ಆಗಿದ್ದರೆ ಆಗ $X = m\ddot{x},\ Y = m\ddot{y}, Z = m\ddot{z}$

**ಕಾರ್ಯ, ಸಾಮರ್ಥ್ಯ ಮತ್ತು ಶಕ್ತಿ:** AB ವಕ್ರರೇಖೆಯ ಮೇಲೆ ಚಲಿಸುತ್ತಿರುವ ಕಣದ ಮೇಲೆ F ಎಂಬ ಬಲ ಪ್ರಯೋಗವಾಗಿದೆ. ಕಣ t ಕಾಲದಲ್ಲಿ C ಯಲ್ಲಿಯೂ. t + $\delta$t ಕಾಲದಲ್ಲಿ D ಯಲ್ಲಿಯೂ ಇರಲಿ. $\delta$t ಕಾಲದಲ್ಲಿ F ಬಲ ಯಾವ ಬದಲಾವಣೆಯನ್ನೂ ಹೊಂದಿಲ್ಲವೆಂದುಕೊಳ್ಳೋಣ ಚಿತ್ರ (9). ಈಗ C ಯಿಂದ Dಗೆ ಕಣ ಚಲಿಸಿದಾಗ ಆಗುವ ಕಾರ್ಯವನ್ನು (ವರ್ಕ್). $\delta$W = F. $\delta$r ಎಂದು ವ್ಯಾಖ್ಯೆ ಮಾಡುತ್ತೇವೆ. ಎಂದರೆ ಕಣ A ಯಿಂದ Bಗೆ ಚಲಿಸಿದಾಗ ಆಗುವ ಒಟ್ಟು ಕಾರ್ಯ

$$W = \int_A^B F.dr$$

ಕಣದ ರಾಶಿ m ಸ್ಥಿರವಾದರೆ $F = m\frac{dv}{dt}$ ಅಲ್ಲದೆ $\delta$r=v. $\delta$t

$$\therefore F.dr = md\left(\frac{1}{2}v^2\right)$$

$$\therefore \text{ಒಟ್ಟು ಕಾರ್ಯ} = \int_A^B F.dr = \left[\frac{1}{2}mV^2\right]_A^B$$

$$= \frac{1}{2}m(v_B^2 - v_A^2)$$

ಕಾರ್ಯ ಮಾಡಬಲ್ಲ ಕ್ಷಮತೆಗೆ ಶಕ್ತಿ ಎನ್ನುತ್ತೇವೆ. ಇದರಲ್ಲಿ ಎರಡು ವಿಧ; ಚಲನಶಕ್ತಿ ಮತ್ತು ವಿಭವಶಕ್ತಿ.

$\frac{1}{2}mv^2 = T$ ಎಂಬುದನ್ನು ಚಲನಶಕ್ತಿ (ಕೈನೆಟಿಕ್ ಎನರ್ಜಿ) ಎಂದು ಕರೆಯುತ್ತೇವೆ. ಎಂದರೆ ಒಟ್ಟು ಕಾರ್ಯ = $T_B - T_A$. ಕಣವನ್ನು A ಯಿಂದ Bಗೆ ಒಯ್ಯುವಾಗ F ಎಂಬ ಬಲ ಮಾಡುವ ಒಟ್ಟು ಕಾರ್ಯ ಚಲನಶಕ್ತಿಯ ಹೆಚ್ಚುವರಿ ಎಂದಾಯಿತು. F.$\delta$r ಎಂಬುದು $\delta$t ಕಾಲದಲ್ಲಿ F ಮಾಡುವ ಕಾರ್ಯ. ಇದರ ದರ $F.\frac{\delta r}{\delta t}$ ಈಗ $\lim_{\delta t \to 0} F.\frac{\delta r}{\delta t} = F.\frac{dr}{dt} = F.v.$ ಕಾರ್ಯ ಮಾಡುವ ದರಕ್ಕೆ ಸಾಮರ್ಥ್ಯ (ಪವರ್) ಎಂದು ಹೆಸರು. $T = \frac{1}{2}mv^2$ ಎಂಬುದು ಚಲನಶಕ್ತಿಯೆಂದು ಹೇಳಿದೆಯಷ್ಟೆ. ಇದಕ್ಕೆ ವೇಗ ಕಾರಣವೆಂಬುದು ಸ್ಪಷ್ಟ. ಅಂತೆಯೇ ಸ್ಥಾನದ ಪ್ರಭಾವದಿಂದಲೋ ರೂಪವ್ಯತ್ಯಾಸದಿಂದಲೋ ವಸ್ತುವಿನಲ್ಲಿ ಗುಪ್ತವಾಗಿರುವ ಶಕ್ತಿಗೆ ವಿಭವಶಕ್ತಿ (ಪೊಟೆನ್ಷಿಯಲ್ ಎನರ್ಜಿ) ಎಂದು ಹೆಸರು. ಕಾರ್ಯನಿರ್ವಹಣೆಯ ಇಲ್ಲವೇ ಶಕ್ತಿ ವರ್ಗಾವಣೆಯ ದರಕ್ಕೆ ಸಾಮರ್ಥ್ಯ (ಪವರ್) ಎಂದು ಹೆಸರು. ಎಸ್‌ಐ ಏಕಮಾನದಲ್ಲಿ ಇದನ್ನು ವ್ಯಾಟ್‌ಗಳಲ್ಲಿ ಅಳೆಯುತ್ತಾರೆ. (1 ವಾಟ್ = 1 ಜೂಲ್/ ಸೆಕೆಂಡ್). ಬ್ರಿಟಿಷ್ ವ್ಯವಸ್ಥೆಯಲ್ಲಿ ಇದು ಅಶ್ವ ಸಾಮರ್ಥ್ಯ. 1 ಅಶ್ವ ಸಾಮರ್ಥ್ಯ = 746 ವಾಟ್‌ಗಳು.

**ಶಕ್ತಿ ಸಂರಕ್ಷಣೆ (ಕನ್ಸರ್ವೇಷನ್ ಆಫ್ ಎನರ್ಜಿ) :** ಶಕ್ತಿಯನ್ನು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಪರಿವರ್ತಿಸಬಹುದೇ ವಿನಾ ಶಕ್ತಿಯನ್ನು ಸೃಷ್ಟಿಸಲು ಅಥವಾ ನಾಶಮಾಡಲು ಸಾಧ್ಯವಿಲ್ಲ. ಇದಕ್ಕೆ ಶಕ್ತಿ ಸಂರಕ್ಷಣ ನಿಯಮ ಎಂದು ಹೆಸರು.

**ಕಣಗತಿವಿಜ್ಞಾನ:** ಒಂದು ವಸ್ತುವನ್ನು ಅದು ಚಲಿಸುತ್ತಿರುವ ಪರಿಸರದೊಡನೆ ಹೋಲಿಸಿದಾಗ ಆ ವಸ್ತು ಅನಂತ ಸೂಕ್ಷ್ಮವಾಗಿದ್ದರೆ ಆ ಪರಿಸರದಲ್ಲಿ ಅದನ್ನು ಒಂದು ಕಣವೆಂದು ಭಾವಿಸುತ್ತೇವೆ. ಉದಾಹರಣೆಗೆ ಸೌರವ್ಯೂಹದಲ್ಲಿ ಭೂಮಿ, ಚಂದ್ರ, ಗ್ರಹಗಳು, ಇವನ್ನೆಲ್ಲ ಬೇರೆ ಬೇರೆ ರಾಶಿಗಳಿರುವ ಭಿನ್ನ ಕಣಗಳೆಂದೇ ಗಣನೆಯ ಸೌಕರ್ಯಕ್ಕಾಗಿ ಭಾವಿಸುವುದು ವಾಡಿಕೆ. ಅದೇ ರೀತಿ ಪರಮಾಣುವೊಂದರ ನ್ಯೂಕ್ಲಿಯಸಿನ ಸುತ್ತ ವಿವಿಧ ಶಕ್ತಿಹಂತಗಳಲ್ಲಿ ಪರಿಭ್ರಮಿಸುತ್ತಿರುವ ಎಲೆಕ್ಟ್ರಾನುಗಳನ್ನು ಆ ಪರಿಸರದಲ್ಲಿ ಕಣಗಳೆಂದೇ ಭಾವಿಸುತ್ತೇವೆ. ಮೂರು ಆಯಾಮಗಳ ಆಕಾಶದಲ್ಲಿ ಒಂದು ಕಣ ಚಲಿಸುತ್ತದೆ ಎಂದು ಭಾವಿಸೋಣ. ಗಣಿತದ ಭಾಷೆಯಲ್ಲಿ ಆ ಕಣದ ಸ್ವಾತಂತ್ರ್ಯಾಂಕ (ಡಿಗ್ರಿ ಆಫ್ ಫ್ರೀಡಂ) ಮೂರು. ಈಗ ದತ್ತ ಬಲಗಳ ಒಂದು ವ್ಯವಸ್ಥೆಯಲ್ಲಿ ಚಲಿಸುತ್ತಿರುವ ಒಂದು ಕಣದ ಚಲನೆಯನ್ನು ಈ ಕೆಳಗಿನಂತೆ ಗಣಿಸುತ್ತೇವೆ.

(a) ಮೊದಲು ಫಲಿತಬಲವನ್ನು ( ಎಂದರೆ ಕಣದ ಮೇಲೆ ವರ್ತಿಸುತ್ತಿರುವ ಎಲ್ಲ ಬಲಗಳ ಸದಿಶ ಮೊತ್ತ) ಪಡೆದು ಬಳಿಕ ಆಯ್ದ ಮೂರು ಪರಸ್ಪರ ಲಂಬದಿಶೆಗಳಲ್ಲಿ ಅದರ ಘಟಕವನ್ನು ಗಣಿಸುತ್ತೇವೆ.

(b) ಈ ಮೂರು ದಿಶೆಗಳಲ್ಲಿ ಪ್ರತಿಯೊಂದಕ್ಕೂ ನ್ಯೂಟನ್‌ನ ಎರಡನೆಯ ನಿಯಮವನ್ನು ಅನುಕ್ರಮವಾಗಿ ಅನ್ವಯಿಸಿ ಕಣದ ವೇಗೋತ್ಕರ್ಷದ ಘಟಕಗಳನ್ನು ಪಡೆಯುತ್ತೇವೆ.

(c) ಈ ಅವಕಲ ಸಮೀಕರಣಗಳನ್ನು (ವೇಗೋತ್ಕರ್ಷಗಳನ್ನು) ಅನುಕಲಿಸಿ ಕಣದ ವೇಗ ಘಟಕಗಳನ್ನೂ ಸ್ಥಾನಾಂತರಿಕೆಗಳನ್ನೂ ಪಡೆಯುತ್ತೇವೆ.

**ಕೇಂದ್ರೀಯ ಕಕ್ಷೆಗಳು (ಸೆಂಟ್ರಲ್ ಆರ್ಬಿಟ್ಸ್) :** ಕಣಗತಿ ವಿಜ್ಞಾನ ಅನ್ವಯಕ್ಕೆ ಒಂದು ಉತ್ಕೃಷ್ಟ ನಿದರ್ಶನ ಕೇಂದ್ರೀಯ ಕಕ್ಷೆಗಳನ್ನು ಕುರಿತ ಪ್ರಶ್ನೆಗಳು. ಇಂಥ ಪ್ರಶ್ನೆಗಳ ಉಗಮವನ್ನು ಸೌರವ್ಯೂಹದ ಸ್ವರೂಪದ ಅಧ್ಯಯನದಲ್ಲಿ ಕಾಣಬಹುದು.

ಇಲ್ಲಿ ಎದುರಾಗುವ ಪ್ರಧಾನ ಅಂಶಗಳಿವು: 0 ಎನ್ನುವುದು ಒಂದು ಸ್ಥಿರೀಕೃತ ಬಲಕೇಂದ್ರ. P ಎನ್ನುವ ಒಂದು ಕಣದ ಮೇಲೆ ಇದು ಆಕರ್ಷಣ ಬಲವನ್ನು ದತ್ತ ನಿಯಮಾನುಸಾರ ಪ್ರಯುಕ್ತಿಸು ವುದು. ಈ ಬಲ OP ರೇಖೆಯು ಮೇಲೆ 0 ನೆಡೆಗೆ ನಿರ್ದೇಶಿತವಾಗಿರುತ್ತದೆ. ಆಗ P ರೇಖಿಸುವ ವಕ್ರರೇಖೆಗೆ ಕೇಂದ್ರೀಯ ಕಕ್ಷೆ ಎಂದು ಹೆಸರು.



ಚಿತ್ರ 10

ಸೌರವ್ಯೂಹದ ಉದಾಹರಣೆಯನ್ನೇ ತೆಗೆದುಕೊಂಡರೆ ಇಲ್ಲಿ ಸೂರ್ಯ ಬಲಕೇಂದ್ರ (S); ಭೂಮಿ (E) ರಾಶಿ m ಇರುವ ಒಂದು ಕಣ. ಸೂರ್ಯ– ಭೂಮಿಯ ಮೇಲೆ ಪ್ರಯುಕ್ತಿಸುವ ಬಲ ಸೂರ್ಯ ಭೂಮಿ ದೂರದ ವ್ಯಸ್ತ ವರ್ಗಾನುಪಾತದಲ್ಲಿದೆ $\left(\alpha 1/SE^2\right)$S ನ್ನು ಮೂಲಬಿಂದುವಾಗಿಯೂ Sx ಎಂಬ ಯಾವುದೇ ಸರಳರೇಖೆಯನ್ನು ಸ್ಥಿರ ಪ್ರಾರಂಭಿಕಾಕ್ಷವಾಗಿಯೂ ಆಯ್ದರೆ ಕಣ E ಯ ಚಲನಸಮೀಕರಣಗಳು (ಧ್ರುವೀಯ ನಿರ್ದೇಶಕಗಳಲ್ಲಿ) ಈ ಕೆಳಗಿನಂತಿವೆ:

$$m\left(\ddot{r}/r\dot{\theta}^2\right) = \frac{m\mu}{r^2}$$

$$m\frac{1}{r}.\frac{d}{dt}\left(r^2\dot{\theta}\right) = 0 \qquad \text{..............} \quad (10)$$

ಈ ಸಮೀಕರಣಗಳನ್ನು ಬಿಡಿಸಿದರೆ ಕಣದ ಪಥ ಒಂದು ದೀರ್ಘವೃತ್ತ ಎಂದು ತಿಳಿಯುತ್ತದೆ. **(ನೋಡಿ– ಕೆಪ್ಲರನ–ನಿಯಮಗಳು)**

ಈಗ ಒಂದು ಬಲಕೇಂದ್ರದ ಪ್ರಭಾವದಲ್ಲಿ ಚಲಿಸುತ್ತಿರುವ ಒಂದು ಕಣ ದೀರ್ಘವೃತ್ತವನ್ನು ರೇಖಿಸುತ್ತಿದ್ದರೆ ಆ ಕೇಂದ್ರ ಪ್ರಯುಕ್ತಿಸುವ ನಿಯಮವನ್ನು ಸಹ ಗುಣಿಸುವುದು ಸಾಧ್ಯ. ಈ ದೀರ್ಘವೃತ್ತ ಸಮೀಕರಣ

$$\frac{1}{r} = 1 + e\cos\theta$$

ಎಂದು ಆಯ್ದು $m\left(\ddot{r} - r\dot{\theta}^2\right) = R$

$$m\frac{1}{r}\frac{d}{dt}\left(r^2\dot{\theta}\right) = 0$$

ಎಂಬ ಚಲನಸಮೀಕರಣಗಳಲ್ಲಿ ಆದೇಶಿಸಿ R ನ ಬೆಲೆಯನ್ನು ಗಣಿಸಬಹುದು. ಇದು $R = \mu/r^2$, ಎಂದರೆ ಕೇಂದ್ರಾಕರ್ಷಣ ಬಲ ದೂರದ ಪ್ರತಿಲೋಮ ವರ್ಗಾನುಪಾತದಲ್ಲಿದೆ ಎಂದು ತೋರಿಸುತ್ತದೆ.

**ದೃಢವಸ್ತುಗಳ ಗತಿವಿಜ್ಞಾನ (ಡೈನಮಿಕ್ಸ್ ಆಫ್ ರಿಜಿಡ್ ಬಾಡೀಸ್):** ಬಾಹ್ಯ ಬಲಗಳನ್ನು ಒಂದು ವಸ್ತುವಿನ ಮೇಲೆ ಪ್ರಯೋಗಿಸಿದಾಗ ಅದರ ಕಣಗಳ ಸಾಪೇಕ್ಷ ಸ್ಥಾನಗಳಲ್ಲಿ ಯಾವ ಬದಲಾವಣೆಯೂ ಆಗದಿದ್ದರೆ ಆ ವಸ್ತುವನ್ನು ದೃಢವಸ್ತು ಎನ್ನುತ್ತೇವೆ. ಉದಾಹರಣೆಗೆ ಕಬ್ಬಿಣದ ಸರಳು, ಮರದ ತುಂಡು, ಇತ್ಯಾದಿ. ದ್ರವ, ಅನಿಲ ಪದಾರ್ಥಗಳು ದೃಢವಸ್ತುಗಳಲ್ಲ. ಪರಿಪೂರ್ಣ ದೃಢ ವಸ್ತುಗಳಿಲ್ಲ ಎಂಬುದನ್ನು ಗಮನಿಸಬೇಕು. ಒಂದು ದೃಢ ವಸ್ತುವಿನ ಮೇಲೆ ಬಾಹ್ಯಬಲಗಳ ಪ್ರಯುಕ್ತವಾದಾಗ ಅದರ ಚಲನೆಯನ್ನು ಆಲಂಬರ್ಟನ ತತ್ತ್ವದ **(ನೋಡಿ)** (ದಲಾಂಬರ್ಟನ ತತ್ತ್ವ ಎಂದೂ ಹೇಳುವುದುಂಟು) ನೆರವಿನಿಂದ ಅಭ್ಯಸಿಸಲಾಗುವುದು. ಇದರ ಪ್ರಕಾರ ಒಂದು ದೃಢ ವಸ್ತುವಿನ ಚಲನ ಸಮೀಕರಣಗಳು ಆರು.

$$\sum m\ddot{x} = \sum X$$

$$\sum m\ddot{y} = \sum Y$$

$$\sum m\ddot{z} = \sum Z$$

$$\sum m\left(y\ddot{z} - z\ddot{y}\right) = \sum\left(yZ - zY\right)$$

$$\sum m\left(z\ddot{x} - x\ddot{z}\right) = \sum\left(zX - xZ\right)$$

$$\sum m\left(x\ddot{y} - y\ddot{x}\right) = \sum\left(xY - yX\right)$$

ಈ ಸಮೀಕರಣಗಳ ಅಧ್ಯಯನದಿಂದ ತಿಳಿದುಬರುವ ಸಂಗತಿಗಳಿವು:

1 ದೃಢ ವಸ್ತುವಿನ ಚಲನೆಯನ್ನು ಸರಳಚಲನೆ (ಟ್ರಾನ್ಸ್‌ಲೇಷನ್) ಮತ್ತು ಆವರ್ತ ಚಲನೆ (ರೊಟೇಷನ್) ಎಂದು ಎರಡು ನಿರ್ದಿಷ್ಟ ಚಲನೆಗಳಾಗಿ ಪರಿಗಣಿಸ ಬಹುದು. ಇವು ಸಂಭವಿಸುತ್ತಿರುವುದು ಒಂದೇ ಕಾಲದಲ್ಲಾದರೂ ವಸ್ತುವಿನ ಚಲನೆಯನ್ನು ಅಭ್ಯಸಿಸುವಾಗ ಇಂಥ ಪ್ರತ್ಯೇಕೀಕರಣ ಬಲು ಉಪಯುಕ್ತವಾಗುತ್ತದೆ. ಸರಳಚಲನೆಯನ್ನು ಪರಿಶೀಲಿಸುವಾಗ ವಸ್ತುವಿನ ಗುರುತ್ವ ಕೇಂದ್ರದಲ್ಲಿ ಅದರ ಸಮಸ್ತ ರಾಶಿಯೂ ಕೇಂದ್ರೀಕೃತವಾಗಿದೆ (ಅರ್ಥಾತ್ ಆ ಬಿಂದುವಿನಲ್ಲಿ ಅಷ್ಟು ರಾಶಿಯ ಒಂದು ಕಣ ಇದೆ) ಮತ್ತು ಅದರ ಮೇಲೆ ಸಮಸ್ತ ಬಾಹ್ಯಬಲಗಳೂ ಪ್ರಯುಕ್ತವಾಗಿವೆ ಎಂದು ಭಾವಿಸುತ್ತೇವೆ. ಅಲ್ಲಿಗೆ ಗುರುತ್ವ ಕೇಂದ್ರದ ಚಲನೆಯನ್ನೂ ಕಣಗತಿವಿಜ್ಞಾನದ ಸೂತ್ರ ನಿಯಮ ವಿಧಿಗಳ ಅನುಸಾರ ಅಭ್ಯಸಿಸಬಹುದೆಂದಾಯಿತು. ಆವರ್ತನ ಚಲನೆಯನ್ನು ಪರಿಶೀಲಿಸುವಾಗ ಗುರುತ್ವಕೇಂದ್ರವನ್ನು ಸ್ಥಿರಗೊಳಿಸಿ ವಸ್ತುವಿನ ಮೇಲೆ ಸಮಸ್ತ ಬಾಹ್ಯಬಲಗಳೂ ಪ್ರಯುಕ್ತವಾಗಿವೆ ಎಂದು ಭಾವಿಸುತ್ತೇವೆ. ಎಂದರೆ, ಗುರುತ್ವಕೇಂದ್ರದ ಸುತ್ತ ಒಂದು ವಸ್ತುವಿನ ಚಲನೆ ಆ ಕೇಂದ್ರ ಸ್ಥಿರೀಕೃತವಾಗಿದ್ದು ಅದೇ ಬಲಗಳು ವಸ್ತುವಿನ ಮೇಲೆ ವರ್ತಿಸಿದಾಗ ಉಂಟಾಗುವ ಚಲನೆಯಂತೆಯೇ ಇರುತ್ತದೆ.

2. ಒಂದು ಸರಳರೇಖೆಯ ದಿಶೆಯಲ್ಲಿ ಬಾಹ್ಯಬಲಗಳ ಮೊತ್ತ ಶೂನ್ಯವಾಗಿದ್ದರೆ ಆ ದಿಶೆಯಲ್ಲಿ ವಸ್ತುವಿನ ಸಂವೇಗ (ಮೊಮೆಂಟಂ) ಸ್ಥಿರಾಂಕವಾಗುತ್ತದೆ. ಈ ತತ್ತ್ವಕ್ಕೆ ರೇಖೀಯ ಸಂವೇಗದ ಸಂರಕ್ಷಣೆ ಎಂದು ಹೆಸರು.

3. ಒಂದು ಸರಳರೇಖೆಯ ಸುತ್ತ ಬಾಹ್ಯಬಲಗಳ ಮಹತ್ವದ (ಮೊಮೆಂಟ್ಸ್) ಮೊತ್ತ ಶೂನ್ಯವಾಗಿದ್ದರೆ ವಸ್ತುವಿನ ಸಂಯೋಗದ ಭ್ರಮಣಾಂಕ ಸ್ಥಿರಾಂಕವಾಗುತ್ತದೆ. ಈ ತತ್ತ್ವಕ್ಕೆ ಕೋನೀಯ ಸಂವೇಗದ ಸಂರಕ್ಷಣೆ ಎಂದು ಹೆಸರು.

**ಜಡತಾ ಮಹತ್ವ (ಮೊಮೆಂಟ್ ಆಫ್ ಇನರ್ಷಿಯ):** ಒಂದು ಸರಳ ರೇಖೆಯ ಸುತ್ತ ಒಂದು ಕಣದ ಜಡತಾ ಭ್ರಮಣಾಂಕ $mr^2$ ಎಂಬ ರಾಶಿ. ಇಲ್ಲಿ m ಕಣ ರಾಶಿ ಮತ್ತು r ಕಣದಿಂದ ಸರಳರೇಖೆಯ ಲಂಬ ದೂರ. ಒಂದಕ್ಕಿಂತ ಹೆಚ್ಚು ಕಣಗಳ ಸಮುದಾಯದಲ್ಲಿ–ಉದಾಹರಣೆಗೆ A ಎಂಬ ಒಂದು ದೃಢ ವಸ್ತುವಿನ ರೂಪದಲ್ಲಿ ನೆಲೆಗೊಳಿಸಲ್ಪಟ್ಟಿರುವ ಕಣವ್ಯವಸ್ಥೆಯಲ್ಲಿ–ಈ ರಾಶಿಯ ಬೆಲೆ $\sum_A mr^2$ ಆಗುತ್ತದೆ. ಕಣಗಳ ಅವಿಚ್ಛಿನ್ನ ವಿತರಣೆಯಾದ ದೃಢ ವಸ್ತುವಿನ ಸಂದರ್ಭದಲ್ಲಿ ಅನುಕಲನವನ್ನು ಅನ್ವಯಿಸಿ ಜಡತಾ ಮಹತ್ವವನ್ನು ಗಣಿಸುತ್ತೇವೆ. $l$ ರೇಖೆಯ ಸುತ್ತ, M ದ್ರವ್ಯರಾಶಿಯ ಒಂದು ದೃಢ ವಸ್ತುವಿನ ಜಡತಾ ಮಹತ್ವವನ್ನು $Mk^2$ ಎಂಬ ಪ್ರತೀಕದಿಂದ ಸೂಚಿಸುವುದು ವಾಡಿಕೆ. ಇಲ್ಲಿ k ಗೆ $l$ ನ ಸುತ್ತ ದೃಢವಸ್ತುವಿನ ಭ್ರಮಣತ್ರಿಜ್ಯ (ರೇಡಿಯಸ್ ಆಫ್ ಜೈರೇಷನ್) ಎಂದು ಹೆಸರು. ದೃಢವಸ್ತುಗಳ ಗತಿವಿಜ್ಞಾನದಲ್ಲಿ ಪದೇ ಪದೇ ತಲೆದೋರುವ ಒಂದು ಪ್ರಮುಖ ಪರಿಕಲ್ಪನೆ ಜಡತಾ ಮಹತ್ವವನ್ನು ಕುರಿತು ಇದೆ. ಒಟ್ಟಿನಲ್ಲಿ ಒಂದು ಅಕ್ಷದ ಸುತ್ತ ತಿರುಗುತ್ತಿರುವ ಕಾಯವು ಅದರ ಚಲನೆಯ ದರದ ಬದಲಾವಣೆಗೆ ತೋರುವ ಪ್ರತಿರೋಧವನ್ನು ಜಡತಾ ಮಹತ್ವ ಎನ್ನುತ್ತೇವೆ.

ಈ ಕೆಳಗಿನ ಪ್ರಮುಖ ಫಲಿತಾಂಶಗಳು ದೃಢವಸ್ತುವಿನ ಗತಿವಿಜ್ಞಾನದಲ್ಲಿ ಸಿದ್ಧಿಸುತ್ತವೆ:

1 ಸ್ಥಿರಾಕ್ಷದ ಸುತ್ತ ಆವರ್ತಿಸುತ್ತಿರುವ ದೃಢವಸ್ತು.

ಚಲನಶಕ್ತಿ $T = \frac{1}{2}I\omega^2$

ಕೋನೀಯ ಸಂವೇಗ $h = I\omega$

ಇಲ್ಲಿ I ಸ್ಥಿರಾಕ್ಷದ ಸುತ್ತ ವಸ್ತುವಿನ ಜಡತ್ವದ ಭ್ರಮಣಾಂಕ, w ಕೋನೀಯ ವೇಗ.

2 ಸಾರ್ವತ್ರಿಕ ಸಮತಲಚಲನೆಯಲ್ಲಿರುವ ದೃಢವಸ್ತು.

$$T = \frac{1}{2}mv^2 + \frac{1}{2}I\omega^2$$

$$h = I\omega$$

ಇಲ್ಲಿ v ವಸ್ತುವಿನ ರೇಖಿಯ ವೇಗ; h ಮತ್ತು I ಗಳನ್ನು ದ್ರವ್ಯರಾಶಿ ಕೇಂದ್ರದ ಸುತ್ತ ತೆಗೆದುಕೊಂಡಿದೆ.

3. ದೃಢ ವಸ್ತು ಒಂದು ಸ್ಥಿರಾಕ್ಷದ ಸುತ್ತ ಆವರ್ತಿಸುತ್ತಿರುವಾಗ

ಕೋನೀಯ ಸಂವೇಗ $N = I^{\omega}$

ಶಕ್ತಿ= $E = \frac{1}{2}I\omega^2 + V$

ಇಲ್ಲಿ V ವಸ್ತುವಿನ ವಿಭವ ಶಕ್ತಿ.

4 ಸಮತಲಕ್ಕೆ ಸಮಾಂತರ ಚಲನೆ

$$m\ddot{x} = X,\ m\ddot{y} = Y$$

ಸಂವೇಗ $N = I^{\omega}$

ಶಕ್ತಿ= $E = \frac{1}{2}mv^2 + \frac{1}{2}I\omega^2 + V$

ಸಾಮಾನ್ಯವಾಗಿ ಗತಿವಿಜ್ಞಾನದ ವ್ಯಾಪ್ತಿ ಈವರೆಗೆ ಚರ್ಚಿಸಿದ ವಿಷಯಗಳ ಸುತ್ತ ಹರಡಿರುತ್ತದೆ. ಆದರೆ ಇಲ್ಲಿನ ಗಣನೆಗಳಲ್ಲಿ ಒಂದು ನಿರ್ದೇಶಕ ಚೌಕಟ್ಟು ಸ್ಥಿರವಾಗಿದೆ ಎಂದು ಭಾವಿಸಿಕೊಂಡು ಅದನ್ನು ಆಧರಿಸಿ ನಮ್ಮ ರಚನೆಯನ್ನು ಮಾಡಿದ್ದೇವೆ. ಅಂದರೆ ಕಾಲದ ಹರಿವು ಸ್ಥಿರವಾಗಿದೆ ಎಂದು ಭಾವಿಸುತ್ತೇವೆ. ಆದರೆ ಇಂಥ ಭಾವನೆ ಕೇವಲ ಸಾಪೇಕ್ಷವಾದದ್ದು. ಭೂಮಿಯನ್ನು ಸ್ಥಿರವೆಂದು ಭಾವಿಸುವೆವೇ? ಅದಕ್ಕೆ ಎರಡು ವಿಧದ ಸ್ಪಷ್ಟ ಚಲನೆಗಳಿವೆ. ಸೂರ್ಯನನ್ನಾಗಲೀ ಕ್ರಾಂತಿವೃತ್ತತಲವನ್ನಾಗಲೀ ಸ್ಥಿರವೆಂದು ಭಾವಿಸುವೆವೇ? ಆಕಾಶಗಂಗೆಯ ವಲಯದಲ್ಲಿ ಅವು ಸಹ ಚಲಿಸುತ್ತವೆ. ಹೀಗೆ ಬೃಹದ್ವಿಶ್ವದೆಡೆಗೆ ಮುಂದುವರಿಯುತ್ತ ಹೋದರೆ ಮತ್ತು ಅದೇ ರೀತಿ ಸೂಕ್ಷ್ಮ ವಿಶ್ವದೆಡೆಗೆ (ಪರಮಾಣು ವಿಶ್ವ) ಹಿಂದುವರಿಯುತ್ತ ತೆರಳಿದರೆ ಸಂಪೂರ್ಣ ಸ್ಥಿರತೆ ಅಥವಾ ನಿಶ್ಚಲತೆ ಎಲ್ಲಿಯೂ ಇಲ್ಲ ಎಂದು ತಿಳಿಯುವುದು. ಆದ್ದರಿಂದ ಯಾವ ನಿರ್ದೇಶಕ ಚೌಕಟ್ಟಿಗೆ ಸಾಪೇಕ್ಷವಾಗಿ ನಾವು ವಸ್ತುಗಳ ಚಲನೆಯನ್ನು ಪರಿಶೀಲಿಸುತ್ತೇವೆ ಎನ್ನುವುದನ್ನು ಅವಲಂಬಿಸಿ ಚಲನೆಯ ಪರಿಭಾಷೆ ಮತ್ತು ಗಣಿತಭಾಷೆ ಬದಲಾಯಿಸುತ್ತವೆ. ಹೀಗೆ ಅವಕಲಸಮೀಕರಣಗಳು, ಸದಿಶಗಳು ಅನಿವಾರ್ಯವಾಗಿ ನಮಗೆ ಎದುರಾಗುತ್ತವೆ. ಚಲನೆಯ ಅವಕಲಸಮೀಕರಣ ಗಳನ್ನು ಪಡೆದು ಅವನ್ನು ನಮ್ಮೆದುರು ಒಡ್ಡುವ ಸವಾಲು. ಸಂಕೀರ್ಣ ವ್ಯವಸ್ಥೆಗಳ ಚಲನೆಯನ್ನು ಪರಿಶೀಲಿಸ ಬೇಕಾಗುವ ಗಣಿತದ ಭಾಷೆಯನ್ನು ವಿಸ್ತರಿಸಬೇಕಾಗುತ್ತದೆ. ಈ ದಿಶೆಯಲ್ಲಿ ಲಗ್ರಾಂಜ್ ಮತ್ತು ಹ್ಯಾಮಿಲ್ಟನ್ ಎಂಬ ಗಣಿತಜ್ಞರು ಒದಗಿಸಿರುವ ವಿಧಾನಗಳು ಬಲು ಮುಖ್ಯವಾದವು. ವಾಸ್ತವವಾಗಿ ಗತಿವಿಜ್ಞಾನದ ಸರಿಯಾದ ಹಾಗೂ ಸಮರ್ಪಕವಾದ ಅಧ್ಯಯನ ಪ್ರಾರಂಭವಾಗುವುದು ಲಗ್ರಾಂಜ್ ಮತ್ತು ಹ್ಯಾಮಿಲ್ಟನ್ನರ ವಿಧಾನಗಳ ಅಭ್ಯಾಸದಿಂದ. ಈ ಹಾದಿಯಲ್ಲಿ ಸಾಗಿದ ಗತಿವಿಜ್ಞಾನ ನ್ಯೂಟೋನಿಯನ್ ವಿಧಾನವನ್ನು ದಾಟಿ ರಿಲೆಟಿವಿಟಿ ಸಿದ್ಧಾಂತಕ್ಕೂ ಗಣಿತೀಯ ಭೌತವಿಜ್ಞಾನಕ್ಕೂ ಓದುಗರನ್ನು ಕೊಂಡೊಯ್ಯುತ್ತದೆ **(ನೋಡಿ- ರಿಲೆಟಿವಿಟಿ; ಲಗ್ರಾಂಜಿಯನ್, ಹ್ಯಾಮಿಲ್ಟೋನಿಯನ್).** (ಕೆ.ಎಂ.)

**ಗತಿಶೀಲತೆ :** ಉತ್ಪಾದನಾಂಗಗಳು ಒಂದು ಕ್ಷೇತ್ರದಿಂದ ಅಥವಾ ಒಂದು ಉದ್ಯೋಗದಿಂದ ಮತ್ತೊಂದಕ್ಕೆ ಚಲಿಸುವ ಪ್ರವೃತ್ತಿ, ಸುಗಮತೆ (ಮೊಬಿಲಿಟಿ). ಮಾರುಕಟ್ಟೆಯಲ್ಲಿ ಉತ್ಪಾದನಾಂಗಗಳ ಸರಬರಾಯಿ ಅವುಗಳ ಬೇಡಿಕೆಗೆ ಸರಿದೂಗುವಂತೆ ಮಾಡುವ ಅಂಶ. ಆದ್ದರಿಂದ ಉತ್ಪಾದನಾಂಗಗಳ ಮಾರುಕಟ್ಟೆಯ ಕಾರ್ಯಗತಿಯನ್ನು ಅರ್ಥಮಾಡಿಕೊಳ್ಳ ಬೇಕಾದರೆ ಗತಿಶೀಲತೆಯ ವಿಶ್ಲೇಷಣೆ ಅತ್ಯಾವಶ್ಯಕ. ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಉತ್ಪಾದನಾಂಗಗಳ ಪ್ರತಿಯೊಂದು ಏಕಮಾನದ ಮಾರುಕಟ್ಟೆ ಬೆಲೆ ಅದರ ಪ್ರತಿಯೊಂದು ಉಪಯೋಗದಲ್ಲೂ ಪ್ರತಿಯೊಂದೂ ಕ್ಷೇತ್ರದಲ್ಲೂ ಒಂದೇ ಆಗಿರುತ್ತದೆ. ಅವುಗಳ ಬೆಲೆಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅದು ಅವುಗಳ ಸಾಪೇಕ್ಷ ಉತ್ಪಾದನ ಸಾಮರ್ಥ್ಯಗಳಿಗೆ ಅನುಗುಣವಾಗಿರುತ್ತದೆ; ಇಲ್ಲವೆ ಆಯಾ ಕ್ಷೇತ್ರದಲ್ಲಿಯ ಅನುಪಯುಕ್ತತೆಗೆ ಅನುಗುಣವಾಗಿರುತ್ತವೆ. ಈ ಕಾರಣದಿಂದಾಗಿ ಉಂಟಾಗಬಹುದಾದ ವ್ಯತ್ಯಾಸವನ್ನು ಬಿಟ್ಟರೆ ಉತ್ಪಾದನಾಂಗ ಏಕಮಾನ ಬೆಲೆಗಳು ಯಾವುದೇ ಮಾರುಕಟ್ಟೆಯಲ್ಲಿ ಸಮನಾಗಿರುತ್ತವೆ. ಅವುಗಳ ಬೆಲೆಗಳಲ್ಲಿ ಸಮಾನತೆಯನ್ನುಂಟುಮಾಡುವ ಅಂಶವೆಂದರೆ ಗತಿಶೀಲತೆ. ಆದರೆ ಮಾರುಕಟ್ಟೆಯಲ್ಲಿ ಪರಿಪೂರ್ಣ ಸ್ಪರ್ಧೆಯಿಲ್ಲದಿರುವುದರಿಂದ ಪರಿಪೂರ್ಣ ಗತಿಶೀಲತೆಗೆ ಅವಕಾಶ ಇರುವುದಿಲ್ಲ. ಈ ಕಾರಣದಿಂದಾಗಿ ಉತ್ಪಾದನಾಂಗದ ಘಟಕಗಳ ಬೆಲೆಗಳು ಒಂದೊಂದು ವೃತ್ತಿಯಲ್ಲೂ ಒಂದೊಂದು ಕ್ಷೇತ್ರದಲ್ಲೂ ಬೇರೆಬೇರೆಯಾಗಿರುತ್ತವೆ. ಉತ್ಪಾದನಾಂಗಗಳಲ್ಲಿ ಕಂಡುಬರುವ ಗತಿ ಶೀಲತೆಯನ್ನು ಪರೀಕ್ಷಿಸಿ ತಿಳಿಯಬಹುದು.

**ಭೂಮಿ:** ಉತ್ಪಾದನಾಂಗಗಳಲ್ಲಿ ಪರಿಪೂರ್ಣ ಗತಿಶೀಲತೆ ಕಂಡುಬರದಿದ್ದರೂ ಈ ಪ್ರವೃತ್ತಿ ಒಂದೊಂದು ಉತ್ಪಾದನಾಂಗದಲ್ಲೂ ಒಂದೊಂದು ಪ್ರಮಾಣದಲ್ಲಿ ಕಂಡುಬರುತ್ತದೆ. ಉತ್ಪಾದನಾಂಗಗಳಲ್ಲಿ ಮುಖ್ಯವಾದ ಭೂಮಿಯಲ್ಲಿ ಗತಿಶೀಲತೆಯೇ ಇಲ್ಲ. ಜಮೀನು, ವಾಯುಗುಣ, ನದಿ ಮುಂತಾದವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಭೌತಿಕವಾಗಿ ಸಾಗಿಸುವುದು ಅಸಾಧ್ಯ. ಆದರೂ ಈ ಉತ್ಪಾದನಾಂಗವನ್ನು ಬೇರೆ ಬೇರೆ ಉಪಯೋಗಗಳಿಗೆ ಅಳವಡಿಸಿಕೊಳ್ಳುವುದರ ಮೂಲಕ ಅದರಲ್ಲಿ ಗತಿಶೀಲತೆಯನ್ನುಂಟು ಮಾಡಬಹುದು. ಉದಾಹರಣೆಗೆ, ಧಾನ್ಯವನ್ನು ಬೆಳೆಯುತ್ತಿದ್ದ ಜಮೀನನ್ನು ಕಾರ್ಖಾನೆ ಕಟ್ಟಡ ಕಟ್ಟಲು ಬಳಸಿಕೊಳ್ಳಬಹುದು. ಈ ಬಗೆಯ ಗತಿಶೀಲತೆ ಸಾಧ್ಯವಿರುವುದರಿಂದ ಯಾವುದೇ ಕ್ಷೇತ್ರದಲ್ಲಿ ಭೂಮಿಯ ಬೇರೆ ಬೇರೆ ಉಪಯೋಗಗಳಲ್ಲಿ ಒಂದೇ ಮಟ್ಟದ ಗೇಣಿ ಇರುವಂತೆ ಮಾಡಲು ಸಾಧ್ಯ. ಆದರೂ ಭೂಮಿಯನ್ನು ಭೌತಿಕವಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವ ಸಾಧ್ಯತೆಯಿಲ್ಲದಿರುವುದರಿಂದ ಗೇಣಿ ಅದರ ಬೇಡಿಕೆಗೆ ಅನುಗುಣವಾಗಿ ಮಾತ್ರ ಬದಲಾಗುತ್ತದೆಯೇ ಹೊರತು ಸರಬರಾಜಿನಿಂದ ಪ್ರಭಾವಿತಗೊಳ್ಳುವುದಿಲ್ಲ. ಯಾವುದೇ ಕ್ಷೇತ್ರದಲ್ಲಿ ಅಧಿಕ ಬೇಡಿಕೆಯ ಕಾರಣದಿಂದಾಗಿ ಗೇಣಿಯ ಮಟ್ಟ ಏರಿದಾಗ ಅದು ಕಡಿಮೆ ಇರುವ ಕ್ಷೇತ್ರಗಳಿಂದ ಭೂಮಿ ಆ ಕ್ಷೇತ್ರಕ್ಕೆ ಚಲಿಸಿ ಆ ಕ್ಷೇತ್ರದಲ್ಲಿಯ ಸರಬರಾಜನ್ನು ಹೆಚ್ಚಿಸಿ ಅಲ್ಲಿಯ ಗೇಣಿಯನ್ನು ಇಳಿಸುವ ಸಾಧ್ಯತೆ ಇಲ್ಲ. ಆದಕಾರಣ ಬೇರೆಬೇರೆ ಕ್ಷೇತ್ರಗಳಲ್ಲಿ ಗೇಣಿ ಬೇರೆ ಬೇರೆ ಮಟ್ಟದಲ್ಲಿರುತ್ತವೆ.

**ಬಂಡವಾಳ:** ಬಂಡವಾಳ ಎರಡು ಬಗೆ: ಹಣ ಬಂಡವಾಳ ಮತ್ತು ಭೌತಿಕ ಬಂಡವಾಳ. ಹಣ ಬಂಡವಾಳದಲ್ಲಿ ತಕ್ಕಮಟ್ಟಿನ ಗತಿಶೀಲತೆಯಿರುವುದರಲ್ಲಿ ಸಂದೇಹವಿಲ್ಲ. ಬಡ್ಡಿಯ ದರದ ವ್ಯತ್ಯಾಸಗಳಿಗೆ ತಕ್ಕಂತೆ ಹಣ ಬಂಡವಾಳ ಒಂದು ಕ್ಷೇತ್ರದಿಂದ ಅಥವಾ ಒಂದು ಉಪಯೋಗದಿಂದ ಮತ್ತೊಂದಕ್ಕೆ ಚಲಿಸಿ ಬಂಡವಾಳ ಮಾರುಕಟ್ಟೆಯಲ್ಲಿ ಸಮಾನವಾದ ಬಡ್ಡಿಯ ದರಕ್ಕೆ ಎಡೆ ಮಾಡಿಕೊಡುತ್ತದೆ. ಆದರೂ ಇದರಲ್ಲಿ ಪರಿಪೂರ್ಣ ಗತಿಶೀಲತೆಯಿದೆಯೆಂದು ಹೇಳುವುದು ಸರಿಯಲ್ಲ. ಸ್ಥಳೀಯ ಬಂಡವಾಳ ಮಾರುಕಟ್ಟೆಯಲ್ಲಿ ಅದರ ಚಲನೆಗೆ ಅಡೆತಡೆಗಳಿರುವುದನ್ನು ಗಮನಿಸ ಬಹುದು. ಉದಾಹರಣೆಗೆ, ರಾಜಕೀಯ ಕಾರಣಗಳಿಂದಾಗಿ ಹೊರದೇಶಗಳಿಂದ ಬಂಡವಾಳದ ಆಗಮನವನ್ನು ನಿಷೇಧಿಸಿರಬಹುದು; ಇಲ್ಲವೇ ಪಾವತಿ ಶಿಲ್ಕಿನಲ್ಲಿ ಅಸಮತೋಲನ ಉಂಟಾಗಬಹುದೆಂಬ ಭಯದಿಂದ ಬಂಡವಾಳ ಹೊರದೇಶಗಳಿಗೆ ಹರಿಯುವುದನ್ನು ಸರ್ಕಾರಗಳು ತಡೆದಿಟ್ಟಿರಬಹುದು. ಭೌತಿಕ ಬಂಡವಾಳದ ಗತಿಶೀಲತೆ ತೀರ ಕಡಿಮೆ. ಈ ಬಗೆಯ ಬಂಡವಾಳವನ್ನು ಬೇರೆಬೇರೆ ಉಪಯೋಗಗಳಿಗೆ ಹಾಕುವುದು ಕಷ್ಟ. ವಿಶಿಷ್ಟ ರೂಪದ ಬಂಡವಾಳವಾಗಿದ್ದರಂತೂ ಅದನ್ನು ಯಾವ ಕಾರ್ಯಕ್ಕೆ ಉಪಯೋಗಿಸಬೇಕೋ ಅದನ್ನು ಬಿಟ್ಟು ಬೇರೆಯದಕ್ಕೆ ಉಪಯೋಗಿಸುವ ಸಾಧ್ಯತೆ ಇಲ್ಲ.

**ಶ್ರಮ:** ಸಂಘಟನೆಯನ್ನೂ ಒಂದು ಬಗೆಯ ಶ್ರಮವೆಂದು ಪರಿಗಣಿಸಿದ ಪಕ್ಷದಲ್ಲಿ ಗತಿಶೀಲತೆಯನ್ನೂ ವಿಶ್ಲೇಷಿಸಬೇಕಾಗಿ ಉಳಿದಿರುವ ಉತ್ಪಾದನಾಂಗ ಶ್ರಮ ಅಥವಾ ಕಾರ್ಮಿಕರು. ಭೂಮಿ ಮತ್ತು ಬಂಡವಾಳಕ್ಕಿಂತ ಕಾರ್ಮಿಕರಲ್ಲಿ ಗತಿಶೀಲತೆ ಅಧಿಕ ಪ್ರಮಾಣದಲ್ಲಿರಬೇಕೆಂಬುದು ಸಾಮಾನ್ಯ ಭಾವನೆ. ಆದರೆ ಆಡಮ್ ಸ್ಮಿತ್ 18 ನೆಯ ಶತಮಾನದಲ್ಲಿ ಬರೆಯುತ್ತ, ಸಾಗಿಸಲಾಗದ ಗಂಟುಮೂಟೆಯೇ ಮಾನವ ಎಂದು ಅಭಿಪ್ರಾಯಪಟ್ಟಿದ್ದ. ಕಾರ್ಮಿಕರ ಗತಿಶೀಲತೆ ಎರಡು ಬಗೆ: 1. ಉದಗ್ರ (ವರ್ಟಿಕಲ್) ಮತ್ತು 2. ಕ್ಷಿತಿಜೀಯ (ಹಾರಿಜಾಂಟಲ್). ಇವೆರಡೂ ಅನುಕ್ರಮವಾಗಿ ಔದ್ಯೋಗಿಕ ಮತ್ತು ಭೌಗೋಳಿಕ ಗತಿಶೀಲತೆಗಳನ್ನು ಸೂಚಿಸುತ್ತವೆ.

**ಉದಗ್ರ ಗತಿಶೀಲತೆ:** ಕೆಳಗಿನ, ನೀಲಿಕಾಲರಿನ ವೃತ್ತಿಗಳಲ್ಲಿ ನಿರತರಾಗಿರುವ ಕಾರ್ಮಿಕರು ಮೇಲಣ, ಶ್ವೇತಕಾಲರಿನ ವೃತ್ತಿಗಳಿಗೆ ಚಲಿಸುವ ಪ್ರವೃತ್ತಿಯನ್ನು ಉದಗ್ರ ಅಥವಾ ಔದ್ಯೋಗಿಕ ಗತಿಶೀಲತೆ ಸೂಚಿಸುತ್ತದೆ. ಈ ಬಗೆಯ ಗತಿಶೀಲತೆ ವಾಸ್ತವವಾಗಿ ಎಷ್ಟರಮಟ್ಟಿಗೆ ಕಂಡುಬರುತ್ತದೆಯೆಂಬುದನ್ನು ಅರಿಯುವ ದೃಷ್ಟಿಯಿಂದ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಅಂತರತಲೆಮಾರಿನ ಅಥವಾ ತಂದೆಮಕ್ಕಳಲ್ಲಿ ಕಂಡುಬರುವ ಔದ್ಯೋಗಿಕ ಗತಿಶೀಲತೆಯನ್ನು ವಿಶ್ಲೇಷಿಸುವ ಅನೇಕ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ಇಂಥ ಅಧ್ಯಯನಗಳಿಂದ ಹೊರಬಿದ್ದಿರುವ ಗಮನಾರ್ಹವಾದ ಅಂಶವೇನೆಂದರೆ, ಕೆಳಗಿನ ಹಾಗೂ ಮೇಲಿನ ಉದ್ಯೋಗಗಳಲ್ಲಿ ನಿರತರಾಗಿರುವವರ ಮಕ್ಕಳು ತಂತಮ್ಮ ತಂದೆಯರ ಉದ್ಯೋಗಗಳನ್ನೇ ಆರಿಸಿಕೊಳ್ಳುತ್ತಾರೆಂಬುದು; ಎಂದರೆ ಕೆಳಗಿನ ಉದ್ಯೋಗದಲ್ಲಿರುವವರ ಮಕ್ಕಳು ಮೇಲಿನ ಉದ್ಯೋಗಗಳಿಗೆ ಚಲಿಸದಿರುವುದು ಕಾರ್ಮಿಕರಲ್ಲಿ ಔದ್ಯೋಗಿಕ ಗತಿಶೀಲತೆ ಇಲ್ಲದಿರುವುದಕ್ಕೆ ಜೆ. ಇ. ಕೈರನ್ಸ್ ಮಂಡಿಸಿರುವ, ಸ್ಪರ್ಧಿಸದ ಗುಂಪುಗಳ ಸಿದ್ಧಾಂತದಲ್ಲಿ ವಿವರಣೆಯಿದೆ. ಈ ಸೂತ್ರದ ಪ್ರಕಾರ ಸಮಾಜದಲ್ಲಿಯ ನಾನಾ ಪಂಗಡಗಳ ನಡುವೆ ಸುಲಭವಾಗಿ ಸ್ಪರ್ಧೆ ಸಾಧ್ಯವಿಲ್ಲದಿದ್ದರೆ ಔದ್ಯೋಗಿಕ ಗತಿಶೀಲತೆ ಸುಸೂತ್ರವಾಗಿ ನಡೆದು, ಈಗ ಕಂಡುಬರುವ ಔದ್ಯೋಗಿಕ ವೇತನಗಳಲ್ಲಿಯ ಅಂತರ ತೀರ ಕಡಿಮೆಯಾಗುತ್ತಿತ್ತು – ಎಂಬುದಾಗಿ ಇದು ವಿವರಿಸುತ್ತದೆ. ಆದರೆ ಇಲ್ಲಿ ಸ್ಪರ್ಧೆ ಸಾಧ್ಯವಿಲ್ಲ. ಏಕೆಂದರೆ ಕೆಳಮಟ್ಟದ ಉದ್ಯೋಗಗಳಲ್ಲಿ ನಿರತನಾಗಿರುವ ವ್ಯಕ್ತಿಗೆ ತನ್ನ ಮಕ್ಕಳಿಗೆ ಮೇಲ್ಮಟ್ಟದ ಉದ್ಯೋಗಕ್ಕೆ ಬೇಕಾದ ಅರ್ಹತೆ ದೊರಕಿಸಿಕೊಡಲು ಅಗತ್ಯವಾದ ವಿದ್ಯಾಭ್ಯಾಸದ ವೆಚ್ಚವನ್ನು ಹೊರುವ ಶಕ್ತಿ ಇಲ್ಲದ ಕಾರಣ ಅಂಥವನ ಮಕ್ಕಳು ಔದ್ಯೋಗಿಕ ಗತಿಶೀಲತೆ ಪಡೆಯಲು ಅಸಮರ್ಥರಾಗಿರುವುದು ಸ್ವಾಭಾವಿಕ. ಮೇಲ್ಮಟ್ಟದ ಉದ್ಯೋಗಗಳಲ್ಲಿರುವ ವ್ಯಕ್ತಿಗಳು ತಮ್ಮ ಮಕ್ಕಳಿಗೆ ತಮ್ಮದೇ ಉದ್ಯೋಗಗಳಿಗೆ ಬೇಕಾಗುವ ಅರ್ಹತೆಗಳನ್ನು ಒದಗಿಸುವುದರಲ್ಲಿ ಸಮರ್ಥರಾಗಿರುವುದರಿಂದ ಅಂಥ ಮಕ್ಕಳು ತಮ್ಮ ತಂದೆಯರ ಉದ್ಯೋಗಗಳನ್ನು

ಸಾಮಾನ್ಯವಾಗಿ ಪಡೆಯುವ ಸಾಧ್ಯತೆ ಉಂಟಾಗುತ್ತದೆ. ಹೀಗಾಗಿ ಕೆಳಮಟ್ಟದ ಹುದ್ದೆಗಳಲ್ಲಿರುವವರ ಮಕ್ಕಳು ಮೇಲ್ಮಟ್ಟದ ಹುದ್ದೆಗಳಲ್ಲಿರುವವರ ಮಕ್ಕಳೊಡನೆ ಈ ಹುದ್ದೆಗಳಿಗಾಗಿ ಸ್ಪರ್ಧೆ ಹೂಡುವ ಸಾಮರ್ಥ್ಯ ಪಡೆದಿಲ್ಲದ ಕಾರಣ ಈ ಹುದ್ದೆಗಳಲ್ಲಿ ಒಂದು ಬಗೆಯ ಏಕಸ್ವಾಮ್ಯ ಲಕ್ಷಣ ಬೆಳೆದು ಬಂದು, ಇವುಗಳಲ್ಲಿ ಅವಶ್ಯಕತೆಗಿಂತ ಅಧಿಕ ಗಾತ್ರದ ವೇತನವಿರುವ ಪ್ರವೃತ್ತಿ ಇರುತ್ತದೆ. ಬಂಡವಾಳ ಪದ್ಧತಿಯ ರಾಷ್ಟ್ರಗಳಲ್ಲಿ ಈ ಪರಿಸ್ಥಿತಿ ಇರುವುದೆಂದು ಭಾವಿಸಲಾಗಿದೆ. ಸಮಾಜವಾದಿ ರಾಷ್ಟ್ರಗಳಲ್ಲಿ ಸರ್ಕಾರ ವಿದ್ಯಾರ್ಥಿವೇತನ, ಉಚಿತ ವಿದ್ಯಾಭ್ಯಾಸ ಮೊದಲಾದ ಪ್ರೋತ್ಸಾಹಕ ನೀತಿ ಪಾಲಿಸುವುದರಿಂದ ಕೆಳಮಟ್ಟದ ಹುದ್ದೆಗಳಲ್ಲಿರುವ ವ್ಯಕ್ತಿಗಳ ಮಕ್ಕಳಿಗೆ ಮೇಲ್ಮಟ್ಟದ ಹುದ್ದೆಗಳಿಗೆ ಬೇಕಾದ ಅರ್ಹತೆಯನ್ನು ಸಂಪಾದಿಸುವ ಅವಕಾಶವುಂಟಾಗುತ್ತದೆ. ಆದಕಾರಣ ಅಂಥ ರಾಷ್ಟ್ರಗಳಲ್ಲಿ ಔದ್ಯೋಗಿಕ ಗತಿಶೀಲತೆ ಸ್ವಲ್ಪ ಮಟ್ಟಿಗೆ ಕಂಡು ಬರುವುದಲ್ಲದೆ, ಮೇಲ್ಮಟ್ಟದ ಉದ್ಯೋಗಗಳಲ್ಲಿಯ ಏಕಸ್ವಾಮ್ಯದ ಅಂಶ ತೊಡೆದು ಹೋಗಿ ಔದ್ಯೋಗಿಕ ವೇತನಗಳ ವ್ಯತ್ಯಾಸ ಸಂಕುಚಿತಗೊಳ್ಳುವ ಪ್ರವೃತ್ತಿ ಇದೆಯೆಂದು ಹೇಳಲಾಗಿದೆ.

**ಕ್ಷಿತಿಜೀಯ ಗತಿಶೀಲತೆ:** ಕಾರ್ಮಿಕ ಒಂದು ಕಾರ್ಖಾನೆಯಿಂದ, ಒಂದು ಕೈಗಾರಿಕೆಯಿಂದ ಅಥವಾ ಒಂದು ಪ್ರದೇಶದಿಂದ ಮತ್ತೊಂದಕ್ಕೆ ಚಲಿಸುವ ಪ್ರವೃತ್ತಿಯೇ ಕ್ಷಿತಿಜೀಯ ಗತಿಶೀಲತೆ. ಈ ಬಗೆಯ ಚಲನೆ ಸ್ವಯಂಪ್ರೇರಿತವಾಗಿರಬಹುದು ಇಲ್ಲವೆ ಕಾರ್ಮಿಕನ ಮೇಲೆ ಹೊರಿಸಿದ್ದಾಗಿರಬಹುದು. ಅಧಿಕವೇತನ ಅಥವಾ ಉತ್ತಮ ಕೆಲಸದ ಸ್ಥಿತಿಯನ್ನರಸಿ ಕಾರ್ಮಿಕ ಚಲಿಸುವುದು ಸ್ವಯಂಪ್ರೇರಣೆಯಿಂದ. ಹುದ್ದೆಯಿಂದ ವಜಾ ಆದ ಅಥವಾ ರಾಜಕೀಯ ಕಾರಣಗಳಿಗಾಗಿ ದೇಶದಿಂದ ದೂಡಲ್ಪಟ್ಟ ಕಾರ್ಮಿಕ ಒಂದು ಉದ್ಯೋಗದಿಂದ ಅಥವಾ ಒಂದು ದೇಶದಿಂದ ಮತ್ತೊಂದಕ್ಕೆ ಚಲಿಸ ಬೇಕಾಗುತ್ತದೆ. ಆದರೆ ಈ ಬಗೆಯ ಗತಿಶೀಲತೆ ವಿರಳ.

ಸ್ವಯಂಪ್ರೇರಿತವಾದ ಕ್ಷಿತಿಜೀಯ ಗತಿಶೀಲತೆಗೆ ಕಾರಣವಾಗುವ ಪ್ರಭಾವಗಳು ಹಲವಾರು. ಸಾಮಾಜಿಕ ಹಾಗೂ ವೈಯಕ್ತಿಕ ಕಾರಣಗಳಿಂದಾಗಿ ಮಹಿಳೆಯರಿಗಿಂತ ಗಂಡಸರಲ್ಲಿ ಇದು ಹೆಚ್ಚು. ವಯಸ್ಸಾದ ಕಾರ್ಮಿಕರಿಗಿಂತ ತರುಣ ಕಾರ್ಮಿಕರಲ್ಲಿ ಅಧಿಕ. ಉದ್ಯೋಗದಾತರು ಸಾಮಾನ್ಯವಾಗಿ ತರುಣ ಕಾರ್ಮಿಕರ ಬಗ್ಗೆ ಹೆಚ್ಚಿನ ಒಲವು ತೋರಿಸುತ್ತಾರೆ. ವಯಸ್ಸಾದ ಕಾರ್ಮಿಕರು ತಾವು ಉದ್ಯೋಗ ಮಾಡುತ್ತಿರುವ ಕಾರ್ಖಾನೆಯಲ್ಲಿ ಸಾಕಷ್ಟು ಜ್ಯೇಷ್ಠತೆ (ಸೀನಿಯಾರಿಟಿ) ಪಡೆದಿರುವುದರಿಂದ ಅವರು ಕೆಲಸ ಬದಲಾಯಿಬೇಕಾದಾಗ ತಮ್ಮ ಜ್ಯೇಷ್ಠತೆಗೆ ಅನುಗುಣವಾಗಿ ಉದ್ಯೋಗ ಭದ್ರತೆ, ವಿಶ್ರಾಂತಿ ವೇತನ, ಮೊದಲಾದ ಅನುಕೂಲಗಳನ್ನು ಬಿಟ್ಟು ಹೋಗಬೇಕಾಗುವುದರಿಂದ ಅವರಲ್ಲಿ ಕೆಲಸ ಬದಲಾಯಿಸುವ ಪ್ರೇರಣೆ ಕಡಿಮೆ. ಅವಿದ್ಯಾವಂತರಿಗಿಂತ ವಿದ್ಯಾವಂತರಲ್ಲಿ ಗತಿಶೀಲತೆ ಹೆಚ್ಚಾಗಿ ಕಂಡುಬರುತ್ತದೆ. ವಿದ್ಯಾವಂತರಿಗೆ ವಿಶಾಲವಾದ ಶ್ರಮ ಮಾರುಕಟ್ಟೆಯುಂಟು. ಅವಿದ್ಯಾವಂತ ದುಡಿಮೆಗಾರರ ಮಾರುಕಟ್ಟೆ ಕಿರಿದು. ಕಾರ್ಮಿಕ ಮಾರುಕಟ್ಟೆಯಲ್ಲಿ ಗತಿಶೀಲತೆ ಕಡಿಮೆಯಿರಲು ಇನ್ನೊಂದು ಕಾರಣವೆಂದರೆ ಉದ್ಯೋಗದಾತರು ಅನುಸರಿಸುತ್ತಿರುವ ಅನೌಪಚಾರಿಕ (ಇನ್ಫಾರ್ಮಲ್) ನೇಮಕ ನೀತಿ ಮತ್ತು ಅಂತರಿಕ ಬಡ್ತಿ ನೀಡಿಕೆ ನೀತಿ. ನೇಮಕ ಮಾಡಿಕೊಳ್ಳಲು ಯಾವ ವಿಧ್ಯುಕ್ತನೀತಿಯನ್ನೂ ಪಾಲಿಸದಿದ್ದಾಗ, ಅಭ್ಯರ್ಥನ ಪತ್ರಗಳನ್ನು ಕರೆಯುವ ಪ್ರಕಟನೆಯೇ ಮುಂತಾದ ಕ್ರಮಗಳನ್ನು ಅನುಸರಿಸದಿದ್ದಾಗ, ಉದ್ಯೋಗಾವಕಾಶಗಳ ಬಗ್ಗೆ ಹೊರಗಿನ ಉದ್ಯೋಗಾರ್ಥಿಗಳಿಗೆ ತಿಳಿವಳಿಕೆ ಲಭ್ಯವಾಗದೆ ಗತಿಶೀಲತೆಗೆ ಅವಕಾಶ ಇಲ್ಲದಂತಾಗುತ್ತದೆ. ಕೆಳಗಿನ ಹುದ್ದೆಗಳಲ್ಲಿರುವವರಿಗೆ ಬಡ್ತಿ ನೀಡಿ ಅವರನ್ನು ಮೇಲಣ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದರಿಂದಲೂ ಹೊರಗಿನವರು ಈ ಹುದ್ದೆಗಳಿಗೆ ಚಲಿಸಲು ಅಡ್ಡಿಯಾಗುತ್ತದೆ. ಈ ನಾನಾ ಕಾರಣಗಳಿಂದಾಗಿ ಪರಿಪೂರ್ಣ ಗತಿಶೀಲತೆ ಇಲ್ಲದಂತಾಗಿ, ಕಾರ್ಮಿಕ ಮಾರುಕಟ್ಟೆಯಲ್ಲಿ ಬೇಡಿಕೆ – ಸರಬರಾಯಿಗಳಲ್ಲಿ ಸಮತೋಲನೆ ಏರ್ಪಡದೆ, ಪರಿಪೂರ್ಣ ಸ್ಪರ್ಧೆಗೆ ಕುಂದುಂಟಾಗುತ್ತದೆ; ಯಾವುದೇ ಹುದ್ದೆಗೆ ಏಕರೂಪದ ವೇತನವಿಲ್ಲದಂತಾಗುತ್ತದೆ; ಅದು ಕಾರ್ಖಾನೆಯಿಂದ ಕಾರ್ಖಾನೆಗೂ ಕೈಗಾರಿಕೆಯಿಂದ ಕೈಗಾರಿಕೆಗೂ ಪ್ರದೇಶದಿಂದ ಪ್ರದೇಶಕ್ಕೂ ಭಿನ್ನವಾಗಿರುತ್ತದೆ. (ಎ.ಎ.)

**ಗದಗ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಅವುಗಳ ಆಡಳಿತ ಕೇಂದ್ರ. 1997ರ ಜಿಲ್ಲಾ ಮರುವಿಂಗಡಣಾ ಯೋಜನೆಯ ಮೇರೆಗೆ ಧಾರವಾಡ ಜಿಲ್ಲೆಯ ಐದು ತಾಲ್ಲೂಕುಗಳನ್ನು ಬೇರ್ಪಡಿಸಿ ಗದಗ ಜಿಲ್ಲೆಯನ್ನು ರಚಿಸಲಾಯಿತು. ಗದಗ, ರೋಣ, ನರಗುಂದ, ಮುಂಡರಗಿ ಮತ್ತು ಶಿರಹಟ್ಟಿ–ಇವು ತಾಲ್ಲೂಕುಗಳು. ಜಿಲ್ಲೆಯ ಉತ್ತರಕ್ಕೆ ಬಾಗಲಕೋಟೆ, ದಕ್ಷಿಣಕ್ಕೆ ಹಾವೇರಿ, ಪೂರ್ವಕ್ಕೆ ಕೊಪ್ಪಳ ಹಾಗೂ ಬಳ್ಳಾರಿ, ಪಶ್ಚಿಮಕ್ಕೆ ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳು ಇದರ ಮೇರೆಗಳು. ಜಿಲ್ಲೆಯ ವಿಸ್ತೀರ್ಣ 4,657ಚ.ಕಿಮೀ. ಹೋಬಳಿಗಳು 11, ಗ್ರಾಮಗಳು 312. ಜನಸಂಖ್ಯೆ 10,65,235 (2011).

ಕರ್ನಾಟಕದ ಉತ್ತರ ಮಧ್ಯ ಭಾಗದಲ್ಲಿರುವ ಈ ಜಿಲ್ಲೆಯು ಪಶ್ಚಿಮದಿಂದ ಪೂರ್ವದತ್ತ ಇಳಿಜಾರಾಗಿರುವ ಪ್ರದೇಶವನ್ನು ಹೊಂದಿದೆ. ಜಿಲ್ಲೆ ಪಾರಂಪರಿಕವಾಗಿ ಬೆಳವಲನಾಡೆಂದು ಪ್ರಸಿದ್ಧವಾಗಿದೆ. ಇದು ಫಲವತ್ತಾದ ಕಪ್ಪುಮಣ್ಣಿನಿಂದ ಕೂಡಿದ್ದು ಸಾಧಾರಣ ಬೆಟ್ಟಗುಡ್ಡಗಳಿಂದ ಕೂಡಿದೆ. ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡ, ನರಗುಂದ ಮತ್ತು ಗಜೇಂದ್ರಗಡದಲ್ಲಿ ಮತ್ತು ಗದಗದ ಬಳಿ ಬೆಟ್ಟಸಾಲುಗಳಿವೆ. ಈ ಬೆಟ್ಟಶ್ರೇಣಿಯ ಅತ್ಯಂತ ಹೆಚ್ಚಿನ ಎತ್ತರ 937ಮೀ ಈ ಶ್ರೇಣಿ ಗದಗದಿಂದ ಆಗ್ನೇಯದಲ್ಲಿ 48ಕಿಮೀ ಉದ್ದವಾಗಿ ಹಬ್ಬಿ ಎರಡು ತುದಿಗಳಲ್ಲೂ ಸು. 6ಕಿಮೀ ಅಗಲವಿದೆ. ಮಧ್ಯದಲ್ಲಿ 16ಕಿಮೀ ಅಗಲವಾಗಿ ವ್ಯಾಪಿಸಿದೆ. ಧಾರವಾಡ ಬಂಡೆಗಳಿಂದ ರಚಿತವಾಗಿರುವ ಪಳೆಯುಳಿಕೆಯ ಬೆಟ್ಟಗಳು ಗದಗದಿಂದ ದಕ್ಷಿಣಕ್ಕೆ ತುಂಗಭದ್ರಾದ ಕಡೆ ಹರಡಿವೆ. ಇಲ್ಲಿ ಕಣಿವೆಗಳು, ಕಂದರಗಳು ಹೆಚ್ಚು. ಎತ್ತರದ ಪ್ರದೇಶಗಳು ಬೋಳಾಗಿವೆ ಅಲ್ಲಿ ದಟ್ಟವಾಗಿ ಹುಲ್ಲು ಬೆಳೆಯುತ್ತದೆ. ಇಲ್ಲಿನ ಭೂಮಿಯ ಫಲವತ್ತತೆ ಪೂರ್ವಕ್ಕೆ ಬಂದಂತೆಲ್ಲ ಕಡಿಮೆಯಾಗಿದೆ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 3,264 ಹೆಕ್ಟೇರ್.

ಜಿಲ್ಲೆಯ ಬಹುಭಾಗ ಪ್ರಾಚೀನ ಬೆಣಚುಕಲ್ಲು ಮತ್ತು ಪದರ ಶಿಲೆಗಳಿಂದ ಕೂಡಿದೆ. ಇವು ಅಗ್ನಿ ಮತ್ತು ಜಲಶಿಲೆಗಳ ಸಂಯೋಗದಿಂದ ರೂಪಾಂತರ ಹೊಂದಿ ಪಸರಿಸಿವೆ. ಪದರ ಶಿಲೆ, ಗ್ರಾನೈಟ್ ಮತ್ತು ಬೆಣಚುಕಲ್ಲು ಶಿಲಾ ವರ್ಗವು ಎಲ್ಲ ದಿಕ್ಕುಗಳಲ್ಲೂ ಹರಡಿದೆ. ಮ್ಯಾಂಗನೀಸ್ ಇಲ್ಲಿನ ಪ್ರಮುಖ ಅದಿರುಗಳಲ್ಲೊಂದು. ಕಪ್ಪತಗುಡ್ಡದಿಂದ ಪ್ರಾರಂಭವಾದ ದೋಣಿ ಸಾಲಿನಲ್ಲಿ ತಾಮ್ರದ ಅದಿರಿನ ಅಂಶ ಕಂಡು ಬಂದಿದೆ. ಸೊರಟೂರು ಮತ್ತು ಜಲ್ಲಿಗೇರಿಗಳಲ್ಲಿ ಪೈರೈಟ್ಸ್ ಇದೆ. ಕಪ್ಪತ್ತ ಗುಡ್ಡ ಸಾಲಿನಲ್ಲಿ ಕಬ್ಬಿಣದ ಅದಿರು ಹೆಚ್ಚು ಪ್ರಮಾಣದಲ್ಲಿದೆ. ಇಲ್ಲಿ ಹೆಮೆಟೈಟ್ ನಿಕ್ಷೇಪಗಳಿವೆ. ಆದರೆ ಆರ್ಥಿಕ ದೃಷ್ಟಿಯಿಂದ ಇದು ಹೆಚ್ಚು ಲಾಭಕರವಾಗಿಲ್ಲ. ಚಿನ್ನದ ಅದಿರು ಅಲ್ಲಲ್ಲಿ ಕಂಡುಬಂದರೂ ಅಷ್ಟು ಸಾಂದ್ರವಾಗಿಲ್ಲ. ಜಿಲ್ಲೆಯ ಕೆಲವೆಡೆ ಬಳಪದ ಕಲ್ಲು ಕಂಡುಬರುತ್ತದೆ. ಜಿಲ್ಲೆಯ ಕೆಲವು ಕಡೆಗಳಲ್ಲಿ ಹೆಮಟೈಟ್ ನಿಕ್ಷೇಪಗಳು ಕಂಡುಬಂದಿವೆ.

ಇಲ್ಲಿನ ಮಣ್ಣು ವಿವಿಧ ಪ್ರಕಾರದ ವಿಭಜಿತ ಶಿಲಾ ಮಿಶ್ರಣದಿಂದ ಕೂಡಿದೆ. ಹುಳಕೆರೆ, ಎರೆ, ಕೆಂಪು ಮಸಾರಿ, ಮಡಿಕಟ್ಟು, ಮತ್ತು ರೇವೆ ಮಣ್ಣುಗಳು ಸೇರಿವೆ. ರೋಣ, ಗದಗ, ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಮರಳುಮಿಶ್ರಿತ ಮಣ್ಣು ಕಂಡುಬರುತ್ತದೆ. ರೋಣ ಮತ್ತು ನರಗುಂದ ತಾಲ್ಲೂಕುಗಳಲ್ಲಿ ಮಲಪ್ರಭಾ ನದಿಯ ಬಲದಂಡೆಯುದ್ದಕ್ಕೂ ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ತುಂಗಭದ್ರಾ ನದಿಯ ಎಡದಂಡೆಯುದ್ದಕ್ಕೂ ರೇವೆಮಣ್ಣು ಹರಡಿದೆ. ಕಪ್ಪು ಮಣ್ಣು ಫಲವತ್ತಾಗಿದೆ. ಇದು ಜಿಲ್ಲೆಯ ರೋಣ, ಗದಗ, ನರಗುಂದ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ತೋಂಟದಾರ್ಯ ಮಠ, ಗದಗ

ವಾಯುಗುಣ: ಬೇಸಗೆಯಲ್ಲಿ (ಏಪ್ರಿಲ್–ಮೇ) ಅಧಿಕ ಉಷ್ಣಾಂಶವಿರುವುದನ್ನು ಬಿಟ್ಟರೆ ಉಳಿದಂತೆ ಹಿತಕರವಾಗಿರುತ್ತದೆ. ಕೆಲವು ವೇಳೆ ಆ ಅವಧಿಯಲ್ಲಿ 40.4ಸೆ. ನಿಂದ 39.6ಸೆ. ವರೆಗೂ ಇರುತ್ತದೆ. ಜೂನ್ ತಿಂಗಳಲ್ಲಿ ಮುಂಗಾರು ಮಳೆ ಪ್ರಾರಂಭವಾದಾಗ ಉಷ್ಣಾಂಶ ತಗ್ಗುತ್ತದೆ. ಸಾಮಾನ್ಯವಾಗಿ ಜೂನ್–ನವೆಂಬರ್‌ಗಳಲ್ಲಿ ವಾರ್ಷಿಕ ಮಳೆಯ ಅಧಿಕ ಭಾಗ ಬೀಳುತ್ತದೆ. ಸರಾಸರಿ ವಾರ್ಷಿಕ ಮಳೆ 612.30ಮಿಮೀ. ಇದು ಸಾಧಾರಣ ಮಳೆ ಪ್ರದೇಶ. ಮುಂಗಾರು ಮಾರುತದ ಅವಧಿಯಲ್ಲಿ ಬೀಳುವ ಮಳೆ ಹಿಂಗಾರು ಮಾರುತದ ಅವಧಿಗಿಂತ ಸ್ವಲ್ಪ ಹೆಚ್ಚಾಗಿರುತ್ತದೆ. ಹಿಂಗಾರಿನಲ್ಲಿ ಚಂಡಮಾರುತದ ಮಳೆಗಳು ಬೀಳುವುದುಂಟು. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಮುಂಗಾರು


ಗದಗ ಜಿಲ್ಲೆ
ಮಲಪ್ರಭಾ ನದಿ
ನರಗುಂದ
ಸವಡಿ
ರೋಣ
ಗಜೇಂದ್ರಗಡ
ನೀಲಗುಂದ
ನರೇಗಲ್ಲ
ಗದಗ
ಲಕ್ಕುಂಡಿ
ಡಂಬಳ
ಮುಳಗುಂದ
ಶಿರಹಟ್ಟಿ
ಮುಂಡರಗಿ
ದೇವಿಗಾಳ
ಲಕ್ಷ್ಮೇಶ್ವರ
ಬೆಳ್ಳಟ್ಟಿ
ತುಂಗಭದ್ರ ಜಲಾಶಯ
ತುಂಗಭದ್ರಾ ನದಿ
0 10 20
ಕಿಲೋಮೀಟರುಗಳು
ಗದಗ ಜಿಲ್ಲೆ

ಅಧಿಕವಾಗಿ ಬಿದ್ದರೆ ಪೂರ್ವ ಭಾಗದಲ್ಲಿ ಹಿಂಗಾರು ಬೀಳುತ್ತದೆ. ಸರಾಸರಿ ಲೆಕ್ಕದಲ್ಲಿ ಪಶ್ಚಿಮ ಭಾಗದಲ್ಲಿ ಮಳೆ ಸರಾಸರಿ ಸ್ವಲ್ಪ ಅಧಿಕ.

ಜಿಲ್ಲೆಯಲ್ಲಿ ಯಾವ ಪ್ರಮುಖ ನದಿಯೂ ಹರಿಯುವುದಿಲ್ಲ. ತುಂಗಭದ್ರಾ ನದಿ ದಕ್ಷಿಣದ ಅಂಚಿನಲ್ಲಿ ಹರಿದರೆ ಮಲಪ್ರಭಾ ನದಿ ಉತ್ತರದ ಅಂಚಿನಲ್ಲಿ ಹರಿಯುತ್ತದೆ. ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಿಗೂ ಬಳ್ಳಾರಿ ಜಿಲ್ಲೆಗೂ ಮೇರೆಯಾಗಿ ತುಂಗಭದ್ರಾ ನದಿ ಹರಿಯುತ್ತದೆ. ಶಿರಹಟ್ಟಿ ಹಳ್ಳ ಮತ್ತು ಹಿರೇಹಳ್ಳಗಳು ಈ ಜಿಲ್ಲೆಯಲ್ಲಿ

ಸರಸ್ವತಿ ದೇವಾಲಯ, ಗದಗ

ಹುಟ್ಟಿ ಆಗ್ನೇಯಾಭಿಮುಖವಾಗಿ ಹರಿದು ತುಂಗಭದ್ರಾ ನದಿಯನ್ನು ಸೇರಿಕೊಳ್ಳುತ್ತವೆ. ಮಲಪ್ರಭಾ ನದಿ ಈ ಜಿಲ್ಲೆಗೂ ಬಾಗಲಕೋಟೆ ಜಿಲ್ಲೆಗೂ ಸರಹದ್ದಾಗಿ ಹರಿಯುತ್ತದೆ. ನರಗುಂದ ತಾಲ್ಲೂಕಿನ ಲಕ್ಮಾಪುರದ ಬಳಿ ಜಿಲ್ಲೆಗೆ ತಾಗಿ ಹರಿದು ರೋಣ ತಾಲ್ಲೂಕಿನ ಹಡಗಲಿ ಗ್ರಾಮದವರೆಗೂ ಮುಂದುವರಿಯುತ್ತದೆ. ಮಲಪ್ರಭಾ ನದಿಗೆ ಈ ಜಿಲ್ಲೆಯ ಮೂಲಕ ಹರಿಯುವ ಮುಖ್ಯ ಉಪನದಿಗಳಲ್ಲೊಂದಾದ ಬೆಣ್ಣೆಹಳ್ಳ ರೋಣ ತಾಲ್ಲೂಕಿನ ಮೆಣಸಿಗೆಯ ಬಳಿ ಅದನ್ನು ಸೇರುತ್ತದೆ. ಈ ನದಿಗೆ ಗೂಗಿಹಳ್ಳ, ತುಪರಿಹಳ್ಳ, ಹಂದಿಗನ ಹಳ್ಳಗಳು ಕೂಡಿಕೊಳ್ಳುತ್ತವೆ. ಇನ್ನೊಂದು ಹಿರೇಹಳ್ಳ, ಅದನ್ನು ಉತ್ತರಾಭಿಮುಖವಾಗಿ ಗದಗ ಮತ್ತು ರೋಣ ತಾಲ್ಲೂಕುಗಳಲ್ಲಿ ಹರಿದು ಬೇಲೆರಿಯ ಹತ್ತಿರ ಮಲಪ್ರಭಾ ನದಿಯನ್ನು ಸೇರುತ್ತದೆ. ಪವಡಿ ಬಳಿ ಹರಿಯುವ ಆಲೂರು ಹಳ್ಳ ಈ ನದಿಗೆ ಸೇರುವ ಉಪಹಳ್ಳ.

**ವ್ಯವಸಾಯ ಮತ್ತು ನೀರಾವರಿ:** ಈ ಜಿಲ್ಲೆಯಲ್ಲಿ ಶೇ.70 ಮಂದಿ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಪಶ್ಚಿಮ ಕರಾವಳಿಯಿಂದ ಬೀಸುವ ಮುಂಗಾರು ಮಾರುತಗಳು ಇಲ್ಲಿಯ ವ್ಯವಸಾಯಕ್ಕೆ ಹೆಚ್ಚು ಅನುಕೂಲಕರವಾಗಿವೆ. ಈಶಾನ್ಯ ಮಾರುತಗಳಿಂದ ಹಿಂಗಾರು ಮಳೆ ಜಿಲ್ಲೆಯ ಎಲ್ಲ ಭಾಗಗಳಿಗೆ ಸಾಧಾರಣವಾಗಿ ಬೀಳುತ್ತದೆ. ಇಲ್ಲಿನ ವ್ಯವಸಾಯದ ಜಮೀನು, ಮಳೆ ಮಾರುತಗಳನ್ನು ಅವಲಂಬಿಸಿದೆ. ಒಣ ಬೆಳೆಗಳು ಬೆಳೆಯುವ ಜಿರಾಯತು ಜಮೀನು ಮತ್ತು ನೀರಾವರಿ ಬೆಳೆ ಬೆಳೆಯುವ ಬಾಗಾಯತು ಜಮೀನುಗಳೆಂದು ಇಲ್ಲಿಯ ಬೇಸಾಯದ ನೆಲವನ್ನು ವಿಂಗಡಿಸಬಹುದು. ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಕಟ್ಟಿದ ಅನೇಕ ಕೆರೆಗಳು ಮತ್ತು ಜಲಾಶಯಗಳು ಇಂದಿಗೂ ಉಪಯುಕ್ತವಾಗಿವೆ. ಶಿರಹಟ್ಟಿ ತಾಲ್ಲೂಕಿನ ಮಜ್ಜೂರು, ಮಾಗಡಿ, ಶಿಟ್ಟಿಕೇರಿ, ಮುಂಡರಗಿ ತಾಲ್ಲೂಕಿನ ಡಂಬಳ ಕೆರೆಗಳು ಹೆಸರಿಸಬಹುದಾದಂಥವು. ಮಲಪ್ರಭಾ ಬಲದಂಡೆ ಯೋಜನೆಯಿಂದ ನರಗುಂದ, ಗದಗ ಮತ್ತು ರೋಣ ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ. ತುಂಗಭದ್ರಾ ನದಿಯಿಂದ ತೀರ ಪ್ರದೇಶದ ಜಮೀನುಗಳಿಗೆ ನೀರಾವರಿ ಅನುಕೂಲ ಒದಗಿದೆ. ಜಿಲ್ಲೆಯಲ್ಲಿ ಕಾಲುವೆಗಳಿಂದ 34,621 ಕೆರೆಗಳಿಂದ 2,030 ಮತ್ತು ಬಾವಿಗಳಿಂದ 7,373 ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಈ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ವಿಶೇಷವಾಗಿ ಜೋಳ ಬೆಳೆಯುತ್ತದೆ. ಬೆಳವಲನಾಡು ಗೋದಿ, ಜೋಳ, ಹತ್ತಿ, ಗೋವಿನಜೋಳಕ್ಕೆ (ಮೆಕ್ಕೆಜೋಳ) ಪ್ರಸಿದ್ಧ. ಗದಗನ್ನು ರಾಜ್ಯದ ಗೋದಿಯ ಕಣಜವೆಂದು ಕರೆಯುತ್ತಾರೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಎಳ್ಳನ್ನು ಬೆಳೆಯುತ್ತಾರೆ. ಹೆಸರು, ಕಡಲೆ, ಹುರುಳಿ, ತೊಗರಿ ಮುಂತಾದ ಬೆಳೆಗಳು ಸಾಮಾನ್ಯವಾಗಿ ಜಿಲ್ಲೆಯ ಎಲ್ಲ ಭಾಗಗಳಲ್ಲೂ ಬೆಳೆಯುತ್ತವೆ. ಎಣ್ಣೆ ಕಾಳುಗಳನ್ನೂ ಮುಖ್ಯವಾಗಿ ಕಡಲೆಕಾಯಿಯನ್ನೂ ಶಿರಹಟ್ಟಿ, ಮುಂಡರಗಿ, ರೋಣ ತಾಲ್ಲೂಕುಗಳಲ್ಲಿ ಬೆಳೆದರೆ, ಕುಸುಬೆ, ಎಳ್ಳು, ಔಡಲ ಇವು ಬೆಳವಲನಾಡಿನಲ್ಲಿ ವಿಶೇಷವಾಗಿ ಬೆಳೆಯುತ್ತವೆ. ಜಿಲ್ಲೆಯ ಕಪ್ಪು ಮಣ್ಣಿನ ಪ್ರದೇಶದಲ್ಲಿ ಹೆಚ್ಚಾಗಿ ಹತ್ತಿ ಬೆಳೆಯುವುದು. ನೀರಾವರಿ ಪ್ರದೇಶದಲ್ಲಿ ಬತ್ತ ಬೆಳೆಯುತ್ತಾರೆ. ದ್ರಾಕ್ಷಿ, ಪೇರಲ, ಬೋರೆ, ಮಾವು, ಬಾಳೆ, ನಿಂಬೆ, ಬದನೆ, ಬೆಂಡೆ, ಹೀರೆ, ಪಡುವಲ, ಬಟಾಟೆ, ಗೆಣಸು, ಈರುಳ್ಳಿ ಮೊದಲಾದವು ಈ ಜಿಲ್ಲೆಯಲ್ಲಿ ಬೆಳೆಯುತ್ತವೆ. ಗೋದಿಯನ್ನು 35,181, ಮುಸುಕಿನ ಜೋಳವನ್ನು 18,063, ಜೋಳವನ್ನು 84,427, ಸಜ್ಜೆಯನ್ನು 1,190 ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತದೆ (1998–99).

**ಕೈಗಾರಿಕೆ:** ಜಿಲ್ಲೆಯಲ್ಲಿ ಗ್ರಾಮೀಣ ಸಂಪನ್ಮೂಲ ಬಳಸಿಕೊಂಡು ಅಸ್ತಿತ್ವಕ್ಕೆ ಬಂದ ಕೈಗಾರಿಕೆಗಳೇ ಹೆಚ್ಚು. ಕೈಮಗ್ಗ, ಕಂಬಳಿ ನೇಯುವುದು, ಬೀಡಿ ಕಟ್ಟುವುದು, ಬಿದಿರು ವಸ್ತುಗಳು, ಚುರಮರಿ (ಮಂಡಕ್ಕಿ) ಅವಲಕ್ಕಿ ಮತ್ತು ರೇಷ್ಮೆ ಇವುಗಳ ತಯಾರಿಕೆ, ಚರ್ಮ ಹದ ಮಾಡುವುದು. ವಿದ್ಯುತ್ ಮಗ್ಗಗಳಿಂದ ಸೀರೆ, ಕುಪ್ಪಸ ತಯಾರಿಕೆ ಕುಂಬಾರಿಕೆ ಮುಂತಾದ ವಿವಿಧ ಉದ್ದಿಮೆಗಳಲ್ಲಿ ಸಾವಿರಾರು ಜನ ನಿರತರಾಗಿದ್ದಾರೆ. ಗದಗ, ನರಗುಂದ ಇವು ಹತ್ತಿಯ ಉದ್ದಿಮೆಗೆ ಪ್ರಸಿದ್ಧ. ಗದಗದಲ್ಲಿ ಬಟ್ಟೆ ತಯಾರಿಸುವ ಕಾರ್ಖಾನೆಯಿದೆ. ನರಗುಂದ, ಹುಲಕೋಟಿ, ಲಕ್ಷ್ಮೇಶ್ವರಗಳಲ್ಲಿ ನೂಲಿನ ಗಿರಣಿಗಳಿವೆ. ಮೇಲಿನ ಎಲ್ಲ ಸ್ಥಳಗಳಲ್ಲೂ ಹತ್ತಿ ಹಿಂಡುವ ಕಾರ್ಖಾನೆಗಳಿವೆ. ಗದಗ ಜಿಲ್ಲೆ ಕೈಮಗ್ಗದ ಬಟ್ಟೆಗಳಿಗೂ ಪ್ರಸಿದ್ಧ. ರೋಣ ತಾಲ್ಲೂಕಿನಲ್ಲಿ ಖಾದಿ ಬಟ್ಟೆ ತಯಾರಾಗುತ್ತದೆ. ಗದಗ, ಬೆಟಗೇರಿ, ಗಜೇಂದ್ರಗಡ, ಶಿರೋಳ ಇವು ಕೈಮಗ್ಗದ ಸೀರೆ, ಕುಪ್ಪಸ ಮುಂತಾದವುಗಳಿಗೆ ಪ್ರಸಿದ್ಧ. ಗಜೇಂದ್ರಗಡ, ಶಿರೋಳಗಳಲ್ಲಿ ಕಣಗಳು (ರವಿಕೆಬಟ್ಟೆ) ಪ್ರಸಿದ್ಧ. ನರಗುಂದ ಗುಡಾರ ತಯಾರಿಸುವುದಕ್ಕೆ ಪ್ರಸಿದ್ಧ. ತಂಬಳೆ, ಲಕ್ಕುಂಡಿ, ಕೊಣ್ಣೂರುಗಳಲ್ಲಿ ಕಂಬಳಿ ತಯಾರಿಸುವ ಉದ್ಯಮವಿದೆ. ಗದಗದಲ್ಲಿ ಹಿತ್ತಾಳೆ ಪಾತ್ರೆ ತಯಾರಿಸುತ್ತಾರೆ.

ಸರಸ್ವತಿ ವಿಗ್ರಹ, ಗದಗ

ಗ್ರಾಮೋದ್ಯಮಗಳಾದ ಗಾಣದ ಎಣ್ಣೆ, ಸೋಪು, ಚರ್ಮ ಹದಮಾಡುವುದು, ಖಾದಿ ಬಟ್ಟೆ ತಯಾರಿಕೆ ಗದಗ, ರೋಣ, ನರಗುಂದ ಇವುಗಳಲ್ಲಿ ಹರಡಿದೆ. ಗದಗ ಪಟ್ಟಣ ಮುದ್ರಣ ಕ್ಷೇತ್ರದಲ್ಲಿ ಪ್ರಮುಖವಾಗಿದೆ. ತಿಜೋರಿ, ಕಪಾಟು, ಕುರ್ಚಿ, ಮೇಜು, ಮುಂತಾದವುಗಳ ತಯಾರಿಕೆ ಗದಗ, ನರಗುಂದದಲ್ಲಿ ಹೆಚ್ಚು. ಜಿಲ್ಲೆಯಲ್ಲಿ ಬಟ್ಟೆ ಗಿರಣಿಗಳು, ರಾಸಾಯನಿಕ ಕಾರ್ಖಾನೆಗಳು, ಎಂಜನಿಯರಿಂಗ್ ಕೇಂದ್ರಗಳು, ಇತರ ಉದ್ದಿಮೆಗಳು, ಕೈಗಾರಿಕಾ ಕೇಂದ್ರಗಳು, ಕೈಗಾರಿಕಾ ಎಸ್ಟೇಟ್‌ಗಳಿವೆ. ಹತ್ತಿಯ ಕೈಮಗ್ಗದ ಬಟ್ಟೆಗಳು, ಮೆಣಸಿನಕಾಯಿ, ಕಡಲೆಕಾಯಿ, ಗೋದಿ, ಜೋಳ ಮುಂತಾದವು ಈ ಜಿಲ್ಲೆಯ ಪ್ರಮುಖ ರಫ್ತು ವಸ್ತುಗಳಾಗಿವೆ. ಮನೆ ಕಟ್ಟುವ ಸಾಮಗ್ರಿಗಳು, ಯಂತ್ರಗಳು,

ಔಷಧಿ, ಇಂಧನ, ದಿನಬಳಕೆಯ ಸಾಮಗ್ರಿಗಳು, ಅಲಂಕಾರ ವಸ್ತುಗಳು, ಏಲಕ್ಕಿ, ಕಾಫಿಬೀಜ, ಹೊಗೇಸೊಪ್ಪು ಮೊದಲಾದವು ಹೆಚ್ಚಾಗಿ ಹೊರಗಡೆಯಿಂದ ಬರುತ್ತವೆ. ಗದಗ, ಲಕ್ಷ್ಮೇಶ್ವರ ನಗರಗಳು ಬೆಳೆವಣಿಗೆಯಾದಂತೆಲ್ಲ ಜಿಲ್ಲೆಯ ವಾಣಿಜ್ಯ ಚಟುವಟಿಕೆ ಹೆಚ್ಚುತ್ತಿದೆ. ಜಿಲ್ಲೆಯಲ್ಲಿ ನಿಯಂತ್ರಿತ ಮಾರುಕಟ್ಟೆಗಳಿವೆ. ವಾಣಿಜ್ಯ ವ್ಯಾಪಾರಗಳಿಗೆ

ವೀರನಾರಾಯಣ ದೇವಸ್ಥಾನ, ಗದಗ

ಸಂಬಂಧಿಸಿದಂತೆ ವಿವಿಧ ಸಂಸ್ಥೆಗಳು ಸ್ಥಾಪಿತವಾಗಿವೆ. ಗದಗಿನಲ್ಲಿರುವ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆ ಆರ್ಥಿಕ ಚಟುವಟಿಕೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ.

ಈ ಜಿಲ್ಲೆಯಲ್ಲಿ ಹಣಕಾಸು ಮತ್ತು ಬ್ಯಾಂಕಿಂಗಿಗೆ ಸಂಬಂಧಿಸಿದ ವಿವಿಧ ಸಂಸ್ಥೆಗಳಿವೆ. ಕರ್ನಾಟಕ ರಾಜ್ಯ ಹಣಕಾಸು ನಿಗಮ ವಿವಿಧ ಸಂಘ ಸಂಸ್ಥೆಗಳಿಗೆ ಮತ್ತು ಕೈಗಾರಿಕೆಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ. ಸಹಕಾರ ವ್ಯವಸ್ಥೆಯಿಂದ ರೈತರಿಗೆ, ಕೈಕಸಬಿನವರಿಗೆ ಆರ್ಥಿಕ ನೆರವು ದೊರೆಯುತ್ತಿದೆ. ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕ್‌ಗಳು, ಗ್ರಾಮೀಣ ಬ್ಯಾಂಕ್‌ಗಳು ಇವೆ. ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸಹಕಾರಿ ನಗರ ಬ್ಯಾಂಕ್‌ಗಳಿವೆ. ಇತರ ಸಹಕಾರ ಬ್ಯಾಂಕ್‌ಗಳಿವೆ. ಭೂ ಅಭಿವೃದ್ಧಿ ಬ್ಯಾಂಕ್‌ಗಳಿವೆ. ಸಾಲ ಸಹಕಾರ ಸಂಘಗಳಿವೆ.

**ಸಾರಿಗೆಸಂಪರ್ಕ:** ಗದಗದಿಂದ ವಿವಿಧ ತಾಲ್ಲೂಕುಗಳಿಗೆ ಮತ್ತು ಜಿಲ್ಲೆಯ ಹೊರ ಊರುಗಳಿಗೆ ರಸ್ತೆ ಮಾರ್ಗಗಳಿವೆ. 46ಕಿಮೀ ರಾಷ್ಟ್ರೀಯ ಹೆದ್ದಾರಿ, 203 ಕಿಮೀ ರಾಜ್ಯ ಹೆದ್ದಾರಿ, 663 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳಿವೆ. ಜಿಲ್ಲೆಯಲ್ಲಿ ಗ್ರಾಮೀಣ ರಸ್ತೆಗಳೂ ಸೇರಿದಂತೆ ಇವುಗಳ ಒಟ್ಟು ಉದ್ದ 2,594 ಕಿಮೀ. ಈ ಜಿಲ್ಲೆಯೊಂದಿಗೆ ಹೊರಗಿನ ಸಂಪರ್ಕ ಕಲ್ಪಿಸುವ ಕೆಲವು ಮುಖ್ಯ ರೈಲುಮಾರ್ಗಗಳಿವೆ. ಹುಬ್ಬಳ್ಳಿ ಬೆಂಗಳೂರು ರೈಲು ಮಾರ್ಗ ಈ ಜಿಲ್ಲೆಯಲ್ಲಿ ಗದಗದ ಮೂಲಕ ಹಾಯ್ದು ಹೋಗುತ್ತದೆ. ಹುಬ್ಬಳ್ಳಿಯಿಂದ ಗುಂತಕಲ್ಲು, ಸೊಲ್ಲಾಪುರ ಗೋವ ಕಡೆಗಳಿಗೆ ರೈಲುಮಾರ್ಗಗಳಿವೆ. ಗದಗ ಕರ್ನಾಟಕದ ದೊಡ್ಡ ರೈಲು ಜಂಕ್ಷನ್‌ಗಳಲ್ಲೊಂದಾಗಿದೆ. ಜಿಲ್ಲೆಯಲ್ಲಿ 62 ಕಿಮೀ ಬ್ರಾಡ್‌ಗೇಜ್ ಮತ್ತು 50 ಕಿಮೀ ಮೀಟರ್ ಗೇಜ್ ರೈಲು ಮಾರ್ಗವಿದೆ.

**ಶಿಕ್ಷಣ:** ಗದಗ ಜಿಲ್ಲೆ ಹಿಂದೆ ಧಾರವಾಡ ಜಿಲ್ಲೆಯ ಭಾಗವಾಗಿತ್ತು. ಜಿಲ್ಲಾ ಕೇಂದ್ರ ಧಾರವಾಡ, ಹುಬ್ಬಳ್ಳಿ ಇವು ಉತ್ತರ ಕರ್ನಾಟಕದಲ್ಲೇ ಹೆಚ್ಚು ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದ್ದ ಸ್ಥಳಗಳು. ಅಲ್ಲಿನ ಕರ್ನಾಟಕ ಕಾಲೇಜು, ಕೃಷಿ ಶಿಕ್ಷಣ ಕಾಲೇಜು, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಂದ ಗದಗ ಜಿಲ್ಲೆಯ ವಿದ್ಯಾರ್ಥಿಗಳು ಉಪಯೋಗ ಪಡೆಯುತ್ತಿದ್ದಾರೆ. 1950ರಲ್ಲಿ ಸ್ಥಾಪಿತವಾದ ಕರ್ನಾಟಕ ವಿಶ್ವವಿದ್ಯಾಲಯ ಉನ್ನತ ಶಿಕ್ಷಣದ ಅನುಕೂಲವನ್ನು ಒದಗಿಸಿತು. ಗದಗ-ಬೆಟಗೇರಿ ಪುರಸಭೆಯ ವ್ಯಾಪ್ತಿಯಲ್ಲಿ ಮತ್ತು ಇತರೆಡೆ ಕಾಲೇಜುಗಳು, ಕಿರಿಯ ಕಾಲೇಜುಗಳು ಸ್ಥಾಪಿತವಾಗಿವೆ. ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ ಶೇ. 75. ಪುರುಷರ ಸಾಕ್ಷರತೆ ಶೇ. 79.55, ಸ್ತ್ರೀಯರ ಸಾಕ್ಷರತೆ ಶೇ. 52.58. ಜಿಲ್ಲೆಯಲ್ಲಿ 697 ಪ್ರಾಥಮಿಕ ಶಾಲೆಗಳೂ 170 ಪ್ರೌಢ ಶಾಲೆಗಳೂ 35 ಪದವಿಪೂರ್ವ ಕಾಲೇಜುಗಳೂ 23 ಸಾಮಾನ್ಯ ಶಿಕ್ಷಣ ಕಾಲೇಜುಗಳೂ 8 ಪಾಲಿಟೆಕ್ನಿಕ್‌ಗಳೂ 2 ಎಂಜಿನಿಯರಿಂಗ್ ಕಾಲೇಜುಗಳೂ 4 ಭಾರತೀಯ ವೈದ್ಯ ಶಿಕ್ಷಣ ಸಂಸ್ಥೆಗಳೂ ಇವೆ. ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕಾಗಿ ಜಿಲ್ಲೆಯಲ್ಲಿ 826 ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ (2000-01).

ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯಗಳು ಅಭಿವೃದ್ಧಿಗೊಂಡಿವೆ. 7 ಸರ್ಕಾರಿ ಆಸ್ಪತ್ರೆಗಳು, 2 ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು ಇವೆ. 29 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 6 ಪ್ರಾಥಮಿಕ ಆರೋಗ್ಯ ಘಟಕಗಳಿವೆ. ಜನಾರೋಗ್ಯ ರಕ್ಷಣೆಗಾಗಿ ಸರ್ಕಾರ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಕುಡಿಯುವ ನೀರು ಸರಬರಾಜಿಗಾಗಿ 2,793 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. 387 ಕೊಳವೆನೀರು ಸರಬರಾಜು ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. 296 ನೀರು ಸರಬರಾಜು ಯೋಜನೆಗಳು ಅನುಷ್ಠಾನಗೊಂಡಿವೆ. ನಿರ್ಮಲ ಗ್ರಾಮ ಯೋಜನೆ ಅಡಿಯಲ್ಲಿ 1,853 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಕೊಳಚೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ 152 ಮನೆಗಳನ್ನು ನಿರ್ಮಿಸಲಾಗಿದೆ (2000-01). ಹಸುರು ಯೋಜನೆಯಲ್ಲಿ 9.14 ಲಕ್ಷ ಮರಗಳನ್ನು ನೆಡಲಾಗಿದೆ.

**ಇತಿಹಾಸ ಮತ್ತು ಸಂಸ್ಕೃತಿ:** ಈ ಜಿಲ್ಲೆ ಪ್ರಾಚೀನ ಕಾಲದಿಂದ ಜನ ವಸತಿ ಹೊಂದಿದ್ದ ಪ್ರದೇಶ. ತುಂಗಭದ್ರಾ, ಮಲಪ್ರಭಾ ನದಿಗಳ ದಂಡೆಯಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯಿದೆ. ಈ ಜಿಲ್ಲೆಯಲ್ಲಿನ ರೋಣ ತಾಲ್ಲೂಕಿನ ಮೆಣಸಗಿ, ಶಿರಹಟ್ಟಿ ತಾಲ್ಲೂಕಿನ ಕೊಂಚಿಗೇರಿ, ನಿಟ್ಟೂರು ಮುಂತಾದ ಸ್ಥಳಗಳಲ್ಲಿ ಪುರಾತನ ಶಿಲಾಯುಗದ ಶಿಲಾ ಉಪಕರಣಗಳು ದೊರಕಿವೆ.

ನವ ಶಿಲಾಯುಗದ ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ನೆಲೆಗಳು ನರಗುಂದ ತಾಲ್ಲೂಕಿನ ಅರಿಶಿಣಗೋಡಿ, ಬೈರನಹಟ್ಟಿ, ಹಾಳಗುಪ್ಪ, ಕರಗೋವಿನಕುಪ್ಪ, ಲಿಂಗಧಾಳ ಮತ್ತು ಶಿರೋಳ, ರೋಣ ತಾಲ್ಲೂಕಿನ ಮಣ್ಣೂರು, ಮೆಣಸಗಿ, ನಿಡಗುಂದಿ, ನಿಡಗುಂದಿಕೊಪ್ಪ, ಸವಡಿ, ಶಿರಹಟ್ಟಿ ತಾಲ್ಲೂಕಿನ ಬಲ್ಲೆರು ಮೊದಲಾದ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ. ರೋಣ ತಾಲ್ಲೂಕಿನ ಹಿರೇಹಾಳದಲ್ಲಿ ನವಶಿಲಾ ಸಂಸ್ಕೃತಿ ಅಂಶಗಳು ಬೆಳಕಿಗೆ ಬಂದಿವೆ. ಇಲ್ಲಿಯೇ ದಕ್ಷಿಣ ಭಾರತದ ಕಬ್ಬಿಣ ಯುಗಕ್ಕೆ ಸಂಬಂಧಿಸಿದ ವಾಸದ ನೆಲೆ ದೊರೆತಿದೆ. ಇಂಥಹ ನೆಲೆಗಳನ್ನು ನರಗುಂದ ತಾಲ್ಲೂಕಿನ ಕೊಪ್ಪ, ರೋಣ ತಾಲ್ಲೂಕಿನ ಉಣಚಗೇರಿ ಮುಂತಾದೆಡೆಗಳಲ್ಲಿ ಕಾಣಬಹುದು. ಉಣಚಗೇರಿಯಲ್ಲಿ ಹಳ್ಳವೊಂದರ ಪಕ್ಕದಲ್ಲಿ ತುಂಡು ಎಲುಬುಗಳಿದ್ದ ಅನೇಕ ಮಡಕೆ ಸಮಾಧಿಗಳನ್ನು ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ ನುರುಜು ಕೂಡಿದ ಶಿಲಾವೃತ್ತಗಳು ಇವೆ. ಬೃಹತ್ ಶಿಲಾಸಮಾಧಿ ಕಾಲದ ಶಿಲಾವೃತ್ತಗಳನ್ನು ರೋಣ ತಾಲ್ಲೂಕಿನ ಗಜೇಂದ್ರಗಡ, ಉಣಚಗೇರಿ, ಈ ಸ್ಥಳಗಳಲ್ಲಿ ಗುರುತಿಸಲಾಗಿದೆ. ಈ ಪ್ರದೇಶದಲ್ಲಿ ಇವುಗಳನ್ನು ಪಾಂಡವರ ಮನೆ, ಪಾಂಡವರ ಕಟ್ಟೆ ಎಂದು ಕರೆಯುವ ರೂಢಿ. ಆದಿಕಾಲದಲ್ಲಿ ಪ್ರಚಲಿತವಿದ್ದ ಕೆಂಪು ಮಡಕೆಗಳು, ಗಾಜಿನ ಮಣಿ ಇತ್ಯಾದಿ ವಸ್ತು ದೊರಕಿರುವ ಅನೇಕ ನೆಲೆಗಳಿವೆ. ಮುಂಡರಗಿ ತಾಲ್ಲೂಕಿನ ಶೀರೆನಹಳ್ಳಿ, ರೋಣ ತಾಲ್ಲೂಕಿನ ಬೆಣಚಕಟ್ಟೆ, ಹಿರೇಹಾಳ, ಕಂಟೋಜಿ, ಶಿರಹಟ್ಟಿ, ಬಟ್ಟೂರು, ಹೊಳಲಾಪುರ, ಹುಲ್ಲೂರು, ಜೀರೆಮಾದಾಪುರ, ಲಕ್ಷ್ಮೇಶ್ವರ,

ತ್ರಿಕೂಟೇಶ್ವರ ದೇವಾಲಯ, ಗದಗ

ನವೆಭಾವನೂರು, ನಿಟ್ಟೂರು, ಸಂಕದಾಳ, ಯಳವತ್ತಿ, ಬೆಳ್ಳಟ್ಟಿ, ಚವತಾಳ್, ಇಟಗಿ, ನಾಗರಮಡುವು, ತಂಗೋಡ ಹೀಗೆ ಇಲ್ಲಿನ ನೆಲೆಗಳನ್ನು ಗುರುತಿಸಬಹುದು. ಶಿರಹಟ್ಟಿ ತಾಲ್ಲೂಕಿನ ಇಟಗಿಯ ನೆಲೆಯಲ್ಲಿ ವೈದಿಕ ಯಜ್ಞಗಳಲ್ಲಿ ಉಪಯೋಗಿಸಲಾಗುತ್ತಿದ್ದ ಉಖಾಪಾತ್ರ ಎಂಬ ವಿಶಿಷ್ಟ ರೀತಿಯ ಮಣ್ಣಿನ ಪಾತ್ರೆ ದೊರೆತಿರುವುದು ಕುತೂಹಲಕಾರಿ.

ಇತರೆ ಅನೇಕ ಸ್ಥಳಗಳಂತೆ ಇಲ್ಲಿನ ವಿವಿಧ ಸ್ಥಳಗಳಿಗೂ ಪೌರಾಣಿಕ ಹಿನ್ನೆಲೆಯಿದೆ. ಗದಗ ತಾಲ್ಲೂಕಿನ ಲಕ್ಕುಂಡಿಯನ್ನು ಶ್ರೀರಾಮ ಸ್ಥಾಪಿಸಿದನೆಂದು ಪ್ರತೀತಿ. ಅದು ರಾಮರ ದತ್ತಿ ಅಗ್ರಹಾರವಾಗಿತ್ತು. ಅಲ್ಲಲ್ಲಿ ಪಾಂಡವರ ಕಟ್ಟೆಗಳ ಬಗ್ಗೆ ಕೇಳಿಬರುತ್ತದೆ.

**ಇತಿಹಾಸ:** ಇತಿಹಾಸ ಕಾಲದಲ್ಲಿ ಮೌರ್ಯರು ಮತ್ತು ಸಾತವಾಹನರು ಈ ಜಿಲ್ಲೆಯನ್ನು ಆಳಿದ್ದು ಐತಿಹಾಸಿಕ ಆಧಾರಗಳಿಂದ ತಿಳಿದುಬರುತ್ತದೆ. ಮುಂದೆ ಮೂರನೆಯ ಶತಮಾನದಿಂದ ಆಳಿಕೆ ನಡೆಸಿದ ಬನವಾಸಿಯ ಕದಂಬರು ತಮ್ಮ

ರಾಜ್ಯವನ್ನು ಇಲ್ಲಿಯವರೆಗೂ ವಿಸ್ತರಿಸಿದ್ದರು. ಬಾದಾಮಿ ಚಳುಕ್ಯರು 5–8ನೆಯ ಶತಮಾನದಲ್ಲಿ ಆಳಿದರು. ಆಗ ಇದು ಅವರ ಸಾಮ್ರಾಜ್ಯದ ಹೃದಯಭಾಗದಲ್ಲಿದ್ದಿತು. ಈ ಸಾಮ್ರಾಜ್ಯ ವ್ಯವಸ್ಥೆ ಮುಂದೆ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಳುಕ್ಯರ ಕಾಲದವರೆಗೂ ಮುಂದುವರಿಯಿತು. ಆಗ ಈ ಪ್ರದೇಶ ಬೆಳವಲ 300, ಕಿಸುಕಾಡು 70, ಪುರಿಗೆರೆ 300 ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿದ್ದಿತು.

ಈ ಪ್ರಾಂತ್ಯ ಐತಿಹಾಸಿಕ ಮಹತ್ವ ಪಡೆದಿದ್ದು ಸಾಮಾನ್ಯವಾಗಿ ಇದನ್ನು ಸಾಮ್ರಾಟರ ಮನೆತನದ ಸದಸ್ಯರು ಮತ್ತು ರಕ್ತಸಂಬಂಧಿಗಳು ಆಳುತ್ತಿದ್ದರು. ಅವರನ್ನು ಮಾಂಡಲಿಕ



ತ್ರಿಕೂಟೇಶ್ವರ ದೇವಾಲಯದ ಗೋಪುರ, ಗದಗ

ಅಥವಾ ಮಹಾಮಂಡಲೇಶ್ವರರೆಂದು ಕರೆಯಲಾಗುತ್ತಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಗಂಗರು ಮತ್ತು ರಾಷ್ಟ್ರಕೂಟ ಮನೆತನಗಳ ಅನ್ಯೋನ್ಯತೆಯಿಂದ ಗಂಗರಾಜರು ಈ ಪ್ರಾಂತ್ಯವನ್ನು ಕೆಲಕಾಲ ಆಳಲು ಅವಕಾಶವಾಯಿತು. ರಾಷ್ಟ್ರಕೂಟರು ಶತ್ರುಗಳಿಂದ ಪೀಡನೆಗೊಳಗಾಗಿದ್ದಾಗ ಗಂಗ ಇಮ್ಮಡಿ ಬೂತುಗ (936–61) ಅವರ ಸಹಾಯಕ್ಕೆ ಹೋದ. ಇದರಿಂದ ಸುಪ್ರೀತನಾದ ರಾಷ್ಟ್ರಕೂಟ ಮುಮ್ಮಡಿ ಅಮೋಘವರ್ಷ ತನ್ನ ಮಗಳು ರೇವಕ ನಿಮ್ಮಡಿಯನ್ನು ಕೊಟ್ಟು ವಿವಾಹ ಮಾಡಿದ. ಮೂರನೆಯ ಕೃಷ್ಣನ ವಿರುದ್ಧ ದಂಗೆಯೆದ್ದ ಲಲ್ಲೆಯನನ್ನು ಬೂತುಗ ನಿರ್ಮೂಲ ಮಾಡಿದ. ರಾಷ್ಟ್ರಕೂಟರ ಶತ್ರುವಾಗಿದ್ದ ಚೋಳ ಯುವರಾಜನಾದ ರಾಜಾದಿತ್ಯನನ್ನು ಬೂತುಗ ರಣರಂಗದಲ್ಲಿ ಕೊಂದು ಸಾಮ್ರಾಜ್ಯದ ಪ್ರತಿಷ್ಠೆಯನ್ನು ಹೆಚ್ಚಿಸಿದ. ಇದರಿಂದ ಬೂತುಗನಿಗೆ ಪುರಿಗೆರೆ 300, ಬೆಳ್ವೊಲ 300, ಕಿಸುಕಾಡು 70 ಮತ್ತು ಬಾಗೆನಾಡು 70 ಪ್ರಾಂತಗಳನ್ನು ಕೊಡಲಾಯಿತು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಪ್ರದೇಶ ಸಾಮ್ರಾಜ್ಯದ ಹಿಡಿತದಿಂದ ಬಿಡುಗಡೆಗೊಳ್ಳತೊಡಗಿತು.

ದ್ವಾರಸಮುದ್ರದಲ್ಲಿ ಹೊಯ್ಸಳರು, ದೇವಗಿರಿಯಲ್ಲಿ ಸೇವುಣರು ಪ್ರಬಲರಾಗಿ ರಾಜ್ಯ ವಿಸ್ತರಣೆ ಮಾಡಿದಾಗ ಹಿಂದಿನ ಸಾಮ್ರಾಜ್ಯ ವ್ಯವಸ್ಥೆ ಹೋಗಿ ಪ್ರಾಂತೀಯ ರಾಜ್ಯಗಳು ಹುಟ್ಟಿಕೊಂಡುವು. ಹೊಯ್ಸಳ ವಿಷ್ಣುವರ್ಧನ ತನ್ನ ರಾಜ್ಯದ ವಿಸ್ತರಣೆಯ ವಿಜಯಯಾತ್ರೆಯಲ್ಲಿ ಬೆಳುವಲ, ಅಣ್ಣಿಗೆರೆ, ಗದಗ ಮುಂತಾದ ಪಟ್ಟಣಗಳನ್ನು ವಶಪಡಿಸಿಕೊಂಡು ಮಲಪ್ರಭಾ ನದಿಯವರೆಗೂ ಸೈನ್ಯವನ್ನು ಮುನ್ನಡೆಸಿದ. ಲೊಕ್ಕಿಗುಂಡಿ ಇವನ ಅಧೀನದಲ್ಲಿತ್ತು. ವಿಷ್ಣುವರ್ಧನ ಗದಗದಲ್ಲಿ ಪಂಚನಾರಾಯಣ ದೇವಾಲಯಗಳಲ್ಲೊಂದನ್ನು ಕಟ್ಟಿಸಿದ. ಈ ಕಾಲದಲ್ಲೇ ಕಲ್ಯಾಣಿ ಚಾಳುಕ್ಯರು ಕಟ್ಟಿಸಿದ ಮೂರು ದೇವಾಲಯಗಳು ಗದಗದಲ್ಲಿವೆ. 11–12ನೆಯ ಶತಮಾನದಲ್ಲಿ ಗದಗ ಉತ್ಕರ್ಷದಲ್ಲಿದ್ದ ಪಟ್ಟಣವಾಗಿತ್ತು. ಕುಮಾರವ್ಯಾಸ (ನೋಡಿ) ಗದಗಿನ ವೀರನಾರಾಯಣ ನಿಂದ ಸ್ಫೂರ್ತಿ ಪಡೆದು ಕರ್ಣಾಟ ಭಾರತ ಕಥಾಮಂಜರಿಯನ್ನು (ಕುಮಾರವ್ಯಾಸ ಭಾರತ) ರಚಿಸಿದ್ದು ಸುಪರಿಚಿತವಾಗಿದೆ.

ಹೊಯ್ಸಳರು ಮತ್ತು ಸೇವುಣರ ನಡುವಿನ ಸಂಘರ್ಷದ ಸ್ಥಳವಾಗಿದ್ದ ಈ ಜಿಲ್ಲೆಯು ಸೊರಟೂರಿನಲ್ಲಿ ಹೊಯ್ಸಳ ಎರಡನೆಯ ಬಲ್ಲಾಳನ ಸೈನ್ಯಕ್ಕೂ ಸೇವುಣ ಭಿಲ್ಲಮನ ಸೈನ್ಯಕ್ಕೂ ನಿರ್ಣಾಯಕ ಯುದ್ಧ ನಡೆದು ಸೇವುಣರನ್ನು ಕೃಷ್ಣಾ ನದಿಯ ಆಚೆಗೆ ಹಿಮ್ಮೆಟ್ಟಿ ಸಲಾಯಿತು. ಮುಂದೆಯೂ ಈ ಪ್ರದೇಶ ಸೇವುಣ ಹೊಯ್ಸಳರ ಸ್ಪರ್ಧೆಯ ತಾಣವಾಗಿತ್ತು. ವಿಜಯನಗರದ ಆಡಳಿತ ಕಾಲದಲ್ಲಿ ಇದು ವಿಜಯನಗರದ ಒಂದು ಪ್ರಾಂತವಾಯಿತು. 1565ರ ತಾಳಿಕೋಟೆ ಯುದ್ಧದ ತರುವಾಯ ಬಿಜಾಪುರದ ಸುಲ್ತಾನಶಾಹಿ ರಾಜ್ಯ ಈ ಜಿಲ್ಲೆಯ ಮೇಲೆ ಹತೋಟಿ ಸಾಧಿಸಲು ಮುಂದಾಯಿತು. ಈಗಿನ ದಾವಣಗೆರೆ ಜಿಲ್ಲೆಯಲ್ಲಿರುವ ಹರಸನಹಳ್ಳಿಯಲ್ಲಿ ಅಸ್ತಿತ್ವಕ್ಕೆ ಬಂದ ಪಾಳೆಯಪಟ್ಟಿನ ನಾಯಕರು ಬಿಜಾಪುರದ ಸುಲ್ತಾನರಿಗೆ ಕಪ್ಪ ಕೊಟ್ಟುಕೊಂಡು ಈ ಜಿಲ್ಲೆಯ ಕೆಲವು ಪ್ರದೇಶಗಳೂ ಸೇರಿಕೊಂಡಂತೆ ಆ ಪ್ರದೇಶವನ್ನು ಆಳಿಕೊಂಡು ಬಂದರು. ಮುಂದೆ ಔರಂಗಜೇಬ್ ಬಿಜಾಪುರ ರಾಜ್ಯವನ್ನು ನಾಶಪಡಿಸಿದ ಅನಂತರ ಮೊಗಲ್ ಸುಬೇದಾರನೊಬ್ಬ ಸಮೀಪದ ಸವಣೂರಿನಲ್ಲಿ ನೆಲೆಯೂರಿದ. ಆಗ ಈ ಜಿಲ್ಲೆಯ ಬಹು ಭಾಗಗಳು ಮೊಗಲರ ಅಧಿಕಾರಕ್ಕೆ ಬಂದವು. ಅಂತಿಮವಾಗಿ ಸವಣೂರು ಪ್ರಾಂತ ಮರಾಠರ ಕೈಗೂ ತರುವಾಯ ಬ್ರಿಟಿಷರ ಕೈಗೂ ಬಂತು.

1830ರಲ್ಲಿ ಧಾರವಾಡ ಜಿಲ್ಲೆಯ ರಚನೆಯಾಗಿ ಈ ಪ್ರದೇಶ ಮುಂಬಯಿ ಪ್ರಾಂತ್ಯಕ್ಕೆ ಸೇರಿತು. 1857–58ರಲ್ಲಿ ನರಗುಂದದ ಬಾಬಾ ಸಾಹೇಬ, ಮುಂಡರಗಿ ಭೀಮರಾಯ **(ನೋಡಿ)** – ಇವರು ಬ್ರಿಟಿಷರ ವಿರುದ್ಧದ ದಂಗೆಯಲ್ಲಿ ಭಾಗವಹಿಸಿದ್ದರು. ಭೀಮರಾಯ ಇನಾಂದಾರರ ಮನೆತನಕ್ಕೆ ಸೇರಿದವನಾಗಿದ್ದು ಸುತ್ತಮುತ್ತಲ ಜಮೀನ್ದಾರರನ್ನು ಸಂಘಟಿಸಿ ರೈತರ ಬೆಂಬಲ ಪಡೆದು ಡಂಬಳ, ಗದಗ ಮತ್ತು ಕೊಪ್ಪಳಗಳನ್ನು ವಶಪಡಿಸಿಕೊಂಡ. ನರಗುಂದದ ಬಾಬಾಸಾಹೇಬ (ನೋಡಿ) ಇವನಿಗೆ ನೆರವಾಗಿ ದಂಗೆಯೆದ್ದ. ಬಾಬಾಸಾಹೇಬ ಬ್ರಿಟಿಷ್ ದಳಪತಿ ಮ್ಯಾನ್ಸನ್‌ನನ್ನು ಸುರೆಬಾನದಲ್ಲಿ ಎದುರಿಸಿ ಹತ್ಯೆ ಮಾಡಿದ. ಬ್ರಿಟಿಷರು ಸೈನ್ಯಬಲದಿಂದಲೂ ಯುಕ್ತಿಯಿಂದಲೂ ಈ ಇಬ್ಬರು ಬಂಡಾಯಗಾರರನ್ನು ಹತ್ಯೆಗೈದರು. ಮುಂಬಯಿ ಪ್ರಾಂತದಲ್ಲಿ ಧಾರವಾಡ ಜಿಲ್ಲೆಗೆ ಸೇರಿದ್ದ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಸಣ್ಣಪುಟ್ಟ ಸಂಸ್ಥಾನಗಳು ಅಸ್ತಿತ್ವದಲ್ಲಿದ್ದವು. ಅವು ಸ್ವಾತಂತ್ರ್ಯಾನಂತರ ಧಾರವಾಡ ಜಿಲ್ಲೆಯ ಭಾಗವಾದವು. ಧಾರವಾಡ ಜಿಲ್ಲೆ ಭಾಷಾವಾರು ಪ್ರಾಂತ ರಚನೆಯಾದಾಗ ವಿಶಾಲ ಮೈಸೂರು ರಾಜ್ಯಕ್ಕೆ ಸೇರಿತು.

ಇತಿಹಾಸಕಾಲದಲ್ಲಿ ಈ ಜಿಲ್ಲೆಯಲ್ಲಿ ಸಂಸ್ಕೃತಿ ಮತ್ತು ಕಲೆಗಳಿಗೆ ಪ್ರಸಿದ್ಧವಾದ ಅನೇಕ ಊರುಗಳು ಇದ್ದುವು. ಅವುಗಳಲ್ಲಿ ಗದಗ, ಲಕ್ಷ್ಮೇಶ್ವರ ಮತ್ತು ಲಕ್ಕುಂಡಿಗಳು ಪ್ರಮುಖವಾದವು. ಗದಗದಲ್ಲಿ ಚಾಳುಕ್ಯ ಶೈಲಿಯ ಮೂರು ದೇವಾಲಯಗಳಿವೆ. ಅವುಗಳಲ್ಲಿ ತ್ರಿಕೂಟೇಶ್ವರ ದೇವಾಲಯ ಅತ್ಯಲಂಕರಣದಿಂದಲೂ ವಿಸ್ತಾರದಿಂದಲೂ ಕೂಡಿದೆ. ಹೊಯ್ಸಳ ವಿಷ್ಣುವರ್ಧನ ನಿರ್ಮಿಸಿದ ವೀರನಾರಾಯಣ ದೇವಾಲಯ ಜಕಣಾಚಾರಿಯಿಂದ ನಿರ್ಮಿಸಲ್ಪಟ್ಟತೆಂದು ಐತಿಹ್ಯವಿದೆ. ಗದಗದಿಂದ 11ಕಿಮೀ ದೂರದಲ್ಲಿರುವ ಲಕ್ಕುಂಡಿ ಪ್ರಾಚೀನ ಕಾಲದಲ್ಲಿ ಲೊಕ್ಕಿಯಗುಂಡಿ ಎಂದು ಪ್ರಸಿದ್ಧವಾಗಿತ್ತು.

ಅನಂತನಾಥ ಬಸದಿ, ಲಕ್ಷ್ಮೇಶ್ವರ

ಬೆಳ್ವೊಲದ 18 ಅಗ್ರಹಾರಗಳಲ್ಲಿ ಇದೂ ಒಂದು. ದಾನ ಚಿಂತಾಮಣಿ ಅತ್ತಿಮಬ್ಬೆ ಇಲ್ಲಿ ಬ್ರಹ್ಮಜಿನಾಲಯವನ್ನು ಕಟ್ಟಿಸಿದಳು. ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ **(ನೋಡಿ)** ಇತಿಹಾಸ ಕಾಲದಲ್ಲಿ ಪುಲಿಗೆರೆ, ಪುರಿಗೆರೆ, ಪುಲಿಕರ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿತ್ತು. 11ನೆಯ ಶತಮಾನದಲ್ಲಿ ಲಕ್ಕರಸನೆಂಬಾತ ಇಲ್ಲಿ ಲಕ್ಷ್ಮೇಶ್ವರ ದೇವಾಲಯವನ್ನು ಕಟ್ಟಿಸಿದ್ದರಿಂದ ಈ ಊರಿಗೆ ಅದೇ ಹೆಸರು ಬಂದಿರಬೇಕೆಂಬ ಅಭಿಪ್ರಾಯವಿದೆ. ಮುಂಡರಗಿ ತಾಲ್ಲೂಕಿನ ಡಂಬಳ (ನೋಡಿ) ಇನ್ನೊಂದು ಪ್ರಾಚೀನ ಧಾರ್ಮಿಕ ಕೇಂದ್ರ. ಇಲ್ಲಿ ಬೌದ್ಧ ವಿಹಾರಗಳು, ಚೈತ್ಯಾಲಯಗಳು ಮತ್ತು ದೇವಾಲಯಗಳು ಇವೆ. ಅವುಗಳಲ್ಲಿ ದೊಡ್ಡ ಬಸಪ್ಪ ದೇವಾಲಯ ಪ್ರಸಿದ್ಧವಾದದ್ದು.

ಇದಲ್ಲದೆ ಶಿರಹಟ್ಟಿ ತಾಲ್ಲೂಕಿನ ದೇವಿಗಾಳ, ಸೊರಟೂರು, ಶ್ರೀಮಂತಗಡಕೋಟೆ, ಗುದಗೇರಿ, ಯೆಲವತ್ತಿ, ರೋಣ ತಾಲ್ಲೂಕಿನ ಗಜೇಂದ್ರಗಡ, ಸವಡಿ, ಸುದಿ, ಗದಗ ತಾಲ್ಲೂಕಿನ ಹೊಂಬಳ, ಮೂಲಗುಂದ, ನಾಗಾವಿ, ನೀಲಗುಂದ, ನರಗುಂದ ತಾಲ್ಲೂಕಿನ ಕೊಣ್ಣೂರು, ಮುಂಡರಗಿ ತಾಲ್ಲೂಕಿನ ಕೊರಳಹಳ್ಳಿ, ಆಲೂರು, ತಾಮ್ರಗುಂಡಿ, ಬಿದರಹಳ್ಳಿ, ನಾಗರಹಳ್ಳಿ – ಇವು ದೇವಾಲಯಗಳು, ಕವಿ ಕಲಾವಿದರು, ಕೋಟೆಗಳು ಮುಂತಾದವಕ್ಕೆ ಹೆಸರಾಗಿವೆ.

ರಾಜ್ಯದ ಇತರ ಭಾಗಗಳಂತೆ ಇಲ್ಲಿಯೂ ಜನಪದ ಸಂಸ್ಕೃತಿ ಪಸರಿಸಿದೆ. ಬಸಪ್ಪ, ಭಂಡಪ್ಪ, ದ್ಯಾಮವ್ವ, ದುರ್ಗವ್ವ, ರೇಣುಕ, ಹುಲಿಗೆವ್ವ, ಜೋತಿಬಾ, ಖಂಡೋಬಾ – ಇಲ್ಲಿನ ಜನಪದ ದೇವತೆಗಳು. ಸಂಗೀತಗಾರರಾದ ಪಂಡಿತ ಭೀಮಸೇನ ಜೋಶಿ, ಪುಟ್ಟರಾಜ ಗವಾಯಿ ಸಾಹಿತಿಗಳಾದ ಹುಯಿಲಗೋಳ ನಾರಾಯಣರಾಯ, ಎನ್.ಕೆ. ಕುಲಕರ್ಣಿ, ಆಲೂರ ವೆಂಕಟರಾಯ, ಸಂ.ಶಿ. ಭೂಸನೂರಮಠ, ಗಿರಡ್ಡಿ ಗೋವಿಂದರಾಜ, ಆರ್.ಸಿ. ಹಿರೇಮಠ, ಜಿ.ಬಿ. ಜೋಶಿ, ಕೀರ್ತಿನಾಥ ಕುರ್ತಕೋಟಿ, ಶಾಂತಕವಿ, ಗರೂಡ ಸದಾಶಿವರಾಯ, ಮಹಾಂತೇಶಶಾಸ್ತ್ರೀ, ಎಚ್.ಎನ್. ಹೂಗಾರ, ಸಿದ್ಧರಾಮ ಜಂಬಲದಿನ್ನಿ, ಚಿತ್ರಕಲೆಯ ಟಿ.ಪಿ. ಅಕ್ಕಿ, ಎಂ.ಎ. ಚಟ್ಟಿ ಮೊದಲಾದವರು ಈ ಜಿಲ್ಲೆಯವರು. (ಸಿ.ವಿ.ಕೆ.)

**ತಾಲ್ಲೂಕು ಮತ್ತು ಮುಖ್ಯ ಪಟ್ಟಣ:** ಇದು ಗದಗ, ರೋಣ, ಮುಂಡರಗಿ, ನರಗುಂದ ತಾಲ್ಲೂಕುಗಳನ್ನೊಳಗೊಂಡ ಉಪವಿಭಾಗದ ಕೇಂದ್ರವೂ ಆಗಿದೆ. ಈ ತಾಲ್ಲೂಕನ್ನು ಆಗ್ನೇಯದಲ್ಲಿ ಮುಂಡರಗಿ, ದಕ್ಷಿಣದಲ್ಲಿ ಶಿರಹಟ್ಟಿ, ತಾಲ್ಲೂಕುಗಳೂ ಪಶ್ಚಿಮದಲ್ಲಿ ಧಾರವಾಡ ಜಿಲ್ಲೆ ಮತ್ತು ನವಲಗುಂದ, ಉತ್ತರದಲ್ಲಿ ರೋಣ ಮತ್ತು ಪೂರ್ವದಲ್ಲಿ ಕೊಪ್ಪಳ ಜಿಲ್ಲೆ ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 1,098.5 ಚ.ಕಿಮೀ. ಜನಸಂಖ್ಯೆ 2,06,908. ಗದಗ, ಬೆಟಗೇರಿ ಎರಡು ಹೋಬಳಿಗಳಿದ್ದು ಒಟ್ಟು 57 ಗ್ರಾಮಗಳಿವೆ.

ತಾಲ್ಲೂಕಿನ ಹೆಚ್ಚು ಭಾಗ ಎರೆಮಣ್ಣಿನ ಪ್ರದೇಶ. ಅಲ್ಲಲ್ಲಿ ಧಾರವಾಡ ಶಿಲಾಶ್ರೇಣಿಗೆ ಸೇರಿದ ಕಲ್ಲಿನ ಗುಡ್ಡಗಳೂ ಇವೆ. ಅದರಲ್ಲೂ ಗದಗದಿಂದ ದಕ್ಷಿಣ ಪ್ರದೇಶ ಈ ರೀತಿಯದು. ಈ ಭಾಗದ ಕಪ್ಪತ ಗುಡ್ಡ ಶ್ರೇಣಿಯಲ್ಲಿ ಚಿನ್ನದ ನಿಕ್ಷೇಪವಿದೆ. ತಾಲ್ಲೂಕು ದಕ್ಷಿಣದಿಂದ ವಾಯವ್ಯ, ಉತ್ತರಕ್ಕೆ ಇಳಿಜಾರಾಗಿದೆ. ದೊಡ್ಡ ನದಿಗಳಾವುವೂ ಇಲ್ಲ. ವಾರ್ಷಿಕ ಸರಾಸರಿ ಮಳೆ ಸು.635ಮಿಮೀ. ಕಪ್ಪತಗುಡ್ಡ ಭಾಗದ ಕುರುಚಲ ಗಿಡಗಳ ಪ್ರದೇಶವನ್ನು ಬಿಟ್ಟರೆ ಮಿಕ್ಕ ಎರೆಭೂಮಿ ಪ್ರದೇಶ ಫಲವತ್ತಾದುದು. ಹೆಚ್ಚಿನ ವ್ಯವಸಾಯ ಮಳೆಯ ಆಧಾರದಿಂದ. ಬಾವಿಗಳ ಸಂಖ್ಯೆಯೂ ಕಡಿಮೆ. ಹತ್ತಿ, ಜೋಳ, ಗೋದಿ ತಾಲ್ಲೂಕಿನ ಮುಖ್ಯ ಬೆಳೆಗಳು. ಕಡಲೆಕಾಯಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ.

ಗದಗ ತಾಲ್ಲೂಕು ಸು.14ನೆಯ ಶತಮಾನದವರೆಗೆ ಬೆಳುವಲ 300 ಎಂಬ ಪ್ರಾಚೀನ ವಿಭಾಗದಲ್ಲಿತ್ತು. ಉತ್ತಮ ಶಿಲ್ಪಗಳಿಂದ ಕೂಡಿದ ಶಂಕರಲಿಂಗಪ್ಪ ದೇವಾಲಯವಿರುವ, 11ರಿಂದ 16ನೆಯ ಶತಮಾನಗಳಲ್ಲಿ ಅಗ್ರಹಾರವಾಗಿದ್ದ ಹೊಂಬಳ, ಪ್ರಾಚೀನ ವಿದ್ಯಾಕೇಂದ್ರವೆನಿಸಿದ್ದ 11–12 ನೆಯ ಶತಮಾನದ ದೇವಾಲಯಗಳಿರುವ ಕೋಟುಮಚಗಿ, ಬೌದ್ಧ ನಾಗಾರ್ಜುನನ ಸಂಬಂಧವಿತ್ತೆಂದು ಹೇಳುವ ನಾಗಾವಿ, 12ನೆಯ ಶತಮಾನದ ಶಾಸನಗಳು ಮತ್ತು ನಾರಾಯಣ ದೇವಾಲಯವಿರುವ ನೀಲಗುಂದ, ಪ್ರಾಚೀನ ಅಗ್ರಹಾರ ಸೊರಟೂರು ಮುಂತಾದ ಹಲವು ಚಾರಿತ್ರಿಕ ಸ್ಥಳಗಳು ಈ ತಾಲ್ಲೂಕಿನಲ್ಲಿವೆ. *

ಲಕ್ಕುಂಡಿ **(ನೋಡಿ)** ಅನೇಕ ದೇವಾಲಯಗಳಿಂದ ಪ್ರಸಿದ್ಧವಾಗಿದೆ. ಕವಿ ನಯಸೇನನಿಗೆ ಸಂಬಂಧಿಸಿದೆಯೆಂಬುದು ಹಾಗೂ ಅಜಿತಪುರಾಣ ಬರೆಯಿಸಿ ರನ್ನನಿಗೆ ಆಶ್ರಯ ನೀಡಿದ ಅತ್ತಿಮಬ್ಬೆಯ ಸಂಪರ್ಕವಿದ್ದಿತೆಂಬುದು ಈ ತಾಲ್ಲೂಕಿನ ಮುಳಗುಂದದ ಖ್ಯಾತಿ. ಗದಗದಿಂದ 9ಕಿಮೀ ದೂರವಿರುವ ಬೆಳದಡಿಯಲ್ಲಿ ಶ್ರೀರಾಮಚಂದ್ರನ ದೇವಾಲಯ ಮತ್ತು 16ಕಿಮೀ ದೂರದಲ್ಲಿ ತಿರುಪತಿಯೆಂದು ಖ್ಯಾತಿ ಗಳಿಸಿರುವ ವೆಂಕಟಾಪುರದಲ್ಲಿ ವೆಂಕಟರಮಣ ಹಾಗೂ ಮಹಾಲಕ್ಷ್ಮಿಯ ದೇವಾಲಯ ಮತ್ತು ಬ್ರಹ್ಮಾನಂದರ ಸಮಾಧಿ ಇವೆ.

ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣವಾದ ಗದಗ ಹುಬ್ಬಳ್ಳಿ–ಗುಂತಕಲ್ಲು ರೈಲುಮಾರ್ಗದಲ್ಲಿ ಹುಬ್ಬಳ್ಳಿಗೆ 59 ಕಿಮೀ ಪೂರ್ವಕ್ಕಿದೆ. ಪಕ್ಕದ ಬೆಟಗೇರಿಯನ್ನೂ ಸೇರಿಸಿ ಗದಗ–ಬೆಟಗೇರಿ ಪುರಸಭೆ ಇಲ್ಲಿ ವ್ಯವಸ್ಥಿತವಾಗಿದೆ. ಗದಗ–ಬೆಟಗೇರಿಯ ಜನಸಂಖ್ಯೆ 95,426. ಹಲವು ಶಾಲೆಗಳು, ಒಂದು ಕಾಲೇಜು, ಆಸ್ಪತ್ರೆಗಳು ಇತ್ಯಾದಿ ನಗರ ಸಾಮಾನ್ಯವಾದುವೆಲ್ಲ ಇಲ್ಲಿವೆ. ಗದಗ ಹತ್ತಿ ವ್ಯಾಪಾರ ಕೇಂದ್ರ. ಇದರ ದೊಡ್ಡ ಮಾರುಕಟ್ಟೆ, ವಖಾರುಗಳು ಇಲ್ಲಿವೆ. ಹತ್ತಿ ಉತ್ಪನ್ನ ಮತ್ತು ಮಾರಾಟದಲ್ಲಿ ಕರ್ನಾಟಕ ರಾಜ್ಯದ ಈಜಿಪ್ಟ್ ಎಂದು ಹೇಳುವಷ್ಟು ಪ್ರಸಿದ್ಧವಾಗಿದೆ. ಹತ್ತಿ ಸಂಸ್ಕರಿಸುವ ಕಾರ್ಖಾನೆಗಳು ಸ್ಥಾಪಿತವಾಗಿವೆ. ಬಟ್ಟೆ ಮತ್ತು ದವಸದ ಮಾರುಕಟ್ಟೆಗಳೂ ಇವೆ. ಇದು ತಾಲ್ಲೂಕಿನ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಬೆಳೆದಿದೆ. ಕೈಮಗ್ಗ ಮತ್ತು ಯಂತ್ರಮಗ್ಗಗಳಿಂದ ನೇಯ್ಗೆ ಉದ್ಯಮ ಪ್ರಮುಖವಾಗಿದೆ. ಎಣ್ಣೆ ತೆಗೆಯುವುದು, ನೂಲು ಉತ್ಪಾದನೆ, ಬೀಡಿ ಕಟ್ಟುವುದು ಇತರ ಉದ್ಯಮಗಳು. ದಕ್ಷಿಣ ಮಧ್ಯ ರೈಲ್ವೆಯಲ್ಲಿ ಗದಗ ಒಂದು ಕೂಡುನಿಲ್ದಾಣ. ಇಲ್ಲಿಂದ ಸೊಲ್ಲಾಪುರಕ್ಕೆ ಮೀಟರ್‌ಗೇಜಿನ ರೈಲುಮಾರ್ಗ ಇದೆ. ಗದಗದಲ್ಲೊಂದು ಸಣ್ಣ ರೈಲ್ವೆ ಕಾರ್ಯಾಗಾರವುಂಟು.

ಇಲ್ಲಿನ ಸ್ಥಳಪುರಾಣದ ಪ್ರಕಾರ ಗದಗಿನ ಪೂರ್ವ ಹೆಸರು ಕ್ರತುಪುರ. ಈಗ ಊರಿನ ಹೆಸರು ಗದಗ್, ಗದುಗು ಎಂದು ಹಿಂದಿನ ರೀತಿಗಳಲ್ಲಿ ಬಳಕೆಯಲ್ಲಿದೆ. ಗದುಗೆಂಬ ಹೆಸರು ಇಲ್ಲಿರುವ ತೋಂಟದಾರ್ಯರ (ಸಿದ್ಧಲಿಂಗೇಶ್ವರರ) ಗದ್ದುಗೆಯಿಂದ ಬಂದಿರಬಹುದೆಂದೂ ಒಂದು ಹೇಳಿಕೆ. ಗಜಗ, ಕಲ್ಲುಗ, ಗಟ್ಟಿಗು ಇತ್ಯಾದಿ ಹೆಸರುಗಳಿಂದ ಬಂದಿರಬಹುದೆಂಬ ಅಭಿಪ್ರಾಯವೂ ಇದೆ. ಗದಗ ಒಂದು ಕಾಲದಲ್ಲಿ ಮಹಾ ಅಗ್ರಹಾರವಾಗಿ ಮೆರೆದ ಪಟ್ಟಣವೆಂಬುದು ಇಲ್ಲಿ ದೊರೆತಿರುವ ಚಾಳುಕ್ಯ, ಹೊಯ್ಸಳ, ಸೇವುಣ, ವಿಜಯನಗರ ಕಾಲದ ಹಲವು ಶಾಸನಗಳಿಂದ ತಿಳಿಯುತ್ತದೆ. ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬನಾದ ಕ್ರತು ಗದಗಿನ ಸಮೀಪದಲ್ಲಿರುವ ಕಪ್ಪತಗುಡ್ಡದಲ್ಲಿ ತಪಸ್ಸು ಮಾಡಿದ. ಕಪೋತರೋಮ ಎಂಬ ರಾಕ್ಷಸನ ಕಿರುಕುಳವನ್ನು ತಪ್ಪಿಸಲು ದೇವರು ವೀರನಾರಾಯಣನ ರೂಪದಲ್ಲಿ ಕಾಣಿಸಿಕೊಂಡು ರಾಕ್ಷಸನನ್ನು ವಧಿಸಿದ. ಕ್ರತುವಿನ ಪ್ರಾರ್ಥನೆಯಂತೆ ನಾರಾಯಣ ಇಲ್ಲಿಯೇ ಉಳಿದ. ಜನಮೇಜಯ ಸರ್ಪಯಾಗ ಮಾಡಿದ ಅಗ್ರಹಾರವೇ ಗದಗ. ರಾಷ್ಟ್ರಕೂಟ 3ನೆಯ ಇಂದ್ರನ ಒಂದು ಶಾಸನ (918) ಇಲ್ಲಿನ ಶಾಸನಗಳಲ್ಲಿ ಅತಿ ಪ್ರಾಚೀನವಾದುದು.

ಇಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯ ಮೂರು ದೇವಾಲಯಗಳು ಇವೆ. ಪ್ರಮುಖವಾದುದು ತ್ರಿಕೂಟೇಶ್ವರ ದೇವಾಲಯ. ಮೂಲತ ದ್ವಿಕೂಟವಾಗಿದ್ದ ಈ ದೇವಾಲಯದ ಪೂರ್ವಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಪಾಣಿಪೀಠದ ಮೇಲೆ ಮೂರು ಲಿಂಗಗಳಿವೆ. ಗರ್ಭಗುಡಿಯ ಮುಂದೆ ಅರ್ಧಮಂಟಪ ಮತ್ತು ಅದರ ಮುಂದೆ ತೆರೆದ ಮಹಾಮಂಟಪ ಇವೆ. ಮಹಾಮಂಟಪದಲ್ಲಿ ಚಾವಣಿ ಮತ್ತು ತೊಲೆಗಳ ಮಧ್ಯೆ ಜಾಲಂಧ್ರಗಳಿವೆ. ಕಂಬಗಳು ಮತ್ತು ಅನೇಕ ಅಲಂಕರಣ ಶಿಲ್ಪಗಳು ಸುಂದರವಾಗಿವೆ. ಶಿಖರ ಈಚಿನದು. ತ್ರಿಕೂಟೇಶ್ವರ ಗುಡಿಯ ಆವರಣದಲ್ಲೇ ದಕ್ಷಿಣಕ್ಕೆ ಇರುವ ಸರಸ್ವತೀಗುಡಿ ಚಿಕ್ಕದು. ಗರ್ಭಗುಡಿ ಮತ್ತು ತೆರೆದ ಮಂಟಪ ಮಾತ್ರ ಇವೆ. ಬಹುಸೂಕ್ಷ್ಮವಾಗಿ ಕೆತ್ತಿರುವ ವಿನ್ಯಾಸಗಳಿರುವ ಇಲ್ಲಿನ ಕಂಬಗಳು ಇಡೀ ಚಾಳುಕ್ಯ ಸಂಪ್ರದಾಯದಲ್ಲೇ ಬಹುಸುಂದರ ರಚನೆಗಳೆಂದು ಪ್ರಸಿದ್ಧವಾಗಿವೆ. ಹಾಗೆಯೇ ಭುವನೇಶ್ವರಿ ಮತ್ತು ಗೋಡೆಗಳಲ್ಲಿನ ಕುಸುರಿ ಕೆಲಸವೂ ಚೆನ್ನಾಗಿವೆ. ಇಲ್ಲಿನ ಆಳೆತ್ತರದ, ಕುಳಿತ ಭಂಗಿಯ ಸರಸ್ವತೀ ವಿಗ್ರಹ ಮುರಿದಿದ್ದರೂ ಅದರಲ್ಲಿರುವ ಸಹಜ ಸುಂದರ ಪ್ರಮಾಣ, ಭಾವಲಾಲಿತ್ಯ, ವಸ್ತ್ರ ಆಭರಣಗಳ ಕೆತ್ತನೆಯ ನವಿರು ಕೆಲಸ ಇವುಗಳಿಂದಾಗಿ ಮೋಹಕವಾಗಿದೆ. ಊರ ಮಧ್ಯದಲ್ಲಿರುವ ಸೋಮೇಶ್ವರ ಅತ್ಯಲಂಕರಣದಿಂದ ಕೂಡಿದ ಇನ್ನೊಂದು ಚಾಳುಕ್ಯ ಶೈಲಿಯ ಗುಡಿ.

ಕನ್ನಡ ಮಹಾಭಾರತದ ಕರ್ತೃ ಕುಮಾರವ್ಯಾಸನ ಪ್ರೇರಕ ದೈವವೆಂದು ಪ್ರಸಿದ್ಧವಾಗಿರುವ ವೀರನಾರಾಯಣಸ್ವಾಮಿಯ ದೇವಸ್ಥಾನ 1117ರಲ್ಲಿ ಹೊಯ್ಸಳ ವಿಷ್ಣುವರ್ಧನ ನಿರ್ಮಿಸಿದ ಪಂಚನಾರಾಯಣ ದೇವಾಲಯಗಳಲ್ಲಿ ಒಂದೆಂದೂ ಜಕಣಾಚಾರಿಯಿಂದ ನಿರ್ಮಿಸಲ್ಪಟ್ಟಿತೆಂದೂ ಐತಿಹ್ಯ. "ಕೃತಪುರಮಹಾತ್ಮೆಯ" ಪ್ರಕಾರ ಕೃತಮುನಿಯ ರಕ್ಷಣೆಗಾಗಿ ಬದರಿಯಿಂದ ನಾರಾಯಣ ಬಂದು ಇಲ್ಲಿ ನೆಲಸಿದ. 11–12ನೆಯ ಶತಮಾನದ ಕೆಲವು ಹಳೆಯ ಭಾಗಗಳಿದ್ದರೂ ಇಂದು ಇದು ಬಹುವಾಗಿ ನವೀಕೃತವಾಗಿದೆ. ಇತ್ತೀಚೆಗೆ ದೇವಸ್ಥಾನ ಜೀರ್ಣೋದ್ಧಾರವಾಗಿತ್ತು (1962). ದೇವಸ್ಥಾನದ ಸುತ್ತ ಸುಮಾರು 300' ಉದ್ದ 200' ಅಗಲದ ಪ್ರಾಕಾರ ಇದೆ. ಪೂರ್ವದ್ವಾರದ ಮೇಲೆ ಎತ್ತರವಾದ ಗೋಪುರ ಇದೆ. ಒಳ ಅಂಗಣ 50' ಉದ್ದ 20' ಅಗಲ ಇದೆ. ಇಲ್ಲಿರುವ ಮಧ್ಯದ ನಾಲ್ಕು ಕಂಬಗಳಲ್ಲಿ ದಶಾವತಾರ ಚಿತ್ರಗಳಿವೆ. ನರಸಿಂಹ ವಿಗ್ರಹವಿರುವ ಇಲ್ಲಿನ ಎರಡನೆಯ ಕಂಬ ಕುಮಾರವ್ಯಾಸ ಕಂಬವೆಂದು ಪ್ರಸಿದ್ಧವಾಗಿದೆ. ಕುಮಾರವ್ಯಾಸ ಇಲ್ಲಿ ಕುಳಿತು ವೀರನಾರಾಯಣನಿಂದ ಸ್ಫೂರ್ತಿ ಪಡೆದು ಕನ್ನಡ ಭಾರತವನ್ನು ರಚಿಸಿದನೆಂದು ಹೇಳಲಾಗಿದೆ. ಗರ್ಭಗುಡಿಯ ಮೇಲಿನ ವಿಮಾನ ಸುಮಾರು 20' ಎತ್ತರವಿದೆ. ವಿಮಾನ ಹನ್ನೊಂದು ಹಂತಗಳಿಂದಾದುದು. ಗರ್ಭಗುಡಿಯಲ್ಲಿ ಕಪ್ಪು ಶಿಲೆಯ ಪ್ರಭಾವಳಿ ಸಹಿತವಾಗಿ 8' ಎತ್ತರವಿರುವ ವೀರನಾರಾಯಣಸ್ವಾಮಿಯ ಮೂರ್ತಿ ಇದೆ. ಮೂರ್ತಿಯ ಎತ್ತರ ಸುಮಾರು $5^1/_4$' ಪ್ರಭಾವಳಿಯಲ್ಲಿ ದಶಾವತಾರ ಚಿತ್ರಗಳನ್ನು ಕೆತ್ತಲಾಗಿದೆ. ಸ್ವಾಮಿಯ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖ, ಮತ್ತೊಂದು ಅಭಯಹಸ್ತ ಇವೆ. ಎಡಗೈಯಲ್ಲಿ ಬೆಂಡು ಇವೆ. ದೇವಾಲಯದಲ್ಲಿ ಗರ್ಭಗುಡಿಯಿಂದ ಬಲಕ್ಕೆ ಶ್ರೀ ರಾಘವೇಂದ್ರಸ್ವಾಮಿಯವರ ಬೃಂದಾವನ, ಕುಮಾರವ್ಯಾಸಮಂಟಪ ಮತ್ತು ಲಕ್ಷ್ಮೀನರಸಿಂಹ, ಈಶ್ವರ ಮತ್ತು ಹನುಮಂತ ದೇವಾಲಯಗಳು ಇವೆ. ವರ್ಷದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೂ ಉಪನ್ಯಾಸಗಳೂ ಭಾರತವಾಚನ ಇತ್ಯಾದಿ

ಕಾರ್ಯಕ್ರಮಗಳೂ ನಡೆಯುತ್ತಿರುತ್ತವೆ. ಶ್ರಾವಣ ಬಹುಳ ಬಿದಿಗೆಯಲ್ಲಿ ರಾಘವೇಂದ್ರ ಸ್ವಾಮಿಗಳ ಆರಾಧನೆ, ಪುಷ್ಯ ಶುದ್ಧ ಚತುರ್ದಶಿ ಅಥವಾ ಹುಣ್ಣಿಮೆಯಂದು ಕುಮಾರವ್ಯಾಸ ಜಯಂತಿ ವಿಜೃಂಭಣೆಯಿಂದ ನಡೆಯುತ್ತವೆ. ಗದಗಿನಲ್ಲಿ ತೋಂಟದ ಸಿದ್ಧಲಿಂಗೇಶ್ವರ ಮಠವಿದೆ. ಇಲ್ಲಿನ ತೋಂಟದಾರ್ಯರ ಜಾತ್ರೆ ಬಹುಜನರನ್ನು ಆಕರ್ಷಿಸುತ್ತದೆ. ಜೋಡು ಹನುಮಾನ್, ಶಂಕರಲಿಂಗ, ದುರ್ಗಾ, ವೀರಭದ್ರ, ವಿಠೋಬ ಮುಂತಾದವು ಈ ಪಟ್ಟಣದ ಇತರ ದೇವಸ್ಥಾನಗಳು. (ಸಿ.ವಿ.ಆರ್.)

**ಗದಬ :** ಆಂಧ್ರ ಪ್ರದೇಶದ ವಿಶಾಖಪಟ್ಟಣಮ್ ಹರವು ಮತ್ತು ಒರಿಸ್ಸದ ಕೋರಾಪುತ್ ಹರವುಗಳಲ್ಲಿ ಬಳಕೆಯಲ್ಲಿರುವ ಅಪ್ರಸಿದ್ಧ ಭಾಷೆ. ಇದನ್ನು ಮುಂಡ ಭಾಷಾವರ್ಗದ ಒಂದು ಉಪಭಾಷೆ ಎನ್ನುವವರೂ ಇದ್ದಾರೆ.

ಗದಬ ಭಾಷೆ ಮುಂಡ ಭಾಷಾವರ್ಗಕ್ಕೆ ಅಥವಾ ಗ್ರಿಯರ್ಸನ್ನರ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಕ್ಕೆ ಅನುಸಾರವಾಗಿ ಆಸ್ಟ್ರಿಕ್ ಭಾಷಾವರ್ಗದ ಆಸ್ಟ್ರೋ–ಏಷ್ಯಾಟಿಕ್ ಉಪವರ್ಗದ ಮುಂಡಶಾಖೆಗೆ ಸೇರಿದ್ದು. ನಾರ್ಮನ್ ಎಚ್. ಜೈದ್ ಎಂಬುವವರು ಗದ್ಬಾ ಮತ್ತು ಗದಬ ಎಂಬ ಎರಡು ಉಪಭಾಷೆಗಳನ್ನು ಕರೆಂಟ್ ಟ್ರೆಂಡ್ಸ್ ಇನ್ ಲಿಂಗ್ವಿಸ್ಟಿಕ್ಸ್ ಎಂಬ ಗ್ರಂಥದಲ್ಲಿ ಗುರುತಿಸಿದ್ದಾರೆ. ಅವರ ಪ್ರಕಾರ ಮೊದಲನೆಯದು ಗುಟೋಬ್ ಭಾಷೆಯ ಒಂದು ಅಂಗ. ಈ ಗುಟೋಬ್ ಒಂದು ಪ್ರತ್ಯೇಕ ಮುಂಡ ಭಾಷೆ. ಎರಡನೆಯದನ್ನು ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯದಲ್ಲಿ ವಿಶಾಖಪಟ್ಟಣದ ಗದಬ ಎಂದು ಗುರುತಿಸಲಾಗಿದ್ದು ಮತ್ತೊಂದು ಮುಂಡಭಾಷೆಯಾದ ಗೋರುಮ್‌ನ ಅಂಗವಾಗಿ ಪರೆಂಗಾ ಮತ್ತಿತರ ಉಪಭಾಷೆಗಳೊಡನೆ ಪರಿಗಣಿಸಲಾಗಿದೆ. ಗದಬದ ಒಂದು ಶಾಖೆಗೆ ಸಂಬಂಧಿಸಿದಂತೆ ನಡೆದಿರುವ ಕಾರ್ಯ ಇದು ದ್ರಾವಿಡ ಭಾಷಾವರ್ಗದೊಡನೆ ಸಂಬಂಧ ಹೊಂದಿದೆಯೆಂಬುದನ್ನು ತೋರಿಸಿ ಕೊಟ್ಟಿರುವುದಾಗಿ ವರದಿಯಾಗಿದೆ ಎಂದು 1961ರ ಜನಗಣತಿಯ ಭಾಷಾಕೋಷ್ಟಕದಲ್ಲಿ ಹೇಳಲಾಗಿದೆ.

ಈ ಭಾಷೆಯ ಭಾಷಾವೈಜ್ಞಾನಿಕ ಅಧ್ಯಯನ ಸಿದ್ಧರೂಪದಲ್ಲಿ ದೊರೆಯುವುದಿಲ್ಲ. ಗ್ರಿಯರ್ಸನ್ನನ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯದ ನಾಲ್ಕನೆಯ ಸಂಪುಟದಲ್ಲಿ ಬಸ್ತಾರ್ ಮಾಹಿತಿಯ ಆಧಾರದ ಮೇಲೆ ಇದರ ಉಚ್ಚಾರ, ಸಂಖ್ಯಾವಾಚಕಗಳು, ನಾಮಪದಗಳು, ಕ್ರಿಯಾಪದಗಳು ಮತ್ತಿತರ ವ್ಯಾಕರಣಾಂಶಗಳ ಬಗ್ಗೆ ಚಿಕ್ಕ ನಿರೂಪಣೆಯೊಂದನ್ನು ಕೊಟ್ಟಿದೆ. ಘೋಷಸ್ಪರ್ಶವ್ಯಂಜನ ಮಾಲೆಯಲ್ಲಿ ಮತ್ತು ಸ್ವರಗಳಲ್ಲಿ ಕಾಣಬರುವ ಕಾಕಲ್ಯೀಕರಣವೇ ಈ ಭಾಷೆಯ ವೈಶಿಷ್ಟ್ಯ. ಇದು ಆರ್ಯ ಮತ್ತು ದ್ರಾವಿಡ ವಾಕ್ಯರಚನಾ ಸ್ವರೂಪಗಳನ್ನು ಬಹಳವಾಗಿ ಎರವಲು ಪಡೆದಿರುವಂತೆ ತೋರುತ್ತದೆ. ಇದಕ್ಕೆ ತನ್ನದೇ ಆದ ಲಿಪಿಯಿಲ್ಲ. ಗೋಪೀನಾಥ ಮೊಹಾಂತಿ ತಮ್ಮ ಗದ್ಬಾ ಭಾಷಾ ಎಂಬ ಪುಸ್ತಿಕೆಯಲ್ಲಿ ಈ ಭಾಷೆಗೆ ಬೇರೊಂದು ವರ್ಣ ಮಾಲೆಯನ್ನು ಸೂಚಿಸಿದ್ದಾರಾದರೂ ಆಯಾ ಪ್ರದೇಶಗಳಲ್ಲಿನ ಪ್ರಮುಖ ಪ್ರಾದೇಶಿಕ ಭಾಷೆಗಳ ಲಿಪಿಯನ್ನೇ ಈ ಭಾಷೆಯ ಬರೆವಣಿಗೆಗೆ ಉಪಯೋಗಿಸಲಾಗುತ್ತಿದೆ. ಇಷ್ಟಾದರೂ ಇದನ್ನು ಮಾತನಾಡುವ ಜನಗಳಲ್ಲಿ ಸಾಕ್ಷರತೆಯ ಪ್ರಮಾಣ ತುಂಬ ಕಡಿಮೆ ಯಾಗಿದೆಯೆಂದೇ ಹೇಳಬೇಕು. (ಎಂ.ಎಸ್.ಟಿ.)

**ಗದಾಧರ ಭಟ್ಟಾಚಾರ್ಯ :** ಪಶ್ಚಿಮದ ಬಂಗಾಲದ ನವದ್ವೀಪದಲ್ಲಿ (ನದಿಯಾ) ಪ್ರಾಬಲ್ಯಕ್ಕೆ ಬಂದ ನವ್ಯನ್ಯಾಯ (ತಾರ್ಕಿಕ) ಪಂಥದ ಸುಪ್ರಸಿದ್ಧ ಆಚಾರ್ಯ ಪರಂಪರೆಯಲ್ಲಿ ಒಬ್ಬ. ಅವರಲ್ಲಿ ಪ್ರಾಚಾರ್ಯನೆಂಬ ಕೀರ್ತಿಗೆ ಪಾತ್ರನಾದವ. ಈತನ ಕಾಲ ಹದಿನಾರನೆಯ ಶತಮಾನದ ಉತ್ತರಾರ್ಧ ಅಥವಾ ಹದಿನೇಳನೆಯ ಶತಮಾನದ ಪೂರ್ವಾರ್ಧ. ಜಗದೀಶಭಟ್ಟಾಚಾರ್ಯನ (ತರ್ಕಾಲಂಕಾರ) ಶಿಷ್ಯ. ಮಿಥಿಲೆ ಅಥವಾ ನವದ್ವೀಪ ಈತನ ಕಾರ್ಯಕ್ಷೇತ್ರವಾಗಿದ್ದಿರಬಹುದು. ಗಂಗೇಶನ ತತ್ತ್ವ ಚಿಂತಾಮಣಿಯ ಮೇಲೆ ರಘುನಾಥ ತರ್ಕಶಿರೋಮಣಿ ಎಂಬ ಆಚಾರ್ಯ ಬರೆದ ದೀಧಿತಿಯೆಂಬ ಭಾಷ್ಯಕ್ಕೆ ಈತ ತನ್ನ ಭಾಷ್ಯವೊಂದನ್ನು ಬರೆದಿದ್ದಾನೆ. ಇದೇ ಗಾದಾಧರೀ, ಗದಾಧರೀಯ ಎಂದು ಪ್ರಸಿದ್ಧಿ ಪಡೆದಿದೆ. ಇಂದು ಭಾರತದಲ್ಲಿ ನವ್ಯನ್ಯಾಯದಲ್ಲಿ, ತರ್ಕದಲ್ಲಿ ಅಪ್ರತಿಮ ಪಾಂಡಿತ್ಯ ಗಳಿಸಬೇಕೆಂಬ ಯಾರಾದರೂ ಗದಾಧರೀಯವನ್ನು ಉಪೇಕ್ಷಿಸುವಂತಿಲ್ಲ. ತತ್ತ್ವಚಿಂತಾಮಣಿಗೆ ಜಯದೇವನೆಂಬ ತಾರ್ಕಿಕ ಬರೆದ ಮಣ್ಯಾಲೋಕವೆಂಬ ಭಾಷ್ಯಕ್ಕೂ ಗದಾಧರ ಭಾಷ್ಯ ಬರೆದನಲ್ಲದೆ ತತ್ತ್ವಚಿಂತಾಮಣಿಯ ಅರವತ್ತುನಾಲ್ಕು ವಿಷಯಗಳನ್ನು ಕುರಿತು ವ್ಯುತ್ಪತ್ತಿವಾದ, ಶಕ್ತಿವಾದ ಮುಂತಾದ ಅರವತ್ತುನಾಲ್ಕು ಗ್ರಂಥಗಳನ್ನು ಬರೆದನೆಂದು ಪ್ರತೀತಿಯಿದೆ. ಇವುಗಳಲ್ಲಿ ಹಲವು ಇಂದು ಅನುಪಲಬ್ಧ. ಉದಯನಾಚಾರ್ಯನ ಆತ್ಮತತ್ತ್ವವಿವೇಕದ ಭಾಷ್ಯ ಈತನ ಮತ್ತೊಂದು ಕೃತಿ. ಮರಣಶಯ್ಯೆಯಲ್ಲಿದ್ದಾಗ ಈತನನ್ನು ಕುರಿತು 'ನೈಯಾಯಿಕರ ಕರ್ತನನ್ನು ಸ್ಮರಿಸಿಕೋ' ಎಂದಾಗ ಈತ ಅಣುಗಳು, ಅಣುಗಳು, ಅಣುಗಳು (ಪೀಲವಃ, ಪೀಲವಃ, ಪೀಲವಃ)–ಎಂದು ಪ್ರಾಣಬಿಟ್ಟನಂತೆ. ಈತ ಅಂಥ ನಿಷ್ಠುರ ತಾರ್ಕಿಕ ಶಿರೋಮಣಿ. (ಸಿ.ಜಿ.ಪಿ.)

**ಗದಾಧರ ಸಿಂಹ :** 1681–1696. ಅಸ್ಸಾಮನ್ನಾಳಿದ 29ನೆಯ ಅಹೋಂ ದೊರೆ. ಈತ ರಾಜನಾದಮೇಲೆ ಮಾಡಿದ ಮೊದಲನೆಯ ಕೆಲಸವೆಂದರೆ ಗೌಹಾತಿಯನ್ನು ಮೊಗಲರ ಆಕ್ರಮಣದಿಂದ ಬಿಡಿಸಿಕೊಂಡದ್ದು. ಈತ ಬಹಬಾರಿ ಮತ್ತು ಕಾಜಲ್ ಬಳಿ ಮೊಗಲರ ಸೈನ್ಯವನ್ನು ಸೋಲಿಸಿ ಓಡಿಸಿದ. ಮೋನಸ್ ನದಿಯನ್ನು ಮೊಗಲ್ ಮತ್ತು ಅಹೋಂ ರಾಜ್ಯಗಳ ನಡುವಣ ಗಡಿಯೆಂದು ಔರಂಗ್‌ಜ಼ೇಬ್ ಒಪ್ಪಿಕೊಳ್ಳಬೇಕಾಯಿತು. ಆಂತರಿಕ ಭದ್ರತೆಯನ್ನೂ ಈತ ಸ್ಥಾಪಿಸಿದ. ಅಲ್ಲಿಯ ಶ್ರೀಮಂತರು ಅನೇಕ ಬಾರಿ ಗಧಾದರ ಸಿಂಹನ ವಿರುದ್ಧ ದಂಗೆ ಎದ್ದರು. ಆ ವಿರೋಧಗಳನ್ನೆಲ್ಲ ಈತ ಅಡಗಿಸಿದ. ವಿರೋಧಿಗಳಲ್ಲಿ ಅನೇಕರನ್ನು ಕೊಲ್ಲಿಸಿದ. ಮಿರಿ ಮತ್ತು ನಾಗಾ ದಂಗೆಕೋರರನ್ನು ಹತ್ತಿಕ್ಕಿದ.

ಗದಾಧರ ಸಿಂಹ ಅನೇಕ ಸುಧಾರಣೆಗಳನ್ನು ಕೈಗೊಂಡ. ಈತನ ಕಾಲದಲ್ಲಿ ಕೆರೆಗಳ ದುರಸ್ತಿಯಾಯಿತು. ಹೆದ್ದಾರಿಗಳು ನಿರ್ಮಾಣವಾದವು. ಈತ ಭೂಹಿಡುವಳಿಯ ವ್ಯಾಪಕ ಸರ್ವೇಕ್ಷಣೆ ಮಾಡಿಸಿದ.

ಗದಾಧರ ಸಿಂಹ ಶಾಕ್ತೇಯನಾಗಿದ್ದ. ಈತ ವೈಷ್ಣವರಿಗೆ ಕಿರುಕುಳ ಕೊಟ್ಟನೆಂದೂ ವೈಷ್ಣವಗುರುಗಳ ಹಕ್ಕುಗಳನ್ನು ಮೊಟಕುಮಾಡಿದನೆಂದೂ ತಿಳಿದುಬರುತ್ತದೆ. ಗೌಹಾತಿಯ ಕಚೇರಿಘಾಟ್ ಎದುರಿಗೆ ಬ್ರಹ್ಮಪುತ್ರಾ ನದಿಯ ದ್ವೀಪವೊಂದರ ಮೇಲೆ ಈತ ಉಮಾನಂದ ದೇವಸ್ಥಾನವನ್ನು ಕಟ್ಟಿಸಿದ. ಈತ ಬ್ರಾಹಣರಿಗೂ ದೇವಸ್ಥಾನಗಳಿಗೂ ಭೂಮಿಯನ್ನು ಕೊಟ್ಟನೆಂದು ಗೊತ್ತಾಗುತ್ತದೆ. (ಎಸ್‌ಎಚ್‌ಐ.)

**ಗದಾಫಿ, ಮೌಮರ್ :** 1942–2011. ಲಿಬಿಯ ದೇಶದ ಅಧ್ಯಕ್ಷ (1971–77), ಲಿಬಿಯನ್ ಅರಬ್ ಜಾಮಾಹಿರಿಯ ನಾಯಕ. ಸಾರ್ಟೆ ನಗರದ ಹೊರಭಾಗದಲ್ಲಿರುವ ಹಳ್ಳಿಗಾಡಿನ ಕೃಷಿ ಪ್ರದೇಶದ ಕೈಸ್ರ್ ಅಬು ಹದಿ(ಡಿ) ಎಂಬಲ್ಲಿ

1942ರ ಜೂನ್‌ನಲ್ಲಿ ಜನಿಸಿದ. ಸಾರ್ಟೆ ಹತ್ತಿರ ಇರುವ ಮರುಭೂಮಿಯ ಗುಡಾರದಲ್ಲಿ ಬೆಳೆದ. ಮನೆಯಿಂದ ದೂರವಿದ್ದ ಸಬಾದ ಮುಸ್ಲಿಂ ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡಿದ. ಆ ಸಮಯದಲ್ಲಿ ಅರಬ್ ದೇಶಗಳಲ್ಲಿ ನಡೆಯುತ್ತಿದ್ದ ಮುಖ್ಯ ಘಟನೆಗಳು ಇವನ ಮೇಲೆ ಪ್ರಭಾವ ಬೀರಿದವು.1911ರಲ್ಲಿ ಇಟಲಿಯು ಲಿಬಿಯವನ್ನು ಸ್ವಾಧೀನ ಪಡೆಸಿಕೊಳ್ಳಲು ನಡೆಸಿದ ಯುದ್ಧದಲ್ಲಿ ಇವನ ತಾತ ಲಿಬಿಯ ಪರ ಹೋರಾಡಿ ಖೋಂನಲ್ಲಿ ಮೊದಲ ಬಲಿಯಾದ. 1948ರಲ್ಲಿ 6ವರ್ಷದ ಬಾಲಕನಾಗಿದ್ದಾಗ ತನ್ನ ಸಂಬಂಧಿಕರ ಮಕ್ಕಳೊಂದಿಗೆ ಆಟವಾಡುವಾಗ ದೂಳು ತುಂಬಿದ ಮಣ್ಣಿನಲ್ಲಿ ಯುದ್ಧದ ಸಮಯದಲ್ಲಿ ಇಟಲಿ ಸೈನ್ಯ ಹುಗಿದಿದ್ದ ಸಿಡಿಮದ್ದು ಸಿಡಿದು ಇಬ್ಬರು ಮಕ್ಕಳು ನಿಧನವಾಗಿ ಇವನಿಗೆ ತೋಳಿನಲ್ಲಿ ಗಾಯವಾಗಿತ್ತು. ಈ ಘಟನೆ ಇವನ ಮನಸ್ಸಿನಲ್ಲಿ ಇಟಲಿಯ ವಿಷಯದಲ್ಲಿ ವಿರೋಧಿ ಭಾವನೆ ಬೆಳೆಯಲು ಅಚ್ಚಳಿಯದ ಪ್ರಭಾವ ಬೀರಿತು.

ಇವನು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾಗ ಅರಬ್ ದೇಶಗಳಲ್ಲಿ ನಡೆಯುತ್ತಿದ್ದ ಮುಖ್ಯ ಘಟನೆಗಳು ಇವನ ಮೇಲೆ ಪ್ರಭಾವ ಬೀರಿದವು. ಪ್ರಾಥಮಿಕ ಶಿಕ್ಷಣದ ಅನಂತರ ಮಿಸರಾಟದಲ್ಲಿ ಖಾಸಾಗಿಯಾಗಿ ಶಿಕ್ಷಣವನ್ನು ಪಡೆದ. ಶಿಕ್ಷಣದ ಸಮಯದಲ್ಲಿ ಇತಿಹಾಸ ಅಭ್ಯಾಸದಲ್ಲಿ ಆಸಕ್ತಿ ವಹಿಸಿದ. ಜಿಂಗಾಸಿಯ (ಬೆಂಗಾಸಿ) ರಾಯಲ್ ಲಿಬಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಅಧ್ಯಯನ ಮಾಡಿ (1961–66) ಪದವೀಧರನಾದ. ಅನಂತರ ಗ್ರೇಟ್ ಬ್ರಿಟನ್ನಿನ ಸಾಂಡ್‌ಹರ್ಟ್‌ನ ರಾಯಲ್ ಮಿಲಿಟರಿ ಅಕಾಡೆಮಿಯಲ್ಲಿ 4 ತಿಂಗಳು ಸಿಗ್ನಲ್ ಆಫೀಸರ್ ತರಬೇತಿ ಪಡೆದ. ಲಿಬಿಯ ಸೈನ್ಯದಲ್ಲಿ ಲೆಫ್ಟಿನೆಂಟ್ ಆದ. ಲಿಬಿಯ ಸೈನ್ಯದ ಎಂಜನಿಯರ್ ವಿಭಾಗದಲ್ಲಿ ನಿಯೋಜಿತ ಅಧಿಕಾರಿಯಾದ. ಇವನು ಈಜಿಪ್ಟ್ ದೇಶದ ಅಧ್ಯಕ್ಷ ಗಮಾಲ್ ಅಬ್ದುಲ್ ನಾಸೆರ್‌ನ ಅಭಿಮಾನಿ. 1956ರಲ್ಲಿ ಸೂಯೆಜ್ ಕಾಲುವೆ ರಾಷ್ಟ್ರೀಕರಣದ ಸಮಯದಲ್ಲಿ ಈಜಿಪ್ಟ್ ಮೇಲೆ ಬ್ರಿಟನ್, ಫ್ರಾನ್ಸ್, ಅಮೆರಿಕ ಹಾಗೂ ಇಸ್ರೇಲ್ ದೇಶಗಳು ಧಾಳಿ ನಡೆಸಿದಾಗ ಅವುಗಳ ವಿರುದ್ಧ ಈಜಿಪ್ಟ್ ನಡೆಸಿದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ.

1967ರಲ್ಲಿ ಇಸ್ರೇಲ್ ಮತ್ತು ನೆರೆಯ ಅರಬ್ ರಾಷ್ಟ್ರಗಳಿಗೂ ನಡೆದ 6 ದಿನಗಳ ಯುದ್ಧದಲ್ಲಿ ಜೆರೂಸಲೇಂ, ಜೋರ್ಡಾನ್ ನದಿಯ ಪಶ್ಚಿಮ ದಂಡೆಯ ಪ್ರದೇಶ, ಸಿನಾಯ್ ಪ್ರದೇಶ ಮತ್ತು ಗೋಲನ್ ದಿಬ್ಬಗಳು ಇಸ್ರೇಲ್‌ನ ವಶವಾದವು. ಆಗ ಅರಬರು ಸೋಲು ಅನುಭವಿಸಿದ್ದು ಇವನಿಗೆ ಮತ್ತು ಇವನ ಮಿಲಿಟರಿ ಅಕಾಡೆಮಿಯ ಸಹಪಾಠಿಗಳಿಗೆ ಮರೆಯಲಾರದ ಅನುಭವವಾಯಿತು. ಇದರಿಂದಾಗಿ ಈತ ಅರಬರ ಐಕ್ಯತೆಗೆ ಪ್ರಯತ್ನಿಸಲು ದೃಢನಿರ್ಧಾರ ಮಾಡಿದ.

1969ರ ಸೆಪ್ಟೆಂಬರ್ 1ರಂದು ಗದಾಫಿಯ ನಾಯಕತ್ವದಲ್ಲಿ ಮಿಲಿಟರಿ ಅಧಿಕಾರಿಗಳು ರಕ್ತಪಾತವಿಲ್ಲದ ಕ್ಷಿಪ್ರಕ್ರಾಂತಿಯನ್ನು ನಡೆಸಿ ಲಿಬಿಯ ರಾಜನನ್ನು ಪದಚ್ಯುತಿಗೊಳಿಸಿ ಮಿಲಿಟರಿ ಆಡಳಿತ ಸ್ಥಾಪಿಸಿದರು. ಗದಾಫಿ 1970ರಲ್ಲಿ ಮುಖ್ಯಮಂತ್ರಿಯಾದ. ಲಿಬಿಯನ್ ರಿವೆಲ್ಯೂಷನರಿ ಕಮಾಂಡ್ ಕೌನ್ಸಿಲ್‌ನ ಆಣತಿಯಂತೆ ಆಡಳಿತ ನಡೆಯುತ್ತಿತ್ತು. ಇವನು ಅಧಿಕಾರ ವಹಿಸಿಕೊಂಡ ಕೂಡಲೇ ಅಮೆರಿಕ ಮತ್ತು ಬ್ರಿಟಿಷ್ ರಕ್ಷಣ ನೆಲೆಗಳನ್ನು ಮುಚಲು ಆಜ್ಞೆ ಮಾಡಿದ. ಐರೋಪ್ಯ ತೈಲೋದ್ಯಮ ಕಂಪನಿಗಳಿಗೆ ಆದಾಯದಲ್ಲಿ ಅಧಿಕಭಾಗ ಕೊಡದಿದ್ದರೆ ಮುಚ್ಚಿಸುವುದಾಗಿ ಎಚ್ಚರಿಕೆ ನೀಡಿದ. ಇವನ ಆಣತಿಯಂತೆ ಕಂಪನಿಗಳು ಶೇ.50 ರಿಂದ ಶೇ.70 ಭಾಗ ಕೊಡಲು ಒಪ್ಪಿದವು. ಗದಾಫಿ 1972ರಲ್ಲಿ ಅಧ್ಯಕ್ಷನಾದ, ಆಗ ಮೇಜರ್ ಅಬ್ದುಲ್ ಮುಖ್ಯಮಂತ್ರಿಯಾದ. ಇವನು 1971 ರಿಂದ 1977ರ ವರೆಗೆ ಈಜಿಪ್ಟ್ ಮಾದರಿಯಂತೆ ಅರಬ್ ಸೋಷಿಯಲಿಸ್ಟ್ ಯೂನಿಯನ್ ಲಿಬಿಯದ ರಾಜಕೀಯ ಪಕ್ಷವಾಗಿ ಕಾರ್ಯನಿರ್ವಹಿಸಲು ಒಪ್ಪಿಗೆ ನೀಡಿದ. 1977ರಲ್ಲಿ ಅಧಿಕಾರ ತ್ಯಜಿಸಿದ. ಲಿಬಿಯನ್ ಅರಬ್ ಜಮಾಹಿರಿಯ ನೇರವಾಗಿ ದೇಶದ ಆಡಳಿತಕ್ಕೆ ಹೊಣೆಯೆಂದು ತಿಳಿಸಿದ. ಆದರೂ ಲಿಬಿಯನ್ ರೆವೆಲ್ಯೂಷನರಿ ಕಮಾಂಡ್ ಕೌನ್ಸಿಲ್ ಆಣತಿಯಂತೆ ನಡೆಯುತ್ತಿತ್ತು.

ಇವನನ್ನು ಟೀಕೆ ಮಾಡುವವರು ಗದಾಫಿ ನಿರಂಕುಶ ಸರ್ವಾಧಿಕಾರಿ ಎಂದು ಕರೆಯುತ್ತಿದ್ದರು. ಈತ 1980ರ ದಶಕದಲ್ಲಿ ರಸಾಯನಿಕ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ. ವಿಶ್ವಸಂಸ್ಥೆಯ ಸದಸ್ಯ ದೇಶಗಳು ಲಿಬಿಯಕ್ಕೆ ನಿರ್ಬಂಧವನ್ನು ವಿಧಿಸಿದವು. 2003ರಲ್ಲಿ ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ನನ್ನು ಬಂಧಿಸಿದ 6 ದಿನಗಳ ಅನಂತರ ಶಸ್ತ್ರಾಸ್ತ್ರಗಳನ್ನು ತ್ಯಜಿಸಿರುವುದಾಗಿ ಗದಾಫಿ ಹೇಳಿದ.

2011ರ ಫೆಬ್ರವರಿಯಲ್ಲಿ ನೆರೆಹೊರೆಯ ದೇಶಗಳಾದ ಈಜಿಪ್ಟ್ ಮತ್ತು ಟ್ಯೂನಿಷಿಯ ದೇಶಗಳಲ್ಲಿ ಕ್ರಾಂತಿಗಳು ನಡೆದಾಗ ಗದಾಫಿ ವಿರುದ್ಧವಾಗಿ ಪ್ರತಿಭಟನೆಗಳು ಪ್ರಾರಂಭವಾಗಿ ದೇಶಾದ್ಯಂತ ಹರಡಿತು. ಗದಾಫಿಗೆ ವಿರೋಧಿಯಾದ ಸೈನ್ಯದ ಭಾಗ ಬೆಂಗಾಜ಼ಿಯಲ್ಲಿ ನ್ಯಾಷನಲ್ ಟ್ರಾನ್ಸಿಷನಲ್ ಕೌನ್ಸಿಲ್ (ಎನ್.ಟಿ.ಸಿ) ಮಧ್ಯಕಾಲಿನ ಸರ್ಕಾರ ಸ್ಥಾಪಿಸಿತು. ದೇಶದಲ್ಲಿ ಹೋರಾಟ ಪ್ರಾರಂಭವಾಗಿ ಅಂತಾರಾಷ್ಟ್ರೀಯ ನ್ಯಾಯಾಲಯ ಗದಾಫಿ ಮತ್ತು ಇವನ ಕುಟುಂಬದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಜೂನ್ 27ರಂದು ಅವರನ್ನು ಬಂಧಿಸಲು ಆಜ್ಞೆ ಹೊರಡಿಸಿತು. ನ್ಯಾಟೊ ಬಲವು ಎನ್.ಟಿ.ಸಿ.ಗೆ ಬೆಂಬಲವಾಗಿ ಹೋರಾಟ ಪ್ರಾರಂಭಿಸಿತು. ಗದಾಫಿಗೆ ವಿಧೇಯರಾದ ಸೈನ್ಯವು ಟ್ರಿಪೋಲಿ ಮೇಲಿನ ಹತೋಟಿಯನ್ನು ಆಗಸ್ಟ್ 16ರಂದು ಕಳೆದುಕೊಂಡಿತು. ಗದಾಫಿ ಸಾರ್ಟೆ ಪಟ್ಟಣದ ಮೇಲೆ ಮಾತ್ರ ಹತೋಟಿಯನ್ನು ಹೊಂದಿದ್ದ. ಸೆಪ್ಟೆಂಬರ್ 16ರಂದು ಎನ್.ಟಿ.ಸಿ. ವಿಶ್ವಸಂಸ್ಥೆಯಲ್ಲಿ ಸ್ಥಾನವನ್ನು ತುಂಬಿತು. ನ್ಯಾಟೊ ಪಡೆಗಳ ಯುದ್ಧ ವಿಮಾನಗಳು ಇವನ ಬೆಂಗಾವಲು ಪಡೆಗಳ ಮೇಲೆ ಧಾಳಿ ನಡೆಸಿದವು. ಅಕ್ಟೋಬರ್ 20ರಂದು ಸಾರ್ಟೆಯಲ್ಲಿ ಎನ್.ಎಲ್.ಎ. ಹೋರಾಟಗಾರರಿಗೆ ಈತ ಜೀವಂತವಾಗಿ ಕೈವಶವಾದಾಗ ಈತನನ್ನು ಕೊಲ್ಲಲಾಯಿತು. ಇವನ 41 ವರ್ಷಗಳ ಆಡಳಿತ ಮುಕ್ತಾಯವಾಯಿತು. 1900 ಅನಂತರ ದೀರ್ಘಕಾಲ ಆಡಳಿತ ನಡೆಸಿದ ರಾಜವಂಶಕ್ಕೆ ಸೇರಿಲ್ಲದ ನಾಲ್ಕನೆಯ ವ್ಯಕ್ತಿ ಈತ. (ಎನ್.ಎಲ್.)

**ಗದ್ದಗಿಮಠ, ಬಿ.ಎಸ್. :** 1917–1960. ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಆದ್ಯರಲ್ಲೊಬ್ಬರು. ಬಿಜಾಪುರ ಜಿಲ್ಲೆ ಕೆರೂರಿನಲ್ಲಿ 1917 ಜನವರಿ 17ರಂದು ಜನಿಸಿದರು. ಇವರ ತಂದೆ ಜನಪದ ಗೀತೆಗಳನ್ನು ಹಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಇಂಥ ಪರಿಸರದಲ್ಲಿ ಬೆಳೆದ ಇವರನ್ನು ಜಾನಪದ ಕ್ಷೇತ್ರ ಆಕರ್ಷಿಸಿತು. ಕನ್ನಡದಲ್ಲಿ ಎಂ.ಎ. ಪದವಿ ಪಡೆದಮೇಲೆ, ಉತ್ತರ ಕರ್ನಾಟಕದ ನಾನಾ ಭಾಗಗಳಲ್ಲಿ ಸಂಚರಿಸಿ ಜನಪದ ಗೀತೆಗಳನ್ನು ಸಂಶೋಧಿಸಿ, ಸಂಗ್ರಹಿಸಿ ಕನ್ನಡ ಜನಪದ ಗೀತೆಗಳು ಎಂಬ ಪ್ರೌಢ ಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು. (1955). ಕರ್ನಾಟಕದಲ್ಲಿ ಜಾನಪದ ಕ್ಷೇತ್ರದಲ್ಲಿ ಪಿಎಚ್.ಡಿ. ಪದವಿ ಪಡೆದ ಪ್ರಥಮರೂ ಇವರೇ. ಜನಪದ ಸಾಹಿತ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಇವರು ಬಹುವಾಗಿ ಶ್ರಮಿಸಿದರು. ಜನಪದ ಗೀತೆಗಳನ್ನು, ನಾಡಪದಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಅದಕ್ಕಾಗಿ ಜನಪದ ಕಾವ್ಯಮಾಲೆ ಎಂಬ ಒಂದು ಮಾಲೆಯನ್ನು ಆರಂಭಿಸಿದರು. ಇವರು ಪ್ರಕಟಿಸಿರುವ ಗ್ರಂಥಗಳಿವು: ನಾಲ್ಕು ನಾಡ ಪದಗಳು, ಕಂಬಿಯ ಹಾಡುಗಳು, ಜನತಾಗೀತಗಳು ಲೋಕಗೀತಗಳು, ಕುಮಾರರಾಮನ ದುಂದುಮೆಗಳು. ಇವರು ಸ್ವತಃ ಜನಪದ ದಾಟಿಯಲ್ಲಿ ಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದರು.

ಇವರು ಬೆಳಗಾಂವಿಯ ಲಿಂಗರಾಜ ಕಾಲೇಜಿನಲ್ಲಿ ವ್ಯಾಯಾಮ ಶಿಕ್ಷಕರಾಗಿ ಸ್ವಲ್ಪಕಾಲ ಕೆಲಸಮಾಡಿದರು. ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡರು. ಆ ಹುದ್ದೆಯಲ್ಲಿದ್ದಾಗಲೇ 1960ರ ಅಕ್ಟೋಬರ್ 30ರಂದು ಹೃದಯಾಘಾತದಿಂದ ನಿಧನಹೊಂದಿದರು.

ಕನ್ನಡ ಜನಪದ ಗೀತಗಳು ಎಂಬ ಇವರ ಪ್ರೌಢಪ್ರಬಂಧವನ್ನು ಇವರ ನಿಧನಾನಂತರ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿತು (1963). ತರೀಕೆರೆಯಲ್ಲಿ 1967ರಲ್ಲಿ ನಡೆದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನದ ಸಭಾಮಂಟಪಕ್ಕೆ ಇವರ ಹೆಸರಿಡಲಾಗಿತ್ತು. (ಸಿ.ಕೆ.ಎನ್.)

**ಗದ್ದರ್ ಪಕ್ಷ :** ಭಾರತದ ಹೋರಾಟದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಬ್ರಿಟಿಷರನ್ನು ಶಸ್ತ್ರಾಸ್ತ್ರ ಬಂಡಾಯದಿಂದ ಕಿತ್ತೊಗೆಯ ಬೇಕೆಂದು ಕ್ರಾಂತಿಕಾರಿಗಳು ಕಾರ್ಯಾಚರಣೆ ನಡೆಸಲು ಪ್ರಾರಂಭಿಸಿದ್ದರು. ಈ ಕ್ರಾಂತಿಕಾರಿಗಳು ಯುರೋಪ್, ಅಮೆರಿಕ, ಮಧ್ಯಏಷ್ಯ ಮತ್ತು ಆಗ್ನೇಯ ಏಷ್ಯಗಳಲ್ಲಿ ತಮ್ಮ ಚಟುವಟಿಕೆಯ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದ್ದರು. ಇವರುಗಳು ಸಾವನ್ನು ಅಥವಾ ಸೆರೆಯಾಗುವುದರಿಂದ ಎದುರಿಸಲು ಹೆದರಿ ವಿದೇಶಗಳಿಗೆ ಹೋದವರಲ್ಲ. ಇವರು ಆ ದೇಶಗಳಲ್ಲಿ ಭಾರತದ ಸಮಸ್ಯೆಗಳನ್ನು ಪ್ರಚಾರ ಮಾಡಿ, ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಹೋಗಿದ್ದರು. ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿ ಸಾವಿರಾರು ಭಾರತೀಯರು ಅದರಲ್ಲೂ ಹೆಚ್ಚಾಗಿ ಪಂಜಾಬಿನ ಸಿಕ್ಕರು ನೆಲೆಸಿದ್ದರು. ಅಲ್ಲಿ ಭಾರತೀಯರನ್ನು ವರ್ಣದ್ವೇಷ ಮತ್ತು ತಾರತಮ್ಯಗಳಿಂದ ಕಾಣುತ್ತಿದ್ದರು. ಇದೇ ಸಮಯದಲ್ಲಿ ತಾರಕನಾಥ್‌ದಾಸ್ ಮತ್ತು ಸೋಹನ್‌ಸಿಂಗ್ ಈ ಪ್ರದೇಶಗಳಲ್ಲಿ ಕ್ರಾಂತಿಕಾರಿ ವಿಚಾರಗಳನ್ನು ಹರಡಿದರು. ಲಾಲ ಹರಿದಯಾಳ್‌ರು ಅಮೆರಿಕಕ್ಕೆ ಹೋಗಿ 1857ರ ಸಿಪಾಯಿದಂಗೆಯ ನೆನಪಿಗಾಗಿ 1913ರ ನವೆಂಬರ್ 1 ರಂದು 'ಗದ್ದರ್' ಎಂಬ ಪತ್ರಿಕೆಯನ್ನು ಪ್ರಕಟಿಸಿದರು. ಪಂಜಾಬಿ ಭಾಷೆಯಲ್ಲಿ 'ಗದ್ದರ' ಎಂದರೆ ಬಂಡಾಯವೆಂದರ್ಥ. ಈ ಪತ್ರಿಕೆಯು ಇಂಗ್ಲಿಷ್, ಗುರುಮುಖಿ, ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ಈ ಪತ್ರಿಕೆಯಲ್ಲಿ ಅಧಿಕಾರಿಗಳ ಕೊಲೆ, ಕ್ರಾಂತಿಕಾರಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಸಾಹಿತ್ಯವನ್ನು ಪ್ರಕಟಿಸುತ್ತಿದರು ನಂತರ ಗದ್ದರ್ ಎಂಬ ಪಕ್ಷವನ್ನು ರಚಿಸಿದರು.

ಗದ್ದರ್ ಪತ್ರಿಕೆಯಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಸಾಹಿತ್ಯವನ್ನು ಪ್ರಕಟಿಸುವುದು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದು, ಸೈನ್ಯದ ನಡುವೆ ವಿರೋಧಿ ಭಾವನೆ ಬೆಳೆಸುವುದು ಮುಂತಾದ ಲೇಖನಗಳನ್ನು ಪ್ರಕಟವಾಗುತ್ತಿತ್ತು. ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಇದರ ಕಛೇರಿಯಿತ್ತು. ಒಂದು ಸಲ ಈ ಪತ್ರಿಕೆಯಲ್ಲಿ 'ಧೈರ್ಯಶಾಲಿ ಸೈನಿಕರು ಬೇಕಾಗಿದ್ದಾರೆ, ಉದ್ಯೋಗ– ಭಾರತದಲ್ಲಿ ದಂಗೆ ಏಳಲು ವೇತನ–ಸಾವು ಬೆಲೆ – ವೀರ ಮರಣ; ವಿಶ್ರಾಂತಿ ವೇತನ–ಸ್ವಾತಂತ್ರ್ಯ; ಯುದ್ಧ ನಡೆಯುವ ಸ್ಥಳ–ಭಾರತ' ಎಂದು ಪ್ರಕಟಿಸಲಾಗಿತ್ತು. ಪ್ರಪಂಚದಾದ್ಯಂತ ಇರುವ ಭಾರತೀಯರನ್ನು ಒಟ್ಟುಗೂಡಿಸಿ ಕ್ರಾಂತಿ ಮಾಡಲು ಜನರನ್ನು ಸಂಘಟಿಸುವ ಉದ್ದೇಶವಾಗಿತ್ತು.

ಗದ್ದರ್ ಪಕ್ಷದ ಕೇಂದ್ರ ಕಛೇರಿಯು ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋದ ನಂ, 436 ಹಿಲ್‌ಸ್ಟ್ರೀಟ್‌ನಲ್ಲಿತ್ತು. ಕಲ್ಕತ್ತದಲ್ಲಿ ಪ್ರಕಟವಾಗುತ್ತಿದ್ದ 'ಯುಗಾಂತರ್' ಪತ್ರಿಕೆಯ ಸ್ಥಾಪನೆಯ ನೆನಪಿನಲ್ಲಿ ಈ ಕೇಂದ್ರಕ್ಕೆ 'ಯುಗಾಂತರ್ ಆಶ್ರಮ'ವೆಂದು ಹೆಸರಿಡಲಾಯಿತು. ಅಮೆರಿಕ, ಕೆನಡ ಮತ್ತಿತರ ಭಾಗಗಳಲ್ಲಿ ಈ ಪಕ್ಷದ ಶಾಖೆಗಳಿದ್ದವು. ಈ ಪಕ್ಷದ ವಿವಿಧ ಶಾಖೆಗಳಿಂದ ಸದಸ್ಯರನ್ನು ಆರಿಸಿ ಕೇಂದ್ರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಆಗಾಗ್ಗೆ ಸಭೆ ನಡೆಸಿ ಭಾರತದಲ್ಲಿದ್ದ ತನ್ನ ಬೆಂಬಲಿಗರಿಗೆ ರಾಜಕೀಯ ಶಿಕ್ಷಣ ನೀಡುವ ಮತ್ತು ಅದಕ್ಕೆ ಬೇಕಾಗುವ ಹಣವನ್ನು ಸಂಗ್ರಹಿಸುವ ತೀರ್ಮಾನಗಳನ್ನು ಕೈಗೊಳ್ಳುತ್ತಿತ್ತು. ಇದೇ ಪಕ್ಷದ ರಾಮಚಂದ್ರ ಅವರು ಅಮೆರಿಕದ ಅಧ್ಯಕ್ಷ ವಿಲ್ಸನ್‌ರವರಿಂದ ಭಾರತದ ಸ್ವಾತಂತ್ರ್ಯಕ್ಕೆ ಬೆಂಬಲ ದೊರಕಿಸಲು ಪ್ರಯತ್ನಪಟ್ಟರು. ಫಿಲಡೆಲ್ಫಿಯದಲ್ಲಿ ಗದ್ದರ್ ಸೊಸೈಟಿಯು ಭಾರತೀಯ ಕ್ರಾಂತಿಕಾರಿಗಳು ನಡೆಸಿದ ಮೆರವಣಿಗೆಯಲ್ಲಿ ಸುಮಾರು 10 ಸಾವಿರ ಅಮೆರಿಕನ್ನರು ಭಾಗವಹಿಸಿ ಭಾರತ ಮತ್ತು ಐರ್ಲೆಂಡ್‌ನಲ್ಲಿ ಬ್ರಿಟಿಷರು ನಡೆಸುತ್ತಿರುವ ದೌರ್ಜನ್ಯವನ್ನು ಖಂಡಿಸಿದರು. ಬ್ರಿಟಿಷರು ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯಲು ಹೋರಾಡುತ್ತಿರುವ ಭಾರತದ ಪ್ರಯತ್ನಕ್ಕೆ ಅಮೆರಿಕನ್ನರು ಬೆಂಬಲ ಘೋಷಿಸಿದರು.

ಅಮೇರಿಕದಲ್ಲಿದ್ದ ಜರ್ಮನಿ ರಾಯಭಾರಿ ಕಛೇರಿಯವರೊಡನೆ ಎಂ.ಎನ್.ರಾಯ್‌ರವರು ಮಾತುಕತೆ ನಡೆಸಿ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ಕಳುಹಿಸುವ ದೀರ್ಘಯೋಜನೆಯನ್ನು ಮಾಡಿದರು. 1915 ಜನವರಿಯಲ್ಲಿ ಅನಿಲಾರ್ಸನ್ ಎಂಬ ಹಡಗಿನಲ್ಲಿ ಶಸ್ತ್ರಾಸ್ತ್ರಗಳನ್ನು ತುಂಬಿ ಒಂದು ಗುಪ್ತ ಸ್ಥಳದಲ್ಲಿ ಜರ್ಮನಿಯವರ ಸಹಾಯದಿಂದ ಮಾವೆರಿಕ್ ಎಂಬ ಹಡಗಿನಲ್ಲಿ ಶಸ್ತ್ರಾಸ್ತ್ರಗಳನ್ನು ಭರ್ತಿಮಾಡಿ ಕಳುಹಿಸಲಾಯಿತು. ಆದರೆ ಪೆಸಿಫಿಕ್ ಸಾಗರದಲ್ಲಿರುವ ಹವಾಯಿ ದ್ವೀಪದ ಹತ್ತಿರ ಮಾವೆರಿಕ್ ಹಡಗು ನೀರಿನ ತೊಂದರೆಯಿಂದ ಸಿಕ್ಕಿಕೊಂಡಿತು. ಅಲ್ಲಿಂದ ಬರುವ ಶಸ್ತ್ರಾಸ್ತ್ರಗಳನ್ನು ಇಳಿಸಿಕೊಳ್ಳಲು ಭಾರತದ ಒರಿಸ್ಸಾರಾಜ್ಯದ ಪೂರ್ವದಲ್ಲಿರುವ ಬಂಗಾಳ ಕೊಲ್ಲಿಯ ತೀರದಲ್ಲಿರುವ ಬಾಲಸೂರಿನ ಬಳಿ ಜತೀನ್ ಮುಖರ್ಜಿಯವರ ನೇತೃತ್ವದಲ್ಲಿ ಸಿದ್ಧವಿದ್ದ ಕ್ರಾಂತಿಕಾರಿಗಳು ಪೋಲಿಸ್ ಪಡೆಯೊಂದಿಗೆ ಹೋರಾಡಿ ಮಡಿದರು. ಹೀಗೆ ಕ್ರಾಂತಿಕಾರಿಗಳ ಯೋಜನೆ ಬಿದ್ದು ಹೋಯಿತು.

ಗದ್ದರ್ ಪಕ್ಷದ ಕ್ರಾಂತಿಕಾರಿಗಳು ವಿದೇಶಗಳಲ್ಲಿ ನಡೆಸಿದ ಕೊಲೆಗಳಲ್ಲಿ ಪ್ರಮುಖವಾದುದು ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಕಾರಣನಾದ ಜನರಲ್ ಸರ್ ಮೈಕೆಲ್ ಓಡ್ವೈಯರನನ್ನು ಲಂಡನ್ನಿನ ಕ್ಯಾಕ್ಸ್‌ಟೌನ್ ಹಾಲ್‌ನಲ್ಲಿ 1940ರ ಮಾರ್ಚ್ 13ರಂದು ಉದಾಮ್‌ಸಿಂಗ್ ಕೊಂದ. ಜಲಿಯನ್ ವಾಲಾಬಾಗ್ ಘಟನೆ 1919ರ ಏಪ್ರಿಲ್ 13ರಂದು ನಡೆಯಿತು. ಆ ಸಮಯದಲ್ಲಿ ಉದಾಮ್‌ಸಿಂಗ್ ಬಾಲಕನಾಗಿದ್ದ ಪಂಜಾಬಿಗಳು ಓಡ್ವೈಯರನನ್ನು ದ್ವೇಷಿಸುತ್ತಿದ್ದರು ನಂತರ ದ್ವೇಷ ತೀರಿಸಲು ಲಂಡನ್‌ಗೆ ಹೋಗಿ ಅವನನ್ನು ಉದಾಮ್‌ಸಿಂಗ್ ಕೊಂದ. ಆಗ ಇವನನ್ನು ಬಂಧಿಸಿ ವಿಚಾರಣೆ ನಡೆಸಿ 1940ರ ಜೂನ್ 12 ರಂದು ಗಲ್ಲಿಗೇರಿಸಲಾಯಿತು.

ಪುಣೆಯಲ್ಲಿ ಪ್ಲೇಗ್ ಬಂದಾಗ ಮನೆಗಳನ್ನು ಖಾಲಿ ಮಾಡಿಸಲು ಬ್ರಿಟಿಷ್ ಅಸಭ್ಯತೆಯ ಮಿತಿ ಮೀರಿದ ಕ್ರಮಗಳಿಂದ ಚಾಪೇಕರ್ ಸೋದರರು ಇಬ್ಬರು ಬ್ರಿಟಿಷ್ ಅಧಿಕಾರಿಗಳನ್ನು ಕೊಲ್ಲಲ್ಲು ಅವರಿಗೆ ಮರಣದಂಡನೆ ಆಯಿತು. ಲಂಡನ್‌ನಲ್ಲಿ ಶ್ಯಾಮಜಿಕೃಷ್ಣವರ್ಮ ಕ್ರಾಂತಿಕಾರಿಗಳ ತರಬೇತಿಗಾಗಿ ಇಂಡಿಯನ್ ಹೌಸ್ ಆರಂಭಿಸಿದರು. ಈ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ವರದಿ ಮಾಡುತ್ತಿದ್ದ ಕರ್ಜನ್ ವೈಲಿ ಎಂಬ ಅಧಿಕಾರಿಯನ್ನು ಮದನಲಾಲ್ ದಿಂಗ್ರಾ ಎಂಬ ಕ್ರಾಂತಿಕಾರಿ ಲಂಡನ್‌ನ ಒಂದು ಸತ್ಕಾರ ಸಮಾರಂಭದಲ್ಲಿ ಗುಂಡು ಹಾರಿಸಿ ಕೊಂದನು. ದಿಂಗ್ರಾನು ಕೋರ್ಟ್‌ನಲ್ಲಿ 'ಭಾರತೀಯ ಯುವಕರನ್ನು ಅಮಾನುಷವಾಗಿ ಗಲ್ಲಿಗೇರಿಸುತ್ತಿರುವುದಕ್ಕೆ ಅಲ್ಪ ಪ್ರತೀಕಾರವಾಗಿ ನಾನು ಬ್ರಿಟಿಷರ ರಕ್ತವನ್ನು ಸುರಿಸಲು ಯತ್ನಿಸಿದೆ ಎಂದು ಒಪ್ಪಿಕೊಳ್ಳುತ್ತೇನೆ. ನಿಶಸ್ತ್ರಜೀವನ ಬಹಿರಂಗ ಯುದ್ಧಕ್ಕಿಳಿಯುವುದು ಅಸಾಧ್ಯವಾದ ಕಾರಣ ಹಠಾತ್ ಧಾಳಿಗೆ ನನ್ನ ಪಿಸ್ತೂಲಿನಿಂದ ಗುಂಡು ಹಾರಿಸಿದೆ' ಎಂದೂ, 'ನನ್ನ ದೇಶಕ್ಕೆ ಮಾಡುವ ಅನ್ಯಾಯ ಭಗವಂತನಿಗೆ ಮಾಡುವ ಅವಮಾನ ಎಂದು ಭಾವಿಸಿದೆ. ಎಂಬಂತಹ ದೇಶಭಕ್ತಿ ನುಡುಗಳನ್ನಾಡಿದನು. ದಿಂಗ್ರಾನ ದೇಶಾಭಕ್ತಿ ಹೇಳಿಕೆಯನ್ನು ಲಾಯ್ಡ್ ಜಾರ್ಜ್ ಮತ್ತು ವಿನ್‌ಸ್ಟನ್ ಚರ್ಚಿಲರು ದಿಂಗ್ರಾನ ಕೊನೆಯ ವಾಕ್ಯಗಳು ಎಂದೆಂದಿಗೂ ದೇಶಾಭಿಮಾನದ ಹೆಸರಿನಲ್ಲಿ ಮಾಡಿರುವ ಅತ್ಯುನ್ನತ ಹೇಳಿಕೆಯೆಂದು ಶ್ಲಾಘಿಸಿದರು. ಐರ್‌ಲೆಂಡ್‌ನ ಪ್ರಜೆಗಳು ದಿಂಗ್ರಾನನ್ನು ದೇಶಕ್ಕಾಗಿ ಪ್ರಾಣತೆತ್ತ ಮಹಾವೀರನೆಂದು ಗೌರವಿಸಿತು (1909).

1922ರಲ್ಲಿ ಕ್ರಾಂತಿಕಾರಿಗಳಾದ ಯುವಕರು ಬ್ರಿಟಿಷ್ ಸರ್ಕಾರವನ್ನು ಬುಡಮೇಲು ಮಾಡಿ ಅದರ ಧೈರ್ಯ, ಸ್ಥೈರ್ಯ ಕುಂದಿಸಬೇಕೆಂದು ಗುಪ್ತವಾಗಿ ಶ್ರಮಿಸಿದರು. ಲಖನೌ ಬಳಿ ಕಾಕೋರಿ ರೈಲು ನಿಲ್ದಾಣದಲ್ಲಿ ಸರ್ಕಾರಿ ತಿಜೋರಿಯನ್ನು ಅಪಹರಿಸಿದರು. ಈ ಪ್ರಕರಣದಲ್ಲಿ 40 ಜನರ ಬಂಧನವಾಗಿ ಮೂವರಿಗೆ 1927ರಲ್ಲಿ ಮರಣದಂಡನೆ ಆಯಿತು.

1928 ಅಕ್ಟೋಬರ್ 20ರಂದು ಎಲ್ಲೆಡೆ ಸೈಮನ್ ಆಯೋಗದ ವಿರುದ್ಧ ಉಗ್ರ ಪ್ರತಿಭಟನೆಯಲ್ಲಿ ಪಾಲುಗೊಂಡ ಲಾಲಾಲಜಪತ್‌ರಾಯ್ ಮೇಲೆ ಉಗ್ರ ಲಾಠಿ ಪ್ರಹಾರವಾಗಿ ಅದರಿಂದ ಅವರು ಗಾಯಗೊಂಡು 1928ರ ನವೆಂಬರ್ 17ರಂದು ನಿಧನವಾದರು. ಈ ಅನಾಹುತಕ್ಕೆ ಸಾಂಡರ್ಸ್ ಎಂಬ ಅಧಿಕಾರಿಯನ್ನು ಕ್ರಾಂತಿಕಾರಿಗಳಾದ ಭಗತ್‌ಸಿಂಗ್ ಮತ್ತು ರಾಜಗುರು ಗುಂಡಿಕ್ಕಿ ಕೊಂದರು. ಹತ್ಯೆಯ ಅನಂತರ ತಲೆ ತಪ್ಪಿಸಿಕೊಂಡಿದ್ದ ಭಗತ್‌ಸಿಂಗ್ ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಯ ಆಡಳಿತದ ಬಗ್ಗೆ ಪ್ರಪಂಚದ ಕಣ್ತೆರಿಸಬೇಕೆಂಬ ಉದ್ದೇಶದಿಂದ ದೆಹಲಿಯ ಕೇಂದ್ರ ಶಾಸನ ಸಭೆಯಲ್ಲಿ ಬಿಟುಕೇಶ್ವರದತ್ತನೊಂದಿಗೆ ಸೇರಿ ಬಾಂಬನ್ನೆಸೆದು ಬಂಧಿತನಾದ (1929). ವಿವಿಧ ಕ್ರಾಂತಿಕಾರಿ ಚಟುವಟಿಕೆಗಳಿಗೆ ವಿಚಾರಣೆ ನಡೆದು, ಭಗತ್‌ಸಿಂಗ್, ಸುಖದೇವ್, ಮತ್ತು ರಾಜಗುರು ಈ ಮೂರು ಮಂದಿಗೂ ಮರಣದಂಡನೆ ವಿಧಿಸಲಾಯಿತು. 1931 ಮಾರ್ಚ್ 23ರಂದು ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಭಗತ್‌ಸಿಂಗ್‌ನನ್ನೂ ಗಲ್ಲಿಗೇರಿಸಲಾಯಿತು. ಚಂದ್ರಶೇಖರ್ ಆಜಾದ್ ಎಂಬ, ಈ ತಂಡದ ಕ್ರಾಂತಿಕಾರಿ 1931ರಲ್ಲಿ ಪೋಲಿಸರೊಡನೆ ಗುಂಡಿನ ಕಾಳಗದಲ್ಲಿ ಹುತಾತ್ಮನಾದ. ಈ ಕ್ರಾಂತಿಕಾರಿಗಳು ಯುವಕರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಳ್ಳಲು ಅಪಾರ ಸ್ಫೂರ್ತಿ ನೀಡಿದರು. ಇವರೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಗದ್ದರ್ ಪಕ್ಷದ ಸಂಪರ್ಕದಲ್ಲಿದ್ದರು. (ಎನ್.ಎಲ್.)

**ಗದ್ದಲ ಮತ್ತು ಅದರ ಪರಿಣಾಮಗಳು :** ಅರ್ಥವಿಲ್ಲದ ಶಬ್ದಕ್ಕೆ, ಗಲಾಟೆಗೆ ಗದ್ದಲವೆನ್ನುತ್ತೇವೆ. ಅರ್ಥವತ್ತಾಗಿ ಹಾರ್ಮೋನಿಯಂ ಮೀಟಿ ನುಡಿಸಿದರೆ ಸಂಗೀತವಾಗುತ್ತದೆ. ಪ್ರತಿಯಾಗಿ ಮನಸ್ಸು ಬಂದಂತೆ ನಾಲ್ಕಾರು ಮನೆಗಳನ್ನೊತ್ತಿದರೆ ಗದ್ದಲವಾಗುತ್ತದೆ. ವರ್ಣಮಾಲೆಯಲ್ಲಿನ ಅಕ್ಷರಗಳನ್ನು ಉಚ್ಚರಿಸಿದಾಗ ವ್ಯವಸ್ಥಿತಶಬ್ದ ಉತ್ಪತ್ತಿಯಾಗುತ್ತದೆ. ಪ್ರತಿಯಾಗಿ ಗುಹಾಧ್ವನಿ, ತೇಗು, ಬಿಕ್ಕಳಿಕೆ, ಅರಚಾಟ ಇವು ಗದ್ದಲವೆನಿಸುತ್ತವೆ. ಸಂತೆಯಲ್ಲಿ ಪ್ರತಿಯೊಬ್ಬನೂ ನಿರಾತಂಕವಾಗಿ ತನ್ನ ತನ್ನ ವ್ಯವಹಾರವನ್ನು ಮಾಡುತ್ತಿರುತ್ತಾನಾದರೂ ಒಟ್ಟು ಸಂತೆಯನ್ನು ದೂರದಿಂದ ನೋಡುವವನಿಗೆ ಅಲ್ಲಿ ಬರೀ ಗದ್ದಲ, ಗಲಾಟೆ ನಡೆಯುತ್ತಿರುವಂತೆ ಭಾಸವಾಗುತ್ತದೆ. ಅಷ್ಟೇ ಅಲ್ಲ. ಪಾಠ ಹೇಳುವ ಉಪಾಧ್ಯಾಯನಿಗೆ ವಿದ್ಯಾರ್ಥಿಗಳ ಗುಸಗುಸ ಮಾತು ಗದ್ದಲ. ಹಾಡುವವನಿಗೆ ಪಕ್ಕದಲ್ಲಿ ಕುಳಿತು ಓದುವವನದು ಗದ್ದಲ. ಓದುವ ವಿದ್ಯಾರ್ಥಿಗೆ ಸಂಗೀತವೇ ಗದ್ದಲ. ಇನ್ನೂ ಸೂಕ್ಷ್ಮವಾಗಿ ನೋಡುವುದಾದರೆ ಒಬ್ಬನಿಗೆ ಈಗ ಸಂಗೀತವೆನಿಸಿದ್ದು ಇನ್ನೊಂದು ಕ್ಷಣಕ್ಕೆ ಗದ್ದಲವೆನಿಸುತ್ತದೆ.

ಮೇಲಿನ ಪರಿಶೀಲನೆಯಲ್ಲಿ ಗದ್ದಲದ ಕೆಲವು ಸ್ತರಗಳನ್ನು ಮಾತ್ರ ಬಣ್ಣಿಸಿದೆ. ನಿಜವಾಗಿ ಗದ್ದಲದ ಕ್ಷೇತ್ರ ಇನ್ನೂ ಹೆಚ್ಚು ವ್ಯಾಪಕವಾದುದಾಗಿದೆ. ಎತ್ತಿನ ಗಾಡಿಯ ಗಾಲಿಗಳು ಉರುಳುವಾಗ, ಬಸ್ಸುಗಳು ಕಾರುಗಳು ಬುಯ್ ಎಂದು ಓಡಾಡುವಾಗ, ರೈಲು ಧಾವಿಸುವಾಗ, ವಿಮಾನ ಗಾಳಿಯನ್ನು ಕತ್ತರಿಸಿ ಹಾರುವಾಗ, ಅಕ್ಕಿ ಗಿರಣಿಯೋ ಡೈನಮೊ ಯಂತ್ರವೋ ಕೆಲಸಮಾಡುವಾಗ, ವಿದ್ಯುಚ್ಚಾಲಿತ ಗರಗಸಗಳು ದೊಡ್ಡ ದಿಮ್ಮಿಗಳನ್ನು ಕತ್ತರಿಸುವಾಗ, ಕಾಯಿಸಿದ ಕಬ್ಬಿಣವನ್ನು ಕಮ್ಮಾರ ದೊಡ್ಡ ಸುತ್ತಿಗೆಯಿಂದ ಕುಟ್ಟಿ ಹದಮಾಡುವಾಗ ಅದೆಷ್ಟು ಬಗೆಯ ಗದ್ದಲ ಕೇಳಿಬರುತ್ತದೆ. ಗಿರಣಿಗಳಲ್ಲಿ, ವಿದ್ಯುದುತ್ಪಾದನಾ ಕೇಂದ್ರಗಳಲ್ಲಿ ಹಗಲಿರುಳೂ ಸುತ್ತುವ ಬೃಹದ್ ಚಕ್ರಗಳಿಂದ ನಿರಂತರ ಹೊರಬರುವ ದೈತ್ಯಶಬ್ದ ಗದ್ದಲದ ಪರಮಾವಧಿಯನ್ನು ಸೂಚಿಸುತ್ತದೆ.

ಗದ್ದಲ ದಿನೇ ದಿನೇ ಹೆಚ್ಚುತ್ತಿದೆ ಎಂಬುದಕ್ಕೆ ಸಂಕೀರ್ಣಗೊಳ್ಳುತ್ತಿರುವ ನಾಗರಿಕ ಜೀವನವೇ ಸಾಕ್ಷಿಯಾಗಿದೆ. ಇಂಥ ಗದ್ದಲವನ್ನು ನಿವಾರಿಸುವುದು ಸಾಧ್ಯವೆ? ಅಥವಾ ಗದ್ದಲ ನಾಗರಿಕ ಜೀವನದ ಒಂದು ಅನಿವಾರ್ಯ ಅಂಶವೇ? ಮನುಷ್ಯನ ಮನಸ್ಸು ಮತ್ತು ದೇಹದ ಮೇಲೆ ಗದ್ದಲದ ಪರಿಣಾಮವೇನು? ಅಶುದ್ಧವಾದ ನೀರು ಗಾಳಿಗಳಂತೆ ಕರ್ಕಶ ಗದ್ದಲವೂ ಪರಿಸರವನ್ನು ಕೆಡಿಸುವುದಿಲ್ಲವೆ? ಊರು ಕೇರಿಗಳಲ್ಲಿ ಜೀವನ ನಡೆಸುತ್ತಿರುವವರಿಗೆ ಗದ್ದಲವಿಲ್ಲದ ಶಾಂತ ವಾತಾವರಣವನ್ನು ಕಲ್ಪಿಸಿಕೊಡುವುದು ಹೇಗೆ? ಗದ್ದಲದ ಮಧ್ಯೆಯೇ ಕೆಲಸ ಮಾಡುವ ಕಾರ್ಮಿಕರ ಪಾಡೇನು? ಇಂಥ ಪ್ರಶ್ನೆಗಳು ಮನಃಶಾಸ್ತ್ರಜ್ಞರನ್ನು, ವಿಜ್ಞಾನಿಗಳನ್ನು, ಸಮಾಜ ಸುಧಾರಕರನ್ನು ಬಹುಕಾಲದಿಂದ ಪೀಡಿಸುತ್ತಿವೆ. ಕಾಲಾನುಕಾಲಕ್ಕೆ ಗದ್ದಲವನ್ನು ನಿವಾರಿಸುವ ಕೆಲವು ವಿಧಾನಗಳನ್ನು ಅವರು ಸೂಚಿಸಿಯೂ ಇದ್ದಾರೆ. ಇ. ಜೆ. ಬೋರಿಂಗ್, ಜೆ. ಜೆ. ಮಾರ್ಗನ್, ಲೈರ್, ಎಮ್. ಎಸ್. ವೈಟಲಿಸ್ ಮೊದಲಾದವರ ಅಧ್ಯಯನಗಳಿಂದ ಹೊರಪಟ್ಟ ಕೆಲವು ಅಂಶಗಳನ್ನು ಇಲ್ಲಿ ಗಮನಿಸಬಹುದು.

1. ಅನೈಚ್ಛಿಕ ದೈಹಿಕ ಕ್ರಿಯೆಗಳಿಗೆ ಗದ್ದಲ ಅಡ್ಡಿಯಾಗುತ್ತದೆಂಬುದಕ್ಕೆ ಯಾವ ಪ್ರಾಯೋಗಿಕ ಪ್ರಮಾಣವೂ ದೊರೆತಿಲ್ಲ. ಆದರೂ ಬಹು ತೀವ್ರವೂ ನಿರಂತರವೂ ಆದ ಕರ್ಕಶ ಶಬ್ದಗಳಿಂದ ಅನೈಚ್ಛಿಕ ಕ್ರಿಯೆಗಳ ಮೇಲೂ ದುಷ್ಪರಿಣಾಮಗಳುಂಟಾಗುತ್ತವೆಂದು ಭಾವಿಸಬಹುದು.

2. ಗದ್ದಲ ಯಾವ ಪ್ರಮಾಣದ್ದೇ ಇರಲಿ ಅದರಿಂದ ಮಾನಸಿಕ ದೈಹಿಕ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮಗಳು ಇದ್ದೇ ಇವೆ. ಗದ್ದಲವಿದ್ದಾಗ ಮನಸ್ಸು ಚಟುವಟಿಕೆಯಿಂದ ಕೆಲಸ ಮಾಡದು. ಏಕಾಗ್ರತೆ ಕೆಡುತ್ತದೆ. ಕೈ ಓಡುವುದಿಲ್ಲ. ಗದ್ದಲದ ಪ್ರತಿಘಾತವನ್ನು ಮೀರಿ ಕೆಲಸಮಾಡಲು ಮನುಷ್ಯ ಹೆಚ್ಚು ಹೆಚ್ಚು ಹೆಣಗಬೇಕಾಗುತ್ತದೆ.

3. ಓದುವ ಮಕ್ಕಳು, ನರಳುವ ರೋಗಿಗಳು ಗದ್ದಲವನ್ನು ಸಹಿಸರು. ಸೂಕ್ಷ್ಮತರವಾದ ಚಿಂತನೆಗಳಲ್ಲಿ ನಿರತರಾಗುವವರಿಗಂತೂ ಅಲ್ಪಸ್ವಲ್ಪ ಗದ್ದಲವೂ ಹಿಡಿಸದು. ಗ್ರಂಥಾಲಯ, ಶಾಲೆ, ಆಸ್ಪತ್ರೆ ಮೊದಲಾದೆಡೆ ವಾತಾವರಣ ಶಾಂತಿಯುತವಾಗಿರಬೇಕೆಂದು ಹೇಳುವುದು ಈ ಉದ್ದೇಶದಿಂದಲೇ.

4. ಈಗೊಮ್ಮೆ ಆಗೊಮ್ಮೆ ಉಂಟಾಗುವ ಗದ್ದಲದಿಂದ ಹೆಚ್ಚಿನ ಕೆಡುಕಾಗುತ್ತದೆ. ಏಕೆಂದರೆ ಯಾರೂ ಇಂಥ ಆಕಸ್ಮಿಕಗಳಿಗೆ ದೈಹಿಕವಾಗಿ ಮಾನಸಿಕವಾಗಿ

ಸಿದ್ಧರಾಗಿರುವುದಿಲ್ಲ. ಗದ್ದಲ ನಿರಂತರವಾಗಿದ್ದಲ್ಲಿ ಅಭ್ಯಾಸಬಲದಿಂದ ಮನುಷ್ಯ ಸ್ವಲ್ಪ ಮಟ್ಟಿಗೆ ಅದಕ್ಕೆ ಹೊಂದಿಕೊಂಡು ಬಿಡುತ್ತಾನೆ.

ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಊರು ಕೇರಿಗಳ ವಾತಾವರಣ ಗದ್ದಲ ರಹಿತವಾಗಿರುವಂತೆ ನೋಡಿಕೊಳ್ಳಬೇಕಾದದ್ದು ಅಲ್ಲಲ್ಲಿನ ಸರ್ಕಾರಗಳ ಮತ್ತು ಪುರಸಭೆಯವರ ಕರ್ತವ್ಯ. ಬೆಂಗಳೂರು, ಕೋಲ್ಕತ್ತ ಮೊದಲಾದ ದೊಡ್ಡ ನಗರಗಳಲ್ಲಿ ರಾತ್ರಿ ಇಡೀ ಆಗುವ ವಾಹನ ಸಂಚಾರವನ್ನು ಈ ದೃಷ್ಟಿಯಿಂದ ನಿಯಂತ್ರಿಸುವುದು ಅಗತ್ಯ. ಜರ್ಮನಿಯ ಕೆಲವು ಭಾಗಗಳಲ್ಲಿ ಈ ಪ್ರಯೋಗ ನಡೆಸಿದ್ದಾರೆ. ಪ್ರಚಾರಕ್ಕಾಗಿ ಧ್ವನಿವರ್ಧಕಗಳ ಬಳಕೆ, ಸಂಗೀತದ ಹೆಸರಿನಲ್ಲಿ ರೇಡಿಯೋಗಳನ್ನು ಕೂಗಿಸುವುದು– ಇಂಥ ಪದ್ಧತಿಗಳು ರದ್ದಾದರೊಳ್ಳೆಯದು. ಜನವಸತಿಗಳ ಸನಿಹದಲ್ಲೇ ಸಿನಿಮಾ, ನಾಟಕ, ಮಂದಿರಗಳು, ಕಾರ್ಖಾನೆಗಳು, ಮುದ್ರಣಾಲಯಗಳು, ಕಮ್ಮಾರನ ಕುಲುಮೆಗಳು– ಇತ್ಯಾದಿ ಇರಬಾರದು.

ಗಿರಣಿ, ಕಾರ್ಖಾನೆ, ಸರ್ಕಾರಿ ಕಚೇರಿ ಮುಂತಾದೆಡೆಗಳಲ್ಲಿ ಗದ್ದಲ ನಿಯಂತ್ರಣದಿಂದ ಕೆಲವು ಪ್ರಯೋಜನಗಳನ್ನು ಪಡೆಯಲಾಗಿದೆ. ಕಾರ್ಮಿಕರಿಗೆ ತಲಪುವ ಬಹಳ ಗದ್ದಲ ಯಂತ್ರಗಳಿಂದ ನೇರವಾಗಿ ಬಂದದ್ದಲ್ಲ, ಗೋಡೆ ಮತ್ತು ಒಳ ಮಾಳಿಗೆಯಿಂದ ಪ್ರತಿಧ್ವನಿತವಾದದ್ದು. ಆದಕಾರಣ ಗೋಡೆಗಳನ್ನು ಸಣ್ಣರಂಧ್ರಗಳಿರುವ ವಸ್ತುವಿನಿಂದ ಮುಚ್ಚಿದರೆ, ಶಬ್ದ ಈ ಸಣ್ಣ ಪುಟ್ಟ ರಂಧ್ರಗಳ ಹೊಕ್ಕು ಹೊರಗೆ ಬರಲಾರದು. ಈ ವಿಧಾನದಿಂದ ಅನೇಕ ಕಾರ್ಖಾನೆಗಳಲ್ಲಿ ಗದ್ದಲವನ್ನು ನಿಯಂತ್ರಿಸಲಾಗಿದೆ. ಈ ವಿಧಾನದಿಂದ ಒಂದು ಟೆಲಿಗ್ರಾಫ್ ಕಚೇರಿಯಲ್ಲಿಯ ದೋಷಗಳು ಶೇ.42 ಕಡಿಮೆಯಾದುವು. ಲೆಕ್ಕಪತ್ರದ ಇಲಾಖೆಯಲ್ಲಿ ಶೇ.24 ದೋಷಗಳು ಕಡಿಮೆಯಾದವು. ಒಂದು ಉಣ್ಣೆ ಗಿರಣಿಯ ನೇಯುವ ಇಲಾಖೆಯಲ್ಲಿ ಶೇಕಡ ಶೇ.3 ಉತ್ಪಾದನೆ ಹೆಚ್ಚಿತು. ಬೆರಳಚ್ಚು ವಿಭಾಗವೊಂದರಲ್ಲಿ ವೇಗ ಶೇ.10 ರಷ್ಟು ಹೆಚ್ಚಿತ್ತಲ್ಲದೆ ದೋಷಗಳು ಶೇ.30 ಕಡಿಮೆಯಾದುವು. (ಎಚ್.ಎಚ್.)

**ಗದ್ದಿಗೆ ಮರುಳಸಿದ್ಧ :** ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕುಪ್ಪೂರು ಗದ್ದಿಗೆಯಲ್ಲಿ ಸಮಾಧಿಸ್ಥನಾಗಿರುವ ಮಹಾತ್ಮ ಮರುಳ ಸಿದ್ದನನ್ನು ಈ ಹೆಸರಿನಿಂದ ಕರೆಯುತ್ತಾರೆ. ಈತ ಸು. 350 ವರ್ಷಗಳಷ್ಟು ಪ್ರಾಚೀನನೆಂದು ತಿಳಿದು ಬಂದಿದೆ. ಈತ ಈ ಭಾಗದಲ್ಲಿ ಪ್ರಸಿದ್ಧನಾಗಿ ಅನೇಕ ಪವಾಡಗಳನ್ನು ಮೆರೆದನೆಂದು ಹೇಳಲಾಗಿದೆ. ಈತನನ್ನು ಕುರಿತು ಹಲವಾರು ಕೃತಿಗಳನ್ನು ರಚಿಸಿ ಆ ಭಾಗದಲ್ಲಿ ಈಗಲೂ ಹಾಡುತ್ತಾರೆ. ವೀರಶೈವ ಮತ ಚರಿತ್ರೆಯಲ್ಲಿ ಪ್ರಸಿದ್ಧರಾದ ಆಚಾರ್ಯ ಮರುಳುಸಿದ್ಧ, ಹೂಲಿಯ ಮರುಳುಸಿದ್ಧ, ಉಜ್ಜಯನಿಯ ಮರುಳಸಿದ್ಧ ಇವರುಗಳಿಂದ ಈತ ಭಿನ್ನನೆಂದು ಇತಿಹಾಸಜ್ಞರ ಅಭಿಪ್ರಾಯ. (ಬಿ.ಎಸ್.)

**ಗದ್ಯ :** ಗದ್ಯದ ಸ್ವರೂಪವನ್ನು ಇಲ್ಲಿ ಪ್ರಸ್ತಾಪಿಸಿದೆ. ಗದ್ಯ ಸಾಹಿತ್ಯದ ಉಗಮ, ವ್ಯಾಪ್ತಿಗಳನ್ನು ತಿಳಿಯಲು **(ನೋಡಿ– ಗದ್ಯಸಾಹಿತ್ಯ)**.

ಪಾಶ್ಚಾತ್ಯ ವಿದ್ವಾಂಸವರ್ಗಕ್ಕೆ ಅನೇಕ ಶತಮಾನಗಳಿಂದ ಪದ್ಯವೆಂದರೇನು ಗದ್ಯವೆಂದರೇನು ಎಂಬುದು ಜಟಿಲ ಸಮಸ್ಯೆಯಾಗಿದೆ. ಅದನ್ನು ಬಿಡಿಸುವುದು ಹೋಗಲಿ, ಅದರ ವಿಚಾರವಾಗಿ ಅಷ್ಟಿಷ್ಟು ತೃಪ್ತಿಕರವಾಗಿ ಬರೆಯುವುದು ಕೂಡ ಅಸಾಧ್ಯವೆಂದು ತೋರಿಬಂದು, ಹಲವರು ಹತಾಶರಾಗಿದ್ದಾರೆ. ಗೊಂದಲಕ್ಕೆ ಮುಖ್ಯ ಕಾರಣ ನಾಲ್ಕು ರೂಪಕ್ಕೆ ಮೂರೇ ನಾಮ ಇರುವ ನಿಜಾಂಶ. ಅದನ್ನು 19ನೆಯ ಶತಮಾನದಲ್ಲೇ ಒಬ್ಬ ಲಾಕ್ಷಣಿಕ ಎತ್ತಿ ತೋರಿಸಿದ. ಈಚಿನ ಕೆಲವರಿಂದಲೂ ಅದಕ್ಕೆ ಅವಧಾರಣೆ ಸಿಕ್ಕಿತು. ಆದರೂ ಆ ವಿಷಯವನ್ನು ಶಾಸ್ತ್ರೀಯವಾಗಿ ವಿಚಾರಿಸಿ, ಖಚಿತಾರ್ಥದ ಪಾರಿಭಾಷಿಕ ಪದಗಳನ್ನು ತಯಾರಿಸಿ, ಅವನ್ನು ಚೆಚ್ಚರದಿಂದ ಉಪಯೋಗಿಸುತ್ತ ಹೋಗಿ, ಅಸ್ಪಷ್ಟ ಚರ್ಚೆಯ ಕೆಟ್ಟ ಪ್ರಭಾವವನ್ನು ಕಡಿಮೆ ಮಾಡುವ ಸಾರಸ್ವತ ವ್ಯಾಪಾರಕ್ಕೆ ಪ್ರಬಲರಾದವರೂ ಮನಗೊಟ್ಟಿಲ್ಲ. ಪೊಎಟ್ರಿ ಎಂಬ ಶಬ್ದದ ಜೊತೆಯಲ್ಲಿ ವರ್ಸ್ ಎಂಬುದು ನಡೆದಾಡುತ್ತದೆ; ಪ್ರೋಸ್ ಎಂಬ ಶಬ್ದವಾದರೂ ಒಂಟಿ. ಅದು ಪೊಎಟ್ರಿಯ ಎದುರಿಗೂ ನಿಲ್ಲಬೇಕು, ವರ್ಸ್ ಎದುರಿಗೂ ನಿಲ್ಲಬೇಕು. ಅಲ್ಲದೆ, ಪೊಎಟ್ರಿಯೇ ಕಾವ್ಯ. ಪ್ರೋಸ್ ಅಲ್ಲ ಎಂಬ ಅಭಿಪ್ರಾಯವೂ ಮನಸ್ಸನ್ನು ಪ್ರವೇಶಿಸಿ ಭ್ರಾಂತಿಯನ್ನು ಹೆಚ್ಚಿಸುತ್ತಿದೆ. ಪ್ರೋಸ್ ನೆಲದ ಮೇಲೆ ಹೆಜ್ಜೆಯಿಕ್ಕುತ್ತ ಹೋಗುವ ಭಾಷೆ; ಪೊಎಟ್ರಿ ಆದರೊ ರಥಾರೂಢವಾಗಿ ದಿಬ್ಬಣ ತೆರಳುವ ಅಥವಾ ಲಂಘಿಸಿ ಬಾನಿಗೇರುವ ಭಾಷೆ ಎಂಬ ತಾತ್ಪರ್ಯದ ವಾಕ್ಯಗಳು ಹೇರಳವಾಗಿವೆ.

ಭಾರತೀಯರಲ್ಲಿ ಮೂರು ರೂಪ, ಮೂರು ನಾಮಗಳು ಇದ್ದದ್ದರಿಂದ ಈ ವಿಷಯ ಎಂದೂ ನಿಷ್ಕರ್ಷಿತವಾಗಿ ವಾದವಿವಾದಕ್ಕೆ ಆಸ್ಪದ ಬಲುಮಟ್ಟಿಗೆ ಇಲ್ಲದಂತಾಯಿತು. ಶಬ್ದಾಕ್ಷರಗಳ ಜೋಡಣೆಯ ಎರಡು ಪ್ರಮುಖ ವಿಧಾನಗಳಿಗೆ ಪದ್ಯ, ಗದ್ಯವೆಂಬುವು ಪಾರಿಭಾಷಿಕ ಅಂಕಿತ. ಛಂದೋಬದ್ಧವಾದ ನುಡಿಗಟ್ಟು ಪದ್ಯ, ಅಲ್ಲದ್ದು ಗದ್ಯ. ಕವಿಯ ಕರ್ಮವಾದ ಕಾವ್ಯ ಪದ್ಯವನ್ನೂ ಬಳಸಿಕೊಳ್ಳುತ್ತದೆ, ಗದ್ಯವನ್ನೂ ಬಳಸಿಕೊಳ್ಳುತ್ತದೆ. ಒಂದೇ ಕಾವ್ಯದಲ್ಲಿ ಎರಡನ್ನೂ ಕಾಣುವುದು ಸಾಧ್ಯ. ಕೇವಲ ಅರ್ಥ ಪ್ರಮುಖವಾದ ವಚನವಿನ್ಯಾಸದಿಂದ ಕೂಡಿದ ಶಾಸ್ತ್ರ, ನಿಘಂಟು ಇತ್ಯಾದಿ ಪ್ರಬಂಧಗಳು ನಿಜವಾಗಿ ಗದ್ಯಗ್ರಂಥಗಳಾದರೂ ಅವನ್ನು ಪದ್ಯರೂಪದಲ್ಲಿ ಬರೆಯುವುದಕ್ಕೆ ಆಕ್ಷೇಪವಿಲ್ಲ. ಎಂದರೆ, ಆ ಪದ್ಯದಿಂದ ವಿಷಯಕ್ಕೆ ಉತ್ಕರ್ಷವಿಲ್ಲ; ವಿಷಯವನ್ನು ನೆನಪಿನಲ್ಲಿ ಇಟ್ಟುಕೊಳ್ಳುದಕ್ಕೆ ಹೆಚ್ಚು ಸೌಕರ್ಯ, ಅಷ್ಟೆ.

ಇಷ್ಟು ಶುಚಿಯಾಗಿ ಇಷ್ಟು ಸುಲಭವಾಗಿ ಇಷ್ಟು ಸರಳವಾಗಿ ವಿಷಯವನ್ನು ನಿಶ್ಚಯಿಸಿಬಿಟ್ಟರೆ, ಎಲ್ಲವನ್ನೂ ಸಂಕೀರ್ಣಗೊಳಿಸುವ ಚಿತ್ತದವರಿಗೂ ಜಿಜ್ಞಾಸೆ ಬಹುಮುಖವಾಗಬೇಕೆಂದು ಹಾತೊರೆಯುವವರಿಗೂ ಪಾಶ್ಚಾತ್ಯ ಕುಶಾಗ್ರಮತಿಗಳಿಗೂ ಸಮಾಧಾನ ಉಂಟಾದೀತೆ? ಪ್ರಶ್ನೆಯ ಮೇಲೆ ಪ್ರಶ್ನೆಯನ್ನು ಅವರು ಕೇಳುತ್ತಲೇ ಇದ್ದಾರೆ. ಉತ್ತರವನ್ನು ಹಿಂಬಾಲಿಸಿಕೊಂಡು ಉತ್ತರ ಬಂದಿದ್ದರೂ ಎಲ್ಲವೂ ಅವರಿಗೆ ಅಯುಕ್ತವಾಗಿ ತೋರಿವೆ. ಯಾವುದು ಕಾವ್ಯ? ಪದ್ಯದಲ್ಲಿ ಬರೆದದ್ದೆಲ್ಲ ಕಾವ್ಯವೆ? ಗದ್ಯದಲ್ಲಿ ಬರೆದದ್ದೂ ಕಾವ್ಯವಾಗಬಹುದೆ? ಗದ್ಯವೂ ಲಯಾತ್ಮಕವಲ್ಲವೆ? ಪದ್ಯಕ್ಕಿರುವಂತೆ ಅಲ್ಲದಿದ್ದರೂ ಅದರದ್ದೇ ಆದ ಛಂದಸ್ಸು ಗದ್ಯಕ್ಕೇಕಿರಬಾರದು? ಪದ್ಯ ಸಾಧಿಸುವ ಸಾಹಸವೇನು? ಗದ್ಯ ನೆರವೇರಿಸುವ ಕಾರ್ಯ ಯಾವುದು? ಕ್ರೈಸ್ತ ಪವಿತ್ರ ಗ್ರಂಥ, ಪ್ಲೇಟೋವಿನ ಸಂವಾದಗಳು ಗದ್ಯದಲ್ಲಿದ್ದರೂ ಎಷ್ಟೋ ಪದ್ಯಕಾವ್ಯಗಳಿಗಿಂತ ಮೇಲ್ಮಟ್ಟದವಲ್ಲವೆ? ಹಾಗಾದರೆ ಪದ್ಯದಲ್ಲಿ ಏನು ಹೆಚ್ಚುಗಾರಿಕೆ ಉಳಿತಿದೆ?

ಗದ್ಯ ಸಾಧಾರಣ, ಕಾವ್ಯ ಅಸಾಧಾರಣವೆಂದು ನಿರ್ಧಾರ ಹೇಳಿ, ಎರಡನ್ನೂ ವಿಂಗಡಿಸಿ ಇಡಬಹುದೆಂದು ಅನೇಕರು ಭಾವಿಸಿದರು. ಇಲ್ಲಿ ಪದ್ಯ ಹಿಂದಕ್ಕೆ ಸರಿದಿರುವ ಸಂಗತಿಯನ್ನು ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಕಾವ್ಯಕ್ಕೆ ಕಾವ್ಯತ್ವವನ್ನು ತಂದುಕೊಡುವ ಮೂಲಾಂಶ ಅಸಾಧಾರಣತೆ ಎಂದಂತಾಯಿತು. ಇರಲಿ. ಆ ಮೂಲಾಂಶ ಗಮನೀಯವಾದ ಪ್ರಮಾಣದಲ್ಲಿ ಗದ್ಯದಲ್ಲೂ ಕಂಡುಬಂದರೆ ಅದೂ ಕಾವ್ಯವೇ ಆಗುತ್ತದೆ ಅಲ್ಲವೆ?. ತರ್ಕಸಮ್ಮತವಾದ ಈ ಅನುಮೇಯವನ್ನು ಸಕಲರೂ ಸ್ವೀಕರಿಸಬೇಕಾಯಿತು. ಅಲ್ಲೊಬ್ಬ ಇಲ್ಲೊಬ್ಬ ವಿಮರ್ಶಕನಿಗೆ ಅದರಲ್ಲಿ ಏನೊ ಆಭಾಸ. ಮಬ್ಬುಮಬ್ಬಾಗಿ ಕಾಣುತ್ತಿದೆಯೆಂದು ಭಾಸವಾದರೂ ತಲೆಮಾರು ತಲೆಮಾರಿನ ಚರ್ಚೆಯ ಪರಿಣಾಮವಾಗಿ ಕುದುರಿನಿಂತ ಅಭಿಪ್ರಾಯಗಳು ಮೂರು: ಪದ್ಯ (ವರ್ಸ್) ಕಾವ್ಯಕ್ಕೆ ಒಂದು ಭೂಷಣವಾದರೂ ಕಾವ್ಯದ ಮೂಲಕಾರಣವಲ್ಲ; ಕೆಲವು ಗದ್ಯವನ್ನು ಕಾವ್ಯವೆನ್ನದೇ ಗತ್ಯಂತರವಿಲ್ಲ; ಕಾವ್ಯದ ಕಾವ್ಯತ್ವವನ್ನು ಬೇರೆ ಅಂಶದಲ್ಲಿ ಗುರುತಿಸತಕ್ಕದ್ದು. ಅಂತೂ, ಕಾವ್ಯ ಹೇಗೋ ಅಸಾಧಾರಣವೆಂಬುದು ಉಳಿದೇ ಉಳಿಯಿತು; ಹಲವರಲ್ಲಿ ಅದು ಶೋಧನೆಗೆ ನಿಲುಕದ ರಹಸ್ಯವೆಂಬ ಮೂಢನಂಬಿಕೆ ಬೇರೂರಿತು.

ಅಪೂರ್ವವಾದ ಸಾಲಂಕೃತ ವಾಗ್ದೋರಣೆಯಿಂದ ಕಾವ್ಯ ಹುಟ್ಟುತ್ತದೆ; ಮಹೋನ್ನತ ಶೈಲಿಯೇ (ದಿ ಗ್ರ್ಯಾಂಡ್ ಸ್ಟೈಲ್) ಕಾವ್ಯದ ಪ್ರಧಾನ ಲಕ್ಷಣವೆಂಬ ತತ್ತ್ವ ಪ್ರಾಚೀನ ರೋಮನರ ಕಾಲದಿಂದ ಮಧ್ಯಯುಗ ಪೂರ್ತ ಮಾನ್ಯತೆ ಪಡೆದಿತ್ತು. ಈಗಲೂ ಆ ಭಾವನೆಯ ಪ್ರಭಾವ ಅಳಿಸಿ ಹೋಗಿಲ್ಲ. ಆದರೂ ಶೈಲಿಯನ್ನು ಕಾವ್ಯದ ಆತ್ಮಕ್ಕೆ ಸಂಕೇತವಾಗಿ ಭಾವಿಸುವುದು ಸಕ್ರಮವಲ್ಲವೆಂದು ದೃಢಬುದ್ಧಿಯವರಿಗೆ ಅರಿವಾಯಿತು. ಪದದೊಡನೆ ಪದವನ್ನು ಕೂಡಿಸುವ ಬಾಹ್ಯ ವ್ಯಾಪಾರಕ್ಕೆ ಎಷ್ಟೇ ಗಾಢವಾದ ವ್ಯಂಜಕತೆ ಇದ್ದರೂ ಅದು ಹೆಚ್ಚು ಕಡಿಮೆ ಕಾವ್ಯದ ಶರೀರಕ್ಕೆ ಸಂಬಂಧಿಸಿದುದು, ಕಾವ್ಯದ ಆಂತರ್ಯವನ್ನೂ ತಿರುಳನ್ನೂ ನಿರ್ದೇಶಿಸುವ ಮಹತ್ಕಾರ್ಯ ಅದರಿಂದ ಆಗಲಾರದು. ಸ್ಥೂಲವಾಗಿ ಕಾವ್ಯ ಶೈಲಿ, ಶಾಸ್ತ್ರಶೈಲಿಗಳನ್ನು ಪ್ರತ್ಯೇಕಿಸಬಹುದು. ಮೂಲತಃ ಅವುಗಳ ಉದ್ದೇಶ, ವಿಧಾನ, ಪರಿಣಾಮಗಳು ಬೇರೆ ಬೇರೆ. ಶೈಲಿಯ ಮೂಲಕ ಗದ್ಯಕಾವ್ಯ ಪದ್ಯ ಕಾವ್ಯಗಳನ್ನು ಸ್ವಲ್ಪಮಟ್ಟಿಗೆ ವಿಂಗಡಿಸಬಹುದಾದರೂ ಕಾವ್ಯಕ್ಕೆ ಶೈಲಿಯೂ ಒಂದು ಸಾಧನವಾಯಿತೇ ಹೊರತು ಕಾವ್ಯತ್ವಕ್ಕೆ ಅದು ಇನ್ನೊಂದು ಹೆಸರಾಗಲಿಲ್ಲ.

ಪದ್ಯ, ಗದ್ಯ, ಕಾವ್ಯ ಎಂಬ ಶಬ್ದಗಳನ್ನು ಹೆಚ್ಚು ಸಂದೇಹಕ್ಕೆ ಅವಕಾಶವೀಯದೇ ಉಪಯೋಗಿಸುತ್ತಿದ್ದ ಸಮಯದಲ್ಲಿ, ಕಾವ್ಯಕ್ಕೆ ಮೀಸಲಾದ ಸಹಜ ಪದ ಕೋಶವಿದೆಯಾಗಿ ಆ ಪದಕೋಶ ಸಂಭಾಷಣೆಯಲ್ಲಿ ಮತ್ತು ಗದ್ಯದಲ್ಲಿ ಬರಕೂಡದು–ಎಂಬ ಅಭಿಮತವಿತ್ತು. ಅಲ್ಪಸ್ವಲ್ಪ ಸತ್ಯಾಂಶದ ಮೇಲೆ ನಿಂತ ಅಭಿಮತ ಅದು. ಕಾವ್ಯವೇ ಆದರೂ ಗದ್ಯ ಹಲಕೆಲವು ಪದಗಳ ಗೋಜಿಗೆ ಹೋಗುವುದಿಲ್ಲ; ಅವು ಪದ್ಯಕ್ಕೆ ಅನುರೂಪವಾಗಿ ಕಂಡುಬರುತ್ತವೆ; ಗದ್ಯ ಅವನ್ನು ಉಪಯೋಗಿಸಿದರೆ ಕಿವಿಗೆ ಅಹಿತವಾಗುತ್ತದೆ; ಕಿವಿಗೆ ಮಧುರವಾಗಿ ಕೇಳಿಸಿದರೂ ಅವುಗಳಿಂದ ಏನೊ ರಸಭಂಗ ಆದಂತೆ ತೋರುವುದು ನಿಶ್ಚಯ. ಹೀಗಿದ್ದರೂ ಕೇವಲ ಪದಗಳನ್ನು ಗದ್ಯ ಪದ್ಯಕ್ಕೆ ಒರೆಗಲ್ಲಾಗಿ ಸನ್ಮಾನಿಸುವುದು ಸಮರ್ಪಕವಲ್ಲ. ರೊಮ್ಯಾಂಟಿಕ್ ಚಳವಳಿ ನಡೆದಮೇಲೆ, ಮಾತುಗಳನ್ನು ಧಾರಾಳವಾಗಿ

ಬಳಸಿಕೊಳ್ಳುವ ಸ್ವಾತಂತ್ರ್ಯ ಸಾಹಿತಿಗೆ ಅತ್ಯಗತ್ಯವೆಂಬುದನ್ನೂ ವಿದ್ವಾಂಸರಾದವರು ಅಲಕ್ಷಿಸಿಲ್ಲ. ನವ್ಯಕವಿಗಳಂತೂ ಗ್ರಾಮ್ಯ, ಒರಟು, ಅಶ್ಲೀಲ, ಅನ್ಯದೇಶೀಯ, ಯಂತ್ರತಂತ್ರದ ಪರಿಭಾಷೆ ಎಲ್ಲವನ್ನೂ ನಿರ್ವಂಚನೆಯಿಂದ ಆಡಿಬಿಟ್ಟಿದ್ದಾರೆ.

ಎಂದರೆ, ಪದ್ಯಕ್ಕೂ ಗದ್ಯಕ್ಕೂ ಅಂತರವೇ ಇಲ್ಲವೆ? ಒಂದರಲ್ಲಿ ಇರುವ ಕಾವ್ಯವನ್ನು ಇನ್ನೊಂದಕ್ಕೆ ಬದಲಾಯಿಸಿದರೆ ಎರಡೂ ಒಂದೇ ತೆರದ ರಸಾಸ್ವಾದವನ್ನು ಒದಗಿಸ ಬೇಕಲ್ಲವೆ? ಕವಿ ತನ್ನ ಇಷ್ಟಬಂದಂತೆ ಅದನ್ನೋ ಇದನ್ನೋ ಕೈಹಿಡಿಯಬಹುದಲ್ಲವೆ? ಇದನ್ನು ಯಾರೂ ಒಪ್ಪಲಾರರು. ಹಾಗಾದರೆ ಎಲ್ಲಿದೆ ವ್ಯತ್ಯಾಸ? ಗದ್ಯಕ್ಕಿಂತ ಪದ್ಯ ಹೆಚ್ಚು ಸಂಕ್ಷಿಪ್ತ, ಹೆಚ್ಚು ಬಲಿಷ್ಠ, ಹೆಚ್ಚು ಧ್ವನಿಯುಕ್ತ, ಹೆಚ್ಚು ಸುಂದರ–ಎಂದಿದ್ದಾರೆ. ರಾಗಾವೇಶವೂ ವಿಭಾವನೆಯ ತೀಕ್ಷ್ಣತೆಯೂ ಒಂದು ಮಟ್ಟವನ್ನು ಮೀರಿದರೆ ಆಗ ಭಾವಾರ್ಥ ನಿರೂಪಣೆಗೆ ಪದ್ಯವೇ ಉಚಿತವೆಂದೂ ನುಡಿದಿದ್ದಾರೆ. ಹೀಗೆ ಸೂತ್ರ ಹೇಳುವ ಅಲಂಕಾರಶಾಸ್ತ್ರಜ್ಞರೂ ಎರಡರ ನಡುವೆ ಇರುವುದು ಭೇದಿಸಲಾಗದ ಕಲ್ಲುಗೋಡೆಯಲ್ಲ, ಆಚೆ ಈಚೆ ಎತ್ತಿ ಇಡಬಲ್ಲ ಬಿದಿರು ಬೇಲಿ–ಎಂಬುದಕ್ಕೆ ಸಮ್ಮತಿ ಸೂಚಿಸಿದ್ದಾರೆ.

ಛಂದಸ್ಸು, ಶೈಲಿ, ಶಬ್ದಪುಂಜ–ಮೊದಲಾದುವನ್ನು ಕೈಬಿಟ್ಟಮೇಲೆ, ಕಾವ್ಯಕ್ಕೆ ಕಾವ್ಯತ್ವವನ್ನು ಅನುಗೂಡಿಸುವ ಅಂಶ ಯಾವುದು? ಇದನ್ನು ಕುರಿತ ಮೀಮಾಂಸೆ 19ನೆಯ ಶತಮಾನದ ಎರಡನೆಯ ಅರ್ಧದಲ್ಲಿ ಬೆಳೆಯುತ್ತ ಬಂತು. 20ನೆಯ ಶತಮಾನದಲ್ಲಿ ಅದು ಇನ್ನೂ ಹೆಚ್ಚಾಗಿ, ಮನಶಾಸ್ತ್ರದ ವಿಕಾಸದಿಂದ ಪುಷ್ಟಿಗೊಂಡು, ಗಹನವಾಯಿತು.

ಕವಿ ಮಾಡುವುದು ವಿಶಿಷ್ಟವಾದೊಂದು ಕರ್ಮ; ಅದು ಒಂದು ಬಗೆಯ ಅನುಕರಣೆ ಎಂಬ ಸಿದ್ಧಾಂತ ಪ್ರಾಚೀನ ಗ್ರೀಕರ ಕಾಲದಿಂದ ನಡೆದು ಬಂದು, ಮೆಚ್ಚಿಕೆಗೆ ಪಾತ್ರವಾಗಿತ್ತು. ಅದಕ್ಕೆ ಟಿಪ್ಪಣಿಯಾಗಿ, ಕಾವ್ಯ ನಮಗೆ ಕೊಡುವುದು ವಾಸ್ತವಿಕತೆಯನ್ನಲ್ಲ, ಅದರ ಹೋಲುವೆಯನ್ನು; ಆದ್ದರಿಂದ ಕಲ್ಪಿತಕಥೆಯೇ (ಫಿಕ್ಷನ್) ಕಾವ್ಯದ ಸಾರಸರ್ವಸ್ವ ಎಂಬ ಅನುಸಿದ್ಧಾಂತವೂ ನಡೆದುಬಂತು. ಕವಿಯ ತನ್ನತನದ ಸೃಷ್ಟಿಕಾರ್ಯವನ್ನು ಅನುಕರಣೆಯೆನ್ನುವುದೂ ನಿಜಕ್ಕಿಂತ ನಿಜವೆಂಬುದು ಪ್ರಭಾವ ಬೀರುವ ಕಾವ್ಯ ವಸ್ತುವನ್ನು ಮಿಥ್ಯಾ ಕಲ್ಪನೆಯೆನ್ನುವುದೂ ಸತ್ಯಕ್ಕೆ ದೂರವೆಂದು ನಿಸ್ಸಂದೇಹ. ಕವಿ ಎಸಗುವುದು ಅನುಕರಣವಲ್ಲ, ಪ್ರತಿಚಿತ್ರಣ ಎಂದು ನಿಶ್ಚಯಿಸಿದ್ದ ಕಾಲವಿತ್ತು. ಮಾನವನಿಗೆ ಆದರ್ಶವಾಗಬಲ್ಲ ವ್ಯಕ್ತಿಗಳನ್ನೂ ಧ್ಯೇಯಗಳನ್ನೂ ಪ್ರತಿಬಿಂಬಿಸಿ ಕಾವ್ಯ ಲೋಕೋಪಕಾರ ಮಾಡುತ್ತದೆ ಎಂಬ ನಂಬಿಕೆಯಿತ್ತು. ಕುರೂಪ ಕೀಳ್ತನ ಕೊಳಕುಗಳೂ ಕಾವ್ಯದಲ್ಲಿ ಪ್ರತಿಪಾದಿತವಾಗತೊಡಗಿದ ತರುವಾಯ, ಪ್ರತಿಚಿತ್ರಣವೆಂಬ ವಿವರಣೆಗೆ ಧಕ್ಕೆ ಉಂಟಾಯಿತು.

ಭಾವ, ಭಾವನೆಗಳನ್ನು ಕಾವ್ಯ ಹೊರಗೆಡಹುತ್ತದೆ ಎಂಬುದು ಸರ್ವರಿಗೂ ವೇದ್ಯವಾದ ಸಂಗತಿ. ಅದನ್ನು ಮನನಗೈದು ವಾಕ್ಯವನ್ನು ಹಿಂದುಮುಂದಾಗಿ ತಿರುಗಿಸಿ, ಕ್ರೋಚೆ ಭಾವಪ್ರದರ್ಶನ ಅಥವಾ ಅಭಿವ್ಯಕ್ತಿಯೇ ಕಾವ್ಯ ಎಂದು ಘೋಷಿಸಿದ. ಎಂದರೆ ಅಭಿವ್ಯಂಜಕತೆ ಸಾಕಷ್ಟು ತೀಕ್ಷ್ಣವಾಗಿರಬೇಕು. ಆದರೆ ಆ ತತ್ತ್ವವನ್ನು ವಿವರಿಸುವಾಗ ಆತನೂ ಆತನ ವ್ಯಾಖ್ಯಾನಕಾರರೂ ಪ್ರಕಾಶನವೆಂಬ ವ್ಯವಹಾರಕ್ಕಿಂತಲೂ ಪ್ರಕಾಶಿತ ಪದಾರ್ಥದ ಮೇಲೆ ತಮ್ಮ ಲಕ್ಷ್ಯವನ್ನು ಹೆಚ್ಚು ಹೆಚ್ಚಾಗಿ ಇಡುತ್ತ ಹೋದರು (**ನೋಡಿ– ಕ್ರೋಚೆ, ಬೆನೆಡೆಟೋ**).

ಐ.ಎ.ರಿಚರ್ಡ್ಸ್ ಮೊದಲಾದವರು ಅಭಿವ್ಯಕ್ತಿಯನ್ನು ಮುಂದಣ ಸ್ಥಾನಕ್ಕೆ ತಂದು ಕೂರಿಸಿದ್ದಾರೆ. ಗಂಭೀರವೂ ಸಂಪೂರ್ಣವೂ ಅನ್ಯೋನ್ಯವೂ ಆದ ಅಭಿವ್ಯಕ್ತಿಯಿಂದ ಉತ್ಪತ್ತಿಯಾಗುತ್ತದೆ, ಕಾವ್ಯ. ಗದ್ಯವೂ ಅಭಿವ್ಯಕ್ತಿಶಕ್ತಿಯುಳ್ಳದ್ದೇ. ಆದರೆ ಅದರ ಅಭಿವ್ಯಕ್ತಿ ದಪ್ಪದಪ್ಪ, ವಿವರ ರಹಿತ, ಅಸ್ಪಷ್ಟ, ಒರಟೊರಟು. ಕಾವ್ಯಕ್ಕಾದರೂ ಅದರ ಬಿಗಿ ಬಿಕ್ಕಟ್ಟು ಕಡುಪು ದ್ಯೋತಕಗಳಿಂದ ನಿಕಟ ಪರಿಚಯವನ್ನು ಏರ್ಪಡಿಸುವ ಶಕ್ತಿಯುಂಟು. ಇಲ್ಲಿಯೂ ವ್ಯಾಖ್ಯಾನಕಾರರು ಅಭಿವ್ಯಕ್ತಿ ಕ್ರಮಕ್ಕಿಂತಲೂ ತಿಳಿಸುವ ವಿಷಯದ ಕಡೆಗೆ ಚಿತ್ತವನ್ನು ಒತ್ತರಿಸಿ, ಅಪ್ರಸಂಗಕ್ಕೆ ಎಡೆಯಿತ್ತಿದ್ದಾರೆ.

ಕೆಲವು ನವೀನರು ಇನ್ನೊಂದು ಮತವನ್ನು ಸಾರಿದ್ದಾರೆ. ಅದರಂತೆ ಒಂದೊಂದು ವಾಕ್ಯವೂ ಒಂದೊಂದು ಸಲಕ್ಷಣ ಸೃಷ್ಟಿ; ಅದರದ್ದೇ ಆದ ಅಸ್ತಿತ್ವವನ್ನು ಬಗೆದು ತೃಪ್ತರಾಗಬೇಕೇ ವಿನಾ ಮತ್ತಾವುದನ್ನೂ ಅದರಿಂದ ನಿರೀಕ್ಷಿಸಲಾಗದು. ಅದರ ಸಾಮೀಪ್ಯದಿಂದ ನಮಗೆ ಒಂದು ಅನೂನ ಅನುಭವ ಲಭ್ಯವಾಗುತ್ತದೆ. ಅಷ್ಟು ಸಾಲದೆ, ಸಾಹಿತ್ಯ ವ್ಯಾಸಂಗಕ್ಕೆ? ಹೀಗೆ, ಗದ್ಯ ಪದ್ಯಗಳನ್ನು ವಿಂಗಡಿಸಲು ಹೊರಟ ಎಷ್ಟೋ ಲೇಖನಗಳು ಕ್ಷಿಪ್ರದಲ್ಲಿ ಕಾವ್ಯ ಶಾಸ್ತ್ರಗಳ ವ್ಯತ್ಯಾಸವನ್ನು ಕುರಿತ ನಿಬಂಧಗಳಾಗಿ ಬಿಡುತ್ತವೆ. ಆ ವ್ಯತ್ಯಾಸ ಸುವ್ಯಕ್ತವಾಗಿದೆ: ಒಂದು ರಾಗಪ್ರಧಾನವಾದದ್ದು, ಇನ್ನೊಂದು ಬುದ್ಧಿಪ್ರಧಾನವಾದದ್ದು; ಒಂದರಲ್ಲಿ ವಿಭಾವನೆಯ ಲೀಲೆಯಿದೆ, ಇನ್ನೊಂದರಲ್ಲಿ ತರ್ಕದ ನಡೆದಾಟವಿದೆ; ಒಂದರಿಂದ ನಮಗೆ ಪರಿತೋಷ, ಇನ್ನೊಂದರಿಂದ ಜ್ಞಾನಾರ್ಜನೆ. ಗದ್ಯವೆಂಬ ಒಂದೇ ಪದವನ್ನು ಉಪಯೋಗಿಸಿದರೂ ಶಾಸ್ತ್ರದ ಗದ್ಯ ಬೇರೆ, ಸಾಹಿತ್ಯದ ಗದ್ಯ ಬೇರೆ.

**ಗದ್ಯಲಯ** : ಗದ್ಯವೂ ಲಯಾತ್ಮಕವೆಂಬ ನಂಬಿಕೆ ಆದಿಯಿಂದಲೂ ಇದೆ. ಪ್ರಾಚೀನ ಗ್ರೀಕ್, ತತ್ವಬೋಧಕ ಥ್ರಾಸಿಮಕಸ್ ತನ್ನ ಭಾಷಣಗಳಲ್ಲಿ ಲಯದಿಂದ ರಂಜಕವಾದ ಪದಗುಚ್ಛಗಳನ್ನು ಉದ್ದೇಶಪೂರ್ವಕವಾಗಿ ತಂದು ಸೇರಿಸುತ್ತಿದ್ದ. ವಿಮರ್ಶಕ ಶಿರೋಮಣಿ ಅರಿಸ್ಟಾಟಲಿನಿಂದ ಈ ವಿಧಿ ಬಳಕೆಗೆ ಬಂತು: 'ಗದ್ಯ ಲಯಬದ್ಧವಾಗಿರಬೇಕು. ಛಂದೋಬದ್ಧವಾಗಕೂಡದು.' ವಾಗ್ಮಿಯ ಭಾಷಣವನ್ನು ಆಲಿಸುವಾಗ ಗ್ರೀಕ್ ಶ್ರೋತೃಗಳಿಗೆ ಅಂಗೈ ಕುಟ್ಟುತ್ತ ತಾಳಹಾಕುವ ಅಭ್ಯಾಸವಿತ್ತು. ಸಿಸರೊ ಮಾತನಾಡುತ್ತಿದ್ದಾಗ ರೋಮನರೂ ಹಾಗೆಯೇ ಮಾಡುತ್ತಿದ್ದರಂತೆ.

ಗದ್ಯ ಲಯರಹಿತವಲ್ಲವೆಂದು ಒಪ್ಪಿಕೊಂಡದ್ದಷ್ಟೆ ಅಲ್ಲದೆ ಪ್ರಾಚೀನರು ಅದರ ಲಯಕ್ಕೆ ಪ್ರಸ್ತಾರ ನಿಷ್ಕರ್ಷಿಸುವ ಕಾರ್ಯವನ್ನೂ ನೆರವೇರಿಸಿದರು. ಮೊದಲನೆಯದಾಗಿ, ಪದ್ಯ ಛಂದಸ್ಸಿಗೆ ಅನುರೂಪವಾದ ಗಣಗಳು ಗದ್ಯಕ್ಕೆ ಹೊಂದದಿದ್ದುದನ್ನು ಕಂಡುಕೊಂಡರು, ಎರಡನೆಯದಾಗಿ ಒಂದು ಗುರು ಮೂರು ಲಘುವಿನಿಂದಾದ ಪಿಯನ್ ( – UUU ಅಥವಾ UUU –) ಅಕ್ಷರ ನಮೂನೆ ಗದ್ಯಕ್ಕೆ ಅಚ್ಚುಮೆಚ್ಚು ಎಂಬುದನ್ನು ಅರಿತುಕೊಂಡರು. 1ನೆಯ ಪಿಯನ್ (–UUU) ವಾಕ್ಯದ ಪ್ರಾರಂಭದಲ್ಲಿ ಬಂದರೆ ಚೆಲುವು; 4ನೆಯ ಪಿಯನ್‌ಗೆ (UUU –) ವಾಕ್ಯದ ಅಂತ್ಯ ಯುಕ್ತಸ್ಥಾನ– ಎಂದು ಅರಿಸ್ಟಾಟಲ್ ತೀರ್ಪು ಹೇಳಿದ. ವಾಕ್ಯದ ನಡುನಡುವೆ ಬರುವ ಲಯಸೂಚಕವಾದ ಪದಗುಚ್ಛಗಳ ಕಡೆಗೆ ಗ್ರೀಕರ ಗಮನ ಅಷ್ಟೊಂದಾಗಿ ಹೋಗಲಿಲ್ಲ. ಅದು ಆಶ್ಚರ್ಯ. ಏತಕ್ಕೆಂದರೆ ಲಯ ಎದ್ದು ಕವಿತಾಕಬೇಕಾದರೆ ಎರಡು ಅಂಶಗಳು ಅವಶ್ಯಕ: ಹಿತವಾದ ಪದಗುಚ್ಛದ ನಮೂನೆ (ಎ ಪ್ಯಾಟರ್ನ್ ಆಫ್ ಸಿಲಬಲ್ಸ್) ಮತ್ತು ಅದರ ಪುನರುಕ್ತಿ. ಪುನರುಕ್ತಿ ಕ್ಲುಪ್ತ ಅಂತರಗಳಲ್ಲಿ ನಿಯಮಿತವಾಗಿ ಬಂದರೆ ವಚನ ವಿನ್ಯಾಸ ಛಂದಸ್ಸಾಗುತ್ತದೆ; ಗದ್ಯದಲ್ಲಿ ಪುನರುಕ್ತಿ ಬರಬೇಕು, ಆದರೆ ವ್ಯತ್ಯಸ್ತ ಅಂತರಗಳಲ್ಲಿ.

ರೋಮನರೂ ತಮ್ಮ ಲ್ಯಾಟಿನ್ ಗದ್ಯವಾಕ್ಯಗಳನ್ನು ಪರಿಶೀಲಿಸುವಾಗ ಅಂತ್ಯದ ನಮೂನೆಗಳನ್ನು ಮಾತ್ರ ಆಸಕ್ತಿಯಿಂದ ವಿಮರ್ಶಿಸಿದರು. ಅವರಿಗೆ ಪ್ರಿಯವಾಗಿ ತೋರಿಬಂದ ನಮೂನೆ – ಎರಡು ಗುರು ಒಂದು ಲಘುವಿನ ಕ್ರೇಟಿಕ್ (–U–) ಗಣವನ್ನು ಅನುಸರಿಸಿ ಒಂದು ಗುರು ಒಂದು ಲಘುವಿನ (–U) ಟ್ರೋಕಿ ಅಥವಾ ಒಂದು ಗುರು ಎರಡು ಲಘುವಿನ ಡ್ಯಾಕ್ಟಿಲ್ (–UU) ಬರುವ ವಿನ್ಯಾಸ. ಆ ನಮೂನೆಯನ್ನು ಕ್ಲಾಸ್ಯುಲ ಅಥವಾ ಕುರ್ಸಸ್ ಎಂದು ಅವರು ಕರೆದರು. ಲ್ಯಾಟಿನ್ ಭಾಷೆಯಲ್ಲಿ ಕೆಲವು ಉಚ್ಚಾರಾಂಶಗಳ ಮೇಲೆ ಕೂರುವ ಒತ್ತಿಗೂ ಸ್ವಲ್ಪ ಸ್ಥಾನವಿತ್ತು. ಕುರ್ಸಸ್ ಯಾವ ಬಗೆಯದೇ ಆದರೂ ಅದರ ಕಡೆಯ ಉಚ್ಚಾರಾಂಶದ ಮೇಲೆ ಒತ್ತನ್ನು ಇಟ್ಟರೆ ಲಯದ ನಾದಗತಿ ಕೆಡುತ್ತದೆಂದು ಅವರ ಭಾವನೆ. ಅದರ ಹಿಂದಣ ಅಂಶದ ಮೇಲೆಯೇ ಒತ್ತು ಕಡ್ಡಾಯವಾಗಿ ಇರಬೇಕೆಂದು ನಿಗದಿಮಾಡಿದರು. ಏತಕ್ಕೆಂದರೆ, ಕುರ್ಸಸಿನ ಶ್ರವ್ಯತೆಗೆ ಅದರಲ್ಲಿರುವ ಎರಡು ಒತ್ತುಗಳ ಧ್ರುವತೆಯೇ (ಪೋಲ್ಯಾರಿಟಿ) ಮುಖ್ಯಕಾರಣವೆಂದು ಅವರ ನಿಶ್ಚಯ.

ಯುರೋಪಿನ ಇತರ ದೇಶಗಳಾದ ಜರ್ಮನಿ, ರಷ್ಯ, ಸ್ಪೇನ್, ಆಧುನಿಕ ಇಟಲಿ ಮುಂತಾದ ಕಡೆಗಳಲ್ಲಿ ಗದ್ಯಲಯದ ವ್ಯಾಸಂಗ ಸಾಕಾದಷ್ಟು ಆಗಿಲ್ಲ. ಫ್ರಾನ್ಸಿನಲ್ಲಿ ಗದ್ಯಕ್ಕೂ ಪದ್ಯಕ್ಕೂ ಏಕಪ್ರಮಾಣದ ಪ್ರಾಧಾನ್ಯ ಇರುವುದರಿಂದ, ಅಲ್ಲಿನ ಪಂಡಿತರು ಗದ್ಯವನ್ನು ನಾನಾಮುಖಗಳಿಂದ ಪರೀಕ್ಷಿಸಿದ್ದಾರೆ. ವಾಕ್ಯವಿನ್ಯಾಸವನ್ನು ಗೀಟುಗಳ ಮೂಲಕ ನಕ್ಷೆ ಮಾಡಿರುವವರೂ ಉಂಟು. ಇಂಗ್ಲಿಷ್ ಗದ್ಯದ ಲಯ ಪರೀಕ್ಷೆ ಸ್ವಲ್ಪಮಟ್ಟಿಗೆ ಜರುಗಿದೆ. ಆದರೆ ಪಂಡಿತರ ದೃಷ್ಟಿ ಭಿನ್ನ ಭಿನ್ನವಾಗಿದೆ. ಒಬ್ಬರ ಅಭಿಮತವನ್ನು ಇನ್ನೊಬ್ಬರು ಒಪ್ಪುವುದು ಅಪರೂಪ. ಛಂದಸ್ಸಿನ ವಿಚಾರದಲ್ಲೇ ನಾಲ್ಕೈದು ಬೇರೆ ಬೇರೆ ಸಿದ್ಧಾಂತಗಳು ತೀವ್ರವಾಗಿ ಹೋರಾಡುತ್ತಿರುವಾಗ ಹೆಚ್ಚು ಸರಾಗವಾದ ಗದ್ಯಲಯವನ್ನು ಕುರಿತು ಒಮ್ಮತವಿರುವುದು ಸಾಧ್ಯವೆ? ಹಾಗೆ ನಿರೀಕ್ಷಿಸಬಹುದೆ, ನಾವು? ಅದೊಂದು ಕೌತುಕ. ಗದ್ಯಲಯದ ವಿಷಯವಾಗಿ ಪಂಡಿತರಲ್ಲಿ ಕಾಣಬರುವ ಹೊಂದಾಣಿಕೆ ಛಂದಸ್ಸಿನ ವಿಷಯವಾಗಿ ಇಲ್ಲ. ಕೆಲವು ಸಂಗತಿಗಳನ್ನು ಸರಿಸುಮಾರಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಅವನ್ನು ಹೀಗೆ ಪಟ್ಟಿಮಾಡಬಹುದು.

1. ಗದ್ಯಲಯವನ್ನು ವಿವೇಚಿಸುವಾಗ ಇಡೀ ಪದವನ್ನು ಒಂದು ಅಂಶವಾಗಿ ತೆಗೆದುಕೊಳ್ಳತಕ್ಕದ್ದು; ಪದ್ಯದಲ್ಲಿ ನಡೆಯಬಹುದಾದಂತೆ ಪದಚ್ಛೇದ ನಡೆಯಕೂಡದು.

2. ಒಂದೇ ಉಚ್ಚಾರಾಂಶದ ಗಣ ಇಂಗ್ಲಿಷಿನಲ್ಲಿ ಹೇರಳವಾಗಿ ಬರುತ್ತದೆ. ಇಂಗ್ಲಿಷ್ ಭಾಷೆ ಸಣ್ಣ ಸಣ್ಣ ಪದಗಳಿಂದ ನಿಬಿಡವಾಗಿದೆ. ಪದ್ಯದ ಛಂದಸ್ಸಿಗೆ ಅದು ನಿಷಿದ್ಧ.

3. ಭಾವಾರ್ಥದ ಅಥವಾ ತರ್ಕದ ವಿನ್ಯಾಸವೂ ಲಯದ ವಿನ್ಯಾಸವೂ ಗದ್ಯದಲ್ಲಿ ಜೊತೆಯಾಗಿ ಓಡುತ್ತವೆ. ಪದ್ಯದಲ್ಲಿ ಅವು ಜೊತೆಗೂಡಬಾರದು.

4. ಪದ್ಯದಲ್ಲಿ ಬಾರದಿರುವ ಎರಡೊ ಮೂರೊ ಒತ್ತುಗಳಿಂದ ಕೂಡಿದ ಐದು ಉಚ್ಚಾರಾಂಶಗಳ ಗಣ ಡಾಕ್ಮಿಯಕ್ ಗದ್ಯದಲ್ಲಿ ಬರುತ್ತದೆ. ಪದ್ಯದಲ್ಲಿ ಅತಿ ವಿರಳವಾದ ನಾಲ್ಕಂಶಗಳ ಪಿಯನ್ ಅನ್ನು ಗದ್ಯಕ್ಕೆ ಅಧಿಷ್ಠಾನವೆನ್ನಬಹುದು.

5. ಗದ್ಯ ವೃತ್ತಗಂಧಿಯಾಗಬಹುದೆ? ಅನೇಕರು ಗದ್ಯಲಯಕ್ಕೆ ಮೀಸಲಾದ ನಾದವಿನ್ಯಾಸಗಳು ಇರುವಾಗ ಅದೇತಕ್ಕೆ ಅಲ್ಲಿಇಲ್ಲಿಯಾದರೂ ಛಂದೋಬದ್ಧವಾಗುವುದಕ್ಕೆ ಪರಿತಪಿಸಬೇಕು-ಎಂದಿದ್ದಾರೆ. ಅಪೂರ್ವವಾಗಿ ಛಂದಸ್ಸಿನ ತುಣುಕು ಬಂದರೆ ಗದ್ಯದ ರುಚಿ ಹೆಚ್ಚುತ್ತದೆಂದು ಕೆಲವರ ನಂಬಿಕೆ. ಲೇಖಕನ ಚಿತ್ತಕ್ಕೆ ಗೋಚರವಾಗದಂತೆ ಎಷ್ಟೋ ಕಡೆ ಛಂದೋಬದ್ಧವೆನ್ನಬಹುದಾದ ಪದುಗುಚ್ಛಗಳು ಹೇಗೊ ಬಂದು ಸೇರಿಬಿಡುತ್ತವೆ. ಆದ್ದರಿಂದ ಅವುಗಳನ್ನು ಪರಿತ್ಯಜಿಸುವುದಕ್ಕೆ ಗದ್ಯಲೇಖಕ ಯಾವಾಗಲೂ ಎಚ್ಚೆತ್ತಿರಬೇಕು.

6. ಲ್ಯಾಟಿನ್ನಿನ ಕುರ್ಸಸ್ಸನ್ನು ಫ್ರೆಂಚ್ ಇಂಗ್ಲಿಷ್ ಗದ್ಯಗಳಲ್ಲೂ ನೋಡಬಹುದು.

7. ಅಲ್ಲದೆ ಕುರ್ಸಸ್ಸಿಗೆ ಸದೃಶವಾದ ದೇಶೀಯ ನಾದಗತಿ (ನೇಟಿವ್ ಕ್ಯಾಡೆನ್ಸ್)ಗಳನ್ನು ಗುರುತಿಸಬಹುದು. ಇಂಗ್ಲಿಷಿನ ಅಂಥ ವಿನ್ಯಾಸಗಳ ಕಡೆಯ ಉಚ್ಚಾರಾಂಶದ ಮೇಲೆ ಒತ್ತು ಇರಬಹುದು.

ಒಟ್ಟಿನಲ್ಲಿ ಗದ್ಯಲಯಕ್ಕೆ ಛಂದಸ್ಸಿಗಿಂತ ಹೆಚ್ಚು ವೈವಿಧ್ಯವಿದೆ. (ಎಸ್.ವಿ.ಆರ್.)

**ಗದ್ಯಸಾಹಿತ್ಯ :** ಗದ್ಯಕಾವ್ಯ ಮತ್ತು ಪದ್ಯಕಾವ್ಯಗಳ ನಡುವಣ ವ್ಯತ್ಯಾಸಗಳು ಬಹು ಸೂಕ್ಷ್ಮ ರೀತಿಯವಾದುದರಿಂದ ಅವನ್ನು ಸ್ಪಷ್ಟವಾಗಿ ಹೇಳುವುದು ಕಷ್ಟ. ಗದ್ಯಕ್ಕೂ ತನ್ನದೇ ಆದ ಲಯವುಂಟು; ಆದರೆ ಅದು ಕಾವ್ಯದ ಲಯದಂತೆ ಪುನರಾವೃತ್ತಿಯನ್ನು ಆಧರಿಸಿದುದಲ್ಲ, ಅಲ್ಲದೆ ಅದನ್ನು ಇಲ್ಲಿ ನಿರೀಕ್ಷಿಸಬಹುದಾದುದೂ ಅಲ್ಲ. ಎರಡನೆಯದಾಗಿ, ಕಾವ್ಯದಲ್ಲಿ ಛಂದಸ್ಸಿಗೂ ಭಾಷೆಗೆ ಸಹಜವಾದ ಲಯಕ್ಕೂ ಎಳೆತವಿರುತ್ತದೆ. ಮೂರನೆಯದಾಗಿ, ಕಾವ್ಯದಲ್ಲಿ ಅರ್ಥಕ್ಕೂ ಛಂದಸ್ಸಿಗೂ ತುಯ್ತವುಂಟು. ಇದೂ ಕವನದ ಸಂಪೂರ್ಣ ಅರ್ಥದ ಸೃಷ್ಟಿಯಲ್ಲಿ ಪಾಲುಗೊಳ್ಳುತ್ತದೆ. ನಾಲ್ಕನೆಯದಾಗಿ, ಭಾಷೆಯ ವ್ಯಾಕರಣದ ನಿಯಮಗಳ ಪಾಲನೆಯಲ್ಲಿ ಕಾವ್ಯ ಹೆಚ್ಚಿನ ಸ್ವಾತಂತ್ರ್ಯ ಪಡೆಯುತ್ತದೆ. ಆದರೆ, ಐದನೆಯದಾಗಿ, ಛಂದಸ್ಸಿನ ಬೇಡಿಕೆಯಿಂದ ಪದಗಳ ಆಯ್ಕೆಯಲ್ಲಿ ಅದರ ಸ್ವಾತಂತ್ರ್ಯ ಮಿತಗೊಳ್ಳುತ್ತದೆ. ಆರನೆಯದಾಗಿ, ಗದ್ಯಕ್ಕಿಂತ ಕಾವ್ಯ ಸೂಚ್ಯಾರ್ಥವನ್ನು ಹೆಚ್ಚಾಗಿ ಬಳಸಿಕೊಳ್ಳುತ್ತದೆ. ಏಳನೆಯದಾಗಿ, ಕಾವ್ಯದಲ್ಲಿ ಭಾಷೆಯ ಹಲವು ಅಂಶಗಳಾದ ನಾದ, ಲಯ, ವಾಕ್ಯಬಂಧ, ಪದಗಳ ಸ್ಪಷ್ಟ ಮತ್ತು ಸೂಚ್ಯ ಅರ್ಥ-ಇಂಥವು ಮತ್ತು ವಿಶೇಷ ಸಾಧನಗಳಾದ ಅಲಂಕಾರಗಳು, ಉಪಮಾನಗಳು, ಪ್ರತಿಮೆಗಳು-ಇಂಥವು ಜಟಿಲವಾದ ರೀತಿಯಲ್ಲಿ ಹೆಣೆದುಕೊಂಡು ಅರ್ಥವನ್ನು ನಿರ್ಮಿಸುತ್ತವೆ (**ನೋಡಿ-ಗದ್ಯ**).

ಯಾವ ದೇಶದಲ್ಲಿಯಾದರೂ ಸಾಹಿತ್ಯವೆನ್ನಿಸಿಕೊಳ್ಳಬಹುದಾದ ಗದ್ಯಸೃಷ್ಟಿ ಕಾಣಿಸಿಕೊಳ್ಳುವುದು ಒಳ್ಳೆಯ ಕಾವ್ಯದ ರಚನೆಯಾದ ಎಷ್ಟೊ ಕಾಲದ ಅನಂತರ. ಕಾವ್ಯಕ್ಕಿಂತ ಗದ್ಯ ಸಾಮಾಜಿಕ ಸ್ಥಿತಿಗತಿಗಳನ್ನು ಹೆಚ್ಚಾಗಿ ಅವಲಂಬಿಸುತ್ತದೆ. ಜನರ ಆಸಕ್ತಿಗಳು ಬೆಳೆದಂತೆ, ಜ್ಞಾನ ವಿಸ್ತಾರವಾದಂತೆ ಗದ್ಯದ ಹರವೂ ಶಬ್ದಸಂಪತ್ತೂ ಬೆಳೆಯುತ್ತವೆ; ವಾಕ್ಯಬಂಧ ಮತ್ತು ಪರಿಣಾಮದ ಸಾಧನೆಗಳು ಬದಲಾಗುತ್ತವೆ. ಸಮಾಜದಲ್ಲಿ ಒಂದು ಹಳೆಯ ವರ್ಗದ ಇಳಿಮುಖ, ಹೊಸ ವರ್ಗದ ಪ್ರಾಬಲ್ಯ, ಶಿಕ್ಷಣದ ಬೆಳವಣಿಗೆ, ಅಚ್ಚುಕೂಟಗಳ ಪ್ರಾರಂಭ ಮತ್ತು ಅಚ್ಚಿನ ತಂತ್ರದ ಪ್ರಗತಿ, ರಾಜಕೀಯ ಪಕ್ಷಗಳ ಸಂಖ್ಯೆ ಮತ್ತು ಸ್ಪರ್ಧೆ, ಜನ ತಮ್ಮ ವಿರಾಮವನ್ನು ಕಳೆಯುವ ರೀತಿ, ಸಾಮಾಜಿಕ ಜೀವನದಲ್ಲಿ ಹೆಂಗಸರ ಪಾತ್ರ-ಇಂಥ ಅಂಶಗಳೆಲ್ಲ ಗದ್ಯ ಸಾಹಿತ್ಯವಾಹಿನಿಯ ದಿಕ್ಕನ್ನು ಪ್ರಭಾವಿಸಬಹುದು. ಇಂಗ್ಲೆಂಡಿನಲ್ಲಿ ಹದಿನೇಳನೆಯ ಶತಮಾನದಲ್ಲಿ ಕಾಫಿ ಹೌಸುಗಳ ಬೆಳವಣಿಗೆ (**ನೋಡಿ- ಕ್ಲಬ್ಬುಗಳು**) ಗದ್ಯ ಸಾಹಿತ್ಯದ ಸೃಷ್ಟಿಗೆ ನೆರವಾಯಿತು ಎಂಬುದನ್ನಿಲ್ಲಿ ನೆನೆಯಬಹುದು. ವಿಜ್ಞಾನದ ಪ್ರಗತಿ ಮತ್ತು ಉಚ್ಚ ವೈಜ್ಞಾನಿಕ ಅಧ್ಯಯನದ ಸಾಧನೆಯನ್ನು ಜನಸಾಮಾನ್ಯಕ್ಕೆ ತಂದುಕೊಡುವ ಅವಶ್ಯಕತೆಗಳು ಸಹ ಗದ್ಯಸಾಹಿತ್ಯದ ಮೇಲೂ ಪ್ರಭಾವ ಬೀರುತ್ತವೆ. ಆರ್ಥರ್ ಸ್ಟ್ಯಾನ್ಲಿ ಎಡಿಂಗ್ಟನ್ (1882-1944), ಜೇಮ್ಸ್ ಜೀನ್ಸ್ (1877-1946), ಜೂಲಿಯನ್ ಹಕ್ಸ್ಲಿ (1887) ಮೊದಲಾದ ವಿಜ್ಞಾನಿಗಳೂ ಸೊಗಸಾದ ಗದ್ಯಕೃತಿಗಳನ್ನು ಬರೆದಿದ್ದಾರೆ.

ಪ್ರಾಚೀನ ಗ್ರೀಸಿನಲ್ಲಿ ಗದ್ಯ ಮೊದಲು ಬಳಕೆಯಾದದ್ದು ಶಾಸನಗಳಿಗಾಗಿ; ಆಮೇಲೆ ಪ್ರ.ಶ.ಪೂ. ಆರನೆಯ ಶತಮಾನದಲ್ಲಿ ಜ್ಞಾನ ಸಾಹಿತ್ಯಕ್ಕಾಗಿ ಬಳಕೆಯಾಯಿತು. ಇದರಲ್ಲಿ ಕೆಲವೇ ವಾಕ್ಯಗಳು ಉಳಿದು ಬಂದಿವೆ. ಪ್ರ.ಶ.ಪೂ. ಸು. 500ರಲ್ಲಿದ್ದ ಹಿರಾಕ್ಲಿಟಸನ ಬರೆಹದಲ್ಲಿ ಚಾಟೂಕ್ತಿಗಳ ಸೊಗಸನ್ನು ಕಾಣಬಹುದು. ಪ್ರಾರಂಭದ ಗದ್ಯ ಬರೆಹಗಾರರ ಗುರಿ ಸ್ಫುಟತ್ವ. ಪರ್ಷಿಯದ ಸಂಪರ್ಕವಾದಂತೆಲ್ಲ ಗ್ರೀಕರಿಗೆ ಹೊರದೇಶಗಳ ವಿಷಯದಲ್ಲಿ ಆಸಕ್ತಿ ಬೆಳೆಯಿತು. ಮೊದಲನೆಯ ಚರಿತ್ರಕಾರನಾದ ಹಿರಾಡೊಟಸನ (ಪ್ರ.ಶ.ಪೂ. ಸು. 484-425) ತಿಳಿಯಾದ ಶೈಲಿಯಲ್ಲಿ ವೈಜ್ಞಾನಿಕ ನಿರೂಪಣಾ ವಿಧಾನವನ್ನು ಕಾಣಬಹುದು. ಆದರೆ ಇವನಲ್ಲಿನ ವೃತ್ತಾಂತದ ರೀತಿ, ಮಹಾಪುರುಷರ ಚಿತ್ರಣ, ಭಾಷಣಗಳು, ಚರ್ಚೆಗಳ ಬಳಕೆ, ಕವನಗಳ ವರ್ಣನೆ-ಇವು ಮಹಾಕಾವ್ಯಗಳ ಪ್ರಭಾವಕ್ಕೆ ಸಾಕ್ಷಿಯಾಗಿವೆ. ಇವನ ಖ್ಯಾತ ಶಿಷ್ಯ ಥೂಸಿಡಿಡೀಸ್ (ಪ್ರ.ಶ.ಪೂ. 471-401). ಗುರುವಿನ ಶೈಲಿಯ ಸರಳತೆ, ಲಾಸ್ಯ ಇವನ ಬರೆಹದಲ್ಲಿಲ್ಲವಾದರೂ ವಿಜ್ಞಾನಿಯ ಮನೋಧರ್ಮ, ಕಲಾವಿದನ ರೂಪ ಪ್ರಜ್ಞೆ ಎರಡೂ ಉಂಟು. ಪ್ರಸಿದ್ಧ ತತ್ತ್ವಜ್ಞಾನಿ ಪ್ಲೇಟೊ ಹುಟ್ಟು ಕವಿ. ತನ್ನ ಗುರು ಸಾಕ್ರಟೀಸನನ್ನು ಕುರಿತ ಇವನ ಬರೆಹಗಳಲ್ಲಿ ನಾಟಕದ ಸ್ವಾರಸ್ಯವಿದೆ, ಕಾದಂಬರಿಕಾರನ ಪಾತ್ರಸೃಷ್ಟಿ ಇದೆ. ಗ್ರೀಸಿನಲ್ಲಿ ಗದ್ಯದ ಬೆಳವಣಿಗೆಗೆ ವಾಗ್ಮಿಗಳ ಕೊಡುಗೆ ವಿಶೇಷವಾದದ್ದು. ಆ ದೇಶದಲ್ಲಿ ಸಾರ್ವಜನಿಕ ಜೀವನದಲ್ಲಿ ಭಾಗವಹಿಸ ಬಯಸುವವರು ಭಾಷಣ ಕಲೆಯನ್ನು ಅಭ್ಯಾಸ ಮಾಡಬೇಕಾಗಿತ್ತು. ಥಿಮಿಸ್ಟಾಕ್ಲೀಸ್, ಪೆರಿಕ್ಲೀಸ್ ಮೊದಲಾದವರ ಭಾಷಣಗಳು ಮೂಲದಲ್ಲಿ ಉಳಿದುಬಂದಿಲ್ಲ. ಭಾಷಣ ಕಲೆಯನ್ನು ಹೇಳಿಕೊಟ್ಟ ಗುರುಗಳಲ್ಲಿ ಬಹು ಪ್ರಸಿದ್ಧನಾದವ ಐಸಾಕ್ರಟೀಸ್ (ಪ್ರ.ಶ.ಪೂ. 436-338). ಭಾಷಣಕಾರರಲ್ಲಿ ಅಗ್ರಗಣ್ಯ ಎನಿಸಿಕೊಂಡವ ಡಿಮಾಸ್ಥನೀಸ್ (ಪ್ರ.ಶ.ಪೂ. 384-322). ಶ್ರೋತೃಗಳ ಭಾವಗಳನ್ನು ಉದ್ದೀಪಿಸುವ ಅಸಾಧಾರಣ ವಾಗ್ಮಿತೆ ಇವನದು. ಒಟ್ಟಿನಲ್ಲಿ ಗ್ರೀಸಿನ ಪ್ರಸಿದ್ಧ ಭಾಷಣಕಾರರೆಲ್ಲ ಚೆನ್ನಾಗಿ ಓದಿಕೊಂಡವರು. ಮನುಷ್ಯ ಸ್ವಭಾವವನ್ನು ಅರ್ಥಮಾಡಿಕೊಂಡವರು. ಬೌದ್ಧಿಕ ಶಕ್ತಿ ಇವರಲ್ಲಿ ಎದ್ದು ಕಾಣುತ್ತದೆ.

ರೋಮನ್ ಸಾಹಿತ್ಯದಲ್ಲಿ ಪ್ರಾಯಶಃ ಅಪಿಯಸ್ ಸೀಕಸ್ ಕ್ಲಾಡಿಯಸನ (ಪ್ರ.ಶ.ಪೂ. ಸು. 300) ಭಾಷಣಗಳಲ್ಲಿ ಮೊಟ್ಟಮೊದಲು ಗದ್ಯ ಕಾಣಸಿಗುತ್ತದೆ. ಲ್ಯಾಟಿನ್ ಸಾಹಿತ್ಯದ ಸುವರ್ಣಯುಗದಲ್ಲಿಯೇ (ಪ್ರ.ಶ.ಪೂ. 80-42) ಶ್ರೇಷ್ಠ ಗದ್ಯ ಸಾಹಿತ್ಯವೂ ಸೃಷ್ಟಿಯಾಯಿತು. ಪ್ರಸಿದ್ಧ ಯೋಧ ಹಾಗೂ ಆಡಳಿತಗಾರ ಜೂಲಿಯಸ್ ಸೀಸರನ 'ಕಾಮೆಂಟರಿ'ಗಳಲ್ಲಿ ಭಾಷೆಯ ಪರಿಶುದ್ಧತೆ ಮತ್ತು ಸ್ಫುಟತ್ವ ಅಸಾಧಾರಣವಾದುವು. ಪ್ರಸಿದ್ಧ ವಾಗ್ಮಿ ಸಿಸಿರೊ (ಪ್ರ.ಶ.ಪೂ. 106-43) ಅಮೂರ್ತವೂ ಜಟಿಲವೂ ಆದ ಭಾವನೆಗಳನ್ನು ಸ್ಪಷ್ಟವಾಗಿ ನಿರೂಪಿಸುವ ಲ್ಯಾಟಿನ್ ಶೈಲಿಯನ್ನು ಬೆಳೆಸಿದ. ಚಾತುರ್ಯದಿಂದ ಹೆಣೆದ ದೀರ್ಘವಾಕ್ಯಗಳು, ಹೊಸ ಲಯಗತಿ ಇವು ಸಿಸಿರೋನ ಶೈಲಿಯ ಲಕ್ಷಣಗಳು. ಇವನ ಕಾಲದಿಂದಾಚೆಗಿನ ಗದ್ಯಲೇಖಕರು ಇವನನ್ನು ಅನುಕರಿಸಿದರು ಇಲ್ಲವೇ ಇವನ ಶೈಲಿಯನ್ನು ವಿರೋಧಿಸಿದರು; ಹೀಗೆ ಸಿಸಿರೊ ತನ್ನ ಕಾಲದ ಅನಂತರದ ಎಲ್ಲ ಗದ್ಯ ಲೇಖಕರ ಮೇಲೆ ಪ್ರಭಾವ ಬೀರಿದ.

ಇವನಿಗೆ ವಿರುದ್ಧವಾದ ಪ್ರತಿಕ್ರಿಯೆ ತೋರಿದವರಲ್ಲಿ ಪ್ರಮುಖ ಸ್ಯಾಲಸ್ಟ್ (ಅಥವಾ ಸ್ಯಾಲಿಸ್ಟಿಯಸ್) (ಪ್ರ.ಶ.ಪೂ. 86-34). ಇವನದು ಅಡಕವಾದ, ಚಾಟೂಕ್ತಿಯ ಶೈಲಿ. ಅರಸೊತ್ತಿಗೆಯ ಸ್ಥಾಪನೆಯಿಂದ ಸಾರ್ವಜನಿಕ ಜೀವನದಲ್ಲಿ ವಾಗ್ಮಿತೆಗೆ ಪ್ರಭಾವ ಕಡಿಮೆಯಾದುದು ಈ ಬಗೆಯ ಶೈಲಿಗೆ ನೆರವಾಯಿತು. ಹೊಸ ವಾತಾವರಣದಲ್ಲಿ ಜನರ ಮನಸ್ಸನ್ನಾಕರ್ಷಿಸುವ ಇಲ್ಲವೇ ಭಾವೋದ್ವೇಗವನ್ನುಂಟು ಮಾಡುವ ವಾಗ್ಮಿತೆ ಕಳೆಗುಂದಿ ಬುದ್ಧಿಶಕ್ತಿಗೆ ಪ್ರಾಧಾನ್ಯ ದೊರೆಯಿತು. ಕಿರಿಯ ಸೆನಿಕ (ಪ್ರ.ಶ.ಪೂ. 5-ಪ್ರ.ಶ. 65) ಮತ್ತು ಟ್ಯಾಸಿಟಸ್ (56-120) ಈ ಶೈಲಿಯನ್ನು ಬೆಳೆಸಿದರು. ಟ್ಯಾಸಿಟಸ್ ವೈವಿಧ್ಯವನ್ನೇ ಮುಖ್ಯವಾಗಿ ಗಣಿಸಿ ಆರ್ಷೇಯ ಪದಗಳನ್ನೂ ಬಳಸುತ್ತಾನೆ. ಇವನ ಶೈಲಿಯನ್ನು ಇಂಗ್ಲಿಷ್ ಸಾಹಿತಿ ಕಾರ್ಲೈಲನ ಶೈಲಿಗೆ ಹೋಲಿಸಬಹುದು.

ರೋಮ್ ಸಾಮ್ರಾಜ್ಯದ ಪ್ರಾಬಲ್ಯ ಕಡಿಮೆಯಾಗಿ ರೋಮನರಿಗೆ ತಮ್ಮ ನಾಡುನುಡಿಗಳಲ್ಲಿನ ತೀವ್ರ ಹೆಮ್ಮೆ ಕುಂದಿದಂತೆ ಆ ದೇಶದ ಲೇಖಕರು ಗ್ರೀಕ್ ಭಾಷೆಯಲ್ಲಿ ಬರೆಯುವುದು ಹೆಚ್ಚಿತು. ರೋಮನ್ ಬರೆಹಗಳಲ್ಲಿನ ಅತಿ ಶ್ರೇಷ್ಠ ಗದ್ಯಕೃತಿ, ಮಾರ್ಕಸ್ ಅರೀಲಿಯಸನ ಚಿಂತನೆಗಳು ಗ್ರೀಕ್ ಭಾಷೆಯಲ್ಲಿದೆ.

ಸುಮಾರು 17ನೆಯ ಶತಮಾನದ ಅಂತ್ಯದವರೆಗೆ ಲ್ಯಾಟಿನ್ ಭಾಷೆಗೆ ಪ್ರತಿಷ್ಠೆಯ ಸ್ಥಾನ ದೊರಕಿತ್ತು. ಯುರೋಪಿನಲ್ಲಿ ಅದು ಅಂತಾರಾಷ್ಟ್ರೀಯ ಭಾಷೆಯಾಗಿ, ವಿದ್ವತ್ತಿನ, ಜಗತ್ತಿನ ಭಾಷೆಯಾಗಿ ಮುಂದುವರಿಯಿತು. ಇಂಗ್ಲೆಂಡಿನ ಫ್ರಾನ್ಸಿಸ್ ಬೇಕನ್ (1561-1626) ತಾನು ಮುಖ್ಯ ಎಂದು ಗಣಿಸಿದ ಕೃತಿಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದು ಅಮುಖ್ಯ ಎಂದು ಭಾವಿಸಿದ ಪ್ರಬಂಧಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದ.

ಪ್ರಾಚೀನ ಲ್ಯಾಟಿನ್ ಸಾಹಿತ್ಯಕ್ಕೂ ಅರ್ವಾಚೀನ ಲ್ಯಾಟಿನ್ ಸಾಹಿತ್ಯಕ್ಕೂ ನಡುವೆ ವಿಚ್ಛಿನ್ನತೆ ಬರಲಿಲ್ಲ. ಕ್ರೈಸ್ತಮತ ಹಬ್ಬಿದಂತೆ ಹೊಸ ಪದಗಳು ಭಾಷೆಗೆ ಸೇರಿದುವು. ಪ್ರ.ಶ. 6ನೆಯ ಶತಮಾನದಲ್ಲಿ ಬೋಯಿಥೀಯಸ್‍ನ ತತ್ತ್ವಜ್ಞಾನದ ಸಂತೈಕೆಗಳು ಕ್ಯಾಸಿಡೊರಸ್‍ನ ಗಾತರ ಚರಿತ್ರೆಗಳಂಥ ಒಳ್ಳೆಯ ಕೃತಿಗಳು ರಚಿತವಾದವು.

ಭಾಷೆ ಮತ್ತು ಸಾಹಿತ್ಯಗಳ ದೃಷ್ಟಿಯಿಂದ ಇಂಗ್ಲಿಷ್ ಗದ್ಯಸಾಹಿತ್ಯ ಗ್ರೀಕ್ ಮತ್ತು ಲ್ಯಾಟಿನ್‍ಗಳ ಪ್ರಭಾವಕ್ಕೆ ಒಳಗಾಗಿದೆ. ಸರಳ ವೃತ್ತಾಂತ, ಐತಿಹಾಸಿಕ ಬರೆಹ, ಅನ್ವಾರ್ಥ, ಜೀವನಚರಿತ್ರೆ, ಆತ್ಮವೃತ್ತ, ತತ್ತ್ವಶಾಸ್ತ್ರ, ಗದ್ಯ ವಿಡಂಬನ, ವೈಜ್ಞಾನಿಕ ಬರೆಹ, ಸಾಹಿತ್ಯ ವಿಮರ್ಶೆ-ಇವುಗಳಲ್ಲಿ ಪ್ರಾಚೀನಸಾಹಿತ್ಯ ಇಂಗ್ಲಿಷ್, ಗದ್ಯಸಾಹಿತ್ಯದ ಮೇಲೆ ಎಷ್ಟು

ಪ್ರಭಾವ ಬೀರಿದೆ ಎಂದು ವಿಶ್ಲೇಷಿಸುವುದು ಬಹು ಕಷ್ಟದ ಕಾರ್ಯ. ಅಷ್ಟೊಂದು ವ್ಯಾಪಕ, ಸೂಕ್ಷ್ಮ ಈ ಪ್ರಭಾವ. ತಂತ್ರಜ್ಞಾನದ ಭಾಷಾ ಸಂಪತ್ತಿಗೆ ಈ ಭಾಷೆಗಳ ಕೊಡುಗೆಯೂ ಸಮೃದ್ಧ. ಲಾಜಿಕ್ ಫಿಲಾಸಫಿ, ಟ್ರ್ಯಾಜಿಡಿ, ಕಾಮಿಡಿ, ಅಸ್ಟ್ರಾನಮಿ ಮೊದಲಾದ ಪದಗಳೆಲ್ಲ ಗ್ರೀಕ್ ಭಾಷೆಯಿಂದ ಬಂದವು. ಸ್ಯಾಟೈರ್ ಲ್ಯಾಟಿನ್ ಭಾಷೆಯ ಕೊಡುಗೆ. ಪ್ಲೇಟೋ, ಪ್ಲೂಟಾರ್ಕ್ ಮೊದಲಾದ ಗ್ರೀಕ್ ಬರೆಹಗಾರರೂ ಸಿಸಿರೋ, ಸೆನಿಕ, ಕ್ವಿಂಟಿಲಿಯನ್ ಮೊದಲಾದ ಲ್ಯಾಟಿನ್ ಬರೆಹಗಾರರೂ ಇಂಗ್ಲಿಷ್ ಗದ್ಯ ಶೈಲಿಗಳ ಮೇಲೆ ತಮ್ಮ ಪ್ರಭಾವ ಬೀರಿದ್ದಾರೆ.

ಇಂಗ್ಲಿಷ್ ಸಾಹಿತ್ಯದ ಪ್ರಾರಂಭ ಪ್ರ.ಶ. 5ನೆಯ ಶತಮಾನದಲ್ಲಿ ಬ್ರಿಟನ್ನಿಗೆ ಬಂದ ಆಂಗ್ಲೊ-ಸ್ಯಾಕ್ಸನ್ ಧಾಳಿಕಾರರಿಂದಾಯಿತು. ಇವರು ಬರುವಾಗ ಕಾವ್ಯಗಳನ್ನು ತಂದುಕೊಂಡರು. ಆದರೆ ಗದ್ಯಬರೆಹದ ಪರಂಪರೆ ಪ್ರಾರಂಭವಾದದ್ದು ಇಂಗ್ಲೆಂಡಿನಲ್ಲಿಯೇ. ಅಲ್ಲೂ ಬಹುಕಾಲ ಲ್ಯಾಟಿನ್ ಭಾಷೆಯೇ ಬಳಕೆಯಲ್ಲಿತ್ತು. ಇಂಗ್ಲಿಷ್ ಗದ್ಯ ನಿಜವಾಗಿ ಪ್ರಾರಂಭವಾಗುವುದು ಆಲ್ಫ್ರೆಡ್ ರಾಜನ ಕಾಲದಲ್ಲಿ (849–901). ಯುದ್ಧಗಳಲ್ಲಿ ಬಹುಕಾಲ ನಿರತನಾಗಿದ್ದರೂ ಸಂಸ್ಕೃತಿಯ ಬೆಳವಣಿಗೆಯಲ್ಲಿ ವಿಶೇಷ ಆಸಕ್ತಿ ತಳೆದಿದ್ದ ಈ ರಾಜ ಪಾಶ್ಚಾತ್ಯ ಸಂಸ್ಕೃತಿಯ ಫಲ ತನ್ನ ದೇಶದ ತರುಣರಿಗೆ ಲಭ್ಯವಾಗಬೇಕೆಂದು ಬಯಸಿದ. ವಿದ್ವಾಂಸರ ನೆರವಿನಿಂದ ತಾನೇ ಲ್ಯಾಟಿನ್ ಭಾಷೆಯಿಂದ ಹಲವು ಕೃತಿಗಳನ್ನು ಅನುವಾದಿಸಿದ. ಹೀಗೆ ಇಂಗ್ಲಿಷ್ ಭಾಷೆಯಲ್ಲಿ ಗದ್ಯಸಾಹಿತ್ಯ ಮೊಳಕೆ ಇಟ್ಟಿತು. ಅನುವಾದದಲ್ಲಿ ಈತ ಇಂಗ್ಲಿಷ್ ಭಾಷೆಗೆ ಸಹಜವಾದ ಶಬ್ದಜೋಡಣೆಯನ್ನೂ ವಾಕ್ಯರಚನೆಯನ್ನೂ ಧೈರ್ಯವಾಗಿ ಬಳಸಿದ. ಇವನ ಕಾಲದಲ್ಲಿ ಪ್ರಾರಂಭವಾದ ಆಂಗ್ಲೊ-ಸ್ಯಾಕ್ಸನ್ ಕ್ರಾನಿಕಲ್ (ನೋಡಿ) ಮುಖ್ಯವಾದ ಕೃತಿ ಆದರೂ ಒಟ್ಟಿನಲ್ಲಿ ಆಂಗ್ಲೊ-ಸ್ಯಾಕ್ಸನರ ಯುಗದಲ್ಲಿ ಗದ್ಯ ಧಾರ್ಮಿಕ ಉದ್ದೇಶಗಳಿಗೇ ಬಹುಮಟ್ಟಿಗೆ ಬಳಕೆಯಾಗುತ್ತಿತ್ತು.

1066ರಲ್ಲಿ ನಾರ್ಮಂಡಿಯ ವಿಲಿಯಂ ಇಂಗ್ಲೆಂಡನ್ನು ಗೆದ್ದ ಅನಂತರ ಫ್ರೆಂಚು ಆಡಳಿತದ ಭಾಷೆ, ಚರಿತ್ರೆಯ ದಾಖಲೆಗಳ ಭಾಷೆ ಆಯಿತು. ಜನಸಾಮಾನ್ಯಕ್ಕೆ ಉಪದೇಶ ಮಾಡಲು ಇಂಗ್ಲಿಷ್ ಮಾಧ್ಯಮವಾಯಿತು. ಬೈಬಲ್ಲನ್ನು ಮೊಟ್ಟಮೊದಲ ಬಾರಿಗೆ ಇಂಗ್ಲಿಷ್ ಭಾಷೆಗೆ ಅನುವಾದಿಸಿದ ಕೀರ್ತಿ ಜಾನ್ ವಿಕ್ಲಿಫ್‌ನದು (1320 ?–1384). ಧಾರ್ಮಿಕ ಗದ್ಯಸಾಹಿತ್ಯದ ಪ್ರಭಾವದ ಹೊರಕ್ಕೆ ಉಳಿದ ಮುಖ್ಯ ಬರೆಹಗಾರ ಥಾಮಸ್ ಮ್ಯಾಲೊರಿ(1400 ?–1470). ಇವನ ಮಾರ್ಟ್ ಡ ಆರ್ಥರ್‌ನ ಸಂಭಾಷಣೆಯಲ್ಲಿ ಲವಲವಿಕೆಯಿದೆ, ವೃತ್ತಾಂತದಲ್ಲಿ ಗಾಂಭೀರ್ಯವಿದೆ, ಭಾಷೆಯಲ್ಲಿ ವೃತ್ತಾಂತಕ್ಕೆ ಹೊಂದಿಕೊಂಡ ಲಯವಿದೆ.

14ನೆಯ ಶತಮಾನದ ಗದ್ಯಸಾಹಿತ್ಯದಲ್ಲಿ ಆಲ್ಫ್ರೆಡ್‌ನ ಬರೆಹದ ನಿರಾಡಂಬರ ವಾಕ್ಯಬಂಧ ಕಾಣುತ್ತದೆ. ಇದೇ ಕಾಲದಲ್ಲಿ ಫ್ರೆಂಚ್ ಸಾಹಿತ್ಯದ ಪ್ರಭಾವದಿಂದ ಇಂಗ್ಲಿಷ್ ಗದ್ಯದಲ್ಲಿ ಬಿಗಿಯಾದ ಬಂಧವಿಲ್ಲದ, ಉಪವಾಕ್ಯಕ್ಕೆ ಉಪವಾಕ್ಯ ಸೇರಿ ಬೆಳೆದ, ಲಂಬವಾದ ವಾಕ್ಯಗಳೂ ಕಾಣುತ್ತವೆ. ಅಲ್ಫ್ರೆಡ್‌ನ ಗದ್ಯದ ಸಂಪ್ರದಾಯ ಉಳಿಯುವುದೇ ಈ ಹೊಸ ಸಂಪ್ರದಾಯ ಉಳಿಯುವುದೇ ಎಂಬುದು 14ನೆಯ ಶತಮಾನದ ಅಂತ್ಯದಲ್ಲೂ ಪ್ರಶ್ನೆಯಾಗಿಯೇ ಉಳಿಯಿತು.

15ನೆಯ ಶತಮಾನ ಪ್ರಯೋಗಗಳ ಕಾಲ. 1422ರಲ್ಲಿ ಲಂಡನ್ನಿನ ಮದ್ಯವ್ಯಾಪಾರಿಗಳು ತಮ್ಮ ದಾಖಲೆಗಳಲ್ಲಿ ಲ್ಯಾಟಿನ್ ಭಾಷೆಯ ಬದಲು, ಇಂಗ್ಲಿಷ್ ಭಾಷೆಯನ್ನೇ ಬಳಸುತ್ತೇವೆಂದು ತೀರ್ಮಾನಿಸಿದರು. ಇವರು ತಕ್ಕಮಟ್ಟಿಗೆ ವಿದ್ಯಾವಂತರು, ಸಮಾಜದಲ್ಲಿ ಹೊಸದಾಗಿ ಗಣ್ಯತೆ ಪಡೆಯುತ್ತಿದ್ದವರು. ಇವರ ತೀರ್ಮಾನ ಇಂಗ್ಲಿಷಿನ ಬಳಕೆ, ಬೆಳವಣಿಗೆಗಳಿಗೆ ಹೊಸ ಸ್ಫೂರ್ತಿಯನ್ನು ನೀಡಿತು. ವಿದ್ಯೆ ಇಲ್ಲದವರಿಗೆ ಮತ್ತು ಹೆಂಗಸರಿಗೆ ಮಾತ್ರ ಇಂಗ್ಲಿಷ್ ಎನ್ನುವುದು ಹೋಗಿ ಆ ಭಾಷೆಗೆ ಗೌರವ ಪ್ರಾಪ್ತವಾಯಿತು.

15ನೆಯ ಶತಮಾನದ ಗದ್ಯಸಾಹಿತ್ಯದ ಶೈಲಿ ಮೂರು ಬಗೆಯದು. ಒಂದು ನಿತ್ಯಬಳಕೆಯ ಭಾಷೆಗೆ ಸಮೀಪವಾದುದು; ಎರಡನೆಯದು ಲ್ಯಾಟಿನ್ ಮತ್ತು ಫ್ರೆಂಚ್‌ಗಳಿಂದ ಭಾಷಾಂತರ ಮಾಡಿರುವಂತಹುದು; ಇದು ಬಹುಮಟ್ಟಿಗೆ ಯಾಂತ್ರಿಕ. ಮೂರನೆಯದು, ಉದ್ದೇಶಪೂರ್ವಕವಾಗಿ ಪ್ರಯೋಗಗಳನ್ನು ನಡೆಸಿರುವಂತಹುದು. ಇಂಗ್ಲಿಷ್ ಹೆಚ್ಚು ಹೆಚ್ಚಾಗಿ ಲೌಕಿಕ ಬರೆಹಗಳಿಗೆ ಉಪಯೋಗವಾಗಲು ಪ್ರಾರಂಭವಾದದ್ದು ಬಹುಮುಖ್ಯ ಅಂಶ. ವರ್ತಕರು ಮತ್ತು ವೃತ್ತಿಸಂಘಗಳ ಲೆಕ್ಕದ ಭಾಷೆ ಇಂಗ್ಲಿಷ್ ಆಯಿತು. ಬೇಟೆ, ಅಡಿಗೆ, ಶಸ್ತ್ರ ಚಿಕಿತ್ಸೆ, ಶಿಷ್ಟಾಚಾರ–ಹೀಗೆ ಹಲವಾರು ವಿಷಯಗಳನ್ನು ಕುರಿತ ಇಂಗ್ಲಿಷ್ ಪುಸ್ತಕಗಳಿಗೆ ಬೇಡಿಕೆ ಬಂತು. ಬಳಕೆ ಹೆಚ್ಚಾದಂತೆ ಇಂಗ್ಲಿಷ್ ಗದ್ಯಕ್ಕೆ ಬಳುಕು, ಲಾಸ್ಯ, ವೈವಿಧ್ಯ ಲಭ್ಯವಾದುವು.

ಯುರೋಪಿನಲ್ಲಿ ಮೊದಲೇ ಪ್ರಾರಂಭವಾದ ನವೋದಯದ ಅಲೆ ಇಂಗ್ಲೆಂಡಿನ ತೀರವನ್ನು 15ನೆಯ ಶತಮಾನದ ಕಡೆಯ ಭಾಗದಲ್ಲಿ ಮುಟ್ಟಿತು. ಪ್ರಾಚೀನ ಭಾಷೆಗಳಲ್ಲಿನ ಗ್ರಂಥಗಳ ಅಧ್ಯಯನ ಬೆಳೆಯಿತು. ಇದೇ ಕಾಲದಲ್ಲಿ ಯುರೋಪಿನಲ್ಲಿ ಪ್ರಬಲ ಅರಸರು ತಲೆ ಎತ್ತಿದರು. ಆಡಳಿತದ ಸೌಕರ್ಯಕ್ಕಾಗಿ ಲ್ಯಾಟಿನ್ ಭಾಷೆಯಲ್ಲಿ ವಿದ್ವಾಂಸರಾದವರನ್ನು ಅವರು ನೇಮಿಸಿಕೊಂಡರು. 7ನೆಯ ಹೆನ್ರಿ ಯುರೋಪಿನಿಂದ ವಿದ್ವಾಂಸರನ್ನು ಬರಮಾಡಿಕೊಂಡ. ಗಣ್ಯ ಕುಟುಂಬದ ತರುಣನಿಗೆ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಅಭ್ಯಾಸ ಅಗತ್ಯವಾಯಿತು. ಲ್ಯಾಟಿನ್ ಭಾಷೆಯಿಂದ ಸಾವಿರಾರು ಪದಗಳು ಇಂಗ್ಲಿಷ್ ಭಾಷೆಯನ್ನು ಪ್ರವೇಶಿಸಿದುವು. ಸ್ಕೆಲ್ಟನ್, ಎಡ್ವರ್ಡ್‌ಹಾಲ್ ಮೊದಲಾದವರ ಬರೆಹದಲ್ಲಿ ‘ಇಂಕ್‌ಹಾರ್ನ್’ ಪದಗಳೇ ಹೆಚ್ಚೆಂಬ ಆಕ್ಷೇಪಣೆಯೂ ಬಂತು. ಸರ್ ಥಾಮಸ್ ಎಲ್ಯಟ್‌ನಂಥವರು ತಮ್ಮ ಭಾಷೆಯ ಶಬ್ದಸಂಪತ್ತಿನ ಕೊರತೆಯನ್ನು ತುಂಬಿಕೊಳ್ಳಲು ಮಾತ್ರ ಲ್ಯಾಟಿನ್ ಪದಗಳನ್ನು ಬಳಸಿದರು. ಹಲವು ಅಕ್ಷರಗಳ ಲ್ಯಾಟಿನ್ ಪದಗಳು ಇಂಗ್ಲಿಷ್ ವಾಕ್ಯಗಳಲ್ಲಿ ಸೇರಿದಂತೆ ಇಂಗ್ಲಿಷಿಗೆ ಸಹಜವಾದ ಲಯದೊಂದಿಗೆ ಈ ಪದಗಳ ಲಯ ಬೆರೆಯಬೇಕಾಯಿತು. ಈ ಹೊಸ ಲಯದ ಶಿಖರವನ್ನು 16ನೆಯ ಶತಮಾನದಲ್ಲಿ ಹುಕರ್ ಮತ್ತು ಇತರ ಉಪದೇಶಕರ ಭಾಷಣಗಳಲ್ಲಿ ಕಾಣಬಹುದು.

ಈ ಯುಗದಲ್ಲಿ ಸಿಸಿರೋನ ಪ್ರಭಾವ ಕಾಣುತ್ತದೆ. ಹಲವು ಉಪವಾಕ್ಯಗಳನ್ನು ಸೇರಿಸಿ ಎಚ್ಚರಿಕೆಯಿಂದ ಹೆಣೆದ ಲಂಬವಾದ ವಾಕ್ಯಗಳು, ವಾಕ್ಯದ ಕಡೆಯಲ್ಲಿ ಕ್ರಿಯಾಪದದ ಬಳಕೆ, ವಾಕ್ಯದ ಕೊನೆಯವರೆಗೆ ಅರ್ಥದ ಬೆಳವಣಿಗೆ–ಇವನ್ನು ಇಂಗ್ಲಿಷ್ ಗದ್ಯದಲ್ಲಿ ಗುರುತಿಸಬಹುದು. ಇನ್ನು ಕೆಲವರು ಬರೆಹಗಾರರ ಮೇಲೆ ಕ್ವಿಂಟಲಿಯನ್ ಪ್ರಭಾವ ಬೀರಿದ್ದಾನೆ. ಹಲವರಿಗೆ ಇಂಥ ಪ್ರಭಾವ ಉಂಟಾದದ್ದು ದಿ ಆರ್ಟ್ ಆಫ್ ರೆಟೊರಿಕ್ ಬರೆದ ಥಾಮಸ್ ವಿಲ್ಸನ್ನನ (1525–81) ಮೂಲಕ. ಪದಗಳ ನಾದ, ಅಲಂಕಾರಗಳ ಬಳಕೆ ಇವುಗಳಲ್ಲೆ ಸಂಭ್ರಮಪಡುವ ಮನೋಧರ್ಮ ಲಿಲಿಯ ಯೂಫುಯಿಸ್‌ನಲ್ಲಿ(1578) ಕಾಣುತ್ತದೆ. ನಾವೀನ್ಯ ಮಾಸಿದಂತೆ ಈ ಶೈಲಿ ಹಾಸ್ಯಕ್ಕೆ ವಸ್ತುವಾಯಿತು. ಲ್ಯಾಟಿನ್ನಿನ ಮಾದರಿಯನ್ನು ಅನುಸರಿಸಿದರೂ ಸೊಗಸಾದ, ಇಂಗ್ಲಿಷಿನ ಸಹಜ ಲಯಕ್ಕೆ ಹೊಂದಿಕೊಂಡ ಗದ್ಯವನ್ನು ಕ್ರ್ಯಾನ್‌ಮರ್, ಹುಕರ್ ಮೊದಲಾದವರು ಬಳಸಿದರು. 16ನೆಯ ಶತಮಾನದಲ್ಲಿಯೇ ಇಂಗ್ಲಿಷ್ ಭಾಷೆಯ ಶ್ರೀಮಂತಿಕೆಯನ್ನೂ ಸೊಗಸನ್ನೂ ಎತ್ತಿ ಹಿಡಿದು ಓದುಗರಿಗೆ ಪರಿಚಿತವಾದ ಶಬ್ದಗಳನ್ನೂ ವಾಕ್ಯಬಂಧಗಳನ್ನೂ ರೋಜರ್ ಆಸ್ಕಮ್, ಹ್ಯೂ ಲ್ಯಾಟಿಮರ್, ಸರ್ ಥಾಮಸ್ ಮೋರ್ ಮೊದಲಾದವರು ಬಳಸಿದರು. ಈ ಕಾಲದಲ್ಲಿ ಬೈಬಲ್ ಇಂಗ್ಲಿಷ್ ಭಾಷೆಗೆ ಅನುವಾದವಾಯಿತು. ಇವುಗಳಲ್ಲಿ ಟಿಂಡಲ್ ಎಂಬುವನದು ಪ್ರಸಿದ್ಧ. (1611ರಲ್ಲಿ ಬೈಬಲಿನ ಅಧಿಕೃತ ಆವೃತ್ತಿ ಪ್ರಕಟವಾಯಿತು.) ಮುದ್ರಣದ ಸೌಕರ್ಯ ಹೆಚ್ಚಿ ಮನೆಮನೆಯಲ್ಲಿ ಬೈಬಲಿನ ಪ್ರತಿ ಕಂಡುಬಂದಂತೆ, ಅದರಲ್ಲಿನ ಗದ್ಯದ ಪ್ರತಿಮೆಗಳು ಮತ್ತು ಚಿತ್ರಗಳು ಇಂಗ್ಲಿಷ್ ಗದ್ಯದಲ್ಲಿ ಹಾಸುಹೊಕ್ಕಾದವು; ಅದರ ಭಾಷೆ ಮತ್ತು ಲಯಗಳ ಪ್ರಭಾವ ಹೆಚ್ಚಾಯಿತು.

17ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಇಂಗ್ಲಿಷ್ ಭಾಷೆ ಗದ್ಯ ಸಾಹಿತ್ಯದ ಮಾಧ್ಯಮ ಎನ್ನಿಸಿಕೊಂಡಿತು. ಬೇಕನ್ನನ ಪ್ರಬಂಧಗಳು ಇಂಗ್ಲಿಷಿಗೆ ಹೊಸದೊಂದು ಸಾಹಿತ್ಯಪ್ರಕಾರವನ್ನು ತಂದುಕೊಟ್ಟವು. 1660ರವರೆಗಿನ ಅವಧಿಯಲ್ಲಿ ಮೂರು ಪಂಥಗಳನ್ನು ಕಾಣುತ್ತೇವೆ. ಮೊದಲನೆಯದು, ಸಿಸಿರೋನ ಪ್ರಭಾವಕ್ಕೆ ಒಳಗಾದವರದು. ಸರ್ ವಾಲ್ಟರ್ ರ್‍ಯಾಲಿ, ಮಿಲ್ಟನ್ ಈ ಪಂಥದವರು. (ಮುಂದಿನ ಶತಮಾನದ ಗಿಬ್ಬನ್, ಬರ್ಕ್ ಮೊದಲಾದವರು ಉದ್ದವಾದ ವಾಕ್ಯಗಳನ್ನು ಉಳಿಸಿಕೊಂಡರು. ಆದರೆ ಅವರ ವಾಕ್ಯಬಂಧ ಬೇರೆ ರೀತಿಯದು.) ಫ್ರಾನ್ಸಿಸ್ ಬೇಕನ್, ಬೆನ್ ಜಾನ್‌ಸನ್, ಜೋಸೆಫ್ ಹಾಲ್ ಮೊದಲಾದವರು ಲ್ಯಾಟಿನ್ ಗದ್ಯದ ಪ್ರಭಾವಕ್ಕೆ ಒಳಗಾದರೂ ಅವರಿಗೆ ಮಾದರಿಗಳು ಟ್ಯಾಸಿಟಸ್ ಮತ್ತು ಸೆನಿಕ. ಸ್ವತಂತ್ರವಾದ ಸಣ್ಣ ಸಣ್ಣ ವಾಕ್ಯಗಳು, ಇಲ್ಲವೆ ಇಂಥ ವಾಕ್ಯಗಳನ್ನು ಸಡಿಲವಾಗಿ ಜೋಡಿಸಿದ ಮತ್ತೊಂದು ವಾಕ್ಯ – ಇವನ್ನು ಇವರ ಬರೆಹಗಳಲ್ಲಿ ಕಾಣುತ್ತೇವೆ. (1612ರಿಂದಾಚೆ ಕೆಲವು ಬರೆಹಗಳಲ್ಲಿ ಬೇಕನ್ ವೈವಿಧ್ಯಕ್ಕಾಗಿ ಬೇರೊಂದು ಶೈಲಿಯನ್ನು ಬಳಸಿದ; ಇದರಲ್ಲಿ ವಾಕ್ಯರಚನೆಯ ಬಂಧಕ್ಕಿಂತ ತಾರ್ಕಿಕ ಬಂಧ ಮುಖ್ಯ. ಉಪಮಾನ ಮತ್ತು ಪ್ರತಿಮೆಗಳ ಬಳಕೆಯುಂಟು. ಇದನ್ನು ಬರೋಕ್ ಶೈಲಿ ಎನ್ನುತ್ತಾರೆ.) ಮೂರನೆಯದು ನಿರಾಡಂಬರವಾದ, ಆಡು ಮಾತಿನ ಆಧಾರ ಪಡೆದ ಗದ್ಯ. ಜಾನ್ ಬನ್ಯನ್, ಐಸಾಕ್ ವಾಲ್ಟನ್ ಮೊದಲಾದವರ ಗದ್ಯ ಈ ರೀತಿಯದು.

ದೇಶಭ್ರಷ್ಟನಾಗಿ ಫ್ರಾನ್ಸ್‌ನಲ್ಲಿದ್ದ ರಾಜಕುಮಾರ ಚಾರ್ಲ್ಸ್ 1660ರಲ್ಲಿ ಹಿಂದಿರುಗಿದ ಅನಂತರದ ಒಂದು ಶತಮಾನದಲ್ಲಿ ಗದ್ಯ ಅಸಾಧಾರಣವಾದ ಬೆಳವಣಿಗೆಯನ್ನೂ ವೈವಿಧ್ಯವನ್ನೂ ಸಾಧಿಸಿತು. ಇದಕ್ಕೆ ಕಾರಣಗಳು ಹಲವಾರು. ಜನಜೀವನದಲ್ಲಿಯೇ ಹೊಸ ಲವಲವಿಕೆ ಮೂಡಿದುದು ಒಂದು. ಅರಸನೂ ಆಸ್ಥಾನಿಕರೂ ನಾಟಕಗಳಲ್ಲಿ ಆಸಕ್ತಿವಹಿಸಿದುದು ಇನ್ನೊಂದು. ಈ ಕಾಲದಲ್ಲಿ ವಿಜ್ಞಾನದಲ್ಲಿ ಆಸಕ್ತಿ ಹೆಚ್ಚಿತು. ರಾಯಲ್ ಸೊಸೈಟಿಯ ಸ್ಥಾಪನೆಯಾಯಿತು. ಇದು ಪ್ರಸಿದ್ಧ ವಿಜ್ಞಾನಿ ಐಸಾಕ್ ನ್ಯೂಟನ್ (1642–1727) ಮತ್ತು ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಜಾನ್ ಲಾಕ್‌ರ (1632–1704) ಯುಗ. ವೃತ್ತ

ಪತ್ರಿಕೆಗಳೂ ಬೆಳೆದುವಾಗಿ ಓದುಗರ ಸಂಖ್ಯೆ ಹೆಚ್ಚಿತು. ರಾಜಕೀಯ ಪಕ್ಷಗಳ ಸ್ಪರ್ಧೆ ತೀವ್ರವಾಗಿ, ಜನಕ್ಕೆ ರಾಜಕೀಯ ತತ್ತ್ವಗಳ ಚರ್ಚೆಯಲ್ಲಿ ಆಸಕ್ತಿ ಹೆಚ್ಚಿತು. ಹಲವು ವರ್ಷಗಳಿಂದ ಮುಚ್ಚಿಹೋಗಿದ್ದ ನಾಟಕ ಶಾಲೆಗಳು ಮತ್ತೆ ತೆರೆದು, ಗದ್ಯದಲ್ಲಿ ರಚಿತವಾದ ವಿನೋದನಾಟಕಗಳು ಜನಪ್ರಿಯವಾದವು. ಹಿಂದಿನ ಯುಗದಲ್ಲಿ ವಿದ್ವಾಂಸ ಓದುಗರಿಗಾಗಿ ಬರೆಯುತ್ತಿದ್ದ ಲೇಖಕ ಈ ಯುಗದಲ್ಲಿ ಜನಸಾಮಾನ್ಯರಿಗಾಗಿ ಬರೆಯಲಾರಂಭಿಸಿದ. (ತತ್ತ್ವಜ್ಞಾನವನ್ನು ವಿಶ್ವವಿದ್ಯಾನಿಲಯಗಳಿಂದ ಜನಸಾಮಾನ್ಯರ ಮನೆಗಳಿಗೆ ತಾನು ತಂದುಕೊಟ್ಟೆ ಎಂದು ಹೇಳಿದ–ಜೋಸೆಫ್ ಅಡಿಸನ್.) ಮಧ್ಯವರ್ಗ ಮತ್ತು ವರ್ತಕವರ್ಗಗಳು ಪ್ರಾಮುಖ್ಯಕ್ಕೆ ಬರತೊಡಗಿದುವು. ರೆಸ್ಟೊರೇಷನ್ ಯುಗದಲ್ಲಿ ಫ್ಯಾಷನಬಲ್ ವರ್ಗದ ಗಂಡಸರು ಹೆಂಗಸರು ಗಂಟೆಗಟ್ಟಲೆ ನಡೆಸುತ್ತಿದ್ದ ಸಂಭಾಷಣೆಗಳಿಂದ ಗದ್ಯಕ್ಕೆ ಅದೆಷ್ಟು ನಯ ನಾಜೂಕು, ಬಳುಕು, ಹೊಳಪು ಲಭ್ಯವಾದುವು ಎಂಬುದು ವಿಸ್ಮಯದ ಸಂಗತಿ. ಸಮತೋಲ, ವಿರೋಧಕಗಳನ್ನು ಬಳಸಿಕೊಂಡು, ಸ್ಫುಟವಾದ ಬಳುಕುಳ್ಳ, ಲವಲವಿಕೆಯ ಗದ್ಯವನ್ನು ಜಾನ್ ಡ್ರೈಡನ್ ಸೃಷ್ಟಿಸಿದ. ನಿಯತಕಾಲಿಕಗಳಲ್ಲಿ ತಮ್ಮ ಪ್ರಬಂಧಗಳನ್ನು ಪ್ರಕಟಿಸಿದ ಅಡಿಸನ್, ಸ್ಟೀಲ್ ಮೊದಲಾದವರ ಗುರಿ ಸಾಮಾನ್ಯ ಓದುಗರನ್ನು ಆಕರ್ಷಿಸುವುದು ಮತ್ತು ಅವರ ಮನಸ್ಸನ್ನು ಒಲಿಸಿ ಉಪದೇಶಿಸುವುದೇ ಆಗಿತ್ತು. ಇವರದು ಸ್ನೇಹಿತರ ಸಂಭಾಷಣೆಯ ಶೈಲಿ. ಕಾದಂಬರಿ ಪ್ರಕಾರ ರೂಪುಗೊಂಡದ್ದು, ಸೊಗಸಾದ ಗದ್ಯದಲ್ಲಿ ಪತ್ರಲೇಖನ ಬೆಳೆದದ್ದು ಈ ಅವಧಿಯಲ್ಲಿಯೇ.

1760ರಿಂದ ಈಚೆಗೆ ಇಂಗ್ಲೀಷ್ ಗದ್ಯ ಶೈಲಿಯಲ್ಲಿ ಮಾರ್ಪಾಡುಗಳಾಗಿರುವುದನ್ನು ನಾವು ಕಾಣುತ್ತೇವೆ. 1761ರಿಂದ ಈಚೆ ಹೊರಬಂದ ಪ್ರಭಾವೀ ವ್ಯಾಕರಣಗ್ರಂಥಗಳು ಕ್ವಿಂಟಿಲಿಯನ್ನನ ಶೈಲಿಯನ್ನು ಹೊಗಳಿದವು. ಗಂಭೀರ ಬರೆಹದ ಮತ್ತು ವೈಚಾರಿಕ ಬರೆಹದ ಶೈಲಿ ನಿತ್ಯದ ಭಾಷೆಯನ್ನು ಶಬ್ದ, ವಾಕ್ಯಬಂಧ, ಲಯಗಳಿಂದ ಭಿನ್ನವಾಗಿರಬೇಕು ಎಂಬ ಅಭಿಪ್ರಾಯವನ್ನು ಬ್ಲೇರ್‌ನಂಥ ವಿದ್ವಾಂಸರು ವ್ಯಕ್ತಪಡಿಸಿದರು. ಸಾಮ್ಯುಯೆಲ್ ಜಾನ್‌ಸನ್, ಗಿಬ್ಬನ್, ಬರ್ಕ್ ಮೊದಲಾದವರು ಈ ಅಭಿಪ್ರಾಯವನ್ನು ಒಪ್ಪಿದರು. ಇವರದು ಪ್ರಾಚೀನ ಸಾಹಿತ್ಯದ ಪ್ರಭಾವಕ್ಕೆ ಒಳಗಾದ, ನಿತ್ಯ ಜೀವನದ ಭಾಷೆಯಿಂದ ದೂರವಾದ ಶೈಲಿ, ಸಾಮಾನ್ಯ ಓದುಗರಿಗೆ ಅಪರಿಚಿತವಾದ ಲ್ಯಾಟಿನ್ ಶಬ್ದಗಳನ್ನೂ ಸಮತೋಲ, ವಿರೋಧ, ಎಪನಫೋರ(ವಾಕ್ಯದ ಹಲವು ಭಾಗಗಳನ್ನು ಒಂದೇ ರೀತಿ ಪ್ರಾರಂಭಿಸುವುದು) ಮೊದಲಾದ ಅಲಂಕಾರಗಳನ್ನೂ ಇವರು ಬಳಸಿದ್ದಾರೆ. ಅಡಿಸನ್, ಸ್ಟೀಲ್, ಲಾಕ್– ಇವರು ಓದುಗರನ್ನು ತಮ್ಮ ತರ್ಕದಿಂದ ಒಲಿಸಿಕೊಂಡರೆ ಬರ್ಕ್ ತನ್ನ ಕೆಲವು ಕೃತಿಗಳಲ್ಲಿ (ಉದಾಹರಣೆಗೆ ಅಮೆರಿಕವನ್ನು ಕುರಿತ ಭಾಷಣಗಳಲ್ಲಿ) ಮತ್ತು ಗೋಲ್ಡ್‌ಸ್ಮಿತ್ ತನ್ನ ಹಲವು ಪ್ರಬಂಧಗಳಲ್ಲಿ ಓದುಗರನ್ನು ತಮ್ಮ ಭಾವಪೂರ್ಣ ಬರೆಹದಿಂದ ಒಲಿಸಿಕೊಂಡಿದ್ದಾರೆ. ಮುಂದಿನ ರಮ್ಯಯುಗದ ಸೂಚನೆಯನ್ನು ಇಲ್ಲಿಯೇ ಕಾಣಬಹುದು.

18ನೆಯ ಶತಮಾನದ ಕಡೆಯ ಭಾಗದ ಹೊತ್ತಿಗೆ ಮೂರು ಬಗೆಯ ಶೈಲಿಗಳು ರೂಪುಗೊಂಡಿದ್ದವು. ಇವು ಮೂರೂ ಮುಂದಿನ ಗದ್ಯಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಮೊದಲನೆಯದು ಹೆಚ್ಚು ಉಪಮಾನ, ಅಲಂಕಾರಗಳನ್ನು ಬಳಸದೆ ಇರುವ, ನಿತ್ಯಜೀವನದ ಭಾಷೆಗೆ ಸಮೀಪವಾದ ಶೈಲಿ. ಇದನ್ನು ವಿಮರ್ಶಕರು ಕೇಂದ್ರ ಪರಂಪರೆ ಎಂದು ಗುರುತಿಸುತ್ತಾರೆ. ಮುಂದಿನ ಶತಮಾನದಲ್ಲಿ ಜೇನ್ ಆಸ್ಟಿನ್, ಹ್ಯಾಜ್ಲಿಟ್, ನ್ಯೂಮನ್, ಥ್ಯಾಕರೆ ಮೊದಲಾದವರು ಈ ಶೈಲಿಯನ್ನು ಅನುಸರಿಸಿದರು. ಎರಡನೆಯ ಶೈಲಿಗೆ ಕ್ವಿಂಟಿಲಿಯನ್ನನ ಶೈಲಿಯೇ ಮಾದರಿ. ಜ್ಞಾನ ಸಾಹಿತ್ಯದ ಬರೆಹಗಳು ಬಹುಮಟ್ಟಿಗೆ ಈ ಶೈಲಿಯನ್ನು ಬಳಸಿದುವು; ಸರ್ ವಾಲ್ಟರ್ ಸ್ಕಾಟನ್ ಶೈಲಿಯೂ ಈ ಬಗೆಯದೇ ಆಗಿದ್ದು ಓದುಗರ ಭಾವಗಳನ್ನು ಒಲಿಸುವ ರಮ್ಯ ಪ್ರಕಾರಕ್ಕೆ ಸೇರಿದ್ದಾಗಿದೆ. ಲ್ಯಾಮ್, ಡೆಕ್ವಿನ್ಸಿ, ಪೇಟರ್, ರಸ್ಕಿನ್, ಹಾರ್ಡಿ, ಡಿ.ಎಚ್. ಲಾರೆನ್ಸ್, ಜೇಮ್ಸ್ ಜಾಯ್ಸ್ ಈ ಪಂಥಕ್ಕೆ ಸೇರಿದವರು. ಕಾದಂಬರಿ ಜನಪ್ರಿಯವಾದಂತೆ, ಆ ಪ್ರಕಾರದಲ್ಲಿ ಪ್ರಯೋಗಗಳು ಹೆಚ್ಚಿದಂತೆ, ರಮ್ಯಗದ್ಯದ ವೈವಿಧ್ಯವೂ ಹೆಚ್ಚಿತು.

1870ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಇಂಗ್ಲೆಂಡಿನಲ್ಲಿ ಕಡ್ಡಾಯವಾಗಿ ಬಹುವೇಗವಾಗಿ ಹರಡಿತು. ತಂತ್ರಜ್ಞಾನ ಬೆಳೆದಂತೆ ಅಧಿಕ ಸಂಖ್ಯೆಯಲ್ಲಿ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಮುದ್ರಿಸಿ ಸುಲಭ ಬೆಲೆಗೆ ಮಾರುವುದು ಸಾಧ್ಯವಾಯಿತು. ಇದರಿಂದ ಓದುಗರ ಸಂಖ್ಯೆ ಏರತೊಡಗಿತು. ಎಡಿನ್‌ಬರ ರೆವ್ಯೂ, ಕ್ವಾರ್ಟರ್ಲಿ ಮುಂತಾದ 19ನೆಯ ಶತಮಾನದ ಪ್ರಭಾವೀ ಪತ್ರಿಕೆಗಳು ಜಾನ್‌ಸನ್ನನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋದವು. ಗಂಭೀರವಾದ ಅಥವಾ ಶಾಸ್ತ್ರೀಯ ಬರೆಹಕ್ಕೆ ಇದೇ ಉಚಿತವಾದ ಶೈಲಿ ಎಂಬ ಅಭಿಪ್ರಾಯ ಬೆಳೆಯಿತು. ಜೆ.ಎಸ್. ಮಿಲ್, ಚಾರ್ಲ್ಸ್ ಡಾರ್ವಿನ್ ಮೊದಲಾದ ಬೌದ್ಧಿಕ ವರ್ಗದ ಮುಖಂಡರು ಬೆಳೆಸಿದ ಶೈಲಿ ಇದು. ರೊಮ್ಯಾಂಟಿಕ್ ಯುಗದಲ್ಲಿ ವ್ಯಕ್ತಿಗೆ ಹೆಚ್ಚು ಪ್ರಾಧಾನ್ಯ ದೊರೆಯಿತು. ಆ ಯುಗ ಕಳೆದ ಅನಂತರವೂ ಕಾರ್ಲೈಲ್, ರಸ್ಕಿನ್ ಮೊದಲಾದವರ ಬರೆಹಗಳಲ್ಲಿ ರಮ್ಯಗದ್ಯ ಕಾಣುತ್ತದೆ. ಮ್ಯಾಥ್ಯೂ ಆರ್ನಲ್ಡ್, ಬರ್ನಾರ್ಡ್ ಷಾ, ಬರ್ಟ್ರಂಡ್ ರಸೆಲ್ ಮೊದಲಾದವರು ಕೇಂದ್ರಪರಂಪರೆಗೆ ಸೇರಿದವರು.

ಗದ್ಯ ಸಾಹಿತ್ಯದ ಚರಿತ್ರೆಯಲ್ಲಿ ಕಾದಂಬರಿಯ ಪಾತ್ರವನ್ನು ವಿಮರ್ಶಿಸಲು ಒಂದು ಇಡೀ ಪುಸ್ತಕವೇ ಬೇಕಾದೀತು. ಭಾಷೆಯನ್ನು ಒಡೆದು ಅದರ ಸ್ವರೂಪವನ್ನೇ ವಿಶ್ಲೇಷಿಸುವ ಅಸಾಧಾರಣ ಪ್ರಯೋಗಗಳು ಕಾದಂಬರಿ ಮತ್ತು ಸಣ್ಣ ಕತೆಗಳಲ್ಲಿ ನಡೆದಿದೆ. ಇಲ್ಲಿ ಗಮನಿಸಬಹುದಾದ ಒಂದು ಅಂಶ ಎಂದರೆ, ಕಾದಂಬರಿಯಲ್ಲಿ ವರ್ಣನೆ, ವೃತ್ತಾಂತ, ಸಂಭಾಷಣೆ, ವ್ಯಾಖ್ಯಾನ –ಎಲ್ಲ ಬೆರೆಯುವುದರಿಂದ ನಿತ್ಯಬಳಕೆಯ ಭಾಷೆಯನ್ನು ಬಳಸುವ ಕಾದಂಬರಿಕಾರನೂ ಅದರಲ್ಲಿ ಹೆಚ್ಚಿನ ವ್ಯಾಪ್ತಿಯನ್ನೂ ವೈವಿಧ್ಯವನ್ನೂ ಸಾಧಿಸಬಲ್ಲ. ಸಂಭಾಷಣೆಗೆ ಉಪಭಾಷೆಗಳನ್ನೂ ವಿದ್ಯಾವಂತ – ಅವಿದ್ಯಾವಂತ, ಶ್ರೀಮಂತ – ಕಾರ್ಮಿಕ ಮೊದಲಾದ ಎಲ್ಲ ವರ್ಗಗಳ ಭಾಷಾರೀತಿಗಳನ್ನೂ ಬಳಸುವುದು ಸಾಮಾನ್ಯವಾಗಿದೆ. ವೃತ್ತಾಂತ ಭಾಗದಲ್ಲಿ ವಿದ್ಯಾವಂತರ ಭಾಷೆಯೇ ಮುಖ್ಯ. ವರ್ಣನೆಯ ಭಾಗದಲ್ಲಿ ಸಾಮಾನ್ಯವಾಗಿ ಬಳಸುವುದು ರಮ್ಯಶೈಲಿ. 19ನೆಯ ಶತಮಾನದಲ್ಲಿ ಕಾದಂಬರಿಕಾರ ನೇರವಾಗಿ ವ್ಯಾಖ್ಯಾನ ಮಾಡುತ್ತಿದ್ದ. ಇದನ್ನು ತ್ಯಜಿಸಿದ ಅನಂತರ ಕಾದಂಬರಿಕಾರರು ತಮ್ಮ ವ್ಯಾಖ್ಯಾನವನ್ನು ವೃತ್ತಾಂತದಲ್ಲಿ ಅಂತರ್ಗತ ಮಾಡುವ ಪ್ರಯತ್ನದಲ್ಲಿ ಪ್ರತಿಮೆಗಳ ಬಳಕೆ, ವಾಕ್ಯಬಂಧ ಇವುಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಡಾನ್ ವಾಸ್‌ಪೋಸ್. ಜೇಮ್ಸ್ ಜಾಯ್ಸ್, ವಿಲಿಯಂ ಫಾಕ್ನರ್, ವ್ಲಾಡಿಮಿರ್ ನಬಕೊವ್ ಮೊದಲಾದವರ ಪ್ರಯೋಗ ಗಳು– ಇವರಲ್ಲಿ ಕೆಲವರು ಬ್ರಿಟನಿಗೆ ಸೇರಿದವರೇ ಅಲ್ಲ– ಗದ್ಯದ ಮೆಲೆ ಪ್ರಭಾವ ಬೀರದಿರುವುದು ಸಾಧ್ಯವಿರಲಿಲ್ಲ.

20ನೆಯ ಶತಮಾನ ಉಸಿರುಗಟ್ಟಿಸುವ ತಂತ್ರಜ್ಞಾನದ ಯುಗ. ಇದರಿಂದಾಗಿ ಓದುಗರು ಹಲವು ವರ್ಗಗಳಿಗೆ ಸೇರಿದವರು. ಪ್ರಕಾಶಕರು ಹಲವು ಬಗೆಯವರು. ಸಾಹಿತ್ಯದ ವಾಣಿಜ್ಯೀಕರಣವೂ ಗದ್ಯದ ಮೇಲೆ ಪ್ರಭಾವ ಬೀರುವುದು ಅನಿವಾರ್ಯ ವಾಯಿತು. ಎರಡು ಮಹಾಯುದ್ಧಗಳು ಮಾನಸಿಕ ಜಗತ್ತನ್ನು ತಲೆಕೆಳಗೂ ಮಾಡಿಬಿಟ್ಟ ಅನಂತರ ಹೊಸ ಮನೋಧರ್ಮ, ಹೊಸ ಬೇಡಿಕೆಗಳಿಗೆ ಹೊಂದಿಕೊಳ್ಳುವ ಗದ್ಯದ ಬೆಳವಣಿಗೆಯೂ ಅನಿವಾರ್ಯವಾಯಿತು. ಜೀವನಚರಿತ್ರೆ, ಆತ್ಮವೃತ್ತಗಳ ಸಂಖ್ಯೆ ಬೆಳೆದುದು ಅರ್ಥವತ್ತಾದ ಸಂಗತಿ. 20ನೆಯ ಶತಮಾನದ ಪ್ರಾರಂಭದಲ್ಲಿಯೇ ವಿಚಾರ ಸಾಹಿತ್ಯದಲ್ಲಿ ರೂಢಿಯಾಗಿದ್ದ ದೀರ್ಘವಾಕ್ಯಗಳು, ಗಂಭೀರ ಲಯ, ಭಾವಗೀತೆಯಲ್ಲಿನಂಥ ಸ್ಫೋಟಕ ಅಭಿವ್ಯಕ್ತಿ– ಇವು ಕಡಿಮೆಯಾಗಿ ಸ್ಪುಟವೂ ನಿಷ್ಕೃಷ್ಟವೂ ಆದ ಬರೆಹಕ್ಕೆ ಪ್ರಾಧಾನ್ಯ ಬಂತು. ಇದನ್ನು ಮೂರನ ಪ್ರಿನ್ಸಿಪಿಯ ಎಥಿಕ (1905)ದಲ್ಲಿಯೇ ಕಾಣಬಹುದು. ಪ್ರಾಮಾಣಿಕತೆ ಸ್ಫುಟತ್ವ, ನಿಷ್ಕೃಷ್ಟತೆ, ಇವು ಇಂದಿನ ಬರೆಹಗಾರನ ಗುರಿಗಳು. ಪ್ರಜಾಪ್ರಭುತ್ವ, ವಿಜ್ಞಾನ ಎರಡರ ಬೆಳವಣಿಗೆ ಪ್ರಭಾವವನ್ನೂ ಇಂದಿನ ಶೈಲಿಯಲ್ಲಿ ಕಾಣಬಹುದು. ವಿನ್‌ಸ್ಟನ್ ಚರ್ಚಿಲ್‌ನಂಥ (1874–1965) ಕೆಲವೇ ಬರೆಹಗಾರರಲ್ಲಿ ಉದ್ದೇಶಿತ ವಾಗ್ಮಿತೆ, ದೀರ್ಘವಾಕ್ಯಗಳು, ಜಟಿಲ ವಾಕ್ಯಬಂಧ, ನಾದ ಮತ್ತು ಜಟಿಲ ಲಯಗಳಿಗೆ ಗಮನ– ಇವನ್ನು ಕಾಣುತ್ತೇವೆ. ಚೆಸ್ಟರ್‌ಟನ್, 19ನೆಯ ಶತಮಾನದ ಲ್ಯಾಮ್‌ನಂತೆ, ಬಹು ವೈಯಕ್ತಿಕವಾದ, ವಿರುದ್ಧೋಕ್ತಿಯ ವಿಶೇಷ ಬಳಕೆಯ ಶೈಲಿಯನ್ನು ರೂಪಿಸಿಕೊಂಡ. ಆದರೆ ಬರ್ನಾರ್ಡ್ ಷಾನ ಮುನ್ನುಡಿಗಳು, ಟಾಯ್ನ್‌ಬಿ, ಬರ್ಟ್ರಂಡ್ ರಸಲ್ ಮೊದಲಾದವರ ಬರೆಹಗಳಲ್ಲಿ 20ನೆಯ ಶತಮಾನದ ಗದ್ಯ ಕೇಂದ್ರ ಪರಂಪರೆಗೆ ಹಿಂದಿರುಗಿದೆ.

(ಎಲ್.ಎಸ್.ಎಸ್.)

**ಸಂಸ್ಕೃತ ಗದ್ಯ:** ಗದ್ಯ ಎಂಬುದು ಗದ್–ವ್ಯಕ್ತಾಯಾಂ ವಾಚಿ (ಹೇಳುವುದು) ಎಂಬ ಧಾತುವಿಗೆ ಯ (ತ್) ಪ್ರತ್ಯಯ ಸೇರಿಸಿ ಬಂದಿದೆ; ಗದ್ಯವೆಂದರೆ ಹೇಳಲ್ಪಡತಕ್ಕದ್ದು ಎಂದರ್ಥ. ಛಂದೋಬದ್ಧವಾಗಿರುವ ವೃತ್ತರೂಪದ ಪದ್ಯದಿಂದ ಬೇರೆಯಾಗಿರುವುದೆಂದೂ (ವೃತ್ತಗಂಧೋಜ್ಝಿತಂ ಗದ್ಯಂ) ಪಾದರಹಿತವಾದ ಪದವಿನ್ಯಾಸವೆಂದೂ (ಅಪಾದಃಪದ – ಸಂತಾನೋ ಗದ್ಯಂ) ಹೇಳಲಾಗಿರುವ ಒಂದು ಸಂಸ್ಕೃತಕಾವ್ಯ ಪ್ರಕಾರ; ಅದೇ ಸಂಸ್ಕೃತ ಗದ್ಯ. ಪದ್ಯ, ಚಂಪೂ, ನಾಟಕ ಇವು ಉಳಿದ ಪ್ರಕಾರಗಳು. ನಾಟಕ ದೃಶ್ಯಗಳಲ್ಲೂ ಗದ್ಯ ಪದ್ಯ ಚಂಪೂಗಳು ಶ್ರವ್ಯದಲ್ಲೂ ಸೇರಿವೆ.

ಪುರಾತನವಾಗಿರುವ ವೈದಿಕವಾಙ್ಮಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಶ್ರುತಿ ಎನಿಸಿಕೊಂಡಿರುವ ಗ್ರಂಥಗಳಲ್ಲಿ ಮೊದಲನೆಯದಾದ ಋಗ್ವೇದ ಸಂಪೂರ್ಣವಾಗಿ ಛಂದೋಬದ್ಧ ಗ್ರಂಥ; ಸಂಸ್ಕೃತಸಾಹಿತ್ಯದಲ್ಲೇ ಅದು ಪ್ರಾಚೀನತಮ. ಅನಂತರ ಬಂದ ಅಥರ್ವವೇದ, ಕೃಷ್ಣಯಜುರ್ವೇದ, ಬ್ರಾಹ್ಮಣಗಳು, ಉಪನಿಷತ್ತುಗಳು– ಇವುಗಳಲ್ಲಿ ಸರಳವೂ ಹೃದ್ಯವೂ ಆದ ಪ್ರಾಚೀನ ಗದ್ಯವನ್ನು ಕಾಣಬಹುದು. ತರುವಾಯ, ಸ್ಮೃತಿ ಗ್ರಂಥಗಳಲ್ಲಿ ಸೇರಿಸಲ್ಪಟ್ಟಿರುವ ಧರ್ಮಸೂತ್ರಾದಿಗಳು ಬಹುಮಟ್ಟಿಗೆ ಸೂತ್ರರೂಪದ ಗದ್ಯದಲ್ಲಿವೆ. ಅನಂತರ ಮಹಾಭಾರತದಲ್ಲೂ ವಿಷ್ಣುಪುರಾಣ ಮುಂತಾದ ಪುರಾಣ

ಗಳಲ್ಲೂ ಅಲ್ಲಲ್ಲಿ ಗದ್ಯಭಾಗಗಳನ್ನು ಕಾಣಬಹುದು. ಮೇಲ್ಕಂಡ ಗ್ರಂಥಗಳ ಗದ್ಯ ಪ್ರಾಯಶಃ ಕಾವ್ಯನಿಯಮಕ್ಕನುಸಾರವಾಗಿ ರಚಿತವಾಗಿಲ್ಲದಿದ್ದರೂ ಸರಳವೂ ಶಕ್ತಿಯುತವೂ ಆಗಿದೆ.

ಋಗ್ವೇದದ ಛಂದಸ್ಸಿನ ಸಂಪ್ರದಾಯದಿಂದಲೋ ಲೇಖನ ಸೌಕರ್ಯವಿಲ್ಲದೆ ಎಲ್ಲ ಸಾಹಿತ್ಯವನ್ನೂ ಪದ್ಯರೂಪದಲ್ಲಿಟ್ಟು ಸ್ಮರಣೆಗೆ ಸೌಲಭ್ಯವುಂಟುಮಾಡಬೇಕಾಗಿದ್ದ ಕಾರಣದಿಂದಲೋ ಬೇರೆ ಚಾರಿತ್ರಿಕ ಕಾರಣದಿಂದಲೋ ಸಂಸ್ಕೃತ ಗದ್ಯ ರಚನೆ ವಿರಳವಾಗಿ, ಕಷ್ಟವೆಂಬ ಅಭಿಪ್ರಾಯವೂ ಮೂಡಿ ಗದ್ಯಂ ಕವೀನಾಂ ನಿಕಷಂ ವದಂತಿ (ಗದ್ಯವು ಕವಿ ಪರೀಕ್ಷೆಯ ಒರೆಗಲ್ಲು) ಇತ್ಯಾದಿ ಮಾತುಗಳು ರೂಢಿಗೆ ಬಂದಿವೆ. ಅದಕ್ಕೆ ತಕ್ಕಂತೆ ಮುಂದೆ ಸಂಸ್ಕೃತಸಾಹಿತ್ಯದಲ್ಲಿ ಗದ್ಯ ವಿರಳವಾಗಿರುವುದಲ್ಲದೆ, ಅದರ ರಚನೆ ಸುಲಭವಲ್ಲವೆಂಬ ಅಂಶವೂ ಕ್ರಮೇಣ ಬಂದ ಗ್ರಂಥಗಳ ಭಾಷೆ ಶೈಲಿಯಿಂದ ಗೋಚರವಾಗುತ್ತದೆ.

ಸ್ವರೂಪದಲ್ಲಿ ನಿಯಮಿತವಾದ ಸ್ಥಿತಿಯುಳ್ಳ ಗದ್ಯ ಮೊಟ್ಟಮೊದಲು ಪತಂಜಲಿಯ ಮಹಾಭಾಷ್ಯದಲ್ಲಿ (ಪ್ರ.ಶ.ಪೂ.ಸು. 2ನೆಯ ಶತಮಾನ) ಕಂಡುಬರುತ್ತದೆ. ಈ ಗದ್ಯ ಲಲಿತವೂ ಮನೋಹರವೂ ಆಗಿದೆ. ತರುವಾಯ ಬಂದ ಗದ್ಯ ಹಲವಾರು ಉದ್ಗ್ರಂಥಗಳ ಮೇಲಣ ಭಾಷ್ಯಗಳದ್ದು. ಅದರ ರಚನೆಯಲ್ಲಿ ಮನೋಜ್ಞತೆಯ ದೃಷ್ಟಿಯಿಂದ ಗಮನಾರ್ಹ ಪ್ರಗತಿಯನ್ನು ಕಾಣಬಹುದು.

ಸುಮಾರು 2ನೆಯ ಶತಮಾನದಿಂದ ಕಾವ್ಯಸಂದರ್ಭಗಳಲ್ಲಿ ಗದ್ಯದ ಬಳಕೆ ಗೋಚರವಾಗುತ್ತದೆ; ಅದರ ಸಾಧನೆಗಳೆಂದರೆ– ಆ ಕಾಲದ ಕೆಲವು ಶಾಸನಗಳು; ಕ್ರಮೇಣ ಬಂದ ನೀತಿಕಥಾಯುಕ್ತ ಪಂಚತಂತ್ರಾದಿ ಗ್ರಂಥಗಳು; ದಂಡಿಯ ದಶಕುಮಾರ ಚರಿತ, ಸುಬಂಧುವಿನ ವಾಸವದತ್ತಾ, ಬಾಣಭಟ್ಟನ ಕಾದಂಬರಿ ಮತ್ತು ಹರ್ಷಚರಿತ. ಇವುಗಳ ಗದ್ಯದಲ್ಲಿ ಪ್ರಮುಖವಾಗಿ ಎರಡು ಮಾರ್ಗಗಳನ್ನು ಕಾಣಬಹುದು; ಒಂದು, ಹರ್ಷಚರಿತಾದಿ ಅಖ್ಯಾಯಿಕೆಗಳ ಕ್ಲಿಷ್ಟ ಗದ್ಯ; ಮತ್ತೊಂದು, ನೀತಿಕಥೆ ಮುಂತಾದವು ಗಳಿಂದ ಕೂಡಿದ ಪಂಚತಂತ್ರಾದಿಗಳ ಸರಳಗದ್ಯ.

ಹೀಗೆ, ಸಂಸ್ಕೃತಗದ್ಯ ವೈದಿಕ ಕಾಲದಷ್ಟು ಪ್ರಾಚೀನ ಅದರ ಬೆಳೆವಣಿಗೆಯಲ್ಲಿ ಪತಂಜಲಿಯ ಮಹಾಭಾಷ್ಯದ ಮನೋಹರ ಗದ್ಯ ಮುಖ್ಯವಾದ ಒಂದು ಹಂತ. ಅನಂತರ ಇದು ಕ್ರಮಬದ್ಧ ಕಾವ್ಯಸ್ವರೂಪಗಳೆನಿಸಿಕೊಂಡ ಅಖ್ಯಾಯಿಕೆ ಮುಂತಾದ ಕ್ಲಿಷ್ಟಪ್ರಕಾರಗಳಲ್ಲೂ ನೀತಿ ಮುಂತಾದ ಸರಳ ಪ್ರಕಾರಗಳಲ್ಲೂ ಮುಂದುವರಿಯುತ್ತ ವಿರಳವಾಗಿದ್ದರೂ ಸಂಸ್ಕೃತ ಸಾಹಿತ್ಯದ ಅತ್ಯುಪಯುಕ್ತ ಹಾಗೂ ಪ್ರಭಾವಶಾಲಿ ಸ್ವರೂಪಗಳಲ್ಲಿ ಒಂದಾಗಿ ನೆಲೆಗೊಂಡಿದೆ (**ನೋಡಿ–ಸಂಸ್ಕೃತ ಗದ್ಯ ಸಾಹಿತ್ಯ**). (ಬಿ.ಕೆ.ಎಸ್.)

**ಕನ್ನಡದಲ್ಲಿ ಗದ್ಯ ಸಾಹಿತ್ಯ:** ಕನ್ನಡ ಗದ್ಯಸಾಹಿತ್ಯದ ಚರಿತ್ರೆ ಹಲ್ಮಿಡಿ ಶಾಸನದಿಂದ (ಸು.450) ಪ್ರಾರಂಭವಾಗುತ್ತದೆ. ಅಲ್ಲಿಂದ 18ನೆಯ ಶತಮಾನದವರೆಗೆ ಅಸಂಖ್ಯ ಗದ್ಯಶಾಸನಗಳು ದೊರೆಯುತ್ತವೆ. 5ನೆಯ ಶತಮಾನಕ್ಕೂ ಹಿಂದೆ ಗದ್ಯ ಇತ್ತೆನ್ನಲು ಉಪಲಬ್ಧ ಆಧಾರಗಳಿಲ್ಲ. ಎಲ್ಲ ಸಾಹಿತ್ಯದಂತೆ ಕನ್ನಡ ಸಾಹಿತ್ಯವೂ ಪದ್ಯಸಾಹಿತ್ಯದಿಂದ ಪ್ರಾರಂಭವಾಗಿರಬಹುದು. 10ನೆಯ ಶತಮಾನವನ್ನು ಚಂಪೂಯುಗದ ಸುವರ್ಣ ಕಾಲವೆನ್ನಲಾಗಿದೆ. ಪಂಪರನ್ನಾದಿಗಳಲ್ಲಿ ಬರುವ ಗದ್ಯ ಕ್ವಚಿತ್ತಾದರೂ ಗಮನಾರ್ಹ ವಾದುದಾಗಿದೆ. ಉಪಲಬ್ಧ ಗದ್ಯಗ್ರಂಥಗಳಲ್ಲಿ ಮೊದಲನೆಯದು ಪ್ರಮುಖವೂ ಆದದ್ದು ಶಿವಕೋಟ್ಯಾಚಾರ್ಯನ ವಡ್ಡಾರಾಧನೆ (ಸು.920). ಅನಂತರ ಹೆಸರಿಸಬೇಕಾದ ಕೃತಿಯೆಂದರೆ ಚಾವುಂಡರಾಯನ ತ್ರಿಷಷ್ಟಿ ಲಕ್ಷಣ ಮಹಾಪುರಾಣ (ಸು.978). 12ನೆಯ ಶತಮಾನದಲ್ಲಿ ವಿಪುಲವಾಗಿ ನಿರ್ಮಾಣವಾದ ವಚನಸಾಹಿತ್ಯದ ಗದ್ಯ ಕನ್ನಡದಲ್ಲೇ ವಿಶೇಷ ಉಲ್ಲೇಖಕ್ಕೆ ಅರ್ಹವಾದುದಾಗಿದೆ. ಆ ಯುಗದ ಪ್ರಾರಂಭದಲ್ಲಿದ್ದ ಹರಿಹರ ತನ್ನ ರಗಳೆಗಳಲ್ಲಿ ಗದ್ಯಕ್ಕೆ ವಿಚಿತ್ರ ನಿಲುವನ್ನು ತಿರುವನ್ನು ಕೊಟ್ಟಿದ್ದಾನೆ. 17ನೆಯ ಶತಮಾನದಲ್ಲಿ ಗದ್ಯ ಹಿಂದಿಲ್ಲದ ಒಂದು ಪ್ರಾಶಸ್ತ್ಯವನ್ನು ಪಡೆಯಿತು. ಒಡೆಯರ ಕಾಲದ ಸಾಹಿತ್ಯ ಈ ದೃಷ್ಟಿಯಿಂದ ಮುಖ್ಯವೆನಿಸಿದೆ. 17, 18ನೆಯ ಶತಮಾನದ ಬಖೈರುಗಳು, 18, 19ನೆಯ ಶತಮಾನದ ಕಳಲೆ ನಂಜರಾಜ, ದೇವಚಂದ್ರ, ಮುಮ್ಮಡಿ ಕೃಷ್ಣರಾಜ, ಕೆಂಪುನಾರಾಯಣ, ಅಳಿಯ ಲಿಂಗರಾಜ, ಮುದ್ದಣ್ಣ–ಮೊದಲಾದವರ ಕೃತಿಗಳು ಗಮನಾರ್ಹ ಗದ್ಯಕೃತಿಗಳಾಗಿವೆ. 20ನೆಯ ಶತಮಾನ ನಿಜಕ್ಕೂ ಗದ್ಯಸಾಹಿತ್ಯದ ಸುವರ್ಣಯುಗವೇ. ಕಥೆ, ಕಾದಂಬರಿ, ಪ್ರಬಂಧಗಳು, ಜೀವನ ಚರಿತ್ರೆಗಳು, ಪ್ರವಾಸ, ವಿಮರ್ಶೆ–ಹೀಗೆ ವಿವಿಧ ಪ್ರಕಾರಗಳಲ್ಲಿ ಗಣನೀಯ ಕೆಲಸ ನಡೆದಿದೆ. ಟಿ.ಎಸ್. ವೆಂಕಣ್ಣಯ್ಯ, ಎ.ಎನ್.ಮೂರ್ತಿರಾವ್, ಎ.ಆರ್.ಕೃಷ್ಣಶಾಸ್ತ್ರೀ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ದೇಜಗೌ, ಹಾ.ಮಾ.ನಾಯಕ ಮೊದಲಾದ ಅನೇಕರು ಕನ್ನಡಗದ್ಯಕ್ಕೆ ವಿಪುಲವಾದ ಹೊಸ ತಿರುವುಗಳನ್ನೊದಗಿಸಿ ಒಬ್ಬೊಬ್ಬರೂ ವಿಶಿಷ್ಟವಾದ ಶೈಲಿಯೊಂದನ್ನು ರೂಢಿಸಿದ್ದಾರೆ (**ನೋಡಿ– ಕನ್ನಡದಲ್ಲಿ ಗದ್ಯಸಾಹಿತ್ಯ**).*

**ಗನಾಯ್‌ಡೀ :** ಎಲುಬು ಮೀನುಗಳ ಒಂದು ಗುಂಪು. ಗನಾಯ್ಡ್ ಹುರುಪೆಗಳಿರುವುದು ಈ ಮೀನುಗಳ ಪ್ರಮುಖ ಲಕ್ಷಣ. ಇದು ವೈಜ್ಞಾನಿಕವಾಗಿ ಒಂದು ಸ್ವಾಭಾವಿಕ ಗುಂಪಲ್ಲ. ಈ ಗುಂಪಿನ ಅನೇಕ ಜಾತಿಯ ಮೀನುಗಳು ನಶಿಸಿಹೋಗಿ ಈಗ ಕೆಲವೇ ಜಾತಿಯ ಮೀನುಗಳು ಮಾತ್ರ ಜೀವಂತವಾಗಿವೆ. ಉದಾಹರಣೆಗೆ ಸ್ಟರ್ಜನ್ (ಆಸಿಪೆನ್ಸರ್), ಸ್ಪೂನ್ ಬಿಲ್ (*ಪಾಲಿಯೊಡಾನ್*), ಬೋಫಿನ್ (*ಆಮಿಯ*),



ಗಾರ್‌ಪೈಕ್ (*ಲೆಪಿಡಾಸ್ಟಿಯಸ್*) *ಪಾಲಿಪ್ಟೀರಸ್* ಮತ್ತು *ಕಾಲೊಮಿಕ್ಥಿಸ್* ಮೀನುಗಳು. ಇವುಗಳಲ್ಲಿ *ಪಾಲಿಯೊಡಾನ್* ಮತ್ತು *ಆಸಿಪೆನ್ಸರ್* ಜಾತಿಯ ಕೆಲವು ಪ್ರಭೇದಗಳನ್ನುಳಿದು ಮಿಕ್ಕೆಲ್ಲವೂ ಸಿಹಿನೀರಿನ ವಾಸಿಗಳು. ಇವುಗಳ ಗನಾಯ್ಡ್ ಹುರುಪೆಗಳು ಸಮಚೌಕಾಕಾರವುಳ್ಳವು. ಗನಾಯ್ಡ್ ಹುರುಪೆಗಳ ಮೇಲುಪದರದಲ್ಲಿ ಗನಾಯಿನ್ ಎಂಬ ಪದಾರ್ಥವಿರುವುದರಿಂದ ಇವು ಪ್ರಕಾಶಮಾನವಾಗಿರುತ್ತವೆ. ಗನಾಯ್ಡ್ ಮೀನುಗಳು ಕೆಲವು ಲಕ್ಷಣಗಳಲ್ಲಿ ಪ್ರಾಚೀನ ಮೀನುಗಳನ್ನು ಹೋಲುತ್ತವೆ. ಈ ಮೀನುಗಳಲ್ಲಿ ಕಿವಿರುಗಳ ಜೊತೆಗಿರುವ ಗಾಳಿಚೀಲಗಳು ನೀರಿನಲ್ಲಿ ತೇಲಾಡಲು ಸಹಾಯ ಮಾಡುವ ಈಜು ಗಾಯಿ ರೀತಿಯ ಸಹಾಯಕ ಅಂಗವಾಗಿಲ್ಲದೆ ಶ್ವಾಸಾಂಗಗಳಾಗಿವೆ.

ಗನಾಯ್ಡ್ ಹುರುಪೆಗಳನ್ನು *ಆಸಿಪೆನ್ಸರ್* ಮತ್ತು *ಪಾಲಿಯೊಡಾನ್* ಮೀನುಗಳಲ್ಲಿ ಬಾಲದ ರೆಕ್ಕೆಯಲ್ಲೂ *ಆಮಿಯ* ಮೀನಿನಲ್ಲಿ ತಲೆಯ ಮೇಲೂ ಕಾಣಬಹುದು.

ಲೆಪಿಡಾಸ್ಟಿಯಸ್ (ಗಾರ್‌ಪೈಕ್) ಮೀನಿನ ಎರಡು ದವಡೆಗಳೂ ಉದ್ದವಾಗಿರುತ್ತವೆ. ಹೀಗೆ ದವಡೆಗಳು ಚಾಚಿ ಉಂಟಾಗಿರುವ ರಚನೆಗೆ ಗಾರ್ ಎಂದು ಹೆಸರು. ಇದನ್ನು ನೀರಿನಿಂದ ಹೊರಕ್ಕೆ ಚಾಚಿ ಗಾಳಿಯನ್ನು ಸೇವಿಸಲು ಬಳಸುತ್ತದೆ. ಗಾರ್‌ಪೈಕ್ ಮೀನು ಉತ್ತರ ಅಮೆರಿಕದ ಸಿಹಿನೀರಿನ ಸರೋವರಗಳಲ್ಲಿ ವಾಸಿಸುತ್ತದೆ.

*ಪಾಲಿಪ್ಟೀರಸ್* ಜಾತಿಯ ಮೀನುಗಳು ಆಫ್ರಿಕ ಖಂಡದ ನದಿಗಳಲ್ಲಿ ಕಾಣಬರುತ್ತವೆ. ಈಗ ಜೀವಂತವಾಗಿರುವ ಎಲುಬು ಮೀನುಗಳೆಲ್ಲ ಬಹುಪ್ರಾಚೀನ ಗುಣಗಳನ್ನು ಇವು ಪ್ರದರ್ಶಿಸುವುದರಿಂದ ಇವನ್ನು ಜೀವಂತ ಪಳೆಯುಳಿಕೆಗಳು ಎನ್ನುವುದುಂಟು. ಇವುಗಳಲ್ಲಿ ಹಾಲೆಗಳ ರೀತಿಯ ಈಜುರೆಕ್ಕೆಗಳಿವೆ. ಬೆನ್ನಿನ ಒಂಟಿ ಈಜುರೆಕ್ಕೆ ಅನೇಕ ಉಪರೆಕ್ಕೆಗಳಾಗಿ ವಿಂಗಡಣೆಯಾಗಿದೆ. *ಪಾಲಿಪ್ಟೀರಸ್* ಬಿಚಿರ್ ಪ್ರಭೇದ ನೈಲ್‌ನದಿಯ ಕೆಸರು ಭೂಮಿಯಲ್ಲಿ ಆಳವಾದ ಹೋರು ಮತ್ತು ಸಣ್ಣ ಗುಂಡಿಗಳಲ್ಲಿ ವಾಸಿಸುತ್ತದೆ. ಇತರ ಬಗೆಯ ಸಣ್ಣಮೀನುಗಳು ಮತ್ತು ಕಠಿಣ ಚರ್ಮಿಗಳು ಇದರ ಆಹಾರ.

ಕಾಲೊಮಿಕ್ಥಿ ಮೀನುಗಳೂ ಆಫ್ರಿಕಕ್ಕೇ ಸೀಮಿತವಾಗಿವೆ; ಲಘು ಶರೀರದ ಚುರುಕಾದ ಮೀನುಗಳು ಇವು. ಹಾವಿನ ಹಾಗೆ ಬಳಕುತ್ತ ಈಜುತ್ತವೆ. ಮುಂದಿನ ಜೊತೆ ಈಜುರೆಕ್ಕೆಗಳೂ ಬೆನ್ನಿನ ಒಂಟಿ ಈಜುರೆಕ್ಕೆಯೂ ಉಪರೆಕ್ಕೆಗಳಾಗಿ ವಿಭಾಗವಾಗಿವೆ. ಕೀಟಗಳು ಮತ್ತು ಕಠಿಣಚರ್ಮಿಗಳು ಇವುಗಳ ಆಹಾರ. ತೆಂಗು ಜಾತಿಮರಗಳ ಬುಡಗಳಲ್ಲಿ ಇವು ಹಲವು ವೇಳೆ ಕಾಣಬರುವುದರಿಂದ ಇವನ್ನು ಪಾಮ್‌ಮೀನು ಎಂದೂ ಕರೆಯುವುದುಂಟು. (ಎನ್.ವಿ.ಎ.)

**ಗನ್‌ಚೆರಾಫ್, ಇವ್ಯಾನ್ ಅಲೆಕ್ಸಾನ್‌ಡ್ರವಿಚ್ :** 1812–1891. ರಷ್ಯದ ಪ್ರಸಿದ್ಧ ಕಾದಂಬರಿಕಾರ. ಗಣ್ಯ ವರ್ತಕನೊಬ್ಬನ ಮಗ. ಹುಟ್ಟಿದ್ದು ಸಿಂಬಿರ್ಸ್ಕ್‌ನಲ್ಲಿ. ಮಾಸ್ಕೊ ವಿಶ್ವವಿದ್ಯಾಲಯದ ಪದವೀಧರನಾದ ಈತ ಸಿವಿಲ್ ಪರೀಕ್ಷೆಯನ್ನು ಮುಗಿಸಿ ಸಿಂಬಿರ್ಸ್ಕ್ ನಗರದಲ್ಲಿ ಗವರ್ನರನ ಕಾರ್ಯದರ್ಶಿಯಾದ. ಅನಂತರ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ (ಈಗಿನ ಲೆನಿನ್‌ಗ್ರಾಡ್) ಅರ್ಥಶಾಖಾ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ. 1856ರಲ್ಲಿ ಅಡ್ಮಿರಲ್ ಪುಟಿಯಾಟಿನ್‌ರ ಆಪ್ತಕಾರ್ಯದರ್ಶಿಯಾಗಿ ಜಪಾನ್ ಪ್ರವಾಸಮಾಡಿ ಬಂದ. ಅಲ್ಲಿನ ಅನುಭವಗಳು ದಿ ಫ್ರಿಗಟ್ ಪಲ್ಲಾಡ್ (1858) ಎಂಬ ಪ್ರವಾಸ ಕಥನದಲ್ಲಿವೆ. ನಿವೃತ್ತಿಗೆ ಮುನ್ನ ಈತ ಸಾಹಿತ್ಯದ ದೋಷ ವಿಮರ್ಶಕನಾಗಿ (ಸೆನ್ಸಾರ್) ಸರ್ಕಾರದಿಂದ ನೇಮಕಗೊಂಡಿದ್ದ.

30 ವರ್ಷಗಳ ಸರ್ಕಾರಿ ನೌಕರಿಯ ಅವಧಿಯಲ್ಲಿ ಮೂರು ಶ್ರೇಷ್ಠವಾದ ಕಾದಂಬರಿಗಳನ್ನು ಬರೆದುದೇ ಈತನ ಮಹತ್ತರ ಸಾಧನೆ. ಮೊದಲ ಕಾದಂಬರಿ ಓಬಿಕ್ನೊವೆನ್ನಯ ಇಸ್ಟೋರಿಯಾ (1847) ಪ್ರಕಟವಾದುದು ಈತನ 35ನೆಯ ವಯಸ್ಸಿನಲ್ಲಿ. ಇದು ಈತನ ಉತ್ಕೃಷ್ಟ ಕೃತಿಯಲ್ಲವಾದರೂ ವಿಸ್ಸಾರಿಯೊನ್ ಬೆಲಿನ್‌ಸ್ಕಿ

ಎಂಬ ವಿಮರ್ಶಕನಿಂದ ಮನ್ನಣೆ ಪಡೆದು ಸಾಹಿತ್ಯಲೋಕದಲ್ಲಿ ಈತನ ಕೀರ್ತಿಯನ್ನು ಹೆಚ್ಚಿಸಿತು. ಆದರ್ಶವಾದಿ ಯುವಕನೊಬ್ಬ ಮಧುರವಾದ ಗ್ರಾಮ ಜೀವನವನ್ನು ತ್ಯಜಿಸಿ ನಗರಜೀವನವನ್ನು ಅಪ್ಪುವ ಕಥೆ ಈ ಕಾದಂಬರಿಯ ವಸ್ತು. 1849ರಲ್ಲಿ ಓಬ್ಲಮೊವ್‌ನ ಕನಸು ಎಂಬ ಕವನ ಪ್ರಕಟವಾಯಿತು. ಬಾಲ್ಯದ ಸವಿಯನ್ನೂ ಜಮೀನ್ದಾರಿ ಬದುಕಿನ ಸ್ವರ್ಗವನ್ನೂ ಕಳೆದುಕೊಂಡ ವೇದನೆ ಈ ಕವನದಲ್ಲಿ ವ್ಯಕ್ತವಾಗಿದೆ.

1857ರಲ್ಲಿ ಈತನ ಅಮರಕೃತಿ ಎನಿಸಿದ ಓಬ್ಲಮೊವ್ ಪ್ರಕಟವಾಯಿತು. ಇದೊಂದು ಚಿರಂತನ ಕೃತಿ ಎಂದು ಜನರ ಮೆಚ್ಚಿಕೆ ಪಡೆದು ಪ್ರಖ್ಯಾತವಾಯಿತು. ಈಗಲೂ ಇದು ರಷ್ಯನ್ ಸಾಹಿತ್ಯದ ಅತ್ಯಂತ ಶ್ರೇಷ್ಠವಾದ ಆರು ಕಾದಂಬರಿಗಳಲ್ಲಿ ಒಂದೆನಿಸಿದೆ. ಮರ್ಸ್ಕಿ, ಡೊಬ್ರೊಲ್ಯುಬೊವ್, ಪೀಸಾರೆವ್ ಮೊದಲಾದ ಹೆಸರಾಂತ ವಿಮರ್ಶಕರು ಈ ಕಾದಂಬರಿಯ ಗುಣವೈಶಿಷ್ಟ್ಯಗಳನ್ನು ಎತ್ತಿಹಿಡಿದು ಕೊಂಡಾಡಿದ್ದಾರೆ. ಇದರಲ್ಲಿ ರಷ್ಯದ ಯಥಾವತ್ತಾದ ಸಾಮಾಜಿಕ ಚಿತ್ರವಿದ್ದು ಗುಣ–ದೋಷಗಳೆರಡರ ಸಹಜ ನಿರೂಪಣೆಯಿದೆ. ಓಬ್ಲಮೊವ್ ಒಬ್ಬ ಸುಸಂಸ್ಕೃತ ಯುವಕ. ಬಹಳ ಬುದ್ಧಿವಂತ. ಸದ್ಭಾವನೆಗಳಿಂದ ಕೂಡಿದ ಉದಾರ ಹೃದಯಿ. ಅಲಸಿಕೆಯೊಂದೆ ಈತನ ದೌರ್ಬಲ್ಯ. ಯಾವುದನ್ನೂ ಸಾಧಿಸಲಾರದ ನಿಷ್ಕ್ರಿಯತೆ, ಸದಾ ಹಾಯಾಗಿ ಮೈಚಾಚಿಕೊಂಡು ಮಲಗಿರುವ ಈತನ ಸುಖಜೀವನದ ವರ್ಣನೆ ಪುಟಗಟ್ಟಲೆ ಬೆಳೆದಿದೆ. ತಾನು ಪ್ರೀತಿಸುತ್ತಿದ್ದ ಚೆಲುವೆಯನ್ನು ಮದುವೆಯಾಗುವುದಕ್ಕೂ ಆಗದಷ್ಟು ಸೋಮಾರಿಯಾಗಿದ್ದ ಈತ ಕ್ರಮೇಣ ಓಬ್ಲಮೊವಿಸಮ್ ಎಂಬ ತನ್ನದೇ ಆದ ಸಿದ್ಧಾಂತದಲ್ಲಿ ಮುಳುಗಿ ಹೋಗುತ್ತಾನೆ. ರಷ್ಯದಲ್ಲಿ ಈ ಸಿದ್ಧಾಂತ ಸೋಮಾರಿತನಕ್ಕೆ ಇನ್ನೊಂದು ಹೆಸರಾಯಿತು. ಸ್ಲಾವೊನಿಕ್ ಸುಖಾಪೇಕ್ಷೆಯ ಸ್ವಭಾವ ಮತ್ತು ರಷ್ಯದ ಸಾಮಾಜಿಕ ವ್ಯವಸ್ಥೆಗಳ ಸಮ್ಮಿಲನದಿಂದ ಜನಿಸಿದ ಜಾಡ್ಯ ಇದು. ಓಬ್ಲಮೊವ್‌ನ ಈ ಸ್ವಭಾವಕ್ಕೆ ಕಾರಣ ಜೀವನ ವಿಮುಖತೆಯೂ ಅಲ್ಲ; ಔದಾಸೀನ್ಯವೂ ಅಲ್ಲ. ಸರಿ ಯಾವುದು ತಪ್ಪು ಯಾವುದು ಎಂದು ನಿಷ್ಕರ್ಷೆಯಾದ ಹೊರತು ಯಾವ ಮಾರ್ಗವನ್ನೂ ಅನುಸರಿಸಬಾರದೆಂಬ ನೀತಿ, ಅಷ್ಟೆ. ಹೀಗೆ ಈ ಕಾದಂಬರಿಯಲ್ಲಿ ಅನಿಶ್ಚತೆಯಲ್ಲಿ ನಿಷ್ಕ್ರಿಯನಾಗಿ ಕೂತ ಓಬ್ಲಮೊವ್ ನಿರಂತರವಾಗಿ ಚಲಿಸುತ್ತ ಹೋಗುವ ಜಗತ್ತಿನ ಸಂಬಂಧವನ್ನು ಕಡಿದುಕೊಂಡ ಚಿತ್ರಣವಿದೆ.

ಈತನ ಮೂರನೆಯ ಕಾದಂಬರಿ ಓಬ್ರಿವ್ (1869). ಇದರ ಇಂಗ್ಲಿಷ್ ಭಾಷಾಂತರ ದಿ ಪ್ರೆಸಿಪಿಸ್ (1915). ಇದು ರಷ್ಯದ ಒಂದು ಹಿರಿಯಮನೆತನದ ಸುಂದರವಾದ ಕಥೆ. ಮನೆಯ ವಹಿವಾಟನ್ನೆಲ್ಲ ದರ್ಪದಿಂದ ನಡೆಸಿಕೊಂಡು ಬರುವ ಸಹೃದಯಿ ಅಜ್ಜಿಯ ಪಾತ್ರ ಇಲ್ಲಿ ಸ್ಮರಣೀಯವಾಗಿ ಮೂಡಿದೆ. ತನ್ನ ಆಧುನಿಕತೆಯನ್ನೂ ರಸವಂತಿಕೆಯನ್ನೂ ಬಿಡಲಾರದೆ ಹಳೆಯ ಮತ್ತು ಹೊಸ ಮೌಲ್ಯಗಳ ದ್ವಂದ್ವದಲ್ಲಿ ಸಿಕ್ಕಿ ಪೇಚಾಡುವ ಯುವಕನ ಬದುಕೂ ಇಲ್ಲಿ ಚಿತ್ರಿತವಾಗಿದೆ. ಸಂಪ್ರದಾಯದ ಸಂಕೇತದಂತಿರುವ ಅಜ್ಜಿಯ ಪಾತ್ರವನ್ನು ಅಭಿಮಾನಪೂರ್ವಕವಾಗಿಯೂ ಆಧುನಿಕ ನೇತಿವಾದಿಯೋರ್ವನನ್ನು ಹೀಯಾಳಿಸಿಯೂ ಚಿತ್ರಿಸಿರುವುದನ್ನು ಹೊಸ ಪೀಳಿಗೆಯ ಹಲವರು ಖಂಡಿಸಿದ್ದಾರೆ.

ಗನ್‌ಚೆರಾಫ್ ಹಲವು ಸಣ್ಣ ಕಥೆಗಳನ್ನು ಬರೆದಿದ್ದಾನೆ. ವಿಶ್ರಾಂತನಾದ ಬಳಿಕ ಹಳೆಯ ನೆನಪುಗಳನ್ನೂ ಕೆಲವು ವಿಮರ್ಶಾ ಲೇಖನಗಳನ್ನೂ ಈತ ಬರೆದ. 1870ರಲ್ಲಿ ಪ್ರಕಟವಾದ ಎನ್ ಅನ್‌ಕಾಮನ್ ಸ್ಟೋರಿ ಸ್ವಲ್ಪ ವಿಚಿತ್ರವಾದುದೆಂದೇ ಹೇಳಬೇಕು.

ತುರ್ಗನ್ಯೆಫ್ ಮೊದಲಾದವರು ತನ್ನ ಬರೆಹಗಳನ್ನು ಕದ್ದಿದ್ದಾರೆಂಬ ಭ್ರಮೆಗೊಳಗಾಗಿ ಈತ ಅವರ ವಿರುದ್ಧ ಅನೇಕ ಆರೋಪಗಳನ್ನು ಮಾಡಿದ್ದಾನೆ. ಈತ 1891ರಲ್ಲಿ ನಿಧನನಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ.

ಸಾಹಿತ್ಯ ಪ್ರತಿಭೆಯುಳ್ಳ ಈತ ಆಡಳಿತ ಕಾರ್ಯಗಳಲ್ಲೇ ಮಗ್ನನಾಗಿದ್ದುದರಿಂದ ಸಾಮಾಜಿಕ ಸಮಸ್ಯೆಗಳ ಕಡೆ ಅಷ್ಟಾಗಿ ಗಮನ ಹರಿಸಲಿಲ್ಲವೆಂಬುದೂ ಸಮಕಾಲೀನ ಬುದ್ಧಿಜೀವಿಗಳಿಗಿದ್ದಂಥ ಬೌದ್ಧಿಕ ಕುತೂಹಲ ಈತನಲ್ಲಿರಲಿಲ್ಲವೆಂಬುದೂ ಈತನ ಮೇಲಿರುವ ಎರಡು ಮುಖ್ಯ ಆಕ್ಷೇಪಗಳು. (ಕೆ.ಬಿ.ಪಿ.)

**ಗಪ್ಪಿ ಮೀನು :** ಸಿಪ್ರಿನಿಡಾಂಟಿಫಾರ್ಮೀಸ್ ಗಣದ ಪೋಯಿಸಿಲಿಡೀ ಕುಟುಂಬಕ್ಕೆ ಸೇರಿದ ಲೆಬಿಸ್ಟೀಸ್ ರೆಟಿಕ್ಯುಲೇಟಸ್ ಎಂಬ ವೈಜ್ಞಾನಿಕ ಹೆಸರುಳ್ಳ ಮೀನಿನ ಜನಪ್ರಿಯ ಹೆಸರು. ಟ್ರಿನಿಡಾಡ್‌ನಲ್ಲಿದ್ದ ರಾಬರ್ಟ್ ಎಲ್. ಗಪ್ಪಿ ಎಂಬಾತ 1866ರಲ್ಲಿ ಮೊದಲ ಬಾರಿಗೆ ಇದನ್ನು ನೋಡಿ ಇದರ ಬಗ್ಗೆ ವಿಷಯ ಸಂಗ್ರಹಿಸಿ ವರದಿ ಮಾಡಿದ. ಆದ್ದರಿಂದ ಅವನ ಗೌರವಾರ್ಥವಾಗಿ ಇದಕ್ಕೆ ಗಪ್ಪಿ ಎಂದು ಹೆಸರು ಬಂದಿತು.



ವೆನಜುವೇಲ, ಲೆಸ್ಸರ್ ಆಂಟಿಲ್ಲಿಸ್ ಮತ್ತು ದಕ್ಷಿಣ ಅಮೆರಿಕದ ಉತ್ತರ ಭಾಗದ ಸಿಹಿನೀರಿನ ಕೊಳ, ಕೆರೆ, ನದಿಗಳಲ್ಲಿ ಇದು ವಾಸಿಸುತ್ತದೆ. ಜಲೋದ್ಯಾನದ ಕೃತಕ ಪರಿಸರಕ್ಕೂ ಹೊಂದಿಕೊಂಡು ಜೀವಿಸುವುದರಿಂದ ಇದನ್ನು ಜಲೋದ್ಯಾನಗಳಲ್ಲಿ (ಅಕ್ವೇರಿಯಂ) ಸಾಕುವುದುಂಟು.

ಗಾತ್ರದಲ್ಲಿ ಬಲು ಪುಟ್ಟ ಮೀನಿದು. ಗಂಡು ಸುಮಾರು 7.5–10 ಸೆಂ.ಮೀ ಉದ್ದವೂ, ಹೆಣ್ಣು ಮೀನು 2.5–3.25 ಸೆಂ.ಮೀ ಉದ್ದವೂ ಇರುತ್ತದೆ. ಗಂಡು ಮೀನುಗಳು ಅತ್ಯಾಕರ್ಷಕ ಬಣ್ಣಗಳಿಂದ ಕೂಡಿರುತ್ತದೆ. ಅತ್ಯಂತ ವರ್ಣರಂಜಿತ, ಕೆಂಪು, ಕಿತ್ತಳೆ, ಹಳದಿ, ಹಸಿರು, ಊದಾ ಬಣ್ಣಗಳ ಹಿನ್ನೆಲೆಯಲ್ಲಿ ಕಪ್ಪು ಚುಕ್ಕೆಗಳಿಂದ ಕೂಡಿರುತ್ತದೆ. ಗಂಡಿನ ದೇಹದ ಬಣ್ಣ ಅನುವಂಶಿ ಮಾತ್ರವಲ್ಲ ಹಾರ್ಮೋನುಗಳ ನಿಯಂತ್ರಣಕ್ಕೂ ಒಳಪಟ್ಟಿದೆ ಎನ್ನಲಾಗಿದೆ. ಹೀಗಾಗಿ ಈ ಮೀನುಗಳನ್ನು ಅನುವಂಶಿಕ ಅಧ್ಯಯನಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ. ಈ ಮೀನುಗಳ ಈಜು ರೆಕ್ಕೆಗಳು ಬಹಳ ಆಕರ್ಷಕವಾಗಿದ್ದು ವಿವಿಧ ಆಕಾರದಲ್ಲಿ ಇರುತ್ತವೆ. ಇದರಿಂದಾಗಿ ಈ ಮೀನು ಹೆಚ್ಚು ಜನಪ್ರಿಯವಾಗಿವೆ. ಈ ಮೀನು ಜರಾಯುಜ. ಹೆಣ್ಣು ಮೀನು 3 ತಿಂಗಳು ವಯಸ್ಸಾದ ಅನಂತರ ಪ್ರೌಢಾವಸ್ಥೆ ತಲುಪುತ್ತವೆ. ಗಂಡು ಮೀನು ತನ್ನ ಗುದದ ಈಜುರೆಕ್ಕೆಯ ಮಧ್ಯ ಇರುವ ಗೋನೋಪೋಡಿಯಂನ ಸಹಾಯದಿಂದ ನಿಷೇಚನ ಕ್ರಿಯೆ ನಡೆಸುತ್ತದೆ. ಭ್ರೂಣದ ಬೆಳವಣಿಗೆ ಹೆಣ್ಣಿನ ಅಂಡಾಶಯದ ಫಾಲಿಕಲ್‌ನಲ್ಲಿ ನಡೆಯುತ್ತದೆ. ಗರ್ಭಾವಸ್ಥೆಯ ಕಾಲ ಸುಮಾರು 28 ದಿನಗಳು. ಒಂದು ಬಾರಿಗೆ 25–50 ಮರಿಗಳಿಗೆ ಜನ್ಮ ನೀಡುತ್ತವೆ. ಮರಿ ಹಾಕಲು ವರ್ಷದಲ್ಲಿ ನಿರ್ದಿಷ್ಟ ಸಮಯವೇನೂ ಇಲ್ಲ.

ಗಪ್ಪಿ ಮೀನು ಮುಖ್ಯವಾಗಿ ಕೀಟಾಹಾರಿ. ಇತರ ಬಗೆಯ ಆಹಾರವನ್ನು ತಿನ್ನುವುದುಂಟು. ಕೆಲವು ವೇಳೆ ಇದು ಸ್ವಜಾತಿ ಭಕ್ಷಕವೂ ಹೌದು. ಎಷ್ಟೋ ವೇಳೆ ತನ್ನಮರಿಗಳನ್ನೇ ತಿಂದುಬಿಡುತ್ತದೆ. ಸೊಳ್ಳೆ ಮತ್ತು ಸೊಳ್ಳೆ ಮರಿಗಳನ್ನು ತಿನ್ನುವುದರಿಂದ ಸೊಳ್ಳೆ ನಿಯಂತ್ರಣಕ್ಕೆ ಇವುಗಳನ್ನು ಬಳಸುವುದುಂಟು. (ಜಿ.ಎಸ್.ಎಚ್.ಐ.; ಟಿ.ಎಸ್.ವಿ.)

**ಗಬೆಲ್ಸ್, ಜೋಸೆಫ್ :** 1897–1945. ಜರ್ಮನಿಯ ಒಬ್ಬ ರಾಜಕಾರಣಿ. ಜರ್ಮನ್ ರಾಷ್ಟ್ರೀಯ ಸಮಾಜವಾದಿ (ನಾಜಿ) ಪಕ್ಷದ ಪ್ರಮುಖ ಪ್ರಚಾರಕ. ಇವನ ಪೂರ್ಣ ಹೆಸರು ಪಾಲ್ ಜೋಸೆಫ್ ಗಬೆಲ್ಸ್. ಇವನು 1897ರ ಅಕ್ಟೋಬರ್ 29 ರಂದು, ರೈನ್‌ಲ್ಯಾಂಡಿನ ರೆಯ್ಡ್‌ನಲ್ಲಿ ಜನಿಸಿದ. ತಂದೆ ಒಬ್ಬ ಶ್ರಮಜೀವಿ. ಪೋಲಿಯೋ ವ್ಯಾಧಿಯಿಂದಾಗಿ ಗಬೆಲ್ಸ್ ಕುಂಟನಾಗಿದ್ದುದರಿಂದ ಅವನು ಸೈನ್ಯ ಸೇರಲಾಗಲಿಲ್ಲ. ಬಾನ್ ಮತ್ತು ಹೈಡೆಲ್ ಬರ್ಗ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ ಡಾಕ್ಟೊರಲ್ ಪದವಿ ಪಡೆದು ಪ್ರತಿಕೋದ್ಯಮಿಯಾದ (1921). ನಾಜಿ ಮುಖಂಡ ಗ್ರೆಗೊರ್ ಸ್ಟ್ರಾಸರನ ಕಾರ್ಯದರ್ಶಿಯಾಗಿ ಕೆಲಸಮಾಡಿದ (1925). ಹಿಟ್ಲರನಿಗೂ ಸ್ಟ್ರಾಸರನಿಗೂ ವಿರಸ ಬೆಳೆದಾಗ ಗಬೆಲ್ಸ್ ಹಿಟ್ಲರನ ಕಡೆ ಸೇರಿದ (1926). ಇದಕ್ಕಾಗಿ ಅವನಿಗೆ ಬಹುಮಾನ ಕಾದಿತ್ತು. ಬರ್ಲಿನ್ ಜಿಲ್ಲಾ ಪಕ್ಷನಾಯಕನಾಗಿ ಅವನನ್ನು ಹಿಟ್ಲರ್ ನೇಮಿಸಿದ. ಗಬೆಲ್ಸ್‌ನ ಪ್ರಚಾರಶಕ್ತಿ, ಚಳುವಳಿಯ ಸಾಮರ್ಥ್ಯ ಆಗ ಬೆಳಕಿಗೆ ಬಂದುವು. 1928ರಲ್ಲಿ ಗಬೆಲ್ಸ್ ರೀಕ್‌ಸ್ಟ್ಯಾಗ್ ಸಭೆಗೆ ಆಯ್ಕೆ ಹೊಂದಿದ. ಪಕ್ಷ ಪ್ರಚಾರಕಾರ್ಯದ ಹೊಣೆ 1929ರಲ್ಲಿ ಅವನದಾಯಿತು. ನಾಜಿ ಪಕ್ಷ ಪ್ರಬಲವಾಗಲು ಗಬೆಲ್ಸ್ ಎಲ್ಲ ತಂತ್ರಗಳನ್ನೂ ಬಳಸಿದ. ಹೊಡೆ ದಾಟವೊಂದರಲ್ಲಿ ಮೃತನಾದ ನೀತಿಹೀನನೊಬ್ಬ ಗೀಚಿದ್ದ ಪದ್ಯವನ್ನು ಪಕ್ಷದ ಗೀತೆಯಾಗಿ ಗಬೆಲ್ಸ್ ಆರಿಸಿಕೊಂಡ. ಗಬೆಲ್ಸ್‌ನ ಪ್ರಚಾರದಿಂದಾಗಿ ಪಕ್ಷದ ಸದಸ್ಯರ ಸಂಖ್ಯೆ ಹೆಚ್ಚಿತು. ಅದು ಅತ್ಯಂತ ಪ್ರಬಲವಾಯಿತು. ಹಿಟ್ಲರ್ ಅಧಿಕಾರರೂಢನಾಗಲು ಗಬೆಲ್ಸ್ ಬಹುಮಟ್ಟಿಗೆ ಕಾರಣ. ಅಲ್ಲಿಂದ ಮುಂದೆ ಗಬೆಲ್ಸನ ಪ್ರಭಾವ ಬಹಳ ಹೆಚ್ಚಿತು. ಪ್ರಚಾರ ಕಾರ್ಯಕ್ಕೆ ರಾಷ್ಟ್ರದ ಎಲ್ಲ ಸಾಧನಗಳೂ ಅವನಿಗೆ ಒದಗಿಬಂದವು. ಅವನಿಗೆ

ಯಾವ ನೀತಿ ನಿಯಮಗಳೂ ಇರಲಿಲ್ಲ. ಅವನೊಬ್ಬ ಶೂನ್ಯವಾದಿ. ರೇಡಿಯೋ, ಚಲನಚಿತ್ರ ಮುಂತಾದ ಸಾಧನಗಳನ್ನು ಎಷ್ಟರಮಟ್ಟಿಗೆ ಪಕ್ಷದ ಉದ್ದೇಶ ಸಾಧನೆಗೆ ಬಳಸಿಕೊಳ್ಳಬಹುದೆಂಬುದನ್ನು ಅರಿತುಕೊಂಡ ಗಬೆಲ್ಸ್ ಈ ವಿದ್ಯೆಯಲ್ಲಿ ಎಲ್ಲರನ್ನೂ ಮೀರಿಸಿದ. ಯೆಹೂದ್ಯರ ವಿರುದ್ಧವಾಗಿ ವಿಷಪ್ರಚಾರದ ಹೊಳೆಯೇ ಹರಿಯಿತು.

ಗಬೆಲ್ಸ್ 1931ರಲ್ಲಿ ಮ್ಯಾಗ್ಡ ಕ್ವಾಂಟಳೊಂದಿಗೆ ವಿವಾಹವಾದ. ಅವಳಲ್ಲಿ ಅವನಿಗೆ ಆರು ಮಕ್ಕಳಾದವು. ಆದರೆ ಅನೇಕ ಹೆಂಗಸರೊಂದಿಗೆ ಅವನು ಅಕ್ರಮ ಸಂಬಂಧ ಹೊಂದಿದ್ದನೆಂದೂ ಒಮ್ಮೆ ಪರಿಸ್ಥಿತಿ ತುಂಬ ಕೆಟ್ಟು, ಅವನ ಹೆಂಡತಿ ವಿವಾಹವಿಚ್ಛೇದನ ಮಾಡಿಕೊಳ್ಳಬೇಕೆಂದು ತೀರ್ಮಾನಿಸುವ ಘಟ್ಟ ಮುಟ್ಟಿದಾಗ ಹಿಟ್ಲರ್ ನಡುವೆ ಪ್ರವೇಶಿಸಿ ಅದನ್ನು ತಪ್ಪಿಸಿ ಗಬೆಲ್ಸನಿಗೆ ಬುದ್ಧಿ ಹೇಳಿದನೆಂದೂ ತಿಳಿದುಬರುತ್ತದೆ.



ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನಿಯ ಸಾಧನೆಗಳನ್ನು ಕ್ರೋಡೀಕರಿಸಲು ತೀವ್ರಕ್ರಮಗಳನ್ನು ಕೈಗೊಳ್ಳಬೇಕೆಂದು ಇವನು ಭಾವಿಸಿದ್ದ. ರಷ್ಯದ ವಿರುದ್ಧ ಅತೃಪ್ತಿ ಬೆಳೆಸುವ ಪ್ರಚಾರ ಕೈಗೊಂಡ ಗಬೆಲ್ಸ್ ಕೊನೆಕೊನೆಗೆ ಜರ್ಮನಿಯ ಸ್ಥಿತಿ ಕೆಟ್ಟಾಗ ರಷ್ಯದೊಡನೆ ಒಪ್ಪಂದ ಮಾಡಿಕೊಳ್ಳಲು ಯತ್ನಿಸಿದ. ಅದು ಫಲಿಸದಿದ್ದಾಗ ಅವನು ಇನ್ನೂ ಕಟುವಾದ. ಬರ್ಲಿನ್ ನಗರ ಧಾಳಿಗೆ ಒಳಗಾದಾಗ ಗಬೆಲ್ಸ್ ಅಲ್ಲೇ ಇದ್ದು ನಗರಾಡಳಿತ ಕಾರ್ಯ ಮುಂದುವರಿಸಿದ. ಶರಣಾದರೆ ನಿಮ್ಮ ಗತಿ ತೀರಿತು–ಎಂದು ಜನರನ್ನು ಹೆದರಿಸಿ ಯುದ್ಧಕ್ಕೆ ಹುಸಲಾಯಿಸಿದ. ಜಿನೀವ ಒಡಂಬಡಿಕೆಯನ್ನು ತಿರಸ್ಕರಿಸಿ, ಸೆರೆ ಸಿಕ್ಕ ವೈಮಾನಿಕರನ್ನು ಗುಂಡಿಟ್ಟು ಕೊಲ್ಲಬೇಕೆಂಬುದು ಅವನ ಬೋಧನೆಯಾಗಿತ್ತು. ಹಿಟ್ಲರನ ಪ್ರಾಣ ತೆಗೆಯುವ ಸಂಚು ವಿಫಲವಾದ ಮೇಲೆ (1944ಜುಲೈ 20) ಹಿಟ್ಲರ್ ಗಬೆಲ್ಸನಿಗೆ ಯುದ್ಧಕಾರ್ಯಕ್ಕಾಗಿ ಜನಧನಬಲವನ್ನೆಲ್ಲ ಸಜ್ಜುಗೊಳಿಸುವ ಪೂರ್ಣ ಅಧಿಕಾರ ನೀಡಿದ. 1945ರ ಏಪ್ರಿಲ್ ಬಂತು. ಹಿಟ್ಲರ್ ಬರ್ಲಿನಿನ ತನ್ನ ಕಚೇರಿ ಬಿಟ್ಟು ಹೊರಬರಬಾರದೆಂದು ಗಬೆಲ್ಸ್ ಕೇಳಿಕೊಂಡ. ಏನಾದರೂ ಪವಾಡ ಸಂಭವಿಸಿ ಹಿಟ್ಲರ್ ಅಂತಿಮ ವಿಜಯ ಸಾಧಿಸುವನೆಂಬುದು ಗಬೆಲ್ಸನ ಭ್ರಮೆಯಾಗಿತ್ತು. ಆದರೆ ಅಂಥದೇನೂ ಆಗಲಿಲ್ಲ. ತನ್ನ ಅನಂತರ ಗಬೆಲ್ಸ್ ಚಾನ್ಸಲರ್ ಆಗತಕ್ಕದ್ದೆಂದು ಹಿಟ್ಲರ್ ತನ್ನ ಉಯಿಲಿನಲ್ಲಿ ಸೂಚಿಸಿದ್ದನಾದರೂ ಹಿಟ್ಲರ್ ಸತ್ತ ಮರುದಿನ ಗಬೆಲ್ಸ್ ಮತ್ತು ಅವನ ಪತ್ನಿ ಮ್ಯಾಗ್ಡ ತಮ್ಮ ಮಕ್ಕಳಿಗೂ ವಿಷಹಾಕಿ ಕೊಂದರು. ನಂತರ ಗಬೆಲ್ಸ್ ಸೇವಕ ಇವರಿಬ್ಬರ ಕೋರಿಕೆಯಂತೆ ಇವರಿಗೆ ಗುಂಡು ಹೊಡೆದು ಸಾಯಿಸಿದ (1945ರ ಮೇ 1). ಗಬೆಲ್ಸನ ದಿನಚರಿ 1948ರಲ್ಲಿ ಪ್ರಕಟವಾಯಿತು.

(ಎ.ಎಂ.ಆರ್.)

**ಗಬ್ಬೂರು :** ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಒಂದು ಗ್ರಾಮ, ಐತಿಹಾಸಿಕ ಸ್ಥಳ, ಹೋಬಳಿ ಕೇಂದ್ರ ದೇವದುರ್ಗಕ್ಕೆ ಆಗ್ನೇಯದಲ್ಲಿ, ರಾಯಚೂರು ಮಾರ್ಗದಲ್ಲಿದೆ. ಈ ಗ್ರಾಮಕ್ಕೆ ಗೊಬ್ಬೂರು ಎಂಬ ಹೆಸರೂ ಇದೆ. ಇದು 12–13ನೆಯ ಶತಮಾನಗಳಲ್ಲಿ ಗೋಪುರ ಗ್ರಾಮ ಎಂಬ ಹೆಸರಾಗಿದ್ದ ಅಗ್ರಹಾರ ಮತ್ತು ವಿದ್ಯಾಕ್ಷೇತ್ರವಾಗಿತ್ತು. ಇಲ್ಲಿ ಚಂಡಿ ದರ್ವಾಜ ಎಂಬ ಹಳೆಯ ದ್ವಾರವೂ ಅನೇಕ ದೇವಾಲಯಗಳೂ ಶಿಲಾಶಾಸನಗಳೂ ಇವೆ. ಮಲೇಶಂಕರ, ವೆಂಕಟೇಶ್ವರ, ಈಶ್ವರ, ಬಂಗಾರ ಬಸಪ್ಪ ಮತ್ತು ಹನುಮಂತ ದೇವಾಲಯಗಳು ಮುಖ್ಯವಾದವು. ಮಲೇಶಂಕರ ದೇವಾಲಯದಲ್ಲಿಯ ಹೊರಭಾಗದ ಕೆತ್ತನೆಯ ಕೆಲಸ ಮತ್ತು ಕಲ್ಲಿನಲ್ಲಿ ಕೊರೆದ ಆನೆಗಳು ನೋಡತಕ್ಕವು. ಇದರ ಪೂರ್ವಕ್ಕೆ ಇರುವ ಕಲ್ಯಾಣಿಯನ್ನು ಸಾತ್ ಬಾವಡಿ ಎಂದು ಕರೆಯುತ್ತಾರೆ. ಗಣ್ಣಿಗುಡಿ ಮಠದ ಮಹಾದ್ವಾರದ ಕೆತ್ತನೆ ಕೆಲಸ ಬಹಳ ಸುಂದರವಾಗಿದೆ. ಒಂದು ಕಾಲದಲ್ಲಿ ಊರ ಸುತ್ತಲೂ ಇದ್ದ ಕೋಟೆಯ ಅವಶೇಷಗಳು ಕಾಣಸಿಗುತ್ತವೆ. ಕಲ್ಯಾಣ ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದ ಸು. 1109ರ ಶಾಸನದ ಪ್ರಕಾರ (ಈ ಶಾಸನ ಈಗ ಹೈದರಾಬಾದಿನಲ್ಲಿರುವ ಪುರಾತತ್ತ್ವ ವಸ್ತು ಸಂಗ್ರಹಾಲಯದಲ್ಲಿದೆ) ಬ್ರಹ್ಮಜಿನಾಲಯವೆಂಬ ಜೈನ ಮಂದಿರವೊಂದು ಇಲ್ಲಿದ್ದಿತ್ತು. ಅಂದು ಈ ಊರಿಗೆ ಹಿರಿಯ ಗೊಬ್ಬೂರು ಎಂಬ ಹೆಸರಿತ್ತೆಂದು ತಿಳಿದು ಬರುತ್ತದೆ. ಬಂಗಾರ ಬಸಪ್ಪನ ಗುಡಿಯಲ್ಲಿ ಒಂದು ಶಾಸನವೂ ಗಣೇಶನ ಮತ್ತು ಎರಡು ನಂದಿಗಳ ವಿಗ್ರಹಗಳೂ ಇವೆ. ಜೇಡರ ದಾಸಿಮಯ್ಯನ ಶಿಷ್ಯ ಮತ್ತು ಪುತ್ರ ಇಲ್ಲಿಯ ಗಣೇಶ್ವರ ದೇವರಿಗೆ ದತ್ತಿ ಕೊಟ್ಟಿರುವ ಉಲ್ಲೇಖ ಇಲ್ಲಿಯ ಇನ್ನೊಂದು ಶಾಸನದಲ್ಲಿದೆ. (ಜೆ.ಆರ್.ಪಿ.)

**ಗಮಕ ಕಲೆ :** ಸಾಹಿತ್ಯಕ್ಕೆ ಸಂಗೀತವನ್ನು ಬೆರೆಸಿ ಅದರ ಮಾಧುರ್ಯವನ್ನು ಇಮ್ಮಡಿಗೊಳಿಸುವ ಕಲೆ. ಒಂದರ್ಥದಲ್ಲಿ ಕಾವ್ಯರಸ–ಗಾನರಸಗಳ ಮೈತ್ರಿಯುಳ್ಳದ್ದು. ಇದನ್ನರಿತ ಕಲೆಗಾರನೇ ಗಮಕಿ ಅಥವಾ ಕಾವ್ಯವಾಚಕ.

ಗಮಕ ಕಲಾಪ್ರಕಾರವು ಸಾಕಷ್ಟು ಪ್ರಾಚೀನವಾದದ್ದು. ಆದಿಕಾವ್ಯಮಿದಂ ಪ್ರೋಕ್ತಂ ಪುರಾವಾಲ್ಮೀಕಿನಾಕೃತಮ್ ಎನ್ನುವ ರಾಮಾಯಣದ ಕಾವ್ಯ ಕರ್ತೃ ವಾಲ್ಮೀಕಿಯಾದಂತೆ, ಆತ ರಾಮಾಯಣವನ್ನು ಹಾಡಿಸಿದ ಲವಕುಶರು ಆದಿಗಮಕಿಗಳು. ಗ್ರಾಮೀಣ ಪರಿಸರವೇ ಪ್ರಮುಖವಾಗಿ ಇರುವ ಕರ್ನಾಟಕದಲ್ಲಿ ಕಾವ್ಯದ ಜತೆಜತೆಗೇ ಅರಳಿದ ಜಾನಪದ, ಜನಪದ ಸಾಹಿತ್ಯ ಆ ಮೂಲಕ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್.... ಎಂಬುದಾಗಿ ಕವಿರಾಜಮಾರ್ಗ ಕರ್ತೃ ಅಭಿವ್ಯಕ್ತಿಸಿರುವಂತೆ, ಕೋಲುಹುಯ್ಯೋಪದವೂ, ಗೀಗೀಪದ–ಕಂಸಾಳೆ–ಹರಿಕಥೆ–ಶಿವಕಥೆ, ವೀರರ ಬದುಕಿನ ಗಾಥೆ ಹಾಡುವ ಲಾವಣಿ, ಪ್ರಸಂಗ–ಯಕ್ಷಗಾನ–ತಾಳಮದ್ದಳೆ, ಬಯಲಾಟ ಈ ಎಲ್ಲ ಜನಪದ ಕಾವ್ಯಪ್ರಕಾರಗಳಲ್ಲಿಯೂ ಗಮಕ ಕಲೆ ತನ್ನದೇ ವಿಶಿಷ್ಟ ಶೈಲಿಯಲ್ಲಿ, ಅನುಕರಣೀಯ ರೀತಿಯಲ್ಲಿ ಹಾಸುಹೊಕ್ಕಾಗಿರುವುದೂ ಗಮನೀಯ. ಅದರಂತೆಯೇ ಆದಿಕವಿ ಪಂಪನಿಂದ ಕುವೆಂಪು ಅವರವರೆಗೆ ಹಾಗೂ ನಮ್ಮ ನಾಡಿನ ಇತಿಹಾಸ–ಸಾಹಿತ್ಯ–ಸಂಸ್ಕೃತಿಗಳ ದಾಖಲೆಗಳಾಗಿ ಇರುವ ಶಾಸನಗಳತನಕ – ಗಮಕದ ವ್ಯಾಪ್ತಿಯನ್ನು ಗುರುತಿಸಬಹುದು. ಹಿನ್ನೆಲೆ :

ಶ್ರೀ ವಾಗ್ದೇವಿ ಚತುರ್ಮುಖಾಸ್ಯ ಕಮಲಶ್ರೀಹಂಸೆ ವೀಣಾರವ

(i) ಸ್ರಾವಾಸಕ್ತೆ ಸಪುಸ್ತಕಾನ್ವಿತೆ ಲಸತ್ ಸಾಹಿತ್ಯ ಸಂಗೀತ ಸ ।
ದ್ಭಾವಸ್ರೂ ಕವಿವಾದಿ ವಾಗ್ಮಿ ಗಮಕ ವ್ಯಾಖ್ಯಾತೃ ಚಿತ್ತೋಲ್ಲಸತ್
ಪ್ರಾವೀಣ್ಯಪ್ರದೆಯಿಂ ಕಲೋದ್ಧರಣಮಕ್ಕೀ ನಾಡಿನೊಳ್ ನಾಡೆಯೂ ॥
(ಪ್ರಾಚೀನಶಾಸನೋಕ್ತ–ಶಾಸನಮಂಜರಿ–ರಾ. ನರಸಿಂಹಾಚಾರ್ಯ)

(ii) ಅವರಗ್ರತನಯನಾತಂ ।
ವಿವೇಕ xxx ಸರೋವರ ಹಂಸ ।
ಕವಿಗಮಕಿ ವಾಗ್ಮಿಗಮವನೀತಳದೊಳೊಗೆದಾ ।
ಸುಗಂ ಕಳ್ಪಕುಜಂ ॥
E.I Vol. IX, C.E. 1040 (xxx – ಶಾಸನದ ಕಲ್ಲು ಕೆತ್ತಿಹೋಗಿದೆ–ಲಿಪಿ ಇಲ್ಲ)

(iii) ಕವಿಗಮಕಿ ವಾದಿ ವಾಗ್ಮಿಗ ।
ಳವಿವೇಕದ ದೆಸೆಯನರಿಯರಾಶ್ರಿತ ಜನಮು ॥
ತ್ತವದಿಂ ಬೇಡಲ್ಕೀವರ್ ।
ಸವಿಲಾಸಿಗಳ್ತೆ ಶಿವೆಯಗೇರಿಯನೂರ್ವರ್
(ಶಾಸನ ಪದ್ಯಮಂಜರಿ–ಪುಟ 147, ಪದ್ಯ 862)

(iv) ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ ।
ಬಾದಿಪ್ಪ ಕಲಿಗೆ ಕಲಿಯುಗ ।
ವಿಪರೀತನ್ ಮಾಧವನೀತನ್ ಪೆರನಲ್ಲ ॥
(ಕಪ್ಪೆಅರಭಟ್ಟನ ಶಾಸನ – ತ್ರಿಪದಿ – ಬಾದಾಮಿ; ಸು. 8ನೆಯ ಶತಮಾನ)

(v) ನುಡಿದು ತಲೆದೂಗಿಸುವಮರೆಗ ।
ನ್ನಡಕೆ ಹಾಹಾಯೆನಿಸಿ ಮೆಚ್ಚನು
ಪಡಿವ ವಾಗ್ಮಿಗಳೋದಿ ಹೊಗಳಿಸಿಕೊಂಬ ಗಮಕಿಗಳು ॥
ಕೊಡುವ ಪದ್ಯಕೆ ಸುಪ್ರಮೇಯದ ।
(ಕುಮಾರವ್ಯಾಸಭಾರತ – ಸಂಧಿ 8 – ಪದ್ಯ 38)

ಪ್ರಾಚೀನ ಸಂಗೀತಶಾಸ್ತ್ರಜ್ಞನಾದ ಶಾರ್ಙ್ಗದೇವನು (1230) ತನ್ನ ಸಂಗೀತರತ್ನಾಕರ ಗ್ರಂಥದಲ್ಲಿ ತಿಳಿಸಿರುವಂತೆ, "ಕೇಳುಗರಿಗೆ ಸುಖವೀಯುವ ರೀತಿಯಲ್ಲಿ ಸ್ವರಗಳನ್ನು ಕಂಪಿಸುವುದೇ ಗಮಕ, ವಾಚಸ್ಪತ್ಯ ಕೋಶದ ಪ್ರಕಾರ, ಸ್ಪಷ್ಟಪಡಿಸುತ್ತ, ಯಾವುದು ಮೂರ್ಛನಾದಿ ಲಕ್ಷಣಗಳಿಂದ ತನ್ನನ್ನೇ ಹೊಂದಿಸುವುದೋ ಅದು ಗಮಕ".

"ಗಮಯತೀತಿ ಗಮಕ, ಗಮಯತಿ=ಪ್ರಾಪಯತಿ, ಬೋಧಯನೆ ವಾ"

(ಇಲ್ಲಿ ಮೂರ್ಛನಾ ಎಂದರೆ ಸಂಗೀತದಲ್ಲಿ ಹಾಡುವಿಕೆಯಲ್ಲಿ ಸಪ್ತಸ್ವರಗಳ ಏರಿಳಿತಗಳ ಆಲಾಪನೆ. ಗಮಕ ಕಲೆಯಲ್ಲಿ ಪದ್ಯಗಳನ್ನು ಹಾಡುವಾಗ, ಆಯಾ ಸನ್ನಿವೇಶ–

ರಸ–ಧ್ವನಿಗಳಿಗೆ ಸಂಬಂಧಿಸಿದಂತೆ ಆಯಾ ರಾಗಗಳಲ್ಲಿ ವಾಚಿಸುವುದರಿಂದ ಅದ್ಭುತ ಪರಿಣಾಮ ಮನದ ಮೇಲಾಗುವುದೆಂಬುವ ಅಂಶ ಕೇಳುವ ಸಹೃದಯರಿಗೆ ಸುವಿದಿತ).

ಗಮಕ ವಿದ್ಯೆಯ ಪ್ರಾಚೀನತೆಯನ್ನು ಸಾರುವ ಮತ್ತಷ್ಟು ವಿಚಾರಗಳಿವು : ಪ್ರ.ಶ.ಪೂ. 1ನೆಯ ಶತಕದ ಲಲಿತ ವಿಸ್ತರ ಎಂಬ ಗ್ರಂಥದಲ್ಲಿ 64 (ಚತುಶ್ಶಷ್ಟಿ) ಕಲೆಗಳನ್ನು ಬಲ್ಲವನಾಗಿದ್ದ ಗೌತಮ ಬುದ್ಧನು 38ನೆಯ ಕಲೆಯಾಗಿ ಗಮಕ ಕಲೆಯನ್ನು ಸೂಚಿಸಿರುವುದು ಗಮನಾರ್ಹ. ಹಾಗೆಯೇ 1ನೆಯ ಶತಮಾನದ ಸುಮಾರಿನಲ್ಲಿದ್ದ ವಾತ್ಸಾಯನನಿಂದ (ಕಾಮಶಾಸ್ತ್ರ ಬರೆದವನಲ್ಲ) ರಚಿತವಾದ ಗೀತಪಠಿತಂ ಎಂಬ ಕೃತಿಯಲ್ಲಿ ಗಮಕವೆಂದರೆ "ಪುಸ್ತಕ ವಾಚನ"ವೆಂದು ತಿಳಿಸಿರುವುದು ಉಲ್ಲೇಖನೀಯ. ಇವೆಲ್ಲವೂ ಗಮಕಕಲೆಯ ಪ್ರಾಚೀನತೆಯನ್ನು ಸಾರುತ್ತವೆ. ಹೀಗೆ ಶಾಸನ, ಕಾವ್ಯಶಾಸ್ತ್ರ ಎಲ್ಲದರಲ್ಲಿಯೂ ಈ ಕಲೆಯ ಪ್ರಾಚೀನತೆಯನ್ನು ಕುರಿತ ಮಾಹಿತಿಯನ್ನು ನಾವು ಗಮನಿಸಬಹುದಾಗಿದೆ. ಒಡೆಯರ ಕಾಲದ ಗೋವಿಂದ ವೈದ್ಯನೆಂಬುವ ಕವಿ ತನ್ನ ಚಂಪೂಕೃತಿ ಕಂಠೀರವನರಸರಾಜವಿಜಯದಲ್ಲಿ ಭಾರತಿಗಳು ರಂಜಿಸಿದರು ಎನ್ನುತ್ತಾನೆ. ಅಂದರೆ, ಅವನ ಕಾಲಕ್ಕೆ ಹಾಡುವ ಗಮಕಿಗಳಿದ್ದರು ಎಂಬುದು ಇದರ ಸೂಚನೆ. ಭಾರತಿನಂಜನ ಮೂಲಕ ರಾಜ ಇಡೀ ಕಾವ್ಯವನ್ನೆ ಹಾಡಿಸಿದನಂತೆ. ಹೀಗೆಯೇ ರತ್ನಾಕರವರ್ಣಿಯ ಭರತೇಶ ವೈಭವದಲ್ಲಿಯೂ ದಂಡಿಗೆ ಮಿಡಿಯುತ್ತ ಗಮಕಿ ಹಾಡಿದಳೆಂಬುವ ಅಂಶವು ಧ್ವನಿತಗೊಂಡಿದೆ. ಬತ್ತೀಸರಾಗದೊಳೋದಿಭೂಪಾಲನ ಚಿತ್ತಕೆ ಬಂದವಳೇವೇಳ್ವೆ ಎಂಬುವ ಪ್ರಶಂಸೆಯೂ ಇದ್ದು, ಬಸವೇಶ್ವರಾದಿ ವಚನಕಾರರಲ್ಲಿಯೂ ಗಮಕ ಕಲೆಯ ಪ್ರಸ್ತಾಪವಿರುವುದು ಗಮನೀಯ:

ತಾಳಮಾನಸರಿಸವ ನಾನರಿಯೆ,
ಓಜೆ ಬಜಾವಣೆ ಲೆಕ್ಕವನರಿಯೆ,
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವ, ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ – (ಬಸವಣ್ಣ)

ಪ್ರಮುಖವಾಗಿ ಗಮಕವೆಂದರೆ ಕಾವ್ಯವಾಚನ, ಸಾಹಿತ್ಯ ಸಾರವನ್ನು ಬದುಕಿನ ಮೌಲ್ಯಗಳನ್ನು ಜನತೆಗೆ ಮುಟ್ಟಿಸುವ ಸುಲಭ ಮಾಧ್ಯಮ. ಅಂದರೆ, ಕೇಳುಗರಿಗೆ ರಸಾನುಭವ–ಬದುಕಿನ ಬಗ್ಗೆ ಉತ್ತಮಿಕೆಯನ್ನು ಒಡಮೂಡಿಸುವ ಹಾಗೆ ಕಾವ್ಯಗಳನ್ನು ವಾಚಿಸುವ (ಹಾಡುವ)ವರನ್ನು ಗಮಕಿ ಎನ್ನುವುದು ರೂಢಿ. ಹಾಗೆಯೆ ಕಾವ್ಯದ ಅಂತರಾರ್ಥದ ಸೊಗಸು–ಸೊಬಗು–ಸೊಗಡನ್ನು ಅರ್ಥಯಿಸಿ ಬಿತ್ತರಿಸುವವರು ವ್ಯಾಖ್ಯಾತರು ಯಾ ವ್ಯಾಖ್ಯಾನಕಾರರು (ಕಾಮೆಂಟೇಟರ್) ಎಂದು ಕರೆಯಿಸಿಕೊಳ್ಳುತ್ತಾರೆ. ಬಹು ಹಿಂದೆ ರಾಜರ ಆಸ್ಥಾನಗಳಲ್ಲಿ ಕವಿಗಳು, ಸಂಗೀತಗಾರರು, ನೃತ್ಯಕಲಾವಿದರು – ಇಂತಹವರಿಗೆ ಮಾನ್ಯತೆಗಳಿದ್ದಂತೆಯೇ ಗಮಕಿಗಳಿಗೂ ಅತ್ಯುತ್ತಮ ಸ್ಥಾನಗಳಿದ್ದವು.

ಕನ್ನಡ, ತಮಿಳು, ತೆಲುಗು ಮೊದಲಾದ ಅನೇಕ ಭಾಷಾ ಸಾಹಿತ್ಯ ಇತಿಹಾಸದಲ್ಲಿ ಕವಿ, ಗಮಕಿ, ವಾದಿ ಹಾಗೂ ವಾಗ್ಮಿ – ಇಂತಹ ನಾಲ್ಕು ವಿಭಾಗಗಳಲ್ಲಿ ಪಾಂಡಿತ್ಯವನ್ನು ಗುರುತಿಸಿರುವುದನ್ನು ಗಮನಿಸಬಹುದು. ಇದರಿಂದ, ಗಮಕದ ವಿಶೇಷತೆ, ಇದೊಂದು ಸರ್ವಮಾನ್ಯತೆ ಗಳಿಸಿದ್ದ ಕಲೆ ಎಂಬ ಅಂಶ ಮನವರಿಕೆಯಾಗುತ್ತದೆ. ಈ ವಿಚಾರಗಳಿಗೆ ಪೋಷಕವಾಗಿ ಪ್ರಾಚೀನ ಕಾವ್ಯಶಾಸ್ತ್ರಾದಿ ಕೃತಿಗಳಲ್ಲಿ ಈ ಕಲೆಯನ್ನು ಕುರಿತಂತೆ ಕಂಡುಬರುವ ಕೆಲವು ವಿಷಯಗಳನ್ನು ಉಲ್ಲೇಖಿಸಬಹುದು:

ವಾಲ್ಮೀಕಿ ಈ ಕಲೆಯನ್ನು ಲಯ ಸಮನ್ವಿತಾಂ.... ಎಂದೂ ಮಂಗರಾಜ ನಿಘಂಟುಕಾರ ವಾಚಕ, ಲಿಪಿಯನೋದುವಂ.... (ಪದ್ಯ 360) ಎಂದೂ ನಿಜಗುಣಶಿವಯೋಗಿ ತನ್ನ ವಿವೇಕ ಚಿಂತಾಮಣಿ ಕೃತಿಯಲ್ಲಿ ತಾನಮಾನಂದೋಜೆ ವಿಶ್ರಮಣನನಜೆದು ಪದನಂ ವ್ಯಕ್ತಿಗೈದು ಕೇಳ್ವರ ಕಿವಿಗೊಳಿಸಿ ಮೃದುಮಧುರ ವರ್ಣೋಚ್ಚಾರಣಂ ಮಾಳ್ಪರ್ ಗಮಕಿಗಳ್ ಎಂದೂ ತಮಿಳಲ್ಲಿ ಅರುಂಬೊರುಳೈ ಚ್ಚೆಂಬೊರುಳ್ । ನಡೈಯಾಯ್‌ಕ್ಕಾಟ್ಟಿಪಾಡುವೋನ್ ಗಮಕನ್ (ಗೂಢವಾದ ಅರ್ಥಗಳನ್ನು ಸ್ಫುಟವಾಗಿ ಗೊತ್ತಾಗುವ ಹಾಗೆ ಬಿಡಿಬಿಡಿಸಿ ಹಾಡುವಾತ ಗಮಕಿ) ಎಂದೂ ನೀತಿಪಾಠದಲ್ಲಿ –

ಎಡರದೆ ತಡೆಯದೆ ತಲೆಯಂ ।
ಕೊಡಹದೆ ಕಡುವಹಿಲ ಜಾಡ್ಯವೆನಿಸದೆ ರಸಮಂ ।
ಕೆಡಿಸದೆ ಸರ್ವರ ಚಿತ್ತ ।
ಕ್ಕೊಡಬಡಮೋದುವನೆಗಮಕಿ ಕನ್ನಡ ಜಾಣಾ॥

ಎಂದರೆ, ಕಾವ್ಯವೋದುವಲ್ಲಿ (ಹಾಡುವಲ್ಲಿ) ಎಡವದಂತೆ, ತೊಡರಿಸದಂತೆ, ಹರಿವ ಸಲಿಲದಂತೆ ನಿರರ್ಗಳವಾಗಿ ಸಾಗುವಂತೆ ತಲೆಕೊಡವದಂತೆ, ರಸ ಕೆಡಿಸದಂತೆ, ಎಲ್ಲರ ಮನರಂಜಿಸುವಂತೆ ವಾಚಿಸಬಲ್ಲವ – ಗಮಕಿ ಎಂದೂ ಹೇಳಿದೆ.

ಕನ್ನಡದ ಆದಿಕವಿ ಪಂಪನ ವಿಕ್ರಮಾರ್ಜುನವಿಜಯ (ಪಂಪಭಾರತ) ಕಾವ್ಯದಲ್ಲಿ:

ಕವಿ ಗಮಕಿ ವಾದಿ ವಾಗ್ಮಿ
ಪ್ರವರರ ಪಂಡಿತರ ನೆಗಟ್ದಿ ಮಾತಜೆವರ ಸ ।
ಬ್ಬವದವರೊಡನಂತೆಸೆದ
ನ್ನವಾಸದೋಲಗದೊಳಿರ್ಪನಾಗಳ್ ಹರಿಗಂ ॥ ಎಂದು ಹೇಳಿದೆ.

ಪೊನ್ನ ತನ್ನ ಶಾಂತಿಪುರಾಣ ಕಾವ್ಯದಲ್ಲಿ ತನ್ನನ್ನು ಪ್ರಶಂಸೆ ಮಾಡಿಕೊಂಡಿರುವ ಸಂದರ್ಭದ ಪದ್ಯವೊಂದರಲ್ಲಿ ಗಮಕಿಯ ವಿಚಾರ ಹೀಗೆ ನಿರೂಪಣೆಗೊಂಡಿದೆ :

ಇದಿರ್ಗೆ ಬರೆ ಪೊನ್ನಿಗಂ ಕಿಡಿ
ಸದಿರಂ ಕವಿ ಗಮಕಿ ವಾದಿ ವಾಗ್ಮಿಗಳ ಕವಿ
ತ್ವದ ಗಮಕಿತ್ವದ ವಾದಿ
ತ್ವದ ವಾಗ್ಮಿತ್ವದ ಪೊಡರ್ಪುಮಂದರ್ಪಮುಮಂ ॥

ಹರಿಹರ ತನ್ನ ನಂಬಿಯಣ್ಣನ ರಗಳೆಯಲ್ಲಿ ಗೇಯಗೋಷ್ಠಿ, ಗಮಕಿತ್ವದ ವಾಗ್ಮಿವೃಂದದೊಳ್ ನಂಬಿಯಣ್ಣನು ಕವಿಗಮಕಿ ವಾದಿ ವಾಗ್ಮಿಗಳನ್ನು ಉಪಚರಿಸಿ, ಗೌರವಿಸುತ್ತಿದ್ದ ಪರಿ ತಿಳಿಯಬರುತ್ತದೆ. ಇನ್ನು ಲಕ್ಷ್ಮೀಶನಲ್ಲಿ ಸ್ಪಷ್ಟವಾಗಿ ಕವಿಗಮಕಿಗಳ ಕುರಿತ ಚಿತ್ರಣ ನಮಗೆ ದೊರೆಯುತ್ತದೆ. ದುರ್ಗಸಿಂಹ ತನ್ನ ಕನ್ನಡ ಪಂಚತಂತ್ರದಲ್ಲಿಯೂ ಶ್ರೀಮಾದಿರಾಜ ಎಂಬುವ ಮುನಿಯ ಕವಿಗಮಕಿವಾದಿ ವಾಗ್ಮಿ ಪ್ರವರನೆಂದಿದ್ದಾನೆ. ಕಬ್ಬದ ಸೃಜನೆಯಲ್ಲಿ ವಿಶಿಷ್ಟರೆನಿಸುವ ಕನಕದಾಸರಂತೂ ತಮ್ಮ ಮೋಹನತರಂಗಿಣಿ ಹಾಡುಗಬ್ಬದಲ್ಲಿ (3–40) ಶ್ರೀಕೃಷ್ಣನಿದ್ದ ದ್ವಾರಕೆಯನ್ನು ಬಣ್ಣಿಸುವಲ್ಲಿ ಹೀಗೆ ಹಾಡಿದ್ದಾರೆ:

ರವಿ ಸಿದ್ಧಾಂತ ಪಾಠಕರಷ್ಟಭಾಷಾ । ಕವಿ ಗಮಕಿಗಳು ತಾರ್ಕಿಕರು ।
ವಿವಿಧ ವಿದ್ವತ್ಸಭೆ ನೆಜೆದುದು ಲಲಿತಾ ಭಾರ್ಗವಿಯ

ಕಾಂತನ ಪುರದೊಳಗೆ ಎನ್ನುವಲ್ಲಿ ಜ್ಯೋತಿಷಿಗಳ ಕುರಿತ ಅಂಶವೂ ಬಿತ್ತರಗೊಂಡಿದೆ.

ಶಿವ ಪಾರಮ್ಯವನ್ನು ಮೆರೆದ ಭೀಮಕವಿಯ ಬಸವಪುರಾಣದಲ್ಲಿ ಕವಿಗಮಕಿವಾದಿ ವಾಗ್ಮಿಗಳ ಸಂಪೂರ್ಣ ಚಿತ್ರಣ ದೊರೆಯುತ್ತದೆ.

ಗಮಕ ಕಲೆಯ ವಿಷಯವಾಗಿ ಪುರಂದರದಾಸರ ಒಂದು ಕೀರ್ತನೆ ಬಹಳ ಮುಖ್ಯವಾದ ಕೆಲವು ವಿಷಯಗಳನ್ನು ತಿಳಿಸುತ್ತದೆ.

ತಾಳ ಬೇಕು । ತಕ್ಕ ಮೇಳ ಬೇಕು
ಶಾಂತ ವೇಳೆ ಬೇಕು–ಗಾನವ ಕೇಳಬೇಕೆನ್ನುವಗೆ ॥ಪ॥

॥ಚ॥ ಯತಿಪ್ರಾಸವಿರಬೇಕು । ಗತಿಗೆ ನಿಲ್ಲಿಸಬೇಕು
ರತಿಪತಿನೊಳು ಅತಿಪ್ರೇಮವಿರಬೇಕು ॥1॥

ಗಳ ಶುದ್ಧವಿರಬೇಕು–ತಿಳಿದು ಪೇಳಲಿ ಬೇಕು
ಕಳವಳ ಬಿಡಬೇಕು–ಕಳೆ ಮುಖವಿರಬೇಕು ॥2॥

ಅರಿತವರಿರಬೇಕು–ಹರುಷ ಹೆಚ್ಚಲಿ ಬೇಕು
ಪುರಂದರ ವಿಠಲನ–ಪರದೈವವೆನಬೇಕು ॥3॥

ಈ ಎಲ್ಲ ಅಂಶಗಳನ್ನೂ ಗಮನಿಸಿ, ಶ್ರದ್ಧಾಭಕ್ತಿಯಿಂದ ಕವಿಕೃತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿ ಅದರ ಸಂಪೂರ್ಣ ರಸಭಾವಗಳು ಶ್ರೋತೃಗಳಲ್ಲಿ ಉದ್ಬೋಧವಾಗುವಂತೆ ಮಾಡುವ ಗಮಕಿ ನಿಜವಾಗಿ ಆ ಹೆಸರಿಗೆ ತಕ್ಕವನಾಗುತ್ತಾನೆ. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಶಾಂತವೇ ಮೊದಲಾದ ನವರಸಗಳೂ ಮೂಡಿಬರುವಂತೆ ಮಾಡುವುದು ನಿಜವಾದ ವಾಚನ ವೈಖರಿಯ ಅಗ್ಗಳಿಕೆ. ಯತಿ, ಗಣ, ಪ್ರಾಸ ಇತ್ಯಾದಿಗಳನ್ನೂ ಷಟ್ಪದಿ, ಸಾಂಗತ್ಯ, ರಗಳೆ, ಶತಕ, ತ್ರಿಪದಿ, ಕಂದ ಮೊದಲಾದ ಛಂದೋವೈವಿಧ್ಯವನ್ನೂ ಗಮಕಿ ಅರಿತಿರಬೇಕು.

ಸುಶ್ರಾವ್ಯವಾಗಿ ವಾಚನ ಮಾಡಲು ಶ್ರುತಿ, ಗತಿಗಳನ್ನು ಅನುಸರಿಸಬೇಕು. ಸುಕಂಠದಿಂದ ಸ್ಫುಟವಾಗಿ ಕಾವ್ಯದ ನುಡಿಯನ್ನು ನಾಲಗೆಯಲ್ಲಿ ಕುಣಿಸಬೇಕು. ತಾನು ಆನಂದಪಟ್ಟು ವಾಚಿಸಿದಲ್ಲಿ ಕೇಳುವವರಿಗೂ ಆನಂದವಾಗುವುದು. ಅವರ ಹೃದಯವೂ ಮಿಡಿಯುವುದು. ಶ್ರುತಿಭೇದ, ರಾಗಭೇದ, ಸಂಗೀತದ ಸ್ವರಸ್ಥಾಯಿ, ಗಮಕ, ವರ್ಣ, ಕೃತಿಯ ಜೀವಾಳ – ಇವನ್ನು ತಿಳಿದುಕೊಳ್ಳದಿದ್ದರೆ ಗಮಕ ಹಿತವಾಗಿರುವುದಿಲ್ಲ. ಇನ್ನು ತಾಳದ ವಿಷಯ. ಪದ್ಯದ ಸಹಜವಾದ ಗತಿ, ಲಯ, ಏರಿಳಿತಗಳ ಕಡೆ ಗಮನವಿರಬೇಕು. ಎಲ್ಲಿ ಮುರಿಯಬೇಕು, ಎಲ್ಲಿ ನಿಲ್ಲಿಸಬೇಕು, ಎಲ್ಲಿ ನೆರವಲು ಮಾಡಬೇಕು ಎಂಬುದನ್ನರಿತು ಅರ್ಥವಾಗುವಂತೆ ಜಾಗೃತಿಯಿಂದ ಪದಗಳ ಜಾಡು ಹಿಡಿಯಬೇಕು. ವಾಚಿಸುವಾಗಲೇ ಅರ್ಥ ಮೂಡಬೇಕು. ಅಭಿನಯದ ಮುದ್ರೆಗಳ ಪರಿಚಯ ಪಡೆದುಕೊಂಡು ಸಮಯವರಿತು ಅವನ್ನು ಪ್ರಯೋಗ ಮಾಡುವುದು ಲೇಸು.

ಸರಾಗದಿಂದ ಸುಮ್ಮನೆ ವಾಚನ ಮಾಡುವುದೂ ಗಮಕವೇ. ಗದ್ಯಕೃತಿಗಳನ್ನು, ನಾಟಕ ಭಾಗಗಳನ್ನು, ಅನೇಕ ಹೊಸಗನ್ನಡ ಕವಿತೆಗಳನ್ನು-ಅದರಲ್ಲೂ ಹೆಚ್ಚಿನ ನವ್ಯಕತೆಗಳನ್ನು ಹಾಡಲಾಗದು. ಅವನ್ನು ಭಾವಪೂರ್ಣವಾಗಿ ಅಭಿನಯ ಸಹಿತವಾಗಿ ಓದುವುದನ್ನು ಅಭ್ಯಾಸ ಮಾಡಬೇಕು.

ಕನ್ನಡ ಸಾಹಿತ್ಯದಲ್ಲಿ ಬಗೆಬಗೆಯ ಕಾವ್ಯ ರಚನೆಯಾಗಿರುವುದರಿಂದ ಅವನ್ನು ಗಮಕಿಸುವ ರೀತಿಯೂ ಬಗೆಬಗೆಯಾಗಿದೆ. ಅದರ ಪ್ರಯೋಗವನ್ನು ಗಮಕಿಯಾದವನು ಸಾಧಿಸಬೇಕಾಗಿದೆ. ಮೊದಲು ಹಳೆಯ ಚಂಪೂಕಾವ್ಯವನ್ನು ನೋಡಬಹುದು. ಅದರಲ್ಲಿ ಗದ್ಯ, ಪದ್ಯ ಮಿಶ್ರವಾಗಿರುತ್ತದೆ; ಕಂದ, ವೃತ್ತಗಳಿರುತ್ತವೆ. ಗದ್ಯವನ್ನು ಸ್ಫುಟವಾಗಿ ಸರಾಗವಾಗಿ ಓದಬೇಕು. ಅನೇಕ ವೃತ್ತಗಳಿಗೆ ಹಾಗೂ ಕಂದಕ್ಕೆ ತಾಳವಿಲ್ಲ. ಲಯವುಂಟು. ಅರ್ಥ ಕೆಡದಂತೆ, ನಿಲುಗಡೆ ಅರಿತು ಸೂಕ್ತ ರಾಗಗಳನ್ನು ಸಂಯೋಜಿಸಿ ಹಾಡಿದಾಗ ಮನರಂಜನೆಯಾಗುವುದು. ಆದಿಕವಿ ಪಂಪನ ಸಮಸ್ತಭಾರತವನ್ನೂ ಮಹಾಕವಿ ರನ್ನನ ಗದಾಯುದ್ಧವನ್ನೂ ವಾಚಿಸುವ ಬಗೆಯನ್ನು ಅರಿತುಕೊಳ್ಳಬೇಕು; ಜನ್ನನ ಯಶೋಧರ ಚರಿತೆ ಬರಿ ಕಂದಗಳಲ್ಲಿ ಬಂದಿದೆಯಾದರೂ ಸುಲಲಿತವಾಗಿದೆ, ಸುನಾದಮಯವಾಗಿದೆ. ವಿವಿಧ ರಾಗಗಳಲ್ಲಿ ಅದನ್ನು ಗಮಕಿಸಬಹುದು.



**ಗುರು ದೇಶಪಾಂಡೆ ಅವರ ಜೊತೆ ಭೀಮಸೇನ ಜೋಶಿ**

ಷಟ್ಪದಿ ಕಾವ್ಯಗಳಲ್ಲಿ ಕುಮಾರವ್ಯಾಸನ ಮಹಾಭಾರತ ಗಮಕಿಗಳ ಭಾಗ್ಯನಿಧಿ ಎನಿಸಿದೆ. ಕುಮಾರವಾಲ್ಮೀಕಿಯ ತೊರವೆ ರಾಮಾಯಣಕ್ಕೆ ಅನಂತರದ ಸ್ಥಾನ. ಇವೆರಡೂ ತುಂಬ ಜನಪ್ರಿಯವಾಗಿವೆ. ಭಾರತ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು ವಾಚನ ಮಾಡಿ ನಾಡಿನಾದ್ಯಂತ ಇವನ್ನು ಪ್ರಚಾರ ಮಾಡಿದ್ದಾರೆ. ಜನಸಾಮಾನ್ಯರು ಗುರುತಿಸಬಲ್ಲ ನವರಾಗಗಳೇ ಸಾಕು. ಆದ್ದರಿಂದ ಗಮಕಿಗೂ ಸಂಗೀತಾಭ್ಯಾಸ ಬಹಳ ಮುಖ್ಯ. ರಾಗಗಳ ಪರಿಚಯ, ಅವುಗಳನ್ನು ಇಂಪಾಗಿ ಹಾಡುವ ಯೋಗ್ಯತೆ ಅವನಿಗಿರಬೇಕಾಗುತ್ತದೆ. ಸಾಹಿತ್ಯದಲ್ಲಿ ಅಡಗಿರುವ ನವರಸಗಳನ್ನು ಗುರುತಿಸಿ ಅದನ್ನು ಪೋಷಿಸುವ ರಾಗಶಕ್ತಿಯನ್ನು ಗಮಕಿ ಗಳಿಸಿರಬೇಕಾಗುತ್ತದೆ.

ಛಂದಸ್ಸಿನ ವಿಚಾರಕ್ಕೆ ಬಂದರೆ ಕವಿಯು ತನ್ನ ಕೃತಿಯ ಪದ್ಯಗಳನ್ನು ಯಾವ ತಾಳಗತಿಯಲ್ಲಿ ನಡೆಸಿದ್ದಾನೆಂಬ ಅರಿವು ಗಮಕಿಗೆ ಅಗತ್ಯ. ತಾಳಯುತವಾಗಿ ವಾಚಿಸುವುದು ರೂಢಿಯಲ್ಲಿಲ್ಲದಿದ್ದರೂ ಕವಿಕೃತಿಯನ್ನು ವಾಚಿಸುವಾಗ ತಾಳಕ್ಕೆ ಆಧಾರವಾದ ಗತಿಯನ್ನು ಗುರುತಿಸಿ ಆ ಗತಿಯನ್ನು ಮೆರೆಸಬೇಕು. ಕವಿಗೆ ಸ್ಫೂರ್ತಿ, ಆವೇಶ ಬಂದಾಗ ಅವನ ಮಾತೂ ಲಯಬದ್ಧವಾಗುತ್ತದೆ, ರಾಗಬದ್ಧವಾಗುತ್ತದೆ. ಆಗ ಅವನ ಪದ್ಯಗಳು ಒಂದು ಗತಿಯಲ್ಲಿ ಅಳವಡುವಂತಾಗುತ್ತದೆ. ಅದನ್ನರಿತು ಗಮಕಿ ವಾಚಿಸಿದರೆ ವಾಚನದ ವೈಶಿಷ್ಟ್ಯ ಹೆಚ್ಚಾಗುವುದರೊಂದಿಗೆ ಕೃತಿಯ ಆಸ್ವಾದವೂ ಹೆಚ್ಚುತ್ತದೆ.

ಗಮಕ ಕಲೆಯು ಬಹು ಪ್ರತಿಭೆಗಳನ್ನು ಅಂತರ್ಗತಗೊಳಿಸಿಕೊಂಡಿರುವ ಅದ್ಭುತ ಕಲಾಪ್ರಕಾರ. ಸುಶ್ರಾವ್ಯತೆ, ಕಾವ್ಯದ ಅರ್ಥವಂತಿಕೆ, ರಸಾನುಭವ, ಭಾಷಾಸೌಂದರ್ಯ ಇವೆಲ್ಲದರ ಸಮರ್ಥ ಅಭಿವ್ಯಕ್ತಿಗೆ ಪೂರಕವಾದ ರಾಗ ಭಾವಗಳ ರಹಸ್ಯ ಇತ್ಯಾದಿಗಳೆಲ್ಲವೂ ಈ ಕಲೆಯಲ್ಲಿ ಅಡಗಿದೆ. ಗಮಕಿ ಎಂಬ ಹೆಸರಿಗೆ ಪಾತ್ರನಾದವನು ಕಾವ್ಯ ವಾಚಿಸುವಾಗ ಈ ಎಲ್ಲ ಅಂಶಗಳ ಸಮರ್ಥ ನಿರ್ವಹಣೆಯ ಜವಾಬ್ದಾರಿಯುಳ್ಳವನಾಗಿರಬೇಕು.

ಗಮಕವೆಂದರೆ ಸಂಸ್ಕೃತದಲ್ಲಿ ನಡೆ, ಗತಿ ಎಂದರ್ಥವಾಗುವುದು. ಗಮನದ ಭಾವವೆಂತಲೂ ಅರ್ಥ. ಸಂಗೀತ ಶಾಸ್ತ್ರದ ರೀತಿ ಗಮಕವೆಂದರೆ ಸ್ವರವಿನ್ಯಾಸ, ಧ್ವನಿ ವಿಶೇಷ ಎಂದರ್ಥ. ಆರೋಹಣ, ಅವರೋಹಣ, ಢಾಲು, ಸ್ಫುರಿತ, ಕಂಪನ, ಆಹತ, ಪ್ರತ್ಯಾಹತ, ತ್ರಿಪುಚ್ಛ, ಆಂದೋಳ, ಮೂರ್ಛನಾ ಎಂದು ಹತ್ತು ವಿಧವಾದ ಗಮಕಗಳು ಸಂಗೀತದಲ್ಲಿವೆ. ಗಮಕಿಯ ಗಮಕಕ್ಕೆ ಕಾಕು ಎಂದೂ ಸಂಸ್ಕೃತದಲ್ಲಿ ಕರೆಯುವರು.

19-20ನೆಯ ಶತಮಾನದ ಅವಧಿಯಲ್ಲಿ ಕರ್ನಾಟಕದಲ್ಲಿ ಗಮಕಕಲೆ, ಕಾವ್ಯವಾಚನ ಕ್ಷೇತ್ರದಲ್ಲಿ ಶ್ರಮಿಸುತ್ತ ಈ ಪ್ರಾಚೀನ ಕಲೆಯನ್ನು ನಾಡಿನಾದ್ಯಂತ ಪ್ರಸಾರ ಮಾಡಿದ ಹಿರಿಯರನೇಕರು ಆಗಿಹೋಗಿದ್ದಾರೆ, ಇನ್ನು ಹಲವು ಹಿರಿಯರು ನಮ್ಮೊಡನಿದ್ದು ಗಮಕ ಪ್ರಸಾರ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳು (1843-91) ಗಮಕ ಕಲಾಕ್ಷೇತ್ರದಲ್ಲಿ ಪ್ರಥಮ ಸ್ಮರಣೀಯರು. ಇವರು ಸ್ವತಃ ಕವಿಗಳೂ ವಿದ್ವಾಂಸರೂ ಪಂಡಿತರೂ ಆಗಿದ್ದುದು ಇವರ ಗಮಕ ಕಲೆಗೆ ಅದ್ಭುತವಾಗಿ ವಿಶಿಷ್ಟ ಆಯಾಮಗಳನ್ನು ಒದಗಿಸಿತ್ತು. ಸಂಗೀತ-ಸಾಹಿತ್ಯ-ಭಾಷೆಗಳಲ್ಲಿನ ಪಾಂಡಿತ್ಯಪೂರ್ಣತೆ ಇವರ ಗಮಕ ಕಲೆಯ ಶ್ರೀಮಂತಿಕೆಯಾಗಿತ್ತು. ಇವರ ಗಮಕ ವಾಚನವನ್ನು ಕುರಿತಂತೆ ಹಿರಿಯ ವಿದ್ವಾಂಸರಾದ ಆರ್. ನರಸಿಂಹಾಚಾರ್ಯರ ನುಡಿಗಳು ಇಲ್ಲಿ ಉಲ್ಲೇಖನೀಯ: ನನಗೆ ತಿಳಿದ ಹಾಗೆ ಭಾರತವನ್ನು ಈಚೆಗೆ ಚೆನ್ನಾಗಿ ಓದುತ್ತಿದ್ದವರು ಮೈಸೂರಿನಲ್ಲಿದ್ದ ಸುಪ್ರಸಿದ್ಧ ಬಸವಪ್ಪಶಾಸ್ತ್ರಿಗಳು. ಇವರು ಮೈಸೂರು ಶ್ರೀಮನ್ಮಹಾರಾಜರ ಆಸ್ಥಾನದಲ್ಲಿ ಕವಿಗಳಾಗಿದ್ದು ಅಭಿನವ ಕಾಳಿದಾಸ ಎಂಬುವ ಬಿರುದು ಪಡೆದಿದ್ದವರು. ಇವರಷ್ಟು ಚೆನ್ನಾಗಿ ಭಾರತವನ್ನು ಓದಿದವರನ್ನು ನಾನು ಕಂಡಿಲ್ಲ. ಈ ಮಾತುಗಳಿಂದ ಇವರ ಅವಧಿಯಲ್ಲಿ ಗಮಕಕಲೆ ಸಾಕಷ್ಟು ವ್ಯಾಪ್ತಿಯನ್ನುಳ್ಳದ್ದಾಗಿತ್ತು ಎಂಬುದು ತಿಳಿದುಬರುತ್ತದೆ. ಬಸವಪ್ಪಶಾಸ್ತ್ರಿಗಳ ಸಾಕ್ಷಾತ್ ಶಿಷ್ಯೆ ಹಾಡಿನ ನಾಗಮ್ಮ ಉತ್ತಮ ಗಮಕಿಯೆನಿಸಿಕೊಂಡಿದ್ದರು. ಇನ್ನೂ ಎಷ್ಟು ಶಿಷ್ಯರನ್ನು ಶಾಸ್ತ್ರಿಗಳು ತಯಾರು ಮಾಡಿದ್ದರೆಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಹಿರಿಯರಾಗಿದ್ದ ನಿಟ್ಟೂರು ಶ್ರೀನಿವಾಸರಾಯರೂ ಬಸವಪ್ಪಶಾಸ್ತ್ರಿಗಳನ್ನು ಕಂಡುಕೇಳಿದುದನ್ನು ತಿಳಿಸಿದ್ದಾರೆ (ಸಾಚ್ಯಗಮಕ ಸಂಮೇಳನದ ಗಮಕಮಂದಾರ ಎಂಬುವ ಸ್ಮರಣ ಸಂಚಿಕೆಯಲ್ಲಿ). ಅನಂತರದಲ್ಲಿ ಬೆಳೆದು ಬಂದ ಗಮಕ ಕಲೆಯಲ್ಲಿ ಕೆಲವು ಅಂಶಗಳೇ ಕಾಣಬಂದವು. ಸಾಹಿತ್ಯ ಪ್ರಧಾನವೇ, ಸಂಗೀತವೇ ಕಾವ್ಯವೋದುವಲ್ಲಿ ಗಮಕಿಗೆ ವ್ಯಾಖ್ಯಾನದ ಅಗತ್ಯವಿದೆಯೇ ಎಂಬುವ ಅನಿಸಿಕೆಯೂ ಮೂಡಿತು.



**ಮತ್ತೂರು ಕೃಷ್ಣಮೂರ್ತಿ**

ಹಿರಿಯ ಗಮಕಿಗಳಲ್ಲಿ ಹೆಸರಾದವರು ಸಂಗೋಬಿಂದೂರಾಯರು (1877-1969) ಅಥವಾ ಭಾರತದ ಬಿಂದೂರಾಯರೆಂದೇ ಪ್ರಸಿದ್ಧರಾದವರು. ಸಾಹಿತ್ಯಕ್ಕೆ ಒತ್ತುಗೊಟ್ಟು ಸಂಗೀತ ರಸಭಾವಕ್ಕಾಗಿ ಮಾತ್ರ ಅಳವಡಿಸಿಕೊಳ್ಳುತ್ತ ಕಾವ್ಯವನ್ನು ಕೇಳುಗರಿಗೆ ಮುಟ್ಟಿಸುತ್ತಿದ್ದ ಬಿಂದೂರಾಯರ ಕುಮಾರವ್ಯಾಸ ಭಾರತ ಸಾರೋದ್ಧಾರ ಎಂಬುವ ಮೇರು ಕೃತಿ ಇಂದು ಆಕರ ಗ್ರಂಥವೆನಿಸಿದೆ. ರಾಯರ ಗಮಕ ಶುದ್ಧಗಮಕಪದ್ಧತಿಯೆಂದೇ ಪ್ರಸಿದ್ಧ. ಅವರ ಶಿಷ್ಯ-ಶಿಷ್ಯೆಯರು - ಮೈಸೂರಿನ ಭಾರತದ ಕೃಷ್ಣರಾಯರು, ಶಕುಂತಲಾಬಾಯಿ, ಪಾಂಡುರಂಗರಾವ್, ಎಂ.ಎಸ್. ಚಂದ್ರಶೇಖರಯ್ಯ, ಧಾರವಾಡದ ಸುಪ್ರಸಿದ್ಧ ಗವಾಯ್ ಗುರುರಾವ್ ದೇಶಪಾಂಡೆ ಮೊದಲಾದವರು.

ಹೀಗೆಯೇ ಮೈಸೂರಿನಲ್ಲಿದ್ದ ತಲಕಾಡು ಮಾಯಿಗೌಡರು, ಜವಳಿ ಅಂಗಡಿ ತಮ್ಮಯ್ಯ - ಇವರ ಸುಪ್ರಸಿದ್ಧ ಶಿಷ್ಯರು. ಅನೇಕ ಗ್ರಂಥ ರಚನೆಯನ್ನು ಮಾಡಿದ ಮೈಸೂರು ರಾಘವೇಂದ್ರರಾಯರು, ಕಳಲೆ ಸಂಪತ್ಕುಮಾರಾಚಾರ್ಯರ ಗಮ್ಮತ್ತಿನ ಗಮಕ ಹಾಗೂ ಅವರ ಶ್ಲೋಕ ಸಂಗೀತ, ಗೌರೀದೇವುಡು ನರಸಿಂಹಶಾಸ್ತ್ರೀ ಅವರು (1878-1933), ಮೈ.ಶೇ. ಅನಂತಪದ್ಮನಾಭರಾವ್ (1903-87), ಜೋಳದರಾಶಿ ದೊಡ್ಡನಗೌಡರು (1919-94), ಅನಂತಪದ್ಮನಾಭಯ್ಯ, ಕೆ.ಎ. ವೆಂಕಟಸುಬ್ಬಯ್ಯ ವ್ಯಾಖ್ಯಾನಕಾರ ಕ.ಲಿ. ವೈದ್ಯನಾಥನ್ (1928-2013), ಮಾಲೂರಿನ ಟಿ. ವೆಂಕಟಪ್ಪನವರು (1915-95), ಗಮಕ ರೂಪಕಗಳೆಂಬುವ ಹೊಸ ಪ್ರಕಾರವನ್ನು ಸೃಜಿಸಿದ ಹು.ಮ. ರಾಮಾರಾಧ್ಯರು (1907-73), ಸರೋಜಮ್ಮ ಅನಂತರಾಮಯ್ಯ (1918-93), ಮತ್ತೂರಿನ ರಾಮಾಶಾಸ್ತ್ರಿಗಳು ಹಾಗೂ ಲಕ್ಷ್ಮೀಕೇಶವಶಾಸ್ತ್ರಿಯವರು, ಮತ್ತೂರು ಕೃಷ್ಣಮೂರ್ತಿಯವರು ಹೀಗೆ ನಮಗೆ ದೊರಕುವ ದಾಖಲೆಗಳಿಂದ 500ಕ್ಕೂ ಹೆಚ್ಚು ಗಮಕಿಗಳು ವ್ಯಾಖ್ಯಾನಕಾರರು ಇದ್ದಾರೆ.

ಎಂ. ರಾಘವೇಂದ್ರರಾಯರು ಕುಮಾರವ್ಯಾಸ ಗುರುಕುಲ, ಕಾವ್ಯರಂಜನೀ ಸಭಾ ಮುಂತಾದ ಗಮಕ ಬೋಧನ ಶಾಲೆಗಳನ್ನು ತೆರೆದು ನೂರಾರು ಶಿಷ್ಯರನ್ನು ತಯಾರು ಮಾಡಿದರು ಹಾಗೂ ಕರ್ನಾಟಕ ಸರ್ಕಾರದಿಂದ ಕನಕಪುರಂದರ ಪ್ರಶಸ್ತಿಗೆ ಭಾಜನರಾದರು.

ಮೈಸೂರಿನಲ್ಲಿದ್ದ ಭಾರತದ ಕೃಷ್ಣರಾಯರೆಂದೇ ಹೆಸರಾದ ಹಿರಿಯ ಕೃಷ್ಣರಾಯರ ಗಮಕ ಶೈಲಿಯೇ ವಿಭಿನ್ನ. ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದ ಜೆ.ಸಿ. ರಾಲೋ ಅವರಿಗೆ ರಾಯರ ಗಮಕ ವಾಚನವೆಂದರೆ ಅತ್ಯಂತ ಪ್ರೀತಿ. ಹಾಗೆಯೆ ರಾಷ್ಟ್ರಕವಿ ಕುವೆಂಪು ಅವರ ಮಹಾ ಛಂದಸ್ಸಿನ ಪ್ರಸಿದ್ಧ ಕಾವ್ಯಗಳಾದ ಶ್ರೀರಾಮಾಯಣದರ್ಶನಂ, ಚಿತ್ರಾಂಗದಾ – ಇವುಗಳನ್ನು ಹಸ್ತಪ್ರತಿಯಲ್ಲೇ ವಾಚಿಸಿ, ಆಚಾರ್ಯ ವೆಂಕಣ್ಣಯ್ಯ, ಕೃಷ್ಣಶಾಸ್ತ್ರೀ ಮೊದಲಾದವರ ಪ್ರೀತಿಯನ್ನು ಗಳಿಸಿದವರು ಕೃಷ್ಣರಾಯರು. ಹಾಡಿದನು ಗಮಕಿ, ನಾಡು ನಲಿದುದು ರಸದ ಕಡಲಿನಲಿ ಧುಮುಕಿ ಎಂದೇ ಕವಿ ಕುವೆಂಪು ಅವರು ರಾಯರ ಗಮಕವನ್ನು ಪ್ರಶಂಸಿಸಿದ್ದಾರೆ. ಗಮಕ ಕಲೆಯನ್ನು ಹಾಗೂ ಕಾವ್ಯ–ಕಾವ್ಯಾಂತರಂಗ ಕುರಿತು ಕೆ.ಟಿ. ರಾಮಸ್ವಾಮೈಯ್ಯಂಗಾರ್ ರಂತಹ ಅನೇಕ ಹಿರಿಯ ಗಮಕಿಗಳೇ ಗಮಕಕಲೆ ಎಂಬಿತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇಂದಿಗೂ ಮೈಸೂರಿನ ಗಮಕ ಶೈಲಿ, ಧಾರವಾಡ–ಉತ್ತರಕರ್ನಾಟಕದ ಗಮಕಶೈಲಿ, ಶಿವಮೊಗ್ಗ–ಸಾಗರ ಪರಿಸರಗಳ–ಹೊಸಹಳ್ಳಿ ಮತ್ತೂರು ಶೈಲಿ – ಹೀಗೆ ಸ್ವತಂತ್ರ ವಿಭಿನ್ನಶೈಲಿಗಳಲ್ಲಿ ಗಮಕ ಕಲೆ ಬೆಳೆದುಬಂದಿದೆ. ಹೊಸಬರಲ್ಲಿ ಕೃ. ರಾಮಚಂದ್ರರು, ಮತ್ತೂರು ಹೊಸಹಳ್ಳಿಗಳ ಕೇಶವಮೂರ್ತಿಯವರು ಹಾಗೂ ಅವರ ಶಿಷ್ಯ ಪರಂಪರೆ, ನಿರ್ಮಲಾಪ್ರಸನ್ನ, ರಾಘವೇಂದ್ರರಾಯರ ಮಗ ಎಂ.ಆರ್. ಸತ್ಯನಾರಾಯಣ, ಗಂಗಮ್ಮ ಕೇಶವಮೂರ್ತಿ, ಅನ್ನಪೂರ್ಣಮ್ಮ ರಘುಪತಿಶಾಸ್ತ್ರೀ, ಎನ್.ಕೆ. ಶ್ರೀರಂಗಮ್ಮ, ಹೀಗೆ ಅನೇಕ ಗಮಕಿಗಳು ಪ್ರಸಿದ್ಧರಾಗಿದ್ದಾರೆ.

ಕರ್ನಾಟಕ ಸರ್ಕಾರ ಹೊಸದಾಗಿ ಸ್ಥಾಪಿಸಿರುವ ಗಣ್ಯ ಪ್ರಶಸ್ತಿಯೆಂದರೆ ಕುಮಾರವ್ಯಾಸಪ್ರಶಸ್ತಿ. ಹಿರಿಯರಾದ ಹೊಸಹಳ್ಳಿ ಕೇಶವಮೂರ್ತಿಯವರು, ಗಮಕಿ ಬಿ.ಎಸ್.ಎಸ್. ಕೌಶಿಕ್, ವ್ಯಾಖ್ಯಾತರಾದ ರಘುಪತಿಶಾಸ್ತ್ರೀ, ಹಿರಿಯ ಸುಪ್ರಸಿದ್ಧ ಗಮಕಿ ಎಚ್.ಕೆ. ರಾಮಸ್ವಾಮಿ ಮೊದಲಾದ ಗಣ್ಯರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮತ್ತೂರಿನ ಹಿರಿಯ ಮಾರ್ಕಂಡೇಯ ಅವಧಾನಿಗಳು ಸುಪ್ರಸಿದ್ಧ ವ್ಯಾಖ್ಯಾತರಾಗಿರುವಂತೆಯೇ ಗಮಕಿ ಜಯರಾಮರಾವ್, ವ್ಯಾಖ್ಯಾನಕಾರರಾದ ಎ.ವಿ. ಪ್ರಸನ್ನ, ಎನ್.ಕೆ. ರಾಮಶೇಷನ್, ಗಮಕಿ ಹೊಸಬಾಳೆ ಸೀತಾರಾಮರಾವ್ – ಹೀಗೆ ಇನ್ನೂ ಅನೇಕ ಗಣ್ಯರು ಕನ್ನಡ ನಾಡಿನ ವಿಶಿಷ್ಟ ಕಲೆಯಾದ ಗಮಕ ಕಲೆಯ ಪ್ರಸಾರಕಾರ್ಯ ನಡೆಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಗುರುತಿಸಬಹುದಾದ ಸಂಘ–ಸಂಸ್ಥೆಗಳೆಂದರೆ ಕೆಂಗೇರಿ ಉಪನಗರದ ಶ್ರೀ ಹೈಮವತಮ್ಮನವರು ನಡೆಸುತ್ತಿರುವ ಸಂಸ್ಥೆ, ರಾಜಾಜಿನಗರದ ಕುಮಾರವ್ಯಾಸ ಮಂಟಪ, ಹೊಸಹಳ್ಳಿ ಗಮಕಗ್ರಾಮದ ಗಮಕ ಪರಿಷತ್ತು, ಕರ್ನಾಟಕ ಗಮಕ ಕಲಾ ಪರಿಷತ್ತು ಮೊದಲಾದವು. (ಆರ್.)

**ಗಮೆಲ್ಲಿ, ಕರೇರಿ :** 1651–1725. ಇಟಲಿಯ ಕಾನೂನು ಪಂಡಿತ, ಔರಂಗ್‌ಜೇಬನ ಕಾಲದಲ್ಲಿ ಭಾರತಕ್ಕೆ ಭೇಟಿ ಕೊಟ್ಟ ವಿದೇಶೀ ಪ್ರವಾಸಿಗಳಲ್ಲೊಬ್ಬ. ಟ್ಯೂರಿನೋವ್ ನಗರದಲ್ಲಿ 1651ರಲ್ಲಿ ಈತ ಜನಿಸಿದ. ಸಂಸಾರದಲ್ಲಿ ತೊಂದರೆಗಳಿಗೆ ಒಳಗಾಗಿ ಮನೆ ಬಿಟ್ಟು ಪ್ರವಾಸ ಕೈಗೊಂಡ. ಟರ್ಕಿ ಮತ್ತು ಪರ್ಷಿಯಗಳ ಮೂಲಕ 1693ರಲ್ಲಿ ಭಾರತಕ್ಕೆ ಬಂದ ಈತ ಸುಮಾರು ಆರು ತಿಂಗಳು ಇಲ್ಲಿ ಸಂಚರಿಸಿದ. ದಾಮನ್, ಡಿಯೂ, ಸೂರತ್, ಬಸ್ಸೇನ್, ಕನ್ಹೇರಿ, ಸಾಲ್‌ಸೆಟ್ ಮತ್ತು ಗೋವಗಳನ್ನು ಸಂದರ್ಶಿಸಿ, ಬಿಜಾಪುರದ ಬಳಿಯ ಗಲ್‌ಗಲಾ ಎಂಬ ಸ್ಥಳಕ್ಕೆ ಪ್ರಯಾಣ ಹೊರಟು ಅಲ್ಲಿ ತಂಗಿದ್ದ ಔರಂಗ್‌ಜೇಬನ ಶಿಬಿರ ತಲಪಿದ. ಮಾರ್ಚ್ 21ರಂದು ಚಕ್ರವರ್ತಿ ಔರಂಗ್‌ಜೇಬನನ್ನು ಭೇಟಿ ಮಾಡಿದ. ಈತ ಭಾರತಕ್ಕೆ ಬಂದ ಉದ್ದೇಶವೇನೆಂದೂ ಇವನಿಗೆ ಮೊಗಲರ ಸರ್ಕಾರದಲ್ಲಿ ಸೇವೆ ಸಲ್ಲಿಸುವ ಆಸಕ್ತಿಯಿದೆಯೇ ಎಂದೂ ಚಕ್ರವರ್ತಿ ಇವನನ್ನು ಕೇಳಿದ. ತಾನು ವಿಶ್ವದ ಪ್ರಬಲ ಚಕ್ರವರ್ತಿಯನ್ನೂ ಆತನ ವೈಭವವನ್ನೂ ನೋಡಲು ಮಾತ್ರ ಬಂದಿದ್ದುದಾಗಿ ಗಮೆಲ್ಲಿ–ಕರೇರಿ ಔರಂಗ್‌ಜೇಬನಿಗೆ ತಿಳಿಸಿದ. ಹಂಗರಿಯಲ್ಲಿ ತುರ್ಕರಿಗೂ ಐರೋಪ್ಯರಿಗೂ ನಡೆಯುತ್ತಿದ್ದ ಯುದ್ಧದ ಬಗ್ಗೆ ಔರಂಗ್‌ಜೇಬ್ ಅನೇಕ ಪ್ರಶ್ನೆಗಳನ್ನು ಹಾಕಿ ಅವನಿಂದ ಉತ್ತರ ಪಡೆದ. ಅಲ್ಲಿಗೆ ಅವರ ಭೇಟಿ ಮುಕ್ತಾಯವಾಯಿತು. ಗಮೆಲ್ಲಿ–ಕರೇರಿ ಔರಂಗ್‌ಜೇಬನ ಆಸ್ಥಾನದ ವೈಭವವನ್ನು ವರ್ಣಿಸಿದ್ದಾನೆ. ಎಪ್ಪತ್ತೆಂಟು ವರ್ಷಗಳ ವೃದ್ಧನಾದರೂ ಔರಂಗ್‌ಜೇಬ್ ಕನ್ನಡಕದ ಸಹಾಯವಿಲ್ಲದೆ ಎಲ್ಲ ಪತ್ರಗಳನ್ನೂ ನೋಡಿ ಅವಕ್ಕೆ ಸಹಿ ಹಾಕುತ್ತಿದ್ದನೆಂದು ಕರೇರಿ ಬರೆಯುತ್ತಾನೆ. ಉತ್ಸಾಹದಿಂದ ಕೆಲಸ ನಿರ್ವಹಿಸುತ್ತಿದ್ದುದು ಔರಂಗ್‌ಜೇಬನಲ್ಲಿ ಈತ ಕಂಡ ಒಂದು ದೊಡ್ಡ ಗುಣ. ಬಿಜಾಪುರ ರಾಜ್ಯ ಕಳೆದುಕೊಂಡಿದ್ದ ಸಿಕಂದರ್ ಆಲಿಷಾನನ್ನೂ, ಗೋಲ್ಕೊಂಡದ ಮಾಜಿ ಸುಲ್ತಾನ ತಾನಕ್‌ಷಾನನ್ನೂ ಗಮೆಲ್ಲಿ–ಕರೇರಿ ನೋಡಿದ. ಬಹಳ ಕಷ್ಟನಷ್ಟಗಳನ್ನು ಅನುಭವಿಸಿ ಅಲ್ಲಿಂದ ಹೊರಟು, ಏಪ್ರಿಲ್ 5ರಂದು ಗೋವ ತಲುಪಿದ. ಅಲ್ಲಿಂದ ಮಕಾವ್‌ಗೆ ಹೋದ. ಅನಂತರ ಚೀನದ ಒಳಭಾಗಕ್ಕೆ ಹೋಗಿ, ಚೀನದ ಚಕ್ರವರ್ತಿಯನ್ನು ಪ್ರತ್ಯಕ್ಷವಾಗಿ ಭೇಟಿ ಮಾಡಿದ. ಏಳು ತಿಂಗಳುಗಳ ಕಾಲ ಅಲ್ಲಿ ಪ್ರವಾಸಮಾಡಿ, ಫಿಲಿಪೀನ್ಸಿನ ಮನಿಲಕ್ಕೆ ಹೋದ. ಅನಂತರ ಪೆಸಿಫಿಕ್ ಸಾಗರದ ಮೇಲೆ ಪ್ರಯಾಣ ಮಾಡಿ ಮೆಕ್ಸಿಕೋ ದೇಶದ ಅಕಾಪೂಲ್ಕೊಗೆ ಹೋಗಿ, 1699ರ ಡಿಸೆಂಬರಿನಲ್ಲಿ ತನ್ನ ದೇಶಕ್ಕೆ ಹಿಂದಿರುಗಿದ. ಈತ 1725ರಲ್ಲಿ ನೇಪಲ್ಸ್‌ನಲ್ಲಿ ನಿಧನವಾದ.

ಗಮೆಲ್ಲಿ–ಕರೇರಿ ಬರೆದ ಪ್ರವಾಸಕಥನದಲ್ಲಿ ಅನೇಕ ವಾಸ್ತವ ಸಂಗತಿಗಳೊಂದಿಗೆ ಅವಾಸ್ತವ ಸಂಗತಿಗಳೂ ಉತ್ಪ್ರೇಕ್ಷೆಗಳೂ ಸೇರಿಕೊಂಡಿವೆ. ಔರಂಗ್‌ಜೇಬ್ ಬೀಡು ಬಿಟ್ಟಿದ್ದ ಸ್ಥಳದಲ್ಲಿ 60,000 ಅಶ್ವಗಳು, 10 ಲಕ್ಷ ಸಿಪಾಯಿಗಳು, 50,000 ಒಂಟೆಗಳು ಮತ್ತು 3,000 ಆನೆಗಳನ್ನು ಒಳಗೊಂಡ ಸೇನೆಯಿತ್ತೆಂದು ಗಮೆಲ್ಲಿ–ಕರೇರಿ ಹೇಳಿರುವುದನ್ನು ನಂಬಲು ಕಷ್ಟವಾಗುತ್ತದೆ. ಅವನ ಶಿಬಿರದ ಸುತ್ತಳತೆ 45 ಕಿಮೀ ಎಂದೂ ಅಲ್ಲಿ 250 ಪ್ರತ್ಯೇಕ ಮಾರುಕಟ್ಟೆಗಳಿದ್ದುವೆಂದೂ ಅತ್ಯಮೂಲ್ಯ ವಸ್ತುಗಳು ಮೊದಲುಗೊಂಡು ಎಲ್ಲ ತರದ ಸರಕುಗಳೂ ಅಲ್ಲಿ ದೊರಕುತ್ತಿದ್ದುವೆಂದೂ ಈತ ಬರೆದಿದ್ದಾನೆ. ಒಟ್ಟಿನಲ್ಲಿ ಇವನ ಗ್ರಂಥ ಸ್ವಾರಸ್ಯವಾಗಿಯೂ ಉಪಯುಕ್ತವಾಗಿಯೂ ಇದೆ. (ಎಸ್.ಕೆ.ಎಸ್.)

**ಗಯಟೆ :** 1749–1832. ಜರ್ಮನಿಯ ಕವಿ, ನಾಟಕಕಾರ, ವಿಮರ್ಶಕ, ಕಾದಂಬರಿಕಾರ, ವಿಜ್ಞಾನಿ, ಚಿಂತಕ, ಆಡಳಿತಗಾರ, ವಿವಿಧ ಪ್ರಕಾರಗಳಲ್ಲಿ ವಿಪುಲ ಸಾಹಿತ್ಯ ರಾಶಿಯನ್ನೇ ಸೃಷ್ಟಿಸಿದ ಮಹಾಸಾಹಿತಿ. ಯುರೋಪಿನ ರೆನೇಸಾನ್ಸ್ ಯುಗದ ಪರಂಪರೆಯ ಕಟ್ಟಕಡೆಯ ಪ್ರತಿನಿಧಿ. ಈತ ಸೃಷ್ಟಿಸಿದ ವಿಶ್ವಸಾಹಿತ್ಯ ಎನ್ನುವ ಮಾತನ್ನು ಈತನಿಗೇ ಅನ್ವಯಿಸಿ ಹೇಳುವುದಾದರೆ ಇವನೊಬ್ಬ ಶ್ರೇಷ್ಠ ವಿಶ್ವಸಾಹಿತಿ. ನೂರಾರು ರಸಮಯ ಘಟನೆಗಳಿಂದ ವೈವಿಧ್ಯಮಯ ಅನುಭವಗಳಿಂದ ತುಂಬಿ ಹರಿಯುವ ಇವನ ಬದುಕೇ ಒಂದು ರೋಮಾಂಚಕ ಇತಿಹಾಸದಂತಿದೆ.

ಗಯಟೆ 1749ರ ಆಗಸ್ಟ್ 28ರಂದು ಜರ್ಮನಿಯ ಫ್ರಾಂಕ್‌ಫರ್ಟ್ ಆನ್–ದಿ–ಮೇಯ್‌ನ್‌ನಲ್ಲಿ ಜನಿಸಿದ. ಶ್ರೀಮಂತ ಕುಟುಂಬಕ್ಕೆ ಸೇರಿದ್ದ ಇವನ ತಂದೆ ಜೋವಾನ್ ಕ್ಯಾಸ್ಪರ್ ಗಯಟೆ ಸುಸಂಸ್ಕೃತ ಗೃಹಸ್ಥ. ತಾಯಿ ಕ್ಯಾಥರೀನ್ ಎಲಿಜಬೆತ್ ಟೆಕ್ಸ್‌ಟರ್ ಉತ್ತಮ ವಂಶಸ್ಥಳು; ಫ್ರಾಂಕ್ ಫರ್ಟಿನ ಪೌರಾಧ್ಯಕ್ಷನ ಮಗಳು. ಸುಖಸಂತೋಷಗಳಿಂದ ತುಂಬಿದ ಶ್ರೀಮಂತ ವಾತಾವರಣದಲ್ಲಿ ಗಯಟೆಗೆ ಒಳ್ಳೆಯ ಶಿಕ್ಷಣ ದೊರೆಯಿತು.

1759 ರಿಂದ ಮೂರು ವರ್ಷಗಳ ಕಾಲ ಫ್ರೆಂಚ್ ಸೈನ್ಯ ಫ್ರಾಂಕ್‌ಫರ್ಟನ್ನು ಮುತ್ತಿ ಆಕ್ರಮಿಸಿಕೊಂಡಿತ್ತು. ಕೋಲಾಹಲಕರವಾದ ಆ ಕಾಲದ ಹಲವು ಘಟನೆಗಳಿಂದಾಗಿ ಗಯಟೆಯ ದೃಷ್ಟಿ ವಿಶಾಲಗೊಂಡು ಮನಸ್ಸು ರಂಗಭೂಮಿಯತ್ತ ತಿರುಗುವಂತಾಯಿತು. ನ್ಯಾಯಶಾಸ್ತ್ರವನ್ನು ಓದಲೆಂದು 1765ರಲ್ಲಿ ಲೀಪ್‌ಜಿಗ್ಗಿಗೆ ಹೋಗಿ ಮೂರು ವರ್ಷದ ಅನಂತರ ಊರಿಗೆ ವಾಪಸಾದ. ಆಗಿನ ಅವನ ಕೆಲವು ಲೇಖನಗಳಲ್ಲಿ ರೊಕೋಕೋ ಯುಗದ ಆಡಂಬರಯುತ ಶೈಲಿ ಮತ್ತು ಅತಿರಂಜಕ ಕಲ್ಪನೆಗಳನ್ನು ಕಾಣಬಹುದು. ದೀರ್ಘಕಾಲದ ಕಾಯಿಲೆಯಿಂದ ಚೇತರಿಸಿಕೊಂಡ ಮೇಲೆ ಶಿಕ್ಷಣ ಮುಂದುವರಿಸಲೆಂದು ಸ್ಟ್ರಾಸ್‌ಬರ್ಗಿಗೆ ಹೋದ (1770). ಅಲ್ಲಿ ವಿದ್ಯಾಭ್ಯಾಸ ಮುಗಿಯಿತು. ಇವನಲ್ಲಿ ಅಡಗಿದ್ದ ಸಾಹಿತ್ಯಶಕ್ತಿಗೆ ಅಲ್ಲಿ ಹೆಚ್ಚಿನ ಸ್ಫೂರ್ತಿ ಸಿಕ್ಕಿತು. ಗಯಟೆ ಅಲ್ಲಿ ಹರ್ಡರ್‌ನನ್ನು ಭೇಟಿಯಾದುದು ನಿಜವಾಗಿ ಧರ್ಮಕರ್ಮ ಸಂಯೋಗವೇ ಸರಿ. ಹರ್ಡರನ ಪ್ರಭಾವದಿಂದಾಗಿ ಗಯಟೆಗೆ ಷೇಕ್ಸ್‌ಪಿಯರನ ಕೃತಿಗಳ ಪರಿಚಯವಾಯಿತು. ಗಾತಿಕ್ ವಾಸ್ತುಶಿಲ್ಪ, ಹೋಮರನ ಮಹಾಕಾವ್ಯ, ಓಸಿಯನ್ ಮುಂತಾದವನ್ನು ಓದಿದ. 1771–75ರವರೆಗಿನ ಅವಧಿಯಲ್ಲಿ ಫ್ರಾಂಕ್‌ಫರ್ಟಿನಲ್ಲಿ ವಕೀಲನಾಗಿ ಕೆಲಸ ಮಾಡಿದ. ಆಗ ಬರೆದ ಗಾಟ್ಸ್‌ಫನ್ ಬರ್ಲಿಷಿಂಗನ್ ಎಂಬ ನಾಟಕ ವಿಶೇಷ ಖ್ಯಾತಿ ತಂದಿತು. ಸಾರೋಸ್ ಆಫ್ ವರ್ದರ್ (ಡೈ ಲೇಡನ್ ಡೇಯ್ ಯಂಗನ್ ವರ್ದರ್) ಎಂಬ ಕಾದಂಬರಿ (1774) ಕವಿಯ ಹೆಸರು ಯುರೋಪಿನಲ್ಲೆಲ್ಲ ಹರಡುವಂತೆ ಮಾಡಿತು. 1775ರಲ್ಲಿ ಗಯಟೆ ವೈಮರ್‌ಗೆ ಹೋದ. ಪ್ರಶಾಂತವಾದ ಆ ಪುಟ್ಟ ಸಂಸ್ಥಾನದ ವಾತಾವರಣದಿಂದಾಗಿ ಆತನ ಬಹುಮುಖ ಪ್ರತಿಭೆ ವಿಕಾಸವಾಯಿತು. ಸುಮಾರು ಹನ್ನೊಂದು ವರ್ಷ ಕಾಲ ಆ ರಾಜ್ಯದ ಮುಖ್ಯಾಧಿಕಾರಿಯಾಗಿ ಕೆಲಸ ಮಾಡಿ, ವೈವಿಧ್ಯಮಯವಾದ ಅಪೂರ್ವ ಅನುಭವಗಳನ್ನು ಆತ ಮೈಗೂಡಿಸಿಕೊಂಡ.

ಚಾರ್ಲೆಟ್ ಫನ್ ಸ್ಟೈನ್ ಎಂಬಾಕೆಯ ಪ್ರಭಾವದಿಂದ ಗಯಟೆ ಸುಸಂಸ್ಕೃತ ವ್ಯಕ್ತಿಯಾದ. ಕಲೆ, ವಿಜ್ಞಾನ ಮೊದಲಾದ ಹಲವು ವಿಷಯಗಳಲ್ಲಿ ಇವನ ಅಭಿರುಚಿ ಬೆಳೆಯಿತು. 1786–88ರವರೆಗೆ ಇಟಲಿಯಲ್ಲಿ ಪ್ರವಾಸ ಮಾಡಿ ಕ್ಲಾಸಿಕಲ್ ಇಟಲಿಯ ಕಲಾವೈಭವವನ್ನು ಕಣ್ಣಾರೆ ಕಂಡುಬಂದ. ಹರ್ಡರನ ಪ್ರಭಾವ, ಷೇಕ್ಸ್‌ಪಿಯರನ ಕಾವ್ಯ ಮತ್ತು ಕ್ಲಾಸಿಕಲ್ ಇಟಲಿಯ ಕಲಾಸಂಪತ್ತು–ಇವು ಇವನ ವ್ಯಕ್ತಿತ್ವದ ಎರಡು ಬೇರೆ ಬೇರೆ ಮುಖಗಳ ವಿಕಸನಕ್ಕೆ ನೆರವಾದವು. 1790ರಲ್ಲಿ (ಅಲ್ಲಿಯವರೆಗೆ ಹದಿನೇಳು ವರ್ಷಗಳು ವಿವಾಹವಿಲ್ಲದೆ

ಗಯಟೆ ಹುಟ್ಟಿದ ಮನೆ, ಫ್ರಾಂಕ್‌ಫರ್ಟ್ ಆನ್–ದಿ–ಮೇಯ್ನ್‌ನಲ್ಲಿ

ಯಾರೊಂದಿಗೆ ಸಹಜೀವನ ನಡೆಸುತ್ತಿದ್ದನೋ ಆ ಹೆಂಗಸು) ಕ್ರಿಸ್ಟಿಯಾನ್ ವಲ್ಪಿಯಸ್ ಎಂಬುವಳನ್ನು ಮದುವೆಯಾದ. ವೈಮರ್‌ಗೆ ಹಿಂದಿರುಗಿದ ಮೇಲೆ ರಾಜ್ಯ ಅಧಿಕಾರ ಪದವಿಯನ್ನು ಬಿಟ್ಟುಕೊಟ್ಟ. 1791–1817ವರೆಗೆ ವೈಮರ್ ರಂಗಭೂಮಿಯ ಮೇಲ್ವಿಚಾರಣೆ ವಹಿಸಿಕೊಂಡು ಕೆಲಸ ಮಾಡಿದ. ಆ ಕಾಲದಲ್ಲಿ ಷಿಲ್ಲರನೊಡನೆ ಅತಿ ನಿಕಟವಾದ ಸ್ನೇಹ ಬೆಳೆಯಿತು. 1800–1832ರವರೆಗೆ ಗಯಟೆ ಅಪೂರ್ವ ಕೀರ್ತಿ, ಗೌರವಗಳಿಗೆ ಭಾಜನನಾಗಿ ಯುರೋಪಿನ ಅತ್ಯಂತ ಗಣ್ಯಸಾಹಿತಿ ಎನಿಸಿಕೊಂಡ. ಈ ಸುಮಾರಿನಲ್ಲೇ ತನ್ನ ಮೇರುಕೃತಿ ಫೌಸ್ಟ್ ನಾಟಕದ ಎರಡನೆಯ ಭಾಗವನ್ನು ತಿದ್ದಿ ಬರೆದು, ತಾನು ಸಾಯುವ ಒಂದು ವರ್ಷಕ್ಕೆ ಮೊದಲು ಅದನ್ನು ಮುಗಿಸಿದ, 1832ರಲ್ಲಿ ಈತ ತೀರಿಕೊಂಡಾಗ ಯುರೋಪಿನ ಒಬ್ಬ ಯುಗಪುರುಷ ಕಣ್ಮರೆಯಾದಂತಾಯಿತು.

**ಕೃತಿಗಳು :** ಗಯಟೆಯ ಸಾಹಿತ್ಯಕ ಕೃತಿಗಳನ್ನು ಮೂರು ಮುಖ್ಯ ಭಾಗಗಳಾಗಿ ವಿಭಜಿಸಬಹುದು. ಮೊದಮೊದಲ ಕೃತಿಗಳು ರೊಕೋಕೋ ಯುಗದವು–ಅವು ಅಷ್ಟು ಪಕ್ವವಾಗಿಲ್ಲ. ಅನಂತರದವು ಜರ್ಮನಿಯ ರೊಮ್ಯಾಂಟಿಕ್ ಬಿರುಗಾಳಿಯ ಪ್ರಭಾವವನ್ನು ತೋರುವ ಕೃತಿಗಳು–ಸ್ಟುರ್ಮ್ ಉಂಡ್ ಡ್ರಂಗ್ ಯುಗದವು. ಕೊನೆ ಕೊನೆಯವು ಕ್ಲ್ಯಾಸಿಕ್ ಮತ್ತು ರೊಮ್ಯಾಂಟಿಕ್ ಅಂಶಗಳ ಸಮನ್ವಯವನ್ನು ತೋರುವಂಥವು. ಇವುಗಳಲ್ಲಿ ತಂತ್ರ ಮತ್ತು ಮನೋವೈಜ್ಞಾನಿಕ ಸೂಕ್ಷ್ಮತೆಗಳಿಗೆ ಹೆಚ್ಚು ಪ್ರಾಧಾನ್ಯ. ಇವು ಅತ್ಯಂತ ಆಧುನಿಕ ಅನಿಸುವಂತಿದ್ದು ಹೆನ್ರಿ ಜೇಮ್ಸ್ ಮುಂತಾದವರ ಆಧುನಿಕ ಕೃತಿಗಳಿಗೆ ಪೂರ್ವಸೂಚಿಗಳಂತಿವೆ.

**ಗಾಟ್ಸ್ ಫನ್ ಬರ್ಲಿಷಿಂಗನ್** (1773) : ಇದೊಂದು ಐತಿಹಾಸಿಕ ನಾಟಕ, ಇದನ್ನು ಗಯಟೆ ಎರಡು ವರ್ಷ ಕಾಲ ತಿದ್ದಿ ಹೊಳಪುಗೊಳಿಸಿದ. ಇದರಲ್ಲಿ ರೆಫರ್ಮೇಷನ್ ಕಾಲದ ಸ್ವಾತಂತ್ರ್ಯ ವೀರಯೋಧನೊಬ್ಬನ ಕಥೆಯಿದೆ. ಕಥಾನಾಯಕ ಗಾಟ್ಸ್ ಮತ್ತು ಚಂಚಲಚಿತ್ತ ವೆಸ್ಲಿಂಗನ್ ಇಬ್ಬರೂ ವಿಭಿನ್ನ ಸ್ವಭಾವದವರಾದರೂ ಬಾಲ್ಯಸ್ನೇಹಿತರು. ವೆಸ್ಲಿಂಗನ್ ಗಾಟ್ಸ್ ಸೋದರಿ ಮೇರಿಯಲ್ಲಿ ಅನುರಕ್ತನಾಗಿರುತ್ತಾನೆ. ಗಾಟ್ಸ್ ಸ್ವಾತಂತ್ರ್ಯಪ್ರಿಯ ಶ್ರೀಮಂತ. ಆದರೆ ವೆಸ್ಲಿಂಗನ್ ಬ್ಯಾಂಬರ್ಗ್ ಬಿಷಪ್ಪನ ಅಡಿಯಾಳು. ನಾಟಕದ ಪ್ರಾರಂಭದಲ್ಲಿ ಗಾಟ್ಸ್ ತನ್ನ ಸ್ನೇಹಿತನನ್ನು ತನ್ನ ಹಳೆಯ ಶತ್ರುವಾದ ಬ್ಯಾಂಬರ್ಗಿನ ಬಿಷಪ್ಪಿನ ಸಹವಾಸದಿಂದ ಬೇರ್ಪಡಿಸಿ ಕೈಸೆರೆ ಹಿಡಿದು ತನ್ನ ಅರಮನೆಗೆ ಕರೆತರುತ್ತಾನೆ. ಅಲ್ಲಿ ಮೇರಿಯನ್ನು ಕಂಡಾಗ ವೆಸ್ಲಿಂಗನ್ನನ ಹಳೆಯ ಪ್ರೇಮ ಮರುಕಳಿಸುತ್ತದೆ; ಅವನು ಗಾಟ್ಸನ ಪಕ್ಷ ಹಿಡಿಯುತ್ತಾನೆ. ತನ್ನ ಖಾಸಗಿ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲೆಂದು ಬ್ಯಾಂಬರ್ಗಿಗೆ ಹೋದಾಗ ವೆಸ್ಲಿಂಗನ್ ತನ್ನ ಸ್ನೇಹಿತನಿಗೂ ಪ್ರೇಯಸಿಗೂ ಇತ್ತ ವಚನವನ್ನು ಮರೆತು ಭ್ರಷ್ಟನಾಗುತ್ತಾನೆ; ವಾಲ್‌ಡಾರ್ಫ್ ಎಂಬ ಕುಟಿಲಸ್ವಭಾವದ, ಅರಮನೆಯ ಬಣ್ಣದ ಚಿಟ್ಟೆಯ ಸಹವಾಸಕ್ಕೆ ಬೀಳುತ್ತಾನೆ. ದಬ್ಬಾಳಿಕೆಗೆ ಸಿಕ್ಕಿದ್ದ ರೈತರು ದಂಗೆ ಎದ್ದಾಗ ಗಾಟ್ಸ್ ಅವರ ಮುಖಂಡನಾಗಿ ಹೋರಾಡುತ್ತಾನೆ.

ಗಯಟೆ ವಸ್ತು ಸಂಗ್ರಹಾಲಯದ ಒಂದು ಕೋಣೆ

ವೆಸ್ಲಿಂಗ್‌ನ್ನನ ಕೈಗೆ ಸಿಕ್ಕಿ, ಮರಣದಂಡನೆಗೆ ಗುರಿಯಾಗುತ್ತಾನೆ. ಮೇರಿ ಮಧ್ಯೆ ಪ್ರವೇಶಿಸಿ, ತನ್ನ ಮೇಲಿನ ಹಳೆಯ ಪ್ರೇಮದ ಸಲುವಾಗಿಯಾದರೂ ತನ್ನಣ್ಣನನ್ನು ಬಂಧನದಿಂದ ಬಿಡಿಸಬೇಕೆಂದು ಬೇಡಿಕೊಳ್ಳುತ್ತಾಳೆ. ಅವಳ ಮಾತಿಗೆ ಕರಗಿದ ವೆಸ್ಲಿಂಗನ್ ಮರಣದಂಡನೆಯ ಆಜ್ಞೆಯನ್ನು ಹರಿದುಹಾಕುತ್ತಾನೆ. ಆದರೆ ಅವನ ಹೆಂಡತಿ ವಾಲ್‌ಡಾರ್ಫ್ ಗಂಡನಿಗೆ ವಿಷವೂಡಿಸಿ ಕೊಲ್ಲುತ್ತಾಳೆ. ಅನಂತರ ತಾನೇ ಮರಣ ದಂಡನೆಗೆ ಗುರಿಯಾಗುತ್ತಾಳೆ. ಗಾಟ್ಸ್ ಕಾರಾಗೃಹದಲ್ಲಿ ಗಾಯಗೊಂಡು ಅಸು ನೀಗುತ್ತಾನೆ. ಅತಿ ಭಾವುಕತೆ ತುಂಬಿದ ಈ ನಾಟಕವನ್ನು ಜರ್ಮನ್ ರೊಮ್ಯಾಂಟಿಕ್ ಪಂಥದ ಘೋಷಣೆ ಎನ್ನಬಹುದು. ನಾಟಕದಲ್ಲಿನ ಅತಿರಂಜಕ ಶೈಲಿ, ರಾಗರಂಜಿತ ಪಾತ್ರ ವಿನ್ಯಾಸ–ಇವು ಜರ್ಮನಿಯ ಯುವಕಸ್ತೋಮವನ್ನು ಬಹಳವಾಗಿ ಆಕರ್ಷಿಸಿದವು. ಇದರಲ್ಲಿ ಕವಿ ತನ್ನ ಜೀವನದ ಹಲವು ಘಟನೆಗಳನ್ನೂ ಜೀವಂತ ವ್ಯಕ್ತಿಗಳನ್ನೂ ಸೇರಿಸಿದ್ದಾನೆ. ಈ ನಾಟಕದಲ್ಲಿ ಬಹುಮಟ್ಟಿಗೆ ಷೇಕ್ಸ್‌ಪಿಯರನ ನಾಟಕಗಳ ಹಾಗೂ ಮಾರ್ಟಿನ್ ಲೂಥರ್‌ನ ಬೈಬಲ್ ಅನುವಾದದ ಶೈಲಿಗಳ ಅನುಕರಣ ಇದೆ. ನಿಜವಾದ ಅರ್ಥದಲ್ಲಿ ಇದನ್ನು ಐತಿಹಾಸಿಕ ನಾಟಕ ಎನ್ನುವುದು ಕಷ್ಟ. 16ನೆಯ ಶತಮಾನದ್ದೆಂದು ಹೇಳಲಾದ ನಾಟಕದ ಪರಿಸರ, ಹಿನ್ನೆಲೆ, ಪಾತ್ರಗಳು–ಎಲ್ಲವೂ ಅಸಹಜವಾಗಿವೆ. ಅದೇನೇ ಇರಲಿ, ಈ ನಾಟಕ ಜರ್ಮನಿಯ ರಂಗಭೂಮಿಗೆ ಹೊಸ ತಿರುವನ್ನು ಕೊಟ್ಟ ಕೃತಿ.

**ಡೈಲೇಡನ್ ಡೇಯ್ ಯುಂಗನ್ ವರ್ದರ್** (1774): ಗಯಟೆಯ ಕೀರ್ತಿ ಯುರೋಪಿನಲ್ಲೆಲ್ಲ ಹರಡುವಂತೆ ಮಾಡಿದ ಈ ಕೃತಿ ಒಂದು ದುರಂತ ಕಾದಂಬರಿ. ತನ್ನ ಸಮಕಾಲೀನರಾದ ಇಂಗ್ಲೆಂಡಿನ ಕಾದಂಬರಿಕಾರ ರಿಚರ್ಡ್‌ಸನ್ ಹಾಗೂ ಫ್ರೆಂಚ್ ಸಾಹಿತಿ ರೂಸೋವಿನ ಕೃತಿಗಳಿಂದ ಪ್ರೇರಿತನಾಗಿದ್ದ ಗಯಟೆ ಈ ಕಾದಂಬರಿಯನ್ನು ಪತ್ರಗಳ ರೂಪದಲ್ಲಿ ಬರೆದಿದ್ದಾನೆ. ತನ್ನ ಸ್ವಂತ ಪ್ರಣಯಾನುಭವಗಳನ್ನು ಗಾಟ್ಸ್ ನಾಟಕದಲ್ಲಿ ಎರಕ ಹೊಯ್ದಂತೆ, ಚಾರ್ಲೆಟ್ ಬಫ್‌ಳೊಂದಿಗೆ ವೆಟ್ಸ್‌ಲರ್‌ನಲ್ಲಿ ತನಗಾದ ಪ್ರಣಯಾನುಭವವನ್ನು ಈ ಕಾದಂಬರಿಯಲ್ಲಿ ಪ್ರತಿರೂಪಿಸಿದ್ದಾನೆ. ತನ್ನ ಕಹಿ ಅನುಭವಗಳ ಜೊತೆಗೆ, ಸಹಪಾಠಿಯೊಬ್ಬನ ದುರಂತ ಆತ್ಮಹತ್ಯೆಯ ಪ್ರಕರಣವನ್ನೂ ಸೇರಿಸಿ ಕಥೆ ನೇಯ್ದಿದ್ದಾನೆ. ಕಥಾನಾಯಕ ವರ್ದರ್ ಒಬ್ಬ ಅತಿಭಾವುಕ ಯುವಕ ಲೋಟ್ ಎಂಬ ಸುಂದರಿಯನ್ನು ಗಾಢವಾಗಿ ಪ್ರೀತಿಸಿದ್ದು, ಅವಳು ತಮ್ಮಿಬ್ಬರ ಗೆಳೆಯನಾದ ಆಲ್ಬರ್ಟ್ ಆಗಲೇ ಮದುವೆಯಾಗಲು ನಿಶ್ಚಯಿಸಿರುವ ಹುಡುಗಿಯೆಂದು ತಿಳಿದಾಗ ನಿರಾಶೆಗೊಳಗಾ

ಗುತ್ತಾನೆ. ಅವಳನ್ನು ಮರೆಯಲೆಂದು ದೂರದ ಊರಿಗೆ ಹೋಗಿ ನೆಲಸುತ್ತಾನೆ. ಆದರೆ ಅದಮ್ಯ ಪ್ರೇಮದ ಸೆಳೆತದಿಂದ ತಪ್ಪಿಸಿಕೊಳ್ಳಲಾರದೆ ಹಿಂದಿರುಗಿ ಬರುತ್ತಾನೆ. ಅಷ್ಟು ಹೊತ್ತಿಗೆ ಲೋಟ್ ಆಲ್ಬರ್ಟ್‌ನ ಹೆಂಡತಿಯಾಗಿರುತ್ತಾಳೆ. ಅದನ್ನು ನೋಡಿ ತಾಳಲಾರದೆ ವರ್ದರ್ ಆಲ್ಬರ್ಟ್‌ನ ಪಿಸ್ತೂಲಿನಿಂದಲೇ ತನ್ನ ತಲೆಗೆ ಗುಂಡಿಕ್ಕಿಕೊಂಡು ಸಾಯುತ್ತಾನೆ. ಈ ಕಾದಂಬರಿಯನ್ನು ಕೇವಲ ಅತಿಭಾವನಾಮಯ ಹಳಸಲು ಪ್ರೇಮಕಥೆ ಎನ್ನಲಾಗದು. ದುಗುಡ, ನಿರಾಶೆ, ಅಸಮಾಧಾನಗಳಿಂದ ತುಂಬಿದ ಒಂದು ಯುಗದ ಅಂತರ್ಮುಖಿ ಯುವಕವೃಂದವನ್ನೇ ಈ ಕಾದಂಬರಿ ಪ್ರತೀಕಿಸುತ್ತದೆ–ಎನ್ನುವುದು ವಿಮರ್ಶಕರ ಅಭಿಮತ. ಕಾರ್ಲೈಲ್ ಹೇಳುವಂತೆ ಜರ್ಮನಿಯ ಸ್ಟಾರ್ಮ್ ಉಂಡ್ ಡ್ರಂಗ್ ಯುಗದ ಕುದಿತ, ಮೊರೆತ, ಅಂತರಂಗದ ತಹತಹ–ಮುಂತಾಗಿ ತರುಣ ಜನಾಂಗದ ಉತ್ಕಟ ಮಾನಸಿಕ ಅನುಭವಗಳನ್ನೆಲ್ಲವನ್ನೂ ಈ ಕಾದಂಬರಿ ಪ್ರತಿಧ್ವನಿಸುತ್ತದೆ. ಆದ್ದರಿಂದಲೇ ಈ ಕಾದಂಬರಿಯನ್ನು ಓದಿದಾಗ ಯುರೋಪಿಗೆ ಯುರೋಪೇ ಕಣ್ಣೀರು ಕರೆಯಿತಂತೆ. ಗಯಟೆಯ ಉದ್ದೇಶ ಕೇವಲ ದುರಂತ ಪ್ರೇಮ ಚಿತ್ರಣವಲ್ಲ, 18ನೆಯ ಶತಮಾನದ ಜನರ ಅತಿಭಾವನಾ ಪರವಶತೆಯ ದುರಂತ ಪರಿಣಾಮಗಳ ವಿಶ್ಲೇಷಣೆ, ಸಮಾಜದ ನಡುವೆ ಯಾವ ಮೌಲ್ಯವೂ ನಿರಂಕುಶವಾಗಬಾರದು; ಯಾವುದೊಂದು ಭಾವನೆಯೂ ವಿವೇಕದ ಎಲ್ಲೆ ಮೀರಬಾರದು. ಆದರೆ ಮನುಷ್ಯನ ಬದುಕಿನಲ್ಲಿ ಸಂಘರ್ಷ, ನೋವು, ತೊಳಲಾಟಗಳು ಅನಿವಾರ್ಯ. ಇದನ್ನು ಪ್ರತಿರೂಪಿಸುವುದರ ಜೊತೆಗೆ ತನ್ನ ವೈಯಕ್ತಿಕ ಬದುಕನ್ನು ಶೋಧಿಸುತ್ತ ತನ್ನ ಅಂತರಂಗವನ್ನು ತೋಡಿಕೊಳ್ಳುವುದೇ ಗಯಟೆಯ ಉದ್ದೇಶವೆಂದು ಕಾಣುತ್ತದೆ.

**ಎಗ್ಮಾಂಟ್** (1787) : ಫೌಸ್ಟ್ ನಾಟಕದ ಮೊದಲ ಭಾಗಕ್ಕೆ ಬೀಜಾಂಕುರವಾದಂತೆ ಕಾಣುವ ಒಂದು ಅಪೂರ್ಣ ಕೃತಿಯನ್ನು (ಉರ್ ಫೌಸ್ಟ್) ಬರೆಯುತ್ತಿದ್ದ ಕಾಲದಲ್ಲಿ ಗಯಟೆ ರಚಿಸಿದ ಐತಿಹಾಸಿಕ ನಾಟಕವಿದು. ಇದನ್ನು ಮೊಟ್ಟಮೊದಲು 1775ರಲ್ಲಿ ಪ್ರಾರಂಭಿಸಿದರೂ ಕ್ರಮೇಣ ಪರಿಷ್ಕಾರಗೊಂಡು 1787ರಲ್ಲಿದು ಸಿದ್ಧವಾಯಿತು. ಹಾಲೆಂಡನ್ನು ಆಕ್ರಮಿಸಿದ್ದ ಸ್ಪೇನಿನ ಸರ್ವಾಧಿಕಾರಿಯ ವಿರುದ್ಧ ದಂಗೆ ಎದ್ದ ಗ್ರಾಫ್ ಎಗ್ಮಾಂಟ್ ಎಂಬ ಸ್ವಾತಂತ್ರ್ಯ ವೀರನ ಕಥೆ ಈ ನಾಟಕದ ವಸ್ತು. ಇದರಲ್ಲಿ ಕ್ರಿಯೆಯ ಅಂಶ ತೀರ ವಿರಳ. ಕ್ರಾಂತಿಕಾರರ ನಾಯಕ ಗ್ರಾಫ್ ಎಗ್ಮಾಂಟ್ ಬ್ರಸಲ್ಸ್ ನಗರದಿಂದ ತಕ್ಷಣ ಹೊರಟುಹೋಗಬೇಕೆಂದೂ ಇಲ್ಲದಿದ್ದರೆ ಅವನ ಪ್ರಾಣಕ್ಕೆ ಅಪಾಯವಿದೆ ಯೆಂದೂ ಅವನಿಗೆ ಮೇಲಿಂದ ಮೇಲೆ ಎಚ್ಚರಿಕೆ ಬರುತ್ತದೆ. ಆದರೆ ಅವನು ಅದನ್ನು ಕಡೆಗಣಿಸಿ, ಆಲ್ಬಾದ ಡ್ಯೂಕನಿಗೆ ಸೆರೆಸಿಕ್ಕು ಮರಣದಂಡನೆಗೆ ಗುರಿಯಾಗುತ್ತಾನೆ. ಇದಿಷ್ಟೇ ನಾಟಕದ ಕ್ರಿಯೆ. ಉಳಿದೆಲ್ಲ ಸಂಗತಿಗಳೂ ಪ್ರಾಸಂಗಿಕವಾಗಿ ಬಂದು ಎಗ್ಮಾಂಟನ ಪಾತ್ರವಿನ್ಯಾಸಕ್ಕೆ ನೆರವಾಗುತ್ತವೆ. ಮಾರ್ಗರೆಟ್, ಮ್ಯಾಕಿಯವೆಲ್ಲಿ, ಎಗ್ಮಾಂಟ್ ಪ್ರೀತಿಸುವ ಕ್ಲಾರ್‌ಷೆನ್–ಮುಂತಾದ ಪಾತ್ರಗಳು ಜೀವಂತವಾಗಿ ಹೊಮ್ಮಿವೆ. ಗಾಟ್ಸ್ ಮುಂತಾದ ಮೊಟ್ಟಮೊದಲ ನಾಟಕಗಳಲ್ಲಿರುವ ಪ್ರಕ್ಷುಬ್ಧತೆ ಇಲ್ಲಿಲ್ಲ. ನಾಟಕದಲ್ಲಿ ಎದ್ದು ಕಾಣುವ ಮಾನವೀಯತೆ, ಭಾವುಕತೆ, ಹಾಗೂ ಪ್ರಶಾಂತ ವಾತಾವರಣ–ಇವು ಓದುಗರನ್ನು ಸೆಳೆಯುತ್ತವೆ. ಸ್ಟುರ್ಮ್ ಉಂಡ್ ಡ್ರಂಗ್ ಯುಗದ ಉದ್ರೇಕ, ಕೋಲಾಹಲಗಳ ಹಿನ್ನೆಲೆಯಲ್ಲಿ ಬರೆದ ಕೃತಿಗಳಿಗೂ ವೈಮರ್‌ನ ನೀರವ, ಪ್ರಶಾಂತ, ಜೀವನದ ಹಿನ್ನೆಲೆಯಲ್ಲಿ ಬರೆದ ಇಫಿಜೆನಿ ಮುಂತಾದ ಶ್ರೇಷ್ಠ, ಕಲಾತ್ಮಕ ಕೃತಿಗಳಿಗೂ ನಡುವಣ ತಿರುವನ್ನು ಈ ನಾಟಕ ಸೂಚಿಸುತ್ತದೆ.

**ಇಫಿಜೆನಿ ಆಫ್ ಟಾರಿಸ್** (1787) : ಈ ನಾಟಕ ಗಯಟೆಯ ಕೃತಿಗಳಲ್ಲಿ ಅತ್ಯಂತ ಪರಿಪೂರ್ಣವೂ ದೋಷರಹಿತವೂ ಆದುದೆಂದು ಹೇಳುವುದುಂಟು. ಗ್ರೀಕ್ ಶಿಲ್ಪಕಲೆಯಲ್ಲಿ ತಾನು ಮೆಚ್ಚಿಕೊಂಡ ಸಂಯಮವನ್ನಿಲ್ಲಿ ಕವಿ ಸಾಧಿಸಿದ್ದಾನೆ. ಆದರೂ ನಾವು ಇಲ್ಲಿ ಕಾಣುವುದು ಗ್ರೀಕ್ ಕಲಾತತ್ತ್ವವನ್ನಲ್ಲ, ಗಯಟೆಯ ಮಾನವತಾವಾದದ ದಿವ್ಯ ಸ್ವರೂಪವನ್ನು. ತಂದೆ ಆಗಮೆಮ್ನಾನನ ಕೈಯಿಂದ ದೇವತೆಗಳ ಪ್ರೀತ್ಯರ್ಥವಾಗಿ ಬಲಿಯಾಗುವ ಅವನ ಮಗಳು ಇಫಿಜೀನಿಯಳ ಕಥೆ ಯುರಿಪಿಡೀಸನ ನಾಟಕದ ವಸ್ತು. ಅದನ್ನು ಗಯಟೆ ಮಾರ್ಪಡಿಸಿಕೊಂಡು ತನ್ನ ನಾಟಕಕ್ಕೆ ಅಳವಡಿಸಿಕೊಂಡಿದ್ದಾನೆ. ಕ್ರೂರಿ ತಂದೆಯ ಕೈಯಿಂದ ಅವಳನ್ನು ತಪ್ಪಿಸಲು ಆರ್ಟೆಮಿಸ್ ದೇವತೆ ಅವಳನ್ನು ಸ್ಕಿತಿಯನರೆಂಬ ಅನಾಗರಿಕರ ದೇಶಕ್ಕೆ ಕೊಂಡೊಯ್ದು ಬಿಡುತ್ತಾಳೆ. ಇಫಿಜೆನಿ ತನ್ನ ಅನುಪಮ ರೂಪಲಾವಣ್ಯ, ಧೈರ್ಯಸ್ಥೈರ್ಯಾದಿ ಸದ್ಗುಣಗಳಿಂದ ಅಲ್ಲಿನ ಅನಾಗರಿಕ ಜನರನ್ನು ಸುಧಾರಿಸುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಾಳೆ. ಸ್ಕಿತಿಯನ್ನರ ರಾಜ್ಯದಲ್ಲಿ ದೇವತೆಗಳಿಗೆ ನರಬಲಿ ಅರ್ಪಿಸುವ ಸಂಪ್ರದಾಯವನ್ನು ತಪ್ಪಿಸುತ್ತಾಳೆ. ಅವಳು ಶಾಪಗ್ರಸ್ತ ಟ್ಯಾಂಟಲಸ್ ವಂಶದವಳೆಂದು ತಿಳಿದರೂ ದೊರೆ ಥೊಯಾಸ್ ಅವಳಲ್ಲಿ ಪ್ರೇಮಭಿಕ್ಷೆ ಯಾಚಿಸಿ ಹತಾಶನಾಗುತ್ತಾನೆ. ತನ್ನಲ್ಲಿಗೆ ಬಂದ ಇಬ್ಬರು ಅಗಂತುಕರನ್ನು ಇಫಿಜೆನಿಯ ಬಳಿ ಕಳುಹಿಸಿ ಅನೂಚಾನವಾಗಿ ನಡೆದು ಬಂದ ನರಬಲಿ ಮತ್ತೆ ಪ್ರಾರಂಭವಾಗ ಬೇಕೆಂದು ಆಜ್ಞಾಪಿಸುತ್ತಾನೆ. ಈ ಅಗಂತುಕರಲ್ಲಿ ಒಬ್ಬ ತನ್ನ ಸೋದರ ಓರೆಸ್ಟ್, ಇನ್ನೊಬ್ಬ ಅವನ ಗೆಳೆಯ ಪೈಲೇಡಿಸ್ ಎಂದು ಅವಳಿಗೆ ತಿಳಿಯದು. ರಾಜಾಜ್ಞೆಯ ಪ್ರಕಾರ ಅವರಿಬ್ಬರೂ ಅಲ್ಲಿ ಮೊದಲ ಬಲಿಯಾಗಬೇಕು. ಪೈಲೇಡಿಸ್ ಅವಳಿಗೆ ಟ್ರಾಯ್‌ಪತನ, ಆಗಮೆಮ್ನಾನನ ಕೊಲೆ, ಮಗ ಓರೆಸ್ಟ್ ಪ್ರತೀಕಾರಕ್ಕಾಗಿ ನಡೆಸಿದ ಮಾತೃಹತ್ಯೆ ಎಲ್ಲವನ್ನೂ ಸೂಚ್ಯವಾಗಿ ತಿಳಿಸುತ್ತಾನೆ. ಅಪಾಲೋ ದೇವತೆಯ ಆಜ್ಞೆಯಂತೆ ಓರೆಸ್ಟ್ ತನ್ನ ತಂಗಿಯ ದೇವಾಲಯದಿಂದ ದೇವತೆಯ ವಿಗ್ರಹವನ್ನು ತಂದರೆ ಅವನು ಉಗ್ರ ಕನ್ಯೆಯರ ಕೋಪದಿಂದ ಮುಕ್ತನಾಗುವನಲ್ಲದೇ ಅವನ ಶಾಪ ನಿವಾರಣೆ ಯಾಗುವುದೆಂದು ಪೈಲೇಡಿಸ್ ತಿಳಿಸುತ್ತಾನೆ. ತಾಳ್ಮೆ ತಪ್ಪಿದ ಓರೆಸ್ಟ್ ತನ್ನ ನಿಜರೂಪವನ್ನು ಸೋದರಿಗೆ ತಿಳಿಸಿಬಿಡುತ್ತಾನೆ. ನಿಷ್ಕಳಂಕಳೂ ಪವಿತ್ರ ಹೃದಯಿಯೂ ಆದ ಸೋದರಿಯ ಎದುರು ತನ್ನ ಘೋರ ಅಪರಾಧಗಳನ್ನು ಒಪ್ಪಿಕೊಂಡಾಗ ಅವನ ಉನ್ಮತ್ತಸ್ಥಿತಿ ಹಾಗೂ ಹೃದಯದ ಭಾರ ಇಳಿದಂತಾಗುತ್ತದೆ. ತನ್ನ ಕಣ್ಣಮುಂದೆ ಸುಳಿಯುವ ಅದ್ಭುತ



ದೃಶ್ಯಾವಳಿಯಲ್ಲಿ ತನ್ನ ಪಿತೃಗಳೆಲ್ಲರೂ ಶಾಂತಿಸೌಹಾರ್ದಗಳಿಂದಿರುವುದನ್ನು ನೋಡಿ ಅವನಿಗೆ ತನ್ನ ಶಾಪನಿವಾರಣೆಯ ಬಗ್ಗೆ ಭರವಸೆ ಮೂಡುತ್ತದೆ. ಮೂವರೂ ಅಲ್ಲಿಂದ ತಪ್ಪಿಸಿಕೊಂಡು ದೇವತೆಯ ವಿಗ್ರಹವನ್ನು ರಹಸ್ಯವಾಗಿ ಒಯ್ಯಬೇಕಾದಾಗ ಇಫಿಜೆನಿ ತನ್ನನ್ನು ಪ್ರೀತಿಸಿದ ಥೊಯಾಸನಿಗೆ ಮೋಸಮಾಡಲು ಇಚ್ಛಿಸುವುದಿಲ್ಲ. (ಗ್ರೀಕ್ ನಾಟಕದಲ್ಲಿ ಅವಳು ವಂಚನೆಯಿಂದ ತಪ್ಪಿಸಿಕೊಂಡು ಹೋಗುತ್ತಾಳೆ. ಆರ್ಟೆಮಿಸ್ ದೇವತೆಯೇ ಪ್ರತ್ಯಕ್ಷಳಾಗಿ ಬಂದು ದುರಂತವನ್ನು ತಪ್ಪಿಸುತ್ತಾಳೆಂಬುದು ಗಮನಾರ್ಹ.) ನಡೆದ ಎಲ್ಲ ಸಂಗತಿಯನ್ನು ಅವನ ಮುಂದೆ ಒಪ್ಪಿಸಿ ಅವನು ತನ್ನನ್ನು, ತನ್ನ ಬಂಧುಗಳಿಬ್ಬರನ್ನು ಬಿಡುಗಡೆ ಮಾಡುವಂತೆ ಬೇಡಿಕೊಳ್ಳುತ್ತಾಳೆ. ತಂಗಿಯ ದೇವಾಲಯ ಎನ್ನುವ ದೇವವಾಣಿಯ ದ್ವಂದ್ವಾರ್ಥ ನಿವಾರಣೆಯಾಗಿ ಥೊಯಾಸ್ ಉದಾರ ಹೃದಯದಿಂದ ಅವರನ್ನು ವಿಮುಕ್ತಗೊಳಿಸುತ್ತಾನೆ. ಹೀಗೆ ಈ ನಾಟಕದಲ್ಲಿ ಗಯಟೆ ಮೂಲ ಗ್ರೀಕ್ ನಾಟಕವನ್ನು ತನ್ನ ನೈತಿಕ ಮಾನವೀಯ ದೃಷ್ಟಿಗಳಿಗನುಸಾರವಾಗಿ ಅಳವಡಿಸಿಕೊಂಡು ಒಂದು ಅಸದೃಶ ಕಲಾಕೃತಿ ನಿರ್ಮಿಸಿದ್ದಾನೆ. ಇಂಥ ಪಾತ್ರಗಳನ್ನು ಕುರಿತೇ ಅವನು ಹಲವು ವರ್ಷಗಳ ಅನಂತರ 'ಹೃದಯವಂತಿಕೆಯ ಸಾಕಾರಗಳು' ಎಂದು ನುಡಿದದ್ದು.

**ಟಾರ್ಕ್ವಾಟೋ ಟ್ಯಾಸೋ** (1790) : ಐದು ಅಂಕಗಳ ಈ ನಾಟಕದಲ್ಲಿ ಗಯಟೆ ವೈಮರ್ ರಾಜನ ಆಸ್ಥಾನದಲ್ಲಿ ಕಂಡುಂಡ ವೈಯಕ್ತಿಕ ಅನುಭವಗಳನ್ನು ಕಂಡರಿಸಿದ್ದಾನೆನ್ನಬಹುದು. ಇದು 16ನೆಯ ಶತಮಾನದ ಇಟಲಿಯ ಮಹಾಕವಿ

ಟ್ಯಾಸೋವಿನ ಜೀವನಚರಿತ್ರೆಗೆ ಸಂಬಂಧಿಸಿದ ನಾಟಕ. ಇಫಿಜೆನಿ ನಾಟಕದಲ್ಲಿ ಬರುವ ಮಿಂಚಿನಂಥ ಘಟನೆಗಳಾಗಲೀ ಮಾತಿನ ಚಮತ್ಕಾರವಾಗಲೀ ಇಲ್ಲಿಲ್ಲ. ಇದರಲ್ಲಿ ಭಾವಗೀತೆಯ ಸಾಂದ್ರತೆಯೇ ಹೆಚ್ಚು. ಕ್ರಿಯೆ, ಸಂಘರ್ಷಗಳು ಇಲ್ಲವೆಂದರೂ ಇದೊಂದು ಮನೋವಿಶ್ಲೇಷಣಾತ್ಮಕ ನಾಟಕ. ಕೇವಲ ಐದೇ ಪಾತ್ರಗಳಿರುವ ಈ ನಾಟಕದ ಕಥೆಯೆಲ್ಲವೂ ಫೆರ‍್ರಾರ ನಗರದ ಡ್ಯೂಕ್ ಎರಡನೆಯ ಆಲ್‌ಫಾನ್ಸೋವಿನ ಆಸ್ಥಾನದಲ್ಲಿ ನಡೆಯುತ್ತದೆ. ಆತ್ಮಸಂಯಮವನ್ನು ಪರಿಪೂರ್ಣತೆಯನ್ನು ಪಡೆಯಲಾರದೆ ತೊಳಲುವ ಟ್ಯಾಸೋ ಕವಿಯ ವ್ಯಗ್ರ ಅಂತರಂಗದ ಚಿತ್ರಣ ಇಲ್ಲಿದೆ. ನಾಟಕ ಪ್ರಾರಂಭವಾಗುವಾಗ ಕವಿ ತನ್ನ ಮೇರುಕೃತಿ ಜೆರೂಸಲೆಂ ಲಿಬರ‍್ಯಾಟ ಎಂಬ ಭವ್ಯ ಕಾವ್ಯವನ್ನು ಬರೆದು ಅಪೂರ್ವ ಮನ್ನಣೆಗೆ ಪಾತ್ರನಾಗಿದ್ದಾನೆ. ತನ್ನ ಆಶ್ರಯದಾತ ಡ್ಯೂಕ್ ಆಲ್‌ಫಾನ್ಸೋವಿನ ಸೋದರಿ ಲಿಯೋನೋರ್ ದ ಎಸ್ತ ಕವಿಯನ್ನು ಬಹುವಾಗಿ ಮೆಚ್ಚಿ ಅವನಿಗೆ ಜಯಮಾಲೆ ಅರ್ಪಿಸಿದ್ದಾಳೆ. ಇದರಿಂದ ಆಗತಾನೇ ರೋಮಿನಿಂದ ಹಿಂದಿರುಗಿರುವ, ಡ್ಯೂಕನ ಕಾರ್ಯದರ್ಶಿ ಆಂಟೋನಿಯೋ ಮಾಂಟಿಕ್ಯಾಟಿನೋವಿಗೆ ಕವಿ ಟ್ಯಾಸೋವಿನ ವಿಷಯದಲ್ಲಿ ಅಸೂಯೆ, ಅನಾದರಗಳು ಹುಟ್ಟಿವೆ. ಕವಿ ತನ್ನ ಯಶಸ್ಸಿನ ಬಗ್ಗೆ ಇಲ್ಲಸಲ್ಲದ ಪ್ರಚಾರ ಮಾಡಿಕೊಂಡು, ತಾನು ವರ್ಜಿಲ್, ಆರಿಯೋಸ್ಟೊ ಮುಂತಾದ ಮಹಾಕವಿಗಳ ಸಾಲಿಗೆ ಸೇರಿದವನೆಂದು ಹೇಳಿಕೊಳ್ಳುತ್ತಿದ್ದಾನೆಂದು ಭಾವಿಸಿ ಆಂಟೋನಿಯೋವಿಗೆ ಸಿಟ್ಟು ಬರುತ್ತದೆ. ಕವಿ ರಾಜಕಾರಣಿಗಳಿಬ್ಬರ ನಡುವೆ ಬಿರುಕು ಹುಟ್ಟುತ್ತದೆ. ಟ್ಯಾಸೋವಿನ ಮೇಲೆ ದೇಶದ್ರೋಹದ ಆಪಾದನೆ ಬರುತ್ತದೆ. ಅವನನ್ನು ಕಾರಾಗೃಹಕ್ಕೆ ಕಳುಹಿಸಲಾಗುತ್ತದೆ. ಅನಂತರ ಡ್ಯೂಕನ ಆಜ್ಞೆಯಂತೆ ಆಂಟೋನಿಯೋ ಭಗ್ನ ಹೃದಯದ ಕವಿಯನ್ನು ಬಿಡುಗಡೆ ಮಾಡುತ್ತಾನೆ. ಟ್ಯಾಸೋ ಫೆರ‍್ರಾರ ನಗರವನ್ನು ಬಿಟ್ಟು ಹೊರಡಲು ತನಗೆ ಡ್ಯೂಕನ ಅಪ್ಪಣೆ ದೊರಕುವಂತೆ ಮಾಡಬೇಕೆಂದು ಆಂಟೋನಿಯೋನನ್ನು ಪ್ರಾರ್ಥಿಸುತ್ತಾನೆ. ಕೊನೆಯ ಗಳಿಗೆಯಲ್ಲಿ ನತದೃಷ್ಟ ಟ್ಯಾಸೋ ರಾಜಕುಮಾರಿ ಲಿಯೋನಾರಳಲ್ಲಿ ತನಗಿರುವ ಗಾಢ ರಹಸ್ಯಪ್ರೇಮವನ್ನು ತೋಡಿಕೊಂಡು ಅವಳಿಂದ ತಿರಸ್ಕೃತನಾಗುತ್ತಾನೆ. ಎಲ್ಲ ಕಡೆಯೂ ನಿರಾಶೆಯನ್ನು ಕಾಣುತ್ತಿರುವ ಕವಿಗೆ ರಾಜಕಾರಣಿ ಆಂಟೋನಿಯೋವಿನ ಗೆಳೆತನವೇ ಅಮೃತಸೇಚನವಾಗುತ್ತದೆ. ಹೀಗೆ ಇದ್ದಕ್ಕಿದ್ದಹಾಗೆ ಮುಗಿಯುವ ಈ ನಾಟಕ ಅಪೂರ್ಣವೆನಿಸಿದರೂ ಅಲ್ಲಲ್ಲಿ ಕಾವ್ಯಾತ್ಮಕವಾದ ಹೊಳಪಿನಿಂದ ಕೂಡಿದೆ. ಆದರೆ ಆಂಟೋನಿಯೋ ಪಾತ್ರ ವಿನ್ಯಾಸ ಅಸಹಜವೆನಿಸುವಷ್ಟು ವಿರೋಧಾಭಾಸಗಳಿಂದ ತುಂಬಿದೆ. ಕುಟಿಲ ರಾಜಕಾರಣಿ ಇದ್ದಕ್ಕಿದ್ದ ಹಾಗೆ ಕವಿಯ ಆತ್ಮೀಯ ಗೆಳೆಯನಾಗುವ ಸಂಗತಿಯಲ್ಲಿ ನಾಟ್ಯಾಂಶವೇ ಇಲ್ಲ. ಆದರೆ ಕವಿಯ ಅಂತರಂಗದ ತುಮುಲವನ್ನೂ ಆಸೆ ನಿರಾಸೆಗಳ ಏರಿಳಿತಗಳನ್ನೂ ಗಯಟೆ ಅತ್ಯಂತ ಹೃದಯಸ್ಪರ್ಶಿಯಾಗಿ ವಿಶ್ಲೇಷಿಸಿದ್ದಾನೆ. ಇಂಗ್ಲಿಷ್ ಕವಿ ಕೀಟ್ಸ್, ಟ್ಯಾಸೋನ ಅಂತರಂಗದ ಸ್ವರೂಪವನ್ನು ವಿವರಿಸುತ್ತ ಆತ ಗೋಸುಂಬೆಯಂಥವನು, ಅವನಿಗೆ ವಿಶಿಷ್ಟ ವ್ಯಕ್ತಿತ್ವವೆಂಬುದೇ ಇಲ್ಲ, ಅವನಿಗೆ ತಾನೆಂಬುದೇ ಇಲ್ಲ-ಎನ್ನುತ್ತಾನೆ. ಹೀಗೆ ಗೋಸುಂಬೆಯಂತೆ ಏನೊಂದೂ ವಿಶಿಷ್ಟ ವ್ಯಕ್ತಿತ್ವವಿಲ್ಲದ, ಆದರೆ ಮಾನವಕೋಟಿಯನ್ನೇ ಪ್ರತೀಕಿಸುವಂಥ ಸ್ವರೂಪವುಳ್ಳ ಕವಿಯ ಸಂಕೀರ್ಣ ಅಂತರಂಗವನ್ನು ಗಯಟೆ ಈ ನಾಟಕದಲ್ಲಿ ತುಂಬ ಅರ್ಥವತ್ತಾಗಿ ಪ್ರತಿರೂಪಿಸಿದ್ದಾನೆ.

**ವಿಲ್‌ಹೆಲ್ಮ್ ಮೈಸ್ಟರ್ಸ್ ಅಪ್ರೆಂಟಿಸ್‌ಷಿಪ್** (1795–96) : ಇಟಲಿಯ ಪ್ರವಾಸದಿಂದ ಗಯಟೆ ವೈಮರ್‌ಗೆ ಹಿಂದಿರುಗಿದ ಮೇಲೆ ಸುಮಾರು 25 ವರ್ಷ ವೈಮರ್ ಥಿಯೇಟರಿನ ನಿರ್ದೇಶನಕ್ಕಾಗಿ ಕೆಲಸಮಾಡಿದ. ಥಿಯೇಟರಿನ ಆಡಳಿತದಲ್ಲಿ ತನಗೆ ಲಭಿಸಿದ ಗಾಢ ಅನುಭವಗಳನ್ನು ಈ ಕಾದಂಬರಿಯಲ್ಲಿ ರೂಪಿಸಿದ್ದಾನೆ. ಕವಿ ಇದರಲ್ಲಿ ಇಂಗ್ಲಿಷ್ ಕಾದಂಬರಿಕಾರ ರಿಚರ್ಡ್‌ಸನ್ನನ ಪ್ರಭಾವದಿಂದ ತಪ್ಪಿಸಿಕೊಂಡು ಹೊಸ ಸಂವೇದನೆಯ ನ್ನೊಳಗೊಂಡ, ಆತ್ಮಕಥನೀಯ ಕಾದಂಬರಿ ಎನ್ನಬಹುದಾದ ಒಂದು ಹೊಸ ಪ್ರಕಾರವನ್ನೇ ಸೃಷ್ಟಿಸಿದ್ದಾನೆ. ಈ ಕಾದಂಬರಿಯ ರಚನೆ ತೀರ ಶಿಥಿಲವಾಗಿದ್ದು, ಕಥಾವಸ್ತು ಹಾಗೂ ಪಾತ್ರಗಳು ಕೇವಲ ಒಂದು ನೀತಿಪಾಠದ ಅಥವಾ ತತ್ತ್ವನಿರೂಪಣೆಯ ಸಾಧನವಾಗಿವೆಯೆಂದು ತೋರುತ್ತದೆ. ಒಬ್ಬ ಯುವಕನ ವ್ಯಕ್ತಿತ್ವ ಸಂಪೂರ್ಣವಾಗಿ ವಿಕಾಸವಾಗುವುದಕ್ಕೆ ಮುಂಚೆ ಅವನಿಗೆ ಎಂಥ ಅನುಭವಗಳು ಲಭಿಸಬಹುದೆಂಬುದನ್ನು ಇಲ್ಲಿ ಕಾಣಬಹುದು. ವಿಲ್‌ಹೆಲ್ಮ್ ಪ್ರೀತಿಸುವ ಮಾರಿಯಾನಿ, ಮೇನಾ, ನಟಾಲಿ, ಥೆರೆಸಾ ಮುಂತಾದ ಹೆಣ್ಣುಗಳು, ವಿಲ್‌ಹೆಲ್ಮ್‌ನ ಸಾಕುಮಗಳು ಮಿಗ್ನಾನ್, ಚಿತ್ರ ವಿಚಿತ್ರ ಅಲೌಕಿಕ ಅದ್ಭುತ ವ್ಯಕ್ತಿ ಹಾರ್ಪರ್-ಇವರು ಕಾದಂಬರಿಯ ಹಾಸು ಹೊಕ್ಕಾಗಿ ಬರುತ್ತಾರೆ. ಕಥೆ ಎಂಟು ಘಟ್ಟಗಳಾಗಿ ವಿನ್ಯಾಸಗೊಂಡು ಒಂದಕ್ಕೊಂದು ಸಂಬಂಧವಿಲ್ಲದಂತೆ ಬೆಳೆಯುತ್ತದೆ. ವ್ಯಾಪಾರಿಯಾಗಿದ್ದ ವಿಲ್‌ಹೆಲ್ಮ್‌ನ ಅನುಭವಗಳು, ರಂಗಭೂಮಿಯ ಜೀವನದ ವಾಸ್ತವ ಘಟನೆಗಳು, ಲೋಥಾರಿಯೋವಿನ ದುರ್ಗದಲ್ಲಿ ನಡೆಯುವ ಅದ್ಭುತ ಪ್ರಸಂಗಗಳು-ಇವು ಕಾದಂಬರಿಯ ಮುಖ್ಯಾಂಶಗಳು. ವ್ಯಕ್ತಿ ಸಮಾಜದ ಅಂಗವಾಗಿ ಬದುಕುವುದರ ಜೊತೆಗೆ ಬದುಕಿನ ನಾನಾ ಅನುಭವಗಳ ಸಾರವನ್ನು ರಕ್ತಗತ ಮಾಡಿಕೊಳ್ಳಬೇಕು, ತನ್ನ ಅರಿವನ್ನು ಕಲ್ಪನೆಯ ಕಣ್ಣನ್ನು ನಕ್ಷತ್ರಲೋಕದಿಂದಾಚೆಗೆ ಕೊಂಡೊಯ್ಯಲೆತ್ನಿಸಬೇಕು-ಎಂಬ ಮಾತು ಇಲ್ಲಿ ಮುಖ್ಯವೆಂದು ತೋರುತ್ತದೆ. ಕಾದಂಬರಿಯ ಕೊನೆಯಲ್ಲಿ ವಿಲ್‌ಹೆಲ್ಮ್‌ನ ಸಾಕುಮಗಳು ಮಿಗ್ನಾನ್ ಸತ್ತಾಗ ಅವಳ ಶವದ ಬಳಿ ನಾಲ್ವರು ತರುಣರು ಶೋಕಗೀತೆ ಹಾಡುತ್ತಾರೆ. ಈ ಗೀತೆಯಲ್ಲಿ ಇಡೀ ಕಾದಂಬರಿಯ ತತ್ತ್ವವೇ ಅಡಗಿದೆ ಎನ್ನುವುದುಂಟು. 'ನಿನ್ನ ಜೀವನದಲ್ಲಿ ಯಾವುದು ನಿನ್ನ ಪಾಲಿಗೆ ಒದಗುತ್ತದೆಯೋ ಅದನ್ನು ನಿಷ್ಠೆಯಿಂದ, ನಿನ್ನ ಶಕ್ತಿಮೀರಿ ನೆರವೇರಿಸು' ಎನ್ನುವುದು ಗಯಟೆಗೆ ಪ್ರಿಯವಾಗಿದ್ದ ಆದರ್ಶ. ಕಾದಂಬರಿಯ ಪಾತ್ರ ಘಟನೆಗಳೆಲ್ಲವೂ ಈ ಆದರ್ಶಕ್ಕೆ ವಸ್ತುಪ್ರತಿರೂಪಗಳಾಗಿ ಬಂದಿವೆ ಎನ್ನುವುದು ವಿಮರ್ಶಕರ ಅಭಿಪ್ರಾಯ.


Zarte, schattende Gebilde,
Fliegt zu eurer Künstlerinn!
Daß Sie freündlich, hold und milde
Immer Sich nach Ihrem Sinn
Eine Welt von Schatten bilde.
Denn das irdische Gefilde
Schattet oft nach eignem Sinn.

Weimar
am 24 Apr.
1818

Goethe

**ಹರ್ಮನ್ ಮತ್ತು ಡೊರೋತಿಯ** (1798) : ಈ ನೀಳ್ಗವನದಲ್ಲಿ ಗಯಟೆ ಗ್ರೀಕ್ ಕಲೆಯನ್ನು ಆಧುನಿಕ ಕಲ್ಪನೆಯೊಂದಿಗೆ ಹೇಗೆ ಸಮನ್ವಯಗೊಳಿಸಬಹುದೆಂದು ತೋರಿಸಿದ್ದಾನೆ. ಅತಿ ಸಾಮಾನ್ಯ ಹಳ್ಳಿಗಾಡಿನ ಪ್ರೇಮಕಥೆಯನ್ನು ಹೋಮರನ ಭವ್ಯಕಾವ್ಯದ ಶೈಲಿಯಲ್ಲಿ (ಹೆಕ್ಸಾಮೀಟರ್) ನಿರೂಪಿಸುತ್ತಾನಾದರೂ ಕವನ ದೋಷರಹಿತವಾಗಿದೆ. ಅದರಲ್ಲಿ ಒಂದಿಷ್ಟೂ ಅತಿಭಾವುಕತೆ ಕಂಡುಬರುವುದಿಲ್ಲ. ಇಲ್ಲಿ ಬರುವ ಪ್ರೇಮಿಗಳು, ತರುಣ ತರುಣಿಯರು, ತಂದೆತಾಯಂದಿರು, ಗ್ರಾಮವಾಸಿಗಳು ಮೊದಲಾದ ಎಲ್ಲ ಪಾತ್ರಗಳೂ ಅಚ್ಚಿನಲ್ಲಿ ಎರಕ ಹೊಯ್ದಂತಿದ್ದರೂ ಕಥೆಯ ನಿರೂಪಣೆಯಲ್ಲಿ ಕವಿ ಸಾಧಿಸಿರುವ ನಿರ್ಲಿಪ್ತತೆ, ವಸ್ತುನಿಷ್ಠೆ ಬೆರಗುಗೊಳಿಸುವಂಥವು. ರೈನ್ ನದೀತೀರದ ಜರ್ಮನ್ ಶ್ರೀಮಂತ ಕುಟುಂಬಕ್ಕೆ ಸೇರಿದ ಹರ್ಮನ್ ಎಂಬ ತರುಣ ಪ್ಯಾಲೆಸ್ಟೈನಿನಿಂದ ಬಂದ ನಿರಾಶ್ರಿತರಿಗೆ ಅನ್ನ ಬಟ್ಟೆ ಹಂಚಲು ಹೋದಾಗ ಆ ಗುಂಪಿನಲ್ಲಿದ್ದ ಡೊರೋತಿಯ ಎಂಬ ಹುಡುಗಿಯನ್ನು ಕಂಡು ಪ್ರೀತಿಸುತ್ತಾನೆ. ತಾನು ಹಂಚಲು ತಂದಿದ್ದ ವಸ್ತುಗಳನ್ನೆಲ್ಲ ಆ ಹುಡುಗಿಯ ವಶಕ್ಕೆ ಕೊಟ್ಟುಬಿಡುತ್ತಾನೆ. ಶ್ರೀಮಂತ ಕುಟುಂಬದ ಹೆಣ್ಣನ್ನು ತಂದು ಮಗನಿಗೆ ಮದುವೆ ಮಾಡಬೇಕೆಂದಿದ್ದ ಹರ್ಮನ್ನನ ತಂದೆಗೆ ಇದರಿಂದ ನಿರಾಶೆಯಾಗುತ್ತದೆ. ಆದರೆ ಡೊರೋತಿಯಳ ಸಚ್ಚರಿತ್ರೆ, ಸದ್ಗುಣ ಸೌಂದರ್ಯಗಳ ಬಗೆಗೆ ಸಂತೃಪ್ತನಾದ ತಂದೆ ಇಬ್ಬರೂ ಮದುವೆಯಾಗಲು ಅನುಮತಿ ನೀಡುತ್ತಾನೆ. ತನ್ನ ಮನೆಗೆಲಸಕ್ಕಾಗಿ ನೇಮಿಸಿದ ಸೇವಕಿಯೆಂದು ಆ ಮುಗ್ಧ ಹಳ್ಳಿಯ ಹುಡುಗಿಗೆ ಹರ್ಮನ್ ಸುಳ್ಳು ಹೇಳಿ ಮನೆಗೆ ಕರೆತರುತ್ತಾನೆ. ಅವನು ಅವಳಿಗೆ ಅನಿರೀಕ್ಷಿತವಾಗಿ ನಿಜಾಂಶ ತಿಳಿಸಿದಾಗ ಅವಳ ಸಂತೋಷಕ್ಕೆ ಪಾರವಿಲ್ಲದಂತಾಗುತ್ತದೆ. ಮತ್ತೆ ಮತ್ತೆ ಹೋಮರನ ಭವ್ಯ ಪಾತ್ರಗಳನ್ನು ನೆನಪು ಮಾಡುವಂಥ ಈ ಕಥನ ಕವನದ ಸರಳ ಪಾತ್ರಗಳು ಗ್ರೀಕ್ ಶಿಲ್ಪಾಕೃತಿಗಳನ್ನು ಹೋಲುತ್ತವೆ. ಕ್ಲಾಸಿಕಲ್ ಗ್ರೀಕ್ ಸಾಹಿತ್ಯ ಮತ್ತು ಶಿಲ್ಪಕಲೆಗಳಿಂದ ತಾನು ಗ್ರಹಿಸಿದ ಕಲಾಪ್ರಜ್ಞೆಯನ್ನು ಗಯಟೆ ಇಲ್ಲಿ ತುಂಬ ಸೊಗಸಾಗಿ ಬಳಸಿದ್ದಾನೆ. ಜರ್ಮನಿಯ ಕ್ಲಾಸಿಕಲ್ ಸಾಹಿತ್ಯದಲ್ಲಿ ಇದನ್ನು ಮೀರಿಸಿದ ಪರಿಪೂರ್ಣ ಕವನ ಇನ್ನೊಂದಿಲ್ಲ.

**ದಿ ಎಲೆಕ್ಟಿವ್ ಅಫಿನಿಟೀಸ್** (1809) : ಈ ಕಾದಂಬರಿಯಲ್ಲಿ ಗಯಟೆ ವ್ಯಕ್ತಿವ್ಯಕ್ತಿಗಳ ನಡುವಣ ಸಂಬಂಧ ಎಷ್ಟು ಅವ್ಯಕ್ತವೂ ವಿಚಿತ್ರವೂ ಆದುದೆಂಬುದನ್ನು ಚಿತ್ರಿಸಿದ್ದಾನೆ. ಕಥಾನಾಯಕ ಎಡ್ವರ್ಡ್, ಅವನ ಹೆಂಡತಿ ಚಾರ್ಲಟ್, ಆಕೆ ಪ್ರೀತಿಸುವ ಕ್ಯಾಪ್ಟನ್, ಎಡ್ವರ್ಡ್ ಪ್ರೀತಿಸುವ ಓಟ್ಟಿಲಿ (ಚಾರ್ಲಟ್ಟಳ ಸಾಕುಮಗಳು)-ಈ ನಾಲ್ವರ ವಿಷಮ ಸಂಬಂಧವನ್ನು ಗಯಟೆ ಅತ್ಯಂತ ವಸ್ತುನಿಷ್ಠ ಶೈಲಿಯಲ್ಲಿ ನಿರೂಪಿಸಿದ್ದಾನೆ. ಕೆಲವು ಧಾತುಗಳು ಕೆಲವನ್ನು ಬಿಟ್ಟು ಉಳಿದ ಕೆಲವು ಪದಾರ್ಥಗಳೊಡನೆ ಸಂಯೋಗ ಹೊಂದುವ ಪ್ರವೃತ್ತಿ ಪಡೆದಿರುತ್ತವೆ. ಇದು ರಸಾಯನಶಾಸ್ತ್ರದಲ್ಲಿನ ಒಂದು ನೈಸರ್ಗಿಕ ವ್ಯಾಪಾರ. ಸಸ್ಯ ಹಾಗೂ ಪ್ರಾಣಿಲೋಕದ ನೈಸರ್ಗಿಕ ವ್ಯಾಪಾರಗಳನ್ನು ಬಿಡುಗಣ್ಣಿನಿಂದ

ವೀಕ್ಷಿಸುತ್ತಿದ್ದ ವಿಜ್ಞಾನಿ ಗಯಟೆ ಈ ರಾಸಾಯನಿಕ ಕ್ರಿಯೆಯನ್ನು ಮಾನವಸಂಬಂಧ ಹಾಗೂ ವ್ಯಕ್ತಿವ್ಯಕ್ತಿಗಳ ನಡುವಣ ಆಕರ್ಷಣೆಗಳಿಗೆ ಅನ್ವಯಿಸಿ ಈ ಕಾದಂಬರಿಯನ್ನು ರಚಿಸಿದ್ದಾನೆ. ಪೂರ್ವಸಿದ್ಧ ತಾತ್ತ್ವಿಕ ಸೂತ್ರಗಳ ಚೌಕಟ್ಟಿನಲ್ಲಿ ಚಲಿಸುವುದರಿಂದ ಇಲ್ಲಿನ ಪಾತ್ರಗಳ ನಿಯೋಜನೆ ತೀರ ಯಾಂತ್ರಿಕವಾಗಿದೆಯಾದರೂ ಕತೆ ಮಾತ್ರ ಕವಿ ಗಯಟೆಯ ವೈಚಾರಿಕತೆಯ ವಿವಿಧ ಸ್ತರಗಳನ್ನು ನವಿರಾಗಿ ಪ್ರತೀಕಿಸುತ್ತದೆ.

**ಡಿಶ್ಟಂಗ್ ಅಂಡ್ ವಾಹ್ರ್ ಹೈಟ್** (1811–14) : ಇದು ಗಯಟೆಯ ಜೀವನದ ಮೊದಲ ಭಾಗವನ್ನು ರೂಪಿಸುವ ಆತ್ಮಕಥೆ. 1811ರಿಂದ 1814ರವರೆಗಿನ ಅವಧಿಯಲ್ಲಿ ಗಯಟೆ ಆತ್ಮಕತೆಯ ಮೂರುಭಾಗಗಳನ್ನು ಬರೆದರೂ ಕೊನೆಯಭಾಗ, ಅಂದರೆ ಅವನು ವೈಮರ್‌ಗೆ ಬರುವವರೆಗಿನ ಜೀವನದ ಇತಿಹಾಸದ ಭಾಗ, ಆತ ತೀರಿಹೋದ ಅನಂತರ, 1833ರಲ್ಲಿ ಪ್ರಕಟವಾಯಿತು. ಇಳಿವಯಸ್ಸಿನ ಕವಿ ತನ್ನ ವಿಸ್ತೃತ ಜೀವನದ ಏರಿಯ ಮೇಲೆ ನಿಂತು, ಕಳೆದುಹೋದ ತನ್ನ ತಾರುಣ್ಯದ ವಿವಿಧ ಅನುಭವಗಳನ್ನು ಇಲ್ಲಿ ಸಮೀಕ್ಷಿಸಿದ್ದಾನೆ. ಫ್ರಾಂಕ್‌ಫರ್ಟಿನಲ್ಲಿನ ಬಾಲ್ಯ ಮತ್ತು ಲೀಪ್‌ಜಿಗ್ ಘಟನೆಗಳು ಇಲ್ಲಿ ಜೀವ ತಳೆದು ಸ್ಫುಟವಾಗಿ ಹೊಮ್ಮಿವೆ. ತಾನು ಪ್ರೀತಿಸಿದ್ದ ಫ್ರೆಡ್ರಿಕ್ ಬ್ರಯಾನ್ ಮತ್ತು ಸೀಸನ್‌ಹ್ಯಾಮ್ ಹಳ್ಳಿಗಳ ವರ್ಣನೆ ಅತ್ಯಂತ ಕಾವ್ಯಾತ್ಮಕವಾಗಿ ಅರಳಿ ಬಂದಿದೆ. ಜರ್ಮನಿಯಲ್ಲಿ ಚಂಡಮಾರುತದಂತೆ ಬೀಸಿದ ಸ್ಟುರ್ಮ್ ಉಂಡ್ ಡ್ರಂಗ್ ಚಳವಳಿಯ ನಡುವೆ ಗಯಟೆ ತನ್ನ ಯೌವ್ವನವನ್ನು ಕಳೆದರೂ ಆ ಪ್ರಕ್ಷುಬ್ಧ ವಾತಾವರಣದ ಪ್ರಭಾವ ಈ ಆತ್ಮಕಥೆಯಲ್ಲಿ ಎಲ್ಲೂ ಸುಳಿದಿಲ್ಲ. ಇಲ್ಲಿನ ವಸ್ತುನಿಷ್ಠ ನಿರ್ಲಿಪ್ತಶೈಲಿ ತಾನೇತಾನಾಗಿ, ಅನಿವಾರ್ಯವಾಗಿ ರೂಪ ತಾಳಿ ಬಂದುದಲ್ಲ ಅನಿಸುತ್ತದೆ. ಈ ಆತ್ಮಕಥೆಯ ಶೈಲಿಯನ್ನು ಕುರಿತು ವಿಮರ್ಶಕರು ಅರುವತ್ತು ವರ್ಷದ ವೃದ್ಧ ನಾಲ್ವತ್ತರ ಹರೆಯದ ಕಣ್ಣುಗಳ ಮೂಲಕ ನೋಡಲೆತ್ನಿಸಿದಂತಿದೆ–ಎಂದಿದ್ದಾರೆ.

**ವೆಸ್ಟ್‌ಯೋಸ್ಟ್‌ಲಿಶೆರ್ ಡೀವಾನ್** (1819) : ಈ ಕವನ ಸಂಗ್ರಹದಲ್ಲಿ ಗಯಟೆ ಪರ್ಷಿಯನ್ ಕವಿ ಹಾಫಿಜ್‌ನನ್ನು ಅನುಕರಿಸಿ ಬರೆದ ಪ್ರೇಮಗೀತೆಗಳಿವೆ. ಪ್ರಸಿದ್ಧ ಪೌರಸ್ತ್ಯ ಭಾಷಾಪಂಡಿತ ಜೋಸೆಫ್ ಹ್ಯಾಮರ್‌ನ ವಿಪುಲ ಗ್ರಂಥಗಳಿಂದ ಪರ್ಷಿಯನ್ ಸಾಹಿತ್ಯದ ಪರಿಚಯ ಪಡೆದಿದ್ದ ಗಯಟೆಗೆ ಹಾಫಿಜ್‌ನ ಪ್ರೇಮಗೀತೆಗಳಲ್ಲಿ ಬರುವ ಮೇಳಗೀತಾ ಛಂದಸ್ಸು ಬಹಳ ಮೆಚ್ಚಾಯಿತು. ತನ್ನ ಇಳಿವಯಸ್ಸಿನಲ್ಲೂ ಮೇರಿಯಾನ ವಿಲ್ಲೆಮರ್ ಎಂಬ ಹುಡುಗಿಯನ್ನು ಅಪಾರವಾಗಿ ಪ್ರೀತಿಸಿದ ಗಯಟೆ ತನ್ನ ಉತ್ಕಟ ಭಾವನೆಗಳನ್ನು ಈ ಕವನಗಳಲ್ಲಿ ಹರಿಯಬಿಟ್ಟಿದ್ದಾನೆ. ಸಂಗ್ರಹದಲ್ಲಿನ ಹನ್ನೆರಡು ಭಾಗಗಳಲ್ಲಿ ನೆಪೋಲಿಯನನನ್ನು ಕುರಿತ ಕವನ ಚಿತ್ರಗಳಿವೆ. ಉದ್ದನೆಯ ಸೂಕ್ತಿಗಳಂತೆ ಕಾಣುವ ಈ ಸುಂದರ ಕವನಗಳಲ್ಲಿ ಗಾಢ ಚಿಂತನೆ ಇದೆ. ಚಿತ್ರಯುಕ್ತವಾದ ಸಂಯುಕ್ತ ಪದಗಳನ್ನು ಗಯಟೆ ಈ ಕವನಗಳಲ್ಲಿ ಅನನ್ಯವಾಗಿ ಬಳಸಿದ್ದಾನೆ.

**ವಿಲ್‌ಹೆಲ್ಮ್ ಮೈಸ್ಟರ್ಸ್ ವಾಂಡರ್‌ಜಾಹ್ರ್** (1821–29) : ವಿಲ್‌ಹೆಲ್ಮ್ ಮೈಸ್ಟರ್ಸ್ ಅಪ್ರೆಂಟಿಸ್‌ಶಿಪ್ ಎಂಬ ಕಾದಂಬರಿಯ ಮುಂದಿನ ಭಾಗವಾದ ಇದನ್ನು ಗಯಟೆ 1829ರಲ್ಲಿ ಮುಗಿಸಿದ. ಮೊದಲ ಭಾಗದ ಭಾವಸಾಂದ್ರತೆಯಾಗಲೀ ಚೆಲುವಾದ ನಿರೂಪಣೆಯಾಗಲೀ ಇಲ್ಲಿಲ್ಲ. ಕಥಾನಾಯಕನ ಆತ್ಮಕಥನ ಅಲ್ಲಲ್ಲಿ ನೀರಸವಾಗಿದೆ. ಮೊದಲ ಭಾಗದಲ್ಲಿ ಬರುವ ಪಾತ್ರಗಳೇ ಮತ್ತೆ ಇಲ್ಲಿ ಕಾಣಿಸಿಕೊಂಡರೂ ಅವುಗಳ ಕಲ್ಪನೆ ಶಿಥಿಲವಾಗಿದೆ. ಅವು ಕೆಲವು ವಿಶಿಷ್ಟ ಆದರ್ಶ ರೀತಿಗಳನ್ನು ಮೈಗೆ ಮೆತ್ತಿಕೊಂಡು ಬರುವ ಆಕೃತಿಗಳಂತೆ ಸುಳಿಯುತ್ತವೆ. ಮೊದಲ ಭಾಗದಲ್ಲಿ ಕಥಾನಾಯಕ, (ಫೌಸ್ಟ್ ನಾಟಕದ ಮೊದಲ ಭಾಗದ ನಾಯಕನ ಹಾಗೆ) ಸ್ವಂತ ಜೀವನದ ಎಡರುತೊಡರುಗಳನ್ನು ಎದುರಿಸಿ ಕಟ್ಟಕಡೆಯಲ್ಲಿ ಅನುಭವಗಳನ್ನು ರೂಢಿಸಿಕೊಂಡು ಜೀವನದ ರಹಸ್ಯವನ್ನು ಅರಿಯಲು ಯತ್ನಿಸುವಂತೆ ಕಾದಂಬರಿಯ ಎರಡನೆಯ ಭಾಗದಲ್ಲಿ ವ್ಯಕ್ತಿ ಹಾಗೂ ಸಮಾಜದ ಸಂಬಂಧವೇನೆಂದು ಅರ್ಥ ಮಾಡಿಕೊಳ್ಳಲು ಹೆಣಗುತ್ತಾನೆ. ಬದುಕಿನ ಶಿಕ್ಷಣಶಾಲೆಯಲ್ಲಿ ಕಲಿತ ಆದರ್ಶವನ್ನು ಇಲ್ಲಿ ವಾಸ್ತವ ಜೀವನಕ್ಕೆ ಅನ್ವಯಿಸಲು ಪ್ರಯತ್ನಿಸುತ್ತಾನೆ. ಕಥೆಯ ಸ್ವಾರಸ್ಯಕ್ಕಿಂತ ಹೆಚ್ಚಾಗಿ ಇಲ್ಲಿ ಗಯಟೆಯ ವೈಚಾರಿಕತೆ ತುಂಬಿ ಹೊನಲಾಗಿ ಹರಿಯುತ್ತದೆ. ಶಿಕ್ಷಣ, ಧರ್ಮ, ಕೈಗಾರಿಕೆಯ ಸಮಸ್ಯೆಗಳು, ಕಾರ್ಮಿಕರ ಹಕ್ಕು ಬಾಧ್ಯತೆಗಳು–ಮುಂತಾದ ಸಮಾಜ ಸಂಬಂಧಿ ತತ್ತ್ವಗಳು ಇಲ್ಲಿ ಗರಿಗೆದರಿಕೊಂಡಿವೆ.

**ಫೌಸ್ಟ್–1ನೆಯ ಮತ್ತು 2ನೆಯ ಭಾಗಗಳು** (1808–32) : ಗಯಟೆ ತನ್ನ ಜೀವನದ ಬೇರೆ ಬೇರೆ ಘಟ್ಟಗಳಲ್ಲಿ, ಕಾಲಾವಧಿಗಳಲ್ಲಿ ಬರೆದ ಈ ಕಾವ್ಯ ನಾಟಕ (ನಾಟಕೀಯ ಕಾವ್ಯವೆಂದರೂ ಸಮಂಜಸವಾದೀತು) ಜಗತ್ತಿನ ಮಹೋನ್ನತ ಸಾಹಿತ್ಯ ಕೃತಿಗಳಲ್ಲಿ ಒಂದು. ತನ್ನ ಭೌತಿಕ ಜಗತ್ತಿನ ಎಲ್ಲೆಕಟ್ಟುಗಳನ್ನು ಮೀರಿ ನಿಲ್ಲಬೇಕೆನ್ನುವ ಮನುಷ್ಯನ ಹಂಬಲವಾಗಲೀ ಬದುಕಿನ ಮೂಲಭೂತ ಸಾರ್ವಕಾಲಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕೆನ್ನುವ ಮನುಷ್ಯನ ತುಡಿತ ತೊಳಲಾಟಗಳಾಗಲೀ ಹೊಸ ವಿಚಾರಗಳೇನಲ್ಲ. ಆದರೆ ಈ ವಿಶ್ವವ್ಯಾಪಕ ಸಮಸ್ಯೆಯನ್ನು ಗಯಟೆ ಉನ್ನತ ಕಾವ್ಯಶೈಲಿಯಲ್ಲಿ ರೂಪಿಸಿದ್ದಾನೆ. ಫೌಸ್ಟ್ ನಾಟಕದ ಎರಡನೆಯ ಭಾಗವನ್ನು ಗಯಟೆ 1831ರಲ್ಲಿ ಮುಗಿಸಿದರೂ 1771ರಲ್ಲಿ ಉರ್‌ಫೌಸ್ಟ್ ಎಂಬ ಅಪೂರ್ಣ ಕೃತಿಯನ್ನು ಬರೆಯಲು ಮೊದಲು ಮಾಡಿದಾಗಲೇ ನಾಟಕದ ಬೀಜಾಂಕುರವಾಯಿತೆನ್ನಬಹುದು. ಕವಿಯ ಅಂತಃಕರಣ ಸಂವೇದನೆಗಳು ಬೆಳೆಯುತ್ತ ಹೋದಂತೆ ಈ ನಾಟಕದ ಕಲ್ಪನೆಯೂ ಹಿಗ್ಗುತ್ತ ಹೋಗಿ ಹೊಸ ಹೊಸ ವಿಚಾರಗಳನ್ನು ಅದು ಒಳಗೊಳ್ಳುವಂತಾಯಿತು. ಎಲ್ಲವನ್ನೂ ಹುಡುಕುತ್ತ ತಡಕುತ್ತ ಬಾಳಿನ ರಹಸ್ಯವನ್ನು ಮುಟ್ಟಿ ಮೇಲೇರಬೇಕೆನ್ನುವ ಫೌಸ್ಟನ ತತ್ತ್ವ ಹಾಗೂ ಫೌಸ್ಟ್‌ಪಾತ್ರದ ಕಲ್ಪನೆಯನ್ನು ನಾಟಕದ ಮೊದಲ ಭಾಗದಲ್ಲಿ ಬರುವ ಸ್ವರ್ಗದಲ್ಲಿನ ಪ್ರಸ್ತಾವನೆಯಲ್ಲಿ ಕಾಣಬಹುದು. ಇಲ್ಲಿ ಸೃಷ್ಟಿಕರ್ತ ಭಗವಂತ ಒಂದು ಕಡೆ, ಎಲ್ಲವನ್ನೂ ಅಲ್ಲಗಳೆದು ಹೀನೈಸುವ ನಿಷೇಧಾತ್ಮಕ ಶಕ್ತಿಯಾದ ಮೆಫಿಸ್ಟಾಫೆಲೀಸ್ ಇನ್ನೊಂದು ಕಡೆ, ಮುಖಾಮುಖಿಯಾಗಿ ನಿಂತು ಮನುಷ್ಯನ ಆತ್ಮದ ವಿಷಯವಾಗಿ ಜಿಜ್ಞಾಸೆ ನಡೆಸುತ್ತಾರೆ. ಮೆಫಿಸ್ಟಾಫೆಲೀಸ್ ಹೇಳುತ್ತಾನೆ: ಮನುಷ್ಯ ಚಿರದುಃಖಿ. ಅವನ ಸ್ಥಿತಿ ಕರುಣಾಜನಕ. ಇನ್ನುಮೇಲೆ ನಾನು ಅವನ ಗೋಜಿಗೆ ಹೋಗುವುದಿಲ್ಲ. ದೇವರೆಂಬ ಬಯಲ ಭ್ರಾಂತಿಯನ್ನು ಕೇವಲ ತೋರಿಕೆಗಾಗಿ ನೆಚ್ಚಿಕೊಂಡಿರುವ ಅವನನ್ನು ದೇವರ ದಾರಿಯಿಂದ ತಪ್ಪಿಸಿ ಸೈತಾನಶಕ್ತಿಯತ್ತ ಒಯ್ಯುವುದು ಅತಿ ಸುಲಭ. ಇದಕ್ಕೆ ಭಗವಂತನ ಉತ್ತರ: ಮನುಷ್ಯ ಚಿರದುಃಖಿಯೆಂಬುದು ದಿಟ. ಭೂಮಿಯ ಮೇಲೆ ಬದುಕಿರುವ ತನಕ ಅವನು ಕಷ್ಟದಲ್ಲಿ ನರಳಬೇಕು, ಹೋರಾಡಬೇಕು. ಹೋರಾಟ ನಡೆಯುವಷ್ಟು ಕಾಲ ಅವನು ತಪ್ಪು ಮಾಡುವುದು ಅನಿವಾರ್ಯ, ಆದರೆ ಅವನು ದೈವಶಕ್ತಿಯ ಪ್ರತೀಕವೂ ಹೌದು. ಅವನು ಎಷ್ಟೇ ತಪ್ಪು ಮಾಡಿದರೂ ಸತ್ಯದ ದಾರಿಗೆ ಮತ್ತೆ ಬಂದೇ ಬರುತ್ತಾನೆ. ಏಕೆಂದರೆ ಅವನಿಗೆ ಎಂದೆಂದಿಗೂ ಸತ್ಯದ ಅರಿವು ಇದ್ದೇ ಇರುತ್ತದೆ. ಮೆಫಿಸ್ಟಾಫೆಲೀಸ್ ಮಹಾಕೆಡುಕಿಯಾದರೂ ದೇವರ ಸೃಷ್ಟಿಯಲ್ಲಿ ತಾನೂ ಒಂದು ಪೂರಕಶಕ್ತಿ, ಈ ಲೋಕದ ಆಗುಹೋಗುಗಳಲ್ಲಿ ತಾನೂ ಭಾಗಿಯೆಂಬುದು ಅವನಿಗೆ ತಿಳಿಯದು. ಆದ್ದರಿಂದ ಮನುಷ್ಯನನ್ನು ಕೆಡಿಸಿ, ಅವನ ಆತ್ಮವನ್ನು ಸಂಪೂರ್ಣವಾಗಿ ವಿನಾಶಗೊಳಿಸುವೆನೆಂದು ದೇವರ ಮುಂದೆ ಪಣ ತೊಡುತ್ತಾನೆ. ಇದು ಅಸಾಧ್ಯವಾದ ಸಾಹಸವೆನ್ನುವುದು ಮೆಫಿಸ್ಟಾಫೆಲೀಸ್ ಮತ್ತು ಫೌಸ್ಟ್ ಪಣ ತೊಡುವ ಇನ್ನೊಂದು ಸನ್ನಿವೇಶದಲ್ಲಿ ವ್ಯಕ್ತವಾಗುತ್ತದೆ. ಫೌಸ್ಟ್‌ನ ಈ ಪಣಕ್ಕನುಸಾರವಾಗಿ ಮೆಫಿಸ್ಟಾಫೆಲೀಸ್ ಫೌಸ್ಟನ ಎಲ್ಲ ಆಸೆ ಆಕಾಂಕ್ಷೆಗಳನ್ನೂ ಸಂಪೂರ್ಣವಾಗಿ ಸಂತೃಪ್ತಿಗೊಳಿಸಬೇಕು. ಮನುಷ್ಯನಿಗೆ ಎಲ್ಲ ಸುಖವೂ ಕೈಗೂಡಿತೆಂದಾಗ ಅವನಿಗೆ ಅದು ಇನ್ನೂ ಇರಲಿ, ಮತ್ತೂ ಇರಲಿ ಎನಿಸುವ ಹಾಗೆ ಮಾಡಬೇಕು. ಈ ಕಠಿಣ ಷರತ್ತನ್ನು ಅವನು ಒಪ್ಪಿಕೊಳ್ಳುತ್ತಾನೆ. ದೇವಮಾನವರಿಬ್ಬರನ್ನೂ ಗೆದ್ದು ತನ್ನ ಏಕೈಕ ಪ್ರಭುತ್ವವನ್ನು ಸ್ಥಾಪಿಸಲು ಹವಣಿಸುತ್ತಾನೆ. ಆದರೆ ಸ್ವರ್ಗದಲ್ಲಿನ ಪ್ರಸ್ತಾವನಾ ಭಾಗದಲ್ಲಿ ಫೌಸ್ಟ್ ಅಜೇಯ ಆತ್ಮಶಕ್ತಿಯುಳ್ಳವನು, ಅಂತಿಮವಾಗಿ ಅವನಿಗೆ ಯಶಸ್ಸು ದೊರೆಯುವುದು ಖಂಡಿತ–ಎನ್ನುವ ಸೂಚನೆ ಇದೆ. ಇಲ್ಲಿ ಗಯಟೆ, ಫೌಸ್ಟ್ ಇಡೀ ಮಾನವ ವರ್ಗದ ಪ್ರತಿನಿಧಿ ಎಂಬ ವಿಚಾರದ ಮೇಲೆ ಒತ್ತು ಹಾಕಿದ್ದಾನೆ. ಮನುಷ್ಯನಿಗೆ ತೃಪ್ತಿಯೆಂಬುದೇ ಇಲ್ಲ. ಅವನ ಆಸೆ ಕೊರೆಬೀಳದ ಗಣಿಯಂತೆ; ಎಷ್ಟು ಮೊಗೆದು ಕುಡಿದರೂ ಬತ್ತದ ಪ್ರವಾಹದಂತೆ. ಇದ್ದುದನ್ನು ಬಿಟ್ಟು ಇಲ್ಲದುದನ್ನು ಹಿಡಿಯಲು ಊರ್ಧ್ವಮುಖಿಯಾಗಿ ಹೊರಟ ಅವನು ನಿರಂತರವಾಗಿ ಗಗನದತ್ತ ಹಾರುತ್ತಿರುವನು. ಇದು ಅವನ ಬದುಕಿನ ರಹಸ್ಯ. ಇಲ್ಲಿ ಗಯಟೆಯ ನಾಟಕದ ಅಂತರಾರ್ಥವಿದೆ. ನಾಟಕದ ಕೊನೆಯಲ್ಲಿ ದೇವತೆಗಳು ಫೌಸ್ಟನ ದೇಹವನ್ನು ಸ್ವರ್ಗದತ್ತ ಒಯ್ಯುವಾಗ, ಕೆಡುಕನ್ನು ಕಳೆದು ಉದ್ಧಾರಗೊಂಡ ಅವನ ದಿವ್ಯಚೇತನವನ್ನು ಕುರಿತು ಅವರು ಹಾಡಿ ಹೊಗಳುತ್ತಾರೆ: ಯಾರು ತಮ್ಮ ಧೀಃಶಕ್ತಿಯಿಂದ ಹೋರಾಡುತ್ತಾರೋ ಅಂಥವರು ದೇವರಿಗೆ ಹತ್ತಿರದವರು. ನಾವು ಅಂಥವರನ್ನು ಒಲಿಯುತ್ತೇವೆ.

ಫೌಸ್ಟ್ ಏರುವ ಯಶಸ್ಸಿನ ಈ ಶಿಖರಕ್ಕೆ ಸುಖದ ಸೋಪಾನಗಳಿಲ್ಲ. ಕೊನೆಯುಸಿರಿರುವ ತನಕ ಅವನು ಕ್ಷಣ ಕ್ಷಣವೂ ಹೋರಾಡಬೇಕು. ಆಸೆ–ನಿರಾಸೆ, ಬಯಕೆ–ನೋವು, ರಾಗ–ದ್ವೇಷ ಎಲ್ಲವನ್ನೂ ಅನುಭವಿಸುತ್ತ ಯಾವುದನ್ನೂ ಅಪ್ಪಿಹಿಡಿಯದೆ, ತಪ್ಪಿನಡೆದರೂ ಎಲ್ಲೂ ನಿಲ್ಲದೆ, ಮೇಲೇರುತ್ತ ಸಾಗಬೇಕು. ಈ ಘೋರ ಹೋರಾಟದಲ್ಲಿ ಮಾರ್ಗರೆಟ್ಟಳ (ಗ್ರೆಚೆನ್) ದುರಂತ ಒಂದು ಮುಖ್ಯ ಘಟ್ಟ. ಮೆಫಿಸ್ಟಾಫೆಲೀಸನ ಬಲೆಗೆ ಬಿದ್ದ ಫೌಸ್ಟ್, ತಾನು ಗಾಢವಾಗಿ ಪ್ರೀತಿಸುವ, ನಿಷ್ಕಳಂಕಳಾದ ಮಾರ್ಗರೆಟ್ಟಳನ್ನು ಕೂಡುತ್ತಾನೆ. ಕಾಮತೃಷೆ ತೀರಿಸಿಕೊಳ್ಳುತ್ತಾನೆ. ವಾಲ್ಪುರ್ಗಿಸ್ ಇರುಳಿನ ಕಾಮಕೇಳಿಯಲ್ಲಿ ಸೇರಿ ಸ್ವೈರನಾಗಿ ರಮಿಸುತ್ತಾನೆ. ಕಾಮ ಹೊತ್ತಿ ಉರಿದು ಮತ್ತೆ ತಣ್ಣಗಾದ ಮೇಲೆ ಅವನಿಗೆ ಮಾರ್ಗರೆಟ್ಟಳಿಗೆ ಮಾಡಿದ ಅನ್ಯಾಯದ ಅರಿವಾಗುತ್ತದೆ. ಅವಳ ನಿಷ್ಕಳಂಕ ಪ್ರೇಮ, ಸಹನೆ, ತ್ಯಾಗಗಳ ನೆನಪಾದಾಗ ಪಶ್ಚಾತ್ತಾಪದಿಂದ

ಕುದಿಯುತ್ತಾನೆ. ಆದರೆ ಮೆಫಿಸ್ಟಾಫೆಲೀಸನ ಕೈಗೆ ಸಿಕ್ಕಿದ ಅವನು ಹಿಂದಕ್ಕೆ ಕಾಲ್ದೆಗೆ ಯುವಂತಿಲ್ಲ. ಏಕೆಂದರೆ ಸೈತಾನನ ವ್ಯವಸ್ಥೆಯಲ್ಲಿ ಅವ್ಯಾಜ ಪ್ರೇಮ, ಬಲಿದಾನಗಳಿಗೆ ಸ್ಥಾನವಿಲ್ಲ, ಅರ್ಥವಿಲ್ಲ. ಹೀಗೆ ಪಿಶಾಚಿಯ ಪ್ರಲೋಭನಗಳಗೆ ಸಿಕ್ಕಿದ ಅವನು ಮಾರ್ಗರೆಟ್ಟಳನ್ನು ತ್ಯಜಿಸಿದ್ದಾನೆ. ತನ್ನ ಪಾಪದ ಫಲವಾಗಿ ಶಿಕ್ಷೆಗೆ ಗುರಿಯಾದ ಮಾರ್ಗರೆಟ್ ಸೆರಮನೆಯಲ್ಲಿ ಕೊಳೆಯುತ್ತಿರುವಾಗ, ನಿರುಪಾಯ ಸ್ಥಿತಿಯಲ್ಲಿರುವ ಫೌಸ್ಟ್ ದುಃಖಿತಪ್ತನಾಗಿ ತನ್ನನ್ನು ತಾನೇ ಅವಹೇಳನ ಮಾಡಿಕೊಳ್ಳುತ್ತಾನೆ. ಇಲ್ಲಿಂದ ಮುಂದಕ್ಕೆ ಮೆಫಿಸ್ಟಾಫೆಲೀಸ್ ಹಾಗೂ ಫೌಸ್ಟರ ನಡುವಣ ಸಂಘರ್ಷ ಹೆಚ್ಚು ಸೂಕ್ಷ್ಮವೂ ಸ್ಪಷ್ಟವೂ ಆಗಿ ತೋರುತ್ತದೆ. ಫೌಸ್ಟನದು ಮೇಲುಗೈಯಾಗಿ ಅವನ ಎಳಸಿಕೆಗಳೆಲ್ಲವನ್ನೂ ಪೂರೈಸುವೆನೆಂದು ವಚನವಿತ್ತ ಮೆಫಿಸ್ಟಾಫೆಲೀಸನದು ಸೋಲುಗೈ ಆಗುತ್ತದೆ. ಏಕೆಂದರೆ ಮೆಫಿಸ್ಟಾಫೆಲೀಸ್ ನೀಡುವ ಕ್ಷುದ್ರವಾದ ಆಸೆ ಆಮಿಷಗಳೆಲ್ಲವನ್ನೂ ಫೌಸ್ಟ್ ಕ್ಷಣದಲ್ಲೇ ಹೀರಿ ಬಿಸುಟು ಆತ್ಮೋನ್ನತಿಯತ್ತ ಏರುತ್ತಾನೆ.

ನಾಟಕದ ಎರಡನೆಯ ಭಾಗದ ಫೌಸ್ಟನ ಎಳಸಿಕೆಗಳು, ಬೇಡಿಕೆಗಳು ಮೆಫಿಸ್ಟಾಫೆಲೀಸನಿಗೆ ತಿಳಿಯದಷ್ಟು ಜಟಿಲವಾಗುತ್ತವೆ. ಭೂಮಿಗೆ ಅಂಟಿಕೊಂಡ ಅವನಿಗೆ ಫೌಸ್ಟನ ಬೌದ್ಧಿಕ ಔನ್ನತ್ಯ, ಅದಮ್ಯ ಸೌಂದರ್ಯಾನ್ವೇಷಣೆಗಳು ಅರ್ಥವಾಗುವುದಾದರೂ ಹೇಗೆ? ಮಾರ್ಗರೆಟ್ಟಳ ಕಥೆ ಮೊದಲ ಭಾಗದಲ್ಲಿ ನಾಟಕದ ರಸಶಿಖರವಾದಂತೆ, ಇಲ್ಲಿ ಹೆಲೆನಳ ಪ್ರಕರಣ ಫೌಸ್ಟನ ವ್ಯಕ್ತಿತ್ವಕ್ಕೆ ಪೋಷಣೆಯಾಗುವ ಅಂಶವಾಗಿ, ವ್ಯಂಜಕತೆಯನ್ನು ಉದ್ದೀಪಿಸುತ್ತದೆ. ಎರಡು ಪ್ರಕರಣಗಳ ರಚನೆಯಲ್ಲಿ ಕಲಾತ್ಮಕವಾದ ಸಾಮ್ಯವಿದ್ದರೂ ಹೆಲೆನ್ ಕಥೆಯ ಸಾಂಕೇತಿಕತೆ ತೀರಾ ವಿಶಿಷ್ಟವಾದದ್ದು. ಹೆಲೆನ್ ಕ್ಲಾಸಿಕಲ್ ತತ್ತ್ವಗಳು ಪ್ರತಿಪಾದಿಸುವ ಸೌಂದರ್ಯದ ಪ್ರತೀಕವಾದರೆ ಫೌಸ್ಟ್ ರೊಮ್ಯಾಂಟಿಕ್ ಶಕ್ತಿಸಾಹಸಗಳ ಪ್ರತಿನಿಧಿ. ಇಬ್ಬರ ಸಂಗದಿಂದ ಹುಟ್ಟುವ ಮಗು ಯುಫೋರಿಯನ್ ಆಧುನಿಕ ಪ್ರತಿಭೆಯ ಸಂಕೇತವಾಗುತ್ತಾನೆ. (ಯುಫೋರಿಯನ್ ಪಾತ್ರ ಕಲ್ಪನೆ ಬೈರನ್ ಕವಿಯ ಬದುಕು ಹಾಗೂ ವ್ಯಕ್ತಿತ್ವದಿಂದ ಪ್ರೇರಿತವಾಯಿತೆಂಬುದು ಗಮನಾರ್ಹ). ಹೀಗೆ ಹುಟ್ಟಿದ ಮಗ ಏನೊಂದೂ ಕಟ್ಟುಪಾಡುಗಳಿಲ್ಲದೆ ಸ್ವೈರನಾಗಿ ಬೆಳೆದು ನಾಶವಾಗುತ್ತಾನೆ. ಹೆಲೆನ್ ಅಧೋಲೋಕಕ್ಕೆ ತೆರಳುತ್ತಾಳೆ. ಹೆಲೆನ್ ಪ್ರಕರಣದಿಂದಾಗಿ ಫೌಸ್ಟನಿಗೆ ಪುರಾತನ ಗ್ರೀಕರ ಕಾಲದಿಂದ ಹಿಡಿದು ತನ್ನ ಕಾಲದವರೆಗೆ ಎಡೆಬಿಡದೆ ಪ್ರವಹಿಸುತ್ತಿರುವ ಇತಿಹಾಸ, ಸಂಸ್ಕೃತಿಗಳ ದರ್ಶನವಾಗುತ್ತದೆ. ಆದರೂ ಅವನ ಎಳಸಿಕೆಗಳಿಗೆ ಮಿತಿಯಿಲ್ಲ. ಅವಳನ್ನು ಸಾಧಿಸಲು ಆತ ಮತ್ತೆ ಹೋರಾಡುತ್ತಾನೆ. ನಾಟಕದ ಕೊನೆಯ ಘಟ್ಟದಲ್ಲಿ ಫೌಸ್ಟ್ ಒಬ್ಬ ಶತಾಯು ಸಾಹಸಿ. ಪ್ರಕೃತಿಯ ಶಕ್ತಿಗಳೆಲ್ಲವನ್ನೂ ನಿಯಂತ್ರಿಸುವ ಅದ್ಭುತ ಸಾಮರ್ಥ್ಯ, ಮನುಷ್ಯ ಲೋಕವನ್ನು ಆಳಬಲ್ಲ ಯೋಗ್ಯತೆಗಳು ಈಗ ಅವನಿಗೆ ದಕ್ಕಿವೆ. ಕೈಸರ್ ದೊರೆಯ ದೇಶದಲ್ಲಿ ಅವನು ಅಸಾಮಾನ್ಯವಾದ ಕೆಲಸಕಾರ್ಯಗಳಲ್ಲಿ ತೊಡಗಿದ್ದಾನೆ. ಒಡ್ಡುಕಟ್ಟಿ ಸಮುದ್ರವನ್ನು ಹಿಂದಕ್ಕೆ ತಳ್ಳಿ, ಲಕ್ಷಾಂತರ ಮಂದಿಗೆ ಮರುವಸತಿ ಒದಗಿಸಲು ಸಮುದ್ರದಿಂದ ಉತ್ಕೃಷ್ಟ ನೆಲವನ್ನು ಆತ ಪಡೆದುಕೊಳ್ಳುತ್ತಾನೆ. ಆತನ ಕಾರ್ಯಕ್ರಮಗಳೆಲ್ಲವೂ ಬೇಗನೆ ಮುಗಿದು ಹೋಗಲೆಂದು ತುಡಿಯುತ್ತಿರುವ ಮೆಫಿಸ್ಟಾಫೆಲೀಸ್ ಫೌಸ್ಟನ ಎಲ್ಲ ಕೆಲಸಗಳಲ್ಲೂ ನೆರವಾಗುತ್ತಾನೆ. ಮೆಫಿಸ್ಟಾಫೆಲೀಸನ ಕ್ಷುದ್ರತನವನ್ನು ಅರಿತ ಫೌಸ್ಟ್ ಅವನ ಸಹಾಯವಿಲ್ಲದೆ ಬದುಕಬೇಕೆಂಬ ನಿರ್ಧಾರಕ್ಕೆ ಬರುತ್ತಾನೆ. ಸಾಯುವ ಕೊನೆಯ ಗಳಿಗೆಯಲ್ಲೂ ಮುಂದಿನ ಸಹಸ್ರಾರು ಯೋಜನೆಗಳನ್ನೂ ತಯಾರಿಸುತ್ತಿರುವ ಫೌಸ್ಟನಿಗೆ ಎಣೆಯೆಲ್ಲಿ, ಕೊನೆಯೆಲ್ಲಿ? ಅವನ ಆತ್ಮವನ್ನು ವಶಪಡಿಸಿಕೊಳ್ಳಲು ದೇವತೆಗಳಿಗೂ ಪಿಶಾಚಿಗಳಿಗೂ ಪೈಪೋಟಿ. ಮೇಲಿಂದ ಇಳಿದುಬಂದ ದೇವತಾವೃಂದ ಅವನನ್ನು ಸ್ವರ್ಗಾಭಿಮುಖವಾಗಿ ಕೊಂಡೊಯ್ಯುತ್ತದೆ.

ಅತ್ಯದ್ಭುತ ಕಾವ್ಯಸಂಪತ್ತಿನಿಂದ ತುಂಬಿದ ಈ ಮಹಾಕೃತಿಯಲ್ಲಿ ಗಯಟೆ ವೈವಿಧ್ಯಮಯ ಕಾವ್ಯರೂಪಗಳನ್ನು ಬಳಸಿದ್ದಾನೆ. ಹೆಚ್ಚಾಗಿ ಪಾತ್ರ ವಿನ್ಯಾಸಕ್ಕೆ ಗಮನವಿತ್ತಿರುವುದರಿಂದ ನಾಟಕರಚನೆಯಲ್ಲಿ ಸಾವಯವ ಸಮಗ್ರತೆ ಇಲ್ಲ. ಆದರೆ ಫೌಸ್ಟನ ಅನ್ಯಾದೃಶ ಪಾತ್ರವೇ ನಾಟಕದ ಭಾವಗೀತಾತ್ಮಕವಾದ ಬಿಡಿಭಾಗಗಳನ್ನು ಒಂದುಗೂಡಿಸುವ ಸಾಧನವಾಗಿದೆ. ಫೌಸ್ಟ್ ನಾಟಕ ರಂಗಪ್ರದರ್ಶನಕ್ಕಾಗಿ ಉದ್ದೇಶಿಸಿದ ಕೃತಿಯಲ್ಲ. ಆದರೂ ಅದು ನೂರು ವರ್ಷಗಳಿಂದಲೂ ಯುರೋಪಿನ ನಾಟಕಕಾರರನ್ನೂ ನಟರನ್ನೂ ಬೇರೆ ಬೇರೆ ಪ್ರಕಾರಗಳ ಕಲಾವಿದರನ್ನೂ ಆಕರ್ಷಿಸುತ್ತ ಬಂದಿದೆ. ಅವರ ಆತ್ಮಕ್ಕೆ ಚ್ಯುತಿ ಇಲ್ಲ– ಇದು ಗಯಟೆಯ ಜೀವನದ ಮುಖ್ಯ ಸಿದ್ಧಾಂತವಾಗಿತ್ತು. ಇದಕ್ಕೆ ಚಿರಂತನ ಅಭಿವ್ಯಕ್ತಿ ಕೊಟ್ಟ ಫೌಸ್ಟ್, ವಿಶ್ವಸಾಹಿತ್ಯದ ಒಂದು ಅಮೃತ ಕೃತಿ.

**ಗಯಟೆಯ ವೈಜ್ಞಾನಿಕ ಬರೆಹಗಳು** : ಪ್ರಪಂಚದ ಅದ್ವಿತೀಯ ಸಾಹಿತಿಗಳಲ್ಲೊಬ್ಬನಾದ ಗಯಟೆ ತನ್ನ ವೈಜ್ಞಾನಿಕ ಕೃತಿಗಳನ್ನು ಕುರಿತು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಅವನ ವೈಜ್ಞಾನಿಕ ವಿಚಾರಗಳೆಲ್ಲವನ್ನೂ ಆಧುನಿಕ ವಿಜ್ಞಾನಿಗಳು ಒಪ್ಪಿಕೊಂಡಿಲ್ಲ. ಆದರೆ ತಾನೇ ನಡೆಸಿದ ಸಂಶೋಧನೆಗಳ ಫಲವಾಗಿ ಅವನು ಪ್ರತಿಪಾದಿಸಿದ ಕೆಲವು ಸಂಶೋಧನಾತ್ಮಕ ವಿಚಾರಗಳನ್ನು ವಿಜ್ಞಾನಿಗಳು ಸ್ವೀಕರಿಸಿ ಅವನಿಗೆ ಸಲ್ಲಬೇಕಾದಷ್ಟು ಅಗ್ರಮಾನ್ಯತೆ ಕೊಟ್ಟಿದ್ದಾರೆ. ಅವನು ಪ್ರತಿಪಾದಿಸಿದ ವಿಚಾರಗಳ ಸ್ವಂತಿಕೆಯ ಮಹತ್ತ್ವಕ್ಕಿಂತ ಹೆಚ್ಚಾಗಿ ಅವನ ವೈಜ್ಞಾನಿಕ ದೃಷ್ಟಿ, ಮನೋಧರ್ಮಗಳನ್ನು ಹಲವು ವಿಜ್ಞಾನಿಗಳು ಮೆಚ್ಚಿಕೊಂಡಿದ್ದಾರೆ. ಅವನ ವೈಜ್ಞಾನಿಕ ಗ್ರಂಥಗಳಲ್ಲಿ ಮುಖ್ಯವಾಗಿ ಬಣ್ಣದ ಸ್ವರೂಪವನ್ನು ಕುರಿತ ಫಾರ್‌ಬೆನ್ ಲೆಹ್ರ್ (1805–10), ಮನೋವಿಜ್ಞಾನ ಹಾಗೂ ದೃಗ್ವಿಜ್ಞಾನಕ್ಕೆ ಸಂಬಂಧಿಸಿದ ಯುಟೋಪಿಶ್ಚೆ ಫಾರ್ ಬೆನ್, ಸಸ್ಯಶಾಸ್ತ್ರ ಹಾಗೂ ರೂಪವಿಜ್ಞಾನವನ್ನು ಕುರಿತ ಮೆಟಮಾರ್ಫೋಸ್ ಡರ್ ಫ್ಲಾಂಜೆನ್–ಇವು ವಿಜ್ಞಾನ ಲೋಕದ ಕಣ್ಣು ಸೆಳೆದಿರುವ ಕೃತಿಗಳು. ಬೆಳಕು ಹಾಗೂ ಬಣ್ಣದ ಸ್ವರೂಪವನ್ನು ವಿಶ್ಲೇಷಿಸುವಾಗ ನ್ಯೂಟನ್ನನ ಸೂತ್ರಗಳನ್ನು ಗಯಟೆ ಅಲ್ಲಗಳೆಯಲು ಪ್ರಯತ್ನಿಸಿ ವಿಫಲನಾಗಿದ್ದಾನೆ. ಗಣಿತವಿಜ್ಞಾನದಲ್ಲಿ ಸಾಕಷ್ಟು ಮಾಹಿತಿ ಇಲ್ಲದ್ದರಿಂದ ಗಯಟೆ ಹಲವು ತಪ್ಪುಗಳನ್ನು ಮಾಡಿದ್ದಾನೆಂದು ಭೌತವಿಜ್ಞಾನಿಗಳು ಸುಲಭವಾಗಿ ತೋರಿಸಿಕೊಟ್ಟಿದ್ದಾರೆ. ಬೆಳಕು ಕಣಗಳ ರೂಪದಲ್ಲಿ ಚಲಿಸುತ್ತದೆಂಬ ಸಿದ್ಧಾಂತ ತಪ್ಪೆಂದು ತೋರಿಸಲು ಪ್ರಯತ್ನಿಸುವ ಇವನ ಗಮನ ಸೂತ್ರಗಳನ್ನು ಅವರು ಒಪ್ಪಿಕೊಂಡಿಲ್ಲ. ಆದರೆ ದೃಗ್ವಿಜ್ಞಾನ ಸೂತ್ರಗಳನ್ನು ಪ್ರತಿಪಾದಿಸುವಾಗ ಬಳಸಿಕೊಂಡಿರುವ ಮನೋವೈಜ್ಞಾನಿಕ ತತ್ತ್ವಗಳು ಸ್ವೀಕಾರಾರ್ಹವೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ವಿಜ್ಞಾನದ ವಿಕಾಸವನ್ನು ಚರ್ಚಿಸುವ ಇವನ ವಿಚಾರಗಳು ವಿಜ್ಞಾನದ ಇತಿಹಾಸ ರಚಿಸುವವರಿಗೆ ದಾರಿದೀಪವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ರೂಪವಿಜ್ಞಾನಕ್ಕೆ ಸಂಬಂಧಪಟ್ಟ ಮೂಲಭೂತ ವಿಚಾರಗಳನ್ನು ಪ್ರಪ್ರಥಮವಾಗಿ ಪ್ರತಿಪಾದಿಸಿದ ಹಿರಿಮೆ ಗಯಟೆಗೆ ಸಲ್ಲುತ್ತದೆ. ಮಾರ್ಫಾಲಜಿ ಎಂಬ ಪದ ಇವನೇ ಸೃಷ್ಟಿಸಿದ್ದು. 1790ರಲ್ಲಿ ಈತ ಬರೆದ ಮೆಟಮಾರ್ಫಸಿಸ್ ಆಫ್ ಪ್ಲ್ಯಾಂಟ್ಸ್ ಎಂಬ ಗ್ರಂಥದಲ್ಲಿ ಈತನೇ ರಚಿಸಿರುವ ಚೇತೋಹಾರಿ ಚಿತ್ರಗಳು, ವಿವರಣೆಗಳು, ಸಸ್ಯ ವಿಜ್ಞಾನಿಗಳಿಗೆ ಪ್ರಿಯವೆನಿಸಿವೆ. ಒಂದು ಸಸ್ಯ ದೊಡ್ಡದಾಗಿ ಬೆಳೆಯುವ ಪೂರ್ವದಲ್ಲಿ ಹೊಮ್ಮುವ ಟೈಪ್‌ಲೀಫ್‌ನಲ್ಲಿ ಆ ಗಿಡದ ರಚನೆಯ ಸ್ವರೂಪವೆಲ್ಲವೂ ಅಂತರ್ಗತವಾಗಿರುತ್ತದೆಂಬ ವಿಚಾರವನ್ನು ಆಧುನಿಕ ವಿಜ್ಞಾನ ಒಪ್ಪಿಕೊಂಡರೂ ಈತ ಸೂಚಿಸುವ ಟೈಪ್‌ಪ್ಲಾಂಟ್ ತತ್ತ್ವವನ್ನು ಕೇವಲ ಊಹೆ ಎಂದು ಹೇಳಿ ಕೈಬಿಡಲಾಗಿದೆ. ಗಿಡದ ಬೇರುಗಳನ್ನು ಕುರಿತು ಗಯಟೆ ಏನನ್ನೂ ಹೇಳದಿರುವುದು ಸಸ್ಯ ಸಂಶೋಧನೆಗೆ ಅಗತ್ಯವಾದ ಒಂದು ಆಧಾರ ಸಂಗತಿಯನ್ನೇ ಬಿಟ್ಟಂತಾಗಿದೆ. ಇದನ್ನು ವಿಜ್ಞಾನಿಗಳು ಸ್ಪಷ್ಟವಾಗಿ ಟೀಕಿಸಿದ್ದಾರೆ. ಗಯಟೆ ಕೈಗೊಂಡ ವೈಜ್ಞಾನಿಕ ಸಂಶೋಧನೆಗಳಲ್ಲಿ ಜೀವವಿಜ್ಞಾನಕ್ಕೆ ಸಂಬಂಧಿಸಿದ ಒಂದು ವಿಚಾರ ಉಲ್ಲೇಖಾರ್ಹ. ಕಶೇರುಕಗಳಲ್ಲಿರುವ ಒಳದವಡೆಯ ಹಿಂಭಾಗ (ಇಂಟರ್ ಮ್ಯಾಕ್ಸಿಲೇರ್ ಅಥವಾ ಈಗಿನ ಅರ್ಥದಲ್ಲಿ ಪ್ರೀಮ್ಯಾಕ್ಸಿಲಾ)– ಮನುಷ್ಯನ ದೇಹರಚನೆಯಲ್ಲೂ ಇದೆ ಎಂದು ತನ್ನದೇ ಆದ ಸ್ವಂತ ರೀತಿಯಲ್ಲಿ ಗಯಟೆ ಗುರುತಿಸಿದ್ದು ಒಂದು ವಿಶೇಷ ಸಂಗತಿ. ಈ ಸಂಶೋಧನೆಯ ಮೂಲಕ ವಿಕಾಸ ಸಿದ್ಧಾಂತಕ್ಕೆ ದಾರಿತೋರಿದನೆಂದು ಡಾರ್ವಿನ್ ಗಯಟೆಯನ್ನು ಸ್ತುತಿಸಿದ್ದಾನೆ. ವ್ಯಕ್ತಿ ತನ್ನ ದೈಹಿಕ ಹಾಗೂ ಮಾನಸಿಕ ವ್ಯಾಪಾರ ವಿಶೇಷಗಳನ್ನು ಸೂಕ್ಷ್ಮವಾಗಿ ಗುರುತಿಸುವುದು ಸಾಧ್ಯ ಎಂಬುದು ಗಯಟೆಯ ರೂಪ ವಿಜ್ಞಾನತತ್ತ್ವ. ಈ ವಿಚಾರದ ನಾನಾ ಮುಖಗಳು ಅವನ ವೈಜ್ಞಾನಿಕ ಬರೆಹಗಳಿಗೆ ಪ್ರೇರಣೆ ಒದಗಿಸಿವೆ.

**ಗಯಟೆಯ ಸೌಂದರ್ಯತತ್ತ್ವಗಳು** : ಗಯಟೆಯ ವಿಪುಲ ಸಾಹಿತ್ಯರಾಶಿಯಲ್ಲಿ ಬೆರೆತುಹೋಗಿರುವ ಸೌಂದರ್ಯತತ್ತ್ವಗಳಲ್ಲಿ ಮುಖ್ಯವಾದವನ್ನು ಮಾತ್ರ ಇಲ್ಲಿ ಸೂಚಿಸಲು ಪ್ರಯತ್ನಿಸಿದೆ. ಸಾಮಾನ್ಯವಾಗಿ ಸೌಂದರ್ಯಮೀಮಾಂಸೆಯ ಚರಿತ್ರೆಯಲ್ಲಿ ಗಯಟೆಗೆ ವಿಂಕಲ್ ಮನ್ ಪಂಥವನ್ನು ಜನಪ್ರಿಯಗೊಳಿಸಿದವನು ಎಂದಷ್ಟೇ ಸ್ಥಾನ ಕೊಡಲಾಗಿದೆ. ಕೆಲವು ಶಾಸ್ತ್ರಗ್ರಂಥಗಳಲ್ಲಿ ಇವನನ್ನು ಷಿಲ್ಲರ್‌ನಿಂದ ಪ್ರತ್ಯೇಕಿಸಿ, ಮೆಂಗ್ಸ್ ಹಾಗೂ ವಿಂಕಲ್‌ಮನ್ ಸಮುದಾಯಕ್ಕೆ ಸೇರಿದವನು, ಕ್ಯಾಂಟನಿಗಿಂತ ಹಿಂದಿನ ಪಂಥದವನು ಎಂದು ಹೇಳಲಾಗಿದೆ. ಇದು ಸರಿಯಲ್ಲ ಎಂದು ಬೊಸಾಂಕೆ ಅಭಿಪ್ರಾಯಪಟ್ಟಿದ್ದಾನೆ. ಏಕೆಂದರೆ ಗಯಟೆ ತನ್ನ ಸಮಕಾಲೀನನಾದ ಕಾಂಟನ ತತ್ತ್ವಗಳನ್ನು ಕೂಡ ಅಧ್ಯಯನ ಮಾಡಿ ಅವುಗಳ ಬಗೆಗೆ ತನ್ನ ಸ್ಪಷ್ಟ ಅಭಿಪ್ರಾಯ ಕೊಟ್ಟಿದ್ದಾನೆ. ಗಯಟೆಯ ಸ್ವೋಪಜ್ಞತೆಯನ್ನು ಪ್ರಶ್ನಿಸುವ ಕೆಲವು ಇತಿಹಾಸತಜ್ಞರು ಅರ್ಥಪೂರ್ಣತ್ವ (ದಿ ಡಾಕ್ಟ್ರಿನ್ ಆಫ್ ದಿ ಸಿಗ್ನಿಫಿಕೆಂಟ್ ಆರ್ ದಿ ಕ್ಯಾರೆಕ್ಟರಿಸ್ಟಿಕ್) ಎನ್ನುವ ತತ್ತ್ವವನ್ನು ಪ್ರತಿಪಾದಿಸಿದವನು ವಿಂಕಲ್‌ಮನ್ನನೇ ಹೊರತು ಗಯಟೆ ಅಲ್ಲ ಎನ್ನುತ್ತಾರೆ. ಆದರೆ ವಿಂಕಲ್‌ಮನ್‌ಗೆ ಅದರ ಸ್ಪಷ್ಟವಾದ ಕಲ್ಪನೆ ಇತ್ತೆನ್ನುವುದು ಕಷ್ಟ. ಅದರ ಬಗೆಗೆ ನಿಚ್ಚಳ ವಿಚಾರ ಪರಂಪರೆ ಮೂಡಿಸಿದವ ಗಯಟೆಯೇ ಎನ್ನುವ ಅಭಿಪ್ರಾಯವೂ ಸಾಧಾರವಾಗಿ ವಿಮರ್ಶಕರಿಂದ ಮಂಡಿತವಾಗಿದೆ. ವಿಂಕಲ್‌ಮನ್ ತನ್ನ ಸಮಾಲೋಚನೆಯಲ್ಲಿ ಶಿಲ್ಪ ಮತ್ತು ಚಿತ್ರ ಕಲೆಗಳನ್ನುಳಿದು ಸಂಗೀತ, ಕಾವ್ಯ ಮುಂತಾದ ಲಲಿತಕಲಾಪ್ರಕಾರಗಳನ್ನು ಪ್ರಸ್ತಾಪಿಸಿಲ್ಲ. ಕಲೆಯಲ್ಲಿ ಯಾವುದು ಅರ್ಥಪೂರ್ಣವೋ ಅದೇ ಉತ್ಕೃಷ್ಟ ಸುಂದರ. ಸುಂದರ

ಎನ್ನುವ ಮಾತನ್ನು ಬಾಹ್ಯರೂಪಕ್ಕೆ ಮಾತ್ರ ಅನ್ವಯಿಸಬಾರದು; ಐತಿಹಾಸಿಕ ಹಿನ್ನಲೆಯಲ್ಲಿ ಸಾಪೇಕ್ಷವಾಗಿ ಪರಿಶೀಲಿಸಬೇಕು–ಎಂದಿದ್ದಾನೆ ವಿಂಕಲ್‌ಮನ್. ಸೌಂದರ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುವ ಅವಕಾಶ ಗಯಟೆಗೆ ಒದಗಿದ್ದು ಅವನು ಗಾತಿಕ್ ವಾಸ್ತುಶಿಲ್ಪವನ್ನು ಕುರಿತು ವಿಚಾರ ಮಾಡಿದಾಗ, ಕೃತಕ ಅಭಿಜಾತ ಪರಂಪರೆಯನ್ನು (ಸ್ಯೂಡೊ ಕ್ಲಾಸಿಕಲ್ ಟ್ರೆಡಿಷನ್) ಅನುಕರಿಸುವ ತನ್ನ ಕಾಲದ ವಾಸ್ತುಶಿಲ್ಪಗಳ ಪ್ರವೃತ್ತಿಯನ್ನು ಖಂಡಿಸುತ್ತ ಅವನು ಗಾತಿಕ್‌ಕಲೆಯ ಮಹತ್ತ್ವವನ್ನು ಎತ್ತಿ ತೋರಿಸಿದ. ಈ ಸಂದರ್ಭದಲ್ಲಿ ಅವನು ಚಿತ್ರಕಲೆ, ಸಂಗೀತ, ಕಾವ್ಯಗಳಿಗೆ ಸಂಬಂಧಿಸಿದ ವಿಚಾರಗಳನ್ನೂ ಪ್ರತಿಪಾದಿಸಿದ್ದಾನೆ. ಜರ್ಮನ್ ವಾಸ್ತುಕಲೆಯನ್ನು ಕುರಿತ ಪುಸ್ತಕದಲ್ಲಿ ಆ ಶತಮಾನದ ಸೌಂದರ್ಯಮೀಮಾಂಸೆಗೆ ಸಂಬಂಧಿಸಿದ ಅತಿ ಮುಖ್ಯ ವಿಚಾರಗಳಿವೆ. 84 ವರ್ಷಗಳ ಅನಂತರ ರಸ್ಕಿನ್ ಗಯಟೆಯ ಮೂಲತತ್ತ್ವಗಳನ್ನೇ ವಿಶದವಾಗಿ, ನಿಷ್ಕೃಷ್ಟವಾಗಿ ತನ್ನ ದಿ ಸ್ಟೋನ್ಸ್ ಆಫ್ ವೆನಿಸ್ ಎನ್ನುವ ಗ್ರಂಥದಲ್ಲಿ ಕ್ರೋಡೀಕರಿಸಿದ್ದಾನೆಂಬುದು ಗಮನಾರ್ಹ.

ಸ್ಟ್ರಾಸ್‌ಬರ್ಗ್ (ಸೇಂಟ್ ಪೀಟರ್) ಚರ್ಚಿನ ವಾಸ್ತುಶಿಲ್ಪವನ್ನು ವಿಮರ್ಶಿಸುತ್ತ ಪರಂಪರೆಯ ಅಂಧಾನುಕರಣೆ ಮಾಡುತ್ತಿದ್ದ ಸಮಕಾಲೀನರ ಶಿಲ್ಪ ಶೈಲಿಯನ್ನು ಗಯಟೆ ಉಗ್ರವಾಗಿ ಟೀಕಿಸಿದ್ದಾನೆ. ಸೇಂಟ್ ಪೀಟರ್ ಚರ್ಚನ್ನು ನೋಡುವ ಮೊದಲು ಗಾತಿಕ್‌ಕಲೆಯ ಬಗ್ಗೆ ತನ್ನಲ್ಲಿ ವಿಶೇಷ ತಪ್ಪು ಗ್ರಹಿಕೆ ಇತ್ತೆಂದೂ ಆ ಭವ್ಯಮಂದಿರವನ್ನು ಕಂಡಾಗ ಅವೆಲ್ಲ ಕರಗಿಹೋಗಿ ಗಾತಿಕ್‌ಕಲೆಯ ಅರ್ಥಪೂರ್ಣತೆಯ ಅರಿವು ತನಗಾಯಿತೆಂದೂ ತಿಳಿಸಿದ್ದಾನೆ. ಮೇಲುನೋಟಕ್ಕೆ ಭದ್ರವಾಗಿದ್ದು ಯಾವ ನಯ ನುಣುಪುಗಳಿಲ್ಲವೆಂದು ತೋರಿದರೂ ಗಾತಿಕ್‌ಕಲೆಯಲ್ಲಿ ಆಂತರಿಕವಾದ ಸೌಂದರ್ಯವಿದೆ. ಸೌಂದರ್ಯ ಪ್ರಜ್ಞೆ ಇರುವ ಯಾರಿಗಾದರೂ ಅದರಲ್ಲಿ ಲಲಿತಕಲೆಯ ಉತ್ಕೃಷ್ಟ ಗುಣಗಳು ಎದ್ದು ಕಾಣುತ್ತವೆ. ನೈಜರೂಪದ ಕಲಾಕೃತಿಯಲ್ಲೂ ಸೌಂದರ್ಯವಿದೆ ಎಂಬ ಮಾತಿನ ಮೇಲೆ ಗಯಟೆ ಹೀಗೆ ಒತ್ತು ಹಾಕಿರುವುದು ಅವನ ಮತ್ತು ವಿಂಕಲ್‌ಮನ್ನರ ನಡುವಣ ಅಭಿಪ್ರಾಯ ಭಿನ್ನತೆಯನ್ನು ಸೂಚಿಸುತ್ತದೆ. ಸಾಮಾನ್ಯರ ಅಭಿಪ್ರಾಯದಲ್ಲಿ ಸುಂದರ ಎಂದರೆ ಅಚ್ಚುಕಟ್ಟಾಗಿರುವುದು, ಸಮಗ್ರರೂಪ ಉಳ್ಳದ್ದು, ನುಣುಪು ಮಾಡಿದ್ದು ಎನ್ನುವ ಅರ್ಥ. ಆದರೆ ಸೌಂದರ್ಯಶಾಸ್ತ್ರದಲ್ಲಿ ಆ ಅರ್ಥ ಅಪೂರ್ಣವಾಗುತ್ತದೆ. ಕಲೆ ಪರಿಷ್ಕೃತ ಸುಂದರ ರೂಪ ಪಡೆಯುವುದಕ್ಕೆ ಪೂರ್ವಭಾವಿಯಾಗಿ ದೀರ್ಘಕಾಲ ಬೆಳೆವಣಿಗೆಯ ಸ್ವರೂಪದಲ್ಲಿ ಇರುತ್ತದೆ; ಸಾಮಾನ್ಯರಿಗೆ ಅದು ಅಪೂರ್ಣವೆನಿಸಿದರೂ ನಿಜವಾಗಿ ಅರ್ಥಪೂರ್ಣವಾಗಿರುತ್ತದೆ. ಶ್ರೇಷ್ಠ ಕಲೆ ಎನ್ನುವುದು ಕೇವಲ ನುಣುಪಾದ ನಾಜೂಕಾದ ಸುಂದರ ಕಲೆಗಿಂತ ಉತ್ಕೃಷ್ಟವಾದುದು, ಜೀವಂತವಾದುದು–ಎಂದು ಗಯಟೆ ಅರ್ಥಪೂರ್ಣತ್ವದ ವಿವರಣೆ ಕೊಟ್ಟಿದ್ದಾನೆ. ಅರ್ಥಪೂರ್ಣ ಕಲೆಯಲ್ಲಿ ಆಂತರಿಕವಾದ ಅವಿಭಾಜ್ಯ ಏಕಸೂತ್ರವಿರುತ್ತದೆ. ಸ್ವತಂತ್ರ ಉತ್ಕಟ ಭಾವನೆಯ ಪ್ರೇರಣೆ ಇರುತ್ತದೆ. ಸುತ್ತಲಿನ ಪರಿಸರದ ಕ್ಷಣಿಕತೆಯಿಂದ ಪ್ರಭಾವಿತವಾಗದ, ಸಾರ್ವಕಾಲಿಕ, ಸಾರ್ವತ್ರಿಕ ಮೌಲ್ಯಗಳು ಅದರಲ್ಲಿರುತ್ತವೆ ಎನ್ನುವುದು ಅವನ ಮತ.

ಆದರೆ ಯುವಕ ಗಯಟೆಯಲಿದ್ದ ಈ ವಿಚಾರಗಳು ಸ್ವಲ್ಪಕಾಲ ಬೇರೆ ಜಾಡಿನಲ್ಲಿ ನಡೆದಂತೆ ತೋರಿ ಮತ್ತೆ ಅವನ ವೃದ್ಧಾಪ್ಯದ ಕಾಲದಲ್ಲಿ ಯಥಾಸ್ಥಿತಿಗೆ ಮರುಕಳಿಸಿದವೆನ್ನಬಹುದು. ತನ್ನ ಜೀವನದ ಮಧ್ಯಂತರಕಾಲದಲ್ಲಿ ಸುಂದರ ಗ್ರೀಕ್ ಕಲೆಯ ನಯ, ನಾಜೂಕುಗಳು ತನ್ನನ್ನು ಸೆಳೆದವೆಂದು ಆತ್ಮಕಥೆಯಲ್ಲಿ ಆತ ಹೇಳಿಕೊಂಡಿದ್ದಾನೆ. ತನ್ನ ಅಂತರಂಗದ ಈ ವಿಕಾಸವನ್ನು ಫೌಸ್ಟ್ ನಾಟಕದಲ್ಲಿ ಪ್ರತೀಕಿಸಿದ್ದಾನೆ; ಹೆಲನ್ನಳ ಅನ್ಯಾದೃಶ ಸೌಂದರ್ಯಕ್ಕೆ ಕಥಾನಾಯಕ ಮಾರುಹೋದರೂ ಸಂಪೂರ್ಣವಾಗಿ ಅದರಲ್ಲಿ ತಲ್ಲೀನನಾಗದೆ ಅವಳನ್ನು ತ್ಯಜಿಸಿ ಬಿಡುವುದು ಇದರ ಸಂಕೇತವಾಗಿದೆ.

ಕಲೆ ಮತ್ತು ವಿಜ್ಞಾನಗಳಿಗಿರುವ ಪರಸ್ಪರ ಸಂಬಂಧ ಅವನನ್ನು ಬಹಳವಾಗಿ ಸೆಳೆಯಿತು. ಪ್ರಕೃತಿಯಲ್ಲಿ ಕಾಣಸಿಗುವ ಪೂರ್ವಲಕ್ಷಣಗಳನ್ನುಳ್ಳ ಮಾದರಿಗಳಿಗೂ (ಆರ್ಕಿಟೈಪಲ್) ಆರ್ಷೇಯ ಕಲೆಯ ಅರ್ಥಪೂರ್ಣತ್ವಕ್ಕೂ ನಡುವೆ ಇರುವ ಹೋಲಿಕೆಯನ್ನು ಆತ ಗಮನಿಸಿದ್ದಾನೆ. ಅವನು ಪ್ರಕೃತಿಯಲ್ಲಿ ಆರ್ಷೇಯ ಮಾದರಿಗಳನ್ನು ಹುಡುಕುತ್ತ ಹೊರಟಾಗಲೇ ಅವನಿಗೆ ವಿಜ್ಞಾನದ ಹಲವು ಮುಖಗಳ ದರ್ಶನವಾದದ್ದು. ಕೆಲವು ಜಾತಿಯ ಹೂಗಳಲ್ಲಿ ಅವನು ಅವುಗಳ ಸಂಪೂರ್ಣ ವಿಕಾಸದ ರೂಪವನ್ನು ಗುರುತಿಸಿ ಆ ಮೂಲಕ ಸಸ್ಯಗಳ ಕಾಯಾಂತರಣ (ಮೆಟಮಾರ್ಫಸಿಸ್) ಕುರಿತ ಸಿದ್ಧಾಂತವನ್ನು ಪ್ರತಿಪಾದಿಸಿದ್ದು ಹೀಗೆಯೇ. ಯಾವುದೇ ವಸ್ತು ಅಥವಾ ಕೃತಿಯ ಮಥಿತಾರ್ಥ (ಇಂಪೋರ್ಟ್), ಅದರ ಪ್ರಾತಿನಿಧಿಕ ಗುಣ (ಕ್ಯಾರೆಕ್ಟರ್ ಅಥವಾ ಸಿಗ್ನಿಫಿಕೆನ್ಸ್) ಅದರ ಜೀವಾಳ ಎನ್ನುವುದು ಅವನ ಅಭಿಮತ. ಗಯಟೆ ಹಾಗೂ ಅವನ ಇಬ್ಬರು ಗೆಳೆಯರಾದ ಮೇಯರ್ ಮತ್ತು ಹರ್ಟ್ ಒಟ್ಟಾಗಿ ಪ್ರತಿಪಾದಿಸಿದ ಈ ವಿಚಾರಗಳಲ್ಲಿ ಅಲ್ಪಸ್ವಲ್ಪ ಭಿನ್ನಾಭಿಪ್ರಾಯ ತೋರಿಬಂದರೂ ಹೆಗಲ್ ಹೇಳುವಂತೆ ಅವರ ಸೂತ್ರಗಳು ಮುಖ್ಯವಾಗಿ ವಸ್ತು ಮತ್ತು ರೂಪಗಳಿಗೆ ಸಂಬಂಧಿಸಿದವು; ಕಲೆಯ ಶ್ರೇಷ್ಠತೆ ಅದು ಉಚಿತ ಅರ್ಥವನ್ನು ಅಭಿವ್ಯಕ್ತಿಸುತ್ತದೆಯೋ ಇಲ್ಲವೋ ಎನ್ನುವುದನ್ನು ಹೊಂದಿಕೊಂಡಿದೆ ಎಂಬ ಮಾತನ್ನು ಒತ್ತಿ ಹೇಳುತ್ತದೆ. ಆದರೆ ಕಲೆಯ ಈ ಅರ್ಥದ ಸ್ವರೂಪವೇನೆಂದು ವಿವರಿಸಹೊರಟಾಗ ಮಾತ್ರ ಕಲಾಕೃತಿಯ ಆರ್ಷೇಯ ಗುಣಗಳ ವಿವರಣೆ ಅಮೂರ್ತವೆನಿಸಿ ಬಿಡುತ್ತವೆ. ಆರ್ಷೇಯ ಕಲೆ ವಿಶಿಷ್ಟ ಅರ್ಥವನ್ನು ಪಡೆದಿದ್ದರೂ ಅದು ಕಾಲಕ್ರಮೇಣ ಪರಿಷ್ಕಾರಕ್ಕೆ ಪಕ್ಕಾದಾಗ ವಿಶಿಷ್ಟ ರೂಪ ತಳೆದು ಸುಂದರಕಲೆ ಆಗುತ್ತದೆ ಎನ್ನುತ್ತಾನೆ, ಗಯಟೆ. ಕಲೆಯನ್ನು ಆಸ್ವಾದಿಸಬೇಕಾದರೆ ಅದನ್ನು ಸುಂದರಗೊಳಿಸಿ ವಿಶಿಷ್ಟ ರೂಪಕ್ಕೆ ಇಳಿಸಿ ಅದನ್ನು ಸಾಂಪ್ರದಾಯಿಕಗೊಳಿಸಬೇಕು; ಆದರೆ ರಸಾಭಿಜ್ಞನಾದವ ವಿಶಿಷ್ಟರೂಪದಲ್ಲಿರುವ ಕಲೆಯ ನೆರವೂ ಇಲ್ಲದೆ ಸೌಂದರ್ಯವನ್ನು ಕಾಣಬಲ್ಲ ಎನ್ನುವ ಗಯಟೆಯ ಮಾತುಗಳಲ್ಲಿ ಪರಸ್ಪರ ವಿರೋಧ ಕಾಣಿಸುತ್ತದೆ.

ಗಯಟೆ ಹಾಗೂ ಅವನ ಗೆಳೆಯರು ಕೂಡಿ ನಡೆಸುತ್ತಿದ್ದ ಸೌಂದರ್ಯ ಜಿಜ್ಞಾಸೆಗಳ ಫಲಶ್ರುತಿಯನ್ನು ಅವನ ದಿ ಕಲೆಕ್ಟರ್ ಅಂಡ್ ಹಿಸ್ ಫ್ರೆಂಡ್ಸ್ ಎನ್ನುವ ಒಂದು ಸಂವಾದರೂಪಕದಲ್ಲಿ ಕಾಣಬಹುದು. ಸೌಂದರ್ಯ ಮೀಮಾಂಸೆಯ ಇತಿಹಾಸದಲ್ಲಿ ಇದು ಮಹತ್ತ್ವದ ಕೃತಿ. ಇದರಲ್ಲಿ ಶ್ರೇಷ್ಠ ಕಲೆಯ ವಿವಿಧ ಅಂಶಗಳು ಯಾವುವು ಎನ್ನುವ ವಿಶ್ಲೇಷಣೆ ಇದೆ. ಈ ಪ್ರಸ್ತಾಪ ಸೌಂದರ್ಯಶಾಸ್ತ್ರದ ಇತಿಹಾಸದಲ್ಲೇ ಹೊಸತು ಎನ್ನುತ್ತಾನೆ ಬೊಸಾಂಕೆ. ಗ್ರೀಕ್ ಕಲೆಯಲ್ಲೂ ಆರ್ಷೇಯ ಕಲೆಯ ಅರ್ಥಪೂರ್ಣ ಗುಣಗಳಿವೆ–ಎನ್ನುವ ಮಾತನ್ನು ಚರ್ಚಿಸುತ್ತ ಗ್ರೀಕರ ಭವ್ಯಶೈಲಿ ನಮ್ಮನ್ನು ಆದರ್ಶದ ಔನ್ನತ್ಯಕ್ಕೆ ಏರಿಸುತ್ತದೆ, ಆದರೆ ನಮಗೆ ಅಷ್ಟೇ ಸಾಲದು ಆರ್ಷೇಯ ಕಲೆಯ ವಿಶಿಷ್ಟತೆ, ಗ್ರೀಕರ ಔನ್ನತ್ಯ, ಎರಡೂ ಬೇಕು. ಈ ಉಭಯ ಸಂಕಟವನ್ನು ನಿವಾರಿಸಲು ನಮಗೆ ಸೌಂದರ್ಯದ ನೆರವೇ ಬೇಕು. ಅದು ಗ್ರೀಕರ ಕಲೆಯ ವಸ್ತುನಿಷ್ಠೆಗೆ ಜೀವಂತ ಉತ್ಸಾಹವನ್ನು ಸೇರಿಸಬಲ್ಲದು, ಆರ್ಷೇಯ ಕಲೆಯ ಒರಟುತನವನ್ನು ನಯಗೊಳಿಸಬಲ್ಲದು. ಇದರಿಂದಾಗಿ ಒಂದು ಸುಂದರ ಕಲಾಕೃತಿ ವಿಕಾಸದ ಹಲವು ಹಂತಗಳನ್ನು ಏರಿ ವಿಶಿಷ್ಟತೆಯನ್ನು ಪಡೆಯುತ್ತದೆ. ಆ ವಿಶಿಷ್ಟತೆಯನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯವಾಗುತ್ತದೆ.– ಗಯಟೆಯ ಈ ಮಾತುಗಳಲ್ಲಿ ಒಂದು ದ್ವಂದ್ವ ಗೋಚರಿಸುತ್ತದೆ. ಸೌಂದರ್ಯ ಸೂತ್ರವೆಂದರೆ ಅನಗತ್ಯವಾದುದನ್ನು ವರ್ಜಿಸುವುದು. ಅಗತ್ಯ ಅಂಶಗಳನ್ನು ಸಮಗ್ರೀಕರಣಗೊಳಿಸುವುದು ಎನ್ನುವುದಾದರೆ ಅದು ವಿಶಿಷ್ಟ ಗಟ್ಟಿಭದ್ರ ವೈಯಕ್ತಿಕ ಗುಣರೇಖೆಗಳನ್ನು ನುಣುಪುಗೊಳಿಸಿ, ನಿರ್ಬಲಗೊಳಿಸಿದಂತಾಗುವುದಲ್ಲವೇ? ಕಲೆಯ ಗಟ್ಟಿಭದ್ರ ಗುಣರೇಖೆಗಳಲ್ಲಿ ಸೌಂದರ್ಯವನ್ನು ಕಾಣುವುದು ರಸಾಭಿಜ್ಞನ ಪ್ರತಿಭೆಯನ್ನು ಅವಲಂಬಿಸಿರುತ್ತದೆಯಲ್ಲವೆ? ಪರಸ್ಪರ ವಿರೋಧವೆನಿಸುವ ಈ ಅಭಿಪ್ರಾಯಗಳನ್ನು ಸಮತೋಲನಗೊಳಿಸಲು ಗಯಟೆ ಪ್ರಯತ್ನಿಸುವುದಿಲ್ಲ.

ಶ್ರೇಷ್ಠ ಕಲೆಯನ್ನು ನಿರ್ಧರಿಸುವ ಕಲೆಗಾರರು ಕಲಾಭಿಜ್ಞರು ಮತ್ತು ಸೌಂದರ್ಯ ವಿಮರ್ಶಕರಲ್ಲಿ ಯಾವ ಯಾವ ಗುಣಗಳಿರಬೇಕು ಎಂದು ಗಯಟೆ ಈ ಚರ್ಚೆಯ ಕೊನೆಯಲ್ಲಿ ಪಟ್ಟಿ ಮಾಡಿದ್ದಾನೆ. ಸೌಂದರ್ಯದ ವಿವಿಧ ಅಂಶಗಳನ್ನು ಸವಿವರವಾಗಿ ಉಲ್ಲೇಖಿಸಿದ್ದಾನೆ. ಶ್ರೇಷ್ಠಕಲೆಯಲ್ಲಿ ಸಹಜತೆ (ಆರ್ಟ್–ಟ್ರುತ್), ಸೌಂದರ್ಯ, ನಯಗಾರಿಕೆ (ಒಪ್ಪ)– ಎಂಬ ಮೂರು ಅಂಶಗಳಿರುತ್ತವೆ. ಇವುಗಳಲ್ಲಿ ಒಂದೊಂದೂ ಪರಸ್ಪರ ವಿರೋಧ ಗುಣ ಅಥವಾ ಪರಸ್ಪರ ವಿರೋಧ ಪ್ರವೃತ್ತಿಗಳಿಂದ ಸಮಾವೇಶಗೊಂಡಿರುತ್ತದೆ. ಆ ಪರಸ್ಪರ ವಿರೋಧ ಗುಣ ಅಥವಾ ಪ್ರವೃತ್ತಿಗಳಲ್ಲಿ ಯಾವುದಾದರೂ ಒಂದು ಮಹತ್ತ್ವ (ಸೀರಿಯಸ್)ದ್ದಾಗಿದ್ದು ಇನ್ನೊಂದು ಲಘುವಾಗಿರುತ್ತದೆ (ಪ್ಲೇಫುಲ್). ಎರಡನ್ನೂ ಪ್ರತ್ಯೇಕವಾಗಿ ಪರಿಗಣಿಸಿದಾಗ ಅವು ಅಪ್ರಬುದ್ಧತೆ, ವಿಲಕ್ಷಣತೆ ಎನಿಸಿಕೊಳ್ಳುತ್ತವೆ. ಆದರೆ ಎರಡೂ ಸುಸಂಘಟಿತವಾದ ಶೈಲಿಯ ನಿರ್ಮಾಣವಾಗುತ್ತದೆ. ಇದನ್ನು ಹೀಗೆ ಸೂಚಿಸಬಹುದು.

1. ಬರಿ ಅನುಕರಣಾತ್ಮಕವಾದ್ದು + ಕಲ್ಪನಾಶಕ್ತಿ = ಕಲಾಸಹಜತೆ
2. ಆರ್ಷೇಯ ಪ್ರಾತಿನಿಧಿಕ ಗುಣವುಳ್ಳದ್ದು + ಕೇವಲ ಅಲಂಕಾರಿಕವಾದ ವಕ್ರರೇಖಾರೂಪ ವಿನ್ಯಾಸ = ಸೌಂದರ್ಯ
3. ಸೂಕ್ಷ್ಮ ನಿಷ್ಕೃಷ್ಟತೆ + ಅರ್ಥಗರ್ಭಿತ ರೇಖಾರೂಪಣೆ = ನಯಗಾರಿಕೆ.

ಇದಲ್ಲದೆ ಶ್ರೇಷ್ಠ ಕಲೆಯ ಆವಿಷ್ಕಾರವಾಗಬೇಕಾದರೆ ಕಲಾಸಹಜತೆ, ಸೌಂದರ್ಯ ಮತ್ತು ನಯಗಾರಿಕೆ– ಈ ಮೂರು ಗುಣಗಳ ಸಂಯೋಗವಿರಬೇಕು.

ಇಲ್ಲಿಯೂ ಗಯಟೆಯ ತತ್ತ್ವದಲ್ಲಿ ಪರಸ್ಪರ ವಿರೋಧಭಾವವಿದೆ. ಸೌಂದರ್ಯ (ಆ ಮಾತಿನ ಸಾಮಾನ್ಯ ಅರ್ಥದಲ್ಲಿ) ಲಲಿತಕಲೆಯ ವೈಶಿಷ್ಟ್ಯವನ್ನು ಹೆಚ್ಚಿಸುತ್ತದೆಂದು ಅವನು ಹೇಳಿದರೂ ವಸ್ತುವಿನ ತಿರುಳಿಲ್ಲದ ಸೌಂದರ್ಯ ಅಥವಾ ವಿಭಜಿಸಲು ಸಾಧ್ಯವಿಲ್ಲದ ಸೌಂದರ್ಯ ಸಾಧ್ಯವೇ ಇಲ್ಲವೆಂದಾಯಿತು. ಗಯಟೆ ಸೌಂದರ್ಯವೆನ್ನುವ ಮಾತಿಗೆ ಕೊಟ್ಟ ವಿವರಣೆಯಿಂದಾಗಿ ಅದು ಅಭಿವ್ಯಕ್ತಿಯನ್ನು ದುರ್ಬಲಗೊಳಿಸುವುದಿಲ್ಲ.

ಏಕೆಂದರೆ ಅದರಲ್ಲಿ ಮೂಲಭೂತವಾದ, ಸಾಂಕೇತಿಕವಾದ ಅಭಿವ್ಯಂಜಕತೆ ಸೇರಿರುತ್ತದೆ ಎಂದು ಅರ್ಥವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಗಯಟೆ 18ನೆಯ ಶತಮಾನ ದಿಂದೀಚೆಗೆ ಪ್ರಚಲಿತವಾದ ಫಾರ್ಮಲಿಸ್ಟಿಕ್ ಥಿಯೊರಿ ಎನ್ನುವ ಪಂಥಕ್ಕೆ ಜೀವತುಂಬಿದ. 1805ರಲ್ಲಿ ಅವನು ವಿಂಕಲ್‌ಮನ್‌ನನ್ನು ಕುರಿತು ಬರೆದ ಗ್ರಂಥದಲ್ಲಿ ಕಲೆ ಪರಸ್ಪರಾವಲಂಬಿ ಭಾಗಗಳುಳ್ಳ ಒಂದು ಸಮಷ್ಟಿಕ್ರಿಯೆ ಎಂಬುದನ್ನು ಒತ್ತಿ ಹೇಳಿದ್ದಾನೆ. ಈ ಎಲ್ಲ ವಿಚಾರಗಳನ್ನೂ ಗಮನಿಸುವಾಗ ಗಯಟೆ 18ನೆಯ ಶತಮಾನದ ಸೌಂದರ್ಯಶಾಸ್ತ್ರದ ಚಿಂತನೆಗಳಿಗೆ ಒಂದು ಮುಖ್ಯ ತಿರುವುಕೊಟ್ಟನೆಂಬುದು ಖಚಿತವಾಗುತ್ತದೆ. (ಎಚ್.ಕೆ.ಆರ್.)

**ಗಯ :** ಬಿಹಾರ ರಾಜ್ಯದ ಪಾಟ್ನ ವಿಭಾಗದ ಒಂದು ನಗರ. ಅದೇ ಹೆಸರಿನ ಜಿಲ್ಲೆಯ ಕೇಂದ್ರ. ಪೂರ್ವ ರೈಲ್ವೆಯ ಮುಖ್ಯ ಮಾರ್ಗದಲ್ಲಿ ಪಾಟ್ನ ನಗರಕ್ಕೆ 90 ಕಿಮೀ ದೂರದಲ್ಲಿ ಫಲ್ಗು ನದಿಯ ಪಶ್ಚಿಮ ದಂಡೆಯ ಉದ್ದಕ್ಕೂ ಬಹುತೇಕ ಹಬ್ಬಿರುವ ಈ ನಗರದ ವಿಸ್ತೀರ್ಣ 17.24 ಚ.ಕಿಮೀ. ಗಯೆಯ ಸುತ್ತಲೂ ಛೋಟಾನಾಗಪುರ ಪ್ರಸ್ಥಭೂಮಿಯ ಅಂಚಿನ ಬೆಟ್ಟಗಳಿವೆ. ವರ್ಷದಲ್ಲಿ ಬಹುಕಾಲ ಬರಡಾಗಿರುವ ಫಲ್ಗು ನದಿಯ ಮರಳು ಬಿಸಿಲಿನಿಂದ ಕಾಯುವುದರಿಂದ ಗಯ ನಗರ ಬಹಳ ಬಿಸಿ. ಗಯ ನಗರ ಛೋಟಾನಾಗಪುರ ಪ್ರಸ್ಥಭೂಮಿಯೂ ಗಂಗಾ ನದಿಯ ಬಯಲೂ ಕೂಡುವ

ವಿಷ್ಣುಪಾದ ದೇವಸ್ಥಾನ, ಗಯ

ಎಡೆಯಲ್ಲಿರುವುದರಿಂದ ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಅಲ್ಲದೆ ಇದೊಂದು ಯಾತ್ರಾಸ್ಥಳ. ಪ್ರತಿ ವರ್ಷವೂ ಲಕ್ಷಗಟ್ಟಲೆ ಯಾತ್ರಾರ್ಥಿಗಳು ಗಯಕ್ಕೆ ಬರುತ್ತಾರೆ. ಗಯ ನಗರದ ಅನೇಕ ದೇವಸ್ಥಾನಗಳಲ್ಲಿ ರಾಣಿ ಅಹಲ್ಯಾಬಾಯಿ ಹೋಳ್ಕರ್ ಕಟ್ಟಿಸಿದ (1787) ವಿಷ್ಣುಪಾದ ದೇವಸ್ಥಾನ ಮುಖ್ಯವಾದದ್ದು. ಈ ಕ್ಷೇತ್ರದ ಒಂದು ಭಾಗವಾದ ಬ್ರಹ್ಮಗಯ ಹಿಂದುಗಳ ಯಾತ್ರಾಸ್ಥಳವಾದರೆ ಇನ್ನೊಂದು ಭಾಗವಾದ ಬೋಧಗಯ ಪ್ರಪಂಚದ ಬೌದ್ಧರ ಯಾತ್ರಾಸ್ಥಳ.

**ಬೋಧಗಯ:** ಬ್ರಹ್ಮಗಯಕ್ಕೆ ಸು.9 ಕಿಮೀ ದೂರದಲ್ಲಿದೆ. ಸಮೀಪದಲ್ಲಿಯೇ ಸು.2,400 ವರ್ಷಗಳಿಗೂ ಹಳೆಯದೆಂದು ಹೇಳಲಾದ ಬೋಧಿವೃಕ್ಷವಿದೆ. ಇಲ್ಲಿಯೇ ಶಾಕ್ಯವಂಶದ ಸಿದ್ಧಾರ್ಥ ಆರು ವರ್ಷಗಳ ಕಾಲ ಕಠಿಣ ತಪಸ್ಸನ್ನಾಚರಿಸಿ ತನ್ನ 35ನೆಯ ವಯಸ್ಸಿನಲ್ಲಿ ಜ್ಞಾನೋದಯ ಪಡೆದು ಬುದ್ಧನಾದದ್ದು. ಬುದ್ಧನ ಸಂದೇಶವನ್ನು ಪಡೆದ ಮೊದಲಿಗರಲ್ಲಿ ಗಯ ನಿವಾಸಿಗಳೂ ಸೇರಿದ್ದಾರೆ. ಗಯ ಪಟ್ಟಣಕ್ಕೆ 24 ಕಿಮೀ ದೂರದಲ್ಲಿರುವ ಬರಾಬರ್ ಬೆಟ್ಟದ ಗುಹೆಯೊಂದರಲ್ಲಿ ಅಶೋಕನ ಮೂರು ಶಾಸನವಿದೆ. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಇಲ್ಲಿಯ ಬೋಧಿವೃಕ್ಷದ ಸಮೀಪದಲ್ಲಿ ಅಶೋಕ ಕಟ್ಟಿಸಿದ್ದ ದೊಡ್ಡ ವಿಹಾರವೊಂದರ ಅವಶೇಷಗಳನ್ನು ಇಂದಿಗೂ ಕಾಣಬಹುದು. ಈಗ ಇಲ್ಲಿರುವ ದೇವಮಂದಿರ 48ಮೀ ಚೌಕವಾಗಿದ್ದು 15ಮೀ ಎತ್ತರವಾಗಿದೆ. ಒಳಗಡೆ ಬುದ್ಧನ ದೊಡ್ಡ ವಿಗ್ರಹವಿದೆ. ಮೇಲಿನ ಅಂತಸ್ತಿನಲ್ಲಿ ಸಿದ್ಧಾರ್ಥನ ತಾಯಿ ಮಾಯಾದೇವಿಯ ವಿಗ್ರಹವಿದೆ. 7ನೆಯ ಶತಮಾನದಲ್ಲಿ ಚೀನಿಯಾತ್ರಿಕ ಯುವಾನ್‌ಚಾಂಗ್ ಇಲ್ಲಿಗೆ ಬಂದಿದ್ದನೆಂದು ಹೇಳಲಾಗಿದೆ. (ಸಿ.ಕೆ.ವೈ.ಡಿ.;ಜಿ.ಎಚ್.)

ಮಹಾಬೋಧಿ ದೇವಾಲಯ, ಬೋಧಗಯ

**ತರದಿಹ್ (ಬೋಧಗಯ):** ಇಲ್ಲಿನ ಉತ್ಖನನದಲ್ಲಿ ಅನುಕ್ರಮವಾಗಿ ನವಶಿಲಾಯುಗ ಹಂತದಿಂದ ಪಾಲ ಅರಸು ಮನೆತನದ ಹಂತದವರೆಗೆ ಒಟ್ಟು ಏಳು ಸಾಂಸ್ಕೃತಿಕ ಹಂತಗಳು ಪತ್ತೆಯಾಗಿವೆ. ನವಶಿಲಾಯುಗದ ಆದಿಹಂತದಲ್ಲಿ ಕೈಯಿಂದ ಮಾಡಿದ ಮಣ್ಣಾತ್ರೆಗಳು ಮತ್ತು ಅಂತ್ಯ ಉಪಹಂತದಲ್ಲಿ ಉಜ್ಜಿದ ಹೊಳಪಿನ ಬೂದುಬಣ್ಣದ ಮಡಕೆಗಳು ವಿಶೇಷವಾಗಿವೆ. ಎರಡನೆಯ ಹಂತದಲ್ಲಿ ತಿಗುರಿಯ ಮೇಲೆ ಮಾಡಿದ ಮಡಕೆ, ತಾಮ್ರದ ಉಪಕರಣಗಳು ಹಾಗೂ ಕಪ್ಪು ಮತ್ತು ಬೂದುಬಣ್ಣದ ಮಡಕೆಗಳಿವೆ. ಮೂರನೆಯ ಹಂತದಲ್ಲಿ ಆದಿ ಕಬ್ಬಿಣಯುಗದ ಕಪ್ಪು, ಕೆಂಪು–ಕಪ್ಪು ದ್ವಿವರ್ಣ ಮಡಕೆಗಳು, ಕಬ್ಬಿಣದ ಬಾಣದ ಮೊನೆ, ಈಟಿ ಮೊನೆ, ಉಳಿ, ಮೊಳೆ ಕಲ್ಲಿನ ಮಣಿಗಳು, ಚಿಕ್ಕ ಅಲಗುಗಳು ಮುಂತಾದವು ದೊರೆತಿವೆ. ನಾಲ್ಕನೆಯ ಹಂತದಲ್ಲಿ ಪ್ರಥಮ ಬಾರಿಗೆ ಔತ್ತರೇಯ ಮೆರುಗಿನ ಕಪ್ಪುಬಣ್ಣದ ಮಡಕೆಗಳು, ಎಲುಬು, ಕಲ್ಲಿನ ಉಪಕರಣಗಳು, ಸುಡಾವೆ ಮಣ್ಣಿನ ಗೊಂಬೆಗಳು, ತಾಮ್ರದ ಮಣಿ, ಎರಕ ಹೊಯ್ದ ನಾಣ್ಯಗಳ ಜೊತೆಗೆ ಕಾಣಿಸಿಕೊಳ್ಳುತ್ತವೆ. ಐದನೆಯ ಹಂತದಲ್ಲಿ ಕುಷಾಣರ ಕಾಲದ ಕೆಂಪುವರ್ಣದ ಮಡಕೆ, ಕಲ್ಲಿನ, ಗಾಜಿನ, ಸುಡಾವೆ ಮಣ್ಣಿನ ಹಾಗೂ ತಾಮ್ರದ ಮಣಿಗಳು ಮುಖ್ಯವಾದವು. ಆರನೆಯ ಮತ್ತು ಏಳನೆಯ ಹಂತಗಳಲ್ಲಿ ಕ್ರಮವಾಗಿ ಗುಪ್ತರ ಕಾಲದ ಮತ್ತು ಪಾಲರ ಕಾಲದ ಪ್ರಾಚ್ಯಾವಶೇಷಗಳು ದೊರಕಿವೆ. (ಎ.ಎಸ್.;ಎನ್.ಎಲ್.)

**ಬ್ರಹ್ಮಗಯ:** ಹಿಂದುಗಳ ಪುಣ್ಯಕ್ಷೇತ್ರವಾದ ಇದು ಸು.5ನೆಯ ಶತಮಾನದಿಂದಲೂ ಪ್ರಸಿದ್ಧವಾಗಿದೆ. ಪುರಾಣಗಳಲ್ಲಿ ಗಯದ ಉಲ್ಲೇಖವಿರುವುದಾದರೂ ಋಗ್ವೇದದಲ್ಲಿ ಇದು ಒಬ್ಬ ಋಷಿಯ ಹೆಸರು. ಈ ಕ್ಷೇತ್ರದಲ್ಲಿ ಯಾಗವನ್ನು ಕೈಗೊಂಡ ಧಾರ್ಮಿಕ ದೊರೆಯೊಬ್ಬನ ಪ್ರಸ್ತಾಪ ಮಹಾಭಾರತದಲ್ಲಿ ಬಂದಿದೆ. ಈತ ಚಿನ್ನದಿಂದಲೇ

ಯಜ್ಞವೇದಿಕೆಯನ್ನು ನಿರ್ಮಿಸಿ ಕೊನೆಯಲ್ಲಿ ಆ ವೇದಿಕೆಯನ್ನು ಬ್ರಾಹ್ಮಣರಿಗೆ ಹಂಚಿಕೊಟ್ಟನೆಂದೂ ಈತ ಅಪಾರವಾಗಿ ಶೇಖರಿಸಿದ್ದ ಘೃತ ಮತ್ತು ಮಧುವನ್ನು ಯಜ್ಞ ಮುಗಿದ ಬಳಿಕ ಅಗ್ನಿಯ ಅನುಗ್ರಹದಿಂದ ಘೃತಕುಲ್ಯಾ ಎಂಬ ಹೆಸರಿನಿಂದ ನದಿಗಳ ರೂಪದಲ್ಲಿ ಹರಿಯಬಿಟ್ಟನೆಂದೂ ಹೇಳಲಾಗಿದೆ.

ಹುಟ್ಟಿದ ಮಕ್ಕಳಲ್ಲಿ ಒಬ್ಬನಾದರೂ ಗಯದಲ್ಲಿ ಶ್ರಾದ್ಧಮಾಡಿ ತನ್ನ ತಂದೆಗೆ ಸ್ವರ್ಗ ಪ್ರಾಪ್ತಿಯಾಗುವಂತೆ ಮಾಡಬೇಕೆಂದು ರಾಮಾಯಣದಲ್ಲಿ ಹೇಳಿದೆ. ಈ ಕ್ಷೇತ್ರದಲ್ಲಿ ಶ್ರಾದ್ಧ ನಡೆಸಿದವನ ವಂಶದ ನೂರು ಜನ ಪಿತೃಗಳಿಗಲ್ಲದೆ ಅವನಿಗೂ ಶಾಶ್ವತ ಸ್ವರ್ಗ ಪ್ರಾಪ್ತಿಯಾಗುತ್ತದೆಂದು ಸ್ಥಳಪುರಾಣ ತಿಳಿಸುತ್ತದೆ. ಈ ನಂಬಿಕೆಗೆ ಹಿನ್ನೆಲೆಯಾಗಿರುವ ಕಥೆ ಗಯ ಮಹಾತ್ಮ್ಯೆಯಲ್ಲಿ ಹೀಗಿದೆ: ವಿಷ್ಣುವಿನ ಪರಮ ಭಕ್ತನಾದ ಗಯನೆಂಬ ಅಸುರ ಒಮ್ಮೆ ಕೋಲಾಹಲ ಪರ್ವತದ ಮೇಲೆ ಕಠಿಣ ತಪಸ್ಸನ್ನಾಚರಿಸಿದ. ಇದರಿಂದ ದೇವತೆಗಳೆಲ್ಲ ಖಿನ್ನರಾಗಿ ವಿಷ್ಣು ಮಹೇಶ್ವರರ ಬಳಿಗೆ ಹೋದರು. ವಿಷ್ಣು ದೇವತೆಗಳೊಡನೆ ಗಯಕ್ಕೆ ಬಂದು ಗಯ ಪರಿಶುದ್ಧನೆಂಬ ವಿಚಾರ ತಿಳಿದು, ಅವನನ್ನು ಸ್ಪರ್ಶಿಸಿದವರು ವೈಕುಂಠವನ್ನು ಸೇರಲಿ ಎಂಬುದಾಗಿ ವರ ನೀಡಿದ. ಅಂದಿನಿಂದ ಜನ ಗಯನನ್ನು ಸ್ಪರ್ಶಿಸಿ ಸ್ವರ್ಗಲಾಭ ಪಡೆಯತೊಡಗಿದರು. ಇದರಿಂದ ಯಮನ ರಾಜ್ಯ ಬರಿದಾಗಿ ಅವನಿಗೆ ಕೆಲಸವಿಲ್ಲದಂತಾಯಿತು. ಅನಂತರ ವಿಷ್ಣುವಿನ ಸಲಹೆಯಂತೆ ಬ್ರಹ್ಮ ಗಯನನ್ನು ಸಮೀಪಿಸಿ ಅವನ ಪವಿತ್ರ ದೇಹದ ಮೇಲೆ ಯಾಗ ಮಾಡಬೇಕೆಂಬ ಸಂಕಲ್ಪವನ್ನು ಅವನಲ್ಲಿ ವಿಜ್ಞಾಪನೆ ಮಾಡಿಕೊಂಡ. ಇದಕ್ಕೆ ಗಯ ಮರುಮಾತನಾಡದೆ ಸಮ್ಮತಿಯನ್ನಿತ್ತ. ಯಾಗಕರ್ಮಗಳನ್ನು ನಡೆಸಲು ಬ್ರಹ್ಮ ಋತ್ವಿಜರಾದ ಮಾನಸಪುತ್ರರನ್ನು ಸೃಷ್ಟಿಸಿದ. ಅವರು ಗಯನ ಶಿರ ಉತ್ತರದ ಕಡೆಗಿರುವಂತೆಯೂ ಪಾದಗಳು ದಕ್ಷಿಣದ ಕಡೆಗಿರುವಂತೆಯೂ ಮಾಡಿ ಅವನ ದೇಹದ ಮೇಲೆ ಯಜ್ಞವನ್ನು ವಿಜೃಂಭಣೆಯಿಂದ ನಡೆಸಿದರು. ಯಜ್ಞಸಮಾರಂಭದ ಕೊನೆಯಲ್ಲಿ ಗಯನ ತಲೆ ಅಲುಗಾಡತೊಡಗಿತು. ವಿಶೇಷವಾದ ಧರ್ಮಶಿಲೆಯೊಂದನ್ನು ತಂದು ಗಯನ ತಲೆಯ ಬಳಿ ಇಡಬೇಕೆಂದು ಆಗ ಬ್ರಹ್ಮ ಯಮನಿಗೆ ಸೂಚಿಸಿದ. ಆದರೂ ಗಯ ನಿಶ್ಚಲನಾಗಲಿಲ್ಲ. ದೇವತೆಗಳೆಲ್ಲ ಶಿಲೆಯ ಬಳಿ ನಿಂತರೂ ತಲೆಯ ಅಲುಗಾಟ ನಿಲ್ಲಲಿಲ್ಲ. ಕೊನೆಗೆ ವಿಷ್ಣುವೇ ಗದಾಧಾರಿಯಾಗಿ ಗಯನ ಶಿರದ ಬಳಿ ಪ್ರತ್ಯಕ್ಷನಾದಾಗ ತಲೆ ಅಲುಗಾಡುವುದು ನಿಂತಿತು. ಮಹಾವಿಷ್ಣುವಿನ ದರ್ಶನ ಲಾಭದಿಂದ ಕೃತಾರ್ಥನಾದ ಗಯ ತನಗೆ ವಿಷ್ಣುವಿನ ಆಜ್ಞೆಯೊಂದೇ ಸಾಕಾಗಿತ್ತೆಂದೂ ಅಷ್ಟು ಜನ ದೇವತೆಗಳು ಚಿತ್ರಹಿಂಸೆ ಕೊಡಬಾರದಾಗಿತ್ತೆಂದು ಭಿನ್ನೈಸಿಕೊಂಡ. ಗಯನ ಭಕ್ತಿಗೆ ಮೆಚ್ಚಿದ ವಿಷ್ಣು ಅವನಿಗೆ ವರಪ್ರಸಾದವನ್ನು ನೀಡಿ ತಾನೇ ಮೊದಲ್ಗೊಂಡು ಸಮಸ್ತ ದೇವತೆಗಳಿಗೂ ಅವನ ಶಿರದ ಬಳಿ ಶಾಶ್ವತವಾಗಿ ನಿಂತಿರುವಂತಾಗಿ ಆ ಸ್ಥಳ ಗಯನ ಹೆಸರಿನಿಂದ ಶೋಭಿಸಲೆಂದು ಅನುಗ್ರಹಿಸಿದ. ಅಂದಿನಿಂದ ಅದು ಗಯ ಕ್ಷೇತ್ರವೆಂದು ಪ್ರಸಿದ್ಧವಾಯಿತು.

ಭಾರತ ಭಾಗವತಾದಿಗಳಲ್ಲೆಲ್ಲಿಯೂ ಕಾಣದ, ಜನಜನಿತವಾದ, ಗಯೋಪಾಖ್ಯಾನ ವೆಂಬ ಹೆಸರಿನ ಒಂದು ಕಥೆಯಿದೆ. ಈ ಕಥೆಯ ವಿವರಗಳು ಹೀಗಿವೆ: ಶಿವಭಕ್ತ ಸಂಪನ್ನನಾದ ಗಯನೆಂಬ ಒಬ್ಬ ಗಂಧರ್ವ ಒಮ್ಮೆ ಶಿವಪೂಜೆಗಾಗಿ ಕೈಲಾಸಕ್ಕೆ ಹೋಗಿ ಮಡದಿಮಕ್ಕಳೊಂದಿಗೆ ಹಿಂದಿರುಗಿ ವಿಮಾನದಲ್ಲಿ ಕುಳಿತು ಬರುವಾಗ ಬಾಯ ತಂಬುಲವನ್ನು ಉಗುಳಿದ. ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತ ಕಣ್ಮುಚ್ಚಿ ನಿಂತಿದ್ದ ಶ್ರೀಕೃಷ್ಣನ ಬೊಗಸೆಯಲ್ಲಿ ಅದು ಬಿತ್ತು. ಕೈಲಿದ್ದ ನೀರು ಕೆಂಪಾಗಿದ್ದುದನ್ನು ಕಂಡು ಕೋಪಗೊಂಡ ಕೃಷ್ಣ ಆ ಅಪರಾಧ ಎಸಗಿದವನನ್ನು ಕೊಲ್ಲದೆ ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಇದರಿಂದ ಭೀತಿಗೊಂಡ ಗಯ ದೇವತೆಗಳಲ್ಲಿ ಮೊರೆಯಿಟ್ಟ. ಯಾರೂ ಅಭಯ ನೀಡಲಿಲ್ಲ. ಕೊನೆಗೆ ನಾರದರ ಸೂಚನೆಯ ಮೇರೆಗೆ ಅರ್ಜುನನ ಮೊರೆಹೊಕ್ಕ. ಅರ್ಜುನ ಹಿಂದುಮುಂದು ನೋಡದೆ ಅಭಯಪ್ರದಾನ ಮಾಡಿದ. ಅನಂತರ ವಿಷಯ ತಿಳಿದು ತನ್ನ ಅವಿವೇಕವನ್ನು ಕಂಡು ವಿಷಾದಿಸಿದ. ಕಡೆಗೆ ಮೊರೆಹೊಕ್ಕವರನ್ನು ಕಾಪಾಡ ಬೇಕೆಂಬ ಧರ್ಮಕ್ಕೆ ಕಟ್ಟುಬಿದ್ದು ಗಯನಿಗಾಗಿ ಅರ್ಜುನ ಕೃಷ್ಣನನ್ನು ಇದಿರಿಸಿ ಯುದ್ಧದಲ್ಲಿ ತೊಡಗಿದ. ಆಗ ದೇವತೆಗಳು ಮಧ್ಯೆ ಪ್ರವೇಶಿಸಿ ಗಯನನ್ನು ಶ್ರೀಕೃಷ್ಣನ ಚರಣಗಳಿಗೆ ಅಡ್ಡಬೀಳಿಸಿ ಕೃಷ್ಣನಿಂದಲೇ ಗಯನಿಗೆ ಅಭಯಪ್ರದಾನ ಮಾಡಿಸಿದರು.

ಭಾರತದ ಎಲ್ಲ ಕಡೆಗಳಿಂದಲೂ ಹಿಂದುಗಳು ಗಯಕ್ಕೆ ಹೋಗಿ ಫಲ್ಗು ನದಿಯಲ್ಲಿ ಸ್ನಾನ ಮಾಡಿ ಪಿತೃಗಳಿಗೆ ತರ್ಪಣವನ್ನೂ ಪಿಂಡವನ್ನೂ ಅರ್ಪಿಸಿ ವಿಷ್ಣುಪಾದೋದಕ ವನ್ನು ಪ್ರೋಕ್ಷಿಸಿಕೊಳ್ಳುವ ಪದ್ಧತಿ ಬಹು ಹಿಂದಿನಿಂದ ನಡೆದುಬಂದಿದೆ. ಈ ಕ್ಷೇತ್ರದ ಮುಖ್ಯಸ್ಥರು ಇಲ್ಲಿ ಸಂಸ್ಕಾರ ನಡೆಸಿದವರ ಹೆಸರು ಕುಲಗೋತ್ರಗಳನ್ನು ಹಿಂದಿನಿಂದಲೂ ಬರೆದು ಇಟ್ಟಿದ್ದಾರೆ. ಈ ಕ್ಷೇತ್ರದ ಯಾತ್ರೆ ಪೂರ್ಣವಾಗಬೇಕಾದರೆ ಸಮೀಪದಲ್ಲಿರುವ ಐದು ಸ್ಥಳಗಳಿಗೆ ಹೋಗಿ ಅಲ್ಲಿಯ ಯಮದೇವತೆಗೂ ಆತನ ದೂತನಿಗೂ ಪೂಜೆ ಸಲ್ಲಿಸಬೇಕು. ಇವುಗಳಲ್ಲಿ ಮುಖ್ಯವಾದವು ರಾಮಶಿಲಾ ಮತ್ತು ಪ್ರೇತಶಿಲಾ ಗುಡ್ಡಗಳು. ಪ್ರೇತಶಿಲಾದಲ್ಲಿ ಯಮನನ್ನು ಪ್ರಾರ್ಥಿಸಿಯಾದ ಮೇಲೆ ಪಿತೃಯಾನದ ಕಾವಲು ನಾಯಿಗಳಿಗೂ ಪೂಜೆ ಸಲ್ಲಿಸುವುದು ವಾಡಿಕೆ. **(ಸಿ.ಕೆ.ವೈ.ಡಿ;ಜಿ.ಎಚ್.)**

**ಗಯದ ವಾಸ್ತುಶಿಲ್ಪ:** ಗಯ ಪುರಾತನ ಹಿಂದೂ ಕ್ಷೇತ್ರಗಳಲ್ಲೊಂದಾದರೂ ಈಗ ಕಾಣುವ ಇಲ್ಲಿಯ ದೇವಾಲಯಗಳು ಮತ್ತು ಇತರ ಎಲ್ಲ ಪ್ರಾಚೀನ ಕಟ್ಟಡಗಳು ಪ್ರ.ಶ. 8ನೆಯ ಶತಮಾನದ ಅನಂತರ ಆಳಿದ ಪಾಲವಂಶದ ಅರಸರ ಮತ್ತು ಅವರ ಅನಂತರದವರ ಕಾಲಕ್ಕೆ ಸೇರಿದವುಗಳು. ಪ್ರಖ್ಯಾತವಾದ ಅಶ್ವತ್ಥ ವೃಕ್ಷ ಹಿಂದೂಗಳಿಗೂ ಬೌದ್ಧರಿಗೂ ಪವಿತ್ರವಾದ್ದು. ಈ ಬೋಧಿವೃಕ್ಷದ ಅಡಿಯಲ್ಲಿ ಧ್ಯಾನಾಸಕ್ತನಾಗಿದ್ದಾಗಲೇ ಗೌತಮ ಬುದ್ಧನಾದ್ದು. ಇಂದು ಇಲ್ಲಿ ಕಾಣುವ ಬೋಧಿವೃಕ್ಷ ಅಂದಿನದಲ್ಲ. ಅಶೋಕನ ಕಾಲದಲ್ಲಿ ಒಮ್ಮೆ ಒಣಗಿಹೋಗಿದ್ದ ಈ ವೃಕ್ಷವನ್ನು ತೆಗೆಸಿ ಅದೇ ಸ್ಥಳದಲ್ಲಿ ಅದರ

**ಪ್ರಾಚೀನ ವಜ್ರಾಸನ, ಗಂಧಕುಟಿ (ಬೋಧಗಯ)**

ಬೀಜಗಳನ್ನು ನೆಟ್ಟು ಹೊಸ ವೃಕ್ಷವನ್ನು ಬೆಳೆಸಲಾಯಿತು. ಪ್ರ.ಶ.ಸು. 7ನೆಯ ಶತಮಾನದಲ್ಲಿ ಪುನಃ ಶಶಾಂಕ ಇಲ್ಲಿ ಹೊಸದೊಂದು ಸಸಿಯನ್ನು ನೆಡೆಸಿದ. 1876ರಲ್ಲಿ ಈ ಮರ ಒಣಗಿ ಬಿದ್ದು ಹೋದಾಗ ಪುನಃ ಅದರ ಬೀಜಗಳಿಂದ ಹೊಸದೊಂದು ಮರವನ್ನು ಬೆಳೆಸಲಾಯಿತು. ಇಂದು ಕಾಣುವ ಮರ ಸುಮಾರು ಒಂದು ಶತಮಾನದಷ್ಟು ಹಿಂದಿನದು. 7ನೆಯ ಶತಮಾನದ ಅನಂತರ ಹಲವಾರು ಬಾರಿ ಈ ಮರ ಜೀವದಾನ ಪಡೆದಿರಬೇಕು.

ಮೌರ್ಯ ಅಶೋಕ ಈ ವೃಕ್ಷದ ಹಿಂದೆ ಏಕಶಿಲಾಸ್ತಂಭವೊಂದನ್ನು ನಿಲ್ಲಿಸಿ, ಮರದ ಸುತ್ತಲೂ ಚೌಕಾಕಾರದ ಕಟಾಂಜನವನ್ನು ಕಟ್ಟಿಸಿದ. ಯುವಾನ್‌ಚಾಂಗ್ ಕಂಡಾಗ ಈ ಬೋಧಿವೃಕ್ಷದ ಸುತ್ತಲೂ ಇಟ್ಟಿಗೆಯ ಗೋಡೆಯೊಂದಿತ್ತು. ಮುಖ್ಯದ್ವಾರ ಪೂರ್ವಾಭಿಮುಖ ವಾಗಿತ್ತೆಂದೂ ಉತ್ತರದ್ವಾರದ ಮೂಲಕ ಸಂಘಾರಾಮಕ್ಕೆ ಹೋಗಬಹುದಾಗಿತ್ತೆಂದೂ ಜಂಬೂದ್ವೀಪದ ಅನೇಕ ಅರಸರು ಕಟ್ಟಿಸಿದ ಸ್ತೂಪಗಳೂ ವಿಹಾರಗಳೂ ಇಲ್ಲಿದ್ದುವೆಂದೂ ಆ ಯಾತ್ರಿಕ ಹೇಳಿದ್ದಾನಾದರೂ, ಈಗ ಉಳಿದಿರುವುದೆಲ್ಲ ಕೆಲವು ಅವಶೇಷಗಳು ಮಾತ್ರ. ಅಶೋಕ ನಿಲ್ಲಿಸಿದನೆಂದು ಹೇಳಲಾದ ಶಿಲಾಸ್ತಂಭವನ್ನು ಬಾರ್‌ಹುತ್‌ದಲ್ಲಿಯ ಸ್ತೂಪಗಳಲ್ಲಿ ಕಂಡುಬರುವ ಚಿತ್ರಗಳಲ್ಲಿ ಕಾಣಿಸಿದೆ. ಕಂಬದ ಬೋದಿಗೆಯ ಮೇಲೆ ಆನೆಯೊಂದನ್ನು ಕೆತ್ತಲಾಗಿತ್ತು. ಈಗ ಕಾಣುವುದು ಅರ್ಧ ಮರಳುಗಲ್ಲಿನ, ಇನ್ನರ್ಧ ಬೆಣಚುಕಲ್ಲಿನ ಕಟಾಂಜನ. ಮರಳುಗಲ್ಲಿನ ಕಂಬಗಳಿಂದ ಕೂಡಿದ ಕಟಾಂಜನ ಅಶೋಕನ ಕಾಲದ್ದೆಂದು, ಬೆಣಚುಕಲ್ಲಿನದು ಅನಂತರದ ಕಾಲದ್ದೆಂದು ಹೇಳಲಾಗಿದೆ.

ಬೋಧಗಯಾದಲ್ಲಿ ಕನಿಂಗ್‌ಹ್ಯಾಂ ಕಂಡುಹಿಡಿದ ಇನ್ನೊಂದು ಅವಶೇಷ ಪ್ರಾಚೀನ ವಜ್ರಾಸನ ಗಂಧಕುಟಿ. ಈ ಆಸನದ ಮೇಲೆ ಮೂರು ಪದರಗಳಿದ್ದುವು. ಕೆಳಗಿನ ಪದರ ಹೊಳಪು ಮಾಡಿದ ಮರಳುಕಲ್ಲಿನದು. ಇದರ ಮೇಲೆ ಗಿಲಾಯಿ ಮಾಡಿದ್ದ ಮಣ್ಣನ್ನು ತೆಗೆದಾಗ, ಚಿನ್ನದ ನಾಣ್ಯಗಳು, ಕೆಲವು ಆಭರಣಗಳು, ಬೆಳ್ಳಿಯ ನಾಣ್ಯಗಳು, ಮುತ್ತುಗಳು ಇತ್ಯಾದಿ ಅವಶೇಷಗಳು ದೊರಕಿದ್ದುವು. ಬೋಧಿವೃಕ್ಷದ ಮುಂದಿದ್ದ ಈ ಸಿಂಹಾಸನದ ಮೇಲೆ ಕುಳಿತಾಗಲೇ ಬುದ್ಧನಿಗೆ ಜ್ಞಾನೋದಯವಾಯಿತೆಂದು ಬೌದ್ಧರ ಸಾಂಪ್ರದಾಯಿಕ ಕತೆಗಳು ತಿಳಿಸುತ್ತವೆ. ಇದೇ ಸ್ಥಳದಲ್ಲಿ ಈ ಸಿಂಹಾಸನವನ್ನು ಸೇರಿಸಿದಂತೆ ಒಂದು ಸಣ್ಣ ಕೋಣೆಯನ್ನು ಕಟ್ಟಿಸಿದ್ದರ ಗುರುತುಗಳಿವೆ. ಈ ಒಂದು ವಿಹಾರವನ್ನು ಅಶೋಕ ಕಟ್ಟಿಸಿದನೆಂದು ಯುವಾನ್‌ಚಾಂಗ್ ತಿಳಿಸುತ್ತಾನಾದರೂ, ಅನಂತರ ಪ್ರ.ಶ.ಪೂ. 1ನೆಯ ಶತಮಾನದಲ್ಲಿ ಕೌಶಿಕೀಪುತ್ರನ ಹಿರಿಯರಸಿಯಾದ ಕುರಂಗಿ ಕಟ್ಟಿಸಿದಳೆಂದು ಈಗ ಸಾಮಾನ್ಯವಾಗಿ ಒಪ್ಪಲಾಗಿದೆ.

ಇವೆಲ್ಲಕ್ಕಿಂತ ಪ್ರಖ್ಯಾತವಾದ ಬೋಧಗಯಾ ದೇವಾಲಯವನ್ನು ಆ ಚೀನೀ ಯಾತ್ರಿಕ ಮಹಾಬೋಧಿವಿಹಾರವೆಂದು ಕರೆದಿದ್ದಾನೆ. ಈಗಿರುವ ಕಟ್ಟಡ ಅನೇಕ ಬದಲಾವಣೆಗಳಿಗೆ ಒಳಗಾಗಿದೆ; ಅನೇಕ ಬಾರಿ ಜೀರ್ಣೋದ್ಧಾರಗೊಂಡಿದೆ. ಈಗಿನ ದೇವಾಲಯ ಚೌಕಾಕಾರದ ತಳಹದಿಯ ಮೇಲಿದೆ. ಪಕ್ಕದ ಗೋಡೆಗಳು ಇಳಿಜಾರಾಗಿ, ಮೇಲಕ್ಕೆ ಹೋಗುತ್ತ ಸೂಚ್ಯಗ್ರವಾಗಿದೆ. ಮೇಲೆ ಆಮಲಕವಿದೆ. ಮಹಾದ್ವಾರ ಇರುವುದು ಪೂರ್ವಕ್ಕೆ. ಗೋಪುರದ ಕೆಳಭಾಗದಲ್ಲಿ ನಾಲ್ಕು ದಿಕ್ಕುಗಳಲ್ಲಿ ಅದೇ ಆಕಾರದ ಸಣ್ಣ ಗೋಪುರಗಳಿವೆ. ಗೋಪುರಗಳಲ್ಲಿಯ ಮಾಡಗಳಲ್ಲಿ ಒಮ್ಮೆ ಬುದ್ಧನ ಮೂರ್ತಿಗಳಿದ್ದುವೆಂದು ಯುವಾನ್‌ಚಾಂಗ್‌ನಿಂದ ತಿಳಿಯುತ್ತದೆ. ಇದು ಇಟ್ಟಿಗೆಯಿಂದ ಕಟ್ಟಲಾದ ಕಟ್ಟಡ. ಈ ಆಲಯದ ಮುಖ್ಯಭಾಗ, ಗೋಪುರ ಇತ್ಯಾದಿಗಳು ಪ್ರ.ಶ. 7ನೆಯ ಶತಮಾನದಷ್ಟು ಪ್ರಾಚೀನವೆಂದು ಹೇಳಲಾಗಿದೆ. ಸಿಂಹಳದ ಶ್ರಮಣ ಪ್ರಖ್ಯಾತಕೀರ್ತಿ, ಪಾಗನ್ ಅರಸನಾದ ಕಯಾನ್‌ಜಿತ್ಥ, 12ನೆಯ ಶತಮಾನದಲ್ಲಿ ಆಳಿದ ಅರಕಾನಿನ ಲೆತ್ಯಮಿನ್ನ, ಪೆಗುವಿನ ಧರ್ಮಜೆದಿ ಮುಂತಾದ ವಿದೇಶೀ ಅರಸರು ಸಹ ಈ ದೇವಾಲಯದ ಜೀರ್ಣೋದ್ಧಾರ ಮಾಡಿಸಿದರೆಂದು ಅವರ ಶಾಸನಗಳಿಂದ ತಿಳಿದಿದೆ.

ವಿಷ್ಣುಪಾದ ದೇವಾಲಯದಲ್ಲಿ ಆದಿ ಗದಾಧರನೆಂದು ಹೇಳಲಾದ ಪಾದಗಳ ಗುರುತಿದೆ. ಆದರೆ ಫಾಹಿಯಾನ್ ಇಲ್ಲಿಗೆ ಬಂದಾಗ ಕಂಡದ್ದು ಹಾಳುಬಿದ್ದ ನಗರವನ್ನು ಮಾತ್ರ. ಇದೇ ಪರಿಸ್ಥಿತಿ ಯುವಾನ್‌ಚಾಂಗ್‌ನ ಕಾಲದಲ್ಲೂ ಮುಂದುವರಿದಿತ್ತು. ಹನ್ನೊಂದನೆಯ ಶತಮಾನದಲ್ಲಿ ಆಳಿದ ನಯಪಾಲದೇವ ಮತ್ತು ಅವನ ಅನಂತರದ ಅರಸರ ಕಾಲದಲ್ಲಿ ಈ ಸ್ಥಳದ ಜೀರ್ಣೋದ್ಧಾರ ಕಾರ್ಯಗಳು ಆರಂಭವಾದುವು. ತದನಂತರವೇ ಗಯ ಹಿಂದೂಗಳ ಪವಿತ್ರ ಕ್ಷೇತ್ರಗಳಲ್ಲೊಂದು ಎಂಬ ಖ್ಯಾತಿ ಪಡೆದದ್ದು. ಗಯ ಮಾಹಾತ್ಮ್ಯ 13–14ನೆಯ ಶತಮಾನಕ್ಕೂ ಹಿಂದಿನದಲ್ಲವೆಂದೂ, ಅದರಲ್ಲಿ ಕಂಡುಬರುವ ವಿವರಗಳೆಲ್ಲ ಪಾಲ ಅರಸರು ಕೈಗೊಂಡ ಕಾರ್ಯಗಳ ಫಲವೆಂದೂ ಹೇಳಬಹುದು. ಅಲ್ಲಿ ಹಿರಿಯರಿಗೆ ಶ್ರಾದ್ಧ ಕರ್ಮಾದಿಗಳನ್ನು ನೆರವೇರಿಸಿದರೆ ಅವರಿಗೆ ಮುಕ್ತಿ ಲಭಿಸುತ್ತದೆ ಎಂಬ ಹಿಂದೂಗಳ ನಂಬಿಕೆಯಿಂದಾಗಿ ಮಾತ್ರ, ಅಂಥ ಕರ್ಮಗಳನ್ನು ನಡೆಸಬಹುದಾದ ಪುಣ್ಯಕ್ಷೇತ್ರವೆಂದು ಮಾತ್ರ, ಗಯ ಇದಕ್ಕೆ ಮೊದಲೂ ಪ್ರಸಿದ್ಧವಾಗಿತ್ತು.

**ಗಯದಲ್ಲಿರುವ, ದಕ್ಷಿಣ ಭಾರತದ ಅರಸರ ಶಾಸನಗಳು:** ಗಯೆಯಲ್ಲಿ ದೊರಕಿರುವ ಶಾಸನಗಳು ಬಹುತೇಕ ಆ ಪ್ರಾಂತ್ಯದ ಅರಸು ಮನೆತನಗಳಿಗೆ ಸೇರಿದವಾದರೂ ಅಲ್ಲಿಯ ವಿಷ್ಣುಪಾದ ದೇವಾಲಯದಲ್ಲಿ ದಕ್ಷಿಣಾಪಥದ ಅರಸರ ಕೆಲವು ಶಾಸನಗಳು ದೊರೆತಿವೆ. ಆ ದೇವಾಲಯದ ಮುಂದಿರುವ ಶಿವ ಗುಡಿಯ ಬಲಭಾಗದ ಗೋಡೆಗೆ ಸೇರಿಸಿ ಕಟ್ಟಲಾದ ಕರಿಯ ಕಲ್ಲಿನಲ್ಲಿ ರಾಜನಾದ ಪ್ರತಾಪರುದ್ರನ, 31 ಸಾಲುಗಳುಳ್ಳ ಸಂಸ್ಕೃತ ಶಾಸನ ಒಂದಿದೆ. ಇದನ್ನು ನಂದಿ ನಾಗರೀ ಲಿಪಿಯಲ್ಲಿ ಕೆತ್ತಲಾಗಿದೆ. ಈತನ ಗುರುವಾದ ತ್ರಿಭುವನ ವಿದ್ಯಾಚಕ್ರವರ್ತಿ ಬಿರುದಾಂಕಿತನಾದ ಮಲ್ಲಿಕಾರ್ಜುನ, ವಿಂಧ್ಯಾದ್ರಿಗೆ ದಕ್ಷಿಣದಲ್ಲಿ, ಗೌತಮೀ ಗೋದಾವರೀ ತೀರದ ಮಂತ್ರಕೂಟದಲ್ಲಿ (ಈಗಿನ ಆಂಧ್ರಪ್ರದೇಶದ ಕರೀಂ ನಗರ ಜಿಲ್ಲೆಯ ಮಂಥನಿ) ಅನೇಕ ರಮ್ಯ ಕಟ್ಟಡಗಳನ್ನು ಕಟ್ಟಿಸಿದ್ದ. ಈತ ಪರಮ ಶಿವಭಕ್ತ. ಆದರೆ ಈತನ ಪತ್ನಿಯಾದ ಕಂದಮ್ಮಟಿ ಮನೆತನಕ್ಕೆ ಸೇರಿದ ಗೌರಿ ಗೋಪೀನಾಥದೇವರ (ವಿಷ್ಣುವಿನ) ಭಕ್ತೆ. ಶಾಸನ ಕಾಲಕ್ಕೆ ಗಯದ ಮಣಿಕರ್ಣಿಕಾ ಘಟ್ಟದಲ್ಲಿ ನೆಲಸಿದ್ದ ಈಕೆ ಗಯಶ್ರಾದ್ಧವನ್ನು ಮಾಡಿಸಿದಳೆಂದು ಶಾಸನ ಹೇಳುತ್ತದೆ. ಈ ಶಾಸನದಲ್ಲಿ ಉಕ್ತನಾದ ಅರಸ ಕಾಕತೀಯ ವಂಶದ ಒಂದನೆಯ ಪ್ರತಾಪರುದ್ರನೆಂದೂ ಆತನ ಗುರುವಾದ ಮಲ್ಲಿಕಾರ್ಜುನನೇ ಸುಪ್ರಸಿದ್ಧ ಶೈವ ಗುರುವಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನೆಂದೂ ಊಹಿಸಲಾಗಿದೆ. ಶಾಸನದ ಕಾಲಕ್ಕೆ ಆ ಗುರು ದೈವಾಧೀನನಾಗಿ, ಆತನ ಆತ್ಮಶಾಂತಿಗಾಗಿ ಗಯಶ್ರಾದ್ಧವನ್ನು ಅವನ ಧರ್ಮಪತ್ನಿ ಮಾಡಿಸಿದ್ದಿರಬೇಕು. 1163–1195ರ ವರೆಗೆ ಆಳಿದ ಪ್ರತಾಪರುದ್ರ ಇನ್ನೂ ಜೀವಿಸಿದ್ದಾಗಲೇ ಈತನ ಗುರು ಮರಣ ಹೊಂದಿದನೆಂಬುದು ಇದರಿಂದ ಖಚಿತವಾಗುತ್ತದೆ.

ಇದೇ ದೇವಾಲಯದ ಪ್ರಾಂಗಣದಲ್ಲಿರುವ ಮಹದೇವಗುಡಿಯ ಬಾಗಿಲುವಾಡದಲ್ಲಿ ಹೊಯ್ಸಳ ವಂಶದ ಮುಮ್ಮಡಿ ನರಸಿಂಹನ ಶಾಸನವೊಂದಿದೆ. ಇದೂ ನಂದಿ ನಾಗರೀಲಿಪಿಯಲ್ಲಿದೆಯಾದರೂ ಇದರ ಭಾಷೆ ಕನ್ನಡ. ತನ್ನ ರಾಜಧಾನಿಯಾದ ದೋರಸಮುದ್ರದಲ್ಲಿ ಈ ಅರಸ ಬಹುಶಃ ಕಟ್ಟಿಸಿದ್ದ ದೇಹಾರದ (ದೇಗುಲದ) ಗಯವ್ರಜನ ಮಠವನ್ನು ಆಚಾರ್ಯನಾದ ಪದ್ಮನಾಭ ಚಟ್ಟೋಪಾಧ್ಯಾಯರ ಮಗ ಅಪ್ಪಣ್ಣನು ಗಯೆಯಲ್ಲಿ ಮಾಡಿಸಿ ದೇವಋಣಗಳನ್ನು ಕಳೆದನೆಂದು ಶಾಸನ ಹೇಳಿದೆ. ಆತ ಆ ಸ್ಥಳದಲ್ಲಿ ಧರ್ಮಶಾಲೆಯೊಂದನ್ನು ಕಟ್ಟಿಸಿರಬಹುದೆಂದು ಇದರಿಂದ ಸೂಚಿತವಾಗುತ್ತದೆ. ಶಾಸನದ ಕಾಲ ಪ್ರ.ಶ. 1291ರ ಸೆಪ್ಟೆಂಬರ್ 24 ಆಗಿರಬಹುದು. ಈ ಶಾಸನದ ಕೆಳಗಡೆ ಕನ್ನಡ ಲಿಪಿಯ ಇನ್ನೊಂದು ಶಾಸನವಿದೆ. ಇದರ ಕಡೆಯ ಭಾಗ ಒಡೆದಿದೆ. ವೀರನರಸಿಂಹ ದೇವರಸರ ಕಮ್ಮಟದ (ನಾಣ್ಯಗಳನ್ನು ಅಚ್ಚು ಹಾಕುವ ಟಂಕಸಾಲೆಯ) ಜಕ್ಕಂಣನ ಮಗ ದೇವಂಣ ಇದೇ ವರ್ಷದ ಸೆಪ್ಟೆಂಬರ್ 24ರಂದು ಗಯ ಪ್ರವೇಶ ಮಾಡಿದನೆಂದು ಶಾಸನ ಹೇಳುತ್ತದೆ. ಈ ಎರಡೂ ಶಾಸನಗಳನ್ನು ಕೊರೆದವನು ದೇವರಸನೆಂದು ತೋರುತ್ತದೆ.

ಗದಾಧರ ಗುಡಿಯ ಮುಂದೆ ಗದಾಧರ ಘಾಟಿನ ಬಲಗೋಡೆಗೆ ಸೇರಿಸಲಾದ ಕಲ್ಲೊಂದರಲ್ಲಿ ವಿಜಯನಗರದ ಕೃಷ್ಣದೇವರಾಯನ 1521ರ ಶಾಸನವಿದೆ. ತೆಲುಗುಲಿಪಿ ಹಾಗೂ ಭಾಷೆಯ ಈ ಶಾಸನದಲ್ಲಿ ತೆಲುಗಿನ ಸುಪ್ರಸಿದ್ಧ ಸಮಕಾಲೀನ ಕವಿಯಾದ ಮುಕ್ಕುತಿಮ್ಮಯನ (ತಿಮ್ಮಣ) ಪಾರಿಜಾತಾಪಹರಣದಿಂದ ಆರಿಸಲಾದ ಪದ್ಯವೊಂದಿದೆ. ಶಾಸನವನ್ನು ವಿಜಯ ಶಾಸನವೆಂದು ಕರೆದಿರುವುದರಿಂದ ಕೃಷ್ಣದೇವರಾಯ ತನ್ನ ಉತ್ತರ ದಿಗ್ವಿಜಯದ ಸಂದರ್ಭದಲ್ಲಿ ಗಯೆಯವರೆಗೂ ಬಂದು ಈ ಪ್ರದೇಶವನ್ನು ಸ್ವಲ್ಪಕಾಲದ ಮಟ್ಟಿಗಾದರೂ ಆಕ್ರಮಿಸಿದ್ದನೆಂದು ಒಂದಿಬ್ಬರು ವಿದ್ವಾಂಸರು ಊಹಿಸಿದ್ದಾರಾದರೂ ಇದು ಒಂದು ಧರ್ಮಶಾಸನವೇ ಹೊರತು ವಿಜಯಶಾಸನವಲ್ಲ. ಈ ಶಾಸನದ ಕರ್ತೃ ಸಹ ಮುಕ್ಕುತಿಮ್ಮಯನೇ. ಇವನ ಹೆಸರು ಬೇರೆ ಯಾವ ಶಾಸನಗಳಲ್ಲೂ ಉಲ್ಲೇಖವಾದಂತೆ ಇದುವರೆಗೂ ಕಂಡುಬಂದಿಲ್ಲ. ಅಂತೆಯೇ ಇವನ ಕಾವ್ಯದಿಂದ ಉದ್ಧರಿಸಲಾದ

ತಿರುಮಲದೇವೀವಲ್ಲಭ<br>
ಕರುಣಾಮಯಹೃದಯ ರಾಜಕಂಠೀರವ ಈ<br>
ಶ್ವರನರಸ ಭೂಪುರಂದರ<br>
ವರನಂದನ ಬಾಸದಪ್ಪುವರ ಗಂಡ್ಡಾಂಕಾ

ಎಂಬ ಕಂದವೃತ್ತದ ಪದ್ಯ ಸಹ. ತಿಮ್ಮಣನ ಪಾರಿಜಾತಾಪಹರಣ 1521ಕ್ಕೂ ಮೊದಲೇ ರಚಿತವಾಗಿತ್ತೆಂಬ ಅಂಶ ಈ ಶಾಸನದಿಂದ ತಿಳಿದುಬರುತ್ತದೆ. ಕವಿ ತನ್ನ ಆಶ್ರಯದಾತನ ಪ್ರತಿನಿಧಿಯಾಗಿ ಗಯೆಗೆ ಬಂದು, ಆ ಸಂದರ್ಭದಲ್ಲಿ ಈ ಶಾಸನವನ್ನು ಕೆತ್ತಿಸಿದನೆಂದು ಊಹಿಸಲಾಗಿದೆ.

ಮಹಾದೇವ ಗುಡಿಯಲ್ಲಿರುವ ಇನ್ನೊಂದು ಶಾಸನ ವಿಜಯನಗರದ ಅರಸನಾದ ಅಚ್ಯುತರಾಯನದು. 1531ರ ಈ ತೆಲುಗು ಶಾಸನದಲ್ಲಿ ತಿಮ್ಮಣ್ಣನೆಂಬವನು ವಿಜಯನಗರ ಸಿಂಹಾಸನ ಕರ್ತರನ್ನು ಗಯಮುಕ್ತರನ್ನಾಗಿ ಮಾಡಿದನೆಂದು ಹೇಳಿದೆ. ಇದರಲ್ಲಿ ಅಚ್ಯುತರಾಯನವಂಶಾವಳಿ ಅವನ ಮುತ್ತಜ್ಜನಿಂದ ಆರಂಭವಾಗಿದೆ. ತಿಮ್ಮಯ, ಈಶ್ವರ ಮತ್ತು ನಾರಸಿಂಹರನ್ನು ಹೆಸರಿಸಿ ಅನಂತರ ಇದು ಮಂಡಲೇಶ್ವರ ಶ್ರೀವೀರ ಅಚ್ಯುತರಾಯ ಮಹಾರಾಯರ ಧರ್ಮಶಾಸನವೆಂದು ಹೇಳಿದೆ. (ಜಿ.ಬಿ.ಆರ್.)

**ಗಯಾನ :** ದಕ್ಷಿಣ ಅಮೆರಿಕದ ಒಂದು ಗಣರಾಜ್ಯ. ಉತ್ತರದಲ್ಲಿ ಅಟ್ಲಾಂಟಿಕ್ ಸಾಗರ, ಪೂರ್ವದಲ್ಲಿ ಸುರಿನಾಂ, ದಕ್ಷಿಣ ನೈರುತ್ಯಗಳಲ್ಲಿ ಬ್ರೆಜಿಲ್, ಪಶ್ಚಿಮದಲ್ಲಿ ವೆನಿಜ್ಯುವೇಲ – ಇವು ಇದರ ಮೇರೆಗಳು. ವಿಸ್ತೀರ್ಣ 214, 969 ಚ.ಕಿಮೀ. ಜನಸಂಖ್ಯೆ 7,62,000 (20 ಸು.). ರಾಜಧಾನಿ ಜಾರ್ಜ್‌ಟೌನ್.

**ಭೌತಲಕ್ಷಣ, ವಾಯುಗುಣ, ಜನಜೀವನ** : 432 ಕಿಮೀ ಉದ್ದದ ಕಡಲ ಕರೆ ಇರುವ ಈ ದೇಶದ ಕರಾವಳಿ ತಗ್ಗಿನ ಮೈದಾನ. ದಕ್ಷಿಣ ಭಾಗ ಪ್ರಸ್ಥಭೂಮಿ ಪರ್ವತಗಳಿಂದ ಕೂಡಿದೆ. ಕರಾವಳಿಯ ಮೈದಾನದ ವಿಸ್ತೀರ್ಣ 6,250 ಚಮೈ. ಇದರಲ್ಲಿ ಸು. 700ಕಿಮೀ ಪ್ರದೇಶ ಸಾಗುವಳಿಗೆ ಒಳಪಟ್ಟಿದೆ. ಜನಸಂಖ್ಯೆಯ ಬಹುಭಾಗ ವಾಸಿಸುವುದು ಕರಾವಳಿಯ ಮೈದಾನದಲ್ಲಿ. ದೇಶದ ಶೇ. 85 ಭಾಗ ಕಾಡಿನಿಂದ ಆವೃತವಾಗಿದೆ. ಪೂರ್ವ ಆಗ್ನೇಯಗಳ ಕಾಡು ಈಗಲೂ ಬಹಳ ಮಟ್ಟಿಗೆ ನಿರ್ಜನವಾಗಿದೆ, ಜನಕ್ಕೆ ಅಪರಿಚಿತವಾಗಿದೆ. ಕರಾವಳಿಯ ಪ್ರದೇಶದ ವಾಯುಗುಣ ಉಳಿದ ಭಾಗದ್ದಕ್ಕಿಂತ ಹಿತಕರ. ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಹೆಚ್ಚು ಮಳೆ. ಸೆಪ್ಟೆಂಬರ್–ನವೆಂಬರ್‌ಗಳಲ್ಲಿ ಒಣ ಹವೆ. ಒಳನಾಡಿನಲ್ಲಿ ಫೆಬ್ರುವರಿಯ ವರೆಗೂ ಒಣಹವೆ ಇರುತ್ತದೆ. ಸರಾಸರಿ ಉಷ್ಣತೆ 80° ಫ್ಯಾ.

ಗಯಾನದ ಆರ್ಥಿಕತೆ ಕೃಷಿಪ್ರಧಾನವಾದ್ದು, ಕಬ್ಬು, ಬತ್ತ ಮುಖ್ಯ ಬೆಳೆಗಳು. ಬಾಳೆ ಮುಖ್ಯ ನಿರ್ಯಾತ ಬೆಳೆ. ತೆಂಗೂ ಬೆಳೆಯುತ್ತದೆ. ಕಿತ್ತಳೆ ಜಾತಿಯ ಗಿಡಗಳ ವ್ಯವಸಾಯ ಅಧಿಕವಾಗುತ್ತಿದೆ. ಅರಣ್ಯೋತ್ಪನ್ನ ಮುಖ್ಯ ವರಮಾನ ಮೂಲವಾದರೂ ಸಾರಿಗೆ ಸೌಲಭ್ಯಕ್ಕೆ ಪರಿಮಿತವಾಗಿದೆ. ಬಾಕ್ಸೈಟ್, ಚಿನ್ನ, ವಜ್ರ, ತಾಮ್ರ, ಮಾಲಿಬ್ಡಿನಂ–ಇವು ಮುಖ್ಯ ಖನಿಜ ನಿಕ್ಷೇಪಗಳು. 1966ರಲ್ಲಿ ಏಳು ವರ್ಷಗಳ ಅಭಿವೃದ್ಧಿ ಯೋಜನೆಯೊಂದು ಜಾರಿಗೆ ಬಂತು. ಇದರ ವೆಚ್ಚ 30 ಕೋಟಿ ಡಾಲರ್. ಶೇ. 5–6 ವಾರ್ಷಿಕದರದಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸಬೇಕೆಂಬುದು ಈ ಯೋಜನೆಯ ಉದ್ದೇಶ. ಜಲವಿದ್ಯುತ್ ಕಾಮಗಾರಿಗಳ ಬಗ್ಗೆ ಸಂಶೋಧನೆ ನಡೆಸಲಾಗಿದೆ. ಸಕ್ಕರೆ, ಅಕ್ಕಿ, ಬಾಕ್ಸೈಟ್ ನಿರ್ಯಾತವನ್ನೇ ದೇಶ ಅವಲಂಬಿಸಬೇಕಾಗಿ ಬಂದಿರುವ ಪರಿಸ್ಥಿತಿಯನ್ನು ತಪ್ಪಿಸಲು ಅಲ್ಯೂಮಿನಿಯಂ ಮುಂತಾದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ತೀರ ಪ್ರದೇಶದಲ್ಲಿ ರಸ್ತೆ ವ್ಯವಸ್ಥೆ ಅಭಿವೃದ್ಧಿಹೊಂದಿದೆ. ಒಟ್ಟು 128 ಕಿಮೀ ದೂರದ ಎರಡು ರೈಲುಮಾರ್ಗಗಳಿವೆ. ಇವು ಸರ್ಕಾರಿ ಒಡೆತನದಲ್ಲಿವೆ. ದಮ್ಮಸು ಮಾಡಿದ ರಸ್ತೆಯ ಉದ್ದ 383 ಕಿಮೀ ಒಟ್ಟು 1760 ಕಿಮೀ ರಸ್ತೆಗಳುಂಟು. ಜಾರ್ಜ್ ಟೌನ್‌ನಿಂದ ಬಾಕ್ಸೈಟ್ ಗಣಿಕೇಂದ್ರವಾದ ಮಕೆನ್‌ಜ಼ಿಗೆ 1968ರಲ್ಲಿ ಬಿಟ್ಯೂಮಿನಸ್ ರಸ್ತೆ ನಿರ್ಮಿಸಲಾಯಿತು. ಒಳನಾಡಿನಲ್ಲಿ ನದಿಗಳೇ ಈಗಲೂ ಮುಖ್ಯ ಸಂಪರ್ಕ ಸಾಧನಗಳು. ಮ್ಯಾಜ಼ರೂನಿ, ಕೂಯೂನಿ, ಎಸೆಕ್ವೀಬೋ, ಡೆಮೆರೇರ, ಬರ್ಬೀಸ್–ಇವು ಈ ದೃಷ್ಟಿಯಿಂದ ಉಪಯುಕ್ತವಾದ ನದಿಗಳು. ಒಳನಾಡಿನ ಮುಖ್ಯ ವಸತಿಗಳಲ್ಲಿ ವಿಮಾನ ಇಳಿದಾಣಗಳುಂಟು. ಆಟ್ಕಿನ್ಸನ್ ಫೀಲ್ಡ್‌ನಲ್ಲಿ 1968ರಲ್ಲಿ ವಿಮಾನ ನಿಲ್ದಾಣವೊಂದು ನಿರ್ಮಿತವಾಯಿತು.




ಜಾರ್ಜ್‌ಟೌನ್ ರಾಜಧಾನಿ. ಮಕೆನ್‌ಜ಼ಿ, ನ್ಯೂ ಆಮ್ಸ್ಟರ್ಡಾಂ ಇತರ ಪಟ್ಟಣಗಳು. ದೇಶದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಮಂದಿ ಈಸ್ಟ್ ಇಂಡಿಯನರು. ಅನಂತರ ಬರುವವರು ಆಫ್ರಿಕನರು. ಮಿಶ್ರಬುಡಕಟ್ಟಿನವರೂ ಪೋರ್ಚುಗೀಸರೂ ಚೀನೀಯರೂ ಐರೋಪ್ಯರೂ ಅಮೆರಿಂಡಿಯನರೂ ಇದ್ದಾರೆ. ಕ್ರೈಸ್ತ, ಹಿಂದೂ, ಇಸ್ಲಾಂ ಮುಖ್ಯ ಧರ್ಮಗಳು.

5ರಿಂದ 16ನೆಯ ವಯಸ್ಸಿನವರೆಗೆ ಶಿಕ್ಷಣ ಉಚಿತ; 6ರಿಂದ 14ನೆಯ ವಯಸ್ಸಿನ ವರೆಗೆ ಕಡ್ಡಾಯ, ಶೇ. 80–85ರಷ್ಟು ಜನ ಅಕ್ಷರಸ್ಥರು. ಜಾರ್ಜ್‌ಟೌನಿನಲ್ಲಿ ಗಯಾನ ವಿಶ್ವವಿದ್ಯಾಲಯವಿದೆ. ದೇಶದ ನಾಣ್ಯ ಗಯಾನನ್ ಡಾಲರ್, ಕ್ರಿಕೆಟ್ ಆಟ ಅತ್ಯಂತ ಜನಪ್ರಿಯ. ಹಾಕಿ, ಬ್ಯಾಸ್ಕೆಟ್‌ಬಾಲ್, ಟೇಬಲ್ ಟೆನಿಸ್, ಲಾನ್ ಟೆನಿಸ್, ಫುಟ್‌ಬಾಲ್ ಇತರ ಕ್ರೀಡೆಗಳು.

**ಆಡಳಿತ**: 1970ರ ಫೆಬ್ರುವರಿಯಿಂದ ಗಯಾನ ಗಣರಾಜ್ಯವಾಗಿದೆ. ಅಧ್ಯಕ್ಷನಿಂದ ನೇಮಕವಾದ ಮಂತ್ರಿ ಸಂಪುಟಕ್ಕೆ ಪ್ರಧಾನ ಮಂತ್ರಿಯೇ ಮುಖ್ಯ. ಇದು ದ್ವಿಸದನ ಸಂಸತ್ತಿನ ಜವಾಬ್ದಾರಿ ಹೊಂದಿದೆ. ರಾಷ್ಟ್ರೀಯ ಸಭೆಯ ಸದಸ್ಯ ಸಂಖ್ಯೆ 53. ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. ಆಡಳಿತಸೌಲಭ್ಯಕ್ಕಾಗಿ ದೇಶವನ್ನು ಒಂಬತ್ತು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಇಂಗ್ಲಿಷ್ ಅಧಿಕೃತ ಭಾಷೆ. ಇಂಡಿಯನ್ ಭಾಷೆಗಳೂ ಜಾರಿಯಲ್ಲಿವೆ.

*

**ಇತಿಹಾಸ** : ಗಯಾನ ಮೊದಲು ಬ್ರಿಟಿಷ್ ಗಯಾನವಾಗಿತ್ತು. 18ನೆಯ ಶತಮಾನದ ಆದಿಯಲ್ಲಿ ಈ ಪ್ರದೇಶದಲ್ಲಿ ಬ್ರಿಟಿಷರ ವಶದಲ್ಲಿದ್ದ ವಸಾಹತುಗಳಾದ ಬರ್ಬೀಸ್, ಎಸೆಕ್ವಿಬೋ, ಡೆಮೆರೇರ–ಈ ಮೂರನ್ನೂ ಅವರು 1831ರಲ್ಲಿ ಸೇರಿಸಿ ಬ್ರಿಟಿಷ್ ಗಯಾನವನ್ನು ರಚಿಸಿದರು.

ಬ್ರಿಟಿಷ್ ಗಯಾನ ಉದಯವಾದ ಕಾಲದಿಂದಲೂ ಅಲ್ಲಿಯ ಆರ್ಥಿಕಾಭಿವೃದ್ಧಿಗೆ ಪರದೇಶದಿಂದ ಬಂದ ವಿವಿಧ ಜನಾಂಗಗಳವರು ದುಡಿದರು. ಮೊದಲಲ್ಲಿ ಗುಲಾಮರನ್ನು ಆಫ್ರಿಕದಿಂದ ತರಲಾಯಿತು. ಈ ನೀಗ್ರೋ ಗುಲಾಮರು ಬ್ರಿಟಿಷರಿಗೆ ಸೇರಿದ್ದ ಕಬ್ಬಿನ ತೋಟಗಳಲ್ಲಿ ದುಡಿಯಬೇಕಾಗಿತ್ತು. 1807ರಲ್ಲಿ ಬ್ರಿಟಿಷ್ ಸರ್ಕಾರ ಗುಲಾಮರ ವ್ಯಾಪಾರವನ್ನು ರದ್ದುಗೊಳಿಸಿತು. ಆ ವರ್ಷ ಬ್ರಿಟಿಷ್ ಗಯಾನದಲ್ಲಿ ಸುಮಾರು 10,000 ಗುಲಾಮರಿದ್ದರು. ಗುಲಾಮವ್ಯಾಪಾರ ನಿಂತರೂ ಗುಲಾಮಗಿರಿ ಹೋಗಲಿಲ್ಲ. ಕಡೆಗೆ 1839ರಲ್ಲಿ ಗುಲಾಮಗಿರಿಯೂ ಕೊನೆಗೊಂಡಿತು. 1900ರ ಹೊತ್ತಿಗೆ ಚಿನ್ನದ ಮತ್ತು ವಜ್ರದ ಗಣಿಗಳು ತಲೆಯೆತ್ತಿಕೊಂಡು ಆರ್ಥಿಕಾಭಿವೃದ್ಧಿಯಾಗಲು ಸಹಾಯಕವಾದವು.

1928ರವರೆಗೆ ವಸಾಹತುವಿನ ಒಳಾಡಳಿತದಲ್ಲಿ ಅಲ್ಲಿಯ ಜನರಿಗೆ ಬ್ರಿಟಿಷರು ಯಾವ ರೀತಿಯ ಸ್ವಾತಂತ್ರ್ಯವನ್ನಾಗಲಿ ಸೌಲಭ್ಯವನ್ನಾಗಲಿ ಕೊಟ್ಟಿರಲಿಲ್ಲ. 1928ರಲ್ಲಿ ಪರಿಮಿತ ಪ್ರತಿನಿಧಿ ಸರ್ಕಾರವೊಂದನ್ನು ಬ್ರಿಟಿಷರು ಸ್ಥಾಪಿಸಿದರು. 1943ರಲ್ಲಿ ಮತ್ತು 1945ರಲ್ಲಿ ಮತ್ತಷ್ಟು ಸುಧಾರಣೆಗಳನ್ನು ಜಾರಿಗೆ ತರಲಾಯಿತು.

1953–57ರ ಅವಧಿಯಲ್ಲಿ ಬ್ರಿಟಿಷರು ಇನ್ನೂ ಮುಂದೆ ಹೋಗಿ ಅಲ್ಲಿಯ ಜನರಿಗೆ ಒಂದು ಸಂವಿಧಾನವನ್ನು ನೀಡಿದರು. ಇದರ ಪ್ರಕಾರ, ದ್ವಿಸದನ ವಿಧಾನ ಮಂಡಲವನ್ನು ರಚಿಸಲಾಯಿತು. ಅಲ್ಲದೆ ದೇಶದ ಮಂತ್ರಿಗಳು ಶಾಸಕಾಂಗಕ್ಕೆ ಅಧೀನರಾಗಿ, ಅದಕ್ಕೆ ಜವಾಬ್ದಾರಿಯುಳ್ಳವರಾಗಿರಬೇಕೆಂಬ ನಿಯಮವನ್ನು ಜಾರಿಗೆ ತರಲಾಯಿತು. ಸಾರ್ವತ್ರಿಕ ಚುನಾವಣೆಯಲ್ಲಿ ವಯಸ್ಕರ ಮತದಾನಪದ್ಧತಿಯನ್ನು ಬ್ರಿಟಿಷರು ಜಾರಿಗೆ ತಂದರು. ಶಾಸಕಾಂಗಕ್ಕೆ ಹೊಸ ಸಂವಿಧಾನದ ಪ್ರಕಾರ ಚುನಾವಣೆಗಳು ನಡೆದವು. ಚೆಡ್ಡಿ ಜಗನ್ ನಾಯಕತ್ವದಲ್ಲಿ ಪೀಪಲ್ಸ್ ಪ್ರೋಗ್ರೆಸಿವ್ ಪಾರ್ಟಿ ಬಹುಮತ ಪಡೆದು ಸರ್ಕಾರ ರಚಿಸಿತು. ಕಮ್ಯೂನಿಸ್ಟರು ಬ್ರಿಟಿಷ್ ಗಯಾನದ ಸರ್ಕಾರವನ್ನು ಉರುಳಿಸಲು ಒಳಸಂಚನ್ನು ನಡೆಸುತ್ತಿರುವರೆಂಬ ನೆಪದ ಮೇಲೆ 6 ತಿಂಗಳುಗಳಲ್ಲೇ ಬ್ರಿಟಿಷರು ಸಂವಿಧಾನವನ್ನು ತಡೆಹಿಡಿಯಲು ಆಜ್ಞಾಪಿಸಿದರು. ಮಧ್ಯಂತರ ಸರ್ಕಾರವೊಂದನ್ನು ರಚಿಸಲಾಯಿತು.

1960ರಲ್ಲಿ ಬ್ರಿಟಿಷ್ ಗಯಾನದ ಜನತೆಯ ಸ್ವಾತಂತ್ರ್ಯದಾಹ ಅಧಿಕವಾಯಿತು. ಆ ವರ್ಷ ಸೇರಿದ ಸಂವಿಧಾನದ ಸಮ್ಮೇಳನದಲ್ಲಿ ಸ್ವಾತಂತ್ರ್ಯಕ್ಕೆ ತಾತ್ತ್ವಿಕವಾಗಿ ಸಮ್ಮತಿ ದೊರಕಿತು. ಸ್ವಾತಂತ್ರ್ಯಗಳಿಸಿದ ಮೇಲೆ ಗಯಾನ ಬ್ರಿಟಿಷ್ ಕಾಮನ್‌ವೆಲ್ತಿನಲ್ಲೇ ಅಧಿರಾಜ್ಯವಾಗಿ ಮುಂದುವರಿಯತಕ್ಕದ್ದೆಂಬುದು ಇದರ ತೀರ್ಮಾನ. ಮರುವರ್ಷವೇ, ಅಂದರೆ 1961ರಲ್ಲಿ, ಗಯಾನ ಒಳಾಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಪಡೆಯಿತು. ಹೊಸ ಸಂವಿಧಾನ ಜಾರಿಗೆ ಬಂದು, ಚುನಾವಣೆಗಳು ನಡೆದವು. ಚೆಡ್ಡಿ ಜಗನ್ ಗಯಾನದ ಪ್ರಧಾನಮಂತ್ರಿಯಾದರು.

1962–64ರ ನಡುವೆ ಪೀಪಲ್ಸ್ ಪ್ರೋಗ್ರೆಸಿವ್ ಪಕ್ಷಕ್ಕೂ, ನೀಗ್ರೊಗಳಿಂದ ಬೆಂಬಲಪಡೆದ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ ಪಕ್ಷಕ್ಕೂ ಸ್ಪರ್ಧೆ ಏರ್ಪಟ್ಟಿತು. ಇದು ಹಿಂಸಾತ್ಮಕ ಚಳವಳಿಯಲ್ಲಿ ಮುಕ್ತಾಯಗೊಂಡಾಗ, ಗಯಾನದ ಎಲ್ಲ ಪಕ್ಷಗಳೂ ಸೇರಿಕೊಂಡು, ಎಲ್ಲರಿಗೂ ಒಪ್ಪಿಗೆಯಾಗುವಂತೆ, ಸಂಯುಕ್ತರಂಗವೊಂದನ್ನು ಸ್ಥಾಪಿಸಿ, ಮಂತ್ರಿಮಂಡಲವನ್ನು ಅಸ್ತಿತ್ವಕ್ಕೆ ತಂದವು. ಈ ಸರ್ಕಾರದ ಮುಖಂಡರಾಗಿ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಫೋರ್ಬ್ಸ್ ಬರ್ನ್‌ಹ್ಯಾಂ ಆಯ್ಕೆಗೊಂಡರು. ಈ ಮಧ್ಯೆ ಕೋಮುಗಲಭೆಗಳು ಮತ್ತೆ ಸಂಭವಿಸಿದಾಗ ಸರ್ಕಾರ ತುರ್ತುಪರಿಸ್ಥಿತಿಯನ್ನು ಘೋಷಿಸಿ, ಬ್ರಿಟಿಷ್ ಸೇನೆಯ ನೆರವಿನಿಂದ ಪರಿಸ್ಥಿತಿಯನ್ನು ಹತೋಟಿಗೆ ತಂದಿತು.

1966ರಲ್ಲಿ ಗಯಾನ ಅಧಿರಾಜ್ಯವಾಯಿತು. 1968ರ ಸಾರ್ವತ್ರಿಕ ಚುನಾವಣೆಯಲ್ಲಿ ಬರ್ನ್‌ಹ್ಯಾಮರ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ ಪಕ್ಷ ಬಹುಮತಗಳಿಸಿ ಬರ್ನ್‌ಹ್ಯಾಂ ಮತ್ತೆ ಪ್ರಧಾನಿಯಾದರು. 1970ರ ಫೆಬ್ರುವರಿ 23 ರಂದು ಗಯಾನ ಗಣರಾಜ್ಯವಾಯಿತು. ಬರ್ನ್‌ಹ್ಯಾಂ 1980ರ ವರೆಗೆ ಪ್ರಧಾನಿಯಾಗಿದ್ದರು. ಇವರು ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ಹೊಂದಿರಬೇಕೆಂದು 1980ರಲ್ಲಿ ಒಂದು ಚಳವಳಿ ನಡೆಸಿ ಅಧ್ಯಕ್ಷ ಪದ್ಧತಿಯನ್ನು ತಂದು 1985ರಲ್ಲಿ ಅವರೇ ನಿಧನರಾಗುವ ತನಕ ಅಧ್ಯಕ್ಷರಾಗಿ ಅಧಿಕಾರದಲ್ಲಿದ್ದರು. 1997ರಲ್ಲಿ ನಡೆದ ಚುನಾವಣೆಯಲ್ಲಿ ಚೆಡ್ಡಿಜಗನ್‌ರವರ ಪತ್ನಿ ಜನೆಟ್ ಜಗನ್ ಅಧ್ಯಕ್ಷೆಯಾದರು.

1999 ಜನೆಟ್ ಜಗನ್ ತಮ್ಮ ದೇಹಸ್ಥಿತಿಯ ಕಾರಣದಿಂದ ಅಧ್ಯಕ್ಷೆ ಹುದ್ದೆಗೆ ರಾಜೀನಾಮೆ ಕೊಟ್ಟರು. ಆಗ ಪ್ರಧಾನ ಮಂತ್ರಿಯಾಗಿದ್ದ ಭರತ್ ಜಗದೇವ್ ಅಧ್ಯಕ್ಷರಾದರು. (ಎಸ್.ಕೆ.ಎಸ್.)

**ಗರಗಸ ಮೀನು :** ಪ್ರಪಂಚದ ಉಷ್ಣವಲಯ ಸಾಗರಗಳಲ್ಲಿ ಕಾಣಸಿಗುವ ಒಂದು ಬಗೆಯ ಮೃದ್ವಸ್ಥಿ ಮೀನು (ಸಾ ಫಿಶ್). ಶಾರ್ಕ್, ರೇ, ಸ್ಕೇಟ್ ಮೀನುಗಳ ವರ್ಗದಲ್ಲಿ ಸ್ಕ್ವಾಲಿಫಾರ್ಮಿಸ್ ಗಣದ ಪ್ರಿಸ್ಟಿಡೆ ಕುಟುಂಬದ ಮೀನು. ಇದರ ಶಾಸ್ತ್ರೀಯ ಹೆಸರು ಪ್ರಿಸ್ಟಿಸ್. ಅಕ್ಕ ಪಕ್ಕದಲ್ಲಿ ಚೂಪಾದ ಹಲ್ಲುಗಳಿರುವ ಮತ್ತು ಬಲು ಉದ್ದವಾಗಿರುವ ಗರಗಸ ದಂಥ ಮೂತಿಯಿರುವುದರಿಂದ ಇದಕ್ಕೆ ಈ ಹೆಸರು. ಇದರಲ್ಲಿ ಆರು ಪ್ರಭೇಧಗಳಿವೆ. ಇವುಗಳಲ್ಲಿ ಅಮೆರಿಕದ ಆಗ್ನೇಯ ಹಾಗೂ ಗಲ್ಫ್ ತೀರ ಪ್ರದೇಶಗಳಲ್ಲಿ ಕಾಣಬರುವ ಪೆಕ್ಟಿನೇಟಸ್ ಪ್ರಭೇದ, ಮೆಡಿಟರೇನಿಯನ್ ಮತ್ತು ಅಟ್ಲಾಂಟಿಕ್ ಸಾಗರಗಳಲ್ಲಿ ಕಾಣಬರುವ ಆಂಟಿಕೋರಮ್ ಪ್ರಭೇದ ಮತ್ತು ಭಾರತದ ತೀರ ಪ್ರದೇಶಗಳಲ್ಲಿ ಸಿಕ್ಕುವ ಕಸ್ಪಿಡೇಟಸ್ ಮತ್ತು ಮೈಕ್ರೋಡಾನ್ ಪ್ರಭೇದಗಳು ಪ್ರಮುಖವಾದವು.



ಗರಗಸ ಮೀನುಗಳು ತೀರಕ್ಕೆ ಸಮೀಪದಲ್ಲಿ ಮತ್ತು ಅಳಿವೆಗಳಲ್ಲಿ ಜೀವಿಸುವುವು. ಅನೇಕ ಸಂದರ್ಭದಲ್ಲಿ ನದಿಗಳಲ್ಲಿ ಒಳನಾಡಿಗೂ ಹಲವಾರು ಮೈಲಿಗಳಷ್ಟು ದೂರ ಬರುವುದೂ ಉಂಟು. ಇದು ಸು. 6.1 ಮೀ ಗಳವರೆಗೆ ಬೆಳೆಯುತ್ತದೆ. ದೇಹರಚನೆಯಲ್ಲಿ ಶಾರ್ಕ್ ಮೀನನ್ನು ಹೋಲುತ್ತದಾದರೂ ಇದು ರೇ ಮೀನುಗಳ ಹತ್ತಿರದ ಸಂಬಂಧಿ ಅಂದರೆ ಕಿವಿರು ದ್ವಾರಗಳು ದೇಹದ ತಳ ಭಾಗದಲ್ಲಿರುತ್ತವೆ. (ಶಾರ್ಕ್ ಮೀನುಗಳಲ್ಲಿ ಕಿವಿರು ದ್ವಾರಗಳು ದೇಹದ ಪಾರ್ಶ್ವದಲ್ಲಿರುತ್ತವೆ). ಅಗಲವಾದ ಎದೆಯ ಈಜುರೆಕ್ಕೆಗಳು, ಎರಡು ಬೆನ್ನಿನ ಈಜುರೆಕ್ಕೆಗಳು, ಬಾಲದ ಈಜುರೆಕ್ಕೆ, ಗರಗಸದಂತಹ ಮೂತಿ, ತಲೆಯ ಕೆಳಭಾಗದಲ್ಲಿನ ಅರ್ಧಚಂದ್ರಾಕೃತಿಯ ಬಾಯಿ, ಬಾಲದ ಆಚೀಚೆ ದೋಣಿಯ ಆಕಾರದ ಚರ್ಮದ ಮಡಿಕೆ–ಇವು ಗರಗಸ ಮೀನಿನ ಬಾಹ್ಯ ಲಕ್ಷಣಗಳು. ಮೂತಿ ಚಪ್ಪಟೆಯಾಗಿ ಬಲು ಉದ್ದವಾಗಿರುತ್ತದೆ; ಕೆಲವು ಮೀನುಗಳಲ್ಲಿ ಸು. 1.8ಮೀ ಉದ್ದವಿರುತ್ತದೆ. ಅದರ ಒಂದೊಂದು ಅಲುಗಿನಲ್ಲಿ ಚೂಪಾದ ಸುಮಾರು 22–32 ಹಲ್ಲುಗಳಿರುತ್ತವೆ. ಸಾಗರತಳವನ್ನು ಹೆಕ್ಕಿ ಅದರೊಳಗಿರುವ ಹಲವಾರು ಬಗೆಯ ಪ್ರಾಣಿಗಳನ್ನು ತಿನ್ನಲು ಈ ಗರಗಸವನ್ನು ಬಳಸುತ್ತದೆ. ಅಲ್ಲದೆ ಚಲಿಸುವಾಗ ಸಣ್ಣ ಮೀನುಗಳ ಗುಂಪಿನಲ್ಲಿ ಮಧ್ಯೆ ನುಗ್ಗಿ ಗರಗಸ ವನ್ನು ಅತ್ತಿತ್ತ ಬಲವಾಗಿ ಆಡಿಸಿ ಕೆಲವು ಮೀನುಗಳು ಇದರ ಹೊಡೆತಕ್ಕೆ ಸಿಕ್ಕಿ ಸಾಯುವಂತೆ ಮಾಡಿ ತಿನ್ನುವುದೂ ಉಂಟು. ಗರಗಸ ಮೀನು ಜರಾಯುಜ ಪ್ರಾಣಿ. ಹುಟ್ಟುವ ಮುನ್ನವೇ ಮರಿಗಳಿಗೆ ಗರಗಸವಿರುವುದಾದರೂ ಅದು ಬಲು ಮೃದುವಾಗಿಯೂ ಒಂದು ಬಗೆಯ ಹೊದಿಕೆಯಿಂದ ಆವೃತವಾಗಿರುವುದರಿಂದ ತಾಯಿಯ ಹೊಟ್ಟೆಯಲ್ಲಿರುವಾಗ ಅಲ್ಲಿನ ಅಂಗಾಂಶಗಳಿಗೆ ಹಾನಿಯಾಗುವ ಸಂಭವವಿರುವುದಿಲ್ಲ.

ಮಲೇಶಿಯಾ, ಇಂಡೋನೇಶಿಯಾ ಮತ್ತು ಚೀನಾಗಳಲ್ಲಿ ಗರಗಸ ಮೀನನ್ನು ತಿನ್ನುತ್ತಾರೆ. ಇದರ ಮಾಂಸ ಶಾರ್ಕ್ ಮೀನಿನ ಮಾಂಸದಷ್ಟೇ ರುಚಿ ಎಂದು ಹೇಳಲಾಗಿದೆ. ಅಲ್ಲದೆ ಈ ಮೀನಿನ ಚರ್ಮದಿಂದ ಕತ್ತಿಯ ಒರೆಯನ್ನು ಮಾಡುವುದಿದೆ. ಇದರ ಯಕೃತ್ತಿನಿಂದ ಎಣ್ಣೆಯನ್ನು ತೆಗೆಯುತ್ತಾರೆ. (ಎನ್.ವಿ.ಎ.)

**ಗರಡಿ :** ಕುಸ್ತಿ ಮೊದಲಾದ ಅಂಗಸಾಧನೆಗಳಿಗಾಗಿ ಗೊತ್ತಾದ ಸ್ಥಳ, ಆ ಸ್ಥಳವಿರುವ ಮನೆ. ಗರಡಿಗಾಗಿ ಮನೆ ಇರುವುದು ಹೆಚ್ಚಾಗಿ ದಕ್ಷಿಣ ಭಾರತದಲ್ಲೆ. ಉತ್ತರದವರು ಬಯಲಲ್ಲಿಯೇ ಕುಸ್ತಿ ಮುಂತಾದವನ್ನು ಅಭ್ಯಾಸ ಮಾಡುತ್ತಾರೆ. ಗರಡಿ ಮನೆಯೊಳಗೆ ಕುಸ್ತಿ ಕಲಿಯುವ ಸ್ಥಳಕ್ಕೆ ಮಟ್ಟಿ (ಮಣ್ಣು) ಎಂದೂ ಸ್ಪರ್ಧೆಯಲ್ಲಿ ಭಾಗವಹಿಸಿ ಕುಸ್ತಿ ಮಾಡುವ ಸ್ಥಳಕ್ಕೆ ಅಖಾಡ (ಕುಸ್ತಿಯ ಕಣ) ಎಂದೂ ಕರೆಯುತ್ತಾರೆ. ಗರಡಿ ಮಾಡುವುದು ಎಂದರೆ ಸಾಧನೆ ಮಾಡುವುದು, ವ್ಯಾಯಾಮ ಮಾಡುವುದು ಎಂಬುದಷ್ಟೇ ಅಲ್ಲದೆ ಕುಸ್ತಿ ಮಾಡುವುದು ಎಂಬ ಅರ್ಥವೂ ರೂಢಿಯಲ್ಲಿದೆ. ವಿರಾಟಪರ್ವದಲ್ಲಿ ಬರುವ ಮಲ್ಲಯುದ್ಧವನ್ನಿಲ್ಲಿ ನೆನೆಯಬಹುದು. ಹಿಂದಿನ ಕಾಲದಲ್ಲಿ ಕುಸ್ತಿ ಕಲೆಗೆ ಬಹಳ ಪ್ರೋತ್ಸಾಹವಿತ್ತು. ರಾಜಮಹಾರಾಜರುಗಳೇ ಈ ಕಲೆಯಲ್ಲಿ ಪರಿಣತಿ ಹೊಂದಿದ್ದರಲ್ಲದೆ ಪ್ರಖ್ಯಾತ ಪೈಲ್ವಾನರು (ಜಟ್ಟಿ)ಗಳನ್ನು ಸಾಕಿಕೊಂಡು ಈ ಕಲೆಗೆ ಪ್ರೋತ್ಸಾಹವೀಯುತ್ತಿದ್ದರು. ಸಂಗೊಳ್ಳಿ ರಾಯಣ್ಣ, ಮೈಸೂರಿನ ರಣಧೀರ ಕಂಠೀರವ ನರಸರಾಜ ಒಡೆಯರ್ ಮೊದಲಾದವರು ಈ ಕಲೆಯಲ್ಲಿ ಅಸಾಧಾರಣ ಚತುರತೆಯನ್ನು ಸಂಪಾದಿಸಿದ್ದರು. ರಣಧೀರ ಕಂಠೀರವ ನರಸಿಂಹರಾಜ ಒಡೆಯರು ಮಾರುವೇಷದಲ್ಲಿ ಹೋಗಿ ತಿರುಚನಾಪಳ್ಳಿ ಜಟ್ಟಿಯನ್ನು ಸೋಲಿಸಿದ ಕಥೆಯಂತೂ ಇತಿಹಾಸ ಪ್ರಸಿದ್ಧ. ಹಿಂದಿನ ಕಾಲದಲ್ಲಿ ಸೈನಿಕರಿಗೆ ಕಡ್ಡಾಯವಾಗಿ ಈ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಮದಕರಿ ನಾಯಕರ ಕಾಲದಲ್ಲಿದ್ದ ಗರಡಿ ಮನೆಗಳನ್ನು ಚಿತ್ರದುರ್ಗದ ಕೋಟೆಯಲ್ಲಿ ನಾವು ಇಂದೂ ಕಾಣಬಹುದಾಗಿದೆ. ಹಳ್ಳಿಯಾದರೆ ಒಂದು, ಊರೆಂದರೆ ನಾಲ್ಕೈದು ಗರಡಿ ಮನೆಗಳಿದ್ದ ಕಾಲವೊಂದಿತ್ತು.

ಮಟ್ಟಿ ಪೂಜೆ

ಹಿಂದಿನ ಕಾಲದ ಗರಡಿ ಮನೆಗಳು ವಿಶಾಲವಾಗಿರದೆ ಚಿಕ್ಕವಾಗಿರುತ್ತಿದ್ದುವು. ದೂರದಿಂದ ನೋಡಿಯೇ ಸುಲಭವಾಗಿ ಅವನ್ನು ಪತ್ತೆಮಾಡಬಹುದಾಗಿತ್ತು. ಗರಡಿಯ ಹೊರ ಗೋಡೆಗಳ ಮೇಲೆ ಕೆಮ್ಮಣ್ಣಿನ ದೊಡ್ಡ ದೊಡ್ಡ ಹಾಗೂ ಉದ್ದುದ್ದವಾದ ಪಟ್ಟೆಗಳನ್ನು ಹಾಕಿರುತ್ತಿದ್ದರು. ಹಾಗೂ ಗರಡಿಯ ಮುಂದೆ ದಪ್ಪ ದಪ್ಪ ಕಲ್ಲುಗುಂಡುಗಳನ್ನು ಇಟ್ಟಿರುತ್ತಿದ್ದರು. ಬಾಗಿಲಿನಲ್ಲಿ ಗರುಡನ ಅಥವಾ ಹನುಮಂತನ ಚಿತ್ರಪಟವಿರುತ್ತಿತ್ತು. ಗರಡಿ ಮನೆಗಳಿಗೆ ಎಲ್ಲೋ ಒಂದು ಸಣ್ಣ ಕಿಟಕಿ ಇದ್ದರೆ ಅದೇ ಹೆಚ್ಚು. ಒಳಗಡೆ ಹೆಚ್ಚು ಗಾಳಿ, ಬೆಳಕು ಪ್ರವೇಶ ಮಾಡುತ್ತಿರಲಿಲ್ಲ. ಬಾಗಿಲು ಚಚ್ಚೌಕವಾಗಿದ್ದು ಸುಮಾರು 76 ಸೆಂ.ಮೀ ಅಗಲ ಹಾಗೂ 76 ಸೆಂ.ಮೀ ಎತ್ತರವಿರುತ್ತಿತ್ತು. ಆ ಮನೆಗೆ ಆ ಬಾಗಿಲು ತುಂಬ ಚಿಕ್ಕದೆಂದೇ ಹೇಳಬೇಕು. ಅಲ್ಲದೆ ಅದರ ದಪ್ಪ ಸು. 16 ಸೆಂ.ಮೀ ಇರುತ್ತಿತ್ತಾಗಿ ಅದನ್ನು ತಳ್ಳಿಕೊಂಡು ಒಳಗೆ ಹೋಗಬೇಕಾದರೆ ಸಾಕಷ್ಟು ಶಕ್ತಿ ಇರಬೇಕಾಗುತ್ತಿತ್ತು. ಈ ಬಾಗಿಲಿನ ಇನ್ನೊಂದು ವೈಶಿಷ್ಟ್ಯವೆಂದರೆ ಮುಂಭಾಗದಲ್ಲಿ ಬೀಗ ಹಾಕಿಕೊಳ್ಳಲು ಚಿಲಕವಿರುತ್ತಿರಲಿಲ್ಲ. ಆದರೆ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು ಅಗಳಿ ಇರುತ್ತಿತ್ತು. ಸಾಧಾರಣವಾಗಿ ಒಂದೇ ಊರಿನಲ್ಲಿ 3, 4, ಗರಡಿ ಮನೆಗಳಿದ್ದು ಅವಕ್ಕೆಲ್ಲ ಹೆಸರಾಂತ ಉಸ್ತಾದರ ನಾಮಕರಣವಿರುತ್ತಿತ್ತು. ಅಲ್ಲದೆ ಒಂದು ಗರಡಿಯವರಿಗೂ ಇನ್ನೊಂದು ಗರಡಿಯವರಿಗೂ ಪೈಪೋಟಿಯಲ್ಲದೆ ವಿರೋಧವೂ ಇರುತ್ತಿತ್ತು. ಹೀಗೆ ವಿರೋಧವಿದ್ದುದರಿಂದಲೇ ಗರಡಿ ಮನೆಗಳಿಗೆ ಬಾಗಿಲಿನ ಮುಂಭಾಗದಲ್ಲಿ ಬೀಗ ಹಾಕಿಕೊಳ್ಳಲು ಚಿಲಕವಿರುತ್ತಿರಲಿಲ್ಲ. ಕಾರಣ ಗರಡಿ ಮನೆಯೊಳಗೆ ಸಾಧನೆ ನಡೆಸುವುದನ್ನು ಕಂಡರೆ ಆಗದವರು ಚಿಲಕ ಹಾಕಿ ಹೊರಟು ಬಿಟ್ಟರೆ ಒಳಗಡೆ ಇದ್ದವರು ಗಾಳಿ ಬೆಳಕು ಇಲ್ಲದೆ ಅಲ್ಲಿಯೇ ಸಾಯಬೇಕಾಗುತ್ತಿತ್ತು. ಸಾಧನೆ

ಮಟ್ಟಿಯಲ್ಲಿ ಹುಗಿದ ತೆಂಗಿನಕಾಯನ್ನು ಹುಡುಕುತ್ತಿರುವುದು

ಮಾಡುವಾಗ ಉಸ್ತಾದ್ (ಗುರು) ತನ್ನ ಶಾಗಿರ್ದು (ಶಿಷ್ಯ) ಪೈಲ್ವಾನರುಗಳಿಗೆ ಹೇಳಿಕೊಡುವ ಡಾವುಗಳನ್ನು ಅವನ ಎದುರಾಳಿಗಳು ಯಾರಾದರೂ ಬಂದು ನೋಡಿಕೊಳ್ಳಬಹುದೆಂಬ ಕಾರಣದಿಂದ ಬಹುಶಃ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು ಅಗಳಿ ಇರುತ್ತಿತ್ತು. ಗರಡಿ ಮನೆಯೊಳಗೆ ಪ್ರವೇಶ ಮಾಡಿದ್ದೇ ಆದರೆ ಗುಹೆಯೊಳಗೆ ಪ್ರವೇಶ ಮಾಡಿದ ಅನುಭವವಾಗುತ್ತಿತ್ತು. ಗರಡಿ ಮನೆಗಳು ಚಿಕ್ಕವಾಗಿದ್ದು ಗಾಳಿ ಬೆಳಕು ಪ್ರವೇಶ ಮಾಡದಂತಿದ್ದುದಕ್ಕೆ ಇನ್ನೊಂದು ಕಾರಣ, ಮೈ ಬೆವರು ಶೀಘ್ರವಾಗಿ ಹೊರಬೀಳಬೇಕೆಂಬುದೇ ಆಗಿತ್ತು. ಹೆಣ್ಣುಮಕ್ಕಳಾರೂ ಗರಡಿಮನೆಯನ್ನು ಪ್ರವೇಶಮಾಡಬಾರದು ಎಂಬ ನಿಯಮವಿತ್ತು. ಒಂದು ವೇಳೆ ಪ್ರವೇಶ ಮಾಡಿದರೆ ಅಂಥವರ ತಲೆಗೂದಲೆಲ್ಲ ಉದುರಿಹೋಗುತ್ತದೆ ಎಂಬ ನಂಬಿಕೆಯೂ ಇತ್ತು. ಬಹುಶಃ ಸಾಧನೆ ಮಡುವ ಪೈಲ್ವಾನನಿಗೆ ಹೆಂಗಸಿನ ದೃಷ್ಟಿ ತಗಲಬಾರದು. ಆತ ಆಕೆಯ ಬಲೆಗೆ ಬೀಳಬಾರದು ಎಂಬುವುದು ಈ ಕಟ್ಟಳೆಯ ಉದ್ದೇಶವೆಂದು ತೋರುತ್ತದೆ.

ಹಿಂದೆ ಗರಡಿ ಮನೆಗಳು ಹೊರಗಡೆಯಿಂದ ಬಂದ ಪೈಲ್ವಾನರುಗಳಿಗೆ ಇಳಿದು ಕೊಳ್ಳುವ ವಸತಿಗೃಹಗಳೂ ಆಗಿದ್ದುವು. ಕೊಲ್ಹಾಪುರದ ಕಡೆಯ ಗರಡಿಮನೆ ಗಳಲ್ಲಿಯಂತೂ ವಸತಿ ಸೌಕರ್ಯದ ಜೊತೆ ಊಟದ ಸೌಕರ್ಯವೂ ಇರುತ್ತಿತ್ತು.

ಈಗೀಗ ಕಟ್ಟುತ್ತಿರುವ ಗರಡಿಗಳನ್ನು ವ್ಯಾಯಾಮಶಾಲೆಗಳು ಎಂದು ಕರೆಯುತ್ತಾರೆ. ಇವು ವಿಶಾಲವಾಗಿದ್ದು ಗಾಳಿ ಬೆಳಕು ಹೆಚ್ಚು ಬರುವಂತಿರುತ್ತದೆ. ವ್ಯಾಯಾಮ ಶಾಲೆಯ ಸುತ್ತಲೂ ಎತ್ತರವಾದ ನಿಲುಗನ್ನಡಿಗಳನ್ನು ನಿಲ್ಲಿಸಿರುತ್ತಾರೆ. ಹೀಗಿರುವುದರಿಂದ ಸಾಧನೆ ಮಾಡುವವರಿಗೆ ತಮ್ಮ ದೇಹದ ಅಂಗಾಂಗಗಳನ್ನು ಪೂರ್ಣವಾಗಿ ನೋಡಿಕೊಳ್ಳುವ ಅವಕಾಶವಿರುತ್ತದೆ. ಇಂಥ ವ್ಯಾಯಾಮಶಾಲೆಗಳಲ್ಲಿ ಕುಸ್ತಿಗಿಂತ ದೇಹದ ಅಂಗಸೌಷ್ಠವಕ್ಕೆ ಹೆಚ್ಚು ಪ್ರಾಧಾನ್ಯವಿರುತ್ತದೆ. ಮೈಸೂರು ಮತ್ತು ಮಹಾರಾಷ್ಟ್ರದಲ್ಲಿ ಸುವ್ಯವಸ್ಥಿತವಾದ ಗರಡಿಮನೆಗಳಿವೆ. ಈಗ ವ್ಯಾಯಾಮಶಾಲೆಗೆ ಹೋದರೆ ದೇಹದ ಅಂಗಾಂಗಗಳ ಕಾಂತಿಯನ್ನು ಹೆಚ್ಚಿಸಿಕೊಳ್ಳಲು ವ್ಯಾಯಾಮ ಮಾಡಿಕೊಂಡು ಬರಬಹುದು; ಕುಸ್ತಿ ಮಾಡಬೇಕೆಂಬ ನಿಯಮವೇನಿಲ್ಲ. ಅಂತೆಯೇ ಈಗಿನ ವ್ಯಾಯಾಮ ಶಾಲೆಗಳಲ್ಲಿ ದೇಹದ ಪ್ರತಿ ಅಂಗಾಂಗಗಳನ್ನು ಸುದೃಢವಾಗಿಸಲು ಬೇಕಾದ ವ್ಯಾಯಾಮ ಸಾಮಗ್ರಿಗಳನ್ನು ಕಾಣಬಹುದು.

**ಮಟ್ಟಿ** : ಗರಡಿಮನೆಯಲ್ಲಿ ಅತ್ಯಂತ ಪ್ರಧಾನವಾದ ಭಾಗವೆಂದರೆ ಮಟ್ಟಿ. ಅಂದರೆ ಕುಸ್ತಿ ಮಾಡುವ ಸ್ಥಳ. ಈ ಮಟ್ಟಿ ಕನಿಷ್ಠ ಪಕ್ಷ 4.27 ಮೀ ಇರುವ ಒಂದು ಚೌಕ. ಇಂಥ ಮಟ್ಟಿಯಲ್ಲಿ ಒಂದು ಜೊತೆ ಅಥವಾ ಎರಡು ಜೊತೆ ಜಟ್ಟಿಗಳು ಕುಸ್ತಿ ಮಾಡಬಹುದು. ಕುಸ್ತಿ ಮಾಡುವ ಸ್ಥಳವನ್ನು ಸು. 30.5 ಸೆಂ.ಮೀ ಆಳದವರೆಗೂ ಹುಡಿಮಣ್ಣಿನಿಂದ ತುಂಬಿರಬೇಕು. ಇದಕ್ಕೆ ಕೆಮ್ಮಣ್ಣು ಶ್ರೇಷ್ಠವೆಂದು ಹೇಳಲಾಗಿದೆ. ಉತ್ತಮದರ್ಜೆಯ ಮಣ್ಣನ್ನು ತುಂಬುವುದರಿಂದ ಚರ್ಮಕ್ಕೆ ತಗಲುವ ಅಪಾಯಗಳು ಕಡಿಮೆ. ಮಣ್ಣಿನಲ್ಲಿ ಸಣ್ಣ ಸಣ್ಣ ಮರಳು ಮತ್ತು ನುರುಜುಗಲ್ಲುಗಳಿಲ್ಲದಂತೆ ಮಾಡಲು ಮಣ್ಣನ್ನು ಜರಡಿ ಆಡಿಸಿರುತ್ತಾರೆ.

ಕೆಮ್ಮಣ್ಣು 100 ಚೀಲ, ಜೇಕಿನ ಗೆಡ್ಡೆಯ ಪುಡಿ 10 ಚೀಲ, ಕರ್ಪೂರ, ಕುಂಕುಮ ಸು. 9 ಕಿ.ಗ್ರಾಂಗಳು, ಟಿಂಕ್ಚರ್ ಸು. 20 ಕಿ.ಗ್ರಾಂ, ದೇವದಾರು ಎಣ್ಣೆ ಸು. 9 ಕಿ.ಗ್ರಾಂ, ಗಂಧದ ಹುಡಿ ಸು. 9 ಕಿ.ಗ್ರಾಂ, ಅತ್ತರು 20 ತೊಲ, ಎಳ್ಳೆಣ್ಣೆ 20 ಮಣ–ಇವೇ ಮೊದಲಾದ ಸಾಮಗ್ರಿಗಳನ್ನು ಬೆರೆಸಿದ ಮಟ್ಟಿ ತುಂಬ ಆರೋಗ್ಯದಾಯಕವಾದದ್ದು. ಲಡತ್ ಮಾಡಿ ಮುಗಿದ ಮೇಲೆ ಪೈಲ್ವಾನರು ಈ ಮಟ್ಟಿಯಲ್ಲಿ ಉದ್ದುದ್ದವಾದ ಗುಂಡಿಯನ್ನು ತೆಗೆದು ಅದರಲ್ಲಿ ಕತ್ತನ್ನು ಮಾತ್ರ ಹೊರಗೆ ಬಿಟ್ಟು ಮಲಗಿಕೊಳ್ಳುತ್ತಾರಲ್ಲದೆ ದೇಹದ ತುಂಬ ಮಣ್ಣನ್ನು ಮುಚ್ಚಿಸಿಕೊಳ್ಳುತ್ತಾರೆ. ಹೀಗೆ ಮಟ್ಟಿಯಲ್ಲಿ ಮಲಗಿ ವಿಶ್ರಾಂತಿ ಪಡೆಯುವುದರಿಂದ ದೇಹದ ಕಾವೆಲ್ಲವೂ ಆರಿಹೋಗುತ್ತದೆ. ಅಲ್ಲದೆ ಶರೀರಕ್ಕೆ ತುಂಬ ತಂಪೊದಗಿ, ಒಂದು ರೀತಿಯ ಕಾಂತಿಯುಂಟಾಗುತ್ತದೆ. ಇದಕ್ಕೆ ಮಟ್ಟಿ ತೆಗೆದುಕೊಳ್ಳುವು ದೆಂದು ಹೇಳುತ್ತಾರೆ. ಮಲ್ಲಾಡಿ ಹಳ್ಳಿಯ ಅನಾಥ ಸೇವಾಶ್ರಮದಲ್ಲಿ ರಾಘವೇಂದ್ರ ಸ್ವಾಮಿಗಳು ಹಲವಾರು ಆಯುರ್ವೇದೀಯ ಔಷಧಿಗಳನ್ನು ಬೆರಸಿದ ಮಟ್ಟಿಯನ್ನು ರೋಗ ಚಿಕಿತ್ಸೆಗಾಗಿ ಬಳಸುತ್ತಿದ್ದಾರೆ. ಹೀಗೆ ಮಟ್ಟಿ ತೆಗೆದುಕೊಳ್ಳುವುದೂ ಒಂದೇ, ಒಂದು ಸೇರು ಹಾಲು ಕುಡಿಯುವುದೂ ಒಂದೇ ಎಂದು ನಂಬಿಕೆ. ಕುಸ್ತಿ ಮಾಡುವಾಗ ಪೈಲ್ವಾನರಿಗೆ ಅಕಸ್ಮಾತ್ ಗಾಯಗಳೇನಾದರೂ ಆದರೆ ಅವರು ಯಾವ ವೈದ್ಯನ ಬಳಿಗೂ ಹೋಗುವುದಿಲ್ಲ. ಗಾಯದ ಮೇಲೆ ಈ ಮಟ್ಟಿಯ ಮಣ್ಣನ್ನು ಮೆತ್ತುತ್ತಾರೆ. ನವರಾತ್ರಿಯದಿವಸ ಈ ಮಟ್ಟಿಗೆ ಹೊಸ ಮಣ್ಣು ಸೇರಿಸಿ ಉಸ್ತಾದರೆಲ್ಲ ಸೇರಿ ಪೂಜೆ ಮಾಡುತ್ತಾರೆ. ಕುಸ್ತಿಯ ಸ್ಪರ್ಧೆ ಇರುವ ದಿವಸ ಮಟ್ಟಿಯ ಮಣ್ಣನ್ನು ಒಂದೆಡೆ ದೊಡ್ಡ ರಾಶಿಯಾಗಿ ಏರುಹಾಕಿ ಅದರೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಪೈಲ್ವಾನರುಗಳು ಕಾಚ, ಹನುಮಾನ್ ಚಡ್ಡಿ, ವ್ಯಾಯಾಮ ಸಾಮಗ್ರಿಗಳೆಲ್ಲವನ್ನೂ ಇಟ್ಟು ಪೂಜೆ ಮಾಡುತ್ತಾರೆ. ಆ ದಿವಸ ಗರಡಿಮನೆಯಲ್ಲಿ ಯಾರೂ ಕುಸ್ತಿ ಮಾಡುವುದಿಲ್ಲ. ಕುಸ್ತಿ ಮುಗಿದ ಮೂರನೆಯ ದಿವಸವೇ ಏರು ಹಾಕಿದ ಮಟ್ಟಿಯ ಮಣ್ಣನ್ನು ಒಡೆದು ದೈನಂದಿನ ಸಾಧನೆ ನಡೆಸುತ್ತಾರೆ.

**ವ್ಯಾಯಾಮಸಾಮಗ್ರಿಗಳು:** ಹಿಂದಿನ ಕಾಲದಲ್ಲಿ ಗರಡಿಮನೆಗಳಲ್ಲಿ ವ್ಯಾಯಾಮ ಸಾಮಗ್ರಿಗಳು ಹೆಚ್ಚು ಇದ್ದಿರಲಿಲ್ಲ. ದಂಡೆ ಒತ್ತುವುದು, ಬಸ್ಕಿ ಹೊಡೆಯುವುದು ಮತ್ತು ಮಟ್ಟಿ ಕುರಾಯಿಸುವುದು–ಇವಿಷ್ಟೇ ಅಂದಿನ ಪ್ರಧಾನ; ವ್ಯಾಯಾಮಗಳಾಗಿದ್ದವು. ಅಲ್ಲಿನ ಸಾಮಾನ್ಯ ವ್ಯಾಯಾಮಸಾಮಗ್ರಿಗಳೆಂದರೆ–ಡಂಬೆಲ್ಸ್, ಲೋಡು (ಗದೆ), ಬಳಪದ ಕಲ್ಲಿನಿಂದ ಮಾಡಿದ್ದು ಕುತ್ತಿಗೆಗೆ ಸಿಕ್ಕಿಸಿಕೊಳ್ಳುವ ಗಾಲಿ, ರಂಧ್ರವಿರುವ ಕಬ್ಬಿಣದ ಗುಂಡು, ಮಲ್ಲಗಂಬ, ದಂಡೆ ಹೊಡೆಯುವಾಗ ಹಿಡಿದುಕೊಳ್ಳಲು ಉಪಯೋಗಿಸುವ ಮರದಿಂದ ಮಾಡಿದ ಕೈಹಿಡಿಗಳು, ಮಣೆ, ಮಟ್ಟಿ ಕುರಾಯಿಸುವ ದೊಡ್ಡ ಗುದ್ದಲಿ ಮೊದಲಾದವು. ಈ ಎಲ್ಲ ವ್ಯಾಯಾಮಸಾಮಗ್ರಿಗಳೂ ಕುಸ್ತಿಕಲೆಗೆ ಸಹಾಯಕವಾಗುವಂಥವು.

ಪೈಲ್ವಾನರುಗಳ ಆರಾಧ್ಯದೈವವೆಂದರೆ ಮೌಲಾಲಿ ಮತ್ತು ಹನುಮಂತ. ಆದ್ದರಿಂದಲೇ ಎಲ್ಲ ಗರಡಿಮನೆಗಳಲ್ಲೂ ಹನುಮಂತ ಮತ್ತು ಮೌಲಾಲಿ ದೇವರುಗಳನ್ನು ಕಾಣಬಹುದು. ಮೌಲಾಲಿ ಆಕಾರವಿಲ್ಲದ ದೇವರು. ಸಾಮಾನ್ಯವಾಗಿ ಗರಡಿಮನೆಗಳಲ್ಲಿ ಕೆಳಗಡೆ ಮೂರು ಗುಂಡು. ಮೇಲ್ಗಡೆ ಒಂದು ಗುಂಡನ್ನು ಇಟ್ಟು ಇದನ್ನೇ ಮೌಲಾಲಿ ದೇವರೆಂದು ಪೂಜಿಸುತ್ತಾರೆ. ಕುಸ್ತಿ ಇರುವ ದಿವಸ ಪೈಲ್ವಾನರು ಅಖಾಡವನ್ನು ಪ್ರವೇಶಿಸುವಾಗ, ಯಾಲಿ ಮೌಲಾಲಿ, ಯಾಲಿ ಮದಾತ್, ಯಾಲಿ ಉಸ್ತಾದ್, ಜೈ ಭಜರಂಗಬಲಿ ಮುಂತಾದ ಘೋಷಣೆಗಳನ್ನು ಮಾಡುತ್ತಾರೆ. ಇತ್ತೀಚೆಗೆ ಇದರ ಜೊತೆಗೆ ಹಿಂಕಣ್ಣು ಮುಂಕಣ್ಣು ಲಾಗ ಹಾಕಿಕೊಂಡು ಬರುವುದೂ ರೂಢಿಯಲ್ಲಿದೆ.

ಮಲ್ಲಕಂಬ ಕಸರತ್ತು

1 ಮಲ್ಲಗಂಬ; ಮಲ್ಲಗಂಬಗಳಲ್ಲಿ ಮೂರು ವಿಧ; 1 ನೇಣು ಮಲ್ಲಗಂಬ 2 ಹುಗಿದಿರುವ ಮಲ್ಲಗಂಬ 3 ಬೆತ್ತದ ಮಲ್ಲಗಂಬ. ಇವುಗಳ ಮೇಲೆ ವ್ಯಾಯಾಮ ಮಾಡುವುದರಿಂದ ತೊಡೆಗಳಿಗೆ ಅಸಾಧಾರಣವಾದ ಶಕ್ತಿ ಹಾಗೂ ಬಿಗಿಬರುತ್ತದಲ್ಲದೆ ದೇಹವನ್ನು ಹೇಗೆ ಬೇಕೋ ಹಾಗೆ ಮಣಿಸುವುದಕ್ಕೆ ಸಾಧ್ಯವಾಗುತ್ತದೆ.

ದಾದಾ ಬಾಲಂಭಟ್ಟ ಎಂಬಾತ ಮಲ್ಲಗಂಬದ ಮೇಲೆ ವ್ಯಾಯಾಮ ಮಾಡುವುದನ್ನು ಕಂಡುಹಿಡಿದ. ಇದಕ್ಕೆ ಸಂಬಂಧಿಸಿದಂತೆ ಕಥೆಯೊಂದಿದೆ. ಪ್ರಖ್ಯಾತ ಜಟ್ಟಿಯೊಬ್ಬನ ಸವಾಲನ್ನು ಎದುರಿಸಿ ಅವನ ಜೊತೆ ಕುಸ್ತಿ ಮಾಡಲುಒಪ್ಪಿಕೊಂಡ ಬಾಲಂಭಟ್ಟ ಅವನನ್ನು ಸೋಲಿಸುವ ಬಗೆಯನ್ನು ಕುರಿತು ತೀವ್ರವಾಗಿ ಯೋಚಿಸತೊಡಗಿದ. ಈ ಯೋಚನೆಯಲ್ಲಿರುವಾಗಲೇ ಒಂದು ದಿವಸ ಅವನಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ಕೋತಿಯೊಂದು ಮರದ ಕೊಂಬೆಯ ಮೇಲೆ ಲಾಗ ಹಾಕುತ್ತಾ ಅನೇಕ ರೀತಿಯ ಕಸರತ್ತು ಮಾಡುತ್ತಿರುವುದನ್ನು ಕಂಡ. ಅದು ಅವನಿಗೊಂದು ಸೂಚನೆಯನ್ನೊದಗಿಸಿತು. ಮಾರನೆಯ ದಿನವೇ ನುಣುಪಾದ ಮರದ ಕಂಬವನ್ನು ತಂದು ನೆಲದಲ್ಲಿ ನೆಟ್ಟು ಅದರ ಮೇಲೆ ಕಸರತ್ತು ಮಾಡಲು ಪ್ರಾರಂಭಿಸಿದ. ಅದರಿಂದಾಗಿ ಆತ ತನ್ನ ಎದುರಾಳಿಯನ್ನು ಸುಲಭವಾಗಿ ಸೋಲಿಸಿದ. ಮಲ್ಲಗಂಬದ ಮೇಲೆ ನಡೆಸುವ ವಿವಿಧ ಚಟುವಟಿಕೆಗಳ ಸ್ಪರ್ಧೆಯನ್ನು ಈಗಲೂ ಮಹಾರಾಷ್ಟ್ರದಲ್ಲಿ ನಡೆಸುತ್ತಾರೆ.

ಮಲ್ಲಗಂಬದ ಮೇಲೆ ಮಾಡುವ ಸಾಧನೆಯಲ್ಲಿ ಅನೇಕ ಬಗೆಗಳಿವೆ. ಪವಿತ್ರ : ನೆಲದಲ್ಲಿ ಹುಗಿದಿರುವ ಕಂಬದ ಬದಿಯಲ್ಲಿ ಎಡಗಾಲನ್ನು ಸ್ವಲ್ಪ ಮುಂದೆ ಇಟ್ಟುಕೊಂಡು, ಎಡಮುಂಗೈಯನ್ನು ಕಂಬದ ಮುಂದುಗಡೆಯಲ್ಲಿ ಸೊಂಟದ ಮಟ್ಟದಲ್ಲಿಯೂ ಬಲಗೈಯನ್ನು ಕಂಬದ ಹಿಂಬದಿಯಲ್ಲಿಯೂ ಇಟ್ಟು ಬಲಗೈಯಿಂದ ಕಂಬವನ್ನು ಬಳಸಿ ನಿಲ್ಲುವುದಕ್ಕೆ ಎಡಪವಿತ್ರವೆಂದು ಹೇಳುತ್ತಾರೆ. ಇದಕ್ಕೆ ವಿರುದ್ಧವಾಗಿ ನಿಲ್ಲುವುದು

ಬಲಪವಿತ್ರ. ವ್ಯಾಯಾಮ ಮಾಡುವಾಗ ಮುಂಗೈ ತ್ರಾಣದಿಂದ ಕಂಬವನ್ನು ಹಿಡಿದು ತಲೆಯನ್ನು ಕೆಳಗೆಮಾಡಿ ಕಾಲುಗಳನ್ನು ಮೇಲೆಸೆದು ಎರಡು ತೊಡೆಗಳಿಂದಲೂ ಕಂಬವನ್ನು ಬಳಸಿ ಹಿಡಿದು ಎರಡು ಕೈಗಳನ್ನೂ ಬಿಡಬೇಕು. ತೊಡೆಗಳ ಬಲದಿಂದ ಕಂಬವನ್ನು ಬಿಗಿಹಿಡಿದು ಸ್ವಲ್ಪ ಹೊತ್ತಿನ ಅನಂತರ ತೊಡೆಗಳನ್ನು ಸಡಿಲಿಸಿ ಹಾಗೆಯೇ ನಿಧಾನವಾಗಿ ಕೆಳಗಡೆ ಜಾರಬೇಕು. ನೆಲವನ್ನು ಸಮೀಪಿಸಿದಾಗ ಕೈಗಳಿಂದ ಕಂಬವನ್ನು ಹಿಡಿದು ಕಾಲುಗಳನ್ನು ನೆಲಕ್ಕೆ ಸೋಕಿಸದಂತೆ ಇಳಿಬಿಟ್ಟು ಮತ್ತೆ ಮುಂಗೈ ತ್ರಾಣದಿಂದ ಕಾಲುಗಳನ್ನು ಮೇಲೆಸೆದು ತೊಡೆಗಳಿಂದ ಕಂಬವನ್ನು ಬಿಗಿ ಹಿಡಿಯಬೇಕು. ನೆಲಕ್ಕಿಳಿಯುವಾಗ ತೊಡೆಗಳನ್ನು ಸಡಿಲಿಸಿ ಕಂಬದ ಮೇಲಿನಿಂದ ತಲೆಕೆಳಗಾಗಿಯೇ ಜಾರಿಕೊಂಡು ಬಂದು ಕೈಗಳಿಂದ ಕಂಬವನ್ನು ಹಿಡಿದು ಕಂಬದ ಬದಿಯಲ್ಲಿ ಕಾಲುಗಳನ್ನು ಪೂರ್ತಿಯಾಗಿ ನೆಲದ ಮೇಲೆ ಊರದೆ ಬೆರಳುಗಳ ಸಹಾಯದಿಂದ ನಿಲ್ಲಬೇಕು. ಹೀಗೆಯೇ ಮಲ್ಲಗಂಬದ ಮೇಲೆ ವ್ಯಾಯಾಮ ಮಾಡುವ ಅನೇಕ ರೀತಿಯ ಉಡಿಗಳಿವೆ. ಅವುಗಳಲ್ಲಿ ಕಮಾನಿ ಉಡಿ, ದೋ ಹಾಥಿ ಉಡಿ, ನಕೀಕಸ್ ಸಾದಾ, ಬಗಲ್ ಉಡಿ, ಸಲಾಮಿ, ಸಾದಿತೇಡಿ, ಫಾಡ್ ಉಡಿ, ಬಗಲ್ ತೇಡಿ, ಕತ್ತರ ಪಕ್ಕಡ್, ಕಾನ್‌ಪಕ್ಕಡ್ ಘಾನ ಉಡಿ, ದೋಹಾಥಿ ದಸ್‌ರಂಗ್, ಖಾಂದಾದಸ್‌ರಂಗ್, ಮೊದಲಾದುವು ಪ್ರಖ್ಯಾತವಾದುವು. ಹೀಗೆಯೇ ಬೆತ್ತದ ಕಂಬ ಮತ್ತು ನೇಣುಗಂಬಗಳ ಮೇಲೆ ಆಸನಗಳನ್ನು ಹಾಕುತ್ತಾರೆ.

2 ಡಂಬೆಲ್ಲುಗಳು: ವಿವಿಧ ತೂಕದ ಡಂಬೆಲ್ಲುಗಳನ್ನು ಎರಡೂ ಕೈಯಲ್ಲಿ ಹಿಡಿದುಕೊಂಡು ದೀರ್ಘಶ್ವಾಸ ಎಳೆದುಕೊಂಡು ಕೈಗಳನ್ನು ಒಂದಾದ ಮೇಲೆ ಒಂದರಂತೆ ಮೇಲೆತ್ತಿ, ನಿಧಾನವಾಗಿ ಉಸಿರು ಬಿಡುತ್ತ ಕೆಳಗೆ ಇಳಿಸಬೇಕು. ಈ ವ್ಯಾಯಾಮದಿಂದ ಮುಂಗೈ ಮತ್ತು ತೋಳುಗಳಿಗೆ ಬಲ ಬರುತ್ತದೆ.

3 ಗದೆ ಅಥವಾ ಲೋಡು: ವಿವಿಧ ತೂಕದ ಗದೆಗಳಿರುತ್ತವೆ. ಒಂದೇ ತೂಕವುಳ್ಳ ಎರಡು ಗದೆಗಳನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಮೂಗಿನ ನೇರದಲ್ಲಿ ನಿಲ್ಲಿಸಿಕೊಳ್ಳಬೇಕು. ಅನಂತರ ಒಂದು ಕೈಯಲ್ಲಿ ಹಿಡಿದಿರುವ ಗದೆಯನ್ನು ಮೂಗಿನ ನೇರದಲ್ಲಿಯೇ ನಿಲ್ಲಿಸಿಕೊಂಡು, ಇನ್ನೊಂದು ಕೈಯಲ್ಲಿರುವ ಗದೆಯನ್ನು ತಲೆಯ ಮೇಲೆ ಎತ್ತಿ ಬೆನ್ನ ಹಿಂದೆ ಇಳಿಸಿ ಅನಂತರ ಮೊದಲಿದ್ದ ಸ್ಥಾನಕ್ಕೇ ಅಂದರೆ ಮುಂಭಾಗದಿಂದ ಮೇಲೆತ್ತಿ ಮೂಗಿನ ನೇರಕ್ಕೇ ನಿಲ್ಲಿಸಿಕೊಳ್ಳಬೇಕು. ತಕ್ಷಣವೇ ಮತ್ತೊಂದು ಕೈಯಲ್ಲಿರುವ ಗದೆಯನ್ನು ತಲೆಯ ಮೇಲೆ ಎತ್ತಿ ಬೆನ್ನ ಹಿಂದೆ ಇಳಿಸಿ ಮುಂದುಗಡೆಯಿಂದ ಮೂಗಿನ ನೇರಕ್ಕೆ ತಂದು ನಿಲ್ಲಿಸಿಕೊಳ್ಳಬೇಕು. ಹೀಗೆ ಒಂದಾದ ಮೇಲೊಂದರಂತೆ ಗದೆಯನ್ನು ತಿರುಗಿಸಬೇಕು. ಇದರಿಂದ ಮುಂಗೈ ಮತ್ತು ತೋಳುಗಳಿಗೆ ಅಸಾಧಾರಣ ಶಕ್ತಿ ಬರುತ್ತದೆ.

4 ಗಾಲಿ: ಸಿಮೆಂಟಿನ ಈ ಗಾಲಿ 45 ಸೆಂಮೀ ಅಳತೆಯ ಸುತ್ತಳತೆಯದಾಗಿದ್ದು ತುಂಬ ಭಾರವಾಗಿರುತ್ತದೆ. ಇದರ ಮಧ್ಯೆ ತಲೆ ನುಗ್ಗುವಷ್ಟು ರಂಧ್ರವೊಂದಿರುತ್ತದೆ. ಈ ಗಾಲಿಯನ್ನು ನಿಲ್ಲಿಸಿಕೊಂಡು, ಕುಕ್ಕುರುಗಾಲಿನಲ್ಲಿ ಕುಳಿತು ರಂಧ್ರದ ಮಧ್ಯೆ ತಲೆಯನ್ನು ತೂರಿಸಿ ಗಾಲಿಯನ್ನು ಕುತ್ತಿಗೆಗೆ ಸಿಗಿಸಿಕೊಂಡು ಮೇಲೇಳಬೇಕು. ಮೇಲೆದ್ದು ಗರಡಿಮನೆಯ ಒಳಭಾಗದಲ್ಲಿಯೇ ಒಂದೆರಡು ನಿಮಿಷ ಸುತ್ತಾಡಬೇಕು. ಹೀಗೆ ಮಾಡುವುದರಿಂದ ಕುತ್ತಿಗೆಗೆ ಬಲ ಬರುತ್ತದೆ.

5 ಗುಂಡು: ಇದು ಭಾರವಾದ ಕಬ್ಬಿಣದ್ದಾಗಿದ್ದು ಮಧ್ಯೆ ಒಂದು ಅಂಗುಲ ಅಥವಾ ಎರಡು ಅಂಗುಲದಷ್ಟು ಅಗಲವಾದ ರಂಧ್ರವಿರುತ್ತದೆ. ಈ ರಂಧ್ರದ ಮಧ್ಯೆ ದಪ್ಪನಾದ ಕೋಲೊಂದನ್ನು ತಳ್ಳಿ ಕೈಯಿಂದ ಆ ಕೋಲನ್ನು ಹಿಡಿದು ಮುಂಗೈ ತ್ರಾಣದಿಂದ ಆ ಗುಂಡನ್ನು ಮೇಲೆತ್ತಬೇಕು. ಹೀಗೆ ಮಾಡುವುದರಿಂದ ಕೈಗಳಿಗೆ ಬಲ ಬರುತ್ತದೆ.

6 ಗುದ್ದಲಿ: ಇದು ವ್ಯವಸಾಯದ ಗುದ್ದಲಿಗಿಂತ ಆಕಾರದಲ್ಲಿ ದೊಡ್ಡದಾಗಿದ್ದು, ಭಾರವಾಗಿರುತ್ತದೆ. ಪ್ರತಿಯೊಬ್ಬ ಪೈಲ್ವಾನನೂ ಕುಸ್ತಿ ಮಾಡಿಯಾದ ಮೇಲೆ ಈ ಗುದ್ದಲಿಯಿಂದ ಮಟ್ಟಿಯನ್ನು ಪೂರ್ತಿ ಕುರಾಯಿಸುತ್ತಾನೆ. ಇದರಿಂದ ಎದೆ ವಿಶಾಲವಾಗುತ್ತದೆ. ಅಲ್ಲದೆ ಮುಂಗೈಗಳು, ತೋಳುಗಳು ಮತ್ತು ಸೊಂಟಕ್ಕೆ ಹೆಚ್ಚಿನ ಶಕ್ತಿ ಬರುವುದಲ್ಲದೆ ದಮ್ಮುಕಸ್ತು ನಿಲ್ಲುತ್ತದೆ **(ನೋಡಿ: ಅಂಗಸಾಧನೆ: ಕುಸ್ತಿ ವ್ಯಾಯಾಮ ಶಾಲೆ).** (ಎಚ್.ಕೆ.ಎನ್.)

**ಗರಾಶನಿನ್, ಇಲಿಯ :** 1812–74. ಆಧುನಿಕ ಸರ್ಬಿಯದ ಒಬ್ಬ ರಾಜಕೀಯ ಪ್ರಮುಖ, ದಕ್ಷ ಆಡಳಿತಗಾರ. ಎರಡು ಬಾರಿ ಪ್ರಧಾನಮಂತ್ರಿಯಾಗಿ ಹೆಸರು ಪಡೆದ ಈತ ಧನಿಕ ವ್ಯಾಪಾರಿಯೊಬ್ಬನ ಮಗನಾಗಿ 1812ರ ಜನವರಿ 28ರಂದು ಗರಾಶಿಯಲ್ಲಿ ಜನಿಸಿದ. ಜರ್ಮನ್ ಮತ್ತು ಗ್ರೀಕ್ ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆದ. 1834ರಲ್ಲಿ ಸುಂಕದ ಅಧಿಕಾರಿಯಾದ ಗರಾಶನಿನ್ ಅನಂತರ ಸೈನ್ಯ ಸೇರಿ, ಅದರ ದಳಪತಿಯಾದ. ಮಿಲೋಶ್ ಒಬ್ರೆನೊವಿಚ್ ದೊರೆತನವನ್ನು ತ್ಯಾಗಮಾಡಿದಾಗ (1839) ಗರಾಶನಿನ್ ದೇಶದಿಂದ ಹೊರಹೋಗಿ ತಲೆ ಮರೆಸಿಕೊಂಡಿದ್ದ. 1842ರಲ್ಲಿ ಒಬ್ರೆನೊವಿಚನನ್ನು ಪದಚ್ಯುತಿಗೊಳಿಸಿ ಅಲೆಕ್ಸಾಂಡರ್ ಕಾರಾಜಾರ್ಜೆವಿಚನನ್ನು ದೊರೆಯಾಗಿ ಆಯ್ಕೆ ಮಾಡಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ. ಅನಂತರ ಗೃಹಖಾತೆಯ ಅಧೀನ ಕಾರ್ಯದರ್ಶಿಯಾಗಿಯೂ ಗೃಹಕಾರ್ಯದರ್ಶಿಯಾಗಿಯೂ ನೇಮಕಗೊಂಡ. 1852ರಲ್ಲಿ



ಪ್ರಧಾನಮಂತ್ರಿಯಾದ. ಈತನ ಒಲವು ಪಶ್ಚಿಮ ದೇಶಗಳ ಕಡೆ ಇತ್ತೆಂಬ ಕಾರಣದಿಂದಾಗಿ ಇವನನ್ನು ದೊರೆ ಅಧಿಕಾರದಿಂದ ತೆಗೆದು ಹಾಕಿದ. ಇದಕ್ಕೆ ರಷ್ಯದ ಒತ್ತಡವೇ ಕಾರಣ. ಈತ ಮತ್ತೆ ಗೃಹಕಾರ್ಯದರ್ಶಿಯಾಗಿ ನೇಮಕಗೊಂಡ (1858). ಅಲೆಕ್ಸಾಂಡರನ ಪದತ್ಯಾಗಕ್ಕೆ ಈತನೇ ಕಾರಣ (1858). ದೊರೆ ಮಿಲೋಶ ಒಬ್ರೆನೊವಿಚ್ ಎರಡನೆಯ ಬಾರಿಗೆ ಅಧಿಕಾರಕ್ಕೆ ಬಂದಾಗ ಗರಾಶನಿನ್ ರಾಜಕೀಯದಿಂದ ನಿವೃತ್ತ ನಾದ. 1860ರಲ್ಲಿ ಒಬ್ರೆನೊವಿಚ್ ತೀರಿಕೊಂಡ. ಮೈಕೇಲ್ ಸಿಂಹಾಸನಾರೋಹಣ ಮಾಡಿದ. ಈತ ಗರಾಶನಿನನನ್ನು 1861ರಲ್ಲಿ ಪ್ರಧಾನಮಂತ್ರಿಯಾಗಿ ಮಾಡಿಕೊಂಡ. ಮೈಕೇಲ್ ತನ್ನ ಸೋದರ ಸಂಬಂಧಿ ಕ್ಯಾಟರೀನ ಕಾನ್‌ಸ್ಟಾಂಟಿನೋವಿಚಳನ್ನು ಮದುವೆಯಾಗ ಬಯಸಿದಾಗ ಗರಾಶನಿನ್ ಇದನ್ನು ಒಪ್ಪಲಿಲ್ಲ. ಆದ್ದರಿಂದ ಈತ ಪ್ರಧಾನಿಪದವಿ ಕಳೆದುಕೊಂಡ. 1868ರಲ್ಲಿ ಮೈಕೇಲ್ ಕೊಲೆಯಾದ. ಆಗ ಸರ್ಬಿಯವನ್ನು ಅನಾಯಕತ್ವ ಸ್ಥಿತಿಯಿಂದ ರಕ್ಷಿಸಿದವನು ಗರಾಶನಿನ್. ಮಿಲಾನ್ ಒಬ್ರೆನೊವಿಚ್ ಸಿಂಹಾಸನಾರೋಹಣ ಮಾಡಿದಾಗ ಗರಾಶನಿನ್ ಅಧಿಕಾರದಿಂದ ನಿವೃತ್ತನಾದ. 1874ರ ಜೂನ್ 28ರಂದು ಬೆಲ್‌ಗ್ರೇಡಿನಲ್ಲಿ ನಿಧನನಾದ.

ಗರಾಶನಿನ್ ತನ್ನ ಮೊದಲ ಅಧಿಕಾರಾವಧಿಯಲ್ಲಿ (1843–53) ಸರ್ಬಿಯವನ್ನು ಪ್ರಗತಿಪರವಾಗಿ ಪರಿವರ್ತಿಸಿದ. ದಕ್ಷ ಆಡಳಿತಾಂಗವನ್ನು ಸ್ಥಾಪಿಸಿದ. ಸರ್ಬಿಯದ ಸ್ವಯಮಧಿಕಾರವನ್ನು ರಕ್ಷಿಸುವುದು ಶಕ್ತರಾಷ್ಟ್ರಗಳ ಸಂಯುಕ್ತ ಹೊಣೆಗಾರಿಕೆಯೆಂಬುದಕ್ಕೆ ಪ್ಯಾರಿಸ್ ಒಪ್ಪಂದದಲ್ಲಿ (1856) ಮಾನ್ಯತೆ ದೊರಕಲು ಗರಾಶನಿನ್ ಕಾರಣ. ಗೃಹಾಡಳಿತದಲ್ಲಿ ಈತ ಸಂಪ್ರದಾಯ ನೀತಿ ಅನುಸರಿಸಿದರೂ ವಿದೇಶಾಂಗ ವ್ಯವಹಾರಗಳಲ್ಲಿ ಈತನದು ಧಾರಾಳ ನೀತಿಯಾಗಿತ್ತು. ಗರಾಶನಿನನ ಎರಡನೆಯ ಅಧಿಕಾರಾವಧಿಯಲ್ಲಿ (1861–1867) ಸರ್ಬಿಯದ ಮುಂದಾಳುತನದಲ್ಲಿ ದಕ್ಷಿಣ ಸ್ಲಾವ್ ರಾಜ್ಯಸ್ಥಾಪನೆಗಾಗಿ ಹಲವಾರು ಒಡಂಬಡಿಕೆಗಳನ್ನು ಮಾಡಿಕೊಂಡ.

ಈತನ ಮಗ ಮಿಲ್ಯುಟಿನ್ ಗರಾಶನಿನ್ (1843–1898). ಬೆಲ್‌ಗ್ರೇಡಿನಲ್ಲಿ ಹುಟ್ಟಿದ ಈತ ವಿದ್ಯಾಭ್ಯಾಸ ಮುಗಿಸಿದ ಅನಂತರ 1874ರಲ್ಲಿ ಪಾರ್ಲಿಮೆಂಟ್ ಪ್ರವೇಶಿಸಿದ. 1880–83ರಲ್ಲಿ ಗೃಹಕಾರ್ಯದರ್ಶಿಯಾಗಿ, 1883ರಲ್ಲಿ ವಿಯೆನ್ನದ ಮಂತ್ರಿಯಾಗಿ, 1895–96ರಲ್ಲಿ ಪಾರ್ಲಿಮೆಂಟಿನ ಅಧ್ಯಕ್ಷನಾಗಿದ್ದ. ಮತ್ತೆ ಮಂತ್ರಿಯಾದ. 1898ರಲ್ಲಿ ಮರಣಹೊಂದಿದ. (ಬಿ.ಎಸ್.ಎಚ್.)

**ಗರಿ :** ಹಕ್ಕಿಗಳಲ್ಲಿ ಮಾತ್ರ ಕಾಣಬರುವ ಒಂದು ವಿಶೇಷ ನಿರ್ಜೀವ ರಚನೆ (ಫೆದರ್). ಚರ್ಮದಿಂದ ಉದ್ಭವಿಸುವ ಈ ಕೊಂಬಿನ ರಚನೆ ಹಕ್ಕಿಗಳ ವಾಯುಜೀವನಕ್ಕೆ ಬಲು ಸಹಕಾರಿಯೆನಿಸಿದೆ. ಸರೀಸೃಪಗಳ ದೇಹದಲ್ಲಿ ಕಾಣಬರುವ ಶಲ್ಕೆಗಳಂತೆಯೆ ಗರಿಗಳೂ ಕೂಡ ಕೆರಾಟಿನ್‌ನಿಂದ ಕೂಡಿದ್ದು ಅವುಗಳಂತೆಯೇ ಹುಟ್ಟುತ್ತವೆ. ಇದರಿಂದಾಗಿ ಗರಿಗಳು ಶಲ್ಕೆಗಳಿಂದ ವಿಕಾಸವಾದ ಸಂಕೀರ್ಣ ಬಗೆಯ ರಚನೆಗಳು ಎಂದು ನಂಬಲಾಗಿದೆ. ಆದರೆ ಶಲ್ಕೆಗಳಿಗೂ ಗರಿಗಳಿಗೂ ಸಂಬಂಧ ಕಲ್ಪಿಸುವ ಮಧ್ಯಾಂತರ ಬಗೆಯ ರಚನೆಗಳು ಈವರೆಗೂ ಯಾವುದೇ ಬಗೆಯ ಪ್ರಾಣಿಯಲ್ಲಿ ಕಂಡುಬಂದಿಲ್ಲ. ಜುರಾಸಿಕ್ ಅವಧಿಯಲ್ಲಿ ಜೀವಿಸಿದ್ದು ಆದಿಪಕ್ಷಿಯೆಂದು ಪರಿಗಣಿತವಾಗಿರುವ ಆರ್ಕಿಯಾಪ್ಟೆರಿಕ್ಸ್ ಹಕ್ಕಿಯ ಗರಿಗಳು ಕೂಡ ಆಧುನಿಕ ಹಕ್ಕಿಗಳ ಗರಿಗಳನ್ನೆ ಹೋಲುತ್ತವೆ.

ಕ್ರಿಯೆ, ರಚನೆ ಮತ್ತು ಸ್ಥಾನಗಳ ಆಧಾರದಮೇಲೆ ಗರಿಗಳನ್ನು ಆರು ಬಗೆಯವಾಗಿ ವಿಂಗಡಿಸಬಹುದು.

1. ಕಾಂಟೂರ್ ಅಥವಾ ಹೊದಿಕೆ ಗರಿಗಳು: ಇವು ಪಕ್ಷಿದೇಹವನ್ನು ಮುಚ್ಚುತ್ತವಲ್ಲದೆ ಪಕ್ಷಿದೇಹಕ್ಕೆ ಹೊರರೂಪರಚನೆಯನ್ನು ಸಹ ಕೊಡುತ್ತವೆ. ಇವುಗಳ ಸಂಖ್ಯೆ ಅಪಾರ, ರಚನೆ ಸಂಕೀರ್ಣ. ಇದನ್ನೇ ಪ್ರರೂಪಿ (ಟಿಪಿಕಲ್) ಗರಿಯೆಂದು ತಿಳಿಯಲಾಗಿದೆ.

ಇಂಥ ಒಂದೊಂದು ಗರಿಯೂ ಎಲೆಯಂತೆ ಚಪ್ಪಟೆಯಾಗಿದ್ದು ಹೊರ ಹಾಗೂ ಒಳ ಮೇಲಾಯಗಳಿಂದ ಕೂಡಿರುತ್ತದೆ. ಪ್ರತಿಯೊಂದು ಗರಿಯಲ್ಲಿಯೂ ಕೇಂದ್ರ ಅಕ್ಷಭಾಗ ಮತ್ತು ವೇನ್ (ವೆಕ್ಸಿಲಮ್) ಎಂಬ ಎರಡು ಭಾಗಗಳನ್ನು ಗುರುತಿಸಬಹುದು. ಅಕ್ಷಕ್ಕೆ ದಂಡ (ಶಾಫ್ಟ್) ಎಂದು ಹೆಸರು. ದಂಡವನ್ನು ದೇಹದ ಕಡೆಗಿನ ಕ್ವಿಲ್ ಅಥವಾ ಕಲೀಮಸ್ ಮತ್ತು ವೇನ್ ಭಾಗದಲ್ಲಿನ ರೇಕಿಸ್ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಕ್ವಿಲ್ ಭಾಗದಿಂದಲೇ ಗರಿ ದೇಹಕ್ಕೆ ಅಂಟಿರುವುದು. ಇದು




ಪ್ರರೂಪಿ ಗರಿಯೊಂದರ ಚಿತ್ರ, ವೃತ್ತವೆಳೆದಿರುವ ಗರಿಯ ಭಾಗವನ್ನು ಬಲಗಡೆಯ ಚಿತ್ರದಲ್ಲಿ ದೊಡ್ಡದು ಮಾಡಿ ತೋರಿಸಿದೆ. 1. ಬಾರ್ಬ್, 2. ಬಾರ್ಬ್ಯೂಲ್, 3. ರೇಕಿಸ್, 4. ವೇನ್, 5. ಕ್ವಿಲ್

ಟೊಳ್ಳಾಗಿದ್ದು ಚರ್ಮದಲ್ಲಿನ ತೋಡಿನಲ್ಲಿ ಹುದುಗಿರುತ್ತದೆ. ಕ್ವಿಲ್‌ನ ತುದಿಯಲ್ಲಿ ಸಣ್ಣ ರಂಧ್ರವೊಂದಿದೆ. ಇದಕ್ಕೆ ನಿಮ್ನಪಿಚ್ಛ ರಂಧ್ರವೆಂದು ಹೆಸರು. ಗರಿ ಕೂತುಕೊಳ್ಳುವ ಚರ್ಮದ ತೋಡಿನಲ್ಲಿ ಸಣ್ಣ ಪ್ಯಾಪಿಲವೊಂದು ಇದ್ದು ನಿಮ್ನ ಪಿಚ್ಛರಂಧ್ರದ ಮೂಲಕ ಕ್ವಿಲ್‌ನ ಒಳಗೆ ಚಾಚಿರುತ್ತದೆ. ವೇನಿನಲ್ಲಿ ದಂಡ ಮುಂದುವರಿದು ರೇಕಿಸ್ ಎನಿಸಿಕೊಳ್ಳುತ್ತದೆ. ರೇಕಿಸ್‌ನ ಒಳಭಾಗ ಕ್ವಿಲ್‌ನಂತೆ ಟೊಳ್ಳಾಗಿರದೆ ಗಟ್ಟಿಯಾಗಿದೆ. ಕ್ವಿಲ್ ಮತ್ತು ರೇಕಿಸ್‌ಗಳು ಸಂಧಿಸುವ ಕಡೆ ತಳಭಾಗದಲ್ಲಿ ಇನ್ನೊಂದು ಸೂಕ್ಷ್ಮ ರಂಧ್ರವಿದೆ. ಇದಕ್ಕೆ ಊರ್ಧ್ವ ಪಿಚ್ಛರಂಧ್ರವೆಂದು ಹೆಸರು. ರೇಕಿಸ್‌ನ ಎಡಬಲಗಳಲ್ಲಿ ದಟ್ಟವಾಗಿ ಹಾಗೂ ಒಂದಕ್ಕೊಂದು ಸಮಾನಾಂತರವಾಗಿ ಜೋಡಿಸಲ್ಪಟ್ಟಿರುವ ಅಸಂಖ್ಯಾತ ಎಳೆಗಳಿವೆ. ಇವೇ ಬಾರ್ಬುಗಳು. ರೇಕಿಸ್‌ನ ಅಕ್ಷಕ್ಕೆ ಕೊಂಚ ಓರೆಯಾಗಿ ಜೋಡಿಸಲ್ಪಟ್ಟಿರುವ ಇವನ್ನು ಪರಸ್ಪರ ಬೇರ್ಪಡಿಸುವುದು ಕಷ್ಟ. ಏಕೆಂದರೆ ಬಾರ್ಬ್‌ಗಳು ಒಂದರೊಡನೊಂದು ಹೆಣೆದುಕೊಂಡಿವೆ. ಈ ಹೆಣಿಕೆಯನ್ನು ನೋಡಲು ಸೂಕ್ಷ್ಮದರ್ಶಿಯ ಸಹಾಯ ಬೇಕು. ಪ್ರತಿ ಬಾರ್ಬ್‌ನ ಹಿಮ್ಮುಖ ಮತ್ತು ಮುಮ್ಮುಖದ ಮೇಲೂ ಓರೆ ಓರೆಯಾಗಿ ಹಾಗೂ ಒತ್ತೊತ್ತಾಗಿ ಅಳವಡಿಸಿರುವ ಅಸಂಖ್ಯಾತ ಬಾರ್ಬ್ಯೂಲ್‌ಗಳೆಂಬ ತಂತುಗಳಿರುತ್ತವೆ. ಕ್ವಿಲ್‌ನ ಕಡೆ ಚಾಚಿರತಕ್ಕವು ಮತ್ತು ಗರಿಯ ತುದಿಯೆಡೆಗೆ ಚಾಚಿರುವಂಥವು. ಎರಡು ಬಗೆಯ ಬಾರ್ಬ್ಯೂಲ್‌ಗಳನ್ನು ಗುರುತಿಸಬಹುದು. ಬಾರ್ಬ್ಯೂಲ್‌ಗಳು ಓರೆ ಓರೆಯಾಗಿ ದಟ್ಟವಾಗಿ ಅಳವಡಿಕೆಯಾಗಿರುವುದರಿಂದ ಒಂದು ಬಾರ್ಬ್‌ನ ದೂರಸ್ಥ ಬಾರ್ಬ್ಯೂಲ್‌ಗಳು ಸಮೀಪಸ್ಥ ಬಾರ್ಬ್ಯೂಲ್‌ಗಳನ್ನು ಹಾಯ್ದುಹೋಗುತ್ತವೆ. ಪ್ರತಿ ದೂರಸ್ಥ ಬಾರ್ಬ್ಯೂಲ್‌ನ ಕೊನೆಯ ಕೆಳ ಅಂಚಿನಲ್ಲಿ ಸಣ್ಣ ಸಣ್ಣ ಕೊಕ್ಕೆಗಳಿವೆ. ಇವಕ್ಕೆ ಬಾರ್ಬಿಸೆಲ್‌ಗಳೆಂದು ಹೆಸರು. ಒಂದು ಬಾರ್ಬ್ಯೂಲ್‌ನ ಬಾರ್ಬಿಸೆಲ್‌ಗಳು ಅದರ ಮುಂದಿರುವ ಬಾರ್ಬ್ಯೂಲ್‌ನ ಅಡ್ಡ ಅಂಚುಗಳಿಗೆ ಕೊಂಡಿ ಕೂಡುತ್ತವೆ. ಇದರಿಂದಾಗಿ ಬಾರ್ಬ್ಯೂಲ್‌ಗಳು ಒಂದಕ್ಕೊಂದು ಹೆಣೆದು ಹಿಡಿದು ಕೊಂಡಂತಿರುತ್ತವೆ. ಈ ಬಗೆಯ ಹೆಣಿಗೆಯಿಂದ ವೇನ್ ಮೃದುತ್ವವನ್ನು ಪಡೆಯುತ್ತದೆ. ಈ ಹೆಣಿಗೆಯನ್ನು ಸಡಿಲಿಸುವುದರಿಂದ ಗರಿಜಾಲವನ್ನು ಹರಿಯಬಹುದು. ಸ್ವಾಭಾವಿಕವಾಗಿಯೇ ಹೀಗಾಗಬಹುದು. ಇಂಥ ಸಂದರ್ಭಗಳಲ್ಲಿ ಹರಿದ ಭಾಗವನ್ನು ಪಕ್ಷಿ ತನ್ನ ಕೊಕ್ಕಿನಿಂದ ತೀಡಿ ತೀಡಿ ಬಾಚಿ ಮತ್ತೆ ಹೆಣೆದುಕೊಂಡು ಸರಿಪಡಿಸಿಕೊಳ್ಳ ಬಲ್ಲದು. ಕೆಲವು ಗರಿಗಳಲ್ಲಿ ತಳಭಾಗದ ಬಾರ್ಬ್‌ಗಳು ನೀಳ ಹಾಗೂ ಕೋಮಲ ವಾಗಿರುತ್ತವೆ. ಇವಕ್ಕೆ ನೆರೆಯ ಬಾರ್ಬ್‌ಗಳೊಡನೆ ಸಂಧಿಸುವ ಸಂಯಂತ್ರವಿರುವುದಿಲ್ಲ. ತತ್ಫಲವಾಗಿ ಗರಿಯ ಈ ಭಾಗ ಮೃದುರೋಮೀಯವಾಗಿರುತ್ತವೆ.

ಹಲವು ಹೊದಿಕೆ ಗರಿಗಳ ತಳಭಾಗದಲ್ಲಿ ಕ್ವಿಲ್ ಮತ್ತು ರೇಕಿಸ್‌ಗಳು ಕೂಡುವ ಕಡೆ ಒಂದು ಲೇಶಗರಿ (ಆಫ್ಟರ್ ಶಾಫ್ಟ್) ಅಂಟಿಕೊಂಡಿರುತ್ತವೆ. ಸಾಮಾನ್ಯವಾಗಿ ಇದರಲ್ಲಿ ಕೋಮಲವಾದ ಬಾರ್ಬ್‌ಗಳು ಬಿಡಿಬಿಡಿಯಾಗಿರುತ್ತವೆ. ಲೇಶಗರಿಗಳ ಬೆಳವಣಿಗೆ ವಿವಿಧ ಪಕ್ಷಿಗಳಲ್ಲಿ ಬೇರೆಬೇರೆಯಾಗಿರುವುದೇ ಅಲ್ಲದೆ ಒಂದೇ ಪಕ್ಷಿಯ ಬೇರೆ ಬೇರೆ ಭಾಗದ ಗರಿಗಳಲ್ಲೂ ಭಿನ್ನತೆಯನ್ನು ಪ್ರದರ್ಶಿಸುತ್ತದೆ. ಕ್ಯಾಸೋವರಿ ಮತ್ತು ಈಮ್ಯೂ ಹಕ್ಕಿಗಳಲ್ಲಿ ಲೇಶಗರಿ ಮುಖ್ಯಗರಿಯ ಉದ್ದ ಮತ್ತು ಗಾತ್ರವನ್ನು ಹೋಲುವುದಾದರೂ ಸಾಮಾನ್ಯವಾಗಿ ಪ್ರಧಾನ ಗರಿಗಿಂತ ಇದು ಹೆಚ್ಚು ಕೋಮಲ ಮತ್ತು ಚಿಕ್ಕದು. ಕೆಲವು ಹಾರುವ ಪಕ್ಷಿಗಳ ದೊಡ್ಡ ದೊಡ್ಡ ಗರಿಗಳಲ್ಲಿ ಇದು ಕೆಲವು ಬಾರ್ಬ್‌ಗಳಿಂದ ಕೂಡಿರಬಹುದು ಅಥವಾ ಲೋಪವಾಗಿರಬಹುದು.

ಹಾರುವುದರಲ್ಲಿ ನೆರವಾಗುವ ಪೇನಾಗರಿಗಳು (ಕ್ವಿಲ್ ಫೆದರ್ಸ್) ಇತರ ಹೊದಿಕೆ ಗರಿಗಳಿಗಿಂತ ಬಹು ದೊಡ್ಡವು. ಇವು ರೆಕ್ಕೆ ಮತ್ತು ಬಾಲಗಳಿಗೆ ಮಾತ್ರ ಸೀಮಿತ ವಾಗಿರುತ್ತವೆ. ಈ ಗರಿಗಳ ದಂಡ ಸಾಮಾನ್ಯವಾಗಿ ನೆಟ್ಟಗಿರುತ್ತದೆ. ಆದರೆ ಉಳಿದ ಹೊದಿಕೆ ಗರಿಗಳ ದಂಡ ಸ್ವಲ್ಪ ಬಾಗಿರುತ್ತದೆ. ರೆಕ್ಕೆಯ ಪೇನಾಗರಿಗಳಿಗೆ ರೆಮಿಜೆಸ್ ಎಂದೂ ಬಾಲದ ಪೇನಾಗರಿಗಳಿಗೆ ರೆಟ್ರಿಸಿಸ್ ಎಂದೂ ಹೆಸರು. ರೆಕ್ಕೆಯ ಪೇನಾಗರಿಗಳಲ್ಲಿ ಹಲವು ಬಗೆ. ರೆಕ್ಕೆಯ ಹಿಂಪಾರ್ಶ್ವದಲ್ಲಿ ಅಂಟಿಕೊಂಡು ಹಿಮ್ಮುಖವಾಗಿ ಚಾಚಿರುವ ಗರಿಗಳಲ್ಲಿ ಪ್ರಾಥಮಿಕ ಮತ್ತು ದ್ವಿತೀಯಕ ಗರಿಗಳು ಮುಖ್ಯವಾದವು. ಪ್ರಾಥಮಿಕ ಗರಿಗಳು ಕೈಭಾಗದ ಎಲುಬುಗಳಿಗೂ ದ್ವಿತೀಯಕ ಗರಿಗಳು ಮುಂದೋಳಿನ ಅಲ್ನ ಎಂಬ ಎಲುಬಿಗೂ ಅಂಟಿಕೊಂಡಿರುತ್ತವೆ. ಹೆಬ್ಬೆರಳಿನ ಸ್ಥಳದಲ್ಲಿ ಅಂದರೆ ರೆಕ್ಕೆಯ ಮುಂಭಾಗದ ಕೊನೆಯಲ್ಲಿ ಆಲ ಸ್ಪೂರಿಯ ಎಂಬ ಒಂದು ವಿಶೇಷವಾದ ಚಿಕ್ಕ ಗರಿಗಳ ಗುಂಪು ಇದೆ. ಬಾಲದ ಪೇನಾಗರಿಗಳು ಅರ್ಧವೃತ್ತಾಕಾರದಲ್ಲಿ ಅಳವಡಿಸಿರುತ್ತವೆ. ಇವೇ ಅಲ್ಲದೆ ಬಾಲದ ಹಾಗೂ ರೆಕ್ಕೆಯ ಪೇನಾಗರಿಗಳ ಬುಡದ ಭಾಗವನ್ನು ಮುಚ್ಚುವ ಮೇಲಿನ ಹಾಗೂ ಕೆಳಗಿನ ಬಾಲ ಹಾಗೂ ರೆಕ್ಕೆಯ ಮುಚ್ಚಕ ಗರಿಗಳಿರುತ್ತವೆ (ವಿಂಗ್ ಕವರ್ಟ್ಸ್ ಅಂಡ್ ಟೈಲ್ ಕವರ್ಟ್ಸ್). ಈ ಮುಚ್ಚಕ ಗರಿಗಳಿಗೆ ಟೆಕ್ಟ್ರಿಸೆಸ್ ಎಂದು ಹೆಸರು.

ಹೊದಿಕೆಗರಿಗಳು ಕೆಲವು ಪಕ್ಷಿಗಳಲ್ಲಿ ಬಗೆಬಗೆಯಾಗಿ ಮಾರ್ಪಟ್ಟಿವೆ. ಉದಾಹರಣೆಗೆ ನವಿಲಿನ ತಲೆಯ ಮೇಲಿನ ಸುಂದರವಾದ ತುರಾಯಿ ಹಾಗೂ ವರ್ಣರಂಜಿತವಾದ ಬಾಲದ ನೀಳಗರಿಗಳು, ಮರಕುಟಿಕ, ಕೂಕೂಹಕ್ಕಿಗಳ ತಲೆಯ ಮೇಲಿನ ಗರಿಗಳು.

2 ಅರೆಪುಚ್ಛ ಗರಿಗಳು (ಸೆಮಿ ಪ್ಲೂಮ್ ಫೆದರ್ಸ್) : ಈ ಬಗೆಯ ಗರಿಗಳ ಸಂರಚನೆ ಹೊದಿಕೆ ಗರಿ ಹಾಗೂ ತುಪ್ಪಳ ಗರಿಗಳ ನಡುವಣ ರೀತಿಯಂತಿರುತ್ತದೆ. ಈ ಗರಿಯ ವಿವಿಧ ಭಾಗಗಳು ಹೊದಿಕೆ ಗರಿಯದರಂತೆಯೇ ಇರುತ್ತವೆ. ಆದರೆ ಬಾರ್ಬ್ಯೂಲ್‌ಗಳಲ್ಲಿ ಬಾರ್ಬಿಸೆಲ್‌ಗಳಿರುವುದಿಲ್ಲ. ಅರೆಪುಚ್ಛಗರಿಗಳು ಸಾಮಾನ್ಯವಾಗಿ ದೇಹದ ಎಡಬಲಭಾಗಗಳಲ್ಲಿ ಹಾಗೂ ದೇಹದ ತಳಭಾಗದ ಮೇಲಾಯದಲ್ಲಿ ಕಂಡು ಬರುತ್ತವೆ.

3 ತುಪ್ಪಳ ಗರಿಗಳು : ಹಲವು ಪಕ್ಷಿಗಳ ಮರಿಗಳು ಮೊಟ್ಟೆಯಿಂದ ಹೊರ ಬಂದಾಗ ಒಂದು ವಿಶಿಷ್ಟಬಗೆಯ ಗರಿಗಳಿಂದ ಹೊದೆಯಲ್ಪಟ್ಟಿರುತ್ತವೆ. (ಕೆಲವು ಪಕ್ಷಿಯ ಮರಿಗಳು ಮೊಟ್ಟೆಯಿಂದ ಹೊರಬಂದಾಗ ಬೋಳಾಗಿರುತ್ತವೆ.) ಈ ಬಗೆಯ ತಾತ್ಕಾಲಿಕವಾದ ಗರಿಗಳಿಗೆ ತುಪ್ಪಳ ಗರಿಗಳು ಅಥವಾ ಗೂಡುಮರಿಯ ಗರಿಗಳು ಎಂದು (ನೆಸ್ಟಿಂಗ್ ಫೆದರ್ಸ್) ಹೆಸರು. ದೇಹದ ಶಾಖ ಹೊರಗೆ ಹೋಗದಂತೆ ತಡೆಯುವ ಪ್ರಚಂಡಶಕ್ತಿ ಇವಕ್ಕೆ ಇದೆ. ಮರಿಗಳಲ್ಲಿ ಮಾತ್ರವಲ್ಲದೆ ಇವು ಪ್ರಾಯಸ್ಥ ಪಕ್ಷಿಯ ದೇಹದ ಮೇಲೂ ಹೊದಿಕೆ ಗರಿಗಳ ತಳಭಾಗದಲ್ಲಿ ಬಿಡಿಬಿಡಿಯಾಗಿ ಹರಡಿರುವುದು ಕಂಡುಬರುತ್ತದೆ. ಈ ಬಗೆಯ ಗರಿಯ ದಂಡ ಬಲು ಮೃದುವಾಗಿಯೂ ಕ್ಷೀಣವಾಗಿಯೂ ಇರುತ್ತದೆ. ಇದರ ಮೇಲೆ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಚಿಕ್ಕಚಿಕ್ಕ ಬಾರ್ಬ್ಯೂಲ್‌ಗಳಿಂದ ಕೂಡಿದ ನೀಳವಾದ ಬಳುಕುವಂಥ ಬಾರ್ಬ್‌ಗಳಿರುತ್ತವೆ.

4 ತಂತು ಗರಿಗಳು : ಇವು ಹೊದಿಕೆ ಗರಿಗಳ ನಡುವೆ ಚದರಿದಂತೆ ಹರಡಿರುವ ಮತ್ತು ತೆಳುವಾದ ಕೂದಲಿನಂತಿರುವ ಗರಿಗಳು. ಇವು ಸಾಮಾನ್ಯವಾಗಿ ಹೊದಿಕೆಗಳಂತಿರುವ ಫಾಲಿಕಲ್‌ಗಳ ಬಳಿಯೇ ಗುಂಪುಗುಂಪಾಗಿ ಬೆಳೆಯುತ್ತವೆ. ಒಂದೊಂದು ತಂತುಗರಿಗೂ ಒಂದು ನೀಳವಾದ ದಾರದಂತಿರುವ ದಂಡ ಇರುತ್ತದೆ. ಇದರ ತುದಿಯಲ್ಲಿ ಚಿಕ್ಕ ಚಿಕ್ಕ ಬಾರ್ಬ್ಯೂಲ್‌ಗಳಿಂದ ಕೂಡಿದ ದುರ್ಬಲವಾದ ಹಾಗೂ ಬಿಡಿಬಿಡಿಯಾದ ಬಾರ್ಬ್‌ಗಳಿವೆ. ಇವು ಎಲ್ಲ ಪಕ್ಷಿಗಳಲ್ಲಿ ಕಾಣಬರುತ್ತವೆ. ಕಾರ್ಮೊರಾಂಟ್ ಪಕ್ಷಿಗಳಲ್ಲಿ ಇವು ಹೊದಿಕೆ ಗರಿಗಳಿಂದ ಹೊರ ಚಾಚಿರುತ್ತವೆ. ಇವು ಹೊದಿಕೆ ಗರಿಗಳ ಅಪಭ್ರಷ್ಟವಾದ ರಚನೆಗಳು.

5 ಬಿರುಗೂದಲ ಗರಿಗಳು : ಇವು ಹೊದಿಕೆ ಗರಿಗಳ ಒಂದು ರೀತಿಯ ಮಾರ್ಪಾಟು. ಇವು ಒಂದೊಂದಕ್ಕೂ ಒಂದು ಚಿಕ್ಕ ದಂಡವೂ ಇದರ ತಳಭಾಗದಲ್ಲಿ ಕೆಲವು ಬಿಡಿ ಬಿಡಿಯಾದ ಚಿಕ್ಕ ಚಿಕ್ಕ ಬಾರ್ಬ್‌ಗಳೂ ಇವೆ. ಇವು ಸಾಮಾನ್ಯವಾಗಿ

ಕೆಲವು ಕೀಟಭಕ್ಷಿ ಪಕ್ಷಿಗಳಲ್ಲಿ ಮೂಗು ಮತ್ತು ಬಾಯಿಯ ಬಳಿ ಕಂಡುಬರುತ್ತವೆ. ಇವಕ್ಕೆ ಸಂವೇದನಾತ್ಮಕ ಕ್ರಿಯೆಯಿರುವುದೆಂದು ಹೇಳಲಾಗಿದೆ.

6 ದೂಳು ಗರಿಗಳು : ಇವು ಬಕ, ಕಬ್ಬಾರೆ, ಕೊಕ್ಕರೆ ಮೊದಲಾದ ಕೆಲವು ಜಲಚರ ಪಕ್ಷಿಗಳಲ್ಲಿ ಕಂಡುಬರುತ್ತವೆ. ದೇಹದ ಕೆಲವು ಪ್ರದೇಶಗಳಲ್ಲಿ ಮಾತ್ರ ಬೆಳೆಯುವ ಈ ಗರಿಗಳು ಬೆಳೆದಮೇಲೆ ನಯವಾದ ಪುಡಿ ಅಥವಾ ದೂಳಾಗಿ ಮಾರ್ಪಡುತ್ತವೆ. ಹಕ್ಕಿಗಳು ಈ ದೂಳನ್ನು ಇತರ ಗರಿಗಳಿಗೆ ಸವರಲು ಉಪಯೋಗಿಸುತ್ತವೆ. ಬಾಲದ ಬಳಿಯಿರುವ ತೈಲಗ್ರಂಥಿಯಿಂದ ಪಡೆದ ತೈಲ ಮತ್ತು ಈ ದೂಳು ಗರಿಗಳಿಗೆ ನೀರು ಅಂಟದಂತೆ ನೋಡಿಕೊಳ್ಳುತ್ತವೆ.

ಉಷ್ಟ್ರಪಕ್ಷಿ, ಈಮ್ಯೂ ಮೊದಲಾದ ಹಾರಲಾಗದ ಪಕ್ಷಿಗಳಲ್ಲಿ ಗರಿಗಳು ಸಾಮಾನ್ಯವಾಗಿ ದೇಹದ ಮೇಲೆಲ್ಲ ಏಕರೂಪವಾಗಿ ಬೆಳೆಯುತ್ತವೆ. ಆದರೆ ಹಾರುವ ಪಕ್ಷಿಗಳಲ್ಲಿ ಇವು ಚರ್ಮದ ಮೇಲಿನ ನಿರ್ದಿಷ್ಟ ಪಥ ಅಥವಾ ಕ್ಷೇತ್ರಗಳಲ್ಲಿ ಮಾತ್ರ ಬೆಳೆಯುತ್ತವೆ. ಪಕ್ಷಿದೇಹದ ಮೇಲಿನ ಗರಿ ವಿನ್ಯಾಸಕ್ಕೆ ಟೆರಿಯೋಲೋಸಿಸ್ ಎಂದು ಹೆಸರು; ಗರಿಗಳು ಬೆಳೆಯುವ ಪಥಗಳಿಗೆ ಟೆರಿಲಗಳೆಂದೂ ಅವುಗಳ ನಡುವಣ ಪ್ರದೇಶಕ್ಕೆ ಆಪ್ಟೆರಿಲಗಳೆಂದೂ ಹೆಸರು. ಟೆರಿಲಗಳು ಒಂದೊಂದು ಪಕ್ಷಿಗಣಕ್ಕೂ ಒಂದೊಂದು ಬಗೆಯವಾಗಿರುವುದರಿಂದ ಇವನ್ನು ಹಕ್ಕಿಗಳ ವರ್ಗೀಕರಣದಲ್ಲಿ ಬಳಸುತ್ತಾರೆ. ಎದೆ, ಬೆನ್ನೆಲುಬು, ಕುತ್ತಿಗೆಯ ಇಕ್ಕಡೆಗಳು, ಎದೆಯ ಇಕ್ಕಡೆಗಳು, ಉದರದ ಇಕ್ಕಡೆಗಳು, ಭುಜವನ್ನು ಕೂಡಿಸುವ ಕ್ಷೇತ್ರ, ಕಾಲಿನ ಮೇಲಿನ ಎರಡು ಕ್ಷೇತ್ರಗಳು ಹಾಗೂ ರೆಕ್ಕೆ ಮತ್ತು ಜಾಲದ ಗರಿಗಳು ಬೆಳೆವ ಪ್ರದೇಶ ಇವು ಪ್ರಧಾನವಾದ ಗರಿಪಥಗಳು.

ಸಾಮಾನ್ಯವಾಗಿ ಎಲ್ಲ ಹಕ್ಕಿಗಳಲ್ಲಿ ಬೇಸಗೆ ಮುಕ್ತಾಯವಾದಂತೆ ಗರಿಗಳು ಉದುರುತ್ತವೆ. ಕೆಲವು ಪಕ್ಷಿಗಳಲ್ಲಿ ವಸಂತಋತುವಿನಲ್ಲಿ ಅಂದರೆ ಸಂತಾನೋತ್ಪತ್ತಿಗೆ ಮುನ್ನ ಗರಿಗಳು ಭಾಗಶಃ ಅಥವಾ ಸಂಪೂರ್ಣವಾಗಿ ಕಳಚಿಬೀಳುತ್ತವೆ. ಹಾರಾಟದಲ್ಲಿ ನೆರವಾಗುವ ಪೇನಾಗರಿಗಳು ಕೆಲವು ಪಕ್ಷಿಗಳಲ್ಲಿ ಜೋಡಿ ಜೋಡಿಯಾಗಿ ಉದುರಿದರೆ ಬಾತು ಮತ್ತು ನೀರುಕೋಳಿಗಳಲ್ಲಿ ಈ ಗರಿಗಳು ಒಟ್ಟಿಗೆ ಕಳಚಿ ಬೀಳುತ್ತವೆ. ಇದರಿಂದ ಅವು ಹಲವು ವಾರಗಳ ಕಾಲ ಹಾರಲಾರವು. ಅನಂತರ ಹೊಸಗರಿಗಳು ಹಳೆಗರಿಗಳಿದ್ದ ಸ್ಥಳದಲ್ಲಿಯೇ ಮೂಡಿಬರುತ್ತವೆ.

ಸರೀಸೃಪಗಳು ಶಲ್ಕೆಗಳಂತೆ ಗರಿಗಳು ಕೂಡ ಚರ್ಮದ ಪ್ಯಾಪಿಲಗಳಿಂದ ಮೂಡಿ ಬರುತ್ತವೆ. ಹಾಗೂ ಭ್ರೂಣಾವಸ್ಥೆಯಿಂದಲೇ ವಿಭೇದನೆ ಹೊಂದಲು ಪ್ರಾರಂಭಿಸುತ್ತವೆ. ಕೋಳಿಮರಿಯ ಭ್ರೂಣದಲ್ಲಿ ಗರಿಮೂಲ (ಫೆದರ್ ಜೆರ್ಮ್) ಕಾವು ಕೂತ $6\frac{1}{2}$ ದಿವಸಗಳಲ್ಲಿಯೇ ಕಾಣಿಸಿಕೊಂಡು ಬೆಳೆಯಲಾರಂಭಿಸುತ್ತದೆ. ಪ್ರತಿ ಗರಿ ಮೂಲವೂ ಚರ್ಮದ ಮೇಲೆ ಬೊಬ್ಬೆಯಂತೆ ಕಾಣಿಸಿಕೊಂಡು ಕ್ರಮೇಣ ಚರ್ಮದ ಹಳ್ಳದಲ್ಲಿ ಕೆಳಕ್ಕಿಳಿಯುತ್ತದೆ. ಈ ಹಳ್ಳಕ್ಕೆ ಗರಿಕೂಪ (ಫೆದರ್ ಫಾಲಿಕಲ್) ಎಂದು ಹೆಸರು. ಗರಿಕೂಪದ ತಳಭಾಗದಲ್ಲಿ ಗರಿಪ್ಯಾಪಿಲ ಮೇಲೆದ್ದು ನಿಂತಿರುತ್ತದೆ. ಪ್ರತಿಪ್ಯಾಪಿಲವೂ ಸೂಕ್ಷ್ಮರಕ್ತನಾಳಗಳಿಂದ ಕೂಡಿದ ಡರ್ಮಿಸ್ ಹಾಗೂ ಅದರ ಮೇಲಿನ ಎಪಿಡರ್ಮಿಸಿನ ಹೊದಿಕೆಯಿಂದ ಕೂಡಿರುತ್ತದೆ. ಡರ್ಮಿಸ್ ಭಾಗ ಬೆಳೆಯುವ ಗರಿಗೆ ಪೋಷಣಾಂಶವನ್ನು ಒದಗಿಸುತ್ತದೆ. ಎಪಿಡರ್ಮಿಸ್‌ನಲ್ಲಿ ಸ್ಟ್ರಾಟಂ ಕಾರ್ನಿಯಂ ಮತ್ತು ಸ್ಟ್ರಾಟಂ ಮಾಲ್ಫೀಗಿ ಎಂಬ ಎರಡು ಪದರಗಳಿವೆ. ಮಾಲ್ಫೀಗಿ ಪದರದ ಚಟುವಟಿಕೆಗಳಿಂದ ಗರಿಗಳು ರೂಪುಗೊಳ್ಳುತ್ತವೆ. ಹೊರಗಿನ ಕಾರ್ನಿಯಂ ಪದರ ಬೆಳೆಯುವ ಗರಿಗೆ ಕೊಂಬಿನಿಂದಾದ ಒಂದು ತಾತ್ಕಾಲಿಕವಾದ ಹೊದಿಕೆಯನ್ನು ರಚಿಸುತ್ತದೆ. ಗರಿ ಬೆಳೆದು ಚರ್ಮದ ಮೇಲೆ ಮೂಡಿಬಂದ ಮೇಲೆ ಈ ಆವರಣ ಕಳಚಿ ಬೀಳುತ್ತದೆ. ಸಾಧಾರಣವಾಗಿ ಪೂರ್ಣವಾಗಿ ಬೆಳೆದ ಮೇಲೆ ಫಾಲಿಕಲ್ಲಿನ ಡರ್ಮಿಸ್ ಭಾಗ ಗರಿಯ ಕ್ವಿಲ್‌ನ ಒಳಭಾಗದಿಂದ ಕೆಳಗಿಳಿಯುತ್ತದೆ. ಆದರೆ ಜಪಾನಿನ ಫೀನಿಕ್ಸ್ ಕೋಳಿಯ ಬಾಲದ ಮಧ್ಯದ ಗರಿಗಳು ಹಲವು ವರ್ಷಗಳು ಬೆಳೆಯುತ್ತಲೇ ಇದ್ದು ಸುಮಾರು ಆರು ಮೀಟರು ಉದ್ದದಷ್ಟಾಗುತ್ತವೆ.

ಗರಿಗಳಲ್ಲಿ ವರ್ಣವಿನ್ಯಾಸ ಕೆಂಪು, ಕಪ್ಪು, ಕಂದು, ಕಿತ್ತಳೆ, ಹಳದಿ ಹೀಗೆ ವೈವಿಧ್ಯಮಯ. ಬಣ್ಣಗಳಿಗೆ ಗರಿಗಳಲ್ಲಿನ ವರ್ಣಕಗಳೇ ಕಾರಣ. ಪಕ್ಷಿಗಳ ವರ್ಣ ವಿನ್ಯಾಸದಲ್ಲಿ ಲೈಂಗಿಕ ದ್ವಿರೂಪತ್ವವನ್ನೂ ಕಾಣಬಹುದು. ಗಂಡಿನ ಗರಿಗಳು ಹೆಣ್ಣಿನ ಗರಿಗಳಿಗಿಂತ ಹೆಚ್ಚು ಮನಮೋಹಕ ಹಾಗೂ ಆಕರ್ಷಕ. ಬಹುಶಃ ಹೆಣ್ಣನ್ನು ಒಲಿಸಿಕೊಳ್ಳುವುದಕ್ಕಾಗಿ ಹೀಗಿರಬಹುದು.

ಗರಿಗಳಿಂದ ಪಕ್ಷಿಗಳಿಗೆ ಹಲವು ಬಗೆಯ ಉಪಯೋಗಗಳಿವೆ. ಇವು ಹಾರಾಟದ ಸಾಧನಗಳಾಗಿರುವುದಲ್ಲದೆ ದೇಹವನ್ನೆಲ್ಲ ಆವರಿಸಿರುವುದರಿಂದ ದೇಹದ ಶಾಖ ಹೊರಗೆ ಹೋಗದಂತೆ ಸಂರಕ್ಷಿಸುತ್ತವೆ, ಬಿಸಿಲು ಮಳೆ, ಗಾಳಿಗಳಿಂದ ಒಳಚರ್ಮವನ್ನು ಕಾಪಾಡುತ್ತವೆ; ಕೆಲವು ಸಂದರ್ಭಗಳಲ್ಲಿ ಶತ್ರುಗಳ ಕಣ್ಣಿಗೆ ಬೀಳದಂತಿರಲು ನೆರವಾಗ ಬಹುದು. ಉದಾಹರಣೆಗೆ ಟಾರ್ಮಿಗನ್ ಹಕ್ಕಿಯ ಗರಿಗಳ ಬಣ್ಣ ಬೇಸಗೆಯಲ್ಲಿ ಬೂದಿಮಿಶ್ರಿತ ಕಂದುಬಣ್ಣವಾದರೆ ಚಳಿಗಾಲದಲ್ಲಿ ಬಿಳಿ. ಮೊದಲನೆಯ ಬಣ್ಣ ಎಲೆಗಳ ಬಣ್ಣದೊಂದಿಗೆ ಐಕ್ಯವಾದರೆ ಬಿಳುಪು ಮಂಜಿನೊಡನೆ ಮಿಲನಗೊಳ್ಳುತ್ತದೆ. ಗಿಳಿಗಳನ್ನು ಹಸಿರೆಲೆಗಳ ಮಧ್ಯೆ ಗುರುತಿಸುವುದು ಕಷ್ಟ.

ಗರಿಗಳಿಂದ ಮಾನವನೂ ಹಲವು ಬಗೆಯ ಉಪಯೋಗಗಳನ್ನು ಪಡೆಯುತ್ತಿದ್ದಾನೆ. ಹಂಸ, ಬಾತು ಮುಂತಾದ ಕೆಲವು ಪಕ್ಷಿಗಳ ಗರಿಗಳಿಗೆ ಸ್ಥಿತಿಸ್ಥಾಪನಶಕ್ತಿ, ಮೃದುತ್ವ ಮೊದಲಾದ ವಿಶೇಷ ಲಕ್ಷಣಗಳಿರುವುದರಿಂದ ಇವುಗಳ ತುಪ್ಪಳ ಗರಿಗಳು ಹಾಸಿಗೆದಿಂಬು, ಒರಗುದಿಂಬು, ಮೇಲುಹೊದಿಕೆ ಮೊದಲಾದುವುಗಳ ಉಪಯೋಗಕ್ಕೆ ಬರುತ್ತವೆ. ಲೇಖನಿಗಳು ಬಳಕೆಗೆ ಬರುವ ಮುನ್ನ ಹಂಸ, ಬಾತು, ಹದ್ದು, ಕಾಗೆ, ಗೂಬೆ, ಟರ್ಕಿಕೋಳಿ ಮೊದಲಾದ ಪಕ್ಷಿಗಳ ಪೇನಾಗರಿಗಳನ್ನು ಬರೆವಣಿಗೆಯ ಉಪಕರಣವನ್ನಾಗಿ ಉಪಯೋಗಿಸುತ್ತಿದ್ದರು. ಪಾಶ್ಚಾತ್ಯ ದೇಶದಲ್ಲಿ ಕೆಲವು ವರ್ಣವೈವಿಧ್ಯವನ್ನುಳ್ಳ ಗರಿಗಳನ್ನು ಹೆಂಗಸರ ಟೋಪಿಗಳ ಅಲಂಕಾರಕ್ಕಾಗಿ ಉಪಯೋಗಿಸುತ್ತಾರೆ. ಅಮೆರಿಕದ ರೆಡ್ ಇಂಡಿಯನ್ನರು ತಮ್ಮ ತಲೆಗೆ ಧರಿಸುವ ಗರಿಗಳ ಕಿರೀಟಗಳಲ್ಲಿ ಗೋಲ್ಡನ್ ಈಗಲ್ ಮೊದಲಾದ ಪಕ್ಷಿಗಳ ಗರಿಗಳನ್ನು ಉಪಯೋಗಿಸುತ್ತಾರೆ. ಗೂಬೆಯ ಗರಿಗಳು ಬ್ರಷ್ಷುಗಳ ತಯಾರಿಕೆಗೆ ಬರುತ್ತವೆ. ನೀಳವಾದ ಗರಿಗಳನ್ನು ಕಂತೆಕಟ್ಟಿ ಪೊರಕೆಗಳನ್ನು ಮಾಡುವುದುಂಟು. ಷಟಲ್‌ಕಾಕ್ (ಬ್ಯಾಡ್ಮಿಂಟನ್) ಚೆಂಡುಗಳ ತಯಾರಿಕೆಯಲ್ಲಿ ಕೆಲವು ಬಗೆಯ ಗರಿಗಳ ಬಳಕೆಯಿದೆ.

ಪಕ್ಷಿಗಳು ಗರಿಗಳಿಗಾಗಿ ಕೊಲ್ಲಲ್ಪಟ್ಟು ವಿನಾಶದಂಚಿಗೆ ಬಂದಿರುವುದರಿಂದ ಬಹುಪಾಲು ರಾಷ್ಟ್ರಗಳಲ್ಲಿ ಹಕ್ಕಿಗಳ ರಕ್ಷಣೆಗಾಗಿ ಕಾನೂನುಗಳನ್ನು ಜಾರಿ ಮಾಡಲಾಗಿದ್ದು, ಇವುಗಳ ಬೇಟೆಯನ್ನು ನಿಷೇಧಿಸಲಾಗಿದೆ. (ಬಿ.ಎನ್.ಬಿ.)

**ಗರಿಕೆಹುಲ್ಲು :** ಪೋಯೇಸೀ (ಗ್ರಾಮಿನೀ) ಕುಟುಂಬಕ್ಕೆ ಸೇರಿದ ಸೈನೊಡಾನ್ ಡ್ಯಾಕ್ಟಿಲಾನ್ ಎಂಬ ವೈಜ್ಞಾನಿಕ ಹೆಸರಿನ ಒಂದು ಬಹುವಾರ್ಷಿಕ ಹುಲ್ಲು ಗಿಡ. ಕುಡಿಗರಿಕೆ. ಪರ್ಯಾಯ ನಾಮ. ಬರ್ಮ್ಯುಡ ಹುಲ್ಲು, ಬಹಾಮ ಹುಲ್ಲು ಎಂಬ ಹೆಸರುಗಳೂ ಇವೆ. ಇದನ್ನೆ ಬಹುವಾಗಿ ಹೋಲುವ ಇನ್ನಿತರ ಸುಮಾರು 10 ಬಗೆಯ ಹುಲ್ಲುಗಳಿವೆ. ಇವಕ್ಕೂ ರೂಢಿಯಲ್ಲಿ ಗರಿಕೆ ಹುಲ್ಲು ಎಂದೇ ಹೆಸರು. ಇವೆಲ್ಲ ಹಬ್ಬಿ ಹರಡಿಕೊಳ್ಳುವ ಬಹುವಾರ್ಷಿಕ ಸಸ್ಯಗಳು. ಇವುಗಳಲ್ಲೆಲ್ಲ ಗರಿಕೆಹುಲ್ಲು ದನಕರುಗಳಿಗೆ ಬಹು ಮುಖ್ಯವಾದ ಆಹಾರವೆನಿಸಿದೆ.

ಯೂರೇಷ್ಯದ ಮೂಲ ನಿವಾಸಿಯಾದ ಇದು ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲೆಲ್ಲ ಬೆಳೆಯುತ್ತಿದೆ. ಭಾರತದಲ್ಲಿ ಸಮುದ್ರಮಟ್ಟದಿಂದ ಹಿಡಿದು 2500 ಮೀ ಎತ್ತರದ ವರೆಗಿನ ಪ್ರದೇಶಗಳಲ್ಲಿ ಇದನ್ನು ಕಾಣಬಹುದು. ರಸ್ತೆ ಮತ್ತು ಕಾಲುದಾರಿಗಳ ಅಂಚಿನಲ್ಲಿ ಸಮೃದ್ಧಿಯಾಗಿ ಬೆಳೆದಿರುತ್ತದೆ. ಬಂಜರು ಬಿಟ್ಟಿರುವ ಭೂಮಿಯನ್ನು ಈ ಹುಲ್ಲು ಬಹುಬೇಗ ಆವರಿಸಿಕೊಳ್ಳುವುದು. ಇದು ಎಲ್ಲ ಬಗೆಯ ಮಣ್ಣುಗಳಲ್ಲಿ ಬೆಳೆಯ ಬಲ್ಲದಾದರೂ ಗಟ್ಟಿ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ವರ್ಷದ ಎಲ್ಲ ಕಾಲಗಳಲ್ಲೂ ಹೂ ಬಿಡುವುದು ಇದರ ಪ್ರಮುಖ ಲಕ್ಷಣ ಗಳಲ್ಲೊಂದು. ಗರಿಕೆ ಹುಲ್ಲನ್ನು ಕಾಂಡ ಅಥವಾ ಬೇರು ಭಾಗ ಗಳನ್ನು ಕತ್ತರಿಸಿ ನೆಟ್ಟು ಬೆಳೆಸಬಹುದು. ಬೀಜಗಳಿಂದಲೂ ಬೆಳೆಸಬಹುದು. ರೆಂಬೆಗಳಲ್ಲಿ ಗೆಣ್ಣುಗಳಲ್ಲಿ ಬೇರು ಬಿಟ್ಟುಕೊಂಡು ಹಬ್ಬಿ ಹರಡಿಕೊಳ್ಳುತ್ತವೆ. ಕಾಂಡದ ಕವಲುಗಳು ಬಳ್ಳಿಯಂತೆ 1–1.2 ಮೀ ಉದ್ದಕ್ಕೆ ಬೆಳೆಯುತ್ತವೆ. ಮಳೆಗಾಲದಲ್ಲಿ 5–7 ಮೀ ವರೆಗೂ ವರ್ಧಿಸಿರುವುದುಂಟು. ಹೂಗಳು ಸ್ಪೈಕ್ ಮಾದರಿಯ ಗೊಂಚಲಲ್ಲಿ ಸಮಾವೇಶಗೊಂಡಿವೆ. ಒಂದೊಂದು ಗೊಂಚಲಲ್ಲೂ 3–6 ಕವಲು ಗೊಂಚಲುಗಳಿರುತ್ತವೆ.

ಬೇರಾವ ಹುಲ್ಲಿಗಿಂತಲೂ ದನಕರುಗಳಿಗೆ, ಅದರಲ್ಲೂ ಕುದುರೆಗಳಿಗೆ, ಹೆಚ್ಚು ಉಪಯುಕ್ತವಾದ ಮೇವೆಂದರೆ ಗರಿಕೆಹುಲ್ಲು. ಇದನ್ನು ಹಸಿಯಾಗಿ ಇಲ್ಲವೆ ಒಣಗಿಸಿ ತಿನ್ನಿಸಬಹುದು. ಕಾಕಂಬಿ ಜೊತೆಯಲ್ಲಿ ಬೆರೆಸಿ ಕೆಡದಂತೆ ಅನೇಕ ವರ್ಷಗಳವರೆಗೆ ಇದನ್ನು ಕಾದಿಟ್ಟ ಹುಲ್ಲಾಗಿ ಅಥವಾ ಹಗೇವು ಮೇವಾಗಿ ಇಡಬಹುದು. ಬಲು

ಪುಷ್ಟಿದಾಯಕವೆಂದು ಹೆಸರಾಗಿರುವ ಇದರಲ್ಲಿ ಕಚ್ಚಾಪ್ರೋಟೀನ್ ಶೇ. 10.47, ನಾರು ಶೇ. 28.17, ಸಾರಜನಕಮುಕ್ತವಸ್ತುಗಳು ಶೇ. 47.8, ಈಥರ್ ಅಂಶ ಶೇ. 1.80 ಮತ್ತು ವಿವಿಧ ಖನಿಜಾಂಶಗಳು ಶೇ. 11.75, ಇರುವುದು ಕಂಡುಬಂದಿದೆ.

ತೆನೆ ಬಿಟ್ಟಾಗ ಇದನ್ನು ಕತ್ತರಿಸಿ ಒಣಗಿಸುವುದು ರೂಢಿಯಲ್ಲಿರುವ ಕ್ರಮ. ಒಂದು ಎಕರೆಗೆ 15–20 ಮಣದಷ್ಟು ಹುಲ್ಲು ದೊರೆಯುತ್ತದೆ. ಸರಿಯಾಗಿ ಗೊಬ್ಬರ ಮತ್ತು ನೀರನ್ನು ಒದಗಿಸಿ ಇಳುವರಿಯನ್ನು ಹೆಚ್ಚಿಸಬಹುದು. ವರ್ಷಕ್ಕೆ ಕೊನೆಯ ಪಕ್ಷ 4 ಬಾರಿ ಕಟಾಯಿಸಬಹುದು. ಇದರ ಗುಪ್ತಕಾಂಡಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ, ಸಗಣಿಯೊಂದಿಗೆ ಬೆರೆಸಿ ಕೆತ್ತಿದ ಭೂಮಿಯ ಮೇಲೆ, ಮಳೆ ಪ್ರಾರಂಭವಾಗುವ ಮುನ್ನ ಹಾಕಿದರೆ, ಮಳೆಗಾಲದ ಕೊನೆಗೆ ಚೆನ್ನಾಗಿ ಬೆಳೆದು ಹರಡಿಕೊಳ್ಳುತ್ತದೆ.

ಗರಿಕೆಹುಲ್ಲು ಇಷ್ಟು ಉಪಯುಕ್ತವಾದರೂ ಇದು ಒಂದು ಕಡೆ ಬೇರೂರಿದ ಮೇಲೆ ಇದನ್ನು ನಿರ್ಮೂಲ ಮಾಡುವುದು ಕಷ್ಟ. ವ್ಯವಸಾಯದ ಭೂಮಿಗಳನ್ನು ಇದು ಒಂದು ಅಪಾಯಕಾರಿ ಕಳೆಯಾಗಿ ಬಹುಬೇಗ ಆವರಿಸಿಕೊಳ್ಳುವುದು. ಅಲ್ಲಿ ಬೆಳೆದಿರುವ ಪೈರುಗಳನ್ನು ಹಾಳು ಮಾಡುವುದಲ್ಲದೆ ಕೆಲವೇ ವರ್ಷಗಳಲ್ಲಿ ಅಲ್ಲಿರುವ ಮಣ್ಣಿನ ಸಾರವನ್ನೆಲ್ಲ ಹೀರಿ ನೆಲವನ್ನು ವ್ಯವಸಾಯಕ್ಕೆ ಅನುಪಯುಕ್ತವಾಗಿ ಮಾಡುತ್ತದೆ. ಬೇಸಗೆಯಲ್ಲಿ ಭೂಮಿಯನ್ನು ಆಳವಾಗಿ ಉತ್ತು ಗರಿಕೆಹುಲ್ಲಿನ ಬೇರುಗಳನ್ನು ಬಿಸಿಲಿಗೆ ಬಿಡುವುದರ ಮೂಲಕ ಇದನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು. ಇಂಥ ಭೂಮಿಯಲ್ಲಿ ಗೋದಿಯ ಬೆಳೆಯನ್ನು ಬೆಳೆಸುವುದರಿಂದ ಹುಲ್ಲಿನ ಕಳೆ ಬಹುಮಟ್ಟಿಗೆ ನಿರ್ಮೂಲವಾಗುವುದೆಂಬ ಅಂಶ ಈಚೆಗೆ ಗೊತ್ತಾಗಿದೆ. ಬಹುಶಃ ಗೋದಿ ಬೆಳೆಗೆ ಮಾಡುವ ವ್ಯವಸಾಯ ಕ್ರಮ ಗರಿಕೆಹುಲ್ಲಿಗೆ ಮಾರಕವೆನಿಸಬಹುದು.

ಗರಿಕೆಹುಲ್ಲಿನ ಕಷಾಯ ಮೂತ್ರಸ್ರಾವವನ್ನು ಹೆಚ್ಚಿಸುತ್ತದೆ. ಜಲೋದರ ರೋಗಕ್ಕೆ ಔಷಧವಾಗಿಯೂ ಇದರ ಬಳಕೆ ಉಂಟು. ಬೇರು ಮತ್ತು ಗುಪ್ತಕಾಂಡಗಳಿಂದ ಮೂತ್ರಜನಕಾಂಗ ಮತ್ತು ಜನನಾಂಗಗಳ ಕೆಲವು ರೋಗಗಳ ನಿವಾರಣೆಗೆ ಔಷಧಿಯನ್ನು ತಯಾರಿಸುತ್ತಾರೆ. ರಕ್ತಸ್ರಾವವನ್ನು ತಡೆಯಲು ಕೂಡ ಇದನ್ನು ಬಳಸುವುದುಂಟು.

(ಕೆ.ಎಸ್.ಜೆ.; ಎಂ.)

**ಗರಿನಕ್ಷತ್ರ :** ಕಂಟಕಚರ್ಮಿಗಳ ವಂಶದ ಪೆಲ್ಮಟೋಜ಼ೋವ ಉಪವಂಶದ ಕ್ರೈನಾಯ್ಡಿಯ ವರ್ಗಕ್ಕೆ ಸೇರಿದ ಸಮುದ್ರವಾಸಿಗಳಿಗಿರುವ ಸಾಮಾನ್ಯ ಹೆಸರು (ಫೆದರ್ ಸ್ಟಾರ್, ಸೀ ಲಿಲ್ಲಿ). ಸು. 3500 ಮೀ ಆಳದಲ್ಲಿ ಯಾವುದಾದರೂ ಅಧಃಸ್ತರಕ್ಕೆ (ಸಬ್‌ಸ್ಟ್ರಾಟಮ್) ಅಂಟಿಕೊಂಡಿರುತ್ತದೆ. ಇದಕ್ಕೆಂದೇ ಅಧೋಭಾಗದಲಿ ಉದ್ದವಾದ ತೊಟ್ಟಿದೆ. ರೈಜ಼ೊಕ್ರೈನಸ್ ಮತ್ತು ಪೆಂಟ್ರಾಕ್ರೈನಸ್ ಈ ತೆರನ ಪ್ರಾಣಿಗಳು. ಅದರೆ ಆಂಟೆಡಾನ್ ಮಾತ್ರ ಕಾಂಡದಿಂದ ತುಂಡಾಗಿ ತನ್ನ ಬಾಹುಗಳ ಸಹಾಯದಿಂದ ಸಮುದ್ರದಲ್ಲಿ ಈಜಬಲ್ಲದು. ಪೆಡಸು ನಕ್ಷತ್ರ ಮತ್ತು ನಕ್ಷತ್ರಗಳಲ್ಲಿರುವಂತೆ ಇದರಲ್ಲಿಯೂ ಮಧ್ಯತಟ್ಟೆ ಮತ್ತು ಅದರಿಂದ ಹೊರಡುವ ಐದು ಬಾಹುಗಳಿವೆ. ಮಧ್ಯತಟ್ಟೆಗೆ ಕೇಲಿಕ್ಸ್ ಎಂದು ಹೆಸರು. ಪ್ರತಿ ಬಾಹುವೂ ಬುಡದಲ್ಲಿ ಎರಡಾಗಿ ಕವಲೊಡೆದಿರುವುದರಿಂದ ಹತ್ತು ನೀಳವಾದ, ನಮ್ಯವಾದ ಮತ್ತು ಉದ್ದವಾದ ಬಾಹುಗಳಿರುವಂತೆ ಭಾಸವಾಗುತ್ತದೆ. ಪ್ರತಿಯೊಂದು ಕವಲಿನಲ್ಲೂ ಪಿನ್ನ್ಯೂಲುಗಳೆಂಬ ಸಣ್ಣ ಸಣ್ಣ ಕವಲುಗಳಿವೆ. ಬಾಹುಗಳಿಗೂ ಹಕ್ಕಿಯ ಗರಿಗಳಿಗೂ ಹೋಲಿಕೆ ಇರುವುದರಿಂದಲೇ ಗರಿನಕ್ಷತ್ರವೆಂದು ಹೆಸರು. ಕೇಲಿಕ್ಸ್‌ನ ಊರ್ಧ್ವಭಾಗದಲ್ಲಿ ಬಾಯಿ ಮತ್ತು ಆಸನದ್ವಾರಗಳಿವೆ. ಇವಲ್ಲದೆ ಬಾಯಿಯಿಂದ ಐದು ಆಂಬುಲ್ಯಾಕ್ರಲ್ ಕೊರಕಲುಗಳು ತ್ರಿಜ್ಯಕ್ಕೆ ಹೊರಡುತ್ತವೆ. ಈ ಕೊರಕಲುಗಳು ಶಿಲಕೆಯುಕ್ತವಾಗಿವೆ ಮತ್ತು ಪರಿಧಿಯಲ್ಲಿ ಸಾಲಾಗಿ ಜೋಡಿಸಲ್ಪಟ್ಟ ಟೆಂಟಕಲ್ ಅಥವಾ ಪೋಡಿಯಗಳನ್ನು (ಮಾರ್ಪಾಟಾದ ನಳಿಕೆಪಾದ) ಹೊಂದಿವೆ. ಆಂಟೆಡಾನ್‌ನಲ್ಲಿ ಕೇಲಿಕ್ಸನ್ ಅಧೋಭಾಗದಲ್ಲಿ ಒಂದು ದೊಡ್ಡ ಆಸಿಕಲ್ ಇದೆ. ಇದು ಮುಂಚೆ ಇದ್ದ ತೊಟ್ಟು ಅಥವಾ ಕಾಂಡದ ಮೂಲಬಿಂದು. ಇದಲ್ಲದೆ ಸಿರ್ರೈ ಎಂಬ ಸಣ್ಣ ಸಣ್ಣ ಆಸಿಕಲ್‌ಗಳೂ ಉಂಟು. ಇವು ಅಧಃಸ್ತರಕ್ಕೆ ಅಂಟಿಕೊಳ್ಳಲು ಸಹಾಯಕ. ದೇಹದ ಅಸ್ಥಿಪಂಜರ ಆಸಿಕಲ್‌ಗಳಿಂದಾಗಿದೆ. ಜೀರ್ಣಾಂಗವ್ಯೂಹ ಬಾಯಿ, ಅಗಲವಾದ ಅನ್ನನಾಳ, ದೊಡ್ಡದಾದ ಜಠರ, ಸುರುಳಿಯಾಕಾರದ ಕರುಳು ಮತ್ತು ಆಸನದ್ವಾರಗಳನ್ನೊಳಗೊಂಡಿದೆ. ಹೀಮಲ್ ವ್ಯವಸ್ಥೆ ಮತ್ತು ನರವ್ಯೂಹ ಇತರ ಕಂಟಕಚರ್ಮಿಗಳಂತಿವೆ. ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್‌ಗಳ ವಿನಿಮಯವಾಗುವುದು ಪೋಡಿಯಗಳಲ್ಲಿ.

ಗರಿನಕ್ಷತ್ರಗಳು ಏಕಲಿಂಗಿಗಳು. ಮೊಟ್ಟೆಗಳೊಡೆದು ಡಾಲಿಯೋಲೇರಿಯ ಎಂಬ ಲಾರ್ವಗಳು ಹೊರಬರುತ್ತವೆ. ಇವು ನೀರಿನಲ್ಲಿ ಈಜಾಡುತ್ತ ಸ್ವಲ್ಪ ದಿವಸಗಳಲ್ಲೆ ಕಾಂಡಯುಕ್ತ ಪೆಂಟಾಕ್ರೈನಾಯಿಡ್ ಎಂಬ ಲಾರ್ವಗಳಾಗುತ್ತವೆ. ಇವುಗಳು ಅಧಃಸ್ತರಕ್ಕೆ ಅಂಟಿಕೊಂಡಿರುತ್ತವೆ. ರೂಪಪರಿವರ್ತನೆ ಹೊಂದಿ ಬೆಳೆದ ಗರಿನಕ್ಷತ್ರಗಳಾಗುತ್ತವೆ.

(ಎಸ್.ಕೆ.ಎಚ್.)

**ಗರುಡ :** ಫಾಲ್ಕನಿ ಫಾರ್ಮೀಸ್ ಗಣದ ಆಕ್ಸಿಪಿಟ್ರಿಡೀ ಕುಟುಂಬದ ಬ್ಯೂಟಿಯಾನಿನೀ ಉಪಕುಟುಂಬಕ್ಕೆ ಸೇರಿದ ಒಂದು ಹಕ್ಕಿ. ಹದ್ದು, ಗಿಡುಗ, ಡೇಗೆ, ರಣಹದ್ದು, ಗೂಬೆ ಮುಂತಾದವುಗಳ ಹತ್ತಿರ ಸಂಬಂಧಿ. *ಹ್ಯಾಲಿಯಾಸ್ಟರ್ ಇಂಡಸ್* ಇದರ ವೈಜ್ಞಾನಿಕನಾಮ. ಬ್ರಾಹ್ಮಣಿ ಕೈಟ್ ಎಂಬುದು ಇಂಗ್ಲಿಷಿನಲ್ಲಿ ಸಾಮಾನ್ಯ ಬಳಕೆಯಲ್ಲಿರುವ ಹೆಸರು. ಗರುಡ ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನಗಳಲ್ಲಿ ಕಂಡುಬರುತ್ತದೆ.

ಇದರ ಹಲವು ಬಗೆಗಳು ಬರ್ಮ, ಇಂಡೋಚೀನ, ಮಲಯಗಳಿಂದ ಹಿಡಿದು ಸಾಲೊಮನ್ ದ್ವೀಪಗಳವರೆಗೂ ಹರಡಿವೆ. ಸುಮಾರು 48 ಸೆಂಮೀ. ಉದ್ದದ ಸುಂದರವಾದ ಹಕ್ಕಿಯಿದು. ತಲೆ, ಕುತ್ತಿಗೆ, ಎದೆ, ಮತ್ತು ಬೆನ್ನಿನ ಮುಂಭಾಗಗಳು ಬಿಳುಪು. ದೇಹದ ಉಳಿದ ಭಾಗ ಕೆಂಪು ಮಿಶ್ರಿತವಾದ ಕಂದು. ಈ ಕೆಂಪು ಮಿಶ್ರಿತ ಕಂದು ಬಣ್ಣವೇ ಇದಕ್ಕೆ ಇಂಗ್ಲಿಷ್ ಹೆಸರಿನ ಪೂರ್ವಪದ 'ಬ್ರಾಹ್ಮಿನಿ'ಯನ್ನು ತಂದುಕೊಟ್ಟಿದೆ. ನಮ್ಮಲ್ಲಿ ಬ್ರಾಹ್ಮಣಿ ಮೈನಾ, ಬ್ರಾಹ್ಮಿಣಿ ಬಾತುವೂ ಇವೆ. ಹೊರನೋಟಕ್ಕೆ ಗಂಡು ಹೆಣ್ಣುಗಳು ಒಂದೇ ಬಗೆ. ಗರುಡ ಸಾಮಾನ್ಯವಾಗಿ ನದಿ, ಕೊಳ, ಝರಿ, ಸಮುದ್ರ ತೀರ, ನೀರು ತುಂಬಿದ ಗದ್ದೆಗಳು, ಬಂದರು, ಅಣೆಕಟ್ಟುಗಳಿರುವ ಪ್ರದೇಶಗಳಲ್ಲಿ ಒಂಟೊಂಟಿಯಾಗಿ ಕಂಡು ಬರುತ್ತವೆ. ಹದ್ದಿನ ಕೊಕ್ಕಿನಂತೆ ಇದರ ಕೊಕ್ಕೂ ಬಲವಾಗಿದ್ದು ಬಾಗಿದೆ. ಅಂಚು ಬಲು ಹರಿತ. ಕೊಕ್ಕಿನ ಬಣ್ಣ ನಸುನೀಲಿ. ಮೇಲುಕೊಕ್ಕಿನ ಬುಡಭಾಗದಲ್ಲಿ ಸೆರೆ ಎಂಬ ಹಳದಿ

ವಿಷ್ಣುವಿನ ವಾಹನ ಗರುಡ–ರವಿವರ್ಮನ ಕಲಾಕೃತಿ

ಬಣ್ಣದ ರಚನೆಯಿದೆ. ಇದರ ಬಳಿ ಅಗಲ ಹಾಗೂ ದುಂಡಗಿನ ಮೂಗಿನ ಹೊಳ್ಳೆಗಳಿವೆ. ಕಣ್ಣಿನ ವರ್ಣಪಟಲ ಕಂದು ಅಥವಾ ಹಳದಿಮಿಶ್ರಿತವಾದ ಕಂದು ಬಣ್ಣದ್ದು. ದೃಷ್ಟಿ ಬಲು ಸೂಕ್ಷ್ಮ. ರೆಕ್ಕೆಗಳು ಅತ್ಯಂತ ಬಲಯುತವಾಗಿದ್ದು ತುಂಬ ಉದ್ದವಾಗಿ ಬಾಲದ ತುದಿಯವರೆಗೂ ಚಾಚಿವೆ. ಹರಡಿದಾಗ ಒಂದೊಂದು ರೆಕ್ಕೆಯೂ 38–39 ಸೆಂಮೀ ಅಗಲವಿರುತ್ತದೆ. ಬಾಲ ಕೂಡ ಉದ್ದ ಮತ್ತು ದುಂಡು. ಕಾಲು ಮತ್ತು ಪಾದಗಳು

ಬೂದು ಮಿಶ್ರಿತ ಇಲ್ಲವೆ ಹಸಿರು ಮಿಶ್ರಿತವಾದ ಹಳದಿಬಣ್ಣದಿಂದ ಕೂಡಿವೆ. ಕಾಲಿನ ಮೇಲ್ಭಾಗ ಗರಿಗಳಿಂದ ಮುಚ್ಚಿದ್ದು ತಳಭಾಗ ಬೋಳಾಗಿದೆ. ತಳಭಾಗದಲ್ಲೂ ಮತ್ತು ಬೆರಳುಗಳ ಮೇಲೂ ಶಲ್ಕೆಗಳಿವೆ. ಉಗುರುಗಳು ಕಪ್ಪು; ಬೇಟೆ ಹಿಡಿಯಲು ಅನುಕೂಲವಾಗುವಂತೆ ಬಾಗಿವೆ, ಬಲಯುತವಾಗಿವೆ. ಅಂಗಾಲಿನಲ್ಲಿ ಮುಳ್ಳುಮಯವಾದ ಸಣ್ಣಸಣ್ಣ ಶಲ್ಕೆಗಳಿವೆ. ಗರುಡಪಕ್ಷಿಯ ಧ್ವನಿ ತೀಕ್ಷ್ಣವಾದ ಸಿಳ್ಳಿನಂತಿದೆ. ಮೀನು, ಕಪ್ಪೆ, ಸಣ್ಣ ಸಣ್ಣ ಹಾವುಗಳು, ಹಲ್ಲಿ, ಸಣ್ಣಗಾತ್ರದ ಸ್ತನಿಗಳು, ಕೋಳಿ, ಕೀಟ ಮತ್ತು ಅವುಗಳ ಡಿಂಬಗಳು ಮುಂತಾದವು ಗರುಡಪಕ್ಷಿಯ ಮುಖ್ಯ ಆಹಾರ. ಅಪರೂಪವಾಗಿ ಇದು ಹದ್ದು, ರಣಹದ್ದುಗಳಂತೆ ಸತ್ತ ಪ್ರಾಣಿಗಳನ್ನು ತಿನ್ನುವುದುಂಟು.

ಬೇಲೂರಿನ ಚೆನ್ನಕೇಶವದೇವಾಲಯದಲ್ಲಿರುವ ಗರುಡ, ಚಿನ್ನಾಚಾರ್ಯರ ಆಧುನಿಕ ಶಿಲ್ಪ

ಗರುಡ ಪಕ್ಷಿಯ ಸಂತಾನೋತ್ಪತ್ತಿಯ ಕಾಲ ಡಿಸೆಂಬರ್ –ಏಪ್ರಿಲ್ ತಿಂಗಳುಗಳು. ಹಳ್ಳಿಗಳ ಹೊರವಲಯದಲ್ಲಿ ನೀರಿನ ಆಸರೆಯಿರುವಂಥ ಪ್ರದೇಶಗಳಲ್ಲಿ, ಬೆಳೆಯುವ ಅರಳಿ, ಆಲ, ಹುಣಿಸೆ, ಗಾಳಿಮರ ಮತ್ತು ತೆಂಗಿನ ಗಿಡಗಳ ಮೇಲೆ ಇದು ಗೂಡು ಕಟ್ಟುತ್ತದೆ. ಗೂಡಿನ ರಚನೆಯಲ್ಲಿ ಮುಖ್ಯವಾಗಿ ಕಡ್ಡಿಪುಳ್ಳೆಗಳು ಮತ್ತು ಕೆಲವೊಮ್ಮೆ ಹತ್ತಿ, ಉಣ್ಣೆ, ಎಲೆಗಳು ಮೊದಲಾದವನ್ನು ಬಳಸುವುದುಂಟು. ಸಾಮಾನ್ಯವಾಗಿ ಒಂದು ಸೂಲಿನಲ್ಲಿ ಎರಡು ಇಲ್ಲವೆ ಮೂರು ಮೊಟ್ಟೆಗಳಿರುತ್ತವೆ. ಮೊಟ್ಟೆಯ ಉದ್ದ 5 ಸೆಂಮೀ. ಅಗಲ 4 ಸೆಂಮೀ; ಬಣ್ಣ ಬೂದಿಮಿಶ್ರಿತ ಬಿಳಿ. ಮೇಲೆಲ್ಲ ಕಂದುಬಣ್ಣದ ಚುಕ್ಕೆಗಳಿವೆ. ಹೆಣ್ಣುಗಂಡುಗಳೆರಡೂ ಸೇರಿ ಗೂಡುಕಟ್ಟುತ್ತವೆ. ಕಾವು ಕೊಡುವುದು ಹೆಣ್ಣು. ಕಾವು ಕೊಡುವ ಹೆಣ್ಣಿಗೆ ಆಹಾರವನ್ನು ತಂದು ಕೊಡುವ ಕೆಲಸ ಗಂಡಿನ ಪಾಲಿನದು. 26–27 ದಿನಗಳ ಕಾಲ ಕಾವು ಕೊಟ್ಟ ಮೇಲೆ ಮೊಟ್ಟೆಯಿಂದ ಮರಿಗಳು ಹೊರಗೆ ಬರುತ್ತವೆ. ಪ್ರಾಯಕ್ಕೆ ಬರುವ ಮುನ್ನ ಮರಿಗಳ ಬಣ್ಣ ಕಂದು. ವರ್ಷಂಪ್ರತಿ ಮರಿಗಳ ಗರಿ ಉದುರುತ್ತವೆ. ನಾಲ್ಕು ವರ್ಷಗಳಾದ ಮೇಲೆ ಮರಿಗಳು ಪ್ರೌಢಾವಸ್ಥೆಗೆ ಬರುತ್ತವೆ. ಮರಿಗಳ ಬಾಲ ಗುಂಡಾಗಿರುತ್ತದೆ ಮತ್ತು ವಯಸ್ಕ ಹಕ್ಕಿಗಳಿಗೆ ತಲೆ ಹಾಗೂ ಎದೆಯ ಮೇಲೆ ಬಿಳಿಯ ಬಣ್ಣ ಇರುವುದಿಲ್ಲ.

ಭಾರತದಲ್ಲಿ ಗರುಡನಿಗೆ ಸಂಬಂಧಿಸಿದಂತೆ ಹಲವು ಪೌರಾಣಿಕ ಕಥೆಗಳಿವೆ. ಗರುಡ ಪಕ್ಷಿಗಳ ರಾಜ. ಗರುಡನ ಶಕ್ತಿ ಸಾಮರ್ಥ್ಯಗಳನ್ನು ಮೆಚ್ಚಿದ ಮಹಾವಿಷ್ಣು ಅದನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿದ್ದಾನೆ. ಶಿಲ್ಪಕಲೆಯಲ್ಲಿ ಗರುಡನ ಆಕೃತಿ ಮನುಷ್ಯನಂತಿದ್ದು ಬಾಗಿದ ಕೊಕ್ಕು ಮತ್ತು ರೆಕ್ಕೆಗಳಿಂದ ಕೂಡಿರುತ್ತದೆ. ಇಂಥ ವಿಗ್ರಹಗಳನ್ನು ಹಲವು ವೈಷ್ಣವ ದೇವಾಲಯಗಳಲ್ಲಿ ಕಾಣಬಹುದು. ಗರುಡನಿಗೂ ನಾಗರಹಾವುಗಳಿಗೂ ಇರುವ ಬದ್ಧ ದ್ವೇಷಕ್ಕೆ ಸಂಬಂಧಿಸಿದ ಕಥೆಗಳೂ ಉಂಟು. ಗರುಡ ಮತ್ತು ಸೂರ್ಯನ ಸಾರಥಿಯಾದ ಅರುಣ ಎಂಬುವರು ಕಶ್ಯಪಮುನಿ ಮತ್ತು ವಿನತೆಯರ ಮಕ್ಕಳು. ಇವರ ಮಲತಾಯಿ ಕದ್ರು, ಸರ್ಪಗಳ ತಾಯಿ. ಕಾರಣಾಂತರದಿಂದ ವಿನತೆ ಕದ್ರುವಿನ ದಾಸಿಯಾಗಿರಬೇಕಾದ ಸಂದರ್ಭ ಒದಗಿತು. ನಾಗರಾಜನು ಗರುಡನ ಬೆನ್ನುಹತ್ತಿ ಸವಾರಿ ಮಾಡಲು ಪ್ರಾರಂಭಿಸಿದ. ಇದರಿಂದ ಗರುಡನಿಗೆ ತುಂಬಾ ಅವಮಾನ ವಾದಂತಾಯಿತು. ತಾಯಿಯ ದಾಸ್ಯವನ್ನು ತೊಡೆದುಹಾಕಲು ಮಾರ್ಗವೇನೆಂದು ವಿಚಾರಿಸಿದ. ಸ್ವರ್ಗಲೋಕದಿಂದ ಅಮೃತವನ್ನು ಕದ್ರುವಿಗೆ ತಂದು ಕೊಟ್ಟರೆ ತಾಯಿಯ ದಾಸ್ಯ ನಿವಾರಣೆಯಾಗುವುದು ಎಂದು ತಿಳಿದುಬಂತು. ಆಗ ಗರುಡ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಅಮೃತ ಕಲಶದ ರಕ್ಷಕರಾದ ಗಂಧರ್ವರನ್ನು ಕೊಂದು, ಘಟಸರ್ಪಗಳನ್ನು ಸಂಹರಿಸಿ, ಇಂದ್ರನೊಡನೆ ಹೋರಾಡಿ ಕೊನೆಗೆ ಅಮೃತ ಕುಂಭವನ್ನು ತಂದು ಮಲತಾಯಿಗೆ ಕೊಟ್ಟು ದಾಸ್ಯ ಸಂಕಲೆಯಿಂದ ತಾಯಿಯನ್ನು ಬಿಡಿಸಿದ. ಇವನ ಪರಾಕ್ರಮಕ್ಕೆ ಮೆಚ್ಚಿ ಇಂದ್ರ ಇವನಿಗೆ ಸರ್ಪಗಳು ಆಹಾರವಾಗಿರುವಂತೆ ವರವನ್ನಿತ್ತ. ವಿಷ್ಣು ಇವನ ಸಾಹಸ ಸಾಮರ್ಥ್ಯಗಳಿಗೆ ಮಾರುಹೋಗಿ ಇವನಿಗೆ ಸಂಪರ್ಣನೆಂದು ಬಿರುದು ಕೊಟ್ಟು ತನ್ನ ವಾಹನವನ್ನಾಗಿ ಮಾಡಿಕೊಂಡುದಲ್ಲದೇ ತನ್ನ ಧ್ವಜದಲ್ಲಿ ಲಾಂಛನವನ್ನಾಗಿರಿಸಿಕೊಂಡ. ಭಾರತದ ಆದಿಪರ್ವದಲ್ಲಿ ಈ ಕತೆ ಬಹು ವಿಸ್ತಾರವಾಗಿ ಬಂದಿದೆ.

ಪುರಾತನ ಕಾಲದಿಂದಲೂ ತನ್ನ ಗಾತ್ರ, ಗಾಂಭೀರ್ಯ ಮತ್ತು ವೈಭವಯುತ ಹಾಗೂ ಪ್ರಯಾಸವಿಲ್ಲದ ಹಾರಾಟದಿಂದಾಗಿ ಗರುಡ ಪಕ್ಷಿಗಳ ರಾಜನೆಂದು ಮಾನ್ಯತೆ ಪಡೆದಿದೆ. ಇದು ಶಕ್ತಿ, ಶೌರ್ಯ ಮತ್ತು ವೈಭವಗಳ ಪ್ರತೀಕ. ಈಟಿಗಳ ಮೇಲೆ ಗರುಡಪಕ್ಷಿ ಪ್ರ.ಶ.ಪೂ. 104ರ ಹೊತ್ತಿಗೆ ರೋಮನರ ಮುಖ್ಯ ಲಾಂಛನವಾಯಿತು. ಅಲ್ಲದೆ ಅವರು ಇದನ್ನು ನಾಣ್ಯ ಮತ್ತು ಪದಕಗಳ ಮೇಲೂ ಹಾಕಿಕೊಂಡರು. ರೋಮನ್ ಪುರಾಣದಲ್ಲಿ ಬರುವ ದೇವತೆ ಹಾಗೂ ಮಾನವರ ಪ್ರಭುವಾದ ಜ್ಯೂಪಿಟರ್‌ನಿಗೆ ಪ್ರಿಯವಾದದ್ದು, ಈ ಗರುಡಪಕ್ಷಿ. 1200ರ ಅನಂತರ ಯುರೋಪಿನ ಹಲವು ರಾಜರು ಮತ್ತು ರಾಜ ಮಾನ್ಯರು ತಮ್ಮ ಗುರಾಣಿಗಳ ಮೇಲೆ ಗರುಡಪಕ್ಷಿಯ ಲಾಂಛನವನ್ನು ಉಪಯೋಗಿಸ ಲಾರಂಭಿಸಿದರು. ಎರಡು ತಲೆಯ ಗರುಡ ಪಕ್ಷಿ, ಜರ್ಮನಿ, ರಷ್ಯ, ಆಸ್ಟ್ರಿಯ, ಪೋಲೆಂಡ್ ಚಕ್ರವರ್ತಿಗಳ ರಾಷ್ಟ್ರಲಾಂಛನವಾಯಿತು. ಕಪ್ಪು ಗರುಡ ಪ್ರಷ್ಯದೇಶದ ಲಾಂಛನವಾಯಿತು. ಈ ಗರುಡಪಕ್ಷಿಯ ಮುದ್ರೆ ಅಮೆರಿಕನರ ನಾಣ್ಯಗಳಲ್ಲಿ 1776ರಲ್ಲಿಯೇ ಬಳಕೆಗೆ ಬಂದಿರುವುದನ್ನು ಗಮನಿಸಬಹುದು. **(ಬಿ.ಎನ್.ಬಿ.; ಎನ್.ಎಸ್.ಆರ್.ಬಿ.)**

**ಗರುಡಗಂಬ :** ದೇವಾಲಯಗಳ ಮುಂದಿರುವ ಕಲ್ಲಿನ ಧ್ವಜಸ್ತಂಭ ಅಥವಾ ದೀಪಸ್ತಂಭ. ಗರುಡಗಂಬಗಳನ್ನು ನಿಲ್ಲಿಸುವ ಪದ್ಧತಿ ವಿಜಯನಗರ ಕಾಲದಿಂದೀಚೆಗೆ ಬಂದಂತೆ ತೋರುತ್ತದೆ. ಬೇಲೂರಿನ ಕೇಶವ ದೇವಾಲಯದ ಮುಂದೆ ಇರುವ ಖಗ ಧ್ವಜಸ್ತಂಭವನ್ನು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಜಕ್ಕನೃಪ ನಿಲ್ಲಿಸಿದ. ವಿಷ್ಣು ದೇವಾಲಯಗಳ ಮುಂದಿನ ಈ ಕಂಬಗಳು ಗರುಡಧ್ವಜಗಳನ್ನು ಸೂಚಿಸುತ್ತವೆ. ಶಿವದೇವಾಲಯಗಳ ಮುಂದೆ ನಿಲ್ಲಿಸಿರುವ ಕಂಬಗಳನ್ನು ನಂದಿಕಂಬವೆಂದು ಕರೆಯುತ್ತಾರೆ.

ವಿಜಯನಗರದ ಕಾಲದಿಂದೀಚೆಗೆ ನಿಲ್ಲಿಸಿರುವ ಇಂಥ ಕಂಬಗಳು ಧ್ವಜಸ್ತಂಭ ಅಥವಾ ದೀಪಸ್ತಂಭಗಳಾಗಿರಬಹುದು. ಆದರೆ ಹೊಯ್ಸಳರ ಕಾಲದಲ್ಲಿ ಶಿವ ದೇವಾಲಯಗಳ ಬಳಿ ನಿಲ್ಲಿಸುತ್ತಿದ್ದ ಕೆಲವು ವಿಶಿಷ್ಟವಾದ ಕಂಬಗಳಿಗೆ ಗರುಡಗಂಬಗಳೆಂಬ ಹೆಸರು ಬಂದಿರಬೇಕು. ಆ ಕಾಲದಲ್ಲಿ ರಾಜನಿಗೆ ನಿಷ್ಠರಾಗಿ, ಅವನ ಪ್ರಾಣ ರಕ್ಷಣೆಯೇ ತಮ್ಮ ಕರ್ತವ್ಯವೆಂದು ತಿಳಿದು, ರಾಜನ ಮರಣಾನಂತರ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದ ಲೆಂಕರಿಗೆ ಗರುಡರೆಂಬ ಹೆಸರಿತ್ತು **(ನೋಡಿ– ಗರುಡರು)**. ಸ್ವಾಮಿನಿಷ್ಠೆಯಲ್ಲಿ ತಾವು ಗರುಡನಿಗಿಂತ ಕಡಿಮೆಯೇನೂ ಇಲ್ಲವೆಂದು ಇವರು ಭಾವಿಸುತ್ತಿದ್ದುದರಿಂದ ಬಹುಶಃ ಇವರಿಗೆ ಈ ಹೆಸರು ಬಂದಿರಬೇಕು. ಸ್ವಾಮಿಗಾಗಿ ಸತ್ತವರ ನೆನಪಿಗಾಗಿ ಕಂಬಗಳನ್ನು ನಿಲ್ಲಿಸಿ ಶಾಸನ ಹಾಕಿಸುತ್ತಿದ್ದುದುಂಟು. ಅಥವಾ ಅವರು ಅಂಥ ಕಂಬಗಳ ಮೇಲಿಂದ ಹಾರಿ ಪ್ರಾಣತ್ಯಾಗ ಮಾಡುತ್ತಿದ್ದರು. ಆನೆಯ ಮೇಲೆ ಕುಳಿತು ಗರುಡನೊಂದಿಗೆ ಸೆಣಸುತ್ತಿರುವ ಲೆಂಕರ ಮೂರ್ತಿಗಳನ್ನು ಹೊತ್ತ ಮೂರು ಕಂಬಗಳು ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ಮುಂದೆ ಇವೆ. ಇಮ್ಮಡಿ ಬಲ್ಲಾಳನ ಮರಣಾನಂತರ ಗರುಡನಾದ ಕುವರಲಕ್ಷ್ಮ ಮತ್ತು ಅವನನ್ನುಸರಿಸಿದ ಸಾವಿರ ಲೆಂಕರು ಮತ್ತು ಅವರ ಹೆಂಡಿರ ನೆನಪಿಗಾಗಿ ಹಳೆಯಬೀಡಿನ ಹೊಯ್ಸಳೇಶ್ವರ ದೇವಾಲಯದ



ಗದುಗಿನ ವೀರನಾರಾಯಣ ದೇವಾಲಯದ ಎದುರಿನ ಗರುಡಗಂಬ

ಬಳಿ ಕಂಬವನ್ನು ನಿಲ್ಲಿಸಲಾಗಿದೆ. ಹೊಯ್ಸಳ ದೇವಾಲಯದಲ್ಲಿ ಈಗ ಊರೆಕಂಬವಾಗಿರುವ ಪ್ರೌಢ ದೇವರಾಯ ಕಂಬವೂ ರವಳ ಬೋವನೆನೆಂಬ ಗರುಡನೊಬ್ಬನ ನೆನಪಿಗಾಗಿ ನಿಲ್ಲಿಸಿದ್ದ ಕಂಬವೇ. ಬಸರಾಳಿನಲ್ಲಿ ಮಲ್ಲಿಕಾರ್ಜುನ ದೇವಾಲಯದ ಮುಂದಿನ ಕಂಬದ ಮೇಲೆ ಶಾಸನವಿಲ್ಲದಿದ್ದರೂ ಮೇಲಿನಿಂದ ಹಾರಿ ಪ್ರಾಣತ್ಯಾಗ ಮಾಡಲು ಸಿದ್ಧನಾಗಿರುವ ಗರುಡ, ಅವನ್ನನುಸರಿಸುತ್ತಿರುವ ಅವನ ಹೆಂಡತಿ–ಇವರ ಮೂರ್ತಿಗಳಿರುವುದರಿಂದ ಅದು ಗರುಡಗಂಬವೆಂಬುದು ಸ್ಪಷ್ಟ. (ಎಂ.ಎಚ್.)

**ಗರುಡಪುರಾಣ: ನೋಡಿ– ಅಷ್ಟಾದಶ ಪುರಾಣಗಳು**

**ಗರುಡ ಫಲ :** ಫ್ಲಕೂರ್ಷಿಯೇಸೀ ಕುಟುಂಬಕ್ಕೆ ಸೇರಿದ ಹಿಡ್ನೊಕಾರ್ಪಸ್ ಲಾರಿಫೋಲಿಯ ಎಂಬ ಶಾಸ್ತ್ರೀಯ ಹೆಸರಿನ ಮರ. ಚಿಕ್ಕ ಸುರಟಿ ಗಿಡ ಪರ್ಯಾಯ ನಾಮ. ಇಂಡೊ ಮಲಯ ಮತ್ತು ಏಷ್ಯದ ಉಷ್ಣ ಪ್ರದೇಶಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಭಾರತದಲ್ಲಿ ಪಶ್ಚಿಮ ಘಟ್ಟದ ಕಾಡುಗಳಲ್ಲೂ ವಿಪುಲ. ಸುಮಾರು 50ಮೀ ಎತ್ತರಕ್ಕೆ ಬೆಳೆಯುವ ಮರ ಇದು. ಕಂದುಬಣ್ಣದ ತೊಗಟೆ, ಗರಗಸದಂಥ ಅಂಚುಳ್ಳ ನೀಳವಾದ ಎಲೆಗಳು, ಹಸುರು ಮಿಶ್ರಿತ ಬಿಳಿಬಣ್ಣದ ಚಿಕ್ಕ ಗಾತ್ರದ ಹೂಗಳು, ಲಿಂಗಭಿನ್ನತೆ–ಇವು ಈ ಮರದ ಮುಖ್ಯ ಲಕ್ಷಣಗಳು. ಬೀಜಗಳು ಅಂಡಾಕೃತಿಯಲ್ಲಿವೆ. ಅವುಗಳಲ್ಲಿ ಒಂದು ವಿಶೇಷ ಬಗೆಯ ಎಣ್ಣೆ ಉಂಟು, ಇದಕ್ಕೆ ಹಿಡ್ನೊಕಾರ್ಪಸ್ ತೈಲ ಎಂದು ಹೆಸರು. ಇದು ಅನೇಕತರದ ಚರ್ಮ ವ್ಯಾಧಿಗಳಿಗೆ–ಮುಖ್ಯವಾಗಿ ಕುಷ್ಠರೋಗಕ್ಕೆ ಒಳ್ಳೆಯ ಮದ್ದು ಎನಿಸಿದೆ. ಬಹಳ ಹಿಂದಿನಿಂದಲೂ ಇದರ ಔಷಧೀಯ ಗುಣಗಳು ಪ್ರಸಿದ್ಧಿಯಾಗಿವೆ. ಎಣ್ಣೆಗೆ ಬೆಲ್ಜಿಯಂ, ಫ್ರಾನ್ಸ್, ಬೋರ್ನಿಯೊಗಳಲ್ಲಿ ಅತೀವ ಬೇಡಿಕೆಯಿದೆ.

ಗರುಡ ಫಲಗಳನ್ನು ಗುಡ್ಡಪ್ರದೇಶಗಳಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಬೆಳೆಸುವುದು ರೂಢಿ. ಸಸ್ಯಾಭಿವೃದ್ಧಿ ಬೀಜಗಳ ಮೂಲಕ. ಮೊದಲು ನರ್ಸರಿಯಲ್ಲಿ ಸಸಿಗಳನ್ನು ಬೆಳೆಸಿ ಅನಂತರ ಅಪೇಕ್ಷಿತ ಸ್ಥಳಗಳಲ್ಲಿ ಸಸಿಗಳನ್ನು ನಾಟಿ ಮಾಡಲಾಗುತ್ತದೆ. ಎಣ್ಣೆಗೆ ತನ್ನದೇ ಆದ ವಾಸನೆ ಹಾಗೂ ಕ್ಷಾರೀಯ ರುಚಿ ಉಂಟು. ಇದನ್ನು ಕೈಕಾಲುಗಳ ಮೇಲೆ ಮೂಡುವ ಗಂಟುಗಳ ಊದುವಿಕೆಗೆ ಮತ್ತು ಸ್ಪರ್ಶಕ್ಕೆ ಸಂವೇದಿಯಾಗಿಲ್ಲದ ಚರ್ಮದ ವ್ರಣಗಳ ಉಪಶಮನಕ್ಕೆ ಹಾಗೂ ಕುಷ್ಠರೋಗ ನಿವಾರಣೆಗೆ ಉಪಯೋಗಿಸುತ್ತಾರೆ. ತೈಲ ಇಲ್ಲವೆ ಬೀಜಗಳನ್ನು ಹೆಚ್ಚು ಮೊತ್ತದಲ್ಲಿ ನೇರವಾಗಿ ಸೇವಿಸಿದರೆ, ಕರುಳಿನಲ್ಲಿ ವೇದನೆ ಉಂಟಾಗುವುದರಿಂದ ಸೇವನೆಯ ಮೊತ್ತವನ್ನು ಕ್ರಮೇಣ ಹೆಚ್ಚಿಸುತ್ತ ಹೋಗಬೇಕು. ಚುಚ್ಚುಮದ್ದಿನ ರೂಪದಲ್ಲಿ ಕೊಡುವುದೇ ಒಳ್ಳೆಯದು. ಹಿಡ್ನೊಕಾರ್ಪಸ್ ಎಣ್ಣೆಯನ್ನು ಶುದ್ಧರೂಪದಲ್ಲಿ ಬಹಳ ಕಾಲ ಸಂಗ್ರಹಿಸಿಡಲಾಗುವುದಿಲ್ಲ. ಸಂಗ್ರಹಿಸಿಟ್ಟ ಎಣ್ಣೆ ಕೊಳೆಯುತ್ತದಲ್ಲದೆ ಇಂಥ ಎಣ್ಣೆಯನ್ನು ಬಳಸಿದರೆ ಹೆಚ್ಚು ನೋವು ಮತ್ತು ತುರಿಕೆಯುಂಟಾಗುತ್ತವೆ. ಇದರಿಂದ ತೈಲದ ಬಾಳಿಕೆಯನ್ನು ಹೆಚ್ಚಿಸಲು ಕ್ರಿಯೊಸೋಟ್ ಅಥವಾ ಹೈಡ್ರೊಕ್ವಿನೋನ್‌ಗಳನ್ನು ಮಿಶ್ರಮಾಡುತ್ತಾರೆ. ಬೀಜಗಳಿಂದ ಎಣ್ಣೆ ತೆಗೆದ ನಂತರ ಉಳಿವ ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ. ಗರುಡಫಲ ಮೀನುಗಳಿಗೆ ಮಾರಕವೆನ್ನಲಾಗಿದೆ. ಇದರ ಸೇವನೆಯ ಫಲವಾಗಿ ಸತ್ತ ಮೀನುಗಳು ತಿನ್ನಲು ಯೋಗ್ಯವಲ್ಲ. ಚೌಬೀನೆ ಬಲು ಹಗುರ, ಮೃದು ಮತ್ತು ಏಕರೂಪದ ರಚನಾವಿನ್ಯಾಸವುಳ್ಳದ್ದು. ಸುಲಭವಾಗಿ ಕೊಯ್ಯಬಹುದು ಮತ್ತು ನಯಗೊಳಿಸಬಹುದು. ಒಣಗಿಸುವಾಗ ಸೀಳದಿದ್ದರೂ ಕೊಂಚ ಕಾಲದ ಅನಂತರ ಅಲ್ಲಲ್ಲಿ ಬಿರುಕು ಬಿಡುವುದಲ್ಲದೆ ತನ್ನ ಬಣ್ಣವನ್ನು ಕಳೆದುಕೊಳ್ಳುತ್ತದೆ. ಅಲ್ಲದೆ ಕೀಟ, ಬೂಷ್ಟುಗಳಿಗೆ ಬಲುಬೇಗ ಬಲಿಯಾಗುವುದರಿಂದ ಹೆಚ್ಚು ಬಾಳಿಕೆ ಬರುವುದಿಲ್ಲ. ಆದ್ದರಿಂದ ತಾತ್ಕಾಲಿಕ ಉಪಯೋಗಕ್ಕೆ ಬೇಕಾಗುವ ಪೆಟ್ಟಿಗೆ ಮುಂತಾದವನ್ನು ಮಾತ್ರಮಾಡಲು ಇದನ್ನು ಬಳಸುತ್ತಾರೆ. ಸೌದೆಯಾಗಿ ಉಪಯೋಗಿಸುವುದುಂಟು. (ಎ.ಕೆ.ಕೆ.; ಪಿ.ಎಸ್.ಎಸ್.)

**ಗರುಡ ಮೂಗಿನ ಆಮೆ :** *ಎರೆಟ್ಮೊಕೆಲಿಸ್ ಇಂಬ್ರಿಕೇಟ* ಎಂಬ ವೈಜ್ಞಾನಿಕ ಹೆಸರಿನ ಕಡಲಾಮೆ. ಮೂತಿ ಗರುಡ ಪಕ್ಷಿಯ ಕೊಕ್ಕಿನ ಹಾಗೆ ಬಾಗಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ.



ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಆಂಧ್ರಪ್ರದೇಶ, ಗುಜರಾತ್, ಕೇರಳ, ಲಕ್ಷದ್ವೀಪ, ಒರಿಸ್ಸ ಮತ್ತು ತಮಿಳುನಾಡುಗಳಲ್ಲಿ ಕಂಡು ಬರುತ್ತದೆ. ಆಫ್ರಿಕ, ಅಮೆರಿಕ, ಏಷಿಯ, ಆಸ್ಟ್ರೇಲಿಯ ಮತ್ತು ಯುರೋಪ್‌ಗಳ ಬಹುತೇಕ ಉಷ್ಣ ಮತ್ತು ಸಮಶೀತೋಷ್ಣ ಸಾಗರಗಳಲ್ಲಿ ಸರ್ವೇಸಾಮಾನ್ಯವಾಗಿ ಹರಡಿದೆ. ಮಾಂಸಾಹಾರಿ. ಸ್ಪಂಜುಗಳನ್ನೂ ತಿನ್ನುವ ಏಕೈಕ ಆಮೆ ಪ್ರಭೇಧ. ಹವಳ ದ್ವೀಪಗಳ ಬಳಿಯಿರುವ ತೀರ ಪ್ರದೇಶಗಳಲ್ಲಿ ಸಂತಾನಾಭಿವೃದ್ಧಿ ಮಾಡುವುದು ಸಾಮಾನ್ಯ. ದೇಹದ ಮೇಲೆ ಸುಮಾರು 915 ಮಿಮೀ ಉದ್ದದ ಚಿಪ್ಪು ಇದೆ. ಚಿಪ್ಪಿನ ಮೇಲೆಲ್ಲ ಹೆಂಚು ಹೊದಿಸಿದಂತೆ ಕಾಣುವ ಕಂದುಬಣ್ಣದ ದಪ್ಪನೆಯ ಫಲಕಗಳಿವೆ. ಆಮೆಯ ಚಿಪ್ಪುಗಳಲ್ಲೆಲ್ಲ ಗರುಡ ಮೂಗಿನ ಆಮೆಯದು ಅತ್ಯುತ್ತಮ ವಾದುದೆಂದು ಹೇಳಲಾಗಿದೆ. ಇದರಿಂದ ಬಾಚಣಿಗೆ, ಕಡಗ, ಅಲಂಕಾರಿಕ ಸಮಾನುಗಳು ಮುಂತಾದವನ್ನು ಮಾಡಲಾಗುತ್ತದೆ. ಚಿಪ್ಪಿಗೋಸ್ಕರ ಹಿಂದಿನ ಕಾಲದಲ್ಲಿ ಇದನ್ನು ಬಹಳವಾಗಿ ಹಿಡಿಯುವುದಿತ್ತು. ಆದರೆ ಈಗ ಪ್ಲಾಸ್ಟಿಕ್ ವಸ್ತುಗಳ ಬಳಕೆ ಹೆಚ್ಚಾಗಿದ್ದು ಇದರ ಚಿಪ್ಪಿಗೆ ಬೇಡಿಕೆ ಕಡಿಮೆಯಾಗಿದೆ. ಆದರೂ ಸಂಖ್ಯೆ ಕ್ಷೀಣಿಸಿರುವುದರಿಂದ ಭಾರತದ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಪಟ್ಟಿ 4 ರಲ್ಲಿ ಸೇರಿಸಲ್ಪಟ್ಟಿದೆ. *

**ಗರುಡರು :** ವಿಶೇಷವಾಗಿ ಕನ್ನಡ ನಾಡಿನಲ್ಲಿ–ಅದರಲ್ಲೂ ಹೊಯ್ಸಳರ ಕಾಲದಲ್ಲಿ ರಾಜರಿಗೆ ನೆಚ್ಚಿನ ಬಂಟರಾಗಿ, ಅವರಿಗಾಗಿ ಪ್ರಾಣವನ್ನೇ ಪಣವಾಗಿಟ್ಟು ಕಾದುತ್ತಿದ್ದು, ಅವರು ಸತ್ತಾಗ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದ ವಿಶಿಷ್ಟ ಅಂಗರಕ್ಷಕರು. ಕರ್ನಾಟಕದ ಇತಿಹಾಸದ ವಿವಿಧ ಕಾಲಗಳಲ್ಲಿದ್ದ ಅಂಕಕಾರರು, ಲೆಂಕರು, ವೇಳೆಕಾರರು ಇವರು ಕೂಡ ಇದೇ ಬಗೆಯ ಯೋಧರು. ಕರ್ನಾಟಕದ ಹೊರಗಡೆಯೂ ರಾಜರು ಇಂಥ ನಿಷ್ಠಾವಂತ ಸೇವಕರನ್ನು ನೇಮಿಸಿಕೊಳ್ಳುವ ಪದ್ಧತಿ ಇತ್ತು. ಕೇರಳದಲ್ಲಿ ಈ ಪದ್ಧತಿ ಇತ್ತೆಂಬುದು ಮಾರ್ಕೊಪೋಲೋನ ಬರೆವಣಿಗೆಗಳಿಂದ ಗೊತ್ತಾಗುತ್ತದೆ.

ಸಿದ್ಧಾಪುರದ ಶಾಸನ

ವಿಷ್ಣುವಾಹನನಾದ ಗರುಡನಂತೆ ಇವರಿಗೆ ತಮ್ಮ ಪ್ರಭುವಿನಲ್ಲಿ ಅನನ್ಯ ಭಕ್ತಿ ನಿಷ್ಠೆಗಳಿದ್ದುದರಿಂದ ಇವರು ಗರುಡರೆಂದು ಹೆಸರಾದರು. ಗರುಡಪಟ್ಟವನ್ನು ಸ್ವೀಕರಿಸಲು ಸಾಮಾನ್ಯವಾಗಿ ಅನೇಕರು ಮುಂದೆ ಬರುತ್ತಿದ್ದರು. ಅವರ ನಿಯಮ, ನಿಷ್ಠೆ ಹಾಗೂ ಪರಾಕ್ರಮಗಳನ್ನು ಗಮನಿಸಿ ಅರ್ಹರಾದವರಿಗೆ ರಾಜ ಅನುಮತಿ ನೀಡುತ್ತಿದ್ದ. ಗರುಡಪಟ್ಟವನ್ನು ಸ್ವೀಕರಿಸಿದವರು ಮೊಣಕಾಲಿನ ಮೇಲೆ ತೊಡರೊಂದನ್ನು ಧರಿಸುತ್ತಿದ್ದರು. ತಮ್ಮ ಪ್ರಭುವಿಗೆ ಸೋಲೊದಗದಂತೆ ರಕ್ಷಿಸಲು ಇವರು ವೀರಪ್ರತಿಜ್ಞೆ ಮಾಡುತ್ತಿದ್ದರು.

ಗರುಡರ ಪರಾಕ್ರಮ, ಸಾಧನೆ ಮತ್ತು ಪ್ರಾಣತ್ಯಾಗಗಳಿಗೆ ಸಂಬಂಧಿಸಿದ ಅನೇಕ ಪ್ರಸಂಗಗಳು ಕನ್ನಡ ಶಾಸನಗಳಲ್ಲಿ ದೊರೆಯುತ್ತವೆ. ಪ್ರಶ.ಸು.865ರಲ್ಲಿ ನೀತಿ ಮಾರ್ಗ ಗಂಗರಾಜ ಮರಣಹೊಂದಿದಾಗ ಆತನ ಗರುಡರಾಗಿದ್ದ ರಾಸೇಯ ಮತ್ತು ಬೇಬಿಯಮ್ಮ(ಣ್ಣ)ರು ಪ್ರಾಣಾರ್ಪಣೆ ಮಾಡಿದರು. ರಾಷ್ಟ್ರಕೂಟ ಕಾಲದಲ್ಲೂ ಈ ಪದ್ಧತಿಯಿತ್ತು. ಹೊಯ್ಸಳ

ಚಕ್ರವರ್ತಿ ಇಮ್ಮಡಿ ವೀರಬಲ್ಲಾಳನ ಅಂಗರಕ್ಷಕ ದಳದ ಅಧಿಪತಿಯಾಗಿದ್ದ ಕುವರ ಲಕ್ಷ್ಮನ ಹೆಸರು ಉಲ್ಲೇಖಾರ್ಹವಾದದ್ದು, ಕುವರಲಕ್ಷ್ಮನೂ ಇವನ ವೀರಪತ್ನಿ ಸುಗ್ಗಲದೇವಿಯೂ ಇವನ ಅಧೀನದಲ್ಲಿದ್ದ ಯೋಧರು ಗರುಡರಾಗಿದ್ದರು. ತಮ್ಮ ದೊರೆಗಾಗಿ ಬದುಕುವುದಾಗಿ, ಅವನಿಗಾಗಿ ಸಾಯುವುದಾಗಿ ಅವರು ಪ್ರತಿಜ್ಞೆಮಾಡಿದ್ದರು. ವೀರ ಲಕ್ಷ್ಮನಿಗೂ ಅವನ ಪ್ರಭುವಾದ ಬಲ್ಲಾಳ ದೊರೆಗೂ ನಡುವೆ ಯಾವ ಭಿನ್ನಭಾವವೂ ಇರಲಿಲ್ಲ. ದೊರೆ ಅವನನ್ನು ತನ್ನ ಮಗನಂತೆಯೇ ಸಾಕಿದ. ತನ್ನ ಕೀರ್ತಿಯಲ್ಲೂ ದೊರೆತನದ ಮರ್ಯಾದೆಯಲ್ಲೂ ಅವನೂ ಪಾಲ್ಗೊಳ್ಳುವಂತೆ ಮಾಡಿದ. ದೊರೆ 1220ರಲ್ಲಿ ಮರಣಹೊಂದಿದಾಗ ಕುವರಲಕ್ಷ್ಮನೂ ಅವನ ಪತ್ನಿಯೂ ಅವನ ಸಾವಿರ ಯೋಧರ ಪಡೆಯೊಡನೆ ಪ್ರಾಣಾರ್ಪಣೆ ಮಾಡಿದರೆಂಬುದು ಹಳೇಬೀಡಿನ ಶಾಸನದಿಂದ ತಿಳಿದು ಬರುತ್ತದೆ. ಹೊಯ್ಸಳ ವೀರ ಸೋಮೇಶ್ವರನ ಮರಣದೊಡನೆ ಅವನ ಗರುಡನಾದ ಕಾಮೇಯ ನಾಯಕ ಪ್ರಾಣಾರ್ಪಣೆ ಮಾಡಿಕೊಂಡ.

ಆ ಕಾಲದಲ್ಲಿ ಈ ಪದ್ಧತಿಗೆ ಧಾರ್ಮಿಕ ಬೆಂಬಲವಿತ್ತು. ಶ್ರದ್ಧೆ ಮತ್ತು ನಿಷ್ಠೆಯಿಂದ ತಮ್ಮ ಪ್ರಮಾಣವಚನಕ್ಕೆ ಬದ್ಧರಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದರಿಂದ ತಮಗೆ ವೀರಸ್ವರ್ಗ ಲಭಿಸುವುದೆಂದು ಗರುಡರು ನಂಬಿದ್ದರು. ಗರುಡರ ಸ್ಮರಣಾರ್ಥವಾಗಿ ವೀರಗಲ್ಲುಗಳನ್ನು ನೆಡಿಸುತ್ತಿದ್ದುದುಂಟು. ಗರುಡಗಂಬಗಳೆಂಬ ಹೆಸರು ಇವರಿಂದ ಬಂದಿರಬಹುದೆಂದು ಹೇಳಲಾಗಿದೆ (**ನೋಡಿ– ಗರುಡಗಂಬ**). (ಜಿ.ಆರ್.ಆರ್.)

**ಗರೂಡ ಸದಾಶಿವರಾವ್ :** 1879–1954. ರಂಗಭೂಮಿಯ ಸುಪ್ರಸಿದ್ಧ ನಟ, ನಾಟಕಕಾರ, ರಂಗನಿರ್ಮಾಪಕ, ಗರೂಡ ಎಂಬುದು ಮನೆತನದ ಹೆಸರು. ತಂದೆ ಕೊಪ್ಪಳದ ಗುರುನಾಥ ಶಾಸ್ತ್ರಿಗಳು. ಎಳೆತನದಲ್ಲಿ ತಾಯಿಯನ್ನು ಕಳೆದುಕೊಂಡ



ಇವರು ಕಲಬುರ್ಗಿಯಲ್ಲಿ ಸೋದರ ಮಾವನ ಮನೆಯಲ್ಲಿ ಬೆಳೆದರು. ಮೊದಲಿನಿಂದ ಸಂಗೀತ ಸಾಹಿತ್ಯಗಳ ಕಡೆ ಒಲವಿದ್ದ ಇವರು ಕನ್ನಡ ನಾಟಕ ಮಂಡಳಿಯು ಸತ್ಯ ಹರಿಶ್ಚಂದ್ರ ನಾಟಕ ನೋಡಿದಾಗ, ಹೆಚ್ಚು ಸಂಸ್ಕಾರಗೊಂಡಿದ್ದ ಅಂದಿನ ಮರಾಠೀ ನಾಟಕಗಳೊಂದಿಗೆ ಆ ಕನ್ನಡ ನಾಟಕವನ್ನು ಹೋಲಿಸಿ ಹೀಯಾಳಿಸಿದ ಗೆಳೆಯರ ಮೇಲೆ ಹುರುಡು ಗಟ್ಟಿ, ಪರಿಷ್ಕಾರಗೊಂಡ ಕನ್ನಡ ನಾಟಕವನ್ನು ರಚಿಸಿ ಪ್ರಯೋಗಿಸುವುದಾಗಿ ಪಣ ತೊಟ್ಟು, ಮಾರ್ಕಂಡೇಯ ಎಂಬ ತಮ್ಮ ಮೊದಲ ನಾಟಕವನ್ನು ಬರೆದು, ಶಿವ ಪ್ರಾಸಾದಿಕ ನಾಟಕ ಮಂಡಳಿಯನ್ನು ಕಟ್ಟಿ ಪ್ರಯೋಗಿಸಿ ಕಲ್ಬುರ್ಗಿಯ ಪ್ರೇಕ್ಷಕರನ್ನು ಮೆಚ್ಚಿಸಿದರು (1894). ಎರಡನೆಯ ನಾಟಕ ಬಂಧವಿಮೋಚನೆ. ಮುಂದೆ ಹನ್ನೆರಡು ವರ್ಷಗಳ ಕಾಲ ನಾಟಕಕಾರರಾಗಿ, ನಾಟ್ಯಶಿಕ್ಷಕರಾಗಿ ಕಲ್ಬುರ್ಗಿ, ಹೊಂಬಳ, ಕೊಪ್ಪಳ, ಬಿಜಾಪುರ, ಧಾರವಾಡಗಳ ಹಲವಾರು ನಾಟಕ ಸಂಸ್ಥೆಗಳಲ್ಲಿ ದುಡಿದರು.

ಕೊಣ್ಣೂರು ನಾಟಕ ಮಂಡಳಿಯ ವ್ಯವಸ್ಥಾಪಕ ಶಿವಮೂರ್ತಿಸ್ವಾಮಿ ಕಣಬರಗೀಮಠ ಅವರ ನೆರವಿನಿಂದ 1919ರಲ್ಲಿ ಗರೂಡರು ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯನ್ನು ಕಟ್ಟಿದರು. ತಾವೇ ರಂಗನಾಟಕಗಳನ್ನು ರಚಿಸಿ, ಕಲಾವಿದರನ್ನು ಹುಡುಕಿ, ಆರಿಸಿ ಕರೆತಂದು, ನಿಷ್ಪಕ್ಷಪಾತವಾದ ಶಿಕ್ಷಣ ಕೊಟ್ಟು ಸಾರ್ಥಕ ಪ್ರಯೋಗಗಳನ್ನು ಮಾಡಿದರು. ಮುಂದಿನ ಮೂರು ದಶಕಗಳಲ್ಲಿ ದತ್ತಾತ್ರೇಯ ಮಂಡಳಿ ಕನ್ನಡ ನಾಡಿನ ಎಲ್ಲ ಮುಖ್ಯಪಟ್ಟಣಗಳಲ್ಲಿ ನಾಟಕಗಳನ್ನು ಆಡಿದು ದಲ್ಲದೆ, ಮಹಾರಾಷ್ಟ್ರದ ಪುಣೆ, ಸಾಂಗಲಿ, ಕೊಲ್ಲಾಪುರಗಳಲ್ಲಿ ಪ್ರವಾಸ ಮಾಡಿ ಯಶಸ್ಸನ್ನು ಗಳಿಸಿತು. ಮನೋಜ್ಞವಾದ ಅಭಿನಯ ಕಲೆ ಹಾಗೂ ಶುದ್ಧ ಸಾಹಿತ್ಯಕ ನಾಟಕಗಳಿಂದಾಗಿ ಅತ್ಯಂತ ಪ್ರಸಿದ್ಧಿಗೆ ಬಂತು. ಗರೂಡರು ಒಟ್ಟಾರೆ ಐವತ್ತನಾಲ್ಕು ರಂಗನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಚೌತಿಯ ಚಂದ್ರ, ವತ್ಸಲಾಹರಣ, ಶಕ್ತಿವಿಲಾಸ, ಪಾದುಕಾಪಟ್ಟಾಭಿಷೇಕಗಳಂಥ ಪೌರಾಣಿಕ ನಾಟಕಗಳೂ ಎಚ್ಚಮನಾಯಕನಂಥ ಐತಿಹಾಸಿಕನಾಟಕವೂ ವಿವೇಕವಿಜಯ, ಬಲ ಸಿಂಹತಾರಾದಂಥ ಕಾಲ್ಪನಿಕ ಕಥಾವಸ್ತುವನ್ನು ಆಧರಿಸಿದ ನಾಟಕಗಳೂ ವಿಷಮ ವಿವಾಹ, ಉಗ್ರ ಕಲ್ಯಾಣ ದಂಥ ಸಾಮಾಜಿಕ ನಾಟಕಗಳೂ ಮಹಾತ್ಮಾ ಕಬೀರ ಮೊದಲಾಗಿ ಸಂತ ಜೀವನ ದರ್ಶನವನ್ನು ಪ್ರತಿಬಿಂಬಿಸಿದ ನಾಟಕಗಳೂ ಇವೆ. ಇವು ವೈಯಕ್ತಿಕವಾಗಿ ಗರೂಡರಿಗೆ ಅಪಾರವಾದ ಕೀರ್ತಿಯನ್ನೂ ಇವರ ಮಂಡಳಿಗೆ ಯಶಸ್ಸನ್ನೂ ತಂದುಕೊಟ್ಟವು.

ಇವರು ಹುಟ್ಟು ನಟರು. ಅಭಿನಯಕಲೆಯನ್ನೂ ಧ್ವನಿ ಬಳಕೆಯನ್ನೂ ಅವಿರತವಾಗಿ ಅಭ್ಯಸಿಸಿ ಆ ಕಲೆಗಳಿಗೆ ಶಾಸ್ತ್ರದ ಮಹತ್ತ್ವವನ್ನು ಕೊಟ್ಟವರು. ಅಶೋಕ, ದಶರಥ, ಎಚ್ಚಮನಾಯಕ, ಕಬೀರದಾಸ ಮೊದಲಾಗಿ ಇವರು ಅಭಿನಯಿಸಿದ ಭೂಮಿಕೆಗಳು ಅಭಿನಯಕೇಸರಿ, ಕರ್ಣಾಟಕ ನಾಟಕಾಲಂಕಾರ ಎಂಬ ಪ್ರಶಸ್ತಿಗಳನ್ನು ಇವರಿಗೆ ಗಳಿಸಿಕೊಟ್ಟವು.

ಇವರ ನಾಟಕಗಳಲ್ಲಿ, ಪ್ರದರ್ಶನಗಳಲ್ಲಿ, ಸಂಗೀತಕ್ಕಿಂತ ಹೆಚ್ಚಾಗಿ ಅಭಿನಯಕ್ಕೆ ಪ್ರಾಧಾನ್ಯ. ರಾಷ್ಟ್ರಪ್ರೇಮ ಹಾಗೂ ಭಾರತೀಯ ಸಂಸ್ಕೃತಿಯ ಉದಾತ್ತತೆಯ ಸೆಳಕುಗಳು ಇವರ ನಾಟಕಗಳಲ್ಲಿ ಹಾಸುಹೊಕ್ಕಾಗಿದ್ದವು. ಎಂದೇ ಅಂದಿನ ವಿಮರ್ಶಕರ ಕಣ್ಣಿನಲ್ಲಿ ಗರೂಡರು ನಟರಾಗಿ, ನಾಟಕಕಾರರಾಗಿ, ದೇಶಸೇವಕರಾಗಿ, ಧರ್ಮಪ್ರಸಾರಕರಾಗಿ ಕನ್ನಡ ರಂಗಭೂಮಿಗೆ ದೇಗುಲದ ಪಾವಿತ್ರ್ಯವನ್ನು ತಂದುಕೊಟ್ಟ ದ್ರಷ್ಟಾರರಾದರು. (ಎಚ್.ಕೆ.ಆರ್.)

**ಗರೆಸ್, ಯೋಹಾನ್ ಯೋಸೆಫ್ ಫಾನ್ :** 1776–1849. ಸುಪ್ರಸಿದ್ಧ ಪತ್ರಿಕೋದ್ಯಮಿಯಾಗಿದ್ದ ಜರ್ಮನ್ ಲೇಖಕ. ಕೊಬ್ಲೆಂಜ್ ಎಂಬ ಊರಿನಲ್ಲಿ ಜನಿಸಿದ. ತನ್ನ ಉದಾತ್ತ ಸ್ವಭಾವ, ಸೌಜನ್ಯಗಳಿಂದಲೂ ಚೈತನ್ಯಶಾಲಿ ವ್ಯಕ್ತಿತ್ವದಿಂದಲೂ ಈತ ಆ ಯುಗದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯೆನಿಸಿದ. ಮೊದಲಿನಿಂದಲೂ ಸ್ವಾತಂತ್ರ್ಯಪ್ರಿಯನಾದ ಈತ ಇನ್ನೂ ಶಾಲಾವಿದ್ಯಾರ್ಥಿಯಾಗಿರುವಾಗ ಆರಂಭವಾಗಿದ್ದ ಫ್ರಾನ್ಸಿನ ಮಹಾಕ್ರಾಂತಿಯ ಬಗ್ಗೆ ತುಂಬ ಭರವಸೆಯಿಟ್ಟುಕೊಂಡು ಆಶಾಗೋಪುರಗಳನ್ನು ಕಟ್ಟತೊಡಗಿದ. ಮುಂದೆ ರೆಯ್ನಿ ಪ್ರಾಂತಗಳ ಪರವಾಗಿ ರಾಜಕೀಯ ಸಂಧಾನ ನಡೆಸಲು

ಪ್ಯಾರಿಸ್ಸಿಗೆ ಹೋಗಿಬಂದಮೇಲೆ ಮಹಾಕ್ರಾಂತಿಯ ಬಗ್ಗೆ ಈತನಿಗೆ ಇದ್ದ ಭ್ರಮೆಯೆಲ್ಲ ಹಾರಿ ಹೋಯಿತು. ನಿರಾಸೆ ಕವಿಯಿತು. 1797ರಲ್ಲಿ ಡಾಸ್ ರೋಟೆ ಬ್ಲಟ್ ಎಂಬ ರಾಷ್ಟ್ರೀಯ ಪತ್ರಿಕೆಯನ್ನು ಆರಂಭಿಸಿ ಅದರ ಪ್ರಥಮ ಸಂಪಾದಕನಾದ. ಅನಂತರ ಗರೆಸ್ ರಾಜಕೀಯ ಜೀವನವನ್ನು ತ್ಯಜಿಸಿ ಕೊಬ್ಲೆಂಜ್‌ನಲ್ಲಿ ಅಧ್ಯಾಪಕನಾದ. 1806 ರಿಂದ 1808ರ ವರೆಗೆ ಹೈಡೆಲ್‌ಬರ್ಗ್‌ನಲ್ಲಿ ಜರ್ಮನಿಯ ರಮ್ಯ ಸಾಹಿತ್ಯವಾದಿಗಳಾಗಿದ್ದ ಆಷಿಂ ಫಾನ್ ಅರ್ನಿಮ್ ಮತ್ತು ಕ್ಲೆಮೆನ್ಸ್ ಬೆಂಟ್ಯಾನೊ ಎಂಬವರ ಜೊತೆಗೂಡಿ ಟ್ಸೈಟುಂಗ್ ಫ್ಯೂರೆ ಐನ್‌ಸೀಡ್ಲೆರ್ ಎಂಬ ಪತ್ರಿಕೆಯ ಸಂಪಾದಕನಾಗಿ ಜರ್ಮನಿಯ ಭವ್ಯ ಪರಂಪರೆಯನ್ನು ಪ್ರಸಾರಮಾಡುತ್ತ ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸುವ ಕಾರ್ಯದಲ್ಲಿ ತೊಡಗಿದ. 1807ರಲ್ಲಿ ತನ್ನ ಫೊಲ್ಕ್ಸ್ ಬ್ಯೂಷೆರ್ ಎಂಬ ಗ್ರಂಥದ ಮೊದಲ ಭಾಗವನ್ನು ಪ್ರಕಟಿಸಿದ. 1810ರಲ್ಲಿ ಮೈಥೆನ್ ಗೆಷಿಷ್ಟೆ ಡೆರ್ ಅಸಿಯಾಟಿಷೆನ್ ವೆಲ್ಟ್ ಎಂಬ ಏಷ್ಯದ ಪುರಾಣಗಳನ್ನು ಕುರಿತ, ಗ್ರಂಥವನ್ನು ಬರೆದು ಪ್ರಕಟಿಸಿದ. ಏಷ್ಯದ ಧರ್ಮ, ಸಂಸ್ಕೃತಿಗಳ ಬಗೆಗೆ ಜರ್ಮನಿಯ ಯುವಕರಿಗಿದ್ದ ಆಸ್ಥೆಯನ್ನಿದು ತೋರಿಸುತ್ತದೆ.

1814ರಲ್ಲಿ ಫ್ರಾನ್ಸಿನಲ್ಲಿ ನೆಪೋಲಿಯನ್ನನ ನಿರಂಕುಶಾಧಿಕಾರ ಉಚ್ಛ್ರಾಯ ಸ್ಥಿತಿಗೇರಿದಾಗ ರೈನಿಷೆರ್ ಮೆರ್ಕೂರ್ ಎಂಬ ತೀವ್ರಸ್ವಾತಂತ್ರ್ಯವಾದಿ ಪತ್ರಿಕೆಯನ್ನು ಆರಂಭಿಸಿದ. ಅದರಲ್ಲಿ ಪ್ರಕಟವಾಗುತ್ತಿದ್ದ ನಿರಂಕುಶ ಪ್ರಭುತ್ವ ವಿರುದ್ಧವಾದ

ಅಗ್ರಲೇಖನಗಳ ಉಗ್ರತೆ ನೆರೆರಾಜ್ಯಗಳಿಗೂ ತಟ್ಟಿತು. ಚಕ್ರವರ್ತಿ ನೆಪೋಲಿಯನ್ ವ್ಯಗ್ರನಾಗಿ ಈ ಪತ್ರಿಕೆಯನ್ನು ಪಂಚಮಶಕ್ತಿ ಎಂದು ಕರೆದ. ಗರೆಸ್‌ನ ಜನತಾ ಸ್ವಾತಂತ್ರ್ಯ ಪರವಾದ ನಿಷ್ಠುರ ಲೇಖನಗಳು ನೆಪೋಲಿಯನ್ನನ ಪತನಾನಂತರ ಜರ್ಮನಿಯಲ್ಲಿ ಅಸ್ತಿತ್ವಕ್ಕೆ ಬಂದ ಪ್ರಷ್ಯನ್ ಸರ್ಕಾರದ ದಬ್ಬಾಳಿಕೆಯನ್ನೂ ಖಂಡಿಸತೊಡಗಿದ್ದಕ್ಕಾಗಿ ಸರ್ಕಾರ 1816ರಲ್ಲಿ ಕ್ರಮ ಕೈಗೊಂಡು ಪತ್ರಿಕೆಯನ್ನು ನಿಲ್ಲಿಸಿಬಿಟ್ಟಿತು. ಗರೆಸ್ ತಾನು ಬರೆದ ಟುಟ್ಷ್‌ಲ್ಯಾಂಡ್ ಉಂಟ್ ಡಿ ರೆವೊಲ್ಯೂಷನ್ (ಜರ್ಮನಿ ಮತ್ತು ಕ್ರಾಂತಿ) ಎಂಬ ಪ್ರಚಾರ ಲೇಖದ ಪರಿಣಾಮವಾಗಿ ದೇಶ ಬಿಟ್ಟು ಓಡಿಹೋಗಬೇಕಾಯಿತಲ್ಲದೆ ಸ್ವಿಟ್ಜರ್ಲೆಂಡಿನಲ್ಲಿ ಹಲವಾರು ವರ್ಷ ಕಡು ಬಡತನದ ಬವಣೆಯಲ್ಲಿ ಬೇಯಬೇಕಾಗಿ ಬಂತು. 1824ರಲ್ಲಿ ಗರೆಸ್ ತಾನು ಹಿಂದೊಮ್ಮೆ ಕಡೆಗಣಿಸಿದ್ದ ರೋಮನ್ ಕ್ಯಾಥೊಲಿಕ್ ಚರ್ಚಿಗೆ ಸೇರಿಕೊಂಡ. 1827ರಲ್ಲಿ ಬವೇರಿಯದ ಮೊದಲು ಲೂದ್ವಿಷ್ ದೊರೆಯ ಆಹ್ವಾನವನ್ನು ಒಪ್ಪಿ ಇತಿಹಾಸದ ಪ್ರಧ್ಯಾಪಕನಾಗಿ ಮ್ಯೂನಿಕ್ ವಿಶ್ವವಿದ್ಯಾಲಯಕ್ಕೆ ಬಂದ. ಧಾರ್ಮಿಕವಾದ ವಿವಾದಗಳೆದ್ದಾಗಲೆಲ್ಲ ರೋಮನ್ ಕೆಥೊಲಿಕ್ ಪಂಥದ ವೀರಬೆಂಬಲಿಗನಾಗಿ ತನ್ನ ವಾಗ್ಝರಿಯನ್ನು ಹರಿಸಿದ.

1836ರಿಂದ 1842ರ ಅವಧಿಯಲ್ಲಿಯೇ ಈತನ ಮಹಾಕೃತಿಯೆನಿಸಿರುವ ಕ್ರೈಸ್ಟ್‌ಲಿಷ್ ಮಿಸ್ಟಿಕ್ ಎಂಬ ಗ್ರಂಥದ ರಚನೆಯಾಯಿತು. 1848ರಲ್ಲಿ ಈತ ಮ್ಯೂನಿಕ್ ನಗರದಲ್ಲಿ ವಿಧಿವಶನಾದ.

ಪ್ರಜಾಸ್ವಾತಂತ್ರ್ಯಕ್ಕಾಗಿ ಈತ ತೋರಿದ ನಿರಂತರ ಉತ್ಸಾಹ, ನಡೆಸಿದ ಪ್ರಾಮಾಣಿಕ ವಾದ ಹೋರಾಟ ಚಿರಸ್ಮರಣೀಯವಾದುವು. ಸತ್ತ್ವಶಾಲಿಯಾದ ಶೈಲಿ, ಅಮೋಘವಾದ ಭಾಷಾವೈಖರಿಗಳಿಂದ ಕೂಡಿದ ಲೇಖನಗಳಿಂದ ತುಂಬ ಪ್ರಭಾವವನ್ನು ಬೀರಿದ ಮಹಾವ್ಯಕ್ತಿಯೆಂದು ಈತ ವಿಖ್ಯಾತನಾದ. 1876ರಲ್ಲಿ ರೋಮನ್ ಕೆಥೋಲಿಕ್ ಧರ್ಮವನ್ನು ಕುರಿತ ವಿಶೇಷ ಅಧ್ಯಯನಕ್ಕೂ ಸಂಶೋಧನೆಗೂ ಮೀಸಲಾದ ಗರೆಸ್–ಗಸ್ಸೆಲ್ಸ್ ಸಂಸ್ಥೆಯೊಂದು ಸ್ಥಾಪಿತವಾಯಿತು. ಗರೆಸ್‌ನ ಮರಣಾನಂತರವೂ ಆತನ ಹೆಸರಿನ ಪ್ರಭಾವ ಎಷ್ಟಿತ್ತು ಎಂಬುದಕ್ಕೆ ಇದೊಂದು ನಿದರ್ಶನ. ಈ ಅಧ್ಯಯನ ಸಂಸ್ಥೆ ಈಗ ದೊಡ್ಡದಾಗಿ ಬೆಳೆದು ರೋಮ್, ಮ್ಯಾಡ್ರಿಡ್, ಜೆರೂಸಲೆಮ್ ನಗರಗಳಲ್ಲಿ ಶಾಖೆಗಳನ್ನು ತೆರೆದಿದೆ. ಇದರ ಆಶ್ರಯದಲ್ಲಿ ಹಲವಾರು ನಿಯತಕಾಲಿಕ ಧಾರ್ಮಿಕ ಪತ್ರಿಕೆಗಳು ಹೊರಡುತ್ತಿವೆ. ಈತನ ರಾಜಕೀಯ ಲೇಖನಗಳನ್ನೆಲ್ಲ ಸಂಗ್ರಹಿಸಿ ಗೆಸಾಮ್ಮೆಲ್ಟೆಪ್ರಿಫ್ಟೆನ್ ಎಂಬ ಹೆಸರಿಟ್ಟು 6 ಸಂಪುಟಗಳಲ್ಲಿ ಪ್ರಕಟಿಸಿದೆ. (1854–60). ಪ್ರಮುಖ ಪತ್ರಗಳನ್ನೆಲ್ಲ ಸಂಗ್ರಹಿಸಿ 3 ಸಂಪುಟಗಳಲ್ಲಿ (1858–74) ಮತ್ತು 1960ರಲ್ಲಿ ಈತನ ಎಲ್ಲ ಬರೆಹಗಳನ್ನೂ ಒಟ್ಟುಗೂಡಿಸಿ 16 ಸಂಪುಟಗಳಲ್ಲಿ ಪ್ರಕಟಿಸಿದೆ. (ಕೆ.ಬಿ.ಪಿ.)

**ಗರ್ನ್ಸಿ** : ಇಂಗ್ಲೆಂಡಿನ ದಕ್ಷಿಣಕ್ಕೆ, ಫ್ರಾನ್ಸ್ ತೀರಕ್ಕೆ ಸಮೀಪದಲ್ಲಿ ಇಂಗ್ಲಿಷ್ ಕಡಾಲ್ಗಾಲುವೆಯಲ್ಲಿರುವ ದ್ವೀಪಗಳಲ್ಲೊಂದು. ಗಾತ್ರದಲ್ಲಿ ಎರಡನೆಯದು. ವಿಸ್ತೀರ್ಣ 63. ಚ.ಕಿ.ಮೀ. ಉದ್ದ ಈಶಾನ್ಯದಿಂದ ನೈಋತ್ಯಕ್ಕೆ, ದಕ್ಷಿಣದಲ್ಲಿ ಇದರ ಅಗಲ ಸು. 13.5 ಕಿ.ಮೀ ಹರ್ಮ್, ಜ್ಹೆಟೂ ಮತ್ತು ಇತರ ಪುಟ್ಟ ದ್ವೀಪಗಳನ್ನೊಳಗೊಂಡಂತೆ ಏರ್ಪಟ್ಟಿರುವ ಬೇಯ್ಲಿಫ್ ಆಡಳಿತ ಪ್ರದೇಶದ ಜನಸಂಖ್ಯೆ 47,158 (1961). ರಾಜಧಾನಿ ಸೇಂಟ್ ಪೀಟರ್ಸ್ ಪೋರ್ಟ್.

ಭೌತಲಕ್ಷಣ: ಗರ್ನ್ಸಿ ದ್ವೀಪದ ದಕ್ಷಿಣ ಭಾಗದಲ್ಲಿ ಸಮುದ್ರದಂಚಿನಲ್ಲಿ ಪ್ರಪಾತಗಳಿವೆ. ಅನೇಕ ಕಡೆ ಸಮುದ್ರದ ಅಲೆಗಳಿಂದ ಸಂಭವಿಸಿದ ಕೊರಕಲುಗಳುಂಟು. ಉತ್ತರಾಭಿಮುಖವಾದ ತೊರೆಗಳು ಇಲ್ಲಿಯ ಕಣಿವೆಗಳ ಮೂಲಕ ಹರಿಯುತ್ತವೆ. ದಕ್ಷಿಣತೀರಭಾಗದ ಹೊರತು ದ್ವೀಪದ ಇತರ ತೀರಗಳಲ್ಲಿ ಕಲ್ಲಿನ ದಿಬ್ಬಗಳು ಹೆಚ್ಚು. ಇಂಥ ದಿಬ್ಬಗಳು ಪೆರೆಲ್ಲಿ ಕೊಲ್ಲಿ ಮತ್ತು ಅನತಿದೂರದ ಲಿಹೌ ದ್ವೀಪದಲ್ಲಿ ಹೇರಳವಾಗಿವೆ. ದ್ವೀಪದ ಪಶ್ಚಿಮತೀರ ಅಟ್ಲಾಂಟಿಕ್ ಸಾಗರಕ್ಕೆ ತೆರವಾಗಿದೆ. ಅಲ್ಲಿ ಹಲವು ನೌಕಾಘಾತಗಳು ಸಂಭವಿಸಿವೆ. ಉತ್ತರಕರಾವಳಿ ತಗ್ಗು. ಸೇಂಟ್ ಸ್ಯಾಂಪ್ಸನ್ ಬಂದರು ಇರುವುದು ಆ ಭಾಗದಲ್ಲಿ. ಅಲ್ಲಿ ಭೂಮಿ ಸಮುದ್ರದಿಂದ ಕೊಚ್ಚಿ ಬಂದ ಮರಳಿನಿಂದ ಕೂಡಿದ್ದು, ಸಮುದ್ರದ ಗಷ್ಟು ಮತ್ತು ಮರಳು ದಿಬ್ಬಗಳ ನಡುವಣ ಜಲಭಾಗದಲ್ಲಿ ಶೇಖರವಾದ ಕಶ್ಮಲ ವಸ್ತು ಸಾಮಾನ್ಯವಾಗಿ ಗೊಬ್ಬರವಾಗಿ ಉಪಯೋಗಕ್ಕೆ ಬರುತ್ತದೆ.

ವಾಯುಗುಣ: ಈ ದ್ವೀಪದ್ದು ಸಮುದ್ರತೀರದ ವಾಯುಗುಣ. ಮಂಜು ಮತ್ತು ಹಿಮ ಕಡಿಮೆ. ವಾರ್ಷಿಕ ಸರಾಸರಿ ಉಷ್ಣತೆ $17^0$ ಫ್ಯಾ. ($-8^0$ಸೆಂ.). ಬಿಸಿಲು ವರ್ಷದಲ್ಲಿ 1,905 ಘಂಟೆಗಳ ಕಾಲ ಬೀಳುತ್ತದೆ. ವಾರ್ಷಿಕ ಮಧ್ಯಕ ಮಳೆ ದಕ್ಷಿಣದಲ್ಲಿ 89 ಸೆಂ.ಮೀ, ವಾಯುವ್ಯದಲ್ಲಿ 76 ಸೆಂ.ಮೀ ಈ ದ್ವೀಪದ ಸಿಹಿನೀರಿನ ಅಭಾವವನ್ನು ಸಮುದ್ರದ ನೀರನ್ನು ಶೋಧಿಸುವ ಯಂತ್ರದ ಸಹಾಯದಿಂದ ಈಗ ನಿವಾರಿಸಿದ್ದಾರೆ.

ಇತಿಹಾಸ: ಗರ್ನ್ಸಿ ದ್ವೀಪದಲ್ಲಿ ನವಶಿಲಾಯುಗದಿಂದಲೂ ಜನಜೀವನ ಇದೆಯೆಂದು ತಿಳಿದುಬರುತ್ತದೆ. 11ನೆಯ ಶತಮಾನದಲ್ಲಿ ನಾರ್ಮಂಡಿ ಪ್ರದೇಶದ ಜನ ಈ ದ್ವೀಪದಲ್ಲಿ ವಸಾಹತುಗಳನ್ನು ಸ್ಥಾಪಿಸಿಕೊಂಡರು. ಆಗಿನ ಕಾಲದ ದಾಖಲೆಗಳಿಂದ ಸೇಂಟ್ ಸೋವರ್ ಪ್ರಭುಗಳು, ಬೆಸ್ಸಿನ್‌ನ ಶ್ರೀಮಂತರು, ಲ ಮಾಂಟ್ ಸೇಂಟ್ ಮಿಚ್ಚೆಲ್, ಕ್ರೈಸ್ತಮತದ ಪಾದ್ರಿಗಳು ಹಾಗೂ ನಾರ್ಮಂಡಿಯ ಡ್ಯೂಕ್–ಇವರು ಈ ದ್ವೀಪದ ಮುಖ್ಯ ಭೂಮಾಲೀಕರಾಗಿದ್ದರೆಂದು ತಿಳಿದುಬರುತ್ತದೆ. ಆ ಶತಮಾನದಲ್ಲಿ ಹತ್ತು ಪ್ಯಾರಿಷ್ ಚರ್ಚುಗಳು ಇಲ್ಲಿದ್ದುವು. 12ನೆಯ ಶತಮಾನದಲ್ಲಿ ಹನ್ನೆರಡು ಫ್ರೆಂಚ್ ಕ್ರೈಸ್ತ ಮಠಗಳು ಈ ದ್ವೀಪದಲ್ಲಿ ಸ್ವತ್ತು ಹೊಂದಿದ್ದುವು. ನಾರ್ಮಂಡಿಯಿಂದ ಪ್ರತ್ಯೇಕಗೊಂಡ ಮೇಲೆ, ಇಂಗ್ಲೆಂಡಿನ ಜಾನ್ ದೊರೆಯ ಕಾಲದಿಂದ ಈ ದ್ವೀಪ ಅದರ ಸಾಮಾನ್ಯ ಕಾನೂನುಗಳನ್ನು ಮತ್ತು ಸ್ಥಳೀಯ ಪದ್ಧತಿಗಳನ್ನು ಉಳಿಸಿಕೊಂಡು ಬಂತು. 15ನೆಯ ಶತಮಾನದ ಕೊನೆಯಿಂದ ಈ ದ್ವೀಪದ ಆಡಳಿತವನ್ನು ನೋಡಿಕೊಳ್ಳಲು ಒಬ್ಬ ಕಪ್ತಾನನನ್ನು ನೇಮಿಸಲಾಯಿತು. ಕ್ರಮೇಣ ಈ ಅಧಿಕಾರಿಯ ಹೆಸರು ಗವರ್ನರ್ ಎಂದಾಯಿತು. 1835ರಲ್ಲಿ ಗವರ್ನರ್ ಹುದ್ದೆ ರದ್ದಾಯಿತು; ಇದರ ಆಡಳಿತಕ್ಕೆ ಲೆಫ್ಟೆನೆಂಟ್ ಗವರ್ನರನ ನೇಮಕವಾಯಿತು.

14ನೆಯ ಶತಮಾನದ ಇಂಗ್ಲೆಂಡಿನ ಸಂಚಾರಿ ನ್ಯಾಯಾಧೀಶರು ಗರ್ನ್ಸಿ ದ್ವೀಪಕ್ಕೆ ಬಂದು ನ್ಯಾಯ ವಿಚಾರಣೆ ಮಾಡುವ ಪದ್ಧತಿ ಪ್ರಾರಂಭವಾಯಿತು. ತರುವಾಯ ನ್ಯಾಯಾಧಿಕಾರವನ್ನು ವಾರ್ಡನ್ ಎಂಬ ನ್ಯಾಯಾಧಿಕಾರಿಗೂ ಆ ತರುವಾಯ ಬೇಯ್ಲಿಫ್ ಮತ್ತು ನ್ಯಾಯದರ್ಶಿಗಳಿಗೂ ನೀಡಲಾಯಿತು. ಕಾಯಿದೆಯ ಕ್ಲಿಷ್ಟ ಸಮಸ್ಯೆಗಳನ್ನು ಭೂಹಿಡುವಳಿದಾರರೇ ಮುಂತಾದವರು ನ್ಯಾಯಾಲಯದಲ್ಲಿ ಸೇರಿದಾಗ ಬಗೆಹರಿಸುತ್ತಿದ್ದ ಪದ್ಧತಿಯಿಂದ ದಿ ಸ್ಟೇಟ್ಸ್ ಆಫ್ ಡೆಲಿಬರೇಷನ್ಸ್, ಎಂಬ ಶಾಸನ ಸಭೆ ವಿಕಾಸ ಹೊಂದಿತು. 19ನೆಯ ಶತಮಾನದಲ್ಲಿ ಸ್ಟೇಟ್ಸ್ ಸಭೆ ಕಾರ್ಯನಿರ್ವಾಹಕ ಸಮಿತಿಗಳ ಮೂಲಕ ದ್ವೀಪದ ಆಡಳಿತ ವಹಿಸಿತು.

ಗರ್ನ್ಸಿ ದ್ವೀಪ ಯಾವ ಕಾಲದಲ್ಲೂ ಪ್ರಬಲ ರಾಜಮನೆತನಗಳ ಪ್ರಭುತ್ವಕ್ಕೆ ಒಳಪಟ್ಟಿರಲಿಲ್ಲ. ರೈತ ಜನ ಭೂಮಾಲೀಕರಿಂದ ಶೋಷಿತರಾಗದೆ ಸ್ವತಂತ್ರವಾಗಿ ಉಳಿದುಕೊಂಡು ಬಂದಿದ್ದಾರೆ. ವಾಣಿಜ್ಯಾಭಿವೃದ್ಧಿಯಿಂದಾಗಿ ಸೇಂಟ್ ಪೀಟರ್ ಬಂದರು ಅಭಿವೃದ್ಧಿ ಹೊಂದಿ, 19ನೆಯ ಶತಮಾನದಲ್ಲಿ ಕೈಗಾರಿಕೆಗಳು ಮುಂದುವರಿದ ಕಾರಣ ಈ ದ್ವೀಪದಲ್ಲಿ ಊಳಿಗಮಾನ್ಯ ಪದ್ಧತಿ ಸಡಿಲಗೊಂಡಿತು.

ಜನಜೀವನ: ಗರ್ನ್ಸಿಯ ಜನ ನಾರ್ಮನ್ ಬುಡಕಟ್ಟಿನವರು. ಬ್ರಿಟನ್ನಿನ ಜನಾಂಗದವರೊಡನೆ ಕಲೆತಿದ್ದಾರೆ. 19ನೆಯ ಶತಮಾನದಲ್ಲಿ ಕಲ್ಲು ಗಣಿ ಕೆಲಸ ಮತ್ತು ತೋಟಗಾರಿಕೆಗೆ ಹೆಚ್ಚು ಅವಕಾಶವಿದ್ದ ಕಾರಣ ಜನ ಈ ದ್ವೀಪಕ್ಕೆ ವಲಸೆ ಬರಲಾರಂಭಿಸಿ ಜನಸಂಖ್ಯೆ ಹೆಚ್ಚಿತು. ದ್ವೀಪದ ಜನರಲ್ಲಿ 2/5 ಭಾಗ ಸೇಂಟ್ ಪೀಟರ್ಸ್ ಪೋರ್ಟ್ ನಗರದಲ್ಲಿ ವಾಸಿಸುತ್ತಾರೆ.

ಆಡಳಿತ: ಗರ್ನ್ಸಿ ದ್ವೀಪದ ಆಡಳಿತವನ್ನು ಸ್ಟೇಟ್ಸ್ ಆಫ್ ಡೆಲಿಬರೇಷನ್ಸ್ ಸಭೆ ವಹಿಸಿದೆ. ಅದರ ಅಧ್ಯಕ್ಷ ಬೇಯ್ಲಿಫ್. 12 ಮಂತ್ರಾಲೋಚಕರು (ಕೌನ್ಸೆಲರ್ಸ್), 33 ಚುನಾಯಿತ ಪ್ರಜಾಪ್ರತಿನಿಧಿಗಳು, 10 ಡೌಜ್ಹೇನ್ ಪ್ರತಿನಿಧಿಗಳು, 2 ಡೆಪ್ಯುಟಿಗಳು ಸಭೆಯ ಸದಸ್ಯರು. ರಾಯಲ್ ನ್ಯಾಯಾಲಯದ ಅಧಿಪತಿ ಬೇಯ್ಲಿಫ್; ಅವನ ನೆರವಿಗೆ 12 ಮಂದಿ ಚುನಾಯಿತ ನ್ಯಾಯದರ್ಶಿಗಳಿದ್ದಾರೆ. ನ್ಯಾಯ ವ್ಯವಹಾರ ಇಂಗ್ಲಿಷಿನಲ್ಲಿ ನಡೆಯುತ್ತದೆ. ಲೆಫ್ಟೆನೆಂಟ್ ಗವರ್ನರ್ ಬ್ರಿಟಿಷ್ ದೊರೆಯ ವೈಯಕ್ತಿಕ ಪ್ರತಿನಿಧಿ. (ವಿ.ಜಿ.ಕೆ.)

**ಗರ್ಭಪಾತ** : ನಿರ್ಣಯಿತ ಕಾಲಕ್ಕೆ ಮುಂಚೆ ಪ್ರಸವವಾಗಿ ಹೀಗೆ ಪ್ರಸವಗೊಂಡ ವಸ್ತು ಜೀವಂತವಾಗಿರದ ಘಟನೆ (ಅಬಾರ್ಷನ್). ಮನುಷ್ಯರಲ್ಲಿ ಗರ್ಭಧಾರಣದ ಪೂರ್ಣಕಾಲ 40 ವಾರಗಳು. ಗರ್ಭಿಣಿಯಲ್ಲಿ ಇದಕ್ಕೆ ಮೊದಲೇ ಗರ್ಭಾವಸ್ಥೆ ಕೊನೆಗೊಂಡು ಜೀವದಿಂದಿರಲಾಗದ ಮಗು ಜನಿಸುವ ಘಟನೆಯೇ ಗರ್ಭಪಾತ. ಮೊದಲಿಗೆ ಗರ್ಭಕ್ಷಯ, ಗರ್ಭಪಾತ, ದಿನ ತುಂಬುವುದಕ್ಕೆ ಮುಂಚೆಯೇ ಅವಸರದಿಂದ ಹಡೆಯುವಿಕೆ ಎಂಬ ವಿವಿಧ ಘಟ್ಟಗಳನ್ನು ಗುರುತಿಸಲಾಗುತ್ತಿತ್ತು. ಗರ್ಭ ತಾಳುವುದಕ್ಕೆ ಹಿಂದಿನ ರಜಸ್ರಾವದ ಪ್ರಾರಂಭದ ದಿವಸದಿಂದ ಲೆಕ್ಕ ತೆಗೆದುಕೊಂಡು ಸು. 28 ವಾರಗಳಾದರೂ ಭ್ರೂಣ ಗರ್ಭಕೋಶದಲ್ಲಿ ಬೆಳೆಯದೆ ಇದ್ದರೆ ಪ್ರಸವವಾದಾಗ ಅದು ಜೀವಂತವಾಗಿರಲಾರದು. ಆಮೇಲೆ ಹುಟ್ಟಿದ ಮಕ್ಕಳು ಜೀವಂತವಾಗಿದ್ದರೂ ಹುಟ್ಟಿದಾಗ ಒಂದು ಕೆಜಿಗಿಂತ ಹೆಚ್ಚು ತೂಕವಿರದಿದ್ದರೆ, ಅವುಗಳ ಪೋಷಣೆ ಅತಿ ಕ್ಲಿಷ್ಟ ಸಮಸ್ಯೆಯಾಗಿ ಅವು ಬಹುವಾಗಿ ಸತ್ತು ಹೋಗುತ್ತವೆ. 34–36 ವಾರಗಳ ಕಾಲವಾದರೂ ಅವು ಗರ್ಭಾವಸ್ಥೆಯಲ್ಲಿ ಬೆಳೆಯುತ್ತ ಇದ್ದರೆ ಹುಟ್ಟಿದ ಮೇಲೆ ಜೀವಂತವಾಗಿದ್ದು ಸಹಜವಾಗಿ ಬೆಳೆಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಸಾಮಾನ್ಯವಾಗಿ 28 ವಾರಗಳಿಗೆ ಮೊದಲೇ ಕೊನೆಗೊಂಡ ಗರ್ಭಾವಸ್ಥೆಯನ್ನು ಗರ್ಭಪಾತವೆಂದು ಗಣಿಸಬಹುದಾದರೂ ಬೇರೆ ಬೇರೆ ದೇಶಗಳಲ್ಲಿ ಗರ್ಭಪಾತಕ್ಕೆ ಬೇರೆ ಬೇರೆ ವ್ಯಾಖ್ಯಾನವಿದ್ದುದರಿಂದ ವಿಶ್ವ ಆರೋಗ್ಯಸಂಸ್ಥೆ 1950ರಲ್ಲಿ ಗರ್ಭಪಾತವನ್ನು ಈ ಮುಂದಿನಂತೆ ನಾಲ್ಕು ರೀತಿಯಲ್ಲಿ ವಿಂಗಡಿಸಿತು : 1. 20 ವಾರಗಳ ಗರ್ಭಾವಧಿಗೆ ಮುಂಚೆಯೇ, ಸತ್ತುಹುಟ್ಟುವ

ಸಂದರ್ಭಗಳು; 2. ಭ್ರೂಣ 20 ವಾರಗಳಾದ ಮೇಲೂ ಬೆಳೆಯುತ್ತಿದ್ದು 28ನೆಯ ವಾರದ ಒಳಗೆ, ಸತ್ತುಹುಟ್ಟುವ ಸಂದರ್ಭಗಳು; 3. ಭ್ರೂಣ 28 ವಾರಗಳೂ ಗರ್ಭದಲ್ಲಿ ಬೆಳೆದು ಆಮೇಲೆ, ಸತ್ತು ಹುಟ್ಟುವ ಸಂದರ್ಭಗಳು; 4. ಇವು ಮೂರು ಗುಂಪಿಗೂ ಸೇರದ, ಸತ್ತ ವಸ್ತುವಿನ ಜನನ.

ಗರ್ಭಪಾತ ಸ್ವಾಭಾವಿಕವಾಗಿ ಆಗಬಹುದು. ಇಲ್ಲವೇ ಕೃತಕವಾಗಿ ಆಗಬಹುದು. ಸ್ವಾಭಾವಿಕ ಗರ್ಭಪಾತ ಅಥವಾ ಸಾಮಾನ್ಯವಾಗಿ ಜನ ಕರೆಯುವಂತೆ ಮೈ ಇಳಿಯುವುದು ಶೇ. 12 ಗರ್ಭಿಣಿಯರಲ್ಲಿ ಕಂಡುಬರಬಹುದೆಂದು ಅಂದಾಜು ಮಾಡಲಾಗಿದೆ. ಅನೇಕರಿಗೆ ಗರ್ಭಧಾರಣೆಯಾದ ಕೆಲವು ವಾರಗಳಲ್ಲೆ ಗರ್ಭಪಾತವಾಗುವುದರಿಂದ ಗರ್ಭಪಾತವಾದ ವಿಷಯ ಗಮನಕ್ಕೇ ಬರದಿರಬಹುದು. ಪತನವಾದ ವಸ್ತು ಕೆಲವು ವೇಳೆ ಇನ್ನೂ ಭ್ರೂಣಾವಸ್ಥೆಯನ್ನೂ ಹೊಂದದೆ ಇರಬಹುದು. ಅಂತೂ ಈ ರೀತಿಯ ಗರ್ಭಪಾತ ಸ್ವಲ್ಪ ತಡವಾದ ಮತ್ತು ಅಧಿಕವಾದ ಸ್ವಾಭಾವಿಕ ಋತುಸ್ರಾವದಂತೆಯೇ ಇದ್ದು ಗರ್ಭನಷ್ಟವಾಗುವುದರಿಂದ ಗೋಚರಕ್ಕೆ ಬರುವುದಿಲ್ಲ. ಒಟ್ಟು ಗರ್ಭಧಾರಣೆಗಳಲ್ಲಿ ಶೇ.20 ರಷ್ಟು ಈ ರೀತಿಯ ಅವ್ಯಕ್ತ ಗರ್ಭಪಾತ ಕಾಣಬರುತ್ತದೆ. ಸ್ವಾಭಾವಿಕ ಗರ್ಭಪಾತಗಳಲ್ಲಿ ಶೇ.75ರಷ್ಟು ಸಾಮಾನ್ಯವಾಗಿ 3–4 ತಿಂಗಳ ಗರ್ಭಿಣಿಯರಲ್ಲಿ ಕಂಡುಬರುತ್ತದೆ. ಗರ್ಭಪಾತವಾಗುವುದಕ್ಕೆ ಕೆಲವು ದಿವಸಗಳಿಗೆ ಮುಂಚೆಯೇ ಭ್ರೂಣ ಗರ್ಭಕೋಶದೊಳಗೆ ಸತ್ತು ಹೋಗಿರುವುದು ಸಾಮಾನ್ಯ. ಕೆಲವು ವೇಳೆ ಹೀಗೆ ಸತ್ತುಹೋಗಿರುವ ಭ್ರೂಣ ವಿಸರ್ಜಿಸಲ್ಪಡದೆ ಗರ್ಭಕೋಶದ ಒಳಗೇ ಅನೇಕ ವಾರಗಳು ಇರಬಹುದು. ಇಂಥ ಸಂದರ್ಭಗಳಲ್ಲಿ ಗರ್ಭಪಾತದ ಸೂಚನೆ ಕಂಡುಬಂದು ಬಹುಬೇಗನೆ ಸಮಾಧಾನವಾಗಿ, ಗರ್ಭಸ್ಥಿತಿ ಮುಂದುವರಿಯುತ್ತಿದೆಯೇನೋ ಎನ್ನುವಂತೆ ಇರುತ್ತದೆ. ಆದರೆ ಗರ್ಭದ ಬೆಳೆವಣಿಗೆ ಇಲ್ಲದೆ ಒಂದೇ ಸ್ಥಿತಿಯಲ್ಲಿರುವುದು ಮತ್ತು ಇತರ ಸೂಚನೆಗಳಿಂದ ಈ ರೀತಿಯ ಗೋಪ್ಯಗರ್ಭಪಾತಗಳನ್ನು ಗುರುತಿಸಬಹುದು. ಇಂಥ ಸಂದರ್ಭಗಳಲ್ಲಿ ಗರ್ಭಕೋಶದೊಳಗೆ ಇರುವ ಸತ್ತ ಮತ್ತು ಶಿಥಿಲವಾಗುತ್ತಿರುವ ಭ್ರೂಣದ ವಿಸರ್ಜನೆಗೆ ಚಿಕಿತ್ಸೆ ಮಾಡಬೇಕಾಗುತ್ತದೆ. ಇದು ಔಷಧೋಪಚಾರಗಳಿಂದ ಸಾಗದಿದ್ದರೆ ಶಸ್ತ್ರಚಿಕಿತ್ಸೆಯನ್ನು ಅವಲಂಬಿಸಬೇಕು. ಕೆಲವು ವೇಳೆ ಯೋನಿಯೊಳಗಿನಿಂದ ರಕ್ತಸ್ರಾವ, ಸೊಂಟನೋವು, ಕಿಬ್ಬೊಟ್ಟೆನೋವು ಮುಂತಾದ ಸೂಚನೆಗಳು ಕಂಡುಬಂದು ಗರ್ಭಪಾತವಾಗುವ ಹೆದರಿಕೆ ಉಂಟಾಗುತ್ತದೆ. ಆದರೆ ಪೂರ್ಣ ವಿಶ್ರಾಂತಿ, ಔಷಧೋಪಚಾರಗಳಿಂದ ಗರ್ಭಪಾತವಾಗುವುದನ್ನು ತಪ್ಪಿಸಬಹುದು ಮತ್ತು ಗರ್ಭದ ಬೆಳೆವಣಿಗೆ ಮುಂದುವರಿಯುವಂತೆ ಮಾಡಬಹುದು. ಇಂಥ ಸಂದರ್ಭಗಳನ್ನು ಬೆದರಿಕೆ ಗರ್ಭಪಾತವೆನ್ನುತ್ತಾರೆ. ಇನ್ನು ಕೆಲವು ವೇಳೆ ಮೇಲೆ ಹೇಳಿದ ಗರ್ಭಪಾತದ ಸೂಚನೆಗಳು ಅಗಾಧವಾಗಿ ಕಂಡುಬಂದು ಏನು ಮಾಡಿದರೂ ಗರ್ಭಪಾತವಾಗುವುದನ್ನು ತಪ್ಪಿಸಲು ಸಾಧ್ಯವಾಗದೇ ಹೋಗಬಹುದು. ಇದು ಅನಿವಾರ್ಯ ಗರ್ಭಪಾತ. ಹೀಗೆ ಗರ್ಭಪಾತವಾದಾಗ ಗರ್ಭಕೋಶ ಪೂರ್ಣವಾಗಿ ಖಾಲಿಯಾದರೆ ಅದು ಸಮಗ್ರ ಅನಿವಾರ್ಯ ಗರ್ಭಪಾತ. ಅದಿಲ್ಲದೆ ಗರ್ಭಕೋಶದೊಳಗಿನ ವಸ್ತು ಪೂರ್ತಿಯಾಗಿ ವಿಸರ್ಜಿಸಲ್ಪಡದಿದ್ದರೆ ಅದು ಅಸಮಗ್ರ ಅನಿವಾರ್ಯ ಗರ್ಭಪಾತ ಎನ್ನಿಸಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಅತಿಯಾದ ರಕ್ತಸ್ರಾವ, ವಿಷಾಣು ಸೋಂಕು ಮುಂತಾದ ಭೀಕರ ಅವಸ್ಥೆಗಳು ಉಂಟಾಗದಂತೆ ಔಷಧೋಪಚಾರಗಳಿಂದ, ಅಗತ್ಯವಾದರೆ ಶಸ್ತ್ರಕಾರ್ಯ ದಿಂದ, ಚಿಕಿತ್ಸೆ ಮಾಡಿ ಗರ್ಭಪಾತ ಪೂರ್ಣವಾಗುವಂತೆ ಮಾಡಬೇಕಾಗುತ್ತದೆ.

ಗರ್ಭಪಾತಕ್ಕೆ ಕಾರಣಗಳು ತಾಯಿಯಲ್ಲಿ ಅಥವಾ ಭ್ರೂಣದಲ್ಲಿ ಇರಬಹುದು. ತಾಯಿಯಲ್ಲಿ ಸಿಡುಬು, ಪ್ಲೇಗು, ಮಲೇರಿಯ, ರೂಬೆಲ್ಲ, ಪರಂಗಿ ರೋಗ ಮುಂತಾದ ರೋಗಗಳ ನಂಜಿನಿಂದ ಗರ್ಭಪಾತವಾಗಬಹುದು. ಕ್ಷಯ, ಸಿಹಿಮೂತ್ರ, ಅಧಿಕ ರಕ್ತದೊತ್ತಡ, ನೆಫ್ರೈಟಿಸ್ ಮುಂತಾದ ರೋಗಗಳಿಂದಲೂ ಗರ್ಭಪಾತವಾಗುವ ಸಾಧ್ಯತೆ ಇದೆ. ತೀವ್ರವಾದ ಭೀತಿ, ದುಃಖ, ಆತಂಕಗಳು, ಹಾರ್ಮೋನುಗಳ ಮತ್ತು ನರಮಂಡಲದ ಏರುಪೇರುಗಳು ಗರ್ಭಪಾತವನ್ನು ಉಂಟುಮಾಡಬಲ್ಲವು. ಗರ್ಭಕೋಶ ವಿಕಾರವಾಗಿದ್ದರೆ, ರೋಗಪೀಡಿತವಾಗಿದ್ದರೆ, ಸ್ಥಳಾಂತರಗೊಂಡಿದ್ದರೆ, ದುರ್ಮಾಂಸ ದಿಂದೊಡಗೂಡಿದ್ದರೆ, ಅತಿ ಸಂಭೋಗದಿಂದ ಉದ್ರೇಕಗೊಂಡಿದ್ದರೆ ಗರ್ಭಪಾತವಾಗ ಬಹುದು. ಅತಿಯಾದ ದೈಹಿಕ ಶ್ರಮ, ಗರ್ಭಕೋಶದ ಹತ್ತಿರ ಘಾತ, ಕೃತಕ ಗರ್ಭಪಾತದ ಪ್ರಯತ್ನಗಳು ಇವು ಭ್ರೂಣವನ್ನು ರೂಢಮೂಲವಾಗಿ ಬೇರ್ಪಡಿಸಿ ಗರ್ಭಪಾತವನ್ನು ಉಂಟುಮಾಡಬಹುದು. ಆಹಾರಲೋಪ ಅಥವಾ ಬೇರೆ ಕಾರಣದಿಂದಾದ ನಿಶ್ಶಕ್ತಿಯೇ ಗರ್ಭಪಾತವನ್ನು ಉಂಟುಮಾಡಬಹುದು. ಸೀಸ, ತಾಮ್ರ, ಪಾದರಸ ಮುಂತಾದ ಲೋಹ ಸಂಯುಕ್ತ ವಸ್ತುಗಳು ಗರ್ಭಪಾತವನ್ನು ಉಂಟುಮಾಡುತ್ತವೆ. ಹಾಗೆಯೇ ರೋಗಪೀಡಿತ ಅಂಡಾಣು ಅಥವಾ ಪುರುಷಾಣುಗಳ ಮಿಲನದಿಂದ ವಿಕೃತಿಗೊಂಡ ಭ್ರೂಣ, ರೋಗಪೀಡಿತವಾದ ಮತ್ತು ಪರಸ್ಥಳದಲ್ಲಿ ಊರ್ಜಿತವಾದ ಜರಾಯು, ಗರ್ಭಕೋಶದಲ್ಲಿ ಭ್ರೂಣದ ಅತಿಯಾದ ಚಲನದಿಂದ ಹೊಕ್ಕಳಬಳ್ಳಿ ಭ್ರೂಣದ ಕತ್ತಿಗೆ ಸುತ್ತಿಕೊಂಡು ನೇಣುಹಾಕುವುದು, ಭ್ರೂಣದ ರಕ್ತ ತಾಯಿಯ ರಕ್ತದಿಂದ ಆರ್‌ಹೆಚ್ ಎಂಬ ಘಟಕದಲ್ಲಿ ಭಿನ್ನವಾಗಿರುವಿಕೆ, ಹಾರ್ಮೋನು ಏರುಪೇರು ಇವು ಭ್ರೂಣಕ್ಕೆ ಸಂಬಂಧಿಸಿದಂತೆ ಗರ್ಭಪಾತ ಮಾಡಿಸುವ ಕಾರಣಗಳು.

ಕೆಲವರಲ್ಲಿ ಗರ್ಭಧಾರಣೆಯಾಗಿ ಸುಮಾರು 12 ವಾರಗಳ ಬಳಿಕ ಪ್ರತಿಸಲವೂ ಗರ್ಭಪಾತ ಸಂಭವಿಸುವುದು ರೂಢಿಯಾಗಿಬಿಟ್ಟಿರುತ್ತದೆ. ಇಂಥ ವರ್ತನೆಯ ಗರ್ಭಪಾತಕ್ಕೆ ಮೇಲೆ ಹೇಳಿದ ಕಾರಣಗಳು ಯಾವುವೂ ಅನ್ವಯಿಸುವಂತೆ ಕಾಣುವುದಿಲ್ಲ. ಸಾಮಾನ್ಯವಾಗಿ ಗರ್ಭಪಾತ ಸಹಜ ಋತುಕ್ರಮದಂತೆ ಋತುಸ್ರಾವವಾಗಬಹುದೆಂದು ನಿರೀಕ್ಷಿಸಬಹುದಾದ ದಿವಸಗಳಲ್ಲಿ ಆಗುತ್ತದೆ. ಪದೇ ಪದೇ ಗರ್ಭಪಾತಕ್ಕೊಳಗಾಗು ವವರಲ್ಲಂತೂ ಇದು ಸ್ಪಷ್ಟವಾಗಿ ಕಾಣಬರುತ್ತದೆ.

ಕೃತಕ ಗರ್ಭಪಾತ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ತೀವ್ರ ಅಪರಾಧವೆಂದು ಗಣಿಸಲ್ಪಟ್ಟಿದೆ. ಕೃತಕವಾಗಿ ಗರ್ಭಪಾತ ಮಾಡಿಸುವವರನ್ನೂ ಅವರಿಗೆ ಸಹಾಯ ಮಾಡುವವರನ್ನೂ ಶಿಕ್ಷೆಗೆ ಗುರಿ ಮಾಡಲಾಗುತ್ತಿದೆ. ಮಾನ ಹೋಗುವ ಸಂದರ್ಭಗಳಲ್ಲಿ, ಆರ್ಥಿಕ ಸಮಸ್ಯೆಗಳಿಗಾಗಿ, ಸಂತಾನ ನಿರೋಧ ಕ್ರಮದ ರಕ್ಷಣೆ ಅನಿರೀಕ್ಷಿತವಾಗಿ ಕುಸಿದು ಗರ್ಭಧಾರಣೆಯಾಗಿಬಿಟ್ಟಾಗ ಅಥವಾ ಬೇರೆ ಕಾರಣದಿಂದಲಾದರೂ ಬೇಡದ ಬಸಿರನ್ನು ಕಳೆದುಕೊಳ್ಳುವುದಕ್ಕಾಗಿ ಕೃತಕಗರ್ಭಪಾತವನ್ನು ಮಾಡಿಕೊಳ್ಳುತ್ತಾರೆ, ಇಲ್ಲವೇ ಮಾಡಿಸಿ ಕೊಳ್ಳುತ್ತಾರೆ. ಗರ್ಭಾವಸ್ಥೆಯ ಮೂರನೆಯ ತಿಂಗಳಲ್ಲಿ ಗರ್ಭಧಾರಣೆಯಾದ ವಿಷಯ ಖಚಿತವಾಗಿ ಮನದಟ್ಟಾದಾಗ, ಸಾಮಾನ್ಯವಾಗಿ, ಕೃತಕ ಗರ್ಭಪಾತದ ಪ್ರಯತ್ನ ನಡೆಯುತ್ತದೆ. ಇಲ್ಲವೇ ನಾಲ್ಕು ತಿಂಗಳುಗಳು ಕಳೆದ ಮೇಲೆ ಗರ್ಭಿಣಿಯೆಂಬ ವಿಷಯ ಬಹಿರಂಗವಾಗಿ ಗೋಚರವಾಗುವಂತಾದಾಗ ಈ ಪ್ರಯತ್ನ ನಡೆಯುತ್ತದೆ. ಕೃತಕ ಗರ್ಭಪಾತ ಅಪರಾಧವಾದುದರಿಂದ, ಸ್ವಪ್ರಯತ್ನ ಇಲ್ಲವೇ ಗುಟ್ಟಿನಲ್ಲಿ ಒದಗಬಹುದಾದ, ಕೌಶಲವಿಲ್ಲದವರ ಅಥವಾ ಕುಶಲಿಗಳ ಸಹಾಯದಿಂದ, ಸಾಮಾನ್ಯವಾಗಿ ಅಶುದ್ಧವಾದ ಸ್ಥಳದಲ್ಲಿ, ಅಶುದ್ಧ ಸಲಕರಣೆಗಳಿಂದ ಗರ್ಭಪಾತವನ್ನು ಉಂಟುಮಾಡಲಾಗುತ್ತದೆ. ಕೃತಕ ಗರ್ಭಪಾತ ಔಷಧ ಸೇವನೆ ಅಥವಾ ಪ್ರಯೋಗದಿಂದಾಗಲಿ ಅಥವಾ ಬಲಪ್ರಯೋಗ ದಿಂದಾಗಲಿ ಅಥವಾ ಸಲಕರಣೆಗಳ ಉಪಯೋಗದಿಂದಾಗಲಿ ಫಲಿಸುವಂತೆ ಪ್ರಯತ್ನ ನಡೆಯುತ್ತದೆ. ಖಚಿತವಾಗಿ ಗರ್ಭಪಾತ ಮಾಡಿಸಬಲ್ಲ ಸುರಕ್ಷಿತ ಔಷಧಿಗಳು ಅಷ್ಟಾಗಿ ಇಲ್ಲವೆಂದೇ ಹೇಳಬೇಕು. ಬಹಳ ರೀತಿಯ ಔಷಧಿಗಳನ್ನು ಗರ್ಭಪಾತವಾಗುವಷ್ಟು ಉಪಯೋಗಿಸಿದರೂ ಅವು ದೇಹಕ್ಕೆ ಅಪಾಯವಾಗುವಷ್ಟು ಗಾತ್ರದಲ್ಲಿ ಅವನ್ನು ಉಪಯೋಗಿಸಬೇಕಾಗಿದೆ. ಎರ್ಗಾಟ್, ಕ್ವಿನೀನ್, ಈಸ್ಟ್ರೋಜೆನ್ನುಗಳು, ಟರ್ಪೆಂಟೈನ್ ಕ್ಯಾಂಥರಿಡೀನುಗಳು, ಜಾಪಾಳ, ಕಿಲುಬು ಮುಂತಾದ ತೀಕ್ಷ್ಣವಾದ ವಮನ ವಿರೇಚಿಗಳು, ಸೀಸ ಸಂಯುಕ್ತ ರಾಸಾಯನಿಕಗಳು ಇವೆಲ್ಲವನ್ನು ಗರ್ಭಪಾತವಾಗಲು ಉಪಯೋಗಿಸುತ್ತಾರೆ. ಭಾರತದಲ್ಲಿ ಎಳ್ಳೇ ಪರಂಗಿಬೀಜ, ಎಕ್ಕದ ಹಾಲು, ಚಿತ್ರಮೂಲ, ಹಾಗಲ, ನುಗ್ಗೆ ಮುಂತಾದವನ್ನು ಗರ್ಭಪಾತಕ್ಕೆ ಉಪಯೋಗಿಸುವುದುಂಟು. ಹಿಗ್ಗಿನ್ಸ್ ಪಿಚಕಾರಿಯಿಂದ ಯೋನಿಯ ಮೂಲಕ ಗರ್ಭಕೋಶಕ್ಕೆ ಒತ್ತಡದಿಂದ ಜಲಸೇಚನ ಮಾಡುವುದು, ಭಟ್ಟಿ ಜಾರಿದಾಗ ಅನುಸರಿಸುವಂಥ ಪಾತ್ರಾಪ್ರಯೋಗ, ಹೊಟ್ಟೆ ಮೇಲೆ ತುಳಿಸಿಕೊಳ್ಳುವುದು, ಹೊಟ್ಟೆ ಸುತ್ತ ಅತಿ ಬಿಗಿಯಾಗಿ ಸಿಂಬಿ ಸುತ್ತಿಕೊಳ್ಳುವುದು, ಎತ್ತರದಿಂದ ಧುಮುಕುವುದು, ಕುದುರೆ ಸವಾರಿ, ಶ್ರಮವಾಗುವ ಕುಣಿತ, ಮಹಡಿ ಹಂತವನ್ನು ಹತ್ತಿ ದುಡುದುಡನೆ ಇಳಿಯುವುದು ಮುಂತಾದ ಬಲಪ್ರಯೋಗಗಳನ್ನೂ ಗರ್ಭಪಾತವಾಗುವ ಸಲುವಾಗಿ ಅನುಸರಿಸಲಾಗುತ್ತದೆ. ಸಾಮಾನ್ಯವಾಗಿ ಪಿಚಕಾರಿ ಉಪಯೋಗದಿಂದ ಗರ್ಭಪಾತದ ಸ್ವಪ್ರಯತ್ನ ಪ್ರಾರಂಭವಾಗುತ್ತದೆ. ಅದು ಸಫಲವಾಗದಿದ್ದಾಗ ಶ್ರಮಸಾಧನೆಗಳು, ಅವೂ ತಪ್ಪಿದರೆ ಔಷಧ ಸೇವನೆ, ಅವೂ ತಪ್ಪಿದರೆ ಸಲಕರಣೆಗಳ ಉಪಯೋಗವನ್ನು ಕೃತಕ ಗರ್ಭಪಾತದ ಪ್ರಯತ್ನಗಳಾಗಿ ಕಾಣಬಹುದು. ಹೊರಗಿನವರಿಂದ ಗರ್ಭಪಾತ ಮಾಡಿಸಿ ಕೊಳ್ಳುವಾಗ ಸಾಮಾನ್ಯವಾಗಿ ಸಲಕರಣೆಗಳ ಉಪಯೋಗವೇ ಅನುಸರಿಸುವ ಮಾರ್ಗ. ತಿಳಿಯದ ಜನ ಸಲಕರಣೆಗಳನ್ನು ಉಪಯೋಗಿಸಿದಾಗ ಸ್ವಪ್ರಯತ್ನದಲ್ಲಿ ಸಲಕರಣೆಯ ಉಪಯೋಗದಂತೆಯೇ ಶರೀರ ಘಾತವಾಗುವ ಸಾಧ್ಯತೆ ಬಹಳ ಉಂಟು. ಅನುಭವಸ್ಥರು ಅಥವಾ ಶಸ್ತ್ರಕ್ರಿಯಾ ಜ್ಞಾನವುಳ್ಳವರು ಸಲಕರಣೆಗಳನ್ನು ಉಪಯೋಗಿಸಿದರೆ ಅಷ್ಟಾಗಿ ಘಾತವಾಗದೆ ಹೆಚ್ಚು ಕಡಿಮೆ ಖಚಿತವಾಗಿ ಗರ್ಭಪಾತವಾಗುವ ಸಂಭವವಿರುತ್ತದೆ. ಅನನುಭವಿಗಳು ಪಿಚಕಾರಿ ಪ್ರಯೋಗ, ಯೋನಿಯೊಳಗಿನಿಂದ ಗರ್ಭಕೋಶ ದ್ವಾರಕ್ಕೆ ಸಿಕ್ಕಿಕೊಳ್ಳುವಂತೆ ಔಷಧಗಳನ್ನು ಲೇಪಿಸಿದ ಕಡ್ಡಿಗಳನ್ನು ತೂರಿಸುವುದು, ಸೂಜಿ, ಮೊಳೆ ಮುಂತಾದ ಚೂಪಾದ ವಸ್ತುಗಳಿಂದ ಭ್ರೂಣವನ್ನು ಆವರಿಸಿರುವ ಚೀಲವನ್ನು ಛಿದ್ರಿಸುವುದು ಮುಂತಾದ ಮಾರ್ಗಗಳನ್ನು ಅನುಸರಿಸುತ್ತಾರೆ. ಅನುಭವಿಗಳೂ ಶಸ್ತ್ರಕ್ರಿಯಾ ಜ್ಞಾನವುಳ್ಳವರೂ ಸಾಮಾನ್ಯವಾಗಿ ಈ ನೀರಿನ ಚೀಲವನ್ನು ಛಿದ್ರಿಸುವ ವಿಧಾನವನ್ನೇ ಅನುಸರಿಸುತ್ತಾರೆ.

ಶಸ್ತ್ರಕ್ರಿಯಾ ಶಾಸ್ತ್ರಜ್ಞರು ಸಾಮಾನ್ಯವಾಗಿ ಶಸ್ತ್ರಕ್ರಿಯೆಗೆ ಅನುಸರಿಸುವ ಎಚ್ಚರಿಕೆಗಳನ್ನು ಆದಷ್ಟು ಮಟ್ಟಿಗೆ ಅನುಸರಿಸುವುದರಿಂದ ಇವರು ಜರುಗಿಸುವ ಕೃತಕ ಗರ್ಭಪಾತ ತಕ್ಕಮಟ್ಟಿಗೆ ಕ್ಷೇಮವಾಗಿರುತ್ತದೆ ಮತ್ತು ಬಹುವಾಗಿ ಸ್ವಾಭಾವಿಕ ಗರ್ಭಪಾತದಂತೆಯೇ ಇರುತ್ತದೆ. ಅಕುಶಲಿಗಳು ಅನುಸರಿಸುವ ಸಲಕರಣೆಗಳ ಪ್ರಯೋಗದಿಂದ ಮತ್ತು ಸ್ಥಳೀಕವಾಗಿ ತೀವ್ರ ಔಷಧ ಪ್ರಯೋಗಗಳಿಂದ ಯೋನಿ, ಗುದದ್ವಾರ, ಗರ್ಭಕೋಶದ್ವಾರ, ಗರ್ಭಕೋಶಗಳಲ್ಲಿ ಗಾಯ ವ್ರಣಗಳಾಗಿ, ರಕ್ತಸ್ರಾವ, ಡೊಗರು ಬೀಳುವಿಕೆ, ತೀವ್ರ ಆಘಾತಗಳಾಗಿ ಸಾವು ಸಂಭವಿಸಬಹುದು; ಇಲ್ಲವೇ ವಿಷಾಣು ಸೋಂಕಾಗಿ ವಿಷಮಿಸಿ ಸಾವು ಸಂಭವಿಸಬಹುದು. ಇಂಥ ಸಾವು, ಸ್ವಯಂಕೃತ ಮತ್ತು ಅಕುಶಲ ಪರಕೃತ ಕೃತಕ ಗರ್ಭಪಾತಗಳಲ್ಲಿ ಶೇ.16ರಷ್ಟು ಸಂಭವಿಸಬಹುದೆಂದು ಅಂದಾಜು ಮಾಡಿದ್ದಾರೆ. ಆಘಾತಗಳಿಂದ ಚೇತರಿಸಿಕೊಂಡರೂ ಅನೇಕ ಕಾಲ ಸೊಂಟನೋವು, ಅತಿರಜಸ್ರಾವ, ಬಿಳುಪು ಹೋಗುವುದು ಮುಂತಾದ ಅನಾರೋಗ್ಯ ಸ್ಥಿತಿಗಳಿಂದ ಬಹುಕಾಲ ನರಳಬೇಕಾಗುತ್ತದೆ.

ಕೃತಕ ಗರ್ಭಪಾತ ಕೆಲವು ಸಂದರ್ಭಗಳಲ್ಲಿ ಸಮರ್ಥನೀಯವಾಗಿರುತ್ತದೆ. ಇದು ಸಾಮಾನ್ಯವಾಗಿ ಮುಚ್ಚುಮರೆ ಇಲ್ಲದೆ ಸಕಲ ಸೌಕರ್ಯವೂ ಇರುವ ಆಸ್ಪತ್ರೆಯಲ್ಲಿ ತಜ್ಞರು ಮಾಡುವ ಕಾರ್ಯ. ಸಮರ್ಥನೀಯ ಗರ್ಭಪಾತವನ್ನು ಮಾಡಿಸುವ ಮೊದಲು ಆ ಗರ್ಭ ಮುಂದುವರಿದರೆ ತಾಯಿಯ ದೇಹಸೌಖ್ಯಕ್ಕೆ, ಮನೋಸ್ಥಿತಿಗೆ ಮತ್ತು ಜೀವಕ್ಕೆ ಅಪಾಯ ಉಂಟೆಂದು ಸಾಮಾನ್ಯವಾಗಿ ಇಬ್ಬರು ತಜ್ಞರಾದರೂ ಒಮ್ಮತದಿಂದ ಸಮ್ಮತಿಸಬೇಕಾಗುತ್ತದೆ. ಅಂತೆಯೇ ವ್ಯಕ್ತಿ ಮತ್ತು ಸಂಬಂಧಿಗಳ ಲಿಖಿತ ಒಪ್ಪಿಗೆಯೂ ಅಗತ್ಯ. ತುರ್ತು ಪರಿಸ್ಥಿತಿಗಳಲ್ಲಿ ಈ ನಿರ್ಬಂಧಗಳನ್ನು ಸಾಮಾನ್ಯವಾಗಿ ಸಡಿಲಿಸುತ್ತಾರೆ. ಸಮರ್ಥನೀಯ ಗರ್ಭಪಾತ ಮಾಡಬೇಕಾದ ಸಂದರ್ಭಗಳು ನವೀನ ಔಷಧಿಗಳು ಮತ್ತು ಚಿಕಿತ್ಸಾ ಕ್ರಮಗಳಿಂದ ಈಚೆಗೆ ಕಡಿಮೆಯಾಗಿವೆ. ಕ್ಷಯ, ತಕ್ಕಮಟ್ಟಿನ ಹೃದಯ ದೌರ್ಬಲ್ಯ, ರಕ್ತದ ಒತ್ತಡ ಮುಂತಾದ ಕಾರಣಗಳಿಗಾಗಿ ಈಚೆಗೆ ಗರ್ಭಪಾತವನ್ನು ಉಂಟುಮಾಡುವುದಿಲ್ಲ. ಅನಿವಾರ್ಯ ಗರ್ಭಪಾತ ಸಮಗ್ರಗೊಳ್ಳದೆ ದೀರ್ಘಕಾಲಿಕವಾದಾಗ, ಕೃತಕ ಗರ್ಭಪಾತದ ಅಕುಶಲಿತ ಪ್ರಯತ್ನಗಳಿಂದ ದೇಹಾಘಾತವಾಗಿ ವಿಷಾಣು ಸೋಂಕುಂಟಾದಾಗ, ಗರ್ಭಕೋಶದಲ್ಲಿ ದುರ್ಮಾಂಸ ಏಡಿಗಂತಿಗಳಿದ್ದಾಗ, ಮೂರ್ಛಾರೋಗ, ಹಿಂದಿನ ಪ್ರಸವ ಕಾಲಗಳಲ್ಲಿ ಮನೋವಿಕಲ್ಪ ಇಂಥ ಸಂದರ್ಭಗಳಲ್ಲಿ ಕೃತಕ ಗರ್ಭಪಾತ ಸಾಮಾನ್ಯವಾಗಿ ಸಮರ್ಥನೀಯವೆಂದು ಗಣಿಸಲ್ಪಡುತ್ತದೆ.

ಅನುವಂಶಿಕವಾಗಿರಬಹುದಾದ ಮೂರ್ಛಾರೋಗ, ಮನೋವಿಕಲ್ಪ, ತೀವ್ರ ಅಂಗವಿಕಲತೆ ಇವನ್ನು ತಡೆಗಟ್ಟಲು ಗರ್ಭಪಾತ ಸಮರ್ಥನೀಯವೆಂದು ಕೆಲವು ದೇಶಗಳಲ್ಲಿ ಎಣಿಸಲಾಗಿದೆ. ಅತಿಕ್ರಮ ಸಂಭೋಗದಿಂದಾದ ಗರ್ಭವನ್ನು ಕಳೆದುಕೊಳ್ಳಲೂ ಗರ್ಭಪಾತವನ್ನು ಸಮರ್ಥನೀಯವೆಂದು ಕೆಲವು ದೇಶಗಳಲ್ಲಿ (ಇತ್ತೀಚೆಗೆ ಭಾರತದಲ್ಲೂ) ಭಾವಿಸಲಾಗಿದೆ. ಈಚೆಗೆ ಜಪಾನ್ ಮುಂತಾದ ಕೆಲವು ದೇಶಗಳಲ್ಲಿ ಕುಟುಂಬ ಯೋಜನೆಯ ಅಂಗವಾಗಿ, ಸಾಮಾಜಿಕ ವೈಯಕ್ತಿಕ ಕಾರಣಗಳಿಗಾಗಿ ಗರ್ಭಪಾತವನ್ನು ಐಚ್ಛಿಕ ವಿಷಯವನ್ನಾಗಿ ಮಾಡಲಾಗಿದೆ. ಇಂಥ ಗರ್ಭಪಾತಗಳನ್ನು ಸರಕಾರದ ಅನುಮತಿ ಇರುವ ಸ್ಥಳಗಳಲ್ಲಿ ಮಾತ್ರ ತಜ್ಞರು ಯಾವ ಮುಚ್ಚುಮರೆಯೂ ಇಲ್ಲದೆ ಮಾಡಬೇಕಾಗಿರುತ್ತದೆ. ಈ ವ್ಯವಸ್ಥೆಗೆ ಈಡಾಗುವುದಕ್ಕೆ ಹೀನಾಯ ಪಟ್ಟುಕೊಂಡೋ ಆರ್ಥಿಕ ಕಾರಣಗಳಿಗಾಗಿಯೋ ಐಚ್ಛಿಕ ಗರ್ಭಪಾತವನ್ನು ಗುಟ್ಟಾಗಿ ಅಕುಶಲಿಕವಾಗಿ ಪ್ರಯತ್ನಿಸುವುದೂ ಅದರಿಂದಾಗಬಹುದಾದ ಗಂಡಾಂತರವನ್ನು ಅನುಭವಿಸುವುದೂ ಸಮಾಜದಲ್ಲಿ ಇದ್ದೇ ಇರುತ್ತದೆ. ಐಚ್ಛಿಕ ಗರ್ಭಪಾತವನ್ನು ಈಚೆಗೆ ನವವಿಧಾನಗಳಿಂದ ಕ್ಷೇಮಕರವಾಗಿ ಮಾಡಲಾಗಿದೆ. ಅಗತ್ಯವಾದ ಎಚ್ಚರಿಕೆಗಳನ್ನು ತೆಗೆದುಕೊಳ್ಳುವುದನ್ನು ಮರೆಯದೆ ಕಿಬ್ಬೊಟ್ಟೆಯ ಮೂಲಕ ಚುಚ್ಚುಮದ್ದಿನ ದೊಡ್ಡ ಸೂಜಿಯನ್ನು ಭ್ರೂಣವನ್ನು ಆವರಿಸಿರುವ ನೀರಿನ ಚೀಲದೊಳಗೆ ಹುಗಿಸಿ, ಆದಷ್ಟು ನೀರನ್ನು ತೆಗೆದು, ಅಷ್ಟೇ ಗಾತ್ರದಲ್ಲಿ ಶುದ್ಧೀಕರಿಸಿ ಬೆಚ್ಚಗೆ ಮಾಡಿದ ಶೇ.20 ಉಪ್ಪುನೀರನ್ನೋ ಶೇ.50 ಗ್ಲೂಕೋಸ್ ದ್ರಾವಣವನ್ನೋ ಚೀಲದೊಳಕ್ಕೆ ಸೇರಿಸುತ್ತಾರೆ. ಇದಾದ ಕೆಲವು ಗಂಟೆಗಳಲ್ಲಿ ಸಾಮಾನ್ಯವಾಗಿ ಗರ್ಭಪಾತ ಉಂಟಾಗುತ್ತದೆ. ಈ ರೀತಿ ಗರ್ಭಪಾತವನ್ನು ಉಂಟುಮಾಡಿದಾಗ ಹುಟ್ಟುವ ಮಕ್ಕಳು ಸತ್ತು ಹೋಗಿರುತ್ತವೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಅಮೆರಿಕದಲ್ಲಿ ಈಚೆಗೆ ವಿದ್ಯುತ್ ಸಹಾಯದಿಂದ ಗರ್ಭಕೋಶವನ್ನು ಸಂಕುಚಿಸಿ ಗರ್ಭಪಾತವಾಗುವಂತೆ ಮಾಡುವುದೂ ರೂಢಿಗೆ ಬಂದಿದೆ. ಈ ರೀತಿಯ ಕೃತಕ ಗರ್ಭಪಾತಗಳು ಸಹಜ ಗರ್ಭಪಾತಗಳಂತೆಯೇ ಇದ್ದು ಭಿನ್ನತೆ ವ್ಯಕ್ತವಾಗದೇ ಇರಬಹುದಾದ್ದರಿಂದ ಇವನ್ನು ಪತ್ತೆಮಾಡುವುದು ಕಷ್ಟ.

ಭಾರತದಲ್ಲೂ (ಆಗಸ್ಟ್ 1971) ಐಚ್ಛಿಕ ಗರ್ಭಪಾತ ಕುಟುಂಬ ಯೋಜನೆ ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ನ್ಯಾಯಸಮ್ಮತವೆಂದು ಶಾಸನ ಮಾಡಲಾಗಿದೆ.

(ಎಸ್.ಆರ್.ಆರ್.)

ಕಾನೂನಿನ ದೃಷ್ಟಿಯಲ್ಲಿ ಗರ್ಭಪಾತ: ಗರ್ಭ ನಿಂತ ಯಾವುದೇ ಅವಧಿಯಲ್ಲಿ ಅನೈಸರ್ಗಿಕವಾಗಿ ಅಥವಾ ಕೃತ್ರಿಮ ರೀತಿಯಿಂದ ಗರ್ಭಕೋಶದಲ್ಲಿದ್ದ ಭ್ರೂಣ ಅಥವಾ ಅದರ ಅಂಶವನ್ನು ಹೊರಗೆ ಹಾಕುವುದನ್ನು ಕಾನೂನು ಗರ್ಭಪಾತವೆಂದು ಪರಿಗಣಿಸುತ್ತದೆ. ತೀರ ಇತ್ತೀಚಿನವರೆಗೆ ಗರ್ಭಪಾತ ಮಾಡಿಕೊಳ್ಳುವುದು ಇಲ್ಲವೇ ಮಾಡಿಸುವುದು ಕಾನೂನಿನಂತೆ ಅಪರಾಧವಾಗಿತ್ತು. ಈ ಅಪರಾಧಕ್ಕೆ ಮೂರು ವರ್ಷದ ಕಾರಾಗೃಹವಾಸದ ಶಿಕ್ಷೆ ಮತ್ತು/ಅಥವಾ ದಂಡ, ತಾಯಿ ಅಸುನೀಗಿದರೆ ಏಳು ವರ್ಷಗಳವರೆಗೆ ಶಿಕ್ಷೆ ಮತ್ತು/ಅಥವಾ ದಂಡ ಹಾಗೂ ಗರ್ಭಪಾತಕ್ಕೊಳಗಾಗುವವಳ ಅನುಮತಿ ಇಲ್ಲದೇ ಮಾಡಿದ ಅಪರಾಧಕ್ಕೆ ಗರಿಷ್ಠ ಆಜೀವ ಕಾರಾಗೃಹವಾಸದ ಶಿಕ್ಷೆಯಿತ್ತು. ಒಂದು ವೇಳೆ ತಾಯಿಯ ಜೀವವನ್ನು ಉಳಿಸುವ ಪ್ರಾಮಾಣಿಕ ಉದ್ದೇಶದಿಂದ ಗರ್ಭಪಾತ ಮಾಡಿಸಿದ್ದಾದರೆ ಮಾತ್ರ ಈ ಶಿಕ್ಷೆ ಅನ್ವಯಿಸುವುದಿಲ್ಲ.

ಕುಟುಂಬಯೋಜನಾ ಕಾರ್ಯಕ್ರಮ ಹಾಗೂ ಇನ್ನಿತರ ಸಾಮಾಜಿಕ ಕಾರಣಗಳಿಂದಾಗಿ ಗರ್ಭಪಾತವನ್ನು ಕಾಯಿದೆಬದ್ಧಗೊಳಿಸುವ ಮಸೂದೆ ಭಾರತದಲ್ಲಿ ಜಾರಿಗೆ ಬಂದಿದೆ. ಅದರಂತೆ ಗರ್ಭಪಾತವನ್ನು ಕಾಯಿದೆಬದ್ಧವಾಗಿ ಈ ಕೆಳಗಿನ ಕಾರಣಗಳಿಂದ ಮಾಡಿಸಬಹುದಾಗಿದೆ:

1. ಗರ್ಭ ನಿಲ್ಲುವುದರಿಂದ ತಾಯಿಯ ಜೀವಕ್ಕೆ ಅಪಾಯ ಒದಗಬಹುದಾದ ಸಂದರ್ಭಗಳಲ್ಲಿ. ಉದಾಹರಣೆಗೆ, ತಾಯಿಯಾಗಲಿರುವವಳು ಹೃದಯ ಅಥವಾ ಪಿತ್ತಕೋಶದ ತೊಂದರೆಯಿಂದ ಬಳಲುತ್ತಿದ್ದಾಗ ಅಥವಾ ಸ್ತನ ಅಥವಾ ಗುಪ್ತಾಂಗಗಳ ಕ್ಯಾನ್ಸರ್ ಮೊದಲಾದ ರೋಗಗಳಿಗೆ ತುತ್ತಾದಾಗ.

2. ವಿಕೃತ ಮಗುವಿನ ಜನನದ ಸಂಶಯವಿದ್ದಾಗ, ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಕೃತಗೊಂಡ ಗರ್ಭ ಬೆಳೆವಣಿಗೆಯಲ್ಲಿದೆಯೆಂಬ ಸಂಶಯಕ್ಕೆ ಕಾರಣವಿದ್ದಲ್ಲಿ, ಅಂದರೆ ಗುಹ್ಯರೋಗಗಳು, ಮಾರಕ ಅಥವಾ ಮಾದಕ ಔಷಧ ಸೇವನೆ ಮುಂತಾದ ಸಂದರ್ಭಗಳಲ್ಲಿ ಇಂಥ ಸಂಶಯಕ್ಕೆ ಕಾರಣವಿದೆ. ವಿಕಿರಣಪಟುತ್ವದಿಂದ ಭ್ರೂಣ ಘಾಸಿಗೊಂಡಾಗ ಸಹ ಗರ್ಭಪಾತ ಮಾಡಿಸಬಹುದು.

3. ಅತ್ಯಾಚಾರಕ್ಕೆ ಬಲಿಯಾಗಿ ಗರ್ಭ ನಿಂತ ಸಂದರ್ಭಗಳಲ್ಲಿ ಗರ್ಭಪಾತ ಮಾಡಿಸಬಹುದಾಗಿದೆ.

4. ಸಾಮಾಜಿಕ ಇಲ್ಲವೇ ಇತರ ಕಾರಣಗಳು.

ಅವಿವಾಹಿತ ಕನ್ಯೆ, ವಿಧವೆ ಮೊದಲಾದವರು ಗರ್ಭವತಿಯರಾದಲ್ಲಿ ಅಥವಾ ಮಕ್ಕಳ ಸಂಖ್ಯೆ ಅತಿಯಾಗಿದ್ದಲ್ಲಿ ಗರ್ಭಪಾತವನ್ನು ಕಾನೂನು ಒಪ್ಪುತ್ತದೆ. ಆದರೆ ಇಂಥ ಪ್ರಸಂಗದಲ್ಲಿ ಅವರವರ ಸಾಮಾಜಿಕ ಸ್ಥಾನಮಾನ, ತಾಯಿಯಾಗಲಿರುವವಳ ವಯಸ್ಸು, ಮಕ್ಕಳ ಸಂಖ್ಯೆ, ಕುಟುಂಬದ ವರಮಾನ ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. ಗರ್ಭ ಧರಿಸಿದ 12 ವಾರಗಳಲ್ಲಿ (ಮೂರು ತಿಂಗಳು) ಯಾವುದೇ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟಿಶನರ್ ಅಥವಾ ಸ್ತ್ರೀ ರೋಗ ತಜ್ಞ ವೈದ್ಯರು ಗರ್ಭಪಾತವನ್ನು ಮಾಡಿಸಬಹುದಾಗಿದೆ. ಆದರೆ 12 ವಾರಗಳ ಅನಂತರ 20 ವಾರದೊಳಗೆ ಗರ್ಭಪಾತ ಮಾಡಿಸುವ ಬಗ್ಗೆ ಇಂಥ ಇಬ್ಬರು ಡಾಕ್ಟರರ ಒಮ್ಮತದ ನಿರ್ಣಯ ಅವಶ್ಯ. ಜನನ ನಿಯಂತ್ರಣದ ಕೃತ್ರಿಮ ಸಾಧನಗಳ ದೋಷದಿಂದಾದ ಗರ್ಭವನ್ನು ತೆಗೆಯಿಸಲೂ ಕೂಡ ಕಾನೂನು ಅವಕಾಶ ಮಾಡಿಕೊಡುವುದು. ಗರ್ಭಪಾತವನ್ನು ಸರ್ಕಾರ ನಿಗದಿ ಮಾಡಿದ ಆಸ್ಪತ್ರೆಗಳಲ್ಲಿಯೇ ಮಾಡಿಸಬೇಕು. ಈ ಬಗ್ಗೆ ದಾಖಲೆಯಿಡತಕ್ಕದ್ದು. ಗರ್ಭಪಾತ ಮಾಡಿಕೊಳ್ಳುವವಳು ಹುಚ್ಚಿ ಇಲ್ಲವೇ ಅಪ್ರಾಯಸ್ಥಳು ಇದ್ದ ಸಂದರ್ಭವನ್ನು ಹೊರತುಪಡಿಸಿ ಗರ್ಭಪಾತ ಮಾಡಿಕೊಳ್ಳುವ ಬಗ್ಗೆ ಅಂತಿಮ ನಿರ್ಣಯವನ್ನು ಮಾಡಿಸಿಕೊಳ್ಳುವ ಹೆಂಗಸೇ ನಿರ್ಧರಿಸತಕ್ಕದ್ದು. ಪ್ರಾಮಾಣಿಕವಾಗಿ ಸದುದ್ದೇಶದಿಂದ ಮಾಡಿದ ಗರ್ಭಪಾತ ಕ್ರಿಯೆಗೆ ವೈದ್ಯರ ವಿರುದ್ಧ ನಷ್ಟ ವಗೈರೆ ಬಗ್ಗೆ ಕಾನೂನುಕ್ರಮ ಕೈಗೊಳ್ಳದಂತೆ ಅವರಿಗೆ ಕಾಯ್ದೆಯ ರಕ್ಷಣೆಯಿದೆ. (ಬಿ.ಡಿ.ಎಚ್.)

**ಗರ್ಭಾದಾನ :** ಶೌನಕರ ವ್ಯಾಖ್ಯಾನದ ಪ್ರಕಾರ ಹದಿನಾರು ಹಿಂದೂ ಸಂಸ್ಕಾರಗಳಲ್ಲಿ ಮೊದಲನೆಯದು; ಪತಿಯ ಮುಖಾಂತರ ಪತ್ನಿ ಗರ್ಭವತಿಯಾಗುವ ಕರ್ಮಪೂರ್ತಿ. ಗರ್ಭಾಲಂಬನ ಎಂಬ ಹೆಸರೂ ಉಂಟು.

ವೇದಪೂರ್ವಕಾಲದಲ್ಲಿ ಪ್ರಜೋತ್ಪತ್ತಿ ವಿಷಯದ ಬಗ್ಗೆ ಜನರ ಧೋರಣೆ ಏನಿದ್ದಿತೋ ತಿಳಿಯದು. ಮಾನವ ಜಾತಿಯ ಆದಿಕಾಲದಲ್ಲಿ ಗರ್ಭಧಾರಣೆ ಮತ್ತು ಪ್ರಸೂತಿಗಳಿಗೆ ಧಾರ್ಮಿಕ ಪ್ರಾಮುಖ್ಯವಿರಲಿಲ್ಲ. ವಿಷಯೋಪಭೋಗದ ಇಚ್ಛೆಯಾದ ಕೂಡಲೇ ಸ್ತ್ರೀಪುರುಷರಿಬ್ಬರೂ ಒಂದು ಕಡೆ ಕೂಡಿ ಪರಸ್ಪರ ಸಮಾಗಮ ಹೊಂದಿ ಇಂದ್ರಿಯಸುಖವನ್ನು ಅನುಭವಿಸುತ್ತಿದ್ದರು. ಇಂಥ ಸಮಾಗಮದಿಂದ ಸಂತಾನ ಪ್ರಾಪ್ತಿಯಾಗುವುದೆಂಬ ತಿಳಿವಳಿಕೆ ಉಂಟಾದದ್ದು ಕೇವಲ ಅನಂತರ, ನಿಧಾನವಾಗಿ. ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ಮುನ್ನಡೆ ಸಾಧಿಸಿದಂತೆ ಆದಿಮಾನವನಿಗೆ

ಗರ್ಭಾಧಾನವನ್ನು ಒಂದು ನಿರ್ದಿಷ್ಟ ಸಂಸ್ಕಾರವನ್ನಾಗಿ ಆಚರಿಸುವ ಅಗತ್ಯ ಕಂಡುಬಂತು. ಮನೆ, ಗೃಹಸ್ಥಾಶ್ರಮ, ಸಂತಾನಾಕಾಂಕ್ಷೆ ಇವಕ್ಕೆ ದೈವ ಕೃಪೆ ಅಗತ್ಯ ಎಂಬ ವಿಷಯದಲ್ಲಿ ಮೂಡಿದ ಅವನ ಶ್ರದ್ಧೆ ಈ ಸಂಸ್ಕಾರಕ್ಕೆ ಆಧಾರವಾಗಿದೆ. ಇದರ ಬಗೆಗೆ ಸಂಹಿತೆಗಳಲ್ಲಿ ಪ್ರತ್ಯೇಕ ಉಲ್ಲೇಖವಿಲ್ಲದಿದ್ದರೂ ಗರ್ಭಧಾರಣೆ ಮತ್ತು ಗರ್ಭದೇವತೆಗಳ ಬಗ್ಗೆ ಮಂತ್ರಗಳ ಉಲ್ಲೇಖವನ್ನು ಋಗ್ವೇದ ಮತ್ತು ಅಥರ್ವವೇದ ಸಂಹಿತೆಗಳಲ್ಲಿ ಕಾಣಬಹುದು. ಸೂತ್ರ ಪೂರ್ವಕಾಲದಲ್ಲಿ ಇದೊಂದು ಸಾಧಾರಣ ಸಂಸ್ಕಾರವಾಗಿತ್ತು. ಪತಿಯಾದವ ಋತುಸ್ನಾತ ಪತ್ನಿಯನ್ನು ಒಪ್ಪಿಕೊಂಡು, ಗರ್ಭದ ಸ್ಥಾಪನೆಯಾಗಲಿ ಎಂದು ದೇವರನ್ನು ಪ್ರಾರ್ಥಿಸಿ, ಆಕೆಯ ಸಮಾಗಮವನ್ನು ಮಾಡುತ್ತಿದ್ದ. ಸೂತ್ರಗಳ ಕಾಲಕ್ಕೆ ಇದೇ ಧಾರ್ಮಿಕ ಸಂಸ್ಕಾರದ ಸ್ವರೂಪವನ್ನು ತಾಳಿತು. ಗೃಹ್ಯಸೂತ್ರದಲ್ಲಿ ಇದರ ಬಗ್ಗೆ ವ್ಯವಸ್ಥಿತ ವಿವರಗಳು ಸೇರಿವೆ. ಋತುಸ್ನಾತ ಸ್ತ್ರೀಯ ಐದನೆಯ ದಿನದಿಂದ ಹದಿನಾರನೆಯ ದಿನದ ಗಡುವಿನ ಶುಭದಿನದಲ್ಲಿ ಇದನ್ನು ನಡೆಸಬೇಕು. ಇದಕ್ಕೆ ಯೋಗ್ಯವಾದ ತಿಥಿ, ನಕ್ಷತ್ರ, ಅವುಗಳ ಶುಭಾಶುಭ ಫಲಗಳ ಬಗ್ಗೆ ಮನು, ಯಾಜ್ಞವಲ್ಕ್ಯ ಇತ್ಯಾದಿ ಸ್ಮೃತಿಕಾರರೂ ಧರ್ಮಸಿಂಧು, ನಿರ್ಣಯಸಿಂಧುಗಳ ಗ್ರಂಥಕರ್ತೃಗಳೂ ವಿವೇಚಿಸಿದ್ದಾರೆ.

ಗಂಡುಮಗುವನ್ನು ಇಚ್ಛಿಸುವಾತ ಹೆಂಡತಿ ರಜಸ್ವಲೆಯಾದ ಮೊದಲನೆಯ ದಿನದಿಂದ 4, 6, 8, 10, 12 ಈ ದಿನಗಳಲ್ಲೂ ಸ್ತ್ರೀಸಂತಾನವನ್ನು ಬಯಸುವಾತ 5, 7, 9, 11ನೆಯ ದಿನಗಳಲ್ಲೂ ಗರ್ಭಾದಾನ ಮಾಡಬೇಕು. ಸತ್‌ಸಂತತಿಪ್ರಾಪ್ತಿಗಾಗಿ ಸತಿಪತಿಯರ ಹೃದಯಗಳು ಪ್ರೀತಿಯಿಂದ ಕೂಡಿರತಕ್ಕದ್ದು ಅವಶ್ಯ. ಭಯ, ಕ್ರೋಧ, ದ್ವೇಷ, ಮಾತ್ಸರ್ಯಗಳು ಗರ್ಭವನ್ನು ಕೆಡಿಸುತ್ತವೆ.

ಪ್ರಥಮ ರಜೋದರ್ಶನ ಕಾಲದ ತಿಥಿನಕ್ಷತ್ರಗಳಿಗನುಗುಣವಾಗಿ ಗರ್ಭಾಧಾನದ ಶುಭಾಶುಭಗಳನ್ನು ನಿರ್ಣಯಿಸುವುದುಂಟು. ದುಷ್ಟಯೋಗದಲ್ಲಿ ರಜೋದರ್ಶನವಾಗಿದ್ದರೆ ಆ ದೋಷ ಪರಿಹಾರಾರ್ಥವಾಗಿ ಭುವನೇಶ್ವರೀ ಶಾಂತಿಯನ್ನು ಕೈಕೊಳ್ಳುತ್ತಾರೆ. ರಾತ್ರಿ, ಸಮಾಗಮ ಪೂರ್ವದಲ್ಲಿ ಸಂಹಿತಗ್ರಂಥದಲ್ಲಿನ ಮಂತ್ರೋಚ್ಚಾರಣೆ ಮಾಡುತ್ತಾರೆ. ಇತ್ತೀಚೆಗೆ ಗರ್ಭಾದಾನ ಸಂಸ್ಕಾರವನ್ನು ಮದುವೆಯ ಜೊತೆಯಲ್ಲೇ ನಡೆಸುತ್ತಿದ್ದಾರೆ.

ಗರ್ಭಾದಾನದ ದಿವಸ ರಾತ್ರಿಯಲ್ಲಿ ಪತಿ-ಪತ್ನಿಯರನ್ನು ಪಕ್ಕಪಕ್ಕದಲ್ಲಿ ಕೂಡಿಸಿ ಪತ್ನಿಯ ಕಡೆಯಿಂದ ಪತಿಯ ಪೂಜೆ ಮಾಡಿಸುತ್ತಾರೆ. ಪತ್ನಿಗೆ ಉಡಿ ತುಂಬುತ್ತಾರೆ. ಹತ್ತಿರ ಸಮಯಗಳನ್ನಿಟ್ಟು ದೀಪ ಉರಿಸುತ್ತಾರೆ. ಪಕ್ಕದಲ್ಲಿ ವಿವಿಧ ಫಲಾಹಾರ ತುಂಬಿದ ತಟ್ಟೆಯನ್ನೂ ತಾಂಬೂಲ ಕರಂಡಕವನ್ನೂ ಇಟ್ಟಿರುತ್ತಾರೆ. ಪತಿಪತ್ನಿಯರಿಗೆ ಆರತಿ ಮಾಡುತ್ತಾರೆ. ಇದು ಲೌಕಿಕ ವಿಧಿ. *

**ಗರ್ಭಾವಸ್ಥೆ :** ಗರ್ಭಕೋಶದಲ್ಲಿ ಮಗು ಬೆಳೆಯುವ ಸ್ಥಿತಿ (ಪ್ರೆಗ್ನೆನ್ಸಿ). ಬಸಿರು ಪರ್ಯಾಯನಾಮ. ಈ ಸ್ಥಿತಿಯಲ್ಲಿರುವ ಸ್ತ್ರೀಗೆ ಗರ್ಭಿಣಿ ಅಥವಾ ಬಸುರಿ, ಬಿಮ್ಮನಸೆ ಎಂಬ ಹೆಸರುಗಳಿವೆ. ಅಂಡಾಣು ಮತ್ತು ವೀರ್ಯಾಣುಗಳ ಮಿಲನದಿಂದ ಗರ್ಭಾವಸ್ಥೆ ಪ್ರಾರಂಭವಾಗುತ್ತದೆ. ಭ್ರೂಣ ತಾಯಿಯ ಗರ್ಭಕೋಶದಲ್ಲಿದ್ದುಕೊಂಡು ಬೆಳೆದು ಶಿಶುವಿನ ರೂಪ ತಾಳಿ ಜನಿಸುವವರೆಗೂ ಗರ್ಭಾವಸ್ಥೆಯ ಅವಧಿ ಉಂಟು. ನಿರೀಕ್ಷಿತ ಕಾಲದಲ್ಲಿ ಮತ್ತು ಮುಂದೆಯೂ ಮುಟ್ಟಾಗದೇ ಹೋಗುವುದು, ನಾಲ್ಕಾರು ವಾರಗಳ ಬಳಿಕ ಬೆಳಿಗ್ಗೆ ಎದ್ದಾಗಲೆ ವಾಕರಿಕೆ, ಸ್ತನಗಳ ವೃದ್ಧಿ, ಮೊಲೆತೊಟ್ಟು ಕಪ್ಪು ವರ್ಣಕ್ಕೆ ತಿರುಗುವುದು, ಹೊಟ್ಟೆ ದಪ್ಪವಾಗುತ್ತಾ ಬರುವುದು, ಗರ್ಭಕೋಶದೊಳಗೆ ಮಗುವಿನ ಚಲನದಿಂದ ಆಗುವ ಅನುಭವ ಇವು ಕಂಡುಬಂದು ಸಾಮಾನ್ಯವಾಗಿ ಮುಟ್ಟು ನಿಂತ 40 ವಾರಗಳ ತರುವಾಯ (ಹತ್ತು ಚಾಂದ್ರಮಾನ ತಿಂಗಳು) ಶಿಶುವಿನ ಜನನವಾಗುತ್ತದೆ.

ಸಂಭೋಗ ಕ್ರಿಯೆಯಿಂದ ವೀರ್ಯ ಯೋನಿಯೊಳಹೊಕ್ಕ ಸಮಯದಲ್ಲಿ ಅಂಡಾಣು ಗರ್ಭಕೋಶನಾಳದೊಳಗಿದ್ದರೆ (ಫೆಲೋಪಿಯನ್ ಟ್ಯೂಬ್) ಅಥವಾ 12-24 ಗಂಟೆಗಳ ಬಳಿಕವಾದರೂ ಅದು ಬರುವ ಹಾಗಿದ್ದರೆ ಮಾತ್ರ ಅದರೊಡನೆ ಪುರುಷಾಣುವಿನ ಮಿಲನ ಸಾಧ್ಯ. ಪ್ರತಿ ಸಂಭೋಗ ಕ್ರಿಯೆಯೂ ಸ್ತ್ರೀಯಲ್ಲಿ ಗರ್ಭಾವಸ್ಥೆಯನ್ನು ಉಂಟುಮಾಡದೆ ಇರುವುದಕ್ಕೂ ಸಾಮಾನ್ಯವಾಗಿ ಮಾಸಿಕಚಕ್ರದ ಸುಮಾರು ಮಧ್ಯಕಾಲದಲ್ಲಿ ಮಾತ್ರ ಸಂಭೋಗದಿಂದ ಗರ್ಭಧಾರಣೆಯಾಗುವುದಕ್ಕೂ ಇದೇ ಕಾರಣ. ಸ್ತ್ರೀಯರಲ್ಲಿ ಪ್ರತಿ ತಿಂಗಳೂ (28 ದಿವಸಗಳ ಚಾಂದ್ರಮಾನ ತಿಂಗಳು) ಒಂದು ಅಂಡಾಣು ಅಂಡಾಶಯದಿಂದ ಕಳಿತು ಹೊರಬೀಳುತ್ತದೆ. ಮೇಲೆ ಹೇಳಿದಂತೆ 12-24 ಗಂಟೆಗಳ ಒಳಗೇ ಅದು ಪುರುಷಾಣುವಿನೊಡನೆ ಮಿಲನಗೊಂಡರೆ ಆಗ ಗರ್ಭಾವಸ್ಥೆಯುಂಟಾಗುತ್ತದೆ. ಇಲ್ಲದಿದ್ದರೆ ಅಂಡಾಣು ನಿಧಾನವಾಗಿ ಮುಂದಕ್ಕೆ ನೂಕಲ್ಪಡುತ್ತ ಗರ್ಭಕೋಶವನ್ನು ತಲಪಬಹುದು. ಆಮೇಲೋ ಅಥವಾ ಇನ್ನೂ ಮುಂಚೆಯೋ ಅದು ನಶಿಸಿಹೋಗುತ್ತದೆ. ಗರ್ಭಾವಸ್ಥೆ ಉಂಟಾಗದ ಇಂಥ ಸನ್ನಿವೇಶದಲ್ಲಿ ಅಂಡಾಣು ಅಂಡಾಶಯದಿಂದ ಹೊರಬಿದ್ದ 14 ದಿವಸಗಳ ತರುವಾಯ ಸ್ತ್ರೀಯಲ್ಲಿ ರಜಸ್ರಾವವಾಗುತ್ತದೆ. ಗರ್ಭಾವಸ್ಥೆ ಉಂಟಾದರೆ ರಜಸ್ರಾವವಾಗುವುದಿಲ್ಲ. ಆದ್ದರಿಂದ ಹೆಂಗಸು ಮುಟ್ಟಾಗುವುದು ಆಕೆ ಬಸಿರಾಗದೆ ಹೋದುದರ ಸೂಚನೆ ಮತ್ತು ಪರಿಣಾಮವಾಗಿರುತ್ತದೆ. ಹೆಂಗಸಿನ ಜೀವಮಾನದಲ್ಲಿ ಗರ್ಭಧಾರಣಾ ಸೌಲಭ್ಯ ಸುಮಾರು 15ನೆಯ ವರ್ಷದಿಂದ ಸುಮಾರು 50ನೆಯ ವರ್ಷ ವಯಸ್ಸಿನ ತನಕ ಕಾಣಬರುತ್ತದೆ. ಅಂದರೆ ಹುಡುಗಿ ಮೈನೆರೆದು ಪ್ರೌಢಳಾದಾಗಿನಿಂದ ವಯಸ್ಕ ಹೆಂಗಸಿನಲ್ಲಿ ಮುಟ್ಟು ನಿಲ್ಲುವತನಕ ಸಂತಾನ ಪ್ರಾಪ್ತಿ ಸೌಲಭ್ಯ ಉಂಟು. ರಜಸ್ರಾವಕ್ಕೂ ಗರ್ಭಧಾರಣೆ ಗರ್ಭಾವಸ್ಥೆಗಳಿಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕಾದರೆ ಹೆಂಗಸಿನಲ್ಲಿ ಪ್ರಜನನ ಕ್ರಿಯೆಯ ಸ್ಥೂಲಪರಿಚಯವಿರಬೇಕು.

ಪ್ರಜನನ ಕ್ರಿಯೆ ಜನನಾಂಗಗಳಿಂದ ಜರುಗಿಸಲ್ಪಡುವ ದೇಹಕಾರ್ಯ ಸ್ತ್ರೀಯಲ್ಲಿ ಪ್ರಧಾನ ಜನನಾಂಗಗಳೆಂದರೆ ಕಿಬ್ಬೊಟ್ಟೆಯಲ್ಲಿರುವ (ಪೆಲ್ವಿಕ್ ಕ್ಯಾವಿಟಿ) ಎಡ ಮತ್ತು ಬಲ ಅಂಡಾಶಯಗಳು ಮತ್ತು ಅವುಗಳ ನಡುವೆ ಇರುವ ಗರ್ಭಕೋಶ. ಅಂಡಾಶಯಗಳ ಸನಿಹದಲ್ಲಿ ಪ್ರಾರಂಭವಾಗುವ ಗರ್ಭಕೋಶನಾಳಗಳು ಗರ್ಭಕೋಶವನ್ನು ಸೇರುತ್ತವೆ. ಗರ್ಭಕೋಶ ಗೇರುಹಣ್ಣಿನ ಆಕಾರದಲ್ಲಿರುತ್ತದೆ. ಅದರ ಕಂಠ ಯೋನಿಯೊಳಕ್ಕೆ ಚಾಚಿಕೊಂಡಿರುತ್ತದೆ. ಯೋನಿಗೆ ಸಂಪರ್ಕವನ್ನು ಉಂಟುಮಾಡುವ ಭಾಗವಿದು. ಅಲ್ಲದೇ ಇದು ಗರ್ಭಕೋಶದೊಳಕ್ಕೂ ಹೊರಗಡೆಗೂ ಸಂಪರ್ಕವನ್ನು ಉಂಟುಮಾಡುತ್ತದೆ. ಹುಡುಗಿ ಮೈನೆರೆದಾಗ ಈ ಭಾಗಗಳಲ್ಲಿ ಮತ್ತು ಅನುಷಂಗಿಕ ಅಂಗಗಳಲ್ಲಿ ಮುಖ್ಯವಾಗಿ ಸ್ತನಗಳಲ್ಲಿ ಚಟುವಟಿಕೆ ಮತ್ತು ಕ್ರಿಯಾಶಕ್ತಿ ಮೂಡಿ ಬಂದು ವಿಶಿಷ್ಟ ಕ್ರಮವನ್ನು ಅನುಸರಿಸಿ ಜರುಗುವ ಕ್ರಿಯೆ ಕಂಡುಬರುತ್ತದೆ. ಇದರ ಅವಧಿ ಸಾಮಾನ್ಯವಾಗಿ 28 ದಿವಸಗಳು ಅಥವಾ ಒಂದು ಚಾಂದ್ರಮಾನ 30ಗಳು ರಜಸ್ರಾವ ಈ ಚಕ್ರೀಯ ಕ್ರಿಯೆಯಲ್ಲಿ ಪ್ರಧಾನವಾಗಿ ವ್ಯಕ್ತವಾಗುವ ಘಟ್ಟವಾದುದರಿಂದ ಇದನ್ನು ಮಾಸಿಕ ಚಕ್ರವೆಂದು ಕರೆದು, ಚಕ್ರವನ್ನು ರಜಸ್ರಾವದ ಮೊದಲನೆಯ ದಿವಸದಿಂದ ಎಣಿಸುವುದು ರೂಢಿಯಾಗಿದೆ. ಈ ಕ್ರಿಯೆಗೆ ತಲೆಚಿಪ್ಪಿನೊಳಗೆ ಮಿದುಳಿನ ತಳಭಾಗದಿಂದ ತೊಟ್ಟಿನ ಮೂಲಕ ನೇತುಬಿದ್ದಿರುವ ಪಿಟ್ಯುಯಿಟರಿ ಗ್ರಂಥಿಯ ಮುಂಭಾಗದ ಎಸ್.ಎಸ್.ಎಚ್., ಎಲ್.ಎಚ್. ಮತ್ತು ಎಲ್.ಟಿ.ಎಚ್ ಗಳೆಂಬ ಅಂತಃಸ್ರಾವಗಳೇ ಕಾರಣ. ಇವು ಅಂಡಾಶಯಗಳ ಮೇಲೆ ಪ್ರಭಾವ ಬೀರಿ ಅವನ್ನು ಕಾರ್ಯೋನ್ಮುಖಗೊಳಿಸುತ್ತವೆ. ಎಡ ಅಥವಾ ಬಲ ಅಂಡಾಶಯಗಳಲ್ಲಿ ಯಾವುದಾದರೂ ಒಂದು (ಯಾವುದು ಎನ್ನುವುದು ಕೇವಲ ಅನಿರ್ದಿಷ್ಟ) ಅಂಡಾಶಯದಿಂದ ಸಾಮಾನ್ಯವಾಗಿ ಒಂದು ಅಂಡಾಣು ಸುಮಾರು 2 ವಾರಗಳಲ್ಲಿ ಬಲಿತು ಹಣ್ಣಾಗುವುದಕ್ಕೆ ಈ ಎರಡು ವಾರಗಳು ಪಿಟ್ಯುಟರಿಯಿಂದ ಉತ್ಪತ್ತಿಯಾಗುವ ಎಫ್.ಎಸ್.ಎಚ್. ಕಾರಣ. ಇದೇ ಕಾರಣದಿಂದಲೇ ಈ ಎರಡು ವಾರಗಳಲ್ಲೂ ಅಂಡಾಶಯದಿಂದ ಈಸ್ಟ್ರೋಜೆನ್ನೆಂಬ ಅಂತಃಸ್ರಾವ ಉತ್ಪತ್ತಿಯಾಗುತ್ತದೆ. ಈಸ್ಟ್ರೋಜಿನ್ ಮುಖ್ಯವಾಗಿ ಗರ್ಭಕೋಶ ಮತ್ತು ಸ್ತನಗಳ ಮೇಲೆ ಪ್ರಭಾವ ಬೀರಿ ಅವುಗಳ ವೃದ್ಧಿಯನ್ನು ಉಂಟುಮಾಡುವುದು. ಎರಡು ವಾರಗಳ ತರುವಾಯ ಪಿಟ್ಯುಟರಿ ಎಫ್.ಎಸ್.ಎಚ್. ಬದಲು ಎಲ್.ಎಚ್ ಮತ್ತು ಎಲ್.ಟಿ.ಎಚ್‌ಗಳನ್ನು ಸ್ರವಿಸುತ್ತದೆ. ಇವುಗಳ ಪ್ರಭಾವವೂ ಅಂಡಾಶಯಗಳ ಮೇಲೆಯೇ ಪ್ರಧಾನವಾಗಿರುವುದು. ಈ ಕಾಲದ ಪ್ರಾರಂಭದಲ್ಲಿ ಅಂದರೆ ಸುಮಾರು 14ನೆಯ ದಿವಸವೇ ಬಲಿತು ಹಣ್ಣಾದ ಅಂಡಾಣು ಅಂಡಾಶಯದಿಂದ ಹೊರಬಿದ್ದು ಗರ್ಭಕೋಶ ನಾಳದೊಳಕ್ಕೆ ಹೀರಲ್ಪಟ್ಟು ಅದರೊಳಗೆ ಗರ್ಭಕೋಶದೆಡೆಗೆ ನೂಕಲ್ಪಡುತ್ತಿರುತ್ತದೆ. ಅಂಡಾಣುವಿದ್ದ ಸ್ಥಳ ರೂಪಾಂತರಗೊಂಡು ಕಾರ್ಪಸ್ ಲೂಟಿಯಂ ಮುಂದಕ್ಕೆ 14 ದಿವಸಗಳ ಪರ್ಯಂತ ಪ್ರೊಜೆಸ್ಟಿರಾನ್ ಎಂಬ ಅಂತಃಸ್ರಾವವನ್ನು ಉತ್ಪತ್ತಿ ಮಾಡುತ್ತದೆ. ಇದಕ್ಕೆ ಪಿಟ್ಯುಟರಿಯ ಎಲ್.ಟಿ.ಎಚ್. ಕಾರಣ ಪ್ರೊಜೆಸ್ಟಿರಾನ್ ಕೂಡ ಗರ್ಭಕೋಶ ಮತ್ತು ಸ್ತನಗಳ ಮೇಲೆ ಪ್ರಧಾನವಾಗಿ ಪ್ರಭಾವ ಬೀರಿ ಅವುಗಳ ವೃದ್ಧಿತ ಸ್ಥಿತಿ ಉಪಯುಕ್ತ ರೀತಿಯಲ್ಲಿ ಮುಂದುವರಿಯುವಂತೆ ಮಾಡುತ್ತದೆ. ಸಾಮಾನ್ಯವಾಗಿ ಈ ಎರಡು ವಾರಗಳ ಕೊನೆಯಲ್ಲಿ ಪಿಟ್ಯುಟರಿ ಎಲ್.ಎಚ್ ಮತ್ತು ಎಲ್.ಟಿ.ಎಚ್ ಅನ್ನು ಸ್ರವಿಸುವ ಬದಲು ಪುನಃ ಎಫ್.ಎಸ್.ಎಚ್. ಅನ್ನು ಸ್ರವಿಸುವುದಕ್ಕೆ ಪ್ರಾರಂಭಿಸುತ್ತದೆ. ತನ್ನ ಕ್ರಿಯಾಶಕ್ತಿ ಜರಾಯು ತಾಯಿಯ ಗರ್ಭಕೋಶ ಭಿತ್ತಿಯಿಂದ ಬೇರ್ಪಟ್ಟು ಅದರ ಕಾರ್ಯ ಕ್ಷೀಣಿಸುತ್ತದೆ, ಪ್ರೊಜೆಸ್ಟಿರಾನಿನ ಉತ್ಪತ್ತಿಗೆ ಇದರಿಂದ ಧಕ್ಕೆಯಾಗಿ ಗರ್ಭಾವಸ್ಥೆ ಕೊನೆಗೊಳ್ಳುತ್ತದೆ. ಆದರೆ ಇಷ್ಟರೊಳಗೆ ಭ್ರೂಣ ಬೆಳೆದು ತಾಯಿಯ ನೆರವಿಲ್ಲದೆ ಸ್ವತಂತ್ರವಾಗಿ ಜೀವಿಸಬಲ್ಲ ಮಗುವಾಗಿ ಅದರ ಜನನವಾಗುತ್ತದೆ. ಈ ಜನನಕ್ಕೆ ಪ್ರೊಜೆಸ್ಟಿರಾನಿನ ಉತ್ಪತ್ತಿಯ ನಿಲುಗಡೆ ಮಾತ್ರ ಕಾರಣವಲ್ಲ, ಪಿಟ್ಯುಟರಿ ಗ್ರಂಥಿಯ ಹಿಂಭಾಗದಿಂದ ಉತ್ಪತ್ತಿಯಾಗುವ ಆಕ್ಸಿಟೋಸಿನ್ ಎಂಬ ಅಂತಃಸ್ರಾವವೂ ಶಿಶು ಜನನಕ್ಕೆ (ಗರ್ಭಾವಸ್ಥೆಯ ಅಂತ್ಯಕ್ಕೆ) ಮುಖ್ಯವಾಗಿದೆ. ಬಹುಶ ಪ್ರೊಜೆಸ್ಟಿರಾನಿನ

ಪ್ರಭಾವಕ್ಕೆ ಒಳಗಾಗಿದ್ದ ಮತ್ತು ಆ ಪ್ರಭಾವ ಹಠಾತ್ತಾಗಿ ನಿಂತುಹೋದ ಗರ್ಭಕೋಶವನ್ನು ಮಾತ್ರ ಆಕ್ಸಿಟೋಸಿನ್ ಉದ್ರೇಕಿಸುತ್ತದೆ. ಹೀಗಾಗಿ 40 ವಾರಗಳ ಗರ್ಭಾವಸ್ಥೆಯ ಕೊನೆಯಲ್ಲಿ ಗರ್ಭಕೋಶ ಸಂಕುಚಿಸಿ ಒಳಗಿರುವ ಶಿಶುವನ್ನು ಹೊರದೂಡುತ್ತದೆ. ಸ್ವಲ್ಪ ಹೊತ್ತಿನಲ್ಲೆ ಬೇರ್ಪಟ್ಟ ಜರಾಯುವನ್ನೂ ಇದೇ ರೀತಿ ಹೊರದೂಡುತ್ತದೆ. ಇದು ಗರ್ಭಾವಸ್ಥೆಯ ಅಂತ್ಯ.

ಗರ್ಭಿಣಿಯರು ಹೆಚ್ಚು ಧೈರ್ಯಶಾಲಿಗಳಾಗಿಯೂ ಬಲಶಾಲಿಗಳಾಗಿಯೂ ಸಾಹಸ ಪ್ರವೃತ್ತಿಯವರಾಗಿಯೂ ಇರುವರೆಂದೂ ಗರ್ಭಾವಸ್ಥೆಯ ಕೊನೆಗೊಂಡ ಮೇಲೂ ಅವರು ಈ ಗುಣಗಳನ್ನು ಹೊಂದಿರುವರೆಂದೂ ಹೇಳಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಗರ್ಭಿಣಿಯರಲ್ಲಿ ಮಾನಸಿಕ ವ್ಯಾಪಾರಗಳು ಸ್ವಲ್ಪಮಟ್ಟಿಗೆ ಏರುಪೇರಾಗುತ್ತವೆ. ಸ್ವಲ್ಪ ಕಿರಿಕಿರಿ–ಶೀಘ್ರ ಕೋಪ–ಸೂಕ್ಷ್ಮಮನಸ್ಕರಾಗಿರುತ್ತಾರೆ. ಕ್ಷಯ ರೋಗಿಗಳು ಗರ್ಭಿಣಿಯರಾದಾಗ ಅವರಲ್ಲಿ ರೋಗದ ಉಲ್ಬಣ ತಗ್ಗಿನ ಮಟ್ಟದಲ್ಲಿರುತ್ತದೆ. ಆದರೆ ಗರ್ಭಾವಸ್ಥೆ ಕೊನೆಗೊಂಡ ಮೇಲೆ ರೋಗ ತೀಕ್ಷ್ಣತರವಾಗುತ್ತದೆ. ಆದರೆ ಬಲಹೀನ, ರೋಗಿಷ್ಠ ಸೂಕ್ಷ್ಮವ್ಯಕ್ತಿಗಳು, ಅತಿ ಚಿಕ್ಕ ವಯಸ್ಸಿಯವರು ಮತ್ತು ಅತಿ ಹೆಚ್ಚು ವಯಸ್ಕರು ಗರ್ಭಿಣಿಯರಾದರೆ ಗರ್ಭಾವಸ್ಥೆಯಲ್ಲಿ ಅವರು ಅನೇಕ ಪಿಡುಗುಗಳನ್ನು ಅನುಭವಿಸಬೇಕಾಗುತ್ತದೆ. ಹೊಟ್ಟೆ ತೊಳಸು, ವಾಂತಿ, ಕೆಲವು ಬಯಕೆ, ಹಲ್ಲುನೋವು, ಕೆಮ್ಮು ಗರ್ಭಕಾಲದ ಪ್ರಾರಂಭಿಕ ಮೂರು ತಿಂಗಳು ಮತ್ತು ಕೊನೆಯ ತಿಂಗಳು ಮೂತ್ರವಿಸರ್ಜನೆಯಲ್ಲಿ ತೊಂದರೆ, ಕಾಲಿನ ಅಭಿಧಮನಿಗಳು ಊದಿಕೊಂಡು ಕಾಲು ತೊಡೆಗಳಲ್ಲಿ ಊತ, ನೋವು ಉಂಟಾಗುವುದು ಇತ್ಯಾದಿ ಇವರ ಗರ್ಭಾವಸ್ಥೆಯಲ್ಲಿ ಕಂಡುಬರುತ್ತವೆ.

ಗರ್ಭಾವಸ್ಥೆಯಲ್ಲಿ ಸ್ವಾಭಾವಿಕ ಶಾರೀರಿಕ ಬದಲಾವಣೆಗಳು: ಬೆಳೆಯುವ ಭ್ರೂಣಕ್ಕೆ ಅಗತ್ಯವಾದ ಆಹಾರ ಸಾಮಗ್ರಿಗಳನ್ನು ಕ್ಲುಪ್ತ ಉಷ್ಣತೆಯುಳ್ಳ ಸ್ಥಳವನ್ನು ಗರ್ಭಾವಸ್ಥೆ ಅನುಕೂಲವಾಗಿ ಒದಗಿಸುವುದೇ ಅಲ್ಲದೆ ಮುಂದಕ್ಕೆ ಬೇಕಾಗಬಹುದಾದ ಶಾರೀರಿಕ ಬದಲಾವಣೆಗಳನ್ನೂ ಉಂಟುಮಾಡುತ್ತದೆ. ಮೊದಲಾಗಿ ಗರ್ಭಕೋಶ ದೊಡ್ಡದಾಗುವುದು. ಅದರೊಳಗಿರುವ ಭ್ರೂಣದ ಬೆಳವಣಿಗೆಯಿಂದ ಅದು ಹಿಗ್ಗುವುದು ಮಾತ್ರವಲ್ಲದೆ ತಾನೇ ಸ್ವತಃ ದೊಡ್ಡದಾಗಿ ದೃಢವಾಗುತ್ತದೆ. ಇದರಿಂದ ಗರ್ಭಕೋಶ ಸಕಾಲದಲ್ಲಿ ಸಂಕುಚಿಸಿ ಶಿಶುಜನನವಾಗುವುದಕ್ಕೆ ಅನುಕೂಲವಾಗುವುದು. ಉದರ ಮತ್ತು ಕಿಬ್ಬೊಟ್ಟೆಯ ಮುಂದಿನ ಭಿತ್ತಿಯ ಸ್ನಾಯುಗಳು ವೃದ್ಧಿ ಮತ್ತು ಸ್ರವಿಸುವ ಸಾಮರ್ಥ್ಯವೂ ಮೂಳೆಗಳ ಕಟ್ಟು ಹಿಗ್ಗಿದಂತಾಗುವುದೂ ಹೆರಿಗೆಗೆ ಅನುಕೂಲವಾಗುವ ಬದಲಾವಣೆಗಳು. ಸ್ತನಗಳ ವೃದ್ಧಿ ಮತ್ತು ಸ್ರವಿಸುವ ಸಾಮರ್ಥ್ಯವೂ ಗರ್ಭಾವಸ್ಥೆಯಲ್ಲಿ ಕಂಡುಬರುತ್ತದೆ. ಇದು ಮುಂದೆ ಹುಟ್ಟುವ ಮಗುವಿಗೆ ಹಾಲೂಡಿಸಿ ಸಂರಕ್ಷಿಸಲು ಆಗಿರುವ ಏರ್ಪಾಡು, ಗರ್ಭಾವಸ್ಥೆಯಲ್ಲಿ ವ್ಯಕ್ತಿಯ ತೂಕದ ಹೆಚ್ಚಳ ಸುಮಾರು 11–12 ಕೆ.ಜಿ. ವೃದ್ಧಿಗೊಂಡ ಗರ್ಭಕೋಶ, ಅದರೊಳಗಿರುವ ಮಗು, ಸ್ತನಗಳು ಎಲ್ಲಾ ಸುಮಾರು 5–6 ಕೆ.ಜಿ. ತೂಕಕ್ಕೆ ಕಾರಣ. ಉಳಿದ 5–6 ಕೆ.ಜಿ. ತೂಕದ ಹೆಚ್ಚಳ ದೇಹದಲ್ಲಿ ದ್ರವಾಂಶ ಹೆಚ್ಚು ಶೇಖರಣೆ ಆಗುವುದರಿಂದ ಉಂಟಾಗಿರುತ್ತದೆ. ರಕ್ತ ಸಹಜ ಪ್ರಮಾಣಕ್ಕಿಂತ 1/3ರಷ್ಟು ಹೆಚ್ಚಾಗಿದ್ದು ಕಣಗಳಿಗಿಂತ ದ್ರವಾಂಶ ಜಾಸ್ತಿಯಾಗಿರುವುದರಿಂದ ಸಹಜವಾಗಿಯೆ ಗರ್ಭಾವಸ್ಥೆಯಲ್ಲಿ ರಕ್ತವರ್ಣಹೀನತೆ ಕಂಡುಬಂದು ಸ್ವಾಭಾವಿಕ ಪ್ರಮಾಣದ ಶೇ. 87 ರಷ್ಟು ಮಾತ್ರ ಹಿಮೋಗ್ಲೋಬಿನ್ ಇರುತ್ತದೆ. ಗರ್ಭಾವಸ್ಥೆ ಕೊನೆಗೊಂಡಾಗ ಶರೀರ ತೂಕ ಸಹಜಮಟ್ಟಕ್ಕೆ ಸಾಮಾನ್ಯವಾಗಿ ಬಂದರೂ ಕೆಲವು ವೇಳೆ ತೂಕದ ಹೆಚ್ಚಳ ಪ್ರಸವಕಾಲದಿಂದ ಗಣನೆಗೆ ಬರುವಂತೆ ಸ್ಥೂಲಕಾಯವಾಗಿ ನಿಂತುಬಿಡಬಹುದು. ಗರ್ಭಾವಸ್ಥೆಯ ಪ್ರಾರಂಭವನ್ನು ಅನೇಕ ವಿಧದಿಂದ ಕರಾರುವಾಕ್ಕಾಗಿ ಗುರುತಿಸಬಹುದು. ಅಂಡಾಣು ಅಂಡಕೋಶದಿಂದ ಹೊರಬಿದ್ದ ದಿವಸ ಸ್ತ್ರೀಯರಲ್ಲಿ ಮುಂಜಾನೆ ದೇಹದ ಉಷ್ಣತೆ ಹಠಾತ್ತನೆ ಸ್ವಲ್ಪ ತಗ್ಗಿ ಆಮೇಲೆ ಮುಂಚಿಗಿಂತ ಸ್ವಲ್ಪ ಹೆಚ್ಚಿನ ಮಟ್ಟಕ್ಕೆ ಏರಿ ಮುಂದಿನ ದಿವಸಗಳಲ್ಲಿ ಆ ಹೊತ್ತಿನಲ್ಲಿ ಅದೇ ಏರಿದ ಮಟ್ಟದಲ್ಲಿ ಇರುತ್ತದೆ. ಅಂಡಾಣು ಅಂಡಕೋಶದಿಂದ ಹೊರಬಿದ್ದ 22–24 ಗಂಟೆಗಳಲ್ಲಿ ಗರ್ಭಾವಸ್ಥೆ ಪ್ರಾರಂಭವಾಗಿರಬೇಕೆನ್ನುವುದು ವ್ಯಕ್ತಪಟ್ಟಿದೆ. ಆದ್ದರಿಂದ ಮುಂಜಾವಿನ ಶರೀರೋಷ್ಣತೆಯನ್ನು ಕ್ಲಿಪ್ತವಾಗಿ ನೋಡುತ್ತಿದ್ದರೆ ಅದರ ವ್ಯತ್ಯಾಸದಿಂದ ಅಂಡಾಣು ಹೊರಬಿದ್ದ ದಿವಸವನ್ನು, ಅರ್ಥಾತ್ ಗರ್ಭಾವಸ್ಥೆಯ ಪ್ರಾರಂಭವನ್ನು, ಪತ್ತೆಮಾಡಬಹುದು. ಶರೀರೋಷ್ಣತಾ ವ್ಯತ್ಯಾಸ ಸ್ವಲ್ಪವೇ ಆದರೂ (0.5° ಸೆಂ.) ಅದು ಖಚಿತವಾಗಿ ಆಗುತ್ತದಾದ್ದರಿಂದ ಈ ರೀತಿಯ ಗಣನೆ ಕಷ್ಟವಾಗುವುದಿಲ್ಲ. ಆ ದಿವಸದಿಂದ ಗರ್ಭಾವಸ್ಥೆ ಸಾಮಾನ್ಯವಾಗಿ 266 ದಿವಸಗಳು ಅಂದರೆ 9 1/2 ತಿಂಗಳು (ಚಾಂದ್ರಮಾನ) ಕಾಲ ವ್ಯಾಪ್ತಿಯುಳ್ಳದ್ದಾಗಿರುತ್ತದೆ. ಆದರೆ ಬೇರೆ ಬೇರೆ ಸ್ತ್ರೀಯರಲ್ಲಿ ಆರೋಗ್ಯವಾಗಿದ್ದರೂ ಈ ಅವಧಿ 252 ರಿಂದ 285 ದಿವಸಗಳವರೆಗೆ ಬದಲಾಗಬಹುದು. ಜೊತೆಗೆ ಅಂಡಾಣು ಹೊರಬಿದ್ದ ದಿವಸವನ್ನು ಶರೀರದ ಉಷ್ಣತಾಮಾಪನದಿಂದ ಎಲ್ಲರೂ ಖಚಿತವಾಗಿ ತಿಳಿದುಕೊಳ್ಳಲಾರರು. ಆದ್ದರಿಂದ ಗರ್ಭಾವಸ್ಥೆಯ ಕಾಲವನ್ನು ಬೇರೆ ಸುಲಭ ರೀತಿಯಲ್ಲಿ ಗಣಿಸುವುದು ರೂಢಿಗೆ ಬಂದಿದೆ, ಕೊನೆಯ ಬಾರಿ ಆದ ರಜಸ್ರಾವದ ಮೊದಲನೆಯ ದಿವಸಕ್ಕೆ ಏಳು ದಿವಸಗಳನ್ನು ಸೇರಿಸಿ ಅಲ್ಲಿಂದ ಮುಂದಕ್ಕೆ 9 ತಾರೀಖು ಪಟ್ಟಿ ತಿಂಗಳನ್ನು ಎಣಿಸಿದರೆ ಲಭಿಸುವ ದಿವಸ ಗರ್ಭಾವಸ್ಥೆಯ ಅಂತಿಮ ದಿವಸವೆಂದು ಗಣಿಸುವುದೂ ಇದು ಮುಟ್ಟಾದ ಮೊದಲ ದಿವಸದಿಂದ 280 ದಿನಗಳು ಅಂದರೆ 10 ಚಾಂದ್ರಮಾನ ತಿಂಗಳುಗಳ ಮೇಲೆ ಎಂದು ಗಣಿಸುವುದೂ ರೂಢಿಯಾಗಿದೆ. ಆದರೆ ನಿಜವಾಗಿ ಗರ್ಭಾವಸ್ಥೆಯ ಕಾಲ ಅಂಡಾಣು ಹೊರಬಿದ್ದು ನಿಷೇಚನಗೊಂಡ ದಿವಸದಿಂದ ಪ್ರಾರಂಭವಾಗುವುದರಿಂದ ಇದಕ್ಕಿಂತ 14 ದಿವಸಗಳು ಕಡಿಮೆ ಇರುತ್ತದೆನ್ನುವುದನ್ನು ಮರೆಯಬಾರದು. ಗರ್ಭಾವಸ್ಥೆಯ ಅವಧಿ ಅನೇಕ ವೇಳೆ ಯೋಗ್ಯ ಅಥವಾ ಅನೈತಿಕ ಜನನ ನಿಷ್ಕರ್ಷೆಯಲ್ಲಿ ನ್ಯಾಯಾಲಯದ ಅವಲೋಕನಕ್ಕೆ ಬರಬಹುದಾಗಿರುವುದರಿಂದ ಅನೇಕ ದೇಶಗಳಲ್ಲಿ ಗರ್ಭಾವಸ್ಥೆಯ ಕನಿಷ್ಠ ಮತ್ತು ಗರಿಷ್ಠ ಮಿತಿಗಳನ್ನು ಕಾನೂನಿನಂತೆ ನಿಯಮಿಸಲಾಗಿದೆ. ಬೇರೆ ಬೇರೆ ದೇಶಗಳಲ್ಲಿ ಗರಿಷ್ಠ ಮಿತಿ ಬೇರೆ ಬೇರೆ ಉಂಟು. ಗರ್ಭಾವಸ್ಥೆಯ 28 ವಾರಗಳ ಮುಂಚೆಯೇ ಅಂದರೆ 7 ನೆಯ ತಿಂಗಳಿಗೆ ಮುಂಚೆಯೇ ಪ್ರಸವವಾದರೆ ಜನಿಸಿದ ಮಗು ಜೀವಂತವಾಗಿರುವುದಿಲ್ಲ ಎಂದು ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಅಂಗೀಕರಿಸಿದ್ದಾರೆ. ಆದ್ದರಿಂದ ಅನೇಕ ದೇಶಗಳಲ್ಲಿ ಗರ್ಭಾವಸ್ಥೆಯ ಗರಿಷ್ಠ ಮಿತಿ 310 ದಿವಸಗಳೆಂದು ಗಣಿಸಲಾಗಿದೆ.

ಗರ್ಭಾವಸ್ಥೆಯ ಅರಿವು: ನಿರೀಕ್ಷಣೆಯಂತೆ ಮುಟ್ಟಾಗದೇ ಇದ್ದಾಗ ಸ್ತ್ರೀ ತಾನು ಗರ್ಭಿಣಿಯಾಗಿರಬಹುದೆಂಬುದನ್ನು ಊಹಿಸುತ್ತಾಳೆ. ಮುಂದಕ್ಕೆ ಬೆಳಗ್ಗೆ ಎದ್ದಾಗಲೇ ವಾಕರಿಕೆ, ಸ್ತನಗಳ ವೃದ್ಧಿ, ಹೊಟ್ಟೆ ದಪ್ಪವಾಗುವುದು ಕಂಡುಬರುತ್ತದೆ. ಗರ್ಭಾವಸ್ಥೆಯ 20ನೇ ವಾರ ಮೊದಲನೇ ಗರ್ಭಧರಿಸಿದವರಿಗೂ, 10ನೇ ವಾರಕ್ಕೆ ಎರಡನೆಯ, ಮೂರನೆಯ ಸಲ ಗರ್ಭಧರಿಸಿದವರಿಗೂ ಹೊಟ್ಟೆಯ ಮೇಲೆ ಕೈಯಿಟ್ಟು ನೋಡಿದರೆ ಶಿಶುವಿನ ಕೈಕಾಲು ಮುಂತಾದ ಭಾಗಗಳು ಸಿಕ್ಕಿ ಅವುಗಳ ಚಲನೆ ಖಾತರಿಯಾಗುತ್ತದೆ. ವ್ಯಕ್ತಿಗೇ ತಿಳಿಯುವಂತಿರುವ ಈ ಸೂಚನೆಗಳಲ್ಲದೆ ವೈದ್ಯಪರೀಕ್ಷೆಯಿಂದ ಗರ್ಭಾವಸ್ಥೆಯನ್ನು ಅರಿಯಬಹುದಾಗಿದೆ. 14ನೆಯ ವಾರಕ್ಕೆ ಡಾಪ್ಲರ್ ಮಗುವಿನ ಎದೆಬಡಿತ ಗುರುತಿಸುತ್ತದೆ. 16–18ವಾರಗಳ ಬಳಿಕ ಸ್ಟೆತಾಸ್ಕೋಪನ್ನು ಗರ್ಭಿಣಿಯ ಹೊಟ್ಟೆಯ ಮೇಲಿಟ್ಟು ಆಲಿಸಿದರೆ ಗುಂಡಿಗೆಯ ಬಡಿತ ಗಡಿಯಾರದ ಮಸುಕಾದ ಟಿಕ್ ಟಿಕ್ ಶಬ್ದದಂತೆ ಕೇಳುತ್ತದೆ. ಯೋನಿಯೊಳಗಿನ ಪರೀಕ್ಷೆಗಳಿಂದಲೂ ಗರ್ಭಾವಸ್ಥೆಯನ್ನು ಅರಿಯಬಹುದು;

33–34ನೆಯ ದಿನವೇ ಮೂತ್ರ ಪರೀಕ್ಷೆಯಿಂದ ಕರಾರುವಕ್ಕಾಗಿ ಆಕೆಯ ಗರ್ಭಿಣಿಯೇ ಇಲ್ಲವೇ ಎಂದು ತಿಳಿಯಬಹುದು. ಇತ್ತೀಚಿನ ಸ್ಕ್ಯಾನಿಂಗ್ ಪರೀಕ್ಷೆಯಲ್ಲಿ 5–6ನೇ ವಾರಕ್ಕೆ ಗರ್ಭಿಣಿಯೆ ಅಲ್ಲವೇ ತಿಳಿಯುವುದರೊಂದಿಗೆ ಮಗುವಿನ ಹೃದಯ ಮಿಡಿತ ಕೂಡ ನೋಡಬಹುದು. 6ನೇ ವಾರದಿಂದ ಯೋನಿ ಪರೀಕ್ಷೆಯಲ್ಲಿ ಗರ್ಭವನ್ನು ಖಚಿತಪಡಿಸಬಹುದು.

20ನೆಯ ವಾರಕ್ಕೆ ಮೊದಲ ಬಾರಿ ಬಸಿರಾದವರೂ, 16ನೆಯ ವಾರಕ್ಕೆ ಎರಡು ಮೂರನೆ ಬಾರಿ ಬಸಿರಾದವರಿಗೂ ಮಗುವಿನ ಚಲನೆ ತಿಳಿಯುತ್ತದೆ.

ನಡುಗಾಲದಲ್ಲಿ, ಗರ್ಭಾವಸ್ಥೆಯ ಪ್ರಾರಂಭಿಕ ಲಕ್ಷಣಗಳು ಬೇರೆ ಕಾರಣಗಳಿಂದಲೂ ಉಂಟಾಗಬಹುದಾದ್ದರಿಂದ ನಂಬುವಂಥದಲ್ಲ, ರಕ್ತಕೊರತೆಯಿಂದ ಅಥವಾ ಬಹುವಾಗಿ ಬೇಕಾದ ವ್ಯಕ್ತಿಯ ಸಾವಿನಂತಹ ತೀವ್ರಮಾನಸಿಕ ಆಘಾತದಿಂದ ವ್ಯಕ್ತಿ ನಿರೀಕ್ಷಣೆಯಂತೆ ಮುಟ್ಟಾಗದೆ ಅದು ಮುಂದೆ ಹೋಗಬಹುದು. ಅನೈತಿಕ ಅಥವಾ ಇಷ್ಟವಿಲ್ಲದ ಸಂಭೋಗವಾದ ಮೇಲೆ ಗರ್ಭಧಾರಣೆಯಾಗಿ ಬಿಟ್ಟಿದೆಯೋ ಎಂಬ ಮಾನಸಿಕ ಭೀತಿಯಿಂದಲೇ ನಿರೀಕ್ಷಿತ ಮುಟ್ಟು, ನಿಂತುಹೋಗಿರಬಹುದು. ಇದಕ್ಕೆ ಬದಲಾಗಿ ಮಕ್ಕಳಿರದ ಸ್ತ್ರೀಯಲ್ಲಿ ಮಕ್ಕಳಾಗಬೇಕೆಂಬ ಅಭಿಲಾಷೆ ತೀವ್ರತೆಯಿಂದಲೇ ಮುಟ್ಟು ನಿಂತು ಬೆಳಗಿನ ವಾಕರಿಕೆ, ಹೊಟ್ಟೆ ದಪ್ಪವಾಗುವುದು ಮುಂತಾದ ಗರ್ಭಾವಸ್ಥೆಯ ಮುಂದಿನ ಅನೇಕ ಸೂಚನೆಗಳು ವ್ಯಕ್ತವಾಗಿ ಕೊನೆಗೆ 10 ತಿಂಗಳ ತರುವಾಯ ನಕಲಿ ಪ್ರಸವವೂ ಆಗಬಹುದು. 3ನೆಯ ತಿಂಗಳು ತುಂಬಿದ ಮೇಲೆ ಗರ್ಭಕೋಶದ ಬೆಳವಣಿಗೆಯನ್ನು ಹೊಟ್ಟೆಯ ಮೇಲೆ ಕೈಯಿಟ್ಟು ಪರೀಕ್ಷಿಸಿ ತಿಳಿಯಬಹುದು. 3ನೆಯ ತಿಂಗಳಲ್ಲಿ ಹೊಕ್ಕಳ ಮಟ್ಟದಲ್ಲಿ, 9ನೆಯ ತಿಂಗಳಲ್ಲಿ ಎದೆ ಮೂಳೆಯ ಕೆಳತುದಿಯ ಮಟ್ಟದಲ್ಲಿ, 10ನೆಯ ತಿಂಗಳಲ್ಲಿ ಅಂದರೆ ಪ್ರಸವದ ಸಮಯ ಹತ್ತಿರವಾದಂತೆ ಮೇಲಿನ ಮಟ್ಟಕ್ಕಿಂತ ಸು. 3–28 ಸೆಂಮೀ ಅಂಗುಲ ಕೆಳಗೆ ಗರ್ಭಕೋಶವನ್ನು ಸ್ಪರ್ಶಿಸಬಹುದು. ಚೊಚ್ಚಲು ಗರ್ಭಿಣಿಯರಲ್ಲಿ ಸ್ತನಗಳು ದಪ್ಪವಾಗಿಯೂ ದೃಢವಾಗಿಯೂ ಆಗುವುದರ

ಜೊತೆಗೆ ಮುಟ್ಟಿದರೆ ನೋಯಲೂಬಹುದು. ಸಾಮಾನ್ಯವಾಗಿ ಎಲ್ಲ ಗರ್ಭಿಣಿಯರಲ್ಲೂ ಸ್ತನವನ್ನು ಅಮುಕಿದರೆ ಗಟ್ಟಿಯಾದ ಗಿಣ್ಣಿನಂತ ದ್ರವ ಬರುತ್ತದೆ. ಚೊಚ್ಚಲು ಗರ್ಭದಲ್ಲಿ ಮೊಲೆಗಳು ಕಂದು ಮತ್ತು ಅನೇಕರಲ್ಲಿ ಕಪ್ಪು ಬಣ್ಣಕ್ಕೆ ತಿರುಗುತ್ತವೆ ಮತ್ತು ಜೀವಮಾನ ಪರ್ಯಂತ ಕಪ್ಪಾಗಿಯೇ ಇರುತ್ತವೆ. ಹಾಗೇ ಹೊಟ್ಟೆಯ ನಡುಗೆರೆ ಹೊಕ್ಕಳಿಂದ ಕೆಳಭಾಗದಲ್ಲಿ ಕಪ್ಪಾಗುತ್ತದೆ. ಹೊಟ್ಟೆ ಹಿಗ್ಗುವುದರಿಂದ ಗರ್ಭಾವಸ್ಥೆಯಲ್ಲಿ ಹೊಟ್ಟೆಯ ಮೇಲೆಲ್ಲ ಕೆಂಪು ರೇಖೆಗಳು ಕಂಡು ಬರುತ್ತದೆ. ಪ್ರಸವವಾದ ಮೇಲೆ ಇವು ಬಿಳಿಯ ಸುಕ್ಕುಗಟ್ಟಿದ ರೇಖೆಗಳಾಗುತ್ತವೆ. ಈ ರೇಖೆಗಳು ಜೀವಮಾನಪರ್ಯಂತ ಇರುತ್ತವೆ. ಮೊಲೆಗಳ ಕಪ್ಪುವರ್ಣ, ಹೊಟ್ಟೆಯ ಸುಕ್ಕುಗಟ್ಟಿದ ರೇಖೆಗಳು ಆ ಸ್ತ್ರೀ ಒಮ್ಮೆಯಾದರೂ ಗರ್ಭಿಣಿಯಾಗಿದ್ದಳೆಂಬುದನ್ನು ಸೂಚಿಸುತ್ತವೆ. ಶಂಕಿತ ವ್ಯಕ್ತಿಯ ಮೂತ್ರವನ್ನು ಇಲಿ, ಮೊಲ, ಕಪ್ಪೆ ಮುಂತಾದ ಪ್ರಾಣಿಗಳಿಗೆ ಪಿಚಕಾರಿಯ ನೆರವಿನಿಂದ ಚುಚ್ಚಿ ಈ ಪರೀಕ್ಷೆಗಳನ್ನು ಮಾಡಲಾಗುತ್ತದೆ. ಅಷಿಂಜಾಂಡೆಕ್‌ರ ಪರೀಕ್ಷಾ ವಿಧಾನದಲ್ಲಿ ಎಳೆಯ ಹೆಣ್ಣು ಇಲಿಗಳಿಗೆ 3–4 ದಿವಸ ಶಂಕಿತ ವ್ಯಕ್ತಿಯ ಮೂತ್ರವನ್ನು ಚುಚ್ಚುಮದ್ದಾಗಿ ಕೊಟ್ಟು ಆಮೇಲೆ ಅವನ್ನ ಕೊಂದು ಅವುಗಳ ಅಂಡಾಶಯಗಳನ್ನು ಪರೀಕ್ಷಿಸಲಾಗುತ್ತದೆ. ಅಂಡಾಣು ವೃದ್ಧಿಯಾಗಿರುವುದೂ ಅದು ಹೊರಬಿದ್ದು ಅಂಡಾಶಯದಲ್ಲಿ ರಕ್ತಕಲೆ ಕಟ್ಟಿಕೊಂಡಿರುವುದೂ ಸ್ತ್ರೀ ಗರ್ಭಿಣಿ ಎಂದು ಸೂಚಿಸುತ್ತದೆ. ಫ್ರೀಡ್‌ಮನ್ನನ ಪರೀಕ್ಷಾ ವಿಧಾನದಲ್ಲಿ ಜೊತೆಯ ಮೊಲಗಳಿಂದ ಅದರಲ್ಲೂ ಗಂಡಿನಿಂದ 2 ವಾರಗಳು ಬೇರೆಯಾಗಿರದ ಕನ್ಯಾಮೊಲವನ್ನು ಉಪಯೋಗಿಸುತ್ತಾರೆ. 48 ಗಂಟೆಗಳಾದ ಬಳಿಕ ಶಸ್ತ್ರಚಿಕಿತ್ಸೆಯಿಂದ ಹೊಟ್ಟೆಯನ್ನು ಕೊಯ್ದು ಮೊಲದ ಅಂಡಾಶಯಗಳನ್ನು ಪರೀಕ್ಷಿಸಲಾಗುತ್ತದೆ. ಇಲ್ಲೂ ಅಂಡಾಣುವೃದ್ಧಿ ವ್ಯಕ್ತಿಯ ಗರ್ಭಾವಸ್ಥೆಯನ್ನು ಸೂಚಿಸುತ್ತದೆ. ಹಾಗ್‌ಬೆನ್ ಪರೀಕ್ಷಾವಿಧಾನದಲ್ಲಿ ಒಂದು ತರಹ ಹೆಣ್ಣು ನೆಲಗಪ್ಪೆಯನ್ನು (ಟೋಡ್) ಉಪಯೋಗಿಸಲಾಗುವುದು. ಇದಲ್ಲದೆ ಗಂಡು ಕಪ್ಪೆಗಳನ್ನು ಉಪಯೋಗಿಸುವ ಪರೀಕ್ಷಾ ವಿಧಾನಗಳು ಉಂಟು, ಈ ಪರೀಕ್ಷಾ ವಿಧಾನಗಳಿಂದ ಗರ್ಭಾವಸ್ಥೆಯನ್ನು ಮುಟ್ಟು ನಿಂತ 1 ವಾರದಲ್ಲೇ ಅಂದರೆ ಸುಮಾರು 3 ವಾರಗಳ ಗರ್ಭಾವಸ್ಥೆಯಲ್ಲೇ ಪತ್ತೆ ಮಾಡಬಹುದು ಮತ್ತು ಇವು ಶೇ. 98 ಸಂದರ್ಭಗಳಲ್ಲಿ ಖಚಿತವಾದ, ನಂಬಲರ್ಹವಾದ ಪರೀಕ್ಷಾ ವಿಧಾನಗಳಾಗಿವೆ.

ಗರ್ಭಧರಿಸಿದ ಸಮಯದಲ್ಲಿ ಒಳ್ಳೆಯಗಾಳಿ, ಪೌಷ್ಟಿಕ ಆಹಾರ ಮತ್ತು ನಿಯಮಿತ ವ್ಯಾಯಾಮ ಅಗತ್ಯ. ಆಹಾರ ಸಮತೋಲನವಾಗಿದ್ದು, ವಿಟಮಿನ್ನುಗಳನ್ನೂ ಕಬ್ಬಿಣದ ಮತ್ತು ಸುಣ್ಣ ಅಂಶವನ್ನೂ ಪೂರೈಸುವಂತಿರಬೇಕು. ಸಾಮಾನ್ಯವಾಗಿ ಗರ್ಭಿಣಿಗೆ ಗರ್ಭಸ್ಥಿತಿ ಪೂರ್ವದ 1 1/5 ರಷ್ಟು ಶಕ್ತಿಯನ್ನು ಒದಗಿಸುವಷ್ಟು ಆಹಾರ ಬೇಕಾಗುತ್ತದೆ. ಇದು 3ನೆಯ ತಿಂಗಳಿನಿಂದಲೇ ಸಹಜವಾಗಿ ಉಂಟಾಗುವ ಹೆಚ್ಚಿನ ಹಸಿವಿನಿಂದ ಪೂರೈಕೆ ಆಗುತ್ತದೆ. ತರಕಾರಿ ಹಣ್ಣುಗಳನ್ನೂ ದಿನಕ್ಕೆ ಕಡೆಪಕ್ಷ ಮುಕ್ಕಾಲು ಲೀಟರ್ ಹಾಲನ್ನು ತೆಗೆದುಕೊಂಡರೆ ಸಾಕಾದಷ್ಟು ಪೋಷಣೆ ದೊರೆಯುತ್ತದೆ. ಪ್ರಗತಿಪರ ರಾಷ್ಟ್ರಗಳ ಜನತೆಯಲ್ಲಿ ತಕ್ಕಷ್ಟು ಜ್ಞಾನ, ಧನ ಇರುವುದರಿಂದ ಗರ್ಭಾವಸ್ಥೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಅಗತ್ಯವಾದ ವಿಟಮಿನ್ನುಗಳನ್ನುಳ್ಳ ಆಹಾರಗಳನ್ನು ತೆಗೆದುಕೊಂಡು ಆ ಅವಧಿಯಲ್ಲಿ ಮತ್ತು ಪ್ರಸವ ಸಮಯದಲ್ಲಿ ಕಷ್ಟವಾಗದಂತೆ ನೋಡಿಕೊಳ್ಳುತ್ತಾರೆ. ಆದರೆ ಭಾರತದಂಥ ಮುಂದುವರೆಯುತ್ತಿರುವ ದೇಶಗಳಲ್ಲಿ ಪೌಷ್ಟಿಕಾಹಾರದ ಕೊರತೆ ಕಂಡುಬರುತ್ತದೆ. ಕಬ್ಬಿಣದ ಕೊರತೆಯಿಂದ ರಕ್ತಹೀನತೆ ಕಂಡುಬರುತ್ತದೆ. ಗರ್ಭಾವಸ್ಥೆಯಲ್ಲಿ ಮದ್ಯಸಾರವು ಹೊಗೆಸೊಪ್ಪೂ ವರ್ಜ್ಯ, ವ್ಯಕ್ತಿಯ ಸ್ವಾಭಾವಿಕ ಬಯಕೆಗಳ ಪೂರೈಕೆ ವಿಚಾರದಲ್ಲಿ ಜಾಗರೂಕತೆಯಿಂದ ವರ್ತಿಸಬೇಕಾಗುತ್ತದೆ. ಗರ್ಭಾವಸ್ಥೆಯಲ್ಲಿ ನರಮಂಡಲ ಸೂಕ್ಷ್ಮಸ್ಥಿತಿಯಲ್ಲಿ ಇರುವುದರಿಂದ ಮನಸ್ಸು ಉದ್ರೇಕಗೊಳ್ಳದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಅವಶ್ಯಕತೆಗೆ ತಕ್ಕಂತೆ ನಿದ್ರೆ ಬೇಕಾಗುತ್ತದೆ. ಕಡಿಮೆಯೆಂದರೂ 10 ಗಂಟೆಗಳ ಕಾಲ ನಿದ್ರೆ ಮಗುವಿನ ಬೆಳೆವಣಿಗೆಗೆ ಅಗತ್ಯ. ಉಡಿಗೆ ತೊಡಿಗೆಗಳು ಹೊಟ್ಟೆ, ಸ್ತನಗಳನ್ನು ಬಿಗಿಯದಂತೆ ಇರಬೇಕಾಗುತ್ತದೆ. ಗರ್ಭಾವಸ್ಥೆಯಲ್ಲಿ ದೇಹದ ಸಮತೋಲನ ವ್ಯತ್ಯಾಸವಾಗಿದ್ದು ಗರ್ಭಿಣಿಯರು ನಡೆದಾಡುವಾಗ ಒಂದೆರಡು ಬಾರಿಯಾದರೂ ಮುಗ್ಗರಿಸಿ ಬೀಳುವುದು ಸಾಮಾನ್ಯ. ದೇಹಘಾತ ಮತ್ತು ಶ್ರಮವನ್ನು ಉಂಟುಮಾಡುವ ಕೆಲಸಗಳು, ಎತ್ತರದಿಂದ ಧುಮುಕುವುದು, ಭಾರ ಹೊರುವುದು ಗುದ್ದಾಡುವುದು, ದೂರ ಪ್ರಯಾಣ ಇವುಗಳೆಲ್ಲ ವರ್ಜ್ಯ, ಎತ್ತರದ ಹಿಮ್ಮಡಿ ಚಪ್ಪಲಿ ಒಳ್ಳೆಯದಲ್ಲ, ಯಾವ ಆತಂಕಗಳೂ ಇಲ್ಲದಿದ್ದರೆ ಸಂಭೋಗ ನಿಷಿದ್ಧವಲ್ಲ.

ಮೊದಲು ಗರ್ಭ ಖಚಿತಪಡಿಸಿಕೊಳ್ಳಬೇಕು, ಆ ಸಮಯದಲ್ಲಿಯೇ ಗರ್ಭಿಣಿಯ ದೈಹಿಕ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ರಕ್ತ ಪರೀಕ್ಷೆಗಳ ಮೂಲಕ ತೊಂದರೆಗಳು ಇಲ್ಲದೇ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.

ಗರ್ಭಾವಸ್ಥೆಯ ಕಾಲದಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕ್ರಮ: ಅತಿ ವಾಂತಿಯು ಮೊದಲ ತಿಂಗಳಲ್ಲಿ ಅವರಿಗೆ ಕಾಡಬಹುದಾದ ಅಂಶ. ಚಿಕಿತ್ಸೆಗೆ ಬಗ್ಗದಿದ್ದರೆ ವೈದ್ಯಕೀಯ ಮೇಲ್ವಿಚಾರಣೆಯಿಂದ ಗರ್ಭಪಾತ ಮಾಡಿಸಬಹುದು. ಸುಖ ಪ್ರಸವವಾಗುವುದಕ್ಕೆ ಗರ್ಭಿಣಿಯ ದೇಹದಲ್ಲಿ ಏನಾದರೂ ಅಡಚಣೆ ಇದೆಯೇ ಎಂದು ಮೊದಲ ಪರೀಕ್ಷೆಯಲ್ಲಿ ನೋಡಿಕೊಳ್ಳಬೇಕು. ಸೊಂಟದಲ್ಲಿ ಮೂಳೆಗಳ ವಿಕೃತಿಯಿಂದ ಇಂಥ ಸಂಭಾವ್ಯತೆ ಬರಬಹುದು. ಇಲ್ಲವೇ ರೋಗಸ್ಥಿತಿಯಿಂದ ಅಡಚಣೆ ಬರಬಹುದು. ಇವುಗಳಿಗೆ ತಕ್ಕ ಗಮನ ಕೊಟ್ಟು ಸುಖಪ್ರಸವವಾಗಿ ತಾಯಿ ಮಗು ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದು ಪ್ರಸವಪೂರ್ವ ಎಚ್ಚರಿಕೆ ಕ್ರಮ. ಈ ಕ್ರಮದಂತೆ ಪ್ರಸವ ಆಸ್ಪತ್ರೆಯಲ್ಲಿ ನಡೆಯಬೇಕೇ ಮನೆಯಲ್ಲಿ ನಡೆಯಬೇಕೇ ಎನ್ನುವ ನಿರ್ಧಾರ ಮಾಡಬೇಕಾಗುತ್ತದೆ. ಕಷ್ಟ ಪ್ರಸವದಲ್ಲಿ ಆಸ್ಪತ್ರೆ ಸೌಕರ್ಯದ ಅವಶ್ಯಕತೆ ಜನತೆಗೆ ಬೇಕಾಗಿದೆ. 1930ರಿಂದ ಈಚೆಗೆ ಇಂಗ್ಲೆಂಡಿನಲ್ಲಿ ಮತ್ತು ಭಾರತದಲ್ಲಿ ಹೆರಿಗೆ ಆಸ್ಪತ್ರೆಗಳು, ಆಸ್ಪತ್ರೆಗೆ ಸೇರಬಯಸುವ ವ್ಯಕ್ತಿಗಳ ಸಂಖ್ಯೆಯೂ ಬಹುವಾಗಿ ಹೆಚ್ಚಿವೆ. ಎಲ್ಲ ಗರ್ಭಿಣಿಯರಿಗೂ ಆಸ್ಪತ್ರೆಯಲ್ಲೇ ಹೆರಿಗೆ ಆಗಬೇಕೆನ್ನುವುದು ಅಸಾಧ್ಯ. ಆದರೆ ಚೊಚ್ಚಲ ಬಸಿರಿನವರು, ಹಿಂದಿನ ಹೆರಿಗೆಗಳು ಕಷ್ಟವಾಗಿದ್ದವರು, ಮನೆಯಲ್ಲಿ ಹೆರಿಗೆಗೆ ಸೌಕರ್ಯಲೇಶವೂ ಇಲ್ಲದಿರುವವರು– ಇವರುಗಳಿಗೆ ಆಸ್ಪತ್ರೆಯ ದಾಖಲಾತಿ ಅವಶ್ಯಕವಾಗಿರುತ್ತದೆ. ಆಗಲೇ ಬಹು ಮಕ್ಕಳಾಗಿರುವವರಿಗೂ ಆಸ್ಪತ್ರೆಯಲ್ಲೇ ಹೆರಿಗೆ ನಡೆಯುವುದು ಸೂಕ್ತ. ಏಕೆಂದರೆ ಇವರಲ್ಲಿ ಪ್ರಸವ ಕಾಲದ ಮರಣ ಸಂಭಾವ್ಯತೆ ಬಹುವಾಗಿರುತ್ತದೆ. 3–4 ಮಕ್ಕಳಿರುವ ವ್ಯಕ್ತಿಗಳಿಗಿಂತ 6 ಮಕ್ಕಳಿರುವ ವ್ಯಕ್ತಿಗಳಲ್ಲಿ ಪ್ರಸವ ಕಾಲದ ಮರಣ ಸಂಭಾವ್ಯತೆ ಎರಡಷ್ಟೂ ಹತ್ತು ಮಕ್ಕಳಿರುವವರಲ್ಲಿ ನಾಲ್ಕರಷ್ಟೂ ಇರುವುದರಿಂದ ಆಸ್ಪತ್ರೆ ಅಂಥವರಿಗೆ ಎಷ್ಟು ಅಗತ್ಯ ಎಂದು ಗೊತ್ತಾಗುತ್ತದೆ.

ಪ್ರಸವಪೂರ್ವ ಎಚ್ಚರಿಕೆ ಗರ್ಭಸ್ಥಿತಿಯ ತರುಣದಲ್ಲೆ ದೇಹ ಪರೀಕ್ಷೆಯಿಂದ ಪ್ರಾರಂಭವಾಗಬೇಕು. ಕೊನೆಯ ಸಲ ಆದ ರಜಸ್ರಾವದ ಮೊದಲ ದಿವಸವನ್ನೂ ನಿರೀಕ್ಷಿತ ಪ್ರಸವ ದಿವಸವನ್ನೂ ವ್ಯಕ್ತಿಯ ತೂಕ, ಎತ್ತರ, ರಕ್ತದ ಒತ್ತಡವನ್ನೂ ಗುಂಡಿಗೆ ಫುಪ್ಪುಸನಾಳ ಸ್ಥಿತಿಯನ್ನೂ ಮೊದಲ ಸಾರಿಯೇ ಪರೀಕ್ಷೆ ಪ್ರಯೋಗಗಳಿಂದ ತಿಳಿದುಕೊಳ್ಳಬೇಕು. ರಕ್ತದ ಕೊರತೆ, ರಕ್ತಪಂಗಡ, ಅದರಲ್ಲೂ ಆರ್.ಎಚ್.ಪಂಗಡ ಹೆಚ್.ಐ.ವಿ. ಕಾಮಾಲೆ ಮತ್ತು ಪರಂಗಿ ರೋಗದ ಪತ್ತೆಗಾಗಿ ರಕ್ತಪರೀಕ್ಷೆಯನ್ನು ಮಾಡಬೇಕು. ಮೂತ್ರದಲ್ಲಿ ಆಲ್ಬ್ಯುಮಿನ್ ಸಕ್ಕರೆಗಳಿವೆಯೇ ಎಂದು ಪರೀಕ್ಷಿಸಬೇಕು. ಆಮೇಲೆ ನಾಲ್ಕು ವಾರಗಳಿಗೊಮ್ಮೆ ತೂಕ ಮತ್ತು ರಕ್ತದ ಒತ್ತಡವನ್ನು ಗರ್ಭಸ್ಥಿತಿಯ 20ನೆಯ ವಾರದ ತನಕವೂ 2 ವಾರಗಳಿಗೊಮ್ಮೆ 36ನೆಯ ವಾರದ ತನಕವೂ ಆಮೇಲೆ ಪ್ರಸವವಾಗುವ ತನಕ ವಾರವಾರವೂ ನೋಡುತ್ತಿರಬೇಕು. ಹೊಟ್ಟೆಯನ್ನು ಅಮುಕಿ ಪರೀಕ್ಷಿಸಿ ಗರ್ಭಕೋಶ ಎಷ್ಟು ಎತ್ತರದಲ್ಲಿದೆ ಎಂದು ಕಂಡುಕೊಳ್ಳಬೇಕು. ಗರ್ಭಕೋಶದೊಳಗೆ ಭ್ರೂಣ ಸರಿಯಾದ ಭಂಗಿಯಲ್ಲಿದೆಯೇ ಎಂದು ಗಮನಿಸಬೇಕು, ಮೊದಲ, ಎರಡನೆಯ ಹಾಗೂ ಕೊನೆಯ ತ್ರೈಮಾಸಿಕಗಳಲ್ಲಿ ನಡೆಸುವ ಸ್ಕ್ಯಾನಿಂಗ್ ಎಲ್ಲಾ ಪರೀಕ್ಷೆಗಳಿಗೆ ಪೂರಕವಾಗಿ ಒದಗುತ್ತವೆ ಎನ್ನುವುದನ್ನೂ ತಿಳಿದುಕೊಳ್ಳಬೇಕು. ಗರ್ಭಸ್ಥಿತಿಯ 34ನೆಯ ವಾರದಲ್ಲಿ ಸುಖಪ್ರಸವಾಗುವಂತಿದೆಯೇ ಶಸ್ತ್ರಕ್ರಿಯಾಪ್ರಸವದ ಅಗತ್ಯ ಬೀಳುತ್ತದೆಯೇ ಎನ್ನುವುದನ್ನು ಭ್ರೂಣದ ತಲೆಯ ಗಾತ್ರದ ಪರೀಕ್ಷೆಯಿಂದ ತಿಳಿಯಬೇಕು. ಪ್ರಸವಪೂರ್ವ ಎಚ್ಚರಿಕೆಕ್ರಮ ಗರ್ಭಾವಸ್ಥೆಯ ಬಸಿರು ನಂಜನ್ನು ಪತ್ತೆಮಾಡಲು ಅಗತ್ಯವಾದ ವಿಧಾನ. ಬಸಿರು ನಂಜು ಇರುವ ವಿಚಾರವನ್ನು ಅದಷ್ಟು ಬೇಗ ಪತ್ತೆಮಾಡಿ ಚಿಕಿತ್ಸೆಗೆ ಒಳಪಡಿಸುವುದು ಒಳ್ಳೆಯದು. ಯಾರಿಗೆ ಬಸುರು ನಂಜು ಬರುವ ಸಾಧ್ಯತೆಗಳಿದೆಯೋ ಅವರಿಗೆ ಮೂರನೆಯ ತಿಂಗಳಿನಿಂದಲೂ ಚಿಕಿತ್ಸೆ ಆರಂಭಿಸುವುದು ಉತ್ತಮ. ಪುಷ್ಟಿಭರಿತ ಆಹಾರ, ನೀರು, ವಿಶ್ರಾಂತಿ, ಮಾನಸಿಕ ನೆಮ್ಮದಿ ಮುಖ್ಯವಾಗುತ್ತವೆ.

ವಿಟಮಿನ್ ಎ, ಸಿ, ಆಯ್ಕೆ ಮಾಡಿದ ಮೇದೋ ಅಮ್ಲಗಳು ಈ ದಿಸೆಯಲ್ಲಿ ಮುಖ್ಯವಾದ ಔಷಧಿಗಳು. ಕಾಲಮೀರಿದ ಮೇಲೆ ಜ್ಞಾನ ತಪ್ಪಿ ಅದಿರುವಾಯು ಬಂದು ಸಾವೇ ಸಂಭವಿಸಬಹುದು. ವಿಷಮ ಸ್ಥಿತಿ ಗರ್ಭಾವಸ್ಥೆಯ ಉತ್ತರಾರ್ಧದಲ್ಲಿ ಅವ್ಯಕ್ತವಾಗಿ ಪ್ರಾರಂಭವಾಗುತ್ತದೆ. ತೂಕ ಅತಿ ಹೆಚ್ಚಾಗುವುದಕ್ಕೆ ಮೂತ್ರದಲ್ಲಿ ಆಲ್ಬ್ಯುಮಿನ್ ಹೋಗುವುದು, ಕೈ ಕಾಲು ಮುಖ, ಹೊಟ್ಟೆ ಊತ ಇದರ ಸೂಚನೆಗಳು ಏರಿದ ಚಿಪ್ಪು, ಕಣ್ಣಕತ್ತಲೆ ನಂಜು ಹೆಚ್ಚಾದ ಸೂಚನೆ. ಅನೇಕ ವೇಳೆ ಇದೇ ವಿಷಮ ಸ್ಥಿತಿಯ ಪ್ರಾಥಮಿಕ ಗುರುತಾಗಿರುತ್ತದೆ ಮತ್ತು ತೂಕದ ವಿಷಯದಲ್ಲಿರುವಂತೆಯೇ ಕಾಲಕಾಲದ ದೇಹ ಪರೀಕ್ಷೆಯಿಂದಲೊ ಅಕಸ್ಮಾತ್ತಾಗಿಯೋ ತಿಳಿದುಬರುವ ಸ್ಥಿತಿಯಾಗಿರುತ್ತದೆ. ಇನ್ನು ಮುಂದಿನ ಘಟ್ಟ, ಗರ್ಭಾವಸ್ಥೆಯ ವಿಷಮ ಪರಿಸ್ಥಿತಿಯನ್ನು ವೈದ್ಯರ ನೇರ

ನಿರ್ದೇಶನದಲ್ಲಿ ಮನೆಯಲ್ಲೇ ಸೂಕ್ತ ವಿಶ್ರಾಂತಿ ಕೊಟ್ಟು ಚಿಕಿತ್ಸಿಸಬಹುದು. ಪರಿಸ್ಥಿತಿ ತೀವ್ರವಾಗಿದ್ದರೆ ಆಸ್ಪತ್ರೆಗೇ ಸೇರಿಸಬೇಕಾಗುತ್ತದೆ. ಕಾಲಮೀರಿ ವಿಷಮಸ್ಥಿತಿ ಅದಿರುವಾಯುವಿನ ಘಟ್ಟ ತಲುಪಿದ್ದರೆ ಶೇ.30 ಮರಣವನ್ನಪ್ಪುತ್ತಾರೆ. ಈ ಸ್ಥಿತಿಯ ಕಾರಣದ ಅರಿವು ಇನ್ನೂ ಹೆಚ್ಚುವವರೆಗೂ ಹೀಗೆ ಇರುತ್ತದೆ ಎಂಬುದಾಗಿಯೂ ಅಂದಾಜು ಮಾಡಲಾಗಿದೆ. ನಂಜು ಹತೋಟಿಯಲ್ಲಿಲ್ಲದಿದ್ದರೆ ಮಗುವನ್ನು ತೆಗೆಯಲೇಬೇಕು. ಗರ್ಭಿಣಿ ಆರ್.ಎಚ್. ಋಣ ಪ್ರತಿಯಕಾಯ (ಆ್ಯಂಟಿ ಆರ್. ಎಚ್. ಅಗ್ಲೂಟಿನೆನ್) ಉತ್ಪತ್ತಿಯಾಗಿ ಮಾಸು/ಕಸದ ಮೂಲಕ ಭ್ರೂಣದ ದೇಹಕ್ಕೆ ತಲುಪಿ ಭ್ರೂಣದ ಕೆಂಪುರಕ್ತಕಣ (ಕೆಂಗಣ) ನಾಶವಾಗುತ್ತದೆ. ಇದರಿಂದ ಶಿಶುವಿನಲ್ಲಿ ರಕ್ತಹೀನತೆ, ಕಾಮಾಲೆಗಳು ಉಂಟಾಗುತ್ತವೆ. ಮೊದಲ ಗರ್ಭಾವಸ್ಥೆಯಲ್ಲಿ ತಾಯಿ ತಂದೆಯವರಿಗೆ ಆಗುವ ಮಗುವಿಗೆ ಯಾವ ಅಪಾಯವೂ ಇಲ್ಲ.

ಆದರೆ ಮುಂದಿನ ಗರ್ಭಾವಸ್ಥೆಗಳು ಸಾಮಾನ್ಯವಾಗಿ ಗರ್ಭಪಾತದಿಂದಲೋ ಸತ್ತಮಗುವಿನ ಜನನದಿಂದಲೋ ಅಥವಾ ಹುಟ್ಟಿದ ಮಗು ರಕ್ತಹೀನತೆ ಕಾಮಾಲೆಗಳ ತೀವ್ರತೆಯಿಂದ ಸುಮಾರು ಒಂದು ವಾರದಲ್ಲೇ ಮೃತವಾಗುವುದರಿಂದಲೋ ಪರ್ಯವಸಾನವಾಗುತ್ತದೆ. ಹುಟ್ಟಿದ ಶಿಶುವಿನ ರಕ್ತವನ್ನೆಲ್ಲ ತೆಗೆದು ಅದರ ದೇಹಕ್ಕೆ ಒಗ್ಗುವ ಬೇರೆ ರಕ್ತವನ್ನು ತುಂಬಿ ಶಿಶು ಜೀವಂತವಾಗಿರುವಂತೆ ಮಾಡಲು ಪ್ರಯತ್ನಿಸುತ್ತಾರೆ. ಶಿಶು ಗರ್ಭದಲ್ಲಿ ಇರುವಾಗಲಾದರೂ ಈ ಪ್ರಯೋಗ ಮಾಡಬಹುದು. ಶಿಶುವಿಗೆ ಮಾತ್ರವಲ್ಲದೆ ಈ ಪರಿಸ್ಥಿತಿ ತಾಯಿಗೂ ಅನಾನುಕೂಲವಾಗಿರುತ್ತದೆ. ತಾಯಿಗೆ ಆರ್.ಎಚ್. ಧನಪಂಗಡದ ರಕ್ತವನ್ನು ಕೊಡುವಂತಿಲ್ಲ. ಪರಿಸ್ಥಿತಿಯ ಅರಿವಿಲ್ಲದೆ ಹಾಗೇನಾದರೂ ಕೊಟ್ಟರೆ, ತಾಯಿಯ ಜೀವಕ್ಕೆ ಅಪಾಯವಾಗಬಹುದು. ಕ್ಷಯರೋಗ ತಾಯಿಗೆ ಮಾರಕವಾಗಬಹುದು. ಲೈಂಗಿಕ ರೋಗಗಳು ಶಿಶುವಿಗೆ ಮಾರಕವಾಗಿರುತ್ತವೆ. ಮೂತ್ರಪಿಂಡ ರೋಗಗಳೂ ಗರ್ಭಾವಸ್ಥೆಯ ವಿಷಮಪರಿಸ್ಥಿತಿಗಳೂ ತಾಯಿ ಮಗು ಇಬ್ಬರಿಗೂ ಮಾರಕವಾಗಿತ್ತವೆ. ಕೀಲು ಗಂಟು ನೋವು ಇರುವವರಿಗೆ ಗರ್ಭಾವಸ್ಥೆಯ ಕಾಲದಲ್ಲಿ ಯೋನಿಯಿಂದ ರಕ್ತಸ್ರಾವವಾಗಬಹುದು. ಇದು ಗರ್ಭಪಾತದ ಚಿಹ್ನೆ ಇಲ್ಲವೇ ಕಷ್ಟ ಪ್ರಸವದ ಚಿಹ್ನೆಯಾಗಿದ್ದು ಎಚ್ಚರಿಕೆ ತೆಗೆದುಕೊಳ್ಳಬೇಕಾದ ಪ್ರಸಂಗವಾಗಿರುತ್ತದೆ. ಗರ್ಭಾವಸ್ಥೆಯಲ್ಲಿ ಅವಳಿತ್ರಿವಳಿ ಮಕ್ಕಳಿರುವ ಸಾಧ್ಯತೆ ಅಪರೂಪವೇನಲ್ಲ, ಅಂಡಾಶಯದಿಂದ ಒಂದು ಕಾಲದಲ್ಲಿ ಒಂದೇ ಅಂಡಾಣು ವೃದ್ಧಿಯಾಗಿ ಹೊರಬೀಳುವ ಬದಲು 2–3 ಅಂಡಾಣುಗಳು ಏಕಕಾಲಿಕವಾಗಿ ಹೊರಬೀಳುವುದರಿಂದ ಅವಳಿತ್ರಿವಳಿಗಳಾಗುವ ಸಂಭಾವ್ಯತೆ ಉಂಟಾಗುತ್ತದೆ. ಭ್ರೂಣಾಣು ಬೆಳೆದು ಒಂದು ಶಿಶುವಾಗುವ ಬದಲು, ಪ್ರಾರಂಭದಲ್ಲಿ ಭ್ರೂಣಾಣು ಇಬ್ಭಾಗವಾದಾಗ ಆ ಎರಡೂ ಬೇರೆ ಬೇರೆ ಶಿಶುಗಳಾಗಿ ಬೆಳೆಯುವುದರಿಂದಲೂ ಅವಳಿ ಸ್ಥಿತಿಗೆ ಕಾರಣವಾಗಿದೆ. ಆದರೆ ಕೆಲವರಲ್ಲಿ ಕೆಲವು ಸಲ ಮಾತ್ರ ಹೀಗೆ ಏಕೆ ಆಗುತ್ತದೆ ಎನ್ನುವುದು ಗೊತ್ತಿಲ್ಲ. ಗರ್ಭಾವಸ್ಥೆಯಲ್ಲಿ ಭ್ರೂಣ ಸರಿಯಾಗಿ ಬೆಳೆಯದೆ ಕಾರಣಾಂತರದಿಂದ ಅಕ್ರಮ ಬೆಳವಣಿಗೆಯಾಗಿ ಅಂಗವಿಕಲವಾದ ಮಗು ಹುಟ್ಟಬಹುದು. ಸ್ವಲ್ಪ ಕಾಲದ ಹಿಂದೆ ಥಾಲಿಡೋಮೈಡ್ ಎಂಬ ವೇದನಾಶಕ ಔಷಧಿಯನ್ನು ಗರ್ಭಿಣಿಯರು ಸೇವಿಸುವ ರೂಢಿ ಇದ್ದಾಗ ಇಂತ ವ್ಯತ್ಯಯಗಳು ಉದ್ಭವಿಸಿ ಅನೇಕ ಊನಗಳುಳ್ಳ ಶಿಶುಗಳ ಜನನವಾಗುತ್ತಿತ್ತು. ಗರ್ಭಾವಸ್ಥೆಯ ಕಾಲದಲ್ಲಿ ತಾಯಿಗೆ ರೂಬೆಲ್ಲ ಎಂಬ ಸೋಂಕಿನ ರೋಗ ಉಂಟಾದರೂ ಹೀಗೆ ಭ್ರೂಣದಲ್ಲಿ ಅಕ್ರಮ ಬೆಳವಣಿಗೆ ಮತ್ತು ಅಂಗವಿಕಲತೆ ಕಂಡುಬರುತ್ತವೆ. ಗರ್ಭಾವಸ್ಥೆಯಲ್ಲಿ ಸ್ತ್ರೀ ಅಗಾಧ ವಿಕಿರಣಪಟುತ್ವಕ್ಕೆ ಒಳಗಾದಾಗಲೂ ಇಂತಹ ಅಕ್ರಮಗಳುಂಟಾಗುತ್ತವೆ. 1945ರಲ್ಲಿ ಜಪಾನಿನ ಹಿರೋಷಿಮ, ನಾಗಸಾಕಿಗಳಲ್ಲಿ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಪ್ರಥಮವಾಗಿ ಉಪಯೋಗಿಸಿದ ಪರಮಾಣು ಬಾಂಬಿನ ಸ್ಫೋಟನೆಯಿಂದಾಗಿ ಅಗಾಧ ವಿಕಿರಣಪಟುತ್ವಕ್ಕೆ ತುತ್ತಾಗಿ ಜನಿಸಿದ ಸಹಸ್ರಾರು ಅಂಗವಿಕಲ ಮಕ್ಕಳನ್ನು ಯಾರೂ ಮರೆಯಲಾರರು.

ಗರ್ಭಾವಸ್ಥೆಯ ಅವಧಿ 40 ವಾರಗಳು ಎಂದು ಮೇಲೆ ವಿವರಿಸಿದ್ದರೂ ಶೇ.5 – ಶೇ.8 ರಷ್ಟು ಪ್ರಸಂಗಗಳಲ್ಲಿ ಅವಧಿಗೆ ಮುಂಚಿತವಾಗಿಯೇ ಗರ್ಭಾವಸ್ಥೆ ಕೊನೆಗೊಂಡು ಅವಸರದ ಹೆರಿಗೆ ಆಗುತ್ತದೆ. ಹೀಗೆ ಅವಸರವಾಗಿ ಹುಟ್ಟಿದ ಅನೇಕ ಮಕ್ಕಳು ಸತ್ತೇ ಹುಟ್ಟುತ್ತವೆ. ಇಲ್ಲವೇ ಶೀಘ್ರದಲ್ಲೇ ಸತ್ತು ಹೋಗುತ್ತವೆ. ಗರ್ಭಾವಸ್ಥೆಯ ಅವಧಿ 28 ವಾರಗಳನ್ನು ಮೀರಿ 40 ವಾರಗಳನ್ನು ಸಮೀಪಿಸಿದಂತೆ ಹುಟ್ಟುವ ಮಕ್ಕಳು ಜೀವಂತವಾಗಿರುವ ಸಂಭಾವ್ಯತೆ ಹೆಚ್ಚುತ್ತದೆ. ಗರ್ಭಾವಸ್ಥೆಯ ಅವಧಿ ಈ ಮಿತಿಯಲ್ಲಿ ಎಷ್ಟೇ ಇರಲಿ, ಹುಟ್ಟಿದ ಮಗು 2 ಕೆ.ಜಿ.ಗಿಂತ ಕಡಿಮೆ ಇದ್ದರೆ ಅದನ್ನು ಅವಸರದಲ್ಲಿ ಹುಟ್ಟಿದ ಮಗು ಎಂದು ಪರಿಗಣಿಸಬೇಕೆಂದು ಎಲ್ಲ ದೇಶದವರೂ ಒಪ್ಪಿದ್ದಾರೆ. ಗರ್ಭಾವಸ್ಥೆಯ ಅಕಾಲಿಕ ಅಂತ್ಯ ತಾಯಿಯ ದೇಹದಾರ್ಢ್ಯ, ಪೌಷ್ಟಿಕಸ್ಥಿತಿ ಇವನ್ನು ಅವಲಂಬಿಸಿವೆ. ಕುಳ್ಳ ರೋಗಿಷ್ಠ ಹೆಂಗಸು, ಎತ್ತರವಾಗಿ ಆರೋಗ್ಯವಾಗಿರುವ ಹೆಂಗಸಿಗಿಂತ 6ರಷ್ಟು ಹೆಚ್ಚು ಸಂದರ್ಭಗಳಲ್ಲಿ ಗರ್ಭಾವಸ್ಥೆಯ ಅಕಾಲಿಕ ಅಂತ್ಯವನ್ನು ತೋರುತ್ತಾಳೆ.

(ಎಸ್.ಆರ್.ಆರ್.)

**ಗರ್ಭಾವಸ್ಥೆ (ಪ್ರಾಣಿಗಳಲ್ಲಿ) :** ಮರಿಗಳಿಗೆ ಮೊಲೆ ಹಾಲೂಡಿಸುವ ಪ್ರಾಣಿಗಳನ್ನು, ಎಂದರೆ ಸಸ್ತನಿಗಳನ್ನು, ಕುರಿತು ಗರ್ಭಾವಸ್ಥೆ ಎಂಬ ಪದದ ಬಳಕೆ ಉಂಟು. ಇಂಥ ಪ್ರಾಣಿಗಳಲ್ಲಿ ಸಹ ಗರ್ಭಾವಸ್ಥೆಯ ಅವಧಿಯನ್ನು ಮನುಷ್ಯರಲ್ಲಿ ವ್ಯಾಖ್ಯಾನಿಸಿರುವಂತೆಯೇ ವ್ಯಾಖ್ಯಾನಿಸಲಾಗಿದೆ: ಗರ್ಭದಲ್ಲಿ ಭ್ರೂಣವುಂಟಾಗಿ ಪಿಂಡವಾಗಿ ಬೆಳೆದು ಅದು ಮರಿಯಾಗಿ ಹುಟ್ಟುವವರೆಗಿನ ಕಾಲ. ಯಾವುದೇ ಪ್ರಾಣಿಯಲ್ಲಿ ನಿಷೇಚನ ಯಾವಾಗ ನಡೆಯಿತು ಎಂಬುದನ್ನು ಕರಾರುವಾಕ್ಕಾಗಿ ಹೇಳುವುದು ಕಷ್ಟ. ಆದ್ದರಿಂದ ಇಂಥಲ್ಲಿ ಋತು ದಿನದಿಂದ ಲೆಕ್ಕಹಾಕಿ ಗರ್ಭಾವಧಿಯನ್ನು ನಿರ್ಧರಿಸಬೇಕು. ಒಂದೊಂದು ಪ್ರಾಣಿಯ ಗರ್ಭಾವಸ್ಥೆಯ ಕಾಲ ಒಂದೊಂದು ಎಂಬುದನ್ನು ಮುಂದಿನ ಯಾದಿಯಲ್ಲಿ ನೋಡಬಹುದು.

| ಪ್ರಾಣಿಯ ಹೆಸರು | | ಗಬ್ಬದ ಅವಧಿ (ದಿನಗಳಲ್ಲಿ) |
|---|---|---|
| ಕತ್ತೆಕಿರುಬ | ... | 110 |
| ಮೀನ್ಮುಳ್ಳಿ | ... | 338–358 |
| ಮುಳ್ಳು ಹಂದಿ– | ... | |
| ಯುರೋಪಿನ | | 35–40 |
| ಹಂದಿ ಮೀನು | ... | 276 |
| 1 ಎಮ್ಮೆ | ... | 275 |
| 2 ಕಾಡೆಮ್ಮೆ | ... | 270 |
| 3 ದನ | ... | 284 (260–300) |
| 4 ಕುರಿ | ... | 148 (143–159) |
| 5 ಮೇಕೆ | ... | 151 (145–157) |
| 6 ಕುದುರೆ | ... | 337 (320–356) |
| 7 ಕತ್ತೆ | ... | 365 |
| 8 ಒಂಟೆ | ... | 410 (370–440) |
| 8ಎ ಹಂದಿ | ... | 113 (110–120) |
| 9ಬಿ ಖಡ್ಗಮೃಗ (ಆಫ್ರಿಕದ) | ... | 530–550 |
| 9 ಜಿರಾಫೆ | ... | 395–425 |
| 9ಎ ನೀರಾನೆ | ... | 237–250 |
| 10 ಜಿಂಕೆ | ... | 197–220 |
| 11 ಹಿಮ ಸಾರಂಗ | ... | 215–224 |
| 12 ಬೆಕ್ಕು | ... | 63 (55–69) |
| ನಾಯಿ | ... | 61 (58–63) |
| 15 ಕಾಡು ಬೆಕ್ಕು | ... | 92–95 |
| 16 ಚಿರತೆ | ... | 90–93 |
| 17 ಸಿಂಹ | ... | 108 (105–113) |
| 18 ಹುಲಿ | ... | 113–105 |
| 19 ರಕೂನ್ | ... | 63 |
| 19ಎ ಸೀಲ್ ಪ್ರಾಣಿ (ಉತ್ತರದ ತುಪ್ಪುಳು ಪ್ರಾಣಿ) | | 350 |
| 20 ಇಲಿ | ... | 22 (21.5–22) |
| 20 ನೀರು ನಾಯಿ–ಕೆನಡ | ... | 62 |
| 21 ಕರಡಿ | ... | 210 |
| 21 ಗಿನಿ ಹಂದಿ | ... | 68 |
| 22 ಮೊಲ | ... | 38 |
| 23 ತಿಮಿಂಗಿಲ | ... | 365 (360–480) |
| 24 ಆನೆ | ... | 600–660 |
| 25 ಆನೆ–ಏಷ್ಯದ್ದು | ... | 645 (520–730) |
| 26 ಕೋತಿ | ... | 210 |

| | | | |
|---|---|---|---|
| 27 | ಕೋತಿ–ರ್ಹೀಸಸ್ | ... | 164 (146–180) |
| 28 | ಚಿಂಪಾಂಜಿ ... | | 237 (216–261) |
| 29 | ಬಾವಲಿ ... | | 50 |
| 30 | ಕಾಂಗರೂ–ದೊಡ್ಡದು ... | | 30–40 |
| 31 | ಒಪಾಸಮ್ (ವರ್ಜೀನಿಯದ) | | 181 (502–2.5) |

ಸಸ್ತನಿಗಳಲ್ಲೆಲ್ಲ ಅತಿಕಡಿಮೆ ಗಬ್ಬದ ಅವಧಿ ವರ್ಜೀನಿಯದ ಒಪಾಸಮ್‌ನಲ್ಲಿ ಕಂಡುಬಂದರೆ. ಅತಿ ದೀರ್ಘಾವಧಿ ಭಾರತದ ಆನೆಗಳಲ್ಲಿ (ಸುಮಾರು 22 ತಿಂಗಳುಗಳು) ಕಾಣಬಹುದು. ಈ ವ್ಯತ್ಯಾಸದ ಕಾರಣ ನಿಖರವಾಗಿ ಇನ್ನೂ ತಿಳಿದು ಬಂದಿಲ್ಲ. ಪ್ರಾಣಿಗಳು ವಿಕಾಸವಾದಂತೆಲ್ಲ ಅವುಗಳ ದೇಹಸ್ಥಿತಿಗೆ ಅನುಗುಣವಾಗಿ ಗರ್ಭಾವಸ್ಥೆ ಹೊಂದಿಕೊಂಡಿರಬಹುದು. ಪಿಂಡದ ಬೆಳವಣಿಗೆ ಹಾಗೂ ಅದರ ಗಾತ್ರ ಗಬ್ಬದ ಅವಧಿಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಚಿಕ್ಕ ಚಿಕ್ಕ ಪ್ರಾಣಿಗಳಲ್ಲಿ ಗಬ್ಬದ ಅವಧಿ ಕಡಿಮೆ: ದೈತ್ಯಾಕಾರದ ಪ್ರಾಣಿಗಳಲ್ಲಿ ಹೆಚ್ಚು. ಈ ನಿಯಮಕ್ಕೆ ಅಪವಾದದ ಪ್ರಾಣಿಗಳು–ಗಿನಿಹಂದಿ ಹಾಗೂ ಈ ಪ್ರಾಣಿಯ ಸಂಬಂಧಿಗಳಾದ ದಕ್ಷಿಣ ಅಮೆರಿಕದ ಮೂಷಕಗಳು. ಇವು ಗಾತ್ರದಲ್ಲಿ ಚಿಕ್ಕವಾದರೂ ಇವುಗಳ ಗರ್ಭಾವಸ್ಥೆ ಸಾಕಷ್ಟು ದೀರ್ಘವಾಗಿಯೇ ಇರುವುದು. ಹೆಚ್ಚು ದಿವಸ ಗರ್ಭದಲ್ಲಿದ್ದು ಹುಟ್ಟುವ ಮರಿಗಳು ಚೆನ್ನಾಗಿ ಬೆಳೆದಿರುತ್ತವೆ.

**ಕಾರ್ಪಸ್ ಲೂಟಿಯಮಿನ ಪಾತ್ರ:** ಪ್ರಾಣಿ ಗಬ್ಬವಾದಾಗ ಅದರ ಗರ್ಭಕೋಶ, ಅಂಡಾಶಯ ಮತ್ತು ದೇಹದ ಅಂಗಾಂಶಗಳೆಲ್ಲ ಪ್ರಭಾವಿತವಾಗುತ್ತವೆ. ದೇಹದ ಹೊರಗೆ ಒಳಗೆ ಅನೇಕ ರೀತಿಯ ಬದಲಾವಣೆಗಳು ಆಗುತ್ತವೆ. ಅಂಡಾಶಯದಲ್ಲಿ ಕಾರ್ಪಸ್ ಲೂಟಿಯಮ್ ಕಾಣಿಸಿಕೊಳ್ಳುತ್ತದೆ. ಇದು ಇರುವವರೆಗೂ ಗಬ್ಬ ಮುಂದುವರಿಯುವುದು. ಇದು ಒಂದು ಅಂತಃಸ್ರಾವ ಗ್ರಂಥಿಯ ರೀತಿಯಲ್ಲಿ ಕೆಲಸಮಾಡುವುದು. ಇದರಿಂದ ಪ್ರೋಜೆಸ್ಟಿರಾನ್ ಉತ್ಪತ್ತಿಯಾಗುತ್ತದೆ. ಇದು ಇರುವವರೆಗೂ ಪಿಂಡ ಗರ್ಭದಲ್ಲಿಯೇ ಇರುತ್ತದೆ. ಕಾರ್ಪಸ್ ಲೂಟಿಯಮ್ ಸಂಕುಚಿತವಾದಾಗ ಪ್ರೋಜೆಸ್ಟಿರಾನಿನ ಉತ್ಪಾದನೆ ನಿಂತುಹೋಗುವುದು. ಆಗ ಪ್ರಾಣಿ ಈಯುತ್ತದೆ (ಮರಿಹಾಕುತ್ತದೆ). ಆದ್ದರಿಂದ ಕಾರ್ಪಸ್ ಲೂಟಿಯಮಿನ ಕ್ರಿಯಾಶೀಲತೆಯ ವೇಳೆಯನ್ನು ಗರ್ಭಾವಧಿಯೆನ್ನಬಹುದು. ಒಂದು ವೇಳೆ ಕೃತಕ ರೀತಿಯಲ್ಲಿ ಪ್ರೋಜೆಸ್ಟಿರಾನನ್ನು ದೇಹದೊಳಗೆ ಸೇರಿಸುತ್ತಾ ಹೋದರೆ ಪ್ರಾಣಿಯ ಮರಿಹಾಕುವ ಕಾರ್ಯ ಮುಂದೆ ಹೋಗುವುದಲ್ಲದೆ ಪಿಂಡ ಬೆಳೆಯುತ್ತಲೇ ಹೋಗುತ್ತದೆ. ಕೆಲವು ದಿವಸಗಳು ಮಾತ್ರ ಈ ರೀತಿ ಮಾಡಿದರೆ ಪಿಂಡಕ್ಕೆ ಅಪಾಯವೇನೂ ಆಗುವುದಿಲ್ಲ. ಆದರೆ ಬಹಳ ದಿವಸಗಳವರೆಗೆ ಪ್ರೋಜೆಸ್ಟಿರಾನನ್ನು ಉಪಯೋಗಿಸುತ್ತ ಹೋದರೆ ಪಿಂಡ ಸತ್ತುಹೋಗುವುದು. ಆದ್ದರಿಂದ ಗರ್ಭಾವಸ್ಥೆಯಲ್ಲಿ ಕಾರ್ಪಸ್ ಲೂಟಿಯಮಿನ ಪಾತ್ರ ಬಹಳ ಪ್ರಧಾನವಾದುದು. ಆದರೆ ಎಲ್ಲ ಪ್ರಾಣಿಗಳಲ್ಲಿಯೂ ಕಾರ್ಪಸ್ ಲೂಟಿಯಮಿನ ಅವಶ್ಯಕತೆ ಅಷ್ಟಾಗಿರದು. ಪೂರ್ವ ಆಫ್ರಿಕದಲ್ಲಿ ಕಾಣಬರುವ ನಿಕ್ಟೀರಿಯಸ್ ಜಾತಿಯ ಬಾವಲಿಗಳಲ್ಲಿ ಪ್ರಾಣಿ ಗರ್ಭಾವಸ್ಥೆಯಲ್ಲಿರುವಾಗಲೆ ಕಾರ್ಪಸ್ ಲೂಟಿಯಮ್ ಸಂಕುಚಿತವಾಗುತ್ತದೆ. ಆದರೂ ಗಬ್ಬ ಮುಂದುವರಿಯುತ್ತದೆ. ಸಾಕುಪ್ರಾಣಿಗಳಾದ ಕುದುರೆಗಳಲ್ಲಿಯೂ ಇದೇ ಸ್ಥಿತಿ ಕಾಣಬರುತ್ತದೆ. ಕಾರ್ಪಸ್ ಲೂಟಿಯಮಿನ ಕಾರ್ಯವನ್ನು ಬೇರೆ ಅಂತಃಸ್ರಾವ ಗ್ರಂಥಿಗಳು ವಹಿಸಿಕೊಂಡು ಪ್ರೋಜೆಸ್ಟಿರಾನನ್ನು ಉತ್ಪತ್ತಿಮಾಡುವುದರಿಂದ ಗಬ್ಬ ಮುಂದುವರಿಯುತ್ತದೆ. ಕೆಲವು ಪ್ರಾಣಿಗಳ ಗರ್ಭಾವಸ್ಥೆಯಲ್ಲಿ ಕಾರ್ಪಸ್ ಲೂಟಿಯಮ್ ಇರಲೇಬೇಕು. ಇಲ್ಲದಿದ್ದರೆ ಅಥವಾ ಅದನ್ನು ತೆಗೆದುಹಾಕಿದರೆ ಚಿಟ್ಟಿಲಿ ಮತ್ತು ಮೇಕೆಗಳಲ್ಲಿ ಪಿಂಡವು ಇಂಗಿ ಹೋಗುವುದು. ಪಿಂಡ ತಳವೂರಿದ ಬಳಿಕ ಕೋತಿ ಮತ್ತು ಮನುಷ್ಯರಲ್ಲಿ ಕಾರ್ಪಸ್ ಲೂಟಿಯಮನ್ನು ತೆಗೆದುಹಾಕಿದರೂ ಯಾವ ಬಾಧಕವೂ ಆಗುವುದಿಲ್ಲ.

ಕಾಡಿನಲ್ಲಿ ವಾಸಿಸುವ ಪ್ರಾಣಿಗಳಲ್ಲಿ ಗಬ್ಬದ ಸ್ಥಿತಿ ಇನ್ನೂ ವಿಚಿತ್ರ. ಅವು ಯಾವ ತಾಣದಲ್ಲಿಯೂ ನಿಲ್ಲದೆ ಕಾಡಿನಲ್ಲೆಲ್ಲ ಓಡಾಡುತ್ತವೆ. ಕೆಲವಾರು ಪ್ರಾಣಿಗಳು ಗುಹೆ ಮತ್ತು ಬಿಲಗಳಲ್ಲಿ ವಾಸಿಸುತ್ತವೆ. ಯಾವ ತಾಣದಲ್ಲಿಯೂ ಇರದ ಪ್ರಾಣಿಗಳಲ್ಲಿ ಗಬ್ಬದ ಅವಧಿ ದೀರ್ಘವಾದುದು. ಹುಟ್ಟಿದ ಮರಿಗಳು ಸಾಕಷ್ಟು ಬಲಿಷ್ಠವಾಗಿರುತ್ತವೆ. ಆದರೆ ಗುಹೆ, ಬಿಲಗಳಲ್ಲಿ ವಾಸಿಸುವ ಇಲಿ ಮುಂತಾದ ಮೂಷಕಗಳ ಮರಿಗಳು ಹುಟ್ಟಿದಾಗ ಬಹಳ ಎಳೆಯ ಸ್ಥಿತಿಯಲ್ಲಿಯೇ ಇರುತ್ತವೆ. ಕರಡಿ ಮರಿಗಳೂ ಹುಟ್ಟಿದಾಗ ಬಹಳ ಎಳಸಾಗಿರುತ್ತವೆ. ಗಬ್ಬದ ಅವಧಿ ಕಾಂಗರೂ ಮುಂತಾದ ಮಾರ್ಸ್ಯೂಪಿಯಲ್‌ಗಳಲ್ಲಿ ಕಡಿಮೆ. ಇವುಗಳ ಮರಿಗಳು ಹುಟ್ಟಿದಾಗ ಬಹಳ ಎಳಸಾಗಿರುತ್ತವೆ. ಮರಿಗಳ ಬೆಳವಣಿಗೆ ಪೂರ್ಣವಾಗಿರುವುದಿಲ್ಲ. ಆದ್ದರಿಂದ ಮರಿಗಳು ಹುಟ್ಟಿದಮೇಲೆ ಅವನ್ನು ತಾಯಿ ಪ್ರಾಣಿ ತನ್ನ ಒಡಲಿನ ಹೊರಭಾಗದಲ್ಲಿ ಕಾಣಬರುವ ಮರಿಚೀಲದಲ್ಲಿ ಸಾಕುತ್ತದೆ. ಈ ಚೀಲದಲ್ಲಿ ಮರಿಗಳ ಬೆಳವಣಿಗೆ ಮುಂದುವರಿದು ಅವು ಪೂರ್ಣಾವಸ್ಥೆಯನ್ನು ತಲಪುತ್ತವೆ. ಕೆಲವೊಂದು ಜಾತಿಯ ಪ್ರಾಣಿಗಳಲ್ಲಿ ಈ ರೀತಿಯ ಮರಿಚೀಲ ಕಂಡುಬರುವುದಿಲ್ಲ. ಇಂಥ ಪ್ರಾಣಿಗಳಲ್ಲಿ ಹುಟ್ಟಿದ ಎಳೆಮರಿಗಳು ತಮ್ಮ ಕಾಲುಗಳಿಂದ ತಾಯಿಯ ಎದೆಭಾಗವನ್ನು ತಬ್ಬಿಕೊಂಡಿದ್ದು ಯಾವಾಗಲೂ ಮೊಲೆತೊಟ್ಟನ್ನು ಬಾಯಿಂದ ಹಿಡಿದುಕೊಂಡಿರುತ್ತವೆ. ಉದಾ: ಒಪಾಸಮ್, ಮಾರ್ಮೊಸಾಟ್, ಅಮೆರಿಕೆಯ ಬಯಲಿನ ಇಲಿ ಮತ್ತು ಕಾಡಿನ ಇಲಿಗಳು.

**ಭ್ರೂಣದ ಒಳನಾಟಿಕೆ ಹಾಗೂ ಗರ್ಭಾವಧಿ:** ಕೆಲವಾರು ಜಾತಿಯ ಪ್ರಾಣಿಗಳಲ್ಲಿ ಭ್ರೂಣದ ಬೆಳವಣಿಗೆ ಕೆಲಕಾಲ ನಿಂತುಹೋಗುತ್ತದೆ. ಇದರಿಂದ ಗಬ್ಬದ ಅವಧಿ ಹೆಚ್ಚಾಗುತ್ತದೆ. ಇದು ತುಪ್ಪಳಗೂದಲ ಹೊದಿಕೆಯುಳ್ಳ ಮಾಂಸಗಳಲ್ಲಿ ಸಾಮಾನ್ಯ. ಉದಾಹರಣೆಗೆ, ತುಪ್ಪಳಿಗ ಮತ್ತು ವೀಸಲ್. ಯುರೋಪಿನ ಬ್ಯಾಡ್ಜರ್ ಮತ್ತು ಅಮೆರಿಕದಲ್ಲಿನ ತುಪ್ಪಳಿಗ ಜುಲೈ ಮತ್ತು ಆಗಸ್ಟ್‌ನಲ್ಲಿ ಗಬ್ಬವಾಗುತ್ತವೆ. ಭ್ರೂಣ ಕೆಲಕಾಲ ಮಾತ್ರ ಬೆಳೆದು ಮುಂದೆ ಜನವರಿ ತಿಂಗಳಿನವರೆಗೆ ತನ್ನ ಬೆಳವಣಿಗೆಯನ್ನು ಸ್ಥಗಿತಗೊಳಿಸುತ್ತದೆ. ಆಗ ಭ್ರೂಣ ಗರ್ಭಕೋಶದೊಳಗೆ ನಾಟುವುದಿಲ್ಲ. ಜನವರಿ ತಿಂಗಳಲ್ಲಿ ಭ್ರೂಣ ಒಳನಾಟಿಕೊಂಡು ಬೆಳೆದು ಮಾರ್ಚ್ ತಿಂಗಳಿನಲ್ಲಿ ಈ ಪ್ರಾಣಿಗಳು ಮರಿಹಾಕುವುವು. ಇಲ್ಲಿ ಗಬ್ಬದ ಅವಧಿ 250 ದಿನಗಳಾದರೂ ಭ್ರೂಣ/ಪಿಂಡ ಬೆಳೆಯಲು ಬೇಕಾಗುವ ಅವಧಿ ಮಾತ್ರ ಕೇವಲ 50 ದಿನಗಳು. ಈ ಪ್ರಾಣಿಗಳನ್ನು ಗಬ್ಬವಾದ ಮೇಲೆ ಪ್ರಾಯೋಗಿಕವಾಗಿ ಬಿಸಿಲಿನಲ್ಲಿ ಬಿಟ್ಟರೆ ಗಬ್ಬ ಮೂರು ತಿಂಗಳಿನಷ್ಟು ಕಡಿಮೆಯಾಗುತ್ತದೆ. ಬಿಸಿಲಿನ ಪ್ರಭಾವದಿಂದ ಚೇತನಗೊಂಡ ಕಾರ್ಪಸ್ ಲೂಟಿಯಮ್ ಪಿಟ್ಯುಟರಿ ಗ್ರಂಥಿಯನ್ನು ಪ್ರಚೋದಿಸಿ ಅದರಿಂದ ಹಾರ್ಮೋನ್ ಉತ್ಪತ್ತಿಯಾಗುವಂತೆ ಮಾಡುವುದು. ಇದೇ ರೀತಿಯ ಗಬ್ಬದ ಸ್ಥಿತಿ ಆರ್ಮಡಿಲೊ ಮತ್ತು ರೋ ಜಿಂಕೆಗಳಲ್ಲಿ ಸಹ ಕಾಣಬರುತ್ತದೆ. ಕರಡಿ ಮತ್ತು ಸೀಲ್‌ಗಳಲ್ಲಿಯೂ ಇದೇ ರೀತಿ ಇರಬಹುದೆಂದು ನಂಬಲಾಗಿದೆ. ಈ ಒಳನಾಟಿಕೆ ನಿಧಾನವಾಗುವುದರಿಂದ ಚಿಟ್ಟಿಲಿ ಮುಂತಾದ ಚಿಕ್ಕ ಮೂಷಕಗಳಲ್ಲಿ ಗಬ್ಬ ಮುಂದೆ ಹೋಗುತ್ತದೆ. ತಾಯಿ ಮರಿಗಳಿಗೆ ಹಾಲನ್ನುಣ್ಣಿಸುತ್ತಿದ್ದರೆ 10–20 ದಿವಸಗಳಷ್ಟು ಗಬ್ಬ ಮುಂದೆ ಹೋಗುವುದು. ತಾಯಿಯ ದೇಹದಿಂದ ಹಾಲು ಉತ್ಪತ್ತಿಯಾಗಿ ಉಪಯೋಗವಾಗುವುದರಿಂದ ಹಾಗೂ ತಾಯಿ ಹೆಚ್ಚಿನ ಮರಿಗಳಿಗೆ ಹಾಲನ್ನು ಕೊಡುತ್ತಿರುವ ಸ್ಥಿತಿಯಲ್ಲಿ ಗಬ್ಬವಾಗುವುದು ನಿಧಾನವಾಗುತ್ತದೆ. ಆದರೆ ದೊಡ್ಡ ಗಾತ್ರದ ಮೂಷಕಗಳಲ್ಲಿ ಒಳನಾಟಿಕೆ ನಿಧಾನವಾಗುವುದು ವಿರಳ. ಚಿಟ್ಟಿಲಿಗಿಂತ ಸಾಮಾನ್ಯ ಇಲಿಗಳಲ್ಲಿ ಸೂಲಿನ ಅವಧಿ 22 ದಿನಗಳು. ಅರಳೆ ಇಲಿಯಲ್ಲಿ 27 ದಿನಗಳು.

**ಗಬ್ಬದ ಪರೀಕ್ಷೆಗಳು:** ಮನುಷ್ಯನಲ್ಲಿ ಮಾಡುವಂತೆಯೇ ಆಷಿಂಜ್ಹಾಂಡೆಕ್ ಪರೀಕ್ಷೆಯ ತತ್ತ್ವವನ್ನು ಪಾಲಿಸಿಕೊಂಡು ಪ್ರಾಣಿಗಳಲ್ಲಿಯೂ ಈ ರೀತಿಯ ಪರೀಕ್ಷೆಗಳನ್ನು ಮಾಡುವ ವಿಧಾನ ಜಾರಿಯಲ್ಲಿದೆ. ಕುದುರೆ ಮತ್ತು ಹಸುಗಳಲ್ಲಿ ಅವು ಗಬ್ಬಗಟ್ಟಿದ ಬಳಿಕ ಈಸ್ಟ್ರಿನ್ ಅಥವಾ ಈಸ್ಟ್ರೋನ್ ಚೋದಕಗಳು ಉತ್ಪತ್ತಿಯಾಗುವುದು. ಇದನ್ನು ಸಹ ಇಲಿ ಹಾಗೂ ಚಿಟ್ಟಿಲಿಗಳನ್ನು ಉಪಯೋಗಿಸಿಕೊಂಡು ಗರ್ಭಾವಸ್ಥೆಯನ್ನು ಕಂಡುಹಿಡಿಯಬಹುದು. ಸ್ವಲ್ಪವೇ ಗಂಜಲವನ್ನು ಪ್ರಯೋಗದ ಹೆಣ್ಣು ಪ್ರಾಣಿಗಳಿಗೆ ಸೂಜಿಯ ಮೂಲಕ ದೇಹದೊಳಗೆ ಸೇರಿಸಿದರೆ ಇವುಗಳ ಯೋನಿದ್ವಾರದ ಮೇಲುಪೊರೆಯ ಕಣಗಳಲ್ಲಿ ವಿಶಿಷ್ಟವಾದ ಬದಲಾವಣೆಗಳುಂಟಾಗುವುದು. ಅದರ ಗಾಜುಫಲಕ ಮೇಲಿನ ಬಳಿತವನ್ನು (ಸ್ಮಿಯರ್) ಬಣ್ಣವೇರಿಸಿ ಸೂಕ್ಷ್ಮದರ್ಶಕದಡಿ ಈ ಬದಲಾವಣೆಗಳನ್ನು ನೋಡಬಹುದು. ಹೆಣ್ಣುದುರೆಯಲ್ಲಿ ಗಂಡಿನೊಡನೆ ಸಂಗಮವಾದ 42 ದಿವಸಗಳೊಳಗೆ ಈ ಪರಿಣಾಮ ಕಾಣಬರುವುದು. ಆದರೆ ಗರ್ಭನಿದಾನ ಪರೀಕ್ಷೆಯನ್ನು 60–65 ದಿನಗಳ ಬಳಿಕ ಮಾಡಿದರೆ ಕುದುರೆ ಗಂಜಲದಲ್ಲಿ ಈಸ್ಟ್ರಿನ್ ಅಂಶ ಹೆಚ್ಚಾಗಿರುವುದು. ಹಸುವಿನಲ್ಲಿ ಗಂಜಲದ ಮೂಲಕ ಹೊರ ಹೋಗುವ ಈಸ್ಟ್ರಿನ್ ತೀರ ಕಡಿಮೆ ಇರುವುದು. ಆದ್ದರಿಂದ 90 ದಿನಗಳವರೆಗೂ ಒಳ್ಳೆಯ ಪರಿಣಾಮ ಕಾಣಬರದು. ಮೇಲಾಗಿ ಒಂದೊಂದು ಹಸುವಿನಲ್ಲಿ 175 ದಿನಗಳವರೆಗೂ ಸರಿಯಾದ ಪರಿಣಾಮ ಕಾಣಿಸದು.

ಈ ರೀತಿಯಲ್ಲಿ ಈ ಗರ್ಭನಿದಾನ ಪರೀಕ್ಷೆಗಳು ಬಹಳ ಸೂಕ್ಷ್ಮತರವಾದವು. ನಾರ್ವೆಯಲ್ಲಿ ಇತ್ತೀಚೆಗೆ ಬಹಳ ಗುರುತರವಾದ ಪರೀಕ್ಷೆಯೊಂದನ್ನು ರೂಪಿಸಿರುವರು. ಹಂದಿಗಳ ಗಬ್ಬದ ಅವಸ್ಥೆಯನ್ನು ತಿಳಿಯಲು ಈ ಪರೀಕ್ಷೆಯನ್ನು ಮಾಡಬಹುದು. ಈ ಪರೀಕ್ಷೆಗೆ ಒಂದು ಗಂಟೆ ಹಿಡಿಯುವುದಲ್ಲದೇ ಬಹಳ ದುಬಾರಿ. ಇದಲ್ಲದೆ ಮಾಂಸಕ್ಕಾಗಿ ಬೀಜ ತೆಗೆದು ಬೆಳೆಸುವ ಕಂದುಬಣ್ಣದ ಕೆಪನ್ ಹುಂಜವನ್ನು ಗರ್ಭನಿದಾನಕ್ಕಾಗಿ ಉಪಯೋಗಿಸಿರುವರು. ಈ ಹಕ್ಕಿಯ ರೆಕ್ಕೆಗಳು ಸಾಮಾನ್ಯವಾಗಿ ಕಪ್ಪಾಗಿರುವುವು. ಈಸ್ಟ್ರಿನನ್ನು ಸೂಜಿಯ ಮೂಲಕ ದೇಹದೊಳಗೆ ಸೇರಿಸಿದರೆ ಬೆಳ್ಳಿಬಣ್ಣದ ಪಟ್ಟೆಗಳು ಬೆಳೆಯುವ ಪುಕ್ಕಗಳ ಮೇಲೆ ಕಾಣಿಸಿಕೊಳ್ಳುವುವು. ಗಂಜಲದಲ್ಲಿ ಈಸ್ಟ್ರಿನ್

ಅಂಶವಿದ್ದರೆ ಸೂಕ್ಷ್ಮದರ್ಶಕದಡಿ ನೋಡಿ ನಿರ್ಧಾರಮಾಡಬಹುದು. ಈ ಪರೀಕ್ಷೆಗೆ ಸುಮಾರು 48 ಗಂಟೆ ಹಿಡಿಯುವುದು. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಅತಿಶಬ್ದದಿಂದ (ಅಲ್ಟ್ರಾಸಾನಿಕ್ಸ್) ಕುರಿಗಳ ಗರ್ಭನಿದಾನ ಪರೀಕ್ಷೆ ಮಾಡುವರು. ಈ ಪರೀಕ್ಷೆ ಮಾಡುವಾಗ ಉಂಟಾಗುವ ಎಕ್ಸ್‌ಕಿರಣಗಳು ಪಿಂಡಕ್ಕೆ ಯಾವುದೇ ರೀತಿಯ ದುಷ್ಪರಿಣಾಮವನ್ನುಂಟು ಮಾಡುವುದಿಲ್ಲ.

**ಗಬ್ಬದ ಪರೀಕ್ಷೆ:** ಗುದದ್ವಾರದ ಮೂಲಕ ಕೈಯಿಟ್ಟು ನೆಟ್ಟಗರುಳಿನ ಕೆಳಗಿರುವ ಗರ್ಭಕೋಶವನ್ನು ಕೈಬೆರಳುಗಳ ಮೂಲಕ ಮುಟ್ಟಿ ಪಿಂಡ ಬೆಳೆಯುತ್ತಿರುವ ಗರ್ಭದ ಶೃಂಗ, ಪಿಂಡದ ಬೆಳವಣಿಗೆಗಳನ್ನು ತಿಳಿಯಬಹುದು. ದೊಡ್ಡ ಗಾತ್ರದ ಸಾಕುಪ್ರಾಣಿಗಳಲ್ಲಿ ಈ ವಿಧಾನವನ್ನು ಅನುಸರಿಸಬಹುದು. ಉದಾಹರಣೆಗೆ, ಕುದುರೆ ಮತ್ತು ಹಸು. ಇದು ಅಷ್ಟು ಸುಲಭದ ಕೆಲಸವಲ್ಲ. ಗರ್ಭಕೋಶದ ಆಕಾರ, ರಚನೆ, ಗರ್ಭಧಾರಣೆ, ಪಿಂಡದ ಬೆಳವಣಿಗೆ ಹಾಗೂ ಪ್ರಸವಶಾಸ್ತ್ರತಜ್ಞರು ಮಾಡುವ ಕೆಲಸವಿದು. ಕುಶಲಿಗಳಲ್ಲದವರು ಈ ಪರೀಕ್ಷೆಯನ್ನು ತಾವೇ ಮಾಡಲು ಹೋದರೆ ಪ್ರಾಣಿಗೆ ಅನೇಕ ರೀತಿಯ ಹಾನಿಗಳುಂಟಾಗಬಹುದು. ಪಿಂಡದ ಗುಂಡಿಗೆ ಒಡೆದು ಪಿಂಡ ಸಾಯಬಹುದು. ನೆಟ್ಟಗರುಳಿನಲ್ಲಿ (ರೆಕ್ಟಂ) ತೂತು ಉಂಟಾಗಬಹುದು. ಹಸು ಕಂದು ಹಾಕುವುದು. ಇತರ ಚಿಕ್ಕಪ್ರಾಣಿಗಳಲ್ಲಿ ಉದರಭಾಗದಲ್ಲಿ ಪಿಂಡದ ಬೆಳವಣಿಗೆಯನ್ನು ಗಮನಿಸಿ ಗಬ್ಬದ ಅವಧಿಯನ್ನು ನಿರ್ಧರಿಸುವರು.

ಪ್ರಾಣಿ ಗಬ್ಬವಾದ ಮೇಲೆ ಅದರ ಗರ್ಭಕೋಶ, ಅಂಡಾಶಯಗಳು ಮತ್ತು ದೇಹದ ಅಂಗಾಂಶಗಳೆಲ್ಲ ಅನೇಕ ವಿಧದಲ್ಲಿ ಗಬ್ಬದ ಪ್ರಭಾವಕ್ಕೆ ಒಳಗಾಗುತ್ತವೆ. ಮರಿಹಾಕಿದ ಮೇಲೆ ಈ ಪ್ರಭಾವಗಳಿರುವುದಿಲ್ಲ. ಆದರೆ ಕೆಲವಾರು ಸೂಕ್ಷ್ಮ ಬದಲಾವಣೆಗಳು ಆಜೀವ ಪರ್ಯಂತ ಇರುತ್ತವೆ. ಉದಾಹರಣೆಗೆ ಕೆಚ್ಚಲು ದೊಡ್ಡದಾಗುವುದು ಮತ್ತು ಗರ್ಭಕೋಶ ವಿಶಾಲವಾಗುವುದು. ಆದರೂ ಮರಿ ಹಾಕಿದ ನಾಲ್ಕು ವಾರಗಳ ಅನಂತರ ಇವುಗಳೆಲ್ಲ ಸಾಮಾನ್ಯಸ್ಥಿತಿಗೆ ಬರುವುವು. ಕೆಚ್ಚಲುಗಳಲ್ಲಿ ಮಾತ್ರ ಯಾವ ಬದಲಾವಣೆಯೂ ಆಗದೆ ಹಾಲು ಉತ್ಪತ್ತಿಯಾಗುತ್ತಾ ಹೋಗುತ್ತದೆ. ಒಂದೇ ಮರಿ ಹಾಕುವ ಪ್ರಾಣಿಗಳಲ್ಲಿ ಗರ್ಭದ ಒಂದು ಕೋಡು ತನ್ನ ಸುರುಳಿಯಾಕಾರದಿಂದ ಬಿಡುಗಡೆಯಾಗಿ ನೆಟ್ಟಗಾಗುತ್ತದೆ. ಅಲ್ಲದೆ ಸಾಕಷ್ಟು ವಿಶಾಲವಾಗುತ್ತದೆ. ಉಳಿದ ಕೋಡಿನಲ್ಲಿ ಯಾವ ಬದಲಾವಣೆಯೂ ಕಾಣುವುದಿಲ್ಲ. ಹಲವಾರು ಮರಿಗಳನ್ನು ಹಾಕುವ ಪ್ರಾಣಿಗಳಲ್ಲಿ ಎರಡು ಕೋಡುಗಳೂ ವಿಶಾಲವಾಗಿ ಅವುಗಳಲ್ಲಿ ಪಿಂಡಗಳು ಬೆಳೆಯುವುವು. ಪಿಂಡ ಹೊತ್ತ ಕೋಡಿನಲ್ಲಿ ಅನೇಕ ಬದಲಾವಣೆಗಳು ಕಾಣಬರುತ್ತವೆ. ರಕ್ತಚಲನೆ ಹೆಚ್ಚಾಗುವುದು. ಗರ್ಭಕೋಶದ ಧಮನಿಯ ಗಾತ್ರ ಹೆಚ್ಚಿ ರಕ್ತದ ಮಿಡಿತ ಬಲವಾಗುವುದು. ಪಿಂಡ ಬೆಳೆಯುತ್ತ ಹೋದಂತೆ ಅದಕ್ಕೆ ಅನು ಮಾಡಿಕೊಡಲು ದೊಡ್ಡ ತಂತು (ಬ್ರಾಡ್ ಲಿಗಮೆಂಟ್) ಸಹ ಉದ್ದದಲ್ಲಿ ಬೆಳೆಯುತ್ತದೆ. ಇದರಿಂದ ಗರ್ಭಕೋಶ ಪಿಂಡದ ಭಾರವನ್ನು ಹೊತ್ತುಕೊಂಡು ಒಡಲಿನ ಮೇಲ್ಭಾಗದಲ್ಲಿರಲು ಅನುಕೂಲವಾಗುತ್ತದೆ. ಈ ರೀತಿ ಪಿಂಡ ಪ್ರವೃದ್ಧವಾಗುತ್ತಿರುವಂತೆ ಗರ್ಭಕೋಶದ ಮಾಂಸದ ಪೊರೆ ಬೆಳೆಯುವುದರಿಂದ ಶಕ್ತಿಯುತವಾಗುವುದಲ್ಲದೆ ದಪ್ಪವಾಗಿ ಗಟ್ಟಿಯಾಗುವುದು. ಇದರಿಂದ ಪಿಂಡದ ಭಾರವನ್ನು ಹೊರುವ ಶಕ್ತಿಯೂ ಇದಕ್ಕೆ ಬರುತ್ತದೆ. ಗರ್ಭಕೋಶದ ಲೋಳೆಪೊರೆಯಲ್ಲಿ ಗಮನೀಯ ಬದಲಾವಣೆಗಳಾಗುವುವು. ಹರಡಿದ ಜರಾಯುವನ್ನು ಪಡೆದಿರುವ ಪ್ರಾಣಿಗಳಾದ ಕುದುರೆ ಮತ್ತು ಹಂದಿಗಳಲ್ಲಿ ಲೋಳೆಪೊರೆ ದಪ್ಪವಾಗುವುದು; ಬಹಳ ರಕ್ತಪ್ರಸಾರ ಸಹ ಆಗುವುದು. ಮೆಲುಕು ಹಾಕುವ ಪ್ರಾಣಿಗಳ ಗರ್ಭಕೋಶದಲ್ಲಿ ಪಿಂಡದ ಚೀಲ ಗುಂಡಿಗಳಂಥ ರಚನೆಗಳಿಂದ ಬಂಧಿತವಾಗಿರುವುದು. ಪಿಂಡ ಬೆಳೆದ ಹಾಗೆಲ್ಲ ಗುಂಡಿಗಳ ಗಾತ್ರ ಮತ್ತು ಸಂಖ್ಯೆ ಹೆಚ್ಚಾಗುತ್ತದೆ. ಇವು ಅಣಬೆಯಾಕಾರದಲ್ಲಿ ಬೆಳೆದು ಹಸುವಿನಲ್ಲಿ ಹೊರ ಉಬ್ಬಿನ ರೂಪದಲ್ಲಿಯೂ ಕುರಿಗಳಲ್ಲಿ ಒಳತಗ್ಗಿನ ರೂಪದಲ್ಲಿಯೂ ಇರುವುವು. ನಾಯಿ ಮತ್ತು ಬೆಕ್ಕುಗಳಲ್ಲಿ ಪಿಂಡದ ಚೀಲ ಗರ್ಭಕೋಶದ ಲೋಳೆಪೊರೆಗೆ ಕೆಲವು ಭಾಗಗಳಲ್ಲಿ ಅಂಟಿಕೊಂಡಿರುವುದು.

**ಗಬ್ಬದ ಲಕ್ಷಣಗಳು:** ಗಬ್ಬವಾದ ಮೇಲೆ ಮೊದಲೆರಡು ತಿಂಗಳು ಗರ್ಭಧಾರಣೆ ಆಗಿದೆಯೆ ಇಲ್ಲವೆ ಎಂದು ಗೊತ್ತಾಗುವುದಿಲ್ಲ. ಕಾಲಕಳೆದಂತೆ ಕೆಲವಾರು ಲಕ್ಷಣಗಳ ಸಹಾಯದಿಂದ ಗರ್ಭಧಾರಣೆಯನ್ನು ಗುರುತಿಸಬಹುದು. ಗರ್ಭಧರಿಸಿದ ಮೇಲೆ ಹೆಣ್ಣು ಗಂಡಿನೊಡನೆ ಕೂಡುವ ಬಯಕೆಯನ್ನು ತೋರಿಸುವುದಿಲ್ಲ. ಕೆಲವು ವೇಳೆ ಗಂಡಿನೊಂದಿಗೆ ಕೂಡುವ ಲಕ್ಷಣ ತೋರಿಸಬಹುದಾದರೂ ಆಗ ಹೋರಿಯಿಂದ ವೀರ್ಯ ಸಂಚಯನ ಮಾಡಿಸಿದರೆ ಹಸು ಕಂದು ಹಾಕುವುದು. ಬೆದರುವ, ಕಾಟಕೊಡುವ ಕುದುರೆಗಳು ಗಬ್ಬವಾದ ಮೇಲೆ ಸಾಧುವಾಗುವುವು. ಹಸುಗಳು ಸಹ ಸಾಧುವಾಗುವುವು. ಗಬ್ಬವಾದ ಮೇಲೆ ಪ್ರಾಣಿಗಳು ಮೈತುಂಬಿಕೊಳ್ಳುವುದು. ಕೆಲಸ ಮಾಡಲಾಗದೆ ಬೇಗನೆ ಬಳಲುವುವು. ಕುದುರೆಗಳು ಬೇಗನೆ ಬೆವರುವುವು. ಹಂದಿ ಮತ್ತು ನಾಯಿಗಳು ಆದಷ್ಟು ಆರಾಮವಾಗಿ ಇರಲು ಬಯಸುವುವು.

**ಒಡಲು:** ಒಡಲು ಮೈತುಂಬಿ ಗುಂಡಾಗುತ್ತದೆ. ಗಬ್ಬವಾದ ಮೇಲೆ ಕಾಣಿಸಿಕೊಳ್ಳುವ ಪ್ರಧಾನ ಲಕ್ಷಣವಿದು. ಒಳಗೆ ಪಿಂಡ ಬೆಳೆದಂತೆ ಉದರದ ಆಕಾರ ಬದಲಾವಣೆ ಹೊಂದುವುದು. ಈಯುವ ಕಾಲ ಬಂದಾಗ ಪಕ್ಕೆಗಳಲ್ಲಿ ಗುಳಿ ಬೀಳುವುದು. ಬೆನ್ನು ಮೂಳೆಗಳು ಮೇಲೆದ್ದು ಕಾಣುವುವು. ರೊಂಡಿಯ ಮಾಂಸಗಳು ಇಳಿಬೀಳುವುವು. ಪಿರ್ರೆಯ ಭಾಗ ಕುಗ್ಗುವುದು. ಬಾಲದ ಬುಡದ ಬಳಿ ಗುಳಿ ಚೆನ್ನಾಗಿ ತೋರುವುದು.

**ಕೆಚ್ಚಲು:** ಗಬ್ಬವಾದ ಮೇಲೆ ಕ್ರಮೇಣ ಕೆಚ್ಚಲು ದಪ್ಪವಾಗುತ್ತ ಹೋಗುವುದು. ಮೊಲೆತೊಟ್ಟುಗಳು ಉದ್ದವಾಗುವುದು. ಕೆಚ್ಚಲು ಮೇಲಿನ ಸುಕ್ಕು ಇಲ್ಲವಾಗುವುದು. ಮರಿಹಾಕುವ ಅವಧಿ ಹತ್ತಿರವಾದಂತೆ ಹಳದಿಬಣ್ಣದ ಅಂಟು ಹಾಲು ಉತ್ಪತ್ತಿಯಾಗುವುದು. ಹಾಲು ಕೊಡುತ್ತಿದ್ದ ಹಸುವಿನ ಹಾಗೂ ಕುದುರೆಯ ಕೆಚ್ಚಲು ಅವು ಗಬ್ಬವಾದ ಮೇಲೆ ಸ್ವಲ್ಪ ಒಣಗಿಹೋಗುವುವು. ಹಸುವಿನಲ್ಲಿ ಏಳು ತಿಂಗಳವರೆಗೆ, ಕುದುರೆಗಳಲ್ಲಿ ಎಂಟರಿಂದ ಒಂಬತ್ತು ತಿಂಗಳವರೆಗೆ ಹಾಲು ಕಡಿಮೆಯಾಗುತ್ತ ಹೋಗಿ, ಆಮೇಲೆ ನಿಂತುಹೋಗುವುದು.

ಗರ್ಭವನ್ನು ಹೊತ್ತ ಪ್ರಾಣಿಯ ದೇಹಭಾರ ಹೆಚ್ಚುತ್ತ ಹೋಗುವುದು. ಮೇಲಾಗಿ ಒಡಲಿನ ಅಕ್ಕಪಕ್ಕಗಳಲ್ಲಿ ಪಿಂಡದ ಓಡಾಟ ಕಾಣಬರುವುದು. ಕುದುರೆಯ ಒಡಲಿನ ಎಡಪಾರ್ಶ್ವದಲ್ಲಿ, ಹಸುವಿನ ಬಲಭಾಗದಲ್ಲಿ ಪಿಂಡದ ಆಂತರಿಕ ಓಡಾಟ ಕಾಣಬರುವುದು. ಗಬ್ಬ ಹೊತ್ತ ಪ್ರಾಣಿ ತಣ್ಣೀರು ಕುಡಿದಾಗ ಅಥವಾ ಸ್ವಲ್ಪ ದೂರ ನಡೆದು ಒಮ್ಮೆಗೆ ನಿಂತುಕೊಂಡಾಗ ಪಿಂಡ ಮಾತ್ರ ಓಡಾಡುವುದು. ಅಲ್ಲದೆ ಹಸುಗಳು ಎಡಕ್ಕೆ ಮತ್ತು ಕುದುರೆಗಳು ಬಲಕ್ಕೆ ಬೇಗನೆ ತಿರುಗಿದರೂ ಈ ಓಡಾಟ ಕಾಣುವುದು. ಮಲಗಿ ಎದ್ದ ಪ್ರಾಣಿಗಳ ಒಡಲಿನಲ್ಲಿ ಈ ಓಡಾಟವನ್ನು ಗುರುತಿಸಬಹುದು. ಚಿಕ್ಕಪ್ರಾಣಿಗಳಲ್ಲಿ ಈ ರೀತಿಯ ಪಿಂಡದ ಓಡಾಟ ಕಾಣಬರುವುದಿಲ್ಲ. ಆದರೆ ಒಡಲಿನ ಮೇಲೆ ಕೈಯಿಟ್ಟು ಸ್ವಲ್ಪ ಒತ್ತಿಹಿಡಿದರೆ ಪಿಂಡದ ಇರುವನ್ನು ಸುಲಭವಾಗಿ ಗುರುತಿಸಬಹುದು.

**ಗಬ್ಬವಾದ ಪ್ರಾಣಿಯ ಉಪಚಾರ:** ಗಬ್ಬವಾದ ಪ್ರಾಣಿಗೆ ಸಾಕಷ್ಟು ವ್ಯಾಯಾಮ ಮತ್ತು ಒಳ್ಳೆಯ ಆಹಾರ ಅವಶ್ಯಕ. ಪಿಂಡದ ಬೆಳವಣಿಗೆ ಹಾಗೂ ಪ್ರಾಣಿಯ ಆರೋಗ್ಯರಕ್ಷಣೆಗೆ ಬೇಕಾಗುವ ಸಮತೂಕ ಆಹಾರವನ್ನು ಕೊಡಬೇಕು. ಹೊಟ್ಟೆಯಲ್ಲಿ ಉರಿಯನ್ನು ಉಂಟುಮಾಡುವ, ಭೇದಿಯನ್ನು ಉಂಟುಮಾಡುವ ಆಹಾರವನ್ನು ಕೊಡಬಾರದು. ಆಹಾರದಲ್ಲಿ ತೀವ್ರ ಬದಲಾವಣೆ ಸಹ ಮಾಡಬಾರದು. ತಣ್ಣನೆಯ ಮತ್ತು ಶುಚಿಯಾದ ನೀರನ್ನು ಆದಷ್ಟು ಹೆಚ್ಚಾಗಿ ಕೊಡಬೇಕು. ಕುರಿಗಳು ತಿನ್ನುವ ಹಸುರು ಮೇವಿನಲ್ಲಿ ಸಾಕಷ್ಟು ನೀರಿನ ಅಂಶವಿರುವುದರಿಂದ ಅವಕ್ಕೆ ಹೆಚ್ಚು ನೀರು ಬೇಕಾಗುವುದಿಲ್ಲ. ಪಿಂಡದ ಚೀಲದ ರಕ್ಷಣೆಗೆ ನೀರು ಬಹಳ ಅವಶ್ಯಕವಾದುದು. ಅಲ್ಲದೆ ಕೆಚ್ಚಲ ಬೆಳವಣಿಗೆಗೂ ನೀರು ಬೇಕಾಗುವುದು.

**ಕುದುರೆ:** ಅದರ ಒಡಲು ದಪ್ಪವಾಗುವವರೆಗೂ ಯಥಾಪ್ರಕಾರ ಅದನ್ನು ಪೋಷಿಸಬೇಕು. ಅದಕ್ಕೆ ಬಹಳ ಹಗುರವಾದ ಕೆಲಸ ಕೊಡಬೇಕು. ಸಾಕಷ್ಟು ನೆರಳನ್ನು ಸಹ ಕಲ್ಪಿಸಬೇಕು. ಹನ್ನೊಂದು ತಿಂಗಳ ಮಧ್ಯಭಾಗ ಮುಟ್ಟಿದರೆ ಅದನ್ನು ಮಧ್ಯಾಹ್ನ ಹುಲ್ಲುಮೇಯಲು ಬಿಟ್ಟು ಅನಂತರ ಸ್ವಲ್ಪ ಕೆಲಸಮಾಡಿಸಬೇಕು. ಸವಾರಿಗೆ ಉಪಯೋಗಿಸಬಾರದು. ಕೊನೆಯ ತಿಂಗಳಲ್ಲಿ ಹೆಚ್ಚಿನ ಆಹಾರ ಹಾಗೂ ನೀರನ್ನು ಕೊಡಬೇಕು. ಒಳ್ಳೆಯ ಕುದುರೆಗೆ ಮಸಾಲೆ ಸೊಪ್ಪು ಹಾಗೂ ಹಸಿರು ಹುಲ್ಲನ್ನು ಒದಗಿಸಬೇಕು. ಮರಿಹಾಕುವ ದೊಡ್ಡಿಯನ್ನು ಶುಚಿಯಾಗಿ ಇಟ್ಟರಬೇಕು. ಕುದುರೆಗೆ ಮಾಲೀಸುಮಾಡುವಾಗ ನೋವಾಗದಂತೆ ಎಚ್ಚರವಹಿಸಬೇಕು. ಚೊಚ್ಚಲು ಬಸಿರಿನ ಕುದುರೆಯ ಒಡಲನ್ನು ಆಗಾಗ್ಗೆ ನಯವಾಗಿ ಒತ್ತಬೇಕು. ಮೇಲಾಗಿ ಕೆಚ್ಚಲು, ಒಡಲಿನ ಮೇಲೆ ಆಗಾಗ್ಗೆ ಕೈಯಾಡಿಸುತ್ತ ಇರಬೇಕು.

**ಹಸು:** ಗಬ್ಬವಾದ 7 ತಿಂಗಳ ಅನಂತರ ಹಾಲು ಕರೆಯುವುದನ್ನು ನಿಲ್ಲಿಸಬೇಕು. ಇದರಿಂದ ಪಿಂಡದ ಬೆಳವಣಿಗೆ ಚೆನ್ನಾಗಿ ಆಗುತ್ತದೆ. ಹಸುವನ್ನು ಯಾವ ರೀತಿಯ ಕಷ್ಟಕ್ಕೂ ಈಡುಮಾಡಬಾರದು. ಮಳೆ, ಗಾಳಿ, ಬಿಸಿಲುಗಳ ತೀವ್ರತೆಯಿಂದ ರಕ್ಷಿಸಬೇಕು. ಹೋರಿಯಿಂದ ಆಗುವ ತೊಂದರೆಯನ್ನು ತಪ್ಪಿಸಬೇಕು. ಭೇದಿ ಉಂಟುಮಾಡುವ ಹಾಗೂ ಮತ್ತುಬರಿಸುವ ಔಷಧಿಗಳನ್ನು ನಿಲ್ಲಿಸಬೇಕು. ಕರುಹಾಕುವ ಕಾಲಬಂದಾಗ ಯಾವ ಅಡೆತಡೆಗಳಿಲ್ಲದ ಒಂದು ಕೊಠಡಿಯಲ್ಲಿ ಈಯಲು ಬಿಡಬೇಕು.

**ಕುರಿ ಮತ್ತು ಮೇಕೆ:** ಇವನ್ನು ಮರಿಹಾಕುವ ರೊಪ್ಪದಲ್ಲಿಟ್ಟು ಎಲ್ಲ ವಿಷಯಗಳಲ್ಲಿಯೂ ಗಮನ ಹರಿಸಬೇಕು. ಅವನ್ನು ಒರಟಾಗಿ ಕಾಣದೆ ಓಡಾಡಿಸದೆ ಇಡಬೇಕು. ನಾಯಿಯ ಕಾಟವನ್ನು ತಪ್ಪಿಸಬೇಕು.

**ಹಂದಿ:** ಇವನ್ನು ಹಳೆಯ ಮನೆಯೊಂದರಲ್ಲಿ ಇಡಬೇಕು. ರಾತ್ರಿಯ ವೇಳೆಯಲ್ಲಿ ಒಳ್ಳೆಯ ಆಹಾರ ಹಾಗೂ ತಳಹಾಸುಗಳನ್ನು ಕೊಡಬೇಕು. ಬೇರೆ ಯಾವ ರೀತಿಯ ತೊಂದರೆಯೂ ಆಗದಂತೆ ನೋಡಿಕೊಳ್ಳಬೇಕು. ಮರಿ ಹಾಕುವ ಹಂದಿಗಳನ್ನು ಬೇರೆ ಬೇರೆಯಾಗಿ ಉಣಿಸಬೇಕು. ಇಲ್ಲದಿದ್ದರೆ ಒಂದೊಂದು ಹಂದಿಗೂ ಸರಿಯಾಗಿ ಆಹಾರ ಸಿಗದು.

**ನಾಯಿ:** ಸರಿಯಾಗಿ ಓಡಾಡಿಸಬೇಕು. ಒಳ್ಳೆಯ ಆಹಾರ, ಪಿಷ್ಟರಹಿತ ತಿಂಡಿ, ಆಗಾಗ್ಗೆ ಯಕೃತ್ತಿನ ಚೂರುಗಳನ್ನು ಅಥವಾ ಬೇಯಿಸಿದ ಯಕೃತ್ತನ್ನು ಕೊಡಬೇಕು. ಬೆಚ್ಚನೆಯ ಸ್ಥಳಗಳಲ್ಲಿ ಇವನ್ನು ಇಟ್ಟು ತಳಹಾಸು ಹಾಗೂ ಮೆತ್ತೆಯನ್ನು ಕೊಡಬೇಕು. ಹಾಸಿಗೆ ಹಾಗೂ ಹಚ್ಚಡಗಳನ್ನು ಹಾಕಿ ಬೆಚ್ಚಗೆ ಮಲಗಿಸಬೇಕು. (ಜಿ.ಆರ್.ಆರ್.ಎಸ್.)

**ಗರ್ಭೋನ್ಮಾದ : ನೋಡಿ: ಉನ್ಮಾದ**

**ಗರ್ಲಾಫ್ಕ :** ಸೋವಿಯೆತ್ ಸಮಾಜವಾದಿ ಗಣರಾಜ್ಯ ಒಕ್ಕೂಟ 1991ರ ಡಿಸೆಂಬರ್ 21 ರಂದು ವಿಘಟನೆ ಹೊಂದಿ ಉಕ್ರೇನಿಯನ್ ಗಣರಾಜ್ಯ ಸೋವಿಯೆತ್ ಒಕ್ಕೂಟ ಸೇರಿತು. ಡನೆಟ್ಸ್ ಆಬ್ಲಾಸ್ಟ್‌ನಲ್ಲಿ (ಆಡಳಿತ ವಿಭಾಗ) ಇರುವ ಒಂದು ಪಟ್ಟಣ. ಡನೆಟ್ಸ್ಕ್ ನದೀಕಣಿವೆಯ ಕೈಗಾರಿಕಾ ಪ್ರದೇಶದ ಮಧ್ಯಭಾಗದಲ್ಲಿದೆ. ಡನೆಟ್ಸ್ಕ್ ನಗರಕ್ಕೆ 40 ಕಿಮೀ ದೂರದಲ್ಲಿದೆ. 1867ರಲ್ಲಿ ಇದನ್ನು ಗಣಿವಸತಿಯಾಗಿ ಸ್ಥಾಪಿಸಲಾಯಿತು. 1932ರಲ್ಲಿ ಇದು ಪಟ್ಟಣವಾಯಿತು; ಈಗ ಈ ಪ್ರದೇಶದ ಅತ್ಯಂತ ದೊಡ್ಡ ಕಲ್ಲಿದ್ದಲು ಗಣಿ ಕೇಂದ್ರಗಳಲ್ಲೊಂದಾಗಿದೆ. ವಿಶ್ವದಲ್ಲೆ ಅತ್ಯಂತ ಆಳವಾದ ಕಲ್ಲಿದ್ದಲು ಕುಳಿಗಳ ಪೈಕಿ ಕೆಲವು ಇಲ್ಲಿವೆ. ಕಲ್ಲಿದ್ದಲು ಗಣಿ ಯಂತ್ರ ತಯಾರಿಸುವ ದೊಡ್ಡ ಎಂಜಿನಿಯರಿಂಗ್ ಕೈಗಾರಿಕೆಯೂ ರಸಾಯನ ಕೈಗಾರಿಕೆಯೂ ಇಲ್ಲಿ ಬೆಳೆದಿವೆ. ಅನೇಕ ರೈಲುಮಾರ್ಗಗಳು ನಗರಕ್ಕೂ ಸುತ್ತಮುತ್ತಲಿನ ನಗರಗಳಿಗೂ ಸಂಪರ್ಕ ಕಲ್ಪಿಸಿವೆ. (ವಿ.ಜಿ.ಕೆ.)

**ಗಲ್ :** ಕರ್ಯಾಡ್ರಿಯಿಫಾರ್ಮೀಸ್ ಗಣದ ಲ್ಯಾರಿಡೀ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಸಾಗರವಾಸಿ ಹಕ್ಕಿಗಳಿರುವ ಸಾಮಾನ್ಯ ಬಳಕೆಯ ಇಂಗ್ಲಿಷ್ ಹೆಸರು. ಸುಮಾರು 40 ಕ್ಕೂ ಹೆಚ್ಚು ಬಗೆಯ ಗಲ್ ಹಕ್ಕಿಗಳಿವೆ. ಟರ್ನ್ ಹಕ್ಕಿಗಳಿಗೆ ಬಹಳ ಹತ್ತಿರದ ಸಂಬಂಧಿಗಳಿವು. ಪ್ರಪಂಚದ ಮೇರು ಪ್ರದೇಶಗಳು ಮತ್ತು ಸಮಶೀತೋಷ್ಣ ವಲಯಗಳಲ್ಲೆಲ್ಲ ಇವುಗಳ ವ್ಯಾಪ್ತಿಯಿದೆ. ಕೆಲವು ಬಗೆಯವು ಉಷ್ಣಪ್ರದೇಶಗಳಲ್ಲೂ (ಚಳಿಗಾಲದಲ್ಲಿ) ಕಾಣಬರುತ್ತವೆ. (ಜಿ.ಎಸ್.ಆರ್.)



ಲೇರಸ್ ಬ್ರುನಿಸಿಫ್ಯಾಲಸ್

ವಿವಿಧ ಬಗೆಯ ಗಲ್ ಹಕ್ಕಿಗಳಲ್ಲಿ ಕೆಲವು ಭಿನ್ನತೆಗಳಿರುವುವಾದರೂ ಎಲ್ಲಕ್ಕೂ ಸಮಾನವೆನಿಸುವ ಹಲವಾರು ಗುಣಲಕ್ಷಣಗಳನ್ನು ನೋಡಬಹುದು : ಸುಪ್ರಮಾಣ ಬದ್ಧವಾದ ದೇಹ, ಉದ್ದವಾದ ಮತ್ತು ಬಲಯುತವಾದ ರೆಕ್ಕೆಗಳು, ಅತ್ಯಂತ ದೃಢವಾದ ಮತ್ತು ತುದಿಯಲ್ಲಿ ಕೊಕ್ಕೆಯಂತೆ ನಸುಬಾಗಿದ ಕೊಕ್ಕು, ಜಾಲಪಾದ, ಇತ್ಯಾದಿ. ದೇಹದ ಬಣ್ಣ ಪ್ರೌಢಹಕ್ಕಿಗಳಲ್ಲಿ ಸಾಮಾನ್ಯವಾಗಿ ಬಿಳಿ. ಆದರೆ ಕೆಲವು ಬಗೆಗಳಲ್ಲಿ ಬೆನ್ನು, ರೆಕ್ಕೆ ಮತ್ತು ತಲೆಗಳು ಬೂದಿ, ಕಪ್ಪು, ಕಂದು ಮುಂತಾದ ವರ್ಣಗಳನ್ನು ಪಡೆದಿರಬಹುದು. ಮರಿಹಕ್ಕಿಗಳು ಕಂದುಬಣ್ಣಕ್ಕಿರುತ್ತವೆ. ವಯಸ್ಕ ಹಾಗೂ ಮರಿಹಕ್ಕಿಗಳು ಒಂದೆಡೆ ಕೂಡಿದಾಗ ಬೇರೆ ಬೇರೆ ಪ್ರಭೇದಗಳು ಸೇರಿವೆಯೆಂಬ ಭಾವನೆ ಬರುವಷ್ಟು ಬಣ್ಣವ್ಯತ್ಯಾಸವನ್ನು ಇವು ಪ್ರದರ್ಶಿಸುತ್ತವೆ. ಕಂದುಬಣ್ಣಕ್ಕಿರುವ ಮರಿಹಕ್ಕಿ ವರ್ಷಕ್ಕೆರಡು ಸಲ ತನ್ನ ಗರಿಗಳನ್ನು ಬದಲಿಸುತ್ತದೆ. ಪ್ರತಿಸಲ ಗರಿಯುದುರಿದಾಗಲೂ ದೇಹದ ಬಣ್ಣ ಕಂದಿನಿಂದ ತಿಳಿಯಾಗುತ್ತ ಬಂದು ಸುಮಾರು 3 ವರ್ಷಗಳ ಅನಂತರ ವಯಸ್ಕ ಹಕ್ಕಿಯ ಬಣ್ಣವಾದ ಬಿಳಿ ಬಣ್ಣಕ್ಕೆ ತಿರುಗುತ್ತದೆ.

ಗಲ್ ಹಕ್ಕಿಗಳು ಬಲು ಸೊಗಸಾಗಿ ಶ್ರಮವಿಲ್ಲದೆ ಗಾಳಿಯಲ್ಲಿ ತೇಲುವಂತೆ ಹಾರಬಲ್ಲವು. ಸಾಮಾನ್ಯವಾಗಿ ಸಮುದ್ರತೀರ, ರೇವುಪಟ್ಟಣಗಳ ಬಳಿಯೇ ಇವುಗಳ ವಾಸ. ಆದಷ್ಟು ನೆಲದ ಸಮೀಪವೇ ಇರುವುದು ಇವುಗಳಿಗೆ ಇಷ್ಟವಾದರೂ ಆಗಿಂದಾಗ್ಗೆ ಹಡಗು, ದೋಣಿಗಳನ್ನು ಹಿಂಬಾಲಿಸಿ ಸಾಗರಗಳ ಮೇಲೆ ಹಲವಾರು ಕಿಲೋಮೀಟರ್‌ಗಳಷ್ಟು ದೂರ ಸಾಗುವುದೂ ಉಂಟು. ಮೀನು ಮತ್ತು ಸಾಗರವಾಸಿ ಪ್ರಾಣಿಗಳೇ ಇವುಗಳ ಮುಖ್ಯ ಆಹಾರ. ಆದರೆ ಬೇರೆ ಬಗೆಯ ಆಹಾರವನ್ನೂ ತಿನ್ನದೆ ಇಲ್ಲ. ಚೆನ್ನಾಗಿ ಈಜಬಲ್ಲವಾದರೂ ಟರ್ನ್ ಮುಂತಾದ ಇತರ ಹಕ್ಕಿಗಳಂತೆ ಸಾಗರಗಳಲ್ಲಿ ಈಜುವ ಮೀನು ಮುಂತಾದ ಪ್ರಾಣಿಗಳನ್ನು ಹಿಡಿವ ಚಾಣಾಕ್ಷತೆ ಇವಕ್ಕೆ ಇಲ್ಲ. ಅಕಸ್ಮಾತ್ತಾಗಿ ಸತ್ತು ನೀರಮೇಲೆ ತೇಲುವ ಇಲ್ಲವೆ ಗಾಯಗೊಂಡು ಚೆನ್ನಾಗಿ ಈಜಲಾರದ ಪ್ರಾಣಿಗಳನ್ನು ಮಾತ್ರ ಚುರುಕಾಗಿ ಹಿಡಿಯಬಲ್ಲವು. ಈ ಕಾರಣದಿಂದಲೇ ಗಲ್‌ಗಳು ಸಾಮಾನ್ಯವಾಗಿ ಮನುಷ್ಯರ ವಾಸ್ತವ್ಯವಿರುವ ಸ್ಥಳಗಳಲ್ಲೆ ಇದ್ದು ಅವರು ಎಸೆಯುವ ಕೊಳೆತ ಮೀನು ಮತ್ತಿತರ ಆಹಾರವನ್ನು ತಿನ್ನುತ್ತ ವಾಸಿಸುತ್ತವೆ. ತೀರಪ್ರದೇಶಗಳ ಬಂದರುಗಳು, ಕೊಳಚೆ ಸ್ಥಳಗಳು, ಚರಂಡಿ, ಹೊಲಸು ಇರುವೆಡೆಯೆಲ್ಲೆಲ್ಲ ಇವು ಇರುತ್ತವೆ. ಈ ಗುಣದಲ್ಲಿ ಕಾಗೆಗಳನ್ನು ಹೋಲುವ ಗಲ್‌ಗಳು ಮನುಷ್ಯನಿಗೆ ಅತ್ಯಂತ ಉಪಕಾರಿಯೆನಿಸಿವೆ. ಕೆಲವೊಮ್ಮೆ ಒಳನಾಡಿನ ಕೃಷಿಭೂಮಿಯಲ್ಲೂ ಗಲ್‌ಗಳನ್ನು ಕಾಣಬಹುದು. ಅಲ್ಲಿ ಸಿಗಬಹುದಾದ ಕ್ರಿಮಿಕೀಟಗಳನ್ನು ಇವು ಹಿಡಿದು ತಿನ್ನುತ್ತವೆ. ಗಲ್‌ಗಳಿಗೆ ಕಪ್ಪೆಚಿಪ್ಪಿನ ಪ್ರಾಣಿಗಳೆಂದರೆ ಬಲು ಇಷ್ಟ. ಚಿಪ್ಪಿನೊಳಗಿನ ಪ್ರಾಣಿಗಳನ್ನು ಹೊರತೆಗೆಯಲು ಸುಲಭವಾಗಿ ಆಗದೆಂದು ಅರಿತಿರುವ ಇವು ಚಿಪ್ಪನ್ನು ಹಿಡಿದುಕೊಂಡು ಮೇಲಕ್ಕೆ ಹಾರಿ ಅಲ್ಲಿಂದ ನೆಲದ ಮೇಲಿನ ಕಲ್ಲು ಮುಂತಾದ ಯಾವುದಾದರೂ ಗಟ್ಟಿಯಾದ ವಸ್ತುವಿನ ಮೇಲೆ ಬೀಳಿಸಿ ಚಿಪ್ಪು ಒಡೆಯುವಂತೆ ಮಾಡುತ್ತವೆ. ತತ್‌ಕ್ಷಣವೇ ಅಲ್ಲೆ ಸುತ್ತ ಇರುವ ಬೇರೆ ಹಕ್ಕಿಯೊಂದು ಆಹಾರದ ಮೇಲೆ ಎರಗುವ ಮುನ್ನವೇ ಕೆಳಕ್ಕೆ ಧಾವಿಸಿ ಚಿಪ್ಪಿನಿಂದ ಹೊರಬಂದ ಪ್ರಾಣಿಯನ್ನು ಭಕ್ಷಿಸುತ್ತವೆ. ಚಿಪ್ಪನ್ನು ಒಡೆಯಲು ಕೆಲವೊಮ್ಮೆ ಕಾರು, ಮನೆ, ಮಾಡು, ರಸ್ತೆಗಳ ಮೇಲೂ ಹಾಕುವುದುಂಟು. ಕೆಲವು ಬಗೆಯ ಗಲ್‌ಗಳು ಬೇರೆ ಹಕ್ಕಿಗಳ ಮೊಟ್ಟೆ, ಮರಿಹಕ್ಕಿ, ಕೆಲವೊಮ್ಮೆ ವಯಸ್ಕ ಹಕ್ಕಿಗಳನ್ನು ತಿನ್ನುವುದುಂಟು.

ಬೇರೆ ಬಹುಪಾಲು ಬಗೆಯ ಹಕ್ಕಿಗಳಿಗೆ ಹೋಲಿಸಿದರೆ ಗಲ್‌ಗಳು ಬಹಳ ವರ್ಷ ಬದುಕಿರುತ್ತವೆ. ಇವುಗಳ ಆಯಸ್ಸು ಸುಮಾರು 25–30 ವರ್ಷಗಳು. ಇವು ಸಂಘಜೀವಿಗಳು. ಪ್ರದೇಶದಿಂದ ಪ್ರದೇಶಕ್ಕೆ ಸಾಗುವಾಗ, ಆಹಾರಕ್ಕಾಗಿ ಬೇಟೆಯಾಡುವಾಗ, ವಿರಮಿಸುವಾಗ ಹೀಗೆ ಎಲ್ಲ ಚಟುವಟಿಕೆಗಳಲ್ಲೂ ಗುಂಪುಗಳಲ್ಲಿಯೇ ಇರುತ್ತವೆ. ಯಾವಾಗಲೂ ಕರ್ಕಶವಾಗಿ ಕೂಗುತ್ತ ಆಹಾರಕ್ಕಾಗಿ ಪರಸ್ಪರ ಜಗಳವಾಡುತ್ತ ಹಾರಾಡುತ್ತಿರುತ್ತವೆ. ಸಂತಾನೋತ್ಪತ್ತಿಯ ಕಾಲದಲ್ಲಂತೂ ಈ ಸ್ವಭಾವ ಹೆಚ್ಚು ವ್ಯಕ್ತವಾಗುತ್ತದೆ. ಒಂದೇ ಪ್ರಭೇದದ ಹಲವಾರು ಹಕ್ಕಿಗಳು ಗುಂಪುಗೂಡುವುದು ಸಾಮಾನ್ಯವಾದರೂ ಕೆಲವೊಮ್ಮೆ ಬೇರೆ ಪ್ರಭೇದಗಳೊಂದಿಗೆ ಟರ್ನ್, ಕಾರ್ಮೊರಾಂಟ್, ಪೆಲಿಕನ್ ಮುಂತಾದ ಬೇರೆ ಜಾತಿಯ ಹಕ್ಕಿಗಳೊಂದಿಗೆ ಇರುವುದೂ ಉಂಟು. ಮೊಟ್ಟೆಯಿಡುವ ಕಾಲದಲ್ಲಿ ಯಾವುದಾದರೂ ಸುರಕ್ಷಿತವಾದ ದ್ವೀಪವನ್ನು ಆರಿಸಿಕೊಂಡು ನೆಲದಮೇಲೆ ಇಲ್ಲವೆ ಸಣ್ಣಗಾತ್ರದ ಮರಗಳ ಮೇಲೆ ಕಡ್ಡಿ, ಸಮುದ್ರದ ಸಸ್ಯಗಳನ್ನು ಉಪಯೋಗಿಸಿ ಗೂಡುಗಳನ್ನು ನಿರ್ಮಿಸುತ್ತವೆ. ಕೆಲವು ಪ್ರಭೇದಗಳು (ಅಮೆರಿಕದ ಕ್ಯಾಲಿಫೋರ್ನಿಯ ಗಲ್, ಫ್ರಾಂಕ್ಲಿನ್ಸ್ ಗಲ್, ಚೀನದ ಸಾಂಡರ್ಸ್ ಗಲ್, ನ್ಯೂಜಿಲೆಂಡಿನ ಬಲರ್ಸ್ ಗಲ್) ಒಳನಾಡಿನ ಸರೋವರಗಳ ಬಳಿ ಗೂಡು ಕಟ್ಟುತ್ತವೆ. ಭಾರತದಲ್ಲಿ ಕಾಣಬರುವ ಕಂದು ತಲೆಯ ಗಲ್ ಹಕ್ಕಿ ಹಿಮಾಲಯದ ಲಡಾಕ್, ಟಿಬೆಟ್, ಮಾನಸಸರೋವರಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಉತ್ತರಾರ್ಧಗೋಳದ ಸಾಗರವಾಸಿಯಾದ ಕಿಟಿವೇಕ್ ಎಂಬ ಹೆಸರಿನ ಗಲ್ ಚಳಿಗಾಲದಲ್ಲಿ ಬ್ರಿಟನ್ನಿನವರೆಗೆ ವಲಸೆ ಬಂದು ಸಮುದ್ರತೀರಗಳಲ್ಲಿನ ಪ್ರಪಾತಗಳಲ್ಲಿ ಗೂಡುಕಟ್ಟಿ ಮರಿಮಾಡುತ್ತದೆ. ಬಹುಪಾಲು ಪ್ರಭೇದಗಳಲ್ಲಿ ಮೊಟ್ಟೆಗಳ ಸಂಖ್ಯೆ ಸೂಲಿಗೆ ಮೂರನ್ನು ಮೀರುವುದಿಲ್ಲ. ಮೊಟ್ಟೆಗಳ ಬಣ್ಣ ಕಂದು, ಮೇಲೆಲ್ಲ ಕಗ್ಗಂದು ಇಲ್ಲವೆ ಕಪ್ಪುಬಣ್ಣದ ಚುಕ್ಕೆಗಳಿರುತ್ತವೆ. ಗಂಡು ಹೆಣ್ಣು ಹಕ್ಕಿಗಳೆರಡೂ ಕಾವು ಕೊಟ್ಟು ಮರಿಮಾಡುವ ಮತ್ತು ಮರಿಗಳ ಪಾಲನೆಯ ಕೆಲಸವನ್ನು ಹಂಚಿಕೊಳ್ಳುತ್ತವೆ. ಅದೇ ತಾನೇ ಮೊಟ್ಟೆಯೊಡೆದು ಹೊರಬಂದ ಮರಿಹಕ್ಕಿಗಳು ಸ್ವಶಕ್ತಿಯಿಂದ ನಿಲ್ಲುವ ನಡೆದಾಡುವ ಸಾಮರ್ಥ್ಯವನ್ನು ಪಡೆದಿವೆಯಾದರೂ ಸಾಮಾನ್ಯವಾಗಿ ಪೂರ್ಣ ದೊಡ್ಡವಾಗುವವರೆಗೂ ತಂದೆತಾಯಿಗಳನ್ನು ಬಿಟ್ಟು ಕದಲುವುದಿಲ್ಲ. ಇವು ಸುಮಾರು 4–6 ವಾರಗಳಲ್ಲಿ ಹಾರುವ ಶಕ್ತಿ ಪಡೆಯುತ್ತವೆ.

ಸುಮಾರು 40ಕ್ಕೂ ಹೆಚ್ಚು ಬಗೆಯ ಗಲ್ ಹಕ್ಕಿಗಳಿವೆ ಎಂದು ಮೊದಲೇ ಹೇಳಿದೆ. ಇವುಗಳಲ್ಲಿ ಬಹುಮುಖ್ಯವಾದ ಕೆಲವು ಪ್ರಭೇದಗಳನ್ನು ಮುಂದೆ ವಿವರಿಸಲಾಗಿದೆ.

1. *ಲೇರಸ್ ಬ್ರುನಿಸಿಫ್ಯಾಲಸ್* (ಕಂದುತಲೆಯ ಗಲ್) : ಭಾರತದಲ್ಲಿ ಕಾಣಬರುವ ಬಗೆ ಇದು. ಕಾಡುಕಾಗೆ ಗಾತ್ರದ್ದು. ಬೂದಿಬಣ್ಣದ ಬೆನ್ನುಭಾಗ, ಬಿಳಿಯ ಹೊಟ್ಟೆಭಾಗ, ಕಾಫಿಬಣ್ಣದ ತಲೆ ಇದೆ. ಕರ್ಕಶವಾಗಿ ಕೀಯಾ ಎಂದು ಕೂಗುತ್ತ ಹಾರಾಡುತ್ತಿರುತ್ತದೆ.

2. *ಲೇರಸ್ ರಿಡಿಬಂಡಸ್* (ಕಪ್ಪು ತಲೆಯ ಗಲ್) : ಯುರೇಶಿಯದ ಸಮಶೀತೋಷ್ಣ ವಲಯಗಳಲ್ಲೆಲ್ಲ ಇದು ಸಾಮಾನ್ಯ. ಚಳಿಗಾಲದಲ್ಲಿ ಭಾರತಕ್ಕೂ ಬರುತ್ತದೆ. ಯುರೋಪಿನ ಕೃಷಿ ಭೂಮಿಗಳಲ್ಲಿನ ಕೀಟಗಳನ್ನು ತಿನ್ನುವುದರಿಂದ ಬಲು ಉಪಕಾರಿ ಎನಿಸಿದೆ.

3. *ಲೇರಸ್ ಮ್ಯಾರಿನಸ್* (ಕಪ್ಪು ಬೆನ್ನಿನ ಗಲ್) : ಉತ್ತರ ಅಟ್ಲಾಂಟಿಕ್ ಸಾಗರದ ತೀರಪ್ರದೇಶಗಳಲ್ಲಿ ಕಾಣಬರುತ್ತದೆ. ಗಲ್‌ಹಕ್ಕಿಗಳಲ್ಲೆಲ್ಲ ಅತಿದೊಡ್ಡದು. ಇದರ ರೆಕ್ಕೆ ಹರಡಿದಾಗ ಅಗಲ ಸುಮಾರು 1.5 ಮೀ ಗೂ ಹೆಚ್ಚು. ಬೇರೆ ಹಕ್ಕಿಗಳ ಮೊಟ್ಟೆ ಮರಿ ಮುಂತಾದುವನ್ನು ತಿನ್ನುವುದರಿಂದ ಒಂದು ರೀತಿಯ ಹಿಂಸ್ರ ಪಕ್ಷಿಯಂತಿದೆ.

4. *ಲೇರಸ್ ಆರ್ಜೆಂಟೇಟಸ್* (ಹೆರ್ರಿಂಗ್ ಗಲ್) : ಉತ್ತರಾರ್ಧಗೋಳದಲ್ಲೆಲ್ಲ ಬಲು ಸಾಮಾನ್ಯ.

5. ಲೇರಸ್ ಪಿಪಿಕ್ಸ್‌ಕನ್ (ಫ್ರಾಂಕ್ಲಿನ್ಸ್ ಗಲ್) : ಉತ್ತರ ಅಮೆರಿಕದ ಒಳನಾಡಿನಲ್ಲಿ ವಾಸಿಸುತ್ತದೆ. ಹಿಂದೊಮ್ಮೆ ಕೃಷಿಪಿಡುಗುಗಳಾದ ಮಿಡತೆಗಳನ್ನು ಸಂಪೂರ್ಣವಾಗಿ ನಾಶಮಾಡಿ ಬೆಳೆಯನ್ನು ಉಳಿಸಿಕೊಟ್ಟವೆಂದು ಅಮೆರಿಕದ ಸಾಲ್ಟ್‌ಲೇಕ್ ನಗರಗಳಲ್ಲಿ ಈ ಪ್ರಭೇದದ ಗಲ್‌ಗಳಿಗೆ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ.

6. *ಲೇರಸ್ ಕ್ಯಾಲಿಫೋರ್ನಿಕಸ್* (ಕ್ಯಾಲಿಫೋರ್ನಿಯ ಗಲ್) : ಉತ್ತರ ಅಮೆರಿಕದಲ್ಲಿನ ಪಶ್ಚಿಮ ಭಾಗಗಳಲ್ಲಿ ಬಲುಸಾಮಾನ್ಯ. ಅಲ್ಲಿನ ಒಳನಾಡಿನ ಸರೋವರಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ.

7. *ಪ್ಯಾಗೊಫಿಲ ಎಬರ್ನಿಯ* (ಐವರಿ ಗಲ್) : ಗಲ್‌ಗಳಲ್ಲೆಲ್ಲ ಬಹುಶಃ ಅತ್ಯಂತ ಸುಂದರವಾದುದು. ಮೈಬಣ್ಣ ಅಚ್ಚಬಿಳಿ. ಕಾಲುಗಳು ಮಾತ್ರ ಕಪ್ಪು. ಆರ್ಕ್‌ಟಿಕ್ ಪ್ರದೇಶಗಳಲ್ಲಿ ವಾಸಿಸುತ್ತದೆ.

8. *ರಿಸ ಟ್ರೈಡ್ಯಾಕ್ಟಿಲ* (ಕಿಟಿವೇಕ್) : ಉತ್ತರಾರ್ಧಗೋಳದ ಸಾಗರಗಳಲ್ಲಿ ಕಾಣಬರುತ್ತದೆ. ಬ್ರಿಟನ್ನಿನ ಸಮುದ್ರತೀರದ ಪ್ರಪಾತಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಇದರ ಕಾಲುಗಳಲ್ಲಿ ಹಿಂಬೆರಳು ಇಲ್ಲ.

9. *ರೋಡೋಸ್ಟಿತಿಯ ರೋಸಿಯ* (ರೋಸಿಯೇಟ್ ಗಲ್) : ಆರ್ಕ್‌ಟಿಕ್ ಪ್ರದೇಶಗಳ ವಾಸಿ. ಗುಲಾಬಿ ಬಣ್ಣದ ರೆಕ್ಕೆ ಪುಕ್ಕಗಳಿಂದಾಗಿ ಸುಂದರವಾಗಿ ಕಾಣುತ್ತದೆ.

10. *ಕ್ಸೀಮ ಸ್ಯಾಬಿನೈ* (ಸ್ಯಾಬೈನ್ಸ್ ಗಲ್) : ಇದು ಕೂಡ ಆರ್ಕ್‌ಟಿಕ್ ಪ್ರದೇಶಗಳಲ್ಲಿ ಕಾಣಬರುವಂಥದು. ಇದರ ಬಾಲ ಕವಲೊಡೆದಿದೆ. ನೆಲದಮೇಲೆ ಚೆನ್ನಾಗಿ ಓಡಲೂಬಲ್ಲದು ಇದು.

11. *ಕ್ರಿಯಾಗ್ರಸ್ ಫರ್ಕೇಟಸ್* (ಕವಲುತೋಕೆ ಗಲ್) : ಗಲಾಪಗಸ್ ದ್ವೀಪಗಳ ಮೂಲವಾಸಿ. ಬಾಲ ಎರಡು ಭಾಗಗಳಾಗಿ ಸೀಳಿದೆ.

12. *ಗೇಬಿಯಾನಸ್ ಪ್ಯಾಸಿಫಿಕಸ್ (ಪೆಸಿಫಿಕ್ ಗಲ್)* : ಟಾಸ್ಮೇನಿಯ ಮತ್ತು ದಕ್ಷಿಣ ಆಸ್ಟ್ರೇಲಿಯಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ದೇಹದ ಬಣ್ಣ ಬೂದಿ.

(ಜಿ.ಎಸ್.ಆರ್.)

**ಗಲಗು :** ಸೋರ್ಗಂ ಹ್ಯಾಲಪೆನ್ಸ್ ಎಂಬ ವೈಜ್ಞಾನಿಕ ಹೆಸರಿನ ಏಕದಳ ಸಸ್ಯ. ಪೋಯೇಸೀ ಕುಟುಂಬಕ್ಕೆ ಸೇರಿದೆ. ಯುರೋಪು ಮತ್ತು ಆಫ್ರಿಕದ ಮೆಡಿಟರೇನಿಯನ್ ಪ್ರದೇಶಗಳ ಮೂಲನಿವಾಸಿಯಾದ ಈ ಸಸ್ಯವನ್ನು ಮೊಟ್ಟಮೊದಲು ಕರ್ನಲ್ ಜಾನ್ಸನ್ ಎಂಬಾತ ತಂದು ಬೆಳೆಸಿದ್ದರಿಂದ ಇದನ್ನು ಜಾನ್ಸನ್ ಹುಲ್ಲು ಎಂದೂ ಕರೆಯುವುದುಂಟು. ದಪ್ಪವಾಗಿ ಎತ್ತರಕ್ಕೆ ಬೆಳೆಯುತ್ತದೆ. ಇದೊಂದು ಬಹುವಾರ್ಷಿಕ ಹುಲ್ಲು. ಇದಕ್ಕೆ ಅಗಲವಾದ ಎಲೆಗಳಿವೆ. ಎಲೆಯ ಮಧ್ಯನಾಳ ದಪ್ಪ ಮತ್ತು ಬಿಳುಪಾಗಿರುತ್ತದೆ. ಹೂಗಳು ಅಗಲವಾದ ಪ್ಯಾನಿಕಲ್ ಮಾದರಿಯ ಗೊಂಚಲಲ್ಲಿ ಜೋಡಣೆಗೊಂಡು ಅರಳಿದಾಗ ಎದ್ದುಕಾಣುತ್ತದೆ. ಬೀಜಗಳು ಬಲಿತಾಗ ಸಿಡಿದು ಪ್ರಸಾರವಾಗುತ್ತವೆ. ಇತರ ಹುಲ್ಲುಸಸ್ಯಗಳಲ್ಲಿರುವ ತೊಡಕು ಬೇರುಗಳ ಜೊತೆಗೆ ಇದಕ್ಕೆ ಅನೇಕ ಗುಪ್ತಕಾಂಡಗಳೂ ಇವೆ. ಗುಪ್ತಕಾಂಡಗಳ ಗೆಣ್ಣುಗಳಿಂದ ಕೊಂಬೆಗಳು ಹೊರಟು ಹೊಸಗಿಡಗಳಾಗಿ ಬೆಳೆಯುತ್ತವೆ. ಮಣ್ಣಿನಲ್ಲಿ 15–20 ಸೆಂ.ಮೀ ಕೆಳಕ್ಕೆ ಇವು ಅಡಗಿರುತ್ತವೆ. ಕಾಂಡ 7–15 ಸೆಂ.ಮೀ ಎತ್ತರಕ್ಕೆ ಬೆಳೆಯುತ್ತದೆ.

ನದಿಯ ಮೆಕ್ಕಲುಮಣ್ಣಿನ ಮತ್ತು ಎರೆಮಣ್ಣಿನ ಭೂಮಿಗಳಲ್ಲಿ ಗಲಗು ಚೆನ್ನಾಗಿ ಬೆಳೆಯುತ್ತದೆ. ಇದು ಚೆನ್ನಾಗಿ ಬೆಳೆಯಲು ಮಳೆ, ಹಳ್ಳಗಳಿಂದ ಉಕ್ಕುವ ನೀರು, ನೀರಾವರಿಯ ಪ್ರದೇಶ ಇತ್ಯಾದಿಗಳಿಂದ ಒದಗುವ ತೇವ ಆವಶ್ಯಕ. ಬಿಸಿಲನ್ನು ಬಯಸುವ ಈ ಸಸ್ಯ ಉಷ್ಣತೆ ಹೆಚ್ಚಾಗಿರುವೆಡೆ ಚೆನ್ನಾಗಿ ಬೆಳೆಯುತ್ತದೆ. ಸು.1/2 ಹೆಕ್ಟೇರಿಗೆ ಸುಮಾರು 10–12 ಕೆ.ಜಿ ಬೀಜ ಬಿತ್ತನೆಗೆ ಬೇಕಾಗುತ್ತದೆ. ಚೆನ್ನಾಗಿ ಬೆಳೆದು ಫಲ ಬಿಟ್ಟ ಮೇಲೆ ಪೈರನ್ನು ಕತ್ತರಿಸಿದ ಅನಂತರ ಮತ್ತೆ ಗಿಡ ಚಿಗುರಿ ಮರುಫಸಲು ನೀಡುತ್ತದೆ. ಹೀಗೆ ವರ್ಷಕ್ಕೆ ಎರಡು ಬೆಳೆ ಬೆಳೆಸಬಹುದು. ನೀರಾವರಿ ಭೂಮಿಯಲ್ಲಿ ಎಕರೆಗೆ 5–6 ಟನ್ ಫಸಲು ದೊರಕುತ್ತದೆ. ನದೀ ಬಯಲು ಭೂಮಿಯಲ್ಲಿ 3–4 ಟನ್ ಫಸಲನ್ನು ಪಡೆಯಬಹುದು. ಮಳೆ ನೀರನ್ನು ಆಶ್ರಯಿಸಿರುವೆಡೆ ಎಕರೆಗೆ 1–3 ಟನ್ ಫಸಲು



ದೊರಕುವುದು. ತೆನೆ ಬಂದಾಗ ಅಥವಾ ಹಾಲು ಹಿಡಿದಾಗ ಕಟಾವು ಮಾಡುವುದರಿಂದ ಸಸಾರಜನಕಾದಿ ವಸ್ತು ಅತ್ಯಧಿಕ ಪ್ರಮಾಣದಲ್ಲೂ ನಾರು ಕಡಿಮೆ ಪ್ರಮಾಣದಲ್ಲೂ ಇರುತ್ತವೆ. ಮೇವಿನಲ್ಲಿ ಶೇ.3.9 ಭಸ್ಮಾಂಶ (ಆ್ಯಷ್), ಶೇ.7.8 ಸಸಾರಜನಕಾದಿ ವಸ್ತುವೂ ಶೇ.1.7 ಮೇದೋಭಾಗವೂ ಶೇ.32.0 ನಾರೂ ಇರುತ್ತವೆ. (ಎಂ.)

**ಗಲಾಪಗಸ್ ದ್ವೀಪಗಳು :** ಸಮಭಾಜಕೀಯ ಪೆಸಿಫಿಕ್ ಸಾಗರದಲ್ಲಿ, ಈಕ್ವಡಾರಿನ ಪಶ್ಚಿಮಕ್ಕೆ 800 ಕಿಮೀಗಳಿಂದ 1320ಕಿಮೀಗಳ ವರೆಗೆ 57500ಚ.ಕಿಮೀಗಳಲ್ಲಿ ಹರಡಿರುವ 14 ದೊಡ್ಡ ಮತ್ತು ಹಲವಾರು ಸಣ್ಣ ದ್ವೀಪಗಳ ಗುಂಪು. ಇವುಗಳ ಒಟ್ಟು ವಿಸ್ತೀರ್ಣ 7570 ಚ.ಕಿಮೀ. ಇವುಗಳಲ್ಲಿ ಅತ್ಯಂತ ದೊಡ್ಡದೂ ಎತ್ತರವಾದದ್ದೂ ಆದ ದ್ವೀಪ ಆಲ್ಬೆಮಾರ್ಲ್.

ಈ ದ್ವೀಪಗಳ ಉಗಮ ಹೇಗಾಯಿತೆಂಬುದು ನಿರ್ವಿವಾದವಾಗಿ ಇನ್ನೂ ಸ್ಥಾಪಿತವಾಗಿಲ್ಲ. ಇವು ಅಮೆರಿಕ ಖಂಡದೊಂದಿಗೆ ಎಂದಿಗೂ ಸೇರಿರಲಿಲ್ಲವೆಂದು ಕಾಣುತ್ತದೆ. ಈಗ ಜೀವಂತವಾಗಿಲ್ಲದ ಅಗ್ನಿ ಪರ್ವತಗಳ ಲಾವದಿಂದ ಇವು ಬಹಳಮಟ್ಟಿಗೆ ಕೂಡಿವೆ. ಆಲ್ಬೆಮಾರ್ಲ್‌ನ ಒಂದು ಜ್ವಾಲಾಮುಖಿ 1948ರಿಂದ ಈಚೆಗೆ ಮೂರು ಬಾರಿ ಜ್ವಾಲೆ ಉಗುಳಿತು.

ಈ ದ್ವೀಪಸ್ತೋಮ ಉಷ್ಣವಲಯದಲ್ಲಿದ್ದರೂ ಇಲ್ಲಿಯ ವಾಯುಗುಣ ಅನೇಕ ವ್ಯತಿಕ್ರಮಗಳಿಂದ ಕೂಡಿದ್ದು, ತೀರಪ್ರದೇಶದಲ್ಲಿ ಮಳೆ ಬಹಳ ಕಡಿಮೆ. ಗಾಳಿಯ ಉಷ್ಣತೆ $70^0$–$85^0$ಫ್ಯಾ. ಸಮುದ್ರದ ನೀರಿನ ಮೇಲ್ಭಾಗದ ಉಷ್ಣತೆಯೂ ಕಡಿಮೆ ($63^0$–$86^0$ಫ್ಯಾ.). ಇದಕ್ಕೆ ಕಾರಣವೆಂದರೆ, ಈ ದ್ವೀಪಸ್ತೋಮದ ಸುತ್ತ ಬುದ್ಬುದಿಸುವ ಶೀತೋದಕ ಪ್ರವಾಹ.

ಭಾರಿ ಮೊಂಡುಗಳ್ಳಿ, ಕುರುಚಲು ಮತ್ತು ಕುಳ್ಳಾದ ಪರ್ಣಪಾತಿ ವೃಕ್ಷಗಳು ಕರಾವಳಿಯಲ್ಲಿ ವಿಶೇಷವಾಗಿವೆ. ಒಳನಾಡಿನಲ್ಲಿ ಪೇರಲ ಮತ್ತು ಸೂರ್ಯಕಾಂತಿ ಬೆಳೆಯುತ್ತವೆ.

ಇಲ್ಲಿ ನಾನಾ ಜಾತಿಯ ಪಕ್ಷಿಗಳು ಮತ್ತು ಉರಗಗಳು ಉಂಟು. ರಾಕ್ಷಸಾಕಾರದ ಆಮೆ ಮತ್ತು ಇಗ್ವಾನ ಇಲ್ಲಿಯ ಮುಖ್ಯ ಪ್ರಾಣಿಗಳು. ಈ ದ್ವೀಪಗಳ ಪ್ರಾಣಿಗಳ ಸಂರಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ.

ಮೀನುಗಾರಿಕೆ ಮತ್ತು ಚರ್ಮ ಹದಮಾಡುವುದು ಇಲ್ಲಿಯ ಮುಖ್ಯ ಕಸುಬುಗಳು. ಚರ್ಮ, ವಸ್ತ್ರ, ಗಂಧಕ ಮತ್ತು ಮೀನು ಇಲ್ಲಿಯ ಮುಖ್ಯ ನಿರ್ಯಾತಗಳು.

ಗಲಾಪಗಸ್ ದ್ವೀಪಸ್ತೋಮವನ್ನು 1535ರಲ್ಲಿ ಪನಾಮಾದ ಬಿಷಪ್ ಟಾಮಸ್ ಡಿ ಬೆರ್ಲಾಂಗ್ ಕಂಡುಹಿಡಿದ. ಪ್ರಸಿದ್ಧ ಕಾದಂಬರಿಕಾರ ಹರ್ಮನ್ ಮೆಲ್ವಿಲ್ 1841ರಲ್ಲಿ ಈ ದ್ವೀಪಸ್ತೋಮವನ್ನು ಸಂದರ್ಶಿಸಿದ್ದ.

1835ರಲ್ಲಿ ಚಾರಲ್ಸ್ ಡಾರ್ವಿನ್ ಈ ದ್ವೀಪಗಳಿಗೆ ಭೇಟಿ ಕೊಟ್ಟು ಇಲ್ಲಿಯ ಅಸಾಧಾರಣ ಜೀವಿಗಳನ್ನು ಅಭ್ಯಸಿಸಿ ತನ್ನ ಸಿದ್ಧಾಂತಗಳಿಗೆ ಅನೇಕ ವಿವರಗಳನ್ನು ಪಡೆದುಕೊಂಡ. ಈತನ ಭೇಟಿಯ ಅನಂತರ ಈ ದ್ವೀಪಸ್ತೋಮ ವಿಜ್ಞಾನಿಗಳ ಗಮನ ಸೆಳೆಯಿತು.

1832ರಲ್ಲಿ ಈ ದ್ವೀಪಸ್ತೋಮವನ್ನು ಈಕ್ವಡಾರ್ ಅಧಿಕೃತವಾಗಿ ವಶಪಡಿಸಿ ಕೊಂಡಿತು. ಚಾರಲ್ಸ್ ದ್ವೀಪದಲ್ಲಿ ವಸತಿ ಆರಂಭವಾಯಿತು. 1920 ರಿಂದ ಕೆಲವು ಐರೋಪ್ಯರೂ ಇಲ್ಲಿ ಬಂದು ನೆಲೆಸಿದರು. ಎರಡನೆಯ ಮಹಾಯುದ್ಧ ಕಾಲದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಇಲ್ಲೊಂದು ವಿಮಾನ ನೆಲೆ ಸ್ಥಾಪಿಸಿತ್ತು. ಈಚೆಗೆ ಈಕ್ವಡಾರ್ ಜನ ಅಧಿಕ ಸಂಖ್ಯೆಯಲ್ಲಿ ಇಲ್ಲಿ ನೀರಿನ ಸೌಕರ್ಯ ಇರುವೆಡೆಗಳಲ್ಲಿ ನೆಲಸುತ್ತಿದ್ದಾರೆ. (ಎಂ.ಎ.ಎಚ್.)

**ಗಲಿಪೊಲಿ :** ಐರೋಪ್ಯ ತುರ್ಕಿಯ ಚಾನಾಕ್ಕಾಲೆ ಪ್ರಾಂತ್ಯದಲ್ಲಿ, ಡಾರ್ಡನೆಲ್ಸ್ ಜಲಸಂಧಿಯ ಈಶಾನ್ಯ ತುದಿಯಲ್ಲಿ, ಮಾರ್ಮರ ಸಮುದ್ರದ ಪಶ್ಚಿಮ ಪ್ರವೇಶದ್ವಾರದ ಎಡೆಯಲ್ಲಿ ಉ.ಅ. $40^0$ 26' ಮತ್ತು ಪೂ.ರೇ. $26^0$ 38' ಮೇಲೆ ಇರುವ ಒಂದು ರೇವುಪಟ್ಟಣ. ಕಿರಿದಾದ ಪರ್ಯಾಯದ್ವೀಪವೊಂದರ ಮೇಲಿದೆ. ಇದರ ಎರಡೂ ಬದಿಗಳಲ್ಲಿ–ಎಂದರೆ ಮಾರ್ಮರ ಸಮುದ್ರದ ಕಡೆಗೂ ಇಜೀಯನ್ ಸಮುದ್ರದ ಕಡೆಗೂ ಮುಖ ಮಾಡಿದಂತೆ–ಎರಡು ಬಂದರುಗಳಿವೆ. ಇಸ್ತಾಂಬೂಲಿಂದ ಇಲ್ಲಿಗೆ ಸು. 211ಕಿ.ಮೀ ದೂರ. ಇಲ್ಲಿ ಅನೇಕ ಮಸೀದಿಗಳು, ರೋಮನ್ ಮತ್ತು ಬಿಜಾಂಟೈನ್ ಅವಶೇಷಗಳು, 483–565ರಲ್ಲಿದ್ದ 1ನೆಯ ಜಸ್ಟಿನಿಯನ್ ಚಕ್ರವರ್ತಿಯ ಮದ್ದಿನ ಉಗ್ರಾಣ, ಚಚ್ಚೌಕನಾದ ಕೋಟೆ ಮತ್ತು ಕೆಲವು ಗೋರಿಗಳು ಇವೆ. ಇಸ್ತಾಂಬೂಲಿನಿಂದ ಇಲ್ಲಿಗೆ ಹಡಗು ಸಂಚಾರವುಂಟು. ಹಡಗುಗಳಿಗೆ ಸೂಚನೆ ನೀಡುವುದಕ್ಕಾಗಿ ಕಟ್ಟಲಾದ ಎತ್ತರವಾದ ದೀಪಸ್ತಂಭವೊಂದು ಇಲ್ಲಿದೆ. ಇಲ್ಲಿಂದ ಎಡಿರ್ನೆಗೂ ಇಸ್ತಾಂಬೂಲಿಗೂ ಹೆದ್ದಾರಿಯಿದೆ. ಇದೊಂದು ಮೀನುಗಾರಿಕೆ ಕೇಂದ್ರ. ಇಲ್ಲಿ ರೇಷ್ಮೆ, ಕರ್ಪೂರ, ಚರ್ಮ, ಕಬ್ಬಿಣ ಮತ್ತು ಪೆಟ್ರೋಲಿಯಂ ಕೈಗಾರಿಕೆಗಳಿವೆ. ಇಸ್ತಾಂಬೂಲಿನ ರಕ್ಷಣೆಯ ದೃಷ್ಟಿಯಿಂದ ಇದು ಆಯಕಟ್ಟಿನ ಸ್ಥಳವಾಗಿದೆ. 1ನೆಯ ಮಹಾಯುದ್ಧದ ಕಾಲದಲ್ಲಿ 1915ರಲ್ಲಿ ಮಿತ್ರ ರಾಷ್ಟ್ರಗಳು ಟರ್ಕಿ ಮತ್ತು ಆಸ್ಟ್ರಿಯಾಗಳ ಮೇಲೆ ಧಾಳಿ ನಡೆಸಿ ಯುದ್ಧಕ್ಕೆ ಹೊಸ ತಿರುವು ಕೊಡಬಯಸಿದವು. ಆದರೆ ಬ್ರಿಟನ್ ಮತ್ತು ಫ್ರಾನ್ಸ್ ಯುದ್ಧ ನೌಕೆ ಡಾರ್ಡ್‌ನೆಲ್ಸ್‌ನಲ್ಲಿ ಭಾರಿ ನಷ್ಟವನ್ನನುಭವಿಸಿತು. ಈ ಯುದ್ಧ ಕಾಲದಲ್ಲಿ ಇದು ಬಹಳ ಮಟ್ಟಿಗೆ ನಾಶವಾಯಿತು. (ಪಿ.ಎಂ.ಯು.ಎಸ್.)

**ಗಲೀನ :** ಸೀಸದ ಮುಖ್ಯ ಅದಿರು. ರಾಸಾಯನಿಕವಾಗಿ ಸೀಸದ ಸಲ್ಫೈಡ್ PbS. ಇದು ಉತ್ತಮ ನಿಕ್ಷೇಪವಾಗಿ ದೊರೆಯುತ್ತದೆ. ಸಾಮಾನ್ಯವಾಗಿ ಉತ್ತಮ ಹರಳು ಗುಚ್ಛಗಳಂತೆ ಇದರ ಆಕಾರ ಉಂಟು. ಲೋಹದಂತೆ ಚೆನ್ನಾಗಿ ಹೊಳೆಯುತ್ತದೆ. ಚೌಕಾಕಾರದ ಸೀಳುಗೆರೆಗಳು ಇದರ ಮೇಲೆ ಬಲುಸ್ಪಷ್ಟವಾಗಿ ಕಾಣುತ್ತವೆ. ಸಾಂದ್ರತೆ 7.4–7.6. ಮೋಕಾಠಿನ್ಯಮಾನದಲ್ಲಿ ಇದರ ಕಾಠಿನ್ಯ 2.5–2.75ರವರೆಗಿದೆ. ಇದರ ಬಣ್ಣ ಮತ್ತು ಒರೆ ಸೀಸದ ಬೂದು ಬಣ್ಣವಾಗಿದೆ. ಸೀಸದ ಸಲ್ಫೈಡ್ ಅದಿರಾದ ಗಲೀನ ಸಾಧಾರಣವಾಗಿ ತಾಮ್ರ, ಸತು, ಆಂಟಿಮನಿ, ಆರ್ಸೆನಿಕ್ ಮುಂತಾದ ಲೋಹ ಸಲ್ಫೈಡುಗಳೊಂದಿಗೆ ದೊರೆಯುತ್ತವೆ. ಸೀಸ ನಿಕ್ಷೇಪಗಳೊಂದಿಗೆ ಸತು ನಿಕ್ಷೇಪಗಳು,



ಗಲೀನದ ಮೂರು ಬಗೆಯ ಹರಳುಗಳು

ಸತು ನಿಕ್ಷೇಪಗಳೊಂದಿಗೆ ಸೀಸ ನಿಕ್ಷೇಪಗಳು ಸಾಮಾನ್ಯವಾಗಿ ಕೂಡಿಲ್ಲದಿದ್ದರೂ ಇವೆರಡು ಲೋಹದ ಅದಿರುಗಳು ಒಂದೆಡೆಯಲ್ಲಿರುವುದುಂಟು. ಗಲೀನದಿಂದ ಸುಲಭವಾಗಿ ಬೇರ್ಪಡಿಸಬಹುದಾದ ಬೆಳ್ಳಿ ಕೆಲವು ಸಂದರ್ಭಗಳಲ್ಲಿ ಲಾಭಕರವಾದ ಗಾತ್ರದಲ್ಲಿ ಇರುವುದುಂಟು. ಆಗ ಅದಕ್ಕೆ ಆರ್ಜೆಂಟಿಫೆರಸ್ ಗಲೀನ ಅಥವಾ ರಜತಾನ್ವಿತ ಗಲೀನ ಎಂದು ಹೆಸರು.

ಭಾರತದಲ್ಲಿ ಸೀಸದ ಅದಿರು ಬಹಳ ಕಡೆ ಸಿಕ್ಕಿದ್ದರೂ ಆರ್ಥಿಕ ದೃಷ್ಟಿಯಿಂದ ಹೇಳಿಕೊಳ್ಳುವಂಥ ಉತ್ತಮ ನಿಕ್ಷೇಪಗಳಿಲ್ಲ. ಪ್ರಸಕ್ತ ರಾಜಸ್ತಾನದ ಭವಾರ್ ಸೀಸದ ಅದಿರು ನಿಕ್ಷೇಪ ಬಹಳ ಮುಖ್ಯವಾದದ್ದು. ಇಲ್ಲಿ ರಜತಾನ್ವಿತ ಸೀಸದ ಅದಿರು ಸತುವಿನ ಜೊತೆಯಲ್ಲಿ ಡಾಲೊಮೈಟ್ ಶಿಲೆಯ ಬಿರುಕುಗಳಲ್ಲಿ ಅಡಕವಾಗಿದೆ. ಸದ್ಯದಲ್ಲಿ ಭಾರತದ ಲೋಹ ಕಾರ್ಪೊರೇಷನ್ನಿನವರು ಈ ಅದಿರಿಗಾಗಿ ಮೋಚಿಯಮಾಗ್ರ ಎಂಬ ಬೆಟ್ಟದಲ್ಲಿ ಗಣಿ ಕೆಲಸ ನಡೆಸುತ್ತಿದ್ದಾರೆ. ಮೈಸೂರಿನ ಕೆಲವು ಪ್ರದೇಶಗಳಲ್ಲಿ ತಾಮ್ರದ ಅದಿರಿನೊಂದಿಗೆ ಅಥವಾ ಶುದ್ಧರೂಪದಲ್ಲಿ ಸೀಸದ ಅದಿರು ನಿಕ್ಷೇಪಗಳಿವೆ. ಆದರೆ ಇವೆಲ್ಲವೂ ಅಷ್ಟು ದೊಡ್ಡ ಗಾತ್ರದ ನಿಕ್ಷೇಪಗಳಲ್ಲ. ಬೆಳ್ಳಿ ಬೆರೆತ ಗಲೀನ ಅದಿರು ಮುಖ್ಯವಾಗಿ ಚಿತ್ರದುರ್ಗದ ಸಮೀಪದಲ್ಲಿ ಮತ್ತು ಗುಡ್ಡದ ರಂಗಪ್ಪನಹಳ್ಳಿ, ಕುರುಬರ ಮರಡೀಕೆರೆ ಸುತ್ತಮುತ್ತ ಅನೇಕ ಸ್ಥಳಗಳಲ್ಲಿ ಕಂಡುಬಂದಿದೆ. ಈ ಪ್ರದೇಶದಲ್ಲಿ 16–19 ಕಿಮೀ ಉದ್ದದ ಕ್ಲೋರೈಟ್ ಪದರ ಶಿಲಾಹರವನ್ನು ಹಾಯ್ದಿರುವ ಅನೇಕ ಬೆಣಚು ಸಿರಗಳಲ್ಲಿ ಗಲೀನ ಬಿಡಿ ಹರಳುಗಳಂತೆಯೂ ಗೊಂಚಲುಗಳಂತೆಯೂ ಮಡಿಗಳಂತೆಯೂ ಸಿಗುತ್ತದೆ. (ಟಿ.ಟಿ.)

**ಗಲೀವರ್ಸ್ ಟ್ರಾವಲ್ಸ್ :** ನೋಡಿ– ಸ್ವಿಫ್ಟ್, ಜೊನ್ಯಾಥನ್

**ಗಲ್ಫ್ ಸ್ಟ್ರೀಂ :** ಮೆಕ್ಸಿಕೋ ಕೊಲ್ಲಿಯಲ್ಲಿ (ಗಲ್ಫ್) ಉಗಮಿಸಿ, ಫ್ಲಾರಿಡ ಜಲಸಂಧಿಯ ಮೂಲಕ ಸಾಗಿ, ಅಮೆರಿಕ ಸಂಯುಕ್ತಸಂಸ್ಥಾನದ ತೀರಕ್ಕೆ ಸಮಾನಾಂತರದಲ್ಲಿ ಈಶಾನ್ಯ ದಿಕ್ಕಿನಲ್ಲಿ ಹರಿದು ಹೋಗುವ ಪ್ರವಾಹ (ಸ್ಟ್ರೀಂ). ಬ್ರಿಟಿಷ್ ದ್ವೀಪಗಳ ಆಚೆಗೂ ವ್ಯಾಪಿಸಿಕೊಂಡಿರುವ ಪ್ರವಾಹದ ಈ ಹೆಸರು ವಾಸ್ತವವಾಗಿ ಹ್ಯಾಟೆರಸ್ ಮತ್ತು ನ್ಯೂಫಂಡ್‌ಲ್ಯಾಂಡ್ ತೀರಗಳ ನಡುವಣ ಭಾಗಕ್ಕೆ ಮಾತ್ರ ಅನ್ವಯಿಸುತ್ತದೆ. ಗಾಢ




ಅಥವಾ ಕಡು ನೀಲಿ ಬಣ್ಣದ ಈ ಉದಕದ ಮೇಲ್ಮೈನಲ್ಲಿ ಶೇ. 36ರಷ್ಟು ಲವಣವೂ, $80^0$ ಫ್ಯಾ. ಉಷ್ಣತೆಯೂ ಇರುವುದೆಂದು ಹೇಳಲಾಗಿದೆ. ಕೊಲ್ಲಿಯನ್ನು ಬಿಟ್ಟು ಹೊರಡುವಾಗ 80 ರಿಂದ 160 ಕಿಮೀಗಳಷ್ಟು ಅಗಲವಾಗಿಯೂ ಸುಮಾರು 610 ಮೀಟರ್‌ಗಿಂತಲೂ ಹೆಚ್ಚು ಆಳವಾಗಿಯೂ ಇದ್ದು, ದಿನವೊಂದಕ್ಕೆ ಸುಮಾರು 108 ಕಿಮೀ ವೇಗದಲ್ಲಿ ಪ್ರವಹಿಸುತ್ತದೆ. ಈ ವೇಗ ಮಿಸಿಸಿಪಿ ನದಿಯ ವೇಗಕ್ಕಿಂತ 1000

ಪಟ್ಟು ಹೆಚ್ಚು ಅಂಟಾರ್ಕ್‌ಟಿಕ್ ವೃತ್ತದ ಬಳಿಯ ಪ್ರವಾಹವನ್ನು ಬಿಟ್ಟರೆ ಇದೇ ಜಗತ್ತಿನ ದೊಡ್ಡ ಸಾಗರೋದಕ ಪ್ರವಾಹ.

ಅಟ್ಲಾಂಟಿಕ್ ಸಮುದ್ರದ ಸಮಭಾಜಕ ವೃತ್ತದ ಬಳಿಯಲ್ಲಿ ಬೀಸುವ ವಾಣಿಜ್ಯ ಮಾರುತಗಳು ನೀರಿನ ಪ್ರವಾಹವನ್ನು ಪಶ್ಚಿಮದತ್ತ ತಿರುಗಿಸುತ್ತವೆ. ಆ ಪ್ರವಾಹದ ಕವಲುಗಳು ಉತ್ತರ ಮತ್ತು ದಕ್ಷಿಣ ಸಮಭಾಜಕೀಯ ಪ್ರವಾಹಗಳೆಂದು ಹೆಸರಾಗಿವೆ. ದಕ್ಷಿಣ ಸಮಭಾಜಕೀಯ ಪ್ರವಾಹ ಪಶ್ಚಿಮದತ್ತ ಹರಿದು ಬ್ರೆಜಿ಼ಲಿನ ಉತ್ತರ ಕರಾವಳಿಗೆ ಅಪ್ಪಳಿಸಿದಾಗ ಅಲ್ಲಿಯ ನೀರು ಕ್ಯಾರಿಬೀಯನ್ ಸಾಗರಕ್ಕೆ ನುಗ್ಗುತ್ತದೆ; ಅದು ಉತ್ತರ ಸಮಭಾಜಕೀಯ ಪ್ರವಾಹದ ಉಷ್ಣಪ್ರವಾಹದೊಂದಿಗೆ ಬೆರೆತು ಅದರ ಉಷ್ಣತೆಯನ್ನು ಹೆಚ್ಚಿಸುತ್ತದೆ. ಈ ಸಂಯುಕ್ತ ಪ್ರವಾಹ ಇಕ್ಕಟ್ಟಾಗಿರುವ ಯುಕಟ್ಯಾನ್ ಕಾಲುವೆ ಮತ್ತು ಫ್ಲಾರಿಡ ಜಲಸಂಧಿ ಇವುಗಳ ಮೂಲಕ ಹಾಯ್ದುಬಂದಾಗ ಗಲ್ಫ್ ಸ್ಟ್ರೀಂ ಎನ್ನಿಸಿಕೊಳ್ಳುತ್ತದೆ.

ಈ ಉಷ್ಣೋದಕ ಪ್ರವಾಹ ಬಹಾಮ ಕರಾವಳಿಯನ್ನು ದಾಟಿ ಹೋಗುವಾಗ ಆಂಟಿಲೆಸ್ ಪ್ರವಾಹದೊಡನೆ ಬೆರೆಯುತ್ತದೆ. ಇದು ವೆಸ್ಟ್ ಇಂಡೀಸಿನ ಅಟ್ಲಾಂಟಿಕ್ ಪಾರ್ಶ್ವದಲ್ಲಿ ವಾಯವ್ಯಾಭಿಮುಖವಾಗಿ ಹರಿಯುವ ಪ್ರವಾಹ. ಈ ಸಂಯುಕ್ತ ಪ್ರವಾಹ ಮುಂದೆ ಸಾಗಿದಂತೆ ಇದರ ವೇಗ ಕಡಿಮೆಯಾಗುತ್ತದೆ, ಪಾತ್ರ ಅಗಲವಾಗುತ್ತದೆ. ಮುಂದೆ ಉತ್ತರ ಅಮೆರಿಕದ ಅಟ್ಲಾಂಟಿಕ್ ಕರಾವಳಿಗೆ ಸಮಾನಾಂತರದಲ್ಲಿ ಸಾಗುತ್ತದೆ. ಕರಾವಳಿಗೂ ಈ ಉಷ್ಣೋದಕ ಪ್ರವಾಹಕ್ಕೂ ನಡುವೆ ಇರುವ ನೀರಿನ ಕಿರುಧಾರೆಗೆ ಕೋಲ್ಡ್ ವಾಲ್ (ತಂಪುಗೋಡೆ) ಎಂದು ಹೆಸರು. ನ್ಯೂಫಂಡ್‌ಲ್ಯಾಂಡ್ ತೀರವನ್ನು ತಲಪುವ ಹೊತ್ತಿಗೆ ಇದರ ವೇಗ ತುಂಬ ಕಡಿಮೆಯಾಗಿರುತ್ತದೆ. ಅಲ್ಲಿ ಇದು ಮತ್ತಷ್ಟು ಹರಡಿಕೊಂಡು ಸಾಧಾರಣ ಉಷ್ಣೋದಕ ಪ್ರವಾಹವಾಗಿ, ಪೂರ್ವಾಭಿಮುಖವಾಗಿ ಯುರೋಪಿನತ್ತ ಹರಿಯುತ್ತದೆ. ಇಲ್ಲಿಂದ ಮುಂದೆ ಇದು ಉತ್ತರ ಅಟ್ಲಾಂಟಿಕ್ ಪ್ರವಾಹ ಎನಿಸಿಕೊಳ್ಳುತ್ತದೆ. ಯುರೋಪಿನ ಬಳಿಗೆ ಬಂದಮೇಲೆ ಈ ಪ್ರವಾಹ ಎರಡು ಕವಲುಗಳಾಗಿ ಒಡೆಯುತ್ತದೆ. ಒಂದು ಕವಲು ದಕ್ಷಿಣಾಭಿಮುಖವಾಗಿ ಹರಿಯತೊಡಗಿ ಆಫ್ರಿಕದ ಪಶ್ಚಿಮ ಕರಾವಳಿಯನ್ನು ಸೇರುತ್ತದೆ. ಇನ್ನೊಂದು ಕವಲು ಬ್ರಿಟಿಷ್ ದ್ವೀಪಗಳತ್ತ ಸಾಗುತ್ತದೆ. ಈ ಕವಲು ಮುಂದೆ ಮತ್ತೆ ಮೂರು ಭಾಗಗಳಾಗಿ ಒಡೆಯುತ್ತದೆ. ಒಂದು ಉಪಕವಲು ಸ್ಕಾಟ್ಲೆಂಡಿನ ಉತ್ತರಕ್ಕಿರುವ ಫೇರೋ ಮತ್ತು ಶೆಟ್ಲೆಂಡ್ ದ್ವೀಪಸ್ತೋಮಗಳ ನಡುವೆ ಸಾಗಿ, ಆರ್ಕ್‌ಟಿಕ್ ಸಮುದ್ರದಲ್ಲಿ ಲೀನವಾಗುತ್ತದೆ. ಎರಡನೆಯ ಉಪಕವಲು ಐಸ್‌ಲೆಂಡಿನ ಪಶ್ಚಿಮ ಕರಾವಳಿಯಲ್ಲಿ ಸಾಗುತ್ತದೆ. ಮೂರನೆಯ ಉಪಕವಲು ಗ್ರೀನ್‌ಲೆಂಡಿನ ಕರಾವಳಿಯಲ್ಲಿ ಸಾಗಿ ಡೇವಿಸ್ ಜಲಸಂಧಿಯಲ್ಲಿ ಹರಿದು ಬ್ಯಾಫಿನ್ ಕೊಲ್ಲಿಯಲ್ಲಿ ಲೀನವಾಗುತ್ತದೆ.

ಗ್ರೇಟ್ ಬ್ರಿಟನ್ ಮತ್ತು ವಾಯವ್ಯ ಯುರೋಪ್ ವಾಯುಗುಣ ಅಷ್ಟೇ ಉತ್ತರಕ್ಕಿರುವ ಉತ್ತರ ಅಮೆರಿಕನ್ ಪ್ರದೇಶಗಳಿಗಿಂತ ಹಿತಕರವಾಗಿರುವುದಕ್ಕೆ ಗಲ್ಫ್ ಸ್ಟ್ರೀಮಿನ ಮೇಲಿನಿಂದ ಬೀಸುವ ಮಾರುತಗಳೇ ಕಾರಣ. ಈ ಮಾರುತಗಳು ಹಾದುಹೋಗುವ ಪ್ರದೇಶದಲ್ಲೆಲ್ಲ ವಾತಾವರಣ ಬೆಚ್ಚಗಿರುತ್ತದೆ. ಜನವರಿ ತಿಂಗಳಿನಲ್ಲಿ ಉತ್ತರ ನಾರ್ವೆಯ ಉಷ್ಣತೆ ಆ ಅಕ್ಷಾಂಶದಲ್ಲಿರುವ ಇತರ ಪ್ರದೇಶಗಳಿಗಿಂತ $45^0$ ಫ್ಯಾ. ಅಧಿಕವಾಗಿರುತ್ತದೆ. ಈ ಉಷ್ಣೋದಕ ಪ್ರವಾಹದಿಂದಾಗಿ ವಾಯವ್ಯ ಯುರೋಪಿನ ಅನೇಕ ಬಂದರುಗಳು ಚಳಿಗಾಲದಲ್ಲಿ ಹಿಮಗಟ್ಟಿರುವುದಿಲ್ಲ. ಈ ಪ್ರವಾಹದ ಪ್ರಭಾವಕ್ಕೊಳಗಾದ, ಉತ್ತರ ನಾರ್ವೆಯ ಹಾಮೆರ್‌ಫೆಸ್ಟ್ ನಗರ (ಉ.ಅ. $70^0$ 38') ಚಳಿಗಾಲದಲ್ಲೂ ಹಿಮಮುಕ್ತವಾಗಿರುತ್ತದೆ. ಇದು ಪ್ರಮುಖ ಮೀನುಗಾರಿಕೆ ಕೇಂದ್ರ. ಆದರೆ ಇದಕ್ಕೆ 1200 ಕಿಮೀ ದಕ್ಷಿಣದಲ್ಲಿ ರಷ್ಯ ಗಣರಾಜ್ಯದ ರೀಗ ಬಂದರು ಚಳಿಗಾಲದಲ್ಲಿ ಹಿಮಾವೃತವಾಗಿರುತ್ತದೆ.

ಗಲ್ಫ್ ಸ್ಟ್ರೀಂ ನೌಕಾ ಸಾರಿಗೆಗೂ ನೆರವಾಗುತ್ತದೆ. ದಕ್ಷಿಣ ಅಮೆರಿಕದಿಂದ ಅಟ್ಲಾಂಟಿಕ್ ಕರಾವಳಿಯ ಬಂದರುಗಳತ್ತ ಯಾನಮಾಡುವ ತೈಲವಾಹಕ ಮತ್ತು ಅದಿರುಸಾಗಣೆ ನೌಕೆಗಳು ತಮ್ಮ ಉತ್ತರಾಭಿಮುಖ ಯಾನದಲ್ಲಿ ಈ ಪ್ರವಾಹ ಪಥವನ್ನೇರುತ್ತವೆ. ಇದರಿಂದ ಯಾನದ ಅವಧಿ ಕಡಿಮೆಯಾಗುತ್ತದೆ. ಹೀಗೆ ಇದು ವಾಣಿಜ್ಯ ಹಾಗೂ ವಾಯುಗುಣ ದೃಷ್ಟಿಯಿಂದ ತುಂಬ ಮಹತ್ತ್ವಪೂರ್ಣವೆನಿಸಿದ ಪ್ರವಾಹ. **(ಪಿ.ಜಿ.ಡಿ.)**

**ಗಲ್‌ಸ್ಟ್ರಾಂಡ್ ಆಲ್‌ವಾರ್ :** 1862–1930. ಸ್ವೀಡನಿನ ನೇತ್ರವೈದ್ಯ. ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ 1911ರ ನೊಬೆಲ್ ಪಾರಿತೋಷಿಕವನ್ನು ಪಡೆದ ಈತ ಸ್ವೀಡನಿನ ಲಾಂಟ್ಸ್‌ಕ್ರೂನಾ ಎಂಬಲ್ಲಿ 1862ರ ಜೂನ್ 5ರಂದು ಜನಿಸಿದ. ವೈದ್ಯಶಾಸ್ತ್ರದಲ್ಲಿ– ಅದರಲ್ಲೂ ಕಣ್ಣಿಗೆ ಸಂಬಂಧಿಸಿದ ಅಧ್ಯಯನ, ರೋಗನಿದಾನ, ಚಿಕಿತ್ಸೆ ಮುಂತಾದವುಗಳಲ್ಲಿ ಹೆಚ್ಚಿನ ಆಸಕ್ತಿ ತಳೆದಿದ್ದ. ಉಪ್ಸಲ ಎಂಬಲ್ಲಿ ಈತ ಕಣ್ಣಿನ ರೋಗ ವಿಜ್ಞಾನದ ಪ್ರಾಧ್ಯಾಪಕನಾದ (1894). ಅನಂತರ 1913ರಲ್ಲಿ ಈತನನ್ನು ಅಲ್ಲೇ ದೃಗ್ವಿಭಾಗದ ಪ್ರಾಧ್ಯಾಪಕನನ್ನಾಗಿ ನೇಮಿಸಲಾಯಿತು. ವಕ್ರೀಭವನ ಶಾಸ್ತ್ರಕ್ಕೆ (ಡಯಾಪ್ಟರಿಕ್ಸ್) ಸಂಬಂಧಿಸಿದಂತೆ ಸಾರ್ವತ್ರಿಕ ನಿಯಮಗಳನ್ನು ಕುರಿತ ಇವನ ಸಂಶೋಧನೆಗಳು ದೃಗ್‌ವಿಜ್ಞಾನತತ್ತ್ವ, ಕಣ್ಣಿನೊಳಗಣ ದೃಷ್ಟಿಪ್ರತಿಬಿಂಬಗಳ ಬಿಡಿಸಿಕೆ, ಬೆಳಕು ಮತ್ತು ಕಣ್ಣಿಗೂ ಇರುವ ಸಂಬಂಧ–ಈ ಮುಂತಾದ ಪ್ರಕಾರಗಳಲ್ಲಿ ಒಂದು ಹೊಸದೃಷ್ಟಿ ಕೋನವನ್ನು ಉಂಟುಮಾಡಿದವು. ಈ ಸಂಶೋಧನೆಗಳಿಗಾಗಿಯೇ ಈತನಿಗೆ ನೊಬೆಲ್ ಪಾರಿತೋಷಿಕ ಲಭಿಸಿದ್ದು. ಇವನ ಹಲವಾರು ಬರೆಹಗಳಲ್ಲಿ 1900, 1908 ಮತ್ತು 1911ರಲ್ಲಿ ಪ್ರಕಟಗೊಂಡ ವೈದ್ಯಕೀಯ ಲೇಖನಗಳು ಮಹತ್ತ್ವವುಳ್ಳವು. ಈತನಿಗೆ ಡಬ್ಲಿನ್ ವಿಶ್ವವಿದ್ಯಾಲಯ ಗೌರವ ಡಾಕ್ಟರ್ ಆಫ್ ಸೈನ್ಸ್ ಪದವಿ ನೀಡಿ ಗೌರವಿಸಿತು. ಕನ್ನಡಕದ ಮಸೂರಗಳು, ಕಣ್ಣಿನ ರೋಗ ನಿದಾನೋಪಕರಣವಾದ ಸ್ಲಿಟ್‌ಲ್ಯಾಂಪ್ ಇವುಗಳ ಸುಧಾರಣೆಗೆ ಗಲ್‌ಸ್ಟ್ರಾಂಡ್ ಕಾರಣನಾದ. ಈತ 1885ರಲ್ಲಿ ಸಿಗನೆ ಎಂಬುವವಳನ್ನು ವಿವಾಹವಾದ. ಈತ 1930 ಜುಲೈ 28ರಂದು ಸ್ಟಾಕ್‌ಹೋಮ್‌ನಲ್ಲಿ ನಿಧನವಾದ. *

**ಗವರ್ನರ್-ಜನರಲ್ :** ಒಂದು ದೇಶದ ಅತ್ಯುನ್ನತ ಅಧಿಕಾರಿ. ಗವರ್ನರ್, ಲೆಫ್ಟಿನಂಟ್ ಗವರ್ನರ್ ಮುಂತಾದ ಹಲವಾರು ಅಧಿಕಾರಿಗಳ ಮೇಲೆ ಇರುವವ. ಗವರ್ನರ್-ಇನ್-ಚೀಫ್ ಎಂದೂ ಇವನನ್ನು ಕರೆಯುವುದಿದೆ.

ಬ್ರಿಟಿಷ್ ಸಂವಿಧಾನ ಪದ್ಧತಿಯಲ್ಲಿ ಗವರ್ನರ್-ಜನರಲನ ಅಧಿಕಾರ ದೊರೆಯಿಂದ (ಅಥವಾ ರಾಣಿಯಿಂದ) ಇಲ್ಲವೇ ಸಾಮ್ರಾಜ್ಯೀಯ ಅಥವಾ ಸ್ಥಳೀಯ ಕಾನೂನಿನಿಂದ ಪ್ರಾಪ್ತವಾದದ್ದು. ಬ್ರಿಟನಿನ ಅಧೀನ ಪ್ರದೇಶಗಳಲ್ಲಿ ಹಲವಾರು ವಿಭಾಗಗಳ ಒಕ್ಕೂಟದ ಉನ್ನತಾಧಿಕಾರಿಯನ್ನು ಗವರ್ನರ್-ಜನರಲ್ ಎಂದು ಕರೆಯಲಾಗುತ್ತದೆ.



ಜನರಲ್ ಕಾರ್ನ್‌ವಾಲಿಸ್

ಬ್ರಿಟಿಷ್ ಸಾಮ್ರಾಜ್ಯದ ಇತಿಹಾಸದಲ್ಲಿ ಗವರ್ನರ್-ಜನರಲ್ ಹುದ್ದೆಯ ಸ್ಥಾನಮಾನ ಕಾರ್ಯಭಾರಗಳು ಕಾಲಾನುಗುಣವಾಗಿ ವಿಶೇಷವಾದ ಬದಲಾವಣೆಗಳಿಗೆ ಒಳಗಾಗಿವೆ. ಅದರ ಅಧೀನ ಪ್ರದೇಶಗಳು ಸ್ವಯಮಾಡಳಿತದತ್ತ ವಿಕಾಸಗೊಂಡಂತೆಲ್ಲ ಆ ಹುದ್ದೆಯ ಸ್ವರೂಪ ವ್ಯತ್ಯಾಸಗೊಂಡಿದೆ. ನಾಮಕರಣಗೊಂಡ ಸದಸ್ಯರಿದ್ದ ವಿಧಾನ ಮಂಡಲಗಳು ಚುನಾಯಿತ ಸದನಗಳುಳ್ಳ ಮಂಡಲಗಳಾದಂತೆ ಗವರ್ನರ್ - ಜನರಲನ ಹುದ್ದೆಯೂ ಪ್ರಜಾಸತ್ತಾತ್ಮಕವಾಗಿ ಪರಿಣಮಿಸಿದೆ.

ಬ್ರಿಟಿಷ್ ಚಕ್ರಾಧಿಪತ್ಯದೊಳಗಿನ ಸ್ವಯಮಾಡಳಿತ ವಸಾಹತುಗಳ ಗವರ್ನರ್-ಜನರಲ್‌ಗಳನ್ನು ಬ್ರಿಟಿಷ್ ಸರ್ಕಾರ ನೇಮಕ ಮಾಡುವಾಗ ಆ ನೇಮಕಗಳನ್ನು ಸಂಬಂಧಪಟ್ಟ ಸರ್ಕಾರಗಳ ಒಪ್ಪಿಗೆ ಪಡೆಯುವ ಪದ್ಧತಿ 1890ರ ವೇಳೆಗೆ ಬಂದಿತ್ತು. 1922ರಲ್ಲಿ ಐರಿಷ್ ಸ್ವತಂತ್ರ ರಾಜ್ಯ ಸ್ಥಾಪನೆ ಆದಾಗ ಈ ವಿಚಾರದಲ್ಲಿ ಇನ್ನೊಂದು ಮಹತ್ತ್ವದ ಸುಧಾರಣೆ ಆಯಿತು. ಸ್ವತಂತ್ರ ರಾಜ್ಯ ಸರ್ಕಾರವೇ ಗವರ್ನರ್ - ಜನರಲನನ್ನು ಆಯ್ಕೆ ಮಾಡತೊಡಗಿತು: ಇದಕ್ಕೆ ದೊರೆ ಅನುಮತಿ ನೀಡುತ್ತಿದ್ದ. ಅದಕ್ಕೆ ಮುಂಚೆ ಐರ್ಲೆಂಡಿನಲ್ಲಿದ್ದ ರಾಜಪ್ರತಿನಿಧಿ ವೈಸ್‌ರಾಯ್ ಸ್ಥಾನಮಾನ ಪಡೆದಿದ್ದ. 1920ರ ಕಾಯಿದೆಯ ಪ್ರಕಾರ ಐರಿಷ್ ಸ್ವತಂತ್ರ ರಾಜ್ಯಕ್ಕೆ ಗವರ್ನರ್-ಜನರಲ್ ಹುದ್ದೆಯನ್ನು ರಚಿಸಲಾಯಿತು. ಐರಿಷ್ ಸ್ವತಂತ್ರ ರಾಜ್ಯ ಅಧಿರಾಜ್ಯದ (ಡೊಮಿನಿಯನ್) ಸ್ಥಾನ ಪಡೆಯಿತು.

1926ರಲ್ಲಿ ಇನ್ನೊಂದು ಮಹತ್ತರ ಬದಲಾವಣೆ ಆಯಿತು. ಆ ಬಾರಿ ಇದಕ್ಕೆ ಕಾರಣವಾದದ್ದು ಕೆನಡ. ಅಧಿರಾಜ್ಯವೊಂದರ ಗವರ್ನರ್-ಜನರಲ್ ಸಾಮಾನ್ಯವಾಗಿ ದೊರೆಯ ಪ್ರತಿನಿಧಿಯಾಗಿ ಮಾತ್ರ ಇರತಕ್ಕದ್ದೆಂದು, ಆತ ಬ್ರಿಟಿಷ್ ಸರ್ಕಾರದ ಪರವಾಗಿ ಯಾವುದೇ ಕಾರ್ಯಭಾರ ನಿರ್ವಹಿಸಬೇಕೆಂದು ಸಂಬಂಧಪಟ್ಟ ಅಧಿರಾಜ್ಯ ಕೇಳಿಕೊಂಡ ವಿನಾ ಅವನು ಅದನ್ನು ನಿರ್ವಹಿಸತಕ್ಕದ್ದಲ್ಲವೆಂದು ತೀರ್ಮಾನವಾಯಿತು.

1930ರಲ್ಲಿ ನಡೆದ ಸಾಮ್ರಾಜ್ಯ ಸಮ್ಮೇಳನದಲ್ಲಿ ಕೈಗೊಂಡ ತೀರ್ಮಾನ ಇನ್ನಷ್ಟು ಪ್ರಗತಿಪರವಾದ್ದು. ಗವರ್ನರ್-ಜನರಲನನ್ನು ನೇಮಿಸುವುದು ಸಂಬಂಧಪಟ್ಟ ಅಧಿರಾಜ್ಯದ ಪ್ರಾಧಿಕಾರವೆಂಬುದಾಗಿ ಆ ಸಮ್ಮೇಳನದಲ್ಲಿ ತೀರ್ಮಾನವಾಯಿತು. ಇದರ ಫಲವಾಗಿ ಕೆಲವು ಅಧಿರಾಜ್ಯಗಳು ತಮ್ಮ ಪ್ರಜೆಗಳನ್ನೇ ಗವರ್ನರ್-ಜನರಲನನ್ನಾಗಿ ಆರಿಸಿಕೊಂಡವು. ಗವರ್ನರ್-ಜನರಲನ ನೇಮಕದ ಪ್ರಶ್ನೆ ಅಧಿರಾಜ್ಯಕ್ಕೂ ಬ್ರಿಟಿಷ್ ರಾಜತ್ವಕ್ಕೂ

ಸಂಬಂಧಿಸಿದ್ದು. ಬ್ರಿಟನಿನ ದೊರೆ ತನ್ನ ಸಚಿವಮಂಡಲಿಯ ಸಲಹೆಯ ಮೇರೆಗೆ ನಡೆಯುವಂತೆ, ಅಧಿರಾಜ್ಯದ ಗವರ್ನರ್-ಜನರಲನ ನೇಮಕವೂ ಅದರ ಸಚಿವರ ಸಲಹೆಯ ಮೇರೆಗೇ ಆಗತಕ್ಕದ್ದು. ನೇಮಕದ ಬಗ್ಗೆ ಅವರು ಮೊದಲು ಅನೌಪಚಾರಿಕವಾಗಿ ದೊರೆಯೊಡನೆ ಸಮಾಲೋಚನೆ ನಡೆಸಿ, ಅನಂತರ ಔಪಚಾರಿಕವಾಗಿ ದೊರೆಗೆ ಸಲಹೆ ನೀಡುವರು. ದೊರೆ ಅದನ್ನು ಒಪ್ಪತಕ್ಕದ್ದು. ಹೀಗೆ ಇದು ಅಧಿರಾಜ್ಯ ಸರ್ಕಾರಕ್ಕೂ ದೊರೆಗೂ ನೇರವಾಗಿ ನಡೆಯುವ ವ್ಯವಹಾರ-ಎಂಬುದು ನಿಶ್ಚಿತವಾಯಿತು.

ಜನರಲ್ ಲಾರ್ಡ್ ಕರ್ಜನ್

ನೇಮಕ ಹೊಂದಿದ ಗವರ್ನರ್ - ಜನರಲನನ್ನು ವಜಾ ಮಾಡುವ ಬಗ್ಗೆ ಕ್ರಾಂತಿಕಾರಿ ಮಾರ್ಗ ಅನುಸರಿಸಿದ್ದು ಐರ್ಲೆಂಡ್. 1932ರಲ್ಲಿ ಈ ಘಟನೆ ಸಂಭವಿಸಿತು. ತನಗೆ ಮೆಚ್ಚುಗೆ ಯಿಲ್ಲದ ಗವರ್ನರ್-ಜನರಲನನ್ನು ದೊರೆಯಿಂದ ತೆಗೆಸಿ ಹಾಕುವ ಕ್ರಮವನ್ನು ಐರಿಷ್ ಸ್ವತಂತ್ರ ರಾಜ್ಯ ಅನುಸರಿಸಿತು. ಅಧಿರಾಜ್ಯದ ಗವರ್ನರ್ - ಜನರಲನ ಸಂವೈಧಾನಿಕ ಸ್ಥಾನ ಬ್ರಿಟಿಷ್ ದೊರೆಯಂತೆಯೇ ಆದರೂ ಗವರ್ನರ್-ಜನರಲ್ ತತ್ಕಾಲದ ಸರ್ಕಾರದ ಇಚ್ಛಾನುಗುಣವಾಗಿ ಮಾತ್ರವೇ ಅಧಿಕಾರದಲ್ಲಿರಬಲ್ಲ.

**ಭಾರತದಲ್ಲಿ :** ಬ್ರಿಟಿಷ್ ಭಾರತದಲ್ಲಿ ಗವರ್ನರ್-ಜನರಲನ ಹುದ್ದೆ ವಿಕಾಸಗೊಂಡ ರೀತಿಯೇ ಬೇರೆ. 1773ರಲ್ಲಿ ಜಾರಿಗೆ ಬಂದ ರೆಗ್ಯುಲೇಟಿಂಗ್ ಕಾಯಿದೆಯ ಪ್ರಕಾರ ಗವರ್ನರ್-ಜನರಲನ ಹುದ್ದೆ ರಚಿತವಾಯಿತು. ವಾರನ್ ಹೇಸ್ಟಿಂಗ್ಸ್ ಮೊದಲನೆಯ ಗವರ್ನರ್-ಜನರಲ್ ಆಗಿ ನೇಮಕವಾದ. 1834ರ ವರೆಗೂ ಈ ಅಧಿಕಾರಿಯನ್ನು ಬಂಗಾಳದ ಫೋರ್ಟ್ ವಿಲಿಯಮ್‌ನ ಗವರ್ನರ್ - ಜನರಲ್ ಎಂದು ಕರೆಯಲಾಗುತ್ತಿತ್ತು. 1833ರ ಚಾರ್ಟರ್ ಕಾಯಿದೆಯ ಪ್ರಕಾರ ಇವನನ್ನು ಭಾರತದ ಗವರ್ನರ್-ಜನರಲ್ ಎಂದು ಕರೆಯಲಾಯಿತು. ವ್ಯಾಪಾರಕ್ಕಾಗಿ ಬಂದಿದ್ದ ಈಸ್ಟ್ ಇಂಡಿಯ ಕಂಪನಿಯಂಥ ಸಂಸ್ಥೆ ದೂರದೇಶವೊಂದರ ಆಳ್ವಿಕೆ ನಡೆಸುವುದು ಯುಕ್ತವೆ ಎಂಬ ವಿಷಯ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದು, ಆ ಆಳ್ವಿಕೆಯ ಮೇಲ್ವಿಚಾರಣೆ ಪಾರ್ಲಿಮೆಂಟಿಗೆ ಸೇರಿರಬೇಕೆಂದು ತೀರ್ಮಾನವಾಗಿ, ಅದರಂತೆ ರೆಗ್ಯುಲೇಟಿಂಗ್ ಕಾಯಿದೆಯನ್ನು ಜಾರಿಗೆ ತರಲಾಗಿತ್ತು. ಇದರ ಪ್ರಕಾರ, ಭಾರತದಲ್ಲಿ ಈಸ್ಟ್ ಇಂಡಿಯ ಕಂಪನಿಯ ಆಳ್ವಿಕೆಗೆ ಸೇರಿದ ರಾಜ್ಯಗಳ ಆಡಳಿತ ನಿಯಂತ್ರಣ ಬ್ರಿಟಿಷ್ ಪಾರ್ಲಿಮೆಂಟಿಗೆ ಸೇರಿದ್ದೆಂದು ನಿರ್ಣಯವಾಗಿ, ಗವರ್ನರ್-ಜನರಲನನ್ನು ನೇಮಿಸಲಾಯಿತು. ಇವನ ಅಧಿಕಾರವ್ಯಾಪ್ತಿ ಎಷ್ಟು ಎಂಬುದನ್ನು ಮೊದಲು ಸ್ಪಷ್ಟವಾಗಿ ಗೊತ್ತುಮಾಡಿರಲಿಲ್ಲವಾದ್ದರಿಂದ ಮೊದಲನೆಯ ಗವರ್ನರ್-ಜನರಲ್ ಆದ ವಾರನ್ ಹೇಸ್ಟಿಂಗ್ಸ್ ಬಹಳ ಕಿರುಕುಳಗಳನ್ನನುಭವಿಸ ಬೇಕಾಯಿತು. ಈ ಹೊಸ ಕಾಯಿದೆ ಈಸ್ಟ್ ಇಂಡಿಯ ಕಂಪನಿಯ ಆಡಳಿತದ ಮೇಲೆ ಬ್ರಿಟಿಷ್ ಸರ್ಕಾರಕ್ಕೆ ಖಚಿತವಾದ ಹತೋಟಿಯನ್ನು ಕೊಟ್ಟಿರಲಿಲ್ಲ; ಕಂಪನಿಯ ನಿರ್ದೇಶಕರಿಗೆ ಭಾರತದಲ್ಲಿ ತಮ್ಮ ಅಧಿಕಾರಿಗಳ ಮೇಲೆ ಎಷ್ಟರಮಟ್ಟಿನ ಅಧಿಕಾರ ಇರತಕ್ಕದ್ದೆಂದು ನಿಗದಿ ಮಾಡಿರಲಿಲ್ಲ. ಗವರ್ನರ್-ಜನರಲ್‌ಗೆ ತನ್ನ ಸಲಹಾ ಮಂಡಲಿಯ ಸದಸ್ಯರ ಮೇಲೆ ಇದ್ದ ಅಧಿಕಾರ ಎಷ್ಟೆಂಬುದನ್ನೂ ತಿಳಿಸಿರಲಿಲ್ಲ; ಮದರಾಸ್, ಮುಂಬಯಿ ಗವರ್ನರುಗಳ ಮೇಲೆ ಗವರ್ನರ್-ಜನರಲ್‌ಗೆ ಇದ್ದ ಅಧಿಕಾರ ಎಷ್ಟೆಂಬುದನ್ನು ನಿರ್ದಿಷ್ಟಪಡಿಸಿರಲಿಲ್ಲ-ಎಂದು ಒಬ್ಬ ಚರಿತ್ರಕಾರ ಬರೆದಿದ್ದಾನೆ.

ಜನರಲ್ ವಾರನ್‌ಹೇಸ್ಟಿಂಗ್ಸ್

ವಾರನ್ ಹೇಸ್ಟಿಂಗ್ಸ್ ಸಮರ್ಥ, ನಿಷ್ಠಾವಂತ. ಆದರೂ ಅವನಿಗೆ ವಿರೋಧಿಗಳಾಗಿದ್ದ ಸಲಹಾ ಮಂಡಲಿಯ ಸದಸ್ಯರಿಂದ ಹೆಜ್ಜೆಹೆಜ್ಜೆಗೂ ವಿರೋಧ ಹುಟ್ಟಿ ಆಡಳಿತ ನಡೆಸುವುದು ಅವನಿಗೆ ಬಹು ಕಷ್ಟವಾಯಿತು; ಪ್ರಾಂತೀಯ ಗವರ್ನರುಗಳು ಸ್ವತಂತ್ರವಾಗಿ ವರ್ತಿಸುತ್ತಿದ್ದರು. 1784ರಲ್ಲಿ ವಿಲಿಯಂ ಪಿಟ್ಟನ ಶ್ರಮದ ಫಲವಾಗಿ ಹೊಸ ಇಂಡಿಯ ಕಾಯಿದೆ (ಪಿಟ್‌ನ ಇಂಡಿಯ ಕಾಯಿದೆ) ಪಾರ್ಲಿಮೆಂಟಿನ ಅನುಮತಿ ಪಡೆದು ಜಾರಿಗೆ ಬಂದಿತು. ಭಾರತದಲ್ಲಿ ಬ್ರಿಟಿಷರಿಗೆ ಸೇರಿದ್ದ ಪ್ರಾಂತ್ಯಗಳ ಆಡಳಿತದ ಮೇಲ್ವಿಚಾರಣೆಯನ್ನು ಭಾರತದ ಕಾರ್ಯದರ್ಶಿಯನ್ನೊಳಗೊಂಡು ಆರು ಸದಸ್ಯರಿದ್ದ ನಿಯೋಜಿತ ಮಂಡಲಿಗೆ ಒಪ್ಪಿಸಲಾಯಿತು. ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕ ಮಂಡಲಿಯ ಆಡಳಿತದ ಮೇಲಿನ ಅಧಿಕಾರ ಇನ್ನೂ ಕುಗ್ಗಿತು. ಗವರ್ನರ್-ಜನರಲನ ಅಧಿಕಾರ ಹೆಚ್ಚು ವ್ಯಾಪಕವಾಯಿತು, ಹೆಚ್ಚು ನಿರ್ದಿಷ್ಟವಾಯಿತು. 1793-1813, 1833 ಮತ್ತು 1853ರಲ್ಲಿ ಈ ಕಾಯಿದೆ ಪರಿಷ್ಕೃತವಾಯಿತು.

1858ರಲ್ಲಿ ಭಾರತದ ಆಡಳಿತ ಈಸ್ಟ್ ಇಂಡಿಯ ಕಂಪನಿಯಿಂದ ಬ್ರಿಟಿಷ್ ಸರ್ಕಾರಕ್ಕೆ ವರ್ಗವಾಯಿತು. ಆಗಿನಿಂದ ಗವರ್ನರ್-ಜನರಲನನ್ನು ವೈಸ್‌ರಾಯ್ ಎಂದೂ ಕರೆಯಲಾಯಿತು. ಲಾರ್ಡ್ ಕ್ಯಾನಿಂಗ್ ಭಾರತದ ಪ್ರಥಮ ವೈಸ್‌ರಾಯ್.

ಭಾರತದಲ್ಲಿ ಬ್ರಿಟಿಷರ ಆಡಳಿತ ಇರುವವರೆಗೂ ಯಾವ ಭಾರತೀಯನೂ ಈ ಹುದ್ದೆಗೆ ನೇಮಕವಾಗಲಿಲ್ಲ.

ಗವರ್ನರ್-ಜನರಲನ ಅಧಿಕಾರಗಳೂ ಕರ್ತವ್ಯಗಳೂ ಮೊಟ್ಟಮೊದಲಿಗೆ 1773ರ ರೆಗ್ಯುಲೇಟಿಂಗ್ ಕಾಯಿದೆಯಲ್ಲಿ ನಿಬಂಧಿತವಾಗಿದ್ದುವು. 1784ರ ಪಿಟ್ಟನ ಇಂಡಿಯ ಕಾಯಿದೆ ಮತ್ತು 1786ರ ಅನುಬಂಧಿ ಕಾಯಿದೆಗಳಲ್ಲೂ ಇವನ್ನು ವ್ಯಾಖ್ಯಿಸಲಾಗಿದೆ. ಗವರ್ನರ್-ಜನರಲ್ ಸಾಮಾನ್ಯವಾಗಿ ತನ್ನ ಮಂಡಲಿಯ ಸಲಹೆಯ ಮೇರೆಗೆ ಆ ದೇಶದ ಆಡಳಿತ ನಡೆಸಬೇಕು. ಆದರೆ ಅಗತ್ಯವೆನಿಸಿದಾಗ ಆತ ಅದರ ಸಲಹೆಯನ್ನು ತಳ್ಳಿ ತನಗೆ ಸರಿಯೆನಿಸಿದಂತೆ ನಡೆಯಬಹುದು. ಎಂದರೆ ಬ್ರಿಟಿಷ್ ಆಡಳಿತ ಕಾಲದಲ್ಲಿ ಗವರ್ನರ್-ಜನರಲನಿಗೆ ಅತ್ಯುನ್ನತ ಅಧಿಕಾರವಿತ್ತು. ದೂರದಲ್ಲಿ ಇಂಗ್ಲೆಂಡಿನಲ್ಲಿದ್ದ ಪಾರ್ಲಿಮೆಂಟ್ ಹಾಗೂ ಸ್ಟೇಟ್ ಸೆಕ್ರೆಟರಿಗಳ ನಿಯಂತ್ರಣಕ್ಕೆ ಮಾತ್ರ ಇವನು ಒಳಪಟ್ಟಿರುತ್ತಿದ್ದ.

1947ರಲ್ಲಿ ಭಾರತ ಸ್ವಾತಂತ್ರ್ಯ ಕಾಯಿದೆ ಜಾರಿಗೆ ಬಂದಾಗ ಭಾರತದ ಗವರ್ನರ್-ಜನರಲನ ನೇಮಕವೂ ಅಧಿರಾಜ್ಯಗಳ ಗವರ್ನರ್-ಜನರಲರ ನೇಮಕದ ರೀತಿಯಲ್ಲೇ ಆಗಬೇಕಾಯಿತು. ಆದರೆ ರಾಣಿಗೆ ಈ ಬಗ್ಗೆ ಸಲಹೆ ನೀಡಲು ಸಚಿವರು ಇರಲಿಲ್ಲ. ಗವರ್ನರ್-ಜನರಲನ ನೇಮಕವಾಗುವವರೆಗೂ ಸಚಿವರು ಅಧಿಕಾರ ಸ್ವೀಕರಿಸುವಂತಿರಲಿಲ್ಲ. ಆಗ ಅನೌಪಚಾರಿಕವಾಗಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ನಾಯಕರೊಂದಿಗೆ ಸಮಾಲೋಚಿಸಿ, ಭಾರತ-ಪಾಕಿಸ್ತಾನಗಳ ಗವರ್ನರ್-ಜನರಲ್‌ಗಳ ನೇಮಕದ ಬಗ್ಗೆ ಬ್ರಿಟಿಷ್ ಸರ್ಕಾರ ರಾಣಿಗೆ ಸಲಹೆ ಒಪ್ಪಿಸಿತು. ವೈಸ್‌ರಾಯ್ ಹುದ್ದೆ ಕೊನೆಗೊಂಡಿತು. ಭಾರತ ಸ್ವತಂತ್ರ ಗಣರಾಜ್ಯವಾಗುವವರೆಗೂ ಗವರ್ನರ್-ಜನರಲ್ ಹುದ್ದೆ ಮುಂದುವರೆಯಿತು.

ಭಾರತದಲ್ಲಿ ಅನುಕ್ರಮವಾಗಿ ಗವರ್ನರ್-ಜನರಲ್‌ಗಳಾಗಿದ್ದವರನ್ನೂ ಅವರ ಅಧಿಕಾರಾವಧಿಗಳನ್ನೂ ಮುಂದೆ ಕೊಡಲಾಗಿದೆ:

| | | |
|---|---|---|
| ವಾರನ್ ಹೇಸ್ಟಿಂಗ್ಸ್ | ... | 1773-1786 |
| ಲಾರ್ಡ್ ಕಾರ್ನ್‌ವಾಲಿಸ್ | ... | 1786-1793 |
| ಸರ್ ಜಾನ್ ಷೋರ್ | ... | 1793-1798 |
| ಲಾರ್ಡ್ ವೆಲೆಸ್ಲಿ | ... | 1798-1805 |
| ಲಾರ್ಡ್ ಕಾರ್ನ್‌ವಾಲಿಸ್ (ಎರಡನೆಯ ಬಾರಿ) | ... | 1805ಜುಲೈ-1805 ಅಕ್ಟೋಬರ್ |
| ಲಾರ್ಡ್ ಮಿಂಟೊ | ... | 1807-1813 |
| ಲಾರ್ಡ್ ಹೇಸ್ಟಿಂಗ್ಸ್ | ... | 1813-1823 |
| ಲಾರ್ಡ್ ಆಮ್‌ಹರ್ಸ್ಟ್ | ... | 1823-1828 |
| ಲಾರ್ಡ್ ವಿಲಿಯಂ ಬೆಂಟಿಂಕ್ | ... | 1828-1833 |
| ಲಾರ್ಡ್ ಆಕ್ಲ್ಯಾಂಡ್ | ... | 1836-1842 |
| ಲಾರ್ಡ್ ಎಲೆನ್‌ಬರೊ | ... | 1842-1844 |
| ಲಾರ್ಡ್ ಹಾರ್ಡಿಂಜ್ I | ... | 1844-1848 |
| ಲಾರ್ಡ್ ಡಾಲ್‌ಹೌಸಿ | ... | 1848-1856 |

| | | |
|---|---|---|
| ಲಾರ್ಡ್ ಕ್ಯಾನಿಂಗ್ | ... | 1856–1862 |
| ಲಾರ್ಡ್ ಎಲ್ಗಿನ್ I | ... | 1862–1863 |
| ಲಾರ್ಡ್ ಲಾರೆನ್ಸ್ | ... | 1864–1869 |
| ಲಾರ್ಡ್ ಮೇಯೊ | ... | 1869–1872 |
| ಲಾರ್ಡ್ ನಾರ್ತ್‌ಬ್ರೂಕ್ | ... | 1872–1876 |
| ಲಾರ್ಡ್ ಲಿಟನ್ I | ... | 1876–1880 |
| ಲಾರ್ಡ್ ರಿಪನ್ | ... | 1880–1884 |
| ಲಾರ್ಡ್ ಡಫರಿನ್ | ... | 1884–1888 |
| ಲಾರ್ಡ್ ಲ್ಯಾನ್ಸ್‌ಡೌನ್ | ... | 1888–1894 |
| ಲಾರ್ಡ್ ಎಲ್ಗಿನ್ I | ... | 1894–1899 |
| ಲಾರ್ಡ್ ಕರ್ಜ಼ನ್ | ... | 1899–1904 |
| ಲಾರ್ಡ್ ಮಿಂಟೊ II | ... | 1905–1910 |
| ಲಾರ್ಡ್ ಹಾರ್ಡಿಂಜ್ II | ... | 1910–1916 |
| ಲಾರ್ಡ್ ಚೆಮ್ಸ್‌ಫರ್ಡ್ | ... | 1916–1921 |
| ಲಾರ್ಡ್ ರೀಡಿಂಗ್ | ... | 1921–1925 |
| ಲಾರ್ಡ್ ಇರ್ವಿನ್ | ... | 1925–1931 |
| ಲಾರ್ಡ್ ವಿಲಿಂಗ್ಡನ್ | ... | 1931–1935 |
| ಲಾರ್ಡ್ ಲಿನ್ಲಿತ್‌ಗೊ | ... | 1936–1943 |
| ಲಾರ್ಡ್ ವೇವೆಲ್ | ... | 1943–1947 |
| ಲಾರ್ಡ್ ಮೌಂಟ್‌ಬ್ಯಾಟನ್ | ... | 1947–1948 |
| ಸಿ. ರಾಜಗೋಪಾಲಾಚಾರಿ | ... | 1948–1950 |

(ಎ.ಎಂ.)

**ಗಸಗಸೆ ಗಿಡ :** ಪಪಾವರೇಸೀ ಕುಟುಂಬಕ್ಕೆ ಸೇರಿದ ಸುಪ್ರಸಿದ್ಧ ಮೂಲಿಕೆ ಸಸ್ಯ. ಪರ್ಯಾಯ ನಾಮ ಅಫೀಮುಗಿಡ. ಪಪೇವರ್ ಸಾಮ್ನಿಫೆರಂ ವೈಜ್ಞಾನಿಕ ನಾಮ. ಸಾಮಾನ್ಯ ಬಳಕೆಯ ಇಂಗ್ಲಿಷ್ ಹೆಸರು ಓಪಿಯಂ ಪಾಪಿ ಅಥವಾ ವೈಟ್ ಪಾಪಿ. ಬಹಳ ಹಿಂದಿನ ಕಾಲದಿಂದ ಮೆಡಿಟರೇನಿಯನ್ ಪ್ರದೇಶಗಳು, ಮಧ್ಯ ಪ್ರಾಚ್ಯ, ಭಾರತ, ರಷ್ಯ ದೇಶಗಳಲ್ಲಿ ಇದರ ವ್ಯವಸಾಯ ಇದೆ. ಪಶ್ಚಿಮ ಯುರೋಪ್ ದೇಶಗಳಲ್ಲಿ ಇದನ್ನು ಗಸಗಸೆ ಬೀಜಗಳಿಗಾಗಿಯೂ ಪೂರ್ವದೇಶಗಳಲ್ಲಿ ಅದರಲ್ಲೂ ಭಾರತ, ಇರಾನ್, ಟರ್ಕಿಗಳಲ್ಲಿ ಆಫೀಮಿಗಾಗಿಯೂ ಹೆಚ್ಚಾಗಿ ಬೆಳೆಸಲಾಗುತ್ತಿದೆ. ಭಾರತದಲ್ಲಿ ಇದನ್ನು ಬೀಜ ಮತ್ತು ಅಫೀಮಿಗಾಗಿ ಸುಮಾರು 16ನೆಯ ಶತಮಾನದಿಂದ ಬೆಳೆಸುತ್ತಿದ್ದಾರೆ. ಅಫೀಮಿನ ಬೇಸಾಯ, ಮಾರಾಟ, ಬಳಕೆಗಳ ಬಗ್ಗೆ ಕಟ್ಟುನಿಟ್ಟಾದ ನಿಬಂಧನೆಗಳಿವೆ. ಸರ್ಕಾರದ ಅನುಮತಿ ಇಲ್ಲದೆ ಗಸಗಸೆ ಗಿಡವನ್ನು ಬೆಳೆಸಲಾಗದು. ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ಬಿಹಾರಗಳಲ್ಲಿ ಹೆಚ್ಚಾಗಿಯೂ ಕಾಶ್ಮೀರದಲ್ಲಿ ಅಲ್ಪಸ್ವಲ್ಪವಾಗಿಯೂ ಇದನ್ನು ಬೆಳೆಸುತ್ತಾರೆ. ಹಿಮಾಚಲ ಪ್ರದೇಶದಲ್ಲಿ ಇದರ ವ್ಯವಸಾಯವನ್ನು ನಿಷೇಧಿಸಲಾಗಿದೆ. ಗಸಗಸೆ ಗಿಡದ ಬೇಸಾಯ, ಇದರಿಂದ ಅಫೀಮನ್ನು ತೆಗೆಯುವ ವಿಧಾನ ಮತ್ತು ಅಫೀಮಿನ ಬಳಕೆಗಳನ್ನು ಕುರಿತ ವಿವರಗಳಿಗೆ **ನೋಡಿ– ಅಫೀಮು.**

ಗಸಗಸೆ ಗಿಡ ವಾರ್ಷಿಕ ಬಗೆಯದು. ಇದು ಸುಮಾರು 61ಸೆಂಮೀನಿಂದ 1ಮೀ–22ಸೆ.ಮೀ ಎತ್ತರಕ್ಕೆ ಬೆಳೆಯುತ್ತದೆ. ಕಾಂಡ ನೀಳವಾಗಿ ಬೆಳೆಯುವುದು. ಇದರ ಮೇಲ್ಭಾಗದಲ್ಲಿ ವಿರಳವಾಗಿ ಕೊಂಬೆಗಳು ಹರಡಿರುತ್ತವೆ. ಎಲೆಗಳ ಆಕಾರ ದೀರ್ಘ ಅಂಡದಂತೆ. ಅಂಚು ಸೀಳುಗೊಂಡಿದೆ. ಹೂಗಳು ಗಾತ್ರದಲ್ಲಿ ದೊಡ್ಡವು. ಇವುಗಳ ಭಾರಕ್ಕೆ ಕೊಂಬೆಗಳು ಜಗ್ಗಿ ತೂಗಾಡುತ್ತಿರುತ್ತವೆ. ಹೂಗಳ ಬಣ್ಣ ಕೆಂಪು, ಬಿಳಿ, ನೇರಳೆ, ನೀಲಿ–ಹೀಗೆ ವೈವಿಧ್ಯಮಯ. ಅಂಡಾಶಯ ಗುಂಡಗೆ ದಪ್ಪವಾಗಿದೆ. ಶಲಾಕೆ ಇಲ್ಲ. ಅಂಡಾಶಯದ ಮೇಲ್ಭಾಗದಲ್ಲಿ ಛಾವಣಿಯಂಥ ಶಲಾಕಾಗ್ರ ಉಂಟು. ಕಾಯಿಯ ಒಳಗೆ ಅಸಂಖ್ಯಾತ ಬೀಜಗಳಿವೆ. ಇವೇ ಗಸಗಸೆ. ಬೀಜಗಳ ಬಣ್ಣ ಕಪ್ಪು ಇಲ್ಲವೆ ಬಿಳಿ. ಆಕಾರ ಮೂತ್ರಪಿಂಡದಂತೆ. ಕಾಯಿಗಳು ಬಲಿತ ಮೇಲೆ ತುದಿಯಲ್ಲಿ ಸಣ್ಣ ಸಣ್ಣ ರಂಧ್ರಗಳು ಉಂಟಾಗಿ ಅವುಗಳ ಮೂಲಕ ಬೀಜಗಳು ಹೊರಬರುತ್ತವೆ. ಗಾಳಿಗೆ ಕಾಯಿ ಅಲುಗಾಡಿದಾಗ ಬೀಜಗಳು ಸ್ವಲ್ಪಸ್ವಲ್ಪವಾಗಿ ಹೊರಬಂದು ಚದರುತ್ತವೆ.

ಬೀಜಗಳಲ್ಲಿ ಪೌಷ್ಟಿಕಾಂಶಗಳು ಹೇರಳವಾಗಿವೆ. ಬೀಜಗಳ ರಾಸಾಯನಿಕ ಸಂಯೋಜನೆ ಈ ರೀತಿ ಇದೆ: ಶೇ.4.3–ಶೇ.5.2 ತೇವಾಂಶ, ಶೇ.22.3– ಶೇ.24.4 ಪ್ರೋಟೀನು, ಶೇ.1.03– ಶೇ.1.45 ಸುಣ್ಣ, ಶೇ.0.79–ಶೇ.0.89 ರಂಜಕ, ಶೇ.8.5–ಶೇ.11.1 ಕಬ್ಬಿಣ ಮತ್ತು ಥಯಾಮಿನ್, ರೈಬೊಫ್ಲೇವಿನ್, ನಿಕೊಟಿನಿಕ್ ಆಮ್ಲ ಮುಂತಾದ ವಿಟಮಿನ್ನುಗಳೂ ಮ್ಯಾಂಗನೀಸ್, ತಾಮ್ರ, ಮೆಗ್ನೀಸಿಯಂ, ಪೊಟ್ಯಾಸಿಯಂ, ಸತು ಮುಂತಾದ ಖನಿಜಾಂಶಗಳೂ ಲಘು ಪರಿಮಾಣಗಳಲ್ಲಿರುತ್ತವೆ. ಅಲ್ಲದೆ ಲೆಸಿತಿನ್, ಆಕ್ಸ್ಯಾಲಿಕ್ ಆಮ್ಲ, ಪೆಂಟಾಸಾನ್ಸ್ ಎಂಬ ವಸ್ತುಗಳೂ ಡಯಾಸ್ಟೇಸ್, ಎಮಲ್ಸಿನ್, ಲೈಪೇಸ್, ನ್ಯೂಕ್ಲಿಯೇಸ್ ಮುಂತಾದ ಕಿಣ್ವಗಳೂ ಇವೆ. ಮತ್ತುಬರಿಸುವ ಅಂಶವಾದ ನಾರ್ಕೊಟಿನ್ ಅತ್ಯಲ್ಪ ಪರಿಮಾಣದಲ್ಲಿದೆ. ಅನೇಕ ಬಗೆಯ ಖಾದ್ಯ ವಸ್ತುಗಳ ತಯಾರಿಕೆಯಲ್ಲಿ ಬೀಜಗಳನ್ನು ಬಳಸುತ್ತಾರೆ. ಬೀಜಗಳಿಗೆ ಔಷಧೀಯ ಗುಣಗಳೂ ಇವೆ. ಬೀಜಕ್ಕೆ ಪುಷ್ಟಿದಾಯಕ ಮತ್ತು ತಂಪುಕಾರಕವೆಂದು ಹೆಸರುಂಟು. ದೇಹಭಾಗಗಳನ್ನು ಮೃದುಗೊಳಿಸುವ ಲೇಪವಾಗಿಯೂ ಮಲಬದ್ಧತೆಯ ನಿವಾರಕವಾಗಿಯೂ ಇದನ್ನು ಬಳಸುವುದಿದೆ.

ಗಸಗಸೆಯ ಬೀಜಗಳಿಂದ ಎಣ್ಣೆಯನ್ನು ತೆಗೆಯುತ್ತಾರೆ. ಹಸಿಬೀಜಗಳನ್ನು ಗಾಣಕ್ಕೆ ಒಡ್ಡಿ ಇಲ್ಲವೆ ಬೇಯಿಸಿ ಎಣ್ಣೆ ತೆಗೆಯಬಹುದು. ಎಣ್ಣೆಯನ್ನು ಶುದ್ಧ ಮಾಡಿ ಅಡುಗೆಗೆ ಉಪಯೋಗಿಸಬಹುದು. ಎಣ್ಣೆಗೆ ಬಣ್ಣವಾಗಲಿ ವಾಸನೆಯಾಗಲಿ ಇಲ್ಲ. ರುಚಿ ಕೊಂಚ ಮಟ್ಟಿಗೆ ಬಾದಾಮಿ ರುಚಿಯನ್ನು ಹೋಲುತ್ತದೆ. ಎಣ್ಣೆಯನ್ನು ಸಾಬೂನು, ಡಾಲ್ಡ, ವಾರ್ನಿಷ್ ಬಣ್ಣ, ಚಿತ್ರ ಲೇಖನದ ಬಣ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಎಣ್ಣೆ ತೆಗೆದ ಮೇಲೆ ಉಳಿವ ಹಿಂಡಿ ಸಿಹಿಯಾಗಿ ಪುಷ್ಟಿದಾಯಕವಾಗಿರುತ್ತದೆ. ಇದನ್ನು ತಿನ್ನುವುದುಂಟು. ದನಕರುಗಳಿಗೆ ಮೇವಾಗಿ ಉಪಯೋಗಿಸುತ್ತಾರೆ. ಎಳೆಯ ಗಸಗಸೆ ಗಿಡವನ್ನು ಸೊಪ್ಪಿನಂತೆ ತರಕಾರಿಯಾಗಿ ಬಳಸುವುದುಂಟು. ಹೂಗಳಿಂದ ಒಂದು ವಿಧವಾದ ಪಾಕವನ್ನು ತಯಾರಿಸುತ್ತಾರೆ. ಕಾಯಿಗಳಿಂದ ಒಂದು ಬಗೆಯ ಮಾದಕ ಪಾನೀಯವನ್ನು ತಯಾರಿಸುತ್ತಾರೆ. ಗಾಯಗಳಿಗೂ ಊತಗಳಿಗೂ ಇದರ ಎಲೆಯನ್ನು ಕಟ್ಟುತ್ತಾರೆ. (ಎಂ.ಸಿ.ಆರ್.)

**ಗಸಗಸೆ ಹಣ್ಣಿನ ಮರ :** ಟೀಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಮಧ್ಯಮಗಾತ್ರದ ಮರ. ಇದರ ಹಣ್ಣಿನಲ್ಲಿ ಗಸಗಸೆ ಬೀಜವನ್ನು ಹೋಲುವ ನೂರಾರು ಬೀಜಗಳು ಇರುವುದರಿಂದ ಇದಕ್ಕೆ ಈ ಹೆಸರು. ಇದನ್ನು ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಸಿಂಗಪುರ ಚೆರಿ ಅಥವಾ ಜಪಾನೀಸ್ ಚೆರಿ ಎನ್ನಲಾಗುತ್ತದೆ. ಮುಂಟಿಂಜಿಯ ಕ್ಯಾಲಬುರ ಶಾಸ್ತ್ರೀಯ ನಾಮ. ಇದು ಮೂಲತಃ ದಕ್ಷಿಣ ಅಮೆರಿಕದ್ದು. ಉಷ್ಣವಲಯ ದೇಶಗಳಲ್ಲೆಲ್ಲ ಇದನ್ನು ಹಣ್ಣಿಗಾಗಿ ಮತ್ತು ಉದ್ಯಾನವನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುತ್ತಾರೆ. ಎಲ್ಲ ದಿಕ್ಕುಗಳಲ್ಲಿಯೂ ಹರಡಿ ಬೆಳೆಯುವ ಕೊಂಬೆಗಳು, ಭರ್ಜಿಯಾಕಾರದ ಹಾಗೂ ಗರಗಸ ಅಂಚುಳ್ಳ ಎಲೆಗಳು ಮತ್ತು ಸಣ್ಣಗಾತ್ರದ ಬಿಳಿಯಬಣ್ಣದ ಹೂಗಳು ಇದರ ಮುಖ್ಯ ಲಕ್ಷಣಗಳಲ್ಲಿ ಕೆಲವು. ಹಣ್ಣು ಬೆರಿ ಮಾದರಿಯದು. ಇದು ಗುಂಡಾಗಿಯೂ ನುಣುಪಾಗಿಯೂ ಇದೆ. ಇದರ ಬಣ್ಣ ಕೆಂಪು. ರುಚಿ ಸಿಹಿ. ಹಣ್ಣಿನಲ್ಲಿ ರಸಭರಿತ ತಿರುಳಿದೆ. ಇದರಿಂದ ಮುರಬ್ಬ ತಯಾರಿಸಬಹುದು. ಗಸಗಸೆ ಹಣ್ಣಿನ ಮರವನ್ನು ಕಾಂಡತುಂಡುಗಳಿಂದ ವೃದ್ಧಿಸುತ್ತಾರೆ. ಮರಳುಭೂಮಿ ಇದರ ಬೆಳವಣಿಗೆಗೆ ಉತ್ತಮ. ಈ ಮರದ ಎಲೆಗಳಿಂದ ಒಂದು ಬಗೆಯ ಕಷಾಯ ಮಾಡುವುದುಂಟು. ಹೂಗಳನ್ನು ತಲೆನೋವು ಮತ್ತು ನೆಗಡಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ. ಇದರ ತೊಗಟೆಯಿಂದ ನಾರು ತೆಗೆದು ಹಗ್ಗಗಳನ್ನು ತಯಾರಿಸುವುದಿದೆ. (ಎನ್.)

**ಗಸ್ಟೇವಸ್ :** ಸ್ವೀಡನಿನ ದೊರೆಗಳ ಹೆಸರು.

**ಗಸ್ಟೇವಸ್ I ವೇಸ :** 1496–1560. ಸ್ವೀಡನನ್ನು ಡೆನ್ಮಾರ್ಕಿನಿಂದ ಪ್ರತ್ಯೇಕಿಸಿ ಅಲ್ಲಿ ಸ್ವತಂತ್ರ ರಾಜಮನೆತನವನ್ನು ಸ್ಥಾಪಿಸಿದ. ಈತ 15ನೆಯ ಶತಮಾನದ ಕೊನೆಯಲ್ಲಿ ಅಲ್ಲಿಯ ಪ್ರಸಿದ್ಧ ಮನೆತನವೊಂದರಲ್ಲಿ ಹುಟ್ಟಿದ. ಈತನ ಪೂರ್ವಿಕರು ಸ್ಕಾಂಡಿನೇವಿಯದ ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದರು. ಸ್ವೀಡನಿನ ರೀಜೆಂಟರಾಗಿದ್ದ ಸ್ಟೂರರ

ಮನೆತನದೊಡನೆ ಸಂಬಂಧ ಹೊಂದಿದ್ದರು. ಗಸ್ಟೇವಸ್ ಯೌವನದಲ್ಲಿ ಸ್ಟೆನ್ ಸ್ಟೂರನ ಪರವಾಗಿ ಡೆನ್ಮಾರ್ಕಿನ ರಾಜ ಎರಡನೆಯ ಕ್ರಿಶ್ಚನೊಡನೆ 1517–18ರಲ್ಲಿ ಕಾದಾಡಿದ. ಸ್ಟೇನ್ ಮತ್ತು ಕ್ರಿಶ್ಚನ್ ನಡುವೆ ಆದ ಒಪ್ಪಂದದ ಪ್ರಕಾರ ಗಸ್ಟೇವಸ್‍ನನ್ನು ಕ್ರಿಶ್ಚನನಿಗೆ ಒತ್ತೆಯಾಗಿ ಸ್ಟೆನ್ ಒಪ್ಪಿಸಿದ. ಕ್ರಿಶ್ಚನ್ ಒಪ್ಪಂದವನ್ನು ಉಲ್ಲಂಘಿಸಿ ಗಸ್ಟೇವಸನನ್ನು ಡೆನ್ಮಾರ್ಕಿಗೆ ಕೊಂಡೊಯ್ದ. ಗಸ್ಟೇವಸ್ ಬಂಧನದಿಂದ ತಪ್ಪಿಸಿಕೊಂಡು ಲುಬೆಕ್ ನಗರಕ್ಕೆ ಓಡಿಹೋದ. ಅಲ್ಲಿ ಅನೇಕ ಮಂದಿ ಶ್ರೀಮಂತರು ಇವನ ಸ್ನೇಹಿತರಾದರು. ಅನಂತರ ಗಸ್ಟೇವಸ್ ಸ್ವೀಡನನ್ನು ತಲುಪಿದ. ಸ್ವೀಡನಿನ ರೀಜೆಂಟರಾಗಿದ್ದ ಸ್ಟೆನ್ ಸ್ಟೂರ್ 1520ರಲ್ಲಿ ಮರಣ ಹೊಂದಿದ್ದರಿಂದ ಎರಡನೆಯ ಕ್ರಿಶ್ಚನ್ ಸ್ಟಾಕೋಂ ಉಳಿದು ಇಡೀ ಸ್ವೀಡನಿನ ಮೇಲೆ ಅಧಿಕಾರ ಸ್ಥಾಪಿಸಿದ. ಕ್ರಿಶ್ಚನ್ ತನ್ನ ತೀವ್ರ ವಿರೋಧಿಗಳೆನಿಸಿ ದವರನ್ನೆಲ್ಲ ಕೊಲೆ ಮಾಡಿದ. ಗಸ್ಟೇವಸನ ತಂದೆಯೂ ಚಿಕ್ಕಪ್ಪಂದಿರೂ ಸಾವಿಗೆ ಈಡಾದರು. ಗಸ್ಟೇವಸ್ ಧೈರ್ಯಗೆಡಲಿಲ್ಲ. ಸ್ವೀಡನಿನಲ್ಲಿ ಕ್ರಿಶ್ಚನನ ಅಧಿಕಾರವನ್ನು ಕೊನೆಗಾಣಿಸದೆ ಗತ್ಯಂತರವಿಲ್ಲವೆಂದು ನಿರ್ಧರಿಸಿದ. ಅವನು ಕ್ರಿಶ್ಚನಿನ ಆಡಳಿತವನ್ನು ವಿರೋಧಿಸುತ್ತ ಗುಂಪಿನ ಮುಖಂಡನಾಗಿ ಬಂಡಾಯಕ್ಕೆ ಸಿದ್ಧವಾದ. ಲುಬೆಕ್‍ನ ಶ್ರೀಮಂತ ವರ್ತಕರು ಗಸ್ಟೇವಸನಿಗೆ ಅಗತ್ಯವಾಗಿದ್ದ ಹಣದ ನೆರವು ನೀಡಿದರು. ಗಸ್ಟೇವಸ್ ಪ್ರಬಲನಾಗಿ, ಸ್ವೀಡನಿನ ಮೇಲೆ ಡೆನ್ಮಾರ್ಕಿನ ದೊರೆ ಎರಡನೆಯ ಕ್ರಿಶ್ಚನನ ಆಡಳಿತವನ್ನು ಕೊನೆಗಾಣಿಸಿದ. 1523ರಲ್ಲಿ ಈತ ಸ್ವತಂತ್ರ ಸ್ವೀಡನಿನ ರಾಜನಾದ. ಈತ ಚುನಾವಣೆಯ ಮುಖಾಂತರ ಸಿಂಹಾಸನಕ್ಕೆ ಬಂದರೂ ಮುಂದೆ ರಾಜತ್ವ ತನ್ನ ವಂಶಪಾರಂಪರ್ಯ ವಾಗುವಂತೆ ಪ್ರತಿನಿಧಿಸಭೆಯ ಒಪ್ಪಿಗೆ ದೊರಕಿಸಿಕೊಂಡ. ಡೆನ್ಮಾರ್ಕಿನಲ್ಲಿ ಸಿಂಹಾಸನಕ್ಕಾಗಿ ಕಚ್ಚಾಟಗಳುಂಟಾದವು. ಆ ಸಮಯದಲ್ಲಿ ಗಸ್ಟೇವಸ್ ಎರಡನೆಯ ಕ್ರಿಶ್ಚನನ ವಿರೋಧಿಗಳ ಜೊತೆ ಸೇರಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಕ್ರಿಶ್ಚನನ ಚಿಕ್ಕಪ್ಪ ಒಂದನೆಯ ಫ್ರೆಡರಿಕ್ ಎಂಬವನು ಕ್ರಿಶ್ಚನನನ್ನು ಓಡಿಸಿ ತಾನೇ ದೊರೆಯಾಗಿದ್ದ. ಅವನು ಗಸ್ಟೇವಸನ ಸಖ್ಯ ಸಾಧಿಸುವುದು ಅವನ ಹಿತದೃಷ್ಟಿಯಿಂದ ಅವಶ್ಯವಾಯಿತು. ಸ್ವೀಡನ್ ಡೆನ್ಮಾರ್ಕ್‍ಗಳ ಮಧ್ಯೆ ಕಾಲಕ್ರಮದಲ್ಲಿ ಸ್ನೇಹ ಬೆಳೆಯಿತು.

ಗಸ್ಟೇವಸ್ ಅನೇಕ ಸುಧಾರಣೆಗಳನ್ನು ಕೈಗೊಂಡ. ಹೆಚ್ಚು ತೆರಿಗೆಗಳನ್ನು ವಿಧಿಸಿದ. ಶ್ರೀಮಂತವಾಗಿದ್ದ ಚರ್ಚುಗಳ ಆಸ್ತಿಯನ್ನು ಮೊಟಕುಗೊಳಿಸಲು ಹವಣಿಸಿದ. ರಾಜ ತನಗಿಷ್ಟ ಬಂದಂತೆ ಚರ್ಚಿನ ಆಸ್ತಿಯನ್ನು ಬಳಸಿಕೊಳ್ಳಬಹುದೆಂದು ಸ್ವೀಡನಿನ ಪ್ರತಿನಿಧಿ ಸಭೆ 1527ರಲ್ಲಿ ಒಪ್ಪಿಗೆ ನೀಡಿತು. ಈ ನಿಮಿತ್ತವಾಗಿ ಸ್ವೀಡನಿನಲ್ಲಿ ಮತಸುಧಾರಣೆಯೂ ಪ್ರಾರಂಭವಾಯಿತು. ಗಸ್ಟೇವಸ್ ಪ್ರಾಟೆಸ್ಟಂಟ್ ಪಂಥದತ್ತ ವಾಲಲು ಅವನ ಧಾರ್ಮಿಕ ಒಲವಿಗಿಂತ ರಾಜಕೀಯ ಚಾತುರ್ಯವೇ ಮುಖ್ಯ ಕಾರಣ. ಜರ್ಮನಿಯ ಪ್ರಾಟೆಸ್ಟಂಟ್ ರಾಜರು ನಿರ್ಮಿಸಿಕೊಂಡಿದ್ದ ರಾಜಕೀಯ ನೀತಿಯನ್ನನುಸರಿಸಿ ಸ್ವೀಡನಿನಲ್ಲಿ ಪ್ರಬಲವಾದ ರಾಜತ್ವವನ್ನು ಸ್ಥಾಪಿಸಿದ. ವೈಯಕ್ತಿಕವಾಗಿ ವಿಪುಲವಾದ ಹಣ ಮತ್ತು ಆಸ್ತಿಯನ್ನು ಕಲೆ ಹಾಕಿ ಇತರ ಎಲ್ಲ ಶ್ರೀಮಂತರಿಗಿಂತಲೂ ಸ್ಥಿತಿವಂತನೆನಿಸಿಕೊಂಡ. ಇಡೀ ಸ್ವೀಡನ್ ಒಂದು ಭಾರಿ ಜಹಗೀರು, ಅದಕ್ಕೆ ತಾನೇ ಅಧಿಪತಿ–ಎಂಬಂತೆ ಅವನ ಧೋರಣೆ ಯಾಗಿತ್ತು. ಸ್ವೀಡನಿನ ಆಡಳಿತವನ್ನು ಪ್ರಗತಿದಾಯಕವಾಗಿ ಮಾರ್ಪಡಿಸಲು ಆತ ಅನೇಕ ಸುಧಾರಣೆಗಳನ್ನು ಕೈಗೊಂಡ. ಕೊನೆಗೆ 1644ರಲ್ಲಿ ರಾಜತ್ವ ವಂಶಪಾರಂಪರ್ಯವಾಗಿ ಅವನ ಮನೆತನದ ಹಕ್ಕೆಂಬುದಕ್ಕೆ ಪ್ರತಿನಿಧಿ ಸಭೆ ಸಮ್ಮತಿ ನೀಡಿತು.

ಗಸ್ಟೇವಸ್ ವೇಸ ಪರಾಕ್ರಮಿ. ಹಲವು ವೇಳೆ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗುತ್ತಿದ್ದ. ತನ್ನ ಶತ್ರುಗಳನ್ನು ನಿರ್ನಾಮ ಮಾಡಲು ಎಂಥ ಕೃತ್ಯಕ್ಕೂ ಅವನು ಹಿಂಜರಿಯುತ್ತಿರಲಿಲ್ಲ. ಸಾಹಿತ್ಯ ಮತ್ತು ಕಲೆಯಲ್ಲಿ ಹೆಚ್ಚು ಅಭಿರುಚಿಯಿಲ್ಲದಿದ್ದರೂ ಅವನು ಸಂಗೀತಪ್ರಿಯನಾಗಿದ್ದ. ಸ್ವೀಡಿಷ್ ಭಾಷೆಯಲ್ಲಿ ಚತುರ ಭಾಷಣಕಾರನಾಗಿದ್ದ. ಪತ್ರ ವ್ಯವಹಾರದಲ್ಲಿ ಅವನಿಗೆ ವಿಶೇಷ ಪ್ರತಿಭೆಯಿತ್ತು. ಸ್ವೀಡನನ್ನು ಸ್ವತಂತ್ರಗೊಳಿಸಿ 40 ವರ್ಷಗಳ ಕಾಲ ಭದ್ರವಾದ ಆಡಳಿತ ನಡೆಸಿದ. ಮತಸುಧಾರಣಾ ಚಳವಳಿಯಲ್ಲಿ ಸ್ವೀಡನ್ ಭಾಗವಹಿಸುವಂತೆ ಮಾಡಿದ. ಸದಾ ಸಜ್ಜಾಗಿದ್ದ ಭೂ ಸೈನ್ಯ ಹಾಗೂ ನೌಕಾದಳವನ್ನು ಅವನು ಪ್ರಪ್ರಥಮವಾಗಿ ಸ್ಥಾಪಿಸಿದ. ಸಮಕಾಲೀನ ದಕ್ಷ ರಾಜರಲ್ಲಿ ಗಸ್ಟೇವಸ್ ವೇಸನೂ ಒಬ್ಬನೆಂದು ಪರಿಗಣಿತನಾಗಿದ್ದಾನೆ. ಗಸ್ಟೇವಸ್ ವೇಸನ ಮರಣಾ ನಂತರ (1560) ಅವನ ಮಗ 14ನೆಯ ಎರಿಕ್ ರಾಜನಾದ.

**ಗಸ್ಟೇವಸ್ II ಅಡಾಲ್ಫಸ್ :** 1594–1632. ಸ್ವೀಡನಿನ 9ನೆಯ ಚಾರ್ಲ್ಸ್‍ನಿಗೆ ಅವನ ಎರಡನೆಯ ಹೆಂಡತಿ ಕ್ರಿಸ್ಟೀನಳಲ್ಲಿ ಹುಟ್ಟಿದ ಹಿರಿಯ ಮಗ. ತನ್ನ ತಂದೆಯ ಮರಣಾನಂತರ 1611ರಲ್ಲಿ ಇನ್ನೂ ಚಿಕ್ಕ ವಯಸ್ಸಿನಲ್ಲೇ ಪಟ್ಟಕ್ಕೆ ಬಂದ. ಅವನ ತಂದೆಯ ದರ್ಪಿಷ್ಟ ಆಡಳಿತ, ಪೋಲೆಂಡಿನೊಡನೆ ಅವನ ಯುದ್ಧ–ಈ ಕಾರಣ ಗಳಿಂದಾಗಿ ಗಸ್ಟೇವಸ್ ಸಿಂಹಾಸನಕ್ಕೆ ಬಂದ ತರುವಾಯ ಅನೇಕ ಕಷ್ಟಗಳನ್ನೆದುರಿಸ ಬೇಕಾಯಿತು. ಬಾಲ್ಯದಲ್ಲಿ ಒಳ್ಳೆಯ ಶಿಕ್ಷಣವನ್ನು ಪಡೆದಿದ್ದ ಗಸ್ಟೇವಸ್ ಚತುರತೆಯಿಂದ ತನಗೆದುರಾದ ತೊಡಕುಗಳನ್ನು ಬಗೆಹರಿಸಿಕೊಂಡ. ಆಡಳಿತದಲ್ಲಿದ್ದ ಲೋಪದೋಷ ಗಳನ್ನು ಸರಿಪಡಿಸಿದ. ಶ್ರೀಮಂತರಿಗೆ ಹಣ ಕೊಟ್ಟು ಅವರ ವಿಶ್ವಾಸ ಸಂಪಾದಿಸಿಕೊಂಡ. ಸ್ಥಳೀಯ ಸಂಸ್ಥೆಗಳನ್ನು ನೇರ್ಪುಗೊಳಿಸಿದ. ಹೀಗಾಗಿ ಪ್ರಜೆಗಳ ಮೆಚ್ಚುಗೆಗೆ ಪಾತ್ರನಾದ. ಈತ ಸ್ವೀಡನ್‍ನ ಅತ್ಯಂತ ಪ್ರಸಿದ್ಧ ರಾಜರಲ್ಲೊಬ್ಬ. ಇವನ ಸುಧಾರಣೆಗಳು ಮುಂದಿನ ಎರಡು ಶತಮಾನಗಳ ಕಾಲದಲ್ಲಿ ಸ್ವೀಡನ್‍ನ ಪ್ರಗತಿಗೆ ಸಹಕಾರಿಯಾದವು. ಈತ ವಾಕ್‍ಚತುರ, ಮೇಧಾವಿ, ಸಂಗೀತಪ್ರಿಯ, ತೀಕ್ಷ್ಣಮತಿ. ವಿದ್ಯಾಭ್ಯಾಸದ ಪ್ರಗತಿಗೆ ಇವನು ವಿಶೇಷ ಗಮನ ಕೊಟ್ಟ. ಅನೇಕ ಶಾಲೆಗಳನ್ನು ಸ್ಥಾಪಿಸಿದ. ಸ್ವೀಡನ್‍ನ ಉಪ್ಸಾಲ ವಿಶ್ವವಿದ್ಯಾಲಯ ಪುರೋಭಿವೃದ್ಧಿ ಹೊಂದಿ ಯುರೋಪಿನ ಇತರ ಸುಪ್ರಸಿದ್ಧ ವಿಶ್ವವಿದ್ಯಾಲಯಗಳಿಗೆ ಸರಿಸಮನಾಗಿ ಬೆಳೆದು ಪ್ರಸಿದ್ಧಿಗೆ ಬರಲು ಈತನೇ ಕಾರಣ. ರಾಷ್ಟ್ರದ ವಾಣಿಜ್ಯ ಪ್ರಗತಿ ಸಾಧಿಸಲು ಅನೇಕ ಹೊಸ ಪಟ್ಟಣಗಳನ್ನು ಸ್ಥಾಪಿಸಿದ. ಅವುಗಳಲ್ಲಿ ಎಲ್ಲವೂ ಬೆಳೆಯಲಿಲ್ಲವಾದರೂ ಗಾತನ್‍ಬರ್ಗ್ ಪ್ರಸಿದ್ಧವಾಯಿತು. ದೇಶದಲ್ಲಿ ದೊರೆಯುತ್ತಿದ್ದ ಖನಿಜ ನಿಕ್ಷೇಪಗಳನ್ನು ಸದುಪಯೋಗಪಡಿಸಿಕೊಳ್ಳುವ ಸಲುವಾಗಿ ವಿದೇಶಿ ಬಂಡವಾಳಗಾರರನ್ನು ಆಹ್ವಾನಿಸಿ ಗಣಿ ಉದ್ಯಮಗಳನ್ನು ಸ್ಥಾಪಿಸಿದ. ಇದರಿಂದ ಸ್ವೀಡನ್ ದೇಶ ತಾಮ್ರ ಮತ್ತು ಕಬ್ಬಿಣ ಕೈಗಾರಿಕೆಗಳಲ್ಲಿ ವಿಶೇಷ ಪ್ರಗತಿ ಸಾಧಿಸಿತು.

2ನೆಯ ಗಸ್ಟೇವಸ್ ಆಂತರಿಕ ಹಾಗೂ ಅಂತಾರಾಷ್ಟ್ರೀಯ ನೀತಿಗಳನ್ನು ಬಹು ಸೂಕ್ಷ್ಮವಾಗಿ ಯೋಚಿಸಿ ರೂಪಿಸುತ್ತಿದ್ದ. ಡೆನ್ಮಾರ್ಕ್ ರಷ್ಯಗಳೊಡನೆ ಅವನು ಅನಿವಾರ್ಯವಾಗಿ ಯುದ್ಧ ಮಾಡಲೇಬೇಕಾಯಿತು. ರಷ್ಯದೊಡನೆ ಸಂಧಾನವನ್ನೇರ್ಪ ಡಿಸಿಕೊಂಡು ಪರಿಸ್ಥಿತಿಯನ್ನು ಸುಧಾರಿಸಿಕೊಂಡ. ಪೋಲೆಂಡಿನೊಡನಿದ್ದ ಹಗೆತನವನ್ನು ಅಂತ್ಯಗೊಳಿಸಲು ಅವನು ಅನೇಕ ಕ್ರಮಗಳನ್ನು ಕೈಗೊಂಡ. ಯುರೋಪಿನ ಪ್ರಾಟೆಸ್ಟಂಟ್ ರಾಷ್ಟ್ರಗಳೊಡನೆ ಮೈತ್ರಿ ಬೆಳೆಸಿದ. ಬ್ರಾಂಡನ್‍ಬರ್ಗಿನ ಜಾನ್ ಸಿಗಿಸ್ಮಂಡನ ಮಗಳಾದ ಎಲಿಯನೋರಳನ್ನು 1620ರಲ್ಲಿ ವಿವಾಹವಾದದ್ದು ಈ ಉದ್ದೇಶಕ್ಕಾಗಿ.

ಈ ಮಧ್ಯೆ 1618ರಲ್ಲಿ ಯುರೋಪಿನಲ್ಲಿ ಮೂವತ್ತು ವರ್ಷಗಳ ಯುದ್ಧ ಪ್ರಾರಂಭವಾಯಿತು. ಆಸ್ಟ್ರಿಯದ ಚಕ್ರವರ್ತಿ 2ನೆಯ ಫರ್ಡಿನೆಂಡ್ ಪೋಲೆಂಡಿಗೆ ವಿಶೇಷ ಸಹಾಯ ನೀಡಿದ. ಸ್ವೀಡನ್‍ಗೂ ಪೋಲೆಂಡ್‍ಗೂ ವೈರ ಬೆಳೆಯಿತು. ಆಸ್ಟ್ರಿಯನ್‍ರ ಸಹಾಯದಿಂದ ಬಾಲ್ಟಿಕ್ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪೋಲೆಂಡ್ ಯತ್ನಿಸಿತು. 2ನೆಯ ಗಸ್ಟೇವಸ್ 1621ರಲ್ಲಿ ಪೋಲೆಂಡ್‍ನ ಸೈನ್ಯವನ್ನು ರೀಗ್‍ನಲ್ಲಿ ಸೋಲಿಸಿದ. ಆ ವೇಳೆಗೆ ಮಧ್ಯ ಜರ್ಮನಿಯಲ್ಲಿ ಆಸ್ಟ್ರಿಯನ್ ಸೈನ್ಯಗಳು ಪ್ರಾಟೆಸ್ಟಂಟ್ ರಾಜರನ್ನು ಸೋಲಿಸಿದವು. 1627ರಲ್ಲಿ ಪ್ರಾಟೆಸ್ಟಂಟ್ ಪಂಥಕ್ಕೆ ವಿಪತ್ತೊದಗಿದಂತೆ ಕಂಡಿತು. ಗಸ್ಟೇವಸ್ ಪ್ರಾಟೆಸ್ಟಂಟ್ ರಾಜರ ಒಕ್ಕೂಟವನ್ನು ಸ್ಥಾಪಿಸಿ ಆಸ್ಟ್ರಿಯನ್ ಸಾಮ್ರಾಜ್ಯವನ್ನು ಸೋಲಿಸಲು ಯತ್ನಿಸಿದ. ಆದರೆ ಅವನ ಈ ಪ್ರಯತ್ನ ಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಸ್ವೀಡನ್ ಮತ್ತು ಪ್ರಾಟೆಸ್ಟಂಟ್ ಪಂಥದ ಮೇಲ್ಮೆಗಾಗಿ ಹೋರಾಡಲು ಗಸ್ಟೇವಸ್ ನಿರ್ಧರಿಸಿ 1629ರಲ್ಲಿ ಜರ್ಮನಿಯನ್ನು ಪ್ರವೇಶಿಸಿದ. ಪ್ರಾಟೆಸ್ಟಂಟ್ ಪಂಥಾನುಯಾಯಿಗಳು ಗಸ್ಟೇವಸ್‍ನನ್ನು ಉತ್ತರದ ಸಿಂಹ ಎಂಬುದಾಗಿ ಕರೆದು ಅವನ ನೇತೃತ್ವದಲ್ಲಿ ಹೋರಾಡಲು ಸಿದ್ಧರಾದರು. ಮ್ಯಾಗ್ಡೆಬರ್ಗ್ ನಗರವನ್ನು ವಶಪಡಿಸಿ ಕೊಳ್ಳುವುದರಲ್ಲಿ ಗಸ್ಟೇವಸ್ ವಿಫಲನಾದರೂ ಧೈರ್ಯಗೆಡದೆ ಯುದ್ಧವನ್ನು ಮುಂದುವರಿಸಿದ. ಬ್ರೈಟೆನ್‍ಫೆಲ್ಟ್ ಕದನದಲ್ಲಿ ಗಸ್ಟೇವಸ್ ಆಸ್ಟ್ರಿಯನ್ ಸಾಮ್ರಾಜ್ಯದ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿ ಅದ್ಭುತ ವಿಜಯ ಗಳಿಸಿದ. ಅವನ ಪ್ರತಿಷ್ಠೆ ಹೆಚ್ಚಿತು. ಪ್ರಾಟೆಸ್ಟಂಟ್ ಪಂಥಕ್ಕೆ ಒದಗಿದ್ದ ವಿಪತ್ತು ದೂರವಾಯಿತು. 1632ರಲ್ಲಿ ಗಸ್ಟೇವಸ್ ಬವೇರಿಯದ ಮೇಲೆ ದಂಡೆತ್ತಿಹೋಗಿ ಮ್ಯೂನಿಕ್ ಅನ್ನು ಆಕ್ರಮಿಸಿದ. ಅದೇ ವರ್ಷ ಲುಟ್ಸೆನ್‍ನಲ್ಲಿ ನಡೆದ ಕದನದಲ್ಲಿ ಗಸ್ಟೇವಸ್‍ನ ಸೈನ್ಯ ವಿಜಯ ಗಳಿಸಿತಾದರೂ ಅಶ್ವದಳವೊಂದರ ಮುಂದಾಳಾಗಿದ್ದ ಆತ ಮರಣ ಹೊಂದಿದ.

2ನೆಯ ಗಸ್ಟೇವಸ್ ರಾಜತಂತ್ರ ನಿಪುಣ, ವೀರಯೋಧ, ಚತುರ ದಳಪತಿ. ಕರ್ತವ್ಯ, ಶ್ರದ್ಧೆ, ಕರುಣೆ, ಸಹನೆ ಮೊದಲಾದ ಗುಣಗಳಿಗೂ ಅವನು ಹೆಸರಾಗಿದ್ದ. ತನ್ನ ರಾಷ್ಟ್ರದ ಹಿರಿಮೆಯನ್ನು ಹೆಚ್ಚಿಸಿದ ಪ್ರಾಟೆಸ್ಟಂಟ್ ಪಂಥದ ಉಳಿವು ಸಂದಿಗ್ಧ ಸ್ಥಿತಿಯಲ್ಲಿದ್ದಾಗ ಅದಕ್ಕೆ ಗೆಲವು ತುಂಬಿ, ರಣರಂಗದಲ್ಲಿ ವೀರಾವೇಶದಿಂದ ಹೋರಾಡಿದ. ಗಸ್ಟೇವಸ್‍ನ ಮರಣಾನಂತರ ಅವನ ಏಕಮಾತ್ರ ಪುತ್ರಿಯಾದ ಕ್ರಿಸ್ಟೀನ ಸ್ವೀಡನ್‍ನ ಸಿಂಹಾಸನವನ್ನೇರಿದಳು.

**ಗಸ್ಟೇವಸ್ III :** 1746–92. ಸ್ವೀಡನಿನ ದೊರೆ ಅಡಾಲ್ಫಸ್ ಫ್ರೆಡರಿಕ್ ಮತ್ತು ಲೂಯಿಸ ಉಲ್ರಿಕ–ಇವರ ಮಗ. ಲೂಯಿಸ ಉಲ್ರಿಕ ಪ್ರಷ್ಯದ ಫ್ರೆಡರಿಕ್ ಮಹಾಶಯನ ಸೋದರಿ. 3ನೆಯ ಗಸ್ಟೇವಸ್ 1771ರಲ್ಲಿ ಸ್ವೀಡನ್‍ನ ರಾಜನಾದ. ರಾಜತಂತ್ರ ನಿಪುಣರೂ ವಿದ್ವಾಂಸರೂ ಅವನಿಗೆ ಬಾಲ್ಯದಲ್ಲಿ ಶಿಕ್ಷಣ ನೀಡಿದರು. 1771ರ ಪ್ರಾರಂಭದಲ್ಲಿ ಯುವರಾಜ ಗಸ್ಟೇವಸ್ ರಾಜಕೀಯ ಸಂಧಾನಕ್ಕಾಗಿ ಫ್ರಾನ್ಸ್‍ಗೆ ಭೇಟಿ ನೀಡಿದ್ದ ಕಾಲದಲ್ಲಿ ಅವನ ತಂದೆ ಮರಣ ಹೊಂದಿದ. ತತ್‍ಕ್ಷಣ ಗಸ್ಟೇವಸ್ ರಾಜಧಾನಿಗೆ ಧಾವಿಸಿ ಬಂದು ಅಧಿಕಾರ ವಹಿಸಿಕೊಂಡ. ಆ ವೇಳೆಗೆ ಸ್ವೀಡನ್‍ನಲ್ಲಿ ಹ್ಯಾಟ್ಸ್ ಮತ್ತು ಕ್ಯಾಪ್ಸ್

ಎಂಬ ಎರಡು ಪ್ರಧಾನ ಗುಂಪುಗಳು ಅಧಿಕಾರಕ್ಕಾಗಿ ಹೋರಾಟದಲ್ಲಿ ತೊಡಗಿದ್ದವು. ಗಸ್ಟೇವಸ್ ಈ ಪಕ್ಷಗಳೊಡನೆ ಸಂಧಾನದಲ್ಲಿ ತೊಡಗಿ, ಭಿನ್ನಾಭಿಪ್ರಾಯಗಳನ್ನೂ ಆಂತರಿಕ ಕಚ್ಚಾಟಗಳನ್ನೂ ಕೊನೆಗಾಣಿಸಲು ಯತ್ನಿಸಿ ವಿಫಲನಾದ. ಈ ಪಕ್ಷಗಳು ಪರಸ್ಪರ ಬಲಾಬಲಪ್ರದರ್ಶನದಲ್ಲಿ ತೊಡಗಿದವು. ಕೊನೆಗೆ ಗಸ್ಟೇವಸ್ ತನ್ನ ಆಪ್ತ ದಳಪತಿಗಳ ಸಹಾಯದಿಂದ ಈ ಪಕ್ಷಗಳ ಬಲವನ್ನು ಸೋಲಿಸಿ ಅವರ ನಾಯಕರನ್ನು ಬಂಧಿಸಿ ಪ್ರತಿನಿಧಿ ಸಭೆಯನ್ನು ಸೇರಿಸಿ ಹೊಸ ಸಂವಿಧಾನವನ್ನು ಅಸ್ತಿತ್ವಕ್ಕೆ ತಂದ.

ಅನಂತರ ಗಸ್ಟೇವಸ್ ಸ್ವೀಡನ್ನನ್ನು ಪ್ರಗತಿಪರ ರಾಷ್ಟ್ರವನ್ನಾಗಿ ಮಾರ್ಪಡಿಸಲು ವಿಶೇಷವಾಗಿ ಶ್ರಮಿಸಿದ. ಆಡಳಿತ ಯಂತ್ರವನ್ನು ಚುರುಕುಗೊಳಿಸಿದ. ನ್ಯಾಯಾಂಗದಲ್ಲಿ ಅನೇಕ ಸುಧಾರಣೆಗಳು ಜಾರಿಗೆ ಬಂದವು. ಪತ್ರಿಕಾ ಸ್ವಾತಂತ್ರ್ಯ ನೀಡುವ ಸುಗ್ರೀವಾಜ್ಞೆಯೊಂದು 1774ರಲ್ಲಿ ಹೊರಬಂತು ಈತ ಮತೀಯ ಸ್ವಾತಂತ್ರ್ಯವನ್ನು ಘೋಷಿಸಿದ. ವಾಣಿಜ್ಯ ವಹಿವಾಟುಗಳ ಮೇಲಿದ್ದ ನಿರ್ಬಂಧಗಳನ್ನು ತೆಗೆದುಹಾಕಿದ. ನಾಣ್ಯಪದ್ಧತಿಯನ್ನು ಸುಧಾರಿಸಿದ. ರಾಷ್ಟ್ರೀಯ ನೌಕಾಬಲದ ಸಾಮರ್ಥ್ಯವನ್ನು ಇಮ್ಮಡಿಗೊಳಿಸಿದ. ಕೇವಲ ಆರು ವರ್ಷಗಳಲ್ಲಿ ಅನೇಕ ಪ್ರಗತಿಪರ ಸುಧಾರಣೆಗಳು ಜಾರಿಗೆ ಬಂದವು. ಆದರೂ 1778ರಲ್ಲಿ ರೀಕ್ಸ್‌ದಾಗ್ ಸಭೆ ಗಸ್ಟೇವಸ್‌ನ ಅಧಿಕಾರಕ್ಕೆ ವಿರೋಧ ವ್ಯಕ್ತಪಡಿಸಿತು. ಗಸ್ಟೇವಸ್ ಈ ಸಭೆಯ ಅಧಿಕಾರವನ್ನು ಮೊಟಕುಗೊಳಿಸಲು ಸಮಯ ಕಾಯುತ್ತಿದ್ದ. 1789ರಲ್ಲಿ ಸ್ವೀಡನ್ ರಷ್ಯಗಳ ಮಧ್ಯೆ ಯುದ್ಧ ಸಂಭವಿಸಿದ್ದರಿಂದ ಗಸ್ಟೇವಸ್ ರೀಕ್ಸ್‌ದಾಗ್ ಸಭೆಯನ್ನು ಮೂಲೆಗೊತ್ತಿ ಸಂಪೂರ್ಣ ಅಧಿಕಾರವನ್ನು ತಾನೇ ವಹಿಸಿಕೊಂಡ. 1790ರಲ್ಲಿ ರಷ್ಯವನ್ನು ನೌಕಾಯುದ್ಧದಲ್ಲಿ ಸೋಲಿಸಿದ. ಆದರೂ ಸ್ವೀಡನ್‌ಗಿಂತ ರಷ್ಯ ಪ್ರಬಲವೆಂಬುದನ್ನರಿತ ಗಸ್ಟೇವಸ್ ಅದರೊಂದಿಗೆ ಶಾಂತಿ ಏರ್ಪಡಿಸಿಕೊಂಡು ಎಂಟು ವರ್ಷಗಳ ರಕ್ಷಣಾ ಒಪ್ಪಂದ ಮಾಡಿಕೊಂಡ. ರಷ್ಯದ ಸಾಮ್ರಾಜ್ಞಿ ಕ್ಯಾಥರೀನ್ ಸ್ವೀಡಿನ್‌ಗೆ ವಾರ್ಷಿಕ ಸಹಾಯಧನ ನೀಡಲೊಪ್ಪಿದರು. ಅನಂತರ ಗಸ್ಟೇವಸ್ ಐರೋಪ್ಯ ಸಮಸ್ಯೆಗಳಿಗೆ ಗಮನ ನೀಡತೊಡಗಿದ. ಕ್ರಾಂತಿ ವಿರುದ್ಧವಾಗಿ ದೊರೆಗಳ ಕೂಟವೊಂದನ್ನು ಸ್ಥಾಪಿಸುವುದು ಇವನ ಉದ್ದೇಶವಾಗಿತ್ತು. ಆದರೆ ಬಡತನ ಮತ್ತು ಪರಸ್ಪರ ಅಸೂಯೆಗಳಿಂದಾಗಿ ಈ ಪ್ರಯತ್ನಕ್ಕೆ ಯಶಸ್ಸು ದೊರಕಲಿಲ್ಲ. 1792ರಲ್ಲಿ ಶ್ರೀಮಂತರ ಸಂಚೊಂದಕ್ಕೆ ಗಸ್ಟೇವಸ್ ಬಲಿಯಾದ. ಸ್ಟಾಕ್ಹೋಮಿನ ನಾಟಕಶಾಲೆಯೊಂದರಲ್ಲಿ ಕ್ಯಾಪ್ಟನ್ ಜೇಕಬ್ ಜೊಹಾನ್ ಆಂಕಾರ್‌ಸ್ಟ್ರಾಂ ಈತನನ್ನು ತಿವಿದ (ಮಾರ್ಚ್ 16). ಹದಿಮೂರು ದಿನಗಳ ಆನಂತರ ಗಸ್ಟೇವಸ್ ತೀರಿಕೊಂಡ.

3ನೆಯ ಗಸ್ಟೇವಸ್ ಸ್ವೀಡಿನ್ನಿನ ಅತಿ ದಕ್ಷ ಹಾಗೂ ರಾಷ್ಟ್ರಾಭಿಮಾನ ರಾಜರಲ್ಲಿ ಒಬ್ಬ. ಅವನು ಸಾಹಿತ್ಯ ಕಲೆಗಳಲ್ಲಿ ಅಭಿರುಚಿ ಹೊಂದಿದ್ದು ಅವಕ್ಕೆ ವಿಶೇಷ ಪ್ರೋತ್ಸಾಹ ನೀಡಿದ. ಗಸ್ಟೇವಸ್ 1786ರಲ್ಲಿ ಸ್ವೀಡಿಷ್ ಅಕಾಡೆಮಿಯನ್ನು ಸ್ಥಾಪಿಸಿದ. ಈತನಿಂದ ನಾಟ್ಯಕಲೆಗೆ ವಿಶೇಷ ಪ್ರೋತ್ಸಾಹ ದೊರಕಿತು. ಇವನ ಸಾಂಸ್ಕೃತಿಕ ಅಭಿಮಾನ ಮತ್ತು ಪ್ರೋತ್ಸಾಹ ಹಾಗೂ ರಾಜಕೀಯ ಸಿದ್ಧಿಗಳಿಂದಾಗಿ ಇವನ ಆಳ್ವಿಕೆ ಸ್ವೀಡನ್ನಿನ ಇತಿಹಾಸದಲ್ಲಿ ಗಸ್ಟೇವಿಯನ್ ಯುಗವೆಂದು ಪ್ರಸಿದ್ಧವಾಗಿದೆ.

**ಗಸ್ಟೇವಸ್ IV** : 1778–1837. 3ನೆಯ ಗಸ್ಟೇವಸ್‌ನ ಮಗ. 3ನೆಯ ಗಸ್ಟೇವಸ್ ಕೊಲೆಯಾದಾಗ ಈತ ಇನ್ನೂ ಬಾಲಕನಾಗಿದ್ದ. ಆದ್ದರಿಂದ ಗತಿಸಿದ ರಾಜನ ಸೋದರನೂ ಸಾಡರ್‌ಮನ್‌ಲೆಂಟಿನ ಡ್ಯೂಕನು ಆಗಿದ್ದ ಚಾರಲ್ಸ್ ರೀಜೆಂಟಾಗಿ ಆಡಳಿತ ನಡೆಸುವಂತೆ ಏರ್ಪಾಡಾಗಿತ್ತು. 4ನೆಯ ಗಸ್ಟೇವಸ್ ಬಾಲ್ಯದಲ್ಲಿ ಯೋಗ್ಯ ಶಿಕ್ಷಣ ಪಡೆದ. ಬೇಡನಿನ ಚಾರಲ್ಸ್ ಲೂಯಿಯ ಮಗಳಾದ ಫ್ರೆಡರಿಕ್ ಡೊರೋತಿಯಳೊಂದಿಗೆ 1797ರಲ್ಲಿ ಇವನ ವಿವಾಹವಾಯಿತು. 1800ರಲ್ಲಿ ಪ್ರಾಪ್ತ ವಯಸ್ಕನಾದ 4ನೆಯ ಗಸ್ಟೇವಸ್ ವಿಧಿವತ್ತಾಗಿ ಸಿಂಹಾಸನಾರೋಹಣ ಮಾಡಿದ. ಫ್ರಾನ್ಸಿನ ಕ್ರಾಂತಿಯ ಪರಿಣಾಮವಾಗಿ ಗಸ್ಟೇವಸ್ ಹಲವು ಉಗ್ರಕ್ರಮಗಳನ್ನು ಆಚರಣೆಗೆ ತಂದ. ಅಲ್ಲದೆ ಕೆಲವು ವರ್ಷಗಳ ಕಾಲ ಸ್ವೀಡನ್‌ನಲ್ಲಿ ಬೆಳೆಗೆ ಹಾನಿ ತಟ್ಟಿತ್ತು. 1808ರ ವೇಳೆಗೆ ದೇಶದಲ್ಲಿ ಆರ್ಥಿಕಸ್ಥಿತಿ ಅಧೋಗತಿ ಹೊಂದಿತು. ಗಸ್ಟೇವಸ್ ಚತುರತೆಯಿಂದ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳುವ ಬದಲು ಬೆದರಿಕೆಯ ಉಗ್ರಕ್ರಮಗಳನ್ನು ಕೈಗೊಂಡ. ಅವನನ್ನು ಅಧಿಕಾರದಿಂದ ತೆಗೆಯಲು ಪಿತೂರಿಗಳು ನಡೆದುವು. ಕೊನೆಗೆ 1809ರಲ್ಲಿ ಸೇನಾನಾಯಕರು ಅರಮನೆಗೆ ನುಗ್ಗಿ ರಾಜನನ್ನೂ ಅವನ ಪರಿವಾರವನ್ನೂ ಬಂಧಿಸಿ ರಾಜಧಾನಿಯಿಂದ ಬೇರೆ ಕಡೆಗೆ ಸಾಗಿಸಿ ಬಂಧನದಲ್ಲಿಟ್ಟರು. ಕೂಡಲೇ ಡಯಟ್ ಸಭೆ ಸೇರಿ ಕ್ರಾಂತಿಯನ್ನು ಅನುಮೋದಿಸಿ ಗಸ್ಟೇವಸ್‌ನ ಚಿಕ್ಕಪ್ಪನಾದ ಚಾರ್ಲ್ಸ್‌ನ ನೇತೃತ್ವದಲ್ಲಿ ತಾತ್ಕಾಲಿಕವಾಗಿ ಆಡಳಿತ ನಡೆಸುವ ಏರ್ಪಾಡು ಮಾಡಿತು. ಸಿಂಹಾಸನದ ಹಕ್ಕನ್ನು ತನ್ನ ಮಗನಿಗೆ ಉಳಿಸುವ ದೃಷ್ಟಿಯಿಂದ 4ನೆಯ ಗಸ್ಟೇವಸ್ ತಾನಾಗಿಯೇ ಸಿಂಹಾಸನ ತ್ಯಾಗ ಮಾಡಿದ. ಸೈನ್ಯದ ಬೆಂಬಲ ಪಡೆದಿದ್ದ ಕ್ರಾಂತಿಯ ಮುಖಂಡರು ಗಸ್ಟೇವಸ್‌ನ ಸಂತತಿಗೆ ಸಿಂಹಾಸನದ ಹಕ್ಕಿಲ್ಲವೆಂದು ತೀರ್ಮಾನಿಸಿದರು. ಗಸ್ಟೇವಸ್ ಮತ್ತು ಅವನ ಕುಟುಂಬದವರನ್ನು ಜರ್ಮನಿಗೆ ಸ್ಥಳಾಂತರಿಸಲಾಯಿತು. ಅವನ ಚಿಕ್ಕಪ್ಪ ಚಾರ್ಲ್ಸ್‌ನನ್ನೇ 13ನೆಯ ಚಾರ್ಲ್ಸ್ ದೊರೆಯೆಂದು ಘೋಷಿಸಲಾಯಿತು. ಆತ ಒಪ್ಪಿಕೊಂಡ ನೂತನ ಉದಾರವಾದಿ ಸಂವಿಧಾನವನ್ನು ಡಯಟ್ ಸ್ಥಿರೀಕರಿಸಿತು.

ಗಸ್ಟೇವಸ್ ತನ್ನ ಜೀವನದ ಉಳಿದ ಕಾಲವನ್ನು ಬೇರೆಬೇರೆ ಸ್ಥಳಗಳಲ್ಲಿ ಕಳೆದ. ಗಾಟಾರ್ಪ್‌ನ ಕೌಂಟ್ ಎಂಬ ಬಿರುದು ತಳೆದ. ಇವನು ಕೆಲವು ಗ್ರಂಥಗಳನ್ನೂ ಬರೆದಿದ್ದಾನೆ. ಈತ ಸಂಸಾರವನ್ನು ತ್ಯಜಿಸಿ ಅವ್ಯವಸ್ಥೆಯ ಜೀವನ ನಡೆಸಿ 1812ರಲ್ಲಿ ವಿವಾಹವಿಚ್ಛೇದ ಮಾಡಿಕೊಂಡು, ಅಂತಿಮವಾಗಿ ಸ್ವಿಟ್ಜರ್ಲೆಂಡಿನಲ್ಲಿ ಒಂಟಿ ಜೀವನ ನಡೆಸಿದ. 1837ರಲ್ಲಿ ಮರಣ ಹೊಂದಿದ. 2ನೆಯ ಆಸ್ಕಾರ್ ದೊರೆಯ ಸಲಹೆಯಂತೆ 1884ರಲ್ಲಿ ಅವನ ದೇಹವನ್ನು ಸ್ವೀಡನ್‌ಗೆ ತಂದು ರಿಡ್ಡರ್ ಹೋಂಸ್ಕಿರ್ಕದಲ್ಲಿ ಸಮಾಧಿ ಮಾಡಲಾಯಿತು.

**ಗಸ್ಟೇವಸ್ V** : 1858–1950. 2ನೆಯ ಆಸ್ಕರನ ಮಗ. 1872ರಲ್ಲಿ ಯುವರಾಜನಾದ. ಸೈನ್ಯದಲ್ಲಿ ಉನ್ನತ ಅಧಿಕಾರಿಯಾಗಿದ್ದ. ವಿದೇಶಗಳಲ್ಲಿ ಪ್ರಯಾಣ ಕೈಗೊಂಡು ಅನುಭವ ಗಳಿಸಿದ. ಬೇಡನಿನ ಗ್ರಾಂಡ್ ಡ್ಯೂಕ್ 1ನೆಯ ಫ್ರೆಡರಿಕ್‌ನ ಮಗಳೂ 4ನೆಯ ಗಸ್ಟೇವಸ್‌ನ ಮರಿಮಗಳೂ ಆದ ವಿಕ್ಟೋರಿಯಳನ್ನು 1881ರಲ್ಲಿ ವಿವಾಹವಾದ್ದರಿಂದ ಸ್ವೀಡನ್‌ನ ವೇಸ ವಂಶದೊಂದಿಗೆ ಇವನ ವಂಶ ಸಮಾವೇಶಗೊಂಡಿತು. 5ನೆಯ ಗಸ್ಟೇವಸ್ 1907ರಲ್ಲಿ ಸ್ವೀಡನ್‌ನ ರಾಜನಾದ. ಎರಡು ಮಹಾಯುದ್ಧಗಳ ಕಾಲದಲ್ಲಿ ಇವನ ನೇತೃತ್ವದಲ್ಲಿ ಸ್ವೀಡನ್ ತಟಸ್ಥ ನೀತಿ ಅನುಸರಿಸಿತು. 1942ರಲ್ಲಿ ಇವನು ತೀವ್ರವಾದ ಕಾಯಿಲೆಯಿಂದ ಮಲಗುವವರೆಗೂ ಒಳ್ಳೆಯ ಟೆನಿಸ್ ಆಟಗಾರನಾಗಿದ್ದ. 5ನೆಯ ಗಸ್ಟೇವಸ್ 1950ರಲ್ಲಿ ಸ್ಟಾಕ್ಹೋಂನಲ್ಲಿ ಮರಣ ಹೊಂದಿದ.

**ಗಸ್ಟೇವಸ್ VI** : 5ನೆಯ ಗಸ್ಟೇವಸ್‌ನ ಮಗ. 1882ರಲ್ಲಿ ಹುಟ್ಟಿದ. ತನ್ನ ತಂದೆಯ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ಗಸ್ಟೇವಸ್ ಪ್ರಾಕ್ತನ ಶಾಸ್ತ್ರದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದು ಒಳ್ಳೆಯ ವಿದ್ವಾಂಸನೆನಿಸಿಕೊಂಡಿದ್ದ. ಅವನು ಸ್ವೀಡನ್‌ನ ಅನೇಕ ಐತಿಹಾಸಿಕ ಸ್ಥಳಗಳಲ್ಲಿ ಪ್ರಾಕ್ತನ ಸಂಶೋಧನೆ ನಡೆಸಿ ಆ ಬಗ್ಗೆ ಲೇಖನಗಳನ್ನು ಪ್ರಕಟಿಸಿದ್ದಾನೆ. ಗ್ರೀಸ್, ಚೀನ ಮತ್ತು ಸೈಪ್ರಸ್ ಪ್ರದೇಶಗಳಲ್ಲಿ ಅವನ ನೇತೃತ್ವದಲ್ಲಿ ಸ್ವೀಡನಿನ ಪ್ರಾಕ್ತನ ತಜ್ಞರು ಅನೇಕ ಸಂಶೋಧನೆಗಳನ್ನು ನಡೆಸಿದ್ದಾರೆ. 6ನೆಯ ಗಸ್ಟೇವಸ್ ತನ್ನ ತಂದೆಯ ಮರಣಾನಂತರ 1950ರಲ್ಲಿ ಸ್ವೀಡನ್‌ನ ಸಿಂಹಾಸನವನ್ನೇರಿದ. **(ಜಿ.ಆರ್.ಆರ್.; ಎಸ್.ಎಸ್.)**

**ಗಳಗಂಡ : ನೋಡಿ– ಗಂಡಮಾಲೆ**

**ಗಳಗನಾಥ[1]** : ಹಾವೇರಿ ಜಿಲ್ಲೆ ಹಾವೇರಿ ತಾಲ್ಲೂಕಿನಲ್ಲಿರುವ ಒಂದು ಪುಣ್ಯಕ್ಷೇತ್ರ. ಸುಂದರ ತಾಣ. ವರದಾ ಮತ್ತು ತುಂಗಭದ್ರಾ ನದಿಗಳ ಸಂಗಮಸ್ಥಳದಲ್ಲಿದೆ.

ಇಲ್ಲಿರುವ ಗಳಗೇಶ್ವರ ದೇವಸ್ಥಾನದಿಂದ ಈ ಸ್ಥಳಕ್ಕೆ ಗಳಗನಾಥ ಎಂಬ ಹೆಸರು ಬಂದಿದೆ. ಈ ದೇವಾಲಯವನ್ನು ಗಳಗೇಶ್ವರ ಮುನಿ ಸ್ಥಾಪಿಸಿದರೆಂದು ಪ್ರತೀತಿ. ಈ ದೇವಾಲಯ 28ಮೀ. ಉದ್ದ 14ಮೀ ಅಗಲವಿದೆ. ಇದರ ಮೇಲ್ಛಾವಣಿಯನ್ನು ನಾಲ್ಕು ಸುಂದರವಾದ ಸ್ತಂಭಗಳು ಅಂದವಾಗಿ ಎತ್ತಿ ಹಿಡಿದಿವೆ. ದೇವಾಲಯದ ಸುತ್ತಲೂ ಗೋಡೆಯ ಮೇಲೆ ಪೌರಾಣಿಕ ಕಥೆಗಳನ್ನು ಕೆತ್ತಲಾಗಿದೆ. ಈ ದೇವಾಲಯದ ಕಟ್ಟಡದ ವೈಶಿಷ್ಟ್ಯವೆಂದರೆ ಇದರ ಅಡಿಪಾಯ. ಇದರ ಆಕಾರ ಪಿರಮಿಡ್‌ನಂತಿದೆ. ನದಿಯ ನೆರೆಹಾವಳಿಯಿಂದ ಈ ದೇವಾಲಯವನ್ನು ರಕ್ಷಿಸಲು ಗೋಡೆಗಳನ್ನು ಕಟ್ಟಲಾಗಿದೆ. ಇಲ್ಲಿ ಒಂದು ಹನುಮಂತದೇವರ ಗುಡಿಯೂ ಇದೆ. ಈ ಊರಲ್ಲಿ ಕಲ್ಯಾಣ ಚಾಳುಕ್ಯರ ಆರು ಶಾಸನಗಳು ದೊರೆತಿವೆ. ಹೊಯ್ಸಳ ವಿಷ್ಣುವರ್ಧನ ಇಲ್ಲಿಂದ ದಾನಮಾಡಿದ ಸಂಗತಿ ತಿಳಿದುಬರುತ್ತದೆ. ಈ ಗ್ರಾಮದ ಸಮೀಪದಲ್ಲಿ ಅನೇಕ ಬೃಹತ್ ಶಿಲಾ ಸಮಾಧಿಗಳು ಬೆಳಕಿಗೆ ಬಂದಿವೆ. ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥರು ಈ ಸ್ಥಳದವರು. **(ಎಸ್.ಎಸ್.ಬಿ.)**

**ಗಳಗನಾಥ[2]** : 1869–1942. ಕನ್ನಡದ ಹೊಸ ಹುಟ್ಟಿನ ಕಾಲದ ಪ್ರಾರಂಭದಲ್ಲಿ ತಮ್ಮ ವಿಪುಲವಾದ ಕನ್ನಡ ಬರವಣಿಗೆಯಿಂದ ಇಡೀ ನಾಡಿನಲ್ಲಿ ಭಾಷಾ ಜಾಗೃತಿಯನ್ನುಂಟುಮಾಡಿದ ಪ್ರಸಿದ್ಧ ಲೇಖಕರಲ್ಲೊಬ್ಬರು. ಇವರ ಪೂರ್ಣ ಹೆಸರು ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥ. ವೆಂಕಣ್ಣ, ವೆಂಕಟೇಶ ಎಂಬುದು ಮನೆಯ ಹೆಸರುಗಳು. ಗಳಗನಾಥರು ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ಗಳಗನಾಥ ಎಂಬ ಹಳ್ಳಿಯಲ್ಲಿ 1869ರ ಜನವರಿ 5ರಂದು ಹುಟ್ಟಿದರು. ಇವರು ಊರಿನ ಕುಲಕರ್ಣಿಯವರ ಚೊಚ್ಚಲು ಮಗನಾದುದರಿಂದ ಇಡಿಯ ಊರಿನಲ್ಲಿಯೇ ಅಂದು ಒಂದು ದೊಡ್ಡ ಸಂಭ್ರಮ. ತನ್ನಿಮಿತ್ತ ಆ ಊರಿನ ಸ್ವಾಮಿಯಾದ ಗಳಗೇಶ್ವರನ ದೇವಾಲಯದಲ್ಲಿ ವಿಶೇಷ ಪೂಜಾದಿಗಳು ಜರುಗಿದವು. ಮುಂದೆ ವೆಂಕಣ್ಣನ ಬಾಲ್ಯ ಆ ಪರಿಸರದಲ್ಲಿಯೇ ಕಳೆಯಿತು. ವರದಾ ಹಾಗೂ ತುಂಗಭದ್ರಾ ನದಿಗಳ ಸಂಗಮ ಸ್ಥಾನದ ಹತ್ತಿರ ರಮಣೀಯ ಸ್ಥಳದಲ್ಲಿರುವ ಗಳಗನಾಥದ ಗಳಗೇಶ್ವರ ದೇವಾಲಯವೇ ಇವರ ಪ್ರಥಮ ಪಾಠಶಾಲೆಯಾಯಿತಲ್ಲದೆ ಅಲ್ಲಿ ಇವರಿಗೆ ಅಕ್ಕರೆಯ ಗುರುಕುಲ

ಶಿಕ್ಷಣ ದೊರೆಯಿತು. ಇದರಿಂದಾಗಿ ಗಳಗನಾಥರಲ್ಲಿ ಸ್ವಾಭಿಮಾನ, ಸ್ವಭಾಷೆ ಹಾಗೂ ಸಂಸ್ಕೃತಿಗಳ ಬಗ್ಗೆ ವಿಶೇಷ ಪ್ರೇಮ ಬೆಳೆದವು. ಹಾವನೂರಿನಲ್ಲಿ ಮುಲ್ಕಿ ಪರೀಕ್ಷೆ ಮುಗಿಸಿದನಂತರ ಶಿಕ್ಷಕನಾಗಬೇಕೆಂಬ ಹಂಬಲವು ಸ್ವಭಾವತಃ ಇದ್ದುದರಿಂದ ಗಳಗನಾಥರು ಧಾರವಾಡ ಟ್ರೇನಿಂಗ್ ಕಾಲೇಜಿಗೆ ಸೇರಿದರು (1886). ಕಾಲೇಜಿನ ಎಲ್ಲಾ ಪರೀಕ್ಷೆಗಳಲ್ಲೂ ಮೇಲ್ದರ್ಜೆಯಲ್ಲಿ ತೇರ್ಗಡೆ ಹೊಂದಿ ಮೂರು ವರ್ಷದ ಶಿಕ್ಷಕ ತರಬೇತಿಯನ್ನು ಮುಗಿಸಿ (1889) ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಉತ್ತಮ ಶಿಕ್ಷಕರೆಂದು ಹೆಸರು ಗಳಿಸಿದರು. ಗಳಗನಾಥರ ಜೀವನದಲ್ಲಿ ಧಾರವಾಡ ಮಹತ್ತ್ವದ ಸ್ಥಾನವನ್ನು ಪಡೆದಿದೆ. ಅದು ಇವರನ್ನು ಸಾಹಿತಿಯನ್ನಾಗಿ ರೂಪಿಸಿದ ಕ್ಷೇತ್ರ. ಟ್ರೇನಿಂಗ್ ಕಾಲೇಜಿನ ವಾತಾವರಣ ತುಂಬ ಉತ್ತಮವಾಗಿತ್ತು. ಪಂಡಿತರಾದ ಕಿತ್ತೂರ ಅಯ್ಯನವರು, ಧೋಂಡೋ ನರಸಿಂಹ ಮುಳಬಾಗಲ ಅವರು ತಮ್ಮ ಪ್ರಭಾವಬೀರಿ ಗಳಗನಾಥರಿಗೆ ಕನ್ನಡ ಕಲಿಸಿದರು. ಅದೇ ಪ್ರಕಾರ ಪ್ರಭಾವ ಬೀರಿದವರು ರೊದ್ದ ಶ್ರೀನಿವಾಸರಾಯರು ಹಾಗೂ ಕರಂದೀಕರರು. ಕರಂದೀಕರರ ಅಚ್ಚುಕಟ್ಟು, ಶಿಸ್ತು, ಗಳಗನಾಥರಿಗೂ ಬಂದವು. ಆ ಸಮಯದಲ್ಲಿ ಅಪ್ರತ್ಯಕ್ಷವಾಗಿ ಇವರ ಜೀವನದ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳೆಂದರೆ ಮಹಾರಾಷ್ಟ್ರದ ಲೋಕಮಾನ್ಯ ಟಿಳಕ ಹಾಗೂ ಹರಿ ನಾರಾಯಣ ಆಪ್ಟೆ ಅವರು.

ಆಗ ಉತ್ತರ ಕರ್ನಾಟಕದಲ್ಲಿ ಟಿಳಕ ಹಾಗೂ ಆಪ್ಟೆಯವರ ಹೆಸರುಗಳು ಮನೆಮಾತಾಗಿದ್ದವು. ಟಿಳಕರ ಕೇಸರಿ, ಆಪ್ಟೆಯವರ ಕರಮಣೂಕ ಪತ್ರಿಕೆಗಳು ಹೆಚ್ಚು ಪ್ರಚಾರದಲ್ಲಿದ್ದವು. ಕನ್ನಡ ಪತ್ರಿಕೆಗಳ ಅಭಾವದಿಂದಾಗಿ ಕನ್ನಡಿಗರು ಮರಾಠಿ ಪತ್ರಿಕೆಗಳನ್ನೇ ಓದುತ್ತಿದ್ದರು. ಇಷ್ಟೇ ಅಲ್ಲದೇ ಪೇಶ್ವೆ ಕಾಲದ ರಾಜಭಾಷೆಯಾದ ಮರಾಠಿ ತನ್ನ ರಾಜಕೀಯ ಮುದ್ರೆಯನ್ನೊತ್ತಿ ತನ್ನದೇ ಆದ ವಿಶಿಷ್ಟ ಪ್ರಭಾವವನ್ನು ಬೀರುತ್ತಿತ್ತು. ಟ್ರೇನಿಂಗ್ ಕಾಲೇಜಿಗೆ ಬರುತ್ತಿದ್ದ ಈ ಎರಡು ಪತ್ರಿಕೆಗಳನ್ನು ಗಳಗನಾಥರು ತಪ್ಪದೆ ಓದುತ್ತಿದ್ದರಲ್ಲದೆ ತಮ್ಮ ಗೆಳೆಯರೊಂದಿಗೆ ಅಲ್ಲಿನ ವಿಷಯಗಳನ್ನು ಚರ್ಚಿಸುತ್ತಿದ್ದರು. ಟಿಳಕರ ವಿಚಾರಧಾರೆ ಇವರ ಮನಸ್ಸನ್ನು ಸಂಪೂರ್ಣ ಆಕರ್ಷಿಸಿತ್ತು; ಅಷ್ಟೇ ಸತ್ತ್ವಶಾಲಿಯಾಗಿ ಆಪ್ಟೆಯವರ ಕಾದಂಬರಿಗಳಲ್ಲಿಯ ಕಲ್ಪನಾ ವೈಭವದ ವೈಖರಿ ಮನಸ್ಸನ್ನು ಬೆರಗುಗೊಳಿಸುತ್ತಿತ್ತು. ಆ ಭಾಗದ ಕನ್ನಡ ಜನತೆ ಮರಾಠಿ ವ್ಯಾಮೋಹದಲ್ಲಿದ್ದುದು ಇವರಿಗೆ ಕಂಡುಬಂದಿತು. ಟಿಳಕರ ವಿಚಾರಧಾರೆಯನ್ನೂ ಆಪ್ಟೆಯವರ ಕಾದಂಬರಿ ಕತೆಗಳನ್ನೂ ಕನ್ನಡದಲ್ಲಿಯೇ ಹೇಳಿ ಕನ್ನಡಿಗರ ವಾಚನಾಭಿ ರುಚಿಯನ್ನು ಬೆಳೆಸುವ ಉತ್ಕಟ ಆಸೆ ಇವರಲ್ಲಿ ಮೂಡಿತು. ಅದೇ ಕಾಲಕ್ಕೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಕನ್ನಡ ಗ್ರಂಥಕರ್ತರಿಗೆ ಬಹುಮಾನ ಕೊಡುವ ಪರಿಪಾಠವನ್ನು ಹಾಕಿದರು. ಆ ಸಂದರ್ಭದಲ್ಲಿ ಇವರು ಬರೆದ ಪ್ರಥಮ ಕಾದಂಬರಿ ಪ್ರಬುದ್ಧ ಪದ್ಮನಯನೆಗೆ ಬಹುಮಾನ ದೊರಕಿತು. ಹೀಗೆ 1898ರಲ್ಲಿ ಆರಂಭವಾದ ಇವರ ಬರವಣಿಗೆ 1942ರ ವರೆಗೂ ಅವ್ಯಾಹತವಾಗಿ ಸಾಗಿತು. ನರೇಂದ್ರ, ಶಿರಗುಪ್ಪ, ಅಗಡಿ, ಹಾವೇರಿ ಇವು ಇವರು ನೆಲಸಿನಿಂತು ಕನ್ನಡಕ್ಕೆ ದುಡಿದ ಇತರ ಸ್ಥಳಗಳು. ಅಗಡಿಯ ಶ್ರೀ ಶೇಷಾಚಲ ಸ್ವಾಮಿಗಳು ಗಳಗನಾಥರ ಮೇಲೆ ವಿಶೇಷ ಪ್ರಭಾವವನ್ನು ಬೀರಿದರು. ಅಂತೆಯೇ ಸರ್ಕಾರಿ ಕೆಲಸದಲ್ಲಿ ಘರ್ಷಣೆ ಬಂದಾಗ ಕಾಲಕ್ಕೆ ಮೊದಲೆ ಪಿಂಚಣಿ ಪಡೆದು ಅಗಡಿಯ ಆನಂದವನದಲ್ಲಿ ನೆಲೆಸಿದರು. ಅಲ್ಲಿನ ವಾತಾವರಣ ವಿಪರೀತವಾದಾಗ ಹಾವೇರಿಗೆ ಹೋಗಿ ರಾಮದೇವರ ಗುಡಿಯ ಆವಾರವನ್ನೆ ತಮ್ಮ ಆಶ್ರಮವನ್ನಾಗಿ ಮಾಡಿಕೊಂಡು ಸುತ್ತಣ ಜನತೆಯೊಂದಿಗೆ ಬೆರೆತು ಬಾಳಿದರು. ಆನಂದವನದಲ್ಲಿದ್ದಾಗ ಸದ್ಬೋಧ ಚಂದ್ರಿಕೆ ಎಂಬ ಪತ್ರಿಕೆಯ ಮೂಲಕ ಮತ್ತು ಹಾವೇರಿಯಲ್ಲಿ ಇರತೊಟ್ಟಂದಿನಿಂದ ಸದ್ಗುರು (1919) ಎಂಬ ಪತ್ರಿಕೆಯ ಮೂಲಕ ತಮ್ಮ ಬರವಣಿಗೆಯನ್ನು ಪ್ರಕಟಿಸಿದರು. ಸದ್ಬೋಧ ಚಂದ್ರಿಕೆಗೆ 7000ದಷ್ಟು ಚಂದಾದಾರರು ಇದ್ದರೆಂಬುದು ನಿಜವಾಗಿಯೂ ಅಚ್ಚರಿಯ ವಿಷಯ.

ಆದರೂ ಕಾಲ ಕಳೆದಂತೆ ಗಳಗನಾಥರ ಆದಾಯ ಇಳಿಮುಖವಾಗಹತ್ತಿ ಸಾಲ ಬೆಳೆಯತೊಡಗಿತು. ಸಾಲ ತೀರಿಸುವುದಕ್ಕಾಗಿ ಗಳಗನಾಥರು ಪುಸ್ತಕಗಳನ್ನು ಬರೆದು ಊರಿಂದೂರಿಗೆ, ಓಣಿಯಿಂದ ಓಣಿಗೆ, ಮನೆಯಿಂದ ಮನೆಗೆ, ಮಳೆಗಾಳಿ ಚಳಿಬಿಸಿಲು ಒಂದನ್ನೂ ಗಮನಿಸದೆ ತಿರುಗಿ ತಿರುಗಿ ಸೋತು ಸುಣ್ಣವಾದರು. ಸಾಲದ ಶೂಲ ನಿತ್ಯ ತಿವಿದಿತಾಗಿ ಆರೋಗ್ಯ ತೀರ ಕೆಟ್ಟು ಕ್ಯಾನ್ಸರ್ ಮೊದಲಾಯಿತು. ಗಳಗನಾಥರು ಆ ಬೇನೆಯಿಂದ ತಮ್ಮ 74ನೆಯ ವಯಸ್ಸಿನಲ್ಲಿ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ 1942ರ ಏಪ್ರಿಲ್ 22ರಂದು ಕೊನೆಯುಸಿರೆಳೆದರು. ಸರಳತೆ, ಅನುಕಂಪ, ಗುರಿಯನ್ನು ಸಾಧಿಸುವಲ್ಲಿ ನಿಸ್ಸೀಮ ತ್ಯಾಗ, ಉಜ್ಜ್ವಲ ಸ್ವಾಭಿಮಾನ, ಮಡಿವಂತ ಜೀವನ ಇತ್ಯಾದಿಗಳಿಗೆ ಸಂಕೇತವಾಗಿದ್ದ ಗಳಗನಾಥರು ಶುಚಿಯಾದದ್ದನ್ನೇ ನೋಡಿದರು, ಮಾಡಿದರು, ಬರೆದರು. ಪ್ರಾಥಮಿಕ ಶಾಲೆಯ ಕಿರುಬಯಲಿನಲ್ಲಿಯೇ ತಮ್ಮ ಶಕ್ತಿಯನ್ನು ಸಂಪೂರ್ಣ ವ್ಯಯಗೊಳಿಸದೆ ಅಲ್ಲಿಗೆ ಸಲ್ಲುವಷ್ಟನ್ನು ಸಲ್ಲಿಸಿ ಹೊರಜಗತ್ತಿಗೂ ಜಾಗೃತಚೇತನ ಶಕ್ತಿಯನ್ನು ಒದಗಿಸಿದರು.

ಬಂಗಾಲಿ ಸಾಹಿತ್ಯಕ್ಕೆ ಬಂಕಿಮ್‌ಚಂದ್ರ, ಮರಾಠಿ ಸಾಹಿತ್ಯಕ್ಕೆ ಹರಿ ನಾರಾಯಣ ಆಪ್ಟೆ ಯಾವ ಬಗೆಯ ಸೇವೆಯನ್ನು ಸಲ್ಲಿಸಿದರೂ ಅದೇ ಬಗೆಯ ಸೇವೆಯನ್ನು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಪ್ರಮುಖ ಮಹನೀಯರು ಗಳಗನಾಥರು. ಇವರು ವಿಶೇಷವಾಗಿ ಹರಿ ನಾರಾಯಣ ಆಪ್ಟೆಯವರ ಗ್ರಂಥಗಳನ್ನು ಅನುವಾದಿಸಿ ಕೊಟ್ಟರು. ಮರಾಠೀ ಸಾಹಿತ್ಯ ಕ್ಷೇತ್ರದಲ್ಲಿ ಆಪ್ಟೆಯವರು ಯುಗಪ್ರವರ್ತಕ ಲೇಖಕರು. ಕಥಾನಕ ಪ್ರಾಧಾನ್ಯ, ವ್ಯಕ್ತಿದರ್ಶನ, ಮೂರ್ತಿಮತ್ತ ಪ್ರಸಂಗವರ್ಣನೆ, ವೈಚಿತ್ರ್ಯ ಮತ್ತು ಅದ್ಭುತಗಳ ನಿರೂಪಣೆಯಲ್ಲಿ ಪಳಗಿದ ಚಿತ್ತಾಕರ್ಷಕ ಶೈಲಿ, ಆಪ್ಟೆಯವರದು. ಆ ಶೈಲಿಯನ್ನೇ ಗಳಗನಾಥರು ಅನುಸರಿಸಿದರು. ಅನುಸರಣೆ ಇದ್ದರೂ ಅದು ಸಂಪೂರ್ಣ ಅನುಕರಣೆಯಲ್ಲ. ಒಂದು ಉದಾತ್ತವಾದ ಭಾವನೆಯಿಂದ, ದಿವ್ಯವಾದ ಆದರ್ಶದಿಂದ, ಅದ್ಭುತವಾದ ದೃಷ್ಟಿಯಿಂದ ಜನರಲ್ಲಿ ಪ್ರೇಮ, ದಯೆ, ತ್ಯಾಗ, ಸ್ವಾತಂತ್ರ್ಯ, ಸ್ವಾಭಿಮಾನಗಳು ಒಡಮೂಡಬೇಕು, ನೆಲೆನಿಲ್ಲಬೇಕು, ಬೆಳಗಬೇಕು ಎಂಬ ಹೆಗ್ಗುರಿಯಿಂದ ಗಳಗನಾಥರು ಸಾಹಿತ್ಯವನ್ನು ಸೃಜಿಸಿದರು. ಪ್ರಾಯಶಃ ಇದೇ ಕಾರಣದಿಂದ ಇವರು ಸಮಕಾಲೀನ ಚಿತ್ರವನ್ನು ಕೊಡುವ ಸಾಮಾಜಿಕ ಕಾದಂಬರಿಯನ್ನು ರಚಿಸಲಿಲ್ಲವೆಂದು ತೋರುತ್ತದೆ.

ಗಳಗನಾಥರು ರಚಿಸಿದ ಸಾಹಿತ್ಯ ವಿಪುಲವಾದುದು, ವಿವಿಧ ಮುಖವಾದುದು– 24 ಕಾದಂಬರಿಗಳು, 9 ಪೌರಾಣಿಕ ಕಥೆಗಳು, 3 ಸತ್ಪುರುಷ ಚರಿತ್ರೆಗಳು (ಮಹಾಭಾರತದ 18 ಪರ್ವಗಳಲ್ಲಿ ಮೊದಲಿನ 2 ಪರ್ವಗಳು ಅಚ್ಚಾಗಿವೆ; ಮಿಕ್ಕಿನ 16 ಪರ್ವಗಳು ಅಚ್ಚಾಗಿಲ್ಲ. ಕಲಿಕುಠಾರದ 2ನೆಯ ಭಾಗ ಮತ್ತು ಬಿಚ್ಚುಗತ್ತಿಯ 2ನೆಯ ಭಾಗ ಅಚ್ಚಾಗಿಲ್ಲ.) ಮತ್ತು 8 ನಿಬಂಧಗಳು ಇಲ್ಲವೇ ಪ್ರಬಂಧಗಳು, 24 ಕಾದಂಬರಿಗಳಲ್ಲಿ ಆರು ಸ್ವತಂತ್ರ, ಮಿಕ್ಕಿನವು ಅನುವಾದಿತ. ಅನುವಾದಿತ ಕಾದಂಬರಿಗಳನ್ನು ಅನುವಾದಗಳೆಂದು ಹೇಳುವುದಕ್ಕಿಂತ ರೂಪಾಂತರಗಳೆಂದು ಕರೆಯುವುದೇ ಹೆಚ್ಚು ಸಮಂಜಸ. ಕಮಲಕುಮಾರಿ ಕೃತಿಯೊಂದೇ ಶಬ್ದಶಃ ಅನುವಾದ; ಇದಕ್ಕೆ ಮೂಲ, ಆಪ್ಟೆಯವರ ಕೃತಿ ಗಡ ಆಲಾ ಪಣ ಸಿಂಹ ಗೇಲಾ (ಕೋಟೆ ಕೈವಶವಾಯಿತು ಆದರೆ ಸಿಂಹ ಹೋಯಿತು) ಎಂಬುದು.

ಕಾಲಾನುಕ್ರಮವಾಗಿ ಹೊರಬಂದ ಇವರ ಕೃತಿಗಳ ಪಟ್ಟಿಕೆ ಹೀಗಿದೆ:

**1 ಕಾದಂಬರಿಗಳು :** (1) ಪದ್ಮನಯನೆ ಅಥವಾ ಪ್ರಬುದ್ಧ ಪದ್ಮನಯನೆ, ಸ್ವತಂತ್ರ ರಮ್ಯಾದ್ಭುತ ಕಾದಂಬರಿ. (2) ಕಮಲಕುಮಾರಿ, ಮರಾಠಿ ಇತಿಹಾಸಕ್ಕೆ ಸಂಬಂಧಪಟ್ಟ ಇದರ ಮೂಲ–ಮೇಲೆ ತಿಳಿಸಿರುವಂತೆ ಗಡ ಆಲಾ ಪಣ ಸಿಂಹ ಗೇಲಾ. (3) ಮೃಣಾಲಿನಿ ಅಥವಾ ರಾಣಿ ಮೃಣಾಲಿನಿ. ಇದು ಬಂಕಿಮ್‌ಚಂದ್ರರ ಮೃಣಾಲಿನಿ ಕೃತಿಯ ಮರಾಠಿ ಅನುವಾದದ ಅನುವಾದ. (4) ವೈಭವ. ಮೌರ್ಯರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಇದರ ಇನ್ನೊಂದು ಹೆಸರೇ ಚಾಣಕ್ಯನ ಕಾರಸ್ಥಾನ. ಇದರ ಕತೆ ಮುದ್ರಾರಾಕ್ಷಸ (ಸಂಸ್ಕೃತ) ಹಾಗೂ ಕೆಂಪುನಾರಾಯಣನ ಮುದ್ರಾಮಂಜೂಷಗಳಿಂದ ಭಿನ್ನವಾಗಿದೆ. (5) ಕುಮುದಿನಿ ಅಥವಾ ಬಾಲಕ್ಕೆ ಬಡಿದಾಟ. 2ನೆಯ ಸ್ವತಂತ್ರ ಕಾದಂಬರಿ ಹಾಗೂ ಕರ್ನಾಟಕದ ಇತಿಹಾಸಕ್ಕೆ ಸಂಬಂಧಪಟ್ಟ ಮೊದಲ ಕಾದಂಬರಿ (1913). ಚಂದ್ರಗಿರಿಯಲ್ಲಿ ಬಾಳಿದ ವಿಜಯನಗರದ ರಾಜಮನೆತನದ ಕೊನೆಗಾಲದ ಚಿತ್ರವೇ ಇದರ ವಸ್ತು. (6) ಈಶ್ವರೀ ಸೂತ್ರವೆಂಬುದು ಉಷಃಕಾಲ ಎಂಬ ಮರಾಠೀ ಗ್ರಂಥದ ಅನುವಾದ. ಮರಾಠರ ಇತಿಹಾಸಕ್ಕೆ ಸಂಬಂಧ ಪಟ್ಟಿದೆ. (7) ಕ್ಷಾತ್ರತೇಜ. ಇದು ಮರಾಠೀ ಕೃತಿ ರೂಪನಗರೇಚಿ ರಾಜಕನ್ಯಾ ಎಂಬುದರ ಅನುವಾದ. ರಾಜಪುತ್ರರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ರಜಪೂತರ ಕ್ಷಾತ್ರತೇಜಸ್ಸನ್ನೇ ಎತ್ತಿ ತೋರುತ್ತದೆ. (8) ಧರ್ಮರಹಸ್ಯ ಅಥವಾ ಸತ್ಸಮಾಗಮ ಪ್ರಭಾವ. ಇದಕ್ಕೆ ಮೂಲ ಮರಾಠಿಯ ಎರಡು ಕೃತಿಗಳು: (1) ಸಮ್ರಾಟ ಅಶೋಕ (2) ಅಶೋಕ ಅಥವಾ ಆರ್ಯಾ ವೃತ್ತಾಂತಲಾ ಪಹಿಲಾ. ಚಕ್ರವರ್ತಿ ರಾಜಾಚಂಡಾಶೋಕ ಧರ್ಮಾಶೋಕನಾದುದೇ ಇದರ ವಸ್ತು. (9) ಸತ್ವಸಾರ ಅಥವಾ ಶೌರ್ಯಸಂಜೀವಿನಿ–ರಜಪೂತರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಗಳಗನಾಥರ 3ನೆಯ ಸ್ವತಂತ್ರ ಕಾದಂಬರಿಯಿದು. ಮೇವಾಡದ ಪ್ರತಾಪಸಿಂಹನ

ಕತೆಯೇ ಇದರ ವಸ್ತು. (10) ತಿಲೋತ್ತಮೆ ಅಥವಾ ಸರಸ ಪ್ರೇಮ. ಅಕ್ಬರನ ಕಾಲದಲ್ಲಿದ್ದ ರಾಣಾ ಮಾನಸಿಂಗನ ಮಗ ಜಗತ್ಸಿಂಗನ ಪ್ರೇಮ ಕಥೆ. ರಜಪೂತರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಇಲ್ಲಿಯ ಪ್ರೇಮದಲ್ಲಿ ಸರಸಕ್ಕಿಂತ ವಿರಸವೇ ಹೆಚ್ಚು. ಗಳಗನಾಥರು ವೀರರ ಕತೆಗಳಂತೆ ಪ್ರೇಮಕಥೆಯನ್ನು ಹೇಳಲಾರರೆಂಬುದು ಇಲ್ಲಿ ವ್ಯಕ್ತವಾಗಿದೆ. (11) ಕನ್ನಡಿಗರ ಕರ್ಮಕಥೆ. ಇದು ವಿಜಯನಗರದ ಪತನವನ್ನು ಸೂಚಿಸುವ ಕಾದಂಬರಿ. ಇದಕ್ಕೆ ಮೂಲ ಮರಾಠೀಕೃತಿ ವಜ್ರಾಘಾತ. (12) ಶಿವಪ್ರಭುವಿನ ಪುಣ್ಯ. ಮರಾಠೀ ಇತಿಹಾಸಿಕ ಕಾದಂಬರಿಯ ಅನುವಾದ. ಶಿವಾಜಿಯ ಅನಂತರದಲ್ಲಿ ಆತನ ಮನೆಯಲ್ಲಿ ನಡೆದ ಘಟನೆಗಳೇ ಇದರ ವಸ್ತು. (13) ಕುರುಕ್ಷೇತ್ರ ಇದು ಪಾಣೀಪತಚಾ ಮೋಹಿಮ್ ಎಂಬುದರ ಅನುವಾದ; ಪೇಶ್ವೆಯವರ ಐತಿಹಾಸಕ್ಕೆ ಸಂಬಂಧಪಟ್ಟಿದೆ. (14) ಮರಾಠರ ಅಭ್ಯುದಯ. ಇದು ಶಿವಾಜಿ ಅಫ್‍ಜಲಖಾನನನ್ನು ಕೊಂದ ಕತೆಯನ್ನು ವಿವರಿಸುತ್ತದೆ. ಮರಾಠಿಯಿಂದ ಅನುವಾದಿತ. (15) ಛತ್ರಪತಿ. ಛತ್ರಪತಿ ಶಿವಾಜಿಯ ಕತೆಗೆ ಸಂಬಂಧಿಸಿದೆ. (16) ಮಾಧವಕರುಣವಿಲಾಸ. ಗಳಗನಾಥರ ನಾಲ್ಕನೆಯ ಸ್ವತಂತ್ರ ಕಾದಂಬರಿ. ಇದು ತಮ್ಮ ಹಿರಿಯ ಕೃತಿಯೆಂದು ಅವರೇ ಹೇಳಿಕೊಂಡಿದ್ದಾರೆ. ವಿಜಯನಗರ ರಾಜ್ಯ ಸ್ಥಾಪನೆಯ ವಿಷಯವೇ ಇದರ ವಸ್ತು. ಕನ್ನಡ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದ ಮಹಾಕೃತಿ. (17) ಗೃಹಕಲಹ. ಮರಾಠೀ ಕೃತಿಯ ಅನುವಾದ. ಮರಾಠರ ಇತಿಹಾಸಕ್ಕೆ ಸಂಬಂಧಪಟ್ಟಿದೆ. (18) ರಾಣಾ ರಾಜಸಿಂಹ. ರಜಪೂತ ಇತಿಹಾಸಕ್ಕೆ ಸಂಬಂಧಿಸಿದ ಮರಾಠೀ ಕೃತಿಯ ಅನುವಾದ. (19) ಧಾರ್ಮಿಕತೇಜ ಅಥವಾ ಪರಹಿತದಕ್ಷತಾ. ಇದೂ ರಜಪೂತರ ಇತಿಹಾಸಕ್ಕೆ ಸಂಬಂಧಿಸಿದೆ. ಬುಂದೇಲ ಖಂಡದ ರಾಜಾ ಛತ್ರಸಾಲನ ಕಥೆ. ಮರಾಠಿಯಿಂದ ಅನುವಾದಿತ. (20) ಸಂಸಾರ ಸುಖ. ಮರಾಠಿಯಿಂದ ಅನುವಾದಿತ. ಮೊಗಲರ ಇತಿಹಾಸಕ್ಕೆ ಸಂಬಂಧಪಟ್ಟಿದೆ. (21) ಸ್ವರಾಜ್ಯ ಸುಗಂಧ. ಅನುವಾದಿತ ಕೃತಿ. ಮರಾಠರ ಇತಿಹಾಸಕ್ಕೆ ಸಂಬಂಧಿಸಿದೆ. (22) ಸತ್ವಾದರ್ಶ. (23) ದುರ್ಗದ ಬಿಚ್ಚುಗತ್ತಿ. ಚಿತ್ರದುರ್ಗದ ನಾಯಕರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಗಳಗನಾಥರ ಐದನೆಯ ಸ್ವತಂತ್ರ ಕಾದಂಬರಿ. ಒಂದನೆಯ ಭಾಗ ಮಾತ್ರ ಅಚ್ಚಾಗಿದೆ. (24) ಭಗವತೀ ಕಾತ್ಯಾಯಿನಿ. ಪೌರಾಣಿಕ ಕಾದಂಬರಿ. ಗಳಗನಾಥರ ಆರನೆಯ ಸ್ವತಂತ್ರ ಕಾದಂಬರಿ.

**II ಪೌರಾಣಿಕ ಕಥೆಗಳು :** (1) ಗಿರಿಜಾಕಲ್ಯಾಣ (2) ಉತ್ತರರಾಮಚಂದ್ರ (3) ನಳಚರಿತ್ರ (4) ಚಿದಂಬರಚರಿತ್ರ (5) ಭಾಗವತಾಮೃತ (6) ಶೈವಸುಧಾರ್ಣವ (7) ತುಲಸೀರಾಮಾಯಣ (8) ಮಹಾಭಾರತ (ಆದಿಪರ್ವ ಮತ್ತು ಸಭಾಪರ್ವ ಮಾತ್ರ ಅಚ್ಚಾಗಿವೆ.)

**III ಸತ್ಪುರುಷ ಚರಿತ್ರೆಗಳು :** (1) ನಿರ್ಯಾಣ ಮಹೋತ್ಸವ (2) ಸದ್ಗುರು ಪ್ರಭಾವ (3) ಕಲಿಕುಠಾರ (1ನೆಯ ಭಾಗ ಮಾತ್ರ ಅಚ್ಚಾಗಿದೆ.)

**IV ನಿಬಂಧಗಳು :** (1) ದಾಂಪತ್ಯ (2) ಕುಟುಂಬ (3) ಸುಂದರಲೇಖ ಸಮುಚ್ಚಯ (4) ನಿಬಂಧ ಶಿಕ್ಷಣ (5) ಕನ್ಯಾಶಿಕ್ಷಣ (6) ರಾಜನಿಷ್ಠೆ (7) ಶ್ರೇಷ್ಠ ಸದುಪದೇಶ ಹಾಗೂ (8) ಬ್ರಾಹ್ಮಣ ಪ್ರಾಪ್ತಿ ಸಾಧನೆ.

ಕಲ್ಪಕತೆ, ಭಾವೋದ್ರೇಕತೆ, ಐತಿಹಾಸಿಕ ವ್ಯಕ್ತಿಗಳ ಮೂಲಕ ವೀರಸಾಹಸರಸಿಕತೆ ಸಾಧುಸಂತರ ಪಾತ್ರಗಳ ಮೂಲಕ ಸದುಪದೇಶ–ಇವನ್ನು ಕನ್ನಡ ಜನತೆಗೆ ಗಳಗನಾಥರು ತಮ್ಮ ಹಲವಾರು ಕೃತಿಗಳ ಮೂಲಕ ಒದಗಿಸಿದ್ದಾರೆ. ಇವರ ಕೃತಿಗಳಲ್ಲಿ ಮಾನವೀಯ ಹೋರಾಟ ರಾಷ್ಟ್ರೀಯತೆಯಲ್ಲಿ ಪರ್ಯವಸಾನವಾಗಿ ಈಶ್ವರೀ ಭಾವದತ್ತ ನಡೆಯುತ್ತದೆ. ಕೃತಿಗಳಲ್ಲಿ ಸಮಕಾಲೀನ ರಾಜಕೀಯ ಆಂದೋಲನಗಳ ಪ್ರಭಾವ ಇಲ್ಲದಿದ್ದರೂ ಸನಾತನಧರ್ಮದ ಪುನರುಜ್ಜೀವನದ ಹೆಬ್ಬಯಕೆ ಇತ್ತೆಂಬುದು ಸ್ಪಷ್ಟವಿದೆ. ಇದು ಗಳಗನಾಥರ ಜೀವನಕಾಲದ ಭಾರತೀಯ ಸಾಹಿತ್ಯದ ಲಕ್ಷಣವೇ ಆಗಿತ್ತು. ಆದುದರಿಂದ ಅವು ಆಗಿನ ಕಾಲಕ್ಕೆ ತಕ್ಕಂತೆ ಜನರ ಮನೋಧರ್ಮವನ್ನು ಸಂಸ್ಕಾರಗೊಳಿಸಿದ, ಜಾಗೃತಿಯನ್ನುಂಟುಮಾಡಿದ ಕೃತಿಗಳಾದವು.

ಗಳಗನಾಥರು ಸಂಸ್ಕೃತ ಭಾಷೆ ಹಾಗೂ ಸಾಹಿತ್ಯಗಳಲ್ಲಿ ವಿಶೇಷ ಪ್ರೇಮವುಳ್ಳವರಾಗಿದ್ದರೂ ಸಂಸ್ಕೃತ ಶಬ್ದಗಳ ಜಡಪ್ರಯೋಗಗಳಿಗೆ ಮರುಳಾಗದೆ, ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡು ಅದಕ್ಕೆ ತಿರುಳ್ಗನ್ನಡ ಶಬ್ಧಗಳನ್ನೂ ಕೆಲವು ಬಾರಿ ಮನೆಮಾತುಗಳ ಪಡೆನುಡಿಗಳನ್ನೂ ಸೇರಿಗೆ ಸವ್ವಾಸೇರು ಎಂಬಂಥ ಗಾದೆಮಾತುಗಳನ್ನೂ ಬೆರೆಸಿ ಹಾಳತವಾದ ಶೈಲಿಯೊಂದನ್ನು ಸೃಷ್ಟಿಸಿದರು. ಅಷ್ಟೆ ಅಲ್ಲ ಉತ್ತರ, ಮಧ್ಯ, ದಕ್ಷಿಣ ಕನ್ನಡಗಳಿಗೆ ಸಮಾನ ಬೆಲೆ ಕೊಟ್ಟು ಎಲ್ಲರಿಗೂ ಅರ್ಥವಾಗಬಲ್ಲ ಕನ್ನಡ ಒಂದೇ ಎಂಬುದನ್ನೂ ತಮ್ಮ ಕೃತಿಗಳ ಮೂಲಕ ವ್ಯಕ್ತಪಡಿಸಿದರು. ಮೈಸೂರಿನ ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘ ಇವರಿಗರ್ಪಿಸಿದ ಮಾನಪತ್ರವೇ ಇದಕ್ಕೆ ಸಾಕ್ಷಿ. ಹೀಗೆ ಕನ್ನಡಕ್ಕೆ ಏಕರೂಪತೆಯನ್ನು ಕೊಟ್ಟವರಲ್ಲೂ ಇವರು ಆದ್ಯರಾಗಿದ್ದಾರೆ.

(ಎಸ್.ಎಸ್.ಜೆ.ಎ.;ಎನ್.ಆರ್.ಎನ್.)

**ಗಳಲೆ :** ದುಗ್ಧರಸನಾಳಗಳ (ಲಿಂಫ್ಯಾಟಿಕ್ ವೆಸಲ್ಸ್) ಮಾರ್ಗದಲ್ಲಿ ಸಾಧಾರಣವಾಗಿ ಅಲ್ಲಲ್ಲಿ ಇರುವ ಸಾಸಿವೆಕಾಳಿನಿಂದ ಅವರೆಕಾಳಿನ ಗಾತ್ರದ ಗಂಟುಗಳು ರೋಗಗ್ರಸ್ತವಾದಾಗ ತಳೆಯುವ ಗಡಸಾದ ಮತ್ತು ದಪ್ಪವಾದ ಒಂದು ವಿಶೇಷ ಸ್ಥಿತಿ. ಗಾತ್ರ ಮತ್ತು ಗಡಸುತನದಿಂದ ಗಳಲೆಗಳು, ಕೈಗೆ ಸಿಕ್ಕುವುದರಿಂದ ಸ್ಪರ್ಶಪರೀಕ್ಷೆಯಿಂದ ಅವನ್ನು ಕಂಡುಕೊಳ್ಳಬಹುದು. ಅನೇಕ ವೇಳೆ ಅವು ನೋಯುವುದರಿಂದಲೂ ಗಮನಕ್ಕೆ ಬರುತ್ತವೆ. ಗಳಲೆಗಳು ತಾತ್ಕಾಲಿಕವಾಗಿಯೋ ಬಹುಕಾಲಿಕವಾಗಿಯೋ ಇರಬಹುದು. ತಾತ್ಕಾಲಿಕವಾದ ಅಥವಾ ಬಹುಕಾಲಿಕವಾದ ವಿಷಾಣು ಸೋಂಕಿನಿಂದ ರೋಗಗ್ರಸ್ತವಾದ ದೇಹಭಾಗಗಳಿಂದ ಪ್ರವಹಿಸುವ ದುಗ್ಧರಸಮಾರ್ಗದಲ್ಲಿರುವ ಗಂಟುಗಳು ಅದೇ ವಿಷಾಣು ಸೋಂಕಿನಿಂದ ಗಳಲೆ ಕಟ್ಟಿಕೊಳ್ಳುವುದು ಸಾಮಾನ್ಯ. ಕೈಕಾಲುಗಳಲ್ಲಿ ಗಾಯವಾಗಿ ಕೀತುಕೊಂಡಾಗ ಕಂಕುಳು ತೊಡೆಸಂದಿಗಳಲ್ಲಿ ತಾತ್ಕಾಲಿಕ ಗಳಲೆಗಳು ಕಾಣಿಸಿಕೊಳ್ಳುವುದೂ ಗಂಟಲು ನೋವು ಬಂದಾಗ ದವಡೆಯ ತಳಭಾಗದಲ್ಲಿರುವ ಗಂಟುಗಳು ಗಳಲೆ ಕಟ್ಟಿಕೊಳ್ಳುವುದೂ ಹೇನು ಹತ್ತಿ ತಲೆಯಲ್ಲಿ ವ್ರಣವಾದಾಗ ಕತ್ತಿನ ಹಿಂಭಾಗದಲ್ಲಿ ಗಳಲೆ ಕಟ್ಟಿಕೊಳ್ಳುವುದೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯ. ಈ ಗಳಲೆಗಳೆಲ್ಲ ಸಾಧಾರಣವಾಗಿ ತಾತ್ಕಾಲಿಕವಾಗಿದ್ದು ನೋವನ್ನು ಉಂಟುಮಾಡುತ್ತಿದ್ದರೂ ಕಾರಣಭೂತ ಸ್ಥಿತಿಗಳಿಗೆ ಅನುಸಾರವಾಗಿ ಇವು ಬಹುಕಾಲಿಕವಾಗಿಯೂ ವೇದನಾರಹಿತವಾಗಿಯೂ ಇರಬಹುದು.

ಬಹುಕಾಲಿಕ ವ್ಯಾಧಿಗಳಾದ ಕ್ಷಯ, ಫರಂಗಿರೋಗ (ಸಿಫಿಲಿಸ್), ಏಡ್ಸ್ ಇವುಗಳಲ್ಲಿ ಗಳಲೆ ಸಹಜವಾಗಿಯೇ ಬಹುಕಾಲಿಕವಾಗಿ ಇರುತ್ತದೆ. ಬಾಲ್ಯಾವಸ್ಥೆಯಲ್ಲಿ ಕ್ಷಯ ರೋಗಾಣು ಸೋಂಕಿನಿಂದ ಉಂಟಾದ ಜಡೆಕಟ್ಟಿಕೊಂಡಿರುವ ಕೊರಳಿನ ಹಿಂಭಾಗದಲ್ಲಿ (ಕಳ್ಳಂಗುಣಿ) ಇರುವ ಗಳಲೆಗಳು, ಹಾಗೆಯೇ ಫರಂಗಿ ರೋಗದಲ್ಲಿ ಕಾಣಬರುವ ಮೊಣಕೈ ಮತ್ತು ತೊಡೆಯ ಸಂದಿನಲ್ಲಿ ಸಿಕ್ಕುವ ಕಲ್ಲಿನಂತೆ ಗಡಸಾದ ಗಳಲೆಗಳು ಈ ರೀತಿಯವು. ಏಡ್ಸ್ ರೋಗದಲ್ಲಿ ಅಕಾರಣವಾಗಿ ದೇಹಾದ್ಯಂತ ಗಳಲೆಗಳು ದೊಡ್ಡದಾಗಿ ಗೋಚರಿಸುತ್ತವೆ. ಏಡಿಗಂತಿಕೋಶಗಳ ಆಕ್ರಮಣದಿಂದಲೂ ಗಳಲೆ ಕಟ್ಟಿಕೊಳ್ಳುವುದರಿಂದ ಗಳಲೆ ರೋಗನಿದಾನವನ್ನು ಬಹು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಕಾರಣಭೂತ ರೋಗ ಗುಣವಾದರೆ ಕ್ರಮೇಣ ಗಳಲೆಗಳೂ ಇಂಗಿ ಮಾಯವಾಗುತ್ತವೆ. (ಎಸ್.ಆರ್.ಆರ್.)

**ಗಳಿಸಿದ ವರಮಾನ :** ಕೊಡುಗೆಗಳು ಮತ್ತು ಇತರ ಆಕಸ್ಮಿಕ ಲಾಭಗಳನ್ನು ಬಿಟ್ಟು ಉಳಿದ ಎಲ್ಲ ವರಮಾನವೂ ಸ್ಥೂಲವಾಗಿ ಗಳಿಸಿದ ವರಮಾನ (ಇನ್‍ಕಮ್ ಅರ್ನ್‍ಡ್) ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಏಕೆಂದರೆ ಉಳಿದೆಲ್ಲ ಯಾವುದಾದರೊಂದು ಆರ್ಥಿಕ ಸೇವೆಗೆ ಪ್ರತಿಯಾಗಿ ಸಂಪಾದಿಸಿದ್ದು. ಸರ್ಕಾರಿ ಸಾಲಪತ್ರದ ಮೇಲೆ ಪಡೆದ ಬಡ್ಡಿಯೂ ಈ ದೃಷ್ಟಿಯಲ್ಲಿ ಗಳಿಸಿದ ವರಮಾನವೇ. ಏಕೆಂದರೆ ಸರ್ಕಾರಕ್ಕೆ ಸಾಲ ನೀಡುವ ಸೇವೆಗೆ ಪ್ರತಿಯಾಗಿ ಪಡೆದ ಸಂಪಾದನೆಯಿದು. ಆದರೆ ದುಡಿಮೆಯಿಂದ ಬರುವ ವರಮಾನವನ್ನು ಗಳಿಸಿದ ಆದಾಯವೆಂದೂ ಸ್ವತ್ತಿನಿಂದ ಬರುವ ಆದಾಯವನ್ನು ಗಳಿಕೆಯಾಗದ ವರಮಾನವೆಂದೂ ತಜ್ಞರು ಕರೆದಿದ್ದಾರೆ. ಉದಾಹರಣೆಗೆ ಕಟ್ಟಡಗಳು, ಸರ್ಕಾರಿ ಪ್ರತಿಭೂತಗಳು (ಸೆಕ್ಯೂರಿಟೀಸ್), ಷೇರುಗಳು ಮುಂತಾದವುಗಳ ಮೇಲೆ ಪಡೆಯುವ ವರಮಾನ, ಉತ್ತರಾಧಿಕಾರದಿಂದಾಗಿ ಪಡೆದ ಸ್ವತ್ತಿನಿಂದ ದೊರಕುವ ವರಮಾನ ಮುಂತಾದವನ್ನು ಗಳಿಕೆಯಾಗದ ವರಮಾನವೆಂದು ಕರೆಯಲಾಗಿದೆ. ಗಳಿಸಿದ ಆದಾಯ ದುಡಿಮೆಯ ಫಲವಾದ್ದರಿಂದ ಅದಕ್ಕೆ ಸ್ವಾಭಾವಿಕವಾಗಿಯೇ ಮಾನ್ಯತೆ ಹೆಚ್ಚು. ಅಂತೂ ವರಮಾನದ ಮೂಲ ಯಾವುದು ಎಂಬುದರ ಮೇಲಿಂದ ಅದನ್ನು ಗಳಿಸಿದ್ದೇ ಗಳಿಸದ್ದೇ ಎಂಬುದಾಗಿ ವಿಂಗಡಿಸಲಾಗುತ್ತದೆ. ಆದರೆ ಈ ಬಗೆಯ ವಿಂಗಡಣೆ ಅನೇಕ ವೇಳೆ ತುಂಬ ಸಂಕೀರ್ಣ. ಅನೇಕ ದೇಶಗಳಲ್ಲಿ ವರಮಾನ ವಿಧಿಸುವಾಗ ಗಳಿಸಿದ ಮತ್ತು ಗಳಿಸದ ವರಮಾನಗಳೆಂದು ವಿಂಗಡಣೆ ಮಾಡಲಾಗುತ್ತದೆ. ಬ್ರಿಟನ್‍ನಲ್ಲಿ 1907–20ರ ವರೆಗೆ ವರಮಾನವನ್ನು ಗಳಿಸಿದ ಮತ್ತು ಗಳಿಸದ ವರಮಾನಗಳೆಂದು ವಿಂಗಡಿಸಿ, ಗಳಿಸಿದ ವರಮಾನದ ಮೇಲೆ ಕಡಿಮೆ ದರದ ತೆರಿಗೆಯನ್ನೂ ಗಳಿಸದ ವರಮಾನದ ಮೇಲೆ ಹೆಚ್ಚಿನ ದರದ ತೆರಿಗೆಯನ್ನೂ ವಿಧಿಸಲಾಗುತ್ತಿತ್ತು. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ 1924ರ ಹಣಕಾಸು ಕಾಯಿದೆಯ ಪ್ರಕಾರ ಗಳಿಸಿದ ವರಮಾನದ ಮೇಲಿನ ತೆರಿಗೆಗೆ ರಿಯಾಯತಿ ಕೊಡುವ ಪದ್ಧತಿ ಪ್ರಾರಂಭವಾಯಿತು. 1924–43ರ ವರೆಗೆ ಈ ಕ್ರಮ ಜಾರಿಯಲ್ಲಿತ್ತು. ಭಾರತದಲ್ಲಿ ಗಳಿಸಿದ ವರಮಾನಕ್ಕೆ ರಿಯಾಯಿತಿ ನೀಡುವ ಪದ್ಧತಿ ಆರಂಭವಾದ್ದು 1945–46ರಲ್ಲಿ. ಇದಕ್ಕೆ ಸಂಬಂಧಿಸಿದಂತೆ ತೆರಿಗೆ ನೀತಿಯಲ್ಲಿ ಪದೇಪದೇ ಬದಲಾವಣೆಗಳಾಗುತ್ತಿದ್ದುವು. 1969–70ರಿಂದ ಈ ವಿಂಗಡಣೆಯನ್ನು ಭಾರತದಲ್ಲಿ ಕೈಬಿಡಲಾಯಿತು.

ಗಳಿಸಿದ ವರಮಾನಕ್ಕೆ ತೆರಿಗೆ ರಿಯಾಯಿತಿ ಅಗತ್ಯವೆಂಬುದಕ್ಕೆ ಕೆಲವು ಮುಖ್ಯವಾದಗಳನ್ನು ಮುಂದೊಡ್ಡಲಾಗಿದೆ: 1. ಗಳಿಸಿದ ವರಮಾನ ಅಥವಾ ದುಡಿಮೆಯಿಂದ ಬರುವ ವರಮಾನ ಶಾಶ್ವತವಾದ್ದಲ್ಲ. ದುಡಿಯುವ ಶಕ್ತಿ ಮತ್ತು ಅವಕಾಶಗಳಿರುವವರೆಗೆ ಮಾತ್ರ ವರಮಾನ ದೊರಕುತ್ತಿರುತ್ತದೆ. ಅಂದರೆ, ಗಳಿಸಿದ ವರಮಾನದಲ್ಲಿ ಸ್ಥಿರತೆ ಇರುವುದಿಲ್ಲ.

ಆದರೆ ಸ್ವತ್ತಿನಿಂದ ಬರುವ ವರಮಾನ ಹೆಚ್ಚು ಶಾಶ್ವತ, ಸ್ಥಿರ. ದುಡಿದು ಸಂಪಾದಿಸುವವನು ಉಳಿತಾಯಮಾಡಿ ವೃದ್ಧಾಪ್ಯ ಕಾಲದ ಜೀವನಕ್ಕೆ ಕೂಡಿಡ ಬೇಕಾಗುತ್ತದೆ. ಸ್ವತ್ತಿನಿಂದ ವರಮಾನ ಪಡೆಯುವವನು ಈಗಾಗಲೇ ಕೂಡಿಟ್ಟಿರು ವುದರಿಂದ ಅವನು ಹೊಸದಾಗಿ ಉಳಿಸಿಡಬೇಕಾದ ಅಗತ್ಯವಿರುವುದಿಲ್ಲ. 2. ವರಮಾನವನ್ನು ಗಳಿಸುವುದಕ್ಕೆ ದೈಹಿಕ ಮತ್ತು ಮಾನಸಿಕ ಶ್ರಮ ಅಗತ್ಯ. ಗಳಿಕೆಗಾಗಿ ದುಡಿಯುವವನು ತನ್ನ ಬಿಡುವನ್ನು ತ್ಯಾಗಮಾಡುತ್ತಾನೆ. ಆದರೆ ಸ್ವತ್ತಿನಿಂದ ವರಮಾನ ಪಡೆಯುವವನಿಗೆ ಶ್ರಮವಿರುವುದಿಲ್ಲ; ಅವನು ಬಿಡುವನ್ನು ಅನುಭವಿಸುತ್ತಾನೆ. 3. ಸಾಮಾನ್ಯವಾಗಿ ಆಸ್ತಿಯಿಂದ ವರಮಾನ ಪಡೆಯುವವರಿಗೆ ಇರುವಷ್ಟು ವೆಚ್ಚಮಾಡುವ ಶಕ್ತಿ ದುಡಿಮೆಯಿಂದ ಗಳಿಸುವವರಿಗೆ ಇರುವುದಿಲ್ಲ. ಆದರೆ ಸ್ವತ್ತಿನಿಂದ ಬಂದ ಅಲ್ಪ ವರಮಾನದಿಂದಲೇ ಜೀವನ ನಡೆಸಬೇಕಾಗಿರುವವರೂ ಇಲ್ಲದಿಲ್ಲ. 4. ದುಡಿಮೆಯಿಂದ ವರಮಾನ ಪಡೆಯುವವರು ಆ ಶಕ್ತಿಯನ್ನು ಗಳಿಸಲು ವಿದ್ಯಾಭ್ಯಾಸ ಮತ್ತು ತರಬೇತಿಗಾಗಿ ವೆಚ್ಚ ಮಾಡಿರುತ್ತಾರೆ. ಆದರೆ ಸ್ವತ್ತಿನಿಂದ ವರಮಾನ ಪಡೆಯಲು ಇಂಥ ವೆಚ್ಚದ ಅಗತ್ಯವಿರುವುದಿಲ್ಲ. 5. ದುಡಿಮೆಯಿಂದ ವರಮಾನ ಪಡೆಯುವವರಿಗೆ, ಮುಖ್ಯವಾಗಿ ಸಂಬಳ ವರಮಾನಗಾರರಿಗೆ, ತೆರಿಗೆಯನ್ನು ತಪ್ಪಿಸಿಕೊಳ್ಳುವ ಅವಕಾಶ ಸಾಮಾನ್ಯವಾಗಿ ಇರುವುದಿಲ್ಲ. ಆದರೆ ಈ ಮಾರ್ಗಗಳೆಲ್ಲವೂ ಬಹುಮಟ್ಟಿಗೆ ಲಭ್ಯವಿರುವುದು ಸ್ವತ್ತಿನಿಂದ ವರಮಾನ ಪಡೆಯುವವರಿಗೆ. ಈ ಕಾರಣಗಳಿಂದಾಗಿ ಗಳಿಸಿದ ವರಮಾನದ ಮೇಲೆ ತೆರಿಗೆ ಕೊಡುವ ಶಕ್ತಿ ಗಳಿಸದ ವರಮಾನದ ಮೇಲೆ ತೆರಿಗೆ ಕೊಡುವ ಶಕ್ತಿಗಿಂತ ಕಡಿಮೆಯಾಗಿರುತ್ತದೆಂದೂ ಆದ್ದರಿಂದ ಗಳಿಸಿದ ವರಮಾನಕ್ಕೆ ರಿಯಾಯಿತಿ ನೀಡ ಬೇಕೆಂದೂ ವಾದಿಸಲಾಗಿದೆ.

ಒಂದು ನಿರ್ದಿಷ್ಟ ಮೊತ್ತದ ರಾಜ್ಯಾದಾಯವನ್ನು ಸರ್ಕಾರ ಪಡೆಯಲೇ ಬೇಕಾಗಿರುವಾಗ, ಗಳಿಸಿದ ವರಮಾನಕ್ಕೆ ಅದು ತೆರಿಗೆಯಲ್ಲಿ ರಿಯಾಯಿತಿ ನೀಡುವುದ ರಿಂದ ಆಗುವ ನಷ್ಟ ತುಂಬಿಕೊಳ್ಳಲು ಗಳಿಸದ ವರಮಾನದ ಮೇಲಿನ ತೆರಿಗೆಯನ್ನು ಹೆಚ್ಚಿಸಬೇಕಾಗುತ್ತದೆ. ಗಳಿಸದ ವರಮಾನದ ಮೇಲೆ ಹೆಚ್ಚಿನ ದರದ ತೆರಿಗೆ ವಿಧಿಸುವುದಕ್ಕೆ ಆರ್ಥಿಕ ಅಸಮತೆಯನ್ನು ಕಡಿಮೆಮಾಡುವ ದೃಷ್ಟಿಯಿಂದಲೂ ಸಮರ್ಥನೆಯುಂಟು. ಆದರೆ ಈ ನೀತಿಯಿಂದ ಉಳಿತಾಯ ಮಾಡಲು ಮತ್ತು ಸ್ವತ್ತನ್ನು ಸಂಪಾದಿಸಲು ಉತ್ತೇಜನವಿಲ್ಲದಂತಾಗುತ್ತದೆಂಬ ಮತ್ತು ನಷ್ಟ ಸಂಭವವುಳ್ಳ ಉದ್ಯಮಗಳಲ್ಲಿ ಬಂಡವಾಳ ಹೂಡಲು ಉತ್ತೇಜನವಿಲ್ಲದಂತಾಗುತ್ತದೆಂಬ ಭಯವುಂಟು. ಸ್ವತ್ತನ್ನು ಸಂಪಾದಿಸಿದಾಗಿ ನಿಂದ ಹಲವಾರು ವರ್ಷಗಳವರೆಗೆ ವಿನಾಯಿತಿ ಕೊಟ್ಟು, ಅನಂತರ ಅದರಿಂದ ಬರುವ ವರಮಾನದ ಮೇಲೆ ಹೆಚ್ಚಿನ ದರದ ತೆರಿಗೆ ವಿಧಿಸುವುದಾದರೆ ಉಳಿತಾಯ ಮಾಡಲೂ ಸ್ವತ್ತನ್ನು ಆರ್ಜಿಸಲೂ ಉತ್ತೇಜನ ತಪ್ಪದಂತೆ ಮಾಡಬಹುದೆಂಬ ಅಭಿಪ್ರಾಯವೂ ಉಂಟು. (ಬಿ.ಎಸ್.ಎಸ್.ಎ.)

ಒಂದು ಆದಾಯವನ್ನು ಇತಮಿತ್ಥಂ ಎಂದು ಗಳಿಸಿದ ವರಮಾನ ಹಾಗು ಗಳಿಸದ ವರಮಾನವೆಂದು ವರ್ಗೀಕರಿಸುವುದು ಅಷ್ಟೇನೂ ಸುಲಭವಲ್ಲ. ಒಂದೇ ಆದಾಯವು ಗಳಿಸಿದ್ದೂ ಆಗಬಹುದು; ಗಳಿಸದ್ದೂ ಆಗಬಹುದು. ಆ ಹಣದ ಮೂಲವು ವ್ಯಕ್ತಿಯ ದುಡಿಮೆಯಿಂದ ಬಂದುದೇ ಅಥವಾ ಬೇರೆಯವರಿಂದಲೋ/ಆಕಸ್ಮಿಕವಾಗಿ ಬಂದುದೋ ಎಂಬುದರ ಮೇಲೆ ಆಧಾರಿತವಾಗಿದೆ.

ತನ್ನ ಸ್ವಯಂ ದುಡಿಮೆಯಿಂದ ಉಳಿಸಿದ ಅಥವಾ ಕೂಡಿಟ್ಟ ಅಥವಾ ಸಾಲ ಮಾಡಿ ಹಣ ದೊರಕಿಸಿಕೊಂಡು ಆಮೇಲೆ ತನ್ನ ವರಮಾನದಿಂದ ತೀರಿಸಿದ ಹಣ ಅಥವಾ (ನಿವೃತ್ತಿ, ವೇತನ ಪರಿಷ್ಕರಣ ಮೊದಲಾದ ಕಾರಣಗಳಿಂದ) ಇಡು ಗಂಟಾಗಿ ಬಂದ ಹಣವನ್ನು ಹಲವಾರು ರೀತಿ ವಿನಿಯೋಗಿಸಿ ಅದರಿಂದ ಬರುವ ಆದಾಯವು ಗಳಿಸಿದ ವರಮಾನವಾಗುವುದು. ಉದಾಹರಣೆಗೆ ಈ ಕೆಳಗಿನವುಗಳು ಗಳಿಸಿದ ವರಮಾನಗಳು:

1. ವೇತನ, ಬೋನಸ್ಸು, ತುಟ್ಟಿಭತ್ಯ, ವೇತನೇತರ ಸೌಲಭ್ಯಗಳು, ನಿವೃತ್ತಿವೇತನ, ನಿವೃತ್ತಿಕಾಲದ ಮೊತ್ತಗಳು.

2. ಠೇವಣಿಗಳು, ಅಂಚೆ ಕಛೇರಿಯ ರಾಷ್ಟ್ರೀಯ ಉಳಿತಾಯ ಪತ್ರಗಳು, ಮಾಸಿಕ ಆದಾಯ ಯೋಜನೆ ಠೇವಣಿ, ನಿವೃತ್ತರ ಆದಾಯ ಯೋಜನೆ, ಸಾರ್ವಜನಿಕ ಭವಿಷ್ಯನಿಧಿ, ಐಡಿಬಿಐ ಮೊದಲಾದ ಬಾಂಡುಗಳು, ಡಿಬೆಂಚರ್ ಬಾಂಡುಗಳು, ಉಳಿತಾಯ ಖಾತೆ, ಪಾರಸ್ಪರಿಕ ನಿಧಿ ಮೊದಲಾದವುಗಳಿಂದ ಬರುವ ಬಡ್ಡಿ.

3. ಮನೆ/ಕಟ್ಟಡದ ಬಾಡಿಗೆ, ಷೇರುಗಳು–ಬಂಡವಾಳ ಪತ್ರಗಳು ಮೊದಲಾದವುಗಳ ಮೇಲೆ ಬರುವ ಲಾಭಾಂಶ ಮೊದಲಾದವುಗಳು.

ಗಳಿಸದ ವರಮಾನವೆಂದರೆ ತನ್ನ ಸ್ವಂತ ದುಡಿಮೆಯ ಪ್ರತಿಫಲವಾಗದೆ ಬೇರೆಯವ ರಿಂದ ಹಲವಾರು ಕಾರಣಗಳಿಗಾಗಿ ಬರುವ ಆಸ್ತಿಯ ಅಥವಾ ಇಡುಗಂಟಿನ ಮೇಲಣ ಆದಾಯ ಅಥವಾ ಇತರೇ ಈ ರೀತಿಯ ಆದಾಯಗಳು ಗಳಿಸದ ವರಮಾನವಾಗುತ್ತವೆ.

1. ಪಿತ್ರಾರ್ಜಿತವಾಗಿ ಬಂದ ಮನೆ, ನಿವೇಶನ, ಕಟ್ಟಡ, ಹಣ ಮೊದಲಾದವುಗಳಿಂದ ಬರುವ ಆದಾಯವು ಗಳಿಸದ ವರಮಾನ. ಇದರಿಂದ ಬರುವ ಬಾಡಿಗೆ, ಬಡ್ಡಿ, ಲಾಭಾಂಶಗಳೂ ಗಳಿಸದ ವರಮಾನವಾಗುತ್ತವೆ.

2. ಲಾಟರಿ, ರಸಪ್ರಶ್ನೆಗಳಿಂದ ಬರುವ ಬಹುಮಾನ ಮೊದಲಾದವುಗಳು ಸಹ ಗಳಿಸದ ವರಮಾನ.

3. ತಂದೆ ಮೊದಲಾದವರ ಮರಣಾನಂತರ ವಾರಸುದಾರನಾಗಿ ಪಡೆಯುವ ಆಸ್ತಿ, ಹಣ, ಷೇರುಗಳು, ಡಿಬೆಂಚರ್–ಬಂಡವಾಳ ಪತ್ರಗಳು ಮೊದಲಾದವುಗಳಿಂದ ಬರುವ ಆದಾಯವು ಗಳಿಸದ ವರಮಾನವಾಗುತ್ತವೆ. (ಬಿ.ಎಸ್.ಎಸ್.ಎ.)

**ಗಾಂಕೂರ್ ಸಹೋದರರು :** ಎಡ್ಮಾನ್ ಡ ಗಾಂಕೂರ್ (1822–96) ಮತ್ತು ಝೂಲ್ ಡ ಗಾಂಕೂರ್ (1830–70) 19ನೆಯ ಶತಮಾನದ ಉತ್ತರಾರ್ಧದ ಫ್ರೆಂಚ್ ಸಾಹಿತ್ಯದಲ್ಲಿ ಹೆಸರಾಂತ ಕಾದಂಬರಿಕಾರರು; ಕಲಾ ವಿಮರ್ಶಕರು. ತಮ್ಮ ಕಾದಂಬರಿಗಳನ್ನು ರೂಪಾಂತರ ಮಾಡಿ ಇವರು ಬರೆದ ನಾಟಕಗಳು ಫ್ರೆಂಚ್ ರಂಗಭೂಮಿ ಸ್ವಲ್ಪಕಾಲ ಕಳೆಗಟ್ಟುವಂತೆ ಮಾಡಿದ್ದವು. ಇವರು ತಮ್ಮ ಪೂರ್ವದ ಬಾಲ್‌ಜ್ಯಾಕ್, ಫ್ಲೋಬರ್–ಮುಂತಾದವರ ವಾಸ್ತವತಾ ಸಿದ್ಧಾಂತವನ್ನೇ ಅನುಸರಿಸಿ ತಮ್ಮ ಅನಂತರ ಬಂದ ಎಮಿಲಿ ಝೋಲಾ ಮೊದಲಾದ ವಾಸ್ತವತಾವಾದಿಗಳಿಗೆ ದಾರಿ ತೋರಿಸಿದರು. ಈ ಇಬ್ಬರು ಸಹೋದರರಲ್ಲಿ ಚಿಕ್ಕವನಾದ ಝೂಲ್ ತನ್ನ 40ನೆಯ ವರ್ಷದಲ್ಲಿ ತೀರಿಕೊಂಡ. ಇವನು ಜೀವಿಸಿದ್ದಾಗ ಇಬ್ಬರೂ ಬರೆದ ಕೃತಿಗಳಲ್ಲಿ ಯಾರದ್ದು ಎಷ್ಟು ಭಾಗವೆಂದು ನಿರ್ಣಯಿಸುವುದು ಕಷ್ಟ. ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಇದ್ದುದರಿಂದ ಇವರು 18ನೆಯ ಶತಮಾನದ ಫ್ರೆಂಚ್ ಸಮಾಜವನ್ನೂ ಆ ಕಾಲದ ಕಲೆಯನ್ನೂ ಆಳವಾಗಿ ಅಧ್ಯಯನ ಮಾಡಿದರು. ಆ ತನಕ ಸಾಮಾನ್ಯವಾಗಿ ಅನೇಕ ಇತಿಹಾಸಕಾರರು ಅಲಕ್ಷಿಸುತ್ತಿದ್ದ ಹಳೆಯ ಕಾಗದಪತ್ರಗಳು, ವರ್ಣಚಿತ್ರಗಳು,



ಕೆತ್ತನೆಯ ಚಿತ್ರಗಳು, ಸಾಮಾಜಿಕ ಹಿನ್ನೆಲೆಗೆ ಸಂಬಂಧಿಸಿದ ಸಾಕ್ಷ್ಯ ಸಂಗತಿಗಳು, ಅಲಂಕಾರ ವಸ್ತುಗಳು, ಪೀಠೋ ಪಕರಣಗಳು ಮುಂತಾದ ಐತಿಹಾಸಿಕ ಪುರಾವೆಗಳನ್ನು ಇವರಿಬ್ಬರೂ ಪರಿಣಾಮಕಾರಿ ಯಾಗಿ ಬಳಸಿಕೊಂಡರು. ಇವರು ಬರೆದ ಹಿಸ್ಟರಿ ಡ ಲ ಸೊಸೇತಿ ಫ್ರಾನ್ಸೇಸ್ ಪೆಂದಾಂತ್ ಲ ರೆವೆಲ್ಯೂಷನ್ (1854) ಮತ್ತು ಒಂಬತ್ತು ಸಂಪುಟಗಳಾಗಿ ರಚಿತವಾದ ಗಾಂಕೂರ್ ಜರ್ನಲ್ (1885–87) ಎಂಬುವು ಉಪಯುಕ್ತ ಚಾರಿತ್ರಿಕ ಆಕರ ಗ್ರಂಥಗಳಾಗಿವೆ. ಇವುಗಳ ಜೊತೆಗೆ 18ನೆಯ ಶತಮಾನದ ಚಿತ್ರಕಲೆಯನ್ನು ಕುರಿತು ವಿಚಾರಭರಿತ ಸಾಕ್ಷ್ಯ ಗ್ರಂಥಗಳನ್ನು ಇವರು ಬರೆದಿದ್ದಾರೆ. ಪ್ರಮುಖವಾಗಿ ಇತಿಹಾಸಕಾರ ರೆಂದು ಪ್ರಸಿದ್ಧಿ ಪಡೆದ ಇವರು ತಮ್ಮ ಕಾದಂಬರಿ ಹಾಗೂ ನಾಟಕಗಳಲ್ಲಿಯೂ ಅನನ್ಯ ವಾಸ್ತವಿಕ ಪ್ರಜ್ಞೆಯನ್ನು ತೋರಿಸಿದ್ದಾರೆ. ಆನ್ರೀತ್ ಮಾರೇಶಲ್ ಮುಂತಾದ ನಾಟಕಗಳಲ್ಲಿ ನಿತ್ಯಜೀವನದ ಆಡುಮಾತಿನ ಸೊಗಡನ್ನೂ ರಂಗಭೂಮಿಯ ಸಾಂಪ್ರದಾಯಿಕ ಗಡಸು ಶೈಲಿಯನ್ನೂ ಚೆನ್ನಾಗಿ ರೂಢಿಸಿಕೊಂಡಿದ್ದಾರೆ. ಹಲವು ಸಮಕಾಲೀನ ಸಮಸ್ಯೆಗಳನ್ನೆತ್ತಿಕೊಂಡು, ಪ್ರಮಾಣಬದ್ಧವಾದ ಜೀವಂತ ವಾಸ್ತವಿಕ ಚಿತ್ರಗಳನ್ನು ಕೊಟ್ಟಿದ್ದಾರೆ. ಇವರು ಯಥಾರ್ಥ ಸಂಗತಿಗಳನ್ನು ಯಾಥಾರ್ಥವಾದಿಗಳಂತೆ ಕೇವಲ ಬಾಹ್ಯಾಲಂಕರಣಕ್ಕಾಗಿ ಬಳಸುವುದಿಲ್ಲ. ಕಳೆದುಹೋದ ಯುಗದ ಜನ ಜೀವನವನ್ನು ವೀಕ್ಷಿಸುವಾಗ ಆ ಕಾಲದ ಜನರ ಮನಸ್ಸಿನ ಚಲನವಲನಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಅತ್ಯಂತ ನವಿರಾದ, ಕಾವ್ಯಾತ್ಮಕ ಭಾಷೆಯಲ್ಲಿ ವಿಶ್ಲೇಷಿಸಿದ್ದಾರೆ. ಇವರ ಕೃತಿಗಳು ಆಧುನಿಕ ಮನೋವಿಶ್ಲೇಷಣಾತ್ಮಕ ಕಾದಂಬರಿಗಳ ಪೂರ್ವಸೂಚಿ ಯಂತಿವೆ. ಇವರ ರಿನೆಮಾ ಮೊಪೆರಿನ್ ಕಾದಂಬರಿಯಲ್ಲಿ ಸಮಕಾಲೀನ ಯುವಜನರನ್ನು ಕುರಿತ ಹೃದಯಸ್ಪರ್ಶಿ ಚಿತ್ರವಿದೆ. ಮದಾಂ ಜರ್ ವಾಯ್‌ಸಾಯ್ ಧರ್ಮದ ಗೀಳು ಹಿಡಿದ ವ್ಯಕ್ತಿಗಳನ್ನು ಕುರಿತ ಕಥೆ. ಮ್ಯಾನೀತ್ ಸಾಲೊಮನ್ ಚಿತ್ರಕಲಾವಿದರ ಬದುಕನ್ನೂ ಕಲಾವಿದನೊಬ್ಬನ ದುರಂತ ಜೀವನವನ್ನೂ ಪಡಿಮೂಡಿಸುವ ಗಂಭೀರ ಕಥೆ. ಎಲ್ಲಕ್ಕಿಂತ ಹೆಚ್ಚಾಗಿ ಜರ್ಮಿನಿ ಲ್ಯಾಸೆರ್‌ಟ್ಯೂ ಎನ್ನುವ ಕಾದಂಬರಿಯಲ್ಲಿ ದೀನವ್ಯಕ್ತಿಯೊಬ್ಬನ ದಾರುಣ ಕಥೆಯಿದೆ. ಎಡ್‌ಮಾನ್ ಗಾಂಕೂರ್ ಒಬ್ಬನೇ ಬರೆದ ಆತ್ಮಕಥೆಯಲ್ಲಿ ಸರ್ಕಸ್ ಕೆಲಸಗಾರರ ವೃತ್ತಿಜೀವನದ ಹಾಗೂ ತಮ್ಮ ಝೂಲ್ ಗಾಂಕೂರ್‌ನನ್ನು ಕುರಿತ ಅಂತಃಕರಣ ಪೂರ್ವಕವಾದ ವರ್ಣನೆಗಳಿವೆ. ಸೂಳೆಗಾರಿಕೆ ಮತ್ತು ಏಕಾಂತ ಕಾರಾಗೃಹವಾಸದ ಕ್ರೂರ ಪರಿಣಾಮಗಳನ್ನು ಬಣ್ಣಿಸುವ ದುರಂತ ಕಾದಂಬರಿ–ಲಾ ಫಿಲ್ ಎಲಿಸೊ.

ಗಾಂಕೂರ್ ಸಹೋದರರು ವಾಸ್ತವಿಕ ಬದುಕನ್ನು ಯಥಾರ್ಥವಾದಿಗಳಂತೆ ಕೇವಲ ಛಾಯಾಗ್ರಹಣ ಮಾಡಿ ತೋರಿಸುವುದಿಲ್ಲ. ಅತ್ಯಂತ ಸೂಕ್ಷ್ಮಸಂವೇದಿಗಳಾದ ಅವರು ಅದನ್ನು ಧ್ವನಿಪೂರ್ಣವಾದ ಭಾಷೆಯಲ್ಲಿ ಸಮಷ್ಟಿ ಪರಿಣಾಮ ಸಾಧಿಸುವಂತೆ ಚಿತ್ರಿಸುತ್ತಾರೆ. ಪರಿಣಾಮ ವಿಧಾನ 'ಇಂಪ್ರೆಷನಿಸಂ' ಎನ್ನುವ ಫ್ರೆಂಚ್ ಕಲಾಸಂಪ್ರದಾಯಕ್ಕೆ ಇವರು ವಿಶೇಷ ಕೊಡುಗೆ ನೀಡಿದ್ದಾರೆ. ಎಡ್ಮಾನ್ ಗಾಂಕೂರ್ ಸ್ಥಾಪಿಸಿದ ಗಾಂಕೂರ್ ಅಕಾಡೆಮಿ ಮತ್ತು ಪ್ರಿಗಾಂಕೂರ್ ಸಾಹಿತ್ಯ ಪ್ರಶಸ್ತಿ ಅವನ ಹೆಸರನ್ನು ಚಿರಸ್ಥಾಯಿಯಾಗಿಸಿವೆ.

(ಎಚ್.ಕೆ.ಆರ್.)

**ಗಾಂಗೇಯದೇವ :** ಆಳ್ವಿಕೆ 1015–41. ಚೇದಿ ವಂಶವೆಂದು ಪ್ರಸಿದ್ಧವಾದ ತ್ರಿಪುರಿ ಕಳಚುರಿ ವಂಶದ ಒಬ್ಬ ದೊರೆ. 2ನೆಯ ಕೊಕ್ಕಲನ ಮಗ; ಕೊಕ್ಕಲನ ಮರಣಾನಂತರ ಪಟ್ಟಕ್ಕೆ ಬಂದ. ಈಗಿನ ಜಬ್ಬಲ್‌ಪುರದ ಸುತ್ತಮುತ್ತ ಇರುವ ದಾಹಲ ಪ್ರದೇಶ ಮೊದಲು ಇವನ ರಾಜ್ಯವಾಗಿತ್ತು. ಇವನಿಗೆ ವಿಕ್ರಮಾದಿತ್ಯ, ಜಿತವಿಶ್ವ ಎಂಬ ಬಿರುದುಗಳಿದ್ದವು. ಇವನ ವೈರಿಗಳು ಕೂಡ ಇವನನ್ನು ಜಿತವಿಶ್ವನೆಂದೇ ಕರೆಯುತ್ತಿದ್ದರು.

ಗಾಂಗೇಯದೇವ ತನ್ನ ರಾಜ್ಯದ ವಿಸ್ತಾರಕ್ಕಾಗಿ ನೆರೆಹೊರೆಯ ರಾಜರೊಂದಿಗೆ ಅನೇಕ ಯುದ್ಧಗಳನ್ನು ಮಾಡಿದ. ಕಲ್ಯಾಣದ ಚಾಳುಕ್ಯ 2ನೆಯ ಜಯಸಿಂಹನ ಕಾಲಕ್ಕೆ ಪರಮಾರ ಭೋಜ ಮತ್ತು ದಕ್ಷಿಣದ ರಾಜೇಂದ್ರ ಚೋಳ ಇವರ ಜೊತೆಗೂಡಿಕೊಂಡು ಕುಂತಲ ದೇಶಾಧಿಪತಿಯಾದ ಇಮ್ಮಡಿ ಜಯಸಿಂಹನ ಮೇಲೆ ಧಾಳಿ ಮಾಡಿದ. ಆದರೆ ಈ ಯುದ್ಧದಲ್ಲಿ ಈ ಕೂಟಕ್ಕೆ ಸೋಲುಂಟಾಯಿತೆಂದು ಜಯಸಿಂಹನ ಕುಳೇನೂರ ಶಾಸನದಿಂದ ತಿಳಿದುಬರುತ್ತದೆ. ಭೋಜ ಮಾಲವ ದೇಶಕ್ಕೆ ಓಡಿಹೋದ. ದಕ್ಷಿಣದಲ್ಲಿ ಸೋತರೂ ಉತ್ತರದಲ್ಲಿ ಗಾಂಗೇಯ ಕೋಸಲದೇಶದ ಸೋಮವಂಶದ ಮಹಾಶಿವಗುಪ್ತನನ್ನು ಸೋಲಿಸಿದ. ಸಾಮಂತ ಹಾಗೂ ಮಹಾಮಂಡಲೇಶ್ವರನಾದ ತುಮ್ಮಾನದ ಕಳಚುರಿ ವಂಶದ ಕಮಲರಾಜನ ಜೊತೆಯಲ್ಲಿ ಉತ್ಕಲವನ್ನು ಗೆದ್ದು ಪೂರ್ವ ಸಮುದ್ರದವರೆಗೆ ರಾಜ್ಯವನ್ನು ವಿಸ್ತರಿಸಿದ. ಈ ಘಟನೆಯ ತರುವಾಯ ಅವನು ತ್ರಿಕಳಿಂಗಾಧಿಪತಿ ಎಂಬ ಬಿರುದನ್ನು ತಳೆದನೆಂದು ತೋರುತ್ತದೆ. ಉತ್ತರಾಪಥದಲ್ಲಿ ಚಕ್ರಾಧಿಪತ್ಯವನ್ನು ಸ್ಥಾಪಿಸುವ ಕಾರ್ಯದಲ್ಲಿ ಸ್ನೇಹಿತನಾಗಿದ್ದ ಪರಮಾರ ಭೋಜ ಮತ್ತು ಚಂದೇಲರ ಮೇಲೆ ಈತ ಯುದ್ಧ ಮಾಡಿದ. ಅಂತ್ಯದಲ್ಲಿ ಜಯ ಇವನದಾಯಿತು. ಸು. 1034ರಲ್ಲಿ ವಾರಾಣಸಿಯನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇದು ಆಗ್ಗೆ ಚಂದೇಲರ ಢಂಗನ ರಾಜ್ಯಕ್ಕೆ ಸೇರಿತ್ತು. ಪೂರ್ವದಲ್ಲಿಯ ಗೌಡದೇಶದ ಪಾಲವಂಶದ 1ನೆಯ ಮಹಿಪಾಲನಿಂದ ಅಂಗದೇಶದ ಭಾಗಲ್‌ಪುರವನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿದ. ಇವನ ಮಗನಾದ ಲಕ್ಷ್ಮೀಕರ್ಣ ಅಥವಾ ಕರ್ಣ ನೇಪಾಲದವರೆಗೆ ದಂಡೆತ್ತಿ ಹೋಗಿದ್ದ. ಬಿಹಾರದಲ್ಲಿಯ ಪಾಲವಂಶದ ನಯಪಾಲನನ್ನು ಸೋಲಿಸಿ ಮಗಧದೇಶವನ್ನು ಗೆದ್ದ. ಸರಿಸುಮಾರು ಇದೇ ಸಮಯಕ್ಕೆ ಘಜ್ನಿ ವಂಶದ ದೊರೆಗಳ ರಾಜ್ಯಪಾಲನಾಗಿ ಪಂಜಾಬನ್ನು ಆಳುತ್ತಿದ್ದ ಅಹಮ್ಮದ್ ನಿಯಾಲ್ತಿಗೀನ್ ಎಂಬ ಸರದಾರ ವಾರಾಣಸಿಯನ್ನು ಮುತ್ತಿ ಅದನ್ನು ಕೊಳ್ಳೆ ಹೊಡೆದು ಅಪಾರ ಸಂಪತ್ತನ್ನು ದೋಚಿಕೊಂಡು ಆ ನಗರವನ್ನು ಹಾಳು ಮಾಡಿ ಹೋದ. ಆಗ ಗಾಂಗೇಯದೇವ ಅವನ ಬೆಂಬತ್ತಿ ಹೋಗಿ ಕೀರಾದೇಶವೆಂದು ಪ್ರಸಿದ್ಧಿ ಹೊಂದಿದ್ದ ಕಾಂಗ್ರಾ ಕಣಿವೆಯನ್ನು ಗೆದ್ದುಕೊಂಡ. ಅನಂತರ ಅವನು ಚಕ್ರಾಧಿಪತ್ಯಸೂಚಕವಾದ ಮಹಾರಾಜಾಧಿರಾಜ, ಪರಮೇಶ್ವರ ಎಂಬ ಬಿರುದುಗಳನ್ನು ಧರಿಸಿದ. ಕಳಚುರಿ ಶಕ 789ರ (1037–38) ಅವನ ಪಿವಾನ ಶಿಲಾಲೇಖದಿಂದ ಈ ವಿಷಯ ತಿಳಿದುಬರುತ್ತದೆ. ಎರಡನೆಯ ರಾಜಧಾನಿಯೆನಿಸಿದ್ದ ಪ್ರಯಾಗದ ಮೇಲೆ ಗಾಂಗೇಯನಿಗೆ ಬಹಳ ಪ್ರೇಮವಿತ್ತು. ಅಲ್ಲಿಯ ಆಲದ ಮರದ ನೆರಳಿನಲ್ಲಿಯೇ ಅವನು ಮರಣ ಹೊಂದಿದನೆಂದೂ ಅನಂತರ ಆತನ 100 ಜನ ಮಡದಿಯರು ಸತಿ ಹೋದರೆಂದೂ ಹೇಳಲಾಗಿದೆ.

ಗಾಂಗೇಯದೇವ ಶೈವಮತನಿಷ್ಠನಾಗಿದ್ದ. ಭೇರಾಘಾಟದ ಶಾಸನದ ಪ್ರಕಾರ ಅವನು ಅಲ್ಲೊಂದು ದೊಡ್ಡ ಶಿವಾಲಯವನ್ನು ಕಟ್ಟಿಸಿದ್ದ. ಪಿವಾನಶಾಸನವೂ ಶಿವಲಿಂಗದ ಪ್ರತಿಷ್ಠಾಪನೆಯನ್ನು ಸೂಚಿಸುತ್ತದೆ. ಜಲಶಯನ (ವಿಷ್ಣು) ದೇವರಿಗೆ ಬಿಟ್ಟ ದತ್ತಿಯ ವಿಷಯ ಮುಕುಂದಪುರ ಶಾಸನದಲ್ಲಿದೆ. ಅವನು ಉತ್ತರದಿಂದ ಬರುತ್ತಿದ್ದ ಮುಸಲ್ಮಾನರ ಅನೇಕ ಧಾಳಿಗಳನ್ನು ತಡೆದ. ಅವನ ಖ್ಯಾತಿಯನ್ನು ಆಲ್ಬೆರೂನಿ ತನ್ನ ಗ್ರಂಥದಲ್ಲಿ ಹೆಚ್ಚಾಗಿ ವರ್ಣಿಸಿದ್ದಾನೆ.

ಗಾಂಗೇಯ ದಕ್ಷ ಆಡಳಿತಗಾರನೂ ಅರ್ಥಶಾಸ್ತ್ರವನ್ನು ಬಲ್ಲವನೂ ಆಗಿದ್ದ. ಅವನ ಕಾಲದ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳು ದೊರೆತಿವೆ. ಇವುಗಳ ಮೇಲೆ ಮುಂಬದಿಯಲ್ಲಿ ಲಕ್ಷ್ಮೀಮೂರ್ತಿಯನ್ನೂ ಹಿಂಬದಿಯಲ್ಲಿ ರಾಜನ ಸಂಪೂರ್ಣ ಹೆಸರನ್ನೂ ಮೂರು ಸಾಲಿನ ನಾಗರೀಲಿಪಿಯಲ್ಲಿ ಬರೆಯಲಾಗಿದೆ. ಈ ನಾಣ್ಯಗಳನ್ನು ದ್ರಮ್ಮ, ಅರ್ಧ ದ್ರಮ್ಮ ಮತ್ತು ಕಾಲು ದ್ರಮ್ಮ ಎಂದು ಮುಂತಾಗಿ ವಿಭಜಿಸಿ ಟಂಕಿಸಲಾಗಿದೆ. ಈತ ಬಳಕೆಗೆ ತಂದ ಲಕ್ಷ್ಮೀಮೂರ್ತಿಯನ್ನುಳ್ಳ ನಾಣ್ಯಪದ್ಧತಿ ಉತ್ತರ ಭಾರತದಲ್ಲಿ ಬಹಳ ಬೇಗ ಪ್ರಖ್ಯಾತವಾಯಿತು. ಈ ನಾಣ್ಯಗಳಲ್ಲಿಯ ರೂಪರೇಷೆಗಳನ್ನು ಚಂದೇಲರು, ಗಾಹದ್ವಾಲರು, ತೋಮರರು ಮತ್ತು ದೂರದ ಕಾಶ್ಮೀರರಾಜರು ತಮ್ಮ ನಾಣ್ಯಗಳಲ್ಲಿ ಅನುಕರಿಸಿದರು.

(ಎಸ್.ಎಸ್.ಜಿವಿ.)

**ಗಾಂಜಾ ಗಿಡ :** ಕ್ಯಾನಬಿನೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ; ವೈಜ್ಞಾನಿಕ ನಾಮ ಕ್ಯಾನಬಿಸ್ ಸೇಟಿವ. ಪರ್ಯಾಯನಾಮ ಭಂಗಿ, ಹೆಂಪ್, ಸಾಫ್ಟ್ ಹೆಂಪ್ ಮುಂತಾದವು ಇಂಗ್ಲಿಷಿನ ಬಳಕೆಯ ಹೆಸರುಗಳು. ಈ ಸಸ್ಯ ಮೂಲತಃ ಹಿಮಾಲಯದ ಉತ್ತರಪ್ರದೇಶದ್ದು ಎಂದು ಹೇಳಲಾಗಿದೆ. ಪ್ರ.ಶ.ಪೂ. 2800ರಲ್ಲೇ ಚೀನೀಯರು ಈ ಗಿಡದ ನಾರನ್ನು ಉಪಯೋಗಿಸುತ್ತಿದ್ದರೆಂದು ಪ್ರಾಚೀನ ಕಾಲದ ಬರೆವಣಿಗೆಗಳ ಆಧಾರದಿಂದ ತಿಳಿದುಬಂದಿದೆ.

ಮಾನವ ಮೊಟ್ಟಮೊದಲಲ್ಲಿ ಉಪಯೋಗಿಸಿದ ನಾರುಗಳಲ್ಲಿ ಗಾಂಜಾ ಗಿಡದ ನಾರು ಕೂಡ ಒಂದು. ಏಷ್ಯ ಖಂಡದಿಂದ ಈ ಗಿಡ ಮೊದಲು ಪೂರ್ವ ಹಾಗೂ ದಕ್ಷಿಣ ಯುರೋಪುಗಳಿಗೂ ಸು. 500ರ ವೇಳೆಗೆ ಪಶ್ಚಿಮ ಯುರೋಪಿಗೂ ಹರಡಿತೆಂದು ಊಹಿಸಲಾಗಿದೆ. ದಕ್ಷಿಣ ಅಮೆರಿಕದ ಚಿಲಿ ಪ್ರದೇಶಕ್ಕೆ 16ನೆಯ ಶತಮಾನದ ಮಧ್ಯದಲ್ಲಿ ಹಾಗೂ 100 ವರ್ಷಗಳ ಬಳಿಕ ನ್ಯೂಇಂಗ್ಲೆಂಡ್ ಮತ್ತು ವರ್ಜಿನಿಯಕ್ಕೆ ಇದು ಹರಡಿತು. 20ನೆಯ ಶತಮಾನದ ಆದಿಯಲ್ಲಿ ಉತ್ತರ ಸಮಶೀತೋಷ್ಣವಲಯದಲ್ಲಿರುವ ಎಲ್ಲ ದೇಶಗಳಲ್ಲಿ ಹಾಗೂ ದಕ್ಷಿಣ ಸಮಶೀತೋಷ್ಣ ವಲಯದ ಕೆಲವು ಪ್ರದೇಶಗಳಲ್ಲಿ ಇದು ಕಾಡುಗಿಡದಂತೆ ಬೆಳೆಯತೊಡಗಿತ್ತು. ಅಲ್ಲದೆ ಅಲ್ಲಲ್ಲಿ ಇದರ ಬೇಸಾಯವೂ ಪ್ರಾರಂಭವಾಗಿತ್ತು. ನಾರಿನ ಉತ್ಪಾದನೆಗೋಸ್ಕರ ಈ ಗಿಡವನ್ನು ಇಂದು ರಷ್ಯ, ಇಟಲಿ, ಚೀನ, ಯೂಗೋಸ್ಲಾವಿಯ, ರೊಮೇನಿಯ, ಕೊರಿಯ, ಪೋಲೆಂಡ್ ತುರ್ಕಿಸ್ತಾನ, ಹಂಗರಿ, ಜಪಾನ್, ಜರ್ಮನಿ, ಚೆಕೋಸ್ಲೊವಾಕಿಯ, ಫ್ರಾನ್ಸ್, ಬಲ್ಗೇರಿಯ, ಚಿಲಿ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಬೇಸಾಯ ಮಾಡಲಾಗುತ್ತಿದೆ.




ಗಿಡದ ಬೇರೆ ಬೇರೆ ಭಾಗಗಳು: 1. ಹೆಣ್ಣು ಗಿಡದ ಒಂದು ರೆಂಬೆ, 2. ಹೆಣ್ಣು ಹೂ, 3. ಬೀಜ, 4. ಫಲ, 5. ಗಂಡು ಹೂ

ಗಾಂಜಾ ಗಿಡ ಏಕವಾರ್ಷಿಕ ಸಸ್ಯ. ಎತ್ತರದಲ್ಲಿ ಸುಮಾರು 2ಮೀ ವರೆಗಿರಬಹುದು. ಕಾಂಡ ಟೊಳ್ಳು. ಗಿಡಗಳಲ್ಲಿ ಗಂಡು ಹೆಣ್ಣು ಬೇರೆ ಬೇರೆ. ಅಪರೂಪಕ್ಕೆ ಒಂದೇ ಗಿಡ ಗಂಡು ಮತ್ತು ಹೆಣ್ಣು ಹೂಗಳೆರಡನ್ನೂ ಪಡೆದಿರಬಹುದು. ಸಾಗುವಳಿಯಲ್ಲಿ ಗಂಡು ಮತ್ತು ಹೆಣ್ಣು ಗಿಡಗಳು ಸಮಾನಸಂಖ್ಯೆಗಳಲ್ಲಿ ಇರುತ್ತವೆ. ಪರಾಗೋತ್ಪತ್ತಿಯಾದ ಬಳಿಕ ಗಂಡುಗಿಡ ಒಣಗಿಹೋಗುತ್ತದೆ. ಹೆಣ್ಣು ಗಿಡಗಳು ಬೀಜ ಬಲಿಯುವವರೆಗೂ ಜೀವಂತವಾಗಿರುತ್ತವೆ.

ನಾರು ಬೇಕಾದಲ್ಲಿ ಸೂಕ್ತರೀತಿಯ ಹದ ಮಾಡಿ ಅಳವಡಿಸಿಕೊಂಡ ಬೀಜಗಳನ್ನು ಬಿತ್ತಬೇಕು. ಆಗ ಗಿಡಗಳು ನೀಳವಾಗಿ ಎತ್ತರಕ್ಕೆ ಬೆಳೆಯುತ್ತವೆ. ಈ ರೀತಿ ಬೆಳೆದ ಗಿಡಗಳ ನೀಳ ಕಾಂಡಗಳ ನೆತ್ತಿಯಲ್ಲಿ ಮಾತ್ರ ಕೊಂಬೆಗಳು ಕಾಣಿಸಿಕೊಳ್ಳುತ್ತವೆ. ಬೀಜಗಳನ್ನು ವಿರಳವಾಗಿ ಬಿತ್ತಿದ್ದು ಅವುಗಳ ಮಧ್ಯಾಂತರ ಸಾಕಷ್ಟಿದ್ದರೆ ಕೆಳಭಾಗದಿಂದ ಮೇಲ್ತುದಿಯವರೆಗಿರುವ ಗೆಣ್ಣುಗಳೆಲ್ಲೆಲ್ಲ ಕೊಂಬೆಗಳು ಚಿಗುರೊಡೆದು ಗಿಡ ದಪ್ಪವಾಗಿ ಒರಟಾಗಿ ರೂಪುಗೊಳ್ಳುತ್ತದೆ. ಹರಡಿ ಬೆಳೆದಾಗ ಗಿಡ ಕುಳ್ಳಾಗಿರುತ್ತದೆ. ಎಣ್ಣೆ ಬೀಜದ ಉತ್ಪಾದನೆಗೋಸ್ಕರ ರಷ್ಯದ ಈಶಾನ್ಯ ಭಾಗಗಳಲ್ಲಿ ಬೆಳೆಯುವ ಗಿಡಗಳು ಹಾಗೂ ಭಾರತ, ಅರಬ್ ದೇಶಗಳಲ್ಲಿ ಮತ್ತು ಉತ್ತರ ಆಫ್ರಿಕದ ವಿವಿಧ ಪ್ರದೇಶಗಳಲ್ಲಿ ಔಷಧ ಮೂಲಿಕೆಗಾಗಿ ಬೆಳೆಯುವ ಗಿಡಗಳು ಈ ರೀತಿ ಅನೇಕ ಕೊಂಬೆಗಳುಳ್ಳ ಕುಳ್ಳುಜಾತಿಯವು. ಬುಡ ಮತ್ತು ತುದಿ ಭಾಗಗಳೆರಡನ್ನು ಹೊರತು ಉಳಿದ

ಕಾಂಡಭಾಗವೆಲ್ಲ ಟೊಳ್ಳಷ್ಟೆ; ಕಾಂಡದ ಎಪಿಡರ್ಮಿಸ್ ಮತ್ತು ಕೇಂಬಿಯಮುಗಳ ನಡುವೆ ಇರುವ ಆಹಾರಸಾಗಣೆಯ ಅಂಗಾಂಶವಾದ ಫ್ಲೋಯೆಮ್ ಅಂಗಾಂಶವೇ ಗಾಂಜಾಗಿಡದ ನಾರು. ಗಂಡು ಹೂಗಳು ಗಾತ್ರದಲ್ಲಿ ಹೆಣ್ಣು ಹೂಗಳಿಗಿಂತ ದೊಡ್ಡವಾದ್ದರಿಂದ ಸುಲಭವಾಗಿ ಕಣ್ಣಿಗೆ ಬೀಳುತ್ತವೆ. ಅದೇ ಹೆಣ್ಣು ಹೂಗಳು ತುಂಬಾ ಚಿಕ್ಕವಾದುದರಿಂದ ಗಮನವನ್ನು ಸೆಳೆಯವು. ಕಾಂಡದ ತುದಿ ಭಾಗಗಳಲ್ಲಿ ಮತ್ತು ಕಾಂಡದುದ್ದಕ್ಕೆ ಪ್ರತಿ ಗೆಣ್ಣಿನಲ್ಲು ಹೂಗಳು ಗೊಂಚಲು ಗೊಂಚಲಾಗಿ ಬಿಡುತ್ತವೆ. ಬೀಜಗಳು ಗಾತ್ರದಲ್ಲಿ ಗೋದಿ ಕಾಳಿನಷ್ಟಿದ್ದು ಕೊಂಚ ಗುಂಡಾಗಿರುತ್ತವೆ. ಅವು ಪೂರ್ಣ ಬಲಿಯಲು ಇಷ್ಟೇ ಕಾಲ ಹಿಡಿಯುತ್ತದೆಂದು ಹೇಳಲು ಸಾಧ್ಯವಿಲ್ಲ.

ನಾರಿನ ಉತ್ಪಾದನೆಗೋಸ್ಕರ ಈ ಗಿಡದ ಸಾಗುವಳಿ ವಿಧಾನಗಳು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆಯಾದರೂ ಎಲ್ಲ ಕಡೆಗೂ ಅನುಸರಿಸುವ ಕೆಲವು ಸಾಮಾನ್ಯ ಕ್ರಮಗಳಿವೆ. ಸಕಾಲದಲ್ಲಿ ಬೀಜ ಬಿತ್ತುವುದು, ಅಚ್ಚುಕಟ್ಟಾಗಿ ಹದ ಮಾಡಿದ ಭೂಮಿಯನ್ನೇ ಉಪಯೋಗಿಸುವುದು, ಫಲವತ್ತಾಗಿಲ್ಲದಲ್ಲಿ ಸಾಕಷ್ಟು ಗೊಬ್ಬರ ಕೊಡುವುದು ಹಾಗೂ ದಟ್ಟವಾಗಿ ಬೀಜ ಬಿತ್ತುವುದು ಎಲ್ಲೆಡೆಗಳಲ್ಲೂ ವಾಡಿಕೆ. ಒಂದು ಎಕರೆಗೆ 15–20 ಕೆಜಿ. ಬೀಜ ಬೇಕಾಗುತ್ತದೆ. ಬೆಲ್ಜಿಯಂ ಮತ್ತು ಫ್ರಾನ್ಸಿನ ಉತ್ತರದ ಪ್ರದೇಶಗಳಲ್ಲಿ ಎಕರೆಗೆ 40 ಕೆಜಿ ಬೀಜವನ್ನು ಬಿತ್ತುವುದುಂಟು. ಭೂಮಿಯ ಮೇಲ್ಮೈಯಲ್ಲಿ ಎಂದರೆ 1–2.5 ಸೆಂ.ಮೀ ಆಳದಲ್ಲಿ ಬೀಜ ನೆಡುತ್ತಾರೆ. ಬಿತ್ತಿದ ಅನಂತರ ಆರೈಕೆ ಅಷ್ಟಾಗಿ ಬೇಕಿಲ್ಲ. ಯುರೋಪಿನ ಕೆಲವು ಭಾಗಗಳ ಹೊರತು ಇತರ ಪ್ರದೇಶಗಳಲ್ಲಿ ಕಳೆ ಕೀಳುವುದು ಸಹ ರೂಢಿಯಲ್ಲಿಲ್ಲ. ಗಂಡು ಗಿಡಗಳಲ್ಲಿ ಹೂ ಅರಳಿ ಪರಾಗ ಹೊರ ಸುರಿಯುತ್ತಿರುವ ಕಾಲದಲ್ಲಿ ನಾರಿಗೋಸ್ಕರ ಬೆಳೆದ ಫಸಲನ್ನು ಕಟಾವು ಮಾಡುತ್ತಾರೆ. ಈ ಕಾಲದಲ್ಲಿ ಕಟಾಯಿಸಿದ ಗಿಡಗಳಿಂದ ಬರುವ ನಾರು ಅತಿನವುರಾಗಿಯೂ ಮೃದುವಾಗಿಯೂ ಇರುತ್ತದೆ. ಆದರೆ ಈ ನಾರು ಅಷ್ಟು ಗಡುಸಲ್ಲ. ನಾರು ಗಡುಸಾಗಿದ್ದು ಹೇರಳವಾಗಿರಬೇಕಾದರೆ ಗಿಡಗಳು ಇನ್ನೂ ಬಲಿತಿರಬೇಕು. ಆದರೆ ಈ ನಾರು ಒರಟು. ಯುರೋಪಿನ ಕೆಲವು ಭಾಗಗಳಲ್ಲಿ ಕೈಯಿಂದ ಗಿಡಗಳನ್ನು ಬುಡಸಮೇತ ಕೀಳುವುದು ರೂಢಿಯಲ್ಲಿದೆ. ಉಳಿದ ದೇಶಗಳ ಬಹುಭಾಗಗಳಲ್ಲಿ ಗಿಡವನ್ನು ನೆಲದಿಂದ ಕೊಂಚ ಮೇಲಕ್ಕೆ ಕುಡುಗೋಲಿನಿಂದ ಕತ್ತರಿಸುತ್ತಾರೆ.

ಗಿಡಗಳ ಕಟಾವಾದ ಬಳಿಕ ಅವುಗಳಿಂದ ನಾರು ತೆಗೆಯಲು ಅವನ್ನು ಕೊಳೆಸಬೇಕು. ಕೊಳೆಸುವಿಕೆಯಲ್ಲಿ ಮುಖ್ಯವಾಗಿ ಎರಡು ವಿಧಾನಗಳಿವೆ: ನೀರಿನಲ್ಲಿ ಅದ್ದಿಟ್ಟು ಕೊಳೆಸುವುದು ಅಥವಾ ಇಬ್ಬನಿಯಲ್ಲಿ ಗಿಡಗಳನ್ನು ಹರವಿಟ್ಟು ಕೊಳೆಸುವುದು. ಅಮೆರಿಕದಲ್ಲಿ ಇಬ್ಬನಿಯಿಂದ ಕೊಳೆಸುವುದು ಸಾಮಾನ್ಯ. ನೀರಿನಲ್ಲಿ ಅದ್ದಿಟ್ಟು ಕೊಳೆಸುವುದು ಇತರ ದೇಶಗಳಲ್ಲಿ ಅನುಸರಿಸುವ ಮಾರ್ಗ. ಇಬ್ಬನಿಯಲ್ಲಿ ಕಟಾವಾದ ಗಿಡಗಳನ್ನು ಹೊಲಗಳಲ್ಲೇ ಕೊಳೆಯಲು ಬಿಡುತ್ತಾರೆ. ಕೆಲವು ಏಕಾಣು ಜೀವಿಗಳು ಹಾಗೂ ಶಿಲೀಂಧ್ರಗಳು ನಾರಿನ ಸುತ್ತಲಿರುವ ಸಸ್ಯಾಂಶವನ್ನು ಹೊಕ್ಕು ಅವನ್ನು ಕೊಳೆಸುತ್ತವೆ. ಹೀಗೆ ಸಸ್ಯಾಂಶ ಮಾತ್ರ ಕೊಳೆಯುವುದರಿಂದ ನಾರನ್ನು ಸುಲಭವಾಗಿ ಬೇರ್ಪಡಿಸಬಹುದು. ಕೊಳೆಯಲು ಬೇಕಾಗುವ ಕಾಲಾವಧಿ ಹವಾ ಪರಿಸ್ಥಿತಿಯನ್ನು ಅವಲಂಬಿಸಿ ಒಂದು ವಾರದಿಂದ ಕೆಲವು ತಿಂಗಳುಗಳಷ್ಟು ವ್ಯತ್ಯಾಸವಾಗುತ್ತದೆ.

ನೀರಿನಲ್ಲಿ ಅದ್ದಿ ಕೊಳೆಸುವ ಕ್ರಮದಲ್ಲಿ ಮೊದಲು ಕಟಾವಾದ ಗಿಡಗಳನ್ನು ಪೂರ್ಣವಾಗಿ ಒಣಗಿಸಬೇಕು. ಅನಂತರ ಇವನ್ನು ನೀರಿನಲ್ಲಿ ಅದ್ದಿಡಬೇಕು. ಏಕಾಣುಜೀವಿಗಳು ಹಾಗೂ ನೀರು ಇವೆರಡರಿಂದಾಗಿ ನಾರಿನ ಸುತ್ತಲಿರುವ ಸಸ್ಯಾಂಶ ಕೊಳೆಯಲು ಅವಕಾಶವಾಗುತ್ತದೆ. ಈ ಕ್ರಮದಿಂದ ನಾರು ಪಡೆಯಲು 10–20 ದಿವಸಗಳಾಗುತ್ತವೆ. ಕೊಳೆಯಲು ಬೇಕಾಗುವ ಅವಧಿ ನೀರಿನ ಉಷ್ಣತೆಯನ್ನು ಅನುಸರಿಸುವುದು. ಗಿಡಗಳನ್ನು ಕೆರೆ, ಕೊಳ, ಕುಂಟೆ, ನದಿಗಳಲ್ಲಿ ಇಲ್ಲವೆ ಕೃತಕ ತೊಟ್ಟಿಗಳಲ್ಲಿ ಕೊಳೆಸಬಹುದು. ತೊಟ್ಟಿಗಳಲ್ಲಿ ನೀರಿಟ್ಟು ಉಷ್ಣತೆಯನ್ನು ಸೂಕ್ತವಾಗಿ ನಿಯಂತ್ರಿಸಿದರೆ ಕೇವಲ 3–5 ದಿವಸಗಳಲ್ಲಿ ಕೊಳೆಯುತ್ತದೆ. ಇದಕ್ಕೆ ಬೇಕಾಗುವ ಸೂಕ್ತ ಉಷ್ಣತೆ $90^0$ ಫ್ಯಾ.

ಇಬ್ಬನಿಯಿಂದ ಕೊಳೆಸಿದ ಗಿಡಗಳನ್ನು ಕೆಲವು ಪ್ರದೇಶಗಳಲ್ಲಿ ಕಂತೆ ಕಟ್ಟುವುದಿಲ್ಲ. ಅಮೆರಿಕ ಸಂಯುಕ್ತಸಂಸ್ಥಾನದ ಉತ್ತರ ಭಾಗಗಳಲ್ಲಿ ಗಿಡಗಳನ್ನು ಒಟ್ಟಿಗೆ ಸೇರಿಸಿ ಯಂತ್ರಗಳಿಂದ ಕಂತೆ ಕಟ್ಟುತ್ತಾರೆ. ಇದಾದ ಅನಂತರ ಕಂತೆಗಳನ್ನು ಒಣಗಿಸಲು ಯಾವ ವಿಶಿಷ್ಟ ಕ್ರಮವನ್ನೂ ಸಾಮಾನ್ಯವಾಗಿ ಅನುಸರಿಸುವುದಿಲ್ಲ. ಅವೇ ಒಣಗುತ್ತವೆ. ಆದರೆ ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಹಲವಾರು ಸಾಧನಗಳನ್ನು ಉಪಯೋಗಿಸಿ ಕೃತಕ ರೀತಿಯಲ್ಲಿ ಒಣಗಿಸುತ್ತಾರೆ.

ಕೊಳೆತ ಗಿಡಗಳು ಸಾಕಷ್ಟು ಒಣಗಿದ ಅನಂತರ ನಾರನ್ನು ಬೇರ್ಪಡಿಸಲು ವಿವಿಧ ರೀತಿಯ ಯಂತ್ರ ಸಾಧನಗಳನ್ನು ಉಪಯೋಗಿಸಲಾಗುವುದು. ಈ ಸಾಧನಗಳಿಗೆ ಜಜ್ಜಿ ತುಂಡರಿಸುವ (ಬ್ರೇಕರ್ಸ್) ಸಾಧನಗಳು ಎಂದು ಹೆಸರು. ಏಕೆಂದರೆ ಇವು ಸಸ್ಯಾಂಶವೆಲ್ಲವನ್ನು ಕಬ್ಬಿನ ಗಾಣದಂತೆ ಜಜ್ಜಿ ತುಂಡರಿಸುತ್ತವೆ. ಈ ಸಂಸ್ಕಾರವಾದ ಅನಂತರ ನಾರನ್ನು ಇವುಗಳಿಂದ ಬೇರ್ಪಡಿಸಲಾಗುವುದು. ಒದರುವುದು, ಕೂರ್ಚ ಹೊಡೆಯುವುದು ಹಾಗೂ ಚಾಚುವುದರಿಂದ ನಾರನ್ನು ಬೇರ್ಪಡಿಸಿ ಚೊಕ್ಕ ಮಾಡುತ್ತಾರೆ. ಸಾಮಾನ್ಯವಾಗಿ ಈ ಕಾರ್ಯಗಳನ್ನು ಕೈಗಳಿಂದಲೇ ಮಾಡಿದರೂ ಅನೇಕ ಕಡೆ ಯಂತ್ರ ಸಾಧನಗಳನ್ನೂ ಉಪಯೋಗಿಸುವುದುಂಟು. ಈ ಸಾಧನಗಳನ್ನು ಉಪಯೋಗಿಸಿದಾಗ ನಾರು ತುಂಡಾಗುವ ಸಂಭವ ಉಂಟು.

**ಉತ್ಪಾದನಾ ಪರಿಮಾಣ :** ಎಕರೆಗೆ ಉತ್ಪಾದನೆಯಾಗುವ ನಾರಿನ ಪರಿಮಾಣದಲ್ಲಿ ದೇಶದಿಂದ ದೇಶಕ್ಕೆ ವ್ಯತ್ಯಾಸ ಕಂಡುಬರುತ್ತದೆ. ಸಾಮಾನ್ಯವಾಗಿ ಇಳುವರಿ ಒಂದು ಎಕರೆಗೆ 225–820 ಕೆಜಿ.ಗಳವರೆಗೂ ಇರುವುದುಂಟು. ಎಕರೆಗೆ ಅತ್ಯಂತ ಕನಿಷ್ಠ ಉತ್ಪಾದನೆ ರಷ್ಯದಲ್ಲಿ ಹಾಗೂ ಅತ್ಯಂತ ಅಧಿಕ ಉತ್ಪಾದನೆ ಉತ್ತರ ಇಟಲಿಯಲ್ಲಿ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ 900 ಕೆಜಿ. ನಾರು ಉತ್ಪಾದನೆಯಾದ ದಾಖಲೆಯಿದೆಯಾದರೂ ಸರಾಸರಿ ಉತ್ಪಾದನೆ 400 ಕೆಜಿ.ಯನ್ನು ಮೀರಿಲ್ಲ.

**ಉಪಯೋಗಗಳು :** ನಾರನ್ನು ಏಷ್ಯ ಮತ್ತು ಯುರೋಪುಗಳಲ್ಲಿ ವಿವಿಧ ರೀತಿಯ ನೇಯ್ಗೆ ಸರಕುಗಳಿಗಾಗಿ ಒಂದಲ್ಲ ಒಂದು ಕಾಲದಲ್ಲಿ ಬಳಸಲಾಗಿದೆ. ಇದರಿಂದ ಅತ್ಯಂತ ನವುರಾದ ದಾರ ಹಾಗೂ ದಪ್ಪ ಹುರಿಗಳನ್ನು ತಯಾರಿಸಬಹುದು. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಗಾಂಜಾ ನಾರಿನಿಂದ ಟ್ವೈನ್ ದಾರವನ್ನು ತಯಾರಿಸುತ್ತಿದ್ದರು. ಕೃತಕ ಸ್ಪಂಜ್ ಮಾಡಲು ಈ ನಾರನ್ನು 1950ರ ಅನಂತರ ಉಪಯೋಗಿಸಿ ಕೊಳ್ಳಲಾಗುತ್ತಿದೆ.

ಈ ಗಿಡದ ಬೀಜದಿಂದ ಎಣ್ಣೆಯೊಂದನ್ನು ತೆಗೆಯಬಹುದು. ಬೀಜದಲ್ಲಿ ಶೇ. 30 ಭಾಗ ಎಣ್ಣೆ ಉಂಟು. ಇದನ್ನು ಬಣ್ಣ, ವಾರ್ನಿಶ್ ಮತ್ತು ಸಾಬೂನು ತಯಾರಿಕೆಯಲ್ಲಿ ಬಳಸುತ್ತಾರೆ. ಅಲ್ಲದೆ ಬೀಜಗಳನ್ನು ಸಾಕುಪಕ್ಷಿಗಳ ಆಹಾರವಾಗಿ ಉಪಯೋಗಿಸುವುದಿದೆ.

**ಗಾಂಜಾ ಸೇವನೆ :** ಗಾಂಜಾಗಿಡದ ಕುಡಿ ಹೂ, ಎಳೆಯಕಾಂಡ, ಎಲೆ ಮತ್ತು ಬೀಜಗಳಲ್ಲಿ ಔಷಧೀಯ ಗುಣವಿದೆ. ಈ ಪದಾರ್ಥವನ್ನೇ ಗಾಂಜಾ ಎನ್ನುವುದೂ ಉಂಟು. ಗಾಂಜಾದ ಮಾದಕ ಗುಣಕ್ಕೆ ಅದರಲ್ಲಿನ ಎಣ್ಣೆಯೇ ಕಾರಣ. ತೀವ್ರತೆಗೆ ತಕ್ಕಂತೆ ಗಾಂಜಾ ಮೂರು ಬಗೆಯದಾಗಿದೆ.

1. ಅತ್ಯಂತ ಪ್ರಭಾವಶಾಲಿ ಮತ್ತೇರಿಸುವ ಬಗೆ: ಬಲಿತಿರುವ ಹೆಣ್ಣು ಗಿಡಗಳ ಕುಡಿಗಳಿಂದ ಬರುವ ಗೋಂದಿನಿಂದ ಇದನ್ನು ತಯಾರುಮಾಡುತ್ತಾರೆ. ಉತ್ತರ ಆಫ್ರಿಕ, ಮಧ್ಯಪ್ರಾಚ್ಯ ಪ್ರದೇಶಗಳಲ್ಲಿ ಇದಕ್ಕೆ ಹಶೀಶ್ ಎನ್ನುತ್ತಾರೆ. ಇದನ್ನೇ ಭಾರತದಲ್ಲಿ ಚರಸ್ ಎನ್ನವುದು.

2. ಪ್ರಭಾವ ಅಷ್ಟು ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ, ಮಧ್ಯಮ ರೀತಿಯ ಬಗೆ ಇದೇ ಗಾಂಜಾ ಎಂದು ಬಳಕೆಯಿದೆ. ಸಾಗುವಳಿ ಮಾಡಿದ ಗಿಡಗಳ ಕುಡಿಗಳಲ್ಲಿ ಬಿಡುವ ಹೂ ಮತ್ತು ಎಲೆಗಳಿಂದ ಇದನ್ನು ಪಡೆಯಲಾಗುತ್ತದೆ.

3. ಪ್ರಭಾವ ಅತ್ಯಲ್ಪವಾಗಿರುವುದು ಮೂರನೆಯ ವಿಧ. ಇದನ್ನು ಭಾಂಗ್ (ಭಂಗಿ) ಎಂದು ಕರೆಯುತ್ತಾರೆ. ಕಾಡುಗಿಡಗಳಂತೆ ಬೆಳೆದಿರುವ ಗಿಡಗಳ ಒಣ ಎಲೆಗಳು ಹಾಗೂ ಹೂ ಬಿಡುವ ಕೊಂಬೆಗಳನ್ನು ಕತ್ತರಿಸಿ ಇದನ್ನು ತೆಗೆಯಲಾಗುತ್ತದೆ.

ಗಾಂಜಾ ಗಿಡದ ಯಾವ ಭಾಗಕ್ಕೆ ಆಗಲಿ ಅಥವಾ ಯಾವ ಭಾಗದಿಂದ ತೆಗೆದ ವಸ್ತುವಿಗಾಗಲಿ ಅಮೆರಿಕದಲ್ಲಿ ಮ್ಯಾರವಾನ ಎಂಬ ಸಾಮಾನ್ಯ ಹೆಸರು ರೂಢಿಯಲ್ಲಿದೆ. ಅಂದರೆ ಈ ವಸ್ತುವನ್ನು ಸೇವಿಸಿದರೆ ವ್ಯಕ್ತಿಯ ಶರೀರಕ್ರಿಯೆ ಹಾಗೂ ಮನಸ್ಸಿನ ಮೇಲೆ ಪರಿಣಾಮ ಬೀರುವಂತಿರಬೇಕು. ಮ್ಯಾರವಾನ ಪದ ಪೋರ್ಚುಗೀಸ್ ಭಾಷೆಯ ಮರಿಜಿ ಆಂಗೋ (ಮಾದಕವಸ್ತು ಎಂದು ಅರ್ಥ) ಎಂಬುದರಿಂದ ಬಂದಿದೆ ಎಂದು ಊಹಿಸಲಾಗಿದೆ. ಅಮೆರಿಕದಲ್ಲಿ ಎಲ್ಲೆಡೆಗಳಲ್ಲೂ ಸುಲಭವಾಗಿ ಹಾಗೂ ಅತಿ ಕಡಿಮೆ ಬೆಲೆಗೆ ದೊರಕುವ ವಸ್ತು ಭಂಗಿ. ಅಶುದ್ಧ ಹಾಗೂ ಕೀಳುದರ್ಜೆಯ ವಸ್ತುವಿದು. ಇದರಿಂದ ಕೆಲವು ರೋಗಗಳೂ ಬರಬಹುದೆಂದು ಹೇಳಲಾಗಿದೆ.

ಗಾಂಜಾ ಮೊಟ್ಟಮೊದಲು ಔಷಧರೂಪದಲ್ಲಿ ಬಳಕೆಗೆ ಬಂದುದು ಪ್ರಾಚೀನ ಚೀನದಲ್ಲಿ. ಇದನ್ನು ಭಾರತ, ಆಫ್ರಿಕ ಅನಂತರ ಯುರೋಪು ದೇಶಗಳಲ್ಲೂ ಉಪಯೋಗಿಸಲಾಗುತ್ತಿತ್ತು ಮತ್ತು ಮಧ್ಯ ಮತ್ತು ದಕ್ಷಿಣ ಅಮೆರಿಕ ದೇಶಗಳ ಆದಿವಾಸಿಗಳಿಗೂ ಇದರ ಉಪಯೋಗ ಚೆನ್ನಾಗಿ ತಿಳಿದಿತ್ತು. ಇದನ್ನು ನೋವು ಮತ್ತು ಸಣ್ಣಪುಟ್ಟ ರೋಗಗಳಿಗೆ ಶಿಫಾರಸು ಮಾಡುತ್ತಿದ್ದರು. ಗಾಂಜಾದ ಬಗ್ಗೆ 1938ರ ಅನಂತರ ಗಮನಾರ್ಹವಾದ ಸಂಶೋಧನೆಗಳು ನಡೆದಿವೆ. ಇದರ ರಾಸಾಯನಿಕ ಸ್ವರೂಪ ಅತಿ ಜಟಿಲವಾದದ್ದು. ಇದರ ಪೂರ್ಣ ಅರಿವು ನಮಗಿನ್ನೂ ಆಗಿಲ್ಲ. ಟೆಟ್ರಹೈಡ್ರೊಕ್ಯಾನಾಬಿನಾಲ್ (ಟಿ.ಎಚ್.ಸಿ.) ಎಂಬುದು ಗಾಂಜಾದ ಕ್ರಿಯಾಂಶ (ಆಕ್ಟಿವ್ ಪ್ರಿನ್ಸಿಪಲ್) ಎಂದು ವಿಜ್ಞಾನಿಗಳು ನಂಬಿದ್ದಾರೆ. ಕ್ಯನಾಬಿನಾಲಿನಲ್ಲಿ ಅನೇಕ ಸ್ವರೂಪಗಳಿವೆ. ಪ್ರತಿಯೊಂದು ಒಂದು ನಿರ್ದಿಷ್ಟ ರೀತಿಯ ಮಾದಕಾವಸ್ಥೆಗೆ ಕಾರಣವಾಗಬಹುದು.

ಇತ್ತೀಚೆಗೆ ಯುವಕ ಯುವತಿಯರಲ್ಲಿ ಭಂಗಿ ಸೇವನೆ ಒಂದು ಬೃಹತ್ಸಮಸ್ಯೆಯಾಗಿ ಪ್ರಪಂಚಾದ್ಯಂತ ತಲೆ ಎತ್ತಿದೆ. ಪಾಶ್ಚಾತ್ಯ ದೇಶಗಳಲ್ಲಿ ಇದಕ್ಕೆ ವೀಡ್, ಪಾಟ್, ಸ್ಟಫ್, ಗ್ರ್ಯಾಸ್, ಇಂಡಿಯನ್ ಹೇ, ಟೀ, ಮೇರಿ ಜೇನ್ ಮುಂತಾದ ಹೆಸರುಗಳು ರೂಢಿಗೆ ಬಂದಿವೆ. ಗಿಡಗಳನ್ನು ಕಿತ್ತು, ಕತ್ತರಿಸಿ, ಒಣಗಿಸಿ, ಪುಡಿಮಾಡಿ ಸಿಗರೇಟು ಚುಟ್ಟಾಗಳಂತೆ ಸೇದುವುದೇ ಎಲ್ಲೆಲ್ಲೂ ಅನುಸರಣೆಯಲ್ಲಿರುವ ಚಟ. ಇವಕ್ಕೆ ಇಂಗ್ಲಿಷಿನಲ್ಲಿ ರೀಫರ್ಸ್ ಅಥವಾ ಜಾಯಿಂಟ್ಸ್ ಎಂದು ಕರೆಯಲಾಗುತ್ತದೆ. ಇತ್ತೀಚೆಗೆ ಈ ವಸ್ತುವನ್ನು ದೇಹಕ್ಕೆ ಚುಚ್ಚಿ ಸೇರಿಸಿಕೊಳ್ಳುವುದೂ ವರದಿಯಾಗಿದೆ. ಪಾನೀಯ, ತಾಂಬೂಲ ಹಾಗೂ ಮಿಠಾಯಿಗಳಲ್ಲಿ ಸೇರಿಸಿ ಸೇವಿಸುವುದು ಮತ್ತೊಂದು ಬಗೆ. ಗಾಂಜಾ ಸೇವನೆಯಿಂದ ದೇಹ ಹಾಗೂ ಮನಸ್ಸುಗಳೆರಡರ ಮೇಲೂ ದುಷ್ಪರಿಣಾಮಗಳಾಗುತ್ತವೆ.

**ದೈಹಿಕ ಪರಿಣಾಮಗಳು :** ಗಾಂಜಾವನ್ನು ಸೇವಿಸುವ ವ್ಯಕ್ತಿಯ ನಾಡಿಯ ಓಟ ತ್ವರಿತಗೊಳ್ಳುತ್ತದೆ. ರಕ್ತದ ಒತ್ತಡ ಅಲ್ಪ ಸ್ವಲ್ಪ ಏರುತ್ತದೆ. ಕಣ್ಣು ಗುಡ್ಡೆ ಕೆಂಪಗಾಗುತ್ತದೆ. ರಕ್ತದಲ್ಲಿ ಸಕ್ಕರೆಯ ಅಂಶ ಅಧಿಕಗೊಳ್ಳುತ್ತದೆ. ಪದೇ ಪದೇ ಮೂತ್ರವಿಸರ್ಜನೆಗೆ ಒತ್ತಾಯ ಕಂಡುಬರುತ್ತದೆ. ಗಂಟಲೊಣಗುವುದು, ಬಾಯಾರುವುದು, ಓಕರಿಕೆ, ವಾಂತಿ ಕೆಲವು ವೇಳೆ ಭೇದಿ ಸಹ ಆಗಬಹುದು. ಕಣ್ಣಿನ ಪಾಪೆಯ ಸ್ಥಿತಿಸ್ಥಾಪಕಶಕ್ತಿ ಕಡಿಮೆಯಾಗುತ್ತದೆ. ಬೆರಳುಗಳು ಅದುರುವುದು ಸಾಮಾನ್ಯ. ದೈಹಿಕ ಮತ್ತು ಮಾನಸಿಕ ಕ್ರಿಯೆಗಳಲ್ಲಿ ಪರಸ್ಪರ ಹೊಂದಾಣಿಕೆಗೆ ಧಕ್ಕೆ ಉಂಟಾಗುತ್ತದೆ. ಉದಾಹರಣೆಗೆ ನೆಟ್ಟಗೆ ನಿಲ್ಲಲ್ಲು ಮತ್ತು ಬೇಕಾಗಿರುವೆಡೆ ಎಲ್ಲರಂತೆ ಹೋಗಲು ಸಾಧ್ಯವಾಗದಿರಬಹುದು.

**ಮಾನಸಿಕ ಪರಿಣಾಮಗಳು :** ಅತಿಸಾಮಾನ್ಯವಾಗಿ ಕಂಡುಬರುವ ಪ್ರತಿಕ್ರಿಯೆಗಳೆಂದರೆ ಒಂದು ರೀತಿಯ ಸ್ವಪ್ನಾವಸ್ಥೆ, ಅರಿವಿನಲ್ಲಿ ಬದಲಾವಣೆ, ಒಂದಕ್ಕೊಂದು ಹೊಂದಾಣಿಕೆ ಯಿಲ್ಲದ ಭಾವನಾತರಂಗಗಳು ಹತೋಟಿಯಿಲ್ಲದೆ ತಮ್ಮಷ್ಟಕ್ಕೆ ತಾವೇ ತೇಲಾಡುವಂಥ ತೋರಿಕೆ ಇತ್ಯಾದಿ. ಈ ಭಾವನಾತರಂಗಗಳು ಒಂದಾದ ಮೇಲೊಂದು ಜೋಡಣೆ ಯಿಲ್ಲದೆ ಇಲ್ಲಷ್ಟು ಅಲ್ಲಷ್ಟು ಹರುಕು ಹುರುಕು ಎಂದೋ ನಡೆದುಹೋದ ಮರೆತಿರುವ ಪ್ರಸಂಗಗಳು ಜ್ಞಾಪಕಕ್ಕೆ ಬರುವುದು ಮತ್ತು ಪ್ರಮುಖ ಪ್ರಸಂಗಗಳು ಜ್ಞಾಪಕದಲ್ಲಿ ಉಳಿಯದಿರುವುದು ಸಾಮಾನ್ಯ. ನಿಮಿಷಗಳು ಗಂಟೆಗಳಂತೆ ಗಂಟೆಗಳು ನಿಮಿಷಗಳಂತೆ ಭಾಸವಾಗುವುದು, ಸಂಕುಚಿತ ಸ್ಥಳ ಬೃಹದಾಕಾರವಾಗಿ ಕಾಣುವುದು, ಹತ್ತಿರವಿರುವ ವಸ್ತುಗಳು ದೂರವಿರುವಂತೆ ತೋರುವುದು ಇವೆಲ್ಲ ಸಾಮಾನ್ಯ. ಹೆಚ್ಚು ಮೊತ್ತದಲ್ಲಿ ಗಾಂಜಾ ಸೇವಿಸಿದರೆ ಅತ್ಯಂತ ವಾಸ್ತವಿಕವೆಂಬಂತೆ ತೋರುವ ಭ್ರಮೆಯ ಅನುಭವ ವಾಗುತ್ತದೆ. ಈ ಭ್ರಮೆ ಸಾಮಾನ್ಯವಾಗಿ ಉಲ್ಲಾಸ ಕೊಡುವ ಸಂತೋಷಾನುಭವ. ಆದರೆ ಅದರಲ್ಲಿ ಕಾಣುವ ಬಣ್ಣಗಳು, ಕಲ್ಪನೆಗೆ ಬರುವ ಲೈಂಗಿಕಪ್ರಸಂಗಗಳು ಮುಂತಾದವು ಔಷಧದ ಪ್ರಭಾವಕ್ಕಿಂತ ವ್ಯಕ್ತಿಯ ವ್ಯಕ್ತಿತ್ವವನ್ನು ಅವಲಂಬಿಸುತ್ತವೆ ಎಂದು ಹೇಳಲಾಗಿದೆ. ಅನೇಕ ವೇಳೆ ಮನಃಸ್ಥಿತಿಯಲ್ಲಿಯೂ ಬದಲಾವಣೆಗಳನ್ನು ಕಾಣಬಹುದು. ಅತ್ಯಂತ ಸುಖ ಸಂತೋಷಗಳಿಂದ ಕೂಡಿದ ಒಂದು ರೀತಿಯ ಉದ್ರೇಕಾನುಭವ ಈ ಔಷಧಿಯ ವೈಶಿಷ್ಟ್ಯ. ಹತೋಟಿಯಿಲ್ಲದ ನಗು ಹಾಗೂ ಅತಿ ಸ್ವಲ್ಪ ಉತ್ತೇಜನದಿಂದಲೇ ಉಂಟಾಗುವ ಆನಂದಾತಿರೇಕ ಇವು ಸಾಮಾನ್ಯ ಅನುಭವಗಳು. ಅನಂತರ ವ್ಯಕ್ತಿ ಒಂದು ರೀತಿಯ ದುಗುಡ, ವಿಲಕ್ಷಣ ಕಲ್ಪನಾಪ್ರಪಂಚದಲ್ಲಿ ಮುದುರಿಕೊಳ್ಳುತ್ತಾನೆ. ಅಪರೂಪಕ್ಕೆ ಗಾಂಜಾ ಸೇವನೆಯಿಂದ ಕೆಲವರಲ್ಲಿ ಇರುವ ಲವಲವಿಕೆಯೂ ಹೋಗಿ ಜಡತ್ವ ಕಂಡುಬರಬಹುದು. ಇಂಥವರು ಇನ್ನೂ ಹೆಚ್ಚಿನ ಪ್ರಮಾಣಗಳಲ್ಲಿ ಸೇವಿಸಿದರೆ ನಿಷ್ಕಾರಣವಾದ ಭೀತಿ ಆವರಿಸಿ ಸಾವಿನ ಭಯ ತೋರಬಹುದು. ತನ್ನ ದೇಹ ಸೊಟ್ಟಪಟ್ಟವಾದಂತೆ, ತಲೆ ದೊಡ್ಡದಾಗಿರುವಂತೆ, ಕೈಕಾಲುಗಳು ಎತ್ತಲಾರದಷ್ಟು ಭಾರವಾದಂತೆ ಅನುಭವವಾಗುತ್ತದೆ. ಕಲ್ಪನಾಪ್ರಪಂಚದ ಭ್ರಮೆ ಅನೇಕ ವಿಧ. ತಾನು ಎರಡು ವ್ಯಕ್ತಿತ್ವಗಳಿಂದ ಕೂಡಿದ್ದೇನೆಂಬ ಅರಿವು ಸಾಮಾನ್ಯವಾಗಿ ಉಂಟಾಗುತ್ತದೆ. ಔಷಧದ ಪ್ರಮಾಣ ಕಡಿಮೆಯಾಗಿದ್ದರೂ ಮನಸ್ಸಿನ ಆವೇಗದಿಂದ ನಡೆವಳಿಕೆ ಹಠಾತ್ತಾದ ಪ್ರವೃತ್ತಿಯನ್ನೊಳಗೊಂಡಿರಲೂ ಸಾಧ್ಯ. ಗೊತ್ತುಗುರಿ ಇಲ್ಲದ ಭಾವನೆಗಳು ಉದ್ಭವವಾದೊಡನೆ ವ್ಯಕ್ತಿ ಮಾತಿನಲ್ಲಿ ಈ ಭಾವನೆಗಳನ್ನು ಹೊರಗೆಡಹುತ್ತಾನೆ. ಆದರೆ ಹಿಂಸಾತ್ಮಕ ಅಥವಾ ಮೇಲೆ ಬೀಳುವ ಪ್ರವೃತ್ತಿ ಅಪರೂಪ. ವ್ಯಕ್ತಿ ಒಬ್ಬನೇ ಇದ್ದರೆ ಅಮಲೇರಿದವನಂತೆ ಮಲಗಿದ್ದು ಗದ್ದಲ ಮಾಡದೆ ಇರುತ್ತಾನೆ. ಯಾರಾದರೂ ಜೊತೆಗಿದ್ದರೆ ಹರಟುವುದು, ಉಲ್ಲಾಸ ಪೂರಿತವಾಗಿರುವುದು ಸಾಮಾನ್ಯ. ಅನೇಕವೇಳೆ ಹುಚ್ಚು ಹಿಡಿದವರಿಗೂ ಇವರಿಗೂ ಹೆಚ್ಚು ವ್ಯತ್ಯಾಸಗಳೇನೂ ಕಂಡು ಬರುವುದಿಲ್ಲ. ಗಾಂಜಾ ಸೇವನೆಯಿಂದ ಸಂಭೋಗಾನಂದ ವೃದ್ಧಿಗೊಳ್ಳುತ್ತದೆಂಬುದು ಕೆಲವರ ಅಭಿಪ್ರಾಯ. ಆದರೆ ಇದಕ್ಕೆ ವೈಜ್ಞಾನಿಕ ಆಧಾರಗಳಿಲ್ಲ. ಇದರ ಪ್ರಭಾವಕ್ಕೊಳಗಾಗಿ ರುವ ವ್ಯಕ್ತಿಯ ಮಾನಸಿಕ ಹತೋಟಿ ಪೂರ್ಣ ಸಡಿಲಗೊಂಡು ಗಂಡಸಲ್ಲೇ ಆಗಲಿ ಹೆಂಗಸಲ್ಲೇ ಆಗಲಿ ನೈತಿಕ ಮಟ್ಟ ಅಧೋಗತಿಗಿಳಿದಿರುತ್ತದೆ ಎಂಬುದರಲ್ಲಿ ಅನುಮಾನ ವಿಲ್ಲ. ಈ ಸಂದರ್ಭಗಳಲ್ಲಿ ಮನುಷ್ಯನ ಪಾಶವೀಗುಣ ಎದ್ದು ಕಾಣುತ್ತದೆ.

ಗಾಂಜಾ ಸೇವಿಸುವ ತಂದೆ ತಾಯಿಗಳಿಗೆ ಹುಟ್ಟುವ ಮಕ್ಕಳಲ್ಲಿ ಅನುವಂಶಿಕ ಪರಿಣಾಮಗಳೇನಾದರೂ ಉಂಟೇ ಎಂಬುದರ ಬಗ್ಗೆ ಅಮೆರಿಕದ ನ್ಯೂಜರ್ಸಿಯ ಪ್ಯಾಟರ್‌ಸನ್‌ನಲ್ಲಿರುವ ಸೇಂಟ್ ಡಿಸ್‌ಮಾಸ್ ಆಸ್ಪತ್ರೆಯ ಡಾಕ್ಟರ್ ಲೂಯಿ ಸೌಜರವರು ಅಧ್ಯಯನ ನಡೆಸಿದ್ದಾರೆ. ಗಾಂಜಾ ತನ್ನ ಪ್ರಭಾವವನ್ನು ವಂಶವಾಹಿಗಳ ಮೇಲೂ ಬೀರಿ ಪೀಳಿಗೆಯ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡಿ, ಅನುವಂಶಿಕವಾಗಿ ಬುದ್ಧಿಮಾಂದ್ಯ ಇತ್ಯಾದಿ ನ್ಯೂನತೆಗಳನ್ನು ಸಾಗಿಸುತ್ತದೆ ಎಂದು ಅವರು ದೃಢಪಡಿಸಿದ್ದಾರೆ. ದೀರ್ಘಾವಧಿ ಗಾಂಜಾ ಸೇವನೆಯಿಂದ ಕೆಮ್ಮು, ಗೂರಲು, ನಿದ್ರಾಭಂಗ, ಚಿತ್ತೈಕಾಗ್ರತೆಗೆ ಧಕ್ಕೆ ಮುಂತಾದ ದುಷ್ಪರಿಣಾಮಗಳು ಸಾಮಾನ್ಯ ಎಂದು ಅಮೆರಿಕದ ವೈದ್ಯರ ಸಂಘ ವರದಿ ಮಾಡಿದೆ. ಗಾಂಜಾ ಸೇವನೆ ಕ್ರಮೇಣ ಚಿಕಿತ್ಸೆ ತಿರುಗುತ್ತದೆಯೇ ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ಇನ್ನೂ ಸಿಕ್ಕಿಲ್ಲ. ಸಾಮಾನ್ಯವಾಗಿ ಚಟವಸ್ತುಗಳನ್ನು ಸೇವಿಸುತ್ತಿರು ವವರು ಇದ್ದಕ್ಕಿದ್ದಂತೆ ನಿಲ್ಲಿಸಿದರೆ ಅವರ ಮಾನಸಿಕ ನೆಮ್ಮದಿ ಕೆಡುತ್ತದೆ; ಅವರು ಹುಚ್ಚರಂತೆ ಚಟಪಟಿಸುತ್ತಾರೆ. ಆದರೆ ಗಾಂಜಾ ಸೇವನೆಯಲ್ಲಿ ಈ ರೀತಿಯ ಲಕ್ಷಣಗಳು ಕಾಣುವುದಿಲ್ಲವಾದ್ದರಿಂದ ಗಾಂಜಾ ಚಟವಸ್ತುವಲ್ಲ ಎಂದು ಹೇಳಲಾಗಿದೆ. ವೈಜ್ಞಾನಿಕ ಪ್ರಯೋಗಗಳಿಂದಲೂ ಈ ಮಾತು ಸ್ಥಿರಪಟ್ಟಿದೆ. ಆದರೆ ಇದರ ರುಚಿ ಕಂಡವರು ಇದಕ್ಕೂ ಹೆಚ್ಚಿನ ಪ್ರಭಾವ ಬೀರುವ ವಸ್ತುಗಳನ್ನು ಹುಡುಕಿ ಸೇವಿಸುತ್ತಾರೆ.

ಔಷಧವಾಗಲ್ಲದೆ ಮಾದಕವಸ್ತುವಾಗಿ ಗಾಂಜಾವನ್ನು ಬಳಸಿದಾಗ ದೇಹ ಮತ್ತು ಮನಸ್ಸುಗಳ ಮೇಲೆ ಆಗುವ ದುಷ್ಪರಿಣಾಮಗಳು ಅಪಾರವಾದ್ದರಿಂದ ಅದರಿಂದ ಆದಷ್ಟು ದೂರ ಇರುವುದೇ ಒಳ್ಳೆಯದು. (ಆರ್.ಎಸ್.ವಿ.; ಎಂ.)

**ಗಾಂಡ :** ಪೂರ್ವ ಆಫ್ರಿಕದ ಬುಗಾಂಡ ಪ್ರಾಂತ್ಯದಲ್ಲಿರುವ, ಬಂಟೂ ಭಾಷೆಯನ್ನಾಡುವ ಜನ. ಬಗಾಂಡ, ವಗಾಂಡ ಎಂಬ ಪರ್ಯಾಯ ಹೆಸರುಗಳೂ ಉಂಟು. ನೆಗ್ರಾಯಿಡ್ ವರ್ಗಕ್ಕೆ ಸೇರಿದ ಈ ಜನ ಮಧ್ಯಮ ನಿಲುವಿನವರು; ಗಾಢವಾದ ಚಾಕೊಲೇಟ್ ವರ್ಣದವರು. ಮೊದಲಿಗೆ ಇವರ ಸಂಖ್ಯೆ 30 ಲಕ್ಷಕ್ಕೂ ಮಿಕ್ಕಿತ್ತಾದರೂ 1ನೆಯ ಮಹಾಯುದ್ಧ ಕಾಲದಲ್ಲಿ ಕಾಣಿಸಿಕೊಂಡ ನಿದ್ರಾರೋಗ ಬಹುಮಂದಿಯನ್ನು ಬಲಿ ತೆಗೆದುಕೊಂಡಿದ್ದರಿಂದ ಇಂದು ಇವರ ಸಂಖ್ಯೆ ಸು. 10 ಲಕ್ಷ. ಆದರೆ ಇವರು ನೆಲೆಸಿರುವ ನಾಡಿನ ಸಮೃದ್ಧಿ ಆಫ್ರಿಕದ ಇತರ ಭಾಗಗಳ ಜನರನ್ನು ಆಕರ್ಷಿಸಿರುವುದರಿಂದ ಆ ನೆಲೆಸಿಗರ ಸಂಖ್ಯೆ ಈ ಮೂಲನಿವಾಸಿಗಳ ಸಂಖ್ಯೆಯೊಡನೆ ಸ್ಪರ್ಧಿಸುತ್ತದೆ. ಆಫ್ರಿಕದ ಇತರ ಭಾಗಗಳಲ್ಲಿರುವ ಜನತೆಗೆ ಹೋಲಿಸಿದರೆ ಇಲ್ಲಿಯ ಜನರಲ್ಲಿ ಸಾಕ್ಷರತೆಯ ಪ್ರಮಾಣ ತುಂಬ ಹೆಚ್ಚು. ಇತರ ಬುಡಕಟ್ಟುಗಳಿಗಿಂತಲೂ ಇವರು ಹೆಚ್ಚು ಬುದ್ಧಿವಂತರೂ ರಾಜಕೀಯವಾಗಿ ಮುಂದುವರಿದವರೂ ಆದವರು. ಇವರದು ಪಿತೃಪ್ರಧಾನ ವ್ಯವಸ್ಥೆ. ವಂಶದ ಹಿರಿಯ ಉತ್ತರಾಧಿಕಾರವೇ ಮೊದಲಾದ ವಿಚಾರಗಳನ್ನು ನಿಯಂತ್ರಿಸುತ್ತಾರೆ. ಇವರಲ್ಲಿ ಕೆಲವರು ರಾಜಕೀಯ ಅಧಿಕಾರಗಳನ್ನು ನಿರ್ವಹಿಸುತ್ತಾರೆ. ಆದರೆ ಇವರೆಲ್ಲ ಕಬಕನ (ರಾಜ) ಅಧೀನಕ್ಕೆ ಒಳಪಟ್ಟಂಥವರು. ವಾಸ್ತವವಾಗಿ, ಬೇರೆ ಬೇರೆ ವಂಶದವರು ಅರಮನೆಯ ಸೇವೆಗೆಂದು ನಿಯೋಜಿಸಿದ ವ್ಯಕ್ತಿಗಳಲ್ಲಿ ಕೆಲವರನ್ನು ಆಯ್ದು, ಕಬಕ ಅವರಿಗೆ ರಾಜಕೀಯ ಕರ್ತವ್ಯಗಳನ್ನು ವಹಿಸಿಕೊಟ್ಟಿರುತ್ತಾನೆ. ಇದೇ ರೀತಿ ನಿಯೋಜಿಸಲ್ಪಟ್ಟ ಹುಡುಗಿಯರು ಕಬಕನ ಪತ್ನಿಯರೂ ಆಗಬಹುದು. ಇವರಲ್ಲಿ ಬಹುಪತ್ನಿತ್ವ ರೂಢಿಯಲ್ಲುಂಟು. ಸಾಂಪ್ರದಾಯಿಕ ಗಾಂಡ ಧರ್ಮದಲ್ಲಿ ಪೂರ್ವಜರು, ಹಿಂದಿನ ರಾಜರು, ಪ್ರಾಕೃತಿಕ ಶಕ್ತಿಗಳು ಮತ್ತು ದೇವದೇವತೆಗಳನ್ನು ಉಪಾಸಿಸುವ ಪದ್ಧತಿ ಬಳಕೆಯಲ್ಲಿತ್ತು. ಇಂದು ಇವರಲ್ಲಿ ಬಹುಮಂದಿ ಕ್ರೈಸ್ತಧರ್ಮೀಯರಾಗಿದ್ದರೂ ಮಾಟಮಂತ್ರಗಳ ಪ್ರಾಬಲ್ಯ ಇದ್ದೇ ಇದೆ. ಸುನ್ನಿ ಮುಸ್ಲಿಮರೂ ಗಣನೀಯ ಸಂಖ್ಯೆಯಲ್ಲುಂಟು.

ಬುಗಾಂಡಕ್ಕೆ ಭೇಟಿಕೊಟ್ಟ ವಿದೇಶೀಯರೆಲ್ಲ ಇಲ್ಲಿಯ ಅತ್ಯುತ್ಕೃಷ್ಟ ರೂಪದ ಪ್ರಭುತ್ವವ್ಯವಸ್ಥೆಯನ್ನು ಕಂಡು ಮೆಚ್ಚಿದ್ದಾರೆ. ಕಬಕ ಇಲ್ಲಿಯ ಪರಮಪ್ರಭು. ಈತನಿಗೆ ಎಲ್ಲ ಸಾಂಪ್ರದಾಯಿಕ ಮತ್ತು ರಾಜಕೀಯ ಅಧಿಕಾರಗಳಿರುತ್ತವೆ. ಹಿಂದೆ ಈತ ಮೂವರು ಮಂತ್ರಿಗಳ ಸಹಾಯದಿಂದ ರಾಜ್ಯವಾಳುತ್ತಿದ್ದ. ಕಾಲಾನುಕ್ರಮದಲ್ಲಿ ಮಂತ್ರಿಗಳ ಸಂಖ್ಯೆ ಆರಕ್ಕೆ ಏರಿತು. ಇವರಲ್ಲಿ ಒಬ್ಬ ಪ್ರಧಾನ ಮಂತ್ರಿ, ಚುನಾಯಿತ ಹಾಗೂ ನಾಮಕರಣಗೊಂಡ ಪ್ರತಿನಿಧಿಗಳನ್ನೊಳಗೊಂಡ ಲುಕಿಕೋ ಅಥವಾ ಸಂಸತ್ತು ಉಂಟು. ಪ್ರಾಂತ್ಯವನ್ನು ಜಿಲ್ಲೆಗಳಾಗಿ ವಿಭಾಗಿಸಿ ಅವುಗಳ ಆಡಳಿತಕ್ಕೆ ಅಧಿಕಾರಿಗಳನ್ನು ನೇಮಿಸಲಾಗಿದೆ. ರೈತರ ಮೇಲ್ವಿಚಾರಣೆಗಾಗಿ ಸಾಚಾ ಮತ್ತು ಗೊಂಬೊಲೋಲಾ ಎಂಬ ಅಧಿಕಾರಗಳುಂಟು. ಪೌರ ಅಥವಾ ಸೈನಿಕ ಕಾರ್ಯಗಳನ್ನು ನಿರ್ವಹಿಸುವ ಎಲ್ಲ ಅಧಿಕಾರಗಳಿಗೂ ಜಹಗೀರುಗಳನ್ನು ಕೊಡಲಾಗುತ್ತಿತ್ತು. ಇವರು ಆಡಳಿತಗಾರರಾಗಿ, ನ್ಯಾಯಾಧೀಶರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ಸೈನಿಕ ಕಾರ್ಯಾಚರಣೆಯೇ ಇವರ ಮುಖ್ಯ ಕರ್ತವ್ಯವಾಗಿತ್ತು. ತಂತಮ್ಮ ವಿಭಾಗಗಳಲ್ಲಿ ಸಜ್ಜುಗೊಂಡಿದ್ದ ಪಡೆಗಳ ನೆರವನ್ನು ಪಡೆದು ಇವರು ಯುದ್ಧಕಾರ್ಯದಲ್ಲಿ ಭಾಗವಹಿಸುತ್ತಿದ್ದರು.

19ನೆಯ ಶತಮಾನದ ಕೊನೆಯ ಚರಣದಿಂದ ಈ ಪ್ರಾಂತ್ಯದ ಮೇಲೆ ಬ್ರಿಟಿಷರ ಪ್ರಭಾವ ಬೀಳತೊಡಗಿತು. ತನ್ನ ಪ್ರಾಂತ್ಯದ ಜನರಿಗೆ ಶಿಕ್ಷಣ ಕೊಡುವುದಕ್ಕಾಗಿ ಧರ್ಮ ಪ್ರಚಾರಕರನ್ನು ಕಳುಹಿಸಿಕೊಡಬೇಕೆಂದು ಕಬಕ ಮುತೇಸ ಸ್ಟ್ಯಾನ್ಲೆಯನ್ನು ಕೇಳಿಕೊಂಡಿದ್ದನೆಂದು ತಿಳಿದುಬಂದಿದೆ. 1884 ಮತ್ತು 1900ರಲ್ಲಿ ಸಹಿ ಹಾಕಲಾದ ಒಪ್ಪಂದಗಳ ಮೇರೆಗೆ ಇದು ಬ್ರಿಟಿಷ್ ಆರಕ್ಷಿತ ಪ್ರದೇಶವಾಯಿತು. ಈ ಒಪ್ಪಂದ ಕಬಕ ಮತ್ತು ಲುಕಿಕೋಗಳ ಕರ್ತವ್ಯಾಧಿಕಾರಗಳನ್ನೂ ಬ್ರಿಟಿಷರೊಂದಿಗಿನ ಸಂಬಂಧ ಗಳನ್ನೂ ನಿಯಂತ್ರಿಸಿಕೊಳಪಡಿಸಿತು. 1953ರಲ್ಲಿ 2ನೆಯ ಕಬಕ ಮುತೇಸ ಬ್ರಿಟಿಷ್ ಸರ್ಕಾರದೊಂದಿಗೆ ಸಹಕರಿಸಲಿಲ್ಲವೆಂಬ ಆರೋಪದ ಮೇಲೆ ಆತನನ್ನು ಗಡೀಪಾರು ಮಾಡಲಾಗಿತ್ತು. ಮೊದಲಿಗೆ ಎಂದರೆ 1954ರಲ್ಲಿ, ಲುಕಿಕೋನಲ್ಲಿ ಒಟ್ಟು 89 ಮಂದಿ ಪ್ರತಿನಿಧಿಗಳಿದ್ದರು. ಅವರಲ್ಲಿ 31 ಮಂದಿ ಮಾತ್ರ ಚುನಾಯಿತ ಪ್ರತಿನಿಧಿಗಳು. 1953ರ ಹೊತ್ತಿಗೆ ಚುನಾಯಿತ ಪ್ರತಿನಿಧಿಗಳ ಸಂಖ್ಯೆಯನ್ನು 60ಕ್ಕೂ ಮಂತ್ರಿಗಳ ಸಂಖ್ಯೆಯನ್ನು 6ಕ್ಕೂ ಏರಿಸಲಾಯಿತು. 1953ರ ಅನಂತರದ ರಾಜಕೀಯ ಬೆಳವಣಿಗೆಗಳ ಫಲವಾಗಿ 1962ರಲ್ಲಿ ಈ ಪ್ರಾಂತ್ಯ ಸ್ವತಂತ್ರವಾಯಿತು.

ಗಾಂಡ ಜನ ಬುದ್ಧಿವಂತರು, ಸಾಹಸಿಗಳು, ಅವರು ಅಡಕವಾದ ಗ್ರಾಮಗಳಲ್ಲಿ ವಾಸಿಸುತ್ತಾರೆ. ಸಾಮಾನ್ಯವಾಗಿ ಪ್ರತಿಯೊಂದು ಕುಟುಂಬವೂ ಬಾಳೆಯ ತೋಟದಲ್ಲಿಯೇ ವಾಸಿಸುತ್ತದೆ. ಬಾಳೆಯ ಹಣ್ಣು ಇವರ ಮುಖ್ಯ ಆಹಾರ. ಅದನ್ನು ಆವಿಯಲ್ಲಿ ಬೇಯಿಸಿ ತಿನ್ನುತ್ತಾರೆ. ಹತ್ತಿ ಮತ್ತು ಕಾಫಿಯಂಥ ವಾಣಿಜ್ಯ ಬೆಳೆಗಳನ್ನು ಪ್ರಾರಂಭಿಸಿದ ಮೇಲೆ ಇಲ್ಲಿಯ ರೈತರ ಜೀವನಮಟ್ಟ ಬಹಳಮಟ್ಟಿಗೆ ಸುಧಾರಿಸಿದೆ. ಇವರು ಕುರಿ, ಮೇಕೆ, ಕೋಳಿ ಮತ್ತು ದನಗಳನ್ನು ಸಾಕುವುದೂ ಉಂಟು. ದೆಬ್ಬೆ ಹುಲ್ಲುಗಳಿಂದ ಮನೆಗಳನ್ನು ಕಟ್ಟುವುದೂ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಿಸುವುದೂ ಸಾಂಪ್ರದಾಯಿಕ ಉದ್ಯೋಗಗಳು. ಈಚೆಗೆ ಇತರ ಉದ್ಯೋಗಗಳೂ ಬೆಳೆದಿವೆ. ಮರದ ತೊಗಟೆಯಿಂದ ಬಟ್ಟೆಗಳ ತಯಾರಿಕೆ, ಬುಟ್ಟಿ ಹೆಣೆಯುವುದು, ಕುಂಬಾರಿಕೆ, ಮೀನುಗಾರಿಕೆ ಮೊದಲಾದ ಉದ್ಯೋಗಗಳೂ ಉಂಟು. (ಪಿ.ಜಿ.ಡಿ.)

**ಗಾಂಡೀವ :** ಒಂದು ದಿವ್ಯ ಧನುಸ್ಸು. ಈ ಧನುಸ್ಸು ಬ್ರಹ್ಮನಿಂದ ಇಂದ್ರನಿಗೂ ಇಂದ್ರನಿಂದ ವರುಣನಿಗೂ ವರುಣನಿಂದ ಅಗ್ನಿಗೂ ಬಂತು. ಖಾಂಡವದಹನ ಸಮಯದಲ್ಲಿ ಅಗ್ನಿ ಅರ್ಜುನ ಮಾಡಿದ ಉಪಕಾರಕ್ಕಾಗಿ ಆತನಿಗಿದನ್ನು ಕೊಟ್ಟ. ಈ ಧನಸ್ಸು ಎರಡು ಅಕ್ಷಯ ಬತ್ತಳಿಕೆಗಳೊಂದಿಗೆ ಅರ್ಜುನನಿಗೆ ಪ್ರಾಪ್ತವಾಗಿತ್ತು. ಈ ಕಾರಣದಿಂದಲೇ ಅವನು ಗಾಂಡೀವಿ ಎನಿಸಿದ. ಇದರ ಮಹಿಮೆಯಿಂದ ಅರ್ಜುನ ಎಲ್ಲ ದಿಕ್ಕುಗಳನ್ನು ಗೆದ್ದು, ಇಂದ್ರನನ್ನು ಸೋಲಿಸಿದುದಲ್ಲದೆ ಇದರ ತುದಿಯಿಂದ ಶಿವನ ನೆತ್ತಿ ಮೇಲೆ ಹೊಡೆದು ಗಾಯ ಮಾಡಿದ. ಮಹಾಪ್ರಸ್ಥಾನ ಸಮಯದಲ್ಲಿ ಅರ್ಜುನ ಇದನ್ನು ಸಮುದ್ರದಲ್ಲಿ ಬಿಸಾಡಿದನೆಂದು ಹೇಳಲಾಗಿದೆ. *

**ಗಾಂಡೈಟ್ :** ಆರ್ಕೇಯನ್ ಮತ್ತು ಧಾರವಾಡ ಯುಗಕ್ಕೆ ಸೇರಿದ ಶಿಲಾ ಶ್ರೇಣಿಗಳಲ್ಲಿ ಹೆಚ್ಚಿನ ರೂಪಾಂತರಕ್ಕೊಳಗಾಗಿ ಮಾರ್ಪಟ್ಟ ಕೆಲವು ಶಿಲಾಸಮುದಾಯಗಳ ಹೆಸರು. ಇದನ್ನು ಮೊತ್ತ ಮೊದಲಿಗೆ ಸರ್ ಲೂಯಿ ಫರ್ಮರ್ ಮಧ್ಯ ಪ್ರದೇಶದಲ್ಲಿ ಗುರುತಿಸಿ ಅಲ್ಲಿನ ಮೂಲನಿವಾಸಿಗಳೆನಿಸಿದ ಗೋಂಡ್ ಪಂಗಡದ ಗಿರಿಜನರ ಹೆಸರನ್ನೇ ಈ ರೂಪಾಂತರಿತ ಶಿಲೆಗಳಿಗೆ ಇಟ್ಟ. ಧಾರವಾಡ ಯುಗದ ಮ್ಯಾಂಗನೀಸ್ ಅಂಶ ಇರುವ ಜೇಡು ಮತ್ತು ಮರಳು ಶಿಲೆಗಳು ತೀವ್ರವಾದ ಒತ್ತಡಕ್ಕೆ ಒಳಗಾದಾಗ ಈ ಶಿಲೆ ಉಂಟಾಯಿತೆಂದು ಅಭಿಪ್ರಾಯಪಡಲಾಗಿದೆ. ಇದರಲ್ಲಿ ಮುಖ್ಯವಾಗಿ ಕ್ವಾರ್ಟ್ಸ್, ಮ್ಯಾಂಗನೀಸ್, ಗಾರ್ನೆಟ್, ಮತ್ತು ರ್‍ಹೊಡೊನೈಟ್ ಎಂಬ ಖನಿಜಗಳನ್ನು ಕಾಣಬಹುದು. ಶಿಲೆ ಸಮಕಣವಿನ್ಯಾಸವನ್ನು ತೋರಿಸುತ್ತದೆ. ಗಾಂಡೈಟ್ ಶಿಲಾಸಮುದಾಯ ಮುಖ್ಯವಾಗಿ ಮಧ್ಯ ಪ್ರದೇಶದ ಜಬುವಾ, ಶಿವರಾಜಪುರ, ಚಿಂದ್ವಾರ, ಭಂಡಾರ, ಗಂಗಪುರ್, ಮತ್ತು ಮಹಾರಾಷ್ಟ್ರದ ನಾಗಪುರ ಈ ಜಿಲ್ಲೆಗಳಲ್ಲಿ ಕಂಡುಬಂದಿವೆ. ಅದರಲ್ಲೂ ಸಾಸರ್ ಶ್ರೇಣಿಯ ಮ್ಯಾಂಗನೀಸ್ ಜಾಡಿನಲ್ಲಿ ಇವನ್ನು ಸಾಮಾನ್ಯವಾಗಿ ಕಾಣಬಹುದು. ಇವಲ್ಲದೆ ಮೇಲೆ ಹೇಳಿರುವ ಖನಿಜಗಳಲ್ಲದೆ ಬ್ರಾನೈಟ್, ಸೈಲಾಮಲೀನ್, ಪೈರೊಲ್ಯೂಸೈಟ್, ಸಿತಾಪರೈಟ್, ವೃಡನ್‌ಬರ್ಗೈಟ್, ಜಾಕಬ್‌ಸೈಟ್, ಹಾಸ್ಮನೈಟ್ ಮೊದಲಾದ ಮ್ಯಾಂಗನೀಸ್ ಖನಿಜಗಳೂ ಇವೆ. ಇವೇ ಮುಖ್ಯವಾದ ಮ್ಯಾಂಗನೀಸ್ ಅದಿರುಗಳು. ತಮ್ಮ ರಚನೆಯಲ್ಲಿ ಇವು ಪ್ರೀಕೇಂಬ್ರಿಯನ್ ಯುಗದ ಕಬ್ಬಿಣದ ಅದಿರಿನ ನಿಕ್ಷೇಪಗಳಾದ ಹಿಮಟೈಟ್–ಕ್ವಾರ್ಟ್ಸೈಟ್ ಸ್ತರಗಳನ್ನು ಹೋಲುತ್ತವೆ. ಅದಿರಿನ ಪ್ರಸ್ತರಗಳು ಸಾಮಾನ್ಯವಾಗಿ 1 1/2–2ಮೀ ಮಂದವಾಗಿರುತ್ತವೆ. ಹಲವು ಬಾರಿ 12–15 ಮೀಗಳಷ್ಟು ಮಂದವಾಗಿರುವುದೂ ಉಂಟು. ಇದೇ ಅಲ್ಲದೆ ಲೋಹಪ್ರಮಾಣದಲ್ಲಿ ಸಹ ಈ ಅದಿರುಗಳಲ್ಲಿ ವಿವಿಧ ದರ್ಜೆಗಳನ್ನು ಗುರುತಿಸಲಾಗಿದೆ. ಒಟ್ಟಿನಲ್ಲಿ ಇವು ಭಾರತದ ಮ್ಯಾಂಗನೀಸ್ ನಿಕ್ಷೇಪಗಳಿಗೆ ಮುಖ್ಯ ತವರು. ಮಧ್ಯ ಪ್ರದೇಶ ಒಂದರಲ್ಲೇ ಸುಮಾರು 80–100 ದಶಲಕ್ಷ ಟನ್‌ಗಳಷ್ಟು ಅದಿರು ಸಿಗಬಹುದೆಂದು ಅಂದಾಜು ಮಾಡಲಾಗಿದೆ. (ಬಿ.ವಿ.ಜಿ.)

**ಗಾಂದಿನಿ :** ಕಾಶೀರಾಜನ ಮಗಳು. ಈಕೆ ಹನ್ನೆರಡು ವರ್ಷಗಳವರೆಗೆ ತಾಯಿಯ ಗರ್ಭದಲ್ಲೇ ಇದ್ದಳೆನ್ನಲಾಗಿದೆ. ಸಕಾಲ ಪ್ರಸವವಾಗದುದನ್ನು ಕಂಡು ಕಳವಳಗೊಂಡ ರಾಜ ತನ್ನ ಪುರೋಹಿತನ ಸಲಹೆಯಂತೆ ಯದುವಂಶದ ಶ್ವಫಲ್ಕನನ್ನು ಬರಮಾಡಿಕೊಂಡು ಈ ವಿಷಯವನ್ನು ತಿಳಿಸಿದ. ಶ್ವಫಲ್ಕ ಗರ್ಭದಲ್ಲಿರುವುದು ಹೆಣ್ಣು ಮಗುವೆಂದು ತಿಳಿದನಲ್ಲದೆ ತನ್ನ ತಾಯಿಗೆ ಈ ರೀತಿ ಹಿಂಸೆ ಕೊಡಲು ಕಾರಣವೇನೆಂದು ಆ ಶಿಶುವನ್ನು ಪ್ರಶ್ನಿಸಿದ. ತಾನು ಹುಟ್ಟಿದ ಮೊದಲ್ಗೊಂಡು ಪ್ರತಿ ದಿನವೂ ಒಂದೊಂದು ಗೋವನ್ನು ದಾನ ಮಾಡುವುದಾದರೆ ತಾನು ಅವತರಿಸಲು ಸಿದ್ಧವೆಂದು ಆ ಶಿಶು ನುಡಿಯಿತು. ರಾಜ ದಂಪತಿಗಳು ಸಂತೋಷದಿಂದ ಒಪ್ಪಿದರು. ಕೂಡಲೇ ಸುಖಪ್ರಸವವಾಯಿತು. ಹನ್ನೆರಡು ವರ್ಷಗಳಿಂದ ಮಳೆ ಬೀಳದಿದ್ದ ಆ ಪ್ರದೇಶದಲ್ಲಿ ಈ ಮಗು ಹುಟ್ಟಿದ ಕೂಡಲೇ ಸುವೃಷ್ಟಿಯಾಯಿತು. ಕಾಲಕ್ರಮದಲ್ಲಿ ಈಕೆಯನ್ನು ಶ್ವಫಲ್ಕನಿಗೇ ಕೊಟ್ಟು ಮದುವೆ ಮಾಡಲಾಯಿತು. ಇವರ ಮಗನೇ ಅಕ್ರೂರ (**ನೋಡಿ**). ಈ ವೃತ್ತಾಂತ ಭಾಗವತದ ಹತ್ತನೆಯ ಸ್ಕಂಧದಲ್ಲಿ ಬಂದಿದೆ. *

**ಗಾಂಧರ್ವವಿವಾಹ :** ಆಧುನಿಕ ಪ್ರೇಮವಿವಾಹವನ್ನು ಹೋಲುವ ಈ ಪದ್ಧತಿ ಸಾಕಷ್ಟು ಪ್ರಾಚೀನವಾದುದು. ಋಗ್ವೇದದಲ್ಲಿ ಇದು ಸೂಚಿತವಾಗಿದೆ. ಮಾತಾಪಿತೃಗಳು ಪ್ರೇಮಪ್ರಸಂಗಗಳಲ್ಲಿ ಕನ್ಯೆಯರನ್ನು ಪ್ರೋತ್ಸಾಹಿಸುತ್ತಿದ್ದರೆಂದೂ ಪ್ರೇಮಯಾಚನೆಗಾಗಿ ವಶೀಕರಣ ಮಂತ್ರಗಳಿವೆಯೆಂದೂ ಅಥರ್ವವೇದ ತಿಳಿಸುತ್ತದೆ. ಮುಂದೆ ಗೃಹ್ಯ ಮತ್ತು ಧರ್ಮಸೂತ್ರಗಳಲ್ಲೂ ಸ್ಮೃತಿಗಳಲ್ಲೂ ವಿವಾಹದ ಎಂಟು ರೂಪಗಳ ಪ್ರಸ್ತಾಪ ಬಂದಾಗಲೆಲ್ಲ ಗಾಂಧರ್ವವಿವಾಹಕ್ಕೂ ಸಾಕಷ್ಟು ಪ್ರಾಶಸ್ತ್ಯ ಸಿಕ್ಕಿದೆ. ಅದು ಬ್ರಾಹ್ಮಣವರ್ಣಕ್ಕೆ ಉಚಿತವಾದ, ಪ್ರಶಸ್ತ ಅಥವಾ ಧರ್ಮಪದ್ಧತಿ ಅಲ್ಲದಿದ್ದರೂ ಬೇರೆ ಅಪ್ರಶಸ್ತ ರೂಪಗಳಿಗಿಂತ ಉತ್ತಮ ಎಂಬ ಭಾವನೆ ಇತ್ತು.

ವಧೂವರರಲ್ಲಿ ಪರಸ್ಪರ ಅನುರಾಗ ಬೆಳೆದು ತಮ್ಮ ಇಚ್ಛೆಯಿಂದಲೇ ಆಲಿಂಗನಾದಿ ಶರೀರ ಸಂಬಂಧ ಉಂಟಾಗಿ ಅನಂತರ ನಡೆಯುವ ವಿವಾಹ ಗಾಂಧರ್ವ ರೀತಿಯದು ಎಂದು ಮನುಸ್ಮೃತಿಯಲ್ಲಿ ಹೇಳಿದೆ. ಗಂಧರ್ವರು ಸ್ತ್ರೀ ಕಾಮುಕರಾದುದರಿಂದ ಈ ಹೆಸರು ಬಂದಿದೆಯೆಂದು ತೈತ್ತಿರೀಯ ಸಂಹಿತೆ ಮತ್ತು ಐತರೇಯ ಬ್ರಾಹ್ಮಣಗಳಿಂದ ತಿಳಿಯುತ್ತದೆ. ಇಲ್ಲಿ ತಂದೆಯಿಂದ ಕನ್ಯಾದಾನವಿಲ್ಲ. ಹೀಗೆ ಅವನ ಅಧಿಕಾರ ಮೊಟಕಾಗುತ್ತದೆ. ವಧೂವರರ ಪರಸ್ಪರ ಪ್ರೇಮವೇ ಇಲ್ಲಿ ಮುಖ್ಯ. ಧರ್ಮ ಮತ್ತು ಪ್ರಜಾಕಾರ್ಯಗಳಿಗಿಂತ ರತಿಗೇ ಹೆಚ್ಚು ಪ್ರಾಧಾನ್ಯ ಇರುವುದರಿಂದ ಹೆಚ್ಚಿನ ಧರ್ಮಶಾಸ್ತ್ರಕಾರರು ಇದನ್ನು ಅಪ್ರಶಸ್ತವೆಂದು ಪರಿಗಣಿಸಿದ್ದಾರೆ. ಆದರೂ ಅದು ಹೇಯವಲ್ಲವೆಂದೂ ಕ್ಷತ್ರಿಯರಿಗೆ ಉಚಿತವಾದುದೆಂದೂ ಕೆಲವೊಮ್ಮೆ ಎಲ್ಲ ವರ್ಣಗಳೂ ಒಪ್ಪಬಹುದಾದ ವಿವಾಹವೆಂದೂ ಅನೇಕರು ಅಭಿಪ್ರಾಯಪಟ್ಟಿದ್ದಾರೆ. ವಾತ್ಸ್ಯಾಯನ ಕಾಮಸೂತ್ರದಲ್ಲಿ ಮೊದಲಿಗೆ ಬ್ರಾಹ್ಮಣವಿವಾಹವೇ ಶ್ರೇಷ್ಠವೆಂದು ತಿಳಿಸಿದರೂ ಮುಂದೆ ಗಾಂಧರ್ವವೇ ಶ್ರೇಷ್ಠವೆಂದು ಹೇಳಿದೆ. ಪರಸ್ಪರ ಅನುರಾಗದ ಮೇಲೆ ನಿಂತಿರುವುದರಿಂದಲೂ ಅನೇಕ ಕ್ಲೇಶಗಳಿಂದ ಮುಕ್ತವಿರುವುದರಿಂದಲೂ ಗಾಂಧರ್ವವಿವಾಹ ವಿವಾಹಗಳಲ್ಲೆಲ್ಲ ಪೂಜಿತವೆಂದು ವಾತ್ಸ್ಯಾಯನ, ಬೌಧಾಯನ ಮತ್ತು ನಾರದರು ಹೊಗಳಿದ್ದಾರೆ. ಕ್ಷತ್ರಿಯರಲ್ಲಿ, ಅದರಲ್ಲೂ ರಾಜಮನೆತನಗಳಲ್ಲಿ, ಅದು ಧಾರಾಳವಾಗಿ ಪ್ರಚಾರದಲ್ಲಿದ್ದಂತೆ ಕಾಣುತ್ತದೆ.

ಸ್ವಯಂವರ ಗಾಂಧರ್ವವಿವಾಹದ ಒಂದು ವಿಧವೆಂದು ಯಾಜ್ಞವಲ್ಕ್ಯ ಸ್ಮೃತಿಯ ಭಾಷ್ಯವಾದ ವೀರಮಿತ್ರೋದಯದಲ್ಲಿ ಹೇಳಿದೆ. ಅದರ ಒಂದು ಸರಳ ಪ್ರಕಾರವೆಂದರೆ ಋತುಮತಿಯಾದ ಕನ್ಯೆ ಮೂರು ವರ್ಷ ಕಾದ ಅನಂತರ ತನ್ನ ವರನನ್ನು ತಾನೇ ಆರಿಸಿಕೊಳ್ಳುವುದು. ಹಾಗೆಯೇ, ವಿವಾಹ ಮಾಡಿಸುವ ತಂದೆ ತಾಯಿಯರೂ ಪಾಲಕರೂ ಇಲ್ಲದಿರುವಾಗಲೂ ಕನ್ಯೆ ಸ್ವತಂತ್ರಳು. ಇದು ಎಲ್ಲ ಜಾತಿಗಳಿಗೂ ಅನ್ವಯಿಸುತ್ತದೆ. ಸಾವಿತ್ರಿ ಸತ್ಯವಾನನನ್ನು ಆರಿಸಿದ್ದು ಹೀಗೆಯೇ. ದಮಯಂತಿ, ಇಂದುಮತಿ ಶಕುಂತಲೆ ಮೊದಲಾದವರು ಪ್ರಸಿದ್ಧ ಉದಾಹರಣೆಗಳಾಗಿದ್ದಾರೆ. (ಎಚ್.ವಿ.ಎಸ್.)

**ಗಾಂಧಾರ :** ಪ್ರಾಚೀನ ಭಾರತದ ವಾಯವ್ಯ ಭಾಗದಲ್ಲಿ ಹಬ್ಬಿದ್ದ ಪ್ರದೇಶ. ಈ ಪ್ರದೇಶದ ಜನರನ್ನೂ ಗಾಂಧಾರರೆಂದು ಕರೆಯುತ್ತಿದ್ದದ್ದುಂಟು. ಇದರ ಮೇರೆಗಳು ಅಸ್ಪಷ್ಟವಾಗಿದ್ದುವಲ್ಲದೆ ಇದರ ವಿಸ್ತಾರ ಕಾಲಕಾಲಕ್ಕೆ ಬದಲಾಯಿಸುತ್ತಿತ್ತೆಂದು ತೋರುತ್ತದೆ. ಗಾಂಧಾರದ ಉಲ್ಲೇಖ ಮೊದಲು ಋಗ್ವೇದದಲ್ಲಿ ದೊರಕುತ್ತದೆ. ಅನಂತರದ ಬ್ರಾಹ್ಮಣಗಳು, ಪುರಾಣಗಳು ಮತ್ತು ಬೌದ್ಧ ಗ್ರಂಥಗಳಲ್ಲೂ ಇದರ ಪ್ರಸ್ತಾಪವಿದೆ. ನಿಶ್ಚಿತ ಚಾರಿತ್ರಿಕ ದಾಖಲೆಗಳಲ್ಲಿ ಗಾಂಧಾರದ ಹೆಸರು ಮೊದಲು ಕಾಣಸಿಗುವುದು ಪರ್ಷಿಯದ ದೊರೆ 1ನೆಯ ಡೇರಿಯಸನ (ಪ್ರ.ಶ.ಪೂ. 522–486) ಬೇಹಿಸ್ತಾನ್ ಶಾಸನದಲ್ಲಿ. ಹಿಂದೂಕುಷ್ ಪರ್ವತಶ್ರೇಣಿಯ ದಕ್ಷಿಣಕ್ಕಿದ್ದ ಪ್ರದೇಶಕ್ಕೆ ಗಾಂಧಾರವೆಂಬ ಹೆಸರಿತ್ತೆಂದು ಆ ಕಾಲದ ಇತರ ಆಧಾರಗಳಿಂದ ಸ್ಥೂಲವಾಗಿ ತಿಳಿಯುತ್ತದೆ. ಯುವಾನ್

ಚಾಂಗ್ ಮತ್ತು ಇತರ ಚೀನೀ ಯಾತ್ರಿಕರ ಇತಿವೃತ್ತಗಳಲ್ಲಿ ಗಾಂಧಾರದ ಪ್ರಸಿದ್ಧ ನಗರಗಳು ಮತ್ತು ಬೌದ್ಧ ಕೇಂದ್ರಗಳನ್ನು ವಿಶೇಷವಾಗಿ ವಿವರಿಸಿರುವುದರಿಂದ, ಆ ಪ್ರದೇಶದ ಅಂದಿನ ವ್ಯಾಪ್ತಿಯನ್ನು ಊಹಿಸಬಹುದು. ಇವುಗಳ ಪ್ರಕಾರ ಗಾಂಧಾರ

ಮಾರಸೇನೆಯಿಂದ ಆವೃತನಾದ ಬುದ್ಧ – 3ನೆಯ ಶತಮಾನದ ಶಿಲ್ಪ

ಈಗಿನ ಉತ್ತರ ಪಾಕಿಸ್ತಾನದಲ್ಲಿ, ಸಿಂಧೂ ನದಿಯ ಪಶ್ಚಿಮದಿಂದ ಪೆಷಾವರ್ ತಗ್ಗಿನವರೆಗಿನ ಪ್ರದೇಶವನ್ನೂ ಪಶ್ಚಿಮೋತ್ತರದಲ್ಲಿ ಈಗಿನ ಆಫ್ಘಾನಿಸ್ತಾನದ ಸ್ವಾಕ್ ಮತ್ತು ಕಾಬುಲ್ ಕಣಿವೆಯ ಪ್ರದೇಶವನ್ನೂ ಒಳಗೊಂಡಿತ್ತೆಂದು ತಿಳಿಯುತ್ತದೆ. ತಕ್ಷಶಿಲೆ (ಪಾಕಿಸ್ತಾನದ ರಾವಲ್ಪಿಂಡಿ ಜಿಲ್ಲೆಯಲ್ಲಿರುವ ಈಗಿನ ಟ್ಯಾಕ್ಸಿಲ) ಗಾಂಧಾರದ ರಾಜಧಾನಿಯಾಗಿತ್ತು. ಪುಷ್ಕಳಾವತಿಯೂ (ಪಾಕಿಸ್ತಾನದ ಪೆಷಾವರ್ ಜಿಲ್ಲೆಯಲ್ಲಿರುವ ಚಾರ್ಸ್ಸದ) ಕೆಲಕಾಲ ರಾಜಧಾನಿಯಾಗಿತ್ತು. ಅಕ್ಬರನ ಕಾಲದ ಐನ್–ಇ–ಅಕ್ಬರಿ ಗ್ರಂಥದ ಪ್ರಕಾರ ಅಂದಿನ ಗಾಂಧಾರ ಕಾಶ್ಮೀರ ಮತ್ತು ಅಟ್ಟಕ್ ಮಧ್ಯದ ಪ್ರದೇಶವಾಗಿದ್ದಿತು. ಈಗ ಆಫ್ಘಾನಿಸ್ತಾನದಲ್ಲಿರುವ ಕಾಂದಹಾರ್ ನಗರದ ಹೆಸರಿನಲ್ಲಿ ಹಳೆಯ ಗಾಂಧಾರ ಪ್ರಾಂತ್ಯದ ಸ್ಮರಣೆ ಉಳಿದುಬಂದಿದೆ. ಗಾಂಧಾರದ ಮುಂಡಿಗಕ್, ಬೆಗ್ರಾಮ್, ಹಡ್ಡ, ತಕ್ಷಶಿಲಾ, ಚಾರ್ಸ್ಸದ ಮುಂತಾದ ಅನೇಕ ಪ್ರಾಚೀನ ನೆಲೆಗಳಲ್ಲಿ ಉತ್ಖನನಗಳು ನಡೆದಿವೆ. ಮುಂಡಿಗಕ್‌ನಲ್ಲಿ ಪ್ರ.ಶ.ಪೂ. 4ನೆಯ ಸಹಸ್ರಮಾನದಿಂದ ಚಾರಿತ್ರಿಕ ಕಾಲದವರೆಗೂ ಪ್ರಚಲಿತವಿದ್ದ ಸಂಸ್ಕೃತಿಗಳು ಬೆಳಕಿಗೆ ಬಂದಿವೆ. ಹಡ್ಡ ಮತ್ತು ಬೆಗ್ರಾಮ್ ಬಹುಮಟ್ಟಿಗೆ ಪ್ರಸಕ್ತಶಕದ ಆದಿ ಶತಮಾನಗಳಿಗೆ ಸೇರಿದ ನಗರಾವಶೇಷಗಳು. ಹಡ್ಡದಲ್ಲಿ ಅನೇಕ ವಾಸ್ತು ಶಿಲ್ಪ ಕಲಾಕೃತಿಗಳೂ ಬೆಗ್ರಾಮ್‌ನಲ್ಲಿ ಇವುಗಳ ಜೊತೆಗೆ ಕೆತ್ತನೆಗಳೂ




ಜಂಡಿಯಾಲ್ ದೇವಾಲಯದ ತಳವಿನ್ಯಾಸ: 1. ಪೆರಿಸ್ಟೈಲ್, 2. ಓಪಿಸ್ಟೋಡೋಮಸ್, 3. ನೇವೋಸ್, 4. ಪ್ರೋನೇವೋಸ್

ದೊರಕಿವೆ. ತಕ್ಷಶಿಲಾದಲ್ಲಿ ಮೂರು ಕಾಲಗಳ ಅವಶೇಷಗಳು ಬೇರೆಬೇರೆ ದಿಬ್ಬಗಳಲ್ಲಿದ್ದವು. ಮೊದಲ ನೆಯ ಬೀರ್ ದಿಬ್ಬ ಪ್ರ.ಶ. ಪೂ. 6ನೆಯ ಶತಮಾನ ದಿಂದ ಅಲೆಗ್ಸಾಂಡರನ ಕಾಲದವರೆಗೆ ಉಪಸ್ಥಿತವಿದ್ದ ನಗರಾವಶೇಷ. ಮುಂದಿನ ಸಿರ್ಕಪ್ ಪ್ರ.ಶ.ಪೂ. 2ನೆಯ ಶತಮಾನದಿಂದ 12ನೆಯ ಶತಮಾನದ ವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ತದನಂತರದ ಸಿಸುರ್ಕ್‌ನಲ್ಲಿ ಕುಶಾನರ ಕಾಲದ ಅವಶೇಷಗಳಿವೆ. ತಕ್ಷಶಿಲಾ ನಗರ 5ನೆಯ ಶತಮಾನದ ಹೊತ್ತಿಗೆ ಕೊನೆಗೊಂಡಿತೆಂದು ತೋರುತ್ತದೆ. ಇಲ್ಲಿ ಕೋಟೆ, ಅರಮನೆ, ದೇವಾಲಯಗಳು, ಬೌದ್ಧಸ್ತೂಪಗಳು, ಮಠಗಳು, ವಾಸದ ಮನೆಗಳು ಮುಂತಾದ ಅನೇಕ ವಾಸ್ತು ಅವಶೇಷಗಳಲ್ಲದೆ ಕಲ್ಲು ಮತ್ತು ಲೋಹ ಕಲಾಕೃತಿಗಳೂ ಅನೇಕ ನಾಣ್ಯಗಳೂ ನಿತ್ಯೋಪಯೋಗಿ ಉಪಕರಣಗಳೂ ಆಯುಧಗಳೂ ಅಲಂಕರಣ ಸಾಮಗ್ರಿಗಳೂ ದೊರೆತಿವೆ. ಚಾರ್ಸದದಲ್ಲಿ ಈಚೆಗೆ ನಡೆದಿರುವ ಉತ್ಖನನದಲ್ಲಿ ಪ್ರಚಲಿತಶಕದ ಆರಂಭದ ಶತಮಾನಗಳ ಅವಶೇಷಗಳು ಕಂಡುಬಂದಿವೆ. ಭಾರತದಲ್ಲಿ ಕ್ರೈಸ್ತಧರ್ಮದ ಅಸ್ತಿತ್ವದ ಬಗ್ಗೆ ಮಾಹಿತಿ ನೀಡುವ ಸಂತ ಪೀಟರನ ಪ್ರತಿಮೆ ಇವುಗಳಲ್ಲಿ ಬಹುಮುಖ್ಯವಾದದ್ದು. ಈ ಪ್ರದೇಶದಲ್ಲಿ ನಡೆದಿರುವ ಇತರ ಅನ್ವೇಷಣೆಗಳಿಂದ ಅನೇಕ ಪ್ರಾಗೈತಿಹಾಸಿಕ ನೆಲೆಗಳು, ಬಾಮಿಯಾನ್, ದರುಂತ, ಮುಂತಾದೆಡೆಗಳಲ್ಲಿ ಗುಹಾದೇವಾಲಯಗಳು, ಅನೇಕ ಶಾಸನಗಳು ಮತ್ತು ನಾಣ್ಯಗಳು ಗೋಚರವಾಗಿವೆ. ಶಾಸನಗಳಲ್ಲಿ ಮಾನ್ಸೇರಾ ಶಾಬಾಸ್‌ಗರ್ಹಿಗಳ ಅಶೋಕನ ಶಿಲಾಲಿಪಿಗಳು ಮುಖ್ಯ. ಇತ್ತೀಚೆಗೆ ಕಾಂದಹಾರ್ ಬಳಿ ದೊರಕಿದ ಅದೇ ದೊರೆಯ ಗ್ರೀಕ್ ಮತ್ತು ಆರಮೇಯಿಕ್ ಶಾಸನಗಳೂ ಅನೇಕ ಶಿಲಾವಿಗ್ರಹಗಳ ಮೇಲಿರುವ ಖರೋಷ್ಠಿ ಶಾಸನಗಳೂ ಮುಖ್ಯವಾದವು. ಅನೇಕ ಉತ್ಖನನಗಳಲ್ಲಿ ಭಾರತದ ಅತ್ಯಂತ ಪ್ರಾಚೀನ ನಾಣ್ಯಗಳಾದ ಮುದ್ರಾಂಕಿತ ನಾಣ್ಯಗಳೂ ಗ್ರೀಕರ, ಪಾರ್ಥಿಯನರ, ಶಕರ, ಕುಷಾಣರ, ಸ್ಯಾಸಾನೀಯನರ ಮತ್ತು ಅನಂತರದ ರಾಜವಂಶೀಯರ ನಾಣ್ಯಗಳು ಬೆಳಕಿಗೆ ಬಂದಿವೆ.

ಬೋಧಿಸತ್ತ್ವ, ಸು. 2ನೆಯ ಶತಮಾನ

ಭಾರತದ ಚರಿತ್ರೆಯಲ್ಲಿ ಗಾಂಧಾರಕ್ಕೆ ಪ್ರಾಮುಖ್ಯತೆ ಇದೆ. ಖೈಬರ್, ಬೋಲಾನ್ ಕಣಿವೆಗಳ ಸುತ್ತಲಿನ ಪ್ರದೇಶವನ್ನು ಒಳಗೊಂಡು, ಪಶ್ಚಿಮ ಮತ್ತು ಮಧ್ಯ ಏಷ್ಯದಿಂದ ಭಾರತದ ಕಡೆಯ ಪ್ರವೇಶ ದ್ವಾರದಲ್ಲಿರುವುದೇ ಗಾಂಧಾರದ ಮಹತ್ತ್ವಕ್ಕೆ ಕಾರಣ. ಇದು ಭಾರತೀಯ ಮತ್ತು ಪಶ್ಚಿಮ ಸಂಗಮ ಸ್ಥಾನ. ಇತಿಹಾಸಪೂರ್ವ ಕಾಲದಲ್ಲೇ ಗಾಂಧಾರದಲ್ಲಿ ಇರಾನ್ ಪ್ರಸ್ಥ ಭೂಮಿಯಿಂದ ಹಬ್ಬಿದ ಹಲವು ಸಂಸ್ಕೃತಿ ಗಳು ಪ್ರಚಲಿತವಿದ್ದವು. ಅನಂತರ ಇದರ ಕೆಲವು ಭಾಗಗಳು ಪ್ರಸಿದ್ಧ ಹರಪ್ಪ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿದ್ದವು. ಪ್ರಾಯಶಃ ಆರ್ಯ ಭಾಷಾಭಾಷಿಗಳು ಭಾರತವನ್ನು ಪ್ರವೇಶಿಸಿದ್ದು ಈ ಭಾಗ ದಿಂದಲೇ ಮುಂದೆ ಇತಿಹಾಸ ಯುಗದ ಆರಂಭದಲ್ಲಿ ಇದು ಸುಮಾರು ಎರಡು ಶತಮಾನಗಳ ಕಾಲ ಪರ್ಷಿಯನ್ ಸಾಮ್ರಾಜ್ಯದ ಭಾಗವಾಗಿತ್ತು. ಗ್ರೀಕ್ ಚರಿತ್ರಕಾರ ಹೆಕ್‌ಟೀಯಸ್‌ನ ಒಂದು ಹೇಳಿಕೆಯ ಪ್ರಕಾರ ಪರ್ಷಿಯನ್ ಸಾಮ್ರಾಜ್ಯದ ಇಪ್ಪತ್ತೆರಡು ಪ್ರಾಂತ್ಯಗಳಲ್ಲಿ (ಸತ್ರಪಿ) ಗಾಂಧಾರ ಹದಿನೇಳನೆಯದು. ಬೇಹಿಸ್ತಾನ್ ಶಾಸನವೂ ಹಿರಾಡೊಟಸನ ಉಲ್ಲೇಖಗಳೂ ಇದಕ್ಕೆ ಇಂಬುಗೊಡುತ್ತವೆ. ಗಾಂಧಾರ ಪರ್ಷಿಯನ್ ಸಾಮ್ರಾಜ್ಯದ ಅಧೀನವಾದ್ದು ಪ್ರಾಯಶಃ ಸೈರಸ್ ದೊರೆಯ (ಪ್ರ.ಶ.ಪೂ. 559–530) ಕಾಲದಲ್ಲಿ. ಪರ್ಷಿಯನ್ ಸಾಮ್ರಾಜ್ಯದ ಅಂತ್ಯದ ಅನಂತರ ಪ್ರ.ಶ.ಪೂ. ಸು. 327ರಲ್ಲಿ ಮ್ಯಾಸಿಡಾನ್ ದೊರೆ ಅಲೆಕ್ಸಾಂಡರನ

ಕೈವಶವಾಯಿತು. ಅನಂತರ ಅವನ ದಂಡಾಧಿಕಾರಿ ಸೆಲ್ಯೂಕಸನ ಕೈಸೇರಿ ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದಲ್ಲಿ ಲೀನವಾಯಿತು. ಅಶೋಕಮೌರ್ಯನ ಮರಣಾನಂತರ ಆ ಸಾಮ್ರಾಜ್ಯ ಒಡೆದಾಗ, ಪ್ರ.ಶ.ಪೂ. 208ರಲ್ಲಿ ಸೆಲ್ಯೂಕಸನ ವಂಶೀಯರು ಪುನಃ ಇದನ್ನು ಆಕ್ರಮಿಸಿದರು. ಅಲ್ಲಿಂದ ಪ್ರಚಲಿತಶಕಾರಂಭದ ವರೆಗೆ ಗ್ರೀಕ್–ಬ್ಯಾಕ್ಟ್ರಿಯನರು, ಶಕರು ಇಲ್ಲಿ ಆಳಿದರು. 1ನೆಯ ಶತಮಾನದ ಮೊದಲ ಭಾಗದಲ್ಲಿ ಮಧ್ಯ ಏಷ್ಯದಿಂದ ಬಂದ ಯೂ–ಚಿ ಕುಲದ ಕುಜುಲ ಕಡ್‍ಫೀಸಿಸನ ಕಾಲದಲ್ಲಿ ಕುಶಾಣರ ಅಧೀನವಾಗಿ, ಅನಂತರ ಆ ವಂಶದ ವಿಮ, ಕನಿಷ್ಕ, ವಾಸುದೇವ ಮುಂತಾದವರ ಆಳ್ವಿಕೆಯಲ್ಲಿದ್ದು,



ಗಾಂಧಾರವನ್ನಾಳುತ್ತಿದ್ದ ರಾಜರ ಕೆಲವು ನಾಣ್ಯಗಳು: 1–3 ಪ್ರ.ಶ.ಪೂ. 2ನೆಯ ಶತಮಾನದ ಕೆಲವು ಇಂಡೋಗ್ರೀಕ್ ಅರಸರ ಬೆಳ್ಳಿಯ ನಾಣ್ಯಗಳು. 4. ಕುಷಾಣ ಅರಸ ಕನಿಷ್ಕನ ಚಿನ್ನದ ನಾಣ್ಯ

3ನೆಯ ಶತಮಾನದ ಅಂತ್ಯದ ಹೊತ್ತಿಗೆ ಸ್ಯಾಸಾನೀಯ ಕುಲದ 1ನೆಯ ಆರ್ದಶಿರ ಮತ್ತು 2ನೆಯ ಶಾಪುರನ ಧಾಳಿಗಳಿಂದ ಸ್ಯಾಸಾನೀಯ ಸಾಮ್ರಾಜ್ಯದ ಭಾಗವಾಯಿತು. ಸುಮಾರು 477ರಲ್ಲಿ ಶ್ವೇತ ಹೂಣರು ಇದರ ಮೇಲೆ ಧಾಳಿ ಮಾಡಿದರು. ಹೂಣರನ್ನು ಗುಪ್ತ ವಂಶೀಯರು ಸೋಲಿಸಿದ ಮೇಲೆ ಗಾಂಧಾರ ಸ್ವಲ್ಪಕಾಲ ಗುಪ್ತಸಾಮ್ರಾಜ್ಯದಲ್ಲಿ ಸೇರಿತ್ತು. ಅನಂತರ ಅದು ಕನೌಜಿನ ಹರ್ಷವರ್ಧನನ ಆಸರೆಯಲ್ಲಿತ್ತು. 7ನೆಯ ಶತಮಾನಾಂತ್ಯದಲ್ಲಿ ಅರಬರು ಈ ಪ್ರದೇಶವನ್ನು ಆಕ್ರಮಿಸಿದರು. ಬಹುಶಃ ಈ ಕಾಲದಿಂದ ಗಾಂಧಾರ ಪ್ರಾಂತ್ಯ ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡಿತು. ಮುಂದೆ ಈ ಭಾಗ ಶಾಹಿ ಮುಂತಾದ ಅನೇಕ ಹಿಂದೂರಾಜರು, ದೆಹಲಿಯ ಸುಲ್ತಾನರು, ಆಫ್ಘಾನಿಸ್ತಾನದ ರಾಜವಂಶೀಯರು, ಮೊಗಲರು, ಸಿಕ್ಖರು ಮುಂತಾದವರ ಅಧೀನವಾಗಿ 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಆಫ್ಘಾನಿಸ್ತಾನ ಮತ್ತು ಬ್ರಿಟಿಷ್ ಭಾರತಗಳಲ್ಲಿ ಹಂಚಿಹೋಯಿತು.

ಗಾಂಧಾರ ಕಾಲಕಾಲಕ್ಕೆ ಭಾರತೀಯರ ಇಲ್ಲವೇ ಪರಕೀಯರ ಆಳ್ವಿಕೆಗೆ ಒಳಪಡುತ್ತಿದ್ದುದರಿಂದ ಇಲ್ಲಿಯ ಸಾಂಸ್ಕೃತಿಕ ಸ್ವರೂಪದ ಮೇಲೆ ಪರಿಣಾಮವುಂಟಾಗಿದೆ. ಈ ಪ್ರಾಂತ್ಯ ಹಿಂದೂ ಮತ್ತು ಅನ್ಯ ಸಂಸ್ಕೃತಿಗಳನ್ನು ಬೆಸೆಯುತ್ತಿದ್ದ ಪ್ರದೇಶ. ಆದರೂ ಹೊರದೇಶಗಳ ಸಂಸ್ಕೃತಿಗಳ ಪ್ರಭಾವವೇ ಇಲ್ಲಿ ವಿಶೇಷವಾಗಿತ್ತು. ಗಾಂಧಾರದ ಜನ ವೇದಧರ್ಮ ನಿಷ್ಠರಲ್ಲವೆಂದೂ ಆದ್ದರಿಂದ ಅಲ್ಲಿಗೆ ಹೋದವರು ಪ್ರಾಯಶ್ಚಿತ್ತ ಮಾಡಿಕೊಳ್ಳ ಬೇಕೆಂದೂ ಕೆಲವು ಪ್ರಾಚೀನ ಹಿಂದೂ ಧರ್ಮಗ್ರಂಥಗಳಲ್ಲಿ ವಿಧಿಸಲಾಗಿದೆ. ಈ ಪ್ರದೇಶಗಳಲ್ಲಿ ಹರಡಿದ್ದುದು ಮೊದಲು ಪ್ರಾಚೀನ ಇರಾನೀಯ, ಅನಂತರ ವೇದಕಾಲೀನ ಹಿಂದು, ಅನಂತರ ಬಹುಮಟ್ಟಿಗೆ ಗ್ರೀಕ್–ರೋಮನ್ ಸಂಸ್ಕೃತಿಗಳು. ಪ್ರಚಲಿತ ಶಕದ ಆರಂಭದ ಶತಮಾನಗಳಲ್ಲಿ ಮಹಾಯಾನ ಬೌದ್ಧಧರ್ಮ ಇಲ್ಲಿ ಪ್ರಬಲಿಸಿ ಗ್ರೀಕ್–ರೋಮನ್ ಮತ್ತು ಭಾರತೀಯ ಅಂಶಗಳನ್ನೊಳಗೊಂಡಿದ್ದು ಒಂದು ವಿಶಿಷ್ಟ ಸಂಸ್ಕೃತಿ ಹರಡಿತು. 11–12ನೆಯ ಶತಮಾನಗಳಿಂದ ಇಸ್ಲಾಂ ಇಲ್ಲಿಯ ಪ್ರಧಾನ ಧರ್ಮವಾಗಿ, ಇಸ್ಲಾಮೀ ಸಂಸ್ಕೃತಿ ಇಲ್ಲಿ ಹರಡಿತು.

ಇಸ್ಲಾಮೀ ಸಂಸ್ಕೃತಿ ಹರಡಿದ ಮೇಲೆ ಗಾಂಧಾರ ಪ್ರಾಂತ್ಯದ ಕಲೆಯಲ್ಲಿ ಸತ್ವವೇನೂ ಕಾಣುವುದಿಲ್ಲ. ಇದಕ್ಕೆ ಮುನ್ನ ಶ್ವೇತಹೂಣರ ಅಥವಾ ಅರಬ್ಬರ ಆಕ್ರಮಣದಿಂದಾಗಿ ಈ ಪ್ರದೇಶ ಆರ್ಥಿಕ ಹಾಗೂ ಸಾಂಸ್ಕೃತಿವಾಗಿ ಜರ್ಝರಿತವಾದ್ದರಿಂದ ಆ ಕಾಲದ ಕೃತಿಗಳೂ ಕಲೈತಿಹಾಸಿಕ ದೃಷ್ಟಿಯಿಂದ ಬರಡೇ. ಆದರೆ ಅದಕ್ಕೂ ಹಿಂದೆ, ಎಂದರೆ ಪ್ರ.ಶ. 6ನೆಯ ಶತಮಾನಕ್ಕೆ ಹಿಂದೆ, ಇಲ್ಲಿ ಬೆಳೆದ ಕಲಾ ಸಂಪ್ರದಾಯ ವೈಭವಯುತವಾಗಿತ್ತು.

ಗಾಂಧಾರದ ಅತ್ಯಂತ ಪ್ರಾಚೀನ ಗಮನಾರ್ಹ ವಾಸ್ತುಕೃತಿಯೆಂದರೆ ಪ್ರ.ಶ.ಪೂ. 3ನೆಯ ಸಹಸ್ರಮಾನಕ್ಕೆ ಸೇರಿದ ಮಂಡಿಗಕ್‍ನ ಅರಮನೆ. ಇತ್ತೀಚೆಗೆ ಉತ್ಖನನದಲ್ಲಿ ಬೆಳಕಿಗೆ ಬಂದಿರುವ ಇದರ ಅವಶೇಷಗಳಲ್ಲಿ, ಆ ಕಾಲದಲ್ಲಾಗಲೇ ಇಲ್ಲಿ ಹರಡಿದ್ದ ಸುಮೇರಿಯ ವಾಸ್ತುಸಂಪ್ರದಾಯದ ಕುರುಹುಗಳು ಎದ್ದು ಕಾಣುತ್ತವೆ. ಸುಮಾರು ಚೌಕಾಕೃತಿಯಲ್ಲಿರುವ ಈ ಕಟ್ಟಡದ ಹೊರಗೋಡೆಗಳಲ್ಲಿ ಮೆಸಪೊಟೇಮಿಯದ ಸಮಕಾಲೀನ ದೇವಾಲಯಗಳ ರೀತಿಯ ಅರೆಗಂಬಗಳ ಅಲಂಕರಣ ಇದೆ. ಅಲ್ಲದೆ ಈ ಕಾಲದ ಚಿತ್ರಿತ ಮಡಕೆಗಳು, ಸುಟ್ಟ ಮಣ್ಣಿನ ಬೊಂಬೆಗಳು ಮತ್ತು ಇತರ ಶಿಲ್ಪಗಳು ಮೆಸಪೊಟೇಮಿಯ ಮತ್ತು ಹರಪ್ಪ ಸಂಸ್ಕೃತಿಯ ಸಂಪ್ರದಾಯದವುಗಳಾಗಿವೆ. ಅಶೋಕನ ಕಾಲದಲ್ಲಿ ಬೌದ್ಧಧರ್ಮ ಇಲ್ಲಿ ಹರಡಿದಾಗಿನಿಂದ ಶಿಲೆಯ ಬಳಿಯ ಧರ್ಮರಾಜಿಕಾ ಎಂಬ ಬೌದ್ಧ ಸ್ತೂಪವನ್ನು ಅನಂತರದ ಕಾಲದಲ್ಲಿ ಬಹುವಾಗಿ ನವೀಕರಿಸಲಾಗಿದ್ದರೂ, ಅದರ ಮೂಲಭಾಗ ಮೌರ್ಯಕಾಲದ್ದಾಗಿದೆ. ಧರ್ಮರಾಜಿಕಾ ಸ್ತೂಪ ಒಂದು ವೃತ್ತಾಕಾರದ ಕಟ್ಟಡ. ಇದರಲ್ಲಿ ತಳದಲ್ಲಿ ವೃತ್ತಾಕಾರದ ಜಗತಿಯೂ ಅದರ ಮೇಲೆ ಅರ್ಧಗೋಳಾಕಾರದ ಅಂಡವೂ ಇದ್ದವು. ಜಗತಿಗೆ ಹತ್ತಲು ನಾಲ್ಕು ಮುಖ್ಯದಿಕ್ಕುಗಳಲ್ಲಿ ಮೆಟ್ಟಿಲುಗಳಿದ್ದವು. ಸ್ತೂಪದ ಒಳಭಾಗವನ್ನು ಒರಟು ಕಲ್ಲುಗಳನ್ನು ಪೇರಿಸಿ ಕಟ್ಟಲಾಗಿದೆ. ಇದರ ಸುತ್ತ ಸಕೇಂದ್ರದ ಇನ್ನೊಂದು ವೃತ್ತಾಕಾರದ ಕಲ್ಲು ಗೋಡೆಯಿದೆ; ಒಳಹೊರಗೋಡೆಗಳನ್ನು ಅನೇಕ ಅಡ್ಡಗೋಡೆಗಳಿಂದ ಸೇರಿಸಲಾಗಿದೆ. ಈ ಭಾಗ ಕುಶಾಣರ ಕಾಲದ್ದಿರಬಹುದೆಂದು ಊಹೆ. ಸ್ತೂಪದ ಹೊರಮೈಯಲ್ಲಿ ಸುಣ್ಣಕಲ್ಲಿನ ಸೈಜುಗಲ್ಲುಗಳಿದ್ದು ಅವುಗಳ ಮಧ್ಯೆ ದೇವಕೋಷ್ಠಗಳೂ ಇವೆ. ಈಗ ಇರುವ ಜಗತಿ ಪ್ರಾಯಶಃ ಶಕ ಅರಸರ (ಪ್ರ.ಶ.ಪೂ. 1ನೆಯ ಶತಮಾನ) ಕಾಲದ್ದು.



ಶ್ರಾವಸ್ತಿಯ ಪವಾಡ, 3ನೆಯ ಶತಮಾನ

ಸ್ತೂಪದ ಸುತ್ತಲೂ ಪ್ರದಕ್ಷಿಣೆ ಮಾಡಲು ಇದರಲ್ಲಿ ಪ್ರದಕ್ಷಿಣಾಪಥವಿದೆ. ಗಾಂಧಾರದಲ್ಲಿ ಈ ಸ್ತೂಪವೇ ಬಹು ಪ್ರಸಿದ್ಧವಾದ್ದು. ಇಲ್ಲಿ ಕಂಡುಬರುವ ವಾಸ್ತುರೂಪ ಎಲ್ಲೆಡೆಯೂ ಹರಡಿ ಗಾಂಧಾರದ ಸ್ತೂಪ ಶೈಲಿಯ ಬೆಳವಣಿಗೆಗೆ ಕಾರಣವಾಯಿತು. ತಕ್ಷಶಿಲೆಯ ಸಿರ್ಸುಖ್ ಅವಶೇಷಗಳ ಬಳಿ ಇರುವ ಶಿರೋಧಾನ ಸ್ತೂಪ ಸುಮಾರು ಇದೇ ಮಾದರಿಯಲ್ಲಿ, ಪೂರ್ಣ ಭಾರತೀಯ ಸ್ತೂಪ ವಾಸ್ತುವಿನೊಡನೆ ಕೊರಿಂಥಿಯನ್ ಕಂಬ ಮುಂತಾದ ಗ್ರೀಕ್–ರೋಮನ್ ಅಂಶಗಳನ್ನೂ ಅಳವಡಿಸಿಕೊಂಡಿದೆ. ಈ ಪ್ರದೇಶದ ಸ್ತೂಪವಾಸ್ತು ಕುಶಾಣರ ಕಾಲದಲ್ಲಿ ಒಂದು ವಿಶಿಷ್ಟ ರೂಪ ತಳೆಯಿತು. ಇವುಗಳಲ್ಲಿ ಚೌಕದ ಜಗತಿ, ಮೇಲೆ ಅನೇಕ ಸ್ತರಗಳ ಸ್ತೂಪಪೀಠ, ಅದರ ಛತ್ರಾವಳಿ ಇರುತ್ತವೆ. ಅಲ್ಲದೆ ಸ್ತೂಪದ ಸುತ್ತಲೂ ದೇವಕೋಷ್ಠಗಳ ಅಥವಾ ಸುದ್ದೆಯ ಉಬ್ಬುಶಿಲೆಗಳ ಅಲಂಕರಣ ಸಾಮಾನ್ಯ. ಈ ರೀತಿಯ ಸ್ತೂಪಗಳು ಮೊಹ್ರಾಮೊರಡು, ಪಿಪ್ಪಲ, ಜೌಲಿಯನ್ ಮುಂತಾದೆಡೆಗಳಲ್ಲಿ ಕಂಡುಬಂದಿವೆ. ಅಲ್ಲದೆ ಈ ಕಾಲದ ಸ್ತೂಪಗಳ ಸುತ್ತಲೂ ಶ್ರದ್ಧಾನ್ವಿತರು ಆಗಿಂದಾಗ್ಗೆ ಸೇರಿಸಿದ ಅನೇಕ ಸಣ್ಣ ಸ್ತೂಪಗಳೂ ಬುದ್ಧಗೃಹಗಳೂ ಈ ಪ್ರಾಂತ್ಯದ ಸ್ತೂಪ ಕಟ್ಟಡಗಳಿಗೆ ಬೋರುಗಲ್ಲುಗಳನ್ನೇ ಸಾಮಾನ್ಯವಾಗಿ ಬಳಸುತ್ತಿದ್ದರು. ಹೊರಮೈ ಮಾತ್ರ ಕಡೆದ ಸೈಜುಗಲ್ಲುಗಳು ಮತ್ತು ಚಪ್ಪಡಿಗಳಿಂದ ಕೂಡಿರುತ್ತದೆ. ಒಮ್ಮೊಮ್ಮೆ ಇಟ್ಟಿಗೆಯನ್ನು ಬಳಸಿರುವುದೂ ಉಂಟು.

ಈ ಸ್ತೂಪಗಳ ಸಮೀಪದಲ್ಲೇ ಬೌದ್ಧ ಭಿಕ್ಷುಗಳಿಗಾಗಿ ವಿಹಾರಗಳು ಇದ್ದು ಇವುಗಳಲ್ಲಿ ಸಾಮಾನ್ಯವಾಗಿ ಚೌಕ ಅಂಗಳದ ಸುತ್ತ ಅನೇಕ ಕೋಣೆಗಳನ್ನು ಅಳವಡಿಸಲಾಗಿರುತ್ತದೆ. ಅನೇಕ ಗೋಡೆಗಳ ಮೇಲೆ ಬೌದ್ಧ ಪ್ರತಿಮೆಗಳು ಮತ್ತು ಚಿಹ್ನೆಗಳನ್ನು ಸುದ್ದೆಯಲ್ಲಿ

ರೂಪಿಸಿ ಇವನ್ನು ಬಣ್ಣದಿಂದ ಅಲಂಕರಿಸುತ್ತಿದ್ದರು. ಇದು ಗಾಂಧಾರ ಶೈಲಿಯ ಸಂಘಾರಾಮಗಳ ವೈಶಿಷ್ಟ್ಯ.

ಬೌದ್ಧವಾಸ್ತುವಲ್ಲದೆ ಇತರ ರೀತಿಯ ಕಟ್ಟಡಗಳೂ ಈ ಪ್ರದೇಶದಲ್ಲಿವೆ. ತಕ್ಷಶಿಲೆಯ ಬಳಿಯ ಜಂಡಿಯಾಲ್‍ನಲ್ಲಿರುವ ದೇವಾಲಯ ಅವುಗಳ ಪೈಕಿ ಮುಖ್ಯವಾದ್ದು. ಪ್ರ.ಶ.ಪೂ. 2ನೆಯ ಶತಮಾನದ್ದಿರಬಹುದಾದ ಈ ಕಟ್ಟಡ, ಗ್ರೀಕ್ ವಾಸ್ತುರೀತಿಯಲ್ಲಿದೆ. ಇದರ ವಿಸ್ತಾರ 47.40X24 ಚ.ಮೀ. ಮಾತ್ರ. ಆದರೂ ಗ್ರೀಕರ ದೇವಸ್ಥಾನಗಳಲ್ಲಿರುವಂತೆ ಒಂದು ಗರ್ಭಗೃಹ, ಮುಂಭಾಗದಲ್ಲಿ ಎರಡು ಕಂಬಗಳಿರುವ ಒಂದು ಮುಮ್ಮಂಟಪ, ಹಿಂಭಾಗದಲ್ಲೊಂದು ಸಣ್ಣ ಆವರಣ ಮತ್ತು ಸುತ್ತಲೂ ಕಂಬಗಳ ಮೇಲೆ ಎತ್ತಿರುವ ಪಡಸಾಲೆ ಇವೆ. ಇಲ್ಲಿ ಉಪಯೋಗಿಸಿರುವ ಕಂಬಗಳು ಐಯೋನಿಯನ್ ರೀತಿಯವು. ಕಟ್ಟಡ ಗ್ರೀಕ್ ಮಾದರಿಯಲ್ಲಿದ್ದರೂ ಇದು ಇರಾನಿನ ಝೋರೋಆಸ್ಟ್ರಿಯನ್ ಪಂಥದ ಅಗ್ನಿ ದೇವಾಲಯವಿರಬೇಕೆಂದು ವಿದ್ವಾಂಸರ ಊಹೆ.

ಗಾಂಧಾರ ಕಲಾ ಸಂಪ್ರದಾಯದ ಪರಮೋಚ್ಚಸಾಧನೆಯೆಂದರೆ ಶಿಲ್ಪಗಳು. ಈ ಶೈಲಿಯ ಶಿಲಾಶಿಲ್ಪಗಳು ತಕ್ಷಶಿಲೆ, ಹಡ್ಡ, ಚಾರ್ಸದ ಮುಂತಾದೆಡೆಗಳಲ್ಲಿ ಬಹುಸಂಖ್ಯೆಯಲ್ಲಿ ದೊರಕಿವೆ. ಆ ಪ್ರದೇಶದ ಸಾಂಸ್ಕೃತಿಕ ಸಂಕರವೇ ಆ ಶೈಲಿಯ ರೂಪಣೆಯಲ್ಲಿ ಮುಖ್ಯ ಪಾತ್ರ ವಹಿಸಿದೆ. ಇದುವರೆಗೆ ದೊರಕಿರುವ ಶಿಲ್ಪಗಳೇ ಬಹುಮಟ್ಟಿಗೆ ಬೌದ್ಧ ಶಿಲ್ಪಗಳು. ಇವುಗಳಲ್ಲಿ ಹಲವು ಬುದ್ಧ ಮತ್ತು ಬೋಧಿಸತ್ತ್ವ ವಿಗ್ರಹಗಳಿವೆ. ಸ್ತೂಪಗಳಲ್ಲಿ ಕಡೆದ ಅರೆ ಉಬ್ಬುಶಿಲ್ಪವಿರುವ ಚಪ್ಪಡಿಗಳೂ ವಿಶೇಷವಾಗಿವೆ. ಈ ಶಿಲ್ಪಗಳ ವಸ್ತು ಬೌದ್ಧಧರ್ಮವಾದರೂ ಇವುಗಳ ರೂಪಣೆಯ ರೀತಿ ಗ್ರೀಕ್ ರೋಮನ್. ಇದರಲ್ಲಿ ಕೆಲವು ಇರಾನೀಯ ಅಂಶಗಳೂ ಬೆರೆತುಕೊಂಡಿವೆ.

ಗಾಂಧಾರದ ಶಿಲಾ ಶಿಲ್ಪಗಳೆಲ್ಲ ಸಾಮಾನ್ಯವಾಗಿ ಒಂದು ರೀತಿಯ ಕಂದು ಬಣ್ಣದ ಪದರಶಿಲೆಯಲ್ಲಿ ಮಾಡಿದವಾಗಿವೆ. ಬುದ್ಧನನ್ನು ಭಾರತೀಯ ಬೌದ್ಧ ಸಂಪ್ರದಾಯದ ನಂಬಿಕೆಗಳಂತೆ ಕಾವಿ ಧರಿಸಿದ ಯತಿಯೊಬ್ಬ ಅಭಯ ನೀಡುತ್ತಿರುವಂತೆಯೋ ಧ್ಯಾನಾಸಕ್ತನಾಗಿರುವಂತೆಯೋ ನಿರೂಪಿಸಿದ್ದರೂ ಬುದ್ಧನ ಮುಖಭಾವ, ದೈಹಿಕ ಪ್ರಮಾಣಗಳು ಮುಂತಾದವುಗಳಲ್ಲಿ ಇವು ಗ್ರೀಕ್, ದೇವತೆಗಳ ಶಿಲ್ಪಗಳನ್ನು ಹೋಲುತ್ತವೆ. ಇಲ್ಲಿ ಭಾರತೀಯ ಆದರ್ಶವಾದ ಅಂತಃಶಕ್ತಿಯ ನಿರೂಪಣೆಗಿಂತಲೂ ಬಾಹ್ಯ ಸೌಂದರ್ಯಕ್ಕೇ ಹೆಚ್ಚು ಗಮನ ಕೊಡಲಾಗಿದೆ. ಕೆಲವು ಬುದ್ಧ ವಿಗ್ರಹಗಳಲ್ಲಿ ಮೀಸೆಯನ್ನು ತೋರಿಸಿರುವುದೂ ಉಂಟು. ತಲೆಗೂದಲು ಗುಂಗುರು ಗುಂಗುರಾಗಿ ಮೇಲೇರಿರುತ್ತದೆ. ಧರಿಸಿರುವ ಉಡುಪು ಗ್ರೀಕರ ಟೋಗ ಮಾದರಿಯದು. ಅಲ್ಲದೆ ಭಾರತೀಯ ಸಂಪ್ರದಾಯಗಳಲ್ಲಿರುವಂತೆ ತೆಳುವಾಗಿರದೆ ಅಂಗಗಳು ಪೂರ್ತ ಮುಚ್ಚುವಂತೆ ದಪ್ಪ ಬಟ್ಟೆಯಲ್ಲಿ ಮಾಡಿದಂತಿದ್ದು ಹಲವು ನೆರಿಗೆಗಳನ್ನು ರೂಪಿಸಲಾಗಿರುತ್ತದೆ. ಬುದ್ಧನ ಜನ್ಮ, ನಿಷ್ಕ್ರಮಣ, ಶ್ರಾವಸ್ತಿಯ ಪವಾಡ, ಜೇತವನದ ಆತಿಥ್ಯ, ಸಾರನಾಥದಲ್ಲಿ ಧರ್ಮಪ್ರಸಾರ ಮುಂತಾದವೂ ಕುರು, ಶಿಬಿ, ಮಹಾಕಪಿ ಮುಂತಾದ ಭಾರತೀಯ ಬೌದ್ಧ ಕಥೆಗಳೂ ಉಬ್ಬು ಶಿಲ್ಪಗಳಲ್ಲಿ ಕಂಡುಬಂದರೂ ಈ ನಿರೂಪಣೆಯಲ್ಲಿ ಬರುವ ಪಾತ್ರಧಾರಿಗಳೆಲ್ಲ ಗ್ರೀಕರಂತಿವೆ. ಇವುಗಳಲ್ಲಿಯೂ ದೇಹಸೌಂದರ್ಯ, ಮಾಟ, ನಿಲುವು ಎಲ್ಲವೂ ಗ್ರೀಕ್ ಸಂಪ್ರದಾಯದ್ದು. ಅಲ್ಲದೆ ದಪ್ಪ ಹಾರವನ್ನು ಹೊತ್ತಿರುವ ಬೆತ್ತಲೆ ಕುಬ್ಜರ ಚಿತ್ರಗಳೂ ಡೋರಿಕ್, ಐಯೋನಿಯನ್ ಮತ್ತು ಕೊರಿಂಥಿಯನ್ ಮಾದರಿಯ ಅರೆಗಂಬಗಳೂ ಇರುತ್ತವೆ. ಕೆಲವೊಮ್ಮೆ ಇಂದ್ರ, ಬ್ರಹ್ಮ ಮುಂತಾದ ಉಪದೇವತೆಗಳ ಅಥವಾ ಮಾಯಾದೇವಿ ಯಶೋಧರಾ ಮುಂತಾದ ವ್ಯಕ್ತಿಗಳ ನಿರೂಪಣೆ ಗ್ರೀಕ್ ದೇವತೆಗಳ ಪ್ರತಿಕೃತಿಗಳಂತೆ ಕಾಣುತ್ತವೆ. ಹಲವೊಮ್ಮೆ ಸುಂದರ ಸ್ತ್ರೀಯರು, ಮದ್ಯಪಾನಾಸಕ್ತರು ಮುಂತಾದವರ ನಿರೂಪಣೆಗಳು ಪೂರ್ಣ ಗ್ರೀಕ್ ಮಾದರಿಯಲ್ಲಿ ಬರುವುದೂ ಉಂಟು. ಈ ಶಿಲ್ಪಗಳಲ್ಲಿ ಅಲ್ಲಲ್ಲಿ ಕಂಡುಬರುವ ನಾನೀ ದೇವತೆ, ರೆಕ್ಕೆಯುಳ್ಳ ಸಿಂಹಗಳು, ನಿತಂಬಕ್ಕೆ ನಿತಂಬವನ್ನು ಅನಿಸಿ ಕುಳಿತ ಸಿಂಹಗಳು ಅಥವಾ ಗೂಳಿಗಳು ಇರುವ ಬೋದಿಗೆಗಳನ್ನೊಳಗೊಂಡ ಕಂಬಗಳು, ನರಶಿರಗಳುಳ್ಳ ಅನೇಕ ವಿಚಿತ್ರ ಪ್ರಾಣಿಗಳು ಇರಾನೀಯ ಶಿಲ್ಪಶೈಲಿಯಲ್ಲಿ ರೂಪಿಸಲಾದವು. ಇದೇ ರೀತಿಯಲ್ಲಿ ಸುದ್ದಿಯಲ್ಲಿ ಮಾಡಿದ ಅನೇಕ ಶಿಲ್ಪಗಳೂ ದೊರಕಿವೆ. ಇವು ಪ್ರಾಯಶಃ ಶಿಲಾಶಿಲ್ಪಗಳ ಅನಂತರದ ಕಾಲದವೆಂದು ಕೆಲವು ವಿದ್ವಾಂಸರ ಊಹೆ.

ಈ ಭಾರತೀಯ ಗ್ರೀಕ್ ರೋಮನ್ ಇರಾನಿ ಸಂಕರ ಶಿಲ್ಪಶೈಲಿ ಸು. 2ನೆಯ ಶತಮಾನದಿಂದ 6ನೆಯ ಶತಮಾನದವರೆಗೆ ಪ್ರಚಲಿತವಾಗಿತ್ತೆಂಬುದು ಅನೇಕ ಮಂದಿ ವಿದ್ವಾಂಸರ ಮತ. ಆದರೆ ಈ ಗಾಂಧಾರ ಶೈಲಿಯ ಕಾಲ ನಿಷ್ಕರ್ಷೆ ಅಷ್ಟೇನೂ ನಿಖರವಾಗಿಲ್ಲ. ಕೆಲವು ವಿದ್ವಾಂಸರ ಪ್ರಕಾರ ಇದು ಪ್ರ.ಶ.ಪೂ. 2ನೆಯ ಶತಮಾನದಲ್ಲೇ ಹುಟ್ಟಿ 7ನೆಯ ಶತಮಾನದ ವರೆಗೂ ಮುಂದುವರಿದಿತ್ತು. ಇನ್ನು ಕೆಲವು ವಿದ್ವಾಂಸರ ಪ್ರಕಾರ ಇದರ ಕಾಲ 1ನೆಯ ಶತಮಾನದಿಂದ 3ನೆಯ ಶತಮಾನದ ವರೆಗೆ ಮಾತ್ರ. ಈ ಶೈಲಿಯ ಸಹಸ್ರಾರು ಶಿಲ್ಪಗಳು ದೊರಕಿದ್ದರೂ ಕೇವಲ ನಾಲ್ಕು ಶಿಲ್ಪಗಳ ಮೇಲೆ ಮಾತ್ರ ತೇದಿಯಿರುವ ಶಾಸನಗಳಿವೆ. ಆದರೆ ಈ ತೇದಿಗಳ ಬಗ್ಗೆಯೇ ಭಿನ್ನಾಭಿಪ್ರಾಯಗಳಿರುವುದು ಸಮಸ್ಯೆಗೆ ಕಾರಣವಾಗಿದೆ. ಗಾಂಧಾರ ಶೈಲಿ ಒಂದು ಪ್ರದೇಶದ ಹೆಸರನ್ನು ಹೊತ್ತಿದ್ದರೂ ಅದು ಆ ಪ್ರದೇಶಕ್ಕಷ್ಟೇ ಸೀಮಿತವಾಗಿರಲಿಲ್ಲ. ಅದರ ಮುಖ್ಯ ಕೇಂದ್ರ ಮಾತ್ರ ಗಾಂಧಾರದಲ್ಲಿತ್ತು. ಈ ಶೈಲಿಯ ಶಾಖೆಗಳು ಗಾಂಧಾರದ ಉತ್ತರದ ಬ್ಯಾಕ್ಟ್ರಿಯದಲ್ಲೂ ಅಲ್ಲಿಂದಲೂ ಮುಂದೆ ಮಧ್ಯ ಏಷ್ಯದಲ್ಲೂ ಭಾರತದಲ್ಲೂ ಕಾಶ್ಮೀರದಲ್ಲೂ ಕಂಡುಬಂದಿದೆ. ಅಲ್ಲದೆ ಇದರ ಪ್ರಭಾವವನ್ನು ಭಾರತದ ಮಥುರಾ ಮತ್ತು ಅಮರಾವತಿ ಕಲಾಶೈಲಿಗಳಲ್ಲೂ ಟಿಬೆಟ್ ಚೀನಗಳ ಬೌದ್ಧ ಕಲೆಯಲ್ಲೂ ಕಾಣಬಹುದಾಗಿದೆ.

ಗಾಂಧಾರ ಶೈಲಿಗೆ ಸೇರಿದ ಅನೇಕ ಲೋಹ ಮತ್ತು ದಂತಕೃತಿಗಳು ಬೆಗ್ರಾಮ್ ಮುಂತಾದೆಡೆಗಳಲ್ಲಿ ದೊರೆತಿವೆ. (ಎಸ್.ಎನ್.)

**ಗಾಂಧಾರಿ :** ಮಹಾಭಾರತ ಮಹಾಕಾವ್ಯದ ಪ್ರಮುಖರಲ್ಲೊಬ್ಬಳು. ಧೃತರಾಷ್ಟ್ರನ ಪತ್ನಿ. ದುರ್ಯೋಧನಾದಿಗಳ ತಾಯಿ. ಮಗಳು ದುಶ್ಶಲೆ. ನೂರು ಜನ ಶೂರರ ತಾಯಿಯಾದರೂ ಅವರ ದುಷ್ಟತನದಿಂದ ದುಃಖಶತಜನನಿ ಎಂಬ ಹೆಸರಿಗೆ ಪಕ್ಕಾದವಳು. ವ್ಯಾಸರ ದಿವ್ಯ ಕೂರ್ಚಿಕೆ ಇವಳನ್ನು ಉಜ್ವಲ ವರ್ಣಗಳಲ್ಲಿ ಚಿತ್ರಿಸಿವೆ. ಧರ್ಮದೇವತೆಯೆಂದು ಪ್ರಾಜ್ಞರು ಈಕೆಯನ್ನು ಕೈವಾರಿಸಿರುವರು. ಭಾರತದಲ್ಲಿ ತಮ್ಮ ಪಾತಿವ್ರತ್ಯದಿಂದ ತ್ಯಾಗತಪಗಳಿಂದ ಆದರ್ಶಪ್ರಾಯರಾಗಿರುವ ಸತೀಶಿರೋಮಣಿಯರಲ್ಲೀಕೆ ಅಪೂರ್ವಳು.

ಗಾಂಧಾರಿ ಗಾಂಧಾರ ದೇಶದ ಸುಬಲ ರಾಜನ ಕುಮಾರಿ. ಪರಮಚತುರನಾದ ಶಕುನಿ ಇವಳ ಸೋದರ. ಬಾಲ್ಯದಲ್ಲಿಯೇ ಈಶ್ವರನನ್ನು ಕುರಿತು ತೀವ್ರವಾಗಿ ತಪಸ್ಸುಮಾಡಿ ನೂರು ಜನ ಗಂಡುಮಕ್ಕಳಾಗುವಂತೆ ವರ ಪಡೆದಳು. ಇವಳ ಇಂಥ ಪುಣ್ಯವನ್ನೂ ಸದ್ಗುಣಗಳನ್ನೂ ಕೇಳಿ ತಿಳಿದ ಕುರುಕುಲಪಿತಾಮಹ ಗಾಂಗೇಯ ಧೃತರಾಷ್ಟ್ರನಿಗಾಗಿ ಈಕೆಯನ್ನು ಸುಬಲ ರಾಜನಲ್ಲಿ ಯಾಚಿಸಿದ. ಈಕೆಯ ಪುಣ್ಯದಿಂದಲಾದರೂ ಕುರುವಂಶದಲ್ಲಿ ನಿಯೋಗ ಪದ್ಧತಿ ತಪ್ಪಿ ಔರಸ ಸಂತಾನ ಸಂಪತ್ತು ಅಭಿವೃದ್ಧಿಗೊಳ್ಳಲಿ ಎಂಬುದು ಆ ಮಹಾಪ್ರಾಜ್ಞನ ಆಶಯ.

ಸುಬಲನಿಗಾದರೂ ಪ್ರಸಿದ್ಧವಾದ ಕುರುವಂಶದೊಡನೆ ಸಂಬಂಧ ಬೆಳೆಸುವ ಆಸೆಯಾದರೂ ಧೃತರಾಷ್ಟ್ರ ಹುಟ್ಟುಕುರುಡನೆಂಬ ಹಿಂಜರಿಕೆ ಇತ್ತು. ಹೇಗಾದರೂ ಆತನ ವಂಶವಿಭವ ಸಂಪತ್ತು ಅಧಿಕಾರಗಳಿಗೆ ಮನಸೋತು ಆ ಮೂಲಕ ತನ್ನ ಗೌರವ ಘನತೆಗಳು ಬೆಳೆಯುವವೆಂದು ಆಶಿಸಿ ಆ ಸಂಬಂಧ ಬೆಳೆಸಲು ಒಪ್ಪಿದ. ತಂದೆ ತನ್ನನ್ನು ಒಬ್ಬ ಜನ್ಮಾಂಧ ರಾಜಕುವರನಿಗೆ ಕೊಡಲಿರುವುದನ್ನು ತಿಳಿದರೂ ಗಾಂಧಾರಿ ಅದರ ವಿರುದ್ಧ ಒಂದು ಮಾತನ್ನೂ ಆಡಲಿಲ್ಲ. ಅದಕ್ಕೆ ಪ್ರತಿಯಾಗಿ ಮಂಟಪಕ್ಕೆ ಬರುವ ಮುನ್ನ ದಪ್ಪನಾದೊಂದು ಬಟ್ಟೆಯಿಂದ ತನ್ನ ಕಣ್ಣುಗಳನ್ನು ಕಟ್ಟಿಕೊಂಡು ತಾನೂ ನಯನವಿಹೀನೆಯಾದಳು. ಇದನ್ನು ಕಂಡ ವ್ಯಾಸ ಮಹರ್ಷಿಗಳು ಈಕೆಯನ್ನು ಪಾತಿವ್ರತ್ಯಪರಾಯಣಳೆಂದರು. ಇವಳ ಲೋಕೋತ್ತರವಾದ ಪತಿಭಕ್ತಿ ತ್ಯಾಗಶಕ್ತಿಗಳನ್ನು ಕಂಡು ಹಸ್ತಿನಾವತಿಯೇ ಕೈಮುಗಿಯಿತು.

ಈಕೆಗೆ ತನ್ನ ಮಕ್ಕಳಲ್ಲಿ ಹೇಗೊ ಹಾಗೆಯೇ ಪಾಂಡುಪುತ್ರರಲ್ಲೂ ಅಕ್ಕರೆ. ದ್ರೌಪದಿಯ ಸ್ವಯಂವರಾನಂತರ ಆಸ್ಥೆಯಿಂದ ಕೃಷ್ಣೆಯನ್ನು ಮನೆ ತುಂಬಿಕೊಂಡು ಉಪಚರಿಸಿದಳು. ಸುಂದರಿಯಾದ ಹೊಸ ಸೊಸೆಯನ್ನು ಅಧರ್ಮಿಗಳಾದ ತನ್ನ ಮಕ್ಕಳಿಂದ ದೂರವಿಟ್ಟು ಕಾಪಾಡುವ ಜಾಗ್ರತೆಯನ್ನೂ ತೋರಿದಳು.

ಕ್ರಮೇಣ ತನ್ನ ಮಕ್ಕಳಿಗೆ ಪಾಂಡವರಲ್ಲಿ ಬೆಳೆಯುತ್ತಿದ್ದ ಹಗೆಯನ್ನು ಗುರುತಿಸಿ ಅದನ್ನು ತಡೆಯಲು ಪ್ರಯತ್ನಿಸಿ ವಿಫಲಳಾದಾಗ ತುಂಬ ಕೊರಗಿದಳು.

ಸಂಧಾನಕ್ಕಾಗಿ ಆಗಮಿಸಿದ ಕೃಷ್ಣ ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡಬೇಕೆಂದು ಕೇಳಿದಾಗ, ಕರ್ಣ ದುಶ್ಶಾಸನ ಶಕುನಿ ಮುಂತಾದ ಸುಯೋಧನನ ಪಕ್ಷದವರಿಗೂ ಭೀಷ್ಮ ದ್ರೋಣ ವಿದುರ ಮುಂತಾದ ನ್ಯಾಯನಿಷ್ಠರಾದ ವೃದ್ಧರಿಗೂ ಬಿರುಸಿನ ಚರ್ಚೆಯಾಗುತ್ತದಷ್ಟೆ. ಪಾಂಡವರು ಅರ್ಧರಾಜ್ಯಕ್ಕೆ ಹಕ್ಕುದಾರರೆಂದು ಹಿರಿಯರೆಲ್ಲರ ವಾದವನ್ನು ಗಾಂಧಾರಿ ಅನುಮೋದಿಸಿ ಧರ್ಮಜ್ಞಾ,ದೂರದರ್ಶಿನಿ ಎಂಬ ವ್ಯಾಸಸ್ತುತಿಗೆ ತಕ್ಕವಳಾಗುತ್ತಾಳೆ. 'ಇದು ಪಾಂಡುವಿನ ರಾಜ್ಯ. (ಧೃತರಾಷ್ಟ್ರ ಹುಟ್ಟುಕುರುಡನಾದುದರಿಂದ ಅವನಿಗೆ ರಾಜ್ಯದ ಹಕ್ಕೇ ಹುಟ್ಟಲಿಲ್ಲ.) ಅವನ ಮಕ್ಕಳಾದ ಪಾಂಡವರೇ ಇದಕ್ಕೆಲ್ಲ ನಿಜವಾದ ವಾರಸುದಾರರು. ಆದ್ದರಿಂದ ಅರ್ಧ ರಾಜ್ಯವನ್ನಲ್ಲ, ಸಂಪೂರ್ಣ ರಾಜ್ಯವನ್ನೂ ದುರ್ಯೋಧನ ಧರ್ಮಪುತ್ರನಿಗೆ ಒಪ್ಪಿಸತಕ್ಕದ್ದು' ಎಂಬುದು ಈಕೆಯ ಅಭಿಮತ.

ಗಾಂಧಾರಿ ಎಂಥ ದೀರ್ಘದರ್ಶಿನಿ ಮತ್ತು ಮಹಾಪ್ರಜ್ಞಳು ಎಂಬುದು ಆಕೆ ಮಗನಿಗೆ ಮಾಡುವ ಉಪದೇಶದಿಂದ ಚೆನ್ನಾಗಿ ತಿಳಿಯುತ್ತದೆ. ಅರ್ಥ ಗಾಂಭೀರ್ಯದಿಂದ ಉನ್ನತ ಭಾವಗಳಿಂದ ಕೂಡಿದ ಆಕೆಯ ಉಕ್ತಿಗಳು ಆಕೆಯ ಅಂತರ್ದೃಷ್ಟಿಯನ್ನು ವ್ಯಕ್ತಪಡಿಸುತ್ತವೆ. ಹಠಮಾರಿಯಾದ ಮಗನಿಗೆ ಈಕೆ ಹೇಳುವ ಬುದ್ಧಿವಾದವಿದು: 'ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಟ್ಟು ನೀನು ಹೋರಾಟಕ್ಕೆ ನಿಂತೆಯಾದರೆ ಭೀಷ್ಮ ದ್ರೋಣ

ಕೃಪ ಕರ್ಣ ಭೀಮಸೇನ ಧನಂಜಯ ಧೃಷ್ಟದ್ಯುಮ್ನ ಮುಂತಾದವರೆಲ್ಲರ ಉಗ್ರಾಸ್ತ್ರಗಳ ಅಮೋಘವರ್ಷದಿಂದ ಇಡಿಯ ಭೂಮಂಡಲವೆಲ್ಲ ನಾಶವಾಗುವುದು. ನಿನ್ನೊಬ್ಬನ ಕಾರಣದಿಂದ ವಂಶವೂ ಪ್ರಜೆಗಳೂ ನಾಶವಾಗುವುದಕ್ಕಿಂತ ಬೇರೆ ಅನರ್ಥ ಏದೆಯೇ? ಬಲಿಷ್ಠರಾದ ಆ ಪಾಂಡವರನ್ನು ಮಣಿಸಲು ನೀನು ನಂಬಿ ಕುಳಿತ ಕರ್ಣನಾಗಲೀ ಶೀಘ್ರಕೋಪಿಯಾದ ದುಶ್ಯಾಸನನಾಗಲೀ ಶಕ್ತರಲ್ಲ. ನಿಜವಾಗಿ ಹಾಗೆ ಮಾಡಲು ಸಮರ್ಥರಾದವರು ಭೀಷ್ಮ ದ್ರೋಣ ಕೃಪಾದಿಗಳು. ಆದರೆ ಕೈಯಾರೆ ಸಾಕಿದ ಮೊಮ್ಮಕ್ಕಳನ್ನು ತಾತನಾಗಲೀ ವಿದ್ಯೆಯೂಡಿದ ಗುರುವಾಗಲೀ ಕೊಂದಾರೆಂದು ನೀನೆಣಿಸಬೇಡ. ಆ ವೃದ್ಧವೀರರು ನಿನ್ನ ಅನ್ನದ ಋಣಕ್ಕಾಗಿ ನಿನ್ನ ಕಡೆ ನಿಂತು ಯುದ್ಧ ಮಾಡುವರು. ಆ ತಬ್ಬಲಿಗಳಾದ ಪಾಂಡುಪುತ್ರರನ್ನು ಕೊಲ್ಲುವುದರ ಬದಲು ಆನಂದದಿಂದ ಅವರೆಲ್ಲ ಜೀವವನ್ನೇ ಬಿಟ್ಟಾರು. ಆದ್ದರಿಂದ ಮಗು ನೀನೀಗ ಹದಿಮೂರು ವರ್ಷ ಅವರಿಗೆ ಮೋಸಮಾಡಿ ರಾಜ್ಯವಾಳಿದ್ದೀಯೆ, ಈಗ ಅವರು ಬದುಕಿ ಉಳಿದಿರುವುದೇ ಹೆಚ್ಚು. ನನ್ನ ಹೊಟ್ಟೆಯ ಪುಣ್ಯ. ಇನ್ನೂ ಅತಿಯಾಸೆ ಮಾಡಬೇಡ. ಅವರ ಅರ್ಧರಾಜ್ಯವನ್ನು ಅವರಿಗೆ ಕೊಟ್ಟುಬಿಡು. ನಿನಗೂ ನಿನ್ನ ಮಂತ್ರಿ ಮಿತ್ರರಿಗೂ ಸುಖವಾಗಿ ಉಂಡು ಗೌರವದಿಂದ ಬಾಳಲು ವಿಶಾಲವಾದ ಕುರುರಾಜ್ಯದ ಅರ್ಧಭಾಗವೇನೂ ಕಡಿಮೆಯಿಲ್ಲ. ಅತ್ಯಾಸೆಯಿಂದ ಸ್ವಾಭಿಮಾನಿಗಳೂ ಶೂರರೂ ಸಂಯಮಿಗಳೂ ಜನಪ್ರಿಯರೂ ಆದ ಪಾಂಡವರ ವಿರುದ್ಧ ಯುದ್ಧವನ್ನು ಹೂಡಬೇಡ. ಅವರ ಜೊತೆಗೆ ಯುದ್ಧವೆಂದರೆ ನಿನಗೆ ಸುಖಭ್ರಂಶ, ಆತ್ಮಧ್ವಂಸ.'

ತನ್ನ ಮಾತಿಗೆ ಕಿವಿಗೊಡದೆ ಉತ್ಕಟ ದುರಭಿಮಾನದಿಂದ ಪಾಂಡವದ್ವೇಷವನ್ನು ಸಾಧಿಸಲು ದುರ್ಯೋಧನ ಮುಂದಾದಾಗ ಗಾಂಧಾರಿ ಅವನಿಗೆ ಬೆಂಬಲ ಕೊಟ್ಟ ಧೃತರಾಷ್ಟ್ರನನ್ನು ಚೇಡಿಸುತ್ತಾಳೆ. 'ಇಂಥ ಅಯೋಗ್ಯನಿಗೆ ರಾಜ್ಯವನ್ನು ಒಪ್ಪಿಸಿದ್ದೇ ಮಹಾಪರಾಧ. ಇಲ್ಲಿ ತಪ್ಪು ಮೊದಲು ನಿನ್ನದಿದ್ದು ಈ ವಿಷಯದಲ್ಲಿ ಪುತ್ರಲಂಪಟನಾದ ನಿನ್ನನ್ನೇ ಬೈಯಬೇಕಾಗಿದೆ. ಏಕೆಂದರೆ ಅವನ ಈ ದೌರ್ಜನ್ಯವನ್ನು ತಿಳಿದೂ ಮತ್ತೆ ನೀನು ಅವನ ಬೆನ್ನುಹತ್ತುವೆ' ಎಂದು ಆಕ್ಷೇಪಿಸುತ್ತಾಳೆ.

ಇಡೀ ಭಾರತದಲ್ಲಿ ಹೀಗೆ ದೂರದೃಷ್ಟಿಯುಳ್ಳ ತರ್ಕಬುದ್ಧಿಯ, ಧ್ಯೇಯ ನಿಷ್ಠ ವ್ಯಕ್ತಿಗಳು ಕಾಣುವುದು ಅಪೂರ್ವ. ಅಲ್ಲಲ್ಲಿ ಹರಡಿಕೊಂಡಿರುವ ಗಾಂಧಾರಿಯ ಮಾತುಕಥೆಗಳನ್ನೆಲ್ಲ ಕ್ರೋಢೀಕರಿಸಿ ವಿಚಾರಮಾಡಿದರೆ ಹಲವು ಅರ್ಥ ಮತ್ತು ನೀತಿ ಶಾಸ್ತ್ರಗ್ರಂಥಗಳ ಸಾರವೇ ಅಲ್ಲಿ ಎರಕ ಹೊಯ್ದಂತೆ ಘನೀಭವಿಸುವುದು ಕಂಡುಬರುತ್ತದೆ. ಅವಳ ಲೋಕಾನುಭವ, ಮಾನವೀಯ ಹೃದಯಪರೀಕ್ಷಣೆ, ಸರ್ವಂಕಷ ಪ್ರತಿಭೆ, ನೀತಿ, ಪ್ರೀತಿ ಎಲ್ಲವೂ ಅವಳ ವಚೋವಿಸ್ತಾರದಲ್ಲಿ ನಿಚ್ಚಳವಾಗಿ ಮೂಡಿ ಬಂದಿದೆ.

ಅವಳ ಹೆಣ್ಣು ಹೃದಯದ ಭಾವ ಕೋಮಲತೆಯನ್ನೂ ಪ್ರೇಮಲ ಸ್ವಭಾವವನ್ನೂ ಹಲವು ಸನ್ನಿವೇಶಗಳಲ್ಲಿ ಕಾಣುತ್ತೇವೆ.

ರಾಜಸಭೆಯಲ್ಲಿ ದುರ್ಯೋಧನಾದಿಗಳು ದ್ರೌಪದಿಯನ್ನು ಅವಮಾನಗೊಳಿಸಲು ಯತ್ನಿಸಿದಾಗ ಅವಳ ಗೋಳಿನಿಂದ ನೊಂದ ಗಾಂಧಾರಿ ಕ್ರುದ್ಧಳಾಗಿ 'ಹುಟ್ಟಿದಾಗಲೇ ಕತ್ತೆಯಂತೆ ಕೂಗಿದ ಈ ದುಷ್ಟಪುತ್ರನನ್ನು ಕುಲನಾಶಕನನ್ನು ವಿದುರನ ಮಾತಿನಂತೆ ನಾವು ತ್ಯಜಿಸಲಿಲ್ಲವೇಕೆ?' ಎಂದು ಮರಗುತ್ತಾಳೆ; 'ಈಗಲೂ ಕುಲಘಾತಕನಾದ ಈ ಪುತ್ರನನ್ನು ಹೊರಗಟ್ಟಿಬಿಡು' ಎಂದು ಧೃತರಾಷ್ಟ್ರನಿಗೆ ಹೇಳುತ್ತಾಳೆ. ಇದರಿಂದ ಎಚ್ಚೆತ್ತ ಧೃತರಾಷ್ಟ್ರ ದುರ್ಯೋಧನನ ಅವಿವೇಕಕ್ಕೆ ತಡೆಹಾಕುತ್ತಾನೆ.

ಮುಂದೆ ಮಹಾಯುದ್ಧದಲ್ಲಿ ತನ್ನ ಐವರು ಮಕ್ಕಳನ್ನೂ ಕಳೆದುಕೊಂಡು ಗೋಳಿಡುವ ಕೃಷ್ಣೆಯನ್ನು ಕಂಡು ತನ್ನ ಎದೆಯಲ್ಲಿ ನೂರು ಅಗ್ನಿಕುಂಡಗಳು ಉರಿಯುತ್ತಿದ್ದರೂ ಗಾಂಧಾರಿ ಸಮಾಧಾನಪಡಿಸುತ್ತಾಳೆ: 'ನೂರು ಮಂದಿ ಮಕ್ಕಳನ್ನು ನುಂಗಿ ಕುಳಿತ ನನ್ನನ್ನು ನೋಡಿ ನಿನ್ನ ದುಃಖವನ್ನು ತಡೆದುಕೊ ಮಗುವೆ, ಸಮಾಧಾನ ತಂದುಕೊ' ಎನ್ನುವ ಇವಳ ಸಾಂತ್ವನ ವಚನ ಇವಳ ಹೃದಯದ ಔದಾರ್ಯವನ್ನು ಪರದುಃಖಕಾತರತೆಯನ್ನು ತೋರುತ್ತದೆ.

ಗಾಂಧಾರಿಯ ತೇಜವೂ ತಪಶ್ಯಕ್ತಿಯೂ ಅಷ್ಟೇ ಉಜ್ವಲವಾದುವು. ಯುದ್ಧಾನಂತರದಲ್ಲಿ ನಮಿಸಲು ಬಂದ ಧರ್ಮಪುತ್ರನನ್ನು ಸ್ಪರ್ಶಿಸಿದ ಇವಳ ಕಣ್ಣಂಚಿನ ಕಿರಣವೇ ಅವನಿಗೆ ಸಾಕಷ್ಟು ಘಾಸಿಯನ್ನು ಮಾಡುತ್ತದೆ; ಅವನ ಪಾದಗಳ ಉಗುರು ಸೀದು ಕಪ್ಪಿಡುತ್ತದೆ.

ಇನ್ನು ಈ ಸಾಧ್ವಿಯ ನುಡಿಯಾದರೋ ಕಿಡಿಯಾಗಿ ಹಣೆಯ ಬರೆಹವನ್ನು ತಿದ್ದುವ ಸಾಮರ್ಥ್ಯವನ್ನು ಪಡೆದಿತ್ತು. ಅದನ್ನು ಅರಿತ ದುರ್ಯೋಧನ ಯುದ್ಧದಲ್ಲಿ ಕೈಗಟ್ಟಿದ ಇವಳ ಆಶೀರ್ವಾದವನ್ನು ಬಯಸುತ್ತಾನೆ. ಆದರೆ ನ್ಯಾಯನಿಷ್ಠರಳಾದ ಆ ಮಹಾಮಾತೆ ಧರ್ಮಕ್ಕೆ ಜಯವಾಗಲಿ ಎನ್ನುತ್ತಾಳೆ.

ತೊಂಬತ್ತೊಂಬತ್ತು ಜನ ತಮ್ಮಂದಿರ ಅನಂತರ ತೊಡೆಮುರಿದು ನೆಲಕ್ಕೆ ಒದಗಿದ ದುರ್ಯೋಧನನ್ನು ಕಂಡು ಗಾಂಧಾರಿಯ ಕೋಮಲ ಹೃದಯ ಗೋಳಿಡುತ್ತದೆ. 'ಅಂಥ ವಿಭವಶಾಲಿಯಾದ ನೀನು, ನಾಯಿ, ನರಿಗಳ ಆಹಾರವಾಗಿ ಭೂಶಾಯಿಯಾದೆಯಾ'–ಎಂದು ಹಲಬುತ್ತಾಳೆ. ಕಪಟದಿಂದ ಪಾಂಡವರನ್ನು ಪಾಲಿಸಿ ಕೌರವರನ್ನು ನಿರ್ಮೂಲ ಮಾಡಿದ ದೈವದ ಮೇಲೆ ಮುನಿಯುತ್ತಾಳೆ. ಈಕೆಯ ತಪಶ್ಯಕ್ತಿಯನ್ನರಿತ ವಾಸುದೇವ ತಾನೇ ಬಂದು ಮುಂದೆ ನಿಂತು ಶಪಿತನಾಗಿ ಇವಳ ಕ್ರೋಧದಿಂದ ಇತರರನ್ನು ರಕ್ಷಿಸುತ್ತಾನೆ.

'ನೀನು ಇಚ್ಛೈಸಿದ್ದರೆ ಕೌರವರೂ ಬಾಳುತ್ತಿದ್ದರು. ಬೇಕೆಂದೇ ನೀನವರನ್ನು ಉಪೇಕ್ಷಿಸಿ ನಾಶಮಾಡಿದೆ. ಅದರ ಫಲವಾಗಿ ನನ್ನ ಶಾಪವನ್ನು ನೀನು ಅನುಭವಿಸು' ಎನ್ನುತ್ತ 'ನಿನ್ನ ಜ್ಞಾತಿಬಾಂಧವರು ನಿನ್ನೆದುರಿಗೇ ಹೊಡೆದಾಡಿ ಸಾಯಲಿ. ಅನಾಥನಾಗಿ ನೀನು ಯಾರೂ ಅರಿಯದಂತೆ ಎಲ್ಲಿಯೋ ಬಿದ್ದು ಸಾಯಿ' ಎಂದು ಗಾಂಧಾರಿ ಕೃಷ್ಣನನ್ನು ಶಪಿಸುತ್ತಾಳೆ.

ಹೀಗೆ ಮಹಾಭಾರತದುದ್ದಕ್ಕೂ ಗಾಂಧಾರಿಯ ಧರ್ಮಸಂಕಟದ ಪ್ರಸಂಗ ಬಹು ಉಜ್ವಲವಾಗಿ ಬಂದಿದೆ. (ಪಿ.ವಿ.ಸಿ.)

**ಗಾಂಧೀ–ಇರ್ವಿನ್ ಒಪ್ಪಂದ :** ಭಾರತದ ವೈಸ್‌ರಾಯ್ ಇರ್ವಿನ್ ಮತ್ತು ಮಹಾತ್ಮ ಗಾಂಧೀ ಇವರ ನಡುವೆ 1931ರ ಮಾರ್ಚ್ 5ರಂದು ಆದ ಒಪ್ಪಂದ. ಆಧುನಿಕ ಭಾರತದ ಇತಿಹಾಸದಲ್ಲಿ ಇದು ಒಂದು ಮುಖ್ಯ ಘಟನೆ. ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿ ವೈಸ್‌ರಾಯ್‌ನಿಗೂ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ರಾಷ್ಟ್ರೀಯ ಕಾಂಗ್ರೆಸಿನ ನೇತಾರರಾದ ಗಾಂಧಿಯವರಿಗೂ ಪ್ರಥಮ ಬಾರಿಗೆ ಸಮಾನ ಅಂತಸ್ತಿನಲ್ಲಿ ವಿಚಾರವಿನಿಮಯ ನಡೆದು ಅದು ಈ ಒಪ್ಪಂದದಲ್ಲಿ ಪರ್ಯವಸಾನವಾಯಿತು. ಇದರಿಂದ ಕಾಂಗ್ರೆಸಿಗೆ ಪ್ರಾಮುಖ್ಯ ಅಧಿಕವಾಗಿ ಅದರ ಕೀರ್ತಿಯೂ ಹೆಚ್ಚಿತು. ದುಂಡುಮೇಜಿನ ಪರಿಷತ್ತಿನ ಎರಡನೆಯ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸಲು ಅವಕಾಶವಾಯಿತು.

1930ರ ಏಪ್ರಿಲ್ 6ರಂದು ಗಾಂಧಿಯವರು ಆರಂಭಿಸಿದ ಕಾನೂನು ಭಂಗ ಚಳವಳಿಯ ಪ್ರತಿಭಟನೆಯನ್ನು ಹತ್ತಿಕ್ಕಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಸರ್ಕಾರ ಪ್ರಯತ್ನಿಸುತ್ತಿತ್ತು. ಭಾರತೀಯ ಜನರ ಮೇಲೆ ಕಾಂಗ್ರೆಸ್ ಹೊಂದಿದ್ದ ಪ್ರಭಾವವನ್ನು ಸರ್ಕಾರ ಸರಿಯಾಗಿ ಅರಿತಿರಲಿಲ್ಲ. ಕಾಂಗ್ರೆಸಿನಷ್ಟು ಪ್ರಭಾವಶಾಲಿಯಲ್ಲದ, ಪ್ರತಿಗಾಮಿಯಾಗಿದ್ದ ಹಲವಾರು ಸಣ್ಣಪುಟ್ಟ ಪಕ್ಷಗಳಿಗೆ ಅದು ವಿಶೇಷವಾಗಿ ಉತ್ತೇಜನ ನೀಡಲು ಯತ್ನಿಸಿತು. ಸರ್ಕಾರದ ದಮನನೀತಿಯಿಂದ ಸ್ವಾತಂತ್ರ್ಯ ಹೋರಾಟ ಇನ್ನೂ ಬಿರುಸಾಯಿತು. ಭಾರತದ ರಾಜಕೀಯ ಭವಿಷ್ಯದ ಬಗ್ಗೆ ಸಮಾಲೋಚಿಸಲು 1930ರ ನವೆಂಬರಿನಲ್ಲಿ ಸಮಾವೇಶಗೊಂಡಿದ್ದ ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪ್ರತಿನಿಧಿ ಯಾರೂ ಇರಲಿಲ್ಲ. ಕಾಂಗ್ರೆಸ್ ಇಲ್ಲದ ಯಾವ ಸಮಾಲೋಚನೆಯೂ ಫಲಪ್ರದವಾಗುವಂತಿರಲಿಲ್ಲ. ಪರಿಷತ್ತಿನ ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸುವುದೆಂಬುದು ಬ್ರಿಟಿಷ್ ಪ್ರಧಾನಿಯ ಆಶಯವಾಗಿತ್ತು. 1931ರ ಫೆಬ್ರವರಿ 17ರಂದು ಗಾಂಧೀ ಇರ್ವಿನರ ನಡುವೆ ಮಾತುಕತೆಗಳು ಆರಂಭವಾದುವು. ಮಾರ್ಚ್ 5ರಂದು ಒಪ್ಪಂದಕ್ಕೆ ಸಹಿಯಾಯಿತು.

ಇರ್ವಿನರ ಅಭಿಲಾಷೆಗಳು ಪ್ರಾಮಾಣಿಕವಾಗಿವೆಯೆಂದು ಗಾಂಧಿಯವರಿಗೆ ಖಚಿತವಾಗಿತ್ತು. ಲಿಬರಲ್ ಪಕ್ಷದ ನಾಯಕರಾದ ತೇಜ್‌ಬಹದ್ದೂರ್ ಸಪ್ರು, ಎಂ.ಆರ್. ಜಯಕರ್, ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಇವರು ಸಂಧಾನ ಫಲಪ್ರದವಾಗಲು ಪ್ರಮುಖ ಪಾತ್ರ ವಹಿಸಿದ್ದರು.

ಒಪ್ಪಂದದ ಮುಖ್ಯಾಂಶಗಳಿವು : ದಬ್ಬಾಳಿಕೆಯ ಸುಗ್ರೀವಾಜ್ಞೆಗಳನ್ನೂ ಇತ್ಯರ್ಥವಾಗದ ಆಪಾದನೆಗಳನ್ನೂ ಹಿಂತೆಗೆದುಕೊಳ್ಳಲೂ ಹಿಂಸೆಯಲ್ಲಿ ತೊಡಗಿದ್ದವರನ್ನು ಬಿಟ್ಟು ಉಳಿದ ಎಲ್ಲ ರಾಜಕೀಯ ಸೆರೆಯಾಳುಗಳ ಬಿಡುಗಡೆ ಮಾಡಲೂ ಸತ್ಯಾಗ್ರಹದಲ್ಲಿ ಭಾಗವಹಿಸಿ ಆಸ್ತಿ ಕಳೆದುಕೊಂಡಿದ್ದವರಿಗೆ ಅದನ್ನು ಹಿಂದಿರುಗಿಸಲೂ ಮದ್ಯ ಮತ್ತು ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಶಾಂತಿಯುತ ನಿರೋಧಕಾರ್ಯ ನಡೆಸುವುದಕ್ಕೆ ಮತ್ತು ಸಮುದ್ರತೀರದಿಂದ ನಿಯಮಿತ ದೂರದಲ್ಲಿ ವಾಸಿಸುವ ಜನ ತೆರಿಗೆಯಿಲ್ಲದೆ ಉಪ್ಪು ತಯಾರಿಸುವುದಕ್ಕೆ ಅವಕಾಶ ಕೊಡಲೂ ಸರ್ಕಾರದ ಪರವಾಗಿ ಇರ್ವಿನ್ ಒಪ್ಪಿಕೊಂಡ. ಪೋಲಿಸ್ ದೌರ್ಜನ್ಯ ಕುರಿತು ವಿಚಾರಣೆಗೆ ಒತ್ತಾಯಿಸದಿರಲೂ ಕಾನೂನುಭಂಗ ಚಳವಳಿ ನಿಲ್ಲಿಸಲೂ ಜವಾಬ್ದಾರಿ ಸರ್ಕಾರ ಸ್ಥಾಪನೆ ಮತ್ತು ಭಾರತ ಹಿತರಕ್ಷಣೆಯ ಆಧಾರದ ಮೇಲೆ ದುಂಡುಮೇಜಿನ ಪರಿಷತ್ತಿನ ಎರಡನೆಯ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸಲೂ ಬಹಿಷ್ಕಾರವನ್ನೆಲ್ಲ ನಿಲ್ಲಿಸಲೂ ಗಾಂಧಿಯವರು ಕಾಂಗ್ರೆಸಿನ ಪರವಾಗಿ ಸಮ್ಮತಿಸಿದರು. (ವಿ.ಕೆ.)

**ಗಾಂಧೀಗ್ರಾಮ :** ತಮಿಳುನಾಡಿನ ಮಧುರೈ ಜಿಲ್ಲೆಯಲ್ಲಿ ಇರುವ ಒಂದು ಆಶ್ರಮ, ವಸತಿ. ಇದರ ಪೂರ್ವದಲ್ಲಿ ಶಿರುಮಲೈ ಬೆಟ್ಟವೂ ಪಶ್ಚಿಮಕ್ಕೆ ಕೊಡೈ ಬೆಟ್ಟವೂ ಹಬ್ಬಿವೆ. ಇವುಗಳ ನಡುವೆ ಸು. 400 ಎಕರೆ ಪ್ರದೇಶದಲ್ಲಿರುವ ಗಾಂಧೀಗ್ರಾಮ 1947ರ ಅಕ್ಟೋಬರ್ 7ರಂದು ಸ್ಥಾಪಿತವಾಯಿತು. ಗಾಂಧೀ ತತ್ತ್ವಗಳ ಪ್ರಚಾರ,

ಗಾಂಧಿಯವರ ಜೀವನಮಾರ್ಗದ ಅನುಷ್ಠಾನ–ಈ ಉದ್ದೇಶದಿಂದ ಶ್ರೀಮತಿ ಸೌಂದರಂ ರಾಮಚಂದ್ರನ್ ಇದನ್ನು ಸ್ಥಾಪಿಸಿದರು. ಜಿ. ರಾಮಚಂದ್ರನ್ ಇದರ ನಿರ್ದೇಶಕರು.

ಆರಂಭದಲ್ಲಿ ಇಲ್ಲಿ ಎರಡು ಕಟ್ಟಡಗಳು ಮಾತ್ರ ಇದ್ದುವು. ಕೆಲವು ಅಧ್ಯಾಪಕರು ಮತ್ತು ನೂರಕ್ಕೂ ಕಡಮೆ ವಿದ್ಯಾರ್ಥಿಗಳಿದ್ದರು. ಮೂಲಶಿಕ್ಷಣ ಶಾಲೆ, ಮೂಲ ಶಿಕ್ಷಕ ಶಿಕ್ಷಣ ಶಾಲೆ, ಸಣ್ಣ ವೈದ್ಯಶಾಲೆ ಇವು ಮಾತ್ರ ಇದ್ದ ಈ ಎಡೆಯಲ್ಲಿ ಈಗ ಅನೇಕ ಶಾಲೆಗಳೂ ಉತ್ಪಾದನ ಸಂಸ್ಥೆಗಳೂ ಸಹಕಾರ ಸಂಸ್ಥೆಗಳೂ ಸಂಶೋಧನಾಲಯಗಳೂ ಇವೆ. ಶಿಶುಮಂದಿರ, ಮೂಲಶಿಕ್ಷಣ ಶಾಲೆ, ಕಸ್ತೂರಬಾ ಸೇವಿಕಾಶ್ರಮ, ಗ್ರಾಮ ಪ್ರೌಢವಿದ್ಯಾ ಶಾಲೆ, ಲಕ್ಷ್ಮೀ ಶಿಕ್ಷಣ ಕಾಲೇಜ್, ಗಾಂಧೀ ಶತಾಬ್ದಿ ಕುಶಲಕಲಾ ಶಾಲೆ, ಕುಮಾರಪ್ಪ ಗ್ರಾಮ ಕೈಗಾರಿಕಾ ಕೇಂದ್ರ, ಕಸ್ತೂರಬಾ ಆಸ್ಪತ್ರೆ, ಗ್ರಾಮ ಆರೋಗ್ಯ ಮತ್ತು ಕುಟುಂಬ ಯೋಜನಾ ಕೇಂದ್ರ, ಮಕ್ಕಳ ಕ್ಷೇಮಾಭಿವೃದ್ಧಿ ತರಬೇತು ಕೇಂದ್ರ, ಖಾದಿ ಭವನ, ಕಲಾ ಭವನ, ಸತ್ಯಮಿತ್ರರ ಸಹಯೋಗ ಸಂಸ್ಥೆ, ಶಾಂತಿಸೇನೆ ಮುಂತಾದ 30 ಸಂಸ್ಥೆಗಳಿವೆ. 2,500 ವಿದ್ಯಾರ್ಥಿಗಳೂ 500 ಮಂದಿ ಶಿಕ್ಷಕರೂ ಇದ್ದಾರೆ.

ಮಕ್ಕಳ ಕಲ್ಯಾಣ ಕೇಂದ್ರದ ಹೆಸರು ಸೌಭಾಗ್ಯಂ. ಇದು ಅನಾಥ ಶಿಶುಗಳ ಗೃಹ, ಮಕ್ಕಳ ಮನಸ್ಸಿನಲ್ಲಿ ತಾವು ಅನಾಥರೆಂಬ ಭಾವನೆಯೇ ಬೆಳೆಯದಂತೆ ಅವುಗಳ ರಕ್ಷಣೆ, ಶಿಕ್ಷಣ ನಡೆಯುತ್ತಿವೆ. ಮಕ್ಕಳ ಮನವರಿತು, ಅವರ ಸಾಮರ್ಥ್ಯಕ್ಕೂ, ಇಚ್ಛೆಗೂ ತಕ್ಕಂತೆ ಶಿಕ್ಷಣದ ಜೊತೆಗೆ ಕೈಕಸುಬನ್ನು ಕಲಿಸಲಾಗುವುದು. ಕಸ್ತೂರಬಾ ಸೇವಿಕಾಶ್ರಮ ವಿಧವೆಯರ, ಪರಿತ್ಯಕ್ತೆಯರ, ಸಮಾಜದ ದಬ್ಬಾಳಿಕೆಗೆ ಒಳಗಾದ ನತದೃಷ್ಟ ಅನಾಥಸ್ತ್ರೀಯರ ರಕ್ಷಣೆಯ ಕೇಂದ್ರವಾಗಿದೆ. ಇಲ್ಲಿ ಬಂದು ಸೇರುವ ಮಹಿಳೆಯರಿಗೆ ಪ್ರೌಢಶಾಲೆಯ ವರೆಗೆ ಶಿಕ್ಷಣ ನೀಡಿ ಅನಂತರ ಅವರ ಇಚ್ಛೆಯಂತೆ ಶಿಕ್ಷಕಿಯರೋ ದಾದಿಯರೋ ಕುಶಲ ಕಲಾ ಶಿಕ್ಷಕಿಯರೋ ಆಗಲು ಅಗತ್ಯವಾದ ತರಬೇತು ನೀಡಲಾಗುತ್ತದೆ.

ಗ್ರಾಮೀಣ ಉನ್ನತ ಶಿಕ್ಷಣ ಸಂಸ್ಥೆಗಳೂ ಇಲ್ಲುಂಟು. ಗ್ರಾಮಸೇವಾ ಕಾಲೇಜು, ಗ್ರಾಮಸಮಾಜಶಾಸ್ತ್ರ ಮತ್ತು ಸಮುದಾಯ ಅಭಿವೃದ್ಧಿ ಡಿಪ್ಲೊಮ ನೀಡುವ ಸ್ನಾತಕೋತ್ತರ ಶಿಕ್ಷಣ ಕಾಲೇಜು, ಕೃಷಿವಿಜ್ಞಾನ ಕಾಲೇಜು ಇವು ಇಂಥವು. ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಗಾಂಧೀಗ್ರಾಮದ ಸುತ್ತಣ ಹಳ್ಳಿಗಳೇ ಜೀವಂತ ಪ್ರಯೋಗಶಾಲೆಗಳಾಗಿವೆ. ಇದರಿಂದ ಸುತ್ತಣ ಗ್ರಾಮದ ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ. ವಿದ್ಯಾರ್ಥಿಗಳು ಗ್ರಾಮ ಸಮಸ್ಯೆಗಳನ್ನು ಅಭ್ಯಸಿಸಲು ಆ ಗ್ರಾಮಗಳಲ್ಲೆ ಕೆಲವು ದಿನಗಳನ್ನು ಕಳೆಯುತ್ತಾರೆ. ಗ್ರಾಮ ಸೇವಕರೊಡನೆ ಕೆಲವು ಕಾಲ ಇದ್ದು ತಮ್ಮ ಇಚ್ಛೆಯಂತೆ ಗ್ರಾಮಕ್ಕೆ ಸಂಬಂಧಪಟ್ಟ ಯಾವುದಾದರೂ ವಿಷಯವನ್ನು ಅಭ್ಯಾಸಮಾಡಿ ಪರಿಣತಿಗಳಿಸಿಕೊಳ್ಳುತ್ತಾರೆ.

ಗಾಂಧೀಗ್ರಾಮದ ವಿದ್ಯಾರ್ಥಿಗಳು ತಮ್ಮ ತರಬೇತಿಗೆ ಪೂರಕವಾಗಿ ಸಮಾಜಕಲ್ಯಾಣ ಕಾರ್ಯಗಳನ್ನು ಸ್ವಯಂಸೇವಕರಂತೆ ನಿರ್ವಹಿಸುತ್ತಾರೆ. ಬಡವರಿಗೆ ಮನೆಕಟ್ಟಿಕೊಳ್ಳಲು ಸಹಾಯಮಾಡುವುದು, ಉಚಿತವಾಗಿ ಶಾಲೆಗಳನ್ನು ನಡೆಸಿ ವಿದ್ಯಾದಾನ ಮಾಡುವುದು, ವಯಸ್ಕರ ಶಿಕ್ಷಣ, ಕೃಷಿ ಅಭಿವೃದ್ಧಿ, ನೀರಿನ ಸೌಕರ್ಯ ಹೆಚ್ಚಿಸುವುದು, ಆರೋಗ್ಯ ರಕ್ಷಣೆಯ ವಿಚಾರ ತಿಳಿಸುವುದು, ಮಕ್ಕಳಿಗೆ ಸಿಡುಬು ಮತ್ತು ಕಾಲರ ನಿರೋಧಕ ಸೂಜಿಮದ್ದನ್ನು ಹಾಕುವುದು ಮುಂತಾದ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಕೈಗೊಂಡು ಗ್ರಾಮಸ್ಥರಿಗೆ ಉಪಕಾರ ಮಾಡುತ್ತಿದ್ದಾರೆ. ಸುತ್ತಣ 25 ಗ್ರಾಮಗಳನ್ನು ಇದಕ್ಕಾಗಿ ಆಯ್ದುಕೊಳ್ಳಲಾಗಿದೆ. ದಿಂಡಿಗಲ್ ಮತ್ತು ರೆಡ್ಡಿಯಾರ್ ಚತ್ರಂ ಪಂಚಾಯತಿಯ ವ್ಯಾಪ್ತಿಯಲ್ಲಿರುವ 13 ಹಳ್ಳಿಗಳನ್ನು ಸಾಂದ್ರ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಆರಿಸಿಕೊಳ್ಳಲಾಗಿದೆ. ಇದಕ್ಕೆ ಜರ್ಮನ್ ಸಂಸ್ಥೆಯೊಂದು ಆರ್ಥಿಕ ನೆರವು ನೀಡಿದೆ.

ಕುಶಲ ಕಲಾ ಶಿಕ್ಷಣ ಶಾಲೆಯಲ್ಲಿ ಕುಶಲ ಕಲೆಗಳ ಬಗ್ಗೆ ತರಬೇತಿ ನೀಡಿ ಜೊತೆಗೆ ಸುತ್ತಣ ರೈತಜನಕ್ಕೆ ಕೃಷಿ ಉಪಕರಣಗಳ ಸೌಲಭ್ಯ ಒದಗಿಸಲಾಗುತ್ತದೆ. ಗಾಂಧೀಗ್ರಾಮದ ಕುಟುಂಬಯೋಜನಾ ಕೇಂದ್ರವೂ ಕಸ್ತೂರಬಾ ಆಸ್ಪತ್ರೆಯೂ ಅತ್ಯಂತ ಅಮೂಲ್ಯವಾದ ಸೇವೆ ನೀಡುತ್ತಿವೆ. ಗಾಂಧೀಗ್ರಾಮದ ಶಾಂತಿಸೇನೆಯ ಸೇವೆ ವಿಶಿಷ್ಟವಾದ್ದು, ಸಾಮೂಹಿಕ ಶಿಸ್ತನ್ನು ಬೆಳೆಯಿಸುವುದು ಇದರ ಉದ್ದೇಶ. ಗಾಂಧೀಗ್ರಾಮದ ಸುತ್ತ ಪೌಳಿಗೋಡೆಗಳಿಲ್ಲ. ಶಾಂತಿ ಸೇನೆಯ ಸದಸ್ಯರು ಸಣ್ಣ ಸಣ್ಣ ತಂಡಗಳಲ್ಲಿ ಅಹರ್ನಿಶಿ ಅದಕ್ಕೆ ಕಾವಲಾಗಿರುತ್ತಾರೆ. 1956ರಲ್ಲಿ ಸಂಭವಿಸಿದ ಚಂಡಮಾರುತದಿಂದ ನೊಂದವರಿಗೆ ಪರಿಹಾರ ನೀಡುವ ಕಾರ್ಯದಲ್ಲೂ ಸ್ವಲ್ಪ ಕಾಲಾನಂತರ ರಾಮನಾಥಪುರಂ ಜಿಲ್ಲೆಯಲ್ಲಿ ನಡೆದ ಕೋಮುವಾರು ಗಲಭೆಗಳ ಸಮಯದಲ್ಲೂ ಗಾಂಧೀಗ್ರಾಮದ ಶಾಂತಿಸೇನೆ ನೀಡಿದ ಸೇವೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಗಾಂಧೀಗ್ರಾಮದ ಕಲಾಭವನದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂಗೀತ, ನೃತ್ಯ, ನಾಟಕ, ಚಿತ್ರಕಲೆಗಳಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದೆ.

ಗಾಂಧೀಗ್ರಾಮದ ಆಶ್ರಮವಾಸಿಗಳು ಸಂಪೂರ್ಣವಾಗಿ ವಿಕಾಸಗೊಂಡು ತಮ್ಮ ಹೊಣೆಗಳನ್ನು ನಿರ್ವಹಿಸುವಂತೆ ಅವರಿಗೆ ವಿಶೇಷ ಅನುಭವ ದೊರಕಿಸಿ ಕೊಡಲಾಗುತ್ತದೆ. ಅದೇ ರೀತಿ ಅಲ್ಲಿಯ ಜೀವನವನ್ನು ಸಂಘಟಿಸಲಾಗಿದೆ. ವಿದ್ಯಾರ್ಥಿಗಳಿಗೆ ಸಂಘಜೀವನವನ್ನು ಕಲಿಸಲಾಗುತ್ತದೆ. ಆಡಳಿತ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ವ್ಯವಸ್ಥಾಪಕರಿಗೆ ತಿಳಿಸಲು ಆಂ ಸಭಾ ಎಂಬ ವಿಧಾನಸಭೆಯೊಂದುಂಟು. ಗಾಂಧೀಗ್ರಾಮದ ಆಡಳಿತ ಮಂಡಳಿಯಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಿಗೂ ಸ್ಥಾನವುಂಟು. ಧರ್ಮಸಮನ್ವಯ ದೃಷ್ಟಿಯಿಂದ ಆಶ್ರಮದ ಸಾಮೂಹಿಕ ಪ್ರಾರ್ಥನೆಯನ್ನು ರೂಪಿಸಲಾಗಿದೆ. *

**ಗಾಂಧೀ, ದೇವದಾಸ್ :** 1900–1958. ಮಹಾತ್ಮ ಗಾಂಧೀ ಮತ್ತು ಕಸ್ತೂರಬಾ ಗಾಂಧೀಯರ ಕೊನೆಯ ಮಗ ದೇವದಾಸ್ ಗಾಂಧೀ 1900ರಲ್ಲಿ ದಕ್ಷಿಣ ಆಫ್ರಿಕದ ಡರ್ಬನಿನಲ್ಲಿ ಜನಿಸಿದರು. ಗಾಂಧೀಯವರ ಇತರ ಮಕ್ಕಳಂತೆ ಇವರಿಗೂ ಸಾಮಾನ್ಯ ರೀತಿಯ ಶಾಲಾ–ಕಾಲೇಜ್ ಶಿಕ್ಷಣ ದೊರಕಲಿಲ್ಲ. ಇವರು ಗಾಂಧಿಯವರೊಂದಿಗೆ ಇದ್ದುದೇ ದೊಡ್ಡ ಶಿಕ್ಷಣವಾಯಿತು. ಇವರು ಯಂಗ್ ಇಂಡಿಯ ಪತ್ರಿಕೆಯಲ್ಲಿ ಕೆಲಸ ಮಾಡಿ, ಪತ್ರಿಕೋದ್ಯಮದ ಅನುಭವ ಪಡೆದರು. ಮಹಾತ್ಮ ಗಾಂಧೀಯವರ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಹವರ್ತಿಯಾದ ರಾಜಗೋಪಾಲ ಚಾರ್ಯರ ಮಗಳಾದ ಲಕ್ಷ್ಮೀಯನ್ನು 1933ರಲ್ಲಿ ವಿವಾಹವಾದರು.

1923ರಲ್ಲಿ ದೆಹಲಿಯಲ್ಲಿ ಸ್ಥಾಪಿತವಾದ ಹಿಂದೂಸ್ಥಾನ್ ಟೈಮ್ಸ್ ಎಂಬ ಇಂಗ್ಲಿಷ್ ದಿನಪತ್ರಿಕೆಗೆ 1940ರಲ್ಲಿ ದೇವದಾಸ್ ಗಾಂಧಿಯವರು ಕಾರ್ಯನಿರ್ವಾಹಕ ಸಂಪಾದಕರಾಗಿ ನೇಮಕಗೊಂಡರು. ಆಗ ಇವರ ಅನುಭವ ಒಳ್ಳೆಯ ಪ್ರಯೋಜನಕ್ಕೆ ಬಂತು. ಸಹ ಸಂಪಾದಕರಾಗಿದ್ದ ದುರ್ಗಾದಾಸ್ ಅವರ ನೆರವಿನಿಂದ ಪತ್ರಿಕೆಯನ್ನು ಹೆಚ್ಚು ಜನಪ್ರಿಯವನ್ನಾಗಿ ಮಾಡಲು ಪ್ರಯತ್ನಿಸಿದರು. ಸ್ವಾತಂತ್ರ್ಯ ಹೋರಾಟ, ಕಾಂಗ್ರೆಸ್ ಧ್ಯೇಯ ಇವನ್ನು ಪ್ರತಿಪಾದಿಸುತ್ತಿದ್ದ ಈ ಪತ್ರಿಕೆ 1947ರಲ್ಲಿ, ರಾಷ್ಟ್ರಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ, ಸರ್ಕಾರದ ನೀತಿ–ಧೋರಣೆಗಳ ವಾಣಿಯಾಯಿತು. ಇದರ ಹಿಂದೀ ಅವತಾರಗಳಾದ ಹಿಂದೂಸ್ತಾನ್, ಹಿಂದೂಸ್ತಾನ್ ಸಾಪ್ತಾಹಿಕ ಇವೂ ಜನಪ್ರಿಯತೆ ಗಳಿಸಿದುವು. ಇದರ ಸಾಗರೋತ್ತರ ಆವೃತ್ತಿ ವಿದೇಶಗಳಲ್ಲಿಯ ರಾಷ್ಟ್ರೀಯರ ಪ್ರೀತಿಗೆ ಪಾತ್ರವಾಯಿತು. ದೇವದಾಸ್ ಗಾಂಧಿಯವರು 1947ರಲ್ಲಿ ಅಖಿಲಭಾರತ ಪತ್ರಕರ್ತರ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1958ರಲ್ಲಿ ನಿಧನವಾದರು. (ಜಿ.ವಿ.ಎಸ್.)

**ಗಾಂಧೀನಗರ :** ಗುಜರಾತ್ ರಾಜ್ಯದ ರಾಜಧಾನಿ; ಸಾಬರ್ಮತಿ ನದಿಯ ದಡದ ಮೇಲೆ, ಅಹಮದಾಬಾದಿನಿಂದ ಸು. 24 ಕಿಮೀ ಅಂತರದಲ್ಲಿದೆ. ಈ ನಗರ ಸಂಪೂರ್ಣವಾಗಿ ಬೆಳೆದಾಗ 2163 ಚ.ಕಿಮೀ ವಿಸ್ತೀರ್ಣವುಳ್ಳದ್ದಾಗಿರುತ್ತದೆ. ಜನಗಣತಿಯ ಪ್ರಕಾರ ಇದರ ಜನಸಂಖ್ಯೆ 2,08,299 (2011).

1960ರಲ್ಲಿ ಗುಜರಾತ್ ರಾಜ್ಯ ರಚಿತವಾದಾಗ ಅಹಮದಾಬಾದ್ ಅದರ ರಾಜಧಾನಿಯಾಯಿತು. ಆದರೆ ಹೊಸ ರಾಜ್ಯಕ್ಕೆ ಹೊಸದೊಂದು ರಾಜಧಾನಿಯ ಅವಶ್ಯಕತೆಯಿತ್ತು. ಅಹಮದಾಬಾದ್ ಒಂದು ದೊಡ್ಡ ಕೈಗಾರಿಕಾ ಕೇಂದ್ರ. ಇದರ ಜನಸಂಖ್ಯೆ ತೀವ್ರವಾಗಿ ಬೆಳೆಯುತ್ತಿದೆ. ಅಹಮದಾಬಾದ್ ನಗರಗಳಲ್ಲಿ ಜಮೀನಿನ ಬೆಲೆ ಹೆಚ್ಚು. ಅತಿಯಾದ ಜನಸಂದಣಿಯಿರುವ ಆ ನಗರದಲ್ಲಿ ವಸತಿಯದೊಂದು ಸಮಸ್ಯೆ. ಜನಸಂಖ್ಯೆಯ ಬೆಳವಣಿಗೆಯ ವೇಗಕ್ಕೆ ಅನುಗುಣವಾಗಿ ನಾಗರಿಕ ಸೌಲಭ್ಯಗಳನ್ನು ಒದಗಿಸುವುದು ಕಷ್ಟ ಈ ಕಾರಣಗಳಿಂದಾಗಿ ರಾಜ್ಯದ ಆಡಳಿತಕ್ಕಾಗಿ ಅಹಮದಾಬಾದಿನ ಹತ್ತಿರದಲ್ಲಿ ಹೊಸ ರಾಜಧಾನಿಯೊಂದನ್ನು ರಚಿಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು. ಹೊಸ ರಾಜಧಾನಿಗಾಗಿ ಆಯ್ಕೆ ಮಾಡಿದ ನಿವೇಶನದ ಅಡಿಯಲ್ಲಿ ತೈಲ ಸೆಲೆಗಳಿಲ್ಲವೆಂಬುದನ್ನು ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ 1964ರಲ್ಲಿ ಖಚಿತವಾಗಿ ಸಾರಿದ ಬಳಿಕ 1965ರ ಜೂನ್ ತಿಂಗಳಲ್ಲಿ ಈ ನಗರಯೋಜನೆಯ ಅನ್ವಯಕ್ಕೆ ಕ್ರಮ ಕೈಗೊಳ್ಳಲಾಯಿತು. ಅನಂತರದ ಐದು ವರ್ಷಗಳಲ್ಲಿ ರಾಜಧಾನಿಯ ಮುಖ್ಯ ಭಾಗಕ್ಕೆ ಒಂದು ರೂಪು ಬಂದು 1974ರಲ್ಲಿ ಇದು ಗುಜರಾತ್ ರಾಜ್ಯದ ಹೊಸ ರಾಜಧಾನಿಯಾಯಿತು.

ಅಹಮದಾಬಾದಿಗಿಂತ 21 ಮೀ ಹೆಚ್ಚು ಎತ್ತರದಲ್ಲಿರುವ, 5,500 ಹೆಕ್ಟೇರ್ ವಿಸ್ತಾರವುಳ್ಳ ಗಾಂಧೀನಗರ ನಿವೇಶನ ವಿಶೇಷವಾಗಿ ಫಲವತ್ತಾದ ಉಸುಕಿನ ಪ್ರದೇಶ; ಇದು ಸುಂದರವಾದ ಮಾವಿನ ಮರಗಳ ಸಾಲುಗಳಿಂದ ಕಂಗೊಳಿಸುತ್ತದೆ. ನಗರರಚನೆಯ ಅನಂತರವೂ ಇಲ್ಲಿಯ ನಿಸರ್ಗ ಸೌಂದರ್ಯ ಕೆಡದಂತೆ ಎಚ್ಚರಿಕೆ ವಹಿಸಲಾಗಿದೆ. ಈ ನಗರರಚನೆಯಲ್ಲಿ ಮುಖ್ಯವಾದ ಐದು ವಿಭಾಗಗಳಿವೆ: 1. ರಾಜಧಾನಿ ವಿಭಾಗ ಮತ್ತು ಸರ್ಕಾರಿ ಕಾರ್ಯಾಲಯಗಳು. 2. ಔದ್ಯೋಗಿಕ ವಿಭಾಗ, 3. ನಗರ ವಿಭಾಗ, 4. ಸಾರ್ವಜನಿಕ ಸಂಸ್ಥೆಗಳ ವಿಭಾಗ ಮತ್ತು 5. ಮಾರುಕಟ್ಟೆ ಮತ್ತು ದಾಸ್ತಾನು ಮಳಿಗೆಗಳ ವಿಭಾಗ.

ರಾಜಧಾನಿ ಮತ್ತು ಸರ್ಕಾರಿ ಕಾರ್ಯಾಲಯಗಳು: ಗಾಂಧೀನಗರ ರಾಜಧಾನಿಯ ಸಮಗ್ರ ಯೋಜನೆಯಲ್ಲಿ ಇದು ಅತ್ಯಂತ ಮಹತ್ತ್ವದ ವಿಭಾಗ. ಇದರಲ್ಲಿ ರಾಜ್ಯ ಸರ್ಕಾರದ ಸಚಿವಾಲಯ ಮತ್ತು ಇತರ ಕಚೇರಿಗಳು, ವಿಧಾನಸಭಾ ಗೃಹ, ಉಚ್ಚ ನ್ಯಾಯಾಲಯ, ರಾಜ್ಯ ಕೇಂದ್ರ ಸರ್ಕಾರಗಳ ವಿವಿಧ ಇಲಾಖೆಗಳ ಕಚೇರಿಗಳು ಇವೆ.

ಒಟ್ಟು 150 ಹೆಕ್ಟೇರ್ ಜಮೀನಿನ ಮೇಲೆ ಸಾಬರ್ಮತಿಯ ದಂಡೆಗುಂಟ ಹರಡಿಕೊಂಡಿರುವ ಈ ವಿಭಾಗದ ಹೊಸ ರಾಜಧಾನಿಯ ಆಕರ್ಷಕ ಭಾಗಗಳಲ್ಲೊಂದು.

ಔದ್ಯೋಗಿಕ ವಿಭಾಗ: ಗುಜರಾತ್ ರಾಜ್ಯದ ರಾಜಧಾನಿಯಾಗಿರಬೇಕೆಂಬುದು ಗಾಂಧೀನಗರದ ರಚನೆಯ ಮುಖ್ಯ ಉದ್ದೇಶವಾದರೂ ಆರ್ಥಿಕ ಚಟುವಟಿಕೆಗಳಿಗೂ ಇಲ್ಲಿ ಎಡೆಯುಂಟು. ಇದಕ್ಕಾಗಿ ಸಣ್ಣಪುಟ್ಟ ಕೈಗಾರಿಕೆಗಳ ವಿಭಾಗವನ್ನು ಸೇರ್ಪಡೆಗೊಳಿಸಿದೆ. ಆದರೂ ಕೈಗಾರಿಕೆಗಳ ಹೊಗೆಯಿಂದ ಇಲ್ಲಿಯ ಬದುಕಿನ ಬಗೆ ಕೆಡದಂತೆ ಎಚ್ಚರಿಕೆ ವಹಿಸಲಾಗಿದೆ. 100 ಹೆಕ್ಟೇರ್ ಜಮೀನನ್ನು ವ್ಯಾಪಿಸಿದ ಈ ವಿಭಾಗದಲ್ಲಿ 9,000 ಕೆಲಸಗಾರರ ದುಡಿಮೆಗೆ ಅವಕಾಶವಿದೆ.

ನಗರ ವಿಭಾಗ : 75 ಹೆಕ್ಟೇರ್ ಜಮೀನನ್ನು ವ್ಯಾಪಿಸಿಕೊಂಡಿರುವ ನಗರ ವಿಭಾಗ ಜನಕ್ಕೆ ನಾಗರಿಕ ಸೌಕರ್ಯಗಳನ್ನು ಸಾಂಸ್ಕೃತಿಕ ಅನುಕೂಲತೆಗಳನ್ನೂ ವ್ಯಾಪಾರ ವ್ಯವಹಾರಗಳ ಅವಕಾಶಗಳನ್ನೂ ಒದಗಿಸಿಕೊಡುತ್ತದೆ.

ಸಾರ್ವಜನಿಕ ಸಂಸ್ಥೆಗಳ ವಿಭಾಗ : 50 ಹೆಕ್ಟೇರ್ ಜಮೀನನ್ನೊಳಗೊಂಡ ಈ ವಿಭಾಗದಲ್ಲಿ ರಾಜ್ಯಮಟ್ಟದಲ್ಲಿ ಮಹತ್ತ್ವದ್ದೆನಿಸುವ ಸಂಸ್ಥೆಗಳ ಕಟ್ಟಡಗಳು, ಶಾಲೆ ಕಾಲೇಜುಗಳು ಮತ್ತು ಅವುಗಳಲ್ಲಿ ಉದ್ಯೋಗನಿರತರಾದವರ ಮನೆಗಳು ಇವೆ.

ಮಾರುಕಟ್ಟೆ ಮತ್ತು ದಾಸ್ತಾನು ವಿಭಾಗ : ನಿತ್ಯದ ಬದುಕಿಗೆ ಬೇಕಾಗುವ ಸರಕುಗಳನ್ನು ಪೂರೈಸುವ ಅಂಗಡಿಗಳಿಗೆ ಮತ್ತು ಸುತ್ತಲಿಂದ ಬರುವ ಸರಕುಗಳ ದಾಸ್ತಾನಿಗೆ ಮೀಸಲಾದ ಈ ವಿಭಾಗ ನಗರ ವಿಭಾಗದೊಡನೆ ಸಂಪರ್ಕವಿರಿಸಿಕೊಂಡು ಇಲ್ಲಿಯ ನಿವಾಸಿಗಳಿಗೆ ಬಹು ಅನುಕೂಲವಾಗಿದೆ.

ವಸತಿ ವ್ಯವಸ್ಥೆ : ಸು. 1,50,000 ಜನಕ್ಕೆ ವಸತಿ ಸೌಕರ್ಯ ಒದಗಿಸುವ ಯೋಜನೆಯನ್ನು ಈ ನಗರರಚನೆಯಲ್ಲಿ ಅಳವಡಿಸಲಾಗಿದೆ. ಸರ್ಕಾರಿ ಕಾರ್ಯಕರ್ತರಿಗಾಗಿ ಅವರವರ ಸಂಬಳಶ್ರೇಣಿಗನುಸಾರವಾಗಿ ಎಂಟು ಪ್ರಕಾರಗಳ ಮನೆಗಳನ್ನು ಒದಗಿಸಲಾಗಿದೆ. ರಾಜಧಾನಿಯ ವಸತಿ ಸೌಕರ್ಯ ಕೇವಲ ಸರ್ಕಾರಿ ಕಾರ್ಯಕರ್ತರಿಗೇ ಮೀಸಲಾಗಿರಬೇಕೆಂಬ ಉದ್ದೇಶವಿಲ್ಲ. ಅರ್ಧದಷ್ಟು ಮನೆಗಳನ್ನು ಸಾರ್ವಜನಿಕರ ವಸತಿಗಾಗಿ ಕೊಡುವ ಏರ್ಪಾಡು ಮಾಡಲಾಗಿದೆ. ಒಟ್ಟು 30 ಚೌಕಾಕಾರದ ವಸತಿ ಘಟಕಗಳುಳ್ಳ ಈ ನಗರದಲ್ಲಿ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ, ಮಾರುಕಟ್ಟೆ, ಆಸ್ಪತ್ರೆ, ಶಾಲೆ, ಕಾಲೇಜುಗಳಂಥ ಸಕಲ ನಾಗರಿಕ ಸೌಕರ್ಯಗಳನ್ನು ಹೊಂದಿದ 7,570 ಮನೆಗಳನ್ನು ಸರ್ಕಾರಿ ಕಾರ್ಯನಿರತರಿಗಾಗಿ ಮೀಸಲಾಗಿಟ್ಟರೂ ಮಧ್ಯೆ ಸಾರ್ವಜನಿಕರಿಗೆ ವಸತಿ ಸೌಕರ್ಯವನ್ನೊದಗಿಸಿಕೊಟ್ಟು ಸಮನ್ವಯ ಜೀವನದ ಅವಕಾಶ ಮಾಡಿಕೊಟ್ಟಿರುವುದು ಒಂದು ವಿಶೇಷವಾಗಿದೆ. 3–4 ಸಾವಿರ ಜನಕ್ಕೆ ಒಂದರಂತೆ ಪ್ರಾಥಮಿಕ ಶಾಲೆಯನ್ನೂ 10–12 ಸಾವಿರ ಜನಕ್ಕೆ ಒಂದರಂತೆ ಮಾಧ್ಯಮಿಕ ಶಾಲೆಯನ್ನೂ ಇಲ್ಲಿ ಒದಗಿಸಲಾಗಿದೆ. ಒಂದೊಂದು ಘಟಕದಲ್ಲಿಯೂ ಒಂದೊಂದು ಆಸ್ಪತ್ರೆ ಇದೆ. ನಗರಕ್ಕೆ ಸಾಬರ್ಮತೀ ನದಿಯಿಂದ ಕುಡಿಯುವ ನೀರಿನ ಪೂರೈಕೆ ಆಗುತ್ತದೆ. ಅವಶ್ಯಕ ಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಪೂರೈಕೆಯ ವ್ಯವಸ್ಥೆಯನ್ನೂ ಮಾಡಲಾಗಿದೆ.

ಈ ಹೊಸ ನಗರದ ನಿರ್ಮಾಣಕ್ಕೆ ಕೈಹಾಕುವ ಮುನ್ನ ಇಲ್ಲಿ ವಾಸವಾಗಿದ್ದ 783 ರೈತ ಕುಟುಂಬಗಳ ಬೇಸಾಯದ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡು ಅಂಥ ಕುಟುಂಬಗಳಿಗೆ ಅವಶ್ಯಕ ಏರ್ಪಾಡು ಮಾಡಿಕೊಡಬೇಕಾಯಿತು. ಸಾಬರ್ಮತೀ ನದೀಪ್ರದೇಶವನ್ನೂ ಒಳಗೊಂಡು ಒಟ್ಟು 1350 ಎಕರೆ ಭೂಮಿಯನ್ನು ವ್ಯಾಪಿಸಿದ ಈ ನಗರದ ರಚನೆಯನ್ನು ಅತ್ಯಂತ ಯೋಜನಾಬದ್ಧವಾಗಿ ಕೈಗೊಳ್ಳಲಾಗಿದ್ದು, ಹಳೆಯ ರಾಜಧಾನಿಗೂ ಹೊಸ ರಾಜಧಾನಿಗೂ ಸಜೀವ ಸಂಪರ್ಕವಿರಿಸಿಕೊಳ್ಳುವ ಏರ್ಪಾಡು ಮಾಡಲಾಗಿದೆ. ಅಹಮದಾಬಾದಿನಿಂದ ಗಾಂಧೀನಗರಕ್ಕೆ ಸುಂದರವಾದ ರಸ್ತೆಗಳನ್ನು ರಚಿಸಲಾಗಿದೆ. ಅಹಮದಾಬಾದ್ ವಿಮಾನ ನಿಲ್ದಾಣ ಇರುವುದು ಎರಡು ನಗರಗಳ ಮಧ್ಯದಲ್ಲಿ. ಮುಂಬೈ ದಿಲ್ಲಿಗಳನ್ನು ಕೂಡಿಸುವ ರಾಷ್ಟ್ರೀಯ ಹೆದ್ದಾರಿಗೆ (ನಂ.8) 5 ಕಿಮೀ. ಅಂತರದಲ್ಲಿ ಈ ನಗರವುಂಟು. ಇಲ್ಲಿಂದ ಖೋಡಿಯಾರ ರೈಲು ನಿಲ್ದಾಣಕ್ಕೆ ಹೋಗುವ ರಸ್ತೆ ಅಹಮದಾಬಾದ್–ಮೌಂಟ್ ಅಬೂ ನಡುವಣ ರಾಜ್ಯ ಹೆದ್ದಾರಿಗೂ ಸಂಪರ್ಕ ಕಲ್ಪಿಸುತ್ತದೆ. ನಗರದ ಒಳಗಡೆಯಲ್ಲಿ 45–100 ಮೀ. ಅಗಲದ ಸುಯೋಜಿತ ಸುಂದರ ರಸ್ತೆಗಳ ನಕ್ಷೆಯನ್ನೇ ಬರೆದಿರಿಸಿದಂತಿದೆ. ಈ ನಗರದ ಯಾವುದೇ ವಿಭಾಗದಲ್ಲಾಗಲಿ ಬಸ್ಸಿನಲ್ಲಿ ಸಂಚರಿಸುವಾಗ ಸೂರ್ಯ ಕಿರಣಗಳಿಂದ ಪ್ರಯಾಣಿಕರ ಕಣ್ಣುಗಳಿಗೆ ತೊಂದರೆಯಾಗದಂತೆ ರಸ್ತೆಗಳ ರಚನಾವಿನ್ಯಾಸವುಂಟು. ಹೀಗೆ ಈ ನಗರದ ಒಳಹೊರಗಿನ ಸಂಪರ್ಕ ಸೌಕರ್ಯಗಳಿಂದಾಗಿ ಇದಕ್ಕೆ ವಿಶೇಷ ಮಹತ್ತ್ವ ಲಭ್ಯವಾಗಿದೆ.

ಗಾಂಧೀನಗರ ಜಿಲ್ಲೆ : ಗಾಂಧೀನಗರ ಮತ್ತು ಸುತ್ತಲಿನ ಸ್ವಲ್ಪ ಪ್ರದೇಶವನ್ನು ಸೇರಿಸಿ ಹೊಸದೊಂದು ಜಿಲ್ಲೆಯನ್ನು ರಚಿಸಲಾಗಿದೆ. ಒಟ್ಟು 58,000 ಹೆಕ್ಟೇರ್ ವಿಸ್ತಾರವುಳ್ಳ ಈ ಜಿಲ್ಲೆ ನಗರದ ಸುತ್ತಮುತ್ತ ಸು.12 ಕಿಮೀ ವರೆಗೆ ಹರಡಿಕೊಂಡಿದೆ. ಇದರಲ್ಲಿ ಒಟ್ಟು 79 ಗ್ರಾಮಗಳಿವೆ. ನಾಲ್ಕು ಗ್ರಾಮಗಳು ಗಾಂಧೀನಗರದ ನಿವೇಶನದಲ್ಲಿ ಸೇರಿಹೋಗಿವೆ. ಜಿಲ್ಲೆಯ ಒಟ್ಟು ಜನಸಂಖ್ಯೆ 13,87,478 (2011). (ಬಿ.ಎ.ಎಸ್.)

**ಗಾಂಧೀ, ಫಿರೋಜ್ :** 1912–1960. ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರ ಪತಿ. ಜಹಾಂಗೀರ್ ಗಾಂಧಿಯವರ ಪುತ್ರ. 1912ರ ಸೆಪ್ಟೆಂಬರ್ 12ರಂದು ಜನಿಸಿದರು. ಮುಂಬಯಿಯಲ್ಲೂ ಲಂಡನಿನಲ್ಲೂ (ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್) ವಿದ್ಯಾಭ್ಯಾಸ ಮಾಡಿದರು. ಲಂಡನಿನಲ್ಲಿದ್ದಾಗಲೇ ಇವರು ಭಾರತೀಯ ವಿದ್ಯಾರ್ಥಿಗಳು ಮತ್ತು ಬ್ರಿಟಿಷ್ ಬುದ್ಧಿಜೀವಿಗಳಲ್ಲಿ ಗಾಂಧೀಜಿಯವರ



ವಿಚಾರಧಾರೆಯನ್ನು ಪ್ರಚಾರ ಮಾಡುವ ಕಾರ್ಯದಲ್ಲಿ ನಿರತರಾಗಿದ್ದರು. ಲಂಡನ್ನಿನ ಇಂಡಿಯನ್ ಮಜ್ಲಿಸ್‌ನ ಅಧ್ಯಕ್ಷರಾಗಿದ್ದರು. ಭಾರತದ ಸ್ವಾತಂತ್ರ್ಯದ ಬಗ್ಗೆ ಇವರಿಗಿದ್ದ ಅಮಿತೋತ್ಸಾಹ, ಇವರು ಮಾಡುತ್ತಿದ್ದ ಕೆಲಸ–ಇವು ಮಹಾತ್ಮ ಗಾಂಧಿ, ಜವಹರಲಾಲ್ ನೆಹರೂ ಮುಂತಾದವರ ಗಮನ ಸೆಳೆದುವು. ಇವರು 1942ರ ಮಾರ್ಚ್ 26ರಂದು ನೆಹರೂ ಅವರ ಕುಮಾರಿ ಇಂದಿರಾ ಅವರನ್ನು ವಿವಾಹವಾದರು. 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಕಾರಾಗೃಹವಾಸ ಪ್ರಾಪ್ತವಾಯಿತು. ಅನಂತರ ಇವರು ಲಖನೌದಿಂದ ಪ್ರಕಟವಾಗುವ ಇಂಗ್ಲಿಷ್ ದಿನಪತ್ರಿಕೆ ನ್ಯಾಷನಲ್ ಹೆರಾಲ್ಡ್ ಮತ್ತು ಹಿಂದಿ ದಿನಪತ್ರಿಕೆ ನವಜೀವನ ಇವುಗಳ ಪ್ರಕಾಶನ ಸಂಸ್ಥೆಯಾದ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದರು. ಇವರ ಮಾರ್ಗದರ್ಶನದಲ್ಲಿ ನ್ಯಾಷನಲ್ ಹೆರಾಲ್ಡ್ ಉತ್ತರ ಭಾರತದ ಪ್ರಮುಖ ರಾಷ್ಟ್ರೀಯ ಪತ್ರಿಕೆಗಳಲ್ಲಿ ಒಂದಾಯಿತು. ಇವರು ಇತರ ಪತ್ರಿಕೆಗಳೊಂದಿಗೂ ಯುವಜನ ಚಳವಳಿಗೆ ಸಂಬಂಧಪಟ್ಟ ಹಲವಾರು ಸಾರ್ವಜನಿಕ ಸಂಘ ಸಂಸ್ಥೆಗಳೊಂದಿಗೂ ನಿಕಟ ಸಂಬಂಧ ಹೊಂದಿದ್ದರು.

ಸ್ವಾತಂತ್ರ್ಯಾನಂತರ 1950ರಲ್ಲಿ ಫಿರೋಜ್ ಗಾಂಧಿಯವರು ಸಂಸತ್ತನ್ನು ಪ್ರವೇಶಿಸಿದರು. 1952ರಲ್ಲಿ ನಡೆದ ಪ್ರಥಮ ಮಹಾ ಚುನಾವಣೆಗಳಲ್ಲಿ ಜಯಗಳಿಸಿ ಲೋಕಸಭೆಯ ಸದಸ್ಯರಾದರು. 1957ರಲ್ಲಿ ಇವರು ಮತ್ತೊಮ್ಮೆ ಲೋಕಸಭೆಗೆ ಆಯ್ಕೆಯಾದರು. ಇವರು ಸಂಸತ್ತಿನಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ ಸದಸ್ಯರಾಗಿದ್ದರು. ಇವರು ದಕ್ಷ ಭಾಷಣಕಾರರೆಂದೂ ಸಮರ್ಥರಾದ ವಾದ ಚತುರರೆಂದೂ ಖ್ಯಾತಿ ಗಳಿಸಿದ್ದರು. ಇವರ ಕರ್ತವ್ಯನಿಷ್ಠೆ ಪ್ರಾಮಾಣಿಕತೆ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿದ್ದುವು.

ಜೀವವಿಮಾ ಕಾರ್ಪೊರೇಷನ್ ಮುಂತಾದ ಸರ್ಕಾರಿ ಉದ್ಯಮಗಳ ವ್ಯವಹಾರಗಳು, ಸರ್ಕಾರದಲ್ಲಿ ಮಿತವ್ಯಯ ಸಾಧನೆ–ಇಂಥ ನಾನಾ ವಿಚಾರಗಳಲ್ಲಿ ಗಾಂಧಿಯವರು ಆಸಕ್ತಿ ತಳೆದಿದ್ದರು. ಕೇಂದ್ರ ಸರ್ಕಾರದ ಉದ್ಯೋಗಿಗಳ ಮುಷ್ಕರದಲ್ಲಿ ಇವರು ಪ್ರಭಾವಪೂರ್ಣವಾದ ಮಧ್ಯಸ್ಥಿಕೆ ವಹಿಸಿದ್ದರು.

ಗಾಂಧಿಯವರು ಗೌಹಾತಿ (ಗುವಾಹಟಿ) ಯಲ್ಲಿರುವ ಇಂಡಿಯನ್ ಆಯಿಲ್ ರಿಫೈನರೀಸ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು. ಇವರು 1960ರ ಸೆಪ್ಟೆಂಬರ್ 8ರಂದು ಹೃದಯಾಘಾತದಿಂದ ನಿಧನರಾದರು. ರಾಜೀವ್ ಗಾಂಧಿ ಮತ್ತು ಸಂಜಯ್ ಗಾಂಧಿ ಇವರು ಫಿರೋಜ್ ಗಾಂಧಿಯವರ ಪುತ್ರರು. (ಎಸ್.ಎಸ್.ಆರ್.)

**ಗಾಂಧೀ, ಮೋಹನ್‌ದಾಸ್ ಕರಮ್‌ಚಂದ್ :** 1869–1948. ಭಾರತದ ಸ್ವಾತಂತ್ರ್ಯ ಶಿಲ್ಪಿ. ಅಹಿಂಸಾತ್ಮಕ ಕ್ರಾಂತಿಯಿಂದ ಬ್ರಿಟಿಷರ ಚಕ್ರಾಧಿಪತ್ಯವನ್ನು ಭಾರತದಲ್ಲಿ ಕೊನೆಗೊಳಿಸಿದ ಕಾರಣಪುರುಷ. ತನ್ನ ಇಡೀ ಬಾಳನ್ನು ಸತ್ಯಶೋಧನೆಗಾಗಿ ಮುಡಿಪಿಟ್ಟ ಮಹಾತ್ಮ. ಹಲವಾರು ಶತಮಾನಗಳಿಂದ ನಿಸ್ಸತ್ತ್ವಯುತವೂ ನಿರ್ವೀರ್ಯವೂ ವಿವಿಕ್ತವೂ ಆಗಿ ಪರಿಣಮಿಸಿದ್ದ ಭಾರತೀಯ ಸಮಾಜವನ್ನು ಕ್ರಾಂತಿಕಾರಿ ಪರಿವರ್ತನೆಗಳಿಗೆ ಒಳಪಡಿಸಿದ ದ್ರಷ್ಟಾರ. ಜನನ 1869ರ ಅಕ್ಟೋಬರ್ 2ರಂದು. ಕಾಠಿಯಾವಾಡದ ಪೋರ್‌ಬಂದರಿನಲ್ಲಿ. ತಂದೆ ಕರಮ್‌ಚಂದ್ ಗಾಂಧೀ ರಾಜಕೋಟೆಯಲ್ಲೂ ವಾಂಕನೇರಿನಲ್ಲೂ ದಿವಾನರಾಗಿದ್ದರು. ಗಾಂಧಿಯವರ ತಾಯಿ ಪುತಲಿಬಾಯಿ. ತಂದೆ ಸ್ವಾಮಿಭಕ್ತ, ಸತ್ಯನಿಷ್ಠ, ಧೈರ್ಯಶಾಲಿ, ಉದಾರಿ. ತಾಯಿಯ ಧರ್ಮಶ್ರದ್ಧೆ ಅನುಪಮವಾದ್ದು. ಗಾಂಧಿಯವರು ಆಕೆಯಿಂದ ಬಹಳಮಟ್ಟಿಗೆ ಪ್ರಭಾವಿತರಾಗಿದ್ದರು.

ಗಾಂಧಿಯವರ ವಿದ್ಯಾಭ್ಯಾಸ ಪೋರ್‌ಬಂದರ್ ಮತ್ತು ರಾಜಕೋಟೆಗಳಲ್ಲಿ ನಡೆಯಿತು. ಶಾಲೆಯಲ್ಲಿ ಅವರು ಸಾಮಾನ್ಯ ವಿದ್ಯಾರ್ಥಿಯಾಗಿದ್ದರು. ಅವರು ಎಂದಿಗೂ ಕಾಲ ತಪ್ಪಿ ನಡೆಯುತ್ತಿರಲಿಲ್ಲ. ಹಿರಿಯರಲ್ಲಿ ವಿಧೇಯತೆ, ಎಲ್ಲ ಬಾಲಕರಂತೆ ಅವರೂ ಕೆಟ್ಟ ಸಹವಾಸ ಸೇರಿ, ಹೊಗೆ ಸೇದಿದರು, ಕಳ್ಳತನವನ್ನೂ ಮಾಡಿದರು, ಮಾಂಸ ಕೂಡ ತಿಂದರು. ಆದರೆ ಇವು ಮಾಡಬಾರದ ಕೃತ್ಯಗಳೆಂದು ಬಹಳ ಬೇಗ ಅರಿತು ಕೊಂಡರು. ಪಶ್ಚಾತ್ತಾಪಪಟ್ಟು, ಇವನ್ನು ತ್ಯಜಿಸಿದರು.

ಗಾಂಧಿಯವರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಹದಿಮೂರನೆಯ ವಯಸ್ಸಿನಲ್ಲಿ, ಕಸ್ತೂರ ಬಾರೊಂದಿಗೆ ಅವರ ವಿವಾಹವಾಯಿತು. ಕಸ್ತೂರ ಬಾ ಅವರಿಗೂ ಗಾಂಧಿಯವರಿಗಾಗಿದಷ್ಟೇ ವಯಸ್ಸಾಗಿತ್ತು. ಉತ್ತರೋತ್ತರದಲ್ಲಿ ಅವರಿಗೆ ನಾಲ್ವರು ಗಂಡುಮಕ್ಕಳಾದರು (**ನೋಡಿ– ಕಸ್ತೂರಬಾ**).

ಗಾಂಧಿಯವರ ಎಳಮನಸ್ಸಿನ ಮೇಲೆ ಅದ್ಭುತ ಪರಿಣಾಮ ಮಾಡಿದ ನಾಟಕ ಹರಿಶ್ಚಂದ್ರ. ತಾವೂ ಸತ್ಯಸಂಧರಾಗಬೇಕೆಂಬುದು ಅವರು ಮನಸ್ಸು ಮಾಡಿದರು.



**ಪೋರ್‌ಬಂದರನಲ್ಲಿರುವ ಮನೆ, ಗಾಂಧೀ ಇಲ್ಲಿ ಜನಿಸಿದರು**

ರಂಭಾ ಎಂಬ ದಾದಿ ಅವರಿಗೆ ರಾಮನಾಮ ಕಲಿಸಿದ್ದಳು. ಸತ್ಯ, ರಾಮನಾಮ, ಇವೆರಡೂ ಗಾಂಧೀ ಜೀವನದ ಪರಮ ಆದರ್ಶಗಳಾಗಿದ್ದುವು.

ಗಾಂಧಿಯವರು 18ನೆಯ ವಯಸ್ಸಿನಲ್ಲಿ ರಾಜಕೋಟೆಯ ಆಲ್ಫ್ರೆಡ್ ಪ್ರೌಢಶಾಲೆ ಯಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿದರು. ಅನಂತರ ಅವರು ಕಾಲೇಜು ಸೇರಿದರಾದರೂ ಅವರ ವಿದ್ಯಾಭ್ಯಾಸ ಚೆನ್ನಾಗಿ ಆಗಲಿಲ್ಲ. ಆಗ ಹಿತೈಷಿಗಳೊಬ್ಬರ ಸಲಹೆಯಂತೆ ಅವರು ಇಂಗ್ಲೆಂಡಿಗೆ ಹೋಗಿ ನ್ಯಾಯಶಾಸ್ತ್ರ ವ್ಯಾಸಂಗ ಮಾಡಿಬರಬೇಕೆಂದು ನಿರ್ಧಾರವಾಯಿತು. ವಿದೇಶದಲ್ಲಿರುವಾಗ ಮದ್ಯಪಾನ, ಪರಸ್ತ್ರೀಸಂಗ, ಮಾಂಸಾಹಾರ ಸೇವನೆ ಮಾಡುವುದಿಲ್ಲವೆಂದು ತಾಯಿಗೆ ವಚನವಿತ್ತು, 1888ರ ಸೆಪ್ಟೆಂಬರ್ 4ರಂದು ಗಾಂಧಿಯವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಮೋಧ್ ಬನಿಯ ಜಾತಿಯಲ್ಲಿ ಮೊಟ್ಟಮೊದಲು ಸಮುದ್ರಯಾನ ಮಾಡಿದವರು ಅವರೇ. ಇದು ಜಾತಿಪದ್ಧತಿಗೆ ನಿಷಿದ್ಧವೆಂದು ಮುಖಂಡರು ಅವರಿಗೆ ಬಹಿಷ್ಕಾರ ಹಾಕಿದರು. ಆಗ ಗಾಂಧಿಯವರಿಗೆ 19 ವರ್ಷ. ಕಸ್ತೂರ ಬಾ ಆ ವೇಳೆಗೆ ಒಂದು ಗಂಡು ಮಗುವಿನ ತಾಯಿಯಾಗಿದ್ದರು.

ಗಾಂಧಿಯವರು ಲಂಡನಿನಲ್ಲಿ ಮೂರು ವರ್ಷಗಳ ಕಾಲ ಇದ್ದರು. ಅಪ್ಪಟ ಆಂಗ್ಲ ಗೃಹಸ್ಥನಂತೆ ಆಗಬೇಕೆಂಬುದು ಆರಂಭದಲ್ಲಿ ಇವರ ಪ್ರಯತ್ನವಾಗಿತ್ತು. ನೃತ್ಯ, ಫ್ರೆಂಚ್, ಉಪನ್ಯಾಸ ಕಲೆ ಇವನ್ನು ಅಭ್ಯಸಿಸಬೇಕೆಂದು ಪ್ರಯತ್ನಿಸಿ, ಅವು ತಮಗೆ ಸಾಧ್ಯವಿಲ್ಲವೆಂದು ಕೈಬಿಟ್ಟರು. ಕರ್ತವ್ಯದ ಕಡೆ ಚೆನ್ನಾಗಿ ಗಮನವಿಟ್ಟು ವ್ಯಾಸಂಗ ಮಾಡಿದರು.

ಗಾಂಧಿಯವರು ತಮ್ಮ ತಾಯಿಗೆ ಕೊಟ್ಟಿದ್ದ ವಚನಗಳನ್ನು ಈಡೇರಿಸಲು ಬಹಳ ಶ್ರಮಪಟ್ಟರು. ಮಾಂಸಾಹಾರ ಸೇವಿಸದೆ ಲಂಡನಿನಲ್ಲಿ ಇರುವುದಾದರೂ ಹೇಗೆ ಎಂದು ಸಂಶಯ ಪಡುತ್ತಿದ್ದ ಅವರು ಒಂದು ನಿದರ್ಶನವಾದರು. ಮೊದಮೊದಲು ಶಾಖಾಹಾರದ ಭೋಜನಗೃಹಗಳಲ್ಲಿ ಊಟಮಾಡುತ್ತಿದ್ದರು. ಕೊನೆಗೆ ತಾವೇ ಅಡಿಗೆ ಮಾಡಿಕೊಳ್ಳಲಾರಂಭಿಸಿ ಸಸ್ಯಾಹಾರಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಯೋಗಗಳನ್ನು ಮಾಡಿದರು. ರುಚಿಯ ಅಧಿಷ್ಠಾನ ಮನಸ್ಸೇ ಹೊರತು ನಾಲಗೆಯಲ್ಲವೆಂಬುದು ಅವರ ಅರಿವಿಗೆ ಬಂತು. ಅಸ್ವಾದ ಅವರ ಜೀವನದ ಒಂದು ನಿಯಮವಾಯಿತು. ನೀತಿ ತಪ್ಪುವಂಥ ಪ್ರಸಂಗವೂ ಒಮ್ಮೆ ಗಾಂಧಿಯವರಿಗೆ ಬರುವುದರಲ್ಲಿತ್ತು. ಲಂಡನಿನಲ್ಲಿದ್ದಾಗಲೇ ಗಾಂಧಿಯವರು ಭಗವದ್ಗೀತೆಯನ್ನು ಮೊದಲನೆಯ ಬಾರಿಗೆ ಓದಿದ್ದು. ಆ ಮಹಾಗ್ರಂಥ ಅವರ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಬೀರಿತು. ಅವರ ಬೈಬಲಿನ ಹೊಸ ಒಡಂಬಡಿಕೆಯನ್ನು ಓದಿದ್ದೂ ಅದೇ ಕಾಲದಲ್ಲಿ. ಕೇಡುಕಿಗೆ ಕೇಡುಕನ್ನು ಮಾಡಬೇಡ–ಎಂಬ ಸೂಕ್ತ ಅವರಿಗೆ ಬಹಳ ಹಿಡಿಸಿತು. ಅವರು ಚಿಕ್ಕವರಿದ್ದಾಗ ಓದಿದ್ದ, ಗುಜರಾತೀ ಕವಿ ಶಾಮಲಾಲ್ ಭಟ್ಟನ, ಒಂದು ಸೀಸಪದ್ಯದ ಉದಾತ್ತ ಭಾವಗಳನ್ನು ಅದು ಸಮರ್ಥಿಸಿತು.

ಗಾಂಧಿಯವರು ಇಂಗ್ಲೆಂಡಿನಲ್ಲಿ ವ್ಯಾಸಂಗ ಮುಗಿಸಿ ಬ್ಯಾರಿಸ್ಟರ್ ಪದವಿ ಪಡೆದು 1891ರ ಜೂನ್ 12ರಂದು ಭಾರತಕ್ಕೆ ಹಿಂದಿರುಗಿ ಎರಡು ವರ್ಷಕಾಲ ಮುಂಬಯಿ ರಾಜಕೋಟೆಗಳಲ್ಲಿ ವಕೀಲ ವೃತ್ತಿ ಮಾಡಿದರು. ಆದರೆ ಅವರಿಗೆ ಯಶಸ್ಸು ದೊರಕಲಿಲ್ಲ. ಅವರಲ್ಲಿ ಆತ್ಮವಿಶ್ವಾಸ, ವಾದಚಾತುರ್ಯ ಇರಲಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದ ಮುಸ್ಲಿಂ ವರ್ತಕರೊಬ್ಬರಿಂದ ಅವರಿಗೆ ಅನಿರೀಕ್ಷಿತವಾಗಿ ಬೇಡಿಕೆಯೊಂದು ಬಂತು. ತಮ್ಮ ಐರೋಪ್ಯ ವಕೀಲರಿಗೆ ಸಹಾಯಕರಾಗಬೇಕೆಂದು ಆ ವರ್ತಕರು ಬಯಸಿದರು. ಇದು ಗಾಂಧಿಯವರ ಬಾಳಿನ ಒಂದು ಮುಖ್ಯ ತಿರುವಾಗಿ ಪರಿಣಮಿಸಿತು. 1893ರ ಮೇ ತಿಂಗಳಿನಲ್ಲಿ ಡರ್ಬನಿನಲ್ಲಿ ಬಂದು ಇಳಿದ ಒಂದು ವಾರದ ಮೇಲೆ ಗಾಂಧಿಯವರು ಅಲ್ಲಿಯ ನ್ಯಾಯಾಲಯಕ್ಕೆ ಹೋದಾಗ ಅವರು ತಲೆಗೆ ಸುತ್ತಿದ್ದ ಪೇಟವನ್ನು ತೆಗೆಯಬೇಕೆಂದು ನ್ಯಾಯಾಧೀಶ ಆಜ್ಞೆ ಮಾಡಿದ. ಅಲ್ಲಿಯ ಬಿಳಿಯರು ಭಾರತೀಯರನ್ನು ಕಾಣುತ್ತಿದ್ದ ರೀತಿ ಎಂಥದೆಂಬುದು ಗಾಂಧಿಯವರಿಗೆ ಪ್ರಥಮವಾಗಿ ಅರಿವಿಗೆ ಬಂತು. ಇದಕ್ಕಿಂತ ಅತ್ಯಂತ ತೀವ್ರತರವಾದ ಆಘಾತವೊಂದು ಅವರಿಗೆ ಕಾದಿತ್ತು. ಅವರು ಡರ್ಬನಿನಿಂದ ಪ್ರಿಟೋರಿಯಕ್ಕೆ ರೈಲ್ವೆಯ ಮೂಲಕ ಒಂದನೆಯ ತರಗತಿಯ ಡಬ್ಬಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿತು. ಮಾರಿಟ್ಸ್‌ಬರ್ಗ್‌ನಲ್ಲಿ ಬಿಳಿಯನೊಬ್ಬ ಆ ಡಬ್ಬಿಯನ್ನು ಹೊಕ್ಕ. ಗಾಂಧಿಯವರ ಬಳಿ ಒಂದನೆಯ ತರಗತಿಯ ಟಿಕೆಟ್ ಇದ್ದರೂ ಆತ ಗಾಂಧಿಯವರನ್ನು ಹೊರತಳ್ಳಿಸಿದ. ವರ್ಣೀಯರು ಒಂದನೆಯ ತರಗತಿಯಲ್ಲಿ ಬಿಳಿಯರೊಂದಿಗೆ ಪ್ರಯಾಣಮಾಡುವುದಕ್ಕೆ ನಿಷೇಧವಿತ್ತು. ಕತ್ತಲು ತುಂಬಿದ ವಿಶ್ರಾಂತಿಮಂದಿರದಲ್ಲಿ ಗಾಂಧಿಯವರು ಚಳಿಯಿಂದ ನಡುಗುತ್ತ ರಾತ್ರಿ ಕಳೆಯಬೇಕಾಯಿತು. ನನ್ನ ಗಂಟುಮೂಟೆ ಎಲ್ಲಿತ್ತೆಂಬುದು ನನಗೆ ಗೊತ್ತಿರಲಿಲ್ಲ. ಅದು ಎಲ್ಲಿದೆಯೆಂದು ಯಾರನ್ನಾದರೂ ಕೇಳುವ ಧೈರ್ಯವೂ ನನಗಿರಲಿಲ್ಲ. ಹಾಗೆ ಮಾಡಿದರೆ ಮತ್ತೆ ಅವಮಾನ ಹಲ್ಲೆಗಳಿಗೆ ಗುರಿಯಾಗಬೇಕಾಗುತ್ತಿತ್ತು. ನಿದ್ದೆ ಮಾಡುವ ಪ್ರಶ್ನೆಯೇ ಇರಲಿಲ್ಲ. ನನ್ನ ಮನಸ್ಸು ಸಂಶಯದ ಪ್ರಭುತ್ವಕ್ಕೆ ಒಳಗಾಯಿತು. ಭಾರತಕ್ಕೆ ಓಡಿಹೋಗುವುದು ಹೇಡಿತನವೆಂದು ಸರಿರಾತ್ರಿಯಲ್ಲಿ ತೀರ್ಮಾನಕ್ಕೆ ಬಂದೆ–ಎಂದು ಅವರು ಬರೆದುಕೊಂಡಿದ್ದಾರೆ. ನನ್ನ ಕರ್ತವ್ಯವೇನೆಂದು ನನ್ನನ್ನು ನಾನೇ ಕೇಳಿಕೊಂಡೆ. ನಾನು ಭಾರತಕ್ಕೆ ಮರಳಬೇಕೇ? ಅಥವಾ, ದೇವರ ನೆರವಿಗಿರುವನೆಂದು ನಂಬಿ, ಮುಂದುವರಿದು, ಅನುಭವಿಸಬೇಕಾದ್ದನ್ನೆಲ್ಲ ಅನುಭವಿಸಲೆ? ಎಂದು ಅವರು ತಮ್ಮನ್ನು ತಾವೇ ಪ್ರಶ್ನಿಸಿಕೊಂಡರು. ಅಲ್ಲೇ ಉಳಿದು ಕಷ್ಟ ಅನುಭವಿಸಬೇಕೆಂದು ತೀರ್ಮಾನಿಸಿದೆ. ನನ್ನ ಕ್ರಿಯಾತ್ಮಕ ಅಹಿಂಸೆ ಆರಂಭವಾದ್ದು ಅಂದಿನಿಂದ.

ದಕ್ಷಿಣ ಆಫ್ರಿಕದಲ್ಲಿ ಭಾರತೀಯ ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸಬೇಕೆಂದು ನಿರ್ಧರಿಸಿದ ಗಾಂಧಿಯವರು ಈ ಉದ್ದೇಶಕ್ಕಾಗಿ 1894ರಲ್ಲಿ ನಟಾಲ್ ಇಂಡಿಯನ್ ಕಾಂಗ್ರೆಸ್ ಎಂಬ ಪಕ್ಷ ಸ್ಥಾಪಿಸಿದರು. ಬ್ರಿಟಿಷ್ ಚಕ್ರಾಧಿಪತ್ಯದ ಒಳ್ಳೆಯ ತನದಲ್ಲಿ ಅವರಿಗೆ ಆಗ ನಂಬಿಕೆಯಿತ್ತು. ದಕ್ಷಿಣ ಆಫ್ರಿಕ ಯುದ್ಧದಲ್ಲೂ (1899–1902) ಝುಲು ದಂಗೆಯಲ್ಲೂ ಅವರು ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಸ್ವಯಂ ಸೇವಕ ದಳವೊಂದನ್ನು ನಿರ್ಮಿಸಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಮನಃಪೂರ್ವಕವಾಗಿ ನೆರವು ನೀಡಿದರು. ಇದಕ್ಕೆ ಬ್ರಿಟಿಷ್ ಸರ್ಕಾರದ ಮೆಚ್ಚುಗೆ ಲಭಿಸಿತಾದರೂ ಭಾರತೀಯರ ಬಗ್ಗೆ ಅದರ ಧೋರಣೆ ಬದಲಾಗಲಿಲ್ಲ. ಪ್ರತಿಯಾಗಿ ಇನ್ನೂ ಕ್ರೂರವಾಯಿತು. ಈ ವೇಳೆಗೆ ಗಾಂಧಿಯವರು ವಕೀಲಿಯಲ್ಲಿ ವಿಶೇಷವಾದ ಕೀರ್ತಿಯನ್ನೂ ಯಶಸ್ಸನ್ನೂ ಗಳಿಸಿದ್ದರು. ಜೀವನದ ಬಗ್ಗೆ, ತಾವು ನಿರ್ವಹಿಸಬೇಕಾದ ಕರ್ತವ್ಯದ ಬಗ್ಗೆ ಅವರ ಮನಸ್ಸು ಹೆಚ್ಚು ಹೆಚ್ಚು ಖಚಿತಗೊಂಡಿತು. ಈ ನಡುವೆ ಅವರು ಭಾರತಕ್ಕೂ ಹೋಗಿ ಬರುತ್ತಿದ್ದರು. ಗೋಪಾಲಕೃಷ್ಣ ಗೋಖಲೆಯವರ ಪರಿಚಯವಾಗಿ ಅದು ಗಾಢ ಸ್ನೇಹವಾಗಿ ಪರಿಣಮಿಸಿತು. ಗೋಖಲೆಯವರನ್ನು ಗಾಂಧಿಯವರು ತಮ್ಮ ರಾಜಕೀಯ ಗುರುವೆಂದೇ ಭಾವಿಸಿದರು. ಭಾರತೀಯ ನೆಲಸುಗಾರರ ಹಕ್ಕುಗಳಿಗಾಗಿ ಹೋರಾಟ ನಡೆಸಲು ಇಂಡಿಯನ್ ಒಪಿನಿಯನ್ ಎಂಬ ಪತ್ರಿಕೆಯೊಂದು 1904ರಲ್ಲಿ ಪ್ರಾರಂಭವಾಯಿತು.

ಪ್ರತಿಯೊಬ್ಬ ಭಾರತೀಯನೂ ತನ್ನ ಬೆರಳ ಗುರುತುಗಳನ್ನು ನೋಂದಾಯಿಸ ಬೇಕೆಂದು ವಿಧಿಸುವ ಮಸೂದೆಯೊಂದಕ್ಕೆ ಟ್ರಾನ್ಸ್‌ವಾಲ್ ಸರ್ಕಾರ 1906ರಲ್ಲಿ ಅನುಮೋದನೆ ನೀಡಿದಾಗ ಹೋರಾಟ ಬಿರುಸಾಯಿತು. ಸ್ತ್ರೀಪುರುಷರೆಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಅನ್ವಯಿಸುತ್ತಿದ್ದ ಈ ಕಾನೂನಿನಂತೆ ನಡೆಯದವರು ದಂಡ ಕಾರಾಗೃಹವಾಸಗಳ ಶಿಕ್ಷೆಗೆ ಒಳಗಾಗಬೇಕಾಗುತ್ತಿತ್ತು. ಅಪಮಾನಕವಾದ ಈ ಕಾನೂನಿಗೆ ವಿಧೇಯತೆ ತೋರಿಸಬಾರದೆಂದು ಗಾಂಧಿಯವರು ಭಾರತೀಯರಿಗೆ ಹೇಳಿದರು. ಅವರ ನಾಯಕತ್ವದಲ್ಲಿ 2,000 ಸ್ತ್ರೀಯರು ಪ್ರತಿಭಟನೆಯ ಮೆರವಣಿಗೆ ನಡೆಸಿದರು. ಜೈಲಿಗೂ ನಡೆದರು.

ಗಾಂಧಿಯವರು ಆರಂಭಿಸಿದ ಸತ್ಯಾಗ್ರಹದಲ್ಲಿ ಅನೇಕ ಭಾರತೀಯ ವರ್ತಕರೂ ವಕೀಲರೂ ಸಾಮಾನ್ಯರೂ ಭಾಗವಹಿಸಿ ಕಾರಾಗೃಹವಾಸ ಅನುಭವಿಸಿದರು. ಗಡೀಪಾರು, ಆರ್ಥಿಕ ಒತ್ತಾಯ ಮುಂತಾದ ಯಾವುದಕ್ಕೂ ಸತ್ಯಾಗ್ರಹಿಗಳು ಜಗ್ಗಲಿಲ್ಲ. ಗಾಂಧಿಯವರ ನಾಯಕತ್ವದಲ್ಲಿ ಅವರ ನಂಬಿಕೆ ಅಷ್ಟು ಅಗಾಧವಾಗಿತ್ತು. 1912ರಲ್ಲಿ ಗೋಪಾಲಕೃಷ್ಣ ಗೋಖಲೆಯವರ ದಕ್ಷಿಣ ಆಫ್ರಿಕಕ್ಕೆ ಭೇಟಿಯಿತ್ತುದರ ಪರಿಣಾಮವಾಗಿ ವರ್ಣಭೇದನೀತಿ

ಪಠಾಣರ ನಡುವೆ

ನಿಲ್ಲುವುದೆಂದೂ ಭಾರತೀಯರು ತೆರಬೇಕಾಗಿದ್ದ ತೆರಿಗೆ ರದ್ದಾಗುವುದೆಂದೂ ಆಶೆ ಜನಿಸಿತು. ಆದರೆ ಅದು ಭಗ್ನವಾಯಿತು. ಕ್ರೈಸ್ತ ವಿವಾಹಪದ್ಧತಿಗನುಗುಣವಾಗಿ ವಿವಾಹ ದಾಖಲಾತಿ ಹೊಂದದ ಎಲ್ಲ ಹಿಂದೂ, ಮುಸ್ಲಿಂ ಮತ್ತು ಪಾರ್ಸೀ ವಿವಾಹಗಳೂ ನ್ಯಾಯಬದ್ಧವಲ್ಲವೆಂಬುದು ಶ್ರೇಷ್ಠ ನ್ಯಾಯಾಲಯವಿತ್ತ ಒಂದು ತೀರ್ಪಿನ ಫಲ. ಇದು ಭಾರತೀಯರ ಆತ್ಮಗೌರವವನ್ನು ಪೂರ್ಣವಾಗಿ ನಾಶಮಾಡಿತು. ಸತ್ಯಾಗ್ರಹ ಚಳವಳಿಗೆ ಇದರಿಂದ ಪುಟವಿಟ್ಟಂತಾಯಿತು.

ಈ ಸತ್ಯಾಗ್ರಹ ಹೋರಾಟದಲ್ಲಿ ಪುರುಷರ ಜೊತೆಗೆ ಸ್ತ್ರೀಯರೂ ಭಾಗವಹಿಸಿದರು. ಶಾಸನವನ್ನು ಉಲ್ಲಂಘಿಸಿ ನಟಾಲಿನಿಂದ ಟ್ರಾನ್ಸ್‌ವಾಲಿಗೆ ಪ್ರವೇಶಿಸುವುದೇ ಆಗಿನ ಸತ್ಯಾಗ್ರಹದ ಕ್ರಮ. 1913ರ ನವೆಂಬರ್ 6ರಂದು ನಡೆದ ಶಾಸನೋಲ್ಲಂಘನ ಯಾತ್ರೆಯಲ್ಲಿ ಅಸಂಖ್ಯ ಹೆಂಗಸರೂ ಗಂಡಸರೂ ಮಕ್ಕಳೂ ಭಾಗವಹಿಸಿದರು. ದಕ್ಷಿಣ ಆಫ್ರಿಕ ಸರ್ಕಾರ ಸತ್ಯಾಗ್ರಹಿಗಳ ಮೇಲೆ ನಡೆಸಿದ ಅತ್ಯಾಚಾರ ಬಹಳ ಹೇಯವಾದ್ದು. ಕೊನೆಗೆ ಗಾಂಧೀ ಮತ್ತು ಜನರಲ್ ಸ್ಮಟ್ಸರ ನಡುವೆ ಮಾತುಕತೆ ನಡೆದು ಒಂದು ಒಪ್ಪಂದವಾಯಿತು. 8 ವರ್ಷಗಳ ಸತ್ಯಾಗ್ರಹ ಕೊನೆಗೊಂಡಿತು. ಭಾರತೀಯರ ಬೇಡಿಕೆಗಳು ಸ್ವೀಕೃತವಾದುವು. ತೆರಿಗೆ ರದ್ದಾಯಿತು. ಭಾರತೀಯ ಸಂಪ್ರದಾಯದ ಪ್ರಕಾರ ನಡೆದ ವಿವಾಹಗಳು ಶಾಸನಬದ್ಧವೆಂದು ಘೋಷಿತವಾದುವು. ಇದರಿಂದ ದಕ್ಷಿಣ ಆಫ್ರಿಕದ ಭಾರತೀಯರ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕದಿದ್ದರೂ ಭಾರತೀಯರು ಆತ್ಮಗೌರವಕ್ಕಾಗಿ ಹೋರಾಡುವ ಶಕ್ತಿಯನ್ನು ಕಂಡುಕೊಂಡರು. ಅಲ್ಲದೆ ಈ ಹೋರಾಟದ ನಾಯಕತ್ವ ವಹಿಸಿದ್ದ ಗಾಂಧಿಯವರು ಅಪಾರ ಅನುಭವ ಪಡೆದಿದ್ದರು. ಸಾಮಾಜಿಕ, ರಾಜಕೀಯ ಚಳವಳಿಗಳನ್ನು ನಡೆಸಲು ಹೊಸದೊಂದು ತಂತ್ರವೇ ಅವರಿಂದ ಸೃಷ್ಟಿಯಾಗಿತ್ತು.

ಗಾಂಧಿಯವರು ಹೂಡಿದ ಈ ಹೋರಾಟವನ್ನು ಮೊದಲು ನಿಶ್ಶಸ್ತ್ರ ಪ್ರತಿಭಟನೆ ಎಂದೇ ಕರೆಯಲಾಗುತ್ತಿತ್ತು. ಅನಂತರ ಅವರು ಇದನ್ನು ಸದಾಗ್ರಹವೆಂದೂ ಕೊನೆಗೆ ಸತ್ಯಾಗ್ರಹ ಎಂದೂ ಕರೆದರು. 1906ರಿಂದ 1914ರ ವರೆಗೆ ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ ಚಳವಳಿ ನಡೆಯಿತು.

ತಮ್ಮ ವಕೀಲಿಯಿಂದ ಚೆನ್ನಾಗಿ ಸಂಪಾದನೆ ಮಾಡುತ್ತಿದ್ದ ಗಾಂಧಿಯವರು ಕ್ರಮೇಣ ಅದನ್ನೂ ಬಿಟ್ಟುಕೊಟ್ಟರು. ತಮ್ಮ ವೇಳೆಯನ್ನೆಲ್ಲ ಅವರು ಮುಂದಿರಿಸಿಕೊಂಡ ಉದ್ದೇಶಕ್ಕಾಗಿಯೇ ಮೀಸಲಾಗಿರಿಸಿದರು. ಜೀವನದ ಬಗ್ಗೆ ಅವರ ಧೋರಣೆ ಶೀಘ್ರವಾಗಿ ಬದಲಾಗುತ್ತಿತ್ತು. ಗೀತೆ ಉಪನಿಷತ್ತು ಕುರಾನ್ ಬೈಬಲ್‌ಗಳನ್ನು ಅವರು ಆಳವಾಗಿ ಅಭ್ಯಾಸ ಮಾಡಿದರು. ಗೀತೆಯಂತೂ ಅವರಿಗೆ ಬಾಯಿಪಾಠವಾಗಿತ್ತು. ಅದು ಅವರ ಜೀವನಧರ್ಮಸೂತ್ರ. ಅವರ ಮೇಲೆ ತುಂಬ ಪರಿಣಾಮ ಮಾಡಿದ ಇನ್ನೊಂದು ಪುಸ್ತಕವೆಂದರೆ ರಸ್ಕಿನನ ಅಂಟು ದಿಸ್ ಲಾಸ್ಟ್. ಎಲ್ಲರ ಒಳಿತಾದಾಗಲೇ ವ್ಯಕ್ತಿಯ ಒಳಿತು; ದುಡಿಮೆಯ ಬಾಳೇ ಸಾರ್ಥಕವಾದ್ದು–ಎಂಬುದು ಅವರು ಗ್ರಹಿಸಿದ ತತ್ತ್ವ. ಬ್ರಹ್ಮಚರ್ಯವನ್ನು ಅವರು ಅನುಷ್ಠಾನಕ್ಕೆ ತಂದರು. ತಮ್ಮ ಸಂಸಾರದೊಂದಿಗೂ ಸ್ನೇಹಿತರೊಂದಿಗೂ ಅವರು ಫೀನಿಕ್ಸ್ ಆಶ್ರಮವನ್ನೂ 1910ರಲ್ಲಿ ಟಾಲ್‌ಸ್ಟಾಯ್ ಆಶ್ರಮವನ್ನೂ ಸ್ಥಾಪಿಸಿದರು. ದೇಹ ಮನಸ್ಸುಗಳೆರಡರ ಸಾಮರಸ್ಯ ಸಾಧಿಸಿದರು. ಗುಡಿಸುವುದು, ಮಚ್ಚೆ ಹೊಲಿಯುವುದು, ಕೃಷಿ, ಮುದ್ರಣ–ಹೀಗೆ ಎಲ್ಲ ಬಗೆಯ ಕೆಲಸಗಳನ್ನೂ ಮಾಡಿದರು. ಯಾವ ಕೆಲಸವೂ ತುಚ್ಛವಲ್ಲ, ಯಾವುದೂ ದೊಡ್ಡದಲ್ಲ–ಎಂಬುದು ಅವರು ಸ್ವತಃ ಕಲಿತ, ಕಲಿಸಿದ ಪಾಠ. ಅವರೊಬ್ಬ ವಸ್ತುನಿಷ್ಠ ಆದರ್ಶವಾದಿ.

ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿದ್ದ 21 ವರ್ಷಗಳ ಕಾಲ ಅದು ಅವರಿಗೊಂದು ಪ್ರಯೋಗ ಶಾಲೆ ಆಯಿತು. ಅವರ ವ್ಯಕ್ತಿತ್ವ ವಿಕಾಸ ಹೊಂದಿದ್ದಲ್ಲದೆ, ಅವರ ಜೀವನತತ್ತ್ವದ ವಿಕಾಸವೂ ಆಯಿತು. ನೈತಿಕ ಪ್ರಶ್ನೆಗಳ ಬಗ್ಗೆ ಜಿಜ್ಞಾಸೆ ಅವರ ಬಾಲ್ಯದಿಂದಲೇ ಮುಂದುವರಿದಿದ್ದರೂ ಅದನ್ನು ಆಗ ವ್ಯವಸ್ಥಿತ ರೂಪದಲ್ಲಿ ನಡೆಸಿದರು. ಗೀತಾಧ್ಯಯನದಿಂದ ಅವರು ಅಸಂಗ್ರಹದ–ಐಚ್ಛಿಕ ದಾರಿದ್ರ್ಯದ–ಆದರ್ಶವನ್ನು ರೂಢಿಸಿಕೊಂಡರು. ನಿಷ್ಕಾಮಸೇವೆ, ಬ್ರಹ್ಮಚರ್ಯ ಇವು ಅವರ ಸಾರ್ವಜನಿಕ ಜೀವನಕ್ಕೆ ಶಕ್ತಿಯನ್ನು ನೀಡಿದವು. ಟಾಲ್‌ಸ್ಟಾಯಿಯ ಗ್ರಂಥಗಳ ಅಧ್ಯಯನ ಅವರ ಅಭಿಪ್ರಾಯಗಳನ್ನು ಮತ್ತಷ್ಟು ದೃಢಪಡಿಸಿತು. ಅವರು ಕಾಯಕದ ಪ್ರಭಾವವನ್ನು ಅರಿತರು. ಜಾನ್ ರಸ್ಕಿನ್ನನ ಅಂಟು ದಿಸ್ ಲಾಸ್ಟ್ ಗ್ರಂಥವಂತೂ ಅವರ ಜೀವನಪರಿವರ್ತನೆಗೆ ಪ್ರಧಾನ ಕಾರಣವಾಯಿತು. ಟಾಲ್‌ಸ್ಟಾಯಿ ಯೊಂದಿಗೆ ಅವರು ಪತ್ರವ್ಯವಹಾರ ಬೆಳೆಸಿದರು. ಸತ್ಯಾಗ್ರಹ ವಿಶ್ವವ್ಯಾಪಕವಾಗುವಷ್ಟು ಪ್ರಾಮುಖ್ಯವುಳ್ಳ ಒಂದು ಪರಿಕಲ್ಪನೆ ಎಂದು ಟಾಲ್‌ಸ್ಟಾಯ್ ಹೊಗಳಿದ. ಗಾಂಧಿಯವರು ಒಂದು ನೂತನ ಜೀವನದರ್ಶನವನ್ನೇ ಕಂಡುಕೊಂಡು ಅದಕ್ಕೆ ತಮ್ಮ ಬಾಳನ್ನು ಮುಡುಪಾಗಿ

ಲ್ಯಾಂಕಷೈರ್ ಸ್ತ್ರೀ ಕಾರ್ಮಿಕರ ನಡುವೆ

ಇಟ್ಟರು. ಅದನ್ನು ಸರ್ವೋದಯ–ಸರ್ವರ ಕ್ಷೇಮ–ಎಂದು ಕರೆದರು. ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿದ್ದಾಗ ತಮ್ಮ ಮನಸ್ಸಿನಲ್ಲಿ ರೂಪುಗೊಂಡ ಭಾವನೆಗಳನ್ನೆಲ್ಲ ಅಭಿವ್ಯಕ್ತಿಸಿ ಬರೆದ ಪುಸ್ತಕ ಹಿಂದ್ ಸ್ವರಾಜ್ ಅಥವಾ ಇಂಡಿಯನ್ ಹೋಂ ರೂಲ್ (1909). ಇದು ಗಾಂಧೀ ಚಿಂತನದ ಸಾರದಂತಿದೆ. ಸಾಮಾನ್ಯ ವ್ಯಕ್ತಿಯ ಹಕ್ಕುಗಳಿಗೆ ಮಾನ್ಯತೆ ಇರುವ, ಅವನ್ನು ಅವನು ರಕ್ಷಿಸಿಕೊಳ್ಳಲು ಅವಕಾಶವಿರುವ, ಶೋಷಣರಹಿತವಾದ ಸಮಾಜವೇ ತಮ್ಮ ಗುರಿಯೆಂದು ಅವರು ಇದರಲ್ಲಿ ಪ್ರತಿಪಾದಿಸಿದ್ದಾರೆ. ಯಂತ್ರ ನಾಗರಿಕತೆಯನ್ನು ಅವರು ಇಲ್ಲಿ ಖಂಡಿಸಿರುವ ರೀತಿ ಅನುಪಮವಾದ್ದು. ಟಾಲ್‌ಸ್ಟಾಯಿಗೆ ಈ ಪುಸ್ತಕ ತುಂಬ ಪ್ರಿಯವಾಯಿತು.

ಗಾಂಧಿಯವರು 1915ರ ಜನವರಿಯಲ್ಲಿ ಭಾರತಕ್ಕೆ ಬಂದರು. ರವೀಂದ್ರನಾಥ ಠಾಕೂರರು ಅವರನ್ನು ಮಹಾತ್ಮ ಎಂದು ಕರೆದರು. ಗೋಪಾಲಕೃಷ್ಣ ಗೋಖಲೆಯವರ ಸಲಹೆಯಂತೆ ಗಾಂಧಿಯವರು ಒಂದು ವರ್ಷ ಕಾಲ ಯಾವ ಸಾರ್ವಜನಿಕ ಕಾರ್ಯದಲ್ಲೂ ತೊಡಗಲಿಲ್ಲ. ಭಾರತದ ಪರಿಸ್ಥಿತಿಯ ಅಧ್ಯಯನವನ್ನು ಆರಂಭಿಸಿದರು. 1915ರ ಮೇ ತಿಂಗಳಲ್ಲಿ ಅಹಮದಾಬಾದಿನ ಬಳಿ ಸತ್ಯಾಗ್ರಹ ಆಶ್ರಮ ಆರಂಭವಾಯಿತು. ಆಶ್ರಮವಾಸಿಗಳು ಖಾದಿ ಧರಿಸಬೇಕಾಗಿತ್ತು; ಸತ್ಯ ಅಹಿಂಸೆ ಬ್ರಹ್ಮಚರ್ಯಗಳನ್ನು ಪಾಲಿಸುತ್ತ, ಅಸ್ಪೃಶ್ಯತಾ ನಿವಾರಣೆ, ಮಾತೃಭಾಷೆಯ ಮೂಲಕ ಶಿಕ್ಷಣ ಮುಂತಾದ ಕಾರ್ಯಗಳಲ್ಲಿ ಪ್ರವೃತ್ತರಾಗುವುದಾಗಿ ಅವರು ವ್ರತ ತೊಟ್ಟಿದ್ದರು.

ಗಾಂಧಿಯವರು ಎರಡು ವರ್ಷಗಳ ಕಾಲ ಭಾರತದಲ್ಲಿ ಸಂಚಾರ ಮಾಡಿದರು. ಒಂದನೆಯ ಮಹಾಯುದ್ಧ ಅಂತಿಮಘಟ್ಟ ಮುಟ್ಟಿದ್ದ ಆ ಕಾಲದಲ್ಲಿ ಬಿಹಾರದ ಚಂಪಾರಣ್‌ನ ರೈತರ ಕರುಣಾಜನಕ ಸ್ಥಿತಿ ಗಾಂಧಿಯವರ ಗಮನ ಸೆಳೆಯಿತು.

ಅಲ್ಲಿಯ ರೈತರು ದೀರ್ಘಕಾಲದಿಂದ ಐರೋಪ್ಯ ಮತ್ತು ಭಾರತೀಯ ಭೂಮಾಲೀಕರ ಶೋಷಣೆಗೆ ಒಳಗಾಗಿದ್ದರು. ಗಾಂಧಿಯವರು ರಾಜೇಂದ್ರ ಪ್ರಸಾದರೊಂದಿಗೆ ಅಲ್ಲಿಯ ರೈತರ ಸ್ಥಿತಿಯನ್ನು ಕುರಿತ ವಿಚಾರಣೆಯಲ್ಲಿ ತೊಡಗಿದರು. ಬ್ರಿಟಿಷ್ ಸರ್ಕಾರ ಇದನ್ನು ಸಹಿಸಲಿಲ್ಲ. ಗಾಂಧಿಯವರು ಆ ಜಿಲ್ಲೆಯಿಂದ ಹೊರಗೆ ಹೋಗಬೇಕೆಂಬ ಆಜ್ಞೆ ಜಾರಿಯಾಯಿತು. ಗಾಂಧಿಯವರು ಅದನ್ನು ಉಲ್ಲಂಘಿಸಿದರು. ಭಾರತದಲ್ಲಿ ಮೊಟ್ಟ



3ನೆಯ ತರಗತಿಯ ರೈಲು ಡಬ್ಬಿಯಲ್ಲಿ ಪ್ರಯಾಣ ಮಾಡುತ್ತಿರುವುದು

ಮೊದಲನೆಯ ಸತ್ಯಾಗ್ರಹವಿದು. ನ್ಯಾಯಾಲಯದಲ್ಲಿ ಅವರ ವಿಚಾರಣೆಯಾಯಿತು. ತಾವು ಆಜ್ಞೋಲ್ಲಂಘನೆ ಮಾಡಿದ್ದುಂಟೆಂದು ಗಾಂಧಿಯವರು ಒಪ್ಪಿಕೊಂಡರು. ಗವರ್ನರ್ ನಡುವೆ ಪ್ರವೇಶಿಸಿ, ವಿಚಾರಣಾ ಸಮಿತಿಯೊಂದನ್ನು ನೇಮಕ ಮಾಡಿದರು.

ಲಂಡನಿನ್ನಲ್ಲಿ ಬಹುಮಾನಿತ ಆಡಿನೊಂದಿಗೆ (1931)

ಗಾಂಧಿಯವರೂ ಸದಸ್ಯರಾಗಿದ್ದ ಆ ಸಮಿತಿಯ ಶಿಫಾರಸುಗಳ ಮೇರೆಗೆ ಚಂಪಾರಣ್ ರೈತರ ಸುಧಾರಣೆಗಾಗಿ ಕಾಯಿದೆ ಜಾರಿಗೆ ಬಂತು. ಅನಂತರ ಗಾಂಧಿಯವರ ಗಮನ ಅಹಮದಾಬಾದಿನ ಗಿರಿಣಿ ಕಾರ್ಮಿಕರತ್ತ ಹರಿಯಿತು. ಅವರಿಗೆ ನ್ಯಾಯವಾದ ವೇತನ ದೊರಕಬೇಕೆಂದು ಅವರು ಇಪ್ಪತ್ತೊಂದು ದಿನಗಳ ಮುಷ್ಕರವನ್ನು ಸಂಘಟಿಸಿದರು. ಅದೂ ಫಲಪ್ರದವಾಯಿತು.

ಬ್ರಿಟಿಷ್ ನ್ಯಾಯದಲ್ಲಿ ವಿಶೇಷ ನಂಬಿಕೆ ಇಟ್ಟಿದ್ದ ಮಹಾತ್ಮ ಗಾಂಧಿಯವರು ವೈಸ್‌ರಾಯ್ ಲಾರ್ಡ್ ಚೆಮ್ಸ್‌ಫರ್ಡನ ಅಪೇಕ್ಷೆಯಂತೆ ಒಂದನೆಯ ಮಹಾಯುದ್ಧದಲ್ಲಿ ಬ್ರಿಟನಿಗೆ ತಮ್ಮ ಬೆಂಬಲ ನೀಡಿದರು. ಆದರೆ ಅವರ ಈ ನಂಬಿಕೆ ಅಲುಗುವಂಥ ಘಟನೆಯೊಂದು ಅಷ್ಟರಲ್ಲಿ ಸಂಭವಿಸಿತು. ಜನರ ರಾಜಕೀಯ ಆಶೋತ್ತರಗಳನ್ನು ಸರ್ಕಾರ ಈಡೇರಿಸುವ ಬದಲು ಅವನ್ನು ಹತ್ತಿಕ್ಕುವ ಕ್ರಮ ಕೈಗೊಂಡಿತು. ಬ್ರಿಟಿಷ್ ಸರ್ಕಾರಕ್ಕೆ ವಿರುದ್ಧವಾದ ಕಲಾಪಗಳಲ್ಲಿ ತೊಡಗಿರುವರೆಂಬ ಸಂಶಯಕ್ಕೆ ಒಳಗಾದವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಲು ಸರ್ಕಾರಕ್ಕೆ ಅಧಿಕಾರ ನೀಡುವ ರೌಲತ್ ಕಾಯಿದೆ ಜಾರಿಗೆ ಬಂದಿತು. ಗಾಂಧಿಯವರು ಇದನ್ನು ಪ್ರತಿಭಟಿಸಿದರು. ಏಪ್ರಿಲ್ 6ರಂದು ಹರತಾಳವನ್ನಾಚರಿಸಬೇಕೆಂದು ಕರೆ ಇತ್ತರು. ಅವರು ದೆಹಲಿಗೆ ಹೋಗುತ್ತಿದ್ದಾಗ ಹಾದಿಯಲ್ಲಿ ದಸ್ತಗಿರಿಯಾದರು. ಇದರಿಂದ ಮುಳಿದ ಜನ ಹಿಂಸಾಚರಣೆ ಮಾಡಿದರು. ಗಾಂಧಿಯವರು ಸತ್ಯಾಗ್ರಹವನ್ನು ನಿಲ್ಲಿಸಬೇಕಾಯಿತು. ಅದೇ ಸಮಯದಲ್ಲಿ ಇನ್ನೊಂದು ಮಹಾ ದುರ್ಘಟನೆ ನಡೆಯಿತು. ಅಮೃತಸರದ ಜಲಿಯನ್‌ವಾಲಾಬಾಗಿನಲ್ಲಿ ಸೇರಿದ್ದ ನಿಶ್ಶಸ್ತ್ರಜನರ ಮೇಲೆ ಸರ್ಕಾರ ಮಷೀನ್-ಗನ್ ಪ್ರಯೋಗಿಸಿತು. ಪಂಜಾಬಿನಲ್ಲಿ ಲಷ್ಕರಿ ಕಾನೂನು ಜಾರಿಗೆ ಬಂತು. ಇದರಿಂದ ಇಡೀ ಭಾರತದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಕ್ರೋಧ ಹಬ್ಬಿತು.

ಲಂಡನಿನ ದುಂಡುಮೇಜಿನ ಪರಿಷತ್ತಿನಲ್ಲಿ

ಈ ಸಮಯದಲ್ಲಿ ಮಹಾತ್ಮ ಗಾಂಧಿಯವರು ಜನರಿಗೆ ಅಹಿಂಸೆಯನ್ನೂ ನಿರ್ಭಯವನ್ನೂ ಬೋಧಿಸಿದರು. ಇದಕ್ಕಾಗಿಯೇ ಇಂಗ್ಲಿಷಿನಲ್ಲಿ ಯಂಗ್ ಇಂಡಿಯ ಎಂಬ ಪತ್ರಿಕೆಯೂ ಗುಜರಾತಿಯಲ್ಲಿ ನವಜೀವನ ಎಂಬ ಪತ್ರಿಕೆಯೂ ಆರಂಭವಾದುವು. (1919). ಯಂಗ್ ಇಂಡಿಯ ಪತ್ರಿಕೆಯಲ್ಲಿ ಇವರ ಕೊನೆಯ ಮಗ ದೇವದಾಸ್ ಗಾಂಧೀ ಕೆಲಸ ಮಾಡುತ್ತಿದ್ದರು.

1920ರಲ್ಲಿ ಆರಂಭವಾದ ಒಂದು ಮುಖ್ಯ ಚಳವಳಿ ಖಿಲಾಫತ್. ತುರ್ಕಿಯ ಖಲೀಫನ ಅಧಿಕಾರಕ್ಕೆ ಚ್ಯುತಿ ಬಾರದಂತೆ ಬ್ರಿಟನಿಗೆ ಒತ್ತಾಯ ಹಾಕಲು ಭಾರತೀಯ ಮುಸ್ಲಿಮರು ಆರಂಭಿಸಿದ್ದ ಚಳವಳಿಯಿದು. ಮುಸ್ಲಿಮರ ಮನಸ್ಸನ್ನು ಕಲಕಿದ್ದ ಈ ಚಳವಳಿಯಲ್ಲಿ ಹಿಂದುಗಳು ಸಹಾನುಭೂತಿಯಿಂದ ಪಾಲ್ಗೊಳ್ಳಬೇಕೆಂಬುದು ಗಾಂಧಿಯವರ ಅಭಿಮತವಾಗಿತ್ತು. ಹಿಂದೂ ಮುಸ್ಲಿಂ ಐಕ್ಯ ಸಾಧನೆ ಇದರ ಉದ್ದೇಶ. ಬ್ರಿಟಿಷ್ ಸಾಮ್ರಾಜ್ಯಾಧಿಕಾರದ ಸಂಕೇತವಾದ ಎಲ್ಲ ಬಿರುದುಗಳನ್ನೂ ಗೌರವಗಳನ್ನೂ ಭಾರತೀಯರು ಹಿಂದಕ್ಕೊಪ್ಪಿಸಬೇಕು. ಶಾಲೆ ಕಾಲೇಜು ನ್ಯಾಯಾಲಯ ವಿಧಾನಸಭೆಗಳನ್ನು ಬಹಿಷ್ಕರಿಸಬೇಕು-ಎಂದು ಗಾಂಧಿಯವರು ಕರೆ ಕೊಟ್ಟರು. ತಮಗೆ ಬ್ರಿಟಿಷ್ ಸತ್ತೆಯಿಂದ ದತ್ತವಾಗಿದ್ದ ಪದಕವೇ ಮುಂತಾದವನ್ನೆಲ್ಲ ಅವರು ಹಿಂದುರುಗಿಸಿದರು. ಸತ್ಯಾಗ್ರಹ ಆರಂಭವಾಯಿತು. ಭಾರತದ ಜನರನ್ನು ಅವರು ಅಹಿಂಸಾತ್ಮಕ ಹೋರಾಟದ ಪಥದಲ್ಲಿ ಕೊಂಡೊಯ್ಯಲು ಸತತವಾಗಿ ಯತ್ನಿಸಿದರು. ಚರಖಾ ಅವರ ಸ್ವರಾಜ್ಯದ ಪ್ರತೀಕ ವಾಯಿತು. ಚರಖಾ ಅನಾರ್ಥಿಕವೆನ್ನಬಹುದು. ಆದರೆ ಇದು ಅತ್ಯಂತ ಅಗ್ಗ. ನಿರುದ್ಯೋಗಿಗಳಿಗೆ ಇದರಿಂದ ಇಷ್ಟಷ್ಟಾದರೂ ಉದ್ಯೋಗ ದೊರಕುತ್ತದೆ. ಭಾರತವನ್ನು ಲ್ಯಾಂಕಷೈರಿನ ಯಂತ್ರದ ಹಿಡಿತದಿಂದ ಬಿಡಿಸಲು ಇದೊಂದೇ ಮಾರ್ಗ. ಬೇರೆಲ್ಲ ವಿದೇಶೀ ವಸ್ತುಗಳನ್ನು ಬಹಿಷ್ಕರಿಸಿದರೂ ವಸ್ತ್ರಕ್ಕಾಗಿ ಅನ್ಯರನ್ನು ಅವಲಂಬಿಸಬೇಕಾದ ಪರಿಸ್ಥಿತಿಯನ್ನು ತಪ್ಪಿಸಲಿಕ್ಕಾಗಿ ಇದು ಅಗತ್ಯ-ಎಂಬುದು ಗಾಂಧಿಯವರ ವಾದ.

ಅಸಂಖ್ಯಾತ ಜನರಿಗೆ ತಮ್ಮ ಹರಿದ ಬಟ್ಟೆಯ ಬದಲು ಖಾದಿ ಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದ್ದದ್ದನ್ನು ಕಂಡು ಅವರ ಮನಸ್ಸು ಬಲು ನೊಂದಿತು. ಅಂಥವರಿಗೆ ಒಂದು ತುಂಡು ದಟ್ಟಿಯಿದ್ದರೂ ಸಾಕಿತ್ತು. ಹಾಗಿರುವಾಗ ತಾವಾದರೂ ಹೇಗೆ ಮೈ ತುಂಬ ಬಟ್ಟೆ ತೊಟ್ಟುಕೊಂಡಾರು? 1921ರಲ್ಲಿ ಗಾಂಧಿಯವರೂ ತುಂಡುಲುಂಗೀ ಧಾರಿಯಾದರು. ಅಸಹಕಾರ ಚಳವಳಿಯನ್ನು ಬಲಪಡಿಸಿದರು. ಅಸಹಕಾರ ಧಾರ್ಮಿಕ ಹಾಗೂ ನೈತಿಕ ಚಳವಳಿಯಾದರೂ ಸರ್ಕಾರವನ್ನು ಉರುಳಿಸುವುದೇ ಅದರ ಧ್ಯೇಯ– ಎಂದು ಸಾರಿದರು. ಬ್ರಿಟಿಷ್ ಚಕ್ರಾಧಿಪತ್ಯವನ್ನು ಸೈತಾನನ ಪ್ರಭುತ್ವವೆಂದು ಕರೆದರು.

1922ರಲ್ಲಿ ಗಾಂಧಿಯವರು ಗುಜರಾತಿನ ಬಾರ್ಡೋಲಿ ಜಿಲ್ಲೆಯಲ್ಲಿ ಸಾಮೂಹಿಕ ಕರನಿರಾಕರಣೆಯ ಚಳವಳಿಯ ನಾಯಕತ್ವ ವಹಿಸಲು ನಿರ್ಧರಿಸಿದರು. ಆದರೆ ಆ ಸಮಯಕ್ಕೆ ಸರಿಯಾಗಿ ಉತ್ತರ ಪ್ರದೇಶದ ಚೌರಿಚೌರಾದಲ್ಲಿ ಜನರು ಹಿಂಸಾಕಾರ್ಯದಲ್ಲಿ ತೊಡಗಿದರು. ಪೋಲೀಸರ ಮೇಲೆ ಹಲ್ಲೆ ಮಾಡಿದರು. ಜನರಿನ್ನೂ ಅಹಿಂಸಾತ್ಮಕ



ಎಸ್.ಎಸ್. ರಾಜಪುಟಾಣ ಹಡಗಿನ ಮೇಲೆ (ಆಗಸ್ಟ್ 1931)

ಚಳವಳಿಗೆ ಸಿದ್ಧರಾಗಿಲ್ಲವೆಂದು ಗಾಂಧಿಯವರಿಗೆ ಮನವರಿಕೆಯಾಗಿ ಸಾಮೂಹಿಕ ಚಳವಳಿಯನ್ನು ನಿಲ್ಲಿಸಿದರು. ಗಾಂಧಿಯವರ ಈ ನಿರ್ಣಯವನ್ನು ಅನೇಕರು ಒಪ್ಪಲಿಲ್ಲ. ಗಾಂಧಿಯವರು ಪ್ರಾಯಶ್ಚಿತ್ತರೂಪವಾಗಿ ಐದು ದಿನಗಳ ಉಪವಾಸ ಕೈಗೊಂಡರು. 1922ರ ಮಾರ್ಚ್ 13ರಂದು ಸರ್ಕಾರ ಅವರನ್ನು ಬಂಧಿಸಿತು. ಗಾಂಧಿಯವರು ಯಂಗ್ ಇಂಡಿಯ ಪತ್ರಿಕೆಯಲ್ಲಿ ಬರೆದಿದ್ದ ಲೇಖನಗಳು ರಾಜದ್ರೋಹಾತ್ಮಕವೆಂದು ಅದು ಅಪಾದಿಸಿತು. ನ್ಯಾಯಾಲಯ ಅವರಿಗೆ ಆರು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿತು. ಪುಣೆಯ ಕಾರಾಗೃಹದಲ್ಲಿ ಎರಡು ವರ್ಷ ಕಳೆದ ಮೇಲೆ ಗಾಂಧಿಯವರಿಗೆ ಅಂತ್ರಪುಚ್ಛ ವ್ಯಾಧಿಗಾಗಿ ಶಸ್ತ್ರಚಿಕಿತ್ಸೆ ನಡೆಯಬೇಕಾಗಿದ್ದುದರಿಂದ ಅವರು ಬಿಡುಗಡೆ ಹೊಂದಿದರು.

ಆ ವೇಳೆಗೆ ಖಿಲಾಫತ್ ಚಳವಳಿ ವಿಫಲವಾಗಿತ್ತು. ವಿಧಾನ ಮಂಡಲಗಳನ್ನು ಪ್ರವೇಶಿಸಿ ಅಲ್ಲಿಂದ ಸರ್ಕಾರವನ್ನು ವಿರೋಧಿಸಬೇಕೆಂಬವರು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದ್ದರು. ವಿಧಾನಮಂಡಲ ಪ್ರವೇಶ ಮಾಡಬೇಕೆಂಬುದು ಕಾಂಗ್ರೆಸಿನ ಬಹುಮತಾಭಿ ಪ್ರಾಯವಾಗಿತ್ತು. ಗಾಂಧಿಯವರು ರಾಜಕೀಯದಿಂದ ದೂರವಾದರು. ಖಾದಿ ಪ್ರಚಾರಕ್ಕೆ ಅವರು ಹೆಚ್ಚು ಗಮನ ನೀಡಿದರು. 1924ರಲ್ಲಿ ಬೆಳಗಾಂವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧಿಯವರು ಅಧ್ಯಕ್ಷರಾಗಿದ್ದರು.

1927ರಲ್ಲಿ–ಇರ್ವಿನ್ ವೈಸ್‌ರಾಯ್ ಆಗಿದ್ದಾಗ–ಭಾರತದ ರಾಜ್ಯಾಂಗ ಸುಧಾರಣೆ ಗಳಿಗಾಗಿ ಸರ್ ಜಾನ್ ಸೈಮನ್ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಆಯೋಗವನ್ನು ನೇಮಿಸಿತು. ಒಬ್ಬನಾದರೂ ಭಾರತೀಯ ಸದಸ್ಯನಿಲ್ಲದ ಆ ಆಯೋಗವನ್ನು ಭಾರತೀಯರು ವಿರೋಧಿಸಿದರು. ಕಾಂಗ್ರೆಸ್ ಬಹಿಷ್ಕಾರ ಹಾಕಿತು. ಭಾರತದ ರಾಜಕೀಯ ಭವಿಷ್ಯವನ್ನು ನಿರ್ಧರಿಸಲು ಬ್ರಿಟಿಷ್ ಮತ್ತು ಭಾರತೀಯ ಪ್ರತಿನಿಧಿಗಳನ್ನೊಳಗೊಂಡ ದುಂಡುಮೇಜಿನ ಪರಿಷತ್ತೊಂದು ನಡೆಯುವುದಾಗಿ ಪ್ರಕಟನೆ ಹೊರಬಿತ್ತು. ಭಾರತಕ್ಕೆ ಅಧಿರಾಜ್ಯ ಸ್ಥಾನವನ್ನು (ಡೊಮಿನಿಯನ್ ಸ್ಟೇಟಸ್) ನೀಡುವುದಾಗಿ ಪರಿಷತ್ತು ತೀರ್ಮಾನಿಸುವ ಬಗ್ಗೆ ವೈಸ್‌ರಾಯ್‌ಯಿಂದ ಭರವಸೆ ಬರಲಿಲ್ಲ. ಸಂಪೂರ್ಣ ಸ್ವರಾಜ್ಯವೇ ತನ್ನ ಗುರಿಯೆಂದು ಕಾಂಗ್ರೆಸ್ ಘೋಷಿಸಿತು. ಮತ್ತೊಂದು ಮಹಾ ಚಳವಳಿಗಾಗಿ ಸಿದ್ಧತೆಗಳು ನಡೆದುವು.

1930ರ ಮಾರ್ಚ್ 12ರಂದು ಗಾಂಧಿಯವರು ತಮ್ಮ ಸುಪ್ರಸಿದ್ಧ ಉಪ್ಪಿನ ಸತ್ಯಾಗ್ರಹವನ್ನಾರಂಭಿಸಿದರು. 78 ಮಂದಿ ಅನುಯಾಯಿಗಳೊಂದಿಗೆ ಗಾಂಧಿಯವರು ಅಹಮದಾಬಾದಿನಿಂದ 384 ಕಿಮೀ ದೂರದಲ್ಲಿ ಸಮುದ್ರ ದಂಡೆಯಲ್ಲಿರುವ ದಂಡಿಗೆ ಹೊರಟರು. ಉಪ್ಪಿನ ತಯಾರಿಕೆಯಲ್ಲಿ ಸರ್ಕಾರ ಹೊಂದಿದ್ದ ಏಕಸ್ವಾಮ್ಯವನ್ನು ವಿರೋಧಿಸಿ ಕಾನೂನು ಭಂಗ ಮಾಡುವುದು ಅವರ ಉದ್ದೇಶ. ಏಪ್ರಿಲ್ 6ರಂದು ಅವರು ದಂಡಿಯನ್ನು ತಲಪಿ, ಸಮುದ್ರಸ್ನಾನ ಮಾಡಿ ನೈಸರ್ಗಿಕ ಉಪ್ಪನ್ನು ಕೈಯಲ್ಲಿ ಹಿಡಿದರು. ನಾಡಿನಾದ್ಯಂತ ಜನರು ಗಾಂಧಿಯವರ ಕರೆಯಂತೆ ಸತ್ಯಾಗ್ರಹವನ್ನಾಚರಿ ಸಿದರು. ಸುಮಾರು ಒಂದು ಲಕ್ಷ ಜನ ದಸ್ತಗಿರಿಯಾದರು. ಮೇ 4ರಂದು ಗಾಂಧಿಯವರ ದಸ್ತಗಿರಿಯಾಯಿತು. 1931ರ ಜನವರಿ 26ರ ವರೆಗೂ ಸರ್ಕಾರ ಅವರನ್ನು ಸೆರೆಯಲ್ಲಿಟ್ಟಿತ್ತು. ಸತ್ಯಾಗ್ರಹವನ್ನು ಅಂತ್ಯಗೊಳಿಸುವ ಬಗ್ಗೆ ಮಾರ್ಚ್ 5ರಂದು ಗಾಂಧಿ–ಇರ್ವಿನ್ ಒಪ್ಪಂದಕ್ಕೆ ಸಹಿಯಾಯಿತು. ಸತ್ಯಾಗ್ರಹಿಗಳು ಬಿಡುಗಡೆಯಾದರು. ಕೆಲವೊಂದು ಮಿತಿಗಳೊಳಗೆ, ಸ್ವಂತ ಉಪಯೋಗಕ್ಕಾಗಿ ಉಪ್ಪನ್ನು ತಯಾರಿಸಲು ಅವಕಾಶ ಲಭ್ಯವಾಯಿತು.

ಮುಂಬಯಿಯ ಕಡಲದಂಡೆಯಲ್ಲಿ ಸಂಚಾರ (1937)

1931ರಲ್ಲಿ ಲಂಡನಿನಲ್ಲಿ ನಡೆದ ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧಿಯವರು ಪ್ರಯಾಣ ಬೆಳೆಸಿದರು. ಅವರ ಭೇಟಿಯಿಂದಾಗಿ ಇಂಗ್ಲೆಂಡ್–ಭಾರತಗಳ ಸಾಮಾನ್ಯ ಜನಗಳ ನಡುವೆ ಹೆಚ್ಚು ನಿಕಟ ಬಾಂಧವ್ಯ ಬೆಳೆಯಿತು. ಆದರೆ ಸಮ್ಮೇಳನದಲ್ಲಿ ಅಲ್ಪಸಂಖ್ಯಾತರಿಗೆ ಸರ್ಕಾರ ವಿಶೇಷ ಪ್ರಾಮುಖ್ಯ ನೀಡಿತು. ಭಾರತೀಯರಿಗೆ ಸ್ವಯಮಾಡಳಿತ ನೀಡುವುದಕ್ಕಿಂತ ಇದಕ್ಕೇ ಆದ್ಯ ಗಮನ ನೀಡುವುದಕ್ಕೆ ಗಾಂಧಿಯವರು ಒಪ್ಪಲಿಲ್ಲ. ಸರ್ಕಾರ ಅನಾವಶ್ಯಕವಾಗಿ ಭಾರತದ ಜನಗಳ ನಡುವೆ ಕೋಮುವಾರು ಭೇದಭಾವವನ್ನು ಬೆಳೆಸುತ್ತಿದೆಯೆಂಬ ವಿಷಯ ಅವರಿಗೆ ಮನವರಿಕೆ



ಮುಂಬಯಿಯಲ್ಲಿ ಮಹಾದೇವ ದೇಸಾಯಿ ಅವರೊಂದಿಗೆ

ಯಾಯಿತು. ಬ್ರಿಟನ್ ತನ್ನ ಅಧಿಕಾರವನ್ನು ಹಿಂದೆಗೆದು ಕೊಂಡರೆ ಕೋಮುವಾರು ಸಮಸ್ಯೆಗಳೆಲ್ಲ ತಾವಾಗಿಯೇ ಬಗೆಹರಿದಾವೆಂಬುದು ಅವರ ಭಾವನೆ. ಆದರೆ ಅವರ ವಾದ ಫಲಿಸಲಿಲ್ಲ. ಸಮ್ಮೇಳನದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಎತ್ತಿ ಹಿಡಿಯುವವರ ಸಂಖ್ಯೆಯೇ ಹೆಚ್ಚಾಗಿರುವಂತೆ ಸರ್ಕಾರ ತಂತ್ರ ಹೂಡಿತ್ತು.

1931ರ ಕೊನೆಯಲ್ಲಿ ಗಾಂಧಿಯವರು ಹಿಂದಿರುಗಿದಾಗ ಭಾರತದ ರಾಜಕೀಯ ಪರಿಸ್ಥಿತಿ ತೀವ್ರವಾಗಿತ್ತು. ಹಲವು ನಾಯಕರು ಬಂಧಿತರಾಗಿದ್ದರು. ನಿಷೇಧಾಜ್ಞೆಗಳು ಜಾರಿಯಲ್ಲಿದ್ದುವು. ಆಗ ವೈಸ್‌ರಾಯ್ ಆಗಿದ್ದ ವಿಲಿಂಗ್ಡನನಿಗೆ ಗಾಂಧಿಯವರು ಪತ್ರ ಬರೆದರು. ಪರಿಸ್ಥಿತಿ ಕೈಮೀರದಂತೆ ಯತ್ನಿಸಬೇಕೆಂದೂ ಅನಿವಾರ್ಯವಾದರೆ ಕಾಂಗ್ರೆಸ್ಸು ಸತ್ಯಾಗ್ರಹ ಹೋರಾಟ ವನ್ನು ಮತ್ತೆ ಆರಂಭಿಸಲಾಗುವುದೆಂದೂ ಎಚ್ಚರಿಸಿದರು.

ಆದರೆ ಸರ್ಕಾರ ಲಕ್ಷಿಸಲಿಲ್ಲ. 1932ರ ಜನವರಿ 4ರಂದು ಗಾಂಧಿಯವರು ದಸ್ತಗಿರಿಯಾದರು. ಪಟೇಲರನ್ನೂ ಅವರನ್ನೂ ಸರ್ಕಾರ ಪುಣೆಯ ಎರವಾಡ ಸೆರೆಮನೆ ಯಲ್ಲಿಟ್ಟಿತು. ಹರಿಜನರನ್ನು ಪ್ರತ್ಯೇಕ ಗೊಳಿಸಲು ಸರ್ಕಾರ ಕೈಗೊಳ್ಳಲಿದ್ದ ಕ್ರಮವೊಂದನ್ನು

ವಿರೋಧಿಸಿ ಭಾರತ ಕಾರ್ಯದರ್ಶಿಗೆ ಗಾಂಧಿಯವರು ಪತ್ರ ಬರೆದರು. ಗಾಂಧಿಯವರ ಅಭಿಪ್ರಾಯಗಳನ್ನು ಸರ್ಕಾರ ಕಡೆಗಣಿಸಿತು. ಸೆಪ್ಟೆಂಬರ್ 20 ರಂದು ಗಾಂಧಿಯವರು ಉಪವಾಸ ಆರಂಭಿಸಿದರು. ಅನೇಕ ದೇವಸ್ಥಾನ ಗಳು ಹರಿಜನರಿಗೆ ತೆರೆದುವು. ಐದು ದಿನಗಳ ಅನಂತರ ಹಲವು ಒತ್ತಾಯದಂತೆ ಗಾಂಧಿಯವರು ತಮ್ಮ ಉಪವಾಸವನ್ನು ಕೊನೆಗೊಳಿಸಿದರು.

ಅಸ್ಪೃಶ್ಯರೆನಿಸಿಕೊಂಡ ಹರಿ ಜನರ ಹಿತಸಾಧನೆಗೆ ಗಾಂಧಿ ಯವರು ಪಣತೊಟ್ಟರು. ಅವರಿಗೆ ಹರಿಜನರೆಂಬ ಹೆಸರು ಕೊಟ್ಟವರು ಗಾಂಧಿಯವರೇ. 1933ರಲ್ಲಿ ಅವರು ಹರಿಜನ ಎಂಬ ಹೆಸರಿನ ವಾರಪತ್ರಿಕೆ ಯೊಂದನ್ನು ಸ್ಥಾಪಿಸಿದರು. ಮುಂದೆ ಇದು ಹತ್ತು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು.

ಗಾಂಧಿಯವರು ವರ್ಧಾದಲ್ಲಿ ಸ್ಥಾಪಿಸಿದ ಆಶ್ರಮದಲ್ಲಿ ಸ್ವಲ್ಪಕಾಲ ವಿಶ್ರಾಂತಿ ಪಡೆದರು. ಆದರೆ ಆ ಜೀವ ದೀರ್ಘಕಾಲ ವಿಶ್ರಾಂತಿ ಬಯಸಲಿಲ್ಲ. ಹರಿಜನೋದ್ಧಾರಕ್ಕಾಗಿ ದೇಶಾದ್ಯಂತ ಅವರು ಸಂಚಾರ ಕೈಗೊಂಡು ಹಣ, ಒಡವೆ, ಸಂಗ್ರಹಿಸಿದರು.

ಕಾಂಗ್ರೆಸಿನ ಹಾದಿಯ ಬಗ್ಗೆ ಅವರಿಗೆ ಆ ವೇಳೆಗಾಗಲೇ ಅತೃಪ್ತಿ ಮೂಡಿತ್ತು. ಗಾಂಧಿಯವರ ದೃಷ್ಟಿಯಲ್ಲಿ ಅಹಿಂಸೆ ಒಂದು ವ್ರತ. ಆದರೆ ಕಾಂಗ್ರೆಸ್ಸು ಅದನ್ನು ಹಾಗೆಂದು ಪರಿಗಣಿಸಿರಲಿಲ್ಲ. ಅದರ ದೃಷ್ಟಿಯಲ್ಲಿ ಅದೊಂದು ಉಪಾಯ; ಸ್ವಾತಂತ್ರ್ಯ ಗಳಿಸಲು ಅದೊಂದು ಸಾಧನ ಮಾತ್ರ. ಗಾಂಧಿಯವರು ಕಾಂಗ್ರೆಸಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಗ್ರಾಮೋದ್ಧಾರ ಕಾರ್ಯಕ್ಕೇ ತಮ್ಮ ಸಮಯವನ್ನು ಮುಡಿಪಾಗಿಟ್ಟರು. ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘ ಸ್ಥಾಪಿತವಾಯಿತು. ಅವರು ವರ್ಧಾ ಬಳಿಯ ಸೇವಾಗ್ರಾಮದಲ್ಲಿ ನೆಲಸಿದರು.

ಆಗಾಖಾನ್ ಅರಮನೆ : ಗಾಂಧೀಯವರನ್ನು ಬಂಧನದಲ್ಲಿಟ್ಟಿದ್ದ ಸ್ಥಳ

1935ರ ಕಾಯಿದೆಯ ಪ್ರಕಾರ 1937ರಲ್ಲಿ ಭಾರತದ ವಿವಿಧ ಪ್ರಾಂತ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಮತ ಗಳಿಸಿತು. 11 ಪ್ರಾಂತ್ಯಗಳ ಪೈಕಿ ಒಂಬತ್ತರಲ್ಲಿ ಕಾಂಗ್ರೆಸ್ ಸರ್ಕಾರಗಳು ಸ್ಥಾಪಿತವಾದುವು. ಪಾನನಿರೋಧ, ಮೂಲ ಶಿಕ್ಷಣ, ರೈತರ ಋಣ ಪರಿಹಾರ, ಗ್ರಾಮಹಿತರಕ್ಷಣೆ–ಇವು ಕಾಂಗ್ರೆಸ್ ಸರ್ಕಾರಗಳ ಮುಂದೆ ಗಾಂಧಿಯವರು ಇಟ್ಟ ಗುರಿಗಳು.

1939ರ ಸೆಪ್ಟೆಂಬರಿನಲ್ಲಿ ಎರಡನೆಯ ಮಹಾಯುದ್ಧ (**ನೋಡಿ– ಎರಡನೆಯ–ಮಹಾಯುದ್ಧ**) ಆರಂಭವಾದಾಗ ಬ್ರಿಟಿಷ್ ಸರ್ಕಾರಕ್ಕೆ ತಮ್ಮ ನೈತಿಕ ಬೆಂಬಲ ನೀಡಲು ಗಾಂಧಿಯವರು ಸಿದ್ಧವಾಗಿದ್ದರು. ಈ ಬಿಕ್ಕಟ್ಟಿನ ಕಾಲದಲ್ಲಿ ಬ್ರಿಟನನ್ನು ತೊಡಕಿಗೆ ಸಿಲುಕಿಸುವ ಯಾವ ಕ್ರಮಕ್ಕೂ ಗಾಂಧಿಯವರು ಸಿದ್ಧವಿರಲಿಲ್ಲ. ಜರ್ಮನಿ ಜಪಾನ್‌ಗಳ ಸೈನಿಕ ನೆರವು ಪಡೆದು ಭಾರತದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕೆಂದು ಸುಭಾಷ್ ಚಂದ್ರ ಭೋಸರ ವಾದ ಅವರಿಗೆ ಒಪ್ಪಿಗೆಯಾಗಲಿಲ್ಲ. ಆದರೆ ಯುದ್ಧ ಮುಗಿದ ಮೇಲೆ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಾಗಿ ಭರವಸೆ ನೀಡಿದರೆ ಮಾತ್ರ ಬ್ರಿಟನಿನ ಯುದ್ಧಕಾರ್ಯಕ್ಕೆ ಸಹಕಾರ ನೀಡುವುದೆಂಬುದು ಕಾಂಗ್ರೆಸ್ ಅಭಿಪ್ರಾಯವಾಗಿತ್ತು. ಬ್ರಿಟಿಷ್ ಸರ್ಕಾರದಿಂದ ಅಂಥ ಭರವಸೆಯೇನೂ ಬರಲಿಲ್ಲ.

1940ರಲ್ಲಿ ಗಾಂಧಿಯವರು ವೈಯಕ್ತಿಕ ಸತ್ಯಾಗ್ರಹವನ್ನಾರಂಭಿಸಿದರು. ಗಾಂಧಿಯವರ ಕರೆಯಂತೆ ಸತ್ಯಾಗ್ರಹ ಮಾಡಿ ಕಾರಾಗೃಹ ಹೊಕ್ಕವರ ಪೈಕಿ ವಿನೋಬಾ ಭಾವೆ ಮೊದಲಿಗರು. 1941ರ ಅಂತ್ಯದ ವೇಳೆಗೆ ಯುದ್ಧದಲ್ಲಿ ಬ್ರಿಟನಿನ ಸ್ಥಿತಿ ಆತಂಕಕಾರಿಯಾಗಿ ಪರಿಣಮಿಸಿತ್ತು. ಜಪಾನೀಯರ ಆಕ್ರಮಣಕಾರ್ಯ ತೀವ್ರವಾಗಿತ್ತು. ಸರ್ಕಾರ ಸತ್ಯಾಗ್ರಹಿಗಳನ್ನು ಸೆರೆಯಿಂದ ಬಿಟ್ಟಿತು. ಭಾರತದ ರಾಜಕೀಯ ಸಮಸ್ಯೆಯ ಇತ್ಯರ್ಥ ಮಾಡುವುದು ಬ್ರಿಟನಿನ ಹಿತದಿಂದಲೇ ಆವಶ್ಯವಾಗಿತ್ತು. ಬ್ರಿಟಿಷ್ ಸಚಿವ ಸ್ಟ್ಯಾಫರ್ಡ್ ಕ್ರಿಪ್ಸ್ 1942ರ ಮಾರ್ಚ್ ತಿಂಗಳಲ್ಲಿ ಭಾರತಕ್ಕೆ ಸಲಹೆಯೊಂದನ್ನು ತಂದ. ಗಾಂಧಿಯವರಿಗೆ ಅದು ಪರಿಶೀಲನಯೋಗ್ಯವೆನಿಸಲಿಲ್ಲ. ಭಾರತ ಬಿಟ್ಟು ತೊಲಗಿ ಎಂಬ ಚಳವಳಿಯ ಪರಿಕಲ್ಪನೆ ಗಾಂಧಿಯವರಲ್ಲಿ ಮೂಡಿಬಂತು. ಹರಿಜನದಲ್ಲಿ ಈ ಬಗ್ಗೆ ಲೇಖನಗಳು ಪ್ರಕಟವಾದುವು. ಆ ವರ್ಷ ಆಗಸ್ಟ್ 8ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈ ಚಳವಳಿಯನ್ನು ಹೂಡಲು ನಿರ್ಣಯ ಮಾಡಿತು. ಮರುದಿನ ಸರ್ಕಾರ ಗಾಂಧಿಯ ವರನ್ನೂ ಅವರ ಅನುಯಾಯಿಗಳನ್ನೂ ಕಾಂಗ್ರೆಸ್ಸಿನ ಎಲ್ಲ ಮುಖಂಡರನ್ನೂ ದಸ್ತಗಿರಿ ಮಾಡಿತು. ಗಾಂಧಿಯವರ ಕಾರ್ಯದರ್ಶಿ ಮಹಾದೇವ ದೇಸಾಯಿ, ಪತ್ನಿ ಕಸ್ತೂರ ಬಾ ಇವರು ಗಾಂಧಿಯವರೊಂದಿಗೆ ಪುಣೆಯಲ್ಲಿ ಬಂಧನಕ್ಕೊಳಪಟ್ಟರು. ಇವರಿಬ್ಬರೂ ಸೆರೆಮನೆಯಲ್ಲೇ ತೀರಿಕೊಂಡರು. 1943ರ ಜನವರಿಯಲ್ಲಿ ಗಾಂಧಿಯವರು ವೈಸ್‌ರಾಯ್ ಲಿನ್‌ಲಿತ್‌ಗೋಗೆ ಒಂದು ಪತ್ರ ಬರೆದು, ಸರ್ಕಾರದ ಹಿಂಸಾಚಾರವನ್ನು ಖಂಡಿಸಿದರು. ಫೆಬ್ರುವರಿ 10 ರಿಂದ 21. ದಿನಗಳ ಕಾಲ ಉಪವಾಸ ಕೈಗೊಂಡರು. 1944ರ ಮೇ 6ರಂದು ಸರ್ಕಾರ ಅವರನ್ನು ಆರೋಗ್ಯನಿಮಿತ್ತ ಬಿಡುಗಡೆ ಮಾಡಿತು.

ನೌಖಾಲಿಯಲ್ಲಿ ಒಂಟಿ ನಡಿಗೆ

1946ರಲ್ಲಿ ಎರಡನೆಯ ಮಹಾಯುದ್ಧ ಮುಗಿಯಿತು. ಬ್ರಿಟನಿನಲ್ಲಿ ಕಾರ್ಮಿಕ ಸರ್ಕಾರ ಸ್ಥಾಪಿತವಾಯಿತು. ಸಂಪುಟ ನಿಯೋಗವೊಂದು ಭಾರತಕ್ಕೆ ಬಂತು. ಪಾಕಿಸ್ತಾನದ ನಿರ್ಮಾಣವಾಗಬೇಕೆಂಬುದು ಮಹಮ್ಮದ್ ಆಲಿಜಿನ್ನಾ ಬೇಡಿಕೆಯಾಗಿತ್ತು. ದ್ವಿರಾಷ್ಟ್ರ ಸಿದ್ಧಾಂತವನ್ನು ಗಾಂಧಿಯವರು ಪ್ರಬಲವಾಗಿ ವಿರೋಧಿಸಿದರು.

ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಕೊನೆಗೊಳಿಸುವರೆಂದು ಆ ನಿಯೋಗ ಸಾರಿತು. ಅಖಂಡ ಭಾರತ ಸರ್ಕಾರ ಸ್ಥಾಪನೆಯಾಗಲೆಂಬುದು ಅವರ ಸಲಹೆ.

ಮುಸ್ಲಿಂ ಲೀಗ್ ಈ ಸಲಹೆಗೆ ತನ್ನ ಬೆಂಬಲ ನೀಡಲು ನಿರಾಕರಿಸಿತು. ನೇರ ಕಾರ್ಯಾಚರಣೆ ಕೈಗೊಳ್ಳಲು ತೀರ್ಮಾನಿಸಿತು. ಅಂತೂ ಕೊನೆಗೆ 1946ರ ಸೆಪ್ಟೆಂಬರ್ 2ರಂದು ನೆಹರೂ ಅವರ ನಾಯಕತ್ವದಲ್ಲಿ ತಾತ್ಕಾಲಿಕ ಸರ್ಕಾರವೊಂದು ಸ್ಥಾಪಿತ ವಾಯಿತು. ಮುಸ್ಲಿಂ ಲೀಗ್ ಆಗಸ್ಟ್ 16ರಂದು ನೇರ ಕಾರ್ಯಾಚರಣೆ ಆರಂಭಿಸಿದ್ದರ ಪರಿಣಾಮವೆಂದರೆ ಕೋಮು ಗಲಭೆ. ಹಲವು ಎಡೆಗಳಿಗೆ ಗಲಭೆಗಳು ಹಬ್ಬಿದುವು. 1946ರ ಕೊನೆಯಲ್ಲಿ ಗಾಂಧಿ ಯವರು ಪೂರ್ವ ಬಂಗಾಳದ ಹಳ್ಳಿಗಳಲ್ಲಿ ಸಂಚರಿಸುತ್ತ ಜನಕ್ಕೆ ಪ್ರೀತಿ ಅಹಿಂಸೆಗಳ ಸಂದೇಶವನ್ನು ಸಾರಿದರು. ಬಿಹಾರದಲ್ಲೂ ಅವರು ಸಂಚಾರ ಕೈಗೊಂಡರು.

ಅಂತಿಮ ದರ್ಶನ

1947ರ ಜೂನ್ 3ರಂದು ಬ್ರಿಟನ್ ಭಾರತವಿಭಜನೆಯ ಯೋಜನೆಯನ್ನು ಘೋಷಿಸಿತು. ಕಾಂಗ್ರೆಸ್–ಮುಸ್ಲಿಂ ಲೀಗ್‌ಗಳು ಅದನ್ನೊಪ್ಪಿದುವು. ಆದರೆ ಗಾಂಧಿಯವರು ಅದನ್ನೊಂದು ದುರಂತವೆಂದು ಕರೆದರು. ಮೂವತ್ತೆರಡು ವರ್ಷಗಳ ಕಾರ್ಯ ವೆಲ್ಲ ವ್ಯರ್ಥವಾಯಿತೆಂಬುದು ಗಾಂಧಿಯವರ ಭಾವನೆ. ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದಾಗ ಅವರು ಕಲ್ಕತ್ತದಲ್ಲಿ ಹಿಂಸೆಯಿಂದ ನೊಂದ ಜನರ ನಡುವೆ ಇದ್ದರು.

ಅಶಾಂತಿಯನ್ನು ಕಂಡು ಅವರು ಪರಿತಪಿಸುತ್ತಿದ್ದರು. ಆ ದಿನವಿಡೀ ಅವರು ಉಪವಾಸ ಪ್ರಾರ್ಥನೆಗಳಲ್ಲಿ ನಿರತವಾಗಿದ್ದರು. ಅವರು ಅಂದು ದೇಶಕ್ಕೆ ಯಾವ ಸಂದೇಶವನ್ನೂ ನೀಡಲಿಲ್ಲ. ಕೆಲವು ದಿನಗಳಲ್ಲಿ ಕಲ್ಕತ್ತದಲ್ಲಿ ಮತ್ತೆ ಭೀಕರ ಗಲಭೆಗಳು ಸಂಭವಿಸಿದುವು. ಗಾಂಧಿಯವರು ಅನಿರ್ದಿಷ್ಟ ಕಾಲ ಉಪವಾಸ ಕೈಕೊಂಡರು. ಗಲಭೆಗಳು ನಿಂತುವು.

ಆದರೂ ಪರಿಸ್ಥಿತಿ ಶಾಂತವಾಗಿರಲಿಲ್ಲ. ಭಾರತ-ಪಾಕಿಸ್ತಾನಗಳಲ್ಲಿಯ ಅಲ್ಪಸಂಖ್ಯಾತರಿಗೆ ನೆಮ್ಮದಿಯಿರಲಿಲ್ಲ. ಭೀತರಾದ ಹಿಂದೂ ಮುಸ್ಲಿಂ ನಿರಾಶ್ರಿತರು ಅಗಾಧ ಸಂಖ್ಯೆಯಲ್ಲಿ ಗಡಿ ದಾಟುತ್ತಿದ್ದರು. ಅಲ್ಪ ಸಂಖ್ಯಾತರ ಹಿತ ರಕ್ಷಿಸುವುದು ಉಭಯ ರಾಷ್ಟ್ರಗಳ ಹೊಣೆಯೆಂದು ಗಾಂಧಿಯವರು ಹೇಳಿದರು. 1948ರ ಜನವರಿ 13ರಂದು ಗಾಂಧಿಯವರು ಇನ್ನೊಮ್ಮೆ ಉಪವಾಸ ಆರಂಭಿಸಿದರು. ಮತೀಯ ಸೌಹಾರ್ದ ಬೆಳೆಸುವುದಾಗಿ ಮುಖಂಡರು ಒಪ್ಪಂದ ಮಾಡಿಕೊಂಡಾಗಲೇ ಅವರು ಉಪವಾಸವನ್ನು ಕೊನೆಗೊಳಿಸಿದ್ದು.

ಗಾಂಧಿಯವರ ದೃಷ್ಟಿಯಿಂದ ಅತೃಪ್ತರಾದ ಕೆಲವರು ಅವರ ಕೊಲೆಗೆ ಪ್ರಯತ್ನಿಸುತ್ತಿದ್ದರು. ಜನವರಿ 20 ರಂದು ಅವರ ಪ್ರಾರ್ಥನಾಸಭೆ ಯಲ್ಲಿಒಬ್ಬಯುವಕ ಬಾಂಬೊಂದನ್ನು ಎಸೆದ. ಅದರಿಂದ ಪ್ರಾಣಾಪಾಯ ವಾಗಲಿಲ್ಲ. ಆ ಯುವಕನ ವಿಚಾರದಲ್ಲಿ ಗಾಂಧಿಯವರು ದ್ವೇಷ ವ್ಯಕ್ತಪಡಿಸಲಿಲ್ಲ. ಗಾಂಧಿಯವರ ಕೊನೆಯ ದಿನ ಬಳಿಸಾರಿತು. 1948ರ ಜನವರಿ 30ರಂದು ಸಂಜೆ 5 ಗಂಟೆ ದಾಟಿತ್ತು. ಗಾಂಧಿಯವರು ಎಂದಿನಂತೆ ಪ್ರಾರ್ಥನಾಸಭೆಯ ಮೆಟ್ಟಲು ಹತ್ತುತ್ತಿದ್ದರು. ನಾಥುರಾಂ ವಿನಾಯಕ ಗೋಡ್ಸೆಯೆಂಬ ಹಿಂದೂವೊಬ್ಬ ಗುಂಪಿನಿಂದ ಮುನ್ನುಗ್ಗಿ ಗಾಂಧಿಯವರತ್ತ ಮೂರು ಬಾರಿ ಗುಂಡು ಹಾರಿಸಿದ. ಹೇ ರಾಂ ಎನ್ನುತ್ತ ಗಾಂಧಿಯವರು ಕೆಳಗೆ ಬಿದ್ದರು. ಅವರ ಇಹಲೋಕ ಯಾತ್ರೆ ಪೂರೈಸಿತ್ತು.

ಸಮಕಾಲೀನ ಜಗತ್ತಿನ ಮೇಲೆ ಮಾತ್ರವಲ್ಲದೆ ಭವಿಷ್ಯತ್ತಿನ ಮೇಲೆ ಕೂಡ ತಮ್ಮ ಪ್ರಭಾವದ ಮುದ್ರೆಯೊತ್ತಿದ ವ್ಯಕ್ತಿ ಗಾಂಧೀಜಿ. ಅವರು ಸತ್ಯ ಅಹಿಂಸೆಗಳ ಪ್ರವಾದಿ. ಗುರಿ ಶುದ್ಧವಾಗಿದ್ದರೆ ಸಾಲದು; ಅದನ್ನು ನಿಲುಕುವ ಮಾರ್ಗವೂ ಶುದ್ಧವಾಗಿರಬೇಕು-ಎಂದು ಅವರು ಹೇಳಿದರು. ಮಾರ್ಗವೆಂತೋ ಗುರಿಯಂತು-ಎಂದರು. ಜನರು ತಮ್ಮ ಹಕ್ಕುಗಳಿಗಾಗಿ ಹೊಡೆದಾಡುವಾಗ ಜೀವನದ ಬಗ್ಗೆ ಅಗೌರವದಿಂದ ವರ್ತಿಸ ಬಾರದು-ಎಂಬುದು ಅವರ ಬೋಧನೆ.

ಗಾಂಧಿಯವರು ಜನತೆಯ ನಾಯಕ. ರಾಜಕೀಯ ಸಾಮಾಜಿಕ ಬಂಡಾಯಗಾರ. ತಮ್ಮ ದೇಶವನ್ನು ಸ್ವಾತಂತ್ರ್ಯದ ಗುರಿ ಮುಟ್ಟಿಸುವ ಪ್ರಯತ್ನವೇ ಅವರ ಅಭಿವ್ಯಕ್ತಿಗೆ ಮಾಧ್ಯಮವಾಯಿತು. ತನ್ಮೂಲಕವಾಗಿ ಅವರು ಇಡೀ ಮಾನವತೆಯನ್ನೇ ಪ್ರೀತಿಸಿದರು.

ಜೈನ ವೈಷ್ಣವ ಧರ್ಮಗಳಿಂದ ಗಾಂಧಿಯವರು ತುಂಬ ಪ್ರಭಾವಿತರಾಗಿದ್ದರು. ಮಾರ್ಕ್ಸ್ ಡಾರ್ವಿನ್ ಸಿದ್ಧಾಂತಗಳು ಅತ್ಯಂತ ಪ್ರಚಾರದಲ್ಲಿದ್ದ ಕಾಲದಲ್ಲಿ ಅವರು ಲಂಡನಿನಲ್ಲಿ ವಿದ್ಯಾರ್ಥಿಯಾಗಿದ್ದರು. ಎಪ್ಪತ್ತೈದರ ಪ್ರಾಯದಲ್ಲಿ ಅವರು ಮಾರ್ಕ್ಸ್‌ನ ಕ್ಯಾಪಿಟಲ್ ಉದ್ಗ್ರಂಥವನ್ನೋದಿದ್ದರು. ಎಲ್ಲ ಧರ್ಮಗಳ ಸಮನ್ವಯವನ್ನು ಬೋಧಿಸಿದರೂ ಅವರು ಮೂಲತಃ ಹಿಂದುವಾಗಿ ಉಳಿದರು. ಸನಾತನ ಧರ್ಮದ ಉತ್ಕೃಷ್ಟ ಉತ್ಪನ್ನ ಗಾಂಧಿಯವರು. ತಮ್ಮ ಇಡೀ ಬಾಳನ್ನೇ ತಮ್ಮ ವಿಚಾರದ ಪ್ರಯೋಗ ಶಾಲೆಯನ್ನಾಗಿ ಮಾಡಿ ಕೊಂಡ ಗಾಂಧಿಯವರು ಸ್ವಂತ ಅನುಭವ ದಿಂದಕಂಡುಕೊಳ್ಳದ ಯಾವುದನ್ನೂ ಬೋಧಿಸಲಿಲ್ಲ. ದೇವರು ಸತ್ಯ ಮಾತ್ರವಲ್ಲ, ಸತ್ಯವೇ ದೇವರು-ಎಂದು ಅವರು ಪ್ರತಿಪಾದಿಸಿದರು. ಇಷ್ಟಾದರೂ ಅವರು ಅತ್ಯಂತ ವಿನಯಶೀಲರು. ತಮಗೆ ಯಾವ ದೈವಿಕ ಶಕ್ತಿಯೂ ಇಲ್ಲವೆಂದೇ ಅವರು ಸಾರಿದರು. ಗಾಂಧಿಯವರು ಕಣ್ಮರೆಯಾದರೂ ಅವರ ವಿಚಾರಗಳ ಪ್ರಭಾವ ಮಾತ್ರ ನಿಧಾನವಾದರೂ ಖಂಡಿತವಾಗಿಯೂ ಅಗೋಚರವಾಗಿಯೂ ಜಗತ್ತನ್ನೆಲ್ಲ ವ್ಯಾಪಿಸುತ್ತಿದೆ. ದೇಶವಿದೇಶ ಗಳಲ್ಲಿ ಅವರ ಬೋಧನೆಯನ್ನು ನಂಬಿ ನಡೆವ ಹಲವಾರು ಮಂದಿ ಇದ್ದಾರೆ. (ಜಿ.ವಿ.ಎಸ್.)



**ಗಾಂಧಿಯವರು ಬಳಸುತ್ತಿದ್ದ ವಸ್ತುಗಳು**

ಗಾಂಧಿಯವರ ಸಾಧನೆಗಳು, ಸಿದ್ಧಿ ಮತ್ತು ಪ್ರಭಾವಗಳ ಬಗ್ಗೆ ಈ ಲೇಖನದಲ್ಲಿ ಕೆಳಕಂಡ ಶೀರ್ಷಿಕೆ ಗಳಲ್ಲಿ ವಿಷಯ ಸಂಗ್ರಹ ಮಾಡಲಾಗಿದೆ : ಗಾಂಧೀ ತತ್ತ್ವ ದರ್ಶನ; ಗಾಂಧಿಯವರ ರಾಜನೀತಿ; ಗಾಂಧೀ ಸಮಾಜದರ್ಶನ; ಗಾಂಧೀ ಸಾಹಿತ್ಯ; ಗಾಂಧೀ ಅರ್ಥಶಾಸ್ತ್ರ; ಗಾಂಧಿಯವರ ಶಿಕ್ಷಣ ತತ್ತ್ವದೃಷ್ಟಿ; ಗಾಂಧೀ ದೃಷ್ಟಿಯಲ್ಲಿ ಸ್ವರಾಜ್ಯ; ಗಾಂಧೀ ದೃಷ್ಟಿಯಲ್ಲಿ ಸತ್ಯಾಗ್ರಹ: ಗಾಂಧೀ ಮತ್ತು ಅಹಿಂಸೆ; ಗಾಂಧೀಯವರ ಅನಾಸಕ್ತಿಯೋಗ; ಗಾಂಧೀ ಆಶ್ರಮಗಳು. ಗಾಂಧಿಯವರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸಾಮಾನ್ಯ ವಿಷಯಸೂಚಿಯನ್ನು ನೋಡತಕ್ಕದ್ದು.

**ಗಾಂಧೀ ತತ್ತ್ವದರ್ಶನ:** ಗಾಂಧಿಯವರ ವಿಫುಲವಾದ ಬರೆವಣಿಗೆ, ಮಾತುಕತೆ, ಭಾಷಣಗಳು, ಸತ್ಯಾನ್ವೇಷಣೆಗಾಗಿ ಮುಡುಪಿಟ್ಟ ಅವರ ಜೀವನ-ಇವುಗಳಲ್ಲಿ ಸ್ಫುರಿಸುವ ಅವರ ತತ್ತ್ವದರ್ಶನವನ್ನು ಇಲ್ಲಿ ಸಂಗ್ರಹವಾಗಿ ತಿಳಿಸಿದೆ.

ಗಾಂಧಿಯವರ ತತ್ತ್ವದೃಷ್ಟಿ ಕೇವಲ ತಾತ್ತ್ವಿಕವಾಗಿರದೆ ಅತ್ಯಂತ ಪ್ರಾಯೋಗಿಕ ವಾಗಿತ್ತು. ಜೀವನವನ್ನು ಕುರಿತ ಸತ್ಯಾನ್ವೇಷಣೆ ಮತ್ತು ಅತ್ಯುನ್ನತ ಆದರ್ಶಗಳಿಂದ ಪ್ರಭಾವಿತವಾದ ಅವರ ದರ್ಶನವನ್ನು ಪ್ರಾಯೋಗಿಕ ಧ್ಯೇಯವಾದವೆನ್ನಬಹುದು.

ದರ್ಶನಗಳಲ್ಲಿ ಪ್ರಧಾನವಾದ ವಿಷಯಗಳು ಜೀವ, ಜಗತ್ತು ಮತ್ತು ಈಶ್ವರ. ಇವುಗಳನ್ನು ಕುರಿತು ಗಾಂಧಿ ತಮ್ಮ ಅಭಿಪ್ರಾಯಗಳನ್ನು ಅಲ್ಲಲ್ಲಿ ವಿವರಿಸಿದ್ದಾರೆ. ಈಶ್ವರ ಸತ್ಯಸ್ವರೂಪನೆಂದು ತಾತ್ತ್ವಿಕರು ವರ್ಣಿಸುತ್ತಾರೆ. ಆದರೆ ಗಾಂಧಿ ಈಶ್ವರ ಸತ್ಯ ಎನ್ನುವುದಕ್ಕಿಂತಲೂ ಸತ್ಯವೇ ಈಶ್ವರ ಎಂದು ಹೇಳುವುದು ಹೆಚ್ಚು ಉಚಿತ ಎನ್ನುತ್ತಾರೆ. ದರ್ಶನಗಳಲ್ಲಿ ಈಶ್ವರನ ಅಸ್ತಿತ್ವವನ್ನು ಸ್ಥಾಪಿಸಲು ಅನೇಕ ವಾದಗಳು ಮಂಡಿಸಲ್ಪಟ್ಟಿವೆ ಯಷ್ಟೆ. ಗಾಂಧೀಜಿಯವರ ದೃಷ್ಟಿಯಲ್ಲಿ ಈಶ್ವರನ ಅಸ್ತಿತ್ವವನ್ನು ಕೇವಲ ತರ್ಕದಿಂದ ಸಾಧಿಸಲು ಸಾಧ್ಯವಿಲ್ಲ. ಇದು ಶ್ರದ್ಧೆಯ ವಿಷಯ ಮತ್ತು ಅನುಭವದ ವಿಷಯ. ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಎನ್ನುವ ಗೋಜಿಗೆ ಹೋಗದೆ ತಮ್ಮಲ್ಲಿ ಇವೆಲ್ಲದರ ಸ್ವಲ್ಪ ಸ್ವಲ್ಪ ಅಂಶವಿದೆಯೆಂದು ಅವರು ಒಪ್ಪಿಕೊಳ್ಳುತ್ತಾರೆ. ತಾವು ಒಂದು ದೃಷ್ಟಿಯಿಂದ ಅದ್ವೈತಿ ಎಂದೂ ಮತ್ತೊಂದು ದೃಷ್ಟಿಯಿಂದ ದ್ವೈತಿ ಎಂದೂ ಹೇಳಿಕೊಳ್ಳುತ್ತಾರೆ. ಹಾಗೆಯೇ ಜೈನದರ್ಶನದ ಅನೇಕಾಂತವಾದ, ಸ್ಯಾದ್ವಾದಗಳಿಂದ ಕೆಲವು ಅಂಶಗಳನ್ನವರು ತೆಗೆದುಕೊಂಡಿದ್ದಾರೆ. ತಮಗೆ ಬೇಕಾದ ಹಾಗೆ ಆ ಸಿದ್ಧಾಂತಗಳನ್ನು ಬೆಳೆಸಿಕೊಂಡಿದ್ದಾರೆ. ವೈಷ್ಣವದರ್ಶನದ ಕೆಲವು ಅಂಶಗಳೂ ಇವರ ದರ್ಶನದಲ್ಲಿ ಸಮಾವೇಶಗೊಂಡಿವೆ. ಬ್ರಹ್ಮ ಸತ್ಯ, ಜಗತ್ತು ಸ್ಫೂರ್ತಿದಾಯಕವಾದದ್ದು ಮತ್ತು ಇಡೀ ಮಾನವಜೀವನ ಸತ್ಯಶೋಧನೆಯ ಕ್ಷೇತ್ರ ಎಂಬ ಅಭಿಪ್ರಾಯಗಳು ಇವರ ದರ್ಶನಕ್ಕೆ ಮೂಲಭೂತವಾಗಿವೆ. ಜಗತ್ತಿನ ಎಲ್ಲ ಧರ್ಮಗಳ ಮೂಲ ಉದ್ದೇಶ ಭಗವಂತನ ಸಾಕ್ಷಾತ್ಕಾರವೆನ್ನುತ್ತಾರೆ, ಗಾಂಧಿ. ಪ್ರತಿ ಧರ್ಮದಲ್ಲಿಯೂ ಸತ್ಯಾಂಶದ ಸಂಗತಿಗಳಿವೆ. ಹಾಗೆಯೇ ಅದರೊಡನೆ ಅಸತ್ಯಾಂಶಗಳೂ ಕಾಲಾನುಕ್ರಮವಾಗಿ ಸೇರಿಕೊಂಡಿವೆ. ಈ ಕಾರಣದಿಂದ ಧರ್ಮಗಳನ್ನೂ ಆಗಿಂದಾಗ್ಯೆ ಶುದ್ಧಿಗೊಳಿಸುವ ಅಗತ್ಯವಿದೆ. ಎಲ್ಲ ಧರ್ಮಗಳೂ ನ್ಯಾಯವಾದ ಜೀವನಮಾರ್ಗವನ್ನೇ ಬೋಧಿಸುತ್ತವೆ. ಆದ್ದರಿಂದ ತಮ್ಮ ತಮ್ಮ ಮತಧರ್ಮದಂತೆ ಜನ ನಡೆಯುವುದನ್ನು ಕಲಿಯಬೇಕು. ಸತ್ಯಶೀಲತೆ, ಅಹಿಂಸಾಪಾಲನೆ, ಅಪರಿಗ್ರಹ, ಸ್ವದೇಶೀ ಭಾವನೆ ಇತ್ಯಾದಿ ಆರು ನಿಯಮಗಳನ್ನು ಪ್ರತಿಯೊಬ್ಬನೂ ಪಾಲಿಸುವುದು ಅಗತ್ಯ. ಗಾಂಧೀಜಿಯವರ ದೃಷ್ಟಿಯಲ್ಲಿ ಈ ಜಗತ್ತು ಮತ್ತು ಇಲ್ಲಿ ನಡೆಸುವ ಬಾಳ್ವೆ ಈಶ್ವರ ಸಾಕ್ಷಾತ್ಕಾರಕ್ಕೆ ನಮಗೆ ಬೇಕಾದ ಸಾಧನ ಸಂಪತ್ತನ್ನು ಒದಗಿಸಿಕೊಡುತ್ತವೆ. ಅಂದಮೇಲೆ ಈ ಜಗತ್ತನ್ನು ಕುತ್ಸಿತ ಭಾವದಿಂದ ಕಾಣಬಾರದು. ಈಸಬೇಕು ಇದ್ದು ಜೈಸಬೇಕು ಎನ್ನುವುದೇ ಇದರ ತಾತ್ಪರ್ಯ. ಈಶ್ವರ ಮಾನವನ ಎಲ್ಲ ಮೌಲ್ಯಗಳ ಪರಿಪೂರ್ಣಸ್ವರೂಪ. ಆತ ಸತ್ಯ, ಶಿವ, ಸುಂದರ. ಮಾನವರು ಅಪೂರ್ಣರು, ಈಶ್ವರ ಪೂರ್ಣ. ಈ ಪೂರ್ಣತೆಯ ಕಡೆಗೆ ಮಾನವರು ಸಾಗಬೇಕು; ಇರುವ ಅಪೂರ್ಣತೆಯನ್ನು ಪರಿಶ್ರಮದಿಂದ ಹೋಗಲಾಡಿಸಿಕೊಳ್ಳಬೇಕು. ಬಾಳು ಪ್ರೇಮಪೂರ್ಣ ವಾಗಬೇಕು. ಮಾನವನ ಮಾನವತ್ವದ ಆಧಾರ ಸತ್ಯ, ಅಹಿಂಸೆಗಳು. ಇವನ್ನು ಅಭ್ಯಾಸ ಮಾಡದಿದ್ದರೆ ಮಾನವ ಪಶುವಾಗುತ್ತಾನೆ. ಮಾನವ ಸಮಾಜದ ನಿಯಮ ಅರಣ್ಯದ ನಿಯಮವಲ್ಲ, ಮತ್ಸ್ಯನ್ಯಾಯವಲ್ಲ. ಪೈಪೋಟಿ ಘರ್ಷಣೆಗಳಲ್ಲ. ಸಹಬಾಳ್ವೆಯ ಸಹಾನುಭೂತಿಯ ಆವಿಷ್ಕಾರವೇ ಮಾನವ ಜೀವನದ ವೈಶಿಷ್ಟ್ಯ. ಸರ್ವೋದಯವೇ ಮಾನವನ ಸಾಮಾಜಿಕ ಜೀವನದ ಸಾರಸರ್ವಸ್ವ. ಸರ್ವೋದಯ ಸರ್ವರ ಉದಯ ಮತ್ತು ಎಲ್ಲ ವ್ಯಕ್ತಿಗಳ ಸಮಗ್ರ ಉದಯ. ವ್ಯಕ್ತಿಯ ಮತ್ತು ರಾಷ್ಟ್ರದ ಜೀವನದಲ್ಲಿ ಉದಾತ್ತ ಧ್ಯೇಯಗಳಿರಬೇಕು. ಅವನ್ನು ಸಾಧನೆ ಮಾಡುವ ದಾರಿಯೂ ಕ್ರಮವೂ ಅಷ್ಟೇ ಉದಾತ್ತವಾದುದಾಗಿರಬೇಕು. ಗುರುಸಾಧನೆಯೇ ಮುಖ್ಯವೆಂದು ಅಡ್ಡದಾರಿಗಳಿಂದ, ಅಧರ್ಮ, ಹಿಂಸೆಗಳಿಂದ ಅದನ್ನು ಸಾಧಿಸಹೋಗುವುದು ಸಲ್ಲದು. ಆದ್ದರಿಂದ ರಾಜಕೀಯ ಹೋರಾಟದಲ್ಲೂ ಧರ್ಮದ ದಾರಿ ಒಳ್ಳೆಯದು. ಗೃಹಸ್ಥನ ಕುಟುಂಬ ಜೀವನ ಬಹಳ ಪವಿತ್ರವಾದುದು. ಮದುವೆ ಅಂಥ ಜೀವನದ ಒಂದು ಪವಿತ್ರ ಪ್ರಾರಂಭ. ಸಂತಾನಕ್ಕಾಗಿ ಮಾತ್ರ ಸಂಭೋಗ. ಉಳಿದಂತೆ ಎಲ್ಲರಿಗೂ ಸಂಯಮ, ಬ್ರಹ್ಮಚರ್ಯ ಅಗತ್ಯ. ದೇವರ ನಾಮಸ್ಮರಣೆ, ಪ್ರಾರ್ಥನೆ, ಕಾಯಕ, ಪರೋಪಕಾರ-ಇವು ಮಾನವನ ಏಳಿಗೆಯ ಸಾಧನಗಳು-ಇದು ಗಾಂಧೀದರ್ಶನದ ಬಹುಮುಖ್ಯ

ವಿಷಯ. ಗಾಂಧಿಯವರ ದೃಷ್ಟಿಯಲ್ಲಿ ಜೀವನ ಅಖಂಡವಾದುದು. ಇದರಲ್ಲಿ ಒಂದನ್ನು ಒಂದರಿಂದ ಪ್ರತ್ಯೇಕಗೊಳಿಸುವುದು ಅಸಾಧ್ಯ. ಮಾನವನ ಮನಸ್ಸು, ಮಾನವನ ಸಮಾಜ ಇವುಗಳಲ್ಲಿ ಪ್ರತ್ಯೇಕವಾದ ವಿಭಾಗಗಳಿಲ್ಲ. ಸಾಮಾಜಿಕ ರಾಜಕೀಯ ಮತ್ತು ಧಾರ್ಮಿಕ ಎನ್ನುವ ವಿಭಾಗಗಳಲ್ಲಿ ಇವುಗಳದು ಅನ್ಯೋನ್ಯಾಶ್ರಯ. (ಎಂ.ವೈ.: ಜಿ.ವಿ.ಎಸ್.)

**ಗಾಂಧಿಯವರ ರಾಜನೀತಿ:** ಗೋಪಾಲಕೃಷ್ಣ ಗೋಖಲೆಯವರು ಗಾಂಧಿಯವರ ರಾಜಕೀಯ ಗುರು. ಅಧ್ಯಾತ್ಮದಿಂದ ರಾಜಕಾರಣ ಪವಿತ್ರಗೊಳ್ಳಬೇಕು–ಎಂಬುದು ಗೋಖಲೆಯವರ ಅಭಿಮತವಾಗಿತ್ತು. ಗಾಂಧಿಯವರದೂ ಇದೇ ಧೋರಣೆ. ಧರ್ಮ ರಾಜಕಾರಣಗಳು ಅವಿಭಾಜ್ಯವೆಂದು ಗಾಂಧಿಯವರು ಹೇಳಿದ್ದಾರೆ. ಧರ್ಮವನ್ನು ಬಿಟ್ಟರೆ ರಾಜಕಾರಣದಲ್ಲಿ ಉಳಿದುದೆಲ್ಲ ಕಸವೆಂದು ಅವರ ನಂಬಿಕೆ. ರಾಷ್ಟ್ರಗಳ ಪ್ರಜೆಗಳೆಲ್ಲರ ಯೋಗಕ್ಷೇಮ ಸಾಧನೆಯೆಂದರೆ ಧರ್ಮಸಾಧನೆ. ಧರ್ಮ ಕಾಮಿತಾರ್ಥವನ್ನು ಕೊಡುತ್ತದೆ; ಧರ್ಮ ನೀಡಲಾಗದ ಯಾವುದಕ್ಕೂ ಯಾವ ಬೆಲೆಯೂ ಇಲ್ಲ. ಧರ್ಮವೆಂದರೆ ಕುರುಡು ನಂಬಿಕೆಯಲ್ಲ. ಪರಮತದ್ವೇಷವಲ್ಲ; ಎಲ್ಲ ಪ್ರಾಣಿಗಳನ್ನೂ ತನ್ನಂತೆಯೇ ಭಾವಿಸಿ, ನಡೆದುಕೊಳ್ಳುವುದು; ಎಲ್ಲ ಧರ್ಮಗಳನ್ನೂ ಸಹಿಷ್ಣುತೆಯಿಂದ ಕಾಣುವ ಔದಾರ್ಯ.

ರಾಜಕಾರಣ ಯಾರನ್ನೂ ಬಿಟ್ಟಿದ್ದಲ್ಲ. ರಾಜನೀತಿ ಹಾವಿನ ಸುರುಳಿಯಂತೆ ನಮ್ಮನ್ನು ಸುತ್ತಿಕೊಂಡಿದೆಯೆನ್ನುತ್ತಾರೆ ಅವರು. ಎಷ್ಟೇ ಹೆಣಗಿದರೂ ಅದರಿಂದ ಬಿಡಿಸಿ ಕೊಳ್ಳುವುದು ಸಾಧ್ಯವಿಲ್ಲ. ಜೀವನವೆಲ್ಲ ರಾಜಕಾರಣದಿಂದ ತುಂಬಿದೆ. ಜೀವನವನ್ನು ಆಧ್ಯಾತ್ಮಿಕ ಕ್ಷೇತ್ರ, ಸಾಮಾಜಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ, ರಾಜಕೀಯ ಕ್ಷೇತ್ರ ಎಂಬುದಾಗಿ ವಿಭಾಗ ಮಾಡಿ, ಒಂದು ಕ್ಷೇತ್ರಕ್ಕೂ ಇನ್ನೊಂದು ಕ್ಷೇತ್ರಕ್ಕೂ ಸಂಪರ್ಕವಿಲ್ಲದಂತೆ ಮಾಡಲಾಗದು. ಜೀವನ ಅಖಂಡ; ಅದನ್ನು ಖಂಡಗೊಳಿಸುವುದೆಂದರೆ ದುಃಖಕ್ಕೆ, ಘರ್ಷಣೆಗೆ, ನಾಶಕ್ಕೆ ಆಹ್ವಾನ ಕೊಟ್ಟಂತೆ.

ಪ್ರತಿಯೊಬ್ಬ ರಾಜಕಾರಣಿಯೂ ಆಸ್ತಿಕನೂ ಸತ್ಯಶೋಧಕನೂ ಆಗಬೇಕು. ದೇವರಲ್ಲಿ ನಂಬಿಕೆ ಇಟ್ಟು ನಡೆಯುವ ಸತ್ಯವನ್ನು ಆಶ್ರಯಿಸಿರುವ ಪ್ರಜೆ ರಾಜಕಾರಣಿಯಾದಾಗ ಆ ದೇಶದ ಭಾಗ್ಯ ತೆರೆಯುತ್ತದೆ. ಇಂಥ ರಾಜಕಾರಣಿಗಳಿರುವ ದೇಶದಲ್ಲಿ ಸರ್ಕಾರದ ಅತಿಯಾದ ಪಾರುಪತ್ಯಕ್ಕೆ, ವಿಪರೀತ ಸರ್ಕಾರಕ್ಕೆ ಕಾರಣವೇ ಇರುವುದಿಲ್ಲ. ಗಾಂಧಿಯವರ ರಾಜನೀತಿ ಕಲುಷಿತವಲ್ಲ. ಅದಕ್ಕೂ ಸತ್ಯ–ಅಹಿಂಸೆಗಳಿಗೂ ಅವಿನಾಸಂಬಂಧ. ಸತ್ಯ ಅಹಿಂಸೆಗಳು ಅವಳಿಮಕ್ಕಳು. ಅವು ನಾಣ್ಯದ ಎರಡು ಬದಿಗಳಂತೆ. ಸತ್ಯಕ್ಕೆ ಸಂಚಕಾರ ಬರುವುದಾದರೆ ನನಗೆ ಸ್ವರಾಜ್ಯವೇ ಬೇಡ, ಎಂದು ಗಾಂಧಿಯವರು ಹೇಳಿದರು. ಯಾವುದನ್ನೇ ಸಾಧಿಸಬೇಕಾದರೂ ಅದರ ಮಾರ್ಗವೂ ಪರಿಶುದ್ಧವಾಗಿರಬೇಕೆಂಬುದು ಗಾಂಧಿಯವರ ಅಪೇಕ್ಷೆ. ಮಾರ್ಗವೆಷ್ಟು ನಿರ್ಮಲವೋ ಅಷ್ಟರಮಟ್ಟಿಗೆ ಫಲಪ್ರಾಪ್ತಿ.

ಗಾಂಧಿಯವರು ಪ್ರಜಾತಂತ್ರವಾದಿ; ಪ್ರಾಪ್ತವಯಸ್ಕರೆಲ್ಲ ಮತದಾನ ಮಾಡಿ ನಿರ್ಮಿಸಿದ ವಿಧಾನ ಸಭೆಗಳ ಮೂಲಕ ಮಂತ್ರಿಮಂಡಲಗಳನ್ನು ರಚಿಸುವ, ಆಡಳಿತ ನಡೆಸುವ, ಸಂಯಮಪೂರಿತ ವಿವೇಕಯುತ ಪ್ರಜಾತಂತ್ರದ ಪ್ರತಿಪಾದಕರವರು. ಪ್ರಜಾತಂತ್ರ ಹಿಂಸೆಯಿಂದ ಮುಕ್ತವಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವೂ ಸುರಕ್ಷಿತವಾಗಬೇಕಾದರೆ ಪ್ರಜಾತಂತ್ರ ಶುದ್ಧ ಅಹಿಂಸಾತ್ಮಕವಾಗಿರಲೇಬೇಕು. ಆಗ ಮಾತ್ರ ಬಲಶಾಲಿ, ದುರ್ಬಲ ಇಬ್ಬರಿಗೂ ಸಮಾನಾವಕಾಶವೂ ಸಮಾನಾಧಿಕಾರವೂ ಇರುತ್ತವೆ.

ಅಲ್ಪಸಂಖ್ಯಾತ ನೌಕರಶಾಹಿಯ ಸರ್ಕಾರ ಎಷ್ಟು ಅನಪೇಕ್ಷಿತವೋ, ಬಹುಸಂಖ್ಯಾತ ಪಕ್ಷದ ಸರ್ಕಾರವೂ ಅಷ್ಟೇ ಅನಪೇಕ್ಷಿತ. ವಿಚಾರಸ್ವಾತಂತ್ರ್ಯವನ್ನೂ ಕ್ರಿಯಾಸ್ವಾತಂತ್ರ್ಯವನ್ನೂ ಬಯಸುವುದಾದರೆ ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನೂ ಕಾಪಾಡಬೇಕಾಗುತ್ತದೆ. ಬಹುಮತ ಪದ್ಧತಿಯ ಪ್ರಭುತ್ವದಲ್ಲಿ ವ್ಯಕ್ತಿಸಮಷ್ಟಿಯಲ್ಲಿ ಮುಳುಗಿಹೋಗುವ ಸಂಭವವೇ ಹೆಚ್ಚು. ಹಾಗಾಗಬಾರದು. ಸ್ನೇಹದಿಂದ, ಮಧುರಮಾರ್ಗದಿಂದ ಅಲ್ಪಸಂಖ್ಯಾತರನ್ನು ಒಲಿಸಿಕೊಳ್ಳಬೇಕು; ಬೇರೆ ದಾರಿ ಇಲ್ಲ. ಬಹುಮತವಾದ ಅಸಹನೀಯ ಹಿಂಸೆಗೆ ಮೂಲ. ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯವನ್ನು ತಾನು ಪಾಲಿಸಿದಾಗ ಅವನ ಪಾಲಿನ ಹಕ್ಕು ಅವನಿಗೆ ಕ್ರಮಪ್ರಾಪ್ತವಾಗುತ್ತದೆ–ಎಂದು ಗಾಂಧಿಯವರು ಹೇಳಿದ್ದಾರೆ. ಪ್ರಜಾತಂತ್ರವೆಂದರೆ ಪ್ರಜೆಗಳು ಸದಾ ವಿಧೇಯರಾಗಿ ವರ್ತಿಸುವುದಲ್ಲ. ಬಹುಸಂಖ್ಯಾತರಿಂದ ಭಿನ್ನವಾದ ಅಭಿಪ್ರಾಯ ಉಳ್ಳವರಾಗಿ ವರ್ತಿಸುವ ಹಕ್ಕು ಅಲ್ಪಸಂಖ್ಯಾತರಿಗೆ ಉಂಟೆಂದು ಅವರ ವಾದ. ವ್ಯಕ್ತಿ ಗಣನೆಗೆ ಬಾರದೆ ಹೋದರೆ ಸಮಾಜದಲ್ಲಿ ಏನೂ ಉಳಿಯದು. ವ್ಯಕ್ತಿಗೆ ಸ್ವಾತಂತ್ರ್ಯವಿದ್ದಾಗ ಮಾತ್ರ ಅವನು ತಾನಾಗಿ ತಾನೇ ಸಮಾಜದ ಅನುವರ್ತಿಯಾಗುತ್ತಾನೆ; ಅದಕ್ಕೆ ಸೇವೆ ಸಲ್ಲಿಸುತ್ತಾನೆ. ಆ ಸ್ವಾತಂತ್ರ್ಯವನ್ನು ಅವನಿಂದ ಕಸಿದುಕೊಂಡರೆ ಅವನು ಬರಿಯ ಯಂತ್ರವಾಗುತ್ತಾನೆ; ಸಮಾಜ ಹಾಳಾಗುತ್ತದೆ. ವ್ಯಕ್ತಿ ಎಲ್ಲಿ ಸ್ವಾತಂತ್ರ್ಯದಿಂದ ವಂಚಿತನಾಗುತ್ತಾನೋ ಅಲ್ಲಿ ಸಮಾಜವ್ಯವಸ್ಥೆ ಸಾಧ್ಯವಿಲ್ಲ. ವ್ಯಕ್ತಿ, ಸಮಾಜ ಎರಡೂ ಸುರಸವಾಗಿ ಸುಗಮವಾಗಿ ಬೆಳೆಯಬೇಕು. ವ್ಯಕ್ತಿಯೂ ತಾನು ಕೂಟಜೀವಿಯೆಂಬುದನ್ನು ನೆನಪಿನಲ್ಲಿಡಬೇಕು. ಸಮಾಜಪ್ರಗತಿಗೆ ಹೊಂದಿಕೊಂಡು ವ್ಯಕ್ತಿ ನೆಮ್ಮದಿಯ ಜೀವನ ನಡೆಸಬೇಕು. ಅವನು ಸ್ವಾತಂತ್ರ್ಯ ಬಯಸುವುದಾದರೂ ಸ್ವಸುಖಕ್ಕಾಗಿ ಅಲ್ಲ. ಸಕಲರ ಸುಖಕ್ಕಾಗಿ; ಸಕಲರ ಹಿತಕ್ಕಾಗಿ. ವ್ಯಕ್ತಿಸ್ವಾತಂತ್ರ್ಯವೆಂದರೆ ಒಬ್ಬ ಇನ್ನೊಬ್ಬನ ಮೇಲೆ ಸವಾರಿ ಮಾಡುವ ಅವಕಾಶವಲ್ಲ.

ಗಾಂಧಿಯವರು ಸಂಕುಚಿತ ರಾಷ್ಟ್ರವಾದಿಗಳಲ್ಲ. ಇಡೀ ವಿಶ್ವವೇ ಒಂದು ಕುಟುಂಬ–ಎಂಬುದೇ ಅವರ ಆದರ್ಶ. ವಿಶ್ವಕ್ಕೆಲ್ಲ ಲಾಭವಾಗಿ ಭಾರತ ಏಳಬೇಕು. ಇತರ ರಾಷ್ಟ್ರಗಳು ಹಾಳಾಗಿ ಅದರ ಮೇಲೆ ಭಾರತ ಏಳಬಾರದು–ಎಂದು ಅವರು ಹೇಳಿದ್ದಾರೆ. ರಾಷ್ಟ್ರವಾದಿಯಾಗದೆ ಅಂತಾರಾಷ್ಟ್ರೀಯವಾದಿಯಾಗುವುದು ಸಾಧ್ಯವಿಲ್ಲವೆಂಬುದು ಗಾಂಧಿಯವರ ಮತ. ರಾಷ್ಟ್ರವಾದದಲ್ಲಿ ಕುಂದೇನೂ ಇಲ್ಲ; ಸಂಕುಚಿತ ದೃಷ್ಟಿಯಲ್ಲಿ, ಸ್ವಾರ್ಥದಲ್ಲಿ ದೋಷವಿದೆ. ಭಾರತದ ರಾಷ್ಟ್ರವಾದವೂ ಅದರ ರಾಷ್ಟ್ರತ್ವ ಕಲ್ಪನೆಯೂ ಮಾನವ ಕುಲದ ಸೇವೆಗೆ ಮುಡುಪಾಗಿರತಕ್ಕದ್ದೆಂದು ಅವರು ಬೋಧಿಸಿದರು.

ವಿಶ್ವಕ್ಕೆಲ್ಲ ಒಂದು ಪ್ರಭುತ್ವವಿರಬೇಕೆಂಬುದು ಗಾಂಧಿಯವರ ಆದರ್ಶ. ಸೇವಾಗ್ರಾಮದ ಪರ್ಣಕುಟಿಯಲ್ಲಿ ಕೂತಿರುವಾಗಲೇ ನಾನು ಇಡೀ ಜಗತ್ತಿನೊಂದಿಗೆ ಸಂಪರ್ಕವನ್ನಿಟ್ಟು ಕೊಂಡು, ಅಷ್ಟೇ ಏಕೆ, ಬ್ರಹ್ಮಾಂಡದೊಂದಿಗೆ ಸಂಪರ್ಕವನ್ನಿಟ್ಟುಕೊಂಡು, ಸುರಸವಾಗಿ ಬಾಳನ್ನು ನಡೆಸಲು ಬಯಸುತ್ತೇನೆ–ಎಂದು ಅವರು ಬರೆದಿದ್ದಾರೆ. ಅವರು ವಿಶ್ವ ಒಕ್ಕೂಟ ಸ್ಥಾಪಿಸುವ ವಿಚಾರ ಮಾಡಿದ್ದರು. ಇದನ್ನು ಅವರು ಅಹಿಂಸೆ, ಅಂತಾರಾಷ್ಟ್ರೀಯ ಸಹಕಾರ–ಇವುಗಳ ಅಸ್ತಿಭಾರದ ಮೇಲೆ ರಚಿಸುವ ಆಲೋಚನೆ ಮಾಡಿದ್ದರು. ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಚತುರಂಗ ಬಲಗಳನ್ನು ಕೊನೆಗೊಳಿಸಬೇಕು; ಸಂಪೂರ್ಣ ಶಸ್ತ್ರನಿರಾಕರಣ ನೀತಿಯನ್ನು ಪರಿಪಾಲಿಸಬೇಕು. ರಾಷ್ಟ್ರಗಳ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಸ್ನೇಹದಿಂದ, ಸಂಧಾನದಿಂದ ಪರಿಹರಿಸಿಕೊಳ್ಳಬೇಕು. ವಿಶ್ವಶಾಂತಿಯ ಪಾಲನೆಗಾಗಿ ವಿಶ್ವ ಒಕ್ಕೂಟ ಮಾತ್ರ ತಕ್ಕಷ್ಟು ಸೇನಾಬಲವನ್ನು ಇಟ್ಟುಕೊಳ್ಳಬಹುದು; ಶಸ್ತ್ರಧಾರಣ ಮಾಡಬಹುದು–ಎಂದು ಅವರು ಭಾವಿಸಿದ್ದರು. (ಟಿ.ಟಿ.ಎಸ್.)

**ಗಾಂಧೀ ಸಮಾಜದರ್ಶನ:** ಗಾಂಧೀಜಿ ಭಾರತದ ಸ್ವಾತಂತ್ರ್ಯ ಸಂಪಾದಕರಾದರೂ ಅಖಿಲ ಜಗತ್ತಿನ ಪ್ರಜೆಯಾಗಿ, ಜಗತ್ತಿನ ಕಲ್ಯಾಣವನ್ನು ತಮ್ಮ ಬೋಧನೆಯಿಂದಲೂ ಆಚರಣೆಯಿಂದಲೂ ಸಾಧಿಸಲು ತಮ್ಮ ಜೀವಮಾನವನ್ನೆಲ್ಲ ವಿನಿಯೋಗಿಸಿದರು. ಅವರು ರಾಜತಂತ್ರಜ್ಞರಾಗಿದ್ದುದಕ್ಕಿಂತ ಹೆಚ್ಚಾಗಿ ಧಾರ್ಮಿಕ ಪುರುಷರೂ ಆಧ್ಯಾತ್ಮ ಸಾಧಕರೂ ಆಗಿದ್ದರು. ಆದುದರಿಂದ ರಾಜಕೀಯ ಹೋರಾಟವೂ ಸೇರಿದಂತೆ, ಅವರ ಎಲ್ಲ ಚಟುವಟಿಕೆಗಳೂ ಸತ್ಯ ಧರ್ಮ ಅಹಿಂಸೆಯ ಮೇಲೆಯೇ ಆಧಾರಿತ ವಾಗಿದ್ದುವು. ವ್ಯಕ್ತಿಯ ಮಟ್ಟದಲ್ಲಿ, ರಾಷ್ಟ್ರದ ಮಟ್ಟದಲ್ಲಿ, ಅಂತಾರಾಷ್ಟ್ರ ಮಟ್ಟದಲ್ಲಿ, ಎಲ್ಲ ಕಾರ್ಯಗಳನ್ನು ನಿರ್ದೇಶಿಸುವ ಮೂಲಪ್ರೇರಣೆ ಸತ್ಯ ಮತ್ತು ಅಹಿಂಸೆಯಾಗಿರ ಬೇಕೆಂದು ಅವರು ಬಯಸಿದರು ಅಂಥ ಸಮಾಜವನ್ನು ರೂಪಿಸುವುದು ಅವರ ಉದ್ದೇಶವಾಗಿತ್ತು.

ಗಾಂಧೀಜಿಯವರ ಕಲ್ಪನೆಯ ಸಮಾಜರಚನೆಯಲ್ಲಿ ವ್ಯಕ್ತಿಯೇ ಪರಮಗಣ್ಯ. ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡ ಸಮಾಜದಲ್ಲಿ ಮಾತ್ರ ಶಾಂತಿ ಸುಖ ಸಮತೆ ಇರಬಲ್ಲದು. ವ್ಯಕ್ತಿ ಸ್ವಾತಂತ್ರ್ಯವೊಂದೇ ಮಾನವ ಪೂರ್ಣ ಆತ್ಮ ಸಂತೋಷದಿಂದ ತನ್ನನ್ನು ಸಮಾಜಸೇವೆಗೆ ಅರ್ಪಿಸಿಕೊಳ್ಳುವ ಸ್ಫೂರ್ತಿಯನ್ನು ನೀಡಬಲ್ಲದು. ಪ್ರಜಾ ಪ್ರಭುತ್ವದ ಹೆಸರಿನಲ್ಲಾಗಲೀ ಬಹುಮತದ ಬಲಪ್ರಯೋಗದಿಂದಾಗಲೀ ವ್ಯಕ್ತಿ ಸ್ವಾತಂತ್ರ್ಯ ಹರಣ ಸಲ್ಲದು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಎಲ್ಲ ಬಗೆಯ ವಿರೋಧದಮನ ಅಥವಾ ವಿರೋಧಿಗಳ ನಿರ್ನಾಮವಾದರೆ ಅದು ನಿಜವಾದ ಜನತಂತ್ರ ಅಥವಾ ಜನತಾಸ್ವರಾಜ್ಯ ವಾಗದು. ವ್ಯಕ್ತಿ ತನ್ನ ಪೂರ್ಣತೆಗೆ ಬೆಳೆದು, ತನ್ನ ಶಕ್ತಿಗಳನ್ನೆಲ್ಲ ಸಾಧಿಸಿಕೊಂಡು ಅದರ ಎಲ್ಲ ಫಲಗಳನ್ನೂ ಸಮಾಜಕ್ಕೆ ಹಿಂದಿರುಗಿಸುವುದೇ ನಿಜವಾದ ವ್ಯಕ್ತಿ ಸ್ವಾತಂತ್ರ್ಯದ ಅರ್ಥ. ಇಂಥ ಸಮಾಜದಲ್ಲಿ ಬಡತನವಿರದು, ಯುದ್ಧವಿರದು, ಕ್ರಾಂತಿಯಿರದು, ರಕ್ತಪಾತವಿರದು.

ಆದರ್ಶ ಸಮಾಜದಲ್ಲಿ, ಮನಸ್ಸಿನ ಹಾಗೂ ನೀತಿಯ ಪೂರ್ಣ ವಿಕಾಸದಿಂದ ಕೂಡಿದ ಮಾನವಸೌಖ್ಯವೇ ಜೀವನದಲ್ಲಿ ಆರಿಸುವ ಗುರಿಯಾಗುತ್ತದೆ. ಇಲ್ಲಿ ನೀತಿಯೆಂದರೆ ಆಧ್ಯಾತ್ಮಿಕ ಎಂದೂ ಅರ್ಥ. ಬರಿಯ ದೇಹದ ಸೌಖ್ಯವೇ ಮಾನವನಿಗೆ ಎಂದಿಗೂ ಪೂರ್ಣ ಸೌಖ್ಯವಾಗಲಾರದು. ಅದು ಪಶುಗಳಿಗೆ ಮಾತ್ರ ಸರ್ವಸ್ವವಾಗ ಬಹುದು. ಇಂಥ ಸಮಾಜದಲ್ಲಿ ವಿಕೇಂದ್ರೀಕರಣ ಒಂದು ಮುಖ್ಯ ಅಂಶ. ಹಳ್ಳಿಗಳು ಸಮಾಜ ಜೀವನದ ಕೇಂದ್ರಬಿಂದುಗಳಾಗಬೇಕು. ಕೇಂದ್ರೀಕರಣ ಪದ್ಧತಿ, ಅಹಿಂಸಕ ಸ್ವರೂಪವುಳ್ಳ ಸಮಾಜರಚನೆಯೊಂದಿಗೆ ಹೊಂದಿಕೊಳ್ಳಲಾರದು. ವ್ಯಕ್ತಿ ತನ್ನ ಹಳ್ಳಿಗಾಗಿ ಪ್ರಾಣಾರ್ಪಣೆ ಮಾಡಲೂ ಸಿದ್ಧನಾಗಿ, ಸಮುದಾಯಕ್ಕಾಗಿ ಸದಾ ದುಡಿಯುತ್ತಾನೆ. ಇಂಥ ಸಮಾಜದಲ್ಲಿ ವ್ಯಕ್ತಿ ಪರಿವರ್ತನೆಹೊಂದಿ ಸ್ವಾರ್ಥರಹಿತನಾಗಿರುತ್ತಾನೆ. ಪ್ರತಿ ಹಳ್ಳಿಯೂ ವ್ಯವಸಾಯ, ಗ್ರಾಮೋದ್ಯೋಗ, ಮೂಲಶಿಕ್ಷಣಶಾಲೆ, ಆಟದ ಬಯಲು, ಪ್ರಕೃತಿ ಚಿಕಿತ್ಸಾಲಯ, ಸಹಕಾರಸಂಘ, ಶಿಶುವಿಹಾರ, ಶುದ್ಧವಾದ ಕುಡಿಯುವ ನೀರು, ಮಕ್ಕಳಿಗೆ ಹಾಲು–ಇವೆಲ್ಲ ದೊರೆಯುವ ಘಟಕವಾಗುತ್ತದೆ. ಹಳ್ಳಿ ಪಟ್ಟಣಿಗರ ಅಥವಾ ಇತರರ ಲೂಟಿಗೆ ತುತ್ತಾಗದೆ ಸ್ವಾವಲಂಬಿಯಾಗಿರುತ್ತದೆ. ಭಾರತದ ಪ್ರತಿಹಳ್ಳಿಯೂ

ಗಣರಾಜ್ಯವಾಗಿ ಯಾವುದೂ ಶ್ರೇಷ್ಠವೂ ಕನಿಷ್ಠವೂ ಆಗದೆ ಕಡೆಯದೂ ಮೊದಲದೂ ಆಗದೆ ಎಲ್ಲವೂ ಸಮಾನವಾಗಿರುತ್ತವೆ.

ಇಂಥ ಸಮಾಜದಲ್ಲಿ, ಸರ್ಕಾರದ ಸಂಪರ್ಕ, ಹಳ್ಳಿಗಳೊಂದಿಗೆ ಎಷ್ಟು ಕಡಿಮೆ ಇದ್ದರೆ ಅಷ್ಟು ಒಳ್ಳೆಯದು. ಜನತೆ ಮಾಡಬೇಕಾದ ಕಾರ್ಯಗಳನ್ನೆಲ್ಲ ತಾನೇ ಮಾಡುತ್ತ ಜನತೆಯನ್ನು ನಿಷ್ಕ್ರಿಯವನ್ನಾಗಿ ಮಾಡಿ, ಅದರ ಕಾರ್ಯಶಕ್ತಿಯನ್ನು ಉಡುಗಿಸುವುದು ಯಾವ ಸರ್ಕಾರಕ್ಕೂ ಒಳ್ಳೆಯದಲ್ಲ. ಅದು ಜನತೆಯ ವ್ಯಕ್ತಿ ಸ್ವಾತಂತ್ರ್ಯವನ್ನೂ ಹರಣಮಾಡುತ್ತದೆ.

ಯಾವ ವ್ಯಕ್ತಿಯೂ ಸಮಾಜಕ್ಕೆ ಕಂಟಕನಾಗಿ ಬೆಳೆಯಕೂಡದು. ಮಾನವ ಪ್ರಧಾನವಾಗಿ ಸಮಾಜಜೀವಿ ಎಂಬುದನ್ನು ಮರೆಯಬಾರದು. ಸಾಮಾಜಿಕ ಪ್ರಗತಿಯ ಆವಶ್ಯಕತೆಗಳಿಗೆ ಅನುಗುಣವಾಗಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತ ಅವನು ಇಂದಿನ ಹಂತಕ್ಕೆ ಏರಿದ್ದಾನೆ. ಇಡೀ ಸಮಾಜದ ಕಲ್ಯಾಣದೃಷ್ಟಿಯಿಂದ ವ್ಯಕ್ತಿ ಇಚ್ಛಾಪೂರ್ವಕವಾಗಿ ಸಾಮಾಜಿಕ ನಿಗ್ರಹಕ್ಕೆ ಒಳಗಾಗುವುದರಿಂದ ಸಮಾಜದ ಸದಸ್ಯರಲ್ಲೊಬ್ಬನಾದ ಅವನಿಗೂ ಸಮಾಜಕ್ಕೂ ಒಳಿತಾಗುವುದು.

ಶ್ರೀಮಂತರು ಧರ್ಮದ ಪಾರುಪತ್ಯಗಾರರಾಗಬೇಕು. ಅನಾಸಕ್ತರಾದ ಯಜಮಾನ ರಾಗಬೇಕು–ಎಂಬ ಮಾತಿನಲ್ಲಿ ಗಾಂಧೀಜಿ ಈ ಮಾರ್ಗವನ್ನು ವಿವರಿಸಿದರು.

ಸರ್ವಸಮಭಾಗ ಎಂಬ ಮಾತಿಗೆ ಗಾಂಧೀಜಿಯ ದೃಷ್ಟಿಯಲ್ಲಿ ಹೀಗೆ ಅರ್ಥ: ಸರ್ವಸಮಭಾಗವೆಂದರೆ ಜಗತ್ತಿನ ಸಂಪತ್ಸಾಮಗ್ರಿಯನ್ನೆಲ್ಲ ಯಾರೋ ಒಬ್ಬರು ಕೂತು ತಮ್ಮ ಮನಸ್ಸಿಗೆ ಬಂದ ಹಾಗೆ ಹಂಚಿಹಾಕುವುದಲ್ಲ. ಪ್ರತಿಯೊಬ್ಬನಿಗೂ ತನತನಗೆ ಸಹಜವಾಗಿ ಎಷ್ಟು ಬೇಕೋ ಅಷ್ಟು ಸಾಮಗ್ರಿ ದೊರೆಯಬೇಕು. ಒಂದು ಕವಡೆಯೂ ಹೆಚ್ಚಾಗಿ ಯಾರಿಗೂ ಸಿಗಬೇಕಾದ್ದಿಲ್ಲ.

ಈ ಸರ್ವಸಮ ವಿಭಾಗ ಹೇಗೆ ಆಗಬೇಕು, ಲೋಕದಲ್ಲಿ? ಕ್ರಾಂತಿಯಿಂದಲೇ ರಕ್ತಪಾತದಿಂದಲೇ? ಹಣವಂತರ ಸಂಪತ್ತನ್ನೆಲ್ಲ ಬಲಾತ್ಕಾರವಾಗಿ ದೋಚುವುದರಿಂದಲೇ? ಕೂಡದು ಎನ್ನುತ್ತದೆ ಅಹಿಂಸೆ. ಬಲಾತ್ಕಾರವಾದ ಸಂಪತ್ತಿನ ಆಕ್ರಮಣದಿಂದ ಲೋಕ ಇನ್ನೂ ಪಾತಾಳಕ್ಕಿಳಿದೀತು. ಹಣವಂತನ ಕೌಶಲವೆಲ್ಲ ಮಾಯವಾಗಿ ಲೋಕಕ್ಕೆ ಆ ಪ್ರಭಾವದ ಲಾಭ ಇಲ್ಲವಾದೀತು. ಅವನಿಗೆ ಸೃಷ್ಟಿಕೌಶಲ, ನಿರ್ಮಾಣ ಶಕ್ತಿಯಿದೆ. ಆ ಸಾಮರ್ಥ್ಯವನ್ನು ಕಳೆದುಕೊಳ್ಳುವುದು ಉಚಿತವಲ್ಲ. ಆತನ ಧನ ಅವನಿಗಿರಲಿ. ತನ್ನ ಬದುಕಿಗೆ ಅಗತ್ಯವಿದ್ದಷ್ಟನ್ನು ಆತ ಬಳಸಲಿ. ಉಳಿದುದಕ್ಕೆ ಬರೀ ಯಜಮಾನನಾಗಿರಲಿ. ದೇಶದ ಹಿತಕ್ಕಾಗಿ ಅದನ್ನು ಬೆಳೆಸಲಿ. ಗಾಂಧೀತತ್ತ್ವದಂತೆ ಹಿಂಸೆಯ ಮೂಲಕ ಉಂಟಾಗುವ ಸಹಕಾರ, ಬಲತ್ಕಾರದಿಂದ ಉಂಟಾದ ಒಳಿತು, ವ್ಯಕ್ತಿತ್ವವನ್ನು ನಾಶ ಮಾಡುತ್ತದೆ.

ಮಾನವಕುಟುಂಬದ ಪ್ರತಿಯೊಬ್ಬ ಪುರುಷನಿಗೂ ಮಹಿಳೆಗೂ ಅವರೆಷ್ಟೇ ಅಶಕ್ತರಾಗಿದ್ದರೂ ತಮ್ಮ ಆತ್ಮಗೌರವ ಮತ್ತು ಸ್ವಾತಂತ್ರ್ಯಗಳ ರಕ್ಷಣೆ ಮಾಡಿಕೊಳ್ಳಬೇಕೆಂಬ ಮನೋದಾರ್ಢ್ಯವನ್ನುಂಟುಮಾಡುವುದು ಅಗತ್ಯ.

ಆದರ್ಶ ಸಮಾಜದಲ್ಲಿ ಕುಟುಂಬ ಧರ್ಮವನ್ನು ರಾಷ್ಟ್ರಧರ್ಮವನ್ನಾಗಿಯೂ ರಾಷ್ಟ್ರಧರ್ಮವನ್ನು ವಿಶ್ವಧರ್ಮವನ್ನಾಗಿಯೂ ಎಂದಾದರೊಂದು ದಿನ ವಿಸ್ತರಿಸಲೇಬೇಕು.

ವ್ಯಕ್ತಿಸ್ವಾತಂತ್ರ್ಯ ಎಷ್ಟೇ ಇದ್ದರೂ ಮಾನವ ಸಮಾಜಜೀವಿಯಾಗಿಯೇ ಬೆಳೆಯಬೇಕು. ಆ ಸ್ವಾತಂತ್ರ್ಯ ಅವನನ್ನು ಸಮಾಜ ಜೀವನದಿಂದ ಪ್ರತ್ಯೇಕಗೊಳಿಸುವಷ್ಟು ದೂರ ಹೋಗಬಾರದು.

ವಿಕೇಂದ್ರೀಕರಣ ಕ್ರಮದಿಂದ ಸರ್ಕಾರ ಉತ್ಪಾದನೆಯ ಬಹುಭಾಗವನ್ನು ಜನತೆಗೆ ವಹಿಸಿ ವ್ಯಕ್ತಿಸ್ವಾತಂತ್ರ್ಯ ಸಾಮಾಜಿಕ ಅಪಾಯವಾಗುವ ಸ್ಥಿತಿಗೆ ಮುಟ್ಟಿದಾಗ ಮಾತ್ರ ತಾನು ಕೈಹಾಕಬೇಕು. ಈ ವ್ಯವಸ್ಥೆಯಿಂದ ಬಹುಮಟ್ಟಿಗೆ ನಿರುದ್ಯೋಗವೂ ಪೈಪೋಟಿಯೂ ಕಡಿಮೆಯಾಗುವುದು.

ಗಾಂಧೀಜಿ ಸೂಚಿಸಿದ ಈ ಸಮಾಜ ವ್ಯವಸ್ಥೆ ವಿಶ್ವದ ಹಿತದೃಷ್ಟಿಯಿಂದ ರೂಪಿತವಾದುದು. ಅವರು ಹಿಂದೂ ಸಮಾಜದಲ್ಲಿ ಜನಿಸಿದುದರಿಂದ ಹಿಂದೂ ಸಮಾಜದ ಗುಣದೋಷಗಳು, ಅವುಗಳ ನಿವಾರಣೆ–ಇವನ್ನು ಕುರಿತು ಯೋಚಿಸುವುದು ಅವರಿಗೆ ಅನಿವಾರ್ಯವಾಯಿತು. ಹಿಂದೂ ಸಮಾಜದಲ್ಲಿ ಅನೇಕ ಲೋಪದೋಷ ಗಳಿದ್ದರೂ ತಾನು ಹಿಂದೂ ಧರ್ಮವನ್ನೇ–ತನ್ನ ಹೆಂಡತಿಯನ್ನು ಪ್ರೀತಿಸುವಂತೆ– ಪ್ರೀತಿಸುತ್ತೇನೆಂದು ಗಾಂಧೀಜಿ ಹೇಳಿಕೊಂಡಿದ್ದಾರೆ. ಹಿಂದೂ ಧರ್ಮ ಹಿಂದೂ ಸಂಸ್ಕೃತಿ ಹಿಂದೂ ಸಮಾಜದ ವಿಷಯದಲ್ಲಿ ಅವರು ಆಳವಾಗಿ ಹತ್ತೂನಿಟ್ಟಿನಿಂದ ಯೋಚನೆ ಮಾಡಿದ್ದಾರೆ. ಭಾರತ ತನ್ನ ಪ್ರಾಚ್ಯ ಸಂಸ್ಕೃತಿಯ ಆಧಾರದಮೇಲೆ ಮಾತ್ರವೆ, ತನ್ನ ಸುಂದರವಾದ ರೀತಿ ನೀತಿಗಳಿಂದ ಬೆಳೆದು, ಭಾರತೀಯ ಸತ್ತ್ವಕ್ಕನುಗುಣವಾಗಿ ಇತರ ಪ್ರಾಚ್ಯ ಮತ್ತು ಪಾಶ್ಚಾತ್ಯದೇಶಗಳ ಸ್ನೇಹಸಂಬಂಧವನ್ನು ಸ್ಥಾಪಿಸಿಕೊಳ್ಳಬಲ್ಲದು. ಏಷ್ಯ ಖಂಡದವರು ಪಾಶ್ಚಾತ್ಯರಿಂದ ಬರುವುದೆಲ್ಲವನ್ನೂ ತಾರತಮ್ಯವಿಲ್ಲದೆ ವಿಚಾರಶೂನ್ಯತೆ ಯಿಂದ ಅನುಕರಿಸಬಾರದು. ಭಾರತ ತನ್ನ ನಾಗರಿಕತೆಯ ಮೇಲೆ ಅನ್ಯಾಯವಾಗಿ ಆಗುತ್ತಿರುವ ದಾಳಿಗಳನ್ನು ಶಾಂತಿಮಾರ್ಗದಿಂದ ಪ್ರತಿಭಟಿಸಬೇಕು. ಆಗ ವಿಶ್ವದ ಶಾಂತಿಗೂ ಸುಭದ್ರಪ್ರಗತಿಗೂ ಸಹಾಯಕವಾಗುವುದು. ಜನತೆಯ ಬಡತನದ ಸಮಸ್ಯೆಗೆ ಪಾಶ್ಚಾತ್ಯ ಸಮಾಜವಾದ, ಸಾಮ್ಯವಾದಗಳೇ ಅಂತಿಮಪರಿಹಾರವೆಂದು ಭಾವಿಸುವುದು ನಿಜವಾಗಿಯೂ ತಪ್ಪು.

ಹಿಂದೂ ಸಮಾಜ ಧಾರ್ಮಿಕ ತಳಹದಿಯಮೇಲೆ ರಚಿತವಾಗಿದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಹಿಂದೂ ಧರ್ಮ, ಪಶ್ಚಿಮ ದೇಶಗಳವರು ಭೌತ ವಿಷಯಗಳಲ್ಲಿ ಮಾಡಿರುವುದಕ್ಕಿಂತ ಹೆಚ್ಚು ಶೋಧನೆಗಳನ್ನು ಮಾಡಿದೆ. ಆದರೆ ಮಹತ್ತಮವೂ ಸುಂದರವೂ ಆದ ಆ ಶೋಧನೆಗಳನ್ನು ಕಾಣುವ ಕಣ್ಣುಗಳು ಜನಕ್ಕೆ ಇಲ್ಲ. ಇಂದು ಹಿಂದೂ ಧರ್ಮವನ್ನು ಅದರ ಅನುಯಾಯಿಗಳೇ ವಿಪರೀತಗೊಳಿಸಿ ಅಲ್ಲಗಳೆಯುತ್ತಿ ರುವರು. ಅದನ್ನು ಅಳಿಸಿಬಿಡುವುದು ಅದಕ್ಕೆ ಮದ್ದಲ್ಲ. ನಿಜವಾದ ಹಿಂದೂ ಭಾವನೆಯನ್ನು ಜನ ತಮ್ಮಲ್ಲಿ ಉಂಟುಮಾಡಿಕೊಳ್ಳಬೇಕು. ಹಿಂದೂ ಧರ್ಮ ಗಂಗಾನದಿಯಂತೆ ಉಗಮಸ್ಥಾನದಲ್ಲಿ ನಿರ್ಮಲವೂ ಶುದ್ಧವೂ ಆಗಿದೆ. ಗಂಗಾನದಿ ಹರಿದು ಬರುವಾಗ ಕೊಳೆಯನ್ನು ತೆಗೆದುಕೊಂಡು ಬರುವಂತೆ, ಹಿಂದೂ ಧರ್ಮವೂ ಬೆಳೆಯುತ್ತ ನಡೆದಂತೆ ಕೊಳೆ ಕೂಡಿದೆ ಆದರೆ ಗಂಗಾ ನದಿಯಂತೆ ಒಟ್ಟಿನಲ್ಲದು ಪರೋಪಕಾರಿಯಾಗಿದೆ.

ಹಿಂದೂ ಧರ್ಮ ಒಂದು ಅಧಿಕೃತ ಧರ್ಮವಲ್ಲ. ಅದು ಅದರ ಸುದೈವ. ಮತ್ತು ದುರ್ದೈವ. ಅದಕ್ಕೆ ಇತರ ಧರ್ಮಗಳಿಗಿರುವಂತೆ (ಬೈಬಲ್, ಕುರಾನ್, ಜೆಂಡ್ ಅವೆಸ್ತಗಳಂತೆ) ಒಂದು ಗ್ರಂಥವಿಲ್ಲ. ಆದರೆ ಭಗವದ್ಗೀತೆಯನ್ನು ಹಿಂದೂ ಧರ್ಮದ ಆಧಾರ ಗ್ರಂಥವೆಂದು ಭಾವಿಸಬಹುದು.

ಹಿಂದೂ ಧರ್ಮದ ಲಕ್ಷಣವನ್ನು ಗಾಂಧೀಜಿ ಹೀಗೆ ಹೇಳಿದ್ದಾರೆ. ಅಹಿಂಸಾ ಸಾಧನಗಳ ಮೂಲಕ, ಸತ್ಯವನ್ನು ಹುಡುಕುವುದೇ ಈ ಧರ್ಮದ ಉದ್ದೇಶ. ಸತ್ಯದ ಕಠೋರ ಶೋಧನವೇ ಹಿಂದೂತ್ವ. ಹಿಂದೂ ಧರ್ಮ ಅತ್ಯಂತ ಸಹಿಷ್ಣು ಧರ್ಮ, ಸಮದರ್ಶಿ ಧರ್ಮ, ಸರ್ವಗ್ರಾಹಿಧರ್ಮ. ಈ ಸರ್ವಗ್ರಾಹಿತ್ವವೇ ಅದರ ವಿಶಿಷ್ಟ ಸೌಂದರ್ಯ. ಬೇರೆ ಧರ್ಮಗಳಲ್ಲಿ ಇರುವುದೆಲ್ಲವನ್ನೂ ಹಿಂದೂ ಧರ್ಮದಲ್ಲಿ ಕಾಣಬಹುದು. ಅದರಲ್ಲಿಲ್ಲದುದು ಅಮುಖ್ಯವೂ ಅನಾವಶ್ಯಕವೂ ಆಗಿದೆ.

ಅಸ್ಪೃಶ್ಯತೆ, ಅಸಂಖ್ಯಾತವಾದ ಜಾತಿಗಳು, ಜಾತಿಭೇದ, ಮೂಢನಂಬಿಕೆಗಳು, ಬಾಲ್ಯವಿವಾಹ, ವೈಧವ್ಯದ ಕಠೋರ ನಿಯಮಗಳು, ಎಲ್ಲ ಪ್ರಾಚೀನ ಪದ್ಧತಿಗಳನ್ನೂ ತಾರತಮ್ಯ ಜ್ಞಾನವಿಲ್ಲದೆ ನಿರಾಕರಿಸಿ ನವೀನವಾದುದೆಲ್ಲದರ ಅಂಧಾನುಕರಣೆ, ವ್ಯವಹಾರಗಳಿಂದ ದೇವರನ್ನು ಸಂಪೂರ್ಣವಾಗಿ ಬಹಿಷ್ಕರಿಸಿರುವುದು, ಧರ್ಮ, ನೀತಿ ಮುಂತಾದ ನಿಜವಾದ ಆರ್ಷೇಯದ ಮೌಲ್ಯಗಳನ್ನು ನಿರಾಕರಿಸಿರುವುದು, ಬಡತನ ಬಲ್ಲಿದತನ ಬಂಡವಾಳ ಕೂಲಿ ಸರ್ವಸಮಾನತೆ ಇವುಗಳಿಗೆಲ್ಲ ಪಾಶ್ಚಾತ್ಯ ಮಾರ್ಗಗಳ ಹೊರತು ಬೇರೆ ದಾರಿ ಇಲ್ಲವೆಂದು ಅವನ್ನೇ ಅನುಸರಿಸುವುದು–ಇವೇ ಹಿಂದೂ ಸಮಾಜದ ದೌರ್ಬಲ್ಯವಾಗಿದೆ. ಹಿಂದೂ ಧರ್ಮದಲ್ಲಿ ಅನ್ಯಧರ್ಮದಿಂದ ಹಿಂದೂ ಧರ್ಮಕ್ಕೆ ಮತಾಂತರವಿಲ್ಲದುದನ್ನು ಗಾಂಧೀಜಿ ದೊಡ್ಡ ದೋಷವೆಂದು ಎಣಿಸುವುದಿಲ್ಲ. ಯಾವ ಧರ್ಮದ ಯೋಗ್ಯತೆಯೂ ಬರಿಯ ಸಂಖ್ಯಾಬಲವಲ್ಲ. ಮತಾನುಯಾಯಿಗಳೆಲ್ಲ ತಮ್ಮ ಧರ್ಮದ ತಿರುಳನ್ನು ಅರಿತು ಅದರಂತೆ ಆಚರಿಸುವುದು ಆ ಧರ್ಮದ ಶಕ್ತಿ.

ಹಿಂದೂ ಸಮಾಜದ ಜಾತಿಪದ್ಧತಿ, ಅಸ್ಪೃಶ್ಯತೆ, ಮೂಢನಂಬಿಕೆ, ಬಾಲ್ಯವಿವಾಹ, ವಿಧವೆಯರ ಕಷ್ಟಸ್ಥಿತಿ, ಸ್ತ್ರೀಸ್ವಾತಂತ್ರ್ಯ ಇವನ್ನೆಲ್ಲ ತಿದ್ದಲು ಸುಧಾರಣೆ ಆವಶ್ಯಕವೆಂದು ಗಾಂಧೀಜಿ ಅಭಿಮತ. ಸಮಾಜಸುಧಾರಣೆ ರಾಜಕೀಯಕ್ಕಿಂತ ಕಡಿಮೆಯದಲ್ಲ. ಸಮಾಜ ಸುಧಾರಕರು ತೆವಳುತ್ತ ನಡೆಯಬೇಕು. ಶಾಂತರಾಗಿರಬೇಕು. ನಿಸ್ಸ್ವಾರ್ಥತೆಯಿಂದಲೂ ಆತ್ಮತ್ಯಾಗದಿಂದ, ಮನವೊಲಿಸುವ ಮಾರ್ಗದಿಂದಲೂ ಸೇವೆ ಸಲ್ಲಿಸಬೇಕು. ಹಿಂದೂ ಸಮಾಜವನ್ನು ಒಂದೇ ಸಲಕ್ಕೆ ವಿವೇಚನೆಯಿಲ್ಲದೆ ಪಾಶ್ಚಾತ್ಯ ಸಮಾಜವಾಗಿ ಪರಿವರ್ತಿಸಲು ಪ್ರಯತ್ನಿಸುವುದು ವಿವೇಚನಾ ರಹಿತಕಾರ್ಯ. ಯಾವ ರೀತಿಯಲ್ಲಿಯೂ ಹಿಂಸಾಮಾರ್ಗ ವರ್ಜ್ಯ.

ಆದರ್ಶ ಸಮಾಜದಲ್ಲಿ ಸ್ತ್ರೀಪುರುಷರಲ್ಲಿ ಮೇಲು–ಕೀಳೆಂಬ ಭೇದವಿಲ್ಲ. ಅವರು ವಿವಾಹದಲ್ಲಿ ಗೆಳೆಯರಾಗಿ ಸಮಾನರಾಗಿ ಕೂಡುತ್ತಾರೆ. ಪತಿ ಸ್ವಾಮಿನ್ ಎಂದು ಕರೆಯಲ್ಪಟ್ಟರೆ, ಪತ್ನಿ, ಸ್ವಾಮಿನಿ. ಪತ್ನಿಗೆ ಪತಿ ಗುರು. ಪತಿಗೆ ಪತ್ನಿ ನೆರವೀವ ಸಂಗಾತಿ. ಜೀವನದ ಕಾರ್ಯವನ್ನು ಮತ್ತು ಕರ್ತವ್ಯಗಳನ್ನು ಎಸಗುವುದರಲ್ಲಿ ಒಬ್ಬರು ಮತ್ತೊಬ್ಬರ ಜೊತೆ ಸಹಕರಿಸುವರು. ಒಬ್ಬರ ಅಭಿವೃದ್ಧಿ ಮಾರ್ಗದಲ್ಲಿ ಒಬ್ಬರು ಅಡ್ಡಿಯಾಗರು. ಒಬ್ಬರಲ್ಲೆ (ಹೆಣ್ಣಾಗಲಿ, ಗಂಡಾಗಲಿ) ಭಾವಸಂಪತ್ತಿಯುಳ್ಳವರಾದರೆ, ಆ ಭಾವ ತಮ್ಮ ಸಹಭಾಗಿಗೂ ಉಂಟಾಗುವಂತೆ ಮಾಡುತ್ತಾರೆ. ಒಬ್ಬರಿಗೆ ಒಬ್ಬರು ನಿಜವಾದ ಗುರುಗಳೂ ಮಾರ್ಗದರ್ಶಕರೂ ಆಗುತ್ತಾರೆ. ಇಬ್ಬರಲ್ಲಿ ಯಾರೊಬ್ಬರ ಬುದ್ಧಿ ಭಾವ ಸಂಯಮ ಆದರ್ಶಾನುಕರಣೆ ದೈವಭಕ್ತಿ ಬ್ರಹ್ಮಚರ್ಯಗಳಿಗೆ ಎಂದಿಗೂ ಚ್ಯುತಿಬಾರದು. ಒಂದು ಸುವ್ಯವಸ್ಥಿತ ಸಮಾಜದಲ್ಲಿ, ಕುಟುಂಬಕ್ಕೆ ಜೀವನೋಪಾಯ ಕಲ್ಪಿಸುವ ಹೆಚ್ಚುವರಿ

ಹೊರೆ ಸ್ತ್ರೀಯ ಪಾಲಿಗೆ ಬರಬಾರದು. ಮಕ್ಕಳ ಪೋಷಣೆ, ಗೃಹಕೃತ್ಯನಿರ್ವಹಣೆ ಇವೇ ಆಕೆಯ ಸರ್ವಶಕ್ತಿಗಳನ್ನೂ ಪೂರ್ಣವಾಗಿ ಆಕರ್ಷಿಸಲು ಸಾಕು. ಆಕೆಗೆ ಇನ್ನೂ ಹೆಚ್ಚು ವ್ಯವಧಾನವೂ ಶಕ್ತಿಯೂ ಇದ್ದಲ್ಲಿ ಅದು ಸಮಾಜಸೇವೆಗೆ ಮೀಸಲಾಗಬೇಕು.

ವಿವಾಹ, ಗಂಡು ಹೆಣ್ಣು ಇಬ್ಬರಿಗೂ ಒಂದು ಪವಿತ್ರ ಸಂಸ್ಕಾರ. ಸತಿಪತಿಯರ ಸಂಯೋಗ, ಬರಿಯ ದೈಹಿಕ ಸಂಯೋಗವಲ್ಲ; ಅದು ಎರಡು ಆತ್ಮಗಳ ನಿಜಸಂಯೋಗ.

ಇಂಥ ಗೃಹಸ್ಥಾಶ್ರಮ ಉಳಿದ ಎಲ್ಲ ಆಶ್ರಮಗಳಿಗಿಂತ ಉತ್ತಮ.

ಗಾಂಧೀ ಸಮಾಜವಾದದಲ್ಲಿ ವಿವಾಹ ಒಂದು ನೈಸರ್ಗಿಕ ಅಂಶ. ಅದನ್ನು ಯಾವ ಅರ್ಥದಲ್ಲಿಯೂ ಕೀಳೆಂದುಭಾವಿಸುವುದು ಶುದ್ಧಾಂಗ ತಪ್ಪು. ವಿವಾಹವನ್ನು ಒಂದು ಪವಿತ್ರ ಸಂಸ್ಕಾರವೆಂದು ಭಾವಿಸಿ, ಅದರ ಅನಂತರವೂ ಆತ್ಮಸಂಯಮದ ಜೀವನವನ್ನು ನಡೆಸುವುದು ಆದರ್ಶ. ಹಿಂದೂ ಧರ್ಮದ ನಾಲ್ಕು ಆಶ್ರಮಗಳಿಗೂ ಅದೇ ಆಧಾರ. ಆದರೆ ದುರದೃಷ್ಟವಶಾತ್ ಆಧುನಿಕ ಕಾಲದಲ್ಲಿ ವಿವಾಹ ಒಂದು ದೈವಿಕ ಸಂಯೋಗವೆಂದು ಪರಿಗಣಿಸಲ್ಪಟ್ಟಿದೆ. ವಿವಾಹದ ಕಟ್ಟು ಸಡಿಲವಾದಾಗ ಸಂಯಮದ ಆಚರಣೆಯಿಲ್ಲದ ಸ್ತ್ರೀ, ವೈಮನಸ್ಯದ ಮೂಲವಾದಾಳು. ನಿಗ್ರಹವಿಲ್ಲದೆ ಹೋದಾಗ ಮಾನವರು ಪಶುಗಳಂತೆ.

ವಿವಾಹ ಮತ್ತು ಕಾಮತೃಪ್ತಿಗಳ ವಿಷಯದಲ್ಲಿ ಗಾಂಧೀಜಿ ಸ್ಪಷ್ಟ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿವಾಹದ ಗುರಿ ಸಂತಾನಾಪೇಕ್ಷೆಗಾಗಿ ಮಾತ್ರ. ಸಂತಾನಾಪೇಕ್ಷೆಯಿಲ್ಲದಿದ್ದರೆ ವಿವಾಹ ಖಂಡಿತ ಕೂಡದು. ಸಂತಾನ ಹೊಂದಬೇಕೆಂಬ ಆಸೆ ಸ್ವಾಭಾವಿಕವಾದುದು. ಅದು ತೃಪ್ತಿಯಾದ ಕೂಡಲೇ ಸಂಭೋಗವೇ ಕೂಡದು. ಕಾಮತೃಪ್ತಿಯ ವಿಷಯದಲ್ಲಿ ಸ್ತ್ರೀ ಪುರುಷರು ಒಬ್ಬರನ್ನೊಬ್ಬರು ಬಲಾತ್ಕರಿಸಬಾರದು. ಸಂತಾನಾಪೇಕ್ಷೆ ಮುಗಿದ ಕೂಡಲೇ ಕಾಮರಹಿತ ವಿವಾಹಜೀವನವನ್ನು ನಡೆಸಬೇಕು. ಕಾಮವನ್ನು ತೃಪ್ತಿಮಾಡಿಕೊಳ್ಳದೆ ಇದ್ದರೆ ದೇಹಾರೋಗ್ಯ ಕೆಡುತ್ತದೆ ಎಂಬ ಭಾವನೆ ಶುದ್ಧತಪ್ಪು. ವೀರ್ಯನಾಶದಿಂದ ಯಾರಿಗೂ ಯಾವ ಕಾಲದಲ್ಲಿಯೂ ಒಳ್ಳೆಯದಾಗಿಲ್ಲ. ದಂಪತಿಗಳಲ್ಲಿ ಯಾರೊಬ್ಬರೂ ಸಂಯಮದ ಎಲ್ಲ ಕಟ್ಟುಪಾಡುಗಳನ್ನು ಮುರಿಯುವುದಾದರೆ, ವಿವಾಹಿತ ಜೀವನ ಅಸಹ್ಯವೆನಿಸುತ್ತದೆ. ದಂಪತಿಗಳು ಒಮ್ಮತದಿಂದ, ಸಂಯೋಗ ಅಪೇಕ್ಷಣೀಯವೆಂದು ಭಾವಿಸುವುದಾದರೆ ಇತರರೆಲ್ಲರನ್ನೂ ಬಿಟ್ಟು ಅವರಿಬ್ಬರೇ ಸಂಯೋಗ ಹೊಂದುವ ಅಧಿಕಾರವನ್ನು ವಿವಾಹ ಸ್ಥಿರಪಡಿಸುತ್ತದೆಯೇ ಹೊರತು, ಇಬ್ಬರಲ್ಲಿ ಯಾರೊಬ್ಬರೂ ಮತ್ತೊಬ್ಬರ ಇಚ್ಛೆಯಂತೆ ಸಂಯೋಗಕ್ಕೆ ತಲೆಬಾಗುವಂತೆ ಬಲಾತ್ಕರಿಸುವ ಅಧಿಕಾರವನ್ನು ನೀಡುವುದಿಲ್ಲ. ಇಬ್ಬರಲ್ಲಿ ಯಾರೊಬ್ಬರಾಗಲಿ, ನೈತಿಕ ಅಥವಾ ಇತರ ಯಾವ ಕಾರಣಕ್ಕೇ ಆಗಲಿ, ಮತ್ತೊಬ್ಬರ ಇಚ್ಛೆಯಂತೆ ನಡೆಯದಿದ್ದರೆ, ವಿಚ್ಛೇದನವೇ ಆಯ್ದುಕೊಳ್ಳಬೇಕಾದ ಅವಕಾಶವೆನಿಸಿದಲ್ಲಿ, ಅದನ್ನು ಒಪ್ಪಿಕೊಳ್ಳಲು ಹಿಂದೆಗೆಯಬಾರದು. ಆದರೆ ಅದು ನೈತಿಕ ಅಥವಾ ಸಂಯಮದ ಕಾರಣಗಳಿಗಾಗಿ ಆಗಬೇಕೇ ಹೊರತು ಅನ್ಯಸುಖಲೋಲುಪತೆಗಾಗಿ ಆಗಕೂಡದು. ಪತ್ನಿ ತನ್ನ ಸ್ವತಂತ್ರವಾದ ಮಾರ್ಗವನ್ನು ಆರಿಸಿಕೊಂಡು, ತಾನು ಸರಿ ಎಂದು ಭಾವಿಸಿರುವ ಘನವಾದ ಉದ್ದೇಶಕ್ಕಾಗಿ ನಮ್ರಪೂರ್ವಕ ಧೈರ್ಯದಿಂದ ಪರಿಣಾಮಗಳನ್ನು ಎದುರಿಸಬೇಕು.

ವಿವಾಹ ಬಾಳಿನಲ್ಲಿ ಸ್ವಾಭಾವಿಕ ಅಂಶ. ಭೋಗಾಪೇಕ್ಷೆಯಿಂದ ಚೆನ್ನಾಗಿಯೂ ನಿಜವಾಗಿಯೂ ನಡೆಸುವ ವೈವಾಹಿಕ ಜೀವನ ಅನೇಕ ವಿಧಗಳಲ್ಲಿ ಅವಿವಾಹಿತ ಜೀವನಕ್ಕಿಂತ ಹೆಚ್ಚು ಕಷ್ಟವಾದುದು. ಸಮಾಜಸೇವೆಯನ್ನು ಅಜೀವ ಪರ್ಯಂತ ಮಾಡುವ ದೃಷ್ಟಿಯಿಂದ ಕೆಲವು ಮಹಿಳೆಯರು ಅವಿವಾಹಿತರಾಗಿಯೇ ಉಳಿಯಲು ಬಯಸಬಹುದು. ಅಂಥವರೂ ವಿವಾಹಿತರಾಗಿ ಪತಿಪತ್ನಿಯರಿಬ್ಬರೂ ಪರಸ್ಪರ ಸಹಾಯಕರಾಗಿ ಸಮಾಜಸೇವೆಯನ್ನು ನಡೆಸುವುದು ಉತ್ತಮ. ವಿವಾಹಿತರಾಗಿ ಕುಟುಂಬ ಸೇವೆ ನಡೆಸುವುದು ನಿರರ್ಥಕವಲ್ಲ. ರಾಷ್ಟ್ರಸೇವೆ ಎಂದರೆ ಮಾನವಸೇವೆ. ಹಾಗೆಯೇ ನಿಸ್ವಾರ್ಥ ಕುಟುಂಬ ಸೇವೆಯೂ ರಾಷ್ಟ್ರಸೇವೆ ಎನಿಸೀತು. ಧರ್ಮ ಅರ್ಥ ಕಾಮಗಳಲ್ಲಿ, ಪತಿಪತ್ನಿಯರಲ್ಲಿ ಸಹಮತವಿರಬೇಕೆಂಬುದು ಹಿಂದೂ ವಿವಾಹದ ಆರ್ಷೇಯ ಕಟ್ಟಳೆ. ಆತ್ಮಸಾಕ್ಷಿಗೆ ವಿರೋಧವಾದ ಕಟ್ಟಳೆಯನ್ನು ಗಂಡನಾಗಲೀ ಹೆಂಡತಿಯಾಗಲೀ ನಡೆಸಬೇಕಾದುದಿಲ್ಲ. ಗಂಡಹೆಂಡಿರು ಪರಸ್ಪರ ಪ್ರೇಮವುಳ್ಳವರಾಗಿ ವಶವರ್ತಿಗಳಾಗಿರಬೇಕು. ಹಿಂದೂ ಧರ್ಮ ಪುರುಷ-ಸ್ತ್ರೀ ಇಬ್ಬರಿಗೂ ಅವರು ಅಪೇಕ್ಷಿಸುವ ರೀತಿಯಲ್ಲಿ ಅವರ ಹುಟ್ಟಿನ ಏಕಮಾತ್ರ ಗುರಿಯಾದ ಆತ್ಮಸಾಕ್ಷಾತ್ಕಾರವನ್ನು ಹೊಂದಲು ಪೂರ್ಣ ವ್ಯಕ್ತಿಸ್ವಾತಂತ್ರ್ಯವನ್ನು ನೀಡುತ್ತದೆ. ಸ್ತ್ರೀಪುರುಷರಿಗೆ, ಹಿಂದೂ ವಿಧವೆಯರು ಇಂದ್ರಿಯ ನಿಗ್ರಹಮಾಡಿ ಕುಟುಂಬದ ಮತ್ತು ಸಮಾಜದ ಸೇವೆ ಸಲ್ಲಿಸುತ್ತಿರುವುದು ಉನ್ನತ ಧ್ಯೇಯದಿಂದಲೆ. ಆದರೆ ಬಾಲವಿಧವೆಯರು ಪುನರ್ವಿವಾಹವಾಗಬಹುದು. ಯಾರೇ ಆಗಲಿ, ಸಂಯಮ ಸಾಧ್ಯವಿಲ್ಲದಿದ್ದರೆ ಪುನರ್ವಿವಾಹಿತರಾಗಿ ಗೃಹಸ್ಥಾಶ್ರಮ ನಡೆಸಬೇಕೇ ಹೊರತು ಸ್ವೇಚ್ಛಾಚಾರಿಗಳಾಗಬಾರದು.

ಗಾಂಧೀಜಿಯ ದೃಷ್ಟಿಯಲ್ಲಿ ಬ್ರಹ್ಮಚರ್ಯವೆಂಬುದು ಮನುಷ್ಯನಿಗೆ ದೊರಕಿರುವ ಅತ್ಯಮೂಲ್ಯ ವಸ್ತು; ಭಾರತೀಯ ಸಮಾಜವಿಜ್ಞಾನ ಜಗತ್ತಿಗೆ ಕೊಟ್ಟಿರುವ ಶುಕ್ರಸಮ ಪ್ರಕಾಶಮಾನವಾದ ತೇಜೋನಿಧಿ. ಮೇಲುನೋಟಕ್ಕೆ ಬರಿಯ ಜನನೇಂದ್ರಿಯ ನಿಯಂತ್ರಣವಷ್ಟೇ ಬ್ರಹ್ಮಚರ್ಯವೆಂದು ತೋರಿದರೂ ಅದಕ್ಕೆ ಎಲ್ಲ ಬಗೆಯ ನಿಗ್ರಹಗಳೂ ಅಗತ್ಯವಾಗುತ್ತವೆ. ಧ್ಯೇಯಸಾಧನೆಯ ಉತ್ಕಟೇಚ್ಛೆಯ ಜೊತೆಯಲ್ಲಿಯೇ ಅನುಷ್ಠಾನವೂ ಅಗತ್ಯ. ಬ್ರಹ್ಮಚಾರಿ ಮನೋ ವಾಕ್ ಕಾಯಗಳನ್ನು ನಿಯಂತ್ರಿಸಬೇಕು. ಆಲೋಚನೆಯ ಮೇಲೆ ನಿಯಂತ್ರಣವಿಲ್ಲದಿದ್ದರೆ ಉಳಿದೆರಡರ ನಿಯಂತ್ರಣ ವ್ಯರ್ಥ. ಬ್ರಹ್ಮಚಾರಿ ನಿರೋಗಿಯೂ ದೀರ್ಘಾಯುವೂ ಆಗಿರುವನು. ಅವನಿಗೆ ಮುಪ್ಪೂ ಬುದ್ಧಿಮಾಂದ್ಯವೂ ಇಲ್ಲ. ಗೀತೆಯಲ್ಲಿ ಬಣ್ಣಿಸಿದ ಸ್ಥಿತಪ್ರಜ್ಞನ ಲಕ್ಷಣಗಳನ್ನೆಲ್ಲ ಅವನು ತೋರುವನು.

ಬ್ರಹ್ಮಚರ್ಯಕ್ಕೆ ಸಾಧನ ಯಾವುದು? ಸತ್ಯದಲ್ಲಿ ಪರಮಾತ್ಮನಲ್ಲಿ ಅವಲಂಬನೆ. ವಿವರವಾಗಿ ಹೇಳುವುದಾದರೆ ಅಹಿಂಸೆ, ಸತ್ಯ, ಅಸ್ತೇಯ (ಇತರರದನ್ನು ಅಪಹರಿಸದಿರುವುದು), ಬ್ರಹ್ಮಚರ್ಯ, ಅಪರಿಗ್ರಹ, ಕಾಯಕ, ಜಿಹ್ವಾ ನಿಗ್ರಹ, ಅಭಯ, ಸರ್ವಧರ್ಮಸಮನ್ವಯ, ಸ್ವದೇಶಿ ಮತ್ತು ಅಸ್ಪೃಶ್ಯತಾ ನಿವಾರಣೆ ಈ ಎಲ್ಲ ನಿಯಮಗಳನ್ನೂ ತಪ್ಪದೆ ಆಚರಿಸುವವನು ಮಾತ್ರ ಬ್ರಹ್ಮಚಾರಿ.

ಬ್ರಹ್ಮಚರ್ಯದ ಗುರಿ ಯಾವುದು? ಪರಮಾತ್ಮಸಾನ್ನಿಧ್ಯ ಅಥವಾ ಬ್ರಹ್ಮಸಾಮೀಪ್ಯ. ಬ್ರಹ್ಮಚರ್ಯ ಪಾಲನೆಗೆ ನೇರವಾದ ದಾರಿ ಪರಮಾತ್ಮಸ್ಮರಣೆ, ರಾಮನಾಮ.

ಇಂಥ ಆದರ್ಶ ಬ್ರಹ್ಮಚರ್ಯ, ಸ್ಥಿತಪ್ರಜ್ಞರಿಗೆ ಮಾತ್ರ ಸಾಧ್ಯವೆಂದು ಉಳಿದವರು ಇಂದ್ರಿಯಗಳ ಸ್ವೇಚ್ಛಾವರ್ತನೆಗೆ ಬಲಿಯಾಗಬಾರದು. ಸಂಯಮ ಎಲ್ಲರಿಗೂ ಆವಶ್ಯಕ. ಗೃಹಸ್ಥರಾದ ಸ್ತ್ರೀಪುರುಷರು ಸಹ ಸಂತಾನಾಪೇಕ್ಷೆ ತೀರಿದ ಅನಂತರ ಬ್ರಹ್ಮಚರ್ಯವನ್ನು ಅನುಸರಿಸುವುದರಿಂದ ಅವರ ಬಾಳಿನಲ್ಲಿ ಹೆಚ್ಚು ಕಾಂತಿಯೂ ಸುಖವೂ ದೇಹದಲ್ಲಿ ಬಲವೃದ್ಧಿಯೂ ಉಂಟಾಗುವುದಲ್ಲದೆ, ದಂಪತಿಗಳಾದುದೇ ಇಂದ್ರಿಯ ಲಂಪಟತನಕ್ಕಾಗಿ ಎಂಬ ತಪ್ಪು ಭಾವ ಮರೆಯಾಗಿ ಪರಸ್ಪರರಲ್ಲಿರುವ ಗುಣೌನ್ನತ್ಯವನ್ನರಿತು ಸೇವಾಕಾರ್ಯದಲ್ಲಿ ಒಬ್ಬರಿಗೊಬ್ಬರು ಮಿತ್ರರಾಗಿ ಪರಸ್ಪರ ಆತ್ಮೋದ್ಧಾರಕ್ಕೆ ತೊಡಗಲು ಸಹಾಯಕವಾಗುವುದು. ಸ್ವತಃಗಾಂಧೀಜಿಯೇ ತಮ್ಮ ಮೂವತ್ತೈದನೆಯ ವಯಸ್ಸಿನಿಂದಲೇ ಕಸ್ತೂರ ಬಾ ಅವರೊಂದಿಗೆ ದೈಹಿಕ ಸಂಪರ್ಕವನ್ನು ತೊರೆದರಾದರೂ ಶ್ರೀರಾಮ ಸೀತೆಯರಂತೆ ಆದರ್ಶ ದಂಪತಿಗಳಾಗಿದ್ದರು.

ಸಂತತಿನಿಯಂತ್ರಣದ ವಿಷಯದಲ್ಲಿ ಗಾಂಧೀಜಿ ಸ್ಪಷ್ಟವಾದ ಮತ್ತು ಖಚಿತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಜನನವನ್ನು ನಿಯಂತ್ರಿಸಬೇಕೆಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಪ್ರಾಚೀನಕಾಲದಿಂದಲೂ ಇದಕ್ಕಾಗಿ ಅನುಸರಿಸಿದ ಮಾರ್ಗ ಬ್ರಹ್ಮಚರ್ಯ ಅಥವಾ ಸಂಯಮ. ಸಂತತಿ ನಿಯಂತ್ರಕರು (ಸರ್ಕಾರವೇ ಆಗಲಿ, ಅದರ ಪ್ರಚಾರಕರೇ ಆಗಲಿ) ಕೃತಕ ಉಪಾಯಗಳನ್ನು ಹುಡುಕುವ ಬದಲು ಆತ್ಮನಿಗ್ರಹದ ಸಾಧನಗಳನ್ನು ಶೋಧಿಸಿದರೆ ಮಾನವ ಕುಲವೇ ಅವರಿಗೆ ಋಣಿಯಾಗಿರುವುದು. ಸ್ತ್ರೀಪುರುಷ ಸಂಯೋಗ ಬರಿ ಭೋಗಕ್ಕಾಗಿರದೆ ಸಂತತಿ ಜನನಕ್ಕಾಗಿದೆ. ಸಂತತಿಜನನದ ಇಚ್ಛೆಯಿಲ್ಲದೆ ಮಾಡಿದ ಸ್ತ್ರೀಸಂಭೋಗ ಮಹಾಪರಾಧ. ಕೃತಕ ಉಪಾಯಗಳಿಂದ ದುರಾಚಾರಕ್ಕೆ ಉತ್ತೇಜನ ದೊರೆಯುತ್ತದೆ. ಅಲ್ಲದೆ ಅಂಥ ಉಪಾಯಗಳ ಅಂಗೀಕಾರದಿಂದ ನಪುಂಸಕತ್ವವೂ ಸ್ನಾಯು ದೌರ್ಬಲ್ಯವೂ ಹುಚ್ಚೂ ಉಂಟಾಗುತ್ತದೆ. ಕೃತಕ ಉಪಾಯಗಳನ್ನು ಪುರಸ್ಕರಿಸುವ ಜನರು, ತಮ್ಮ ಅಪಾಯಕರಚಟುವಟಿಕೆಯನ್ನು ತಡೆಹಿಡಿದು, ವಿವಾಹಿತರಿಗೂ ಅವಿವಾಹಿತರಿಗೂ ಬ್ರಹ್ಮಚರ್ಯೆಯಿಂದಾಗುವ ಹಿತವನ್ನು ಬಿಂಬಿಸಬೇಕು. ಸಂತತಿ ನಿಯಮನಕ್ಕೆ ಇದೊಂದೇ ನೇರವಾದ ಹಾಗೂ ಉದಾತ್ತವಾದ ಉಪಾಯ.

ಪ್ರಕೃತಿಯ ನಿಯಮ ಕಠೋರ. ತಾನು ಎಸಗಿದ ಕರ್ಮಗಳ ಫಲವನ್ನು ತಪ್ಪಿಸಿಕೊಳ್ಳಲೆತ್ನಿಸುವುದು ತಪ್ಪು ಹಾಗೂ ಅನೀತಿ. ಯಾವ ಸಮಾಜ, ಆಗಲೇ ಅನೇಕ ಕಾರಣಗಳಿಂದ ಸತ್ತ್ವಹೀನವಾಗಿದೆಯೋ ಅದು ಕೃತಕ ಸಾಧನಗಳಿಂದ ಇನ್ನೂ ಸತ್ತ್ವಹೀನವಾಗುತ್ತದೆ. ಕೃತಕ ಸಾಧನಗಳಿಂದ ಸ್ತ್ರೀಯನ್ನು ಪುರುಷ ಮತ್ತಷ್ಟು ತನ್ನ ಭೋಗಪಾಲನೆಯ ಸಾಮಗ್ರಿಮಾಡಿಕೊಂಡು ಅಧೋಗತಿಗಿಳಿಸುತ್ತಾನೆ. ಪುರುಷ ನಿಜವಾಗಿಯೂ ಸ್ತ್ರೀಗೆ ಒಳ್ಳೆಯದನ್ನು ಮಾಡಲು ಬಯಸುವುದಾದರೆ ಅವನು ತನ್ನ ಮೇಲೆ ನಿಗ್ರಹವನ್ನು ಹಾಕಿಕೊಳ್ಳಲಿ. ಅತಿಸಂತಾನ ಪಾಪಕರ. ಆದರೆ ತಮ್ಮ ಕರ್ಮದ ಪರಿಣಾಮವನ್ನು ತಪ್ಪಿಸಿಕೊಳ್ಳಲೆತ್ನಿಸುವುದು ಇನ್ನೂ ಹೆಚ್ಚು ಪಾಪಕರ. ಇದರಿಂದ ಮಾನವನ ಮಾನವತ್ವವೇ ಹೋಗುತ್ತದೆ.

ಜನನನಿಯಂತ್ರಣ ಪ್ರತಿಪಾದಕರು ಕೃತಕಸಾಧನಗಳ ಮೂಲಕ ಮಾನವನ ಸರ್ವಕಾಲವೂ ಇಂದ್ರಿಯಲಂಪಟನಾಗಲು ಸೌಕರ್ಯವನ್ನು ಒದಗಿಸುತ್ತಿದ್ದಾರೇ ಹೊರತು ಒಂದು ಸಲವಾದರೂ ಸಂಯಮದ ಆದರ್ಶವನ್ನು ಜನರ ಮುಂದೆ ಇಡುವುದು

ಆವಶ್ಯಕವೆಂಬುದನ್ನು ಪರಿಗಣಿಸಿಲ್ಲ. ಕೃತಕೋಪಾಯಗಳಿಗೆ ಅನೇಕ ಕೋಟಿ ರೂಪಾಯಿಗಳನ್ನು ವೆಚ್ಚಮಾಡುವಂತೆ ಸಂಯಮ ಸಂತಾನ ನಿಯಂತ್ರಣಕ್ಕೂ ಸ್ತ್ರೀ ಪುರುಷರು ಯಾವಾಗಲೂ ಭೋಗಲಾಲಸರೂ ಕಾಮುಕರೂ ಆದ ಪಶುಗಳಾಗಿರ ಬೇಕೆಂದು ನಿರ್ಣಯಿಸುವುದು ಸಮಂಜಸವಾಗಲಾರದು. ನಮ್ಮ ವಿಜ್ಞಾನ ಇಷ್ಟೊಂದು ಬೆಳೆದಿದ್ದರೂ ಮನುಷ್ಯದೇಹದ ರಹಸ್ಯದ ವಿಷಯ ನಮಗೆ ತಿಳಿದಿರುವುದು ಬಲು ಕಡಿಮೆ. ಅದರ ಮೇಲೆ ಈ ಬಗೆಯ ಕೃತಕ ಆಘಾತಗಳಿಂದ, ಮುಂದಲ ಜನಾಂಗದ ಮೇಲೆ ಏನು ಪರಿಣಾಮವಾಗುವುದೋ ಎಂಬ ಶಂಕೆ ಅನಿವಾರ್ಯ.

ಇವು ಸಮಾಜದ ಬಗ್ಗೆ ಗಾಂಧೀಜಿ ತಾಳಿದ್ದ ಕೆಲವು ಮೂಲಭೂತ ಅಭಿಪ್ರಾಯಗಳು.

(ಜಿ.ಆರ್.ಎ.)

**ಗಾಂಧೀ ಸಾಹಿತ್ಯ:** ಗಾಂಧೀಜಿ ತಮ್ಮ ಜೀವನದಲ್ಲಿ ಸುಮಾರು ಆರು ದಶಕಗಳ ಕಾಲವನ್ನು (1880–1948) ಒಂದಲ್ಲ ಒಂದು ಬಗೆಯ ಲೋಕಹಿತಕಾರ್ಯಕ್ಕೆ ವಿನಿಯೋಗಿಸಿದರು. ಅಂಥ ಸಮಯಗಳಲ್ಲಿ ಅವರು ಆಡಿದ ಮಾತು, ಬರೆದ ಪತ್ರ, ಮಾಡಿದ ಭಾಷಣ–ಇವೆಲ್ಲವನ್ನೂ ಒಟ್ಟಾಗಿ ಗಾಂಧೀ ಸಾಹಿತ್ಯವೆಂದು ಕರೆಯಬಹುದು.

ಅವರ ಬರೆಹಗಳ ರಾಶಿ ಬೆರಗುಪಡಿಸುವಷ್ಟಿದ್ದರೂ ಅದಾವುದನ್ನೂ ಅವರು ಬರೆಯಬೇಕೆಂದೇ ಬರೆದವರಲ್ಲ. ಅವರು ನಿಜಕ್ಕೂ ಯಾವ ಒಂದು ತತ್ತ್ವಪಂಥ ವನ್ನಾಗಲೀ ಜೀವನದರ್ಶನವನ್ನಾಗಲೀ ಸ್ಥಾಪಿಸ ಹೊರಟವರೂ ಅಲ್ಲ. ಹಾಗೆ ಮಾಡಲು ಅವರಿಗೆ ಸಾಕಷ್ಟು ಕಾಲಾವಕಾಶವಾಗಲೀ ಮಾಡುವ ಮನೋಧರ್ಮವಾಗಲೀ ಇರಲಿಲ್ಲ. ಅವರಿಗೆ ಸತ್ಯ ಮತ್ತು ಅಹಿಂಸೆಯಲ್ಲಿ ಅಪಾರ ಶ್ರದ್ಧೆ ಇತ್ತಾಗಿ ಅವು ತೋರಿದ ಮಾರ್ಗದಲ್ಲಿ ಅವರು ನಡೆಯಲು ಯತ್ನಿಸಿದರು; ತಮ್ಮ ಸುತ್ತಣ ಜನತೆಯನ್ನೂ ನಡೆಯುವಂತೆ ಪ್ರೇರಿಸಿದರು. ಹೀಗೆ ಮಾಡುವಾಗ ತಮಗೆ ಸತ್ಯವೆಂದು ಕಂಡದ್ದನ್ನು ಹೇಳಿದರು. ಇದೇ ಗಾಂಧೀ ತತ್ತ್ವ, ಗಾಂಧೀ ಸಾಹಿತ್ಯ.

ಗಾಂಧೀಜಿ ಜೀವನದ ಎಲ್ಲ ಕ್ಷೇತ್ರಗಳನ್ನು ಹೊಕ್ಕು ನೋಡಿದ್ದಾರೆ. ರಾಜಕೀಯ ಸಾಮಾಜಿಕ, ಧಾರ್ಮಿಕ, ಸಾಂಸಾರಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮಸ್ಯೆಗಳನ್ನವರು ಎದುರಿಸಿದ್ದಾರೆ. ಭಾಷೆ, ಸಾಹಿತ್ಯ, ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ, ಕಾರ್ಮಿಕರು–ಈ ಎಲ್ಲ ಕ್ಷೇತ್ರಗಳಲ್ಲೂ ಅವರು ಸತ್ಯಾನ್ವೇಷಕರಾಗಿ ಪ್ರವೇಶಿಸಿದ್ದುಂಟು. ಕೊನೆಗೆ ವ್ಯಕ್ತಿಜೀವನದಲ್ಲಿ ಆಹಾರ, ಉಡುಪು, ನಡೆವಳಿಕೆ ಹೇಗಿರಬೇಕೆಂಬುದರ ಬಗೆಗೂ ಅವರು ತೀವ್ರ ಆಸಕ್ತಿಯನ್ನು ತೋರಿಸಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಸಾಮಾಜಿಕವಾಗಿ ಶತಮಾನಗಳಿಂದ ಕಂಡು ಬರುತ್ತಿದ್ದ ಸಮಸ್ಯೆಗಳಿಗೆ ಸಮಂಜಸವಾದ ಉತ್ತರಗಳನ್ನು ಹುಡುಕಲು ಅವರು ಪ್ರಯತ್ನಿಸಿದ್ದಾರಾದರೂ ಅವರ ಅಭಿಪ್ರಾಯಗಳು ಯಾವ ಸಂಪ್ರದಾಯದ ಕಟ್ಟಿಗೂ ಒಳಗಾಗಿಲ್ಲ.

ಅವರ ಮಾರ್ಗವೂ ಅಷ್ಟೆ. ಸಮಸ್ಯೆ ದೊಡ್ಡದಾಗಿರಲಿ, ಸಣ್ಣದಾಗಿರಲಿ, ಪರಿಣಾಮ ಕಾರಿಯೂ ನೂತನವೂ ಆಗಿರುತ್ತಿತ್ತು. ಹೊಸ ಪ್ರಯೋಗಗಳಿಂದ ಹೊಳೆಯುತ್ತಿದ್ದ ಸತ್ಯಾಂಶಗಳಿಗೆ ಅವರೆಂದು ಕಣ್ಣು ಮುಚ್ಚಿಕೊಂಡವರಲ್ಲ.

ತೋರಿಕೆಯ ಸಾಮಂಜಸ್ಯಕ್ಕೆ ಅವರೆಂದೂ ಬೆಲೆ ಕೊಟ್ಟವರಲ್ಲ. ಆದ್ದರಿಂದ, ಮೇಲೆ ಮೇಲೆ ನೋಡುವವರಿಗೆ ಅವರಲ್ಲಿ ಅಸಮಂಜಸತೆ ಕಾಣಬರಬಹುದು. ತಮ್ಮದು ತಪ್ಪು ದಾರಿ ಎಂದು ಕಂಡುಬಂದಾಗ ಅವರು ನಾಚದೆ ಸಾರ್ವಜನಿಕವಾಗಿ ಅದನ್ನು ಒಪ್ಪಿಕೊಂಡು ಬೇರೆ ಮಾರ್ಗವನ್ನು ಅನುಸರಿಸುತ್ತಿದ್ದರು. ಅದೇ, ತಮ್ಮ ಮಾರ್ಗಸರಿಯೆನಿಸಿದಾಗ ಎಂಥ ಒತ್ತಾಯಕ್ಕೂ ಅವರು ಮಣಿದು ತಮ್ಮ ದಾರಿಯನ್ನು ಬದಲಿಸುತ್ತಿರಲಿಲ್ಲ. ಇದರಿಂದಾಗಿ ಅವರ ಅನೇಕ ಧೋರಣೆಗಳು ಬಹುವೇಳೆ ಅವರ ಟೀಕಾಕಾರರನ್ನು ಬೆರಗುಗೊಳಿಸುತ್ತಿದ್ದುವು. ಆದ್ದರಿಂದ ಗಾಂಧಿಯವರ ಜೀವನದ ನಿಲುವು, ತತ್ತ್ವಗಳನ್ನು ಅರಿಯಲು ಅವೆಲ್ಲವನ್ನೂ ಸಮಗ್ರವಾಗಿ ನೋಡಬೇಕಾಗುತ್ತದೆ. ಆಂಶಿಕವಾದ ಯಾವ ಅಧ್ಯಯನವೂ ಅವರ ಬೃಹದ್ ಜೀವನ, ಸಾಧನೆಗಳಿಗೆ ಸರಿಯಾದ ತಾತ್ಪರ್ಯವನ್ನು ಸೂಚಿಸವು.

**ಗಾಂಧೀ ಸಾಹಿತ್ಯ ಪ್ರಕಟಣೆ :** ಗಾಂಧೀಜಿ ಬರೆದ, ಆಡಿದ ಮಾತು ಅಪಾರ. ಅವು ಸತ್ಯದ ಜ್ಯೋತಿಯಲ್ಲಿ ಅಹಿಂಸೆಯ ಮೂಸೆಯಿಂದ ಉದ್ಭವಿಸಿ ಬಂದವು. ಅವು ಬದುಕಿನ ಅಂತರಾಳವನ್ನು ಸ್ಪರ್ಶಿಸಿ, ಜನಮಾನಸವನ್ನು ಮೀಟಿ ಎಬ್ಬಿಸುತ್ತಿದ್ದಂಥವು. ಐಹಿಕದ ಸಮಸ್ತ ವಿಷಯಗಳನ್ನು ಒಳಗೊಂಡು ಪರಮಾರ್ಥದ ಕಡೆಗೆ ಬಿಡದೆ ಸಾಗುತ್ತಿದ್ದ ಅವರ ವಿಚಾರವ್ಯಾಪ್ತಿ ಆಕಾಶದಂತೆ ಅನಂತ. ಅವರು ತಮ್ಮ ಚಿಂತನ ಮತ್ತು ವಿಚಾರಗಳನ್ನು ಸಂಯಮಕ್ಕೆ ಒಳಪಡಿಸಿಕೊಂಡು ಅವನ್ನು ಸಂಯಮದಿಂದಲೇ ಅಭಿವ್ಯಕ್ತಿಗೊಳಿಸಿದ ಮಾತು ಎಣೆಯಿಲ್ಲದ ಶಕ್ತಿಯಿಂದ ಹೊಮ್ಮಿಬಂದಂತೆಯೇ ಪ್ರಮಾಣದಲ್ಲಿಯೂ ಅಪಾರವಾಯಿತು. ಅವರ ಜೀವಮಾನ ಕಾಲದಲ್ಲಿ ಸೃಷ್ಟಿಯಾದ ಈ ಸಾಹಿತ್ಯರಾಶಿ ಯಾವ ಒಬ್ಬ ಸಾಹಿತಿಯ ಜೀವಮಾನಕಾಲದಲ್ಲಿ ಸೃಷ್ಟಿಯಾದ, ಯಾವ ಒಬ್ಬನೂ ಸೃಷ್ಟಿಸಬಹುದಾದ ಸಾಹಿತ್ಯದ ಪ್ರಮಾಣಕ್ಕಿಂತ ಯಾವ ವಿಧದಲ್ಲಿಯೂ ಕಡಿಮೆಯಿಲ್ಲ.

ಗಾಂಧಿಯವರೇ ಸ್ಥಾಪಿಸಿದ ನವಜೀವನ ನ್ಯಾಸದವರು ಅವರ ಬರೆಹಗಳನ್ನು ಅಚ್ಚುಹಾಕಿದ್ದಾರೆ. ಅವುಗಳೆಲ್ಲ ಗಾಂಧಿಯವರು ಭಾರತದಲ್ಲಿ ಕೈಗೊಂಡ ಕಾರ್ಯ ಕ್ರಮಗಳನ್ನು ಕುರಿತವಾಗಿವೆ. ನವಜೀವನ, ಯಂಗ್ ಇಂಡಿಯ, ಹರಿಜನ ಮೊದಲಾದ ಪತ್ರಿಕೆಯಲ್ಲಿ ಪ್ರಕಟವಾದ ಮತ್ತು ಮಿಕ್ಕಂತೆ ಅನೇಕ ಕಡೆ ಹಂಚಿಹೋಗಿರುವ ಗಾಂಧೀ ಸಾಹಿತ್ಯವನ್ನು ಈ ಸಂಸ್ಥೆ ಒಂದೆಡೆ ಸಂಗ್ರಹಿಸಿ ಅಚ್ಚು ಮಾಡಿದೆ. ಹೀಗೆ ಮಾಡುವಾಗ ಸತ್ಯ, ದೇವರು, ಅಹಿಂಸೆ, ಸತ್ಯಾಗ್ರಹ, ಸ್ವರಾಜ್ಯ, ಮಹಿಳೆಯರಿಗೆ ವಿದ್ಯಾರ್ಥಿಗಳಿಗೆ–ಹೀಗೆ ವಿಷಯಕ್ಕೆ ತಕ್ಕಂತೆ ಬರೆಹಗಳನ್ನು ಕೂಡಿಸಿ ಅಚ್ಚುಮಾಡಲಾಗಿದೆ. ಹೀಗೆ ಕೂಡಿಸುವಾಗ ಇಡೀ ಬರವಣಿಗೆಯ ಉಚಿತ ಭಾಗವನ್ನು ಮಾತ್ರ ಉದ್ಧರಿಸಿರುವುದರಿಂದ ಎಷ್ಟೋ ಕಡೆ ಗಾಂಧಿಯವರ ಸಮಗ್ರ ಬರವಣಿಗೆ ಒಂದು ಕಡೆ ಸಿಗುವಂತಾಗಿಲ್ಲ.

ಇನ್ನೂ ಗಾಂಧೀ ಸ್ಮಾರಕ ನಿಧಿಯವರು ಅವರ ಪತ್ರಗಳಲ್ಲಿ ಬಹುಪಾಲನ್ನು ಅಚ್ಚುಮಾಡಿದ್ದಾರೆ. ಇಲ್ಲಿಯೂ ಅವರ ಎಲ್ಲ ಪತ್ರಗಳು ಸಿಗುವುದಿಲ್ಲ.

ಗಾಂಧಿಯವರ ಎಲ್ಲ ಬರೆಹಗಳನ್ನೂ ಅಚ್ಚುಮಾಡುವ ದೊಡ್ಡ ಕೆಲಸವನ್ನು ಭಾರತ ಸರ್ಕಾರ ಕೈಗೆತ್ತಿಕೊಂಡು, ನವಜೀವನ ನ್ಯಾಸದ ಸಹಾಯದಿಂದಲೂ ಒಂದು ಪರಿಣತ ಸಂಪಾದಕ ಮಂಡಳಿಯ ಸಹಾಯದಿಂದಲೂ ಪ್ರಕಟಣೆಯ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ಮಾಲೆಯ ಮೊದಲ ಸಂಪುಟ ಅಚ್ಚಾದದ್ದು 1958ರ ಜನವರಿ 26ರಂದು. ಅದರಲ್ಲಿ 1884–1896ರ ವರೆಗಿನ ಗಾಂಧೀ ಬರೆಹಗಳು ಅಚ್ಚಾಗಿವೆ. ಮೊದಲ ಎಣಿಕೆಯಂತೆ ಗಾಂಧೀ ಸಾಹಿತ್ಯ 50 ಸಂಪುಟಗಳಾಗಬಹುದೆಂಬ ನಿರೀಕ್ಷೆ ಇತ್ತು. ಈಗ ಅವುಗಳ ಸಂಖ್ಯೆ 75ಕ್ಕೆ ಏರಿದೆ. 1971ರ ಜುಲೈ ತಿಂಗಳಲ್ಲಿ ಈ ಸರಣಿಯಲ್ಲಿ 45 ಸಂಪುಟಗಳು ಅಚ್ಚಾಗಿವೆ.

ಇಲ್ಲಿನ ಕ್ರಮ ಹೀಗಿದೆ. ಸಾಹಿತ್ಯ ಎಂದೆಂದು ಹುಟ್ಟಿತೋ ಅಂದಂದಿನ ಎಣಿಕೆಯಲ್ಲಿ, ಕಾಲಾನುಕ್ರಮವಾಗಿ, ಗಾಂಧಿಯವರ ಬರೆಹಗಳನ್ನು ಇಲ್ಲಿ ಅಚ್ಚುಹಾಕಲಾಗಿದೆ. ಅವರ ಕಾಗದಪತ್ರಗಳು, ಭಾಷಣಗಳು, ದಿನಚರಿ, ಪತ್ರಿಕೆಗೆ ಬರೆದ ಲೇಖನಗಳು, ಅಹವಾಲುಗಳು, ತಂತಿಗಳು, ಪ್ರವಚನಗಳು–ಹೀಗೆ ಗಾಂಧಿಯವರ ಎಲ್ಲ ಲೇಖಗಳನ್ನೂ ಈ ಸಂಪುಟಗಳು ಒಳಗೊಂಡಿವೆ. ಈ ಸರಣಿ ಪೂರ್ಣವಾಗಿ ಅಚ್ಚಾದಾಗ ಗಾಂಧೀ ದರ್ಶನವೇನೆಂಬುದನ್ನು ನಿರ್ಣಯಿಸುವ ಸಂಶೋಧಕರಿಗೆ ತುಂಬ ಸಹಾಯವಾಗುತ್ತದೆ.

ಕನ್ನಡದಲ್ಲೂ ಗಾಂಧೀ ಸಾಹಿತ್ಯವನ್ನು ಪ್ರಕಟಿಸುವ ಯೋಜನೆ ಯಶಸ್ವಿಯಾಗಿ ಮುಂದುವರಿಯುತ್ತದೆ. ಗಾಂಧೀ ಸ್ಮಾರಕ ನಿಧಿಯವರು ಕನ್ನಡ ಗಾಂಧೀ ಸಾಹಿತ್ಯ ಮಾಲೆ ಎಂಬ ಹೆಸರಿನಲ್ಲಿ ಈಗಾಗಲೆ 15ಕ್ಕೂ ಮೇಲ್ಪಟ್ಟು ಗ್ರಂಥಗಳನ್ನು ಹೊರ ತಂದಿದ್ದಾರೆ. 1. ಸಂಕ್ಷಿಪ್ತ ಆತ್ಮಕಥೆ ಮತ್ತು ಹಿಂದ್ ಸ್ವರಾಜ್ 2. ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ 3. ಗೀತಾಮಾತೆ 4. ಸತ್ಯ–ಅಹಿಂಸೆ 5. ಧರ್ಮ–ನೀತಿ 6. ಸಮಾಜ ಧರ್ಮ 7. ಜೀವನ ಶಿಕ್ಷಣ 8. ಅರ್ಥವಿಚಾರ 9. ಸತ್ಯಾಗ್ರಹ 10. ಮಹಿಳೆಯರು 11. ಪತ್ರಗುಚ್ಛ–1 12. ಪತ್ರಗುಚ್ಛ–2 13. ನನ್ನ ಸಮಕಾಲೀನರು 14. ರಾಜನೀತಿ 15. ಪತ್ರಗುಚ್ಛ–3 ಈ ಶೀರ್ಷಿಕೆಗಳನ್ನು ನೋಡಿದರೆ ಕನ್ನಡದ ಈ ಗ್ರಂಥಗಳಿಗೆ ಮಾದರಿ ನವಜೀವನ ನ್ಯಾಸದವರ ಗ್ರಂಥಗಳು ಎಂಬುದು ಸ್ಪಷ್ಟವಾಗುತ್ತದೆ.

**ಗಾಂಧೀ ಸಾಹಿತ್ಯದ ಪ್ರಕಾರಗಳು :** ಗಾಂಧೀ ಸಾಹಿತ್ಯವನ್ನು, ಸಹಜವಾಗಿಯೇ, ಗಾಂಧೀಜಿ ಸ್ವತಃ ಬರೆದುವು ಮತ್ತು ಅವರು ಆಡಿದ ಮಾತಿನ ಮೂಲಕ ವ್ಯಕ್ತವಾಗಿ ಗ್ರಂಥರೂಪ ಪಡೆದುವು. ಹಾಗೂ ಗಾಂಧೀಜೀವನ–ಚಿಂತನ ಇವುಗಳ ಬಗೆಗೆ ಇತರರು ಬರೆದುವು ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಇಲ್ಲಿ ಗಾಂಧೀಯವರೇ ಬರೆದು ಗ್ರಂಥರೂಪಕ್ಕೆ ಬಂದುವುಗಳ ಸಂಗ್ರಹ ಪರಿಚಯವನ್ನು ಕೊಡಲಾಗಿದೆ. ಅವುಗಳಲ್ಲಿ 1. ಹಿಂದ್ ಸ್ವರಾಜ್ಯ, 2. ಸರ್ವೋದಯ, 3. ನೀತಿ ಧರ್ಮ, 4. ಆರೋಗ್ಯ ಮಾರ್ಗದರ್ಶಿನೀ, 5. ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ, 6. ನನ್ನ ಸತ್ಯಾನ್ವೇಷಣೆ ಅಥವಾ ಆತ್ಮಕಥೆ, 7. ಅನಾಸಕ್ತಿಯೋಗ, 8. ಮಂಗಳ ಪ್ರಭಾತ, 9. ರಚನಾತ್ಮಕ ಕಾರ್ಯಕ್ರಮ ಅಥವಾ ನಿರ್ಮಾಣ ಕಾರ್ಯಕ್ರಮ–ಇವುಗಳು ಪ್ರಧಾನವಾದುವು.

1. ಹಿಂದ್ ಸ್ವರಾಜ್ಯ : ಗಾಂಧೀ ವಿಚಾರಕ್ಕೆ ಮೂಲಗ್ರಂಥವಿದು. ಅವರು 1909ರಲ್ಲಿ ಲಂಡನ್ನಿನಿಂದ ದಕ್ಷಿಣ ಆಫ್ರಿಕಕ್ಕೆ ಹಿಂದಿರುಗುವಾಗ, ನವೆಂಬರ್ 13 ರಿಂದ 22ರ ವರೆಗೆ ಹಗಲು ರಾತ್ರಿ ಹಡಗಿನಲ್ಲಿ ಕುಳಿತು ಬರೆದ ಗ್ರಂಥ. ಇದರ ಕರಡುಪ್ರತಿಯ ಕೆಲವು ಪುಟಗಳನ್ನು ಅವರು ಎಡಗೈಯಲ್ಲೂ ಬರೆದರು. ಈ ಪುಸ್ತಕ ಆಧುನಿಕ ನಾಗರಿಕತೆಯ ತೀವ್ರಖಂಡನೆಯಾಗಿದೆ. ಇದು ಸಂವಾದರೂಪದಲ್ಲಿದ್ದು ಅಂದು ಹಿಂದೂಸ್ಥಾನದಲ್ಲಿ ಹೆಚ್ಚುತ್ತಿದ್ದ ಹಿಂಸಾವಾದಕ್ಕೆ ಯುಕ್ತ ಉತ್ತರವಾಗಿದೆ. ದ್ವೇಷಕ್ಕೆ ಪ್ರತಿಯಾಗಿ

ಆತ್ಮತ್ಯಾಗವನ್ನಿದು ಕಲಿಸುತ್ತದೆ. ಪಶುಬಲಕ್ಕೆ ಇದಿರಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ–ಎಂದು ಅವರು ವಿವರಿಸಿದ್ದಾರೆ. ಇದನ್ನು ಗಾಂಧೀಜಿ ಮೊದಲು ಗುಜರಾತೀ ಭಾಷೆಯಲ್ಲಿ ಬರೆದರು. ಅವರೇ ಇಂಗ್ಲಿಷಿಗೂ ಭಾಷಾಂತರಿಸಿದರು. ಈ ಗ್ರಂಥದಲ್ಲಿ ಪ್ರತಿಪಾದಿಸಿದ ಆದರ್ಶಕ್ಕೆ ಅವರ ಬದುಕು ವೈಯಕ್ತಿಕವಾಗಿ ಮೀಸಲಾಗಿತ್ತು. ಹಿಂದೂಸ್ತಾನ ಆ ಆದರ್ಶವನ್ನು ಸಾಧಿಸಲು ಕಾಲ ಮಾಗಿ ಬಂದಿರಲಿಲ್ಲವೆಂದು ಅವರು ಚೆನ್ನಾಗಿ ಅರಿತಿದ್ದರು. ಆದರೆ, ನನ್ನ ಸಾಮೂಹಿಕ ಪ್ರಯತ್ನ, ಭಾರತೀಯ ಅಭಿಮತದಂತೆ ಶಾಸನಸಮ್ಮತ ಪ್ರಜಾಪ್ರಭುತ್ವಕ್ಕಾಗಿ ನಡೆದಿದೆ–ಎಂದು ಅವರೇ ವ್ಯಕ್ತಪಡಿಸಿದ್ದರು.

ಹಿಂದ್ ಸ್ವರಾಜ್ಯವನ್ನು ಓದಿದವರು ಗಾಂಧೀಜಿ ನ್ಯಾಯಾಲಯಗಳು, ಗಿರಣಿ, ಯಂತ್ರ, ಸಂಸದಾತ್ಮಕ ಪ್ರಜಾಪ್ರಭುತ್ವ, ಇವೆಲ್ಲವುಗಳ ವಿರೋಧಿಯೆಂದು ಭಾವಿಸುವುದುಂಟು. ಆದರೆ, ವ್ಯಾವಹಾರಿಕ ಆದರ್ಶವಾದಿಯಾಗಿದ್ದ ಅವರು, ತಮ್ಮ ನಿಲುವನ್ನು ಅನುಮಾನಕ್ಕೆ ಎಡೆಯಿಲ್ಲದಂತೆ ವ್ಯಕ್ತಪಡಿಸಿದ್ದಾರೆ. ಇವು ಯಾವುವೂ ನಿಜ ನಾಗರಿಕತೆಯ ಲಕ್ಷಣಗಳಲ್ಲವೆಂದೂ ಸಹಜವಾಗಿಯೇ ಇವು ನಾಶವಾದರೆ ಲೋಕಕ್ಕೆ ಕ್ಷೇಮವೆಂದೂ ಆದರೆ ಆ ರೀತಿ ಆಗಬೇಕಾದರೆ ಮನುಜವರ್ಗ ಅಪಾರತ್ಯಾಗಕ್ಕೂ ಸರಳಜೀವನಕ್ಕೂ ಸಿದ್ಧವಾಗಿರಬೇಕೆಂದೂ ಅವರ ಅಭಿಪ್ರಾಯ. ಬ್ರಿಟಿಷ್ ಸಾಮ್ರಾಜ್ಯವಾದಿಯಾಗಿದ್ದ ಲಾರ್ಡ್ ಲೋದಿಯನ್ 1938ರಲ್ಲಿ ಸೇವಾಗ್ರಾಮದಲ್ಲಿ ಕೆಲವು ದಿನ ತಂಗಿದ್ದಾಗ ಹಿಂದ್ ಸ್ವರಾಜ್ಯದ ಪ್ರತಿ ಇದ್ದರೆ ಕೊಡಿ, ಗಾಂಧೀಜಿ ಹೇಳುವುದೆಲ್ಲ ಅದರಲ್ಲಿ ಬೀಜರೂಪದಲ್ಲಿದೆ, ಗಾಂಧೀಜಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಈ ಪುಸ್ತಕವನ್ನು ಎಷ್ಟು ಸಲ ಓದಿದರೂ ಸಾಲದು–ಎಂದು ನುಡಿದಿದ್ದರು. ಈ ಮಾತು ಪುಸ್ತಕದ ಮಹತ್ತ್ವವನ್ನು ತೋರಿಸುತ್ತದೆ.

2 ಸರ್ವೋದಯ : ಇದು ಇಂಗ್ಲೆಂಡಿನ ಪ್ರಸಿದ್ಧ ಲೇಖಕ ಜಾನ್ ರಸ್ಕಿನ್ನನ 'ಅಂಟು ದಿಸ್ ಲ್ಯಾಸ್ಟ್' ಎಂಬ ಪುಸ್ತಕದ ಸಾರಸಂಗ್ರಹ, ಇದಕ್ಕೆ ಗಾಂಧೀಜಿಯೇ ಇಟ್ಟ ಹೆಸರು–ಸರ್ವೋದಯ. ಇದರಲ್ಲಿ ಗಾಂಧೀಜಿ ಕಂಡುಕೊಂಡ ತತ್ತ್ವಗಳೂ ಮೂರು: (ಅ) ವ್ಯಕ್ತಿಯ ಒಳಿತು ಸಮಾಜದ ಒಳಿತಿನಲ್ಲಿ ಅಡಗಿದೆ. (ಆ) ನ್ಯಾಯ ವಾದಿಯ ಕೆಲಸ, ನಾಯಿಂದನ ಕೆಲಸ ಎರಡಕ್ಕೂ ಸಮಾನ ಬೆಲೆ; ಏಕೆಂದರೆ ಇಬ್ಬರಿಗೂ ತಮ್ಮ ಕೆಲಸದಿಂದ ಉದರಂಭರಣ ಮಾಡುವ ಸಮಾನ ಹಕ್ಕಿದೆ. (ಇ) ಶ್ರಮ ಜೀವಿಯ ಎಂದರೆ ಕೃಷಿಕನ ಮತ್ತು ಕೈಕಸಬುದಾರನ ಜೀವನವೇ ಯೋಗ್ಯಜೀವನ. ಈ ಮೂರು ಅಧ್ಯಾತ್ಮ ಅಥವಾ ತ್ಯಾಗತತ್ತ್ವ, ಆರ್ಥಿಕ ಸಮಾನತೆಯ ತತ್ತ್ವ, ಶ್ರಮಗೌರವ ಅಥವಾ ಶ್ರಮನಿಷ್ಠೆ ಇವನ್ನು ತಿಳಿಸುತ್ತದೆ. ಭಾರತದ ಅಷ್ಟೇ ಏನು ಜಗತ್ತಿನ ಸಮಾಜಗಳು ಈ ತತ್ತ್ವಗಳ ಆಧಾರದ ಮೇಲೆ ಪುನರ್ರಚಿತವಾಗಬೇಕೆಂಬುದು ಗಾಂಧೀಜಿಯ ಆಕಾಂಕ್ಷೆಯಾಗಿತ್ತು. ಸರ್ವೋದಯ ಅವರ ಬೋಧೆಯ ಸಾರ, ಅದಕ್ಕಾಗಿಯೇ ಅವರು ದುಡಿದು ಮಡಿದರು.

3 ನೀತಿತತ್ತ್ವ: ಈ ಗ್ರಂಥ ನೀತಿ ಜೀವನವೇ ಧಾರ್ಮಿಕ ಜೀವನದ ತಿರುಳು ಎಂಬುದನ್ನು ಪ್ರತಿಪಾದಿಸುತ್ತದೆ. ನೀತಿಯೆಂದರೆ ಆಚಾರ, ಸದಾಚಾರ, ಅದಿಲ್ಲದೆ ಯಾವ ಧರ್ಮವೂ ಸಾಧಿತವಾಗಲಾರದು. ನಿಜವಾಗಿ ನೋಡಿದರೆ ನೀತಿನಿಯಮಗಳಿಗೆ ವಿಧೇಯನಾಗಿ ನಡೆಯದವನು ಪೂರ್ಣಾರ್ಥದಲ್ಲಿ ಮನುಷ್ಯನೇ ಅಲ್ಲ ಎಷ್ಟೇ ಕಷ್ಟ ಬರಲಿ, ನಷ್ಟವಾಗಲಿ ಸತ್ಯಶೀಲಗಳಲ್ಲೇ ಸುಖವನ್ನು ಅನುಭವಿಸುವಂತೆ ಆಗಬೇಕು ಎಂಬುದು ನೀತಿಧರ್ಮದ ಮಥಿತಾರ್ಥ. ವೈಯಕ್ತಿಕ ಜೀವನದಲ್ಲಿಯೂ ವೃತ್ತಿಜೀವನ ದಲ್ಲಿಯು ಸಾರ್ವಜನಿಕ ಜೀವನದಲ್ಲಿಯೂ ನೀತಿಧರ್ಮವೇ ಪ್ರಧಾನ ಅಂಶವಾಗಬೇಕು. ನೀತಿಧರ್ಮದ ಬೆಲೆಯಿಲ್ಲದ ಕರ್ಮಗಳೆಲ್ಲ ಉಸುಬಿನ ಮೇಲೆ ಕಟ್ಟಿದ ಸೌಧಗಳಂತೆ.

4 ಆರೋಗ್ಯಮಾರ್ಗದರ್ಶಿನೀ : ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಅನುಸರಿಸಬೇಕಾದ ನಿಯಮಗಳನ್ನು ಈ ಪುಸ್ತಕ ತಿಳಿಸುತ್ತದೆ. ಇವೆಲ್ಲ ಗಾಂಧೀಜಿಯೇ ಪ್ರಯೋಗಿಸಿದ ವಿಧಾನಗಳ ವಿವರಣೆ. ಗಾಳಿ, ಬೆಳಕು, ನೀರು, ಮೃತ್ತಿಕೆ ಇವುಗಳ ಉಪಯೋಗವೇ, ಇದರ ತಿರುಳು, ಇದನ್ನು ಗಾಂಧೀಜಿ ಪ್ರಕೃತಿಚಿಕಿತ್ಸೆ, ನಿಸರ್ಗಚಿಕಿತ್ಸೆ ಎನ್ನುತ್ತಾರೆ. ಮಾನವ ಪ್ರಕೃತಿಯಿಂದ ದೂರವಾದಷ್ಟೂ ರೋಗಗಳಿಗೆ ತುತ್ತಾಗುವುದು ಸಹಜ. ಹಾಗೆಯೇ ಪ್ರಕೃತಿಯೇ ಅವುಗಳಿಗೆ ನಿಜವಾದ ಚಿಕಿತ್ಸೆಯ ಮಾರ್ಗವನ್ನು ತೋರಿಸುತ್ತದೆಂದು ಗಾಂಧೀಜಿಯ ನಂಬಿಕೆಯಾಗಿತ್ತು.

5 ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ : ಗಾಂಧೀಜಿ ಸತ್ಯ ಅಹಿಂಸೆಗಳ ಮಾರ್ಗದಲ್ಲಿ ಪ್ರಥಮವಾಗಿ ನಡೆಸಿದ ಸವಿನಯ ಪ್ರತೀಕಾರದ, ಸವಿನಯ ಶಾಸನೋಲ್ಲಂಘನದ, ಪಾಶವೀ ಶಕ್ತಿಗೆ ವಿರುದ್ಧವಾಗಿ ನಿಲ್ಲಿಸಿದ ಸಾತ್ತ್ವಿಕ ಶಕ್ತಿಯ ಅಥವಾ ಪ್ರೇಮ ಶಕ್ತಿಯ ಹೋರಾಟದ ಇತಿಹಾಸವಿದು. ಈ ಹೋರಾಟ ಸತ್ಯಾಗ್ರಹ ಎಂಬ ಹೆಸರಿನಿಂದ ಜಗತ್ತಿನಲ್ಲೆಲ್ಲ ಪ್ರಸಿದ್ಧವಾಯಿತು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೂ ಇದು ಸ್ಫೂರ್ತಿ ನೀಡಿತು.

6 ಮಂಗಳ ಪ್ರಭಾತ : ಇದೊಂದು ಪುಟ್ಟ ಪುಸ್ತಕವಾದರೂ ಸರ್ವೋದಯಕ್ಕೆ ನೆರವಾಗುವ ವ್ಯಕ್ತಿಜೀವನ ಹಾಗೂ ಸಾಮಾಜಿಕ ಜೀವನಗಳನ್ನು ಬೆಳೆಸಿಕೊಳ್ಳಲು ಶಕ್ತಿ ನೀಡುವ ವ್ರತಗಳ ವಿವರಣೆಯನ್ನು ನೀಡುತ್ತದೆ. ಸತ್ಯ, ಅಹಿಂಸೆ, ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹ, ಶರೀರಶ್ರಮ, ಅಸ್ವಾದ, ಭಯಮುಕ್ತಿ, ಸರ್ವಧರ್ಮಸಮಭಾವ, ಸ್ವದೇಶೀ ಸ್ಪರ್ಶಭಾವನೆ (ಅಸ್ಪೃಶ್ಯತಾ ನಿವಾರಣೆ) ಇವನ್ನು ಸಾಧಿಸಲು ನಮ್ರತೆಯಿಂದ ಪ್ರಯತ್ನ ಮಾಡುವುದರ ಮಹತ್ತ್ವವನ್ನು ಇದು ವಿವರಿಸುತ್ತದೆ. ಈ ಪುಸ್ತಕ ಗಾಂಧಿ ಜೀವನವಿಧಾನದ ಕೈಪಿಡಿ ಎನ್ನಬಹುದು.

7 ಆತ್ಮಕಥೆ : ಗಾಂಧೀ ಸಾಹಿತ್ಯದಲ್ಲಿ ಎಂದೆಂದಿಗೂ ಶಿಖರಪ್ರಾಯವಾಗಿ ನಿಲ್ಲುವ ಕೃತಿ ಇದು. ಇದನ್ನು ಓದಿ ಅದೆಷ್ಟೋ ಮಂದಿ ಸ್ಫೂರ್ತಿ ಪಡೆದಿದ್ದಾರೆ ಗಾಂಧೀಜಿಯಂತೆಯೇ ಈಚೆಗೆ ಹಂತಕನ ಗುಂಡಿಗೆ ತುತ್ತಾಗಿ, ಹುತಾತ್ಮನಾದ ಅಮೆರಿಕದ ನೀಗ್ರೋನಾಯಕ ಮಾರ್ಟಿನ್ ಲೂಥರ್ ಕಿಂಗ್ ಇದನ್ನು ಓದಿ ಸ್ಫೂರ್ತಿ ಪಡೆದುದಲ್ಲದೆ ಸವಿನಯ ಪ್ರತೀಕಾರ ಚಳವಳಿಯನ್ನು ಬಿಳಿಯರ ದಬ್ಬಾಳಿಕೆಯ ವಿರುದ್ಧವಾಗಿ ನಡೆಸಿದ. ಜಗತ್ತಿನ ಮಹನೀಯರ ಆತ್ಮಕಥನ ಗ್ರಂಥಗಳಲ್ಲಿ ಇದಕ್ಕೆ ಅಗ್ರಸ್ಥಾನ ದೊರಕಿದೆ.

8 ಅನಾಸಕ್ತಿಯೋಗ : ಗಾಂಧೀಜಿ ಭಗವದ್ಗೀತೆಯನ್ನು ನನ್ನ ತಾಯಿ ಎಂದು ಕರೆದರು. ಅದರಲ್ಲಿ ಅವರು ಕಂಡ ಸತ್ಯವೇ ಅನಾಸಕ್ತಿಯೋಗ, ಅವರು ತಮ್ಮ ಜೀವನವನ್ನೂ ಅನಾಸಕ್ತಿಯೋಗದಿಂದಲೇ ನಡೆಸಿದರು. ಎಲ್ಲವನ್ನೂ ಭಗವಂತನಿಗೇ ಅರ್ಪಿಸಿ, ಸುಖ–ದುಃಖಗಳಿಂದ ಉದ್ವಿಗ್ನರಾಗದೆ, ಸೋಲು–ಗೆಲವುಗಳನ್ನು ಸಮನಾಗಿ

**ಗಾಂಧಿ ಜೀವನ ಕೃತಿಗಳ ಸ್ಮೃತಿಕೋಶವನ್ನು ಅವರು ಹತ್ಯೆಗೊಳಗಾದ ಸ್ಥಳದಲ್ಲಿ ಉಪರಾಷ್ಟ್ರಪತಿ ಜಿ.ಎಸ್. ಪಾಠಕ್ ಭೂಮಿಯೊಳಕ್ಕೆ ಇಳಿಯಬಿಡುತ್ತಿದ್ದಾರೆ (1973)**

ಕಂಡು, ಬಾಳಬೇಕಾದ ಪರಿ, ಜೀವನದ ವಿವೇಕ, ಇದರಲ್ಲಿ ಉಲ್ಲೇಖವಾಗಿದೆ. ಗೀತಾಮಾತೆಯ ಪೀಯೂಷಪಾನದಿಂದಲೇ ಗಾಂಧೀಜಿಯ ಆಧ್ಯಾತ್ಮಿಕ ಶಕ್ತಿ ವೃದ್ಧಿಯಾಯಿತು. ಅದು ಅವರ ಎಲ್ಲ ಲೌಕಿಕ ಕರ್ಮಗಳಿಗೂ ಪುಷ್ಟಿ ನೀಡಿತು.

9 ನಿರ್ಮಾಣ ಕಾರ್ಯಕ್ರಮ : ಸರ್ವೋದಯ ದರ್ಶನದ ಆಧಾರದ ಮೇಲೆ ಶಾಂತಿ ಸಮೃದ್ಧವಾದ, ಯುದ್ಧಭೀತಿಮುಕ್ತವಾದ ಸ್ವತಂತ್ರ ಭಾರತವನ್ನು ಸೃಷ್ಟಿಸುವುದಕ್ಕೂ ವಿಕೇಂದ್ರೀಕರಣ ಪ್ರಧಾನವಾದ ನಿಜವಾದ ಪ್ರಜಾಪ್ರಭುತ್ವ, ಆರ್ಥಿಕ ಸಮತೆ, ಮಾನವ ಸೋದರಭಾವ ಇವನ್ನು ಕಾರ್ಯರೂಪಕ್ಕೆ ತರುವುದಕ್ಕೂ ಕಾಲ ಕಾಲಕ್ಕೆ ಗಾಂಧೀಜಿ ರೂಪಿಸಿದ ಕಾರ್ಯಕ್ರಮಗಳ ವಿವರಣೆ ಈ ಪುಟ್ಟ ಪುಸ್ತಕದಲ್ಲಿದೆ. ನಿರ್ಮಾಣ ಕಾರ್ಯಕ್ರಮದ ಶ್ರದ್ಧಾಭರಿತ ಅನುಷ್ಠಾನದಿಂದ ನಿಜಸ್ವರಾಜ್ಯವನ್ನು ಸಾಧಿಸಬಹುದೆಂಬ ನಂಬಿಕೆ ಅವರಲ್ಲಿತ್ತು.

**ಗಾಂಧೀ ಸಾಹಿತ್ಯದ ಗುಣಲಕ್ಷಣಗಳು :** ಜೀವನದ ಸಮಗ್ರ ಚಿತ್ರವನ್ನು ಎದುರಿಗೆ ಇಟ್ಟುಕೊಂಡು ನ್ಯಾಯಸಮ್ಮತವೂ ಫಲಕಾರಿಯೂ ಆದ ಮಾತುಗಳನ್ನು ಗಾಂಧಿಯವರಂತೆ ಸೂಚಿಸಿದವರು ಅಪರೂಪ, 60 ವರ್ಷಗಳ ತುಂಬು ಜೀವನದಲ್ಲಿ ಅವರು ಎಂದಿಗೂ ಸಮಯಸಾಧಕರಾಗಿ ವರ್ತಿಸಿದವರಲ್ಲ. ದಾರಿ ಯಾವುದಾದರೂ ಸರಿ ಗುರಿ ಮುಟ್ಟಿದರಾಯಿತು, ಎಂದವರಲ್ಲ. ಜನತೆಯನ್ನು ಒಟ್ಟಾಗಿ ಬಿಡಿಬಿಡಿಯಾಗಿ ತಿದ್ದುವಲ್ಲಿ, ಪ್ರೋತ್ಸಾಹಿಸಿ ಹುರಿದುಂಬಿಸುವಲ್ಲಿ ಕಾರ್ಯೋನ್ಮುಖರನ್ನಾಗಿ ಮಾಡುವಲ್ಲಿ

ಹೊಸ ಜೀವನ ಮಾರ್ಗವನ್ನು ತೋರುವಲ್ಲಿ, ಎಲ್ಲ ಕಾಲಕ್ಕೂ ಎಲ್ಲ ದೇಶಗಳೂ ಅನ್ವಯವಾಗುವಂಥ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿವಲ್ಲಿ–ಈ ಎಲ್ಲವನ್ನೂ ಗಾಂಧೀಜಿಗೆ ಇದ್ದ ಮಾನವೀಯ ಧೋರಣೆ ಅವರ ಎಲ್ಲ ಬರೆಹಗಳಲ್ಲೂ ಎದ್ದುಕಾಣುತ್ತದೆ.

ಮಾನವನ ಹೃದಯಾಂತರಾಳದಲ್ಲಿ ಹುದುಗಿರುವ ಪ್ರೇಮ, ಪ್ರೀತಿ, ವಿಶ್ವಾಸಗಳ ಬಗ್ಗೆ ಗಾಂಧೀಯವರಿಗೆ ಅಪಾರ ಭರವಸೆ ಇತ್ತು. ಅದರ ವಿಕಸನದಿಂದ ಬಂದ ಸ್ವಾತಂತ್ರ್ಯ ನಿಲ್ಲುವಷ್ಟು ಕಾಲ ಕೇವಲ ರಾಜಕೀಯ ಆಂದೋಲನದಿಂದ ಬಂದ ಸ್ವಾತಂತ್ರ್ಯ ನಿಲ್ಲಲಾರದು ಎಂದು ಅವರು ಅರಿತಿದ್ದರು. ಅವರ ಈ ಮನೋಧರ್ಮ ಅವರ ಮಾತಿನಲ್ಲೂ ನೀತಿ ಬರೆಹದಲ್ಲೂ ಎದ್ದುಕಾಣುತ್ತದೆ.

ಅವರ ಆರ್ಥಿಕ ನೀತಿ ಕೇವಲ ಬಡತನದ ನೀತಿಯಲ್ಲ. ಅವರ ಜೀವನವಿವೇಕ ಕೇವಲ ಅಭಾವ ವೈರಾಗ್ಯದಿಂದ ಬಂದ ಸಪ್ಪೆಸರಕಲ್ಲ. ಆಶ್ರಮಜೀವನ ಬ್ರಹ್ಮಚರ್ಯ, ಸ್ವದೇಶಿ, ಸತ್ಯಾಗ್ರಹ, ಉಪವಾಸ, ಶಾಂತಿಯುತ ಅಸಹಕಾರ, ಇವೆಲ್ಲ ಜೀವನವನ್ನು ಒಣಗಿಸುವುದಕ್ಕಲ್ಲ. ಅದನ್ನು ವಿಕಸಿಸಿ ಬೆಳೆಸುವುದಕ್ಕೆ–ಎಂಬುದು ಅವರ ಧೋರಣೆ.

ಗಾಂಧಿ ಇಂಗ್ಲಿಷ್ ಮತ್ತು ಗುಜರಾತಿ –ಎರಡು ಭಾಷೆಗಳಲ್ಲೂ ಬರೆದರು. ಗುಜರಾತಿ ಅವರ ಮಾತೃಭಾಷೆ. ಅವರನ್ನು ಗುಜರಾತಿ ನವ್ಯ ಗದ್ಯದ ನಿರ್ಮಾಪಕರಲ್ಲೊಬ್ಬರೆಂದು ವಿದ್ವಾಂಸರು ಕೊಂಡಾಡಿದ್ದಾರೆ. ಇಂಗ್ಲಿಷಿನಲ್ಲೂ ಗಾಂಧೀಯವರದು ಅಂಥದೇ ಎತ್ತಿದ ಕೈ.

ಸರಳವಾಗಿ, ಸುಲಭವಾಗಿ, ನೇರವಾಗಿ ಹೇಳುವುದು ಅವರ ಮಾರ್ಗ ಅವರ ಬರವಣಿಗೆಯಲ್ಲಿ ಅನಾವಶ್ಯಕ ವಿವರಗಳಾಗಲಿ, ಚರ್ವಿತಚರ್ವಣವಾಗಲಿ ಎಲ್ಲಿಯೂ ಕಾಣದು, ಬೈಬಲ್, ಭಗದ್ಗೀತೆ, ಪಿಲ್ಗ್ರಿಮ್ಸ್ ಪ್ರಾಗ್ರೆಸ್, ಪಾಸ್ಟ ಅಂಡ್ ಪ್ರೆಸೆಂಟ್, ಅಂಟು ದಿಸ್ ಲ್ಯಾಸ್ಟ್ ಮೊದಲಾದ ಉದ್ಗ್ರಂಥಗಳಲ್ಲಿನ ಸುಲಭತೆಯನ್ನು ಗಾಂಧಿಯವರಲ್ಲಿ ನಾವು ಗುರುತಿಸಬಹುದು. ಮಾತು ಯವಾಗಲೂ ತರ್ಕಬದ್ಧ, ನ್ಯಾಯಸಮ್ಮತ ಹಾಗೆಂದ ಮಾತ್ರಕ್ಕೆ ವ್ಯಂಗ್ಯ, ವಿಡಂಬನ, ಹಾಸ್ಯ, ಸರಸ ಇಲ್ಲವೆಂದಲ್ಲ. ಅನೇಕ ಕಡೆ ಕವಿಯ ಮನೋಧರ್ಮ ಕೂಡ ಕಾಣುವುದುಂಟು.

**ಗಾಂಧೀ ಸಾಹಿತ್ಯದ ಪ್ರಭಾವ :** 'ನನ್ನ ಬರೆಹಗಳನ್ನು ನನ್ನ ದೇಹದ ಜೊತೆಯಲ್ಲೆ ಸುಟ್ಟುಬಿಡಬೇಕು. ನಾನು ಮಾಡಿರುವ ಕೆಲಸ ಉಳಿಯುತ್ತದೇ ಹೊರತು ನಾನು ಆಡಿದ್ದೂ ಬರೆದದ್ದೂ ಅಲ್ಲ' ಎಂದು ಗಾಂಧೀ ಹೇಳಿಕೊಂಡಿದ್ದಾರಾದದರೂ ಅವರ ಬರೆಹಗಳ ಪ್ರಭಾವ ಬಹು ವ್ಯಾಪಕವಾಗಿದೆ. ಪಾರ್ಥಿವವಾಗಿ ಅವರು ಇಲ್ಲವಾದರೂ ಸೂಕ್ಷ್ಮರೂಪಿಯಾಗಿ ಅವರು ತಮ್ಮ ಬರೆಹಗಳಲ್ಲಿ ಉಳಿದು ಬಂದಿದ್ದಾರೆ.

ಗಾಂಧೀಜಿಯ ವ್ಯಕ್ತಿತ್ವ ಹೇಗೆ ಜಗತ್ತಿನ ಮತ್ತು ಭಾರತದ ವಿಚಾರವಂತರ ಗಮನವನ್ನು ಸೆಳೆಯಿತೋ ಹಾಗೆಯೇ ಭಾರತೀಯ ಭಾಷೆಗಳು ಮತ್ತು ಸಾಹಿತ್ಯಗಳ ಮೇಲೂ ಪ್ರಭಾವ ಬೀರಿದೆ. ಅವರ ಆತ್ಮಕಥೆ ಭಾರತದ ಎಲ್ಲ ಭಾಷೆಗಳಲ್ಲೂ ಅನುವಾದವಾಗಿರುವಂತೆಯೇ ವಿವಿಧ ರಾಷ್ಟ್ರಗಳ ಭಾಷೆಗಳಲ್ಲಿಯೂ ಅನುವಾದವಾಗಿರುವುದನ್ನು ಗಮನಿಸಬಹುದು. ಗಾಂಧೀ ವಿಚಾರ ಜೀವನತತ್ತ್ವ ಸತ್ಯಾಗ್ರಹ ಇವು ಭಾರತೀಯ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಕಾದಂಬರಿ, ಕವನ, ನಾಟಕ ಇವುಗಳಲ್ಲೆಲ್ಲ ಪ್ರತಿಧ್ವನಿಗೊಂಡಿರುವುದನ್ನೂ ಕಾಣಬಹುದು. ಗಾಂಧೀ ಯುಗದ (1920–48) ವಿವಿಧ ಸತ್ಯಾಗ್ರಹ ಸಂಗ್ರಾಮಗಳು ಲೇಖಕರ, ಕವಿಗಳ ವಿಚಾರರಂಗಗಳನ್ನು ಕೆರಳಿಸಿದ್ದುಂಟು: ಭಾವೋತ್ಕರ್ಷ ಮಾಡಿದ್ದುಂಟು. ಕನ್ನಡದ ಕವಿಗಳಾದ ಕುವೆಂಪು, ಬೇಂದ್ರೆ ಆದಿಯಾಗಿ ಈವರೆಗೆ ಮೂರು ತಲೆಮಾರಿನ ಕವಿಗಳು ಗಾಂಧೀಜೀವನ, ವಿಚಾರ, ಚಿಂತನ, ಇವನ್ನೆಲ್ಲ ಕುರಿತು ಕವನಗಳನ್ನು ರಚಿಸಿದ್ದಾರೆಂಬುದು ಉಲ್ಲೇಖನೀಯ, ಗಾಂಧೀ ಸಾಹಿತ್ಯ ಸಾರಸರ್ವಸ್ವವನ್ನು ಕನ್ನಡದಲ್ಲೂ ಭಾರತದ ವಿವಿಧ ಭಾಷೆಗಳಲ್ಲೂ ಅನುವಾದ ಮಾಡಲಾಗಿದೆ. ಇವೆನ್ನೆಲ್ಲ ಗಮನಿಸಿದಾಗ, ಪ್ರಮಾಣದಲ್ಲಿಯೂ ಪ್ರಕಾರದಲ್ಲಿಯೂ ವಿಪುಲವಾಗಿರುವ ಗಾಂಧೀ ಸಾಹಿತ್ಯಕ್ಕೆ ಜಗತ್ತಿನ ವಿಚಾರ ಸಾಹಿತ್ಯ ಕ್ಷೇತ್ರದಲ್ಲಿ ಚಿರಂತನ ಸ್ಥಾನವಿದೆ. ಎಂಬುದು ಗೋಚರಿಸುತ್ತದೆ. (ಜಿ.ವಿ.ಎಸ್.)

ಗಾಂಧೀ ಅರ್ಥಶಾಸ್ತ್ರ: ಮಹಾತ್ಮ ಗಾಂಧಿಯವರು ಅರ್ಥಶಾಸ್ತ್ರದ ಮೇಲೆ ಯಾವ ಉದ್ಗ್ರಂಥವನ್ನೂ ಬರೆಯಲಿಲ್ಲ. ಸಾಂಪ್ರದಾಯಿಕವಾಗಿ ಅರ್ಥಶಾಸ್ತ್ರದ ಅಧ್ಯಯನ ಮಾಡಿ ಯಾವ ಪದವಿಯನ್ನು ಪಡೆದಿರಲಿಲ್ಲ. ಆದರೆ ಅವರು ಜೀವನದ ಬಹುಮುಖ ಸಮಸ್ಯೆಗಳನ್ನು ಅರಿತಿದ್ದು. ಅವಕ್ಕೆ ತಮ್ಮವೇ ಆದ ಪರಿಹಾರಗಳನ್ನು ಮೊದಲು ತಮ್ಮ ಜೀವನದ ಮೇಲೆ ಪ್ರಯೋಗ ಮಾಡಿಕೊಂಡು ಅನಂತರ ಭಾಷಣಗಳು ಹಾಗೂ ಲೇಖನಗಳ ಮೂಲಕ ಪ್ರಸಿದ್ಧಪಡಿಸುತ್ತಿದ್ದರು. ಮಾನವನ ಆರ್ಥಿಕ ಸಮಸ್ಯೆಗಳ ಬಗ್ಗೆ ಅವರು ಆಗಿಂದಾಗ್ಗೆ ಆಡುತ್ತಿದ್ದ ಮಾತುಗಳನ್ನು ಮತ್ತು ಲೇಖನಗಳನ್ನು ಸುಸಂಬದ್ಧವಾಗಿ ಸಂಕಲನ ಮಾಡಿದರೆ ಒಂದು ಆರ್ಥಿಕ ಸಿದ್ಧಾಂತವೇ ರೂಪು ತಳೆಯುತ್ತದೆ.

ಗಾಂಧೀಯವರು ಜೀವನವನ್ನು ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಎಂದು ಮುಂತಾಗಿ ಪ್ರತ್ಯೇಕ ಭಾಗಗಳಾಗಿ ಮಾಡಿ ಸಂಕೀರ್ಣವಾಗಿ ನೋಡದೆ ಅದನ್ನು ಸಮಗ್ರವಾಗಿ ವೀಕ್ಷಿಸುತ್ತಿದ್ದರು. ಮಾನವನ ಪರಿಪೂರ್ಣ ವಿಕಾಸಕ್ಕೆ ಪೋಷಕವಾಗುವಂತೆ ಆಧ್ಯಾತ್ಮಿಕ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ತತ್ತ್ವಗಳನ್ನು ಅನ್ವಯಿಸಬೇಕೆಂಬುದು ಅವರ ವಿಚಾರವಾಗಿತ್ತು. ಅರ್ಥಾತ್ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ವಿಚಾರಪೂರ್ವಕ, ನಿಷ್ಠಾವಂತ ಅನ್ವಯವೇ ಅವರ ಸಿದ್ಧಾಂತದ ಮೂಲಸೂತ್ರ ಎನ್ನಬಹುದು.

ಅರ್ಥವನ್ನು ಧರ್ಮ ನೀತಿಗಳಿಂದ ಬೇರ್ಪಡಿಸಿ, ಕೇವಲ ಸಂಪತ್ತಿನ ಉತ್ಪಾದನೆ ವಿತರಣೆಗಳ ದೃಷ್ಟಿಯಿಂದ ಅರ್ಥಶಾಸ್ತ್ರದ ವ್ಯಾಖ್ಯೆ ಮಾಡುವುದನ್ನು ಗಾಂಧಿಯವರು ವಿರೋಧಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ನೀತಿಬಾಹಿರವಾದ ಅರ್ಥಶಾಸ್ತ್ರ ಪಾಶವೀಶಾಸ್ತ್ರವೇ ಎನಿಸಿತ್ತು. ಅರ್ಥಶಾಸ್ತ್ರ ನಿಯಮಗಳು ಧರ್ಮನಿಷ್ಠವಾಗಿರಬೇಕು: ಉದಾತ್ತ ಜೀವನದ ಸಾಗಣೆಗೆ ಅನುವಾಗಬೇಕು. ಉದಾತ್ತ ಜೀವನವೆಂದರೆ ಸರಳಜೀವನ; ಉಚ್ಚವಿಚಾರಗಳ ಸೂತ್ರಕ್ಕೆ ಬದ್ಧವಾಗಿರುವಂಥದು. ಮಾನವನ ಜೀವಿತದ ಉದ್ದೇಶ ಧನ ಕನಕ ವಸ್ತು ವಾಹನಗಳ ಸಂಗ್ರಹವಾಗಬಾರದು. ಅದು ಆತ್ಮಶ್ರೀಯ ವಿಕಾಸದ ಸಾಧನೆಯಾಗಿರತಕ್ಕದ್ದು. ಆತ್ಮಶ್ರೀಯ ವಿಕಾಸವಾಗುವುದು ಮಿತಿಮೀರಿದ ಐಹಿಕ ಸುಖದ ಆಸೆಯಿಂದಲ್ಲ. ಬದಲಾಗಿ ಸರಳಜೀವನದಿಂದ ಆದ್ದರಿಂದ ಮನುಷ್ಯ ತನ್ನ ಆತ್ಮವಿಕಾಸವನ್ನೇ ಧ್ಯೇಯವನ್ನಾಗಿಟ್ಟುಕೊಂಡು ಜೀವನ ನಿರ್ವಾಹಕ್ಕೆ ಅತ್ಯಗತ್ಯವಾಗಿ ಎಷ್ಟು ಬೇಕೋ ಅಷ್ಟೇ ವಸ್ತುಗಳನ್ನು ಉಪಯೋಗಿಸಬೇಕು. ಹಾಗೆ ತನಗೆ ಬೇಕಾಗುವ ಅಗತ್ಯ ವಸ್ತುಗಳನ್ನು ಪಡೆಯಲು ಪ್ರತಿಯೊಬ್ಬನೂ ಶ್ರಮನಿಷ್ಠ ಜೀವನವನ್ನು ನಡೆಸಬೇಕು. ಇದೇ ಅನ್ನಕಾಯಕ. ಜೀವನ ನಿರ್ವಹಣೆಗಾಗಿ ಶ್ರಮ ಮಾಡದೇ ಕೂಡಿಟ್ಟ ಹಣದ ಬಲದಿಂದಲೂ ಬೇರೊಬ್ಬರ ಶ್ರಮದ ಶೋಷಣೆಯಿಂದಲೋ ಲೋಲುಪ್ತಿಯ ಜೀವನ ನಡೆಸುವುದು ಚೌರ್ಯಕ್ಕೆ ಸಮಾನ: ಸಮಾಜದ ವಿಷಮತೆಗೆ ಕಾರಣ. ಸುವ್ಯವಸ್ಥಿತ ಅಹಿಂಸಾತ್ಮಕ ಸಮಾಜಕ್ಕೆ ಶ್ರಮನಿಷ್ಠ ಕಾಯಕ ಅಥವಾ ಅನ್ನಕಾಯಕ ಆಧಾರವಾಗಿರತಕ್ಕದ್ದು.

ಸ್ವದೇಶೀವ್ರತ, ಗಾಂಧೀ ಅರ್ಥವಿಚಾರದ ಅವಿಭಾಜ್ಯ ಅಂಗ, ಸ್ವದೇಶೀ ಎಂದರೆ ತನ್ನ ನೆರೆಹೊರೆಯವರ, ಹಳ್ಳಿಯ, ರಾಜ್ಯದ ಅಥವಾ ದೇಶದ ಸಂಘಸಂಸ್ಥೆಗಳ ಬಗ್ಗೆ ಅಭಿಮಾನ ಮತ್ತು ಸ್ವದೇಶೀ ವಸ್ತುಗಳ ಉಪಯೋಗ, ಸ್ವದೇಶೀಗಳ ಬಗ್ಗೆ ಅಭಿಮಾನ ಮತ್ತು ಸ್ವದೇಶೀ ವಸ್ತುಗಳ ಉಪಯೋಗ. ಸ್ವದೇಶೀ ದೀಕ್ಷೆ ತನ್ನ ನೆರೆಹೊರೆಯವರ



ಮಹಾತ್ಮಗಾಂಧೀ ನೂಲುತ್ತಿರುವುದು

ಹಿತಚಿಂತನೆಯಿಂದಲೆ ಆರಂಭವಾಗುತ್ತದೆ. ನೆರೆಹೊರೆಯವರು ತಯಾರಿಸಿದ ವಸ್ತುಗಳನ್ನು ಕೊಳ್ಳಬೇಕು. ಸ್ಥಳೀಯ ಮತ್ತು ದೇಶೀಯ ಉದ್ಯಮಗಳಿಗೆ ಉತ್ತೇಜನ ನೀಡಬೇಕು. ಅವುಗಳನ್ನವಲಂಬಿಸಿರುವ ಜನರ ಹಿತವನ್ನು ಈ ಮೂಲಕ ರಕ್ಷಿಸಬೇಕು. ಇದು ಸ್ವದೇಶೀ ಧರ್ಮದ ಕಟ್ಟಲೆ. ಸ್ವದೇಶೀ ಎಂದಮಾತ್ರಕ್ಕೆ ಪರದೇಶೀಯವಾದ್ದನ್ನು ದ್ವೇಷಿಸಬೇಕೆಂಬುದಲ್ಲ. ಯಾವುದೇ ನೆರೆಹೊರೆಯಲ್ಲಿ, ಸ್ಥಳೀಯವಾಗಿ ಅಥವಾ ಸ್ವದೇಶದಲ್ಲಿ ಸಿಕ್ಕುವುದಿಲ್ಲವೋ ಅದನ್ನು ಬೇರೆಡೆಯಿಂದ, ಪರದೇಶಗಳಿಂದ ತರಿಸಿಕೊಳ್ಳಲು ಅಭ್ಯಂತರವಿಲ್ಲ. ಅದರೆ ನೆರೆಹೊರೆಯಲ್ಲಿ ತಯಾರಾದ ವಸ್ತುಗಳನ್ನು ಕೊಳ್ಳದೆ ತಯಾರಕರನ್ನು ಹಸಿವಿಗೆ ದೂಡಿ, ದೂರದಿಂದ ಪೈಪೋಟಿಯಿಂದ ಬರುವ ವಸ್ತುಗಳನ್ನು ಕೊಳ್ಳುವುದು ಸ್ವದೇಶೀ ಧರ್ಮಕ್ಕೆ ವಿರೋಧ, ಅದು ಅಮಾನುಷವೂ ಆದೀತು.

ಸ್ವದೇಶೀ ಎಂಬುದು ನಮ್ಮ ನಿಕಟ ವಾತಾರಣಕ್ಕೆ ಅನ್ವಯಿಸುವ ಸ್ವಧರ್ಮ ಎಂದು ಗಾಂಧೀಯವರು ಹೇಳಿದ್ದಾರೆ.

ಆರ್ಥಿಕ ನಿಯಮಗಳು ಸರ್ವಕಾಲಕ್ಕೂ ಸರ್ವದೇಶಕ್ಕೂ ಸಾರ್ವತ್ರಿಕವಾಗಿ ಸಮಾನವಾಗಿ ಅನ್ವಯಿಸುವ ನಿಯಮಗಳೇನೂ ಇಲ್ಲ. ಒಂದು ದೇಶಕ್ಕೆ ಲಾಭದಾಯಕ ವಾಗಿ ಅನ್ವಯಿಸಬಹುದಾದ ಆರ್ಥಿಕ ನಿಯಮಗಳು ಮತ್ತೊಂದು ದೇಶಕ್ಕೆ ಪ್ರಯೋಜನ ಕಾರಿಯಾಗಿರಬಹುದೆಂದು ಹೇಳಲಾಗುವುದಿಲ್ಲ. ಆರ್ಥಿಕ ಸಂಸ್ಥೆಗಳು, ಆಚಾರವಿಚಾರಗಳು ಆಯಾ ದೇಶಗಳ ವಾಯುಗುಣ, ಭೌಗೋಳಿಕ ಸನ್ನಿವೇಶ, ಜನರ ಸಂಖ್ಯೆ ಅವರ ಭಾವನೆಗಳು ಇತ್ಯಾದಿ ವಿಷಯಗಳನ್ನು ಅವಲಂಬಿಸಿರುತ್ತದೆ. ಚಳಿದೇಶದ ಜನರಿಗೆ ಅಗತ್ಯವಾಗಬಹುದಾದ ಉಡಿಗೆ ತೊಡಿಗೆ, ತಿಂಡಿ ತಿನಿಸು ಉಷ್ಣದೇಶದವರಿಗೆ ಅಗತ್ಯವಾಗದಿರಬಹುದು. ಜನಸಂಖ್ಯೆ ಕಡಿಮೆಯಿರುವ ದೇಶದಲ್ಲಿ ರೂಢವಾಗಿರುವ ಉತ್ಪಾದನೆ ವಿತರಣೆಗಳ ವ್ಯವಸ್ಥೆ ಜನನಿಬಿಡವಾದ ದೇಶಗಳಿಗೆ ಮಾರಕವಾಗಬಹುದು. ಅಂದರೆ ಯಾವುದೇ ಆರ್ಥಿಕ ನಿಯಮಗಳು ಅಥವಾ ಪದ್ಧತಿ ಸರ್ವವ್ಯಾಪಕವಾಗಿರುವುದು ಸಾಧ್ಯವಿಲ್ಲ. ಆಯಾ ದೇಶಗಳ ಸ್ಥಿತಿಗತಿಗಳಿಗನುಗುಣವಾಗಿ ಅರ್ಥಶಾಸ್ತ್ರದ ನಿಯಮಗಳನ್ನು, ಅರ್ಥವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಆದ್ದರಿಂದ ಸಂಖ್ಯಾಬಾಹುಳ್ಯವುಳ್ಳ ಗ್ರಾಮಾಧಾರಿತ ಭಾರತ ಪಾಶ್ಚಾತ್ಯ ರಾಷ್ಟ್ರಗಳ ಆರ್ಥಿಕ ಪದ್ಧತಿಯನ್ನು ಅನುಸರಿಸುವುದು ಸಾಧುವಲ್ಲ.

ಹಳ್ಳಿಗಳ ದೇಶವಾದ ಭಾರತದ ಅರ್ಥವ್ಯವಸ್ಥೆ ಗ್ರಾಮಸ್ವಾವಲಂಬನೆಯ ಆಧಾರದ ಮೇಲೆ ನಿರ್ಮಾಣವಾಗಬೇಕು. ಪ್ರತಿ ಹಳ್ಳಿಯೂ ಅದಕ್ಕೆ ಅಗತ್ಯವಾದ ವಸ್ತುಗಳನ್ನು ಉತ್ಪಾದನೆ ಮಾಡಿಕೊಳ್ಳಬೇಕು. ಗ್ರಾಮ ಅರ್ಥವ್ಯವಸ್ಥೆ ಕೃಷಿ ಮತ್ತು ಕುಟೀರ ಉದ್ಯಮಗಳ ಆಧಾರದ ಮೇಲೆ ನಿಲ್ಲಬೇಕು. ಗ್ರಾಮಕ್ಕೆ ಅಗತ್ಯವಾದ ಆಹಾರ ಧಾನ್ಯ, ಹತ್ತಿ, ಎಣ್ಣೆಕಾಳುಗಳು, ತರಕಾರಿ, ದನಗಳಿಗೆ ಮೇವು ಎಲ್ಲವನ್ನೂ ಗ್ರಾಮದಲ್ಲೇ ಉತ್ಪಾದನೆ ಮಾಡಿಕೊಳ್ಳಬೇಕು. ಹತ್ತಿ ನೂತು ಬಟ್ಟೆಯನ್ನು ನೆಯ್ದು ಕೊಳ್ಳಬೇಕು. ಕೃಷಿ ಗ್ರಾಮೋದ್ಯೋಗ ಗಳಿಗೆ ಬೇಕಾದ ಉಪಕರಣಗಳು ಗ್ರಾಮದಲ್ಲೇ ತಯಾರಾಗಬೇಕು. ಆರೋಗ್ಯರಕ್ಷಣೆ, ನೈರ್ಮಲ್ಯ, ಗ್ರಾಮರಕ್ಷಣೆ ಎಲ್ಲವೂ ಹಳ್ಳಿಯವರದೇ ಜವಾಬ್ದಾರಿ. ಈ ರೀತಿಯಲ್ಲಿ ವ್ಯವಸ್ಥೆಯಾದರೆ ಪ್ರತಿಗ್ರಾಮವೂ ಸ್ವಾವಲಂಬಿ ಘಟಕವಾಗುತ್ತದೆ. ಭಾರತ ಸ್ವಾವಲಂಬಿ ಗ್ರಾಮ ಘಟಕಗಳ ಅಜೇಯ ಗಣರಾಜ್ಯವಾಗುತ್ತದೆ.

ಉತ್ಪಾದನೆಯ ಗುರಿ ಲಾಭಸಂಪಾದನೆಯಾಗಿರಬಾರದು: ಸಾಮಾಜಿಕಹಿತ ಸಾಧನೆಯಾಗಿರಬೇಕು, ಉತ್ಪಾದನೆಯ ವ್ಯವಸ್ಥೆ ಜನರ ಅಗತ್ಯಗಳನ್ನು ಪೂರೈಸುವ ಶಕ್ತಿ ಪಡೆದಿರುವುದರ ಜೊತೆಗೆ, ಅದು ಶೋಷಣರಹಿತವು ಪರಮಾವಧಿ ಉದ್ಯೋಗ ಕಾರಕವೂ ಆಗಿರಬೇಕು. ಕೈಗಾರಿಕೆಗಳಲ್ಲಿ ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ದೊಡ್ಡ ಕೈಗಾರಿಕಾ ವ್ಯವಸ್ಥೆ ಆರ್ಥಿಕ ಶಕ್ತಿಯ ಕೇಂದ್ರೀಕರಣಕ್ಕೆ ಎಡೆ ಮಾಡಿ ಕೊಟ್ಟಿದೆ. ಹಿಡಿಜನ ಬಂಡವಾಳಗಾರರ ಕೈಯಲ್ಲಿ ಆರ್ಥಿಕ ಶಕ್ತಿ ಕೇಂದ್ರೀಕೃತವಾಗಿರುವುದರಿಂದ ಶ್ರಮವರ್ಗದ ಶೋಷಣೆ, ಅಹಿತಕರ ಪೈಪೋಟಿ, ಮಾರುಕಟ್ಟೆಗಳ ಸ್ವಾಮ್ಯಕ್ಕಾಗಿ ಹೋರಾಟ ಹಾಗೂ ಸಾಮ್ರಾಜ್ಯಶಾಹಿ ದುರಾಕ್ರಮಣಗಳಿಗೆ ಅವಕಾಶವಾಗಿದೆ: ಯುದ್ಧಗಳಿಗೆ ಕಾರಣವಾಗಿದೆ. ಆದ್ದರಿಂದ ಅಹಿಂಸೆ ಮತ್ತು ಚಿರಶಾಂತಿಯ ಆಧಾರದ ಮೇಲೆ ಸಮಾಜದ ರಚನೆಯಾಗ ಬೇಕಾದರೆ ಅರ್ಥವ್ಯವಸ್ಥೆ ವಿಕೇಂದ್ರೀಕೃತವಾಗಬೇಕು. ವಿಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿ ಮನುಷ್ಯ ಕೇಂದ್ರಬಿಂದುವಾಗಿರತಕ್ಕದ್ದು, ಶ್ರಮಶಕ್ತಿಯ ಉಪಯೋಗದಿಂದ ವಸ್ತುಗಳ ಉತ್ಪಾದನೆಯಾಗತಕ್ಕದ್ದು. ಪೈಪೋಟಿ ಮಾಯವಾಗಿ ಸಹಕಾರ ಸರ್ವವ್ಯಾಪಕವಾಗಿರುತ್ತದೆ. ಉತ್ಪಾದನೆ ವ್ಯವಸ್ಥೆ ಕೃಷಿ ಮತ್ತು ಗೃಹಕೈಗಾರಿಕೆಗಳ ಮೇಲೆ ನಿಂತಿರತಕ್ಕದ್ದಾಗಿದೆ. ಕೃಷಿ, ಗೋಪಾಲನೆ, ಸಿದ್ಧವಸ್ತುಗಳ ಮಾರಾಟ ಮುಂತಾದವು ಸಹಕಾರದ ಆಧಾರದ ಮೇಲೆ ಜರುಗಬೇಕು. ಲಕ್ಷಾಂತರ ಗ್ರಾಮಗಳ ಕೋಟಿಕೋಟಿ ಕುಟೀರಗಳಲ್ಲಿ ಅನುಭೋಗ ವಸ್ತುಗಳ ತಯಾರಿಕೆ ಸಮೃದ್ಧಿಯಾಗಿ ಆಗಬೇಕು. ಇಂಥ ವ್ಯವಸ್ಥೆಯಲ್ಲಿ ಪರಮಾವಧಿ ಉದ್ಯೋಗ, ಹೇರಳ ಉತ್ಪಾದನೆ, ಸ್ಥಳೀಯ ವಿತರಣೆ, ಶೋಷಣರಾಹಿತ್ಯ, ಕೆಲಸಗಾರನಿಗೆ ತಕ್ಕ ಕೌಶಲದ ಔನ್ನತ್ಯದ ಸಾಧನೆ ಮತ್ತು ತಾನೇ ಉತ್ಪಾದಿಸಿದೆನೆಂಬ ಸಂತೋಷ ಎಲ್ಲವೂ ಲಭ್ಯವಾಗುತ್ತವೆ. ಇಂಥ ಉತ್ಪಾದನೆಯ ವ್ಯವಸ್ಥೆಯಲ್ಲಿ ಯಂತ್ರಗಳ ಸ್ಥಾನ ಆದಷ್ಟು ಕಡಿಮೆಯಾಗಿರತಕ್ಕದ್ದು. ಯಂತ್ರಗಳ ಕುರಿತು ಭ್ರಾಂತಿ ಇರುವುದಿಲ್ಲ. ಯಂತ್ರ ಇಂದಿನಂತೆ ಮಾನವನ ಉದ್ಯೋಗಾವಕಾಶವನ್ನು ಚೌರ್ಯ ಮಾಡುವ ಮಾರಕಶಕ್ತಿ ಯಾಗಿರುವುದಿಲ್ಲ. ಯಾವ ಯಾವ ಕ್ಷೇತ್ರಗಳಲ್ಲಿ ಕೇವಲ ಅನಿವಾರ್ಯವೋ ಅಂಥ ಕಡೆ ಮಾತ್ರ ಯಂತ್ರ ಉಪಯೋಗಿಸಲ್ಪಡುತ್ತದೆ. ಅನಿವಾರ್ಯವಾಗಿ ಯಂತ್ರೋಪಕರಣಗಳ ಸಹಾಯದಿಂದ ದೊಡ್ಡ ಉದ್ಯಮಗಳೂ ರೈಲ್ವೆ ಸಾರಿಗೆ ಮುಂತಾದವು ಇರಲೇಬೇಕೋ ಅಂಥ ಎಡೆಗಳಲ್ಲಿ ಅವುಗಳ ಒಡೆತನ ಸರ್ಕಾರಕ್ಕೆ ಸೇರಿರಬೇಕು.

ಗಾಂಧಿಯವರು ಮೇಲೆ ಕಾಣಿಸಿದ ಆದರ್ಶ ಆರ್ಥಿಕ ವ್ಯವಸ್ಥೆಯ ರೂಪ ರೇಷೆಯನ್ನು ಕೊಟ್ಟಿದ್ದರೂ ಪ್ರಚಲಿತ ಸಮಸ್ಯೆಗಳ ಬಗ್ಗೆ ಅವರು ಗಮನಹರಿಸದೆ, ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸದೆ ಇರಲಿಲ್ಲ. ಬಂಡವಾಳವಾದ, ಸಾಮ್ಯವಾದ, ಸಮಾಜ ವಾದ ಇವುಗಳ ಬಗ್ಗೆ ಅವರ ಅಭಿಪ್ರಾಯ ಸ್ಪಷ್ಟವೂ ಖಚಿತವೂ ಆಗಿತ್ತು.

ಬಂಡವಾಳವಾದದ ಅಳಿವು ಆವಶ್ಯಕ. ಆದರೆ ಬಂಡವಾಳಗಾರರನ್ನು ಹಿಂಸಾಮಾರ್ಗದಿಂದ ನಿರ್ನಾಮ ಮಾಡಿದರೆ ಬಂಡವಾಳಶಾಹಿಯ ನಾಶವಾಗುವುದಿಲ್ಲ. ಮನುಷ್ಯನಲ್ಲಿ ರೂಢವಾಗಿರುವ ಲೋಭ ಮತ್ತು ಪರಿಗ್ರಹ ಪ್ರವೃತ್ತಿ ದೂರವಾಗುವಂತೆ ಪ್ರಯತ್ನಪಡಬೇಕು. ಅದಕ್ಕೆ ಹೃದಯಪರಿವರ್ತನ ಮಾರ್ಗವೇ ಶ್ರೇಷ್ಠ ಮಾರ್ಗ,

ಬಂಡವಾಳ ಮತ್ತು ಕಾರ್ಮಿಕರ ನಡುವೆ ನಿರಂತರ ಸಂಘರ್ಷವಿರುವುದು ಅನಿವಾರ್ಯವಲ್ಲ. ಕಾರ್ಮಿಕರ ಸಹಕಾರವಿಲ್ಲದೆ ಬಂಡವಾಳ ಏನನ್ನೂ ಸಾಧಿಸಲಾರದು. ಕೆಲಸಗಾರರ ವರ್ಗದಲ್ಲಿ ಸಂಘಟನೆ ಆಗಿ ಅದರ ಶಕ್ತಿಯ ಅರಿವಾದರೆ ಅದನ್ನು ಬಂಡವಾಳವರ್ಗ ಶೋಷಣೆ ಮಾಡಲು ಸಾಧ್ಯವೇ ಇಲ್ಲ. ಎಲ್ಲಿ ಶೋಷಣೆ, ಅನ್ಯಾಯ ತಲೆದೋರುತ್ತದೋ ಅಲ್ಲಿ ಕಾರ್ಮಿಕರು ಶೋಷಕರೊಡನೆ ಅಹಿಂಸಾತ್ಮಕವಾಗಿ ಅಸಹಕರಿಸುವುದರ ಮೂಲಕ ಮುಕ್ತರಾಗಬಹುದು.

ಉದ್ಯಮದ ಒಡೆಯರು ತಾವು ತಮ್ಮ ಸ್ವತ್ತಿನ ಧರ್ಮದರ್ಶಿಗಳೆಂದು ಮನಗಾಣ ಬೇಕು. ಕೆಲಸಗಾರನ್ನೂ ಉದ್ಯಮದ ಪಾಲುದಾರರೆಂದು ಭಾವಿಸಬೇಕು. ಯೋಗ್ಯ ವೇತನ ಮತ್ತು ಕೆಲಸದ ಭದ್ರತೆಯ ಭರವಸೆಯನ್ನು ಕೆಲಸಗಾರರಿಗೆ ದೊರಕಿಸಿಕೊಡಬೇಕು. ಅವರ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಪ್ರಗತಿಗೆ ಸೌಕರ್ಯಗಳನ್ನು ಒದಗಿಸತಕ್ಕದ್ದು. ಕೆಲಸಗಾರರು ತಮಗೆ ದೊರೆಯುವ ಬಿಡುವು ಮತ್ತು ಹೆಚ್ಚಿನ ವೇತನವನ್ನು ಸ್ವಚ್ಛ ಮನ ಸ್ವಚ್ಛ ಆತ್ಮ ಇವುಗಳ ಸಾಧನೆಗೆ ವಿನಿಯೋಗಿಸಬೇಕು.

ಸಮಾಜವಾದವನ್ನು ಸರಿಯಾದ ರೀತಿಯಲ್ಲಿ ಅನ್ವಯಿಸಿದ್ದಾದರೆ ಅದೊಂದು ಅತ್ಯುಚ್ಚ ತತ್ತ್ವವೇ ಸರಿ. ಆದರೆ ಅದನ್ನು ಬಲವಂತವಾಗಿ ಹಿಂಸಾಮಾರ್ಗದಲ್ಲಿ ಅನ್ವಯಿಸಲು ಹೋದರೆ ಅದೊಂದು ಪಾಶವೀಪ್ರಯೋಗವಾಗುತ್ತದೆ. ನಿಜವಾದ ಸಮಾಜವಾದವೆಂದರೆ ಅಮೂಲ್ಯವಾದ ಅಪರಿಗ್ರಹತತ್ತ್ವವನ್ನು ಸಮಾಜಕ್ಕೆ ಅನ್ವಯಿಸುವುದು. ಈ ಕಾರ್ಯ ಮನಃಪೂರ್ವಕವಾಗಿ ಅಹಿಂಸಾತ್ಮಕವಾಗಿ ಅನ್ವಯವಾದರೆ ಅದರಿಂದ ಮಾನವಕಲ್ಯಾಣ ಸಾಧಿತವಾಗುತ್ತದೆ. ಸಮಾಜವಾದ ಕೇಂದ್ರೀಕೃತ ಸರ್ಕಾರದಿಂದ ಇಳಿದು ಬರುವುದಿಲ್ಲ. ಅದರ ಆದರ್ಶವನ್ನು ಜನರು ತಾವಾಗಿಯೇ ಅಂಗೀಕರಿಸಿದರೆ ಅಥವಾ ಶಾಂತಿಯುತ ಪರಿವರ್ತನೆ ಮತ್ತು ಅನುನಯಗಳಿಂದ ಅವರು ಒಪ್ಪುವಂತೆ ಮಾಡಿದುದಾದರೆ, ಅದು ಯಶಸ್ವಿಯಾಗುತ್ತದೆ. ವ್ಯಕ್ತಿಗಳು ತಮ್ಮ ಆಸೆ ಅಪೇಕ್ಷೆಗಳನ್ನು ಕಡಿಮೆ ಮಾಡಿಕೊಂಡು, ಇರುವ ವಸ್ತುಗಳು ಸರ್ವರ ಉಪಯೋಗಕ್ಕೂ ಹಂಚಿಕೆಯಾಗ ಬೇಕೆಂಬ ಅಂತಃಕರಣದಿಂದ ಕೂಡಿ, ತಮಗೆ ಅತ್ಯಗತ್ಯವಾದಷ್ಟು ಮಾತ್ರವೇ ಆವಶ್ಯಕ ವಸ್ತುಗಳನ್ನು ಬಳಸಬೇಕು. ಸಮಾಜದ ಸಂಪತ್ತನ್ನು ಹೆಚ್ಚಿಸಲು ಹಿತವನ್ನು ಸಂವರ್ಧಿಸಲು ತಮ್ಮ ಸಕಲ ಶಕ್ತಿ ಸಾಮರ್ಥ್ಯಗಳನ್ನೂ ವಿನಿಯೋಗಿಸುವ ಮನೋಭಾವವನ್ನು ಅವರು ಹೊಂದಿರಬೇಕು. ಮೇಲಾಗಿ ಜಗತ್ತಿನಲ್ಲಿರುವ ಸರ್ವಸ್ವವೂ ಈಶ್ವರನದೆಂಬ ಸತ್ಯವನ್ನು ಅರಿತು. ತಮ್ಮಲ್ಲಿರುವುದನ್ನೆಲ್ಲ ಜನತಾಜನಾರ್ದನನ ಸೇವೆಗಾಗಿ ವಿನಿಯೋಗಿಸಬೇಕು. ಯಾರೊಬ್ಬರ ಸ್ವತ್ತಿಗಾಗಲಿ ಸಂಪತ್ತಿಗಾಗಲಿ ಆಸೆ ಪಡಬಾರದು. ಪ್ರತಿಯೊಬ್ಬನೂ ತನ್ನ ದೇಹಶಕ್ತಿ, ಬುದ್ಧಿ, ಸಂಪತ್ತು ಎಲ್ಲಕ್ಕೂ ತಾನು ಧರ್ಮದರ್ಶಿಯೆಂದು ಭಾವಿಸಿ, ಸಂಪಾದನೆಯ ಫಲದಲ್ಲಿ ತನ್ನ ಬದುಕಿಗೆ ಎಷ್ಟು ಅಗತ್ಯವೂ ಅಷ್ಟನ್ನು ತಾನು ಬಳಸಿಕೊಂಡು ಮಿಕ್ಕದ್ದನ್ನೆಲ್ಲ ಸಮಾಜದ ಹಿತಕ್ಕಾಗಿ ಧಾರೆ ಎರೆಯಬೇಕು. ಅಂಥ ವ್ಯಕ್ತಿಗಳನ್ನುಳ್ಳ ಸಮಾಜದಲ್ಲಿ ಸ್ವಾತಂತ್ರ್ಯ, ಸಮತೆ, ಸಮೃದ್ಧಿ ಮತ್ತು ಶಾಂತಿ ಶಾಶ್ವತವಾಗಿ ನೆಲೆಗೊಂಡಿರುತ್ತವೆ. (ಬಿ.ಆರ್.ಪಿ.)

**ಗಾಂಧಿಯವರ ಶಿಕ್ಷಣ ತತ್ತ್ವದೃಷ್ಟಿ:** ಶಿಕ್ಷಣದ ಬಗ್ಗೆಯೂ ಗಾಂಧಿ ಅವರು ತತ್ತ್ವ ಚಿಂತನೆ ನಡೆಸಿ ಪ್ರಯೋಗಗಳ ಮೂಲಕ ಅವನ್ನು ಪರೀಕ್ಷಿಸಿ ನೋಡಿದರು. ಅದರ ಫಲವಾಗಿ 20ನೆಯ ಶತಮಾನದ ನಾಲ್ಕನೆಯ ದಶಕದಲ್ಲಿ ಪೂರ್ಣವಾಗಿ ಭಾರತೀಯ ವೆನ್ನಬಹುದಾದ ನೂತನ ಶಿಕ್ಷಣ ಪದ್ಧತಿಯೊಂದು ರೂಪುಗೊಂಡಿತು. ಅವರ ಧಾರ್ಮಿಕ ದೃಷ್ಟಿಯಿಂದ ದೇವರೇ ಸತ್ಯ. ಅದನ್ನು ಸಾಧಿಸಲು ಅಹಿಂಸೆಯೇ ಮಾರ್ಗ. ಸ್ವಾತಂತ್ರ್ಯ ಸತ್ಯದ ಒಂದು ಮುಖ. ಪ್ರತಿರಾಷ್ಟ್ರಕ್ಕೂ ತನ್ನದೇ ಆದ ಶಿಕ್ಷಣಪದ್ಧತಿಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯ ಅಗತ್ಯ. ಭಾರತ ಆಧ್ಯಾತ್ಮಿಕ ದೃಷ್ಟಿಗೆ ಪ್ರಾಚೀನಕಾಲದಿಂದಲೂ ಜೀವನವನ್ನು ಮುಡಿಪಾಗಿರಿಸಿರುವುದರಿಂದ ಅಂಥ ಶಿಕ್ಷಣ ಆಧ್ಯಾತ್ಮಿಕ ತತ್ತ್ವ ದೃಷ್ಟಿಯನ್ನು ಅವಲಂಬಿಸಿರಬೇಕು. ಆದರೂ ಫಲಾಪೇಕ್ಷೆಯನ್ನು ಕಡೆಗಣಿಸುವಂತಿಲ್ಲ. ಆದ್ದರಿಂದ ಸತ್ಯ, ಅಹಿಂಸೆ, ಸೇವೆ, ಸಹಕಾರ, ಸಾಮಾಜಿಕ ನ್ಯಾಯ ಇವುಗಳ ಬುನಾದಿಯ ಮೇಲೆ ನೂತನ ಸಮಾಜದ ರಚನೆಗೆ ಅಂಥ ಶಿಕ್ಷಣಪದ್ಧತಿ ಉಪಕರಣವಾಗಬೇಕು. ಹೀಗೆ ತಮ್ಮ ಜೀವನದ ದೃಷ್ಟಿಯನ್ನು ಆಧಾರ ಮಾಡಿಕೊಂಡು ರೂಪಿಸಿದ ಅವರ ನೂತನ ಶಿಕ್ಷಣಪದ್ಧತಿ ಭಾರತದಲ್ಲಿ ಜೀವನಶಿಕ್ಷಣ, ಮೂಲಶಿಕ್ಷಣ, ನಯೀ ತಾಲೀಂ (ನೂತನ ಶಿಕ್ಷಣ) ಇತ್ಯಾದಿ ಹೆಸರುಗಳಿಂದ ಪ್ರಚಾರಕ್ಕೆ ಬಂದಿದೆ.

ಗಾಂಧೀಜಿ ತಮ್ಮ ಶಿಕ್ಷಣಪದ್ಧತಿಯನ್ನು ರೂಪಿಸುವ ವೇಳೆಗೆ ಶಿಕ್ಷಣಪ್ರಪಂಚದಲ್ಲಿ ನಿಸರ್ಗವಾದ, ಆದರ್ಶವಾದ, ಯಥಾರ್ಥವಾದ, ಫಲಪರಿಣಾಮಾನುಮೇಯವಾದ– ಎಂಬ ನಾಲ್ಕು ತತ್ತ್ವ ದೃಷ್ಟಿಗಳು ಪ್ರಚಾರದಲ್ಲಿದ್ದವು. ನಿಸರ್ಗ ಸತ್ಯದ ಸಮಗ್ರತೆ;

ನಿಸರ್ಗ ಸಮಸ್ತ ಪದಾರ್ಥಸ್ವರೂಪ: ನಿಸರ್ಗಕ್ಕೆ ಅನ್ವಯಿಸುವ ವಿಧಾನಗಳನ್ನು ಅನ್ವಯಿಸಲು ಆಗದ ಯಾವ ಜ್ಞಾನ ಅಥವಾ ಅನುಭವದ ಕ್ಷೇತ್ರವೂ ಇಲ್ಲ; ಅಸ್ತಿತ್ವಕ್ಕೆ ಅತಿಮಾನುಷ ಅಥವ ಆಧ್ಯಾತ್ಮಿಕ ಪ್ರಪಂಚವೊಂದರ ಕೈವಾಡವಿಲ್ಲ. ಹಾಗೆಯೇ ಎಲ್ಲ ಪ್ರಕ್ರಿಯೆಗಳನ್ನೂ ಪದಾರ್ಥದ ಚಲನೆಯ ರೂಪದಲ್ಲಿ ವಿವರಿಸುವ ಭೌತ ಅಥವಾ ಯಂತ್ರಕೌಶಲವಾದವೂ ಸರಿಯಲ್ಲ–ಎಂದು ಪ್ರತಿಪಾದಿಸುತ್ತದೆ, ಆಧುನಿಕ ನಿಸರ್ಗವಾದ. ಇದನ್ನು ಮೊದಲು ರೂಸೋ ಅನಂತರ, ಪೆಸ್ಟಲಾಜಿ, ಹರ್ಬಾರ್ಟ್, ಸ್ಟಾನ್ಲಿ ಹಾಲ್, ಜಾನ್ ಡ್ಯೂಯಿ ಇವರು ಆಧಾರಮಾಡಿಕೊಂಡು ಶಿಕ್ಷಣ ಕ್ಷೇತ್ರಕ್ಕೆ ಅಳವಡಿಸಿಕೊಂಡರು. ಈ ವಿಧಾನದಂತೆ ಶಿಕ್ಷಣ ಸ್ವಾಭಾವಿಕ ಬೋಧನ ಕ್ರಮಗಳನ್ನು ಅನುಸರಿಸಬೇಕು. ಮಗುವಿನ ಜೀವನದಲ್ಲಿ ಸ್ವಾಭಾವಿಕ ಬೆಳೆವಣಿಗೆಯ ಅಂತಸ್ತುಗಳನ್ನು ಇದು ಅಂಗೀಕರಿಸುತ್ತದೆ. ಹಾಗೆಯೇ, ಸಿದ್ಧತೆಯ ಮಟ್ಟ, ವೈಯಕ್ತಿಕ ಭಿನ್ನತೆಗಳು ಮತ್ತು ಆಧುನಿಕ ಶಿಕ್ಷಣದ ಪ್ರಗತಿಪರ ಅಂಶಗಳನ್ನು ಪುರಸ್ಕರಿಸುತ್ತದೆ. ಶಿಕ್ಷಣ ಮಕ್ಕಳ ಸ್ವಾಭಾವಿಕ ಬೆಳೆವಣಿಗೆಗೆ ಅನುಗುಣವಾಗಿರಬೇಕೆಂದೂ ಕೆಲವು ಚಟುವಟಿಕೆ ಮತ್ತು ಅನುಭವಗಳ ಆಧಾರದ ಮೇಲೆ ಸಾಗಬೇಕೆಂದೂ ಶಿಸ್ತು ಮಕ್ಕಳ ಸ್ವಪ್ರೇರಣೆಯಿಂದ ಮೂಡಬೇಕೆಂದೂ ವಾದಿಸುತ್ತದೆ. ವೈಯಕ್ತಿಕ ಗಮನ, ಇಂದ್ರಿಯಗಳ ಬಳಕೆ, ಆರೋಗ್ಯಜೀವನ, ಅನುಭವಗಳ ಫಲವಾಗಿ ಅಂತರ್ಜನ್ಯವಾಗಿ ವೃದ್ಧಿಸುವ ನೈತಿಕ ಬೆಳೆವಣಿಗೆ (ಹೊರಗಿನ ಕಟ್ಟುನಿಟ್ಟುಗಳಿಂದಲ್ಲ) –ಇವುಗಳಿಗೆ ಪ್ರಾಧಾನ್ಯ ವೀಯುತ್ತದೆ. ಆದರೆ 18ನೆಯ ಶತಮಾನದ ಅಧ್ಯಾತ್ಮವಾದವನ್ನೂ ತರ್ಕಪ್ರಮಾಣವಾದವನ್ನೂ ಇದು ವಿರೋಧಿಸುತ್ತದೆ. ಮುಖ್ಯವಾಗಿ ಕೃತಕರೀತಿಯ ಕಟ್ಟುಕಟ್ಟಳೆಗಳಿಗೆ ಬದಲಾಗಿ ಶಿಕ್ಷಣ ಸ್ವಾಭಾವಿಕ ರೀತಿಯದಾಗಿದ್ದು ನಿಸರ್ಗದ ಮಡಿಲಲ್ಲಿ ನಡೆಯಬೇಕೆಂದು ವಾದಿಸುತ್ತದೆ. ಒಂದು ದೃಷ್ಟಿಯಲ್ಲಿ ಇದು ಆದಿಕಾಲದ ಸಮಾಜ ರಚನೆಗೆ ಶರಣು ಹೋಗಬೇಕೆಂದೂ ಸೂಚಿಸುತ್ತದೆ.

ಆದರ್ಶವಾದ ವಿಚಾರವಿವರಣೆಯಲ್ಲಿ ಪ್ರಧಾನವಾಗಿ ಚಿತ್‌ಸತ್ಯತೆಯನ್ನು ಒತ್ತಿ ಹೇಳುತ್ತದೆ. 'ಪ್ರಪಂಚ ಮನಸ್ಸಿನ ಅಥವಾ ಬುದ್ಧಿಯ ಕಲ್ಪನೆ; ಶಾಶ್ವತವಾದ್ದು ಚಿತ್‌ಸ್ವರೂಪದ್ದು; ಆದ್ದರಿಂದ ಎಲ್ಲ ಜ್ಞಾನವೂ ಮನಸ್ಸನ್ನು ಅವಲಂಬಿಸಿದ್ದು ಅದರ ಕ್ರಿಯಾಪರಿಮಿತಿಯೊಳಗೇ ಇರತಕ್ಕದ್ದು. ಕಲೆ, ಶಿಕ್ಷಣ, ಧರ್ಮ, ವಿಜ್ಞಾನ, ತರ್ಕ ಇವೆಲ್ಲಕ್ಕೂ ಮೂಲಕಾರಕ ಚೈತನ್ಯ. ಇಂದ್ರಿಯಗೋಚರ ಬಾಹ್ಯ ಜಗತ್ತೆಲ್ಲ ಶಿಕ್ಷಣದಲ್ಲಿ ಭಾವನಾಮಯವಾದುದು' ಎಂದು ಪ್ರತಿಪಾದಿಸುತ್ತಿದೆ. ಇದರ ಪ್ರಭಾವದಿಂದ ಹಿಂದಿನವರ ಆದರ್ಶಗಳಿಗೂ ಸಂಪ್ರದಾಯಗಳಿಗೂ ಪ್ರಾಮುಖ್ಯ ಬಂತು. ಜೀವನದ ಉದ್ದೇಶ ಪರಮಾರ್ಥವೆಂಬುದನ್ನು ಎತ್ತಿಹಿಡಿದು ಅದರ ಸಾಧನೆಗಾಗಿ ಇಂದ್ರಿಯನಿಗ್ರಹ, ಭಾವ ಮತ್ತು ಬುದ್ಧಿಗಳ ಆದರ್ಶಪಥದಲ್ಲಿ ನಿರೂಪಣೆ ಇತ್ಯಾದಿಯಾದ ಶಿಕ್ಷಣ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಟ್ಟಿತು.

ಯಥಾರ್ಥವಾದ (ವಾಸ್ತವ) ಜ್ಞಾನ ವಸ್ತುಗಳನ್ನು ಅರಿಯುವ ಕಾರ್ಯಕ್ಕಿಂತ ಬೇರೆಯಾದ್ದೆಂದೂ ಅದು ಅರಿಯುವ ಕಾರ್ಯವನ್ನು ಅವಲಂಬಿಸಿರದೆ ಸ್ವತಂತ್ರ್ಯ ಅಸ್ತಿತ್ವ ತಳೆದಿದೆಯೆಂದೂ ಅದರ ಸ್ವಭಾವ ಮತ್ತು ಲಕ್ಷಣಗಳು ಅರಿಯುವ ಕಾರ್ಯದಿಂದ ರೂಪುಗೊಳ್ಳುವುದಿಲ್ಲ ಮತ್ತು ಬದಲಾಗುವುದಿಲ್ಲವೆಂದೂ ಪ್ರತಿಪಾದಿಸುತ್ತದೆ. ಶಿಕ್ಷಣದಲ್ಲಿ ಕೇವಲ ಶಬ್ದಗಳನ್ನೊಳಗೊಂಡ ಕಾರ್ಯಕ್ರಮಗಳಿಗೇ ಪ್ರಾಮುಖ್ಯವೀಯುವುದನ್ನು ಇದು ವಿರೋಧಿಸುತ್ತದೆ. ಶಿಕ್ಷಣದಿಂದ ವ್ಯಕ್ತಿಯಾದವನು ವಿಚಾರ ಮಾಡುವುದನ್ನು ಕಲಿತು ಜೀವನದಲ್ಲಿ ಒದಗಬಹುದಾದ ವಿವಿಧ ಸನ್ನಿವೇಶಗಳಿಗೆ ಹೊಂದಿಕೊಂಡು ಹೋಗುವ ಶಕ್ತಿಯನ್ನು ಸಾಧಿಸಬೇಕೆಂದು ಪ್ರತಿಪಾದಿಸುತ್ತದೆ. ಜ್ಞಾನ ಮತ್ತು ಅದರ ಸಾಧನೆಗಾಗಿ ನಡೆಸುವ ಚಟುವಟಿಕೆಗಳೆರಡಕ್ಕೂ ಶಿಕ್ಷಣದಲ್ಲಿ ಪ್ರಾಧಾನ್ಯವೀಯುತ್ತದೆ. ಮಾನವನ ವರ್ತನೆಯ ಪರಿವರ್ತನೆಯಲ್ಲಿ ಬಾಹ್ಯ ಸನ್ನಿವೇಶಗಳ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಶಿಕ್ಷಣದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶವಿರಬೇಕೆಂದು ಪ್ರತಿಪಾದಿಸಿದರೂ ಅದು ಇತರರ ಹಕ್ಕಿಗೂ ನೆಮ್ಮದಿಗೂ ಮಾರಕವಾಗಬಾರದೆಂದು ಸೂಚಿಸುತ್ತದೆ. ಮಾನವನ ಸ್ವಭಾವದಲ್ಲೂ ಸಮಾಜಜೀವನದಲ್ಲೂ ಬುದ್ಧಿಗ್ರಾಹ್ಯ ಅಂಶಗಳಿವೆಯೆಂದು ಅವು ವ್ಯಕ್ತಿಯ ಮತ್ತು ಸಮಾಜದ ಜೀವನಕ್ಕೆ ಮಾರ್ಗದರ್ಶನವಾಗಬಲ್ಲವೆಂದೂ ವಿವರಿಸುತ್ತದೆ.

ಫಲಪರಿಣಾಮಾನುಮೇಯವಾದವನ್ನು (ಪ್ರಾಗ್ಮ್ಯಾಟಿಸಂ) ಪೇರ್ಸ್, ಡ್ಯೂಯಿ ಮುಂತಾದ ಅಮೆರಿಕದ ತತ್ತ್ವಚಿಂತಕರು ಪ್ರತಿಪಾದಿಸಿ ಶಿಕ್ಷಣಕ್ಷೇತ್ರಕ್ಕೆ ಅನ್ವಯಿಸಿಕೊಂಡರು. ವಿಲಿಯಂ ಜೇಮ್ಸ್ ಅದಕ್ಕೆ ಮನೋವಿಜ್ಞಾನದ ಬೆಳಕಿನಲ್ಲಿ ಅರ್ಥ ಕಲ್ಪಿಸಿಕೊಟ್ಟ. ಅದರ ಪ್ರಕಾರ ಒಂದು ಭಾವನೆಯ ಅರ್ಥ ಅದು ನಿರ್ದೇಶಿಸುವ ನಡೆವಳಿಕೆಯಲ್ಲಿರುತ್ತದೆ. ಎಲ್ಲ ಭಾವನೆಗಳಲ್ಲೂ ಅವುಗಳ ಅಭ್ಯಾಸದಲ್ಲಿರಬಹುದಾದ ವ್ಯತ್ಯಾಸಗಳಿಂದ ಅವುಗಳ ವೈಶಿಷ್ಟ್ಯ ಕಾಣಿಸಿಕೊಳ್ಳುತ್ತದೆ. ಚಿಂತನೆ ಕಾರ್ಯವನ್ನು ನಿರ್ದೇಶಿಸುವ ಒಂದು ಪ್ರಕ್ರಿಯೆ. ಸತ್ಯ ಒಂದು ಸಾಮಾಜಿಕ ಮೌಲ್ಯ. ಬಹಿರಂಗವಾಗಿ ಚರ್ಚಿಸಿ ಪರೀಕ್ಷಿಸಿದಂತೆ ಆ ಮೌಲ್ಯಗಳು ಭಾವನೆಗಳಲ್ಲಿ ಸಂಗ್ರಹವಾಗುತ್ತವೆ. ವಾಸ್ತವ್ಯ ಅಥವಾ ಸತ್ಯ ಅಂತಿಮ ಸ್ವರೂಪದಲ್ಲಿ ಬಹುತ್ವದ್ದಾಗಿರುತ್ತದೆ. ಕೆಲವರು ಇದೊಂದು ಉಪಯುಕ್ತವಾದವೆಂದು ಪರಿಗಣಿಸಿ ಯಾವುದು ಉದ್ದೇಶವನ್ನು ಸಾಧಿಸುವುದೋ ಯಾವುದು ಹಿತಕರ ಫಲನೀಡುವುದೋ ಅದೇ ಸತ್ಯ ಎಂದು ಭಾವಿಸುವುದುಂಟು. ಹೇಗೆ ಆಗಲಿ, ಶಿಕ್ಷಣದಲ್ಲಿ ಇದು ತೀವ್ರ ರೀತಿಯ ಪರಿಣಾಮವನ್ನು ಮೂಡಿಸಿದೆ. ಜೀವನದಲ್ಲಿ ಯಾವುದು ಫಲದಾಯಕವೂ ಅದೆಲ್ಲ ಶಿಕ್ಷಣದ ಕಾರ್ಯಕ್ರಮದಲ್ಲಿ ಸೇರಬೇಕೆಂದೂ ಶಾಲೆ ವಿಶಾಲವೂ ಬಹುವಿಧವೂ ಆದ ಅನುಭವಗಳನ್ನೊದಗಿಸುವ ಸ್ಥಳವಾಗಬೇಕೆಂದೂ ಜ್ಞಾನ ಅನುಭವದಿಂದ ಸಿದ್ಧಿಸಬೇಕೆಂದೂ ಸೂಚಿಸುತ್ತದೆ. ವಿಜ್ಞಾನಕ್ಕೆ ಪ್ರಧಾನ ಸ್ಥಾನವನ್ನು ದೊರಕಿಸಿಕೊಟ್ಟು ಈ ತತ್ತ್ವಪಂಥ ಅನುಭವಗಳೇ ಪ್ರಧಾನವಾಗುಳ್ಳ ಉದ್ಯಮ ಪದ್ಧತಿಯ (ಪ್ರೋಜೆಕ್ಟ್) ಉಗಮಕ್ಕೆ ಅವಕಾಶ ಮಾಡಿಕೊಟ್ಟಿತು. ಯಾವುದನ್ನೇ ಆಗಲಿ ಅದರ ಪರಿಣಾಮದಿಂದ ಅರಿತುಕೊಳ್ಳಬೇಕೆನ್ನುವ ಈ ತತ್ತ್ವ ಪಂಥದ ದೃಷ್ಟಿಯಲ್ಲಿ ಅಂತಿಮ ಸ್ವರೂಪದ ಸತ್ಯವೆಂಬುದೇ ಇಲ್ಲ. ಅದು ನಿರಂತರವೂ ಪರಿವರ್ತನೆಯಾಗುತ್ತಿರುತ್ತದೆ. ಶಿಕ್ಷಣದಲ್ಲೂ ನಿರಂತರ ಪರಿವರ್ತನೆಗಳನ್ನು ಪ್ರೋತ್ಸಾಹಿಸುತ್ತದೆ.

ಗಾಂಧೀಜಿಯ ಶಿಕ್ಷಣ ಧೋರಣೆ ಮೇಲಿನ ನಾಲ್ಕು ತತ್ತ್ವಪಂಥಗಳಲ್ಲಿ ಯಾವ ಒಂದು ಪಂಥವನ್ನೂ ಆಧಾರಮಾಡಿಕೊಳ್ಳದಿದ್ದರೂ ಅವುಗಳಲ್ಲೊಂದೊಂದರ ಹಲಕೆಲವು ಅಂಶಗಳನ್ನು ಒಳಗೊಂಡಿದೆ. ಎಂದ ಮಾತ್ರಕ್ಕೆ ಆ ನಾಲ್ಕರಿಂದಲೂ ಆಯ್ದ ತತ್ತ್ವದೃಷ್ಟಿಗಳ ಆಧಾರದ ಮೇಲೆ ಅವರು ತಮ್ಮ ದೃಷ್ಟಿಯನ್ನು ರೂಪಿಸಿದರೆಂದು ಭಾವಿಸಕೂಡದು ಅದನ್ನು ಅವರು ಪ್ರತ್ಯೇಕವಾಗಿ ತಮ್ಮ ಜೀವನದರ್ಶನದ ವಿಶಿಷ್ಟಪ್ರಭಾವದಿಂದ ರೂಪಿಸಿದರು. ಅದರೂ ಅವರ ತತ್ತ್ವದೃಷ್ಟಿ ಯಾವ ಯಾವ ಅಂಶಗಳಲ್ಲಿ ಮೇಲಿನ ತತ್ತ್ವಪಂಥಗಳನ್ನು ಹೋಲುತ್ತದೆಂಬುದನ್ನು ಪರಿಶೀಲಿಸಬೇಕಾಗಿದೆ.

ಗಾಂಧಿಯವರು ರೂಪಿಸಿದ ಮೂಲಶಿಕ್ಷಣ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಅನ್ವಯವಾಗುವಂಥದು. ಭಾರತದ ಜನತೆಯ ಶೇ. 80 ರಷ್ಟು ಭಾಗ ಗ್ರಾಮಗಳಲ್ಲಿ ಜೀವಿಸುವುದರಿಂದ ಭಾರತದಲ್ಲಿ ರೂಪಿಸುವ ಯಾವ ರಾಷ್ಟ್ರೀಯ ಶಿಕ್ಷಣ ಯೋಜನೆಯೇ ಆಗಲಿ ಪ್ರಥಮತಃ ಅವರ ಹಿತದೃಷ್ಟಿಗೆ ಒಪ್ಪುವಂತೆ ರೂಪಗೊಳ್ಳ ಬೇಕೆಂಬುದು ಸ್ವಾಭಾವಿಕ. ಗ್ರಾಮಗಳು ನಿಸರ್ಗದ ಮಡಿಲಲ್ಲಿರುವುದರಿಂದ ಅದರೊಡನೆ ಸಂಪರ್ಕ ಹೊಂದಿ ಅದರಿಂದ ಪರಿಣಾಮ ಹೊಂದಿ ಬೆಳೆಯಲು ಅವಕಾಶವಿದೆ. ಜೀವನದಲ್ಲಿ ಕಂಡುಬರುವ ಒಂದು ಸ್ವಾಭಾವಿಕ ಸನ್ನಿವೇಶವನ್ನು (ಕಸಬು) ಆಧಾರ ಮಾಡಿಕೊಂಡು ಅಲ್ಲಿ ಕಲಿಯುವ ರೀತಿಯಲ್ಲಿ ಶಾಲೆಯಲ್ಲೂ ಮಕ್ಕಳು ಶಿಕ್ಷಣ ಪಡೆಯಬೇಕೆಂಬ ಅವರ ದೃಷ್ಟಿ ನಿಸರ್ಗವಾದದ ತತ್ತ್ವದೃಷ್ಟಿಯನ್ನು ಅಳವಡಿಸಿಕೊಂಡಿದೆ. ಕೃತಕರೀತಿಯಲ್ಲಿ ವಿಷಯಗಳನ್ನು ಪ್ರತ್ಯೇಕಿಸಿ ವರ್ಗೀಕರಿಸುವುದರ ಬದಲು ಜೀವನದಲ್ಲಿ ಅವು ಪಾತ್ರವಹಿಸುವ ಸ್ವರೂಪದಲ್ಲಿ ಕಲಿಸುವುದೂ ಆ ತತ್ತ್ವದೃಷ್ಟಿಯನ್ನೇ ವ್ಯಕ್ತಪಡಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಪರಮಚೈತನ್ಯ ಸ್ವರೂಪದ ಒಂದು ಅಂಶವೆಂದು ಅವರು ನಂಬಿದ್ದುದರಿಂದ ಅದು ಆದರ್ಶವಾದದಲ್ಲಿ ಕಂಡುಬರುವ ಅಂಶವೆಂಬುದನ್ನು ಗುರುತಿಸಬಹುದು. ಅನ್ಯಭಾಷೆಯೊಂದರ ಮೂಲಕ ಅನ್ಯಸಂಸ್ಕೃತಿಯೊಂದನ್ನು ಕುರಿತ ವಿದ್ಯೆ ಕಲಿಯುವುದು ನಮ್ಮವರಿಗೆ ಅಸ್ವಾಭಾವಿಕವೆಂದು ಬಗೆದು 'ಇಲ್ಲಿನವರ ಶಿಕ್ಷಣ, ಇಲ್ಲಿನ ಜನತೆಯ ಜೀವನಕ್ಕೆ ಸಂಬಂಧಿಸಿದಂತೆ ನಡೆಯಬೇಕು; ಅವರ ಮಾತೃಭಾಷೆಯಲ್ಲಿ ನಡೆಯಬೇಕು; ಇಲ್ಲಿನವರ ಜೀವನ ವಿಧಾನದಲ್ಲಿ ನಡೆಯಬೇಕು. ಹಾಗೂ ಬಡತನದ ಈ ವಿಶಾಲ ದೇಶದಲ್ಲಿ ಅಷ್ಟಾಗಿ ಧನದ ಅಗತ್ಯವಿರದೆ ನಡೆಯಬೇಕು' ಎಂಬ ಅವರ ದೃಷ್ಟಿ ಯಥಾರ್ಥವಾದವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಸಮಾಜದಲ್ಲಿ ಜೀವನೋಪಾಯಕ್ಕಾಗಿ ಜನತೆ ಅನುಸರಿಸುತ್ತಿರುವ ಕಸಬೊಂದನ್ನು ಕೇಂದ್ರವಾಗಿ ಮಾಡಿಕೊಂಡು ಅದನ್ನು ಕಲಿಯಲು ಅಗತ್ಯವೆನಿಸುವ ಜ್ಞಾನ, ಕೌಶಲ, ಮನೋಭಾವ ಇವುಗಳನ್ನು ಕಲಿಸುವ ಯತ್ನ ಫಲ ಪರಿಣಾಮಾನುಮೇಯವಾದದ ಮುಖ್ಯ ಅಂಶವನ್ನು ಅಳವಡಿಸಿಕೊಂಡಿದೆ. ಹಾಗೂ ಅನುಭವಗಳ ಮೂಲಕ ಶಿಕ್ಷಣ ದೊರಕಿಸಬೇಕೆಂಬ ಆ ತತ್ತ್ವಪಂಥದ ವಿಧಾನವನ್ನು ಅನುಸರಿಸುತ್ತದೆ. ಸದ್ಯದಲ್ಲಿ ಎಲ್ಲ ದೇಶಗಳಲ್ಲೂ ಫಲ ಪರಿಣಾಮವಾದಕ್ಕೆ ಪ್ರಾಶಸ್ತ್ಯ ದೊರಕುತ್ತಿದೆ. ಅದನ್ನು ಆಧಾರಮಾಡಿಕೊಂಡು ಮೊಟ್ಟಮೊದಲು 20ನೆಯ ಶತಮಾನದ ಆದಿಯಲ್ಲಿ ಜಾನ್ ಡ್ಯೂಯಿಯವರು ಉದ್ಯಮ ಶಾಲೆಗಳನ್ನು ಅಮೆರಿಕದಲ್ಲಿ ಆರಂಭಿಸಿದರು. ಅವರ ತತ್ತ್ವದೃಷ್ಟಿಯನ್ನು ಪ್ರಪಂಚದಾದ್ಯಂತ ಪುರಸ್ಕರಿಸಲಾಯಿತು. 20ನೆಯ ಶತಮಾನದ ಪ್ರಧಾನ ತತ್ತ್ವಚಿಂತಕರೆನಿಸಿರುವ ಅವರು ಮೂಲಶಿಕ್ಷಣ ಪದ್ಧತಿಯನ್ನು ಕುರಿತು 'ಅದು ನನ್ನ ಶಿಕ್ಷಣಪದ್ಧತಿಗಿಂತಲೂ ಒಂದು ಹಂತ ಮುಂದೆ ಸಾಗಿದೆ 'ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಇಂಥ ಅನೇಕ ಪ್ರಗತಿಪರ ಅಂಶಗಳನ್ನೊಳಗೊಂಡ ಗಾಂಧೀಜಿಯವರ ಶಿಕ್ಷಣದೃಷ್ಟಿ ಆಕಸ್ಮಿಕವಾಗಿ ರೂಪಗೊಂಡದ್ದಲ್ಲ. ಅವರ ಜೀವನದರ್ಶನ ಬೆಳೆದು ಪಕ್ವಗೊಂಡಂತೆ ಅವರ ಶಿಕ್ಷಣತತ್ತ್ವವೂ ರೂಪುಗೊಂಡಿತು. ಅದನ್ನವರು ಪ್ರತ್ಯೇಕವಾಗಿ ರೂಪುಗೊಳಿಸಲಿಲ್ಲ. ಅವರ ಜೀವನ ದರ್ಶನದ ಕಾರ್ಯಸ್ವರೂಪವಾಗಿ ಅವರ ಶಿಕ್ಷಣ ಪದ್ಧತಿ ಮೈದಾಳಿತು. ಆದ್ದರಿಂದ ಆ ಶಿಕ್ಷಣಪದ್ಧತಿಯಲ್ಲಿ ಅವರ ಜೀವನದ ತತ್ತ್ವದೃಷ್ಟಿ ಪ್ರತಿಬಿಂಬಿಸಿರುವುದು ಸ್ವಾಭಾವಿಕ.

ಗಾಂಧೀಜಿಯ ತತ್ತ್ವದೃಷ್ಟಿಯನ್ನು ಯಾವೊಂದು ಸಾಂಪ್ರದಾಯಿಕ ಹೆಸರಿನಿಂದಲೂ ಕರೆಯುವಂತಿಲ್ಲ. ಏಕೆಂದರೆ, ಅದರಲ್ಲಿರುವ ಲಕ್ಷಣಗಳು ಯಾವ ಒಂದು ತತ್ತ್ವಪಂಥವನ್ನು ಪೂರ್ಣವಾಗಿ ಅನುಸರಿಸುವುದಿಲ್ಲ. ಅದನ್ನು ಗಾಂಧೀವಾದವೆನ್ನುವುದು ಸೂಕ್ತ. ಅವರ ಈ ತತ್ತ್ವದೃಷ್ಟಿಯನ್ನು ಪೋಷಿಸಿದ್ದು ರಸ್ಕಿನ್ನರ 'ಅಂಟು ದಿಸ್ ಲ್ಯಾಸ್ಟ್' ಎಂಬ ಕೃತಿ. ವ್ಯಕ್ತಿಯ ಒಳ್ಳಿತು ಎಲ್ಲರ ಒಳ್ಳಿತಿನಲ್ಲೂ ಅಡಗಿದೆ. ತಮ್ಮ ತಮ್ಮ ದುಡಿಮೆಯಿಂದ ತಮ್ಮ ತಮ್ಮ ಜೀವನೋಪಾಯವನ್ನು ಹುಡುಕಿಕೊಳ್ಳಬೇಕೆಂಬ ದೃಷ್ಟಿಯಲ್ಲಿ ಒಬ್ಬ ನ್ಯಾಯವಾದಿಯ ಕೆಲಸ ಒಬ್ಬ ಕ್ಷೌರಿಕನ ಕೆಲಸದಷ್ಟೇ ಅಮೂಲ್ಯವಾದುದು. ಉಳುವ ರೈತನ, ದುಡಿಯುವ ಕಾರ್ಮಿಕನ ಜೀವನ ಅಷ್ಟೇ ಯೋಗ್ಯ ಜೀವನ – ಎಂಬ ನಂಬಿಕೆಯನ್ನು ಆ ಗ್ರಂಥಪಠನ ಅವರಲ್ಲಿ ಮೂಡಿಸಿತು. ಹಾಗೆಯೇ ಗೀತೆಯ ಪಠನದಿಂದ ಆತ್ಮವತ್ ಸರ್ವಭೂತೇಷು ಎಂಬ ದೃಷ್ಟಿಯನ್ನು ಆಗಲೇ ಅವರು ಅಂತರ್ಗತ ಮಾಡಿಕೊಂಡಿದ್ದರು. ತಮ್ಮ ಈ ಭಾವನೆಗಳನ್ನವರು ಒಟ್ಟಾರೆ ಸರ್ವೋದಯ ಎಂದು ಕರೆದರು. ಆ ತತ್ತ್ವದೃಷ್ಟಿಯನ್ನು ಕಾರ್ಯರೂಪಕ್ಕೆ ಇಳಿಸಲು ಸಿದ್ಧರಾದರು. ಆ ಕಾರ್ಯ ಅವರಿಗೆ ಸತ್ಯಶೋಧನೆಯಾಯಿತು. ಅದಕ್ಕೆ ಅಹಿಂಸೆ ಅಥವಾ ಪ್ರೇಮ ಪಥವಾಯಿತು.

**ಗಾಂಧೀಜಿಯ ಪ್ರಯೋಗಗಳು :** ತತ್ತ್ವದೃಷ್ಟಿಯ ಕಾರ್ಯಸ್ವರೂಪವೇ ಶಿಕ್ಷಣ ಎಂದು ಆಗಲೇ ಸೂಚಿಸಿದೆಯಷ್ಟೆ. ತಮ್ಮ ಸರ್ವೋದಯ ತತ್ತ್ವವನ್ನು ಪ್ರಯೋಗಿಸಿ ನೋಡಲು ಗಾಂಧೀಜಿ ಹಲವು ಪ್ರಯೋಗಗಳನ್ನು ನಡೆಸಿದರು. ಆ ಒಂದೊಂದು ಪ್ರಯೋಗವೂ ಒಂದೊಂದು ಶಿಕ್ಷಣಯೋಜನೆಯೆನ್ನಬಹುದು. ಫೀನಿಕ್ಸ್ ಆಶ್ರಮ, ಟಾಲ್‌ಸ್ಟಾಯ್ ಆಶ್ರಮ, ಸತ್ಯಾಗ್ರಹಾಶ್ರಮ, ಸೇವಾ ಗ್ರಾಮ ಆಶ್ರಮ ಇವೇ ಮೊದಲಾದವು ಸತ್ಯ – ಅಹಿಂಸಾ ಶಿಕ್ಷಣದ ಕೇಂದ್ರಗಳೆನಿಸಿದವು. ಟಾಲ್‌ಸ್ಟಾಯ್ ಆಶ್ರಮದಲ್ಲಿ ಅವರೇ ಶಿಕ್ಷಕರಾಗಿದ್ದರು. ತಮ್ಮ ಮತ್ತು ಇತರ ಮಕ್ಕಳಿಗೆ ಜೀವನೋಪಾಯದ ಕಸಬೊಂದರ ಮೂಲಶಿಕ್ಷಣ ಕೊಡಲು ತಾವೇ ಚಮ್ಮಾರನ ಕೆಲಸವನ್ನು ಕಲಿತರು. ಇದು ಅವರು ದಕ್ಷಿಣ ಆಫ್ರಿಕದಲ್ಲಿದ್ದಾಗ ನಡೆಸಿದ ಪ್ರಯೋಗ. ಅನಂತರ ಅವರು ಮಾತೃಭೂಮಿಗೆ ಹಿಂದಿರುಗಿದ ಮೇಲೆ ಅಹಮದಾಬಾದಿನ ಬಳಿ ಆಶ್ರಮವನ್ನು ಮಾಡಿಕೊಂಡು ಅಲ್ಲಿ ನೂಲುವುದು, ನೇಯುವುದು, ಮತ್ತು ಅವಕ್ಕೆ ಸಂಬಂಧಿಸಿದ ಇತರ ಕಾರ್ಯಗಳನ್ನೂ ಜೀವನೋಪಾಯದ ಕಸಬನ್ನಾಗಿ ಆರಿಸಿಕೊಂಡು ಅದರ ಆಧಾರದ ಮೇಲೆ ಶಿಕ್ಷಣವೀಯುವ ಬಗ್ಗೆ ಸತತವಾಗಿ ಪ್ರಯತ್ನ ನಡೆಸಿದರು. ಈ ಎಲ್ಲ ಪ್ರಯೋಗಗಳಲ್ಲಿ ದೊರೆತ ಅನುಭವಗಳಿಂದ ಕಸಬನ್ನು ಕೇಂದ್ರವಾಗಿ ಮಾಡಿಕೊಂಡು ಶಿಕ್ಷಣವೀಯುವುದರ ಯಥಾರ್ಥತೆಯನ್ನು ಚೆನ್ನಾಗಿ ಮನದಟ್ಟು ಮಾಡಕೊಂಡರು.

**ರಾಷ್ಟ್ರೀಯ ಶಿಕ್ಷಣ ಮತ್ತು ಸರ್ವೋದಯ :** ಒಂದೂ ಕಾಲು ಶತಮಾನಕ್ಕೂ ಹೆಚ್ಚು ಕಾಲ ಪಾಶ್ಚಾತ್ಯ ಶಿಕ್ಷಣಪದ್ಧತಿ ಭಾರತದ ಆದ್ಯಂತವೂ ಅಸ್ತಿತ್ವದಲ್ಲಿದ್ದರೂ ಅದು ಇಲ್ಲಿನವರ ಅಗತ್ಯಗಳನ್ನು ಪೂರೈಸಿರಲಿಲ್ಲ; ಆಶೋತ್ತರಗಳನ್ನು ಈಡೇರಿಸಿರಲಿಲ್ಲ. ಉನ್ನತ ಶಿಕ್ಷಣದಲ್ಲಿ ಇಂಗ್ಲಿಷ್ ಬೋಧನಮಾಧ್ಯಮವಾದ್ದರ ಫಲವಾಗಿ ಜನಸಾಮಾನ್ಯಕ್ಕೂ ಶಿಕ್ಷಣಪಡೆದವರಿಗೂ ಅಂತರ ಏರ್ಪಟ್ಟು ಜ್ಞಾನದ ಸಾರ್ವತ್ರಿಕ ಪ್ರಸಾರಕ್ಕೆ ಅವಕಾಶವಿಲ್ಲ ವಾಗಿತ್ತು. ಅನ್ಯಭಾಷೆಯಾದ ಇಂಗ್ಲಿಷಿಗೆ ಕೊಟ್ಟಿದ್ದ ಅನುಚಿತ ಪ್ರಾಧಾನ್ಯದ ಫಲವಾಗಿ, ಅದು ವಿದ್ಯಾವಂತರ ಮೇಲೆ ಒಂದು ಹೊರೆಯಾಗಿ ಪರಿಣಮಿಸಿ ಅವರ ಮನಶ್ಶಕ್ತಿಯನ್ನು ಕುಂದಿಸಿ ತಮ್ಮ ನಾಡಿನಲ್ಲೆ ಅವರು ಅಪರಿಚಿತರಂತಾಗುವಂತೆ ಮಾಡಿತ್ತು. ವೃತ್ತಿಶಿಕ್ಷಣಕ್ಕೆ ಅಷ್ಟಾಗಿ ಅವಕಾಶವಿಲ್ಲದಿದ್ದ ಆ ಪದ್ಧತಿ ವಿದ್ಯಾವಂತರನ್ನು ಉನ್ನತಕಾರ್ಯಗಳಿಗೆ ಯೋಗ್ಯರಲ್ಲದವರನ್ನಾಗಿ ಮಾಡಿ ಅವರ ದೈಹಿಕ ಶಕ್ತಿಯನ್ನು ಕುಂದಿಸುತ್ತಿತ್ತು. ಪ್ರಾಥಮಿಕ ಶಿಕ್ಷಣದಿಂದ ಕಲಿತ ಅಷ್ಟಿಷ್ಟೂ ಮರೆತುಹೋಗಿ, ಅದರ ನಗರ ಅಥವಾ ಗ್ರಾಮಜೀವನದಲ್ಲಿ ಅನುಪಯುಕ್ತವೆನಿಸುತ್ತಿತ್ತು. ಆ ಮಟ್ಟಿಗೆ ಅದರ ಮೇಲೆ ಹೂಡಿದ ಹಣ ವ್ಯರ್ಥವ್ಯಯ ವಾಗುತ್ತಿತ್ತು. ಅಲ್ಲದೆ ಆ ಪದ್ಧತಿಯಿಂದ ತೆರಿಗೆ ತೆರುವವನಿಗಾಗಲಿ ಅವನ ಮಕ್ಕಳಿಗಾಗಲಿ ಅನುಕೂಲ ಆಗುತ್ತಿರಲಿಲ್ಲ. ಎಲ್ಲೋ ಕೆಲವರಿಗೆ ಸರ್ಕಾರದ ಉದ್ಯೋಗ ದೊರಕುತ್ತಿತ್ತೇ ಹೊರತು ಬಹುತೇಕ ಜನತೆ ನಿರುದ್ಯೋಗ, ಅಜ್ಞಾನ, ದಾರಿದ್ರ್ಯ ಇವುಗಳಲ್ಲಿ ತೊಳಲುವಂತೆ ಮಾಡಿತ್ತಲ್ಲದೆ ಅಸಮಾನತೆ, ಅನುಚಿತಸ್ಪರ್ಧೆ, ಅಸೂಯೆ, ಹಿಂಸೆ ಇವುಗಳಿಗೆ ಪ್ರೋತ್ಸಾಹವೀಯುವಂತೆ ಮಾಡಿತ್ತು. ಆದರೆ ಗಾಂಧೀಜಿಯವರ ಕಲ್ಪನೆಯ ಸರ್ವೋದಯ ಸಮಾಜರಚನೆಗೆ ಸಮಾನತೆ, ಸಹಕಾರ, ಪ್ರೇಮ, ಅಹಿಂಸೆ ಈ ಅಂಶಗಳು ಆಧಾರವಾಗಬೇಕಿತ್ತು. ಅದಕ್ಕೆ ಜನತೆಯಲ್ಲಿ ಜ್ಞಾನ, ಉದ್ಯೋಗ, ಪ್ರಸಾರ, ದಾರಿದ್ರ್ಯ ನಿವಾರಣೆ ಇವು ಅಗತ್ಯವಾಗಿ ಆಗಬೇಕಾಗಿತ್ತು. ಅದಕ್ಕೆ ಶಿಕ್ಷಣ ಸೂಕ್ತ ರೀತಿಯಲ್ಲಿ ಮಾರ್ಪಡಬೇಕಾಗಿತ್ತು. ಏಕೆಂದರೆ ಸಮಾಜ ಪರಿವರ್ತನೆಗೆ ಅದು ಉಪಕರಣವೆಂಬುದನ್ನು ಅವರು ಗ್ರಹಿಸಿದ್ದರು. ಅಂಥ ಶಿಕ್ಷಣಪದ್ಧತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಏಳು ವರ್ಷಗಳ ಕಾಲಾವಧಿಗಾದರೂ ಹೆಚ್ಚಿಸಿ, ಅದರಿಂದ ಮೆಟ್ರಿಕ್ಯುಲೇಷನ್ ಹಂತದಲ್ಲಿ ದೊರೆಯುವಷ್ಟು ಸಾಮಾನ್ಯ ಜ್ಞಾನವೂ (ಇಂಗ್ಲಿಷನ್ನುಳಿದು) ವೃತ್ತಿಯೊಂದರಲ್ಲಿ ಶಿಕ್ಷಣವೂ ದೊರಕುವಂತೆ ಅವಕಾಶಕಲ್ಪನೆಯಾಗಬೇಕೆಂದು ತೀರ್ಮಾನಿಸಿಕೊಂಡರು. ಈ ಬದಲಾವಣೆಗಳನ್ನು ಅಂದಿದ್ದ ಶಿಕ್ಷಣ ಪದ್ಧತಿಗೆ ತೇಪೆಹಾಕಿ ನೇರಮಾಡುವುದು ಅಸಾಧ್ಯವೆಂದುಕೊಂಡು ಪ್ರತ್ಯೇಕ ಶಿಕ್ಷಣಪದ್ಧತಿಯೊಂದರ ಅನುಷ್ಠಾನಕ್ಕೆ ಯತ್ನಿಸಿದರು. ರಾಷ್ಟ್ರದ ಅಂದಿನ ತೀವ್ರ ಸಮಸ್ಯೆಗಳನ್ನೂ ನಿವಾರಿಸಿ ತಮ್ಮ ಕನಸಿನ ಸರ್ವೋದಯ ಸಮಾಜವನ್ನು ರಚಿಸಬಲ್ಲ ಆ ಪದ್ಧತಿಯಲ್ಲಿ ಗ್ರಾಮೋದ್ಯೋಗಗಳಿಗೆ ಪ್ರಾಧಾನ್ಯವಿರ ಬೇಕೆಂದು ಭಾವಿಸಿದರು. ಏಕೆಂದರೆ, ಇಲ್ಲಿನ ಶೇ.80 ರಷ್ಟು ಜನತೆ ಗ್ರಾಮವಾಸಿ ಗಳಾಗಿದ್ದರು. ರಾಷ್ಟ್ರದ ಪ್ರಧಾನ ಸಮಸ್ಯೆಗಳನ್ನೂ ಪರಿಹರಿಸಿ ಸಮಾಜದಲ್ಲಿ ಪರಿವರ್ತನೆ ಮಾಡಬಲ್ಲ ಆ ಶಿಕ್ಷಣವನ್ನು ಅವರು 'ಗ್ರಾಮೀಣ ರಾಷ್ಟ್ರೀಯ ಶಿಕ್ಷಣ' ಎಂದು ಕರೆದರು. ಸಮಕಾಲೀನ ಶಿಕ್ಷಣವೇತ್ತರು ರಾಷ್ಟ್ರೀಯ ಶಿಕ್ಷಣ ಎಂಬುದಕ್ಕೆ ಬೇರೆ ಬೇರೆ ಅರ್ಥ ವ್ಯಾಪ್ತಿಯನ್ನು ಕಲ್ಪಿಸಿದ್ದರು. ಗಾಂಧೀಜಿಯವರ ಮೇಲಿನ ಅರ್ಥಕಲ್ಪನೆ ಅದೆಲ್ಲಕ್ಕಿಂತ ಭಿನ್ನವಾಗಿದೆ. ಅವರ ಮಾತಿನಲ್ಲೆ ಹೇಳುವುದಾದರೆ 'ಇದು ಗ್ರಾಮೀಣ. ಏಕೆಂದರೆ ಉನ್ನತ ಅಥವಾ ಇಂಗ್ಲಿಷ್ ಶಿಕ್ಷಣವನ್ನು ತ್ಯಜಿಸಿರುತ್ತದೆ; ರಾಷ್ಟ್ರೀಯ. ಏಕೆಂದರೆ ಸತ್ಯ, ಅಹಿಂಸೆ, ಗ್ರಾಮೋದ್ಯೋಗಗಳ ಮೂಲಕ (ಎಂದರೆ ಅದನ್ನು ಕಲಿಸುವ ಅಧ್ಯಾಪಕರು ಮಕ್ಕಳಿಗೆ ತಾವು ಆರಿಸಿಕೊಂಡ ಕಸಬಿನ ಮೂಲಕ) ಯಾವ ನಿರ್ಬಂಧ ಹಸ್ತಕ್ಷೇಪಗಳೂ ಇಲ್ಲದೆ ಅವರ ಸರ್ವಸಾಮರ್ಥ್ಯಗಳೂ ವಿಕಸಿಸುವಂತೆ ಮಾಡುವರು.' ಇದು ಯಾವ ದೃಷ್ಟಿಯಲ್ಲೂ ಪಾಶ್ಚಾತ್ಯ ವಿಧಾನದಿಂದ ಪ್ರಭಾವಿತವಾದುದಲ್ಲವೆಂಬುದು ಇದರಿಂದ ಸ್ಪಷ್ಟಪಡುತ್ತದೆ.

**ಕಸಬು ಕೇಂದ್ರಿತ ಶಿಕ್ಷಣ :** ವ್ಯಕ್ತಿಯ ಸರ್ವತೋಮುಖವಾದ ಬೆಳೆವಣಿಗೆಯಾಗಲು ಸಾಧ್ಯವಾದಮಟ್ಟಿಗೆ ಎಲ್ಲ ಶಿಕ್ಷಣವನ್ನೂ ಒಂದು ಲಾಭದಾಯಕ ಕಸಬಿನ ಮೂಲಕ ಒದಗಿಸಬಹುದೆಂದು ಗಾಂಧೀಜಿ ತಮ್ಮ ಪ್ರಯೋಗಗಳಿಂದ ಸ್ಪಷ್ಟವಾಗಿ ಅರಿತು ಕೊಂಡಿದ್ದರು. ಶಿಕ್ಷಣದ ಕೇಂದ್ರವನ್ನಾಗಿ ಮಾಡಿಕೊಳ್ಳಲು ಆರಿಸಿಕೊಳ್ಳುವ ಕಸಬು ವಿದ್ಯಾರ್ಥಿಯ ದೃಷ್ಟಿಯಲ್ಲಿ ಮೂರು ಉದ್ದೇಶಗಳನ್ನು ಸಾಧಿಸಬೇಕು : ಮೊದಲನೆಯ ದಾಗಿ, ತನ್ನ ಶಿಕ್ಷಣದ ವೆಚ್ಚವನ್ನು ತನ್ನ ದುಡಿಮೆಯ ಫಲವಾದ ಉತ್ಪನ್ನದಿಂದ ಗಳಿಸಿಕೊಳ್ಳುವಂತಾಗಬೇಕು; ಎರಡನೆಯದಾಗಿ, ತನ್ನ ವ್ಯಕ್ತಿತ್ವದ ಎಲ್ಲ ಮುಖಗಳನ್ನು ಬೆಳೆಸಲು ಅದು ನೆರವಾಗಬೇಕು; ಮೂರನೆಯದಾಗಿ, ಮುಂದೆ ಅದು ತನ್ನ ಜೀವನೋಪಾಯಕ್ಕಾಗಿ ಅನುಸರಿಸಬಹುದಾದ ಉದ್ಯೋಗವೂ ಆಗಬೇಕು. ಹತ್ತಿ, ಉಣ್ಣೆ, ರೇಷ್ಮೆ – ಇವುಗಳ ಬಳಕೆಗೆ ಸಂಬಂಧಿಸಿದಂತೆ ಸಂಗ್ರಹ, ಶುದ್ಧೀಕರಣ, ಬೀಜ ತೆಗೆಯುವುದು (ಹತ್ತಿಯ ವಿಷಯದಲ್ಲಿ ಮಾತ್ರ), ಎಕ್ಕುವುದು, ನೂಲುವುದು, ಬಣ್ಣಕಟ್ಟುವುದು, ಗಂಜಿಕಟ್ಟುವುದು, ಹಾಸುಮಾಡುವುದು, ಇಮ್ಮಡಿ ನುಲಿಕೆ, ಮಾದರಿ ರಚನೆ, ಮತ್ತು ನೇಯ್ಗೆ – ಇತ್ಯಾದಿಯಾದ ಎಲ್ಲ ಕೆಲಸಗಳೂ ಕಸೂತಿ, ಹೊಲಿಗೆ, ಕಾಗದ ತಯಾರಿಕೆ, ಪುಸ್ತಕಕ್ಕೆ ರಟ್ಟು ಕಟ್ಟುವುದು, ಮರಗೆಲಸ, ಆಟಿಕೆಗಳ ತಯಾರಿಕೆ, ಮನೆಕಟ್ಟುವುದು –ಇವೆಲ್ಲ ಸರಾಗವಾಗಿ ಕಲಿಯಬಹುದಾದ ಹಾಗೂ ಅಷ್ಟಾಗಿ ಬಂಡವಾಳ ಬೇಡದ ಕಸಬುಗಳು. ಪ್ರಾಥಮಿಕ ಕಲಿಕೆ ಬಾಲಕಬಾಲಕಿಯರಿಗೆ ಜೀವನೋಪಾಯಕ್ಕೆ ನೆರವಾಗಬಲ್ಲ ಶಿಕ್ಷಣ ಒದಗಿಸಬೇಕು. ಅವರು ಕಲಿತಿರುವ ಕಸಬಿಗೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಸರ್ಕಾರ ಆಶ್ವಾಸನೆ ನೀಡಬೇಕು. ಅಥವಾ ಅವರು ತಯಾರಿಸುವ ಉತ್ಪನ್ನಗಳನ್ನು ಸೂಕ್ತ ಬೆಲೆಗೆ ಕೊಂಡುಕೊಳ್ಳಬೇಕು. ಆಗ ಶಿಕ್ಷಣ ವ್ಯಕ್ತಿಗೂ ಸಮಾಜಕ್ಕೂ ಅನುಕೂಲವಾಗುವುದಲ್ಲದೆ ಆರ್ಥಿಕವಾಗಿ ಸ್ವಾವಲಂಬಿಯೂ ಆಗಿರಬಲ್ಲದು. ಇವು ಗಾಂಧೀಜಿಯವರ ಮನಸ್ಸಿನಲ್ಲಿ 20ನೆಯ ಶತಮಾನದ ಆದಿಯಿಂದಲೂ ಶಿಕ್ಷಣದ ಬಗ್ಗೆ ಪುಟಗೊಳ್ಳುತ್ತಿದ್ದ ಭಾವನೆಗಳು. 1902 ರಲ್ಲೆ ಟಾಲ್‌ಸ್ಟಾಯ್ ಫಾರಮ್ಮಿನಲ್ಲಿ ಅಂಥ ಶಿಕ್ಷಣ ಸ್ವಾವಲಂಬಿಯಾಗಬಲ್ಲದೆಂದು ದೃಢಪಡಿಸಿಕೊಂಡಿದ್ದರೂ ಆ ಬಗ್ಗೆ ನಿರ್ದಿಷ್ಟವಾಗಿ ಪ್ರಕಟಿಸಿದ್ದು 1921 ರಲ್ಲಿ. ಹರಿಜನ ಪತ್ರಿಕೆಯಲ್ಲಿ ಮೊಟ್ಟಮೊದಲನೆಯದಾಗಿ ತಮ್ಮ ಶಿಕ್ಷಣದ ಸ್ಥೂಲ ರೂಪರೇಷೆಗಳನ್ನು ವಿವರಿಸಿದರು. ಆದರೆ ಅದನ್ನು ಸಾರ್ವತ್ರಿಕವಾಗಿ ಆಚರಣೆಗೆ ತರಲು ಅಂದು ದೇಶದಲ್ಲಿ ಪರಕೀಯ ಆಡಳಿತ ಅಸ್ತಿತ್ವದಲ್ಲಿದ್ದುದರಿಂದ ಅವಕಾಶವಾಗಲಿಲ್ಲ. ಮೇಲಾಗಿ ಅವರು ಇಂಗ್ಲಿಷರ ಆಡಳಿತದ ವಿರುದ್ಧ ಚಳವಳಿ ಹೂಡಿ ಸ್ವಾತಂತ್ರ್ಯ ಸಂಗ್ರಾಮ ನಡೆಸುತ್ತಿದ್ದುದರಿಂದ ಸರ್ಕಾರ ಅವರ ಪದ್ಧತಿಗೆ ಪುರಸ್ಕಾರ ನೀಡುವುದಾದರೂ ಸಾಧ್ಯವೇ ? ಆದರೂ ಅವರು ವರ್ಧಾದಲ್ಲಿ ಅದನ್ನು ಪ್ರಾಯೋಗಿಕವಾಗಿ ಆಚರಣೆಗೆ ತಂದೇ ಇದ್ದರು. ತಮ್ಮ ನೆಚ್ಚಿನ ಆ ಶಿಕ್ಷಣಪದ್ಧತಿಯನ್ನು ದೇಶಾದ್ಯಂತ ಆಚರಣೆಗೆ ತರಲು ಸೂಕ್ತ ಸನ್ನಿವೇಶಗಳಿಗಾಗಿ ಕಾದಿದ್ದರು.

1937 ರಲ್ಲಿ ಪ್ರಾಂತೀಯ ಸ್ವಾತಂತ್ರ್ಯ ಆಚರಣೆಗೆ ಬಂತು. ಪ್ರಾಂತ್ಯಗಳಲ್ಲಿ ಜನನಾಯಕರು ಶಿಕ್ಷಣ ಸಚಿವರಾಗಿ ಜನತೆಯ ಆಶೋತ್ತರಗಳನ್ನು ಈಡೇರಿಸುವಂತೆ ಶಿಕ್ಷಣ ವ್ಯವಸ್ಥೆ ಮಾಡಲು ಸಿದ್ಧರಾದರು. ಅಂದಿಗಾಗಲೆ ಕಡ್ಡಾಯ ಶಿಕ್ಷಣವನ್ನು ದೇಶಾದ್ಯಂತ ಆಚರಣೆಗೆ ತರಬೇಕೆಂಬ ಕೂಗು ಎಲ್ಲೆಲ್ಲೂ ಆರಂಭವಾಗಿತ್ತು. ಹಣದ ಅಭಾವದ ಕಾರಣವನ್ನು ಮುಂದೊಡ್ಡಿ ಸರ್ಕಾರ ಅದನ್ನು ನಿರ್ಲಕ್ಷಿಸುತ್ತ ಬಂದಿತ್ತು. ಈಗ

ಜನನಾಯಕರು ಆಡಳಿತಕ್ಕೆ ಬಂದಿದ್ದುದರಿಂದ ಅವರು ಅದನ್ನು ಇನ್ನೂ ಮುಂದೂಡುವುದು ಅಸಾಧ್ಯವಾಯಿತು. ಆದರೆ ಅದಕ್ಕೆ ಬೇಕಾದ ಹಣಕ್ಕೆ ಮಾತ್ರ ಅಭಾವವಿತ್ತು. ಜೊತೆಗೆ ಕಾಂಗ್ರೆಸ್ ಸರ್ಕಾರಗಳು ಪಾನನಿರೋಧವನ್ನು ಆಚರಣೆಗೆ ತರಲು ತೀರ್ಮಾನಿಸಿದ್ದರಿಂದ ಅದರಿಂದ ಬರುತ್ತಿದ್ದ ಆದಾಯವೂ ನಿಂತುಹೋಗಿತ್ತು. ಆದ್ದರಿಂದ ಸರ್ಕಾರ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿತ್ತು. ಆ ಸಮಯದಲ್ಲಿ ಗಾಂಧೀಜಿ ಅಷ್ಟಾಗಿ ಹಣದ ವೆಚ್ಚವಿಲ್ಲದೆ ರಾಷ್ಟ್ರವ್ಯಾಪಕವಾಗಿ ಆಚರಣೆಗೆ ತರಬಹುದಾದ ತಮ್ಮ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಜನತೆಯ ಮುಂದಿಟ್ಟರು. ಅಂದಿಗಾಗಲೇ ಅವರ ಶಿಕ್ಷಣ ಪದ್ಧತಿಗೆ ತಕ್ಕಷ್ಟು ಪ್ರಚಾರ ದೊರೆತಿದ್ದು, ಬೇಕಾದ ಹಾಗೆ ಖಂಡನೆ ಮಂಡನೆಗಳು ಪ್ರಕಟವಾಗಿದ್ದುವು ಹಾಗೂ ಆ ಶಿಕ್ಷಣ ಪದ್ಧತಿಯ ಸ್ವಾವಲಂಬನೆಯ ಬಗ್ಗೆ ತೀವ್ರತರ ಟೀಕೆಗಳು ಬಂದಿದ್ದುವು. ಆದ್ದರಿಂದ ಅದನ್ನು ಆಚರಣೆಗೆ ತರುವ ಮುನ್ನ ತಜ್ಞರು ಅದನ್ನು ಪರಿಶೀಲಿಸಬೇಕೆಂದು ಅವರ ಅಭಿಪ್ರಾಯವಾಗಿತ್ತು.

1937 ರ ಅಕ್ಟೋಬರ್ 23 ರಂದು ವರ್ಧಾದಲ್ಲಿ ರಾಷ್ಟ್ರೀಯ ಶಿಕ್ಷಣ ಸಮ್ಮೇಳನ ನಡೆಯಿತು. ಗಾಂಧೀಜಿ ಹರಿಜನ ಪತ್ರಿಕೆಯ ಮೂಲಕ ಪ್ರಕಟಿಸಿದ್ದ ಶಿಕ್ಷಣ ಪದ್ಧತಿಯ ಬಗ್ಗೆ ಟೀಕೆಗಳು ಬರಹತ್ತಿದ್ದುವು. ಆ ಪದ್ಧತಿಯನ್ನು ಸಮ್ಮೇಳನ ಚೆನ್ನಾಗಿ ಪರಿಶೀಲಿಸಿತು. ಸಮ್ಮೇಳನದಲ್ಲಿ ಅಂದು ಕಾಂಗ್ರೆಸ್ ಅಧಿಕಾರದಲ್ಲಿದ್ದ ಏಳು ಪ್ರಾಂತ್ಯಗಳ ಶಿಕ್ಷಣ ಸಚಿವರೂ ರಾಷ್ಟ್ರೀಯ ಶಿಕ್ಷಣದಲ್ಲಿ ಆಸಕ್ತಿಯಿದ್ದ ಶಿಕ್ಷಣ ತಜ್ಞರೂ ಇತರರೂ ಇದ್ದರು. ಗಾಂಧೀಜಿಯ ಶಿಕ್ಷಣಯೋಜನೆಯ ಮೇಲೆ ತೀವ್ರರೀತಿಯಲ್ಲಿ ಚರ್ಚೆ ನಡೆಯಿತು. ಕಡೆಗೆ ಸಮ್ಮೇಳನ ಈ ಕೆಲವು ತೀರ್ಮಾನಗಳನ್ನು ಕೈಕೊಂಡಿತು : 1 ರಾಷ್ಟ್ರವ್ಯಾಪಕವಾಗಿ ಏಳು ವರ್ಷಗಳ ಉಚಿತ ಕಡ್ಡಾಯ ಶಿಕ್ಷಣವನ್ನು ದೊರಕಿಸಬೇಕು; 2 ಬೋಧನಮಾಧ್ಯಮ ಮಾತೃಭಾಷೆಯಾಗಿರಬೇಕು; 3 ಈ ಕಾಲಾವಧಿಯ ಶಿಕ್ಷಣ ಗಾಂಧೀಜಿ ಸಲಹೆ ಮಾಡಿರುವಂತೆ, ಒಂದು ಉತ್ಪನ್ನದಾಯಕ ಕೈಕಸಬನ್ನು ಕೇಂದ್ರಮಾಡಿಕೊಂಡಿರಬೇಕು. ಮಕ್ಕಳಲ್ಲಿ ಮೂಡಿಸಬೇಕಾದ ಮಿಕ್ಕೆಲ್ಲ ಸಾಮರ್ಥ್ಯಗಳೂ ಕೊಡಬೇಕಾದ ತರಪೇತೂ ಸಾಧ್ಯವಾದ ಮಟ್ಟಿಗೆ ಮಗುವಿನ ಸನ್ನಿವೇಶದಿಂದ ಆರಿಸಿಕೊಂಡ ಆ ಕೈಕಸಬಿನೊಡನೆ ಸಂಬಂಧಿಸಿರಬೇಕು; 4 ಈ ಶಿಕ್ಷಣ ಪದ್ಧತಿ ಕ್ರಮಕ್ರಮವಾಗಿ ಅಧ್ಯಾಪಕರ ಸಂಭಾವನೆಯ ಬಗ್ಗೆ ಸ್ವಯಂಪೂರ್ಣವಾಗಬೇಕು ಎಂದು ಸಮ್ಮೇಳನ ಆಶಿಸುವುದು. ಈ ತೀರ್ಮಾನಗಳನ್ನು ಆಧಾರ ಮಾಡಿಕೊಂಡು ಗಾಂಧೀಜಿ ಶಿಕ್ಷಣ ಯೋಜನೆಗೆ ಒಂದು ಶಾಸ್ತ್ರೀಯ ಚೌಕಟ್ಟನ್ನು ಕೊಡಬೇಕಾಗಿತ್ತು. ಅದಕ್ಕಾಗಿ ಸಮ್ಮೇಳನ ಜಾಕೀರ್ ಹುಸೇನ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿ ಎರಡು ತಿಂಗಳೊಳಗಾಗಿ ಈ ಕಾರ್ಯವನ್ನು ಪೂರೈಸಿ ವರ್ಧಾ ಶಿಕ್ಷಣ ಯೋಜನೆ ಎಂಬ ಹೆಸರಿನ ವರದಿಯನ್ನು ಸಲ್ಲಿಸಿತು. ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಇದೊಂದು ಪ್ರಧಾನ ದಾಖಲೆ. ಅನಂತರ 1938 ರಲ್ಲಿ ಹರಿಪುರದಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಅಧಿವೇಶನ ಅದಕ್ಕೆ ತನ್ನ ಒಪ್ಪಿಗೆ ನೀಡಿತು. ಕಾಂಗ್ರೆಸ್ ಅಧಿಕಾರದಲ್ಲಿದ್ದ ಏಳು ಪ್ರಾಂತ್ಯಗಳಲ್ಲೂ ಯೋಜನೆ ಮೂಲಶಿಕ್ಷಣ (ಬೇಸಿಕ್ ಎಜುಕೇಷನ್) ಎಂಬ ಹೆಸರಿನಲ್ಲಿ ಅನುಷ್ಠಾನಕ್ಕೆ ಬಂತು.

**ಮೂಲಶಿಕ್ಷಣದ ಶಾಸ್ತ್ರೀಯ ಸ್ವರೂಪ :** ಮೂಲಶಿಕ್ಷಣವನ್ನು ರೂಪಿಸಿದ ಗಾಂಧೀಜಿ ಮೂಲತಃ ಶಿಕ್ಷಣವೇತ್ತರಲ್ಲ. ಅವರು ಅದನ್ನು ಶಿಕ್ಷಣಶಾಸ್ತ್ರದ ಬೆಳಕಿನಲ್ಲಿ ರೂಪಿಸುವ ಯತ್ನವನ್ನೂ ಮಾಡಿದವರಲ್ಲ. ಆದರೂ ಅವರ ಯೋಜನೆಯಲ್ಲಿ ಶಿಕ್ಷಣಶಾಸ್ತ್ರ ಎತ್ತಿಹಿಡಿಯುವ ಹಲವು ಸಲ್ಲಕ್ಷಣಗಳನ್ನು ಗುರುತಿಸಬಹುದು. ಉತ್ಪನ್ನದಾಯಕ ಚಟುವಟಿಕೆಯೊಂದರ ಮೂಲಕ ಮಕ್ಕಳಿಗೆ ಶಿಕ್ಷಣವೀಯಲು ನಿಯೋಜಿಸಿರುವ ಅವರ ಯೋಜನೆ ಎಲ್ಲ ಆಧುನಿಕ ತತ್ತ್ವಗಳಿಗೂ ಒಪ್ಪುವಂತಿದೆ. ಮಕ್ಕಳ ಸಮಗ್ರವೂ ಸರ್ವತೋಮುಖವೂ ಆದ ವಿಕಾಸಕ್ಕೆ ಅದು ಪರಿಣಾಮಕಾರಿ ವಿಧಾನವೆಂಬುದನ್ನು ಎಲ್ಲ ಶಿಕ್ಷಣತತ್ತ್ವಗಳೂ ಒಪ್ಪುತ್ತವೆ. ಅರ್ಥವಾಗದ ಸೈದ್ಧಾಂತಿಕರೂಪದ ಜ್ಞಾನವನ್ನು ಕಲಿಯಲು ಮಕ್ಕಳ ಮನಸ್ಸು ಬೇಸರಗೊಳ್ಳುವುದರಿಂದ ಅದು ವಿಹಿತವೆನಿಸದ ವಿಧಾನವಾಗುತ್ತದೆ. ಮೂಲಶಿಕ್ಷಣದಲ್ಲಿ ಬೌದ್ಧಿಕ ಮತ್ತು ಅಭ್ಯಾಸಾತ್ಮಕ (ಕ್ರಿಯಾಪ್ರದ) ಅಂಶಗಳೆರಡೂ ಸೇರಿರುವುದರಿಂದ ಅವರ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆಗಳೆರಡೂ ಸಮನ್ವಯಗೊಂಡು ಅಭಿವೃದ್ಧಿಯಾಗುತ್ತವೆ; ಮಕ್ಕಳು ಬರಿಯ ಗಿಳಿ ಓದಿನ ಅಕ್ಷರ ವಿದ್ಯೆಯನ್ನು ಸಾಧಿಸದೆ ರಚನಾತ್ಮಕ ಉದ್ದೇಶಗಳಿಗಾಗಿ ಬುದ್ಧಿ ಮತ್ತು ಕೈಗಳನ್ನು ಬಳಸಿಕೊಂಡು ಶಿಕ್ಷಣ ಪಡೆಯುತ್ತಾರೆ; ಸುಮ್ಮನೆ ಕೇಳಿ ಅಥವಾ ಓದಿ ಕಲಿಯುವುದರ ಬದಲು ಮಾಡಿ ಕಲಿಯುವ ಅವಕಾಶವಿರುವುದರಿಂದ ಈ ಪದ್ಧತಿಯಿಂದ ಕಲಿತ ಶಿಕ್ಷಣ ದೃಢವಾಗಿ ನಿಲ್ಲುವುದರ ಜೊತೆಗೆ ಅವರ ಜೀವನದಲ್ಲಿ ಹೆಚ್ಚು ಪರಿಣಾಮಕಾರಿಯೂ ಆಗಬಲ್ಲದು. ಯಾವುದೇ ಜ್ಞಾನವನ್ನು ಅವರಿಗೆ ಕಲಿಸಬೇಕಾದರೂ ಕಸಬನ್ನು ಮಾಡಲು ಅನಿವಾರ್ಯವೆನಿಸಿದಾಗ ಆ ಕಾರ್ಯಕ್ಕೆ ಯತ್ನಿಸುವುದರಿಂದ ಕಲಿತದ್ದು ಅರ್ಥವತ್ತಾಗಿರುವುದಲ್ಲದೆ ಅದನ್ನು ಕಲಿಯಲು ಮನಸ್ಸಿನಲ್ಲಿ ಆಸಕ್ತಿ, ಸಿದ್ಧತೆ ಮತ್ತು ಉದ್ದೇಶಗಳು ರೂಪುಗೊಂಡಿರುತ್ತವೆ. ಇವೆಲ್ಲ ಮನಶ್ಶಾಸ್ತ್ರಕ್ಕೆ ಸಮ್ಮತವೆನಿಸಿರುವ ಅಂಶಗಳು.

ಶೈಕ್ಷಣಿಕ ಸಮಾಜಶಾಸ್ತ್ರದ ದೃಷ್ಟಿಯಲ್ಲೂ ಮೂಲಶಿಕ್ಷಣ ಹಲವು ಉತ್ತಮ ಗುಣಗಳಿಂದ ಕೂಡಿರುವುದನ್ನು ಕಾಣಬಹುದು. ಸರ್ವೋದಯ ತತ್ತ್ವವ್ಯಕ್ತಿಯ ಜೀವನದಲ್ಲಿ ಅಂಕುರಿಸಿ ಸಮಾಜ ಜೀವನದಲ್ಲಿ ಆವಿಷ್ಕಾರವಾಗಬೇಕೆಂಬುದು ಗಾಂಧೀಜಿಯ ಅಭಿಲಾಷೆಯಾಗಿತ್ತು. ಅಂಥ ಪರಿವರ್ತನೆ ಅಹಿಂಸೆ ಅಥವಾ ಪ್ರೇಮದಿಂದ ಉದ್ಭವಿಸಬೇಕು. ಅದು ಎಲ್ಲ ಮಾನವರ (ಸಮಾಜದ) ಪರಮ ಒಳಿತಿನಲ್ಲಿ ಅಡಗಿದೆ. ಸಮಾಜ ಈಶ್ವರನ ವ್ಯಕ್ತಸ್ವರೂಪ. ಇದು ಜೀವಂತ ಚೈತನ್ಯದಲ್ಲಿನ (ದೇವ) ಅವರ ನೈಜವಾದ ನಂಬಿಕೆ. ವ್ಯಕ್ತಿಯ ಸಾಧನೆ (ಶಿಕ್ಷಣ), ಸಂಪತ್ತು, ಕಾಣಿಕೆಯ ರೂಪದಲ್ಲಿ ಸಮಾಜಕ್ಕೆ ಸಲ್ಲಬೇಕು. ಸಮಾಜ ಸಂಗ್ರಹಿಸಿಕೊಂಡು ರಕ್ಷಿಸಿಕೊಂಡು ಬಂದಿರುವ ಮಾನವಜನಾಂಗದ ಸಂಸ್ಕೃತಿ ಸಂಪತ್ತನ್ನು ವ್ಯಕ್ತಿ ಬಳಸಿಕೊಂಡು ತನ್ನ ಹಿತವನ್ನು ಸಾಧಿಸಿಕೊಂಡು ಸಮಾಜ ಹಿತಕ್ಕೆ ತನ್ನ ಸೇವೆಯನ್ನು ಸಲ್ಲಿಸಲು ಶಕ್ತನಾಗಬೇಕು. ಈ ದೃಷ್ಟಿಯಲ್ಲಿ ಅವರ ಸರ್ವೋದಯ ಸಮಾಜದ ತತ್ತ್ವ ಸಾಮಾಜಿಕದೊಡನೆ ಆಧ್ಯಾತ್ಮಿಕವನ್ನು ಅಳವಡಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರಲು ಶಿಕ್ಷಣವನ್ನೊಂದು ಉಪಕರಣವನ್ನಾಗಿ ಮಾಡಿಕೊಂಡಿತೆನ್ನಬಹುದು. ಅಂಥ ಶಿಕ್ಷಣದಿಂದ ದೇಶದ ಮಕ್ಕಳೆಲ್ಲ ಕೈಗಾರಿಕೆಯಲ್ಲಿ ತೊಡಗುವುದರಿಂದ ಬುದ್ಧಿಜೀವನಕ್ಕೂ ಶ್ರಮಜೀವನಕ್ಕೂ ಹಿಂದಿನಿಂದಲೂ ಬೆಳೆದುಕೊಂಡು ಬಂದಿದ್ದ ವ್ಯತ್ಯಾಸ ಕಡಿಮೆಯಾಗುವುದರ ಜೊತೆಗೆ ಬೇರೆ ಬೇರೆ ಕಸಬುಗಳಿಗಿರುವ ಭಿನ್ನತೆಯನ್ನೂ ಅಂತರವನ್ನೂ ನಿವಾರಿಸಿದಂತಾಗುತ್ತದೆ. ಸಮಾಜಕ್ಕೆ ಎಲ್ಲ ಕಸಬುಗಳೂ ಅಗತ್ಯವೆಂಬ ಅಂಶ ವ್ಯಕ್ತಪಟ್ಟು ಎಲ್ಲ ವೃತ್ತಿಗಳಿಗೂ ಸಮಾನ ಗೌರವ ಲಭಿಸುತ್ತದೆ. ಮೂಲಶಿಕ್ಷಣ ಈ ಎಲ್ಲ ಸಾಮಾಜಿಕ ಮೌಲ್ಯಗಳನ್ನೂ ವೃದ್ಧಿಪಡಿಸಿ ಸಮಾಜದ ಪ್ರಗತಿಗೆ ರಕ್ತರಹಿತ ಕ್ರಾಂತಿಯ ಮೂಲಕ ನೆರವಾಗಬೇಕು.

ಆರ್ಥಿಕ ದೃಷ್ಟಿಯಿಂದ ಪರಿಗಣಿಸಿದರೂ ಮೂಲಶಿಕ್ಷಣದಲ್ಲಿ ಪ್ರಗತಿಪರ ಅಂಶಗಳು ಕಾಣುತ್ತವೆ. ಪ್ರತಿಯೊಬ್ಬನೂ ಶಿಕ್ಷಣ ಮುಗಿಸಿಕೊಂಡು ಜೀವನೋಪಾಯವನ್ನು ಸಾಧಿಸಿಕೊಳ್ಳಲು ಶಕ್ತಿ ಪಡೆದಿರುತ್ತಾನೆ. ಅಲ್ಲದೆ ಅವನು ತನ್ನ ವೃತ್ತಿಯಲ್ಲಿ ಕುರುಡುಕರ್ಮ ಮಾಡದೆ ಬುದ್ಧಿಯನ್ನೂ ಬಳಸುವುದರಿಂದ ವೃತ್ತಿಯಲ್ಲೂ ಪ್ರಗತಿ ಸಾಧನೆಯಾಗಿ ರಾಷ್ಟ್ರದ ಆರ್ಥಿಕ ಪ್ರಗತಿಗೂ ಅವಕಾಶವಾಗುತ್ತದೆ.

ಶುದ್ಧ ಶಿಕ್ಷಣಶಾಸ್ತ್ರದ ದೃಷ್ಟಿಯಿಂದ ನೋಡಿದರೂ ಜೀವನದಲ್ಲಿ ಅನುಸರಿಸುವ ಒಂದು ಕಸಬು ಶಾಲೆಯಲ್ಲಿ ಬೋಧನೆಯ ಕೇಂದ್ರವಿಷಯವಾಗಿರುವುದರಿಂದ ಜೀವನಕ್ಕೂ ಶಿಕ್ಷಣಕ್ಕೂ ನಿಕಟಸಂಬಂಧವಿರುವುದು ವ್ಯಕ್ತವಾಗಿ ಜೀವನವೇ ಬೇರೆ ಶಿಕ್ಷಣವೇ ಬೇರೆ ಎನ್ನುವ ಕೃತಕ ಅಹಿತದೃಷ್ಟಿ ಮಾಯವಾಗುತ್ತದೆ.

ಯಾವ ಶಿಕ್ಷಣಪದ್ಧತಿಯೇ ಆಗಲಿ ವ್ಯಕ್ತಿಗೆ ಸತ್ಪೌರನಾಗಿ ಬಾಳಲು ಸಿದ್ಧತೆ ನೀಡಬೇಕು. ತಾವು ವೃತ್ತಿಯೊಂದರಲ್ಲಿ ಸಿದ್ಧತೆ ಪಡೆದಿರುವುದರಿಂದ ವ್ಯಕ್ತಿ ತನ್ನ ಜೀವನೋಪಾಯದ ಜೊತೆಗೆ ಸಮಾಜಕ್ಕೆ ಅಗತ್ಯವೆನಿಸುವ ಸೇವಾಕಾರ್ಯವನ್ನೂ ನಿರ್ವಹಿಸಬಲ್ಲನು. ಸಹಕಾರದ ಸನ್ನಿವೇಶದಲ್ಲಿ ಕಲಿತ ಆ ವೃತ್ತಿಮನೋಭಾವ ಸಮಾಜ ಜೀವನಕ್ಕೂ ಹರಿದುಬಂದು ವ್ಯಕ್ತಿಯಲ್ಲಿ ಸೇವಾದೃಷ್ಟಿಯನ್ನು ಬೆಳೆಸುವುದಲ್ಲದೆ, ವೈಯಕ್ತಿಕ ಮೌಲ್ಯ, ಆತ್ಮಗೌರವ, ವೃತ್ತಿದಕ್ಷತೆ ಮುಂತಾದ ಸದ್ಗುಣಗಳನ್ನೂ ಮೂಡಿಸುತ್ತದೆ.

ಗಾಂಧೀಜಿ ಗ್ರಾಂಥಿಕ ಶಿಕ್ಷಣವನ್ನೇನೂ ವಿರೋಧಿಸಲಿಲ್ಲ. ಆದರೆ ಪುಸ್ತಕದ ಓದು ಕಲಿಸುವುದಕ್ಕಾಗಿಯೇ ಕೋಟಿಗಟ್ಟಲೆ ಹಣ ತಿನ್ನುವ ಪ್ರಾಥಮಿಕ ಶಿಕ್ಷಣ ಮಕ್ಕಳ ಮನಶ್ಶಕ್ತಿಯನ್ನು ಶೋಷಿಸದಿರಬೇಕೆಂದು ಅವರ ಆಶಯವಾಗಿತ್ತು. ತಕಲಿ ಮುಂತಾದ ಉಪಕರಣಗಳಿಂದ ಕೆಲಸ ಮಾಡುವುದು ಮಕ್ಕಳಿಗೊಂದು ಆಟದ ರೂಪದಲ್ಲಿದ್ದು ಅಂಥ ಶೋಷಣೆಯಿಂದ ಅವರನ್ನು ವಿಮುಕ್ತಿ ಮಾಡುವುದೆಂದು ಅವರು ಪ್ರತಿಪಾದಿಸುತ್ತಿದ್ದರು.

ಮೂಲಶಿಕ್ಷಣ ಕೇವಲ ಕಸಬೊಂದನ್ನು ಕಲಿಸುವ ಮಧ್ಯಯುಗಗಳ ಉಮೇದುವಾರಿ ತರಪೇತಿನಂತಿರಲಿಲ್ಲ; ಸಾಮಾನ್ಯ ಶಿಕ್ಷಣದ ಜೊತೆಗೆ ಕೈಗಾರಿಕೆಯೊಂದನ್ನು ಕಲಿಸುವ ಶಿಕ್ಷಣವೂ ಆಗಿರಲಿಲ್ಲ; ಅದು ನಿಜವಾಗಿ, ಯಾವುದಾದರೂ ಕೈಗಾರಿಕೆಯ ಮಾಧ್ಯಮದ ಮೂಲಕ ಇಡೀ ಶಿಕ್ಷಣವನ್ನು ದೊರಕಿಸಿ, ವೃತ್ತಿಶಿಕ್ಷಣದ ಮೂಲಕ ಮಕ್ಕಳ ವ್ಯಕ್ತಿತ್ವವನ್ನೇ ರೂಪಿಸುವ ಒಂದು ಯೋಜನೆ.

**ಉನ್ನತ ಶಿಕ್ಷಣದ ಬಗ್ಗೆ ಗಾಂಧೀಜಿಯ ದೃಷ್ಟಿ :** 20ನೆಯ ಶತಮಾನದ ಪೂರ್ವಾರ್ಧದಲ್ಲಿ ಭಾರತದಲ್ಲಿದ್ದ ವಿಶೇಷ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಿಂದಾಗಿ ಗಾಂಧೀಜಿ ಪ್ರಾಥಮಿಕ ಶಿಕ್ಷಣದ ಕಡೆಯೇ ಹೆಚ್ಚು ಗಮನ ಹರಿಸಿದ್ದರೂ ಶಿಕ್ಷಣದ ಇತರ ಹಂತಗಳ ಬಗ್ಗೆಯೂ ಚಿಂತನೆ ನಡೆಸಿದ್ದರು. ಪ್ರಾಥಮಿಕ ಪೂರ್ವದ ಮಕ್ಕಳ ಶಿಕ್ಷಣದ ಪ್ರಾಮುಖ್ಯವನ್ನೂ ಅಗತ್ಯವನ್ನೂ ಅವರು ಮನಗಂಡಿದ್ದರು. ರಾಷ್ಟ್ರದ ಮುನ್ನಡೆಗೆ ಉನ್ನತ ಶಿಕ್ಷಣದ ಅಗತ್ಯವನ್ನೂ ಅದರ ಪುನರ್ವ್ಯವಸ್ಥೆಯ ಅಗತ್ಯವನ್ನೂ ವ್ಯಕ್ತಪಡಿಸಿದ್ದಾರೆ. ಆದರೆ ಅಂದು ಪ್ರಾಥಮಿಕ ಶಿಕ್ಷಣ ಎಲ್ಲ ದೇಶಗಳಂತೆ ಭಾರತದಲ್ಲೂ ತೀರ ಅಗತ್ಯವೆನಿಸಿದ್ದುದರಿಂದ ಅವರು ತಮ್ಮ ಗಮನವನ್ನು ಮುಖ್ಯವಾಗಿ ಆ ಕಡೆ ವಿನಿಯೋಗಿಸಿದರು.

ಗಾಂಧೀಜಿಯ ದೃಷ್ಟಿಯಲ್ಲಿ ಮೂಲಶಿಕ್ಷಣ ದೃಷ್ಟಿಯನ್ನೇ ಉನ್ನತಶಿಕ್ಷಣಕ್ಕೂ ವಿಸ್ತರಿಸಬಹುದಾಗಿತ್ತು. ಹರಿಜನ ಪತ್ರಿಕೆಯಲ್ಲಿ ಆ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅದರ ರೂಪುರೇಖೆಯೂ ಮೂಲಶಿಕ್ಷಣಕ್ಕೆ ಆಧಾರವಾದ ಸ್ವಯಂ ಉದ್ಯೋಗ, ಸ್ವಾವಲಂಬನೆ, ಶ್ರಮಜೀವನ– ಇವುಗಳನ್ನೇ ಅವಲಂಬಿಸಿದ್ದು, ಪ್ರಾಥಮಿಕ ಶಿಕ್ಷಣದಂತೆ ಆ ಮೂಲಕ ಉನ್ನತ ಶಿಕ್ಷಣದಲ್ಲೂ ಕ್ರಾಂತಿಕಾರಕ ಬದಲಾವಣೆಗಳಾಗ ಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. 'ಅದು ರಾಷ್ಟ್ರೀಯ ಆವಶ್ಯಕತೆಗಳನ್ನು ಆಧಾರಮಾಡಿಕೊಂಡು ವ್ಯವಸ್ಥೆಗೊಳ್ಳಬೇಕು; ಯಂತ್ರ ಪರಿಣಿತರು, ತಾಂತ್ರಿಕ ತಜ್ಞರು, ವಿವಿಧ ವೃತ್ತಿನಿಪುಣರು – ಇತ್ಯಾದಿಯವರನ್ನು ಸಿದ್ಧಪಡಿಸಲು ವೃತ್ತಿಶಿಕ್ಷಣ ವ್ಯವಸ್ಥೆಯೂ ಇದ್ದೇ ಇರಬೇಕು' ಎಂದು ಅವರು ಭಾವಿಸಿದ್ದರು. ಆದರೆ ಔದ್ಯೋಗಿಕ ಶಿಕ್ಷಣ ಆಯಾ ಉದ್ಯೋಗಕ್ಕೆ ಹೊಂದಿಕೊಂಡಂತಿದ್ದು ಅಲ್ಲಿಗೆ ಅಗತ್ಯವಾಗುವ ಪದವೀಧರರ ಶಿಕ್ಷಣವನ್ನು ಆ ಉದ್ಯೋಗ ಕ್ಷೇತ್ರವೇ ನಿರ್ವಹಿಸಬೇಕೆಂದು ಅವರು ಪ್ರತಿಪಾದಿಸಿರುವರು. ಅದರ ಪ್ರಕಾರ ತಾತಾ ಔದ್ಯೋಗಿಕ ಸಂಸ್ಥೆಗಳಂಥವು ರಾಷ್ಟ್ರದ ಮೇಲ್ವಿಚಾರಣೆಯಲ್ಲಿ ಇಂಜಿನಿಯರಿಂಗ್ ಕಾಲೇಜೊಂದನ್ನು ನಡೆಸಬಹುದು. ಗಿರಣಿ ಕೆಲಸಗಾರರು ತಮ್ಮ ಉದ್ಯೋಗಗಳಿಗೆ ಬೇಕಾಗುವ ತಾಂತ್ರಿಕ ಪದವೀಧರರಿಗೆ ಶಿಕ್ಷಣವೀಯಲು ಕಾಲೇಜು ಗಳನ್ನು ನಡೆಸಬಹುದು; ವಾಣಿಜ್ಯಕ್ಷೇತ್ರ ವಾಣಿಜ್ಯಕಾಲೇಜುಗಳನ್ನೂ ನಡೆಸಬಹುದು; ವೈದ್ಯವೃತ್ತಿ ಧನಿಕರ ಆಸಕ್ತಿಯನ್ನು ಗಳಿಸಿರುವುದರಿಂದ ಖಾಸಗಿ ಅಂಗೀಕೃತ ಕಾಲೇಜುಗಳಲ್ಲಿ ಆ ಶಿಕ್ಷಣವನ್ನು ವ್ಯವಸ್ಥೆಗೊಳಿಸಬಹುದು. ಇವೆಲ್ಲ ಸರ್ಕಾರದ ಧನಸಹಾಯವಿಲ್ಲದಿದ್ದರೂ ಆರ್ಥಿಕವಾಗಿ ಸ್ವಾವಲಂಬಿಯಾಗಿ ಕೆಲಸಮಾಡಬಲ್ಲವು. ಎಷ್ಟೋ ಕಲಾಶಾಸ್ತ್ರ ಮತ್ತು ವಿಜ್ಞಾನಶಾಸ್ತ್ರದ ಖಾಸಗಿ ಕಾಲೇಜುಗಳೂ ಆ ರೀತಿಯಲ್ಲಿ ನಡೆಯಲು ಸಾಧ್ಯವೆಂಬುದು ಆಗಲೆ ವ್ಯಕ್ತವಾಗಿತ್ತು. ಹಾಗೆಯೇ ಕೃಷಿ ಕಾಲೇಜುಗಳೂ ಸ್ವಾವಲಂಬಿಯಾಗಿ ನಡೆಯಬೇಕೆಂದು ಅವರು ಭಾವಿಸಿದ್ದರು. ಕೃಷಿಕ್ಷೇತ್ರದಲ್ಲೇ ಅವರಿಗೆ ಶಿಕ್ಷಣವೀಯುವು ದಾದರೆ ಅದು ಸಾಧ್ಯವಾಗುವುದೆಂದೂ ಅಲ್ಲಿನ ವಿದ್ಯಾರ್ಥಿಗಳು ಪದವೀಧರರಾದ ಮೇಲೆ ವ್ಯವಸಾಯ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸುವರೆಂದೂ ಅವರು ಸೂಚಿಸಿರುವರು; ಹೀಗೆಯೇ ಇತರ ವೃತ್ತಿಶಿಕ್ಷಣಗಳೂ ಸ್ವಾವಲಂಬಿಯಾಗಿ ಕೆಲಸ ಮಾಡುವುದು ಸಾಧ್ಯವೆಂದು ತೋರಿಸಿರುವರು. ಈ ದೃಷ್ಟಿ ವೈಪರೀತ್ಯವನ್ನು ಮುಟ್ಟಿರುವಂತೆ ತೋರಿದರೂ ಸಾಧ್ಯವೆಂಬುದನ್ನು ಅವರು ಮನಗಂಡಿದ್ದರು. ಮೇಲಾಗಿ ಅವರ ಆಸಕ್ತಿ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಕಡೆಗೆ ಇದ್ದುದರಿಂದ ಉನ್ನತ ಶಿಕ್ಷಣವನ್ನೆಲ್ಲ ಖಾಸಗೀ ಸಂಸ್ಥೆಗಳೇ ನಡೆಸುವಂತಾದರೆ ಸರ್ಕಾರ ತನ್ನ ಪೂರ್ಣಗಮನವನ್ನು ಪ್ರಾಥಮಿಕ ಶಿಕ್ಷಣದ ಕಡೆಗೆ ಮೀಸಲಿಡಲು ಸಾಧ್ಯವಾಗುವುದೆಂದು ಅವರು ಆಲೋಚಿಸಿದರು.

**ಮೂಲ ಶಿಕ್ಷಣದ ಭವಿಷ್ಯ :** ಭಾರತ ಸರ್ಕಾರ ಮೂಲಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ರಾಷ್ಟ್ರೀಯ ಶಿಕ್ಷಣ ಪದ್ಧತಿಯೆಂದು ಅಂಗೀಕರಿಸಿ ಅದರ ಪ್ರಗತಿಗೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನೂ ಒದಗಿಸಿತು. ಅದರೊಡನೆ ಅಂಟಿಕೊಂಡಿದ್ದ 'ವಿದ್ಯಾರ್ಥಿ ದುಡಿಮೆಯಿಂದ ಅಧ್ಯಾಪಕರ ವೇತನವನ್ನು ದೊರಕಿಸಿಕೊಳ್ಳಬೇಕೆಂಬ' ಅಂಶವನ್ನು ಕೈಬಿಡಲಾಯಿತು. ಆದರೂ ಅದು ದೇಶಾದ್ಯಂತ ಆಚರಣೆಗೆ ಬರಲಿಲ್ಲ. ಜನತೆಗೆ ಇಂದು ಅದರಲ್ಲಿ ಆಸಕ್ತಿಯಿಲ್ಲವಾಗಿದೆ. ಅದು ಉತ್ತಮ ತತ್ತ್ವಗಳ ಬುನಾದಿಯ ಮೇಲೆ ರಚನೆಯಾಗಿರುವುದೆಂದು ದೇಶವಿದೇಶಗಳ ಪಂಡಿತರನೇಕರು ಒಪ್ಪಿದ್ದರೂ ಅದು ತನ್ನ ಜನ್ಮಭೂಮಿಯಲ್ಲೇ ಪ್ರಚಾರಕ್ಕೆ ಬರದಾದುದು ಆಶ್ಚರ್ಯದ ಸಂಗತಿ. ಆ ಪದ್ಧತಿಯ ಮೇಲೆ ಟೀಕೆಗಳೇನೋ ಹೇರಳವಾಗಿ ಬಂದುವು. ಅವುಗಳಲ್ಲಿ ವಾಸ್ತವಿಕವೆನ್ನಬಹುದಾದ ಕೆಲವನ್ನು ಇಲ್ಲಿ ಸೂಚಿಸಿದೆ.

1 ತೀರ ಚಿಕ್ಕ ವಯಸ್ಸಿನಲ್ಲಿ ಅವರ ಸ್ವಾಭಾವಿಕ ಆಸಕ್ತಿಗಳಿಗೆ ವಿರುದ್ಧವಾದ ವೃತ್ತಿಶಿಕ್ಷಣದ ವಾತಾವರಣವನ್ನು ಕಲ್ಪಿಸುತ್ತದಾಗಿ ಈ ಪದ್ಧತಿ ಮಕ್ಕಳಿಗೆ ಶಿಕ್ಷಣವೆಂದರೆ ಜಿಗುಪ್ಸೆ ಹುಟ್ಟಿಸುತ್ತದೆ. 2 ತಲೆಗೆಲ್ಲ ಒಂದೇ ಮಂತ್ರವೆಂದು ನೂಲುವುದನ್ನು ಎಲ್ಲರಿಗೂ ಕಲಿಸಹೋದರೆ ಯಾವ ಪುರುಷಾರ್ಥ ತಾನೆ ಸಾಧನೆಯಾದೀತು ? ಮುಂದಿನ ಜನಾಂಗವೆಲ್ಲ ಅದೇ ಕೈಗಾರಿಕೆಯನ್ನು ಅನುಸರಿಸಿದರೆ ಮುಂದೆ ಗತಿಯೇನು ? 3 ದಿನದ ಅರ್ಧಭಾಗದಲ್ಲಿ ತಮ್ಮ ಸ್ವಾಭಾವಿಕ ಆಸಕ್ತಿಗೆ ವಿರುದ್ಧವಾಗಿ ಇತರರು ಹೇರಿದ ಉದ್ಯೋಗದಲ್ಲಿ ತೊಡಗಿ ಆ ಸ್ವಾಭಾವಿಕ ಆಸಕ್ತಿಗಳ ಪ್ರಕಾಶನಕ್ಕೆ ಅಡಚಣೆಯಾಗಿ ಅವರ ವ್ಯಕ್ತಿತ್ವದಲ್ಲಿ ತೊಡಕುಗಳು ಮೂಡಿಕೊಳ್ಳುವುದಿಲ್ಲವೆ ? 4 ಕಸಬೇ ಪ್ರಧಾನವಾಗಿರುವ ಈ ಪದ್ಧತಿ ಮಗುವನ್ನೇ ಮರೆತಿರುವುದಲ್ಲದೆ ದೈಹಿಕ ಶಿಕ್ಷಣ, ನೈತಿಕ ಶಿಕ್ಷಣಗಳಿಗೆ ಅವಕಾಶ ಕಲ್ಪಿಸಿಲ್ಲ. 5 ಕಸಬಿಗೆ ಸಂಬಂಧಿಸಿದಂತೆ ವಿಷಯವನ್ನು ಬೋಧಿಸುವ ಯತ್ನದಲ್ಲಿ ಗೊಂದಲಕ್ಕೂ ಕೃತಕತೆಗೂ ಅವಕಾಶವಾಗಿ ಶಾಲೆಗೂ ಜೀವನಕ್ಕೂ ಅಂತರ ಹುಟ್ಟಿಕೊಳ್ಳುತ್ತದೆ. 6 ಪಠ್ಯಪುಸ್ತಕಗಳಿಗೆ ಪುರಸ್ಕಾರವೀಯದ ಈ ಶಿಕ್ಷಣ ಹೇಗೆ ತಾನೆ ಜನಪ್ರಿಯವಾದೀತು – ದೇವರಿಲ್ಲದ ಗುಡಿಯಂತೆ ? 7 ಮೇಲ್ಮಟ್ಟದ ಶಿಕ್ಷಣಕ್ಕೆ ಈ ಪದ್ಧತಿಯ ಅನ್ವಯ ಯೋಗ್ಯವಲ್ಲ.

ಈಚೆಗೆ ಈ ದಿಕ್ಕಿನಲ್ಲಿ ಮೂಲಶಿಕ್ಷಣವನ್ನು ಸುಧಾರಿಸುವ ಯತ್ನ ನಡೆದಿದೆ. ಆದರೂ ಮೂಲಶಿಕ್ಷಣಕ್ಕೆ ಸ್ವಾತಂತ್ರ್ಯದ ಆರಂಭದಲ್ಲಿ ಲಭಿಸಿದ್ದ ಜನಪ್ರಿಯತೆ ಈಗ ಇಲ್ಲವಾಗಿದೆ. ಅದನ್ನು ಆ ರೂಪದಲ್ಲಿ ದೇಶಾದ್ಯಂತ ಪ್ರಚಾರಕ್ಕೆ ತರುವ ಯತ್ನವೂ ಹಿಂಬದಿಗೆ ಬಿದ್ದಂತೆ ಕಾಣುತ್ತದೆ. ಹೊಸದಾಗಿ ಪ್ರಚಾರಕ್ಕೆ ಬಂದ ಎಲ್ಲ ಶಿಕ್ಷಣಪದ್ಧತಿಗಳಿಗೂ ಇದೇ ಪಾಡು ಒದಗಿದೆ. ಅವು ಮೊದಲು ಪರಮೋತ್ಕೃಷ್ಟವೆಂದು ಹೊಗಳಿಸಿಕೊಳ್ಳುತ್ತವೆ; ಅನಂತರ ಅವುಗಳ ಕುಂದುಕೊರತೆಗಳನ್ನು ಕಂಡು ಜನತೆ ಅವನ್ನು ಕಟುವಾಗಿ ಟೀಕಿಸುತ್ತದೆ. ಆಮೇಲೆ ಅದರಲ್ಲಿರುವ ಉತ್ತಮಾಂಶಗಳನ್ನು ಮಾತ್ರ ಇಂದಿನ ಪದ್ಧತಿಯಲ್ಲಿ ಅಳವಡಿಸಿಕೊಳ್ಳಲು ಯತ್ನಿಸುತ್ತದೆ. ಮೂಲಶಿಕ್ಷಣದ ಬಗ್ಗೆಯೂ ಈ ಮಾತು ಒಪ್ಪುತ್ತದೆ. ಈಗ ಅದು ತನ್ನ ಆ ಮೂರನೆಯ ಅಂತಸ್ತನ್ನು ಮುಟ್ಟಿದೆ. ಅದರಲ್ಲಿರುವ ಉತ್ತಮಾಂಶಗಳು ನಮ್ಮ ಪ್ರಾಥಮಿಕ ಶಿಕ್ಷಣಕ್ಷೇತ್ರವನ್ನು ಈಗಾಗಲೇ ಪರಿಣಾಮಗೊಳಿಸಿವೆ. ಕಸಬು, ಕಲೆ, ಕೈಕೆಲಸ ಮುಂತಾದ ಕಾಯಕಾನುಭವಗಳನ್ನೊದಗಿಸುವ ಚಟುವಟಿಕೆಗಳು ಅಲ್ಲಿನ ಪಠ್ಯಕ್ರಮದಲ್ಲಿ ಹೊಸದಾಗಿ ಸೇರಿಕೊಂಡಿವೆ. ಜೀವನಕ್ಕೆ ಹೊಂದಿಸಿಕೊಂಡು ವಿಷಯಗಳನ್ನು ಸಮೀಕರಿಸಿಕೊಂಡು ಪಾಠ ಬೋಧಿಸುವ ನೂತನ ಬೋಧನಕ್ರಮ ಬಳಕೆಗೆ ಬರುತ್ತಿದೆ. ತಮ್ಮ ಶಾಲೆಯನ್ನು ತಾವೇ ಚೊಕ್ಕಟವಾಗಿಟ್ಟುಕೊಳ್ಳುವ ಸ್ವಾವಲಂಬನೆಯ ದೃಷ್ಟಿ ಆಚರಣೆಗೆ ಬರುತ್ತಿದೆ. ಕೈಕೆಲಸಗಳ ಮೂಲಕ ಮಕ್ಕಳ ಕ್ರಿಯಾತ್ಮಕ ಶಕ್ತಿಗೆ ಪೋಷಣೆ ದೊರೆಯುವುದರ ಜೊತೆಗೆ ಅವರ ಮನಸ್ಸಿನಲ್ಲಿ ಶ್ರಮಜೀವನದ ಬಗ್ಗೆ ಗೌರವ ಬೆಳೆಯಲು ಅವಕಾಶವಾಗಿದೆ. ಶಾಲೆಯೊಡನೆ ಸುತ್ತಣ ಸಮಾಜದ ಜೀವನವನ್ನು ಹೊಂದಿಸಿಕೊಂಡು ಕೆಲಸಮಾಡುತ್ತ ಶಾಲೆ, ಸಮಾಜದ ಕ್ಷೇಮಚಿಂತನೆಗೂ ಅಭಿವೃದ್ಧಿಸಾಧನೆಗೂ ಕೆಲಸ ಮಾಡಬೇಕಾದ ಸಂಸ್ಥೆಯಾಗಿ ರೂಪುಗೊಳ್ಳುತ್ತಿದೆ. ಇಷ್ಟೆಲ್ಲ ಮೂಲಶಿಕ್ಷಣ ಪ್ರಾಥಮಿಕ ಶಿಕ್ಷಣದ ಮೇಲೆ ಇತ್ತೀಚಿನ ದಿನಗಳಲ್ಲಿ ಬೀರಿರುವ ಪ್ರಭಾವವೆನ್ನಬಹುದು. ಆದರೂ ಅದು ತನ್ನ ಶುದ್ಧರೂಪದಲ್ಲಿ ದೇಶಾದ್ಯಂತ ಆಚರಣೆಗೆ ಬರಲೇಬೇಕೆಂದು ವಾದಿಸತಕ್ಕವರು ಇಂದಿಗೂ ಉಳಿದುಕೊಂಡೇ ಇರುವರು. (ಎನ್.ಎಸ್.ವಿ.)

**ಗಾಂಧೀ ದೃಷ್ಟಿಯಲ್ಲಿ ಸ್ವರಾಜ್ಯ:** ಭಾರತದ ಸ್ವಾತಂತ್ರ್ಯಕ್ಕಾಗಿ ಅಪ್ರತಿಮವಾಗಿ ಹೋರಾಟ ನಡೆಸಿದ ಗಾಂಧೀಜಿಯವರು ಕೇವಲ ರಾಜಕೀಯ ಸ್ವಾತಂತ್ರ್ಯದ ಗುರಿ ಇಟ್ಟುಕೊಂಡಿರಲಿಲ್ಲ. ಪೂರ್ಣ ಸ್ವರಾಜ್ಯದ ಸ್ಥಾಪನೆಗೆ ರಾಜಕೀಯ ಸ್ವಾತಂತ್ರ್ಯ ಮೊದಲ ಮೆಟ್ಟಲೆಂದು ಮಾತ್ರ ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ಸ್ವರಾಜ್ಯವೆಂದರೆ ಪರಿಪೂರ್ಣವಾದ ಪ್ರಜಾರಾಜ್ಯ. ಈ ವ್ಯವಸ್ಥೆಯಲ್ಲಿ ಸಾರ್ವಭೌಮಾಧಿಕಾರವಿರುವುದು ಪ್ರಜೆಗಳಲ್ಲೇ ಹೊರತು ಪ್ರಭುತ್ವದಲ್ಲಿ ಅಲ್ಲ. ಪ್ರಜೆಗಳ ಸಾರ್ವಭೌಮತ್ವಕ್ಕೆ ಬುನಾದಿ ನೈತಿಕ ಅಧಿಕಾರ; ದಂಡಿನ ಬಲವಲ್ಲ. ಸತ್ಯ, ಅಹಿಂಸೆ, ಸ್ವಾತಂತ್ರ್ಯ, ಸಮಾನತೆ – ಈ ಮೌಲ್ಯಗಳ ಸಾಕ್ಷಾತ್ಕಾರವೇ ಪ್ರಜೆಗಳ ಗುರಿ. ಈ ಮೌಲ್ಯಗಳು ಹೆಚ್ಚುಹೆಚ್ಚಾಗಿ ಅನುಷ್ಠಾನಕ್ಕೆ ಬಂದಂತೆ ವ್ಯಕ್ತಿಗಳ ವಿಕಾಸದ ಹಾಗೂ ಸಮಾಜದ ಮೇಲ್ಮೆಯ ಸಾಧನೆಯಾಗುತ್ತ ಹೋಗುತ್ತದೆ. ಅಂಥ ಪ್ರಜಾರಾಜ್ಯ ಶೋಷಣರಹಿತ ವರ್ಗರಹಿತ ರಾಜ್ಯವಾಗಿರುತ್ತದೆ. ಪೂರ್ಣ ಸ್ವರಾಜ್ಯ ಏರ್ಪಟ್ಟಾಗ ಯಾವುದೇ ರೀತಿಯ ಸರ್ಕಾರಿ ಅಂಕುಶವಿರುವುದಿಲ್ಲ. ಈ ವ್ಯವಸ್ಥೆಯಲ್ಲಿ ಜನತೆಗೆ ಪೂರ್ಣವಾಗಿ ಸಾಮಾಜಿಕ ನ್ಯಾಯ, ಆರ್ಥಿಕ ನೆಮ್ಮದಿ ಹಾಗೂ ವ್ಯಕ್ತಿಸ್ವಾತಂತ್ರ್ಯ ಇರುತ್ತವೆ. ಇಂಥ ಪ್ರಜಾರಾಜ್ಯವನ್ನು ಗಾಂಧಿಯವರು ರಾಮರಾಜ್ಯವೆಂದು ಕರೆದರು; ಪ್ರಬುದ್ಧ ಅರಾಜಕತೆ (ಎನ್‌ಲೈಟನ್ಡ್ ಆನಾರ್ಕಿ) ಎಂದರು.

ಸರ್ಕಾರವೇ ಇಲ್ಲದ ರಾಜ್ಯ ಆದರ್ಶವಾದರೂ ಸದ್ಯಕ್ಕೆ ಅದು ಎಟುಕದ ಆದರ್ಶ. ಆದ್ದರಿಂದ ಯಾವುದು ಅತ್ಯಂತ ಮಿತವಾದ ಪ್ರಭುತ್ವವೋ ಅದೇ ಉತ್ಕೃಷ್ಟ ಪ್ರಭುತ್ವ ಎಂಬ ಥಾರೋವಿನ ವಿಚಾರವನ್ನು ಗಾಂಧಿಯವರು ಒಪ್ಪಿಕೊಂಡರು.

ಸ್ವತಂತ್ರ ಭಾರತ ಬ್ರಿಟನಿನ ಸಂಸದೀಯಪ್ರಭುತ್ವ ಪದ್ಧತಿಯನ್ನಾಗಲಿ ಸೋವಿಯೆತ್ ಪದ್ಧತಿಯನ್ನಾಗಲಿ ಫ್ಯಾಸಿಸ್ಟ್ ಪದ್ಧತಿಯನ್ನಾಗಲಿ ಅನುಕರಿಸಬಾರದು. ಅವುಗಳಲ್ಲಿ ಯಾವುದೂ ಭಾರತೀಯ ಜನಜೀವನ ಅಥವಾ ಸಂಸ್ಕೃತಿಗೆ ಹೊಂದಿಕೊಳ್ಳುವಂಥದಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೂಢವಾಗಿರುವ ಪ್ರಭುತ್ವಗಳೆಲ್ಲವೂ ಸಾಮ್ರಾಜ್ಯವಾದ, ಹಿಂಸೆ, ಶೋಷಣೆ ಇವುಗಳ ಮೇಲೆ ನಿಂತಿರುವಂಥವು. ಆದ್ದರಿಂದ ಅವು ಭಾರತಕ್ಕೆ ವರ್ಜ್ಯವೆಂಬುದು ಗಾಂಧಿಯವರ ಮತ.

ಭಾರತದಲ್ಲಿ ಕೇವಲ ಕೆಲವು ಜನತಾಪ್ರತಿನಿಧಿಗಳು ಅಧಿಕಾರಸೂತ್ರ ವಹಿಸಿಕೊಂಡರೆ ನಿಜವಾದ ಸ್ವರಾಜ್ಯವಾಗಲಾರದು. ಸರ್ಕಾರ ತಪ್ಪು ಮಾಡಿದಾಗ ಅದನ್ನು ತಡೆಗಟ್ಟುವ ಸಾಮರ್ಥ್ಯ ಪ್ರತಿಯೊಬ್ಬ ಪ್ರಜೆಗೂ ಬಂದಾಗಲೇ ನಿಜವಾದ ಸ್ವರಾಜ್ಯಪ್ರಾಪ್ತಿ ಎಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು. ರಾಜಕೀಯ ಅಧಿಕಾರದ ಕೇಂದ್ರೀಕರಣವಾದಷ್ಟೂ ಪ್ರಭುತ್ವ ಜನಸಾಮಾನ್ಯರ ಹಿಡಿತದಿಂದ ದೂರ ಸರಿಯುತ್ತದೆ. ಹಿಂಸೆಯನ್ನು ಆಧರಿಸಿದ ಸರ್ಕಾರ ದೊಡ್ಡ ಶೋಷಕಶಕ್ತಿಯಾಗುವುದಲ್ಲದೆ ವ್ಯಕ್ತಿಸ್ವಾತಂತ್ರ್ಯಕ್ಕೆ ಕಂಟಕವಾಗುತ್ತದೆ. ಅಂಥ ಕೇಂದ್ರೀಕೃತ ರಾಜಕೀಯ ವ್ಯವಸ್ಥೆ ಜನರ ಹೆಸರಿನಲ್ಲಿ ನಡೆದರೂ ಅದು ಹೆಸರಿಗೆ ಮಾತ್ರ ಪ್ರಜಾಪ್ರಭುತ್ವವಾಗಿರುತ್ತದೆ. ಪ್ರಜೆಗಳು ತಮ್ಮ ಆಗುಹೋಗುಗಳನ್ನು

ನಿರ್ಧರಿಸುವುದರಲ್ಲಿ ಸಕ್ರಿಯಾಪಾತ್ರವಹಿಸಲಾಗುವುದಿಲ್ಲ. ಬದಲಾಗಿ ಪ್ರತಿಯೊಂದು ಕೆಲಸಕ್ಕೂ ಸರ್ಕಾರವನ್ನೇ ಎದುರು ನೋಡುವ ಅಸಹಾಯಕ ಪರಿಸ್ಥಿತಿಯಲ್ಲಿರುತ್ತಾರೆ. ಇದು ತಪ್ಪಬೇಕಾದರೆ ರಾಜಕೀಯ ಅಧಿಕಾರದ ವಿಕೇಂದ್ರೀಕರಣವಾಗಬೇಕು. ಭಾರತದಲ್ಲಿ ರಾಜ್ಯಶಕ್ತಿಯ ವಿಕೇಂದ್ರೀಕರಣಕ್ಕೆ ಸಹಾಯಕವಾಗುವ ಗ್ರಾಮ ಘಟಕಗಳಿವೆ. ಗಾಂಧಿಯವರ ದೃಷ್ಟಿಯಲ್ಲಿ ಪ್ರತಿ ಗ್ರಾಮವೂ ಸ್ವಾಯತ್ತತೆಯ ಘಟಕವಾಗಬೇಕು. ಅವರು ದೇಶದ ಮುಂದಿಟ್ಟ ಗ್ರಾಮಸ್ವರಾಜ್ಯದ ಚಿತ್ರವಿದು.

ನನ್ನ ಕಲ್ಪನೆಯ ಗ್ರಾಮಸ್ವರಾಜ್ಯವೆಂದರೆ ಅದೊಂದು ಪರಿಪೂರ್ಣಗಣರಾಜ್ಯ. ತನ್ನ ಪ್ರಧಾನ ಅಗತ್ಯಗಳಲ್ಲಿ ಅದು ನೆರೆಹೊರೆಯವರಿಂದ ಸ್ವತಂತ್ರ. ಆದರೂ ಅಗತ್ಯವಾದಲ್ಲಿ, ಎಷ್ಟೋ ವಿಷಯಗಳಲ್ಲಿ ಗ್ರಾಮಗಳು ಪರಸ್ಪರಾವಲಂಬಿಯಾಗಿರುತ್ತವೆ. ಹೀಗೆ ತನ್ನ ಆಹಾರ ಬೆಳೆಯುವುದು, ಬಟ್ಟೆಗಾಗಿ ಹತ್ತಿ ಬೆಳೆಯುವುದು, ಪ್ರತಿ ಹಳ್ಳಿಯ ಮೊದಲ ಗಮನ. ದನಕರುಗಳಿಗಾಗಿ ಕಾವಲು, ಮಕ್ಕಳಿಗಾಗಿಯೂ ಪ್ರೌಢರಿಗಾಗಿಯೂ ಆಟಕ್ಕೂ ಮನೋರಂಜನೆಗೂ ಸ್ಥಳ ಇರಬೇಕು. ಇದಕ್ಕೆಲ್ಲ ಆಗಿ ಭೂಮಿ ಮಿಕ್ಕರೆ ಅದರಲ್ಲಿ ಗಾಂಜಾ, ತಂಬಾಕು, ಅಫೀಮುಗಳ ಹೊರತಾಗಿ ಉಪಯೋಗಕರ ಹಣದ ಬೆಳೆಗಳನ್ನು ಬೆಳೆಯಬಹುದು. ಹಳ್ಳಿಹಳ್ಳಿಯಲ್ಲೂ ನಾಟಕಮಂದಿರ, ಶಾಲೆ, ಸಭಾಭವನ ಇದ್ದಾವು; ಶುದ್ಧವಾದ ನೀರಿನ ಪೂರೈಕೆಯ ಕೇಂದ್ರ ಇದ್ದೀತು. ಮೂಲಶಿಕ್ಷಣದ ಅವಧಿಯ ಪೂರ್ಣ ಶಿಕ್ಷಣ ಕಡ್ಡಾಯವಿದ್ದೀತು. ಸಾಧ್ಯವಿದ್ದಷ್ಟು ಮಟ್ಟಿಗೂ ಪ್ರತಿಯೊಂದು ಕೆಲಸವನ್ನು ಸಹಕಾರತತ್ತ್ವದ ಆಧಾರದ ಮೇಲೆ ಕೈಗೊಳ್ಳಲಾದೀತು. ಘಟ್ಟಘಟ್ಟಗಳ ಅಸ್ಪೃಶ್ಯತೆಯುಳ್ಳ ಇಂದಿನಂಥ ಜಾತಿಗಳಿರುವುದಿಲ್ಲ. ಸತ್ಯಾಗ್ರಹ ಹಾಗೂ ಅಸಹಕಾರ ತಂತ್ರವುಳ್ಳ ಅಹಿಂಸೆಯೇ ಗ್ರಾಮಸಮಾಜದ ಆಧಾರಶಕ್ತಿ. ಹಳ್ಳಿಯಲ್ಲಿ ಇಡಲಾದ ಒಂದು ಖಾತೆಯಿಂದ ಸರದಿ ಪ್ರಕಾರ ಆರಿಸಲಾಗುವ, ಎಲ್ಲರಿಗೂ ಅನಿವಾರ್ಯವಾದ, ಗ್ರಾಮರಕ್ಷಕ ಪಡೆ ಇದ್ದೀತು. ಹಳ್ಳಿಯಲ್ಲಿ ಯೋಗ್ಯಕನಿಷ್ಠ ಅರ್ಹತೆಗಳುಳ್ಳ ಎಲ್ಲ ಪ್ರೌಢ ಸ್ತ್ರೀಪುರುಷರೂ ವರ್ಷಕ್ಕೊಮ್ಮೆ ಚುನಾಯಿಸುವ ಐವರ ಪಂಚಾಯಿತಿ ಹಳ್ಳಿಯ ಆಡಳಿತವನ್ನು ನಡೆಸಿಕೊಂಡು ಹೋಗುವುದು. ಆಡಳಿತಕ್ಕೆ ಬೇಕಾದ ಅಧಿಕಾರ, ವ್ಯಾಪ್ತಿ ಎರಡೂ ಈ ಮಂಡಳಿಗೆ ಇರುವುವು. ಪ್ರಚಲಿತ ಅರ್ಥದ ಶಿಕ್ಷೆಯ ಪದ್ಧತಿ ಇರುವುದಿಲ್ಲವಾದ್ದರಿಂದ ಪಂಚಾಯಿತಿಯೇ ಶಾಸಕಾಂಗ ನ್ಯಾಯಾಂಗ ಕಾರ್ಯಾಂಗಗಳಾಗಿ ತನ್ನ ಒಂದು ವರ್ಷದ ಅಧಿಕಾರಾವಧಿಯಲ್ಲಿ ಕೆಲಸ ಮಾಡೀತು. ಇಲ್ಲಿ ವ್ಯಕ್ತಿಸ್ವಾತಂತ್ರ್ಯದ ಆಧಾರದ ಮೇಲೆ ಪರಿಪೂರ್ಣ ಜನತಂತ್ರವಿದೆ. (ಆಧಾರ : ಹರಿಜನ, ಜುಲೈ 26, 1942)

ಗ್ರಾಮ ಗಣರಾಜ್ಯಗಳ ಮಹಾ ಒಕ್ಕೂಟವೇ ಭಾರತರಾಷ್ಟ್ರ. ಅಸಂಖ್ಯ ಹಳ್ಳಿಗಳುಳ್ಳ ಈ ರಚನೆಯಲ್ಲಿ ಸದಾ ವ್ಯಾಪಕವೃತ್ತಗಳಿರುತ್ತವೆ; ಆರೋಹಣ ವೃತ್ತಗಳಿರುವುದಿಲ್ಲ. ಬದುಕು ಪಿರಮಿಡಿನಂತಿರುವುದಿಲ್ಲ. ಅದು ಸಾಗರ ಸಮವೃತ್ತದಂತೆ. ಅದರ ಕೇಂದ್ರಬಿಂದು ವ್ಯಕ್ತಿ. ಆತ ತನ್ನ ಹಳ್ಳಿಗಾಗಿ ಅಳಿಯಲೂ ಸಿದ್ಧ. ಗ್ರಾಮಗಳ ಸಮೂಹಕ್ಕಾಗಿ ನಾಶವಾಗಲು ಹಳ್ಳಿ ಸಿದ್ಧ. ಕೊನೆಗೆ ಇಡೀ ಜೀವನ ಒಂದು ಪೂರ್ಣತೆಯಾಗುತ್ತದೆ. ಅದರಲ್ಲಿರುವ ವ್ಯಕ್ತಿಗಳು ಎಂದೂ ಅಹಂಕಾರದಿಂದ ಆಕ್ರಮಣಕಾರಿಗಳಾಗುವುದಿಲ್ಲ. ಅವರು ಸದಾ ವಿನಿಮ್ರರು. ಸಾಗರ ಸಮವೃತ್ತದ ಗಾಂಭೀರ್ಯದಲ್ಲಿ ಪಾಲುಗೊಂಡವರು.

ಆದ್ದರಿಂದ ಹೊರಗಿನ ವೃತ್ತ ಒಳಗಿನ ವೃತ್ತವನ್ನು ತುಳಿಯಲು ತನ್ನ ಅಧಿಕಾರವನ್ನು ಉಪಯೋಗಿಸುವುದಿಲ್ಲ. ಅದರ ಬದಲಾಗಿ ತಾನೂ ಅದಕ್ಕೆ ಶಕ್ತಿ ನೀಡುತ್ತದೆ. ಅದರಿಂದ ತಾನೂ ಶಕ್ತಿ ಪಡೆಯುತ್ತದೆ. ಇದೆಲ್ಲ ಅಸಾಧ್ಯವಾದ ಆದರ್ಶ ಎಂದು ನೀವು ನನ್ನನ್ನು ಮೂದಲಿಸಬಹುದು. ಮನುಷ್ಯಮಾತ್ರರು ಗುರುತಿಸಲಾದ ಯೂಕ್ಲಿಡನ ಬಿಂದುವಿಗೇ ಅಳಿಯದ ಬೆಲೆ ಇರುವುದಾದರೆ ಮಾನವಕುಲ ಉಳಿಯುವಂಥ ನನ್ನ ಚಿತ್ರಕ್ಕೂ ತನ್ನದೇ ಆದ ಮೌಲ್ಯವುಂಟು. ಚಿತ್ರವನ್ನು ಪರಿಪೂರ್ಣವಾಗಿ ಎಂದೂ ಸಾಧಿಸಲಾಗದಿದ್ದರೂ ಭಾರತ ಈ ನೈಜ ಚಿತ್ರಕ್ಕಾಗಿ ಬದುಕಲಿ, ನಮಗೆ ಬೇಕಾದುದರ ಯೋಗ್ಯ ಚಿತ್ರವಿಲ್ಲದೆ ನಾವು ಅದರತ್ತ ಧಾವಿಸುವುದು ಸಾಧ್ಯವಿಲ್ಲ. ಭಾರತದ ಪ್ರತಿಯೊಂದು ಹಳ್ಳಿಯಲ್ಲೂ ಎಂದಾದರೊಂದು ದಿನ ಪ್ರಜಾರಾಜ್ಯವಾಗಬೇಕಾಗಿದ್ದರೆ ನನ್ನ ಈ ಚಿತ್ರವೇ ಸರಿ ಎನ್ನುತ್ತೇನೆ. ಇದರಲ್ಲಿ ಕೊನೆಯದೂ ಮೊದಲಿನದೂ ಪರಸ್ಪರ ಸಮಾನ; ಅರ್ಥಾತ್ ಪ್ರಥಮ ಅಂತಿಮ ಯಾವುದೂ ಇದರಲ್ಲಿಲ್ಲ. (ಆಧಾರ: ಹರಿಜನ ಜುಲೈ 22,1946).

ಪ್ರಜಾಪ್ರಭುತ್ವದ ಯಶಸ್ಸು ವಿಕೇಂದ್ರೀಕರಣವನ್ನು ಅವಲಂಬಿಸಿದೆ ಎಂಬುದು ಗಾಂಧಿಯವರ ಸ್ಪಷ್ಟ ಅಭಿಮತ, ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಮಾತ್ರ ಅಹಿಂಸೆಯ ಆಚರಣೆ ಸಾಧ್ಯ. ಅಹಿಂಸೆ ಆಧಾರವಾಗಿರದ ಪ್ರಜಾತಂತ್ರ ನಿಜವಾದ ಪ್ರಜಾಪ್ರಭುತ್ವ ವಾಗುವುದೇ ಇಲ್ಲ.

ರಾಜಕೀಯ ಅಧಿಕಾರದ ಜೊತೆಯಲ್ಲಿ ಆರ್ಥಿಕಶಕ್ತಿಯ ವಿಕೇಂದ್ರೀಕರಣವೂ ಆಗಬೇಕು. ವಿಕೇಂದ್ರೀಕೃತ ಅರ್ಥವ್ಯವಸ್ಥೆ ಎಂದರೆ ಮನುಷ್ಯನ ಶ್ರಮಶಕ್ತಿ ಆಧಾರವಾಗಿರುವ ಸಣ್ಣ ಉದ್ಯಮಗಳ ವ್ಯವಸ್ಥೆ. ಜನತೆಗೆ ಉಪಯುಕ್ತವಾದ ಎಲ್ಲ ಅಗತ್ಯ ಬಳಕೆಯ ವಸ್ತುಗಳ ಉತ್ಪಾದನೆ ಕುಟೀರಗಳಲ್ಲಿ ಅಥವಾ ಸಣ್ಣ ಸಣ್ಣ ಘಟಕಗಳಲ್ಲಿ ಆಗುತ್ತದೆ. ಭಾರತದಂಥ ಜನಬಾಹುಳ್ಯವಿರುವ ದೇಶದಲ್ಲಿ ಕೋಟಿ ಕೋಟಿ ಕೈಗಳೂ ಲಕ್ಷೋಪಲಕ್ಷ ಕುಟೀರಗಳಲ್ಲಿ ಉತ್ಪಾದಿಸಿದ ವಸ್ತುಗಳ ಒಟ್ಟು ಗಾತ್ರ ಅಗಾಧವಾದ ಜನರ ಆವಶ್ಯಕತೆಗಳನ್ನು ಪೂರೈಸುತ್ತದೆ. ಶ್ರಮಶಕ್ತಿಗೆ ಪೂರಕವಾಗಿ ಸಣ್ಣ ಯಂತ್ರಗಳಿಗೆ ಅವಕಾಶವಿರುತ್ತದೆ. ಇಂಥ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳಿಂದ ಶೋಷಣೆ ಅಥವಾ ಲಾಭಬಡುಕತನ ಇರುವುದಿಲ್ಲ. ಉತ್ಪಾದನೆ ವಿತರಣೆಗಳು ಒಟ್ಟಿಗೆ ಆಗಿ ಪರಮಾವಧಿ ಉದ್ಯೋಗ ಪ್ರಾಪ್ತಿ ಹಾಗೂ ನ್ಯಾಯೋಚಿತ ವಿತರಣೆ ಆಗುತ್ತದೆ.

ಅನಿವಾರ್ಯವಾಗಿ ಹಲವು ಬೃಹತ್ ಕೈಗಾರಿಕೆಗಳು ಇರಬೇಕಾದ ಸಂದರ್ಭದಲ್ಲಿ ಅದರ ಮಾಲೀಕತ್ವದಲ್ಲಿ ಕಾರ್ಮಿಕರ ಸಹಭಾಗಿತ್ವ ಇರಬೇಕು. ಮಾಲೀಕರು ಉದ್ಯಮದ ಧರ್ಮದರ್ಶಿಗಳಾಗಿ ವರ್ತಿಸಿ ಕಾರ್ಮಿಕವರ್ಗಕ್ಕೆ ಸಮಪಾಲು ನೀಡಬೇಕು. ಮಾಲೀಕ ವರ್ಗ ಹಾಗೇ ನಡೆದುಕೊಳ್ಳದಿದ್ದ ಪಕ್ಷದಲ್ಲಿ ಅಂಥ ಭಾರೀ ಉದ್ಯಮಗಳು ಸರ್ಕಾರದ ಒಡೆತನಕ್ಕೆ ಒಳಪಡುತ್ತವೆ. ಸರ್ಕಾರದ ಅಧೀನದಲ್ಲಿದ್ದರೂ ಅದರ ಆಡಳಿತ ನೌಕರಶಾಹಿಯ ಮುಷ್ಟಿಯಲ್ಲಿರದೆ ಕಾರ್ಮಿಕರ ಪ್ರಾತಿನಿಧ್ಯವುಳ್ಳ ದಕ್ಷ ಆಡಳಿತ ಮಂಡಲಿಯಲ್ಲಿರತಕ್ಕದ್ದು.

ಗಾಂಧಿಯವರ ಕಲ್ಪನೆಯ ಸಮಾಜ ಜಾತಿರಹಿತ ಹಗೂ ವರ್ಗರಹಿತ ಸಮಾಜ. ಎಲ್ಲ ಜನರ ಸರ್ವಾಂಗೀಣ ವಿಕಾಸಕ್ಕೆ ಇದರಲ್ಲಿ ಆದ್ಯ ಗಮನ. ಸ್ತ್ರೀಪುರುಷರು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಸಹಭಾಗಿಗಳು.

ಸ್ವರಾಜ್ಯದ ರಾಜಕಾರಣ ಸೇವಾಪರವಾದ ರಾಜಕಾರಣ. ನೀತಿಬಾಹಿರವಾದ ರಾಜಕಾರಣ ಪಾಶವೀ ರಾಜಕೀಯವಾದ್ದರಿಂದ ಅದು ಸಮಾಜಘಾತಕ. ಸಾಧನ, ಗುರಿ ಇವೆರಡೂ ಪವಿತ್ರವಾಗಿದ್ದಲ್ಲಿ ರಾಜಕಾರಣ ಪರಿಶುದ್ಧವಾಗಿರುತ್ತದೆ. ಜನತೆಯಿಂದ ಚುನಾಯಿತರಾದ ಪ್ರತಿನಿಧಿಗಳು ಪ್ರಾಮಾಣಿಕವಾಗಿ ಸೇವಾತತ್ಪರರಾಗಿದ್ದರೆ ಅವರು ನಡೆಸುವ ಸರ್ಕಾರ ಸೇವಾಸಾಧನವಾಗುತ್ತದೆ. ವಿವಿಧ ಘಟ್ಟಗಳಲ್ಲಿ ಜನರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವ್ಯಷ್ಟಿ ಹಾಗೂ ಸಮಷ್ಟಿ ಹಿತಕ್ಕಾಗಿ ಸಕ್ರಿಯವಾಗಿ ಕೆಲಸ ಮಾಡುವುದರಿಂದ ಸಮಾಜದ ಅಭ್ಯುದಯ ಉಂಟಾಗುತ್ತದೆ. ಅಂಥ ಸಮಾಜ ಸರ್ವರ ಯೋಗಕ್ಷೇಮ ಸಾಧಿಸುವ ಸರ್ವೋದಯ ಸಮಾಜವಾಗುತ್ತದೆ. ಅದು ಸ್ವರಾಜ್ಯವು ಸುರಾಜ್ಯವೂ ಆಗಿರುತ್ತದೆ.

ಗಾಂಧಿಯವರ ಸ್ವರಾಜ್ಯದ ಕಲ್ಪನೆ ಕೇವಲ ಭಾರತಕ್ಕೆ ಸೀಮಿತವಾಗಿರದೆ ಇಡೀ ಮಾನವಜನಾಂಗಕ್ಕೆ ಅನ್ವಯಿಸುತ್ತದೆ. ದೊಡ್ಡವು, ಚಿಕ್ಕವು ಎಂಬ ಭೇದವಿಲ್ಲದೆ ಎಲ್ಲ ರಾಜ್ಯಗಳೂ ಸರಿಸಮಾನವಾದವು. ಎಲ್ಲ ದೇಶಗಳಲ್ಲೂ ರಾಜ್ಯವ್ಯವಸ್ಥೆ ಸತ್ಯ, ಅಹಿಂಸೆ, ವಿಕೇಂದ್ರೀಕರಣ ಇವುಗಳ ಆಧಾರದ ಮೇಲೆ ರಚಿತವಾದರೆ ವಿಶ್ವಶಾಂತಿ ಶಾಶ್ವತ ವಾಗಿರುತ್ತದೆ. ಮಾನವ ಸ್ವಾತಂತ್ರ್ಯದ ದಿಗಂತ ವಿಸ್ತಾರವಾಗುತ್ತದೆ. (ಬಿ.ಆರ್.ಪಿ.)

ಗಾಂಧೀ ದೃಷ್ಟಿಯಲ್ಲಿ ಸತ್ಯಾಗ್ರಹ: ಮಹಾತ್ಮ ಗಾಂಧಿಯವರು ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ವಿಮೋಚನೆಗೊಳಿಸಿದ ರಾಷ್ಟ್ರನಾಯಕರು. 19ನೆಯ ಶತಮಾನದ ಯುರೋಪಿನ ಕೈಗಾರಿಕಾ ಕ್ರಾಂತಿ ಹಾಗೂ ಸಾಮ್ರಾಜ್ಯಶಾಹಿ ರಾಜಕೀಯ ವಿಸ್ತರಣಗಳ ಪರಿಣಾಮವಾಗಿ ಏಷ್ಯ ಆಫ್ರಿಕ ಖಂಡಗಳಲ್ಲಿಯ ಬಹುಭಾಗ ದಾಸ್ಯಕ್ಕೆ ಒಳಗಾಗಿತ್ತು. ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯ ವರ್ತಕರ ವಕೀಲರಾಗಿ ಅಲ್ಲಿಗೆ ಹೋಗಿದ್ದ ಗಾಂಧೀಯವರು ಅಲ್ಲಿಯ ಬ್ರಿಟಿಷ್ ಸಾಮ್ರಾಜ್ಯ ಶಾಹಿ ವರ್ಣೀಯರನ್ನು ಅತ್ಯಂತ ಹೀನದಾಸ್ಯಕ್ಕೆ ಗುರಿಮಾಡಿ ಅವರ ನಾಗರಿಕ ಹಕ್ಕುಗಳನ್ನೆಲ್ಲ ದಮನ ಮಾಡಿದ್ದನ್ನು ಕಂಡು ಮೊದಲ ಬಾರಿಗೆ ಪ್ರತಿಭಟಿಸಿ ನಿಲ್ಲುವ ಸಾಹಸ ಮಾಡಿದರು. ಅಸಂಖ್ಯಾತ ಬಡ ಕೂಲಿಗಾರರ ಸಮೂಹವನ್ನು ಸಂಘಟಿಸಿ, ಅಲ್ಲಿ ನೆಲೆಸಿದ್ದ ಇತರ ಬುದ್ಧಿ ಜೀವಿಗಳ ನೆರವನ್ನೂ ಪಡೆದ ನಿಶ್ಯಸ್ತ್ರ ಸಾಮೂಹಿಕ ಪ್ರತಿಭಟನಾ ಸಮರವೊಂದನ್ನು ಪ್ರಾರಂಭಿಸಿದರು.

ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹಿ ಗಾಂಧಿ

ಮಾನವನ ನೈತಿಕಶಕ್ತಿಗಳನ್ನು ಜಾಗೃತಗೊಳಿಸಿ ಆತ್ಮಗೌರವದ ನಿಷ್ಠೆಯನ್ನು ಉಜ್ವಲಗೊಳಿಸಿ ಸಾಮಾನ್ಯ ಜನತೆ ಒಂದು ಪ್ರಬಲ ಸಶಸ್ತ್ರ ಸಾಮ್ರಾಜ್ಯ ಸರ್ಕಾರದ ಅನ್ಯಾಯ

ದುರಾಡಳಿತಗಳನ್ನು ಪ್ರತಿಭಟಿಸಿ ನಿಲ್ಲುವಂತೆ ಪ್ರೇರೇಪಿಸಿ ದರು. ಅವಮಾನಕರ ಕಾನೂನುಗಳನ್ನು ಸವಿನಯವಾಗಿ ಉಲ್ಲಂಘಿಸಿ ದಬ್ಬಾಳಿಕೆಯ ಶಿಕ್ಷೆಯನ್ನನುಭವಿಸುತ್ತ ಸತತವಾಗಿ ನ್ಯಾಯಕ್ಕಾಗಿ ಹೋರಾಡುವ ಕ್ರಮವನ್ನು ರೂಪಿಸಿದರು. ಮೊದಲು ಸದಾಗ್ರಹ ಎಂದೂ ಅನಂತರ ಸತ್ಯಾಗ್ರಹ ಎಂದೂ ಅದಕ್ಕೆ ಹೆಸರಿಟ್ಟರು. ರಸ್ಕಿನ್, ಟಾಲ್‌ಸ್ಟಾಯ್, ಥಾರೋ, ಮತ್ತು ರಾಯಿಚಂದಭಾಯಿ ಅವರ ಬರೆಹಗಳಿಂದಲೂ ಗೀತಾ, ಉಪನಿಷತ್, ಕುರಾನ್, ಬೈಬಲ್‌ಗಳ ಮೂಲ ತತ್ತ್ವಗಳ ಅಧ್ಯಯನ ಅನುಷ್ಠಾನಗಳಿಂದಲೂ ಪ್ರೇರಣೆ ಪಡೆದು ಸತ್ಯಾಗ್ರಹ ಚಳವಳಿಯನ್ನು 1906ರಲ್ಲಿ ಪ್ರಾರಂಭಿಸಿದರು. 1917ರಲ್ಲಿ ಭಾರತಕ್ಕೆ ಬಂದು ಸಾಬರಮತಿಯ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿ ಭಾರತದ ಸ್ವಾತಂತ್ರ್ಯ ಸಮರದ ನಾಯಕತ್ವ ವಹಿಸಿಕೊಂಡರು. ಅವರ ಇಡೀ ಜೀವನವೇ ಅಲ್ಲಿಂದಾಚೆಗೆ ಸತ್ಯಾಗ್ರಹ ಪಥವನ್ನು ಹಿಡಿದು ನಡೆದರು. ಜೀವನದ ಯಾವ ಕ್ಷೇತ್ರದಿಂದಲೂ ವಿಮುಖವಾಗದೆ, ಆದರ್ಶದ ಒರೆಗಲ್ಲಿಗೆ ಸಕಲ ಕರ್ಮಗಳನ್ನೂ ನಿಷ್ಠುರವಾಗಿ ಉಜ್ಜಿನೋಡಿ, ಸತ್ಯದ ಅರಿವಾದೊಡನೆ ನಿರ್ಭಯವಾಗಿ ಅದನ್ನನುಸರಿಸಿ ಮುನ್ನಡೆಯಲು ವ್ಯಕ್ತಿಗಾಗಲಿ, ಸಮಾಜಕ್ಕಾಗಲಿ, ರಾಷ್ಟ್ರಕ್ಕಾಗಲಿ ಅಹಿಂಸಾಮಾರ್ಗವೊಂದೇ ಸಾಧನ; ಅದೇ ಸತ್ಯಾಗ್ರಹ. ಇದು ಗಾಂಧಿಯವರು ಕಂಡುಕೊಂಡ ಸಿದ್ಧಾಂತ.

ಜೀವನದ ಸಮಸ್ಯೆಗಳನ್ನು ಸಮಗ್ರವಾಗಿ ಕಂಡು ಅವುಗಳನ್ನೆದುರಿಸಿ ಪರಿಹಾರ ಪಡೆದುಕೊಳ್ಳಲು ಅಹಿಂಸಾತ್ಮಕ ಹೋರಾಟವನ್ನು ಆತ್ಮಶಕ್ತಿಯ ಬಲದಿಂದ ನಡೆಸುವುದು ಸತ್ಯಾಗ್ರಹ. ಶಸ್ತ್ರಬಲದ ಅಥವಾ ಭಯೋತ್ಪಾದನೆಯ ಮೂಲಕ ಕಡ್ಡಾಯವಾಗಿ ಪರಿವರ್ತನೆ ಸಾಧಿಸುವ ಕ್ರಮದಿಂದ ಮಾನವೀಯ ಸಂಬಂಧಗಳು ಕಡಿಯುತ್ತವೆ. ಅದರಿಂದ ಉದ್ದೇಶಿತ ಫಲ ದೊರಕುವುದಿಲ್ಲ. ಆದ್ದರಿಂದ ವಿಕಾಸಶೀಲ ಕ್ರಾಂತಿಗೆ ಸತ್ಯಾಗ್ರಹವೇ ಆಧಾರಶಕ್ತಿ ಎನ್ನುವುದು ಗಾಂಧೀವಾದ. ಅವರ ಮಾತಿನಲ್ಲಿ 'ಕೌಟಂಬಿಕ ಪ್ರೇಮತತ್ತ್ವವನ್ನು ರಾಜಕೀಯಕ್ಕೆ ವಿಸ್ತರಣೆ ಮಾಡುವುದೇ ಸತ್ಯಾಗ್ರಹ. ಕುಟುಂಬದಲ್ಲಿ ತೊಂದರೆಗೀಡಾದ

5 ಏಪ್ರಿಲ್ 1939ರಂದು ದಂಡಿಯಲ್ಲಿ

ವ್ಯಕ್ತಿ ಇತರರ ವಿಷಯದಲ್ಲಿ ಪ್ರೇಮಭಾವ ಕಳೆದುಕೊಳ್ಳುವುದಿಲ್ಲ. ತನ್ನ ತತ್ತ್ವಗಳಿಗಾಗಿ ಹಿಂಸೆಯನ್ನು ಸಹಿಸಿಕೊಳ್ಳುತ್ತಾನೆ. ಭಿನ್ನಾಭಿಪ್ರಾಯದವರ ಬಗ್ಗೆ ಕ್ರೋಧವನ್ನಾಗಲಿ ಸೇಡಿನ ಮನೋಭಾವವನ್ನಾಗಲಿ ತಳೆದಿರುವುದಿಲ್ಲ. ಕ್ರೋಧದ ದಮನ, ಆತ್ಮಕ್ಲೇಶಾನುಭವ ಇವನ್ನು ಅಂಗೀಕರಿಸಿ ತಾಳ್ಮೆಯಿಂದ ಇತರರ ತಪ್ಪನ್ನು ತಿದ್ದುವ ಪ್ರಯತ್ನ ಮಾಡುತ್ತಾನೆ. ಉತ್ಕಟ ಪರಿಸ್ಥಿತಿಗಳಲ್ಲಿ ಕುಟುಂಬದ ಇತರರೊಂದಿಗೆ ಜಾಗ್ರತೆ ಒಮ್ಮತಕ್ಕೆ ಬಂದು ಕುಟುಂಬದ ಶಾಂತಿಯುತ ಕ್ಷೇಮಕ್ಕೆ ನೆರವಾಗುತ್ತಾನೆ. ಈ ಪ್ರೇಮತತ್ತ್ವ ಜಗತ್ತಿನ ಬಹುತೇಕ ನಾಗರಿಕ ರಾಷ್ಟ್ರಗಳ ಕುಟುಂಬಗಳಲ್ಲಿ ಅಗೋಚರವಾಗಿಯೂ ಸ್ಥಿರವಾಗಿಯೂ ಪ್ರಭಾವ ಬೀರುತ್ತಲೇ ಇದೆ. ಈ ತತ್ತ್ವವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳೆಲ್ಲದರಲ್ಲೂ ಒಪ್ಪಿದ ಹೊರತು ಜನಾಂಗಗಳ ಒಕ್ಕೂಟವಾಗಲಿ ಮನುಜಕುಲದ ಸರ್ವತೋಮುಖ ಏಳಿಗೆಯಾಗಲಿ ಅಸಾಧ್ಯ' ಸತ್ಯಾಗ್ರಹದ ಮೂಲಶಕ್ತಿ ಸತ್ಯನಿಷ್ಠೆ. ಸತ್ಯಕ್ಕಾಗಿ ಹೋರಾಡುವಾಗ ಹಿಂಸಾಚಾರ ಎಂದಿಗೂ ಸಮಂಜಸವಾದ ಅಸ್ತ್ರವಾಗಲಾರದು. ಅಹಿಂಸೆಯ ಪಥ ಅನಿವಾರ್ಯ. ವೈಯಕ್ತಿಕ ಅಹಿಂಸೆ ಮಾನವಧರ್ಮದ ಅವಿಭಾಜ್ಯ ಅಂಗ ಎಂದು ಎಲ್ಲ ಧರ್ಮಗಳು ನಂಬಿವೆ. ಅಂತೆಯೇ ಸಾಮೂಹಿಕ ಪ್ರತಿಭಟನೆ ಸತ್ಯವಿಷ್ಠವೂ ಅಹಿಂಸಾತ್ಮಕವೂ ಆದಾಗ ಮಾತ್ರ ಸಾಮಾಜಿಕ ನ್ಯಾಯ ಸುಪ್ರತಿಷ್ಠಿತವಾಗುತ್ತದೆ. ಇದರ ಪ್ರಪ್ರಥಮ ಪ್ರಯೋಗ ಗಾಂಧಿಯವರ ಸತ್ಯಾಗ್ರಹ ಚಳವಳಿಗಳು. 1906ರಲ್ಲಿ ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲಿನಲ್ಲಿ ಏಷ್ಯನರ ಮೇಲೆ ಬಿಳಿಯರ

ದಂಡಂ ಕಾರಾಗೃಹದ ರಾಜಕೀಯ ಕೈದಿಗಳ ಸಂದರ್ಶನ

ದಬ್ಬಾಳಿಕೆಯನ್ನು ಪ್ರತಿಭಟಿಸಿ ಅಲ್ಲಿಯ ಕಾರ್ಮಿಕರು ಆತ್ಮಗೌರವದಿಂದ ಬಾಳಲು ಗಾಂಧಿಯವರು ಹೂಡಿದ ಮೊದಲ ಸತ್ಯಾಗ್ರಹ ಹಂತಹಂತವಾಗಿ ಬೆಳೆದು ಭಾರತದ ಸ್ವಾತಂತ್ರ್ಯ ಸಮರದ ಹದಿನಾಲ್ಕು ವಿವಿಧ ಪ್ರಯೋಗಗಳಲ್ಲಿ ಒಂದು ವ್ಯಾವಹಾರಿಕ ಸಿದ್ಧಾಂತವಾಯಿತು. ಸತ್ಯಾಗ್ರಹ ಎಂದರೆ ನಿಷ್ಕ್ರಿಯತೆ ಅಲ್ಲ. ಅನ್ಯಾಯಗಳನ್ನು ಸಹಿಸಿಕೊಂಡು ಉಪೇಕ್ಷೆಯಿಂದಿರುವುದಲ್ಲ. ಅದನ್ನು ಪ್ರತಿಭಟಿಸಿ ನಿಂತು ಪ್ರೇಮ ಶಕ್ತಿಯಿಂದ ಸರಿಪಡಿಸುವ ನೈತಿಕ ಸಮರವೇ ಸತ್ಯಾಗ್ರಹ. ಸವಿನಯ ಶಾಸನಭಂಗ, ಅಹಿಂಸಾತ್ಮಕ ಅಸಹಕಾರ, ಶಸ್ತ್ರಾವಲಂಬನೆಯ ನಿರಾಕರಣೆ, ತತ್ತ್ವಪಾಲನೆಯಲ್ಲಿ ನಿಸ್ಸೀಮಬಲಿದಾನದ ಸಿದ್ಧತೆ ವೈರಿಯ ಬಗ್ಗೆ ನಿಸ್ಸಂಕೋಚ ಪ್ರೀತಿ ಮತ್ತು ವ್ಯಕ್ತಿದ್ವೇಷದ ಸಂಪೂರ್ಣದಮನ ಇವು ಸತ್ಯಾಗ್ರಹದ ಕ್ರಮಬದ್ಧ ಪ್ರಭಾವಯುತ ಅಸ್ತ್ರಗಳೆಂದು ಗಾಂಧೀಜಿಯ ಸತ್ಯಾನ್ವೇಷಣೆಯ ಪ್ರಯೋಗಗಳು ಸಿದ್ಧಮಾಡಿ ಕೊಟ್ಟಿವೆ. ಸಾತ್ವಿಕ ಪ್ರತಿಭಟನೆಯಿಂದ ಮಾನವನ ದೌರ್ಜನ್ಯ ಪ್ರವೃತ್ತಿ ಕ್ರಮೇಣ ಅಳಿಸಿಹೋಗಿ ಮಾನವ ಮಾನವನಾಗುತ್ತಾನೆ ಎಂಬ ನಂಬಿಕೆ ಸತ್ಯಾಗ್ರಹಶಾಸ್ತ್ರದ ಅಡಿಗಲ್ಲು. ಮಾನವಚರಿತ್ರೆಯಲ್ಲಿ ವಿಕಾಸಶೀಲ ಪರಿವರ್ತನೆಗಳೆಲ್ಲವೂ ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಸತ್ಯಾಗ್ರಹಗಳ ಪರಿಣಾಮವಾಗಿಯೇ ಆಗಿವೆ. ಎನ್ನುವುದು ಗಾಂಧೀದೃಷ್ಟಿ. ಸತ್ಯಾನ್ವೇಷಣೆ ಮಾನವನ ಸಹಜಧರ್ಮ. ಅದು ಎಷ್ಟರಮಟ್ಟಿಗೆ ಅಹಿಂಸಾತ್ಮಕವಾಗಿ ಸಾಗುತ್ತದೆಯೋ ಅಷ್ಟರಮಟ್ಟಿಗೆ ಮಾತ್ರ ನಿಜವಾದ ವಿಕಾಸ ಸಾಗುತ್ತದೆ ಎನ್ನುವುದು ಗಾಂಧಿಯವರ ಅಭಿಪ್ರಾಯ. ಗುರಿಯಷ್ಟೇ ಸಾಧನವೂ ಶುದ್ಧವಾಗಬೇಕೆನ್ನುವುದೇ ಸತ್ಯಾಗ್ರಹಜೀವನದ ಮೂಲತತ್ತ್ವ.

ಗಾಂಧಿಯವರ ದೃಷ್ಟಿಯಲ್ಲಿ ಸತ್ಯಾಗ್ರಹ ಕೇವಲ ರಾಜಕೀಯ ಕ್ಷೇತ್ರದ ಪ್ರತಿಭಟನೆಯ ಮಾರ್ಗ ಮಾತ್ರವಲ್ಲ. ಅದು ಒಂದು ಸಮಗ್ರ ಜೀವನವಿಧಾನದ ಸೂತ್ರವೂ ಹೌದು. ಹಿಂಸೆ ಕೇವಲ ಭೌತಿಕ ಸ್ವರೂಪದ್ದಷ್ಟೇ ಆಗಿರುವುದಿಲ್ಲ. ಅತ್ಯಂತ ಸೂಕ್ಷ್ಮ ರೂಪದ ಪರೋಕ್ಷ ಶೋಷಣೆಯ ವ್ಯವಸ್ಥೆಗಳೆಲ್ಲವೂ ವ್ಯಾಪಕ ಹಿಂಸೆಗೆ ಕಾರಣವಾಗುತ್ತವೆ. ಆದ್ದರಿಂದ ಎಲ್ಲ ರೀತಿಯ ಹಿಂಸಾಮಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ನೈತಿಕ ದೃಷ್ಟಿಯಿಂದ ನಿರಾಕರಿಸಿ ಎಷ್ಟೇ ವೈಯಕ್ತಿಕ ಸಂಕಟಗಳಿಗೊಳಗಾಗಬೇಕಾದರೂ ಅವುಗಳೊಂದಿಗೆ ಅಸಹಕರಿಸಿ ನಿರ್ಭಯವಾಗಿ ವರ್ತಿಸುವುದೇ ಸತ್ಯಾಗ್ರಹ. ಈ ನಿರ್ಭಯತೆ ಬಹಳಮಟ್ಟಿಗೆ ಸ್ವಾವಲಂಬನೆಯ ಜೀವನದಿಂದ ಬರುತ್ತದೆ. ರಾಷ್ಟ್ರಗಳಾಗಲಿ ಜನಸಮೂಹಗಳಾಗಲಿ ಜೀವನದ ಅತ್ಯಾವಶ್ಯಕ ವಸ್ತುಗಳ ಪೂರೈಕೆಗೆ ಪರಾವಲಂಬಿಗಳಾದರೆ ಶೋಷಣೆಗೆ ಗುರಿಯಾಗುವುದು ಅನಿವಾರ್ಯವಾಗುತ್ತದೆ. ಕ್ರಿಯಾತ್ಮಕವಾದ, ಆತ್ಮಗೌರವದಿಂದ ಕೂಡಿದ ಸ್ವತಂತ್ರವಿಚಾರ ಶಕ್ತಿಯುಳ್ಳ ಸರಳಜೀವನ ಸತ್ಯಾಗ್ರಹಿಯದವರಿಗೆ ಸಹಾಯವಾಗಬೇಕು ಎನ್ನುತ್ತಾರೆ ಗಾಂಧೀಜಿ. ಅಂಥ ಬಾಳಿನ ನಿಯಮಗಳನ್ನು ತಾವು ಅನುಷ್ಠಾನ ಮಾಡಿ, ಸಾಮೂಹಿಕ ದಳಗಳೂ ಯಶಸ್ವಿಯಾಗಿ

ಆಚರಿಸುವಂತೆ ಮಾಡಿದ ವಿಶಿಷ್ಟ ಮಾರ್ಗದರ್ಶನ ಗಾಂಧಿಯವರದು. ಈ ನಿಯಮಗಳನ್ನು ಅವರು ಏಕಾದಶವ್ರತಗಳೆಂದು ಕರೆದರು. ಧಾರ್ಮಿಕ ಪರಂಪರೆಗಳಿಗೆ ಸುಪರಿಚಿತವಾದ ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಅಸ್ವಾದಗಳ ಜೊತೆಗೆ ಸಾಮಾಜಿಕ ಮೌಲ್ಯಗಳುಳ್ಳ ಶರೀರಶ್ರಮ, ಸರ್ವಧರ್ಮ ಸಮಭಾವ, ಸ್ಪರ್ಶಭಾವನೆ, ಸ್ವದೇಶೀ ಮತ್ತು ನಿರ್ಭಯತೆಗಳನ್ನು ಅವರು ಸೇರಿಸಿದರು. ಸತ್ಯಾಗ್ರಹಶಾಸ್ತ್ರದಲ್ಲಿ ಈ ವ್ರತ ನಿಯಮಗಳು ಅತ್ಯಂತ ಮುಖ್ಯವಾದ ಅಂಗ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಚಲಿತವಿರುವ ಯುದ್ಧವಿರೋಧೀ ಚಳವಳಿ, ಸಾತ್ತ್ವಿಕ ಪ್ರತಿಭಟನೆ ಶಾಸನೋಲ್ಲಂಘನೆ ಕರನಿರಾಕರಣೆ, ಮುಂತಾದ ನಿಶ್ಶಸ್ತ್ರ ಪ್ರತಿಭಟನಾಕ್ರಮಕ್ಕೂ ಸತ್ಯಾಗ್ರಹಕ್ಕೂ ಒಂದು ಮೂಲಭೂತ ವ್ಯತ್ಯಾಸವುಂಟು. ಅವನ್ನು ನಡೆಸುವವರು ಆಯುಧ ದೊರಕದ್ದರಿಂದ ತಾವು ದುರ್ಬಲರೆಂದು ತಿಳಿದು ಆ ಚಳವಳಿಗಳಲ್ಲಿ ಹಿಂಸೆಯನ್ನು ವರ್ಜಿಸುತ್ತಾರೆ. ಅವಕಾಶ ಒದಗಿದಾಗ ಹಿಂಸೆಯನ್ನು ಉಪಯೋಗಿಸಲು ಅವರು ಹಿಂದೆಗೆಯುವುದಿಲ್ಲ. ಅಲ್ಲದೆ ರಾಷ್ಟ್ರ ರಕ್ಷಣೆಗಾಗಿ ಶಸ್ತ್ರಾಸ್ತ್ರ ಸಂಗ್ರಹಣೆ ಅತ್ಯಗತ್ಯ ಎಂದು ನಂಬಿ ಅದನ್ನು ಬೆಂಬಲಿಸುತ್ತಾರೆ. ಗಾಂಧಿಯವರು ರೂಪಿಸಿಕೊಟ್ಟ ಸತ್ಯಾಗ್ರಹಕ್ರಮ ದಲ್ಲಿ ಹಿಂಸೆಗೆ ಯಾವ ಸಂದರ್ಭದಲ್ಲೂ ಅವಕಾಶವೇ ಇರಲಾಗದು. ಸತ್ಯಾಗ್ರಹದಲ್ಲಿ ಸತ್ಯ ಮತ್ತು ಅಹಿಂಸೆ ಅನ್ಯೋನ್ಯಾವಲಂಬಿ ತತ್ತ್ವಗಳು. ಒಂದಕ್ಕೆ ಇನ್ನೊಂದು ಆಶ್ರಯ. ಅತ್ಯಂತ ಪ್ರಬಲ ರಾಷ್ಟ್ರವೂ ಶಸ್ತ್ರ ನಿರಾಕರಣೆಯನ್ನು ಅಂಗೀಕರಿಸುವುದು ಸತ್ಯಾಗ್ರಹಮಾರ್ಗ. ಸತ್ಯವನ್ನು ಹಿಂಸಾವೃತ್ತಿಯಿಂದ ಪಡೆಯುವುದು ಅಸಾಧ್ಯ. ಅಹಿಂಸೆ ಒಂದು ಸಶಕ್ತ ಆತ್ಮಶಕ್ತಿಯ ಪ್ರಕಟಿತರೂಪ; ಅದಕ್ಕೆ ಶಸ್ತ್ರದ ಅವಲಂಬನೆ ಯಾವ ಸಂದರ್ಭದಲ್ಲೂ ಅನಾವಶ್ಯಕ; ಈ ಶಕ್ತಿ ಸಮರದಿಂದ ಸಮರಕ್ಕೆ ವೃದ್ಧಿಯಾಗುತ್ತ ವೈರವನ್ನು ಸಂಪೂರ್ಣ ವಾಗಿ ತೊಡೆದುಹಾಕುತ್ತದೆ. ಸತ್ಯಾಗ್ರಹದ ಶುದ್ಧಸ್ವರೂಪದಲ್ಲಿ ಈ ನಿಷ್ಠೆ ಅಡಗಿದೆ.

ಸತ್ಯಾಗ್ರಹ ಕ್ರಮದಲ್ಲಿ ವೈರಿಯನ್ನು ಸಾಂಪ್ರದಾಯಿಕ ದೃಷ್ಟಿಯಿಂದ ಹತ್ಯಾಯೋಗ್ಯ ಪಾಪಿ ಎಂದು ಪರಿಗಣಿಸಲಾಗುವುದಿಲ್ಲ. ಅವನಲ್ಲಿ ತಾತ್ಕಾಲಿಕವಾಗಿ ಸುಪ್ತವಾಗಿರುವ ವಿವೇಕಪೂರ್ಣ ಸಾತ್ತ್ವಿಕತೆಯನ್ನು ಎಚ್ಚರಗೊಳಿಸಿ ಅವನು ತನ್ನ ತಪ್ಪನ್ನು ತಾನೇ ಅರಿಯುವಂತೆ ಮಾಡುವ ಪ್ರಕ್ರಿಯೆ ಸತ್ಯಾಗ್ರಹ. ಗಾಂಧಿಯವರ ಮಾತಿನಲ್ಲಿ, ದುರುಳ ಎತ್ತುವ ಕತ್ತಿಯ ಎದುರು ಇನ್ನೂ ಹೆಚ್ಚು ಹರಿತವಾದ ಆಯುಧವನ್ನು ಹಿಡಿಯದೆಯೇ ಅವನ ಕತ್ತಿಯ ಅಲಗನ್ನು ಮೊಂಡಾಗಿಸುವ ಪ್ರಯತ್ನ ನನ್ನದು. ಅವನು ನಿರೀಕ್ಷಿಸುವ ದೈಹಿಕ ಪ್ರತಿಭಟನೆಯನ್ನು ಕಾಣದೆ ಹೋದಾಗ ಅವನು ಹತಾಶನಾಗುತ್ತಾನೆ. ನನ್ನ ಸಾತ್ತ್ವಿಕ ಪ್ರತಿಭಟನೆ ಅವನ ಹಿಡಿತಕ್ಕೆ ಸಿಗದು. ಅವನನ್ನು ದಿಗ್ಭ್ರಾಂತನನ್ನಾಗಿ ಮಾಡಿ ಬಿಡುತ್ತದೆ. ಕೊನೆಗೆ ಅವನು ಅಂಥ ಸಾತ್ತ್ವಿಕ ಪ್ರತಿಭಟನೆಯನ್ನು ಗೌರವದಿಂದ ಕಾಣುತ್ತಾನೆ. ಹೀಗೆ ಮಾನ್ಯತೆ ನೀಡುವುದು ಅವನಿಗೆ ಅಪಮಾನ ಎನಿಸುವುದಿಲ್ಲ. ತನ್ನ ಘನತೆ ಹೆಚ್ಚಾಯಿತೆಂದೇ ಅವನು ಭಾವಿಸುತ್ತಾನೆ. ತನ್ನ ವೈರಿ ಶರಣಾಗತನಾಗಿ ತಾನು ಅವನ ಮೇಲೆ ಅಧಿಕಾರ ಹೆಚ್ಚಿಸಿಕೊಳ್ಳಬೇಕೆಂಬ ಹಂಬಲ ಸತ್ಯಾಗ್ರಹಿಗೆ ಸಲ್ಲದು. ಸತ್ಯಾಗ್ರಹ ಸಮರದ ಅಂತ್ಯದಲ್ಲಿ ಗೆದ್ದವರೂ ಪುನೀತರಾಗುತ್ತಾರೆ, ಸೋತವರೂ ಪುನೀತರಾಗುತ್ತಾರೆ. ಯಾವ ಬಲತ್ಕಾರಕ್ಕೂ ಮಣಿಯದೆ ಭಿನ್ನಾಭಿಪ್ರಾಯಗಳು ಸಮರಸ ವಾಗಿ ಕೊನೆಗೊಂಡು ಪರಸ್ಪರ ಸಹಕಾರಿಗಳಾಗಿಯೆ ಉಳಿಯುವುದು ಸತ್ಯಾಗ್ರಹದ ಗೆಲುವು. ಭಾರತದ ಸ್ವಾತಂತ್ರ್ಯ ಸಂಗ್ರಾಮ ಕೊನೆಗೊಂಡಾಗ ಭಾರತ, ಬ್ರಿಟನ್ ಎರಡು ರಾಷ್ಟ್ರಗಳೂ ಧನ್ಯತೆಯ ಅನುಭವವನ್ನು ಪಡೆದುದ್ದು, ಒಂದು ಪ್ರಖ್ಯಾತ ನಿದರ್ಶನ. ಚಕ್ರಾಧಿಪತ್ಯದ ಪ್ರತಿನಿಧಿಯೇ ತಮ್ಮ ಬಾವುಟವನ್ನು ಇಳಿಸಿ ಸ್ವತಂತ್ರ ಭಾರತದ ಪ್ರಜಾನುರಾಗಿ ಗವರ್ನರ್–ಜನರಲ್ ಎನಿಸಿಕೊಂಡರು. ಇದು ಸತ್ಯಾಗ್ರಹದ ಒಂದು ಪರಿಣಾಮ.

ಗಾಂಧಿಯವರು ನಿರ್ದೇಶಿಸಿದ ಸತ್ಯಾಗ್ರಹಗಳಲ್ಲಿ ಅವರು ಸ್ವತಃ ಒಂದು ಸ್ವಯಂ ಸೇವಕ ಶಿಕ್ಷಣಕ್ರಮವನ್ನು ಅನುಸರಿಸುತ್ತಿದ್ದರು. ಸಾಮೂಹಿಕ ಸತ್ಯಾಗ್ರಹ ಇನ್ನೂ ಹೊಸ ಪ್ರಯೋಗ, ಅದಕ್ಕೆ ಜನತೆಯ ಅತ್ಯಂತ ದಕ್ಷವಾದ ಶಿಸ್ತಿನ ಶಿಕ್ಷಣ ಅತ್ಯಗತ್ಯ ಎಂದರು. ಸತ್ಯಾಗ್ರಹವೆಂದರೆ ವೇದನೆಯನ್ನು ಸದಾ ಸಹಿಸುವ ನಿರಂತರ ಸಿದ್ಧತೆ. ಈ ಸಹನೆ ನಿಷ್ಕಲಂಕವಾದಷ್ಟೂ ಅದರ ಪರಿಣಾಮ ಸತ್ತ್ವಶಾಲಿಯಾಗುತ್ತದೆ. ಸತ್ಯಾಗ್ರಹದಲ್ಲಿ ಅಸಹಾಯಕತೆ ಎಂದಿಗೂ ಇರಬಾರದು ಎನ್ನುತ್ತಿದ್ದರು. ತಮ್ಮ ಸೂಚನೆಗಳ ಹಿನ್ನೆಲೆಯಲ್ಲಿ ಯಾವ ಗುಣಗಳು ಪ್ರತಿ ಸತ್ಯಾಗ್ರಹಿಯಲ್ಲೂ ಇರಬೇಕೋ ಅವನ್ನು ಅವರು ಹೀಗೆ ಸಂಗ್ರಹಿಸಿಕೊಟ್ಟಿದ್ದಾರೆ: 1 ಸತ್ಯಸ್ವರೂಪನಾದ ದೇವರಲ್ಲಿ ಅಚಲನಂಬಿಕೆ. 2 ಸತ್ಯ ಅಹಿಂಸೆಗಳಲ್ಲೂ ಕಷ್ಟಸಹಿಷ್ಣುತೆಯಿಂದ ಇತರರಲ್ಲಿ ಎಚ್ಚರಗೊಳ್ಳುವ ಮಾನವೀಯ ಒಳ್ಳೆಯತನದಲ್ಲೂ ವಿಶ್ವಾಸ. 3 ಪರಿಶುದ್ಧ ಜೀವನ, ತ್ಯಾಗಬಲಿದಾನಗಳಿಗೆ ಸಿದ್ಧತೆ. 4 ಸ್ವದೇಶೀ ಮತ್ತು ಶರೀರಶ್ರಮ ವ್ರತಗಳ ಸ್ವೀಕಾರ. 5 ಮದ್ಯ ಮತ್ತು ಇತರ ಮಾದಕವಸ್ತುಗಳ ಸಂಪೂರ್ಣ ನಿಷೇಧ. 6 ಕಾಲಕಾಲಕ್ಕೆ ಅನುಸರಿಸಬೇಕಾದ ಶಿಸ್ತುಗಳ ಮನಃಪೂರ್ವಕ ಪಾಲನೆ. 7 ಶಿಕ್ಷೆಯನ್ನು ಸಂತೋಷದಿಂದ ಅನುಭವಿಸುವಾಗ ನಿಯಮಗಳನ್ನು ಪಾಲಿಸುತ್ತ ವಿನಯ ಪೂರ್ವಕವಾಗಿ ಆತ್ಮಗೌರವದಿಂದ ನಡೆದುಕೊಳ್ಳುವುದು.

ಸತ್ಯಾಗ್ರಹದ ಸಮಗ್ರರೂಪದ ಪರಿಣಾಮ ಮಾನವನ ಆಧ್ಯಾತ್ಮಿಕ ವಿಕಾಸ. ವಸ್ತುನಿಷ್ಠ ಬಾಹ್ಯ ಪ್ರಪಂಚದ ಸಂಪತ್ಸಮೃದ್ಧಿಯ ಅವಿರತ ಕಾರ್ಯದಲ್ಲಿ ತೊಡಗಿರುವಾಗಲೂ ಆತ್ಮವಿಕಾಸ ನಿರಂತರವಾಗಿ ಹರಿದುಬರುವ ಸಾಧನ ಸತ್ಯಾಗ್ರಹ ಜೀವನಮಾರ್ಗ. ವಿಜ್ಞಾನ + ಹಿಂಸೆ = ಸರ್ವನಾಶ; ವಿಜ್ಞಾನ + ಅಹಿಂಸೆ = ಸರ್ವೋದಯ, ಎಂದು ವಿನೋಬಾ ಭಾವೆಯವರು ಕೊಟ್ಟಿರುವ ಸೂತ್ರ ಗಾಂಧಿ ಪ್ರಣೀತ ಸತ್ಯಾಗ್ರಹ ಮಾರ್ಗದ ವ್ಯಾಖ್ಯೆಯೂ ಹೌದು. ವಿಜ್ಞಾನ ಮತ್ತು ಆತ್ಮಜ್ಞಾನಗಳ ಸಮತೋಲನ ವಿಕಾಸವಾಗುತ್ತ ಹೋದಂತೆ ಮಾನವಸಮಾಜದ ಸ್ವರೂಪವೇ ಬದಲಾಗಿ ಮಾನವೀಯ ಮೌಲ್ಯಗಳು ಸುಪ್ರತಿಷ್ಠವಾಗುತ್ತವೆ. ಸತ್ಯಾಗ್ರಹಶಾಸ್ತ್ರ ಈ ದಿಸೆಯಲ್ಲಿ ಸಂಶೋಧಿತವಾದ ಅತ್ಯಂತ ಪ್ರಭಾವಯುತ ಸಿದ್ಧಾಂತವೆಂದು ಪರಿಗಣಿತವಾಗಿದೆ. (ಕೆ.ಎಸ್.ಎನ್.ಎಸ್.)

**ಗಾಂಧಿ ಮತ್ತು ಅಹಿಂಸೆ** : ಗಾಂಧೀಜಿಯವರ ಜೀವನದರ್ಶನದಲ್ಲಿ ಸತ್ಯಕ್ಕೆ ಪ್ರಥಮ ಸ್ಥಾನವಾದರೆ ಅಹಿಂಸೆಗೆ ದ್ವಿತೀಯ ಸ್ಥಾನ. ಸತ್ಯಶೋಧನೆಯಲ್ಲಿ ತೊಡಗಿದ ಇವರು ಅನುಸರಿಸಿದ ಏಕೈಕ ಮಾರ್ಗವೇ ಅಹಿಂಸೆ. ಅಹಿಂಸೆ ಸಾಧನ, ಸತ್ಯವೇ ಅದರ ಸಿದ್ಧಿ. ಸತ್ಯದ ಅಥವಾ ದೇವರ ಸಾಕ್ಷಾತ್ಕಾರಕ್ಕೆ ಅಹಿಂಸೆಯಲ್ಲದೆ ಅನ್ಯ ಮಾರ್ಗವೇ ಇಲ್ಲ ಎಂಬುದನ್ನು ಮನಗಂಡ ಇವರು ಅಹಿಂಸೆಯ ಆಚರಣೆಗೆ ತಮ್ಮ ಬಾಳಿನ ಸರ್ವಸ್ವವನ್ನೂ ಪಣವಾಗಿಟ್ಟರು. ಇವರ ಅಂತರಂಗ ಬಹಿರಂಗ ಜೀವನವನ್ನೆಲ್ಲಾ ಇದು ವ್ಯಾಪಿಸಿತು. ತ್ರಿಕರಣಪೂರ್ವಕ ಅಹಿಂಸೆಯ ಆಚರಣೆಯಲ್ಲಿ ತೊಡಗಿದ ಇವರು ಅಹಿಂಸೆಯನ್ನು ಕುರಿತು ಹೇಳಿರುವ ಮಾತುಗಳು ಋಷಿ ವಾಣಿಯಂತೆ ಪ್ರಮಾಣವಾಕ್ಯಗಳಾಗಿವೆ.

**ಅಹಿಂಸೆಯ ಅರ್ಥ** : ಗಾಂಧೀಜಿಯವರೇನು ಅಹಿಂಸಾತತ್ತ್ವದ ಜನಕರಲ್ಲ. ಏಕೆಂದರೆ ಭಾರತೀಯ ದರ್ಶನದಲ್ಲಿ ಅದರಲ್ಲಿಯೂ ಜೈನ ಮತ್ತು ಬೌದ್ಧದರ್ಶನದಲ್ಲಿ, ಅಹಿಂಸಾತತ್ತ್ವ ಮತ್ತು ಅದರ ಆಚರಣೆ ಅತ್ಯಂತ ಸಮರ್ಥರೀತಿಯಲ್ಲಿ ನಿರೂಪಿತವಾಗಿದೆ. ಆದರೂ ಗ್ರಂಥಸ್ಥವಾದ ಈ ತತ್ತ್ವ ಗಾಂಧೀಜಿಯವರ ಬದುಕಿನಲ್ಲಿ ಜೀವಂತಗೊಂಡು ನಮ್ಮ ಸಮಕಾಲೀನ ಯುಗದಲ್ಲಿ ಒಂದು ಪವಾಡವನ್ನೇ ಎಸಗಿದೆ. ಸ್ಥೂಲವಾಗಿ ನೋಡಿದಾಗ ಅಹಿಂಸೆ ಎಂದರೆ ಕೊಲ್ಲದಿರುವುದು ಅಥವಾ ಹಿಂಸಿಸದಿರುವುದು ಎಂದಾದರೂ ಇದರ ಸೂಕ್ಷ್ಮ ಹಾಗೂ ವಿಸ್ತೃತವಾದ ಅರ್ಥವನ್ನು ಗ್ರಹಿಸಲು ಗಾಂಧೀಜಿಯವರ ಬದುಕು ಮತ್ತು ಬೋಧನೆಗಳೆರಡನ್ನೂ ಅವಲೋಕಿಸಬೇಕಾಗುತ್ತದೆ. ಸತ್ಯನಿಷ್ಠನಾದ ವಿಜ್ಞಾನಿಯಂತೆ ಅಹಿಂಸೆಯ ಪ್ರಯೋಗದಲ್ಲಿ ತೊಡಗಿದ ಗಾಂಧೀಜಿ ಯವರು ಇದು ಕೇವಲ ಒಂದು ಧಾರ್ಮಿಕ ನಿಯಮ ಮಾತ್ರವಲ್ಲ; ಇದು ಆರ್ಥಿಕ, ಸಾಮಾಜಿಕ, ರಾಜಕೀಯವೇ ಮುಂತಾದ ಎಲ್ಲ ರಂಗಗಳಲ್ಲಿಯೂ ಪ್ರತಿಧ್ವನಿತವಾಗುವಂಥ ವಿಶ್ವವ್ಯಾಪಿತತ್ತ್ವ, ಚರಾಚರಾತ್ಮಕವಾದ ಜಗತ್ತೆಲ್ಲವೂ ಈ ತತ್ತ್ವಕ್ಕೆ ತಲೆಬಾಗಿ ನಡೆಯುತ್ತದೆ–ಎಂಬುದನ್ನು ಕಂಡುಕೊಂಡರು. ಅಹಿಂಸೆಯ ವಿಶ್ವರೂಪದರ್ಶನ ಇವರಿಗಾದಂತೆಲ್ಲ. ಈ ಮಹತ್ತತ್ತ್ವದ ಪೂರ್ಣ ವ್ಯಾಖ್ಯಾನ ಮಾನವನಿಂದ ಸಾಧ್ಯವಾಗದು, ತಮ್ಮಿಂದಂತೂ ಸಾಧ್ಯವಾಗಿಲ್ಲ ಎಂಬುದನ್ನು ಬಹುದುಃಖದಿಂದ ಹೇಳಿಕೊಂಡರು. ಆದರೂ ಅಹಿಂಸೆಯ ಸಾಧನೆ ತಮಗೆ ಅಳವಟ್ಟಷ್ಟರಿಂದಲೇ. ಅದಕ್ಕಿರುವ ಅಗಾಧ ಶಕ್ತಿಯ ಅರಿವು ತಮಗಾಯಿತೆಂಬ ತೃಪ್ತಿಯೂ ಇವರಲ್ಲಿ ಕಾಣತ್ತದೆ. ವಿನಾಶಕಾರಿ ಅಸ್ತ್ರಗಳಿಂದೊದಗುವ ಯಾವ ಶಕ್ತಿಯೂ ಈ ಅಹಿಂಸೆಯ ಶಕ್ತಿಗೆ ಸರಿಸಮನಾಗಲಾರದೆಂದು ಇವರು ಹೇಳಿದರು. ಅಹಿಂಸೆಯಿಂದ ಸಾಧಿಸಲಾರದುದು ಜಗತ್ತಿನಲ್ಲಿ ಯಾವುದೂ ಇಲ್ಲ ಎಂಬುದೇ ಇವರ ಅನುಭವ. ಆದರೆ ಅಹಿಂಸೆಯ ಸಾಧಕನಲ್ಲಿ ಅಮಿತವಾದ ಸಾಮರ್ಥ್ಯವಿರಬೇಕೆಂಬುದನ್ನು ಹೇಳಲು ಇವರು ಮರೆತಿಲ್ಲ.

**ಅಹಿಂಸೆಯ ಸಹಕಾರಿ ಧರ್ಮಗಳು**: ಗಾಂಧೀಜಿ ಕಂಡಂತೆ, ಅಹಿಂಸೆಯ ಆಚರಣೆಯಲ್ಲಿ ಪ್ರೇಮ, ತ್ಯಾಗ, ಸಹನೆ ಮತ್ತು ಧೈರ್ಯ ಎಂಬ ಮೂಲಧಾತುಗಳು ಅಡಗಿವೆ. ಜೀವಜಂತುಗಳಲ್ಲಿ ನಮಗಿರುವ ಪ್ರೇಮದ ಮೂರ್ತಸ್ವರೂಪವೇ ಅಹಿಂಸೆ. ಪ್ರೀತಿ ಇರುವಲ್ಲಿ ಹಿಂಸೆಗೆ ಸ್ಥಾನವಿಲ್ಲ. ನಮಗೆ ಪ್ರಿಯವಾದುದನ್ನು ನಾವು ಎಂದೂ ನಾಶಪಡಿಸುವುದಿಲ್ಲ. ಪ್ರೀತಿಯ ಅಭಾವವಿದ್ದಲ್ಲಿ ಮಾತ್ರವೇ ಹಿಂಸೆ ಸಾಧ್ಯ. ದ್ವೇಷಕ್ಕೆ ದ್ವೇಷ ಪರಿಹಾರವಲ್ಲ, ಕ್ರೌರ್ಯಕ್ಕೆ ಏಕೈಕ ಪರಿಹಾರವೆಂದರೆ ಪ್ರೇಮ. ಈ ಅಂಶವನ್ನು ಗಾಂಧೀಜಿಯವರ ಮಾತಿನಲ್ಲಿಯೇ ಹೇಳುವುದಾದರೆ 'ಶಸ್ತ್ರಸನ್ಯಾಸ ಮಾಡಿರುವ ನನ್ನಲ್ಲಿ ನನ್ನನ್ನು ದ್ವೇಷಿಸುವವರಿಗೆ ಕೊಡಲು ಪ್ರೇಮ ತುಂಬಿದ ಬಟ್ಟಲಲ್ಲದೆ ಬೇರೇನೂ ಇಲ್ಲ'. ಈ ಮಾತು ಅಹಿಂಸೆಗೆ ಇವರು ಕೊಟ್ಟ ಒಂದು ವ್ಯಾಖ್ಯಾನ. ಪುನರ್ಜನ್ಮದಲ್ಲಿ ನಂಬಿಕೆ ಇದ್ದ ಇವರು ಈ ಜನ್ಮದಲ್ಲಲ್ಲದಿದ್ದರೆ ಅನೇಕ ಜನ್ಮಗಳ ಅನಂತರವಾದರೂ ವಿಶ್ವದ ಜೀವಜಂತುಗಳನ್ನೆಲ್ಲ ತಮ್ಮ ಪ್ರೇಮಬಾಹುಗಳಿಂದ ಅಪ್ಪಲು ಬಯಸುತ್ತಾರೆ.

ಅಹಿಂಸೆಯ ಸಾಧನೆ ತಕ್ಕ ಮಟ್ಟಿಗಾದರೂ ಫಲಪ್ರದವಾಗಬೇಕಾದರೆ ತ್ಯಾಗ ಅತ್ಯಂತ ಆವಶ್ಯಕವೆಂಬುದನ್ನು ಗಾಂಧೀಜಿ ಮನಗಂಡಿದ್ದರು. ಸ್ವಾರ್ಥವೆಂಬುದು ಒಂದು ರೀತಿಯ ಹಿಂಸೆ. ಶರೀರ ಸುಖ, ಕೀರ್ತಿ, ಲಾಭ, ಇಲ್ಲವೆ ಅಹಂಕಾರದ ಆಡಂಬರ, ಇವುಗಳಿಗಾಗಿಯೇ ಒಬ್ಬರು ಮತ್ತೊಬ್ಬರನ್ನು ಹಿಂಸಿಸುವುದು. ವ್ಯಕ್ತಿಗಳಷ್ಟೇ ಏಕೆ,

ರಾಷ್ಟ್ರಗಳೂ ಇದರಿಂದ ಮುಕ್ತವಲ್ಲ. ಕಾಮ, ಕ್ರೋಧ, ಮದ, ಮತ್ಸರಗಳಿಗೆ ಒಳಗಾಗಿರುವ ಮಾನವನಿಗೆ ಶುದ್ಧ ಅಹಿಂಸೆಯ ಅಚರಣೆ ಕೇವಲ ಮರೀಚಿಕೆಯೇ ಸರಿ. ಯಾವ ರೀತಿಯಿಂದಲೇ ಆಗಲಿ ತನ್ನ ಹಿತಕ್ಕಾಗಿ ಅನ್ಯರನ್ನು ಬಳಸುವುದು ಸ್ವಾರ್ಥ. ಇದೊಂದು ಮೃಗಧರ್ಮ. ಅನ್ಯರ ಒಳಿತಿಗಾಗಿ ತಾನು ಶ್ರಮಿಸುವುದೇ ತ್ಯಾಗ. ಆದ್ದರಿಂದ ಅಹಿಂಸೆ ಅಥವಾ ವಿಶ್ವಪ್ರೇಮಕ್ಕೆ ಯಾವ ತ್ಯಾಗವೂ ಹೆಚ್ಚೆನಿಸಲಾರದು.

ಅಹಿಂಸೆಯ ಆಚರಣೆಗೆ ಬೇಕಾದ ಮತ್ತೊಂದು ಸಹಕಾರಿ ಧರ್ಮವೆಂದರೆ ಸಹನೆ. ತನ್ನನ್ನು ದ್ವೇಷಿಸುವವನನ್ನು ತಾನು ಪ್ರೀತಿಸಬೇಕೆಂದರೆ ಆಗ ಅವನಲ್ಲಿ ಬೆಟ್ಟದಷ್ಟು ಸಹನೆ ಬೇಕು. ಕೋಪ ಮತ್ತು ಮಾತ್ಸರ್ಯ ಅಹಿಂಸೆಯ ಪರಮ ವೈರಿಗಳು. ನಿರಹಂಕಾರಿಯಾದವನಿಗೆ ಮಾತ್ರ ಈ ಸಹನೆ ಸಾಧ್ಯ. ಗಾಂಧೀಜಿ ಉದಾಹರಿಸಿದಂತೆ, ತಾಯಿಯ ಪ್ರೇಮ ಸಹನೆಯ ಪ್ರತೀಕ.

ಇನ್ನು ಅಹಿಂಸೆಯ ಆಚರಣೆ ಹೇಡಿಯಾದವನಿಗೆ ಎಂದೂ ಸಾಧ್ಯವಿಲ್ಲ. ಗೀತೆಯಲ್ಲಿ ಹೇಳಿರುವ ಅಭಯತ್ವ ಕೈಗೂಡದವನು ಹಿಂಸೆಗೆ ಅಹಿಂಸೆಯನ್ನು ಹಿಂದಿರುಗಿಸಲು ಎಂದೂ ಶಕ್ತನಾಗುವುದಿಲ್ಲ. ಹಿಂಸಾವಾದಿಗಳಿಂದ ತನಗಾಗುವ ಎಲ್ಲ ರೀತಿಯ ಅಘಾತಗಳನ್ನೂ ಸಹಿಸಿಕೊಂಡು ಹಿಂಸಾವಾದಿಗಳ ಹೃದಯ ಪರಿವರ್ತನೆಯಾಗುವಂತೆ ಮಾಡುವುದೇ ಅಹಿಂಸೆಯ ಉದ್ದೇಶ. ಸತ್ಯಕ್ಕೆ ಹೊರತಾಗಿ ಮತ್ತಾವುದಕ್ಕೂ ಅಂಜೆನೆಂಬ ಎದೆಗಾರಿಕೆ ಇರುವವನಿಗೆ ಮಾತ್ರ ಈ ಸಾಹಸ ಸಾಧ್ಯ. ಸತ್ಯಕ್ಕಾಗಿ ಅಹಿಂಸಾಚರಣೆಯಲ್ಲಿ ತೊಡಗಿರುವವನು ಸಾಕ್ರಟಿಸ್‌ನಂತೆ, ಏಸುವಿನಂತೆ, ಸತ್ಯಕ್ಕಾಗಿ ಸಾವನ್ನೂ ಸ್ವಾಗತಿಸುತ್ತಾರೆ. ವಿಶ್ವದಲ್ಲಿಯೇ ಅಜೇಯವೆನಿಸಿದ ಬ್ರಿಟಿಷ ಸಾಮ್ರಾಜ್ಯದೆದುರು ಗಾಂಧೀಜಿಯವರ ಹೋರಾಟದ ಜೀವನ ಹಾಗೂ ಅಜ್ಞಾನಿಯೊಬ್ಬನ ಗುಂಡಿಗೆ ಬಲಿಯಾದ ಇವರ ಧೀರಮರಣ ಇವು ಇವರ ಅಭಯತ್ವದ ಜೀವಂತಸಾಕ್ಷಿ. ಅಹಿಂಸಾಚರಣೆಗೆ ಬೇಕಾದ ಅಭಯತ್ವಕ್ಕೆ ಈ ಮಹನೀಯರ ಇಡೀ ಜೀವನವೇ ನಿದರ್ಶನ.

**ಅಹಿಂಸೆಯ ದಾರ್ಶನಿಕ ಸ್ವರೂಪ:** ಅಹಿಂಸೆ ಎಂಬುದು ಒಂದು ಆತ್ಮಕಶಕ್ತಿ. ಅತ್ಯಂತ ಕ್ರೂರಿಯ ಹೃದಯದಲ್ಲಿಯೂ ಭಗವಂತನ ಅಂಶ ಇದೆ ಎಂಬುದೇ ಇದರ ಬುನಾದಿ. ಇದು ಯಾವಾಗಲೂ ಯಾರಿಗೂ ಕೆಟ್ಟದ್ದನ್ನು ಮಾಡುವಂಥದಲ್ಲ. ಇದನ್ನು ಅರಿತು ಅಚರಿಸುವವರೂ ಉಂಟು. ಅರಿಯದೇ ಆಚರಿಸುವ ಮುಗ್ಧ ಚೇತನಗಳೂ ಉಂಟು. ಇದನ್ನು ಎಷ್ಟೇ ಅಪೂರ್ಣವಾಗಿ ಆಚರಿಸಿದರೂ ಅದರಿಂದ ಸಾಕಷ್ಟು ಉತ್ತಮ ಫಲ ದೊರೆತೇ ದೊರೆಯುತ್ತದೆ. ಇದರ ಆಚರಣೆಗೆ ಪಂಡಿತನ ಪಾಂಡಿತ್ಯವೇ ಬೇಕೆಂದಿಲ್ಲ. ಸತ್ಯದಲ್ಲಿ ನಿಷ್ಠೆಯೊಂದಿದ್ದರೆ ಮಿಕ್ಕೆಲ್ಲ ಮಾರ್ಗದರ್ಶನವೂ ತಾನೇ ತಾನಾಗಿ ದೊರೆಯುತ್ತದೆ. ಇದನ್ನು ಆಚರಿಸುವವನು ಮಾತ್ರವಲ್ಲದೆ ಅವನ ಪರಿಸರವೂ ಇದರಿಂದ ಪ್ರಭಾವಿತವಾಗುತ್ತದೆ. ಜೀವ ಜಂತುಗಳಲ್ಲೆಲ್ಲ ಸುಪ್ತವಾಗಿರುವ ದಿವ್ಯಶಕ್ತಿಯನ್ನು ಸಚೇತನ ಗೊಳಿಸುವ ಶಕ್ತಿ ಅಹಿಂಸೆಗಿದೆ. ಶುದ್ಧ ಅಹಿಂಸಾವ್ರತಿಗೆ ವಿಷ ತುಂಬಿದ ಹಾವಿನೊಂದಿಗೂ ಸಖ್ಯಸಾಧ್ಯವಾಗಬೇಕು. ಆದರೆ ತಾವು ಆ ಆದರ್ಶ ಸ್ಥಿತಿಯಿಂದ ಬಹು ಹಿಂದೆ ಬಿದ್ದಿರುವುದಾಗಿ ಗಾಂಧೀಜಿ ಒಮ್ಮೆ ಮನನೊಂದು ಹೇಳಿದ್ದಾರೆ. ಅಹಿಂಸೆಯ ಆಚರಣೆಯಿಂದ ಶತ್ರು ಮಿತ್ರನಾಗುತ್ತಾನೆ. ದ್ವೇಷಿಸುವವ ಪ್ರೀತಿಸಲು ಕಲಿಯುತ್ತಾನೆ. ನಿಂದಕನಲ್ಲಿ ಪಶ್ಚಾತ್ತಾಪ ಮೂಡುತ್ತದೆ. ಜೀವಂತ ನಿದರ್ಶನವಿಲ್ಲದಿದ್ದಾಗ ಈ ಮಾತು ಕೇವಲ ಕಲ್ಪನೆಯಂತೆ ಕಾಣಬಹುದು. ಅಹಿಂಸೆಯನ್ನು ನಂಬಿ ತುಸು ದೂರ ಆ ಮಾರ್ಗದಲ್ಲಿ ನಡೆದ ಭಾರತರಾಷ್ಟ್ರಕ್ಕೆ ಸ್ವಾತಂತ್ರ್ಯ ಕೊಟ್ಟಾಗಲೂ ಅನಂತರವೂ ಬ್ರಿಟಿಷ್ ಸಾಮ್ರಾಜ್ಯ ಹಾಗೂ ಅಲ್ಲಿನ ವಿಚಾರವಂತ ಜನರಲ್ಲಿ ಕಂಡ ಪ್ರೇಮ ಮತ್ತು ಮೈತ್ರಿಗಳು ವಿಶ್ವದ ಇತಿಹಾಸದಲ್ಲಿಯೇ ಕಂಡರಿಯದ ಒಂದು ವಿನೂತನ ಅನುಭವ.

ಪೂರ್ಣ ಅಹಿಂಸೆ ಸಾಧ್ಯವೇ? ನೂರಕ್ಕೆ ನೂರರಷ್ಟು ಅಹಿಂಸೆಯ ಆಚರಣೆ ಮಾನವ ಮಾನವನಾಗಿರುವವರೆಗೂ ಸಾಧ್ಯವಾಗದೆಂಬುದೇ ಗಾಂಧೀಜೀಯವರ ಮತ. ಮಾನವ ತನ್ನ ಶರೀರ ಪೋಷಣೆಗಾಗಿ ಅನ್ನಪಾನೀಯಗಳನ್ನು ತೆಗೆದುಕೊಳ್ಳುವಾಗ ಅನೇಕ ಸಸ್ಯ ಹಾಗೂ ಸೂಕ್ಷ್ಮ ಕ್ರಿಮಿಗಳ ನಾಶ ಅವನಿಗರಿವಿಲ್ಲದೇ ನಡೆಯುತ್ತದೆ. ಆಹಾರಧಾನ್ಯಗಳನ್ನು ಬೆಳೆಯುವಾಗ ಮತ್ತು ದವಸಧಾನ್ಯಗಳನ್ನು ರಕ್ಷಿಸುವಾಗ ಅನೇಕ ಕ್ರಿಮಿಕೀಟಗಳ ನಾಶ ಅನಿವಾರ್ಯ. ಹುಚ್ಚಿದ್ದ ವ್ಯಕ್ತಿಯೊಬ್ಬ ತನ್ನೆದುರಿಗೆ ಕಂಡವರನ್ನೆಲ್ಲಾ ಕೊಲ್ಲುತ್ತ ಹೋಗುವಾಗ ಅವನನ್ನು ಗುಂಡಿಕ್ಕಿ ಕೊಲ್ಲುವುದು ಯುಕ್ತವಾಗಿಯೇ ಕಾಣುತ್ತದೆ. ಹಾಗೆಯೇ ವೈದ್ಯಕೊಟ್ಟ ಯಾವ ಔಷಧಿಗೂ ಮಣಿಯದ ನಿರಂತರ ವೇದನೆಯಿಂದ ಯಾತನೆಗೊಳ್ಳುತ್ತಿದ್ದ ತಮ್ಮ ಆಶ್ರಮದ ಕರು ಒಂದನ್ನು, ಕರುವಿನ ಮೇಲಿನ ಕರುಣೆಯಿಂದಲೇ ಕೊಲ್ಲಲು ಗಾಂಧೀಜಿಯವರೇ ಅನುಮತಿ ಕೊಟ್ಟದ್ದುಂಟು. ಪೋಲೀಸಿನವರಿಂದ ತಮ್ಮ ಹೆಂಡತಿ ಮಕ್ಕಳ ಮಾನಭಂಗವಾದದ್ದನ್ನು ಅಹಿಂಸಾಚರಣೆಯ ಹೆಸರಿನಲ್ಲಿ ಮೂಕ ಪ್ರೇಕ್ಷಕರಂತೆ ನೋಡಿ ಬಂದ ಬೆಟ್ಟಿಯ ಎಂಬ ಗ್ರಾಮದ ಜನರ ನಡತೆಯನ್ನು 'ಇದು ಕೇವಲ ಅಹಿಂಸೆಯ ದುರುಪಯೋಗ' ಎಂದು ಗಾಂಧೀಜಿಯವರೇ ಖಂಡಿಸಿದರು. ಅಹಿಂಸೆ ಸಾಧ್ಯವಾಗದಿದ್ದಾಗ ಹಿಂಸೆಯಿಂದಲಾದರೂ ಅವರ ಮಾನರಕ್ಷಣೆ ಮಾಡಬೇಕಾಗಿದ್ದಿತೆಂಬುದೇ ಗಾಂಧೀಜಿಯವರ ಅಭಿಮತ.

ಅಹಿಂಸೆಯ ಹೆಸರಿನಲ್ಲಿ ಮಾನವ ಹೇಡಿಯಾಗಬೇಕೆಂದು ಗಾಂಧೀಜಿ ಎಂದೂ ಬಯಸಲಿಲ್ಲ. ಹಿಂಸೆಯನ್ನು ಆತ್ಮಬಲದಿಂದ ಎದುರಿಸಲು ಕಲಿಯಬೇಕೆಂಬುದೇ ಅಹಿಂಸೆಯ ಮೂಲ ಸಂದೇಶ. ಹೇಡಿತನ ಮತ್ತು ಹಿಂಸೆ ಈ ಎರಡರ ನಡುವೆ ಯಾವುದಾದರೂ ಒಂದನ್ನು ಆರಿಸಬೇಕಾದಲ್ಲಿ ನಾನು ಹಿಂಸೆಯ ಮಾರ್ಗವನ್ನೆ ತುಳಿದೇನು ಎಂದು ಗಾಂಧೀಜಿ ಹೇಳಿದ್ದರು. ಅಂದಮೇಲೆ ಅಹಿಂಸೆ ಸಾಧ್ಯವಾಗದಾಗ ಹಿಂಸೆಯೇ ಮೇಲು, ಹೇಡಿತನವಂತೂ ಎಂದಿಗೂ ಕೂಡದು. ಗುಣಮಟ್ಟದಿಂದ ನಿರ್ಣಯಿಸಬಹುದಾದರೆ ಅಹಿಂಸೆಯೇ ಪರಮಧರ್ಮ, ಅದಕ್ಕೆ ಕೀಳಾದದ್ದು ಹಿಂಸೆ, ಹೇಡಿತನವಂತೂ ಅದಕ್ಕಿಂತ ಕೀಳಾದದ್ದು, ಅಂದಮೇಲೆ ಅಹಿಂಸೆಯನ್ನು ಗುರುತಿಸುವಾಗ ಕೇವಲ ಒಂದು ಕಾರ್ಯದ ಸ್ಥೂಲ ರೂಪವನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಸಾಲದು. ಅದರಲ್ಲಡಗಿರುವ ಉದ್ದೇಶ ಅದರಿಂದಾಗುವ ಫಲ ಮತ್ತು ಅದು ಅನುಸರಿಸುವ ಮಾರ್ಗ ಇವುಗಳ ಸಮಗ್ರ ಚಿತ್ರ ನಮ್ಮ ಕಲ್ಪನೆಗೆ ಬರಬೇಕು.

ಪೂರ್ಣ ಅಹಿಂಸೆಯ ಆಚರಣೆ ಒಂದು ಮಹದಾದರ್ಶ ಎನ್ನುವುದಂತೂ ನಿಜ. ಮಾನವನ ಬದುಕು ಸಾಧ್ಯವಾಗಬೇಕಾದರೆ ಸ್ವಲ್ಪಮಟ್ಟಿನ ಹಿಂಸೆ ಅನಿವಾರ್ಯವೆಂದೇ ಕಾಣುತ್ತದೆ. ಇದನ್ನು ವ್ಯಾವಹಾರಿಕವಾಗಿ ಗುರುತಿಸಿದ ಗಾಂಧೀಜಿ, ಹಿಂಸೆಯ ವಲಯವನ್ನು ಆದಷ್ಟು ಕಡಿಮೆ ಮಾಡುವುದು ಮಾನವನ ಪ್ರಗತಿಯ ಚಿಹ್ನೆ ಎಂದರು. ಈ ರೀತಿಯ ಅತ್ಯಲ್ಪ ಹಿಂಸೆ ತನ್ನ ಬದುಕಿಗೆ ಅನಿವಾರ್ಯ ಹಾಗೂ ಇದು ತನ್ನ ದೌರ್ಬಲ್ಯವೇ ಸರಿ ಎಂದರಿತು ಮಾನವ ಹೆಚ್ಚು ನಮ್ರತೆಯಿಂದ ಜಗತ್ತಿನಲ್ಲಿ ವ್ಯವಹರಿಸುವಂತಾಗಬೇಕು ಎಂದು ಗಾಂಧೀಜಿ ಹೇಳಿದರು.

ತಮ್ಮ ಬಾಳಪರ್ಯಂತ ಗೌರವಿಸಿ ಆಚರಿಸುತ್ತಿದ್ದ ಅಸ್ತೇಯ, ಅಸಂಗ್ರಹ, ಬ್ರಹ್ಮಚರ್ಯ, ಶರೀರಶ್ರಮ, ಸರ್ವಧರ್ಮಸಮಾನತ್ವ, ಸ್ವದೇಶಿ ಮುಂತಾದ ಏಕಾದಶ ವ್ರತಗಳೂ ಮೂಲತಃ ಸತ್ಯ ಮತ್ತು ಅಹಿಂಸೆಯ ಪೂರಕ ತತ್ತ್ವಗಳೇ ಎಂದು ಗಾಂಧೀಜಿ ಗ್ರಹಿಸಿದ್ದರು. ನಮ್ಮ ಅವಶ್ಯಕತೆಗಿಂತಲೂ ಹೆಚ್ಚಾಗಿ ಸಂಗ್ರಹಿಸಿಡುವುದು ಅನ್ಯರ ಅವಶ್ಯಕತೆಗಳನ್ನು ಮರೆತು ನಾವು ಅವರಿಗೆಸಗಿದ ಹಿಂಸೆ ಇಲ್ಲವೇ ಅಪಚಾರ, ತಮ್ಮ ಬಳಕೆಗೆ ಬೇಕಾಗುವುದಕ್ಕಿಂತಲೂ ಮಿಗಿಲಾಗಿ ಸಂಗ್ರಹಿಸಿಡುವ ಪೀಠೋಪಕರಣ, ಉಡುಪು ವಸ್ತ್ರಗಳಿಂದಲೂ ತಾವು ಅಹಿಂಸಾಚರಣೆಯ ಉಲ್ಲಂಘನೆ ಮಾಡುತ್ತೇವೆಂದೂ ಗಾಂಧೀಜಿ ಯೋಚಿಸಿದರು. ಈ ಭಾವನೆಯ ಫಲವಾಗಿಯೇ ತಮ್ಮ ವಸ್ತ್ರ ಉಡುಪುಗಳಲ್ಲಿವರು ನಿರಾಡಂಬರವನ್ನು ಕ್ರಮಕ್ರಮವಾಗಿ ಸಾಧಿಸಿದರು.

ಅಹಿಂಸೆಯ ತತ್ತ್ವದಲ್ಲಿ ಅಂತರ್ಗತವಾಗಿರುವ ಸೂಕ್ಷ್ಮ ಅಂಶಗಳು ಇನ್ನೂ ಅಗಾಧವಾಗಿದ್ದು ಅವುಗಳ ವೈಜ್ಞಾನಿಕ ಸಂಶೋಧನೆ ಮಾನವವಂಶ ಇರುವವರೆಗೂ ನಡೆದುಕೊಂಡು ಹೋಗುತ್ತದೆಂಬುದಕ್ಕೆ ಗಾಂಧೀಜಿ ಮತ. ಅಹಿಂಸೆಯತ್ತ ಕ್ರಮಗತಿಯಲ್ಲಿ ಬೆಳೆಯುತ್ತಿರುವುದೇ ಮಾನವನ ಇತಿಹಾಸ. ಮೃಗಗಳ ಬೇಟೆಯಿಂದ ಜೀವಿಸುತ್ತಿದ್ದ ಆದಿಮಾನವ ಅಹಿಂಸೆಯ ಜಾಡನ್ನು ತುಳಿದಂತೆಲ್ಲ ಕೃಷಿಯಿಂದ ಬದುಕಲು ಕಲಿತ. ಸೂಕ್ಷ್ಮಸಂವೇದಿಯಾದ ಮಾನವನಿಗೆ ಹಿಂಸೆ ಏಕೋ ಮುಜುಗರವೆನಿಸಿತೆಂಬುದು ಮಾನವನ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಮಗೆ ಕಂಡುಬರುತ್ತದೆ.

**ಅಹಿಂಸೆ ಹಾಗೂ ಸತ್ಯಾಗ್ರಹ:** ಅಸತ್ಯದೊಡನೆ ಮಾಡುವ ಅಸಹಕಾರವನ್ನು ಅಥವಾ ಸತ್ಯಕ್ಕಾಗಿ ಎಸಗುವ ಆಗ್ರಹವನ್ನು ಗಾಂಧೀಜಿ ಸತ್ಯಾಗ್ರಹ ಎಂದು ಕರೆದರು. ಈ ಅಸಹಕಾರ ಯಾವ ಕಾರಣದಿಂದಲೂ ಅಹಿಂಸೆಗೆ ವಿರುದ್ಧವಾಗುವಂತಿಲ್ಲ. ಅದು ಹಿಂಸಾತ್ಮಕವಾದರೆ ಆಗ ಅದು ದುರಾಗ್ರಹವೆನಿಸುತ್ತದೆ. ಆದ್ದರಿಂದಲೇ ಸತ್ಯಾಗ್ರಹಿ ಪೂರ್ಣ ಅಹಿಂಸವಾದಿಯಾಗಬೇಕೆಂಬ ನಿಯಮ. ತಾನು ಮಾಡುವ ಅಸಹಕಾರದಿಂದ ಎದುರಾಳಿಗೆ ಯಾವ ರೀತಿಯಿಂದಲೂ ಕೇಡುಕಾಗಬಾರದು. ಸತ್ಯಾಗ್ರಹಿ ಸದಾ ಎದುರಾಳಿಯ ಒಳಿತನ್ನೇ ಗಮನದಲ್ಲಟ್ಟಿರಬೇಕು. ಅಸತ್ಯಕ್ಕಂಟಿದ ಅವನ ಮನಸ್ಸನ್ನು ಪರಿವರ್ತಿಸಿ ಅವನ ಆತ್ಮೋನ್ನತಿಗೆ ಸಹಾಯ ಮಾಡುವುದೇ ಈ ಸತ್ಯಾಗ್ರಹದ ಮೂಲ ಉದ್ದೇಶ. ಎದುರಾಳಿಯಿಂದ ಸತ್ಯಾಗ್ರಹಿಗೆ ಎಷ್ಟೇ ನೋವಾದರೂ ಅದನ್ನು ಸಹಿಸುವ ಹೊಣೆಗಾರಿಕೆ ಇವನದು. ಸತ್ಯಾಗ್ರಹಿಯಲ್ಲಿ ಯಾವ ರಹಸ್ಯ, ಗುಟ್ಟು ಇಲ್ಲವೇ, ಕುತಂತ್ರವೂ ಇರಬಾರದು. ಸತ್ಯಾಗ್ರಹಿ ತಾನು ಮಾಡುವ ಕಾರ್ಯವಿಧಾನಗಳನ್ನೆಲ್ಲ ಪೂರ್ವಭಾವಿಯಾಗಿ ಎದುರಾಳಿಗೆ ತಿಳಿಸಿ ಅವನು ಅದಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲ ಮಾಡಿಕೊಳ್ಳಲು ನೆರವಾಗಬೇಕು. ಆ ಕಾರಣದಿಂದಲೇ ಗಾಂಧೀಜಿಯವರು ತಾವೆಸಗಿದ ಎಲ್ಲ ಸತ್ಯಾಗ್ರಹಗಳಿಗೂ ಮುನ್ನ ಅದರ ಕ್ರಮ ಮತ್ತು ಉದ್ದೇಶಗಳನ್ನು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿ ಅವರಿಗೆ ಯಾವ ರೀತಿಯ ಇಕ್ಕಟ್ಟೂ ಆಗದಂತೆ ನೋಡಿಕೊಳ್ಳುತ್ತಿದ್ದರು. ಇಷ್ಟೆಲ್ಲ ಏಕೆಂದರೆ ಸತ್ಯಾಗ್ರಹದಲ್ಲಿ ಹಿಂಸೆ ವರ್ಜ್ಯ.

ಗಾಂಧೀಜಿಯವರ ಅಭಿಪ್ರಾಯ ಅಹಿಂಸಾಚರಣೆಯ ಹೊಣೆಗಾರಿಕೆ ಮಿಕ್ಕೆಲ್ಲ ರಾಷ್ಟ್ರಗಳಿಗಿಂತಲೂ ಭಾರತಕ್ಕೆ ಹೆಚ್ಚು – ಎಂದು. ಅನೇಕ ಶತಮಾನಗಳ ದಾರ್ಶನಿಕ ಪರಂಪರೆಯನ್ನು ಹೊಂದಿರುವ ಭಾರತ ಅಹಿಂಸಾಚರಣೆಯಲ್ಲಿ ಮಿಕ್ಕ ರಾಷ್ಟ್ರಗಳಿಗಿಂತಲೂ ಮುಂದೆ ಹೋಗಿ ವಿಶ್ವಕ್ಕೆ ಅಹಿಂಸೆಯ ಸಂದೇಶ ನೀಡುವಂತಾಗಬೇಕು. – ಗಾಂಧೀಜಿಯವರ ಈ ನಂಬಿಕೆಗೆ ಪುಷ್ಟಿ ದೊರೆಯುವಂಥ ಕೆಲವು ನಿದರ್ಶನಗಳು ಇತ್ತೀಚಿನ ಕಾಲದಲ್ಲಿ ನಡೆಯುತ್ತಿರುವುದು ಒಂದು ಆಶಾದಾಯಕ ಚಿಹ್ನೆ. ಅಮೆರಿಕದ ನೀಗ್ರೋ ಜನ ವರ್ಣ ವೈಷಮ್ಯಕ್ಕೆ ಸಿಲುಕಿ ತೊಳಲಾಡುತ್ತಿದ್ದಾಗ ಗಾಂಧೀಜಿಯವರ ಅಹಿಂಸಾತತ್ತ್ವದಿಂದ ಪ್ರೇರಿತನಾದ ಮಾರ್ಟಿನ್ ಲೋಥರ್ ಕಿಂಗ್ ದ್ವೇಷರಹಿತ ಹೋರಾಟದಿಂದ ಬಿಳಿ ಜನರ ಮನಸ್ಸನ್ನೂ ಮಾರ್ಪಡಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾದ ನಿದರ್ಶನ ಇನ್ನೂ ಅಚ್ಚ ಹಸುರಾಗಿದೆ. 20ನೆಯ ಶತಮಾನದಲ್ಲಿ ಬಹು ವಿಚಾರಪರ ದಾರ್ಶನಿಕನೆನಿಸಿದ ಬರ್ಟ್ರೆಂಡ್ ರಸಲ್ ಯುದ್ಧ ದಾಹದಿಂದ ಉನ್ಮತ್ತರಾಗಿ, ವಿನಾಶಕಾರಕವಾದ ಅಣ್ವಸ್ತ್ರಗಳನ್ನು ಸೃಷ್ಟಿಸಿ, ಸರ್ವನಾಶಕ್ಕೆ ಉದ್ಯುಕ್ತರಾಗಿದ್ದ ಶಕ್ತ ರಾಷ್ಟ್ರಗಳ ಮನ ಒಲಿಸಲು ಬಳಸಿದ ಅಸ್ತ್ರದ ಸ್ವರೂಪವಾದರೂ ಏನು? ಶಾಂತಿಪ್ರಿಯರಾದ ಜನರೆನ್ನೆಲ್ಲ ತಮ್ಮ ಹಿಂದೆ ಸಾಲ್ಗೂಡಿಸಿ ಲಂಡನ್ ನಗರದ ಬೀದಿಗಳಲ್ಲಿ ಕಿಲೋಮೀಟರ್ ಗಟ್ಟಳೆ, ಮಳೆ ಚಳಿಯನ್ನು ಲೆಕ್ಕಿಸದೆ, ಪಾದಯಾತ್ರೆ ನಡೆಸಿ ವಿಶ್ವದ ಜನತೆಯ ಅಭಿಪ್ರಾಯವನ್ನೆಲ್ಲ ಶಾಂತಿಯ ಸಂದೇಶದತ್ತ ವಾಲುವಂತೆ ಮಾಡಿದ ರಸಲ್ಲನ ಈ ಮಾರ್ಗ ಗಾಂಧೀಜಿಯವರ ದಂಡಿಯಾತ್ರೆಯ ಪುನಃ ಸ್ಮರಣೆಯಂತಿದೆ.

ಹಾಗೆ ನೋಡುವುದಾದರೆ ಮಾನವ ಅನಾದಿಕಾಲದಿಂದ ಹಿಂಸಾಮಾರ್ಗವನ್ನು ತುಳಿದು ಅದರಲ್ಲಿ ನೂರಾರು ಪ್ರಯೋಗಗಳನ್ನು ಮಾಡಿ ಅದರಿಂದ ಈಗ ಬೇಸತ್ತಿದ್ದಾನೆ. ಅದು ಈಗ ಗತಕಾಲದ ಪಳೆಯುಳಿಕೆಯಂತಿದೆ. ಆದ್ದರಿಂದಲೇ ಈಗ ಅವನು ಅಹಿಂಸೆಯ ಅರುಣೋದಯದತ್ತ ಆಶಾವಾದಿಯಾಗಿ ಕಣ್ತೆರೆಯುತ್ತಿದ್ದಾನೆ. (ಎ.ಎಲ್.ಎಸ್.)

**ಗಾಂಧೀಯವರ ಅನಾಸಕ್ತಿಯೋಗ:** ಗಾಂಧೀಯವರ ಜೀವನದರ್ಶನವನ್ನು ಒಂದು ಮಾತಿನಲ್ಲಿ ಹೇಳಬೇಕೆಂದರೆ ಅದನ್ನು ಅನಾಸಕ್ತಿಯೋಗ ಎಂದೇ ಕರೆಯಬಹುದಾದರೂ ಈ ಮಾತನ್ನು ಅವರು ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಬಳಸಿದ್ದಾರೆ. ಭಗವದ್ಗೀತೆಯಲ್ಲಿ ತಾವು ಕಂಡ ತಾತ್ತ್ವಿಕ ಸ್ವರೂಪವೇನೆಂಬುದನ್ನು ವಿವರಿಸುವಾಗ ಅನಾಸಕ್ತಿಯೋಗ ಎಂಬ ಮಾತನ್ನು ಅವರು ವಿಶಿಷ್ಟವಾಗಿ ಬಳಸಿದ್ದಾರೆ. ತಮ್ಮ ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ತಮ್ಮ ನಡೆ ನುಡಿಯ ಕೈಪಿಡಿಯಂತಿದ್ದು ತಮಗೆ ಮಾರ್ಗದರ್ಶನವಿತ್ತ ಭಗವದ್ಗೀತೆಯ ವಿಚಾರದಲ್ಲಿ ಗಾಂಧೀಯವರಿಗೆ ಅಪಾರ ಗೌರವ, ಅದರ ವಿಚಾರದಲ್ಲಿ ತಮಗಿದ್ದ ಭಕ್ತಿಗೌರವಗಳನ್ನು ವಿವರಿಸಲು ಅತ್ಯಂತ ಗಂಭೀರವಾದ ಹಾಗೂ ಮನಮುಟ್ಟುವಂಥ ರೂಪಕಗಳನ್ನವರು ಬಳಸುತ್ತಾರೆ. ತಮ್ಮ ಭೌತ ಶರೀರಕ್ಕೆ ಜನ್ಮವಿತ್ತು ಸಲಹಿದ ತಾಯಿ ಹೇಗೋ ಹಾಗೆಯೇ ತಮ್ಮ ಆಂತರಿಕ ವ್ಯಕ್ತಿತ್ವಕ್ಕೆ ಪೋಷಣೆಯಿತ್ತು, ಅವರ ಧಾರ್ಮಿಕ ಶ್ರದ್ಧೆಗೆ ನೀರೆರೆದು ಬೆಳೆಸಿದ ಭಗವದ್ಗೀತೆ ಅವರಿಗೆ ಜೀವಂತ ಮಾತೆ. ಆ ಕಾರಣದಿಂದ ಅವರು ಗೀತೆಯನ್ನು ಗೀತಾಮಾತೆ ಎಂದು ಸಂಬೋಧಿಸಿದರು. ಪ್ರಯೋಗಾತ್ಮಕವಾಗಿ ಬಾಳಿದ ತಮ್ಮ ದೈನಂದಿನ ಬದುಕಿನಲ್ಲಿ ತಮಗೊದಗಿದ ಧಾರ್ಮಿಕ ಸಮಸ್ಯೆಗಳಿಗೆಲ್ಲಾ ಗೀತೆಯಲ್ಲಿ ತಪ್ಪದೇ ಪರಿಹಾರ ದೊರೆತದ್ದರಿಂದ ಅದು ಅವರ ಭಾಗದ ಕಾಮಧೇನು. ಅಷ್ಟೇ ಏಕೆ, ಅದು ಅವರ ಧಾರ್ಮಿಕ ಸಮಸ್ಯೆಗಳ ಅರ್ಥಕೋಶ. ಆತ್ಮದರ್ಶನಕ್ಕೆ ಭಗವದ್ಗೀತೆಯಲ್ಲಿ ಅದ್ವಿತೀಯ ಮಾರ್ಗ ಒಂದಿದೆ ಎಂಬುದನ್ನು ಅವರು ಚೆನ್ನಾಗಿ ಗ್ರಹಿಸಿದ್ದರೆಂಬುದಕ್ಕೆ ಈ ಮಾತುಗಳೇ ಸಾಕ್ಷಿ.

ವೈಜ್ಞಾನಿಕ ಯುಗದ ಶಿಶುವಾದ ಯುವಕ ಗಾಂಧಿ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಥಿಯಾಸಫಿಸ್ಟ್ ಸೋದರರಿಬ್ಬರಿಂದಾಗಿ ಮೊಟ್ಟಮೊದಲಿಗೆ ಭಗವದ್ಗೀತೆಯನ್ನು ಓದಿ ಅದರಿಂದ ಸ್ವಲ್ಪಮಟ್ಟಿಗೆ ಪ್ರಭಾವಿತರಾದರು. ದಿನಕಳೆದಂತೆಲ್ಲ ಅವರಿಗೆ ಗೀತೆಯ ಆಕರ್ಷಣೆ ಹೆಚ್ಚುತ್ತ ಬಂದು ಕೊನೆಗೆ ತತ್ತ್ವಜ್ಞಾನಕ್ಕೆ ಅದೇ ಸರ್ವೋತ್ತಮ ಗ್ರಂಥ ಎಂದೆನ್ನುವಂತಾಯಿತು. ಈ ರೀತಿಯ ವಿಶಿಷ್ಟವಾದ ಅನುಭವಕ್ಕೆ ಅವರಿಗೆ ಸ್ವಭಾವಜನ್ಯವಾಗಿ ಬಂದಿದ್ದ ಧಾರ್ಮಿಕ ತೃಷೆಯೇ ಬಹುಮಟ್ಟಿಗೆ ಕಾರಣವೆನ್ನಬಹುದು. ಗೀತೆಯ ಸಾರಸರ್ವಸ್ವವನ್ನೂ ತಿಳಿಯಬೇಕೆಂಬ ದಾಹ ಹೆಚ್ಚುತ್ತ ಬಂದಂತೆ, ಅದರ ವಿಚಾರದಲ್ಲಿ ಸಂಪ್ರದಾಯಬದ್ಧವಾದ ಭಾಷ್ಯಗಳೇ ಅಲ್ಲದೆ ಟಿಳಕರಂಥ ಪ್ರಾಜ್ಞರ ಪಾಂಡಿತ್ಯಪೂರ್ಣ ವ್ಯಾಖ್ಯೆಗಳನ್ನು ಓದು ನೋಡಿದರು. ಭಗವದ್ಗೀತೆಯನ್ನು ಪಂಡಿತರ ಭಾಷ್ಯಗಳೊಂದಿಗೆ ಓದಿದಾಗ ಗಾಂಧಿಗೆ ಅಷ್ಟೊಂದು ತೃಪ್ತಿ ದೊರೆತಂತೆ ಕಾಣಲಿಲ್ಲ. ಆದ್ದರಿಂದ ಪಾಂಡಿತ್ಯದ ಭಾರವನ್ನು ತೊರೆದು ಕೇವಲ ಉಪಾಸಕನಾಗಿ ಅತ್ಯಂತ ನಮ್ರತೆಯಿಂದ ಗೀತೆಯನ್ನು ಮೊರೆಹೊಕ್ಕಾಗ ಅದರಷ್ಟು ಸುಲಭಸಾಧ್ಯವಾದ ಧಾರ್ಮಿಕ ಗ್ರಂಥ ಮತ್ತೊಂದಿಲ್ಲ ಎಂಬುದು ಅವರಿಗೆ ಅರಿವಾಯಿತು.

ಸ್ಥೂಲವಾಗಿ ನೋಡಿದರೆ, ಯುದ್ಧದಿಂದ ವಿಮುಖನಾದ ಕ್ಷತ್ರಿಯ ಶ್ರೇಷ್ಠನಾದ ಅರ್ಜುನನನ್ನು ಯುದ್ಧೋನ್ಮುಖವಾಗಿ ಮಾಡಲು ಭಗವಾನ್ ಶ್ರೀಕೃಷ್ಣ ಕೊಟ್ಟ ಸಂದೇಶವೇ ಭಗವದ್ಗೀತೆ. ಕರ್ತವ್ಯ ವಿಮೂಢನಾಗಿದ್ದ ವೀರನಲ್ಲಿ ಕರ್ತವ್ಯದ ಸ್ಮರಣೆಯನ್ನು ಮೂಡಿಸಿ ಅವನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಲು, ಭಗವಂತ ಒಟ್ಟು ಸೃಷ್ಟಿಯ ರಹಸ್ಯ ಮತ್ತು ಉದ್ದೇಶ, ಅದರಲ್ಲಿ ಪ್ರಜ್ಞಾಶೀಲನಾದ ಮಾನವನ ಪಾತ್ರ, ಧರ್ಮಾಧರ್ಮಗಳ ನೈಜಸ್ವರೂಪವೇ ಮುಂತಾದ ಉಪನಿಷತ್ತಿನ ಸಾರಸರ್ವಸ್ವವಾದ ದಾರ್ಶನಿಕ ತತ್ತ್ವಗಳನ್ನೆಲ್ಲ ಪ್ರಾಸಂಗಿಕವಾಗಿ ವಿವರಿಸುತ್ತಾನೆ. ಗೀತಾಚಾರ್ಯನ ಈ ವಿವರಣೆಯಲ್ಲಿ ಭಕ್ತಿ, ಕರ್ಮ, ಜ್ಞಾನ ಹಾಗೂ ಅಭ್ಯಾಸಯೋಗಗಳು ಹಾಸುಹೊಕ್ಕಾಗಿ ಬೆಳೆದು ಬರುತ್ತವೆ.

ಅರ್ಜುನನಲ್ಲಿ ಕರ್ತವ್ಯಸ್ಮರಣೆಯನ್ನುಂಟುಮಾಡುವುದೇ ಗೀತೆಯ ಪರಮ ಧ್ಯೇಯವಾದ್ದರಿಂದ ಇದು ಕರ್ಮಯೋಗದ ಒಂದು ವ್ಯಾಖ್ಯಾನ ಎಂದು ಟಿಳಕ ಮುಂತಾದವರು ಮಾಡಿದ ಸಿದ್ಧಾಂತವನ್ನು ಗಾಂಧಿ ಗೌರವದಿಂದಲೇ ಓದಿ ತಿಳಿದುಕೊಂಡರು. ಆದರೆ ತಾವು ತಮ್ಮ ಜೀವನಪರ್ಯಂತ ಸಾಧಿಸುತ್ತ ಬಂದ ಅಹಿಂಸೆಯ ಸಂದೇಶವನ್ನು ಭಗವದ್ಗೀತೆಯಲ್ಲಿ ಕಂಡದ್ದು ಅವರ ಒಂದು ವೈಶಿಷ್ಟ್ಯ. ತಮ್ಮ ಈ ಅನುಭವವನ್ನು ವಿವರಿಸಲು ಅಲ್ಲೊಂದು ಇಲ್ಲೊಂದು ಗೀತಾ ಶ್ಲೋಕಗಳನ್ನು ಅವರು ಉದಾಹರಿಸುತ್ತಿದ್ದುದುಂಟು. ಇದನ್ನು ಕಂಡ ಇವರ ಮಿತ್ರರು, ಅದರಲ್ಲಿಯೂ ಮುಖ್ಯವಾಗಿ ಅವರ ಆತ್ಮಕಥನವನ್ನು ಬರೆಯಲು ಪ್ರೇರೇಪಿಸಿದ ಸ್ವಾಮಿ ಆನಂದರು ಗಾಂಧೀಜಿ ತಾವು ಕಂಡ ರೀತಿಯಲ್ಲಿ ಇಡೀ ಭಗವದ್ಗೀತೆಯನ್ನು ಏಕೆ ವಿವರಿಸಬಾರದು ಎಂಬ ಸೂಚನೆಯನ್ನು ಕೊಟ್ಟರು. ಅದರ ಫಲವಾಗಿ ಗಾಂಧೀಜಿ ಭಗವದ್ಗೀತೆಗೆ ಅತ್ಯಂತ ಸುಲಭವಾದ ರೀತಿಯಲ್ಲಿ, ಗುಜರಾತಿಭಾಷೆಯಲ್ಲಿ ಅರ್ಥವಿವರಣೆ ಬರೆದರು. ಗೀತೆಗೆ ಈ ರೀತಿ ವಿವರಣೆ ಬರೆಯಲು ತಮಗೆ ಪಾಂಡಿತ್ಯದ ಅರ್ಹತೆ ಏನೂ ಇಲ್ಲವೆಂಬುದನ್ನು ಚೆನ್ನಾಗಿ ಮನಗಂಡಿದ್ದ ಅವರು, ಗೀತೆಯ ಮಾರ್ಗದರ್ಶನದಲ್ಲಿ ತಾವು ಬದುಕಿದ ನಲವತ್ತುವರ್ಷಗಳ ಪ್ರಯೋಗಾತ್ಮಕ ಜೀವನದ ಅನುಭವದ ಹಿನ್ನೆಲೆಯಲ್ಲಿ ಈ ಪ್ರಯತ್ನ ಮಾಡಿದ್ದೇನೆಂದು ಸ್ಪಷ್ಟಪಡಿಸಿದ್ದಾರೆ.

ಮಹಾಭಾರತವನ್ನು ಶ್ರದ್ಧೆಯಿಂದ ಓದಿ, ಮಹಾಭಾರತದ ಕರ್ತೃ ಭೌತಿಕ ಯುದ್ಧದ ನಿರರ್ಥಕತೆಯನ್ನು ಸಿದ್ಧಾಂತಪಡಿಸುವಲ್ಲಿ ಪೂರ್ಣ ಯಶಸ್ವಿಯಾಗಿದ್ದಾನೆಂಬುದನ್ನು ಗಾಂಧೀಜಿ ಮನಗಂಡರು. ಮಹಾಭಾರತದ ಕೊನೆಯಲ್ಲಿ ವ್ಯಾಸರು ಗೆದ್ದವರನ್ನು ಅಳಿಸಿ ಅದಕ್ಕಾಗಿ ಅವರು ಪಶ್ಚಾತ್ತಾಪ ಪಡುವಂತೆ ಮಾಡಿದ್ದಾರೆ. ಸೋತು ಸತ್ತವರಿಗಿಂತಲೂ ಗೆದ್ದು ಉಳಿದವರೇನು ಹೆಚ್ಚು ಸುಖಪಟ್ಟಂತೆ ಕಾಣುವುದಿಲ್ಲ. ಅಂದ ಮೇಲೆ ಮಹಾಭಾರತಕ್ಕೆ ಮಕುಟಪ್ರಾಯವಾದ ಭಗವದ್ಗೀತೆಯಲ್ಲಿ, ದಾರ್ಶನಿಕ ಕವಿ ವ್ಯಾಸರು, ಅರ್ಜುನನನ್ನು ಇಂಥ ನಿರರ್ಥಕವಾದ ಭೌತಿಕ ಯುದ್ಧಕ್ಕೆ ಧರ್ಮದ ಹೆಸರಿನಲ್ಲಿ ಪ್ರಚೋದಿಸಿದರೆಂಬುದು ಮೂಲ ಗ್ರಂಥದ ಧ್ವನಿ ನಿರೂಪಣೆಗೆ ಸರಿ ಹೊಂದುವಂತೆ ಗಾಂಧೀಜಿಗೆ ಕಾಣಲಿಲ್ಲ. ಆದ್ದರಿಂದ ಗೀತೆಯ ಮೊದಲ ಅಧ್ಯಾಯದಲ್ಲಿ ಬರುವ ಕುರುಕ್ಷೇತ್ರದ ರಣರಂಗ ಕವಿಯ ಒಂದು ಉಪಮೆ ಮಾತ್ರವಾಗಿ ಗಾಂಧೀಜಿಗೆ ಕಂಡಿತು. ಅಷ್ಟೇ ಅಲ್ಲ ರಣರಂಗದಲ್ಲಿ ಕಾದಲು ನಿಂತ ಇಕ್ಕೆಲದ ಸೇನೆಗಳೂ ಸಾಂಕೇತಿಕವೆಂದೇ ಅವರು ಗ್ರಹಿಸಿದರು. ಗೀತೆಯಲ್ಲಿ ಎಲ್ಲೆಲ್ಲಿ ಸಂಹಾರದ ಪ್ರಸ್ತಾಪ ಬರುತ್ತದೋ ಅಲ್ಲೆಲ್ಲ ಬೇರೆ ಅರ್ಥವಿರಬೇಕೆಂಬ ಮನವರಿಕೆ ಅವರಿಗಾಯಿತು. ಪ್ರತಿ ಮಾನವನ ಹೃದಯದಲ್ಲಿಯೂ ಸದಾ ಒಳ್ಳಿತು ಕೆಟ್ಟದು, ಯುಕ್ತ ಅಯುಕ್ತ, ಧರ್ಮ ಅಧರ್ಮಗಳ ನಡುವೆ ಹೋರಾಟ ನಡೆಯುತ್ತಲೇ ಇರುತ್ತದೆ. ಈ ಹೋರಾಟದಲ್ಲಿ ಕೊನೆಗಂತೂ ಧರ್ಮಕ್ಕೆ ಜಯ ಖಂಡಿತ. ಈ ಸಂದೇಶವನ್ನು ಸಾರುವುದೇ ಗೀತೆಯ ಉದ್ದೇಶ. ಇದಕ್ಕಾಗಿ ಕುರುಕ್ಷೇತ್ರದಂಥ ಒಂದು ರೂಪಕವನ್ನು ಬಳಸಿಕೊಂಡು ಬಹು ಮಾರ್ಮಿಕವಾಗಿ ಈ ಉದ್ದೇಶವನ್ನು ವ್ಯಾಸರು ಸಾಧಿಸಿದ್ದಾರೆಂಬುದು ಗಾಂಧೀಜಿ ಮತ.

ಈ ಹಿನ್ನೆಲೆಯಲ್ಲಿ ನೋಡಿದಾಗ ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ ಕರ್ತವ್ಯ ಪ್ರಜ್ಞೆಯ ಸ್ವರೂಪವೇ ಬೇರೆಯಾಗಿ ಕಾಣುತ್ತದೆ. ಈ ಬೋಧನೆಯಲ್ಲಿ ಗಾಂಧೀಜಿಯವರಿಗೆ ಅಹಿಂಸೆಯೇ ಮೂರ್ತಿವೆತ್ತಂತಿದೆ. ಇದನ್ನು ತಿಳಿಯಬೇಕಾದರೆ ಶಸ್ತ್ರ ಸಂನ್ಯಾಸ ಮಾಡಿನಿಂತ ಅರ್ಜುನನ ಮಾನಸಿಕ ಸ್ಥಿತಿಯನ್ನು ಸ್ವಲ್ಪ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹುಟ್ಟುವೀರನಾದ ಅರ್ಜುನ ಯುದ್ಧಕ್ಕೆ ಹೊಸಬನಲ್ಲ; ಮಾನವರ ಮೇಲೆ ಏಕೆ, ಪರಮೇಶ್ವರನೊಂದಿಗೆ ಕಾದಿ ಪಾಶುಪತಾಸ್ತ್ರವನ್ನು ಪಡೆದ ಕಡುಗಲಿ. ಅಂದರೆ ಹಿಂಸೆಗೆ ಹೆದರುವ ಸ್ವಭಾವ ಇವನದಲ್ಲ. ಅಹಿಂಸೆ ಇವನ ಜಾಯಮಾನದಲ್ಲಿ ಈವರೆಗೂ ಕಂಡುಬಂದಿಲ್ಲ. ಕುರುಕ್ಷೇತ್ರದ ರಣರಂಗದಲ್ಲಿ ತನ್ನೆದುರಿಗೆ ಹೋರಾಡಲು ನಿಂತ ಕೌರವಸೇನೆಯಲ್ಲಿ ತನ್ನ ಗುರುಹಿರಿಯರಾದ ದ್ರೋಣ, ಭೀಷ್ಮ ಮುಂತಾದವರನ್ನು ಕಂಡು ಇವನು ಶಸ್ತ್ರಸಂನ್ಯಾಸದ ಮಾತನ್ನಾಡುತ್ತಾನೆ. ಇವನು ಕೇವಲ ತನ್ನ ಬಂಧು ಬಾಂಧವರನ್ನು ಕೊಲ್ಲಲು ಹಿಂದೆಗೆಯುತ್ತಾನೆಯೆ ಹೊರತು ಹಿಂಸೆಗೆ ಮನ ಒಗ್ಗದೆ ಯುದ್ಧದಿಂದ ವಿಮುಖನಾಗುತ್ತಿಲ್ಲ. ಆದ್ದರಿಂದ ಅರ್ಜುನನಲ್ಲಿ ಕಾಣುವ ವಿಷಾದ ಅಹಿಂಸೆಯಿಂದ ಅಥವಾ ವಿರಾಗದಿಂದ ಮೂಡಿಬಂದ ವಿಷಾದವಲ್ಲ. ಅದು ಒಂದು ರೀತಿಯ ವ್ಯಾಮೋಹದಿಂದ ಮೂಡಿಬಂದಿದೆ. ಇಂಥ ಹೃದಯದೌರ್ಬಲ್ಯದವನಿಗೆ ಅಹಿಂಸೆ ಸಾಧ್ಯವಿಲ್ಲ. ಅರ್ಜುನನಲ್ಲಿ ಕಂಡ ಈ ಕ್ಷಿಪ್ರವೈರಾಗ್ಯ ಗಂಟೆಗೆ ಅರವತ್ತು ಕಿಲೋಮೀಟರ್ ವೇಗದಲ್ಲಿ ಓಡುವ ರೈಲಿನಲ್ಲಿ ಕುಳಿತವನು ಪ್ರವಾಸಕ್ಕೆ ಬೇಸತ್ತು

ಓಡುವ ಗಾಡಿಯಿಂದ ದುಮುಕುವವನ ಸ್ಥಿತಿಯಂತೆ – ಎಂದು ಗಾಂಧೀಜಿ ವಿವರಿಸುತ್ತಾರೆ. ಈ ಕಾರಣದಿಂದ ನಿಜವಾದ ಅಹಿಂಸೆ ಅಥವಾ ವೈರಾಗ್ಯ ಸಾಧ್ಯವಾಗದ ಅರ್ಜುನನಿಗೆ ನಿಜವಾದ ನಿಷ್ಕಾಮ ಕರ್ಮದ ಸ್ವಭಾವವೇನೆಂಬುದನ್ನು ಶ್ರೀಕೃಷ್ಣ ಬೋಧಿಸಿರುವುದು, ಗಾಂಧೀಜಿಗೆ ಅತಿಸೂಕ್ತವಾಗಿ ಕಂಡಿತು.

ನಿಷ್ಕಾಮ ಕರ್ಮಕ್ಕೆ ಗಾಂಧೀಜಿ ಕೊಡುವ ವ್ಯಾಖ್ಯಾನ ಬಹು ವಿಶಿಷ್ಟವಾದದ್ದು, ಗೀತೆಯಲ್ಲಿ ಬೋಧಿಸುವ ನಿಷ್ಕಾಮಕರ್ಮ ನಿಜವಾಗಿಯೂ ಕಾರ್ಯಸಾಧ್ಯವೇ ಎಂದು, ಬಾಳಪರ್ಯಂತ ಮಾನವಸೇವೆಗೆ ತಮ್ಮನ್ನು ಮುಡಿಪಿಟ್ಟಂಥ ಅನೇಕ ಮಾನವತಾವಾದಿಗಳು ಅನುಮಾನಪಟ್ಟಿದ್ದಾರೆ. ಫಲಾಪೇಕ್ಷೆ ಇಲ್ಲದೆ ಕಾರ್ಯ ಮಾಡಬೇಕೆಂಬ ಗೀತಾಸಂದೇಶ ಅವ್ಯವಹಾರಿಕವೆಂದು ಅನೇಕರಿಗೆ ಕಂಡಿದ್ದರೂ ಗಾಂಧೀಜಿಗೆ ಅದರಲ್ಲಿ ಕ್ಲಿಷ್ಟತೆಯೂ ಕಾಣಬರಲಿಲ್ಲ. ಏಕೆಂದರೆ ನಿಷ್ಕಾಮಕರ್ಮಕ್ಕೆ ಆಧಾರವಾದ ಧರ್ಮದ ವಿಚಾರದಲ್ಲಿ ಗಾಂಧೀಜಿಗೆ ನಿಚ್ಚಳವಾದ ಅರಿವಿತ್ತು. ಅವರ ಅನಾಸಕ್ತಿಯೋಗವನ್ನು ನಾವು ಗುರುತಿಸಬೇಕಾದದ್ದು ಇಲ್ಲಿಯೇ.

ಯಾವ ಕಾರ್ಯವನ್ನು ಮಾಡುವಾಗ ಅದರ ಫಲಾಪೇಕ್ಷೆ ನಮ್ಮನ್ನು ಸಹಜವಾಗಿ ಬಾಧಿಸುವುದಿಲ್ಲವೋ ಅದೇ ನಿಷ್ಕಾಮಕರ್ಮ. ಅಂದ ಮೇಲೆ ಫಲಾಸಕ್ತಿ ಅಥವಾ ಅನಾಸಕ್ತಿಯ ಬೇರು ಕಾರ್ಯದ ಸ್ವರೂಪದಲ್ಲಿಯೇ ಇರುತ್ತದೆ. ಆದ್ದರಿಂದ ಅನಾಸಕ್ತಿಯನ್ನು ಪ್ರೇರಿಸುವ ಕಾರ್ಯಗಳನ್ನು ಆರಿಸಿಕೊಂಡು ಫಲಾಸಕ್ತಿ ಪ್ರೇರಕವಾದ ಕಾರ್ಯಗಳನ್ನು ವರ್ಜಿಸುವುದಷ್ಟೇ ಮಾನವನ ಹೊಣೆಗಾರಿಕೆ. ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ಸ್ವಾರ್ಥ – ಸ್ವಭಾವತಃ ನಮ್ಮಲ್ಲಿ ಅಪೂರ್ಣ ಫಲದ ಬಗ್ಗೆ ಆಸಕ್ತಿಯನ್ನು ಕೆರಳಿಸುತ್ತದೆ. ಇಂಥ ಕಾರ್ಯಗಳನ್ನು ಮಾಡಿದಮೇಲೆ ಅವನ್ನು ಮರೆಯುವಂತಿಲ್ಲ. ಮಾಡುವ ಮುನ್ನವೇ ಅವುಗಳ ಫಲದ ವಿಚಾರದಲ್ಲಿ ಇಲ್ಲದ ಆಶೆ ಆಕಾಂಕ್ಷೆಗಳು ನಮ್ಮಲ್ಲಿ ಮೂಡಿರುತ್ತವೆ. ಮಾಡಿ ಆದಮೇಲೆ ಅದರಿಂದ ಬರುವ ಫಲದಿಂದಾಗಿ ಸುಖದುಃಖದ ರೂಪದಲ್ಲಿ ನಾವು ಸಮ್ಮೋಹಿತರಾಗುತ್ತೇವೆ. ಈ ಕ್ರಿಯೆ ಕೊನೆ ಮೊದಲಿಲ್ಲದೆ ನಡೆದು ಕೊನೆಗೊಮ್ಮೆ ನಮ್ಮನ್ನು ವಿನಾಶದಲ್ಲಿಗೆ ಕೊಂಡೊಯ್ಯುತ್ತದೆ. ಇದೇ ಸಕಾಮಕರ್ಮದ ಸ್ವಭಾವ. ನಿಷ್ಕಾಮಕರ್ಮಗಳಾದರೋ ನಾವು ಕಣ್ಣಿನ

ಕುಷ್ಠರೋಗಾಣುಗಳ ವೀಕ್ಷಣೆಯಲ್ಲಿ ಮಗ್ನರಾದ ಗಾಂಧೀಜಿ

ರೆಪ್ಪೆಮಿಡಿಯುವ ರೀತಿಯಲ್ಲಿದ್ದು ಕೇವಲ ಸಹಜ ಕರ್ಮಗಳಾಗಿರುತ್ತವೆ. ಈ ರೀತಿಯ ಸಹಜಕರ್ಮಗಳನ್ನು ಮಾಡುವಾಗ ಯಾವ ಫಲಾಪೇಕ್ಷೆಯೂ ಇಲ್ಲದಿರುವುದರಿಂದ, ಅವುಗಳ ಆಚರಣೆ ಅನಾಸಕ್ತಿಯೋಗವೆನಿಸುತ್ತದೆ.

ಆಸಕ್ತಿಯಿಂದ ಮಾಡುವ ಕರ್ಮಗಳು ಲಾಭ ನಷ್ಟ, ಸುಖದುಃಖ, ಜಯಾಪಜಯಗಳ ರೂಪದಲ್ಲಿ ನಮ್ಮನ್ನು ಅಂಥ ಕೆಲಸಗಳಲ್ಲಿ ಮತ್ತಷ್ಟು ಆಸಕ್ತರಾಗುವಂತೆ ಮಾಡುತ್ತವೆ. ಒಂದು ಕಾರ್ಯ ಮತ್ತೊಂದು ಕಾರ್ಯಕ್ಕೆ ಬೀಜರೂಪದಲ್ಲಿದ್ದು ನಾವು ಅದಕ್ಕೆ ದಾಸರಾಗುವಂತೆ ಮಾಡುತ್ತವೆ. ಈ ರೀತಿ ಫಲಾಸಕ್ತರಾಗಿ ಕಾರ್ಯ ಮಾಡುವವರು ದಿನದಿನಕ್ಕೂ ತಮ್ಮ ಮಾನಸಿಕ ಸ್ತಿಮಿತತೆಯನ್ನು ಕಳೆದುಕೊಳ್ಳುತ್ತಾರೆ. ತಮ್ಮ ಬಯಕೆಯ ವಿಚಾರದಲ್ಲಿ ಮೋಹ, ಅದು ಕೈಗೂಡದಿದ್ದರೆ ಕೋಪ, ಅನಂತರ ಸ್ಮೃತಿವಿಭ್ರಮೆ, ಹಾಗೆಯೇ ವ್ಯಕ್ತಿಯ ಸರ್ವನಾಶ. ಅಂದ ಮೇಲೆ ಆಸಕ್ತಿಯಲ್ಲಿಯೇ ವಿನಾಶದ ಬೀಜವೂ ಇದೆ. ಆದ್ದರಿಂದ ಗಾಂಧೀಜಿಯವರು ಅನಾಸಕ್ತಿಯಿಂದ ಮಾತ್ರ ಸ್ಥಿತಪ್ರಜ್ಞತೆ ಸಾಧ್ಯ ಎಂಬುದನ್ನ ಚೆನ್ನಾಗಿ ಮನಗಂಡರು. ಅಷ್ಟೇ ಅಲ್ಲದೆ ಅನಾಸಕ್ತಿಯೋಗ ಕೈಗೂಡದ ಹೊರತು ಭಗವಂತನಲ್ಲಿ ಪೂರ್ಣ ಭಕ್ತಿ ಸಾಧ್ಯವಾಗದೆಂಬುದು ಅವರ ಮತ. ಅನಾಸಕ್ತಯೋಗಿಯೇ ನಿಜವಾದ ಭಕ್ತ ಹಾಗೂ ಜ್ಞಾನಿಯೆನಿಸುತ್ತಾನೆ.

ಗಾಂಧೀಜಿಯವರ ಅನಾಸಕ್ತಿಯೋಗ ನಿಷ್ಕ್ರಿಯೆಯನ್ನು ಬೋಧಿಸುತ್ತದೆಂದು ತಿಳಿದುಕೊಳ್ಳಬಾರದು. ಫಲದ ವಿಚಾರದಲ್ಲಿ ಇಲ್ಲದ ಆಸಕ್ತಿಯನ್ನು ಕೆರಳಿಸಿದಂಥ ಕಾರ್ಯಗಳನ್ನು ಮಾಡುವಾಗ ಸಹಜವಾಗಿ ಆಸಕ್ತಿಯೆಲ್ಲ ಕಾರ್ಯ ಮಾಡುವುದರಲ್ಲಿಯೇ ವಿನಿಯೋಗವಾಗುತ್ತದೆ. ಮೋಹ ಮಾತ್ಸರ್ಯಗಳ ಹೊರೆ ಮನಸ್ಸಿನ ಮೇಲಿಲ್ಲವೆಂದಾಗ ಮನಸ್ಸು ಸದಾ ಪ್ರಫುಲ್ಲವಾಗಿದ್ದು ಶಾಂತವಾಗಿರುತ್ತದೆ. ಅನಾಸಕ್ತಿಯಿಂದ ಮಾಡಿದ ಕೆಲಸಗಳು ಗುಣದಲ್ಲಿ ಕಡಿಮೆ ಇರುವುದಿಲ್ಲ. ಇಲ್ಲವೆ ಅವುಗಳಿಂದ ಬರಬೇಕಾದ ಫಲವೂ ಕಡಿಮೆಯಾಗುವುದಿಲ್ಲ – ಎಂಬುದೇ ಭಗವಂತನ ಆಶ್ವಾಸನೆ. ಅದರ ಫಲ ಕಡಿಮೆಯಾಗುವ ಬದಲು ನೂರ್ಮಡಿ ಹೆಚ್ಚುತ್ತದೆ, ಏಕೆಂದರೆ ನಿರಹಂಕಾರದಿಂದ ಮಾಡಿದ ಕೆಲಸದಲ್ಲಿ ಭಗವಂತನ ಕೃಪೆಗೆ ಪೂರ್ಣ ಅವಕಾಶವಿರುತ್ತದೆ. ಆಕಾರಣದಿಂಲೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣ, ನಿಷ್ಕಾಮ ಕರ್ಮಕ್ಕೆ ಯಥೇಚ್ಛವಾಗಿ ಫಲಕೊಡುವ ಹೊಣೆಯನ್ನು ತಾನೇ ವಹಿಸಿಕೊಂಡಿದ್ದಾನೆ. ಭಕ್ತನಾದ ಅನಾಸಕ್ತಿಯೋಗಿಗೆ ಈ ಅಭಯ ಒಂದು ವರವಿದ್ದಂತೆ.

ಗಾಂಧೀಜಿಯವರಿಗೆ ಅನಾಸಕ್ತಿಯೆಂಬುದು ಭಕ್ತಿ, ಜ್ಞಾನ, ಧ್ಯಾನ, ಯೋಗಗಳಿಗೆ ಹೊರತಾದ ಆತ್ಮಸಾಕ್ಷಾತ್ಕಾರದ ಬೇರೊಂದು ಮಾರ್ಗ ಎಂದು ಕಾಣಲಿಲ್ಲ. ಅವರ ಅನಾಸಕ್ತಿಯೋಗದಲ್ಲಿ ಭಕ್ತಿ, ಧ್ಯಾನ, ಮತ್ತು ಜ್ಞಾನಗಳು ಸಮಪ್ರಮಾಣದಲ್ಲಿ ಸಮನ್ವಯಗೊಳ್ಳುತ್ತವೆ. ಈ ಎಲ್ಲ ಯೋಗಗಳ ಸಾಮರಸ್ಯವಾದಾಗ ಮಾತ್ರ ಅನಾಸಕ್ತಿಯೋಗ ಸಿದ್ಧಿಸುತ್ತದೆಂಬ ದಿವ್ಯತತ್ತ್ವವನ್ನು ಗೀತಾ ಸಂದೇಶದಲ್ಲಿ ಕಂಡುಕೊಂಡು ಅದನ್ನು ತಮ್ಮ ಜೀವನಪರ್ಯಂತ ಬಾಳಲು ಗಾಂಧೀಜಿ ತಪಿಸಿದರು. (ಎ.ಎಲ್.ಎಸ್.)

**ಗಾಂಧೀ ಆಶ್ರಮಗಳು:** ಮಹಾತ್ಮ ಗಾಂಧೀಯವರು ತಮ್ಮ ಧ್ಯೇಯ ಸಾಧನೆಗಾಗಿ ಅಗತ್ಯ ಕಂಡಾಗಲೆಲ್ಲ ಕೆಲವು ಆಶ್ರಮಗಳನ್ನು ಸ್ಥಾಪಿಸಿ, ಅಲ್ಲಿ ತಮ್ಮ ಸಹಚರರೊಂದಿಗೆ ಇದ್ದು ನಿಯಮಬದ್ಧವಾದ ಸಾತ್ತ್ವಿಕ ಜೀವನವನ್ನು ನಡೆಸುತ್ತ ಇಹಪರಗಳೆರಡರ ಸಾಧನೆಗೆ ತೊಡಗಿದ್ದು ಅವರ ಸಮಾಜೋದ್ಧಾರ ಕಾರ್ಯದ ಒಂದು ಮುಖ್ಯ ವಿಷಯ. ಕ್ರಮೇಣ ತಾವು ಕೈಗೊಂಡ ಸಾರ್ವಜನಿಕ ಕಾರ್ಯಗಳಿಗೂ ಸತ್ಯಾಗ್ರಹ ಆಂದೋಲನಗಳಿಗೂ ಈ ಆಶ್ರಮಗಳೇ ಶಿಕ್ಷಣ ಕ್ಷೇತ್ರಗಳಾಗಿಯೂ ಪರಿಣಮಿಸಿದವು. ಅವರಿಗೆ ಪ್ರತ್ಯೇಕವಾದ ಸ್ವಂತ ಮನೆ ಎಂಬುದು ಎಲ್ಲಿಯೂ ಇರಲಿಲ್ಲ. ಅವರ 36 ನೆಯ ವಯಸ್ಸಿನಿಂದ ಅಂತ್ಯಕಾಲದ ವರೆಗೂ ಈ ಆಶ್ರಮಗಳೇ ಅವರ ವಸತಿಗಳಾಗಿದ್ದುವು.

**ಫೀನಿಕ್ಸ್ ವಸತಿ:** ಹೀಗೆ ಅವರು ಸ್ಥಾಪಿಸಿದ. ಆಶ್ರಮಗಳಲ್ಲಿ ಮೊದಲನೆಯದು ದಕ್ಷಿಣ ಆಫ್ರಿಕದ ನಟಾಲಿನಲ್ಲಿ 1904ರಲ್ಲಿ ಅವರು ಏರ್ಪಾಡು ಮಾಡಿದ ಫೀನಿಕ್ಸ್ ವಸತಿ.

ಆ ವರ್ಷ ಜೋಹ್ಯಾನಿಸ್‌ಬರ್ಗಿನಿಂದ ಡರ್ಬನಿಗೆ ಕೈಗೊಂಡ 24 ಗಂಟೆಯ ರೈಲು ಪ್ರಯಾಣದಲ್ಲಿ ಹೊತ್ತು ಕಳೆಯಲು ಅವರ ಮಿತ್ರರಾದ ಪೋಲಕ್ ಅವರು ಕೊಟ್ಟ ಅಂಟು ದಿಸ್ ಲ್ಯಾಸ್ಟ್ ಎಂಬ ರಸ್ಕಿನ್ನನ ಪುಸ್ತಕ ಅವರ ಮೇಲೆ ಉಂಟುಮಾಡಿದ ಅದ್ಭುತ ಪ್ರಭಾವವೇ ಈ ಫೀನಿಕ್ಸ್ ವಸತಿ ನಿರ್ಮಾಣಕ್ಕೆ ಮುಖ್ಯ ಕಾರಣವಾಯಿತು. ಈ ಮೊದಲೇ ಅವರು ಅಂತರ್ಮುಖಿಗಳಾಗಿ ಜೀವನದ ಧ್ಯೇಯಗಳ ಬಗೆಗೆ ವಿಚಾರ ನಡೆಸಿ ಆದಷ್ಟು ಸರಳವೂ ನಿಯಮಿತವೂ ಆದ ಜೀವನವನ್ನು ನಡೆಸುತ್ತಿದ್ದರಾಗಿ ಅವರ ಚಿತ್ತ ಹದಗೊಂಡಿತ್ತು. ರಸ್ಕಿನ್ನನ ಪುಸ್ತಕದಲ್ಲಿ ಪ್ರತಿಪಾದಿಸಿರುವ ತತ್ತ್ವಗಳು ಅವರ ಮನಸ್ಸನ್ನು ಸೂರೆಗೊಂಡವು. ಎಲ್ಲ ಕಸುಬುಗಳೂ ಸಮಾನವಾದ ಆದರವನ್ನು ಪಡೆಯಬೇಕು ಮತ್ತು ಶ್ರಮಜೀವನ ಅಥವಾ ಕಾಯಕ ಎಲ್ಲಕ್ಕಿಂತಲೂ ಯೋಗ್ಯವಾದ ಜೀವನ ವಿಧಾನ – ಈ ತತ್ತ್ವಗಳನ್ನು ಅನುಷ್ಠಾನಕ್ಕೆ ತರಲು ಅವರು ಈಗ ಸ್ಥಿರ ಸಂಕಲ್ಪವನ್ನು ಕೈಗೊಂಡರು.

ಈ ಫೀನಿಕ್ಸ್ ವಸತಿಯನ್ನು ವಿಳಂಬವಿಲ್ಲದೆ ಆರಂಭಿಸಲು ಮತ್ತೊಂದು ಕಾರಣವೂ ಇತ್ತು. ಕೆಲವು ತಿಂಗಳುಗಳ ಹಿಂದೆ, ಭಾರತೀಯ ಸೇವೆಗಾಗಿ ಇಂಡಿಯನ್ ಒಪಿನಿಯನ್ ಎಂಬ ವಾರಪತ್ರಿಕೆಯನ್ನು ಡರ್ಬನ್ನಿನಲ್ಲಿ ಅವರು ಸ್ಥಾಪಿಸಿದ್ದರು. ಆಲ್ಬರ್ಟ್ ವೆಸ್ಟ್

ಎಂಬ ಆಂಗ್ಲೇಯ ಮಿತ್ರ ಅದನ್ನು ಸಂಬಂಧಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಪತ್ರಿಕೆಯ ಕೆಲಸ ಬಹಳ ನಷ್ಟದಲ್ಲಿ ನಡೆಯುತ್ತಿತ್ತು. ಈ ಪತ್ರಿಕೆಯನ್ನು ಫೀನಿಕ್ಸ್ ವಸತಿಗೆ ಬದಲಾಯಿಸಿ ಇದರ ವ್ಯಯವನ್ನು ಅಲ್ಲಿನ ನಿವಾಸಿಗಳ ನೆರವಿನಿಂದ ಕಡಿಮೆ ಮಾಡಬಹುದೆಂಬುದು ಗಾಂಧೀಜಿಯವರ ತೀರ್ಮಾನವಾಗಿತ್ತು. ಅದು ಹಾಗೆಯೇ ಆಯಿತು.

ಈ ವಸತಿ ಫೀನಿಕ್ಸ್ ರೈಲ್ವೆ ನಿಲ್ದಾಣದಿಂದ 4 ಕಿಮೀ (ಇದೇ ಅದರ ಹೆಸರಿಗೆ ಕಾರಣ) ಮತ್ತು ಡರ್ಬನಿನಿಂದ 21 ಕಿಮೀ ದೂರದಲ್ಲಿತ್ತು.

ಇಲ್ಲಿ ವಾಸಕ್ಕೆ ಬಂದವರಲ್ಲಿ ಆಲ್ಬರ್ಟ್ ವೆಸ್ಟ್, ಪೋಲಕ್, ಗಾಂಧಿಯವರ ಚಿಕ್ಕಪ್ಪನ ಮಗ ಛಗನಲಾಲ್ ಗಾಂಧಿ ಮತ್ತು ಆತನ ಕುಟುಂಬ, ಹಾಗೂ ಗಾಂಧಿಯವರಿಗೆ ಬಲಗೈಯಂತಿದ್ದ ಅವರ ಸೋದರಳಿಯ ಮದನ್‌ಲಾಲ್ ಗಾಂಧೀ ಉಲ್ಲೇಖನೀಯರು. ಹೆಂಗಸರೂ ಮಕ್ಕಳೂ ಇದ್ದರು. ಎಲ್ಲರೂ ಶಕ್ತ್ಯನುಸಾರ ಶ್ರಮಜೀವನ ನಡೆಸಬೇಕು. ಪ್ರತಿಯೊಬ್ಬರಿಗೂ ತಿಂಗಳಿಗೆ 3 ಪೌಂಡು ಸಮಾನವಾದ ವೇತನ. ವ್ಯವಸಾಯ ಮಾಡಲು ಪ್ರತಿಯೊಬ್ಬರಿಗೂ 1.5 ಹೆಕ್ಟೇರು ಹಂಚಲಾಗಿತ್ತು. ಒಟ್ಟು ಇಲ್ಲಿ ಇದ್ದ 40 ಹೆಕ್ಟೇರುಗಳನ್ನು 1000 ಪೌಂಡುಗಳಿಗೆ ಕೊಳ್ಳಲಾಗಿತ್ತು. ಸತ್ಯಾಗ್ರಹ ಆಂದೋಲನ ನಡೆದಾಗ ಸೆರೆಮನೆಗೆ ಹೋಗಿ ಬಂದವರು ಬೇರೆ ಮನೆಗಳಿಲ್ಲದಿದ್ದರೆ ಇಲ್ಲಿಗೆ ಬಂದು ತಂಗುತ್ತಿದ್ದರು. ಬೇರೆ ಬೇರೆ ಮತಧರ್ಮಗಳಿಗೆ ಸೇರಿದವರು ಇಲ್ಲಿ ಸಾಮೂಹಿಕ ಜೀವನವನ್ನು ನಡೆಸುತ್ತಿದ್ದರು. ಅಲ್ಲಿದ್ದ ಮಕ್ಕಳಿಗೆ ಗಾಂಧಿಯವರೇ ಮುಖ್ಯ ಶಿಕ್ಷಕರು. ಅಚ್ಚಾದ ಇಂಡಿಯನ್ ಒಪಿನಿಯನ್ ಪತ್ರಿಕೆಗಳನ್ನು ಚಂದಾದಾರರಿಗೆ ರವಾನಿಸುವ ಕಾರ್ಯದಲ್ಲಿ ಮಕ್ಕಳು ಬಹಳ ಉತ್ಸಾಹದಿಂದ ನೆರವಾಗುತ್ತಿದ್ದರು.

ಗಾಂಧೀಯವರಿಗೆ ಮಾತ್ರ ತಮ್ಮ ವಕೀಲಿ ವೃತ್ತಿಯ ಕಾರಣದಿಂದಾಗಿ ಯಾವಾಗಲೂ ಈ ವಸತಿಯಲ್ಲಿರಲು ಸಾಧ್ಯವಾಗುತ್ತಿರಲಿಲ್ಲ.

**ಟಾಲ್‌ಸ್ಟಾಯ್ ಆಶ್ರಮ:** ಮಹಾತ್ಮ ಗಾಂಧಿಯವರು ಸ್ಥಾಪಿಸಿದ ಎರಡನೆಯ ಆಶ್ರಮ ಟ್ರಾನ್ಸ್‌ವಾಲ್ ಪ್ರಾಂತ್ಯದಲ್ಲಿ ಲಾಲಿ ಎಂಬ ರೈಲ್ವೆ ನಿಲ್ದಾಣದಿಂದ 1.5 ಕಿಮೀ, ಜೊಹ್ಯಾನಿಸ್‌ಬರ್ಗ್ ಪಟ್ಟಣದಿಂದ ಸು. 32 ಕಿಮೀ ದೂರದಲ್ಲಿದ್ದ ಟಾಲ್‌ಸ್ಟಾಯ್ ಆಶ್ರಮ. ಟಾಲ್‌ಸ್ಟಾಯ್ ಅವರ ಬರೆಹಗಳನ್ನು ಓದಿ ಗಾಂಧಿ ಪ್ರಭಾವಿತರಾಗಿದ್ದರು. ತಮ್ಮ ಆಂದೋಲನದ ಬಗೆಗೆ ಅವರೊಂದಿಗೆ ಪತ್ರವ್ಯವಹಾರ ನಡೆಸಿದ್ದರು. ಅವರ ಆಶೀರ್ವಾದವನ್ನೂ ಪಡೆದಿದ್ದರು. ಟ್ರಾನ್ಸ್‌ವಾಲಿನಲ್ಲಿ ಭಾರತೀಯರ ಮೇಲೆ ವಿಧಿಸಿದ್ದ ಮೂರು ಪೌಂಡ್ ತಲೆಕಂದಾಯದ ವಿರುದ್ಧ ಗಾಂಧಿಯವರು ಹೂಡಿದ ಸತ್ಯಾಗ್ರಹ ಚಳವಳಿಯ ಕಾಲದಲ್ಲಿ ಸ್ಥಾಪಿಸಿದ ಆಶ್ರಮವಿದು (30 ಮೇ 1910). ಸೆರೆಮನೆ ಸೇರಿದ ಕುಟುಂಬದವರ ವಸತಿಗೆಂದು ಮುಖ್ಯವಾಗಿ ಇದು ಸ್ಥಾಪಿತವಾಯಿತು. ಇದಕ್ಕೆ 440 ಹೆಕ್ಟೇರು ಜಮೀನು ಮತ್ತು ತೋಟವಿದ್ದು ಅದರಲ್ಲಿ ಸುಮಾರು 1000 ಹಣ್ಣಿನ ಗಿಡಗಳಿದ್ದವು. ಇದರ ಮಾಲೀಕ ಗಾಂಧಿಯವರ ಮಿತ್ರನೂ ಅನುಯಾಯಿಯೂ ಆದ ಕ್ಯಾಲೆನ್ ಬ್ಯಾಕ್ ಎಂಬ ಜರ್ಮನ್ ಗ್ರಹಸ್ಥ (ಬಾಡಿಗೆ ಇಲ್ಲದೆ ಈ ಕ್ಷೇತ್ರವನ್ನು ಭಾರತೀಯರಿಗಾಗಿ ಆತ ಬಿಟ್ಟು ಕೊಟ್ಟ.) ಗೃಹಶಿಲ್ಪ ಮತ್ತು ಅದಕ್ಕೆ ಸಂಬಂಧಿಸಿದ ಕಸಬುಗಳಲ್ಲಿ ಪರಿಣತನಾದ ಆತ ಪಾದರಕ್ಷೆಗಳನ್ನು ಹೊಲಿಯುವದನ್ನು ತಾನು ಕಲಿತು ಗಾಂಧಿಯವರಿಗೂ ಕಲಿಸಿದ. ಈ ಆಶ್ರಮದಲ್ಲಿ ಆರಂಭದಲ್ಲಿಯೇ ಸುಮಾರು 70 ಜನರಿದ್ದರು. ಸದಸ್ಯತ್ವಕ್ಕೆ ವಯಸ್ಸಿನ, ಮತಧರ್ಮದ ಯಾವ ಮಿತಿಯೂ ಇರಲಿಲ್ಲ. ವಾಸಕ್ಕಾಗಿ ಕಟ್ಟಡಗಳು ಅಲ್ಲಿನ ನಿವಾಸಿಗಳ ಶ್ರಮದಾನದಿಂದಲೇ ಬಹುಮಟ್ಟಿಗೆ ಸಿದ್ಧವಾದಂಥವು. ಇದರ ಮೇಲ್ವಿಚಾರಣೆಯೆಲ್ಲ ಕ್ಯಾಲೆನ್ ಬ್ಯಾಕನದೇ. ಒಂದೇ ಅಡಿಗೆಯ ಮನೆ ಇತ್ತು. ಅದರ ನಿರ್ವಹಣೆ ಅಲ್ಲಿದ್ದ ಮಹಿಳೆಯರದಾಗಿತ್ತು. ಸಸ್ಯಾಹಾರ ಸೇವನೆಯೇ ಅಲ್ಲಿನ ಪದ್ಧತಿ. ಧೂಮ ಮತ್ತು ಸುರಾಪಾನಗಳು ನಿಷೇಧಿಸಲ್ಪಟ್ಟಿದ್ದವು. ಸಾಮೂಹಿಕ ಪ್ರಾರ್ಥನೆ ಮತ್ತು ಭೋಜನ ರೂಢಿಯಲ್ಲಿದ್ದುವು. ನೈರ್ಮಲ್ಯ ರಕ್ಷಣೆಗೆ ಒಳ್ಳೆಯ ಏರ್ಪಾಡಿತ್ತು. ಜಲಮಲಗಳ ವಿಸರ್ಜನೆಗಾಗಿ ಮಾಡಿದ ಗುಂಡಿಗಳು ಕಾಲಾನಂತರ ಉತ್ತಮ ಗೊಬ್ಬರವನ್ನೊದಗಿಸುತ್ತಿದ್ದವು. ಖಾಸಗಿ ಕೆಲಸಕ್ಕಾಗಿ ಜೊಹ್ಯಾನಿಸ್‌ಬರ್ಗಿಗೆ ಹೋಗುವವರು 32 ಕಿಮೀ ದೂರವನ್ನು ಕಾಲುನಡಿಗೆಯಲ್ಲೇ ನಿರ್ವಹಿಸುತ್ತಿದ್ದರು.

**ಸತ್ಯಾಗ್ರಹಾಶ್ರಮ, ಸಾಬರಮತಿ:** 1915 ರ ಜನವರಿಯಲ್ಲಿ ಗಾಂಧಿಯವರು ಭಾರತಕ್ಕೆ ಹಿಂತಿರುಗಿದ ಮೇಲೆ ಇಲ್ಲಿಯೂ ಆಶ್ರಮ ವಾಸವನ್ನು ಕೈಗೊಳ್ಳಬೇಕೆಂದು ಅವರಿಗೆ ತೋರಿತು. ಅಂತೆಯೇ ಮೇ ತಿಂಗಳಲ್ಲಿ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದರು. ಅವರೊಂದಿಗೆ ಹಿಂತಿರುಗಿದ ಅವರ ಬಂಧುವರ್ಗದವರು ಮತ್ತು ಅನುಯಾಯಿಗಳು ಸುಮಾರು 25 ಮಂದಿ ಆಶ್ರಮವಾಸಿಗಳಾದರು. ಆಶ್ರಮ ಆರಂಭವಾದದ್ದು ಅಹಮದಾಬಾದಿಗೆ ಸೇರಿದ ಕೊಚರಾಬ್ ಹಳ್ಳಿಯಲ್ಲಿ. ಒಂದು ಬಾಡಿಗೆ ಬಂಗಲೆಯಲ್ಲಿ. ಸ್ವಲ್ಪ ಕಾಲವಾದ ಮೇಲೆ ಸಾಬರಮತಿ ನದೀತೀರಕ್ಕೆ ಆಚೆ ಸುಮಾರು 60 ಹೆಕ್ಟೇರು ನಿವೇಶನಕ್ಕೆ ಆಶ್ರಮವನ್ನು ಬದಲಾಯಿಸಲಾಯಿತು. ಹಳ್ಳಿಯ ಮಾದರಿಯ ಮನೆಗಳೂ ಕಟ್ಟಡಗಳೂ ಸಿದ್ಧವಾದವು. ಕೃಷಿ, ತೋಟಗಾರಿಕೆ ಮತ್ತು ಪಶುಪಾಲನೆಗೆ ಅವಕಾಶ ಮಾಡಲಾಯಿತು. ಆಶ್ರಮವಾಸಿಗಳು ಕೆಲವು ನಿಯಮಗಳನ್ನು ಪಾಲಿಸಿ ಸಾಮೂಹಿಕವಾದ ಧಾರ್ಮಿಕ ಜೀವನವನ್ನು ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. ಸತ್ಯ, ಅಹಿಂಸೆ, ಬ್ರಹ್ಮಚರ್ಯೆ, ನಾಲಗೆಯ ರುಚಿಯ ಮೇಲೆ ಹತೋಟಿ, ಅಸ್ತೇಯ, ಅಸಂಗ್ರಹ ಇವು ಮೂಲಭೂತವಾದ ನಿಯಮಗಳು. ಇವೇ ಅಲ್ಲದೆ ಸ್ವದೇಶಿ, ನಿರ್ಭಯತ್ವ, ಕಾಯಕ, ಅಸ್ಪೃಶ್ಯತಾ ನಿವಾರಣೆ – ಇವನ್ನೂ ವ್ಯಾವಹಾರಿಕ ಜೀವನದಲ್ಲಿ ಪಾಲಿಸಬೇಕು. ನಿತ್ಯ ಪ್ರಾರ್ಥನೆಯೊಂದಿಗೆ ಈ ಏಕಾದಶವ್ರತಗಳ ಹೆಸರನ್ನೊಳಗೊಂಡ ಒಂದು ಶ್ಲೋಕವನ್ನು ಹೇಳುವುದು ರೂಢಿಯಾಗಿತ್ತು.

ಸೇವಾಗ್ರಾಮದ ಆಶ್ರಮ

ಆಶ್ರಮದ ನಿತ್ಯಜೀವನದಲ್ಲಿ ಬೆಳಗ್ಗೆ 4 1/2 ಗಂಟೆಗೆ ಮತ್ತು ಸಂಜೆ 5 ಗಂಟೆಗೆ ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ಎಲ್ಲರೂ ಭಾಗವಹಿಸಬೇಕು. ಈ ಪ್ರಾರ್ಥನೆಯಲ್ಲಿ ಕೆಲವು ಉಪನಿಷತ್ತಿನ ಮಂತ್ರಗಳು. ಸ್ತೋತ್ರಗಳು. ಭಗವದ್ಗೀತೆಯ ಶ್ಲೋಕಗಳು. ತುಲಸೀದಾಸ ರಾಮಾಯಣ, ಇವೇ ಅಲ್ಲದೆ ಅನ್ಯ ಧರ್ಮಾವಲಂಬಿಗಳಿದ್ದಾಗ ಅವರ ಧರ್ಮಗಳಿಂದ ಆಯ್ದ ಭಾಗಗಳೂ ಸಾಮೂಹಿಕ ಭಜನೆ, ರಾಮನಾಮ– ಇವು ರೂಢಿಯಲ್ಲಿದ್ದವು. ಮಸಾಲೆ ಪದಾರ್ಥಗಳನ್ನು ದೂರಮಾಡಿ ಭೋಜನಕ್ಕೆ ಕೇವಲ ಸಾತ್ತ್ವಿಕ ಆಹಾರ ಬಳಸಲಾಗುತ್ತಿತ್ತು. ಸಂಜೆಯ ಭೋಜನ ಸೂರ್ಯಾಸ್ತಮದೊಳಗಾಗಿ ಮುಗಿಯಬೇಕು ಮತ್ತು ರಾತ್ರಿ 9 ಗಂಟೆಗೆ ಎಲ್ಲರೂ ವಿಶ್ರಮಿಸಬೇಕು– ಎಂಬುದು ಒಂದು ಮುಖ್ಯ ಕಟ್ಟಳೆ. ಎಲ್ಲ ಆಶ್ರಮವಾಸಿಗಳೂ ಸಫಾಯಿ– ಝಾಡಮಾಲಿಯ ಮತ್ತು ಭಂಗಿಯ– ಕೆಲಸಗಳನ್ನು ಮಾಡಲು ಮೊದಲು ಶಿಕ್ಷಣ ಪಡೆಯುತ್ತಿದ್ದರು. ಎಲ್ಲರೂ ಒಂದಲ್ಲ ಒಂದು ಕಾಯಕವನ್ನು ಕೈಗೊಳ್ಳಬೇಕಾಗಿತ್ತು (ಅವುಗಳಲ್ಲಿ ರಾಟೆಯಿಂದ ನೂಲುವುದು ಅನಿವಾರ್ಯ) ಕೃಷಿ, ತೋಟಗಾರಿಕೆ, ಬಡಗಿ ಕೆಲಸ, ನೇಯ್ಗೆ, ಗೋಪಾಲನೆ ಇತ್ಯಾದಿ ಆಶ್ರಮ ವಾಸಿಗಳಲ್ಲಿ ಉಚ್ಚ ನೀಚವೆಂಬ ಭಾವನೆಯನ್ನು ತೊಡೆದು ಹಾಕಲಾಗಿತ್ತು.

ಸತ್ಯಾಗ್ರಹ ಆಶ್ರಮದ ಆರಂಭದ ದಿನಗಳಲ್ಲಿಯೇ ಹರಿಜನ ಕುಟುಂಬ ಒಂದನ್ನು ಆಶ್ರಮಕ್ಕೆ ಸೇರಿಸಿ ಕೊಂಡದ್ದರಿಂದ ದಾನಿಗಳು ತಮ್ಮ ಸಹಾಯವನ್ನು ನಿಲ್ಲಿಸಿದರು. ಆಶ್ರಮ ಉಳಿಯುವುದೇ ಒಂದು ಸಮಸ್ಯೆಯಾಯಿತು. ಅಹಮದಾಬಾದಿನ ಪ್ರಸಿದ್ಧ ಗಿರಣಿ ಮಾಲೀಕರಾದ ಅಂಬಾಲಾಲ್ ಸಾರಾಭಾಯಿ ಅವರು ಅಪ್ರಾರ್ಥಿತವಾಗಿ ಆಶ್ರಮಕ್ಕೆ ಮಾಡಿದ 1300 ರೂಪಾಯಿಗಳ ಉದಾರ ದಾನದಿಂದ ಆಶ್ರಮದ ಕೆಲಸ ಕಾರ್ಯಗಳು ಮುಂದೆ ಸಾಗಿದವು.

1930 ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಆಶ್ರಮದ ಚಟುವಟಿಕೆಗಳೂ ಅಲ್ಲಿದ್ದವರ ಸಂಖ್ಯೆಯೂ ಹಿಂದೆ ಎಂದೂ ಇಲ್ಲದ ಪ್ರಮಾಣದಲ್ಲಿದ್ದವು. ತರಪೇತನ್ನು ಪಡೆದ 87 ಮಂದಿ ಸತ್ಯಾಗ್ರಹಿಗಳೊಡನೆ ಭಜನೆಯೊಂದಿಗೆ ಗಾಂಧಿಯವರು ಸುಮಾರು 386 ಕಿಮೀ ದಕ್ಷಿಣದಲ್ಲಿ ಸಮುದ್ರತೀರದಲ್ಲಿರುವ ದಂಡಿ ಎಂಬ ಗ್ರಾಮಕ್ಕೆ ಕಾಲು ನಡಿಗೆಯಿಂದ ಹೋಗಲು ಆಶ್ರಮದಿಂದ ಹೊರಬಿದ್ದರು. ಸ್ವರಾಜ್ಯಪ್ರಾಪ್ತಿಯಾಗದೆ ಆಶ್ರಮಕ್ಕೆ ಹಿಂತಿರುಗುವುದಿಲ್ಲವೆಂದು ಪ್ರತಿಜ್ಞೆ ತೊಟ್ಟರು. ಹೀಗವರು ದೂರವಾದ್ದರಿಂದ ಸಾಬರಮತಿ ಆಶ್ರಮದ ವರ್ಚಸ್ಸು ಕಳೆಗುಂದಿತು.

**ಸೇವಾಗ್ರಾಮ:** ವರ್ಧಾ ನಗರಕ್ಕೆ ಸುಮಾರು ಎಂಟು ಕಿಮೀ ದೂರದಲ್ಲಿ ಶೇಗಾಂವ್ ಎಂಬ ಹಳ್ಳಿಯ ಬಳಿಯಲ್ಲಿ ಗಾಂಧಿಯವರ ಪ್ರಿಯ ಶಿಷ್ಯರಾದ ಸೇಠ್ ಜಮನಾಲಾಲ್ ಬಜಾಜ್ ಅವರ ಜಮೀನಿನಲ್ಲಿ ಹಾಕಿದ ಒಂದು ಗುಡಿಸಲಿನಲ್ಲಿ 1936ರಲ್ಲಿ ಗಾಂಧಿಯವರು ನೆಲೆಸಿದರು. ಅನಂತರ ಇದನ್ನು ಸೇವಾಗ್ರಾಮವೆಂದು ಕರೆಯಲಾಯಿತು. ಸಕ್ರಿಯ ರಾಜಕೀಯದಿಂದ ಈ ವೇಳೆಗೆ ಗಾಂಧಿಯವರು ನಿವೃತ್ತರಾಗಿ ಹರಿಜನೋದ್ಧಾರ, ಗ್ರಾಮೋದ್ಯೋಗ, ನೂತನ ಶಿಕ್ಷಣ, ಗೋಸೇವಾ ಮುಂತಾದ ಕಾರ್ಯಗಳಲ್ಲಿ ಮಗ್ನರಾಗಿದ್ದರು.

ಅನಂತರ ಇತರ ಕಾರ್ಯಕರ್ತರೂ ಅಲ್ಲಿಗೆ ತರಬೇತಿಗೆ ಬಂದ ವಿದ್ಯಾರ್ಥಿಗಳೂ ಸಾಬರಮತಿ ಆಶ್ರಮದಂತೆ ಅಲ್ಲದಿದ್ದರೂ ಸರಳವೂ ನಿಯಮಿತವೂ ಸಾಮೂಹಿಕವೂ ಆದ ಜೀವನವನ್ನು ಇಲ್ಲಿ ನಡೆಸಿದರು.

ಸೇವಾಗ್ರಾಮದಲ್ಲಿ ಗಾಂಧಿಯವರು ವಾಸವಾಗಿದ್ದ ಗುಡಿಸಲು ಈಗ ಅವರ ಸ್ಮಾರಕವಾಗಿ ಕಾಪಾಡಲ್ಪಟ್ಟಿದ್ದು ಒಂದು ಯಾತ್ರಾಸ್ಥಳವಾಗಿ ಪರಿಣಮಿಸಿದೆ.

ಹೀಗೆ ಗಾಂಧಿಯವರು ಸ್ಥಾಪಿಸಿದ ಆಶ್ರಮಗಳು ಆತ್ಮೋನ್ನತಿಗೂ ಸಮಾಜ ಸೇವೆಗೂ ಕೇಂದ್ರಗಳಾದುವು. ಆಶ್ರಮವಾಸಿಗಳಿಗೆ ಈ ಹೊಸ ಬಗೆಯ ತಪೋ ಜೀವನವನ್ನು ನೇಮಿಸಿ ಮಹಾತ್ಮಾಗಾಂಧಿಯವರು ವ್ಯಕ್ತಿ ಜೀವನವನ್ನು ಚೊಕ್ಕಟ ಮಾಡುವುದು ಹೇಗೆಂಬುದನ್ನು ಕಲಿಸಿದರು.

ಗಾಂಧಿಯವರ ಸ್ಫೂರ್ತಿಯಿಂದ ಅವರು ಸ್ಥಾಪಿಸಿದ ಆಶ್ರಮಗಳ ಮಾದರಿ ಯಲ್ಲಿಯೇ ಅನೇಕ ಆಶ್ರಮಗಳು ಸ್ಥಾಪಿತವಾದುವು. ಇವು ನಿಷ್ಠಾವಂತ ಸಮಾಜ ಸೇವಕರನ್ನು ಸಿದ್ಧಮಾಡಿವೆ ಮತ್ತು ಮಾಡುತ್ತಲಿವೆ. (ಎಸ್.ಆರ್.ಕೆ.)

**ಗಾಂಫ್ರಿನ :** ಅಮರ್ಯಾಂತೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಅನೇಕ ಪ್ರಭೇದಗಳನ್ನು ಒಳಗೊಂಡಿದೆ. ಇವುಗಳಲ್ಲೆಲ್ಲ ಉದ್ಯಾನಗಾರಿಕೆ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು ಗ್ಲೋಬೋಸ ಎಂಬುದು. ಇದಕ್ಕೆ ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಗ್ಲೋಬ್ ಅಮರ್ಯಾಂತ್ ಮತ್ತು ಬ್ಯಾಚಲರ್ಸ್ ಬಟನ್ ಎಂಬ ಹೆಸರುಗಳಿವೆ. ನೆಲದ ಮೇಲೆಯೆ ಹಬ್ಬಿ ಇಲ್ಲವೆ ನೇರವಾಗಿ 30–45 ಸೆ.ಮೀ ಎತ್ತರಕ್ಕೆ ಬೆಳೆಯುವ ಏಕವಾರ್ಷಿಕ ಮೂಲಿಕೆ ಸಸ್ಯ ಇದು. ಎಲೆಗಳು ಉದ್ದುದ್ದವಾಗಿ ಇಲ್ಲವೆ ಅಂಡಾಕಾರ ವಾಗಿವೆ. ಒಂದು 2.5 ಸೆಂಮೀ ವ್ಯಾಸದ ವರ್ಣರಂಜಿತವಾದ ಹೂಗೊಂಚಲುಗಳಿಂದಾಗಿ ಈ ಗಿಡ ಬಲು ಪ್ರಸಿದ್ಧವಾಗಿದೆ. ಗೊಂಚಲುಗಳು ಗುಂಡಗೆ ಕೋಟಿನ ಗುಂಡಿಯಂತೆ ಕಾಣುವುದರಿಂದ ಇದಕ್ಕೆ ಬ್ಯಾಚಲರ್ಸ್ ಬಟನ್ ಎಂಬ ಹೆಸರು ಬಂದಿರಬೇಕು. ಹೂಗಳಿಗೆ ಬಣ್ಣವಿಲ್ಲದಿದ್ದರೂ ಅವನ್ನು ಆವರಿಸುವ ಬ್ರ್ಯಾಕ್ಟ್‌ಗಳಿಗೆ ನೇರಳೆ, ಊದಾ, ಕಡುಗೆಂಪು, ಬಿಳಿ, ಮುಂತಾದ ಬಣ್ಣಗಳಿರುವುದರಿಂದ ಬಲು ಆಕರ್ಷಕವಾಗಿ ಕಾಣುತ್ತವೆ.

ಈ ಸಸ್ಯವನ್ನು ಮಡಿಗಳಲ್ಲಾಗಲಿ, ಕುಂಡಗಳಲ್ಲಾಗಲಿ ಬೆಳೆಸಬಹುದು. ಬೇಕೆಂದ ಸ್ಥಳಗಳಲ್ಲಿ ಬೀಜಗಳನ್ನು ಬಿತ್ತಿ ಬೆಳೆಸಬಹುದು ಇಲ್ಲವೆ ಮೊದಲು ಒಟ್ಲುಪಾತಿಯಲ್ಲಿ ಬೀಜಗಳನ್ನು ಬಿತ್ತಿಸಸಿಗಳನ್ನು ಬೆಳೆಸಿಕೊಂಡು ಅನಂತರ ಅಪೇಕ್ಷಿತ ಸ್ಥಳಗಳಿಗೆ ವರ್ಗಾಯಿಸಬಹುದು. ಮಡಿಗಳಲ್ಲಿ ಬೆಳೆಸುವಾಗ ಸಸಿಯಿಂದ ಸಸಿಗೆ 30–40 ಸೆ.ಮೀ ಅಂತರವಿರುವಂತೆ ನೋಡಿಕೊಳ್ಳಬೇಕು. ಇದರಿಂದ ಗಿಡಗಳು ಅಗಲವಾಗಿ ಹರಡಿ ಕೊಂಡು ಬೆಳೆಯಲು ಅನುಕೂಲ. ಬಿತ್ತಿದ 3 ತಿಂಗಳ ಅನಂತರ ಗಿಡ ಹೂ ಬಿಡಲು ಪ್ರಾರಂಭಿಸುತ್ತದೆ. ಹೂಗಳು ಅರಳಿದ ಮೇಲೆ $1^1/_2$–2 ತಿಂಗಳವರೆಗೂ ಬಾಡದೆ ಗಿಡದಲ್ಲೇ ಉಳಿಯುವುದರಿಂದ ಗಾಂಫ್ರಿನ ಗಿಡ ಬಲು ಜನಪ್ರಿಯವಾಗಿದೆ. (ಕೆ.)

**ಗಾಂವಕರ, ಎಸ್.ಡಿ. :** 1925–96. ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಶಿಕ್ಷಣ ತಜ್ಞ, ರಾಜಕಾರಣಿ. ಸಖಾರಾಮ ದತ್ತಾತ್ರೇಯ ಗಾಂವಕರ ಇವರ ಪೂರ್ತಿ ಹೆಸರು. ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಹನಕೋನದಲ್ಲಿ 1925 ಸೆಪ್ಟಂಬರ್ 2ರಂದು ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಕಾರವಾರದಲ್ಲಿ ಪಡೆದರು. ಅನಂತರ ಧಾರವಾಡದ ಕರ್ನಾಟಕ ಕಾಲೇಜು, ಬೆಳಗಾಂವಿಯ ಆರ್.ಎಲ್.ಕಾನೂನು ಕಾಲೇಜಿನಲ್ಲಿ ಶಿಕ್ಷಣಪಡೆದರು. ಕಾರವಾರದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ (1952) ಅಪಾರ ಯಶಸ್ಸು ಗಳಿಸಿ ಜನಪ್ರಿಯರಾದರು.

ಕಾರವಾರ ನಗರಸಭೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 26ನೆಯ ವಯಸ್ಸಿನಲ್ಲೇ ಇವರು ತಾವೊಬ್ಬ ದಕ್ಷ ಆಡಳಿತಗಾರರೆಂಬುದನ್ನು ತೋರಿಸಿದರು. ರಾಜಕೀಯ, ಸಾರ್ವಜನಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೆಲಸಗಳಲ್ಲಿ ಉತ್ಸಾಹದಿಂದ ದುಡಿಯುವುದು ಇವರ ಜಾಯ ಮಾನವಾಗಿತ್ತು. ಕೆಲಕಾಲ ಇವರು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಮಿತಿಯ ಕಮಿಶನರ್ ಆಗಿ ದುಡಿದರು (1960–72). ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ, ಬೋಟ ಬಿಲ್ಡಿಂಗ್ ಯಾರ್ಡ್ ಸಮಿತಿಯ ಸದಸ್ಯ, ಜಿಲ್ಲಾ ಸಹಕಾರಿ ಬ್ಯಾಂಕಿನ ನಿರ್ದೇಶಕ,ಕೊಂಕಣ ಮರಾಠಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಕೆನರಾ ಬ್ಯಾಂಕ್ ನಿರ್ದೇಶಕ, ಜನತಾ ಕೋ ಆಪರೇಟೀವ್ ಸ್ಟೋರ್ಸ್ ಸಂಸ್ಥಾಪಕ, ಬಾಡದ ಶಿವಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ–ಹೀಗೆ ಬಹುಮುಖವಾಗಿ ಸೇವೆ ಸಲ್ಲಿಸಿದರು. ಮಹಾರಾಷ್ಟ್ರದ ಕೊಲಾಬಾದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಇವರನ್ನು ನೇಮಿಸಲಾಯಿತು (1961). ಕೆಲವು ತಿಂಗಳುಗಳಲ್ಲಿಯೆ ರಾಜಕೀಯ, ರಂಗಪ್ರವೇಶಿಸಿ ರಾಜೀನಾಮೆ ನೀಡಿದರು.

ಇವರು ಕಾಂಗ್ರೆಸ್ ಪಕ್ಷದಿಂದ ಕರ್ನಾಟಕ ವಿಧಾನಸಭೆಗೆ ಪ್ರಥಮ ಬಾರಿಗೆ ಆಯ್ಕೆಯಾದರು(1957). ವಿಧಾನಸಭೆಯಲ್ಲಿ ಕಾರವಾರ ಕ್ಷೇತ್ರವನ್ನು ಪ್ರತಿನಿಧಿಸಿದ್ದರು (1962–74). ವಿಧಾನ ಪರಿಷತ್ತಿನ ಉಪಸಭಾಪತಿಗಳಾಗಿದ್ದ (1966–68)ಇವರು, ಅನಂತರ ವಿಧಾನ ಪರಿಷತ್ತಿನ ಸಭಾಪತಿಗಳಾಗಿಯೂ ಸೇವೆ ಸಲ್ಲಿಸಿದರು (1972–74).ಸಭಾಪತಿ ಹುದ್ದೆಯನ್ನು ಅತ್ಯಂತ ಸಮರ್ಥ ವಾಗಿ ನಿರ್ವಹಿಸಿದರು. ಮೂರನೆಯ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಂಡು (1996) ನಿಧನ ಹೊಂದುವವರೆಗೂ ಕಾರ್ಯನಿರ್ವಹಿಸಿದರು.

ಆಫ್ರಿಕದ ಮಲಾವಿಯಲ್ಲಿ ನಡೆದ ಜಾಗತಿಕ ಸಂಸದೀಯ ಸಮ್ಮೇಳನದಲ್ಲಿ ನಿಯೋಗದ ಸದಸ್ಯರಾಗಿ ಭಾಗವಹಿಸಿದರು (1972). ರೋಟರಿ ಸಂಸ್ಥೆಯ ಸದಸ್ಯರಾಗಿ ಯುರೋಪ್, ಅಮೆರಿಕ ಮೊದಲಾದ ರಾಷ್ಟ್ರಗಳಲ್ಲಿ ಪ್ರವಾಸ ಕೈಗೊಂಡರು. ಇವರು ಶ್ರೇಷ್ಠ ಸಂಸದೀಯ ಪಟುವೆಂದು ಹೆಸರು ಗಳಿಸಿದ್ದರು. ತಮ್ಮ ಸ್ವಂತ ಪ್ರತಿಭೆಯಿಂದ ಉನ್ನತ ಸ್ಥಾನ ಗಳಿಸಿದ ಇವರು 1996 ಮೇ 21ರಂದು ನಿಧನಹೊಂದಿದರು. ಕುಸುಮಾ ಇವರ ಧರ್ಮಪತ್ನಿ. ಇವರಿಗೆ ಎರಡು ಗಂಡು ಎರಡು ಹೆಣ್ಣು ಮಕ್ಕಳು. (ಆರ್.ಜಿ.ಆರ್.)

**ಗಾಂವಕರ, ಸ. ಪ. :** 1887–1972. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕನ್ನಡಿಗ. ಶಿಕ್ಷಣ ತಜ್ಞ, ದಕ್ಷ ಆಡಳಿತಗಾರ. ಸಮಾಜ ಸುಧಾರಕ ಮತ್ತು ಕವಿ. ಸಣ್ಣಪ್ಪ ಪರಮೇಶ್ವರಪ್ಪ ಗಾಂವಕರರು ಉತ್ತರಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನ ತೊರ್ಕೆ ಗ್ರಾಮದಲ್ಲಿ 1887 ಜನವರಿ 11 ರಂದು ಜನಿಸಿದರು. ಪರಮೇಶ್ವರ ಗಾಂವಕರರ ಏಳು ಗಂಡುಮಕ್ಕಳ ಪೈಕಿ ಇವರು ನಾಲ್ಕನೆಯವರು. ಪ್ರಾಥಮಿಕ ಶಿಕ್ಷಣದ ಅನಂತರ



ಉಪಾಧ್ಯಾಯ ವೃತ್ತಿಗೆ ತರಬೇತು ಪಡೆದರು. ಅನಂತರ ತದಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾದರು. ಈ ವೃತ್ತಿಯಲ್ಲಿ ನಿರತರಾಗಿದ್ದಾಗಲೆ ಅವರು ಖಾಸಗಿಯಾಗಿ ವ್ಯಾಸಂಗ ಮಾಡಿ ಧಾರವಾಡದಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದರು. ಧಾರವಾಡ, ಸಾಂಗ್ಲಿಗಳಲ್ಲಿ ಶಿಕ್ಷಣ ಮುಂದುವರಿಸಿ ನಲ್ವತ್ತನೆಯ ವರ್ಷಕ್ಕೆ ಬಿ.ಎ. ಪದವೀಧರರಾದರು. ಅನಂತರ ಅವರಿಗೆ ಹುಬ್ಬಳ್ಳಿಯ ಸ್ಕೂಲ್ ಬೋರ್ಡಿನ ಆಡಳಿತ ಅಧಿಕಾರಿಯ ಹುದ್ದೆ ದೊರಕಿತು. 12 ವರ್ಷ ಈ ಹುದ್ದೆ ನಿರ್ವಹಿಸಿ ನಿವೃತ್ತ ರಾದರು. ಅನಂತರ ಗಾಂಧಿಯವರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆವಾಸವನ್ನು ಅನುಭವಿಸಬೇಕಾಯಿತು. ಬಂಧನದಿಂದ ಹೊರಬಂದ ಅನಂತರ ಮುಂಬಯಿ ಪ್ರಾಂತ್ಯದಲ್ಲಿ ಖೇರ್ ಮುಖ್ಯಮಂತ್ರಿತ್ವದಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಸರ್ಕಾರದಲ್ಲಿ ಇವರು ಉಪಮಂತ್ರಿಗಳಾದರು. ಸ್ವಾತಂತ್ರ್ಯಾನಂತರವೂ ರಾಜಕೀಯದಲ್ಲಿ ಆರು ವರ್ಷ ದುಡಿದರು. ಅನಂತರ ಇವರ ಮನಸ್ಸು ಅಸ್ಪೃಶ್ಯತಾ ನಿವಾರಣೆ, ದೀನದಲಿತೋದ್ಧಾರ, ಮಹಿಳಾ ಶಿಕ್ಷಣಗಳ ಕಡೆಗೆ ಹರಿಯಿತು. ಜಿಲ್ಲೆಯ ಹಿಂದುಳಿದ ಜನಾಂಗವಾದ ಹಾಲಕ್ಕಿ ಒಕ್ಕಲಿಗರ ಏಳ್ಗೆಗಾಗಿ ಬಹಳ ದುಡಿದರು. ವಾಚನಾಲಯ, ವಿದ್ಯಾರ್ಥಿ ವಸತಿ ಸೌಕರ್ಯ, ರೈತರ ಸಂಘಟನೆ, ಪ್ರೌಢಶಾಲಾ ಸ್ಥಾಪನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಅವರು ಸೇವೆ ಸಲ್ಲಿಸಿದರು. ಅಂಕೋಲೆಯಲ್ಲಿ ಕಾಲೇಜು ಸ್ಥಾಪನೆಯಾಗಲು ಇವರೂ ಕಾರಣರು. ಗಾಂಧಿ ತತ್ತ್ವ ಮತ್ತು ಜೀವನವಿಧಾನಗಳ ಶಿಕ್ಷಣ ಪ್ರಚಾರಗಳಿಗಾಗಿ ಇವರು ಗಾಂಧಿ ನಿವಾಸವನ್ನು ಸ್ಥಾಪಿಸಿದರು. ಗಾಂವಕಾರರಿಗೆ ಅರವಿಂದರ ತತ್ತ್ವದಲ್ಲೂ ವಿಶೇಷವಾದ ಆಸಕ್ತಿ ಇತ್ತು. ಮತಾಂತರ ಹೊಂದಿದ ಹಿಂದೂಗಳನ್ನು ಪುನಃ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಬೇಕೆಂಬ ಆರ್ಯಸಮಾಜದ ವಿಚಾರದಲ್ಲಿ ಇವರಿಗೆ ಶ್ರದ್ಧೆ ಇತ್ತು. ಕೆಲಕಾಲ ಆರ್ಯಸಮಾಜದ ಕಾರ್ಯಕರ್ತರಾಗಿ ಆ ಕೆಲಸ ಮಾಡಿದ್ದೂ ಉಂಟು.

ಇವರು ಕವಿಗಳೂ ಹೌದು. ಇವರ ಮೊದಲನೆಯ ಕವನಸಂಕಲನ ಮುಗಿಲು. ರವೀಂದ್ರನಾಥ ಠಾಕೂರರ ಗೀತಾಂಜಲಿಯನ್ನು ಸರಳ ಶೈಲಿಯಲ್ಲಿ ಕನ್ನಡಕ್ಕೆ ಭಾಷಾಂತರಿಸಿ ದ್ದಾರೆ. ಪ್ರಕೃತಿ–ಪ್ರೀತಿ, ಪ್ರೇರಣೆ–ಶೋಧನೆ ಇವು ಇವರ ಇನ್ನೆರಡು ಕವನ ಸಂಕಲನಗಳು. (ಎಸ್.ಆರ್.ಜಿ.)

**ಗಾಗಮೇಲ ಕದನ :** ಮ್ಯಾಸಿಡೋನಿಯದ ಅಲೆಕ್ಸಾಂಡರ್ ಮಹಾಶಯನಿಗೂ ಪರ್ಷಿಯದ 3ನೆಯ ಡೇರಿಯಸನಿಗೂ ಪ್ರ.ಶ.ಪೂ. 331 ರಲ್ಲಿ ನಡೆದ ನಿರ್ಣಾಯಕ ಕದನ. ಇದರಲ್ಲಿ ಡೇರಿಯಸ್ ಸೋತುಹೋದ. ಅಲೆಕ್ಸಾಂಡರನ ಯುದ್ಧತಂತ್ರದಿಂದಾಗಿ ಈ ಕದನ ಪ್ರಸಿದ್ಧವಾಗಿದೆ. ಮುನ್ನಡೆದು ಬರುತ್ತಿದ್ದ ಅಲೆಕ್ಸಾಂಡರನನ್ನು ಎದುರಿಸಿ

ಯುದ್ಧ ಮಾಡುವ ಉದ್ದೇಶದಿಂದ ಪ್ರಾಚೀನ ನಿನೇವದ ಹತ್ತಿರ, (ಈಗಿನ ಇರಾಕ್) ಗಾಗಮೇಲ ಬಯಲಿನಲ್ಲಿ ಡೇರಿಯಸ್, ತನ್ನ ದೊಡ್ಡ ಸೈನ್ಯದೊಡನೆ ಬಿಡಾರ ಹೂಡಿದ್ದ. ಡೇರಿಯಸ್ ಮಧ್ಯಸ್ಥಳವನ್ನಾ ಕ್ರಮಿಸಿಕೊಂಡು, ಪರ್ಷಿಯನ್ನರಿಂದ ಸುತ್ತಿವರಿಯಲ್ಪಟ್ಟಿದ್ದ. ಡೇರಿಯಸನ ಸೈನ್ಯ ಅಲೆಕ್ಸಾಂಡರನ ಸೈನ್ಯಕ್ಕಿಂತ ಬಹಳ ಹೆಚ್ಚಾಗಿತ್ತು.

ಅಲೆಕ್ಸಾಂಡರ್ ತನ್ನ ಸೈನ್ಯಕ್ಕೆ 4 ದಿನಗಳ ಬಿಡುವು ಕೊಟ್ಟು, ರಾತ್ರಿಯ ವೇಳೆ ಮುಂದುವರಿದು, ಬಯಲು ಪ್ರದೇಶಕ್ಕೆ ಎದುರಾಗಿ ಒಂದು ಗುಡ್ಡದ ಮೇಲೆ ನಿಂತ. ಒಂದುದಿನ ಅಲ್ಲಿಯೇ ಇದ್ದು ನಿಧಾನವಾಗಿ ಯುದ್ಧದ ಸ್ಥಳವನ್ನು ಪರಿಶೀಲಿಸಿದ. ರಾತ್ರಿಯ ವೇಳೆ ಯುದ್ಧ ಆರಂಭಿಸಬೇಕೆಂದು ಅಲೆಕ್ಸಾಂಡರನಿಗೆ ಸಲಹೆ ಮಾಡಿದಾಗ, ನಾನು ವಿಜಯವನ್ನು ಕದಿಯುವುದಿಲ್ಲ ಎಂದು ಆತ ಹೇಳಿದ. ರಾತ್ರಿಯ ವೇಳೆ ಅನುಕೂಲ ಸಾಧಿಸುವ ಬದಲು, ಹಗಲು ಹೊತ್ತು ಮೈದಾನದಲ್ಲಿ ಪರ್ಷಿಯನ್ನರ ಮೇಲೆ ವಿಜಯ ಪಡೆಯುವುದರಿಂದ ಇಡೀ ಏಷ್ಯದಲ್ಲಿ ತನ್ನ ಕೀರ್ತಿ ಸ್ಥಾಪನೆಗೆ ಅನುಕೂಲವಾಗುವುದೆಂದು ಆತ ಅರಿತಿದ್ದ.

ಡೇರಿಯಸನ ಸೈನ್ಯ ದೊಡ್ಡದಾಗಿದ್ದದ್ದರಿಂದ, ಅಲೆಕ್ಸಾಂಡರನ ಸೈನ್ಯ ಸುತ್ತುವರಿಯಲ್ಪಡುವ ಅಪಾಯವಿತ್ತು. ಅಲೆಕ್ಸಾಂಡರ್ ತನ್ನ ಪಡೆಯ ಹಿಂಬದಿಯಲ್ಲಿ ಅಶ್ವಾರೋಹಿಗಳ ಎರಡನೆಯ ಸಾಲೊಂದನ್ನು ನಿರ್ಮಿಸಿದ. ಡೇರಿಯಸ್ ಆಕ್ರಮಣ ಆರಂಭಿಸಿದೊಡನೆಯೇ ಅಲೆಕ್ಸಾಂಡರ್ ಬಲಗಡೆಯಿಂದ ಆಕ್ರಮಣವನ್ನಾರಂಭಿಸಿದ. ಸಾಮಂತರೆಲ್ಲ ಭಯಪಟ್ಟರು. ಡೇರಿಯಸನೇ ಮೊದಲು ರಣರಂಗದಿಂದ ಪಲಾಯನ ಮಾಡಿದ. ವಿಜಯ ಅಲೆಕ್ಸಾಂಡರನದಾಯಿತು. ಈ ವಿಜಯದಿಂದ ಅಲೆಕ್ಸಾಂಡರ್ ದಕ್ಷಿಣ ಏಷ್ಯದ ಮೇಲೆ ಹಿಡಿತ ಸಾಧಿಸಿದನು. (ವಿ.ಕೆ.)

**ಗಾಗಲ್, ನಿಕಲೈ ವಸೀಲ್ಯವಿಚ್ :** 1809–52. ಹೆಸರಾಂತ ರಷ್ಯನ್ ಸಾಹಿತಿ. 1809ರಲ್ಲಿ ಉಕ್ರೇನಿನಲ್ಲಿ ಜನಿಸಿದ. ನಿರುದ್ಯೋಗಿಯಾಗಿ ಸೇಂಟ್ ಪೀಟರ್ಸ್ ಬರ್ಗಿಗೆ ಬಂದು 1826ರಲ್ಲಿ ಅಲ್ಲಿ ಸಣ್ಣಮಟ್ಟ ಸರ್ಕಾರಿ ಕೆಲಸದಲ್ಲಿದ್ದು ಅನಂತರ ಅನೇಕ ವರ್ಷಗಳ ಕಾಲ ನಟನಾಗಿ, ಕವಿಯಾಗಿ ತೊಳಲಾಡಿದ. ಕೊನೆಯಲ್ಲಿ ಸಣ್ಣಕತೆಗಾರನೆಂದು ಅಪಾರ ಖ್ಯಾತಿ ಪಡೆದ. ಈವ್ನಿಂಗ್ ಆನ್ ಎ ಫಾರಮ್ ನಿಯರ್ ದಿಕಂಕ (ವಚೇದನ ಕುತೋರ್ ಬ್ಲಿಜ್ ದಿಕಂಕ) (ದಿಕಂಕ ಬಳಿಯ ಕೃಷಿಕ್ಷೇತ್ರಗಳಲ್ಲಿನ ಸಂಜೆಗಳು) ಎನ್ನುವ ಇವನ ಮೊದಲ ಕಥಾಸಂಕಲನ ಈತನಿಗೆ ಹೆಸರು ತಂದ ಗ್ರಂಥ. ಈ ಕಥೆಗಳಲ್ಲಿ ಉಕ್ರೇನ್ ಪ್ರಾಂತ್ಯದ ಸಾಮಾನ್ಯ ಜನರ ನಡೆನುಡಿ ಹಾಗೂ ಜಾನಪದವನ್ನು ಕುರಿತ ವಾಸ್ತವ ಚಿತ್ರಗಳಿವೆ. ಗಾಗಲ್ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕನಾಗಿ ಕೆಲವು ಕಾಲ ಕೆಲಸಮಾಡಿ, ವೃತ್ತಿಯಲ್ಲಿ ಏನೊಂದು ಯಶಸ್ಸನ್ನೂ ಗಳಿಸಲಾರದೆ 1834ರಲ್ಲಿ ಕೆಲಸಕ್ಕೆ ಶರಣು ಹೊಡೆದು, ಸಾಹಿತಿಯಾಗಿಯೇ ಬದುಕಬೇಕೆಂಬ ನಿರ್ಧಾರಕ್ಕೆ ಬಂದ. ಡೈರಿ ಆಫ್ ಎ ಮ್ಯಾಡ್ ಮ್ಯಾನ್ (1835) ಇವನು 1836ರಿಂದ 1846ರವರೆಗೆ ಇಟಲಿಯಲ್ಲಿ ವಾಸಿಸುತ್ತಿದ್ದ. ಇವನು 1842ರಲ್ಲಿ ದಿ ಓವರ್ ಕೋಟ್ ಎಂಬ ಹಾಸ್ಯ ಭರಿತವಾದ ಕಾದಂಬರಿ ರಚಿಸಿದ. ಈತ ಬರೆದ ಅತಿಮುಖ್ಯ ಕೃತಿಗಳೆಂದರೆ ರೆವಿಝೋರ್ (ದಿ ಗವರ್ನಮೆಂಟ್ ಇನ್ಸ್‌ಪೆಕ್ಟರ್ 1836) ಎನ್ನುವ ವಿಡಂಬನಾತ್ಮಕ ನಾಟಕ ಮತ್ತು ಡೆಡ್ ಸೋಲ್ಸ್ 1842 (ಸತ್ತ ಆತ್ಮಗಳು) ಎಂಬ ಅಪೂರ್ಣ ಕಾದಂಬರಿ. ಇನ್‌ಸ್ಪೆಕ್ಟರ್ ನಾಟಕದಲ್ಲಿ ಮೂರ್ಖರಾದ. ಲಂಚಕೋರರಾದ, ಸಣ್ಣ ಪುಟ್ಟ ಸರ್ಕಾರಿ ಅಧಿಕಾರಿಗಳ ಅಧಿಕ ಪ್ರಸಂಗತನ, ಪೆದ್ದು ಪೆದ್ದಾದ ನಡೆವಳಿಕೆ – ಇವನ್ನು ಅತ್ಯಂತ ಹಾಸ್ಯಭರಿತ ಶೈಲಿಯಲ್ಲಿ ಗೇಲಿಮಾಡಿದ್ದಾನೆ. ಸತ್ತ ಆತ್ಮಗಳು ಎಂಬ ಕಾದಂಬರಿಯಲ್ಲಿ ರಷ್ಯದ ಜೀತಗಾರಿಕೆ ಪದ್ಧತಿಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ಇಡೀ ರಷ್ಯನ್ ಸಮಾಜವನ್ನು ಬಡಿದೆಬ್ಬಿಸಿದ ಈ ಕಾದಂಬರಿಯನ್ನು ಮುಂದುವರಿಸಿ ರಷ್ಯನ್ ಸಮಾಜವನ್ನೇ ಸಮಗ್ರವಾಗಿ ಚಿತ್ರಿಸುವ ಮಹಾಕಾದಂಬರಿಯನ್ನು ರಚಿಸ ಬೇಕೆಂದು ಗಾಗಲ್ ನಿಶ್ಚಯಿಸಿದ್ದ. ಆದರೆ ಅತಿಯಾಗಿ ನೀತಿಭೋಧೆ ಮಾಡುವ ಶೈಲಿಯಿಂದಾಗಿ ಕಾದಂಬರಿಯ ರಚನೆ ತೀರಾ ನಿಧಾನವಾಯಿತು. ಇವನು ರೋಮ್ ನಲ್ಲಿ ಇದ್ದಾಗ ಮತಭ್ರಾಂತನಾದ ಪಾದ್ರಿಯ ಪ್ರಭಾವಕ್ಕೆ ಒಳಗಾಗಿ 1845 ರಲ್ಲಿ ಇದ್ದಕ್ಕಿದ್ದಂತೆ ಧಾರ್ಮಿಕ ವಿಷಯಗಳತ್ತ ಮನಸ್ಸು ಹರಿಯಿತಾಗಿ ಗಾಗಲ್ ಚಿತ್ತಕ್ಷೋಭೆಗೆ ಒಳಗಾದ. ಆಗ ತಾನು ಅಲ್ಲಿಯವರೆಗೆ ಬರೆದಿಟ್ಟಿದ್ದ ಸತ್ತ ಆತ್ಮಗಳು ಕಾದಂಬರಿಯ ಮುಂದಿನ ಭಾಗದ ಹಸ್ತಪ್ರತಿಯನ್ನು ಸುಟ್ಟುಹಾಕಿದ. ಇವನು 1852ರ ಫೆಬ್ರವರಿ 24ರಂದು ನಿಧನವಾದ. ಸೋಚಿನೆನಿಯಾ ಎನ್ನುವ ಗದ್ಯನಿರೂಪಣೆ ಮತ್ತು ಜೆನಿಟ್‌ಬ (ವಿವಾಹ) ಎಂಬ ವಿನೋದ ಪ್ರಹಸನ ಇವನ ಇತರ ಕೃತಿಗಳು. ಪುಷ್ಕಿನ್, ಲೆರ್‌ಮೊಂಟಾವ್ ಮೊದಲಾದವರ ರೊಮ್ಯಾಂಟಿಕ್ ಯುಗದಿಂದ ಹಿಡಿದು – ತುರ್ಗೆನೈಫ್, ಟಾಲ್‌ಸ್ಟಾಯ್, ದಾಸ್ತೋವ್‌ಸ್ಕಿ ಮುಂತಾದ ವಾಸ್ತವತಾವಾದಿಗಳವರೆಗಿನ ಕಾಲಾವಧಿಯಲ್ಲಿ ಬಂದ ಗಾಗಲ್ ಅತ್ಯಂತ ಪ್ರಮುಖ ಸಾಹಿತಿ. ಇವನ ವಿಕಟ ವಾಸ್ತವಿಕ ದೃಷ್ಟಿ, ವಿಡಂಬನಯುತವಾದ ವರ್ಣರಂಜಿತ ಗದ್ಯಶೈಲಿ ಇವು ದಾಸ್ತೋವ್‌ಸ್ಕಿ, ಬೆಲಿ ಮುಂತಾದವರ ಮೇಲೆ ಗಾಢಪ್ರಭಾವ ಬೀರಿದುವು. ಗಾಗಲ್ ರಷ್ಯನ್ ಸಮಾಜದ ಹಳೆಯ ಹುರುಳಿಲ್ಲದ ಕಂದಾಚಾರ ಪದ್ಧತಿಗಳು ನಡೆವಳಿಕೆಗಳು, ನೀತಿ ನಿಯಮಗಳನ್ನು ಯಥಾವತ್ತಾಗಿ ಎತ್ತಿ ತೋರಿಸಿದ್ದಾನೆ. ಬದುಕಿನ ವ್ಯಗ್ರ ಸಮಸ್ಯೆಗಳನ್ನು ಸಾಹಿತಿ ಯಥಾರ್ಥವಾಗಿ ಚಿತ್ರಿಸಬೇಕೆಂದು ಹೊಸ ಪಂಥವನ್ನೇ (ರಿಯಲಿಸಂ) ಪ್ರಾರಂಭಿಸಿದವನು ಈತ. ತನ್ನ ಚಿತ್ತಚಾಂಚಲ್ಯ, ವಿಚಾರದ ಅಸಾಂಗತ್ಯ, ಮುಂತಾದ ದೋಷಗಳಿಂದಾಗಿ ಈತ ನಿಷ್ಠೆಯಿಲ್ಲದವನು, ಪ್ರಗತಿವಿರೋಧಿ ಎಂಬ ಆಕ್ಷೇಪಣೆಗಳಿಗೆ ಪಾತ್ರನಾಗಿದ್ದಾನೆ.



(ಎಚ್.ಕೆ.ಆರ್.)

**ಗಾಗಾಭಟ್ಟ :** ಮೀಮಾಂಸಕ. ಭಾಟ್ಟಚಿಂತಾಮಣಿಯ ಕರ್ತೃ. ನಿಜನಾಮಧೇಯ ವಿಶ್ವೇಶ್ವರ, ತಂದೆ ದಿನಕರಭಟ್ಟ, ಪಿತಾಮಹ ರಾಮಕೃಷ್ಣ ಭಟ್ಟ. ಭಟ್ಟ ನಾರಾಯಣ ಈತನ ಮೂಲಪುರುಷನೆಂದೂ ಈತ ಸಂನ್ಯಾಸಾಶ್ರಮ ಸ್ವೀಕರಿಸಿದ್ದರೂ ಛತ್ರಪತಿ ಶಿವಾಜಿಯ ಪ್ರಾರ್ಥನೆ ಮೇರೆಗೆ ಅದನ್ನು ತ್ಯಜಿಸಿದನೆಂದೂ ಈತನ ಗ್ರಂಥದಿಂದ ತಿಳಿದುಬರುತ್ತದೆ. ಈತನ ಭಾಟ್ಟಚಿಂತಾಮಣಿ ಗ್ರಂಥ ಪೂರ್ವಮೀಮಾಂಸಾ ಸೂತ್ರದ ವ್ಯಾಖ್ಯಾನ ರೂಪವಾಗಿದ್ದು ಕೇವಲ ತರ್ಕಪಾದ ಮಾತ್ರ ಉಪಲಬ್ಧವಿದೆ. ವಿಚಾರಸರಣಿಯಲ್ಲಿ ಈತ ಕುಮಾರಿಲಭಟ್ಟನನ್ನು ಅನುಕರಿಸಿದ್ದಾನೆಂಬುದು ಗ್ರಂಥ ವಿಷಯದಿಂದ ಸ್ಪಷ್ಟವಾಗುತ್ತದೆ. ಜೈಮಿನೀಯ ಸೂತ್ರಗಳಿಗೆ ಕುಸುಮಾಂಜಲಿ ಎಂಬ ವೃತ್ತಿಗ್ರಂಥವನ್ನೂ ಶಿವಾಜಿಯನ್ನು ಕುರಿತಂತೆ ಶಿವಾರ್ಕೋದಯವೆಂಬ ಗ್ರಂಥವನ್ನೂ ಈತ ಬರೆದಿದ್ದಾನೆಂದು ಈತನ ಮಾತಿನಿಂದಲೇ ತಿಳಿದುಬರುತ್ತದೆ. (ಎನ್.ಎಸ್.ಆರ್.ಬಿ.)

**ಗಾಗಿ, ಯೂಜೆನ್ ಹೆನ್ರಿ ಪಾಲ್ :** 1848–1903. ಫ್ರಾನ್ಸಿನ ಪ್ರತಿಭಾವಂತ ವರ್ಣಚಿತ್ರಕಾರ. ಕಲೆಗಾಗಿ ಸರ್ವವನ್ನೂ ತ್ಯಾಗಮಾಡಿ, ನವ್ಯಕಲಾ ಶೈಲಿಯ ನಿರ್ಮಾಪಕರಲ್ಲಿ ಅಗ್ರಗಣ್ಯನೆಂದು ಹೆಸರಾದವ. ಪತ್ರಿಕೋದ್ಯಮಿಯೊಬ್ಬನ ಮಗನಾಗಿ ಪ್ಯಾರಿಸಿನಲ್ಲಿ ಹುಟ್ಟಿದ. ಹದಿನೇಳು ವರ್ಷದ ಬಾಲಕನಾಗಿರುವಾಗಲೇ ಸಮುದ್ರಜೀವನದಲ್ಲಿ ಧುಮುಕಿ ಆರು ವರ್ಷಗಳ ಕಾಲ ವ್ಯಾಪಾರಿ ಹಡಗುಗಳೊಂದಿಗೆ ಯೋಧರೊಟ್ಟಿಗೂ ಪ್ರಪಂಚ ಪರ್ಯಟನ ಮಾಡಿದ. 1871 ರಲ್ಲಿ ಪ್ಯಾರಿಸಿಗೆ ಹಿಂದಿರುಗಿ ಒಂದು ದಲಾಲಿ ವ್ಯಾಪಾರಿಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡ 1873ರಲ್ಲಿ ಡೇನಿಷ್ ಮಹಿಳೆ ಮೆಟ್ಟೆಸೋಫಿ ಗ್ಯಾಡ್ ಎಂಬಾಕೆಯನ್ನು ಮದುವೆಯಾದ.

ಗಾಗಿ–ಸ್ವಚಿತ್ರಣ

ಗಾಗಿಯ ಚಿತ್ರಕಲಾ ಪ್ರವೃತ್ತಿ ಪ್ರಚೋದಿತವಾದದ್ದು ಆತನ ಪಾಲಕನಾಗಿದ್ದ ಗಸ್ತಾಫ್ ಅರೋಸ ನಿಂದಾಗಿ, ಅರೋಸನಲ್ಲಿದ್ದ ಕಾರೋ, ಡೆಲಕ್ವಾ, ಮಿಲೆಟ್ ಮೊದಲಾದ ಹೆಸರಾಂತ ಕಲಾವಿದರ, ಕೃತಿರತ್ನಗಳನ್ನು ಗಾಗಿ ನೋಡಿ ಮಾರುಹೋಗಿ ಹವ್ಯಾಸಕ್ಕಾಗಿ ತಾನೂ ಚಿತ್ರಕಲೆಗೆ ಕೈಹಾಕಿದ. ವಿರಾಮವೇಳೆಯಲ್ಲೆಲ್ಲ ಚಿತ್ರಗಳನ್ನು ಬಿಡಿಸುತ್ತ, ಹೊಸ ಹೊಸ ಶೈಲಿಗಳನ್ನು ಶೋಧಿಸತೊಡಗಿದ. ಪರಿಣಾಮವಾಗಿ ಈತನ ಕಲಾಪ್ರೌಢಿಮೆ ಹೆಚ್ಚಿತು. ಆ ಸಮಯದಲ್ಲಿ ನವ್ಯಕಲಾಶೈಲಿಗಳಲ್ಲಿ ಜನಪ್ರಿಯವಾಗಿದ್ದ ಪರಿಣಾಮ ವಿಧಾನದಲ್ಲಿ (ಇಂಪ್ರೆಶನಿಸಂ) ಆಸಕ್ತನಾದ. 1875–76 ರಲ್ಲಿ ಪ್ರಸಿದ್ಧ

ಚಿತ್ರಕಾರನಾದ ಪಿಸಾರೊನೊಟ್ಟಿಗೆ ಸೇರಿಕೊಂಡು ಕಲಾ ತಂತ್ರದಲ್ಲಿ, ಕಲಾಶೈಲಿಯಲ್ಲಿ ವಿಶೇಷ ಪರಿಣತಿಯನ್ನು ಪಡೆದ. ಅಲ್ಲದೆ ಮತ್ತೊಬ್ಬ ಹೆಸರಾಂತ ಕಲಾವಿದನಾದ ಸೇಜ್ಯಾನನೊಡನೆ ಕೆಲಸಮಾಡಿ ತನ್ನ ಶೈಲಿಯಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದ.

ಕ್ರಮೇಣ ಗಾಗಿ ಕಲಾಪ್ರಪಂಚದಲ್ಲಿ ಎಷ್ಟೊಂದು ಆಸಕ್ತನಾದನೆಂದರೆ 1883 ರಲ್ಲಿ ತನ್ನ ಉಳಿದೆಲ್ಲ ಉದ್ಯೋಗಗಳನ್ನು ಅದಕ್ಕಾಗಿ ತ್ಯಜಿಸಿದ. ಈ ಒಂದು ಸಾಹಸೀ ನಿರ್ಧಾರ ಆತನ ಜೀವನಗತಿಯನ್ನೇ ಬದಲಾಯಿಸಿತು. ನಾಲ್ಕು ಮಕ್ಕಳ ತಂದೆಯಾದ ಗಾಗಿಗೆ ಸಂಸಾರವನ್ನು ತೂಗಿಸಿಕೊಂಡು ಹೋಗುವುದೇ ದುಸ್ತರವಾಯಿತು. ಸಾಲದ್ದಕ್ಕೆ ಈತನ ಕಲಾಕೃತಿಗಳನ್ನು ಕೊಂಡುಕೊಳ್ಳುವವರೂ ಕಾಣಲಿಲ್ಲ. ಈ ಆರ್ಥಿಕ ಅವ್ಯವಸ್ಥೆಯಿಂದಾಗಿ ಸಂಸಾರದಲ್ಲಿ ವಿರಸವುಂಟಾಯಿತು. ಮಾವನ ಕಡೆಯಿಂದ ಯಾವ ಸಹಾನುಭೂತಿಯೂ ದೊರೆಯಲಿಲ್ಲ. ಮಕ್ಕಳೊಂದಿಗೆ ಹೆಂಡತಿ ತವರುಮನೆಗೆ ಹೊರಟುಹೋದಳು. 1885ರಲ್ಲಿ ಗಾಗಿ ಒಬ್ಬ ಅನಾಥ ನಿರಾಶಾವಾದಿ ಕಲಾವಿದನಾಗಿ ಅಂಡಲೆಯಬೇಕಾಯಿತು; ದಟ್ಟದಾರಿದ್ರ್ಯದಲ್ಲಿ ತೊಳಲಾಡಬೇಕಾಯಿತು. ಕೊನೆಗೆ ಸಮಾಜದಿಂದಲೂ ಈತ ಬಹಿಷ್ಕೃತನಾದ. ಇನ್ನು ಯಾವುದೇ ರೀತಿಯಲ್ಲಿ ತನ್ನ ಸ್ಥಿತಿಯನ್ನು ಸುಧಾರಿಸಲಸಾಧ್ಯವೆಂಬ ದುಃಸ್ಥಿತಿಗಿಳಿದಾಗ ಯುರೋಪ್ ಮತ್ತು ಅದರ ನಾಗರಿಕತೆಗಳ ಬಗೆಗಾಗಿ ತನಗಿದ್ದ ಎಲ್ಲ ಅಭಿಮಾನವನ್ನೂ ಕಳೆದುಕೊಂಡ.

ಈ ಎಲ್ಲ ಅನುಭವಗಳ ಮೂಸೆಯಲ್ಲಿ ಬೆಂದ ಗಾಗಿ ತನ್ನ ತೀವ್ರವಾದ ಸಂವೇದನೆಗಳನ್ನು ಬಣ್ಣಗಳಲ್ಲಿ ವ್ಯಕ್ತಪಡಿಸುವ ಸಾಧ್ಯತೆಗಳನ್ನು ಕಲಿತ. ಈ ದಿಶೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ. 1887 ರಲ್ಲಿ ಮಾರ್ಟಿನೀಕ್ ಎಂಬ ಪ್ರಕೃತಿ ಸೌಂದರ್ಯದ ಬೀಡಿಗೆ ಹೋಗಿ ಸಂಚರಿಸಿ ಪ್ರಕೃತಿಯಲ್ಲಿನ ಮನೋಹರವಾದ ವರ್ಣ ಸಂಯೋಜನೆಯನ್ನೂ ರಸೋಪಜ್ಞತೆ ಯನ್ನೂ ಕಂಡುಕೊಂಡ. ಅಲ್ಲಿಯ ಮೂಲ ಜನಾಂಗದವರೊಡನೆ ಕಲೆತು ಅವರ ಸಹಜಸುಂದರ ನೈಜಜೀವನದ ಸೊಬಗನ್ನು ಬಹಳವಾಗಿ ಮೆಚ್ಚಿಕೊಂಡ. ಇವೆಲ್ಲವುಗಳ ಪ್ರಭಾವ ಗಾಗಿಯ ಕಲಾಶೈಲಿಯ ಮೇಲೆ ಆಗದೆ ಇರಲಿಲ್ಲ. ಗಾಗಿಯ ಮನಸ್ಸು ಸಮಕಾಲೀನ ಕಲಾಶೈಲಿಯಿಂದ ಪ್ರಾಚೀನ ಜಾನಪದ ಶೈಲಿಯತ್ತ ತಿರುಗಿತು. ಪ್ರಾಕೃತಿಕ ಸೌಂದರ್ಯ ವನ್ನು ತನಗೆ ತಕ್ಕಂತೆ ಉಪಯೋಗಿಸಿ ಕೊಂಡ ಗಾಗಿ ಚೇತೋಹಾರಿ ಯಾದ ಅನೇಕ ಕಲಾರತ್ನಗಳನ್ನು ಸೃಷ್ಟಿಸಿದ. ಈ ಸಂದರ್ಭದಲ್ಲಿ ಬನಾರ್ಡ್ ಎಂಬ ಜಾನಪದ ಕಲಾವಿದನ ಮಾರ್ಗದರ್ಶನವೂ ಈತನಿಗೆ ಸಿಕ್ಕಿತು. ಅಲ್ಲದೆ 1888 ರಲ್ಲಿ ಪ್ರಸಿದ್ಧ ಕಲಾವಿದ ವ್ಯಾನ್ ಗೋನ ಪರಿಚಯವೂ ಆಯಿತು. ಕ್ರಮೇಣ ಗಾಗಿ ತನ್ನದೇ ಆದ ಒಂದು ಸಂಶ್ಲೇಷಣಾಶೈಲಿಯನ್ನು ಬೆಳೆಸಿಕೊಂಡ. ಇದರಲ್ಲಿ ಕೃತ್ರಿಮ ನಾಗರಿಕತೆಯ ಪ್ರಭಾವಕ್ಕಿಂತಲೂ ಸಹಜ ಸುಂದರ ಪ್ರಕೃತಿಯ ಪರಿಣಾಮ ಎದ್ದುಕಾಣುತ್ತದೆ. ಜಪಾನಿನ ವರ್ಣಚಿತ್ರಗಳಲ್ಲಿ ಕಂಡುಬರುವಂತೆ, ಸರಳ ವರ್ಣಗಳನ್ನು ಉಪಯೋಗಿಸಿ ಚಪ್ಪಟೆ ಚಿತ್ರಗಳನ್ನು ಗಾಗಿ ರಚಿಸಿದ. ಇವುಗಳಲ್ಲಿ ಕಂಡುಬರುವ ವರ್ಣ ಸಂಯೋಜನೆ, ರೇಖಾವಿನ್ಯಾಸ, ಲಾಲಿತ್ಯ ಮತ್ತು ಅವುಗಳ ಒಟ್ಟು ಪರಿಣಾಮ ಬಹು ಮನೋಹರವಾಗಿದೆ.

ಈ ಶೈಲಿ ಜನಸಾಮಾನ್ಯರಿಗೂ ಅರ್ಥವಾಗುವಂತಿದ್ದು, ಅದರಲ್ಲಿ ಒಂದು ಭಾವ ಕಲಾತ್ಮಕವಾಗಿ, ವರ್ಣರಂಜಿತವಾಗಿ ವ್ಯಕ್ತವಾಗಿರುವುದನ್ನು ನೋಡಬಹುದು. ಒಟ್ಟಿನಲ್ಲಿ ಗಾಗಿಯ ಚಿತ್ರರಾಶಿಗಳಲ್ಲಿ ಆತ್ಮವಿನಾಶಕ ಬೂರ್ಜ್ವಾನಾಗರಿಕತೆಯ ವಿರುದ್ಧವಾಗಿ ವ್ಯಕ್ತಪಡಿಸಿದ ಒಂದು ತೀವ್ರ ಪ್ರತಿಕ್ರಿಯೆಯನ್ನು ನೋಡಬಹುದಾಗಿದೆ.

ಗಾಗಿಯ ಕಲಾಶೈಲಿಯ ಪ್ರಭಾವವನ್ನು ಪಿಕಾಸೊ ಮೊದಲಾದ ಕಲಾವಿದರ ಕೃತಿಗಳಲ್ಲಿ ಕಾಣಬಹುದು. ಇದು ಮುಂದೆ ಘನಾಕೃತಿವಿಧಾನ (ಕ್ಯೂಬಿಸಂ) ಎಂಬ ಕಲಾಶೈಲಿಯ ಬೆಳೆವಣಿಗೆಗೆ ಪುಷ್ಟಿನೀಡಿತು. ಅಲ್ಲದೆ ಗಾಗಿ ಮುಂದೆ ಆಫ್ರಿಕದ ನಿಗ್ರೋಕಲೆಯ ಸೌಂದರ್ಯ ಸಮೀಕ್ಷೆಗೆ ಪ್ರೇರಣೆ ನೀಡಿದ. ತನ್ನ ಕಲಾಸಾಧನೆಯ ಗುಣವಿಶೇಷದಿಂದಾಗಿ ಮತ್ತು ನವ್ಯಕಲೆಯ ಮೇಲೆ ಬೀರಿದ ಅದ್ಭುತ ಪ್ರಭಾವದಿಂದಾಗಿ ನವ್ಯಕಲಾ ಪ್ರಪಂಚದಲ್ಲಿ ಗಾಗಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದ್ದಾನೆ.

ಗಾಗಿ ಬರೆದಿರುವ ನೋವ-ನೋವ ಎಂಬ ಪುಸ್ತಕ ಆತನ ಸೌಂದರ್ಯ ಮೀಮಾಂಸಾತತ್ತ್ವವನ್ನು ವಿವರಿಸುತ್ತದೆ.

ಈತನ ಜೀವನದ ಪ್ರಧಾನ ಘಟನೆಗಳನ್ನು ಆಧರಿಸಿ ಸಾಮರ್‌ಸೆಟ್ ಮಾಮ್ ಎಂಬ ಪ್ರಸಿದ್ಧ ಸಾಹಿತಿ ದಿ ಮೂನ್ ಅಂಡ್ ಸಿಕ್ಸ್ ಪೆನ್ಸ್ ಎಂಬ ಕಾದಂಬರಿಯನ್ನು ರಚಿಸಿದ್ದಾನೆ (1929). (ಎಚ್.ಆರ್.ಆರ್.ಬಿ.)

**ಗಾಜ಼ :** ದಕ್ಷಿಣ ಪ್ಯಾಲಸ್ತೀನಿನ ಒಂದು ನಗರ. ಮೆಡಿಟರೇನಿಯನ್ ಕರಾವಳಿಯಿಂದ ಸು. 5 ಕಿ.ಮೀ ಮತ್ತು ಟೆಲ್-ಅವಿವ್‌ನ ನೈಋತ್ಯಕ್ಕೆ 64 ಕಿಮೀ ದೂರದಲ್ಲಿದೆ. ಪ್ರ.ಶ.ಪೂ. 62ರ ಹೊತ್ತಿಗೆ ಪಾಂಪೇಯ ಆಡಳಿತಕ್ಕೆ ಈ ನಗರ ಒಳಗಾದಾಗ ಇದಕ್ಕೆ ಗಾಜ಼ ಮಿನೋವ ಎಂಬ ಹೆಸರನ್ನು ಕೊಡಲಾಗಿತ್ತು. ಪ್ರ.ಶ. 331ರಲ್ಲಿ ಚಕ್ರವರ್ತಿ ಕಾನ್ಸ್‌ಟೆಂಟೈನ್ ತನ್ನ ಸೋದರಿಯ ಗೌರವಾರ್ಥವಾಗಿ ಈ ನಗರಕ್ಕೆ ಕಾನ್ಸ್‌ಟ್ಯಾಂಟಿಯ ಎಂದು ಮರುನಾಮಕರಣಮಾಡಿದ. ಇಷ್ಟಾದರೂ ಇಂದಿಗೂ ಇದಕ್ಕೆ ಗಾಜ಼ ಎಂಬ ಹೆಸರೇ ವಿಶೇಷವಾಗಿ ಬಳಕೆಯಲ್ಲಿದೆ. ಇದು ಭೌಗೋಳಿಕ ಹಾಗೂ ಆಯಕಟ್ಟಿನ ದೃಷ್ಟಿಯಿಂದ ಅತ್ಯಂತ ಮಹತ್ವದ ಸ್ಥಾನ ಗಳಿಸಿರುವುದರಿಂದ ಪ್ರಾಚೀನ ಕಾಲದಿಂದಲೂ ಈ ನಗರಕ್ಕೆ ಐತಿಹಾಸಿಕ ಪ್ರಾಮುಖ್ಯವಿದೆ. ಇಲ್ಲಿಯ ದಗೋನ್ ದೇವಾಲಯವನ್ನು ಸ್ಯಾಂಸನ್ ನಿರ್ನಾಮಗೊಳಿಸಿದನೆಂದು ಬೈಬಲಿನಲ್ಲಿ ಉಲ್ಲೇಖವಿದೆ. ಗಾಜ಼ದ ಹೆಸರು ಮೊಟ್ಟಮೊದಲಿಗೆ ಕಾಣುವುದು ಈಜಿಪ್ಟಿನ ಚಕ್ರವರ್ತಿ ಮೂರನೆಯ ಥೂಟ್‌ಮೋಸೆಯ ಸ್ಮಾರಕದಲ್ಲಿ. ಈತ ಪ್ರ.ಶ.ಪೂ. 1480ರಲ್ಲಿ ಸಿರಿಯದ ಮೇಲೆ ಆಕ್ರಮಣ ನಡೆಸಲು ಗಾಜ಼ವನ್ನು ಸೈನಿಕನೆಲೆಯಾಗಿ ಬಳಸಿದುದಾಗಿ ತಿಳಿದುಬಂದಿದೆ. ಕ್ಯಾನಾನ್ ಪ್ರಾಂತ್ಯ ಗಾಜ಼ದಿಂದ ಸಿಡೋನ್‌ವರೆಗೆ ವಿಸ್ತರಿಸಿತ್ತೆಂದು ಹೇಳಲಾಗಿರುವುದರಿಂದ ಗಾಜ಼ ಅದರ ದಕ್ಷಿಣ ಗಡಿಯಾಗಿದ್ದಿರಬೇಕು. ಗಾಜ಼ದ ಸಮೀಪದಲ್ಲಿದ್ದ ನಗರಗಳನ್ನು ಜೋಷುವ ವಶಪಡಿಸಿಕೊಂಡನಾದರೂ ಗಾಜ಼ ಇಸ್ರೇಲಿನ ಗಡಿಯಿಂದ ಹೊರಗೇ ಉಳಿದಿತ್ತು. ಪ್ರ.ಶ.ಪೂ. ಸು. 1200ರ ವೇಳೆಗೆ ಫಿಲಿಸ್ಟೀನರು

ಗಾಜ಼ದ ಬೃಹತ್ ಮಸೀದಿ

ಪ್ಯಾಲೆಸ್ಟೀನ್ ಕರಾವಳಿಯನ್ನು ಪ್ರವೇಶಿಸಿದರು. ಆಗ ಇದು ಅವರ ಪಂಚ ಮಹಾ ನಗರಗಳಲ್ಲಿ ಒಂದಾಗಿ ಪರಿಣಮಿಸಿತು. ಯಹೂದ್ಯರಿಗೆ ಸತತವಾಗಿ ಕಿರುಕುಳ ನೀಡಿದ ನಗರವೂ ಇದಾಯಿತು. ಗುಲಾಮರ ವ್ಯಾಪಾರಕೇಂದ್ರವಾಗಿತ್ತೆಂಬ ಕಾರಣಕ್ಕಾಗಿ ಅಮೋಸ್ ಈ ನಗರವನ್ನು ಗೌರವಿಸಲಿಲ್ಲ. ಪ್ರ.ಶ.ಪೂ. 734ರಲ್ಲಿ ಮೂರನೆಯ ತಿಗ್ಲಾಥ್ ಪಿಲೇಸರ್ ಈ ನಗರದ ಮೇಲೆ ಆಕ್ರಮಣ ಮಾಡಿದ್ದ. ಆಗ ನಗರದ ರಾಜನಾಗಿದ್ದ ಹನೂನ್ ಈಜಿಪ್ಟಿಗೆ ಓಡಿಹೋದನಾದರೂ ಅಸ್ಸಿರಿಯನ್ನರ ಅಧಿಪತ್ಯವನ್ನು ಒಪ್ಪಿಕೊಂಡು ಗಾಜ಼ಕ್ಕೆ ಹಿಂದಿರುಗಿದ. ಆದರೆ ಪ್ರ.ಶ.ಪೂ. 720ರಲ್ಲಿ ಈಜಿಪ್ಷಿಯನರ ನೆರವನ್ನು ಪಡೆದು, ಎರಡನೆಯ ಸಾರ್ಗೊನನ ಆಡಳಿತಾವಧಿಯಲ್ಲಿ ಅಸ್ಸಿರಿಯಕ್ಕೆ ವಿರುದ್ಧವಾಗಿ ದಂಗೆಯೆದ್ದ. ಆಗ ನಡೆದ ಯುದ್ಧದಲ್ಲಿ ಹನೂನನನ್ನು ಸೋಲಿಸಿ ಸೆರೆಹಿಡಿದು ಅಸ್ಸಿರಿಯಕ್ಕೆ ಕೊಂಡೊಯ್ಯಲಾಯಿತು. ಪ್ರ.ಶ.ಪೂ. 332ರಲ್ಲಿ ಎರಡು ತಿಂಗಳುಗಳ ಹೋರಾಟದ ಕೊನೆಯಲ್ಲಿ ಅಲೆಗ್ಸಾಂಡರ್ ಇದನ್ನು ಪರ್ಷಿಯನ್ನರಿಂದ ಗೆದ್ದುಕೊಂಡ. ಪ್ರ.ಶ.ಪೂ. 3ನೆಯ ಶತಮಾನದಿಂದ 1ನೆಯ ಶತಮಾನದ ವರೆಗಿನ ಅವಧಿಯಲ್ಲಿ ಈಜಿಪ್ಟ್, ಸಿರಿಯ ಮತ್ತು ಯಹೂದ್ಯ ಸೈನ್ಯಗಳು ಈ ನಗರದ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸುವ ಸಲುವಾಗಿ ಪರಸ್ಪರ ಹೋರಾಡುತ್ತಿದ್ದುವು. ಪ್ರ.ಶ.ಪೂ. 62ರಲ್ಲಿ ಪಾಂಪೇ ಈ ನಗರವನ್ನು ಗೆದ್ದುಕೊಂಡಾಗ ಇದು ವ್ಯಾಪಾರಕೇಂದ್ರವಾಗಿ ಅಭಿವೃದ್ಧಿ ಹೊಂದಿತು. ಈ ದಿಕ್ಕಿನಲ್ಲಿ ರೋಮನ್ನರು ನಡೆಸಿದ ಪ್ರಯತ್ನಗಳು ಉಲ್ಲೇಖಾರ್ಹವಾಗಿವೆ. ಪ್ರ.ಶ.ಪೂ. 30ರಲ್ಲಿ ಆಗಸ್ಟಸ್ ಚಕ್ರವರ್ತಿ ಈ ನಗರವನ್ನು ಹೆರದ್‌ಗೆ ಬಳುವಳಿಯಾಗಿ ಕೊಟ್ಟ. ಪ್ರ.ಶ.ಪೂ. 4ರಲ್ಲಿ ಹೆರದ್ ಕಾಲವಾದಾಗ ಇದನ್ನು ಮತ್ತೆ ಸಿರಿಯದ ಚಕ್ರಾಧಿಪತ್ಯಕ್ಕೇ ಸೇರಿಸಿಕೊಳ್ಳಲಾಯಿತು.

ಕ್ರೈಸ್ತರ ನಂಬಿಕೆಯ ಪ್ರಕಾರ ಫಿಲೋಮೆನ್ ಗಾಜ಼ಕ್ಕೆ ಬಂದ ಮೊಟ್ಟಮೊದಲ ಧರ್ಮಾಧಿಕಾರಿ. ಪ್ರ.ಶ. 331ರಲ್ಲಿ ಗಾಜ಼ದ ರೇವುಪಟ್ಟಣವಾಗಿದ್ದ ಮುಯಿ-ಔಮಸ್ (ಇಂದಿನ ಅಲ್-ಮೀನ) ಉಪನಗರ ಸಂಪೂರ್ಣವಾಗಿ ಕ್ರೈಸ್ತಧರ್ಮಕ್ಕೆ ಧರ್ಮಾಂತರ ಹೊಂದಿತು. ಈ ಚರಿತ್ರಾರ್ಹ ಘಟನೆಯ ಸ್ಮರಣಾರ್ಥ ಹಾಗೂ ತನ್ನ ಸೋದರಿಯ ಗೌರವಾರ್ಥ ಚಕ್ರವರ್ತಿ ಕಾನ್ಸ್‌ಟೆಂಟೈನ್ ಈ ನಗರಕ್ಕೆ ಕ್ಯಾನ್ಸ್‌ಟ್ಯಾಂಟಿಯ ಎಂದು ನಾಮಕರಣ ಮಾಡಿದ. ಪ್ರ.ಶ. 5ನೆಯ ಶತಮಾನದ ಆರಂಭದಲ್ಲಿ ಕ್ರೈಸ್ತಧರ್ಮ ಇಲ್ಲಿ ವಿಜೃಂಭಿಸತೊಡಗಿತ್ತು. ಪ್ರ.ಶ. 500ರ ಸುಮಾರಿಗೆ ಇಲ್ಲಿ ಒಂದು ರ್ಹೆಟೊರಿಕ್ ಶಾಲೆಯೂ ಆರಂಭಗೊಂಡಿತ್ತು.

634ರಲ್ಲಿ ಅರಬ್ಬರು ಗಾಜ಼ವನ್ನು ವಶಪಡಿಸಿಕೊಂಡರು. ಆದರೆ, ಅವರು ಇಲ್ಲಿಗೆ ಅಪರಿಚಿತರೇನೂ ಆಗಿರಲಿಲ್ಲ. ಎರಡನೆಯ ಖಲೀಫನಾದ ಉಮರ ಇಲ್ಲಿ ರಾಜ್ಯವಾಳಿ ಪ್ರಸಿದ್ಧಿ ಗಳಿಸಿದ್ದ. ಪ್ರವಾದಿ ಮಹಮ್ಮದನ ಮುತ್ತಜ್ಜ ಹಾಷಿಮನ ಸಮಾಧಿ ಗಾಜ಼ದಲ್ಲೇ ಇತ್ತೆಂದು ಇಸ್ಲಾಂ ಸಂಪ್ರದಾಯ ಹೇಳುತ್ತದೆ. ಇಸ್ಲಾಂ ಕಾನೂನಿಗೆ ವ್ಯವಸ್ಥಿತ ರೂಪವನ್ನಿತ್ತ ಕೀರ್ತಿಗೆ ಪಾತ್ರನಾಗಿರುವ ಅಲ್-ಶಫಿ ಹುಟ್ಟಿದ್ದೂ ಇಲ್ಲೇ (767). ಮುಂದೆ 12ನೆಯ ಶತಮಾನದಲ್ಲಿ ಧರ್ಮಯೋಧರು ಇದನ್ನು ವಶಪಡಿಸಿಕೊಂಡಾಗ ಇದು ಬಹು ಮಟ್ಟಿಗೆ ಪಾಳು ನೆಲವಾಗಿತ್ತು. ಅವರು ಈ ನಗರವನ್ನು ಸಾಕಷ್ಟು ಅಭಿವೃದ್ಧಿಪಡಿಸಿದ ರಾದರೂ ಇದಕ್ಕೆ ಮತ್ತೆ ಹಿಂದಿನ ಮಹತ್ತ್ವ ದೊರೆಯಲಿಲ್ಲ.

1187ರಲ್ಲಿ ಸಲಾದೀನ್ ಇದನ್ನು ಮತ್ತೆ ವಶಪಡಿಸಿಕೊಂಡಾಗ ಈ ನಗರ ಮತ್ತೆ ಮುಸ್ಲಿಮರ ಕೈವಶವಾದಂತಾಯಿತು. 1577ರಲ್ಲಿ ತುರ್ಕರು, 1799ರಲ್ಲಿ ನೆಪೋಲಿಯನ್ ಬೋನಾಪಾರ್ಟೆ ಈ ನಗರದ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಿದ್ದರು. 1831ರಲ್ಲಿ ಇದು ಈಜಿಪ್ಟಿನ ಗವರ್ನರ್ ಮೊಹಮ್ಮದಾಲಿಯ ಕೈವಶವಾಯಿತು. ಆದರೆ 1840ರಲ್ಲಿ ಇದು ಮತ್ತೆ ತುರ್ಕರ ಆಡಳಿತಕ್ಕೆ ಒಳಗಾಯಿತು. 1917ರಲ್ಲಿ ಇದು ಬ್ರಿಟಿಷ್ ಮತ್ತು ತುರ್ಕಿ ಸೇನೆಗಳ ನಡುವಣ ಕದನದ ಕ್ಷೇತ್ರವಾಗಿ ಪರಿಣಮಿಸಿತು. ಪ್ಯಾಲೆಸ್ಟೀನಿನ ಬ್ರಿಟಿಷ್ ನಿಯೋಗಿ ಆಡಳಿತದಲ್ಲಿ ಗಾಜ಼ ನಗರ ಇದೇ ಹೆಸರಿನ ಪ್ರಾಂತ್ಯದ ಆಡಳಿತ ಕೇಂದ್ರವಾಗಿ ಪರಿಣಮಿಸಿತು. 1947ರ ನವೆಂಬರ್ 20ರಂದು ವಿಶ್ವಸಂಸ್ಥೆಯ ಮಹಾಸಭೆ ಪ್ಯಾಲಿಸ್ಟೀನ್ ವಿಭಜನೆಯ ನಿರ್ಣಯವನ್ನು ಅಂಗೀಕರಿಸಿದ್ದರಿಂದ ಗಾಜ಼ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳು ಪ್ಯಾಲೆಸ್ಟೀನ್ ಅರಬ್ ಪ್ರದೇಶದ ಭಾಗಗಳಾಗಿ ಪರಿಣಮಿಸಿದುವು. 1948ರಲ್ಲಿ ಬ್ರಿಟಿಷ್ ಒಪ್ಪಂದದ ಅವಧಿ ಕೊನೆಗೊಂಡ ದಿವಸವೇ ಇದು ಇಸ್ರೇಲ್-ಈಜಿಪ್ಟ್ ನಡುವಣ ಕದನದ ಕೇಂದ್ರವೂ ಪ್ಯಾಲೆಸ್ಟೀನ್ ಅರಬ್ ನಿರಾಶ್ರಿತರ ನೆಲೆಯೂ ಆಗಿ ಪರಿಣಮಿಸಿತು. 1949ರ ಕದನ ವಿರಾಮ ಒಪ್ಪಂದ ಗಾಜ಼ದ ಕೆಲವು ಭಾಗಗಳ ಮೇಲೆ ಈಜಿಪ್ಟಿನ ಸೈನ್ಯಾಧಿಕಾರವನ್ನು ಮಾನ್ಯಮಾಡಿತು. 1956ರಲ್ಲಿ ಇಸ್ರೇಲ್ ಗಾಜ಼ದ ಒಂದು ಭಾಗವನ್ನು ವಶಪಡಿಸಿಕೊಂಡಿತ್ತಾದರೂ ಮತ್ತೆ ಅದನ್ನು ಈಜಿಪ್ಟಿಗೆ ಹಿಂದಿರುಗಿಸಲಾಯಿತು. 1967ರಲ್ಲಿ ಇಸ್ರೇಲ್-ಈಜಿಪ್ಟ್‌ಗಳ ನಡುವೆ ನಡೆದ ಆರು ದಿನಗಳ ಯುದ್ಧದಲ್ಲಿ ಇದನ್ನು ಇಸ್ರೇಲ್ ಮತ್ತೆ ಆಕ್ರಮಿಸಿಕೊಂಡಿತು.

ಈ ನಗರದ ಬಳಿ ಟೆಲ್-ಎಲ್-ಅಜ್ಜುಲ್‌ನಲ್ಲಿ ಫ್ಲಿಂಡರ್ಸ್ ಪೆಟ್ರಿಯೇ ಉತ್ಖನನಗಳನ್ನು ನಡೆಸಿದ್ದಾನೆ. ಈತನ ಅಭಿಪ್ರಾಯದ ಪ್ರಕಾರ ನವಶಿಲಾಯುಗದಿಂದ ಕಂಚಿನ ಯುಗದ ವರೆಗೆ ಇಲ್ಲಿ ಜನರು ವಾಸವಾಗಿದ್ದರು. ಇದೇ ಪ್ರಾಚೀನ ಗಾಜ಼ದ ನಿವೇಶನವಾಗಿತ್ತು. ಈ ಭೂಭಾಗ ವಡಿಗುಹ್‌ಜೇಡ್ ನದೀಮುಖಜಭೂಮಿಯ ಬಳಿ ಇದ್ದು, ಇದರ ಆಳವೆ ಮಲೇರಿಯ ಪೀಡಿತವಾಗಿದ್ದುದರಿಂದ ಶಾಶ್ವತ ನೆಲೆಸಿಕೆ ಅಸಾಧ್ಯವಾಗಿದ್ದಿರಬೇಕೆಂದು ಹೇಳಲಾಗಿದೆ. ಈ ಕಾರಣದಿಂದಾಗಿ ಈ ನಿವೇಶನ ವರ್ಜ್ಯವಾಗಿರಬೇಕು.

ಗಾಜ಼ ನಗರ

ಗಾಜ಼ದ ಪ್ರಮುಖ ಸ್ಮಾರಕಗಳೆಂದರೆ ಸಂತ ಪೋರ್‌ಫಿರಿಯ ಚರ್ಚ್, ಜಮೀ-ಅಲ್-ಕಬೀರ್ ಬೃಹತ್ ಮಸೀದಿ, ಜಮೀ-ಅಲ್-ಸಯೀದ್ ಹಾಷಿಮ್ ಸಮಾಧಿ ಮತ್ತು ಅಬು-ಅಲ್-ಅಜಮ್ ಸಮಾಧಿ. ಇಲ್ಲಿ ಕ್ರೈಸ್ತಧರ್ಮ ಪ್ರಚಾರ ಸಂಸ್ಥೆಯೊಂದಿದೆ. ಅದು ಕೆಲವು ಶಾಲೆಗಳನ್ನೂ ಆಸ್ಪತ್ರೆಗಳನ್ನೂ ನಡೆಸುತ್ತಿದೆ.

ಈಚೆಗೆ ಈ ಸುತ್ತಿನಲ್ಲಿ ಬಾರ್ಲಿ ವ್ಯವಸಾಯವನ್ನು ಕೈಗೊಂಡಿದ್ದರಿಂದ ಇದು ಆಂಶಿಕವಾಗಿಯಾದರೂ ಮತ್ತೆ ಸಮೃದ್ಧಿಯತ್ತ ಹೆಜ್ಜೆ ಹಾಕಿದಂತಾಗಿದೆ. ಎತ್ತರವಾದ ಪ್ರದೇಶದಲ್ಲಿ ನೆಲೆಗೊಂಡಿರುವುದರಿಂದಲೂ ಅನೇಕ ಗುಮ್ಮಟ ಹಾಗೂ ಮಿನಾರುಗಳಿರುವು ದರಿಂದಲೂ ಆಲಿವ್ ಮತ್ತು ಖರ್ಜೂರದ ಗಿಡಗಳು ಅಲ್ಲಲ್ಲಿ ಬೆಳೆದು ನಿಂತಿರುವದ ರಿಂದಲೂ ಈ ನಗರ ತುಂಬಾ ರಮಣೀಯವಾಗಿದೆ.

ಗಾಜ಼ ಭೂಪಟ್ಟಿ: ಪ್ಯಾಲೆಸ್ಟೀನಿನ ನೈರುತ್ಯಕ್ಕೆ, ಈಜಿಪ್ಟಿನ ಗಡಿಯಿಂದ ಈಶಾನ್ಯ ದಿಕ್ಕಿನತ್ತ ಹರಡಿಕೊಂಡಿರುವ, ಸುಮಾರು 9 ಕೀ.ಮೀ. ಅಗಲ, 40ಕಿ.ಮೀ. ಉದ್ದವಿರುವ ಭೂಭಾಗ, ಭೌಗೋಳಿಕವಾಗಿ ಇದು ನೆಗೆಬ್ ಪ್ರಾಂತ್ಯದ ಒಂದು ಭಾಗ, 1948ಕ್ಕೆ ಮೊದಲು ಇದು ಬ್ರಿಟಿಷ್ ನಿಯೋಗಿ ಆಡಳಿತಕ್ಕೆ ಒಳಪಟ್ಟಿದ್ದ ಪ್ಯಾಲೆಸ್ಟೀನಿನ ಒಂದು ಭಾಗವಾಗಿತ್ತು. ಆದರೆ, ಒಪ್ಪಂದದ ಅವಧಿ ಕೊನೆಗೊಂಡ ದಿವಸವೇ- ಅಂದರೆ, ಮೇ 15, 1948ರಂದೇ ಅರಬ್-ಇಸ್ರೇಲ್ ಯುದ್ಧ ಪ್ರಾರಂಭವಾಯಿತು. ಈಜಿಪ್ಟಿನ ಸೈನ್ಯ ಗಾಜ಼ವನ್ನು ಪ್ರವೇಶಿತು. ಗಾಜ಼ ಆಗ ಈಜಿಪ್ಟಿನ ಸೈನಿಕ ಕಾರ್ಯಾಚರಣೆ ಕೇಂದ್ರವೂ ಆಗಿ ಪರಿಣಮಿಸಿತು. ಕದನದ ಪರಿಣಾಮವಾಗಿ ಅರಬ್ಬರ ವಶದಲ್ಲಿದ್ದ ಈ ಪ್ರದೇಶದ ವಿಸ್ತೀರ್ಣ ಮೇಲೆ ಹೇಳಿದ ಅಳತೆಗೆ ಸೀಮಿತ ಗೊಂಡಿತು. ಇದಕ್ಕೆ ಗಾಜ಼ ಭೂಪಟ್ಟಿ ಎಂದು ಹೆಸರಾಯಿತು. ಅಧಿಕೃತವಾಗಿ ಇದರ ಮೇರೆಗಳು ನಿರ್ಧರಿಸಲ್ಪಟ್ಟು ಇದು ಅಸ್ತಿತ್ವಕ್ಕೆ ಬಂದದ್ದು 1949ರ ಫೆಬ್ರುವರಿ 24ರಂದು. 1949-1954ರಲ್ಲಿ ಒಟ್ಟಾರೆ ಶಾಂತಿ ಸ್ಥಿತಿಯಿತ್ತಾದರೂ ಆಗಿಂದಾಗ್ಗೆ ಸಣ್ಣಪುಟ್ಟ ಗಡಿ ಘರ್ಷಣೆಗಳು ನಡೆಯುತ್ತಲೇ ಇದ್ದುವು. 1955ರ ಫೆಬ್ರುವರಿಯಲ್ಲಿ ಇಸ್ರೇಲ್ ಈ ಭೂಪಟ್ಟಿಯ ಮೇಲೆ ತೀವ್ರಧಾಳಿ ನಡೆಸಿತು. ಈಜಿಪ್ಟ್ ಪ್ರತಿ ಧಾಳಿ ನಡೆಸಿತು. 1956ರ ನವೆಂಬರಿನಲ್ಲಿ ಇಸ್ರೇಲಿನ ಸೈನ್ಯ ಇದನ್ನು ಆಕ್ರಮಿಸಿ ಕೊಂಡಿತು. ಈ ಮಧ್ಯೆ ಈ ಅವಧಿಯಲ್ಲಿ ಸೂಯೆಜ಼್ ಕಾಲುವೆಯ ರಾಷ್ಟ್ರೀಕರಣ ನಡೆದದ್ದರಿಂದ ಈ ಭೂಪಟ್ಟಿಯಲ್ಲಿ ಸ್ವಲ್ಪಕಾಲ ಶಾಂತಿ ಏರ್ಪಟ್ಟಿತು. ವಿಶ್ವಸಂಸ್ಥೆ ಅಂಗೀಕರಿಸಿದ ನಿರ್ಣಯಗಳಿಂದಾಗಿ 1957ರ ಮಾರ್ಚ್ ತಿಂಗಳಲ್ಲಿ ಇಸ್ರೇಲಿ ಪಡೆಗಳು ಈ ಪ್ರದೇಶವನ್ನು ತೆರವು ಮಾಡಿದುವು. ಈಜಿಪ್ಟ್ ಮತ್ತೆ ನಾಗರಿಕ ಆಡಳಿತ ವ್ಯವಸ್ಥೆಯ ಹೊಣೆಯ ವಹಿಸಿಕೊಂಡಿತು. ಘರ್ಷಣೆಗಳನ್ನು ನಿವಾರಿಸುವ ಸಲುವಾಗಿ ವಿಶ್ವಸಂಸ್ಥೆಯ ಪಡೆಗಳನ್ನು ಇರಿಸಲಾಯಿತು. 1967ರಲ್ಲಿ ಆರು ದಿನಗಳ ಯುದ್ಧದಲ್ಲಿ ಇದನ್ನು ಇಸ್ರೇಲ್ ಮತ್ತೆ ವಶಪಡಿಸಿಕೊಂಡಿತು.

**ಆರ್ಥಿಕ ಪರಿಸ್ಥಿತಿ:** ಸಣ್ಣ ಕೈಗಾರಿಕೆಗಳು, ವ್ಯವಸಾಯ ಹಾಗೂ ಕೆಲಸಗಾರರಿಂದ ಕೂಡಿದೆ. ಪ್ರಮುಖವಾಗಿ ಸ್ಟ್ರಾಬೆರಿ, ಸಿಟ್ರಸ್, ಖರ್ಜೂರ, ಆಲಿವ್ ಹಾಗೂ ಹಣ್ಣುಗಳು. ವಿವಿಧ ತರಕಾರಿಗಳನನು ಬೆಳೆಯುತ್ತಾರೆ.

ಸಣ್ಣ ಕೈಗಾರಿಕೆಗಳು: ಪ್ಲಾಸ್ಟಿಕ್, ಬಟ್ಟೆ, ಉಪಕರಣಗಳು, ಮಡಕೆಗಳು, ತಾಮ್ರ, ಹಾಗೂ ಕಾರ್‌ಪೆಟ್ ಕೈಗಾರಿಕೆಗಳಿವೆ.

ಸಂಸ್ಕೃತಿ: ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ರಶಾದ-ಶಾನ ಸಾಂಸ್ಕೃತಿಕ ಕೇಂದ್ರ ಪ್ರಮುಖವಾಗಿದೆ. ಮಕ್ಕಳಿಗಾಗಿ ಮಕ್ಕಳ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಿದ್ದು.. ಎಲ್ಲ ಬಗೆಯ ಕಲೆಗಳನ್ನು ಕಲಿಸಲಾಗುತ್ತದೆ. ಗಾಜ಼ಾ ಪ್ರಾಚೀನ ವಸ್ತು ಸಂಗ್ರಹಾಲಯ ಹಾಗೂ ಕ್ರೇಜ಼ಿವಾಲರ ಪಾರ್ಕ್‌ಗಳನ್ನು ನೋಡಬಹುದು.

ಶಿವಾ: ಜನಸಂಖ್ಯೆಯ 90 ಭಾಗ ಶಿಕ್ಷಿತರು. ಇದನ್ನು ನಾಲ್ಕು ವಿಶ್ವವಿದ್ಯಾಲಯಗಳಿವೆ. 1. ಆತ-ಅಭರ ವಿಶ್ವವಿದ್ಯಾನಿಲಯ, 2. ಆಲ್ ಕ್ವುಕ್ಸ್ ಮುಕ್ತ ವಿಶ್ವವಿದ್ಯಾನಿಲಯ 3. ಆಲ್ ಆಕ್ಸ ವಿಶ್ವವಿದ್ಯಾನಿಲಯ 4. ಇಸ್ಲಾಮಿಕ ವಿಶ್ವವಿದ್ಯಾನಿಲಯ ಗಾಜ಼

ಧರ್ಮ: ಮುಖ್ಯವಾಗಿ ಸುನ್ನಿ ಇಸ್ಲಾಂ ಅನುಕರಿಸುವವರು ಇದ್ದಾರೆ. ಗಾಜ಼ಾದಲ್ಲಿ ಶಿಷ್ಯ ಇನ್ನೊಂದು ಅಧಿಕವಾಗಿತಂತೆ. ನಗರ ಜನಸಂಖ್ಯೆ: 2009ಕ್ಕೆ 449,221. (ಪಿ.ಜಿ.ಡಿ.)

**ಗಾಜ಼ಿ ಆಂಟೆಪ್ :** ದಕ್ಷಿಣ ಮಧ್ಯ ತುರ್ಕಿಯ ಒಂದು ಪ್ರಾಂತ್ಯ ಹಾಗೂ ಆ ಪ್ರಾಂತ್ಯದ ಆಡಳಿತ ಕೇಂದ್ರ. ಮೊದಲು ಇದಕ್ಕೆ ಐಂಟಾಬ್ ಎಂಬ ಹೆಸರಿತ್ತು. 1920-21ರ ಅವಧಿಯಲ್ಲಿ ಫ್ರೆಂಚರ ಆಕ್ರಮಣವನ್ನು ಪ್ರತಿಭಟಿಸಿ ನಿಂತ ಗೌರವದ ಕುರುಹಾಗಿ ಕೆಮಾಲ್ ಅಟಾಟರ್ಕ್ ಈ ನಗರಕ್ಕೆ ಗಾಜ಼ಿ ಆಂಟೆಪ್ ಎಂದು ಹೊಸದಾಗಿ ನಾಮಕರಣ ಮಾಡಿದ. ಗಾಜ಼ಿ ಎಂದರೆ ಇಸ್ಲಾಮಿಗಾಗಿ ಹೋರಾಟಗಾರ ಎಂದು ಅರ್ಥ. ಈ ನಗರ ಟಾರಸ್ ಪರ್ವತದ ಇಳಿಜಾರಿನಲ್ಲಿ ಸುಣ್ಣಕಲ್ಲಿನ ಬೆಟ್ಟದ ಮೇಲೆ ನೆಲೆಗೊಂಡಿದೆ. ಮೊದಲು ಇಲ್ಲಿ ಆರ್ಮೇನಿಯನರೇ ಬಹುಸಂಖ್ಯಾತರಾಗಿದ್ದರೂ ಈಗ ತುರ್ಕೊಮನ್ ಮತ್ತು ಕುರ್ದಿ ಜನಾಂಗಗಳವರೂ ವಿಶೇಷವಾಗಿದ್ದಾರೆ.

ಇತಿಹಾಸಪೂರ್ವ ಕಾಲದಿಂದಲೂ ಈ ನಗರ ಜನಭರಿತವಾಗಿದ್ದುದಾಗಿ ತಿಳಿದು ಬಂದಿದೆ. ಹಿಟ್ಟೈಟರ ಕಾಲದಲ್ಲಿ ಈ ನಗರಕ್ಕೆ ಯಾವ ಹೆಸರಿತ್ತೆಂಬುದು ಖಚಿತವಾಗಿ ತಿಳಿದಿಲ್ಲವಾದರೂ ಇದು ತುಂಬ ಮಹತ್ವದ ನಗರವಾಗಿದ್ದಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಕಾರಣ ಇದರ ಭೌಗೋಳಿಕ ನೆಲೆ. ಮಧ್ಯಯುಗದಲ್ಲೂ ಇದು ಪ್ರಮುಖ ಸೈನಿಕನೆಲೆಯಾಗಿತ್ತು. 1183ರಲ್ಲಿ ತುರ್ಕಿಯಸಲಾದೀನ್ ಈ ನಗರವನ್ನು ಆಕ್ರಮಿಸಿಕೊಂಡಿದ್ದ. 1516ರಲ್ಲಿ ಇದು ಆಟೊಮನ್ ಚಕ್ರಾಧಿಪತ್ಯದ ಒಂದು ಭಾಗವಾಗಿತ್ತು. 19ನೆಯ ಶತಮಾನದ ಆದಿಭಾಗದಲ್ಲಿ ಇಬ್ರಾಹಿಂ ಪಾಷ ಇದನ್ನು ತನ್ನ ಸೈನಿಕನೆಲೆಯಾಗಿಸಿ ಕೊಂಡು, ಆಟೊಮನ್ ದಳಗಳ ಮೇಲೆ ವಿಜಯ ಸಾಧಿಸಿದ. 1920-21ರ ನಡುವೆ ಇದು ಹತ್ತು ತಿಂಗಳುಗಳ ಕಾಲ ಫ್ರೆಂಚರ ಆಕ್ರಮಣವನ್ನು ಯಶಸ್ವಿಯಾಗಿ ತಡೆದಿತ್ತು. ಈ ಕಾರಣದಿಂದಾಗಿಯೇ ಇದಕ್ಕೆ ಗಾಜ಼ಿ ಆಂಟೆಪ್ ಎಂದು ಮರು ನಾಮಕರಣವಾದ್ದು. ಕೊನೆಗೆ ಇದು ಫ್ರೆಂಚರ ಕೈವಶವಾಯಿತು. ಆದರೆ, 1922ರಲ್ಲಿ ಮತ್ತೆ ಇದನ್ನು ತುರ್ಕಿಗೆ ಒಪ್ಪಿಸಿಕೊಡಲಾಯಿತು. ಜ್ಯೂಪಿಟರ್ ದೊಲಿಚೆನಸ್ಸನ ಪ್ರಸಿದ್ಧ ದೇವಾಲಯವಿದ್ದ ದುಲುಕ್

(ದೊಲಿಚೆ ಎಂಬುದು ಪ್ರಾಚೀನ ಹೆಸರು) ನಗರದ ನಿವೇಶನ ಈ ನಗರದ ವಾಯವ್ಯಕ್ಕೆ ಕೆಲವೇ ಕಿ.ಮೀಗಳ ದೂರದಲ್ಲಿದೆ. ಅಲ್ಲಿಗೂ ಈ ನಗರಕ್ಕೂ ರೈಲುಸಂಪರ್ಕವುಂಟು. ದುಲುಕ್‌ನಲ್ಲಿ ಗಮನಾರ್ಹವಾದ ಅನೇಕ ಪ್ರಾಚೀನ ಸಮಾಧಿಗಳು ದೊರೆತಿವೆ. ಇದರಿಂದಾಗಿ ಗಾಜಿ ಆಂಟೆಪ್‌ನ ಮಹತ್ತ್ವ ಹೆಚ್ಚಿದೆ.

ತುರ್ಕಿ ರಾಷ್ಟ್ರೀಯ ರೈಲ್ವೆ ಜಾಲ ಈ ನಗರಕ್ಕೂ ಇತರ ನಗರಗಳಿಗೂ ಸಂಪರ್ಕ ಕಲ್ಪಿಸಿದೆ. ಸರ್ವಋತು ಭೂಮಾರ್ಗಗಳೂ ಉಂಟು. ಈ ನಗರದ ಸುತ್ತ ದ್ರಾಕ್ಷಿಯ ತೋಟಗಳು, ಪಿಸ್ತಾಶಿಯೋ ಮತ್ತು ಆಲಿವ್ ತೋಪುಗಳು ಉಂಟು. ಇದು ಈ ಪ್ರಾಂತ್ಯದ ಪ್ರಮುಖ ವ್ಯಾಪಾರ ಕೇಂದ್ರ. ಇಲ್ಲಿ ವೈದ್ಯಕೀಯ ಶಾಲೆಯನ್ನೊಳಗೊಂಡಿರುವ ಅಮೆರಿಕನ್ ಮಿಷನ್ ಕಾಲೇಜು ಮತ್ತು ಬಾಲಕಿಯರ ಶಾಲೆ ಇವೆ. ಒಂದು ಹವಾ ವೀಕ್ಷಣಾಲಯವೂ ಉಂಟು. ಉತ್ತಮ ದರ್ಜೆಯ ಹತ್ತಿ ಬಟ್ಟೆಗಳು, ಮೇಕೆಯ ಕೂದಲಿನ ಗುಡಾರದ ಬಟ್ಟೆಗಳು, ಮೇಕೆ ಚರ್ಮದ ವಸ್ತುಗಳು, ಹೊಗೆ ಸೊಪ್ಪು, ಸಾಬೂನು, ಕಚ್ಚಾ ಹತ್ತಿ ಮತ್ತು ಹತ್ತಿ ನೂಲು, ಬಣ್ಣಗಳು, ದ್ರಾಕ್ಷಾ ಪಾಕ– ಇವು ಇಲ್ಲಿಯ ಮುಖ್ಯ ವ್ಯಾಪಾರ ಸರಕುಗಳು.

ಗಾಜಿ ಆಂಟೆಪ್ ಪ್ರಾಂತ್ಯದ ವಿಸ್ತೀರ್ಣ 7642 ಚ.ಕಿ.ಮೀ. ಜನಸಂಖ್ಯೆ 1,127,686, (1997). ಯುಫ್ರೇಟೀಸ್ ಇದರ ಪೂರ್ವಕ್ಕಿದೆ. ಈ ಪ್ರಾಂತ್ಯದ ಮೇಲ್ನಾಡಿನಲ್ಲಿ ಕುರಿಗಳನ್ನೂ ಮೇಕೆಗಳನ್ನೂ ಸಾಕುತ್ತಾರೆ. ಹತ್ತಿ, ತಂಬಾಕು, ದ್ವಿದಳ ಧಾನ್ಯ ಇಲ್ಲಿಯ ಮುಖ್ಯ ಬೆಳೆಗಳು. ಮೇಕೆ ಚರ್ಮದ ರಗ್ಗುಗಳಿಗೂ ಹಲವು ಬಗೆಯ ಮದ್ಯಗಳಿಗೂ ಬಕ್ಲಾವಾ, ಪೆಕ್ಮೇಜ್ ಮೊದಲಾದ ಖಾದ್ಯವಸ್ತುಗಳಿಗೂ ಈ ಪ್ರಾಂತ್ಯ ಹೆಸರಾಗಿದೆ. ಈ ಪ್ರಾಂತ್ಯ ತುರ್ಕಿಯ ಅಶ್ವದಳಕ್ಕೆ ಕುದುರೆಗಳನ್ನು ಒದಗಿಸುತ್ತದೆ. (ಪಿ.ಜಿ.ಡಿ.)

**ಗಾಜಿನ ಕೆಲಸ :** ಪ್ರಕೃತಿಯಲ್ಲಿ ಹಲವಾರು ನೈಸರ್ಗಿಕ ವಿದ್ಯಮಾನಗಳ ಪರಿಮಾಣವಾಗಿ ಗಾಜಿನ ತುಣುಕುಗಳು ದೊರೆಯಬಹುದಾದರೂ ಸಾರಭೂತವಾಗಿ ಗಾಜು ಮನುಷ್ಯಕ್ರಿಯೆಯಿಂದ ಉತ್ಪನ್ನವಾಗುವ ಒಂದು ವಸ್ತು. ಇದರ ಬಳಕೆ ಸುಮಾರು ನಾಲ್ಕು ಸಾವಿರ ವರ್ಷಗಳಿಂದಲೂ ಇರುವುದಾಗಿ ದಾಖಲೆ ಉಂಟು. ಆದಿವಾಸಿಗಳು ಪ್ರಕೃತಿಯಲ್ಲಿ ದೊರೆತ ಜ್ವಾಲಾಮುಖಿಜ ಗಾಜಿನ ಚೂರುಗಳನ್ನು ತಮ್ಮ ಆಯುಧಗಳ ಅಲಗಿಗೆ ಸಿಕ್ಕಿಸುತ್ತಿದ್ದುದು ಅಪರೂಪವಾಗಿರಲಿಲ್ಲ. ನೀಲಿ ಬಣ್ಣದ ಗಾಜಿನ ತುಂಡೊಂದು ಪ್ರ.ಶ.ಪೂ.2200ರಲ್ಲಿ ಎರಿಡು ಎಂಬಲ್ಲಿಯೂ ಹಸಿರು ಗಾಜಿನಿಂದ ತಯಾರಾದ ಮಣಿಗಳು ಪ್ರ.ಶ.ಪೂ. 2500ರಲ್ಲಿ ಈಜಿಪ್ಟಿನಲ್ಲಿಯೂ ಹಸಿರು ಗಾಜಿನ ಕಡ್ಡಿಯೊಂದು ಪ್ರ.ಶ.ಪೂ.2600ರಲ್ಲಿ ಬ್ಯಾಬಿಲೋನಿಯದ ಈಶನುನ್ನದಲ್ಲಿಯೂ ದೊರೆತುದಕ್ಕೆ ಆಧಾರಗಳಿವೆ. ಸಿರಿಯದ ಮೆಡಿಟರೇನಿಯನ್ ಸಮುದ್ರ ತೀರದಲ್ಲಿ ಬೇಲೂಸ್ ಎಂಬ ನದಿ ನಿಕ್ಷೇಪಿಸಿದ ಮರಳಿನ ರಾಶಿಯಲ್ಲಿ ಸಂಭವಿಸಿದ ಒಂದು ಆಕಸ್ಮಿಕ ಘಟನೆಯಿಂದ ಗಾಜು ತಯಾರು ಮಾಡುವ ರೀತಿಯನ್ನು ಫೀನೀಶಿಯನ್ನರು ಪತ್ತೆ ಹಚ್ಚಿದರು. ಈ ಜನ ಈಜಿಪ್ಟಿನಿಂದ ವಾಷಿಂಗ್ ಸೋಡ ಕೊಂಡುಕೊಳ್ಳುತ್ತಿದ್ದರು. ಒಂದು ಸಲ ಬೇಲೂಸ್ ನದಿ ತೀರದಲ್ಲಿ ವಾಷಿಂಗ್ ಸೋಡವನ್ನು ಹೊತ್ತುಕೊಂಡು ಒಂದು ಹಡಗು ಬಂತು. ನಾವಿಕರು ಮರಳದಂಡೆಯ ಮೇಲೆ ಅಡುಗೆ ಮಾಡಲು ಯೋಚಿಸಿದರು. ಒಲೆ ಹೂಡಲು ಕಲ್ಲು ದೊರೆಯದಿದ್ದಾಗ ವಾಷಿಂಗ್ ಸೋಡದ ಹೆಂಟೆಗಳನ್ನೇ ಕಲ್ಲುಗಳಂತೆ ಬಳಸಿದರು. ಒಲೆ ಉರಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಪಾರದರ್ಶಕ ದ್ರವದ ಪ್ರವಾಹ ಹರಿಯುವುದು ಅವರಿಗೆ ಕಾಣಿಸಿತು. ಸೋಡ ಮತ್ತು ಮರಳಿಗೆ ಬೆಂಕಿಯ ಕಾವು ಬಡಿದಾಗ ಈ ರೀತಿಯ ದ್ರವ ಉಂಟಾಗುತ್ತಿತ್ತು. ಈ ಪ್ರವಾಹವೇ ದ್ರವರೂಪದ ಗಾಜು ಎಂದು ಅವರು ತಿಳಿದರು. ಹೀಗೆ ಅಕಸ್ಮಾತ್ತಾಗಿ ಪ್ರಾಪ್ತವಾದ ಗಾಜಿನ ತಯಾರಿಕೆಯ ಈ ವಿಧಾನವನ್ನು ಫೀನೀಶಿಯನ್ನರು ಅಭಿವೃದ್ಧಿಪಡಿಸಿ ಗಾಜಿನ ಸಾಮಾನುಗಳನ್ನು ತಯಾರಿಸಲು ಪ್ರಾರಂಭಿಸಿದರು. ಗಾಜಿನ ಸಂಶೋಧನೆಯ ಬಗ್ಗೆ ಪ್ರಚಲಿತವಿರುವ ಇನ್ನೊಂದು ದಂತಕತೆ ಹೀಗಿದೆ. ಇಸ್ರೇಲಿನ ಹುಡುಗರು ಒಮ್ಮೆ ಒಂದು ಕಾಡಿಗೆ ಬೆಂಕಿ ಹಚ್ಚಿದರು. ಬೆಂಕಿಯ ಕಾವಿಗೆ ಕಾಡಿನಲ್ಲಿದ್ದ ಮರಳು ಮತ್ತು ಪೆಟ್ಲುಪ್ಪು ಕರಗಿ ಬೆಟ್ಟಗಳಿಂದ ಇವುಗಳ ದ್ರವ ಪ್ರವಾಹ ಹರಿಯಿತು. ಇದೇ ಗಾಜಿನ ಪ್ರಥಮಾವಿಷ್ಕಾರ. ಒಟ್ಟಿನಲ್ಲಿ ಫೀನೀಶಿಯನ್ನರೂ ಇಸ್ರೇಲಿಗಳೂ ಗಾಜನ್ನು ಪತ್ತೆ ಮಾಡಿದರು ಎನ್ನಬಹುದು. ಅದರೆ ಇವರಿಗಿಂತ ಮೊದಲೇ ಪುರಾತನ ಈಜಿಪ್ಷಿಯನ್ನರು ಗಾಜಿನ ತಯಾರಿಕೆಯನ್ನು ಅರಿತಿದ್ದರು ಎಂಬುದಕ್ಕೆ ಅಲ್ಲಿ ದೊರೆತ ಗಾಜಿನ ಸಾಮಾನುಗಳು ಆಧಾರವಾಗಿವೆ. ಪುರಾತನ ಈಜಿಪ್ಟಿನಲ್ಲಿ ಗಂಡಸರು ಹೆಂಗಸರು ಗಾಜಿನ ಮಣಿಗಳ ಸರಗಳನ್ನು ಬಳಸುತ್ತಿದ್ದರು.

ಕ್ರಿಸ್ತನ ಕಾಲಕ್ಕಿಂತ ಮುಂಚೆ ಕೊಳವಿಯನ್ನು ಊದಿ ಗಾಜಿನ ಭರಣಿಗಳನ್ನು ತಯಾರಿಸುತ್ತಿದ್ದರು. ಗಾಜಿನ ಪಾತ್ರೆಗಳನ್ನು ತಯಾರಿಸಲು ಪುರಾತನ ಈಜಿಪ್ಷಿಯನ್ನರು ಮೊದಲು ಒಂದು ಲೋಹದ ಕಡ್ಡಿಗೆ ಸಿಲಿಕದ ಅಂಟು ಹಿಟ್ಟನ್ನು ಪಾತ್ರೆಯ ಆಕಾರ ಮಾಡಿ ಮೆತ್ತುತ್ತಿದ್ದರು. ಇದು ಒಣಗಿದ ಬಳಿಕ ಕಡ್ಡಿಯನ್ನು ಕರಗಿದ ಗಾಜಿನಲ್ಲಿ ಅದ್ದುತ್ತಿದ್ದರು. ಸಿಲಿಕದ ಹಿಟ್ಟಿನ ಮೇಲೆ ಕುಳಿತ ಗಾಜಿನ ದ್ರವ ಒಣಗಿದ ತರುವಾಯ ಒಳಗಿದ್ದ ಸಿಲಿಕದ ಹಿಟ್ಟನ್ನು ಅಗೆದು ತೆಗೆದು ಹಾಕುತ್ತಿದ್ದರು. ಅಮೆನ್ ಹೋಟೆಪ್–2 ಈಜಿಪ್ಟ್‌ದೇಶವನ್ನು ಆಳುತ್ತಿದ್ದ ಸಮಯದಲ್ಲಿ ಮೊದಲು ಗಾಜಿನ ಪಾತ್ರೆಗಳ ತಯಾರಿಕೆ ಆರಂಭವಾಯಿತು ಎನ್ನಬಹುದು. ಪ್ರ.ಶ.ಪೂ.8ನೆಯ ಶತಮಾನದಿಂದ 6ನೆಯ ಶತಮಾನದ ವರೆಗಿನ ಕಾಲದಲ್ಲಿ ತಯಾರಾಗಿದ್ದ ಗಾಜಿನ ವಸ್ತುಗಳು ಮೆಸೊಪೊಟೇಮಿಯದಲ್ಲಿ ಸಿಕ್ಕಿವೆ. ಪ್ರ.ಶ.ಪೂ. 6ನೆಯ ಶತಮಾನದಿಂದ ಗ್ರೀಕರು ನೆಲೆಸಿದ್ದ ಈಜಿಯನ್ ಗ್ರೀಸ್, ಇಟಲಿ ಮತ್ತು ಸಿಸಿಲಿಯಲ್ಲಿ ಹೆಚ್ಚು ಗಾಜು ದೊರೆತಿವೆ. ಈಜಿಪ್ಟಿನ ಭೂಮಿಯಲ್ಲಿ ಹಿಂದೆ ಸಿಕ್ಕಿದ ಪರಿಮಾಣಕ್ಕಿಂತ ಹೆಚ್ಚು ಗಾಜು ಈ ಸ್ಥಳದಲ್ಲಿ ಸಿಕ್ಕಿದೆ. ಈ ಗಾಜಿನ ಪಾತ್ರೆಗಳಲ್ಲಿದ್ದ ಕಲೆ, ಅವುಗಳ ಬಣ್ಣ ಮತ್ತು ರಚನೆ ಈಜಿಪ್ಷಿಯನ್ನರ ಕಲೆಗಿಂತ ಭಿನ್ನವಾಗಿದ್ದವು. ಕಾನ್‌ಸ್ಟಾಂಟಿನೋಪಲಿನ ಅವನತಿಯ ಸಮಯದಲ್ಲಿ ವೆನಿಸ್ ಮುಂತಾದ ಕಡೆಗಳಲ್ಲಿ ಗಾಜಿನ ಕೈಗಾರಿಕೆ ಹರಡಿ ಸುಮಾರು 8000 ಜನರಿಗೆ ಉದ್ಯೋಗ ದೊರೆತಿತ್ತು. 1870ರಲ್ಲಿ ಬೊಹೀಮಿಯದಲ್ಲಿ 30,000ಜನ ಗಾಜಿನ ಕೆಲಸ ಮಾಡುತ್ತಿದ್ದರು. ಭಾರತದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಗಾಜಿನ ವಸ್ತುಗಳೆಂದರೆ ತಕ್ಷಶಿಲೆಯ ದಿಬ್ಬಗಳಲ್ಲಿ ದೊರೆತವು. ಇವು ಪ್ರ.ಶ.ಪೂ.5ನೆಯ ಶತಮಾನದವೆಂದು ಗುರುತಿಸಲಾಗಿದೆ. ಆದರೆ ಭಾರತದಲ್ಲಿ ಅದಕ್ಕೂ ಮೊದಲೇ ಗಾಜಿನ ಉಪಯೋಗವಿತ್ತು ಎನ್ನುವುದಕ್ಕೆ ವಿಪುಲ ಉಲ್ಲೇಖಗಳು ಶತಪಥ ಬ್ರಾಹ್ಮಣದಲ್ಲಿ ಇವೆ.

ಬಹಳ ಪುರಾತನ ಕಾಲದಿಂದಲೂ ವಿವಿಧ ರೀತಿಯ ಪಾತ್ರೆಗಳನ್ನು ತಯಾರಿಸಲು ಗಾಜನ್ನು ಬಳಸುತ್ತಿದ್ದರು. ಬಣ್ಣದ ಗಾಜಿನ ಕಡ್ಡಿಗಳ ತಯಾರಿಕೆಯಲ್ಲೂ ವಿವಿಧ ಹೂಗಳನ್ನು ಪಾತ್ರೆಗಳಲ್ಲಿ ಚಿತ್ರಿಸುವ ಕಲೆಯಲ್ಲೂ ಈಜಿಪ್ಟಿನ ಅಲೆಗ್ಸಾಂಡ್ರಿಯ ಅಗ್ರಸ್ಥಾನ ಪಡೆದಿತ್ತು. ಕರಗಿದ ಗಾಜನ್ನು ಅಚ್ಚುಗಳಲ್ಲಿ ಹಾಕಿ ಗಾಜಿನ ಭರಣಿಗಳನ್ನು ತಯಾರಿಸುತ್ತಿದ್ದರು. ಯಂತ್ರಗಳಿಂದ ಈ ಆಕರ್ಷಕ ಭರಣಿಗಳಿಗೆ ಹೊಳಪನ್ನು ಸಹ

ಕಾರ್ಯಾಗಾರದಲ್ಲಿ ಅಚ್ಚುಗಳನ್ನು ಕುಶಲಿ ಕೆತ್ತುತ್ತಿರುವುದು

ಕೊಡುತ್ತಿದ್ದರು. ಊದುವುದರ ಮೂಲಕವೂ ಅಚ್ಚುಹಾಕಿಯೂ ಗಾಜಿನ ಸಾಮಾನುಗಳನ್ನು ತಯಾರಿಸುತ್ತಿದ್ದರು. ಸಿರಿಯ ದೇಶದ ಗಾಜಿನ ಕೆಲಸದವರು ಮೊದಲು ಗಾಜನ್ನು ಊದುವುದರ ಮೂಲಕ ಪಾತ್ರೆಗಳನ್ನು ತಯಾರಿಸುತ್ತಿದ್ದರು. ಇವರು ಇಟಲಿಗೆ ಹೋಗಿ ನೆಲೆಸಿದುದರಿಂದ ಆ ದೇಶ ಗಾಜಿನ ಉತ್ಪತ್ತಿಯಲ್ಲಿ ಹೆಸರು ಪಡೆಯಿತು. ಗಾಜಿನ ಲೋಟಗಳ ಮೇಲೆ ಸುಂದರ ಆಕೃತಿಗಳನ್ನು ಚಿತ್ರಿಸುವುದು ಮತ್ತು ಕೆತ್ತನೆಯ ಕೆಲಸ ಮಾಡುವುದು ಇಟಲಿಯಲ್ಲಿ ಅಭಿವೃದ್ಧಿ ಹೊಂದಿದವು. ಕ್ರಮೇಣ ಈ ಗಾಜಿನ ಕೈಗಾರಿಕೆ ಇಟಲಿಯಿಂದ ರೈನ್ ಪ್ರದೇಶಕ್ಕೆ ಹರಡಿತು. ಸರ್ಪದ ಆಕಾರದ ಗಾಜಿನ ಬಳ್ಳಿಗಳಿಂದ ಅಲಂಕೃತವಾಗಿದ್ದ ಗಾಜುಗಳಿಗೆ ಮತ್ತು ಅದರಲ್ಲಿದ್ದ ಅದ್ಭುತ ಕೆತ್ತನೆಯ ಕೆಲಸ ಇವು ಈ ದೇಶದ ಹೆಸರನ್ನು ಎತ್ತಿ ಹಿಡಿದಿದ್ದುವು. 3 ಮತ್ತು 4ನೆಯ ಶತಮಾನಗಳಲ್ಲಿ ಗಾಜಿನ ಮೇಲೆ ಈ ರೀತಿಯ ಕಲಾಕೌಶಲಗಳು ಕಂಗೊಳಿಸುತ್ತಿದ್ದುವು. ಈಜಿಪ್ಟಿನ ಅಮೆನ್ ಹೋಟೆಪ್–4 ಆಳುತ್ತಿದ್ದ ಕಾಲದಲ್ಲಿ ಟೆಲ್–ಎಲ್–ಅವಾರ್ಣ ಎಂಬ ಸ್ಥಳದಲ್ಲಿ ಅಗೆದಾಗ ಗಾಜಿನ ಕಾರ್ಖಾನೆಯೊಂದರ ಅವಶೇಷ ಕಂಡುಬಂತು. ಗಾಜಿನ ಕೊಳವೆ ಮತ್ತು ಚೂರುಗಳನ್ನು ಈ ಸ್ಥಳದಲ್ಲಿ ಕಂಡರು.

ರೋಮನ್ನರ ಕಾಲದ ತರುವಾಯ ಈಜಿಪ್ಟಿನಲ್ಲಿ ಗಾಜನ್ನು ತಯಾರಿಸುವ ಕಲೆ ನವೀನ ಹಾದಿಯನ್ನು ಹಿಡಿಯಿತು. ಚಿಮಟದಿಂದ ಗಾಜುಗಳ ಮೇಲೆ ಮುದ್ರೆ ಒತ್ತುತ್ತಿದ್ದರು. ಕರಗಿದ ಗಾಜನ್ನು ಸಾಚೆಯಲ್ಲಿ(ಮೋಲ್ಡ್) ಹಾಕಿ ನಾಣ್ಯದಂಥ ಒತ್ತುಗಳನ್ನು

ತಯಾರಿಸುತ್ತಿದ್ದರು. ಹೊಳಪುಳ್ಳ ಮತ್ತು ಮಿರುಗುವ ಬಣ್ಣಗಳಿಂದ ಗಾಜುಗಳಿಗೆ ಬಣ್ಣ ಬಳಿಯುವ ಕಲೆಯನ್ನು ಮೊದಲು ಕಂಡುಹಿಡಿದವರು ಈಜಿಪ್ಟಿನವರು. ಉದಾಹರಣೆಗೆ ಬೆಳ್ಳಿಯ ಬಣ್ಣವನ್ನು ಗಾಜಿಗೆ ಹಚ್ಚಿ ಅನಂತರ ಆಮ್ಲಜನಕವಿಲ್ಲದ ಆವರಣದಲ್ಲಿ ಕಾಯಿಸುವುದು. ಆಗ ಈ ಬಣ್ಣ ತಿಳಿ ಹಳದಿಯ ಅಥವಾ ಬೂದು ಬಣ್ಣದ ಪೊರೆಯನ್ನು ಗಾಜಿನಲ್ಲಿ ಉಂಟುಮಾಡುತ್ತದೆ. ಗಾಜಿನ ಬೋಗುಣಿ ಮತ್ತು ಸೀಸೆಗಳ ಮೇಲೆ ಈ ಕಲೆಯನ್ನು ಪ್ರದರ್ಶಿಸುತ್ತಿದ್ದರು.

ಭಾರತದಲ್ಲಿ ಗಾಜಿನ ಕೆಲಸ : ಬರೋಡದಲ್ಲಿ ಸ್ಥಾಪಿತವಾದ (1944) ಅಲೆಂಬಿಕ್ ಗಾಜಿನ ಕಾರ್ಖಾನೆಯೇ ಆಧುನಿಕ ಭಾರತದಲ್ಲಿ ಸ್ಥಾಪಿತವಾದ ಮೊದಲ ಕಾರ್ಖಾನೆ. ಮುಂದೆ 1948ರಲ್ಲಿ ಈ ಕಾರ್ಖಾನೆ ಸ್ವಯಂಚಾಲಕ ಯಂತ್ರಗಳನ್ನು ಬಳಸಲು ತೊಡಗಿತು. ಈಗ(1972) ಭಾರತದಲ್ಲಿ ಮೂವತ್ತೊಂಬತ್ತು ಗಾಜಿನ ಕಾರ್ಖಾನೆಗಳಿವೆ. 1964–65ರಲ್ಲಿ ಭಾರತದಿಂದ ಸುಮಾರು 27 ಲಕ್ಷ ರೂಪಾಯಿಗಳ ಗಾಜಿನ ಪಾತ್ರೆಗಳನ್ನು ಹೊರಗಿನ ದೇಶಗಳಿಗೆ ರಫ್ತುಮಾಡಿದರು. ಗಾಜಿನ ಪಾತ್ರೆಗಳ ಉತ್ಪತ್ತಿ 1952ರಲ್ಲಿ ಸುಮಾರು 50,000 ಮೆಟ್ರಿಕ್ ಟನ್ನುಗಳಿದ್ದು 1965ರಲ್ಲಿ ಅದು 1,55,000 ಮೆಟ್ರಿಕ್ ಟನ್ನುಗಳಿಗೆ ಏರಿತ್ತು. ಭಾರತದಲ್ಲಿ ತಯಾರಾದ ಗಾಜಿನ ಸೀಸೆಗಳನ್ನು ಶ್ರೀಲಂಕ, ಇರಾನ್, ಸೌದಿ ಅರೇಬಿಯ, ಬರ್ಮ, ಪಾಕಿಸ್ತಾನ, ಥಾಯ್‌ಲೆಂಡ್, ಪೂರ್ವ ಆಫ್ರಿಕ, ಕುವೈತ್ ಮತ್ತು ನೇಪಾಲಗಳಿಗೆ ರಫ್ತು ಮಾಡುತ್ತಾರೆ.

ಕರ್ನಾಟಕದಲ್ಲಿ ಎರಡು ಗಾಜಿನ ಕಾರ್ಖಾನೆಗಳಿವೆ. ಬೆಂಗಳೂರು ಜಿಲ್ಲೆಯಲ್ಲಿರುವ ವೈಟ್‌ಫೀಲ್ಡಿನ ಅಲೆಂಬಿಕ್ ಗಾಜಿನ ಕಾರ್ಖಾನೆ (ಸ್ಥಾಪನೆ 1966) ಸ್ವಯಂಚಾಲಕ ಯಂತ್ರಗಳಿಂದ ನಡೆಯುತ್ತದೆ. ಇದು ದಕ್ಷಿಣ ಭಾರತದಲ್ಲೇ ಮೊದಲನೆಯದು. ಈ ಕಾರ್ಖಾನೆಯಲ್ಲಿ ಪ್ರತಿದಿವಸ 55 ಟನ್ ಗಾಜಿನ ಸಾಮಾನುಗಳು ಉತ್ಪತ್ತಿಯಾಗುತ್ತವೆ. ಉತ್ಪತ್ತಿ ಮಟ್ಟವನ್ನು 130 ಟನ್ನುಗಳಿಗೆ ಏರಿಸುವ ಉದ್ದೇಶ ಉಂಟು. ಇದರ ವಾರ್ಷಿಕ ಉತ್ಪಾದನ ಸಾಮರ್ಥ್ಯ 24,000 ಟನ್ನುಗಳು. ವಾರ್ಷಿಕ ಮಾರಾಟ ಮೌಲ್ಯ ಸುಮಾರು ರೂ.1,20,000. ಪ್ರಯೋಗ ಶಾಲೆಯಲ್ಲಿ ಪರೀಕ್ಷೆ ಮಾಡಿದ ಉತ್ತಮ ಗುಣದ ಗಾಜುಗಳನ್ನು ಈ ಕಾರ್ಖಾನೆಯಲ್ಲಿ ತಯಾರಿಸುತ್ತಾರೆ.

**ಗಾಜಿನ ಕುಪ್ಪಿಗಳು ಕುಲುಮೆಯಿಂದ ಹೊರಬರುತ್ತಿವೆ**

ಗಾಜಿನ ತಯಾರಿಕೆ: ಒಟ್ಟು ಗಾಜಿನ ಉತ್ಪತ್ತಿಯಲ್ಲಿ ಶೇ.95 ಭಾಗ ಸಾಮಾನ್ಯ ಗುಣದ ಗಾಜಿರುತ್ತದೆ. ಉಳಿದದ್ದು ವಿಶೇಷ ಗಾಜುಗಳು. ಗಾಜನ್ನು ತಯಾರಿಸಲು ಬಳಸುವ ಕಚ್ಚಾ ಪದಾರ್ಥಗಳು ಪ್ರಮಾಣ ಹೀಗಿರುತ್ತದೆ: ಸಿಲಿಕ(ಮರಳು) ಶೇ.75, ಸುಣ್ಣ ಶೇ.10, ಸೋಡ ಶೇ.15, ಗಾಜಿನ ಹಾಳೆಯನ್ನು ತಯಾರಿಸುವಾಗ ಸುಣ್ಣದ ಅಂಶದಲ್ಲಿ ನಾಲ್ಕು ಭಾಗ ತೆಗೆದು ಆ ಸ್ಥಳದಲ್ಲಿ ಮೆಗ್ನೀಶಿಯಂ ಅನ್ನು ಬಳಸುತ್ತಾರೆ. ಸೀಸೆಯ ಗಾಜು ಮಾಡುವಾಗ ಶೇ.2 ಭಾಗ ಅಲ್ಯುಮಿನಿಯಂ ಬಳಸುತ್ತಾರೆ. ವಾಣಿಜ್ಯ ಗಾತ್ರದಲ್ಲಿ ಗಾಜನ್ನು ತಯಾರಿಸುವಾಗ ಗೋಣಿಚೀಲದಲ್ಲಿ ಶೇಖರಿಸಿರುವ ಕಚ್ಚಾ ಪದಾರ್ಥಗಳನ್ನು ತೂಕ ಮಾಡಿ ಒಲೆಗೆ ಅಥವಾ ಕುಲುಮೆಗೆ ಹಾಕಲು ಕಳಿಸುತ್ತಾರೆ. ದೊಡ್ಡ ಕಾರ್ಖಾನೆಗಳಲ್ಲಿ ತೂಕ ಮಾಡುವ ಕೆಲಸ ಸ್ವಯಂಚಾಲಕ ಯಂತ್ರಗಳಿಂದ ನಡೆಯುತ್ತದೆ. ಕಾಂಕ್ರೀಟ್ ಮಿಶ್ರಣವನ್ನು ಮಾಡುವಂಥ ಯಂತ್ರದಲ್ಲಿ ಕಚ್ಚಾಪದಾರ್ಥಗಳ ಮಿಶ್ರಣವನ್ನು ಮಾಡುತ್ತಾರೆ. ಹೀಗೆ ತಯಾರಾದ ಮಿಶ್ರಣವನ್ನು ಸಾಲು ಬಕೆಟ್ಟುಗಳಲ್ಲಿ ತುಂಬಿ ಸಾಗುಪಟ್ಟಿ ಟ್ರಾಲಿಗಳ ಮುಖಾಂತರ ಅಥಮಾ ಸಣ್ಣ ರೈಲುಗಳಿಂದ ಅಥವಾ ಕೊಳವೆಗಳ ಮೂಲಕ ಒತ್ತಡದ ವಾಯುವನ್ನು ಉಪಯೋಗಿಸಿ ನೂಕುತ್ತಾರೆ. ಈ ಕಚ್ಚಾ ಪದಾರ್ಥಗಳ ಮಿಶ್ರಣ ಹೋಗುವಾಗ ಅಲ್ಲಾಡಿ ಬೀಳಬಹುದು. ಇದನ್ನು ತಪ್ಪಿಸಲು ಈ ಮಿಶ್ರಣವನ್ನು ಅದುಮಿ ಇಟ್ಟಿಗೆಯಂತೆ ಮಾಡಿ ಅನಂತರ ರವಾನಿಸುತ್ತಾರೆ. ಯಾವ ರೀತಿಯ ಗಾಜನ್ನು ತಯಾರಿಸುತ್ತಾರೋ ಅದರ ಗಾಜಿನ ತುಂಡುಗಳನ್ನು ಈ ಮಿಶ್ರಣದಲ್ಲಿ ಬೆರೆಸಿರುವುದು ಪದ್ಧತಿ. ಇದರಿಂದ ಅನುಕೂಲತೆಯೂ ಉಂಟು. ಹಿಂದಿನ ತಯಾರಿಕೆಯಿಂದ ಬಂದ ಈ ವ್ಯರ್ಥವಾದ ಗಾಜಿನ ತುಂಡುಗಳಿಗೆ ಕಲೆಟ್ ಎಂದು ಹೆಸರು. ಇದನ್ನು ಸಣ್ಣ ಚೂರುಮಾಡಿ ಬಳಸುತ್ತಾರೆ. ನವೀನ ಯಂತ್ರೋಪಕರಣಗಳಲ್ಲಿ ಸೂತ್ರಕ್ಕೆ ಅನುಸಾರವಾಗಿ, ಮರಳು ಅಥವಾ ಬೆಣಚುಕಲ್ಲಿನ ಪುಡಿ, ಸೋಡಿಯಂ ಕಾರ್ಬೋನೇಟ್ ಮತ್ತು ಇತರ ವಸ್ತುಗಳನ್ನು ಬೆರೆಸಿ ಮಿಶ್ರಣ ಮಾಡುವರು. ಸಾಗುಪಟ್ಟಿಗಳ ಮೇಲೆ ಚಲಿಸುವ ಬಕೆಟ್ಟುಗಳಲ್ಲಿ ಈ ಮಿಶ್ರಣವನ್ನು

**ಅನ್ನೀಲನಕೋಷ್ಠದಿಂದ ಹೊರಬಂದ ಕುಪ್ಪಿಗಳನ್ನು ಮಾರುಕಟ್ಟೆಗೆ ನಿರ್ಯಾತ ಮಾಡಲು ಪರೀಕ್ಷಿಸುತ್ತಿದ್ದಾರೆ**

ಯಂತ್ರಕ್ಕೆ ಸಾಮಾನು ಒದಗಿಸುವ ಸಲಕರಣೆಗೆ ತಲುಪಿಸುವರು. ಇಲ್ಲಿಂದ ಈ ಮಿಶ್ರಣವನ್ನು ಒಂದೇ ಸಮನಾಗಿ ಉರಿಯುತ್ತಿರುವ ಒಲೆಯಲ್ಲಿ ಸುರಿಯುವರು. ಸುಮರು $1480^0$ ಸೆಂ. ಉಷ್ಣತೆಯಲ್ಲಿ ಕರಗಿದ ಗಾಜು ಶುದ್ಧಗೊಳಿಸುವ ಕೊಠಡಿಗೆ ನಿಧಾನವಾಗಿ ಒಂದೇ ಪ್ರವಾಹದಲ್ಲಿ ಹೋಗುತ್ತದೆ. ಕೊಳೆಯನ್ನು ಈ ಕೊಠಡಿಯಲ್ಲಿ ತೆಗೆದು ಶುದ್ಧ ಗಾಜನ್ನು ದುಂಡನೆಯ ರಂಧ್ರದ ಮೂಲಕ ಹೊರ ನೂಕುತ್ತಾರೆ. ನಿಧಾನವಾಗಿ ಹರಿಯುವ ಈ ಮಂದ ಗಾಜನ್ನು ಬೇಕಾದ ಗಾತ್ರಕ್ಕೆ ಕತ್ತರಿಸಿ ಮುದ್ದೆ ಮಾಡುವರು. ಕೆಂಪಗೆ ಕಾದಿರುವ ಮುದ್ದೆಗಾಜು ನಕ್ಷತ್ರದಂತೆ ಪ್ರಕಾಶಿಸುತ್ತ ಅಚ್ಚುಗಳಿಗೆ ಬಿದ್ದು ಅವುಗಳಲ್ಲಿರುವ ಆಕಾರಗಳನ್ನು ಪಡೆಯುವುದು. ಗಾಜಿನ ಆಕಾರವನ್ನು ಪೂರ್ಣಮಾಡುವ ಅಚ್ಚು, ಅದು ಹಿಡಿದುಕೊಂಡು ಕೆಲವೇ ಸೆಕೆಂಡುಗಳಲ್ಲಿ ಒತ್ತಡದ ವಾಯುವನ್ನು ಊದುವುದರ ಮೂಲಕ, ಸೀಸೆಗೆ ಸರಿಯಾದ ಆಕಾರವನ್ನು ಕೊಡುತ್ತದೆ. ಕಬ್ಬಿಣದ ಅಚ್ಚುಗಳ ಬಾಯಿ ತೆರೆದಾಗ ಸೀಸೆಯ ಸಮೂಹ ಹೊರಗೆ ಬೀಳುತ್ತದೆ. ಪ್ರತಿಯೊಂದು ಸೀಸೆಯೂ ಆಕಾರ ಮತ್ತು ಗಾತ್ರದಲ್ಲಿ ಒಂದೇ ರೀತಿ ಇರುವುದು. ಹೊಳೆಯುವ ಸೀಸೆ ಅಥವಾ ಜಾಡಿಗಳು ಕಾವಿನಿಂದ ಹದಮಾಡುವ ಒಲೆಗಳುಳ್ಳ ಸುರಂಗದಲ್ಲಿ ಸಾಗುಪಟ್ಟಿಯ ಮೂಲಕ ಹಾದು ಹೋಗಿ ನಿಧಾನವಾಗಿ ತಣ್ಣಗಾಗುತ್ತದೆ. ತರಬೇತಾಗಿರುವ ವೀಕ್ಷಕರು  ಈ ಸುರಂಗದ ಇನ್ನೊಂದು ಭಾಗದಲ್ಲಿ ಸೀಸೆಗಳನ್ನು ಪರೀಕ್ಷಿಸುವರು. ಅವುಗಳಲ್ಲಿ ದೋಷ ಕಂಡುಬಂದರೆ ಅಂಥವನ್ನು ಬೇಡದ ಗಾಜು ಎಂದು ಪರಿಗಣಿಸಿ ಮುಂದಿನ ಒಬ್ಬೆಯಲ್ಲಿ ಬಳಸುವರು. ಆಗ ತಾನೆ ತಯಾರಾದ ಗಾಜಿನ ಸೀಸೆಗಳನ್ನು ಮಾರಾಟಕ್ಕೆ ರವಾನಿಸುವ ಮೊದಲು ಪ್ರಯೋಗಶಾಲೆಯಲ್ಲಿ ಬೆಳಕಿನ ಕಿರಣಗಳಿಗೆ ಒಡ್ಡಿ ಪರೀಕ್ಷಿಸುತ್ತಾರೆ. ಸೀಸೆಯಲ್ಲಿ ಯಾವ ಬಣ್ಣವೂ ಕಾಣಿಸದಿದ್ದರೆ ಅದು ತೇರ್ಗಡೆ ಹೊಂದುತ್ತದೆ. ಅದರಲ್ಲಿ ಹಳದಿ ಮುಂತಾದ ಬಣ್ಣ ಕಂಡಲ್ಲಿ ಆ ಸೀಸೆಯನ್ನು ತೆಗೆದುಹಾಕಿ ಕಲೆಟ್ ಆಗಿ ಬಳಸುತ್ತಾರೆ. ಸುಮರು 50 ಪೌಂಡ್ ತೂಕದ ಒತ್ತಡವನ್ನು ಯಂತ್ರದ ಮುಖಾಂತರ ಸೀಸೆಯ ಮೇಲೆ ಹೇರಲಾಗುವುದು. ಸೀಸೆಯ ಸಾಮರ್ಥ್ಯ ಸರಿಯಾಗಿದ್ದರೆ ಅಗ ಏನೂ ಆಗುವುದಿಲ್ಲ ಇಲ್ಲದಿದ್ದರೆ ಅದು ಒಡೆದು ಹೋಗುತ್ತದೆ. ಸೀಸೆಗಳಿಗೆ ಕಾವು ಕೊಟ್ಟ ತತ್‌ಕ್ಷಣ ತಣ್ಣಗೆ ಮಾಡಿದರೆ ಅದನ್ನು ಅವು ತಾಳಿಕೊಳ್ಳುತ್ತವೆಯೇ ಎಂಬುದನ್ನು ಪರೀಕ್ಷಿಸಲು ಬಿಸಿನೀರು ಮತ್ತು ತಣ್ಣಗಿರುವ ನೀರಿನ ತೊಟ್ಟಿಗಳಲ್ಲಿ ಸೀಸೆಗಳನ್ನು ಮುಳಗಿಸಿ ನೋಡುತ್ತಾರೆ. ಉತ್ತಮ ಗುಣದ ಸೀಸೆಯ ಮೇಲೆ ಇದರಿಂದ ಯಾವ ಪರಿಣಾಮವೂ ಆಗುವುದಿಲ್ಲ. ಸೀಸೆ ಸರಿಯಾಗಿಲ್ಲದಿದ್ದರೆ ಒಡೆದು  ಹೋಗುತ್ತದೆ.

**ವಿವಿಧ ಗಾಜುಗಳು :** 1 ಗಾಜಿನ ಸುರುಳಿ(ರೋಲ್ಡ್ ಗ್ಲಾಸ್): ಪ್ರಾರಂಭದಲ್ಲಿ ಹಾಳೆಗಾಜು(ಷೀಟ್ ಗ್ಲಾಸ್) ಮತ್ತು ತಟ್ಟೆ ಗಾಜುಗಳಲ್ಲಿ (ಪ್ಲೇಟ್ ಗ್ಲಾಸ್) ಬಹಳ ವ್ಯತ್ಯಾಸವಿತ್ತು. ಊದುವುದರ ಮುಖಾಂತರ ಒಂದನ್ನು ತಯಾರಿಸುತ್ತಿದ್ದರು.

ಇನ್ನೊಂದನ್ನು ಅಚ್ಚಿಗೆ ಹಾಕಿ ಸುರುಳಿ ಸುತ್ತುತ್ತಿದ್ದರು. ತಟ್ಟೆ ಗಾಜಿನ ಭಾಗಗಳಿಗೆ ಕಡೆಗೆ ಮೆರಗು ಕೊಡುತ್ತಿದ್ದರು. ಈಗ ಮುಂಚಿನ ಹಾಗೆ ಈ ವಿಂಗಡಣೆ ಸರಳವಾಗಿಲ್ಲ. 1688ರಲ್ಲಿ ಮೊದಲು ತಟ್ಟೆ ಗಾಜನ್ನು ತಯಾರಿಸಿದರು. ಕರಗಿದ ಗಾಜನ್ನು ಇಳಿಜಾರು ಮೇಜಿನ ಮೇಲೆ ಎರಕ ಹೊಯ್ಯುತ್ತಿದ್ದರು. ಇದರಲ್ಲಿ ಎರಡು ಸುರುಳಿ ಗಾಜು ಸಿಗುತ್ತಿತ್ತು.

**2 ಹೊಳಪಿನ ಗಾಜು :** ಆರ್ಗ್ಯಾನಿಕ್ ಗಂಧಕದ ಮಿಶ್ರಣಗಳಾದ ಚಿನ್ನ, ಪ್ಲಾಟಿನಮ್ ಮತ್ತು ಇತರ ಪ್ರಮುಖ ಲೋಹಗಳನ್ನು ಲ್ಯಾವೆಂಡರ್ ಸುಗಂಧ ಎಣ್ಣೆಯಲ್ಲಿ ತೆಗೆದುಕೊಂಡು ಗಾಜಿಗೆ ಬಳಿದರೆ ಹೊಳಪುಗಾಜು ದೊರೆಯುತ್ತದೆ.

**3 ಅಲಂಕೃತ ಗಾಜು :** ಚಿನ್ನ ಬೆಳ್ಳಿ ಮತ್ತು ತಾಮ್ರಗಳನ್ನುಳ್ಳ ಕೆಲವು ಗಾಜುಗಳು ಬೆಳಕಿಗೆ ಸೂಕ್ಷ್ಮವಾಗಿರುತ್ತವೆ. ಇವನ್ನು ಅತಿ ತೀಕ್ಷ್ಣವಾದ ಅತಿನೇರಿಳೆ ಕಿರಣಗಳಿಗೆ (ಅಲ್ಟ್ರವಯೊಲೆಟ್ ರೇಸ್) ಒಡ್ಡಿದರೆ ಯಾವ ಬದಲಾವಣೆಯೂ ಗಾಜಿನಲ್ಲಿ ಕಂಡು ಬರುವುದಿಲ್ಲ. ಆದರೆ ಈ ಗಾಜನ್ನು ಮೃದುವಾಗಿ ಮಾಡಲು ಕಾಯಿಸಿದಾಗ ಅದು ಹಳದಿ ಅಥವಾ ಕೆಂಪುಬಣ್ಣಕ್ಕೆ ತಿರುಗುತ್ತದೆ.

**4 ಸಂರಕ್ಷಕ ಗಾಜು :** ಗಾಜು ಮುರಿದಾಗ ಅಥವಾ ಒಡೆದಾಗ ಜನರಿಗೆ ಅದು ಸಿಡಿದು ಉಂಟಾಗುವ ಅಪಾಯವನ್ನು ಇದು ಕಡಿಮೆ ಮಾಡುತ್ತದೆ. ಎರಡು ಗಾಜಿನ ಹಾಳೆಗಳ ಮಧ್ಯದಲ್ಲಿ ಮೆದುವಾದ ಹಾಳೆಯೊಂದನ್ನು ಇಟ್ಟು ತೆಳುಪದರದ ಗಾಜನ್ನು ತಯಾರಿಸುತ್ತಾರೆ. ಹಾಗಾಗಿ ಗಾಜು ಮುರಿದಾಗ ಅಪಾಯವಾಗುವುದಿಲ್ಲ. ಗಾಜಿನ

ಕುಪ್ಪಿಗಳ ಮೇಲೆ ಅಕ್ಷರಗಳನ್ನೂ ಅಲಂಕಾರ ಚಿತ್ರಗಳನ್ನೂ ಮುದ್ರಿಸುವ ಸ್ಥಾವರ

ಹಾಳೆಗಳನ್ನು ಅವು ಮೃದುವಾಗುವ ಅವಧಿಕ ಸ್ಥಿತಿವರೆಗೆ ಕಾಯಿಸಿ ಬಳಿಕ ಒಂದೇ ಸಮನಾಗಿ ವಾಯುವಿನಿಂದ ಬೇಗ ತಣ್ಣಗೆ ಮಾಡಲಾಗುವುದು. ಇಂಥ ಗಾಜನ್ನು ಕಾರು, ಮೋಟಾರು ವಾಹನ ಮುಂತಾದವುಗಳಲ್ಲಿ ಬಳಸುತ್ತಾರೆ.

**5. ಗಾಜಿನ ದಾರ :** ಬಿಸಿಯಾಗಿರುವ ಗಾಜನ್ನು ಎಳೆದು ದಾರದಂತೆ ಮಾಡಿ ಅದನ್ನು ಗಾಜಿನ ಪಾತ್ರೆಗಳ ಮೇಲೆ ಆಭರಣದಂತೆ ತೊಡಿಸುವುದನ್ನು ಮೊದಲು ಗಾಜಿನ ಚರಿತ್ರೆ ಆರಂಭವಾದಾಗಿನಿಂದಲೂ ಕಾಣಬಹುದು **(ನೋಡಿ– ಗಾಜಿನಬಟ್ಟೆ).**

**6. ರಂಗಿನ ಗಾಜು :** ಸಾವಿರಾರು ವರ್ಷಗಳ ಹಿಂದೆ ಚರ್ಚುಗಳ ಕಿಟಕಿಯ ಗಾಜುಗಳನ್ನು ರಂಗಿನಿಂದ ಚಿತ್ರಿಸುತ್ತಿದ್ದರು. ಗಾಜಿನ ಕೆಲಸಗಾರ ಕೊಳವೆಯೊಂದನ್ನು ಕರಗಿರುವ ಗಾಜಿನಲ್ಲಿ ಅದ್ದಿ ತುದಿಯಲ್ಲಿ ಮೃದುವಾದ ಮುದ್ದೆ ತೆಗೆದುಕೊಳ್ಳುತ್ತಾನೆ. ಕೊಳವೆಯ ಇನ್ನೊಂದು ಅಂಚಿನಿಂದ ಗಾಜನ್ನು ಊದಿ ದೊಡ್ಡ ಟೊಳ್ಳಾದ ಗಾಜಿನ ಚಂಡನ್ನು ಮಾಡಿ ಅದನ್ನು ತೂಗಾಡಿಸಿ ಕೊಳವೆಯ ಆಕಾರವನ್ನು ಮಾಡುತ್ತಾನೆ. ಇದು ತಣ್ಣಗಾಗಿ ಸ್ವಲ್ಪ ಗಟ್ಟಿಯಾದ ಮೇಲೆ ಅಂಚುಗಳನ್ನು ಕತ್ತರಿಸುತ್ತಾನೆ. ಅನಂತರ ಇದನ್ನು ಕಾಯಿಸಿ ಮೃದುಮಾಡಿ ಗಾಜಿನ ಹಾಳೆಯಾಗಿ ಬಿಚ್ಚುತ್ತಾನೆ. ಈ ರೀತಿಯಲ್ಲಿ 91.5ಸೆಂ.ಮೀ ಉದ್ದ ಮತ್ತು 63ಸೆಂ.ಮೀ ಅಗಲದ ಗಾಜಿನ ಹಾಳೆಗಳನ್ನು ಪಡೆದು ಅವುಗಳ ಮೇಲೆ ಆಕೃತಿ ಚಿತ್ರಗಳನ್ನು ಬರೆದು ಕಿಟಕಿಗಳಲ್ಲಿ ಉಪಯೋಗಿಸುತ್ತಿದ್ದರು.

**ಗಾಜಿನ ಉಪಯೋಗಗಳು :** ಗಾಜಿನ ಸೀಸೆಗಳಲ್ಲಿ ಮಾತ್ರೆ, ಪುಡಿ, ದ್ರವ, ಮುಲಾಮು ಈ ರೀತಿ ಯಾವ ವಸ್ತುವನ್ನು ಬೇಕಾದರೂ ತುಂಬಬಹುದು. ಹಾಲು, ಹಣ್ಣು, ತರಕಾರಿ ಮತ್ತು ಆಹಾರ ವಸ್ತುಗಳನ್ನು ಗಾಜಿನ ಪಾತ್ರೆಗಳಲ್ಲಿ ಶೇಖರಿಸಿಟ್ಟರೆ ಅವು ಅಂದವಾಗಿ ಕಾಣುತ್ತವೆ. ಸುಗಂಧ ಎಣ್ಣೆಗಳನ್ನು, ಔಷಧಿಗಳನ್ನು, ತಂಪಾದ ಪಾನೀಯಗಳನ್ನು, ಬೀರ್, ಮದ್ಯ ಮುಂತಾದವುಗಳನ್ನು ಗಾಜಿನ ವಿವಿಧ ಆಕಾರದ ಮತ್ತು ಆಕರ್ಷಿಸುವ ಸೀಸೆಗಳಲ್ಲಿ ತುಂಬಿ ಮಾರಾಟ ಮಾಡುತ್ತಾರೆ. ಗಾಜನ್ನು ಕಿಟಕಿಗಳಲ್ಲಿ, ಬಾಗಿಲುಗಳಲ್ಲಿ ಮತ್ತು ಹೆಂಚುಗಳಲ್ಲಿ ಉಪಯೋಗಿಸುತ್ತಾರೆ. ಅತಿಸಾಮರ್ಥ್ಯವಿರುವ ಗಾಜು ಉಕ್ಕನ್ನು ಹೋಲುತ್ತದೆ. ಆದ್ದರಿಂದ ಇದನ್ನು ದೊಡ್ಡ ಸುತ್ತಿಗೆಯಂತೆ ಬಳಸಬಹುದು. ಹೆಚ್ಚು ಬಳುಕುವ ಮತ್ತು ಮೃದುವಾದ ಗಾಜನ್ನು ಲಾಡಿಯಂತೆ ಗಂಟುಹಾಕಬಹುದು. ಮುಟಿತತೆ ಇರುವ ಗಾಜನ್ನು ಹಗ್ಗದ ರೂಪದಲ್ಲಿ ಮತ್ತು ಸ್ಪ್ರಿಂಗಿನ ಹಾಗೆ ಬಳಸಬಹುದು. ಕಾರಿನ ಟಯರುಗಳಲ್ಲಿ ಗಾಜನ್ನು ಉಪಯೋಗಿಸುವುದರಿಂದ ಅವು ಹೆಚ್ಚು ಬಾಳಿಕೆ ಬರುತ್ತವೆ. ರಾಸಾಯನಿಕ ವಸ್ತುಗಳಿಂದ ಹೆಚ್ಚು ಸಾಮರ್ಥ್ಯ ಪಡೆದ ಗಾಜು 50,000 ಪೌಂಡಿನ ಒತ್ತಡ ತಡೆಯಬಲ್ಲುದು. ಆದ್ದರಿಂದ ಇದನ್ನು ಲೋಹ ಮತ್ತು ಉಕ್ಕಿನ ಸ್ಥಳಗಳಲ್ಲಿ ಉಪಯೋಗಿಸುತ್ತಾರೆ.

ಬ್ರಿಟನಿನಲ್ಲಿ ಒಡೆದ ಗಾಜಿನ ಸೀಸೆಗಳ ರಾಶಿ ಜನರಿಗೆ ದೊಡ್ಡ ತೊಂದರೆಯಾಗಿತ್ತು. ಈ ಸೀಸೆಗಳನ್ನು ಚೆನ್ನಾಗಿ ಪುಡಿಮಾಡಲು ಹ್ಯಾಂಪ್‍ಶೈರ್ ಕಾರ್ಖಾನೆ ಒಂದು ಹೊಸ ಯಂತ್ರವನ್ನು ಕಂಡುಹಿಡಿಯಿತು. ಈ ಯಂತ್ರ ಮದ್ಯದ ಸೀಸೆಗಳನ್ನು 15 ಸೆಕೆಂಡುಗಳಲ್ಲಿ ಮತ್ತು ಬೀರ್ ಸೀಸೆಗಳನ್ನು 3 ಸೆಕೆಂಡುಗಳಲ್ಲಿ ಪುಡಿ ಮಾಡುತ್ತದೆ. ಈ ಪುಡಿಯನ್ನು ರಸ್ತೆಮಾಡುವ ಉದ್ಯೋಗದವರಿಗೆ ಮಾರುವರು. ಅವರು ಇದನ್ನು ಬಳಸಿ ಗಾಜಿನ ಕಲ್ಲರಗು ರಸ್ತೆಯನ್ನು ತಯಾರಿಸುತ್ತಾರೆ. ಇಂಥ ರಸ್ತೆಯಲ್ಲಿ ವೇಗವಾಗಿ ಚಲಿಸುವ ವಾಹನಗಳು ಜಾರುವುದಿಲ್ಲ. ಈಗಾಗಲೇ ಇಂಥ ರಸ್ತೆಗಳು ಡೆನ್‍ಮಾರ್ಕ್, ನ್ಯೂಯಾರ್ಕ್, ಇಟಲಿ, ಜರ್ಮನಿ ಮತ್ತು ಜಪಾನಿನಲ್ಲಿ ಇವೆ. (ಎಚ್.ಜಿ.ಎಂ.)

**ಗಾಜಿನ ಬಟ್ಟೆ :** ಗಾಜಿನ ದಾರದಿಂದ ನೇಯ್ದ ಬಟ್ಟೆ. ಬಿಸಿಗಾಜನ್ನು ದಾರದಂತೆ ಎಳೆಯಲು ಸಾಧ್ಯ. ಇದು ಸಸ್ಯ ಜನ್ಯ ಇಲ್ಲವೇ ಪ್ರಾಣಿಜನ್ಯ ನಾರಿನ ರೂಪವನ್ನೇ ಪಡೆದಿರುತ್ತದೆ. ಗಾಜಿನ ದಾರ ಸುಲಭವಾಗಿ ಬಗ್ಗುತ್ತದೆ. ಇದು ಕೂದಲಿಗಿಂತ ತೆಳುವಾಗಿರುತ್ತದೆ. ಇಂಥ ದಾರದಿಂದ ತಯಾರಾದ ಬಟ್ಟೆಯ ಮೂಲಕ ನೀರು ಇಳಿಯದು; ಕ್ರಿಮಿಗಳಿಗೆ ಇದು ಅಭೇದ್ಯ; ಉಷ್ಣ ಮತ್ತು ಬೆಂಕಿಗೆ ಸಗ್ಗದು. ವಿದ್ಯುನ್ನಿರೋಧಕ ವಸ್ತುವಾಗಿ ಕೂಡ ಇದರ ಉಪಯೋಗ ಉಂಟು.

ಗಾಜಿನ ಬಟ್ಟೆಯ ಉದ್ಯಮ ವ್ಯಾಪಕವಾಗಿ ಪ್ರಾರಂಭವಾದದ್ದು ಎರಡನೆಯ ಮಹಾಯುದ್ಧಕ್ಕಿಂತ ಸ್ವಲ್ಪ ಮುಂಚೆ. 1931 ಮತ್ತು 1938 ರಲ್ಲಿ ಓವನ್ಸ್ – ಇಲ್ಲಿನಾಯ್ಸ್ ಕಂಪೆನಿಯವರು ಭಾರಿ ಗಾತ್ರದಲ್ಲಿ ಗಾಜಿನ ದಾರವನ್ನು ತಯಾರಿಸುವ ರೀತಿಗಳನ್ನು ಪರೀಕ್ಷಿಸಿದರು. ಇದರ ಫಲವಾಗಿ ಎರಡು ಪ್ರಮುಖ ದರ್ಜೆಯ ಗಾಜಿನ ದಾರಗಳನ್ನು ವಿಂಗಡಿಸಲಾಯಿತು; ಅಖಂಡದಾರ ಮತ್ತು ತಂತುದಾರ (ಸ್ಟೇಪಲ್). ಗಾಜಿನ ದಾರದ ವ್ಯಾಸ ಒಂದೇ ಸಮವಾಗಿರಬೇಕು. ತೂತು ಕೊರೆದ ಬಳೆಯ ಮುಖಾಂತರ ಗಾಜನ್ನು ಹೊರಕ್ಕೆ ನೂಕುವಾಗ ಗಾಜಿನ ಆಳ ಒತ್ತಡವನ್ನು ಕುಂದಿಸುತ್ತದೆ; ಇದರಿಂದ ದಾರದ ವ್ಯಾಸ ಬದಲಾಗಬಹುದು. ಆದ್ದರಿಂದ ಗಾಜನ್ನು ಸಣ್ಣಗೋಲಿಗಳ ರೂಪದಲ್ಲಿ ತೂತುಕೊರೆದ ಬಳೆಯನ್ನು ತಯಾರಿಸಿ ಅದನ್ನು ವಿದ್ಯುಚ್ಛಕ್ತಿಯಿಂದ ಕಾಯಿಸುತ್ತಾರೆ. ಈ ದಾರದಿಂದ ತಯಾರಾದ ನೂತ ಗಾಜು (ಸ್ಪನ್‍ಗ್ಲಾಸ್) ಅಖಂಡ ದಾರದಿಂದ ಇಲ್ಲವೇ ತಂತು ದಾರದಿಂದ ತಯಾರಾಗಿರಬಹುದು.

ಗಾಜಿನ ದಾರದ ಹೊರರೂಪದ ಗುಣಗಳಿಗೆ ಪ್ರಾಮುಖ್ಯ ಉಂಟು. ಹವೆಯಿಂದ ವಿದ್ಯುನ್ನಿರೋಧಕ ದಾರದ ಮೇಲೆ ಏನೂ ಪರಿಣಾಮವಾಗದಂತೆ ತಡೆಯಲು ಆ ದಾರದ ರಚನೆಯಲ್ಲಿ ಶೇ.55 ಸಿಲಿಕ, ಶೇ.10 ಬೋರಿಕ್ ಆಮ್ಲ, ಶೇ.14 ಅಲ್ಯುಮಿನ, ಶೇ.17 ಸುಣ್ಣ ಮತ್ತು ಮೆಗ್ನೀಷಿಯವನ್ನು ಬಳಸುತ್ತಾರೆ. ಕರಗಿದ ಗಾಜು ರಂಧ್ರದ ಮೂಲಕ ಹಾದು ಒಂದೇ ಎಳೆ ದಾರದಂತೆ ಹೊರಗೆ ಬರುತ್ತದೆ. ಇದು ರಭಸದಿಂದ ಸುತ್ತುತ್ತಿರುವ ಗಾಲಿಯಲ್ಲಿ ಸೇರಿಕೊಳ್ಳುತ್ತದೆ. ಕುಲುಮೆಯಿಂದ ಹರಿಯುವ ಗಾಜಿನ ವೇಗಕ್ಕಿಂತ ಈ ಗಾಲಿಯ ವೇಗ ಹೆಚ್ಚಾಗಿರುತ್ತದೆ. ಇದರ ಎಳೆತದಿಂದ ಗಾಜು ಕರಗಿದ ಅವಸ್ಥೆಯಿಂದಲೇ ಅತ್ಯಂತ ತೆಳುವಾದ ದಾರದ ರೂಪ ತಳೆಯುತ್ತದೆ. ಈ ದಾರವನ್ನು ನೇಯ್ಗೆಯಂತ್ರದಲ್ಲಿ ಬಳಸಿ ಗಾಜಿನ ಬಟ್ಟೆಯನ್ನು ತಯಾರಿಸುವರು. ಇಂಥ ಬಟ್ಟೆಯ ದಪ್ಪ ಸುಮಾರು 0.003" – 0.023".

ಉಪಯೋಗಗಳು: ಗಾಜಿನ ದಾರದಿಂದ ತಯಾರಾದ ನಯವಿಲ್ಲದ ಚಾಪೆಯನ್ನು ಗಾಳಿ ಸೋಸುವ ಸಲಕರಣೆಗಳಲ್ಲಿ ಶುದ್ಧಿಗೊಳಿಸುವ ಯಂತ್ರಗಳಲ್ಲಿ ಮತ್ತು ಬಟ್ಟಿಯಿಳಿಸುವ ಯಂತ್ರೋಪಕರಣದ ಸಮಕಾರಕ ಗೋಪುರಗಳಲ್ಲಿ ಬಳಸುತ್ತಾರೆ. ಗಾಜಿನ ಬಟ್ಟೆಯನ್ನು ಸುಲಭವಾಗಿ ಶುಭ್ರಮಾಡಬಹುದು. ಇವುಗಳಿಗೆ ಬೆಂಕಿ ತಗಲುವುದಿಲ್ಲ. ಅಲಂಕಾರದ ಈ ಬಟ್ಟೆಗಳನ್ನು ಚಿತ್ರಮಂದಿರಗಳಲ್ಲಿ ಮತ್ತು ಹಡಗುಗಳಲ್ಲಿ ಬೆಂಕಿಯ ಅಪಾಯವನ್ನು ಎದುರಿಸಲು ಉಪಯೋಗಿಸುತ್ತಾರೆ. ಈ ಬಟ್ಟೆಗಳು ನೀರನ್ನು ಹೀರಿಕೊಳ್ಳುವುದಿಲ್ಲ ವಾದ್ದರಿಂದ ಅಲ್ಪಕಾಲದ ಮಳೆಯ ಸುರಿತವನ್ನು ತಡೆಗಟ್ಟಲು ಈ ಬಟ್ಟೆಯ ಪರದೆಯನ್ನು ಬಳಸುತ್ತಾರೆ. ಬೆಂಕಿಗೆ ಸಗ್ಗದ ಅಂಟನ್ನು ಗಾಜಿನಬಟ್ಟೆಗೆ ಸೇರಿಸಿ ಅತಿ ಸಾಮರ್ಥ್ಯ

ಯುತವಾದ ಅಟ್ಟವನ್ನು ಕಟ್ಟಬಹುದು. ವಿಮಾನೋದ್ಯಮದಲ್ಲಿ ಇಂಥ ಬಟ್ಟೆಗೆ ವಿಶೇಷ ಉಪಯುಕ್ತತೆ ಉಂಟು. ಗಾಜಿನ ದಾರಕ್ಕೆ ಪ್ಲಾಸ್ಟಿಕ್ ಸೇರಿಸಿ ತಯಾರಿಸಿದಾಗ ಲಭಿಸುವ ವಸ್ತು ಅತ್ಯಂತ ಸಾಮರ್ಥ್ಯಯುತವಾದದ್ದು. ಕ್ರೀಡಾಕಾರುಗಳನ್ನೂ ಹಡಗಿನ ಕಟ್ಟಡಗಳನ್ನೂ ಇದರಿಂದ ತಯಾರಿಸುತ್ತಾರೆ. (ಎಚ್.ಜಿ.ಎಂ.)

**ಗಾಜಿನ ಮನೆ :** ನಿಯಂತ್ರಿತ ಹವೆಯಲ್ಲಿ ಸಸ್ಯಗಳನ್ನು ಬೆಳೆಸಲು ಕಟ್ಟಿರುವ ಮನೆ. ಈ ಮನೆಯ ಛಾವಣಿ ಮತ್ತು ಗೋಡೆಗಳೆಲ್ಲವೂ ಗಾಜಿನವೆ. ಚಳಿ, ಗಾಳಿ ಮತ್ತು ಮಳೆಯ ಹೊಡೆತದಿಂದ ರಕ್ಷಣೆ ನೀಡಿ ಸಾಕಷ್ಟು ಬೆಳಕು ಬೀಳುವಂತೆ ರೂಪಿಸಿರುವ ಮನೆಯಿದು. ಚಳಿ ಗಾಳಿಯನ್ನು ಸಹಿಸಿಕೊಂಡು ಬಯಲಿನಲ್ಲೂ ಬೆಳೆಯಬಲ್ಲ ಕೆಲವು ದೃಢಕಾಯ ಸಸ್ಯಗಳುಂಟು. ಅವು ಬೆಳೆಯುವುದು ನಿಧಾನ. ಗಾಜಿನ ಮನೆಯಲ್ಲಾದರೆ ಅವುಗಳ ಬೆಳವಣಿಗೆಯನ್ನು ಚುರುಕುಗೊಳಿಸಬಹುದು. ಆದರೆ ಕೋಮಲ ಪ್ರಕೃತಿಯ ಸಸ್ಯಗಳನ್ನು ಮತ್ತು ಪರದೇಶದಿಂದ ತಂದ ಗಿಡಗಳನ್ನು ಪೋಷಿಸಲು ಇಂಥ ಗಾಜಿನ ಮನೆಗಳು ಅತ್ಯಾವಶ್ಯಕ. ಅಕಾಲದಲ್ಲಿ ಶೀತ ಹವೆಯಲ್ಲಿ ಮತ್ತು ಚಳಿದೇಶಗಳಲ್ಲಿ ಸಸ್ಯಗಳನ್ನು

ಗಾಜಿನ ಮನೆ – ಲಾಲ್‌ಬಾಗ್, ಬೆಂಗಳೂರು

ಬೆಳೆಸಲು ಉಷ್ಣವನ್ನು ಕೃತಕವಾಗಿ ಒದಗಿಸಬೇಕು. ಅದಕ್ಕಾಗಿ ಗಾಜಿನ ಮನೆಯೊಳಗೆ ಒಂದು ಒಲೆಯನ್ನು ಉರಿಸಿ ಬೆಚ್ಚಿನ ವಾತಾವರಣ ಕಲ್ಪಿಸುವುದು ರೂಢಿ. ಹಾಗೆ ಮಾಡಿದಾಗ ಅದಕ್ಕೆ ಕಾವು ಮನೆ ಎಂದು ಹೆಸರು. ಖಾಸಗಿ ತೋಟಗಳಿಗೆ ಮತ್ತು ವಾಸಗೃಹಗಳಿಗೆ ಸೇರಿದಂತಿರುವ ಗಾಜಿನ ಮನೆಗಳನ್ನು ಹಸಿರು ಮನೆ ಎನ್ನುತ್ತಾರೆ. ಅವು ಕಾವು ಮನೆಗಳೂ ಆಗಿದ್ದರೆ ರಕ್ಷಣಾಗೃಹಗಳು ಎನಿಸಿಕೊಳ್ಳುತ್ತವೆ. ಇಂಥ ಗಾಜಿನ ಮನೆಗಳ ವಿಸ್ತೀರ್ಣ ಒಂದು ಸಣ್ಣ ಕೊಠಡಿಯಷ್ಟು. ಆದರೆ ಭೂರಿಗಾತ್ರದಲ್ಲಿ ಟೊಮ್ಯಾಟೊ, ಸೌತೆಕಾಯಿ ಮುಂತಾದ ಕಾಯಿಪಲ್ಯಗಳನ್ನು ವಿದೇಶೀಯ ಪುಷ್ಪಗಳನ್ನು ಬೆಳೆಸಬೇಕಾದರೆ ಗಾಜಿನ ಮನೆಯ ವಿಸ್ತೀರ್ಣ ಸಹಸ್ರಾರು ಚದರಡಿಗಳಷ್ಟಿರುವುದು ಅಗತ್ಯ. ಮೋಡ ಕವಿದ ವಾತಾವರಣದಲ್ಲಿ ಬೆಳಕು ಸಾಲದೆ ಸಸ್ಯದ ಬೆಳವಣಿಗೆ ಕುಂಠಿತವಾಗದಿರಲೆಂದು ಗಾಜಿನ ಮನೆಗಳಲ್ಲಿ ಕೃತಕ ಬೆಳಕಿನ ವ್ಯವಸ್ಥೆಯನ್ನೂ ಮಾಡಿರುತ್ತಾರೆ. ಗಾಜಿನ ಮನೆಯನ್ನು ಪೂರ್ವಪಶ್ಚಿಮವಾಗಿ ಕಟ್ಟಿದ್ದರೆ ಅದರ ಛಾವಣಿ ಒಂದೇ ಹಾಸಿನದು. ದಕ್ಷಿಣಾಭಿಮುಖವಾಗಿ ಇಳಿಜಾರಾಗಿರುತ್ತದೆ. ದಕ್ಷಿಣೋತ್ತರವಾಗಿ ಕಟ್ಟಿರುವ ಗಾಜಿನ ಮನೆಗಳ ಛಾವಣಿಯಲ್ಲಿ ಅನೇಕ ಉಬ್ಬುತಗ್ಗುಗಳಿರುವುವು. ಛಾವಣಿಯ ಒಂದು ಪಾರ್ಶ್ವ ಪೂರ್ವಕ್ಕೂ ಮತ್ತೊಂದು ಪಾರ್ಶ್ವ ಪಶ್ಚಿಮಕ್ಕೂ ಇಳಿಜಾರಾಗಿರುತ್ತದೆ. ಇಂಥ ನಿರಿಗೆ ಚಾವಣಿಗಳ ಮೂಲಕ ಸಸ್ಯಗಳಿಗೆ ಇಡೀ ಹಗಲು ಸೂರ್ಯಸ್ನಾನದ ಲಾಭ ದೊರೆಯುವುದು.

ಸಾಮಾನ್ಯವಾಗಿ ಗಾಜಿನ ಮನೆಯ ಗೋಡೆಗಳು ಮೊಗಸಾಲೆಯ ಗೋಡೆಗಳಂತೆ ಮೋಟು. ಎತ್ತರ 50–60 ಸೆಂಮೀ. ಅವನ್ನು ಇಟ್ಟಿಗೆ ಅಥವಾ ಸಿಮೆಂಟ್ ಕಾಂಕ್ರೀಟಿನಿಂದ ಕಟ್ಟುವುದು ರೂಢಿ. ಗೋಡೆಯ ಮೇಲೆ ನಿಲ್ಲಿಸಲಾಗಿರುವ ಮರದ ಅಥವಾ ಉಕ್ಕಿನ ಚೌಕಟ್ಟುಗಳಲ್ಲಿ ಗಾಜಿನ ಹಲಗೆಗಳನ್ನು ಅಳವಡಿಸಿರುತ್ತಾರೆ. ಕೆಲವು ಗಾಜಿನ ಮನೆಗಳಿಗೆ ಗೋಡೆಗಳೇ ಇರುವುದಿಲ್ಲ. ಇಳಿಜಾರಾದ ಛಾವಣಿ ನೆಲಗಟ್ಟಿಗೇ ಹೊಂದಿಕೊಂಡಿರುವುದು. ಗರಿಷ್ಠ ಬೆಳಕು ಬೀಳಲು ಈ ರಚನೆ ಬಲು ಅನುಕೂಲ. ಗಾಜಿನ ಮನೆಯ ವಿನ್ಯಾಸ ಹೇಗಿದ್ದರೂ ಧಾರಾಳ ಗಾಳಿ ಸಂಚಾರಕ್ಕೂ ಬಿಸಿಲಿನ ಝಳದಿಂದ ರಕ್ಷಣೆಗೂ ಸೂಕ್ತ ವ್ಯವಸ್ಥೆ ಅಲ್ಲಿ ಇರಬೇಕು. ಗಾಳಿಸಂಚಾರಕ್ಕೆ ಬೇಕಾದ ವಾತಾಯನಗಳು ಬಾಗಿಲುಗಳ ಮೇಲಿರಬಹುದು. ಇಲ್ಲವೆ ಅವು ಮೇಲ್ಗೀಲಿನ ಕಿಟಕಿಗಳಾಗಿಬಹುದು. ಆಗ ಕಿಟಕಿಗಳನ್ನು ಅಗತ್ಯವಿದ್ದಷ್ಟು ಮೇಲೆತ್ತಿದರೆ ಗಾಳಿ ಒಳಗೆ ಬರಬಹುದೇ ವಿನಾ ಮಳೆಯ ಎರಚಲು ಬಡಿಯಲು ಅವಕಾಶವಿರದು. ಬಿಸಿಲಿನ ಝಳ ಅತಿಯೆನಿಸಿದಾಗ ಗಾಜಿನ ಮನೆಯ ಹೊರಗೆ ಅಥವಾ ಒಳಗೆ ಚಾಪೆಗಳನ್ನೋ ಪರದೆಗಳನ್ನೋ ಇಳಿಬಿಡಬಹುದು. ಇಲ್ಲದಿದ್ದರೆ ಗಾಜಿಗೆ ಸುಣ್ಣ ಬಳಿದರೂ ಸಾಕು. ಗಾಜಿನ ಮನೆಯೊಳಗೆ ಪರಿಚಲನೆಯಲ್ಲಿರುವ ಗಾಳಿಯ ಉಷ್ಣತೆ ಮತ್ತು ಆರ್ದ್ರತೆಗಳ ನಿಯಂತ್ರಣವೂ ಒಂದು ಪ್ರಮುಖ ಸಮಸ್ಯೆ. ಕಾವು ಮನೆಗಳಲ್ಲಾದರೆ ಬಿಸಿನೀರಿನ ಕೊಳಾಯಿಗಳಿಂದ ಉಷ್ಣತಾನಿಯಂತ್ರಣ ಸಾಧ್ಯ. ಆರ್ದ್ರತೆಯ ನಿಯಂತ್ರಣಕ್ಕೆ ಗಾಜಿನ ಮನೆಯಲ್ಲಿರುವ ನೀರಿನ ತೊಟ್ಟಿಗಳನ್ನು ನಿರ್ದಿಷ್ಟ ಕಾಲ ತೆರೆದಿಡುವುದು ಅಥವಾ ಮುಚ್ಚುವುದು ಪದ್ಧತಿ. ಉಷ್ಣದೇಶಗಳಲ್ಲಾದರೆ ನೀರನ್ನು ಸಿಂಪಡಿಸಿ ಗಾಳಿಯ ಆರ್ದ್ರತೆಯನ್ನು ನಿಯಂತ್ರಿಸುತ್ತಾರೆ. ಪ್ರತಿಯೊಂದು ಗಾಜಿನ ಮನೆಯೂ ಗರಿಷ್ಠ ಮತ್ತು ಕನಿಷ್ಠ, ಒದ್ದೆ ಮತ್ತು ಒಣಬುರುಡೆ ಉಷ್ಣತಾಮಾಪಕಗಳಿಂದ ಸಜ್ಜಾಗಿರುವುದು. ಚಳಿಗಾಲದಲ್ಲಿ ಗಾಜಿನ ಮನೆಯ ಒಳಾಂಗಣವನ್ನು ಬೆಚ್ಚಗಿಡಲು ಅಲ್ಲಲ್ಲೆ ತೈಲ ಒಲೆಗಳನ್ನು ಹೂಡಿರುತ್ತಾರೆ.

ಗಾಜಿನ ಮನೆಯ ಒಳರಚನೆ ಅದರಲ್ಲಿ ಬೆಳೆಸುವ ಸಸ್ಯಗಳ ಸ್ವಭಾವಕ್ಕೆ ಅನುಗುಣವಾಗಿರುವುದು ಸಹಜ. ಗಿಡ್ಡಗೋಡೆಗಳಾಗಿದ್ದರೆ ಅವುಗಳ ಮೇಲ್ಮಟ್ಟಕ್ಕೆ ಹೊಂದಿಕೊಂಡಂತೆ ಮನೆಯ ಒಳಸುತ್ತ ಏಕವಾಗಿ ಬಡುವಿರುತ್ತದೆ. ಇದರ ಮೇಲೆ ಕುಂಡಗಳು ಮತ್ತು ಬೀಜದ ಪೆಟ್ಟಿಗೆಗಳನ್ನು ಪೇರಿಸಬಹುದು. ಅವುಗಳ ಮೇಲೆ ಧಾರಾಳವಾಗಿ ಬೆಳಕೂ ಬೀಳುತ್ತದೆ. ಬಡುವಿನ ಕೆಳಗೆಲ್ಲ ಮರಳು, ಫಲವತ್ತಾದ ಮಣ್ಣು ಮತ್ತು ಸಸ್ಯಶೇಷಮಿಶ್ರಿತ ಮೃತ್ತಿಕೆಗಳನ್ನು ದಾಸ್ತಾನು ಮಾಡಬಹುದು. ಛಾವಣಿ ನೆಲಗಟ್ಟನ್ನು ಸೋಕುವ ಗಾಜಿನ ಮನೆಗಳಲ್ಲಿ ಇಂಥ ಬಡುಗಳಿಗೆ ಅವಕಾಶವಿಲ್ಲ.

ಬಹುತೇಕ ಹಸಿರುಮನೆ ಮತ್ತು ಕಿತ್ತಳೆಗಿಡಗಳಿಗೆ ಉಷ್ಣತೆ ಚಳಿಗಾಲದಲ್ಲಿ $45^0$–$55^0$ ಫ್ಯಾ., ಮಾರ್ಚಿಯಿಂದ ಸೆಪ್ಟೆಂಬರ್‌ವರೆಗೆ $55^0$–$65^0$ ಫ್ಯಾ. ಮಿತಿಯಲ್ಲಿರಬೇಕು. ದ್ರಾಕ್ಷಿ ಬೆಳೆಗಂತೂ ಉಷ್ಣತಾನಿಯಂತ್ರಣ ಅತ್ಯಗತ್ಯ. ನವೆಂಬರಿನಿಂದ ಫೆಬ್ರುವರಿವರೆಗೆ $60^0$ ಫ್ಯಾ; ಮೊಗ್ಗುಗಳು ಬಿರಿಯುವಾಗ $65^0$ ಫ್ಯಾ.; ಹೂವಿರುವ ತನಕ $75^0$ ಫ್ಯಾ.; ಬೀಜರೂಪಣೆಯ ಕಾಲದಲ್ಲಿ $68^0$ ಫ್ಯಾ.; ಮತ್ತು ಹಣ್ಣು ಮಾಗುವಾಗ $70^0$ ಫ್ಯಾ. ಬಾಳೆಹಣ್ಣಿಗೆ ಚಳಿಗಾಲದಲ್ಲಿ $60^0$–$70^0$ ಫ್ಯಾ. ಮತ್ತು ಬೇಸಿಗೆಯಲ್ಲಿ $70^0$–$85^0$ ಫ್ಯಾ. ಅನಾನಾಸ್ ಹಣ್ಣಿಗೆ ಚಳಿಗಾಲದಲ್ಲಿ $65^0$–$75^0$ ಫ್ಯಾ. ಮತ್ತು ಬೇಸಿಗೆಯಲ್ಲಿ $70^0$–$90^0$ ಫ್ಯಾ. ಇವುಗಳ ಸಮೃದ್ಧ ಬೆಳೆಗೆ ಇಷ್ಟು ಸೂಕ್ಷ್ಮವಾದ ಉಷ್ಣತಾನಿಯಂತ್ರಣ ಅವಶ್ಯಕ. ಇದು ಗಾಜಿನ ಮನೆಯಲ್ಲಿ ಸಾಧ್ಯವೇ ವಿನಾ ಬಯಲಿನಲ್ಲಲ್ಲ.

ಇಂಗ್ಲೆಂಡ್ ಮತ್ತು ವೇಲ್ಸ್ ದೇಶಗಳೂ ಸೇರಿದಂತೆ ಅಲ್ಲಿ ಗಾಜಿನ ಮನೆಗಳು ಒಳಗೊಂಡಿರುವ ಪ್ರದೇಶದ ವಿಸ್ತೀರ್ಣ ಸುಮಾರು 4,000 ಎಕರೆಗಳು. ಜುಲೈ ತಿಂಗಳಿನಲ್ಲಿ ಈ ಪ್ರದೇಶದ ಅರ್ಧದಷ್ಟು ಭಾಗದಲ್ಲಿ ಟೊಮ್ಯಾಟೊ, 1/5 ಭಾಗದಲ್ಲಿ ಪುಷ್ಪಗಳು ಮತ್ತು 1/8 ಭಾಗದಲ್ಲಿ ಸೌತೆಯನ್ನು ಬೆಳೆಸಲಾಗುವುದೆಂದು ಒಂದು ಅಂದಾಜು. ಇದರಿಂದ ಸಸ್ಯಪೋಷಣೆಯಲ್ಲಿ ಗಾಜಿನ ಮನೆಯ ಮಹತ್ತ್ವಪಾತ್ರ ಅರಿವಾಯಿತು. ಬೆಂಗಳೂರಿನ ಸುಪ್ರಸಿದ್ಧ ಲಾಲ್‌ಬಾಗಿನಲ್ಲೂ ಒಂದು ಗಾಜಿನ ಮನೆಯಿರುವುದನ್ನು ನೆನೆಯಬಹುದು. ಹಾಗೆಯೇ ಹುಬ್ಬಳ್ಳಿಯಲ್ಲಿ ಒಂದು ಗಾಜಿನ ಮನೆಯಿದೆ. ಬೆಂಗಳೂರಿನಲ್ಲಿ ರಾಜ್ಯಪಾಲರು ವಾಸಿಸುವ ರಾಜಭವನ ಉದ್ಯಾನದಲ್ಲಿ ಒಂದು ಗಾಜಿನ ಮನೆ ನಿರ್ಮಾಣವಾಗಿದೆ. (ಎಚ್.ಜಿ.ಎಸ್.)

**ಗಾಜಿನ ಮೀನು :** ಆಕ್ಟಿನೋಪ್ಟೆರ್ಜಿಯೈ ವರ್ಗದ ಪರ್ಸಿಫಾರ್ಮಿಸ್ ಗಣದ ಅಂಬಾಸಿಡೀ ಕುಟುಂಬಕ್ಕೆ ಸೇರಿದ ಒಂದು ಸಿಹಿನೀರು ಮೀನು. ಅಂಬಾಸಿಸ್ ಇದರ ವೈಜ್ಞಾನಿಕ ನಾಮ ಅಲ್ಲದೆ ಇದಕ್ಕೆ ಸಿಪಾರಿ ಮೀನು ಎಂಬ ಹೆಸರೂ ಇದೆ. ಸುಮಾರು 7.5 ಸೆಂ.ಮೀ ಬೆಳೆಯುವ ಸಣ್ಣ ಮೀನು. ಬಲು ಪಾರದರ್ಶಕವಾಗಿ ಗಾಜಿನಂತೆಯೇ ಕಾಣುವುದರಿಂದ ಈ ಹೆಸರು. ಭಾರತ, ಬರ್ಮಾ, ಇಂಡೋನೇಶಿಯ, ಜಾವಾ, ಮಲಯ, ತೈಲಾಂಡ್ ದೇಶಗಳ ನದಿ ಕೆರೆ ಕುಂಟೆಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ಮೀನು. ಪಾರದರ್ಶಕ, ದೇಹದ ಬಣ್ಣ ಹಳದಿ ಮಿಶ್ರಿತ ಆಲಿವ್, ಮಧ್ಯದಲ್ಲಿ ಬೆಳ್ಳಿ ಬಣ್ಣದ ಗೆರೆ. ದೊಡ್ಡ ತಲೆ, ಬಾಲದ ರೆಕ್ಕೆ ಸಮ ಭಾಗದ ಹಾಲೆಗಳಾಗಿ ಆಳವಾಗಿ



ಕವಲೊಡೆದಿದೆ. ಮುಳ್ಳಿನ ಬೆನ್ನು ರೆಕ್ಕೆ ಮೇಲೆ ಕಪ್ಪು ಗುರುತು. ಭುಜದ ಮೇಲೆ ಚುಕ್ಕೆಗಳು ದೀರ್ಘ ಚತರಸ್ರಾಕಾರದ ಮಚ್ಚೆಯಾಗಿ ಒಟ್ಟುಗೂಡಿವೆ. ತಲೆಯ ಮೇಲ್ಭಾಗ ಹಾಗೂ ಬೆನ್ನು ಭಾಗದ ಮೊದಲನೆಯ ಈಜುರೆಕ್ಕೆಯ ಅರ್ಧಭಾಗ ಕಪ್ಪು ಬಣ್ಣದವು.

ಪಾರ್ಶ್ವದ ಈಜುರೆಕ್ಕೆಗಳು ಕಿತ್ತಳೆ ಬಣ್ಣದವು. ಮೇಲಿನ ದವಡೆಗಿಂತ ಉದ್ದವಾಗಿರುವ ಕೆಳದವಡೆ, ಕೆಳದವಡೆಯ ಸಂಯೋಜನಾ ಸ್ಥಾನದ (ಸಿಂಫೈಸಿಸ್) ಎರಡು ಕಡೆಗಳಲ್ಲೂ ಮುಂದಕ್ಕೆ ಚಾಚಿರುವ ಡೊಂಕಾದ ಕೋರೆಹಲ್ಲುಗಳು., ಎರಡು ದವಡೆಗಳಲ್ಲೂ ಹಲ್ಲಿನ ಎರಡು ಪಂಕ್ತಿಗಳು, – ಇವು ಗಾಜಿನ ಮೀನನ್ನು ಗುರುತಿಸಲು ಇರುವ ಪ್ರಮುಖ ಲಕ್ಷಣಗಳು. (ಬಿ.ಎಚ್.ಎಂ.)

**ಗಾಜು :** ಕೆಲವು ದ್ರವಪದಾರ್ಥಗಳು ಅತಿಯಾಗಿ ತಣಿಸಲ್ಪಟ್ಟು ತಮ್ಮ ದ್ರವರೂಪವನ್ನು ಕಳೆದುಕೊಂಡರೂ ದ್ರವದ ಲಕ್ಷಣಗಳನ್ನು ಉಳಿಸಿಕೊಂಡಾಗ ದೊರೆಯುವ ಘನವಸ್ತು (ಗ್ಲಾಸ್). ಸಾಮಾನ್ಯ ಉಷ್ಣತಾಮಟ್ಟದಲ್ಲಿ ಇದು ಗಟ್ಟಿಯಾಗಿರುತ್ತದೆ. ಎತ್ತರದಿಂದ ಬಿದ್ದರೆ ಚೂರುಚೂರಾಗುತ್ತದೆ. ಕೆಲವು ನೂರು ಡಿಗ್ರಿ ಉಷ್ಣತೆಗೆ ಬಿಸಿ ಮಾಡಿದಾಗಲೂ ಗಾಜಿನ ಘನರೂಪ ಬದಲಾಗುವುದಿಲ್ಲ. ಆದರೆ ಇದನ್ನು ಮತ್ತಷ್ಟು ಬಿಸಿ ಮಾಡಿದರೆ ನಿಧಾನವಾಗಿ ಮೆತ್ತಗಾಗಿ ಮಂದವಾದ ದ್ರವರೂಪವನ್ನು ಪಡೆಯುತ್ತದೆ. ಮಿಕ್ಕ ಘನಪದಾರ್ಥಗಳಂತೆ ನಿರ್ದಿಷ್ಟವಾದ ಉಷ್ಣತಾಮಟ್ಟದಲ್ಲಿ ಇದು ಒಮ್ಮೆಲೇ ದ್ರವವಾಗುವುದಿಲ್ಲ. ಅಧಿಕ ಉಷ್ಣತಾಮಟ್ಟದಲ್ಲಿ ಗಾಜು ಮಿಕ್ಕ ದ್ರವಗಳಂತೆಯೇ ವರ್ತಿಸುತ್ತದೆ. ಮಿಕ್ಕ ದ್ರವಗಳಂತೆ, ಹರಿಯುವ, ತಾನಿರುವ ಪಾತ್ರೆಯ ಆಕಾರವನ್ನು ಪಡೆಯುವ, ಪಾತ್ರೆಗೆ ಯಾವ ಆಕಾರವಿದ್ದರೂ ತನ್ನ ಮಟ್ಟವನ್ನು ಉಳಿಸಿಕೊಳ್ಳುವ ಗುಣಗಳು ದ್ರವಗಾಜಿಗೂ ಇವೆ. ದ್ರವಗಾಜನ್ನು ಘನೀಭವನ ಉಷ್ಣತೆಗೆ ತಣಿಸಿದರೂ ಘನೀಭವಿಸುವುದಿಲ್ಲ. ಗಾಜಿನ ಹರಳುಗಳೂ ಕಾಣಿಸುವುದಿಲ್ಲ. ಅದು ದ್ರವರೂಪದಲ್ಲೇ ತಣಿಸಿ ಅದು ಘನರೂಪವನ್ನು ಹೊಂದುವಂತೆ ಮಾಡಬಹುದು. ಈ ಸ್ಥಿತಿಯಲ್ಲಿ ಅದು ದ್ರವರೂಪದಿಂದಿದ್ದರೂ ಅದರ ಹರಿಯವ ಗುಣ ಅತಿ ಕಡಿಮೆಯಾಗಿ ಅದು ಘನ ಪದಾರ್ಥದಂತೆ ಕಾಣುತ್ತದೆ.

ಗಾಜು ತಯಾರಿಕೆಯಲ್ಲಿ ಒಂದು ಮುಖ್ಯ ಕಚ್ಚಾ ಪದಾರ್ಥ ಕ್ವಾರ್ಟ್ಜ್‌ನ ಶೇಖರಣೆ

ತಯಾರಿಕೆ : ಶುದ್ಧವಾದ ಮತ್ತು ಕಬ್ಬಿಣದ ಸಂಯುಕ್ತರಹಿತ ಮರಳು (ಗ್ಲಾಸ್ ಸ್ಯಾಂಡ್) ಸೋಡಖಾರ (ಸೋಡಿಯಂ ಕಾರ್ಬೊನೇಟ್) ಮತ್ತು ಸುಣ್ಣದ ಕಲ್ಲು (ಲೈಮ್ ಸ್ಟೋನ್) ಇವು ಆವಶ್ಯಕ ಘಟಕಾಂಶಗಳು. ಇನ್ನು ಗಾಜಿನ ಬಗೆಯನ್ನು ಅನುಸರಿಸಿ ಕೆಲವೊಮ್ಮೆ ಪೊಟ್ಯಾಸಿಯಮ್ ಕಾರ್ಬನೇಟ್, ಲೆಡ್ ಮಾನಾಕ್ಸೈಡ್, ಬೋರಾನ್ ಟ್ರೈ ಆಕ್ಸೈಡ್ ಮುಂತಾದವನ್ನು ಸೇರಿಸುವರು. ಇಷ್ಟಲ್ಲದೇ ಕೆಳಗೆ ಕೊಟ್ಟಿರುವ ಒಂದು ಅಥವಾ ಹೆಚ್ಚು ವರ್ಗಗಳ ವಸ್ತುಗಳನ್ನು ಸಹ ಸೇರಿಸುತ್ತಾರೆ: (1) ಕಲೆಟ್ ಎಂಬ ಅನುಪಯುಕ್ತವಾದ ಗಾಜು ಮತ್ತು ಚೂರಾದ ಗಾಜು; (2) ಉತ್ಕರ್ಷಣಕಾರಕಗಳು (ಆಕ್ಸಿಡೈಸಿಂಗ್ ಏಜೆಂಟ್ಸ್); (3) ಬಣ್ಣಗಳನ್ನು ಹೋಗಲಾಡಿಸುವ ವಸ್ತುಗಳು; (4) ನಿರ್ದಿಷ್ಟ ಬಣ್ಣಗಳನ್ನು ಬರಿಸುವ ವಸ್ತುಗಳು.

ಗಾಜಿನ ವಸ್ತುಗಳ ತಯಾರಿಕೆಯಲ್ಲಿ ಹಾಳಾಗಿ ಉಳಿಯುವ ಗಾಜು ಮತ್ತು ಗಾಜಿನ ಚೂರುಗಳು (ಕಲೆಟ್ಸ್) ಗಾಜಿನ ತಯಾರಿಕೆಯಲ್ಲಿ ವಿವಿಧ ರೀತಿಯಲ್ಲಿ ಸಹಾಯಕವಾಗಿವೆ. ಅವನ್ನು ಪುನಃ ಉಪಯೋಗಿಸುವುದರಿಂದ ಹಾಳಾಗಿ ಹೋಗುವ ಪಾಲು ಉಳಿತಾಯವಾಗುತ್ತದೆ. ಅಲ್ಲದೆ ಗಾಜು ದ್ರವಗೊಳ್ಳುವುದಕ್ಕೆ ಕಲೆಟ್ ತುಂಬ ಸಹಾಯಕವಾಗುವುದು. ಉತ್ಕರ್ಷಣಕಾರಕಗಳನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸುತ್ತಾರೆ. ಉದಾಹರಣೆಗಾಗಿ ಗಾಜಿನ ತಯಾರಿಕೆಯಲ್ಲಿ ಲೆಡ್ ಆಕ್ಸೈಡನ್ನು ಬಳಸಬೇಕಾದಾಗ ಕುಲುಮೆಯ ಅನಿಲಗಳಿಂದಾಗಿ ಅದು ಲೋಹರೂಪಕ್ಕೆ ಮಾರ್ಪಾಡು ಗೊಳ್ಳದಂತೆ ಈ ಕಾರಕಗಳನ್ನು ಉಪಯೋಗಿಸಬೇಕಾಗುವುದು. ಅನೇಕ ವೇಳೆ ಗಾಜಿನ ತಯಾರಿಕೆಯಲ್ಲಿ ಉಪಯೋಗಿಸುವ ವಸ್ತುಗಳಲ್ಲಿ ಅನಗತ್ಯವಾದ ಇತರ ವಸ್ತುಗಳು ಬೆರೆತಿರುವುದರಿಂದ ಪೂರೈಸಿದ ಗಾಜಿಗೆ ವಿವಿಧ ಬಣ್ಣಗಳು ಬರುತ್ತವೆ. ಹಾಗೆ ಬಣ್ಣ ಬಾರದಂತೆ ಈ ಅನಗತ್ಯ ವಸ್ತುಗಳನ್ನು ನಿಷ್ಕ್ರಿಯಗೊಳಿಸಲು ಉತ್ಕರ್ಷಣಕಾರಕ ವಸ್ತುಗಳನ್ನು ಸೇರಿಸುವರು. ಹೀಗೆ ಅಗತ್ಯವಾದ ಎಲ್ಲ ವಸ್ತುಗಳನ್ನು ಸರಿಯಾದ ಪ್ರಮಾಣದಲ್ಲಿ ಬೆರೆಸಿ, ಮಿಶ್ರಣವನ್ನು ದ್ರವರೂಪ ಬರುವವರೆಗೆ ಕುಲುಮೆಗಳಲ್ಲಿ ಕಾಯಿಸುತ್ತಾರೆ. ಇದಕ್ಕೆ ವಿವಿಧ ರೀತಿಯ ಕುಲುಮೆಗಳನ್ನು ಸಂದರ್ಭಾನುಸಾರ

ಒಡೆದು ಹುಡಿಮಾಡುವ ಯಂತ್ರಕ್ಕೆ ಕ್ವಾರ್ಟ್ಜ್‌ನ್ನು ಉಣಿಸಲಾಗುತ್ತಿದೆ

ಉಪಯೋಗಿಸುತ್ತಾರೆ. ವಿಶಿಷ್ಟ ಜಾತಿಯ ಗಾಜನ್ನು ತಯಾರಿಸಲು ಮಡಿಕೆ ಆಕಾರದ ಕುಲುಮೆಯನ್ನೂ ಸಾಮಾನ್ಯ ಗಾಜನ್ನು ಭಾರಿ ಗಾತ್ರದಲ್ಲಿ ತಯಾರಿಸಲು ಟ್ಯಾಂಕ್ ಆಕಾರದ ಕುಲುಮೆಗಳನ್ನೂ (ಟ್ಯಾಂಕ್ ಫರ್ನೇಸಸ್) ಉಪಯೋಗಿಸುವರು. ಮಿಶ್ರಣ ಸರಿಯಾಗಿ ದ್ರವವಾದ ಬಳಿಕ ರಾಸಾಯನಿಕ ಕ್ರಿಯೆಗಳಿಂದ ಉಂಟಾದ ಅನಿಲಗಳು ಹೊರಹೊಮ್ಮುವುದಕ್ಕಾಗಿ ಸಾಕಷ್ಟು ಕಾಲವನ್ನು ಬಿಡುತ್ತಾರೆ. ಅನಂತರ ಗಾಜಿನ ದ್ರವವನ್ನು ಹೊರತೆಗೆದು ನುರಿತ ಕಾರ್ಮಿಕರು ಅದನ್ನು ಕೊಳವೆಗಳ ಮೂಲಕ ಊದಿ, ಅಚ್ಚುಗಳಿಂದೊತ್ತಿ ಅಥವಾ ಯಂತ್ರಗಳ ಸಹಾಯದಿಂದ ಅದಕ್ಕೆ ಭಿನ್ನರೂಪಗಳನ್ನು ಕೊಟ್ಟು ಜನರ ಉಪಯೋಗಕ್ಕೆ ಒದಗುವ ಹಾಗೆ ಮಾಡುತ್ತಾರೆ. ದ್ರವರೂಪದಲ್ಲಿದ್ದಾಗ ಗಾಜಿಗೆ ಯಾವ ಆಕೃತಿಯನ್ನು ಕೊಡಲಾಗುವುದೋ ಅದೇ ಆಕೃತಿಯನ್ನು ಅದು ಘನವಸ್ತುವಾದಾಗಲೂ ಇಟ್ಟುಕೊಳ್ಳುವುದು ಗಾಜಿನ ಒಂದು ವಿಶಿಷ್ಟ ಗುಣ. ಗಾಜಿಗೆ ಬೇರೆ ಬೇರೆ ಆಕೃತಿ ಕೊಟ್ಟು ತಣಿಸಿದಾಗ ಅದರಲ್ಲಿ ಒಂದು ಬಗೆಯ ಎಳೆತ ಸೆಳೆತಗಳು ಉಂಟಾಗಿ ಅದು ನಿರ್ಬಲಗೊಳ್ಳುವುದು. ಅದರ ಬಲವನ್ನೂ ಬಾಳುವಿಕೆಯನ್ನೂ ಹೆಚ್ಚಿಸುವ ಸಲುವಾಗಿ ಈ ಎಳೆತ ಸೆಳೆತಗಳನ್ನು ಹೋಗಲಾಡಿಸುವುದು ಅಗತ್ಯ. ಅದಕ್ಕಾಗಿ ಗಾಜಿನ ವಸ್ತುಗಳನ್ನು ಪುನಃ ಒಂದು ನಿರ್ದಿಷ್ಟವಾದ ಉಷ್ಣತೆಗೆ ಬಿಸಿ ಮಾಡಿ ಮತ್ತೆ ನಿಧಾನವಾಗಿ ಅದನ್ನು ತಣಿಸುವ ಕ್ರಮವಿದೆ. ಅನ್ನೀಲನ ಕ್ರಿಯೆ ಎಂದು ಇದರ ಹೆಸರು. ಇದಕ್ಕೆ ಒಳಪಟ್ಟು ಗಾಜಿನ ಬಾಳಿಕೆ ದೀರ್ಘವಾಗುವುದು.



ಕರಗಿದ ಗಾಜನ್ನು ಊದಿ ಬೇರೆ ಬೇರೆ ಆಕಾರಗಳನ್ನು ಪಡೆಯಲು ಬಳಸುವ ಸಂಪೀಡಕಗಳು (ಕಂಪ್ರೆಸರ್ಸ್)

ಗಾಜಿನಲ್ಲಿ ವಿವಿಧ ಬಗೆಗಳಿವೆ. ಕುಪ್ಪಿಗಳು, ಪಾತ್ರೆಗಳು, ತಟ್ಟೆಗಳು, ಹಾಳೆಗಳು ಮುಂತಾದವನ್ನು ಸಾಮಾನ್ಯ ಗಾಜಿನಿಂದ ತಯಾರಿಸುವರು. ಈ ಜಾತಿ ಗಾಜಿನಲ್ಲಿ ಶುದ್ಧ ಮರಳು, ಸೋಡಖಾರ ಮತ್ತು ಸುಣ್ಣದ ಕಲ್ಲು ಸೇರಿವೆ. ಇಂಥ ಗಾಜು ಹೆಚ್ಚಿನ ಉಷ್ಣತೆಯನ್ನು ತಡೆದುಕೊಳ್ಳಲಾರದು. ಅತ್ಯುಷ್ಣತೆಯಲ್ಲಿರುವ ಪದಾರ್ಥಗಳನ್ನು ಈ ಪಾತ್ರೆಗಳಿಗೆ ಫಕ್ಕನೆ ಸುರಿದರೆ ಇವು ಒಡೆದುಹೋಗುತ್ತವೆ. ಅದೇ ರೀತಿ ಪಾತ್ರೆಗಳು

ಬಲು ಬಿಸಿಗೊಂಡಿರುವಾಗ ಫಕ್ಕನೆ ಅವನ್ನು ತಣಿಸಿದಾಗಲೂ ಅವು ಒಡೆದು ಹೋಗುತ್ತವೆ. ಉಷ್ಣತೆಯ ತೀವ್ರ ಏರಿಳಿತಗಳನ್ನು ತಡೆಯಬಲ್ಲ ಗಾಜನ್ನು ವಿಶಿಷ್ಟವಾಗಿ ನಿರ್ಮಿಸ ಬೇಕಾಗುತ್ತದೆ. ಇದಕ್ಕೆ ಗಟ್ಟಿಗಾಜು ಎಂದು ಹೆಸರು. ಇದರ ತಯಾರಿಕೆಯಲ್ಲಿ ಸೋಡಖಾರದ ಬದಲು ಪೊಟ್ಯಾಸಿಯಮ್ ಕಾರ್ಬನೇಟನ್ನು ಉಪಯೋಗಿಸುವರು. ಗಾಜಿಗೆ ಇನ್ನೂ ಬೇರೆ ವಿಶಿಷ್ಟ ಗುಣಗಳನ್ನು ಕೊಡಲು ಸೀಸದ ಇಲ್ಲವೆ ಬೇರಿಯಮಿನ ಸಂಯುಕ್ತ ವಸ್ತುಗಳನ್ನು ಸುಣ್ಣದಕಲ್ಲಿನ ಬದಲು ಉಪಯೋಗಿಸುವರು. ಕೆಲವು ಸಂದರ್ಭದಲ್ಲಿ ಮರಳಿನ ಬದಲು ಅಥವಾ ಅದರ ಜೊತೆಗೆ ಬೋರಾನ್ ಟ್ರೈ ಆಕ್ಸೈಡನ್ನು ಉಪಯೋಗಿಸುವರು. ಇದರಿಂದಾಗಿ ಒದಗುವ ಬೋರೋ ಸಿಲಿಕೇಟ್ ಗಾಜು ಉಷ್ಣತೆಯ ತೀವ್ರ ಬದಲಾವಣೆಗಳನ್ನು ತಡೆಯಲು ಚೆನ್ನಾಗಿ ಸಮರ್ಥವಾಗುತ್ತದೆ.



ಬೆಂಗಳೂರಿನ ಅಲೆಂಬಿಕ್ ಗಾಜು ಕಾರ್ಖಾನೆಯ ಒಂದು ಒಳನೋಟ

ಇನ್ನು ಬಣ್ಣಬಣ್ಣದ ಗಾಜುಗಳೂ ಇವೆ. ತಯಾರಿಕೆಯ ವೇಳೆ ಕಚ್ಚಾ ಪದಾರ್ಥಗಳೊಡನೆ ಅಗತ್ಯವಾದ ಲೋಹದ ಆಕ್ಸೈಡನ್ನು ಸಣ್ಣ ಪ್ರಮಾಣದಲ್ಲಿ ಸೇರಿಸುವುದರಿಂದ ಗಾಜಿಗೆ ಬೇಕಾದ ಬಣ್ಣ ಬರಿಸಬಹುದು. ಕೊಬಾಲ್ಟ್ ಆಕ್ಸೈಡನ್ನು ಸೇರಿಸುವುದರಿಂದ ನೀಲಿಗಾಜನ್ನೂ ಮ್ಯಾಂಗನೀಸ್ ಡೈ ಆಕ್ಸೈಡ್‌ನ್ನು ಸೇರಿಸುವುದರಿಂದ ಹಳದಿ ಗಾಜನ್ನೂ ಬಂಗಾರ ಅಥವಾ ಸಿಲೇನಿಯಮ್ ಸೇರಿಸುವುದರಿಂದ ಕೆಂಪು ಬಣ್ಣದ ಗಾಜನ್ನೂ, ಯುರೇನಿಯಮ್ ಆಕ್ಸೈಡನ್ನು ಸೇರಿಸುವುದರಿಂದ ಹಳದಿ ಗಾಜನ್ನೂ ತಯಾರಿಸಬಹುದು. ಕ್ಯಾಲ್ಸಿಯಂ ಫ್ಲೋರೈಡ್, ಆರ್ಸೆನಿಯಸ್ ಆಕ್ಸೈಡ್, ಅಲ್ಯೂಮಿನಿಯಮ್ ಆಕ್ಸೈಡ್, ಜಿಂಕ್ ಮತ್ತು ಕ್ಯಾಲ್ಸಿಯಮ್ ಫಾಸ್ಫೇಟುಗಳನ್ನು ಒಂದೊಂದಾಗಿ ಆಗಲಿ ಅಥವಾ ಕೆಲವುಗಳ ಕೂಟದಲ್ಲಿ ಆಗಲಿ ಬಳಸುವುದರಿಂದ ಗಾಜಿಗೆ ಬಿಳಿಬಣ್ಣವನ್ನು ಅಲ್ಪಪಾರ ದರ್ಶಕ ಗುಣವನ್ನೂ ಒದಗಿಸಬಹುದು. ಇಂಡಿಯನ್ ಆಕ್ಸೈಡನ್ನು ಸೇರಿಸಿದರೆ ಗಾಜು ಕಪ್ಪುಬಣ್ಣವನ್ನು ಪಡೆಯುತ್ತದೆ. ಇನ್ನೊಂದು ಅತಿ ಉಪಯುಕ್ತವಾದ ಜಾತಿ ಪೈರೆಕ್ಸ್ ಗಾಜು. ಇದರಲ್ಲಿ ಶೇ.80 ರಷ್ಟು ಮರಳು ಸೇರಿರುವುದರಿಂದ ಇದನ್ನು ಹೆಚ್ಚು ಬಿಸಿಮಾಡಿ ಕೂಡಲೆ ತಣಿಯಬಿಟ್ಟರೂ ಅದು ಒಡೆಯುವುದಿಲ್ಲ. ಅಲ್ಲದೆ ಅದು ಅಧಿಕ ಉಷ್ಣತೆಯನ್ನು ತಡೆದುಕೊಳ್ಳುವುದು. ಕನ್ನಡಕ, ಸೂಕ್ಷ್ಮದರ್ಶಕ, ದೂರದರ್ಶಕ ಮೊದಲಾದ ಉಪಕರಣ ತಯಾರಿಕೆಯಲ್ಲಿ ಆಪ್ಟಿಕಲ್ ಗಾಜು ಎಂಬ ವಿಶಿಷ್ಟ ಜಾತಿಯ ಗಾಜನ್ನು ಉಪಯೋಗಿಸು ವರು. ಇದರ ತಯಾರಿಕೆಯಲ್ಲಿ ಕಚ್ಚಾ ಪದಾರ್ಥಗಳನ್ನೂ ತಯಾರಿಕೆಯ ಕ್ರಿಯೆಗಳನ್ನೂ ಚೆನ್ನಾಗಿ ಪರಿಶೀಲಿಸಿ ಅದಕ್ಕೆ ವಿಶಿಷ್ಟ ಗುಣಗಳು ನಿರ್ದಿಷ್ಟ ಪ್ರಮಾಣದಲ್ಲಿ ಇರುವಂತೆ ನೋಡಿಕೊಳ್ಳಲಾಗುವುದು. ತೆಳುವಾದ ಗಾಜಿನ ಪದರಗಳನ್ನು ಸೆಲ್ಯುಲೋಸ್ ಅಸಿಟೇಟ್ ಎಂಬ ವಸ್ತುವಿನಿಂದ ಒಂದಕ್ಕೊಂದು ಜೋಡಿಸಿಕೊಳ್ಳುವ ಹಾಗೆ ಮಾಡುವುದರಿಂದ ಅಪಾಯರಹಿತ ಗಾಜಿನ ಹಾಳೆಯನ್ನು ತಯಾರಿಸಬಹುದು. ಇದರ ಪದರಗಳು ಕಾಣಿಸುವುದಿಲ್ಲ. ಅಲ್ಲದೆ ಈ ಗಾಜು ಪಾರದರ್ಶಕವಾಗಿಯೂ ಇರುತ್ತದೆ. ಅಪಘಾತಕ್ಕೆ ಒಳಗಾದಾಗ ಇಂಥ ಗಾಜು ಪುಡಿಪುಡಿಯಾದರೂ ಅದರ ಚೂರುಗಳು ಸಿಡಿದು ಯಾವ ಹಾನಿಯನ್ನೂ ಮಾಡುವುದಿಲ್ಲ. ಬದಲು ಆ ಚೂರುಗಳು ಇದ್ದಲ್ಲಿಯೇ ಅಂಟಿಕೊಂಡಿರುವುವು. ಇಂಥ ಗಾಜನ್ನು ಮೋಟಾರು ವಾಹನಗಳಲ್ಲಿ ಚಾಲಕರ ಎದುರು ಗಾಳಿರಕ್ಷಕಗಳಾಗಿ (ವಿಂಡ್ ಷೀಲ್ಡ್ಸ್) ಉಪಯೋಗಿಸುತ್ತಾರೆ.

**ನೀರು ಗಾಜು:** ದಪ್ಪವಾಗದ ದ್ರವರೂಪದಲ್ಲಿರುವ ಒಂದು ಜಾತಿಯ ಗಾಜು. ಸೋಡಖಾರ ಮತ್ತು ಶುದ್ಧವಾದ ಮರಳನ್ನು ಟ್ಯಾಂಕ್ ಆಕಾರದ ಕುಲುಮೆಯಲ್ಲಿ ಚೆನ್ನಾಗಿ ಕಾಯಿಸಿದಾಗ ಸೋಡಿಯಮ್ ಸಿಲಿಕೇಟ್ ಎಂಬ ವಸ್ತು ದ್ರವರೂಪದಲ್ಲಿ ತಯಾರಾಗುವುದು. ಇದನ್ನು ಹೊರತೆಗೆದು ನೀರು ಚಿಮುಕಿಸಿ ಚೂರು ಚೂರು ಮಾಡುವರು. ಈ ಚೂರುಗಳನ್ನು ಮಿತಗಾತ್ರದ ನೀರಿನೊಂದಿಗೆ ಬಾಯ್ಲರಿನಲ್ಲಿ ಹೆಚ್ಚು ಒತ್ತಡದಲ್ಲಿ ಕುದಿಸಿದಾಗ ಸೋಡಿಯಂ, ಸಿಲಿಕೇಟ್ ಕರಗಿ ದ್ರಾವಣವಾಗುವುದು. ಇದನ್ನು ಅಗತ್ಯವಿರುವಷ್ಟು ದಪ್ಪ ದ್ರವವಾಗುವವರೆಗೆ ಬಿಸಿ ಮಾಡಿದಾಗ ನೀರು ಗಾಜು ದೊರೆಯುತ್ತದೆ. ಈ ಜಾತಿಯ ಗಾಜಿನ ಉಪಯೋಗಗಳು ಬಹಳ. ಮರದ ವಸ್ತುಗಳಿಗೆ ಇದನ್ನು ಸವರಿದರೆ ಅವಕ್ಕೆ ಬೆಂಕಿ ತಗಲುವುದಿಲ್ಲ. ಮೊಟ್ಟೆಗಳನ್ನು ಈ ದ್ರಾವಣದಲ್ಲಿ ಅದ್ದಿಟ್ಟರೆ ಅವು ದೀರ್ಘಕಾಲದವರೆಗೆ ಕೆಡುವುದಿಲ್ಲ. ಇತರ ರಾಸಾಯನಿಕ ವಸ್ತುಗಳನ್ನು ಸೇರಿಸಿ ಅಥವಾ ಬರೀ ಇದೇ ವಸ್ತುವನ್ನು ಅಂಟಾಗಿ ಉಪಯೋಗಿಸಬಹುದು. ಇದನ್ನು ರಂಗು ಮತ್ತು ಸಾಬೂನಿನ ತಯಾರಿಕೆಯಲ್ಲೂ ಉಪಯೋಗಿಸಲಾಗುತ್ತಿದೆ.

ಗಾಜು ಇಂದು ಉತ್ತಮ ವಾಸ್ತುಶಿಲ್ಪದ ಸರಕಾಗಿದೆ. ಇಂದಿನ ಗೃಹನಿರ್ಮಾಣ ಉದ್ದಿಮೆಗೆ ಗಾಜು ಹೊಸ ಚೌಕಟ್ಟನ್ನೇ ತೊಡಿಸಿದೆ. ಇದಕ್ಕೆ ಕಾರಣ ಗಾಜು ತಂತ್ರಜ್ಞಾನದಲ್ಲಿ ಘಟಿಸುತ್ತಿರುವ ಅತ್ಯಾಧುನಿಕ ಬೆಳವಣಿಗೆ. ಗಾಜನ್ನು ಯಾಂತ್ರಿಕವಾಗಿ ಅಥವಾ ರಾಸಾಯನಿಕವಾಗಿ ಮಾರ್ಪಾಡುಗೊಳಿಸಬಹುದು. ಸಮರ್ಥವಾಗಿ ಸಂಸ್ಕರಿಸಿ ಗಾಜನ್ನು ಶಬ್ದನಿರೋಧಕ, ಶಾಖಹೀರುವಿಕೆ, ಶಾಖಪ್ರತಿಫಲನ, ಹವಾಮಾನ ಪ್ರತಿರೋಧಕ, ಅಗ್ನಿನಿರೋಧಕ ಮತ್ತು ವಿದ್ಯುತ್ ಆಘಾತ ತಡೆಯುಬಲ್ಲ ಸಾಧನವಾಗಿ ಬಳಸಬಹುದಾಗಿದೆ. ನೂರಾರು ವರ್ಷಗಳಿಂದ ಗೃಹ ನಿರ್ಮಾಣದಲ್ಲಿ ಗಾಜಿನ ಬಳಕೆಯಾಗಿದೆಯಾದರೂ ಅಂದಿನ ಷೀಟ್ ಗ್ಲಾಸ್‌ನಿಂದ ಅತ್ಯಾಧುನಿಕ ಫ್ಲೋಟ್ ಗ್ಲಾಸ್‌ವರೆಗೂ ಗಾಜು ಭಾರಿ ಮಾರ್ಪಾಡು ಕಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲೂ ಗಾಜಿನ ಬಳಕೆ ಯಥೇಚ್ಛವಾಗಿದೆ. ತೆಳು ಗಾಜಿನ ಹಾಳೆಗಳಿಂದ ಹಿಡಿದು ಸೂರ್ಯನ ರಶ್ಮಿಗಳನ್ನು ತಡೆ ಹಿಡಿಯಬಲ್ಲ ಗುಣಮಟ್ಟದ ಗಾಜುಗಳು ಇಂದು ಲಭ್ಯ. ಗಾಜು ಉದ್ಯಮ ವೇಗವಾಗಿ ಬೆಳೆಯುತ್ತಿದೆ. ಹಿಂದಿನ ಕಾಲದಲ್ಲಿ ಗೂಡುಗಳಂತಿದ್ದ ಮನೆಗಳು ಇಂದು ಹೆಚ್ಚು ಪಾರದರ್ಶಕವಾಗಿರಲು ಸಾಧ್ಯವಾಗಿರುವುದು ಗಾಜಿನಿಂದ.

ಗಾಜು ಸೂಕ್ಷ್ಮ ಪರಿಕರವಾಗಿದ್ದು ಅದರ ಅಗತ್ಯಗಳಿಗೆ ಅನುಸಾರವಾಗಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. (ಎಂ.ವಿ.ಬಿ.)

**ಗಾಟಿಂಗೆನ್ :** ಜರ್ಮನಿಯಲ್ಲಿ ಒಂದು ವಿಶ್ವವಿದ್ಯಾಲಯ ನಗರ. ಕೆಳ ಸ್ಯಾಕ್ಸನಿಯ ಅತ್ಯಂತ ದಕ್ಷಿಣ ಭಾಗದಲ್ಲಿ, ಲೈನ್ ನದಿಯ ದಡದ ಮೇಲೆ, ಹೈನ್‌ಬರ್ಗ್ ಪರ್ವತದ ತಪ್ಪಲಿನಲ್ಲಿದೆ. ಪ್ರಶ. 950ರ ಜರ್ಮನ್ ದಾಖಲೆಗಳಲ್ಲಿ ಗೋಡಿಂಗ್ ಅಥವಾ ಗುಟಿಂಗಿ ಎಂಬ ಗ್ರಾಮದ ಹೆಸರಿದೆ. ಈ ಗ್ರಾಮವೇ ತರುವಾಯದ ದಿನಗಳಲ್ಲಿ ಗಾಟಿಂಗೆನ್ ಎಂಬ ಹೆಸರು ತಳೆಯಿತು. ಈ ನಗರಕ್ಕೆ ಜರ್ಮನಿಯ ದೊರೆ 4ನೆಯ ಆಟೋ 1210ರಲ್ಲಿ ನಗರಪಾಲಿಕೆ ಹಕ್ಕನ್ನು ನೀಡಿದ. ವಾಣಿಜ್ಯದ ಸೌಲಭ್ಯಗಳಿಗಾಗಿ ಜರ್ಮನಿಯ ನಗರಗಳು 14ನೆಯ ಶತಮಾನದಲ್ಲಿ ಮಾಡಿಕೊಂಡ ಹ್ಯಾನ್ಸಿಯಾಟಿಕ್ ಸಂಘದಲ್ಲಿ ಈ ನಗರ ಉನ್ನತ ಸ್ಥಾನ ಪಡೆಯಿತು. ಇದು 1513ರಲ್ಲಿ ಜರ್ಮನಿಯ ಧಾರ್ಮಿಕ ಪುನರುತ್ಥಾನ ಚಳವಳಿಯಲ್ಲಿ ಭಾಗವಹಿಸಿತು; ಮೂವತ್ತು ವರ್ಷಗಳ ಯುದ್ಧದ (1618–1648) ಕಾಲದಲ್ಲಿ ಕಷ್ಟನಷ್ಟಗಳಿಗೊಳಗಾಯಿತು. ಮುಂದೆ ಒಂದು ಶತಮಾನ ದುರ್ಗತಿಯಲ್ಲಿದ್ದು ತರುವಾಯ ವಿಶ್ವವಿದ್ಯಾಲಯದ ಸ್ಥಾಪನೆಯಿಂದ ಪ್ರಸಿದ್ಧಿಗೆ ಬಂತು. ಈ ನಗರ 18ನೆಯ ಶತಮಾನದಲ್ಲಿ ಜರ್ಮನಿಯ ಯುವ ಕವಿಸಂಘದ ಕೇಂದ್ರವಾಗಿತ್ತು.

ಇಲ್ಲಿಯ ಪುರಭವನ 14ನೆಯ ಶತಮಾನದ ಕಟ್ಟಡ.ಇದನ್ನು 1880ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು. ನಗರದ ಹಳೆಯ ಬೀದಿಗಳು ಕಿರಿದು, ಅಂಕುಡೊಂಕು.

ಈ ನಗರದಲ್ಲಿರುವ ವಿಶ್ವವಿದ್ಯಾಲಯವನ್ನು ಇಂಗ್ಲೆಂಡಿನ ದೊರೆ 2ನೆಯ ಜಾರ್ಜ್ 1737ರಲ್ಲಿ ಸ್ಥಾಪಿಸಿದ. ರಾಷ್ಟ್ರೀಯ ಮನೋಭಾವವನ್ನು ಬೆಳೆಸುವುದರಲ್ಲಿ ಈ ವಿಶ್ವವಿದ್ಯಾಲಯದ ಪಾತ್ರ ಹಿರಿದಾದ್ದು. ಹ್ಯಾನೋವರ್‌ನ ಆಗಸ್ಟ್ ದೊರೆಯ ಪ್ರತಿಗಾಮಿ ನೀತಿಯನ್ನು ವಿರೋಧಿಸಿದ್ದಕ್ಕಾಗಿ ಇಲ್ಲಿಯ ಏಳ್ವರು ಪ್ರಾಧ್ಯಾಪಕರು ತಮ್ಮ ಕೆಲಸ ಕಳೆದುಕೊಂಡರು (1837). ಗ್ರಿಮ್ ಸೋದರರು ಇವರಲ್ಲಿಬ್ಬರು. ಬಿಸ್ಮಾರ್ಕ್ ಗಾಟಿಂಗೆನ್ನಿನ ವಿದ್ಯಾರ್ಥಿ. ನಾಜಿಗಳ ಆಡಳಿತ ಕಾಲದಲ್ಲಿ ಗಾಟಿಂಗೆನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಖ್ಯೆ 3,850 ರಿಂದ (1930–31) 1540 ಕ್ಕೆ (1936–37) ಇಳಿದುಹೋಗಿತ್ತು. ವಿಶ್ವವಿದ್ಯಾಲಯದ ಮುಖ್ಯ ಕಟ್ಟಡವೂ ಅದರ ಪಕ್ಕದಲ್ಲಿರುವ ಗ್ರಂಥಾಲಯವೂ ಪ್ರಾಣಿವಿಜ್ಞಾನ, ಮಾನವ ಶಾಸ್ತ್ರ, ಖನಿಜವಿಜ್ಞಾನಗಳಿಗೆ ಸಂಬಂಧಿಸಿದ ಸಂಗ್ರಹಾಲಯಗಳೂ ಉಲ್ಲೇಖಾರ್ಹ.

ಮಧ್ಯಯುಗದಲ್ಲಿ ಗಾಟಿಂಗೆನ್ ಉಣ್ಣೆ ಕೈಗಾರಿಕಾ ಕೇಂದ್ರವಾಗಿತ್ತು. 19–20ನೆಯ ಶತಮಾನಗಳಲ್ಲಿ ವಿಜ್ಞಾನ, ಶಸ್ತ್ರಕ್ರಿಯೆ ಮತ್ತು ದೃಕ್ ಉಪಕರಣ ಕೈಗಾರಿಕೆಗಳು ಬೆಳೆದಿವೆ. ಇಲ್ಲಿಯ ವಿಜ್ಞಾನ ಸಂಘ ಪ್ರಕಟಿಸುತ್ತಿರುವ (ಸ್ಥಾಪಿತ 1739) ಗಾಟಿಂಗಿಷೆ ಗೇಲಿರ್ಟೆ ಆನ್‌ಟ್ಸೈಗೆನ್ ಜರ್ಮನಿಯ ಪ್ರಮುಖ ವಿದ್ವತ್ ಪತ್ರಿಕೆ.

ಎರಡನೆಯ ಮಹಾಯುದ್ಧ ಕಾಲದಲ್ಲಿ ಈ ನಗರ ಹೆಚ್ಚಾಗಿ ಬಾಂಬು ದಾಳಿಗೆ ತುತ್ತಾಗಲಿಲ್ಲ. 1945ರಲ್ಲಿ ಇದು ಬ್ರಿಟಿಷ್ ಆಕ್ರಮಿತ ವಲಯದಲ್ಲಿ ಇತ್ತು. (ವಿ.ಜಿ.ಕೆ.)

**ಗಾಟ್ಲೆಂಡ್ :** ಸ್ವೀಡನಿಗೆ ಸೇರಿದ ಒಂದು ದ್ವೀಪ. ಬಾಲ್ಟಿಕ್ ಸಮುದ್ರದಲ್ಲಿ ಉ.ಅ. $57^0$–$58^0$ ನಡುವೆ, ಸ್ವೀಡನಿನ ಮುಖ್ಯ ಭೂಭಾಗದ ಪೂರ್ವಕ್ಕೆ 75 ಕಿಮೀ ದೂರದಲ್ಲಿದೆ. ಇದರ ಉದ್ದ 115.5 ಕಿಮೀ., ಕನಿಷ್ಠ ಅಗಲ 45ಕಿಮೀ. ವಿಸ್ತೀರ್ಣ 3.140ಚ.ಕಿಮೀ. ಇದೂ ಫಾರ, ಗಾಟ್ಸ್ಕ ಸ್ಯಾಂಡನ್, ಲಿಲ, ಸ್ಟೋರ್‌ಕಾರ್ಲ್‌ಸೊ ದ್ವೀಪಗಳೂ ಸೇರಿ ಗಾಟ್ಲೆಂಡ್ ಕೌಂಟಿಯಾಗಿದೆ. ಗಾಟ್ಲೆಂಡ್ ಪ್ರಸ್ಥಭೂಮಿ ಸಿಲೂರಿಯಮ್ ಸುಣ್ಣಕಲ್ಲಿನಿಂದ ಕೂಡಿದ್ದು, ಕರಾವಳಿಯಲ್ಲಿ ಸುಣ್ಣಕಲ್ಲಿನ ಉದ್ದನೆಯ ಸಾಲುಗಳಿವೆ. ಬಾರ್ಲಿ, ರೈ, ಸಕ್ಕರೆ ಬೀಟ್, ತರಕಾರಿ, ಹೂವು ಇಲ್ಲಿ ಬೆಳೆಯುತ್ತವೆ. ಫಾರ ಮರಳಿನಿಂದ ಕೂಡಿದೆ. ಕುರಿ ಮೇಯಿಸುವುದು ಇಲ್ಲಿಯ ಕಸಬು. ಮೀನುಗಾರಿಕೆ, ಸಿಮೆಂಟ್ ತಯಾರಿಕೆ ನಡೆಯುತ್ತವೆ. ಗಾಟ್ಲೆಂಡಿನ ಮುಖ್ಯ ಬಂದರು ವಿಸ್ಬಿ. ಇದೇ ಇಲ್ಲಿಯ ಮುಖ್ಯ ಪಟ್ಟಣ. ಪ್ರವಾಸ ದೃಷ್ಟಿಯಿಂದಲೂ ಗಾಟ್ಲೆಂಡ್ ಮುಖ್ಯವಾಗಿದೆ. (ಎಂ.ಎಸ್.)

**ಇತಿಹಾಸ:** ಗಾಟ್ಲೆಂಡ್ ಕಂಚಿನಯುಗದಿಂದಲೇ ವ್ಯಾಪಾರ ಕೇಂದ್ರವಾಗಿತ್ತು. 9ನೆಯ ಶತಮಾನದಿಂದಲೇ ಸ್ವೀಡನಿಗೆ ಸೇರಿತು. 12ನೆಯ ಶತಮಾನದಲ್ಲಿ ಈ ದ್ವೀಪದ ವ್ಯಾಪಾರಿಗಳು ಪಶ್ಚಿಮ ಯುರೋಪ್ ಮತ್ತು ರಷ್ಯದ ನಡುವಿನ ಮಾರ್ಗದಲ್ಲಿ ಅಧಿಪತ್ಯ ಸ್ಥಾಪಿಸಿದರು. ಆರ್ಮನಿಯ ವ್ಯಾಪಾರಿಗಳು ಇಲ್ಲಿಯ ಮುಖ್ಯ ಪಟ್ಟಣಗಳಲ್ಲಿ ಮತ್ತು ಇಲ್ಲಿಯ ಈಗಿನ ಮುಖ್ಯ ಪಟ್ಟಣವಾದ ವಿಸ್ಬಿಯಲ್ಲಿ ನೆಲೆಸಿದರು. ಇದು ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ 1361ರಲ್ಲಿ ಡಚ್ಚರು ಇದನ್ನು ವಶಪಡಿಸಿಕೊಂಡರು. 1654ರಲ್ಲಿ ಸ್ವೀಡನ್ನಿಗೆ ಹಿಂತಿರುಗಸಲ್ಪಟ್ಟಿತು. 19ನೆಯ ಶತಮಾನದ ಕೊನೆಯಲ್ಲಿ ಕೋಟೆಗಳನ್ನು ಕಟ್ಟಿ ಬಲಪಡಿಸಿದರು. *

**ಗಾಟ್‌ಷೆಡ್, ಯೋಹಾನ್ ಕ್ರಿಸ್ಟಾಫ್ :** 1700–1766. ಯುರೋಪಿನ ಸಾಂಸ್ಕೃತಿಕ ಚರಿತ್ರೆಯಲ್ಲೂ ಜರ್ಮನ್ ಸಾಹಿತ್ಯ ಚರಿತ್ರೆಯಲ್ಲೂ ಪ್ರಬುದ್ಧಯುಗ ಎಂದು ಕರೆಯಲ್ಪಟ್ಟಿರುವ 18ನೆಯ ಶತಮಾನದ ಪ್ರಮುಖ ಜರ್ಮನ್ ಲೇಖಕರಲ್ಲಿ ಮೊದಲಿಗ, ಈತನನ್ನು ಯುಗಪ್ರವರ್ತಕನೆಂದೇ ಕರೆದಿದ್ದಾರೆ.

ಕೋನಿಗ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಮೊದಲು ದೇವತಾಶಾಸ್ತ್ರವನ್ನು ವ್ಯಾಸಂಗ ಮಾಡುತ್ತಿದ್ದ ಗಾಟ್‌ಷೆಡ್ ಕೆಲಕಾಲಾನಂತರ ಸಾಹಿತ್ಯ ಹಾಗೂ ಸೌಂದರ್ಯ ಮೀಮಾಂಸೆಯತ್ತ ಹೊರಳಿದ. ಕಡೆಗೆ ಅದೇ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾದರೂ ಆ ಹುದ್ದೆಯಲ್ಲಿ ಹೆಚ್ಚು ಕಾಲ ಇರಲಿಲ್ಲ. ಬಲವಂತವಾಗಿ ಅರಸನ ಸಿಡಿಗುಂಡು ಸೈನ್ಯಕ್ಕೆ ತನ್ನನ್ನು ಎಳೆದೊಯ್ಯುವರೆಂಬ ಭೀತಿ ತಲೆದೋರಿತಾಗಿ ಕೂಡಲೇ ಕೋನಿಗ್ಸ್ ಬರ್ಗ್ ಬಿಟ್ಟು ಲೀಪ್ಜಿಗ್ ನಗರಕ್ಕೆ ಪಲಾಯನ ಮಾಡಿದ.

ಲೀಪ್ಜಿಗ್ ನಗರದಲ್ಲಿ ಹೆಸರಾಂತ ವಿಶ್ವವಿದ್ಯಾಲಯವಿತ್ತು; ಮೇಲಿಂದಮೇಲೆ ಅಲ್ಲಿ ದೊಡ್ಡ ದೊಡ್ಡ ಜಾತ್ರೆಗಳು ನಡೆಯುತ್ತಿದ್ದುವು. ಜರ್ಮನಿಯ ಪುಸ್ತಕ ವ್ಯಾಪಾರ ಕುದುರಿದ್ದಕ್ಕೆ ಈ ನಗರ ಬಹುಪಾಲು ಕಾರಣವೆನ್ನಲಾಗಿದೆ. ಈ ಎಲ್ಲ ಕಾರಣಗಳಿಂದ ಲೀಪ್ಜಿಗ್ ನಗರ ಇಡೀ ಉತ್ತರ ಯುರೋಪಿನಲ್ಲೇ ಒಂದು ಪ್ರಮುಖ ಕೇಂದ್ರವಾಗಿತ್ತು. ಲೀಪ್ಜಿಗ್ ಮುಟ್ಟಿದ ಕೂಡಲೇ ಗಾಟ್‌ಷೆಡ್ ಮತ್ತೆ ತಮ್ಮ ಅಧ್ಯಯನ ಪ್ರವಚನಗಳನ್ನು ಆರಂಭಿಸಿ 1730 ರಲ್ಲಿ ಕಾವ್ಯಕಲೆಯ ಪ್ರಾಧ್ಯಾಪಕನಾದ ನಲ್ಲದೆ ಡಾಯಿಷ್‌ಬಂದ್ ಗೆಸ್ಸಲ್‌ಷಾಫ್ಟ್ ಎಂಬ ಸಂಘಕ್ಕೆ ಸದಸ್ಯನಾಗಿ ಆಯ್ಕೆಯಾದ; ಕೆಲವು ವರ್ಷಗಳ ಅನಂತರ ಈ ಸಂಘದ ಹಿರಿಯನಾದ ಕಾರಣ ಸಾಹಿತ್ಯ ಪ್ರಪಂಚದಲ್ಲಿ ಒಂದು ಮಹಾಶಕ್ತಿಯೇ ಆದ. ವ್ಯಕ್ತಿವಾದ ಮತ್ತು ವಿಚಾರವಾದಗಳು ಸಂಗಮಿಸಿ ಉಕ್ಕೇರುತ್ತಿದ್ದ ಕಾಲವದು. ಈ ಪ್ರವಾಹಕ್ಕೆ ದುಮುಕಿ ಗಾಟ್‌ಷೆಡ್ ತನ್ನ ಸರ್ವಶಕ್ತಿಯಿಂದಲೂ ಲೀಪ್ಜಿಗ್ ನಗರವನ್ನು ಜರ್ಮನಿಯ ಬೌದ್ಧಿಕ ಕೇಂದ್ರವನ್ನಾಗಿ ಮಾಡಲು ಶ್ರಮಿಸಿದ. ಅಡಿಸನ್ನನ ಸ್ಪೆಕ್ಟೇಟರ್ ಪತ್ರಿಕೆಯ ಮಾದರಿಯಲ್ಲಿ ಡೀ ವರ್‌ನೂನ್‌ಫ್ತಿಗನ್ ಟ್ಯಾಡ್ಲೆರಿನ್ನನ್ ಎಂಬ ಪತ್ರಿಕೆಯನ್ನು ಆರಂಭಿಸಿದ. ಇದಾಗಲೀ 1727ರಲ್ಲಿ ಈತ ಹೊರಡಿಸಿದ ಡರ್ ಬೀಡರ್‌ಮನ್ ಎಂಬ ಪತ್ರಿಕೆಯಾಗಲೀ ಊರ್ಜಿತವಾಗಲಿಲ್ಲ.

ಗಾಟ್‌ಷೆಡ್ಡನ ಮೊಟ್ಟಮೊದಲ ಮುಖ್ಯ ಕೃತಿಯೆಂದರೆ ಫರ್‌ಸೂಕ್ ಐನೆರ್ ಕ್ರಿಟಿಷೆನ್ ಡಿಕ್ಟ್‌ಕುನ್ಸ್ಟ್ ಫಾರ್ ಡೀ ಡಾಯ್ಟ್‌ಟನ್ ಎಂಬ ಕಾವ್ಯಮೀಮಾಂಸೆಯನ್ನು ಕುರಿತ ಗ್ರಂಥ (1730). ಈ ಕೃತಿಯಿಂದಾಗಿ ಅದುವರೆಗೂ ಪ್ರಸಿದ್ಧವಾಗಿದ್ದ ಓಪಿಟ್ಜನ ಕಾವ್ಯ ಮೀಮಾಂಸಾ ಗ್ರಂಥ ಬುಕ್ ಫಾನ್ ಡೇರ್ ಡಾಯ್ ಟ್ಶೆನ್ ಪೊಯೆಟೆರೀ (1624) ತನ್ನ ಪ್ರಾಶಸ್ತ್ಯವನ್ನು ಕಳೆದುಕೊಂಡಿತು. ಅಲ್ಲದೆ ಅದುವರೆಗೂ ಪ್ರಚಾರದಲ್ಲಿ ತೀರ ಕೃತಕವಾದ ಬರೋಕ್ ಶೈಲಿಗೆ ಗಾಟ್‌ಷೆಡ್ಡನ ಗ್ರಂಥ ಕೊಡಲಿಪೆಟ್ಟು ಹಾಕಿ ಜರ್ಮನ್ ಸಾಹಿತ್ಯಕ್ಕೆ ದೊಡ್ಡ ಉಪಕಾರವೆಸಗಿತು. ಇದು ಕಾವ್ಯರಚನೆಗೆ ಕೈಗನ್ನಡಿಯಾಗ ಬೇಕೆಂದೇ ಬರೆದ ಶಾಸ್ತ್ರ ಗ್ರಂಥ. ಇದರಲ್ಲಿ ಗಾಟ್‌ಷೆಡ್ ಬಹುವಾಗಿ ಫ್ರೆಂಚ್ ಮೂಲಗಳಿಂದ, ಅದರಲ್ಲೂ ವಿಶೇಷವಾಗಿ ಲೀ ಬಾಸು ಮತ್ತು ಡಾಬಿಗ್ನಾಕ್ ಎಂಬ ಲೇಖಕರ ಕೃತಿಗಳಿಂದ ವಿಷಯವನ್ನು ಸಂಗ್ರಹಿಸಿ ಅಳವಡಿಸಿಕೊಂಡಿದ್ದಾನೆ. ಕಾವ್ಯವೆಂದರೆ ಕೇವಲ ಛಂದೋಬದ್ಧವಾದ ಪಂಕ್ತಿಗಳನ್ನು ನಿರ್ಮಿಸುವ ಯಾಂತ್ರಿಕ ಚಮತ್ಕಾರ ಅಲ್ಲ; ಅದು ನಿಸರ್ಗದ ಅನುಕರಣವಾಗಬೇಕು ಎಂದು ಗಾಟ್‌ಷೆಡ್ ಒತ್ತಾಯವಾಗಿ ನಿರೂಪಿಸಿದ. ಕಾವ್ಯ ಕೃತಕವಾಗಬಾರದು. ಸಹಜವಾಗಿರಬೇಕು. ಸ್ವಾಭಾವಿಕವಾಗಿರಬೇಕು. ಎಂದವನು ಮೇಲಿಂದಮೇಲೆ ಘೋಷಿಸುತ್ತಾನಾದರೂ ಅವನಿಗೆ ಕಾವ್ಯದ ಮರ್ಮ ತಿಳಿದಿಲ್ಲವೆನಿಸುತ್ತದೆ. ಫ್ರೆಂಚ್ ಲೇಖಕರ ಪ್ರಭಾವಕ್ಕೆ ಅತಿಯಾಗಿ ಒಳಪಟ್ಟುದರಿಂದ ಆತ ಕಾವ್ಯದ ಶರೀರಕ್ಕೆ ಹೆಚ್ಚು ಪ್ರಾಮುಖ್ಯಕೊಟ್ಟನಾಗಿ ಕಾವ್ಯದ ಆತ್ಮ ಆತನಿಗೆ ಕಾಣದಾಯಿತು. ಫ್ರೆಂಚ್ ಲೇಖಕರಂತೆ ಅವನೂ ಸಾಹಿತ್ಯವನ್ನು ಕೃತಕವಾಗಿ ವರ್ಗೀಕರಿಸಿದ. ಕಾವ್ಯಾನುಭವದಲ್ಲಿ ಉತ್ತಮ ಅಭಿರುಚಿ ಎಂದರೇನು ಎಂಬುದನ್ನು ವಿವರಿಸಲು ಒಂದು ದೊಡ್ಡ ಸೂತ್ರಾವಳಿಯನ್ನೇ ನಿರ್ಮಿಸಿದ. ಕಾವ್ಯರಚನೆಯಲ್ಲಿ ವಿಚಾರ ಮತ್ತು ಭಾವನಾಶಕ್ತಿಗಳ ಪರಸ್ಪರ ಪಾತ್ರವೇನು ಎಂಬುದನ್ನು ವಿಸ್ತಾರವಾಗಿ ವಿವೇಚಿಸಿದ. ಈ ಪ್ರಯತ್ನ ನಿಜಕ್ಕೂ ಮೆಚ್ಚತಕ್ಕದ್ದು. ಆದರೆ ಕಾವ್ಯರಚನೆಯಾಗಲಿ ಕಾವ್ಯನುಭವವಾಗಲಿ ಬರಿಯ ನಿಯಮ–ನಿರ್ಬಂಧಗಳಿಗೊಳಪಟ್ಟದ್ದಲ್ಲ ಎಂಬುದನ್ನು ಗಾಟ್‌ಷೆಡ್ ಅರಿಯದೆ ಹೋದುದು ದುರ್ದೈವ. ಕಾವ್ಯವು ನಿಸರ್ಗವನ್ನೂ ಮಾನವ ಸ್ವಭಾವವನ್ನೂ ಅನುಸರಿಸಬೇಕೆಂದು ನಿರೂಪಿಸಹೊರಟವನು ಅದರೊಡನೆ ಫ್ರಾನ್ಸಿನ ಅಭಿಜಾತ ಸಾಹಿತ್ಯ ಲೇಖಕರು ಸೃಷ್ಟಿಸಿದ ನಿಯಮಗಳನ್ನೂ ಅವರು ಅನುಸರಿಸಿದ ವಿಧಾನಗಳನ್ನು ಬೆರಸಿದ. ಇದರಿಂದ ಇವನ ನಿರೂಪಣೆಯಲ್ಲಿ ಪುನಃ ಪುನಃ ಪೂರ್ವಾಪರ ವಿರೋಧಗಳೂ ಅಸಾಂಗತ್ಯಗಳೂ ಹುಟ್ಟಿದುವು. ತನ್ನ ಮೂಲತತ್ತ್ವಕ್ಕೂ ಫ್ರೆಂಚ್ ಲೇಖಕರ ಕಟ್ಟುಪಾಡುಗಳಿಗೂ ಪರಸ್ಪರ ಸಾಮಂಜಸ್ಯವಿಲ್ಲದಿರುವುದರಿಂದಲೇ ತನ್ನ ನಿರೂಪಣೆಯಲ್ಲೂ ಪರಸ್ಪರ ವಿರೋಧಗಳು ಉಂಟಾಗುತ್ತಿವೆಯೆಂಬುದು ಅವನಿಗೇ ಅರಿವಾಗಿತ್ತು. ಅವನ ನಿರೂಪಣೆಯಲ್ಲೇ ಇದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೂ ಕಾವ್ಯದ ವಿವಿಧ ರೂಪಗಳ ಸೃಷ್ಟಿಗೆ ಆವಶ್ಯಕವೆಂದು ತೋರಿದ ನಿಯಮಗಳನ್ನು ಪ್ರತಿಪಾದಿಸುವುದು, ಹಾಗೂ ವಿಚಾರ ಮತ್ತು ಸಾಮಾನ್ಯಾನುಭವಗಳಿಗೆ ವಿರುದ್ಧವಾಗಿವೆ ಯೆಂದು ಅನ್ನಿಸಿದ ಕಾವ್ಯಕೃತಿಗಳನ್ನು ಖಂಡಿಸುವುದು ಇವೇ ಗಾಟ್‌ಷೆಡ್ಡನ ಮುಖ್ಯ ಗುರಿಗಳಾದುವು. ತನ್ನ ಈ ಹೆಗ್ಗುರುತುಗಳ ದೃಷ್ಟಿಯಿಂದಲೇ ಈತ ಮಿಲ್ಟನ್ ಮಹಾಕವಿಯ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯವನ್ನು ಕಟುವಾಗಿ ಟೀಕಿಸಿದ. ಈ ಟೀಕೆಯಿಂದಲೇ ಗಾಟ್‌ಷೆಡ್ಡನಿಗೂ ಬಾಡ್‌ಮರ್ ಮತ್ತು ಬ್ರೀಟಿನ್ಗರ್ ಎಂಬ ಸ್ವಿಟ್‌ಜರ್‌ಲೆಂಡಿನ ಲೇಖಕರಿಗೂ ಭಿನ್ನಾಭಿಪ್ರಾಯ ಆರಂಭವಾದದ್ದು. ಈ ಭಿನ್ನಾಭಿಪ್ರಾಯ ಮುಂದೆ ಬಲವಾಗಿ ಬೆಳೆದು ಕಡೆಗೆ ಗಾಟ್‌ಷೆಡ್ಡನ ಪ್ರತಿಷ್ಠೆ ಪ್ರಭಾವಗಳು ಇಳಿಮುಖವಾಗಲು ಕಾರಣವಾಯಿತು.

ಆದರೂ ಗಾಟ್‌ಷೆಡ್ ಸಮಕಾಲೀನ ಸಾಹಿತ್ಯದಲ್ಲಿ ತೀವ್ರಾಸಕ್ತಿ ತಳೆದದ್ದು ಮೆಚ್ಚತಕ್ಕ ವಿಷಯ. ಅವನ ತಿದ್ದುಪಾಟುಗಳಿಂದ ಉಳಿದೆಲ್ಲ ಸಾಹಿತ್ಯರೂಪಗಳಿಗಿಂತ ನಾಟಕ ಸಾಹಿತ್ಯಕ್ಕೆ ಆದ ಉಪಕಾರ ಹೆಚ್ಚು. ಆ ಕಾಲದಲ್ಲಿ ನಾಟಕ ಸಾಹಿತ್ಯಕ್ಕೂ ನಾಟಕರಂಗಕ್ಕೂ ಸಂಬಂಧವೇ ಇಲ್ಲದಂತಾಗಿದ್ದುದು ಅವನಿಗೆ ಕಂಡಬಂತು. ಜನಪ್ರಿಯ ನಾಟಕಗಳು ಸುಸಂಸ್ಕೃತರ ಮುಂದೆ ಪ್ರದರ್ಶಿಸಲು ಯೋಗ್ಯವಾಗಿರಲಿಲ್ಲ. ಗಾಟ್‌ಷೆಡ್ ಉತ್ತಮ ಸಾಹಿತ್ಯ ಕೃತಿಗಳಾದ ನಾಟಕಗಳನ್ನು ರಂಗಭೂಮಿಗೆ ತಂದು ನಾಟಕಕ್ಕೂ ರಂಗಭೂಮಿಗೂ ನಡುವೆ ಕತ್ತರಿಸಿಹೋಗಿದ್ದ ಸಂಬಂಧವನ್ನು ಪುನಃ ಬೆಸೆದ. ಯೋಹಾನ್ ನ್ಯೂಬರ್ ಮತ್ತು ಅವನ ಪತ್ನಿ ಕ್ಯಾರೊಲಿನ್ (1697–1760) ಇವರ ನೇತೃತ್ವದಲ್ಲಿ ನಡೆಯುತ್ತಿದ್ದ ಒಂದು ನಾಟಕ ಮಂಡಲಿಯ ಸಹಾಯದಿಂದ ಗಾಟ್‌ಷೆಡ್ ಫ್ರೆಂಚ್ ಅಭಿಜಾತ ನಾಟಕದ ಅತ್ಯುತ್ತಮ ಕೃತಿಗಳನ್ನು ಜರ್ಮನ್ ರಂಗಭೂಮಿಯಲ್ಲಿ ಪ್ರತಿಷ್ಠಾಪಿಸಿದ. ಇದರ ಪರಿಣಾಮವಾಗಿ ರಂಗಭೂಮಿ ಸುಶಿಕ್ಷಿತ ವರ್ಗಗಳಿಗೆ ಆಕರ್ಷಕವಾಯಿತು.

ಒಂದು ವಿಷಯವನ್ನು ನೆನಪಿಡಬೇಕು. ಇಂಗ್ಲಿಷ್ ಸಾಹಿತಿಗಳು ಹಾಗೂ ವಿಮರ್ಶಕರಂತೆ ಗಾಟ್‌ಷೆಡ್ಡನೂ ನಾಟಕ ವಾಸ್ತವಿಕವಾಗಿರಬೇಕೆಂದು ಪದೇ ಪದೇ ಎಚ್ಚರಿಸಿದ; ರಂಗಭೂಮಿಯಲ್ಲಿ ನಟನಟಿಯರ ವೇಷಭೂಷಣಗಳು ಐತಿಹಾಸಿಕ ದೃಷ್ಟಿಯಿಂದ ವಾಸ್ತವಿಕವಾಗಿರಬೇಕೆಂದು ಒತ್ತಾಯಪಡಿಸಿದ. ಆಡಂಬರವೂ ಕೃತಕವೂ ಆದ ಭಾಷಣಶೈಲಿಯನ್ನೂ ಕೆಳದರ್ಜೆಯ ಹಾಸ್ಯವನ್ನೂ ಸಂಪೂರ್ಣವಾಗಿ ನಾಟಕದಿಂದ ತೊಡೆದುಹಾಕಿದ. ಜೊತೆಗೆ ನಾಟಕದ ಸಹಜತೆಗೆ ಮೂಲಕಾರಣಗಳಾಗಿರುವ ಕಾಲ, ದೇಶ ಮತ್ತು ಕ್ರಿಯೆಗಳ ಐಕ್ಯಕ್ಕೆ ಪ್ರಾಧಾನ್ಯ ಕೊಟ್ಟ. ಈ ಸುಧಾರಣೆಗಳಲ್ಲಿ ಕೊನೆಯದರಿಂದ ಏನು ಒಳ್ಳೆಯದಾಯಿತು ಎಂಬುದು ಚರ್ಚಾಸ್ಪದವಾದ ವಿಷಯ.

ರಂಗಭೂಮಿಯನ್ನು ಸುಧಾರಿಸಿದ ಮೇಲೆ ಅಭಿನಯಯೋಗ್ಯ ನಾಟಕಗಳನ್ನು ಒದಗಿಸುವ ಭಾರವೂ ಗಾಟ್‌ಷೆಡ್ಡನ ಮೇಲೆಯೇ ಬಿತ್ತು. ಅವನೂ ಅವನ ಮಿತ್ರರೂ ಸೇರಿ ಒಂದು ನಾಟಕ ಭಂಡಾರವನ್ನೇ ಕೂಡಿಸಲು ಯತ್ನಿಸಿದರು. ಇದರಲ್ಲಿ ಹೆಚ್ಚು ಪಾಲು ಭಾಷಾಂತರಗಳು. 1740 ರಿಂದ 1745ರ ವರೆಗಿನ ಅವಧಿಯಲ್ಲಿ ಗಾಟ್‌ಷೆಡ್ಡನೂ ಅವನ ಸಹೋದ್ಯೋಗಿಗಳೂ ನಾಟಕಗಳ ದೊಡ್ಡ ಸಂಕಲವೊಂದನ್ನು ಆರು ಸಂಪುಟಗಳಲ್ಲಿ ಪ್ರಕಟಿಸಿದರು. ಇದರ ಹೆಸರು ಡಾಯಿಟ್‌ಶೆ ಷಾನ್‌ಬ್ಯೂನೆ ನಾಹ್ ಡೇನ್ ರೆಗೆಲ್ನ್ ಡೀರ್ ಆಲ್ಟೆನ್ ಗ್ರೀಕೆನ್ ಉಂಟ್ ರೋಮರ್ ಐನ್‌ಗೆರಿಕ್ಟೆಟ್ ಎಂದು. ಈ ಸಂಕಲನಕ್ಕೆ ನಾಟಕಗಳನ್ನು ಒದಗಿಸಿದವರಲ್ಲಿ ಗಾಟ್‌ಷೆಡ್ಡನ ಪತ್ನಿ ಲೂಯಿಸ ಅಡೆಲ್‌ಗುಂಡ್ ವಿಕ್ಟೋರಿಯ (1713 – 62) ಒಬ್ಬಳು. ಈಕೆಗೆ ಕಾಮಿಡಿಗಳನ್ನು ಭಾಷಾಂತರಿಸುವ ಕೆಲಸ ಕೊಡಲಾಗಿತ್ತು. ಈಕೆ ರಚಿಸಿದ ಎರಡು ಮೂರು ಸ್ವತಂತ್ರ್ಯ ನಾಟಕಗಳು ಗಾಟ್‌ಷೆಡ್ಡನು ಬರೆದು ಹೆಸರುಗಳಿಸಿದ ಡೇರ್ ಸ್ಟರ್‌ಬೆಂಡೆ ಕಾಟೊ ಎಂಬ ಟ್ರ್ಯಾಜಡಿಗಿಂತ ಉತ್ತಮವಾಗಿವೆ. ಕಾಟೋ ಪ್ರಕಟವಾದದ್ದು 1731 ರಲ್ಲಿ. ಇದು ಬಹುಮಟ್ಟಿಗೆ ಫ್ರೆಂಚ್ ನಾಟಕಕಾರ ದೇ ಚಾಮ್ ರಚಿಸಿದ ಕೇತನ್ ದೂ ತೀಕ್ (1715) ಎಂಬ ಟ್ರ್ಯಾಜಡಿಯ ಭಾಷಾಂತರ. ಮುಕ್ತಾಯಕ್ಕೆ ಅಡಿಸನ್ನನ ನಾಟಕದ ಮುಕ್ತಾಯವನ್ನು ಹೊಂದಿಸಿಕೊಳಲಾಗಿದೆ. ಗಾಟ್‌ಷೆಡ್ಡನ ಈ ಟ್ರ್ಯಾಜಡಿಯಲ್ಲಿ ಸೂತ್ರರೂಪದಲ್ಲಿರುವ ಅಸಂಖ್ಯ ಸೂಕ್ತಿಗಳೂ ಪ್ರಭಾವಪೂರ್ಣವಾದ ಒಂದೆರಡು ದೃಶ್ಯಗಳೂ ಇವೆ. ಆದ್ದರಿಂದಲೇ ಈ ನಾಟಕ ಜರ್ಮನ್ ರಂಗ ಭೂಮಿಯಲ್ಲಿ ಇಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಜನಪ್ರಿಯವಾಗಿ ಉಳಿಯಿತು.

ರಂಗಭೂಮಿಯಲ್ಲಿ ಗಾಟ್‌ಷೆಡ್ ಮಾಡಿದ ಸುಧಾರಣೆಗಳು ಬಹುಮಟ್ಟಿಗೆ ಸಫಲಗೊಂಡುವು. ಅವನ ಅಧ್ಯಕ್ಷತೆಯಲ್ಲಿ ಜರ್ಮನ್ ಸಂಘ ಏಳಿಗೆ ಪಡೆಯಿತು. 1732 ರಲ್ಲಿ ಈತ ಸ್ಥಾಪಿಸಿದ ಸಾಹಿತ್ಯ ಪತ್ರಿಕೆ ಅವಿಚ್ಛಿನ್ನವಾಗಿ ಹನ್ನೆರಡು ವರ್ಷಕಾಲ ನಡೆಯಿತು. ಅದರ ಹೆಸರು ಬ್ರೈಟೇಗೆ ಟ್ಸುರ್ ಕ್ರಿಟಿಷೆನ್ ಹಿಸ್ಟಾರಿಯಿ ಡೇರ್ ಡಾಯಿ ಟ್ಶೆನ್ ಶ್ಪ್ರಾಕೆ ಪೊಯೆಸೀ ಉಂಟ್ ಬೆರೆಡ್‌ಸ಼ಾಮ್‌ಕೈಟ್. ಈ ಎಲ್ಲ ಕಾರಣಗಳಿಂದ ಗಾಟ್‌ಷೆಡ್ಡನ ಗೌರವ ಅತ್ಯುನ್ನತ ಮಟ್ಟಕ್ಕೇರಿತು. ಅವನ ಮಾತು ಅಧಿಕಾರವಾಣಿ ಯಾಯಿತು. ಸಾಹಿತ್ಯಪ್ರಪಂಚದಲ್ಲಿ ಈತ 1738 ರವರೆಗೂ ಪ್ರತಿವಾದಿಭಯಂಕರನಾಗಿದ್ದ. ಆದರೆ ಆ ವರ್ಷ ಇವನಿಗೂ ಇವನ ಅನುಯಾಯಿಗಳಿಗೂ ವಿರಸದ ಮುನ್ಸೂಚನೆ ಕಾಣಿಸಿಕೊಂಡಿತು. ಮಿಲ್ಟನ್ ಮಹಾಕವಿಯ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯವನ್ನು ಗಾಟ್‌ಷೆಡ್ ಕಟುವಾಗಿ ಟೀಕಿಸಿದ್ದನೆಂದು ಹಿಂದೆಯೇ ಹೇಳಲಾಗಿದೆ. 1732 ರಲ್ಲಿ ಬೋಡ್‌ಮರ್ ಎಂಬ ಸ್ವಿಸ್ ಲೇಖಕ ಆ ಮಹಾಕಾವ್ಯವನ್ನು ಜರ್ಮನ್ ಭಾಷೆಗೆ ಪರಿವರ್ತಿಸಿದನಲ್ಲದೆ 1738 ರಲ್ಲಿ ಆತನೂ ಆತನ ಸ್ವಿಸ್ ಮಿತ್ರ ಬ್ರೀಟಿಂಗರ್ ಇಬ್ಬರೂ ಗಾಟ್‌ಷೆಡ್ಡನ ಅಭಿಪ್ರಾಯಗಳನ್ನು ಪ್ರತ್ಯಕ್ಷವಾಗಿ ಟೀಕಿಸತೊಡಗಿದರು. 1740 ರಲ್ಲಿ ಬ್ರೀಟಿಂಗರನ ಕ್ರಿಟಿಷೆ ಡಿಕ್ಟ್‌ಕುನ್ಸ್ಟ್ ಮತ್ತು ಬೋಡ್‌ಮರನ ಕ್ರಿಟಿಷೆ ಅಭಾಂಡ್‌ಲೂಂಗ್ ಫಾನ್ ಡೇಮ್ ವುಂಡರ್‌ಬಾರೆನ್ ಇನ್ ಡೇರ್ ಪೊಯೆಸೀ ಎಂಬ ವಿಮರ್ಶನ ಗ್ರಂಥಗಳು ಪ್ರಕಟವಾದುವು. ಇವೆರಡರಲ್ಲೂ ಗಾಟ್‌ಷೆಡ್ಡನ ಅಭಿಪ್ರಾಯಗಳನ್ನು ಬಲವಾಗಿ ಟೀಕಿಸಲಾಗಿತ್ತು. ಈ ಟೀಕೆಯನ್ನು ಅಪಮಾನವೆಂದು ಭಾವಿಸಿ ಗಾಟ್‌ಷೆಡ್ ಕೆರಳಿಬಿದ್ದ. ಇವನು ಮತ್ತು ಇವನ ಅನುಯಾಯಿಗಳಾದ ಲೀಪ್‌ಜ಼ಿಗ್ ಪಂಥದವರಿಗೂ ಬೋಡ್‌ಮರ್ ಹಾಗೂ ಬ್ರೀಟಿಂಗರ್‌ರವರ ಪ್ರಭಾವಕ್ಕೊಳಪಟ್ಟ ಸ್ವಿಸ್ ಪಂಥದವರಿಗೂ ಒಂದು ಕಾಳಗವೇ ಆರಂಭವಾಯಿತು. ಕಾವ್ಯದ ನಿಜವಾದ ಹೃದಯ ಏನೆಂಬುದನ್ನು ಸ್ಪಷ್ಟಪಡಿಸಹೊರಟ ಸ್ವಿಸ್ ಪಂಥದವರಿಗೆ ಕಾವ್ಯದ ಮರ್ಮ ಗಾಟ್‌ಷೆಡ್ಡನಿಗಿಂತ ಚೆನ್ನಾಗಿ ಅರಿವಾಗಿತ್ತೆಂಬುದು ಸ್ಪಷ್ಟ. ಆದುದರಿಂದ ಈ ವಾದ – ವಿವಾದದಲ್ಲಿ ಗಾಟ್‌ಷೆಡ್ ಸೋತದ್ದು ಸಹಜವೇ ಆಗಿದೆ.

ಗಾಟ್‌ಷೆಡ್ ಮಾಡಿದ ಉಗ್ರ ಟೀಕೆಯಿಂದ ಕೆರಳಿ ಆತ್ಮಸಮರ್ಥನೆ ಮಾಡಿಕೊಳ್ಳು ವುದಕ್ಕಾಗಿಯೇ ಬೋಡ್‌ಮರ್ ಕ್ರಿಟಿಷ್ ಬೆಟ್ರಾಕ್‌ಟೂಂಗೆನ್ ವ್ಯೂಬರ್ ಡೀ ಪೊಯೆಟಿಷನ್ ಗೆಮಾಲ್ಡೆ ಡೇರ್ ಡಿಕ್ಟರ್ ಎಂಬ ಗ್ರಂಥ ಬರೆದು ಅದರಲ್ಲಿ ಗಾಟ್‌ಷೆಡ್ಡನ ಅಭಿಪ್ರಾಯವನ್ನು ಖಂಡತುಂಡ ಮಾಡಿದ. ಬಳಿಕ ಉಭಯಪಂಥದ ಹಿಂಬಾಲಕರೂ ಪರಸ್ಪರ ಅಣಕ, ವಿಕಟಹಾಸ್ಯ, ವ್ಯಂಗ್ಯ, ವಿಡಂಬನ ಮುಂತಾದ ಎಲ್ಲ ಬಗೆಯ ಅಸ್ತ್ರಶಸ್ತ್ರ ಗಳನ್ನೂ ಪ್ರಯೋಗಿಸಿದರು. ಅಸಂಖ್ಯ ಕಿರುಹೊತ್ತಿಗೆಗಳು ಹಾಗೂ ನಿಯತಕಾಲಿಕೆಗಳೆಲ್ಲ ಈ ವಿವಾದಕ್ಕೆ ಮೀಸಲಾದುವು.

ಗಾಟ್‌ಷೆಡ್ಡನ ಅನುಯಾಯಿಗಳೆಲ್ಲ ಒಬ್ಬೊಬ್ಬರಾಗಿ ಅವನನ್ನು ಬಿಟ್ಟು ಹೋದರು. ಕ್ಯಾರೊಲಿನ್ ನ್ಯೂಬರ್‌ಗೂ ಇವನಿಗೂ ಜಗಳವುಂಟಾಗಿ ಆಕೆಯ ನಾಟಕಮಂಡಲಿ ಗಾಟ್‌ಷೆಡ್‌ನನ್ನು ರಂಗಭೂಮಿಯ ಮೇಲೆಯೇ ಅಪಹಾಸ್ಯ ಮಾಡಿತು (1741). ಸ್ವಿಸ್ ಪಂಥದವರು ಬ್ರೇಮರ್ ಬೈಟ್ರೇಗೆ ಎಂಬ ಪತ್ರಿಕೆಯನ್ನು ತಮ್ಮ ಸಿದ್ಧಾಂತಗಳ ಪ್ರತಿಪಾದನೆಗಾಗಿಯೇ ಸ್ಥಾಪಿಸಿಕೊಂಡಿದ್ದರು. ಇದನ್ನು ನಡೆಸುತ್ತಿದ್ದವರಲ್ಲಿ ಬಹುಪಾಲು ಮಂದಿ ಹಿಂದೆ ಗಾಟ್‌ಷೆಡ್ಡನ ನಿಷ್ಠೆ ಅನುಯಾಯಿಗಳಾಗಿದ್ದು ಆಮೇಲೆ ಇವನನ್ನು ತ್ಯಜಿಸಿಹೋದವರು. ಗಾಟ್‌ಷೆಡ್ ತನ್ನ ಶಿಷ್ಯನಾದ ಕ್ರಿಸ್ಟಾಫ್ ಆಟೋಫಾನ್ ಷ್ಯೋನೇಕ್ ಎಂಬಾತ ಬರೆದ ಹರ್‌ಮನ್ ಓಡರ್ ಡಾಸ್ ಬೀಫ್ರೇಟ್ ಡಾಯಿಟ್ಷ್ಯಲಂಡ್ ಎಂಬ ನೀರಸ ಕಾವ್ಯವನ್ನು ಆ ಯುಗಕ್ಕೇ ಕಿರೀಟಪ್ರಾಯವಾದ ಸಾಧನೆಯೆಂದು ಹೊಗಳಿದ. ಇದರಿಂದ ಅವನು ಇನ್ನೂ ನಗೆಗೀಡಾದ.

ಹೀಗೆ ಗಾಟ್‌ಷೆಡ್ಡನ ಜೀವಿತದ ಕಡೆಯ ಇಪ್ಪತ್ತು ವರ್ಷಗಳಲ್ಲಿ ಆತನ ಪ್ರತಿಷ್ಠೆ ಗೌರವಗಳು ಒಂದೇ ಸಮನೆ ಕುಗ್ಗುತ್ತ ಹೋದವು. ಆದರೂ ಎದೆಗೆಡದೆ ಆತ 1748 ರಲ್ಲಿ ಗ್ರೂಂಡಲ್ ಗೂಂಗ್ ಐನರ್ ಡಾಯಿಟ್ ಟ್ಶೆನ್‌ಶ್ಪ್ರಾಕ್‌ಕೂನ್ಸ್ಟ್ ಎಂಬ ಗ್ರಂಥವನ್ನು ಪ್ರಕಟಿಸಿದ. ಈತ ಮೊಟ್ಟಮೊದಲು ಬರೆದ ಕಾವ್ಯಮೀಮಾಂಸಾ ಗ್ರಂಥದಿಂದ ಪದ್ಯಕಾವ್ಯಕ್ಕಾದ ಉಪಕಾರಕ್ಕಿಂತ ಈ ಹೊಸ ಗ್ರಂಥದಿಂದ ಜರ್ಮನ್ ಗದ್ಯಕ್ಕೆ ಹೆಚ್ಚು ಉಪಕಾರವಾಯಿತು. ಇದಲ್ಲದೆ ಈತ ಜರ್ಮನ್ ಸಾಹಿತ್ಯದ ಸ್ಮರಣೀಯ ಕೃತಿಗಳನ್ನೆಲ್ಲ ವ್ಯಾಸಂಗ ಮಾಡಿ, ಸಂಕಲನ ಮಾಡಿ, ಅನುವಾದಿಸಿದ. ಎಲ್ಲಕ್ಕಿಂತ ಮೇಲಾಗಿ ನ್ಯೋಥಿಂಗರ್ ಫೊರಾತ್‌ಟ್ಸುರ್ ಗೆಸಿಕ್ಟೆ ಡೇರ್ ಡಾಯಿಟ್ಶೆನ್ ಡ್ರಾಮಾಟಿಶೆನ್ ಕೂನ್ಸ್ಟ್ ಎಂಬ ಹೆಸರಿನಲ್ಲಿ. 1757 ರಿಂದ ಮೊದಲು ಮಾಡಿ 1765 ರ (ಅವನು ತೀರಿಕೊಳ್ಳುವುದಕ್ಕೆ ಮುಂಚೆ ಒಂದು ವರ್ಷದ) ವರೆಗೂ ಜರ್ಮನ್ ನಾಟಕ ಸಾಹಿತ್ಯದ ದೊಡ್ಡ ಗ್ರಂಥ ಸೂಚಿಯೊಂದನ್ನು ರಚಿಸಿದ. ಈಗಲೂ ಇದು ಜರ್ಮನ್ ಸಾಹಿತ್ಯದ ಇತಿಹಾಸಕಾರನಿಗೆ ಒಂದು ಅಮೂಲ್ಯವಾದ ಗಣಿಯಾಗಿದೆ.

ಲೀಪ್ಜಿಗ್‌ನಲ್ಲಿ ತನಗೆ ಶಿಷ್ಯರಾಗಿದ್ದವರೇ ತನ್ನನ್ನು ಬಿಟ್ಟುಹೋಗಿ ತನಗೆ ಎದುರಾಗಿ ನಿಂತದ್ದು ಗಾಟ್‌ಷೆಡ್ಡನಿಗೆ ಕಟುವಾದ ವೇದನೆಯನ್ನುಂಟುಮಾಡಿತು. ಈ ದುಃಖದಲ್ಲಿಯೇ ಅವನು ಮೃತನಾದ.

ಬ್ರೀಮರ್ ಬೀತ್ರೇಜ್ ಪತ್ರಿಕೆಯಲ್ಲಿ ಲೇಖನ ಬರೆಯುತ್ತಿದ್ದ ಗಾಟ್‌ಷೆಡ್ಡನ ಎದುರಾಳಿ ಗಳು ಕ್ರಾಂತಿಕಾರಕ ಸುಧಾರಕರೇನೂ ಆಗಿರಲಿಲ್ಲ. ಗಾಟ್‌ಷೆಡ್ಡನ ಪ್ರಮುಖಸೂತ್ರಗಳಲ್ಲಿ ಅವರಿಗೂ ನಂಬಿಕೆ ಇತ್ತು. ವ್ಯತ್ಯಾಸವೇನೆಂದರೆ ಅವನ ಅತಿರೇಕಗಳನ್ನು ಬದಿಗೊತ್ತಿ ಅವನ ಸಿದ್ಧಾಂತಗಳಲ್ಲಿದ್ದ ಉತ್ತಮಾಂಶಗಳನ್ನು ಮಾತ್ರ ಅವರು ಅನುಷ್ಠಾನಕ್ಕೆ ತರಲು ಯತ್ನಿಸಿದರು. ಅವರ ಕವಿತೆಗಳೂ ವಿಚಾರ ಪ್ರಧಾನವಾಗಿದ್ದುವೇ ಹೊರತು ಭಾವಪ್ರಧಾನವೂ ಆಗಿರಲಿಲ್ಲ. ಆದರೂ ಕಾವ್ಯಸೃಷ್ಟಿ ಕವಿಹೃದಯದಲ್ಲಿ ಹೇಗಾಗುವುದೆಂದು ಅರಿತರೆ ಮಾತ್ರ ಕಾವ್ಯದ ಅಂತರಂಗವನ್ನು ಹೋಗಬಹುದೆಂದು ಅವರು ಗುರುತಿಸಿದುದು ಜರ್ಮನ್ ಸಾಹಿತ್ಯದ ಮುನ್ನಡೆಯಲ್ಲಿ ಒಂದು ದೊಡ್ಡ ಹೆಜ್ಜೆ, ಮುಂದಿನ ಯುಗದ ರೊಮ್ಯಾಂಟಿಕ್ ಸಾಹಿತ್ಯಕ್ಕೆ ಒಂದು ಮೊದಲ ಸೂಚನೆ. (ಕೆ.ವಿ.ಎಸ್.ಟಿ.)

**ಗಾಟ್ಸಿ ಕಾರ್ಲೋ :** 1720–1806. ಇಟಲಿಯ ನಾಟಕಕಾರ. ರಸಿಕರ ಸುಸಂಸ್ಕೃತರ ಬೀಡು ಎನಿಸಿಕೊಂಡಿದ್ದ ವೆನಿಸ್‌ನಲ್ಲಿ ಜನಿಸಿದ. ಕೆಲಕಾಲ ಡಾಲ್ಮೇಷಿಯದಲ್ಲಿ ರಾಹುತಪಡೆಯ ಸೈನಿಕನಾಗಿದ್ದ. ತನ್ನ 24 ನೆಯ ವರ್ಷದಲ್ಲಿ ವೆನಿಸ್‌ಗೆ ಹಿಂದಿರುಗಿ ಅಲ್ಲಿನ ಶಿಷ್ಟ ಸಮಾಜದಲ್ಲಿ ಹೆಸರುಗಳಿಸಿ ಶ್ರೀಮಂತ ಸಾಹಿತಿಗಳ ಸಹವಾಸ ದೊರಕಿಸಿಕೊಂಡ. ಇಟಲಿಯ ಜನಪದ ಸಾಹಿತ್ಯದ ಹಳೆಯ ಪರಂಪರೆಯನ್ನು ಉಳಿಸಬೇಕೆಂದು ವಾದಿಸಿ, ಹೊಸ ಪೀಳಿಗೆಯ ಲೇಖಕರ ವಿರುದ್ಧ ಕತ್ತಿ ಕಟ್ಟಿದ. ಆ ಕಾಲದಲ್ಲಿ ಕಾರ್ಲೋ ಗಾಲ್ಡೋನಿ **(ನೋಡಿ– ಗಾಲ್ಡೋನಿ, ಕಾರ್ಲೋ)** ಹಾಗೂ ಷಿಯಾರಿ ಎಂಬ ಇಬ್ಬರು ಹೊಸ ಹೊಸ ಸಾಮಾಜಿಕ ವಿನೋದನಾಟಕಗಳನ್ನು ಬರೆದು ಪ್ರದರ್ಶಿಸಿ ವಿಪುಲವಾದ ಜನಪ್ರಿಯತೆ ಸಂಪಾದಿಸಿದ್ದರು. ಮಡಿವಂತ ಸಾಹಿತಿಗಳೇ ಸೇರಿ ಸ್ಥಾಪಿಸಿದ ಗಾನೆಲೆಷ್ಚಿ ಅಕಾಡೆಮಿಯ ಸದಸ್ಯನಾಗಿ ಗಾಟ್‌ಸಿ ಅಂಥ ಹೊಸ ನಾಟಕಕಾರರ ಅತಿವಾಸ್ತವಿಕತೆಯನ್ನೂ ಭಾವುಕತೆಯನ್ನೂ ತನ್ನ ನಾಟಕಗಳಲ್ಲಿ ವಿಡಂಬನೆ ಮಾಡಿ ಮಿತಿ ಇಲ್ಲದ ವಾದವಿವಾದಗಳನ್ನು ಎಬ್ಬಿಸಿದ. ಇಟಲಿಯ ಜನಪದ ನಾಟಕ ಪ್ರಕಾರವಾದ ಕಮೆದಿಯ ದೆಲ್ ಆರ್ತನ ಪ್ರಾತಿನಿಧಿಕ, ಸಾಂಪ್ರದಾಯಿಕ ಪಾತ್ರಗಳನ್ನೇ ತನ್ನ ನಾಟಕಗಳಿಗೆ ಅಳವಡಿಸಿಕೊಂಡು ಜನಪದ ಕಟ್ಟುಕಥೆಗಳಿಂದ ಅಜ್ಜಿ ಕಥೆಗಳಿಂದ ಆರಿಸಿದ ಕಥಾವಸ್ತುವನ್ನು ಧಾರಾಳವಾಗಿ ಬಳಸಿಕೊಂಡ. ಈತ ಬರೆದ ಫಿಯಾಬಿ ಎಂಬ ಹತ್ತು ವಿಚಿತ್ರ ಕಾಲ್ಪನಿಕ ರೂಪಕಗಳು ಹೆಸರುವಾಸಿಯಾದವು. ಇವುಗಳಲ್ಲಿ ಮುಖ್ಯವಾದ, ಮೂರು ಕಿತ್ತಳೇ ಹಣ್ಣಿನ ಕಥೆ–ಎನ್ನುವ ವಿಚಿತ್ರ ಪ್ರಹಸನದಲ್ಲಿ ಗಾಲ್ಡೋನಿ ಮತ್ತು ಷಿಯಾರಿಗಳಿಬ್ಬರನ್ನೂ ವಿಚಿತ್ರ ಹಾಸ್ಯಪಾತ್ರಗಳಾಗಿ ಮಾರ್ಪಡಿಸಿ ಗೇಲಿಮಾಡಿದ. ಜಿಂಕೆಯಾಗಿ ಮಾರ್ಪಟ್ಟ ದೊರೆ, ಪುಟಾಣಿ ಸುಂದರ ಹಸುರು ಹಕ್ಕಿ, ಟುರಾಂಡಾಟ್ – ಇವು ಈತನ ಇತರ ಸ್ವಾರಸ್ಯಕರ ಕೃತಿಗಳು.

ಇಟಲಿಯ ಪ್ರೇಕ್ಷಕರನ್ನು, ರಸಿಕರನ್ನು ಪ್ರಬಲವಾಗಿ ಸೆಳೆದು ವೆನಿಸ್ ರಂಗ ಭೂಮಿಯ ಮೇಲೆ ಕೋಲಾಹಲವನ್ನುಂಟುಮಾಡಿದ ಗಾಟ್‌ಸಿಯ ವಿಚಿತ್ರ ವೈನೋದಿಕಗಳು ಬಲುಬೇಗ ತಮ್ಮ ಆಕರ್ಷಣೆಯನ್ನು ಕಳೆದುಕೊಂಡು ಸ್ವಲ್ಪಕಾಲ ಮೂಲೆಗುಂಪಾದವು.

ಆದರೆ 1777ರಲ್ಲಿ ಇವು ಜರ್ಮನ್ ಭಾಷೆಗೆ ಅನುವಾದವಾಗಿ ಜರ್ಮನಿಯಲ್ಲಿ ವಿಶೇಷ ಮನ್ನಣೆ ಪಡೆದವು. ಗಯಟೆ, ಷಿಲ್ಲರ್, ಲೆಸ್ಸಿಂಗ್, ಷ್ಲೆಗೆಲ್ ಮುಂತಾದ ಜರ್ಮನ್ ರೊಮ್ಯಾಂಟಿಕ್ ಸಾಹಿತಿಗಳಿಗೆ ಗಾಟ್‌ಸಿಯ ನಾಟಕಗಳು ಹಿಡಿಸಿದವು. ಇವನ ಒಂದೆರಡು ಕಥಾನಕಗಳು ಪ್ಯೂಚ್ಚಿನೀ, ಪ್ರೋಕೋಫೀವ್ ಮುಂತಾದವರ ಆಪೆರಗಳಲ್ಲಿ ಮತ್ತೆ ಮತ್ತೆ ಹೊಸ ರೂಪ ತಾಳಿವೆ. 1780ರಲ್ಲಿ ಗಾಟ್‌ಸಿ ಬರೆದ ಆತ್ಮಕಥೆಯಲ್ಲಿ ಬೇಕಾದಷ್ಟು ಆತ್ಮಪ್ರತಿಷ್ಠೆ, ಆಡಂಬರ ತುಂಬಿವೆ. ಆದರೆ ಅವನ ಚಿಕ್ಕಂದಿನ ನೆನಪುಗಳು, ಇಟಲಿಯ ಜನಪದ ಸಾಹಿತ್ಯವನ್ನು ಕುರಿತ ಮಾತುಗಳು, ಎಲ್ಲಕ್ಕಿಂತ ಹೆಚ್ಚಾಗಿ ಅವನು ಗಾಲ್ಡೋನಿ, ಷಿಯಾರಿಗಳ ಜೊತೆ ನಡೆಸಿದ ಜಗಳಗಳ ಲಘುಹಾಸ್ಯದ ವರ್ಣನೆಗಳು–ಇವುಗಳಿಂದಾಗಿ ಅದು ಸ್ವಾರಸ್ಯವಾದ ಗ್ರಂಥವಾಗಿದೆ. (ಎಚ್.ಕೆ.ಆರ್.)

**ಗಾಟ್‌ಹೆಲ್ಫ್, ಯೆರೆಮೀಯಾಸ್** : 1797–1854. ಸ್ವಿಟ್ಜರ್‌ಲೆಂಡ್‌ನ ಪ್ರಾಟೆಸ್ಟಂಟ್ ಪಾದ್ರಿ, ಕಾದಂಬರಿಕಾರ. ಇವನ ನಿಜನಾಮ ಆಲ್ಬರ್ಟ್ ಬಿಟ್‌ಜಿಯಸ್. ತಂದೆ ಪಾದ್ರಿಯಾಗಿದ್ದ. ಗಾಟ್‌ಹೆಲ್ಫ್ ತನ್ನ ಶಾಲಾ ದಿನಗಳಲ್ಲಿ ಹಾಗೂ ಜರ್ಮನಿಯ ಬರ್ನ್ ಮತ್ತು ಗಾಟಿಂಗೆನ್‌ಗಳಲ್ಲಿ ವೇದಾಂತದ ವಿದ್ಯಾರ್ಥಿಯಾಗಿದ್ದಾಗ ಪ್ರಗತಿಪರ ಧೋರಣೆಗಳನ್ನು ಎತ್ತಿಹಿಡಿದ. ಬರ್ನ್‌ನಲ್ಲಿ ಶ್ರೀಮಂತ ಪ್ರಭುತ್ವವನ್ನು ಮಟ್ಟಹಾಕಿದ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ. 1832ರಲ್ಲಿ ಪಾದ್ರಿಯಾದ ಮೇಲೆ ತನ್ನ ದೇಶದ ಜನರಲ್ಲಿ ತಿಳಿವಳಿಕೆಯನ್ನುಂಟುಮಾಡಲು ತುಂಬ ಶ್ರಮವಹಿಸಿದ; ಸಾರ್ವತ್ರಿಕ ವಿದ್ಯಾಭ್ಯಾಸವನ್ನು ತರಲು ಪ್ರಯತ್ನಿಸಿದ. ಜೀವನದಲ್ಲಿ ಉಪೇಕ್ಷಿಸಲ್ಪಟ್ಟವರಿಗಾಗಿ ಒಂದು ಸಂಸ್ಥೆಯನ್ನು ಕೂಡ ಸ್ಥಾಪಿಸಿದ.

ಸ್ವಿಟ್ಜರ್‌ಲೆಂಡಿನಲ್ಲಿ ಸ್ವತಂತ್ರ್ಯ ವಿಚಾರಗಳ ತತ್ತ್ವದಲ್ಲಿ ತೀವ್ರ ಸುಧಾರಣಾ ಪ್ರವೃತ್ತಿಗಳು ಕಾಣಿಸಿಕೊಂಡಾಗ ಈತ ಹೆಚ್ಚು ಹೆಚ್ಚಾಗಿ ಸಂಪ್ರದಾಯಗಳನ್ನು ಎತ್ತಿ ಹಿಡಿದ. ದಿಗಿಲು ಹುಟ್ಟಿಸುವ ಲೌಕಿಕವಾದದಿಂದ ಕ್ರೈಸ್ತಧರ್ಮದ ನಂಬಿಕೆಗಳನ್ನು ಜೀವಂತವಾಗಿಡುವ ಆಸೆ ಇವನನ್ನು ಬರೆಯಲು ಪ್ರೇರೇಪಿಸಿತು. ಹಳ್ಳಿಗರ ಜನ ಜೀವನವನ್ನು ಚಿತ್ರಿಸುವ ಇವನ ಕಾದಂಬರಿ ಡೆರ್ ಬ್ಯಾನರ್ನ್‌ಸ್ಪಿಗೆಲ್ 1837ರಲ್ಲಿ ಪ್ರಕಟವಾಯಿತು. 1838ರಲ್ಲಿ ಇನ್ನೊಂದು ಕಾದಂಬರಿ ದಿ ಜಾಯ್ಸ್ ಅಂಡ್ ಸಫರಿಂಗ್ಸ್ ಆಫ್ ಎ ಸ್ಕೂಲ್ ಮಾಸ್ಟರ್ ಎರಡು ಸಂಪುಟಗಳಲ್ಲಿ ಹೊರಬಿತ್ತು. ಉಲ್‌ರಿಕ್ ದಿ ಫಾರಮ್‌ಹ್ಯಾಂಡ್ (1840), ಉಲ್‌ರಿಕ್ ದಿ ಟೆನೆಂಟ್ (1849) ಎಂಬೆರಡು ಕಾದಂಬರಿಗಳಲ್ಲಿ ಈತ ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಐಹಿಕ ಸುಖ ಪ್ರವೃತ್ತಿಗಳನ್ನು ವಿರೋಧಿಸಿದ್ದಾನೆ. ಈತನ ಗುರಿ ನೀತಿ ಬೋಧೆಯಾದರೂ ತನ್ನ ಎಲ್ಲ ಬರಹಗಳಲ್ಲಿ ಈತ ಅಸಾಧಾರಣ ಸಾಹಿತ್ಯಕ ಸಾಮರ್ಥ್ಯವನ್ನು ಮೆರೆದಿದ್ದಾನೆ. ಇವನ ಹದಿಮೂರು ಕಾದಂಬರಿಗಳು, ಐವತ್ತಕ್ಕೂ ಹೆಚ್ಚು ಸಣ್ಣ ಕಥೆಗಳು ಈತನ ಅಸಾಧಾರಣ ಪ್ರತಿಭೆಯನ್ನು ಪ್ರಕಾಶಪಡಿಸುವುದಲ್ಲದೆ ಜನರಲ್ಲಿ ಇವನಿಗೆ ಎಂಥ ತೀವ್ರ ಆಸಕ್ತಿ ಇತ್ತೆಂಬುದನ್ನು ಸಾಬೀತುಗೊಳಿಸುತ್ತವೆ. ಮಾನಸಿಕ ಪರಿವೀಕ್ಷಣೆ, ವಿಭಾವನಾಶಕ್ತಿ ಮತ್ತು ಭಾಷೆಯನ್ನು ಸೃಷ್ಟ್ಯಾತ್ಮಕವಾಗಿ ಬಳಸುವ ಚೈತನ್ಯ–ಇವು ಅತ್ಯಂತ ಜೀವಂತ ಪಾತ್ರಗಳನ್ನು ಸೃಷ್ಟಿಸುವುದರಲ್ಲಿ ಇವನಿಗೆ ಬಹಳ ಸಹಾಯಕವಾದುವು. ಬರ್ನೀಸ್ ಗ್ರಾಮಾಂತರ ಪ್ರದೇಶದ ಜನಜೀವನವೇ ಈತನ ಕಥನ ಸಾಮಗ್ರಿ. ಮಾನವತೆಯ ರಚನಾತ್ಮಕ ಬಲಗಳನ್ನು ಕುಟುಂಬ ಮತ್ತು ಸಾಮಾಜಿಕ ಜೀವನದಲ್ಲಿ ಕೇಂದ್ರೀಕೃತವಾಗಿರುವ ಧರ್ಮವಲ್ಲದ ಕ್ರೈಸ್ತಧರ್ಮದಲ್ಲಿ ಕಾಣಬಹುದೆಂದು ಈತ ನಂಬಿದ್ದ.

ಜರ್ಮನ್ ಸಾಹಿತ್ಯದಲ್ಲಿನ ಸಹಜತಾ ಪಂಥಕ್ಕೆ (ನ್ಯಾಚುರಲಿಸಂ) ಈತ ಮೊದಲಿಗ ನೆಂದು ಹೆಸರಾಗಿದ್ದಾನೆ. (ಕೆ.ಎಸ್.ಬಿ.)

**ಗಾಡಗೀಳ, ಗಂಗಾಧರ ಗೋಪಾಳ** : 1923–2008. ಮಹಾರಾಷ್ಟ್ರದ ಹೆಸರಾಂತ ಸಣ್ಣಕಥೆಗಾರರು; ಅಲ್ಲಿಯ ನವ್ಯಕಥೆಯ ಆದ್ಯಪ್ರವರ್ತಕರು. ಇವರು 1923ರ ಆಗಸ್ಟ್ 25ರಂದು ಮುಂಬಯಿಯಲ್ಲಿ ಜನಿಸಿದರು. ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಚರಿತ್ರೆ ಮತ್ತು ಅರ್ಥಶಾಸ್ತ್ರಗಳನ್ನು ಮುಖ್ಯ ವಿಷಯಗಳನ್ನಾಗಿ ಆರಿಸಿಕೊಂಡು ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಪದವಿಯನ್ನು ಪಡೆದು ಅದೇ ವಿಷಯಗಳ ಪ್ರಾಧ್ಯಾಪಕರಾಗಿ ಕೆಲಸ ಮಾಡತೊಡಗಿದರು. ಬರೆವಣಿಗೆಯ ಕಡೆಗೆ ಮೊದಲಿನಿಂದಲೂ ಇವರಿಗೆ ಒಲವು. ಪ್ರಿಯಾ ಆಣಿ ಮಾಂಜರ (ಪ್ರಿಯೆ ಮತ್ತು ಬೆಕ್ಕು) ಎಂಬ ಮೊದಲ ಕಥೆ ವಾಙ್ಮಯಶೋಭಾ ಪತ್ರಿಕೆಯಲ್ಲಿ ಪ್ರಕಟವಾಯಿತು. ಮಾನಸಚಿತ್ರೆ ಎನ್ನುವ ಮೊದಲ ಕಥಾಸಂಗ್ರಹ ಹೊರಬಂದದ್ದು 1946ರಲ್ಲಿ. ಅನಂತರ ಇವರು ಸಣ್ಣ ಕಥೆಗಳನ್ನು ಮಾತ್ರವಲ್ಲದೆ ಏಕಾಂತ ನಾಟಕ, ಪ್ರವಾಸ ವರ್ಣನೆ, ನಾಟಕ, ಕಾದಂಬರಿ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಪುಲವಾಗಿ ಬರೆದಿದ್ದಾರೆ. ಮಾನಸಚಿತ್ರೆ (1946). ನವ್ಯಾವಾಟಾ (ಹೊಸ ದಾರಿಗಳು, 1950), ಕಬೂತರೆ (ಪಾರಿವಾಳಗಳು, 1952) ಮತ್ತು ತಲಾವಾತೀಲ ಚಾಂದಣಿ (ಕೆರೆಯಲ್ಲಿಯ ಬೆಳದಿಂಗಳು, 1954)–ಇವು ಇವರ ಕಥಾಸಂಗ್ರಹಗಳು. ಪಾಂಚನಾಟಿಕಾ (1953) ಒಂದು ನಾಟಕ ಸಂಗ್ರಹ, ಲಿಲೀಚೆ ಫೂಲ್ (ಲಿಲಿ ಹೂವು, 1955) ಒಂದು ಕಾದಂಬರಿ, ಗೋಪುರಾಂಚ್ಯಾ ದೇಶಾಂತ (ಗೋಪುರಗಳ ದೇಶದಲ್ಲಿ) ಒಂದು ಪ್ರವಾಸ ವರ್ಣನೆ, ಖಡಕ ಆಣಿ ಪಾಣೀ ಒಂದು ವಿಮರ್ಶನ ಗ್ರಂಥ, ಇವಲ್ಲದೆ ಮಕ್ಕಳಿಗಾಗಿ ಕಥೆಗಳು ಎಂದು ಮುಂತಾಗಿ ಇವರ ಬರೆವಣಿಗೆ ಬಹುಮುಖವಾಗಿ ಮುಂದುವರಿದಿದೆ. 1964ರಲ್ಲಿ ನ್ಯೂಯಾರ್ಕಿನ ಹೆರಾಲ್ಡ್



ಟ್ರಿಬ್ಯೂನ್ ಪತ್ರಿಕೆಯ ಪಾರಿತೋಷಕ ಇವರಿಗೆ ದೊರಕಿತಲ್ಲದೆ ಮೂರು ವರ್ಷಗಳ ಅನಂತರ ರಾಕ್‌ಫೆಲರ್ ಫೌಂಡೇಷನ್ನಿನಿಂದ ಒಂದು ವರ್ಷದ ವ್ಯಾಸಂಗ ವೇತನವೂ ಸಿಕ್ಕಿತು. ಗಾಡಗೀಳರು ಇಂಗ್ಲಿಷಿನಲ್ಲಿಯೂ ಚೆನ್ನಾಗಿ ಬರೆಯಬಲ್ಲರು. ಇವರ ಅನೇಕ ಕಥೆಗಳು ಹಿಂದೀ, ಗುಜರಾತಿಗಳಲ್ಲಿ ಮಾತ್ರವಲ್ಲದೆ ಇಂಗ್ಲಿಷ್ ಮತ್ತು ಇಟಾಲಿಯನ್ ಭಾಷೆಗಳಲ್ಲಿಯೂ ಅನುವಾದಿತವಾಗಿ ಪ್ರಕಟವಾಗಿವೆ. ನಲವತ್ತರಿಂದ ಅರವತ್ತರವರೆಗಿನ 20ನೆಯ ಶತಮಾನದ ಎರಡು ದಶಕಗಳಲ್ಲಿ ಸಮೃದ್ಧವಾಗಿ ಬೆಳೆದ ಮರಾಠಿ ಸಣ್ಣ ಕಥೆಗಳ ಪ್ರಪಂಚದಲ್ಲಿ ಗಂಗಾಧರ ಗಾಡಗೀಳರಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಕಥೆಯನ್ನು ಹೊರಜಗತ್ತಿನ ಘಟನೆಗಳಿಗೆ ಸೀಮಿತವಾಗಿಸದೆ ಅಂತರಂಗ ಪ್ರಪಂಚದ ಅನಂತ ವಿಸ್ತಾರವನ್ನು ಅದಕ್ಕೆ ಒದಗಿಸಿದವರು ಇವರು. ಮಾತ್ರವಲ್ಲದೆ ಮಾನವಸ್ವಭಾವವನ್ನು ಅನೇಕ ನಿಲುವುಗಳಿಂದ ಅನೇಕ ಪಾತಳಿಗಳಲ್ಲಿ ಕಂಡು ವಿಶ್ಲೇಷಿಸಿ ವಿವರಿಸುವ ಇವರ ವಿಧಾನ ಸಣ್ಣ ಕಥೆಗಳ ಪರಿಣಾಮ ಸಾಧನೆಯಲ್ಲಿ ಒಂದು ಹೊಸ ಆಯಾಮವನ್ನೇ ಸಾಧಿಸಿತು. ಸಾಹಿತ್ಯ ನಿರ್ಮಿತಿಯ ಜೊತೆಯಲ್ಲಿ ತಮ್ಮ ಅಧ್ಯಾಪನದ ವಿಷಯವಾದ ಅರ್ಥಶಾಸ್ತ್ರವನ್ನು ಕುರಿತು ಇಂಗ್ಲಿಷಿನಲ್ಲಿ ಮೂರು ಮತ್ತು ಮರಾಠಿಯಲ್ಲಿ ಎರಡು ಗ್ರಂಥಗಳನ್ನು ಇವರು ಬರೆದಿದ್ದಾರೆ. ಮಹಾರಾಷ್ಟ್ರದ ಪ್ರತಿಭಾನ್ವಿತ ಬರೆಹಗಾರರಾಗಿದ್ದ ಇವರ ಕೊಡುಗೆಯನ್ನು ಇವರು ಬರೆದ ಕೃತಿಗಳಲ್ಲಿ ಹೇಗೋ ಹಾಗೆ ಸಣ್ಣ ಕಥೆಗೆ ಇವರು ಕೊಟ್ಟ ತಿರುವಿನಲ್ಲಿಯೂ ಗುರುತಿಸಬಹುದಾಗಿದೆ. ಇವರು 2008 ಸೆಪ್ಟೆಂಬರ್ 15ರಂದು ನಿಧನವಾದರು. (ವಿ.ಎಂ.ಐ.)

**ಗಾಡಗೀಳ, ಧನಂಜಯ ರಾಮಚಂದ್ರ** : 1901–71. ಭಾರತದ ಒಬ್ಬ ವಿಚಾರಶೀಲ ಲೇಖಕ, ಅರ್ಥಶಾಸ್ತ್ರಜ್ಞ, ಜನನ 1901ರ ಏಪ್ರಿಲ್ 10 ರಂದು, ಮಹಾರಾಷ್ಟ್ರದ ನಾಸಿಕದಲ್ಲಿ. ನಾಗಪುರದ ಪಟವರ್ಧನ್ ಪ್ರೌಢಶಾಲೆಯಲ್ಲೂ ಕೇಂಬ್ರಿಜಿನ ಕ್ವೀನ್ಸ್ ಕಾಲೇಜಿನಲ್ಲೂ ವ್ಯಾಸಂಗಮಾಡಿ ಎಂ.ಎ., ಎಂ.ಲಿಟ್. ಪದವಿಗಳಿಸಿದರು.



ಅರ್ಥಶಾಸ್ತ್ರ ಇವರ ವಿಶೇಷ ವ್ಯಾಸಂಗ ವಿಷಯ. ಇವರ ವಿದ್ವತ್ತನ್ನು ಗುರುತಿಸಿ ನಾಗಪುರ, ಕರ್ನಾಟಕ ಹಾಗೂ ಆಗ್ರ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿದುವು.

ಗಾಡಗೀಳರು ವಿದೇಶದಿಂದ ಹಿಂದಿರುಗಿದ ಅನಂತರ ಮುಂಬಯಿ ಸರ್ಕಾರದ ಹಣಕಾಸು ಶಾಖೆಯಲ್ಲಿ ಸುಮಾರು ಎರಡು ವರ್ಷ ಕೆಲಸಮಾಡಿದರು. ಅನಂತರ ಸೂರತ್‌ನ ಕಾಲೇಜೊಂದರಲ್ಲಿ 1925ರಿಂದ 1930ರ ವರೆಗೆ ಪ್ರಿನ್ಸಿಪಾಲರಾಗಿದ್ದರು. 1930 ರಿಂದ 1966ರ ವರೆಗೆ ಪುಣೆಯ ಗೋಖಲೆ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು. 1966–67ರಲ್ಲಿ ಅವರು ಪುಣೆ ವಿಶ್ವವಿದ್ಯಾಲಯದ ಕುಲಪತಿ ಗಳಾಗಿದ್ದರು. ಇವರ ತಜ್ಞತೆಯನ್ನು ಗುರುತಿಸಿ ಭಾರತ ಸರ್ಕಾರ ಇವರನ್ನು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ 1967ರಲ್ಲಿ ನೇಮಿಸಿತು. ಗಾಡಗೀಳರು ಆ ಅವಧಿಯಲ್ಲಿ ಭಾರತದ ವಾರ್ಷಿಕ ಯೋಜನೆಗಳನ್ನು ಮತ್ತು ನಾಲ್ಕ ನೆಯ

ಪಂಚವಾರ್ಷಿಕ ಯೋಜನೆ ಯನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದರು. 1971ರ ಮೇ ತಿಂಗಳಲ್ಲಿ ಯೋಜನಾ ಆಯೋಗವನ್ನು ಬಿಟ್ಟು ದೆಹಲಿಯಿಂದ ಹಿಂದಿರುಗುತ್ತಿದ್ದಾಗ ಹಾದಿಯಲ್ಲೇ ತೀರಿಕೊಂಡರು.

ಗಾಡಗೀಳರ ಪ್ರಾರಂಭದ ಬರೆಹ ಮರಾಠಿಯಲ್ಲಿತ್ತು. ಸಾಮಾನ್ಯ ಜನಕ್ಕೆ ಅರ್ಥವಾಗುವ ಭಾಷೆಯಲ್ಲಿ ಬರೆದ ಅರ್ಥಶಾಸ್ತ್ರಜ್ಞರ ಪೈಕಿ ಗಾಡಗೀಳರೂ ಒಬ್ಬರು. ಅವರು ಭಾರತಕ್ಕೆ ಹಿಂದಿರುಗಿದ ಕೂಡಲೆ ಭಾರತದ ಆರ್ಥಿಕ ಸಮಸ್ಯೆಗಳ ಬಗ್ಗೆ ಬರೆಯಲು ಪ್ರಾರಂಭಿಸಿ ತಮ್ಮ ಕೊನೆಗಾಲದ ವರೆಗೂ ಆ ಕೆಲಸ ಮುಂದುವರಿಸಿದರು. ಈ ಕಾರಣದಿಂದ ಇವರು ಭಾರತೀಯ ಅರ್ಥಶಾಸ್ತ್ರವನ್ನು ಬೆಳೆಸಿದವರಲ್ಲಿ ಒಬ್ಬರೆಂದು ಪರಿಗಣಿತರಾಗಿದ್ದಾರೆ. 1924ರಲ್ಲಿ ಇವರು ಬರೆದ ದಿ ಇಂಡಸ್ಟ್ರಿಯಲ್ ಎವಲ್ಯೂಷನ್ ಆಫ್ ಇಂಡಿಯ ಎಂಬುದು ಭಾರತದ ಆರ್ಥಿಕ ಇತಿಹಾಸಜ್ಞರಿಗೆ ಉಪಯುಕ್ತವಾದ ಗ್ರಂಥ, ಇವರ ಇಪ್ಪತ್ತು ಗ್ರಂಥಗಳ ಪೈಕಿ, ರೆಗ್ಯುಲೇಷನ್ ಆಫ್ ವೇಜಸ್ ಅಂಡ್ ಅದರ್ ಪ್ರಾಬ್ಲೆಮ್ಸ್ ಆಫ್ ಇಂಡಿಯ, ದಿ ಇಕೊನಾಮಿಕ್ ಎಫೆಕ್ಟ್ ಆಫ್ ಇರಿಗೇಷನ್, ದಿ ಇಕೊನಾಮಿಕ್ ಪಾಲಿಸಿ ಅಂಡ್ ಡೆವಲಪ್‌ಮೆಂಟ್– ಇವು ಮುಖ್ಯವಾದವು. ಭಾರತದ ಆರ್ಥಿಕ ಸಮಸ್ಯೆಗಳ ಬಗ್ಗೆ ಅವರಿಗಿದ್ದ ವಿದ್ವತ್ತಿನ ಪರಿಣಾಮವಾಗಿ ಅವರು ಭಾರತೀಯ ಅರ್ಥಶಾಸ್ತ್ರಜ್ಞರ ಸಮ್ಮೇಳನದ ಅಧ್ಯಕ್ಷರಾಗಿ 1940ರಲ್ಲೂ ಭಾರತೀಯ ಕೃಷಿ ಅರ್ಥಶಾಸ್ತ್ರಜ್ಞರ ಸಮ್ಮೇಳನದ ಅಧ್ಯಕ್ಷರಾಗಿ 1954ರಲ್ಲೂ ಆಯ್ಕೆಗೊಂಡರು.

ಗಾಡಗೀಳರು ಭಾರತದ ಆರ್ಥಿಕ ಸಮಸ್ಯೆಗಳ ಅಧ್ಯಯನದ ಜೊತೆಗೆ ರಾಜಕೀಯ ಸಮಸ್ಯೆಗಳತ್ತಲೂ ಗಮನಕೊಟ್ಟಿದ್ದರು. ಗೋಖಲೆ ಅಧ್ಯಯನ ಸಂಸ್ಥೆಯ ಧ್ಯೇಯ ಭಾರತದ ಇತ್ತೀಚಿನ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳ ಅಧ್ಯಯನವಾಗಿದ್ದುದು ಇವರ ಈ ಆಸಕ್ತಿಗೆ ಕಾರಣ. ಈ ಸಂಸ್ಥೆಯ ನಿರ್ದೇಶಕರಾಗಿ ಇವರು ಸ್ವಾಭಾವಿಕ ವಾಗಿಯೇ ರಾಜಕೀಯ ಸಮಸ್ಯೆಗಳ ಅಧ್ಯಯನವನ್ನೂ ಕೈಗೊಳ್ಳಬೇಕಾಯಿತು. 1942ರಲ್ಲಿ ಭಾರತಕ್ಕೆ ಬಂದಿದ್ದ ಕ್ರಿಪ್ಸ್ ಆಯೋಗದ ಅನಂತರ ಇವರು ಫೆಡರೇಟಿಂಗ್ ಇಂಡಿಯ ಎಂಬ ಗ್ರಂಥ ರಚಿಸಿದರು. ಅನಂತರ ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಸಂವಿಧಾನರಚನಾ ಮಂಡಳಿಯ ಸದಸ್ಯರಾಗಿದ್ದರು. ಭಾರತದ ಸಂವಿಧಾವನ್ನು ಕುರಿತು ಅನೇಕ ಲೇಖನಗಳನ್ನು ಬರೆದರು.

ರಾಜಕೀಯ ಸಮಸ್ಯೆಗಳ ಬಗ್ಗೆ ಇವರು ಬರೆದದ್ದು ಸಾಮಯಿಕವಾದ್ದು. ಆದರೆ ಇವರ ಮುಖ್ಯ ಕೊಡುಗೆಯೆಲ್ಲ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ. ಗೋಖಲೆ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಇವರು ಅನೇಕ ಆರ್ಥಿಕ ಸಮಸ್ಯೆಗಳನ್ನು ವಿಶ್ಲೇಷಿಸಿ ಸೂಕ್ತ ಸಲಹೆಗಳನ್ನೂ ನೀಡುವುದರಲ್ಲಿ ಮಗ್ನರಾಗಿದ್ದರು. ಹೀಗೆ ಇವರ ನಿರ್ದೇಶನದ ಮೊದಲ ದಶಕದಲ್ಲಿಯೇ ಇವರು ಹಣ್ಣುಹಂಪಲು ಮಾರುಕಟ್ಟೆ, ಮೋಟಾರು ಬಸ್ಸು ಸಾರಿಗೆ, ಕೃಷಿ ಉದ್ಯಮ ಇವುಗಳ ಅವಲೋಕನಗಳನ್ನೂ ಪುಣೆ ಹಾಗೂ ಷೋಲಾಪುರ ನಗರಗಳ ಅವಲೋಕನಗಳನ್ನೂ ಮುಗಿಸಿದ್ದರು.

ಗಾಡಗೀಳರು ಅನೇಕ ವಿಚಾರಣಾ ಸಮಿತಿಗಳ ಸದಸ್ಯರಾಗಿ ಕೆಲಸ ಮಾಡಿದರು. ಆದರೆ ಎಲ್ಲರಂತೆ ಇವರು ಸಮಿತಿಯ ಕೆಲಸ ಮುಗಿದ ಅನಂತರ ಆ ವಿಷಯವನ್ನು ಕೈಬಿಟ್ಟಂಥವರಲ್ಲ. ಸಮಿತಿ ಪರಿಶೀಲಿಸಿದ ವಿಷಯದ ವರದಿ ಒಪ್ಪಿಸಿದ ಅನಂತರವು ಆ ಬಗ್ಗೆ ಮಥನ ಮುಂದುವರಿಸಿ ಇವರು ತಮ್ಮ ಅಭಿಪ್ರಾಯಗಳನ್ನು ಪುಸ್ತಕ ಇಲ್ಲವೆ ಲೇಖನಗಳ ರೂಪದಲ್ಲಿ ಪ್ರಕಟಿಸುತ್ತಿದ್ದರು. ಉದಾಹರಣೆಗೆ, ಮುಂಬಯಿ ಕಾರ್ಮಿಕರ ವಿಚಾರಣಾ ಸಮಿತಿಯ (1937–40) ಸದಸ್ಯರಾಗಿ ಕೆಲಸ ಮಾಡಿದ ಅನಂತರ ಕಾರ್ಮಿಕ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ರೆಗ್ಯುಲೇಷನ್ ಆಫ್ ವೇಜಸ್ ಅಂಡ್ ಅದರ್ ಪ್ರಾಬ್ಲೆಮ್ಸ್ ಆಫ್ ಇಂಡಸ್ಟ್ರಿಯಲ್ ಲೇಬರ್ ಇನ್ ಇಂಡಿಯ ಎಂಬ ಪುಸ್ತಕದಲ್ಲಿ ವ್ಯಕ್ತಪಡಿಸಿದರು. ಸಾರಿಗೆ ಸೇವೆಗಳ ರಾಷ್ಟ್ರೀಯ ಯೋಜನಾಮಂಡಳಿಯ ಉಪಸಮಿತಿಯ (1939–40) ಅಧ್ಯಕ್ಷರಾಗಿ ಕೆಲಸ ಮಾಡಿದ ಅನಂತರ ರಸ್ತೆ ಸಾರಿಗೆ ರಾಷ್ಟ್ರೀಕರಣ, ಸಾರಿಗೆ ಸಂಘಟನೆ ಮುಂತಾದ ವಿಷಯಗಳನ್ನು ಕುರಿತು ಬರೆದರು. ಹಾಗೆಯೇ ಮಹಾರಾಷ್ಟ್ರ ರಾಜ್ಯದ ಆಹಾರ ಮತ್ತು ಕೃಷಿ ವಸ್ತುಗಳ ಸಲಹಾಮಂಡಳಿ ಮತ್ತು ಭಾರತ ಸರ್ಕಾರದ ಆಹಾರ ಧಾನ್ಯಗಳ ಧೋರಣಾ ಸಮಿತಿ ಇವುಗಳ ಸದಸ್ಯರಾಗಿದ್ದು ಆಹಾರ ಬೆಲೆಗಳ ಧೋರಣೆ, ಆಹಾರ ಧಾನ್ಯಗಳ ವಸೂಲಿ ಮೊದಲಾದ ವಿಷಯಗಳನ್ನು ಕುರಿತು ಬರೆದರು.

ಆದರೆ ಇವರು ಉದ್ದಕ್ಕೂ ಆಸ್ಥೆ ತೋರಿಸಿದಂಥ ವಿಷಯಗಳೆಂದರೆ ಗ್ರಾಮಾಂತರ ಸಮಸ್ಯೆಗಳು ಮತ್ತು ಆರ್ಥಿಕ ಯೋಜನೆಗಳು. ಮಹಾರಾಷ್ಟ್ರ ಸರ್ಕಾರ ಒಕ್ಕಲುತನ ಹಾಗೂ ರೈತರ ಸಾಲದ ಬಗ್ಗೆ ಕಾಯಿದೆ ಹೊರಡಿಸುವ ಸಂದರ್ಭದಲ್ಲಿ ಗಾಡಗೀಳರು ಇವೆರಡರ ಬಗ್ಗೆಯೂ ಅನೇಕ ಲೇಖನಗಳನ್ನು ಬರೆದರು. ಒಕ್ಕಲುತನ ಹಾಗೂ ಭೂಸುಧಾರಣೆ ಬಗ್ಗೆ ತಮಗೆ ಇದ್ದ ಅಭಿಪ್ರಾಯಗಳನ್ನು ಅವರು ಭಾರತೀಯ ಕೃಷಿ ಅರ್ಥಶಾಸ್ತ್ರಜ್ಞರ ಸಮ್ಮೇಳನದಲ್ಲಿ (1954) ತಮ್ಮ ಅಧ್ಯಕ್ಷಭಾಷಣದಲ್ಲಿ ವ್ಯಕ್ತ ಪಡಿಸಿದರು. ಗ್ರಾಮಾಂತರ ಸಹಕಾರದ ಬಗ್ಗೆ ಇವರ ಕೊಡುಗೆ ಅಮೂಲ್ಯವಾದ್ದು. ಸಹಕಾರ ಸಂಸ್ಥೆಗಳೊಡನೆ ಇವರಿಗಿದ್ದ ಸಂಪರ್ಕವೇ ಇದಕ್ಕೂ ಕಾರಣವಾಯಿತು. ಇವರು ಮೊದಲು ಪುಣೆ ಜಿಲ್ಲೆಯ ಕೇಂದ್ರೀಯ ಸಹಕಾರ ಬ್ಯಾಂಕಿನ ಸದಸ್ಯರಾಗಿ, ಅನಂತರ ಅದರ ಅಧ್ಯಕರಾಗಿ ದುಡಿದರು. ಪುಣೆ ಜಿಲ್ಲೆಯ ಕೇಂದ್ರೀಯ ಮಾರಾಟ ಹಾಗೂ ಕೊಳ್ಳುವ ಸಂಘದ ಅಧ್ಯಕ್ಷರಾಗಿದ್ದಾಗ (1945–50) ಸಹಕಾರ ಸಂಘಗಳ ಮೂಲಕ ಆವಶ್ಯಕ ವಸ್ತುಗಳನ್ನು ಬಳಕೆದಾರರಿಗೆ ಒದಗಿಸಿ ಬೆಲೆ ನಿಯಂತ್ರಣವನ್ನು ಕೈಗೊಳ್ಳಬಹುದೆಂಬುದಾಗಿ ಅವರು ಪ್ರತಿಪಾದಿಸಿದರು. ಭಾರತ ಸರ್ಕಾರದ ಕೃಷಿ ಧೋರಣಾ ಮಂಡಳಿ ಕೃಷಿ ಹಣಕಾಸು ಉಪಸಮಿತಿಯ ಅಧ್ಯಕ್ಷರಾಗಿ ಗ್ರಾಮಾಂತರ ಸಹಕಾರಿ ಹಣಕಾಸಿನ ಯೋಜನೆಯನ್ನು ರೂಪಿಸಿದ್ದರು. ಇವರು ಗ್ರಾಮಾಂತರ ಉದ್ದರಿ ಅವಲೋಕನ ಸಮಿತಿಯ (1951–54) ಸದಸ್ಯರಾಗಿದ್ದಾಗ ರೈತರಿಗೆ ಸಹಕಾರಿ ಬ್ಯಾಂಕುಗಳ ಮೂಲಕ ಹಣಕಾಸನ್ನು ಒದಗಿಸುವ ಸಮರ್ಪಕವಾದ ಕ್ರಮವನ್ನು ರೂಪಿಸುವುದರಲ್ಲಿ ಇವರ ಈ ಅನುಭವ ಸಹಾಯಕವಾಯಿತು. ಮೊಟ್ಟಮೊದಲ ಬಾರಿಗೆ ಭಾರತದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಕಾರಣರಾದವರು ಇವರು. ಅನಂತರ ಮಹಾಷ್ಟ್ರದಲ್ಲಿ ಇನ್ನೂ ಅನೇಕ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸ್ಥಾಪಿತವಾದುವು. ಹೀಗೆ ಭಾರತದಲ್ಲಿ ಸಹಕಾರಿ ಚಳವಳಿಯಲ್ಲಿ ಗಾಡಗೀಳರ ಪಾತ್ರ ಹಿರಿದಾಗಿತ್ತು.

ಆರ್ಥಿಕ ಯೋಜನಾಕ್ಷೇತ್ರಕ್ಕೆ ಇವರ ಕೊಡುಗೆ ಅಮೂಲ್ಯವಾದ್ದು. ಯೋಜನೆ ಗಳೊಡನೆ ಇವರ ಸಂಪರ್ಕ ಹಳೆಯದು. ಇವರು 1940ರ ದಶಕದ ಆದಿಯಲ್ಲಿ ಸಾಂಗ್ಲಿ, ಕೊಲ್ಹಾಪುರ ಮುಂತಾದ ರಾಜ್ಯಗಳ ಅಭಿವೃದ್ಧಿ ಮಂಡಲಿಗಳ ಸದಸ್ಯರಾಗಿದ್ದರು. ಮಹಾರಾಷ್ಟ್ರ ಅಸ್ತಿತ್ವಕ್ಕೆ ಬಂದ ಅನಂತರ ಅದರ ಯೋಜನಾ ಆಯೋಗದ ಸದಸ್ಯರಾಗಿಯೂ ದುಡಿದರು. ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವುದರಲ್ಲಿ ನಿರತರಾಗಿದ್ದ ಅರ್ಥಶಾಸ್ತ್ರಜ್ಞರ ತಂಡದಲ್ಲಿ ಒಬ್ಬರಾಗಿದ್ದು ಅನಂತರ ಆ ತಂಡದ ಉಪಾಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಭಾರತದ ಯೋಜನೆಗಳ ಬಗ್ಗೆ ಇವರು ಅನೇಕ ಲೇಖನಗಳನ್ನು ಬರೆದರು. ಆಗ ಇವರು ಪ್ಲಾನಿಂಗ್ ಅಂಡ್ ಇಕೊನಾಮಿಕ್ ಪಾಲಿಸಿ ಎಂಬ ಗ್ರಂಥವನ್ನು ಪ್ರಕಟಿಸಿದರು. ಭಾರತದ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಗಾಡಗೀಳರಿಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಪ್ರಾರಂಭದಿಂದಲೂ ಇವರು ಯೋಜನಾ ಆಯೋಗದ ಕಾರ್ಯವಿಧಾನದಲ್ಲಿ ಕೊರತೆಯನ್ನೇ ಕಂಡಿದ್ದರು. ಅದನ್ನು ಸಂಪೂರ್ಣ ದುರಸ್ತು ಮಾಡಬೇಕೆಂಬುದು ಇವರ ಅಭಿಪ್ರಾಯವಾಗಿತ್ತು. ಇವರು ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಹೋಗುವ ಮುನ್ನ, ದೇಶದ ಪಂಚವಾರ್ಷಿಕ ಯೋಜನೆಗಳು ಯಶಸ್ವಿಯಾಗದಿದ್ದುದಕ್ಕೆ ಅವುಗಳಲ್ಲಿ ಧೋರಣಾ ಚೌಕಟ್ಟು ಹಾಗೂ ನಿಯಂತ್ರಣ ಚೌಕಟ್ಟು ಇಲ್ಲದ್ದೇ ಕಾರಣವೆಂಬುದು ಇವರ ಅಭಿಪ್ರಾಯವಾಗಿತ್ತು. ಹೀಗಾಗಲು ಕಾರಣವಾದ ಎರಡು ಅಂಶಗಳಿವು: 1. ನಿರುಪಾಧಿಕ ಪ್ರೇರಣೆಯುಳ್ಳ ಹಿತಾಸಕ್ತ ವ್ಯಕ್ತಿಗಳು ಸರ್ಕಾರದ ಮೇಲೆ ಬೀರುವ ಪ್ರಭಾವ, 2. ವಿನಿಯೋಜನೆಯನ್ನು ಕೈಗೊಂಡ ಮಾತ್ರಕ್ಕೆ ಆರ್ಥಿಕ ಅಭಿವೃದ್ಧಿ ಸ್ವಯಂ ಚಲಿಯಾಗಿ ಪರಿಣಮಿಸುವ ಸಾಧ್ಯತೆಯಿದೆ ಎಂದು ತಿಳಿದ ಆರ್ಥಿಕ ಮತ್ತು ಸಾಮಾಜಿಕ ತಂತ್ರಜ್ಞರ ಸಲಹೆ ಈ ಕಾರಣಗಳಿಂದಾಗಿ ಯೋಜನೆಯ ಸಾಧನಸಂಪತ್ತು ಹಿತಾಸಕ್ತ ವ್ಯಕ್ತಿಗಳ ಕೈಸೇರಿತು; ಹಾಗೂ ಮಾರುಕಟ್ಟೆಯನ್ನವಲಂಬಿಸಿದ ಉಪಯೋಗಗಳಿಗಾಗಿ ವಿನಿಯೋಗಿಸಲ್ಪಟ್ಟಿತು. ಇದರಿಂದಾಗಿ ಬೆಲೆಗಳ ಮಟ್ಟ ಏರಲು ಪ್ರಾರಂಭವಾಯಿತು. ಆರ್ಥಿಕ ಅಸಮಾನತೆ ಹೆಚ್ಚುತ್ತ ಬಂತು. ಬೆಲೆಗಳನ್ನು ನಿಯಂತ್ರಿಸಿ ಆರ್ಥಿಕ ಸ್ಥಿರತೆ. ಸಾಧಿಸಬೇಕಾದರೆ ವಸ್ತುಗಳ ಬಳಕೆಗೆ ತಡೆಹಾಕಬೇಕು ಮತ್ತು ಸಮರ್ಪಕವಾದ ಬೆಲೆಗಳ ಧೋರಣೆಯನ್ನು ರೂಪಿಸಬೇಕು. ಜೊತೆಗೆ ಉತ್ಪಾದನೆ, ವಾಣಿಜ್ಯ ಹಾಗೂ ಬ್ಯಾಂಕುಗಳ ಮೇಲೆ ಹೆಚ್ಚಿನ ನಿಯಂತ್ರಣ ವಿಧಿಸಬೇಕು– ಎಂಬುದು ಇವರ ಅಭಿಪ್ರಾಯವಾಗಿತ್ತು. ಹಂಚಿಕೆಗಿಂತ ಉತ್ಪಾದನೆಯೇ ಮುಖ್ಯವೆಂಬ ಸರ್ಕಾರದ ಧೋರಣೆಯೂ ಉದ್ಯೋಗಾವ ಕಾಶಗಳನ್ನು ಸೃಷ್ಟಿಸುವುದರ ಬಗ್ಗೆ ಸರ್ಕಾರದ ಅನಾದರಣೆಯೂ ಆರ್ಥಿಕ ಅಸಮಾನತೆ ಅಧಿಕವಾಗಲು ಕಾರಣವೆಂದು ಇವರು ಭಾವಿಸಿದ್ದರು.

ಆದರೆ ಗಾಡಗೀಳರೇ ಪ್ರತಿಪಾದಿಸಿದ ಅನೇಕ ವಿಚಾರಗಳನ್ನು ಇವರು ಆಯೋಗದ ಉಪಾಧ್ಯಕ್ಷರಾದಾಗ ನಾಲ್ಕನೆಯ ಯೋಜನೆಯಲ್ಲಿ ಅನುಷ್ಠಾನಕ್ಕೆ ತರಲಾಗಲಿಲ್ಲ. ಇದಕ್ಕೆ ಬಹುಶಃ ಆಡಳಿತ ಚೌಕಟ್ಟಿನಲ್ಲಿದ್ದ ಅಡಚಣೆಗಳು ಕಾರಣ. ಇವರು ಮತ್ತೆ ಗೋಖಲೆ ಅಧ್ಯಯನ ಸಂಸ್ಥೆಗೆ ಹಿಂದಿರುಗಿದ್ದಿದ್ದರೆ ಇವುಗಳ ಸ್ಪಷ್ಟ ವಿವರಣೆ ಬಹುಶಃ ಸಿಗುತ್ತಿತ್ತು ಎಂಬುದು ಇವರ ಸ್ನೇಹಿತರಾದ ವಿ.ಎಂ.ದಂಡೇಕರರ ಅಭಿಪ್ರಾಯ. ಯೋಜನಾ ಆಯೋಗ ತಯಾರಿಸಿರುವ ಐದನೆಯ ಯೋಜನೆಯ ಉಪಗಮನ ಪತ್ರದಲ್ಲಿ ಗಾಡಗೀಳರ ಅಭಿಪ್ರಾಯ ಗಳಿಗೆ ಮನ್ನಣೆ ದೊರಕಿದೆ. ಹಂಚಿಕೆಗಿಂತ ಉತ್ಪಾದನೆ ಮುಖ್ಯವೆಂಬ ಧೋರಣೆಯನ್ನು

ಅದರಲ್ಲಿ ಖಂಡಿಸಿರುವುದಲ್ಲದೆ ಅಭಿವೃದ್ಧಿಯ ಫಲ ಎಲ್ಲರಲ್ಲೂ ಸಮಾನವಾಗಿ ಹಂಚಿಕೆಯಾಗಬೇಕಾದರೆ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕು ಹಾಗೂ ಅವಶ್ಯಕ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದು ಪ್ರತಿಪಾದಿಸಲಾಗಿದೆ. (ಎ.ಎ.)

**ಗಾಡಗೀಳ, ನರಹರ ವಿಷ್ಣು :** 1896–1966. ಮಹಾರಾಷ್ಟ್ರದ ಹಿರಿಯ ಕಾಂಗ್ರೆಸ್ ಮುಂದಾಳುಗಳಲ್ಲಿ ಒಬ್ಬರು. ರಾಜಸ್ತಾನದಲ್ಲಿಯ ಮಲ್ಹಾರ ಗಡದಲ್ಲಿ 1896ರ ಜನವರಿ 10ರಂದು ಜನ್ಮ ತಾಳಿದ ಇವರು ನೀಮಚ್, ಬರೋಡ ಮತ್ತು ಪುಣೆಗಳಲ್ಲಿ ಶಿಕ್ಷಣ ಪಡೆದು 1918ರಲ್ಲಿ ಬಿ.ಎ. ಪದವೀಧರರಾದರು. ಮುಂದಿನ ಎರಡು ವರ್ಷಗಳಲ್ಲಿ ಮುಂಬಯಿಯಲ್ಲಿ ಕಾನೂನು ವ್ಯಾಸಂಗ ಮುಗಿಸಿ ಪುಣೆಯಲ್ಲಿ ನ್ಯಾಯವಾದಿಗಳಾದರು. 1929ರಿಂದ 1932ರ ವರೆಗೆ ಪುಣೆಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ, 1931,1936 ಮತ್ತು 1945ರಲ್ಲಿ ಅದರ ಅಧ್ಯಕ್ಷರಾಗಿ ಕೆಲಸ ಮಾಡಿದರು. 1928ರಿಂದ 1932ರ ವರೆಗೆ ಕಾಂಗ್ರೆಸಿನ ಯುವಕ ಚಳವಳಿಯಲ್ಲಿ ಭಾಗವಹಿಸಿದ್ದರು; ಅಲ್ಲದೆ ನಾಸಿಕ ಮತ್ತು ಖಾರಗಳಲ್ಲಿ ಸೇರಿದ್ದ ಸಮ್ಮೇಳನಗಳ ಅಧ್ಯಕ್ಷರಾಗಿದ್ದರು. 1935ರಲ್ಲಿ ಆಗಿನ ಕೇಂದ್ರ ವಿಧಾನಪರಿಷತ್ತಿಗೆ ಆಯ್ಕೆಯಾಗಿ ಅಲ್ಲಿಯ ಕಾಂಗ್ರೆಸ್ ಪಕ್ಷದ ಸಚೇತಕರಾಗಿ ಮತ್ತು ಕಾರ್ಯದರ್ಶಿಯಾಗಿ ನೇಮಕವಾದರು. 1942ರಲ್ಲಿ ಭಾರತದ ವಿಮೋಚನೆಗಾಗಿ ನಡೆದ ಚಳವಳಿಯಲ್ಲಿ ಭಾಗವಹಿಸಿದ್ದರು. 1947–52ರಲ್ಲಿ ಕೇಂದ್ರ ಮಂತ್ರಿ ಮಂಡಲದಲ್ಲಿ ವಿದ್ಯುತ್ತು, ಗಣಿ ಮತ್ತು ಕಟ್ಟಡಗಳ ಶಾಖೆಯ ಮಂತ್ರಿಯಾಗಿದ್ದರು. 1955ರಲ್ಲಿ ಸಾಂಗಲಿಯಲ್ಲಿ ನಡೆದ ಮಹಾರಾಷ್ಟ್ರ ಗ್ರಂಥಾಲಯ ಪರಿಷತ್ತಿನ ಅಧಿವೇಶನದ ಅಧ್ಯಕ್ಷರಾಗಿದ್ದರು. 1958–62ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಅಧ್ಯಕ್ಷರಾಗಿಯೂ ಪಂಜಾಬಿನ ರಾಜ್ಯಪಾಲರಾಗಿಯೂ ಇದ್ದರು. ಕ್ರಿಯಾಶೀಲ ರಾಜಕೀಯದಲ್ಲಿ ಭಾಗವಹಿಸುತ್ತಿದ್ದ ಗಾಡಗೀಳರು ಲೇಖಕರೂ ಆಗಿದ್ದರು. 1962ರಲ್ಲಿ ಸಾತಾರದಲ್ಲಿ ಜರುಗಿದ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇವರು 1963ರಿಂದ ಮೂರು ವರ್ಷಗಳ ಕಾಲ ಪುಣೆ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕೆಲಸ ಮಾಡಿದರು. ರಾಜಕೀಯ, ಸಾಹಿತ್ಯ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಸ್ಮರಣೀಯವಾದ ಕೆಲಸ ಮಾಡಿದ ಇವರು 1966ರ ಜನವರಿ 12ರಂದು ನಿಧನರಾದರು.



ಮಹಾರಾಷ್ಟ್ರದಲ್ಲಿ ಬ್ರಾಹ್ಮಣೇತರ ಸಮಾಜ ಕಾಂಗ್ರೆಸ್ಸಿನಿಂದ ದೂರವಾಗಿರುತ್ತಿದ್ದ ಕಾಲವೊಂದಿತ್ತು. ಆ ಸಂದರ್ಭದಲ್ಲಿ ಬ್ರಾಹ್ಮಣೇತರ ಮುಂದಾಳುಗಳಾಗಿದ್ದ ಕೇಶವರಾವ್ ಜೇಧೆ ಎಂಬವರ ಸಹಾಯ ಸಹಕಾರಗಳಿಂದ, ಜನಸಂಖ್ಯೆಯ ದೃಷ್ಟಿಯಿಂದ ಬಹುಸಂಖ್ಯಾತವಾದ ಆ ಪಕ್ಷ ಕಾಂಗ್ರೆಸ್ಸಿನೊಳಗೆ ಬರುವಂತೆ ಮಾಡಿ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ಸನ್ನು ದೃಢಪಡಿಸಲು ಕಾರಣರಾದರು. 1932ರಿಂದ ಹದಿಮೂರು ವರ್ಷಕಾಲ ಮಹಾರಾಷ್ಟ್ರದ ರಾಜಕೀಯ ಕ್ಷೇತ್ರದಲ್ಲಿ ಇವರ ಪ್ರಭಾವ ವಿಶೇಷವಾಗಿತ್ತು. ವಿಚಾರ ಮತ್ತು ಕಾರ್ಯಧೋರಣೆಗಳಲ್ಲಿ ಗಾಢಗೀಳರು ವಲ್ಲಭ ಭಾಯಿ ಪಟೇಲರಿಗೆ ಹತ್ತಿರದವರಾಗಿದ್ದರು. ಪಟೇಲರ ನಿಧನದ ಅನಂತರದಲ್ಲಿ ಜವಾಹರಲಾಲ್ ನೆಹರು ಅವರಿಂದ ಇವರು ದೂರದೂರ ಸರಿಯುವಂತಾಯಿತು. ಪಕ್ಷದ ಪ್ರತಿಷ್ಠೆಯನ್ನು ಕಾಪಾಡಬೇಕಾದಾಗ ಅಂತಸ್ಸಾಕ್ಷಿಯ ವಿಚಾರ ಧೋರಣೆಗೆ ಅವಕಾಶವಿರಕೂಡದು ಎಂದು ಇವರು ಪ್ರಚಾರ ಮಾಡಿದರು. ಹಿಂದಿ, ಗುಜರಾತಿ, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಮರ್ಥವಾಗಿ ಬರೆಯಬಲ್ಲವರಾಗಿದ್ದ ಇವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಹಿಂದಿ ಅಂದಾಜು ಪತ್ರಿಕೆ, ಗ್ಯಾನಬಾಚೆ ಅರ್ಥಶಾಸ್ತ್ರ, ಸಭಾಶಾಸ್ತ್ರ, ರಾಜ್ಯಶಾಸ್ತ್ರ ವಿಚಾರ, ರಾಜ್ಯವ್ಯವಹಾರ ವಿಚಾರ, ಘಟಾನಾಪ್ರಬೋಧಿನೀ, ಸಾಲಗುದಸ್ತ, ಅನಗಡ ಮೋತೀ, ಎಂಬ ಗ್ರಂಥಗಳನ್ನೂ ಮಾಝೆ ಸಮಕಾಲೀನ, ಮುಠಾತೇ ಮೇನ್, ಪಥಿಕ ಹೀಗೆ ಮೂರು ಸಂಪುಟಗಳಲ್ಲಿ ಆತ್ಮಚರಿತ್ರೆಯನ್ನೂ ಇವರು ಬರೆದಿದ್ದಾರೆ. (ವಿ.ಎಂ.ಐ.)

**ಗಾಡರ್ಡ್, ರಾಬರ್ಟ್ ಹಚಿನ್ಸ್ :** 1882–1945. ಅಮೆರಿಕದ ಭೌತವಿಜ್ಞಾನಿ. ಆ ರಾಷ್ಟ್ರದಲ್ಲಿ ಆಕಾಶಯಾನದ ಆದ್ಯ ಪ್ರವರ್ತಕ, ಪ್ರಪಂಚದ ಆದ್ಯ ಪ್ರವರ್ತಕರಲ್ಲಿ ಒಬ್ಬ (ಇನ್ನೊಬ್ಬ ರಷ್ಯ ದೇಶದ **ಟ್ಸಿಯೋಲ್‌ಕಾವ್‌ಸ್ಕಿ–ನೋಡಿ**). ಮೆಸಾಚುಸೆಟ್ಸ್‌ನ ವಾರ್ಸೆಸ್ಟರಿನಲ್ಲಿ 1882ರ ಅಕ್ಟೋಬರ್ 5 ರಂದು ಜನನ. ಕಾಯಿಲಸ್ಥನಾದ ಈತ ಹೆಚ್ಚಾಗಿ ಅಂತರ್ಮುಖಿಯಾಗಿಯೇ ಇದ್ದ. ಆಕಾಶಯಾನದ ಬಗ್ಗೆ ಇವನಿಗೆ ಅಪಾರಾಸಕ್ತಿ. ವಾರ್ಸೆಸ್ಟರ್ ಔದ್ಯೋಗಿಕ ಶಿಕ್ಷಣ ಸಂಸ್ಥೆಯಲ್ಲಿ ಅಭ್ಯಸಿಸಿ ಪದವೀಧರನಾದ(1908). ಮುಂದಿನ ವಿದ್ಯಾಭ್ಯಾಸ ಕ್ಲಾರ್ಕ್ ವಿಶ್ವವಿದ್ಯಾಲಯದಲ್ಲಿ. 1915–19ವರೆಗೂ ಇದೇ ವಿಶ್ವವಿದ್ಯಾಲಯ ದಲ್ಲಿ ಉಪಪ್ರಾಧ್ಯಾಪಕನಾಗಿಯೂ ಅನಂತರ 1919–43ರ ವರೆಗೆ ಇಲ್ಲಿಯೇ ಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ. ರಾಕೆಟ್ ಸಂಶೋಧನೆಯ ಕೆಲವೇ ಅಗ್ರಗಾಮಿಗಳಲ್ಲಿ ಈತನೂ ಒಬ್ಬ. ದ್ರವೇಂಧನ ಚಾಲಿತ ರಾಕೆಟನ್ನು ಮೊಟ್ಟಮೊದಲು ಉಡಾಯಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ.

ಪದವೀಧರನಾದ ಕೇವಲ ಒಂದು ವರ್ಷದಲ್ಲಿಯೇ ಗಾಡರ್ಡ್ ತನ್ನ ಟಿಪ್ಪಣಿ ಪುಸ್ತಕಗಳಲ್ಲಿ ರಾಕೆಟ್ ವಿಜ್ಞಾನ ಕ್ಷೇತ್ರದಲ್ಲಿ ಸುಮಾರು 70 ವರ್ಷಗಳ ಅನಂತರ ಸಾಧಿಸಬಹುದಾದ ಸಿದ್ಧಿಗಳ ಬಗ್ಗೆ ಪ್ರಸ್ತಾವಿಸಿದ್ದ. ಹಂತ ಹಂತವಾಗಿ ರಾಕೆಟುಗಳ ಉಡಾವಣೆ, ಘನ ಮತ್ತು ದ್ರವ ಇಂಧನವುಳ್ಳ ರಾಕೆಟುಗಳ ಉಡಾವಣೆ, ಮನುಷ್ಯ ಸಹಿತ ರಾಕೆಟುಗಳು ಗ್ರಹಗಳನ್ನು ತಲಪಿ ಮತ್ತೆ ಭೂಮಿಗೆ ಹಿಂತಿರುಗುವ ಸಾಧ್ಯತೆ, ಅತಿವೇಗದ ಆಕಾಶಯಾನಗಳಲ್ಲಿ ರಾಕೆಟುಗಳಲ್ಲಿರುವ ಮನುಷ್ಯರ ಜೀವರಕ್ಷಣೆ, ಚಂದ್ರಯಾನ, ಚಂದ್ರನಲ್ಲಿ ರಾಕೆಟನ್ನು ಉಡಾಯಿಸುವ ನೆಲೆಯನ್ನು ಸ್ಥಾಪಿಸುವ ಸಾಧ್ಯತೆ– ಇವೇ ಮುಂತಾದವುಗಳ ಬಗ್ಗೆ ಈತ ಆಗಲೇ ಚರ್ಚಿಸಿದ್ದ. ಆದರೆ ಆತ ಈ ಯಾವ ಅಭಿಪ್ರಾಯಗಳನ್ನೂ ಕ್ಲಾರ್ಕ್ ವಿಶ್ವವಿದ್ಯಾಲಯದ ವ್ಯಾಸಂಗ ಕ್ಷೇತ್ರವನ್ನು ಸೇರಿ ಪ್ರಯೋಗಗಳನ್ನು ಪ್ರಾರಂಭಿಸುವ ವರೆಗೂ ಪ್ರಚುರ ಪಡಿಸಲಿಲ್ಲ. 1941ರಲ್ಲಿ ಗಾಡರ್ಡ್ ಅಮೆರಿಕ ಸಂಯುಕ್ತಸಂಸ್ಥಾನದ ಎರಡು ಸನ್ನದುಗಳನ್ನು ಪಡೆದ: ಮೊದಲನೆಯದು ದ್ರವೇಂಧನಗಳನ್ನು ಉಪಯೋಗಿಸಿ ರಾಕೆಟುಗಳನ್ನು ಉಡಾಯಿಸುವ ಬಗ್ಗೆ ಪ್ರಯೋಗ ಗಳನ್ನು ಮಾಡಲು; ಮತ್ತು ಎರಡನೆಯದು ಹಂತ ಹಂತವಾಗಿ ರಾಕೆಟುಗಳನ್ನು ಉಡಾಯಿಸುವ ಅಂದರೆ ಸಣ್ಣ ರಾಕೆಟನ್ನು ಹೊತ್ತ ದೊಡ್ಡ ರಾಕೆಟುಗಳನ್ನು ಉಡಾಯಿಸುವ ಬಗ್ಗೆ ಪ್ರಯೋಗ ಮಾಡಲು. 1914–16ರವರೆಗೆ ಈತ ರಾಕೆಟ್ ಉಡಾವಣೆಯ ಮೂಲತತ್ತ್ವದ ಬಗ್ಗೆ ಆಳವಾದ ಸಂಶೋಧನೆ ನಡೆಸಿದ. ಅನಂತರ ಘನೇಂಧನಚಾಲಿತ ರಾಕೆಟುಗಳ ಉಡಾವಣೆಯ ಬಗ್ಗೆ ಅನೇಕ ಪ್ರಯೋಗಗಳನ್ನು ನಡೆಸಿ ಪ್ರಯೋಗದಿಂದ ಪ್ರಯೋಗಕ್ಕೆ ರಾಕೆಟ್ ಹೆಚ್ಚು ಎತ್ತರ ಹಾರುವ ಹಾಗೆ ಮಾಡಿದ. ರಾಕೆಟುಗಳು ನಿರ್ವಾತ ಪ್ರದೇಶದಲ್ಲಿ ಕೂಡ ಕೆಲಸಮಾಡಬಲ್ಲವು ಎಂದು ತೋರಿಸಲು ಸಾಧನವೊಂದನ್ನು ಉಪಜ್ಞಿಸಿ ಅದನ್ನು ಪ್ರದರ್ಶಿಸಿದ. ಅಲ್ಲದೇ ಚಂದ್ರನಿಗೆ ರಾಕೆಟ್ ಕಳುಹಿಸುವ ಸಾಧ್ಯತೆಯ ಬಗ್ಗೆ ಪ್ರಯೋಗಗಳನ್ನು ಮಾಡಿದ. ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಪ್ರಯೋಗಗಳನ್ನು ನಡೆಸಿ ವಿಧವಿಧವಾದ ಪ್ರವರ್ತಕಗಳು (ಪ್ರೊಪೆಲೆಂಟ್ಸ್) ಉಡಾವಣೆಯ ಸಮಯದಲ್ಲಿ ಉಂಟುಮಾಡುವ ನೂಕುಬಲ (ಥ್ರಸ್ಟ್) ಪರಿಮಾಣಗಳನ್ನು ಅಳೆದ. ಇವನ್ನು ಗಮನಿಸಿದ ಸ್ಮಿತ್‌ಸೋನಿಯನ್ ಸಂಸ್ಥೆ ಗಾಡರ್ಡ್‌ನಿಗೆ ಹೆಚ್ಚಿನ ಧನಸಹಾಯ ಮಾಡಿತು. 1926ರ ವರೆಗೂ ಈತ ಅಮೆರಿಕನ್ ರಾಕೆಟ್ ಸೊಸೈಟಿಯ ಮೆಂಬರುಗಳ ಲ್ಲೊಬ್ಬನಾಗಿ ಡ್ಯಾನಿಯಲ್ ಮತ್ತು ಫ್ಲಾರನ್ಸ್ ಗಗೆನ್ ಹ್ಯಾಮ್ ಪ್ರತಿಷ್ಠಾನದ ಸಹಾಯದಿಂದ ದ್ರವೇಂಧನಚಾಲಿತ ರಾಕೆಟುಗಳ ಉಡಾವಣೆಯ ಬಗ್ಗೆ ಸತತ ಪ್ರಯೋಗಗಳನ್ನು ನಡೆಸಿದ. 1926ರ ಮಾರ್ಚ್ 16ರಂದು ಮಸಾಚುಸೆಟ್ಸ್‌ನ ಆಬರ್ನ್ ಪಟ್ಟಣದ ಹತ್ತಿರದ ಕೃಷಿ ಕ್ಷೇತ್ರವೊಂದರಿಂದ ಪ್ರಪಂಚದ ಮೊಟ್ಟಮೊದಲನೆಯ ಇಂಥ ಒಂದು ರಾಕೆಟನ್ನು ಈತ ಉಡಾಯಿಸಿದ. ಇದಕ್ಕೆ ಸಂಬಂಧಪಟ್ಟ ಗಾಡರ್ಡ್‌ನ ವರದಿಯ ಪ್ರಕಾರ ಈ ರಾಕೆಟು 2.5 ಸೆಕೆಂಡುಗಳಲ್ಲಿ ಸು. 56.25 ಮೀಟರ್‌ಗಳಷ್ಟು ಎತ್ತರಕ್ಕೆ ಹಾರಿತ್ತು. ಈ ಸಂಶೋಧನೆ ಆಧುನಿಕ ರಾಕೆಟ್ ಉಡಾವಣೆಗೆ ಬಲವಾದ ಬುನಾದಿ ಹಾಕಿತು ಎಂದು ಹೇಳಬಹುದು. ಈ ವೇಳೆಗೆ ರಾಕೆಟ್‌ಯುಗ ಭದ್ರವಾಗಿ ನೆಲೆಯೂರಿತ್ತು. ಜರ್ಮನಿಯಲ್ಲಿ ಒಂದು ಸಂಸ್ಥೆ ಮತ್ತು ಅಮೆರಿಕದಲ್ಲಿ ಒಂದು ಸಂಸ್ಥೆ ಈ ಪ್ರಯೋಗಗಳನ್ನು ಇನ್ನಷ್ಟು

ಪರಿಷ್ಕರಿಸಲು ಪ್ರಯತ್ನವನ್ನು ನಡೆಸುತ್ತ ಮುಂದುವರಿದುವು. ಅಮೆರಿಕನ್ ರಾಕೆಟ್ ಸಂಸ್ಥೆಯ ಇತರ ಸದಸ್ಯರು ತಮ್ಮ ಪ್ರಯತ್ನಗಳನ್ನು ನಿಲ್ಲಿಸಿದರೂ ಅದರ ಒಬ್ಬ ಸದಸ್ಯ ಗಾಡರ್ಡ್ ಮಾತ್ರ ಸತತವಾಗಿ ಪ್ರಯೋಗಗಳನ್ನು ಮುಂದುವರಿಸುತ್ತಲೇ ಹೋದ. 1935ರ ವೇಳೆಗೆ 2287.5 ಮೀಟರ್‌ಗಳಷ್ಟು ಎತ್ತರಕ್ಕೆ ದ್ರವೇಂಧನಚಾಲಿತ ರಾಕೆಟೊಂದನ್ನು ಹಾರಿಸುವುದರಲ್ಲಿ ಈತ ಜಯಶೀಲನಾದ. ಎರಡನೆಯ ಮಹಾಯುದ್ಧ ಕಾಲದಲ್ಲಿ ಗಾಡರ್ಡನನ್ನು ಅಮೆರಿಕದ ನೌಕಾ ಇಲಾಖೆಯ ಬ್ಯೂರೊ ಆಫ್ ಆಸ್ಟ್ರೊನಾಟಿಕ್ಸ್ ನಿರ್ದೇಶಕನನ್ನಾಗಿ ನೇಮಿಸಿದರು. ನೌಕಾಯಾನದಲ್ಲಿ ದ್ರವೇಂಧನಚಾಲಿತ ರಾಕೆಟುಗಳ ಉಪಯೋಗದ ಬಗ್ಗೆ ಈತ ಈ ಕಾಲದಲ್ಲಿ ಸಂಶೋಧನೆ ನಡೆಸಿದ.

1945ರ ಆಗಸ್ಟ್ 10ರಂದು ಗಾಡರ್ಡ್ ಅಸುನೀಗಿದ. ಅಮೆರಿಕವನ್ನು ಆಕಾಶಯುಗಕ್ಕೆ ಆವಾಹಿಸುವಲ್ಲಿ ಗಾಡರ್ಡ್‌ನ ಕೊಡುಗೆ ಅಪಾರ. ಅಮೆರಿಕದ ಮೇರಿಲೆಂಡಿನ ಗ್ರೀನ್‌ಬೆಲ್ಟಿನಲ್ಲಿ ಗಾಡರ್ಡ್ ಆಕಾಶಯಾನ ಕೇಂದ್ರವನ್ನು ನಾಸಾ ಸಂಸ್ಥೆ ಸ್ಥಾಪಿಸಿ ಈತನ ಹೆಸರನ್ನು ಚಿರಸ್ಥಾಯಿಗೊಳಿಸಿದೆ. (ಎಸ್.ಎಚ್.ಎಸ್.)

**ಗಾಡಿ :** ದವಸ ಧಾನ್ಯಗಳ, ಸಾಮಾನು ಸರಂಜಾಮುಗಳ ಸಾಗಣೆಗೆ ಹಾಗೂ ಜನರ ಪ್ರಯಾಣಕ್ಕೆ ಬಹಳ ಹಿಂದಿನಿಂದಲೂ ಬಳಸಲಾಗುತ್ತಿರುವ ಸಾಧನ. ಚಕ್ರ ಅಥವಾ ಗಾಲಿಗಳ ಸಂಖ್ಯೆಯ ಆಧಾರದ ಮೇಲೆ ಇವನ್ನು ಬೇರೆ ಬೇರೆ ಹೆಸರಿನಲ್ಲಿ




**1. ಪ್ರ.ಶ.ಪೂ.2000ಕ್ಕೂ ಹಿಂದಿದ್ದ ರಥ, ಉಂಡೆಗಾಲಿಯದು–ಸಿಂಧೂ ಕಣಿವೆಯಲ್ಲಿನ ಚನ್ಹುದಾರೋ. 2. ಪ್ರ.ಶ.ಪೂ. 15ನೆಯ ಶತಮಾನದ ಕ್ರೀಟನ್ ರಥದ ಮಾದರಿ, ಹೋತಗಳನ್ನು ಕಟ್ಟಿದ್ದು. ಉಂಗುರದ ಮೇಲಿನ ಚಿತ್ರದ ಪ್ರತಿಕೃತಿ. 3. ಪ್ರ.ಶ.ಪೂ. 300ಕ್ಕೂ ಹಿಂದಿನ ಕಮಾನು ಗಾಡಿ. 4. ಪ್ರ.ಶ.ಪೂ. 2500ರ ಸುಮಾರಿನ ಸುಮೇರಿಯನ್ ಯುದ್ಧ ರಥ. ಉರ್ ಪ್ರದೇಶದ ಒಂದು ಚಿತ್ರಣ. 5. ಕಾನೆಸ್ಟೋಗ ವ್ಯಾಗನ್ ಗಾಡಿ; ಅಮೆರಿಕದ ವಸಾಹತು ಕಾಲದಲ್ಲಿ ಬಳಕೆಯಲ್ಲಿದ್ದುದು. 6. 18ನೆಯ ಶತಮಾನದ ಫ್ರೆಂಚ್ ಕೋಚು. 7. ಸ್ಲೆಜ್–ಶೀತವಲಯ ಪ್ರದೇಶದಲ್ಲಿನ ಗಾಲಿಯಿಲ್ಲದ ಗಾಡಿ. 8. ಮಕ್ಕಳ ಮೂಗಾಲಿ ಗಾಡಿ.**

ವರ್ಗೀಕರಿಸಲಾಗಿದೆಯಾದರೂ ಸಾಮಾನ್ಯವಾಗಿ ಎರಡು ಚಕ್ರಗಳುಳ್ಳ ಕಮಾನು ರಹಿತವಾದ, ಸ್ಪ್ರಿಂಗ್ ಅಥವಾ ಸ್ಪ್ರಿಂಗ್ ಫಲಕಗಳನ್ನು ಹೊಂದಿರದ ಸಾಗಣೆಯ ಸಾಧನವನ್ನು ಗಾಡಿ ಅಥವಾ ಬಂಡಿಯೆಂದು ಕರೆಯುತ್ತಾರೆ. ಗಾಡಿ ಎಳೆಯಲು ವ್ಯಕ್ತಿ ಇಲ್ಲವೆ ಯಾವುದಾದರೂ ಒಂದು ಬಗೆಯ ಪ್ರಾಣಿಯನ್ನು ಬಳಸಲಾಗುತ್ತದೆ. ಈ ಸಂಚಾಲಕ ಶಕ್ತಿಯ ಆಧಾರದ ಮೇಲೆ ಅದಕ್ಕೆ ಬೇರೆ ಬೇರೆ ಹೆಸರುಗಳನ್ನು ಕೊಡಲಾಗಿದೆ. ಅತ್ಯಾಧುನಿಕ ವಾಹನಗಳು ಬಳಕೆಗೆ ಬಂದಿದ್ದರೂ ಇಂದೂ ಹಲವು ದೇಶಗಳಲ್ಲಿ ಸೀಮಿತೋದ್ದೇಶಗಳಿಗಾದರೂ ಈ ವಾಹನ ಬಳಕೆಯಲ್ಲಿದೆ.

**ಇತಿಹಾಸ :** ವಿಶ್ವದ ಪ್ರಾಚೀನ ಸಾಹಿತ್ಯದಲ್ಲಿ–ಉದಾಹರಣೆಗೆ, ಭಾರತದ ವೈದಿಕ ಸಾಹಿತ್ಯದಲ್ಲಿ, ಬೈಬಲಿನಲ್ಲಿ–ಗಾಡಿಯ ಉಲ್ಲೇಖವಿದೆ. ಶೂದ್ರಕನಂತೂ ತನ್ನ ಜಗದ್ವಿಖ್ಯಾತ ಮೃಚ್ಛಕಟಿಕಾ ನಾಟಕದ ಮೂಲಕ ಗಾಡಿಗೆ ಸಾಹಿತ್ಯೇತಿಹಾಸದಲ್ಲಿಯೇ ಅಪೂರ್ವ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟಿದ್ದಾನೆ. ಪ್ರಾಚೀನ ನಾಗರಿಕತೆಯ ಆಡುಂಬೊಲಗಳಾಗಿದ್ದ ಪ್ರದೇಶಗಳಲ್ಲಿ ನಡೆಸಿದ ಉತ್ಖನನಗಳಲ್ಲಿ, ಚಿತ್ರಕಲೆಯ ಹಾಗೂ ಶಿಲ್ಪದ ಪ್ರಾಚೀನ ಮಾದರಿಗಳಲ್ಲಿ, ಗಾಡಿಗಳು ಕಂಡು ಬಂದಿರುವುದು ಮಾನವ ಜನಾಂಗಕ್ಕೆ ಅವು ಎಂಥ ಉಪಯುಕ್ತ ಸಾಧನಗಳಾಗಿದ್ದವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಗಾಡಿಗೆ ತುಂಬ ಪ್ರಾಚೀನ ಇತಿಹಾಸವಿದೆ. ಕನಿಷ್ಠ ಪಕ್ಷ ಪ್ರ.ಶ.ಪೂ. ಮೂರು–ನಾಲ್ಕು ಸಾವಿರ ವರ್ಷಗಳಷ್ಟು ಹಿಂದೆಯೇ ಗಾಡಿಗಳು ಅಸ್ತಿತ್ವದಲ್ಲಿದ್ದುವೆಂಬುದಕ್ಕೆ ಖಚಿತ ಸಾಕ್ಷ್ಯಗಳಿವೆ. ಕೆಲವು ವಿದ್ವಾಂಸರು ಇವುಗಳ ಪ್ರಾಚೀನತೆಯನ್ನು ಪ್ರ.ಶ.ಪೂ. 15ನೆಯ ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ಯುತ್ತಾರೆ. ಪ್ರಾಚೀನ ಮೆಸಪೊಟೇಮಿಯದಲ್ಲಿ ಇವು ಬಳಕೆಯಲ್ಲಿದ್ದುವೆಂದು ನಿಶ್ಚಿತವಾಗಿ ತಿಳಿದು ಬಂದಿದೆ. ಈ ಸಂಸ್ಕೃತಿಯನ್ನು ಘೋಷಿಸಿದ ಜನರೇ ಗಾಡಿಗಳನ್ನು ಮೊಟ್ಟಮೊದಲಿಗೆ ಬಳಕೆಗೆ ತಂದಿರಬೇಕೆಂದು ಹೇಳಲಾಗಿದೆ. ಕಿಷ್‌ನಲ್ಲಿ ದೊರೆತಿರುವ ಪೂರ್ವ–ವಂಶಜರ ಸಮಾಧಿಗಳಲ್ಲಿ ಕಂಡುಬಂದಿರುವ ಗಾಡಿಗಳಲ್ಲಿ ಉಂಡೆಚಕ್ರವಿದ್ದು, ಅವು ತಾಮ್ರದ ಪಟ್ಟಿಯನ್ನು ಹೊಂದಿವೆ. ಮಾನವ ತನ್ನ ತಲೆಯ ಮೇಲೆ ಹಾಗೂ ಪ್ರಾಣಿಗಳ ಮೇಲೆ ಹೊರೆಯನ್ನು ಹೇರಿಕೊಂಡು ಹೋಗುವುದಕ್ಕೆ ಬದಲಾಗಿ ಸಾಗಣೆಯ ಸಾಧನವೊಂದನ್ನು ರೂಪಿಸಲು ಪ್ರಯತ್ನಿಸಿದಾಗ ಬಹುಶಃ ಗಾಡಿಯ ಮೊಟ್ಟಮೊದಲ ಸ್ವರೂಪ ಗೋಚರಿತು. ಇದೇ ಸ್ಲೆಜ್ ಅಥವಾ ಜಾರುಬಂಡಿ. ಇದಕ್ಕೆ ಗಾಲಿಗಳು (ಚಕ್ರ) ಇರುತ್ತಿರಲಿಲ್ಲ (**ನೋಡಿ– ಗಾಲಿ**). ಚಕ್ರದ ಆವಿಷ್ಕಾರ ಸಾಗಣೆಯ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ಸುಮೇರಿಯನ್ ಚಿತ್ರಲಿಪಿಯಲ್ಲಿ ಜಾರುಬಂಡಿಗಳನ್ನು ಹೋಲುವಂಥ ಕೆಲವು ಚಿತ್ರಗಳಿವೆ. ಆದರೆ, ಈ ಸಂಸ್ಕೃತಿಯ ಅತ್ಯಂತ ಪ್ರಾಚೀನ ಅವಶೇಷಗಳಲ್ಲಿ– ಅಂದರೆ ಮಡಕೆಗಳ ಮೇಲೆ ಕೆತ್ತಿರುವ ಚಿತ್ರಗಳಲ್ಲಿ–ನಾಲ್ಕು ಚಕ್ರಗಳನ್ನುಳ್ಳ ವಾಹನವೂ ಕಾಣದೊರೆತಿರುವುದು ಕುತೂಹಲಕರವಾಗಿದೆ. ಈ ಸಂಸ್ಕೃತಿಯ ಕೇಂದ್ರವೆಂದು ಭಾವಿಸಲಾಗಿರುವ ಸುಮೇರ್ ಪ್ರದೇಶದ ಎರೆಖ್ ಎಂಬಲ್ಲಿರುವ ಇನ್ನಾವ ದೇವಾಲಯದಲ್ಲಿಯೂ ನಾಲ್ಕು ಉಂಡೆಚಕ್ರಗಳನ್ನುಳ್ಳ, ಬಹುಮಟ್ಟಿಗೆ ಜಾರುಬಂಡಿಯನ್ನು ಹೋಲುವಂಥ ಗಾಡಿಯೊಂದರ ಚಿತ್ರವಿದೆ. ಇದೇ ಅವಧಿಯದಾಗಿರಬಹುದೆಂದು ಭಾವಿಸಲಾಗಿರುವ ಕಿಷ್, ಉರ್ ಮತ್ತು ಸ್ಯೂಜ್ಯ ಪ್ರದೇಶಗಳಲ್ಲಿ ದೊರೆತಿರುವ ರಾಜರ ಸಮಾಧಿಗಳಲ್ಲಿಯೂ ಈ ಬಗೆಯ ಗಾಡಿಗಳ ಪ್ರತಿಕೃತಿಗಳಿವೆ. ಮಧ್ಯ ಏಷ್ಯದ ಸ್ಟೆಪ್ ಹುಲ್ಲುಗಾವಲುಗಳಲ್ಲಿ ಹಾಗೂ ಸಿಂಧೂನದೀ ಕಣಿವೆಯಲ್ಲಿ ಎರಡು ಚಕ್ರಗಳನ್ನುಳ್ಳ ಗಾಡಿಯೇ ವಿಶೇಷವಾಗಿ ಬಳಕೆಯಲ್ಲಿದ್ದುದಾಗಿ ತಿಳಿಯಬಂದಿದೆ. ಈ ಅವಶೇಷಗಳು ಪ್ರ.ಶ.ಪೂ. ಮೂರನೆಯ ಸಹಸ್ರಾಬ್ದದ ಕೊನೆಯ ಶತಮಾನದವಾಗಿದ್ದಿರಬೇಕೆಂದು ಭಾವಿಸಲಾಗಿದೆ. ಸಿಂಧೂ ನದೀ ಕಣಿವೆಯಲ್ಲಿನ ಚನ್ಹು–ದಾರೋ ಎಂಬಲ್ಲಿ ದೊರೆತಿರುವ ಗಾಡಿಗಳ ಮಾದರಿಗಳು ಆಕಾರದಲ್ಲಿ ಚಿಕ್ಕವಾಗಿದ್ದುವು; ನೊಗಕ್ಕೆ ಎರಡು ಎತ್ತುಗಳನ್ನು ಕಟ್ಟಲಾಗುತ್ತಿತ್ತು. ಹೊರವಲಯಕ್ಕೆ ಉಬ್ಬಿಕೊಂಡಿರುತ್ತಿದ್ದ ವಕ್ರರೂಪದಲ್ಲಿರುತ್ತಿದ್ದ ಎರಡು ತೊಲೆಗಳಿದ್ದು ಅಡ್ಡವಾಗಿ ಮೂರು ಕಿರು ತೊಲೆಗಳನ್ನು ಜೋಡಿಸಿ ಇವನ್ನು ಬಂಧಿಸಲಾಗುತ್ತಿತ್ತು. ಉದ್ದ ತೊಲೆಗಳಲ್ಲಿ ರಂಧ್ರಗಳನ್ನು ಕೊರೆದು ಗೂಟಗಳನ್ನು ಹೊಡೆದಿರುತ್ತಿದ್ದರು. ಚಕ್ರಗಳು ಉಂಡೆಯಾಗಿರುತ್ತಿದ್ದುವು. ಮೂರು ವೃತ್ತ ಖಂಡಗಳ ರೂಪದಲ್ಲಿ ಕತ್ತರಿಸಲಾದ ಮರದ ಭಾಗಗಳನ್ನು ಜೋಡಿಸಿ ಉಂಡೆಚಕ್ರವನ್ನು ರೂಪಿಸುವ ವಾಡಿಕೆ ಇದ್ದಂತೆ ತೋರುತ್ತದೆ. ಮಧ್ಯೆ ಅಚ್ಚಿನ ಭಾಗವೂ ಸೇರ್ಪಡೆಗೊಂಡಿರುತ್ತಿತ್ತು. ಗಾಡಿಯ ದೂರಿ ಮತ್ತು ಚಕ್ರಗಳನ್ನು ಒಂದಿಗೇ ಹಿಡಿದಿಡಲು ಕಡಾಣಿಯನ್ನು ಬಳಸಲಾಗುತ್ತಿತ್ತು. ಚಕ್ರಗಳನ್ನೊಳಗೊಂಡ ಅಚ್ಚಿನ ಮರದ ಚೌಕಟ್ಟಿನಲ್ಲಿ ಅಟ್ಟಣೆಯನ್ನು ಕಟ್ಟಿ, ಸಾಮಾನುಗಳನ್ನು ಇಡಲು ಅಥವಾ ಜನರಿಗೆ ಕೂಡಲು ಅನುಕೂಲ ಮಾಡಿಕೊಡಲಾಗುತ್ತಿತ್ತು. ಇತಿಹಾಸಪೂರ್ವಕಾಲದ ಈ ಗಾಡಿಗಳ ಸ್ವರೂಪ ಇಂದೂ ಸಿಂಧ್‌ನಲ್ಲಿ ಬಳಕೆಯಲ್ಲಿರುವ ರೈತರ ಗಾಡಿಗಳಿಗಿಂತ ಬಹುವಾಗಿ ಭಿನ್ನವಾಗಿಲ್ಲ. ಕರ್ನಾಟಕ ರಾಜ್ಯದ ಕೆಲವೆಡೆಗಳಲ್ಲಿ ಕಾಣಬರುವ ವಡ್ಡರ ಬಂಡಿಗಳು ಬಹುಮಟ್ಟಿಗೆ ಇದೇ ಮಾದರಿಯವು. ಏಷ್ಯದ ಸ್ಟೆಪ್ ಹುಲ್ಲುಗಾವಲಿನ ವಲಸೆಗಾರರು ಕಮಾನುಯುಕ್ತವಾದ ಗಾಡಿಗಳನ್ನೂ ಬಳಸುತ್ತಿದ್ದರು. ಬಹುಮಟ್ಟಿಗೆ ಕುಟುಂಬದ ಸದಸ್ಯರ ಪ್ರಯಾಣಕ್ಕಾಗಿ ಬಳಸಲಾಗುತ್ತಿದ್ದ ಈ ಗಾಡಿಗಳ ಮಾದರಿಗಳು ಪ್ರ.ಶ.ಪೂ. ಮೂರನೆಯ ಸಹಸ್ರಾಬ್ದದ ಹೊತ್ತಿಗೆ ಸಿರಿಯ ಮತ್ತು ಅಸ್ಸೀರಿಯಗಳಲ್ಲಿ

ಕಾಣಬಂದುವೆಂದು ಹೇಳಲಾಗಿದೆ. ಪ್ರ.ಶ.ಪೂ. ಎರಡನೆಯ ಸಹಸ್ರಾಬ್ದದ ಆರಂಭದ ಹೊತ್ತಿಗೆ ಮಧ್ಯ ಪ್ರಾಚ್ಯದಲ್ಲೆಲ್ಲ ಈ ಬಗೆಯ ಗಾಡಿಗಳು ಕಾಣದೊರೆಯುತ್ತಿದ್ದುವು. ಸಿರಿಯ, ಕ್ರೀಟ್ ಮತ್ತು ಅನಟೋಲಿಯ ಪ್ರಸ್ಥಭೂಮಿಯನ್ನೂ ಅವು ಪ್ರವೇಶಿಸಿದ್ದುವು. ಪ್ರಚಲಿತ ಶಕ ಪೂರ್ವದ ಕೊನೆಯ ಶತಮಾನಗಳ ಅವಧಿಯಲ್ಲಿ ಈ ಕಮಾನು ಗಾಡಿಗಳು ಚೀನವನ್ನು ಪ್ರವೇಶಿಸಿದುವು. ಹಂಗರಿಯ ಸರಕುಸಾಗಣೆ ಗಾಡಿಗಳು ಸಿರಿಯದ ಮಾದರಿಯನ್ನೂ ಕ್ಯಾಲ್‌ಮಿಕ್ ಸ್ಟೆಪ್ ಹುಲ್ಲುಗಾವಲಿನ ಗಾಡಿಗಳು ಸಿಥಿಯನ್ ಮಾದರಿಯನ್ನೂ ಹೋಲುತ್ತವೆ. ಅನಟೋಲಿಯದ ಸಾಗರ ಸಂಚಾರಿಗಳು ಈಜಿಪ್ಟಿನ



ಜೋಡೆತ್ತಿನ ಗಾಡಿ ಮತ್ತು ಅದರ ಭಾಗಗಳು: 1. ಕವೆಗೋಲು, 2. ಬಿದಿರು ದಬ್ಬೆ, 3. ನಡುವಣ ತೊಲೆ, 4. ನೊಗ, 5. ಕಣ್ಣಿಗೂಟ, 6. ಕಣ್ಣಿ, 7. ಮೂಕಿ, 8. ಕಡಾಣಿ, 9. ಅಚ್ಚು, 10. ದೂರಿ, 11. ಅರೆ, 12. ಚಕ್ರ, 13. ಇರ್ಚ

ಮೇಲೆ ಆಕ್ರಮಣ ಮಾಡಿದ ಅನಂತರದಲ್ಲಿಯೇ ಈಜಿಪ್ಟಿಗೆ ಗಾಡಿಗಳ ಪ್ರವೇಶವಾದದ್ದು. ಗ್ರೀಸ್ ಮತ್ತು ರೋಮ್‌ಗಳಲ್ಲಿಯೂ ಉಂಡೆಚಕ್ರದ ಬೇಸಾಯದ ಬಂಡಿಗಳು ಬಳಕೆಯಲ್ಲಿದ್ದುವು. ಕಂಚಿನ ಯುಗದ ಕೊನೆಯ ದಿನಗಳಲ್ಲಿ ಗಾಡಿಗಳು ಯುರೋಪನ್ನು ಪ್ರವೇಶಿಸಿದವು. ಈ ಹೊತ್ತಿಗೆ ಉಂಡೆಚಕ್ರಗಳಿಗೆ ಬದಲಾಗಿ ಅಲೆಗಳನ್ನುಳ್ಳ ಚಕ್ರಗಳೂ ಬಳಕೆಗೆ ಬಂದಿದ್ದುವು. ಈ ಕಾಲದ ಗ್ರೀಸಿನ ಕುಂಭಕಲಾ ಚಿತ್ರಗಳಲ್ಲಿ ಈ ಬಗೆಯ ಚಕ್ರಗಳನ್ನುಳ್ಳ ಗಾಡಿಗಳ ಪ್ರತಿಕೃತಿಗಳು ಕಾಣದೊರೆಯುತ್ತವೆ. ಉಂಡೆಚಕ್ರಗಳಿಗೆ ಬದಲಾಗಿ ಅರೆಯುಕ್ತ ಚಕ್ರಗಳನ್ನು ಬಳಸುವ ಕ್ರಮವನ್ನು ಮುಂದೆ ತಂದವರು ಹಿಟ್ಟೈಟರೆಂದು ಹೇಳಲಾಗಿದೆ. ಮೊದಲಿಗೆ ಇಂಥ ಮರದ ಚಕ್ರಗಳನ್ನೂ ಮುಂದೆ ಮರದ ಚಕ್ರಗಳಿಗೆ ಬದಲಾಗಿ ಲೋಹದ ಚಕ್ರಗಳನ್ನೂ ಬಳಸಿದವರಲ್ಲಿ ಇವರೇ ಮೊದಲಿಗರು. ರೋಮನ್ ಚಕ್ರಾಧಿಪತ್ಯದಲ್ಲಿ ಉಂಡೆ ಚಕ್ರದ ಹಾಗೂ ಅರೆ ಚಕ್ರದ ಗಾಡಿಗಳು 20ನೆಯ ಶತಮಾನದ ಮಧ್ಯಭಾಗದಲ್ಲಿಯೂ ಬಳಕೆಯಲ್ಲಿದ್ದುವು. ಈ ಬಗೆಯ ರೋಮನ್ ಗಾಡಿಗಳ ಮಾದರಿಗಳನ್ನು ಸ್ಪೇನ್, ಸಾರ್ಡೀನಿಯ, ಬೋಸ್ನಿಯ, ಅನಟೋಲಿಯ ಮತ್ತು ಮಧ್ಯ ಇಟಲಿಯಲ್ಲಿ ಸಂರಕ್ಷಿಸಿ ಇಡಲಾಗಿದೆ. ರಚನೆಯ ದೃಷ್ಟಿಯಿಂದ ಈ ಗಾಡಿಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು: ಅಚ್ಚಿನ ಮೇಲೆ ಕುಳಿತಿರುವ ಅಟ್ಟಣೆಯನ್ನುಳ್ಳ ಗಾಡಿಗಳು ಹಾಗೂ ಮೂಕಿ ತೊಲೆಯ ಮೇಲೆ ಕುಳಿತಿರುವ ಗಾಡಿಗಳು ಎಂದು. ಮೊದಲ ಮಾದರಿಯ ಗಾಡಿಗಳು ಸ್ಪೇನ್, ಲ್ಯಾಟಿಯಂ ಮತ್ತು ಇಟಲಿಗಳಲ್ಲಿಯೂ ಎರಡನೆಯ ಬಗೆಯವು ಅನಟೋಲಿಯ ಮತ್ತು ಸಾರ್ಡೀನಿಯಗಳಲ್ಲಿಯೂ ಕಾಣಬರುತ್ತವೆ, ಅಮೆರಿಕ ಖಂಡಕ್ಕೆ ಈ ಗಾಡಿಗಳ ಪರಿಚಯವಾದದ್ದು ಸ್ಪ್ಯಾನಿಷ್ ಆಕ್ರಮಣದ ಅನಂತರದಲ್ಲಿಯೇ.

ಅಮೆರಿಕವನ್ನು ಪ್ರವೇಶಿಸಿದ ಈ ಗಾಡಿಯನ್ನು ಎಳೆಯಲು ಹೇಸರುಗತ್ತೆಗಳನ್ನು ಬಳಸಲಾಗಿತ್ತು. ಪ್ರ.ಶ. 1ನೆಯ ಶತಮಾನದ ಹೊತ್ತಿಗೆ ಮೇಕೆಗಳು ಅಥವಾ ನಾಯಿಗಳು ಎಳೆಯಬಹುದಾಗಿದ್ದಂಥ ಸಣ್ಣ ಗಾಡಿಗಳು ರೂಪುದಳೆದಿದ್ದುವೆಂಬುದಕ್ಕೆ ಪಾಂಪೆಯ ಭಿತ್ತಿಚಿತ್ರಗಳು ಸಾಕ್ಷಿಯಾಗಿವೆ. ಪ್ರ.ಶ.2ನೆಯ ಶತಮಾನದ ಹೊತ್ತಿಗೆ ಎತ್ತಿನ ದೊಡ್ಡ ಗಾಡಿಗಳು ಚೀನದಲ್ಲಿ ಬಹುವಾಗಿ ಬಳಕೆಗೆ ಬಂದುವು. ಗಾಡಿಗೆ ನೊಗವನ್ನು ಹೂಡಿ ಎತ್ತುಗಳನ್ನು ಕಟ್ಟುವ ಈ ಬಳಕೆ ಪಾಶ್ಚಾತ್ಯ ಪ್ರಪಂಚಕ್ಕಿಂತಲೂ ದೂರ ಪ್ರಾಚ್ಯದಲ್ಲಿಯೇ ಹೆಚ್ಚಾಗಿ ಬಳಕೆಗೆ ಬಂತು. ಯುರೋಪಿನ ಕೆತ್ತನೆಗಳಲ್ಲಿ 8ನೆಯ ಶತಮಾನದ ಅಂತರದಲ್ಲಿಯೇ ಈ ಬಗೆಯ ಮೊದಲ ಚಿತ್ರ ಕಾಣದೊರೆತಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿಯನ್ನೊದಗಿಸುತ್ತದೆ. ಭಾರತದಲ್ಲಿ ಎತ್ತುಗಳನ್ನು ವಿಶೇಷವಾಗಿ ಬಳಸುತ್ತಿದ್ದರು. ಆದರೆ ಕೆಲವೆಡೆಗಳಲ್ಲಿ ಕೋಣಗಳನ್ನೂ ಅಪೂರ್ವವಾಗಿ ಬಂಜೆ ಹಸುಗಳನ್ನೂ ಈ ಉದ್ದೇಶಕ್ಕೆ ಬಳಸುವ ವಾಡಿಕೆ ಇರುವುದೂ ಕಂಡುಬಂದಿದೆ. ಪರ್ಷಿಯ ಮತ್ತು ಕಪ್ಪಡೋಸಿಯಗಳಲ್ಲಿ ಬಹುಶಃ ಮೊದಲ ಬಾರಿಗೆ ಕುದುರೆಗಾಡಿಗಳು ಸಿದ್ಧವಾದಂತೆ ತಿಳಿದು ಬಂದಿದೆ. ಅಂದರೆ ಪ್ರಚಲಿತ ಶಕಪೂರ್ವ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆಯೇ ಕುದುರೆಗಳನ್ನು ಈ ಕಾರ್ಯಕ್ಕೆ ಬಳಸುವ ಪದ್ಧತಿ ಬಳಕೆಗೆ ಬಂದಿರಬೇಕೆಂದು ಹೇಳಲಾಗಿದೆ.

**ಗಾಡಿಯ ಬಗೆಗಳು:** ಭಾರತದಲ್ಲಿ ಒಂಟೆತ್ತಿನ ಗಾಡಿ, ಜೋಡೆತ್ತಿನ ಗಾಡಿ, ವಡ್ಡರ ಗಾಡಿ (ಚಕ್ಕಡಿ), ಕೈಗಾಡಿ ಮತ್ತು ಕುದುರೆಗಾಡಿ ವಿಶೇಷವಾಗಿ ಬಳಕೆಯಲ್ಲಿವೆ. ಇವುಗಳಲ್ಲಿ ವಡ್ಡರ ಗಾಡಿಯೊಂದು ಈಚೆಗೆ ಅಪೂರ್ವ ವಸ್ತುವಾಗಿ ಪರಿಣಮಿಸುತ್ತಿದೆ. ರಚನೆಯ ಸ್ಥೂಲತ್ವ ಮತ್ತು ಅಕುಶಲತ್ವಗಳಿಂದಾಗಿ ಹಾಗೂ ಅವನ್ನು ಯಾವ ಉದ್ದೇಶಕ್ಕಾಗಿ ಬಳಸುತ್ತಿದ್ದರೋ ಆ ಉದ್ದೇಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅವುಗಳಿಗೆ ವಡ್ಡರ ಬಂಡಿ ಎಂದು ಹೆಸರಿಸಿರಬೇಕು. ವಡ್ಡ ಜನಾಂಗದಲ್ಲಿ ಅವು ವಿಶೇಷವಾಗಿ ಬಳಕೆಯಲ್ಲಿದ್ದುದೂ ಇದಕ್ಕೆ ಕಾರಣವಾಗಿರಬೇಕು.

ಒಂಟೆತ್ತಿನ ಗಾಡಿ ಮತ್ತು ಜೋಡೆತ್ತಿನ ಗಾಡಿ ಎಂಬ ಶಬ್ದಗಳೇ ಈ ಸಾಧನಗಳಲ್ಲಿ ಕ್ರಮಶಃ ಒಂದು ಮತ್ತು ಎರಡು ಎತ್ತುಗಳನ್ನು ಬಳಸಲಾಗುತ್ತದೆಂಬುದನ್ನು ಸೂಚಿಸುತ್ತವೆ. ಇವುಗಳಲ್ಲಿ ಕಮಾನುರಹಿತ ಹಾಗೂ ಕಮಾನುಸಹಿತವಾದ ಗಾಡಿಗಳೆಂದು ಎರಡು ಬಗೆಗಳುಂಟು. ದೂರಿ ಮತ್ತು ಕಡಾಣಿಗಳಿಂದ ಬಂಧಿಸಲ್ಪಟ್ಟ ಎರಡು ಚಕ್ರಗಳ ನಡುವೆ ಮರದ ಅಚ್ಚು ಇದ್ದು, ಅದರ ಮೇಲೆ ಅಟ್ಟಣೆ ಇರುತ್ತದ್ದೆಯಷ್ಟೇ. ಈ ಅಟ್ಟಣೆಯ ಎಡ ಮತ್ತು ಬಲತುದಿಯಲ್ಲಿ ದಪ್ಪನಾದ ತೊಲೆಗಳಿರುತ್ತವೆ. ಇದರ ಹಿಂಬದಿ ಮತ್ತು



ಜೋಡೆತ್ತಿನ ಟೈರ್ ಗಾಡಿ

ಮುಂಬದಿಗಳಲ್ಲಿ ಅಡ್ಡಡ್ಡವಾಗಿ ದಪ್ಪ ತೊಲೆಗಳನ್ನು ಕೂಡಿಸಿ ಆಯತಾಕಾರದ ಚೌಕಟ್ಟನ್ನು ನಿರ್ಮಿಸಿರುತ್ತಾರೆ. ಚೌಕಟ್ಟಿನ ಮಧ್ಯೆ ಹಲಗೆಗಳನ್ನು ಜೋಡಿಸಿರುತ್ತಾರೆ. ಒಂಟೆತ್ತಿನ ಗಾಡಿಯಲ್ಲಿ ಎಡ ಮತ್ತು ಬಲಬದಿಯ ತೊಲೆಗಳು ಕೆಲವು ಮೀಟರ್‌ಗಳಷ್ಟು ಮುಂದಕ್ಕೆ ಚಾಚಿಕೊಂಡಿದ್ದು ಮತ್ತೊಂದು ಉರುಟಾದ ನೊಗ ಇದಕ್ಕೆ ಅಡ್ಡವಾಗಿ ಬಂದು ಚೌಕಟ್ಟೊಂದನ್ನು ನಿರ್ಮಿಸುತ್ತದೆ. ಈ ಚೌಕಟ್ಟಿನ ನಡುವೆ ಒಂದು ಎತ್ತು ಬರುತ್ತದೆ, ಅದರ ಹೆಗಲಿನ ಮೇಲೆ ನೊಗವನ್ನಿಟ್ಟು ಕಣ್ಣಿಯಿಂದ ಅದನ್ನು ನೊಗಕ್ಕೆ ಬಂಧಿಸಲಾಗುತ್ತದೆ. ಎರಡೂ ಬದಿಯ ತೊಲೆಗಳಲ್ಲಿ ಅಲ್ಲಲ್ಲಿ ರಂಧ್ರಗಳನ್ನು ಕೊರೆದು ಕವೆಗೋಲು ಅಥವಾ ಗೂಟಗಳನ್ನು ನೆಟ್ಟಿರುತ್ತಾರೆ. ಅಗತ್ಯಾನುಗುಣವಾಗಿ ಬಿದಿರಿನ ದಬ್ಬೆಗಳನ್ನು ಹೆಣೆದು ಈ ಪಾರ್ಶ್ವಗಳನ್ನು ಪೂರೈಸುವುದೂ ಉಂಟು. ಸಾಮಾನು ಸರಂಜಾಮುಗಳ ಸಾಗಣೆಗೆ ಹಾಗೂ ಪ್ರಯಾಣಿಕರು ಒರಗಿಕೊಂಡು ಕೂಡಲು ಇದರಿಂದ ಅನುಕೂಲವಾಗುತ್ತದೆ. ಜೋಡೆತ್ತಿನ ಗಾಡಿಯಲ್ಲಿ ಬದಿಯ ತೊಲೆಗಳು ಅಟ್ಟಣೆಯ ಚೌಕಟ್ಟಿನಲ್ಲಿಯೇ ಕೊನೆಗಾಣುತ್ತವೆ. ಅದರೆ, ಮೂರನೆಯ ದಪ್ಪ ತೊಲೆಯೊಂದು ಇವುಗಳ ನಡುವೆ ಬಂದಿದ್ದು ಅದು ಕೆಲವು ಮೀಟರ್‌ಗಳಷ್ಟು ಮುಂದಕ್ಕೆ ಚಾಚಿಕೊಂಡಿದ್ದು, ಮೂಕಿಯಲ್ಲಿ ಕೊನೆಗೊಂಡಿರುತ್ತದೆ. ಪ್ರತ್ಯೇಕವಾದ ನೊಗವನ್ನು ಇಟ್ಟು ಕಟ್ಟಲು ಅನುಕೂಲವಾಗುವಂತೆ ಮೂಕಿಯ ತುದಿ ತತ್‌ಕ್ಷಣದ ಪಾತಳಿಗಿಂತ ಸು. 16 ಸೆಂ.ಮೀನಷ್ಟು ಮೇಲೆ ಎದ್ದಿರುತ್ತದೆ. ಅಂದರೆ, ಆ ರೀತಿ ಅದನ್ನು ಕೊರೆಯಲಾಗಿರುತ್ತದೆ. ಅದರ ತುದಿಯ ತಳಭಾಗವೂ ಲಂಬಾಕಾರವಾಗಿ ಸುಮಾರು 46 ಸೆಂ.ಮೀನಷ್ಟು ಕೆಳಚಾಚಿ ಕೊಂಡಿರುತ್ತದೆ. ಹೀಗಾಗಿ, ಗಾಡಿಯ ಅಟ್ಟಣೆಯ ಮುಂಚಾಚು, ಒಂಟೆತ್ತಿನ ಗಾಡಿಯಲ್ಲಾಗುವಂತೆ, ನೆಲದ ಮೇಲೆ ಕುಳಿತಿರುವುದಿಲ್ಲ. ಅಡ್ಡಲಾಗಿ ಹಾಕಲಾದ ನೊಗದ ಎರಡೂ ಬದಿಗಳಲ್ಲಿ ತುದಿಯಿಂದ ಸ್ವಲ್ಪ ದೂರದಲ್ಲಿ ಒಂದೊಂದು ರಂಧ್ರವಿರುತ್ತದ. ಇದೇ ಕಣ್ಣಿಗೂಟದ ರಂಧ್ರ, ಈ ಗೂಟದ ನೆರವಿನಿಂದ ಹಾಗೂ ಕಣ್ಣಿಯನ್ನು ಬಳಸಿ ನೊಗಕ್ಕೆ ಕಟ್ಟಲಾಗುತ್ತದೆ. ಈ ಪ್ರಕ್ರಿಯೆಯನ್ನು ಗಾಡಿ ಹೂಡುವುದು ಎನ್ನುತ್ತಾರೆ. ಅಟ್ಟಣೆಯ ಎರಡೂ ಬದಿಯಿಂದ ಬಲವಾದ ಬಿದಿರುದೆಬ್ಬೆಗಳನ್ನು ಎಳೆದು ಮೂಕಿಯ ತುದಿಯಲ್ಲಿ ಬಂಧಿಸಿರುತ್ತಾರೆ.

ಅಡ್ಡ ತೊಲೆ ಮತ್ತು ಈ ಎರಡು ಬಿದಿರು ಬಾಹುಗಳು ಸೇರಿ ಒಟ್ಟಿನಲ್ಲಿ ಒಂದು ಸಮದ್ವಿಬಾಹು ತ್ರಿಭುಜವನ್ನು ರಚಿಸಿರುತ್ತವೆ. ನಡುವಣ ದಪ್ಪ ತೊಲೆ ಈ ತ್ರಿಭುಜವನ್ನು ಎರಡು ತ್ರಿಭುಜಗಳಾಗಿ ವಿಂಗಡಿಸುವ ಲಂಬರೇಖೆಯಂತಿರುತ್ತದೆ. ಗಾಡಿ ಹೊಡೆಯು ವವನು ಸರಿಯಾಗಿ ಕುಳಿತು ಗಾಡಿ ಹೊಡೆಯಲು ಇದರಿಂದ ಅನುಕೂಲವಾಗುತ್ತದೆ. ಎತ್ತಿನ ಕತ್ತಿಗೆ ಕಟ್ಟಿರುವ ಹಗ್ಗಗಳೆರಡನ್ನೂ ಹಿಡಿದುಕೊಂಡು ಗಾಡಿ ಹೊಡೆಯುವವನು ಕುಳಿತುಕೊಳ್ಳುತ್ತಾನೆ. ಒಂಟೆತ್ತಿನ ಗಾಡಿಯಲ್ಲಿ ಸಾರಥಿ ಅಟ್ಟಣೆಯ ಮುಂಬದಿಯ ಒಂದು ಪಕ್ಕದಲ್ಲಿ ಮಾತ್ರ ಇರುತ್ತದೆ. ಈ ಹಗ್ಗ ಅಥವಾ ಹಗ್ಗಗಳೇ ಇಲ್ಲಿಯ ಸ್ಟಿಯರಿಂಗ್ ಸಾಧನಗಳು; ಅಂದರೆ, ಅವನ್ನು ಅಗತ್ಯಾನುಗುಣವಾಗಿ, ಎಳೆದು ಅಥವಾ ಪಾರ್ಶ್ವವನ್ನು ಬದಲಾಯಿಸುವುದರ ಮೂಲಕ ಅಪೇಕ್ಷಿಸಿದ ದಿಕ್ಕಿನಲ್ಲಿ ಹೋಗಬಹುದು. ತಿರುಗಬಹುದು. ಅಷ್ಟೇ ಅಲ್ಲ, ಬ್ರೇಕ್ ಅಥವಾ ತಡೆಯ ಸಾಧನವೂ ಇದೇ. ಜಗ್ಗಿಸಿ, ಹಿಡಿದೆಳೆದರೆ ಗಾಡಿ ನಿಲ್ಲುತ್ತದೆ. ಸಡಿಲ ಬಿಟ್ಟರೆ ಚಲಿಸುತ್ತದೆ. ಮಳೆ, ಗಾಳಿ ಮತ್ತು ಬಿಸಿಲಿನಿಂದ ರಕ್ಷಣೆ ಪಡೆಯುವ ಹಾಗೂ ತನ್ಮೂಲಕ ಸಾಗಣೆಯ ಅಥವಾ ಯಾನದ ಸೌಕರ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ, ಕವೆಗೋಲು ಅಥವಾ ಗೂಟಗಳನು ವಿಸ್ತರಿಸಿ, ಅವನ್ನು ಆಧರಿಸಿ ಬಿದಿರಿನ ಕಮಾನನ್ನು ಕಟ್ಟಿ, ಅದಕ್ಕೆ ಗೋಣಿಪಟ್ಟಿಯನ್ನು ಹೊಲಿಯುವುದುಂಟು. ಇದನ್ನೇ ಕಮಾನು ಗಾಡಿ ಎಂದು ಕರೆಯುವುದು. ಅಲಂಕರಣದ ದೃಷ್ಟಿಯಿಂದ ಕಮಾನಿನ ಒಳಭಾಗಕ್ಕೆ ಬಣ್ಣ ಹಚ್ಚುವ, ಬದಿಗಳಿಗೆ, ಕನ್ನಡಿಯನ್ನು ಜೋಡಿಸುವ ವಾಡಿಕೆಯೂ ಇದೆ. ಹಬ್ಬಹರಿದಿನಗಳಲ್ಲಿ ಪ್ರಮುಖರನ್ನು ಸನ್ಮಾನಿಸುವಂಥ ಸಂದರ್ಭಗಳಲ್ಲಿ ಜೋಡೆತ್ತಿನ ಗಾಡಿಗಳ ಮೆರವಣಿಗೆಯನ್ನು ಏರ್ಪಡಿಸುವುದೂ ಉಂಟು.

ಒಬ್ಬಿಬ್ಬರು ನಿರ್ವಹಿಸಬಹುದಾದಷ್ಟು ಪ್ರಮಾಣದ ಹೊರೆಯನ್ನು ತುಂಬಹುದಾದಂಥ ಕಿರು ಒಂಟೆತ್ತಿನ ಗಾಡಿಯೇ ಕೈಗಾಡಿ. ವ್ಯತ್ಯಾಸ ಇಷ್ಟೇ. ಎತ್ತಿಗೆ ಬದಲಾಗಿ ಮಾನವ ವ್ಯಕ್ತಿ ಈ ಗಾಡಿಯನ್ನು ಎಳೆಯುತ್ತಾನೆ. ಸೀಮಿತೋದ್ದೇಶಗಳಿಗೆ ಹಾಗೂ ಸೀಮಿತ ದೂರಗಳಿಗೆ ಇದನ್ನು ಬಳಸಬಹುದು.

ಮುಗ್ಗಾಲಿಗಳ ಬಳಕೆ ಅಷ್ಟಾಗಿ ಕಾಣಬರುವುದಿಲ್ಲವಾದರೂ ಮಕ್ಕಳ ಆಟಕ್ಕೆ ಉಪಯೋಗಿಸುವ ಆಟದ ಗಾಡಿ ವಾಸ್ತವವಾಗಿ ಒಂದು ಮುಗ್ಗಾಲಿಯೇ. ಮಗು ನೆಟ್ಟಗೆ ನಿಂತು ಹಿಡಿದುಕೊಳ್ಳಲು ಅನುಕೂಲವಾಗುವಷ್ಟು ಅಂದರೆ ಸುಮಾರು 46 ಸೆಂ.ಮೀನಷ್ಟು ಎತ್ತರದಲ್ಲಿ ಒಂದು ಅಡ್ಡಪಟ್ಟಿ, ಅದರ ಎರಡೂ ತುದಿಗಳಿಗೆ ಸ್ವಲ್ಪ ದೂರದಲ್ಲಿ ಎರಡು ಲಂಬಾಕಾರದ ಪಟ್ಟಿಗಳು. ಅವನ್ನು ಬಂಧಿಸುವ ಮತ್ತೊಂದು ಅಡ್ಡಪಟ್ಟಿ. ಅದರ ಇಕ್ಕೆಲಗಳಲ್ಲಿ ಎರಡು ಚಕ್ರಗಳು. ಕೆಳ ಅಡ್ಡ ಪಟ್ಟಿಯ ಮಧ್ಯದಿಂದ ನೇರವಾಗಿಯೂ ಮೇಲು ಅಡ್ಡಪಟ್ಟಿಯಿಂದ ಇಳಿಜಾರಾಗಿಯೂ ಬರುವ ಪಟ್ಟಿಗಳ ಸಂಧಿಸ್ಥಾನಕ್ಕೆ ಕೊಂಚ ಮುಂದೆ ಮತ್ತೊಂದು ಚಕ್ರವನ್ನು ಅಳವಡಿಸಿರುತ್ತಾರೆ. ಹೀಗಾಗಿ ಇದನ್ನು ತಳ್ಳಿಕೊಂಡು ಹೋಗುವುದು ಮಗುವಿಗೆ ಸುಲಭವೂ ಹೌದು. ಮಕ್ಕಳಿಗೆ ಇದು ಮನೋರಂಜನೆಯನ್ನೊದಗಿಸುವ ಆಟಿಕೆಯೂ ಹೌದು. ಬೇಗ ಕಾಲು ಬರದ – ಅಂದರೆ ನಡೆಯುವುದನ್ನು ಕಲಿಯದ – ಮಕ್ಕಳಿಗೆ ನಡೆಗಲಿಸುವುದರಲ್ಲಿ ಇದು ತುಂಬ ಪರಿಣಾಮಕಾರಿ.

ಒಂಟೆತ್ತಿನ ಗಾಡಿ ಅಥವಾ ಜೋಡೆತ್ತಿನ ಗಾಡಿ ವ್ಯವಸಾಯ – ವಾಣಿಜ್ಯೋದ್ದೇಶಗಳಿಗೆ ತುಂಬ ಉಪಯುಕ್ತವಾಗಿವೆಯಾದರೂ ಮುಖ್ಯ ಕೊರತೆಯೆಂದರೆ ಅವುಗಳ ಪರಿಮಿತ ವೇಗ. ಈ ಗಾಡಿಗಳನ್ನು ಎಳೆಯುವ ಎತ್ತು, ಕೋಣ ಮೊದಲಾದುವು ತುಂಬ ವೇಗದಿಂದ ಚಲಿಸಲಾರವು. ಗಾಡಿಗಳ ಭಾರವೂ ಗಾಲಿಯ ಸುತ್ತಿನ ಲೋಹ ಪಟ್ಟಿಯೂ ಇದಕ್ಕೆ ಕಾರಣ. ಹೀಗಾಗಿ, ಸಾಕಷ್ಟು, ಹಿಂದೆಯೇ ಈ ಗಾಡಿಗಳಿಗೆ ಕುದುರೆಗಳನ್ನು ಬಳಸುವ ಪದ್ಧತಿ ಜಾರಿಗೆ ಬಂದಿತು. ಇದರಿಂದ ವೇಗದ ಪ್ರಯಾಣ ಸಾಧ್ಯವಾಯಿತು. ಕ್ರಮೇಣ ಗಾಡಿಯ ಸ್ವರೂಪದಲ್ಲೂ ಸುಧಾರಣೆಗಳಾದುವು. ಇದರ ಫಲವೇ ಈಗಿನ ಕುದುರೆ ಗಾಡಿ. ಕುದುರೆಗಳನ್ನು ಯುದ್ಧರಥಗಳಿಗೆ ಹಾಗೂ ವೈಭವೋಪೇತ ವಾಹನಗಳಾದ ಕೋಚುಗಳಿಗೆ ಬಳಸುವ ವಾಡಿಕೆ ಬೆಳೆದು ಬಂದಿತ್ತಾದರೂ ಕುದುರೆಗಾಡಿಯ ಉದ್ದೇಶ ಮತ್ತು ಸೌಲಭ್ಯಗಳು ಬೇರೆಯೇ ಆಗಿದ್ದುವು. ಇದು ಒಂಟೆತ್ತಿನ ಗಾಡಿಯ ಸುಧಾರಿತ ರೂಪ. ಅದುವರೆಗೆ ಚಕ್ರಕ್ಕೆ ಹಾಕುತ್ತಿದ್ದ ಕಬ್ಬಿಣದ ಪಟ್ಟಿಗಳಿಗೆ ಬದಲಾಗಿ ರಬ್ಬರಿನ ಪಟ್ಟೆ ಬಂತು. ಅಚ್ಚಿನ ಮೇಲೆ ಅಟ್ಟಣಿಗೆಯನ್ನು ನೇರವಾಗಿ ಕೂಡಿಸುವುದರಿಂದ ರಸ್ತೆಯ ಏರಿಳಿತಗಳು ಪ್ರತಿಯೊಂದು ಕಂಪನವೂ ಆಘಾತವೂ ವಾಹನ ಮೇಲೆ ಕುಳಿತಿರುವ ಪ್ರಯಾಣಿಕರ ಮೇಲೆ ಪ್ರಭಾವ ಬೀರುತ್ತದೆ. ಈ ಕಂಪನವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಸ್ಪ್ರಿಂಗ್ – ಫಲಕಗಳ ಮೇಲೆ ಅಟ್ಟಣಿಗೆಯನ್ನು ಕೂಡಿಸಲಾಯಿತು. ಒಂಟೆತ್ತಿನ ಗಾಡಿಯಲ್ಲಿರುವಂತೆ, ಅಟ್ಟಣೆಯ ಮುಂಚಾಚಿನ ಪಾರ್ಶ್ವಸ್ಥ ಕಿರುದೊಲೆಗಳನ್ನು ಮತ್ತೊಂದು ಉರುಟು ನೊಗ ಬಂಧಿಸಿರುವುದಿಲ್ಲ. ಚರ್ಮದ ಕಣ್ಣಿಗಳನ್ನು ಹಾಕಿರುತ್ತಾರೆ. ಇವುಗಳ ನೆರವಿನಿಂದ ಲಗಾಮು ಹಾಕಿರುವ ಕುದುರೆಯನ್ನು ಗಾಡಿಗೆ ಕಟ್ಟಲಾಗುತ್ತದೆ. ಪ್ರಯಾಣಿಕರು ಹತ್ತಿ ಗಾಡಿಯಲ್ಲಿ ಕುಳಿತುಕೊಳ್ಳಲು ನೆರವಾಗುವುದಕ್ಕಾಗಿ ಗಾಡಿಯ ಹಿಂಬದಿಯಲ್ಲಿ ಕಾಲೊತ್ತು ಇರುತ್ತದೆ. ಅಟ್ಟಣೆಯ ಮೇಲೆ ಸುಮಾರು 75 ಸೆಂ.ಮೀ.ಯಷ್ಟು ಎತ್ತರದಲ್ಲಿ ಕಮಾನನ್ನು ಕಟ್ಟಿದ್ದು, ಅದಕ್ಕೆ ಸಾಮಾನ್ಯವಾಗಿ ಜಲನಿರೋಧಕ ಮೇಣಗಪಟದ ಬಟ್ಟೆಯನ್ನು ಹೊದಿಸಿರುತ್ತಾರೆ. ಒಳಗೆ ಕುಳಿತವರು ಹಿಡಿದುಕೊಳ್ಳಲು ಅನುಕೂಲವಾಗುವಂತೆ ಲೋಹದ ಅಥವಾ ಮರದ ಗುಂಡುಗೋಲನ್ನು ಅಥವಾ ಕಂಬಿಯನ್ನು ಎರಡೂ ಬದಿಗಳಲ್ಲಿ ಹಾಕಿರುತ್ತದೆ. ಅಲಂಕರಣದ ದೃಷ್ಟಿಯಿಂದ, ಕನ್ನಡಿಯನ್ನು ಅಳವಡಿಸಿರುವುದೂ ಚಿತ್ತಾರಗಳನ್ನು ಬರೆಸಿರುವುದೂ ಉಂಟು. ಕೂರುವ ಜಾಗದ ಉದ್ದಕ್ಕೂ ಕುದುರೆಗೆ ತಿನ್ನಲು ಕೊಡುವ ಹುಲ್ಲನ್ನು ಹರಡಿದ್ದು ಅದರ ಮೇಲೆ ಜಮಖಾನೆಯನ್ನು ಹಾಸಿರುತ್ತಾರೆ. ನಾಲ್ಕರಿಂದ ಆರುಮಂದಿ ಇದರಲ್ಲಿ ಒಮ್ಮೆಗೇ ಹಾಗೂ ಹೆಚ್ಚು ವೇಗವಾಗಿ ಪ್ರಯಾಣ ಮಾಡಬಹುದು. ಆದರೆ, ಕುಳಿತುಕೊಳ್ಳುವವರು ಮೈ – ಕೈ ಮುದುರಿಕೊಂಡು ಕೂಡಬೇಕಾಗುತ್ತದೆ. ಆದ್ದರಿಂದ ದೀರ್ಘಕಾಲದ ಅಥವಾ ದೂರದ ಪ್ರಯಾಣಕ್ಕೆ ಇದು ಹೇಳಿಸಿದ್ದಲ್ಲ.

ಕುದುರೆಗಾಡಿಯ ಆಸನವ್ಯವಸ್ಥೆಯ ಈ ಅಸುಖವನ್ನು ಹೋಗಲಾಡಿಸಲಾಗಿರುವ ವಾಹನವೇ ಷಾಪಸಂದ್. ಆದರೆ ಇದರಲ್ಲಿ ಆಸನವ್ಯವಸ್ಥೆ ಮಾತ್ರ ನಾಲ್ಕು ಮಂದಿಗೆ ಸೀಮಿತ. ಕುದುರೆಗಾಡಿಯಲ್ಲಿ ಬಹುಮಟ್ಟಿಗೆ ಎದುರುಬದುರಾಗಿ ಕೂಡಬೇಕಷ್ಟೇ. ಆದರೆ ಇಲ್ಲಿ ಬೆನ್ನಿಗೊಬ್ಬರು ಒರಗಿ ಕುಳಿತುಕೊಳ್ಳುವಂತೆ – ಒಂದು ಜೋಡಿ ಮುಮ್ಮುಖವಾಗಿ, ಒಂದು ಜೋಡಿ ಹಿಮ್ಮುಖವಾಗಿ – ವ್ಯವಸ್ಥೆಮಾಡಲಾಗಿದೆ. ಷಾಪಸಂದ್ ನೋಡಲಿಕ್ಕೂ ತುಂಬ ಸುಂದರವಾಗಿದೆ. ಹಿಂಬದಿಯಲ್ಲಿ ಕುಳಿತು ಪ್ರಯಾಣ ಮಾಡುವುದಂತೂ ತುಂಬ

ಷಾಪಸಂದ್ ಜಟಕಾಗಾಡಿ

ಸುಖಕರ. ಇದಕ್ಕೆ ಕಾರಣ ಕಾಲು ಚಾಚಿ ಕುಳಿತುಕೊಳ್ಳಲು ಅನುವಾಗುವಂತೆ ಅಟ್ಟಣೆಯ ಕೆಳಭಾಗದಲ್ಲಿ ಹಾಗೂ ಅದಕ್ಕೆ ಸೇರಿದಂತೆ ಪಾದಪೀಠದ ವ್ಯವಸ್ಥೆ ಇರುವುದು. ಮುಂಭಾಗದಲ್ಲಿ ಒಂದು ತೊಟ್ಟಿಯನ್ನು ಏರ್ಪಡಿಸಲಾಗಿದೆ. ಮುಂಬದಿಯಲ್ಲಿ ಕೂಡುವವರು ಕಾಲನ್ನು ಇಳಿಬಿಟ್ಟುಕೊಂಡು ಕೂಡಬಹುದು. ಸಾಮಾನ್ಯವಾಗಿ, ಕುದುರೆಗೆ ಹಾಕುವ ಹುಲ್ಲನ್ನು ಇದರಲ್ಲಿ ತುಂಬಿರುತ್ತಾರೆ. ಕೂಡಲು ಮತ್ತೆಯನ್ನು ಹಾಕಿರುತ್ತಾರೆ. ಮುಂಬದಿಯ ಎರಡೂ ಪಾರ್ಶ್ವಗಳಲ್ಲಿ ಹತ್ತಿ ಕುಳಿತುಕೊಳ್ಳಲು ನೆರವಾಗುವ, ಒಂದೊಂದು ಕಾಲೊತ್ತು ಇರುತ್ತದೆ. ಕಮಾನಿನ ಚಾವಣಿ ವಿಸ್ತಾರವಾಗಿಯೂ ವಿಶಿಷ್ಟ ವಕ್ರದಂತೆಯೂ ಇದ್ದು, ರೆಕ್ಸೀನಿನಂಥ ಜಲನಿರೋಧಕ ವಸ್ತ್ರದಿಂದ ಆಚ್ಛಾದಿತವಾಗಿರುವುದರಿಂದ ಗಾಡಿ ನೋಡಲೂ ಚೆನ್ನಾಗಿರುತ್ತದೆ. ಚಕ್ರದ ಪಟ್ಟಿಯ ಮೇಲೆ ದೂಳು ರಕ್ಷಕ ಪಟ್ಟಿ ಅಟ್ಟಣಿಗೆ ಸೇರಿದಂತೆ, ಇರುತ್ತದೆ. ಗಾಡಿಯ ವಿವಿಧ ಭಾಗಗಳಿಗೆ ಬೇರೆ ಬೇರೆ ಬಣ್ಣವನ್ನು ಲೇಪಿಸಿ ಅದನ್ನು ಆಕರ್ಷಕವಾಗಿ ಕಾಣುವಂತೆ ಮಾಡಿರುತ್ತಾರೆ. ಒಳಪಾರ್ಶ್ವದಲ್ಲಿ ಕನ್ನಡಿಯೂ ಚಿತ್ತಾರಗಳೂ ಇರುತ್ತವೆ. ಕುಳಿತಿರುವವರು ಆಯ ತಪ್ಪದಂತೆ ಹಿಡಿದುಕೊಂಡು ಕುಳಿತುಕೊಳ್ಳುವ ಸಲುವಾಗಿ ಚರ್ಮದ ಪಟ್ಟಿಯನ್ನು ಹಾಕಿರುತ್ತಾರೆ. ಇದರಲ್ಲಿನ ಪ್ರಯಾಣ ಸಂತಸದಾಯಕವಾಗಿರುತ್ತದೆ.

ಕುದುರೆಗಾಡಿಗೆ ಜಟಕಾ ಎಂಬ ಹೆಸರೂ ಇದೆ. ಸಾರಥಿಯ ಸೂಚನೆ ದೊರೆತೊಡನೆಯೇ ಚಿಮ್ಮಿ ಮುಂದೆ ಹೋಗುವ (ಝಟಕಾ) ವಾಹನವಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ಮೊದಲಿಗೆ ಆಡಳಿತಗಾರರ, ಅಧಿಕಾರಿಗಳ ಉಪಯೋಗಕ್ಕಾಗಿ ರಚಿತವಾಗಿದ್ದಿರಬಹುದಾದ ವಾಹನವಾದ್ದರಿಂದ ಜಟಕಾದ ಸುಧಾರಿತ ರೂಪದ ವಾಹನಕ್ಕೆ ಷಾಪಸಂದ್ (ಷಾಹ್ ಆಡಳಿತಗಾರರ, ಪಸಂದ್ ಇಷ್ಟ) ಎಂದು ಹೆಸರು ಬಂದಿರಬೇಕು. ಕುದುರೆಗಾಡಿ ಅಥವಾ ಜಟಕಾಗಳು ಸಾಮಾನ್ಯವಾಗಿ ಎಲ್ಲ

ಕಡೆಗಳಲ್ಲೂ ಕಾಣಬರುತ್ತವೆಯಾದರೂ ಷಾಪಸಂದ್ ಕೆಲವೇ ನಗರಗಳ ವೈಶಿಷ್ಟ್ಯಪೂರ್ಣ ವಾಹನವೆನ್ನಿಸಿಕೊಂಡಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಮೈಸೂರಿನಲ್ಲೂ ಉತ್ತರ ಭಾರತದಲ್ಲಿ ವಾರಣಾಸಿ, ಆಗ್ರ ಮುಂತಾದ ಕಡೆಗಳಲ್ಲೂ ಇವನ್ನು ಕಾಣಬಹುದು. ದುಃಖದ ಸಂಗತಿ ಎಂದರೆ ಈ ವೇಗದ ಯುಗದ ವಾಹನಗಳಲ್ಲೊಂದಾದ ಆಟೋರಿಕ್ಷಾದ ಪ್ರಭಾವದಿಂದಾಗಿ ಕುದುರೆಗಾಡಿಗಳು ಮೂಲೆಗುಂಪಾಗುತ್ತಿವೆ.

ಸ್ವಯಂಚಾಲಿತ ವಾಹನಗಳ ಪ್ರಭಾವ ಸಾಂಪ್ರದಾಯಿಕ ಸ್ವರೂಪದ ಗಾಡಿಗಳ ಮೇಲೆ ಬಿದ್ದಿರುವುದಕ್ಕೆ ರಬ್ಬರ್ ಚಕ್ರದ ಗಾಡಿಗಳು ಸಾಕ್ಷಿಯಾಗಿವೆ. ಇವು ಉದ್ದ ಅಗಲ ಆಕಾರಗಳಲ್ಲಿ ಸಾಮಾನ್ಯ ಗಾಡಿಗಳಿಗಿಂತ ದೊಡ್ಡವಾಗಿರುತ್ತವೆ. ಅಚ್ಚು, ದೂರಿ, ಕಡಾಣಿಗಳಿಗೆ ಬದಲಾಗಿ, ಬಲವಾದ ಆಕ್ಸಲ್ ಮೇಲೆ ಜೋಡಿಸಿರುವ ಲೋಹದ ಚೌಕಟ್ಟಿನ ಮೇಲೆ ಗಾಡಿಯ ಅಟ್ಟಣೆ ಕುಳಿತಿರುತ್ತದೆ. ಉರುಳು ಮಣಿಗಳ (ಬಾಲ್ – ಬೇರಿಂಗ್ಸ್) ನೆರವಿನಿಂದ ಚಕ್ರಗಳು ಸುಲಭವಾಗಿ ತಿರುಗುತ್ತವೆ. ಲೋಹದ ಚಕ್ರಮೂಲ (ವ್ಹೀಲ್ – ಬೇಸ್) ಹೊಂದಿದಂತೆ ಟೈರು ಮತ್ತು ಟ್ಯೂಬುಗಳಿರುತ್ತವೆ. ಟ್ಯೂಬಿಗೆ ಗಾಳಿಯನ್ನು ತುಂಬಿಸಲಾಗುತ್ತದೆ. ಈ ಚಕ್ರ ಬಸ್ಸಿನ ಚಕ್ರಕ್ಕಿಂತ ದೊಡ್ಡದಾಗಿರುವ ಸಂಭವವಿಲ್ಲದಿರುವುದರಿಂದ, ಸಾಂಪ್ರದಾಯಿಕ ಗಾಡಿಯ ಚಕ್ರಕ್ಕೂ ಇದಕ್ಕೂ ಹೋಲಿಕೆಯೇ ಇಲ್ಲ. ಅಂತೆಯೇ ಮೂಕಿ ಮತ್ತು ಅಟ್ಟಣೆ ಚೌಕಟ್ಟಿನ ನಡುವಣ ತ್ರಿಭುಜಾಕಾರ ರಚನೆಗಳಿರುವುದಿಲ್ಲ. ಯಂತ್ರಕ್ಕೆ ಬದಲಾಗಿ ಎತ್ತುಗಳೇ ಇವನ್ನು ಎಳೆಯುತ್ತವೆ. ಇದನ್ನು ಸಾಮಾನ್ಯವಾಗಿ ಸರಕು ಸಾಗಣೆ ಉಪಯೋಗಿಸುವುದರಿಂದ ಕಮಾನು ಇರುವುದಿಲ್ಲ.

ಒಟ್ಟಿನಲ್ಲಿ, ಚಕ್ರಸಹಿತವಾದ ಗಾಡಿಗಳು ಮುಖ್ಯವಾಗಿ ವ್ಯವಸಾಯದ ಹಾಗೂ ಪ್ರಯಾಣದ ಅಗತ್ಯಗಳನ್ನು ಪೂರೈಸಿವೆ. ಇಂದಿನ ಯಂತ್ರಯುಗದಲ್ಲೂ ಇವುಗಳ ಮಹತ್ತ್ವ, ಕನಿಷ್ಠ ಪಕ್ಷ ಭಾರತದಲ್ಲಿ, ಕಡಿಮೆಯಾಗಿಲ್ಲ. ಯಂತ್ರೀಕರಣಕ್ಕೊಳಗಾಗಿರುವ ದೇಶಗಳಲ್ಲಿಯೂ ಇವು ಇನ್ನೂ ಬಳಕೆಯಲ್ಲಿವೆ. ಯುರೋಪಿನಲ್ಲಿ ಟಿಂಕರ್ಸ್ ಕಾರ್ಟ್ ಮತ್ತು ಐರಿಷ್ ಜಾಂಟಿಂಗ್ ಕಾರ್ ಎಂಬ ಬಂಡಿಗಳು ವೈಯಕ್ತಿಕ ಸಾಗಣೆಯ ಸಾಧನಗಳಾಗಿವೆ. ರೆಡ್ ರಿವರ್ ಕಾರ್ಟ್ ಎಂಬುದು ಸಾಮಾನು ಸರಂಜಾಮುಗಳ ಬಳಕೆಗೆ ಉಪಯೋಗಿಸಲಾಗುತ್ತಿದ್ದ ದೊಡ್ಡ ಗಾಡಿಯ ಹೆಸರು. ಮೆಕ್ಸಿಕೊದಲ್ಲಿ ತುಂಬ ಜನಪ್ರಿಯವಾಗಿರುವ ಎತ್ತಿನ ಗಾಡಿಯ ಹೆಸರು ಕಾರೇಟಾ.

ರಿಕ್ಷಗಳು: ಕೈಗಾಡಿಯ ವಿಚಾರವನ್ನು ಪ್ರಸ್ತಾವಿಸುವಾಗ, ಎರಡು ಚಕ್ರಗಳ ಮಾನವ ಚಾಲಿತ ರಿಕ್ಷಗಳ ವಿಚಾರವನ್ನೂ ಉಲ್ಲೇಖಿಸಬಹುದು. ಎರಡು ಚಕ್ರಗಳನ್ನುಳ್ಳ ಅಚ್ಚಿನ ಮೇಲೆ ಎತ್ತರದಲ್ಲಿ ಆಸನ ವ್ಯವಸ್ಥೆಯನ್ನು ಹೊಂದಿರುವ (ಕೆಲವೊಮ್ಮೆ ಪ್ರಯಾಣಿಕನಿಗೆ ನೆರಳನ್ನು ಉಂಟು ಮಾಡುವುದಕ್ಕಾಗಿ ಮುಂಚಾಚಬಹುದಾದ ಹಾಗೂ ಮಡಿಸಬಹುದಾದ ಛತ್ರಿಯನ್ನು ಹೊಂದಿರುವ) ಈ ಗಾಡಿಯನ್ನು ಅಟ್ಟಣಿಗೆಗಳಿಂದ ಮುಂಚಾಚಿರುವ ಪಟ್ಟಿ ಕೋಲುಗಳನ್ನು ಹಿಡಿದುಕೊಂಡು ಮಾನವ ವ್ಯಕ್ತಿ ಎಳೆದುಕೊಂಡು ಓಡುತ್ತಾನೆ. ಪ್ರಯಾಣಿಕ ಆಸನದಲ್ಲಿ ಕುಳಿತಿರುತ್ತಾನೆ. ದುರದೃಷ್ಟಶಾಲಿಯೊಬ್ಬ ಪ್ರಾಣಿಯಂತೆ ಗಾಡಿಯನ್ನೆಳೆಯುವುದು ಆತನ ಸೇವೆಯನ್ನು ಕೊಂಡುಕೊಳ್ಳಲು ಸಮರ್ಥನಾಗಿರುವ ವ್ಯಕ್ತಿ ಕುಳಿತು ದರ್ಬಾರು ಮಾಡುವುದು ಮಾನವತೆಯ ವಿಡಂಬನೆ ಎಂದು ಪರಿಗಣಿಸಿ ಕೆಲವೆಡೆಗಳಲ್ಲಿ ವಾಹನ ಈ ವ್ಯವಸ್ಥೆಯನ್ನು ಬಹಿಷ್ಕರಿಸಲಾಗಿದೆಯಾದರೂ ಅವಶೇಷರೂಪದಲ್ಲಿದು ಅಲ್ಲಲ್ಲಿ ಇನ್ನೂ ಉಳಿದುಕೊಂಡಿದೆ.

ರಥಗಳು: ಪ್ರಾಚೀನ ಕಾಲದಲ್ಲಿ ಯುದ್ಧ, ಬೇಟೆ, ಮೆರವಣಿಗೆ ಮತ್ತು ಪಂದ್ಯಗಳ ಸಂದರ್ಭದಲ್ಲಿ ಎರಡು ಚಕ್ರದ ರಥಗಳನ್ನು ಬಳಸುತ್ತಿದ್ದರು. ಅಂದರೆ ಶಾಂತಿ ಮತ್ತು ಯುದ್ಧ ಕಾಲಗಳೆರಡರಲ್ಲಿಯೂ ಇವು ಬಳಕೆಯಲ್ಲಿರುತ್ತಿದ್ದುವು. ಅಥೀನ ಎಂಬ ದೇವತೆ ಯುದ್ಧದ ರಥವನ್ನು ಸೃಷ್ಟಿಸಿದಳೆಂದು ಗ್ರೀಕ್ ಪುರಾಣಗಳಲ್ಲಿ ಹೇಳಲಾಗಿದೆ. ಮೆಸಪೊಟೇಮಿಯ ಮತ್ತು ಸಿರಿಯಗಳಲ್ಲಿ ಪ್ರ.ಶ.ಪೂ. ಸುಮಾರು 20ನೆಯ ಶತಮಾನದ ಹೊತ್ತಿಗೆ ರಥಗಳು ಬಳಕೆಯಲ್ಲಿದ್ದುವೆಂದು ಅವುಗಳ ಚಿತ್ರಣ ಲಭ್ಯವಾಗಿದೆಯೆಂದೂ ಹೇಳಲಾಗಿದೆ. ರೋಮನ್ನರಲ್ಲಿಯೂ ಕೆಲವು ಬಗೆಯ, ರಥಗಳು ಬಳಕೆಯಲ್ಲಿದ್ದುದಾಗಿ ತಿಳಿಯಬಂದಿದೆ. ಹೀರೊಡೊಟಸನ ಪ್ರಕಾರ, ಸಿಥಿಯನರು ಮೇಲು ಛಾವಣಿಗಳನ್ನುಳ್ಳ ರಥಗಳನ್ನು ಬಳಸುತ್ತಿದ್ದರು. ಈ ರಥದ ಮೇಲಿನ ಛತ್ರ ಅಥವಾ ಚಾವಣಿಯನ್ನು ತೆಗೆದು ಇರಿಸಬಹುದಾಗಿತ್ತು ಹಾಗೂ ಅದನ್ನು ಡೇರೆಯ ರೂಪದಲ್ಲಿ ಬಳಸಬಹುದಾಗಿತ್ತು. ಈಜಿಪ್ಟಿಗೆ ರಥಗಳನ್ನು ಪರಿಚಯಿಸಿಕೊಟ್ಟವರು ಹಿಕ್ಸೋಸರು ಪ್ರ.ಶ.ಪೂ. ಸುಮಾರು 15ನೆಯ ಶತಮಾನದ ಹೊತ್ತಿಗೆ ಚೀನ ದೇಶದಲ್ಲಿಯೂ ರಥಗಳು ಬಳಕೆಯಲ್ಲಿದ್ದುವು. ಟ್ರೋಜನ್ ಯುದ್ಧದ ಹಾಗೂ ಪೆಟ್ರೋಕ್ಲಸನ ಅಂತ್ಯಸಂಸ್ಕಾರದ ವರ್ಣನೆಗಳ ಸಂದರ್ಭದಲ್ಲಿ ಹೋಮರ್ ಕ್ರಮಶಃ ರಥಗಳ ಯುದ್ಧ ಹಾಗೂ ರಥ ಸ್ಪರ್ಧೆಗಳ ವಿವರಗಳನ್ನು ಚಿತ್ರಿಸಿದ್ದಾನೆ. ರಾಮಾಯಣ, ಮಹಾಭಾರತಗಳಲ್ಲೂ ಇವನ್ನು ಆಶ್ರಯಿಸಿ ರಚಿತವಾದ ಸಾಹಿತ್ಯದಲ್ಲೂ ರಥಗಳ, ರಥಯುದ್ಧಗಳ ವರ್ಣನೆ ಬರುತ್ತದೆ. ಭೂ – ಜಲ – ವಾಯುಮಾರ್ಗಗಳಲ್ಲಿ ಸಂಚರಿಸಬಲ್ಲವಾಗಿದ್ದಂಥ ರಥಗಳ ಉಲ್ಲೇಖವೂ ಬರುತ್ತದೆ. ಗ್ರೀಕರೂ ರೋಮನ್ನರೂ ರಥಗಳನ್ನು ಯುದ್ಧಕ್ಕೆ ಅಷ್ಟಾಗಿ ಬಳಸುತ್ತಿರಲಿಲ್ಲ. ಆದರೆ ಪಂದ್ಯ ಹಾಗೂ ಮೆರವಣಿಗೆಗಳ ಸಂದರ್ಭದಲ್ಲಿ ಇವುಗಳ ಬಳಕೆ ವಿಶೇಷವಾಗಿರುತ್ತಿತ್ತು. ಒಲಿಂಪಿಕ್ ಪಂದ್ಯ ಹಾಗೂ ಇತರ ಸಮಾರಂಭಗಳ ಅಂಗವಾಗಿ ರಥ ಸ್ಪರ್ಧೆ ನಡೆಯುತ್ತಿತ್ತು. ರೋಮಿನಲ್ಲಿ ಅನುಭವಿಗಳಾದ ಸಾರಥಿಗಳನ್ನು ಪಂದ್ಯದ ಸಂದರ್ಭದಲ್ಲಿ ನೇಮಿಸಿಕೊಳ್ಳುತ್ತಿದ್ದರು. ಇದನ್ನು ಆಶ್ರಯಿಸಿ ಜೂಜಾಟವೂ ಬಹಳವಾಗಿ ನಡೆಯುತ್ತಿತ್ತು. ರೋಮನ್ ರಥಕ್ಕೆ ಸಾಮಾನ್ಯವಾಗಿ ಎರಡು ಕುದುರೆಗಳನ್ನು ಕಟ್ಟುತ್ತಿದ್ದರು. ಆದರೆ ಮೂರು, ನಾಲ್ಕು ಕುದುರೆಗಳನ್ನುಳ್ಳ ರಥಗಳೂ ಇರುತ್ತಿದ್ದುವು. ಕಾನ್‌ಸ್ಟಾಂಟಿನೋಪಲ್‌ನಲ್ಲಿ ರಥ ಸ್ಪರ್ಧೆ ಪ್ರಮುಖ ಜನಪ್ರಿಯ ಮನರಂಜನೆಯ ಸಾಧನವಾಗಿತ್ತು. ಹಸಿರು ಮತ್ತು ನೀಲಿಯ ಬಣ್ಣಗಳು ಪಂದ್ಯದ ಬಣ್ಣಗಳಾಗಿದ್ದುವು. ಇವು ನಗರದಲ್ಲಿಯೂ ಪಕ್ಷ– ವಿಪಕ್ಷ ಸೂಚಕವಾಗಿದ್ದು ಎರಡು ಪಂಗಡಗಳ ನಡುವೆ ಘರ್ಷಣೆಗಳಿಗೂ ಎಡೆಮಾಡಿಕೊಡುತ್ತಿದ್ದುವು. ಯುರೋಪ್ ಖಂಡದಲ್ಲಿ ಹಾಗೂ ಬ್ರಿಟಿಷ್ ದ್ವೀಪಗಳಲ್ಲಿ ನಡೆದ ಕೆಲ್ಟಿಕ್ ಯುದ್ಧಗಳು ಆ ಯುದ್ಧಗಳಲ್ಲಿ ಬಳಸಲಾದ ಪರಿತವಾದ ಅಲುಗುಗಳಿಂದ ಯುಕ್ತವಾಗಿದ್ದ ಚಕ್ರಗಳನ್ನೊಳಗೊಂಡ ರಥಗಳ ದೃಷ್ಟಿಯಿಂದಲೂ ಗಮನಾರ್ಹವಾಗಿವೆ.

ನಾಲ್ಕು ಚಕ್ರದ ಗಾಡಿಗಳೆಂದರೆ ತೇರುಗಳು, ಪ್ರಯಾಣ ಅಥವಾ ಸರಕು ಸಾಗಣೆ ವಾಹನಗಳು ಮತ್ತು ಕೋಚುಗಳು. ಭಾರತದಲ್ಲಿ ಪ್ರತಿಯೊಂದು ಮುಖ್ಯ ದೇವಾಲಯದಲ್ಲಿಯೂ ಸಾಮಾನ್ಯವಾಗಿ ಒಂದು ತೇರು ಇರುತ್ತದೆ. ವಿಶಿಷ್ಟ ದಿನಗಳಂದು– ರಥೋತ್ಸವದ ದಿವಸಗಳಂದು – ಭಕ್ತರು ತೇರನ್ನೆಳೆಯುತ್ತಾರೆ. ಇದು ಬೃಹದಾಕಾರವಾದ ವಿಶಿಷ್ಟ ಅಲಂಕೃತ ರಚನೆ. ಇಂಗ್ಲೆಂಡಿನಲ್ಲಿ 16ನೆಯ ಶತಮಾನದವರೆಗೆ ಲಿಟ್ಟರ್ ಎಂಬುದೇ ರಾಜ ಮನೆತನದ ವಾಹನವಾಗಿತ್ತು. ಹಂಗರಿಯ ಕೋಚ್ಸ್ ಎಂಬಲ್ಲಿ ಮೊಟ್ಟಮೊದಲಿಗೆ ಒಂದು ಬಗೆಯ ವಿಶಿಷ್ಟ ರೀತಿಯ ವಾಹನವನ್ನು ಪ್ರಯೋಗಾರ್ಥವಾಗಿ ಬಳಸಿದ್ದರಿಂದ ಮುಂದೆ ಆ ಬಗೆಯ ವಾಹನಕ್ಕೆ ಕೋಚ್ ಎಂಬ ಹೆಸರು ಬಳಕೆಗೆ ಬಂದಿತು. ಆದರೆ ಅದರ ಉಚ್ಚಾರಣೆಯಲ್ಲಿ ಸಾಕಷ್ಟು ವ್ಯತ್ಯಾಸ ಉಂಟಾಯಿತು. ಇಂಗ್ಲೆಂಡಿನಲ್ಲಿ ಮೊದಲು ಕೊಚ್ ತಯಾರಾದದ್ದು 1555 ರಲ್ಲಿ. ಅನಂತರ ಎಲಿಜಬೆತ್ ರಾಣಿಯೂ ಭವ್ಯವಾದ ಕೋಚನ್ನು ಮಾಡಿಸಿಕೊಂಡುದಾಗಿ ಹೇಳಲಾಗಿದೆ. 1640 ರಲ್ಲಿ ಊರಿಂದೂರಿಗೆ ಪ್ರಯಾಣ ಮಾಡುವ ಸ್ಟೇಜ್ ಕೋಚುಗಳು ಬಳಕೆಗೆ ಬಂದುವು. ಹದಿನೇಳನೆಯ ಶತಮಾನದ ಹೊತ್ತಿಗೆ ಇವು ತುಂಬ ಜನಪ್ರಿಯವಾಗಿದ್ದುವು. ಇವುಗಳ ಅಲಂಕರಣದ ಬಗೆಗೂ ಶ್ರದ್ಧೆ ಹೆಚ್ಚಿತು. 1669 ಸ್ಯಾಮ್ಯುಯೆಲ್ ಪೆಪ್ಸ್ ಎಂಬಾತ ತನ್ನ ಕೋಚಿಗೆ ಗಾಜಿನ ಕಿಟಕಿಗಳನ್ನು ಹಾಕಿರುವುದಾಗಿ ಪ್ರಚಾರ ಮಾಡಿದನಂತೆ. ಗಾಜಿನ ಕಿಟಕಿ, ಪರದೆ, ಅಲಂಕರಣ ಇವುಗಳು ಹೆಚ್ಚಿದಂತೆ ಕೋಚುಗಳ ತೂಕ ಹೆಚ್ಚಿ ವೇಗ ಕಡಿಮೆಯಾಯಿತು. ಆಗ ಮತ್ತೊಮ್ಮೆ ಅವುಗಳ ಸರಳೀಕರಣದ ಗಮನ ಹರಿಯಿತು. 1784 ರಲ್ಲಿ ಊರಿಂದೂರಿಗೆ ಅಂಚೆಯನ್ನು ಒಯ್ಯಲೂ ಕೋಚುಗಳನ್ನು ಬಳಸಲಾಯಿತು. ಕೋಚುಗಳಿಗೆ ಒಂದೆಡೆ ಸ್ಪ್ರಿಂಗು ಮತ್ತು ಸ್ಪ್ರಿಂಗ್‌ಪ್ಲೇಟುಗಳನ್ನು ಅಳವಡಿಸಿ ರಸ್ತೆಯ ಆಘಾತ ಮತ್ತು ಕಂಪನಗಳನ್ನು ಕಡಿಮೆ ಮಾಡುವುದು, ಅವುಗಳ ರಚನೆಯನ್ನು ಸುಧಾರಿಸುವುದು ನಡೆದಂತೆ ಇನ್ನೊಂದೆಡೆ ರಸ್ತೆಗಳನ್ನು ಸುಧಾರಿಸುವ ಕೆಲಸವೂ ನಡೆದು, ಯುರೋಪಿನಲ್ಲಿ ಸುಂದರ ಸಾರ್ವಜನಿಕ ರಸ್ತೆಗಳು ಕಂಗೊಳಿಸತೊಡಗಿದುವು.



ಬಕ್‌ಬೋರ್ಡ್

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಕೋನ್‌ಸ್ಟೋಗಾ ವ್ಯಾಗನ್ 19 ನೆಯ ಶತಮಾನದಲ್ಲಿ ಕೊನೆಯಲ್ಲಿ ಬಳಕೆಗೆ ಬಂತು. ಪೆನ್ಸಿಲ್‌ವೇನಿಯದ ಕೋನ್‌ಸ್ಟೋಗಾ ಎಂಬಲ್ಲಿ ಅದನ್ನು ನಿರ್ಮಿಸಿದ್ದುದೇ ಈ ಹೆಸರು ಬಳಕೆಗೆ ಬರಲು ಕಾರಣ. ಮುಂದೆ ಸ್ವಯಂಚಾಲಿತ ವಾಹನಗಳಿಗೂ ಇದೇ ಹೆಸರು ಬಳಕೆಗೆ ಬಂತು.

ಚಕ್ರಗಳ ಸಂಖ್ಯೆ, ಪ್ರವೇಶ ವಿಧಾನ, ಸ್ಥಳಾವಕಾಶ, ಮೇಲ್ಛಾವಣಿ, ಸಾರಥಿಯ ಸ್ಥಳ, ಕುದುರೆ ಹೂಡುವ ವ್ಯವಸ್ಥೆ – ಇವುಗಳಿಗನುಗುಣವಾಗಿ ಕೋಚುಗಳು ವ್ಯಾಗನ್ನುಗಳು ಭಿನ್ನವಾಗಿರುತ್ತಿದ್ದುವು. ಎರಡು ಚಕ್ರದ ವಾಹನಗಳನ್ನು ಎಳೆಯಲು ಒಂದು ಅಥವಾ ಎರಡು ಕುದುರೆಗಳನ್ನು ಉಪಯೋಗಿಸುತ್ತಿದ್ದರು. ಒಬ್ಬರು ಅಥವಾ ಇಬ್ಬರಿಗೆ

ಸ್ಥಳಾವಕಾಶವಿರುತ್ತಿದ್ದ ಈ ವಾಹನಗಳು ಹಗುರಾಗಿರುತ್ತಿದ್ದುವು. ಪೋಲೋಕಾರ್ಟ್ ಕ್ಯಾಬ್ರಿಯೊಲೆ, ಡಾಗ್‌ಕಾರ್ಟ್ ಮತ್ತು ಸಲ್ಕಿ ಈ ಬಗೆಯವು. ಬಕ್‌ಬೋರ್ಡ್, ಬಗ್ಗಿ, ಸರ್ರಿ, ಬ್ಯಾರೂಷ್, ಬ್ರೂಮ್ ಇವು ನಾಲ್ಕು ಚಕ್ರದ ವಾಹನಗಳಾಗಿದ್ದುವು. ಸಾಮಾನ್ಯವಾಗಿ ಇವುಗಳ ಮುಂದಿನ ಚಕ್ರಗಳು ಆಕಾರದಲ್ಲಿ ಕಿರಿಯವಾಗಿರುತ್ತಿದ್ದುವು. ಕಡಿದಾದ ತಿರುವು ತೆಗೆದುಕೊಳ್ಳಲು ಅನುವು ಮಾಡಿ ಕೊಡುವುದೇ ಇದರ ಉದ್ದೇಶವಾಗಿತ್ತು. 19ನೆಯ ಶತಮಾನದ ಮಧ್ಯ ಭಾಗದ ಹೊತ್ತಿಗೆ ಸ್ವಯಂಚಾಲಿತ ವಾಹನಗಳ ಯುಗ ಆರಂಭವಾಗಿ, ದಿನಗಳೆದಂತೆ ಅವುಗಳ ಉತ್ಕರ್ಷ ಸಾಧಿತವಾಗುತ್ತ ಬಂದುದರಿಂದ ಈ ಎಲ್ಲ ವಾಹನಗಳೂ ಮೂಲೆಗುಂಪಾಗಿ, ಸೀಮಿತೋದ್ದೇಶಗಳಿಗೆ ಮಾತ್ರ ಬಳಕೆಯಾಗುತ್ತಿವೆ. ಕೆಲವಂತೂ ಅವಶೇಷ ಮಾತ್ರವಾಗಿ ಉಳಿದಿವೆ (**ನೋಡಿ– ತೇರು; ರಥ**). (ಪಿ.ಜಿ.ಡಿ.)


ಸರ್ರಿ

**ಗಾಡ್ವಿನ್ ಆಸ್ಟೆನ್ ಶಿಖರ :** ಹಿಮಾಲಯ ಪರ್ವತದ ಶಾಖೆಗಳಲ್ಲೊಂದಾದ ಕಾರಕೋರಂ ಶ್ರೇಣಿಯ ಉನ್ನತ ಶಿಖರಗಳಲ್ಲಿ ಒಂದು. ಇದಕ್ಕೆ $K^2$ (ಕೇಟೂ) ಶಿಖರ ಎಂದೂ ಹೆಸರಿದೆ. ಟಿಬೆಟ್ ಭಾಷೆಯಲ್ಲಿ ಇದರ ಹೆಸರು ದಾಪ್ಸಾಂಗ್. ಶ್ರೀನಗರದಿಂದ ಈಶಾನ್ಯಕ್ಕೆ 256 ಕಿಮೀ ದೂರದಲ್ಲಿದೆ. ವಿಶ್ವದಲ್ಲಿ ಇದು ಎರಡನೆಯ ಉನ್ನತ ಶಿಖರ. ಇದರ ಎತ್ತರ 8,611 ಮೀ. (28,251'). ಮಂಜುಗಡ್ಡೆ ಇದನ್ನು ಸದಾ ಮುಚ್ಚಿರುತ್ತದೆ. ಇದರ ನೆತ್ತಿಯನ್ನು ಮುಟ್ಟುವ ದಾರಿ ಅತ್ಯಂತ ದುರ್ಗಮವಾದ್ದು. 1850ರಲ್ಲಿ ಲೆಫ್ಟನೆಂಟ್ ಕರ್ನಲ್ ಹೆನ್ರಿ ಹ್ಯಾವರ್‌ಶ್ಯಾಮ್ ಗಾಡ್ವಿನ್ ಆಸ್ಟೆನ್ (1834 – 1923) ಎಂಬ ಭೂಗೋಳಶಾಸ್ತ್ರಜ್ಞ ಈ ಶಿಖರದ ಸರ್ವೇಕ್ಷಣೆ ಮಾಡಿದ. ಇದಕ್ಕೆ ಅವನ ಹೆಸರೇ ಬಳಕೆಗೆ ಬಂದಿದೆ. ಬಾಲ್ಟೊರೊ ನೀರ್ಗಲ್ಲ ನದಿ ಇಲ್ಲಿ ಉಗಮಿಸುತ್ತದೆ.

ಈ ಶಿಖರವನ್ನೇರಲು ಇಟಲಿಯ ಪರ್ವತಾರೋಹಣ ತಂಡವೊಂದು 1954 ರಲ್ಲಿ ಪ್ರಥಮವಾಗಿ ಪ್ರಯತ್ನಪಟ್ಟಿತು. ಈ ತಂಡದ ನಾಯಕನಾಗಿದ್ದವ ಮಿಲಾನ್ ವಿದ್ಯಾಪೀಠದ ಭೂವಿಜ್ಞಾನ ಪ್ರಾಧ್ಯಾಪಕ ಆರ್ಡಿಟೊ ಡೇಸಿಓ. ಅವನ ಅನಂತರ 1955ರಲ್ಲಿ ಜರ್ಮನ್ ಮತ್ತು ಇಂಗ್ಲಿಷ್ ಪರ್ವತಾರೋಹಣ ತಂಡಗಳು ಗಾಡ್ವಿನ್ ಶಿಖರವನ್ನು ಏರಿದುವು. *

**ಗಾಡ್ವಿನ್, ಮೇರಿ :** 1759–97. ಸ್ತ್ರೀಸುಧಾರಣೆಗಾಗಿ ದುಡಿದ ಆಂಗ್ಲ ಲೇಖಕಿ. ಐರಿಷ್ ಕುಟುಂಬದಿಂದ ಬಂದವಳು. ತಂದೆಯ ದುಂದಿನ ಪರಿಣಾಮವಾಗಿ, ತಾಯಿಯ ಮರಣಾನಂತರ 19ರ ತರುಣದಲ್ಲೇ ಈಕೆ ಸ್ವಾವಲಂಬಿಯಾಗಿ ಬಾಳಬೇಕಾಯಿತು. ಪ್ರಾರಂಭದಲ್ಲಿ ಕಸೂತಿ ಕೆಲಸ ಮಾಡಿ ಅನಂತರ ತಾನೇ ಪ್ರಾರಂಭಿಸಿದ ಶಾಲೆಯಲ್ಲಿ ಶಿಕ್ಷಕಿಯಾಗಿ ಸ್ವಲ್ಪ ಕಾಲ ದುಡಿದು ಶಾಲೆನಡೆಸುವುದು ಅಶಕ್ಯವಾದಾಗ ಬರೆವಣಿಗೆಗೆ ಕೈಹಾಕಿದಳು. ಈಕೆಯ ಮೊದಲ ಕಾದಂಬರಿ ಮೇರಿ ಎಂಬುದು ಒಂದು ಕಲ್ಪಿತ ಕಥನ. ಈಕೆ ಐರ್ಲೆಂಡ್‌ನಲ್ಲಿ ಲಾರ್ಡ್ ಕಿಂಗ್ಸ್‌ಬರಾನ ಮನೆಯಲ್ಲಿ ಮಕ್ಕಳಿಗೆ ಪಾಠ ಕಲಿಸುವ ಶಿಕ್ಷಕಿಯಾಗಿ ಸ್ವಲ್ಪಕಾಲ ಕೆಲಸ ಮಾಡಿದ್ದೂ ಉಂಟು. ಆ ಕೆಲಸವೂ ಹೋದಮೇಲೆ ಈಕೆಯ ಒಲವು ಪೂರ್ಣವಾಗಿ ಸಾಹಿತ್ಯದ ಕಡೆ ತಿರುಗಿತು. ಮೊದಲು ದಿ ಎಲಿಮೆಂಟ್ಸ್ ಆಫ್ ಮೊರ್‍ಯಾಲಿಟಿ ಮತ್ತು ಫಿಸಿಯಾನಮಿ ಎಂಬ ಎರಡು ಹೊತ್ತಿಗೆಗಳನ್ನು ಭಾಷಾಂತರಿಸಿದಳು. ಒರಿಜಿನಲ್ ಸ್ಟೋರೀಸ್ ಫ್ರಾಮ್ ರಿಯಲ್ ಲೈಫ್ (1791) ಎಂಬ ಈಕೆಯ ಪುಸ್ತಕಕ್ಕೆ ಕವಿ ವಿಲಿಯಂ ಬ್ಲೇಕ್ ಚಿತ್ರಗಳನ್ನು ಬರೆದಿದ್ದಾನೆ. ಮಾರನೆಯ ವರ್ಷವೇ ಸ್ತ್ರೀಯ ಹಕ್ಕುಗಳನ್ನು ಸಮರ್ಥಿಸಿ ಈಕೆ ಬರೆದ ಪ್ರಸಿದ್ಧ ಗ್ರಂಥ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವಿಮೆನ್ ಎಂಬುದು ಹೊರಬಂತು. ಆಗಿನ ಸಮಾಜದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದ ಈ ಗ್ರಂಥದಲ್ಲಿ ಸ್ತ್ರೀಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಲಾಗಿದೆ. 1792 ರಲ್ಲಿ ಫ್ರಾನ್ಸಿನ ಕ್ರಾಂತಿಯ ಪ್ರಗತಿಯನ್ನು ವೀಕ್ಷಿಸಲು ಹೋದಾಗ ಕ್ಯಾಪ್ಟನ್ ಗಿಲ್ಬರ್ಟ್ ಇಮ್‌ಲಿ ಎಂಬುವನನ್ನು ಪ್ಯಾರಿಸಿನಲ್ಲಿ ಭೇಟಿಯಾದಳು. ಇಬ್ಬರಿಗೂ ವಿವಾಹವಾಯಿತು. ಒಬ್ಬ ಮಗಳು ಹುಟ್ಟಿದ ಅನಂತರ 1794ರಲ್ಲಿ ವಿವಾಹ ವಿಚ್ಛೇದವಾಯಿತು. ಇದೇ ಸಮಯದಲ್ಲಿ ಈಕೆ ಫ್ರಾನ್ಸಿನ ಮಹಾಕ್ರಾಂತಿಯನ್ನು ಕುರಿತು ಒಂದು ಗ್ರಂಥ ಬರೆದಳು. 1796ರಲ್ಲಿ ಈಕೆ ಲಂಡನ್ನಿಗೆ ಬಂದು ಇಂಗ್ಲಿಷ್ ಲೇಖಕ, ತತ್ತ್ವಶಾಸ್ತ್ರನಿಪುಣ ವಿಲಿಯಂ ಗಾಡ್ವಿನ್ ಎಂಬಾತನನ್ನು ಸಂಧಿಸಿದಳು. ಮಾರನೆಯ ವರ್ಷವೇ ಇವರಿಬ್ಬರೂ ವಿವಾಹವಾದರು. ಅದೇ ವರ್ಷ ಮೇರಿ ಎಂಬ ಹೆಣ್ಣು ಮಗುವಿಗೆ ಜನ್ಮವಿತ್ತು ಗಾಡ್ವಿನ್ ತೀರಿಕೊಂಡಳು. ಮುಂದೆ ಕವಿ ಷೆಲ್ಲಿ ಇದೇ ಮೇರಿಯನ್ನು ಮದುವೆಯಾದ.

ಗಾಡ್ವಿನ್ ಬರೆದಿರುವ ಗ್ರಂಥಗಳಲ್ಲಿ ಮುಖ್ಯವಾದ ಇನ್ನೆರಡು ಗ್ರಂಥಗಳು ಇವು: ಥಾಟ್ಸ್ ಆನ್ ದಿ ಎಜುಕೇಷನ್ ಆಫ್ ಡಾಟರ್ಸ್; ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ಮ್ಯಾನ್.

ಗಾಡ್ವಿನ್ ಮೇರಿಯ ಜೀವನ ಚರಿತ್ರೆಯನ್ನು ಗಂಡ ವಿಲಿಯಂ ಗಾಡ್ವಿನ್ ಬರೆದಿದ್ದಾನೆ. (ಪಿ.ಎಂ.ಎಚ್.)

**ಗಾಡ್ವಿನ್, ವಿಲಿಯಂ :** 1756–1836. ಇಂಗ್ಲಿಷ್ ಕಾದಂಬರಿಕಾರ ಮತ್ತು ತತ್ತ್ವಶಾಸ್ತ್ರಜ್ಞ. ಕೇಂಬ್ರಿಜ್‌ಷೈರಿನ ವಿಸ್‌ಬೆಕ್ ಎಂಬಲ್ಲಿ ಜನಿಸಿದ. ವ್ಯಾಸಂಗ ಮಾಡಿದ್ದು ನಾರ್ವಿಚ್ ಶಾಲೆಯಲ್ಲಿ. ತಂದೆ ಮತಾಧಿಕಾರಿ, ಮಗನೂ ತನ್ನಂತೆ ಆಗಬೇಕೆಂದು ಆತನ ಬಯಕೆ. ಅದಕ್ಕಾಗಿ ಮಗ ಹಾಕ್ಸ್‌ಟನ್ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಬೇಕಾಯಿತು. ವ್ಯಾಸಂಗಾನಂತರ ಗಾಡ್ವಿನ್ 1778 ರಿಂದ 1783 ರ ವರೆಗೆ ಕ್ರೈಸ್ತ ಪುರೋಹಿತನಾಗಿ ಕೆಲಸ ಮಾಡಿದ. 1782 ರಲ್ಲಿ ಲಂಡನ್ ನಗರಕ್ಕೆ ಬಂದು ನೆಲಸಿದ. ಮತಧರ್ಮದ ವಿಚಾರದಲ್ಲಿ ಬಗೆಹರಿಯದ ಶಂಕೆಗಳುಂಟಾಗಿ ಧರ್ಮದ ಬಗ್ಗೆ ಹೊಸ ಭಾವನೆಗಳು, ನಂಬಿಕೆಗಳು ಮೂಡಿದ್ದರಿಂದ ಪುರೋಹಿತ ಕೆಲಸಕ್ಕೆ ರಾಜೀನಾಮೆ ಇತ್ತು ಸಾಹಿತ್ಯದ ಕಡೆ ತಿರುಗಿದ. ಪ್ರಾರ್ಥನಾಸಭೆಯ ಉಪದೇಶ ಭಾಷಣಗಳ ಶೈಲಿಯಲ್ಲಿ ಈತ ಬರೆದ ಇತಿಹಾಸ ಚಿತ್ರಗಳ ಮೊದಲ ಪುಸ್ತಕ ಯಾರ ಗಮನವನ್ನೂ ಸೆಳೆಯಲಿಲ್ಲ. ಅನಂತರ ಗಾಡ್ವಿನ್ ನ್ಯೂ ಆನ್ಯುಯಲ್ ರಿಜಿಸ್ಟರಿನ ಪ್ರಮುಖ ಲೇಖಕರಲ್ಲಿ ಒಬ್ಬನಾಗಿ ರಾಜಕೀಯ ಮತ್ತು ಸಾಮಾಜಿಕ ಸುಧಾರಕನೆಂದು ಪ್ರಸಿದ್ಧಿ ಪಡೆದ. ಸರ್ಕಾರದಿಂದ ಅಧಿಕಾರದ ದುರುಪಯೋಗವಾಗುತ್ತದಾಗಿ ಅದರ ಅಗತ್ಯವಿಲ್ಲ. ಪರಸ್ಪರ ಗೌರವಯುತ ಸಂಬಂಧ ಮುಖ್ಯವಾದ್ದರಿಂದ ವಿವಾಹ ವಿಧಿಯ ಅಗತ್ಯವಿಲ್ಲ – ಮುಂತಾದ ಈತನ ತತ್ತ್ವಗಳನ್ನು ಇನ್‌ಕ್ವಯರಿ ಕನ್ಸರ್ನಿಂಗ್ ಪೊಲಿಟಿಕಲ್ ಜಸ್ಟೀಸ್ (1793) ಎಂಬ ಗ್ರಂಥದಲ್ಲಿ ಕಾಣುತ್ತೇವೆ. ಒಂದು ವರ್ಷದ ಅನಂತರ ಈತನ ಸಾಮಾಜಿಕ ಸಿದ್ಧಾಂತಗಳನ್ನೊಳಗೊಂಡ ಕಾಲೆಬ್ ವಿಲಿಯಂಸ್ ಎಂಬ ಪ್ರಸಿದ್ಧ ಕಾದಂಬರಿ ಹೊರಬಂತು. ಈತನ ಪ್ರಸಿದ್ಧ ಕಾದಂಬರಿಗಳಲ್ಲಿ ಎರಡನೆಯದು ಸೇಂಟ್ ಲಿಯಾನ್ (1799), ಫ್ಲೀಟ್‌ವುಡ್ (1804), ಮ್ಯಾಂಡೆವಿಲ್ (1817) ಮತ್ತು ಕ್ಲೌಡ್‌ಸ್ಲೇ (1830) ಈತನ ಇತರ ಕಾದಂಬರಿಗಳು. ಗಾಡ್ವಿನ್ 1803ರಲ್ಲಿ ಚಾಸರನ ಜೀವನ ಚರಿತ್ರೆಯನ್ನು ಎರಡು ಸಂಪುಟಗಳಲ್ಲಿ ಹೊರತಂದ. 1808 ರಲ್ಲಿ ಎನ್ ಎಸ್ಸೆ ಆನ್ ಸೆಪಲ್‌ಕರ್ಸ್ ಎಂಬುದೂ 1824–28ರಲ್ಲಿ ಹಿಸ್ಟರಿ ಆಫ್ ದಿ ಕಾಮನ್‌ವೆಲ್ತ್ ಆಫ್ ಇಂಗ್ಲೆಂಡ್ ಎಂಬುದೂ ಬೆಳಕು ಕಂಡವು. ಈತನ ಕೊನೆಯ ಕೃತಿ ಲೈವ್ಸ್ ಆಫ್ ದಿ ನೆಕ್ರೊಮ್ಯಾನ್ಸರ್ 1834ರಲ್ಲಿ ಪ್ರಕಟವಾಯಿತು. ಕೆಲವು ಕಾಲ ಗಾಡ್ವಿನ್ ಪುಸ್ತಕ ಪ್ರಕಟಣ ಉದ್ಯೋಗವನ್ನೂ ಕೈಗೊಂಡಿದ್ದ.

ಗಾಡ್ವಿನ್ 1797ರಲ್ಲಿ ಮೇರಿ ಉಲ್‌ಸ್ಟನ್‌ಕ್ರ್ಯಾಫ್ಟ್ (ನೋಡಿ– ಗಾಡ್ವಿನ್,–ಮೇರಿ) ಎಂಬಾಕೆಯನ್ನು ವಿವಾಹವಾದನಲ್ಲದೆ ಆಕೆಯ ಜೀವನಚರಿತ್ರೆಯೊಂದನ್ನು ಬರೆದಿದ್ದಾನೆ. ಆಕೆಯ ಮರಣಾನಂತರ 1801ರಲ್ಲಿ ಮೇರಿ ಜೇನ್ ಕ್ಲೈರ್‌ಮಾಂಟ್ ಎಂಬ ವಿಧವೆಯನ್ನು ಈತ ವಿವಾಹವಾದ.

ಗಾಡ್ವಿನ್‌ಮೇರಿ ಮತ್ತು ಗಾಡ್ವಿನ್ ವಿಲಿಯಂ ಪುತ್ರಿ ಮೇರಿಯನ್ನು 1816ರಲ್ಲಿ ಷೆಲ್ಲಿ ವಿವಾಹವಾದ.

ವರ್ಡ್ಸ್‌ವರ್ತ್, ಕೋಲ್‌ರಿಜ್ ಮತ್ತು ಷೆಲ್ಲಿ ಮೊದಲಾದವರು ಗಾಡ್ವಿನ್‌ನಿಂದ ಸಾಕಷ್ಟು ಪ್ರಭಾವಿತರಾಗಿದ್ದಾರೆ. *

**ಗಾಡ್ವಿನ್, ಹೆನ್ರಿ ಥಾಮಸ್ :** 1784–1853. ಬ್ರಿಟಿಷ್ ಭಾರತ ಸೇನೆಯ ಒಬ್ಬ ಅಧಿಕಾರಿ. 1824–26ರಲ್ಲಿ ಒಂದನೆಯ ಬರ್ಮ ಯುದ್ಧದಲ್ಲಿ ಭಾಗವಹಿಸಿದ್ದ. 1846ರಲ್ಲಿ ಮೇಜರ್ ಜನರಲ್ ಆದ.

1852–53ರಲ್ಲಿ ನಡೆದ ಎರಡನೆಯ ಬರ್ಮ ಯುದ್ಧದಲ್ಲಿ ಗಾಡ್ವಿನ್ ನಾಯಕತ್ವದಲ್ಲಿ ಬ್ರಿಟಿಷ್ ಭೂಸೇನೆ ಕಾರ್ಯಾಚರಣೆ ನಡೆಸಿತು. ತನ್ನ ಸಾಹಸಕ್ಕಾಗಿ ನೈಟ್ ಪದವಿ ಪಡೆದಿದ್ದ ಗಾಡ್ವಿನ್ 1853ರಲ್ಲಿ ಸಿಮ್ಲಾದಲ್ಲಿ ತೀರಿಕೊಂಡ. (ವಿ.ಕೆ)

**ಗಾಡ್‌ಹ್ಯೂ :** ಫ್ರೆಂಚ್ ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕರಲ್ಲೊಬ್ಬ. ಭಾರತದಲ್ಲಿ ಫ್ರೆಂಚ್ ಗವರ್ನರ್–ಜನರಲ್ ಆಗಿದ್ದ ಡ್ಯುಪ್ಲೆಕ್ಸನನ್ನು ಅಧಿಕಾರದಿಂದ ತೆಗೆದುಹಾಕಲು ಮತ್ತು ಅಲ್ಲಿ ಫ್ರೆಂಚರ ಸ್ಥಿತಿಗತಿಗಳ ವಿಚಾರಣೆ ನಡೆಸಲು ಫ್ರೆಂಚ್ ಕಂಪನಿ ಇವನನ್ನು 1754ರಲ್ಲಿ ಭಾರತಕ್ಕೆ ಕಳುಹಿಸಿತು. ಇವನು 1754ರ ಆಗಸ್ಟ್ ತಿಂಗಳಲ್ಲಿ ಪಾಂಡಿಚೇರಿಯನ್ನು ತಲುಪಿದ. ಆ ವೇಳೆಗೆ ದಕ್ಷಿಣ ಭಾರತದಲ್ಲಿ ಫ್ರೆಂಚರ ಬಲ ಕುಂದುತ್ತಿತ್ತು. ಡ್ಯುಪ್ಲೆಕ್ಸ್ ಆ ಕಾಲದ ವಿವಾದಾಸ್ಪದ ವ್ಯಕ್ತಿಯಾಗಿದ್ದ. ಅವನ ರಾಷ್ಟ್ರ ಪ್ರೇಮ, ನಿಷ್ಠೆ, ಸಾಹಸ ಮತ್ತು ಗುರಿಗಳು ಫ್ರೆಂಚರ ದೃಷ್ಟಿಯಲ್ಲಿ ಸಂಶಯಾತೀತವಾಗಿದ್ದುವಾದರೂ ಅವನು ತನ್ನ ಯೋಜನೆಗಳನ್ನು ಕಾರ್ಯಗತಮಾಡಿದ ವಿಧಾನ ಮಾತ್ರ ದೋಷಯುಕ್ತವಾಗಿದ್ದುವು. ಪರಿಸರದ ಪ್ರತಿಕೂಲತೆಯಿಂದಾಗಿ ವಿಫಲತೆಗೊಂಡಿದ್ದುವು. ಗಾಡ್‌ಹ್ಯೂ ಭಾರತಕ್ಕೆ ಬಂದದ್ದು ಇಂಥ ಹಿನ್ನೆಲೆಯಲ್ಲಿ.

ಗಾಡ್‌ಹ್ಯೂ ಭಾರತಕ್ಕೆ ಬಂದೊಡನೆಯೇ ಇಂಗ್ಲಿಷರೊಂದಿಗೆ ಯುದ್ಧ ನಿಲ್ಲಿಸಿದ. 1755ರ ಜನವರಿಯಲ್ಲಿ ಅವರೊಂದಿಗೆ ತಾತ್ಕಾಲಿಕ ಒಪ್ಪಂದ ಮಾಡಿಕೊಂಡ. ಭಾರತದ ರಾಜರ ವ್ಯವಹಾರಗಳಲ್ಲಿ ಕೈಹಾಕುವುದಿಲ್ಲವೆಂದು ಎರಡು ಪಕ್ಷಗಳೂ ಒಪ್ಪಿಕೊಂಡವು. ಇಂಗ್ಲಿಷರ ಅಧೀನ ಪ್ರದೇಶಗಳಿಗೆ ಫ್ರೆಂಚರೂ ಫ್ರೆಂಚರಿಗೆ ಸೇರಿದ್ದ ಪ್ರದೇಶಗಳಿಗೆ ಇಂಗ್ಲಿಷರೂ ಮನ್ನಣೆ ನೀಡಬೇಕೆಂಬುದು ಒಪ್ಪಂದದ ಷರತ್ತುಗಳಲ್ಲೊಂದು. ಈ ಒಪ್ಪಂದವನ್ನು ಎರಡು ಕಂಪನಿಗಳೂ ಅನುಮತಿಸಬೇಕಾಗಿತ್ತು. ಆದರೆ ಅಷ್ಟರಲ್ಲಿ (1756) ಯುರೋಪಿನಲ್ಲಿ ಏಳು ವರ್ಷಗಳ ಯುದ್ಧ ಪ್ರಾರಂಭವಾದ್ದರಿಂದ ಫ್ರಾನ್ಸ್ ಮತ್ತು ಬ್ರಿಟನ್ ಪುನಃ ಯುದ್ಧಕ್ಕೆ ಇಳಿದುವು. ತತ್ಫಲವಾಗಿ ಈ ಒಪ್ಪಂದ ಕಾರ್ಯಗತವಾಗಲೇ ಇಲ್ಲ.

ಗಾಡ್‌ಹ್ಯೂ ಮಾಡಿಕೊಂಡ ಒಪ್ಪಂದ ದೇಶದ ಅವನತಿಗೆ ಮತ್ತು ರಾಷ್ಟ್ರದ ಅವಮಾನಕ್ಕೆ ಮಾಡಿದ ರುಜು ಎಂದು ಡ್ಯುಪ್ಲೆಕ್ಸ್ ಟೀಕಿಸಿದ. ಈ ಪ್ರಸಂಗದ ಬಗ್ಗೆ ಇತಿಹಾಸಕಾರರ ಅಭಿಪ್ರಾಯ ವಿಭಿನ್ನವಾದ್ದು. ತನ್ನ ಅಸಮರ್ಥ ಸೈನ್ಯದಿಂದಾಗಲೀ ಭಾರತದಲ್ಲಿ ಫ್ರೆಂಚರ ಅಂದಿನ ಸ್ಥಿತಿಗತಿಗಳಿಂದಾಗಲೀ ಗಾಡ್‌ಹ್ಯೂ ಬ್ರಿಟಿಷರ ವಿರುದ್ಧ ಯುದ್ಧಹೂಡುವ ಸ್ಥಿತಿಯಲ್ಲಿರಲಿಲ್ಲವೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಆರ್ಥಿಕವಾಗಿಯಾಗಲೀ ಸೈನ್ಯಬಲದಲ್ಲಿಯಾಗಲೀ ಫ್ರೆಂಚರು ಬ್ರಿಟಿಷರಿಗೆ ಸರಿಗಟ್ಟುವಂತಿರಲಿಲ್ಲ. ಭಾರತದಲ್ಲಿ ಫ್ರೆಂಚರ ವಸಾಹತು ನಿರ್ಮಿಸುವ ಆಶೆ ಕೊನೆಗೊಂಡದ್ದು ಏಳು ವರ್ಷಗಳ ಯುದ್ಧದಿಂದಲೇ ಹೊರತು ಗಾಡ್‌ಹ್ಯೂ ಮಾಡಿಕೊಂಡ ಒಪ್ಪಂದದಿಂದಲ್ಲವೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಆದರೂ ಗಾಡ್‌ಹ್ಯೂ ಮಾಡಿಕೊಂಡ ಈ ಒಪ್ಪಂದ ಫ್ರೆಂಚರಿಗೆ ಯಾವ ರೀತಿಯಲ್ಲೂ ಅನುಕೂಲವಾಗುವಂತಿರಲಿಲ್ಲವೆಂಬುದು ನಿಜ.

ಗಾಡ್‌ಹ್ಯೂ ಡ್ಯುಪ್ಲೆಕ್ಸ್‌ನನ್ನು ಹುದ್ದೆಯಿಂದ ತೆಗೆದುಹಾಕಿದ್ದು ಮತ್ತು ಅನಂತರ ಅವನ ಬಗ್ಗೆ ವ್ಯವಹರಿಸಿದ ರೀತಿ–ಇವು ಡ್ಯುಪ್ಲೆಕ್ಸ್‌ನ ಕೊನೆಯ ಕಾಲದ ದುಃಸ್ಥಿತಿಗೆ ಕಾರಣವಾದುದೆಂದು ಒಂದು ವಾದವಿದೆ. ಆದರೆ ಡ್ಯುಪ್ಲೆಕ್ಸ್ ಸ್ವದೇಶಕ್ಕೆ ಮರಳಲು ಗಾಡ್‌ಹ್ಯೂ ಸಾಕಷ್ಟು ಸಹಾಯ ಮಾಡಿದ. ಫ್ರೆಂಚ್ ಕಂಪನಿ ಡ್ಯುಪ್ಲೆಕ್ಸ್‌ನನ್ನು ಕಡೆಗಣಿಸಿದ್ದರಿಂದ ಅವನಿಗೆ ಆ ಗತಿ ಬಂತೇ ಹೊರತು ಗಾಡ್‌ಹ್ಯೂನಿಂದಲ್ಲವೆಂಬುದು ಹಲವು ಇತಿಹಾಸಕಾರರ ಅಭಿಮತ. (ಡಿ.ಎಸ್.ಜೆ.)

**ಗಾಣಗಾಪುರ :** ದತ್ತಸಂಪ್ರದಾಯದ ಒಂದು ಪವಿತ್ರ ತೀರ್ಥಕ್ಷೇತ್ರ ಕರ್ನಾಟಕದ ಗುಲ್ಬರ್ಗ ಜಿಲ್ಲೆಯಲ್ಲಿ ಪುಣೆ – ರಾಯಚೂರು ರೈಲುಮಾರ್ಗದಲ್ಲಿರುವ ಗಾಣಗಾಪುರ ರೈಲುನಿಲ್ದಾಣದಿಂದ 22 ಕಿಮೀ ದೂರದಲ್ಲಿ ಭೀಮಾ– ಅಮರಜ ನದಿಗಳ ಸಂಗಮದ ಹತ್ತಿರ ಈ ಊರು ಇದೆ. ಶ್ರೀಗುರುಚರಿತ್ರೆ ಎಂಬ ಗ್ರಂಥದಲ್ಲಿ ಇದನ್ನು ಗಾಣಗಾಪುರ, ಗಾಣಗಾಭವನ, ಗಂಧರ್ವಭವನ, ಗಂಧರ್ವಪುರ ಎಂಬ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ದತ್ತಾವತಾರಿ ಎಂದು ಪ್ರಸಿದ್ಧಿಹೊಂದಿರುವ ಶ್ರೀನರಸಿಂಹ ಸರಸ್ವತಿಯವರು ವಾಡಿ ಎಂಬ ಊರಿನಿಂದ ಇಲ್ಲಿಗೆ ಬಂದು ಸುಮಾರು 23 ವರ್ಷ ನೆಲೆಸಿದ್ದರು. ಈ ಅವಧಿಯಲ್ಲಿ ಇಲ್ಲಿ ದತ್ತಸಂಪ್ರದಾಯವನ್ನನುಸರಿಸುವವರ ಸಂಖ್ಯೆ ಹೆಚ್ಚಾಯಿತು. ಸರಸ್ವತಿಯವರು ಮೊದಲು ಸಂಗಮದ ಹತ್ತಿರವೇ ವಾಸವಾಗಿದ್ದು ಅನಂತರ ಊರ ಮಧ್ಯದಲ್ಲಿರುವ ಮಠದಲ್ಲಿರತೊಡಗಿ ಮುಂದೆ ಶ್ರೀಶೈಲದ ಕಡೆಗೆ ತೆರಳಿದರು.

ಮಠದ ಆವಾರದಲ್ಲಿ ಮಹಾದೇವ – ಪಾರ್ವತಿಯರ ಮೂರ್ತಿ, ಅಶ್ವತ್ಥವೃಕ್ಷದ ಪೊದರಿನಲ್ಲಿ ನಾಗನಾಥ ಮತ್ತು ಹನುಮಂತನ ಮೂರ್ತಿಗಳು ತುಲಸೀ ವೃಂದಾವನಗಳು ಗೋಚರವಾಗುತ್ತವೆ. ಈ ಮಠದಲ್ಲಿರುವ ಶ್ರೀಗುರುಗಳ ಪಾದುಕೆಗಳು ನಿರ್ಗುಣ ಪಾದುಕೆಗಳೆಂದು ಹೆಸರಾಗಿವೆ. ವಾಡಿಯಲ್ಲಿರುವ ಪಾದುಕೆಗಳನ್ನು ಮನೋಹರ ಪಾದುಕೆಗಳೆನ್ನುತ್ತಾರೆ. ಮಠದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಎರಡು ಮಹಾದ್ವಾರಗಳಿವೆ. ಪಶ್ಚಿಮದ ಮಹಾದ್ವಾರ ವಿಶಾಲವಾಗಿದ್ದು ಅದರ ಮಹಡಿಯಲ್ಲಿ ನಗಾರಖಾನೆ (ದೇವಸ್ಥಾನದ ನಗಾರಿಗಳನ್ನು ಬಾರಿಸುವ ಜಾಗ) ಇದೆ. ಭಕ್ತಾದಿಗಳು ಕೂಡಲು ಯೋಗ್ಯವಾದ ಏಳು ಜಗಲಿಗಳಿವೆ. ಗರ್ಭಗುಡಿಯಲ್ಲಿನ ಪಾದುಕೆಗಳ ದರ್ಶನ ಮಾಡಬೇಕಾದರೆ ಉಡುಪಿಯಲ್ಲಿರುವಂತೆ ಒಂದು ಬೆಳ್ಳಿಯ ಕಿಟಕಿಯ ಮೂಲಕ ನೋಡಬೇಕಾಗುತ್ತದೆ. ಇಲ್ಲಿ ನಿತ್ಯೋಪಾಸನೆ ಬೆಳಗ್ಗಿನಿಂದ ಪ್ರಾರಂಭವಾಗುತ್ತದೆ. ಪಾದುಕೆಗಳಿಗೆ ಜಲಸ್ಪರ್ಶ ಮಾಡುವುದಿಲ್ಲ. ಕೇಸರಿ ಮತ್ತು ಅಷ್ಟಗಂಧಗಳನ್ನು ಲೇಪಿಸುತ್ತಾರೆ. ಪ್ರತಿ ಗುರುವಾರ ರಾತ್ರಿ ಪಲ್ಲಕ್ಕಿಸೇವೆ ನಡೆಯುತ್ತದೆ.

ಊರಿನಿಂದ 1.6 ಕಿಮೀ ದೂರದಲ್ಲಿ ಭೀಮಾ– ಅಮರಜ ನದಿಗಳ ಸಂಗಮದ ಹತ್ತಿರ ಭಸ್ಮದ ರಾಶಿಯಿದೆ. ಹಿಂದೆ ಇಲ್ಲಿ ಯಜ್ಞಕಾರ್ಯಗಳು ನೆರವೇರುತ್ತಿದ್ದು ಆ ಯಜ್ಞಭೂದಿಯನ್ನು ಹೀಗೆ ಒಂದು ಕಡೆ ಗುಡ್ಡೆ ಮಾಡಲಾಗಿದೆಯೆಂದು ಪ್ರತೀತಿ. ಭಾವುಕ ಭಕ್ತರು ಸ್ನಾನಮಾಡಿದ ಅನಂತರ ಈ ಭಸ್ಮವನ್ನು ಲೇಪಿಸಿಕೊಳ್ಳುವರು. ಸಂಗಮೇಶ್ವರ ದೇವಾಲಯದ ಎದುರು ಶ್ರೀನರಸಿಂಹ ಸರಸತ್ವಿಯವರ ತಪೋಭೂಮಿ ಇದೆ. ಸಂಗಮದಿಂದ ಊರಿಗೆ ಬರುವ ದಾರಿಯಲ್ಲಿ ಷಟ್‌ಕುಲತೀರ್ಥ, ನರಸಿಂಹತೀರ್ಥ, ಭಾಗೀರಥೀತೀರ್ಥ, ಪಾಪವಿನಾಶಿತೀರ್ಥ, ಕೋಟಿತೀರ್ಥ, ರುದ್ರಪಾದತೀರ್ಥ, ಚಕ್ರತೀರ್ಥ ಮತ್ತು ಮನ್ಮಥತೀರ್ಥ ಎಂಬ ಎಂಟು ತೀರ್ಥಗಳಿವೆ. ಇಲ್ಲಿನ ತೀರ್ಥಗಳಲ್ಲಿ ಸ್ನಾನಮಾಡಿದರೆ ಅನೇಕ ಫಲಗಳು ಪ್ರಾಪ್ತಿಯಾಗುತ್ತವೆ ಎಂಬ ನಂಬಿಕೆ.

ಗಾಣಗಾಪುರದ ಉತ್ಸವ ಸಮಾರಂಭಗಳಲ್ಲಿ ಶ್ರೀದತ್ತಜಯಂತಿ ಮತ್ತು ಶ್ರೀನರಸಿಂಹ ಸರಸ್ವತಿಯವರ ಪುಣ್ಯತಿಥಿ – ಇವೆರಡು ವಿಶೇಷ ಮಹತ್ತ್ವದವು. ಶ್ರೀಗುರುವಿನ ಜೀವನಕಾರ್ಯ ಇಲ್ಲಿಯೇ ನಡೆದುದರಿಂದ ಈಗ ಸು. 500 ವರ್ಷಗಳಿಂದ ಇದು ಭಕ್ತರಿಗೆ ಜಾಗೃತ ಸ್ಥಾನವಾಗಿದೆ.

ಆಧಿವ್ಯಾಧಿಗಳಿಂದ ಬಳಲುವ ಅನೇಕ ಜನ ತಮ್ಮ ದುಃಖನಿವಾರಣೆಗಾಗಿ ಇಲ್ಲಿಗೆ ಬಂದು ಸೇವೆಮಾಡಿ ಶ್ರೀಗುರುಚರಿತ ಪಾರಾಯಣಮಾಡಿ ಭಿಕ್ಷಾ ಜೀವನವನ್ನು ನಡೆಸುವರು. ಶ್ರೀಗುರುಚರಿತ್ರೆಯಲ್ಲಿನ ಚಮತ್ಕಾರಿ ಕಥೆಗಳನ್ನೋದುವುದರಿಂದ ಶ್ರದ್ಧಾಜೀವನವನ್ನನುಸರಿಸುವುದರಲ್ಲಿ ವಿಶ್ವಾಸ ಹುಟ್ಟುತ್ತದೆ. ಮಠದಲ್ಲಿ ಮಧ್ಯಾಹ್ನ ಮಹಾನೈವೇದ್ಯ ನಡೆಯುತ್ತದೆ. ಅನಂತರ ಸೇವಾಕರ್ತರು ಮಧುಕರಿ ಬೇಡಲು ಹೋಗುತ್ತಾರೆ. ಧನಿಕರಾದ ಅನೇಕ ದತ್ತಭಕ್ತರು ಸೇವಾಕರ್ತರಿಗೆ ಧನಧಾನ್ಯ ಸಹಾಯ ಒದಗಿಸುತ್ತಿದ್ದಾರೆ. ದತ್ತವ್ರತದ ಪ್ರಕಾರ ಪ್ರತಿಯೊಬ್ಬ ಯಾತ್ರಿಕನೂ ಕನಿಷ್ಠಪಕ್ಷ ಐದು ಮನೆಗಳಿಗಾದರೂ ಹೋಗಿ ಬೇಡಬೇಕು ಎಂಬುದು ನಿಯಮ. ಭಾವುಕ ಭಕ್ತರು ಈ ನಿಯಮವನ್ನು ಅತ್ಯಂತ ಶ್ರದ್ಧೆಯಿಂದ ಪಾಲಿಸುತ್ತಾರೆ. *

**ಗಾಣದ ಕನ್ನಪ್ಪ :** ಬಸವೇಶ್ವರನ ಸಮಕಾಲೀನನೆನ್ನಲಾದ ಒಬ್ಬ ಶಿವಶರಣ, ವಚನಕಾರ, ಕನ್ನಯ್ಯಪ್ರಿಯ ಗುಹೇಶ್ವರನ ಶರಣ, ಗುಹೇಶ್ವರನಲ್ಲಯ್ಯ ಎಂಬ ಅಂಕಿತಗಳಲ್ಲಿ ವಚನಗಳನ್ನು ರಚಿಸಿದ್ದಾನೆ. ವೃತ್ತಿಯಿಂದ ಈತ ಮೀನುಗಾರ. ಗುರುರಾಜಚಾರಿತ್ರ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ಗ್ರಂಥಗಳಲ್ಲಿ ಈತನ ಪ್ರಸ್ತಾಪವಿದೆ.

ಕಲ್ಯಾಣಪಟ್ಟಣದ ತ್ರಿಪುರಾಂತಕ ಕೆರೆಯಲ್ಲಿ ಗಾಳಹಾಕಿ ಮೀನು ಹಿಡಿಯುವ ಕಾಯಕದಲ್ಲಿ ಪ್ರವೃತ್ತನಾದ ಕನ್ನಪ್ಪ ಹಾಗೂ ಆತನ ಧರ್ಮಪತ್ನಿ ರೇಚವ್ವೆ ಶಿವಭಕ್ತಿ ಸಂಪನ್ನರು. ಇವರು ಶಿವಾನುಭವ ಸದ್ಗೋಷ್ಠಿಗಳಲ್ಲಿ ಭಾಗವಹಿಸಿ ಲಿಂಗಭಕ್ತಿಯಲ್ಲಿ ನಿರತರಾಗಿ ಗುಪ್ತಭಕ್ತಿಯುಳ್ಳವರಾಗಿದ್ದರು. ಕನ್ನಪ್ಪ ಅಂದಂದಿಗೆ ಹಿಡಿದ ಮೀನುಗಳನ್ನು ಅಂದಂದೇ ಮಾರಿ ಬಂದ ಹಣದಿಂದ ಜಂಗಮ ಸೇವೆ ಮಾಡುತ್ತಿದ್ದ. ಒಮ್ಮೆ ಈತನಿಗೆ ಗಣಾರಾಧನೆ ಮಾಡಬೇಕೆಂಬ ಅಭಿಲಾಷೆಯಾಯಿತು. ಅಂದು ಲಿಂಗಪೂಜೆಗೆ ಕುಳಿತಾಗ ಅಗೋಚರವಾಗಿ ಒಂದು ದನಿ ನಿನಗೇನು ಬೇಕು – ಎಂದಂತಾಯಿತು. ಕೂಡಲೆ ಕನ್ನಪ್ಪ ಸ್ವರ್ಣಮತ್ಸ್ಯ – ಎನ್ನಲಾಗಿ, ಹಾಗೆಯೇ ಆಗಲಿ ಎಂದು ಉತ್ತರವೂ ಬಂತು.

ನಿತ್ಯದ ಕಾಯಕದಂತೆ ಕನ್ನಪ್ಪ ಅಂದು ತ್ರಿಪುರಾಂತಕ ಕೆರೆಯಲ್ಲಿ ಗಾಳ ಹಾಕಿದ್ದಾಗ ಚಿನ್ನದ ಮೀನೇ ಅದಕ್ಕೆ ತಗಲಿಕೊಂಡಿತು. ಸಂತೋಷಗೊಂಡ ಕನ್ನಪ್ಪ ಅದನ್ನು ಮಾರಿ ಹೆಚ್ಚು ಹಣ ಪಡೆದು ಶಿವಾನುಭವ ಮಂಟಪಕ್ಕೆ ಹೋಗಿ ಜಂಗಮಮೂರ್ತಿಗಳನ್ನು ತನ್ನ ಮನೆಗೆ ದಾಸೋಹಕ್ಕೆ ಬರಬೇಕೆಂದು ಪ್ರಾರ್ಥಿಸಿದ. ಬಿನ್ನಹದಂತೆ ಜಂಗಮರು ಸಕಾಲಕ್ಕೆ ಈತನ ಮನೆಗೆ ಬರಲಾಗಿ ಅಲ್ಲಿದ್ದ ಸತ್ತ ಮೀನುಗಳು ಹಾಗೂ ಅಲ್ಲಿಯ ವಾಸನೆಯನ್ನು ಸಹಿಸಲಾರದೆ ಅಸಹ್ಯಪಟ್ಟು ಹಿಂದಿರುಗಿದರು. ಅವರನ್ನು ಮತ್ತೆ ಕರೆತರಲು ಬಸವಸದನಕ್ಕೆ ಹೋದಾಗ ಅವರೆಲ್ಲ ಕನ್ನಪ್ಪನಿಗೆ ಛೀಮಾರಿಹಾಕಿ ಕಳುಹಿಸಿದರು.

ಇತ್ತ, ಜಂಗಮರು ಬಸವಸದನದಲ್ಲಿ ಭೋಜನಕ್ಕೆ ಮುನ್ನ ಲಿಂಗಪೂಜೆಗಾಗಿ ತಮ್ಮ ಕರಡಿಗೆಗಳನ್ನು ಬಿಚ್ಚಿದಾಗ ಸೆಜ್ಜೆಯಲ್ಲಿ ಯಾರ ಲಿಂಗವೂ ಕಾಣಲಿಲ್ಲ. ಅವರೆಲ್ಲ ನಡುಗಿಹೋದರು. ಇದನ್ನು ಕಂಡ ಬಸವೇಶ ಅವರಿಂದ ವಿಚಾರ ತಿಳಿದು ತಾನೇ ಕನ್ನಪ್ಪನ ಮನೆಗೆ ಬಂದು, ಜಂಗಮರ ತಪ್ಪನ್ನು ಮನ್ನಿಸುವಂತೆ ಬೇಡಿಕೊಂಡು, ಜಂಗಮರ ಇಷ್ಟಲಿಂಗಗಳನ್ನು ಕರಣೆಯಿಟ್ಟು ಹಿಂದಿರುಗಿಸಬೇಕೆಂದು ಪ್ರಾರ್ಥಿಸಿದ.

ಬಸವೇಶನಿಂದ ವಿಚಾರ ತಿಳಿದ ಕನ್ನಪ್ಪ ಅವರನ್ನೆಲ್ಲ ತ್ರಿಪುರಾಂತಕ ಕೆರೆಯ ಬಳಿಗೆ ಬರಹೇಳಿ, ಅಲ್ಲಿ ಕುಳಿತು ಧ್ಯಾನಾಸಕ್ತನಾದ. ಆಗ ಕಳೆದುಹೋದ ಇಷ್ಟಲಿಂಗಗಳು ನೀರಿನಲ್ಲಿ ತೇಲಿಬಂದವು. ಜಂಗಮರು ತಂತಮ್ಮ ಇಷ್ಟಲಿಂಗಗಳನ್ನು ಪಡೆದು ಕನ್ನಪ್ಪನನ್ನು ಸ್ತುತಿಸಿ ಹಿಂತಿರುಗಿದರು. ಕನ್ನಪ್ಪನ ವಚನಗಳಿಗೆ ಒಂದು ಉದಾ :

ಪುಣ್ಯ ಪಾಪವಿಲ್ಲಾಗಿ ಯಮನ ಹಂಗಿಲ್ಲ
ಬಂದುದನುಂಬನಾಗಿ ಮಾನವರ ಹಂಗಿಲ್ಲ
ಭವಗೆಟ್ಟವನಾಗಿ ದೈವದ ಹಂಗಿಲ್ಲ
ಸತ್ಯಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ
ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೆ. *

**ಗಾತರು :** ಟ್ಯೂಟನ್ ಜನಾಂಗಕ್ಕೆ ಸೇರಿದ ಮತ್ತು ಪ್ರ.ಶ. 1ನೆಯ ಶತಮಾನದಲ್ಲಿ ವಿಸ್ಟ್ಯುಲ ನದಿಯ ತೀರದಲ್ಲಿ ವಾಸಿಸುತ್ತಿದ್ದ ವಿವಿಧ ಜರ್ಮ್ಯಾನಿಕ್ ಪಂಗಡಗಳ ಒಕ್ಕೂಟದ ಜನಾಂಗ. ಕ್ರೈಸ್ತ ಧರ್ಮ ಸ್ವೀಕರಿಸಿದ ಪ್ರಥಮ ಜರ್ಮ್ಯಾನಿಕರೆಂದೂ ಇವರನ್ನು ಗುರುತಿಸುತ್ತಾರೆ. ಜನಾಂಗವನ್ನು ಸ್ಥೂಲವಾಗಿ ಗಾತರೆಂದು ಕರೆಯಬಹುದು. ಯುರೋಪಿನ ಇತಿಹಾಸದಲ್ಲಿ ಮಹತ್ತರ ಪಾತ್ರವನ್ನು ವಹಿಸಿದ ಇವರ ಉಗಮ, ಪೂರ್ವ ಚರಿತ್ರೆ ಮುಂತಾದ ವಿಷಯಗಳ ಬಗ್ಗೆ ಚಾರಿತ್ರಿಕ ಅಂಶಗಳಿಗಿಂತ ಕಥೆಗಳೇ ಹೆಚ್ಚು. ಗಾತ್ ಜನಾಂಗದವರಲ್ಲಿ ಪ್ರಚಲಿತವಾದ ಪರಂಪರಾಗತ ನಂಬಿಕೆಯ ಪ್ರಕಾರ ಸ್ಕ್ಯಾಂಡ್‌ಜ಼ ದ್ವೀಪ ಇವರ ಮೂಲನಿವಾಸ. ಅಲ್ಲಿಂದ ವಲಸೆ ಹೊರಟು ಗಾತಿಸ್ಕಾಂಡ್‌ಜ಼ ಎಂಬಲ್ಲಿ ಮೊಟ್ಟಮೊದಲು ನೆಲಸಿದರು. ಅನಂತರ ಇವರು ಪಾಮರೇನಿಯದ ಸಮೀಪದಲ್ಲಿದ್ದ ಅನೇಕ ಜನಾಂಗಗಳನ್ನು ಸೋಲಿಸಿ ತಮ್ಮ ಸ್ಥಾನವನ್ನು ಭದ್ರಪಡಿಸಿ ಕೊಂಡರು.

ಪ್ರಾಚೀನ ಸಾಹಿತ್ಯದಲ್ಲಿ ಗಾತರ ಹೆಸರು ಮೊಟ್ಟಮೊದಲಿಗೆ ಕಂಡುಬರುವುದು ಪ್ರಚಲಿತಶಕೆಯ ಆರಂಭ ವರ್ಷಗಳಲ್ಲಿ. ಅದಕ್ಕಿಂತ ಮುಂಚೆ ಇವರ ಸ್ಥಿತಿಗತಿಗಳು ನಮಗೆ ತಿಳಿದು ಬರುವುದಿಲ್ಲ. ಪ್ರಚಲಿತಶಕೆಯ ಆರಂಭ ವರ್ಷಗಳಲ್ಲಿ ಮ್ಯಾರೊಬಾಡ್ಯೂಸ್ ರಾಜನ ಆಳ್ವಿಕೆಗೆ ಇವರು ಒಳಪಟ್ಟಿದ್ದರೆಂದು ತಿಳಿದುಬರುತ್ತದೆ. ಪ್ರ.ಶ.ಸು.3ನೆಯ ಶತಮಾನದ ಸಮಯದಲ್ಲಿ ರೋಮನ್ ಇತಿಹಾಸದಲ್ಲೂ ಗಾತರ ಪಾತ್ರ ಪ್ರಾರಂಭ ವಾಗುತ್ತದೆ. ಆ ಸಮಯಕ್ಕೆ ಇವರು ತಮ್ಮ ರಾಜ್ಯವನ್ನು ಸಾಕಷ್ಟು ವಿಸ್ತರಿಸಿ ಡ್ಯಾನ್ಯೂಬ್ ನದಿಯ ಕೆಳಪಾತ್ರದವರೆಗೂ ಆಗಾಗ್ಗೆ ನುಗ್ಗುತ್ತಿದ್ದರು. ಚಕ್ರವರ್ತಿ ಗಾರ್ಡಿಯನ್ ಗಾತರನ್ನು ಸೋಲಿಸಿದ್ದ. ಆದರೆ ಅವನ ಅನಂತರ ಬಂದ ಚಕ್ರವರ್ತಿಗಳಲ್ಲಿ ಒಬ್ಬನಾದ ಡೇಷಿಯಸ್ (201–251) ಗಾತರಿಂದ ಕೊಲ್ಲಲ್ಪಟ್ಟ. ಚಕ್ರವರ್ತಿ ಗ್ಯಾಲಿಯೀನಸ್ (ಮರಣ.268) ಗಾತರಿಗೆ ಕಪ್ಪಕಾಣಿಕೆ ಕೊಡಬೇಕಾಯಿತು. ಪ್ರ.ಶ.ಸು. 321ರಲ್ಲಿ ಚಕ್ರವರ್ತಿ ಕಾನ್‌ಸ್ಟಂಟೈನ್ (280–337) ಗಾತರನ್ನು ಈ ಪ್ರದೇಶಗಳಿಂದ ಹೊಡೆದೋಡಿಸಿ, ಗಾತರ ರಾಜನಾಗಿದ್ದ ಅರಿಯಾರಿಕನೊಡನೆ ಮೈತ್ರಿ ಬೆಳೆಸಿದ. ಗಾತರು ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ತಮ್ಮ ಬಲವನ್ನು ಹೆಚ್ಚಿಸಿಕೊಂಡ ಮೇಲೆ ತಮ್ಮ ಮೂಲವಾಸಸ್ಥಾನದೊಡನೆ ಸಂಪರ್ಕ ಕಳೆದುಕೊಂಡರು.

ಪ್ರಾಚೀನ ಗಾತ್ ರಾಜರಲ್ಲಿ ಅತ್ಯಂತ ಮುಖ್ಯನಾದವನು ಹೆರ್ಮಾನರಿಕ್. ಇವನ ಶೌರ್ಯ ಸಾಧನೆಗಳನ್ನು ಕುರಿತು ಅನೇಕ ಕಟ್ಟು ಕಥೆಗಳು ಹುಟ್ಟುಕೊಂಡಿವೆ. ಇವನು ಹೆರೂಲಿ, ಏಸ್ಟೈ, ವೆನೆಡಿ ಮತ್ತು ಇನ್ನೂ ಅನೇಕ ದಕ್ಷಿಣ ರಷ್ಯನ್ ಅನಾಗರಿಕ ಬುಡಕಟ್ಟು ಜನರನ್ನು ಸೋಲಿಸಿದ. ಇವನ ರಾಜ್ಯ ಪಶ್ಚಿಮದಲ್ಲಿ ಹೋಲ್‌ಸ್ಟೈನ್‌ವರೆಗೆ ಹಬ್ಬಿತ್ತು. 370ರಲ್ಲಿ ಹೂಣರು ಆಸ್ಟ್ರೋಗಾತ್ ರಾಜ್ಯದ ಮೇಲೆ ಧಾಳಿ ನಡೆಸಿ ಬಹಳ ಕಷ್ಟನಷ್ಟಗಳಿಗೆ ಕಾರಣರಾದರು. ಇದರಿಂದ ದು:ಖಿತನಾದ ಹೆರ್ಮಾನರಿಕ್ ಆತ್ಮಹತ್ಯೆ ಮಾಡಿಕೊಂಡ. ಅನಂತರ ಆಸ್ಟ್ರೋಗಾತ್ ರಾಜ್ಯ ಹೂಣರ ವಶವಾಯಿತು.

ಇದಾದ ಅನಂತರ ಗಾತರಲ್ಲಿ ಪೂರ್ವದ ಗಾತರು ಮತ್ತು ಪಶ್ಚಿಮದ ಗಾತರು ಎಂಬ ವ್ಯತ್ಯಾಸ ಹೆಚ್ಚು ತೀವ್ರವಾಗಿ ಕಾಣಬರುತ್ತದೆ. ಪ್ರ.ಶ.376ರಲ್ಲಿ ಪಶ್ಚಿಮ ಗಾತರು ಫ್ರಿತಿಜೆರ್ನ್ ಎಂಬ ನಾಯಕನ ನೇತೃತ್ವದಲ್ಲಿ ಡ್ಯಾನ್ಯೂಬ್ ನದಿಯನ್ನು ದಾಟಿ ರೋಮನ್ ಚಕ್ರಾಧಿಪತ್ಯದ ಪ್ರಾಂತ್ಯವಾದ ಮೀಷಿಯಕ್ಕೆ ನುಗ್ಗಿದರು. ಸ್ವಲ್ಪ ಕಾಲದ ಅನಂತರ ಇವರಿಗೂ ಅಲ್ಲಿಯ ಮೂಲ ಜನಕ್ಕೂ ಕಲಹಗಳು ಪ್ರಾರಂಭವಾದುವು. 378ರ ವೇಳೆಗೆ ಇಲ್ಲಿ ಪಶ್ಚಿಮ ಗಾತರು ಪ್ರಬಲರಾದರು. ಅನಂತರ ಚಕ್ರವರ್ತಿ ತೀಯೊಡೋ ಷಿಯಸ್ (346–395) ಗಾತರೊಡನೆ ಸಖ್ಯ ಬೆಳೆಸಿದ. ಬಹು ಮಂದಿ ಗಾತ್ ವೀರರು ರೋಮನ್ ಚಕ್ರಾಧಿಪತ್ಯದಲ್ಲಿ ಸಾಮಂತರಾದರು. ತೀಯೊಡೋಷಿಯಸ್ 395ರಲ್ಲಿ ಮರಣ ಹೊಂದಿದ ಮೇಲೆ ರೋಮನ್ ಚಕ್ರಾಧಿಪತ್ಯಕ್ಕೂ ಗಾತರಿಗೂ ಇದ್ದ ಸಖ್ಯ ನಾಶವಾಯಿತು. ಗಾತರು ತಮ್ಮ ಸಾಮಂತಸ್ಥಾನವನ್ನು ತ್ಯಜಿಸಿ ಅಲರಿಕನನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡರು. ಇವನ ಕಾಲದಲ್ಲಿ ಅವರು ಸ್ವತಂತ್ರವಾಗಿ ಆಳಲು ಪ್ರಾರಂಭ ಮಾಡಿದರೂ ಅವರು ಎಲ್ಲಿಯೂ ನೆಲೆಯಾಗಿ ನಿಲ್ಲಲಿಲ್ಲ. ಅಲರಿಕ್ 395–96 ರಲ್ಲಿ ಗ್ರೀಸಿನ ಮೇಲೆ ದಂಡೆತ್ತಿ ಹೋದ. ಸು. 409–10ರಲ್ಲಿ ರೋಮ್ ನಗರವನ್ನು ಮುತ್ತಿ ಈ ನಗರವನ್ನು ನಾಶಮಾಡಿದ.

ಅಲರಿಕನ ಅನಂತರ ಅಟಾಲ್ಫ್ ಗಾತರ ರಾಜನಾದ. ರೋಮನ್ ಸಾಮ್ರಾಜ್ಯವನ್ನು ನಾಶಮಾಡಿ ಅದರಷ್ಟೇ ಪ್ರಮುಖವಾದ ಗಾತಿಕ್ ಸಾಮ್ರಾಜ್ಯವನ್ನು ಕಟ್ಟಬೇಕೆನ್ನುವುದೇ ಇವನ ಮುಖ್ಯ ಉದ್ದೇಶವಾಗಿತ್ತು. ತೀಯೊಡೋಷಿಯಸನ ಮಗಳಾದ ಪ್ಲೇಸಿಡಿಯಳನ್ನು ವಿವಾಹವಾದ. ಇದರಿಂದ ಗಾತರೂ ರೋಮನ್ನರೂ ಒಂದಾಗುವ ಅವಕಾಶವೂ ಇತ್ತು. ಆದರೆ ಇವರ ಮಗ ಬಾಲ್ಯದಲ್ಲೆ ಮರಣ ಹೊಂದಿದ. ಅಷ್ಟೇ ಅಲ್ಲದೆ 415ರಲ್ಲಿ ಅಟಾಲ್ಫನ ಕೊಲೆಯಾಯಿತು. ಹೀಗಾಗಿ ಅವನ ಆಸೆಗಳು ನೆರವೇರಲಿಲ್ಲ. ಇವನ ಅನಂತರ ವಾಲ್ಲಿಯ ಗಾತರ ರಾಜನಾದ. ಇವನ ಕಾಲದಲ್ಲಿ ಗಾತರ ಸಾಮ್ರಾಜ್ಯ ವಿಸ್ತಾರವಾಯಿತು. ವಾಲ್ಲಿಯನ ಅನಂತರ 1ನೆಯ ತೀಯೊಡೋರಿಕ್ ರಾಜನಾದ. ಇವನ ಕಾಲದಲ್ಲಿ ಹೂಣರ ಧಾಳಿಗಳನ್ನು ಎದುರಿಸುವ ಸಲುವಾಗಿ ರೋಮನ್ನರೂ ಗಾತರೂ ಒಟ್ಟುಗೂಡಿದರು. ಆದರೆ ಹೂಣರ ಸೈನ್ಯದಲ್ಲಿ ಪೂರ್ವ ಗಾತರನ್ನು ಇವರು ಎದುರಿಸಬೇಕಾಯಿತು. ಈ ಯುದ್ಧದಲ್ಲಿ ತೀಯೊಡೋರಿಕ್ ಮರಣ ಹೊಂದಿದ. ಇದರಿಂದ ಪಶ್ಚಿಮ ಗಾತರ ರಾಜ್ಯ ಗಾಲ್ ಪ್ರದೇಶಕ್ಕೆ ಮಾತ್ರ ಸೀಮಿತಗೊಳ್ಳುವಂತಾಯಿತು. ಪಶ್ಚಿಮ ಗಾತರು ರೋಮನ್ನರ ಸಂಸ್ಕೃತಿಯನ್ನು ಅನುಸರಿಸಿದರೂ ಕೆಥೊಲಿಕ್ ಜನಕ್ಕೆ ಅವರ ಧರ್ಮ ಹಿಡಿಸಲಿಲ್ಲ. ಹೀಗಾಗಿ ಪಶ್ಚಿಮ ಗಾತರು ತಮ್ಮ ಪ್ರಭಾವವನ್ನು ಹೆಚ್ಚು ಕಾಲ ಸ್ಪೇನಿನಲ್ಲಿ ಉಳಿಸಿಕೊಳ್ಳುವುದು ಕಷ್ಟವಾಯಿತು.

ಹೂಣರ ರಾಜ ಆಟ್ಟಿಲನ ಮರಣಾನಂತರ ಹೂಣರಲ್ಲಿ ಒಗ್ಗಟ್ಟು ಕಡಿಮೆಯಾಯಿತು. ಇದೇ ತಕ್ಕ ಸಮಯವೆಂದು ಪೂರ್ವ ಗಾತರು ಸ್ವತಂತ್ರ್ಯರಾದರು. ಪ್ರ.ಶ. 5ನೆಯ ಶತಮಾನದ ಕೊನೆಯಲ್ಲಿ ಪೂರ್ವಗಾತರ ರಾಜನಾದ ತೀಯೊಡೋರಿಕ್ ಈ ವಂಶದಲ್ಲಿ ಅತ್ಯಂತ ಶ್ರೇಷ್ಠನೂ ಸಮರ್ಥನೂ ಆದ ವ್ಯಕ್ತಿ. ಸುಮಾರು 493ರ ಸಮಯಕ್ಕೆ ಪೂರ್ವ ಗಾತ್ ಸಾಮ್ರಾಜ್ಯಕ್ಕೆ ಇಟಲಿ, ಸಿಸಿಲಿ ಮುಂತಾದ ಪ್ರದೇಶಗಳೂ ಸೇರಿಕೊಂಡುವು. ಇವನ ದಕ್ಷ ಆಡಳಿತದಲ್ಲಿ ಪೂರ್ವ ಮತ್ತು ಪಶ್ಚಿಮ ಗಾತರು ಸ್ವಲ್ಪ ಕಾಲ ಒಟ್ಟಿಗೆ ಸೇರಿದರು. ತೀಯೊಡೋರಿಕ್ ರಾಜನ ಮಗಳನ್ನು ವಿಸಿಗಾತ್ ರಾಜ ಎರಡನೆಯ ಅಲರಿಕ ಮದುವೆಯಾದ. ಇದರಿಂದ ಈ ಎರಡು ಮನೆತನಗಳಿಗೂ ಬಾಂಧವ್ಯ ಬೆಳೆಯಿತು. ತೀಯೊಡೋರಿಕ್ ರಾಜನ ಕಾಲದಲ್ಲಿ ಪೂರ್ವ ಗಾತಿಕ್ ಸಾಮ್ರಾಜ್ಯ ಸುಸಂಸ್ಕೃತವಾಯಿತು. ಗಾತಿಕ್ ಸಾಮ್ರಾಜ್ಯದ ಮೇಲೆ ರೋಮನ್ ಚಕ್ರಾಧಿಪತ್ಯದ ಪ್ರಭಾವ ವಿಶೇಷವಾಯಿತು. ಆದರೆ 526ರಲ್ಲಿ ತೀಯೊಡೋರಿಕ್ ಮರಣ ಹೊಂದಲು ಪೂರ್ವ ಮತ್ತು ಪಶ್ಚಿಮ ಗಾತ್ ರಾಜ್ಯಗಳು ಬೇರ್ಪಟ್ಟುವು. ಸ್ಪೇನಿನಲ್ಲಿ ಅಮಲರಿಕ್ ಎಂಬುವನು ಪಶ್ಚಿಮ ಗಾತರ ರಾಜನಾದ. ಪೂರ್ವಗಾತರು ಸ್ವಲ್ಪ ಕಾಲದಲ್ಲೇ ಅವನತಿ ಹೊಂದಿದರು.

ಪಶ್ಚಿಮ ಗಾತ್ ಸಾಮ್ರಾಜ್ಯ ಹೆಚ್ಚು ಕಾಲ ಬಾಳಿತು. ಲಿಯೋವಿಜಿಲ್ಡ್ ಎಂಬಾತ 568 ರಿಂದ 586ರ ವರೆಗೆ ಆಳಿದ. ಈತ ಗಾತ್ ಸಮ್ರಾಜ್ಯದ ದೊರೆಗಳಲ್ಲಿ ಅತ್ಯಂತ ಶ್ರೇಷ್ಠನಾದವ. ಇವನು ಗಾಲ್ ಮತ್ತು ಸ್ಪೇನ್ ಪ್ರಾಂತ್ಯಗಳನ್ನು ಒಟ್ಟುಗೂಡಿಸಿದ. ಅನೇಕ ಸಣ್ಣಪುಟ್ಟ ರಾಜರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ. ಇವನ ಮಗ ರೆಕಾರಡನ ಕಾಲದಲ್ಲಿ ಬಹುಮಂದಿ ಗಾತರು ಕೆಥೊಲಿಕ್ ಧರ್ಮವನ್ನು ಅನುಸರಿಸಲು ಪ್ರಾರಂಭಿಸಿದರು. ಇದರಿಂದ ರೋಮನ್ನರಿಗೂ ಗಾತರಿಗೂ ಧಾರ್ಮಿಕ ಸಮಾನತೆ ಯುಂಟಾಯಿತು. ಇದಾದಮೇಲೆ ಗಾತರ ಮೇಲೆ ರೋಮನ್ನರ ಪ್ರಭಾವ ವಿಶೇಷವಾಗ ತೊಡಗಿತು. ಕಾಲಕ್ರಮದಲ್ಲಿ ಗಾತ್ ಎನ್ನುವ ಪದವೂ ಮರೆತುಹೋಗುವಂತೆ ರೋಮನ್ ಸಂಸ್ಕೃತಿಯಲ್ಲಿ ಗಾತರು ಸೇರಿ ಹೋದರು. ಮಧ್ಯ ಯುರೋಪಿನಲ್ಲಿ ಸು. 8 ಶತಮಾನಗಳ ಕಾಲ ಪ್ರಭಾವಯುತರಾಗಿದ್ದ ಗಾತರು ಅವನತಿ ಹೊಂದಿದರು. ಆದರೆ ಸ್ಪೇನಿನಲ್ಲಿ ಅವರ ಪ್ರಭಾವ ವಿಶೇಷವಾಗಿ ಕಂಡುಬರುತ್ತದೆ. (ಎಚ್.ಆರ್.ಡಿ.; ಎ.ವಿ.ಎಸ್.)

**ಗಾತಿಕ್ ಕಲೆ :** ಪ್ರ.ಶ. 12ನೆಯ ಶತಮಾನದಿಂದ 15ನೆಯ ಶತಮಾನದವರೆಗೆ ಯುರೋಪಿನ ವಿವಿಧ ಭಾಗಗಳಲ್ಲಿ ಪ್ರಸಿದ್ಧವಾಗಿದ್ದ ಕಲಾ ಸಂಪ್ರದಾಯ. ಜರ್ಮನಿಯ ಗಾತ್ ಎಂಬ ಬುಡಕಟ್ಟಿಗೆ ಸೇರಿದ ಜನ ರೋಮನ್ ಸಾಮ್ರಾಜ್ಯವನ್ನು ಗೆದ್ದು ರೋಮನರ ಅನೇಕ ಕಟ್ಟಡಗಳನ್ನೂ ಶಿಲ್ಪಗಳನ್ನೂ ನಾಶಮಾಡಿದರು. ಈ ಜನ ಅನಾಗರಿಕರೆಂದೂ ಅಭಿಜಾತ ರೋಮನ್ ಮತ್ತು ಗ್ರೀಕ್ ಸಂಪ್ರದಾಯಗಳನ್ನು ಅರಿಯದವ ರೆಂದೂ ಭಾವಿಸಿದ್ದ, ಕೆಲವರು ಈ ಕಾಲದಲ್ಲಿ ಬೆಳೆದುಬಂದ ಕಲೆಯನ್ನು ಗಾತಿಕ್ ಕಲೆ ಎಂದು ಕರೆದರು. ಒರಟರೂ ಅನಾಗರಿಕರೂ ಆದ ಜನಗಳ ಕಲೆಯೆಂಬ ತಾತ್ಸಾರ ಭಾವನೆಯಿಂದ ಈ ಪದ ಮೊದಲು ಬಳಕೆಗೆ ಬಂದಂತೆ ಕಾಣುತ್ತದೆ. ಕಾಲಕ್ರಮದಲ್ಲಿ ಈ ಕಲೆಯ ಅವಶೇಷಗಳ ಪೂರ್ಣ ಅಧ್ಯಯನ ವಾದ ಮೇಲೆ ಈ ತಾತ್ಸಾರ ಮನೋಭಾವ ವಾಯುವಾಗಿ ಗಾತಿಕ್ ಕಲೆ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ ಯೆಂದೂ ಯುರೋಪಿನ ಕಲೆಗೆ ಇದರ ಕೊಡುಗೆ ಮಹತ್ತರವಾದು ದೆಂದೂ ಜನ ಅರಿತರು. ಗಾತಿಕ್ ಸಂಪ್ರದಾಯ ಮಧ್ಯ ಫ್ರಾನ್ಸ್ ದೇಶದಲ್ಲಿ ಪ್ರ.ಶ. 12ನೆಯ ಶತಮಾನದಲ್ಲಿ ಪ್ರಾರಂಭವಾಗಿ 13, 14 ಮತ್ತು 15ನೆಯ ಶತಮಾನಗಳಲ್ಲಿ ಯುರೋಪಿನ ವಿವಿಧ ಭಾಗಗಳಿಗೆ ಹರಡಿತು.

**ಕನ್ಯಾಮೇರಿ ಮತ್ತು ಶಿಶು ಕ್ರಿಸ್ತ. ಲೀಯಾನ್ ನಗರದ ಕತೀಡ್ರಲಿನ ಒಂದು ಶಿಲ್ಪ. 13ನೆಯ ಶತಮಾನ. ಸ್ಪ್ಯಾನಿಷ್ ಶೈಲಿ**

ಅನಂತರ ಪುನರುಜ್ಜೀವನ ಕಲೆ ಉಚ್ಛ್ರಾಯ ಸ್ಥಿತಿಗೆ ಬಂದ ಮೇಲೆ ಆ ಸಂಪ್ರದಾಯ ನಶಿಸಿ ಹೋಯಿತು.

ವಾಸ್ತು ವಿಭಾಗಕ್ಕೆ ಸೇರಿದಂತೆ ಈ ಕಲೆಯ ವೈಶಿಷ್ಟ್ಯಗಳು ಹೀಗಿವೆ. ಅಡ್ಡಡ್ಡಲಾಗಿದ್ದ ಕಟ್ಟಡಗಳು ಉದ್ದುದ್ದ ವಾಗಿಯೂ ಚೂಪಾಗಿಯೂ ಬೆಳೆದದ್ದು ಈ ಕಾಲದಲ್ಲಿ. ಉದ್ದನೆಯ ಮತ್ತು ತೆಳುವಾದ ಕಂಬಗಳ ಆಸರೆಯಿಂದ ಚೂಪಾದ ಕಮಾನುಗಳನ್ನು ತಯಾರಿಸಿ ರುವುದು ಇನ್ನೊಂದು ವೈಶಿಷ್ಟ್ಯ. ಮರದಿಂದ ಚಾವಣಿ ಗಳನ್ನು ಮಾಡುವ ತಂತ್ರಕ್ಕೆ ಬದಲಾಗಿ ಕಲ್ಲನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲು ಪ್ರಾರಂಭ ವಾದುದೂ ಈ ಕಾಲದಲ್ಲೇ. ಚೂಪಾದ ಗೋಪುರಗಳು ವಿಶೇಷವಾಗಿ ಬಳಕೆಗೆ ಬಂದುದ ರಿಂದ ಈ ಕಾಲದ ಕಟ್ಟಡಗಳಿಗೆ ಒಂದು ರೀತಿಯ ವಿಶಿಷ್ಟ ಸೌಂದರ್ಯ ಬಂತು. ಗಾತಿಕ್ ಕಲೆ ಅಭಿವೃದ್ಧಿಯಾದಂತೆ ಅಲಂಕರಣ ಕಾರ್ಯ ವಿಶೇಷವಾಗತೊಡಗಿತು. ರೋಮನೆಸ್ಕ್ ಕಲೆಗಿಂತ ಭಿನ್ನವಾದ ರೀತಿಯಲ್ಲಿ ಈ ಅಲಂಕರಣ ವಿನ್ಯಾಸ ವ್ಯಾಪಕವಾಗಿ ಬೆಳೆದು ಬಂತು. ಇದು ಎಷ್ಟೊಂದು ವಿಸ್ತಾರವಾಗಿ ಬೆಳೆಯಿತೆಂದರೆ, ಇದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವುದೇ ಕಷ್ಟವಾಯಿತು. ರೋಮನೆಸ್ಕ್ ಕಲೆಯ ವೃತ್ತಾಕಾರದ ಚಿಹ್ನೆಗಳ ಜೊತೆಗೆ ಜ್ಯಾಮಿತಿಯ ವಿವಿಧ ಚಿಹ್ನೆಗಳು ವಿಶೇಷವಾದುವು. ಇವುಗಳ ಜೊತೆಗೆ ಲತೆಗಳು, ಬಳ್ಳಿಗಳು, ಎಲೆಗಳು ಮತ್ತು ಹೂಗಳ ಅಲಂಕರಣ ವಿಶೇಷವಾದುವು. ಜೊತೆಯಲ್ಲಿಯೇ ವಿಚಿತ್ರವಾದ ಪ್ರಾಣಿಗಳ ಪಿಶಾಚಿಗಳ ಮತ್ತು ಪೌರಾಣಿಕ ಪ್ರಾಣಿಗಳ ಅಲಂಕಾರವೂ ಗೋಡೆಗಳ ಮೇಲೆ ಕಾಣಬಂದುವು. ಇವುಗಳಿಂದ ಗಾತಿಕ್ ಕಲೆಯ ಅಲಂಕಾರ ಒಂದು ವಿಚಿತ್ರ ರೀತಿಯದೆಂದು ಪ್ರಸಿದ್ಧವಾಯಿತು.

**ಮಾರ್ಟಿನ್ ಮತ್ತು ಜೆರೋಮ್ ಸಂತರ ಮೂರ್ತಿಗಳು 1220–39. ಫ್ರೆಂಚ್ ಶಿಲ್ಪ**

ಬಣ್ಣದ ಗಾಜುಗಳ ಬಳಕೆ ಗಾತಿಕ್ ಕಲೆಯ ಮತ್ತೊಂದು ವೈಶಿಷ್ಟ್ಯ. ಕಟ್ಟಡಗಳು ಕಿಟಕಿಗಳಿಗೆ ವಿವಿಧ ಆಕಾರಗಳ ಮತ್ತು ವಿಧವಿಧವಾದ ಬಣ್ಣಗಳ ಗಾಜು ಗಳನ್ನು ಅಳವಡಿಸಲಾಯಿತು. ಈ ಬಣ್ಣದ ಗಾಜುಗಳು ಬೆಳಕನ್ನು ಪ್ರತಿಬಿಂಬಿಸಿ ಕಟ್ಟಡಗಳ ಒಳಭಾಗ ವನ್ನು ಒಂದು ರೀತಿಯ ಮಾಯಾ ಜಾಲಗಳಂತೆ ಮಾಡಿದುವು. ಗೋಡೆಗಳ ಮೇಲೆ ವರ್ಣಚಿತ್ರ ಗಳೂ, ಶಿಲ್ಪಗಳೂ ವಿಶೇಷವಾದವು. ಕೆತ್ತನೆಯ ಕೆಲಸ ಈ ಕಾಲದಲ್ಲಿ ನಿಜವಾದ ಕಲೆಯೆನಿಸಿತು. ಕಲ್ಲು, ಮರ, ದಂತ ಮೊದಲಾದ ವಸ್ತು ಗಳಲ್ಲಿ ಮಾಡಿದ ಶಿಲ್ಪಗಳು ಕಿಟಕಿಯ ಗೂಡುಗಳಲ್ಲಿ, ಬಾಗಿಲುವಾಡದ ಮೇಲ್ಭಾಗಗಳಲ್ಲಿ ವಿಶೇಷವಾದವು. ಇವುಗಳು ಮಾತ್ರವಲ್ಲದೆ, ಕಿಟಕಿಯ ಮತ್ತು ಬಾಗಿಲಿನ ಕೊಂಡಿಗಳು, ಚಿಲಕಗಳು, ಬೀಗಗಳು ಈ ಮೊದಲಾದವು ಕೂಡ ಕಲಾತ್ಮಕವಾಗಿದ್ದು, ಎಲ್ಲೆಲ್ಲೂ ಕಲೆಯ ಉತ್ಕರ್ಷವನ್ನು ತೋರಿದುವು. ಇವುಗಳ ಜೊತೆಗೆ ದಿನಬಳಕೆಯ ವಸ್ತುಗಳಾದ, ಮಂಚ, ಕುರ್ಚಿ, ಮೇಜು ಮುಂತಾದವೂ ಉಪಯುಕ್ತವಷ್ಟೇ ಅಲ್ಲದೆ ನಿಜವಾದ ಕಲಾವಸ್ತುಗಳೇ ಆದವು. ಸ್ಯಾಲಿಸ್‌ಬರಿ, ಲಿಂಕನ್ ಮತ್ತು ಕ್ಯಾಂಟರ್‌ಬರಿಗಳಲ್ಲಿರುವ ಕತೀಡ್ರಲ್‌ಗಳಲ್ಲಿ ಉಳಿದು ಬಂದಿರುವ ಈ ವಸ್ತುಗಳಿಂದ ಗಾತಿಕ್ ಕಲೆಯ ಅಲಂಕಾರದ ಸ್ವರೂಪ ನಮಗೆ ವ್ಯಕ್ತವಾಗುತ್ತದೆ.

ಗಾತಿಕ್ ಕಲಾವಸ್ತುಗಳಲ್ಲಿ ಅಲಂಕೃತ ಬಟ್ಟೆಗಳೂ ಪೀಠೋಪಕರಣಗಳನ್ನು ಮುಚ್ಚಲು ಉಪಯೋಗಿಸುತ್ತಿದ್ದ ಗವುನುಗಳೂ ವಿಶೇಷವಾಗಿ ಉಳಿದು ಬಂದಿಲ್ಲ. ಆದರೆ ಕತೀಡ್ರಲ್‌ಗಳಲ್ಲಿರುವ ವರ್ಣಚಿತ್ರಗಳಲ್ಲಿ ಉಬ್ಬು ಚಿತ್ರದ ನಮೂನೆಗಳನ್ನು ನೆಯ್ದಿರುವ ಕಿನ್‌ಕಾಪು ಕೆಲಸ ಮಾಡಿದ ವಸ್ತ್ರಗಳನ್ನೂ ಮಖಮಲ್ಲು ಬಟ್ಟೆಗಳನ್ನೂ ಧರಿಸಿರುವ ಸ್ತ್ರೀ ಪುರುಷರನ್ನು ಕಾಣಬಹುದು. ಈ ರೀತಿಯ ಕೆಲಸಗಳಿಗೆ ಸಮಕಾಲೀನ ಇಟಲಿ ಪ್ರಸಿದ್ಧ ವಾಗಿತ್ತು. ಚಿತ್ರಗಳನ್ನು ನೇಯ್ದು ಗೋಡೆತೆರೆಗಳು ಬಹು ನಾಜೂಕಾಗಿದ್ದುವು. ಈ ರೀತಿಯ ಚಿತ್ರಗಳಲ್ಲಿ ವಿಶೇಷವಾಗಿ ಲತೆಗಳು ಮತ್ತು ಬಳ್ಳಿಗಳು ಕಂಡರೂ ಅಪೂರ್ವ ವಾಗಿ ಮಾನವಾಕೃತಿಯ ಮತ್ತು ಪ್ರಾಣಿಗಳ ಚಿತ್ರಗಳೂ ಬಳಸಲ್ಪಡುತ್ತಿದ್ದವು. ಪ್ರ.ಶ. 15ನೆಯ ಶತಮಾನದ ಅನಂತರ ಪುನರುಜ್ಜೀವನ ಕಲೆ ಬೆಳೆದು ಗಾತಿಕ್ ಕಲೆ ಅವನತಿಯನ್ನು ಹೊಂದಲು ಪ್ರಾರಂಭಿಸಿ ತಾದರೂ ಬಹುಕಾಲದವರೆಗೆ ಗಾತಿಕ್ ಕಲೆಯ ಲಕ್ಷಣಗಳು ಒಂದಲ್ಲ ಒಂದು ರೀತಿಯಲ್ಲಿ ಸೂಕ್ತ ಬದಲಾವಣೆಗಳೊಂದಿಗೆ ಯುರೋಪಿಯನ್ ಕಲೆಯಲ್ಲಿ ಸೇರಿದುವು. ಇದು ಗಾತಿಕ್ ಕಲೆ ಎಷ್ಟು ಜನಾನುರಾಗಿ ಯಾಗಿತ್ತೆಂಬುದಕ್ಕೂ ಅದರಲ್ಲಿ ನಿತ್ಯ ನೂತನವಾದ ಲಕ್ಷಣಗಳು ಇದ್ದುವೆಂಬುದಕ್ಕೂ ಸಾಕ್ಷಿಯಾಗಿದೆ (**ನೋಡಿ– ಐರೋಪ್ಯಕಲೆ; ಗಾತಿಕ್ ವಾಸ್ತುಶೈಲಿ**).

**ಪ್ರಾರ್ಥನಾ ಭಂಗಿಯ ಶಿಲ್ಪ. 14ನೆಯ ಶತಮಾನ. ಇಟಾಲಿಯನ್ ಶೈಲಿ**

(ಎ.ವಿ.ಎನ್.)

**ಗಾತಿಕ್ ಭಾಷೆ :** ಪೂರ್ಣವಾಗಿ ವಿವರಗಳು ತಿಳಿದುಬಂದಿವೆಯೆಂದು ಹೇಳಬಹುದಾದ ಜರ್ಮ್ಯಾನಿಕ್ ಭಾಷೆಗಳಲ್ಲಿ ಅತಿ ಪ್ರಾಚೀನವಾದುದು. ಹಾಗಾಗಿ ಇದರ ಬಗ್ಗೆ ವಿಶೇಷ ಆಸಕ್ತಿ ತಲೆದೋರುವುದು ಸಹಜ. ಈ ಭಾಷೆಯನ್ನು ಕುರಿತಾದ ತಿಳಿವಳಿಕೆಗೆ ಇದೇ ಭಾಷೆಯಲ್ಲಿರುವ ಬೈಬಲಿನ ಅನುವಾದದ ಉಳಿಕೆಯೇ ಆಧಾರ. ಪ್ರ.ಶ. 350ರ ಸುಮಾರಿಗೆ ಪಶ್ಚಿಮ ಗಾತರ ಪಾದ್ರಿ ವುಲ್‌ಫಿಲನೆಂಬವನಿಂದ ಈ ಅನುವಾದ ಆಯಿತೆನ್ನಲು ಆ ಕಾಲದಲ್ಲಿ ಗಾತ್ ಜನ ಕಪ್ಪು ಸಮುದ್ರದ ಪಶ್ಚಿಮ ದಂಡೆಯಲ್ಲಿ ವಾಸಮಾಡುತ್ತಿದ್ದುದೇ ಕಾರಣವೆನ್ನಬಹುದು. ಆದ್ದರಿಂದ ಈ ಅನುವಾದ ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಉಪಲಬ್ಧವಾಗಿರುವ ಪ್ರಾಚೀನತಮ ಗ್ರಂಥಗಳಿಂದ ಕ್ರಮವಾಗಿ 300 ಮತ್ತು 400 ವರ್ಷ ಹಿಂದಿನದೆನ್ನಬಹುದು.

ಗ್ರೀಕ್ ವರ್ಣಮಾಲೆಯ ಮಾದರಿಯನ್ನಿಟ್ಟುಕೊಂಡು ವುಲ್‌ಫಿಲನಿಂದ ರಚನೆ ಗೊಂಡ 27ಅಕ್ಷರಗಳಿಂದ ಕೂಡಿರುವ ವಿಶೇಷ ವರ್ಣಮಾಲೆಯ ಆಧಾರದ ಮೇಲೆ ಅನುವಾದಿತ ಬೈಬಲನ್ನು ಬರೆಯಲಾಗಿದೆ. ಗಾತಿಕ್ ಭಾಷೆಯಲ್ಲಿನ ಸ್ವರಗಳ ಬಗ್ಗೆ

ವಿಶದವಾಗಿ ಹೇಳಲಾಗದಿದ್ದರೂ ವ್ಯಂಜನಗಳು ಮಾತ್ರ ಜರ್ಮ್ಯಾನಿಕ್ ಮೂಲ ಭಾಷೆಗೆ ವಿದ್ವಾಂಸರು ಕಲ್ಪಿಸಿಕೊಂಡಿರುವ ವ್ಯಂಜನಗಳೇ ಆಗಿವೆ– ಮೂರು ಅಘೋಷಸ್ಪರ್ಶಗಳು (ಪ, ತ, ಕ), ಮೂರು ಅಘೋಷ ಸಂಘರ್ಷಿಗಳು (ಫ, ಥ, ಹ), ಮೂರು ಘೋಷ ಸ್ಪರ್ಶ–ಸಂಘರ್ಷಿಗಳು (ಬ, ದ, ಗ), ಎರಡು ಊಷ್ಮ ವರ್ಣಗಳು (ಸ, ಜ), ಎರಡು ನಾಸಿಕ್ಯಗಳು (ಮ, ನ), ಎರಡು ಸಲಿಲಗಳು (ಲ, ರ), ಮತ್ತು ಎರಡು ಅಂತಸ್ಥಗಳು (ಅರ್ಧಸ್ವರಗಳು) (ವ, ಯ).

ಪ್ರ. ಶ. 466 ರಿಂದ 711ರವರೆಗೆ ಸ್ಪೇನ್ ದೇಶವನ್ನಾಳಿದ ಪಶ್ಚಿಮ ಗಾತರು ಮತ್ತು 489ರಿಂದ 554ರವರೆಗೆ ಇಟಲಿಯನ್ನಾಳಿದ ಪೂರ್ವ ಗಾತರೂ ಗಾತಿಕ್ ಭಾಷೆಯನ್ನಾಡಿದವರೇ ಆಗಿರಬೇಕು. ಆದರೆ ಈ ಭಾಷೆ ಬಹಳ ಕಾಲ ಈ ಯಾವುದೇ ದೇಶಗಳಲ್ಲಿ ಉಳಿದು ಬರಲಿಲ್ಲ. ಇದಕ್ಕೂ ಮುಂದೆ ಸಾವಿರ ವರ್ಷಗಳವರೆಗೆ ಈ ಭಾಷೆ ವ್ಯವಹಾರದಲ್ಲಿದ್ದ ದೇಶವೆಂದರೆ ಕ್ರಿಮಿಯ ಎನ್ನಬಹುದು. ರಾಜಕಾರ್ಯಕ್ಕಾಗಿ ಕಾನ್‌ಸ್ಟಾಂಟಿನೋಪಲಿಗೆ ಬಂದಿದ್ದ ಬಸ್‌ಬೆಕ್ ಎಂಬ ಹೆಸರಿನ ಫ್ಲೆಮಿಷ್ ರಾಜಕಾರಣಿ ಕ್ರಿಮಿಯದಲ್ಲಿ ವ್ಯವಹಾರದಲ್ಲಿದ್ದ ಗಾತಿಕ್ ಭಾಷೆಯ ಹಲವಾರು ಶಬ್ದಗಳನ್ನು, ವಾಕ್ಯಾಂಶಗಳನ್ನು ಗಮನಿಸಿ ಬರೆದಿಟ್ಟಿದ್ದಾನೆ. ಗಾತಿಕ್ ಭಾಷೆಯ ಬಗ್ಗೆ ನಮಗೆ ದೊರಕುವ ಕಟ್ಟ ಕಡೆಯ ಬರೆವಣಿಗೆ ಎಂದರೆ ಈ ತುಣುಕುಗಳೇ. (ಡಬ್ಲ್ಯೂ.ಜಿ.ಎಂ.)

**ಗಾತಿಕ್ ವಾಸ್ತು ಶೈಲಿ :** ಈ ಶೈಲಿ ಎಲ್ಲಿ ಮತ್ತು ಹೇಗೆ ಉಗಮವಾಯಿತು ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಇಂಗ್ಲಿಷ್ ಚರಿತ್ರಕಾರರು ಇದು ಇಂಗ್ಲಿಷ್ ಜನಾಂಗದ ಕೊಡುಗೆಯೆಂದೂ ಜರ್ಮನ್ನರು ತಮ್ಮ ಕೊಡುಗೆಯೆಂದು ವಾದಿಸುವರಾದರೂ ಇತ್ತೀಚಿನ ಸಂಶೋಧನೆಗಳಿಂದ ಇದು ಫ್ರಾನ್ಸಿನ ಕೊಡುಗೆಯೆಂದೂ ಮೊಟ್ಟ ಮೊದಲು ಪ್ಯಾರಿಸ್ಸಿನ ಸಮೀಪದಲ್ಲಿ ಪ್ರಾರಂಭವಾಯಿತೆಂದೂ ತಿಳಿದುಬಂದಿದೆ. ಪ್ರ.ಶ.

ಸೇಂಟ್ ಡೇನಿಸ್ ಕತೀಡ್ರಲ್‌ನ ಒಳಭಾಗ. ಗಾತಿಕ್ ವಾಸ್ತು ಶೈಲಿಯ ಉಗಮವಾದದ್ದು ಇಲ್ಲಿ

1144ರಲ್ಲಿ ದೊರೆ ಏಳನೆಯ ಲೂಯಿ, ಅವನ ರಾಣಿ, ಐವರು ಆರ್ಚ್‌ಬಿಷಪ್ಪರು ಹದಿನಾಲ್ಕು ಬಿಷಪ್ಪರು ಮತ್ತು ಅನೇಕ ಜನಗಳು ಸೇಂಟ್ ಡೇನಿಸ್ ಕ್ರೈಸ್ತಮಠದಲ್ಲಿ ಸೇರಿ, ಆರಾಧನಾಗೀತೆಯನ್ನು ಹಾಡಲು ಅನುಕೂಲವಾಗಿರುವಂಥ ಪ್ರತ್ಯೇಕ ಕಟ್ಟಡ ಒಂದನ್ನು ರೂಪಿಸಿದರು. ಅದು ಉದ್ದನೆಯ ಗೋಪುರ, ಬಣ್ಣದ ಗಾಜಿನ ಕಿಟಕಿ ಮುಂತಾದವುಗಳಿಂದ ಕೂಡಿದ್ದು, ಪ್ಯಾರಿಸ್ಸಿನ ಸಮೀಪದಲ್ಲಿ ಮುಂದೆ ಕಟ್ಟಲಾದ ಚರ್ಚುಗಳಿಗೆಲ್ಲ ಒಂದು ಮಾದರಿಯಾಯಿತು. ಆದ್ದರಿಂದ ಆ ಚರ್ಚನ್ನೇ ಗಾತಿಕ್ ವಾಸ್ತುಶೈಲಿಯ ತೊಟ್ಟಿಲು ಎಂದು ವಿದ್ವಾಂಸರು ಭಾವಿಸಿದ್ದಾರೆ. ಗಾತಿಕ್ ವಾಸ್ತುಶೈಲಿಯ ಸಮರ್ಥನೆ ಮಾಡಿ ಅದರ ಬೆಳವಣಿಗೆಗೆ ಕಾರಣರಾದವರೆಂದರೆ ಸಂತ ಬರ್ನಾರ್ಡ್ ಮತ್ತು ಸಂತ ಸುಗೇರ್. ಧರ್ಮ ರಹಸ್ಯಗರ್ಭಿತವೂ ಭಯಭಕ್ತಿ ಪ್ರಚೋದಕವೂ ಆದುದೆಂದೂ ಆದ್ದರಿಂದ ಧಾರ್ಮಿಕ ಕಟ್ಟಡಗಳು ಅದಕ್ಕೆ ಅನುಗುಣವಾಗಿರಬೇಕೆಂದೂ ಸಂತ ಬರ್ನಾರ್ಡ್ ವಾದಿಸಿದ. ಆದ್ದರಿಂದ ಗಾತಿಕ್ ಕಟ್ಟಡಗಳಲ್ಲಿ ವಿಲಕ್ಷಣವೂ ಭಯಭಕ್ತಿಯನ್ನು ಪ್ರಚೋದಿಸುವಂಥವೂ ಆದ ಅನೇಕ ವಿನ್ಯಾಸಗಳು ಪ್ರಾರಂಭವಾದುವು. ಈತ ಸೇಂಟ್ ಡೆನಿಸ್ ಚರ್ಚಿನ ಮುಖ್ಯ ಪಾದ್ರಿಯಾದ ಮೇಲೆ (1122) ಮುನ್ನೂರು ವರ್ಷಗಳಿಂದಲೂ ಇದ್ದ ಈ ಕಟ್ಟಡಕ್ಕೆ ತಾನೇ ಹೊಸ ರೂಪು ಕೊಟ್ಟು ಅದನ್ನು ಹೊಸದಾಗಿ ಕಟ್ಟಿಸಿದ. ಅಲ್ಲಿಂದ ಮುಂದೆ ಇದೇ ಗಾತಿಕ್ ವಾಸ್ತುಶೈಲಿಯ ಮಾದರಿಯಾಗಿ ಬೆಳವಣಿಗೆ ಹೊಂದುತ್ತ ಹೋಯಿತು.



ಪ್ಯಾರಿಸಿನ ಸಮೀಪ ಷಾರ್ಟ್ರೆ ನಗರದಲ್ಲಿಯ ಚರ್ಚು (ಪ್ರಾರಂಭ ಸು. 1145). 12 ರಿಂದ 16ನೆಯ ಶತಮಾನದ ಗಾತಿಕ್ ಶಿಲ್ಪದ ವಿವಿಧ ಮಾದರಿಗಳು ಇಲ್ಲಿ ಕಾಣಸಿಗುತ್ತವೆ.

ಬರ್ನಾರ್ಡನ ಅಭಿಪ್ರಾಯದಂತೆ ಗಣಿತ ಮತ್ತು ಜ್ಯಾಮಿತಿಯ ಸಾಧನೆಗಳ ನೆರವಿನಿಂದ ಹೊಸ ವಿನ್ಯಾಸ ರೂಪುಗೊಂಡಿತು. ಸುಂದರವಾದ ಆರಾಧನಾಗೃಹಗಳ ಸಾಲುಸಾಲುಗಳು ಸೇರಿದುವು. ಅವುಗಳ ಕಿಟಕಿಗಳಿಗೆ ಬಣ್ಣದ ಗಾಜುಗಳು ಅಳವಡಿಸಿದರು. ಸೇಂಟ್ ಡೆನಿಸ್ ಚರ್ಚಿನಲ್ಲಿ ನೆಲಮಾಳಿಗೆ ದೇವಾಲಯಕ್ಕೆ ತಳಪಾಯದಂತಿದ್ದರೂ ರೋಮನೆಸ್ಕ್ ಶೈಲಿಗೂ ಗಾತಿಕ್ ಶೈಲಿಗೂ ಇಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ನೆಲಮಾಳಿಗೆಯ (ಹೆಣಗಳನ್ನು ಹೂಳುವ ಜಾಗ) ದಪ್ಪ ಗೋಡೆಗಳು ಸಣ್ಣ ಸಣ್ಣ ಕೊಠಡಿಯಾಕಾರದ ಜಾಗವನ್ನು ಒದಗಿಸಿದರೆ ಅದರ ಮೇಲಿನ ದೇವಾಲಯ ವಿಶಾಲವಾದ ಹಜಾರವನ್ನು ಒದಗಿಸುತ್ತದೆ. ನೆಲಮಾಳಿಗೆಯ ಛಾವಣಿ ಕೂಡು ಕಮಾನುಗಳನ್ನಿಟ್ಟು ನಿರ್ಮಿಸಿದ ಛಾವಣಿಕಟ್ಟಾಗಿದ್ದರೆ, ಮೇಲಿನ ದೇವಾಲಯದ ಛಾವಣಿ ಪಕ್ಕೆಲುಬಿನಾಕರದ ಕಮಾನುಗಳನ್ನು ಹೊಂದಿದ್ದಾಗಿದೆ. ಒಂದು ವಿಧದಲ್ಲಿ ಪಕ್ಕೆಲುಬಿನಾಕಾರದ ಛಾವಣಿ ಗಾತಿಕ್ ವಾಸ್ತುಶೈಲಿಯ ಪ್ರಧಾನ ಲಕ್ಷಣವಾಗಿಯೇ ಪರಿಣಮಿಸಿತು. ಈ ರೀತಿಯ ಛಾವಣಿಯನ್ನು ಅಳವಡಿಸುವುದರಲ್ಲಿಯೂ ಹತ್ತಾರು ಬಗೆಗಳನ್ನು ಗುರುತಿಸಬಹುದು. ಇದು ಆಗಿನ ಕಾಲದ ಶಿಲ್ಪಿಗಳ ನಿಪುಣತೆಗೂ ಸಾಕ್ಷಿಯಾಗಿದೆ.

ಈ ರೀತಿಯ ಭಾವಣಿಯನ್ನು ಅಳವಡಿಸಿದ್ದರಿಂದ ಇಡೀ ಕಟ್ಟಡ ವಿಸ್ಮಯವನ್ನುಂಟು ಮಾಡುವಂತೆ ಅವ್ಯಾಹತವಾದ ಬೆಳಕಿನಿಂದ ಹೊಳೆಯುವುದೆಂದು ಅದರ ನಿರ್ಮಾತ ಸಂತ ಸುಗೇರ್ ಹೇಳಿದ್ದಾರೆ.

ಪ್ರ.ಶ. 1145–50ರಲ್ಲಿ ಕಟ್ಟಲಾದ ನೊಯೊನ್ ಕೆಥೀಡ್ರಲ್‌ನಲ್ಲಿ ಡೆನಿಸ್ ಚರ್ಚಿನ ಮಾದರಿಯನ್ನೇ ಅನುಸರಿಸಲಾಗಿದೆ. ನೋಟರ್‌ಡೇಮ್ ಕೆಥೀಡ್ರಲ್‌ನಲ್ಲಿಯೂ ಇದೇ ಮಾದರಿಯನ್ನು ಕಾಣಬಹುದು. ಕಿರಿದಾದ, ಕಂಬಗಳ ನಡುವಣ ಅಂಗಳದಲ್ಲಿ ಎರಡು ಕಡೆಗಳಲ್ಲಿಯೂ ಚೂಪು ಕಮಾನುಗಳು ಅವುಗಳ ಮೇಲೆ ಅದೇ ರೀತಿಯ ಎರಡು ಮಹಡಿಗಳೂ ಬಂದು ಈ ಕಟ್ಟಡಕ್ಕೆ ಒಂದು ಭವ್ಯತೆಯನ್ನು ಕೊಡುತ್ತವೆ. ಮುಂಭಾಗದ ಬಾಗಿಲಿನಿಂದ ನೋಡಿದರೆ ನಾಲ್ಕಾರು ಮಹಡಿಗಳನ್ನುಳ್ಳ ಕಟ್ಟಡದಂತೆ ಭಾಸವಾಗುವ ಬೃಹತ್‌ಪ್ರಮಾಣದ ಈ ಕಟ್ಟಡ 1160–1205ರ ಸಮಯದಲ್ಲಿ ಪೂರ್ಣಗೊಂಡಿತು. ಆರಂಭದ ಗಾತಿಕ್ ವಾಸ್ತುಶೈಲಿಗೆ ನೋಟರ್ ಡೇಮ್ ಕೆಥೀಡ್ರಲ್ ಒಂದು ಒಳ್ಳೆಯ ಉದಾಹರಣೆ. ಶಿಲ್ಪವೂ ವಾಸ್ತುವಿನ ಹೊಸ ನಮೂನೆಗೆ ತಕ್ಕಂತೆ ಹೊಂದಿಕೊಂಡಿರುವುದು ಅಲ್ಲಿನ ವೈಶಿಷ್ಟ್ಯ. ವಿಶಾಲವೂ ಎತ್ತರವೂ ಆದ ಬಾಗಿಲುಗಳು, ಕಿಟಕಿಗಳ ಮೇಲ್ಭಾಗ, ಅರೆಗಂಬಗಳು ಮೊದಲಾದುವು ಶಿಲ್ಪಗಳಿಂದ ಕೂಡಿದ್ದು ಧಾರ್ಮಿಕ ಭಾವನೆಗೆ ಪುಷ್ಟಿಕೊಡುವಂತಿದೆ. ಅದರಲ್ಲಿಯೂ ಪಶ್ಚಿಮ ದ್ವಾರ ಶಿಲ್ಪಗಳಿಂದ ಆವೃತ್ತವಾಗಿ, ಸಾಂಕೇತಿಕವಾಗಿ ಅದು ದೇವಲೋಕದ ಜೆರೂಸಲೆಂಗೆ ಹೆಬ್ಬಾಗಿಲೋ ಎನ್ನುವಂತೆ ಕೆತ್ತಲಾಗಿದೆ. ಅಲ್ಲಿಯೇ ಇರುವ ಷಾರ್ಟ್ರ ಕೆಥೀಡ್ರಲ್‌ನಲ್ಲಿರುವ ಒಳಾಂಗಣದಲ್ಲಿ ರಾಜರಾಣಿಯರಿಗೆ ಸಂಬಂಧಿಸಿದ ಶಿಲ್ಪಗಳು ವಿಶೇಷವಾಗಿರುವುದರಿಂದ ಅದನ್ನು

**ಆಮ್ಯನ್ (ಉತ್ತರ ಫ್ರಾನ್ಸ್) ಕೆಥೀಡ್ರಲ್, ಹೆಬ್ಬಾಗಿಲಿನ ಚಿತ್ರ. ಪ್ರಾರಂಭ ಸು. 1277**

ರಾಜವಂಶದ ಮಹಾದ್ವಾರವೆಂದು ಕರೆಯಲಾಗಿದೆ. 1145–50ರಲ್ಲಿ ರಚನೆಗೊಂಡ ಪಶ್ಚಿಮದ ಮೂರು ಮಹಾದ್ವಾರಗಳನ್ನೂ ಒಂದೇ ಹೆಬ್ಬಾಗಿಲಂತೆ ಕೆತ್ತಲಾಗಿದೆ. ಕ್ರಿಸ್ತನ ಜನನ, ದೇವಾಲಯಕ್ಕೆ ಆತನನ್ನು ಒಯ್ಯುವುದು, ವರ್ಜಿನ್ ಮಾತೆಯೊಂದಿಗೆ ಕ್ರಿಸ್ತ – ಈ ಶಿಲ್ಪಫಲಕಗಳು ಬಲದ್ವಾರದ ಮೇಲಿವೆ. ಕ್ರಿಸ್ತ ಸ್ವರ್ಗವನ್ನು ಏರುತ್ತಿರುವುದು ಎಡ ದ್ವಾರದಲ್ಲಿದೆ. ಮಧ್ಯದ ದ್ವಾರದಲ್ಲಿ ಆತ ಎರಡನೆಯ ಸಾರಿ ಹಿಂದಿರುಗುವ ಕಥೆ ಬಂದಿದೆ. ಇವುಗಳ ಕೆಳಗೆ ಕ್ರಿಸ್ತನ ಜೀವನಕ್ಕೆ ಸಂಬಂಧಿಸಿದ ವಿವಿಧ ಕಥೆಗಳು ರೂಪುಗೊಂಡಿವೆ. ಕಮಾನಿನ ಕೆಳಭಾಗದಲ್ಲಿ ಮಾಡಿರುವ ಕೆತ್ತನೆಯ ಕೆಲಸವೂ ಗಮನಾರ್ಹವಾಗಿದೆ. ಬಲಭಾಗದಲ್ಲಿ ಜ್ಞಾನವನ್ನು ಸಾಂಕೇತಿಕವಾಗಿಯೂ ವರ್ಷದ ಹನ್ನೆರಡು ತಿಂಗಳನ್ನು ಎಡಭಾಗದಲ್ಲಿಯೂ ಕೆತ್ತಲಾಗಿದೆ. ದ್ವಾರಗಳ ಇಕ್ಕೆಡೆಗಳಲ್ಲಿರುವ ಕಂಬಗಳಲ್ಲಿ ಹಳೆಯ ಒಡಂಬಡಿಕೆಯಲ್ಲಿ ಹೇಳಿರುವ ರಾಜರಾಣಿಯರ ಶಿಲ್ಪಗಳಿವೆ. ಇವುಗಳೆಲ್ಲವೂ ಪ್ರಾರಂಭ ಗಾತಿಕ್ ವಾಸ್ತುಶಿಲ್ಪಕ್ಕೆ ಉತ್ತಮ ಉದಾಹರಣೆಗಳು.

1194ರಲ್ಲಿ ಷಾರ್ಟ್ರ ಕೆಥೀಡ್ರಲ್ ಬೆಂಕಿಗೆ ಆಹುತಿಯಾಯಿತು. ನೆಲಮಾಳಿಗೆ, ಪಶ್ಚಿಮದ ಗೋಪುರಗಳನ್ನು ಬಿಟ್ಟರೆ, ಕಟ್ಟಡದ ಇತರ ಭಾಗಗಳೆಲ್ಲವೂ ನಾಶವಾದುವು. ಕೂಡಲೇ ಈ ಕಟ್ಟಡವನ್ನು ಹೊಸದಾಗಿ ಕಟ್ಟುವ ಕೆಲಸ ಪ್ರಾರಂಭವಾಯಿತು. ಆ ಕೆಲಸ ಮುಗಿದದ್ದು 1220ರಲ್ಲಿ. ಇಲ್ಲಿಂದ ಗಾತಿಕ್ ವಾಸ್ತುಶೈಲಿಯಲ್ಲಿ ಮುಂದಿನ ಹೆಜ್ಜೆ ಪ್ರಾರಂಭವಾಯಿತೆನ್ನ ಬಹುದು. 1194 ರಿಂದ 1248ರ ವರೆಗಿನ ಅವಧಿಯಲ್ಲಿ ನಿರ್ಮಾಣವಾದ ಕೆಥೀಡ್ರಲ್‌ಗಳನ್ನು ಪ್ರೌಢ ಗಾತಿಕ್ ಎಂದು ವ್ಯವಹರಿಸುತ್ತಾರೆ. ಪುನರುಜ್ಜೀವನಗೊಂಡ ಈ ಷಾರ್ಟ್ರ ಕೆಥೀಡ್ರಲ್ ಪ್ರೌಢ ಗಾತಿಕ್ ಶೈಲಿಯ ಮೊದಲ ಕಟ್ಟಡ. ಬೆಂಕಿಯಲ್ಲಿ ಹಾಳಾಗದೇ ಉಳಿದಿದ್ದ ಪಶ್ಚಿಮದ ಗೋಪುರ ಮತ್ತು ನೆಲಮಾಳಿಗೆಯನ್ನು ಅನುಸರಿಸಿ ಅದಕ್ಕೆ ತಕ್ಕ ಪ್ರಮಾಣದ ಪುನರ್ನಿರ್ಮಾಣ ಕಾರ್ಯ ಆರಂಭವಾಯಿತು. ಈ ಕಟ್ಟಡದಲ್ಲಿ ಕಾಣಬರುವ ಮುಖ್ಯ ವೈಶಿಷ್ಟ್ಯವೆಂದರೆ ಹಾಡುವ ಸ್ಥಳ. ಶಿಲುಬೆಯಾಕಾರದ ದೇವಾಲಯದ ಅಡ್ಡಭಾಗ ಮತ್ತು ಮಧ್ಯಾಂಗಣ – ಈ ಮೂರು ಭಾಗಗಳಲ್ಲಿನ ಸಮತೋಲನ. ಅನಂತರ ಬೋರ್ಗೆಸ್ ಎಂಬಲ್ಲಿ ಮತ್ತೊಂದು ಕೆಥೀಡ್ರಲ್ ನಿರ್ಮಿತವಾಯಿತು. ಇಲ್ಲಿ ದೇವಾಲಯದ ಶಿಲುಬೆಯಾಕಾರದ ಅಡ್ಡಭಾಗವನ್ನು ಪೂರ್ಣವಾಗಿ ಕೈಬಿಟ್ಟದ್ದರಿಂದ ಒಳಾಂಗಣ ವಿಶಾಲವಾಯಿತು. ಈ ಕಟ್ಟಡದಲ್ಲಿ ಒಂದರ ಮೇಲೆ ಒಂದರಂತೆ ಮೂರು ಕಿಟಕಿಗಳನ್ನು ಅಳವಡಿಸಲಾಯಿತು. ಮೂರೂ ಮಹಡಿಗಳ ಮುಂಭಾಗ ಈ ಕೆಥೀಡ್ರಲ್‌ಗೆ ಒಂದು ಭವ್ಯತೆಯನ್ನು ಕೊಟ್ಟಿತು. ಷಾರ್ಟ್ರನಲ್ಲಿ ಪ್ರಾರಂಭವಾದ ಬೆಳವಣಿಗೆಗಳು ರೀಮ್ಸ್ ಮತ್ತು ಆಮ್ಯನ್ಸ್ ಕಥೀಡ್ರಲ್‌ಗಳಲ್ಲಿ ಪೂರ್ಣಗೊಂಡುವು. ಪ್ರೌಢ ಗಾತಿಕ್ ಶೈಲಿಯ ಕಟ್ಟಡಗಳಿಗೆ ಇವೆರಡೂ ಉತ್ತಮ ಉದಾಹರಣೆಗಳು. ನೆಲದಿಂದ ಸು. 42ಮೀ ಎತ್ತರದ ಛಾವಣಿ ಚೂಪು ಕಮಾನುಗಳಿಂದ ಮಧ್ಯದಲ್ಲಿರುವ ಕಂಬಗಳಿಂದ ಇನ್ನೂ ಎತ್ತರವಿರುವಂತೆ ಭಾಸವಾಗುತ್ತದೆ.

ಈ ಕೆಥೀಡ್ರಲ್‌ಗಳ ಮಹಾದ್ವಾರಗಳ ಶಿಲ್ಪಗಳು ಗಾತಿಕ್ ಶೈಲಿಯಲ್ಲೇ ಅತ್ಯುತ್ತಮ ಶಿಲ್ಪಗಳೆಂದು ಪರಿಗಣಿತವಾಗಿವೆ. ಇಲ್ಲಿನ ಶಿಲ್ಪಗಳು ಸಾಮಾನ್ಯವಾಗಿ ಸರಳವಾಗಿಲ್ಲ. ಅವುಗಳ ಪ್ರತಿಮಾ ವಿವರಣೆಗಳು ಬಹು ಜಟಿಲವಾಗಿವೆ. ಭೂತಗಳು, ದೇವತೆಗಳು ಮುಂತಾದ ಶಿಲ್ಪಗಳು ಬಹು ಸುಂದರವಾಗಿದ್ದು ಆ ಕಾಲದ ಧಾರ್ಮಿಕ ಜೀವನದ ಸುಂದರ ಪ್ರತೀಕಗಳೂ ಆಗಿವೆ. ಷಾರ್ಟ್ರ ಮತ್ತು ಆಮ್ಯನ್ಸ್ ಕತೀಡ್ರಲ್‌ಗಳ (1220–30) ಶಿಲ್ಪಗಳು ದೇವಲೋಕವನ್ನೇ ನಮ್ಮ ಮುಂದೆ ತೆರೆಯುತ್ತವೆ. 'ಕೊನೆಯ ತೀರ್ಪಿನ' ಶಿಲ್ಪ ಆಮ್ಯನ್ಸ್‌ನ ಮಧ್ಯ ದ್ವಾರದಲ್ಲೂ ವರ್ಜಿನ್ ಮೇರಿಯ ಶಿಲ್ಪ ಉತ್ತರದ ದ್ವಾರದಲ್ಲೂ ಆಮ್ಯನ್ಸ್ ಕತೀಡ್ರಲ್‌ನ ಪ್ರಧಾನ ದೇವತೆ ಸಂತ ಫರ್ಮಿನನ ಶಿಲ್ಪ ದಕ್ಷಿಣದಲ್ಲೂ ಇವೆ.



**ಆಸರೆಗೋಡೆಗಳು ಮತ್ತು ಅವುಗಳ ಶೃಂಗಗಳಲ್ಲಿ ಅಳವಡಿಸಿರುವ ದೇವದೂತರ ವಿಗ್ರಹಗಳು. ರೀಮ್ಸ್ ನಗರದ (ಫ್ರಾನ್ಸ್) ಕತೀಡ್ರಲ್. 1255–1311**

ಕತೀಡ್ರಲ್‌ನ ಉತ್ತರದ ಗೋಡೆಗಳಲ್ಲಿ ಹಳೆ ಒಡಂಬಡಿಕೆಯ ಶಿಲ್ಪ ಫಲಕಗಳಿದ್ದರೆ, ದಕ್ಷಿಣದಲ್ಲಿ ಹೊಸ ಒಡಂಬಡಿಕೆಯ ಚಿತ್ರ ಫಲಕಗಳಿವೆ. ಇಲ್ಲಿಯೇ ಪಶ್ಚಿಮ ದ್ವಾರದಲ್ಲಿರುವ ಬೋಧನೆ ಮಾಡುತ್ತಿರುವ ಕ್ರಿಸ್ತನ ಶಿಲ್ಪ ಪ್ರೌಢ ಗಾತಿಕ್ ಶೈಲಿಯಲ್ಲಿಯೇ ಅತ್ಯುತ್ತಮ ವಿಗ್ರಹ. ದಯಾಮಯನಾದ ಕ್ರಿಸ್ತನ ಭಾವನೆಗಳು ಬಹು ಸುಂದರವಾಗಿ ಇಲ್ಲಿ ರೂಪುಗೊಂಡಿವೆ. ಮಡಿಕೆಗಳಿಂದ ಆವೃತ್ತವಾದ ಬಟ್ಟೆಯ ವಿನ್ಯಾಸ, ನೆಟ್ಟಗೆ ನಿಂತಿರುವ ಭಂಗಿ, ಮೊದಲಾದವು ಈ ಶಿಲ್ಪದ ವೈಶಿಷ್ಟ್ಯಗಳು.

ಈ ಕತೀಡ್ರಲ್‌ಗಳ ಕಿಟಕಿಗಳಲ್ಲಿ ಬಣ್ಣದ ಗಾಜುಗಳು ಹೇರಳವಾಗಿವೆ. ಆಮ್ಯನ್ಸ್ ಮತ್ತು ರೀಮ್ಸ್‌ಗಳಲ್ಲಿ ಆ ಕಾಲದ ಬಣ್ಣದ ಗಾಜುಗಳು ಹೆಚ್ಚಾಗಿ ಉಳಿದಿಲ್ಲವಾದರೂ ಷಾರ್ಟ್ರ ಮತ್ತು ಬೋರ್ಗೆಸ್‌ಗಳಲ್ಲಿ ಅವು ವಿಶೇಷವಾಗಿ ಉಳಿದುಬಂದಿವೆ. ಬಣ್ಣದ

ಗಾಜುಗಳ ಬಳಕೆ ಹೆಚ್ಚಿದಂತೆ, ಬಣ್ಣದ ವೈವಿಧ್ಯವೂ ಹೆಚ್ಚಿದುದು ಸಹಜವೇ ಆಗಿದೆ. 12ನೆಯ ಶತಮಾನದಲ್ಲಿ ನೀಲಿ ಬಣ್ಣ ವಿಶೇಷವಾಗಿ ತಿಳಿಯಾಗಿದ್ದಿತು. 13ನೆಯ ಶತಮಾನದಲ್ಲಿ ಅದು ಗಾಢವಾಯಿತು. ಈ ಕಟ್ಟಡಗಳನ್ನು ಕಟ್ಟಲು ಧನಸಹಾಯ ಮಾಡಿದವರ ಚಿತ್ರಗಳನ್ನು ಷಾರ್ಟ್ರದ ಈ ಗಾಜುಗಳ ಮೇಲೆ ಕೆತ್ತಲಾಗಿದೆಯೆಂದು ಅನೇಕರು ಅಭಿಪ್ರಾಯಪಡುತ್ತಾರೆ.

13ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಅಂತ್ಯದವರೆಗೆ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಸರ್ವತೋಮುಖವಾದ ಬೆಳವಣಿಗೆಯುಂಟಾಯಿತು. ಅದರಲ್ಲಿಯೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಈ ಎರಡು ದೇಶಗಳೂ ತಮ್ಮದೇ ಆದ ಸಂಸ್ಕೃತಿಯನ್ನು ರೂಢಿಸಿಕೊಂಡವು. ಇದರ ಜೊತೆಗೆ ಸೂಕ್ಷ್ಮಾಭಿರುಚಿ ಬೆಳೆಯಿತು. ಇವುಗಳೆಲ್ಲವೂ ಆ ಕಾಲದ ವಾಸ್ತುಶಿಲ್ಪದ ಮೇಲೂ ಪರಿಣಾಮವನ್ನು ಬೀರಿದುವು. 13ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಕೊನೆಯವರೆಗಿನ ವಾಸ್ತುಶಿಲ್ಪವನ್ನು ರಿಫೈನ್ಡ್ ಗಾತಿಕ್ ಎಂದು ಕರೆಯುತ್ತಾರೆ. ಗಾತಿಕ್ ವಾಸ್ತು ಶೈಲಿಯಲ್ಲೇ ಇದು ಅತ್ಯುತ್ತಮ ಮಟ್ಟದ್ದು ಎಂದು ವಿದ್ವಾಂಸರ ಮತ.

**ಸ್ಟ್ರಾಸ್‌ಬರ್ಗ್ (ಫ್ರಾನ್ಸ್) ನಗರದ ಚರ್ಚು. ಆರಂಭ ಸು. 1277**

ಅರೇಕಾಲಿನಂತ ತ್ರಿಜ್ಯ ಪಟ್ಟಿಗಳುಳ್ಳ ಗುಂಡು ಕಿಟಕಿಗಳು ಪ್ರಾರಂಭವಾದದ್ದು ಈ ಕಾಲದಲ್ಲಿ. ಕಿಟಕಿಯ ಮಧ್ಯದ ಬಿಂದುವಿನಿಂದ ಸೂರ್ಯನ ಕಿರಣಗಳಂತೆ ತ್ರಿಜ್ಯಪಟ್ಟಿಗಳು ಹೊರಹೊಮ್ಮಿ, ಈ ಶೈಲಿಗೆ ರೇಯನಂಟ್ ಎಂಬ ಹೆಸರನ್ನು ತಂದುಕೊಟ್ಟಿವೆ. ಒಂಬತ್ತನೆಯ ಲೂಯಿ ಪ್ಯಾರಿಸ್‌ನಲ್ಲಿ 1248ರಲ್ಲಿ ಕಟ್ಟಲಾದ ಸೇಂಟ್ ಚ್ಯಾಪೆಲ್‌ನಲ್ಲಿ ಈ ರೀತಿಯ ಗುಂಡು ಕಿಟಕಿಗಳು ಮೊದಲ ಬಾರಿಗೆ ಬಳಕೆಗೆ ಬಂದುವು. ಇಲ್ಲಿ ಊರೆಗಾಗಿ ಬಳಸಿರುವ ಕಲ್ಲನ್ನೂ ಬಿಟ್ಟರೆ ಮಿಕ್ಕೆಲ್ಲ ಕಡೆಗಳಲ್ಲಿಯೂ ಬಣ್ಣದ ಗಾಜು ವಿಶೇಷವಾಗಿದೆ. 19ನೆಯ ಶತಮಾನದಲ್ಲಿ ಈ ಕಟ್ಟಡವು ಪುನರುಜ್ಜೀವನಗೊಂಡಿದ್ದರೂ 13ನೆಯ ಶತಮಾನಕ್ಕೆ ಸೇರಿದ ಒಳಗಿನ ಅಲಂಕಾರಗಳು ಈ ಕಿಟಕಿಗಳಿಗೆ ಮಾಡಿರುವ ಹತ್ತಾರು ವರ್ಣಚಿತ್ರಗಳ ಅಲಂಕಾರಗಳು ಇಂದಿಗೂ ಅಚ್ಚಳಿಯದೆ ಉಳಿದು ಬಂದಿವೆ. ಒಳಭಾಗದಲ್ಲಿ ಕ್ರೈಸ್ತಗುರುಗಳ ವಿಗ್ರಹಗಳಿವೆ. ಇದಕ್ಕಿಂತಲೂ ಹೆಚ್ಚು ಆಕರ್ಷಕವಾದದ್ದು ಶೈಲಿಯ ದೃಷ್ಟಿಯಿಂದ ಹೆಚ್ಚು ಬೆಳವಣಿಗೆಯನ್ನು ತೋರ್ಪಡಿಸುವ ಕಟ್ಟಡವೆಂದರೆ ಬೋವೇ ಕತೀಡ್ರಲ್ 1247ರಲ್ಲಿ ಪ್ರಾರಂಭಿಸಲಾದ ಈ ಕಟ್ಟಡದ ಗೋಪುರ ಸು. 47ಮೀ. ಎತ್ತರದಾಗಿತ್ತು. 1272ರಲ್ಲಿ ಇದನ್ನು ಪೂರ್ಣಗೊಳಿಸಲಾಯಿತು. ಆದರೆ ಬಹು ಎತ್ತರವೂ ವಿಶಾಲವೂ ಆದ ಈ ಕಟ್ಟಡದ ತಳಪಾಯ ಭದ್ರವಿಲ್ಲದ್ದರಿಂದ 1284ರಲ್ಲಿ ಇಡೀ ಕಟ್ಟಡ ಕುಸಿದುಬಿತ್ತು. ಇದರ ಪುನರುಜ್ಜೀವನವಾದದ್ದು 16ನೆಯ ಶತಮಾನದಲ್ಲಿ. ವಿಲ್ಲರ್ಡ್ ಡಿ ಹೊನ್‌ಕೋರ್ಟ್ ಎಂಬ ಫ್ರೆಂಚ್ ಶಿಲ್ಪಿ ಸುಮಾರು ಇದೇ ಕಾಲದಲ್ಲಿ ಯುರೋಪಿನಲ್ಲೆಲ್ಲ ಸಂಚರಿಸಿ ತಾನೂ ನೋಡಿದ ಪೂರ್ಣಗೊಂಡಿದ್ದ, ಅಪೂರ್ಣವಾಗಿದ್ದ ಎಲ್ಲ ಕತೀಡ್ರಲ್‌ಗಳ ಚಿತ್ರಗಳನ್ನು ಸುಂದರವಾಗಿ ಬರೆದಿಟ್ಟಿದ್ದಾನೆ. ಈ ಚಿತ್ರಗಳಿಂದ ಆಗಿನ ಕಾಲದಲ್ಲಿ ಕಟ್ಟಡಗಳನ್ನು ಕಟ್ಟುತ್ತಿದ್ದ ಕ್ರಮ, ಶಿಲ್ಪಿಗಳು ಬಳಸುತ್ತಿದ್ದ ಸಲಕರಣೆಗಳು ಮುಂತಾದವುಗಳ ಬಗ್ಗೆ ವಿಶೇಷ ಮಾಹಿತಿ ದೊರಕುತ್ತವೆ.

ಈ ಕಾಲದ ಶಿಲ್ಪಕ್ಕೆ ಉದಾಹರಣೆಯಾಗಿ ರೀಮ್ಸ್ ಕತೀಡ್ರಲ್‌ನ ಪಶ್ಚಿಮ ಮಹಾದ್ವಾರವನ್ನು ನೋಡಬಹುದು. ಕ್ರಿಸ್ತ ಅವತಾರ ಮಾಡುವನೆಂದು ಗೇಬ್ರಿಯಲ್ ಮೇರಿ ಕನ್ಯೆಗೆ ಮುನ್ಸೂಚನೆ ಕೊಡುವ ಮತ್ತು ಮೇರಿ ಎಲಿಜಬೆತಳನ್ನು ಸಂದರ್ಶಿಸಿದ – ಈ ಎರಡು ಶಿಲ್ಪ ಫಲಕಗಳು ಬಹು ಸುಂದರವಾದವು.

ಗಾತಿಕ್ ಕಲೆ ಯುರೋಪಿನ ಎಲ್ಲ ಭಾಗಗಳಲ್ಲಿಯೂ ಕಂಡು ಬಂದರೂ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಇಟಲಿಗಳಲ್ಲಿ ಇದರ ಪ್ರಾಬಲ್ಯ ಹೆಚ್ಚು. ಇಲ್ಲೆಲ್ಲ ಶುದ್ಧ ಗಾತಿಕ್ ಶೈಲಿಯೊಂದಿಗೆ ಸ್ಥಳೀಯ ಶೈಲಿ ಬೆರೆತಿರುವುದನ್ನು ಕಾಣಬಹುದು. ಕ್ಯಾಂಟರ್‌ಬರಿ ಕತೀಡ್ರಲ್‌ನ ಪೂರ್ವಭಾಗ 1174ರಲ್ಲಿ ಬೆಂಕಿಗೆ ಆಹುತಿಯಾಗಿ, ಅದರ ಪುನರ್ನಿರ್ಮಾಣ ಕಾರ್ಯ ಈ ಕಾಲದಲ್ಲಿ ಪ್ರಾರಂಭವಾಯಿತು. ಇದರಲ್ಲಿ ಇಂಗ್ಲೆಂಡಿನ ಸ್ಥಳೀಯ ಲಕ್ಷಣಗಳು ವಿಶೇಷವಾಗಿ ಕಾಣಬರುತ್ತವೆ. 1220ರಲ್ಲಿ ಪ್ರಾರಂಭವಾಗಿ 1240ರಲ್ಲಿ ಪೂರ್ಣಗೊಳಿಸಲ್ಪಟ್ಟ ಸ್ಯಾಲಿಸ್‌ಬರಿ ಕತೀಡ್ರಲ್ ಇಂಗ್ಲಿಷ್ ಗಾತಿಕ್ ಶೈಲಿಗೆ ಉತ್ತಮ ಉದಾಹರಣೆ. ಇದರಲ್ಲಿ ಅಲಂಕಾರಕ್ಕೆ ಹೆಚ್ಚು ಗಮನ ಕೊಟ್ಟಿರುವುದು ಕಾಣಬರುತ್ತದೆ. ಇದೇ ಪ್ರವೃತ್ತಿ ಇಂಗ್ಲಿಷ್ ಗಾತಿಕ್ ಶೈಲಿಯಲ್ಲಿ ಎದ್ದು ಕಾಣುತ್ತದೆ.

ಜರ್ಮನಿಯಲ್ಲಿ ಮೊದಮೊದಲು ರೋಮನೆಸ್ಕ್ ಶೈಲಿಯೇ ವಿಶೇಷವಾಗಿ ಅಭಿವೃದ್ಧಿ ಹೊಂದಿದ್ದು, ಗಾತಿಕ್ ಶೈಲಿಯ ಕಟ್ಟಡಗಳಲ್ಲೂ ಇದನ್ನೇ ಅಳವಡಿಸಲಾಗಿತ್ತು. ಕಲೋನ್‌ನ ಕತೀಡ್ರಲ್ಲನ್ನು ಕಟ್ಟಿದ (1248) ಶಿಲ್ಪಿ ಫ್ರಾನ್ಸ್ ದೇಶದಲ್ಲಿ ಶಿಕ್ಷಣ ಪಡೆದವನಾದುದರಿಂದ ಇಲ್ಲಿ ಫ್ರೆಂಚ್ ಶೈಲಿಯೇ ವಿಶೇಷವಾಗಿ ಕಾಣುತ್ತದೆ. ಹಲೆನ್‌ಕಿರ್ಚ್ ಎಲಿಜಬೆತ್‌ಕಿರ್ಚ್‌ಗಳ ಅಂಗಳ, ಪೂಜಾಗೃಹಗಳಲ್ಲಿ ರಿಫೈನ್ಡ್ ಗಾತಿಕ್ ಶೈಲಿಯನ್ನು ಗಮನಿಸಬಹುದು. ಈ ಕಾಲದ ಜರ್ಮನ್ ಗಾತಿಕ್ ಶಿಲ್ಪಗಳಲ್ಲಿ ಕಾಣಬರುವ ಮುಖ್ಯ ಲಕ್ಷಣವೆಂದರೆ ಚಲನೆ. ಶಿಲ್ಪಗಳು ಚಲಿಸುತ್ತಿವೆಯೊ ಎನ್ನುವ ರೀತಿಯಲ್ಲಿ ಅವನ್ನು ಕೆತ್ತಿರುವುದು ಇಲ್ಲಿನ ವೈಶಿಷ್ಟ್ಯ.

**ಮಿಲಾನ್ (ಇಟಲಿ) ನಗರದ ಒಂದು ಚರ್ಚು. ಆರಂಭ 1386. ಗಾತಿಕ್ ಶೈಲಿಯ ಕಲ್ಲುಕುಸುರಿ ಕೆಲಸಕ್ಕೊಂದು ಒಳ್ಳೆಯ ಉದಾಹರಣೆ**

ಸ್ಪೇನಿನಲ್ಲಿ ಅವಿಲ ಕತೀಡ್ರಲ್‌ನಿಂದ ಪ್ರಾರಂಭವಾಗಿ ಗಾತಿಕ್ ಶೈಲಿ ಬೆಳೆದುಬಂತು. ಇಲ್ಲಿನ ಕಮಾನು ಛಾವಣಿ ಪ್ರಾರಂಭದೆಶೆಯ ಗಾತಿಕ್ ಶೈಲಿಗೆ ಸೇರಿದುದು. ಅಲ್ಲಿಂದ ಮುಂದೆ ಇದೇ ಶೈಲಿ ಬೆಳೆಯಿತು. ಟೊಲೆಡೊ ಮತ್ತು ಬರ್ಗೋಸ್ ಕತೀಡ್ರಲ್‌ಗಳಲ್ಲಿ ಎತ್ತರಕ್ಕಿಂತ ವಿಶಾಲತೆಗೆ ಹೆಚ್ಚು ಪ್ರಾಮುಖ್ಯ ಕೊಟ್ಟಿರುವುದು ಕಂಡು ಬರುತ್ತದೆ. ಪಲ್ಮ, ಸೆವಿಲ್ ಕತೀಡ್ರಲ್‌ಗಳು ಹೊರನೋಟದಿಂದ ಭಿನ್ನ ರೀತಿಯವೆಂದೂ ಕಂಡುಬಂದರೂ ಅವು ಗಾತಿಕ್ ಶೈಲಿಯ ಕಟ್ಟಡಗಳೆನ್ನುವುದರಲ್ಲಿ ಸಂದೇಹವೇ ಇಲ್ಲ. ಗಾತಿಕ್ ಶಿಲ್ಪಶೈಲಿ ಸ್ಪೇನಿನಲ್ಲಿ ಸುಮಾರು 18ನೆಯ ಶತಮಾನದವರೆಗೂ ಬಳಕೆಯಲ್ಲಿತ್ತು.

ಗಾತಿಕ್ ಶಿಲ್ಪ ಶೈಲಿಯನ್ನು ತನ್ನ ಹೆಚ್ಚಿನ ಅನುಕೂಲಕ್ಕೆ ಅಳವಡಿಸಿಕೊಂಡ ದೇಶಗಳಲ್ಲಿ ಇಟಲಿ ಬಹು ಪ್ರಮುಖವಾದುದು. ಸ್ಥಳೀಯ ಲಕ್ಷಣಗಳೂ ಗಾತಿಕ್ ಶಿಲ್ಪಲಕ್ಷಣಗಳೂ ಮಿಳಿತಗೊಂಡು ಪುನರುಜ್ಜೀವನ ಶೈಲಿಯ ಉದಯಕ್ಕೆ ಕಾರಣವಾದ

ಇಟಾಲಿಯನ್ ಗಾತಿಕ್‌ನಲ್ಲಿ ವೈವಿಧ್ಯ ವಿಶೇಷವಾಗಿ ಕಂಡುಬರುತ್ತದೆ. ವಾಸ್ತು ಮತ್ತು ಶಿಲ್ಪಕಲೆಗಳಿಗಿಂತ ವರ್ಣಚಿತ್ರಗಳಿಗೆ ಇಲ್ಲಿ ಪ್ರಾಧಾನ್ಯ ಬಂದಿದೆ.

14 ಮತ್ತು 15ನೆಯ ಶತಮಾನದ ವಾಸ್ತುಶಿಲ್ಪ ಕಲೆ ಅದರ ಹಿಂದೆ ಇದ್ದ ಕಲೆಗಿಂತ ಭಿನ್ನವಾಗಿದ್ದು, ಒಂದು ಹೊಸ ಪ್ರವೃತ್ತಿಯನ್ನೇ ವ್ಯಕ್ತಪಡಿಸುತ್ತದೆ. ಆದುದರಿಂದ ಈ ಕಾಲದ ಕಲೆಯನ್ನು ಲೇಟ್ ಗಾತಿಕ್ (ಅಂತ್ಯ ಗಾತಿಕ್) ಎಂದು ಕರೆಯಬಹುದು. 14ನೆಯ ಶತಮಾನದ ಆರಂಭದಲ್ಲಿ ಯುರೋಪು ಉಚ್ಛ್ರಾಯಸ್ಥಿತಿಯಲ್ಲಿದ್ದರೂ ಕೆಲವೇ ವರ್ಷಗಳಲ್ಲಿ ನಡೆದ ಯುದ್ಧಗಳು ಬಂದೊದಗಿದ ಕ್ಷಾಮ ಮುಂತಾದ ಪರಿಸ್ಥಿತಿಗಳಿಂದ ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿ ಹದಗೆಟ್ಟಿತು. ಈ ರೀತಿಯ ಪರಿಸ್ಥಿತಿಯಲ್ಲಿ ಲೇಟ್ ಗಾತಿಕ್ ಶೈಲಿ ಹುಟ್ಟಿ ಬೆಳೆಯಿತು. ಇದರಲ್ಲಿ ಎರಡು ಭೇದಗಳನ್ನು ಗುರುತಿಸಬಹುದು. ಲಂಬತ್ವವನ್ನು ಉಳಿಸಿಕೊಂಡ ಇಂಗ್ಲಿಷ್ ಶೈಲಿ ಮತ್ತು ಫ್ರಾನ್ಸಿನ ಫ್ಲಾಂಬಾಯಂಟ್ ಶೈಲಿ. 13ನೆಯ ಶತಮಾನದಲ್ಲಿಯೇ ಉದ್ದುದ್ದನೆಯ ಗೋಪುರಗಳ ಬಳಕೆ ಕಂಡುಬಂದಿತ್ತು. ಈಗ ಇದಕ್ಕೆ ಅಲಂಕಾರಗಳೂ ಸೇರಿದವು. ಕಮಾನು ಚಾವಣಿ ಆಗಿನ ಕಾಲದಲ್ಲಿ ಎಷ್ಟು ಸರಳವಾಗಿತ್ತೋ ಈಗ ಅಷ್ಟೂ ಅಲಂಕಾರಯುಕ್ತವಾಯಿತು. ಫ್ಲಾಂಬಾಯಟ್ ಶೈಲಿಯಲ್ಲಿ ಚರ್ಚುಗಳಿಗಿಂತ ಜಾಸ್ತಿಯಾಗಿ ಇತರ ಕಟ್ಟಡಗಳು ಬೆಳೆದುಬಂದವು. ಈ ಶೈಲಿಯಲ್ಲಿ ಶಿಲ್ಪಕ್ಕಿಂತ ವರ್ಣಚಿತ್ರಗಳಿಗೆ ವಿಶೇಷ ಗಮನವನ್ನು ಕೊಡಲಾಯಿತು. ಕ್ರಿಸ್ತನ ಜೀವನಕ್ಕೆ ಸಂಬಂಧಿಸಿದ ಶಿಲ್ಪ ಅಥವಾ ವರ್ಣಚಿತ್ರಗಳ ಜೊತೆಗೆ ಅರಮನೆಯ ರಾಜ ರಾಣಿಯರ, ಮಂತ್ರಿಗಳ ಜೀವನಕ್ಕೆ ಸಂಬಂಧಿಸಿದ ವರ್ಣಚಿತ್ರಗಳೂ ಬೆಳೆದು ಬಂದವು.

ಸುಮಾರು ಇದೇ ಕಾಲಕ್ಕೆ ಇಟಲಿಯಲ್ಲಿ ಮತ್ತು ಇತರ ಕಡೆಗಳಲ್ಲಿ ಪುನರುಜ್ಜೀವನ ಶೈಲಿಯ ಉಗಮವಾಗುತ್ತಿತ್ತಾಗಿ ಗಾತಿಕ್ ಶೈಲಿ ಮಂಕಾಗಿ ಹೊಸ ಶೈಲಿಯ ಉಗಮಕ್ಕೆ ದಾರಿ ಮಾಡಿಕೊಟ್ಟಿತು. (ಎ.ವಿ.ಎಸ್.)

**ಗಾತ್ರಾನುಗುಣ ಪ್ರತಿಫಲ :** ಒಂದು ಉದ್ಯಮ ಸಂಸ್ಥೆಯ ಉತ್ಪಾದನ ಗಾತ್ರದಲ್ಲಿ (ಸ್ಕೇಲ್ ಆಫ್ ಪ್ರೊಡಕ್ಷನ್) ವ್ಯತ್ಯಾಸ ಮಾಡಿದಾಗ ಅದರಿಂದಾಗಿ ಆ ಸಂಸ್ಥೆಯ ಪ್ರದಾನದ ಮೇಲೆ (ಔಟ್‌ಪುಟ್ : ಉತ್ಪತ್ತಿ) ಆಗುವ ಪರಿಣಾಮ (ರಿಟರ್ನ್ಸ್ ಟು ಸ್ಕೇಲ್). ಒಂದು ಪದಾರ್ಥದ (ಕಮಾಡಿಟಿ) ಉತ್ಪಾದನೆಗೆ ಬಳಸಲಾಗುವ ಆದಾನಗಳಲ್ಲಿ (ಇನ್‌ಪುಟ್) ಸ್ಥಿರ (ಫಿಕ್ಸೆಡ್) ಮತ್ತು ಚರ (ವೇರಿಯ ಬಲ್) ಎಂಬ ಎರಡು ವಿಧಗಳಿವೆ. ಯಂತ್ರಸ್ಥಾವರ, ಸಲಕರಣೆ ಮುಂತಾದವು ಆದಾನಗಳು, ಶ್ರಮ, ವಿದ್ಯುತ್ತು, ಕಚ್ಚಾ ಸಾಮಗ್ರಿ (ರಾ ಮೆಟೀರಿಯಲ್ಸ್) ಮುಂತಾದವು ಚರ ಆದಾನಗಳು. ಎಷ್ಟು ಸ್ಥಿರ ಆದಾನಗಳನ್ನು ಬಳಸಬೇಕೆಂಬ ನಿರ್ಧಾರಗಳು ಒಂದು ಉದ್ಯಮ ಸಂಸ್ಥೆಯ ದೀರ್ಘಕಾಲಿಕ ಉತ್ಪಾದನ ಯೋಜನೆಗೂ ಎಷ್ಟು ಚರ ಆದಾನಗಳನ್ನು ಬಳಸಬೇಕೆಂಬ ನಿರ್ಧಾರಗಳು ಅಲ್ಪಕಾಲಿಕ ಉತ್ಪಾದನ ಯೋಜನೆಗಳಿಗೂ ಸಂಬಂಧಿಸಿದವು. ಸ್ಥಿರ ಆದಾನಗಳು ಬದಲಾಗದಿದ್ದು, ಒಂದೇ ಗುಣಗಳುಳ್ಳವು ಆಗಿದ್ದು, ಚರ ಆದಾನಗಳು ಬದಲಾಗುತ್ತಿದ್ದರೆ ಪ್ರದಾನದ ಪರಿಮಾಣ ಬದಲಾಗುತ್ತದೆ. ಒಂದು ಪ್ರಕ್ರಿಯೆಯಲ್ಲಿ (ಪ್ರೋಸೆಸ್) ಒಂದು ಕಾಲದ ಒಂದು ನಿರ್ದಿಷ್ಟ ಏಕಮಾನದಲ್ಲಿ (ಯೂನಿಟ್) ದೊರಕುವ ಪ್ರದಾನದ (ಔಟ್‌ಪುಟ್) ಪರಿಮಾಣ $y$ ಆಗಿದ್ದು, ಚರ ಆದಾನದ ಪರಿಮಾಣ $x$ ಆಗಿದ್ದರೆ $y = f(x)$ ಎಂಬುದು ಪ್ರದಾನ ಮತ್ತು ಆದಾನ ಇವುಗಳ ಸಂಬಂಧವನ್ನು ನಿರೂಪಿಸುತ್ತದೆ. ಅದೇ ಕಾಲದ ಏಕಮಾನದಲ್ಲಿ ಪ್ರದಾನದ ಪರಿಮಾಣ $y$ ಆಗಿದ್ದು, $x_1, x_2$ ಇವು ಚರ ಆದಾನಗಳ ಪರಿಮಾಣಗಳಾಗಿದ್ದರೆ

$$y = f(x_1, x_2)$$

ಎಂಬುದು ಪ್ರದಾನ ಮತ್ತು ಆದಾನಗಳ ಸಂಬಂಧವನ್ನು ನಿರೂಪಿಸುತ್ತದೆ.

ಒಂದೇ ಕಾಲದಲ್ಲಿ ಎಲ್ಲ ಆದಾನಗಳಲ್ಲೂ ಒಂದೇ ಪ್ರಮಾಣದಲ್ಲಿ ಬದಲಾವಣೆಗಳನ್ನು ಮಾಡಿದಾಗ ಪ್ರದಾನದಲ್ಲಿ ಆಗುವ ಬದಲಾವಣೆಗಳೇ ಗಾತ್ರಾನುಗುಣ ಪ್ರತಿಫಲ. ಕೆಲವು ಪ್ರಕ್ರಿಯೆಗಳು ಏರುಮುಖದ, ಕೆಲವು ಸ್ಥಿರವಾಗಿರುವ, ಮತ್ತೆ ಕೆಲವು ಕಡಿಮೆಯಾಗುತ್ತಿರುವ ಗಾತ್ರಾನುಗುಣ ಪ್ರತಿಫಲಗಳನ್ನು ಪ್ರದರ್ಶಿಸುವುವು. ಇನ್ನೂ ಕೆಲವು ಪ್ರಕ್ರಿಯೆಗಳು ಉತ್ಪನ್ನದ ವಿವಿಧ ಹಂತಗಳಲ್ಲಿ ಮೂರು ಬಗೆಯ ಪ್ರತಿಫಲಗಳನ್ನೂ ಪ್ರದರ್ಶಿಸಬಹುದು. ಆದಾನಗಳನ್ನು a ದರದಲ್ಲಿ ಬದಲಾಯಿಸಿದಾಗ ಪ್ರದಾನ $\beta$ ದರದಲ್ಲಿ ಬದಲಾವಣೆ ಹೊಂದಿದರೆ $(\alpha > 1, \beta > 1)$ ಅವಲಂಬಿತ ಪರಿಮಾಣ

$$\beta y = f(ax_1, ax_2)$$ ಆಗುತ್ತದೆ.

ಇದರಲ್ಲಿ $\beta > \alpha$ ಆಗಿದ್ದರೆ ಹೆಚ್ಚುತ್ತಿರುವ ಗಾತ್ರಾನುಗುಣ ಪ್ರತಿಫಲವಿರುತ್ತದೆ;

$\beta = \alpha$ ಆಗಿದ್ದರೆ ಸ್ಥಿರ ಗಾತ್ರಾನುಗುಣ ಪ್ರತಿಫಲವಿರುತ್ತದೆ;

$\beta < \alpha$ ಆಗಿದ್ದರೆ ಕಡಿಮೆಯಾಗುತ್ತಿರುವ ಗಾತ್ರಾನುಗುಣ ಪ್ರತಿಫಲವಿರುತ್ತದೆ.

ಉದಾಹರಣೆಗೆ ಒಂದು ಪ್ರಕ್ರಿಯೆಯಲ್ಲಿ ಆದಾನ ಪ್ರದಾನಗಳ ಮತ್ತು ಉತ್ಪನ್ನಗಳ ಪರಿಮಾಣಗಳು ಹೀಗಿರಲಿ :

| | ಆದಾನ 1 | ಆದಾನ 2 | ಪ್ರದಾನ |
|---|---|---|---|
| 1 | 10 | 6 | 20 |
| 2 | 15 | 9 | 35 |
| 3 | 20 | 12 | 40 |
| 4 | 25 | 15 | 45 |

ಒಂದನೆಯ ಸ್ಥಿತಿಯನ್ನು ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಸ್ಥಿತಿಗಳೊಡನೆ ಹೋಲಿಸಬಹುದು. ಒಂದನೆಯ ಸ್ಥಿತಿಯಿಂದ ಎರಡನೆಯ ಸ್ಥಿತಿಗೆ ಏರುಮುಖ ಗಾತ್ರಾನುಗುಣ ಪ್ರತಿಫಲವಿದೆ. ಒಂದನೆಯ ಸ್ಥಿತಿಯಿಂದ ಮೂರನೆಯ ಸ್ಥಿತಿಗೆ ಸ್ಥಿರ ಗಾತ್ರಾನುಗುಣ ಪ್ರತಿಫಲವಿದೆ. ಒಂದನೆಯ ಸ್ಥಿತಿಯಿಂದ ನಾಲ್ಕನೆಯ ಸ್ಥಿತಿಗೆ ಇಳಿಮುಖ ಗಾತ್ರಾನುಗುಣ ಪ್ರತಿಫಲವಿದೆ. (ಎಂ.ಎ.ಎಸ್.)

**ಗಾಥಾ[1] :** ಈ ಶಬ್ದ ವೇದಗಳಲ್ಲಿ ಸ್ತೋತ್ರರೂಪ ಶ್ಲೋಕವೆಂಬ ಅರ್ಥದಲ್ಲಿಯೂ ಸಂಸ್ಕೃತದಲ್ಲಿ ಹಾಡುವ ಗಾದೆಯಂಥ ಸೂಕ್ತಿಯೆಂಬ ಅರ್ಥದಲ್ಲಿಯೂ ಪ್ರಾಕೃತದಲ್ಲಿ ಆರ್ಯಾವೃತ್ತಕ್ಕೆ ಸಮಾನವಾದ ಒಂದು ಮಾತ್ರಾವೃತ್ತದ ಛಂದೋಬಂಧವೆಂದೂ ಬಳಕೆಯಲ್ಲಿದೆ (**ನೋಡಿ– ಗಾಥಾ[2]**). ಆದರೆ ಇದು ಬಹಳಷ್ಟು ಪ್ರಸಿದ್ಧಿಗೆ ಬಂದುದು ಪ್ರಾಚೀನ ಪಾರಸಿಕರ ಪವಿತ್ರ ಗ್ರಂಥವಾದ ಜೆಂಡ್ ಅವೆಸ್ತದ ಒಂದು ಭಾಗವಾಗಿರುವುದರಿಂದಲೇ ಎನ್ನಬಹುದು.

ಪ್ರಚಲಿತ ಶಕ ಪೂರ್ವ 7ನೆಯ ಶತಮಾನದ ವೇಳೆಗೆ ಆಕಿಮೋನಿಯನ್ ಚಕ್ರವರ್ತಿಗಳಾದ ಡೇರಿಯಸ್ ಮುಂತಾದವರ ಕಾಲದಲ್ಲಿ ಈ ಪವಿತ್ರಗ್ರಂಥ ಸಾಕಷ್ಟು ಪ್ರಚಾರಗೊಂಡು ಅಲೆಕ್ಸಾಂಡರನ ದಂಡಯಾತ್ರೆಯ ಹೊತ್ತಿಗೆ ಪ್ರಸಿದ್ಧಿಗೆ ಬಂದಾಗಿತ್ತು. ಭಾರತದಲ್ಲಿ ವೇದಗಳಿರುವ ಮಹತ್ತ್ವದ ಸ್ಥಾನವೇ ಅವೆಸ್ತಕ್ಕೆ ಅಂದಿನಿಂದ ಇಂದಿನವರೆಗೂ ಪಾರಸಿಕರಿಂದ ದತ್ತವಾಗಿದೆ. ಈ ಗ್ರಂಥ ಕಾಲದಿಂದ ಕಾಲಕ್ಕೆ ಬೆಳೆಯುತ್ತ ಬಂದು ಈಗ ಬಹು ವಿಸ್ತಾರವಾಗಿದೆ. ಅದರ ಪ್ರಾಚೀನತಮ ಭಾಗವೇ ಝೊರಾಸ್ಟರನ ಮೂಲ ಸಂದೇಶವನ್ನೊಳಗೊಂಡ ಪದ್ಯರೂಪವಾದ ಗಾಥೆಗಳೆಂದು ವಿದ್ವಾಂಸರು ಭಾವಿಸುತ್ತಾರೆ.

ಅವೆಸ್ತದ ಗಾಥೆಗಳು ಐದು ವೃತ್ತಜಾತಿಗಳನ್ನೊಳಗೊಳ್ಳುತ್ತವೆ : 1 ಅಹುನ ವೈತಿ, 2 ಉಷ್ಟವೈತಿ, 3 ಸ್ಪೆಂಟ ಮೆಯ್ನ್ಯು, 4 ವೊಹುಕ್ಷತ್ರ ಮತ್ತು 5 ವಹಿಸ್ಟೋಯಿಸ್ಟಿ. ಮಿಕ್ಕ ಭಾಗಗಳಿಗಿಂತ ಗಾಥೆಗಳಲ್ಲಿ ಝೊರಾಸ್ಟರನ ವೈಯಕ್ತಿಕ ಉಪದೇಶಗಳೂ ಬೋಧನಗಳೂ ಎದ್ದು ಕಾಣುತ್ತವೆ. ಅಹುರಮಜ್ದ (ಒಳ್ಳೆಯದರ ಅಧಿದೈವ) ಮತ್ತು ಅಹ್ರಿಮನ್ (ಕೆಟ್ಟದರ ಅಧಿದೈವ)–ಇವುಗಳ ನಿತ್ಯಸ್ಪರ್ಧೆ, ಇದರಲ್ಲಿ ಮನುಷ್ಯನ ಸಂಬಂಧ, ಕಟ್ಟಕಡೆಗೆ ಅಧರ್ಮ ನಾಯಕನಾದ ಅಹ್ರಿಮನ್ನನ ವಿನಾಶ–ಇವು ಗಾಥೆಗಳಲ್ಲಿ ಬರುವ ಮುಖ್ಯಾಂಶಗಳು. (ಕೆ.ಕೆ.)

**ಗಾಥಾ[2] :** ಗೀಯತೇ ಇತಿ–ಎಂಬ ವಿವರಣೆಯುಳ್ಳದ್ದು. ಋಗ್ವೇದದಲ್ಲಿ ಗಾತವ್ಯಸ್ತೋತ್ರವೆಂಬ ಅರ್ಥದಲ್ಲಿ ಗಾಥಾ ಶಬ್ದವನ್ನು ಕಾಣಬಹುದು; ಋಕ್, ಸಾಮ, ಯಜುಸ್ ಎಂಬ ವೇದಮಂತ್ರಗಳಿಗಿಂತ ಬೇರೆಯಾಗಿರುವ ಛಂದೋಬದ್ಧ ರಚನೆ. ಸ್ವರ ಸಂಗೀತಯುಕ್ತವಾದ ವೈದಿಕವೃತ್ತಗಳು ಲಘು–ಗುರು ವಿನ್ಯಾಸಜನ್ಯ ಸಂಗೀತದಿಂದ ಕೂಡಿದ ವೃತ್ತಗಳಾಗಿ ಪರಿವರ್ತನೆ ಹೊಂದುತ್ತಿರುವಾಗ ಬ್ರಾಹ್ಮಣಗಳಲ್ಲಿ ಅನುಷ್ಟುಭ್ ಮುಂತಾದ ಕೆಲವು ವೃತ್ತಗಳು ಗಾನಯೋಗ್ಯವಾಗಿ ಪಡೆದಿರುವ ಹೆಸರಿದು. ಮುಖ್ಯವಾಗಿ ಪ್ರಾಕೃತಕಾವ್ಯದ ಒಂದು ಮಾತ್ರಾವೃತ್ತ; ಇದರ ಸಂಸ್ಕೃತರೂಪ ಆರ್ಯಾ ಎನಿಸಿಕೊಂಡಿದೆ. ಛಂದೋಗ್ರಂಥಗಳಲ್ಲಿ ನಿರ್ದೇಶಿಸದೆ ಬಿಟ್ಟಿರುವ ವೃತ್ತಗಳ ಸಾಮಾನ್ಯ ಹೆಸರು.

ಸಂಸ್ಕೃತದಲ್ಲಿ ಕಂಡುಬರುವ ಮತ್ತು ಸ್ವಲ್ಪ ಹೆಚ್ಚು ಕಡಿಮೆಯಾಗಿ ವೈದಿಕ ಛಂದಸ್ಸಿನ ಹಿನ್ನೆಲೆಯುಳ್ಳ ಅಕ್ಷರವೃತ್ತ, ವರ್ಣವೃತ್ತ, ಮಾತ್ರಾವೃತ್ತ–ಇವುಗಳಲ್ಲಿ ಕಡೆಯವು ಪ್ರಾಕೃತ ಛಂದಸ್ಸಿನ ಕೆಲವು ಜಾನಪದಗೀತೆಗಳ ಪ್ರಭಾವದಿಂದ ರೂಪುಗೊಂಡಿವೆಯೆಂದು ವಿದ್ವಾಂಸರ ಅಭಿಪ್ರಾಯ. ವೈದಿಕ ಛಂದಸ್ಸಿನಂತೆ ಅಕ್ಷರವಾಗಲಿ, ಸಂಸ್ಕೃತಕಾವ್ಯ ಛಂದಸ್ಸಿನ ವರ್ಣವಾಗಲಿ (ಲಘು – ಗುರುಯುಕ್ತ) ಪ್ರಾಕೃತ ಜನಪದ ಗೀತೆಗಳ ಕಾಲಮಾನವಾಗಲಿ (ಕಾಲಮಾತ್ರೆ) ಮಾತ್ರಾವೃತ್ತಗಳ ಆಧಾರಾಂಶಗಳಾಗಿಲ್ಲ. ಅವುಗಳ ವೈಲಕ್ಷಣ್ಯವೆಂದರೆ ಅಕ್ಷರಮಾತ್ರೆಗಳ ಅಂಶತ್ವ, ಅವನ್ನು ನಾಲ್ಕು ಮಾತ್ರೆಗಳ (ಚತುರ್ಮಾತ್ರೆ) ಮಾತ್ರಾಗಣದಿಂದ ವಿಭಾಗ ಮಾಡಿ ಗುರುತಿಸುವುದುಂಟು.

ಗಾಥಾ ಎಂಬ ಈ ಪ್ರಾಕೃತ ವೃತ್ತದಲ್ಲಿ ಎರಡು ಶ್ಲೋಕಾರ್ಧಗಳಿದ್ದು, ಒಂದೊಂದರ್ಧದಲ್ಲೂ ಎರಡು ಭಾಗಗಳಿರುತ್ತವೆ. ಎರಡು ಅರ್ಧಗಳ ಪ್ರಥಮ ಭಾಗಗಳಲ್ಲಿ 12 ಮಾತ್ರೆಗಳಿದ್ದು, ಒಂದನೆಯ ಅರ್ಧದ ದ್ವಿತೀಯ ಭಾಗದಲ್ಲಿ 18 ಮಾತ್ರೆಗಳೂ ಎರಡನೆಯ ಅರ್ಧದ ದ್ವಿತೀಯ ಭಾಗದಲ್ಲಿ 15 ಮಾತ್ರೆಗಳೂ ಇರುತ್ತವೆ. ಅಂದರೆ

ಒಟ್ಟಿನಲ್ಲಿ ಮೊದಲನೆಯ ಶ್ಲೋಕಾರ್ಧದಲ್ಲಿ 30 ಮಾತ್ರೆಗಳೂ ಎರಡನೆಯದರಲ್ಲಿ 27 ಮಾತ್ರೆಗಳೂ ಇದ್ದಂತಾಯಿತು. ಪ್ರಥಮ ಭಾಗಗಳಲ್ಲಿ ಒಂದೊಂದರ 12 ಮಾತ್ರೆಗಳೂ ಚತುರ್ಮಾತ್ರೆಯ ಮಾತ್ರಾಗಣದ ಐದು ರೂಪಗಳಲ್ಲಿ ಯಾವುದಾದರೂ ಮೂರೂ ಚತುರ್ಮಾತ್ರೆಗಳುಳ್ಳವು. ಮೊದಲರ್ಧದ ದ್ವಿತೀಯ ಭಾಗದಲ್ಲಿ ನಾಲ್ಕು ಚತುರ್ಮಾತ್ರೆಗಳೂ (ಇವುಗಳಲ್ಲಿ ಮೂರನೆಯ ಚತುರ್ಮಾತ್ರೆ ಜಗಣವೋ ಸರ್ವಲಘುವೋ ಆಗಿರಬೇಕು) ಅನಂತರ ಕಡೆಯಲ್ಲಿ ಒಂದು ಗುರುವೂ ಇದ್ದು, ಎರಡನೆಯ ಅರ್ಧದ ದ್ವಿತೀಯ ಭಾಗದಲ್ಲಿ ಯಾವುದಾದರೂ ಎರಡು ಚತುರ್ಮಾತ್ರೆಗಳು, ಅನಂತರ ಒಂದು ಲಘು, ಯಾವುದಾದರೂ ಒಂದು ಚತುರ್ಮಾತ್ರೆ ಮತ್ತು ಕಡೆಯಲ್ಲಿ ಒಂದು ಗುರು ಇರುತ್ತವೆ.

ಈ ಗಾಥಾ ವೃತ್ತದಲ್ಲಿ ಗಮನಿಸಬೇಕಾದ ಇನ್ನೆರಡು ವಿಷಯಗಳೆಂದರೆ– ಚತುರ್ಮಾತ್ರೆಗಳು ನಿರಂತರವಾಗಿ ಬಂದಾಗ ಒಂದು ಚತುರ್ಮಾತ್ರೆಯ ಕಡೆಯ ಮಾತ್ರೆಗೂ ಮುಂದಿನ ಚತುರ್ಮಾತ್ರೆಯ ಮೊದಲನೆಯದಕ್ಕೂ ಮಧ್ಯೆ ಏರ್ಪಡುವ ಸಂಧಿಸ್ಥಾನದಲ್ಲಿ ಅವೆರಡರ ಸಂಯೋಗವಾಗುವಂತೆ ದೀರ್ಘಾಕ್ಷರವನ್ನು ಬಳಸದಿರುವಿಕೆ ಮತ್ತು ಎಲ್ಲಿ ನಿರ್ದಿಷ್ಟವಾಗಿಲ್ಲವೋ ಅಂಥ ಕಡೆಗಳಲ್ಲಿ ಜಗಣದ ಪ್ರಯೋಗ ನಿಷೇಧ.

ಝೆಂಡ್ ಅವೆಸ್ತದ ಭಾಗವಾಗಿ ಬರುವ ಗಾಥಾ ಎಂಬ ಪದದ ವಿವರಗಳಿಗೆ **(ನೋಡಿ– ಗಾಥಾ[1])**. (ಬಿ.ಕೆ.ಎಸ್.)

**ಗಾದೆಗಳು :** ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ಹರಿದು ಬಂದಿರುವ ಸಾಂದ್ರವೂ ಬೋಧಪರವೂ ಆದ ಸೂಕ್ತಿಯೇ ಗಾದೆ (ಪ್ರಾವರ್ಬ್). ಕನ್ನಡದಲ್ಲಿ ಗಾದೆ ಪದಕ್ಕೆ ಸಂವಾದಿಯಾಗಿ ನಾಣ್ಣುಡಿ ಎಂಬ ಪದವೂ ಪ್ರಚಲಿತವಿದೆ. ಗಾದೆ ಸಂಸ್ಕೃತದ ಗಾಥಾ ಪದದಿಂದ ಬಂದಿದ್ದೆಂದು ಹೇಳುತ್ತಾರೆ. ಇದು ಗಾಥಾ ಪದದ ನೇರ ತದ್ಭವವೂ ಅಥವಾ ಪ್ರಾಕೃತದ ಗಾಹೆಯ ಮೂಲಕ ಬಂದುದೊ ಹೇಳಲು ಕಷ್ಟ. ಆದರೆ ಗಾಥಾ ಎಂಬುದು ಮೂಲದಲ್ಲಿ ಒಂದು ಛಂದಸ್ಸಿನ ಜಾತಿಯನ್ನು ಸೂಚಿಸುತ್ತದೆಯೆಂದು ಮಾತ್ರ ಹೇಳಬಹುದು. ಅಂತು 'ನಾಣ್ಣುಡಿ' ಯನ್ನು ಮರೆಸುವಷ್ಟರಮಟ್ಟಿಗೆ 'ಗಾದೆ' ಪ್ರಚಾರದಲ್ಲಿದೆ. ಗಾದೆಗೆ ಸಂವಾದಿಯಾಗಿ ಸಾಮತಿ, ಸೂಕ್ತಿ, ಸೂತ್ರ, ಉದ್ಧರಣೆ, ಲೋಕೋಕ್ತಿ, ಪ್ರಾಚೀನೋಕ್ತಿ ಇತ್ಯಾದಿಗಳು ಬಳಕೆಯಾಗಿದ್ದರೂ ಮೂಲಾರ್ಥದಲ್ಲಿ ಇವೆಲ್ಲವೂ ಒಂದೇ ಎನ್ನಲಾಗುವುದಿಲ್ಲ.

ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ಗಾದೆ ವ್ಯಾಪಕವೂ ಜನ ಸಂಮುಖವೂ ಆಗಿದೆಯಲ್ಲದೆ, ಜನಸಾಮಾನ್ಯರ ಬದುಕು ಭಾಷೆಗಳಲ್ಲಿ ಹಾಸು ಹೊಕ್ಕಾಗಿದೆ. ಗ್ರಾಮೀಣ ಜನ ಮಾತನಾಡುವಾಗಲೆಲ್ಲ ಗಾದೆಗಳು ಪುಂಖಾನು ಪುಂಖವಾಗಿ ಬರುವುದನ್ನು ಕಾಣುತ್ತೇವೆ. ಅವಿಲ್ಲದೆ ಹೋದರೆ ಮಾತು ಸಪ್ಪೆಯಾಗುತ್ತದೆ. ಆದ್ದರಿಂದಲೆ ಸಮಯಕ್ಕೆ ಸರಿಯಾಗಿ ಗಾದೆ ಬಾರದೆ ಹೋದರೆ, ಹಿಂದಕ್ಕೆ ಏನೋ ಗಾದೆ ಹೇಳಿದ ಹಾಗಾಯ್ತು ಎಂದು ಹೇಳುವುದರ ಮೂಲಕ ಅದರ ಆವಶ್ಯಕತೆಯನ್ನು ಒತ್ತಿ ಹೇಳುತ್ತಾರೆ. ಗಾದೆ ಆಡುಮಾತಿನ ಜೀವಸತ್ತ್ವ ಎಂಬುದನ್ನು ಇದು ತೋರಿಸಿಕೊಡುತ್ತದೆ. ಊಟಕ್ಕೆ ಉಪ್ಪಿನಕಾಯಿಯಂತೆ ಗಾದೆ ಮಾತಿಗೆ ವ್ಯಂಜನಶಕ್ತಿಯನ್ನು ಒದಗಿಸುತ್ತದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಯೇ ಗಾದೆಯ ಸ್ವರೂಪವನ್ನು ತಿಳಿಸುತ್ತದೆ. ಇದು ಆಕಾರದಲ್ಲಿ ವಾಮನನಾಗಿ ಅರ್ಥದಲ್ಲಿ ತ್ರಿವಿಕ್ರಮವೆನಿಸಿದೆ.

ಗಾದೆ ಜನಜೀವನದ ವ್ಯಾಪಕ ಸತ್ತ್ವ, ತತ್ತ್ವ : ನೂರು ಭಾವದ ನೂರು ವಿಷಯದ ನೂರು ಅಭಿವ್ಯಕ್ತಿ. ಇಲ್ಲಿ ವ್ಯಕ್ತಗೊಂಡಿರುವ ಅನುಭವಜಗತ್ತು ಅನ್ಯಾದೃಶವಾದುದು. ಹಾಗೆ ನೋಡಿದಾಗ ಇವುಗಳ ಕರ್ತಾರರನ್ನು ಅಸಂಸ್ಕೃತರೆನ್ನುವುದು ದೂರದ ಮಾತಾಗಿಯೇ ಉಳಿಯುತ್ತದೆ. ಗ್ರಾಮಜೀವನಕ್ಕೆ ಕಾಲಿರಿಸಿದ ಕೂಡಲೇ ಇಂಥ ಗಾದೆಗಳ ಬಿಸಿ ತಾಗುತ್ತದೆ. ಕೆಲವು ಬೆಳದಿಂಗಳಿನಂತೆ ತಂಪಾದರೆ, ಮತ್ತೆ ಕೆಲವು ಬಿಸಿಲಿನಂತೆ ಮೈ ಸುಡುತ್ತವೆ; ಬೆಂಕಿಯ ಕಿಡಿಗಳಂತೆ ಕೆಲವಾದರೆ, ಇಬ್ಬನಿಯಂಥವು ಮತ್ತೆ ಕೆಲವು; ಕೆಲವು ಮುತ್ತಿಕ್ಕಿದರೆ, ಮತ್ತೆ ಕೆಲವು ಮುತ್ತಿಗೆ ಹಾಕುತ್ತವೆ. ಇನ್ನು ಕೆಲವಂತೂ ಸಿಡಿಲಪೊಟ್ಟಣಗಳೇ ಸರಿ. ಇವಕ್ಕೆ ಅಪಮೌಲ್ಯದ ಭಯವಿಲ್ಲ, ಕೊಳೆಕಟ್ಟಿ ಮಾಸಿ ಹೋಗುತ್ತವೆ ಎಂಬ ಶಂಕೆಯಿಲ್ಲ. ಇವು ನೀರಸ ಕವಿಸಮಯಗಳಲ್ಲ, ವಿಚಾರದ ವಿಸ್ಫುಲಿಂಗಗಳು; ಸೂಕ್ತ ಸಂದರ್ಭಗಳಲ್ಲಿ ತಾಳಿದ ಯೋಗ್ಯ ನಿರ್ಣಯಗಳು.

ಗಾದೆ ಹಲವಾರು ಮಾತುಗಳ ಘಟಕ. ಆದ್ದರಿಂದಲೇ ಅದು ಸಾವಿರ ಮಾತಿನ ಸರದಾರ. ಅದು ಹಲವರ ಜ್ಞಾನ, ಒಬ್ಬನ ವಿವೇಕ ವ್ಯಾಖ್ಯಾನವನ್ನು ಅಪೇಕ್ಷಿಸುವ ಹೇಳಿಕೆ. ರಾಷ್ಟ್ರೀಯ ಮಣ್ಣಿನಲ್ಲಿ ಬೆಳೆದ ಬೆಳೆ. ಜರ್ಮನ್ ಗಾದೆಗಳ ಸಂಗ್ರಹಕಾರ ಇಸೆಲಿಯನ್ನನ ಪ್ರಕಾರ, ಗಾದೆಗಳೆಂದರೆ ಜನಸಾಮಾನ್ಯರಲ್ಲಿ ಚಲಾವಣೆಯಲ್ಲಿರುವ ಸಾರ್ವಜನಿಕ ಮುದ್ರೆ ಬಿದ್ದಿರುವ ಪ್ರಚಲಿತವೂ ಸ್ವೀಕೃತ ಮೌಲ್ಯಭರಿತವೂ ಆಗಿರುವ ನಾಣ್ಯ. ಎಸ್. ಜಿ. ಚಾಂಪಿಯನ್ ಎಂಬ ವಿದ್ವಾಂಸ ತನ್ನ ಜನಾಂಗಿಕ ಗಾದೆಗಳು ಎಂಬ ಬೃಹತ್ ಸಂಕಲನಕ್ಕೆ ಪ್ರಸ್ತಾವನೆ ಬರೆಯುತ್ತ ಹೀಗೆ ಹೇಳಿದ್ದಾನೆ : ನನ್ನ ಅಭಿಪ್ರಾಯದಲ್ಲಿ ಗಾದೆಯೆಂದರೆ ಜನರ ಬಳಕೆಯಲ್ಲಿದ್ದು, ಈಗಲೂ ಇರುವ, ಉಪದೇಶಾತ್ಮಕ ಅಥವಾ ಸಲಹೆಯನ್ನು ನೀಡುವ, ನಿಜವಾದ ಅರ್ಥವನ್ನು ಮರೆಸಿ ಅಲಂಕಾರಿಕವಾಗಿ ವ್ಯಕ್ತವಾಗಿರುವ, ರೂಪಕ ಅಥವಾ ಗೂಢಾರ್ಥದ್ಯೋತಕವಾಗಿ ಕಾಣಿಸಿಕೋಳ್ಳುವ ಜನಾಂಗವೊಂದರ ಸೂಕ್ತಿ. ಇನ್ನೊಬ್ಬ ವಿದ್ವಾಂಸ ಜೆ. ಎ. ಕೆಲ್ಲೊ ಗಾದೆಗಳಲ್ಲಿ ನಾಲ್ಕು ಗುಣಗಳನ್ನು ಹೆಸರಿಸುತ್ತಾನೆ : ಸಂಕ್ಷಿಪ್ತತೆ, ವಿವೇಕ ಪೂರ್ಣತೆ, ತೀಕ್ಷ್ಣತೆ ಮತ್ತು ಜನಪ್ರಿಯತೆ. ಇವುಗಳ ಒಂದೊಂದರ ವಿವರಣೆ ಅಗತ್ಯವೆನಿಸುತ್ತದೆ.

ಗಾದೆ ಆವಶ್ಯ ಪದಗಳ ಮಿತವ್ಯಯವೇ ಸರಿ. ಅಲ್ಲದೆ ಗಾದೆಯಲ್ಲಿ 20 ಪದಗಳಿಗಿಂತ ಹೆಚ್ಚು ಇರಬಾರದೆಂದು ವಿದ್ವಾಂಸರು ಹೇಳುತ್ತಾರೆ. ಯಾವ ಭಾಷೆ ಅವ್ಯಯ ಮತ್ತು ಪ್ರತ್ಯಯಗಳಲ್ಲಿ ಸಂಪದ್ಯುಕ್ತವಾಗಿರುತ್ತದೊ ಅದು ಗಾದೆ ನಿರ್ಮಾಣಗೊಳ್ಳುವಾಗಲೆ ಹೆಚ್ಚು ವಿಷಯಗಳನ್ನು ತನ್ನಲ್ಲಿ ಅಡಕಮಾಡಿಕೊಳ್ಳುತ್ತದೆ ಎಂದೂ ಒಂದು ಅಭಿಪ್ರಾಯವಿದೆ. ಗಾದೆ ಸಂಕ್ಷಿಪ್ತವಾಗಿರಬೇಕೆಂಬುದನ್ನು ಈ ಎಲ್ಲ ಮಾತುಗಳು ಸಮರ್ಥಿಸುತ್ತವೆ. ಆದರೆ ಕೆಲವು ಗಾದೆಗಳು ಸಹಜವಾಗಿ ನೀಡಿದಾಗಿರುವುದರಿಂದ ಸಂಕ್ಷಿಪ್ತತೆಗೆ ಇವನ್ನು ಅಪವಾದಗಳಾಗಿ ಪರಿಗಣಿಸಬೇಕಾಗುತ್ತದೆ. ಈ ದೀರ್ಘ ಗಾದೆಗಳು ಶಕ್ತನಿರೂಪಣೆ, ಸೂಕ್ಷ್ಮ ಭಾವುಕತೆ, ಪ್ರಾದೇಶಿಕತೆಗಳಿಗೆ ಹೆಸರಾಗಿದ್ದರೂ ಅನುಭವ ಸಾಂದ್ರತೆಯಲ್ಲಿ ಚಿಕ್ಕ ಗಾದೆಗಳ ಹಾಗೆ ವರ್ಚಸ್ವಿಯಾಗಲಾರವೆಂದು ತೋರುತ್ತದೆ.

ಗಾದೆಯ ಮತ್ತೊಂದು ಅಂಶ ವಿವೇಕಪೂರ್ಣತೆ. ಗಾದೆ ಜನಪ್ರಿಯವಾಗಬೇಕಾದರೆ ಬಹಳ ಕಾಲ ಬಾಳಿಕೆ ಬರಬೇಕಾದರೆ ಕಡೆಯ ಪಕ್ಷ ಅದು ವಿವೇಕಯುತವಾಗಿ ಇರಬೇಕಾಗುತ್ತದೆ. ಆದರೂ ಒಂದು ವಿಷಯ ಉಳಿಯುತ್ತದೆ. ವಿವೇಕಯುತವಾದ ಇಂಥ ಕೆಲವು ಸೂಕ್ತಿಗಳು ಮಾತ್ರ ಗಾದೆಗಳಾಗಿ ಉಳಿದವು ಆಗಲಾರವು. ಮುಂದೆ ಅವು ಕಳೆದುಹೋಗಬಹುದು ಅಥವಾ ಸಾಂದರ್ಭಿಕ ಉದ್ಧರಣೆಗಳಾಗಿ ಉಳಿಯ ಬಹುದು. ಇದಕ್ಕೆ ಕಾರಣ ಭಾಗಶಃ ಸಾಂದ್ರತೆ; ಇದರಿಂದಾಗಿಯೇ ಗಾದೆ ಸಾರ್ವಜನಿಕರ ಸ್ವೀಕಾರಾರ್ಹತೆಯನ್ನು ಪಡೆದುಕೊಂಡಿರುವುದು.

ಗಾದೆ ತೀವ್ರಾನುಭವದ ಪರಿಣಾಮಕಾರಿ ಅಭಿವ್ಯಕ್ತಿಯಾಗಿರುವುದೇ ಅದರ ತೀಕ್ಷ್ಣತೆ. ಸೂಕ್ಷ್ಮಸಂವೇದನಾಶೀಲತೆಯೇ ಇದಕ್ಕೆ ಕಾರಣ. ಒಮ್ಮೆಗೇ ನಮ್ಮ ಹೃದಯವನ್ನು ಆಕ್ರಮಿಸುವ ಸಾಮರ್ಥ್ಯ ಅದರದು. ಯಾವುದೇ ವಿಷಯವನ್ನು ಮನಮುಟ್ಟುವಂತೆ ಹೇಳುವ ಸ್ವಭಾವ ಅದರದು. ಗಾದೆಯ ಮತ್ತೊಂದು ಮಹತ್ವದ ಲಕ್ಷಣ ಜನಪ್ರಿಯತೆ. ನಿಜವಾದ ಅರ್ಥದಲ್ಲಿ ಅದು ಜನತೆಯದಾಗಿರಬೇಕೆಂಬುದೇ ಇದರ ತಾತ್ಪರ್ಯ ಒಟ್ಟಿನಲ್ಲಿ ಗಾದೆಗಳು ಚಿಕ್ಕವು, ಪ್ರಸಕ್ತ ವಿಷಯಕ್ಕೆ ಮಾತ್ರ ಸಂಬಂಧಿಸಿದವು, ರಚನೆಯಲ್ಲಿ ಒಪ್ಪವಾದವು, ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯೂರುವಂಥವು.

ಗಾದೆಗಳಿಗೆ ಕೆಲವು ನಿರ್ದಿಷ್ಟ ಶೈಲಿಯ ತಂತ್ರಗಳಿವೆ : ಛಂದೋಬದ್ಧತೆ, ಪ್ರಾಸಾನು ಪ್ರಾಸ, ಯಮಕ, ಪುನರಾವೃತ್ತಿ, ನಾಟಕೀಯತೆ, ಅಲಂಕಾರ ಮುಂತಾದವು ಅವುಗಳಲ್ಲಿ ಕೆಲವು. ಇವುಗಳ ಯೋಜಿತ ಅಭಿವ್ಯಕ್ತಿಯೇ ಗಾದೆ. ಸುಲಭವಾಗಿ ನೆನಪಿರಿಸಿಕೊಳ್ಳುವುದಕ್ಕೆ ಇವು ನೆರವಾಗುತ್ತವೆ. ಇದಕ್ಕೆ ಯಾವುದೇ ಗಾದೆ ನಿದರ್ಶನವಾಗಬಲ್ಲುದು. ಇಂಥ ಗಾದೆಗಳಲ್ಲಿ ಅತ್ಯುಕ್ತಿ ಮತ್ತು ವಿರೋಧಾಭಾಸಗಳೆರಡೂ ದೊಡ್ಡ ಲಕ್ಷಣಗಳು. ಇಲ್ಲಿ ಅತ್ಯುಕ್ತಿಯೆಂದರೆ ಅತಿಶಯವಾದ ಮಾತೆಂದು ಅರ್ಥ ಮಾಡಿಕೊಳ್ಳಬೇಕು. ಧ್ವನಿ ಮಾರ್ಗವನ್ನು ಇದು ಸೂಚಿಸುತ್ತದೆ.

ಗಾದೆಯ ಒಂದು ವಿಶೇಷ ಲಕ್ಷಣ ಸಮತೋಲನ. ಇದು ಗಾದೆಯ ಸಹಜ ಗುಣವೆಂದು ತೋರುತ್ತದೆ. ಉದಾಹರಣೆಗೆ : ನಾಳೆ ನೋಡು ನಮ್ಮ ರಂಗನ ಮೋಟ, ತೆಗೆದು ನೋಡು ನಮ್ಮ ಅಮ್ಮಿಯ ಮುಸುಕ, ಆದಷ್ಟೇ ಆರಂಭ, ಹೂದಷ್ಟೇ ಮಳೆಗಾಲ – ಇತ್ಯಾದಿ. ಇಲ್ಲಿ ಎರಡು ಸಮಭಾಗಗಳು ಕಾಣಿಸಿಕೊಳ್ಳುತ್ತವೆ. ಪೂರ್ವೋತ್ತರ ಭಾಗಗಳೆರಡೂ ಛಂದಸ್ಸಿನಲ್ಲಿ ಕಡೆಗೆ ಅಕ್ಷರಗಳ ಸಂಖ್ಯೆಯಲ್ಲಿ ಸಮನಾಗಿ ಬಂದಿವೆ. ಸಮತೋಲನ ಚಿಕ್ಕ ಗಾದೆಗಳಲ್ಲಿ ಕಾಣಬರುವಂತೆ, ತೀರ ದೀರ್ಘ ಗಾದೆಗಳಲ್ಲಿ ಕಾಣಬರದು. ಇಷ್ಟಕ್ಕೂ ಚಿಕ್ಕ ಗಾದೆಗಳೇ ಅತ್ಯುತ್ತಮ ಗಾದೆಗಳೆಂದು ಹೆಸರಾಗಿವೆ.

ಗಾದೆಗಳಲ್ಲಿ ಹಾಸ್ಯ ಮತ್ತು ವಿಡಂಬನೆಗಳೂ ಬರುತ್ತವೆ. ಇವೆರಡೂ ಕೆಲವೊಮ್ಮೆ ಒಂದಾಗಿಯೂ ಕೆಲವೊಮ್ಮೆ ಬೇರೆ ಬೇರೆಯಾಗಿಯೂ ಬರುತ್ತದೆ. ಉದಾಹರಣೆಗೆ : ಮೋಜು ಬಂದಾದೆ ಮೊಗ ಕ್ವಾರೆ ಅಂದ, ನನ್ಗೂ ಮೋಜು ಬಂದಾದೆ ಕದಿನ ಮೂಲ್ಗೆ ಬಿಸ್ಹಾಕಿ ಅಂದ್ಲು. ಯಾವುದೇ ಮರ್ಮವಿಲ್ಲದೆ ನಗಿಸಬಲ್ಲ ಗಾದೆಯಿದು. ಇಂಥ ಹಾಸ್ಯ ಚಿತ್ರಗಳಲ್ಲಿ ಸಂಭಾಷಣೆಯೊಂದು ವಿಶೇಷ. ಮತ್ತೊಂದು ಗಾದೆ : ದುಡುವಂತೆ ಧೂಪ ಹಾಕಿದ್ರೆ, ಗುಡಿಕಲ್ಲೆಲ್ಲ ದಡಾರ್ ಅಂದೊ – ಇಲ್ಲಿಯ ವಿಡಂಬನೆ ಅತ್ಯಂತ ಮೊನಚಾದುದು. ಕೆಲವೊಮ್ಮೆ ತಿಳಿ ಹಾಸ್ಯದಲ್ಲಿಯೇ ವಿಡಂಬನೆ ಮೈತಾಳಬಲ್ಲುದು. ಸಾಯ್ತೀನಿ ಸಾಯ್ತೀನಿ ಅಂಥ, ಸಾವಿರ ಕೋಳಿ ತಿಂದನಂತೆ. ಸಮಾಜವನ್ನು ಪ್ರತಿಬಿಂಬಿಸುವುದರಲ್ಲಿ ಗಾದೆಗಳ ಪ್ರಾಮುಖ್ಯ ಇದೆ. ಜನಪದ ತನ್ನ

ಸುತ್ತಮುತ್ತಲ ಸಾಮಗ್ರಿಯನ್ನು ದೃಷ್ಟಾಂತ ರೂಪಕಗಳನ್ನಾಗಿ ಮಾಡಿಕೊಳ್ಳುತ್ತದೆ. ಅನುಭವದ ಪ್ರಾಮಾಣಿಕತೆಗೆ ಕಾವ್ಯತೆಯ ಸೂಕ್ಷ್ಮ ದೃಷ್ಟಿಯನ್ನು ತೊಡಿಸುತ್ತದೆ.

ಸಾಮಾನ್ಯವಾಗಿ ಬಳಕೆಯಲ್ಲಿರುವ ಬಹುತೇಕ ಗಾದೆಗಳು ದೈನಂದಿನ ಜೀವನದಿಂದ ತೆಗೆದುಕೊಂಡ ಅಥವಾ ಪ್ರಕೃತಿ ಪರಿಶೀಲನದಿಂದ ಎತ್ತಿಕೊಂಡ ರೂಪಕಗಳು ಅಥವಾ ಅನುಭವದ ಘನೀಕರಣಗಳು. ಕೆಲವು ಗಾದೆಗಳು ಕೌಟುಂಬಿಕ ಕಸುಬುಗಳಿಗೆ ಸಂಬಂಧಿಸಿದ ಆಧಾರಗಳನ್ನು ಒದಗಿಸುತ್ತವೆ. ಸ್ವೀಕೃತ ನಂಬಿಕೆಯೊಂದು ಗಾದೆಯಾಗಿ ವ್ಯಕ್ತವಾಗಿರಬಹುದು. ಉದಾ : ಸೀಟಗಾಲಿ ಇದ್ದ ಮನೆ ಹಾಳು, ದಾಟಗಾಲ ಇದ್ದ ತೋಟ ಹಾಳು. ಗಾದೆಯೊಂದು ಒಗಟಾಗುವ ಸಾಧ್ಯತೆಯೂ ಉಂಟು. ಉದಾ : ಚಿಕ್ಕಕ್ಕನಿಗೆ ಪುಕ್ಕುದ್ದ. ಕೆಲವು ಗಾದೆಗಳು ಕಥೆಗಳ ಬಾಲಗಳಾಗಿರುತ್ತವೆ. ಉದಾ : ದಪ್ಪ ತರ ದಾ, ಆದಂಗಾಯ್ತು ಚೂ. ಅನ್ಯೋಕ್ತಿಯನ್ನು ಹೋಲುವಂಥ ಗಾದೆಗಳು ವಿರಳ.

ಕೆಲವು ಗಾದೆಗಳು ಪೌರಾಣಿಕ ವಿಷಯವನ್ನು ಆಧರಿಸಿ ರಚನೆಯಾಗಿರುತ್ತವೆ. ಉದಾಹರಣೆಗೆ, ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ : ಅಂತು ಇಂತು ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ – ಇತ್ಯಾದಿ. ಚಾರಿತ್ರಿಕ ಸಂದರ್ಭಗಳನ್ನು ಕುರಿತ ಗಾದೆಗಳೂ ಪ್ರಚಲಿತವಾಗಿವೆ. ಉದಾ : ಕೃಷ್ಣರಾಯ ಭೂಪ, ಮನೆಮನೆಗೆ ದೀಪ. ಕಾನೂನಿನ ಗಾದೆಗಳು ಕಾನೂನು ತತ್ತ್ವದ ಸಂಕ್ಷಿಪ್ತ ಹೇಳಿಕೆಗಳು. ವೈದ್ಯಕೀಯ ಗಾದೆಗಳು ಇನ್ನೊಂದು ಬಗೆಯವು. ಆರೋಗ್ಯವನ್ನು ಕುರಿತಾದ ಹಳೆಯ ನಿಯಮಗಳನ್ನು ಇವು ಹೇಳುತ್ತವೆ. ಹವಾಮಾನದ ಗಾದೆಗಳೂ ಸಾಂಪ್ರದಾಯಿಕವಾಗಿ ಬಂದಿವೆ. ಇವು ಋತುಮಾನಗಳ ವಿಷಯವನ್ನು ವ್ಯವಸಾಯ ವಿಷಯವನ್ನೂ ಕುರಿತು ಹೇಳುತ್ತವೆ. ಉದಾಹರಣೆಗೆ : ಅಶ್ವೀಜದಲ್ಲಿ ಹೊನ್ನು ಕರಗುವ ಬಿಸಿಲು, ಮಣ್ಣು ಕರಗುವ ಮಳೆ; ಅತ್ತದ ಮಳೆ ಎತ್ತಲಿಂದಾದರೂ ಬರುತ್ತದೆ; ರೋಹಿಣಿ ಮಳೆಯಲ್ಲಿ ಓಣಿಯೆಲ್ಲ ಜೋಳ, ಗೌರಿ ಹೊತ್ತಿಗೆ ಗಡಿಗೆ ಮುಳುಗಬೇಕು, ಇತ್ಯಾದಿ.

ಕೆಲವು ಸಾರಿ ಹೋಲಿಕೆಗಳೂ ಗಾದೆಗಳಾಗಬಹುದು. ಆದರೆ ಈ ಬಗೆಯ ಗಾದೆಗಳು ಕ್ರಮೇಣ ಜನಪ್ರಿಯತೆಯನ್ನು ಕಳೆದುಕೊಂಡು ಬಳಕೆಯಿಂದ ತಪ್ಪಿ ಹೋಗುವ ಸಾಧ್ಯತೆಯಿದೆ. ಸಂಪ್ರದಾಯದಲ್ಲಿ ಮತ್ತು ಸಾಹಿತ್ಯದಲ್ಲಿ ಕಂಡುಬರುವ ಅನೇಕ ಮಾತುಗಾರಿಕೆಗಳು ಗಾದೆಗಳಿಗೆ ಸಂಬಂಧಿಸಿವೆ. ಕೆಲವೊಮ್ಮೆ ಗಾದೆಗಳು ಮೊದಲೇ ಇದ್ದ ಮಾದರಿಗಳ ಮೇಲೆ ರಚಿತವಾಗಿರುತ್ತವೆ. ಗಾದೆಯ ಇನ್ನೊಂದು ವರ್ಗ ಕ್ಲೀಷೆಗಳು ಅಥವಾ ಚರ್ವಿತ ಚರ್ವಣಗಳು. ಇವು ಪೂರ್ಣ ವಾಕ್ಯವಾಗಿರುವುದಕ್ಕಿಂಥ ಹೆಚ್ಚಾಗಿ ವಾಕ್ಯಾಂಗಗಳಾಗಿರುತ್ತವೆ. ವಂಶಲಾಂಛನಗಳನ್ನು ಕುರಿತ ಗಾದೆಗಳು ಮತ್ತೊಂದು ಬಗೆಯವು. ಇವು ಜನರ ಮತ್ತು ಸ್ಥಳಗಳ ಗುಣ ವಿವರಣೆ ಮಾಡುವ ಹೆಸರುಗಳು, ನುಡಿಗಟ್ಟುಗಳು.

ಗಾದೆಗಳ ಒಂದು ವಿಶೇಷತೆಯೆಂದರೆ, ಅವು ಆಧ್ಯಾತ್ಮಿಕ ಭೂಮಿಕೆಗೆ ಪ್ರವೇಶಿಸದೆ ಇರುವುದು. ಧರ್ಮಬೋಧಕರ ಪ್ರವಚನಗಳಾಗಲಿ, ಉಪದೇಶಗಳಾಗಲಿ ಗಾದೆಗಳಾಗಿ ಪರಿವರ್ತಿತವಾಗುವುದಿಲ್ಲ. ಇವು ನೀತಿಯನ್ನೇನೋ ಹೇಳುತ್ತವೆ ನಿಜ; ಆದರೆ ಧಾರ್ಮಿಕ ಸಿದ್ಧಾಂತಗಳನ್ನಾಗಲಿ ವೇದಾಂತಪರ ವಿಚಾರಗಳನ್ನಾಗಲಿ ಒಳಗೊಂಡಿರುವುದಿಲ್ಲ. ಆದರೆ ಜನತೆ ಯಾವುದನ್ನು ಸತ್ಯವೆಂದು ಗೌರವಿಸಿದೆಯೋ ಅದಕ್ಕೆ ಸೂಚಿಯಾಗಿವೆ; ಲೋಕದಿಂದ ಪಡೆದುಕೊಂಡ ಅನುಭವದ ಒಟ್ಟು ಮೊತ್ತವಾಗಿದೆ.

ಈಗ ಗಾದೆಗಳ ಸಾಮ್ಯ ಮತ್ತು ಸಾರ್ವತ್ರಿಕತೆ, ಸಮಾನ ಗಾದೆಗಳು ಜಗತ್ತಿನ ಎಲ್ಲಾ ಭಾಷೆಗಳಲ್ಲಿಯೂ ಕಾಣಸಿಗುತ್ತವೆ. ಭಾಷೆ ಬೇರೆಯಾದರೂ ಭಾಷಿತ ಒಂದೇ ಇದಕ್ಕೆ ಕಾರಣವನ್ನು ಹುಡುಕುತ್ತ ಕೆಲವರು, ಅವನ್ನು ಅಂತಾರಾಷ್ಟ್ರೀಯ ಅಲೆಮಾರಿ ಎಂದು ಕರೆದರು. ಗಾದೆಗಳು ಪ್ರಯಾಣ ಮಾಡುತ್ತವೆ ಎಂಬುದು ಇದರ ಅರ್ಥ. ಗಾದೆಗಳ ದೇಶಾತೀತ ಭಾಷಾತೀತ ಲಕ್ಷಣಕ್ಕೆ ಈ ವಿವರಣೆ ಸಮಂಜಸವೆಂದು ತೋರಲಾರದು. ಮೂಲಭೂತವಾಗಿ ಮಾನವರೆಲ್ಲ ಒಂದೇ ರೀತಿ ಆಲೋಚಿಸು ತ್ತಾರೆಂಬುದು ಇದಕ್ಕೆ ಕಾರಣವಿರಬೇಕೆಂದು ತೋರುತ್ತದೆ. ಮೂಲಪ್ರವೃತ್ತಿಗಳಾದ ಪ್ರೀತಿ, ಹಸಿವು, ಭಯಗಳು ಅಸಂಸ್ಕೃತ ಸುಸಂಸ್ಕೃತರೆನ್ನದೆ ಸಮಾನವಾಗಿರುವ ವಿಷಯಗಳು– ಈ ಪ್ರವೃತ್ತಿಗಳನ್ನು ನಾಗರಿಕತೆಗಳಾಗಲಿ, ವಾತಾವರಣಗಳಾಗಲಿ ನಿವಾರಿಸಲಾರವು, ಮಾರ್ಪಡಿಸಲಾರವು, ಆದ್ದರಿಂದ ಗಾದೆಯ ಜ್ಞಾನ ಜಗತ್ತಿನಲ್ಲೆಲ್ಲ ಒಂದೆಯೇ ಭಿನ್ನತೆಯೇ ನಿದ್ದರೂ ಅದರ ಪ್ರಕಟಣೆಯಲ್ಲಿ. ಹೀಗೆ ಗಾದೆಯ ಸಾಮ್ಯತೆ ಮತ್ತು ಸಾರ್ವತ್ರಿಕತೆಗೆ ಸ್ವತಂತ್ರ ಮೂಲ ಸಿದ್ಧಾಂತವನ್ನು ಕಾರಣವಾಗಿ ಕೊಡಬಹುದು. ಇಷ್ಟಾದರೂ ಗಾದೆಗಳನ್ನು ಸ್ವೀಕರಣ ಮಾಡಿಕೊಂಡಿರುವ ಉದಾಹರಣೆಗಳನ್ನು ತೆಗೆದು ಹಾಕುವಂತಿಲ್ಲ. ದೇಶಗಳ ಆಕ್ರಮಣ, ಅಂತರ್ಜಾತಿ ವಿವಾಹ, ರಾಜಕೀಯ ಸಾಂಸ್ಕೃತಿಕ ಸಂಬಂಧ ಮೊದಲಾದವುಗಳಿಂದ ಗಾದೆ ದೇಶದಿಂದ ದೇಶಕ್ಕೆ ಹೋಗಿರಲು ಸಾಧ್ಯವಿದೆ.

ಗಾದೆಯ ಉಗಮವನ್ನು ಕುರಿತು ನಿರ್ದಿಷ್ಟವಾಗಿ ಹೇಳಲಾಗದು. ಇದು ಜನಪದ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದುದು. ಸಮಾಜದಷ್ಟು ಹಳೆಯದು. ಒಂದು ಕಡೆ ಗಾದೆ ಯಾರೊಬ್ಬ ಜನ್ಮದಾತನೂ ಇಲ್ಲದೆ ಕ್ರಮೇಣ ಜನತೆಯ ನಡುವೆ, ಜನತೆಯದಾಗಿ ವಿಕಾಸವಾದುದಾಗಿರಬೇಕು. ಇನ್ನೊಂದು ಕಡೆ, ಸುತ್ತಮುತ್ತಲ ಜಗತ್ತಿನೊಡನೆ ಸಂಪರ್ಕ ಕಲ್ಪಿಸಿಕೊಳ್ಳುವಾಗ ಸಂದರ್ಭ ಸೂತ್ರವಾಗಿ ಬುದ್ಧಿವಂತನೊಬ್ಬನಿಂದ ಜಿಗಿದಿರಬೇಕು. ಹಲವರ ಅನ್ನಿಸಿಕೆ ಜ್ಞಾನಾನುಭವಗಳು ಒಬ್ಬನ ಸೃಷ್ಟಿವಿವೇಕದಲ್ಲಿ ಮೂಡಿ ಗಾದೆಯಾಯಿತು. ಆದರೆ ಸಂಪ್ರದಾಯ ಇದನ್ನು ಕೈಗೆತ್ತಿಕೊಳ್ಳುವ ತನಕ ಇದು ಕೇವಲ ವಸ್ತುಸ್ಥಿತಿಯೊಂದರ ಸೂತ್ರಮಯ ಹೇಳಿಕೆಯಾಗಿತ್ತು ಅಥವಾ ಬೋಧಪ್ರದ ದೃಷ್ಟಾಂತವಾಗಿತ್ತು. ಸಂಪ್ರದಾಯ ಸ್ವೀಕರಿಸಿದಾಗ, ಅನುಕರಿಸಲಾಗದ ರೀತಿಯಲ್ಲಿ ಅದನ್ನು ಹೊಂದಿಸಿಕೊಂಡಿತು, ಮಾರ್ಪಡಿಸಿಕೊಂಡಿತು. ಆದ್ದರಿಂದ ಸೃಷ್ಟಿ ಮತ್ತು ಸ್ವೀಕಾರಗಳೆರಡೂ ಗಾದೆಯೊಂದು ರೂಪ ತಾಳುವುದಕ್ಕೆ ಅವಶ್ಯಾಂಶಗಳಾಗುತ್ತದೆ. ಈ ಕ್ರಿಯೆಯಲ್ಲಿ ಮೂಲ ಮರೆತುಹೋಗುತ್ತದೆ. ಒಂದೇ ವಸ್ತು ಹಾಗೂ ಒಂದೇ ಸೂತ್ರರೂಪ ಒಬ್ಬನಿಗಿಂತ ಹೆಚ್ಚಿನವರಲ್ಲಿ ದೊರೆಯುವುದರಿಂದ ಗಾದೆಗಳ ಮೂಲ ತೊಡಕಾಗಿದೆ. ಆದ್ದರಿಂದ ವೈಯಕ್ತಿಕತೆಯನ್ನು ಒಟ್ಟುಗೂಡಿಸಿಕೊಂಡ ಸಾಮೂಹಿಕ ಸೃಷ್ಟಿ ಇದೆಂದು ಹೇಳಬಹುದಾಗಿದೆ. ಹೀಗೆ ಗಾದೆ ಸಮಷ್ಟಿಯ ಸ್ವತ್ತಾದ ಮೇಲೆ, ಅದು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಬೆಳೆಯಿತು. ಉಳಿಯಿತು. ಈ ರೀತಿ ಪ್ರಯಾಣ ಮಾಡುವಾಗ ಗಾದೆ ಹರಿತವಾಯಿತು, ರೂಪಾಂತರಗಳನ್ನು ಪಡೆಯಿತು. ಸಾರ್ವತ್ರಿಕ ಜನಪ್ರಿಯತೆಯ ಮುದ್ರೆಯೊಂದು ಅದರ ಮೇಲೆ ಬಿತ್ತು.

ಗಾದೆಗಳು ವ್ಯಕ್ತಿಯೊಬ್ಬನಿಂದ ರಚಿತವಾಗಿದ್ದು, ಅವನ ಆಲೋಚನೆಗಳು ಬರೆವಣಿಗೆಯಲ್ಲಿ ದೊರೆತರೆ, ಆಗ ಕೆಲವೇಳೆ ಮೂಲವನ್ನು ಹುಡುಕಲು ಸಾಧ್ಯವಾಗುತ್ತದೆ. ಬೈಬಲ್, ವೇದ, ಉಪನಿಷತ್ತು, ಧಮ್ಮಪದ ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ, ಮಹಾ ಕವಿಗಳ ಕಾವ್ಯಗಳಲ್ಲಿ ಇವು ಕಾಣಬರುವುದಾದರೂ ಸಾಹಿತ್ಯಿಕ ದಾಖಲೆಗೆ ಇಳಿಯುವ ಮುನ್ನ ಇವು ವಾಕ್‌ಸಂಪ್ರದಾಯದಲ್ಲಿರಲಿಲ್ಲವೆಂದು ಹೇಳಲು ಹೇಗೆ ಸಾಧ್ಯ. ಆ ಕಾಲದಲ್ಲಿ ಪ್ರಚಲಿತವಿದ್ದ ಗಾದೆಗಳು ಹಲಕೆಲವು ಮಾರ್ಪಾಡುಗಳೊಡನೆ ಸಾಹಿತ್ಯದಲ್ಲಿ ಸೇರಿಕೊಂಡಿರಬಹುದು. ಯಾವುದೇ ಸಂದರ್ಭದಲ್ಲಿ ಜನಪ್ರಿಯ ಹಾಗೂ ಸಾಹಿತ್ಯಿಕ ಮೂಲಗಳೆರಡೂ ಬೆಳವಣಿಗೆಯ ಹಂತಗಳಲ್ಲಿ ಬೆರೆಯುತ್ತವೆ. ಇದರಿಂದಾಗಿ ಗಾದೆಯೊಂದರ ನಿರ್ದಿಷ್ಟ ಕರ್ತೃತ್ವ ಗೊತ್ತಾಗುವುದಿಲ್ಲ.

ಗಾದೆಗಳ ಅಸ್ತಿತ್ವ ಮತ್ತು ಉಪಯೋಗ ಪ್ರಾಚೀನ ಕಾಲದಿಂದಲೂ ಕಾಣಬರುತ್ತದೆ. ಪ್ರಾಚೀನ ಸಾಹಿತ್ಯ ಗ್ರಂಥಗಳಲ್ಲಿ, ಧರ್ಮಗ್ರಂಥಗಳಲ್ಲಿ, ಚರಿತ್ರ ಲೇಖನಗಳಲ್ಲಿ ಇವು ದೊರೆಯುತ್ತವೆ. ಬರೆದಿರಿಸಿದ ನ್ಯಾಯಶಾಸ್ತ್ರಗಳಿಲ್ಲದ ಜನತೆಗಳಲ್ಲಿ ಅವರ ವ್ಯಾಜ್ಯಗಳ ಮೇಲೆ ಪರಿಣಾಮವನ್ನುಂಟುಮಾಡುವಂತೆ ಗಾದೆಗಳನ್ನು ಉದಾಹರಿಸಲಾಗುತ್ತದೆ. ಸಂದರ್ಭೋಚಿತವಾಗಿ ಉಪಯೋಗಿಸಿದ ಗಾದೆಯೊಂದು ನ್ಯಾಯವೊಂದರ ತೀರ್ಮಾನಕ್ಕೆ ಕಾರಣವಾಗಬಹುದು ಅಥವಾ ಪ್ರಮುಖ ನಿರ್ಣಯವೊಂದಕ್ಕೆ ನೆರವಾಗ ಬಹುದು. ಕೆಲವು ಆಫ್ರಿಕನ್ ಸಮಾಜಗಳಲ್ಲಿ ನಿರ್ಣಯ ಕೈಗೊಳ್ಳುವಾಗ ಜನ ಸಾಂಪ್ರದಾಯಿಕವಾಗಿ ಗಾದೆಗಳನ್ನು ಪಠಿಸುತ್ತಾರಂತೆ.

ಭಾರತೀಯ ವೈದಿಕ ಬರೆಹಗಳು ತತ್ತ್ವಶಾಸ್ತ್ರೀಯ ಭಾವನೆಗಳನ್ನು ಪ್ರತಿಪಾದಿಸಲು ಗಾದೆಗಳನ್ನು ಬಳಸುತ್ತಿದ್ದವು. ಪ್ರಾಚೀನ ಚೀನದಲ್ಲಿ ನೈತಿಕ ಶಿಕ್ಷಣಕ್ಕಾಗಿ ಗಾದೆಗಳನ್ನು ಉಪಯೋಗಿಸುತ್ತಿದ್ದವು. ಇಂಗ್ಲೆಂಡಿನಲ್ಲಿ ಲ್ಯಾಟಿನ್ ಬೋಧಿಸಲು ಗಾದೆಗಳನ್ನು ಬಳಸುತ್ತಿದ್ದರು. ಭಾಷಣಕಲೆಯಲ್ಲಿ ಮಾತಿಗೆ ಅಲಂಕಾರ ಕಟ್ಟಲು ಗಾದೆಗಳನ್ನು ಬಳಸುವುದುಂಟು. ಮಧ್ಯಕಾಲೀನ ಪಠ್ಯಗಳು ಮತ್ತು ಅರಿಸ್ಟಾಟಲ್ ಇದಕ್ಕೆ ನಿದರ್ಶನ. ಗಾದೆಗಳಲ್ಲಿ ಸಂವಾದವನ್ನು ಬರೆದವರಿದ್ದಾರೆ, ಸಾನೆಟ್ಟನ್ನು ರಚಿಸಿದವರಿದ್ದಾರೆ. 16ನೆಯ ಶತಮಾನದಲ್ಲಿ ಇಂಗ್ಲೆಂಡಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಗಾದೆಯ ಭಾಷಣವೊಂದು ನಡೆದಿತ್ತಂತೆ. ಗಾದೆಗಳನ್ನು ಶಿರೋನಾಮೆಗಳಾಗಿ, ಆಡುಭಾಷೆಯ ವಾತಾವರಣವನ್ನು ಕೊಡುವುದಕ್ಕಾಗಿ ಬಳಸಲಾಗಿದೆ. ಹೀಗೆ ಹಲವು ರೀತಿಯಲ್ಲಿ ಗಾದೆಗಳ ಉಪಯೋಗ ಆಗಿದೆ.

ಗಾದೆ ಜ್ಞಾನದ ಅನಂತ ಆಕಾಶವನ್ನು ನಿಂತಲ್ಲಿಯೇ ನೋಡಬಲ್ಲ ನೀತಿ ನಿರ್ಣಯಗಳ ದೂರದರ್ಶಕ. ಇದರಲ್ಲಿ ಎದ್ದುಕಾಣುವುದು ಜನಸಾಮಾನ್ಯರ ಸಾಮಾನ್ಯ ಜ್ಞಾನ. ಜೀವನದ ನಾನಾ ಭಾಗಗಳಲ್ಲಿ ಅವರಿಗಿರುವ ಜ್ಞಾನಾನುಭವಗಳನ್ನು ಇಲ್ಲಿ ವಿವೇಕದ ಒರೆಗಲ್ಲಿಗೆ ಹಚ್ಚಿ ನೋಡಿದೆ. ಗಾದೆ ಸಾಮಾನ್ಯ ಜನತೆಯ ವೇದ, ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ. ವೇದ ಕೆಲವರ ಮಾತು, ಗಾದೆ ಹಲವರ ನುಡಿ. ಇಂಗ್ಲಿಷ್ ಗಾದೆಯೊಂದು ಹೇಳುವ ಹಾಗೆ ಕೆಲವರು ಹೇಳುವುದು ನಿಜವಾಗಬಹುದು, ಆದರೆ ಎಲ್ಲರೂ ಹೇಳುವುದು ನಿಜವಾಗೇ ಆಗುತ್ತದೆ.

ಗಾದೆಗಳು ಜನಪ್ರಿಯ ಅಭಿಪ್ರಾಯದ ಮೇಲೆ ಸೂಕ್ಷ್ಮವೂ ವ್ಯಾಪಕವೂ ಆದ ಪ್ರಭಾವವನ್ನು ಹೊಂದಿರುತ್ತದೆ. ಇವುಗಳ ಸೃಷ್ಟಿಗೆ ಹಾಗೂ ಪ್ರಸಾರಕ್ಕೆ ಕಾರಣರಾದ ಜನರ ಸಾಮಾಜಿಕ, ರಾಜಕೀಯ, ನೈತಿಕ ಹಾಗೂ ಧಾರ್ಮಿಕ ಆದರ್ಶಗಳಿಗೆ

ನಂಬಲರ್ಹವಾದ ಸಾಕ್ಷ್ಯಗಳಾಗಿವೆ. ಗಾದೆಗಳ ಮೌಲ್ಯ ಮತ್ತು ಮಹತ್ತ್ವವನ್ನು ಈ ಮಾತುಗಳು ತಿಳಿಸುತ್ತವೆ.

**ಕನ್ನಡದಲ್ಲಿ ಗಾದೆಗಳು :** ಕನ್ನಡದಲ್ಲಿ ಗಾದೆಗಳ ಕ್ಷೇತ್ರದಲ್ಲಿ ತಕ್ಕಮಟ್ಟಿಗೆ ಕೆಲಸ ನಡೆದಿದೆ. ಇದಕ್ಕೆ ಏನಿಲ್ಲವೆಂದರೂ ನೂರು ವರ್ಷಗಳ ಇತಿಹಾಸವಿದೆ. ಈ ಕ್ಷೇತ್ರದಲ್ಲಿಯೂ ಮೊದಲು ಕೆಲಸ ಮಾಡಿದವರು ಕ್ರೈಸ್ತ ಮಿಷನರಿಗಳೇ. 1894ರಲ್ಲಿ ಪ್ರಕಟವಾದ ಕಿಟ್ಟೆಲ್ ಅವರ ಶಬ್ದಕೋಶದಲ್ಲಿಯೇ ಅಪಾರ ಸಂಖ್ಯೆಯ ಗಾದೆಗಳನ್ನು ಕಾಣುತ್ತೇವೆ. ಈ ಎಲ್ಲ ಗಾದೆಗಳನ್ನು ಒಂದು ಕಡೆ ಕಲೆಹಾಕಿ ಕಿಟ್ಟೆಲ್ ಕೋಶದ ಗಾದೆಗಳು ಎಂಬ ಹೆಸರಿನಲ್ಲಿ ರಾಗೌ ಹೊರತಂದಿದ್ದಾರೆ. ಇದರಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಗಾದೆಗಳಿರುವ ವಿಷಯ ಗೊತ್ತಾಗುತ್ತದೆ. ಒಂದು ಶತಕದ ಹಿಂದೆಯೇ ಕಿಟ್ಟೆಲ್ ಅವರು ಕರ್ನಾಟಕದ ನಾನಾ ಭಾಗಗಳಿಂದ ಗಾದೆಗಳನ್ನು ಸಂಗ್ರಹಿಸಿದ್ದರೆಂಬುದು ಗಮನಾರ್ಹ ಸಂಗತಿ. ಅವರು ತಮ್ಮ ಅರ್ಥಕೋಶದ ಗ್ರಾಮ್ಯಶಬ್ದಗಳ ಅರ್ಥ ಸ್ಪಷ್ಟೀಕರಣಕ್ಕಾಗಿ ಈ ಗಾದೆಗಳನ್ನು ಬಳಸಿಕೊಂಡಿದ್ದಾರೆ. ಒಟ್ಟಿನಲ್ಲಿ ಅವರ ಸಂಗ್ರಹ ಬಹಳ ಮಹತ್ತ್ವದ್ದಾಗಿದೆ ಮತ್ತು ಅದಕ್ಕೆ ವಿಶೇಷ ಐತಿಹಾಸಿಕ ಮೌಲ್ಯವಿದೆ. ಇದರ ತರವಾಯ ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ಸಿನವರು ಕರ್ನಾಟಕ ಲೋಕೋಕ್ತಿನಿಧಾನ ಎಂಬ ಗ್ರಂಥವೊಂದನ್ನು 1912ರಲ್ಲಿ ಪ್ರಕಟಿಸಿದರು. ಪುಸ್ತಕರೂಪದಲ್ಲಿ ಪ್ರಕಟವಾದ ಗಾದೆಗಳ ಸಂಕಲಗಳಲ್ಲಿ ಇದು ಮೊದಲನೆಯದು. 1919ರಲ್ಲಿ ಮರುಮುದ್ರಣವನ್ನು ಕಂಡ ಇದು ಈಗ ದೊರೆಯದಾಗಿದೆ. ಇದರಲ್ಲಿ 1500 ರೂಢಿಯ ಗಾದೆಗಳಿದ್ದು, ಕೆಲವಕ್ಕೆ ಜೊತೆಯಲ್ಲಿಯೇ ಅರ್ಥವಿವರಣೆಯನ್ನೂ ಕೊಡಲಾಗಿದೆ.

ಇದರ ಅನಂತರ ಪ್ರಕಟವಾದ ಪ್ರಮುಖ ಸಂಗ್ರಹವೆಂದರೆ ಎಚ್.ಎಸ್.ಅಚ್ಚಪ್ಪನವರ ಕನ್ನಡ ಗಾದೆಗಳು. 1944ರಲ್ಲಿ ಪ್ರಕಟವಾದ ಈ ಕೃತಿ 1959ರಲ್ಲಿ ಎರಡನೆಯ ಮುದ್ರಣವನ್ನೂ ಕಂಡಿತು. ಇದೊಂದು ಉತ್ತಮ ಸಂಕಲನವಾಗಿದ್ದು, ಜನಪ್ರಿಯವಾಗಿದೆ. ಗಾದೆಗಳ ಕೆಲಸಕ್ಕೆ ತಮ್ಮನ್ನು ಅರ್ಪಿಸಿಕೊಂಡ ಅಚ್ಚಪ್ಪನವರು 1969ರಲ್ಲಿ ಗ್ರಂಥಸ್ಥ ಗಾದೆಗಳು ಎಂಬ ಗಾದೆಗಳ ಬೃಹತ್‌ಕೋಶವೊಂದನ್ನು ಹೊರತಂದಿದ್ದಾರೆ. ಕನ್ನಡ ಪ್ರಸಿದ್ಧ ಕವಿಗಳ ಕಾವ್ಯಗಳಲ್ಲಿ ಉಕ್ತವಾಗಿರುವ ಎಲ್ಲ ಗಾದೆಗಳನ್ನೂ ಒಂದು ಕಡೆ ಕಲೆಹಾಕುವ ಕಾರ್ಯ ಇಲ್ಲಿ ನಡೆದಿದೆ. ನೃಪತುಂಗನ ಕವಿರಾಜಮಾರ್ಗದಿಂದ ಮುದ್ದಣನ ಶ್ರೀರಾಮ ಪಟ್ಟಾಭಿಷೇಕದವರೆಗಿನ ಗಾದೆಗಳು ಇಲ್ಲಿ ಸಂಕಲನಗೊಂಡಿವೆ. ಇದರಲ್ಲಿ ಅನುಸರಿಸಿರುವ ಕ್ರಮವೆಂದರೆ, ಕವಿ–ಕಾವ್ಯಾದಿ ಆಕರವನ್ನು ಕೊಟ್ಟು, ಅದರಲ್ಲಿ ಬಂದಿರುವ ಗಾದೆಗಳನ್ನು ಅಕಾರಾದಿಯಾಗಿ ಪಟ್ಟಿ ಮಾಡಿರುವುದು. ಕೆಲವೊಮ್ಮೆ ಗಾದೆಗಳಂತೆ ತೋರುವ ಉದ್ಧರಣೆಗಳು, ಸಾಮತಿಗಳು, ಜಾಣ್ನುಡಿಗಳು, ಸೂಕ್ತಿಗಳು, ರೂಪಕಗಳು ಮುಂತಾದವೂ ಇಲ್ಲಿ ಸೇರಿಹೋಗಿವೆ. ಜನಪದದಿಂದ ಕವಿಕೃತಿಗಳಿಗೆ ಹೋಗಿ ನೆಲೆಗೊಂಡಿರುವ ಶುದ್ಧ ಗಾದೆಗಳನ್ನು ಮಾತ್ರ ಆಯ್ದುಕೊಂಡಿದ್ದರೆ ಚೆನ್ನಾಗಿರುತ್ತಿತ್ತೇನೋ ಎನಿಸುತ್ತದೆ. ಆದರೂ ಇದೊಂದು ಉಪಯುಕ್ತವೂ ಉತ್ತಮವೂ ಆದ ಕೆಲಸವೆನ್ನುವುದರಲ್ಲಿ ಸಂಶಯವಿಲ್ಲ. ಗ್ರಂಥದ ಕಡೆಯಲ್ಲಿ ಕೊಟ್ಟಿರುವ ಶಬ್ದಕೋಶವೊಂದು ಉಪಯುಕ್ತ ಭಾಗ.

ಮುಂದಿನ ಗಮನಾರ್ಹ ಕೃತಿಯೆಂದರೆ 1959ರಲ್ಲಿ ಪ್ರಕಟವಾದ ಜಂಗಮಕೋಟಿ ಕೃಷ್ಣಶಾಸ್ತ್ರಿ ಅವರ ಗಾದೆಗಳ ಭಂಡಾರ ಭಾಗ 1 ಎಂಬ ಸಂಕಲನ. ಇದು ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದಿಂದ ಪ್ರಕಾಶನಗೊಂಡಿದೆ. ಇದರಲ್ಲಿ ಮೂರು ಸಾವಿರಕ್ಕೂ ಹೆಚ್ಚು ಗಾದೆಗಳಿದ್ದು, ಅವನ್ನು ವಿಷಯಾನುಸಾರವಾಗಿ ವಿಂಗಡಿಸಿ ಅಕಾರಾದಿಯಾಗಿ ಕೊಡಲಾಗಿದೆ. ಈ ವಿಂಗಡಣೆ ಸಮಂಜಸವಾಗಿದೆಯೆಂದು ಹೇಳಲಾಗುವುದಿಲ್ಲ. ಕೆಲವು ಗಾದೆಗಳಿಗೆ ಅಡಿ ಟಿಪ್ಪಣಿಯಲ್ಲಿ ಅರ್ಥವನ್ನೂ ವಿವರಣೆಯನ್ನೂ ನೀಡಿದ್ದಾರೆ. ಸಂಸ್ಕೃತದ ನೂರಾರು ಗಾದೆಗಳನ್ನು ಕನ್ನಡದ ಅನುವಾದದೊಡನೆ ಸೇರಿಸಲಾಯಿತು ಎಂದಿದ್ದಾರೆ.

ಈ ಸಂದರ್ಭದಲ್ಲಿ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಆಶ್ರಯದಲ್ಲಿ 1962ರಲ್ಲಿ ಪ್ರಕಟವಾದ ನಾಲ್‌ನುಡಿ – ನಾಣ್ಣುಡಿ ಎಂಬ ಗ್ರಂಥವನ್ನು ಅಗತ್ಯವಾಗಿ ನೆನೆಯಬೇಕು. ಕನ್ನಡ, ತೆಲುಗು, ತಮಿಳು, ಮಲಯಾಳ ಭಾಷೆಗಳಲ್ಲಿನ 467 ಸಮಾನ ಗಾದೆಗಳು ಇಲ್ಲಿ ಸಂಗ್ರಹಗೊಂಡಿವೆ. ಇದರ ಸಂಪಾದಕರಲ್ಲಿ ಕನ್ನಡವನ್ನು ಪ್ರತಿನಿಧಿಸಿ ಎಂ.ಮರಿಯಪ್ಪ ಭಟ್ಟರಿದ್ದಾರೆ. ಎನ್.ವೆಂಕಟರಾವ್, ಆರ್.ಪಿ.ಸೇತುಪಿಳ್ಳೆ ಮತ್ತು ಎಸ್.ಕೆ.ನಾಯಕ್ ಅವರು ಉಳಿದ ಭಾಷೆಗಳ ಪ್ರತಿನಿಧಿಗಳಾಗಿದ್ದಾರೆ. ದ್ರಾವಿಡ ಭಾಷೆಗಳ ಗಾದೆಗಳ ತೌಲನಿಕ ಅಧ್ಯಯನಕ್ಕೆ ಈ ಗ್ರಂಥ ಸಾಮಗ್ರಿ ಒದಗಿಸುತ್ತದೆ.

1963ರಲ್ಲಿ ಪ್ರಕಟವಾದ ಟಿ.ವಿ.ವೆಂಕಟರಮಣಯ್ಯನವರ ಕನ್ನಡ ಗಾದೆಗಳ ಕೋಶ ಒಂದು ಉಲ್ಲೇಖನೀಯ ಕೃತಿಯಾಗಿದೆ. ಇದರ ಪರಿಷ್ಕೃತ ಹಾಗೂ ವಿಸ್ತೃತ ಆವೃತ್ತಿ 1969ರಲ್ಲಿ ಪ್ರಕಟಗೊಂಡಿದೆ. ಮೊದಲ ಮುದ್ರಣದಲ್ಲಿದ್ದ ಗಾದೆಗಳು ನಾಲ್ಕು ಸಾವಿರವಾದರೆ, ಎರಡನೆಯ ಮುದ್ರಣದಲ್ಲಿ ಎಂಟು ಸಾವಿರಕ್ಕೂ ಹೆಚ್ಚಿವೆ. ಈಗಾಗಲೇ ಪ್ರಕಟವಾಗಿದ್ದ ಹಲವಾರು ಗಾದೆಗಳು ಇಲ್ಲಿ ಮತ್ತೆ ಪುನರಾವರ್ತನಗೊಂಡಿವೆ. ಕನ್ನಡ ಕವಿಗಳ ಕಾವ್ಯಗಳಿಂದ ತೆಗೆದ ಗಾದೆಗಳೂ ಸಂಸ್ಕೃತದ ಗಾದೆಗಳೂ ಕೆಲವು ಸೇರಿವೆ. ಗಾದೆಗಳನ್ನು ವಿಷಯಾನುಸಾರವಾಗಿ ವಿಭಾಗಿಸಿದ್ದರೂ ಸಮರ್ಪಕವೆನಿಸುವಂತಿಲ್ಲ. ಮೊಟ್ಟಮೊದಲಿಗೆ ಪ್ರಕಟವಾದ ಗಾದೆಗಳೂ ಇಲ್ಲಿರುವುದರಿಂದ ಇದೊಂದು ಗಮನಾರ್ಹ ಕೃತಿಯಾಗಿದೆ. ಇದಲ್ಲದೆ ಗ್ರಂಥದ ಕಡೆಯಲ್ಲಿ ಕೆಲವು ಸಮಾನಾರ್ಥಕ ಕನ್ನಡ – ಇಂಗ್ಲೀಷ್ ಗಾದೆಗಳನ್ನು ಕೊಟ್ಟಿರುವುದು ಉಪಯುಕ್ತವಾಗಿದೆ.

ಇಲ್ಲಿ ಹೇಳಬೇಕಾದ ಮತ್ತೊಂದು ಗಾದೆಗಳ ಸಂಗ್ರಹವೆಂದರೆ ರಾಗೌ ಅವರ ನಮ್ಮ ಗಾದೆಗಳು. ಇದು 1968ರಲ್ಲಿ ಪ್ರಕಟಗೊಂಡಿತು. ಇದರಲ್ಲಿ ಎರಡು ಸಾವಿರಕ್ಕೂ ಹೆಚ್ಚು ಗಾದೆಗಳಿದ್ದು ಅವೆಲ್ಲ ಮೊದಲಬಾರಿಗೆ ಪ್ರಕಟವಾಗಿವೆ. ಇಲ್ಲಿಯ ಗಾದೆಗಳೆಲ್ಲ ಪ್ರಾದೇಶಿಕ ಸ್ವರೂಪದವು. ಕೆಲವು ಗಾದೆಗಳು ಪುನರುಕ್ತವಾದಂತೆ ಕಂಡರೂ ಪಾಠಾಂತರ ಅಥವಾ ವಿಶೇಷ ಪದಪ್ರಯೋಗ ಅಥವಾ ಧ್ವನಿಹೆಚ್ಚಳ ಅಥವಾ ಗಾದೆಯ ಪೂರ್ಣರೂಪಕ್ಕಾಗಿ ಅಂಥವನ್ನು ಉಳಿಸಿಕೊಳ್ಳಲಾಗಿದೆ. ಈ ಕೃತಿಯ ಇನ್ನೆರಡು ಆಕರ್ಷಣೆಗಳೆಂದರೆ ಪ್ರಸ್ತಾವನೆ ಮತ್ತು ಅರ್ಥಕೋಶಗಳು. ಗಾದೆಯ ಸ್ವರೂಪ ಲಕ್ಷಣ, ಉಗಮ ವಿಕಾಸ, ಸಾಹಿತ್ಯಮೌಲ್ಯ ಮುಂತಾದ ವಿಷಯಗಳನ್ನು ಕುರಿತ ಪ್ರಸ್ತಾವನೆ ತುಂಬ ಉಪಯುಕ್ತವೆನಿಸಿದೆ.

1971ರಲ್ಲಿ ಪ್ರಕಟವಾದ ಬಿ.ಎ.ವಿವೇಕ ರೈ ಅವರ ತುಳು ಗಾದೆಗಳು ಇಲ್ಲಿ ಗಮನಿಸಬೇಕಾದ ಮತ್ತೊಂದು ಗ್ರಂಥ. ಇದರಲ್ಲಿ 704 ತುಳು ಗಾದೆಗಳಿವೆ. ಪ್ರತಿಯೊಂದು ಗಾದೆಯನ್ನೂ ಕನ್ನಡ ಲಿಪಿಯಲ್ಲಿ ಕೊಟ್ಟು, ಅದರ ಕನ್ನಡಾನುವಾದವನ್ನು, ದೊರೆತಾಗ ಕನ್ನಡ ಸಮಾನ ಗಾದೆಗಳನ್ನು ಕೆಳಗಡೆ ಕೊಡುತ್ತಾರೆ. ಅಗತ್ಯ ಬಿದ್ದಲ್ಲಿ ಗಾದೆಗಳಿಗೆ ಹಿನ್ನೆಲೆ ಹಾಗೂ ವಿವರಣೆಗಳನ್ನೂ ನೀಡಿದ್ದಾರೆ. ಗಾದೆಗಳಿಗೆ ಬರೆದಿರುವ ಅಭ್ಯಾಸಪೂರ್ಣ ಪ್ರಸ್ತಾವನೆ, ಕೊಟ್ಟಿರುವ ತುಳು – ಕನ್ನಡ ಅರ್ಥಕೋಶ ಈ ಪುಸ್ತಕದ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚಿಸಿವೆ.

ಈ ಸಂದರ್ಭದಲ್ಲಿ ಸ್ವತಂತ್ರ್ಯಗಾದೆಗಳ ರಚನೆಯನ್ನು ಕುರಿತು ಕೆಲವು ಮಾತುಗಳನ್ನು ಬರೆಯಬಹುದು. ಕನ್ನಡದಲ್ಲಿ ಕೆಲವರು ಸ್ವಂತ ಗಾದೆಗಳನ್ನು ರಚಿಸಿರುವ ನಿದರ್ಶನಗಳಿವೆ. ಕೊರವಂಜಿ ಪತ್ರಿಕೆಯಲ್ಲಿ ಬಂದ ನಾ. ಕಸ್ತೂರಿಯವರ ಸಾವಿರಾರು ಹೊಸ ಗಾದೆಗಳನ್ನು ಇಲ್ಲಿ ನೆನೆಯಬಹುದು. ಸಮಾಜದ ಕುಂದು ಕೊರತೆಗಳನ್ನು ವಿಡಂಬಿಸುವುದರಲ್ಲಿ ಇವು ಪರಿಣಾಮಕಾರಿಯಾದವು. ಇತ್ತೀಚೆಗೆ ಎರಡು ಸ್ವತಂತ್ರ್ಯ ಗಾದೆಗಳ ಸಂಕಲನಗಳು ಪ್ರಕಟಗೊಂಡಿವೆ. ಅವುಗಳಲ್ಲಿ 1969ರಲ್ಲಿ ಪ್ರಕಟವಾದ ಎಸ್. ವಿ. ಪರಮೇಶ್ವರಭಟ್ಟರ ಮಂಥನ ಒಂದು. ಇದರಲ್ಲಿ ಏಳುನೂರು ಹೊಸಗಾದೆಗಳಿವೆ. ಎಷ್ಟೋ ರೂಢಿಯ ಗಾದೆಗಳು ತಮ್ಮ ಮೂಲ ರೂಪದಲ್ಲಿಯೋ ಅಥವಾ ಅಲ್ಪಸ್ವಲ್ಪ ಬದಲಾವಣೆ ಹೊಂದಿಯೋ ಇಲ್ಲಿ ಬಂದು ಸೇರಿಕೊಂಡಿವೆ. ಕೆಲವು ಗಾದೆಗಳಂತೂ ಮೊದಲೆ ಜನಪದದಲ್ಲಿ ಇದ್ದ ಗಾದೆಗಳ ಸಾದೃಶ್ಯದ ಮೇಲೆ ರಚಿತವಾದವು. ತೀರ ಹೊಸದೆನ್ನುವ ಗಾದೆಗಳೂ ಇಲ್ಲವೆ. ಈ ಎಲ್ಲ ಗಾದೆಗಳೂ ರೂಪ ಮತ್ತು ಶೈಲಿಗಳಲ್ಲಿ ಜನಪದ ಗಾದೆಗಳಂತೆಯೇ ಇವೆ; ಆದರೆ ವಸ್ತುವಿಷಯದಲ್ಲಿ ಕೆಲಮಟ್ಟಿಗೆ ಬೇರೆಯಾಗಿವೆ, ಆಧುನಿಕವಾಗಿವೆ. ಈ ಬಗೆಯ ಇನ್ನೊಂದು ಸಂಕಲನವೆಂದರೆ 1970ರಲ್ಲಿ ಪ್ರಕಟವಾದ ಎಚ್.ಜೆ.ಲಕ್ಕಪ್ಪಗೌಡರ ಇಬ್ಬನಿ. ಇದರಲ್ಲಿ ಸಾವಿರದ ಇನ್ನೂರು ಸ್ವತಂತ್ರ್ಯ ಗಾದೆಗಳಿವೆ. ಆದರೆ ಇವು ಹೆಚ್ಚು ಗ್ರಾಮೀಣ ಸ್ವರೂಪದ್ದಾಗಿವೆ. ಮೇಲಿನ ಕೃತಿಗೆ ಹೇಳಿದ ಮಾತುಗಳೇ ಇದಕ್ಕೂ ಅನ್ವಯಿಸುತ್ತವೆ.

ಇವನ್ನು ಓದಿದಾಗ ಇಂಥ ಗಾದೆಗಳ ಅಗತ್ಯವಾದರೂ ಏನಿತ್ತು ಎಂಬ ಪ್ರಶ್ನೆ ಏಳುತ್ತದೆ. ನಾಗರಿಕತೆಯ ಪರಿಣಾಮದಿಂದ ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ಪರಂಪರಾಗತವಾದ ಗಾದೆಗಳು ಉಳಿಯುತ್ತಿಲ್ಲ; ಹಾಗೆಯೇ ನಾಗರಿಕವಾದ ಹೊಸ ಗಾದೆಗಳು ಜನಪದದಲ್ಲಿ ಸೃಷ್ಟಿಗೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಮಧ್ಯೆ ಇಂಥ ಸ್ವತಂತ್ರ್ಯ ಗಾದೆಗಳು ಜನಪದ ಸಮುದಾಯದಲ್ಲಿ ರೂಢಿಯ ಗಾದೆಗಳಂತೆ ಜನಪ್ರಿಯವಾಗುವುದು ತೀರ ಅಪರೂಪ. ಆದರೂ ಇವನ್ನು ಓದಿ ಸಂತೋಷಪಡಬಹುದು. ಒಟ್ಟಿನಲ್ಲಿ ಕನ್ನಡದ ದೃಷ್ಟಿಯಿಂದ ಗಾದೆಗಳ ಕ್ಷೇತ್ರದಲ್ಲಿ ಇವು ಹೊಸ ಪ್ರಯೋಗಗಳು. ಬೇರೆ ಬೇರೆ ದೇಶಗಳಲ್ಲಿ ಬಹಳ ಹಿಂದೆಯೇ ಇಂಥ ಪ್ರಯೋಗಗಳು ನಡೆದುದಕ್ಕೆ ನಿದರ್ಶನಗಳಿವೆ.

ಗಾದೆಗಳ ಸಂಗ್ರಹ ಪ್ರಕಟಣೆಗಳ ಜೊತೆಯಲ್ಲಿಯೇ ವಿಮರ್ಶನಕಾರ್ಯವೂ ಕನ್ನಡದಲ್ಲಿ ನಡೆದಿದೆ. ಬಿಡಿ ಲೇಖನಗಳ ರೂಪದಲ್ಲಿ, ಮುನ್ನುಡಿ, ಪ್ರಸ್ತಾವನೆಗಳಲ್ಲಿ ಇದರ ಅನೇಕ ವಿಷಯಗಳು ಚರ್ಚಿತವಾಗಿವೆ. ಆದರೆ ಇವೆಲ್ಲವನ್ನೂ ಇಲ್ಲಿ ಹೇಳಲು ಸಾಧ್ಯವಾಗುವುದಿಲ್ಲ. ಪುಸ್ತಕರೂಪದಲ್ಲಿ ಪ್ರಕಟವಾಗಿರುವುದನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಬಹುದು. ಇಲ್ಲಿಯವರೆಗೆ ಇಂಥ ಮೂರು ವಿಮರ್ಶನ ಗ್ರಂಥಗಳು ಮಾತ್ರ ಬಂದಿವೆ. ಮೊದಲನೆಯದು 1936ರಲ್ಲಿ

ಪ್ರಕಟಗೊಂಡ ಕುಲಕರ್ಣಿ ಪ್ರಹ್ಲಾದರ ನಾಣ್ಣುಡಿ. ಗಾದೆಗಳ ಉಗಮ ವಿಕಾಸ, ಸ್ವರೂಪಗಳನ್ನು ಕುರಿತು ಇದರಲ್ಲಿ ವಿಚಾರ ಮಾಡಲಾಗಿದೆ. ಬಹಳ ವರ್ಷಗಳ ಹಿಂದೆಯೇ ಗಾದೆಗಳ ಶಾಸ್ತ್ರೀಯ ಅಧ್ಯಯನದ ಆವಶ್ಯಕತೆಯನ್ನು ಕಂಡುಕೊಂಡುದು ಕುಲಕರ್ಣಿ ಯವರ ವೈಶಿಷ್ಟ್ಯವಾಗಿದೆ.

ಈ ಬಗೆಯ ಎರಡನೆಯ ಗ್ರಂಥವೆಂದರೆ ಎ.ಕೆ.ರಾಮಾನುಜನ್ ಅವರ ಗಾದೆಗಳು ಎಂಬ ಪುಸ್ತಿಕೆ. ಕರ್ನಾಟಕದ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯ ಗ್ರಂಥವಾದ ಇದು 1955ರಲ್ಲಿ ಪ್ರಕಟಗೊಂಡಿತು. ಗಾದೆಗಳ ವಿವರಣಾತ್ಮಕ ವಿಮರ್ಶೆ ಹಾಗೂ ಸೈದ್ಧಾಂತಿಕ ಪ್ರಸ್ತಾಪಗಳು ಇದರಲ್ಲಿ ಮೇಳವಿಸಿವೆ. ಆದರೂ ಗಾದೆಯ ಸಮಗ್ರ ಮೀಮಾಂಸೆ ಇದರಿಂದ ದೊರಕಲಾರದು; ಮಾತ್ರವಲ್ಲ, ಅಂಥ ಒಂದು ದೊಡ್ಡ ಕೆಲಸದ ಕಡೆಗೆ ಬೆರಳು ತೋರಿಸುತ್ತದೆ.

ಇಂಥ ಕೊರತೆಯನ್ನು ತಕ್ಕಮಟ್ಟಿಗಾದರೂ ತುಂಬಿಸಿಕೊಟ್ಟುದು ನಂ. ತಪಸ್ವೀ ಕುಮಾರ್ ಅವರ ಕನ್ನಡ ಗಾದೆಗಳ ಸಮೀಕ್ಷೆ ಎಂಬ ಪುಸ್ತಕ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಗೃಹಸರಸ್ವತಿ ಗ್ರಂಥಮಾಲೆಯ ಪ್ರಕಟಣೆ ಇದು. ಇಲ್ಲಿ ಗಾದೆಗಳ ಹುಟ್ಟು ಬೆಳವಣಿಗೆ, ಸ್ವರೂಪಲಕ್ಷಣ ಮೊದಲಾದವನ್ನು ಚರ್ಚಿಸಿರುವುದಲ್ಲದೆ, ಗಾದೆಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ವಿಶ್ಲೇಷಿಸಲಾಗಿದೆ. ಗಾದೆಗಳ ಅಧ್ಯಯನದ ಇತಿಹಾಸದ ಸ್ಥೂಲ ಪರಿಚಯವೂ ಕಡೆಯಲ್ಲಿ ಸೇರಿದೆ. ವಿಷಯ ಸಮೃದ್ಧವೂ ವಿಚಾರಸಂಪನ್ನವೂ ಆದ ಈ ಕೃತಿ, ಈ ದಿಕ್ಕಿನಲ್ಲಿ ಕೆಲಸಮಾಡುವವರಿಗೆ ಅತ್ಯುಪಯುಕ್ತವೂ ಮಾರ್ಗದರ್ಶಕವೂ ಆದುದಾಗಿದೆ.

ಹೀಗೆ ಗಾದೆಗಳನ್ನು ಕುರಿತ ವಿವೇಚನೆ ಕೆಲಮಟ್ಟಿಗೆ ನಡೆದಿದ್ದರೂ ಆಗಬೇಕಾದುದು ಇನ್ನೂ ಬಹಳವಿದೆ. ಇದಲ್ಲದೆ ಗಾದೆಗಳ ಸಂಗ್ರಹಕಾರ್ಯವೇ ಸಮಗ್ರವಾಗಿ ಆಗಿಲ್ಲ. ಗಾದೆಗಳು ನಿತ್ಯ ಹುಟ್ಟುತ್ತವೆ, ನಿತ್ಯ ಸಾಯುತ್ತವೆ ಎಂಬ ಮಾತೊಂದಿದೆ. ಈಗ ಗಾದೆಗಳು ಹುಟ್ಟುತ್ತಿಲ್ಲ, ಹುಟ್ಟಿದ ಗಾದೆಗಳು ಸಾಯುತ್ತಿರುವುದಂತೂ ಖಂಡಿತ. ಹಾಗೆ ಸಾಯುವುದಕ್ಕಿಂತ ಮುಂಚೆ ಅವನ್ನು ಉಳಿಸಿಕೊಳ್ಳಬೇಕಾದುದು ನಾಡಿನ ಆದ್ಯ ಕರ್ತವ್ಯವಾಗಿದೆ. (ಆರ್.ಜಿ.)

**ಗಾನರೀಯ :** ನೈಸೀರಿಯ ಗಾನರೀಯೀ ಎಂಬ ಏಕಾಣುಜೀವಿಯಿಂದ ಉಂಟಾಗುವ ಒಂದು ತೆರನ ಗುಹ್ಯರೋಗ. ಅಂಟುರೋಗವೂ ಹೌದು. ರೋಗಗ್ರಸ್ತ ಅಂಗಗಳಲ್ಲಿ ಕೀವು ಸ್ರವಿಸುವುದು ಇದರ ಮುಖ್ಯಗುಣ. ಮೂತ್ರನಾಳಗಳಿಂದ ಹೊರಸೂಸುವ ಕೀವು ವೀರ್ಯವೆಂದೂ ಹೀಗೆ ಹೊರಸೂಸಲು ಶುಕ್ಲಗ್ರಂಥಿಯ ದೋಷವೇ ಕಾರಣವೆಂದೂ ಬಗೆದು ಗಾನರೀಯವನ್ನು ಶುಕ್ಲದೋಷವೆಂಬ ಹೆಸರಿನಿಂದ ಕರೆಯುವುದುಂಟು. ಮನುಷ್ಯರಲ್ಲಿ ಮಾತ್ರ ಈ ರೋಗ ಸಹಜವಾಗಿ ಕಾಣಿಸುತ್ತದೆ. ಬೇರಾವ ಪ್ರಾಣಿಗಳಲ್ಲೂ ಕಂಡುಬರುವುದಿಲ್ಲ. ಆದರೆ ಪ್ರಯೋಗಶಾಲೆಗಳಲ್ಲಿ ಕೋತಿ, ಮೊಲ ಮುಂತಾದವಕ್ಕೆ ಈ ರೋಗ ಅಂಟುವಂತೆ ಮಾಡಬಹುದು. ಸಾಮಾನ್ಯವಾಗಿ ಗಂಡಸರಲ್ಲಿ ಮೂತ್ರನಾಳದಲ್ಲಿಯೂ ಹೆಂಗಸರಲ್ಲಿ ಹೆಚ್ಚಾಗಿ ಗರ್ಭಕೋಶ ಕಂಠ (ಸರ್ವಿಕ್ಸ್) ಇಲ್ಲವೆ ಮೂತ್ರನಾಳದಲ್ಲಿಯೂ ಕಾಣಿಸಿಕೊಳ್ಳುತ್ತದೆ.

ರೋಗಚರಿತ್ರೆ: ಪುರಾತನ ಕಾಲದಿಂದಲೂ ಮಾನವನಿಗೆ ತಿಳಿದಿದ್ದ ಮೇಹ ರೋಗವಿದು. ಚೀನೀಯರಿಗೆ 5,000 ವರ್ಷಗಳ ಹಿಂದೆಯೇ ಇದರ ಬಗ್ಗೆ ಗೊತ್ತಿತ್ತು. ಪ್ರಾಚೀನ ಗ್ರೀಕರಿಗೆ, ರೋಮನರಿಗೆ, ಅರಬ್ಬರಿಗೆ ಇದರ ಪರಿಚಯ ಇತ್ತು. ಆದರೆ ಈ ರೋಗ ಲೈಂಗಿಕ ಸಂಬಂಧವಾದುದು ಎಂಬುದು ಬಹಳ ಕಾಲ ಗೊತ್ತಿರಲಿಲ್ಲ. ಅಲ್ಲದೆ ಇದನ್ನು ಇನ್ನೊಂದು ಬಗೆಯ ಮೇಹರೋಗವಾದ ಸಿಫಿಲಿಸ್ ಎಂಬುದರ ಒಂದು ಬಗೆಯೆಂದು ತಿಳಿಯಲಾಗಿತ್ತು. 1831ರ ಅನಂತರ ಇವೆರಡೂ ಭಿನ್ನ ಬಗೆಯ ರೋಗಗಳೆಂದು ಪತ್ತೆ ಹಚ್ಚಲಾಯಿತು. ಜರ್ಮನಿಯ ವೈದ್ಯ ನೈಸರ್ ಗಾನರೀಯ ರೋಗಕಾರಕ ಕ್ರಿಮಿಯನ್ನು 1884ರಲ್ಲಿ ಕಂಡುಹಿಡಿದ ಅನಂತರ ಈ ರೋಗ ಸಿಫಿಲಿಸ್ ರೋಗದಿಂದ ಭಿನ್ನವಾದುದೆಂದು ಖಚಿತವಾಯಿತು.

ರೋಗ ನಿದಾನ: ನೈಸೀರಿಯ ಗಾನರೀಯೀ ಎಂಬ ಏಕಾಣುಜೀವಿಯೇ ಈ ರೋಗಕ್ಕೆ ಕಾರಣ ಎಂದು ಮೇಲೆ ಹೇಳಿದೆ. ಇದು ಗ್ರಾಮನ ವರ್ಣಪರೀಕ್ಷೆಗೆ ನಿಷೇಧಾರ್ಥಕ ಫಲಿತಾಂಶ ನೀಡುತ್ತದೆ. ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದಾಗ ಒಂದೊಂದು ಸೂಕ್ಷ್ಮಜೀವಿಯೂ ಒಂದು ಜೋಡಿ ಅವರೆಬೀಜದಾಕಾರದ ರಚನೆಯಂತೆ ಕಾಣುತ್ತದೆ. ಇದನ್ನು ಏಕಾಣುಜೀವಿ ಪ್ರಯೋಗಶಾಲೆಗಳಲ್ಲಿ ಚಾಕಲೇಟ್ ಅಗಾರ್ ಎಂಬ ಮಾಧ್ಯಮದಲ್ಲಿ ಬೆಳೆಸಬಹುದು. ಜನನೇಂದ್ರಿಯಗಳಿಂದ ಸ್ರವಿಸುವ ಕೀವಿನಲ್ಲಿ ಅನೇಕ ಕ್ರಿಮಿಗಳಿರುವುದರಿಂದ ರೋಗ ಒಬ್ಬರಿಂದ ಇನ್ನೊಬ್ಬರಿಗೆ ಸಂಭೋಗದ ಕಾಲದಲ್ಲಿ ಹರಡುತ್ತದೆ. ಅಲ್ಲದೆ ಕೀವು ತಗಲಿದ ಕಕ್ಕಸಿನ ಪೀಠ, ಕೀವನ್ನು ಮುಟ್ಟಿದ ಬೆರಳು, ಕೀವನ್ನು ಒರಸಿದ ಬಟ್ಟೆ ಮುಂತಾದವುಗಳಿಂದ ಕನ್ಯೆಯರಿಗೆ ಮತ್ತು ಮಕ್ಕಳಿಗೆ ರೋಗ ಹರಡಬಹುದು. ಕ್ರಿಮಿ ದೇಹವನ್ನು ಹೊಕ್ಕ ಅನಂತರ 3–14 ದಿವಸಗಳಲ್ಲಿ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ರೋಗಲಕ್ಷಣಗಳು: ಜನನೇಂದ್ರಿಯಗಳ ಒಳರಚನಾಕ್ರಮದ ವ್ಯತ್ಯಾಸದ ದೆಸೆಯಿಂದ ಇದರ ಲಕ್ಷಣಗಳು ಪುರುಷರಲ್ಲಿ ಮತ್ತು ಸ್ತ್ರೀಯರಲ್ಲಿ ಬೇರೆ ಬೇರೆಯಾಗಿರುತ್ತವೆ.

ಪುರುಷ ಗಾನರೀಯ: $100^0$–$104^0$ ಫ್ಯಾ.ವರೆಗೂ ಜ್ವರ ಬರುವುದು, ಆಗಾಗ್ಗೆ ಮೂತ್ರ ವಿಸರ್ಜಿಸುವುದು, ಮೂತ್ರವನ್ನು ವಿಸರ್ಜಿಸುವಾಗ ನೋವು, ಮೂತ್ರ ವಿಸರ್ಜನೆಯ ಅನಂತರ ಮತ್ತೊಮ್ಮೆ ಮೂತ್ರ ಮಾಡಬೇಕೆಂಬ ಇಚ್ಛೆ, ಮೂತ್ರನಾಳದಿಂದ ಕೀವು ಇಲ್ಲವೆ ರಕ್ತಮಿಶ್ರಿತವಾದ (ಹಳದಿ) ಕೀವು ಬೀಳುವುದು, ಮೊದಮೊದಲು ಮೂತ್ರದ ಜೊತೆಯಲ್ಲಿ ಹರಿದುಬರುವ ಕೀವು ಅನಂತರ ಮೂತ್ರನಾಳದಲ್ಲಿ ಯಾವಾಗಲೂ ಸ್ರವಿಸುತ್ತಿರುವುದು, ಶುಕ್ಲಗ್ರಂಥಿಯಲ್ಲಿ ಕೀವು ಸಂಗ್ರಹಗೊಂಡು ಮೂತ್ರ ಹೊರಬಾರದೆ ಹೊಟ್ಟೆನೋವುಂಟಾಗುವುದು – ಇವು ಕೆಲವು ಮುಖ್ಯ ಲಕ್ಷಣಗಳು. ಮೂತ್ರನಾಳದ ಹೊರ ಮತ್ತು ಒಳಭಾಗದಲ್ಲಿ ಗ್ರಂಥಿ ಮತ್ತು ಮೂಲೆಗಳಿದ್ದು ಗಾನರೀಯ ಕ್ರಿಮಿಗಳು ಗೂಡುಕಟ್ಟಿ ಬೆಳೆಯಲು ಅನುಕೂಲವಿರುವುದರಿಂದ ಟೈಸನನ ಗ್ರಂಥಿ, ಲಿಟ್ಟರ್ ಗ್ರಂಥಿ, ಕೌಪರ್ ಗ್ರಂಥಿ, ಶುಕ್ಲ ಗ್ರಂಥಿ ಮತ್ತು ಲ್ಯಾಕುನೇ ಮಾರ್ಗಾನಿಗಳಲ್ಲಿ ಉದ್ರೇಕವಾಗಿ ಗುಳ್ಳೆಗಳೇಳಬಹುದು. ಲಿಟ್ಟರ್ ಗ್ರಂಥಿ ಮತ್ತು ಲ್ಯಾಕುನೇ ಮಾರ್ಗಾನಿಗಳಲ್ಲಿ ಹಲವು ವೇಳೆ ಉರಿಯೂತವುಂಟಾಗಿ ಮೂತ್ರನಾಳವು ಸಂಕುಚಿತವಾಗಿ ಮೂತ್ರವಿಸರ್ಜನೆ ಕುಂಠಿತವಾಗುವುದುಂಟು. ಎಪಿಡಿಡೈಮಸ್, ವೃಷಣ ನಾಳ ಮತ್ತು ವೀರ್ಯಕೋಶಗಳಲ್ಲಿ ಉರಿಯೂತವಾಗಿ ರೋಗ ತೊಡಕುಗಳುಂಟಾಗಬಹುದು. ಎಪಿಡಿಡೈಮಸ್ ಉಬ್ಬಿ ಅಂಡಕೋಶದಲ್ಲಿ ತೀವ್ರ ನೋವು, ಜ್ವರ ಬರುತ್ತದೆ. ಸ್ಖಲನನಾಳದ ಸುತ್ತ ಬಾವುಂಟಾಗಿ ವೀರ್ಯ ಹೊರಬರಲು ಅಡ್ಡಿಯಾಗಿ ಪುರುಷರಲ್ಲಿ ಅನೇಕ ತೊಂದರೆಗಳಾಗಬಹುದು. ರಕ್ತಚಲನೆಯಿಂದ ಈ ಕ್ರಿಮಿ ದೇಹದ ಬೇರೆ ಬೇರೆ ಅಂಗಗಳಿಗೆ ಸಂಚರಿಸಿ ಕಣ್ಣು ಮತ್ತು ಕೀಲುಗಳಲ್ಲಿ ಉರಿಯೂತವನ್ನು ಉಂಟುಮಾಡುತ್ತದೆ. ಕಣ್ಣಿನ ಪಾಪೆ ಮತ್ತು ಕನೀನಿಕೆಗಳಲ್ಲಿ ನೋವು, ಹುಣ್ಣು ಮತ್ತು ರಕ್ತಾವರೋಧ ಮುಂತಾದ ತೊಂದರೆಗಳುಂಟಾಗುತ್ತವೆ. ಮೊದಲು ದೇಹದ ಎಲ್ಲ ಕೀಲುಗಳಲ್ಲಿ ನೋವುಂಟಾಗಿ ಅನಂತರ ಯಾವುದಾದರೂ ಒಂದು ದೊಡ್ಡ ಕೀಲಿನಲ್ಲಿ ನೋವು ಬಾವುಗಳಾಗುತ್ತವೆ. ಸಾಮಾನ್ಯವಾಗಿ ಮೊಣಕಾಲಿನ ಕೀಲಿನಲ್ಲಿ ಕೀವು ಸಂಗ್ರಹಗೊಂಡು ನಡೆಯಲು ಬಾರದಂತಾಗುತ್ತದೆ. ಕೀಲು ಗಟ್ಟಿಯಾಗಿ ಮಡಚಲಾಗದಂತೆ ಇಲ್ಲವೆ ಮಡಚುವಾಗ ವಿಪರೀತ ನೋವು ಬರುವಂತೆ ಆಗುತ್ತದೆ.

ಸ್ತ್ರೀ ಗಾನರೀಯ: ಸ್ತ್ರೀಯರಲ್ಲಿ ಈ ರೋಗ ಪುರುಷನಲ್ಲಿದ್ದಷ್ಟು ತೀವ್ರವಾಗಿರದೆ ಜನನೇಂದ್ರಿಯ ಮತ್ತು ಮೂತ್ರಾಂಗಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಮೂತ್ರನಾಳ, ಗರ್ಭಕೋಶಕಂಠ ಮತ್ತು ಭಗಗ್ರಂಥಿಗಳ ಮೇಲಿದ್ದ ಅಂಟು ಪೊರೆಯನ್ನು ಗಾನರೀಯ ಕ್ರಿಮಿ ಹೊಕ್ಕು ಅನೇಕ ರೀತಿಯ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಪದೇಪದೇ ಮೂತ್ರವಿಸರ್ಜನೆ, ರಜಸ್ಸು ಚಕ್ರ ಬದಲಾಗುವಿಕೆ, ಒಂದು ಮಗುವಾದ ಬಳಿಕ ಬಂಜೆತನ ಮತ್ತು ಯೋನಿಯೊಳಗಿಂದ ಬಿಳಿಸ್ರಾವವಾಗುವುದು – ಇವು ಹೆಂಗಸರಲ್ಲಿ ಕಾಣಬರುವ ಮುಖ್ಯ ಲಕ್ಷಣಗಳು. ಇವೆಲ್ಲಕ್ಕಿಂತಲೂ ಮುಖ್ಯವಾಗಿ ರೋಗಿ ಅನಿಶ್ಚಿತ ಅಸ್ವಸ್ಥತೆಯಿಂದ ನರಳುತ್ತಾಳೆ. ಭಗೋಷ್ಠಗಳ ಬಾಯುವಿಕೆ, ಯೋನಿಯ ಹಿಂಭಾಗದ ಮೂಲೆಯಲ್ಲಿ ಉರಿಯೂತ, ಗರ್ಭಕೋಶ ಕಂಠದ ಮೇಲೆ ಗಾಯ ಮತ್ತು ಅದರ ದ್ವಾರ ತೆರೆದು ಬಿರಿತು ಕೀವು ಸ್ರವಿಸುವುದು ಇನ್ನಿತರ ಲಕ್ಷಣಗಳು. ಗರ್ಭಕೋಶ ಕಂಠದ ಅಂಟುಪೊರೆಯಲ್ಲಿ ಕ್ರಿಮಿಗಳು ಬಹಳ ಕಾಲ ಇರಬಹುದಾದ್ದರಿಂದ ಗಾನರೀಯ ಹೆಂಗಸರಲ್ಲಿ ದೀರ್ಘಕಾಲದ ರೋಗವಾಗುತ್ತದೆ. ಗರ್ಭಕೋಶಕಂಠನಾಳದಿಂದ ಅಂಡನಾಳವನ್ನು ಕ್ರಿಮಿ ಪ್ರವೇಶಿಸಿದಾಗ ಉರಿಯೂತ ಉಂಟಾಗಿ, ಅಂಡನಾಳ ಉಬ್ಬಿ ಹೊಟ್ಟೆನೋವು ಬರಬಹುದು. ಹೀಗೆ ಅನೇಕ ಸಲ ಉರಿಯೂತವಾಗಿ ಕೊನೆಗೆ ಅಂಡನಾಳ ಸಂಕುಚಿತವಾಗಬಹುದು. ಸಂಕುಚಿತವಾದರೆ ವೀರ್ಯಾಣು ಚಲಿಸಲು ಅಡ್ಡಿಯಾಗಿ ಗರ್ಭಧಾರಣೆಗೆ ಆತಂಕವಾಗಿ ಹೆಂಗಸು ಬಂಜೆಯಾಗಬಹುದು.

ಎಳೆಗೂಸು ಮತ್ತು ಮಕ್ಕಳ ಗಾನರೀಯ: ಜನನ ಕಾಲದಲ್ಲಿ ತಾಯಿಯ ಯೋನಿಯಲ್ಲಿ ಸ್ರವಿಸುವ ಕೀವು ಶಿಶುವಿನ ಕಣ್ಣಿಗೆ ತಗುಲಿದರೆ ಕಣ್ಣಿನ ಬಿಳಿಪೊರೆಯ ಉರಿಯೂತ ಉಂಟಾಗುತ್ತದೆ. ಇದರಿಂದ ಕುರುಡು ಸಂಭವಿಸಬಹುದು. ಮಗು ಹುಟ್ಟಿದ 21 ದಿವಸಗಳೊಳಗೆ ಕಣ್ಣಿಗೆ ಉರಿಯೂತವಾದರೆ ಸಾಮಾನ್ಯವಾಗಿ ಅದು ಗಾನರೀಯದಿಂದ ಉಂಟಾದುದು ಎಂದು ತಿಳಿಯಬಹುದು. ಕನ್ಯೆಯರ ಭಗೋಷ್ಠಗಳ ಮೇಲೆ ಇರುವ ಪೊರೆಯನ್ನು ಗಾನರೀಯ ಕ್ರಿಮಿ ಅತಿ ಸುಲಭವಾಗಿ ಆಕ್ರಮಿಸುತ್ತದೆ. ಭಗೋಷ್ಠ ಉರಿಯೂತ ಕನ್ಯೆಯರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಲೈಂಗಿಕ ಅಕೃತ್ಯ ಮತ್ತು ಬಲಾತ್ಕಾರ

ಸಂಪರ್ಕಗಳಿಂದ ಇದು ಉದ್ಭವಿಸುತ್ತದೆ. ಕೊನೆಯದಾಗಿ ಲೈಂಗಿಕ ವಿಕಾರಗಳಿಂದ ಎಂದರೆ ಗುದಲಿಂಗ ಸಂಪರ್ಕದಿಂದ ಗುದದಲ್ಲಿ ಗಾನರೀಯ ರೋಗ ಬರುತ್ತದೆ.

ರೋಗವನ್ನು ಗುರುತಿಸುವ ವಿಧಾನ: ಕೀವನ್ನು ಗಾಜಿನ ಸ್ಲೈಡಿನ ಮೇಲೆ ಲೇಪಿಸಿ ಗ್ರಾಮನ ವರ್ಣೀಕರಣ ವಿಧಾನದಿಂದ ಬಣ್ಣಕೊಟ್ಟು ಕ್ರಿಮಿಯನ್ನು ಸೂಕ್ಷ್ಮದರ್ಶಕದಲ್ಲಿ ಗುರುತಿಸಬಹುದು. 1960ರಿಂದೀಚೆಗೆ ಕ್ರಿಮಿಯನ್ನು ಪತ್ತೆಹಚ್ಚಲು ಪ್ರತಿರೋಧಿ ಕಿರಣಸ್ಫುರಣ ಪರೀಕ್ಷೆ ಎಂಬುದನ್ನು ಬಳಸುತ್ತಿದ್ದಾರೆ.

ಚಿಕಿತ್ಸೆ: ಪುರುಷನಲ್ಲಿ ರೋಗ ತೀವ್ರವಿದ್ದಾಗ ಪಿಎಎಮ್ ಚುಚ್ಚುಮದ್ದನ್ನು ಕೊಟ್ಟರೆ ಗುಣವಾಗುತ್ತದೆ. ದೀರ್ಘಕಾಲದ ರೋಗವಿದ್ದರೆ ದಿವಸವೂ 1 ಸಿಸಿ.ಯಂತೆ ನಾಲ್ಕು ದಿವಸ ಕೊಡಬೇಕು. ಹೆಂಗಸರಲ್ಲಿ ರೋಗವನ್ನು ಗುಣಪಡಿಸುವುದು ಬಹಳ ಕಷ್ಟ. ಪಿಎಎಮ್‍ಅನ್ನು ಕೊಟ್ಟರೂ ರೋಗ ಗುಣವಾಗುವುದೆಂದು ಹೇಳಲಾಗದು. ಸ್ಟ್ರೆಪ್ಟೊಮೈಸಿನನ್ನು ದಿವಸಕ್ಕೆ 1 ಗ್ರಾಮಿನಂತೆ 5 ದಿವಸ ಚುಚ್ಚುಮದ್ದಾಗಿ ಕೊಡಬೇಕು. ಆದರೆ ಕ್ರಿಮಿ ಸ್ಟ್ರೆಪ್ಟೊಮೈಸಿನಿಗೆ ಪ್ರತಿರೋಧ ಶಕ್ತಿಯನ್ನು ವೃದ್ಧಿ ಮಾಡಿಕೊಳ್ಳಬಹುದಾದ್ದರಿಂದ ಅಕ್ರೊಮೈಸಿನ್ ಮುಂತಾದ ಜೀವಿರೋಧಕ ಮದ್ದುಗಳನ್ನು ದಿನಕ್ಕೆ 2 ಗ್ರಾಮಿನಂತೆ 1 ಇಲ್ಲವೆ 2 ದಿವಸ ಕೊಡಬೇಕು. ಹುಟ್ಟುವ ಎಲ್ಲ ಶಿಶುಗಳ ಕಣ್ಣಲ್ಲಿ ಸಿಲ್ವರ್ ನೈಟ್ರೇಟ್ ದ್ರಾವಣ ಇಲ್ಲವೆ ಪೆನಿಸಿಲಿನ್ ದ್ರಾವಣವನ್ನು ಹಾಕಬೇಕು. ಕಣ್ಣಿನ ಉರಿಯೂತವಿದ್ದರೆ ಪೆನಿಸಿಲಿನ್ ದ್ರಾವಣವನ್ನು ಕಣ್ಣುಗಳಲ್ಲಿ ಆಗಾಗ್ಗೆ ಹಾಕುತ್ತಿರಬೇಕು. ಮತ್ತು ಕೊನೆಯ ಪಕ್ಷ 2 ಲಕ್ಷ ಯೂನಿಟ್ ಪ್ರೊಕೇನ್ ಪೆನಿಸಿಲಿನ್ ಚುಚ್ಚುಮದ್ದನ್ನು ಪ್ರತಿದಿವಸ ಗುಣವಾಗುವವರೆಗೆ ಕೊಡಬೇಕು, ಭಗೋಷ್ಠ ಉರಿಯೂತವಿದ್ದರೆ ಪೆನಿಸಿಲಿನ್ ದ್ರಾವಣದಿಂದ ದಿವಸವೂ ತೊಳೆದು ಪಿಎಎಮ್ಅನ್ನು ದಿನಕ್ಕೆ 1 ಸಿಸಿ.ಯಂತೆ ಗುಣವಾಗುವವರೆಗೆ ಕೊಡಬೇಕು. ಗುಣವಾದ ಮೇಲೂ ರೋಗಿಗಳನ್ನು 3 ರಿಂದ 6 ತಿಂಗಳವರೆಗೆ ಕಣ್ಗಾವಲಿನಲ್ಲಿಟ್ಟು ಸಂಪೂರ್ಣ ಚಿಕಿತ್ಸೆ ಕೊಡಬೇಕು.

ರೋಗ ನಿರೋಧ: ಸಂಭೋಗವಾದ ಕೂಡಲೆ ಪಿಎಎಮ್ ಚುಚ್ಚುಮದ್ದನ್ನು ತೆಗೆದುಕೊಂಡರೆ ಇಲ್ಲವೆ ಸಂಭೋಗ ಕಾಲದಲ್ಲಿ ಲಿಂಗ ಕವಚ ಧರಿಸಿದ್ದರೆ ರೋಗ ಬರಲಾರದು. ಕನಿಷ್ಠ 2 ಲಕ್ಷ ಯೂನಿಟ್ ಪೆನಿಸಿಲಿನ್ ಉಳ್ಳ ಮಾತ್ರೆಯನ್ನು ಸಂಭೋಗದ ಮುಂಚೆ ಇಲ್ಲವೆ ಸಂಭೋಗದ ಅನಂತರ 15 ಗಂಟೆಯೊಳಗೆ ಸೇವಿಸಿದರೆ ರೋಗ ಬರುವ ಸಂಭವ ಕಡಿಮೆ. (ಎನ್.ಕೆ.ಎಂ.)

**ಗಾಫ್, ಹ್ಯೂ :** 1779–1869. ಐರಿಷ್ ಸೈನಿಕ. ಲಿಮರಿಕ್‍ನ ವೂಡ್ಸ್ ಡೌನನಲ್ಲಿ 1779ರ ನವೆಂಬರ್ 3ರಂದು ಹುಟ್ಟಿದ. ಈತ ಸೈನ್ಯಕ್ಕೆ ಸೇರಿದ್ದು 1794ರಲ್ಲಿ. ಎರಡು ವರ್ಷಗಳ ಅನಂತರ ಗುಡ್ ಹೋಪ್ ಭೂಶಿರದ ಆಕ್ರಮಣ ಕಾರ್ಯಾಚರಣೆಯಲ್ಲೂ 1797–1800ರಲ್ಲಿ ವೆಸ್ಟ್ ಇಂಡೀಸಿನಲ್ಲಿ ನಡೆದ ಆಕ್ರಮಣ ಯುದ್ಧಗಳಲ್ಲೂ ಭಾಗವಹಿಸಿದ. 15ನೆಯ ವಯಸ್ಸಿಗೆ ಅಡ್ಜುಟಂಟ್ ಆಗಿ 25ನೆಯ ವಯಸ್ಸಿನಲ್ಲಿ ಮೇಜರ್ ಆಗಿಯೂ ಮೇಲೇರಿದ ಈತ ಪೋರ್ಚುಗಲ್–ಸ್ಪೇನ್‍ಗಳಲ್ಲಿ ವೆಲಿಂಗ್ಟನ್ ಡ್ಯೂಕನ ಸೇನೆಯ 87ನೆಯ ರೆಜಿಮೆಂಟಿನ ಸೇನಾನಿಯಾಗಿದ್ದ. ಈ ಯುದ್ಧದಲ್ಲಿ ತೀವ್ರವಾಗಿ ಗಾಯ ಗೊಂಡರೂ ವಿಜಯ ಸಾಧಿಸಿದ. ಇದಕ್ಕೆ ಪ್ರತಿಫಲವೂ ಕಾದಿತ್ತು. ಗಾಫ್‍ಗೆ ಲೆಫ್ಟೆನೆಂಟ್ ಕರ್ನಲ್ ದರ್ಜೆಗೆ ಬಡ್ತಿ ಸಿಕ್ಕಿತು. ಅನಂತರ ವಿಟೋರೀಯದ ಟಾರೀಫಾ ಬಂದರಿನ ರಕ್ಷಣೆಗಾಗಿ ಈತ ನಡೆಸಿದ ಕದನದಲ್ಲಿ ಮತ್ತೆ ಗಾಯಗೊಂಡ. ಧೈರ್ಯ ಸಾಹಸ ಸಂಘಟನೆ ನಿರ್ದೇಶನಗಳಿಗಾಗಿ 1815ರಲ್ಲಿ ಈತನಿಗೆ ನೈಟ್ ಪದವಿ ಲಭ್ಯವಾಯಿತು.

1821–24ರಲ್ಲಿ ದಕ್ಷಿಣ ಐರ್ಲೆಂಡಿನ ರೈತರ ವಿರುದ್ಧ ನಡೆಸಲಾಗುತ್ತಿದ್ದ ಕಾರ್ಯಾಚರಣೆಯಲ್ಲಿ ಗಾಫ್ ನಿರತನಾಗಿದ್ದ. 1830ರಲ್ಲಿ ಈತನಿಗೆ ಮೇಜರ್ ಜನರಲ್ ದರ್ಜೆ ದೊರಕಿತು. ಗಾಫ್ 1837ರಲ್ಲಿ ಮೈಸೂರಿನಲ್ಲಿ ಸೇನಾಧಿಪತಿಯಾದ. 1840ರಲ್ಲಿ ಚೀನದ ವಿರುದ್ಧ ನಡೆಸಿದ ಓಪಿಯಂ ಯುದ್ಧದ ನೇತೃತ್ವ ವಹಿಸಿದ. 1843ರಲ್ಲಿ ಭಾರತದ ದಂಡನಾಯಕನಾಗಿ ನೇಮಕಗೊಂಡು ಆ ವರ್ಷದ ಡಿಸೆಂಬರಿನಲ್ಲಿ ಮರಾಠರ ಸೈನ್ಯವನ್ನೂ 1845–46ರಲ್ಲಿ ಸಿಖ್ ಸೈನ್ಯವನ್ನೂ ಸೋಲಿಸಿದ. ಎರಡನೆಯ ಸಿಖ್ ಯುದ್ಧದಲ್ಲೂ (1848–49) ವಿಜಯ ಬ್ರಿಟಿಷರದಾಯಿತಾದರೂ ಈ ಎರಡು ಯುದ್ಧಗಳಲ್ಲೂ ಬ್ರಿಟಿಷರಿಗೆ ಆದ ನಷ್ಟ ಅಗಾಧ. ಇವನ ನಾಯಕತ್ವದ ಹಲವು ದೋಷಗಳು ಆಗ ಟೀಕೆಗೆ ಒಳಗಾದವು. ಇವನ ಸ್ಥಾನದಲ್ಲಿ ಚಾರ್ಲ್ಸ್ ನೇಪಿಯರನ ನೇಮಕವಾಯಿತು. 1862ರಲ್ಲಿ ಗಾಫ್ ಫೀಲ್ಡ್–ಮಾರ್ಷಲ್ ಆದ. ಈತ ತೀರಿಕೊಂಡದ್ದು 1869ರ ಮಾರ್ಚ್ 2 ರಂದು. (ಎಸ್.ಕೆ.ಎಸ್.)

**ಗಾಬಿ ಚುಕ್ಕೆ – ಕುರುಡು ತಾಣ (ಬ್ಲೈಂಡ್‍ಸ್ಪಾಟ್) :** ಕಣ್ಣಿನ ದೃಷ್ಟಿಪಟಲದಲ್ಲಿ (ರೆಟಿನ) ಅದರ ಕೇಂದ್ರದಿಂದ ಸುಮಾರು ಅರ್ಧ ಮಿಮೀ. ಕೆಳಗಡೆ ಮತ್ತು 3 ಮಿಮೀ. ಒಳಕ್ಕೆ ಇರುವ ಸುಮಾರು 3 ಮಿ.ಮೀ. ವ್ಯಾಸವುಳ್ಳ ಸ್ವಲ್ಪ ಅಂಡಾಕಾರವಾಗಿರುವ ಭಾಗ, ಕುರುಡುತಾಣ–(ಬ್ಲೈಂಡ್‍ಸ್ಪಾಟ್). ಈ ಭಾಗದಲ್ಲಿ ದೃಷ್ಟಿಪಟಲದ ಎಲ್ಲ ಕಡೆಗಳಿಂದಲೂ ನರತಂತುಗಳು ಬಂದು ಕೂಡಿಕೊಂಡು ದೃಕ್ (ಆಪ್ಟಿಕ್) ನರವಾಗುತ್ತದೆ ಮತ್ತು ಇಲ್ಲಿ ಬೆಳಕಿಗೆ ಪ್ರತಿಕ್ರಿಯೆ ತೋರಬಲ್ಲ ಜೀವಾಣುಗಳಾಗಲಿ ನರಕೋಶ ಗಳಾಗಲಿ ಇರುವುದಿಲ್ಲ. ಹೊರ ವಸ್ತುಗಳು ಈ ಸ್ಥಳದಲ್ಲಿ ಬಿಂಬವನ್ನು ಉಂಟುಮಾಡಿದರೆ ಅದು ದೃಷ್ಟಿಪಟಲದಲ್ಲಿ ಯಾವ ಪ್ರತಿಕ್ರಿಯೆಯನ್ನೂ ಉಂಟುಮಾಡುವುದಿಲ್ಲ ಮತ್ತು ಸಹಜವಾಗಿ ಆ ವಸ್ತು ದೃಷ್ಟಿಗೋಚರಕ್ಕೆ ಬರಲಾರದು. ಆದರೆ ಎರಡು ಕಣ್ಣುಗಳ ಕುರುಡುತಾಣಗಳು ಪರಸ್ಪರ ಸಮಾನ ಸ್ಥಳಗಳಲ್ಲಿ ಇಲ್ಲದಿರುವುದರಿಂದ ವಸ್ತು ಇನ್ನೊಂದು ಕಣ್ಣಿನಲ್ಲಿ ಪ್ರತಿಬಿಂಬವನ್ನು ಬೇರೆ ಸ್ಥಳದಲ್ಲಿ ಉಂಟುಮಾಡಿ ಆ ಕಣ್ಣಿನ ಮೂಲಕ ದೃಷ್ಟಿಗೋಚರಕ್ಕೆ ಬರುತ್ತದೆ. ಈ ಕಾರಣದಿಂದ ಸಾಮಾನ್ಯವಾಗಿ ಎರಡು ಕಣ್ಣುಗಳ ಏಕಕಾಲಿಕ ದೃಷ್ಟಿ ಲಾಭವುಳ್ಳವರಲ್ಲಿ ಕುರುಡುತಾಣದಿಂದ ಯಾವ ಅನನುಕೂಲತೆಯೂ ಇರುವುದಿಲ್ಲ. ಕಾರಣಾಂತರದಿಂದ ವ್ಯಕ್ತಿಯಲ್ಲಿ ಒಂದು ಕಣ್ಣಿನಲ್ಲಿ ಮಾತ್ರ ದೃಷ್ಟಿ ಇದ್ದರೆ ಆಗ ವಸ್ತುಗಳು ಒಂದೊಂದು ಸಲ ಕಾಣಿಸಿದೆ ಇರುವ ಸಾಧ್ಯತೆ ಉಂಟು. ಆದರೆ ದೃಷ್ಟಿಸುವಾಗ ಕಣ್ಣು ಯಾವಾಗಲೂ ಸ್ವಲ್ಪ ಚಲಿಸುತ್ತಲೇ ಇರುವುದರಿಂದ ಇದೂ ಗಮನಕ್ಕೆ ಬರುವುದಿಲ್ಲ. (ಎಸ್.ಆರ್.ಆರ್.)

**ಎಡಗಣ್ಣನ್ನು ಮುಚ್ಚಿ ಬಲಗಣ್ಣಿನಿಂದ X ಗುರುತನ್ನೇ ನೋಡುತ್ತ ಪುಸ್ತಕವನ್ನು ದೂರದಿಂದ ಹತ್ತಿರ ನಿಧಾನವಾಗಿ ತರಬೇಕು. ಕಣ್ಣಿನಿಂದ ಸುಮಾರು 15–20 ಸೆಂಮೀ ದೂರದಲ್ಲಿ ಬಲಗಡೆಯ ಕಪ್ಪು ಚುಕ್ಕೆ ಅದೃಶ್ಯವಾಗುತ್ತದೆ.**

**ಗಾಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ :** 1927–. ಕೊಲಂಬಿಯದ ಅರಕಾಟಕಾದಲ್ಲಿ 6ನೆಯ ಮಾರ್ಚ್, 1928ರಲ್ಲಿ ಹುಟ್ಟಿದ ಗಾಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ತಂದೆ ತಾಯಿಯರಿಗಿಂತ ಹೆಚ್ಚಾಗಿ ಹಿಂದೊಮ್ಮೆ ಯುದ್ಧದಲ್ಲಿ ಉದಾರವಾದಿಗಳ ಯೋಧನಾಗಿದ್ದ ಅಜ್ಜ ಮತ್ತು ಅಜ್ಜಿಯರ ಸಹವಾಸದಲ್ಲಿ ಬೆಳೆದ. 1946ರಲ್ಲಿ ಕಾನೂನು ಕಾಲೇಜಿಗೆ ಸೇರಿಕೊಂಡಿದ್ದರೂ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡ. ಮುಂದೆ 1958ರಲ್ಲಿ ಮದುವೆಯಾಗಲಿದ್ದ 13ರ ಹುಡುಗಿಯನ್ನು ಆಗ ಮೆಚ್ಚಿಕೊಂಡಿದ್ದ. ಓದಿನಲ್ಲಿ ಮನಸ್ಸಿರದೆ ಪತ್ರಕರ್ತನಾಗಿ ಕೆಲಸ ಮಾಡುತ್ತಿದ್ದರೂ ಕೊಲಂಬಿಯದಲ್ಲಿ ಜರುಗುತ್ತಿದ್ದ ರಾಜಕೀಯದ ಏರುಪೇರುಗಳಿಗೆ ತೆರೆದುಕೊಂಡು ಕೆಲವು ಕಾಲ ಸೋಷಲಿಸ್ಟರ ಸಂಗ ಹೊಂದಿದ್ದ. ಅವನು ಎಲ್ ಸ್ಪೆಕ್ಟೇಟರ್ ಪತ್ರಿಕೆಗೆ ತನ್ನ ದೇಶಕ್ಕೆ ಸಂಬಂಧಿಸಿದ ಭಾರಿ ನೌಕಾಘಾತದ ಬಗ್ಗೆ ಬರೆದ ಲೇಖನಗಳು ಅವನಿಗೆ ಅಪಾರ ಖ್ಯಾತಿಯನ್ನು ತಂದು ಕೊಟ್ಟಿತು. ಅವನು 1950ರಲ್ಲಿ ಕಾನೂನು ಅಭ್ಯಾಸವನ್ನು ಸಂಪೂರ್ಣವಾಗಿ ತ್ಯಜಿಸಿ ಬರೆವಣಿಗೆಯಲ್ಲಿ ತೊಡಗಿದ. ಅನಂತರ ಇಡೀ ಯುರೋಪಿನಲ್ಲಿ ಅಲೆಮಾರಿಯಾಗಿ ದೇಶದಿಂದ ದೇಶಕ್ಕೆ ತಿರುಗಾಡಿದ. ವಿಲಿಯಂ ಫಾಕ್ನರ್ ಊರೊಂದನ್ನು ಕಲ್ಪಿಸಿಕೊಂಡಂತೆ ಮಕಾಂದೋವನ್ನು ಕಲ್ಪಿಸಿದ. ಕೊಲಂಬಿಯದ ಸ್ಥಳೀಯ ಭಾಷೆಗಳಲ್ಲಿ ಒಂದಾದ ಬಂಟು ಎಂಬ ಭಾಷೆಯಲ್ಲಿ ಮಕಾಂದೋ ಎಂದರೆ ಬಾಳೆ. ಉತ್ತರ ಕೊಲಂಬಿಯದ ಪ್ರಮುಖ ಬೆಳೆಯೂ ಬಾಳೆ ಆಗಿದ್ದು ಅವನ ಕಲ್ಪನೆಗೆ ಬೆಂಬಲವಾಗಿರಬೇಕೆಂದು ಊಹಿಸಲು ಕಾರಣವಿದೆ. ಅದನ್ನು 1955ರಲ್ಲಿ ಪ್ರಕಟವಾದ ತನ್ನ ಕಿರು ಕಾದಂಬರಿ ಲೀಫ್ ಸ್ಟಾರ್ಮ್‍ನಲ್ಲಿ ಮೊದಲು ಬಳಸಿದ. ಆ ಕೃತಿಯ ಮೇಲೆ ಫಾಕ್ನರ್‌ನ ಪ್ರಭಾವ ಗಾಢವಾಗಿದೆಯೆಂದು ಪರಿಗಣಿತವಾದದ್ದರಿಂದ ಆಗಲೇ ಕೆಲವು ಪುಸ್ತಕಗಳು ಪ್ರಕಟವಾಗಿದ್ದರೂ ಕಾಫ್ಕನ ಮೆಟಮಾರ್ಫಸಿಸ್ ಓದಿದ ಮೇಲೆ ಅದು ಅವನಿಗೆ ಅವನ ಅಜ್ಜಿ ತನ್ನ ಅನುಭವಕ್ಕೆ ಸಿಕ್ಕ ಮತ್ತು ಕೇಳಿದ ಕಥೆಗಳನ್ನು ಹೇಳುತ್ತಿದ್ದ ರೀತಿಯಲ್ಲಿ ಇದ್ದಂತೆ ಕಂಡಿತು. ಅದರಿಂದ ಅವನಿಗೆ ಬರೆವಣಿಗೆಯಲ್ಲಿ ನೇರ ಕಥನದ ಮಾರ್ಗ ಮತ್ತು ಸಾಂಪ್ರದಾಯಿಕ ವಸ್ತು ಅನಿವಾರ್ಯವಿಲ್ಲವೆಂದು ಅರಿವಾಯಿತು. ಅಲ್ಲಿಯ ತನಕ ತಾನು ಬರೆದಿದ್ದರಲ್ಲಿ ಅಸಮಾಧಾನಗೊಂಡು ತನಗೆ ಸಹಜವಾದ ಮಾಂತ್ರಿಕ ವಾಸ್ತವತೆ ಎಂದು ಹೆಸರಿಸಲಾಗಿರುವ ಪರಿಕಲ್ಪನೆಯೊಂದಿಗೆ ಬರೆಯತೊಡಗಿದ. ಅಭಿವ್ಯಕ್ತಿಯ ಮಾರ್ಗಕ್ಕೆ



ತನ್ನ ಅಜ್ಜಿ ಹೇಳುತ್ತಿದ್ದ ರೀತಿಯೇ ಅತ್ಯಂತ ಸಮರ್ಪಕವೆಂದು ಭಾವಿಸಿ ಹದಿನೆಂಟು ತಿಂಗಳ ಸಂಪೂರ್ಣ ಏಕಾಗ್ರತೆಯಿಂದ "ನೂರು ವರ್ಷದ ಏಕಾಂತ" (ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್) ಕಾದಂಬರಿಯನ್ನು ಬರೆದ. ಆ ಅವಧಿಯಲ್ಲಿ ಬಡತನದಲ್ಲಿದ್ದ ಅವನ ಸಂಸಾರದ ನಿರ್ವಹಣೆಗೆ ಮನೆಯಲ್ಲಿ ಇದ್ದದ್ದನ್ನೆಲ್ಲ ಮಾರಬೇಕಾಯಿತು. ಅವನಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ.

ಹಸ್ತ ಪ್ರತಿಯಲ್ಲಿಯೇ ಲ್ಯಾಟಿನ್ ಅಮೆರಿಕದ ಪ್ರಖ್ಯಾತ ಬರೆಹಗಾರ ಕಾರ್ಲೋಸ್ ಫ಼ಿಂತೆಸ್‌ನ ಪ್ರಶಂಸೆಗೆ ಒಳಗಾದ ನೂರು ವರ್ಷದ ಏಕಾಂತ 1967ರಲ್ಲಿ ಪ್ರಕಟವಾಯಿತು. 1969ರಿಂದ 1982ರ ನೊಬೆಲ್ ಪ್ರಶಸ್ತಿಯೂ ಸೇರಿದಂತೆ ಅನೇಕ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದೆ ಮತ್ತು ಪ್ರಪಂಚದ ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿದೆ.

ನೂರು ವರ್ಷದ ಏಕಾಂತ ಬ್ಯುಂಡಿಯಾ ವಂಶದ ಮೂರು ತಲೆಮಾರುಗಳ ಕಥಾ ಹಂದರದಲ್ಲಿ ಮಾಂತ್ರಿಕ ವಾಸ್ತವತೆ ಎಂದು ಕರೆಯಲಾದ ಪರಿಕಲ್ಪನೆಯಲ್ಲಿ ನಿರೂಪಿತವಾದ ಮಾನವ ಸಂಸ್ಕೃತಿಯ ದಾಖಲೆ ಎಂದು ವ್ಯಾಖ್ಯಾನಿಸಲಾಗಿದೆ. 19ನೆಯ ಶತಮಾನದಲ್ಲೇ ಸ್ವಾತಂತ್ರ್ಯ ಗಳಿಸಿದರೂ ರಾಜಕೀಯ ಏರಿಳಿತಕ್ಕೆ ಒಳಗಾದ ಕೊಲಂಬಿಯದ ಸ್ಥಿತಿಯ ಪ್ರತಿಫಲನ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ವಿವಿಧ ರಾಜಕೀಯ ಸಿದ್ಧಾಂತಗಳಿಗೆ ಒಪ್ಪುವ ಅಂಶಗಳು ಇದರಲ್ಲಿ ದೊರಕುತ್ತದೆ. ಇಡೀ ಕಾದಂಬರಿ ಮಕಾಂದೋವನ್ನು ಹುಟ್ಟು ಹಾಕುವ ಬ್ಯುಂಡಿಯಾ ಮನೆತನ ಊರಿನೊಂದಿಗೆ ಅಭಿವೃದ್ಧಿ ಹೊಂದಿ ಕ್ರಮೇಣ ಸಂಪೂರ್ಣವಾಗಿ ನಾಶವಾಗುವ ದುರಂತವನ್ನು ತೆರೆದಿಡುತ್ತದೆ. ಹೀಗೆ ಮಾಡುವ ಪ್ರಕ್ರಿಯೆಯಲ್ಲಿ ಪಾತ್ರಗಳ ಮಾನಸಿಕ ನೆಲೆಯಲ್ಲಿ ಸ್ಥಿರ ಗೊಂಡಿರುವ ಮಾಂತ್ರಿಕ ಅಂಶಗಳನ್ನು ವಾಸ್ತವತೆಯೊಂದಿಗೆ ಹೊಂದಿಸಿ ಮಾನವನ ಮೂಲ ಪ್ರವೃತ್ತಿಗಳ ಅನಾವರಣವಾಗುತ್ತದೆ. ಇಡೀ ಕಾದಂಬರಿಯಲ್ಲಿ ಹಸಿವು, ಕಾಮ, ಪ್ರೇಮ, ಮಾತ್ಸರ್ಯ, ಸಾಹಸ ಇತ್ಯಾದಿಗಳ ಜೊತೆ ರಸವಾದ, ಸುಳ್ಳು, ಸೂಳೆಗಾರಿಕೆ, ಹಾದರ, ಅತೀಂದ್ರಿಯ ಶಕ್ತಿ, ಮೂಢನಂಬಿಕೆ, ದೆವ್ವಗಳು, ದಂತ ಕಥೆ ಮುಂತಾದವುಗಳೂ ಇವೆ.

ಪುರಾಣಗಳಲ್ಲಿ, ಮಹಾ ಕಾವ್ಯಗಳಲ್ಲಿ ಹಾಗೂ ಜಾನಪದ ಕಥೆಗಳಲ್ಲಿರುವ ಅದ್ಭುತ ರಮ್ಯದ ಬಳಕೆಯನ್ನು ಎಂದಿನಿಂದಲೂ ಸ್ವೀಕರಿಸಿರುವ ಭಾರತೀಯರಿಗೆ ಮಾಂತ್ರಿಕ ವಾಸ್ತವತೆಯನ್ನು ಅದರ ನಿಜವಾದ ನೆಲೆಯಲ್ಲಿ ಸ್ವೀಕರಿಸುವುದಲ್ಲದೆ, ಅರ್ಥೈಸಿಕೊಳ್ಳುವುದು ಮತ್ತು ಅಭಿವ್ಯಕ್ತಿಗೊಳಿಸುವುದು ಅವರ ಮನೋಭೂಮಿಕೆಗೆ ಸಹಜವಾದದ್ದು ಎಂದು ಭಾವಿಸಲಾಗಿದೆ.

ಗ್ಯಾಬ್ರಿಯಲ್ ಗಾರ್ಸಿಯಾ ಮಾರ್ಕೆಜ್‌ನ ಹಸ್ತ ಪ್ರತಿಗೆ ಅಪಚಾರವಾಗದ ರೀತಿಯಲ್ಲಿ 1966ರಲ್ಲಿ ಪ್ರಕಟವಾದ ಇನ್ ಇವಿಲ್ ಅವರ್ ಕೃತಿಯಲ್ಲಿ ಅವನ ದೇಶದಲ್ಲಿ ನಡೆದ ಕ್ರೌರ್ಯ ಮತ್ತು ಹಿಂಸೆಯ ತಾಂಡವ ನೃತ್ಯವನ್ನು ಚಿತ್ರಿಸಿದ್ದಾನೆ. ಆ ಕೃತಿಗೆ ಅವನಿಗೆ ಕೊಲಂಬಿಯದ ಸಾಹಿತ್ಯ ಪ್ರಶಸ್ತಿ ದೊರಕಿತು. ಅವನ ತಂದೆಯ ಪ್ರೇಮ ಪ್ರಕರಣವನ್ನು ಆಧರಿಸಿದ್ದೆಂದು ಪರಿಗಣಿತವಾಗಿರುವ ಲವ್ ಇನ್ ದ ಟೈಮ್ ಆಫ್ ಕಾಲರ ಎಂಬ ಕಾದಂಬರಿ 1983ರಲ್ಲಿ ಪ್ರಕಟವಾಗಿ ಹೆಚ್ಚಿನ ಮನ್ನಣೆ ಪಡೆಯಿತು. 1999ರಿಂದ ಕ್ಯಾನ್ಸರ್‌ಗೆ ಒಳಗಾಗಿರುವ ಮಾರ್ಕೆಜ್‌ನ ಇತರ ಪ್ರಮುಖ ಕೃತಿಗಳೆಂದರೆ ಆಟಮ್ ಆಫ್ ದ ಪೇಟ್ರಿಯಾರ್ಕ್ [1975], 1996ರಲ್ಲಿ ಪ್ರಕಟವಾದ ನ್ಯೂಸ್ ಆಫ್ ಕಿಡ್‌ನ್ಯಾಪಿಂಗ್, "ಲವ್ ಅಂಡ್ ಅದರ್ ಡೆಮನ್ಸ್ [1994] ಮತ್ತು ಕಥಾ ಸಂಕಲನಗಳಾದ ಇನ್ನೊಸೆಂಟ್ ಎರಿಂಡಾ ಅಂಡ್ ಅದರ್ ಸ್ಟೋರೀಸ್ ಹಾಗೂ ಸ್ಟ್ರೇಂಜ್ ಪಿಲಿಗ್ರಿಮ್ಸ್ [1992]. ಆತ್ಮ ಕಥನದ ಮೊದಲ ಭಾಗವಾದ ಲಿವಿಂಗ್ ಟು ಟೆಲ್ ದ ಟೇಲ್ ಮತ್ತು ಎರಡನೆಯ ಭಾಗವಾದ ಮೆಮೊರೀಸ್ ಆಫ್ ಮೈ ಮೆಲಾಂಖಲಿ ವೋರ್ಸ್ [2004] ಎಂಬ ಕೃತಿ ಪ್ರಕಟವಾಗಿದೆ. ಇವನು 1999ರಲ್ಲಿ ಕೊಲಂಬಿಯದ "ಕಾಂಬಿಯೋ" ಪತ್ರಿಕೆಯನ್ನು ಖರೀದಿಸಿ ಅದಕ್ಕೊಂದು ಹೊಸ ರೂಪ ಕೊಟ್ಟಿದ್ದಾನೆ. (ಟಿ.ಆರ್.ಎ.)

**ಗಾಬ್ರಿಯೇಲ್ ದಾನೂನ್ ಟ್ಸ್ಯೊ :** 1863–1938. ಹತ್ತೊಂಬತ್ತನೆಯ ಶತಮಾನದ ಇಟಲಿಯ ಸಾಹಿತ್ಯದ ಮೇಲೆ ಅತ್ಯಂತ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದ ಕವಿ, ನಾಟಕಕಾರ, ಕಥೆಗಾರ, ಹಾಗೂ ಸಾಹಸಿ. ಏಡ್ರಿಯಾಟಿಕ್ ಕಡಲುತೀರದ ಅಬ್ರೂಸಿ ಪ್ರಾಂತದ ಪೆಸ್ಕಾರಾದಲ್ಲಿ ಹುಟ್ಟಿ 1881ರಿಂದ 1915ರವರೆಗೆ ರೋಮ್, ನೇಪಲ್ಸ್, ಅಬ್ರೂಸಿಗಳಲ್ಲಿ ತಿರುಗುತ್ತ ಅಸಾಧಾರಣ ಪ್ರತಿಭೆಯನ್ನು ಈತ, ತನ್ನ ವಿವಿಧ ಕೃತಿಗಳಲ್ಲಿ ಪ್ರದರ್ಶಿಸಿದ.

ಕ್ಯಾಂಟೋನೋ (ನ್ಯೂ ಸಾಂಗ್) ಎಂಬ ಕೃತಿ ಇವನಿಗೆ ಅಪಾರ ಕೀರ್ತಿಯನು ಗಳಿಸಿಕೊಟ್ಟಿತು. ಆಮೇಲೆ ಪ್ರಕಟಿಸಿದ ಇಂಟರ್‌ಮೆಸ್ಸೊ ಡಿ ರೈಂ ಮುಂತಾದ ಕಾವ್ಯಗಳಲ್ಲಿ ಇವನ ಕಾವ್ಯಭಾಷೆ ಹುಚ್ಚು ಹೊಳೆಯಂತೆ ಹರಿದು ಇಳಿಗತಿಯತ್ತ ಸಾಗುವುದನ್ನು ಗಮನಿಸಬಹುದು. ಓಡಿ ನವಲಿ ಎಂಬ ಕೃತಿಯಲ್ಲಿ ಕಡಲು ಹಾಗೂ ನೌಕಾ ಜೀವನಗಳ ವರ್ಣನೆಯಿದೆ. ಇಟಲಿ ತನ್ನ ನೌಕಾಪಡೆಯನ್ನು ಬಲಪಡಿಸಿಕೊಳ್ಳಬೇಕೆಂದು ಸಾರುವ ಪ್ರಚಾರ ಗೀತೆಗಳೂ ಇದರಲ್ಲಿ ಸೇರಿವೆ. 1893–1900ರ ಸುಮಾರಿನಲ್ಲಿ ಈತ ಆಕಾಶ, ಸಮುದ್ರ, ಭೂಮಿ ಮತ್ತು ವೀರರನ್ನು ಕುರಿತ ಪ್ರಸಂಸೆ ಎಂಬ ನೀಳ್ಗವನವನ್ನು ಬರೆದ. ಇದರಲ್ಲಿ ಜೀವನ ಕಲೆ ಕಾವ್ಯ ಮತ್ತು ಪುರಾಣ ಕಥೆಗಳಲ್ಲಿನ ರಸನಿಮಿಷಗಳನ್ನು ವರ್ಣಿಸಲಾಗಿದೆ. ಆದರೆ ಈ ವರ್ಣನೆಗಳು ಸ್ವಾರ್ಥಿ, ಸ್ವೇಚ್ಛಾಚಾರಿ ವ್ಯಕ್ತಿಯೊಬ್ಬನ ಮನೋವಿಕಾರಗಳ ರಾಶಿಗಳಂತೆ ಕಾಣುತ್ತವೆ.

ಅನಂತರ ಪೆಸ್ಕಾರಾದ ಕಥೆಗಳು ಎಂಬ ಕಥಾಸಂಗ್ರಹ ಹೊರಬಂತು (1882). ಇದರಲ್ಲಿ ತನ್ನ ಊರಾದ ಅಬ್ರೂಸಿ ಪ್ರಾಂತದ ರೈತರ ವಾಸ್ತವಿಕ ಜೀವನವನ್ನು ಕವಿ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಆದರೆ ಈ ಚಿತ್ರಣ ಯಾವ ವ್ಯಕ್ತಿತ್ವವೂ ಇಲ್ಲದೆ ಸ್ವಾರಸ್ಯರಹಿತವಾಗಿದೆ. ಅಂತಃಕರಣವನ್ನು ಅರಳಿಸಿ ಅನುಕಂಪೆಯನ್ನು ಪ್ರಚೋದಿಸುವ, ಜೀವನದ ಯಾವ ಮೌಲ್ಯವನ್ನೂ ಇಲ್ಲಿ ನಾವು ಕಾಣಲಾರೆವು. 1889ರಲ್ಲಿ ಈತ ಇಲ್ ಪಿಯಾಸೆರೊ (ಭೋಗಗಳು) ಫಾರ್ಸೆ ಚಿ ಸಿ, ಪಾರ್ಸೆ ಚಿ ನೊ (ಇದ್ದರೂ ಇರಬಹುದು, ಇಲ್ಲದಿರಬಹುದು) ಮುಂತಾದ ಏಳು ಕಾದಂಬರಿಗಳನ್ನು ಬರೆದ. ನೀಚೆಯ ತತ್ತ್ವಗಳಿಂದ ಪ್ರಭಾವಿತನಾಗಿ ಈತ ಟ್ರಿಯಾನ್ಫೊ ಡೆಲ ಮಾರ್ಟೆ ಎಂಬ ಸತ್ತ್ವಶಾಲಿ ಕಾದಂಬರಿಯನ್ನು ಬರೆದ. ಮನಃಕ್ಲೇಶ, ಸ್ವಾರ್ಥ, ನಿಷ್ಕಾರುಣ್ಯ, ಕ್ರೌರ್ಯ, ಭ್ರಷ್ಟಾಚಾರ, ವಿಷಯಲೋಲುಪ್ತಿ– ಇಂಥ ಮಾನವ ವಿಕಾರಗಳನ್ನು ವರ್ಣಿಸುವುದರಲ್ಲಿ ಈತನಿಗೆ ಆಸಕ್ತಿ ಹೆಚ್ಚು. ಈ ಎಲ್ಲ ಕಾದಂಬರಿಗಳಲ್ಲಿನ ಪಾತ್ರಗಳು–ನಿರುತ್ಸಾಹಿಗಳು, ಧರ್ಮಬಾಹಿರರು. ಉಲ್ಲಾಸವನ್ನರಿಯದ ಅಂಧ ಜೀವಿಗಳು.

1898ರಲ್ಲಿ ಇವನಿಗೆ ನಾಟಕದಲ್ಲಿ ಅಭಿರುಚಿ ಹುಟ್ಟಿ, ಸಿಟ್ಟ ಮಾರ್ಟ (ಮೃತನಗರ) ಎಂಬ ನಾಟಕ ಬರೆದ. ಆಮೇಲೆ ವರ್ಷಕ್ಕೊಂದರಂತೆ ಇಟಾಲಿಯನ್ ಅಥವಾ ಫ್ರೆಂಚ್‌ನಲ್ಲಿ ಹಲವು ನಾಟಕಗಳನ್ನು ಪ್ರಕಟಿಸಿದ. ಲ ಫಿಗ್ಲಿಯ ಡಿ ಲಾರಿಯೊ ಎಂಬ ನಾಟಕ ಹಿರಿಯಸ್ಥಾನ ಗಳಿಸಿತು.

ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ ಇಟಲಿ ಮಿತ್ರರಾಷ್ಟ್ರಗಳೊಡನೆ ಸೇರಬೇಕೆಂದು ಈತ ಪದೇ ಪದೇ ಒತ್ತಾಯಮಾಡಿ ಪ್ರಚಾರಲೇಖನಗಳನ್ನು ಬರೆದ. ಯುದ್ಧಕ್ಕೆ ತನ್ನ ದೇಶವೂ ಕಾಲಿಟ್ಟಾಗ ನೌಕಾ ಇಲಾಖೆಯಲ್ಲಿ ಲೆಫ್ಟಿನೆಂಟ್ ಆಗಿ ಕೆಲಸಮಾಡಿದ. ಏಡ್ರಿಯಾಟಿಕ್ ತೀರದ ವಿಮಾನ, ಕಡಲು, ಭೂ ಸೈನ್ಯಗಳ ಕಾರ್ಯಾಚರಣೆಯ ನಾನಾ ರಂಗಗಳಲ್ಲಿ ಕಾದಾಡಿ ಶತ್ರು ಶಿಬಿರಗಳ ಜೊತೆ ಹೋರಾಡಿ, ತನ್ನ ಅಸಾಧಾರಣ ಶೌರ್ಯವನ್ನು ಪ್ರದರ್ಶಿಸಿದ. 1910ರಲ್ಲಿ ಫ್ಯೂಮೆ ಪಟ್ಟಣ ಇಟಲಿಗೆ ದಕ್ಕಲಾರದೆಂದು ಖಚಿತವಾದಾಗ ಮೇಲಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಿ ಸುಮಾರು 300 ಜನ ಅನುಯಾಯಿಗಳೊಡನೆ ಮುನ್ನುಗ್ಗಿ ಆ ಪಟ್ಟಣವನ್ನು ಹಿಡಿದು ಎರಡು ವರ್ಷಗಳ ಕಾಲ ಅಲ್ಲಿ ಸರ್ವಾಧಿಕಾರಿಯಾಗಿ ಅಧಿಕಾರ ನಡೆಸಿದ. ಆಗ ಈತ ತನ್ನ ಉಜ್ವಲಶೈಲಿಯಲ್ಲಿ ಹಲವಾರು ಭಾಷಣಗಳನ್ನು ಮಾಡಿದ. ಯುದ್ಧಕ್ಕೆ ಸಂಬಂಧಿಸಿದ ಮತ್ತು ರಾಜಕೀಯ ವಿಷಯಗಳನ್ನು ಕುರಿತ ಕಥೆ, ಕವನ, ಪ್ರಚಾರ ಲೇಖನಗಳನ್ನೂ ಬರೆದು ನಿರಂಕುಶ ಪ್ರಭುತ್ವದ ತತ್ತ್ವವನ್ನು ಸಾರಿದ. 1921ರಲ್ಲಿ ಇಟಲಿಯ ಸೈನ್ಯ ಫ್ಯೂಮೆ ಪಟ್ಟಣವನ್ನು ಮುತ್ತಲು ಬಂದಾಗ ಈತ ಅಧಿಕಾರವನ್ನು ತ್ಯಜಿಸಿ, ನಿವೃತ್ತನಾದ. ಗರ್ದ ಸರೋವರ ತೀರದ ಭವ್ಯ ಸೌಧವೊಂದರಲ್ಲಿ ವಾಸಿಸುತ್ತಿದ್ದು 1938ರಲ್ಲಿ ಕಾಲವಾದ.

ಕೇವಲ ಬುದ್ಧಿ ಪ್ರಧಾನವಾಗಿದ್ದು, ಶುಷ್ಕ ಪಾಂಡಿತ್ಯದ ಅಸಹಜತೆಯಿಂದ ಕೂಡಿದ ಅಂದಿನ ಇಟಲಿಯ ಕಾವ್ಯ ಶೈಲಿಯನ್ನು ಬದಲಾಯಿಸಿ ಈತ ಭಾವ ಪ್ರಧಾನವಾಗುವಂತೆ ಮಾಡಿದ. ಅದು ಮಾನವ ವಿಕಾರಗಳನ್ನೂ ಸಂವೇದನೆಗಳನ್ನೂ ರಾಗೋದ್ವೇಗಗಳನ್ನೂ ಅಭಿವ್ಯಕ್ತಗೊಳಿಸುವಂತೆ ಮಾಡಿ ಇಟಾಲಿಯನ್ ಭಾಷೆಯ ಸಂಪತ್ತನ್ನು ಹೆಚ್ಚಿಸಿದ.

(ಎಚ್.ಕೆ.ಆರ್.)

**ಗಾಮ :** 1888–1953. ಭಾರತಕ್ಕೆ 1910ರಲ್ಲಿ ವಿಶ್ವಕುಸ್ತಿ ಪ್ರಶಸ್ತಿಯನ್ನು ದೊರಕಿಸಿದ ಪ್ರಸಿದ್ಧ ಕುಸ್ತಿಪಟು. ಈತ ಹುಟ್ಟಿದ್ದು ಪಂಜಾಬಿನ ಅಮೃತಸರದಲ್ಲಿ. ಇವನ ನಿಜವಾದ ಹೆಸರು ಗುಲಾಮ್ ಮೊಹಮದ್. ಎಳೆಯ ವಯಸ್ಸಿನಿಂದಲೂ ಕುಸ್ತಿ ಮಾಡುವುದೆಂದರೆ ಇವನಿಗೆ ತುಂಬಾ ಆಸಕ್ತಿ. ಇದಕ್ಕೆ ತಕ್ಕಂತೆ ಮನೆಯವರಿಂದಲೂ ಇವನಿಗೆ ಪ್ರೋತ್ಸಾಹ. ಇವನ ತಂದೆ ಅಜೀಜ್ ಪೈಲ್ವಾನನಾಗಿದ್ದ. ಸೋದರ ಇಮ್ರಾನ್ ಕೂಡ ಕುಸ್ತಿ ಪಟುವಾಗಿದ್ದ. ಹೀಗಾಗಿ ಕುಸ್ತಿಪಟುವೆಂದು ಹೆಸರು ಗಳಿಸಿದ. ಭಾರತದಲ್ಲಿ ಬಹುಬೇಗ ಪ್ರಸಿದ್ಧನಾದ. ಇವನಿಗಿದ್ದ ಶಕ್ತಿಯಂತೂ ಹೇಳಲಸದಳ. ಈತ ಬಾದಾಮಿಕಾಯಿಯನ್ನು ಬೆರಳಿನಿಂದ ಹೊಸಕಿ ಸಿಪ್ಪೆ ತೆಗೆದು ತಿನ್ನುತ್ತಿದ್ದನಂತೆ. ಕಬ್ಬಿಣದ ದಪ್ಪ ದಪ್ಪ ಮೊಳೆಗಳನ್ನು ಅಂಗ್ಯೆ ಹಾಗೂ ಮಧ್ಯದ ಬೆರಳು ಎರಡಕ್ಕೂ ಸಿಕ್ಕಿಸಿಕೊಂಡು ಬಗ್ಗಿಸುತ್ತಿದ್ದನಂತೆ. ವ್ಯಾಯಾಮ ಮಾಡುವಾಗ ದಮ್ಮು ಕಟ್ಟಿ ನಿಂತು ತನ್ನ ಶರೀರದ ಭುಜ, ಎದೆ, ಬೆನ್ನು, ತೋಳುಗಳಿಗೆ ನಾಲ್ಕಾರು ಜನ ಪೈಲ್ವಾನರುಗಳಿಂದ ಡಂಬಲ್ಸ್‌ಗಳಿಂದ ಏಟು ಹಾಕಿಸಿಕೊಳ್ಳುತ್ತಿದ್ದುದೂ, ವ್ಯಾಯಾಮ ಮುಗಿದ ಮೇಲೆ ಧಾರಾಳವಾಗಿ ಹಾಲು ಸೇವಿಸುತ್ತಿದ್ದ.

ಭಾರತದಲ್ಲಿ ಕೀರ್ತಿಗಳಿಸಿದ್ದ ಈತ ಅಂತಾರಾಷ್ಟ್ರೀಯ ಕುಸ್ತಿಯಲ್ಲಿ ಭಾಗವಹಿಸಿ ಭಾರತಕ್ಕೆ ಕೀರ್ತಿ ತಂದೇ ತರುತ್ತಾನೆ ಎಂಬ ಅಚಲ ವಿಶ್ವಾಸ ಬಂಗಾಲದ ದೊಡ್ಡ ಶ್ರೀಮಂತ ಸರತ್‌ಕುಮಾರ್ ಮಿತ್ರನಿಗೆ ಇತ್ತು. 1910ರಲ್ಲಿ ಲಂಡನ್ನಿನಲ್ಲಿ ಜಾನ್ ಬುಲ್ ವಿಶ್ವಕುಸ್ತಿ ಚಾಂಪಿಯನ್‌ಷಿಪ್ ಸ್ಪರ್ಧೆ ನಡೆಯುವುದಿತ್ತು. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸರತ್‌ಕುಮಾರ್‌ಮಿತ್ರ ಅವರು ಗಾಮ ಮತ್ತು ಇಮಾಂ ಭಕ್ಷ್ ಇವರಿಬ್ಬರ ಖರ್ಚಿನ

ಹೊಣೆಯನ್ನು ತಾವೇ ಪೂರ್ಣ ವಹಿಸಿಕೊಂಡು ಲಂಡನ್ನಿಗೆ ಕರೆದೊಯ್ದರು. ಲಂಡನ್ನಿನಲ್ಲಿ ವಿಶ್ವಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಅತ್ಯಂತ ಉತ್ಸಾಹದಿಂದ ಹೋದ ಗಾಮನಿಗೆ ಆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ದೊರೆಯಲಿಲ್ಲ. ಇದಕ್ಕೆ ಕಾರಣ ಗಾಮ 5' 7" ಮಾತ್ರ ಎತ್ತರವಿದ್ದು ತೂಕದಲ್ಲಿ 250 ಪೌಂಡು ಇದ್ದುದು. ಇವನು ಇತರ ಖ್ಯಾತ ಪೈಲ್ವಾನರ ಜೊತೆ ಸೆಣಸಾಡಲಾರನೆಂಬುದೇ ಅವರು ಕೈಗೊಂಡ ತೀರ್ಮಾನ. ಇದರಿಂದಾಗಿ ಇವನಿಗೆ ಅವಮಾನವಾದಂತಾಯಿತು. ಅಸಾಧಾರಣ ಕೋಪದಿಂದ ಸ್ಪರ್ಧೆ ನಡೆಯಲಿದ್ದ ಕ್ರೀಡಾಂಗಣದಲ್ಲಿ ನಿಂತು ಇಡೀ ಇಂಗ್ಲೆಂಡಿನಲ್ಲಿ ಯಾರೇ ಆದರೂ ಸರಿ ತನ್ನನ್ನು ಗೆಲ್ಲುವುದಿರಲಿ ತನ್ನ ಜೊತೆ 5 ನಿಮಿಷಗಳ ಕಾಲ ನಿಂತು ಹೋರಾಡಿದರೆ ಅವರಿಗೆ ತಾನೇ 15 ಪೌಂಡುಗಳನ್ನು ಬಹುಮಾನವಾಗಿ ಕೊಡುವುದಾಗಿ ಸವಾಲು ಹಾಕಿದ. ಇವನ ಸವಾಲನ್ನು ಇಂಗ್ಲೆಂಡಿನ ಪೈಲ್ವಾನರು ಎದುರಿಸಲೇಬೇಕಾಯಿತು. ಮೊದಲ ದಿನ ಇವನ ಜೊತೆ ಹೋರಾಡಲು ಬಂದ ಮೂರು ಜನ ಪೈಲ್ವಾನರನ್ನು 2 ನಿಮಿಷದೊಳಗೆ ಸೋಲಿಸಿದ. ಎರಡನೆಯ ದಿನ ತನ್ನ ಜೊತೆ ಕುಸ್ತಿ ಮಾಡಲು ಬಂದ 12 ಜನ ಪೈಲ್ವಾನರುಗಳಿಗೂ ಅದೇ ಗತಿ ಕಾಣಿಸಿ, ಪ್ರೇಕ್ಷಕರಿಗೆ ದಿಗ್ಭ್ರಮೆ ಹಿಡಿಸಿದ.

ಇದಾದ ಅನಂತರ ವಿಶ್ವಕುಸ್ತಿ ಸ್ಪರ್ಧೆಯ ವ್ಯವಸ್ಥಾಪಕರು ಇವನಿಗೆ ವಿಶ್ವಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲೇಬೇಕಾಯಿತು. 1910ರ ಸೆಪ್ಟೆಂಬರ್ 10 ರಂದು ಈತ ಖ್ಯಾತಿವೆತ್ತ ಅಮೆರಿಕದ ಕುಸ್ತಿಪಟು ಇ. ರೋಲರ್‌ನನ್ನು ಎದುರಿಸಬೇಕಾಯಿತು. ರೋಲರ್‌ನನ್ನು 15 ನಿಮಿಷಗಳಲ್ಲಿ 12 ಸಾರಿ ಕೆಡವಿ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡಿದ. ಅನಂತರ ವಿಶ್ವಚಾಂಪಿಯನ್ ಎನಿಸಿಕೊಂಡಿದ್ದ ಆಸ್ಟ್ರೇಲಿಯದ ಜಿಬಿಸ್ಕೊನನ್ನು ಎದುರಿಸಿದ. ದಿಗ್ಗಜಗಳಂತೆ ಇಬ್ಬರೂ ಹೋರಾಡಿದರು. ಸತತವಾಗಿ ಮೂರು ಗಂಟೆಗಳ ಕಾಲ ನಡೆದ ಈ ಪಂದ್ಯದಲ್ಲಿ ಈತ ಜಿಬಿಸ್ಕೊನನ್ನು ಹಲವಾರು ಬಾರಿ ಸೋಲಿಸಿದ್ದ. ಕುಸ್ತಿಪಂದ್ಯದ ನೀತಿನಿಯಮಗಳನ್ನು ರೆಫರಿಗಳು ಸರಿಯಾಗಿ ಪಾಲಿಸದೆ ಪಕ್ಷಪಾತ ತೋರಿಸಿದರಂತೆ. ಪಂದ್ಯ ಅಂತ್ಯವಾಗಲಿಲ್ಲವೆಂದು ಹೇಳಿ ಮಾರನೆಯ ದಿವಸಕ್ಕೆ ಪಂದ್ಯವನ್ನು ಮುಂದೂಡಲಾಯಿತು. ಮಾರನೆಯ ದಿನ ಗಾಮ ಅತ್ಯಂತ ಉತ್ಸಾಹದಿಂದ ಕುಸ್ತಿಯ ಕಣಕ್ಕೆ ಹಾಜರಾದ. ಆದರೆ, ಹಿಂದಿನ ದಿವಸ ಗಾಮನಿಂದ ಮೈಮೂಳೆ ಮುರಿಸಿಕೊಂಡಿದ್ದ ಜಿಬಿಸ್ಕೊ ಹಾಸಿಗೆಯಿಂದ ಏಳುವುದು ಸಾಧ್ಯವಾಗದೆ ಸ್ಪರ್ಧೆಗೆ ಗೈರುಹಾಜರಾದ. ಅಂದೇ ಈತ ವಿಶ್ವಕುಸ್ತಿ ಪ್ರಶಸ್ತಿಯನ್ನು ಗೆದ್ದುಕೊಂಡು ವಿಶ್ವ ಚಾಂಪಿಯನ್ ಬಿರುದಿನೊಡನೆ ಭಾರತದ ಕೀರ್ತಿಪತಾಕೆಯನ್ನು ಎತ್ತಿಹಿಡಿದ. ಕೆಲವು ತಿಂಗಳ ಅನಂತರ ಈತ ಜಿಬಿಸ್ಕೊನನ್ನು ಪಾಟಿಯಾಲದಲ್ಲೂ ಎದುರಿಸಿದ. ಜಿಬಿಸ್ಕೊಗೆ ಇವನ ಜೊತೆ ಮತ್ತೆ ಕುಸ್ತಿ ಮಾಡುವುದು ಇಷ್ಟವಿರಲಿಲ್ಲ. ಆದರೆ ಅವನ ದೇಶದ ಜನ ವಿಶ್ವ ಚಾಂಪಿಯನ್‌ಷಿಪ್ ಬಿರುದನ್ನು ಮತ್ತೆ ಪಡೆಯುವಂತೆ ಜಿಬಿಸ್ಕೊನನ್ನು ಪ್ರೇರೇಪಿಸಿದರು. ಆದರೆ ಈ ಸಾರಿ ಗಾಮ ಕೇವಲ ಎರಡು ಸೆಕೆಂಡುಗಳಲ್ಲಿ ಜಿಬಿಸ್ಕೊನನ್ನು ಸೋಲಿಸಿ ಇಡೀ ವಿಶ್ವದಲ್ಲಿ ಅಜೇಯನೆನಿಸಿಕೊಂಡ. ಆರಂಭಿಕ ಪಂದ್ಯಗಳು ಸಮವಾದರೂ ಸು. 5,000 ಪಂದ್ಯಗಳಲ್ಲಿ ಈತ ಅಜೇಯನಾಗಿದ್ದ.

1919ರಲ್ಲಿ ಜಲಿಯನ್‌ವಾಲಾ ಪ್ರಕರಣದ ಸಂದರ್ಭದಲ್ಲಿ ಬಂಧಿಸಲ್ಪಟ್ಟವರಲ್ಲಿ ಇವನೂ ಒಬ್ಬ. ಕಾರಾಗೃಹ ವಾಸದ ಅವಧಿಯಲ್ಲಿ ಇವನೊಂದಿಗೆ ಜೈಲಿನ ಸಿಬ್ಬಂದಿ ಸಾಧಾರಣ ವ್ಯಕ್ತಿಯೊಂದಿಗೆ ವ್ಯವಹರಿಸುವಂತೆಯೇ ವ್ಯವಹರಿಸಿತು. ಆದ್ದರಿಂದ ಇವನ ಬಾಳಿನ ನಿಯಮಬದ್ಧತೆಗೆ ಭಂಗ ಬಂತು. ಕಸರತ್ ಹಾಗೂ ಮಾಲಿಗಳ ಅಭಾವದಿಂದ ಇವನಿಗೆ ಸಾಧಾರಣ ಜ್ವರ ಕಾಣಿಸಿಕೊಂಡಿತು. ಮೈಕೈಯಲ್ಲಿ ನೋವು ಕಾಣಿಸಿತು. ಇನ್ನು ಆಹಾರದ ವಿಷಯವಂತೂ ಹೇಳುವ ಹಾಗೇ ಇರಲಿಲ್ಲ. ಈ ಸಂದರ್ಭದ ದುರುಪಯೋಗ ಪಡೆಯಲು ಅಧಿಕಾರಿಗಳು ಎಷ್ಟೇ ಆಸೆ ತೋರಿಸಿದರೂ ಈತ ಅದಾವುದಕ್ಕೂ ಬಗ್ಗಲಿಲ್ಲ. ತನ್ನ ಇತರ ರಾಜಕೀಯ ಚಳವಳಿಗಾರರ ವಿಷಯ ಹೇಳಲಿಲ್ಲ. ಬೇಸತ್ತ ಅಧಿಕಾರಿಗಳು ಕೊನೆಗೆ ಇವನನ್ನು ಬಿಡುಗಡೆಗೊಳಿಸಬೇಕಾಯಿತು.

ಈತ ತನ್ನ ಬದುಕಿನ ಕೊನೆಯ ದಿನಗಳಲ್ಲಿ ಪಡಬಾರದ ಕಷ್ಟಗಳನ್ನು ಎದುರಿಸಬೇಕಾಯಿತು. ಭಾರತ ಸರ್ಕಾರದಿಂದ ಯಾವ ಪುರಸ್ಕಾರವೂ ಇವನಿಗೆ ಸಿಗಲಿಲ್ಲ. ಅನ್ನ ಆಹಾರಗಳಿಲ್ಲದೆ ಸಾಯುವ ದುರ್ಗತಿ ಬಂತು. ಇವನಿಗೆ ಒದಗಿದ ಈ ದುರ್ಗತಿಯನ್ನು ಕಂಡು ಪಾಕಿಸ್ತಾನದ ಸರ್ಕಾರ ಧನಸಹಾಯ ಮಾಡುವುದಾಗಿ ಭರವಸೆಯಿತ್ತು ಗಾಮನನ್ನು ತನ್ನಲ್ಲಿಗೆ ಕರೆಸಿಕೊಂಡಿತು. ಕೊನೆ ಕೊನೆಯ ದಿನಗಳಲ್ಲಿ ತನ್ನ ಮೂಗಿನ ಮೇಲೆ ಕುಳಿತ ನೊಣವನ್ನು ಕೂಡ ಕೈಯಿಂದ ಹೊಡೆದು ಓಡಿಸಲಾಗದಷ್ಟು ನಿಶ್ಶಕ್ತನಾಗಿದ್ದ ಸ್ಥಿತಿಯಲ್ಲಿ ಈತ ಪಾಕಿಸ್ತಾನದಲ್ಲಿ 1953ರಲ್ಲಿ ನಿಧನನಾದ.

(ಎಚ್.ಕೆ.ಎನ್.)

**ಗಾಮ, ವಾಸ್ಕೋ ಡ :** ಸು. 1460-1524. ಪೋರ್ಚುಗೀಸ್ ನಾವಿಕ. ಭಾರತಕ್ಕೆ ಸಮುದ್ರಮಾರ್ಗ ಕಂಡುಹಿಡಿದವ. ಜನನ, ಆಲೆಂತೇಜೂ ಪ್ರಾಂತದ ಸ್ಪೈನ್ಸ್‌ನಲ್ಲಿ. ಗಾಮನ ಬಾಲ್ಯದ ಬಗ್ಗೆ ವಿವರಗಳು ತಿಳಿದುಬಂದಿಲ್ಲ. 1492ರಲ್ಲಿ ಕೆಲವು ಫ್ರೆಂಚ್ ಹಡಗುಗಳನ್ನು ವಶಪಡಿಸಿಕೊಳ್ಳುವ ಸೈನ್ಯಕಾರ್ಯಾಚರಣೆಯಲ್ಲಿ ಈತ ಪಾತ್ರವಹಿಸಿದ್ದ. ಗುಡ್‌ಹೋಪ್ ಭೂಶಿರವನ್ನು ಕಂಡುಹಿಡಿದ ಬಾರ್ತಲೋಮ್ಯು ಡೀಯಷನ ಕಾರ್ಯವನ್ನು ಮುಂದುವರಿಸಿ ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡುಹಿಡಿಯುವ ಕಾರ್ಯದಲ್ಲಿ ಪೋರ್ಚುಗಲ್ ದೊರೆ ಎರಡನೆಯ ಜಾನನಿಂದ ನಿಯುಕ್ತನಾದ. ಈ ಅನ್ವೇಷಣ ಯಾತ್ರೆ 1497ರ ಜುಲೈ 8 ರಂದು ಲಿಸ್ಬನಿನಿಂದ ಹೊರಟಿತು. ಗಾಮನ ವಶದಲ್ಲಿ ನಾಲ್ಕು ಹಡಗುಗಳಿದ್ದುವು. ಇವನ ಯಾತ್ರೆ ಕ್ಯಾನರೀ ದ್ವೀಪಗಳನ್ನು ತಲುಪಿದ್ದು ಜುಲೈ 15 ರಂದು. ನಾವಿಕರ ತಂಡ ಆ ತಿಂಗಳ 26ರಂದು ಕೇಪ್‌ವರ್ಡ್ ದ್ವೀಪಗಳನ್ನು ತಲುಪಿತು. ಆಗಸ್ಟ್ 3 ರವರೆಗೂ ಅಲ್ಲೇ ತಂಗಿದ್ದು, ಗಿನೀ ಕೊಲ್ಲಿಯ ಪ್ರವಾಹಕ್ಕೆ ಸಿಲುಕದಂತೆ ದಕ್ಷಿಣ ಅಟ್ಲಾಂಟಿಕ್ ಮೂಲಕ ಬಳಸು ದಾರಿಯಲ್ಲಿ, ಗುಡ್‌ಹೋಪ್ ಭೂಶಿರದ ಕಡೆಗೆ ಸಾಗಿ, ನವೆಂಬರ್ 7 ರಂದು ಸೇಂಟ್ ಹೆಲೀನಾ ಕೊಲ್ಲಿ ಸೇರಿತು. ನವೆಂಬರ್ 16ರ ವರೆಗೂ ಅಲ್ಲೇ ಇದ್ದು ಅನಂತರ ಮುಂದುವರಿದ ಪ್ರಯಾಣ ಪ್ರತಿಕೂಲ ಮಾರುತಗಳಿಂದಾಗಿ ತಡವಾಗಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಮಾಸೆಲ್ ಕೊಲ್ಲಿ ತಲುಪಿ, ಡಿಸೆಂಬರ್ 8ರಂದು ಅಲ್ಲಿಂದ ಹೊರಟು 25 ರಂದು ನಟ್ಯಾಲ್ ತೀರವನ್ನು ಸೇರಿತು. ಮರುವರ್ಷದ ಮಾರ್ಚ್ 2ರಂದು ಮೊಜಾಂಬಿಕ್ ತಲುಪಿತು. ಗಾಮ ಮತ್ತು ಇವನ ಸಹಪ್ರಯಾಣಿಕರು ಮುಸ್ಲಿಮರೆಂದು ನಂಬಿ ಅಲ್ಲಿನ ಸುಲ್ತಾನ ಗಾಮನಿಗೆ ಇಬ್ಬರು ಚಾಲಕರ ನೆರವು ನೀಡಿದ. ಪೋರ್ಚುಗೀಸರು ಕ್ರೈಸ್ತರೆಂಬುದನ್ನು ತಿಳಿದು ಆ ಚಾಲಕರಲ್ಲೊಬ್ಬ ಇವರನ್ನು ತ್ಯಜಿಸಿದ. ಗಾಮ ಮೊಂಬಾಸವನ್ನು ತಲುಪಿದ್ದು ಏಪ್ರಿಲ್ 7ರಂದು. ಮಲಿಂಡಿಯಲ್ಲಿ ತಂಗಿ, ಕಲ್ಲಿಕೋಟೆಗೆ ಹಾದಿ ಗೊತ್ತಿದ್ದ ಚಾಲಕನೊಬ್ಬನ ನೆರವಿನಿಂದ ಈತ ಯಾನ ಮುಂದುವರಿಸಿದ. 23 ದಿನಗಳ ಕಾಲ ಹಿಂದೂಸಾಗರದಲ್ಲಿ ಸಾಗಿದ ಮೇಲೆ ಘಟ್ಟಗಳು ಕಾಣಿಸಿದುವು. ಮೇ 20ರಂದು ಗಾಮ ಕಲ್ಲಿಕೋಟೆ ತಲುಪಿದ. ಭಾರತವನ್ನು ತಲುಪಿದ್ದರ ಕುರುಹಾಗಿ ಗಾಮ ಅಲ್ಲೊಂದು ಶಿಲಾಸ್ತಂಭ ನೆಟ್ಟ. ಅಲ್ಲಿಯ ಝಾಮೊರಿನ್ ದೊರೆಯಿಂದ ಗಾಮನಿಗೆ ಸ್ವಾಗತ ದೊರಕಿತು. ಆದರೆ ಅಲ್ಲಿಯ ಕೆಲವು ಮುಸ್ಲಿಂ ವ್ಯಾಪಾರಿಗಳ ವಿರೋಧದಿಂದಾಗಿ ದೊರೆಯೊಂದಿಗೆ ಯಾವ ಒಪ್ಪಂದವನ್ನೂ ಇವನಿಗೆ ಮಾಡಿಕೊಳ್ಳಲಾಗಲಿಲ್ಲ.

ಆಗಸ್ಟ್ ತಿಂಗಳ ಕೊನೆಯಲ್ಲಿ ಗಾಮ ಭಾರತದಿಂದ ಹಿಂದಕ್ಕೆ ಹೊರಟ. ಅಂಜೆದಿವ ದ್ವೀಪಕ್ಕೆ ಹೋಗಿ ಅಲ್ಲಿಂದ ಮಲಿಂಡಿಗೆ ಪ್ರಯಾಣ ಬೆಳೆಸಿದ. ಮಾರುತಗಳು ಅನುಕೂಲಪ್ರದವಾಗಿರಲಿಲ್ಲವಾದ್ದರಿಂದ ಅರಬ್ಬೀ ಸಮುದ್ರವನ್ನು ದಾಟಲು ಇವನಿಗೆ ಮೂರು ತಿಂಗಳುಗಳ ಕಾಲ ಬೇಕಾಯಿತು. ನಾವಿಕರಲ್ಲಿ ಅನೇಕರು ಕಾಯಿಲೆಯಿಂದ ಸತ್ತರು. ಮರುವರ್ಷ ಮಾರ್ಚ್ ತಿಂಗಳಲ್ಲಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಮುಂದುವರಿಯುವಾಗ ಬಿರುಗಾಳಿಯಿಂದ ತೊಂದರೆಯಾಯಿತು. ಉಳಿದಿದ್ದ ಎರಡು ಹಡಗುಗಳೂ ಪರಸ್ಪರ ಬೇರ್ಪಟ್ಟವು. ಗಾಮ ಟರ್ಸೇಯಿರ ದ್ವೀಪವನ್ನು ತಲುಪಿ ತನ್ನ ಹಡಗನ್ನು ಲಿಸ್ಬನಿಗೆ ಮುಂದಾಗಿ ಕಳಿಸಿದ. ಅವನು ಲಿಸ್ಬನ್ ತಲಪಿದ್ದು ಸೆಪ್ಟೆಂಬರ್ 9ರಂದು. ಟರ್ಸೇಯಿರದಲ್ಲಿ ತೀರಿಕೊಂಡಿದ್ದ ಸೋದರನಿಗಾಗಿ ಶೋಕವನ್ನಾಚರಿಸಿ ಸೆಪ್ಟೆಂಬರ್ 18ರಂದು ಗಾಮ ವಿಜಯ ಮೆರವಣಿಗೆಯಲ್ಲಿ ಲಿಸ್ಬನ್ ಪ್ರವೇಶಿಸಿದ. ದೊರೆ 1ನೆಯ ಮ್ಯಾನ್ಯುಯೆಲ್ ಇವನಿಗೆ ಡಾಂ ಎಂಬ ಬಿರುದನ್ನೂ ವರ್ಷಾಶನವನ್ನೂ ನೆಲದ ಉಂಬಳಿಯನ್ನೂ ಕೊಟ್ಟು ಗೌರವಿಸಿದ.

ಅನಂತರ ದೊರೆಯ ಆದೇಶದಂತೆ ಕವ್ರಾಲ್ ಎಂಬುವನು ಭಾರತಕ್ಕೆ ಬಂದು ಕಲ್ಲಿಕೋಟೆಯಲ್ಲಿ ಕೋಠಿಯೊಂದನ್ನು ಸ್ಥಾಪಿಸಿದ. ಅಲ್ಲಿ ಉಳಿದಿದ್ದ ಪೋರ್ಚುಗೀಸರು ಕವ್ರಾಲನ ನಿರ್ಗಮನಾನಂತರ ಕೊಲೆಗೆ ಈಡಾದರು. ಇದಕ್ಕೆ ಪ್ರತೀಕಾರ ಮಾಡಬೇಕೆಂಬ

ಸೂಚನೆಯೊಂದಿಗೆ ದೊರೆ ಗಾಮನನ್ನು ಮತ್ತೆ ಭಾರತಕ್ಕೆ ಕಳುಹಿಸಿದ. ಇವನಿಗೆ ಭಾರತ ಸಮುದ್ರದ ಅಡ್ಮಿರಲ್ ಎಂಬ ಬಿರುದು ದತ್ತವಾಯಿತು. ದೊರೆ ಇವನಿಗೆ ಹಲವಾರು ವ್ಯಾಪಾರ ಸವಲತ್ತುಗಳನ್ನೂ ನೀಡಿದ. ಗಾಮ ಭಾರತವನ್ನು ತಲುಪಿದೊಡನೆಯೇ ಕಲ್ಲಿಕೋಟೆಯನ್ನು ಉಡಾಯಿಸಿ, ಭಾರತದ ಯುದ್ಧನೌಕೆಗಳನ್ನು ನಿರ್ನಾಮ ಮಾಡಿದ. ಅನಂತರ ಕೊಚ್ಚಿಗೆ ಹೋಗಿ ಅಲ್ಲಿ ತನ್ನ ದೇಶಕ್ಕೆ ಅನುಕೂಲವಾದ ವ್ಯಾಪಾರ ಒಪ್ಪಂದ ಮಾಡಿಕೊಂಡು ಸ್ವದೇಶಕ್ಕೆ ಹಿಂದಿರುಗಿದ (1503). ಇವನ ವ್ಯಾಪಾರದಿಂದಾಗಿ ಗಾಮ ಪೋರ್ಚುಗಲಿನಲ್ಲಿಯೇ ಅತ್ಯಂತ ಶ್ರೀಮಂತನಾದ. ಇವನು ಅನಂತರ ವಿಶ್ರಾಂತ ಜೀವನ ನಡೆಸಿದರೂ ಭಾರತಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ದೊರೆಗೆ ಸಲಹೆ ನೀಡುತ್ತಿದ್ದ. 1519ರಲ್ಲಿ ಇವನಿಗೆ ವಿಡಿಗ್ಯೆರಿರದ ಕೌಂಟ್ ಪದವಿ ದೊರಕಿತು. 1524ರಲ್ಲಿ ಈತ ಭಾರತದ ವೈಸ್‌ರಾಯ್ ಆದ. ಇವನು ನಿಧನನಾದ 1524ರ ಡಿಸೆಂಬರ್ 24ರಂದು ಈತ ನಿಧನ ಹೊಂದಿದ. (ಬಿ.ಎಂ.)

**ಗಾಯ :** ಅಂಗಾಂಶಗಳ ಅವಿಚ್ಛಿನ್ನತೆಗೆ ಉಂಟಾಗುವ ತಡೆ (ವೂಂಡ್). ಕೆಲವರು ಇದನ್ನು ಸಮರಕ್ಕೆ ಮತ್ತು ಶಾಂತಿಗೆ ಸಂಬಂಧಿಸಿದ ಗಾಯ ಎಂಬ ಎರಡು ಬಗೆಗಳಾಗಿ ವಿಂಗಡಿಸಿ ಇವು ಪರಸ್ಪರ ವಿಭಿನ್ನವಾದವುಗಳೆಂದು ಪರಿಗಣಿಸುವುದುಂಟು. ಆದರೆ ಇವುಗಳ ರೋಗಲಕ್ಷಣಗಳಲ್ಲಿ ಮತ್ತು ಚಿಕಿತ್ಸೆಯಲ್ಲಿ ವ್ಯತ್ಯಾಸವೇನಿಲ್ಲ. ಹೀಗೆ ಇವನ್ನು ಬೇರ್ಪಡಿಸುವುದರಲ್ಲಿ ಯಾವ ಸ್ಪಷ್ಟ ಉದ್ದೇಶವನ್ನೂ ಸಾಧಿಸಿದಂತಾಗುವುದಿಲ್ಲ. ಈ ಕೆಳಗಿನ ವರ್ಗೀಕರಣ ಇವೆರಡನ್ನೂ ಒಳಗೊಳ್ಳುತ್ತದೆ– 1 ಮುಚ್ಚುಗಾಯಗಳು ಅಥವಾ ನಿರ್ಭೇದಕ ಗಾಯಗಳು: ಜಜ್ಜುಗಾಯ, ರಕ್ತಹೆಪ್ಪುಗಟ್ಟುವಿಕೆ, ಉಜ್ಜುಗಾಯ; 2 ಬಿಚ್ಚು ಅಥವಾ ತೆರೆಗಾಯಗಳು ಅಥವಾ ಭೇದಕ ಗಾಯಗಳು: ಕಚ್ಚು ಇರಿತ, ಚುಚ್ಚು, ಹರಿಯುವಿಕೆ, ಹೊರಗಾಣಿಸದ ಸರಳಭೇದಕ ಗಾಯ, ತೂತುಗೊರೆದು ಹೊರಹಾಯುವ ಭೇದಕ ಗಾಯ, ಚೂರು ಚೂರಾಗುವಿಕೆ ಅಥವಾ ಸಿಡಿಯುವಿಕೆ.

1 ಮುಚ್ಚುಗಾಯಗಳು : ಮುಚ್ಚುಗಾಯಗಳು ಚರ್ಮದ ಪೂರ್ಣ ಪದರವನ್ನು ಭೇದಿಸಿರುವುದಿಲ್ಲ. ಒರಟಾದ ಆಯುಧದಿಂದ ಬಲವಾಗಿ ಹೊಡೆದಾಗ ಜಜ್ಜು ಗಾಯ ಉಂಟಾಗುತ್ತದೆ. ಇದರಿಂದ ರಕ್ತನಾಳಗಳು ಒಡೆದು ಹೋಗುವುದಲ್ಲದೆ ಚರ್ಮದ ಕೆಳಭಾಗದಲ್ಲಿರುವ ಮೃದುವಾದ ಅಂಗಾಂಶಗಳಿಗೆ ಅನೇಕ ಬಗೆಯ ಹಾನಿ ಉಂಟಾಗುತ್ತದೆ. ರಕ್ತನಾಳಗಳಿಂದ ಹೊರಹರಿದ ರಕ್ತ ಚರ್ಮದೊಳಗೆ ಪ್ರವೇಶಿಸಿದಾಗ ಚರ್ಮ ವಿವರ್ಣವಾಗುತ್ತದೆ. ನೋವು, ಊತ, ವಿವರ್ಣತೆಗಳು ಜಜ್ಜುಗಾಯದ ಚಿಹ್ನೆಗಳು. ಹಾನಿಗೆ ಒಳಗಾದ ಅಂಗಾಂಶಕ್ಕೆ ಅನುಗುಣವಾಗಿ ನೋವು ಮತ್ತು ಊತಗಳು ವಿಪರ್ಯಯವಾಗುತ್ತವೆ. ಕಣ್ಣುರೆಪ್ಪೆ ಮತ್ತು ವೃಷಣಕೋಶಗಳಂತಹ ಸಡಿಲಚರ್ಮವುಳ್ಳ ಭಾಗಗಳಿಗೆ ಜಜ್ಜುಗಾಯ ಉಂಟಾದಾಗ ಊತ ಜಾಸ್ತಿಯಾಗಿದ್ದರೂ ನೋವು ಕಡಿಮೆಯಿರುತ್ತದೆ. ಇದಕ್ಕೆ ವಿರುದ್ಧವಾಗಿ ಬೆರಳುಗಳಿಗೆ ಅಥವಾ ನೆತ್ತಿಗೆ ಗಾಯವಾದಾಗ ಊತ ಕಡಿಮೆಯಾಗಿ ನೋವು ಹೆಚ್ಚಾಗಿರುತ್ತದೆ. ಕೆಂಪುರಕ್ತಕಣಗಳು ಒಡೆದು ಹೀಮೋಗ್ಲಾಬಿನ್ ಬಿಡುಗಡೆಯಾಗುವುದರಿಂದ ವಿವರ್ಣತೆಯುಂಟಾಗುತ್ತದೆ. ಇದು ಮೊದಲು ದಟ್ಟ ನೇರಳೆ ಬಣ್ಣದಾಗಿದ್ದು ಅನಂತರ ನೀಲಿ, ಕೆಂಪು, ಕಂದು, ಹಸಿರು ಬಣ್ಣಗಳಾಗಿ ಕೊನೆಯಲ್ಲಿ ಹಳದಿ ಕಲೆಯಾಗಿ 14–20 ದಿವಸಗಳೊಳಗೆ ಅದೃಶ್ಯವಾಗುತ್ತದೆ. ಹೀಮೋಗ್ಲಾಬಿನ್ ಹೀರಿಕೆಯ ಸಮಯದಲ್ಲಿ ನಡೆಯುವ ಕೆಲವು ರಾಸಾಯನಿಕ ಕ್ರಿಯೆಗಳೇ ಈ ವರ್ಣ ಬದಲಾವಣೆಗೆ ಕಾರಣ. ದೇಹದ ಒಳಪದರಗಳಲ್ಲಿ ಜಜ್ಜು ಗಾಯವಾದಾಗ ಊತ ಮತ್ತು ವಿವರ್ಣತೆಗಳು ಏಟುಬಿದ್ದ ಜಾಗದಿಂದ ದೂರದಲ್ಲಿಯೂ ಕಾಣಿಸಿಕೊಳ್ಳಬಹುದು.

ಹೆಚ್ಚು ರಕ್ತಸ್ರಾವವಾಗಿ ಅದು ತಂತುರೂಪದ ಅಂಗಾಂಶ ಕೋಶದ ಪದರಗಳ ಮತ್ತು ಮಾಂಸಖಂಡಗಳ ನಡುವೆ ಹೆಪ್ಪುಗಟ್ಟುತ್ತದೆ. ಮೊದಮೊದಲು ಇದು ಗುಂಡಾಗಿ, ಹುಣ್ಣಿನಂತೆ ಮೆತ್ತಗಿದ್ದು ಅನಂತರ ಗಟ್ಟಿಯಾಗುತ್ತದೆ. ಕ್ರಮೇಣ ಗಾಯ ವ್ಯವಸ್ಥಿತವಾಗಿ ಕರಗಿಹೋಗುತ್ತದೆ. ಆದರೆ ಎಲ್ಲ ಹೆಪ್ಪುಗಟ್ಟುಗಳೂ ಇಷ್ಟು ಸರಳವಾಗಿ ಮುಕ್ತಾಯವಾಗುವುದಿಲ್ಲ. ಕೆಲವು ಗಂಟುಗಳಾಗಿ ಮತ್ತೆ ಕೆಲವು ರಸಿಕೆಯ ಕೋಶಗಳಾಗಿ ಉಳಿಯಬಹುದು. ಸಾಮಾನ್ಯವಾಗಿ ಮಿದುಳಿನ ಮೇಲ್ಮೈಯಲ್ಲಿ, ನಡುವಿನ ಭಾಗದಲ್ಲಿ, ತೊಡೆಯ ಪಕ್ಕಗಳಲ್ಲಿ ರಸಿಕೆಯ ಕೋಶಗಳು ಉಂಟಾಗುತ್ತವೆ. ಇವುಗಳ ಸುತ್ತಲೂ ತಂತುದ್ರವ್ಯ (ಫೈಬ್ರಿನ್) ಶೇಖರಗೊಂಡು, ಹೀಮೋಗ್ಲಾಬಿನ್ ಕರಗಿಹೋಗಿ ಮೇಲೆ ನಸುಹಳದಿಬಣ್ಣದ ದ್ರವ ಉಳಿಯುತ್ತದೆ. ಸರಿಯಾದ ಚಿಕಿತ್ಸೆ ನಡೆಸದಿದ್ದಲ್ಲಿ ಈ ಕೋಶದಲ್ಲಿ ಒಳಪೊರೆಯೊಂದು ಬೆಳೆದು ಅನಂತರ ಅದನ್ನು ತೆಗೆಯುವುದು ಕಷ್ಟವಾಗುತ್ತದೆ. ಕ್ರಿಮಿಗಳ ಬೆಳವಣಿಗೆಗೆ ರಕ್ತ ಒಳ್ಳೆಯ ಮಾಧ್ಯಮ. ಆದ್ದರಿಂದ ದುರ್ಬಲಶರೀರಿಗಳಲ್ಲಿ ಕೆಲವು ಸಲ ಈ ಹೆಪ್ಪುಗಟ್ಟಿಗೆ ಸೋಂಕು ತಗಲಬಹುದು. ಮಾಂಸಖಂಡ ಮತ್ತು ಇತರ ಮೇಲ್ಮೈಯ ಅಂಗಾಂಶಗಳಂತೆಯೇ ಒಳಾಂಗಗಳಾದ ಮಿದುಳು, ಪಿತ್ತಕೋಶ, ಗುಲ್ಮ, ಮೂತ್ರಜನಕಾಂಗ, ಪುಪ್ಪುಸ ಮತ್ತು ಅನ್ನನಾಳ ಮುಂತಾದವುಗಳಿಗೂ ಜಜ್ಜುಗಾಯವುಂಟಾಗಿ ರಕ್ತ ಹೆಪ್ಪುಗಟ್ಟಬಹುದು. ಇವುಗಳ ಚಿಕಿತ್ಸೆಗೆ ವಿಶ್ರಾಂತಿ ಆವಶ್ಯಕ. ಆವಿಯಾಗುವ ದ್ರವಗಳ ಲೇಪನ, ಶಾಖ ಕೊಡುವಿಕೆ ಮತ್ತು ಬಿಸಿನೀರಿನ ಸ್ನಾನ ನೋವನ್ನು ಕುಗ್ಗಿಸುತ್ತದೆ. ಬಿಗಿಯಾಗಿ ಒತ್ತುವುದರಿಂದ ರಕ್ತಹೊರಸೋರುವುದು ಕಡಿಮೆಯಾಗುತ್ತದೆ. ಉಜ್ಜುವಿಕೆಯಿಂದ ಹೊರ ಬಂದ ರಕ್ತ ಬೇಗನೆ ಕರಗಿಹೋಗುತ್ತದೆ. ರಕ್ತದ ಹೀರುವಿಕೆ ತಡವಾದಲ್ಲಿ ಅದನ್ನು ಹೊರತೆಗೆದು ಬಿಗಿಯಾದ ಕಟ್ಟುಪಟ್ಟಿಯನ್ನು ಕಟ್ಟುವುದರಿಂದ ರಸಿಕೆಯ ಕೋಶ ಉಂಟಾಗುವುದನ್ನು ತಡೆಯಬಹುದು.

ಯಾವುದಾದರೂ ದೇಹದ ಭಾಗ ಒರಟು ಮೇಲ್ಮೈಗೆ ಉಜ್ಜಿದಾಗ ಉಜ್ಜು ಗಾಯ ಉಂಟಾಗುತ್ತದೆ. ಇದರಿಂದ ಚರ್ಮದ ಮೇಲ್ಪದರಗಳು ಕಿತ್ತುಹೋಗಿ, ನರಗಳ ತುದಿಗಳು ಹೊರಕಾಣಿಸಿಕೊಂಡು ತುಂಬ ನೋವುಂಟಾಗುತ್ತದೆ. ಗಾಯದ ಮೂಲಕ ದೂಳು ಪ್ರವೇಶಿಸಿ ಸೋಂಕು ಉಂಟಾಗುತ್ತದೆ. ಗಾಯವನ್ನು ತೊಳೆದು ಮುಲಾಮನ್ನು ಹಚ್ಚುವುದರಿಂದ ಇದನ್ನು ಗುಣಪಡಿಸಬಹುದು.

ಮರದ ತುಂಡು ಅಥವಾ ಗಾರೆಯ ಗಟ್ಟಿಗಳಿಂದ ದೇಹದ ಭಾಗವನ್ನು ಹೆಚ್ಚು ಕಾಲ ಅಮುಕಿದಾಗ ವಿಶೇಷವಾದ ಜಜ್ಜುಗಾಯ ಉಂಟಾಗುತ್ತದೆ. ಜಜ್ಜಿದ ಭಾಗದಿಂದ ಒಳಹೊಗುವ ಜೀವಾಣು ವಿಷವಸ್ತುಗಳು (ಟಾಕ್ಸಿನ್ಸ್) ಮೂತ್ರಜನಕಾಂಗಗಳ ರಕ್ತ ಪರಿಚಲನೆಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ. ಇದರಿಂದ ಮೂತ್ರಜನಕಾಂಗದ ಹೊರಭಾಗಕ್ಕೆ (ಕಾರ್ಟೆಕ್ಸ್) ರಕ್ತಚಲನೆ ಇಲ್ಲದಂತಾಗುತ್ತದೆ. ಇದಕ್ಕೆ ಪರಿಣಾಮಕಾರಿಯಾದ ಚಿಕಿತ್ಸಾವಿಧಾನ ಇನ್ನೂ ತಿಳಿಯಬರದಿದ್ದರೂ ಜಜ್ಜಿದ ಭಾಗಕ್ಕೆ ಸಂಪೀಡನೆ ಉಂಟುಮಾಡುವುದರಿಂದ ಜೀವಾಣುವಿಷದ ಹೀರುವಿಕೆಯನ್ನು ತಡೆಗಟ್ಟಿ ಮೂತ್ರಜನಕಾಂಗದ ರಕ್ತಪರಿಚಲನೆಯನ್ನು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬಹುದು.

2 ಬಿಚ್ಚು ಅಥವ ತೆರೆಗಾಯಗಳು: ಬಿಚ್ಚು ಅಥವಾ ತೆರೆಗಾಯಗಳಲ್ಲಿ ಚರ್ಮದ ಅಥವಾ ಲೋಳೆಪೊರೆಯ ಅವಿಚ್ಛಿನ್ನತೆಗೆ ತಡೆಯುಂಟಾಗಿ ಒಳಭಾಗದ ಮೃದು ಅಂಗಾಂಶಗಳಿಗೆ ಹಾನಿ ತಗಲುತ್ತದೆ. ಇದರ ತೀವ್ರತೆ ಪೀಡಕವಸ್ತುವಿನ ಗುಣ ಮತ್ತು ಬಲವನ್ನು ಅವಲಂಬಿಸಿರುತ್ತದೆ. ಹಾನಿಗೆ ಒಳಗಾದ ಮಾಂಸಖಂಡದ ತಂತುಗಳ ರಕ್ತಸಂಚಾರಕ್ಕೆ ಅಡ್ಡಿಯುಂಟಾಗಿ ಅವು ತಮ್ಮ ಸಂಕುಚನ ಸಾಮರ್ಥ್ಯ ಮತ್ತು ಸೋಂಕು ನಿರೋಧಕ ಸಾಮರ್ಥ್ಯಗಳನ್ನು ಕಳೆದುಕೊಳ್ಳುತ್ತವೆ. ಅಲ್ಲದೆ ಅವಾಯುಶ್ವಸನ ಜೀವಿಗಳ ಬೆಳವಣಿಗೆಗೆ ಇವು ಉತ್ತೇಜನಕಾರಿಯಾಗಿರುತ್ತವೆ. ತತ್‌ಕ್ಷಣವೇ ಉರಿತದ ಕ್ರಿಯೆ ಪ್ರಾರಂಭವಾಗಿ ಶರೀರ ತನ್ನ ರಕ್ಷಣೆಗೆ ತೊಡಗುತ್ತದೆ. ಸ್ರಾವದಿಂದಾಗಿ ಊತ ಕಾಣಿಸಿಕೊಳ್ಳುತ್ತದೆ. ಊತ ಕೆಲವು ಸಲ ವಿಪರೀತವಾಗಿ ಆ ಅಂಗದ ರಕ್ತ ಚಲನೆಗೆ ತಡೆಯುಂಟಾಗಬಹುದು. ಚರ್ಮ ಅಶುದ್ಧವಾಗಿದ್ದು ದೂಳಿನ ಕಣಗಳು ಗಾಯದೊಳಕ್ಕೆ ಪ್ರವೇಶಿಸುತ್ತವೆ. ಗಾಯ ಉಂಟಾದ ಮೇಲೆ ಆರರಿಂದ ಹನ್ನೆರಡು ಗಂಟೆಯವರೆಗೆ ಈ ಕ್ರಿಮಿಗಳು ಹಾನಿಗೆ ಒಳಗಾದ ಅಂಗಾಂಶದ ಮೇಲೆಯೇ ಇದ್ದು ಇನ್ನೂ ನಂಜನ್ನು ಉತ್ಪತ್ತಿ ಮಾಡಿರುವುದಿಲ್ಲ. ಈ ಅವಧಿ ಕಳೆದ ಬಳಿಕ ಗಾಯ ಸೋಂಕಿಗೊಳಗಾಗಿದೆ ಎಂದರ್ಥ.

ಕಚ್ಚುಗಾಯ ಸಾಮಾನ್ಯವಾಗಿ ಗಾಜಿನಚೂರು, ಚಾಕು ಮೊದಲಾದ ಹರಿತವಾದ ವಸ್ತುಗಳಿಂದ ಉಂಟಾಗುತ್ತದೆ. ಅಪೂರ್ವವಾಗಿ ನೆತ್ತಿಯ ಬಿಗಿಗೊಂಡ ಚರ್ಮವಿರುವ ಭಾಗದಲ್ಲಿ ಮೊಂಡು ಆಯುಧ ಸಹ ಕಚ್ಚುಗಾಯವನ್ನು ಉಂಟುಮಾಡಬಲ್ಲದು. ಕಚ್ಚುಗಾಯದಲ್ಲಿ ಬಿರುಕು ಕಾಣಿಸುತ್ತದೆ. ಇದರ ಉದ್ದ ಆಳಕ್ಕಿಂತ ಹೆಚ್ಚು. ಗಾಯದ ಅಂಚುಗಳು ಕ್ರಮವಾಗಿರುತ್ತವೆ. ರಕ್ತಸ್ರಾವ ಹೆಚ್ಚಾಗಿದ್ದು, ಸಂವೇದನ ನರಗಳು ಕತ್ತರಿಸಿಹೋಗುವುದರಿಂದ ನೋವಿರುತ್ತದೆ. ಸೋಂಕು ತಗಲಿರದಿದ್ದಲ್ಲಿ ಗಾಯದ ಅಂಚುಗಳನ್ನು ಸೇರಿಸಿದಾಗ ಅವು ಸರಿಯಾಗಿ ಕೂಡಿಕೊಳ್ಳುತ್ತವೆ.

ರಕ್ತನಾಳಗಳು, ನರಗಳು, ಮಾಂಸಖಂಡಗಳು ಮುಂತಾದ ಮುಖ್ಯ ಅಂಗಗಳಿಗೆ ಆಕಸ್ಮಿಕ ಚುಚ್ಚುಗಾಯದಿಂದ ಉಂಟಾಗುವ ಹಾನಿಯನ್ನು ತಿಳಿಯಲು ಗಾಯದ ಪೂರ್ಣ ಹರವನ್ನು ಪರೀಕ್ಷಿಸಬೇಕು. ಸೋಂಕು ತಗುಲದಿದ್ದಲ್ಲಿ ನರ, ಮಾಂಸಖಂಡ ಮತ್ತು ಮೂಳೆಗಳ ಪುನರ್ನಿರ್ಮಾಣ ಚೆನ್ನಾಗಿ ಆಗುತ್ತದೆ. ಕೊಬ್ಬು ಮತ್ತು ಸ್ರಾವಕ ಗ್ರಂಥಿಗಳಲ್ಲಿ ಈ ಪುನರ್ನಿರ್ಮಾಣ ಅಷ್ಟು ಚೆನ್ನಾಗಿ ಆಗುವುದಿಲ್ಲ. ಕೇಂದ್ರ ನರಮಂಡಲದಲ್ಲಂತೂ ಇದು ಸಾಧ್ಯವೇ ಇಲ್ಲ.

ಸೂಜಿ ಮೊದಲಾದ ಹರಿತವಾದ ಮೊನೆಯುಳ್ಳ ವಸ್ತುಗಳಿಂದ ಇರಿತ ಮತ್ತು ಚುಚ್ಚುಗಾಯಗಳು ಉಂಟಾಗುತ್ತವೆ. ಇವು ಹೊರನೋಟಕ್ಕೆ ಸಣ್ಣವಾಗಿದ್ದರೂ ಅನ್ಯವಸ್ತುಗಳು ಅಥವಾ ಸೋಂಕು ಇವುಗಳೊಳಕ್ಕೆ ಪ್ರವೇಶಿಸಬಹುದು; ಒಳಾಂಗಗಳಿಗೆ ಹಾನಿಯುಂಟಾಗಿದ್ದು ಅದನ್ನು ಸುಲಭವಾಗಿ ತಿಳಿಯಲು ಸಾಧ್ಯವಾಗದೆ ಹೋಗಬಹುದು.

ಯಾವುದೇ ತೊಡಕಿಲ್ಲದಿದ್ದಲ್ಲಿ ಈ ಚುಚ್ಚುಗಾಯದಿಂದ ಉಂಟಾಗುವ ರಕ್ತಸ್ರಾವ ಮತ್ತು ನೋವು ಕಡಿಮೆಯಾಗಿದ್ದು ಬೇಗನೇ ಗುಣವಾಗುತ್ತದೆ. ಅವು ಸೋಂಕಿಗೊಳಗಾದಾಗ ಶಸ್ತ್ರಚಿಕಿತ್ಸೆಯ ಮೂಲಕ ಗುಣಪಡಿಸಬೇಕಾಗುತ್ತದೆ.

ಹಾವಿನ ಕಡಿತವೂ ಒಂದು ಬಗೆಯ ಚುಚ್ಚುಗಾಯವೇ. ಊತ, ನೋವು, ವಿವರ್ಣತೆ, ಮೂರ್ಛೆ, ನಾಡಿಮಿಡಿತ ಕ್ಷೀಣವಾಗುವುದು, ಕಣ್ಣುಪಾಪೆ ಅಗಲ ಗೊಳ್ಳುವುದು–ಇವು ಇದರ ಮುಖ್ಯ ಲಕ್ಷಣಗಳು. ಉಗ್ರಪರಿಸ್ಥಿತಿಯಲ್ಲಿ ನರಗಳು ಮತ್ತು ಸ್ನಾಯುಗಳು ನಿಶ್ಚೇತನಗೊಂಡು ಕೆಲವೇ ಗಂಟೆಗಳಲ್ಲಿ ಸಾವು ಸಂಭವಿಸಬಹುದು. ಕಡಿದ ಜಾಗಕ್ಕೆ ತೀವ್ರವಾದ ಚಿಕಿತ್ಸೆ ಮಾಡಬೇಕು. ಗಾಯದಿಂದ ಕೊಂಚ ಮೇಲಕ್ಕೆ ಕಟ್ಟನ್ನು ಕಟ್ಟಿ, ಗಾಯವನ್ನು ಕೊಯ್ದು ರಕ್ತಸ್ರಾವವಾಗಲು ಬಿಡಬೇಕು. ಅನಂತರ ಅಮೋನಿಯ ಅಥವಾ ಹೈಡ್ರೊಜನ್ ಪೆರಾಕ್ಸೈಡಿನಿಂದ ತೊಳೆಯಬೇಕು. ಬ್ರಾಂಡಿ ಮತ್ತು ಹೃದಯೋತ್ತೇಜಕಗಳನ್ನು ಕೊಡಬೇಕು. ಹಾವು ಕಚ್ಚಿದ ಒಂದು ಗಂಟೆಯೊಳಗೆ ವಿಷನಿರೋಧಕಗಳನ್ನು ಕೊಟ್ಟಲ್ಲಿ ಒಳ್ಳೆಯ ಪರಿಣಾಮ ಕಾಣಿಸುತ್ತದೆ.

ಜೇನು, ಕಣಜ, ಸೊಳ್ಳೆ, ಚೇಳು, ಮುಂತಾದವುಗಳ ಕಡಿತದಿಂದ ಸೋಂಕು ರೋಗಗಳು ಹರಡಬಹುದು. ನಾಲಿಗೆ ಮತ್ತು ಗಂಟಲಲ್ಲಿ ಇವು ಕಚ್ಚಿದಾಗ ಊತವುಂಟಾಗಿ ಜೀವಕ್ಕೇ ಅಪಾಯ ಒದಗಬಹುದು. ಕೊಂಡಿ ಸೇರಿದ್ದಲ್ಲಿ ಅದನ್ನು ಹೊರತೆಗೆದು ಕ್ಷಾರವಸ್ತುಗಳಿಂದ ಕಟ್ಟುಪಟ್ಟಿಯನ್ನು ಕಟ್ಟಿದಲ್ಲಿ ಗಾಯ ಗುಣವಾಗುತ್ತದೆ.

ಹರಿಗಾಯಗಳು ಯುದ್ಧರಂಗದಲ್ಲಿ ಆಗಬಹುದು ಇಲ್ಲವೇ ಯಂತ್ರಗಳಿಂದ ಆಗಬಹುದು. ಸಿಡಿಯುವ ಅಥವಾ ಹರಿಯುವ ಶಕ್ತಿಗಳಿಂದ ಈ ವಿಧವಾದ ಗಾಯಗಳು ಉಂಟಾಗುವುದರಿಂದ ಇವು ಆಕಾರರಹಿತವಾಗಿರುತ್ತವೆ. ಸಾಮಾನ್ಯವಾಗಿ ಚರ್ಮ ಹರಿದು ಒಳಭಾಗಕ್ಕೆ ಹೆಚ್ಚು ಪೆಟ್ಟಾಗಿರುತ್ತದೆ. ಗಾಯದ ಅಂಚುಗಳು ಚಿಂದಿಚಿಂದಿಯಾಗಿ, ನೇರಳೆ ಬಣ್ಣದವಾಗಿರುತ್ತವೆ. ಚರ್ಮದ ಕೆಳಭಾಗದಲ್ಲಿರುವ ಕೊಬ್ಬು, ಆಳದಲ್ಲಿರುವ ತಂತುರೂಪದ ಅಂಗಾಂಶದ ಕೋಶಗಳು ಮತ್ತು ಮಾಂಸಖಂಡಗಳು ಹಾನಿಗೊಳಗಾಗಿ ಊದಿಕೊಳ್ಳುತ್ತವೆ. ಸಾಮಾನ್ಯವಾಗಿ ರಕ್ತ ನಾಳಗಳಲ್ಲಿ ಹೆಪ್ಪುಗಟ್ಟುವುದರಿಂದ ಅದರ ಸ್ರಾವ ಹೆಚ್ಚಾಗಿರುವುದಿಲ್ಲ. ಹರಿಗಾಯದ ಬಾಯಿಯನ್ನು ಸಾಮಾನ್ಯವಾಗಿ ರಕ್ತದ ಗೆಡ್ಡೆಗಳು ಮುಚ್ಚಿರುತ್ತವೆ. ನರಗಳಿಗೆ ಹಾನಿ ಉಂಟಾದಲ್ಲಿ ಸಂವೇದನ ಸಾಮರ್ಥ್ಯ ಕುಗ್ಗುತ್ತದೆ. ಈ ಬಗೆಯ ಗಾಯಗಳಲ್ಲಿ ಸೋಂಕು ಖಚಿತ.

ಕೆಲವು ಭೇದಕ ಗಾಯಗಳಿಗೆ ಪ್ರವೇಶದ್ವಾರ ಮಾತ್ರ ಇರುತ್ತದೆ. ಇವು ಕಚ್ಚು, ಚುಚ್ಚು ಅಥವಾ ಹರಿಗಾಯಗಳಾಗಿರಬಹುದು. ಇವು ಒಳಗಿನ ಅಂಗಗಳಿಗೆ ಹೆಚ್ಚು ಅಪಾಯವನ್ನು ಉಂಟುಮಾಡುತ್ತವೆ. ಅನೇಕ ಯುದ್ಧಗಾಯಗಳು ಈ ಬಗೆಯವು.

ತೂತು ಕೊರೆದು ಹೊರಹಾಯುವ ಭೇದಕಗಾಯಗಳಿಗೆ ಪ್ರವೇಶ, ನಿರ್ಗಮನ ಗಳೆರಡೂ ಉಂಟು. ಇಂಥ ಗಾಯಗಳಲ್ಲಿ ಅನ್ಯವಸ್ತುಗಳು ಶರೀರದಲ್ಲಿ ಉಳಿಯುವುದಿಲ್ಲ. ಸಿಡಿತದಿಂದ ಉಂಟಾಗುವ ಗಾಯಗಳಲ್ಲಿ ಸ್ಪಷ್ಟವಾದ ಯಾವುದೇ ಬಾಹ್ಯವಸ್ತು ಅಂಗಾಂಶವನ್ನು ಪ್ರವೇಶಿಸಿರುವುದಿಲ್ಲ.

ಗಾಯಚಿಕಿತ್ಸೆಯ ಸಾಮಾನ್ಯ ನಿಯಮಗಳು: 1 ಪ್ರತಿಯೊಂದು ಗಾಯವನ್ನೂ ಸ್ಪರ್ಶಜ್ಞಾನರಹಿತ ಮತ್ತು ವಿಷಾಣುರಹಿತ ಸ್ಥಿತಿಗಳಲ್ಲಿ ಚಿಕಿತ್ಸೆ ಮಾಡುವುದು. 2 ಗಾಯಕ್ಕೆ ತೊಂದರೆಯಾಗದಂತೆ ಚರ್ಮವನ್ನು ತೊಳೆಯುವುದು. 3 ಗಾಯದ ಅಂಚನ್ನು ಕತ್ತರಿಸುವುದು. 4 ಗಾಯವನ್ನು ಸರಿಯಾಗಿ ಪರೀಕ್ಷಿಸುವುದು. 5 ತೀವ್ರ ಹಾನಿಗೆ ಒಳಗಾದ ಅಂಗಾಂಶಗಳನ್ನು ತೆಗೆದುಹಾಕುವುದು. 6 ರಕ್ತಸ್ರಾವವನ್ನು ತಡೆಗಟ್ಟುವುದು. 7 ಹರಿದ ನರ ಮತ್ತು ಮಾಂಸಖಂಡಗಳನ್ನು ಹೊಲಿಯುವುದು. 8 ಪ್ರತಿಯೊಂದು ಬಿರುಕಿಗೂ ಸಲ್ಫೊನಮೈಡ್ ಮತ್ತು ಪೆನ್‌ಸಿಲಿನ್ ಪುಡಿಯನ್ನು ಹಾಕುವುದು. 9 ಬಿಗಿತವುಂಟಾಗದಿದ್ದಲ್ಲಿ ಹೊಲಿಗೆಯನ್ನು ಹಾಕುವುದು. 10 ಕಟ್ಟುಪಟ್ಟಿ ಹಾಕುವುದು. 11 ಗಾಯಗೊಂಡ ಭಾಗ ಚಲಿಸದಂತೆ ನೋಡಿಕೊಳ್ಳುವುದು. (ಜಿ.ಇ.ಎಚ್.ಪಿ.)

**ಗಾಯಕವಾಡ** : ಪೇಷ್ವೆ ಒಂದನೆಯ ಬಾಜಿರಾಯನ ಆಡಳಿತದ ಕಾಲದಲ್ಲಿ (1720–40) ಅಧಿಕಾರಗಳಿಸಿದ ಮರಾಠಾ ರಾಜಮನೆತನ. ಇದರ ಸ್ಥಾಪಕ 1ನೆಯ ದಾಮಾಜಿ. ಅವನ ಸೋದರನ ಮಗ ಪಿಲಾಜಿ ಎಂಬುವನು ಖಂಡೇರಾವ್ ದಾಬಡೆಯ ಅನುವರ್ತಿಯಾಗಿದ್ದ. 1720ರಲ್ಲಿ ಸೂರತ್ತಿನ ಪೂರ್ವಕ್ಕೆ 80 ಕಿಮೀ ದೂರದಲ್ಲಿದ್ದ ಸೋನ್‌ಗಢದಲ್ಲಿ ಕೋಟೆ ಕಟ್ಟಿಕೊಂಡು ಪ್ರಬಲನಾಗುತ್ತಿದ್ದ. ಖಂಡೇರಾಯನ ಮಗನಾದ ತ್ರಿಯಂಬಕರಾಯನಿಗೂ ಬಾಜಿರಾಯನಿಗೂ ಭಿಲಾಪುರದಲ್ಲಿ ನಡೆದ ಯುದ್ಧದಲ್ಲಿ ಪಿಲಾಜಿ ಗಾಯಕವಾಡ ತ್ರಿಯಂಬಕರಾಯನ ಪಕ್ಷ ವಹಿಸಿದ್ದ. ಕದನದಲ್ಲಿ ತ್ರಿಯಂಬಕ ರಾಯ ಮಡಿದ. ಬಾಜಿರಾಯನೊಂದಿಗೆ ಪಿಲಾಜಿ ಸಂಧಿ ಮಾಡಿಕೊಂಡ. ಗುಜರಾತಿನಲ್ಲಿ ಮರಾಠರಿಗೆ ಸೇರಿದ್ದ ಭಾಗದ ಮೇಲ್ವಿಚಾರಣೆಯ ಅಧಿಕಾರವನ್ನು ಬಾಜಿರಾಯ ಪಿಲಾಜಿಗೆ ವಹಿಸಿಕೊಟ್ಟ. ಬರೋಡೆಯೇ ಪಿಲಾಜಿಯ ರಾಜಧಾನಿಯಾಯಿತು.

1732ರಲ್ಲಿ ಪಿಲಾಜಿ ಕೊಲೆ ಹೊಂದಿದಾಗ ಅವನ ಮಗ ಎರಡನೆಯ ದಾಮಾಜಿ ಪಟ್ಟಕ್ಕೆ ಬಂದ. 1761ರಲ್ಲಿ ನಡೆದ ಪಾಣಿಪಟ್ ಯುದ್ಧದಲ್ಲಿ ದಾಮಾಜಿ ಭಾಗವಹಿಸಿದ್ದು ಅಲ್ಲಿಂದ ತಪ್ಪಿಸಿಕೊಂಡು ಬಂದ. ಅವನು 1768ರಲ್ಲಿ ತೀರಿಕೊಂಡಾಗ ಅವನ ಹಲವಾರು ಮಕ್ಕಳು ಅಧಿಕಾರಕ್ಕಾಗಿ ಹಲವು ವರ್ಷಗಳ ಕಾಲ ಪರಸ್ಪರ ಬಡಿದಾಡಿದರು. ಕೊನೆಗೆ (1800) ದಾಮಾಜಿಯ ಹಿರಿಯ ಮಗನಾದ ಗೋವಿಂದರಾಯನ ಪುತ್ರ ಆನಂದರಾವ್ ಸಿಂಹಾಸನವನ್ನೇರಿ 1819ರ ವರೆಗೆ ರಾಜ್ಯವಾಳಿದ. ಗಾಯಕವಾಡ ಮನೆತನದ ಅರಸರು ಮೊದಲಿಂದಲೂ ಇಂಗ್ಲಿಷರೊಂದಿಗೆ ಸ್ನೇಹದಿಂದ ವರ್ತಿಸುತ್ತಿದ್ದರು. ಆನಂದರಾಯ ನಿಗೂ ಇಂಗ್ಲಿಷರಿಗೂ ನಡುವೆ 1805ರಲ್ಲಿ ಒಪ್ಪಂದವಾಗಿ ಗಾಯಕವಾಡ ದೊರೆ ಇಂಗ್ಲಿಷರ ಆಶ್ರಿತ ರಾಜನಾದ. ಗಾಯಕವಾಡರು ಇಂಗ್ಲಿಷರಿಗೆ ವಿಧೇಯವಾಗಿದ್ದುದರಿಂದ ಅನಂತರ ನಡೆದ ಎರಡು ಮೂರನೆಯ ಇಂಗ್ಲಿಷ್ ಮರಾಠಾ ಯುದ್ಧಗಳಲ್ಲಿ ಬರೋಡ ಸಂಸ್ಥಾನಕ್ಕೆ ಏನೂ ಕಷ್ಟನಷ್ಟಗಳು ಸಂಭವಿಸಲಿಲ್ಲ.

ಗಾಯಕವಾಡ ಮನೆತನ

ದಾಮಾಜಿ I — ಝಿಂಗೋಜಿ

ಝಿಂಗೋಜಿ → ಪಿಲಾಜಿ (1721–1732)

ಪಿಲಾಜಿ → ದಾಮಾಜಿ II (1732–1768)

ದಾಮಾಜಿ II → ಗೋವಿಂದರಾವ್ (1768–1771; 1793–1800), ಸಯಾಜಿರಾವ್ I (1771–1778), ಫತೇಸಿಂಗ್ (1778–1789), ಮಾನಾಜಿ (1789–1793), ಇತರರು

ಗೋವಿಂದರಾವ್ → ಆನಂದರಾವ್ (1800–1819), ಖಂಡೇರಾವ್ (1819–1847)

ಖಂಡೇರಾವ್ → ಗಣಪತ್‌ರಾವ್ (1847–1856), ಖಂಡೇರಾವ್ (1856–1870), ಮಲ್ಹಾರ್‌ರಾವ್ (1870–1875)

ದತ್ತು: ಸಯಾಜಿರಾವ್ III (1875–1939)

ಆನಂದರಾಯನ ಅನಂತರ ಅಧಿಕಾರಕ್ಕೆ ಬಂದವನು ಅವನ ತಮ್ಮ ಎರಡನೆಯ ಸಯಾಜಿರಾವ್ (ಆ. 1819–47). ಅನಂತರ ಸಯಾಜಿರಾಯನ ಮೂವರು ಮಕ್ಕಳಾದ ಗಣಪತರಾವ್ (ಆ.1847–56), ಖಂಡೇರಾವ್ (ಆ. 1856–70) ಮತ್ತು ಮಲ್ಹಾರ್‌ರಾವ್ (ಆ. 1870–75) ಅನುಕ್ರಮವಾಗಿ ರಾಜ್ಯವಾಳಿದರು. ಆಡಳಿತವನ್ನು ಹದಗೆಡಿಸಿದನೆಂದೂ ಬ್ರಿಟಿಷ್ ರೆಸಿಡೆಂಟನಿಗೆ ವಿಷ ಹಾಕಿ ಅವನನ್ನು ಕೊಲ್ಲಲು ಯತ್ನಿಸಿದನೆಂದು ಮಲ್ಹಾರಿ ರಾಯನ ಮೇಲೆ ಆಪಾದನೆ ಹೊರಿಸಿ ಅವನನ್ನು ಬ್ರಿಟಿಷರು ವಿಚಾರಣೆಗೆ ಗುರಿಪಡಿಸಿದರು. ವಿಷಪ್ರಯೋಗದ ಆಪಾದನೆಯನ್ನು ಸ್ಥಿರೀಕರಿಸಲಾಗಲಿಲ್ಲ. ಆದರೆ ದುರ್ನಡತೆ ದುರಾಡಳಿತ ಗಳ ಕಾರಣದ ಮೇಲೆ ಅವನನ್ನು ಪದಚ್ಯುತಿಗೊಳಿಸಲಾಯಿತು. ಮಲ್ಹಾರಿ ರಾಯನಿಗೆ ಮಕ್ಕಳಿರಲಿಲ್ಲ. ಗಾಯಕವಾಡ ಮನೆತನದ ದೂರದ ಸಂಬಂಧ ಹೊಂದಿದ್ದ ಸಯಾಜಿರಾಯ ನನ್ನು ಬ್ರಿಟಿಷರು ಸಿಂಹಾಸನಕ್ಕೆ ತಂದರು (1875–1939). 3ನೆಯ ಸಯಾಜಿರಾವ್ ಬರೋಡ ಸಂಸ್ಥಾನದ ಪ್ರಗತಿಪರ ರಾಜನೆಂದು ಖ್ಯಾತಿ ಗಳಿಸಿದ. (ಎಚ್.ಜಿ.ಆರ್.)

**ಗಾಯಿತ್ರೀ** : ಒಂದು ದಿವ್ಯ ಮಂತ್ರ. ಗಾಯಂತಂ ತ್ರಾಯತೇ ಯಸ್ಮಾತ್ ಗಾಯತ್ರೀ ತು ತತಃ ಸ್ಮೃತಾ ಎಂದಿರುವಂತೆ ತನ್ನ ಉಪಾಸಕರನ್ನು ರಕ್ಷಿಸುವುದರಿಂದ ಈ ಮಂತ್ರಕ್ಕೆ ಗಾಯತ್ರೀ ಎಂಬ ಹೆಸರು ಬಂದಿದೆ. ಗಾಯತ್ರೀ ಛಂದಸ್ಸಿನಲ್ಲಿರುವುದ ರಿಂದಲೂ ಇದಕ್ಕೆ ಅದೇ ಹೆಸರು ಬರಲು ಕಾರಣವಾಗಿದೆ. ಛಂದಸ್ಸಿಗೆಲ್ಲ ಮಾತೃಸ್ವರೂಪವಾದದ್ದು ಈ ಗಾಯತ್ರೀ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಗಾಯತ್ರೀ ಛಂದಸಾಮಹಂ (ಛಂದಸ್ಸುಗಳಲ್ಲಿ ನಾನು ಗಾಯತ್ರೀ) ಎಂದಿರುವುದರಿಂದ ಈ ಛಂದಸ್ಸು ಅತ್ಯುತ್ತಮವಾದದ್ದು. ಗಾಯತ್ರೀ ಮಂತ್ರ ಉಪನಿಷತ್ತುಗಳಿಗಿಂತ ಶ್ರೇಷ್ಠವಾದುದು. ಈ ಮಂತ್ರದಲ್ಲಿ ಇಪ್ಪತ್ತನಾಲ್ಕು ಅಕ್ಷರಗಳಿವೆ. ಎಂಟು ಅಕ್ಷರಗಳಿಗೆ ಒಂದು ಪಾದ ವ್ಯವಸ್ಥೆಯಂತೆ ಈ ಮಂತ್ರ ಮೂರು ಪಾದಗಳಿಂದ ಕೂಡಿದೆ. ಉಪನಯನ ಸಂಸ್ಕಾರದಲ್ಲಿ ಉಪನೀತನಿಗೆ ಈ ಮಂತ್ರವನ್ನು ಉಪದೇಶಿಸುತ್ತಾರೆ. ಬ್ರಹ್ಮೋಪದೇಶ ರೂಪವಾದ ಈ ಮಂತ್ರದಿಂದ ಉಪನೀತ ವಿಪ್ರನಾಗುತ್ತಾನೆ. ಮನುಸ್ಮೃತಿಯಲ್ಲಿ ತಿಳಿಸಿರುವಂತೆ ಗಾಯತ್ರಿ ಸಕಲ ವೇದಗಳ ಸಾರವಾದುದು, ಪರಬ್ರಹ್ಮ ಸ್ವರೂಪವುಳ್ಳದ್ದು. ಓಂಕಾರಪೂರ್ವಕ ಸಂಧ್ಯಾಕಾಲಗಳಲ್ಲಿ

ವೇದಮಾತೃವಾದ ಈ ಮಂತ್ರವನ್ನು ಜಪಿಸುವುದರಿಂದ ವೇದಪಠನ ಪುಣ್ಯ ಲಭಿಸುತ್ತದೆ, ಮಹಾಪಾತಕಗಳು ನಶಿಸುತ್ತವೆ.

ವಹ್ನಿಪುರಾಣದಂತೆ ಈ ಮಂತ್ರ ಸವಿತೃದೇವತಾತ್ಮಕವಾದುದು; ಛಂದಸ್ಸು, ಗಾಯತ್ರೀ; ಋಷಿ, ವಿಶ್ವಾಮಿತ್ರ, ಕರ್ಮೇಂದ್ರಿಯಗಳು ಐದು, ಬುದ್ಧೀಂದ್ರಿಯಗಳು ಐದು, ಇಂದ್ರಿಯಾರ್ಥಗಳು ಐದು, ಪಂಚಭೂತಗಳು, ಮನಸ್ಸು ಬುದ್ಧಿ ಆತ್ಮ ಅವ್ಯಕ್ತ – ಈ ಇಪ್ಪತ್ತನಾಲ್ಕು ಗಾಯತ್ರಿಯ ಅಕ್ಷರಗಳು. ಸಪ್ತಲೋಕಗಳು ವ್ಯಾಹೃತಿಗಳು. ಇದಕ್ಕೆ ಶಿರಸ್ಸಾಗಿರುವವ ಪರಮೇಶ್ವರ. ಈ ವಿಧವಾದ ಗಾಯತ್ರಿಯನ್ನು ಜಪಿಸಬೇಕು. ಪ್ರಾತಃಕಾಲದಲ್ಲಿ ಗಾಯತ್ರೀ, ಮಧ್ಯಾಹ್ನದಲ್ಲಿ ಸಾವಿತ್ರಿ, ಸಾಯಂಕಾಲದಲ್ಲಿ ಸರಸ್ವತಿಯನ್ನು ಧ್ಯಾನಿಸಬೇಕು. ಗಾಯತ್ರೀ ಸಾವಿತ್ರೀ ಸರಸ್ವತಿಯರನ್ನು ಆವಾಹನೆ ಮಾಡಿಕೊಂಡು ಋಷಿ ಛಂದಸ್ಸು ದೇವತೆಗಳನ್ನು ಸ್ಮರಿಸಿ ಬಳಿಕ ಈ ಮಂತ್ರವನ್ನು ಜಪಿಸುವುದು ಕ್ರಮ.

ಗಾಯತ್ರೀಮಂತ್ರದೊಡನೆ ಒಂದು ಲಕ್ಷ ತಿಲಹೋಮ ಮಾಡಿದರೆ ಸರ್ವಪಾತಕಗಳೂ ನಶಿಸುತ್ತವೆ. ತುಪ್ಪದಿಂದ ಹೋಮ ಮಾಡಿದರೆ ಆಯಸ್ಸು ಹೆಚ್ಚುತ್ತದೆ. ದಧಿಯಿಂದ ಹೋಮ ಮಾಡಿದರೆ ಮಕ್ಕಳಾಗುತ್ತಾರೆ. ಸಮಿತ್ತಿನಿಂದ ಹೋಮ ಮಾಡಿದರೆ ಗ್ರಹಪೀಡೆ ನಿವಾರಣೆಯಾಗುತ್ತದೆ. ಇದು ಸರ್ವಾಭೀಷ್ಟ ಸಿದ್ಧಿಕರ ಮಂತ್ರ. ಇದನ್ನು ಜಪಿಸಿದವರಿಗೆ ಯಾವ ವಿಧವಾದ ಭಯವೂ ಇರುವುದಿಲ್ಲ. ಪ್ರತಿ ವರ್ಷ ಶ್ರಾವಣ ಮಾಸ ಕೃಷ್ಣ ಪಕ್ಷ ಪಾಡ್ಯದ ದಿವಸ ಮಿಥ್ಯಾಧೀತ (ದೋಷ) ಪ್ರಾಯಶ್ಚಿತ್ತಕ್ಕಾಗಿ ಒಂದು ಸಾವಿರ ಸಂಖ್ಯೆಯಲ್ಲಿ ಗಾಯತ್ರೀ ಜಪ ಅಥವಾ ಹೋಮವನ್ನು ಮಾಡುವುದು ರೂಢಿಯಲ್ಲಿದೆ.

ಗಾಯತ್ರೀ ಬ್ರಹ್ಮನ ಪತ್ನಿ. ಯಾಗದೀಕ್ಷಾಕಾಲದಲ್ಲಿ ಬ್ರಹ್ಮ ತನ್ನ ಪತ್ನಿಯನ್ನು ಯಜ್ಞವಾಟಿಕೆಗೆ ಬರುವಂತೆ ಹೇಳಿಕಳುಹಿಸುತ್ತಾನೆ. ತನ್ನ ಒಡನಾಡಿಯರಿಗಾಗಿ ಕಾಯುತ್ತಿದ್ದ ಆಕೆ ಸಕಾಲಕ್ಕೆ ಬರದೆ ಮುಹೂರ್ತ ಮಿಂಚುತ್ತ ಬರಲು ಕುಪಿತನಾದ ಬ್ರಹ್ಮ ಬೇರೆ ಪತ್ನಿಯನ್ನು ಕರೆತರುವಂತೆ ಇಂದ್ರನಿಗೆ ಆಜ್ಞಾಪಿಸುತ್ತಾನೆ. ಇಂದ್ರ ಕೂಡಲೇ ಭೂಲೋಕಕ್ಕೆ ಹೋಗಿ ಒಬ್ಬ ಸುಂದರಿಯನ್ನು ಕರೆತರಲು ಆಕೆಗೆ ಗಾಯತ್ರೀ ಎಂದು ಹೆಸರಿಟ್ಟು ಗಾಂಧರ್ವ ವಿಧಿಯಿಂದ ಬ್ರಹ್ಮ ವಿವಾಹವಾಗುತ್ತಾನೆ. ಹೀಗೆಂದು ಒಂದು ಪೌರಾಣಿಕ ಕತೆ ಇದೆ.

ಕೆಂಪು ಬಿಳುಪು ಹಳದಿ ನೀಲ ಬಣ್ಣಗಳ ಕಾಂತಿಯಿಂದ ಕೂಡಿರುವವಳೂ ಉಜ್ವಲವಾದ ಮೂರು ಕಣ್ಣುಳ್ಳವಳೂ ಕೆಂಪು ವಸ್ತ್ರವನ್ನು ಧರಿಸಿರುವವಳೂ ವರದಾಭಯ ಹಸ್ತಗಳನ್ನುಳ್ಳವಳೂ ಶಂಖಚಕ್ರಧಾರಣೆಯೂ ಕೈಯಲ್ಲಿ ಕಪಾಲ ಅಂಕುಶ ಜಪಮಾಲೆ ಕಮಲಗಳನ್ನು ಹಿಡಿದಿರುವವಳೂ ಕುಮಾರಿಯೂ ಆಗಿರುವಂತೆ ಗಾಯತ್ರಿ ಸ್ವರೂಪವನ್ನು ಧ್ಯಾನಿಸಬೇಕು.

ವೀರಶೈವ ಪಂಥದ ಕೆರೆಯ ಪದ್ಮರಸನ ದೀಕ್ಷಾಬೋಧೆ ಎಂಬ ಗ್ರಂಥದ ದ್ವಿತೀಯ ಸ್ಥಲದಲ್ಲಿ

ಇನ್ನು ಕೇಳು ಗಾಯತ್ರಿಯ ನಿಜಮಂ
ಸನ್ನುತ ಭೂತಿರುದ್ರಾಕ್ಷಿಗಳಿರಮಂ
ನಿಟಿಲ ತ್ರಿಪುಂಡ್ರಾಂಕಿತಯುಕ್ತಾಂಗಿಯ
ಜಟೆರುದ್ರಾಕ್ಷಭಸಿತ ಸರ್ವಾಂಗಿಯ
ಅಕ್ಷಮಾಲೆ ಜಪಕರದ ಕಮಂಡಲ
ನಿಕ್ಷೇಪಿನಿಸಿದಾಗಮಹೃನ್ಮಂಡಲ
ಋಗ್ಯಜುಸ್ಸಾಮಂ ನಿಜಮೂರುತಿಯ
ಭರ್ಗಭಕ್ತಿಯ ನಿಷ್ಠೆಯ ಮನದರ್ಥಿಯ
ಇದು ಗಾಯತ್ರಿಯ ನಿಜದಾಕಾರಂ

– ಎಂದು ಗಾಯತ್ರಿಯ ಸ್ವರೂಪದ ವಿವರಣೆ ಇದೆ.

ಗಾಯತ್ರೀಯ ಅಕ್ಷರಗಳಲ್ಲಿ ಒಂದೊಂದು ಅಕ್ಷರವೂ ಒಂದೊಂದು ಶ್ಲೋಕದಲ್ಲಿರುವುದನ್ನು ಶ್ರೀಮದ್ವಾಲ್ಮೀಕಿ ರಾಮಾಯಣದಿಂದ ಉದ್ಧರಿಸಿ 24 ಶ್ಲೋಕಗಳುಳ್ಳ ಈ ಗ್ರಂಥ ಭಾಗಕ್ಕೆ ಗಾಯತ್ರೀರಾಮಾಯಣ ಎಂದು ಅಂಕಿತ ಮಾಡಿದ್ದಾರೆ. ಇದನ್ನು ಪ್ರತಿದಿನ ಪಠಿಸುವುದರಿಂದ ಸರ್ವಪಾಪಗಳೂ ನಶಿಸುತ್ತವೆ ಎಂದು ಫಲಶ್ರುತಿ. (ಎಸ್.ಎನ್.ಕೆ.)

**ಗಾಯತ್ರೀ ಛಂದಸ್ಸು :** ಮುಖ್ಯವಾದ ವೈದಿಕ ಛಂದಸ್ಸುಗಳಲ್ಲಿ ಒಂದು. ಋಗ್ವೇದದ 1/4ಭಾಗ ಋಕ್ಕುಗಳು ಈ ಛಂದಸ್ಸಿನಲ್ಲಿವೆ. ಇತರ ವೈದಿಕ ಛಂದಸ್ಸುಗಳಂತೆ ಗಾಯತ್ರಿಯೂ ಉದಾತ್ತಾನುದಾತ್ತಸ್ವರಿತಳೆಂಬ ಸ್ವರಗಳೊಡನೆ ಹೇಳಲ್ಪಡುತ್ತದೆ. ಇದರ ಸಾಮಾನ್ಯ ಲಕ್ಷಣ ಹೀಗೆ: 3 ಪಾದಗಳು: ಪಾದಕ್ಕೆ 8 ಅಕ್ಷರಗಳು: ಪ್ರತಿಯೊಂದು ಪಾದವನ್ನು 4 ಅಕ್ಷರಗಳ 2 ಗಣಗಳನ್ನಾಗಿ ವಿಭಜಿಸಬಹುದು. ಹೀಗೆ ವಿಭಜಿಸಿದಾಗ 2ನೆಯ ಗಣದಲ್ಲಿ 2 ಬಾರಿ ಹ್ರಸ್ವದೀರ್ಘಾಕ್ಷರಗಳ ಅನುಕ್ರಮವಾದ ವಿನ್ಯಾಸ (∪–,∪–) ಸಾಮಾನ್ಯವಾಗಿ ಕಂಡಬರುತ್ತದೆ.

ಉದಾಹರಣೆಗೆ ಋಗ್ವೇದದ ಮೊದಲ ಮಂತ್ರವನ್ನೇ ನೋಡಬಹುದು.

```
   |         |
ಅಗ್ನಿಮೀಳೇ  ಪುರೋಹಿತಂ
   |
ಯಜ್ಞಸ್ಯ ದೇವಮೃತ್ವಿಜಂ
   –        –
   |        |
ಹೋತಾರಂ ರತ್ನಧಾತಮಂ (ಸೂಕ್ತ 1 ಮಂತ್ರ 1)
           –
```

ಇದೇ ಮಂತ್ರವನ್ನು ಗಣ ವಿಭಜಿಸಿ 2ನೆಯ ಗಣದಲ್ಲಿ ಲಘುಗುರುಗಳ ವಿನ್ಯಾಸವನ್ನು ಪರಿಶೀಲಿಸಿದಾಗ ಹೀಗಿರುತ್ತದೆ:

∪– ∪–
ಅಗ್ನಿಮೀಳೇ । ಪುರೋಹಿತಂ
∪– ∪–
ಯಜ್ಞಸ್ಯ ದೇ । ವಮೃತ್ವಿಜಂ
∪– ∪–
ಹೋತಾರಂ ರ । ತ್ನ ಧಾತಮಂ

ಇನ್ನೂ ಒಂದು ಉದಾಹರಣೆಯನ್ನು ನೋಡಬಹುದು.

∪– ∪–
ತದ್ವಿಷ್ಣೋಃ ಪ । ರಮಂ ಪದಂ
∪– ∪–
ಸದಾ ಪಶ್ಯಂ । ತಿ ಸೂರಯಃ
∪– ∪–
ದಿವೀವ ಚ । ಕ್ಷುರಾತತಂ

ಹೀಗೆಯೇ ಗಾಯತ್ರಿಯ ಇನ್ನೂ ಅನೇಕ ಉದಾಹರಣೆಗಳನ್ನು ನೋಡಿದರೂ ಪ್ರತಿ ಪಾದದ ಉತ್ತರಾರ್ಧದ 4 ಅಕ್ಷರಗಳಲ್ಲಿ ಎಂದರೆ 2ನೆಯ ಗಣದಲ್ಲಿ ಮೇಲೆ ತೋರಿಸಿರುವಂಥ ರೀತಿಯಲ್ಲಿ ದ್ವಿಲಗ ವಿನ್ಯಾಸ (∪–, ∪–) ಕಂಡುಬರುತ್ತದೆ. ಹೀಗೆ ಬರಲೇಬೇಕೆಂಬ ನಿರ್ಬಂಧವಿಲ್ಲದೆಯೂ ಆ ವಿನ್ಯಾಸ ಬಲುಮಟ್ಟಿಗೆ ಕ್ರಮ ತಪ್ಪದೆ ಬಂದಿರುವುದು ಗಮನಿಸತಕ್ಕದ್ದಾಗಿದೆ.

ಒಮ್ಮೊಮ್ಮೆ ಈ ಕ್ರಮ ವಿಪರ್ಯಾಯಗೊಂಡು ದೀರ್ಘಹ್ರಸ್ವಲಯವೂ (–∪ ) ದೀರ್ಘ ದೀರ್ಘಲಯವೂ (– –) ಬರುವುದುಂಟು.

ಉದಾಹರಣೆಗೆ ಒಂದು ಅಂಥ ಗಾಯತ್ರಿಯನ್ನು ನೋಡಬಹುದು.

– ∪∪ –
ಸ ಘಾ ನಃ ಸೂ । ನುಃ ಶವಸಾ
– ∪ – –
ಪೃಥುಪ್ರಗಾ । ಮಾ ಸುಶೇವಃ
– ∪ – –
ಮೀಢ್ವಾ ಅಸ್ಮಾ । ಕಂ ಬಭೂಯಾತ್

ಹೀಗಿದ್ದರೂ ಇಂಥ ವ್ಯತ್ಯಾಸಗಳಿಂದ ಉದಾತ್ತಾದಿಯಾದ ಸ್ವರಸಂಗೀತಕ್ಕೆ ಯಾವ ಆತಂಕವೂ ಉಂಟಾಗುವುದಿಲ್ಲ. ಅಲ್ಲದೆ ಅಕ್ಷರ ನಿಯಮ ಸರಿಹೋಗದ ಕಡೆಗಳಲ್ಲಿ, ಹೆಚ್ಚುಕಡಿಮೆಯ ಅಕ್ಷರ ಸಂಖ್ಯೆಯಿದ್ದಲ್ಲಿ, ಕೆಲವು ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಪಾದಕ್ಕೆ 8 ಅಕ್ಷರಗಳ 3 ಪಾದಗಳನ್ನುಳ್ಳ ಉಕ್ತಪಾದ ಗಾಯತ್ರಿಯಲ್ಲದೆ ಅಕ್ಷರ ಸಂಖ್ಯೆಯಲ್ಲಿ ಪಾದಪಾದಕ್ಕೆ ಉಂಟಾಗುವ ವ್ಯತ್ಯಾಸಗಳಿಗೆ ಅನುಗುಣವಾಗಿ ನಾಗೀ ಗಾಯತ್ರಿ, ವಾರಾಹೀ ಗಾಯತ್ರಿ ಮುಂತಾದ ಭೇದಗಳನ್ನು ಮಾಡಿರುವುದು ಕೂಡ ಕಂಡುಬರುತ್ತದೆ: (i) ಚತುಷ್ಪಾದ್ಗಾಯತ್ರಿ : 6×4 (ii) ಪಾದನಿಚೃದ್ಗಾಯತ್ರಿ: 7×3 ( iii) ಅತಿಪಾದ ನಿಚೃದ್ಗಾಯತ್ರಿ : 6,8,7=21 (iv) ನಾಗೀಗಾಯತ್ರಿ: 9,9,6=24 (v) ವಾರಾಹೀ ಗಾಯತ್ರಿ: 6,9,9=24 (vi) ವರ್ಧಮಾನಾ ಗಾಯತ್ರಿ: 6,7,8=21 (vii) ಪ್ರತಿಷ್ಠಾ ಗಾಯತ್ರಿ: 8,7,6=21

ಮಾದರಿಗೆ ಪಾದನಿಚೃದ್ಗಾಯತ್ರಿ :
ಪವಸ್ವ ವಿಶ್ವಚರ್ಷ
ಣೇSಭಿ ವಿಶ್ವಾನಿ ಕಾವ್ಯಾ
ಸಖಾ ಸಖಿಭ್ಯಃ ಈಡ್ಯ ॥ (ಋಗ್ವೇದ್ 9–3–66)

ಗಾಯತ್ರಿ ಸಂಬಂಧವಾದ ಇನ್ನೊಂದು ವೈಲಕ್ಷಣ್ಯವೆಂದರೆ, ಗಾಯತ್ರಿಯ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪಾದಗಳನ್ನು ತ್ರಿಷ್ಟುಪ್, ಜಗತಿ ಮುಂತಾದವುಗಳ ಪಾದಗಳೊಡನೆ ಕೂಡಿಸಿರುವುದು. ಉದಾಹರಣೆಗೆ : (i) ಕಕುಭೋಷ್ಣಿಕ್–ಗಾಯತ್ರಿ, ಜಗತಿ, ಗಾಯತ್ರಿ; ಪುರೋಷ್ಣಿಕ್–ಜಗತಿ, ಗಾಯತ್ರಿ, ಗಾಯತ್ರಿ; ಪರೋಷ್ಣಿಕ್–ಗಾಯತ್ರಿ, ಗಾಯತ್ರಿ, ಜಗತಿ (ii) 4 ಪಾದಗಳ ಬೃಹತಿ–1 ಜಗತಿ+3 ಗಾಯತ್ರಿ, (iii) 4 ಪಾದಗಳ ಪಂಕ್ತಿ–2 ಜಗತಿ + 2 ಗಾಯತ್ರಿ, ಇದೇ ರೀತಿಯಲ್ಲಿ ತ್ರಿಷ್ಟುಪ್ ಮತ್ತು ಗಾಯತ್ರಿಯ ಪಾದಗಳನ್ನೂ ಕೂಡಿಸಿ ಪುರಸ್ತಾಜ್ಜ್ಯೋತಿ (1 ತ್ರಿ + 4 ಗಾ), ಮಧ್ಯೇಜ್ಜ್ಯೋತಿ (2 ಗಾ + 1 ತ್ರಿ + 2 ಗಾ). ಉಪರಿಷ್ಟಾಜ್ಜ್ಯೋತಿ (4 ಗಾ + 1 ತ್ರಿ) ಎಂಬುದಾಗಿ ಭೇದಗಳನ್ನು ಕಲ್ಪಿಸಿರುವುದೂ ಉಂಟು. (ಟಿ.ವಿ.ವಿ.)

**ಗಾರ್ ಮೀನು :** ಬೆಲೋನಿಫಾರ್ಮೀಸ್ ಗಣದ ಬೆಲೋನಿಡೀ ಕುಟುಂಬಕ್ಕೆ ಸೇರಿದ ಕೆಲವು ಜಾತಿಯ ಮೀನುಗಳಿಗಿರುವ ಸಾಮಾನ್ಯ ಹೆಸರು. ಸುರಳಿ, ಕೊಂಟಿ, ಕೊಕ್ಕರೆ ಮೀನು ಎಂದು ಸ್ಥಳೀಯವಾಗಿ ಕರೆಯುತ್ತಾರೆ. ಸ್ಟ್ರಾಂಗಿಲ್ಯೂರ ಸ್ಟ್ರಾಂಗಿಲ್ಯೂರ, ಸಾ. ಕ್ರೊಕೊಡೈಲಸ್, ಸಾ. ಇನ್ಸಿಸ, ಸಾ. ಸಿಕೋನಿಯ, ಕ್ಸಿನೆಂಟಡಾನ್ ಕ್ಯಾನಸಿಲ, ಬೆಲೋನಿ ಮುಂತಾದವು ಪ್ರಮುಖ ಗಾರ್‌ಮೀನುಗಳು. ಇವುಗಳಲ್ಲಿ ಹೆಚ್ಚಿನವು ಸಾಗರವಾಸಿಗಳು. ಕೆಲವು ಸಿಹಿನೀರಿನ ಕೊಳದಲ್ಲೂ, ನದಿಗಳಲ್ಲೂ ವಾಸಿಸುತ್ತವೆ. ಬಲು ಉದ್ದವಾದ ದೇಹ, ಕೊಕ್ಕಿನಂತೆ ಉದ್ದವಾದ ಮೂತಿ, ಸಣ್ಣ ಕಣ್ಣುಗಳು,



ಸಣ್ಣದಾದ ಈಜುರೆಕ್ಕೆಗಳು, ಅಷ್ಟಾಗಿ ಕವಲೊಡೆದಿರದ ಬಾಲದ ಈಜು ರೆಕ್ಕೆ (ಟ್ರಂಕೇಟೆಡ್), ಪಾರ್ಶ್ವರೆಕ್ಕೆ ಹೆಚ್ಚುಕಡಿಮೆ ಉದರ ಭಾಗದಲ್ಲಿರುವುದು. ಗುದದ ಮತ್ತು ಬೆನ್ನು ಈಜುರೆಕ್ಕೆಗಳು ಬಾಲದ ಈಜುರೆಕ್ಕೆಗೆ ಸಮೀಪದಲ್ಲಿರುವುದು. – ಇವು ಗಾರ್ ಮೀನುಗಳ ಪ್ರಮುಖ ಲಕ್ಷಣಗಳು. ವಿಚಿತ್ರ ಲಕ್ಷಣವೆಂದರೆ ಇವುಗಳ ಮೂಳೆ ಹಸಿರುಬಣ್ಣಕ್ಕಿರುವುದು. ಮೂತಿ ಬಲು ಉದ್ದವಾಗಿ ಚೂಪಾಗಿರುವುದರಿಂದ ಈ ಮೀನನ್ನು ಸೂಜಿ ಮೀನು (ನೀಡಲ್ ಫಿಶ್), ಕೊಕ್ಕು ಮೀನು (ಬಿಲ್ ಫಿಶ್) ಎಂದೂ ಕರೆಯುವುದುಂಟು. ಇವು ಸಾಮಾನ್ಯವಾಗಿ ನೀರಿನ ಮೇಲ್ಮಟ್ಟದಲ್ಲಿ ಈಜುತ್ತ ಇದ್ದು ಆಗಿಂದಾಗ್ಗೆ ನೀರಿನಿಂದ ಮೇಲಕ್ಕೆ ನೆಗೆಯುತ್ತಿರುತ್ತವೆ. ಕ್ಸಿನೆಂಟಡಾನ್ ಕ್ಯಾನಸಿಲ, ಜಾತಿಯ ಮೀನು ಕರ್ನಾಟಕದ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಲ್ಲಿ ಕಾಣಸಿಗುತ್ತವೆ, ಇದನ್ನು ಸಿಹಿನೀರಿನ ಗಾರ್ ಮೀನು, ಕೊಕ್ಕರೆ ಮೀನು ಎಂದು ಕರೆಯುತ್ತಾರೆ.

ಗಾರ್‌ಮೀನುಗಳು ಮಾಂಸಾಹಾರಿಗಳು; ಹೆರ್ರಿಂಗ್, ಮ್ಯಾಕರಲ್, ಪಿಲ್ಚರ್ಡ್ ಮುಂತಾದ ಇತರ ಜಾತಿಯ ಮೀನುಗಳ ಮರಿಗಳನ್ನು ಹಿಡಿದು ತಿನ್ನುತ್ತವೆ. ಆಹಾರವನ್ನು ಹಿಡಿಯಲು ತಮ್ಮ ಉದ್ದವಾದ ಮೂತಿಯನ್ನು ಕೊಕ್ಕಿನಂತೆ ಬಳಸುತ್ತವೆ. ಕಡಲಿನಿಂದ ಗಾರ್ ಮೀನುಗಳನ್ನು ಅಲ್ಪ ಪ್ರಮಾಣದಲ್ಲಿ ಹಿಡಿಯಲಾಗುತ್ತದೆ. ಗಾರ್ ಮೀನುಗಳ ಮಾಂಸ ಸಾಕಷ್ಟು ರುಚಿಯಾಗಿದ್ದರೂ ಅಷ್ಟಾಗಿ ಹೆಸರುವಾಸಿಯಲ್ಲ. ತಾಜಾ ರೂಪದಲ್ಲಿ ಮಾರಾಟ ಮಾಡಲಾಗುತ್ತದೆ. (ಬಿ.ಎಚ್.ಎಂ.)

**ಗಾರಿಬಾಲ್ಡಿ, ಜೂಸೆಪ್ಪೆ :** 1807–82. ಇಟಲಿಯ ರಾಷ್ಟ್ರಪ್ರೇಮಿ, ಹೋರಾಟಗಾರ, ಗಣರಾಜ್ಯವಾದಿ, ನಾಡಿನ ಏಕೀಕರಣವನ್ನು ಸಾಧಿಸಲು ಬಹು ಮಟ್ಟಿಗೆ ಕಾರಣರಾದವರ ಲ್ಲೊಬ್ಬ. ಇವನು 1807ರ ಜುಲೈ 4ರಂದು ಇಟಲಿ ದೇಶದಲ್ಲಿದ್ದ ಫ್ರಾನ್ಸ್ ಚಕ್ರಾಧಿಪತ್ಯಕ್ಕೆ ಸೇರಿದ ನೀಸ್ ನಗರದಲ್ಲಿ ಜನಿಸಿದ ಮಗ ಪಾದ್ರಿಯಾಗಬೇಕೆಂಬುದು ತಂದೆತಾಯಿಯರ ಅಭಿಲಾಷೆಯಾಗಿತ್ತು. ಆದರೆ ಇವನನ್ನು ಕಡಲು ಆಕರ್ಷಿಸಿತು. ಇವನು ವ್ಯಾಪಾರ ಹಡಗೊಂದರಲ್ಲಿ ಬಹುಕಾಲ ನಾವಿಕನಾಗಿದ್ದ. ಇಟಲಿಯ ಕ್ರಾಂತಿ ನಾಯಕ ಜೂಸೆಪ್ಪೆ ಮಾಟ್ಸೀನಿಯ ಪ್ರಭಾವಕ್ಕೊಳಗಾಗಿ, ಅವನ (ಯಂಗ್ ಇಟಲಿ) ಯುವ ಇಟಲಿ ಸಂಘದ ಸದಸ್ಯನಾದ. ಪೈಮಾಂತೆಯಲ್ಲಿ ಜನರ ಬಂಡಾಯವನ್ನೆಬ್ಬಿಸುವ ಸಂಚೊಂದರಲ್ಲಿ (1834) ಭಾಗವಹಿಸಿದ್ದನೆಂಬುದು ಬಯಲಾದಾಗ ಅವನು ತಪ್ಪಿಸಿಕೊಂಡು ಓಡಿ ಹೋಗಿ ದಕ್ಷಿಣ ಅಮೆರಿಕ ತಲಪಿ, ಅಲ್ಲಿ 1836 ರಿಂದ 1848ರವರೆಗೆ ಅಲೆದಾಡಿದ ಅವನ ಗೈರುಹಾಜರಿಯಲ್ಲಿ ಅವನ ಮೇಲೆ ಮರಣದಂಡನೆಯ ಶಿಕ್ಷೆ ವಿಧಿಸಿತು.

ದಕ್ಷಿಣ ಅಮೆರಿಕದಲ್ಲೂ ಇವನು ಸುಮ್ಮನಿರಲಿಲ್ಲ; ಬ್ರೆಜಿಲ್ ವಿರುದ್ಧ ಬಂಡೆದ್ದಿದ್ದ ರೀಯೊ ಗ್ರಾಂಡೆ ದೂ ಸೂಲ್ ಪರವಾಗಿ ಕಡಲುಗಳ್ಳನಾಗಿ ಕಾರ್ಯಾಚರಣೆ ನಡೆಸಿದ. ಅರ್ಜೆಂಟೀನದ ವಿರುದ್ಧ ಉರುಗ್ವೆಯ ಪರವಾಗಿ ಹೋರಾಡಿದ. ಇವನ ನೆರವಿನಿಂದ 1843ರಲ್ಲಿ ಇಟಾಲಿಯನ್ ರೆಡ್‌ಷರ್ಟ್ ಸೈನ್ಯದಳವೊಂದನ್ನು (ಕೆಂಪಂಗಿಗಳು) ನಿರ್ಮಿಸ ಲಾಯಿತು. ಗೆರಿಲ್ಲಾ ಯುದ್ಧಕಾರ್ಯಾಚರಣೆಯಲ್ಲಿ ಗಾರಿಬಾಲ್ಡಿ ವಿಶೇಷಾನುಭವವನ್ನು ಸಂಪಾದಿಸಿದ್ದು ದಕ್ಷಿಣ ಅಮೆರಿಕದಲ್ಲಿದ್ದಾಗ ಇವನು ಆನ ಮೇರಿಯ ರಿಬೇರೊ ದ ಸಿಲ್ವ ಎಂಬವಳನ್ನು ಎತ್ತಿಕೊಂಡು ಹೋಗಿ, ಆಕೆಯ ಮೊದಲ ಗಂಡ ತೀರಿಕೊಂಡ ಮೇಲೆ ಮದುವೆಯಾದ (1842). ಗಾರಿಬಾಲ್ಡಿಯ ಹೋರಾಟಗಳಲ್ಲಿ ಅವಳೂ ಇವನೊಡನೆ ಇರುತ್ತಿದ್ದಳು. ಆಕೆ 1849ರಲ್ಲಿ ನಿಧನಳಾದಳು.

ಇಟಲಿಯಲ್ಲಿ ಕ್ರಾಂತಿ ಪರಿಸ್ಥಿತಿ ಏರ್ಪಟ್ಟಿದೆಯೆಂಬ ಸುದ್ದಿ ಕೇಳಿ ಗಾರಿಬಾಲ್ಡಿ ತನ್ನ ಕೆಲವು ಅನುಯಾಯಿಗಳೊಂದಿಗೆ 1848ರಲ್ಲಿ ತನ್ನ ನಾಡಿಗೆ ಹಿಂದಿರುಗಿದ. ಇಟಲಿಯ ಎಲ್ಲ ರಾಜ್ಯಗಳಲ್ಲೂ ಬಂಡಾಯಸ್ಥಿತಿಯಿತ್ತು. ಸಾರ್ಡೆನ್ಯಾ ಆಸ್ಟ್ರಿಯಗಳ ನಡುವೆ ಯುದ್ಧ ಆರಂಭವಾಗಿತ್ತು. ಗಾರಿಬಾಲ್ಡಿ ಗಣತಂತ್ರವಾದಿಯಾಗಿದ್ದರೂ ಸಾರ್ಡೆನ್ಯಾದ ದೊರೆಗೆ ನೆರವು ನೀಡಲು ಮುಂದೆ ಬಂದ. ಆದರೆ ದೊರೆ ಇದರಲ್ಲಿ ಉತ್ಸಾಹ ತೋರಲಿಲ್ಲ. ಆದ್ದರಿಂದ ಇವನು ಮಿಲಾನಿನ ನೆರವಿಗೆ ಹೋದ. ಸಾರ್ಡೆನ್ಯ ಮಿಲಾನ್‌ಗಳು ಸೋತವು. ಮಿಲಾನ್ ಶರಣಾಗತವಾಯಿತು. ಗಾರಿಬಾಲ್ಡಿ ಸಣ್ಣ ಪಡೆಯೊಂದಿಗೆ ಬೆಟ್ಟಗಾಡು ಸೇರಿ ಆಸ್ಟ್ರಿಯನರಿಗೆ ಕಿರುಕುಳ ಕೊಡಲು ಯತ್ನಿಸಿದ.



ಆದರೆ ವಿಫಲನಾಗಿ, ಗಡಿ ದಾಟಿ ಸ್ವಿಟ್ಜರ್ಲೆಂಡಿಗೆ ಹೋಗಿ ಅಲ್ಲಿಂದ ನೀಸ್ ತಲುಪಿದ. ಇಟಲಿಯಲ್ಲಿ ಆಗ ಇನ್ನೂ ಕ್ರಾಂತಿಕಾರಿ ಸರ್ಕಾರಗಳು ಉಳಿದಿದ್ದುವು. ಆದರೆ ಅವು ಯಾವುವೂ ಗಾರಿಬಾಲ್ಡಿಯ ನೆರವನ್ನು ಬಯಸಲಿಲ್ಲ. 1848ರ ನವೆಂಬರಿನಲ್ಲಿ 9ನೆಯ ಪೋಪ್ ಪಯಸ್ ರೋಮಿನಿಂದ ಓಡಿ ಹೋದಾಗ ಗಾರಿಬಾಲ್ಡಿ ರೋಮಿನ ಜನರಿಂದ ಆಹ್ವಾನಿತನಾಗಿ ಅದನ್ನು ಪ್ರವೇಶಿಸಿ ಫ್ರೆಂಚರ ಆಕ್ರಮಣ ವನ್ನೆದುರಿಸಿದ. ಆಗ ಇವನ ಧೈರ್ಯಸಾಹಸಗಳೂ ನಾಯಕತ್ವ ಗುಣವೂ ಸಂಘಟನೆಯ ಚಾತುರ್ಯವೂ ಪ್ರಕಾಶಕ್ಕೆ ಬಂದುವು. ಆದರೂ ಕೊನೆಗೆ ಆ ನಗರ ಶತ್ರುಗಳ ವಶವಾಯಿತು. ಫ್ರಾನ್ಸ್, ಆಸ್ಟ್ರಿಯ, ಸ್ಪೇನ್, ನೇಪಲ್ಸ್ ಪಡೆಗಳು ಇವನನ್ನು ಬೆನ್ನಟ್ಟಿದುವು. ಗಾರಿಬಾಲ್ಡಿ ಹೆದರದೆ, ಶರಣಾಗದೆ ಹಿನ್ನಡೆದು ತಪ್ಪಿಸಿಕೊಂಡು ಅಮೆರಿಕಕ್ಕೆ ಹೋದ. ಸ್ವಾತಂತ್ರ್ಯ ಯೋಧನೆಂದೂ ಎರಡು ಪ್ರಪಂಚಗಳ ವೀರನೆಂದೂ ಗಾರಿಬಾಲ್ಡಿ ಪ್ರಖ್ಯಾತನಾದ. 1854ರಲ್ಲಿ ಇಟಲಿಗೆ ಹಿಂದಿರುಗಲು ಇವನಿಗೆ ಅವಕಾಶ ದೊರಕಿತು. ಕಾರ್ಸಿಕ ಸಾರ್ಡೆನ್ಯಾಗಳ ನಡುವಣ ಕಾಪ್ರೇರಾ ದ್ವೀಪದ ಒಂದು ಭಾಗವನ್ನು ಕೊಂಡ. ಅಲ್ಲೆ ನೆಲಸುವುದು ಇವನ ಉದ್ದೇಶ ವಾಗಿತ್ತು. ಅಷ್ಟರಲ್ಲಿ ಮತ್ತೆ ಹೋರಾಟಕ್ಕೆ ಕರೆ ಬಂತು. ಸಾರ್ಡೆನ್ಯಾಗೆ ಆಗ ಕಾವೂರ್ ಪ್ರಧಾನಿಯಾಗಿದ್ದ. ಆಸ್ಟ್ರಿಯದ ವಿರುದ್ಧ ವಾಗಿ ಮಾಡಲಿದ್ದ ಯುದ್ಧದಲ್ಲಿ ಗಾರಿಬಾಲ್ಡಿಯ ನೆರವು ಬಯಸಿದ. ಅಲ್ಲಿಯ ದೊರೆಗೆ ನೆರವು ನೀಡಲು ಗಾರಿಬಾಲ್ಡಿ ಸಿದ್ಧನಿದ್ದನಾದರೂ ದೇಶಭ್ರಷ್ಟನೆನಿಸಿದ್ದ ಇವನಿಗೆ ಮನ್ನಣೆ ನೀಡುವುದು ಕಷ್ಟವಾಗಿತ್ತು. ಅಲ್ಲದೆ ಕಾವೂರ್ ಗಾರಿಬಾಲ್ಡಿಗಳ ಉದ್ದೇಶ ಗಳು ಪರಸ್ಪರ ಭಿನ್ನವಾಗಿದ್ದುವು. ಆದರೂ ಕೊನೆಗೆ ಇವರ ನಡುವೆ ಒಪ್ಪಂದವಾಯಿತು. ದೊರೆ ವಿಕ್ಟರ್ ಇಮ್ಯಾನ್ಯುಯಲ್‌ನ ಅಡಿಯಲ್ಲಿ ಗಾರಿಬಾಲ್ಡಿ

ಮೇಜರ್ ಜನರಲ್ ಆದ. ಇವನ ಸ್ವಯಂಯೋಧರ ಪಡೆ ಆಸ್ಟ್ರಿಯನ್ ಸೇನೆಯ ಹಾದಿ ತಪ್ಪಿಸಿ ಕಾದಿ ಅದನ್ನು ಸೋಲಿಸಿತು. ಆಲ್ಪ್ಸ್ ಪ್ರದೇಶ ವಿಮೋಚನೆಗೊಂಡಿತು. ಶಾಂತಿ ಕೌಲು ಏರ್ಪಟ್ಟಿತು. ಅನಂತರ ಗಾರಿಬಾಲ್ಡಿ ಟಸ್ಕನಿಯ ಕ್ರಾಂತಿಕಾರಿ ಸರ್ಕಾರಕ್ಕೆ ಸಹಾಯ ಸಲ್ಲಿಸಿದ. ಪೋಪ್ ರಾಜ್ಯದ ಮೇಲೂ ಏರಿಹೋಗಲು ಇವನು ಸಿದ್ಧನಾದ. ಅಷ್ಟರಲ್ಲಿ ದೊರೆ ಇಮ್ಯಾನ್ಯುಯಲನಿಂದ ತಡೆ ಬಂತು. ಗಾರಿಬಾಲ್ಡಿ ಮೇಜರ್ ಜನರಲ್ ಹುದ್ದೆಗೆ ರಾಜೀನಾಮೆ ನೀಡಿದ. ಸವಾಯನ್ನೂ ಗಾರಿಬಾಲ್ಡಿಯ ಜನ್ಮ ಸ್ಥಳವಾದ ನೀಸನ್ನೂ ಸಾರ್ಡಿನ್ಯಾ ಸರ್ಕಾರ ಫ್ರಾನ್ಸಿಗೆ ಒಪ್ಪಿಸಿದ್ದರಿಂದ ಇವನಿಗೆ ಕೋಪ ಬಂತು. ಅಲ್ಲಿಯ ಪಾರ್ಲಿಮೆಂಟನ್ನು ಪ್ರವೇಶಿಸಿ ಈ ಕ್ರಮವನ್ನು ಪ್ರತಿಭಟಿಸಿದ.

ನೇಪಲ್ಸ್ ಸಿಸಿಲಿಗಳ ರಾಜನಾಗಿದ್ದ ಎರಡನೆಯ ಫ್ರಾನ್ಸಿಸನ ವಿರುದ್ಧ ಸಿಸಿಲಿಯ ಪ್ರಜೆಗಳು ಬಂಡಾಯ ಹೂಡಿದ್ದರು. ಗಾರಿಬಾಲ್ಡಿ 1860ರ ಮೇ ತಿಂಗಳಲ್ಲಿ ಸಿಸಿಲಿಯ ದಂಡಯಾತ್ರೆಗೆ ಎರಡು ಹಡಗುಗಳಲ್ಲಿ ಸುಮಾರು 1150 ಸ್ವಯಂ ಯೋಧರ ಮುಂದಾಳಾಗಿ ಜಿನೀವದಿಂದ ಹೊರಟ. ಅನಂತರ ಇವರು ಸಹಸ್ರರು ಎಂದು ಪ್ರಸಿದ್ಧರಾದರು. ಕೆಂಪಂಗಿ ಇವರ ಸಮವಸ್ತ್ರ. ವಿಕ್ಟರ್ ಎಮ್ಯಾನ್ಯುಯಲನ ಹೆಸರಿನಲ್ಲಿ ಸಿಸಿಲಿ ದ್ವೀಪದ ಸರ್ವಾಧಿಕಾರಿಯೆಂದು ಗಾರಿಬಾಲ್ಡಿ ಘೋಷಿತನಾದ. ಸಿಸಿಲಿಯಲ್ಲಿದ್ದ ಫ್ರಾನ್ಸಿಸನ 24000 ಸೈನಿಕರನ್ನು ದಿಟ್ಟ ಹೋರಾಟದಿಂದ ಗಾರಿಬಾಲ್ಡಿ ಸೋಲಿಸಿದ. ಅನಂತರ ನೇಪಲ್ಸಿನ ಆಕ್ರಮಣಕ್ಕೆ ಹೋದ. ಅದೂ ಬಹುತೇಕ ಇವನ ವಶವಾಯಿತು. ವಿಕ್ಟರ್ ಎಮ್ಯಾನ್ಯುಯಲ್ ನೇಪಲ್ಸ್ ಪ್ರವೇಶಿಸಿದಾಗ ಅವನೊಂದಿಗೆ ಗಾರಿಬಾಲ್ಡಿಯೂ ಇದ್ದ. ಆದರೆ ದೊರೆಯ ಸನ್ಮಾನವನ್ನು ಸ್ವೀಕರಿಸಲೊಲ್ಲದೆ ಕಾಪ್ರೇರಾಗೆ ಹಿಂದಿರುಗಿದ.

ಗಾರಿಬಾಲ್ಡಿಗೆ ಅಧಿಕಾರದ ಆಸೆ ಸ್ವಲ್ಪವೂ ಇರಲಿಲ್ಲವಾದರೂ ಇವನ ಬಗ್ಗೆ ಇಟಲಿಯ ಸರ್ಕಾರ ಎಂದಿಗೂ ನೆಮ್ಮದಿಯಾಗಿರಲಿಲ್ಲ. ಗಾರಿಬಾಲ್ಡಿಯ ಅನುಯಾಯಿ ಗಳನ್ನು ಸರ್ಕಾರ ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದ್ದದ್ದು ಗಾರಿಬಾಲ್ಡಿಗೆ ಕೋಪವನ್ನುಂಟು ಮಾಡಿತು. ಗಾರಿಬಾಲ್ಡಿ ಗೆದ್ದ ಪ್ರಾಂತ್ಯಗಳ ಆಡಳಿತ ಸಮರ್ಪಕವಾಗಿರಲಿಲ್ಲ. ಆದ್ದರಿಂದ ಗಾರಿಬಾಲ್ಡಿ ಸರ್ಕಾರವನ್ನು ಕಟುವಾಗಿ ಟೀಕಿಸುತ್ತಿದ್ದ. ಇಟಲಿಯ ಏಕೀಕರಣ ಕಾರ್ಯವನ್ನು ಪೂರ್ಣಗೊಳಿಸುವುದು ಅವನ ಇಚ್ಛೆಯಾಗಿತ್ತು. ರೋಂ ವೆನಿಸ್‌ಗಳ ವಿರುದ್ಧ ಕಾರ್ಯಾಚರಣೆಯಲ್ಲಿ ಇಟಲಿಯ ಸರ್ಕಾರ ಇವನಿಗೆ ಹೆಚ್ಚಿನ ನೆರವು ನೀಡಲಿಲ್ಲ. ಗಾರಿಬಾಲ್ಡಿಯನ್ನೂ ಇವನ ಅನುಯಾಯಿಗಳನ್ನೂ ಅದು ಬಂಧಿಸಿ ವಿಮೋಚನೆಗೊಳಿಸಿತು. ಗಾರಿಬಾಲ್ಡಿ 1864ರಲ್ಲಿ ಲಂಡನಿಗೆ ಹೋದಾಗ ಇವನಿಗೆ ಅದ್ಭುತವಾದ ಸ್ವಾಗತ ದೊರಕಿತು. 1867ರಲ್ಲಿ ಇವನು ಇನ್ನೊಮ್ಮೆ ರೋಮಿನ ಮೇಲೆ ಏರಿ ಹೋದ. ಸರ್ಕಾರ ಇವನನ್ನು ದಸ್ತಗಿರಿ ಮಾಡಿ ಕಾಪ್ರೇರಾಗೆ ಕಳುಹಿಸಿಕೊಟ್ಟಿತು. ಇಟಲಿಯ ಸರ್ಕಾರ ಇವನಿಗೆ ದಿಗ್ಬಂಧನ ವಿಧಿಸಲು ಹವಣಿಸುತ್ತಿದಾಗ ಇವನು ತಪ್ಪಿಸಿಕೊಂಡು ರೋಂ ಪ್ರದೇಶವನ್ನು ಹೊಕ್ಕ. ಇವನ ಪಡೆಗಳಿಗೆ ಸೋಲಾಯಿತು. ಇವನು ಇಟಲಿಯ ಎಲ್ಲೆಯನ್ನು ದಾಟಿ ಬಂದಾಗ ಸರ್ಕಾರ ಇವನನ್ನು ಮತ್ತೆ ದಸ್ತಗಿರಿ ಮಾಡಿ ಕಾಪ್ರೇರಾಗೆ ಕಳುಹಿಸಿತು. 1870ರಲ್ಲಿ ಗಾರಿಬಾಲ್ಡಿ ಇನ್ನೊಂದು ಸೇನೆಯನ್ನು ಸಜ್ಜುಗೊಳಿಸಿದ. ಫ್ರಾನ್ಸ್ – ಜರ್ಮನಿ ಯುದ್ಧದಲ್ಲಿ ಪರ್ಷಿಯ ವಿರುದ್ಧ ಫ್ರಾನ್ಸಿಗೆ ನೆರವು ನೀಡುವುದು ಉದ್ದೇಶವಾಗಿತ್ತು. ಇವನ ನೆರವು ತುಂಬ ಉಪಯುಕ್ತವೆನಿಸಿತು. ಬಾರ್ಡೋದ ರಾಷ್ಟ್ರೀಯ ಸಭೆಗೆ ಗಾರಿಬಾಲ್ಡಿ ಆಯ್ಕೆ ಹೊಂದಿದ. ಆದರೆ ಅದರಲ್ಲಿರಲಾರದೆ ರಾಜೀನಾಮೆ ಕೊಟ್ಟ. ಅನಂತರ ಇವನು ರಾಜಕೀಯದಲ್ಲಿ ವಿಶೇಷವಾದ ಪಾತ್ರ ವಹಿಸಲಿಲ್ಲ. ಗಾರಿಬಾಲ್ಡಿ ಕಾ ಪ್ರೇರಾದಲ್ಲಿ 1882ರ ಜೂನ್ 2ರಂದು ತೀರಿಕೊಂಡ.

ಗಾರಿಬಾಲ್ಡಿ ಚಿಂತನಪರನಾಗಿರಲಿಲ್ಲ. ಇವನು ಆವೇಶ ಭರದಲ್ಲಿ ಪರಸ್ಪರ ವಿರುದ್ಧವಾದ ಭಾವನೆಗಳನ್ನು ಬೋಧಿಸುತ್ತಿದ್ದದ್ದುಂಟು. ಶಾಸನಸಭೆಗಳಲ್ಲಿ ಇವನಿಗೆ ಹೆಚ್ಚಿನ ನಂಬಿಕೆ ಇರಲಿಲ್ಲ. ಶಾಸನಸಭೆಗಳಲ್ಲಿ ಇವನು ಹೆಚ್ಚು ಕಾಲ ಇರುತ್ತಿರಲಿಲ್ಲ. ಕೆಲವು ವಿಷಯಗಳು ಇವನಿಗೆ ಅರ್ಥವಾಗುತ್ತಿರಲಿಲ್ಲ. ಯುರೋಪಿನಲ್ಲಿ ಶೀಘ್ರವಾಗಿ ಸಂಭವಿಸುತ್ತಿದ್ದ ರಾಜಕೀಯ ಬದಲಾವಣೆಗಳನ್ನು ಇವನು ಅರಿತುಕೊಳ್ಳಲಾರದೆ ಹೋದ. ಇವನು ಮೂಲತಃ ಯೋಧ. ಅಧಿಕಾರಕ್ಕೆ ಆಸೆ ಪಡದೆ ಇಟಲಿಯ ಏಕೀಕರಣ ಸಾಧನೆಗಾಗಿ ನಿರಂತರವಾಗಿ ಶ್ರಮಿಸಿ ಬಹುಮಟ್ಟಿಗೆ ಸಫಲನಾದ ಗಾರಿಬಾಲ್ಡಿಗೆ ಇಟಲಿಯ ಇತಿಹಾಸದಲ್ಲಿ ಹಿರಿಯ ಸ್ಥಾನವಿದೆ. (ಎ.ವಿ.ವಿ.)

**ಸಾಹಿತ್ಯ ಕೃತಿಗಳು :** ಹರಿದು ಹಂಚಿ ಹೋಗಿದ್ದ ಇಟಲಿಯನ್ನು ಸಮಗ್ರ ರಾಷ್ಟ್ರವನ್ನಾಗಿ ಒಂದುಗೂಡಿಸಿದ ಅಪ್ರತಿಮ ಯೋಧ ಗಾರಿಬಾಲ್ಡಿ ತಾನಾಗಿ ಸಾಹಿತಿಯಾಗ ಬಯಸಿದವನಲ್ಲ; ಕತ್ತಿ ಹಿರಿದು ಹೋರಾಡಿದಷ್ಟು ಸುಲಭವಾಗಿ ಲೇಖನಿ ಹಿಡಿದು ಬರೆದವನಲ್ಲ. ಆದರೂ ಈ ಶೂರ ಸೈನಿಕ ಎರಡು ಬಾರಿ ಸಾಹಿತ್ಯ ರಚನೆಗೆ ಕೈಹಾಕಿದ್ದುಂಟು. ಇವನು ತನ್ನ ಸಾಹಸಮಯ ಬದುಕಿನ ವೈವಿಧ್ಯಪೂರ್ಣ ಕಥೆಯನ್ನು ಹೇಳಲು ಒಮ್ಮೆ ಕಾವ್ಯವನ್ನು, ಇನ್ನೊಮ್ಮೆ ಗದ್ಯವನ್ನು ಮಾಧ್ಯಮವಾಗಿ ಬಳಸಿದ. ಗಾರಿಬಾಲ್ಡಿಯ ಆತ್ಮಕಥೆಯಲ್ಲಿ ಎಷ್ಟು ಲೋಪದೋಷಗಳಿದ್ದರೂ ಅದ್ಭುತರಮ್ಯ ವೆನಿಸುವಂಥ ನೂರಾರು ಘಟನೆಗಳಿರುವ ಆ ಗ್ರಂಥ ಓದುಗರ ಕುತೂಹಲವನ್ನು ಕೆರಳಿಸುತ್ತದೆ. ಲೇಖಕ ವಿರಾಮವಾಗಿ ಕುಳಿತು ಸುಸಂಬದ್ಧವಾಗಿ ಬರೆದ ಸಾಹಿತ್ಯಕೃತಿಯಲ್ಲ ಅದು. ಗಾರಿಬಾಲ್ಡಿ ಅದನ್ನು ತನ್ನ ವ್ಯಾಪಕವಾದ ಸಮರ ಚಟುವಟಿಕೆಗಳ ನಡುವೆ ಅಲ್ಪಸ್ವಲ್ಪ ಬಿಡುವು ಸಿಕ್ಕಾಗ ಆಗಾಗ ಬರೆದು ಮುಗಿಸಬೇಕಾಯಿತು. ಇದರಲ್ಲಿ ಇವನು ದಕ್ಷಿಣ ಅಮೆರಿಕ, ಇಟಲಿ ಮತ್ತು ಫ್ರಾನ್ಸ್‌ಗಳಲ್ಲಿ ಕೈಕೊಂಡ ಅಸಾಧಾರಣ ದಂಡಯಾತ್ರೆಗಳನ್ನು, ಸಮರ ಸಾಹಸಗಳನ್ನು, ನೂರೆಂಟು ವೈವಿಧ್ಯಮಯ ಅನುಭವಗಳನ್ನು ನೇರ, ಸರಳ ಶೈಲಿಯಲ್ಲಿ ನಿರೂಪಿಸಿದ್ದಾನೆ. ಈ ಕಥನದಲ್ಲಿ ಇವನ ಉತ್ಕಟ ಸ್ವಾತಂತ್ರ್ಯಾಭಿಲಾಷೆ, ನಿರಂತರ ರಾಷ್ಟ್ರಾಭಿಮಾನ ಇವು ಎದ್ದು ಕಾಣುತ್ತವೆ. ಸೋಲು ಗೆಲುವುಗಳ ಏರಿಳಿತಕ್ಕೆ ಸಿಕ್ಕಿ ಹೊಯ್ದಾಡುತ್ತಿದ್ದ ಇವನ ಜೀವನದಲ್ಲಿ ಸಂಭವಿಸಿದ ಘಟನೆಗಳ ನಿರೂಪಣೆ ಇವನ ಮಾನಸಿಕ ತುಯ್ತವನ್ನು, ವ್ಯಗ್ರತೆಯನ್ನು ಯಥಾವತ್ತಾಗಿ ಪಡಿಮೂಡಿಸುವಂತಿವೆ. ಅತಿಭಾವುಕನೂ ಭಾವೋದ್ವಿಗ್ನನೂ ಆದ ಯೋಧನ ಚಿಂತನಶೀಲತೆ ಅಲ್ಲಲ್ಲಿ ಪುಟಿದೆದ್ದು ನಿರೂಪಣೆಯ ಶೈಲಿಯನ್ನೂ ಕಾವ್ಯಮಯಗೊಳಿಸಿದೆ. ಆತ್ಮವೃತ್ತಾಂತವನ್ನು ತಿಳಿಸುವ ದಿ ಪೊಯೆಮ ಆಟೊಬಯೋಗ್ರಾಫಿಕೊ ಎಂಬ ಸರಳ ರಗಳೆಯ ನೀಳ್ಗವನದಲ್ಲಿ ಗಾರಿಬಾಲ್ಡಿ ತನ್ನ ಹಲವು ವೈಯಕ್ತಿಕ ಅನುಭವಗಳನ್ನು ತೋಡಿಕೊಂಡಿದ್ದಾನೆ. ಅದನ್ನು ಇವನು 1862ರಲ್ಲಿ ಕ್ಯಾಪ್ರೇರಾ ದ್ವೀಪದಲ್ಲಿದ್ದಾಗ ಬರೆದ. ರೋಮ್ ನಗರವನ್ನು ಶತ್ರುಗಳಿಂದ ವಿಮುಕ್ತಿಗೊಳಿಸಲು ಸ್ವಂತ ಪ್ರೇರಣೆಯಿಂದ ನಡೆಸಿದ ಹೋರಾಟ ವಿಫಲಗೊಂಡಾಗ ಇವನಿಗೆ ಉಂಟಾದ ಅತೀವ ನಿರಾಶೆ, ವೇದನೆ, ಕೋಪೋದ್ವೇಗಗಳನ್ನು ಇಲ್ಲಿ ವಿವರಿಸಿದ್ದಾನೆ. ಇದಲ್ಲದೆ ಇವನು ಬೇರೆ ಬೇರೆ ಕವನಗಳನ್ನೂ ಬರೆದನೆಂದು ಹೇಳುವುದುಂಟು. ಆದರೆ ಅವುಗಳಲ್ಲಿ ಹೆಚ್ಚು ಸಾಹಿತ್ಯಕ ಮೌಲ್ಯಗಳಿಲ್ಲವೆಂಬುದು ಸ್ಪಷ್ಟವಾಗಿದೆ. ಇವನು ತನ್ನ ನೀಳ್ಗವನವನ್ನು ಬರೆದದ್ದು ಸಹ ಮನರಂಜನೆಗಲ್ಲ. ಅದರಲ್ಲಿ ಉತ್ಕಟ ಸನ್ನಿವೇಶಗಳಲ್ಲಿ ಸೈನಿಕರನ್ನು ಹುರಿದುಂಬಿಸಲು ಬರೆದ ಯುದ್ಧ ಘೋಷಣೆಗಳಂಥ ಮಾತುಗಳು ಬರುತ್ತವೆ. ರಣದುಂದುಭಿಗಳ ಮೊರೆತವನ್ನು, ಉಕ್ಕುವ ಕಡಲಿನ ಕುದಿತವನ್ನು ಅಲ್ಲಿ ಕೇಳಬಹುದು. ಈ ಕವನದಲ್ಲಿ ಅವನ ರಾಗರಂಜಿತ ಶೈಲಿ ಆಗಾಗ ಭವ್ಯ ಔನ್ನತ್ಯ ಸಾಧಿಸುತ್ತದೆ. ಇವನು ಅಪಾಯದ ಪ್ರಪಾತದಲ್ಲಿ ತೂಗಾಡುತ್ತಿದ್ದರೂ ತನ್ನ ಧೈರ್ಯಶೌರ್ಯಗಳನ್ನು ಪ್ರದರ್ಶಿಸುತ್ತ ತನ್ನ ಸೈನಿಕರನ್ನು, ಅನುಯಾಯಿಗಳನ್ನು ಹೇಗೆ ತನ್ನ ಸಮ್ಮೋಹಕ ವಾಕ್‌ಶಕ್ತಿಯಿಂದ ಸೆಳೆಯುತ್ತಿದ್ದನೆಂಬು ದನ್ನು ಇವನ ಆತ್ಮಕಥೆಯ ನಿರೂಪಣೆಯಲ್ಲಿ ಗುರುತಿಸಬಹುದು. ಸೋತು ಹಿಮ್ಮೆಟ್ಟುತ್ತಿದ್ದ ಸೈನಿಕರನ್ನು ಕುರಿತು ಇವನು 'ನನ್ನ ಹಿಂದೆ ಬರುವ ನೀವು ಹಸಿವು, ನೀರಡಿಕೆ, ಮುಗಿಯದ ಅಲೆತ, ಯುದ್ಧಗಳು, ಸಾವು – ಇವಕ್ಕೆ ಸಿದ್ಧರಾಗಿ ಬನ್ನಿ. ನಾನು ಬೇರೆ ಏನನ್ನೂ ನಿಮಗೆ ನೀಡಲಾರೆ' – ಎಂದು ಘೋಷಿಸಿದ್ದು ಲೋಕವಿಖ್ಯಾತವಾಗಿದೆ. ಗತ್ಯಂತರವಿಲ್ಲದೆ ಕಠೋರ ಸ್ಥಿತಿಯಲ್ಲಿ, ಹತಾಶನಾಗಿ ಮೆಂಟಾನಾ ನಗರವನ್ನು ಕೊನೆಯ ಸಲ ಮುತ್ತುವಾಗ ಇವನ ಸೈನಿಕರಿಗೆ 'ಬನ್ನಿ ನನ್ನ ಜತೆ, ಸಾಯಲು ಸಿದ್ಧರಾಗಿ ಬನ್ನಿ, ಕಾದಿ ಸಾಯೋಣ ಬನ್ನಿ. ಸಾಯಲು ಹೆದುರುತ್ತೀರಾ? ಏಕೆ?' – ಎಂದು ಹೇಳಿದ ಮಾತುಗಳಲ್ಲಿ ಕಾವ್ಯದ ಅಸಾಧಾರಣ ಮಿಂಚಿದೆ. (ಎಚ್.ಕೆ.ಆರ್.)

**ಗಾರೇಗಿಡ: ನೋಡಿ – ಇಂಗುದಿ**

**ಗಾರ್ಕಿ :** ರಷ್ಯನ್ ಸೋವಿಯೆತ್ ಸಂಯುಕ್ತ ಸಮಾಜವಾದೀ ಗಣರಾಜ್ಯದ ಒಂದು ಆಡಳಿತವಿಭಾಗ (ಆಬ್ಲಾಸ್ಟ್); ಅದರ ಆಡಳಿತಕೇಂದ್ರ. ಹಿಂದೆ ಇದಕ್ಕೆ ಇದ್ದ ಹೆಸರು ನಿಷ್ನಿನೊವ್‌ಗೊರಾಡ್. ಈ ನಗರದಲ್ಲಿ ಮ್ಯಾಕ್ಸಿಂ ಗಾರ್ಕಿ 1868ರಲ್ಲಿ ಜನಿಸಿದ ಕಾರಣ ಅವನ ಗೌರವಾರ್ಥಕವಾಗಿ 1932ರಲ್ಲಿ ಇದಕ್ಕೆ ಅವನ ಹೆಸರಿಟ್ಟರು. ಇದು ಮಾಸ್ಕೋ ನಗರದ ಪೂರ್ವಕ್ಕೆ 416 ಕಿಮೀ ದೂರದಲ್ಲಿ ವೋಲ್ಗ ಮತ್ತು ಓಕ ನದಿಗಳ ಸಂಗಮ ಸ್ಥಳದಲ್ಲಿದೆ. ವೋಲ್ಗ ಬಯಲಲ್ಲಿ ರಷ್ಯನರ ವಸಾಹತುಗಳು ಸ್ಥಾಪಿತವಾದ ಕಾಲದಲ್ಲಿ 1221ರಲ್ಲಿ ಈ ನಗರವನ್ನು ವ್ಲಾಡಿಮೀರ್ ದೊರೆ ಯೂರಿ ಸೆವೊಲೊಡೋವಿಚ್ ಸ್ಥಾಪಿಸಿದ. ಈ ನಗರ ಬಾಲ್ಟಿಕ್ ಪ್ರದೇಶದಿಂದ ಮಧ್ಯ ಏಷ್ಯಕ್ಕೆ ಹೋಗುವ ಹೆದ್ದಾರಿಯ ಪ್ರಮುಖ ಸ್ಥಳದಲ್ಲಿದೆ. ವೋಲ್ಗ ನದಿಯ ಮೂಲಕ ಮಾಸ್ಕೋ ಪ್ರದೇಶಕ್ಕೂ ಕಾಮಾ ನದಿಯ ಮೂಲಕ ಯೂರಲ್ ಸೈಬೀರಿಯ ಪ್ರಾಂತ್ಯಗಳಿಗೂ ಸಂಪರ್ಕವಿದೆ. 1392ರಲ್ಲಿ ಇದನ್ನು ಮಾಸ್ಕೋ ನಗರಪಾಲಿಕೆಯೊಡನೆ ಸಂಘಟಿಸಲಾಯಿತು.

ಈ ನಗರವನ್ನು ಕೇಂದ್ರವನ್ನಾಗಿ ಮಾಡಿಕೊಂಡು 1469ರಲ್ಲಿ 3ನೆಯ ಇವಾನನೂ 1552ರಲ್ಲಿ 4ನೆಯ ಇವಾನನೂ ಟಾರ್ಟರರ ಮೇಲೆ ದಾಳಿ ನಡೆಸಿದರು. 16ನೆಯ ಶತಮಾನದಲ್ಲಿ ರಷ್ಯನರು ವೋಲ್ಗ ಬಯಲನ್ನು ವಶಮಾಡಿಕೊಂಡ ಮೇಲೆ ನಗರದ ವಾಣಿಜ್ಯ ಅಭಿವೃದ್ಧಿ ಹೊಂದಿತು. 1817ರಲ್ಲಿ ಇಲ್ಲಿ ಪ್ರಾರಂಭವಾದ ವಾರ್ಷಿಕ ಜಾತ್ರೆ

ರಷ್ಯದ ಅತ್ಯಂತ ದೊಡ್ಡ ಜಾತ್ರೆಯಾಗಿ ರಷ್ಯನ್ ಕ್ರಾಂತಿಯವರೆಗೆ ಮುಂದುವರಿಯಿತು. ಇಲ್ಲಿಗೆ ಯುರೋಪ್ ಮತ್ತು ಏಷ್ಯ ಖಂಡಗಳಿಂದ ವ್ಯಾಪಾರಿಗಳು ಬರುತ್ತಿದ್ದರು.

20ನೆಯ ಶತಮಾನದ ಎರಡು ಮಹಾಯುದ್ಧಗಳಿಂದ ಈ ನಗರಕ್ಕೆ ಕೈಗಾರಿಕಾ ಪ್ರಾಮುಖ್ಯ ಪ್ರಾಪ್ತವಾಗಿ ಅನೇಕ ದೊಡ್ಡ ಕಾರ್ಖಾನೆಗಳು ಇಲ್ಲಿ ಸ್ಥಾಪನೆಯಾದವು. ಗಾರ್ಕಿ ಮೋಟಾರುವಾಹನಗಳ ಕಾರ್ಖಾನೆಯಲ್ಲಿ ವೋಲ್ಗ ಮೋಟಾರುಗಳು ತಯಾರಾಗುತ್ತವೆ. 1849ರಲ್ಲಿ ಸ್ಥಾಪಿತವಾದ ಹಡಗುಕಟ್ಟೆಯಲ್ಲಿ ಆವಿ ಮತ್ತು ಡೀಸೆಲ್ ಎಂಜಿನ್ನುಗಳನ್ನು ಜೋಡಿಸಿದ ನೌಕೆಗಳು ನಿರ್ಮಾಣವಾಗುತ್ತವೆ. ಭಾರವಾದ ಸರಕುಗಳನ್ನು ಎತ್ತುವ ಯಂತ್ರ, ಮಂಜುಗಡ್ಡೆ ಒಡೆಯುವ ಯಂತ್ರ, ಚೌಬೀನೆ ಕತ್ತರಿಸುವ ಮತ್ತು ಕಾಗದ ತಯಾರಿಕೆಯ ಯಂತ್ರ ಮೊದಲಾದವು ಈ ನಗರದಲ್ಲಿ ತಯಾರಾಗುತ್ತವೆ. ಬಟ್ಟೆ, ಪಾದರಕ್ಷೆ, ಪ್ಲಾಸ್ಟಿಕ್ ಸಾಮಾನು, ಪೀಠೋಪಕರಣ, ಮೋಟಾರು ವಾಹನಗಳಿಗೆ ಉಪಯೋಗಿಸುವ ಗಾಜು ಇವು ಇಲ್ಲಿಯ ಇತರ ಉತ್ಪನ್ನಗಳು. ನಗರದಲ್ಲಿ ಎರಡು ಉಷ್ಣ ವಿದ್ಯುತ್ ಉತ್ಪಾದನ ಕೇಂದ್ರಗಳುಂಟು. ನಗರಕ್ಕೆ ರೈಲು, ನದಿ, ರಸ್ತೆ ಮತ್ತು ವಿಮಾನಗಳ ಮೂಲಕ ಪ್ರಯಾಣಸೌಲಭ್ಯವಿದೆ. ಪ್ರವ್‌ಡಿನ್ಸ್ಕ್, ಪವ್‌ಲೋವೊ ಮತ್ತು ಬೋರ್ ಉಪನಗರಗಳಿಗೆ ರೈಲುಮಾರ್ಗಗಳಿವೆ.

ಗಾರ್ಕಿ ನಗರದಲ್ಲಿ 1918ರಲ್ಲಿ ಲೋಬಚೆಫ್ಸ್ ಕಿ ರಾಜ್ಯ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಕೃಷಿ, ವೈದ್ಯ ಹಾಗೂ ಎಂಜಿನಿಯರಿಂಗ್ ಉಚ್ಚ ಶಿಕ್ಷಣ ಸಂಸ್ಥೆಗಳೂ ರಾಜ್ಯದ ಕಲಾ ವಸ್ತುಸಂಗ್ರಹಾಲಯವೂ ಇಲ್ಲಿವೆ. ಇಲ್ಲಿಯ ನಾಟಕಶಾಲೆ 1798ರಲ್ಲಿ ಸ್ಥಾಪಿತವಾಯಿತು. 14ನೆಯ ಶತಮಾನದ ಕೋಟೆ (ಕ್ರೆಮ್ಲಿನ್) ಈ ನಗರದ ಇತಿಹಾಸ ಪ್ರಸಿದ್ಧ ಕಟ್ಟಡಗಳಲ್ಲಿ ಒಂದು.

ಗಾರ್ಕಿ ಆಬ್ಲಾಸ್ಟಿನ ವಿಸ್ತೀರ್ಣ 72200 ಚ.ಕಿಮೀ ವೋಲ್ಗ ನದಿ ಇದರ ನಡುವೆ ಹರಿಯುತ್ತದೆ. ಉತ್ತರಾರ್ಧ ಮೈದಾನ. ಇಲ್ಲಿ ವೆಟ್ಲುಗ, ಕರ್ಜೆನೆಟ್ಸ್ ಪ್ರವಹಿಸುತ್ತವೆ. ದಕ್ಷಿಣಾರ್ಧ ಹೆಚ್ಚು ಎತ್ತರ. ಇಲ್ಲಿ ವಾಯುಗುಣ ಖಂಡಾಂತರ ಮಾದರಿಯದು. ರೈ, ಓಟ್ಸ್, ವಸಂತಗೋದಿ, ಬಕ್‌ವ್ಹೀಟ್, ಆಲೂಗಡ್ಡೆ, ಫ್ಲಾಕ್ಸ್, ಮೆಕ್ಕೆಜೋಳ ಮುಖ್ಯ ಧಾನ್ಯಗಳು. (ವಿ.ಜಿ.ಕೆ.)

**ಗಾರ್ಕಿ, ಮ್ಯಾಕ್ಸಿಂ :** 1868 – 1936. ಸೋವಿಯೆತ್ ರಷ್ಯದ ಅತಿ ಸಾಮಾನ್ಯ ಕುಟುಂಬದಲ್ಲಿ ಬಡಗಿಯೊಬ್ಬನ ಮಗನಾಗಿ ಜನಿಸಿ ಕೀರ್ತಿಯ ಶಿಖರವನ್ನೇರಿದ ಪ್ರತಿಭಾವಂತ ಸಾಹಿತಿ. ಮ್ಯಾಕ್ಸಿಂ ಗಾರ್ಕಿ ಎಂಬುದು ಕಾವ್ಯನಾಮ; ನಿಜವಾದ ಹೆಸರು ಅಲೆಕ್ಸಿಮ್ಯಾಕ್ಸಿಮೋವಿಚ್ ಪೆಷ್ಕೋವ್. ಇವನು ರಷ್ಯದ ನಿಷ್ನಿನೊವ್‌ಗೊರಾಡ್‌ನಲ್ಲಿ 1868ರ ಮಾರ್ಚ್ 28ರಲ್ಲಿ ಜನಿಸಿದ. ತಂದೆ ಕಾಲರ ರೋಗದಿಂದ ಅಸುನೀಗಿದಾಗ ಈತನಿನ್ನೂ ಮೂರು ವರ್ಷದ ಹುಡುಗ. ಇದರಿಂದಾಗಿ ಗಾರ್ಕಿ ಬಾಲ್ಯದ ದಿನಗಳನ್ನು ತನ್ನ ಅಜ್ಜನ ಮನೆಯಲ್ಲಿ ಕಳೆದ. ತನ್ನ ಎಳೆಯ ವಯಸ್ಸಿನಿಂದಲೇ ಗಾರ್ಕಿ ಜೀವನೋಪಾಯಕ್ಕಾಗಿ ದುಡಿಯಲು ಪ್ರಾರಂಭಿಸಬೇಕಾಯಿತು. ತಾರುಣ್ಯದಲ್ಲಿ ಅಲೆಮಾರಿಯಾಗಿ ವೋಲ್ಗಾ ನದಿಯ ಮಧ್ಯಪ್ರದೇಶಗಳಿಂದ ಹಿಡಿದು ಕಾಕಸಸ್ ಪ್ರದೇಶದವರೆಗೆ ತಿರುಗಾಡಿದ. ಈ ಪರ್ಯಟನೆಗಳಲ್ಲಿ ನಾನಾ ಉದ್ಯೋಗಗಳನ್ನು ಕೈಗೊಂಡ. ಪಾತ್ರೆ ತೊಳೆಯುವವನಾಗಿ, ವಕೀಲನ ಕಾರಕೂನನಾಗಿ, ರೊಟ್ಟಿ ಬೇಯಿಸುವವನಾಗಿ ತನ್ನ ಪಾಲಿಗೆ ಬಂದ ಎಲ್ಲ ಉದ್ಯೋಗಗಳಲ್ಲೂ ದುಡಿದ. ಇದೇ ಕಾಲದಲ್ಲಿ ನಾನಾ ರೀತಿಯ ಜನಗಳ, ಬೀದಿಹೋಕರ, ಹೊಲಸುಕೇರಿ ನಿವಾಸಿಗಳ, ಕೂಲಿಕಾರರ, ಬುದ್ಧಿಜೀವಿಗಳ – ನಿಕಟ ಪರಿಚಯವನ್ನು ಪಡೆದ. ಕಜ಼ಾನ್ ನಗರದಲ್ಲಿ ಈತ ಕೆಲವು ಬುದ್ಧಿಜೀವಿಗಳು ನಡೆಸುತ್ತಿದ್ದ ರಾಜಕೀಯ ವಿಚಾರಗೋಷ್ಠಿಯನ್ನು ಸೇರಿ ಮಾರ್ಕ್ಸ್‌ವಾದದ ಮೂಲಸೂತ್ರದ ದರ್ಶನವನ್ನಲ್ಲದೆ ಅರ್ಥಶಾಸ್ತ್ರದ ಅರಿವನ್ನೂ ಪಡೆದುಕೊಂಡ. ಈ ಅಲೆಮಾರಿ ಜೀವನದಲ್ಲಿ ಪಡೆದ ಅನುಭವಗಳೇ ಮುಂದಿನ ಸಾಹಿತ್ಯ ಜೀವನದ ಮೂಲಾಧಾರವಾದುವು. ಉದ್ದಾಮ ವ್ಯಕ್ತಿತ್ವ, ಅದ್ಭುತ ಪ್ರತಿಭೆ ಮತ್ತು ತೀವ್ರ ಕಾಲ್ಪನಿಕ ಶಕ್ತಿಗಳೊಂದಿಗೆ ಜೀವನದ ಬಹುಮುಖವೂ ಆಳವಾದ ಅನುಭವವೂ ಸೇರಿತಾಗಿ ಗಾರ್ಕಿ ಉತ್ತಮ ಸಾಹಿತ್ಯವನ್ನು ನಿರ್ಮಾಣ ಮಾಡಿದ.



ಗಾರ್ಕಿ ತನ್ನ ಲೇಖನ ಜೀವನವನ್ನು ಪ್ರಾರಂಭಿಸಿದ ಕಾಲ ಅತ್ಯಂತ ಕ್ರಾಂತಿಕಾರಿ ಸನ್ನಿವೇಶಗಳಿಂದ ಕೂಡಿತ್ತು. ಕಾರ್ಮಿಕ ಚಟುವಟಿಕೆಗಳು ಚುರುಕಿನಿಂದ ಮುನ್ನಡೆಯುತ್ತಿದ್ದವು. ಲೆನಿನ್ ಪಕ್ಷ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿತ್ತು. ಗಾರ್ಕಿ ತನ್ನ ಪರ್ಯಟನೆಯ ಕಾಲದಲ್ಲಿ ಟಿಫ್ಲಿಸ್ ನಗರದಲ್ಲಿದ್ದಾಗ ಅಲ್ಲಿನ ರೈಲ್ವೆ ವರ್ಕ್‌ಷಾಪಿನಲ್ಲಿ ಕೆಲಸಕ್ಕೆ ಸೇರಿದ. ಅಲ್ಲಿನ ಶ್ರಮಜೀವಿಗಳ ಕ್ರಾಂತಿಕಾರಿ ತಂಡದ ಸದಸ್ಯನಾಗಿ ಕೈಗಾರಿಕಾ ಕೂಲಿಕಾರರ ಜೀವನದ ಪರಿಚಯ ಪಡೆದ. ಇಲ್ಲಿ ಈತನಿಗೆ ಕಾಲುಜ್ನಿ ಎಂಬ ಜನನಾಯಕನ ಪರಿಚಯವಾಯಿತು. ಗಾರ್ಕಿ ತನ್ನ ಅನುಭವಗಳನ್ನೆಲ್ಲ ಬರೆಯಲು ಈತ ಪ್ರೇರೇಪಿಸಿದ. ಗಾರ್ಕಿಯ ಮೊದಲ ಕತೆಯಾದ ಮಕರಚುದ್ರಾ ಪ್ರಕಟವಾದದ್ದು ಟಿಫ್ಲಿಸ್‌ನ ಕಾವ್‌ಕಾಜ಼್ ಪತ್ರಿಕೆಯಲ್ಲಿ. ಈ ಕತೆ ಗಾರ್ಕಿ (ಗಾರ್ಕಿ ಎಂದರೆ ಕಟು ಎಂದು ಅರ್ಥ) ಎಂಬ ಗುಪ್ತನಾಮದಲ್ಲಿ ಪ್ರಕಟವಾಯಿತು. ಅನಂತರ ಇದೇ ಇವನ ಶಾಶ್ವತ ನಾಮವಾಗಿ ಉಳಿಯಿತು.

ಟಿಫ್ಲಿಸ್ ನಗರ ಬಿಟ್ಟಮೇಲೆ ಗಾರ್ಕಿ ತನ್ನ ಹುಟ್ಟು ಊರಾದ ನಿಷ್ನಿನೊವ್ ಗೊರಾಡ್‌ಗೆ ವಾಪಸಾದ (ಇದರ ಈಗಿನ ಹೆಸರು ಗಾರ್ಕಿ). ಇಲ್ಲಿ ಈತನಿಗೆ ರಷ್ಯದ ಸುಪ್ರಸಿದ್ಧ ಸಾಹಿತಿ ಕೊರೆಲೆಂಕೊನ ಪರಿಚಯವಾಯಿತು. ಆತ ಗಾರ್ಕಿಯ ಲೇಖನ ಕಲೆ ಮುಂದೆ ಸಾಗಲು ಬಹಳ ಸಹಾಯ ಮಾಡಿದ. ಗಾರ್ಕಿಯ ಕಥೆಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಲು ಪ್ರಾರಂಭವಾಯಿತು. ಮೊತ್ತ ಮೊದಲ ಕಥಾಸಂಕಲನ ಪ್ರಕಟವಾದದ್ದು 1898ರಲ್ಲಿ. ಹೀಗೆ ರಷ್ಯನ್ ಸಾಹಿತ್ಯ ಕ್ಷೇತ್ರದಲ್ಲಿ ಗಾರ್ಕಿಯ ಹೆಸರು ಅಡಿಯೂರಿತು.

ಗಾರ್ಕಿಯ ಕತೆಗಳೆಲ್ಲವೂ ಪ್ರಚಂಡ ಕಾರ್ಮಿಕ ಮುನ್ನಡೆಯಿಂದ ಸಚೇತನಗೊಂಡ ಜನತೆಯ ಮನೋಭಾವದ ಚಿತ್ರಗಳಿಂದ ತುಂಬಿವೆ. ಇವನ ಮೊದಲ ಕೃತಿಗಳು ಸಮಾಜದ ಅತ್ಯಂತ ಕೀಳುವರ್ಗದ ಜನತೆಯ – ಅಂದರೆ ದಿನಗೂಲಿಯವರ, ಅಲೆಮಾರಿಗಳ, ಸ್ವಪ್ನಜೀವಿಗಳ ಮತ್ತು ಬಂಡಾಯಕೋರರ – ಉಜ್ವಲವಾದ ಭಾವನಾತ್ಮಕ ಚಿತ್ರಗಳಿಂದ ಕೂಡಿವೆ. ಗಾರ್ಕಿ ದೀನದಲಿತರ ಜೀವನದ ಕಷ್ಟಕಾರ್ಪಣ್ಯಗಳ ವಾಸ್ತವಚಿತ್ರಣದಿಂದ ತೃಪ್ತನಾಗುವುದಿಲ್ಲ. ಮಾನವ ಜೀವನದ ಘನೋದ್ದೇಶವನ್ನು, ಮಾನವ ವಿಕಾಸದ ನೀತಿನಿಯಮಗಳನ್ನು ಕುರಿತು ಆಳವಾಗಿ ವಿಚಾರ ಮಾಡುತ್ತಾನೆ. ಜೀವನದ ಸತ್ಯಸಂಗತಿಗಳ ಗ್ರಹಿಕೆ, ವ್ಯಾಪಕತೆಗಳಿಗಷ್ಟೇ ಗಮನ ಕೊಡದೆ ಈ ರೀತಿಯ ಜೀವನಕ್ಕೆ ಕಾರಣವೇನು ಅದರಿಂದ ಪಾರಾಗಲು ಮಾರ್ಗವೇನು ಎಂಬುದನ್ನು ಕುರಿತು ವಿಶ್ಲೇಷಿಸುತ್ತಾನೆ. ಈ ಸೌಂದರ್ಯರಹಿತ ಜೀವನವನ್ನು ಈ ವಾತಾವರಣದಿಂದ ಮೇಲೆತ್ತಿ ಅವರಲ್ಲಿ ಜೀವನದ ಸೌಂದರ್ಯ ಮತ್ತು ಸದ್ಗುಣಗಳ ಬಗೆಗೆ ಅರಿವನ್ನುಂಟು ಮಾಡಿ ಅವರನ್ನು ಕ್ರಿಯಾಶೀಲರಾಗುವಂತೆ ಹುರಿದುಂಬಿಸುವ ಹೊಸ ಮಾರ್ಗವನ್ನು ಪ್ರತಿಪಾದಿಸುತ್ತಾನೆ. ಆದುದರಿಂದಲೇ ಅನೇಕ ವೇಳೆ ಗಾರ್ಕಿಯ ಕಥಾವ್ಯಕ್ತಿಗಳು ಜೀವನದ ಧ್ಯೇಯವನ್ನು ಕುರಿತು ಉದ್ದುದ್ದ ಭಾಷಣಗಳನ್ನು ಮಾಡುವುದಲ್ಲದೆ ಓದುಗರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ತಾವೇ ಉತ್ತರ ನೀಡುತ್ತವೆ.

ಇವನ ಪ್ರಖ್ಯಾತ ನಾಟಕವಾದ ದಿ ಲೋಯರ್ ಡೆಪ್ತ್ಸ್‌ನಲ್ಲಿ (1902) ಕ್ರಾಂತಿಯ ಭಾವನೆ ಅತ್ಯಂತ ಪ್ರಭಾವಯುತವಾಗಿ ಮೂಡಿಬಂದಿದೆ. ಜ಼ಾರನ ರಷ್ಯದಲ್ಲಿ ಇದರ ಪ್ರದರ್ಶನವನ್ನು ಬಹಿಷ್ಕರಿಸಲಾಗಿತ್ತಾದರೂ ಇದನ್ನು ಜಗತ್ತಿನ ಎಲ್ಲ ಮಹಾನಗರಗಳಲ್ಲೂ ಪ್ರದರ್ಶಿಸಲಾಗಿದೆ. ಇದರಲ್ಲಿ ಬರುವ ಪಾತ್ರಗಳು – ಕಳ್ಳರು, ವೇಶ್ಯೆಯರು, ವರ್ಗಬಾಹಿರ ಶ್ರೀಮಂತರು – ಒಂದು ಕಿಕ್ಕಿರಿದ ವಠಾರದಲ್ಲಿ, ದುರ್ಗಂಧ ವಾತಾವರಣದಲ್ಲಿ, ಜೀವಿಸುತ್ತಿರುವ ದೃಶ್ಯ ಪ್ರೇಕ್ಷಕರನ್ನು ಕುರಿತು ಇಂಥ ಪರಿಸ್ಥಿತಿ ಖಂಡಿತ ಮುಂದುವರಿಯಕೂಡದು ಎಂದು ಒಕ್ಕೊರಲಿನಲ್ಲಿ ಸಾರಿ ಹೇಳುತ್ತದೆ. ಪಾಲಿಗೆ ಬಂದದ್ದು ಪಂಚಾಮೃತವೆಂದು ನಮ್ರರಾಗಿ ತೃಪ್ತಿಕರ ಜೀವನವನ್ನು ನಡೆಸಿರಿ ಎಂದು ಬೋಧಿಸುತ್ತಿದ್ದ ಲೂಕನನ್ನು ವಠಾರದ ನಿವಾಸಿಗಳು ಅದರಲ್ಲೂ ವಿಶೇಷವಾಗಿ ತನ್ನ ದುರದೃಷ್ಟವನ್ನು ಹೋರಾಟವಿಲ್ಲದೆ ಒಪ್ಪಿಕೊಳ್ಳುವ ಭಾವನೆಯೇ ಇಲ್ಲದಿದ್ದ ಸ್ಯಾಟಿನ್ ಎಂಬ ದಂಗೆಕೋರ ಕುಡುಕ ವಿರೋಧಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಇದರಷ್ಟೇ ಪ್ರಖ್ಯಾತವಾದ ಗಾರ್ಕಿಯ ಕಾದಂಬರಿ 'ತಾಯಿ' (ಮದರ್) ಕೂಡ ಇದೇ ರೀತಿಯ ಭಾವಪೂರ್ಣ ವಿಚಾರಗಳಿಂದ ಕೂಡಿದೆ. ಈ ಕಾದಂಬರಿ ರಷ್ಯದ ಕಾರ್ಮಿಕ ಜೀವನವನ್ನು ಮತ್ತು ಅಲ್ಲಿನ ಕಾರ್ಮಿಕರು ನಡೆಸಿದ ಹೋರಾಟವನ್ನು ಕುರಿತದ್ದು. ಕಾರ್ಮಿಕರು ಕ್ರಾಂತಿಕಾರಿ ಹೋರಾಟದಲ್ಲಿ ಹೇಗೆ ಆಧ್ಯಾತ್ಮಿಕ ಮನೋಭಾವನೆಗಳನ್ನು ವ್ಯಕ್ತಪಡಿಸುತ್ತಾರೆ ಎಂಬುದೇ ಈ ಕಾದಂಬರಿಯ ಗುರಿ. ಇದರಲ್ಲಿ ಪಾವೆಲ್ ವ್ಲಾಸೋವ್ ಮತ್ತು ಅವನ ತಾಯಿ ನಿಲೋವ್ನ ತಮ್ಮ ಹೋರಾಟದ ಜೀವನದಲ್ಲಿ ಹೇಗೆ ಸತ್ಯ ಮತ್ತು ಸೌಂದರ್ಯದ ಅರಿವನ್ನು ಪಡೆಯುತ್ತಾರೆ, ಹೋರಾಟ ಹೇಗೆ ಅವರ ನೀರಸ ಕಷ್ಟಮಯ ಜೀವನವನ್ನು ಶ್ರೀಮಂತವಾಗಿ ಮಾರ್ಪಡಿಸುತ್ತದೆ – ಎಂಬುದರ ಚಿತ್ರಣವಿದೆ.

ಈ ಕೃತಿಯಿಂದ ಸಮಾಜವಾದೀ ವಾಸ್ತವತೆಯ ನಾಂದಿಯಾಯಿತು.

ರಷ್ಯದ ಎರಡು ಸಾಹಿತ್ಯಕ ಯುಗಗಳ ನಡುವಣ ಜೀವಂತ ಸೇತುವೆಯಂತೆ ತೋರುವ ಗಾರ್ಕಿಯ ಪಾತ್ರ 'ತಾಯಿ' ಕಾದಂಬರಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ, ಐತಿಹಾಸಿಕ ಮುನ್ನಡೆಯೆಂದರೆ ಮಾನವನ ಹಿತಸಾಧನೆ ಎಂಬುದನ್ನು ಸ್ಪಷ್ಟಪಡಿಸಿರುವುದೇ ಈ ಕಾದಂಬರಿಯ ಹಿರಿಮೆ. ಇದು ಬರಿಯ ನೊಂದಜೀವಿಗಳ ವಾಸ್ತವಿಕ ಚಿತ್ರಣ ಮಾತ್ರವಲ್ಲ, ಅವರು ತಮ್ಮ ಹೋರಾಟದ ಮೂಲಕ ಪ್ರಪಂಚವನ್ನು ಯಾವ ರೀತಿ ಮಾರ್ಪಡಿಸಲು ಸನ್ನದ್ಧರಾಗಿದ್ದಾರೆ ಎಂಬುದನ್ನು ಇದು ವಿವರಿಸುತ್ತದೆ. ಲೆನಿನ್ 1907ರ ಮೇ ತಿಂಗಳಲ್ಲಿ ಲಂಡನಿನಲ್ಲಿ ನಡೆದ ರಷ್ಯದ ಸೋಷಿಯಲ್ ಡೆಮೋಕ್ರಾಟಿಕ್ ಪಕ್ಷದ ಐದನೆಯ ಅಧಿವೇಶನದಲ್ಲಿ ಗಾರ್ಕಿಯನ್ನು ಸಂಧಿಸಿದಾಗ ಈ ಕಾದಂಬರಿಯನ್ನು ರಚಿಸಿದುದಕ್ಕಾಗಿ, ಸಕಾಲದಲ್ಲಿ ಪ್ರಕಟಿಸಿದುದಕ್ಕಾಗಿ ಈತನನ್ನು ಬಹುವಾಗಿ ಅಭಿನಂದಿಸಿದನೆನ್ನಲಾಗಿದೆ. ಗಾರ್ಕಿಯ ಕೃತಿಗಳಲ್ಲಿ ರಷ್ಯದ ಕಾರ್ಖಾನೆಗಳ, ಮಾಲೀಕರ, ವರ್ತಕರ, ಶ್ರೀಮಂತರ ಮತ್ತು ಬುದ್ಧಿಜೀವಿಗಳ ಚಿತ್ರಗಳನ್ನೂ ಕಾಣಬಹುದು. ಈ ವರ್ಗದ ವ್ಯಕ್ತಿಗಳನ್ನು ಚಿತ್ರಿಸುವಾಗ ಗಾರ್ಕಿ ಅವರನ್ನು ಬಂಡವಾಳಗಾರರೆಂಬ ಕಾರಣದಿಂದ ಮಾತ್ರ ಅವಹೇಳನ ಮಾಡುವುದಿಲ್ಲ. ಗಾರ್ಕಿಯ ಇತರ ಕಾದಂಬರಿಗಳಾದ ದಿತ್ರಿ, ಪೋಮಾಗಾರ್ದೇವ್, ದಿ ಲೈಫ್ ಆಫ್ ಮಾತ್ವೆ ಕೋಷ್ಮಿಯಾಕಿನ್ ಮತ್ತು ಆರ್ತ ಮನೋವ್ಸ್‌ಗಳು ಕ್ರಾಂತಿಪೂರ್ವ ರಷ್ಯದ ಒಡೆಯರ ಜೀವನವನ್ನು ಕುರಿತವುಗಳು. ಅನೇಕ ವೇಳೆ ಈ ಕಾದಂಬರಿಗಳಲ್ಲಿ ಬರುವ ವ್ಯಕ್ತಿಗಳು ದೃಢನಿಶ್ಚಯದಿಂದ ಕೆಲಸ ಮಾಡತಕ್ಕವರು, ಸಾಹಸಿಗಳು, ಕ್ರಿಯಾಶೀಲರು ಮತ್ತು ಸ್ವಪ್ರಯತ್ನದಿಂದ ಮಹತ್ತರವಾದ ಕೆಲಸಗಳನ್ನು ಸಾಧಿಸಿದವರು. ಈ ವರ್ಗದವರನ್ನು ಚಿತ್ರಿಸುವಾಗ ಅವರನ್ನು ನಿಂದಿಸುವುದಾಗಲೀ ಅವಹೇಳನಕ್ಕೆ ಗುರಿ ಮಾಡುವುದಾಗಲಿ ಗಾರ್ಕಿಯ ಉದ್ದೇಶವಲ್ಲ. ಇಂಥ ಜನರ ಜೀವನವನ್ನು ಬಂಡವಾಳ ಸಮಾಜ ಯಾವ ರೀತಿ ವಿರೂಪಗೊಳಿಸುತ್ತದೆ, ಅವರ ಆತ್ಮವನ್ನು ಯಾವ ರೀತಿ ಕುಂಠಿಸುತ್ತದೆ, ಹಣದ ಗಳಿಕೆಯ ಆಸೆ ಹೇಗೆ ಅವರನ್ನು ಕ್ರೂರಿಗಳನ್ನಾಗಿ ಮಾಡುತ್ತದೆ – ಎಂಬುದನ್ನು ಇವನ ಕೃತಿಗಳು ಸಾಹಿತ್ಯಕವಾಗಿ ಪ್ರತಿಬಿಂಬಿಸುತ್ತವೆ. ಆರ್ತಮನೋವ್ಸ್ ಕಾದಂಬರಿ ರಷ್ಯದ ವರ್ತಕವರ್ಗದ ಮೂರು ಪೀಳಿಗೆಗಳ ಜೀವನವನ್ನು ಒಳಗೊಂಡಿದೆ. ಈ ಕುಟುಂಬದ ಯಜಮಾನ ಇಲ್ಯ ಆರ್ತಮನೋವ್ ತನ್ನ ಸ್ವಂತ ನೆಲದಲ್ಲಿಯೇ ಬೆಳೆದು ಅಚಲವಾಗಿ ನಿಂತಿರುವ ಓಕ್ ಮರದಂತೆ ದೃಢನಾಗಿರುತ್ತಾನೆ. ಆತ ತನ್ನ ಹಣ, ಕಾಲ ಮತ್ತು ದುಡಿಮೆಗಳನ್ನು ತನ್ನ ಊರನ್ನು ಸಂಪದ್ಯುಕ್ತವಾದ ಪಟ್ಟಣವಾಗಿ ಮಾರ್ಪಡಿಸಲು ಸಂಕಲ್ಪ ಉಳ್ಳವನು. ಆದರೆ ಅವನ ಚಟುವಟಿಕೆಗಳೆಲ್ಲ ಶೋಷಣೆಯ ಆಧಾರದ ಮೇಲೆ ನಿಂತಿರುತ್ತವೆ. ಅವನ ಮಕ್ಕಳು ಮತ್ತು ಮೊಮ್ಮಕ್ಕಳು ಕ್ರಮೇಣ ಸೋಮಾರಿಗಳಾಗಿ, ಧ್ಯೇಯರಹಿತ ಜೀವನದ ಕೆಸರಿನಲ್ಲಿ ಬಿದ್ದು ಅಲ್ಪರಾಗುತ್ತಾರೆ. ವ್ಯಕ್ತಿ ತನಗೆ ತಾನೇ ಎಷ್ಟೇ ಉನ್ನತಸತ್ತ್ವನಾಗಿದ್ದರೂ ಸಾಮಾಜಿಕ ಅರ್ಥವ್ಯವಸ್ಥೆ ಶೋಷಣಾತ್ಮಕವಾದಾಗ ಅದರಿಂದ ಅವನೂ ಪಾರಾಗಲಾರದೆ ಅವನ ಭಾವೀ ಸಂತಾನವೆಲ್ಲ ವ್ಯರ್ಥಜೀವಿಗಳಾಗಿ ಪತನಗೊಳ್ಳುತ್ತಾರೆಂಬುದನ್ನೂ ಈ ಕಾದಂಬರಿಯಲ್ಲಿ ಸಾಂಕೇತಿಸಲಾಗಿದೆ. ಗಾರ್ಕಿಯ ಕಡೆಯ ಮತ್ತು ಬಹು ದೊಡ್ಡ ಕೃತಿಯಾದ ಕ್ಲಿಂ ಸಾಮ್‌ಗಿನ್ನನ ಜೀವನ – ಎಂಬುದು ಒಬ್ಬ ವ್ಯಕ್ತಿ ಹೇಗೆ ತನ್ನ ಸ್ವಪ್ರತಿಷ್ಠೆ ಮತ್ತು ಅಲ್ಪತೆಯಿಂದ ಅರಿವಿಲ್ಲದೆಯೆ ತನ್ನ ಜೀವನವನ್ನು ವಿಷಪೂರಿತವನ್ನಾಗಿ ಮಾಡಿಕೊಳ್ಳುತ್ತಾನೆ ಎಂಬುದನ್ನು ಕುರಿತದ್ದು. 1880ರಿಂದ 1917ರ ವರೆಗಿನ ಅವಧಿಯ ರಷ್ಯದ ವಿಸ್ತೃತ ದೃಶ್ಯವನ್ನು ನೀಡುವ ಈ ಕಾದಂಬರಿಯ ನಾಯಕ ಕ್ಲಿಂ ಸಾಮ್‌ಗಿನ್. ಇವನೊಬ್ಬ ವಿಷಯ ಲಂಪಟ, ಸ್ವಪ್ರತಿಷ್ಠೆಯಿಂದ ಕೂಡಿದ ವಕೀಲ. ಇವನದು ಬಾಲ್ಯದಿಂದಲೂ ಯಾವ ಮಾತಿಗೂ ಸಿಕ್ಕಿಬೀಳದ, ಯಾವ ತತ್ತ್ವಕ್ಕೂ ತೆಕ್ಕೆಬೀಳದ ಯಾವ ಪ್ರಶ್ನೆಗೂ ಖಚಿತ ಉತ್ತರ ನೀಡದ ಪ್ರಕೃತಿ. ಸದಾ ತಾನು ಅನಾಥರಕ್ಷಕನೆಂದು ಬಡಾಯಿ ಕೊಚ್ಚುತ್ತಿರುತ್ತಾನೆ. ಆದರೆ ಇವನ ಜೀವನದ ಆಧಾರ ಶ್ರೀಮಂತರ ನೆರವು. ಇವನು ಹುಟ್ಟು ಗೋಸುಂಬೆ, ಸ್ವಾರ್ಥಿ. ಯಾವಾಗಲೂ ತನ್ನ ಯೋಗಕ್ಷೇಮಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾನೆ. ತಾನು ಎಲ್ಲರ ಪಕ್ಷಪಾತಿಯೆಂದು ನಟಿಸುತ್ತಾನೆ. ಆದರೆ ಯಾರ ಸಹಾಯಕ್ಕೂ ಒಂದು ಹುಲ್ಲುಕಡ್ಡಿಯನ್ನೂ ಎತ್ತುವುದಿಲ್ಲ. ಎಂಥ ಸನ್ನಿವೇಶಕ್ಕಾದರೂ ಹೊಂದಿಕೊಳ್ಳುವ ಚಾತುರ್ಯ ಇವನಲ್ಲಿದೆ. ಆದರೆ ಇವನಲ್ಲಿ ಮಾನವೀಯತೆ ಎಳ್ಳಷ್ಟೂ ಕಾಣುವುದಿಲ್ಲ. ಇವನ ನಿತ್ಯಜೀವನ ಕಪಟ ಮತ್ತು ಮೋಸದಿಂದ ತುಂಬಿದೆ.

ಗಾರ್ಕಿ ಈ ಕಾದಂಬರಿಯ ಮೂಲಕ ಪ್ರತಿಗಾಮಿ ಶಕ್ತಿಗಳ ವಿರುದ್ಧವಾದ ಮಹತ್ತರವಾದ ಹೋರಾಟ ನಡೆಸಿದ್ದಾನೆ. ಬಂಡವಾಳ ಅರ್ಥವ್ಯವಸ್ಥೆಯಲ್ಲಿ ಮಾನವ ಎಷ್ಟು ಕೀಳುಮಟ್ಟವನ್ನು ತಲುಪಬಲ್ಲ ಎಂಬುದನ್ನು ಕುರಿತ ಇಂಥ ಇನ್ನೊಂದು ಕಾದಂಬರಿ ಇದುವರೆಗೂ ಪ್ರಾಯಶಃ ರಚಿತವಾಗಿಲ್ಲ.

ಗಾರ್ಕಿ ಕೇವಲ ಸಾಹಿತಿಯಾಗಿಯೇ ಉಳಿಯಲಿಲ್ಲ. ತನ್ನ ಕಾಲದ ರಾಜಕೀಯ ಪ್ರಶ್ನೆಗಳನ್ನು ಕುರಿತು ಅನೇಕ ಉಜ್ಜ್ವಲ ಲೇಖನಗಳನ್ನು ಪ್ರಾವ್ದಾ ಮತ್ತು ಇಜ್‌ವೆಸ್ತಿಯಾ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾನೆ. ರಾಜಕೀಯ ಹೋರಾಟದಲ್ಲಿ ಭಾಗವಹಿಸಿದ್ದಾನೆ. 1905ರ ಜನವರಿ ಒಂಬತ್ತರಂದು ನಡೆದ ಹತ್ಯಾಕಾಂಡದ ಪ್ರತ್ಯಕ್ಷದರ್ಶಿಯಾದ ಗಾರ್ಕಿ ಅದನ್ನು ಖಂಡಿಸಿದ್ದಾನೆ. ಇದಕ್ಕಾಗಿ ಗಾರ್ಕಿಯನ್ನು ಬಂಧಿಸಿ ಗಡೀಪಾರು ಮಾಡಿದರು. ಜ಼ಾರ್ ಸರ್ಕಾರದ ಈ ಕೃತ್ಯ ಯುರೋಪನ್ನೆಲ್ಲ ಕದಡಿತು. ಯುರೋಪಿನ ಎಲ್ಲ ನಗರಗಳಲ್ಲೂ ಇದರ ವಿರುದ್ಧ ಸಭೆಗಳು ನಡೆದವು. ಫ್ರೆಂಚ್ ಮಹಾ ಸಾಹಿತಿ ಅನತೋಲ್ ಫ್ರಾನ್ಸ್ ಗಾರ್ಕಿಯಂಥ ಮನುಷ್ಯ ಪ್ರಪಂಚಕ್ಕೆ ಸೇರಿದವನು, ಪ್ರಪಂಚವೆಲ್ಲ ಅವನ ಸಹಾಯಕ್ಕಾಗಿ ಏಳಬೇಕು – ಎಂದು ಘೋಷಿಸಿದ. ಗಾರ್ಕಿ 1906–1913ರ ವರೆಗೆ ವಿದೇಶಗಳಲ್ಲಿ ವಾಸಿಸಿದ. ಇವನು 1921 ರಿಂದ 1928ರ ವರೆಗೆ ಇಟಲಿಯಲ್ಲಿ ವಾಸಿಸುತ್ತಿದ್ದ. ರಷ್ಯಕ್ಕೆ ಹಿಂತಿರುಗಿದ ಅನಂತರ ರಷ್ಯದ ಲೇಖಕರ ನಿರ್ವಿವಾದ ನಾಯಕನಾದ. 1934ರಲ್ಲಿ ಸೋವಿಯಟ್ ಲೇಖಕರ ಒಕ್ಕೂಟ ಸ್ಥಾಪನೆಯಾದಾಗ ಪ್ರಥಮ ಅಧ್ಯಕ್ಷನಾದ. ಇವನು 1936ರ ಜೂನ್ 14ರಂದು ನಿಷ್ನಿನೊವ್‌ಗೊರಾಡ್‌ನಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವಾಗಲೇ ನಿಧನ ಹೊಂದಿದ.

ಗಾರ್ಕಿ ಸಾಮಾಜಿಕ ಕಾದಂಬರಿಗಳನ್ನು ರಚಿಸಿದ ಸಾಹಿತಿ ಮಾತ್ರವಲ್ಲ. ಅವನ ಉದ್ದೇಶ ಸಮಾಜದ ಭವಿಷ್ಯವನ್ನು ರೂಪಿಸುವ ಹಲವಾರು ಕಾರ್ಯವಿಶೇಷಗಳನ್ನೂ ನಿರೂಪಿಸುವುದು. ಈತ ಸಾಹಿತ್ಯರಂಗವನ್ನು ಪ್ರವೇಶಿಸಿದ ಕಾಲದಲ್ಲಿ ಬರೆಹಗಾರರು ಜನತೆಯನ್ನು ಕರುಣಮಿಶ್ರಿತ ಸಹಾನುಭೂತಿಯಿಂದ ನಿರೂಪಿಸುವುದು ವಾಡಿಕೆಯಾಗಿತ್ತು. ಗಾರ್ಕಿ ಈ ಮಾರ್ಗವನ್ನು ಸಂಪೂರ್ಣವಾಗಿ ತ್ಯಜಿಸಿ ಜನತೆ ತಮ್ಮ ಕತೆಯನ್ನು ತಾವೇ ಹೇಳಿದರೆ ಯಾವ ರೀತಿ ಇರುತ್ತದೋ ಆ ರೀತಿಯಲ್ಲಿ ತನ್ನ ಕೃತಿಗಳನ್ನು ರಚಿಸಿದ. ಶುದ್ಧಕಲೆಯ ತತ್ತ್ವಗಳನ್ನು ಗಾರ್ಕಿ ಒಪ್ಪಲಿಲ್ಲ. ಅಂದಿನ ರಷ್ಯದ ಭಯಂಕರ ಅನಾಗರಿಕ ಸಮಾಜವನ್ನು ಕಟುವಾಗಿ ಟೀಕಿಸಿ ತನ್ಮೂಲಕ ರಷ್ಯದ ಜನತೆಯಲ್ಲಿ ತನಗಿದ್ದ ಉಜ್ಜ್ವಲ ವಿಶ್ವಾಸವನ್ನು ಗಾರ್ಕಿ ಪ್ರಕಟಿಸಿದ್ದಾನೆ. ಕಷ್ಟಕಾರ್ಪಣ್ಯಗಳಿಂದ ತುಂಬಿದ ನೀರಸ ಜೀವನವನ್ನು ಪ್ರತಿಭಟಿಸಿ ನಿರೋಧಿಸುವ ಸಲುವಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟಿರುವುದಾಗಿ ಗಾರ್ಕಿ ಹೇಳಿಕೊಂಡಿದ್ದಾನೆ. ಗಾರ್ಕಿಗೆ ಮಾನವನಲ್ಲಿ ಹಾಗೂ ಅವನಲ್ಲಿ ಅಡಗಿರುವ ಅದ್ಭುತ ಕ್ರಿಯಾಶಕ್ತಿಯಲ್ಲಿ ಅಚಲವಾದ ನಂಬಿಕೆಯಿತ್ತು. ತಾನು ಹೇಳಬೇಕಾದುದನ್ನು ಗಾರ್ಕಿ ಎಂದಿಗೂ ಹೇಳದೆ ಇರುತ್ತಿರಲಿಲ್ಲ; ಅಥವಾ ಹೇಳುವಾಗ ಅದನ್ನು ಅಸ್ಪಷ್ಟವಾಗಿ ಅನ್ಯೋಕ್ತಿಗಳ ಸಹಾಯದಿಂದ ಮುಸುಕುಮುಸುಕಾಗಿ ಹೇಳುತ್ತಿರಲಿಲ್ಲ. ಈತನ ಭಾವನೆಗಳು ಸದಾ ಪರಿಶುದ್ಧ ಮತ್ತು ಶಕ್ತಿಯುತವಾಗಿರುತ್ತಿದ್ದುವು. ವಿಚಾರಧಾರೆ ಪ್ರಸ್ತುತ ಹಾಗೂ ಭವಿಷ್ಯದ ಇತಿಹಾಸಗಳ ಮೇಲೆ ಆಧಾರಿತವಾಗಿರುತ್ತಿತ್ತು. ಮನಃಪಟಲದಲ್ಲಿ ಈ ಯುಗದ ಸಮಸ್ಯೆಗಳು ಮತ್ತು ಭಾವನೆಗಳು ತುಂಬಿರುತ್ತಿದ್ದುವು.

ಗಾರ್ಕಿ ಒಂದು ಅರ್ಥದಲ್ಲಿ ವಿಶಿಷ್ಟ ರೀತಿಯ ಬರೆಹಗಾರ. ತನ್ನ ಬರೆಹಗಳಲ್ಲಿ ಇವನು ರಷ್ಯದ ಸಾಹಿತ್ಯದಲ್ಲಿ ಪರಿಪಕ್ವವಾಗುತ್ತ ಬಂದಿದ್ದ ಎಲ್ಲ ಪ್ರಗತಿಶೀಲ ಭಾವನೆಗಳನ್ನೂ ವಿಚಾರಧಾರೆಯನ್ನೂ ಮೂರ್ತೀಭವಿಸಿಕೊಂಡು ಅದರ ಮುನ್ನಡೆಗೆ ಕಾರಣನಾದ. ಪುಷ್ಕಿನ್‌ನಿಂದ ಈಚೆಗೆ ಯಾವ ರಷ್ಯನ್ ಬರೆಹಗಾರನೂ ಇವನಂತೆ ಜೀವನದಲ್ಲಿ ಆಸಕ್ತಿಯನ್ನು ಪ್ರದರ್ಶಿಸಲಿಲ್ಲ. ಮಾನವನ ಜೀವನವನ್ನು ಸುಖಮಯವನ್ನಾಗಿ ಮಾಡಲು ಅವರನ್ನು ಸಂಘಟಿಸಲು, ಕ್ರಿಯಾಶೀಲರನ್ನಾಗಿ ಮಾಡಲು ಗಾರ್ಕಿ ತನ್ನ ಲೇಖಣಿಯನ್ನು ಉಪಯೋಗಿಸಿದ. ಇದಕ್ಕಿಂತ ಹೆಚ್ಚಾಗಿ ನೇರವಾಗಿ ಜನಗಳಿಂದ, ಕಾರ್ಮಿಕ ಚಳವಳಿಯಿಂದ, ಲೆನಿನ್ನನಿಂದ ಪಡೆದುಕೊಂಡ ನವೀನ ಭಾವನೆಗಳಿಂದ ರಷ್ಯದ ಸಾಹಿತ್ಯವನ್ನು ಸಂಪದ್ಭರಿತವಾಗಿ ಮಾಡಿದುದಲ್ಲದೆ ಜನತೆಯ ಕ್ರಾಂತಿಗರ್ಭದಲ್ಲಿ ಜನ್ಮತಾಳಿದ ಈ ಭಾವನೆಗಳನ್ನು ಲೇಖನಗಳಲ್ಲಿ, ಕಾದಂಬರಿಗಳಲ್ಲಿ, ನಾಟಕಗಳಲ್ಲಿ ಮತ್ತು ಕಥೆಗಳಲ್ಲಿ ಅಭಿವೃದ್ಧಿಗೊಳಿಸಿದ; ಹಿಂದಿನ ಯಾವ ಬರೆಹಗಾರನೂ ತೋರದಿದ್ದ ರೀತಿಯಲ್ಲಿ ಸಮಾಜವಾದಿ ನವೀಕರಣದ ಅವಶ್ಯಕತೆಯನ್ನು ತೋರಿಸಿಕೊಟ್ಟ.

ಹೀಗೆ ಸಾಹಿತ್ಯದಲ್ಲಿ ಸಮಾಜವಾದಿ ವಾಸ್ತವತೆಯ ನಿರೂಪಣೆಯ ಸ್ಥಾಪಕನಾದ ಗಾರ್ಕಿಯನ್ನು ಹೊಸ ರಷ್ಯನ್ ಸಾಹಿತ್ಯದ ಪಿತನೆಂದು ಗೌರವಿಸುವುದು ಸ್ವಾಭಾವಿಕವೇ ಆಗಿದೆ. (ಡಿ.ಆರ್.ಕೆ.;ಜಿ.ಎಚ್.ಆರ್.)

**ಗಾರ್ಗಿ :** ಬ್ರಹ್ಮಜಿಜ್ಞಾಸೆಯಲ್ಲಿ ಆಸಕ್ತಳಾಗಿದ್ದ ಒಬ್ಬ ಮಹಿಳೆ. ಗರ್ಗ ವಂಶದವಳು. ಮಹರ್ಷಿ ಮಿಥಿಲೆಯ ಜನಕಮಹಾರಾಜ ತಾನು ಕೈಕೊಂಡ ಯಜ್ಞ ಪೂರ್ತಿಯಾದ ಅನಂತರ ಸಂತುಷ್ಟಬ್ರಹ್ಮಸಭೆಯನ್ನುದ್ದೇಶಿಸಿ ಬ್ರಹ್ಮಿಷ್ಠನಾದವನು ಸುವರ್ಣಾಲಂಕೃತವಾದ ಸಾವಿರ ಆಕಳುಗಳನ್ನು ಕೊಂಡೊಯ್ಯಲಿ ಎಂದಾಗ ಯಾಜ್ಞವಲ್ಕ್ಯ ಋಷಿ ಮುಂದೆ ಬಂದನಷ್ಟೆ. ಆಗ ಯಾಜ್ಞವಲ್ಕ್ಯನ ಬ್ರಹ್ಮಜ್ಞಾನವನ್ನು ಕುರಿತು ಪ್ರಶ್ನಿಸಹೊರಟವರಲ್ಲಿ 6ನೆಯವಳಾಗಿ ಗಾರ್ಗಿ ಬರುತ್ತಾಳೆ. ಎಲ್ಲವನ್ನೂ ಆವರಿಸಿದ್ದು ಎನ್ನಲಾದ ನೀರು

ಯಾವುದರಿಂದ ಆವೃತವಾಗಿದೆ–ಎಂದು ಮುಂತಾಗಿ ಅವಳು ಪ್ರಶ್ನಿಸುತ್ತಾಳೆ. ಕೊನೆಗೆ ಬ್ರಹ್ಮನನ್ನು ತರ್ಕದಿಂದ ಅರಿಯಲಸಾಧ್ಯ, ವಿಪರೀತ ಪ್ರಶ್ನಿಸಿದರೆ ತಲೆ ಸಿಡಿದೀತು ಎಂದು ಯಾಜ್ಞವಲ್ಕ್ಯ ಹೇಳಿದಾಗ ಸುಮ್ಮನಾಗುತ್ತಾಳೆ.

ಏಳನೆಯವನಾಗಿ ಪ್ರಶ್ನಿಸಿದ ಉದ್ದಾಲಕನೂ ಸೋತಮೇಲೆ, ತಡೆಯಲಾರದೆ, ಬ್ರಹ್ಮಸಭೆಯ ಅಪ್ಪಣೆಯೊಂದಿಗೆ ಗಾರ್ಗಿ ಮತ್ತೆರಡು ಪ್ರಶ್ನೆಗಳನ್ನು ಕೇಳುತ್ತಾಳೆ.

ಸ್ವರ್ಗಮರ್ತ್ಯಗಳನ್ನು ಸದಾಕಾಲವೂ ಆವರಿಸಿದ್ದು ಯಾವುದು–ಎಂಬ ಪ್ರಶ್ನೆಗೆ ಯಾಜ್ಞವಲ್ಕ್ಯನಿಂದ ಆಕಾಶವೆಂಬ ಉತ್ತರ ಸಿಗುತ್ತದೆ. ಆಕಾಶವನ್ನು ಆವರಿಸಿದ್ದು ಯಾವುದು–ಎಂಬ ಪ್ರಶ್ನೆಗೆ ಆಕಾಶವನ್ನು ಯಾವುದು ತಾನೇ ಆವರಿಸಬಲ್ಲದು–ಎಂಬ ಪ್ರಶ್ನೆಯಿಂದಲೇ ಯಾಜ್ಞವಲ್ಕ್ಯ ಉತ್ತರಿಸುತ್ತಾನೆ.

ಆಕಾಶ ಎಲ್ಲದರಲ್ಲಿದ್ದು ಎಲ್ಲವನ್ನೂ ಮೀರಿದ್ದು; ಬ್ರಹ್ಮನನ್ನು ಸಂಪೂರ್ಣವಾಗಿ ಅರಿಯುವುದು ಯಾರಿಂದಲೂ ಎಂದಿಗೂ ಸಾಧ್ಯವಿಲ್ಲ ಎಂದು ಮುಂತಾದ ಯಾಜ್ಞವಲ್ಕ್ಯನ ನುಡಿಗಳಿಂದ ಗಾರ್ಗಿ ಸಮಾಧಾನ ಹೊಂದಿ ಯಾಜ್ಞವಲ್ಕ್ಯನನ್ನು ಬ್ರಹ್ಮಿಷ್ಠನೆಂದು ಮನ್ನಿಸಲು ಸಭೆಯನ್ನು ಕೇಳಿಕೊಳ್ಳುತ್ತಾಳೆ. (ಜಿ.ಕೆ.ಎಚ್.)

**ಗಾರ್ಗ್ಯ[1] :** ಒಬ್ಬ ಪ್ರಸಿದ್ಧ ಪ್ರಾಚೀನ ವೈಯಾಕರಣಿ. ಈತ ನಿರುಕ್ತವನ್ನು ಕುರಿತ ಗ್ರಂಥವನ್ನು ರಚಿಸಿದ್ದಿರಬಹುದೆಂದು ಹೇಳಲಾಗಿದೆ. ವೇದಾಂಗ – ಶಿಕ್ಷಾ ಭಾಗಗಳಾಗಿರುವ ಪ್ರಾತಿಶಾಖ್ಯಗಳಲ್ಲಿ ಈತನ ಹೆಸರು ಕಂಡುಬರುತ್ತದೆ. ಸುಪ್ರಸಿದ್ಧ ನಿರುಕ್ತರಾದ ಯಾಸ್ಕ (ಪ್ರ.ಶ.ಪೂ. ಸು. 600) ತನ್ನ ನಿರುಕ್ತದಲ್ಲಿ ಸೂಚಿಸಿರುವ ಮತ್ತು ಅವನಿಗಿಂತಲೂ ಮೊದಲಿನವರಾಗಿದ್ದ ವ್ಯಾಕರಣಾಚಾರ್ಯರಲ್ಲಿ ಗಾರ್ಗ್ಯನೂ ಒಬ್ಬನಾಗಿದ್ದಾನೆ. ಈತನ ಹೆಸರು ಕಂಡುಬರುವ ಮತ್ತೊಂದು ಮುಖ್ಯ ಗ್ರಂಥವೆಂದರೆ ಪಾಣಿನಿಯ ಅಷ್ಟಾಧ್ಯಾಯೀ (ಪ್ರ.ಶ.ಪೂ. ಸು. 400). ಈ ಗ್ರಂಥಗಳು ಸಾಮಾನ್ಯವಾಗಿ ವೈದಿಕಸ್ವರಗಳ ವಿಚಾರಕ್ಕೆ ಸಂಬಂಧಪಟ್ಟಂತೆ ಈತನ ಹೆಸರನ್ನು ಸೂಚಿಸುತ್ತವೆ.

ನಾಮಪದಗಳೆಲ್ಲವೂ ಆಖ್ಯಾತಗಳಿಂದ (ಕ್ರಿಯಾಸೂಚಕ ಧಾತುಗಳು) ನಿಷ್ಪನ್ನವಾಗುತ್ತವೆಂದೂ ಅದು ಆಚಾರ್ಯ ಶಾಕಟಾಯನನ ಹಾಗೂ ನೈರುಕ್ತ ಸಿದ್ಧಾಂತವೆಂದೂ ಯಾಸ್ಕ ಪ್ರತಿಪಾದಿಸಿದ್ದಾನೆ. ಯಾಸ್ಕನೇ ಹೇಳಿರುವ ಪ್ರಕಾರ, ಕೆಲವು ವೈಯಾಕರಣರಂತೆ ಗಾರ್ಗ್ಯನೂ ಎಲ್ಲ ನಾಮಪದಗಳೂ ಧಾತು ನಿಷ್ಪನ್ನವಾಗಲಾರವೆಂಬ ಅಭಿಪ್ರಾಯವುಳ್ಳವನಾಗಿದ್ದಾನೆ. (ಬಿ.ಕೆ.ಎಸ್.)

**ಗಾರ್ಗ್ಯ[2] :** ಒಬ್ಬ ಋಷಿ. ರಾಮಾಯಣದ ಪ್ರಕಾರ ಅಂಗಿರಸನ ವಂಶದವ. ಕೇಕಯ ದೇಶದ ಅಧಿಪತಿಯಾಗಿದ್ದ ಈತ ಯುಧಾಜಿತನ ಪುರೋಹಿತ. ಗಂಧರ್ವ ದೇಶವನ್ನು ಗೆಲ್ಲುವ ಉದ್ದೇಶದಿಂದ ಯುಧಾಜಿತ ಹತ್ತು ಸಾವಿರ ಕುದುರೆಗಳನ್ನೂ ಅನೇಕ ರತ್ನಾಭರಣಗಳನ್ನೂ ಈತನ ಮೂಲಕ ಶ್ರೀರಾಮನಿಗೆ ಕಾಣಿಕೆಯಾಗಿ ಕೊಟ್ಟದ್ದ.

ಹರಿವಂಶದ ಪ್ರಕಾರ ಗಾರ್ಗ್ಯನ ವೇಣುಹೊತ್ರನ ಮಗ. ಪಾಂಡವರ ಮೂಲ ಪುರುಷನಾದ ಜನಮೇಜಯರಾಯ ಗಾರ್ಗ್ಯ ಮಗನನ್ನು ಹಿಂಸೆಮಾಡಿ ಬ್ರಹ್ಮಹತ್ಯೆಗೆ ಗುರಿಯಾಗಿ ಶೌನಕ ಮುನಿಯ ಮೂಲಕ ಯಜ್ಞ ಮಾಡಿಸಿ ಆ ಪಾತಕವನ್ನು ಕಳೆದುಕೊಂಡ. *

**ಗಾರ್ಡನ್, ಚಾರಲ್ಸ್ ವಿಲಿಯಮ್ :** 1860–1937. ಕೆನಡದ ಪಾದ್ರಿ, ಜನಪ್ರಿಯ ಕಾದಂಬರಿಕಾರ. ರಾಲ್ಫ್ ಕೊನಾರ್ ಎಂಬ ಗುಪ್ತನಾಮದಿಂದ ಈತ ತನ್ನ ಕಾದಂಬರಿಗಳನ್ನು ಪ್ರಚುರಪಡಿಸಿದ್ದಾನೆ. ತಂದೆ ಹೈಲ್ಯಾಂಡ್ ಸ್ಕಾಟಿಷ್ ಪ್ರೆಸ್ಬಿಟೀರಿಯನ್ ಪಂಗಡದ ಪಾದ್ರಿಯಾಗಿದ್ದ. 1883ರಲ್ಲಿ ಟರಾಂಟೋ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಅನಂತರ ನಾಕ್ಸ್ ಕಾಲೇಜಿನಲ್ಲೂ ಎಡಿನ್‌ಬರೊ ವಿಶ್ವವಿದ್ಯಾಲಯದಲ್ಲೂ ದೇವತಾಶಾಸ್ತ್ರವನ್ನು ವ್ಯಾಸಂಗ ಮಾಡಿದ. 30ನೆಯ ವಯಸ್ಸಿನಲ್ಲಿ ಕೆನಡದ ರಾಕೀಸ್ ಪ್ರದೇಶದಲ್ಲಿ ಗಣಿಕಾರ್ಮಿಕರ ಮತ್ತು ಮರ ಕಡಿಯುವವರ ಜೊತೆಯಲ್ಲಿ ಮೂರು ವರ್ಷ ಕ್ರೈಸ್ತಧರ್ಮ ಪ್ರಚಾರಕನಾಗಿ ದುಡಿದ. ಒಂದನೆಯ ಮಹಾಯುದ್ಧದಲ್ಲಿ ಪಾದ್ರಿಯಾಗಿ ಕೆನಡದ ಕಡಲಪಡೆಯಲ್ಲಿ ಸೇವೆ ಮಾಡಿದ. ಗ್ಲೆನ್‌ಗ್ಯಾರಿಯಲ್ಲಿ ಕಳೆದ ಬಾಲ್ಯದ ನೆನೆಪುಗಳೂ ಆಮೇಲೆ ಧರ್ಮಬೋಧಕನಾಗಿ ಪಡೆದ ಅನುಭವಗಳೂ ಈತನ ಕಾದಂಬರಿಗಳಿಗೆ ಸಾಮಗ್ರಿಯಾದವು.

ಬಿಯಾಂಡ್ ದಿ ಮಾರ್ಷಸ್ ಎಂಬ ತನ್ನ ಮೊದಲ ಗ್ರಂಥದಲ್ಲಿ ಪ್ರಚಾರಕ ದಿನಗಳ ಕತೆಯನ್ನು ಈತ ಹೇಳಿದ್ದಾನೆ. ಇದಲ್ಲದೆ ತೀವ್ರ ಭಾವುಕತೆಯಿಂದ ತುಂಬಿದ ಬೋಧಪ್ರದವಾದ ಮೂವತ್ತು ಕಾದಂಬರಿಗಳನ್ನು ಈತ ರಚಿಸಿದ್ದಾನೆ. ಚುರುಕಾದ ಕಥನ, ಆಕರ್ಷಕ ಶೈಲಿಗಳಿಂದ ಈತನ ಕಾದಂಬರಿಗಳು ಜನಮೆಚ್ಚುಗೆಯನ್ನು ಪಡೆದುವು. ಬ್ಲ್ಯಾಕ್ ರಾಕ್, ದಿ ಸ್ಕೈ ಪೈಲಟ್, ದಿ ಮ್ಯಾನ್ ಫ್ರಮ್ ಗ್ಲೆನ್‌ಗ್ಯಾರಿ, ದಿ ಪ್ರಾಸ್ಪೆಕ್ಟ್, ಗ್ಲೆನ್‌ಗ್ಯಾರಿ ಸ್ಕೂಲ್ ಡೇಸ್, ದಿ ಗರ್ಲ್ ಫ್ರಮ್ ಗ್ಲೆನ್‌ಗ್ಯಾರಿ – ಮುಂತಾದವು ಇವನ ಪ್ರಸಿದ್ಧ ಕಾದಂಬರಿಗಳು. ಈ ಕೃತಿಗಳಿಗೆ ಜನಪ್ರಿಯತೆಯನ್ನು ತಂದುಕೊಟ್ಟದ್ದು ಇವನ ಕತೆಗಳಲ್ಲಿ ಎದ್ದು ಕಾಣುವ ಸಾಹಸ ಪ್ರೇಮ ಹಾಗೂ ಮಾನವಸೇವಾಬುದ್ಧಿ. ಪೋಸ್ಟ್‌ಸ್ಕ್ರಿಪ್ಟ್ ಟು ಅಡ್ವೆಂಚರ್ ಎಂಬ ಹೆಸರಿನ ಆತ್ಮಕಥೆ ಇವನ ಮರಣಾನಂತರ 1938ರಲ್ಲಿ ಪ್ರಕಟವಾಯಿತು. ಇವನ ಇನ್ನೊಂದು ಸಾಧನೆಯೆಂದರೆ ಕೆನಡದ ಯುನೈಟೆಡ್ ಚರ್ಚಿನ ಸ್ಥಾಪನೆಗೆ ನೆರವಾಗಿದ್ದು. ವಿನಿಪೆಗ್‌ನ ಸೇಂಟ್ ಸ್ಟೀಫನ್ ಚರ್ಚಿನಲ್ಲಿ ನಲವತ್ತು ವರ್ಷಗಳಿಗೂ ಮೇಲ್ಪಟ್ಟು ಪಾದ್ರಿಯಾಗಿ ಈತ ಸೇವೆ ಸಲ್ಲಿಸಿದ. (ಎಚ್.ಜಿ.ಎಸ್.ಆರ್.)

**ಗಾರ್ಡಾ ಸರೋವರ :** ಉತ್ತರ ಇಟಲಿಯಲ್ಲಿರುವ ಅತ್ಯಂತ ದೊಡ್ಡ ಸರೋವರ. ಇದಕ್ಕೆ ಬೆನಾಕೋ ಎಂದು ಹೆಸರುಂಟು. ವೆನೇಟ್ಸ್ಯಾ ಟ್ರಿಡೇಂಟೀನಾದ ದಕ್ಷಿಣಕ್ಕೆ, ಪೈಮಾಂಟೆ ವಲಯದಲ್ಲಿದೆ. ಉದ್ದ 54 ಕಿಮೀ ಗರಿಷ್ಠ ಅಗಲ 16.8 ಕಿಮೀ ವಿಸ್ತೀರ್ಣ ಸು.350.ಚ.ಕಿ.ಮೀ. ಗರಿಷ್ಠ ಆಳ 335.5 ಮೀ ಇದು ಸಮುದ್ರ ಮಟ್ಟದಿಂದ 63.5 ಮೀ ಎತ್ತರದಲ್ಲಿದೆ. ಉತ್ತರದಲ್ಲಿ ಕಡಿದಾದ ಪರ್ವತಗಳೂ ದಕ್ಷಿಣದಲ್ಲಿ ಚಿಕ್ಕ ಗುಡ್ಡಗಳೂ ಇದನ್ನು ಸುತ್ತುವರಿದಿವೆ. ಈ ಸರೋವರಕ್ಕೆ ನೀರು ಪೂರೈಕೆ ಉತ್ತರದ ಸಾರ್ಕೊ ತೊರೆಯಿಂದ; ಸರೋವರದ ನೀರು ಆಗ್ನೇಯದಲ್ಲಿಯ ಮಿನ್ಶಿಯೋ ನದಿಯ ಮೂಲಕ ಹೊರಹರಿಯುತ್ತದೆ. ಆಂಡೀಸ್ ನದಿಯ ದಕ್ಷಿಣ ಪಾತ್ರದ ಭಾಗವೇ ಗಾರ್ಡಾ ಸರೋವರ ಪ್ರದೇಶ ಎನ್ನಲಾಗಿದೆ. ಸದ್ಯದಲ್ಲಿ ಆಂಡೀಸ್ ನದಿ ಈ ಸರೋವರದಿಂದ ಪ್ರತ್ಯೇಕವಾಗಿ ದೂರದಲ್ಲಿ ಮಾಂಟೆಬಾಲ್ಡೊ ಕಡೆಗೆ ಹರಿಯುತ್ತದೆ. ಸರೋವರಕ್ಕೆ ಅಂಚು ಕಟ್ಟಿದಂತೆ ನೆಟ್ಟಿರುವ ಸಾಲು ಮರಗಳಿಂದ ಕೂಡಿರುವ ಸುತ್ತಣ ಪ್ರದೇಶ ಸುಂದರವಾಗಿದೆ. ಇದು ಪ್ರವಾಸಿಗಳನ್ನು ಆಕರ್ಷಿಸಿದೆ. ಪಶ್ಚಿಮ ಮತ್ತು ದಕ್ಷಿಣ ಕಡೆಯ ತೀರಪ್ರದೇಶದ ವಾಯುಗುಣ ಚಳಿಗಾಲದಲ್ಲೂ ಹಿತಕರ. ಈ ಸರೋವರದಲ್ಲಿ ಅನೇಕ ಬಗೆಯ ಮೀನುಗಳು ಹೇರಳವಾಗಿ ಸಿಕ್ಕುತ್ತವೆ. ಈ ಕಾರಣದಿಂದ ಸರೋವರದ ದಂಡೆಯ ಮೇಲೆ ಅನೇಕ ಪಟ್ಟಣಗಳು ಬೆಳೆದಿವೆ. ಪೆಸ್ಕೈರಾ, ಡೆಸೆನ್ಸಾನೊ, ಸ್ಯಾಲೊ, ಗಾರ್ಗ್ನಾನೊ, ರೀವಾ, ಗಾರ್ಡಾ, ಬಾರ್ಡೊಲಿನೊ – ಇವು ಮುಖ್ಯವಾದವು. *

**ಗಾರ್ಡಿನರ್, ಆಲ್‌ಫ್ರೆಡ್ ಜಾರ್ಜ್ :** 1865–1946. ಆಲ್ಫಾ ಆಫ್ ದ ಪ್ಲೋ ಎಂಬ ಕಾವ್ಯನಾಮದಿಂದ ಪ್ರಸಿದ್ಧನಾದ ಈತ ಪತ್ರಿಕೋದ್ಯಮಿ, ಸಾಹಿತಿ. ಹದಿನೈದು ವರ್ಷ ಕಾಲ ಪ್ರಾಂತೀಯ ಪತ್ರಿಕೋದ್ಯಮದಲ್ಲಿದ್ದು ಅನಂತರ 1902ರಿಂದ 1919ರವರೆಗೆ ಡೇಲಿ ನ್ಯೂಸ್ ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡಿದ; ಅನಂತರ ಅದೇ ಪತ್ರಿಕೆಗೆ ಕೆಲವು ವರ್ಷ ರಾಜಕೀಯ ಸಲಹೆಗಾರನಾಗಿಯೂ ದುಡಿದ. ಈ ಕಾಲದಲ್ಲಿ ಈತ ತನ್ನ ಕಾವ್ಯನಾಮದಿಂದ ಉತ್ಕೃಷ್ಟವಾದ ಅನೇಕಾನೇಕ ಲಲಿತ ಪ್ರಬಂಧಗಳನ್ನು ಬರೆದ. ಈತನನ್ನು 20ನೆಯ ಶತಮಾನದ ಅಗ್ರಗಣ್ಯ ಪ್ರಬಂಧಕಾರರ ಪಂಕ್ತಿಗೆ ಸೇರಿಸಲಾಗಿದೆ.

ಈತನ ಪ್ರಸಿದ್ಧ ಪ್ರಬಂಧ ಸಂಕಲನಗಳು ಇವು : ಪ್ರಾಫೆಟ್ಸ್, ಪ್ರೀಸ್ಟ್ಸ್ ಅಂಡ್ ಕಿಂಗ್ಸ್ (1908); ಪಿಲ್ಲರ್ಸ್ ಆಫ್ ಸೊಸಯಟಿ (1913); ದಿ ವಾರ್ ಲಾರ್ಡ್ಸ್ (1915); ಸರ್ಟನ್ ಪೀಪಲ್ ಆಫ್ ಇಂಪಾರ್ಟೆನ್ಸ್ (1926); ಪೆಬಲ್ಸ್ ಆನ್ ದಿ ಷೋರ್ (1915); ಲೀವ್ಸ್ ಇನ್ ದಿ ವಿಂಡ್ (1918), ಮೆನಿ ಫರೋಸ್ (1924). ಇವಲ್ಲದೆ ಈತ ಲೈವ್ಸ್ ಆಫ್ ವಿಲಿಯಂ ಹಾರ್‌ಕೋರ್ಟ್ (1923), ಜಾರ್ಜ್ ಕ್ಯಾಡ್‌ಬರಿ (1923) ಎಂಬ ಜೀವನಚರಿತ್ರೆಗಳನ್ನೂ ಬರೆದಿದ್ದಾನೆ.

ಬಿಗಿಯಾದ ಬಂಧ, ಲಘುವಾದ ನಿರೂಪಣಾ ವಿಧಾನ, ವರ್ಣನಾ ಸಾಮರ್ಥ್ಯ, ಕವಿಯ ಮನೋಧರ್ಮ– ಇವುಗಳಿಂದಾಗಿ ಈತನ ಬರೆಹಗಳು ಜನಪ್ರಿಯವಾಗಿವೆ. (ಪಿ.ಎಂ.ಎಚ್.)

**ಗಾರ್ಡಿಯಂ :** ತುರ್ಕಿಯ ಅಂಕಾರ ಸಮೀಪದಲ್ಲಿರುವ ಒಂದು ಪುರಾತನ ನಗರ. ಸಾಂಗಾರಿಯಸ್ ಮತ್ತು ಟೆಂಬ್ರಿಸ್ ನದಿಗಳ ಸಂಗಮದ ಬಳಿ, ಅಂಕಾರಾ ಮತ್ತು ಡೊರಿಲಿಯಂ (ಈಗಿನ ಎಸ್ಕಿಷೆಹೀರ್) ನಗರಗಳ ನಡುವಣ ರಾಜಮಾರ್ಗದಲ್ಲಿದೆ. ಆನಟೋಲಿಯದ ಬಯಲುಸೀಮೆಗೂ ಸಮುದ್ರಕ್ಕೂ ಮಧ್ಯೆ ಒಂದು ಕೊಂಡಿಯಂತಿದ್ದ ಈ ನಗರ ಪ್ರ.ಶ.ಪೂ. 9ನೆಯ ಶತಮಾನದ ಕೊನೆಯಲ್ಲಿ ಏಷ್ಯ ಮೈನರ್ ಪ್ರದೇಶದಲ್ಲಿ ಪ್ರಬಲರಾಗಿದ್ದ ಫ್ರಿಜಿಯನ್ನರ ರಾಜಧಾನಿಯಾಗಿತ್ತು. ಪ್ರಚಲಿತ ಸಾಂಪ್ರದಾಯಿಕ ಕತೆಗಳಂತೆ ಇವರ ಮೊದಲ ಅರಸ ಗಾರ್ಡಿಯಸ್. ಆತ ಮೊದಲು ಫ್ರಿಜಿಯದಲ್ಲಿ ಒಬ್ಬ ರೈತನಾಗಿದ್ದ. ಅವನಿಂದಲೇ ಈ ನಗರಕ್ಕೆ ಗಾರ್ಡಿಯಂ ಎಂಬ ಹೆಸರು ಬಂತೆಂದು ಹೇಳಲಾಗಿದೆ. ದೇವಸ್ಥಾನಕ್ಕೆ ಬಂಡಿಯಲ್ಲಿ ಬರುವ ಪ್ರಥಮ ಮನುಷ್ಯನನ್ನು ತಮ್ಮ ಅರಸನನ್ನಾಗಿ ಆರಿಸಿಕೊಳ್ಳಬೇಕೆಂಬ ಜ್ಯೂಸ್ ದೇವತೆಯ ದಿವ್ಯವಾಣಿಯಂತೆ ಫ್ರಿಜಿಯನ್ನರು ಅವನನ್ನು ತಮ್ಮ ದೊರೆಯೆಂದು ಸ್ವಾಗತಿಸಿದರೆನ್ನಲಾಗಿದೆ. ಆತ ತನ್ನ ಬಂಡಿಯನ್ನು ದೇವರಿಗೆ ಒಪ್ಪಿಸಿದ. ಅದಕ್ಕೆ ಕಟ್ಟಿದ ಹಗ್ಗದ ಗಂಟನ್ನು ಯಾರು ಬಿಚ್ಚುವರೋ ಅವರು ಇಡೀ ಏಷ್ಯವನ್ನು ಜಯಿಸುವರೆಂದು ದಿವ್ಯವಾಣಿ ಸಾರಿತೆಂದು ಹೇಳಲಾಗಿದೆ. ಅವನ ಅನಂತರ

ಆಳ್ವಿಕೆಗೆ ಬಂದವನು ಮೈದಾಸ್. ಗಾರ್ಡಿಯಂನ ಪ್ರಜೆಗಳು ತಮ್ಮ ಅರಸರನ್ನು ಅನುಕ್ರಮವಾಗಿ ಈ ಎರಡು ಹೆಸರುಗಳಿಂದಲೇ ಕರೆದರು.

ಇಂದಿನ ಯಸ್ಸಿಹಾಯುಕ್ ನಗರಪ್ರದೇಶ ಹಿಂದಿನ ಗಾರ್ಡಿಯಂನ ನಿವೇಶನ ವಾಗಿತ್ತೆಂದು 1889ರಲ್ಲಿ ಕಾರ್ಟೆ ಸೋದರರು ಗುರುತಿಸಿದರಾದರೂ ಇತ್ತೀಚಿನವರೆಗೂ ಆ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿರಲಿಲ್ಲ. ಆರ್.ಎಸ್.ಯಂಗ್ ಎಂಬ ಪುರಾತತ್ತ್ವ ಶೋಧಕ 1950ರಲ್ಲಿ ಇಲ್ಲಿ ಉತ್ಖನನ ಕಾರ್ಯವನ್ನು ಆರಂಭಿಸಿ ಈ ನಗರದ ಪ್ರಾಚೀನ ಇತಿಹಾಸದಲ್ಲಿ ಮೂರು ಘಟ್ಟಗಳನ್ನು ಯಶಸ್ವಿಯಾಗಿ ಗುರುತಿಸಿದ. ಫ್ರಿಜಿಯನ್ನರಿಗೂ ಹಿಂದೆ ಹಿಟ್ಟೈಟ್ ಜನಾಂಗ ಇಲ್ಲಿ ನೆಲಸಿದ್ದರ ಗುರುತುಗಳು ಕೆಳಗಿನ ಪದರದಲ್ಲಿ ದೊರಕಿದವು. ಮಧ್ಯದ ಪದರ ಫ್ರಿಜಿಯನ್ನರ ಕಾಲದ್ದು. ಪರ್ಷಿಯ ದೇಶ ಪ್ರಬಲವಾದಾಗ ಸೈರಸ್ ಈ ನಗರದ ಪ್ರಾಶಸ್ತ್ಯವನ್ನು ಅರಿತು ಕೊಂಡ. ಪರ್ಷಿಯನ್ ಸಾಮ್ರಾಜ್ಯದ ಕಾಲದಲ್ಲಿ ಗಾರ್ಡಿಯಂ ನಗರವನ್ನು ಮುಖ್ಯ ವ್ಯಾಪಾರ ಕೇಂದ್ರವಾಗಿ ಪುನರ್ನಿರ್ಮಿಸ ಲಾಯಿತು. ಇಲ್ಲೊಂದು ಕೋಟೆ ನಿರ್ಮಿತವಾಯಿತು. ಅಲೆಗ್ಸಾಂಡರ್ ಮಹಾಶಯ ಈ ನಗರದ ಮೇಲೆ ದಾಳಿ ಮಾಡಿದ (333). ಆ ಸಂದರ್ಭದಲ್ಲಿ ಆತ ಇಲ್ಲಿಯ ಗಾರ್ಡಿಯನ್ ಗಂಟನ್ನು ತನ್ನ ಕತ್ತಿಯಿಂದ ಕತ್ತರಿಸಿದನೆಂದು ಪ್ರತೀತಿ. ಪರ್ಷಿಯನ್ನರು ಮತ್ತು ಗ್ರೀಕರು ಈ ನಗರದೊಡನೆ ಹೊಂದಿದ್ದ ಸಂಪರ್ಕದ ಬಗ್ಗೆ ಊಹೆಗಳು ಗಾರ್ಡಿಯಂ ಪ್ರದೇಶದಲ್ಲಿ ಉತ್ಖನನ ಮಾಡಿದಾಗ ಮೇಲ್ಪದರದಲ್ಲಿ ದೊರೆತ ಅವಶೇಷಗಳಿಂದ ದೃಢಪಟ್ಟಿವೆ. (ಜಿ.ಬಿ.ಆರ್.)

**ಗಾರ್ಡಿಯನ್, ದಿ :** ಲಂಡನ್ ಮತ್ತು ಮ್ಯಾಂಚೆಸ್ಟರ್‌ನಿಂದ ಪ್ರಕಟವಾಗುತ್ತಿರುವ ರಾಷ್ಟ್ರೀಯ ದಿನ ಪತ್ರಿಕೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಕೆಲವೇ ಪತ್ರಿಕೆಗಳಲ್ಲಿ ಒಂದು. ಪ್ರಾರಂಭದಲ್ಲಿ ಇದು ಮ್ಯಾಂಚೆಸ್ಟರ್ ಗಾರ್ಡಿಯನ್ ಎಂಬ ಹೆಸರಿನಿಂದ ಸಾಪ್ತಾಹಿಕವಾಗಿ ಪ್ರಕಟವಾಗುತ್ತಿತ್ತು. ಸಂಸದೀಯ ಸುಧಾರಣೆ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವ ಉದ್ದೇಶದಿಂದ ಕೆಲವು ಪ್ರಗತಿಶೀಲರು 1821ರಲ್ಲಿ ಈ ಪತ್ರಿಕೆಯನ್ನು ಪ್ರಾರಂಭಿಸಿದರು. ಇದಕ್ಕಾಗಿ ಅವರು ಹೂಡಿದ ಬಂಡವಾಳ ಕೇವಲ 400 ಪೌಂಡ್. 1855ರಿಂದ ದಿನಪತ್ರಿಕೆಯಾಯಿತು. ಪತ್ರಿಕೆ ರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ಅಂತಾರಾಷ್ಟ್ರೀಯ ಖ್ಯಾತಿ ಪಡೆದಾಗ ಪತ್ರಿಕೆಯ ಹೆಸರನ್ನು ಗಾರ್ಡಿಯನ್ ದಿ ಎಂದಷ್ಟಕ್ಕೆ ಮೊಟಕುಗೊಳಿಸಲಾಯಿತು. 1971ರ ಮೇ 5ರಂದು ಪತ್ರಿಕೆಯ 150ನೆಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.

ಈ ಪತ್ರಿಕೆ ಪ್ರಾರಂಭವಾದಂದಿನಿಂದಲೂ ನಿರ್ಭಯ ವಿಚಾರಧಾರೆಗೆ ಹೆಸರುವಾಸಿಯಾಗಿದೆ. 1936ರಲ್ಲಿ ಪತ್ರಿಕೆಯ ಪ್ರಭಾವಿ ಸಂಪಾದಕರಲ್ಲಿ ಒಬ್ಬರಾದ ಸಿ.ಪಿ. ಸ್ಕಾಟ್ ವಿಶ್ವಸ್ಥ ಮಂಡಲಿಯನ್ನು ರಚಿಸಿದ. ಪತ್ರಿಕೆಯ ಸ್ವಾಮ್ಯ ಆ ಮಂಡಲಿಗೆ ಸೇರಿದೆ. ಅದು ಸಂಪಾದಕ ವರ್ಗಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿರುವರಲ್ಲದೆ ಈ ಸತ್ಸಂಪ್ರದಾಯವನ್ನು ಸತತವಾಗಿ ಉಳಿಸಿಕೊಂಡು ಬಂದಿದ್ದಾರೆ. ಪತ್ರಿಕೆಯ ಸಂಪಾದಕೀಯಗಳು ಇದಕ್ಕೆ ಸಾಕ್ಷಿ.

ಗಾರ್ಡಿಯನ್ ನ್ಯೂಸ್ ಪೇಪರ್ಸ್ ಲಿಮಿಟೆಡ್ ಸಂಸ್ಥೆ ಈ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಈ ಸಂಸ್ಥೆಯ ಮಾತೃಸಂಸ್ಥೆ ಮ್ಯಾಂಚೆಸ್ಟರ್ ಗಾರ್ಡಿಯನ್ ಅಂಡ್ ಈವ್ನಿಂಗ್ ನ್ಯೂಸ್ ಲಿಮಿಟೆಡ್. ಸಿ.ಪಿ ಸ್ಕಾಟ್ 25ನೆಯ ವಯಸ್ಸಿನಲ್ಲಿ ಪತ್ರಿಕೆಯ ಸಂಪಾದಕರಾಗಿ ನೇಮಕಗೊಂಡರು. 82ನೆಯ ವಯಸ್ಸಿನವರೆಗೂ ಸಂಪಾದಕರಾಗಿದ್ದರು. ಈಚಿನ ವರ್ಷಗಳಲ್ಲಿ ದಿ ಗಾರ್ಡಿಯನ್ ಅನೇಕ ಪ್ರಶಸ್ತಿಗಳನ್ನು ಗಳಿಸಿದೆ. 1970ರಲ್ಲಿ ಇದು ವರ್ಷದ ಪತ್ರಿಕೆಯಾಗಿ ಆಯ್ಕೆಯಾಗಿತ್ತು. ಸಂಪಾದಕರಾದ ಆಲಸ್ಟೇರ್ ಹೆದರಿಂಗ್ಟನ್ 1971ರಲ್ಲಿ ವರ್ಷದ ಅತ್ಯುತ್ತಮ ಪತ್ರಕರ್ತರಾಗಿ ಆಯ್ಕೆಗೊಂಡಿದ್ದರು. (ಬಿ.ವಿ.ವಿ.ವೈ.)

**ಗಾರ್ಡ್ನರ್, ಅರ್ಲ್ ಸ್ಟ್ಯಾನ್ಲೀ :** 1889–1970. ಅಮೆರಿಕ ಸಂಯುಕ್ತಸಂಸ್ಥಾನದ ಪತ್ತೇದಾರಿ ಕಾದಂಬರಿಕಾರ. ಪೆರೀ ಮೇಸನ್ ಎಂಬ ಜನಪ್ರಿಯ ಪತ್ತೇದಾರ ಪಾತ್ರದ ಪ್ರವರ್ತಕ. ಮೆಸಾಚುಸೆಟ್ಸ್‌ನ ಮಾಲ್ಡನ್‌ನಲ್ಲಿ 1889ರ ಜುಲೈ 17ರಂದು ಹುಟ್ಟಿದ. ವೆಂಟ್ಯುರ ಕೌಂಟಿಯಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ (1911) ಸುಮಾರು 20 ವರ್ಷಗಳ ಕಾಲ ಸಮರ್ಥವಾಗಿ ದುಡಿದ. 1921ರಲ್ಲಿ ಪತ್ತೇದಾರಿ ಕತೆಗಳಿಗೇ ಮೀಸಲಾದ ಪತ್ರಿಕೆಗಳಿಗೆ ಕತೆಗಳನ್ನು ಬರೆಯಲು ಪ್ರಾರಂಭಿಸಿದ. ಈತನ ಮೊದಲ ಕಾದಂಬರಿ ದಿ ಕೇಸ್ ಆಫ್ ದಿ ವೆಲ್ವೆಟ್ ಕ್ಲಾತ್ 1932ರಲ್ಲಿ ಪ್ರಕಟವಾಯಿತು. ಅನಂತರ ವಕೀಲವೃತ್ತಿಗೆ ತಿಲಾಂಜಲಿಯಿತ್ತು ಪೂರ್ಣಕಾಲಿಕ ಲೇಖಕನಾದ. ಲೇಖನವೃತ್ತಿಯಲ್ಲಿ ಮೊದಲ 25 ವರ್ಷಗಳಲ್ಲಿ ಈತ ಒಟ್ಟು 54 ಕೃತಿಗಳನ್ನು ಹೊರತಂದ. ಎಡ್ಗರ್ ವ್ಯಾಲೆಸ್‌ನಂತೆ ಈತನೂ ಡಿಕ್ಟಫೋನ್ ಬಳಸಿಕೊಂಡು ತನ್ನ ಕತೆಗಳನ್ನು ಹೇಳಿ ರೆಕಾರ್ಡ್ ಮಾಡುತ್ತಿದ್ದನಂತೆ. ಇವುಗಳ ಒಟ್ಟು 7 ಕೋಟಿ 50 ಲಕ್ಷ ಪ್ರತಿಗಳು ಕೇವಲ ಉತ್ತರ ಅಮೆರಿಕದಲ್ಲಿಯೇ ಮಾರಾಟವಾದುವಂತೆ.

ಈತನ ಬಹುಪಾಲು ಕಾದಂಬರಿಗಳು ಪೆರೀ ಮೇಸನ್ ಎಂಬ ತೀಕ್ಷ್ಣಮತಿ ವಕೀಲನ ಪತ್ತೇದಾರಿ ಅದ್ಭುತಗಳಿಂದ ಕೂಡಿವೆ. ಕಥೆಯನ್ನು ತುಂಬ ವೇಗವಾಗಿ ಆದರೆ ಪ್ರತಿ ಹೆಜ್ಜೆಯಲ್ಲೂ ಕಾನೂನುಬದ್ಧವಾಗಿ ಹೇಳುವುದು ಗಾರ್ಡ್ನರನ ಕ್ರಮ. ಕಾದಂಬರಿಯ ಪ್ರಕರಣಗಳು ಹೆಚ್ಚು ಕುತೂಹಲ ಕೆರಳಿಸಿ ಕೋರ್ಟಿನಲ್ಲಿ ಮುಕ್ತಾಯವಾಗುತ್ತವೆ. ಎ.ಎ.ಫೇರ್ ಎಂದು ಹೆಸರಿಟ್ಟುಕೊಂಡು ಈತ ಕೆಲವು ನಿಗೂಢ (ಮಿಸ್ಟರಿ) ಕಾದಂಬರಿಗಳನ್ನು ಬರೆದಿದ್ದಾನೆ.

ಗಾರ್ಡ್ನರ್ ಅಪರಾಧಶಾಸ್ತ್ರದಲ್ಲಿ ಬಹಳಷ್ಟು ಆಸ್ಥೆ ವಹಿಸಿ ಸಂಶೋಧನ ಕೆಲಸ ಮಾಡಿದ್ದಾನೆ. ಮಿಥ್ಯಾಪವಾದಕ್ಕೆ ಗುರಿಯಾಗಿ ಕಾರಾಗೃಹ ಸೇರಿದವರ ರಕ್ಷಣೆಗೆ ಈತ 1948ರಲ್ಲೊಂದು ಸಂಸ್ಥೆಯನ್ನು ಪ್ರಾರಂಭಿಸಿದ. ದಿ ಹೌಲಿಂಗ್ ಡಾಗ್ (1934), ದಿ

ಸ್ಟಟರಿಂಗ್ ಬಿಷಪ್ (1936), ದಿ ಲೇಜಿ ಕ್ಯಾನರಿ (1937), ದಿ ಡ್ರೌನಿಂಗ್ ಡಕ್ (1942), ದಿ ರನ್‌ಅವೇ ಕಾರ್ಪ್ಸ್ (1954) ಮುಂತಾದವು ಪೆರೀ ಮೇಸನ್ನನನ್ನೇ ನಾಯಕನನ್ನಾಗುಳ್ಳ ಈತನ ಕೆಲವು ಪ್ರಸಿದ್ಧ ಕಾದಂಬರಿಗಳು. ಇವಲ್ಲದೆ ಈತ ಜಿಲ್ಲಾ ಅಟೋರ್ನಿ ಡಗ್ಲಾಸ್ ಸೆಲ್ಬಿಯನ್ನು ನಾಯಕನನ್ನಾಗುಳ್ಳ ದಿ ಡಿ. ಎ. ಕಾಲ್ಸ್ ಇಟ್ ಮರ್ಡರ್ (1937) ದಿ ಡಿ.ಎ. ಕಾಲ್ಸ್ ಎ ಟರ್ನ್ (1954) ಮೊದಲಾದ ಕಾದಂಬರಿ ಗಳನ್ನು ರಚಿಸಿದ್ದಾನೆ. ಅಮೆರಿಕದ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣ ಸಂಸ್ಥೆ ನಡೆಸಿದ ಒಂದು ಪ್ರಯೋಗದಿಂದ ಸಂಯುಕ್ತಸಂಸ್ಥಾನದಲ್ಲಿ ಗಾರ್ಡ್ನರ್ ತನ್ನ ಕಾಲದ ಅತಿದೊಡ್ಡ ಜನಪ್ರಿಯ ಪತ್ತೇದಾರಿ ಕತೆಗಾರನೆಂದು ತಿಳಿಯುತ್ತದೆ. ಇವನಿಗೆ ಎರಡನೆಯವನು ಷರ್‌ಲಾಕ್ ಹೋಮ್ಸ್‌ಮ್‌ನನ್ನು ಸೃಷ್ಟಿಸಿದ ಕಾನನ್ ಡಾಯಲ್. *

ಗಾರ್ಡ್ನರ್‌ನ ಕಾದಂಬರಿಗಳಲ್ಲಿ ಪೆರೀ ಮೇಸನನ ಕಕ್ಷಿಗಾರ (ಅಥವಾ ಕಕ್ಷಿಗಳು) ಒಂದು ವ್ಯೂಹದಲ್ಲೇ ಸಿಕ್ಕಿಕೊಳ್ಳುತ್ತಾನೆ(ಳೆ). ಇನ್ನೇನು, ಅವನ(ಳ) ಅಪರಾಧ ಸಾಬೀತಾಯಿತು ಸೆರೆಮನೆಗೋ ಗಲ್ಲಿಗೋ ಹೋಗುವುದು ಅನಿವಾರ್ಯ ಎನ್ನುವ ಹಂತದಲ್ಲಿ ಪೆರೀ ಮೇಸನ್‌ಗೆ ಹೊಳೆದ ಉತ್ತರದಿಂದ ಕಕ್ಷಿಗಾರ(ಳು) ಪಾರಾಗುತ್ತಾನೆ(ಳೆ), ಮೊಕದ್ದಮೆಯು ಕೋಲಾಹಲಕರವಾಗಿ ಮುಕ್ತಾಯವಾಗುತ್ತದೆ. ಹಲವೊಮ್ಮೆ ಮೇಸನನಿಗೆ ತೇಜೋವಧೆ ಮಾಡುತ್ತೇವೆ ಎಂದು ಬೀಗುತ್ತಿರುವ ಪೊಲೀಸರಿಗೆ ತೇಜೋವಧೆ ಯಾಗುತ್ತದೆ. ಹಿಂದಿನ ಕಾಲದ ಸಾಹಸ ಕಥೆಗಳ ಅದ್ಭುತ ಶಕ್ತಿಯ ನಾಯಕ ಈ ಕಾದಂಬರಿಗಳಲ್ಲಿ ಆಧುನಿಕ ವಕೀಲನಾಗಿ ಕಾಣಿಸಿಕೊಳ್ಳುತ್ತಾನೆ. (ಲಾರ್ಜಿಕ್ ದೇನ್ ಲೈಫ್) ಅಸಾಧಾರಣ ವ್ಯಕ್ತಿಗಳನ್ನು ಕಾಣುವ ಓದುಗನ ಬಯಕೆ ಇಲ್ಲಿ ತೃಪ್ತಿಹೊಂದುತ್ತದೆ. ಗಾರ್ಡ್ನರ್ 1970ರ ಮಾರ್ಚ್ 11ರಂದು ನಿಧನನಾದ. (ಎಲ್.ಎಸ್.ಎಸ್.)

**ಗಾರ್ಡ್ನರ್, ಅಲೆಗ್ಸಾಂಡರ್ :** 1785–1877. 1785ರಲ್ಲಿ ಜನಿಸಿದ ಒಬ್ಬ ಐರಿಷ್ ಸೈನಿಕ. ಅದೃಷ್ಟವನ್ನರಸುತ್ತಾ ಆಫ್ಘಾನಿಸ್ತಾನಕ್ಕೆ ಬಂದ ಈತ ಹಬೀಬುಲ್ಲಾಖಾನನ ಆಶ್ರಯ ಪಡೆದ. ಮಾವನಾದ ಅಮೀರ್ ದೋಸ್ತ್ ಮಹಮ್ಮದನೊಡನೆ ಹಬೀಬುಲ್ಲಾ ಅಧಿಕಾರಕ್ಕಾಗಿ ನಡೆಸಿದ ಹೋರಾಟಗಳಲ್ಲಿ ಈತನೂ ಪಾಲ್ಗೊಂಡ. ಆದರೆ ಇವನು ಬಹಳ ಕಾಲ ಅಲ್ಲಿರಲಿಲ್ಲ. 1826ರ ಸುಮಾರಿಗೆ ಪಂಜಾಬಿಗೆ ಬಂದು ರಣಜಿತ್ ಸಿಂಗನ ಕೆಳಗೆ ಕರ್ನಲ್ ಹುದ್ದೆ ಪಡೆದ. ಸಿಖ್ ಸೈನಿಕರಿಗೆ ಯುದ್ಧದ ತರಬೇತು ನೀಡುತ್ತಿದ್ದ ಈತ, ರಣಜಿತ್ ಸಿಂಗ್ ಆಫ್ಘನ್ನರೊಡನೆ ಹೂಡಿದ ಕದನಗಳಲ್ಲಿ ಅವನಿಗೆ ಬೆಂಬಲವಾಗಿದ್ದ, ರಣಜಿತ್‌ಸಿಂಗ್‌ನ ಮರಣಾನಂತರ ಅವನ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ನಡೆದ ಹೋರಾಟಗಳ ಪ್ರತ್ಯಕ್ಷದರ್ಶಿಯಾಗಿದ್ದ. ಬ್ರಿಟಿಷರು ಸಿಖ್ಖರೊಡನೆ ನಡೆಸಿದ ಮೊದಲನೆಯ ಕದನದಲ್ಲಿ ಇವನು ಯಾವ ಪಾತ್ರವನ್ನೂ ವಹಿಸದಿದ್ದರೂ ಅಂದಿನ ಘಟನೆಗಳ ಹಲವು ವಿವರಗಳನ್ನು ಬರೆದಿಟ್ಟಿದ್ದಾನೆ. ತದನಂತರ ಜಮ್ಮು–ಕಾಶ್ಮೀರದ ದೊರೆ ಗುಲಾಬ್ ಸಿಂಗ್‌ನ (**ನೋಡಿ– ಗುಲಾಬ್–ಸಿಂಗ್**) ಅಧೀನದಲ್ಲಿ ಕೆಲಕಾಲ ದುಡಿದ. ಈತ ಬರೆದಿಟ್ಟಿರುವ ಸಮಕಾಲೀನ ಘಟನೆಗಳ ವರದಿಗಳನ್ನು ಮೆಮ್ವಾರ್ಸ್ ಆಫ್ ಅಲೆಗ್ಸಾಂಡರ್ ಗಾರ್ಡ್ನರ್ ಎಂಬ ಗ್ರಂಥದಲ್ಲಿ ಹ್ಯೂ ಪಿಯರ್ಸ್ ಸಂಗ್ರಹಿಸಿದ್ದಾನೆ.

1831ರಲ್ಲಿ ಸೈಯದ್ ಅಹಮದನ ನೇತೃತ್ವದಲ್ಲಿ ಮಹಮ್ಮದೀಯರು ಸಿಖ್ಖರ ವಿರುದ್ಧ ದಂಗೆ ಎದ್ದು ಮನ್‍ಸೆಹ್ರಾದ ಬಳಿಯ ಬಾಲಾಕೋಟ್ ಎಂಬಲ್ಲಿ ನಡೆಸಿದ ಧಾಳಿಯಲ್ಲಿ ಸಿಖ್ ಸೈನಿಕರಿಂದ ಅಹಮದ್ ಕೊಲ್ಲಲ್ಪಟ್ಟದ್ದನ್ನು ಕೆಲವೇ ಗಜಗಳ ದೂರದಲ್ಲಿ ನಿಂತು ನೋಡಿದೆನೆಂದು ಗಾರ್ಡ್ನರ್ ಹೇಳಿಕೊಂಡಿದ್ದಾನೆ; ಆಗ ಯಾವ ದೇವದೂತನೂ ಈ ವೀರನನ್ನು ದಿವ್ಯಲೋಕಕ್ಕೆ ಕೊಂಡೊಯ್ಯಲು ಬರಲಿಲ್ಲವೆಂದು ವ್ಯಂಗ್ಯವಾಗಿ ನುಡಿದಿದ್ದಾನೆ. 1839ರ ಅಕ್ಟೋಬರ್ 9ರಂದು ರಣಜಿತ್‍ಸಿಂಗ್‍ನ ಮಗನಾದ ಖಡಕ್‍ಸಿಂಗನ ಮಂತ್ರಿ ಜೇತ್‍ಸಿಂಗ್ ಬಾಜ್ವಾನನ್ನು ಧ್ಯಾನ್‍ಸಿಂಗ್ ಡೋಗ್ರಾ ಎಂಬವನು ರಾಜಕುಮಾರನ ಎದುರಿನಲ್ಲೇ ಇರಿದು ಕೊಂದುದನ್ನು ಕಂಡೆನೆಂಬುದು ಅವನ ಹೇಳಿಕೆ. ಖಡಕ್‍ಸಿಂಗ್ 1840ರ ನವೆಂಬರ್ 5ರಂದು ಮರಣ ಹೊಂದಿದಾಗ, ಅವನ ದೇಹವನ್ನೂ ಅವನೊಡನೆ ಸತಿ ಹೋದ ಅವನ ಇಬ್ಬರು ಪತ್ನಿಯರ ದೇಹಗಳನ್ನೂ ಚಿತೆಗೆ ಒಪ್ಪಿಸಿ ಅವನ ಮಗ ನವ್‍ನಿಹಲ್‍ಸಿಂಗ್ ಅರಮನೆಗೆ ಹಿಂದಿರುಗುತ್ತಿದ್ದಾಗ ಕೋಟೆಯ ದ್ವಾರದ ಕಮಾನು ಕುಸಿದು ನವ್‍ನಿಹಲ್‍ಸಿಂಗ್ ಸತ್ತನೆಂದು ಹೇಳುತ್ತಾನೆ. ಗಾರ್ಡ್ನರ್‍ನ ಬಖೈರಿನಲ್ಲಿರುವ ಇಂಥ ಅನೇಕ ಹೇಳಿಕೆಗಳಲ್ಲಿ ಹಲವು ಸತ್ಯಕ್ಕೆ ದೂರವೆಂದು ಇತಿಹಾಸಕಾರರು ತೋರಿಸಿಕೊಟ್ಟಿದ್ದಾರೆ. (ಜಿ.ಬಿ.ಆರ್.)

**ಗಾರ್ಡ್ನರ್, ಸ್ಯಾಮ್ಯುಯೆಲ್ ರಾಸನ್ :** 1829–1902. ಇಂಗ್ಲಿಷ್ ಇತಿಹಾಸಕಾರ. ಆಲಿವರ್ ಕ್ರಾಮ್ವೆಲ್ ವಂಶಸ್ಥ. 1829ರ ಮಾರ್ಚ್ 4ರಂದು ಹ್ಯಾಂಪ್‍ಷಿರ್‍ನ ಆಲ್ರೆಸ್‍ಫರ್ಡ್‍ನಲ್ಲಿ ಜನಿಸಿದ. ವಿಂಚೆಸ್ಟರಿನಲ್ಲೂ ಆಕ್ಸ್‍ಫರ್ಡಿನ ಕ್ರೈಸ್ಟ್‍ಚರ್ಚ್ ಕಾಲೇಜಿನಲ್ಲೂ ವಿಧ್ಯಾಭ್ಯಾಸ ಮಾಡಿ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಆಧುನಿಕ ಇತಿಹಾಸ ಪ್ರಾಧ್ಯಾಪಕನಾಗಿದ್ದ (1871–85) 1884ರಲ್ಲಿ ಆಲ್ ಸೋಲ್ಸ್ ಕಾಲೇಜಿನ ಮತ್ತು ಮೆರ್ಟನ್ ಕಾಲೇಜಿನ ಫೆಲೊ ಆಗಿ ಆಯ್ಕೆಗೊಂಡ.

ಗಾರ್ಡ್ನರ್ ಇಂಗ್ಲೆಂಡಿನ ಅಂತರ್ಯುದ್ಧ ಕಾಲದ ಇತಿಹಾಸವನ್ನು ವಿಶೇಷವಾಗಿ ಅಧ್ಯಯನಮಾಡಿದ. ಈ ಕಾಲಕ್ಕೆ ಸಂಬಂಧಿಸಿದಂತೆ ಹಲವಾರು ಸ್ಥಳಗಳಲ್ಲಿದ್ದ ಮೂಲ ದಾಖಲೆಗಳನ್ನು ಪರಿಶೀಲಿಸಿ 1863 ರಿಂದ 1900ರವರೆಗೆ ಹಲವಾರು ಉದ್ಗ್ರಂಥಗಳನ್ನು ರಚಿಸಿದ. ಒಂದನೆಯ ಜೇಮ್ಸನ ಸಿಂಹಾಸನಾರೋಹಣ ಕಾಲದಿಂದ ಅಂತರ್ಯುದ್ಧದ ಆರಂಭದವರೆಗಿನ (1603–42) ಕಾಲದ ಇತಿಹಾಸವನ್ನು ಕುರಿತು ಹತ್ತು ಸಂಪುಟಗಳೂ (1883–84) ಅಂತರ್ಯುದ್ಧವನ್ನು ಕುರಿತು ಮೂರು ಸಂಪುಟಗಳೂ (1886–93) ಹೊರಬಿದ್ದುವು. ಕಾಮನ್‍ವೆಲ್ತ್ ಮತ್ತು ಪ್ರೊಟೆಕ್ಟೊರೇಟ್ ಕಾಲದ ಸಮಗ್ರ ಚರಿತ್ರೆಯೂ (1649–60) ನಾಲ್ಕು ಸಂಪುಟಗಳಲ್ಲಿ ಪ್ರಕಟವಾಯಿತು (1903).

ಗಾರ್ಡ್ನರನ ಕೃತಿಗಳನ್ನು ವಿಮರ್ಶಕರು ಮೊದಮೊದಲು ಒಪ್ಪಲಿಲ್ಲ. ಆದರೆ ಇವನ ವಿಶ್ಲೇಷಣ ದೃಷ್ಟಿ ಕ್ರಮೇಣ ಮೆಚ್ಚುಗೆ ಗಳಿಸಿತು. 17ನೆಯ ಶತಮಾನದ ಸಾಮಾಜಿಕ ಆರ್ಥಿಕ ಬೌದ್ಧಿಕ ವಿದ್ಯಮಾನಗಳನ್ನು ಇವನು ಸೂಕ್ಷ್ಮವಾಗಿ ಗ್ರಹಿಸಿದ್ದ. ಇಂಗ್ಲೆಂಡಿನ ರಾಷ್ಟ್ರೀಯ ಭಾವನೆಯನ್ನು ಪುರಸ್ಕರಿಸಿ ಬರೆದ ಇವನ ಇತಿಹಾಸ ಈ ಧೋರಣೆಯಿಂದಾಗಿ ಮಹತ್ವ ಗಳಿಸಿದೆ. ಕಾಲಾನುಕ್ರಮಣಿಕೆಯ ವಿಧಾನವನ್ನನುಸರಿಸಿ, ವಿದ್ಯಮಾನದ ಯಾವ ಮುಖವನ್ನೂ ಕಡೆಗಣಿಸದೆ ಆತ ಮಾಡಿರುವ ನಿರೂಪಣೆಯಿಂದಾಗಿ ಇಂಗ್ಲೆಂಡಿನ ಇತಿಹಾಸದಲ್ಲೇ ಇದು ಅತ್ಯಂತ ಪರಿಚಿತವಾದ ಕಾಲವೆನಿಸಿದೆ. ಮೇಲೆ ಹೇಳಿದ ಗ್ರಂಥಗಳಲ್ಲದೆ ಇನ್ನೂ ಹಲವಾರು ಕೃತಿಗಳನ್ನು ಇವನು ರಚಿಸಿದ್ದಾನೆ. ಇತಿಹಾಸ ಲೇಖನಕ್ಕಾಗಿಯೇ ತನ್ನ ಜೀವನವನ್ನು ಮುಡಿಪಾಗಿಟ್ಟಿದ್ದ ಗಾರ್ಡ್ನರನ ಬಾಳು ಆರ್ಥಿಕವಾಗಿ ಅಷ್ಟೇನು ತೃಪ್ತಿಕರವಾಗಿರಲಿಲ್ಲ. 1882ರ ಅನಂತರ ಇವನಿಗೆ ದೊರಕಿದ ವಿಶ್ರಾಂತಿ ವೇತನದಿಂದ ಸ್ವಲ್ಪ ಅನುಕೂಲವಾಯಿತು. ಇವನ 65ನೆಯ ವಯಸ್ಸಿನಲ್ಲಿ ಆಕ್ಸ್‍ಫರ್ಡಿನಲ್ಲಿ ರೀಜಿಯಸ್ (ವಿದ್ವತ್ ಪೀಠಾಧಿಕಾರಿ) ಪ್ರಾಧ್ಯಾಪಕನ ಸ್ಥಾನವನ್ನು ನೀಡಿದಾಗ ಈತ ಇದನ್ನು ಸ್ವೀಕರಿಸಲಿಲ್ಲ. ಇತಿಹಾಸ ರಚನೆಯ ಕಾರ್ಯಕ್ಕೆ ಅದರಿಂದ ಅಡ್ಡಿಯಾದೀತೆಂಬುದು ಕಾರಣ. ಗಾರ್ಡ್ನರ್ 1902ರಲ್ಲಿ ತೀರಿಕೊಂಡ. (ಎಸ್.ಕೆ.ಎಸ್.)

**ಗಾರ್ತ್, ಸರ್ ಸ್ಯಾಮ್ಯುಯೆಲ್ :** 1661–1718. ವೈದ್ಯ ಹಾಗೂ ಕವಿ. ಜನನ ಯಾರ್ಕ್‍ಷೈರಿನ ಗಣ್ಯ ಕುಟುಂಬದಲ್ಲಿ. ಕೇಂಬ್ರಿಜ್‍ನಲ್ಲಿ ಉಚ್ಚ ಶಿಕ್ಷಣ ಮುಗಿಸಿ, ಲಂಡನ್ ವೈದ್ಯ ವಿದ್ಯಾಲಯದ ಪರೀಕ್ಷೆಯಲ್ಲಿ ಉತ್ತೀರ್ಣನಾದ. ಒಳ್ಳೆಯ ಸ್ವಭಾವ, ವಾಕ್ಕೌಶಲ. ವಿದ್ವತ್ತು, ಮತ್ತು ಜನಸೇವಾ ಪ್ರವೃತ್ತಿಯಿಂದಾಗಿ ಇವನ ವೃತ್ತಿ, ವ್ಯಾಪ್ತಿಗಳೆರಡೂ ವೃದ್ಧಿಸಿದವು. ರಾಜಕೀಯವಾಗಿ ಈತ ಹ್ವಿಗ್ ಬಣಕ್ಕೆ ಸೇರಿದವನು. ಪ್ರಸಿದ್ಧ ಪ್ರಬಂಧಕಾರನಾದ ಅಡಿಸನ್ ಮತ್ತು ಕವಿ ಪೋಪ್ ಈತನ ಗೆಳೆಯರು. ತನ್ನ ನಿವೃತ್ತಿಯ ಸಮಯದಲ್ಲಿ ಗಾರ್ತ್ ಒಂದನೆಯ ಜಾರ್ಜ್ ದೊರೆಗೆ ವೈದ್ಯನಾಗಿದ್ದು ಅವನಿಂದ ನೈಟ್ ಪದವಿಯನ್ನು ಪಡೆದ (1714).

ಗಾರ್ತ್ ಬರೆದ ಡಿಸ್ಪೆನ್ಸರಿ (1699) ಎಂಬ ಅಣಕು ಕವನ ಆ ಕಾಲಕ್ಕೆ ಬಹು ಪ್ರಸಿದ್ಧವಾಗಿತ್ತು. ಈತ ತನ್ನ ಗೆಳೆಯರಾದ ಅಡಿಸನ್, ಪೋಪ್ ಮೊದಲಾದವರ ನೆರವಿನಿಂದ ಓವಿಡ್ಡನ ಮೆಟಮಾರ್ಫಸಿಸ್ ಎಂಬ ಕೃತಿಯನ್ನು ಅನುವಾದ ಮಾಡಿದ್ದಾನೆ.

ವೈದ್ಯಕೀಯ ಸಹಾಯ ಬಡಬಗ್ಗರಿಗೆ ಉಚಿತವಾಗಿ ದೊರೆಯಬೇಕು ಎಂಬ ವಿಷಯ ಪ್ರಚಲಿತವಾಗಿದ್ದ ಆ ಕಾಲದಲ್ಲಿ ಬಹಳಷ್ಟು ಜನ ವೈದ್ಯರು ಆ ಅಭಿನಂದನೀಯ ಉದ್ದೇಶಕ್ಕೆ ಬೆಂಬಲ ಕೊಟ್ಟರು. ಈ ಯೋಜನೆಯ ಬಗ್ಗೆ ಗಾರ್ತ್ ಬಹಳ ಆಸಕ್ತಿ ವಹಿಸಿದನಲ್ಲದೆ ಅದಕ್ಕಾಗಿ ಶ್ರಮಿಸಿದ ಕೂಡ. ಆದರೆ ಗ್ರಂದಿಗೆಯವರು ತಮ್ಮ ವ್ಯಾಪಾರ ಕುಂದುತ್ತದೆಂದು ಬಗೆದು ಆ ಸಲಹೆಗೆ ಒಪ್ಪಲಿಲ್ಲ. ತಿಕ್ಕಾಟ ಪ್ರಾರಂಭವಾಯಿತು. ಗಾರ್ತ್ ಈ ತಿಕ್ಕಾಟವನ್ನೇ ವಸ್ತುವಾಗಿಟ್ಟುಕೊಂಡು ತನ್ನ ಡಿಸ್ಪೆನ್ಸರಿ ಎಂಬುದೊಂದು ಆರು ಕಾಂಡಗಳ ವ್ಯಂಗ್ಯ ಕವನವನ್ನು ರಚಿಸಿದ. ಇಂದು ಸಾಮಾನ್ಯ ಸಾಹಿತ್ಯಾಸಕ್ತನಿಗೆ ಗಾರ್ತ್‍ನ ನೆನಪಿದ್ದಲ್ಲಿ ಅದು ಈ ಪದ್ಯದಿಂದ ಮಾತ್ರ. ಅತಿ ಉದ್ದವೆನ್ನಿಸುವ ಈ ಕೃತಿ ಕಡೆಗೂ ಹಠಾತ್ತನೆ ನಿಂತಂತೆ ತೋರುತ್ತದೆಯಲ್ಲದೆ ಸಹಜವಾಗಿ ಮುಗಿಯಿತೆನಿಸುವುದಿಲ್ಲ. ಅಲ್ಲಲ್ಲೇ ಕೆಲವು ಭಾಗಗಳು ಬಹಳ ಚೆನ್ನಾಗಿವೆ. ಪಿತ್ಥ ಗಹ್ವರದ ವರ್ಣನೆ, ಸಮಕಾಲೀನ ಲೇಖಕ ಸರ್ ರಿಚರ್ಡ್ ಬ್ಲ್ಯಾಕ್‍ಮೋರ್‍ಗೆ, ಮಾಡಿರುವ ಹಿತೋಪದೇಶ, ಅಟರ್‍ಬರಿಯ ಪಾತ್ರಚಿತ್ರಣ ಮುಂತಾಗಿ ಒಂದೆರಡನ್ನು ಹೆಸರಿಸಬಹುದು. ಕವನದ ಓಟ ಸರಾಗವಾಗಿದೆ.

1710ರಲ್ಲಿ ಹ್ವಿಗ್ ಸರ್ಕಾರ ಉರುಳಿದಾಗ ಲಾರ್ಡ್ ಗೊಡಾಲ್ಫಿನ್ ಪದಚ್ಯುತನಾದುದರ ಬಗ್ಗೆ ಬರೆದ ಸಣ್ಣ ಕವಿತೆಯೊಂದು ಅಡಿಸನ್ನನ ಪ್ರಶಂಸೆಗೆ ಪಕ್ಕಾಯಿತೆಂದು ಜಾನ್‍ಸನ್ ಹೇಳುತ್ತಾನೆ.

ನಿಷ್ಠ ಹ್ವಿಗ್ ಆಗಿದ್ದರೂ ಗಾರ್ತ್ ತನ್ನ ಉತ್ತಮ ಸ್ವಭಾವ, ವ್ಯಕ್ತಿಗಳಿಂದಾಗಿ ಎಲ್ಲರಿಗೂ ಬೇಕಾದವನಾಗಿ ಬಾಳಿದ. ಪೋಪ್‍ನಂಥ ತೀಕ್ಷ್ಣ ವಿಡಂಬಕ ಕೂಡ ಇವನ ವ್ಯಕ್ತಿತ್ವವನ್ನು ಮೆಚ್ಚಿ ಬರೆದಿದ್ದಾನೆ. (ಆರ್.ಎಸ್.;ಎಸ್.ಟಿ.ಪಿ.)

**ಗಾರ್ನೆಟ್ :** ಸಂಮಿಶ್ರಿತ ಸಿಲಿಕೇಟ್ ಖನಿಜ. ಇದರಲ್ಲಿ ಸಾಮಾನ್ಯವಾಗಿ ಕಬ್ಬಿಣ, ಮ್ಯಾಂಗನೀಸ್, ಮ್ಯಾಗ್ನೀಸಿಯಂ, ಕ್ಯಾಲ್ಸಿಯಂ ಮತ್ತು ಅಲ್ಯೂಮಿನಿಯಂ ಧಾತುಗಳಿರುತ್ತವೆ. ಇದು ಗಾಜಿನಂಥ ಒಂದು ಬಗೆಯ ಖನಿಜ. ಪಾರದರ್ಶಕವಾದ ದಟ್ಟ ಕೆಂಪು ಜಾತಿಯ ಗಾರ್ನೆಟ್ ಅನ್ನು ರತ್ನವನ್ನಾಗಿ ಬಳಸುತ್ತಾರೆ. ಇದಕ್ಕೆ ರಕ್ತಮಣಿ, ಪದ್ಮರಾಗ ಎಂಬ ವಿವಿಧ ಹೆಸರುಗಳಿವೆ. ಇದರ ಕಾಠಿಣ್ಯ 6.5 – 7.5 . ಇದು ಬಹಳ ಹೇರಳವಾಗಿ ಸಿಕ್ಕುವ ಖನಿಜ ಮತ್ತು ಸಾಮಾನ್ಯವಾಗಿ ರೂಪಾಂತರಿತ ಶಿಲೆಗಳಾದ ಪದರು ಶಿಲೆ ಮತ್ತು ನೈಸ್‍ಗಳಲ್ಲಿ ಕಂಡುಬರುತ್ತದೆ. ಇದು ಹೆಚ್ಚಿನ ಪ್ರಮಾಣದಲ್ಲಿದ್ದಾಗ ಆ ಬಗೆಯ ರೂಪಾಂತರಿತ ಶಿಲೆಯನ್ನು ಗಾರ್ನೆಟ್ ಪದರು ಶಿಲೆಯೆಂದೂ ಕರೆಯುವುದುಂಟು. ಗಾರ್ನೆಟ್ ಎಂಬ ಹೆಸರು ರಚನೆಯಲ್ಲಿಯೂ ಹೊರ ರೂಪದಲ್ಲಿಯೂ ಭೌತ ಲಕ್ಷಣದಲ್ಲಿಯೂ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿರುವ ಏಳು ವಿಧದ ಬೇರೆ ಬೇರೆ ಖನಿಜಗಳಿಗೆ ಅನ್ವಯಿಸುತ್ತದೆ. ಇವೆಲ್ಲವೂ ಸಮಾನ ಪರಿಮಾಣದ ಸ್ಫಟಿಕಗಳಾಗಿ 12 ಅಥವಾ 24 ಲಂಬ ಕೋನ ಫಲಕಗಳಿರುವ ಹರಳುಗಳಂತೆ ರೂಪುಗೊಳ್ಳುತ್ತವೆ. ಅಲ್ಲದೆ ಕಣಗಳಾಗಿಯೂ ಉಂಡೆಗಳಾಗಿಯೂ ಸಿಗುವುದುಂಟು. ಈ ವರ್ಗದ ಖನಿಜಗಳು ಊದಾಬಣ್ಣ, ಕಂದು, ಕಿತ್ತಳೆ, ಕೆಂಪು, ಎಲೆಹಸುರು, ಪಚ್ಚೆಹಸುರು, ಕಪ್ಪು ಮತ್ತು ಬಣ್ಣ ರಹಿತವಾದ ವಿವಿಧ ಛಾಯೆಗಳಲ್ಲಿ ಕೂಡ ಸಿಗುತ್ತವೆ. ಅಪಾರಕ ವಿಧಗಳನ್ನು ಬಹುವಾಗಿ ಘರ್ಷಕ ವಸ್ತುವಾಗಿ ಉಪಯೋಗಿಸುತ್ತಾರೆ. ಈ ದೃಷ್ಟಿಯಿಂದ ಕಬ್ಬಿಣ ಸಂಯೋಜಿತ ಆಲ್ ಮಂಡಿನ್ ವಿಧದ ಗಾರ್ನೆಟ್ ಬಹಳ ಉತ್ತಮವಾದುದು. ಮರಳು ಕಾಗದದ ತಯಾರಿಕೆಗೆ ಸಾಮಾನ್ಯವಾಗಿ ಶುದ್ಧ ಗಾರ್ನೆಟ್ ಕಣಗಳನ್ನು ಉಪಯೋಗಿಸುತ್ತಾರೆ. ಇದರ ಹೊಳಪು ಮುತ್ತಿನಂತೆ ಅಥವಾ ಗಾಜಿನಂತೆ. ಸಾಂದ್ರತೆ 3.15 – 4.3.

ಭಾರತದಲ್ಲಿ ಗಾರ್ನೆಟ್ ದೊರೆಯುವ ಮುಖ್ಯ ಪ್ರದೇಶಗಳು ತಿರುನೆಲ್ವೇಲಿ, ನೆಲ್ಲೂರು, ಹೈದರಾಬಾದು, ತಿರುವಾಂಕೂರು, ಕೋಲಾರ, ತುಮಕೂರು ಬಾಗಲಪುರ (ಬಿಹಾರ್), ಕಿಷನ್‍ಘರ್ (ರಾಜಸ್ತಾನ), ಸರ್ಗೂಜ (ಮಧ್ಯಪ್ರದೇಶ) ಇತ್ಯಾದಿ.

ಕರ್ನಾಟಕದಲ್ಲಿ ಈ ಖನಿಜ ವಿಸ್ತಾರವಾಗಿ ಹರಡಿದ್ದು ಪ್ರತಿಯೊಂದು ಜಿಲ್ಲೆಯಲ್ಲಿಯ ಅನೇಕ ವಿಧದ ಪದರು ಶಿಲೆ, ನೈಸ್, ಸುಣ್ಣಶಿಲೆ ಮುಂತಾದವುಗಳಲ್ಲಿ ಸಂಪರ್ಕ ರೂಪಾಂತರ ಖನಿಜವಾಗಿ ದೊರೆಯುತ್ತದೆ. (ಟಿ.ಟಿ.)

**ಗಾರ್‌ನೆಟ್, ಡೇವಿಡ್ :** 1892–1981. ಇಂಗ್ಲಿಷ್ ಕಾದಂಬರಿಕಾರ. ಹುಟ್ಟಿದ್ದು ಬ್ರೈಟನ್‌ನಲ್ಲಿ. ಪಿತಾಮಹ ರಿಚರ್ಡ್ ಗಾರ್‌ನೆಟ್ ಪ್ರಸಿದ್ಧ ಗ್ರಂಥಪಾಲ. ತಂದೆ ಎಡ್ವರ್ಡ್ ಗಾರ್ನೆಟ್ ನಾಟಕಕಾರ. ತಾಯಿ ಕಾನ್‌ಸ್ಟೆನ್ಸ್ ರಷ್ಯನ್ ಕಾದಂಬರಿಗಳ ಅನುವಾದಕಿ. ಹೀಗಾಗಿ ಈತ ಸಾಹಿತ್ಯಕ ವಾತಾವರಣದಲ್ಲೇ ಬೆಳೆದ. ಈತನ ವಿದ್ಯಾಭ್ಯಾಸ ದಕ್ಷಿಣ ಕೆನ್‌ಸಿಂಗ್‌ಟನ್ನಿನ ರಾಯಲ್ ಕಾಲೇಜಿನಲ್ಲಿ ನಡೆಯಿತು. ಅಲ್ಲಿ ಐದು ವರ್ಷ ಸಸ್ಯವಿಜ್ಞಾನವನ್ನು ಅಭ್ಯಸಿಸಿದ. ಲಂಡನ್ನಿನ ಟ್ಯುಟೋರಿಯಲ್ ಕಾಲೇಜಿನ ವಿದ್ಯಾರ್ಥಿ ಯಾಗಿದ್ದಾಗ ಬ್ರಿಟಿಷರ ಕೈದಿಯಾಗಿದ್ದ ವಿನಾಯಕ ಸಾವರ್ಕರರನ್ನು ಬಿಡಿಸಲು ನಡೆದ ಗುಪ್ತಚರ್ಯೆಯಲ್ಲಿ ಈತ ಭಾಗವಹಿಸಿದ್ದ. 1919ರಲ್ಲಿ ಸೊಹೊನಲ್ಲಿ ಪುಸ್ತಕಗಳ ಅಂಗಡಿಯೊಂದನ್ನು ತೆರೆದ. ಈತನ ಮೊದಲ ಪುಸ್ತಕ ಲೇಡಿ ಇನ್‌ಟು ಫಾಕ್ಸ್ (1923) ಒಂದು ಕಾದಂಬರಿ. ಇದರಲ್ಲಿ ಹೆಂಡತಿಯೊಬ್ಬಳು ನರಿಯಾಗಿ ಮಾರ್ಪಾಟಾದ ಘಟನೆಯೊಂದನ್ನವಲಂಬಿಸಿದಂತೆ ಕಲ್ಪಿತ ಕಥೆಯೊಂದನ್ನು ಹೆಣೆದಿದ್ದಾನೆ. ಈ ಕಾದಂಬರಿ ಈತನಿಗೆ ಹಥಾರ್ನ್‌ಡನ್ ಮತ್ತು ಟೇಟ್ ಮೆಮೊರಿಯಲ್ ಬಹುಮಾನಗಳನ್ನು ತಂದುಕೊಟ್ಟಿತು (1923). ಎ ಮ್ಯಾನ್ ಇನ್ ದಿ ಜ಼ೂ (1924), ದಿ ಸೆಯ್ಲರ್ಸ್ ರಿಟರ್ನ್( 1925). ಗೊ ಷಿ ಮಸ್ಟ್ ! (1927), ನೊ ಲವ್ (1929), ದಿ ಗ್ರ್ಯಾಸ್‌ಹಾಪ್ಪರ್ ಕಮ್ (1931)–ಇವು ಈತನ ಇತರ ಕಾದಂಬರಿಗಳು. ದಿ ಗೋಲ್ಡನ್ ಎಕೊ (1953) ಮತ್ತು ಫ್ಲವರ್ ಆಫ್ ದಿ ಫಾರೆಸ್ಟ್ (1955)–ಇವು ಈತನ ಆತ್ಮವೃತ್ತಗಳು. ಎ ಟೆರಿಬಲ್ ಡೆ (1932) ಎಂಬುದು ಸಣ್ಣಕತೆಗಳ ಸಂಕಲನ. 1952 ರಲ್ಲಿ ಈತನಿಗೆ ಸಿ.ಬಿ.ಇ ಪದವಿ ಲಭಿಸಿತು. (ಎಲ್.ಎಸ್.ಎಸ್.)

**ಗಾರ್ನೆಟ್, ರಿಚರ್ಡ್ :** 1835–1906. ಇಂಗ್ಲಿಷ್ ಕಥೆಗಾರ, ಜೀವನ ಚರಿತ್ರೆಗಳ ಕರ್ತೃ. ಈತನ ತಂದೆ ಬ್ರಿಟಿಷ್ ಮ್ಯೂಸಿಯಂನ ಮುದ್ರಿತ ಗ್ರಂಥ ಭಾಗದ ಸಹಾಯಕ ಪಾಲಕನಾಗಿದ್ದ. ಹುಟ್ಟಿದ್ದು ಲಿಚ್‌ಫೀಲ್ಡ್‌ನಲ್ಲಿ. ವಿದ್ಯಾಭ್ಯಾಸ ಬ್ಲೂಂಸ್‌ಬರೀ ಶಾಲೆಯಲ್ಲಿ. 1851ರಲ್ಲಿ ಬ್ರಿಟಿಷ್ ಮ್ಯೂಸಿಯಂನ ಸಹಾಯಕ ಗ್ರಂಥಪಾಲನಾಗಿ ಸೇರಿ ಸುಮಾರು 50 ವರ್ಷಗಳ ಕಾಲ ಅಮೂಲ್ಯ ಸೇವೆ ಸಲ್ಲಿಸಿದ. ನಿಂತು ಹೋಗಿದ್ದ ಪುಸ್ತಕಗಳ ಪಟ್ಟಿಯನ್ನು ಮುಂದುವರಿಸಿ ಮುಗಿಸಿದ. ಹೊಸ ಬಗೆಯ ಪುಸ್ತಕ ಕಪಾಟುಗಳನ್ನು ಸೇರಿಸಿದ ಕೀರ್ತಿ ಇವನದು. ಈ ಅವಧಿಯಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳ ಬಗ್ಗೆ ಅಪಾರ ಜ್ಞಾನವನ್ನು ಗಳಿಸಿಕೊಂಡ. ಗ್ರೀಕ್, ಜರ್ಮನ್, ಇಟಾಲಿಯನ್, ಸ್ಪ್ಯಾನಿಷ್, ಪೋರ್ಚುಗೀಸ್ ಭಾಷೆಗಳಿಂದ ಅನುವಾದ ಮಾಡಿದುದಲ್ಲದೇ ಕೆಲವು ಕವನಗಳನ್ನು ಬರೆದ. ಕಾರ್ಲೈಲ್, ಮಿಲ್ಟನ್, ಬ್ಲೇಕ್, ಎಮರ್‌ಸನ್ ಇವರ ಜೀವನ ಚರಿತ್ರೆಗಳನ್ನು ಬರೆದುದಲ್ಲದೆ ಡಿಕ್ಷನರಿ ಆಫ್ ನ್ಯಾಷನಲ್ ಬಯಾಗ್ರಫಿ ಎಂಬ ಕೋಶಕ್ಕೆ ಮತ್ತು ಇತರ ವಿಶ್ವಕೋಶಗಳಿಗೆ ಅನೇಕ ಲೇಖನಗಳನ್ನು ನೀಡಿದ. ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ರೆಲಿಕ್ಸ್ ಆಫ್ ಷೆಲಿ (1862) ಮತ್ತು ಇಟಲಿಯ ಸಾಹಿತ್ಯ ಚರಿತ್ರೆ (1898)– ಇವು ಈತನ ಮುಖ್ಯ ಕೃತಿಗಳು. ದಿ ಟ್ವೈಲೈಟ್ ಆಫ್ ದಿ ಗಾಡ್ಸ್ (1888) ನವುರು ವಿಡಂಬನೆಯಿಂದ ಕೂಡಿದ, ಮನಸ್ಸನ್ನೊಲಿಸುವ ನೀತಿಕಥೆಗಳ ಸಂಕಲನ. ಇದರಲ್ಲಿ ಆನಂದ, ದಿ ಮಿರಕಲ್ ವರ್ಕರ್ ಎಂಬ ಕಥೆ ಸ್ವಾರಸ್ಯವಾದದ್ದು. ಬುದ್ಧನ ಅಣತಿಯನ್ನು ಮೀರಿ ಪವಾಡಗಳಿಂದ ಬೌದ್ಧಧರ್ಮವನ್ನು ಹರಡಲು ಪ್ರಯತ್ನಿಸಿ ಪಾಡುಪಟ್ಟ ಆನಂದನ ಕಥೆ ಇದರ ವಸ್ತು. (ಎಲ್.ಎಸ್.ಎಸ್.)

**ಗಾರ್‌ಪೈಕ್ :** ಆಸ್ಟಿಯಿಕ್ತಿಸ್ ವರ್ಗದ ಲೆಪಿಸಾಸ್ಟಿಯೈಫಾರ್ಮೀಸ್ ಗಣದ ಲೆಪಿಸಾಸ್ಟಿಡೀ ಕುಟುಂಬಕ್ಕೆ ಸೇರಿದ ಮೀನುಗಳಿಗಿರುವ ಸಾಮಾನ್ಯ ಹೆಸರು. ಗಾರ್‌ಪೈಕ್‌ಗಳು ಉತ್ತರ ಅಮೆರಿಕ ಮತ್ತು ಮಧ್ಯ ಅಮೆರಿಕದ ಸಿಹಿ ನೀರು ಮತ್ತು ಅಳಿವೆಗಳಲ್ಲಿ ಕಾಣಸಿಗುತ್ತವೆ. ಇವುಗಳು ಹೋಲಾಸ್ಟಿಯನ್ ಗುಂಪಿಗೆ ಸೇರಿದ ಮೀನುಗಳು. ಇವು ಬಲು ಪ್ರಾಚೀನ ಬಗೆಯವು. ಮೀಸೋಜೋಯಿಕ್ ಕಾಲದಿಂದಲೂ ಅಸ್ತಿತ್ವದಲ್ಲಿವೆ ಯೆಂದು ಹೇಳಲಾಗಿದೆ. ವಿಕಸನ ಪಥದಲ್ಲಿ ಅತ್ಯಂತ ಮುಂದುವರೆದ ಎಲುಬು ಮೀನುಗಳಾದ ಟೀಲಾಸ್ಟಿಯನ್ ಮೀನುಗಳ ಪೂರ್ವಜ ಮೀನುಗಳು. ಪ್ರಸ್ತುತ 10 ಪ್ರಭೇದಗಳು ಮಾತ್ರ ಈ ಗುಂಪಿನಲ್ಲಿವೆ. ಗಾರ್‌ಪೈಕ್‌ಗಳಿಗೆ ತೆಳುವಾದ, ಕೊಳವೆಯಂಥ ದೇಹ, ಕೊಕ್ಕಿನಂತೆ ಉದ್ದವಾದ ಮತ್ತು ಹಲವಾರು ಸಾಲು ಹಲ್ಲುಗಳುಳ್ಳ ಮೂತಿ, ನುಣುಪಾದ, ಹೊಳೆಯುವ ದೃಢವಾದ ಗನಾಯ್ಡ್ ಆಕೃತಿಯ ಹುರುಪೆಗಳು, ಚಿಕ್ಕ ಈಜುರೆಕ್ಕೆಗಳು, ಬಾಲದ ರೆಕ್ಕೆಗೆ ಹತ್ತಿರವಿರುವ ಬೆನ್ನಿನ ಈಜುರೆಕ್ಕೆ, ಇವು ಈ ಮೀನುಗಳ ಪ್ರಮುಖ ಲಕ್ಷಣಗಳು. ಇವು ಮಾಂಸಾಹಾರಿ ಮೀನುಗಳು. ಸಾಮಾನ್ಯವಾಗಿ ನಿಧಾನ ಪ್ರವೃತ್ತಿಯ ಮೀನುಗಳಾಗಿದ್ದು ತನ್ನ ಬೇಟೆ ಕಂಡಾಗ ಚುರುಕಾಗಿ ಮೇಲೆರಗಿ ಕಬಳಿಸುತ್ತವೆ. ಅತ್ಯಂತ ದೊಡ್ಡದಾದ ಗಾರ್‌ಪೈಕ್ ದೈತ್ಯ ಅಲಿಗೇಟರ್ ಗಾರ್ (ಲೆಪಿಸೊಸ್ಟಿಯಸ್ ಟ್ರಿಸ್ಟೋಯಿಕಸ್) ಮೀನು ಸುಮಾರು 3.5 ಮೀಟರಿಗೂ ಉದ್ದವಾಗಿ ಬೆಳೆಯುತ್ತದೆ. ಇನ್ನೊಂದು ಪ್ರಭೇಧ ಲೆ. ಆಸಿಯಸ್ (ಲಾಂಗ್‌ನೋಸ್ ಗಾರ್).



ಗಾರ್‌ಪೈಕ್ ಗಳಿಗೆ ಶತ್ರುಗಳು ಕಡಿಮೆ. ಇವುಗಳ ಗಡುಸಾದ ಗ್ಯಾನಾಯ್ಡ್ ಹುರುಪೆಗಳ ಹೊದಿಕೆ ತುಂಬಾ ಗಟ್ಟಿಯಾಗಿರುವುದರಿಂದ ಇವನ್ನು ಬೇರೆ ಮೀನುಗಳು ತಿನ್ನಲಾರವು. ಅಲ್ಲದೆ ಇವುಗಳ ಮೊಟ್ಟೆಗಳು ಸಹ ಬಹಳ ವಿಷಪೂರಿತವಾಗಿರುವುದರಿಂದ ಯಾವ ಪ್ರಾಣಿಗಳು ಇವನ್ನು ತಿನ್ನುವುದಿಲ್ಲ. ಇದರಿಂದಾಗಿ ಕೆಲವು ಸಲ ಇವು ಸಂಖ್ಯೆಯಲ್ಲಿ ವೃದ್ಧಿಗೊಂಡು ಬೇರೆ ಮೀನುಗಳಿಗೆ ಹಾನಿಕಾರಕವಾಗುವುದುಂಟು. (ಬಿ.ಎಚ್.ಎಮ್.)

**ಗಾರ್ಫೀಲ್ಡ್, ಜೇಮ್ಸ್ ಏಬ್ರಂ :** 1831–81. ಅಮೆರಿಕ ಸಂಯುಕ್ತ ಸಂಸ್ಥಾನದ ಇಪ್ಪತ್ತನೆಯ ಅಧ್ಯಕ್ಷ. ಒಹಾಯೊ ರಾಜ್ಯದ ಕಹಾಗ ಕೌಂಟಿಯ ಆರೆಂಜ್ ಎಂಬ ನಗರದ ಬಳಿ ಸಣ್ಣ ಹೊಲವೊಂದರ ಗುಡಿಸಲೊಂದರಲ್ಲಿ 1831ರ ನವೆಂಬರ್ 19ರಂದು ಹುಟ್ಟಿದ. ಗಾರ್ಫೀಲ್ಡನಿಗೆ ಕೇವಲ ಎರಡು ವರ್ಷ ವಯಸ್ಸಾಗಿದ್ದಾಗ ತಂದೆ ತೀರಿಕೊಂಡ. ಸಂಸಾರ ಬಡತನವನ್ನು ಎದುರಿಸ ಬೇಕಾಯಿತು. ತಾಯಿ ಧೈರ್ಯ ದಿಂದ ತನ್ನ ಹಿರಿಯ ಮಗನೊಂದಿಗೆ ಹೊಲದ ಕೆಲಸ ನಿರ್ವಹಿಸಿದಳು. ಮಕ್ಕಳು ತಾಯಿಯ ಅಂಕೆಯಲ್ಲಿ ಸುಶಿಕ್ಷಿತರಾಗಿ ಬೆಳೆದರು. ದುಡಿಮೆಯ ಬೆಲೆ ಅರಿತರು. ಚರ್ಚಿನಲ್ಲಿ ಶ್ರದ್ಧೆ ಮೂಡಿಸಿ ಕೊಂಡರು,

1856ರಲ್ಲಿ ಗಾರ್ಫೀಲ್ಡ್ ವಿಲಿಯಮ್ಸ್ ಕಾಲೇಜ್‌ನಿಂದ ಪದವೀಧರನಾದ. ಅನಂತರ ಸ್ವಲ್ಪ ಕಾಲ ಹಿರಾಯ್‌ನಲ್ಲಿಯ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕನಾಗಿದ್ದ. ಕ್ರೈಸ್ತವಲಯಗಳಲ್ಲಿ ಒಳ್ಳೆಯ ಉಪನ್ಯಾಸಕನೆಂದು ಇವನಿಗೆ ಹೆಸರು ಬಂದಿತ್ತು. ಹೊಸದಾಗಿ ಸ್ಥಾಪಿತವಾಗಿದ್ದ ರಿಪಬ್ಲಿಕನ್ ಪಕ್ಷದ ಕಡೆಗೆ ಈತನ ಒಲವು ಬೆಳೆದಿತ್ತು. 1859ರಲ್ಲಿ ಒಹಾಯೊ ವಿಧಾನ ಮಂಡಲಕ್ಕೆ ಸದಸ್ಯನಾಗಿ ಆಯ್ಕೆ ಹೊಂದಿದ. ಅಮೆರಿಕನ್ ಅಂತರ್ಯುದ್ಧ ಕಾಲದಲ್ಲಿ ಇವನು ಸೇನೆಗೆ ಯೋಧರನ್ನು ಸಂಗ್ರಹಿಸಿ ಸ್ವತಃ ಕರ್ನಲ್ ಆಗಿ ಹೋರಾಡಿದ. ಎರಡು ವರ್ಷಗಳಲ್ಲಿ ಇವನು ಮೇಜರ್ ಜನರಲ್ ದರ್ಜೆಗೆ ಏರಿದ್ದ.

19ನೆಯ ಒಹಾಯೊ ಜಿಲ್ಲೆಯಿಂದ ಕಾಂಗ್ರೆಸಿಗೆ ಗಾರ್ಫೀಲ್ಡನ ಆಯ್ಕೆಯಾಯಿತು (1863). ಚೈತನ್ಯಶೀಲನೂ ದಕ್ಷನೂ ಸ್ನೇಹಪ್ರಿಯನೂ ಆಗಿದ್ದ ಗಾರ್ಫೀಲ್ಡ್ ಬಹು ಬೇಗ ಖ್ಯಾತಿ ಗಳಿಸಿದ. ಮುಂದಿನ ಹದಿನಾರು ವರ್ಷಗಳ ಅವಧಿಯಲ್ಲಿ ನಡೆದ

ಚುನಾವಣೆಗಳಲ್ಲಿ ಇವನು ಸಾಮಾನ್ಯವಾಗಿ ಹೆಚ್ಚು ಕಷ್ಟವಿಲ್ಲದೆ ಕಾಂಗ್ರೆಸಿಗೆ ಆಯ್ಕೆ ಹೊಂದುತ್ತಿದ್ದ. ಅವು ಅಂತರ್ಯುದ್ಧದ, ರಾಷ್ಟ್ರ ಪುನರ‍್ರಚನೆಯ, ಕ್ಷೋಭೆಯ ದಿನಗಳು. ರಿಪಬ್ಲಿಕನ್ ಪಕ್ಷದಲ್ಲಿ ಗಾರ್ಫೀಲ್ಡ್ ಒಬ್ಬ ಸಂಪ್ರದಾಯವಾದಿಯಾಗಿದ್ದ. ಹಣಸಂಬಂಧವಾಗಿ ರಾಜಕೀಯ ಕ್ಷೇತ್ರಗಳಲ್ಲಿ ಅನೈತಿಕ ವ್ಯವಹಾರಗಳು ಆಗ ವಿಶೇಷವಾಗಿ ತೋರಿಬಂದಿದ್ದುವು. ಇವನಿಗೂ ಅಂಥ ಅಪವಾದದ ಅಂಟು ಹತ್ತದೆ ಇರಲಿಲ್ಲ. 1880 ರಲ್ಲಿ ಈತ ಸೆನೆಟಿಗೆ ಆಯ್ಕೆ ಹೊಂದಿದ. ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷ ಪದವಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸಿದ. ಆ ಪದವಿಗೆ ಜಾನ್ ಷರ್ಮನನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಲು ಈತ ಪ್ರಯತ್ನಿಸಿದ. ಈ ಸಂಬಂಧವಾಗಿ ಬಿಕ್ಕಟ್ಟು ಸಂಭವಿಸಿ ಕೊನೆಗೆ ಅದಕ್ಕೆ ಗಾರ್ಫೀಲ್ಡನ ನಾಮಕರಣವಾಯಿತು. ಪಕ್ಷದ ಹಲವಾರು ಪ್ರಬಲ ಗುಂಪುಗಳು ಇವನ ಅಭ್ಯರ್ಥಿತನವನ್ನು ವಿರೋಧಿಸುತ್ತಿದ್ದುವು. ಕೊನೆಗೆ ಈತ ಕೆಲವೇ ಮತಗಳಿಂದ ವಿಜಯಗಳಿಸಿ, 1881 ರ ಮಾರ್ಚ್ 4 ರಂದು ಅಧಿಕಾರಾರೋಹಣ ಮಾಡಿದ. ಪಕ್ಷದಲ್ಲಿದ್ದ ಈತನ ಶತ್ರುಗಳು ಇವನ ವಿರುದ್ಧ ಹೋರಾಟ ನಡೆಸಿದರು. ತಮಗೆ ಹಲವಾರು ಸವಲತ್ತುಗಳನ್ನು ನೀಡದಿದ್ದರೆ ಸಹಕಾರ ನೀಡುವುದಿಲ್ಲವೆಂದು ಹೇಳಿ ಒತ್ತಾಯ ಹಾಕಿದರು. ಗಾರ್ಫೀಲ್ಡ್ ಮಣಿಯಲಿಲ್ಲ. ಜುಲೈ 2 ರಂದು ಚಾರಲ್ಸ್ ಜೆ. ಗಿಟೌ ಎಂಬವನು ಇವನ ಮೇಲೆ ಗುಂಡು ಹಾರಿಸಿದ. ಆತ ಗಾರ್ಫೀಲ್ಡನಿಂದ ಹುದ್ದೆಯೊಂದನ್ನು ಬಯಸಿ ನಿರಾಶನಾಗಿದ್ದವನೆಂದೂ ಪ್ರಾಯಶಃ ಮತಿವಿಕಲನಾಗಿದ್ದನೆಂದು ಹೇಳಲಾಗಿದೆ. ಸೆಪ್ಟೆಂಬರ್ 19ರಂದು ಗಾರ್ಫೀಲ್ಡ್ ನಿಧನ ಹೊಂದಿದ. (ಎಂ.ಯು.)

**ಗಾರ್‌ಬೂರ್ಗ್, ಆರ್ನ್ ಎವನ್‌ಸನ್ :** 1851–1924. ನಾರ್ವೆ ದೇಶದ ಕಾದಂಬರಿಕಾರ, ಕವಿ, ನಾಟಕಕಾರ. ನವ ನಾರ್ವಿಜಿಯನ್ ಬರೆಹದಲ್ಲಿ ಪ್ರಥಮ ಪಂಕ್ತಿಗೆ ಸೇರುವ ಸಾಹಿತಿ.

ಗಾರ್‌ಬೂರ್ಗ್ ರೈತನ ಮಗ. ಮಧ್ಯಯುಗದಿಂದ ನಾರ್ವೆಯ ಗ್ರಾಮೀಣ ಜೀವನದಲ್ಲಿ ನಡೆದುಕೊಂಡು ಬಂದಿದ್ದ ವ್ಯವಸ್ಥೆ ಕುಸಿಯುತ್ತಿದ್ದ ಕಾಲದಲ್ಲಿ ಇವನ ಬಾಲ್ಯ, ಯೌವನಗಳು ಸಾಗಿದುವು. ತಂದೆ ಅತಿ ಧಾರ್ಮಿಕ ಮನೋಧರ್ಮದವನು. ಇದೇ ಅವನ ಸಾವಿಗೂ ಕಾರಣವಾಯಿತು. ಈ ಎರಡು ಅಂಶಗಳೂ ಗಾರ್‌ಬೂರ್ಗ್‌ನ ಜೀವನ ಮತ್ತು ಬರೆಹಗಳ ಮೇಲೆ ಪ್ರಭಾವ ಬೀರಿದುವು. ಇವನಿಗೆ ವಿದ್ಯಾಭ್ಯಾಸ ದೊರೆಯುವುದೇ ಕಷ್ಟವಾಯಿತು. ಹಲವು ಅಡ್ಡಿಗಳನ್ನು ಎದುರಿಸಿ ಕ್ರಿಸ್ಟಿಯಾನ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ. ಇವನು ವಿದ್ಯಾರ್ಥಿ ಜೀವನವನ್ನು ಕುರಿತು ಬರೆದ ಬಾಂಡೇ ಸ್ಟೂಡೆಂಟೆ (1883) ಆಗ ಜನಪ್ರಿಯವಾಗಿದ್ದ ಸ್ವೇಚ್ಛಾಪ್ರವೃತ್ತಿಯ, ಸಹಜತಾವಾದದ ಕಾದಂಬರಿಗಳನ್ನೇ ಅನುಸರಿಸಿದರೂ ಒಳ್ಳೆಯ ಕಥೆ ಎನಿಸಿದೆ. ಗಾರ್‌ಬೂರ್ಗ್ ಬೇಸರಪಟ್ಟು ಬೇಗ ಈ ಪಂಥದಿಂದ ದೂರನಾದ. ಗ್ರಾಮಜೀವನ ವಿಚ್ಛಿದ್ರವಾಗುವುದರಿಂದ ರೈತರ ಬಾಳಿನಲ್ಲಿ ತಲೆದೋರಿದ ಧಾರ್ಮಿಕ ಮತ್ತು ಅಂತಃಕರಣದ ಸಮಸ್ಯೆಗಳನ್ನು ಫ್ರೆಡ್ (1892) ಎಂಬ ಕಾದಂಬರಿಯಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ. ಇದೇ ವಸ್ತುವನ್ನು ಕುರಿತು ಇನ್ನೆರಡು ಕಾದಂಬರಿಗಳನ್ನೂ ಒಂದು ನಾಟಕವನ್ನೂ ಬರೆದ. ಈ ಕೃತಿಗಳಲ್ಲೆಲ್ಲ ಆಳವಾದ ಧಾರ್ಮಿಕ ಭಾವನೆಯುಂಟು. ಬರೆಹಗಾರರು ಬಳಸುತ್ತಿದ್ದ ಡೇನೋ ನಾರ್ವಿಜಿಯನ್ ಮಾಧ್ಯಮದ ಬದಲು, ಪ್ರಾಚೀನ ನಾರ್ಸ್‌ನಿಂದ ಬಂದ ರೈತರ ಭಾಷೆಯ ಆಧಾರದ ಮೇಲೆ ಸಾಹಿತ್ಯಕ್ಕಾಗಿ ನಾರ್ವಿಜಿಯನ್ ಭಾಷೆಯನ್ನು ಹೊಸದಾಗಿ ರೂಪಿಸಬೇಕೆಂಬ ಸಾಹಿತಿಗಳ ಪಂಥಕ್ಕೆ ನಾಯಕನಾದ. ಇವನ ಭಾವಗೀತೆಗಳ ಚಕ್ರ ಹೌಟುಸ (1895) ರೈತರ ಭಾಷೆಯಲ್ಲಿಯೇ ಇದೆ. ಇದು ಅತಿಮಾನುಷದಲ್ಲಿ ಹುಡುಗಿಯೊಬ್ಬಳಿಗಿದ್ದ ನಂಬಿಕೆಯನ್ನು ನಿರೂಪಿಸುತ್ತದೆ. ಮಧ್ಯಯುಗದ ನಂಬಿಕೆಗಳು, ಪದ್ಧತಿಗಳು ಇನ್ನೂ ಜೀವಂತವಾಗಿದ್ದ ಯುಗದ ಜೀವನವನ್ನು ಈ ಕವನಚಕ್ರ ಬಣ್ಣಿಸುತ್ತದೆ. ಇವನ ಭಾಷೆಗೆ ಭಾವನೆಗಳನ್ನು ಪ್ರಚೋದಿಸುವ ವಿಶೇಷ ಸಾಮರ್ಥ್ಯ ಉಂಟು. ಈ ಕವನಚಕ್ರ ಮತ್ತು ಫ್ರೆಡ್ ಇವನಿಗೆ ನವನಾರ್ವಿಜಿಯನ್ ಭಾಷೆಯ ಸಾಹಿತ್ಯದಲ್ಲಿ ಬಹು ಹಿರಿಯ ಸ್ಥಾನವನ್ನು ಗಳಿಸಿಕೊಟ್ಟಿದೆ.

ಗಾರ್‌ಬೂರ್ಗ್ ವಿಶಾಲ ಮನೋಭಾವದ ಅಭಿಪ್ರಾಯಗಳಿಸಿ ಹೆಸರು ಪಡೆದ ಪತ್ರಿಕೆಯೊಂದರ ಸ್ಥಾಪಕ ಸಂಪಾದಕನಾಗಿದ್ದನಲ್ಲದೆ ಹೋಮರನ ಒಡಿಸ್ಸಿಯನ್ನೂ (1918) ಮಹಾಭಾರತದಿಂದ ಆಯ್ದ ಭಾಗಗಳನ್ನೂ (1921) ಅನುವಾದ ಮಾಡಿದ್ದಾನೆ. ಇವನ ಕತೆಗಳು ಯುರೋಪಿನ ಹಲವು ಭಾಷೆಗಳಿಗೆ ಅನುವಾದವಾಗಿವೆ. ಈತನ ಎಲ್ಲ ಬರೆಹಗಳನ್ನೂ 8 ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ (1944). (ಎಲ್.ಎಸ್.ಎಸ್.)

**ಗಾರ್ಬೋ, ಗ್ರೇಟ :** 1905–90. ಖ್ಯಾತ ಚಲನಚಿತ್ರ ತಾರೆ. ಸ್ವೀಡನ್ನಿನವಳು. ಗ್ರೇಟ ಲೋವಿಸ ಗುಸ್ಟಾಫ್‌ಸನ್ ಎಂದು ಈಕೆಯ ಚಿತ್ರರಂಗದ ಹೆಸರು. ಈಕೆ ಜನಿಸಿದ್ದು ಸ್ಟಾಕ್ ಹೋಂನಲ್ಲಿ. ತಂದೆತಾಯಿಗಳು ಕಡುಬಡವ ಕುಟುಂಬದವರು. ತನ್ನ 14ನೆಯ ವಯಸ್ಸಿನ ವೇಳೆಗೆ ಅಲ್ಲಿನ ಗ್ರ್ಯಾಮರ್ ಶಾಲೆಯ ವಿದ್ಯಾಭ್ಯಾಸ ಮುಗಿಸಿಕೊಂಡು, ತಂದೆ ತೀರಿಕೊಂಡ ಕಾರಣ ದಿನಬಳಕೆಯ ವಸ್ತುಗಳ ಅಂಗಡಿಯೊಂದರಲ್ಲಿ ಈಕೆ ಕೆಲಸ ಮಾಡಿದಳು. ಕ್ಷೌರದ ಅಂಗಡಿಯಲ್ಲೂ ಕೆಲಸ ಮಾಡಿದ್ದುಂಟು. ಕೆಲವಾರು ಜಾಹೀರಾತು ಚಲನಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ಈಕೆಗೆ 1921ರಲ್ಲಿ ಎರಿಕ್ ಪೆಟ್ಸ್‌ಚರ್ಲ್ಸ್‌ನ ಪೀಟರ್ ದಿ ಟ್ರ್ಯಾಂಪ್ ಎಂಬ ಹಾಸ್ಯಮಯ ಚಿತ್ರದಲ್ಲಿ ಒಂದು ಸಣ್ಣ ಪಾತ್ರ ಸಿಕ್ಕಿತು. ಅನಂತರ ಈಕೆ ಸ್ಟಾಕ್‌ಹೋಂನಲ್ಲಿ ರಾಯಲ್ ಅಕಾಡೆಮಿ ಆಫ್ ಡ್ರಮ್ಯಾಟಿಕ್ ಆರ್ಟ್ ಸಂಸ್ಥೆಯಲ್ಲಿ 1922 ರಿಂದ 1924 ರವರೆಗೆ ಅಭಿನಯ ಕಲೆಯ ಅಭ್ಯಾಸ ಮಾಡಿದಳು. ಮಾರಿಟ್ಜ್ ಸ್ಟಿಲ್ಲರ್ ಎಂಬ ಚಲನಚಿತ್ರ ನಿರ್ದೇಶಕ ತನ್ನ ದಿ ಸ್ಟೋರಿ ಆಫ್ ಗೋಷ್ಟಾ ಬರ್ಲಿಂಗ್ (1924) ಎಂಬ ಚಿತ್ರದಲ್ಲಿ ಕೌಂಟೆಸ್ ದ್ಹೋನಳ ಪಾತ್ರವಹಿಸಲು ಈಕೆಯನ್ನು ಆಯ್ಕೆ ಮಾಡಿದ. ಈತನೇ ಈಕೆಗೆ ಗ್ರೇಟ ಗಾರ್ಬೋ ಎಂಬ ಹೆಸರನ್ನಿತ್ತದ್ದು. ಸಿನಿಮಾ ರಂಗದ ನಟನೆಯ ಎಲ್ಲ ತಂತ್ರಗಳನ್ನೂ ಆತ ಈಕೆಗೆ ಹೇಳಿಕೊಟ್ಟ. ಸ್ಟಿಲ್ಲರನೊಡನೆ ಭೇಟಿಯಾದುದು ಗಾರ್ಬೋಳ ಜೀವನದಲ್ಲಿ ಒಂದು ಮಹತ್ತ್ವದ ಘಟನೆ. ಈಕೆ ಪಾತ್ರವಹಿಸಿದ ಮತ್ತಾವುದೇ ಚಿತ್ರವನ್ನು ಆತ ನಿರ್ದೇಶಿಸಲಿಲ್ಲವಾದರೂ ಸದಾಕಾಲವೂ ಈಕೆಯ ಬಳಿಯಲ್ಲೇ ಇರುತ್ತಿದ್ದ. ದಿ ಜಾಯ್‌ಲೆಸ್ ಸ್ಟ್ರೀಟ್ ಎಂಬ ಚಿತ್ರದಲ್ಲಿ ಪಾತ್ರವಹಿಸಿದ ಅನಂತರ ಗಾರ್ಬೋ ಸ್ಟಿಲ್ಲರನೊಡನೆ ಅಮೆರಿಕಕ್ಕೆ ಹೋದಳು (1925). ಖ್ಯಾತ ಚಿತ್ರನಿರ್ಮಾಣ ಸಂಸ್ಥೆಯಾದ ಎಂ.ಜಿ.ಎಂ. ನಲ್ಲಿ ಗಾರ್ಬೋಗೆ ಒಂದು ಅವಕಾಶ ಕಲ್ಪಿಸಲು ಸ್ಟಿಲ್ಲರ್ ಬಹಳ ಪ್ರಯತ್ನ ಮಾಡಿದ. ಸಿನಿಮಾ ಸಂಸ್ಥೆಯ ಪ್ರಚಾರ ಶಾಖೆಯ ತೀವ್ರ ಪ್ರಚಾರದಿಂದಾಗಿ ಕೆಲವೇ ದಿವಸಗಳಲ್ಲಿ ಗಾರ್ಬೋ ಹಾಲಿವುಡ್ಡಿನ ಪ್ರಮುಖ ತಾರೆಯಾಗಿ ಮೆರೆದಳು.

ಎಂ.ಜಿ.ಎಂ. ಸಂಸ್ಥೆಯಲ್ಲಿ ತಾನಿದ್ದ 16 ವರ್ಷಗಳ ಅವಧಿಯಲ್ಲಿ ಗಾರ್ಬೋ 24 ಚಲನಚಿತ್ರಗಳಲ್ಲಿ ಕಾಣಿಸಿಕೊಂಡಳು. ಅವಳಿಗೆ ಸಲ್ಲುತ್ತಿದ್ದ ಸಂಭಾವನೆ ಚಿತ್ರವೊಂದಕ್ಕೆ 400 ಡಾಲರುಗಳಿಂದ 3,00.000 ಡಾಲರುಗಳಿಗೇರಿತು. ದಿ ಟಾರೆಂಟ್ (1926); ಫ್ಲೆಷ್ ಅಂಡ್ ದಿ ಡೆವಿಲ್ (1927); ಲವ್ (1927); ವೈಲ್ಡ್ ಆರ್ಕಿಡ್ಸ್ (1929); ಅನ್ನಾ ಕ್ರಿಸ್ಟಿ (1930); ಮಾತಾ – ಹರಿ (1931); ಗ್ರ್ಯಾಂಡ್ ಹೋಟೆಲ್ (1932); ಗಂಭೀರ ಚಿತ್ರಗಳಾದ ಕ್ವೀನ್ ಕ್ರಿಷ್ಟಿನ (1933); ಅನ್ನಾ ಕರೇನಿನಾ (1935); ಮತ್ತು ಕ್ಯಾಮಿಲಿ (1936); ಮೇರಿ ವಾಲೆವ್‌ಸ್ಕ (1937); ನಿನೋಚ್ಕ (1939) – ಇವು ಈಕೆಯ ಕೆಲವು ಪ್ರಮುಖ ಚಲನಚಿತ್ರಗಳು.

1941ರಲ್ಲಿ ತನ್ನ 36ನೆಯ ವಯಸ್ಸಿನಲ್ಲಿ ಸಿನಿಮಾರಂಗದಿಂದ ಗಾರ್ಬೋ ಹೊರಬಂದಳು. 1950ರಲ್ಲಿ ಕೂಡಿದ ಸಿನಿಮಾತಜ್ಞರ ಒಂದು ಸಮಿತಿ ಈಕೆಯನ್ನು ಅತ್ಯುತ್ಕೃಷ್ಟ ತಾರೆಯೆಂದು ಸಾರಿತು. 1955ರಲ್ಲಿ ಗೌರವಾನ್ವಿತ ಅಕಾಡೆಮಿ (ಪ್ರಶಸ್ತಿ) ಪಡೆದುಕೊಂಡಳು. ಸಿನಿಮಾರಂಗದದಿಂದ ನಿವೃತ್ತಿ ಹೊಂದಿದ ಮೇಲೆ ನ್ಯೂಯಾರ್ಕಿನಲ್ಲೇ ಈಕೆ ನೆಲೆಸಿದಳು. 1951ರಲ್ಲಿ ಈಕೆಗೆ ಅಮೆರಿಕ ಸಂಯುಕ್ತ ಸಂಸ್ಥಾನದ ಪೌರತ್ವ ಲಭಿಸಿತು. ಈಕೆ 1990ರ ಏಪ್ರಿಲ್ 15ರಂದು ನ್ಯೂಯಾರ್ಕಿನಲ್ಲಿ ನಿಧನಳಾದಳು. *

**ಗಾರ್ಲೆಂಡ್, ಹ್ಯಾಮ್‌ಲಿನ್ :** 1860–1940. ಅಮೆರಿಕದ ಕಾದಂಬರಿಕಾರ ಮತ್ತು ಪ್ರಬಂಧಕಾರ. ಬಾಲ್ಯದಲ್ಲಿ ರೈತತಂದೆಯೊಡನೆ ಹೊಲದಲ್ಲಿ ಕೆಲಸಮಾಡಿದ. ಅನಂತರ ಉಪಾಧ್ಯಾಯನಾದ, ಲೇಖಕನಾದ. ಈತನ ಮೊದಲ ಗಮನಾರ್ಹ ಕೃತಿ ಮೇನ್–ಟ್ರಾವೆಲ್ಡ್ ರೋಡ್ಸ್ (1891) ಎಂಬ ಕತೆಗಳ ಸಂಗ್ರಹ. ಸ್ಥಳದಿಂದ ಸ್ಥಳಕ್ಕೆ ಮೊಟ್ಟಮೊದಲಿಗೆ ವಲಸೆ ಹೋಗಿ ನೆಲಸುವ ರೈತರ ಕಷ್ಟಗಳ ಅನುಭವ ಗಾರ್ಲೆಂಡ್‌ನ ಕುಟುಂಬಕ್ಕಿತ್ತು. ಈ ಜೀವನದ ಕಹಿ–ಸೋಲುಗಳನ್ನು ತನ್ನ ಗುರು ವಿಲಿಯಂ ಡೀನ್ ಹವೆಲ್ಸ್‌ನಿಗಿಂತ ಉಗ್ರವಾಗಿ ಈತ ನಿರೂಪಿಸಿದ್ದಾನೆ. ರೈತರನ್ನು ಗುಲಾಮಗಿರಿಗಿಳಿಸಿ ಬಿಡುತ್ತಿದ್ದ ಲೇವಾದೇವಿಯವರನ್ನೂ ರೈತನ ಜೀವನದ ಬೆವರು, ಕಣ್ಣೀರುಗಳನ್ನು

ಕಾಣದೆ ದೂರದಿಂದ ಆ ಜೀವನವನ್ನು ರಮ್ಯವಾಗಿ ಬಣ್ಣಿಸುತ್ತಿದ್ದ ಲೇಖಕರನ್ನೂ ಖಂಡಿಸಿ, ಮಧ್ಯ ಪಶ್ಚಿಮ ಪ್ರದೇಶದ ರೈತರ ಸಂಕಟವನ್ನು ಹೃದಯಸ್ಪರ್ಶಿಯಾಗಿ ಇವನು ಚಿತ್ರಿಸಿದ್ದಾನೆ. ಇವನ ಮೊದಲನೆಯ ಕಾದಂಬರಿ ಎ ಸ್ಪಾಯಿಲ್ ಆಫ್ ಆಫೀಸ್ (1892) ವಾಸ್ತವಿಕತೆಯ ಪಂಥದ ನಾಯಕನೆಂದು ಇವನಿಗೆ ಹೆಸರು ತಂದಿತು. ಗಾರ್ಲೆಂಡ್ ತನ್ನ ವಾಸ್ತವಿಕತೆಯನ್ನು ವೆರಿಟಿಸಂ ಎಂದು ಕರೆದ; ವಾಸ್ತವಿಕತೆ ಮತ್ತು ವ್ಯಕ್ತಿ ಪ್ರಾಧಾನ್ಯಗಳು ಬೆರೆತ, ಪ್ರಜಾಪ್ರಭುತ್ವದ ಕಡೆ ವಾಲುವ ಮನೋಧರ್ಮ ಇದು. ಕ್ರಂಬ್ಲಿಂಗ್ ಐಡಲ್ಸ್ (1894) ಎಂಬ ವಿಮರ್ಶಾ ಪ್ರಬಂಧಗಳಲ್ಲಿಯೂ ಇವನು ಜನಸಾಮಾನ್ಯರ ಅಭಿಪ್ರಾಯಕ್ಕಿಂತ ಬಹುಮುಂದೆ ಸಾಗಿದ್ದನೆಂಬುದು ವ್ಯಕ್ತವಾಗುತ್ತದೆ. ಅಮೆರಿಕದ ಪಶ್ಚಿಮಪ್ರದೇಶದ ಜೀವನ, ಅತೀಂದ್ರೀಯ ಮತ್ತು ಪ್ರಕೃತ್ಯತೀತ ಅನುಭವಗಳು – ಇವನ್ನು ವಸ್ತುಗಳನ್ನಾಗಿ ಆರಿಸಿಕೊಂಡು ಈತ 1895 ರಿಂದ 1916ರವರೆಗಿನ ಅವಧಿಯಲ್ಲಿ ಹದಿನಾರು ಕಾದಂಬರಿಗಳನ್ನು ಬರೆದ. 1917ರಿಂದ ಸೃಜನ ಸಾಹಿತ್ಯದ ಮತ್ತೊಂದು ಅವಧಿ ಪ್ರಾರಂಭವಾಯಿತು. ಎ ಸನ್ ಆಫ್ ದಿ ಮಿಡ್ಲ್ ಬಾರ್ಡರ್ (1917) ಬಹುಮಟ್ಟಿಗೆ ಆತ್ಮವೃತ್ತ; ಇದರಲ್ಲಿ ಪರಿಪಕ್ವ ಮನಃಸ್ಥಿತಿ ಅಭಿವ್ಯಕ್ತಿ ಪಡೆದಿತ್ತು; ಈ ಹೊತ್ತಿಗೆ ಸಹಜತಾವಾದಿಗಳು ಅತಿದೂರ ಹೋದರೆಂದು ಆ ಪಂಥದಿಂದ ಗಾರ್‌ಲೆಂಡ್ ವಿಮುಖನಾಗಿದ್ದ. ಈ ಕೃತಿಯ ಮುಂದಿನ ಭಾಗ ಎ ಡಾಟರ್ ಆಫ್ ದಿ ಮಿಡ್ಲ್ ಬಾರ್ಡರ್ (1921) ಪುಲಿಟ್ಜರ್ ಬಹುಮಾನವನ್ನು ಪಡೆಯಿತು. ಟ್ರೇಲ್ ಮೇಕರ್ಸ್ ಆಫ್ ದಿ ಮಿಡ್ಲ್ ಬಾರ್ಡರ್‌ನಲ್ಲಿ (1926) ವಿಷಾದ ಬೆರೆತ ಅಭಿಮಾನದಿಂದ ಅಮೆರಿಕ ಖಂಡಕ್ಕೆ ಮೊದಲು ಬಂದ ವಲಸೆಗಾರರ ಸಾಹಸವನ್ನು ಈತ ವರ್ಣಿಸಿದ್ದಾನೆ. ಬಹುಮಟ್ಟಿಗೆ ಗಾರ್ಲೆಂಡ್‌ನ ಹೆಸರು ಉಳಿದಿರುವುದು ಈ ಮೂರು ಕೃತಿಗಳಿಂದ.

ರೆಡ್ ಇಂಡಿಯನ್ನರ ಜೀವನವನ್ನು ಸಹಾನುಭೂತಿಯಿಂದ ಅಧ್ಯಯನಮಾಡಿ ನಿಷ್ಪಕ್ಷಪಾತವಾಗಿ ಅದನ್ನು ಚಿತ್ರಿಸಿದ ಪ್ರಾರಂಭದ ಕತೆಗಾರರಲ್ಲಿ ಗಾರ್ಲೆಂಡ್ ಒಬ್ಬ. ಇವನ ದಿ ಬುಕ್ ಆಫ್ ಅಮೆರಿಕನ್ ಇಂಡಿಯ (1923) ರೆಡ್ ಇಂಡಿಯನ್ನರ ಜೀವನವನ್ನು ಕುರಿತ ಕತೆಗಳ ಸಂಗ್ರಹ.

ಸಾಹಿತ್ಯ ಕ್ಷೇತ್ರದಲ್ಲಿ ತನಗಿದ್ದ ಸ್ನೇಹಸಂಬಂಧಗಳನ್ನು ಚಿತ್ರಿಸುವ ನಾಲ್ಕು ಪುಸ್ತಕಗಳನ್ನೀತ ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ಬರೆದ. ಅವುಗಳಲ್ಲಿ ರೋಡ್ ಸೈಡ್ ಮೀಟಿಂಗ್ಸ್ (1930) ಗಮನಾರ್ಹವಾದುದು.

ಶ್ರಮವೆಂಬುದನ್ನೇ ಲಕ್ಷಿಸದ ಅಸಾಧಾರಣ ಚೈತನ್ಯದ ಬರೆಹಗಾರ ಮತ್ತು ಭಾಷಣಕಾರನಾದ ಗಾರ್ಲೆಂಡ್ ಹಲವಾರು ಸಾಹಿತ್ಯ ಸಂಸ್ಥೆಗಳನ್ನು ಸ್ಥಾಪಿಸಿದ. ತನ್ನ ಕಾಲದವರ ಮೇಲೆ ಹೆಚ್ಚಿನ ಪ್ರಭಾವ ಬೀರಿದ ಮಹಾಕಾದಂಬರಿಕಾರ ಎಂಬ ಕೀರ್ತಿಗೆ ಈತ ಭಾಜನನಾದ. ಆದರೆ ಈಚೆಗಿನ ಸಾಹಿತ್ಯ ವಿಮರ್ಶಕರಲ್ಲಿ ಇವನ ಪ್ರಭಾವವನ್ನು ಕುರಿತು ಒಮ್ಮತವಿಲ್ಲ. ಈತ 1940ರಲ್ಲಿ ನಿಧನನಾದ. (ಎಲ್.ಎಸ್.ಎಸ್.)

**ಗಾರ್‌ಷಿನ್, ಫಸೀವಲಟ್, ಮಿಖೈಲೊವಿಚ್ :** 1855–88. ರಷ್ಯನ್ ಕತೆಗಾರ ಮತ್ತು ಕಾದಂಬರಿಕಾರ. ತಂದೆ ನಿವೃತ್ತ ಸೈನ್ಯಾಧಿಕಾರಿ. ರಷ್ಯ–ಟರ್ಕಿ ಯುದ್ಧದಲ್ಲಿ ಗಾರ್‌ಷಿನ್ ಸೈನಿಕನಾಗಿ ಭಾಗವಹಿಸಿದ. ಈ ಅನುಭವ ಇವನ ಇಡೀ ಜೀವನದ ಮೇಲೆ ಪ್ರಭಾವ ಬೀರಿತು. ಇವನ ಮೊದಲನೆಯ ಕತೆ, ನಾಲ್ಕು ದಿನಗಳು (1877) ಈ ಯುದ್ಧಕ್ಕೆ ಸಂಬಂಧಿಸಿದುದು. ಯುದ್ಧದ ವಿಷಯದಲ್ಲಿ ಇವನ ಜುಗುಪ್ಸೆ ಇಲ್ಲಿ ವ್ಯಕ್ತವಾಗುತ್ತದೆ. ಇವನದು ವಿಷಣ್ಣತೆಯ ಅತಿಸೂಕ್ಷ್ಮ ಮನಃಸ್ಥಿತಿ. ನ್ಯಾಯಕ್ಕಾಗಿ ತೀವ್ರ ಬಯಕೆ, ಅನುಕಂಪ, ಎಲ್ಲ ದುಷ್ಟತನವನ್ನೂ ತೊಡೆದುಹಾಕುವ ಛಲ– ಇವು ಇವನ ಕತೆಗಳಲ್ಲಿ ಎದ್ದು ಕಾಣುತ್ತವೆ. ಕಡೆಯ ವರ್ಷಗಳಲ್ಲಿ ಇವನ ಮನಸ್ಸು ಅಸ್ವಸ್ಥವಾಗಿತ್ತು. ಕೆಂಪು ಹೂ (1883) ಎಂಬ ಕತೆಯಲ್ಲಿ ತನ್ನ ಅನುಭವದ ಆಧಾರದಿಂದ ಹುಚ್ಚನೊಬ್ಬನ ಭಯಂಕರ ಚಿತ್ರವನ್ನು ಕೊಟ್ಟಿದ್ದಾನೆ. ಇವನ ಮೇಲೆ ಟಾಲ್‌ಸ್ಟಾಯ್ ಪ್ರಭಾವ ವಿಶಿಷ್ಟವಾಗಿತ್ತು. ತನ್ನ 33ನೆಯ ವಯಸ್ಸಿನಲ್ಲಿ ದೈಹಿಕ ಮತ್ತು ಮಾನಸಿಕ ಯಾತನೆಯನ್ನು ತಡೆಯಲಾರದೆ ಗಾರ್‌ಷಿನ್ ಆತ್ಮಹತ್ಯೆ ಮಾಡಿಕೊಂಡ.

ಈತ ಬರೆದದ್ದು ಸ್ವಲ್ಪ. ಆದರೆ ಕತೆಗಳಲ್ಲಿ ವಿಷಣ್ಣತೆ ನಿರಾಸೆಗಳಿದ್ದರೂ ಅನುಕಂಪ ಉದಾತ್ತತೆಗಳಿಂದ ಅವಕ್ಕೆ ಸೊಗಸು ಬರುತ್ತದೆ. ಇವನ ಬರೆಹಗಳಿಂದ ರಷ್ಯನ್ ಬರೆಹಗಾರರಿಗೆ ಸಣ್ಣ ಕತೆಯಲ್ಲಿ ಆಸಕ್ತಿ ಬೆಳೆಯುವಂತಾಯಿತು. ದಿನಚರಿ ಮತ್ತು ಪತ್ರಗಳನ್ನು ಬಳಸುವ ಕಥಾತಂತ್ರ ಇವನಿಗೆ ಬಹುಪ್ರಿಯ ಎನಿಸಿತ್ತು. (ಎಲ್.ಎಸ್.ಎಸ್.)

**ಗಾರೆಶಿಲ್ಪ :** ವಿವಿಧ ಮೂರ್ತಿಗಳನ್ನು ಗಾರೆಯಿಂದ ರಚಿಸುವ ಕಲೆ. ಪ್ರಾಚೀನ ಕಾಲ ದಿಂದಲೂ ಗಾರೆಯನ್ನು ವಾಸ್ತು ಮತ್ತು ಮೂರ್ತಿಶಿಲ್ಪಗಳ ರಚನೆಯಲ್ಲಿ ಬಳಸಿರುವುದನ್ನು ಕಾಣಬಹುದು. ಈಜಿಪ್ಟ್ ಸುಮೇರಿಯ ಮತ್ತು ಸಿಂಧೂ ನಾಗರಿಕತೆಗಳಲ್ಲಿ ಗಾರೆಯ ಬಳಕೆ ಬಗ್ಗೆ ಕುರುಹುಗಳಿವೆ. ಪ್ರಾಚೀನ ಭಿತ್ತಿ ಚಿತ್ರಗಳ ಹಿನ್ನಲೆಯಾಗಿ ಗಾರೆಯನ್ನು ಬಳಸಲಾಗಿದೆ. ಪ್ರಾಚೀನ ಗ್ರೀಕ್ ಮತ್ತು ರೋಮಿನ ಕಟ್ಟಡಗಳ ನಿರ್ಮಾಣದಲ್ಲಿ ಹಾಗೂ ಶಿಲ್ಪಕಲಾಕೃತಿಗಳ ರಚನೆಯಲ್ಲಿ ಗಾರೆ ಹೆಚ್ಚು ಬಳಕೆಗೊಂಡಿದೆ. ಈ ಕಾಲದಲ್ಲೇ ನಯ ಗಾರೆ ಒಂದು ಕಲಾಮಾಧ್ಯಮವಾಗಿ ರೂಪುಗೊಂಡಿತೆನ್ನಬಹುದು. ಭಾರತದಲ್ಲಿ ಗಾಂಧಾರ ಶೈಲಿಯಲ್ಲಿ ರಚನೆಗೊಂಡ ಬಹುತೇಕ ಬಿಡಿ ಆಕೃತಿಗಳು ಮತ್ತು ಫಲಕ ಶಿಲ್ಪಗಳು ಗಾರೆ ಮಾಧ್ಯಮವಾದವು. ಕರ್ನಾಟಕದಲ್ಲಿ ಶಾತವಾಹನರ ಕಾಲದಲ್ಲೇ ಕಟ್ಟಡಗಳ ನಿರ್ಮಾಣದಲ್ಲಿ ಸುಣ್ಣ ಗಾರೆಯನ್ನು ಬಳಸಲಾಗಿದೆ. ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ವಡಗಾಂವ್ ಮಾಧವಪುರದಲ್ಲಿ ನಡೆದ ಉತ್ಖನನಗಳು ಇಟ್ಟಿಗೆ ಕಟ್ಟಡಾವಶೇಷಗಳನ್ನು ಬೆಳಕಿಗೆ ತಂದಿವೆ. ಗಂಗರ ಕಾಲದ ದೇವಾಲಯಗಳಲ್ಲಿ ಭಿತ್ತಿ, ಚಾವಣಿ ಮತ್ತು ಶಿಖರಗಳ ರಚನೆಯಲ್ಲಿ ಇಟ್ಟಿಗೆಯೊಡನೆ ಗಾರೆಯನ್ನು ಬಳಸಲಾಗಿದೆ. ಬೌದ್ಧ ವಿಹಾರಗಳಲ್ಲಿನ ಭಿತ್ತಿ ರಚನೆಯಲ್ಲಿ ಗಾರೆಯನ್ನು ಕಾಣಬಹುದು. ಐಹೊಳೆಯ ಚಾಳುಕ್ಯ ಪೂರ್ವಕಾಲದ ಇಟ್ಟಿಗೆ ಕಟ್ಟಡದಲ್ಲಿ ಗಾರೆಯನ್ನು ಉಪಯೋಗಿಸಲಾಗಿದೆ. ಕಲ್ಯಾಣ ಚಾಳುಕ್ಯರ ಕಾಲದಲ್ಲೂ ಇಟ್ಟಿಗೆ ಗೋಡೆಯ ಮೇಲೆ ಗಾರೆ ಲೇಪನವನ್ನು ಮಾಡಿದ ಕುರುಹುಗಳು ಶಿಗ್ಗಾವಿ ತಾಲ್ಲೂಕಿನ ಬನ್ನಿಕೊಪ್ಪದ ಭೀಮೇಶ್ವರ ದೇವಾಲಯದಲ್ಲಿ ಕಾಣಬಹುದು. ಇದೇ ರೀತಿ ಹೊಯ್ಸಳ, ಮುಂದೆ ವಿಜಯನಗರ ಕಾಲಗಳಲ್ಲಿ ಗಾರೆ ಬಳಕೆಯನ್ನು ಕಾಣಬಹುದು. ಹಂಪಿಯ ಬಹುತೇಕ ಸ್ಮಾರಕಗಳಲ್ಲಿ ಗಾರೆಯನ್ನು ಬಳಸಲಾಗಿದೆ. ಬಿಜಾಪುರ, ಗುಲ್ಬರ್ಗ ಮತ್ತು ಬೀದರ್‌ನಲ್ಲಿನ ಮುಸ್ಲಿಂ ಸ್ಮಾರಕಗಳಲ್ಲಿ ಪ್ರಧಾನವಾಗಿ ಗಾರೆ ಬಳಕೆಗೊಂಡಿದೆ. ಅದರ ಪ್ರಭಾವ ವಿಜಯನಗರದ ಸ್ಮಾರಕಗಳಲ್ಲಿ ಎದ್ದು ಕಾಣುತ್ತದೆ. ಮುಖ್ಯವಾಗಿ ದೇವಾಲಯಗಳಲ್ಲಿಯ ಕೈಪಿಡಿ ಗೋಡೆಯ ಗೂಡುಗಳಲ್ಲಿ ಹಾಗೂ ಮಹಾದ್ವಾರ ಗೋಪುರಗಳಲ್ಲಿ ಗಾರೆ ಮೂರ್ತಿಶಿಲ್ಪಗಳನ್ನು ರಚಿಸಲಾಗಿದೆ. ಗಾರೆಯನ್ನು ಸುಣ್ಣ, ಮರಳು, ನೀರು, ಅಂಟುವಾಳಕಾಯಿ ಮತ್ತಿತರ ಅಂಟುಪದಾರ್ಥಗಳನ್ನು ಸೇರಿಸಿ ಸಿದ್ಧಪಡಿಸಲಾಗುವುದು. ಗಾರೆ ಮಿಶ್ರಣಗಳ ಅಳತೆ ಮತ್ತು ಪ್ರಮಾಣಗಳಿಗೆ ಸಂಬಂಧಿಸಿದಂತೆ ಸಂಸ್ಕೃತಿ ಸಾಹಿತ್ಯದ ಆಗಮಗಳು ಮತ್ತು ಶಿಲ್ಪ ಶಾಸ್ತ್ರ ಕೃತಿಗಳು ವಿವರಿಸಿವೆ. ಕಾಮಿಕಾಗಮ, ಹರಿಭಕ್ತವಿಲಾಸ ಮೊದಲಾದ ಕೃತಿಗಳಲ್ಲಿ ಗಾರೆ ಬಗೆಗಿನ ಮಾಹಿತಿಗಳುಂಟು. ಮುಖ್ಯವಾಗಿ ಗಾರೆಯ ಗುಣಮಟ್ಟ, ಅದನ್ನು ಬಳಸುವ ಉದ್ದೇಶವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಕಟ್ಟಡಗಳ ರಚನೆಗೆ ಮೇಲೆ ತಿಳಿಸಿದಂತೆ ಗಾರೆಯಲ್ಲಿ ಸುಣ್ಣ ಮತ್ತು ಮರಳು ಪ್ರಧಾನವಾಗಿರುತ್ತದೆ. ಆದರೆ ಶಿಲ್ಪಗಳ ರಚನೆಗೆ ಸುಣ್ಣ ಮತ್ತು ಮರಳಿನೊಂದಿಗೆ ಅಂಟುವಾಳ ಕಾಯಿ, ಬೆಲ್ಲ, ಮೊಟ್ಟೆ ಲೋಳೆರಸ, ಬಿಲ್ವಪತ್ರೆ ಕಾಯಿಗಳನ್ನು ಸೇರಿಸಿ ನುಣ್ಣಗೆ ಅರೆದು ಗಾರೆಯನ್ನು ತಯಾರಿಸಲಾಗುವುದು. ಆ ಗಾರೆಯನ್ನು ತಯಾರಿಸಿದ ಅನಂತರ ಕೆಲವು ದಿನಗಳವರೆಗೆ ಅದನ್ನು ಬಳಸಬಹುದು.

ಗಾರೆ ಶಿಲ್ಪಗಳು ಮಥುರಾದ ಕಾಲದಿಂದಲೂ ದೊರೆಯುತ್ತವೆ. ಮರಳಿನೊಂದಿಗೆ ಅಂಟು ಇತ್ಯಾದಿ ಪದಾರ್ಥಗಳನ್ನು ಸೇರಿಸಿ ಗಾರೆಯನ್ನು ಸಿದ್ಧಪಡಿಸುವ ಬಗೆಗೆ ಕಾಶ್ಯಪ ಶಿಲ್ಪ, ವಿಷ್ಣು ಧರ್ಮೋತ್ತರ ಪುರಾಣ ಮತ್ತು ಸಮರಾಂಗಣ ಸೂತ್ರಧಾರಗಳಲ್ಲಿ ಸಾಕಷ್ಟು ವಿವರಗಳಿವೆ. ಶಿಲ್ಪಗಳನ್ನು ಮಣ್ಣು, ಗಾರೆ, ಮರ, ಕಲ್ಲು, ಇಟ್ಟಿಗೆ, ಲೋಹ ಇತ್ಯಾದಿಗಳಿಂದ ರೂಪಿಸಿ ಅದಕ್ಕೆ ಸರಿಹೊಂದುವ ಬಣ್ಣಗಳನ್ನು ಲೇಪಿಸಿ, ಸುಂದರಗೊಳಿಸಬಹುದೆಂದು ಶ್ರೀಕುಮಾರನ ಚಿತ್ರಲಕ್ಷಣದಲ್ಲಿ ಹೇಳಿದೆ. ಗಾರೆ ಪ್ರತಿಮೆಗಳಿಗೆ ಬಣ್ಣ ಹಾಕಿರುವುದನ್ನು ಪಲ್ಲವರ ಕಾಲದ ಕಾಂಚಿಪುರಂನ ಕೈಲಾಸನಾಥ ದೇವಾಲಯ ಮತ್ತು ಚೋಳರ ಕಾಲದ ತಂಜಾವೂರಿನ ಬೃಹದೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಕೆಲವು ಉತ್ಸವ ಮೂರ್ತಿಗಳನ್ನು ಮರ, ಕಲ್ಲು, ಅಥವಾ ಮಣ್ಣಿನಿಂದ ತಯಾರಿಸಿ ಅವುಗಳ ಮೇಲೆ ತೆಳುವಾಗಿ ಗಾರೆಯನ್ನು ಲೇಪಿಸಿ ಬಣ್ಣ ಹಚ್ಚಿರುವುದನ್ನು ಹಾಗೂ ಅವುಗಳಿಗೆ ಅಭಿಷೇಕಾದಿಗಳನ್ನು ಮಾಡುವಂತಿಲ್ಲವೆಂಬ ವಿಚಾರ ಆಗಮಗಳಲ್ಲಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಗಾರೆಯ ಶಿಲ್ಪ ಗಾಂಧಾರ ಶಿಲ್ಪ ಕಾಲಕ್ಕಿಂತ ಹಳೆಯದೆಂದೂ ಆಕೃತಿಯ ಬಟ್ಟೆ ಮತ್ತು ಅಂಗಾಂಗಗಳ ಉಬ್ಬು ತಗ್ಗುಗಳನ್ನು ಸೂಚಿಸಲು ಮಾತ್ರ ಬಣ್ಣಗಳನ್ನು ಹಾಕಲಾಗುತ್ತದೆಂಬುದು ಕೆ.ಎಂ. ವರ್ಮ ಅವರ ಅಭಿಪ್ರಾಯ.

ಕರ್ನಾಟಕದ ಗಂಗರ ಕಾಲದ ದೇವಾಲಯಗಳಲ್ಲಿ ಗಾರೆಶಿಲ್ಪಗಳಿವೆ. ಚಾಮರಾಜನಗರ ತಾಲ್ಲೂಕಿನ ನರಸಮಂಗಲದ ರಾಮಲಿಂಗೇಶ್ವರ ದೇವಾಲಯದ ವಿಮಾನದಲ್ಲಿ ಗಾರೆ ವಿಗ್ರಹಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಉಳಿದು ಬಂದಿವೆ. ಸು.10–12 ನೆಯ ಶತಮಾನದ ಹಲವಾರು ದೇವಾಲಯಗಳ ಗರ್ಭಗೃಹಗಳಲ್ಲಿ ಗಾರೆಶಿಲ್ಪಗಳನ್ನು ರಚಿಸಿದ್ದು, ಇಂದಿಗೂ ಉಳಿದು ಬಂದಿವೆ. ಕೋಲಾರದ ಕೋಲಾರಮ್ಮ, ಅಂಗಡಿಗ್ರಾಮದ ವಾಸಂತಿಕಾ, ಕೂಡಲೂರಿನ ಬಸದಿ ಹಾಗೂ ದೇವಾಲಯ, ಹಾಸನದ ಹಾಸನಾಂಬ, ಕೆಲಸೂರಿನ ಬಸದಿ ಮುಂತಾದೆಡೆಗಳಲ್ಲಿ ಗಾರೆಯ ಬೃಹದಾಕಾರದ ಪೂಜಾ ವಿಗ್ರಹಗಳನ್ನು ಕಾಣಬಹುದು. ಮಂಡ್ಯ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೆಲವೆಡೆ ಗ್ರಾಮದೇವತೆಗಳು ಗಾರೆಯಿಂದ ರೂಪುಗೊಂಡಿವೆ. ಚನ್ನಪಟ್ಟಣ

ತಾಲ್ಲೂಕಿನ ದೇವರ ಹೊಸಳ್ಳಿಯಲ್ಲಿರುವ ಸಂಜೀವರಾಯ (ಆಂಜನೇಯ) ಶಿಲ್ಪ ಗಾರೆಯದು. ಗ್ರಾಮದೇವತೆಗಳ ಗುಡಿಗಳಲ್ಲಿ ಗಾರೆಯ ನಗ್ನ ಸ್ತ್ರೀ ಮತ್ತು ಪುರುಷರ ಪ್ರತಿಮೆಗಳು ಹೆಚ್ಚಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯದ ವಡ್ಡಾರಾಧನೆ ಹಾಗೂ ಜಗನ್ನಾಥ ವಿಜಯ ಮೊದಲಾದ ಕಾವ್ಯಗಳಲ್ಲಿ ಲೆಪ್ಪದ ಬೊಂಬೆ ಎಂಬುದನ್ನು ಗಾರೆ ಪ್ರತಿಮೆಗಳಿಗೆ ಸಂವಾದಿಯಾಗಿ ಬಳಸಲಾಗಿದೆ. ಅಂದರೆ ಪ್ರತಿಮೆಯನ್ನು ಸಂಪೂರ್ಣ ಗಾರೆಯಿಂದ ಮಾಡದೆ ಮಣ್ಣು ಅಥವಾ ಕಲ್ಲಿನಲ್ಲಿ ಮಾಡಿದ ಒರಟು ರಚನೆಗಳ ಮೇಲೆ ಗಾರೆಯನ್ನು ಲೇಪಿಸಲಾಗುತ್ತಿತ್ತು. ಇಂಥಹ ಪ್ರತಿಮೆಗಳು ಚೋಳರ ಕಾಲದಲ್ಲಿಯೂ ರಚನೆಗೊಂಡಿವೆ. ಗಂಗೈಕೊಂಡ ಚೋಳಪುರಂನಲ್ಲಿ ಇಂಥ ಈ ಬಗೆಯ ಗೊಂಬೆಗಳನ್ನು ಈಗಲೂ ನೋಡಬಹುದು. ವಿಜಯನಗರ ಕಾಲದಲ್ಲಿ ಒರಟು ಶಿಲಾಕಂಬಗಳಿಗೆ ಗಾರೆ ಲೇಪನ ಮಾಡಿ ನಯಗೊಳಿಸಿ ಚಿತ್ರಗಳಿಂದ ಅಲಂಕರಿಸಲಾಗುತ್ತಿತ್ತು. ಮತ್ತೊಂದು ರೀತಿಯ ಗಾರೆಶಿಲ್ಪಗಳೆಂದರೆ, ಮೊದಲಿಗೆ ಕಬ್ಬಿಣದ ಕಂಬಿಗಳಿಂದ ಸ್ಥೂಲ ರಚನೆಯನ್ನು ಸಿದ್ಧಪಡಿಸಿಕೊಂಡು, ಅನಂತರ ಅದಕ್ಕೆ ಗಾರೆ ತುಂಬಲಾಗುತ್ತಿತ್ತು. ಇವು ಮೈಸೂರು ಅರಸರ ಕಾಲದ್ದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಆದರೆ ವಿಜಯನಗರ ಕಾಲದ ಗಾರೆ ಶಿಲ್ಪಗಳಲ್ಲೇ ಮರದ ಗೂಟ ಹಾಗೂ ಅವಶ್ಯವಿದ್ದಲ್ಲಿ ಮಾತ್ರ ಅಭಯ ಹಸ್ತ ಮತ್ತು ವರದ ಹಸ್ತಗಳ ರಚನೆಗೆ ಕಬ್ಬಿಣದ ಕಡ್ಡಿಗಳನ್ನು ಬಳಸುತ್ತಿದ್ದರು. ಬಹುಶಃ ಇದೇ ವಿಧಾನವನ್ನು ಮೈಸೂರು ಅರಸರು ಅನುಸರಿಸಿ ಅಭಿವೃದ್ಧಿಪಡಿಸಿರಬಹುದು.

ಶಿಲಾ ಪ್ರತಿಮೆಗಳಲ್ಲಿ ಕಂಡುಬರುವ ವಿಗ್ರಹಗಳ ನಿರ್ಮಾಣದ ಮಾನ, ಪ್ರಮಾಣ, ಉನ್ಮಾನ, ಪರಿಮಾಣ, ಉಪಮಾನ, ಲಂಬಮಾನ ಮೊದಲಾದ ಲಕ್ಷಣಗಳು ಗಾರೆಶಿಲ್ಪಗಳ ನಿರ್ಮಾಣದಲ್ಲೂ ಕಂಡುಬರುತ್ತವೆ. ದ್ರಾವಿಡ ಶೈಲಿಯ ಶಿಖರ ಮತ್ತು ಗೋಪುರಗಳಲ್ಲಿ ಗಾರೆ ಶಿಲ್ಪಗಳು ವಿಶೇಷವಾಗಿವೆ. ಇದಕ್ಕೆ ದ್ರಾವಿಡ ಮಾದರಿಯ ನಿರ್ಮಾಣ ಸ್ವರೂಪವೇ ಕಾರಣ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದನ್ನು ಹಂಪೆಯ ದೇವಾಲಯಗಳ ಶಿಖರ ಮತ್ತು ಗೋಪುರಗಳಲ್ಲಿ ರಚನೆಗೊಂಡಿರುವ ಅಸಂಖ್ಯಾತ ಗಾರೆಶಿಲ್ಪಗಳು ಸಮರ್ಥಿಸುತ್ತವೆ. ಆದರೂ ಗಾರೆಶಿಲ್ಪಗಳ ರಚನೆಯ ಹಿಂದಿರುವ ಪ್ರಧಾನ ಉದ್ದೇಶ ವಾಸ್ತು ನಿರ್ಮಾಣಗಳನ್ನು ಅಲಂಕೃತಗೊಳಿಸುವುದಾಗಿದೆ. ಇದು ಬಿಡಿ ಶಿಲ್ಪವಾಗಿರಲಿ ಅಥವಾ ಉಬ್ಬು ಶಿಲ್ಪವಾಗಿರಲಿ ಹಿನ್ನಲೆಯಲ್ಲಿರುವ ವಾಸ್ತು ಭಾಗದ ಸೌಂದರ್ಯವನ್ನು ಹೆಚ್ಚಿಸುವುದಲ್ಲದೆ, ಖಾಲಿ ಕಾಣುವ ಸ್ಥಳವನ್ನು ಕಲಾಕೃತಿಗಳಿಂದ ತುಂಬುವುದಾಗಿತ್ತು. ಹೀಗಾಗಿ ವಾಸ್ತು ಅಲಂಕರಣದಲ್ಲಿ ಗಾರೆ ಪ್ರತಿಮೆಗಳು ಪ್ರಮುಖ ಪಾತ್ರ ವಹಿಸಿದ್ದವು.

ವಿಜಯನಗರ ಕಾಲದ ಗಾರೆ ಪ್ರತಿಮೆಗಳ ಅಧ್ಯಯನಕ್ಕೆ ಹಂಪಿ ಸೂಕ್ತ ಸ್ಥಳ. ಇಲ್ಲಿಯ ವಿರೂಪಾಕ್ಷ ದೇವಾಲಯ, ಕೃಷ್ಣದೇವಾಲಯ, ವಿಠ್ಠಲ ದೇವಾಲಯ, ಹಜಾರ ರಾಮ ದೇವಾಲಯ, ಮಾಲ್ಯವಂತ ರಘುನಾಥ ದೇವಾಲಯ, ಅಚ್ಯುತರಾಯ ದೇವಾಲಯ ಹಾಗೂ ಇನ್ನಿತರ ಸಣ್ಣ ಪುಟ್ಟ ದೇವಾಲಯಗಳಲ್ಲಿ ಗಾರೆಶಿಲ್ಪಗಳನ್ನು ಕಾಣಬಹುದು. ಅಲ್ಲದೆ ವಿಜಯನಗರ ಕಾಲದಲ್ಲಿ ಬೇರೆ, ಬೇರೆ ಪ್ರದೇಶಗಳಲ್ಲಿ ನಿರ್ಮಾಣಗೊಂಡ ದೇವಾಲಯುಗಳ ಶಿಖರ, ರಾಯಗೋಪುರ ಮತ್ತು ಕೈಪಿಡಿಗೋಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಾರೆ ಪ್ರತಿಮೆಗಳು ರಚನೆಗೊಂಡವು. ಈ ಪ್ರತಿಮೆಗಳಲ್ಲಿ ಕೆಲವು ಸುಸ್ಥಿತಿಯಲ್ಲಿದ್ದು, ಉಳಿದಂತೆ ಭಗ್ನಗೊಂಡಿವೆ. ಅಲ್ಲದೆ ಗಾರೆಶಿಲ್ಪಗಳು ಸದಾ ತೆರೆದ ಸ್ಥಿತಿಯಲ್ಲಿದ್ದು, ಮಳೆ, ಗಾಳಿ ಮತ್ತು ಬಿಸಿಲುಗಳಿಂದ ಹಾಳಾಗುವ ಸಾಧ್ಯತೆಯೇ ಹೆಚ್ಚು. ಹೀಗೆ ಹಾಳಾದ ಶಿಲ್ಪಗಳನ್ನು ಕಾಲ ಕಾಲಕ್ಕೆ ಜೀರ್ಣೋದ್ಧಾರಗೊಳಿಸಿ ಸುಣ್ಣ ಬಣ್ಣಗಳನ್ನು ಹಚ್ಚಿರುವುದರಿಂದ ಅವುಗಳ ಸೌಂದರ್ಯ ಮರೆಯಾಗಿ ಒರಟು ರಚನೆಗಳಂತೆ ಕಂಡು ಬರುತ್ತವೆ. ಹೀಗಾಗಿ ಗಾರೆಶಿಲ್ಪಗಳ ಕಾಲಮಾನವನ್ನು ನಿರ್ದಿಷ್ಟವಾಗಿ ಗುರುತಿಸುವುದು ಕಷ್ಟ.

ವಿಜಯನಗರ ಕಾಲದ ಗಾರೆ ಶಿಲ್ಪಗಳು ಬೆಡಗುಬಿನ್ನಾಣಗಳಿಂದ ಕೂಡಿದ್ದು, ಹೊಯ್ಸಳ ಶಿಲ್ಪಗಳನ್ನು ನೆನಪಿಸುತ್ತವೆ. ಗಾರೆ ಹಸಿ ಹಿಟ್ಟಿನಂತಿರುವುದರಿಂದ ಶಿಲ್ಪಿ ತನ್ನೆಲ್ಲ ಕುಶಲತೆಯನ್ನು ಪ್ರಯೋಗಿಸಲು ಅವಕಾಶವಿದ್ದು, ಶಿಲ್ಪಗಳು ಅತ್ಯಂತ ಮನೋಜ್ಞವಾಗಿ ಮೂಡಿ ಬರಲು ಸಾಧ್ಯವಾಗಿದೆ. ಒಂದು ವೇಳೆ ರಚನೆ ಸರಿ ಬರದಿದ್ದರೆ, ಪುನಃ ಅದಕ್ಕೆ ಗಾರೆಯನ್ನು ಲೇಪಿಸಿ ಸುಂದರಗೊಳಿಸಲಾಗುತ್ತಿತ್ತು. ಹೀಗಾಗಿ ಗಾರೆ ಶಿಲ್ಪಗಳ ರಚನೆಯಲ್ಲಿ ತಿಳಿದೋ ತಿಳಿಯದೆಯೋ ಶಿಲ್ಪಿಯ ಸೃಜನಶೀಲತೆ ಪ್ರವೇಶವಾಗುತ್ತಿತ್ತು. ಇದರಿಂದಾಗಿ ಕೆಲವು ಗಾರೆ ಶಿಲ್ಪಗಳಲ್ಲಿ ನವ್ಯ ಗುಣಲಕ್ಷಣಗಳನ್ನು ಕಾಣಬಹುದು. ಮುಖ್ಯವಾಗಿ ವಿಜಯನಗರದ ಗಾರೆಶಿಲ್ಪಗಳು ನಾನಾ ಭಂಗಿಗಳಲ್ಲಿದ್ದು, ನೀಳ ರಚನೆಗಳಾಗಿವೆ. ಉದ್ದವಾಗಿದ್ದು, ತೆಳುವಾಗಿ ಬಳಕುವ ಲಕ್ಷಣಗಳಿಂದ ಕೂಡಿವೆ. ಈ ಲಕ್ಷಣಗಳನ್ನು ಆ ಕಾಲದ ಶಿಲಾಶಿಲ್ಪಗಳಲ್ಲೂ ಕಾಣಬಹುದು. ಗಾರೆಶಿಲ್ಪಗಳಿಗೆ ವಸ್ತ್ರದ ಅಲಂಕರಣವಿದ್ದು, ಕಸೂತಿ ಕೆಲಸವನ್ನು ಮಾಡಲಾಗಿದೆ. ಮಣಿಗಳ ಹಾರಗಳು ಪ್ರಧಾನ ಆಭರಣಗಳಾಗಿ ಎದ್ದು ಕಾಣುತ್ತವೆ. ಗಾರೆ ಶಿಲ್ಪಗಳು ಗೋಡೆಗೆ ಒರಗಿ ನಿಂತ ಬಿಡಿಶಿಲ್ಪಗಳಂತೆ ರಚನೆಗೊಂಡಿವೆ. ಪ್ರತಿಮಾ ಶಾಸ್ತ್ರದ ಲಕ್ಷಣಗಳನ್ನೊಳಗೊಂಡ ಈ ಶಿಲ್ಪಗಳು ಅಂಗಾಂಗ ರಚನೆಯಲ್ಲಿ ಪ್ರಮಾಣ ಬದ್ಧತೆಯನ್ನು ಕಾಯ್ದುಕೊಂಡಿವೆ. ನುರಿತ ಶಿಲ್ಪಿಗಳ ಅನುಭವದ ಸಾಕಾರ ಮೂರ್ತಿಗಳಂತೆ ಕಂಡು ಬರುತ್ತವೆ ಹಾಗೂ ಸಮಕಾಲೀನ ಇತರ ಮಾಧ್ಯಮಗಳ ಪ್ರತಿಮೆಗಳಿಗೆ ಸರಿ ಸಮನಾಗಿ ನಿಲ್ಲುತ್ತವೆ. ವಿಜಯನಗರೋತ್ತರ ಕಾಲದಲ್ಲಿ ರಚನೆಗೊಂಡ ಗಾರೆಶಿಲ್ಪಗಳು ಉಬ್ಬು ರಚನೆಗಳಾಗಿದ್ದು, ಒರಟು ಒರಟಾಗಿವೆ. ಈ ರೀತಿಯ ಶಿಲ್ಪಗಳು ವಿರೂಪಾಕ್ಷ ದೇವಾಲಯದ ಕೈಪಿಡಿಗೋಡೆಯ ಕೆಲವು ಗೂಡುಗಳಲ್ಲಿ(ವೈಷ್ಣವ ಶಿಲ್ಪಗಳು) ಮತ್ತು ಮುಂದಿನ ಮಹಾದ್ವಾರ ಗೋಪುರದಲ್ಲಿವೆ. ಈ ಶಿಲ್ಪಗಳು ಕೇವಲ ಗೋಡೆಗಂಟಿದ ತೆಳು ಉಬ್ಬು ಶಿಲ್ಪಗಳಂತಿವೆ. ವಸ್ತ್ರ ಮತ್ತು ಆಭರಣಗಳ ಅಲಂಕರಣದಲ್ಲಿ ವಿಜಯನಗರ ಕಾಲದ ಶಿಲ್ಪಶೈಲಿಯನ್ನೇ ಅನುಸರಿಸಿದ್ದರೂ ಒರಟು ಲಕ್ಷಣಗಳು ಎದ್ದು ಕಾಣುತ್ತವೆ. ಹೀಗಾಗಿ ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಗಾರೆ ಪ್ರತಿಮೆಗಳನ್ನು ಕಾಣಬಹುದಾಗಿದೆ. ಆದರೆ ಉಳಿದ ದೇವಾಲಯಗಳಲ್ಲಿ ವಾಸ್ತು ನಿರ್ಮಾಣದೊಂದಿಗೆ ರಚನೆಗೊಂಡ ಗಾರೆಶಿಲ್ಪಗಳನ್ನು ಕಾಣಬಹುದು. ಅಂದರೆ ವಿಜಯನಗರ ಕಾಲದಲ್ಲೆ ರಚನೆಗೊಂಡ ಗಾರೆಶಿಲ್ಪಗಳಿವೆ. ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಶೈವಗಾರೆ ಶಿಲ್ಪಗಳು ಇದೇ ದೇವಾಲಯದ ಕಿರಿಯ ಗೋಪುರದಲ್ಲಿರುವ ಗಾರೆಶಿಲ್ಪಗಳು, ಕೃಷ್ಣ ದೇವಾಲಯದ ಮಹಾದ್ವಾರ ಗೋಪುರದ ಗಾರೆ ಪ್ರತಿಮೆಗಳು, ಹಜಾರರಾಮದೇವಾಲಯದ ಕೈಪಿಡಿಗೋಡೆಯಲ್ಲಿರುವ ಸಾಲುಗಾರೆ ಪ್ರತಿಮೆಗಳು, ಮಲಪನ ಗುಡಿಯ ಮಲ್ಲಿಕಾರ್ಜುನ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಗಾರೆ ಪ್ರತಿಮೆಗಳು ಹಾಗೂ ಮಾಲ್ಯವಂತ ರಘುನಾಥ ದೇವಾಲಯದ ಗೋಪುರಗಳಲ್ಲಿರುವ ಗಾರೆ ಪ್ರತಿಮೆಗಳು ಮುಖ್ಯವಾಗಿವೆ. ಕೆಲವೆಡೆ ಗಾರೆ ಪ್ರತಿಮೆಗಳಿಗೆ ವಿವಿಧ ಬಣ್ಣಗಳನ್ನು ಲೇಪಿಸಿ ಅಲಂಕರಿಸಲಾಗಿದೆ. ಇವುಗಳಲ್ಲಿ ದೇವತಾ ಶಿಲ್ಪಗಳಲ್ಲದೆ ಲೌಕಿಕ ಶಿಲ್ಪಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿವೆ.

ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಉಮಾಮಹೇಶ್ವರ, ನಾಟ್ಯಗಣಪ, ತ್ರಿಭಂಗಿಯಲ್ಲಿರುವ ಶಿವ, ನಂದಿರೂಢ ಶಿವಪಾರ್ವತಿ, ಶೈವಯತಿ, ಗಣಸಮೂಹ, ಚಾತುರಧಾರಿ ಸ್ತ್ರೀಯರು, ಭಕ್ತ ವೃಂದ ಗಾರೆ ಪ್ರತಿಮೆಗಳು ಉಲ್ಲೇಖಾರ್ಹ. ಕೊರಳಹಾರ, ತೋಳ್ಬಂದಿ, ಕಡಗ, ಡಾಬು ಮತ್ತು ಕಿರೀಟಗಳಿಂದ ಅಲಂಕೃತಗೊಂಡ ಈ ಪ್ರತಿಮೆಗಳು ಮನಮೋಹಕವಾಗಿವೆ. ಪುರುಷ ದೇವತೆಯನ್ನು ದೊಡ್ಡದಾಗಿಯೂ ಸ್ತ್ರೀದೇವತೆಯನ್ನು ಚಿಕ್ಕದಾಗಿಯೂ ರಚಿಸಲಾಗಿದೆ. ಕೃಷ್ಣದೇವಾಲಯದ ಮಹಾದ್ವಾರ ಗೋಪುರದ ಪಶ್ಚಿಮ ಭಾಗದಲ್ಲಿರುವ ಸೈನಿಕರ ಸಮೂಹ ಗಾರೆ ಶಿಲ್ಪಗಳನ್ನು ಕೃಷ್ಣದೇವರಾಯ ಒರಿಸ್ಸದ ಮೇಲೆ ಕೈಗೊಂಡ ದಂಡಯಾತ್ರೆಯ ಚಿತ್ರಣವೆನ್ನಲಾಗಿದೆ. ಇದರ ಬಹುಭಾಗ ಭಗ್ನಗೊಂಡಿದ್ದು ಇತ್ತೀಚೆಗೆ ಇದನ್ನು ಸಂರಕ್ಷಿಸಲಾಗಿದೆ.

ಹಂಪೆಯ ಗಾರೆ ಪ್ರತಿಮೆಗಳಲ್ಲಿ ಮಿಥುನ ಶಿಲ್ಪಗಳು ಪ್ರಮುಖವಾಗಿವೆ. ಇವುಗಳ ಮೈಮಾಟ ಆಕರ್ಷಕವಾಗಿದೆ. ವಿಠಲ ದೇವಾಲಯದ ಗೋಪುರದಲ್ಲಿ (ಪೂರ್ವ) ನಗ್ನ ಸ್ತ್ರೀಶಿಲ್ಪವೊಂದು ಲಜ್ಜಾಗೌರಿಶಿಲ್ಪದ ಮಾದರಿಯಲ್ಲಿದೆ. ವಿರೂಪಾಕ್ಷ ದೇವಾಲಯದ ದೊಡ್ಡ ಗೋಪುರದ ದಕ್ಷಿಣ ಮುಖದಲ್ಲಿರುವ ಮಿಥುನ ಶಿಲ್ಪಗಳು ಜೀವಂತಿಕೆಯಿಂದ ಕೂಡಿವೆ. ಸ್ತ್ರೀ ಪ್ರತಿಮೆಗಳು ತುಂಬು ಯೌವನವನ್ನು ಪ್ರಕಟಿಸುತ್ತವೆ. ಇವುಗಳ ಸುಂದರ ಕೇಶಾಲಂಕರಣ, ಲೇಪಾಕ್ಷಿ ವರ್ಣ ಚಿತ್ರಗಳಲ್ಲಿರುವ ಸ್ತ್ರೀಯರ ಕೇಶಾಲಂಕಾರವನ್ನು ಹೋಲುತ್ತವೆ. ಕೃಷ್ಣ ದೇವಾಲಯದ ಗೋಪುರದಲ್ಲಿರುವ ಗೋಪಿಕಾಸ್ತ್ರೀಯರ ಶಿಲ್ಪಗಳು ನಗ್ನವಾಗಿದ್ದರೂ ಸದಭಿರುಚಿಗೆ ಉತ್ತಮ ಉದಾಹರಣೆಗಳಾಗಿವೆ.

ಹೀಗೆ ಗಾರೆ ಪ್ರತಿಮೆಗಳು ವಿಜಯನಗರ ಕಾಲದ ವಾಸ್ತು ರಚನೆಗಳ ಅಲಂಕರಣವನ್ನು ಇಮ್ಮಡಿಸುವುದರಲ್ಲಿ ಪ್ರಮುಖ ಪಾತ್ರವಹಿಸಿವೆ. ವಿವಿಧ ಪಂಥದ ದೇವತೆಗಳು, ಪೌರಾಣಿಕ ಘಟನಾವಳಿಗಳು, ಪರಿವಾರ ದೇವತೆಗಳು, ಪ್ರಾಣಿಪಕ್ಷಿಗಳು, ರಾಜ, ರಾಣಿ, ಯತಿ ,ಶಿಷ್ಯ ಮತ್ತು ಇತರ ಸಮೂಹ ಗಾರೆ ಪ್ರತಿಮೆಗಳು ಪ್ರಮುಖವಾಗಿವೆ. ವಿಜಯನಗರ ಕಾಲದಲ್ಲಿ ಹಂಪಿ ಹೊರತುಪಡಿಸಿ ಇತರೆಡೆಗಳಲ್ಲಿ ನಿರ್ಮಾಣಗೊಂಡ ರಾಯಗೋಪುರ (ಮಹಾದ್ವಾರ ಗೋಪುರ) ಹಾಗೂ ಕೈಪಿಡಿ ಗೋಡೆಯ ಗೂಡುಗಳಲ್ಲಿ ಗಾರೆ ಪ್ರತಿಮೆಗಳು ನಿರ್ಮಾಣ ಗೊಂಡವು. ಉದಾ: ಮೇಲುಕೋಟೆ, ಕನಕಗಿರಿ, ಶ್ರೀರಂಗಪಟ್ಟಣ. ಈ ಹಿನ್ನೆಲೆಯಲ್ಲಿ ವಿಜಯನಗರ ಕಾಲದಲ್ಲಿ ಗಾರೆ ಪ್ರತಿಮೆಗಳನ್ನು ಶಿಲ್ಪಶಾಸ್ತ್ರದಲ್ಲಿ ಪರಿಣತಿ ಪಡೆದಿದ್ದ ಶಿಲ್ಪಿಗಳೆ ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ಈ ಕಾಲದ ಮರ, ಶಿಲೆ, ಲೋಹ ಮತ್ತು ಗಾರೆ ಪ್ರತಿಮೆಗಳು ಲಕ್ಷಣ ಮತ್ತು ಶೈಲಿಯಲ್ಲಿ ಒಂದೇ ಮಾದರಿಯಲ್ಲಿ ಕಂಡುಬರುತ್ತವೆ. ಅಂದರೆ ವಿಜಯನಗರ ಕಾಲದಲ್ಲಿ ಗಾರೆ ಕುಶಲಕಲೆಯಲ್ಲಿ ನುರಿತ ಶಿಲ್ಪಿಗಳ ಒಂದು ವರ್ಗವೇ ಇತ್ತೆಂಬುದು ಸುಸ್ಪಷ್ಟ. ಆದರೆ

ಗಾರೆ ಶಿಲ್ಪಿಗಳನ್ನು ಕುರಿತಂತೆ ಈವರೆಗೂ ಯಾವುದೇ ಮೂಲದ ಮಾಹಿತಿ ದೊರೆತಿಲ್ಲ. ಇನ್ನು ಮೈಸೂರು ಒಡೆಯರ ಕಾಲದಲ್ಲೂ ಹೆಚ್ಚಿನ ಸಂಖ್ಯೆಯ ಗಾರೆ ಪ್ರತಿಮೆಗಳನ್ನು ದೇವಾಲಯಗಳ ಗೋಪುರ ಮತ್ತು ಕೈಪಿಡಿಗೋಡೆಯ ಗೂಡುಗಳಲ್ಲಿ ನಿರ್ಮಿಸಲಾಯಿತು. ಕಾಲಕ್ರಮೇಣ ವಸತಿ ಗೃಹಗಳ ಅಲಂಕರಣೆಯಲ್ಲಿ ಗಾರೆಯನ್ನು ಯಥೇಚ್ಛವಾಗಿ ಬಳಸುವ ಪದ್ಧತಿ ರೂಢಿಯಾಯಿತು. ಸಿಮೆಂಟ್ ಮತ್ತಿತರ ಆಧುನಿಕ ವಸ್ತುಗಳ ಪ್ರವೇಶದಿಂದಾಗಿ ಗಾರೆ ಬಳಕೆ ಸ್ಥಗಿತಗೊಂಡಿತೆನ್ನಬಹುದು. ಆದರೂ ಕೆಲವು ಕೆಲಸಗಳಿಗೆ ಗಾರೆ ಬಳಕೆಗೊಳ್ಳುತ್ತಿದೆ. (ಸಿ.ಎಂ.)

**ಗಾರ್ಸಿಯಾ ಲೋರ್ಕ್, ಫೆಡರಿಕೊ :** 1899–1936. ಆಧುನಿಕ ಸ್ಪೇನಿನ ಪ್ರಮುಖ ಸಾಹಿತಿಗಳಲ್ಲೊಬ್ಬ. ಸ್ಪೇನಿನ ಗ್ರಾನಡ ಜಿಲ್ಲೆಯ ಪೋಂತೆ ವಾಕ್ವೆರೋಸ್ ಎಂಬ ಹಳ್ಳಿಯಲ್ಲಿ ಜನಿಸಿದ. ಚಿಕ್ಕಂದಿನಿಂದಲೂ ದೇಹಸ್ಥಿತಿ ಬಹಳ ಸೂಕ್ಷ್ಮವಾಗಿದ್ದ ಕಾರಣ, ದೈಹಿಕ ಶ್ರಮದ ಕೆಲಸ ಈತನಿಗೆ ಸಾಧ್ಯವಾಗಲಿಲ್ಲ. ವೈಚಾರಿಕ ಮತ್ತು ಗಹನ ಮೀಮಾಂಸೆಯ ಪ್ರವೃತ್ತಿಯ ಲೋರ್ಕನಿಗೆ ತನ್ನ ಆಂಡಲೂಸಿಯ ಪ್ರಾಂತ್ಯದ ಜನರ ಸಹಜವಾದ ಪ್ರಕೃತಿ ಪ್ರೇಮ, ಸೂಕ್ಷ್ಮವಾದ ಕಲಾ ವಸ್ತುಗಳ ಪ್ರೇಮ ಹುಟ್ಟಿನಿಂದಲೇ ಮೈಗೂಡಿ ಬಂದಿತ್ತು. ಈತ ಚಿಕ್ಕಂದಿನಿಂದಲೂ ಸಂಗೀತದ ಅಭ್ಯಾಸದ ಜೊತೆಗೆ ಸ್ಪೇನಿನ ಪ್ರಾಚೀನ ಮತ್ತು ಈಚಿನ ಕಾವ್ಯಗಳ ಅಧ್ಯಯನ ನಡೆಸಿದ. ಗ್ರಾನಡ ವಿಶ್ವವಿದ್ಯಾಲಯ ಮತ್ತು ಮ್ಯಾಡ್ರಿಡ್‌ಗಳಲ್ಲಿ ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ನ್ಯಾಯಶಾಸ್ತ್ರಗಳ ಅಭ್ಯಾಸ ಮಾಡಿ 1921ರಲ್ಲಿ ಪದವಿಗಳನ್ನು ಪಡೆದ. ಇವನ ಮೊದಲ ಪದ್ಯಗಳೆಲ್ಲವೂ ಸ್ಪೇನಿನಲ್ಲೆಲ್ಲ ಪ್ರಸಾರವಾಗಿ ಬರೆದವನಿಗೆ ಅಪಾರ ಕೀರ್ತಿ ತಂದುಕೊಟ್ಟವು. ಲೋರ್ಕ

ಮತ್ತು ಗೆಳೆಯರು ಅವನ್ನು ತಾವೇ ಹಾಡಿ ಜನಪ್ರಿಯಗೊಳಿಸಿದರು. ಪ್ರಾರಂಭದಿಂದಲೂ ಮಕ್ಕಳ ಹಾಡಿನ ಸಾಂಗತ್ಯದ ಬಗ್ಗೆ ಅಪಾರ ಪ್ರೇಮವಿದ್ದ ಈತ ತನ್ನ ಜನತೆಯ ಬದುಕು, ಜಾನಪದ ಸಾಹಿತ್ಯಗಳ ಅಂತರಾಳಗಳನ್ನು ಕಂಡುಕೊಂಡು ನಿಜವಾದ ಜನತಾಕವಿಯೆನಿಸಿಕೊಂಡ. ಈತನ ಕವನ ಸಂಕಲನ ಅಚ್ಚಾದುದು 1921ರಲ್ಲಿ. ಈತನ ಇಂಪ್ರೆಸಿಯೋನ್ಸ್ ಇ ಪೈಸಾಜೆಸ್ ಎಂಬ ಗದ್ಯಗ್ರಂಥದಲ್ಲಿ (1918) ಹಳ್ಳಿಯ ಬದುಕು ಬಹು ಸಹಜವಾಗಿ ಚಿತ್ರಿತವಾಗಿದೆ. ಪ್ರಿಮೆರ್ ರೊಮಾನ್ಸೆರೊ ಗಿತಾನೊ ಎಂಬ ಕವಿತಾ ಸಂಗ್ರಹದಲ್ಲಿ (1928) ತನ್ನ ಗ್ರಾಮೀಣ ಸಮಾಜದ ಸತ್ತ್ವವನ್ನು ಅರ್ಥಪೂರ್ಣವಾಗಿ ಈತ ಚಿತ್ರಿಸಿದ್ದಾನೆ. ಆದರೂ ಆಧುನಿಕ ಕಲೆಯಲ್ಲಿ ಆಸಕ್ತನಾದ ಲೋರ್ಕಾ ಆಗಿನ ಯುವಕ ಚಿತ್ರಕಾರ ಸಾಲ್ವಡೋರ್ ಡಾಲಿ, ಕವಿ ಗೆರಾರ್ಡೊ ಡಿಯೇಗೊ ಮತ್ತು ಮ್ಯಾನುಯೆಲ್ ಡ ಫಾಲಾ ಮುಂತಾದವರ ಗೆಳೆಯನಾಗಿ ಅವರ ಪ್ರಭಾವಕ್ಕೊಳಗಾದ. 1922 ಮತ್ತು 1923ರಲ್ಲಿ ಜನತೆಯ ದೊಡ್ಡ ಜಾತ್ರೆಯೊಂದನ್ನು ನಡೆಸಿದ. ಇದು ಆಂಡಲೂಸಿಯದ ಜಾನಪದ ಕತೆಗಳ ಪುನರ್ನವೀಕರಣ ಮತ್ತು ಉದ್ಧಾರಕ್ಕೆ ಕಾರಣವಾಯಿತು. ಅದೇ ಕಾಲದಲ್ಲಿಯೇ ಜಾನಪದ ಸಂಗೀತಕ್ಕಾಗಿ ಲೋರ್ಕ ಮತ್ತೊಂದು ಸಮ್ಮೇಳನ ನಡೆಸಿದ. 1931ರಲ್ಲಿ ಪ್ರಕಟವಾದ ಪೊಯಾಮಾ ಡೆಲ್ ಕಾಂತೆ ಜಾಂಡೋ ಕಾವ್ಯಸಂಕಲನ ಎರಡು ಭಾಗಗಳಲ್ಲೂ ಲೋರ್ಕ ತನ್ನ ಪ್ರದೇಶದ ಜಿಪ್ಸಿಗಳ ಜಾನಪದ ಕಾವ್ಯಭಾಷೆಯನ್ನೇ ಬಳಸಿ, ಅವರ ಜೀವನದ ಸಮಗ್ರ ಚಿತ್ರಣ ಕೊಟ್ಟಿದ್ದಾನೆ. ಅವರ ಬದುಕಿನ ಅಲೆಮಾರಿತನದಲ್ಲಿಯೂ ಸಾವಿನೆದುರಿಗೆ ನಿಲ್ಲುವುದು ಅವರ ಸ್ಥೈರ್ಯ ಸುಂದರವಾಗಿ ಅಚ್ಚಳಿಯದಂತೆ ಮೂಡಿರುವ ಈ ಕೃತಿ ಅದ್ವಿತೀಯವಾದುದು. ಇಲ್ಲಿಯೂ ಲೋರ್ಕನ ಮನಸ್ಸಿನಲ್ಲಿ ಸದಾ ಹುದುಗಿದ್ದ ಸಾವಿನ ವಿಚಾರ ಇಣುಕುತ್ತದೆ. ಇವನ ಸ್ನೇಹಿತ ಗೂಳಿಕಾಳಗಪಟು ಮೇಜಿಯಾಸ್ ಕಾಳಗವೊಂದರಲ್ಲಿ ಗೂಳಿಯ ಇರಿತಕ್ಕೆ ಸಿಕ್ಕಿ ಸತ್ತಾಗ ಲೋರ್ಕ ಬರೆದ ಶೋಕಗೀತೆ (1935) ಕಣ್ಣಿನಲ್ಲಿ ರಕ್ತ ಹರಿಸುವಂಥ ಆಳವಾದ ಭಾವೋದ್ರೇಕದಿಂದ, ಜಿಲ್ಲೆನ್ನಿಸುವ ಪ್ರತಿಮೆಗಳಿಂದ ಕೂಡಿದೆ. ಈ ಕವಿತೆ ಆಧುನಿಕ ಯುರೋಪಿನ ಸಾಹಿತ್ಯದ ಅತ್ಯದ್ಭುತ ಶೋಕಗೀತೆಯೆಂದು ಹೆಸರಾಗಿದೆ.

ಕವಿಯೇ ಅಲ್ಲದೆ ಸಂಗೀತಗಾರ, ಚಿತ್ರಗಾರ, ನಾಟಕಕಾರ, ನಟ ಮತ್ತು ಜಾನಪದ ನೃತ್ಯಗಾರನಾಗಿ ಲೋರ್ಕ ಅಪಾರ ಜನಪ್ರಿಯತೆ ಗಳಿಸಿದ. 1929ರಲ್ಲಿ ನ್ಯೂಯಾರ್ಕಿಗೆ ಹೋಗಿಬಂದ ಅನಂತರ ಈತ ವಾಲ್ಟ್ ವ್ಹಿಟ್ಮನ್ ಮತ್ತಿತರ ಬಗ್ಗೆ ಸ್ವತಂತ್ರ್ಯ ಗೀತೆಗಳನ್ನು ರಚಿಸಿದ. ಸಂಚಾರೀ ಜಾನಪದ ರಂಗಭೂಮಿಯಲ್ಲಿ ಆಸಕ್ತಿ ವಹಿಸಿ ಕೊನೆಯವರೆಗೆ ಲ ಬ್ಯಾರಾಕಾದ ಸದಸ್ಯನಾಗಿದ್ದು ನಟನಾಗಿ, ನಾಟಕಕಾರನಾಗಿ, ನಿರ್ದೇಶಕನಾಗಿ ದುಡಿದ. ಬೋದಾಸ್‌ದ ಸಾಂಗ್ರೆ (1933), ಯೆರ್ಮಾ (1934), ಬರ್ನಾರ್ಡಾ ಆಲ್ಬನ ಮನೆ (1935ರಲ್ಲಿ ಬರೆದುದಾದರೂ 1940ರಲ್ಲಿ ಕವಿಯ ಸಾವಿನ ಅನಂತರ ಪ್ರಕಟವಾಯಿತು). ಮುಂತಾದ ದುರಂತ ನಾಟಕಗಳಿಗೆ ಜಿಪ್ಸಿ ಅಲೆಮಾರಿಗಳ ಜೀವನವೇ ವಸ್ತು.

ಸ್ಪೇನಿನ ಆಧುನಿಕ ಜಾನಪದ ಪುನರುತ್ಥಾನಕ್ಕೆ ಕಾರಣನಾಗಿ ಕಲೆಯನ್ನು ಅದಕ್ಕಾಗಿ ಮೀಸಲಿಟ್ಟ ಲೋರ್ಕ ಸ್ಪೇನಿನ ಅತ್ಯಂತ ಪ್ರಭಾವಶಾಲಿ ಸಾಹಿತಿಯಾಗಿ ಪರಿಗಣಿತ ನಾಗಿದ್ದಾನೆ. 1936ರಲ್ಲಿ ಸ್ಪೇನಿನಲ್ಲಿ ಅಂತರ್ಯುದ್ಧ ಪ್ರಾರಂಭವಾದಾಗ ಫ್ರ್ಯಾಂಕೋ ಬಣದ ಕಮ್ಯುನಿಸ್ಟ್ ವಿರೋಧಿ ಗುಂಪೊಂದು ಗ್ರಾನಡದಲ್ಲಿ ಗಾರ್ಸಿಯಾ ಲೋರ್ಕವನ್ನು 1936ರ ಆಗಸ್ಟ್ 19ರಂದು ರಸ್ತೆಯಲ್ಲಿ ಇರಿದು ಕೊಂದುಹಾಕಿತು. (ಎಸ್.ಎ.ಎಸ್.)

**ಗಾರ್ಸ್ಟಾಂಗ್, ಜಾನ್ :** 1876–1956. ಬ್ರಿಟಿಷ್ ಪುರಾತತ್ತ್ವಜ್ಞ, ಮಧ್ಯಪ್ರಾಚ್ಯದ ಬಗ್ಗೆ ಈತ ನಡೆಸಿದ ಸಂಶೋಧನೆಗಳಿಂದಾಗಿ ಪ್ರಖ್ಯಾತನಾಗಿದ್ದಾನೆ. ಜನನ ಲ್ಯಾಂಡ್‌ಷೈರಿನ್ ಬ್ಲಾಕ್‌ಬರ್ನ್‌ನಲ್ಲಿ. 1876ರ ಮೇ 5 ರಂದು. ಆಕ್ಸ್‌ಫರ್ಡಿನ ಜೀಸಸ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ವಿದ್ಯಾರ್ಥಿಯಾಗಿದ್ದಾಗ ಈತನಿಗೆ ರೋಮ್ ಮತ್ತು ಬ್ರಿಟಿಷ್ ಪ್ರಾಕ್ತನದಲ್ಲಿ ಆಸಕ್ತಿ ಹುಟ್ಟಿತು. ಈತ ಪ್ರಕಟಿಸಿದ ರೋಮನ್ ರಿಬ್‌ಚೆಸ್ಟರ್ (1899) ಈ ಆಸಕ್ತಿಯ ಫಲ. 1902ರಲ್ಲಿ ಈತ ಲಿವರಪೂಲ್ ವಿಶ್ವವಿದ್ಯಾಲಯದಲ್ಲಿ ಈಜಿಪ್ಟ್ ಪ್ರಾಕ್ತನಶಾಸ್ತ್ರದ ಉಪಪ್ರಾಧ್ಯಾಪಕ ನಾಗಿದ್ದ. ಅದೇ ವಿಶ್ವವಿದ್ಯಾಲಯ ದಲ್ಲಿ 1907ರಿಂದ 1941ರ ವರೆಗೆ ಪ್ರಾಕ್ತನಶಾಸ್ತ್ರ ವಿಧಾನಗಳ ಮತ್ತು ಪ್ರಯೋಗದ ಪ್ರಾಧ್ಯಾಪಕನಾಗಿದ್ದ. ಲಿವರ್‌ಪೂಲ್ ಪ್ರಾಕ್ತನಶಾಸ್ತ್ರ ಸಂಸ್ಥೆಯ ಸ್ಥಾಪನೆಗೆ ಈತ ಕಾರಣ. 1899ರಲ್ಲಿ ಈತ ವಿಲಿಯಂ ಮ್ಯಾಥ್ಯೂಸ್ ಫ್ಲಿಂಡರ್ ಪೆಟ್ರಿಯ ಕೆಳಗೆ ಕೆಲಸ ಮಾಡಲು ಈಜಿಪ್ಟಿಗೆ ಹೋದ. ಮುಂದಿನ 15 ವರ್ಷಗಳ ಕಾಲ ಈಜಿಪ್ಟ್, ನ್ಯೂಬಿಯ, ಏಷ್ಯ ಮೈನರ್‌ಗಳಲ್ಲಿ ಉತ್ಖನನ ಮಾಡಿದ. ಹಿಟ್ಟೈಟ್ ನಾಗರಿಕತೆಯ ವಿಚಾರದಲ್ಲಿ ಅಧಿಕಾರಯುತವಾಗಿ ಹೇಳಬಲ್ಲವನಾದ. 1910ರಲ್ಲಿ ಪ್ರಕಟವಾದ ದಿ ಲ್ಯಾಂಡ್ ಆಫ್ ದಿ ಹಿಟ್ಟೈಟೀಸ್ ಎಂಬುದು ಈ ಬಗ್ಗೆ ಒಂದು ಶಿಷ್ಟ ಗ್ರಂಥ. ಇದನ್ನು ಈತ ಪರಿಷ್ಕರಿಸಿ 1927ರಲ್ಲಿ ದಿ ಹಿಟ್ಟೈಟ್ ಎಂಪೈರ್ ಎಂಬ ಹೆಸರಿನಲ್ಲಿ ಪ್ರಕಟಿಸಿದ. ಪ್ರಾಚೀನ ಇಥಿಯೋಪಿಯದ ರಾಜಧಾನಿ ಮೆರೋಯೀದಲ್ಲಿ ಈತ ನಡೆಸಿದ (1910–14) ಉತ್ಖನನಗಳು ಅತ್ಯಂತ ಗಮನಾರ್ಹ ವಿಚಾರಗಳನ್ನು ಹೊರಗೆಡವಿದವು. ಅದು ರೋಮನ್ನರ ಆಕ್ರಮಣಕ್ಕೊಳಪಟ್ಟಿತ್ತೆಂಬುದು ವ್ಯಕ್ತಪಟ್ಟದ್ದು ಆಗಲೇ.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಈತ ರೆಡ್ ಕ್ರಾಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ. ಈತ ಜೆರೂಸಲೆಂನಲ್ಲಿ ಬ್ರಿಟಿಷ್ ಪುರಾತತ್ತ್ವ ಶಾಲೆಯ ಪ್ರಥಮ ನಿರ್ದೇಶಕನಾಗಿ ನೇಮಕಗೊಂಡದ್ದು 1919ರಲ್ಲಿ. ಪ್ಯಾಲೆಸ್ಟೀನಿನ ಪುರಾತತ್ತ್ವ ಇಲಾಖೆಯನ್ನು ಈತ ವಹಿಸಿಕೊಂಡದ್ದು 1920ರಲ್ಲಿ. 1926ರಲ್ಲಿ ಈ ಎರಡು ಹುದ್ದೆಗಳಿಂದ ನಿವೃತ್ತಿ ಹೊಂದಿದ ಮೇಲೆಯೂ ಪುರಾತತ್ತ್ವ ವಿಚಾರಗಳಲ್ಲಿ ಕೆಲಸ ಮುಂದುವರಿಸಿದ. 1930–36ರಲ್ಲಿ ಜೆರಿಕೋದಲ್ಲಿ ಈತ ಮಾಡಿದ ಉತ್ಖನನಗಳು ಬಲು ಅಮೂಲ್ಯವಾದಂಥವು. ನೂತನ ಶಿಲಾಯುಗ ಮತ್ತು ಕಂಚಿನ ಯುಗಗಳ ಜನವಸತಿಯ ಬಗ್ಗೆ ಅನೇಕ ಮುಖ್ಯ ಸಂಗತಿಗಳು ಆವಿಷ್ಕಾರಗೊಂಡುವು.

ಈತ ಮೆರ್ಸಿನ್‌ನಲ್ಲಿ ಸಂಶೋಧನೆಗೆ ಎರಡನೆಯ ಮಹಾಯುದ್ಧ ಅಡ್ಡಿಯಾಯಿತು. ಈ ಸಂಶೋಧನೆಯ ವರದಿ ಪ್ರಿ-ಹಿಸ್ಟಾರಿಕ್ ಮೆರ್ಸಿನ್ ಎಂಬ ಹೆಸರಿನಲ್ಲಿ ಪ್ರಕಟವಾದ್ದು 1953ರಲ್ಲಿ. ಆನಟೋಲಿಯದ ಬಗ್ಗೆ ನಡೆಸಿದ ಅಧ್ಯಯನಕ್ಕೆ ಮನ್ನಣೆಯಾಗಿ ಈತ 1947–48ರಲ್ಲಿ ಆಂಕಾರದ ಬ್ರಿಟಿಷ್ ಪುರಾತತ್ತ್ವ ಶಾಲೆಯ ಪ್ರಥಮ ನಿರ್ದೇಶಕನಾಗಿ

ನೇಮಕಗೊಂಡ. 1949ರಲ್ಲಿ ಅದರ ಅಧ್ಯಕ್ಷನಾದ. ಈತ ಲೆಬನಾನಿನ ಬೀರತ್‍ನಲ್ಲಿ 1956ರ ಸಪ್ಟೆಂಬರ್ 12ರಂದು ತೀರಿಕೊಂಡ.

*

**ಗಾರ್ಹಸ್ಥ್ಯ :** ಗೃಹಸ್ಥಾಶ್ರಮ ಧರ್ಮಕ್ಕೆ ಈ ಹೆಸರಿದೆ. ಗೃಹಸ್ಥ ಅಂದರೆ ಮನೆಯುಳ್ಳವನು ಎಂದು ಪದಶಃ ಅರ್ಥ; ಭಾವಾರ್ಥ ಇದಕ್ಕಿಂತ ವಿಶಾಲವಾದದ್ದು. ಹಾಗೆಯೇ ಗೃಹಿಣಿ ಪದದ ಅರ್ಥವೂ ವಿಶಾಲವಾದದ್ದು. ಗೃಹಸ್ಥ ಮತ್ತು ಗೃಹಿಣಿ ಕೇವಲ ಮನೆಯೆಂಬ ಒಂದು ಕಟ್ಟಡವನ್ನು ಪಡೆದವರಲ್ಲ. ಅವರು ತಂದೆ ತಾಯಿ, ಅಣ್ಣ ತಮ್ಮ, ಅಕ್ಕ, ತಂಗಿಯರೊಡನೆ ಬಾಳುವ ಕುಟುಂಬಿಗಳು, ಸಂಸಾರಿಗಳು. ಸಮಾಜದ ಶೈಶವಾವಸ್ಥೆಯಲ್ಲೂ ಕುಟುಂಬವೇ ಜೀವನವ್ಯವಸ್ಥೆಯ ತಳಹದಿಯಾಗಿತ್ತು. ಹಲವು ಕುಟುಂಬಿಗಳು ನೆರೆಹೊರೆಯಾಗಿ ಬಾಳುತ್ತಿದ್ದುವು. ಪ್ರತಿಯೊಬ್ಬ ಕುಟುಂಬಿಯೂ ಹಲವು ಕುಟುಂಬಗಳ ಒಂದು ಕುಲ ಅಥವಾ ಬುಡಕಟ್ಟಿನ ಆಡಳಿತದಲ್ಲಿ ಭಾಗವಹಿಸುತ್ತಿದ್ದನು. ಅದರ ಕಟ್ಟು ಕಾಯಿದೆಗಳನ್ನು ಪಾಲಿಸುತ್ತಿದ್ದನು. ಅದರ ಮತಾಚಾರ ಗಳನ್ನು ಅನುಸರಿಸುತ್ತಿದ್ದನು. ಅವನ ಮಕ್ಕಳು ಆಯಾ ಕುಲದ ಅಥವಾ ಗುಂಪಿನ ಗುರುಗಳಿಂದ ವಿದ್ಯೆ ಕಲಿಯುತ್ತಿದ್ದರು. ಗುಂಪುಗುಂಪುಗಳಿಗೆ ಯುದ್ಧ ಒದಗಿದಾಗ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಬೆಳೆದ ಸಮಾಜದಲ್ಲಂತೂ ಗೃಹಸ್ಥನ ಸಾಮಾಜಿಕ ಕರ್ತವ್ಯಗಳು ತುಂಬ ವಿಸ್ತರಿಸಿವೆ. ಅವನು ಪುರವಾಸಿಯಾಗಿ ಪೌರನ ಹಕ್ಕುಬಾಧ್ಯತೆಗಳನ್ನು ಪಡೆದಿರುತ್ತಾನೆ. ಒಂದು ರಾಷ್ಟ್ರದ ಪ್ರಜೆಯಾದ ಗೃಹಸ್ಥ ಅದರಿಂದ ಪಡೆಯುವ ಪ್ರಯೋಜನಕ್ಕೆ ಸಾಪೇಕ್ಷವಾದ ಕಟ್ಟು ಕಾಯಿದೆಗಳನ್ನು ಪಾಲಿಸಬೇಕಾಗುತ್ತದೆ. ಅವನ ಮತ್ತು ಅವನ ಕುಟುಂಬದವರ ಕ್ಷೇಮ, ಆಯುರಾರೋಗ್ಯ, ಆರ್ಥಿಕಸ್ಥಿತಿ, ಸಂಸ್ಕೃತಿ ಮುಂತಾದುವುಗಳಿಗೆ ಬಹುಮಟ್ಟಿಗೆ ಕಾರಣವಾದ ತನ್ನ ರಾಷ್ಟ್ರದ ಸರ್ಕಾರದೊಡನೆ ಪ್ರಜೆಯಾದ ಅವನು ಸಹಕರಿಸಬೇಕು. ಅರಿಸ್ಟಾಟಲನ ಹೇಳಿಕೆಯಂತೆ ರಾಜ್ಯವೆಂಬುದು ವಿಸ್ತೃತಗೊಂಡ ಕುಟುಂಬ. ಇಪ್ಪತ್ತನೆಯ ಶತಮಾನದಲ್ಲಿ ಒಂದು ಸಮಾಜಕ್ಕೆ, ರಾಷ್ಟ್ರಕ್ಕೆ ಸೇರಿದ ಗೃಹಸ್ಥನ ಹೊಣೆಗಾರಿಕೆ ರಾಷ್ಟ್ರಗಳ ಎಲ್ಲೆಯನ್ನು ಮೀರಿ ಸ್ವಲ್ಪಮಟ್ಟಿಗಾದರೂ ಅಂತರರಾಷ್ಟ್ರೀಯವಾಗಿದೆ. ಹೀಗೆ ಸಂಸಾರಿಯಾದ ಗೃಹಸ್ಥನ ಸಂಬಂಧಗಳು ತುಂಬ ವಿಸ್ತರಿಸಿವೆ. ಸಂಸಾರಿಯಲ್ಲದವನ ಜೀವನ ಸಂಕುಚಿತ, ಜೀವನ ಸಮಸ್ಯೆಗಳೂ ಸಂಕುಚಿತ, ಸಂಸಾರಿಯಾದವನ ಜೀವನ ವಿಶಾಲ, ಅವನ ಸಮಸ್ಯೆಗಳೂ ಅನೇಕ. ಇವನ್ನು ಪರಿಹರಿಸಿಕೊಳ್ಳಲು ಅವನು ತನ್ನ ವ್ಯಕ್ತಿತ್ವವನ್ನು ವಿಶೇಷ ರೀತಿಯಲ್ಲಿ ಬೆಳೆಸಿಕೊಳ್ಳ ಬೇಕಾಗುತ್ತದೆ.

ಸಂಸಾರಿಮಾನವನ ಜೀವನವೇ ವಿಶ್ವದ ಸಾಹಿತ್ಯ. ಕಲೆಗಳು, ಕಸಬುಗಳು, ಧರ್ಮ, ನ್ಯಾಯ, ನೀತಿ ಮುಂತಾದ ಎಲ್ಲದರ ವಿಷಯ. ಅದನ್ನು ಬಿಟ್ಟರೆ ಈ ಎಲ್ಲದರ ವ್ಯಾಪ್ತಿ ತೀರ ಸಂಕುಚಿತವಾಗುತ್ತದೆ, ಅವು ಹುರುಳಿಲ್ಲದೆ ಬಡಕಲಾಗುತ್ತವೆ.

ಹೀಗೆ ಜೀವನದಲ್ಲಿ ಮಹತ್ತರ ಪಾತ್ರವಹಿಸಿರುವ ಗೃಹಸ್ಥನ ಜೀವನಾವಸ್ಥೆಗೆ ಭಾರತೀಯ ತತ್ತ್ವವೂ ಮತವೂ ಧರ್ಮಶಾಸ್ತ್ರವೂ ಕಲೆಗಳೂ ತುಂಬ ಪ್ರಾಶಸ್ತ್ಯ ಕೊಟ್ಟಿವೆ. ಭಾರತೀಯ ತಾತ್ತ್ವಿಕರು ಜೀವನವನ್ನು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಎಂದು ನಾಲ್ಕು ಆಶ್ರಮಗಳಾಗಿ ವಿಂಗಡಿಸಿ ಅವುಗಳಲ್ಲಿ ಗೃಹಸ್ಥ್ಯಕ್ಕೆ ಒಂದು ಮುಖ್ಯ ಸ್ಥಾನವನ್ನು ಕೊಟ್ಟಿದ್ದಾರೆ. ಉಳಿದೆಲ್ಲ ಆಶ್ರಮಗಳಿಗೂ ಅದು ತಳಹದಿ. ಗೃಹಸ್ಥನ ಮಕ್ಕಳು ಗುರು ಮತ್ತು ಗುರುಪತ್ನಿಯ ಕುಟುಂಬಕ್ಕೆ ಸೇರಿದವರಾಗಿ ಬ್ರಹ್ಮಚರ್ಯವನ್ನು ನಡೆಸುತ್ತಾರೆ. ಗೃಹಸ್ಥನಾಗಿ ಜೀವನವನ್ನು ಸಾಂಗವಾಗಿ ನಡೆಸಿದವನೇ ಮುಂದೆ ವಾನಪ್ರಸ್ಥಾಶ್ರಮಿಯಾಗುವನು. ಸಂನ್ಯಾಸಿಯಾಗಿ ಪರಿವ್ರಾಜಕನಾದವನೂ ಮೊದಲಿಗೆ ಗೃಹಸ್ಥನೇ. ಪರಿವ್ರಾಜಕನಾದಾಗ ಅವನು ಭಿಕ್ಷೆ ಪಡೆಯುವುದು ಗೃಹಸ್ಥರ ಕುಟುಂಬದಿಂದ. ಹೀಗೆ ಗೃಹಸ್ಥಾಶ್ರಮದ ಮೇಲೆ ಉಳಿದೆಲ್ಲ ಆಶ್ರಮಗಳೂ ನಿಂತಿವೆ.

ವೇದದ ವಿಭಾಗಗಳಾದ ಮಂತ್ರಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳಿಗೂ ಜೀವನದ ಆಶ್ರಮಗಳಿಗೂ ನಿಕಟಸಂಬಂಧವಿದೆ. ಬಾಲಕ ಉಪನಯನದ ಮೂಲಕ ದೀಕ್ಷೆ ಪಡೆದು ಬ್ರಹ್ಮಚಾರಿಯಾದಾಗ ಆತ ತನ್ನ ಶಾಖೆಗೆ ಸಂಬಂಧಿಸಿದ ವೇದ ಮಂತ್ರಗಳನ್ನು ಕಲಿಯಬೇಕು. ಹಿಂದೆ ಬಾಲಕಿಯರಿಗೂ ಉಪನಯನ ರೂಢಿಯಲ್ಲಿತ್ತು. ಹಾರೀತ ಸ್ಮೃತಿ ಸ್ತ್ರೀಯರನ್ನು ಬ್ರಹ್ಮವಾದಿಗಳು ಸದ್ಯೋವಧುಗಳು ಎಂದು ಎರಡು ಬಗೆಯಾಗಿ ವಿಭಾಗ ಮಾಡುತ್ತದೆ. ಬ್ರಹ್ಮವಾದಿಗಳು ಉಪನಯನವಾದ ಮೇಲೆ ವೇದಾಧ್ಯಯನ ನಡಸಿ ಪರಬ್ರಹ್ಮ ಉಪಾಸನೆಯನ್ನು ಕೈಕೊಳ್ಳುತ್ತಿದ್ದರು. ಬೃಹದಾರಣ್ಯಕ ಉಪನಿಷತ್ತಿನ ಗಾರ್ಗಿ ಇಂಥ ಬ್ರಹ್ಮವಾದಿನಿ, ಸದ್ಯೋವಧುಗಳಿಗೆ ವಿವಾಹಸಮಯದಲ್ಲಿ ಅದರ ಅಂಗವಾಗಿ ಮಾತ್ರ ಉಪನಯನ ವಿಧಿಸಲಾಗಿತ್ತು. ಸ್ತ್ರೀಯರೂ ವೇದಾಧ್ಯಯನ ನಡೆಸಿ ಉಪಾಧ್ಯಾಯಾ ಉಪಾಧ್ಯಾಯೀ ಆಚಾರ್ಯಾ ಎಂಬ ಅಧಿಕಾರವನ್ನು ಪಡೆಯುತ್ತಿದ್ದರೆಂದು ಪಾಣಿನಿ ತಿಳಿಸುತ್ತಾನೆ. ಉಪಾಧ್ಯಾಯಾ, ಆಚಾರ್ಯಾ, ಉಪಾಧ್ಯಾಯೀ ಎಂದರೆ ಗುರುಪತ್ನಿಯಲ್ಲ, ಗುರುಪತ್ನಿಯನ್ನು ಆಚಾರ್ಯ, ಉಪಾಧ್ಯಾಯಾ ಎಂದು ಕರೆಯಕೂಡದು. ಗುರುಪತ್ನಿ ಆಚಾರ್ಯಿಣೀ, ಉಪಾಧ್ಯಾಯಿನೀ. ಗುರುವಾದವಳನ್ನು ಆಚಾರ್ಯಾ, ಉಪಾಧ್ಯಾಯಾ ಎಂದೇ ಸಂಬೋಧಿಸುವುದು ರೂಢಿಯಲ್ಲಿತ್ತು. ಪೂರ್ವಮೀಮಾಂಸಾ ತತ್ತ್ವಸ್ಥಾಪಕನಾದ ಜೈಮಿನಿ ಶೂದ್ರರೂ ಉಪನಯನ ಮಾಡಿಕೊಂಡು ವೇದಾಧ್ಯಯನ ನಡೆಸಿ, ಗೃಹಸ್ಥರಾಗಿ ಜ್ಯೋತಿಷ್ಟೋಮ ಮುಂತಾದ ಯಜ್ಞಗಳನ್ನು ನಡೆಸಬಹುದೆಂದು ಹೇಳಿರುತ್ತಾನೆ.

ವೇದಾಧ್ಯಯನ ಮುಗಿಸಿ ಸ್ನಾತಕನಾಗಿ ದೇಶಗಳನ್ನು ಸುತ್ತಿ ತನ್ನ ವಿದ್ಯಾ ಪ್ರೌಢಿಮೆಯನ್ನು ತೋರಿಸಿ ಹಣವನ್ನು ಗಳಿಸಿ ಸದ್ಯೋವಧುವನ್ನು ಮದುವೆಯಾಗಿ ವ್ಯಕ್ತಿ ಗೃಹಸ್ಥನಾಗುತ್ತಾನೆ; ಗುರುವಾಗಿ, ಪುರೋಹಿತನಾಗಿ, ಯಾಜ್ಞಿಕನಾಗಿ ಧರ್ಮ, ಅರ್ಥ, ಕಾಮಗಳೆಂಬ (ತ್ರಿವರ್ಗ) ಪುರುಷಾರ್ಥಗಳನ್ನು ಸಾಧಿಸುತ್ತಾನೆ; ವೇದೋಕ್ತ ಯಜ್ಞ ಕಾರ್ಯಗಳನ್ನು ನಡೆಸಿದ ಫಲವಾಗಿ ಜೀವಾಂತ್ಯದಲ್ಲಿ ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಮೊದಲಲ್ಲಿ ವೇದ ಅಂಗೀಕರಿಸಿದ್ದ ಪುರುಷಾರ್ಥಗಳು ಗೃಹಸ್ಥ ಸಾಧಿಸಬೇಕಾದ ಧರ್ಮ, ಅರ್ಥ ಮತ್ತು ಕಾಮಗಳೆಂಬ ಮೂರೇ ಪುರುಷಾರ್ಥಗಳು. ಸಂನ್ಯಾಸ ನಾಲ್ಕನೆಯ ಆಶ್ರಮವಾಗಿ ಸ್ಥಾಪಿತವಾದದ್ದು. ವೇದದ ಕೊನೆಯ ಭಾಗಗಳು ಅಂದರೆ ಉಪನಿಷತ್ತುಗಳು ಹಿಂದೆ ರೂಢಿಯಲ್ಲಿದ್ದ ಮೂರು ಪುರುಷಾರ್ಥಗಳ ಜೊತೆಗೆ ಮೋಕ್ಷವನ್ನು ನಾಲ್ಕನೆಯ ಪುರುಷಾರ್ಥವಾಗಿ ಸೇರಿಸಿದುವು. ಸ್ವರ್ಗಪ್ರಾಪ್ತಿಯೇ ಮೋಕ್ಷವಲ್ಲ. ಸ್ವರ್ಗಪಡೆದವ ತನ್ನ ಕರ್ಮಫಲ ತೀರಿದ ಮೇಲೆ ಪುನಃ ಈ ಲೋಕದಲ್ಲಿ ಜನ್ಮಪಡೆಯಲೇಬೇಕು. ಮೋಕ್ಷವಾದರೋ ಬ್ರಹ್ಮಸಾಕ್ಷಾತ್ಕಾರದ ಮೂಲಕ ಶಾಶ್ವತ ಬ್ರಹ್ಮಲೋಕಪ್ರಾಪ್ತಿ. ಮುಕ್ತನಾದವನಿಗೆ ಪುನರ್ಜನ್ಮವಿಲ್ಲ. ಗೃಹಸ್ಥನಾದವ ಈ ನಾಲ್ಕನೆಯ ಪುರುಷಾರ್ಥವನ್ನು ಸಾಧಿಸಲು, ಹೆಂಡತಿಯ ಅನುಮತಿ ಪಡೆದು ಸಂನ್ಯಾಸವನ್ನು ಸ್ವೀಕರಿಸುತ್ತಿದ್ದುದು ಸಾಮಾನ್ಯ ಪದ್ಧತಿ. ಗೃಹಸ್ಥನಾಗಿದ್ದ ಯಾಜ್ಞವಲ್ಕ್ಯ ತನ್ನ ಹೆಂಡತಿಯ ಅನುಮತಿ ಪಡೆದು ಸಂನ್ಯಾಸವನ್ನು ಅವಲಂಬಿಸಿದ ಚಿತ್ರವನ್ನು ಬೃಹದಾರಣ್ಯಕ ಉಪನಿಷತ್ತು ರಮ್ಯವಾಗಿ ಚಿತ್ರಿಸಿದೆ. ಉಪನಿಷತ್ತುಗಳ ಕಾಲದಲ್ಲಿ ಬಾಲಸಂನ್ಯಾಸ ಪ್ರಚಾರದಲ್ಲಿದ್ದಂತೆ ಕಂಡುಬರುವುದಿಲ್ಲ. ಈ ಪದ್ಧತಿ ಹುಟ್ಟಿದ್ದು ಬಹುಶಃ ಬುದ್ಧನ ಕಾಲದಲ್ಲಿ, ಉಪನಿಷತ್ತುಗಳಲ್ಲೂ ಕಲ್ಪಸೂತ್ರಗಳ ಗೃಹಸ್ಥನಾಗಿ ಬಾಳಿ ಸಮಾಜಕ್ಕೂ ವಂಶಕ್ಕೂ ಸಕಲ ಪ್ರಾಣಿವರ್ಗಕ್ಕೂ ಸಲ್ಲಿಸಬೇಕಾದ ಕರ್ತವ್ಯಗಳನ್ನು ಸಲ್ಲಿಸಿ ಧರ್ಮವೆಂಬ ಪುರುಷಾರ್ಥವನ್ನು ಸಾಧಿಸಿದ ಗೃಹಸ್ಥನೇ ಮೋಕ್ಷ ಸಾಧನವಾದ ಸಂನ್ಯಾಸಕ್ಕೆ ಅರ್ಹ– ಎಂದು ಸ್ಪಷ್ಟಪಡಿಸುತ್ತವೆ. ಕೆಲವು ಧರ್ಮಸೂತ್ರಗಳು, ಉದಾಹರಣೆಗೆ, ಗೌತಮ ಧರ್ಮಸೂತ್ರ, ಸಂನ್ಯಾಸವನ್ನು ಧಿಕ್ಕರಿಸಿವೆ. ಜೈಮಿನಿಯ ಪೂರ್ವಮೀಮಾಂಸಾದರ್ಶನ ಗಾರ್ಹಸ್ಥ್ಯಕ್ಕೆ ಪ್ರಾಧಾನ್ಯ ಕೊಟ್ಟು ಸಂನ್ಯಾಸವನ್ನು ನಿರಾಕರಿಸುತ್ತದೆ. ಅದರ ಪ್ರಸಿದ್ಧ ಅನುಯಾಯಿಯಾಗಿದ್ದ ಮಂಡನಮಿಶ್ರ ಸಂನ್ಯಾಸಿಗಳಾದ ಶಂಕರಾಚಾರ್ಯರು ತನ್ನ ಬಳಿಗೆ ಬಂದಾಗ ಅವರನ್ನು ತಿರಸ್ಕಾರದಿಂದ ಕಾಣುತ್ತಾನೆ. ಅನಂತರ ವಾದದಲ್ಲಿ ಸೋತು ಸಂನ್ಯಾಸವನ್ನು ಅವಲಂಬಿಸುತ್ತಾನೆ. ಶಂಕರಾಚಾರ್ಯರ ಅನಂತರ ಹುಟ್ಟಿದ ಶ್ರೀವೈಷ್ಣವ ಮತ್ತು ಮಾಧ್ವವೇದಾಂತಪಕ್ಷದವರೂ ಗೃಹಸ್ಥರಾಗಿ ಬಾಳಿ ಸಂನ್ಯಾಸವನ್ನು ಸ್ವೀಕರಿಸುವುದೇ ಸಾಮಾನ್ಯ. ಧರ್ಮವನ್ನು ಬಿಟ್ಟು ಮೋಕ್ಷವಿಲ್ಲ. ಗೃಹಸ್ಥಧರ್ಮವೇ ಉಳಿದೆಲ್ಲಕ್ಕೂ ಆಧಾರ. ಮೋಕ್ಷಾರ್ಥಿಯಾದ ಸಂನ್ಯಾಸಿಯೂ ಧರ್ಮಬಾಹಿರನಲ್ಲ. ಅವನೂ ಸರ್ವರಿಗೆ ಸಾಮಾನ್ಯವಾದ ಸಾಧಾರಣ ಧರ್ಮವನ್ನು ಪಾಲಿಸಬೇಕು.

ಗೃಹಸ್ಥನ ಸಾಧಾರಣ ಧರ್ಮದ ಬಗ್ಗೆ ಯಾಜ್ಞವಲ್ಕ್ಯ ಸ್ಮೃತಿ ಹೀಗೆ ಹೇಳಿದೆ.

ಅಹಿಂಸಾ ಸತ್ಯಮಸ್ತೇಯಮ್ ಶೌಚಮ್ ಇಂದ್ರಿಯನಿಗ್ರಹಃ  
ದಾನಂ ಧರ್ಮೋ ದಯಾ ಶಾಂತಿಃ ಸರ್ವೇಷಾಂ ಧರ್ಮಸಾಧನಮ್

ಅಹಿಂಸೆ, ಸತ್ಯವಚನ, ಪರಿಶುದ್ಧತೆ, ದೇಹ ಮತ್ತು ಮನಸ್ಸುಗಳ ಶುಚಿ, ಇಂದ್ರಿಯಗಳ ಹತೋಟಿ, ದಾನ, ಸಂಯಮ, ದಯೆ, ಶಾಂತಿವರ್ತನೆ–ಇವು ಎಲ್ಲರ ಧರ್ಮ ಸಾಧನೆಗೂ ಅಗತ್ಯವಾದುವು. ಕಾಲ, ದೇಶ ಜಾತಿ, ಕುಲ, ಗೋತ್ರ, ಬುಡಕಟ್ಟು, ಜನಾಂಗ, ಬ್ರಹ್ಮಚಾರಿ, ಗೃಹಸ್ಥ, ಸಂನ್ಯಾಸಿ ಮುಂತಾದ ಭೇದಗಳ ಉಪಾಧಿಗೆ ಒಳಪಡದ ಸಾರ್ವಜನಿಕ ಮಾನವ ಧರ್ಮವೇ ಎಲ್ಲರಿಗೂ ಸಾಧಾರಣವಾದ ಧರ್ಮ.

ಮೇಲೆ ಹೇಳಿದ ಸಾಧಾರಣ ಕರ್ತವ್ಯಗಳಲ್ಲದೆ ಗೃಹಸ್ಥಾಶ್ರಮಕ್ಕೆ ವಿಶಿಷ್ಟವಾದ ಕರ್ಮಗಳಿವೆ. ಇವು ಮೂರು ಬಗೆಯಾಗಿವೆ–ನೈಮಿತ್ತಿಕ ಕರ್ಮಗಳು, ನಿತ್ಯ ಕರ್ಮಗಳು ಮತ್ತು ಐಚ್ಛಿಕ ಕರ್ಮಗಳು–ಎಂದು.

ಗೃಹಸ್ಥ ಆಚರಿಸಬೇಕಾದ ನೈಮಿತ್ತಿಕ ಕರ್ಮಗಳನ್ನು ಗೃಹ್ಯಸೂತ್ರಗಳು ವಿಸ್ತಾರವಾಗಿ ವರ್ಣಿಸಿವೆ. ಈ ಕರ್ಮಗಳು ಜೀವನದುದ್ದಕ್ಕೂ ಬೇರೆ ಬೇರೆ ಕಾಲಗಳಲ್ಲಿ ಆಚರಿಸಬೇಕಾದ ಸಂಸ್ಕಾರಗಳಿಗೆ ಸಂಬಂಧಪಟ್ಟವು. ವಿವಾಹ ಗೃಹಸ್ಥಾಶ್ರಮಕ್ಕೆ ಸೇರಲು ಅಗತ್ಯವಾದ ಸಂಸ್ಕಾರ. ವಿವಾಹಗಳು ಎಂಟು ಬಗೆಯಾಗಿವೆ. ಅವುಗಳಲ್ಲಿ ಶ್ರೇಷ್ಠವಾದದ್ದು ಬ್ರಾಹ್ಮೀವಿವಾಹಪದ್ಧತಿ. ಇದು ಗಂಡು ಹೆಣ್ಣುಗಳು ಮತ್ತು ಅವರ ಹತ್ತಿರ ಸಂಬಂಧಿಗಳ ಅನುಮೋದನೆಯಿದ ವೇದೋಕ್ತವಾಗಿ, ಅಗ್ನಿ ಸಾಕ್ಷಿಯಾಗಿ ನಡೆಯುವ ಕರ್ಮ.

ವಿವಾಹಾನಂತರ ನಡೆಯುವ ಕರ್ಮ ಗರ್ಭಾಧಾನ. ಸೋಮದೇವತೆಯನ್ನು ಸ್ತೋತ್ರಮಾಡಿ ಅವನಿಗೆ ಹವಿಸ್ಸನ್ನರ್ಪಿಸಿ ಅವನನ್ನು ಒಲಿಸಿಕೊಂಡು ದಂಪತಿಗಳು ಈ ಕರ್ಮದಲ್ಲಿ ಸಹಭಾಗಿಗಳಾಗುತ್ತಾರೆ. ಇಲ್ಲಿ ವ್ಯಕ್ತಿ ಸ್ವಇಚ್ಛೆಯಂತೆ ನಡೆಯುವಂತಿಲ್ಲ. ಕೇವಲ ಇಂದ್ರಿಯ ಸುಖವೇ ಸಂಭೋಗದ ಅಂತಿಮ ಗುರಿಯಲ್ಲ. ಅದು ಧರ್ಮ ಸಾಧನವಾದ ನಿಯೋಜಿತ ಕರ್ತವ್ಯ. ದಂಪತಿಗಳು ತಮ್ಮ ವಂಶೋದ್ಧಾರಕ್ಕೆ ಸಲ್ಲಿಸಬೇಕಾದ ಕರ್ತವ್ಯ ಇದು. ಸಂತಾನವಿಲ್ಲದ ದಂಪತಿಗಳಿಗೆ ಸದ್ಗತಿ ಇಲ್ಲ; ಅವರ ಪಿತೃಗಳಿಗೆ ಸ್ವರ್ಗದಲ್ಲಿ ಏಳಿಗೆ ಇಲ್ಲ. ಆದ್ದರಿಂದ ದಂಪತಿಗಳು ಸಂತಾನವನ್ನು ಪಡೆಯಬೇಕೆಂದು ವೇದ ಆಜ್ಞಾಪಿಸಿದೆ. ಗರ್ಭಧಾರಣೆಯಾದ ಮೇಲೆ ಐದನೆಯ ಅಥವಾ ಏಳನೆಯ ತಿಂಗಳಲ್ಲಿ ಆಚರಿಸಬೇಕಾದ ಕರ್ಮ ಸೀಮಂತ. ಶಿಶು ಜನಿಸಿದ ಮೇಲೆ ಹನ್ನೊಂದನೆಯ ದಿನ ದಂಪತಿಗಳು ಶಿಶುವಿಗೆ ನಡೆಸಬೇಕಾದ ಕರ್ಮ ನಾಮಕರಣ. ಶಿಶುವಿಗೆ ಒಂಬತ್ತು ತಿಂಗಳಾದ ಮೇಲೆ ನಡೆಸುವ ಕರ್ಮ ಅನ್ನಪ್ರಾಶನ. ಅದಕ್ಕೆ ಮೂರು ವರ್ಷ ತುಂಬಿದಾಗ ಏರ್ಪಡಿಸುವ ಕರ್ಮ ಚೌಲ. ಏಳು ವರ್ಷತುಂಬಿದಾಗ ಏರ್ಪಡಿಸುವ ಕರ್ಮ ಉಪನಯನ. ಈಗ ಬಾಲಕರಿಗೆ ಮಾತ್ರ ಉಪನಯನವನ್ನು ಮಾಡುವುದು ರೂಢಿಯಲ್ಲಿದೆ. ಹಿಂದೆ ಹುಡುಗಿಯರಿಗೂ ಉಪನಯನ ನಡೆಯುತ್ತಿತ್ತೆಂಬುದನ್ನು ಈಗಾಗಲೇ ತಿಳಿಸಿದೆ. ಉಪನಯನ ಅತ್ಯಂತ ಮುಖ್ಯವಾದ ಸಂಸ್ಕಾರ. ಅಧ್ಯಾತ್ಮಜೀವನವನ್ನು ಪ್ರವೇಶಿಸಲು ಅದು ಮೊದಲನೆಯ ದ್ವಾರ. ಈ ಎಲ್ಲ ಸಂಸ್ಕಾರಗಳಿಗೆ ಸೇರಿದ ಕರ್ಮಗಳು ಗೃಹಕರ್ಮಗಳು. ಜೀವನದ ಹಲವು ಘಟ್ಟಗಳಲ್ಲಿ ಮಾಡಬೇಕಾದ ನೈಮಿತ್ತಿಕ ಕರ್ಮಗಳಿವು.

ಗೃಹಸ್ಥ ಯಾವುದೊಂದು ಫಲಾಪೇಕ್ಷೆ ಇಲ್ಲದೆ ನಿತ್ಯವೂ ಮಾಡಬೇಕಾದ ಕರ್ಮಗಳೇ ನಿತ್ಯಕರ್ಮಗಳು–ತ್ರಿಕಾಲ ಸಂಧ್ಯಾವಂದನೆ, ಬೆಳಗ್ಗೆ ಮತ್ತು ಸಂಜೆ ನಡೆಸಬೇಕಾದ ಅಗ್ನಿಹೋತ್ರ, ವರ್ಷದುದ್ದಕ್ಕೂ ಗೃಹಾಗ್ನಿ ಆರದಂತೆ ಅದನ್ನು ಪೋಷಿಸುವುದು ಅವನ ಆದ್ಯ ಕರ್ತವ್ಯವಾಗಿತ್ತು. ಅದು ಗೃಹಸ್ಥ ನಿತ್ಯವೂ ಮಾಡಬೇಕಾದ ಪಂಚಮಹಾಯಜ್ಞಗಳಲ್ಲಿ ಒಂದು. ವೇದಾಧ್ಯಯನ, ಅತಿಥಿಸತ್ಕಾರ, ಪಿತೃತರ್ಪಣ, ಮೃಗಪಕ್ಷಿಗಳಿಗೆ ಆಹಾರ ಕೊಡುವುದು (ಭೂತಯಜ್ಞ)–ಈ ನಾಲ್ಕು ಇತರ ಮಹಾಯಜ್ಞಗಳು. ಈ ಪಂಚಮಹಾ ಯಜ್ಞಗಳನ್ನು ಸಾಂಗವಾಗಿ ನೆರವೇರಿಸಲು ಗೃಹಸ್ಥ ದಿನದ ಹೆಚ್ಚು ಭಾಗವನ್ನು ಮೀಸಲಾಗಿಡಬೇಕಾಗಿತ್ತು.

ನಿತ್ಯ, ನೈಮಿತ್ತಿಕ ಕರ್ಮಗಳಲ್ಲದೆ ಗೃಹಸ್ಥ ತನ್ನ ಜೀವನೋಪಾಯಕ್ಕಾಗಿ ಅವಲಂಬಿಸಿದ ಪೌರೋಹಿತ್ಯ ಉಪಾಧ್ಯಾಯವೃತ್ತಿ, ವೈದ್ಯಕೀಯವೃತ್ತಿ, ಸಾಹಿತ್ಯ, ಸಂಗೀತ ಮುಂತಾದ ಕಲೆಗಳಿಗೆ ಸಂಬಂಧಪಟ್ಟ ಕರ್ತವ್ಯಗಳು– ಇವು ಐಚ್ಛಿಕ ಕರ್ತವ್ಯಗಳು. ಜೊತೆಗೆ ಬಗೆಬಗೆಯ ಇಷ್ಟಸಿದ್ಧಿಗಳಿಗಾಗಿ ಆತ ಕೈಗೊಳ್ಳುವ ಯಜ್ಞಕಾರ್ಯಗಳೂ ಐಚ್ಛಿಕ ಕರ್ಮಗಳೇ.

ಮೊದಲಲ್ಲಿ ಗೃಹಸ್ಥಾಶ್ರಮದ ಪುರುಷಾರ್ಥಗಳು ಧರ್ಮಾರ್ಥಕಾಮಗಳೆಂಬ ಮೂರೇ ಆಗಿದ್ದವು. ಮೋಕ್ಷವೆಂಬ ನಾಲ್ಕನೆಯ ಪುರುಷಾರ್ಥ ಹುಟ್ಟಿದಾಗ ಆ ಮೋಕ್ಷಸಿದ್ಧಿಗೆ ಸಂನ್ಯಾಸ ಅಗತ್ಯವೆಂದು ಕೆಲವರು ಭಾವಿಸಿದರು. ಗೃಹಸ್ಥನಾಗಿದ್ದೇ ಮೋಕ್ಷಪಡೆಯಬಹುದೆಂದು ಇನ್ನು ಕೆಲವರು ಭಾವಿಸಿದರು. ಈ ನಾಲ್ಕನೆಯ ಪುರುಷಾರ್ಥ ಉಪನಿಷತ್ತುಗಳಲ್ಲಿ ಕಾಣಿಸಿಕೊಂಡಾಗ, ಗೃಹಸ್ಥರಲ್ಲೂ ಬ್ರಹ್ಮ ಸಾಕ್ಷಾತ್ಕಾರ ಪಡೆದವರಿದ್ದರು. ರಾಜನಾದ ಜನಕ, ಗಾಡಿಯನ್ನು ತಯಾರಿಸುತ್ತಿದ್ದ ರೈಕ್ವ ಇವರು ಗೃಹಸ್ಥರಾಗಿದ್ದೇ ಮೋಕ್ಷ ಪಡೆದರು. ಮಹಾಭಾರತ ಮತ್ತು ಪುರಾಣಗಳಲ್ಲಿ ಗೃಹಸ್ಥರಾದ ಹೆಂಗಸರೂ ಗಂಡಸರೂ ಮೋಕ್ಷ ಪಡೆದ ನಿದರ್ಶನಗಳು ಅನೇಕವಿವೆ. ಈ ರೀತಿ ಗೃಹಸ್ಥನ ಜೀವನ ಸಕಲ ಪುರುಷಾರ್ಥಗಳನ್ನು ಸಾಧಿಸಬಹುದಾದ ಸುವ್ಯವಸ್ಥಿತವಾದ ತುಂಬುಜೀವನ.

ಹಿಂದಿನ ರೀತಿಯ ಗಾರ್ಹಸ್ಥ್ಯ ಈಗ ಅಪೂರ್ವವೆನಿಸಿದೆ. ಕೆಲವು ವೈದಿಕ ಕುಟುಂಬಗಳನ್ನು ಬಿಟ್ಟರೆ ಉಳಿದವರಲ್ಲಿ ಅರ್ಥಕಾಮಗಳಿಗೇ ಹೆಚ್ಚು ಬೆಲೆ. ಹಿಂದೆ ಸ್ತ್ರೀಯರಿಗೆ ಮದುವೆಯ ಜೊತೆಯಲ್ಲೇ ಉಪನಯನವಾಗುತ್ತಿದ್ದಂತೆ ಈಗ ಪ್ರಾಯಕ್ಕೆ ಬಂದ ಪುರುಷರಿಗೆ ಉಪನಯನ ನಡೆಯುತ್ತಿದೆ. ನಿತ್ಯ ಮತ್ತು ನೈಮಿತ್ತಿಕ ಕರ್ಮಗಳ ಮತ್ತು ಪಂಚಮಹಾಯಜ್ಞಗಳ ಆಚರಣೆ ನಿಂತುಹೋಗಿದೆ. ಇಂದಿನ ಧರ್ಮ ವಿಶೇಷವಾಗಿ ಲೌಕಿಕ ಧರ್ಮವಾಗಿ ಪರಿವರ್ತನೆಯಾಗಿದೆ. ಆದರೂ ಪಾಶ್ಚಾತ್ಯ ದೇಶಗಳಂತೆ ಭಾರತದಲ್ಲಿ ಕುಟುಂಬ ಜೀವನ ಮುರಿದುಬೀಳುತ್ತಿಲ್ಲ. ಈಗಿನ ಗೃಹಸ್ಥರ ಮತೀಯ ಕರ್ತವ್ಯಗಳು ಸಂಕುಚಿತವಾದರೂ ಸಾಮಾಜಿಕ, ರಾಜಕೀಯ ಕರ್ತವ್ಯಗಳು ವಿಸ್ತರಿಸಿವೆ; ನೈತಿಕ ದೃಷ್ಟಿ ಉದಾರವೂ ವಿಶಾಲವೂ ಆಗಿದೆ. ಸಂನ್ಯಾಸಕ್ಕಿಂತಲೂ ಈಗ ಗಾರ್ಹಸ್ಥ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಬಂದಿದೆ. (ಜಿ.ಎಚ್.)

**ಗಾಲ್ :** ಈಗಿನ ಫ್ರಾನ್ಸ್, ಬೆಲ್ಜಿಯಂಗಳನ್ನೂ ಜರ್ಮನಿ, ಹಾಲೆಂಡ್, ಸ್ವಿಟ್ಜರ್‌ಲೆಂಡ್‌ಗಳ ಭಾಗಗಳನ್ನೂ ಒಳಗೊಂಡ ಪ್ರದೇಶದ ಪ್ರಾಚೀನ ನಾಮ. ಉತ್ತರ ಇಟಲಿಯೂ ಸೇರಿದಂತೆ ಈ ಇಡೀ ಭಾಗವನ್ನು ರೋಮನ್ನರು ಗಾಲ್ ಎಂದು ಕರೆಯುತ್ತಿದ್ದರು. ಪ್ರ.ಶ.ಪೂ. 58–51ರಲ್ಲಿ ನಡೆದ ಗಾಲಿಕ್ ಯುದ್ಧಗಳಲ್ಲಿ ಜೂಲಿಯಸ್ ಸೀಸರ್ ಈ ಭಾಗವನ್ನು ಗೆದ್ದ. ವಿಸ್ತೃತವಾದ ಗಾಲ್ ಪ್ರದೇಶದ ಎರಡು ವಿಭಾಗಗಳ ಪೈಕಿ ಆಲ್ಪ್ಸ್‌ಪರ್ವತದ ಉತ್ತರಕ್ಕಿದ್ದ ವಿಭಾಗವನ್ನು ಟ್ರಾನ್ಸ್ ಆಲ್ಪೈನ್ (ಆಲ್ಪ್ಸ್‌ನಾಚೆಯ) ಗಾಲ್ ಎಂದೂ ದಕ್ಷಿಣಕ್ಕಿದ್ದ ಜಿಲ್ಲೆಯನ್ನು ಸಿಸ್‌ಆಲ್ಪೈನ್ (ಆಲ್ಪ್ಸ್‌ನೀಚೆಯ) ಗಾಲ್ ಎಂದೂ ಕರೆಯುತ್ತಿದ್ದರು. ಟ್ರಾನ್ಸ್‌ಆಲ್ಪೈನ್‌ಗಾಲ್ ರೂಢಿಯಲ್ಲಿ ಗಾಲ್ ಎನಿಸಿಕೊಂಡಿತು. ಈಗಿನ ಫ್ರಾನ್ಸನ್ನು ಕೆಲವು ವೇಳೆ ಗಾಲ್ ಎಂದು ಕರೆಯುವುದುಂಟು.

**ಟ್ರಾನ್ಸ್‌ಆಲ್ಪೈನ್ ಗಾಲ್ :** ಪ್ರ.ಶ.ಪೂ. 600ರಲ್ಲಿ ಗ್ರೀಕೊ–ರೋಮನ್ ಇತಿಹಾಸವನ್ನು ಪ್ರವೇಶಿಸಿತು. ಪ್ರ.ಶ.ಪೂ.ಸು. 400ರಿಂದ ರೋಮ್ ಮತ್ತು ಮಾಸ್ಸಿಲಿಯ (ಮಾರ್ಸೇಲ್ಸ್) ಮೈತ್ರಿಯಿಂದಿದ್ದುವು. ಮುಂದೆ ಮಾಸ್ಸಿಲಿಯಟರಿಗೆ ಒಳನಾಡಿನ ಜನರ ದಾಳಿಯನ್ನು ತಡೆಯುವುದು ಅಸಾಧ್ಯವಾದಾಗ ರೋಮನ್ನರು ನಡುವೆ ಪ್ರವೇಶಿಸಿದರು. ಪ್ರ.ಶ.ಪೂ. 118ರಲ್ಲಿ ನಾರ್ಬೊ ಮಾರ್ಟಿಯಸ್ (ದಕ್ಷಿಣ ಫ್ರಾನ್ಸಿನ ನಾರ್ಬಾನ್) ರೋಮನ್ನರ ವಸಾಹತಾಯಿತು. ರೋಮನ್ ವ್ಯಾಪಾರಿಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬರತೊಡಗಿದರು. ಕ್ಷಿಪ್ರದಲ್ಲಿಯೇ ಗಾಲ್ ರೋಮನೀ ಕೃತವಾಯಿತು.

ರೋಮನ್ ಆಕ್ರಮಣಪೂರ್ವದ ಗಾಲ್‌ನಲ್ಲಿ ತಮ್ಮನ್ನು ಕೆಲ್ಟರೆಂದು ಕರೆದು ಕೊಳ್ಳುತ್ತಿದ್ದ ಗಾಲರಲ್ಲದೆ ಇನ್ನೂ ಹಲವು ಜನಾಂಗಗಳಿದ್ದುವೆಂದು ಸೀಸರನ ವ್ಯಾಖ್ಯಾನಗಳಿಂದ ತಿಳಿದುಬರುತ್ತದೆ. ಇವುಗಳ ನಡುವೆ ಸದಾ ಕದನಗಳು ನಡೆಯುತ್ತಿದ್ದುವು. ಈ ಕಲಹಗಳಿಂದಾಗಿ ಸೀಸರ್ ಇಲ್ಲಿ ಬಲವಾಗಿ ಬೇರೂರುವುದು ಸಾಧ್ಯವಾಯಿತು. ಪ್ರ.ಶ.ಪೂ. 52ರಲ್ಲೇ ವರ್ಸಿಂಜೆಟೂರಿಕ್ಸ್ ಎಂಬಾತ ಗಾಲ್ ಪ್ರದೇಶದ ವಿವಿಧ ಪಂಗಡಗಳನ್ನೂ ಒಟ್ಟುಗೂಡಿಸಿ ರೋಮನ್ನರ ಅಧಿಕಾರವನ್ನು ತೊಡೆದು ಹಾಕಲು ಯತ್ನಿಸಿ ವಿಫಲನಾದ. ಸೀಸರ್ ಗಾಲ್‌ನ ಮೇಲೆ ನಡೆಸಿದ ಧಾಳಿಯಿಂದಾಗಿ ರೋಮನ್ ಸಾಮ್ರಾಜ್ಯಕ್ಕೆ ಅಟ್ಲಾಂಟಿಕ್ ಸಾಗರ, ಇಂಗ್ಲಿಷ್ ಕಾಲುವೆ, ರೈನ್ ನದಿ–ಇವು ಎಲ್ಲೆಗಳಾದುವು. ಮುಂದೆ ಗಾಲ್‌ನ ಸಂಘಟನೆಯ ಭಾರವನ್ನು ಹೊತ್ತ ಆಗಸ್ಟಸ್ ಆ ಪ್ರದೇಶವನ್ನು ನಾರ್ಬೊನೆನ್ಸಿಸ್, ಆಕ್ವಿಟೇನಿಯ, ಲಗ್ಡುನೆನ್ಸಿಸ್, ಬೆಲ್ಜಿಕ ಎಂದು ವಿಂಗಡಿಸಿದ. ನಾರ್ಬೊನೆನ್ಸಿಸ್ ಉಳಿದ ಗಾಲ್ ಪ್ರದೇಶಗಳಿಗಿಂತ ಭಿನ್ನವಾಗಿತ್ತು. ಅನೇಕ ರೋಮನ್ನರು ಇಲ್ಲಿ ನೆಲಸಿದ್ದರು. ಇಲ್ಲಿ ಅನೇಕ ನಗರಗಳೂ ಬೆಳೆದುವು. ಹಲವಾರು ಕಟ್ಟಡಗಳ ನಿರ್ಮಾಣವಾಯಿತು. ರೋಮನ್ ಸಾರ್ವಜನಿಕ ಜೀವನದಲ್ಲಿ ಖ್ಯಾತಿಗಳಿಸಿದ ಅನೇಕರು ಇಲ್ಲಿ ಹುಟ್ಟಿದರು.

ತಮ್ಮ ಆಳ್ವಿಕೆಯಲ್ಲಿ ರೋಮನ್ನರು ಕೆಲ್ಟ್ ಜನಾಂಗದ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಪಟ್ಟ ಯಾವ ವಿಷಯಕ್ಕೂ ಕೈಹಾಕಲಿಲ್ಲ. ಕೆಲ್ಟಿಕ್ ದೇವರುಗಳಿಗೆ ರೋಮನ್ ಹೆಸರುಗಳನಿಟ್ಟರೂ ಕೆಲ್ಟಿಕ್ ನೀತಿನಿಯಮಗಳೇ ಮುಂದುವರಿದುವು. ರೋಮನ್ ಆಡಳಿತದ ವಿರುದ್ಧವಾದ ದಂಗೆಗಳು ಕ್ರಮೇಣ ಕಡಿಮೆಯಾದುವು.

2–3ನೆಯ ಶತಮಾನಗಳಲ್ಲಿ ಗಾಲ್‌ನ ಎಲ್ಲೆಗಳ ಭದ್ರತೆ ಕಡಿಮೆಯಾಗತೊಡಗಿತು. ಬಹುಶಃ 257ರಲ್ಲಿ ಫ್ರಾಂಕರು ಗಾಲ್ ಪ್ರದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನುಗ್ಗಿದರು. ಪಾಸ್ಟ್ಯುಮಸ್ ಎಂಬವನು ಇವರ ಧಾಳಿಯನ್ನಡಗಿಸಿ ಸ್ವತಂತ್ರ ರೋಮನೀಕೃತ ರಾಜ್ಯ ಸ್ಥಾಪಿಸಿದ. ಪ್ರ.ಶ. 268ರಲ್ಲಿ ಸ್ಪೇನ್ ಮತ್ತು ನಾರ್ಬೊನೆನ್ಸಿಸ್ ಬೇರೆಯಾದರೂ 12ನೆಯ ಕ್ಲಾಡಿಯಸ್ ಪ್ರಭುತ್ವವನ್ನೊಪ್ಪಿದುವು. 3ನೆಯ ಶತಮಾನದ ಅಂತ್ಯದಲ್ಲಿ ಬಾಗೌಡೆ ಎಂಬ ದರೋಡೆಕಾರರ ಹಾವಳಿಗೆ ಇದು ತುತ್ತಾಗಿತ್ತು. ಮುಂದೆ ಆಗಿಂದಾಗ್ಗೆ ಇದು ಹೊರಗಿನವರ ಧಾಳಿಗೆ ಒಳಗಾತ್ತಿತ್ತು. 406ರ ಕೊನೆಯಲ್ಲಿ ವ್ಯಾಂಡಲರು ಮತ್ತು ಇತರರು ವ್ಯಾಪಕವಾಗಿ ಇದನ್ನು ಆಕ್ರಮಿಸಿಕೊಂಡರು. ಆದರೂ ಇದು ಬಹಳ ಕಾಲ ರೋಮನ್ ನಾಗರಿಕತೆಯ ಕೊತ್ತಲವಾಗಿ ಉಳಿದಿತ್ತು.

**ಸಿಸ್‌ಆಲ್ಪೈನ್ ಗಾಲ್ :** ಈ ಪ್ರದೇಶ ಕೆಲ್ಟಿಕ್ ಆಕ್ರಮಣಕ್ಕೆ ಯಾವಾಗ ಒಳಗಾಯಿತೆಂಬುದು ನಿರ್ವಿವಾದವಾಗಿ ಸ್ಥಾಪಿತವಾಗಿಲ್ಲ. ಕೆಲ್ಟರು ಪ್ರ.ಶ.ಪೂ. 5ನೆಯ ಶತಮಾನದಿಂದ ಈಚೆಗೆ ಬಂದಿರಲಾರರೆಂದು ಹೇಳಲಾಗಿದೆ. ಇವರು ಬ್ರೆನರ್ ಮೂಲಕ ಬಂದು ಎಟ್ರುಸ್ಕನ್ನರನ್ನು ಕದಲಿಸಿ ತಾವು ನೆಲಸಿದರು; ಪ್ರ.ಶ.ಪೂ. 390 ರಲ್ಲಿ ರೋಮನ್ ಸೈನ್ಯವನ್ನು ನಾಶಗೊಳಿಸಿದರು; ರೋಮನ್ನು ಪ್ರಹರಿಸಿದರು. ಆದರೆ ಇವರ ಅಂತಃಕಲಹ ದಿಂದಾಗಿಯೂ ಹೊರಗಿನವರೊಂದಿಗೆ ಇವರು ಕಾದಾಡಬೇಕಾಗಿದ್ದುದ ರಿಂದಲೂ ಇವರ ದಕ್ಷಿಣ ಯಾತ್ರೆ ಹೆಚ್ಚು ಫಲಿಸಲಿಲ್ಲ. ಪ್ರ.ಶ.ಪೂ. 287 ರಲ್ಲಿ ರೋಮ್ ಇವರನ್ನು ಸೋಲಿಸಿತು. ಗಾಲರ ದೊಡ್ಡ ಆಕ್ರಮಣ ಸೇನೆ ಪ್ರ.ಶ.ಪೂ. 225 ರಲ್ಲಿ ಭಾರಿ ಪೆಟ್ಟು ತಿಂದಿತು. 183ರ ವೇಳೆಗೆ ರೋಮ್ ಆಧಿಪತ್ಯ ಹೆಚ್ಚು ವಿಸ್ತರಿಸಿತು. ಮುಂದಿನ ಶತಮಾನದಲ್ಲಿ ಆಲ್ಪ್ಸ್ ಪ್ರದೇಶದಲ್ಲೂ ಅದು ಸ್ಥಿರವಾಯಿತು. ಪ್ರ.ಶ.ಪೂ. ಸು. 89ರಲ್ಲಿ ಸಿಸ್‌ಆಲ್ಪೈನ್ ಗಾಲ್ ಪ್ರಾಂತ್ಯ ಸ್ಥಾಪಿತವಾಯಿತು.

ಸಿಸ್‌ಆಲ್ಪೈನ್ ಗಾಲ್ ಪ್ರಾಂತ್ಯ ಹಲವು ಲ್ಯಾಟಿನ್ ಲೇಖಕರ ಬೀಡಾಗಿತ್ತು. ಮುಂದೆ ಇದು ವಾಸ್ತವವಾಗಿ ಇಟಲಿಯ ಭಾಗವಾಗಿ ಇದರ ಚರಿತ್ರೆ ರೋಮನ್ ಇತಿಹಾಸದಲ್ಲಿ ಸೇರಿಹೋಯಿತು. (ಟಿ.ಡಿ.ಪಿ.)

**ಗಾಲ್, ಫ್ರಾನ್ಸ್ ಯೋಸೆಫ್ :** 1758–1828. ದೇಹರಚನಾಶಾಸ್ತ್ರಜ್ಞ. ಜರ್ಮನ್ ದೇಶದವ. ವಿಯೆನ್ನದಲ್ಲಿ ವೈದ್ಯನಾಗಿ ಜೀವನ ನಡೆಸುತ್ತಿದ್ದ. ತಲೆ ಬುರುಡೆಯ ವಿನ್ಯಾಸವನ್ನು ಸೂಕ್ಷ್ಮವಾಗಿ ಗಮನಿಸಿ ವ್ಯಕ್ತಿಯ ಗುಣಸ್ವಭಾವಗಳನ್ನು ಹೇಳಬಹುದು, ಎಂದು ಈತನ ನಂಬಿಕೆ. ಕಪಾಲಸಾಮುದ್ರಿಕೆಯನ್ನು (ಫ್ರೆನಾಲಜಿ) ಕುರಿತು ವಿಯೆನ್ನದಲ್ಲಿ ಈತ ಅನೇಕ ಉಪನ್ಯಾಸಗಳನ್ನು ಕೊಟ್ಟ. ಮತಧರ್ಮಕ್ಕೆ ವಿರುದ್ಧವೆಂಬ ಕಾರಣದಿಂದ ಸರ್ಕಾರ ಇವನ ಭಾಷಣಗಳನ್ನು ಬಹಿಷ್ಕರಿಸಿತು (1802). ಅನಂತರ ಈತ ತನ್ನ ಸಹೋದ್ಯೋಗಿ ಯೋಹಾನ್ ಕ್ಯಾಸ್ಪರ್ ಸ್ಪರ್ಝ್‌ಹೈಮ್ (1776–1832) ಎಂಬ ಮನಃಶಾಸ್ತ್ರಜ್ಞನೊಂದಿಗೆ ಪ್ಯಾರಿಸ್ಸಿಗೆ ಬಂದು ನೆಲೆಸಿದ (1807). 1810–1819ರ ಕಾಲದಲ್ಲಿ ಈ ಇಬ್ಬರೂ ಕಲೆತು ಪ್ರಕಟಿಸಿದ ಕಪಾಲಸಾಮುದ್ರಿಕಾ ಸಂಬಂಧವಾದ ಗ್ರಂಥಗಳು ಆ ಕಾಲದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದುವು. 1822ರ ಸುಮಾರಿಗೆ ಗಾಲ್ ತನ್ನ ಸಂಶೋಧನೆಗಳಿಂದ, ಅಧ್ಯಯನದಿಂದ, ಪ್ರತಿಭೆಯಿಂದ ಕಪಾಲಸಾಮುದ್ರಿಕಾ ಶಾಸ್ತ್ರಕ್ಕೆ ಒಂದು ರೂಪ ಕೊಟ್ಟ. ಇದನ್ನು ಸ್ಪರ್ಝ್‌ಹೈಮ್ ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿ ಬಿತ್ತರಿಸಿದ. ಫ್ರೆನಾಲಜಿ ಎಂಬ ಪದವೂ ಈತನ ಸೃಷ್ಟಿಯೇ. ಈಗ ಈ ಶಾಸ್ತ್ರ ಶ್ರದ್ಧೇಯವಲ್ಲವೆಂದು ನಿರ್ಧರಿಸಿದ್ದಾರೆ. ಆದರೂ ಗಾಲ್ ದೇಹ ರಚನೆಯ ಸಂಬಂಧವಾಗಿ ಸ್ಪಷ್ಟಪಡಿಸಿದ ವಿವರಗಳು ನಿರ್ದುಷ್ಟವಾದುವು ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

'ಅನಾಟಮಿ ಅಂಡ್ ಫಿಸಿಯಾಲಜಿ ಆಫ್ ದಿ ನರ್ವಸ್ ಸಿಸ್ಟಮ್', 'ಫಿಲಾಸಫಿಕಲ್ ಮೆಡಿಕಲ್ ರೀಸರ್ಚಸ್ ಕನ್ಸರ್ನಿಂಗ್ ನೇಚರ್ ಅಂಡ್ ಸೈನ್ಸ್ ಇನ್ ಡಿಸೀಸ್ ಅಂಡ್ ಹೆಲ್ತ್'–ಇವು ಗಾಲನ ಎರಡು ಮುಖ್ಯ ಗ್ರಂಥಗಳು. (ಎಸ್.ಕೆ.ಆರ್.)

**ಗಾಲ್ ಮಿಡ್ಜ್ :** ಡಿಪ್ಟರ ಗಣದ ಸಿಸಿಡೊಮೈಯಿಡೆ ಕುಟುಂಬಕ್ಕೆ ಸೇರಿದೆ. ಹಲವು ಜಾತಿ ಮತ್ತು ಪ್ರಭೇದಗಳು ಹಲವು ತರಹದ ಸಸ್ಯಗಳಲ್ಲಿ ಬದುಕುತ್ತವೆ. ಬತ್ತದ ಮತ್ತು ಮುಸುಕಿನ ಜೋಳದ ಸಸ್ಯಗಳಲ್ಲಿ ಜೀವನ ಚರಿತ್ರೆಯನ್ನು ಸಾಗಿಸುವ ಮಿಡ್ಜ್‌ಗಳನ್ನು ಓರ್ಸಿಯೋಲಿಯ ಓರೈಝು, ಬಸವನ ಪಾದದ ಮರದಲ್ಲಿ ಬದುಕುವ ಮಿಡ್ಜ್‌ಗಳನ್ನು ಪ್ಯಾರಡಿಪ್ಲೋಸೀಸ್ ಟ್ಯಮಿಫೆಕ್ಸ್, ಕಿತ್ತಳೆ ಜಾತಿಯ ಗಿಡಗಳಲ್ಲಿ ಬೆಳೆಯುವವನ್ನು ಪ್ಯಾರಡಿಪ್ಲೋಸೀಸ್ ಲಾಂಜಿಫೈಲಾ ಎಂದು ಕರೆಯಲಾಗುತ್ತದೆ. ಹೇನುಗಳು ವಾಸಿಸುವ ಸಸ್ಯಗಳಲ್ಲಿಯೂ ಸಹ ಇವು ವಾಸಿಸುತ್ತವೆ. ಸಸ್ಯಗಳಲ್ಲಿ ಪ್ರೌಢ ಮಿಡ್ಜ್‌ಗಳು ಗಂಟು ಉಂಟುಮಾಡುತ್ತವೆ. ಹೆಣ್ಣು ಮಿಡ್ಜ್ ಕೆಂಪು ವರ್ಣದ ಉದರವನ್ನು ಹೊಂದಿದೆ. ಗಂಡಿನ ದೇಹವು ತಿಳಿಹಳದಿ ಅಥವಾ ಕಂದು ಬಣ್ಣದಿಂದ ಕೂಡಿರುತ್ತದೆ. ಸಾಮಾನ್ಯವಾಗಿ ಗಂಡು ಮಿಡ್ಜ್ ಹೆಣ್ಣಿಗಿಂತ ಚಿಕ್ಕದಾಗಿರುತ್ತದೆ. ಎರಡು ಜೊತೆ ರೆಕ್ಕೆಗಳನ್ನು ಹೊಂದಿದ್ದು 3 ರಿಂದ 3.5 ಮಿಮೀ ವಿಸ್ತಾರವಾಗಿರುತ್ತವೆ. ಗಂಡು ಮತ್ತು ಹೆಣ್ಣು ಎರಡೂ ಸಹ 10 ಕ್ಕಿಂತ ಹೆಚ್ಚು ಖಂಡಗಳಿರುವ ಮಣಿಸರದಾಕಾರದ ಸ್ಪರ್ಶಾಂಗಗಳನ್ನು ಹೊಂದಿವೆ. ನಿಶಾಚಾರಿಗಳಾಗಿದ್ದು ರಾತ್ರಿ ಸಮಯದಲ್ಲಿ ಸುಲಭವಾಗಿ ದೀಪದ ಬೆಳಕಿನ ಸಹಾಯದಿಂದ ಹಿಡಿಯಬಹುದು. ಕೊನೆಯ ಕೋಶಾವಸ್ಥೆಯಿಂದ (ಪ್ಯೂಪ) ಹೊರಬಂದ ತಕ್ಷಣವೆ ಪ್ರೌಢ ಮಿಡ್ಜ್‌ಗಳು ಸಮ್ಮಿಲನದಲ್ಲಿ (ಸಂತಾನಕ್ರಿಯೆ) ತೊಡಗುವುದು ಒಂದು ವಿಶಿಷ್ಟ ಲಕ್ಷಣ. ಆದರೆ ಹೆಣ್ಣು ಮಿಡ್ಜ್ ತನ್ನ ಜೀವಿತಾವಧಿಯಲ್ಲಿ ಒಂದೇ ಒಂದು ಬಾರಿ ಸಂತಾನಕ್ರಿಯೆಯಲ್ಲಿ ಭಾಗಿಯಾಗಿರುತ್ತದೆ. ಒಂದು ಹೆಣ್ಣು ಮಿಡ್ಜ್ 100–200 ಮೊಟ್ಟೆಗಳನ್ನು ಅದರ ಜೀವಿತಾವಧಿ ದಿವಸಗಳಲ್ಲಿ ಇಡುತ್ತದೆ. ಗಂಡು ಮಿಡ್ಜ್ ಮಾತ್ರ ಸಮ್ಮಿಲನ ಕ್ರಿಯೆಮುಗಿದ 12 ರಿಂದ 18 ಗಂಟೆಗಳ ಒಳಗೆ ಸಾಯುತ್ತದೆ. ಮೊಟ್ಟೆಗಳು ಉದ್ದವಾದ ಕೊಳವೆಯಾಕಾರದಲ್ಲಿರುತ್ತವೆ. ಆಗ ತಾನೇ ಹೊಸದಾಗಿ ಇಟ್ಟಿದ್ದ ಮೊಟ್ಟೆಗಳಲ್ಲಿ ವರ್ಣವೈವಿಧ್ಯವಿದೆ. ಶ್ವೇತ, ಗುಲಾಬಿ, ಕೆಂಪು ಮತ್ತು ಹಳದಿ ಬಣ್ಣಬರಬಹುದು. ಹುಳುಗಳು ಮೊಟ್ಟೆಯಿಂದ ಹೊರಬರುವ ಮುನ್ನ, ಆ ಮೊಟ್ಟೆಗಳು ಶಿಲಾರಾಶಿಯಂತೆ ಹೊಳೆಯುತ್ತಿರುತ್ತವೆ. ಒಂದು ಅಥವಾ 3–4 ಮೊಟ್ಟೆಗಳ ಗುಂಪುಗಳು ಬತ್ತದ ಚಿಗುರೊಡೆಯುವ ಗಿಣ್ಣುಗಳಲ್ಲಿ, ಎಲೆಯ ತಳದ ಭಾಗಗಳಲ್ಲಿ ಹಾಗೂ ಎಲೆಯ ಮೇಲ್ಭಾಗಗಳಲ್ಲಿ ಕಂಡು ಬರುತ್ತವೆ. ಮೊಟ್ಟೆಗಳ ಬೆಳವಣಿಗೆ 3–4 ದಿವಸಗಳಲ್ಲಿ ಮುಗಿಯುತ್ತದೆ.

ಮಿಡ್ಜ್‌ಗಳ ಕೋಶಾವಸ್ಥೆಯ ಮೊದಲ ಹುಳು ಕಾಲುಗಳಿಲ್ಲದ 1ಮಿಮೀ ಉದ್ದದ ಬೂದು ಅಥವಾ ಶ್ವೇತವರ್ಣದ್ದಾಗಿರುತ್ತದೆ. ಈ ಹುಳುಗಳು ಕಾಂಡದಲ್ಲಿ ಚಿಗುರು ಬರುವ ಅಥವಾ ಗಿಣ್ಣುಗಳಿರುವ ಜಾಗದಲ್ಲಿ ಆಹಾರಕ್ಕಾಗಿ ನೆಲೆಸಿರುತ್ತವೆ. ಒಂದು ಗಿಣ್ಣಿನಲ್ಲಿ ಒಂದು ಹುಳು ಮಾತ್ರ ಇರುತ್ತದೆ. ಈ ಹುಳುಗಳು ಗಿಣ್ಣಿನ ಬುಡವನ್ನು ತಿನ್ನುತ್ತಾ ಹೋಗುತ್ತವೆ. ಕೊನೆಗೆ ಕೊಳವೆಯಾಕಾರದ ಗಂಟು ಉತ್ಪತ್ತಿಯಾಗುತ್ತದೆ. ಈ ಗಂಟುಗಳು ಸಸ್ಯಗಳು ಚಿಗುರು ಒಡೆಯುವುದನ್ನು ಹಾಗೂ ಎಲೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಎಡೆಬಿಡದೆ ಚಿಗುರು ಒಡೆಯುವ ತಳವನ್ನು ಹಾಗೂ ಕಾಂಡವನ್ನು ತಿನ್ನುವ ಹುಳುವಿನಿಂದ ಗಂಟು ದೊಡ್ಡದಾಗುತ್ತಾ ಹೋಗುತ್ತದೆ. ಕೋಶಾವಸ್ಥೆಯ ಹುಳುಗಳ ಬೆಳವಣಿಗೆಯೂ 3–4 ಹಂತದಲ್ಲಿದ್ದು 15–20 ದಿವಸಗಳಲ್ಲಿ ಕೋಶಾವಸ್ಥೆಯ ಕೊನೆಯ ಹಂತ ತಲುಪುತ್ತವೆ.

ಕೋಶಾವಸ್ಥೆಯ ಕೊನೆಯ ಹಂತದ ಹುಳುವು ತಿಳಿ ಗುಲಾಬಿ ಬಣ್ಣದ್ದಾಗಿದ್ದು ಉದರವು ಮುಳ್ಳುಗಳಿಂದ ಆವೃತಗೊಂಡಿರುತ್ತದೆ. ಪ್ರೌಢಾವಸ್ಥೆಗೆ ಬರುವುದರೊಳಗೆ ಕೆಂಪುಬಣ್ಣಕ್ಕೆ ತಿರುಗುತ್ತದೆ. ಕೊನೆಯ ಹಂತದಲ್ಲಿ ಹುಳುಗಳು 2–2.5 ಮಿಮೀ ಉದ್ದ ಹಾಗೂ 0.6–0.8 ಮಿಮೀ ದಪ್ಪವಿರುತ್ತವೆ. ಈ ಕೊನೆಯ ಹಂತದ ಬೆಳವಣಿಗೆಯು 2–8 ದಿವಸಗಳಲ್ಲಿ ಮುಗಿದು ಪ್ರೌಢಾವಸ್ಥೆಯ ಮಿಡ್ಜ್‌ಗಳಾಗಿ ಬೆಳೆಯುತ್ತವೆ. ಈ ಎಲ್ಲಾ ಬೆಳವಣಿಗೆಗಳೂ ಸಸ್ಯಗಳ ಗಂಟಿನಲ್ಲಿಯೇ ನಡೆಯುತ್ತವೆ. (ಎಚ್.ಪಿ.ಜಿ.)

**ಗಾಲಕ, ವಿದ್ಯುತ್ ಅಲೆ :** ಒಂದು ವಿದ್ಯುನ್ಮಂಡಲದಲ್ಲಿ ಪ್ರವಹಿಸಬಹುದಾದ ಹಲವಾರು ಆವರ್ತಾಂಕಗಳ (ಫ್ರೀಕ್ವೆನ್ಸೀಸ್) ಪರ್ಯಾಯ ವಿದ್ಯುತ್ಪ್ರವಾಹಗಳ ನಡುವೆ ವಿಭೇದೀಕರಿಸಿ ಅನವಶ್ಯ ಆವರ್ತಾಂಕಗಳ ಪ್ರವಾಹದ ಮೊತ್ತವನ್ನು ಕ್ಷೀಣಿಸುವ ಹಾಗೂ ಅವಶ್ಯ ಆವರ್ತಾಂಕಗಳ ಪ್ರವಾಹವನ್ನು ಸರಾಗವಾಗಿ ಪ್ರವಹಿಸಲು ಅನುಮಾಡಿಕೊಡುವ ವಿದ್ಯುಜ್ಜಾಲ (ಎಲೆಕ್ಟ್ರಿಕ್ ವೇವ್ ಫಿಲ್ಟರ್). ರೇಡಿಯೋ, ದೂರವಾಣಿ, ದೂರಲೇಖಕ ಇತ್ಯಾದಿ ದೂರ ಸಂಪರ್ಕ ವಿಜ್ಞಾನಗಳಲ್ಲಿ (ಟೆಲಿಕಮ್ಯುನಿಕೇಷನ್ಸ್), ಎಲೆಕ್ಟ್ರಿಕ್ ಎಂಜಿನಿಯರಿಂಗ್ ವಿಭಾಗದಲ್ಲಿ ಮತ್ತು ಭೌತಶಾಸ್ತ್ರ ವಿಭಾಗದಲ್ಲಿ ಬಹಳವಾಗಿ ಉಪಯೋಗದಲ್ಲಿರುವ ವಿದ್ಯುತ್ ಅಲೆ ಗಾಲಕಗಳ ಉಪಯೋಗವನ್ನು ಮೊದಲು ಉಪಜ್ಞಿಸಿದವ ಜಿ.ಎ. ಕ್ಯಾಂಪ್‌ಬೆಲ್. ದೂರವಾಣಿಯ ವಿದ್ಯುದ್ವಾಹಕ ತಂತಿಗಳಲ್ಲಿ (ಜೋಡಿ ತಂತಿಗಳು) ಅನೇಕ ಸಂದರ್ಭಗಳಲ್ಲಿ ಪ್ರೇರಕಗಳನ್ನು (ಇಂಡಕ್ಟರ್ಸ್) ಶ್ರೇಣಿ ಸಂಯೋಜನೆಯಲ್ಲಿಯೂ (ಸೀರೀಸ್ ಕನೆಕ್ಷನ್) ಸಂಧಾರಿತ್ರಗಳನ್ನು (ಕ್ಯಪಾಸಿಟರ್ಸ್) ಸಮಾಂತರ ಸಂಯೋಜನೆಯಲ್ಲಿಯೂ (ಪ್ಯಾರಲರ್ ಕನೆಕ್ಷನ್) ಜೋಡಿಸಿರುತ್ತಾರೆ. ಅಂಥ ತಂತಿಗಳಿಗೆ ಭಾರಿತ ತಂತಿಗಳು (ಲೋಡೆಡ್ ಸ್ಟ್ರಿಂಗ್ಸ್) ಎಂದು ಹೆಸರು. ಯಾವುದೇ ವಿದ್ಯುತ್ ಸಂಪರ್ಕ ತಂತಿಗಳಲ್ಲಿ ಪ್ರವಹಿಸುವ ವಿದ್ಯುತ್ತಿನ ಮೊತ್ತ ಆ ತಂತಿಗಳ ಗುಣದಿಂದಾಗಿ ಕಡಿಮೆಯಾಗುತ್ತದೆ. ದೂರವಾಣಿಯ ತಂತಿಗಳಲ್ಲಿ ಪ್ರವಹಿಸುವ ವಿದ್ಯುತ್ಪ್ರವಾಹ ವಿವಿಧ ಆವರ್ತಾಂಕಗಳಿಂದ ಕೂಡಿರುವುದು. ಶ್ರವ್ಯ ಆವರ್ತಾಂಕಗಳು 20 ರಿಂದ 20,000 ಊದ ಗಳವರೆಗೆ ಇರುತ್ತವೆ. ಭಾರಿತ ತಂತಿಗಳಲ್ಲಿ ಪ್ರವಹಿಸುವ ವಿದ್ಯುತ್ಪ್ರವಾಹದಲ್ಲಿನ ಅಲ್ಪ ವಿದ್ಯುತ್ ಅಲೆಗಳ ಅಂದರೆ ಅಲ್ಪ ಆವರ್ತಾಂಕಗಳ ಕ್ಷೀಣತೆ ಕಡಿಮೆ ಇರುವುದನ್ನೂ ಉಚ್ಚ ವಿದ್ಯುತ್ ಅಲೆಗಳ ಅಂದರೆ ಉಚ್ಚ ಆವರ್ತಾಂಕಗಳ ಕ್ಷೀಣತೆ ಬಹಳವಾಗಿ ಇರುವುದನ್ನೂ ಕ್ಯಾಂಪ್‌ಬೆಲ್ ಗಮನಿಸಿದ. ಇದನ್ನು ಅನುಸರಿಸಿ ಕ್ಯಾಂಪ್‌ಬೆಲ್, ಝೋಬೆಲ್ ಮೊದಲಾದ ವಿಜ್ಞಾನಿಗಳು ನಡೆಸಿದ ಸಂಶೋಧನೆಯ ಪ್ರಕಾರ ಪ್ರೇರಕಗಳನ್ನೂ ಸಂಧಾರಿತ್ರಗಳನ್ನೂ ಸೂಕ್ತವಾಗಿ ಜೋಡಿಸಿದ ವಿದ್ಯುಜ್ಜಾಲಗಳು ವಿದ್ಯುತ್ ಅಲೆ ಗಾಲಕಗಳಾಗಿ ಕೆಲಸ ಮಾಡಬಹುದೆಂದು ತಿಳಿಯಿತು. ಇದಕ್ಕೆ ಸಂಬಂಧಿಸಿದ ತತ್ತ್ವಗಳ ಮತ್ತು ಸೂತ್ರಗಳ ಪ್ರಕಾರವೇ ಈಗ ಬಳಕೆಯಲ್ಲಿರುವ ವಿದ್ಯುತ್ ಅಲೆ ಗಾಲಕಗಳ ನಿರ್ಮಾಣ ನಡೆಯುತ್ತದೆ. ಗಾಲಕದಲ್ಲಿ ಪ್ರವಹಿಸುವ ಅಥವಾ ಗಾಲಕದಿಂದ ತಡೆಯಲ್ಪಡುವ ವಿದ್ಯುತ್ಪ್ರವಾಹ ಕೇವಲ ಒಂದೇ ಒಂದು ಆವರ್ತಾಂಕ ವಾಗಿರದೆ ಆವರ್ತಾಂಕಗಳ ಒಂದು ತಂಡವೇ ಆಗಿರುತ್ತದೆ. ಗಾಲಕ ರಚನೆಯಲ್ಲಿ ಈ ತಂಡದ ಆದಿ ಮತ್ತು ಅಂತ್ಯ ಆವರ್ತಾಂಕಗಳು ಮುಖ್ಯ.

ನ್ಯೂನಾತಿರಿಕ್ತವಾದ ಆದರ್ಶ ಗಾಲಕದಲ್ಲಿ ಪ್ರತಿರೋಧಕ ನಷ್ಟ (ರೆಸಿಸ್ಟೆನ್ಸ್ ಲಾಸ್) ಇರುವುದಿಲ್ಲವಾಗಿ ಪ್ರವಾಹೀ ತಂಡದ (ಪಾಸ್ ಬ್ಯಾಂಡ್) ವಿದ್ಯುತ್ತಿನ ಮೊತ್ತ ಸ್ವಲ್ಪವೂ ಕ್ಷೀಣಿಸುವುದಿಲ್ಲ. ಬಂಧಕ ತಂಡದ (ಸ್ಟಾಪ್ ಬ್ಯಾಂಡ್) ವಿದ್ಯುತ್ತಿನ ಮೊತ್ತ ಪೂರ್ಣವಾಗಿ ಇಲ್ಲವೆ ಅಗಾಧ ಗಾತ್ರದಲ್ಲಿ ಕ್ಷೀಣಿಸುತ್ತದೆ. ಗಾಲಕದಲ್ಲಿ ವಿದ್ಯುತ್ತಿನ ಮೊತ್ತ ಕ್ಷೀಣಿಸುತ್ತದೆ ಎನ್ನುವುದರ ಅರ್ಥ ಗಾಲಕದಿಂದ ಹೊರಬರುವ ವಿದ್ಯುತ್ಪ್ರವಾಹ $i_2$ ಗಾಲಕವನ್ನು ಪ್ರವೇಶಿಸುವ ವಿದ್ಯುತ್ಪ್ರವಾಹದ ಮೊತ್ತ $i_1$ ಕ್ಕಿಂತ ಕಡಿಮೆ ಇರುತ್ತದೆ ಎಂದು. ಈ ಎರಡು ವಿದ್ಯುತ್ಪ್ರವಾಹಗಳ ಸಂಬಂಧವನ್ನು $i_2=i_1 \exp(-\alpha)$ ಎಂದು ಸೂಚಿಸುತ್ತೇವೆ. ಇಲ್ಲಿ $\alpha$ ಕ್ಷೀಣತೆಯನ್ನು ಸೂಚಿಸುತ್ತದೆ. ಮೇಲಿನ ಸಮೀಕರಣದಲ್ಲಿ ವಿದ್ಯುತ್ಪ್ರವಾಹ ಕ್ಷೀಣತೆಯ ಜೊತೆಗೆ ತರಂಗದ ಪ್ರಾವಸ್ಥೆಯಲ್ಲಿನ (ಫೇಸ್) ಬದಲಾವಣೆಯನ್ನು ಕೂಡ ಗಮನಿಸಬೇಕಾಗುತ್ತದೆ.

ಪ್ರವಾಹಿತಂಡ (ಅಥವಾ ಬಂಧಕ ತಂಡ)ದಲ್ಲಿನ ಆದಿ ಮತ್ತು ಅಂತ್ಯ ಆವರ್ತಾಂಕಗಳ ಸ್ಥಾನಗಳನ್ನು ಗಮನದಲ್ಲಿಟ್ಟು ಗಾಲಕಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು: 1 ಅಲ್ಪ ಪ್ರವಾಹಿ ಗಾಲಕ (ಲೋ ಪಾಸ್ ಫಿಲ್ಟರ್); 2 ಉಚ್ಚ ಪ್ರವಾಹಿ ಗಾಲಕ (ಹೈ ಪಾಸ್ ಫಿಲ್ಟರ್); 3 ತಂಡ ಪ್ರವಾಹಿ ಗಾಲಕ (ಬ್ಯಾಂಡ್ ಪಾಸ್ ಫಿಲ್ಟರ್); 4 ತಂಡಬಂಧಕ ಗಾಲಕ (ಬ್ಯಾಂಡ್ ಸ್ಟಾಪ್ ಫಿಲ್ಟರ್). ತಂಡಬಂಧಕ ಗಾಲಕಗಳಿಗೆ ಅಲೆ ಬೋನುಗಳೆಂದು ಕೂಡ ಹೆಸರುಂಟು. ಈ ಗಾಲಕಗಳ ಸ್ಥೂಲ ವಿವರಣೆಯನ್ನು ಚಿತ್ರ (1)ರಲ್ಲಿ ತೋರಿಸಿದೆ.

ಅಲ್ಪ ಗಾಲಕ ಶೂನ್ಯ ಆವರ್ತಾಂಕದಿಂದ ಛೇದನ ಆವರ್ತಾಂಕ $f_c$ಯವರೆಗಿನ ವಿದ್ಯುತ್ಪ್ರವಾಹವನ್ನು ಕ್ಷೀಣಿಸುವುದಿಲ್ಲ ಮತ್ತು $f_c$ಯ ಮೇಲ್ಪಟ್ಟ ಆವರ್ತಾಂಕ ವಿದ್ಯುತ್ಪ್ರವಾಹವನ್ನು ಪೂರ್ಣವಾಗಿ ತಡೆಯುತ್ತದೆ (ಕ್ಷೀಣತೆ=$\infty$). ಉಚ್ಚ ಗಾಲಕ ಶೂನ್ಯದಿಂದ $f_c$ ಆವರ್ತಾಂಕದವರೆಗಿನ ವಿದ್ಯುತ್ಪ್ರವಾಹಕ್ಕೆ ಪೂರ್ಣ ತಡೆಯನ್ನು ಒಡ್ಡುತ್ತದೆ; ಮತ್ತು $f_c$ಗಿಂತ ಹೆಚ್ಚಿನ ಆವರ್ತಾಂಕದ (ಅನಂತ ಆವರ್ತಾಂಕದವರೆಗೂ) ವಿದ್ಯುತ್ಪ್ರವಾಹಕ್ಕೆ ಸ್ವಲ್ಪವೂ ತಡೆಯಿಲ್ಲದಂತೆ ಹರಿಯಗೊಡುತ್ತದೆ. ತಂಡ ಪ್ರವಾಹಿಗಾಲಕ $f_{c1}$ ಮತ್ತು $f_{c2}$ಗಳ (ಆದಿ ಮತ್ತು ಅಂತ್ಯ ಆವರ್ತಾಂಕಗಳು) ಮಧ್ಯದಲ್ಲಿನ ಆವರ್ತಾಂಕಗಳ ವಿದ್ಯುತ್ಪ್ರವಾಹವನ್ನು ಹರಿಯಲು ಬಿಟ್ಟು ಉಳಿದೆಲ್ಲ ವಿದ್ಯುತ್ಪ್ರವಾಹಗಳನ್ನೂ ಕ್ಷೀಣಿಸುತ್ತದೆ. ತಂಡಬಂಧಕ ಗಾಲಕ $f_{c1}$ ಮತ್ತು $f_{c2}$ಗಳ ನಡುವಿನ ಆವರ್ತಾಂಕದ ವಿದ್ಯುತ್ಪ್ರವಾಹಗಳ ವಿನಾ ಉಳಿದೆಲ್ಲವನ್ನೂ ಹರಿಯಗೊಡುತ್ತದೆ. $f_{c1}$ ಮತ್ತು $f_{c2}$ ಗಳನ್ನು ಕೆಳಗಿನ ಮತ್ತು ಮೇಲಿನ ಆವರ್ತಾಂಕಗಳೆಂದು ಕೂಡ ಕರೆಯುತ್ತಾರೆ.



ಚಿತ್ರ 1. (a) ಅಲ್ಪ ಪ್ರವಾಹಿಗಾಲಕ, (b) ಉಚ್ಚ ಪ್ರವಾಹಿ ಗಾಲಕ, (c) ತಂಡ ಪ್ರವಾಹಿ ಗಾಲಕ, (d) ತಂದ ಬಂಧಕ ಗಾಲಕ, $f$–ಆವರ್ತಾಂಕ, $fc$– ಛೇದನ ಆವರ್ತಾಂಕ. ಆದರ್ಶ ಗಾಲಕದ ಕ್ಷೀಣತೆಯನ್ನು ತುಂಡು ಗೆರೆಯಿಂದಲೂ ವ್ಯಾವಹಾರ್ಯ ಗಾಲಕದ ಕ್ಷೀಣತೆಯನ್ನು ಅಖಂಡ ಗೆರೆಯಿಂದಲೂ ತೋರಿಸಿದೆ.

ಬಳಕೆಯಲ್ಲಿರುವ ಗಾಲಕಗಳು ಮುಖ್ಯವಾಗಿ ಪ್ರೇರಕತ್ವ–ಧಾರಿತಗಳ (ಇಂಡಕ್ಟೆನ್ಸ್–ಕ್ಯಾಪಾಸಿಟೆನ್ಸ್ ಫಿಲ್ಟರ್ಸ್) ಜೋಡಣೆ ಯಿಂದಾದವುಗಳಾಗಿದ್ದು ಇವನ್ನು ನಿಚ್ಚಳಿಕೆ ಜಾಲ ಗಳೆಂದು (ಲ್ಯಾಡರ್ ನೆಟ್‌ವರ್ಕ್ಸ್) ಪರಿಗಣಿಸಿ ಇವು ಕೆಲಸ ಮಾಡುವ ವಿಧಾನವನ್ನು ವಿವರಿಸ ಬಹುದು. ಈ ವಿವರಣೆ ಯನ್ನು ಪರಿಶೀಲಿಸುವ ಮೊದಲು ಅಲ್ಪ ಮತ್ತು ಉಚ್ಚ ವಿದ್ಯುತ್ ಅಲೆ ಪ್ರವಾಹಿ ಗಾಲಕಗಳಾಗಿ ಮಾತ್ರ ಕೆಲಸ ಮಾಡುವ ಪ್ರತಿರೋಧತ್ವ–ಧಾರಿತ ಗಾಲಕಗಳ (ರೆಸಿಸ್ಟೆನ್ಸ್–ಕ್ಯಾಪಾಸಿಟೆನ್ಸ್ ಫಿಲ್ಟರ್ಸ್) ಜೋಡಣೆಯಿಂದ ನಿರ್ಮಿಸಬಹುದಾದ ಸುಲಭ ಗಾಲಕಗಳನ್ನು ಗಮನಿಸೋಣ. ಈ ಬಗೆಯ ಗಾಲಕಗಳನ್ನು ಮುಖ್ಯವಾಗಿ ರೇಡಿಯೋ ಗ್ರಾಹಿಯ (ರಿಸೀವರ್) ಅನೇಕ ಭಾಗಗಳಲ್ಲಿ ಉಪಯೋಗಿಸುತ್ತಾರೆ.

1. ಪ್ರತಿರೋಧತ್ವ–ಧಾರಿತ ಅಲೆಗಳು

(a) ಅಲ್ಪ ಪ್ರವಾಹಿ ಗಾಲಕ: ಚಿತ್ರ (2)ರಲ್ಲಿ ತೋರಿಸಿರುವ ಈ ಗಾಲಕವನ್ನು ರೇಡಿಯೋ ಸಂಧಾರಿತ್ರದಲ್ಲಿ ಧ್ವನಿ ನಿಯಂತ್ರಕವಾಗಿ (ಟೋನ್ ಕಂಟ್ರೋಲ್), ವಿದ್ಯುತ್




ಚಿತ್ರ 2. ಪ್ರತಿರೋಧತ್ವಧಾರಿತ ಅಲ್ಪ ವಿದ್ಯುತ್ ಅಲೆ ಪ್ರವಾಹಿ ಗಾಲಕ

ಪೂರೈಕೆ ಸಾಧನ ಮತ್ತು ಪ್ರವರ್ಧಕಗಳಲ್ಲಿ (ಆ್ಯಂಪ್ಲಿಫಯರ್ಸ್) ಬೇಡವಾದ ಪರ್ಯಾಯ ವಿದ್ಯುತ್ಪ್ರವಾಹವನ್ನು ಭೂಮಿಗೆ ಸೇರಿಸುವ ಸಾಧನವಾಗಿ ಉಪಯೋಗಿಸುತ್ತಾರೆ.

(b) ಉಚ್ಚ ಪ್ರವಾಹಿ ಗಾಲಕ: ಚಿತ್ರ (3)ರಲ್ಲಿ ಇವನ್ನು ತೋರಿಸಿದೆ.

2. ಪ್ರೇರಕತ್ವ–ಧಾರಿತ ಗಾಲಕಗಳು: ಇವುಗಳಲ್ಲಿ ಎರಡು ಮುಖ್ಯ ಪ್ರಭೇದಗಳಿವೆ – (a) ಸ್ಥಿರಾಂಕ– k ಗಾಲಕ (ಕಾನ್ಸ್ಟೆಂಟ್– k ಫಿಲ್ಟರ್); (b) m–ಸಾಧಿತ




ಚಿತ್ರ 3. ಪ್ರತಿರೋಧತ್ವ–ಧಾರಿತ ಉಚ್ಚ ವಿದ್ಯುತ್ ಅಲೆ ಪ್ರವಾಹಿ ಗಾಲಕ

ಗಾಲಕ (m–ಡಿರೈವ್ಡ್ ಫಿಲ್ಟರ್). ಇವನ್ನು ನಿಚ್ಚಳಿಕೆ ಜಾಲದ ಭಾಗಗಳೆಂದು ಪರಿಗಣಿಸಿ ಕೆಲಸ ಮಾಡುವ ರೀತಿಯನ್ನು ತಿಳಿಯುತ್ತೇವೆ. ಚಿತ್ರ 4 (a)ಯಲ್ಲಿ ತೋರಿಸಿರುವ



ಚಿತ್ರ 4. (a) ನಿಚ್ಚಳಿಕೆ ಜಾಲ, (b) T–ಭಾಗ (ಎಡಗಡೆ); T–ಭಾಗಗಳಿಂದ ಮಾಡಿದ ನಿಚ್ಚಳಿಕೆ ಜಾಲ (ಬಲಗಡೆ), (c) π–ಭಾಗ (ಎಡಗಡೆ); –π ಭಾಗಗಳಿಂದ ಮಾಡಿದ ನಿಚ್ಚಳಿಕೆ ಜಾಲ (ಬಲಗಡೆ)

ನಿಚ್ಚಳಿಕೆ ಜಾಲದಲ್ಲಿ $z_1$ ಮತ್ತು $z_2$ಗಳು ಪ್ರೇರಣಿಕ (ಇಂಡಕ್ಟಿವ್) ಅಥವಾ ಧಾರಿತ (ಕ್ಯಾಪಾಸಿಟಿವ್) ಪ್ರತಿಘಾತಗಳು (ರಿಆ್ಯಕ್ಟೆನ್ಸಸ್). $z_1$ ಮತ್ತು $z_2$ಗಳನ್ನು ಸೂಕ್ತವಾಗಿ ಆಯ್ಕೆ ಮಾಡಿ ಬೇರೆ ಬೇರೆ ಗಾಲಕಗಳನ್ನು (ಉದಾಹರಣೆಗೆ ಅಲ್ಪ ಅಲೆಪ್ರವಾಹಿ, ಉಚ್ಚ ಅಲೆ ಪ್ರವಾಹಿ ಇತ್ಯಾದಿ) ನಿರ್ಮಿಸಬಹುದು. ನಿಚ್ಚಳಿಕೆ ಜಾಲಗಳಿಗೆ ಸಂಬಂಧಿಸಿದ



ಚಿತ್ರ 5. ನಿಚ್ಚಳಿಕೆ ಜಾಲದಲ್ಲಿನ ವಿದ್ಯುತ್ಪ್ರವಾಹ

ಕೆಲವು ಪ್ರಮೇಯಗಳನ್ನೂ ಸೂತ್ರಗಳನ್ನೂ ತಿಳಿಯುವುದರಿಂದ ಗಾಲಕಗಳು ಕೆಲಸ ಮಾಡುವ ರೀತಿಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು.

ನಿಚ್ಚಳಿಕೆ ಜಾಲ ಹಲವಾರು ಸರ್ವಸಮ ಬಿಡಿ ಭಾಗಗಳನ್ನು ಸೇರಿಸಿದ ಸಂಘಟಿತ ಜಾಲ. ನಿಚ್ಚಳಿಕೆ ಜಾಲವನ್ನು *AA* ಅಥವಾ *BB*ಗಳಲ್ಲಿ (ಚಿತ್ರ 4) ಛೇದಿಸುವುದರಿಂದ ಜಾಲದ ಬಿಡಿ ಭಾಗಗಳು ಉಂಟಾಗುತ್ತವೆ. *AA* ಛೇದನವನ್ನು ಮಧ್ಯಶ್ರೇಣಿ ಛೇದನ (ಮಿಡ್‌ಸೀರೀಸ್ ಡಿವಿಶನ್) ಎಂದೂ ಇದರಿಂದ ಉಂಟಾಗುವ ಭಾಗಗಳನ್ನು *T*

ಭಾಗಗಳೆಂದೂ ಕರೆಯುತ್ತಾರೆ (ಚಿತ್ರ 4b). *BB* ಛೇದನವನ್ನು ಮಧ್ಯ ಶಾಖಾ ಛೇದನ (ಮಿಡ್‌ಶಂಟ್ ಡಿವಿಶನ್) ಎಂದೂ ಇದರಿಂದ ಉಂಟಾಗುವ ಭಾಗಗಳನ್ನು π ಭಾಗಗಳೆಂದೂ ಕರೆಯುತ್ತಾರೆ (ಚಿತ್ರ 4c). ನಿಚ್ಚಳಿಕೆ ಜಾಲದ ಒಂದು ತುದಿಗೆ ಜನಕ ಎಂದರೆ ಆಕರವನ್ನು (ಜನರೇಟರ್ ಆರ್‌ಸೋರ್ಸ್) ಜೋಡಿಸಿದಾಗ (ಚಿತ್ರ 5) ಜಾಲದಲ್ಲಿ ವಿದ್ಯುತ್ಪ್ರವಾಹ ಉಂಟಾಗುತ್ತದೆ. (ಬಿ.ಎಸ್.ಎನ್.ಪಿ.)

**ಗಾಲವ :** ವಿಶ್ವಾಮಿತ್ರನ ಶಿಷ್ಯರಲ್ಲಿ ಒಬ್ಬ. ವೇದಾಧ್ಯಯನ ಮುಗಿದ ಬಳಿಕ ಗುರುದಕ್ಷಿಣೆ ತೆಗೆದುಕೊಳ್ಳಬೇಕೆಂದು ವಿಶ್ವಾಮಿತ್ರನನ್ನು ಒತ್ತಾಯಪಡಿಸಿದ. ಮೊದಲು ಒಪ್ಪದಿದ್ದರೂ ಮೇಲಿಂದ ಮೇಲೆ ಬಲಾತ್ಕಾರ ಮಾಡಿದಾಗ ಗುರು ಶಿಷ್ಯನಿಗೆ ಒಂದು ಕಿವಿ ಮಾತ್ರ ಕಪ್ಪಾಗಿರುವ 800 ಬಿಳಿಯ ಕುದುರೆಗಳನ್ನು ತಂದೊಪ್ಪಿಸಬೇಕೆಂದು ಅಪ್ಪಣೆ ಮಾಡಿದ. ಭೂಲೋಕದಲ್ಲಿ ಎಲ್ಲೂ ಅಂಥ ಕುದುರೆಗಳು ಕಾಣಲಿಲ್ಲವಾಗಿ ಗಾಲವ ವಿಷ್ಣುವನ್ನು ಕುರಿತು ತಪಸ್ಸು ಮಾಡಿದ. ವಿಷ್ಣುವಿನ ಆಜ್ಞೆಯಂತೆ ಗರುಡ ಈತನನ್ನು ಯಯಾತಿ ರಾಜನಲ್ಲಿಗೆ ಕರೆತಂದು ಬಿಟ್ಟ. ಯಯಾತಿ ತನ್ನ ಮಗಳು ಮಾಧವಿಯನ್ನು ಗಾಲವನಿಗೆ ಒಪ್ಪಿಸಿ ಅವಳನ್ನು ಯಾವ ರಾಜನಿಗಾದರೂ ಕೊಟ್ಟು ಕುದುರೆಗಳನ್ನು ಸಂಪಾದಿಸಿಕೊಳ್ಳಬೇಕೆಂದು ತಿಳಿಸಿದ. ಪ್ರಸವಾನಂತರ ಮತ್ತೆ ತನ್ನ ಕನ್ಯತ್ವವನ್ನು ಪಡೆದುಕೊಳ್ಳುವ ವರವನ್ನೀಕೆ ಪಡೆದಿದ್ದಳು. ಗಾಲವ ಮಾಧವೀಯನ್ನು ಇಕ್ಷ್ವಾಕು ವಂಶದ ಹರ್ಯಶ್ವ, ದಿವೋದಾಸ, ಔಶೀರನೆಂಬ ರಾಜರುಗಳಿಗೆ ಒಪ್ಪಿಸಿ ತಲಾ 200 ಕುದುರೆಗಳಂತೆ 600 ಕುದುರೆಗಳನ್ನು ಸಂಪಾದಿಸಿದ. ಮಿಕ್ಕ 200 ಕುದುರೆಗಳಿಗೆ ಪ್ರತಿಯಾಗಿ ಮಾಧವಿಯನ್ನು ವಿಶ್ವಾಮಿತ್ರನಿಗೇ ಒಪ್ಪಿಸಿದ. ಈ ಉಲ್ಲೇಖ ಮಹಾಭಾರತದಲ್ಲಿದೆ.

ವಿಶ್ವಾಮಿತ್ರನ ಮಕ್ಕಳಲ್ಲಿ ಒಬ್ಬನ ಹೆಸರು ಗಾಲವ. ಒಮ್ಮೆ ಹನ್ನೆರಡು ವರ್ಷ ಕ್ಷಾಮ ಬಂದಾಗ ಭಿಕ್ಷಾವೃತ್ತಿಯನ್ನು ಬಯಸದ ವಿಶ್ವಾಮಿತ್ರ ಹೆಂಡತಿ ಮಕ್ಕಳನ್ನು ಬಿಟ್ಟು ಎಲ್ಲಿಯೋ ಹೊರಟುಹೋದ. ಆಗ ಆತನ ಹೆಂಡತಿ ತನ್ನ ಮಕ್ಕಳಲ್ಲಿ ಒಬ್ಬನನ್ನು ಮಾರಿ ಜೀವನ ನಡೆಸಬೇಕೆಂದು ಬಯಸಿ ಒಬ್ಬನ ಕುತ್ತಿಗೆಗೆ ದರ್ಭೆ ಹುರಿಯನ್ನು ಬಿಗಿದು ಕರೆದೊಯ್ಯುತ್ತಿದ್ದಳು. ನಡುದಾರಿಯಲ್ಲಿ ಸತ್ಯವ್ರತನೆಂಬ ಅರಸು ಇವಳನ್ನು ಸಂಧಿಸಿ ಸಮಾಚಾರ ತಿಳಿದು ಆ ಕುಟುಂಬದ ಹೊಣೆಯನ್ನು ತಾನು ಹೊರುವುದಾಗಿ ಅಭಯವಿತ್ತ. ಈ ರೀತಿ ಕುತ್ತಿಗೆಗೆ ಗಾಳ ಹಾಕಿಸಿಕೊಂಡವನಾದುದರಿಂದ ಈತನಿಗೆ ಗಾಲವನೆಂಬ ಹೆಸರಾಯಿತು. ಈ ವೃತ್ತಾಂತವನ್ನು ದೇವೀಭಾಗವತ, ವಾಯುಪುರಾಣ ಮುಂತಾದ ಕಡೆ ಉಲ್ಲೇಖಿಸಲಾಗಿದೆ. *

**ಗಾಲಿ :** ಲೋಹ, ಮರ ಇಲ್ಲವೇ ಇತರ ಗಡಸು ಪದಾರ್ಥಗಳಿಂದ ನಿರ್ಮಿಸಲ್ಪಟ್ಟ ವರ್ತುಲಾಕಾರದ ಚೌಕಟ್ಟು, ಪೂರ್ಣವಾಗಿ ಇಲ್ಲವೇ ಆಂಶಿಕವಾಗಿ ಘನವಾಗಿರಬಹುದು. ಕೇಂದ್ರದಲ್ಲಿ ಒಂದು ಗುಂಬವಿದ್ದು ಅಲ್ಲಿ ಸಂಗಮಿಸುವ ಮತ್ತು ಪರಿಧಿಯೆಡೆಗೆ ಅರೀಯವಾಗಿ ಅಪಹರಿಸುವ ಅರಗಳಿರಬಹುದು (ವೀಲ್). ಚಕ್ರ ಪರ್ಯಾಯ ನಾಮ. ಗಾಲಿಯ ಇತಿಹಾಸ ಪ್ರ.ಶ.ಪೂ. 6,500 ವರ್ಷಗಳಷ್ಟು ಹಳೆಯದು. ಮಾನವನ ಸಂಸ್ಕೃತಿಯ ಇತಿಹಾಸದಲ್ಲಿ ಗಾಲಿಯ ಪಾತ್ರ ವಿಶಿಷ್ಟವಾದುದೂ ಕ್ರಾಂತಿಕಾರಕವಾದುದೂ ಆಗಿದೆ. ಪ್ರಾಚೀನ ಮಾನವ ಜನಾಂಗ ಅಲೆಮಾರಿಯಾಗಿದ್ದು ಆಹಾರವನ್ನು ಹುಡುಕಿ ಸಂಪಾದಿಸುತ್ತಿದ್ದ ಕಾಲದಲ್ಲಿ ಆಹಾರ ಶೇಖರಣೆಯ ಆವಶ್ಯಕತೆಯೇ ಇರಲಿಲ್ಲ. ಆದರೆ ಕ್ರಮೇಣ ಆತ ಒಂದು ಕಡೆ ನೆಲೆನಿಂತು ತನ್ನ ಆಹಾರವನ್ನು ತಾನೇ ಬೆಳೆಸಲಾರಂಭಿಸಿದಾಗ ಹಾಗೆ ಬೆಳೆಸಿದ ಬೆಳೆಯನ್ನು ಶೇಖರಿಸಲು ಪಾತ್ರೆಗಳ ಆವಶ್ಯಕತೆ ಉಂಟಾಯಿತು. ಜೇಡಿಮಣ್ಣನ್ನು ಕಲಸಿ ಕೈಯಿಂದ ಸಣ್ಣ, ದೊಡ್ಡ ಮಡಿಕೆ, ಗಡಿಗೆ ಜಾಡಿಗಳನ್ನು ಮಾಡಿಕೊಳ್ಳುತ್ತಿದ್ದ. ಆದರೆ ಗಾಲಿಯನ್ನು ಸಮತಲವಾಗಿ ಕೆಳಗಿಟ್ಟು ತಿರುಗಿಸಿದಾಗ ಮಧ್ಯದ ಗುಂಬದಲ್ಲಿ ಮಣ್ಣನ್ನು ಎರೆದು, ತಿರುಗಿಸಿ ಹೆಚ್ಚು ನಯವಾದ, ಭದ್ರವಾದ ಮಡಿಕೆ ಮುಂತಾದ ಪಾತ್ರೆಗಳನ್ನು ಮಾಡಲು ಆತ ಕಲಿತ. ಹೀಗೆ ಮಾಡುವಾಗ ಕ್ರಮೇಣ ಅವನಲ್ಲಿ ಹುದುಗಿದ್ದ ಅಭಿರುಚಿ ಹೊಮ್ಮಿ ಅವುಗಳಿಗೆ ಬಣ್ಣ ಕೊಡುವುದನ್ನೂ ಅವುಗಳ ಮೇಲೆ ರೇಖಾ ಚಿತ್ರಗಳನ್ನು ಹೆಚ್ಚು ಕಲಾತ್ಮಕವಾಗಿ ಬಿಡಿಸುವುದನ್ನೂ ಆರಂಭಿಸಿದ. ಪುರಾತತ್ತ್ವ ಶೋಧಕರು ಪ್ರಾಚೀನಾವಶೇಷಗಳ ಕಾಲನಿರ್ಣಯ ಮಾಡುವಾಗ ನಿವೇಶನಗಳಲ್ಲಿ ದೊರೆತ ಮಡಿಕೆ ಮುಂತಾದ ಮೃತ್ಪಾತ್ರೆಗಳು ಕೈಯಿಂದ



**ಕುಂಬಾರಚಕ್ರ – ಉಪಯೋಗದ ಹಂತದಲ್ಲಿ**




**ವಿವಿಧ ಬಗೆಯ ಗಾಲಿಗಳು : 1. ಒಡ್ಡರ ಬಂಡಿಯ ಗಾಲಿ, 2. ಉರ್ ಗಾಲಿ, ಸುಮೇರಿಯ (ಪ್ರ.ಶ.ಪೂ. 2500), 3. ಪ್ರ.ಶ.ಪೂ. 16ನೆಯ ಶತಮಾನದ ಈಜಿಪ್ಷಿಯನ್ ಗಾಲಿ, 4. ರಥದ ಗಾಲಿ, 5. ಎಟ್ರಸ್ಕನ್ ಗಾಲಿ (ಪ್ರ.ಶ.ಪೂ. 5ನೆಯ ಶತಮಾನ), 6. ಮರದ ಗಾಡಿಯ ಗಾಲಿ, 7. ಮೊಟ್ಟಮೊದಲ ಮೋಟಾರ್ ಕಾರೊಂದರ ಚಕ್ರ, 8. ರೈಲ್ವೆ ಎಂಜಿನಿನ ಚಕ್ರ**

ಮಾಡಿದವೇ ಅಥವಾ ಕುಂಬಾರನ ಚಕ್ರದಿಂದ ಮಾಡಿದವೇ ಎಂಬುದನ್ನು ಸಹ ಗಮನಿಸುತ್ತಾರೆ. ಕುಂಬಾರನ ಮಡಿಕೆ ಪ್ರ.ಶ.ಪೂ. 6,500–5,500 ರಷ್ಟು ಪ್ರಾಚೀನವಾಗಿದೆ. ಚಕ್ರದ ಉಪಯೋಗವನ್ನು ಅರಿತ ಬಳಿಕ ಅದನ್ನೇ ಒಂದು ಕಸಬನ್ನಾಗಿ ಮಾಡಿಕೊಂಡವರು ಕುಂಬಾರರು. ಕುಂಬಾರನ ಚಕ್ರ ಸಾಂಸ್ಕೃತಿಕ ಪಯಣ ಒಂದು ವಿಶಿಷ್ಟ ಘಟ್ಟವನ್ನು ಸೇರಿದುದರ ಕುರುಹೆಂದು ಹೇಳಬಹುದು.



ಅಶೋಕ ನಿರ್ಮಿತ ಸಾರಾನಾಥ ಶಿಲಾಸ್ತಂಭದ ಸಿಂಹಪೀಠದ ಅಡಿಯಲ್ಲಿ ವೃಷಭ–ಆನೆಗಳ ನಡುವೆ ಇರುವ ಅಶೋಕ ಚಕ್ರ

ಬಂಡಿಗಳಿಗೆ ಚಕ್ರದ ಉಪಯೋಗವಂತೂ ತಿಳಿದೇ ಇದೆ. ಮರದ ಕಾಂಡವನ್ನು ಕಡಿದು ಎರಡು ತುದಿಗಳ ಅಚ್ಚುಗಳನ್ನು ಕೆತ್ತಿ ಆ ಅಚ್ಚುಗಳಿಗೆ ಚಕ್ರಗಳನ್ನು ಜೋಡಿಸಿದಾಗ ಇವು ವೇಗವಾಗಿ ಹೋಗುವ ಪಯಣದ ಬಂಡಿಗಳಾದವು. ಪ್ರಾಚೀನ ಕಾಲದಲ್ಲಿ ಇವನ್ನು ಮಾಡಿತ್ತಿದ್ದುದರಿಂದ ಅತಿ ಪ್ರಾಚೀನವಾದ ಗಾಡಿ, ಎಂದರೆ ಗಾಡಿಯ ಚಕ್ರ, ಯಾರ ಕೊಡುಗೆ ಎಂದು ಹೇಳಲಾಗದು. ಹರಪ್ಪ ಸಂಸ್ಕೃತಿಯ ಕಾಲವಾದ ಪ್ರ.ಶ.ಪೂ. 2500 ಕ್ಕೂ ಮೊದಲೇ ಈ ಚಕ್ರಗಳ ಅರಿವು ಅಂದಿನವರಿಗಿತ್ತು. ಪ್ರ.ಶ.ಪೂ. 2500 ಕ್ಕೂ ಹಿಂದಿನ ಸುಮೇರಿಯನ್ ಸಂಸ್ಕೃತಿಯಲ್ಲೂ ಗಾಡಿಗಳ ಉಪಯೋಗವಿತ್ತು. ಇದಕ್ಕೂ ಹಿಂದಿನ ನವಶಿಲಾಯುಗದ ಕಾಲಕ್ಕೆ ಗಾಲಿಯ ಪ್ರಯೋಜನದ ಅರಿವು ಆ ಜನರಿಗಿತ್ತೇ ಎಂಬುದನ್ನು ಹೇಳಲಾಗದು. ಆದರೆ ಕುಂಬಾರನ ಚಕ್ರದ ಅರಿವಿದ್ದ ಈಜಿಪ್ಟ್ ಜನರಿಗೆ ಸುಮಾರು ಪ್ರ.ಶ.ಪೂ. 1650 ರ ವರೆಗೂ ಗಾಲಿಯ ಉಪಯೋಗವನ್ನು ಕುರಿತು ಏನೂ ತಿಳಿದಿರಲಿಲ್ಲವೆಂಬುದು ಆಶ್ಚರ್ಯಕರ ಸಂಗತಿ. ಚಕ್ರದ ಭಾವನಾತ್ಮಕ ಉಪಯೋಗವನ್ನು ಪಡೆದವರು ಭಾರತೀಯರು. ಬುದ್ಧ ತನ್ನ ಧರ್ಮವನ್ನು ಸಾರುವುದನ್ನು ಧರ್ಮಚಕ್ರ ಪ್ರವರ್ತನವೆಂದು ಕರೆಯಲಾಗಿದೆ. ಧರ್ಮವನ್ನು ಒಂದು ಚಕ್ರಕ್ಕೆ ಹೋಲಿಸಿ ಚಕ್ರ ಅವಿಚ್ಛಿನ್ನವಾಗಿ ತಿರುಗುತ್ತಿರುವಂತೆ ಬುದ್ಧ ಈ ಧರ್ಮಚಕ್ರವನ್ನು ಮೊದಲು ನಡೆಸಿದನಂತೆ. ಈ ಪ್ರತೀಕವನ್ನು ತಳೆದಿರುವಂತೆ ಇಂಥ ಚಕ್ರಗಳನ್ನು ಮೇಲು ಭಾಗದಲ್ಲಿ ಹೊತ್ತಿದ್ದ ಸುಮಾರು ಮೂವತ್ತು ಶಿಲಾಸ್ತಂಭಗಳನ್ನು ಅಶೋಕ ತನ್ನ ರಾಜ್ಯದ ಬೇರೆ ಬೇರೆ ಕಡೆ ನಿಲ್ಲಿಸಿದ. ಒಂದೊಂದು ಕಂಬದ ಮೇಲೂ ಸಾಮಾನ್ಯವಾಗಿ ಒಂದು ಚೌಕಾಕೃತಿಯ ಕಲ್ಲು, ಅದರ ಮೇಲೆ ಪೀಠ, ಅದರ ಮೇಲೆ ಚಕ್ರಾಕಾರದ ಇನ್ನೊಂದು ಕಲ್ಲು, ಅದರ ಸುತ್ತಲೂ ಹಂಸಗಳ, ವೃಷಭಗಳ, ಲತೆಗಳ ಸಾಲು, ಈ ಚಕ್ರದ ಮೇಲೆ ಒಂದು ವಿಗ್ರಹ ಇವು ಅಶೋಕನ ಸ್ತಂಭಗಳಲ್ಲಿ ನಾವು ಕಾಣುವ ವಿವರಗಳು. ಮೇಲುಭಾಗದ ವಿಗ್ರಹ ಸಿಂಹ, ವೃಷಭ, ಆನೆ, ಕುದುರೆ ಮುಂತಾದ ಯಾವುದಾದರೂ ಪ್ರಾಣಿಯದಾಗಿದ್ದು ಅವು ನಾಲ್ಕು ದಿಕ್ಕಿಗೆ ನಾಲ್ಕು ಮುಖಗಳನ್ನು ತೋರಿಸುತ್ತಿದ್ದವು. ಇವು ಧರ್ಮ ಸ್ತಂಭಗಳೆನಿಸಿವೆ. ಇವುಗಳ ಮೇಲೆ ಕಾಣುವುದೇ ಧರ್ಮಚಕ್ರ. ಸಾರಾನಾಥದಲ್ಲಿ ಇಂಥ ಕಂಬವೊಂದರ ಮೇಲೆ ನಾಲ್ಕು ಸಿಂಹಗಳನ್ನು ತೋರಿಸಲಾಗಿದೆ. ಭಾರತ ಧರ್ಮರಾಷ್ಟ್ರ, ಧರ್ಮಕ್ಷೇತ್ರವೆಂದು ಸಾರಲೆಂಬ ಭಾರತದ ರಾಜಚಿಹ್ನೆಯಾಗಿ ಈ ಸ್ತಂಭವನ್ನು ಸರ್ಕಾರ ಬಳಸುತ್ತಿದೆ. (ಜಿ.ಬಿ.ಆರ್.)

ಪ್ರಾಚೀನತಮ ಗಾಲಿಗಳು, ಒಡ್ಡರ ಬಂಡಿಯ ಚಕ್ರಗಳಂತೆ, ಉಂಡೆಗಾಲಿಗಳು. ಉದಾಹರಣೆಗೆ ಮೆಸಪೊಟೇಮಿಯಾದ ಕೀಷ್ ಮತ್ತು ಸೂಸ ಎಂಬಲ್ಲಿ ದೊರೆತಿರುವ ಮಾದರಿಗಳು ಹೀಗಿವೆ. ಅವನ್ನು ಮೂರು ಮರದ ತುಂಡುಗಳಿಂದ ಮಾಡಲಾಗಿತ್ತು. ಮಧ್ಯದ ಮರದಲ್ಲಿ ಗುಂಬವಿದ್ದು (ಹಬ್) ಅದರ ಮೂಲಕ ಅಕ್ಷ ಎಂದರೆ ಇರಚಿ (ಆ್ಯಕ್ಸಲ್) ಹಾದುಹೋಗುತ್ತಿತ್ತು. ಇವುಗಳಿಗೆ ಪ್ರತ್ಯೇಕ ನೇಮಿ (ಫೆಲ್ಲಿ) ಇರುತ್ತಿರಲಿಲ್ಲ. ಇಂಥ ಗಾಲಿಗಳು ದಪ್ಪವಾಗಿಯೂ ತೂಕವಾಗಿಯೂ ಇದ್ದುದರಿಂದ ಯುದ್ಧ ಕಾರ್ಯದ ರಥಗಳಿಗೆ ಅನುಪಯುಕ್ತವಾದ್ದವು. ಆದ್ದರಿಂದ ಗಾಲಿಗಳ ಉಪಯೋಗ ಬಲು ಸೀಮಿತವಾಗಿತ್ತು. ಪ್ರ.ಶ.ಪೂ. 3500 ರ ಕಾಲದ್ದೆಂದು ಹೇಳಲಾಗುವ ನಾಲ್ಕು ಗಾಲಿಗಳ ರಥವೊಂದು ಕತ್ತೆಗಳಿಂದ ಮತ್ತು ಎತ್ತುಗಳಿಂದ ಎಳೆಯಲ್ಪಡುತ್ತಿರುವ ಮಾದರಿಯೊಂದು ಕೀಷ್‍ನಲ್ಲಿ ದೊರೆತಿವೆ. ಪ್ರ.ಶ.ಪೂ. 2000 ದ ಹೊತ್ತಿಗೆ ಅರಳಿಗಳಿರುವ (ಸ್ಪೋಕ್ಸ್) ಗಾಲಿಗಳ ಉಪಜ್ಞೆಯಾಗಿ (ಇನ್‍ವೆನ್ಷನ್) ಹಳೆಯ ಗಾಲಿಗಳು ಮರೆಯಾದವು. ಮೆಸಪೊಟೇಮಿಯ, ಪರ್ಷಿಯ ಮತ್ತು ಟರ್ಕಿ ಪ್ರಾಂತಗಳಲ್ಲಿ ರೂಢಿಗೆ ಬಂದ ಅರದ ಗಾಲಿಗಳು ಪ್ರ.ಶ.ಪೂ. 1600 ರ ವೇಳೆಗೆ ಈಜಿಪ್ಟ್ ಮತ್ತು ಕ್ರೀಟ್ ದ್ವೀಪಗಳಲ್ಲಿಯೂ ಪ್ರ.ಶ.ಪೂ. 1300 ರ ಹೊತ್ತಿಗೆ ಚೀನದಲ್ಲಿಯೂ ಪ್ರ.ಶ.ಪೂ. 1000 ದ ವೇಳೆಗೆ ಉತ್ತರ ಯುರೋಪಿನಲ್ಲಿಯೂ ಪ್ರ.ಶ.ಪೂ. 500 ರ ಹೊತ್ತಿಗೆ ಬ್ರಿಟನ್ನಿನಲ್ಲಿಯೂ ಕಾಣಿಸಿಕೊಂಡವು. ಈ ಗಾಲಿಗಳು ಗುಂಬ, ನೇಮಿ ಮತ್ತು ಅರಗಳಿಂದ ಕೂಡಿರುತ್ತಿದ್ದವು. ನೇಮಿ ಮತ್ತು ಗುಂಬಗಳನ್ನು ಅರಗಳು ಕೂಡಿಸುತ್ತಿದ್ದವು. ನೇಮಿಯ ಹೊರಭಾಗಕ್ಕೆ ಚರ್ಮದ ಅಥವಾ ಲೋಹದ ಪಟ್ಟಿಯನ್ನು ಕೂಡಿಸಲಾಗುತ್ತಿತ್ತು. ಕೇಂದ್ರದಲ್ಲಿರುವ ಗುಂಬದಿಂದ ಹೊರಡುವ ಅರಗಳು ಸಮಸಂಖ್ಯೆಯಲ್ಲಿದ್ದು ನೇಮಿಯನ್ನು ಸೇರುತ್ತಿದ್ದವು. ನಾಲ್ಕು ಅರಗಳಿರುವ ಗಾಲಿಗಳು ಬೊಹಿಮಿಯಾ ಮತ್ತು ಡೆನ್ಮಾರ್ಕ್ ಪ್ರದೇಶಗಳಲ್ಲಿ ರಚಿತವಾದುವು. ರೋಮನ್ ಯುಗದಲ್ಲಿದ್ದ ಸೆಲ್ಟಿಕ್ ಗಾಲಿ ಪ್ರವೀಣರು 14 ಅರಗಳುಳ್ಳಗಾಲಿ ಗಳನ್ನು ರಚಿಸಿದ್ದರು. ನೇಮಿಯ ಹೊರಭಾಗಕ್ಕೆ ಕಾಯಿಸಿದ ಲೋಹದ ಪಟ್ಟಿಯನ್ನು ಕೂರಿಸಿ ಅದನ್ನು ತಣಿಸಿದಾಗ ನೇಮಿಯನ್ನು ಈ ಪಟ್ಟಿ ಬಿಗಿಯಾಗಿ ಅಪ್ಪಿಕೊಳ್ಳುತ್ತಿತ್ತು. ಪ್ರಾರಂಭದಲ್ಲಿ ನೇಮಿಯನ್ನು ಒಂದೇ ಮರದ ತುಂಡಿನಿಂದ ಮಾಡುತ್ತಿದ್ದರು. ಅದನ್ನು 6–7 ಮರದ ತುಂಡುಗಳಿಂದ ಅಷ್ಟೇ ಅರಗಳಿರುವಂತೆ ರಚಿಸುತ್ತಿದ್ದುದ್ದೂ ಇತ್ತು. ನೇಮಿ ಭೂಮಿಯ ಮೇಲೆ ಉರುಳುವಾಗ ಅದರ ಮೇಲೆ ಬಿದ್ದ ತೂಕ ಅರಗಳ ಮೂಲಕ ಅಕ್ಷದ ಮೇಲೆಯೂ ಬೀಳುತ್ತದೆ. ಹೀಗಾಗಿ ಗುಂಬಗಳ ರಂಧ್ರ ಕಾಲಕ್ರಮೇಣ ಸವೆದು ದೊಡ್ಡದಾಗುವುದು. ಇದನ್ನು ತಪ್ಪಿಸಲು ಸೆಲ್ಟಿಕ್ ಪ್ರವೀಣರು ಬೇರಿಂಗುಗಳ (ಅಚ್ಚಿನ ಧಾರಕಗಳು) ಉಪಯುಕ್ತತೆಯನ್ನು ಕಂಡುಕೊಂಡರು. ಗುಂಬದಲ್ಲಿ ಉದ್ದಕ್ಕೆ ಕಾಲುವೆಗಳಂತೆ ಕೊರೆದು ಅವುಗಳಲ್ಲಿ ಮರದ ತುಂಡುಗಳನ್ನು ಸೇರಿಸುತ್ತಿದ್ದರು. ಇವು ಗುಂಬದ ದ್ವಾರ ಮತ್ತು ಇರಚಿಯ ಮಧ್ಯೆ ತಿರುಗುತ್ತಿದ್ದವು. ರೋಮನ್ನರು ಮರದ ತುಂಡುಗಳ ಬದಲು ಕಂಚಿನ ಉಂಗುರಗಳನ್ನು ಬಳಕೆಗೆ ತಂದರು. ಇದೇ ಇಂದಿನ ಬುಷ್ ಮಾದರಿಯ ಬೇರಿಂಗುಗಳ ಉಪಜ್ಞೆಗೆ ಕಾರಣವಾಯಿತು. ಅರದ ಗಾಲಿಗಳು ಹಗುರವಾಗಿಯೂ ಗಟ್ಟಿಯಾಗಿಯೂ ಇದ್ದುದರಿಂದ ಅವನ್ನು ಸಾಗಣೆ ಕಾರ್ಯಗಳಲ್ಲಿ ಹೆಚ್ಚಾಗಿ ಬಳಸಿಕೊಳ್ಳಲಾಯಿತು. ಮಧ್ಯ ಯುಗದಲ್ಲಿ ಕೆಲವು ದೇಶಗಳು ರಸ್ತೆ ಹಾಳಾಗುವುದೆಂಬ ಕಾರಣಕ್ಕಾಗಿ ಲೋಹದ ಪಟ್ಟಿಗಳಿರುವ ಗಾಲಿಗಳನ್ನು ನಿಷೇಧಿಸಿದ್ದವು.




ಗಾಲಿಗಳು (ಇತರ ಬಗೆಯವು) : 1. ಬೈಸಿಕಲ್ ಚಕ್ರ, 2. ಬಸ್ಸಿನ ಚಕ್ರ, 3. ಎತ್ತಿನ ಗಾಡಿಯ ಚಕ್ರ, 4. ಟ್ರ್ಯಾಕ್ಟರ್ ಚಕ್ರ

ಪ್ರಸಕ್ತ ಶತಮಾನವನ್ನು ಗಾಲಿಗಳ ಯುಗ ಎಂದು ಸಾರ್ಥಕವಾಗಿ ಹೆಸರಿಸಬಹುದು. ಕೈಗಾರಿಕೆಗಳ ಯಾಂತ್ರೀಕರಣ ಗಾಲಿಗಳ ಉಪಯೋಗವನ್ನು ಅನಿವಾರ್ಯವನ್ನಾಗಿಸಿದೆ. ಯಾವ ಕಾರ್ಖಾನೆಯೇ ಆಗಲಿ ಗಾಲಿ ಇಲ್ಲದೆ ಇರಲು ಸಾಧ್ಯವೇ ಇಲ್ಲ. ಪ್ರತಿಯೊಂದು ಯಂತ್ರದಲ್ಲಿಯೂ ಚಾಲಕ, ಚಾಲಿತ, ಅನುಚಾಲಿತ, ವೇಗವರ್ಧಕ, ವೇಗಪಾತಕ ಮೊದಲಾದ ಗಾಲಿಗಳಲ್ಲಿ ಒಂದಲ್ಲ ಒಂದು ಇದ್ದೇ ಇರುತ್ತದೆ. ಬಸ್ಸು, ಕಾರು ಮೊದಲಾದ ವಾಹನಗಳಲ್ಲಿ ರಬ್ಬರ್ ಗಾಲಿಗಳ ಜೊತೆಗೆ ಗಿಯರು ಚಕ್ರವೇ ಮೊದಲಾದ ಗಾಲಿ ಪ್ರತಿರೂಪಗಳು ಇದ್ದೇ ಇರುತ್ತವೆ. ಗಾಲಿಗಳ ಕ್ಷೇತ್ರದಲ್ಲಿ ಕಪ್ಪಿ (ಪುಲ್ಲಿ), ನಿಯಂತ್ರಕ (ಫ್ಲೈಹ್ವೀಲ್) ,ಮತ್ತು ಗಿಯರು ಚಕ್ರಗಳ ಉಪಜ್ಞೆ ಯಂತ್ರಸಾಮರ್ಥ್ಯದ ವ್ಯಾಪ್ತಿಯ ದಿಗಂತವನ್ನು ಬಹುದೂರಕ್ಕೆ ತಳ್ಳಿಬಿಟ್ಟವೆ. ಎತ್ತಿನ ಗಾಡಿಯಿಂದ ಹಿಡಿದ ಅತ್ಯಂತ ಸಂಕೀರ್ಣಯಂತ್ರದವರೆಗೂ ಗಾಲಿಯ ಉಪಯೋಗ ಸರ್ವವ್ಯಾಪಿಯಾಗಿದೆ. (ಎಂ.ಆರ್.ಕೆ.)

**ಗಾಲಿನ, ಜೆಸಿಂತೊ :** 1852–97. ಇಟಲಿಯ ನಾಟಕಕಾರ. ಗಾಲ್ಡೋನಿಯ **(ನೋಡಿ– ಗಾಲ್ಡೋನಿ, ಕಾರ್ಲೊ)** ಅನಂತರ ಬರಿದಾಗಿದ್ದ ರಂಗಭೂಮಿಯನ್ನು ಪುನಶ್ಚೇತನಗೊಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇಪ್ಪತ್ತು ವರ್ಷ ತುಂಬುವುದಕ್ಕೆ ಮುಂಚೆಯೇ ಈತ ಸಾಂಪ್ರದಾಯಿಕವೂ ಆಡಂಬರಯುತವೂ ಆದ ಎರಡು ನಾಟಕಗಳನ್ನು ಇಟಾಲಿಯನ್ ಭಾಷೆಯಲ್ಲಿ ಬರೆದನಾದರೂ ಅವು ಹೆಚ್ಚು ಬಳಕೆಗೆ ಬರಲಿಲ್ಲ. ನಾಟಕಕಾರನಾಗುವುದಕ್ಕೆ ಮುಂಚೆ ಈತ ಕೆಲವು ಕಾಲ ನಟನಾಗಿಯೂ ರಂಗಭೂಮಿಯ ಮೇಳವಾದ್ಯದಲ್ಲಿ ಸೆಲ್ಲೋ ವಾದಕನಾಗಿ ಕೆಲಸಮಾಡುತ್ತಿದ್ದ. ಸಾಹಸಿ ರಂಗಮಂದಿರವೊಂದರ ವ್ಯವಸ್ಥಾಪಕನೊಬ್ಬ ಇವನ ಪ್ರತಿಭೆಯನ್ನು ಗುರುತಿಸಿ ವೆನೀಷಿಯನ್ ಭಾಷೆಯಲ್ಲಿ (ವೆನಿಸ್ಸಿನ ಪ್ರಾಂತಭಾಷೆ) ನಾಟಕ ಬರೆಯಲು ಪ್ರೇರೇಪಿಸಿದ. ಸ್ವಲ್ಪ ಕಾಲದಲ್ಲೇ ಇವನ ಹೆಸರು ಪ್ರಸಿದ್ಧವಾಯಿತು. ಸುಮಾರು ಏಳು ವರ್ಷ ಗಾಲಿನ ವೆನಿಸ್ಸಿನ ರಂಗಭೂಮಿಯ ಮೇಲೆ ಅತ್ಯಂತ ಪ್ರಸಿದ್ಧ ನಾಟಕಕಾರ ಎನಿಸಿಕೊಂಡ. ಗಾಲಿನ ಮೊಟ್ಟಮೊದಲ ಗಾಲ್ಡೋನಿಯ ಹರ್ಷನಾಟಕಗಳನ್ನು ಚೆನ್ನಾಗಿ ಅಭ್ಯಸಿಸಿ, ಮನನ ಮಾಡಿಕೊಂಡು ಆ ಮೇಲೆ ತನ್ನದೇ ಆದ ಕೃತಿಗಳನ್ನು ರಚಿಸಿದ. ಇವನ ನಾಟಕಗಳಲ್ಲಿ ಗಾಲ್ಡೋನಿಯ ಪ್ರಭಾವ ಸ್ಪಷ್ಟವಾಗಿದ್ದರೂ ನಾಟಕ ವಸ್ತು ಹಾಗೂ ಪಾತ್ರ ವಿನ್ಯಾಸದಲ್ಲಿ ವೈವಿಧ್ಯ, ಸ್ವಂತಿಕೆ ಇವೆ ಎನ್ನುತ್ತಾರೆ. ಈತ ತನ್ನ ಪ್ರತಿಯೊಂದು ನಾಟಕದಲ್ಲೂ ಸಮಕಾಲೀನ ವೆನಿಸ್ ನಾಗರಿಕ ಸಮಾಜದ ಹೃದಯವಿಹೀನತೆಯನ್ನೂ ದುರಾಸೆ, ದೌರ್ಬಲ್ಯಗಳನ್ನೂ ವಿಡಂಬನೆ ಮಾಡಿದ್ದಾನೆ; ಹಳೆಯ ಸಂಪ್ರದಾಯ ಹಾಗೂ ಹೊಸಕಾಲದ ಪ್ರವೃತ್ತಿಗಳ ಸಂಘರ್ಷವನ್ನು ಚಿತ್ರಿಸಿದ್ದಾನೆ. ಇವನ ಹಾಸ್ಯಪ್ರಧಾನವಾದ ನಾಟಕಗಳಲ್ಲೂ ಪ್ರಹಸನಗಳಲ್ಲೂ ಗಂಭೀರ ಚಿಂತನೆ ಇದೆ. ಸುಖ ದುಃಖಗಳ ನೆರಳು ಬೆಳಕಿನ ಚಲ್ಲಾಟವಿದೆ. ದಿ ಹಾರ್ಟ್ಸ್ ಐಸ್ ಎನ್ನುವ ನಾಟಕದಲ್ಲಿ ಬರುವ ಟೆರೆಸಾ ಎಂಬ ಹೃದಯವಂತಳಾದ ಕುರುಡ ವೃದ್ಧೆಯ ಪಾತ್ರ ಅಂತಃಕರಣವನ್ನು ಅರಳಿಸುವಂತಿದೆ. ಈತ ತನ್ನ ಜೀವಿತಕಾಲದ ಕೊನೆಯಲ್ಲಿ ಬರೆದ ವಾಸ್ತವಿಕ (ರಿಯಲಿಸ್ಟಿಕ್) ನಾಟಕಗಳಲ್ಲಿ ಸೂಕ್ಷ್ಮವಾದ ಕಲಾವಂತಿಕೆ, ಪರಿಪಕ್ವವಾದ ಚಿಂತನೆ ಕಾಣಿಸುತ್ತದೆ. ವ್ಯಕ್ತಿ ಹಾಗೂ ಸಮುದಾಯದ ಸಂಬಂಧವನ್ನು ಹೆಚ್ಚು ವ್ಯಗ್ರದೃಷ್ಟಿಯಿಂದ ಈತ ಚಿತ್ರಿಸಿದ್ದಾನೆ. ಹಣ ಹೇಗೆ ಮನುಷ್ಯರ ಅಂತರಂಗವನ್ನು ಕಳಂಕಗೊಳಿಸುತ್ತದೆ ಎನ್ನುವುದೇ ಇವನ ಎಲ್ಲ ನಾಟಕಗಳ ವಸ್ತು. ಆದರೆ ಅವುಗಳಲ್ಲಿ ಸೊಗಸಾದ ವೈವಿಧ್ಯವಿದೆ. ಸಾಯುವುದಕ್ಕೆ ಮುಂಚೆ ಈತ ಅರ್ಧಂಬರ್ಧ ಬರೆದು ಬಿಟ್ಟು ಹೋದ ಸೆನ್ಸ ಬರ್ಸೋಲ (ದಿಕ್ಸೂಚಿ ಇಲ್ಲದ) ಎನ್ನುವ ನಾಟಕದಲ್ಲಿ ಹಣವೇ ಸರ್ವಸ್ವ ಎಂಬ ನಂಬಿಕೆಗೆ ವಿರೋಧವಾಗಿ ನಡೆಯುವ ಮಾನವೀಯ ವ್ಯಕ್ತಿಯೊಬ್ಬನ ದುರಂತವಿದೆ. ಆ ನಾಟಕದ ಒಂದು ವಾಕ್ಯವನ್ನು ವೆನಿಸ್ ನಾಟಕಕಾರರು ಆಗಾಗ ನೆನೆಯುತ್ತಾರೆ. ಸದುದ್ದೇಶವುಳ್ಳವರಿಗೂ ಸತ್ಯವಂತರಿಗೂ ಕಾಲವಿಲ್ಲವೆನ್ನುವುದು ಸುಳ್ಳು. ಭವಿಷ್ಯ ಜಗತ್ತು ಅಂಥವರಿಗೇ ಸೇರಿದ್ದು. ಆದರೆ ಅವರು ಸ್ವಹಿತವನ್ನು ಬದಿಗೊತ್ತಿ ಶಿಲುಬೆ ಹೊತ್ತು ಅದನ್ನು ರಕ್ಷಿಸಲು (ಲೋಕಕಾರುಣ್ಯಕ್ಕಾಗಿ) ಧೈರ್ಯ ಹಾಗೂ ಹುರುಪಿನಿಂದ ಹೋರಾಡಬೇಕಾಗುತ್ತದೆ.

ಗಾಲಿನ ಬರೆದ ನಾಟಕಗಳಲ್ಲಿ ಉನ ಫ್ಯಮೇಜಿಯ ಇನ್ ರೋವಿನ, ಜೆಂತೆ ರೆಫಾದ, ಮಿಯಫಿಯ ಮತ್ತು ಲ ಫಮೇಜಿಯ ಎನ್ನುವುವು ಪ್ರಸಿದ್ಧವಾಗಿವೆ. (ಎಚ್.ಕೆ.ಆರ್.)

**ಗಾಲಿಬ್, ಮಿರ್ಜ಼ಾ :** 1797–1869. ಉರ್ದು ಮತ್ತು ಪರ್ಷಿಯನ್ ಭಾಷೆಗಳಲ್ಲಿ ಕೃತಿ ರಚನೆ ಮಾಡಿರುವ ಪ್ರಸಿದ್ಧ ಕವಿ. ಈತನ ಪೂರ್ಣ ಹೆಸರು ಮಿರ್ಜ಼ಾ ಅಸದುಲ್ಲಾಹ್ ಬೇಗ್ ಖಾನ್ ಅಲಿಯಾಸ್ ಮಿರ್ಜ಼ಾ ನವ್‌ಷಾಹ್. ಗಾಲಿಬ್ ಎನ್ನುವುದು ಕಾವ್ಯನಾಮ. ಕೊನೆಯ ಮೊಗಲ್ ಚಕ್ರವರ್ತಿ ಬಹಾದುರ್ ಷಾ ಜ಼ಫರ್ ಈತನಿಗೆ ನಜ್ಮುದ್ ದೌಲ. ದಬೀರ್–ಉಲ್–ಮುಲ್ಕ್, ನಿಜಾಮ್ ಜಂಗ್ ಬಹಾದೂರ್–ಎಂಬ ಬಿರುದುಗಳನ್ನು ಕೊಟ್ಟಿದ್ದ.

ಈತ ಜನಿಸಿದ್ದು ಆಗ್ರದಲ್ಲಿ. ಬಾಲ್ಯದಲ್ಲಿ ಈತನಿಗೆ ಸಮರ್ಥ ವಿದ್ವಾಂಸನೊಬ್ಬನಿಂದ ಪರ್ಷಿಯನ್ ಮತ್ತು ಅರಬ್ಬೀ ಭಾಷೆಗಳಲ್ಲಿ ಶಿಕ್ಷಣ ದೊರೆಯಿತು. ಹದಿಮೂರನೆಯ ವರ್ಷದಲ್ಲಿಯೇ ಲೋಹಾರೂ ರಾಜಮನೆತನದ ಕನ್ಯೆಯೊಬ್ಬಳೊಡನೆ ಈತನಿಗೆ ವಿವಾಹವಾಯಿತು. ಹದಿನಾರನೆಯ ವರ್ಷದ ಹೊತ್ತಿಗೆ ದೆಹಲಿಗೆ ಬಂದು ಅಲ್ಲಿಯೇ ಶಾಶ್ವತವಾಗಿ ನೆಲೆಸಿದ. ಈತನ ತಂದೆ ಮತ್ತು ಚಿಕ್ಕಪ್ಪ ಸೈನಿಕರಾಗಿದ್ದರು. ಇವರ ಶೌರ್ಯ ಪರಾಕ್ರಮಗಳಿಗಾಗಿ ಬ್ರಿಟಿಷರು ಇವರಿಗೆ ಜಹಗೀರಿಯೊಂದನ್ನು ಕೊಟ್ಟಿದ್ದರು. ಮುಂದೆ ಇದನ್ನು ಕುಟುಂಬ ಪಿಂಚಣಿಯಾಗಿ ಪರಿವರ್ತಿಸಲಾಯಿತು. ಈತನಿಗೂ 750 ರೂ. ಗಳ ವಾರ್ಷಿಕ ಪಿಂಚಣಿ ದೊರೆಯುತ್ತಿತ್ತು. ದೆಹಲಿಯಲ್ಲಿ ಈತನಿಗೆ ಕವಿಗಳ, ವಿದ್ವಾಂಸರ ಮತ್ತು ಸೂಫಿ ಸಂತರ ಸಹವಾಸ ದೊರೆಯಿತು. ಇದು ಈತನ ಕಾವ್ಯ ರಚನೆಯ ಮೇಲೆ ತನ್ನದೇ ಆದ ಪ್ರಭಾವ ಬೀರಿತು. 1850ರಲ್ಲಿ ತೈಮೂರ್ ವಂಶದ ಚರಿತ್ರೆಯನ್ನು ಬರೆಯಲು ಮಾಹೆಯಾನ ಐವತ್ತು ರೂ. ಗಳ ವೇತನದ ಮೇಲೆ ಬಹಾದೂರ ಷಾ ಈತನನ್ನು ನೇಮಕ ಮಾಡಿಕೊಂಡ. ಮಹಾಕವಿ ಜಾಕನ ನಿಧನಾನಂತರ ಬಹಾದುರ್ ಷಾನಿಗೆ ಈತನೇ ಕಾವ್ಯ ಶಿಕ್ಷಾಚಾರ್ಯನಾದ. ಈತನನ್ನು ಆಸ್ಥಾನದ ಮಹಾಕವಿಯನ್ನಾಗಿಯೂ ಮಾಡಲಾಯಿತು. ಮುಂದೆ ಈತ ರಾಜಕುಮಾರರಿಗೆಲ್ಲ ಕಾವ್ಯ ಗುರುವಾದ. ಕೆಂಪುಕೋಟೆಯಲ್ಲಿ ನಡೆಯುತ್ತಿದ್ದ ಕವಿ ಸಮ್ಮೇಳನಗಳಲ್ಲೂ ಈತ ಭಾಗವಹಿಸುತ್ತಿದ್ದ. ಲಖನೌದ ನವಾಬನಾಗಿದ್ದ ವಾಜಿದ್



ಅಲಿ ಷಾನೂ ಈತನ ಪ್ರತಿಭೆಯನ್ನು ಗುರುತಿಸಿ, ಈತನಿಗೆ ವರ್ಷಾಶನವನ್ನು ಗೊತ್ತುಪಡಿಸಿದ. ಲಖನೌ ಕವಿಗಳ ಆಹ್ವಾನದ ಮೇಲೆ 1826ರಲ್ಲಿ ಈತ ಲಖನೌಗೆ ತೆರಳಿ ಅಲ್ಲಿ ಐದು ತಿಂಗಳ ಕಾಲ ತಂಗಿದ್ದ; ಸ್ವಾತಂತ್ರ್ಯದ ಪ್ರಥಮ ಸಮರದ (ಸಿಪಾಯಿದಂಗೆ) ಪರಿಣಾಮವಾಗಿ ಈತ ತುಂಬ ತೊಂದರೆಗೆ ಒಳಗಾದ. ಕೆಲವು ವರ್ಷಗಳಿಂದ ಸರ್ಕಾರ ಪಿಂಚಣಿ ನೀಡಿಕೆಯನ್ನೂ ನಿಲ್ಲಿಸಿತು. ಈ ಅವಧಿಯಲ್ಲಿ ತನ್ನ ಕಾವ್ಯಗುರುವಾಗಿ ನೇಮಿಸಿಕೊಂಡು ಮಾಸಾಶನವನ್ನು ಗೊತ್ತುಪಡಿಸುವುದರ ಮೂಲಕ ರಾಂಪುರದ ನವಾಬ ಈತನ ನೆರವಿಗೆ ಬಂದ; ಕವಿಯು ಆಜೀವಪರ್ಯಂತ ಈ ವ್ಯವಸ್ಥೆ ಮುಂದುವರಿಯಿತು. ಕೆಲವು ವರ್ಷಗಳ ಬಳಿಕ ಬ್ರಿಟಿಷ್ ಸರ್ಕಾರವೂ ಪಿಂಚಣಿ ನೀಡಿಕೆಯನ್ನು ಮತ್ತೆ ಪ್ರಾರಂಭಿಸಿತು. ಇಷ್ಟಾದರೂ ಜೀವನಪರ್ಯಂತ ಈತ ಆರ್ಥಿಕ ಸಂಕಷ್ಟಗಳಿಗೆ ಒಳಗಾಗಿಯೇ ಇದ್ದ. ಬ್ರಿಟಿಷ್ ಸಕಾರದ ಪಿಂಚಣಿ ಮತ್ತು ರಾಂಪುರದ ನವಾಬರು ನೀಡುತ್ತಿದ್ದ ಮಾಸಾಶನ ಇಷ್ಟಲ್ಲದೆ ಇವನಿಗೆ ಬೇರೆ ಆದಾಯವಿರಲಿಲ್ಲ. ಮೊಗಲ್ ಆಸ್ಥಾನದ ವೇತನ, ಲಖನೌ ನವಾಬರ ವರ್ಷಾಸನ, ಕಾವ್ಯ ಶಿಕ್ಷೆಯನ್ನು ಪಡೆಯುತ್ತಿದ್ದ ಶಿಷ್ಯವರ್ಗ ತಂದು ಕೊಡುತ್ತಿದ್ದ ಗುರುದಕ್ಷಿಣೆ – ಇವೆಲ್ಲ ತಾತ್ಕಾಲಿಕವೂ ಅಲ್ಪಪ್ರಮಾಣದವೂ ಆಗಿದ್ದುವು. ದೆಹಲಿಯಲ್ಲಿದ್ದಷ್ಟು ಕಾಲವೂ ಸಾಲಿಗರಿಂದ ಅತಿಯಾದ ಬಡ್ಡಿಯ ಮೇಲೆ ಪಡೆದ ಸಾಲದಿಂದಲೇ ಈತ ಜೀವನ ನಿರ್ವಹಿಸಬೇಕಾಯಿತು. ಜೂಜಾಡುತ್ತಿದ್ದುದಕ್ಕಾಗಿ 1847 ರಲ್ಲಿ ಈತನನ್ನು ಮೂರು ತಿಂಗಳ ಕಾಲ ಜೈಲಿಗೆ ಹಾಕಲಾಗಿತ್ತು. ಈತನ ಏಳು ಮಕ್ಕಳೂ ಬಾಲ್ಯದಲ್ಲಿಯೇ ಕಾಲವಾದರು. ಹುಚ್ಚನಾಗಿದ್ದ ಈತನ ಪ್ರೀತಿಯ ಸೋದರ ಮಿರ್ಜ಼ಾ ಯೂಸುಫ್ 1857ರಲ್ಲಿ ತೀರಿಕೊಂಡ. ಭಾವಮೈದುನನಂತೂ ತನ್ನ ತಾರುಣ್ಯದಲ್ಲೇ ಗತಿಸಿದ. ಇಂಥ ಸುಖ ದುಃಖಗಳನ್ನು ಕಂಡ ಗಾಲಿಬ್ 1869ರ ಫೆಬ್ರವರಿ 15 ರಂದು ತನ್ನ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ವಿಧಿವಶನಾದ. ದೆಹಲಿಯಲ್ಲಿ ಈತನನ್ನು ಸಮಾಧಿ ಮಾಡಲಾಯಿತು.

15 ಫೆಬ್ರವರಿ 1969ರಂದು ಭಾರತದಲ್ಲಿ ಮತ್ತು ವಿಶ್ವದ ಇತರ ವಿದ್ವತ್ ಕೇಂದ್ರಗಳಲ್ಲಿ ಗಾಲಿಬ್ ಶತಮಾನೋತ್ಸವವನ್ನು ಆಚರಿಸಲಾಯಿತು. ಭಾರತೀಯ ಅಂಚೆ ಇಲಾಖೆ ಇದರ ಸ್ಮರಣಾರ್ಥವಾಗಿ ಅಂಚೆಚೀಟಿಯೊಂದನ್ನು ಹೊರಡಿಸಿತು. ಗಾಲಿಬ್ ಅಕಾಡೆಮಿಯೂ ಸೇರಿದಂತೆ ಹಲವಾರು ಸ್ಮಾರಕಗಳನ್ನು ಸ್ಥಾಪಿಸಲಾಯಿತು. ಈತನ ಜೀವನ ಮತ್ತು ಕೃತಿಗಳನ್ನು ಕುರಿತು ಹಲವಾರು ಭಾಷೆಗಳಲ್ಲಿ ಗ್ರಂಥಗಳು ಬೆಳಕು ಕಂಡವು.

ಉರ್ದು ಮತ್ತು ಪರ್ಷಿಯನ್ ಭಾಷೆಗಳಲ್ಲಿ ಗಾಲಿಬ್ ಸುಮಾರು ಹನ್ನೆರಡು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಕೆಲವು ಗದ್ಯರಚನೆಗಳು: ಉಳಿದವು ಪದ್ಯರಚನೆಗಳು. ಅವುಗಳಲ್ಲಿ ಮುಖ್ಯವಾದವು ಇವು:

1 ಮೆಹ್ರ್ ಎ ನಿಮ್ ರೋಜ್ (ತೈಮೂರ್ ವಂಶದ ಚರಿತ್ರೆ – ಪರ್ಷಿಯನ್ ಭಾಷೆಯಲ್ಲಿ)

2 ದಸ್ತಂಬೂ – 1857ರಲ್ಲಿ ನಡೆದ ಘಟನೆಗಳು ವಿವರಣೆ

3 ಕಾತಿ ಎ ಬುರ್ಹನ್ – ಪರ್ಷಿಯನ್ ನಿಘಂಟು

4 ಉರ್ದು ಎ ಮು ಅಲ್ಲಾ

5 ಊದ್ ಎ ಹಿಂದೀ

ಇವೆರಡೂ ಗಾಲಿಬ್ ತನ್ನ ಮಿತ್ರರಿಗೆ ಮತ್ತು ಶಿಷ್ಯರಿಗೆ ಬರೆದ ಪತ್ರಗಳ ಸಂಕಲನಗಳು

6 ಕುಲ್ಲಿಯಾತ್ ಎ ನಜ಼್ಮ್ ಎ ಫಾರ್ಸಿ – ಪರ್ಷಿಯನ್ ಕವಿತೆಗಳ ಸಂಕಲನ
7 ದೀವಾನ್ – ಉರ್ದು ಕವಿತೆಗಳ ಸಂಕಲನ

ಮೊಗಲರು ಭಾರತಕ್ಕೆ ಮೂರು ಕೊಡುಗೆಗಳನ್ನು – ಅಂದರೆ, ಉರ್ದು, ತಾಜ್‌ಮಹಲ್ ಮತ್ತು ಗಾಲಿಬ್ – ಬಿಟ್ಟು ಹೋಗಿದ್ದಾರೆಂದು ಹೇಳಿರುವುದು ಸೂಕ್ತವಾಗಿಯೇ ಇದೆ. ಭಾರತದ ಉರ್ದು ಕವಿಗಳಲ್ಲಿ ಗಾಲಿಬ್‌ನಿಗೆ ವಿಶಿಷ್ಟ ಸ್ಥಾನ ದೊರೆತಿದೆ. ಈತ ಸ್ವತಃ ಒಂದು ಮನೋಧರ್ಮ, ಒಂದು ಯುಗ ಮತ್ತು ಒಂದು ಜಗತ್ತೇ ಆಗಿದ್ದ. ಘನ ವಿದ್ವಾಂಸನಾಗಿದ್ದ ಈತನ ಅಧ್ಯಯನ ವ್ಯಾಪ್ತಿ ವಿಶಾಲವಾಗಿತ್ತು. ಅಮೀರ್ ಖುಸ್ರು ಹೊರತಾಗಿ ಭಾರತದ ಬೇರಾವ ಪರ್ಷಿಯನ್ ಕವಿಯನ್ನಾಗಲೀ ಲೇಖಕನನ್ನಾಗಲೀ ಈತ ಮಾನ್ಯ ಮಾಡಿರಲಿಲ್ಲ. ಉರ್ದು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೀರ್ ಒಬ್ಬನನ್ನೂ ಮಾತ್ರ ಈತ ಗೌರವಿಸುತ್ತಿದ್ದ ಹಾಗೂ ತನ್ನನ್ನೇ ಶಿಷ್ಟತೆಯ ಮಾನದಂಡವೆಂದು ಭಾವಿಸಿದ್ದ. ಪರ್ಷಿಯನ್ ಭಾಷೆಯಲ್ಲಿ ಭವ್ಯವಾದ ಕವನಗಳನ್ನು ರಚಿಸಿದರೂ ಉರ್ದು ಭಾಷೆಯಲ್ಲಿ ರಚಿಸಿದ ಪತ್ರಗಳು ಮತು ಭಾವಗೀತೆಗಳೇ ಈತನಿಗೆ ಸ್ಥಾನಮಾನಗಳನ್ನು ತಂದುಕೊಟ್ಟವು. ಮೀರ್‌ನನ್ನು ಬಿಟ್ಟರೆ, ಈತನೇ ಉರ್ದು ಸಾಹಿತ್ಯದ ಮಹಾನ್ ಕವಿ. ಉರ್ದು ಪತ್ರಸಾಹಿತ್ಯದಲ್ಲಂತೂ ಈತನದು ಅದ್ವಿತೀಯ ಸ್ಥಾನ. ಮೊದಲಿಗೆ ಈತ ಅಸದ್ ಎಂಬ ಕಾವ್ಯನಾಮದಿಂದ ಬರೆದನಾದರೂ ಮುಂದೆ ಗಾಲಿಬ್ ಎಂಬ ಹೆಸರನ್ನು ಸ್ಥಿರವಾಗಿ ಬಳಸಿದ. ವಾಸ್ತವವಾಗಿ ಇವೆರಡೂ ನಾಲ್ಕನೆಯ ಕಲೀಫ್ ಹಾಗೂ ಪವಿತ್ರ ಪ್ರವಾದಿಯ ಅಳಿಯನಾಗಿದ್ದ ಅಲೀಯ ಬಿರುದುಗಳಾಗಿದ್ದವು. ಮೊದಲಿಗೆ ಈತ ಪ್ರಸಿದ್ಧ ಭಾರತೀಯ ಕವಿಯಾದ ಬೇದಿಲ್‌ನನ್ನು ಅನುಕರಿಸುತ್ತಿದ್ದ. ಅದರೆ ಈ ಶೈಲಿ ಕೊಂಚ ಗೊಂದಲಕ್ಕೆಡೆಮಾಡಿಕೊಟ್ಟಿತು. ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ದೀವಾನ್ ಅನ್ನು ಪರಿಷ್ಕರಿಸಿದ. ಈತನ ಅನೇಕ ಕೃತಿಗಳು ಈತನ ಜೀವಮಾನದಲ್ಲಿಯೇ ಪ್ರಕಟವಾದುವು. ದೀವಾನ್ ಸುಮಾರು ಐದು ಆವೃತ್ತಿಗಳನ್ನು ಕಂಡಿತು. ಇದರಲ್ಲಿ ಎರಡು ಸಾವಿರದ ಪದ್ಯಗಳಿವೆ. ಇದೇ ಈತನ ಅತ್ಯಂತ ಮಹತ್ತ್ವಪೂರ್ಣ ಕೃತಿ. ತನ್ನ ಆಶ್ರಯದಾತರು, ಆಂಗ್ಲ ಗವರ್ನರುಗಳು ಮತ್ತು ವಿಕ್ಟೋರಿಯ ಮಹಾರಾಣಿಯವರನ್ನು ಕುರಿತ ಪ್ರಶಂಸಾತ್ಮಕ ಪದ್ಯಗಳನ್ನು ಪರ್ಷಿಯನ್ ಕವಿತೆಗಳ ಸಂಕಲನದಲ್ಲಿ ಕಾಣಬಹುದಾಗಿದೆ.

ಉರ್ದು ಕವಿತೆಗಳು ಈತನಿಗೆ ಉರ್ದು ಸಾಹಿತ್ಯದಲ್ಲಿ ಮಹಾಕವಿಯ ಸ್ಥಾನವನ್ನು ಗಳಿಸಿಕೊಟ್ಟಿವೆ. ಅಷ್ಟೇ ಅಲ್ಲ, ಈತನ ಹಿರಿಮೆ ಮತ್ತು ಖ್ಯಾತಿ ಇತರ ಕವಿಗಳ ಖ್ಯಾತಿಯನ್ನು ನುಂಗಿ ನೀರು ಕುಡಿದುಬಿಟ್ಟಿವೆ. ತನ್ನ ಸೃಜನಾತ್ಮಕ ಚಿಂತನೆಗಳನ್ನು ಅಭಿವ್ಯಕ್ತಿಗೊಳಿಸಲು ಈತ ತನ್ನದೇ ಆದ ಶೈಲಿಯೊಂದನ್ನು ಸೃಷ್ಟಿಸಿದ. ಈ ಶೈಲಿ ಅನನುಕರಣೀಯವಾಗಿದ್ದು ಈತನೊಂದಿಗೇ ಕೊನೆಗೊಂಡಿತು. ಪೂರ್ವಕವಿಗಳನ್ನು ಅನುಸರಿಸುವುದು ಈತನಿಗೆ ಒಪ್ಪಿಗೆಯಾಗಿರಲಿಲ್ಲ. ಹೊಸತನವೇ ಈತನ ಕಾವ್ಯದ ಜೀವಾಳ. ಜೀವನವೇ ಈತನ ಕಾವ್ಯದ ವಸ್ತುವಾಗಿದ್ದು, ಜೀವನದ ಉನ್ನತ ಮೌಲ್ಯಗಳನ್ನು ಈತ ತನ್ನ ಕಾವ್ಯದಲ್ಲಿ ಕಂಡರಿಸಿದ್ದಾನೆ. ಕಾವ್ಯ ಸೃಜನಾತ್ಮಕವಾಗಿರಬೇಕೇ ಹೊರತು ಕೇವಲ ಶಬ್ದಾಡಂಬರವಾಗಿ ಬಾರದು ಎಂಬುದೇ ಈತನ ಧ್ಯೇಯ. ಉದಾತ್ತ ಚಿಂತನೆಗಳು, ಉಪಮಾನಗಳ ಅಪೂರ್ವತೆ ಮತ್ತು ನವೀನತೆ, ಮೃದುಹಾಸ್ಯ, ಶ್ಲೇಷೆ, ವಸ್ತುವಿನ ನೂತನತೆ, ಅನುಭಾವಿಕತೆ, ಮೃದುಮಧುರ ಶೈಲಿ, ಪ್ರತಿಮಾಯೋಜನೆ, ಸೂಕ್ಷ್ಮ ಪರಿವೀಕ್ಷಣೆ, ಜೀವನದ ಕಟು ಅನುಭವಗಳ ನೈಜನಿರೂಪಣೆ, ಸರಳತೆ, ಅಭಿವ್ಯಕ್ತಿಯ ಪರಿಣಾಮ ರಮಣೀಯತೆ, ಪ್ರೇಮದ ತೀವ್ರತೆ–ಇವು ಈತನ ಕವಿತೆಯ ಪ್ರಾಣ ಹಾಗೂ ಸತ್ತ್ವ. ಈತ ನಿರಾಶಾವಾದಿಯೂ ಹೌದು. ಇಷ್ಟಾದರೂ ಈತನ ಕಾವ್ಯ ಸ್ವಾನುಭವದ ಪ್ರತೀಕವಾಗಿದ್ದು, ಓದುಗರೂ ಆ ಅನುಭವಗಳಲ್ಲಿ ಪಾಲ್ಗೊಳ್ಳುವಂತಾಗುತ್ತದೆ.

ಅದುವರೆಗೆ ಸಂಪ್ರದಾಯದ ಜಾಡಿನಲ್ಲಿಯೇ ಹರಿಯುತ್ತಿದ್ದ ಉರ್ದು ಕಾವ್ಯ ಧಾರೆಯ ದಿಕ್ಕನ್ನು ಬದಲಾಯಿಸಿದ ಶ್ರೇಯಸ್ಸು ಈತನದು. ಹೀಗಾಗಿ, ಆಧುನಿಕ ಉರ್ದು ಕವಿತೆಯ ಪ್ರವರ್ತಕನೆಂದು ಈತನನ್ನು ಗೌರವಿಸಲಾಗಿದೆ. ಉರ್ದು ಕಾವ್ಯದ ಮೇಲೆ ಈತ ಬೀರಿರುವ ಪ್ರಭಾವ ಮಹತ್ತರವಾದುದು. ಈತ ದೇಶಾದ್ಯಂತ ಶಿಷ್ಯರನ್ನು ಪಡೆದಿದ್ದ. ಅಂಚೆಯ ಮೂಲಕ ಶಿಕ್ಷಣ ಪಡೆಯುತ್ತಿದ್ದರು.

ಸರಳ, ಮಧುರ ಮತ್ತು ಪ್ರವಾಹ ಶೀಲ ಶೈಲಿಯಲ್ಲಿ ಬರೆಯಲಾಗಿರುವ ಈತನ ಪತ್ರಗಳು ಅನುಪಮವಾಗಿವೆ. ಇವುಗಳ ಅತ್ಯಂತ ಪ್ರಮುಖ ಲಕ್ಷಣವೆಂದರೆ ಸಂಭಾಷಣಾಶೈಲಿ. 1857ರಲ್ಲಿ ಮತ್ತು ಆ ತರುವಾಯ ರಚಿಸಿದ ಪತ್ರಗಳಲ್ಲಿ ತಾನೇ ಕಣ್ಣಾರೆ ಕಂಡ ದುಃಖದ ಘಟನೆಗಳ ಹೃದಯವಿದ್ರಾವಕ ಚಿತ್ರಗಳನ್ನು ಈತ ನೀಡಿದ್ದಾನೆ. ಉರ್ದು ಗದ್ಯದ ಅತ್ಯುತ್ಕೃಷ್ಟ ರಚನೆಗಳಲ್ಲಿ ಇವುಗಳಿಗೂ ಎಡೆ ದೊರೆತಿದೆ. ಈ ಪತ್ರಗಳು ಈತನ ವಿಶಿಷ್ಟ ವ್ಯಕ್ತಿತ್ವದ ಮೇಲೆ ಬೆಳಕು ಬೀರುತ್ತವೆಯಲ್ಲದೆ ಈತನ ಆತ್ಮಚರಿತ್ರೆಯ ಇಣುಕು ನೋಟವನ್ನೂ ನೀಡುತ್ತವೆ. (ಎಂ.ಎಂ.ಎಚ್.)

**ಗಾಲಿಯಂ :** ಆವರ್ತಕೋಷ್ಟಕದ ಪ್ರಧಾನ ಗುಂಪು 3ರ ಲೋಹ ಧಾತು; ಪರಮಾಣು ಸಂಖ್ಯೆ 31; ಪರಮಾಣು ತೂಕ 69.72; ಪ್ರತೀಕ ಉಚಿ. ಎಲೆಕ್ಟ್ರಾನ್ ವಿನ್ಯಾಸ $1^{2}2^{2}2$ಠ$^{6}3^{2}3$ಠ$^{6}3$ಜ$^{10}4^{2}4$ಠ$^{1}$. ಇದೊಂದು ಬೂದು ಬಣ್ಣದ ಘನ ಲೋಹ. 29.78ಹ ಸೆಂ. ಉಷ್ಣತೆಯಲ್ಲಿಯೇ ಕರಗಿ ಬಿಳಿಬಣ್ಣದ ದ್ರವವಾಗುವುದು. ಕುದಿಬಿಂದು 2070ಹ ಸೆಂ. ದ್ರವರೂಪಕ್ಕೆ ಇರುವ ಈ ವ್ಯಾಪ್ತಿ ಗಾಲಿಯಮಿನ ವೈಶಿಷ್ಟ್ಯ. ಗೊತ್ತಿರುವ ಯಾವುದೇ ಧಾತುವಿಗಿಂತ ಇದು ಉಪಯುಕ್ತವಾದ ಮತ್ತು ಅತ್ಯಂತ ದೀರ್ಘವಾದ ವ್ಯಾಪ್ತಿ. ಅಧಿಕ ಉಷ್ಣತೆಯಲ್ಲೂ ಇದರ ಆವಿಯೊತ್ತಡ ಕಡಿಮೆ: 1315ಹ ಸೆಂ. ನಲ್ಲಿ 1ಮಿಮೀ. ಊರ; 1726ಹ ಸೆಂ.ನಲ್ಲಿ 100 ಮಿಮೀ. ಊರ. ಘನೀಭವಿಸಿದಾಗ ಸುಮಾರು ಶೇ 3 ರಷ್ಟು ವಿಕಸಿಸುವುದು ಮತ್ತು ಅಧಿಶೈತ್ಯಗೊಳ್ಳುವುದು. ಇದನ್ನು ಮೃದುವಾದ ಪಾತ್ರೆಗಳಲ್ಲಿ ಶೇಖರಿಸಿಡಬೇಕು. ಮ್ಹೋ ಕಾಠಿನ್ಯಮಾನದಲ್ಲಿ ಇದರ ಕಠಿನತೆ 2–3. ಕಡಿಮೆ ಉಷ್ಣತೆಯಲ್ಲಿ ಪೆಡಸು. ಲೋಹದ ಹರಳು ಆರ್ಥೊರಾಂಬಿಕ್, ದ್ವಿಪರಮಾಣ್ವಕ ಅಣು. 69 (ಶೇ 0.1) ಮತ್ತು 71 (ಶೇ 39.9) ಪರಮಾಣು ತೂಕವಿರುವ ಎರಡು ಸ್ಥಿರ ಐಸೊಟೋಪುಗಳಿವೆ. ವಿಕಿರಣಪಟು ಐಸೊಟೋಪುಗಳು ಮತ್ತು ಅವುಗಳ ಅರ್ಧಾಯುಗಳು ಹೀಗಿವೆ: 64(2.5 ಮಿ.), 65(15 ಮಿ.), 66(9.4 ಗಂ.), 67(78 ಗಂ.), 68(68 ಮಿ.) 70(21 ಮಿ.), 72(14.1 ಗಂ.), 73(5 ಗಂ.), 74(˜8ಮಿ.) ಸಾಂದ್ರತೆ 20ಹ ಸೆಂ. ಉಷ್ಣತೆಯಲ್ಲಿ 5.907. ಪರಮಾಣು ಗಾತ್ರ 11.76 ಗ್ರಾಹ್ಯೋಷ್ಣ 0.0977.

1875ರಲ್ಲಿ ಲೆಕಾಕ್ ಡಿ ಬಾಯ್ಸ್ ಬ್ಯಾಡ್ರಾನ್ ಎಂಬಾತ ಈ ಧಾತುವನ್ನು ಆವಿಷ್ಕರಿಸಿದ. ಫ್ರಾನ್ಸಿನ ಸತುಬ್ಲೆಂಡಿನಿಂದ ಪ್ರತ್ಯೇಕಿಸಿ ಪಡೆದ ಒಂದು ಪದಾರ್ಥವನ್ನು ಪರೀಕ್ಷಿಸುತ್ತಿದ್ದಾಗ ಈ ಧಾತುವಿನ ಪ್ರಧಾನ ರೋಹಿತರೇಖೆಗಳನ್ನು (λ 4172.2 ᴗ ಮತ್ತು 4033.2 ᴗ) ಅವನು ಗಮನಿಸಿದ. ಪೊಟಾಸಿಯಂ ಗ್ಯಾಲೇಟ್ ದ್ರಾವಣವನ್ನು ವಿದ್ಯುದ್ವಿಭಜಿಸಿ ಅಲ್ಪ ಮೊತ್ತದಲ್ಲಿ ಬೇರ್ಪಡಿಸಿ ಅದರ ಗುಣಗಳನ್ನು ಅಭ್ಯಸಿಸಿದ. ಇದಕ್ಕೆ ಕೇವಲ ಕೆಲವೇ ವರ್ಷಗಳ ಹಿಂದೆ ಮೆಂಡಲೀಫ್ ತನ್ನ ಆವರ್ತಕೋಷ್ಟಕದಲ್ಲಿ ಕೆಲವು ಸ್ಥಾನಗಳನ್ನು ಖಾಲಿಬಿಟ್ಟು ಅವನ್ನು ಭರ್ತಿ ಮಾಡುವ ಧಾತುಗಳನ್ನು ಭವಿಷ್ಯದಲ್ಲಿ ಕಂಡುಹಿಡಿಯಲಾಗುವುದೆಂದೂ ಅವುಗಳ ಗುಣಲಕ್ಷಣಗಳು ಹೀಗೆಯೇ ಇರುವುವೆಂದೂ ಮುನ್ನುಡಿದಿದ್ದ. 3b ಉಪಗುಂಪಿನಲ್ಲಿ ಅಲ್ಯೂಮಿನಿಯಂ ಕೆಳಗೆ ಒಂದು ಸ್ಥಾನವನ್ನು ತೆರಪುಬಿಟ್ಟು ಅದರ ಹೆಸರನ್ನು ಏಕ–ಅಲ್ಯೂಮಿನಿಯಂ ಎಂದು ಕರೆದಿದ್ದ. ಗಾಲಿಯಂ ಕಂಡುಹಿಡಿದ ಬಳಿಕ ಆ ಸ್ಥಾನವನ್ನು ಭರ್ತಿಮಾಡಲಾಗಿದೆ. ಮೆಂಡಲೀಫನ ಏಕ–ಅಲ್ಯೂಮಿನಿಯಮಿನ ಮತ್ತು ಗಾಲಿಯಮಿನ ಗುಣಲಕ್ಷಣಗಳು ಪರಸ್ಪರ ಸಂಪೂರ್ಣವಾಗಿ ಹೋಲುತ್ತವೆ.

ಗಾಲಿಯಂ ಅಪರೂಪಲೋಹವಾಗಿದ್ದರೂ ಅದು ಭೂಮಿಯ ಹೊರಪದರದಲ್ಲಿ (ಶೇ 0.0015) ದೊರೆಯುವ ಧಾತುಗಳ ಶ್ರೇಣಿಯಲ್ಲಿ 37ನೆಯದು. ಅಲ್ಯೂಮಿನಿಯಂ ಮತ್ತು ಸತುವಿನ ಖನಿಜ ಸಂಪನ್ಮೂಲಗಳಲ್ಲಿ ಇದು ಹೇರಳವಾಗಿ ಹರಡಿವೆ. ಅಲ್ಲದೆ ಕೆಲವು ಕಲ್ಲಿದ್ದಲುಗಳಲ್ಲೂ ಸೇರಿರುತ್ತದೆ. ಅತ್ಯಂತ ಹೆಚ್ಚು ಗಾಲಿಯಂ ಯುಕ್ತವಾದ ಖನಿಜವೆಂದರೆ ಜರ್ಮನೈಟು. ಇದು ಸತು–ತಾಮ್ರ–ಆರ್ಸೆನಿಕ್–ಜರ್ಮೇನಿಯಂ ಸಲ್ಫೈಡುಗಳ ಯುಗ್ಮಲವಣ. ಇದರಲ್ಲಿ ಶೇ 0.1–0.8ರ ವರೆಗೆ ಗಾಲಿಯಂ ಉಂಟು. ಆದರೆ ಈ ಖನಿಜ ಬಲು ವಿರಳ. ಆದ್ದರಿಂದ ಇದು ಗಾಲಿಯಮಿನ ಆಕರವಾಗುವುದು ಅವ್ಯಾವಹಾರಿಕ. ಅಮೆರಿಕದ ಕೆಲವು ಸತುವಿನ ಅದುರುಗಳು ಶೇ 0.02ರಷ್ಟು ಗಾಲಿಯಮನ್ನು ಪಡೆದಿದೆ. ಬಾಕ್ಸೈಟು ಮತ್ತು ಅಲ್ಯೂಮಿನಿಯಮಿನ ಇತರ ಅದುರುಗಳಲ್ಲಿ ಶೇ 0.001–0.01ರಷ್ಟು ಗಾಲಿಯಂ ಉಂಟು. ಇವುಗಳಿಂದ ಮುಖ್ಯವಸ್ತುಗಳನ್ನು ತಯಾರಿಸುವಾಗ ಗಾಲಿಯಂ ಕೆಲವು ಉಪೋತ್ಪನ್ನಗಳಲ್ಲಿ ಕೇಂದ್ರೀಕೃತವಾಗುತ್ತದೆ. ಇಂಥ ಉಪೋತ್ಪನ್ನಗಳೇ ಗಾಲಿಯಮಿನ ಅತ್ಯುತ್ತಮ ಆಕರಗಳು. ಸತುವಿನ ಹೊಗೆಗಂಡಿ ದೂಳುಗಳಿಂದ. ವಿದ್ಯುದ್ವಿಶ್ಲೇಷಿತ ಸತುವಿನ ದ್ರಾವಣಗಳ ಶೇಷವಸ್ತುಗಳಿಂದ ಮತ್ತು ಬೇಯರನ ಅಲ್ಯೂಮಿನದ ಶೇಷವಸ್ತುಗಳಿಂದ ಗಾಲಿಯಮನ್ನು ಸೋಡಿಯಂ ಗ್ಯಾಲೇಟಾಗಿ ಕ್ಲಿಷ್ಟ ವಿಧಾನಗಳಿಂದ ತಯಾರಿಸುತ್ತಾರೆ. ಸೋಡಿಯಂ ಗ್ಯಾಲೇಟಿನ ದ್ರಾವಣವನ್ನು 30$^{o}$ ಸೆಂ.ಗಿಂತಲೂ ಹೆಚ್ಚಿನ ಉಷ್ಣತೆಯಲ್ಲಿ ವಿದ್ಯುದ್ವಿಭಜಿಸಿ ಲೋಹವನ್ನು ಪಡೆಯುತ್ತಾರೆ. ಗಾಲಿಯಮಿನ ವಾರ್ಷಿಕ ಉತ್ಪಾದನೆ ಸುಮಾರು 200 ಪೌಂಡುಗಳು. ಅಷ್ಟೇ ಅದರ ಬಳಕೆಯೂ ಉಂಟು. ವಿನೂತನ ಉಪಯೋಗಗಳಿಗೆ ಬೇಕಾದರೆ ಈ ಲೋಹವನ್ನು ವರ್ಷಕ್ಕೆ 20 ಟನ್ನಿನಷ್ಟು ಕೂಡ ಉತ್ಪಾದಿಸಲು ಸಾಧ್ಯ. ಇಂಗ್ಲೆಂಡಿನ ಸತುವಿನ ಹೊಗೆಗಂಡಿ ದೂಳುಗಳಿಂದ ಗಾಲಿಯಮನ್ನು ಕೈಗಾರಿಕಾ ಮೊತ್ತದಲ್ಲಿ ತಯಾರಿಸುತ್ತಾರೆ. ದೂಳುಗಳನ್ನು ಸೋಡಿಯಂ ಕಾರ್ಬೊನೇಟ್, ಸುಣ್ಣ, ಇದ್ದಲು ತಾಮ್ರದ ಆಕ್ಸೈಡುಗಳೊಂದಿಗೆ ದ್ರವಿಸುತ್ತಾರೆ. ಹೆಚ್ಚು ಪಾಲು ಜರ್ಮೇನಿಯಂ ಮತ್ತು ಗಾಲಿಯಂ ಹೊಂದಿರುವ ಲೋಹಮಿಶ್ರಣ ಒಂದು ಗೋಲಿಯ ರೂಪದಲ್ಲಿ

ಉತ್ಪತ್ತಿಯಾಗುವುದು. ಅದು ಕಿಟ್ಟದ ಕೆಳಭಾಗದಲ್ಲಿ ಸಂಗ್ರಹಿಸಿರುವುದು. ಅದನ್ನು ಫೆರಿಕ್ ಕ್ಲೋರೈಡಿನ ದ್ರಾವಣದಲ್ಲಿ ವಿಲಂಬಿಸಿ, ಕ್ಲೋರಿನನ್ನು ಹಾಯಿಸಿ, ಕ್ಲೋರೈಡ್‌ನ್ನು ಟ್ರೈಕ್ಲೋರೈಡನ್ನು ಪಡೆಯುತ್ತಾರೆ ಮತ್ತು ಆಸವಿಸಿ ಗಾಲಿಯಂ ಕ್ಲೋರೈಡನ್ನು ಪ್ರತ್ಯೇಕಿಸುತ್ತಾರೆ. ತಾಮ್ರಲವಣಗಳನ್ನು ಮತ್ತು ಒತ್ತರಿಸಬಹುದಾದ ಇತರ ಲೋಹಗಳನ್ನು ಒತ್ತರಿಸುವುದರಿಂದಲೂ ಕಬ್ಬಿಣವನ್ನು ಫೆರಸ್ ಸ್ಥಿತಿಗೆ ಅಪಕರ್ಷಿಸುವುದರಿಂದಲೂ ಶೇಷದ್ರಾವಣವನ್ನು ಇನ್ನಷ್ಟು ಶುದ್ಧೀಕರಿಸಬಹುದು. ಈಥರನ್ನು ಸೇರಿಸಿ ಗಾಲಿಯಂ ಕ್ಲೋರೈಡನ್ನು ಸಂಸ್ಕರಿಸಿ ಬಂದ ಸಾಂದ್ರವಾದ ದ್ರವ್ಯವನ್ನು ಆಸವಿಸಿ ಈಥರನ್ನು ಹೊರತೆಗೆಯುತ್ತಾರೆ. ಹೀಗೆ ಪಡೆದ ಶುದ್ಧ ಗಾಲಿಯಂ ಟ್ರೈಕ್ಲೋರೈಡಿನಿಂದ ಲೋಹವನ್ನು ತಯಾರಿಸುತ್ತಾರೆ.

ರಾಸಾಯನಿಕ ಗುಣಲಕ್ಷಣಗಳಲ್ಲಿ ಗಾಲಿಯಂ ಅಲ್ಯೂಮಿನಿಯಮನ್ನು ವಿಶೇಷವಾಗಿ ಹೋಲುವುದು ತೇವವಾದ ಗಾಳಿಯಲ್ಲಿಟ್ಟಾಗ ಲೋಹದ ಮೈಮೇಲೆ ಅದರ ಆಕ್ಸೈಡಿನ ರಕ್ಷಾಕವಚ ಏರ್ಪಡುತ್ತದೆ. ಕೆಂಗಾವಿಯಲ್ಲಿಯೂ ಇದು ಆಕ್ಸಿಜನ್ನಿನೊಡನೆ ವರ್ತಿಸುವುದಿಲ್ಲ. ಇನ್ನೂ ಹೆಚ್ಚಿನ ಉಷ್ಣತೆಯಲ್ಲಿ ಆಕ್ಸೈಡಾಗುವುದು. ನೀರನ್ನು $100^o$ ಸೆಂ.ನಲ್ಲೂ ಇದು ವಿಭಜಿಸುವುದಿಲ್ಲ. ಖನಿಜಾಮ್ಲಗಳು ಸಾವಕಾಶವಾಗಿ ಲೋಹದ ಮೇಲೆ ವರ್ತಿಸುವುವು. ಅಲ್ಯೂಮಿನಿಯಮಿನಂತೆ ನೈಟ್ರಿಕ್ ಆಮ್ಲದಲ್ಲಿ ಇದೂ ನಿಷ್ಪಟು ವಾಗುವುದು. ಬಿಸಿ ನೈಟ್ರಿಕ್ ಆಮ್ಲದೊಡನೆ ಗಾಲಿಯಂ ನೈಟ್ರೇಟಾಗುವುದು. ಇದು ಉಭಯವರ್ತಿ (ಆಂಫೊಟೆರಿಕ್). ಕಾಸ್ಟಿಕ್ ಕ್ಷಾರಗಳ ಸಾರಯುತ ದ್ರಾವಣಗಳೊಡನೆ ಕುದಿಸಿದಾಗ ದ್ರಾವ್ಯವಾದ ಆಯಾ ಗ್ಯಾಲೇಟುಗಳು ಮತ್ತು ಹೈಡ್ರೊಜನ್ ಉಂಟಾಗುತ್ತವೆ. ಅಲ್ಯೂಮಿನಿಯಮಿನಂತೆ ಗಾಲಿಯಂ ಹ್ಯಾಲೊಜನ್ನುಗಳೊಡನೆ ವರ್ತಿಸಿ ಟ್ರೈಹ್ಯಾಲೈಡುಗಳನ್ನು ಕೊಡುವುದು. ಅಮೋನಿಯದೊಂದಿಗೆ 900ಹ–100ಹ ಸೆಂ. ಉಷ್ಣತೆಯಲ್ಲಿ ವರ್ತಿಸಿ ಗಾಲಿಯಂ ನೈಟ್ರೈಡಾಗುವುದು. ತನ್ನ ಸಮಸ್ತ ಸಂಯುಕ್ತಗಳಲ್ಲೂ ಗಾಲಿಯಂ ಮುಖ್ಯವಾಗಿ ತ್ರಿವೇಲೆನ್ಸೀಯ. ಆದರೆ ದ್ವಿವೇಲೆನ್ಸೀಯ ಸಂಯುಕ್ತಗಳೂ ಇವೆ. ಉದಾಹರಣೆಗೆ ಗ್ಯಾಲಸ್ ಹ್ಯಾಲೈಡುಗಳು, ಸಲ್ಫೈಡು ಮತ್ತು ಆಕ್ಸೈಡು. ಗಾಲಿಯಂ ಸಲ್ಫೈಡ್ $Ga_2S$ ಮತ್ತು ಸೆಲಿನೈಡ್ $Ga_3Se$ ಇವನ್ನು ಬಿಟ್ಟರೆ ಅದರ ಏಕವೇಲೆನ್ಸೀಯ ಸಂಯುಕ್ತಗಳು ಬಹುಶಃ ಇರಲಾರವು.

ಗಾಲಿಯಮಿನ ಅಸಾಮಾನ್ಯ ಗುಣಗಳು ಅದರ ಉಪಯೋಗಗಳ ಬಗ್ಗೆ ಕುತೂಹಲ ಕೆರಳಿಸಿವೆ. ಆದರೂ ಅದು ಇನ್ನೂ ಹೆಚ್ಚಿನ ಬಳಕೆಗೆ ಬರಬೇಕಾಗಿದೆ. ಗಾಲಿಯಂ ಕಡಿಮೆ ಆವಿಯೊತ್ತಡ ಮತ್ತು ಅತಿ ಹೆಚ್ಚು ಕುದಿಯುವ ಉಷ್ಣತೆ ಪಡೆದಿರುವುದರಿಂದ ಕ್ವಾರ್ಟ್ಜ್ ಕೊಳವೆಗಳಲ್ಲಿ ಅದನ್ನು ತುಂಬಿ ಅಧಿಕ ಉಷ್ಣತೆಗಳಲ್ಲಿ ಉಪಯೋಗಿಸುವ ಉಷ್ಣತಾಮಾಪಕಗಳನ್ನು ತಯಾರಿಸುತ್ತಾರೆ. ಗಾಲಿಯಂ ಸಲ್ಫೈಡಿನಂಥ ಅರೆವಿದ್ಯುದ್ವಾಹಿಗಳ ತಯಾರಿಕೆಯಲ್ಲಿ ಮತ್ತು ಯುರೇನಿಯಮಿನ ರೋಹಿತಲೇಖಿ ವಿಶ್ಲೇಷಣೆಯಲ್ಲಿ ಇದರ ಸದ್ಯದ ಉಪಯೋಗ ಉಂಟು. ದ್ಯುತಿ ಕನ್ನಡಿಗಳ ಹಿಂಬದಿಗೆ ಹಚ್ಚಲು, ಹೆಚ್ಚಿನ ಉಷ್ಣತೆಗಳಲ್ಲಿ ದ್ರವಮುದ್ರಿಕೆಯ ಲೋಹವಾಗಿ ಮತ್ತು ಅತಿನೇರಳೆ ದೀಪಗಳಲ್ಲಿ ಪಾದರಸದ ಬದಲಾಗಿ ಗಾಲಿಯಮನ್ನು ಉಪಯೋಗಿಸುವ ಸಾಧ್ಯ ಉಂಟು. ಇದರಿಂದ $GaU_3$ ರಂಥ ಅಧಿವಿದ್ಯುದ್ವಾಹಿಗಳನ್ನು ತಯಾರಿಸಬಹುದು. ಗಾಲಿಯಂ ಕಡಿಮೆ ಉಷ್ಣತೆಯ ಬೆಸುಗೆ ಪದಾರ್ಥ ಮತ್ತು ಹೆಚ್ಚಿನ ಉಷ್ಣತೆಯ ಕೀಲೆಣ್ಣೆ. ಫ್ರೆಡೆಲ್–ಕ್ರಾಫ್ಟ್ಸ್ ಕ್ರಿಯೆಯಲ್ಲಿ ಗಾಲಿಯಂ ಕ್ಲೋರೈಡ್ ಅಲ್ಯೂಮಿನಿಯಂ ಕ್ಲೋರೈಡಿಗಿಂತ ಉಪಯುಕ್ತ ವೇಗವರ್ಧಕ ಎಲುಬಿನ ಕ್ಯಾನ್ಸರಿನ ನಿರ್ಣಯ ಮತ್ತು ಚಿಕಿತ್ಸೆಗಳಲ್ಲಿ ಐಸೊಟೋಪನ್ನು ಉಪಯೋಗಿಸುವರು. ನ್ಯೂಕ್ಲಿಯರ್ ಕ್ರಿಯಾಕಾರಿಗಳಲ್ಲಿ ಉಷ್ಣವಿನಿಮಯ ಮಧ್ಯವರ್ತಿ ಯಾಗಿ ಗಾಲಿಯಮನ್ನು ಉಪಯೋಗಿಸಬಹುದು. ಆದರೆ ಗಾಲಿಯಂ ತುಕ್ಕು ಹಿಡಿಯುತ್ತದೆ. ಹೆಚ್ಚಿನ ಉಷ್ಣತೆಗಳಲ್ಲಿ ಟಂಗಸ್ಟನ್ ಮತ್ತು ಟ್ಯಾಂಟಲಂ ವಿನಾ ಎಲ್ಲ ಲೋಹಗಳ ಮೇಲೂ ಅದರ ಪ್ರಭಾವವಿದೆ. ಅದಕ್ಕಾಗಿಯೇ ಅದರ ಮಿಶ್ರಲೋಹಗಳನ್ನು ಉಪಯೋಗಿಸುವ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. (ಪಿ.ಜಿ.ಆರ್.)

**ಗಾಲ್ಜಿ, ಕ್ಯಾಮಿಲೊ** : 1843–1926. ಇಟಲಿಯ ಸುಪ್ರಸಿದ್ಧ ಅಂಗಾಂಶಶಾಸ್ತ್ರಜ್ಞ, ಕೋಶ ವಿಜ್ಞಾನಿ ಹಾಗೂ ವೈದ್ಯ. 1843ನೆಯ ಇಸವಿ ಜುಲೈ 9 ರಂದು ಲಾಂಬರ್ಡಿ ಪ್ರಾಂತ್ಯದ ಕಾರ್ಟಿನೋ ನಗರದಲ್ಲಿ ಜನಿಸಿದ. ತಂದೆ ವೈದ್ಯ. ಈತನೂ ತಂದೆಯ ವೃತ್ತಿಯನ್ನೇ ಕೈಗೊಳ್ಳುವ ಸಲುವಾಗಿ ಪಾಡುವ ವಿಶ್ವವಿದ್ಯಾಲಯದಲ್ಲಿ ವೈದ್ಯವಿಜ್ಞಾನವನ್ನು ಓದಿ 1865ರಲ್ಲಿ ಪದವಿ ಪಡೆದ. ಅನಂತರ ಅಬ್ಬಿಯ ಟೆಗ್ರಾಸೊ ಎಂಬ ಹಳ್ಳಿಯಲ್ಲಿ ವೈದ್ಯವೃತ್ತಿಯನ್ನು ಆರಂಭಿಸಿದ. ಉತ್ತಮ ಸಂಶೋಧನ ಸೌಲಭ್ಯವಿರದಿದ್ದರೂ ಅಲ್ಲಿಯೇ ಈತ ಸಂಶೋಧನೆಗಳನ್ನು ನಡೆಸಿ ನರಜೀವಕೋಶಗಳನ್ನೂ ನರಮಂಡಲಗಳನ್ನೂ ವಿಶಿಷ್ಟವಾಗಿ ವರ್ಣೀಕರಿಸುವ ಸಿಲ್ವರ್ ನೈಟ್ರೇಟ್ ವಿಧಾನವನ್ನು ಕಂಡುಹಿಡಿದ. ಇದರಿಂದ ನರಮಂಡಲದ ಸೂಕ್ಷ್ಮ ರಚನೆಯ ಅಭ್ಯಾಸ ಸುಲಭವಾಯಿತು. ಒಂದು ರೀತಿಯಲ್ಲಿ ನರವಿಜ್ಞಾನದ ಆಧುನಿಕ ಅಭ್ಯಾಸ ಈತನಿಂದ ಆರಂಭವಾಯಿತು ಎಂದರೆ ಉತ್ಪ್ರೇಕ್ಷೆಯಿಲ್ಲ. ಇದೇ ರೀತಿ ತನ್ನ ಹೊಸ ವಿಧಾನಗಳ ಬಳಕೆಯಿಂದ ಪ್ರಾಣಿಗಳ ಜೀವಕೋಶದಲ್ಲಿ ಸೆಂಟ್ರೋಸೋಮನ್ನು ಸುತ್ತುವರಿದಿರುವ ಮತ್ತು ರಾಸಾಯನಿಕವಾಗಿ ಲೋಹೀಯ ಲವಣಗಳಿಗೆ ಒಲವನ್ನು ತೋರುವ ಕೆಲವು ವಿಶೇಷ ರಚನೆಗಳನ್ನು ಮೊಟ್ಟ ಮೊದಲ ಬಾರಿಗೆ ಈತ ಕಂಡುಹಿಡಿದ. ಈ ರಚನೆಗಳಿಗೆ ಇವನ ಗೌರವಾರ್ಥವಾಗಿ ಗಾಲ್ಜಿ ರಚನೆಗಳೆಂದು ಹೆಸರು ಕೊಡಲಾಗಿದೆ. ಜೀವಕೋಶಗಳ ಅಧ್ಯಯನಕ್ಕೆ ಲೋಹ ಲವಣಗಳನ್ನು ಬಳಸುವ ವಿಧಾನವನ್ನು ಮೊದಲು (1873) ಬಳಕೆಗೆ ತಂದವನೂ ಇವನೇ. ಈ ಲವಣಗಳ ಬಳಕೆಯಿಂದ ಜೀವಕೋಶಗಳು ಸೂಕ್ಷ್ಮದರ್ಶಕದಲ್ಲಿ ಚೆನ್ನಾಗಿ ಕಾಣುತ್ತವೆ. ಕೇಂದ್ರ ನರಮಂಡಲ, ಸಂವೇದನಾಂಗ, ಸ್ನಾಯು ಮತ್ತು ಗ್ರಂಥಿಗಳ ಅಭ್ಯಾಸಕ್ಕೂ ಈ ವಿಧಾನವನ್ನು ಅನ್ವಯಿಸಲಾಗಿದೆ. ಗಾಲ್ಜಿ 1879ರಲ್ಲಿ ಸಿಯೆನ ವಿಶ್ವವಿದ್ಯಾಲಯದ ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾಗಿ ನೇಮಕಗೊಂಡ. ಮರುವರ್ಷ ಪಾವೀಯ ವಿಶ್ವವಿದ್ಯಾಲಯದಲ್ಲಿ ಅಂಗಾಂಶವಿಜ್ಞಾನ ಮತ್ತು ರೋಗನಿಧಾನ ವಿಜ್ಞಾನದ ಪ್ರಾಧ್ಯಾಪಕನಾದ. ಅನಂತರ 1880ರಲ್ಲಿ ಮಲೇರಿಯ ರೋಗದ ಕಡೆಗೆ ಗಮನ ಹರಿಸಿ ರೋಗಾಣುವಿನ ಜೀವನಚರಿತ್ರೆಯನ್ನು ಅಭ್ಯಸಿಸಿದ. ರೋಗಾಣು ಮನುಷ್ಯದೇಹದಲ್ಲಿ ನಡೆಸುವ ಜೀವನಚಕ್ರವನ್ನು ಕಂಡುಹಿಡಿದ ಕೀರ್ತಿ ಈತನದೇ. ಇದಕ್ಕಾಗಿ ಈ ಚಕ್ರಕ್ಕೆ ಗಾಲ್ಜಿಚಕ್ರ ಎಂದೇ ಹೆಸರು ಕೊಡಲಾಗಿದೆ.

ನರಮಂಡಲದ ಬಗ್ಗೆ ನಡೆಸಿದ ಸಂಶೋಧನೆಗಳಿಗಾಗಿ ಗಾಲ್ಜಿಗೆ 1906ರಲ್ಲಿ ನೊಬೆಲ್ ಪ್ರಶಸ್ತಿ ದೊರಕಿತು. 1926ನೆಯ ಇಸವಿ ಜನವರಿ 21ನೆಯ ತಾರೀಖು ಗಾಲ್ಜಿ ಪಾವೀಯದಲ್ಲಿ ನಿಧನನಾದ. (ಎಚ್.ಬಿ.ಡಿ.)

**ಗಾಲ್ಟನ್, ಸರ್ ಫ್ರಾನ್ಸಿಸ್** : 1822–1911. ಪ್ರಸಿದ್ಧ ವಿಜ್ಞಾನಿ. ಹುಟ್ಟಿದ್ದು ಬರ್ಮಿಂಗ್‌ಹ್ಯಾಮಿನಲ್ಲಿ. ಈತ ಚಾರ್ಲ್ಸ್ ಡಾರ್ವಿನ್ನನ ಸಮೀಪಬಂಧು. ಕಿಂಗ್ ಎಡ್ವರ್ಡ್ಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ವೈದ್ಯವಿಜ್ಞಾನವನ್ನು ಓದಿದ. ಅನಂತರ ಕೇಂಬ್ರಿಜಿನಲ್ಲಿ ಗಣಿತ ಶಾಸ್ತ್ರವನ್ನು ಅಭ್ಯಸಿಸಿದ. ಆವರೆಗೂ ಯಾರ ಕಣ್ಣಿಗೂ ಬೀಳದಿದ್ದ ಆಫ್ರಿಕದ ಡಮರ ಲ್ಯಾಂಡ್ ಮತ್ತು ಇತರ ಭಾಗಗಳನ್ನೂ ನೋಡಿ ಬಂದು ಟ್ರಾಪಿಕಲ್ ಸೌತ್ ಆಫ್ರಿಕ (1853) ಮತ್ತು ದಿ ಆರ್ಟ್ ಆಫ್ ಟ್ರಾವಲ್ (1855) ಎಂಬ ಪುಸ್ತಕಗಳನ್ನು ಬರೆದ. 1856 ರಲ್ಲಿ ರಾಯಲ್ ಸೊಸೈಟಿಯ ಫೆಲೋ



ಆಗಿ ಚುನಾಯಿತನಾದ. 1863ರಿಂದ 1867ರವರೆಗೆ ಬ್ರಿಟಿಷ್ ಅಸೋಸಿಯೇಷನಿನ ವಿಜ್ಞಾನಾಭಿವೃದ್ಧಿ ಶಾಖೆಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ. ಪವನಶಾಸ್ತ್ರದ ಬಗ್ಗೆ ಗಮನಾರ್ಹವಾದ ಕೆಲಸ ಮಾಡಿದ. ಈತ ಅನುವಂಶೀಯತೆಯ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಹೆರೆಡಿಟರಿ ಜೀನಿಯಸ್ (1869) ಹ್ಯೂಮನ್ ಫ್ಯಾಕಲ್ಟಿ (1883), ನ್ಯಾಚುರಲ್ ಇನ್‌ಹೆರಿಟೆನ್ಸ್ (1869), ನೋಟ್‌ವರ್ದಿ ಫ್ಯಾಮಿಲೀಸ್ (1906) ಎಂಬ ಗ್ರಂಥಗಳನ್ನು ಬರೆದ. ಶಾಶ್ವತ ನಿಧಿ ಕೊಟ್ಟು ಲಂಡನ್ ವಿಶ್ವ ವಿದ್ಯಾಲಯದಲ್ಲಿ ಉತ್ತಮ ಸಂತಾನವಿಜ್ಞಾನ ವಿಭಾಗವನ್ನು ತೆರೆಯಲು ಕಾರಣಕರ್ತನಾದ. ಕೊಲೆ ಮುಂತಾದ ಅಪರಾಧಗಳ ತನಿಖೆಯಲ್ಲಿ ಬೆರಳು ಗುರುತು ಗಳನ್ನು ತಿಳಿದು ಪತ್ತೆ ಹಚ್ಚುವ ಸಂಶೋಧನಾ ವಿಧಾನವನ್ನು ಜಾರಿಗೆ ತಂದವರಲ್ಲಿ ಈತನೇ ಮೊದಲಿಗ. 1909 ರಲ್ಲಿ ಈತನಿಗೆ ನೈಟ್ ಹುಡ್ ದೊರಕಿತು.

ಸಂಖ್ಯಾಕಲನ ಪದ್ಧತಿ ಯನ್ನು ವಿಶೇಷವಾಗಿ ಈತ ಬಳಕೆಗೆ ತಂದ. ಶ್ರೀಮಂತ ಕುಟುಂಬದವನಾದುದರಿಂದ ಯಾವೊಂದು ಹುದ್ದೆಗೂ ಅಂಟದೆ ಕೊನೆಯವರೆಗೂ ಈತ ಸ್ವತಂತ್ರವಾದ ಸಂಶೋಧನೆ ಮತ್ತು ಅಧ್ಯಯನಗಳನ್ನು ನಡೆಸಿದ. ತುಂಬು ಪ್ರತಿಭಾವಂತನಾದ ಈತನಲ್ಲಿ ಅಮಿತವಾದ ಆಸಕ್ತಿ. ಅದ್ಭುತವಾದ ಕಲ್ಪನೆಯಿದ್ದುದರಿಂದ ಹೊಸ ಹೊಸ ಸಂಶೋಧನೆಗಳಿಗೆ ಬುನಾದಿ ಹಾಕಿದ. ಮಾನವ ಕಪಾಲಮಾಪನ, ಉತ್ತಮ ಸಂತಾನವಿಜ್ಞಾನ, ಸಂಖ್ಯಾಕಲನ ವಿಜ್ಞಾನದಲ್ಲಿ ಕ್ವೆಟ್‌ಲೆಟ್ ಪದ್ಧತಿ, ಬುದ್ಧಿಮಾಪನ ಪರೀಕ್ಷಾ, ಯಂತ್ರರಚನೆ–ಈ ಕ್ಷೇತ್ರಗಳಲ್ಲಿ ಈತ ಆದ್ಯನೆನ್ನಲಾಗಿದೆ. (ಎಸ್.ಕೆ.ಆರ್.)

**ಗಾಲ್ಡೋನಿ, ಕಾರ್ಲೋ :** 1707–93. ಇಟಲಿಯ ಸಾಂಪ್ರದಾಯಿಕ ನಾಟಕವನ್ನು ಸುಧಾರಿಸಿದ ನಾಟಕಕಾರ. ಇಟಾಲಿಯನ್ ಹರ್ಷನಾಟಕದ ಜನಕನೆಂದು ಪ್ರಸಿದ್ಧನಾಗಿದ್ದಾನೆ. ಈತ ಹುಟ್ಟಿದ್ದು 1707ರ ಫೆಬ್ರವರಿ 25ರಂದು ವೆನಿಸ್ಸಿನಲ್ಲಿ. ಸ್ವಲ್ಪಕಾಲ ವಕೀಲಿ ವೃತ್ತಿಯಲ್ಲಿದ್ದು ಅನಂತರ ನಾಟಕರಂಗಕ್ಕೆ ಇಳಿದ.

ನಾಟಕಗಳನ್ನು ಬರೆಯುವ ಆಸೆ ಗಾಲ್ಡೋನಿಗೆ ಬಾಲ್ಯದಿಂದಲೂ ಇತ್ತು. ಎಂಟನೆಯ ವಯಸ್ಸಿನಲ್ಲೆ ಈತ ತನ್ನ ಮೊದಲನೆಯ ನಾಟಕ ಬರೆದನೆನ್ನಲಾಗಿದೆ. 1734ರಲ್ಲಿ ಈತ ಬರೆದ ಬೆಲಿಸಾರಿಯೊ ಎಂಬ ದುರಂತನಾಟಕವನ್ನು ಜನತೆ ಮೆಚ್ಚಿದರೂ ದುರಂತನಾಟಕ ತನ್ನ ಕ್ಷೇತ್ರವಲ್ಲವೆಂದು ಈತ ಬಹುಬೇಗ ಅರಿತುಕೊಂಡ. ಅನಂತರ ಚತುರೋಕ್ತಿಯ ಹರ್ಷನಾಟಕಗಳನ್ನು ಬರೆಯತೊಡಗಿದ; ಆಡು ಮಾತಿನಲ್ಲಿ ಇಟಲಿಯ ಸಾಮಾನ್ಯ ಜನಜೀವನವನ್ನು ಚಿತ್ರಿಸುವ ನಾಟಕಗಳನ್ನು ಬರೆದು ಅವನ್ನು ನೆಲೆಗೊಳಿಸಲು ಶ್ರಮಿಸಿದ.

ನಾಟಕಕಾರನೂ ವಿಮರ್ಶಕನೂ ಆದ ಗಾಟ್‌ಸಿಯಂತೆ (ನೋಡಿ– ಗಾಟ್‌ಸಿ,–ಕಾರ್ಲೋ) ಗಾಲ್ಡೋನಿ ತನ್ನ ನಾಟಕವೃತ್ತಿಯನ್ನು ಕಮೆದಿಯ ದೆಲ್ ಆರ್ತ್‌ನ ನಟರಿಗಾಗಿ ನಾಟಕಗಳನ್ನು ರಚಿಸುವುದರ ಮೂಲಕ ಪ್ರಾರಂಭಿಸಿದ. ಆದರೆ ಗಾಟ್‌ಸಿ ಬಳಸುತ್ತಿದ್ದ ನಕಲಿ ಮತ್ತು ಯಕ್ಷಿಣಿ ಕಥೆಯ ಚಮತ್ಕಾರಗಳನ್ನು ಈತ ಅಷ್ಟಾಗಿ ಬಳಸಲಿಲ್ಲ. ಗಾಲ್ಡೋನಿಯ ಒಲವು ಯಥಾರ್ಥ ನಿರೂಪಣ ಪದ್ಧತಿಯ ರಂಗಭೂಮಿಯ ಕಡೆಗಿತ್ತು. ಫ್ರೆಂಚ್ ನಾಟಕಕಾರ ಮಾಲ್ಯೆರ್‌ನನ್ನು ಅನುಸರಿಸಿ ನೈಜರೀತಿಯಲ್ಲಿ ಸಾಮಾಜಿಕ ಜೀವನದ ಸತ್ಯಗಳನ್ನು ಚಿತ್ರಿಸುವುದು ಇವನ ಆಸೆ. ಈ ದಿಕ್ಕಿನಲ್ಲಿ ಇವನ ಪ್ರಥಮ ಪ್ರಯತ್ನ, ಮೋಮೆಲೊ ದಿ ಕೋರ್ಟಿಯರ್ (1738)– ಇದರಲ್ಲಿ ವೆನಿಷಿಯನ್ ಪ್ರಾಂತ್ಯ ಭಾಷೆಯನ್ನು ಬಳಸಿದ್ದಾನೆ. ಇದೇ ಶೈಲಿಯಲ್ಲಿ ಬರೆದ ಇನ್ನೊಂದು ನಾಟಕ, ದಿ ವರ್ದಿ ವುಮನ್ (1743). ಈ ನಾಟಕಗಳಲ್ಲಿ ರಂಗದ ಮೇಲೆ ಮೊಗವಾಡಗಳನ್ನು ಧರಿಸುವ ಸಾಂಪ್ರದಾಯಿಕ ಪದ್ಧತಿಯಿಂದ ನಟರನ್ನು ಗಾಲ್ಡೋನಿ ಮುಕ್ತಗೊಳಿಸಿದ. ಒಳ್ಳೆಯ ಹರ್ಷನಾಟಕ ಜನತೆಯ ಗುಣ ದೋಷಗಳನ್ನು ಸರಿಪಡಿಸುತ್ತದೆ ಎನ್ನುವುದು ಈತನ ನಿಲುವು. ಗಾಲ್ಡೋನಿ ಶಿಷ್ಟ ಇಟಾಲಿಯನ್ ಭಾಷೆಯಲ್ಲಿ ನಾಟಕಗಳನ್ನು ರಚಿಸಿದ್ದಾನಾದರೂ ಅವು ಅಷ್ಟಾಗಿ ಪ್ರಸಿದ್ಧಿ ಪಡೆಯಲಿಲ್ಲ. ವೆನಿಷಿಯನ್ ಪ್ರಾಂತೀಯ ಭಾಷೆಯಲ್ಲಿ ಈತ ಬರೆದ ನಾಟಕಗಳಲ್ಲೇ ಸಾಮಾಜಿಕ ಜೀವನದ ಉತ್ತಮ ಪಾತ್ರಗಳು ರೂಪುಗೊಂಡಿವೆ ಎಂದು ವಿಮರ್ಶಕರ ಅಭಿಪ್ರಾಯ.

ಗಾಲ್ಡೋನಿ 260ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾನೆ. 1750–51ರ ಒಂದು ವರ್ಷದ ಅವಧಿಯಲ್ಲೇ 16 ನಾಟಕಗಳನ್ನು ಈತ ಬರೆದನೆನ್ನಲಾಗಿದೆ. ಗಾಟ್‌ಸಿಯ ಪ್ರತಿಸ್ಪರ್ಧೆ ಮತ್ತು ವಿರೋಧದಿಂದಾಗಿ ಗಾಲ್ಡೋನಿ 1761ರಲ್ಲಿ ವೆನಿಸ್ಸನ್ನು ಬಿಟ್ಟು ಪ್ಯಾರಿಸ್ಸಿಗೆ ಹೋದ. ಅಲ್ಲಿ ಇಟಾಲಿಯನ್ ರಂಗಭೂಮಿಯ ವ್ಯವಸ್ಥಾಪಕನ ಹುದ್ದೆಯನ್ನು ಒಪ್ಪಿಕೊಂಡ ಇವನು 1763ರಲ್ಲಿ ಬರೆದ ದಿ ಫಾನ್ ಬಹಳ ಪ್ರಸಿದ್ಧವಾಯಿತು. ತರುವಾಯ ಫ್ರಾನ್ಸಿನ ರಾಜಕುಮಾರಿಗೆ ಇಟಾಲಿಯನ್ ಭಾಷೆಯನ್ನು ಕಲಿಸಿದ. 16ನೆಯ ಲೂಯಿಯ ಮದುವೆಗೆಂದು ಫ್ರೆಂಚ್ ಭಾಷೆಯಲ್ಲಿ ದಿ ಕೈಂಡ್ಲಿ ಬೂಅರ್ (1771) ಎಂಬ ನಾಟಕವನ್ನು ಬರೆದ. 1783–87ರ ನಡುವೆ ತನ್ನ ಆತ್ಮಕಥೆಯನ್ನು ಫ್ರೆಂಚ್ ಭಾಷೆಯಲ್ಲಿ ಸಿದ್ಧಪಡಿಸಿದ. ತನ್ನ ಕೊನೆಗಾಲದಲ್ಲಿ ವರ್ಸೇಲ್ಸ್‌ಗೆ ತೆರಳಿದ. 16ನೆಯ ಲೂಯಿಯಿಂದಾಗಿ ಈತನಿಗೆ ಬರುತ್ತಿದ್ದ ವಿಶ್ರಾಂತಿವೇತನ ಫ್ರಾನ್ಸಿನ ಮಹಾಕ್ರಾಂತಿಯ ಅನಂತರ ನಿಂತುಹೋಯಿತು. ಗಾಲ್ಡೋನಿ ತುಂಬ ಬಡತನದಲ್ಲಿ ನರಳಿ 1793ರ ಫೆಬ್ರವರಿ 6ರಂದು ಅಸುನೀಗಿದ.

ಇಟಾಲಿಯನ್ ನಾಟಕದ ಚರಿತ್ರೆಯಲ್ಲಿ ಗಾಲ್ಡೋನಿಗೆ ವಿಶಿಷ್ಟಸ್ಥಾನ ಸಂದಿದೆ. ಈತ ಬಳಕೆಗೆ ತಂದ ಅನೇಕ ಸುಧಾರಣೆಗಳಿಂದ ರಂಗಭೂಮಿಯ ವಿನ್ಯಾಸವೇ ಬದಲಾಯಿತು. ಈತನನ್ನು ಇಟಾಲಿಯನ್ ಹರ್ಷನಾಟಕಗಳ ಜನಕನೆಂದಿರುವುದರ ಜೊತೆಗೆ ಅನೇಕ ವಿಮರ್ಶಕರು ಇಟಲಿಯ ಮಾಲ್ಯೆರ್ ಎಂದು ಹೊಗಳಿದ್ದಾರೆ. (ಎಸ್.ವಿ.ಎಸ್‌ಯು.)

**ಗಾಲ್ಫ್ :** ಚೆಂಡನ್ನು ದಾಂಡಿನಿಂದ ಹೊಡೆದು ಬದ್ದು ತುಂಬಿಸುವ ಒಂದು ಹೊರಾಂಗಣ ಕ್ರೀಡೆ. ಈಗ ಬಹುಜನಪ್ರಿಯವೂ ಅಂತಾರಾಷ್ಟ್ರೀಯವೂ ಎನಿಸಿದೆ. ಅದರ ಮೈದಾನ ಇಷ್ಟೇ ವಿಸ್ತಾರದ್ದಾಗಿರಬೇಕೆಂಬ ನಿಯಮವಿಲ್ಲ. ಆದರೆ ಅದು ಸಾಕಷ್ಟು ದೊಡ್ಡದಾಗಿರಬೇಕು. ಮೈದಾನದಲ್ಲಿನ ಗುಳಿಗಳ ಸಂಖ್ಯೆ 9ರಿಂದ 18ರ ವರೆಗೂ ಇರಬಹುದು. 18 ಇರುವದೇ ಈಗಿನ ವಾಡಿಕೆ. ಉದಾಹರಣೆಗೆ ಅಮೆರಿಕದ ಶಿಷ್ಟ ಮೈದಾನದ ಸುತ್ತು 5400 ಮೀ.ಯಿದ್ದು ನಡುವೆ 18 ಗುಳಿಗಳಿವೆ. ಈ ಗುಳಿಗಳ ನಡುವೆ ಇಂತಿಷ್ಟೇ ಅಂತರವಿರಬೇಕೆಂಬ ನಿಯಮವೇನಿಲ್ಲ. ಮೈದಾನ ಮಟ್ಟಸವಾಗಿರಬೇಕಾದುದೂ ಇಲ್ಲ. ಉಬ್ಬು ತಗ್ಗು ಅಂಕುಡೊಂಕುಗಳಿರುವ ನೈಸರ್ಗಿಕ ಮೈದಾನವೇ ಗಾಲ್ಫಿಗೆ ಹೇಳಿಮಾಡಿಸಿದ ಅಖಾಡ. ಚೆಂಡು ಗಡಸಾಗಿರುತ್ತದೆ. ಅದನ್ನು ದಾಂಡಿನಿಂದ ಹೊಡೆಯುತ್ತ ಒಂದೊದಾಗಿ ಬದ್ದನ್ನು ತುಂಬಿಸುತ್ತ ಹೋಗಬೇಕು. ಯಾರು ಕಡಿಮೆ ಹೊಡೆತದಲ್ಲಿ ಬದ್ದುಗಳೆಲ್ಲವನ್ನೂ ತುಂಬಿಸುತ್ತಾರೋ ಅವರು ಗೆದ್ದಂತೆ. ಆಟಗಾರರು ಒಂದೇ ದಾಂಡನ್ನು ಬಳಸುವುದಿಲ್ಲ. ಚೆಂಡು ಬಿದ್ದಿರುವ ಜಾಗ, ಅದಕ್ಕೂ ಬದ್ದಿಗೂ ಇರುವ ಅಂತರ, ನಡುವಣ ನೆಲದ ಅಂಕುಡೊಂಕುಗಳನ್ನು ಗಮನಿಸಿ ಹೊಡೆತಕ್ಕೆ ಯೋಗ್ಯವಾದ ದಾಂಡನ್ನು ಬಳಸುತ್ತಾರೆ. ಈ ದಾಂಡುಗಳ ಮತ್ತು ಚೆಂಡಿನ ವಿಷಯ ಮುಂದೆ ಬಂದಿದೆ.

ಬತ್ತಳಿಕೆಯಲ್ಲಿ ಬಗೆ ಬಗೆಯ ದಾಂಡುಗಳನ್ನು ಹೊತ್ತು, ಆಟಗಾರರೊಡನೆ ಹೋಗುವ ಸಹಾಯಕ ಜನ

ಗಾಲ್ಫ್ ಎಂದು ಆರಂಭವಾಯಿತು ಎಂಬುದನ್ನು ಸರಿಯಾಗಿ ಹೇಳಲು ಸಾಧ್ಯವಾಗದು. ಈ ಆಟ ಸ್ಕಾಟ್‌ಲೆಂಡಿನಲ್ಲಿ ಆರಂಭವಾಯಿತೆಂದು ಹೇಳಲಾಗುತ್ತಿದ್ದರೂ ಶತಮಾನಗಳ ಹಿಂದೆಯೇ ಇತರ ದೇಶಗಳಲ್ಲಿ ಈ ಆಟ ಆಡಲಾಗುತ್ತಿತ್ತು ಎನ್ನಲು ಪುರಾವೆಗಳಿವೆ. ರೋಮ್ ಸಾಮ್ರಾಜ್ಯದ ಆರಂಭ ದಿನಗಳಲ್ಲಿ ಪ್ಯಾಗಾನಿಕಾ ಎಂಬ ಆಟ ಬಳಕೆಯಲ್ಲಿತ್ತು. ಹಕ್ಕಿಯ ಪುಕ್ಕಗಳನ್ನು ತುಂಬಿದ್ದ ಚರ್ಮದ ಚೆಂಡನ್ನು ಬಾಗಿರುವ ಉದ್ದದ ಕೋಲೊಂದರಿಂದ ಹೊಡೆವ ಆಟ ಅದು. ರೋಮನ್ ಸೈನಿಕರು ತಾವು ಹೋದಲ್ಲೆಲ್ಲ ಈ ಆಟ ಆಡುತ್ತಿದ್ದರು. ಹೀಗೆ ಸ್ಕಾಟ್ಲೆಂಡಿಗೆ ಈ ಆಟ ಬಂದಿರಬಹುದು.

ಬೆಂಗಳೂರು ಗಾಲ್ಫ್ ಕ್ಲಬ್ಬಿನ ಆಟದ ಮೈದಾನ

ಗಾಲ್ಫ್ ಬಗ್ಗೆ ಸ್ಕಾಟ್‌ಲೆಂಡಿನಲ್ಲಿ ನಿಗದಿಯಾಗಿ ಕೇಳಬಂದುದು 1457ರಲ್ಲಿ. ಬಿಲ್ಲು ವಿದ್ಯೆಯ ಬಗ್ಗೆ ಜನತೆಯಲ್ಲಿ ಆಸಕ್ತಿ ಕುಗ್ಗುತ್ತಿದ್ದುದನ್ನು ಪಾರ್ಲಿಮೆಂಟ್ ಗಮನಿಸಿ ರಾಜ್ಯದ ಶ್ರೀಮಂತರು ವರ್ಷಕ್ಕೆ ನಾಲ್ಕು ಬಾರಿ ಸಭೆ ಸೇರಿ, ಫುಟ್‌ಬಾಲ್ ಹಾಗೂ ಗಾಲ್ಫ್ ಆಟಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಗೊತ್ತುಪಡಿಸಿತು. ಇದೇ ರೀತಿಯ ಶಾಸನಗಳನ್ನು 1471 ಹಾಗೂ 1491ರಲ್ಲೂ ಮಾಡಲಾಯಿತು. 1491ರಲ್ಲಿ ಫುಟ್‌ಬಾಲ್ ಹಾಗೂ ಗಾಲ್ಫ್ ಆಟಗಳಿಗೆ ನೇರ ಬಹಿಷ್ಕಾರ ವಿಧಿಸಲಾಯಿತು.

ಗಾಲ್ಫ್ ಆಟಕ್ಕೆ ಬಹಿಷ್ಕಾರ ವಿಧಿಸಿದ ನಾಲ್ಕನೆಯ ಜೇಮ್ಸ್ ಕೆಲವರ್ಷಗಳ ಅನಂತರ ತಾನೇ ಗಾಲ್ಫ್ ಆಡತೊಡಗಿದನೆಂದು ಹೇಳಲಾಗಿದೆ. ಮೇರಿ ಸ್ಟೂವರ್ಟ್ ತನ್ನ ಪತಿಯ ಕೊಲೆಯಾದ ಕೆಲದಿನಗಳ ಮೇಲೆ ಗಾಲ್ಫ್ ಆಡುತ್ತಿದ್ದಳೆಂಬ ವರದಿಗಳಿವೆ. ಹೀಗೆ ರಾಜರುಗಳ ಪ್ರೋತ್ಸಾಹದಿಂದ ಬೆಳೆದ ಗಾಲ್ಫ್ ಆಟ ಹೆಚ್ಚು ಪ್ರಚಾರ ಪಡೆಯಲು 18ನೆಯ ಶತಮಾನದಲ್ಲಿ ಹುಟ್ಟಿಕೊಂಡ ಗಾಲ್ಫ್ ಕ್ಲಬ್‌ಗಳು ನೆರವಾದುವು

ಖ್ಯಾತ ರಾಯಲ್ ಬ್ಲ್ಯಾಕ್‌ಹೀತ್ ಕ್ಲಬ್ 1608ರಲ್ಲೇ ಇತ್ತೆಂದು ಹೇಳಲಾಗಿದ್ದರೂ ಈ ಕ್ಲಬ್ ಅಸ್ತಿತ್ವಕ್ಕೆ ಬಂದುದು 1787 ಎನ್ನಬಹುದು. ಈ ಮುನ್ನ ಕೆಲವು ಕ್ಲಬ್‌ಗಳು ಇದ್ದ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ.

ವಿಶ್ವದ ಪ್ರಧಾನ ಕ್ಲಬ್ ಆದ ರಾಯಲ್ ಅಂಡ್ ಏನ್ಷಂಟ್ ಕ್ಲಬ್ ಭವನವನ್ನು 1840ರಲ್ಲಿ ಕಟ್ಟಲಾಯಿತು. ಇಂಗ್ಲೆಂಡಿನ ರಾಜರ ಹಾಗೂ ಆತನ ಹತ್ತಿರ ಸಂಬಂಧಿಗಳ ಪೋಷಣೆ ಪಡೆದಿದ್ದ ಈ ಕ್ಲಬ್ ಇಂದು ಗಾಲ್ಫ್ ಆಟದ ಬಗ್ಗೆ ನಿರ್ಣಾಯಕ ಸಂಸ್ಥೆ ಎನಿಸಿದೆ. ನಿಯಮಗಳನ್ನು ರೂಪಿಸುವ ಹಾಗೂ ತಿದ್ದುಪಡಿ ಮಾಡುವ ಅಧಿಕಾರ ಈ ಕ್ಲಬ್‌ಗೆ ಇದೆ. ಇದರ ತೀರ್ಮಾನಗಳನ್ನು ಅಮೆರಿಕ ಸಂಯುಕ್ತಸಂಸ್ಥಾನಗಳನ್ನು ಬಿಟ್ಟು ವಿಶ್ವದ ಉಳಿದೆಲ್ಲ ಎಡೆಗಳಲ್ಲೂ ಸ್ವೀಕರಿಸಲಾಗುತ್ತದೆ. 1951ರಲ್ಲಿ ರಾಯಲ್ ಅಂಡ್ ಏನ್ಷಂಟ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಗಾಲ್ಫ್ ಸಂಸ್ಥೆಗಳು ಒಂದು ಕಡೆ ಕಲೆತು ಆಟಕ್ಕೆ ವಿಶ್ವದಾದ್ಯಂತ ಒಂದೇ ರೀತಿಯ ನಿಯಮಗಳನ್ನು ಇಟ್ಟುಕೊಳ್ಳಲು ಒಪ್ಪಿಕೊಂಡವು. ಅನಂತರ ಚೆಂಡಿನ ಪ್ರಮಾಣ ಒಂದನ್ನು ಬಿಟ್ಟು (ಅಮೆರಿಕದ ಚೆಂಡಿನ ವ್ಯಾಸ 4.27 ಸೆಂಮೀ ಇಂಗ್ಲೆಂಡಿನ ಚೆಂಡಿನ ವ್ಯಾಸ 3.75 ಸೆಂಮೀ) ಉಳಿದೆಲ್ಲ ಅಂಶಗಳಲ್ಲೂ ಇವೆರಡು ಸಂಸ್ಥೆಗಳ ನಿಯಮಗಳಲ್ಲೂ ಸಾಮರಸ್ಯವಿದೆ.

ಬೀಸು ಹೊಡೆತದ ವೈಖರಿ



ನವುರಾದ ಏಟಿನಿಂದ ಗುಣಿ ತುಂಬಿಸುವ ಸನ್ನಿವೇಶ

ಬ್ರಿಟಿಷ್ ಓಪನ್ ಅಂಡ್ ಅಮೆಚೂರು ಚಾಂಪಿಯನ್‌ಷಿಪ್ ಹಾಗೂ ಇಂಗ್ಲೆಂಡಿನ ವಾಕರ್ ಕಪ್ ಪಂದ್ಯಗಳು ರಾಯಲ್ ಅಂಡ್ ಏನ್ಷಂಟ್ ಕ್ಲಬ್‌ನ ಆಧಿಕಾರ ವ್ಯಾಪ್ತಿಗೆ ಒಳಗಾಗಿರುತ್ತವೆ.

ಅಮೆರಿಕದಲ್ಲಿ 1779ರಿಂದ ಗಾಲ್ಫ್ ಆಡಲಾಗುತ್ತಿದೆಯಾದರೂ ಮುಂದೆ ಒಂದು ಶತಮಾನಕಾಲ ಈ ಆಟ ಅಷ್ಟು ಪ್ರಚಾರ ಪಡೆದಿರಲಿಲ್ಲ. 1887ರಿಂದ ಈಚೆಗೆ ಈ ಆಟವನ್ನು ಅಮೆರಿಕದಲ್ಲಿ ನಿಯತ ರೂಪದಲ್ಲಿ ಆಡಲಾಗುತ್ತಿದೆ. ಸ್ಕಾಟ್ಲೆಂಡಿನ ರಾಬರ್ಟ್ ಲಾಕ್ ಹಾರ್ಟ್ ಎಂಬಾತ ಕೆಲವು ಗಾಲ್ಫ್ ಚೆಂಡುಗಳನ್ನೂ ದಾಂಡುಗಳನ್ನೂ ತಂದು ಅಮೆರಿಕದಲ್ಲಿ ತನ್ನ ಮಿತ್ರರಿಗೆ ಹಾಗೂ ನೆರೆಯವರಿಗೆ ಕೊಟ್ಟು ಗಾಲ್ಫ್ ಆಟದಲ್ಲಿ ಆಸಕ್ತಿ ಕುದುರಿಸಿದನೆನ್ನಲಾಗಿದೆ. 1888ರಲ್ಲಿ ಈತನಿಗೆ ನೆರೆಯವನಾದ ರೀಡನಿಗೂ ಗಾಲ್ಫ್ ಪಂದ್ಯ ನಡೆಯಿತು. ಅನಂತರ ಸೇಂಟ್ ಆಂಡ್ರೂಸ್ ಕ್ಲಬ್ ಸ್ಥಾಪಿತವಾಯಿತು. 1897ರಲ್ಲಿ ಕ್ಲಬ್‌ನ ನಿವೇಶನವನ್ನು ನ್ಯೂಯಾರ್ಕ್ ನಗರದ ಮೌಂಟ್ ಹೋಪ್‌ಗೆ ವರ್ಗಾಯಿಸಲಾಯಿತು.



ಗಾಲ್ಫ್ ಮೈದಾನ, ಸ್ಕಾಟ್ಲೆಂಡ್

ಮುಂದೆ 5 ವರ್ಷಗಳಲ್ಲಿ ಸುಮಾರು 20 ಕ್ಲಬ್‌ಗಳು ಹುಟ್ಟಿಕೊಂಡುವು. 1900ರ ವೇಳೆಗೆ ಅಮೆರಿಕ ಸಂಯುಕ್ತ ಸಂಸ್ಥಾನದಾದ್ಯಂತ ಬೇಸಗೆಯಲ್ಲಿ ಈ ಆಟ ಆಡಲಾಗುತ್ತಿತ್ತು. 1920ರ ವೇಳೆಗೆ ಅಮೆರಿಕದಲ್ಲಿ 2,800 ಗಾಲ್ಫ್ ಮೈದಾನಗಳು ಇದ್ದುವು.

1894ರ ಡಿಸೆಂಬರ್ 22ರಂದು ಐದು ಪ್ರಮುಖ ಕ್ಲಬ್‌ಗಳ ಪ್ರತಿನಿಧಿಗಳು ಸಭೆ ಸೇರಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಗಾಲ್ಫ್ ಸಂಸ್ಥೆ ಆರಂಭಿಸಿದರು. ಈ ಸಂಸ್ಥೆ ಇಂದು ಈ ವಿಭಾಗದಲ್ಲಿ ಗಾಲ್ಫ್ ಬಗ್ಗೆ ಆಡಳಿತ ನಡೆಸುತ್ತಿದೆ.

ಮಹಿಳೆಯರೂ ಉತ್ತಮ ಸಂಖ್ಯೆಯಲ್ಲಿ ಈ ಆಟ ಆಡುತ್ತಿದ್ದಾರೆ.

ಗಾಲ್ಫ್ ಚೆಂಡನ್ನು ತುಂಬಿಸುವ ಬದ್ದು ಅಥವಾ ಕುಳಿ ಇರುವ ಸ್ಥಳದಲ್ಲಿ ಮಟ್ಟಸವಾದ ಒಂದು ಚದರವಿರುತ್ತದೆ. ಈ ಚದರದ ಮಧ್ಯೆ ನಾಲ್ಕೂವರೆ ಅಂಗುಲ ವ್ಯಾಸದ ಗುಳಿ ಇರುತ್ತದೆ. ಯಾವ ಗುಳಿಯ ಅನಂತರ ಯಾವ ಗುಳಿ ತುಂಬಿಸಬೇಕೆಂಬುದನ್ನು




ಒಂದರಿಂದ ಒಂಬತ್ತರವರೆಗಿನ ಕಬ್ಬಿಣದ ದಾಂಡುಗಳಿಂದ ಚೆಂಡನ್ನು ಹೊಡೆದಾಗ ಅದು ಸುಮಾರಾಗಿ ಎಷ್ಟು ದೂರ (ಗಜಗಳಲ್ಲಿ) ಹೋಗುತ್ತದೆಂಬುದನ್ನು ಚಿತ್ರದಲ್ಲಿ ತೋರಿಸಿದೆ

ಮೊದಲೇ ಗೊತ್ತುಮಾಡಲಾಗಿರುತ್ತದೆ. ಸರಪಳಿಯ ಕೊಂಡಿಗಳಂತೆ ಒಂದು ಗುಳಿಯಿಂದ ಇನ್ನೊಂದು ಗುಳಿಗೆ ಚೆಂಡು ತುಂಬಿಸಲಾಗುತ್ತದೆ. ಒಂದು ಪಂದ್ಯದಲ್ಲಿ ಒಂದು ಗುಳಿಯನ್ನು ಒಮ್ಮೆ ಮಾತ್ರ ತುಂಬಬೇಕು. ಗಾಲ್ಫ್ ಆಟದಲ್ಲಿ ಇಬ್ಬರ ನಡುವೆ ಇಲ್ಲವೆ ಎರಡು ಟೀಮುಗಳ ನಡುವೆ ಸ್ಪರ್ಧೆ ಇರುತ್ತದೆ. ಗುಳಿಯ ಚದರದ ಹೊರಗೆ ಚೆಂಡು ಹೊಡೆಯಲು ಒಂದು ಗುಪ್ಪೆ ಇರುತ್ತದೆ. ಒಂದು ಮರದ ತುಂಡು ಇಲ್ಲವೇ ಮರಳಿನ ಗುಪ್ಪೆ ಚೆಂಡನ್ನು ಸುತ್ತಲ ಪ್ರದೇಶದಿಂದ ಸ್ವಲ್ಪ ಎತ್ತರದಲ್ಲಿ ಇಡಲು ಸಹಾಯಕವಾಗಿರುತ್ತದೆ. ಪ್ರತಿ ಗುಳಿ ತುಂಬುವ ಮೊದಲು ಆಟಗಾರ ಹಲವಾರು ವಿಧದಲ್ಲಿ ಬೇರೆ ಬೇರೆ ಮಾದರಿಯ ದಾಂಡುಗಳನ್ನು ಬಳಸುತ್ತಾನೆ.

ಪಂದ್ಯಗಳಲ್ಲಿ ಎರಡು ಬಗೆ. ಒಂದು ಮ್ಯಾಚ್ ಪ್ಲೇ. ಇದರಲ್ಲಿ ಒಂದೊಂದು ಗುಳಿ ತುಂಬಿಸುವುದೂ ಒಂದೊಂದು ಸ್ಪರ್ಧೆ. ಎದುರಾಳಿಗಿಂತ ಹೆಚ್ಚು ಗುಳಿ ತುಂಬಿಸುವವರು ಗೆಲ್ಲುತ್ತಾರೆ. ಇನ್ನೊಂದು ಸ್ಟ್ರೋಕ್ ಪ್ಲೇ. ಒಬ್ಬ ಆಟಗಾರ ಎಷ್ಟು ಹೊಡೆತಗಳಲ್ಲಿ ಒಂದು ಸುತ್ತು ಗುಳಿತುಂಬಿಸಿ ಮುಗಿಸುತ್ತಾನೆ ಎಂಬುದು ಮುಖ್ಯ. ಕಡಿಮೆ ಹೊಡೆತಗಳಲ್ಲಿ ಸುತ್ತು ಮುಗಿಸುವಾತ ಇದರಲ್ಲಿ ವಿಜಯಿ. ಈ ಎರಡು ಬಗೆಯ ಆಟಗಳೂ ಪ್ರಚಲಿತವಿದೆ. ಸಾಮಾನ್ಯವಾಗಿ ಅಮೆಚೂರ್ ಸ್ಪರ್ಧೆಗಳಲ್ಲಿ ಮ್ಯಾಚ್ ಪ್ಲೇ ವಿಧಾನವನ್ನೂ ಪ್ರೊಫೆಷನಲ್ ಇಲ್ಲವೇ ಓಪನ್ ಸ್ಪರ್ಧೆಗಳಲ್ಲಿ ಸ್ಟ್ರೋಕ್ ಪ್ಲೇ ವಿಧಾನವನ್ನೂ ಬಳಸಲಾಗುತ್ತದೆ. ಪ್ರೊಫೆಷನಲ್ ವಾರ್ಷಿಕ ಚಾಂಪಿಯನ್ ಷಿಪ್‌ನಲ್ಲಿ ಮಾತ್ರ ಮ್ಯಾಚ್ ಪ್ಲೇ ವಿಧಾನದ ಬಳಕೆ ಇದೆ.

ಮಹಿಳೆಯರಿಗಾಗಿ ನಡೆವ ಕರ್ಟಿಸ್ ಕಪ್, ಹಾಗೂ ಪುರುಷರಿಗಾಗಿ ನಡೆವ ರೈಡರ್ ಕಪ್ ಹಾಗೂ ವಾಕರ್ ಕಪ್ ಸ್ಪರ್ಧೆಗಳು ವಿಶ್ವಚಾಂಪಿಯನ್‌ಷಿಪ್‌ಗಳು.

**ಗಾಲ್ಫ್ ಚೆಂಡು:** ರೋಮನ್ನರ ಕಾಲದ ಚೆಂಡಿಗೆ ಹೊರಗಡೆ ಚರ್ಮದ ಹೊದಿಕೆ ಇತ್ತು. ಅದರ ಒಳಗೆ ಹಕ್ಕಿಗಳ ರೆಕ್ಕೆಪುಕ್ಕಗಳನ್ನು ಒತ್ತಿ ತುಂಬಿರುತ್ತಿದ್ದರು. 1884ರಲ್ಲಿ ಒಬ್ಬ ವ್ಯಾಪಾರಿ 2,456 ಇಂಥ ಚೆಂಡುಗಳನ್ನು ತಯಾರಿಸಿದನೆನ್ನಲಾಗಿದೆ. ಈ ಬಗೆಯ ಚೆಂಡು ಹೆಚ್ಚು ಬಾಳಿಕೆ ಬರುತ್ತಿರಲಿಲ್ಲ. ಒಂದೆರಡು ಆಟಗಳಲ್ಲೇ ಒಡೆದು ಹೋಗುತ್ತಿತ್ತು. ಅನಂತರ ಗಟಪರ್ಚದಲ್ಲಿ (ಲೇಟೆಕ್ಸ್) ಚೆಂಡನ್ನು ತಯಾರಿಸತೊಡಗಿದರು. ರಾಬರ್ಟ್ ಎ. ಪ್ಯಾಟರ್‌ಸನ್ ಎಂಬಾತ 1845ರಲ್ಲಿ ಇಂಥ ಒಂದು ಚೆಂಡನ್ನು ರೂಪಿಸಿದನೆನ್ನಲಾಗಿದೆ. ಇದರಿಂದ ಆಟದಲ್ಲಿ ದೊಡ್ಡ ಕ್ರಾಂತಿಯೇ ಆದಂತಾಯಿತು. ಈ ಚೆಂಡು ಪುಕ್ಕದ ಚೆಂಡಿಗಿಂತ ಗಡಸು. ಬೇಗ ಒಡೆಯುವಂಥದಲ್ಲ. ಆಮೇಲೆ 1898ರಲ್ಲಿ ರಬ್ಬರ್ ಚೆಂಡು ಬಳಕೆಗೆ ಬಂತು. ಇದನ್ನು ರೂಪಿಸಿದವನು ಕಾಬರ್ನ್ ಹ್ಯಾಸ್ಕೆಲ್ ಎಂಬಾತ. ಈತ ಸ್ವತಃ ಗಾಲ್ಫ್ ಆಟಗಾರನಾಗಿದ್ದು ಗುಟ್‌ರಿಚ್ ಕಂಪನಿಯವರ ಸಹಾಯದಿಂದ ಈ ಹೊಸ ಚೆಂಡನ್ನು ಬಳಕೆಗೆ ತಂದ. ರಬ್ಬರಿನ ಸಣ್ಣ ಗುಂಡೊಂದರ ಸುತ್ತ ಗಟ್ಟಿಯಾಗಿರುವ ರಬ್ಬರ್ ದಾರವನ್ನು ಸುತ್ತುತ್ತ ಹೋಗಿ ಚೆಂಡಿನ ಆಕೃತಿ ಬಂದಮೇಲೆ ಅದನ್ನು ಗಟ್ಟಿಮಾಡುವುದು ಈ ಚೆಂಡು ತಯಾರಿಕೆಯ ವಿಧಾನ. ಇದನ್ನೇ ಈಗ ಸುಧಾರಿಸಿ ಬಳಸಲಾಗುತ್ತಿದೆ. ಚೆಂಡಿನ ವೇಗ ಸೆಕೆಂಡಿಗೆ 250´ಗಿಂತ ಹೆಚ್ಚಿರಬಾರದು ಎಂಬ ನಿಯಮ ಅಮೆರಿಕದಲ್ಲಿ ಪ್ರಚಲಿತವಿದೆ.




**ದಾಂಡಿನ ಭಾಗಗಳು : 1. ಮುಚ್ಚಳ, 2. ಹಿಡಿ, 3. ದಿಂಡು, 4. ಆಸರೆಕೋಳವೆ, 5. ಕತ್ತು, 6. ಮುಖ, 7. ಹಿಮ್ಮಡಿ, 8. ಅಂಗಾಲು, 9. ಬೆರಳು, 10. ತಲೆ**

**ಗಾಲ್ಫ್ ಮೈದಾನ :** ವಿಶಾಲವಾಗಿದ್ದು ಎಷ್ಟು ಅಂಕುಡೊಂಕುಗಳ ಅಡಚಣೆಗಳು ಇದ್ದರೂ ಅಷ್ಟೂ ಅಷ್ಟು ಉತ್ತಮ. ನಡುವಿನ ಅಡಚಣೆಗಳನ್ನು ನಿವಾರಿಸಿಕೊಂಡು ಚೆಂಡು ಹೊಡೆಯುವುದು ಜಾಣತನ. ಸಹಜವಾದ ಅಡಚಣೆಗಳು ಇಲ್ಲದ ಕಡೆ ಕೃತಕವಾದುದನ್ನು ಒಡ್ಡಲಾಗುತ್ತದೆ. ಸರಿಯಾದ ಮೈದಾನದಲ್ಲಿ 18 ಗುಳಿಗಳಿರುತ್ತವೆ. 18 ಅಲ್ಲದೆ 9 ಮಾತ್ರ ಇದ್ದಲ್ಲಿ ಎರಡು ಸುತ್ತು ಆಡಬೇಕಾಗುತ್ತದೆ.

ಸ್ಕಾಟ್ಲೆಂಡಿನ ಗೆನ್ ಈಗಲ್ಸ್, ಇಂಗ್ಲೆಂಡಿನ ಓಕೆಂಗ್, ಅಮೆರಿಕದ ಪೈನ್‌ವ್ಯಾಲಿ, ಕೆನಡದ ಜ್ಯಾಸ್ಪರ್ ಪಾರ್ಕ್, ಆಸ್ಟ್ರೇಲಿಯದ ರಾಯಲ್ ಮೆಲ್‌ಬೋರ್ನ್–ಈ ಮೊದಲಾದವು ಬಹು ಪ್ರಶಸ್ತವಾದ ಗಾಲ್ಫ್ ಮೈದಾನಗಳು.

**ದಾಂಡುಗಳು:** ಸಾಮಾನ್ಯವಾಗಿ ಸರಿಯಾದ ಆಟಗಾರನ ಬತ್ತಳಿಕೆಯಲ್ಲಿ 3 ಇಲ್ಲವೆ 4 ಮರದ ದಾಂಡುಗಳು 9 ಇಲ್ಲವೆ 10 ಕಬ್ಬಿಣದ ದಾಂಡುಗಳು ಇರುತ್ತವೆ. ಏನೇ ಆದರೂ ಒಂದು ಸುತ್ತಿನ ಆಟದಲ್ಲಿ 14ಕ್ಕಿಂತ ಹೆಚ್ಚು ದಾಂಡುಗಳ ಅಗತ್ಯ ಕಾಣದು. ಈ ದಾಂಡುಗಳ ಉದ್ದ, ಬಳುಕು, ತೂಕ, ಆಕಾರ, ತಲೆಯ ಬಾಗು–ಈ ಮೊದಲಾದವುಗಳಲ್ಲಿ ಖಚಿತವಾದ ವ್ಯತ್ಯಾಸವಿರುತ್ತದೆ. ಗುರುತಿಗೆಂದು ಒಂದೊಂದು ದಾಂಡಿಗೂ ಒಂದೊಂದು ನಂಬರನ್ನು ಹೆಸರನ್ನು ಕೊಟ್ಟಿರುತ್ತಾರೆ. ಉದಾಹರಣೆಗೆ ಮರದವಲ್ಲಿ 1ನೆಯ ದಾಂಡಿಗೆ ಡ್ರೈವರ್ ಎಂದೂ ಮೂರನೆಯದಕ್ಕೆ ಸ್ಪೂನ್ ಎಂದೂ ಹೆಸರಿದೆ. ಇದೇ ರೀತಿ ಲೋಹದಲ್ಲಿ ಒಂದನೆಯದಕ್ಕೆ ಕ್ಲೀಕ್ ಎಂದೂ ಐದನೆಯದಕ್ಕೆ ಮ್ಯಾಷಿ ಎಂದೂ ಒಂಬತ್ತನೆಯದಕ್ಕೆ ನಿಬ್ಲಿಕ್ ಎಂದೂ ಹೆಸರು.

ದಾಂಡಿನ ಅಂಗಭಾಗಗಳ ಹೆಸರುಗಳನ್ನೂ ಯಾವ ದಾಂಡು ಎಂಥ ಹೊಡೆತಕ್ಕೆ ಯೋಗ್ಯ ಎಂಬ ವಿವರಗಳನ್ನೂ ಚಿತ್ರಗಳಲ್ಲಿ ತೋರಿಸಿದೆ.

**ನಿಯಮಗಳು:** ಮ್ಯಾಚ್ ಪ್ಲೇ ಮತ್ತು ಸ್ಟ್ರೋಕ್ ಪ್ಲೇಗಳಿಗೆ ಪ್ರತ್ಯೇಕವಾದ ನಿಯಮಗಳಿವೆ. ಮ್ಯಾಚ್ ಪ್ಲೇನಲ್ಲಿ ಹೆಚ್ಚು ಬದ್ದು ತುಂಬಿಸಿದವರು ಗೆಲ್ಲುತ್ತಾರೆ. ಅಂದರೆ ಇರುವ 18ರಲ್ಲಿ 10 ಬದ್ದು ತುಂಬಿಸಿದವನು ಗೆದ್ದಂತೆ. ಅತಿ ಕಡಿಮೆ ಹೊಡೆತದಿಂದ ಚೆಂಡನ್ನು ಬದ್ದಿಗೆ ತುಂಬಿಸಿದರೆ ಹಾಗೆ ತುಂಬಿಸಿದವನು ಆ ಬದ್ದನ್ನು ಗೆದ್ದಂತಾಗುತ್ತದೆ. ಹಾಗೆ ಮಾಡಿದವನಿಗೆ ಆಟವನ್ನು ಮುಂದುವರಿಸುವ ಗೌರವ ಸಲ್ಲುತ್ತದೆ.

ಇಬ್ಬರೂ ಸಮನಾದ ಹೊಡೆತ ಗಳಿಂದ ಬದ್ದು ತುಂಬಿದಲ್ಲಿ ಗೆದ್ದ ಬದ್ದನ್ನು ಇಬ್ಬರಲ್ಲೂ ಸಮನಾಗಿ ಹಂಚುತ್ತಾರೆ. ಇಬ್ಬರಲ್ಲಿ ಯಾರು ಮೊದಲು ಬದ್ದು ತುಂಬುತ್ತಾರೋ ಅವರಿಗೆ ಆಟ ಮುಂದುವರಿಸುವ ಅಧಿಕಾರ ಬರುತ್ತದೆ. ಸ್ಟ್ರೋಕ್ ಪ್ಲೇನಲ್ಲಿ ಹದಿನೆಂಟು ಬದ್ದುಗಳ ಒಂದು ಸುತ್ತನ್ನು ಯಾರು ಅತಿ ಕಡಿಮೆ ಹೊಡೆತಗಳಲ್ಲಿ ತುಂಬಿ ಮುಗಿಸುತ್ತಾರೋ ಅವರು ಗೆದ್ದಂತೆ. ಯಾರು ಯಾವ ಬದ್ದನ್ನು ಎಷ್ಟು ಹೊಡೆತಗಳಲ್ಲಿ ತುಂಬಿಸಿದರು ಎಂಬುದನ್ನು ಗುರುತು ಮಾಡಿ ಕೊಳ್ಳಲಾಗುತ್ತದೆ.

ಗಾಲ್ಫ್ ಆಟವನ್ನು ಇಬ್ಬರು, ಮೂರು ಜನ, ನಾಲ್ವರು ಒಟ್ಟಿಗೆ ಆಡಬಹುದು. ಇಬ್ಬಿಬ್ಬರ, ಮೂವರು ಮೂವರ ಟೀಮು ಮಾಡಿಕೊಂಡೂ ಆಡಬಹುದು.

(ಎಚ್.ಎಸ್.ಎಸ್.ಎನ್.)

**ಗಾಲ್ಸ್‌ವರ್ದಿ, ಜಾನ್ :** 1867–1933. ಸುಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರ, ನಾಟಕಕಾರ. 1932ರಲ್ಲಿ ಈತನಿಗೆ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನ ಬಂತು. ಈತ ಸರ್ರೆ ಕೌಂಟಿಯ ಕಿಂಗ್‌ಸ್ಟನ್ ಹಿಲ್‌ನಲ್ಲಿ 1867ರಲ್ಲಿ ಹುಟ್ಟಿದ. ತಂದೆ ಜಾನ್ ಗಾಲ್ಸ್‌ವರ್ದಿ ಶ್ರೀಮಂತ ವಕೀಲ, ಹಲವಾರು ಕಂಪನಿಗಳ ನಿರ್ದೇಶಕ. ಅವನ ನಾಲ್ಕು ಜನ ಮಕ್ಕಳಲ್ಲಿ ಈತ ಎರಡನೆಯವ. ಹ್ಯಾರೊ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಆಕ್ಸ್‌ಫರ್ಡಿನಲ್ಲಿ ಲಾ ಪರೀಕ್ಷೆ ತೆಗೆದುಕೊಂಡು ವಕೀಲನಾಗಿ ಲಿಂಕನ್ಸ್‌ಇನ್‌ಗೆ ಸೇರಿದ. ಶಾಲೆಯಲ್ಲಾಗಲಿ ಕಾಲೇಜಿನಲ್ಲಾಗಲಿ ಮುಂದೆ ಪ್ರತಿಭಾವಂತ ಸಾಹಿತಿಯಾಗುವನೆಂಬ ಯಾವ ಲಕ್ಷಣಗಳಾಗಲಿ ಸೂಚನೆಯಾಗಲಿ ಈತನಲ್ಲಿ ಕಂಡಿರಲಿಲ್ಲ. ಅಧ್ಯಯನಕ್ಕಿಂತ ಈತನಿಗೆ ಕ್ರೀಡೆಯ ಆಕರ್ಷಣೆಯೇ ಹೆಚ್ಚಾಗಿತ್ತು. ಫುಟ್‌ಬಾಲ್ ಟೀಮಿನ ಕ್ಯಾಪ್ಟನ್ ಆಗಿದ್ದ. ವಕೀಲಿ ವೃತ್ತಿಯನ್ನು ಆರಂಭವಾಡಿದ್ದಷ್ಟೋ ಅಷ್ಟೆ. ಅದರಲ್ಲಿ ಆಸಕ್ತಿಯಿಲ್ಲದ್ದರಿಂದಲೂ ಮನೆಯ ಕಡೆ ಅನುಕೂಲವಾಗಿದ್ದುದರಿಂದಲೂ ದೂರಪ್ರಾಚ್ಯ ದೇಶಗಳನ್ನು ನೋಡಲು ವ್ಯಾಪಾರಿ ಹಡಗುಗಳಲ್ಲಿ ದೀರ್ಘಪ್ರವಾಸ ಕೈಕೊಂಡ. ಈ ಪರ್ಯಟನ ಕಾಲದಲ್ಲೇ ಜೋಸೆಫ್ ಕಾನ್ರಾಡನ ಸ್ನೇಹವಾಯಿತು. ಈ ಆತ್ಮೀಯತೆ ಗಾಲ್ಸ್ ವರ್ದಿಯ ಬದುಕಿನುದ್ದಕ್ಕೂ ಉಳಿದುಬಂತು.



ಗಾಲ್ಸ್‌ವರ್ದಿ ತುಂಬಾ ರೂಪವತಿಯೂ ಜಾಣೆಯೂ ಆಗಿದ್ದ ಆಡಾ ಎಂಬಾಕೆಯನ್ನು ಮದುವೆ ಆದ. ಈಕೆ ಗಾಲ್ಸ್‌ವರ್ದಿಯ ದಾಯಾದಿ ಆರ್ಥರ್ ಎಂಬುವವನ ಹೆಂಡತಿ. ವಿಕ್ಟೋರಿಯ ಸಮಾಜದ ಸಾಂಪ್ರದಾಯಿಕ ಕಟ್ಟಳೆಯ ಇರುಕಿನಲ್ಲಿ

ಸಿಕ್ಕು ಬಲವಂತದ ಮದುವೆಗೆ ಈಡಾಗಿದ್ದವಳು. ಅದೊಂದು ವಿಷಮ ದಾಂಪತ್ಯ ಎಂದು ಗಂಡನ ಕಡೆಯವರೇ ಕಂಡುಕೊಂಡಿದ್ದರು. ತೀವ್ರ ಜುಗುಪ್ಸೆ, ನಿರಾಸೆಗಳಿಗೆ ಗುರಿಯಾಗಿದ್ದ ಈಕೆಯ ಬಗ್ಗೆ ಜಾನ್‌ಗೆ ಹುಟ್ಟಿದ ಕನಿಕರ ಕ್ರಮೇಣ ಅನುರಾಗಕ್ಕೆ ತಿರುಗಿತು. ಅನಂತರ 1905ರಲ್ಲಿ ಆಡಾ ತನ್ನ ಪತಿಯೊಡನೆ ವಿವಾಹವಿಚ್ಛೇದ ಮಾಡಿಕೊಂಡ ಮೇಲೆ ಜಾನ್ ಆಕೆಯನ್ನು ಮದುವೆ ಯಾದ. ಆಕೆ ತುಂಬಾ ಬುದ್ಧಿವಂತೆ. ಸಾಹಿತ್ಯದಲ್ಲಿ ಅಭಿರುಚಿ ಉಳ್ಳವಳು. ಅವಳೇ ಗಾಲ್ಸ್‌ವರ್ದಿಯಲ್ಲಿ ಹುದುಗಿದ್ದ ಸಾಹಿತ್ಯ ಪ್ರತಿಭೆಯನ್ನು ಜಾಗ್ರತಗೊಳಿಸಿ ಆತ ಪುಸ್ತಕಗಳ ಮೇಲೆ ಪುಸ್ತಕ ಬರೆಯುವಂತೆ ಬಾಳಿನುದ್ದಕ್ಕೂ ಸ್ಫೂರ್ತಿ ಕೊಡುತ್ತ ಬಂದಳು. ಅವರ ದಾಂಪತ್ಯ ಪರಸ್ಪರ ಪ್ರೇಮ, ತಿಳಿವಳಿಕೆಗಳಿಂದ ಸುಖಮಯವಾಗಿತ್ತು. ಗಾಲ್ಸ್‌ವರ್ದಿಯ ನಿರ್ವಿಕಾರವಾದ ಸಮಚಿತ್ತದ ಬರೆವಣಿಗೆಗೆ ಈ ಹಿನ್ನೆಲೆ ಬಹುಮಟ್ಟಿಗೆ ಕಾರಣವಾಗಿರಬೇಕು.

ಗಾಲ್ಸ್‌ವರ್ದಿಯ ಮೊಟ್ಟಮೊದಲ ಕೃತಿ 1897ರಲ್ಲಿ ಪ್ರಕಟವಾದ ಫೋರ್ ವಿಂಡ್ಸ್ ಎಂಬ ಸಣ್ಣಕತೆಗಳ ಸಂಕಲನ. ಅನಂತರ 1898ರಲ್ಲಿ ಜೋಸೆಲಿನ್, 1900ರಲ್ಲಿ ವಿಲ್ಲಾ ರೂಬೆನ್ ಎಂಬ ಎರಡು ಕಾದಂಬರಿಗಳನ್ನು ಈತ ಬರೆದ. ಜಾನ್ ಸಿಂಜಾನ್ ಎಂಬ ಕಾವ್ಯನಾಮದಲ್ಲಿ ಪ್ರಕಟವಾದ ಈ ಕೃತಿಗಳು ಯಾರ ಗಮನವನ್ನೂ ಸೆಳೆಯಲಿಲ್ಲ. ತುರ್ಗ್ಯನೆಫ್‌ನನ್ನು ಮೆಚ್ಚಿದ್ದ ಗಾಲ್ಸ್‌ವರ್ದಿಗೆ ರಷ್ಯದ ಬೃಹತ್ ಕಾದಂಬರಿಗಳ ಮಾದರಿಯಲ್ಲಿ ಬರೆಯಬೇಕೆಂಬ ಆಕಾಂಕ್ಷೆ ಪ್ರಬಲವಾಗಿತ್ತು.

1906ರಲ್ಲಿ ಗಾಲ್ಸ್‌ವರ್ದಿ ದಿ ಮ್ಯಾನ್ ಆಫ್ ಪ್ರಾಪರ್ಟಿ ಎಂಬ ಕಾದಂಬರಿಯನ್ನು ಬರೆದ. ಇದು ಪ್ರಕಟವಾದ ಕೂಡಲೆ ವಿಖ್ಯಾತವಾಯಿತು. ಅದೇ ವರ್ಷ ಈತನ ದಿ ಸಿಲ್ವರ್ ಬಾಕ್ಸ್ ಎಂಬ ಸಾಮಾಜಿಕ ನಾಟಕ ರಂಗದ ಮೇಲೆ ಅತ್ಯಂತ ಯಶಸ್ವಿಯಾಯಿತು.

ಗಾಲ್ಸ್‌ವರ್ದಿಯ ಪ್ರತಿಭೆ ಸಹಜವಾಗಿ ಉಕ್ಕಿಬಂದ ಚಿಲುಮೆಯಲ್ಲ; ಪ್ರಜ್ಞಾಪೂರ್ವಕ ವಾದ ಸಾಧನೆಯಿಂದ ಆತ ಗಳಿಸಿಕೊಂಡದ್ದು. ಕೃತಿಯ ವಸ್ತುವಿನ ಬಗ್ಗೆ ತುಂಬಾ ಆಲೋಚನೆ ಮಾಡಿ, ನಿಧಾನವಾಗಿ ಕೂತು ಬರೆದು, ಅನಂತರ ಅದನ್ನು ಕಲಾತ್ಮಕ ದೃಷ್ಟಿಯಿಂದ ಪರಾಮರ್ಶಿಸಿ ಕಡೆದು ಮೆರುಗು ಕೊಡುವ ಕಲೆಗಾರಿಕೆ ಆತನದು. ಹೀಗಾದುದರಿಂದಲೇ ಗಾಲ್ಸವರ್ದಿಗೆ ಮಧ್ಯ ವಯಸ್ಸು ಮೀರಿದ ಮೇಲೆಯೇ ಸಾಹಿತ್ಯದ ಸಿದ್ಧಿ ಮತ್ತು ಕೀರ್ತಿ ಲಭಿಸಿದ್ದು. ದಿ ಮ್ಯಾನ್ ಆಫ್ ಪ್ರಾಪರ್ಟಿಯನ್ನು ಬರೆದಾಗ ಅದೊಂದು ಸ್ವಸಂಪೂರ್ಣವಾದ ಕೃತಿ ಎಂದೇ ಭಾವಿಸಿದ್ದ ಗ್ರಂಥಕರ್ತನಿಗೆ ಅನಂತರ ಅದು ಮಹಾ ಕಾದಂಬರಿಯೊಂದರ ಮೊದಲ ಭಾಗವಾಗಲು ತಕ್ಕುದೆಂದು ತೋರಿತು. ಕಾಲ್ಪನಿಕವಾದ ಫಾರ್‌ಸೈಟ್ ಮನೆತನದ ಮೂರು ತಲೆಮಾರಿನ ಕತೆಯನ್ನು ಸವಿಸ್ತಾರವಾಗಿ ಬೆಳೆಸಿಕೊಂಡು 1906 ರಿಂದ 1933 ವರೆಗೂ ಸುಮಾರು 26 ವರ್ಷಗಳ ಕಾಲ ಗಾಲ್ಸ್‌ವರ್ದಿ ಈ ಮಹಾಕಾದಂಬರಿಯನ್ನು ಮುಂದುವರಿಸಿ ಬರೆದ. ಈ ಸುದೀರ್ಘವಾದ ಕೃತಿ ಮೊದಲು ಒಂದೊಂದೇ ಸಂಪುಟವಾಗಿ ಪ್ರಕಟವಾದರೂ ಮೊದಲ ಐದು ಸಂಪುಟ ಸೇರಿದ ಫಾರ್‌ಸೈಟ್ ಸಾಗಾ ಎಂಬ ಹೆಸರಿನಲ್ಲಿ ಒಂದನೆಯ ಭಾಗವಾಯಿತು. ಅನಂತರ ಮತ್ತೆ ಮೂರು ಸಂಪುಟಗಳು ಪ್ರತ್ಯೇಕವಾಗಿ ಬಂದುದಲ್ಲದೆ 1929ರಲ್ಲಿ ಅವನ್ನು ಒಟ್ಟಾಗಿ ಸೇರಿಸಿ ಎ ಮಾಡರ್ನ್ ಕಾಮೆಡಿ ಎಂಬ ಹೆಸರಿನಲ್ಲಿ ಎರಡನೆಯ ಭಾಗವಾಗಿ ಪ್ರಕಟಿಸಲಾಯಿತು. 1931ರಿಂದ 1933ರ ವರೆಗೆ ಬರೆಯಲ್ಪಟ್ಟ ಇನ್ನೂ ಮೂರು ಸಂಪುಟಗಳನ್ನು ಗಾಲ್ಸ್‌ವರ್ದಿಯ ಮರಣಾನಂತರ 1934ರಲ್ಲಿ ಎಂಡ್ ಆಫ್ ದಿ ಚಾಪ್ಟರ್ ಎಂಬ ಶಿರೋನಾಮೆಯಲ್ಲಿ ಮೂರನೆಯ ಭಾಗವಾಗಿ ಪ್ರಕಟಗೊಳಿಸ ಲಾಯಿತು. ಫಾರ್‌ಸೈಟ್ ಮನೆತನದ ತಲೆಮಾರಿನ ಕತೆಯಾಗಿದ್ದು ಮೇಲಿನ ಮಧ್ಯಮ ವರ್ಗಕ್ಕೆ ಸೇರಿದ ಇಂಗ್ಲಿಷ್ ಸಿರಿವಂತರ ಕೌಟುಂಬಿಕ ಜೀವನದ ತದ್ವತ್ ಜೀವಂತ ಪೂರ್ಣವಾದ ಚಿತ್ರವಾಗಿ ಮೂಡಿರುವ ಈ ಮಹಾಕಾದಂಬರಿ ಜಗತ್ತಿನ ಮಹತ್ಕೃತಿಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಪಾತ್ರ ಸೃಷ್ಟಿಯಲ್ಲಿ, ಚಿತ್ರಣದಲ್ಲಿ ಗಾಲ್ಸ್‌ವರ್ದಿಯ ಅಸಾಧಾರಣವಾದ ಪ್ರತಿಭೆ, ವಿಶೇಷವಾದ ಪರಿಣತಿ ಚೆನ್ನಾಗಿ ವ್ಯಕ್ತವಾಗುತ್ತವೆ. ಇದರಲ್ಲಿ ಬರುವ ಹಿರಿಯ ಫಾರ್‌ಸೈಟ್, ಸೋಮ್ಸ್, ಐರೀನ್ ಮೊದಲಾದ ವ್ಯಕ್ತಿಗಳು ಬಹುಕಾಲ ನೆನಪಿನಲ್ಲಿ ಉಳಿಯುತ್ತಾರೆ. ಈ ಬೃಹತ್ ಕಾದಂಬರಿಯ ಒಂದೊಂದು ಭಾಗವೂ ಒಂದೊಂದು ಸ್ವತಂತ್ರ್ಯವಾದ ಕಾದಂಬರಿ ಇದ್ದ ಹಾಗೆಯೇ ಇದೆ. ಇವಲ್ಲದೆ ಇತರೆ ಏಳು ಕಾದಂಬರಿಗಳನ್ನು ಗಾಲ್ಸ್‌ವರ್ದಿ ಅನಂತರ ಬರೆದ. ಎಲ್ಲ ಸೇರಿದರೆ ಸುಮಾರು 20 ಕಾದಂಬರಿಗಳಾಗುತ್ತವೆ. ಜೊತೆಗೆ 9 ನಾಟಕಗಳನ್ನೂ, 9 ಪ್ರಬಂಧ ಸಂಕಲನಗಳನ್ನೂ, 7 ಸಣ್ಣ ಕತೆಗಳ ಸಂಕಲನಗಳನ್ನೂ, ಒಂದು ಪತ್ರಗುಚ್ಛವನ್ನೂ ಈ ಸಾಹಿತಿ ರಚಿಸಿದ್ದಾನೆ. ಮರಣಾನಂತರದ ಪ್ರಕಟಣೆಯಾಗಿ ಬಂದ ಈತನ ಒಂದು ಕವನ ಸಂಕಲನ ಗಣನೀಯ ಕಾವ್ಯಗುಣದಿಂದ ಕೂಡಿದ್ದರೂ ಕಾದಂಬರಿ ಮತ್ತು ನಾಟಕಗಳ ಉಜ್ಜ್ವಲತೆಯಲ್ಲಿ ಮರೆಯಾಗಿದೆ.

1921ರಲ್ಲಿ ಸ್ಥಾಪಿತವಾದ ಪಿ.ಇ.ಎನ್. ಕ್ಲಬ್ಬಿನ ಪ್ರಥಮ ಅಧ್ಯಕ್ಷನಾಗಿ ಗಾಲ್ಸ್‌ವರ್ದಿ ಆಯ್ಕೆಯಾದ. ಈ ಮನ್ನಣೆಗೆ ಆತ ಸರ್ವ ವಿಧದಲ್ಲೂ ಯೋಗ್ಯನಾಗಿದ್ದ. ಈ ಸ್ಥಾನದ ಫಲವಾಗಿ ದೂರದ ಅನೇಕ ಸಾಹಿತಿಗಳು ಈತನಿಗೆ ಮಿತ್ರರಾದರು. 1918ರಲ್ಲಿ ತಾನಾಗಿ ಬಂದ ನೈಟ್‌ಹುಡ್ ಗೌರವವನ್ನು ನಿರಾಕರಿಸಿದನಾದರೂ 1929ರಲ್ಲಿ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಯನ್ನು ಈತ ತಪ್ಪಿಸಿಕೊಳ್ಳಲಾಗಲಿಲ್ಲ. 1932ರಲ್ಲಿ ವಿಶ್ವದ ಶ್ರೇಷ್ಠಸಾಹಿತ್ಯಕ್ಕೆ ಸಲ್ಲುವ ನೊಬೆಲ್ ಬಹುಮಾನ ಈತನಿಗೆ ಲಭಿಸಿತು. ಆಕ್ಸ್‌ಫರ್ಡ್, ಕೇಂಬ್ರಿಜ್ ಮುಂತಾದ ಹಲವಾರು ವಿಶ್ವವಿದ್ಯಾನಿಲಯಗಳು ಈತನಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದವು.

ಗಾಲ್ಸ್‌ವರ್ದಿ ಶ್ರೇಷ್ಠದರ್ಜೆಯ ಸಾಹಿತಿಯಾಗಿ ಮಾತ್ರವಲ್ಲ ದಯಾರ್ದ್ರ ಹೃದಯ, ಮಾನವೀಯ ಅನುಕಂಪೆ, ದಾನಶೀಲ ಔದಾರ್ಯ ಮುಂತಾದ ಗುಣ ಸಂಪನ್ನನೂ ಸುಸಂಸ್ಕೃತನೂ ಆದ ವ್ಯಕ್ತಿಯಾಗಿ ಪರಿಚಿತರೆಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ. ತನಗೆ ಬಂದ ನೊಬೆಲ್ ಬಹುಮಾನದ ಹಣವನ್ನೆಲ್ಲ ಪಿ.ಇ.ಎನ್. ಕ್ಲಬ್ಬಿನ ಅಭಿವೃದ್ಧಿಗಾಗಿ ದಾನಮಾಡಿಬಿಟ್ಟ. ಒಂದನೆಯ ಮಹಾಯುದ್ಧದ ಕಾಲದಲ್ಲಿ ತನ್ನ ಪುಸ್ತಕಗಳಿಂದ ಬರುತ್ತಿದ್ದ ವರಮಾನವೆಲ್ಲ ಯೋಧರ ಪರಿಹಾರನಿಧಿಗೆ ಸೇರುವ ಹಾಗೆ ಏರ್ಪಾಟು ಮಾಡಿದ.

ಸಮಾಜದ ಕ್ರೌರ್ಯ, ತಿರಸ್ಕಾರ, ಶೋಷಣೆಗಳಿಗೆ ಗುರಿಯಾಗಿ ಪರಿತಪಿಸುವ ದೀನ ದಲಿತರ ಕರುಣಾಜನಕ ಪರಿಸ್ಥಿತಿಯನ್ನು ಚಿತ್ರಿಸುವ ಕತೆಗಳೇ ಇವನ ನಾಟಕಗಳ ವಸ್ತು. ಬರೆದುದು ಕೆಲವೇ ನಾಟಕಗಳಾದರೂ ಒಂದೊಂದೂ ಬಹು ಪರಿಣಾಮಕಾರಿ ಯಾಗಿ ಸಮಾಜದ ಮೇಲೆ ಪ್ರಭಾವವನ್ನು ಬೀರಿತು. ಶ್ರೀಮಂತರಿಗೇ ಒಂದು ರೀತಿ ಬಡವರಿಗೇ ಮತ್ತೊಂದು ರೀತಿಯಾಗಿ ಕಾನೂನನ್ನು ಅನ್ವಯಿಸುವ ನ್ಯಾಯಾಲಯಗಳ ಪಕ್ಷಪಾತವನ್ನು ಕುರಿತ ವಿಡಂಬನೆಯೇ ದಿ ಸಿಲ್ವರ್ ಬಾಕ್ಸ್ ಎಂಬ ನಾಟಕ. ಕಾರ್ಮಿಕರ ಸಮಸ್ಯೆಯನ್ನು ವಿಶ್ಲೇಷಿಸುವ ದಿ ಸ್ಟ್ರೈಫ್ ಎಂಬ ನಾಟಕ ಮತ್ತು ನರಕಗಳಂತಿದ್ದ ಕಾರಾಗೃಹಗಳ ಘೋರಸ್ಥಿತಿಯನ್ನು ಚಿತ್ರಿಸುವ ಜಸ್ಟಿಸ್ ಎಂಬ ನಾಟಕ ಸರ್ಕಾರದ ಗಮನವನ್ನೂ ಸೆಳೆದವು. ಕಾರಾಗೃಹಗಳ ಸ್ಥಿತಿಯನ್ನು ಸುಧಾರಿಸುವ ಅನೇಕ ಕ್ರಮಗಳನ್ನು ಸರ್ಕಾರ ಕೈಕೊಂಡಿತು.

ಗಾಲ್ಸ್‌ವರ್ದಿಗೆ ಕಪಟತನ, ಗೊಡ್ಡು ಸಂಪ್ರದಾಯ ಮತ್ತು ಹೇಡಿತನಗಳನ್ನು ಕಂಡರೆ ಆಗುತ್ತಿರಲಿಲ್ಲ. ಸಮಾಜದ ಹಲವಾರು ಸಮಸ್ಯೆಗಳನ್ನು ಕುರಿತ ಸಮರ್ಪಕವಾದ ವಿಶ್ಲೇಷಣೆಯನ್ನು ಈತನ ಕೃತಿಗಳಲ್ಲಿ ಕಾಣಬಹುದು. ಈ ಸಮಸ್ಯೆಗಳನ್ನು ಮಾನವೀಯ ದೃಷ್ಟಿಯಿಂದ ನೋಡುತ್ತ ನಿಷ್ಪಕ್ಷಪಾತವಾಗಿ ಸಮಾಜದ ವಿಚಾರವಂತರ ಮುಂದಿಡುವುದಷ್ಟೇ ಗಾಲ್ಸ್‌ವರ್ದಿಯ ಉದ್ದೇಶ. ಈತ ಯಾವ ಸಮಸ್ಯೆಗೂ ಪರಿಹಾರ ವನ್ನು ಸೂಚಿಸುವುದಿಲ್ಲ. ಏಕೆಂದರೆ ಈ ಸಮಸ್ಯೆಗಳಿಗೆ ಪರಿಹಾರ ಅಷ್ಟು ಸರಳವಲ್ಲ, ಸುಲಭವಲ್ಲ ಎಂದು ಈತ ಚೆನ್ನಾಗಿ ವಿಚಾರ ಮಾಡಿ ಮನಗಂಡಿದ್ದ. ಯಾವ ಸಮಸ್ಯೆಗಾದರೂ ಯಾವ ಸಾಮಾಜಿಕ ಅನ್ಯಾಯಕ್ಕಾದರೂ ಯಾವ ಒಬ್ಬ ವ್ಯಕ್ತಿಯಾಗಲಿ ಯಾವ ಒಂದು ವರ್ಗವಾಗಲಿ ಸಂಪೂರ್ಣವಾಗಿ ಹೊಣೆಯಲ್ಲ ಎಂದು ಈತನ ಅಭಿಮತ. ಇದಕ್ಕೇ ಈತ ಯಾರ ಮೇಲೂ ತಪ್ಪು ಹೊರಿಸುವುದಿಲ್ಲ. ಯಾರನ್ನೂ ದೂರುವುದಿಲ್ಲ. ಸಮಾಜದ ವ್ಯವಸ್ಥೆಯಲ್ಲೇ ಕ್ರಾಂತಿಕಾರಕವಾದ ಕೆಲವು ಮೂಲಭೂತ ಬದಲಾವಣೆಗಳಾಗುವುದು ಅಗತ್ಯ. ಸಾಮಾಜಿಕ ಜೀವನ ವ್ಯವಸ್ಥೆಯಾದರೂ ತುಂಬ ಜಟಿಲವಾದುದು. ಯಾವೊಂದು ಆದರ್ಶದ ಸರಳೀಕರಣಕ್ಕೂ ಅದು ಒಳಪಡುವಂಥದಲ್ಲ. ಭಾಗ್ಯಹೀನರು ನಿರಂತರವಾಗಿ ಹೀನಸ್ಥಿತಿಯಲ್ಲೇ ಇರುವಂಥ ಪರಿಸ್ಥಿತಿಗೆ ಇರುವ ಹಲವಾರು ಕಾರಣಗಳು ಇಡೀ ಸಮಾಜದ ರಚನೆಯಲ್ಲಿ ಒಂದಕ್ಕೊಂದು ಜಟಿಲವಾಗಿ ಹೆಣೆದುಕೊಂಡಿರುತ್ತವೆ. ಒಂದು ಕಡೆ ಸಿಕ್ಕು ಬಿಡಿಸಲೆತ್ನಿಸಿದರೆ ಇನ್ನೊಂದು ಕಡೆ ಸಿಕ್ಕುಸಿಕ್ಕಾಗುತ್ತದೆ. ಇದು ಸಾಮಾನ್ಯವಾಗಿ ಗಾಲ್ಸ್‌ವರ್ದಿಯ ವಿಚಾರಸರಣಿ. ಈತ ನಿರಾಶಾವಾದಿಯೇನೊ ಎಂಬ ಸಂಶಯ ಬರಬಹುದು. ಆದರೆ ಅದು ನಿಜವಲ್ಲ. ಈತನಿಗೆ ಮಾನವೀಯತೆಯಲ್ಲಿ ಅಪಾರವಾದ ಶ್ರದ್ಧೆ. ಸದ್ಗುಣ ಸಂಪನ್ನ, ಮನುಷ್ಯತ್ವದಲ್ಲಿ ನಂಬಿಕೆ. ಈ ವಿಶ್ವಾಸವಿದ್ದುದರಿಂದಲೇ ಗಾಲ್ಸ್‌ವರ್ದಿ ಸಾಮಾಜಿಕ ಅನ್ಯಾಯದ ವಿರುದ್ಧ ಸೆಣಸುವಂತೆ ಜನರಲ್ಲಿ ಜಾಗೃತಿಯುಂಟುಮಾಡಿದ.

20ನೆಯ ಶತಮಾನದ ಪೂರ್ವಾರ್ಧ ಅವಧಿ ವಿಚಾರಪ್ರಧಾನವಾದ ಸಾಮಾಜಿಕ ಸಮಸ್ಯಾ ನಾಟಕಗಳ ಯುಗ ಎಂದು ಹೆಸರಾಗಿದೆ. ಈ ಕಾಲದ ಶ್ರೇಷ್ಠ ನಾಟಕಕಾರರಲ್ಲಿ ಗಾಲ್ಸ್‌ವರ್ದಿಯೂ ಒಬ್ಬನಾಗಿದ್ದಾನೆ. ಬರ್ನಾರ್ಡ್ ಷಾನ ನಾಟಕಗಳಲ್ಲಿ ಕಂಡುಬರುವ ಸಂಭಾಷಣಾ ಚಾತುರ್ಯವಾಗಲಿ, ಹಾಸ್ಯದ ಹೊನಲಾಗಲಿ ಈತನ ನಾಟಕಗಳಲ್ಲಿ ಇಲ್ಲ. ತುಂಬ ಗಂಭೀರವೂ ಉದ್ವೇಗರಹಿತವೂ ಆದ ವಸ್ತುನಿಷ್ಠ ಪ್ರತಿಪಾದನೆ ಈತನ ನಾಟಕಗಳ ಲಕ್ಷಣ. ಪಾತ್ರಗಳೂ ಸಂಭಾಷಣೆಯೂ ತೀರ ಸಾಧಾರಣ ಎನ್ನುವಂಥವು. ಆದರೆ ನಾಟಕ ಸಂವಿಧಾನದಲ್ಲಿ ಕಾಣುವ ಅಪೂರ್ವವಾದ ಶಿಲ್ಪಕೌಶಲದಲ್ಲಿ

ಗಾಲ್ಸ್‌ವರ್ದಿಯನ್ನು ಮೀರಿಸುವ ಮತ್ತೊಬ್ಬ ನಾಟಕಕಾರನಿಲ್ಲ. ಸುಸ್ಥಿರವಾದ ಅಸ್ತಿಭಾರದ ಮೇಲೆ ತುಂಬ ಕಲಾತ್ಮಕವಾಗಿ ನಿರ್ಮಿಸಿದ ಗೋಪುರದ ಮಾದರಿ ಈತನ ನಾಟಕಗಳ ರಚನಾಶೈಲಿ. ಸಾಹಿತ್ಯಕ್ಕೆ ಇದು ಗಾಲ್ಸ್‌ವರ್ದಿಯ ವಿಶಿಷ್ಟ ಕಾಣಿಕೆ. ಈತನನ್ನು ಸಮಾಜ ಸುಧಾರಕ ಎನ್ನುವುದಕ್ಕಿಂತ ಹೆಚ್ಚಾಗಿ ಶ್ರೇಷ್ಠ ಕಲಾವಿದ ಎನ್ನಬಹುದು. ಸಾಹಿತ್ಯಕ್ಕಿಂತ, ಕಲೆಗಿಂತ ಜೀವನ ದೊಡ್ಡದು ಎಂಬುದಕ್ಕೆ ಸರಿಯಾಗಿ ಗಾಲ್ಸ್‌ವರ್ದಿಯ ವ್ಯಕ್ತಿತ್ವವೇ ತುಂಬಾ ಹಿರಿದಾದುದು. ಈತನ ಸರಸಸಜ್ಜನಿಕೆಗಳಿಂದ ಕೂಡಿದ ಸುಸಂಸ್ಕೃತ ನಡೆವಳಿಕೆ, ಉದಾತ್ತವಾದ ಸ್ವಭಾವ, ತನಗೆ ಬರುತ್ತಿದ್ದ ವರಮಾನದಲ್ಲಿ ಅರ್ಧ ಭಾಗವನ್ನು ದಾನಧರ್ಮಗಳಿಗೆ ವಿನಿಯೋಗಿಸಿ ಉಳಿದರ್ಧ ಭಾಗದಲ್ಲಿ ಸಂತುಷ್ಟ, ಸಂತೃಪ್ತ ಜೀವನವನ್ನು ನಡೆಸುತ್ತಿದ್ದ ಗುಣಸಂಪನ್ನತೆ ಪ್ರಸಿದ್ಧವಾಗಿದೆ. (ಕೆ.ಬಿ.ಪಿ.)

**ಗಾವಿಲಗಡ :** ಮಹಾರಾಷ್ಟ್ರ ರಾಜ್ಯದ ಅಮರಾವತಿ ಜಿಲ್ಲೆಯ ಮೇಳಘಾಟ್ ತಾಲ್ಲೂಕಿನಲ್ಲಿಯ ಒಂದು ಐತಿಹಾಸಿಕ ಕೋಟೆ. ಸು. 1220ಮೀ ಎತ್ತರದ ಸಾತ್ಪುರಾ ಬೆಟ್ಟದ ನೆತ್ತಿಯ ಮೇಲಿದೆ. ಅಹ್ಮದ್ ಶಹ ಬಹುಮನಿ ಇದನ್ನು ಕಟ್ಟಿಸಿದನೆನ್ನಲಾಗಿದೆ. (1425). ಅಕ್ಬರನ ಆಡಳಿತದ ಕಾಲದಲ್ಲಿ ಅಬುಲ್‌ಫಜಲ್ ಇದನ್ನು ಗೆದ್ದುಕೊಂಡ (1598). ಹಿಂದೆ ಈ ಭಾಗದಲ್ಲಿ ಗೋವಳರು ಹೆಚ್ಚಾಗಿ ವಾಸವಾಗಿದ್ದರಿಂದ ಇವಕ್ಕೆ ಗವಳೀಗಡ, ಗಾವಿಲಗಡ ಎಂದು ಹೆಸರು ಬಂತೆಂದು ಪ್ರತೀತಿ. ಮೊಗಲರಿಂದ ಭೋಸ್ಲೆ ವಂಶದವರ ವಶಕ್ಕೆ ಬಂದ ಅನಂತರ ಈ ಕೋಟೆ ವಿಶೇಷ ಪ್ರಸಿದ್ಧಿ ಪಡೆಯಿತು. ಭೋಸ್ಲೆ ವಂಶ ರಾಜ್ಯವನ್ನು ಕಳೆದುಕೊಂಡ ಮೇಲೆ ಇದು ಇಂಗ್ಲೀಷರ ಅಧಿಕಾರ ಕಕ್ಷೆಯಲ್ಲಿ ಬಂತು. ಕೋಟೆಯಲ್ಲಿ ಒಂದು ಸುಂದರವಾದ ಮಸೀದಿಯೂ ಕೆಲವು ಶಿಲಾಲೇಖನಗಳೂ ಇವೆ *.

**ಗಾಸ್, ಎಡ್ಮಂಡ್ :** 1849–1928. ಇಂಗ್ಲಿಷ್ ಸಾಹಿತಿ. ಯುರೋಪಿನ ಬೇರೆ ಬೇರೆ ದೇಶಭಾಷೆಗಳ ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ಇಂಗ್ಲೆಂಡಿನ ಓದುಗರಿಗೆ ಪರಿಚಯ ಮಾಡಿಕೊಟ್ಟ ವಿದ್ವಾಂಸ ವಿಮರ್ಶಕ. ತಂದೆ ಪಿ. ಎಚ್. ಗಾಸ್ ಧರ್ಮ ನಿಷ್ಠನಾದ ಒಬ್ಬ ಪ್ರಾಣಿವಿಜ್ಞಾನಿ. ಮನೆಯ ಕಠಿಣ ನೀತಿನಿಯಮಗಳ ವಾತಾವರಣ ಯುವಕ ಎಡ್ಮಂಡನಿಗೆ ಹಿಡಿಸಲಿಲ್ಲ. ಆದುದರಿಂದ ತಾನು ವಿಪರೀತ ಒತ್ತಡಕ್ಕೆ ಒಳಗಾಗಬೇಕಾಯಿತೆಂದು ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾನೆ. ಈ ವಿರಸವನ್ನು ಮರೆಯಲು ಎಡ್ಮಂಡ್ ಸಾಹಿತ್ಯಾಭ್ಯಾಸದಲ್ಲಿ ನಿರತನಾದ. ಅನೇಕ ವರ್ಷ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ, ಬೋರ್ಡ್ ಆಫ್ ಟ್ರೇಡ್ ಸಂಸ್ಥೆಗಳಲ್ಲಿ ದುಡಿದು ಬಿಡುವಿನ ಕಾಲವನ್ನೆಲ್ಲ ಸಾಹಿತ್ಯ ಅಧ್ಯಯನಕ್ಕೆ ವಿನಿಯೋಗಿಸಿದ. ಈತ ಬರೆದ ಕೆಲವು ಸಾಧಾರಣ ಕವನಗಳು, ಭಾಷಾಂತರಗಳು, ಸಾಹಿತ್ಯ ಚರಿತ್ರೆಗಳು, ವಿಮರ್ಶಾತ್ಮಕ ಬರೆಹಗಳು ಇವನಿಗೆ ಆ ಕಾಲದಲ್ಲಿ ಖ್ಯಾತಿ ತಂದವು. ಆಧುನಿಕ ಸಾಹಿತ್ಯ ಯುಗದ ಕ್ರಾಂತಿಕಾರಕ

ಬದಲಾವಣೆಗಳು ಅಸ್ತಿತ್ವಕ್ಕೆ ಬರುವ ಮುನ್ನ ರಚಿತವಾದುವಾದ್ದರಿಂದ ಈತನ ಕೃತಿಗಳು ಈಗ ತೀರಾ ಅಪಕ್ವವೆನಿಸುತ್ತವೆ. ಈತನ ಮುಖ್ಯಕೃತಿಗಳಲ್ಲಿ ಇಬ್ಸೆನ್ ನಾಟಕಗಳ ಭಾಷಾಂತರಗಳು, ಈತ ಸಂಪಾದಿಸಿದ ಥಾಮಸ್ ಗ್ರೇ, ಜಾನ್ ಡನ್, ಥಾಮಸ್ ಬ್ರೌನ್ ಮುಂತಾದವರ ಕೃತಿಗಳು, 18ನೆಯ ಶತಮಾನದ ಇಂಗ್ಲಿಷ್ ಸಾಹಿತ್ಯದ ಚರಿತ್ರೆ, ಕ್ರಿಟಿಕಲ್ ಕಿಟ್‌ಕ್ಯಾಟ್ಸ್, ಫ್ರೆಂಚ್ ಪ್ರೊಫೈಲ್ಸ್ ಮುಂತಾದವು ಸೇರಿವೆ. ಎಡ್ಮಂಡನ ಬರೆವಣಿಗೆಯಲ್ಲಿ ವಿಪುಲವಾದ ಉತ್ಸಾಹ, ರಮಣೀಯತೆಗಳಿದ್ದರೂ ಸಾರ್ವಕಾಲಿಕವಾದ ಸಾಹಿತ್ಯ ಮೌಲ್ಯಗಳು ವಿರಳ. ಆದರೆ ಸ್ಕಾಂಡಿನೇವಿಯನ್ ಹಾಗೂ ಫ್ರೆಂಚ್ ಸಾಹಿತ್ಯ, ಮತ್ತು 17–18ನೆಯ ಶತಮಾನದ ಇಂಗ್ಲಿಷ್ ಸಾಹಿತ್ಯ– ಇವುಗಳಲ್ಲಿ ಅಪಾರ ಕೃಷಿ ನಡೆಸಿದ ಅಗ್ರಗಣ್ಯರಲ್ಲಿ ಈತ ಒಬ್ಬ. ಇಂದಿನ ವಿಮರ್ಶಕರ ಬರೆವಣಿಗೆಯಲ್ಲಿ ಅಗಾಧ ಪಾಂಡಿತ್ಯ, ಪ್ರಖರವಾದ ಬುದ್ಧಿಶಕ್ತಿಗಳು ತುಂಬಿದ್ದರೂ ತಾನು ಮೆಚ್ಚಿಕೊಂಡ ಸಾಹಿತ್ಯ ಕೃತಿಗಳನ್ನು ಚಪ್ಪರಿಸಿ ಸವಿದು ಆಸ್ವಾದಿಸಬೇಕೆನ್ನುವ ಮನೋಧರ್ಮ ಇಲ್ಲವಾಗಿದೆ. ಅಂಥವರಿಗೆ ಎಡ್ಮಂಡನ ಗ್ರಂಥಗಳು ದಿಕ್ಸೂಚಿಯಾಗಬೇಕು. ಫಾದರ್ ಅಂಡ್ ಸನ್ ಎನ್ನುವ ಗಾಸ್ ನ ಆತ್ಮಕಥೆ, ಇಂಗ್ಲಿಷ್ ಭಾಷೆಯಲ್ಲಿನ ಒಂದು ಅಪೂರ್ವ ಗ್ರಂಥ. ಇವನ ನವುರಾದ ವ್ಯಂಗ್ಯ, ಬುದ್ಧಿಶಕ್ತಿ, ತಾಳ್ಮೆ ಎಲ್ಲವೂ ಇಲ್ಲಿ ಆಕರ್ಷಕ ಶೈಲಿಯಲ್ಲಿ ಅಭಿವ್ಯಕ್ತಿಗೊಂಡಿವೆ. (ಎಚ್.ಕೆ.ಆರ್.)

**ಗಾಹದ್ವಾಲ ಮನೆತನ :** 11ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಭಾರತದ ಕನೌಜಿನಲ್ಲಿ ಅಧಿಕಾರಕ್ಕೆ ಬಂದ ಒಂದು ರಾಜಮನೆತನ. ಇದು ರಾಷ್ಟ್ರಕೂಟರ ಅಥವಾ ರಾಥೋರರ ವಂಶದ ಒಂದು ರಾಜಮನೆತನ. ಇದು ರಾಷ್ಟ್ರಕೂಟರ ಅಥವಾ ರಾಥೋರರ ವಂಶದ ಒಂದು ಶಾಖೆಯೆಂಬುದು ಕೆಲವರ ಅಭಿಪ್ರಾಯವಾದರೂ ಇದಕ್ಕೆ ಸಾಕಷ್ಟು ಆಧಾರಗಳಿಲ್ಲ. ಕಳಚುರಿ ಲಕ್ಷ್ಮೀಕರ್ಣನ ಮಾಂಡಲಿಕನಾಗಿದ್ದ ಯಶೋವಿಗ್ರಹ ಈವರೆಗೆ ತಿಳಿದುಬಂದಿರುವ ಮೊದಲ ದೊರೆ. ಇವನ ಮಗ ಮಹೀಚಂದ್ರ. ಇವನಿಗೆ ಮಹಿತಲ, ಮಹೀಯಲ, ಎಂದೂ ಹೆಸರುಗಳಿದ್ದುವು. ಈತ ಉತ್ತರ ಪ್ರದೇಶದ ಕೆಲವು ಭಾಗಗಳನ್ನಾಳುತ್ತಿದ್ದ. ಮಹೀಚಂದ್ರನ ಅನಂತರ ಪಟ್ಟಕ್ಕೆ ಬಂದವನು ಅವನ ಮಗ ಚಂದ್ರದೇವ. ಉತ್ತರ ಭಾರತದಲ್ಲಿ ಪ್ರಬಲರಾಗಿದ್ದ ಪರಮಾರ ಭೋಜ ಮತ್ತು ಕಳಚುರಿ ಕರ್ಣರ ಕಾಲದಲ್ಲಿ ಆಕ್ರಮಣ ಮಾಡಲು ಹೆದರಿ ಹಿಂದೆಗೆಯುತ್ತಿದ್ದ ಮುಸ್ಲಿಮರು ಅವರ ಅನಂತರ ಮತ್ತೆ ತಮ್ಮ ಧಾಳಿಗಳನ್ನಾರಂಭಿಸಿದ ರೆಂದೂ ಪಂಜಾಬಿನ ರಾಜ್ಯಪಾಲನಾಗಿದ್ದ ಮಹಮೂದ 1086–90ರಲ್ಲಿ ಕನೌಜ್, ಕಾಲಂಜರ ಮತ್ತು ಉಜ್ಜಯಿನಿಗಳನ್ನು ಲೂಟಿ ಮಾಡಿದನೆಂದೂ ಆಗ ಕನೌಜಿನಲ್ಲಿ ಚಂದರಾಯ್ ಎಂಬವನು ಇವನ ಮಿತ್ರನಾಗಿದ್ದನೆಂದೂ ತಿಳಿದುಬರುತ್ತದೆ. ಚಂದ್ರದೇವನೇ ಈ ಚಂದರಾಯನಾಗಿರಬಹುದು. ಮಹಮೂದ ತನ್ನ ದಂಡಯಾತ್ರೆಯಿಂದ ಹಿಂದಿರುಗಿದಾಗ ಉದ್ಭವಿಸಿದ ಅನಿಶ್ಚಯ ಪರಿಸ್ಥಿತಿಯನ್ನು ಚಂದ್ರದೇವ ಉಪಯೋಗಿಸಿಕೊಂಡು ಕನೌಜನ್ನು ಪಂಚಾಲದ ರಾಷ್ಟ್ರಕೂಟ ದೊರೆ ಗೋಪಾಲನಿಂದ ಕಿತ್ತುಕೊಂಡ. ಚಂದ್ರದೇವ, ಗಜಪತಿ, ನರಪತಿ, ತ್ರಿಶಂಕುಪತಿ– ಇವರನ್ನು ಸೋಲಿಸಿದ. ಈತ ಕುಶಿಕ, ಕಾಶಿ, ಉತ್ತರ ಕೋಸಲಗಳನ್ನು ರಕ್ಷಿಸಿದುದಾಗಿ ಹೇಳಿಕೊಂಡಿದ್ದಾನೆ. ಪೂರ್ವದಲ್ಲಿ ಇವನ ಮುನ್ನಡೆಗೆ ಮಗಧದ ದೊರೆ ಭೀಮಯಶನಿಂದ ತಡೆ ಬಿತ್ತು. ಅಲಹಾಬಾದಿನಿಂದ ವಾರಾಣಸಿ ಅಯೋಧ್ಯೆಗಳವರೆಗಿನ ಸೀಮೆಯೆಲ್ಲ ಚಂದ್ರದೇವನ ವಶವಾಗಿದ್ದುವು. ವಾರಾಣಸಿ ಗಾಹದ್ವಾಲರ ಎರಡನೆಯ ರಾಜಧಾನಿಯಾಗಿತ್ತು. ಚಂದ್ರದೇವನ ರಾಜ್ಯ ಪಶ್ಚಿಮದಲ್ಲಿ ಇಂದ್ರಪ್ರಸ್ಥದವರೆಗೂ ವಿಸ್ತರಿಸಿತ್ತೆಂಬುದು ಕೆಲವರ ಅಭಿಪ್ರಾಯ. ಆದರೆ ಆಗ ದೆಹಲಿಯಲ್ಲಿ ಬೇರೆ ರಾಜಮನೆತನ ಆಳುತ್ತಿತ್ತು. ಚಂದ್ರದೇವನ ವಶದಲ್ಲಿದ್ದ ಇಂದ್ರಸ್ಥಾನವೆಂಬುದು ಇಂದ್ರಪ್ರಸ್ಥವಾಗಿದ್ದಿರಲಾರದೆಂದು ಅದು ಈಗಿನ ಇಂದೂರ್ ಆಗಿರಬಹುದೆಂದೂ ಹೇಳಲಾಗಿದೆ.

ಚಂದ್ರದೇವನ ಅನಂತರ ರಾಜ್ಯವಾಳಿದವನು ಮದನಚಂದ್ರ. ಈತನ 1104–09ರ ಶಾಸನಗಳು ದೊರೆತಿವೆ. ವಾರಾಣಸಿ, ಬಿಠಾಪುರ ಉಪವಿಭಾಗ, ಹಿಂದಿನ ಪಂಚಾಲ ರಾಜ್ಯದ ಒಂದು ಭಾಗ–ಇವು ಈತನ ಅಧೀನದಲ್ಲಿದ್ದುವು. ಮೂರನೆಯ ಅಲ್ಲಾವುದ್ದೌಲಾ ಮಸೂದ ಈ ಸಮಯದಲ್ಲಿ ಕನೌಜಿನ ಮೇಲೆ ದಂಡೆತ್ತಿ ಬಂದಿದ್ದನೆಂದೂ ಅಲ್ಲಿಯ ದೊರೆಯಾದ ಮಲ್ಹಿ ಎಂಬುವನನ್ನು ಸೆರೆಹಿಡಿದನೆಂದೂ ಆತ ವಿಪುಲವಾಗಿ ಹಣ ತೆತ್ತು ವಿಮೋಚನೆ ಪಡೆದನೆಂದೂ ಮುಸ್ಲಿಂ ಇತಿಹಾಸಕಾರರು ಹೇಳುತ್ತಾರೆ. ಮದನಚಂದ್ರನೇ ಈ ಮಲ್ಹಿ ಎಂದು ಭಾವಿಸಲಾಗಿದೆ.

ಮದನಚಂದ್ರನ ಮಗ ಗೋವಿಂದಚಂದ್ರ, ಗಾಹದ್ವಾಲ ವಂಶದ ಸಮರ್ಥ ದೊರೆಗಳಲ್ಲೊಬ್ಬ. ಈತ ತನ್ನ ತಂದೆ ಬದುಕಿದ್ದ ಕಾಲದಲ್ಲೇ ಮುಸ್ಲಿಮರನ್ನು ಸೋಲಿಸಿದನೆಂದು ಕೆಲವು ದಾಖಲೆಗಳಿಂದ ಗೊತ್ತಾಗುತ್ತದೆ. ಮುಸ್ಲಿಮರು ತನ್ನ ತಂದೆಯನ್ನು ಸೆರೆಯಿಂದ ಬಿಡುಗಡೆ ಮಾಡುವಂತೆ ಈತ ಒತ್ತಡ ತಂದಿದ್ದಿರಬಹುದು. ಹೀಗಾಗಿ ಮುಂದೆ ಮದನಚಂದ್ರ ಹೆಸರಿಗೆ ದೊರೆಯಾಗಿದ್ದರೂ ವಾಸ್ತವವಾಗಿ ಗೋವಿಂದಚಂದ್ರನೇ ಆಡಳಿತ ನಡೆಸುತ್ತಿದ್ದಿರಬೇಕು. ಈ ಕಾಲದಲ್ಲಿ ದಂಡೆತ್ತಿ ಬಂದ ಗೌಡ ರಾಮಪಾಲನನ್ನು ಇವನು ಸೋಲಿಸಿ ಹಿಮ್ಮೆಟ್ಟಿಸಿದ. ಈತ 1114ರಲ್ಲಿ ಪಟ್ಟಕ್ಕೆ ಬಂದ. ಅಂದಿನಿಂದ 1154ರವರೆಗೆ ಈತ ಬರೆಸಿದ 42 ಶಾಸನಗಳು ಇದುವರೆಗೆ ದೊರಕಿವೆ. ವಾರಾಣಸಿ, ಫತೇಪುರ, ಕಾನ್ಪುರ, ಕನೌಜ್, ಗೊಂಡಾ, ಗೋರಖಪುರ, ದಿನಾಪುರ, ಪಟ್ನಗಳವರೆಗೆ ಈತನ ರಾಜ್ಯ ವಿಸ್ತರಿಸಿತ್ತೆಂಬುದು ಈ ಶಾಸನಗಳಿಂದ ಗೊತ್ತಾಗುತ್ತದೆ. 1143ರ ಅನಂತರ ಈತ ಪಾಲದೊರೆ ಮದನನನ್ನು ಸೋಲಿಸಿ ಮಾಂಘೀರ್‌ವರೆಗಿನ ಎಲ್ಲ ನೆಲವನ್ನೂ ಗೆದ್ದುಕೊಂಡ. ಆದರೆ 1158ರ ವೇಳೆಗೆ ಮಾಂಘೀರನ್ನು ಮತ್ತೆ ಅವನಿಗೆ ಒಪ್ಪಿಸಬೇಕಾಯಿತು. ಗೊಂಡಾ ಜಿಲ್ಲೆಯನ್ನು 1129ಕ್ಕೂ ಹಿಂದೆಯೇ ರಾಷ್ಟ್ರಕೂಟ ಮದನಪಾಲನಿಂದಲೋ ಅವನ ಅನಂತರ ಬಂದ ದೊರೆಯಿಂದಲೋ ಗೆದ್ದುಕೊಂಡಿರಬೇಕೆಂದು ಊಹಿಸಲಾಗಿದೆ. ಗೌಡ, ವಂಗ, ಕಳಿಂಗ,

ತೆಲಂಗ, ಮಹಾರಾಷ್ಟ್ರ, ಸೌರಾಷ್ಟ್ರ, ಚಂಪಾರಣ, ನೇಪಾಲ, ಭೋಟ, ಚೀನ, ಲೊಹಾವರ (ಲಾಹೋರ), ಓಡ್ರ, ಮಾಳವಗಳ ದೊರೆಗಳ ವಿರುದ್ಧ ಗೋವಿಂದಚಂದ್ರ ಸೆಣಸಾಡಿ ಗೆದ್ದನೆಂದು ಹೇಳಲಾಗಿದೆ. ಕಳಿಂಗ ಒರಿಸ್ಸಗಳ ದೊರೆಯಾಗಿದ್ದ ಅನಂತವರ್ಮನ್ ಚೋಡಗಂಗನ ಪಶ್ಚಿಮದ ಕಡೆಯ ವಿಸ್ತರಣವನ್ನು ಗೋವಿಂದಚಂದ್ರ ತಡೆಗಟ್ಟಿರಬೇಕು. ಮಿಥಿಲೆಯ ನಾನ್ಯದೇವ ಗೋವಿಂದಚಂದ್ರನ ನೆರೆರಾಜ್ಯದ ದೊರೆಯಾಗಿದ್ದ. ಈ ಇಬ್ಬರ ನಡುವೆ ಕದನ ಸಂಭವಿಸಿದ್ದಿರಬೇಕು. ಮಗಧದ ಮೇಲೆ ದಂಡೆತ್ತಿ ಹೋಗಿದ್ದ ಚಾಳುಕ್ಯದೊರೆ ಸೋಮೇಶ್ವರನೂ ಗೋವಿಂದಚಂದ್ರನೊಂದಿಗೆ ಕಾದಿದ ಸಂಭವವುಂಟು. ಇಂತೆಯೇ ಇತರ ಹಲವು ರಾಜರ ವಿರುದ್ಧ ಗೋವಿಂದಚಂದ್ರ ತನ್ನ ಶೌರ್ಯಪ್ರದರ್ಶನ ಮಾಡಿದನೆನ್ನಬಹುದು. ಆದರೆ ಈತ ನೇಪಾಲ, ಚೀನ, ಟಿಬೆಟ್‌ಗಳ ಮೇಲೆ ಆಕ್ರಮಣ ನಡೆಸಿದನೆನ್ನುವುದು ಉತ್ಪ್ರೇಕ್ಷೆಯೆಂದು ಭಾವಿಸಲಾಗಿದೆ. ಗೋವಿಂದಚಂದ್ರನ ಚಿನ್ನ ಮತ್ತು ತಾಮ್ರ ನಾಣ್ಯಗಳು ಸಿಕ್ಕಿವೆ. ಗೋವಿಂದಚಂದ್ರ ಅನೇಕ ಕಲೆಗಳನ್ನು ಬಲ್ಲವನಾಗಿದ್ದ. ಇವನಿಗೆ ಅನೇಕ ರಾಣಿಯರಿದ್ದರು. ಇವರ ಪೈಕಿ ಒಬ್ಬಳು ಕುಮಾರದೇವಿ. ಈಕೆ ಬೌದ್ಧೆ, ದೇವ ರಕ್ಷಿತನ ಮಗಳು. ಗೋವಿಂದಚಂದ್ರನಿಗೆ ಆಸ್ಫೋಟಕಚಂದ್ರ, ವಿಜಯಚಂದ್ರ, ರಾಜ್ಯಪಾಲ ಎಂಬ ಮೂವರು ಮಕ್ಕಳಿದ್ದರು. ಬಹುಶಃ ಗೋವಿಂದಚಂದ್ರನ ಅನಂತರ 1154ರಿಂದ ಈಚೆಗೆ, ವಿಜಯಚಂದ್ರ ದೊರೆಯಾಗಿದ್ದ. ವಿಜಯಚಂದ್ರ ಮುಸ್ಲಿಮರ ದಂಡಯಾತ್ರೆಯೊಂದನ್ನು ಹಿಮ್ಮೆಟ್ಟಿಸಿದ. ಇವನಿಂದ ಸೋತ ಮುಸ್ಲಿಂ ಆಕ್ರಮಣಕಾರ ಬಹುಶಃ ಖುಸ್ರಾವ್ ಖಾನ್ ಇರಬೇಕು.

ವಿಜಯಚಂದ್ರನ ಅನಂತರ ಸಿಂಹಾಸನವನ್ನೇರಿದವನು (1170) ಜಯಚಂದ್ರ. ದೋಆಬ್, ಅಲಹಾಬಾದ್, ವಾರಾಣಸಿ, ಪಟ್ನಾ, ಗಯ ಇವು ಈತನ ವಶದಲ್ಲಿದ್ದುವು. ಈತ ಪೂರ್ವದಲ್ಲಿ ಸೇನ ದೊರೆಯೊಂದಿಗೆ ಘರ್ಷಣೆ ನಡೆಸಿದನೆಂದು ಹೇಳಲಾಗಿದೆ. ಜಯಚಂದ್ರನ ಮಗಳು ಸಂಯುಕ್ತೆಯನ್ನು ಅಜ್ಮೀರದ ಚಾಹಮಾನ 3ನೆಯ ಪೃಥ್ವೀರಾಜ ಪ್ರೇಮಿಸಿ ಅಪಹರಿಸಿಕೊಂಡು ಹೋದನೆಂಬ ಕಥೆಯೊಂದುಂಟು. ಇದು ನಿಜವೆಂಬುದಕ್ಕೆ ಆಧಾರಗಳಿಲ್ಲ. ಜಯಚಂದ್ರ ಕವಿಗಳಿಗೆ ಆಶ್ರಯ ನೀಡಿದ. ನೈಷಧಚರಿತದ ಕರ್ತೃವಾದ ಶ್ರೀಹರ್ಷ ಈತನ ಆಸ್ಥಾನದಲ್ಲಿದ್ದನೆಂದು ಹೇಳಲಾಗಿದೆ. ಜಯಚಂದ್ರ ಎರಡು ದಶಕಗಳಿಗೂ ಹೆಚ್ಚು ಕಾಲ ಶಾಂತಿಯಿಂದ ರಾಜ್ಯವಾಳಿದ. ಆದರೆ ಈತನ ಆಡಳಿತದ ಕೊನೆಯಲ್ಲಿ ಮಹಾ ದುರಂತವೊಂದು ಸಂಭವಿಸಿತು. ಮುಯಿಜ಼್‌ಉದ್ದೀನ್ ಮಹಮ್ಮದ್ ಘೋರಿ ದೆಹಲಿ–ಅಜ್ಮೀರಗಳನ್ನು ಜಯಿಸಿ ದೊಡ್ಡ ಸೇನೆಯೊಂದಿಗೆ ಜಯಚಂದ್ರನ ರಾಜ್ಯದ ಮೇಲೆ ಏರಿಬಂದ (1193). ಜಯಚಂದ್ರ ತನ್ನೆಲ್ಲ ಸೇನಾಬಲದೊಡನೆ ಅವನನ್ನು ಚಂದವರದಲ್ಲಿ ಎದುರಿಸಿ ಹೋರಾಡಿದ. ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದ ಜಯಚಂದ್ರ ಸಾವಿಗೆ ಈಡಾದ. ಗಾಹಡ್ವಾಲ ಸೇನೆ ಸಂಪೂರ್ಣವಾಗಿ ಸೋತುಹೋಯಿತು. ವಿಜಯೀ ಮುಸ್ಲಿಂ ಸೇನೆ ವಾರಾಣಸಿಗೆ ನುಗ್ಗಿ ಅಲ್ಲಿದ್ದ ಸಂಪತ್ತನ್ನೆಲ್ಲ ಸೂರೆಮಾಡಿತು. ಮಹಮ್ಮದ್ ಘೋರಿ ಗೆದ್ದ ಪ್ರದೇಶದ ಆಡಳಿತವನ್ನು ತನ್ನ ಕಡೆಯ ಅಧಿಕಾರಿಯೊಬ್ಬನಿಗೆ ಒಪ್ಪಿಸಿ ಸೇನೆಯೊಂದಿಗೆ ಹಿಂದಿರುಗಿದ. ಆದರೆ ಆ ಪ್ರದೇಶದ ಮೇಲೆ ಬಹಳ ಕಾಲ ಮುಸ್ಲಿಮರು ಹತೋಟಿ ಹೊಂದಲಾಗಲಿಲ್ಲ. ಜಯಚಂದ್ರ ಸತ್ತಾಗ ಅವನ ಮಗ ಹರಿಶ್ಚಂದ್ರನಿಗೆ 18 ವರ್ಷ ವಯಸ್ಸಾಗಿತ್ತು. ಈತ ಮುಸ್ಲಿಮರಿಂದ ತನ್ನ ತಂದೆಯ ರಾಜ್ಯದ ಕೆಲವು ಭಾಗಗಳನ್ನು ಬಹುಶಃ ಬಿಡಿಸಿಕೊಂಡಿರಬೇಕು. ಇವನು, ಕನೌಜ್, ಜೌನ್‌ಪುರ, ಮಿರ್ಜಾಪುರಗಳನ್ನಾಳುತ್ತಿದ್ದ. ಚಂದೆಲ್ಲ ದೊರೆ ತ್ರೈಲೋಕ್ಯವರ್ಮನ್ ಹರಿಶ್ಚಂದ್ರನ ಮೇಲೆ ಯುದ್ಧ ಮಾಡಿ ಇವನನ್ನು ಸೋಲಿಸಿದನೆಂದು ತಿಳಿದುಬರುತ್ತದೆ.

ಹರಿಶ್ಚಂದ್ರನ ಅನಂತರ ರಾಜ್ಯವಾಳುತ್ತಿದ್ದ ಗಾಹಡ್ವಾಲ ದೊರೆ ಅಡಕ್ಕಮಲ್ಲನೆಂದು ಹೇಳಲಾಗಿದೆ. ಕನೌಜನ್ನು ಅಂತಿಮವಾಗಿ ಇಲ್ತುಮಿಷ್ ಗೆದ್ದುಕೊಂಡ (1226). ರಾಜ್ಯ ಕಳೆದುಕೊಂಡ ಅಡಕ್ಕಮಲ್ಲ ಮಧ್ಯಭಾರತದ ನಾಗೋಡ್ ಸಂಸ್ಥಾನದಲ್ಲಿ ನೆಲೆಸಿದನೆಂದು ತಿಳಿದುಬರುತ್ತದೆ. ಅಲ್ಲಿ ಅಡಕ್ಕಮಲ್ಲನ ಸಾಮಂತನೊಬ್ಬ ಆಳುತ್ತಿದ್ದ.

ಗಾಹಡ್ವಾಲ ದೊರೆಗಳು ವಿಷ್ಣುಭಕ್ತರು. ಇವರ ಶಾಸನಗಳು ಲಕ್ಷ್ಮಿಯ ಸ್ತುತಿಯೊಂದಿಗೆ ಆರಂಭವಾಗುತ್ತವೆ. ಇವರು ಶಿವ ಇತ್ಯಾದಿ ದೇವತೆಗಳನ್ನೂ ಪೂಜಿಸುತ್ತಿದ್ದರು. ಇವರನ್ನು ಪರಮ ಮಹೇಶ್ವರರೆಂದೂ ಕರೆಯಲಾಗುತ್ತಿತ್ತು. ಗಾಹಡ್ವಾಲ ದೊರೆಗಳು ಕಟ್ಟಿಸಿದ್ದ ಅನೇಕ ಮಂದಿರಗಳು ಮುಸ್ಲಿಮರ ದಾಳಿಗೆ ತುತ್ತಾಗಿ ನಾಶವಾದವು.

(ಎಚ್.ಎಂ.ಎನ್.ಆರ್.)

**ಗಾಳದ ಮೀನು :** ಲೋಫೀಫಾರ್ಮೀಸ್ ಗಣದ ಲೋಫಿಯಿಡೀ ಕುಟುಂಬಕ್ಕೆ ಸೇರಿದ ಲೋಫಿಯಸ್ ಜಾತಿಯ ಸಮುದ್ರವಾಸಿ ಮೀನುಗಳ ಸಾಮಾನ್ಯ ಬಳಕೆಯ ಹೆಸರು (ಆಂಗ್ಲರ್ ಫಿಶ್). ಬಲು ಸ್ವಾರಸ್ಯಕರ ಮೀನುಗಳಿವು. ಇವುಗಳ ತಲೆಯ ಮೇಲೆ ಉದ್ದವಾದ ಗಾಳದಂಥ ರಚನೆಯಿದ್ದು ಇದರಿಂದ ಇತರೆ ಬಗೆಯ ಮೀನುಗಳನ್ನು ತನ್ನೆಡೆಗೆ ಆಕರ್ಷಿಸಿ ಹಿಡಿದು ತಿನ್ನುತ್ತವೆ. ಹೀಗಾಗಿ ಇದು ಮೀನುಗಾರ ಮೀನಾಗಿದೆ. ಈ ಬಗೆಯ ವಿಚಿತ್ರ ಜೀವನಕ್ರಮದಿಂದ ಇವುಗಳಿಗೆ ಗಾಳದ ಮೀನುಗಳೆಂಬ ಹೆಸರು ಬಂದಿದೆ. ಇವುಗಳಲ್ಲಿ ಸುಮಾರು 12 ಪ್ರಭೇದಗಳಿವೆ. ಇವುಗಳಲ್ಲೆಲ್ಲ ಬಹು ಮುಖ್ಯವಾದುದು ಲೋಫಿಯಸ್ ಪಿಸ್ಕಟೋರಿಯಸ್ ಎಂಬುದು. ಇದು ಪೂರ್ವ ಅಟ್ಲಾಂಟಿಕ ಸಾಗರದ, ಬಾರೆಂಟ್ಸ್ ಸಮುದ್ರ, ಗಿಬ್ರಾಲ್ಟರ್ ಜಲ ಸಂಧಿ, ಭೂಮಧ್ಯ ಸಮುದ್ರ, ಮತ್ತು ಕಪ್ಪು ಸಮುದ್ರಗಳಲ್ಲಿ ಕಂಡು ಬರುತ್ತವೆ. ಐಸ್‌ಲೆಂಡ್ ಮತ್ತು ಮಾರಿಷಿಯಾನಾಗಳಲ್ಲೂ ಇರುವುದಾಗಿ ವರದಿಯಾಗಿದೆ. ಇವು ಸು. 200 ಸೆಂಮೀ.ವರೆಗೆ ಹಾಗೂ 57 ಕೆ.ಜಿ ವರೆಗೆ ಬೆಳೆಯುತ್ತವೆ. ಸುಮಾರು 24 ವರ್ಷಗಳವರೆಗೆ ಬದುಕಬಲ್ಲದೆಂದು ವರದಿಯಾಗಿದೆ. ಮಣ್ಣು ಅಥವಾ ಮರಳಿನಿಂದ ಕೂಡಿದ ಕಡಲ



ತಳದಲ್ಲಿ ತೀರದಿಂದ 20 ಮೀ ಆಳದಿಂದ ಹಿಡಿದು 1000 ಮೀ ಆಳದವರೆಗೆ ಇವು ವಾಸಿಸುತ್ತವೆ. ವಿಲಕ್ಷಣ ರೂಪಿಯಾಗಿದ್ದು ಚಪ್ಪಟೆ ದೇಹ, ಅಗಲವಾದ ತಲೆ, ದೇಹದ ಗಾತ್ರಕ್ಕೆ ಹೋಲಿಸಿದರೆ ಬಲುದೊಡ್ಡದಾದ ಬಾಯಿ. ಹಿಂದಕ್ಕೆ ಬಾಗಿರುವ ಮೋಟು ಹಲ್ಲುಗಳ ಪಂಕ್ತಿ, ಮೈಮೇಲೆ ಹುರುಪೆಗಳಿಲ್ಲದಿರುವುದು, ಚರ್ಮ ತೆಳು ಹಾಗೂ ಸಡಿಲವಾಗಿರುವುದು, ಉರುಟಾದ ಮತ್ತು ಮುಳ್ಳುಗಳಿಂದ ಕೂಡುದ ದೇಹದ ಮುಂಭಾಗ, ಉದ್ದವಾದ ಗಾಳವಾಗಿ ಮಾರ್ಪಟ್ಟ ಬೆನ್ನುಭಾಗದ ಈಜುರೆಕ್ಕೆಯ ಮೊದಲನೆ ಮುಳ್ಳು – ಇವು ಈ ಮೀನಿನ ಮುಖ್ಯ ಲಕ್ಷಣಗಳು. ಬಹಳ ಬಳುಕುವ ಈ ಗಾಳ ಕಣ್ಣುಗಳ ನಡುವೆ ನೆತ್ತಿಯ ಮೇಲೆ ಇದ್ದು ಬಾಯಿಯ ಮುಂದೆ ಚಾಚಿಕೊಂಡಿರುತ್ತದೆ. ಅದರ ತುದಿಯಲ್ಲಿ ಮಾಂಸಲವಾದ ಉಪಾಂಗಗಳೂ ಇವೆ. ಆಹಾರ ಮೀನುಗಳನ್ನು ತನ್ನೆಡೆ ಸೆಳೆಯಲು ಬಲು ಚಾಣಾಕ್ಷತನದಿಂದ ತನ್ನ ಗಾಳವನ್ನು ಬಳಸುತ್ತದೆ. ತನ್ನ ದೇಹವನ್ನೆಲ್ಲ ಸಮುದ್ರದ ತಳ ಭಾಗದಲ್ಲಿ ಹುದುಗಿಸಿಕೊಂಡು ಗಾಳವನ್ನು ಮಾತ್ರ ಹೊರಗೆ ಮೇಲಕ್ಕೆ ಚಾಚಿ ಅಲುಗಾಡಿಸುತ್ತಿರುತ್ತದೆ. ಇದರ ಆಕಾರ ಮತ್ತು ಚಲನೆಗಳಿಂದ ಸೆಲೆ ಹುಳುವಿನಂತೆ ಕಾಣುತ್ತದೆ. ಇದರಿಂದ ಆಕರ್ಷಿತಗೊಂಡ ಮೀನುಗಳು ಇದರ ಬಳಿಗೆ ಬಂದಾಗ ಅವುಗಳ ಮೇಲೆರಗಿ ಕಬಳಿಸುತ್ತದೆ. ಇದರ ಬಾಯಿ ದೊಡ್ಡದಿರುವುದರಿಂದ ಇದು ತನ್ನಷ್ಟೇ ದೊಡ್ಡದಾದ ಮೀನನ್ನು ನುಂಗಬಲ್ಲುದು.

ಗಾಳದ ಮೀನುಗಳಲ್ಲಿ ಸಾಮಾನ್ಯವಾಗಿ ಹೆಣ್ಣಿಗಿಂತ ಗಂಡು ಮೀನುಗಳು ಚಿಕ್ಕ ಗಾತ್ರದಾಗಿದ್ದು ಸಂತಾನೋತ್ಪತ್ತಿಯ ಕಾಲದಲ್ಲಿ ಹೆಣ್ಣಿಗೆ ಅಂಟಿಕೊಂಡಿದ್ದು ಪರಾವಲಂಬಿ ಜೀವನ ನಡೆಸುತ್ತವೆ.

ಇದೇ ರೀತಿಯ ಗಾಳದ ಮೀನುಗಳನ್ನು ಹೋಲುವ ಇನ್ನಿತರ ಗಾಳದ ಮೀನುಗಳೂ ಉಂಟು. 525ಮೀ ರಿಂದ 5250ಮೀ ಆಳದಲ್ಲಿ ವಾಸಿಸುವ ಆಳ ಕಡಲಿನ ಗಾಳದ ಮೀನು (ಡೀಪ್ ಸೀ ಆಂಗ್ಲರ್ ಫಿಶ್) ಕೂಡ ಒಂದು. ಸೆರಿಯಾಟಸ್ ಇದರ ವೈಜ್ಞಾನಿಕ ನಾಮ. ಈ ಮೀನುಗಳು ಕಡಲ ಗಾಢಾಂಧಕಾರದಲ್ಲಿರುವುದರಿಂದ ಇವುಗಳ ಗಾಳದ ತುದಿ ನೀಲು ಊದಾ ಮುಂತಾದ ಬೆಳಕನ್ನು ಚೆಲ್ಲಬಲ್ಲದು. ಹೀಗೆ ಬೆಳಕು ಉತ್ಪತ್ತಿಯಾಗಲು ಕೆಲವು ರೀತಿಯ ವಿಶೇಷ ಬ್ಯಾಕ್ಟೀರಿಯಗಳು ಕಾರಣವೆಂದು ತಿಳಿದು ಬಂದಿದೆ. ಇದರಿಂದ ಇತರೆ ಮೀನುಗಳು ಆಕರ್ಷಿತವಾಗಿ ಹತ್ತಿರ ಬಂದಾಗ ಅವನ್ನು ಸುಲಭವಾಗಿ ಹಿಡಿಯಬಲ್ಲದು. ಹೆಣ್ಣು ಮೀನುಗಳಲ್ಲಿ ಮಾತ್ರ ಇಂತಹ ಗಾಳ ಇರುವುದು ಸೂಜಿಗದ ಸಂಗತಿ. ಗಂಡುಗಳಲ್ಲಿ ಗಾಳವೇ ಇರುವುದಿಲ್ಲ. ಇವುಗಳಲ್ಲೂ ಗಂಡು ಮೀನು ಹೆಣ್ಣು ಮೀನನ್ನು ಅನುಸರಿಸಿ ಜೀವನ ನಡೆಸುತ್ತದೆ.

ಬೇಸಗೆಯಲ್ಲಿ ಗಾಳದ ಮೀನುಗಳು ಸಂತಾನೋತ್ಪತ್ತಿ ನಡೆಸುತ್ತವೆ. ಮೊಟ್ಟೆಯೊಡೆದು ಬರುವ ಮರಿಗಳು ಪ್ರಬುದ್ಧಾವಸ್ಥೆಗೆ ಬರುವವರೆಗೂ ಸಮುದ್ರದ ಮೇಲ್ಪದರದಲ್ಲಿ ಈಜಾಡುತ್ತಿದ್ದು ಸಣ್ಣ ಪುಟ್ಟ ಪ್ರಾಣಿಗಳನ್ನು ತಿಂದು ಬದುಕುತ್ತದೆ. ಅನಂತರ ಕಡಲಾಳಕ್ಕಿಳಿದು ಪ್ರೌಢ ಜೀವನ ಆರಂಭಿಸುತ್ತವೆ.

(ಜಿ.ಎಸ್‌ಎಚ್‌ಐ.)

**ಗಾಳಿ[1] :** ಭೂಮೇಲ್ಮೈಗೆ ಸಾಪೇಕ್ಷವಾಗಿ ಚಲಿಸುವ ವಾಯು (ವಿಂಡ್). ಸಾಮಾನ್ಯವಾಗಿ ವಾಯುವಿನ (ಏರ್) ಕ್ಷಿತಿಜೀಯ ಚಲನೆಗೆ (ಊರ್ಧ್ವ ಚಲನೆಗಲ್ಲ) ಹಾಗೂ 1–3 ಮಿನಿಟುಗಳ ವರೆಗೆ ಆಯ್ದ ಅವಧಿಯಲ್ಲಿ ವಾಯುಚಲನೆಯ ಸರಾಸರಿಗೆ ಗಾಳಿ ಎನ್ನುತ್ತೇವೆ. ಆದ್ದರಿಂದ ಸೂಕ್ಷ್ಮಹವಾವೈಜ್ಞಾನಿಕ ಪರಿಚಲನೆಗಳೇ (ಮೈಕ್ರೊ ಮೀಟಿಯರಲಾಜಿಕಲ್ ಸರ್ಕ್ಯುಲೇಷನ್ಸ್) ಮುಂತಾದ ಸೂಕ್ಷ್ಮ ವಾಯುಚಲನೆಗಳು ನಮ್ಮ ಪರಿಗಣನೆಯಲ್ಲಿ ಬರುವುದಿಲ್ಲ. 1-3 ಮಿನಿಟ್ ಅಂತರದ ಆಯ್ಕೆ ನಮಗೆ ಎರಡು ರೀತಿಯಲ್ಲಿ ಸಮರ್ಪಕವಾಗಿದೆ: 1) ವಾಯುಮಂಡಲದ ಪರಿಚಲನೆಯ ಪ್ರರೂಪದಲ್ಲಿ (ಸರ್ಕ್ಯುಲೇಷನ್ ಪ್ಯಾಟರ್ನ್) ಗಂಟೆಯಿಂದ ಗಂಟೆಗೆ ಮತ್ತು ದಿವಸದಿಂದ ದಿವಸಕ್ಕೆ ಆಗುವ ಬದಲಾವಣೆಗಳನ್ನು ಅಧ್ಯಯಿಸಲು; 2) ವಾಯುಮಂಡಲದ ಸಾರ್ವತ್ರಿಕ ಪರಿಚಲನೆಯ ದೊಡ್ಡ ಗಾತ್ರದ ಪರಿಣಾಮಗಳನ್ನು ಅಧ್ಯಯಿಸಲು. ಭೂಮಿಯ ಮೇಲ್ಮೈಯಲ್ಲಿ ಗಾಳಿಯ ಪ್ರತ್ಯಕ್ಷ ಪರಿಣಾಮಗಳನ್ನು ನೆಲಕೊರೆತ, ಸಸ್ಯಲಕ್ಷಣ, ಕಟ್ಟಡಗಳಿಗೆ ಘಾಸಿ, ಜಲತರಂಗಗಳ ಉತ್ಪಾದನೆ ಇವೇ ಮುಂತಾದವುಗಳಲ್ಲಿ ಕಾಣಬಹುದು. ಎತ್ತರಕ್ಕೆ ಸಾಗಿದಂತೆ ವಾಯುವಿಮಾನಗಳ ಚಲನೆ, ಕ್ಷಿಪಣಿಗಳ ಗಮನ, ವಿಕಿರಣಪಟು ಉತ್ಪನ್ನಗಳ ಹರಡುವಿಕೆ, ಕಾರ್ಖಾನೆಗಳ ಅನಿಲೋಚ್ಚಾಟನೆಗಳ ವಿತರಣೆ ಇವುಗಳ ಮೇಲೆಲ್ಲ ಗಾಳಿ ಗಮನಾರ್ಹವಾಗಿ ಪ್ರಭಾವ ಬೀರುತ್ತದೆ. ಮೋಡಗಳ ಸಂಚಾರ, ಮಳೆಸುರಿತ, ಹವೆ ಮುಂತಾದವುಗಳ ಮೇಲೆ ಕೂಡ ಗಾಳಿಯ ಪ್ರಭಾವ ಉಂಟು. ಗಾಳಿಯ ವೇಗವನ್ನು ಅನುಸರಿಸಿ ಅದರಲ್ಲಿ ಪ್ರಭೇದಗಳನ್ನು ಮಾಡಲಾಗಿದೆ. ಇವುಗಳ ವಿವರಣೆಗೆ **(ನೋಡಿ– ಮಾರುತಗಳು; ವಾಯು)**. *

**ಗಾಳಿ[2] :** ಗಾಳಿ ಎಂಬ ಶಬ್ದಕ್ಕೆ ಎರಡು ಅರ್ಥಗಳುಂಟು. ಒಂದು–ಚಲಿಸುತ್ತಿರುವ ವಾಯು ಎಂದು; ಎರಡು–ದೆವ್ವ ಎಂದು. ಎರಡನೆಯ ಅರ್ಥದಲ್ಲಿ ಅದನ್ನು ಇಲ್ಲಿ ವಿವೇಚಿಸಲಾಗಿದೆ. ಅಕಾಲಮರಣಕ್ಕೆ ತುತ್ತಾದ ಅತೃಪ್ತಜೀವಗಳು ದೆವ್ವ ಪಿಶಾಚಿಗಳಾಗಿ ಅಲೆಯುತ್ತ ಹಲವರ ಮೈ ಹೊಕ್ಕು, ಅವರ ಮುಖಾಂತರ ಅತೃಪ್ತ ಆಸೆಗಳನ್ನು ಈಡೇರಿಸಿಕೊಂಡು ತೃಪ್ತಿಪಟ್ಟುಕೊಳ್ಳುತ್ತವೆ ಎಂಬುದು ಜನಪದ ನಂಬಿಕೆ. ಅಷ್ಟೇ ಅಲ್ಲ, ಅನ್ಯಾಯದಿಂದ ಕೊಲೆಗೀಡಾದವರು ಕೊಲೆ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ದೆವ್ವವಾಗಿ ಅವರಿಗೆ ಕಾಟ ಕೊಡುತ್ತಾರೆಂದೂ ಆಸ್ತಿಪಾಸ್ತಿ ಒಡವೆ ವಸ್ತುಗಳ ಮೇಲೆ ಅತಿಯಾದ ಆಸೆಯುಳ್ಳವರು, ಜಿಪುಣರು ಸತ್ತರೂ ಅವರ ಆತ್ಮ ಐಹಿಕ ಆಸೆ ಅಪೇಕ್ಷೆಗಳಿಂದ ಮುಕ್ತವಾಗದೆ ಹೀಗೇ ದೆವ್ವವಾಗಿ ಅಲೆಯುತ್ತ ಕಾಟ ಕೊಡುತ್ತಾರೆಂದೂ ನಂಬಿಕೆ. ಅಕಾಲಮರಣಕ್ಕೆ ತುತ್ತಾದವರ ಜೀವಗಳು ಅಗೋಚರವಾಗಿ ಇಹಲೋಕದಲ್ಲೇ ಅಲೆದಾಡುತ್ತಿದ್ದು ಕಾಲಪ್ರಾಪ್ತಿಯಾದಾಗ ಸ್ವರ್ಗಕ್ಕೋ ನರಕಕ್ಕೋ ಹೋಗುತ್ತವೆಂದು ತತ್ತ್ವಶಾಸ್ತ್ರ ಹೇಳುತ್ತದೆ. ಇದು ವೈಜ್ಞಾನಿಕ ಸತ್ಯವೋ ಅಲ್ಲವೋ. ಆದರೂ ಅನೂಚಾನವಾಗಿ ಜನಮನದಲ್ಲಿ ಬೇರೂರಿ ಬೆಳೆದು ಬಂದಿರುವ ಅಂಶವಿದು. ನೀನು ಗಾಳಿಪಾಲಾಗ ಎಂಬ ಬೈಗಳೂ ಗಾಳಿ ಹಿಡಿದವನ್ಹಂಗೆ, ಗಾಳಿ ಹೊಕ್ಕವನ್ಹಂಗೆ ಎಂಬ ಮಾತುಗಳೂ ಗಾಳಿಯ ಅಸ್ತಿತ್ವವನ್ನು ಸೂಚಿಸುತ್ತವೆ. ಮನೋವಿಜ್ಞಾನ ಇದನ್ನು ಉನ್ಮಾದವೆಂದೂ ಅದುಮಿಟ್ಟ ಅತೃಪ್ತ ಭಾವನೆಗಳಿಂದ ಹದಗೆಟ್ಟ ಚಿತ್ತಕ್ಷೋಭೆಯೆಂದೂ ಹೇಳಬಹುದು. ಆದರೆ ಗಾಳಿ ಹಿಡಿದವರ ಮಾತುಕತೆಗಳನ್ನು ಕೇಳಿದವರಿಗೆ ಕಣ್ಣಾರೆ ನೋಡಿದವರಿಗೆ ವಿಜ್ಞಾನ ಒದಗಿಸುವ ಕಾರಣಗಳಲ್ಲಿ ಅಷ್ಟಾಗಿ ನಂಬಿಕೆ ಬರುವುದಿಲ್ಲ. ಪ್ರಪಂಚಾದ್ಯಂತ ಆದಿವಾಸಿಗಳಲ್ಲಿ ದೆವ್ವ ಬಿಡಿಸುವ ವಿಶಿಷ್ಟ ವೈದ್ಯರಿದ್ದರೆಂದು ತಿಳಿದುಬಂದಿದೆ. ಅವರು ತಮ್ಮ ವಿಚಿತ್ರ ಉಪಕರಣಗಳಿಂದ ವಿಶಿಷ್ಟ ಮಂತ್ರಗಳಿಂದ ದೆವ್ವವನ್ನು ಬಿಡಿಸುತ್ತಿದ್ದರು.

ಗಾಳಿ ಹಿಡಿದ ಹೆಣ್ಣೊಬ್ಬಳನ್ನು ಒಮ್ಮೆ ಸಿದ್ಧಗಂಗಾಕ್ಷೇತ್ರಕ್ಕೆ ಕರೆತಂದಿದ್ದರು. ಸ್ವಾಮಿಗಳು ಆಕೆಯ ಸ್ವಲ್ಪ ಕೂದಲನ್ನು ಬೆರಳಲ್ಲಿ ಸುತ್ತಿಕೊಂಡು (ಹಾಗೆ ಸುತ್ತಿಕೊಂಡರೆ ಮೈಮೇಲಿರುವ ಗಾಳಿ ಪರಾರಿಯಾಗಲು ಸಾಧ್ಯವಿಲ್ಲವಂತೆ) ಮಂತ್ರಗಳನ್ನು ಪಠಿಸಿ ವಿಭೂತಿಯ ಧೂಳನ್ನು ಆಕೆಯ ಮೈಮೇಲೆ ಉರುಬಿದಾಗ ಸುಟ್ಟುಕೊಂಡವಳಂತೆ ಬೆವರಿದ ಆಕೆ ಎಲ್ಲವನ್ನೂ ಹೇಳುವುದಾಗಿ ಬಾಯಿಬಿಟ್ಟಳು. ಸ್ವಾಮಿಗಳು ಒಂದೊಂದೇ ಪ್ರಶ್ನೆ ಕೇಳುತ್ತ ಹೊರಟರು. ಅವಳ ಮೈಮೇಲಿದ್ದ ಗಾಳಿ ಉತ್ತರಿಸುತ್ತ ಹೋಯಿತು. ತಾನು ಇಂಥವಳೆಂದೂ ಹಗೆಗಳು ಅನ್ಯಾಯದಿಂದ ತನ್ನನ್ನು ಸಾಯಿಸಿದರೆಂದೂ ಅದಕ್ಕಾಗಿ ದೆವ್ವವಾಗಿ ಅವರ ಮನೆಯ ಇಷ್ಟು ಜನರನ್ನು ಆಹುತಿ ತೆಗೆದುಕೊಂಡೆನೆಂದೂ ಗಾಳಿ ಹೇಳಿತು. ಬಾವಿಯ ಬಳಿ ನೀರು ಕುಡಿಯಲು ಬಂದಾಗ ಅವರನ್ನು ಬಾವಿಗೆ ತಳ್ಳಿದನೆಂದೂ ಅವರ ಹೆಸರು ಇಂಥದೆಂದೂ ಗಾಳಿ ಹೇಳಿದ ಮಾತುಗಳು ವಾಸ್ತವ ವಿಷಯಗಳಾಗಿದ್ದವು. ಇಷ್ಟು ಜನರನ್ನು ಕೊಂದು ಗಳಿಸಿದ ಶಾಪ ಸಾಕೆಂದೂ ಇನ್ನು ಆ ಕ್ಷೇತ್ರದಲ್ಲೇ ತಮಗೆ ಪಾಪ ಪರಿಹಾರ ಮಾಡಿಕೊಳ್ಳಬೇಕೆಂದೂ, ಒಪ್ಪಿಗೆಯಿದ್ದರೆ ಏನಾದರೂ ಗುರುತು ಕೊಡತಕ್ಕದೆಂದೂ ಸ್ವಾಮಿಗಳು ಕೇಳಿದಾಗ ಗಾಳಿಹಿಡಿದ ಹೆಣ್ಣು ತನ್ನ ತಲೆಯಿಂದ ಒಂದು ಹಿಡಿಕೂದಲನ್ನು ಕಿತ್ತುಕೊಟ್ಟಳು. ಆಮೇಲೆ ಮತ್ತೆ ದೆವ್ವ ಬರಲಿಲ್ಲವೆಂದೂ ಸುಖವಾಗಿದ್ದಾಳೆಂದೂ ತಿಳಿದುಬಂತು.

ಗಾಳಿ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಹಿಡಿದ ಗಾಳಿಯನ್ನು ಬಿಡಿಸಲು ಅನುಸರಿಸುವ ಪ್ರಮುಖ ವಿಧಾನವೊಂದರ ವಿವರಗಳಿಗೆ **ನೋಡಿ– ಕಲ್ಲುಹುಯ್ಯಿಸುವುದು.** (ಎಸ್‌ಯು.)

**ಗಾಳಿಗೂಡೊಡೆದ ರೋಗ :** ಕುದುರೆಗಳಲ್ಲಿ ಮಾತ್ರ ಕಾಣಬರುವ ಉಸಿರಾಟ ಸಂಬಂಧಿರೋಗ. ಕಟ್ಟುಸಿರು (ಹೀವ್ಸ್), ಗಾಳಿಗೂಡಿನ ಬಿರಿತ (ಅಲ್‌ವಿಯೋಲಾರ್ ಎಂಫೈಸೀಮ) ಪರ್ಯಾಯನಾಮಗಳು. ಪುಪ್ಪುಸದ ಗಾಳಿ ಗೂಡುಗಳ ಹಿಗ್ಗುವಿಕೆ, ಪುಪ್ಪುಸಗಳಲ್ಲಿ ದೊಡ್ಡ ಪೊಳ್ಳುಗಳುಂಟಾಗುವುದು–ಇವು ಇದರ ಲಕ್ಷಣಗಳು. ಇವುಗಳಿಂದಾಗಿ ಪುಪ್ಪುಸದ ಗಾತ್ರ ಕಡಿಮೆಯಾಗಿ ಉಸಿರಾಟದಲ್ಲಿ ಅಸಮರ್ಪಕತೆ ತಲೆದೋರುತ್ತದೆ. ವಾಯುವಿನಿಮಯವೂ ಸರಿಯಾಗಿ ಸಾಗದು. ರೋಗಕ್ಕೆ ನಿರ್ದಿಷ್ಟ ಕಾರಣಗಳು ಇನ್ನೂ ಸರಿಯಾಗಿ ಗೊತ್ತಾಗಿಲ್ಲ. ಪುಪ್ಪುಸದ ಉರಿತ, ಕೂರಾದ ಪಂಗುಸಿರ್ನಾಳದ ಉರಿಯೂತ, ದೀರ್ಘಕಾಲದ ಕೆಮ್ಮು, ಬೇರೂರಿದ ಪಂಗುಸಿರ್ನಾಳದ ಉರಿಯೂತ ಮುಂತಾದವೂ ಕೆಲವು ಕಾರಣಗಳು. ಸೇವನೆಯ ಏರುಪೇರುಗಳಿಂದಲೂ ಇದು ಬರಬಹುದು. ತೇವಪೂರಿತ ವಾತಾವರಣ, ಹೆಚ್ಚಿನ ಕೆಲಸ, ಹೆಚ್ಚಾದ ಆಹಾರ, ಶೀತ ಹಾಗೂ ಬಿರುಗಾಳಿ ಪರಿಸ್ಥಿತಿಗಳಲ್ಲಿ ಕುದುರೆಗಳು ಈ ಬೇನೆಗೆ ಒಳಗಾಗುತ್ತವೆ. ದೂಳಿನಿಂದ ಆವೃತವಾದ ಪರಿಸರದಲ್ಲಿ ಇಬ್ಬನಿ ಇರುವ ಹುಲ್ಲನ್ನು ಮೇಯುವುದರಿಂದಲೂ ಹಸಿಯಾದ ಹಾಗೂ ಬೂಷ್ಟು ಬೆಳೆದಿರುವ ಆಹಾರವನ್ನು ತಿನ್ನುವುದರಿಂದಲೂ ಈ ರೋಗ ಬರುತ್ತದೆ. ತಿಮೋಥಿ ಕೆಂಪು ಕ್ಲೋವರ್, ಕುದುರೆ ಮಸಾಲೆ ಸೊಪ್ಪು ಹಾಗೂ ಇತರ ಜಾತಿಯ ಬೆಳೆಸಿದ ಮೇವನ್ನು ಕೊಡುವುದರಿಂದಲೂ ಈ ಬೇನೆ ಕಾಣಿಸಿಕೊಳ್ಳುತ್ತದೆ. ಡಿಕ್ಟಿಯೊಕೆವೊಲಸ್ ಆರ್ನ್‌ಫೆಲ್ಡಿ ಜಾತಿಯ ಹುಳುಗಳು ಪುಪ್ಪುಸದಲ್ಲಿ ಇರುವುದರಿಂದಲೂ ಗಾಳಿಗೂಡೊಡೆದ ರೋಗ ಬರುವುದೆಂಬ ನಂಬಿಕೆ ಉಂಟು. ಹೆಚ್ಚು ಕಾಲ ಲಾಯದಲ್ಲಿರುವ ಕುದುರೆಗಳಲ್ಲಿ ಈ ರೋಗ ಹೆಚ್ಚು. ಹುಲ್ಲುಗಾವಲಿನಲ್ಲಿ ಸ್ವತಂತ್ರವಾಗಿ ಮೇಯುವ ಕುದುರೆಗಳಲ್ಲಿ ಇದು ಅಷ್ಟಾಗಿ ಕಾಣದು. ಒಣಹುಲ್ಲು ಹಾಗೂ ಬಾರ್ಲಿಯನ್ನು ಮೇಯುವ ಕುದುರೆಗಳಲ್ಲಂತೂ ಈ ಬೇನೆ ಬರುವುದೇ ಇಲ್ಲ. ಒಂದು ರೀತಿಯ ಆಸ್ತಮಾದಿಂದಲೂ ಈ ರೋಗ ಉಂಟಾಗುತ್ತದೆ. ಚೆನ್ನಾಗಿ ಬೆಳೆಸಿದ ಒಳ್ಳೆಯ ತಳಿಗಳಲ್ಲಿ ಅಷ್ಟಾಗಿ ಕಾಣಬರದು. ಆದರೆ ಸ್ಥೂಲಕಾಯದ, ಗಿಡ್ಡಕಾಲಿನ, ದೊಡ್ಡಹೊಟ್ಟೆಯ ಕುದುರೆಗಳು ಈ ರೋಗಕ್ಕೆ ಸುಲಭವಾಗಿ ತುತ್ತಾಗುತ್ತವೆ. ವಿಪರೀತ ಕೆಲಸ ಮಾಡುವ ಕುದುರೆಗಳಿಗೆ ಸರಿಯಾದ ಆಹಾರ ಸಿಗದೆ ಹೋದರೆ ಅವುಗಳ ಪುಪ್ಪುಸ ತನ್ನ ರೋಗನಿರೋಧಕ ಶಕ್ತಿಯನ್ನು ಕಳೆದುಕೊಂಡು ರೋಗಪೀಡಿತವಾಗುತ್ತದೆ.

ಈ ಬೇನೆ ಭಾರತದಲ್ಲಿ ಅಷ್ಟಾಗಿಲ್ಲ. ಅರಬ್ ದೇಶದಲ್ಲಿ ಇಲ್ಲವೇ ಇಲ್ಲ. ಯೂರೋಪಿನ ವಿವಿಧ ದೇಶಗಳಲ್ಲೂ ಬಹು ವಿರಳ. ಅಮೆರಿಕ ಸಂಯುಕ್ತ ಸಂಸ್ಥಾನದ ವಿವಿಧ ಭಾಗಗಳಲ್ಲಿ ವ್ಯಾಪಕವಾಗಿದೆ. ಮಾತ್ರವಲ್ಲ ಅಲ್ಲಿ ಈ ರೋಗ ವರ್ಷವರ್ಷವೂ ಹೆಚ್ಚುತ್ತಿದೆ.

ರೋಗಲಕ್ಷಣಗಳು: ಬಹಳ ನಿಧಾನವಾಗಿ ಕಾಣಿಸಿಕೊಳ್ಳುತ್ತವೆ. ಮೊದಲು ಕಾಣಿಸಿಕೊಳ್ಳುವುದು ಕೆಮ್ಮು. ಎಡೆಬಿಡದೆ ಬರುವ ಕೆಮ್ಮನ್ನು ತಾಳಲಾರದೆ ಕುದುರೆ ನರಳುತ್ತದೆ. ಅನಂತರ ಮೂಗಿನಲ್ಲಿ ನೀರು ಸುರಿಯಲು ಆರಂಭವಾಗುತ್ತದೆ. ಕುದುರೆಗೆ ವಿಶ್ರಾಂತಿ ಕೊಡದೆ ಓಡಾಡಿಸಿದರೆ ಆಗ ಅದು ಉಸಿರಾಡಲು ತೊಳಲಾಡುತ್ತದೆ. ರೋಗದ ಮೊದಲ ದಿನಗಳಲ್ಲಿ ಕುದುರೆ ವಿಶ್ರಾಂತಿ ಪಡೆಯುತ್ತಿರುವಾಗ ಅದರ ಉಸಿರಾಟ ಸರಾಗವಾಗಿ ಇರುತ್ತದೆ. ಮುಂದೆ ರೋಗ ಉಲ್ಬಣವಾಗುತ್ತ ಹೋದಹಾಗೆ ಉಸಿರಾಡುವುದು ಕಷ್ಟವಾಗುತ್ತ ಬರುತ್ತದೆ. ಇದರಿಂದ ರೋಗಸ್ಥಿತಿಯನ್ನು ಬಹಳ ಸುಲಭವಾಗಿ ಗುರುತಿಸಬಹುದು. ಕೆಮ್ಮುವಾಗ ಸೀನು ಇರುವುದಿಲ್ಲ. ಕುದುರೆಯಿಂದ ಶ್ರಮದಾಯಕ ಕೆಲಸಮಾಡಿಸಿದರೆ ಕೆಮ್ಮು ಹೆಚ್ಚಾಗುತ್ತದೆ. ಎಲ್ಲಿಯೊ ದೂರದಲ್ಲಿ ಕೆಮ್ಮಿದ ಹಾಗೆ ಸದ್ದು ಉಂಟಾಗುತ್ತದೆ. ಸಾಮಾನ್ಯವಾಗಿ ಉಸಿರಾಟದ ವೇಗ ಹೆಚ್ಚುತ್ತದೆ. ಉಸಿರೆಳೆದುಕೊಳ್ಳುವುದರಲ್ಲಿ ಯಾವ ಬದಲಾವಣೆ ಇಲ್ಲದಿದ್ದರೂ ಉಸಿರು ಬಿಡುವಾಗ ಕುದುರೆಗೆ ಕಷ್ಟವಾಗುತ್ತದೆ. ಅಲ್ಲದೆ ನಿಃಶ್ವಾಸದಲ್ಲಿ ಎರಡು ಹಂತಗಳನ್ನು ಕಾಣಬಹುದು. ಜೊತೆಗೆ ಒಡಕು ಇಲ್ಲವೆ ಶಿಳ್ಳೆಯ ಶಬ್ದವೂ ಬರುತ್ತದೆ. ಅಲ್ಲದೆ ಹಿಸ್ ಹಿಸ್ ಎಂಬ ಸದ್ದೂ ಉಂಟಾಗುತ್ತದೆ. ಎದೆಗೂಡು ವಿಶಾಲವಾದಂತಾಗಿ ಪುಪ್ಪುಸದ ಅಂಗಾಂಶಗಳು ತನ್ನ ಪುಟಿತತೆಯನ್ನು ಕಳೆದುಕೊಳ್ಳುತ್ತವೆ. ಪುಪ್ಪುಸದ ಪರೆ ಬಿಳಿಚಿಕೊಳ್ಳುತ್ತದೆ. ಪಕ್ಕೆಲುಬುಗಳ

ಹಿಂದಿನ ಭಾಗದಲ್ಲಿ ಗುಳಿ ಬೀಳುತ್ತದೆ. ಅಲ್ಲಿನ ಸ್ನಾಯುಗಳು ಇಳಿಬೀಳುತ್ತವೆ. ಪುಪ್ಪುಸದ ಒಳಶಬ್ದವನ್ನು ಸ್ಟೆತೋಸ್ಕೋಪಿನ ಸಹಾಯದಿಂದ ಕೇಳಬಹುದು. ಪುಪ್ಪುಸದಲ್ಲಿ ಚಿಟಗುಟ್ಟುವ ಶಬ್ದದ ಅಲೆಗಳು ಸ್ಫುಟವಾಗಿ ಕೇಳುವುದರ ಜೊತೆಗೆ ರಕ್ತನಾಳಗಳ ಮರ್ಮರ ಧ್ವನಿಯೂ ಕೇಳಿಬರುತ್ತದೆ.

**ರೋಗನಿದಾನ:** ರೋಗ ಚೆನ್ನಾಗಿ ಉಲ್ಬಣಿಸಿದ ಮೇಲೆಯೆ ಅದನ್ನು ಗುರುತಿಸಲು ಸಾಧ್ಯವಾಗುವುದರಿಂದ ಕುದುರೆಗಳನ್ನು ಕೊಳ್ಳುವಾಗ ಪರಿಣಿತ ಪಶು ವೈದ್ಯರಿಂದ ಪರೀಕ್ಷೆ ಮಾಡಿಸಿ ರೋಗ ಇದೆಯೊ ಇಲ್ಲವೊ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಹೆನ್‌ಬೇನ್, ದತ್ತೂರಿ, ಬೆಲಡೊನ ಬೀಜ ಮುಂತಾದ ಮತ್ತು ಬರಿಸುವ ಔಷಧಿಗಳನ್ನು ಬಳಸಿ ಗಾಳಿಗೂಡೊಡೆದ ರೋಗವನ್ನು ಮರೆಮಾಡಬಹುದಾದ್ದರಿಂದ ಕುದುರೆಗಳನ್ನು ಕೊಳ್ಳುವಾಗ ಈ ವಿಷಯದಲ್ಲಿ ಸಾಕಷ್ಟು ಎಚ್ಚರ ವಹಿಸಬೇಕು.

ಗಾಳಿಗೂಡೊಡೆದ ರೋಗಕ್ಕೆ ಸರಿಯಾದ ಔಷಧಿಗಳಿಲ್ಲ. ಕುದುರೆಗಳು ಒಮ್ಮೆ ರೋಗಪೀಡಿತವಾದರೆ ಅವನ್ನು ಗುಣಪಡಿಸುವದು ಕಷ್ಟ. ಇದರಿಂದ ರೋಗಬಾರದಂತೆ ಮೊದಲೇ ಎಚ್ಚರ ವಹಿಸುವುದು ವಿಹಿತ. ಕುದುರೆಗಳಿಗೆ ಹಗುರಾದ ಕೆಲಸವನ್ನು ಕೊಡುವುದರಿಂದ, ಅವನ್ನು ಶೀತದಿಂದ ರಕ್ಷಿಸುವುದರಿಂದ, ಮಿತವಾದ ಪೌಷ್ಟಿಕ ಆಹಾರ ಕೊಡುವುದರಿಂದ, ಒಣಗಿದ ಮತ್ತು ಒಳ್ಳೆಯ ಹುಲ್ಲನ್ನು ತಿನ್ನಿಸುವುದರಿಂದ ರೋಗವನ್ನು ತಡೆಗಟ್ಟಬಹುದು. ಫೌಲರನ ಆರ್ಸೆನಿಕ್ ದ್ರಾವಣ ಹಾಗೂ ಶಾಮಕ ಔಷಧಗಳ (ಸಡೇಟಿವ್ಸ್) ಬಳಕೆಯಿಂದಲೂ ಇದನ್ನು ತಡೆಯಬಹುದು. (ಜಿ.ಆರ್.ಆರ್.ಎಸ್.)

**ಗಾಳಿತುಂಬಿದೆದೆ :** ಎದೆಗೂಡಿನ ಎರಡು ಪಕ್ಕಗಳಲ್ಲೂ ಇರುವ ಅಳ್ಳೆಪೊರೆಯ (ಪ್ಲೂರಲ್) ಪೊಳ್ಳಿನಲ್ಲಿ ಗಾಳಿಯೋ ಅನಿಲವೋ ತುಂಬಿರುವಿಕೆ (ನ್ಯೂಮೋತೋರಾಕ್ಸ್). ರೋಗದಿಂದ ಇಲ್ಲವೇ ಆಕಸ್ಮಿಕಗಳಿಂದಾದ ಕಾಯಿಲೆಯನ್ನು ಸಹಜವಾಗಿ ಆದದ್ದೆಂದೂ ಪುಪ್ಪುಸಗಳ ರೋಗದ ಚಿಕಿತ್ಸೆಗಾಗಿ ವೈದ್ಯನೇ ಒಳಕ್ಕೆ ಗಾಳಿಯನ್ನು ಚುಚ್ಚಿ ಹೊಗಿಸಿ ಆದುದನ್ನು ಕೃತಕವಾದದ್ದೆಂದೂ ಹೇಳುತ್ತಾರೆ. ಸಹಜವಾಗಿ ಗಾಳಿತುಂಬಿದೆದೆ ಆದಾಗ ಅಳ್ಳೆಪೊರೆಯ ಪೊಳ್ಳಿನೊಳಕ್ಕೆ ಸಾಧಾರಣವಾಗಿ ಪುಪ್ಪುಸದಿಂದ ವಾಯು ನುಗ್ಗುವುದು. ಪುಪ್ಪುಸದ ಮೇಲ್ಮೈಯ ಹತ್ತಿರ ಇರುವ ಕ್ಷಯದ ಗೂಡು ಒಡೆದುಕೊಂಡು ಉಸಿರ್ನಾಳದಲ್ಲಿರುವ ವಾಯು ಪೊಳ್ಳಿನೊಳಕ್ಕೆ ತೂರುವುದು ಸಾಮಾನ್ಯ. ಅಪರೂಪವಾಗಿ ಗೂರಲು ರೋಗಿಗಳಲ್ಲಿ ಆಗಿರುವಂತೆ ಹಿರಿಹಿಗ್ಗಿದ ಗಾಳಿಯುಬ್ಬಟೆಯ (ಎಂಫಿಸೀಮ್ಯಾಟಸ್) ಕಿರುಕೋಶ ಒಡೆದುಕೊಂಡರೂ ಹೀಗಾಗಬಹುದು. ಇನ್ನುಳಿದವರಲ್ಲಿ ಗಾಳಿತುಂಬಿದೆದೆ ಆಗಲು ಎದೆಗೆ ಬಿದ್ದ ಪೆಟ್ಟು, ಇಲ್ಲವೆ ಮುರಿತ ಮುಂತಾದವು ಕಾರಣ. ಆದರೆ ಸಹಜವಾಗಿ ಆಗುವ ಈ ಕಾಯಿಲೆಗೆ 90% ಮಂದಿಯಲ್ಲಿ ಪುಪ್ಪುಸದ ಕ್ಷಯವೇ ಕಾರಣ.

ಸಾಮಾನ್ಯವಾಗಿ ಗಾಳಿತುಂಬಿದೆದೆ ಇದ್ದಕ್ಕಿದ್ದ ಹಾಗೆ ತಲೆದೋರುತ್ತದೆ. ರೋಗಿ ವಿರಮಿಸಿಕೊಳ್ಳುತ್ತಿರುವಾಗ ಕೂಡ ಇದು ತಲೆದೋರಬಹುದು. ಆಗ ಎದೆಯ ಪಕ್ಕೆಯಲ್ಲಿ ಇದ್ದಕ್ಕಿದ್ದ ಹಾಗೆ ಇರಿವಂಥ ಚಳುಕು, ಉರಿಯಾಗಿ ಉಸಿರಾಡಲು ಬಹುಮಟ್ಟಿಗೆ ಕಷ್ಟವಾಗುತ್ತದೆ. ಪುಪ್ಪುಸ ಒಡೆಬಿರಿದು ಅದರ ಹೊದಿಕೆಯಾಗಿರುವ ಅಳ್ಳೆಪೊರೆ ಹರಿದಿರುತ್ತದೆ. ಅಳ್ಳೆಪೊರೆಯ ಪೊಳ್ಳಿನೊಳಕ್ಕೆ ಆಗ ಸಹಜವಾಗಿ ವಾಯು ನುಗ್ಗಿ ಅದೇ ಪಕ್ಕದ ಪುಪ್ಪುಸ ಚಿಕ್ಕದಾಗಿ ಮುದುರಿಕೊಳ್ಳುವುದು. ಎದೆಯ ನಡುವೆ ಇರುವ ಗುಂಡಿಗೆ ಆಗ ರೋಗವಿಲ್ಲದ ಪಕ್ಕಕ್ಕೆ ತಳ್ಳಿದಂತಾಗಿ ಸರಿಯುತ್ತದೆ. ರೋಗಿ ಹೆಜ್ಜೆಹಾಕಲಾರದೆ ಕುಸಿದುಬೀಳುತ್ತಾನೆ. ಹಾಸಿಗೆಯಲ್ಲಿ ಮಲಗಿಸಿದರೆ ರೋಗದ ಪಕ್ಕಕ್ಕೆ ಮಾಲಿಕೊಂಡು ದಿಂಬಿಗೆ ಒರಗಿಕೊಳ್ಳುತ್ತಾನೆ.

ಸಹಜವಾಗಿ ಆಗುವ ಗಾಳಿತುಂಬಿದೆದೆಯ ಕೆಲವು ಬಗೆಗಳಲ್ಲಿ ಪುಪ್ಪುಸಕ್ಕೂ ಅಳ್ಳೆಪೊರೆಗೂ ನಡುವೆ ಇರುವ ಕಂಡಿ ತೆರೆದೇ ಇರುವುದರಿಂದ ರೋಗಿ ಉಸಿರಾಡಿದಂತೆಲ್ಲ ಸಿಳ್ಳೆಹಾಕುವ ಸದ್ದಾಗುವುದು. ಆಗ ಅಳ್ಳೆಪೊರೆಯ ಪೊಳ್ಳಿನಲ್ಲಿ ಒತ್ತಡ ಶೂನ್ಯವಾಗಿದ್ದುದು ವಾಯುವಿನ ಒತ್ತಡದ ಸಮಕ್ಕೆ ಬರುತ್ತದೆ. ಇನ್ನು ಕೆಲವರಲ್ಲಿ ಅಳ್ಳೆಪೊರೆಯ ಹರಿದ ಚೂರು ಕವಾಟದಂತಾಗಿ ಪುಪ್ಪುಸದಿಂದ ಅಳ್ಳೆಪೊರೆಯ ಪೊಳ್ಳಿನೊಳಕ್ಕೆ ವಾಯು ತೂರಲು ಬಿಟ್ಟು ವಾಯು ಹಿಂತಿರುಗಲು ಬಿಡದಂತಾಗುವುದು. ಆಗ ಪೊಳ್ಳಿನೊಳಗಿನ ಒತ್ತಡ ವಿಪರೀತ ಹೆಚ್ಚಿ ಉಸಿರಾಟಕ್ಕೆ ಬಲು ತೊಡಕಾಗುತ್ತದೆ. ಕೂಡಲೇ ಎದೆಗೆ ತೂತುಸೂಜಿ ಚುಚ್ಚಿ ವಾಯುವನ್ನು ಹೊರಕ್ಕೆ ಬಿಟ್ಟರೆ ಶಮನವಾಗುವುದು.

**ಕೃತಕ ಗಾಳಿತುಂಬಿದೆದೆ :** ಪುಪ್ಪುಸದ ಕೆಲವು ಬಗೆಗಳ ಕ್ಷಯ, ಗಾಳಿಯುಬ್ಬಟೆ ರೋಗಗಳಲ್ಲಿ ಬೇಕೆಂದೆ ಪಕ್ಕದ ಪುಪ್ಪುಸಕ್ಕೆ ವಿರಾಮಕೊಡಲು ಅದು ಮುದುರಿಕೊಳ್ಳುವಂತೆ ಮಾಡುವುದೂ ಒಂದು ಚಿಕಿತ್ಸೆ. ಎರಡು ಪಕ್ಕೆಲುಬುಗಳ ನಡುವೆ ಎದೆಗೂಡಿನ ಗೋಡೆಯಲ್ಲಿ ತೂತುಸೂಜಿ ಚುಚ್ಚಿ ಅಳ್ಳೆಪೊರೆ ಪೊಳ್ಳಿನೊಳಕ್ಕೆ ವಾಯುವನ್ನು ಬಿಡುವರು. ಒಂದಕ್ಕೊಂದು ಕೊಳವೆಗಳ ಮೂಲಕ ಸಂಬಂಧಿಸಿರುವ ನಂಜುರೋಧಕ ದ್ರವವಿರುವ ಎರಡು ದೊಡ್ಡ ಸೀಸೆಗಳಿಗೆ ರಬ್ಬರು ಕೊಳವೆ ಮೂಲಕ ತಗಲಿಸಿದ ತೂತುಸೂಜಿಯನ್ನು ಎದೆಯೊಳಕ್ಕೆ ಚುಚ್ಚಬೇಕು. ಒಂದು ಸೀಸೆಯನ್ನು ಮೇಲೆತ್ತಿ ಹಿಡಿದರೆ ಅದರಲ್ಲಿ ದ್ರವ ಅಳ್ಳೆಪೊರೆಯ ಪೊಳ್ಳಿನೊಳಗಣ ಒತ್ತಡವನ್ನು ಒತ್ತಡಮಾಪಿ ಗುರುತಿಸುತ್ತದೆ. ಒಂದೊಂದು ಬಾರಿಗೂ ಕೊಂಚವೇ ತುಂಬಿದಾಗ ವಾಯು ಹೀರಿಹೋಗುವುದರಿಂದ ಮತ್ತೆ ಮತ್ತೆ ಅದನ್ನು ತುಂಬುತ್ತಿರಬೇಕಾಗುವುದು. ಹೀಗೆ ಎದೆಯಲ್ಲಿ ತುಂಬಿದ್ದರೆ ಆ ಭಾಗದ ಪುಪ್ಪುಸ ಚಲಿಸದೆ ಮುದುರಿಕೊಂಡು ವಿರಮಿಸುವುದರಿಂದ ಅದರೊಳಗಿನ ರೋಗ ವಾಸಿಯಾಗಲು ಅವಕಾಶ ಕೊಟ್ಟಂತಾಗುವುದು **(ನೋಡಿ– ಕ್ಷಯ–2)**. ಕ್ಷಯ ರೋಗಾಣುಮಾರಕವಾದ ಇಂದಿನ ಹೊಸ ಮದ್ದುಗಳು ಬರುವತನಕ ಕೃತಕ ಗಾಳಿತುಂಬಿದೆದೆ ರೋಗಿಗೆ ಕ್ಷಯರೋಗಿಗೆ ಮಾಡುವ ಮದ್ದನ್ನೇ ಮಾಡಲಾಗುತ್ತಿತ್ತು. ಒಂದು ಬಾರಿ ಇದನ್ನು ಆರಂಭಿಸಿದರೆ ಎರಡು ವರ್ಷಗಳ ವರೆಗಾದರೂ ಕೊಡಬೇಕಿತ್ತು. ಇದರಿಂದ ಹಲವು ತೊಡಕುಗಳು ಏಳುತ್ತಿದ್ದವು. ಎದೆಗೆ ಹಾಕಿದ ಸೂಜಿ ಅಳ್ಳೆಪೊರೆಗೆ ತಾಗಿದ ಕೂಡಲೇ ಕೆಲವರು ಸಾಯುತ್ತಿದ್ದರು. ಒಳಗೆ ಬಿಟ್ಟ ವಾಯು ರಕ್ತನಾಳದೊಳಕ್ಕೂ ಅಪರೂಪವಾಗಿ ಹೋಗಿಬಿಡುತ್ತಿತ್ತು. ಎದೆಯಲ್ಲಿ ಸೋಂಕುಹತ್ತಿ ಕೀವು ಸೇರಿಬಿಡುತ್ತಿತ್ತು. ಉಸಿರಾಟದ ಆಳವೂ ಕುಗ್ಗಿ ಪುಪ್ಪುಸ ಮತ್ತೆ ಎಂದಿನಂತೆ ಹಿಗ್ಗದೆ ನಾರುಗಟ್ಟುತ್ತಿತ್ತು. ಎಲ್ಲಕ್ಕೂ ಹೆಚ್ಚಿನದಾಗಿ ರೋಗಿ ಸಾಕಷ್ಟು ಕಳವಳಕ್ಕೀಡಾಗುತ್ತಿದ್ದ. 1950ರಿಂದ ಈಚೆಗೆ ಈ ಚಿಕಿತ್ಸೆ ಬಳಕೆಯಲ್ಲಿಲ್ಲ **(ನೋಡಿ– ಉಸಿರಾಟ)** **(ನೋಡಿ– ಉಸಿರಾಟದ–ಮಂಡಲದ–ಅಂಗರಚನೆ)**. (ವೈ.ಆರ್.;ಡಿ.ಎಸ್.ಎಸ್.)

**ಗಾಳಿಪಟ :** ನೆಲದೆಡೆಗೆ ಸಾಗಿರುವ ಉದ್ದವಾದ ದಾರದ ಒಂದು ಕೊನೆಗೆ ಬಂಧಿತವಾಗಿರುವ ಹಾರಾಟ ಸಾಧನ (ಕೈಟ್) ಗಾಳಿಪಟ ಹಾರಿಸುವಾತ ನೆಲದ ಮೇಲೆ ನಿಂತು ಇಲ್ಲವೇ ಚಲಿಸುತ್ತ, ದಾರವನ್ನು ಹಿಡಿದು ಜಗ್ಗುವುದರ ಅಥವಾ ಸಡಿಲಬಿಡುವುದರ ಮೂಲಕ ಗಾಳಿಪಟವನ್ನು ನಿಯಂತ್ರಿಸುತ್ತಾನೆ. ಇದರಿಂದ ಮತ್ತು ವಾಯುವಿಗೆ ಸಹಜವಾಗಿ ಇರಬಹುದಾದ ಚಲನೆಯಿಂದ ಜನಿಸುವ ವಾಯುವಿನ ಸಾಪೇಕ್ಷಚಲನೆ ಉತ್ಪಾದಿಸುವ ವಾಯುಗತೀಯ ಬಲಗಳು ಗಾಳಿಪಟಕ್ಕೆ ಅದರ ದಾರದ ಸಮೇತ ಸಮತೋಲವನ್ನು ಕಾಪಾಡಿಕೊಳ್ಳಲು ಬೇಕಾದ ಆಧಾರವನ್ನು ಒದಗಿಸುತ್ತವೆ.



ಸಾದಾಪಟ

ವಾಯುವನ್ನು ಕೆಳಮುಖವಾಗಿ ವಿಚಲನಗೊಳಿಸುವುದರಿಂದ ಗಾಳಿಪಟವನ್ನು ಮೇಲೆತ್ತಲು ಬೇಕಾಗುವ ನೆಗಪುಬಲ (ಲಿಫ್ಟಿಂಗ್ ಫೋರ್ಸ್) ಒದಗಿಬರುತ್ತದೆ. ಇದರ ಪರಿಣಾಮವಾಗಿ ಸಂವೇಗದಲ್ಲಿ (ಮೊಮೆಂಟಂ) ಉಂಟಾಗುವ ಬದಲಾವಣೆ ಮೇಲ್ಮುಖಬಲವನ್ನು ಗಾಳಿಪಟದ ಮೇಲೆ ಪ್ರಯುಕ್ತಿಸುತ್ತದೆ. ಆದ್ದರಿಂದ ಒಂದು ಗಾಳಿಪಟ ಯಶಸ್ವಿ ಆಗಬೇಕಾದರೆ ಅತ್ಯಂತ ಕಡಿಮೆ ರೆಕ್ಕೆ ಹೊರೆ (ವಿಂಗ್ ಲೋಡಿಂಗ್) ಎಂದರೆ ತೂಕ/ವಿಸ್ತೀರ್ಣ ಇರಬೇಕು. ಅಲ್ಲದೇ ಅದರ ನೆಗಪು–ವಿಕರ್ಷಣ (ಲಿಫ್ಟ್–ಡ್ರ್ಯಾಗ್) ನಿಷ್ಪತ್ತಿ (ರೇಷಿಯೊ) ಸಾಧ್ಯವಾಗುವಷ್ಟು ದೊಡ್ಡದಾಗಿರಬೇಕು. ಒಂದು ಗಾಳಿಪಟಕ್ಕೆ

ಈ ನಿಷ್ಪತ್ತಿ ಹಾಗೂ ಸ್ಥಿರತೆ (ಸ್ಟೆಬಿಲಿಟಿ) ಎರಡೂ ದಾರದ ಉದ್ದವನ್ನು ಅವಲಂಬಿಸಿರುವ ಉತ್ಪನ್ನಗಳು (ಫಂಕ್ಷನ್ಸ್). ದಾರವನ್ನು ಹೆಚ್ಚು ಹೆಚ್ಚು ಸಡಿಲ ಬಿಟ್ಟಂತೆ ಹೆಚ್ಚು ಹೆಚ್ಚು ವಿಕರ್ಷಣ (ಡ್ರ್ಯಾಗ್) ಉಂಟಾಗುತ್ತದೆ. ಹೀಗೆ ಅಧಿಕಗೊಂಡ ವಿಕರ್ಷಣವೂ ಗಾಳಿಪಟ ಮತ್ತು ದಾರದ ಒಟ್ಟು ತೂಕವೂ ಸೇರಿ ಗಾಳಿಪಟ ಕೆಳಮುಖವಾಗಿ ಜೋಲುವಂತೆ ಮಾಡುತ್ತವೆ. ಆದ್ದರಿಂದ ಒಂದು ಗಾಳಿಪಟವನ್ನು ಅನಿರ್ಬಂಧಿತವಾಗಿ ಮೇಲೆ ಮೇಲೆ ಏರಿಸಲು ಸಾಧ್ಯವಿಲ್ಲ ಎಂಬುದು ಸಿದ್ಧವಾಗುತ್ತದೆ.

ಗಾಳಿಪಟ ಹಾರಿಸುವುದು ಜಗತ್ತಿನಲ್ಲಿ ಒಂದು ವಿಶೇಷ ಬಗೆಯ ಆಟ. ಭಾರತೀಯರಿಗೂ ಇದರ ಬಗ್ಗೆ ಹೆಚ್ಚಾದ ಒಲವುಂಟು. ಬಹಳಮಟ್ಟಿಗೆ ಈ ಆಟ ಬಾಲಕರಿಗೆ ಮೀಸಲಾದುದಾದರೂ ದೊಡ್ಡವರೂ ಭಾಗವಹಿಸುವುದುಂಟು. ಹಳ್ಳಿಗಳಲ್ಲಂತೂ ಅಂತೆಯೇ ಪಟ್ಟಣಗಳಲ್ಲೂ ಇದು ರೂಢಿಯಲ್ಲಿದೆ. ಗಾಳಿಪಟ ಹಾರಿಸುವುದು ಹೇಗೆ ಒಂದು ಮನೋರಂಜಕ ಆಟವೋ ಹಾಗೆ ಅದನ್ನು ಕಟ್ಟುವುದು ಒಂದು ಕುಶಲ ಕಲೆಯೂ ಹೌದು. ಕಡ್ಡಿಗಳನ್ನು ಒಂದು ಗೊತ್ತಾದ ಆಕೃತಿಯಲ್ಲಿ ಕಟ್ಟಿ, ಅದಕ್ಕೆ ಬಣ್ಣಬಣ್ಣದ ಕಾಗದವನ್ನು ಅಂಟಿಸಿ ಗಾಳಿಪಟವನ್ನು ತಯಾರಿಸುತ್ತಾರೆ. ಅನಂತರ ಅದಕ್ಕೊಂದು ಸೂತ್ರ ಕಟ್ಟಿ ಪಟಕ್ಕೆ ಅನುಕೂಲವಾದ ಬಾಲಂಗೋಚಿಯೊಂದನ್ನು ಹೊಂದಿಸಿ ದಾರ ಕಟ್ಟಿ ಗಾಳಿಯಲ್ಲಿ ಹಾರಿಸುತ್ತಾರೆ. ಗಾಳಿಯ ಪಟದ ಆಕಾರ ಪಟದಂತಿದ್ದು ಅದು ಗಾಳಿಯಲ್ಲಿ ಹಾರುವುದರಿಂದ ಇದಕ್ಕೆ ಗಾಳಿಪಟ ಎಂಬ ಹೆಸರು ಬಂದಿದೆ. ಪಟ ಗಾಳಿಯಲ್ಲಿ ನಾಗರಹಾವಿನ ಹೆಡೆಯ ಹಾಗೆ ಮೇಲಕ್ಕೂ ಕೆಳಕ್ಕೂ ಅಕ್ಕಕ್ಕೂ ಪಕ್ಕಕ್ಕೂ ಬಾಗಿ, ಬಳುಕಿ, ತೂಗಿ ನಲಿಯುವುದರಿಂದ ನೋಡುವವರಿಗೆ ರಂಜಕವಾಗಿರುತ್ತದೆ.



ಬಣ್ಣಬಣ್ಣದ ಚೀನೀ ಗಾಳಿಪಟಗಳು

ದೊರೆತಿರುವ ಒಂದು ಸಂಪ್ರದಾಯದ ಆಧಾರದ ಮೇಲೆ ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಆರ್ಕಿಟಾಸ್ ಎಂಬ ಗ್ರೀಕ್ ವಿಜ್ಞಾನಿ ಗಾಳಿಪಟವನ್ನು ಮೊದಲ ಬಾರಿಗೆ ರೂಪಿಸಿದನೆಂದು ಗೊತ್ತಾಗಿದೆ. ಆದರೆ ಪಟಹಾರಿಸುವ ಹವ್ಯಾಸ ಏಷ್ಯನ್ ಜನತೆಯಲ್ಲಿ ಗುರುತು ಸಿಗದ ಎಷ್ಟೋ ಕಾಲದಿಂದ ಪ್ರಚಲಿತವಿತ್ತೆಂದು ಊಹಿಸಬಹುದಾಗಿದೆ. ಅಲ್ಲದೆ ಕೊರಿಯ, ಚೀನ, ಜಪಾನ್, ಮತ್ತು ಮಲಯ ದೇಶಗಳಲ್ಲಿ ಗಾಳಿಪಟ ಹಾರಿಸುವುದು ಬಹಳ ಕಾಲದವರೆಗೆ ರಾಷ್ಟ್ರೀಯ ಆಟವಾಗಿ ಖ್ಯಾತಿಯನ್ನು ಪಡೆದಿತ್ತು. ರಾತ್ರಿ ವೇಳೆಯಲ್ಲಿ ಮನೆಗಳ ಮೇಲೆ ಗಾಳಿಪಟ ಹಾರಿಸುವುದರಿಂದ ದುಷ್ಟಶಕ್ತಿಗಳನ್ನು ದೂರಕ್ಕೆ ತಳ್ಳಬಹುದು ಎಂಬ ನಂಬಿಕೆಯೂ ಜನರಲ್ಲಿತ್ತು. ಏಷ್ಯಖಂಡದಲ್ಲಿ ಕೆಲವು ಸಂದರ್ಭಗಳಲ್ಲಿ ಪಟ ಹಾರಿಸುವುದು ಒಂದು ಬಗೆಯ ಧಾರ್ಮಿಕ ಸಂಕೇತವಾಗಿತ್ತು.

ಕರ್ನಾಟಕದಲ್ಲಿ ಕೆಲವು ಕಡೆ ಆಷಾಢದ ಏಕಾದಶಿಯ ಸಮಯದಲ್ಲಿ ಗಾಳಿಪಟದ ಹಬ್ಬವನ್ನು ಆಚರಿಸುತ್ತಾರೆ. ಇದನ್ನು ಪಟದ ಹಬ್ಬ ಎಂದು ಕರೆಯುವುದು ರೂಢಿ. ಈ ಹಬ್ಬದ ದಿನ ಮನೆಯನ್ನು ಸಾರಿಸಿ ಗುಡಿಸಿ, ಸ್ವಚ್ಛಮಾಡಿ ಉಪವಾಸವಿರುತ್ತಾರೆ. ಸಂಜೆ ಗಂಡಸರು ಮತ್ತು ಮಕ್ಕಳು ಬಯಲಿಗೆ ಹೋಗಿ ಪಟ ಹಾರಿಸುತ್ತಾರೆ. ರಾತ್ರಿ ಎಲ್ಲರೂ ದೇವರನ್ನು ಪೂಜಿಸಿ ಫಲಾಹಾರ ಸೇವಿಸುತ್ತಾರೆ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅಳಿಯ ಮನೆ ಬಂದಾಗ ತಿಂಡಿಯ ಬುಟ್ಟಿಯಲ್ಲಿ ಗಾಳಿಪಟವನ್ನೂ ಇಟ್ಟುಕೊಡುತ್ತಾರೆ.

ಗಾಳಿಪಟದ ಮುಖ್ಯ ಉಪಯೋಗ ಮನೋರಂಜನೆಯಾದರೂ ಇದರ ಇತರ ಉಪಯೋಗಗಳೂ ಗಮನಾರ್ಹವಾಗಿವೆ. ಕವಿಗಳು ಪಟವನ್ನು ಮಾನವನ ಅನಿಶ್ಚಿತ ಗತಿಗೆ ಸಂಕೇತವಾಗಿ ಬಳಸಿರುವುದುಂಟು. ಹಿಂದೆ ಕೆಲವು ದೇಶಗಳಲ್ಲಿ ಗಾಳಿಪಟವನ್ನು ಯುದ್ಧಭೂಮಿಯಲ್ಲಿ ಸಂಕೇತವಾಗಿ ಬಳಸುತ್ತಿದ್ದರು. ದೊಡ್ಡ ದೊಡ್ಡ ಪಟಗಳಿಗೆ ಕ್ಯಾಮರಾಗಳನ್ನು ಕಟ್ಟಿ ಸುಂದರವಾದ ಭೂಪ್ರದೇಶಗಳ ಛಾಯಾಚಿತ್ರಗಳನ್ನು ತೆಗೆಯುತ್ತಿದ್ದುದೂ ಉಂಟು. 1860 ರಿಂದ 1901ರಲ್ಲಿ ಗಾಳಿಪಟವನ್ನು ಹಲವಾರು



ಎಂಟು ಮೂಲೆ ಜಂಟಿ ಪಟ

ವೈಜ್ಞಾನಿಕ ಉದ್ದೇಶಗಳಿಗಾಗಿ ಬಳಸಿದ್ದಾರೆ. ವಿಶೇಷವಾಗಿ (melionology) ಏರೋನಾಟಿಕ್ಸ್, ತಂತಿರಹಿತ ದೂರಸಂಪರ್ಕ ಹಾಗೂ ಫೋಟೋಗ್ರಫಿಗಳಲ್ಲಿ ಬಳಸುತ್ತಿದ್ದರು.

1752ರಲ್ಲಿ ಬೆಂಜಮಿನ್ ಫ್ರಾಂಕ್ಲಿನ್ ಎಂಬ ವಿಜ್ಞಾನಿ ಗಾಳಿಪಟಕ್ಕೆ ಲೋಹದ ಬೀಗದ ಕೈಯನ್ನು ತೂಗುಹಾಕಿ, ಪ್ರಚಂಡ ಬಿರುಗಾಳಿಯಲ್ಲಿ ವಿದ್ಯುಚ್ಛಕ್ತಿಯನ್ನು ಆಕರ್ಷಿಸಿ ಅದರಲ್ಲಿನ ಬೆಳಕಿನ ಗುಣವನ್ನು ತೋರಿಸಿಕೊಟ್ಟ. ಗಾಳಿಪಟವನ್ನು ಅನೇಕ ವರ್ಷಗಳ ವರೆಗೆ ವಾಯುಮಂಡಲ ಪರಿಶೀಲನೆಗೆ ಸಹಾಯಕ ಸಾಧನವಾಗಿ ಬಳಸುತ್ತಿದ್ದರು. ಗೊತ್ತಾದ ಯಂತ್ರವನ್ನು ಬಹಳ ಎತ್ತರವಾದ ಪ್ರದೇಶಕ್ಕೆ ಪಟದ ಮೂಲಕವಾಗಿ ಏರಿಸಿ ಅಲ್ಲಿನ ಹವೆಯ ಸ್ಥಿತಿಯನ್ನು ಗುರುತಿಸುತ್ತಿದ್ದರು. ಹೀಗೆ ಯಾವುದೇ ಪಟ ಹಾರಿದ ಅತ್ಯಂತ ದೊಡ್ಡ ಎತ್ತರ 23,835 ಅಡಿಗಳಾಗಿದೆ. ವಿಮಾನ ಮತ್ತು ಬಲೂನುಗಳ ಬಳಕೆಯಿಂದಾಗಿ ಅಮೆರಿಕನರು 1931ರ ತರುವಾಯ ಗಾಳಿಪಟವನ್ನು ವಾಯುಮಂಡಲ ಶಾಸ್ತ್ರದ ಸಾಧನ ಸಾಮಗ್ರಿಯನ್ನಾಗಿ ಬಳಸುವುದನ್ನು ನಿಲ್ಲಿಸಿಬಿಟ್ಟರು. ಆದರೆ 20ನೆಯ ಶತಮಾನಕ್ಕೆ ಮುಂಚೆ ಕೆಲವು ದೇಶಗಳಲ್ಲಿ ದೊಡ್ಡ ದೊಡ್ಡ ಪಟಗಳ ಮೂಲಕವಾಗಿ ಮಾನವನನ್ನು ಆಕಾಶಕ್ಕೇರಿಸುವ ಪ್ರಯತ್ನಗಳು ನಡೆದವು. ಇದು ಸೈನಿಕ ಇಲಾಖೆಯವರ ಪ್ರಯತ್ನವಾಗಿತ್ತು. ಮಿಲಿಟರಿ ಶಕ್ತಿಯನ್ನು ಹೊಂದಿದ್ದ ಕೆಲವು ದೊಡ್ಡ ರಾಷ್ಟ್ರಗಳು ವಿಮಾನದ ಕಂಡುಹಿಡಿಯುವಿಕೆಯಿಂದಾಗಿ ಪಟಗಳಲ್ಲಿ ನಡೆಸುತ್ತಿದ್ದ ಪ್ರಯೋಗಗಳನ್ನು ನಿಲ್ಲಿಸಿಬಿಟ್ಟವು. ಪ್ರಪಂಚಾದ್ಯಂತ ಗಾಳಿಪಟ ಉತ್ಸವವು ಆಚರಿಸಲ್ಪಡುತ್ತದೆ. ಏಷ್ಯಖಂಡದಲ್ಲಿ ಗಾಳಿಪಟ ಪಂದ್ಯಗಳು ನಡೆಯುತ್ತವೆ.

ಆಫ್ಘಾನಿಸ್ತಾನದಲ್ಲಿ ನಡೆಯುವ ಗಾಳಿಪಟ ಪಂದ್ಯವನ್ನು ಗುರಿ ಪರಣ್‌ಬಾಜಿ ಎನ್ನುತ್ತಾರೆ. ಈ ಪಂದ್ಯಗಳನ್ನಾಡುವ ಕೆಲವರು ಗಾಳಿಪಟದ ದಾರಕ್ಕೆ ಗ್ಲಾಸ್‌ಪೌಡರ್ ಹಾಗೂ ಗ್ಲೂಗಳನ್ನು ಹಾಕಿರುತ್ತಾರೆ. ಇದರಿಂದ ತಮ್ಮ ವಿರೋಧಿ ಬಣದ ಗಾಳಿಪಟದ ದಾರವನ್ನು ಬೇಗ ಕತ್ತರಿಸಲು ಸಹಾಯವಾಗುತ್ತದೆ.

ಪಾಕಿಸ್ತಾನದಲ್ಲಿ ಇದನ್ನು ಗುರಿಬಾಜಿ ಅಥವಾ ಪಂತಗ್‌ಬಾಜಿ ಅನ್ನುತ್ತಾರೆ. ಗಾಳಿಪಟದ ಪಂದ್ಯ ಇಡೀ ಪಾಕಿಸ್ತಾನದಲ್ಲಿ ಪ್ರಸಿದ್ಧವಾಗಿದೆ.

ವಿಯೆಟ್ನಾಂನಲ್ಲಿ ಗಾಳಿಪಟಕ್ಕೆ ಬಾಲಂಗೋಚಿ ಬದಲು ಸಣ್ಣ ಕೊಳಲುಗಳನ್ನು ಕಟ್ಟಿರುತ್ತಾರೆ. ಪಟಗಾಳಿಯಲ್ಲಿ ಹಾರಿದಾಗ 'ಹಂ' ಎನ್ನುವ ಸಂಗೀತದ ಸ್ವರ ಕೇಳುತ್ತದೆ.

ದಕ್ಷಿಣ ಅಮೇರಿಕದ ಚಿಲಿಯಲ್ಲಿ ಗಾಳಿಪಟ ಉತ್ಸವ ಬಹಳ ಪ್ರಸಿದ್ಧವಾಗಿದ್ದು, ಸ್ವಾತಂತ್ರ್ಯೋತ್ಸವದ ದಿನ ಸೆಪ್ಟೆಂಬರ್ 18ರಂದು ವಿಶೇಷವಾಗಿ ಆಚರಿಸಲ್ಪಡುತ್ತದೆ.

ಗಯಾನದಲ್ಲಿ ಈಸ್ಟರ್ ದಿನದಂದು ಧಾರ್ಮಿಕ ಗುಂಪುಗಳು ಹಾಗೂ ಬುಡಕಟ್ಟು ಜನಾಂಗದವರು ಸೇರಿ ಗಾಳಿಪಟ ಹಾರಿಸುವ ಉತ್ಸವದಲ್ಲಿ ಭಾಗವಹಿಸುತ್ತಾರೆ.

ಗಾಳಿಪಟಗಳಲ್ಲಿ ಅನೇಕ ಬಗೆಯ ಪ್ರತಿರೂಪಗಳನ್ನು ಕಾಣಬಹುದು. ಮುಖ್ಯವಾಗಿ ಪ್ರಸಿದ್ಧವಾದ ಮೂರು ಬಗೆಗಳನ್ನಿಲ್ಲಿ ವಿವರಿಸಿದೆ.

**1 ಷಟ್ಕೋಣಾಕೃತಿಯ ಪಟಗಳು:** ಈ ಪಟಕ್ಕೆ ಆರು ಮುಖಗಳು (ಕೋನಗಳು) ಇರುವುದರಿಂದ ಇದನ್ನು ಷಟ್ಕೋಣಾಕೃತಿಯ ಪಟ ಎಂಬುದಾಗಿ ಕರೆಯುತ್ತಾರೆ. ಇದಕ್ಕೆ ಮೂರು ಕಡ್ಡಿಗಳನ್ನು ರಚನೆಯ ಸಾಧನವಾಗಿ ಬಳಸುವುದರಿಂದ ಇದನ್ನು ಮೂರು ಕಡ್ಡಿಯ ಪಟ ಎಂದೂ ಕರೆವುದಿದೆ. ಇದರ ರಚನೆಗೆ ಬಳಸುವ ಮೂರು ಕಡ್ಡಿಗಳೂ ಒಂದೇ ಅಳತೆಯವಾಗಿರುತ್ತವೆ. ಇವನ್ನು ಅಡ್ಡಡ್ಡಲಾಗಿ ಸೇರಿಸಿ ಒಳ್ಳೆಯ ಹೊಂದಾಣಿಕೆಯೊಂದಿಗೆ ದಾರದ ಸಹಾಯದಿಂದ ಭದ್ರವಾಗಿ ಕಡ್ಡಿಗಳ ಮಧ್ಯದಲ್ಲಿಯೂ ಮತ್ತು ಅಂಚಿನಲ್ಲಿಯೂ ಕಟ್ಟಲಾಗುತ್ತದೆ. ಅನಂತರ ಇಡೀ ರಚನೆಯನ್ನು ಹಗುರವಾದ ಕಾಗದ ಮುಂತಾದ ವಸ್ತುಗಳನ್ನು ಹೊಂದಿಸಿ ಅಂಟಿಸಲಾಗುತ್ತದೆ. ಬಳಿಕ ಪಟದ ಕೆಳಗಡೆಯ ಎರಡು ಕೋನಬಿಂದುಗಳಿಗೆ ಸೇರಿದ ವಂಕಿಯೊಂದಕ್ಕೆ ಬಾಲವನ್ನು ತೂಗುಬಿಡುತ್ತಾರೆ. ಪಟವನ್ನು ಗಾಳಿಗೆ ಒಡ್ಡಿ ಹಾರಿಸಲು ಸಹಾಯಕವಾಗುವಂತೆ ಅದರ ಮಧ್ಯಕ್ಕೆ ಸೂತ್ರದ ಹುರಿಯೊಂದನ್ನು ಕಟ್ಟುತ್ತಾರೆ. ಆ ಹುರಿ ಅನೇಕ ಪಾದಗಳಿಂದ ಕೂಡಿದ್ದು, ಆ ಪಾದಗಳು ಪಟದ ಅಂಚಿನ ನಾನಾ ಸಂದುಗಳನ್ನು ಬಂಧಿಸಿ ಇರುತ್ತವೆ. ಆ ಪಾದಗಳ ಉದ್ದ ಪಟದ ಒಟ್ಟು ಉದ್ದದ ಅರ್ಧದಷ್ಟು.



ಚೋರಂಟಿ ಪಟ

**2 ವಜ್ರಾಕೃತಿಯ ಪಟ:** ವಜ್ರಾಕೃತಿಯನ್ನು ಹೋಲುವುದರಿಂದ ಈ ಪಟಕ್ಕೆ ಈ ಹೆಸರು. ಇದರಲ್ಲಿ ಸಮಾನ ಅಳತೆಯ ಎರಡು ಕಡ್ಡಿಗಳನ್ನು ಅಡ್ಡಡ್ಡಲಾಗಿ ಸೇರಿಸಿ ಮಧ್ಯದಲ್ಲಿ ದಾರದ ಸಹಾಯದಿಂದ ಬಲವಾಗಿ ಕಟ್ಟಿರುತ್ತಾರೆ. ಇದಕ್ಕೆ ಕಟ್ಟಿದ ಸೂತ್ರಕ್ಕೆ (ಮೂಗುದಾರ) ಎರಡು ಪಾದಗಳು ಇವೆ. ಒಂದು ಪಾದವನ್ನು ಪಟದ ಮೇಲ್ಭಾಗದ ಬಿಂದುವಿಗೂ ಇನ್ನೊಂದು ಪಾದವನ್ನು ಪಟದ ಕೆಳಭಾಗದ ಬಿಂದುವಿಗೂ ಸೇರಿಸಿ ಕಟ್ಟಲಾಗಿರುತ್ತದೆ.

**3 ಪೆಟ್ಟಿಗೆ ಪಟ:** ಇದನ್ನು 1890ರಲ್ಲಿ ಆಸ್ಟ್ರೇಲಿಯ ದೇಶದ ಲಾರೆನ್ಸ್ ಹಾರ್‌ಗ್ರೇವ್ ಎಂಬಾತ ಕಂಡುಹಿಡಿದ. ಇದು ಸಮಚತುಷ್ಕೋಣಾಕೃತಿಯಲ್ಲಿದ್ದು ರಚನೆಯಲ್ಲಿ ಪೆಟ್ಟಿಗೆಯನ್ನು ಹೋಲುವುದರಿಂದ ಇದನ್ನು ಪೆಟ್ಟಿಗೆ ಪಟ ಎಂದು ಕರೆಯಲಾಗಿದೆ. ಇದರಲ್ಲಿ ಚೌಕಾಕೃತಿಯ ಎರಡು ಮೈಕಟ್ಟಿನ ರಚನೆ ಉಂಟು. ಉದ್ದ ಮತ್ತು ಅಗಲ ಒಂದೇ ಅಳತೆಯದು. ಪಟದ ಮೈಕಟ್ಟಿನ ಅಂಚಿಗೆ ಯಾವ ಬಗೆಯ ಹೊದಿಕೆಯೂ ಇರುವುದಿಲ್ಲ. ಸೂತ್ರ ಪಟದ ಮೈಕಟ್ಟಿನ ಮೇಲ್ಭಾಗದ ಮಧ್ಯದಲ್ಲಿ ಲಂಬವಾಗಿ ಸೇರಿರುವ ಕಡ್ಡಿಗಳನ್ನು ತನ್ನೆರಡು ಪಾದಗಳಿಂದ ಬಂಧಿಸಿರುತ್ತದೆ. ಪಟ ಗಾಳಿಯಲ್ಲಿ ಏಕಮುಖ ಕೋನದಿಂದ ನಿರಾಯಾಸವಾಗಿ ತೇಲುತ್ತದೆ. ಇದಕ್ಕೆ ಬಾಲದ ಅಗತ್ಯವಿಲ್ಲ. ಸೂತ್ರದಲ್ಲಿ ನಾಲ್ಕು ಪಾದಗಳು ಇದ್ದಾಗ ಪಟ ವಿಶಾಲವಾಗಿ ಎಲ್ಲ ಕಡೆಯೂ ಹಾರಲು ಅನುಕೂಲವಾಗುತ್ತದೆ. ಇದರಲ್ಲಿ ತ್ರಿಕೋನಪಟ, ದುಂಡುಪಟ (ಕೊಳವೆ ಆಕೃತಿಯ ಪಟ) ಮತ್ತು ಷಟ್ಕೋಣಾಕೃತಿಯ ಪಟಗಳನ್ನು ರಚಿಸುವುದೂ ಸಾಧ್ಯ.

ಇತ್ತೀಚೆಗೆ ಹಕ್ಕಿ ಆಕೃತಿಯಲ್ಲಿ, ಮನುಷ್ಯಾಕೃತಿಯಲ್ಲಿ, ದೋಣಿಯಾಕೃತಿಯಲ್ಲಿ, ಚಿಟ್ಟೆಯಾಕೃತಿಯಲ್ಲಿ ಪಟಗಳನ್ನು ರಚಿಸಿರುವ ನಿದರ್ಶನಗಳಿವೆ. ಡ್ರೇಗನ್ ಮಾದರಿ ಚೀನದ ಅಚ್ಚುಮೆಚ್ಚಿನ ಪಟದಾಕೃತಿಯಾಗಿದೆ.

ಕನ್ನಡದಲ್ಲಿ ಗಾಳಿಪಟ ಎಂಬ ಹೆಸರಿನಲ್ಲಿಯೇ ಪ್ರಬಂಧ ಸಂಕಲನವೊಂದನ್ನು ಪ್ರಕಟಿಸಿರುವ ರಾ. ಕು. ಅವರು ತಮ್ಮ ಕೃತಿಯಲ್ಲಿ ಚೌಕುಪಟ, ಬುಗಲಿ, ಕಿಳ್ಳಿಕೇತ (ರೊಯ್ ಪಟ), ಜೋಡು ಪಟಗಳನ್ನು ಹೆಸರಿಸಿ ಅವುಗಳ ವಿಶಿಷ್ಟತೆಯನ್ನು ತಿಳಿಸಿದ್ದಾರೆ. ಅಲ್ಲದೆ ಗಾಳಿಪಟಕ್ಕೆ ಕೋತಿಪಟ ಎಂಬ ಹೆಸರಿರುವುದನ್ನು ಅವರು ತಿಳಿಸಿದ್ದಾರೆ.

ಗಾಳಿಪಟದ ರಚನೆಯ ಬಗ್ಗೆ ಒಂದೆರಡು ಅಂಶಗಳನ್ನು ಅಗತ್ಯವಾಗಿ ಗಮನಿಸಬಹುದಾಗಿದೆ. ಕಡ್ಡಿಗಳು ಸೇರುವ ಸಂದುಗಳನ್ನು ದಪ್ಪ ಹುರಿಯಿಂದ ಒಂದೆರಡು ಸುತ್ತು ಗಂಟುಹಾಕುವುದಕ್ಕಿಂತ ಸಣ್ಣ ದಾರದಲ್ಲಿ ಅನೇಕ ಸುತ್ತು ಬಳಸಿ ಗಂಟು ಹಾಕುವುದು ಉತ್ತಮ. ದಪ್ಪ ಹುರಿಯಲ್ಲಿ ಗಂಟು ಹಾಕುವುದರಿಂದ ಕಡ್ಡಿಗಳು ಜಾರಿಗೋಗುವ ಸಂಭವ ಉಂಟು. ಈ ಸಂದುಗಳನ್ನು ಸೇರಿಸಿ ಭದ್ರಪಡಿಸಲು ಕೆಲವು ಸಾರಿ ಗೋಂದು (ಮೇಣ), ಅರಗು, ವಜ್ರ ಮೊದಲಾದ ಅಂಟುವ ಪದಾರ್ಥಗಳನ್ನು ಬಳಸುತ್ತಾರೆ. ಪಟದ ಪ್ರಮುಖ ಸಾಧನಗಳಲ್ಲಿ ಬಾಲವೂ ಒಂದು. ಇದನ್ನು ಗಾಳಿಗೆ ಪ್ರತಿರೋಧಕ ಶಕ್ತಿಯಾಗಿ ಉಪಯೋಗಿಸುತ್ತಾರೆಯೆ ಹೊರತು ತೂಕಕ್ಕಾಗಿ ಅಲ್ಲ.



ಪೆಟ್ಟಿಗೆ ಪಟ

ಮನೆ, ಕಂಬ, ಮರ ಮೊದಲಾದ ಅಡಚಣೆಗಳಿಲ್ಲದ ಬಯಲು ಪ್ರದೇಶ ಪಟ ಹಾರಿಸಲು ಒಳ್ಳೆಯ ಸ್ಥಳ. ಗಾಳಿ ಹೆಚ್ಚು ರಭಸದಿಂದ ಬೀಸಿದರೆ ಪಟ ಜೋಲಿ ಹೊಡೆದು ನೆಲಕ್ಕೆ ಅಪ್ಪಳಿಸುವ ಸಾಧ್ಯತೆ ಉಂಟು. ಅಥವಾ ತೀರ ಮಂದಗತಿಯಲ್ಲಿ ಬೀಸಿದರೆ ಪಟ ಮೇಲೇರದೆಯೂ ಹೋಗಬಹುದು.

ಸಾಮಾನ್ಯವಾಗಿ ಪಟವನ್ನು ಗಾಳಿ ಬೀಸುವ ದಿಕ್ಕಿಗೆ ಪ್ರತಿಮುಖವಾಗಿ ಹಾರಿಸುತ್ತಾರೆ. ಉದಾಹರಣೆಗೆ, ಪೂರ್ವದಿಂದ ಪಶ್ಚಿಮದ ಕಡೆಗೆ ಗಾಳಿ ಬೀಸುತ್ತಿದ್ದರೆ ಪೂರ್ವದ ಕಡೆಗೆ ದಾರ ಹಿಡಿದುಕೊಂಡು ಓಡುತ್ತಾರೆ. ಪಟದ ಗಾತ್ರಕ್ಕೆ ಅನುಗುಣವಾಗಿ ಅದನ್ನಾಡಿಸುವ ದಾರದ ಗಾತ್ರವೂ ಇರಬೇಕಾಗುತ್ತದೆ. ಏಕೆಂದರೆ ತುಂಬ ದೊಡ್ಡ ಪಟವನ್ನು ನೂಲೆಳೆಯಲ್ಲಿ ಆಡಿಸಲು ಹೋದಾಗ ದಾರ ತುಂಡಾಗಿ ಪಟ ಭೂಮಿಗೆ ಬಿದ್ದುಹೋಗುತ್ತದೆ. ವಿದ್ಯುತ್ ತಂತಿಗಳಿರುವಲ್ಲಿ ಪಟವನ್ನು ಹಾರಿಸುವುದು ಅಪಾಯಕರ.

ಗಾಳಿಪಟದ ಮುಖ್ಯ ಉಪಯೋಗ ಮನೋರಂಜನೆ. ಇದು ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ತಂದುಕೊಡುತ್ತದೆ. ಈಗಲೂ ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಗಾಳಿಪಟಗಳನ್ನು ಮೇಲಕ್ಕೆ ಹಾರಿಸಿ ಅದರ ಹುರಿಯನ್ನು ತುಂಬ ಎತ್ತರವಾದ ಮರದ ತುದಿಗೆ ಕಟ್ಟಿ ಪಟ ಹಾರುವುದನ್ನು ಬೆಳಗ್ಗೆಯಿಂದ ಸಂಜೆಯವರೆಗೆ ನೋಡಿ ಆನಂದಿಸುವುದುಂಟು.

ಒಟ್ಟಿನಲ್ಲಿ, ಆರಂಭದಲ್ಲಿ ಜನಪದದ್ದಾಗಿದ್ದ ಈ ಆಟ–ಕ್ರಮೇಣ ನಾಗರಿಕ ಆಟವಾಗಿ, ಇಂದು ವಿಶ್ವದೆಲ್ಲೆಡೆಯಲ್ಲಿ ಮಾನ್ಯತೆ ಪಡೆದಿದೆ. (ಎಂ.ಸಿ.ವಿ.)

**ಗಾಳಿಮರ :** ಕ್ಯಾಜ್ಯುಯಾರೈನೇಸೀ ಕುಟುಂಬಕ್ಕೆ ಸೇರಿದ ಒಂದು ಚೆಲುವಾದ ಮರ. ಸರ್ವೆಮರ ಪರ್ಯಾಯನಾಮ. ಕ್ಯಾಜ್ಯುಯಾರೈನ ಎಕ್ವಿಸಿಟಿಫೋಲಿಯ ಇದರ ವೈಜ್ಞಾನಿಕ ಹೆಸರು. ಇದರ ಪುಟ್ಟರೆಂಬೆಗಳು ಕ್ಯಾಸೊವರಿ ಹಕ್ಕಿಯ ಪುಕ್ಕಗಳನ್ನು

ಹೋಲುತ್ತವೆ ಎಂಬ ಕಾರಣದಿಂದ ಬಹುಶಃ ಈ ವೈಜ್ಞಾನಿಕ ಹೆಸರು ಬಂದಿರಬೇಕು (ಕ್ಯಾಸೊವರಿಯ ವೈಜ್ಞಾನಿಕ ಹೆಸರು ಕ್ಯಾಸ್ಯುಯೇರಿಯಸ್ ಎಂದು). ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಬೀಫ್‌ವುಡ್, ಶೀ ಓಕ್ ಎಂದು ಕರೆಯಲಾಗುತ್ತದೆ. ಆಸ್ಟ್ರೇಲಿಯ, ಮಲೇಸಿಯ ಮತ್ತು ಪೆಸಿಫಿಕ್ ದ್ವೀಪಗಳ ತೀರಪ್ರದೇಶಗಳಲ್ಲಿ ಇದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಬಂಗಾಳ, ಬರ್ಮ ಮತ್ತು ಅಂಡಮಾನ್‌ಗಳಲ್ಲೂ ಇದನ್ನು ಸಮುದ್ರ ತೀರಪ್ರದೇಶಗಳಲ್ಲಿ ಕಾಣಬಹುದು. ಅಲ್ಲದೆ ಉರುವಲಾಗಿ ಉಪಯೋಗಿಸುವುದರಿಂದ ಇದನ್ನು ದೊಡ್ಡ ದೊಡ್ಡ ತೋಪುಗಳಲ್ಲಿ ಬೆಳೆಸಲಾಗುತ್ತಿದೆ. ನೋಡಲು ಅಂದವಾಗಿ ಪೈನ್ ಮರಗಳಂತೆ ಕಾಣುವುದರಿಂದ ಅಲಂಕಾರಕ್ಕೆಂದು ಉದ್ಯಾನಗಳಲ್ಲಿ ರಸ್ತೆ ಪಕ್ಕಗಳಲ್ಲಿ ಬೆಳೆಸುವುದೂ ಉಂಟು.

ಗಾಳಿಮರ ಸುಮಾರು 30 ಮೀ ಎತ್ತರಕ್ಕೆ ಬೆಳೆಯುವ ಬೃಹದ್ಗಾತ್ರದ ಮತ್ತು ನಿತ್ಯಹಸಿರಿನ ಮರ. ಬಲು ವೇಗವಾಗಿ ಬೆಳೆಯುವ ಗುಣ ಇದಕ್ಕೆ ಉಂಟು. ಮುಖ್ಯ ಕಾಂಡ ನೆಟ್ಟಗೆ ಮೇಲ್ಮುಖವಾಗಿ ಬೆಳೆಯುತ್ತಿದ್ದು ಉರುಳೆಯಾಕಾರದಲ್ಲಿದೆ. ತುದಿಯಲ್ಲಿನ ರೆಂಬೆಗಳು ಸಣ್ಣದಾಗಿ ಮೃದುವಾಗಿವೆ. ಎಲೆಗಳು ಹುರುಪೆಗಳಾಗಿ ಮಾರ್ಪಾಡಾಗಿರುವು



ದರಿಂದ ಆಹಾರ ತಯಾರಿಕೆಯ ಕಾರ್ಯ ಈ ಎಳೆಯ ರೆಂಬೆಗಳದ್ದು. ಇದಕ್ಕಾಗಿ ಇವುಗಳಲ್ಲಿ ಹರಿತ್ತು ಇರುತ್ತದೆ. ಇದರಿಂದಲೇ ಇವುಗಳ ಬಣ್ಣ ಹಸುರು. ಎಲೆಗಳು ರೆಂಬೆಗಳ ಗೆಣ್ಣುಗಳಲ್ಲಿ ವರ್ತುಲ ಮಾದರಿಯಲ್ಲಿ ಜೋಡಣೆಗೊಂಡಿವೆ. ಈ ಲಕ್ಷಣದಲ್ಲಿ ಗಾಳಿಮರ ಕುದುರೆಬಾಲದ ಗಿಡವನ್ನು ಹೋಲುತ್ತದೆ. ಗಾಳಿಮರದ ಹೂಗಳು ಏಕಲಿಂಗಿಗಳು. ಗಂಡು ಹೂಗಳು ಉದ್ದವಾದ ಕದಿರುಗೊಂಚಲುಗಳಲ್ಲೂ ಹೆಣ್ಣು ಹೂಗಳು ಗುಂಡನೆಯ ಚಂಡು ಮಂಜರಿಗಳಲ್ಲೂ ಜೋಡಣೆಗೊಂಡಿವೆ. ಗಂಡುಹೂಗಳಲ್ಲಿ 1–2 ಪುಷ್ಪಪತ್ರಗಳೂ ಒಂದೇ ಒಂದು ಕೇಸರವೂ ಇವೆ. ಹೆಣ್ಣು ಹೂಗಳಲ್ಲಿ ಪುಷ್ಪಪತ್ರಗಳೇ ಇಲ್ಲ: ಬರಿಯ ಒಂದೇ ಒಂದು ಅಂಡಾಶಯವಿದೆ. ಫಲ ನಟ್‌ಲೆಟ್ ಮಾದರಿಯದು. ಒಂದು ಹೂಗೊಂಚಲಿನ ಫಲಗಳೆಲ್ಲ ಒಟ್ಟುಗೂಡಿ ಹೆಚ್ಚು ಕಡಿಮೆ ರುದ್ರಾಕ್ಷಿಯನ್ನು ಹೋಲುವಂಥ ಸಂಯುಕ್ತ ಫಲವಾಗಿ ಬೆಳೆಯುತ್ತವೆ.

ಗಾಳಿಮರ ಕಡಲ ತೀರಪ್ರದೇಶಗಳ ಮರಳು ಭೂಗುಣಕ್ಕೆ ಹೊಂದಿಕೊಂಡು ಚೆನ್ನಾಗಿ ಬೆಳೆಯುತ್ತದೆ. ಆದರೆ ಗಟ್ಟಿಯಾದ ಜಿಗುಟು ಅಥವಾ ಜೌಗುನೆಲದಲ್ಲಿ ಬೆಳೆಯಲಾರದು. ಗಾಳಿಮರಗಳ ಬೇರಿನಲ್ಲಿ ಸಾರಜನಕವನ್ನು ಸ್ಥಿರೀಕರಿಸುವ ಬ್ಯಾಕ್ಟೀರಿಯಗಳ ಗಂಟುಗಳಿರುತ್ತವೆ. ಗಟ್ಟಿ ನೆಲದಲ್ಲಿ ಈ ಬ್ಯಾಕ್ಟೀರಿಯಗಳ ಕಾರ್ಯ ನಿಂತುಹೋಗುವುದರಿಂದ ಅಂಥ ನೆಲ ಗಾಳಿಮರದ ಬೆಳವಣಿಗೆಗೆ ಯೋಗ್ಯವಲ್ಲ.

ಗಾಳಿಮರವನ್ನು ಭೂರಿಗಾತ್ರದಲ್ಲಿ ಬೆಳೆಸುವಾಗ ಮೊದಲು ನರ್ಸರಿಗಳಲ್ಲಿ ಬೀಜ ಬಿತ್ತಿ ಸಸಿಗಳನ್ನು ಪಡೆದು ಬೇಕಾದ ಸ್ಥಳಕ್ಕೆ ವರ್ಗಾಯಿಸುತ್ತಾರೆ. ಬಿತ್ತಿದ ಬೀಜಗಳಿಗೆ ಇರುವೆಗಳು ಮುತ್ತಿ ಅವು ನಾಶವಾಗುವುದನ್ನು ತಪ್ಪಿಸಲು ಬೀಜ ಬಿತ್ತುವ ಮುನ್ನ ಅಥವಾ ಅನಂತರ ನೀರಿನೊಂದಿಗೆ ಮೈಲುತುತ್ತದ ದುರ್ಬಲ ದ್ರಾವಣವನ್ನೊ ಮೀನುಮಾರಿ ಗಿಡದ ಬೇರಿನ ಕಷಾಯವನ್ನೊ ಹಾಕುತ್ತಾರೆ. ಬಿತ್ತುವ ಸಮಯ, ಸಸಿಗಳನ್ನು ವರ್ಗಾಯಿಸುವ ಕಾಲ ಮತ್ತು ಇತರ ವ್ಯವಸಾಯ ಕ್ರಮಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆಬೇರೆಯಾಗಿವೆ. ಸಾಮಾನ್ಯವಾಗಿ ಬಿತ್ತಿದ 6–18 ತಿಂಗಳ ಅನಂತರ ಸಸಿಗಳನ್ನು ಬೇರೆಡೆಗೆ ವರ್ಗಾಯಿಸಬಹುದು. ನಾಟಿ ಮಾಡುವಾಗ ಅವುಗಳ ನಡುವೆ 2–3 ಮೀ ಅಂತರವಿರುವಂತೆ ನೋಡಿಕೊಳ್ಳಲಾಗುತ್ತದೆ. ಕೆಲವು ಬಾರಿ 4 ಮೀ ಅಂತರವಿಟ್ಟು ತ್ರಿಕೋನಾಕೃತಿಯಲ್ಲಿ ನೆಡುವ ಪದ್ಧತಿಯೂ ಉಂಟು. ಸಸಿಗಳ ನಡುವಣ ಅಂತರ ಮರಗಳನ್ನು ಯಾವ ಕಾರ್ಯಕ್ಕೆ ಉಪಯೋಗಿಸಲಾಗುತ್ತದೆ ಎಂಬ ಅಂಶವನ್ನು ಅವಲಂಬಿಸಿದೆ. ಸೌದೆಗಾಗಿ ಬೆಳೆಸುವಾಗ ಅಂತರ ಕಡಿಮೆ ಇದ್ದರೂ ಪರವಾಗಿಲ್ಲ. ಚೌಬೀನೆಗಾಗಿ ಬೆಳೆಸಿದರೆ ಸಸಿಯಿಂದ ಸಸಿಗೆ ಅಂತರ ಸಾಕಷ್ಟಿರಬೇಕು. ಇದರಿಂದ ಮರಗಳು ಹುಲುಸಾಗಿ ಬೆಳೆಯುತ್ತವೆ. ಸಸಿಗಳು ಚೆನ್ನಾಗಿ ಬೇರೂರುವ ತನಕ (1–3 ವರ್ಷಗಳ ವರೆಗೆ) ನೀರು ಹಾಯಿಸುವುದು ಅತ್ಯಗತ್ಯ.

ಗಾಳಿಮರ ಹಲವು ಕೀಟಗಳ ಹಾಗೂ ಶಿಲೀಂಧ್ರಗಳ ಹಾವಳಿಗೆ ತುತ್ತಾಗುತ್ತದೆ. ನರ್ಸರಿಯಲ್ಲಿ ಸಸಿಗಳು ಚಿಮ್ಮಂಡೆಗಳ ಹಾವಳಿಗೆ ತುತ್ತಾಗುತ್ತದೆ. ಇವನ್ನು ತಡೆಯಲು ನರ್ಸರಿಯ ಸುತ್ತ 6 ಮೀ ಆವರಣದಲ್ಲಿ ಬೆಳೆಯುವ ಗಿಡಮರಗಳನ್ನು ತೆಗೆದು ಆಗಾಗ್ಗೆ ಕಾಣಬರುವ ಚಿಮ್ಮಂಡೆಗಳನ್ನು ನಾಶ ಮಾಡಬೇಕು. ಇದಲ್ಲದೆ ತೊಗಟೆ ತಿನ್ನುವ ಕಂಬಳಿಹುಳುಗಳು (ಆರ್ಬೆಲ ಜಾತಿ) ಗಾಳಿಮರಕ್ಕೆ ಸಾಕಷ್ಟು ಹಾನಿ ಉಂಟುಮಾಡುತ್ತವೆ. ನೆಲದಲ್ಲಿ ನೀರಿನ ಅಂಶ ಹೆಚ್ಚಿದಲ್ಲಿ ಬೇರುಗಳಿಗೆ ಟ್ರೈಕೋಸ್ಪೋರಿಯಮ್ ವೆನಿಕ್ಯುಲೋಸಮ್ ಎಂಬ ಶಿಲೀಂಧ್ರ ರೋಗ ಬರುತ್ತದೆ. ಶಿಲೀಂಧ್ರ ಹಾಗೂ ಕೀಟಗಳಿಗೆ ತುತ್ತಾದ ಮರಗಳನ್ನು ನಾಶಗೊಳಿಸುವುದರಿಂದ ರೋಗ ಹರಡುವಿಕೆ ಯನ್ನು ತಡೆಯಬಹುದಲ್ಲದೆ ತೋಪಿನಲ್ಲಿ ಮರಗಳನ್ನು ಬೀಳಿಸಿ ಮತ್ತೆ ಬೇರೆ ಸಸಿಗಳನ್ನು ಹಾಕಲು 2 ತಿಂಗಳ ಅವಧಿ ಇರುವಾಗ ಈ ಮರಗಳ ನಡುವೆ ಗೇರು, ಹೊಂಗೆ, ಬೇವು, ಬೇಟೆ ಮುಂತಾದವನ್ನು ಬೆಳೆಸುವುದರಿಂದ ರೋಗಕ್ಕೆ ತುತ್ತಾದ ಮರಗಳು ಮಿಕ್ಕ ಆರೋಗ್ಯವಂತ ಮರಗಳಿಂದ ಬೇರ್ಪಡುತ್ತವೆ. ಅಲ್ಲದೆ ಬೇರೆ ಜಾತಿಯ ಮರಗಳಿಂದ ಆಕರ್ಷಿತವಾಗುವ ಕೀಟಾಹಾರಿ ಹಕ್ಕಿಗಳ ಸಂಖ್ಯೆ ಹೆಚ್ಚಾಗಿ ಕೀಟಪಿಡುಗು ಕಡಿಮೆಯಾಗುತ್ತದೆ. ತೋಪಿನಲ್ಲಿನ ಗಾಳಿಮರಗಳನ್ನು ನಿರ್ದಿಷ್ಟ ಅವಧಿಯ ಅನಂತರ ಕಡಿದು ಹಾಕಿ ಮತ್ತೆ ಹೊಸ ಮರಗಳನ್ನು ಬೆಳೆಸುವ ಕ್ರಮ ಇದೆ. ಈ ಅವಧಿ ತಮಿಳುನಾಡಿನಲ್ಲಿ 10 ವರ್ಷಗಳಾದರೆ ಕರ್ನಾಟಕದ ಉತ್ತರಕನ್ನಡ ಜಿಲ್ಲೆಯಲ್ಲಿ 30 ವರ್ಷಗಳು. ಆರ್ಥಿಕ ದೃಷ್ಟಿಯಿಂದ 15 ವರ್ಷಗಳ ಅವಧಿ ಉತ್ತಮವೆನ್ನಲಾಗಿದೆ.

ಗಾಳಿಮರಕ್ಕೆ ಕೆಲವು ವಿಶೇಷ ಗುಣಗಳಿವೆ. ಅದರ ರಸಕಾಷ್ಠದ ಬಣ್ಣ ನಸುಗಂದು. ಚೇಗುಕಾಷ್ಠ ಕೆಂಪು ಮಿಶ್ರಿತ ಕಪ್ಪು ಬಣ್ಣದ್ದಾಗಿದ್ದು ಬಲಿಯುತ್ತ ಹೋದಂತೆ ಕಂದು ಬಣ್ಣಕ್ಕೆ ತಿರುಗುತ್ತದೆ. ಚೌಬೀನೆ ಭಾರವಾಗಿ ಗಟ್ಟಿಯಾಗಿ ಇದ್ದರೂ ಒಣಗಿದ ಮೇಲೆ ಸೀಳುತ್ತದೆ. ಅಲ್ಲದೆ ಇದನ್ನು ಹದ ಮಾಡುವುದು ಸ್ವಲ್ಪ ಕಷ್ಟಕರವಾದ ಕೆಲಸ. ಈ ಮರವನ್ನು ಸೌದೆಯಾಗಿ ಉಪಯೋಗಿಸುವುದೇ ಹೆಚ್ಚು. ಇದು ಹಸಿಯಾಗಿರುವಾಗಲೇ ಚೆನ್ನಾಗಿ ಉರಿಯುವುದಲ್ಲದೆ ಹೆಚ್ಚಿನ ಕಾವನ್ನು ಸಹ ಉಳಿಸಿ ಕೊಂಡಿರುತ್ತದೆ. ಹೀಗಾಗಿ ಇದನ್ನು ಅತ್ಯುತ್ತಮ ಉರುವಲು ಎಂದು ಪರಿಗಣಿಸಲಾಗಿದೆ. ಆದರೂ ಗಾಳಿಮರಕ್ಕೆ ಬೇರೆ ಉಪಯೋಗಗಳೂ ಇಲ್ಲದಿಲ್ಲ. ಇದನ್ನು ತೊಲೆ, ಆಸರೆಕಂಬ, ವಿದ್ಯುತ್ ಕಂಬಗಳಾಗಿ ಉಪಯೋಗಿಸುತ್ತಾರೆ. ಇದಲ್ಲದೆ ಗೃಹಕೈಗಾರಿಕೆಗಳಲ್ಲಿ, ಗ್ಯಾಲರಿಗಳ, ನೊಗಗಳ ಹಾಗೂ ದೋಣಿಯ ಮೀಟುಕೋಲಿನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ; ಚಕ್ರಗಳ ಆಧಾರ ಕಂಬಗಳಾಗಿಯೂ ಬಳಸುತ್ತಾರೆ. ಗಾಳಿಮರಕ್ಕೆ ಔಷಧೀಯ ಗುಣಗಳೂ ಉಂಟು. ಇದರ ತೊಗಟೆ ಒಳ್ಳೆಯ ಪ್ರತಿಬಂಧಕವೆನಿಸಿದೆ. ಇದನ್ನು ಅತಿಸಾರ ಮತ್ತು ಆಮಶಂಕೆಗೆ ಮದ್ದಾಗಿ ಉಪಯೋಗಿಸುತ್ತಾರೆ. ಎಲೆಗಳ ಕಷಾಯವನ್ನು ಉದರ ಶೂಲೆಗೂ ಪುಡಿಮಾಡಿದ ಬೀಜಗಳನ್ನು ತಲೆನೋವಿಗೆ ಪಟ್ಟು ಹಾಕಲೂ ಉಪಯೋಗಿಸುತ್ತಾರೆ. ತೊಗಟೆಯಲ್ಲಿ ಶೇ. 6–15 ರಷ್ಟು ಟ್ಯಾನಿನ್ ಇವೆ. ತೊಗಟೆಯನ್ನು ಬಟ್ಟೆಗಳಿಗೆ ನಸುಕೆಂಪು ಬಣ್ಣ ಹಾಕಲೂ ಮೀನಿನ ಬಲೆಯನ್ನು ಗಟ್ಟಿಯಾಗಿಸಲೂ ಉಪಯೋಗಿಸುತ್ತಾರೆ. (ಕೆ.ಎಸ್.ಎನ್.)

**ಗಾಳಿಯುಬ್ಬಟೆ ರೋಗ :** ಪುಪ್ಪಸದ ಗಾಳಿಗೂಡುಗಳು ಒಡೆದು ಹೋಗಿ, ಅವು ತಮ್ಮ ಸ್ಥಿತಿಸ್ಥಾಪಕ ಶಕ್ತಿ ಕಳೆದುಕೊಳ್ಳುವುದರಿಂದ ಪುಪ್ಪಸ ಅತಿಯಾಗಿ ಹಿಗ್ಗಿ ದೊಡ್ಡದಾಗುವ ಒಂದು ರೋಗ (ಎಂಫಿಸೀಮ). ಗಾಳಿ ಗೂಡುಗಳು (ಆಲ್ವಿಯೋಲೈ)

ತೆಳುವಾದ ಪೊರೆಯಿಂದ ರೂಪುಗೊಂಡು, ಉಸಿರೆಳೆದುಕೊಂಡಾಗ ಉಬ್ಬಿ, ಉಸಿರು ಬಿಟ್ಟಾಗ ತಮ್ಮ ಯಥಾಸ್ಥಿತಿಗೆ ಹಿಂತಿರುಗುತ್ತವೆ; ಆದರೆ ಗಾಳಿಯುಬ್ಬಟೆಯಿಂದ ಪೀಡಿತವಾದಾಗ ಇವು ಅತಿಯಾಗಿ ಹಿಗ್ಗಿರುವುದರಿಂದ ಯಥಾಸ್ಥಿತಿಗೆ ಹಿಂತಿರುಗದೆ ದೊಡ್ಡವಾಗೇ ಉಳಿಯುತ್ತವೆ. ಇದರಿಂದ ಇಕ್ಕೆಡೆಗಳಲ್ಲೂ ಇರುವ ಫುಪ್ಪುಸಗಳು ದೊಡ್ಡವಾಗಿ ಎದೆಗೂಡಿಗೆ ಪೀಪಾಯಿ ಆಕಾರ ಬರುತ್ತದೆ. ಸಾಮಾನ್ಯವಾಗಿ ಈ ರೋಗವನ್ನು ತುತೂರಿ, ಓಲಗ, ಕೊಳಲು ಮುಂತಾದ ವಾದ್ಯಗಳನ್ನು ನುಡಿಸುವ ಸಂಗೀತಗಾರರಲ್ಲಿ ಕಾಣಬಹುದು. ಈ ರೋಗ ಧೂಮಪಾನ ಮಾಡುವವರಲ್ಲಿ ಗೋಚರಿಸುವ ಮುಖ್ಯ ರೋಗ. ಫುಪ್ಪುಸಗಳ ಗಾಳಿ ಗೂಡುಗಳಲ್ಲಿ ಗಾಳಿಯೊತ್ತಡ ಒಂದೇ ಸಮವಾಗಿ ಏರಿ ಉಳಿಯುವುದರಿಂದ ಕಾಲ ಕ್ರಮೇಣ ಈ ಪರಿಸ್ಥಿತಿ ಒದಗುತ್ತದೆ. ಅವರಲ್ಲಿ ಉಸಿರು ಹೊರಬಿಡುವುದು ತುಂಬ ಕಷ್ಟಕರ. ಇದೇ ರೀತಿ ಉಬ್ಬಟೆ ಇತರ ಅಂಗಾಂಶಗಳಲ್ಲೂ ಕಾಣಿಸಿಕೊಳ್ಳಬಹುದು. ಉದಾಹರಣೆಗೆ ಎರಡು ಫುಪ್ಪುಸಗಳ ಮಧ್ಯೆ ಹಾಗೂ ಬೆನ್ನೆಲುಬು ಮತ್ತು ಎದೆ ಎಲುಬುಗಳ ನಡುವಣ ಸ್ಥಳದಲ್ಲೂ ಚರ್ಮದಡಿಯ ಅಂಗಾಂಶಗಳಲ್ಲೂ ಗಾಳಿಯುಬ್ಬಟೆಗೆ ಅವಕಾಶವಿದೆ. ಪಕ್ಕೆಲುಬು ಮುರಿದು ಫುಪ್ಪುಸವನ್ನು ಚುಚ್ಚಿ ಹರಿದರೆ ಈ ಬಗೆಯ ಗಾಳಿಯುಬ್ಬಟೆ ಕಾಣಿಸಿಕೊಳ್ಳಬಹುದು.

ವಾಯು ಅಥವಾ ಇತರ ಅನಿಲಗಳು ದೇಹದ ನಾನಾ ಕುಹರಗಳಲ್ಲಿ ಸಂಗ್ರಹವಾಗಬಹುದು. ಎದೆಗೂಡಿನ ಕುಹರಗಳಲ್ಲಿ ಈ ರೀತಿ ವಾಯು ಸಂಗ್ರಹವಾದರೆ ನ್ಯೂಮೋತೋರ್‍ಯಾಕ್ಸ್ (ಗಾಳಿ ತುಂಬಿದೆದೆ) ಎಂದೂ ಹೊಟ್ಟೆಯೊಳಗೆ ನಾನಾ ಅಂಗಗಳನ್ನಾವರಿಸಿರುವ ಪೆರಿಟೋನಿಯಂ ಪೊರೆಯ ಕುಹರಗಳಲ್ಲಿ ಸಂಗ್ರಹವಾದರೆ ನ್ಯೂಮೋಪೆರಿಟೋನಿಯಂ ಎಂದೂ ಕರೆಯಲಾಗುತ್ತದೆ. ಇವು ಗಾಯದಿಂದ ಅಥವಾ ರೋಗದಿಂದ ಉತ್ಪತ್ತಿಯಾಗುತ್ತವೆ. ಅನಿಲವನ್ನು ಉತ್ಪತ್ತಿಮಾಡುವ ಏಕಾಣುಜೀವಿಗಳ ಸೋಂಕುಂಟಾದರೆ ಅಂಗಾಂಶಗಳಲ್ಲಿ ಗಾಳಿಯುಬ್ಬಟೆ ಕಾಣಿಸಿಕೊಳ್ಳುತ್ತದೆ. (ಆರ್.ಎಸ್.ವಿ.)

**ಗಿಂಗ್‌ಕೋ :** ಗಿಂಗೊಯೋಲೀಸ್ ಗಣದ ಗಿಂಗೊಯೇಸೀ ಕುಟುಂಬಕ್ಕೆ ಸೇರಿದ ಒಂದು ನಗ್ನ ಬೀಜ ಸಸ್ಯ. ಪರ್ಮಿಯನ್ ಅವಧಿಯಲ್ಲಿ ಪ್ರಥಮತಃ ಕಾಣಿಸಿಕೊಂಡ ಈ ಮರ ಬಹುಪ್ರಾಚೀನಕಾಲದ ಸಸ್ಯಗಳ ಏಕೈಕ ಪ್ರತಿನಿಧಿಯಾಗಿ

ಇಂದಿಗೂ ಮೂಲತಃ ಯಾವ ಬದಲಾವಣೆಯನ್ನೂ ತೋರಿಸದೆ ಉಳಿದಿರುವುದರಿಂದ ಇದನ್ನು ಜೀವಂತ ಫಾಸಿಲ್ ಎಂದು ಕರೆಯುವುದುಂಟು. ಟ್ರಯಾಸಿಕ್, ಜುರಾಸಿಕ್ ಮತ್ತು ಟರ್ಶಿಯರಿ ಕಾಲಗಳಲ್ಲಿ ಅತ್ಯಂತ ಉಚ್ಛ್ರಾಯಸ್ಥಿತಿಯನ್ನು ಮುಟ್ಟಿದ್ದ ಗಿಂಗ್‌ಕೋದಲ್ಲಿ ಈಗ ಬೈಲೋಬ ಎಂಬ ಒಂದೇ ಒಂದು ಪ್ರಭೇದ ಮಾತ್ರ ಉಳಿದಿದೆ. ಇದಾದರೂ ಪಶ್ಚಿಮ ಚೀನದ ಕೆಲವು ಪ್ರದೇಶಗಳಲ್ಲಿ ಮಾತ್ರ ಕಾಣದೊರೆಯುತ್ತದೆ. ಚೀನದಲ್ಲಿ ಇದನ್ನು ಪವಿತ್ರಮರವೆಂದು ಪರಿಗಣಿಸಲಾಗಿದ್ದು ಅಲ್ಲಿನ ದೇವಾಲಯಗಳ ಆವರಣಗಳಲ್ಲಿ ಬೆಳೆಸಲಾಗಿದೆ. ಜಪಾನಿನಲ್ಲೂ ಇದನ್ನು ಕಾಣಬಹುದು. ಭಾರತದಲ್ಲಿ ನೀಲಗಿರಿಯಲ್ಲಿ ಸಸ್ಯಾರಾಮ, ಡೆಹ್ರಾಡೂನ್ ಮುಂತಾದೆಡೆಗಳಲ್ಲಿ ಕೆಲವು ಮರಗಳನ್ನು ನೋಡಬಹುದು.

ಗಿಂಗ್‌ಕೋ ಸುಮಾರು 120' ಎತ್ತರಕ್ಕೆ ಬೆಳೆಯುವ ಚೆಲುವಾದ ಮರ. ಇದರಲ್ಲಿ ಹೆಚ್ಚು ರೆಂಬೆಗಳು ಹುಟ್ಟುವುದಿಲ್ಲ. ರೆಂಬೆಗಳಲ್ಲಿ ಉದ್ದರೆಂಬೆ ಮತ್ತು ಮೋಟುರೆಂಬೆ ಎಂಬ ಎರಡು ಬಗೆಗಳಿವೆ. ಮೋಟುರೆಂಬೆಗಳ ಮೇಲೆಯೇ ಎಲೆಗಳು ರೂಪುಗೊಳ್ಳುವುದು. ಗುಂಪು ಗುಂಪಾಗಿ ಹುಟ್ಟುವ ಈ ಎಲೆಗಳು ತಮ್ಮ ಆಕಾರ, ನೋಟ ಮತ್ತು ನಾಳವಿನ್ಯಾಸದಲ್ಲಿ ತಾಮ್ರಶಿಖಿ ಎಂಬ (ಮೇಡನ್ ಹೇರ್ ಫರ್ನ್) ಜರೀಗಿಡದ ಎಲೆಗಳನ್ನು ಹೋಲುತ್ತವೆ. ಇದರಿಂದ ಗಿಂಗ್‌ಕೋ ಮರಕ್ಕೆ ಮೇಡನ್ ಹೇರ್ ಟ್ರೀ ಎಂಬ ಹೆಸರಿದೆ. ಒಂದೊಂದು ಎಲೆಯೂ 2"–4" ಉದ್ದವೂ ಹೆಚ್ಚು ಕಡಿಮೆ ಅಷ್ಟೇ ಅಗಲವೂ ಇದ್ದು ಬೀಸಣಿಗೆಯಾಕಾರದಲ್ಲಿದೆ ಹಾಗೂ ದ್ವಿಭಜನ ರೀತಿಯ ನಾಳ ವಿನ್ಯಾಸವನ್ನು ಪ್ರದರ್ಶಿಸುತ್ತದೆ. ಎಲೆಗಳು ವರ್ಷಕ್ಕೊಮ್ಮೆ ಉದುರುತ್ತವೆ. ಗಿಂಗ್‌ಕೋವಿನಲ್ಲಿ ಲಿಂಗಭೇದವಿದೆ. ಈ ಲಕ್ಷಣದಲ್ಲಿ ಇದು ಗೊಡ್ಡು ಈಚಲು ಜಾತಿಯ ಮರಗಳನ್ನು (ಸೈಕ್ಯಾಸ್) ಹೋಲುತ್ತದೆ. ಕಾಯಿ ಒಂದು ರೀತಿಯ ಅಷ್ಟಿಫಲ. ಇದರ ತಿರುಳಿಗೆ ಒಂದು ಬಗೆಯ ದುರ್ವಾಸನೆಯಿದೆ.

ಗಿಂಗ್‌ಕೋ ಮರ ಆಕರ್ಷಕವಾಗಿರುವುದರಿಂದ ಇದನ್ನು ಅಲಂಕಾರಕ್ಕಾಗಿ ತೋಟಗಳಲ್ಲಿ ಅಲ್ಲಲ್ಲಿ ಬೆಳೆಸಲಾಗಿದೆ. ಇದನ್ನು ಬೀಜಗಳ ಮೂಲಕ ಇಲ್ಲವೆ ಕಾಂಡತುಂಡುಗಳಿಂದ ವೃದ್ಧಿಸಬಹುದು. ಆದರೆ ಬೆಳವಣಿಗೆ ಬಲು ನಿಧಾನ. ಕಾಂಡತುಂಡುಗಳಿಂದ ಬೇರುಮೂಡಲು ಕೊನೆಯ ಪಕ್ಷ ಎರಡು ವರ್ಷಗಳಾದರೂ ಬೇಕು. ಗಿಂಗ್‌ಕೋ ಮರದಿಂದ ಹಲವಾರು ಉಪಯೋಗಗಳುಂಟು. ಚೀನ, ಜಪಾನುಗಳಲ್ಲಿ ಬೀಜದಲ್ಲಿನ ತಿರುಳಿನ ಭಾಗವನ್ನು ಹುರಿದು ಇಲ್ಲವೇ ಬೇಯಿಸಿ ತಿನ್ನುವುದಿದೆ. ಬಟ್ಟೆಗಳನ್ನು ಒಗೆಯುವುದಕ್ಕೂ ಬೀಜಗಳನ್ನು ಉಪಯೋಗಿಸುವುದುಂಟು. ಇದರ ಚೌಬೀನೆ ಹಳದಿವರ್ಣದಿಂದಿದ್ದು ಹಗುರವೂ ಬಿದುರವೂ ಆಗಿದೆ. ಚೀನ, ಜಪಾನುಗಳಲ್ಲಿ ಆಟದ ಸಾಮಾನುಗಳನ್ನು ಮತ್ತು ಕೇರಂ ಬೋರ್ಡುಗಳನ್ನು ತಯಾರಿಸಲು ಇದನ್ನು ಉಪಯೋಗಿಸುತ್ತಾರೆ. (ಎ.ಕೆ.ಕೆ.)

**ಗಿಡತಿಗಣೆಗಳು :** ಹೆಮಿಪ್ಟರ ಗಣ ಮತ್ತು ಹೆಟಿರಾಪ್ಟರ ಉಪಗಣಗಳ ಹಲವಾರು ಕುಟುಂಬಗಳಿಗೆ ಸೇರಿದ ಕೀಟಗಳು (ಪ್ಲಾಂಟ್‌ಬಗ್ಸ್). ತಿಗಣೆ, ಹೇನು ಮುಂತಾದ ಕೀಟಗಳಿಗೆ ಬಲು ಹತ್ತಿರ ಸಂಬಂಧಿಗಳು. ಹಲವಾರು ಬಗೆಯ ಸಸ್ಯಗಳ ಕಾಂಡ, ಎಲೆ, ಹೂ ಮುಂತಾದ ಅಂಗಗಳ ಮೇಲೆ ಪರಾವಲಂಬಿಗಳಾಗಿದ್ದು ಅವುಗಳ ರಸವನ್ನು ಕುಡಿದು ಬದುಕುವುದರಿಂದ ಇವಕ್ಕೆ ಈ ಹೆಸರು ಬಂದಿದೆ.




ವಿವಿಧ ಬಗೆಯ ಗಿಡ ತಿಗಣೆಗಳು : 1. ರೇನೇಟ್ರ ಫಸ್ಕ, 2. ಹಾಲ್ಟಿಕಸ್, ಬ್ರಾಕ್ವಿಯೇಟಸ್, 3. ಲೈಗೀಡಿಯ ಮೆಂಡಾಕ್ಸ್, 4. ಏಫೇನಸ್ ಇಲ್ಯುಮಿನೇಟಸ್, 5. ಲೆಪ್ಟೊಕೋರಿಸ ಟ್ರೈವಿಟೇಟಸ್, 6. ಫೈಮೇಟ ಫ್ಯಾಸಿಯೇಟ

ಗಿಡತಿಗಣೆಗಳ ದೇಹಲಕ್ಷಣಗಳು ಬಗೆಯಿಂದ ಬಗೆಗೆ ಸ್ವಲ್ಪ ವ್ಯತ್ಯಾಸವಾದರೂ ಎಲ್ಲಕ್ಕೂ ಸಮಾನವಾದ ಕೆಲವು ಗುಣಲಕ್ಷಣಗಳನ್ನು ಗುರುತಿಸಬಹುದು. ಈ ಕೆಳಗಿನವುಗಳು ಹೀಗಿವೆ : 1. ರೆಕ್ಕೆಗಳು ಎರಡು ಜೊತೆ ಇವೆ. ಮುಂದಿನ ಜೊತೆ ಬುಡಭಾಗ ದಪ್ಪವಾಗಿಯೂ ಚರ್ಮಿಲವಾಗಿಯೂ ಇದೆ. ತುದಿಭಾಗ ಪೊರೆಯಂತಿದೆ. ಇದರಿಂದಾಗಿ ಈ ಬಗೆಯ ರೆಕ್ಕೆಯನ್ನು ಹೆಮೆಲಿಟ್ರಾನ್ ಮಾದರಿಯದು ಎಂದು ಕರೆಯಲಾಗುತ್ತದೆ. ಹಿಂದಿನ ರೆಕ್ಕೆಗಳು ಸಂಪೂರ್ಣವಾಗಿಯೇ ಎಲೆಗಳ ರೂಪದಂತಿವೆ.

ರೆಕ್ಕೆಗಳನ್ನು ಮಡಚಿದಾಗ ಅವು ಉದರಭಾಗದ ಮೇಲೆ ಚಪ್ಪಟೆ ಆಕಾರವಾಗಿ ಕುಳಿತುಕೊಳ್ಳುತ್ತವೆ. ಕೆಲವು ಕೀಟಗಳಿಗೆ ರೆಕ್ಕೆಯೇ ಇಲ್ಲ. 2. ಕುಡಿಮೀಸೆಗಳು (ಆಂಟೆನೀ) ಉದ್ದವಾಗಿವೆ ಹಾಗೂ 4–5 ತುಂಡುಗಳಿಂದ ಕೂಡಿವೆ. 3. ಕಣ್ಣುಗಳು ಸಂಯುಕ್ತ ಮಾದರಿಯವು. 4. ಬಾಯಿಯ ಭಾಗಗಳು ಸಸ್ಯಭಾಗಗಳನ್ನು ಚುಚ್ಚಿ, ರಸವನ್ನು ಹೀರಲು ಅನುಕೂಲವಾಗಿವೆ. ತಲೆಯ ಮುಂಭಾಗ ಒಂದು ರೀತಿಯ ತೆಳುವಾದ ಕೊಕ್ಕಿನಂಥ ರಚನೆಯಿದೆ. ಇದು ಹಿಮ್ಮುಖವಾಗಿ ಬುಡದವರೆಗೂ ಚಾಚಿದೆ. ಇದರೊಳಗೆ ಚುಚ್ಚುಸಾಧನಗಳಾದ 2 ಮ್ಯಾಂಡಿಬಲ್‌ಗಳೂ 2 ಮ್ಯಾಕ್ಸಿಲಗಳೂ ಇವೆ. ಮ್ಯಾಕ್ಸಿಲಗಳು ಒಂದರೊಡನೊಂದು ಕೂಡಿಕೊಂಡು ಆಹಾರ ಮತ್ತು ಜೊಲ್ಲು ಸಾಗಣೆಗೆ ಅನುಕೂಲವಾದ ಕಾಲುವೆಗಳಾಗಿ ಪರಿವರ್ತಿತವಾಗಿವೆ. 5. ಬಹುಪಾಲು ಗಿಡತಿಗಣೆಗಳಲ್ಲಿ ವಾಸನೆಯನ್ನು ಉಂಟುಮಾಡುವ ಗ್ರಂಥಿಗಳಿವೆ. ಇವು ವಿಶಿಷ್ಟ ರೀತಿಯ ಹಾಗೂ ಅಸಹ್ಯವಾದ ವಾಸನೆಯನ್ನು ಹೊರಸೂಸುತ್ತವೆ. 6. ಗಿಡತಿಗಣೆಗಳು ಸರಳರೀತಿಯ ರೂಪಾಂತರತೆಯನ್ನು ಪ್ರದರ್ಶಿಸುತ್ತವೆ.

ಗಿಡತಿಗಣೆಗಳ ಸಂಖ್ಯೆ ಅಗಾಧ ಮತ್ತು ವ್ಯಾಪ್ತಿ ಬಲು ವಿಸ್ತಾರ. ಪ್ರಪಂಚದಾದ್ಯಂತ ಸುಮಾರು 55,000 ಬಗೆಯ ಗಿಡತಿಗಣೆಗಳಿವೆ. ಭಾರತದಲ್ಲಿ ಸುಮಾರು 4500 ಬಗೆಗಳು ಕಾಣಬರುತ್ತವೆ. ಇವುಗಳಲ್ಲಿ ಹೆಚ್ಚಿನವು ನೆಲವಾಸಿಗಳು. ಕೆಲವು ಜಲವಾಸಿಗಳೂ ಹೌದು. ಸಸ್ಯಗಳ ರಸವನ್ನು ಹೀರಿ ಬದುಕುವ ಇವು ಕೃಷಿ ಸಸ್ಯಗಳಿಗೆ ತೀವ್ರಸ್ವರೂಪದ ಹಾನಿಯುಂಟು ಮಾಡುತ್ತವೆ. ಆದರೆ ಅವುಗಳಲ್ಲೂ ಕೆಲವು ಉಪಕಾರಿ ಕೀಟಗಳಿಲ್ಲದೇ ಇಲ್ಲ. ಇಂಥವು ಇತರ ಬಗೆಯ ಹಾನಿಕಾರಕ ಕೀಟಗಳನ್ನು ತಿಂದು ಮಾನವನಿಗೆ ಉಪಕಾರಿಗಳೆನಿಸಿವೆ.

ಕುಡಿಮೀಸೆಗಳ ಲಕ್ಷಣಗಳ ಆಧಾರದ ಗಿಡತಿಗಣೆಗಳ ಗಣವನ್ನು ಕ್ರಿಪ್ಟೊಸೆರೇಟ ಮತ್ತು ಜಿಮ್ನೊಸೆರೇಟ ಎಂಬ ಎರಡು ಉಪಗಣಗಳಾಗಿ ವಿಂಗಡಿಸಲಾಗಿದೆ. ಇದೊಂದು ಉಪಗಣವನ್ನೂ ಅದರಲ್ಲಿನ ಕೀಟಗಳ ರೆಕ್ಕೆ, ಕಾಲು ಮತ್ತು ಕೊಕ್ಕುಗಳ ಗಣಗಳನ್ನು ಆಧರಿಸಿ ಹಲವಾರು ಕುಟುಂಬಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಮುಖ್ಯವಾದ ಕುಟುಂಬಗಳನ್ನೂ ಅವುಗಳ ಪ್ರರೂಪೀ ಕೀಟಗಳನ್ನೂ ಮುಂದೆ ವಿವರಿಸಲಾಗಿದೆ. 1) ಕಾರಿಕ್ಸಿಡೀ–ಉದಾ : *ಕಾರಿಕ್ಸ್.* 2) ನೋಟೋನೆಕ್ಟಿಡೀ ಉದಾ : *ನೋಟೋನೆಕ್ಟ.* 3) ನೇಪಿಡೀ–ಉದಾ : *ನೇಪ, ರೆನೇಟ್ರ,* 4) ಬೆಲಾಸ್ಟೊಮಾಟಿಡೀ–ಉದಾ : *ಬೆಲಾಸ್ಟೋಮ.* 5) ಜೆರಿಡೀ–ಉದಾ : *ಜೆರಿಸ್.* 6) ಮಿರಿಡೀ–ಉದಾ : *ಹಾಲ್ಟಿಕಸ್, ಲೈಗಸ್, ಲೈಗೀಡಿಯ* ಇತ್ಯಾದಿ. 7) ಫೈಮ್ಯಾಟಿಡೀ–ಉದಾ : *ಫೈಮೇಟ,* 8) ಪೆಂಟಟೋಮಿಡೀ–ಉದಾ : *ಬೆಗ್ರಾಡ.* 9) ಲೈಗೀಯಿಡೀ–ಉದಾ : *ಬ್ಲಿಸಸ್,* ಆಕ್ಸಿಕೇರೀನಸ್, ಫೇನಸ್ ಇತ್ಯಾದಿ. 10) ಕೋರಿಯಿಡೀ–ಉದಾ *ಲೆಪ್ಟೊಕೊರಿಸ.* (ವಿ.ಪಿ.ಎಂ.)

**ಗಿಡ್ಡಲೂರು :** ಆಂಧ್ರಪ್ರದೇಶ ರಾಜ್ಯದ ಕರ್ನೂಲ್ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಪ್ರಪ್ರಥಮ ಬಾರಿಗೆ ಕಮಿಯಡೆ ಶಿಲಾಯುಗ ಕಾಲದ ಉಪಕರಣಗಳನ್ನು ಸಂಗ್ರಹಿಸಿದ. ಇದನ್ನು ಬರ್ಕಿಟ್ ಪರೀಕ್ಷಿಸಿದ. ಈ ಉಪಕರಣಗಳನ್ನು ಗಿಡ್ಡಲೂರು ಮತ್ತು ಗುಂಡಲ–ಬ್ರಹ್ಮೇಶ್ವರಂ ಬೆಟ್ಟದ ಬಳಿ ಗುಂಡ್ಲಕಮ್ಮ ನದಿಯ ಗರಸು ಮಣ್ಣಿನ ಪದರದಲ್ಲಿ ಮತ್ತು ಯರ್ರಕೊಂಡಪಾಲೆಮ್ ಪ್ರದೇಶಗಳಿಂದ ಸಂಗ್ರಹಿಸಲಾಗಿತ್ತು. ಈ ಎರಡು ಪ್ರದೇಶಗಳು ನಲ್ಲಮಲ್ಲೈ ಬೆಟ್ಟದ ಡೊರ್‌ನಾಲ–ಅತಮ್‌ಕುರ್‌ನ ಕಣಿವೆಯ ಆಚೆ–ಈಚೆ ಅಂಚಿನಲ್ಲಿವೆ. ಶಿಲಾಯುಗದ ನಾಲ್ಕು ಸಂಸ್ಕೃತಿಗಳನ್ನು ಬರ್ಕಿಟ್ ಗುರುತಿಸಿದ. ಇವು ಆದಿ ಹಳೆಶಿಲಾಯುಗದ ಕೈಗೊಡಲಿ ಹಂತದಿಂದ ಸೂಕ್ಷ್ಮಶಿಲಾಯುಗದ ಅಗೇಟ್ ಮತ್ತು ಬೆಣಚುಕಲ್ಲಿನ ಉಪಕರಣಗಳ ಸಂಸ್ಕೃತಿಯ ಹಂತದವರೆಗಿನವು. ಪದರ ವಿಶ್ಲೇಷಣೆಯಿಂದ ಇವುಗಳ ನಡುವಿನ ಹಂತಗಳನ್ನೂ ಗುರುತಿಸಲಾಗಿದೆ. ಈ ಹಂತಗಳು ಡಿಟೆರ್ರ ಮತ್ತು ಪ್ಯಾಟರ್‌ಸನ್ ಸೂಚಿಸಿರುವ ಹಿಮಯುಗದ ಹಿಮಘಟ್ಟಗಳು ಮತ್ತು ಇವುಗಳ ನಡುವಿನ ಘಟ್ಟಗಳಿಗೆ ಹೊಂದಿಕೆಯಾಗುತ್ತವೆ.

ಎಫ್.ಈ. ಜ಼ಾಯನರ್, ವಿ.ಡಿ. ಕೃಷ್ಣಸ್ವಾಮಿ ಮತ್ತು ಸೌಂದರರಾಜನ್ ಗಿಡ್ಡಲೂರು ಸುತ್ತಮುತ್ತಲ ನೆಲೆಗಳಲ್ಲಿ ಇನ್ನಷ್ಟು ಸಂಶೋಧನೆ ನಡೆಸಿದರು. ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಶಿಲೋಪಕರಣಗಳನ್ನು ಇವರು ಸಂಗ್ರಹಿಸಿದರು. ಭೂಮಿಯ ಮೇಲ್ಪದರದಲ್ಲಿ ಅಶೂಲಿಯನ್ ಮಾದರಿಯ ಒಂದು ಕೈಗೊಡಲಿ ಮತ್ತೊಂದು ಚೌಕೋನದ ಕಡಿಗತ್ತಿ ದೊರೆತವು. ಇಲ್ಲಿಯ ಅತ್ಯಂತ ಕೆಳಸ್ತರದ ಸಿಮೆಂಟಿನಂತಹ ಗರಸು ಮಣ್ಣಿನ ಪದರ, ಇದರ ಮೇಲೆ ಜೇಡಿಮಣ್ಣಿನ ಪದರ ಮತ್ತು ಇದರ ಮೇಲೆ ಸಡಿಲವಾದ ಬೆಣಚುಕಲ್ಲಿನಿಂದ ಕೂಡಿದ ಪದರವಿದ್ದು ಒಟ್ಟಾಗಿ 3.5 ಮೀ ನಷ್ಟಿದೆ. ಈ ರೀತಿ ಪದರಗಳು ಎಸ್.ಪಿ.ಜಿ. ಮೆಷಿನ್ ಬಂಗಲೋ, ಗಿಡ್ಡಲೂರು ರಸ್ತೆಯ 86 ಮತ್ತು 87 ನೆಯ ಮೈಲಿಗಲ್ಲು, ರೈಲ್ವೇ ಲೈನ್ ಮತ್ತು ಗಿಡ್ಡಲೂರು ರಸ್ತೆ ಹಾಗೂ ನದಿಯ ನಡುವಿನ ಪ್ರದೇಶಗಳಲ್ಲಿಯೂ ಕಂಡುಬರುತ್ತವೆ.

ಗಿಡ್ಡಲೂರು–1 ಮತ್ತು ಗಿಡ್ಡಲೂರು–2ರಲ್ಲಿ ಆದಿ ಲೆವಾಲ್ವ ಮಾದರಿಯ ಉಪಕರಣಗಳಿವೆ. ಗಿಡ್ಡಲೂರು–1ರಲ್ಲಿ ಮುಖ್ಯವಾಗಿ ಆದಿ ಹಳೆಶಿಲಾಯುಗದ ಎಲ್ಲ ಪ್ರಕಾರಗಳ ಉರುಟು ಕಲ್ಲಿನ ಉಪಕರಣಗಳಿಂದ ಹಿಡಿದು ಕ್ಲಾಕ್ಟೋನ್ ಮಾದರಿಯ ಹೆರೆಯುವ ಚಕ್ಕೆಗಳು, ಕೊಕ್ಕಿನಾಕೃತಿಗಳು, ಅಂಡಾಕೃತಿಯ ಉಪಕರಣಗಳು ದೊರಕಿದರೆ ಗಿಡ್ಡಲೂರು–2ರಲ್ಲಿ, ಗಿಡ್ಡಲೂರು–1ರಲ್ಲಿ ಸಿಕ್ಕಿರುವ ಉಪಕರಣ ಮಾದರಿಗಳು ಕಂಡುಬರದಿದ್ದರೂ ಸಮಾನಾಂತರ ಅಂಚಿನ ನೀಳಚಕ್ಕೆಗಳು, ಕೊರೆಯುಳಿಗಳು ಇತ್ಯಾದಿ ದೊರಕಿವೆ. ಗಿಡ್ಡಲೂರಿನಲ್ಲಿ ಸಂಗ್ರಹಿಸಿದ 240 ಉಪಕರಣಗಳನ್ನು ಪರೀಕ್ಷಿಸಲಾಗಿ ಬರ್ಕಿಟ್ ಹೇಳಿರುವಂತೆ ಇವು ಆಫ್ರಿಕ ದೇಶದ ಉಪಕರಣಗಳಿಗೆ ಹೋಲಿಕೆಯಾಗುತ್ತವೆ. ಆದರೆ ಆಫ್ರಿಕ ಮತ್ತು ಗಿಡ್ಡಲೂರುಗಳಿಗೆ ಯಾವುದೇ ರೀತಿಯ ನೇರವಾದ ಜನಾಂಗ–ಸಂಸ್ಕೃತಿಯ ಸಂಪರ್ಕವಿರಲಿಲ್ಲ. ಗಿಡ್ಡಲೂರಿನ ಮೊದಲ ಎರಡು ಸಂಸ್ಕೃತಿಗಳ ಉಪಕರಣಗಳನ್ನು ತಿಳಿಗಂದು ಬಣ್ಣದ ಬೆಣಚು ಕಲ್ಲಿನ ರೂಪಾಂತರ ದಿಂದಾದ ಶಿಲೆಯಿಂದ ತಯಾರಿಸಲಾಗಿದೆ.

ಗಿಡ್ಡಲೂರು–2ರ (ನರಸಿಂಹಕೊಂಡ) ಸೂಕ್ಷ್ಮಶಿಲಾಯುಗ ಉಪಕರಣಗಳನ್ನು ನಸುಹಸಿರು ಬಣ್ಣದ ಬೆಣಚು ಕಲ್ಲು ರೂಪಾಂತರ ಶಿಲೆ, ನಾಳರಚನೆಯುಳ್ಳ ಬೆಣಚುಕಲ್ಲು, ಸ್ಫಟಿಕ, ಯಡಿನೈಟ್, ಅಗೇಟ್ ಮತ್ತು ಚಕಮಕಿ ಕಲ್ಲುಗಳಿಂದ ತಯಾರಿಸಲಾಗಿದೆ. ಹರಿತವಾದ ಇಬ್ಬದಿ ಅಲಗುಗಳು ಮತ್ತು ಸುತ್ತಲೂ ಹರಿತವಾಗಿರುವ ನೀಳಚಕ್ಕೆ, ಅರ್ಧಚಂದ್ರಾಕೃತಿ, ಹೆರೆಚಕ್ಕೆ, ಬೈರಿಗೆ, ಮೊನೆ, ಕೊರೆಯುಳಿ ಇತ್ಯಾದಿ ದೊರಕಿವೆ. ಇವೆಲ್ಲ ಸಾಮಾನ್ಯವಾಗಿ ಸೂಕ್ಷ್ಮಶಿಲಾಯುಗದ ಉಪಕರಣಗಳಾಗಿವೆ. (ಆರ್.ಎಸ್.ಎಸ್.)

**ಗಿಡಿಂಗ್ಸ್, ಫ್ರಾಂಕ್ಲಿನ್ ಹೆನ್ರಿ :** 1885–1931. ಅಮೆರಿಕ ಸಂಯುಕ್ತ ಸಂಸ್ಥಾನಗಳ ಅತ್ಯಂತ ಪ್ರತಿಭಾವಂತರಾದ ಸಮಾಜಶಾಸ್ತ್ರಜ್ಞರಲ್ಲಿ ಒಬ್ಬ. ಅಲ್ಲಿನ ಸಮಾಜಶಾಸ್ತ್ರದ ಸಕ್ರಮ ಬೆಳವಣಿಗೆಯ ಪ್ರವರ್ತಕನೆಂದು ಪ್ರಸಿದ್ಧನಾಗಿದ್ದಾನೆ.

ಈತ ಹುಟ್ಟಿದ್ದು ಕನೆಕ್ಟಿಕಟ್‌ನ ಷರ್ಮನ್ ಎಂಬ ಪಟ್ಟಣದಲ್ಲಿ. ಈತನ ತಂದೆ ತಾಯಿಗಳು ಪ್ಯೂರಿಟನ್ ಪಂಥಕ್ಕೆ ಸೇರಿದವರು. ಮನೆಯ ವಾತಾವರಣ ಬೌದ್ಧಿಕ ಜೀವನಕ್ಕೆ ಉತ್ತೇಜನ ಕೊಡುವ ರೀತಿಯದಾಗಿದ್ದುದರಿಂದ ಮೊದಲಿನಿಂದಲೂ ಈತನಿಗೆ ಓದುವ ಹವ್ಯಾಸ ಅಂಟಿ ಬಂತು. ಕಾಲೇಜು ಪ್ರವೇಶಿಸುವುದಕ್ಕೆ ಮೊದಲೇ ಅನೇಕ ಪ್ರೌಢಗ್ರಂಥಗಳನ್ನು ಓದಿದ್ದ. ಇದಲ್ಲದೆ ವಿವಾದಾಸ್ಪದವಾದ ಅನೇಕ ಬರೆವಣಿಗೆಗಳನ್ನೂ ಅಧ್ಯಯನ ಮಾಡಿ ತನ್ನ ಸ್ವಂತ ಅಭಿಪ್ರಾಯಗಳನ್ನು ರೂಪಿಸುವ ಶಕ್ತಿಯನ್ನು ಪಡೆದಿದ್ದ. ಡಾರ್ವಿನ್, ಹಕ್ಸ್‌ಲಿ, ಜಾನ್ ಟಿಂಡಾಲ್ ಮತ್ತು ಸ್ಪೆನ್ಸರ್ ಇವರುಗಳ ಕೃತಿಗಳನ್ನು ವಿಮರ್ಶನದೃಷ್ಟಿಯಲ್ಲಿ ಈತ ಅಧ್ಯಯನ ಮಾಡಿದ್ದ.

ಗಿಡಿಂಗ್ಸ್‌ನ ತಾತ್ತ್ವಿಕ ಹಿನ್ನೆಲೆಗೆ ರೂಪಕೊಟ್ಟಿದ್ದ ಬರೆವಣಿಗೆಗಾರರಲ್ಲಿ ಮುಖ್ಯರಾದವರು ಆಡಂ ಸ್ಮಿತ್, ಅಗಸ್ಟ ಕಾಂಟ್, ಎಲ್. ಎಫ್. ವಾರ್ಡ್ ಮತ್ತು ಜಾನ್ ಸ್ಟೂಯರ್ಟ್ ಮಿಲ್–ಇವರು. ಇವರು ನಿರೂಪಿಸಿದ ವ್ಯಕ್ತಿತ್ವವಾದ ಗಿಡಿಂಗ್ಸ್‌ನ ಬರೆವಣಿಗೆಗಳಲ್ಲಿ ವಿವಿಧ ರೂಪಗಳಲ್ಲಿ ಕಾಣಬರುತ್ತದೆ. ಒಟ್ಟಿನಲ್ಲಿ ವ್ಯಕ್ತಿತ್ವವಾದ ಗಿಡಿಂಗ್ಸ್‌ನ ಸಮಾಜಶಾಸ್ತ್ರದ ಸೈದ್ಧಾಂತಿಕ ನಿಲುವಾಗಿದೆ.

ಗಿಡಿಂಗ್ಸ್ 1877ರಲ್ಲಿ ಯೂನಿಯನ್ ಕಾಲೇಜಿನ ಪದವೀಧರನಾಗಿ 1888ರಿಂದ ಆರು ವರ್ಷಗಳ ಕಾಲ ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಲ್ಲಿ ಪ್ರಾಧ್ಯಾಪಕನಾಗಿ ಕೆಲಸ ಮಾಡಿ 1894ರಲ್ಲಿ ಕೊಲಂಬಿಯ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕನಾಗಿ ನೇಮಕಗೊಂಡ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪೂರ್ಣಾವಧಿ ಸಮಾಜಶಾಸ್ತ್ರ ಅಧ್ಯಾಪಕರಾದವರಲ್ಲಿ ಈತ ಮೊದಲನೆಯವ.

ಗಿಡಿಂಗ್ಸ್ ಸಮಾಜಶಾಸ್ತ್ರ ಕ್ಷೇತ್ರವನ್ನು ಪ್ರವೇಶಿಸಿದಾಗ, ಅದು ನೀತಿಶಾಸ್ತ್ರದ ಮತ್ತು ಇತಿಹಾಸತತ್ತ್ವಶಾಸ್ತ್ರದ ಭಾಗವಾಗಿ ಪರಿಗಣಿಸಲ್ಪಟ್ಟಿತು. ವ್ಯಕ್ತಿತ್ವವಾದದ ಜೊತೆಗೆ. ಅಗಸ್ಟ ಕಾಂಟನ ಲೋಕಸಿದ್ಧವಾದ ಮತ್ತು ಸ್ಪೆನ್ಸರನ ವಿಕಾಸವಾದಗಳು ಆಗ್ಗೆ ಗಿಡಿಂಗ್ಸ್‌ನ ನೂತನ ಸಮಾಜಶಾಸ್ತ್ರ ನಿರೂಪಣೆಗೆ ಸ್ಫೂರ್ತಿ ನೀಡಿದುವು. ಗಿಡಿಂಗ್ಸ್ ಸಂಖ್ಯಾಕಲನ ಶಾಸ್ತ್ರದಲ್ಲಿ ಪ್ರಾವೀಣ್ಯಗಳಿಸಿದುದಲ್ಲದೆ, ತನ್ನ ಸಂಶೋಧನೆಗಳಲ್ಲಿ ಅದನ್ನು ಗಣನೀಯವಾಗಿ ಬಳಸಿಕೊಂಡ. ಅಂಕಿ ಅಂಶಗಳ ಪರಿಶೀಲನೆಯಿಂದ ಸಮಾಜಶಾಸ್ತ್ರದ ಘನತೆ ಹೆಚ್ಚುವುದೆಂದು ಆತ ನಂಬಿದ್ದ. ಸಮಾಜಶಾಸ್ತ್ರ ವಾಸ್ತವಾಂಶಗಳ ಆಧಾರದ ಮೇಲೆ ಅನುಗಮನ ತಾರ್ಕಿಕ ಮಾರ್ಗವನ್ನು ಅನುಸರಿಸಿ ತನ್ನ ತತ್ತ್ವಗಳನ್ನು ನಿರೂಪಿಸಬೇಕು–ಎಂಬುದು ಆತನ ನಿಲುವು.

ಗಿಡಿಂಗ್ಸ್‌ನ ಪ್ರಕಾರ ಸಮಾಜವಿಕಾಸ ಮೂಲಭೂತವಾಗಿ ವ್ಯಕ್ತಿಗಳ ಮತ್ತು ಗುಂಪುಗಳ ಶಕ್ತಿಸಾಮರ್ಥ್ಯಗಳ ಸಮತೋಲನ ಸ್ಥಿತಿಯನ್ನು ಅವಲಂಬಿಸಿದೆ. ಈ ಸಮತೋಲನ ಸ್ಥಿತಿ ಜಡವಾದುದಲ್ಲ. ಅದು ಮಾನವನ ನಿರಂತರ ಪ್ರಯತ್ನದ ಪರಿಣಾಮವಾಗಿ ಚಲನಾತ್ಮಕ ಸಮತೋಲನವನ್ನು ಹೊಂದುತ್ತದೆ. ಸಮಾಜದಲ್ಲಿ ವ್ಯಕ್ತಿಗಳೆಲ್ಲ ಸಾಮರ್ಥ್ಯ ಮತ್ತು ಸ್ಥಾನಗಳಲ್ಲಿ ಸಮತೋಲ ಇದ್ದರೆ, ಆಗ ಸಮಾಜದಲ್ಲಿ ಆಂತರಿಕ ನ್ಯಾಯ ಮತ್ತು ವ್ಯವಸ್ಥೆ ಸ್ಥಾಪಿತವಾಗುತ್ತದೆ. ಈ ಸಮತೋಲ ರಾಷ್ಟ್ರೀಯ ಜೀವನದಲ್ಲಿ ಸ್ಥಾಪಿತವಾದರೆ ಅಂತರರಾಷ್ಟ್ರೀಯ ಶಾಂತಿಗೆ ಸಹಾಯಕವಾಗುತ್ತದೆ.

ಗಿಡಿಂಗ್ಸ್‌ನ ಸುಪ್ರಸಿದ್ಧ ಗ್ರಂಥವಾದ ಸಮಾಜಶಾಸ್ತ್ರ ತತ್ತ್ವಗಳು ಎಂಬುದು 1896ರಲ್ಲಿ ಪ್ರಕಟವಾಯಿತು. ಈ ಪುಸ್ತಕ ಏಳು ಭಾಷೆಗಳಲ್ಲಿ ಭಾಷಾಂತರಗೊಂಡಿದೆ. 1922ರಲ್ಲಿ ಮಾನವ ಸಮಾಜದ ತತ್ತ್ವಗಳ ಅಧ್ಯಯನಗಳನ್ನು ಕುರಿತ ಸ್ಟಡೀಸ್ ಇನ್ ದಿ ಥಿಯೊರಿ ಆಫ್ ಹ್ಯೂಮನ್ ಸೊಸೈಟಿ ಎಂಬ ಪುಸ್ತಕ ಪ್ರಕಟವಾಯಿತು. ಈ ಎರಡು ಪುಸ್ತಕಗಳಲ್ಲಿ ಗಿಡಿಂಗ್ಸ್‌ನ ಸಮಾಜಶಾಸ್ತ್ರದ ತತ್ತ್ವಗಳು ಸಮಗ್ರವಾಗಿ ನಿರೂಪಿತವಾಗಿವೆ. ಆತನ ಪ್ರಕಾರ ಸಾಮಾಜಿಕ ಜೀವನ ಮಾನವನ ಸಾಮಾನ್ಯ ಸ್ವಭಾವದ ಅರಿವಿನಿಂದುಂಟಾದ ತದೇಕ ಪ್ರಜ್ಞೆಯ ಫಲ. ಮಾನವನ ಸಾಮಾಜಿಕ ಜೀವನ ಕೇವಲ ನೈಸರ್ಗಿಕವೇ ಹೊರತು ಸಾಮೂಹಿಕ ಚರ್ಯೆ ಎಂಬ ಮೂಲ ಪ್ರವೃತ್ತಿಯ ಪರಿಣಾಮವಲ್ಲ. ಅದು ಮಾನವನಲ್ಲಿರುವ ಮಾನಸಿಕ ಪ್ರಕ್ರಿಯೆಗಳ ಪರಿಣಾಮ. ಒಂದು ಗೊತ್ತಾದ ಉದ್ದೀಪನಕ್ಕೆ ಇಬ್ಬರು ಅಥವಾ ಹೆಚ್ಚು ಜನರು ಏಕರೀತಿಯ ಅನುಕ್ರಿಯೆಗಳನ್ನು ತೋರಿಸುತ್ತಾರೆ. ಇದೇ ತದೇಕ ಪ್ರಜ್ಞೆಗೆ ಅಗತ್ಯವಾದ ಮೂಲಾಧಾರ. ಒಂದು ಗೊತ್ತಾದ ಉದ್ದೀಪನಕ್ಕೆ ಏಕರೂಪವಾದ ಅನುಕ್ರಿಯೆ ಇದ್ದರೆ, ಆಗ ಸಮಾಜದಲ್ಲಿ ಐಕ್ಯ ಏರ್ಪಡುತ್ತದೆ. ಒಂದು ಉದ್ದೀಪನಕ್ಕೆ–ಅದು ಸಾಮಾಜಿಕ ಮೌಲ್ಯವಾಗಿರಬಹುದು. ಒಂದು ಅಭಿಪ್ರಾಯವಾಗಿರ ಬಹುದು–ವಿವಿಧ ಅನಿಕ್ರಿಯೆಗಳಿದ್ದರೆ ಸ್ಪರ್ಧೆ ಸಂಘರ್ಷಣೆ ಮೊದಲಾದವು ಉದ್ಭವವಾಗುತ್ತವೆ. ಸಾಮಾಜಿಕ ಜೀವನದಲ್ಲಿ ಮಾನಸಿಕ ಪ್ರಕ್ರಿಯೆಗಳಿಗೆ ಹೆಚ್ಚಿನ ಪ್ರಾಮುಖ್ಯ ಕೊಡುವ ಅಮೆರಿಕ ಸಂಯುಕ್ತಸಂಸ್ಥಾನಗಳ ಸಮಾಜಶಾಸ್ತ್ರ ಪರಂಪರೆಗೆ ಗಿಡಿಂಗ್ಸ್‌ನ ಬರೆವಣಿಗೆಗಳೂ ಸ್ಫೂರ್ತಿಯನ್ನಿತ್ತಿವೆ ಎಂಬುದು ನಿಜವಾದ ಮಾತು.

ಗಿಡಿಂಗ್ಸ್ ಮೂಲಸಂಕಲ್ಪಾನುಸಾರವಾದ ಜಗದ್ವಿಕಾಸವಾದವನ್ನು ಅನುಮೋದಿಸಿ, ವೈಜ್ಞಾನಿಕ ಅಭಿವೃದ್ಧಿ ಮಾನವನ ಸಮಾಜವಿಕಾಸವನ್ನು ಉತ್ಕೃಷ್ಟದೆಶೆಗೆ ತೆಗೆದುಕೊಂಡು ಹೋಗುವುದೆಂಬ ಆಶಾಭಾವನೆಯನ್ನು ಹೊಂದಿದ್ದ.

ದಿ ಸೈಂಟಿಫಿಕ್ ಸ್ಟಡಿ ಆಫ್ ಹ್ಯೂಮನ್ ಸೊಸೈಟಿ (1924), ಡೆಮಾಕ್ರಸಿ ಅಂಡ್ ಎಂಪೈರ್ (1900). ವೆಸ್ಟರ್ನ್ ಹೆಮಿಸ್ಫಿಯರ್ ಇನ್ ದಿ ವರ್ಲ್ಡ್ ಆಫ್ ಟುಮಾರೊ (1915), ದಿ ರೆಸ್ಪಾನ್ಸಿಬಲ್ ಸ್ಟೇಟ್ (1918), ದಿ ಮೈಟಿ ಮೆಡಿಸನ್ (1930), ಸಿವಿಲಿಜೇಷನ್ ಅಂಡ್ ಸೊಸೈಟಿ (1932)– ಇವು ಗಿಡಿಂಗ್ಸ್‌ನ ಇತರೆ ಗ್ರಂಥಗಳು. **(ಎಚ್.ಎಂ.ಎಸ್.)**

**ಗಿಡುಗ :** ಫಾಲ್ಕನಿಫಾರ್ಮೀಸ್ ಗಣದ ಫಾಲ್ಕನಿಡೀ ಕುಟುಂಬಕ್ಕೆ ಸೇರಿದ ಒಂದು ಹಿಂಸ್ರಪಕ್ಷಿ (ಫಾಲ್ಕನ್, ಹಾಕ್). ಡೇಗೆ ಇದರ ಪರ್ಯಾಯ ನಾಮ. ಹದ್ದು, ರಣಹದ್ದು, ಗರುಡ, ಆಸ್ಪ್ರೆ ಮುಂತಾದ ಹಕ್ಕಿಗಳಿಗೆ ಬಲು ಹತ್ತಿರದ ಸಂಬಂಧಿ. ಕ್ಯಾರಕ್ಯಾರ, ಫಾಲ್ಕೊ, ಮೈಕ್ರೊಹೀರ್ಯಾಕ್ಸ್ ಮುಂತಾದ ಜಾತಿಗಳಿಗೆ ಸೇರಿದ ಪ್ರಭೇದಗಳಿಗೆಲ್ಲ ಗಿಡುಗ ಎಂಬ ಹೆಸರೇ ಅನ್ವಯವಾಗುತ್ತದೆ. ಗಿಡುಗಗಳ ಗಾತ್ರಗಳಲ್ಲಿ ಭಿನ್ನತೆ ಉಂಟು. ಕೆಲವು ಕೇವಲ 16 ಸೆಂಮೀ ಉದ್ದವಿದ್ದರೆ (ಫಾಲ್ಕೊನೆಟ್) ಇನ್ನು ಕೆಲವು 60 ಸೆಂಮೀ ಉದ್ದವಿರುವುದುಂಟು (ಉದಾಹರಣೆಗೆ ಉತ್ತರ ಮೇರುವಿನ ತಂಡ್ರಾಪ್ರದೇಶದಲ್ಲಿರುವ ಜರ್‌ಫಾಲ್ಕನ್). ಎಲ್ಲ ಗಿಡುಗಗಳೂ ಹಗಲಿನಲ್ಲಿ ಮಾತ್ರ ಬೇಟೆಯಾಡುತ್ತವೆ. ಇವುಗಳ ಕೊಕ್ಕು ಚೂಪಾಗಿ, ಬಲವಾಗಿ ಕೊಕ್ಕೆಯಂತೆ ಬಾಗಿದೆ. ಕೊಕ್ಕಿನ ಬುಡದಲ್ಲಿ ಮೇಲೆ ಮಾಂಸಲವಾದ ಸೆರೆ ಎಂಬ ಸಂವೇದನೀಯ ಚರ್ಮವಿದೆ. ನಾಸಿಕ ರಂಧ್ರಗಳು ಹೊರಕ್ಕೆ ತೆರೆಯುವುದು ಇದರ ಮೇಲೆಯೇ. ರೆಕ್ಕೆಗಳು ಬಲಯುತವಾಗಿಯೂ ದೇಹದ ಗಾತ್ರಕ್ಕೆ ಹೋಲಿಸಿದರೆ ಉದ್ದವಾಗಿಯೂ ಇವೆ. ಇವುಗಳ ತುದಿ ಬಲು ಚೂಪು. ಕಾಲಿನ ಹರಡು ಭಾಗದಲ್ಲಿ ಗರಿಗಳಿಲ್ಲ. ತೊಡೆಯ ಭಾಗ ಮಾತ್ರ ಸಡಿಲವಾದ ಗರಿಗಳಿಂದ ಆವೃತವಾಗಿದ್ದು ಒಂದು ರೀತಿಯ ಬಿಗಿಚಡ್ಡಿ ಧರಿಸಿದಂತೆ ಕಾಣುತ್ತದೆ.



ಒರಟುಕಾಲಿನ ಗಿಡುಗ

ರೆಂಬೆಗಳನ್ನು ಹಿಡಿಯಲು ಅನುಕೂಲವಾಗುವಂತೆ ಕಾಲಿನ ಬೆರಳು ಹಿಂದಕ್ಕೆ ತಿರುಗಿದೆ. ಬೆರಳುಗಳಲ್ಲಿ ಉದ್ದವಾದ ನಖಗಳಿವೆ.

ಅತ್ಯಂತ ಬಲಯುತವಾದ ಹಾಗೂ ವೇಗವಾದ ಹಾರಾಟಕ್ಕೆ ಗಿಡುಗ ಪ್ರಸಿದ್ಧವಾಗಿದೆ. ಹೀಗೆ ಹಾರಾಡುತ್ತಿರುವಾಗ ಅದರ ಚುರುಕು ದೃಷ್ಟಿಗೆ ಆಹಾರ ಪ್ರಾಣಿಯೇನಾದರೂ ಕಂಡರೆ ರಿವ್ವನೆ ಶರವೇಗದಿಂದ ಅದರ ಮೇಲೆರಗಿ ತನ್ನ ಅತ್ಯಂತ ಹರಿತವಾದ ನಖಗಳಿಂದ ಒಂದೇ ಏಟಿಗೆ ಅದನ್ನು ಹೊಡೆದು ಸಾಯಿಸುತ್ತದೆ. ಸತ್ತ ಪ್ರಾಣಿ ನೆಲಕ್ಕೆ ಬಿದ್ದಮೇಲೆ ಮತ್ತೊಮ್ಮೆ ಸುತ್ತುಹಾಕಿ ಕೆಳಕ್ಕಿಳಿದು ಅದನ್ನು ವಿರಾಮವಾಗಿ ತಿನ್ನುತ್ತದೆ. ಪ್ರಾಣಿಗಳ ಮೇಲೆ ಎರಗುವಾಗ ಇದರ ಹಾರಾಟದ ವೇಗ ಗಂಟೆಗೆ ಸು. 280 ಕಿಮೀ ಇರುತ್ತದೆ ಎಂದು ಅಂದಾಜು ಮಾಡಲಾಗಿದೆ. ಗಿಡುಗವೊಂದು ತನ್ನ ಎರೆಯ ಮೇಲೆ ಎರಗುವ ದೃಶ್ಯ ಪ್ರಕೃತಿಯಲ್ಲಿನ ಅತ್ಯಂತ ರೋಮಾಂಚಕ ನೋಟಗಳಲ್ಲೊಂದು.

ಜರ್‌ಫಾಲ್ಕನ್

ಗಿಡುಗಗಳು ಗೂಡುಗಳನ್ನು ಕಟ್ಟುವುದಿಲ್ಲ. ಕೆಲವು ನೆಲದ ಮೇಲೆಯೆ ಮೊಟ್ಟೆಗಳನ್ನಿಡುವುವಾದರೆ ಇನ್ನು ಕೆಲವು ಬೆಟ್ಟಗಳ ಪ್ರಪಾತಗಳ ಚಾಚುಗಳಲ್ಲಿ ಮೊಟ್ಟೆ ಯಿಡುತ್ತವೆ. ಅನೇಕ ಸಲ ಕಾಗೆ, ಹದ್ದು ಮುಂತಾದವು ತ್ಯಜಿಸಿದ ಹಳೆಯ ಗೂಡುಗಳನ್ನು ಇವು ಬಳಸುತ್ತವೆ. ಮೊಟ್ಟೆಗಳ ಸಂಖ್ಯೆ 2–5ರ ವರೆಗೆ ವ್ಯತ್ಯಾಸವಾಗುತ್ತದೆ. ಕಾವು ಕೂಡುವ ಅವಧಿ ಸುಮಾರು 4 ವಾರಗಳು. ಕಾವುಕೂರುವ ಕೆಲಸ ಹೆಣ್ಣಿನದು. ಅಪರೂಪ ವಾಗಿ ಗಂಡು ಗಿಡುಗವೂ ಕಾವು ಕೂಡಬಹುದು. ಮರಿ ಗಿಡುಗಗಳು 4–6 ವಾರಗಳ ಅನಂತರ ಸ್ವತಂತ್ರ ಜೀವನ ನಡೆಸಲು ಸಮರ್ಥವಾಗುತ್ತವೆ.

ಬ್ಯೂಟಿಯೊ ಗಿಡುಗ

ಗಿಡುಗಗಳನ್ನು ಸಾಕಿ, ಶಿಕ್ಷಣ ಕೊಟ್ಟು ಜಿಂಕೆ, ಗೆಜ್ಜೆಲ್ ಮುಂತಾದ ಪ್ರಾಣಿಗಳ ಮತ್ತು ಕೆಲವು ಬಗೆಯ ಹಕ್ಕಿಗಳ ಬೇಟೆಗೆ ಬಳಸುವುದು ಹಿಂದಿನ ಕಾಲದಲ್ಲಿ ಜನಪ್ರಿಯ ವಿಹಾರವಾಗಿತ್ತು. ಇದರ ವಿವರಗಳಿಗೆ **ನೋಡಿ– ಗಿಡುಗ ಸಾಕಣೆ.** **(ಎಚ್.ಬಿ.ಡಿ.)**

ಗಿಡುಗಗಳಲ್ಲಿ ಮುಖ್ಯವಾದ ಬಗೆಗಳನ್ನು ಮುಂದೆ ವಿವರಿಸಲಾಗಿದೆ. 1 ಫಾಲ್ಕೊ ಬಯಾರ್ಮಿಕಸ್ ಜಗರ್ (ಲಗರ್ ಫಾಲ್ಕನ್) : ಭಾರತದಲ್ಲಿ ಕಾಣಬರುವ ಗಿಡುಗ ಇದು. ಕಾಡುಕಾಗೆಯ ಗಾತ್ರಕ್ಕಿದೆ. ಇದರ ದೇಹದ ಬಣ್ಣ ಬೂದಿಮಿಶ್ರಿತ ಕಂದು. ಹೊಟ್ಟೆಯ ಭಾಗದಲ್ಲಿ ಕಂದುಮಚ್ಚೆಗಳುಳ್ಳ ಬಿಳಿಯ ಬಣ್ಣ ಉಂಟು. ಬಯಲು ಭೂಮಿಯಲ್ಲಿ ಕೃಷಿ ಭೂಮಿಯ ಬಳಿ ಇದರ ವಾಸ. ಪಾರಿವಾಳಗಳೇ ಇದರ ಪ್ರಮುಖ ಆಹಾರ. ಇಲಿ, ಓತಿಕೇತ, ಮಿಡತೆ, ಕೊಡತಿ ಕೀಟ ಮುಂತಾದವನ್ನೂ ತಿನ್ನುತ್ತದೆ. ಮರಗಳ ಮೇಲೆ ಇಲ್ಲವೆ ಪ್ರಪಾತಗಳ ಸಂದುಗಳಲ್ಲಿ ಗೂಡುಕಟ್ಟಿ ಮೊಟ್ಟೆಯಿಡುತ್ತದೆ. ಗೂಡು ಕಟ್ಟುವ ಕಾಲ ಜನವರಿಯಿಂದ ಏಪ್ರಿಲ್‌ವರೆಗೆ.

ಕೂಪರ್ ಗಿಡುಗ

2 ಫಾಲ್ಕೊ ಚಿಕ್ವೇರ (ರೆಡ್ ಹೆಡೆಡ್‌ಮರ್ಲಿನ್) : ಭಾರತದಲ್ಲಿನ ಇನ್ನೊಂದು ಬಗೆಯ ಗಿಡುಗ. ಗಾತ್ರ ಪಾರಿವಾಳದಷ್ಟು. ಇದರ ದೇಹದ ಬೆನ್ನು ಭಾಗ ನೀಲಿಮಿಶ್ರಿತ ಬೂದು ಬಣ್ಣಕ್ಕೂ ಉದರಭಾಗ ಬೆಳ್ಳಗೂ ಇವೆ. ಪಕ್ಕಗಳಲ್ಲಿ ಕರಿಯಬಣ್ಣದ ಪಟ್ಟೆಗಳಿವೆ. ತಲೆ ಮಾತ್ರ ಕಗ್ಗಂದು ಬಣ್ಣದ್ದು. ಇದು ಕೂಡ ಬಯಲು ಪ್ರದೇಶಗಳ ನಿವಾಸಿ. ಗಂಡು ಹೆಣ್ಣುಗಳೆರಡೂ ಜೊತೆಯಾಗಿ ಆಹಾರವನ್ನು ಬೇಟೆಯಾಡುತ್ತವೆ. ಸಣ್ಣ ಪುಟ್ಟ ಹಕ್ಕಿಗಳು, ಇಲಿ, ಓತಿಕೇತ ಮುಂತಾದವು ಇದರ ಆಹಾರ. ದೊಡ್ಡ ಮರಗಳಲ್ಲಿ ಒರಟು ರೀತಿಯ ಗೂಡುಕಟ್ಟುತ್ತದೆ. ಇದು ಬರ್ಮ, ಶ್ರೀಲಂಕಾ ಮತ್ತು ಪಾಕಿಸ್ತಾನ ಗಳಲ್ಲೂ ಕಂಡುಬರುತ್ತದೆ.

3 ಫಾಲ್ಕೊ ಟಿನನ್‌ಕ್ಯುಲಸ್ (ಕೆಸ್ಟ್ರೆಲ್) : ಭಾರತದಲ್ಲಿ ಕಾಣಬರುವ ಮತ್ತೊಂದು ಗಿಡುಗ. ದೇಹದ ಬಣ್ಣ ಇಟ್ಟಿಗೆಗೆಂಪು; ತಲೆ ಮಾತ್ರ ಬೂದಿ ಬಣ್ಣಕ್ಕಿದೆ. ಹೊಟ್ಟೆಯಮೇಲೆ ಕಂದುಬಣ್ಣದ ಮಚ್ಚೆಗಳಿವೆ. ಹಿಮಾಲಯ ಪರ್ವತಗಳಲ್ಲಿ ವಾಸಿಸುವ ಇದು ಚಳಿಗಾಲದಲ್ಲಿ ಬಯಲು ಪ್ರದೇಶಗಳಿಗೆ ಬರುತ್ತದೆ. ಇದರ ಬೇಟೆಯ ರೀತಿ ವಿಶಿಷ್ಟವಾಗಿದೆ. ಹಾರಾಡುತ್ತಿರುವಾಗ ಆಗಿಂದಾಗ್ಗೆ ಅಂತರಿಕ್ಷದಲ್ಲಿ ಹಲವಾರು ಸೆಕೆಂಡುಗಳ ಕಾಲ ನಿಶ್ಚಲವಾಗಿ ನಿಂತಿದ್ದು ನೆಲದಮೇಲೆ ತನ್ನ ತೀಕ್ಷ್ಣ ದೃಷ್ಟಿಯನ್ನು ಹರಿಸುತ್ತದೆ. ಇಲಿ, ಹಲ್ಲಿ ಮುಂತಾದ ಆಹಾರ ಪ್ರಾಣಿಗಳೇನಾದರೂ ಕಣ್ಣಿಗೆ ಬಿದ್ದರೆ ಕ್ಷಣಾರ್ಧದಲ್ಲಿ ಅವುಗಳ ಮೇಲೆ ಸದ್ದುಮಾಡದೆ ಎರಗಿ ತನ್ನ ಚೂಪುನಖಗಳಿಂದ ಹಿಡಿದು ಹಾರಿಹೋಗುತ್ತದೆ. ಇದು ಪ್ರಪಾತಗಳ ಸಂದುಗಳಲ್ಲಿ ಕಡ್ಡಿ, ಹಳೆಬಟ್ಟೆ ಮುಂತಾದವನ್ನು ಬಳಸಿ ಒರಟುಗೂಡು ಕಟ್ಟುತ್ತದೆ.

ಕಪ್ಪುಕತ್ತಿನ ಗಿಡುಗ

4 ಆಕ್ಸಿಪಿಟರ್ ಬೇಡಿಯಸ್ (ಶಿಕ್ರ) : ಇದು ಕೂಡ ಭಾರತದಲ್ಲಿ ವಾಸಿಸುವಂಥದು. ಗಾತ್ರದಲ್ಲಿ ಪಾರಿವಾಳದಷ್ಟಿದೆ. ದೇಹದ ಬೆನ್ನುಭಾಗ ಬೂದುಮಿಶ್ರಿತ ನೀಲಿ. ಹೊಟ್ಟೆಭಾಗ ಬಿಳಿ. ಕಂದು ಬಣ್ಣದ ಪಟ್ಟೆಗಳಿವೆ. ಬಯಲು ಪ್ರದೇಶಗಳ ನಿವಾಸಿ ಇದು. ಸಾಮಾನ್ಯವಾಗಿ ಅಲ್ಲಿನ ದೊಡ್ಡ ಮರಗಳ ರೆಂಬೆಗಳಲ್ಲಿ ಅಡಗಿದ್ದು ಎರೆಪ್ರಾಣಿಗಳು ಕಂಡರೆ ಅವುಗಳ ಮೇಲೆರಗಿ ಕೊಲ್ಲುತ್ತದೆ. ಮಾವಿನ ಮರ ಮುಂತಾದ ದೊಡ್ಡ ಗಾತ್ರದ ಮರಗಳಲ್ಲಿ ಒರಟು ರೀತಿಯ ಗೂಡು ಕಟ್ಟಿ ಮೊಟ್ಟೆಯಿಡುತ್ತದೆ.

ಕಂದು ಗಿಡುಗ

5 ಫಾಲ್ಕೊ ಪೆರಿಗ್ರಿನಸ್ (ಪೆರಿಗ್ರಿನ್ ಫಾಲ್ಕನ್): ನ್ಯೂಜಿಲೆಂಡ್ ಬಿಟ್ಟು ಪ್ರಪಂಚದ ಉಳಿದ ದೇಶಗಳಲ್ಲೆಲ್ಲ ಇರುವ ಗಿಡುಗ ಇದು. ತನ್ನ ಗಾಂಭೀರ್ಯಕ್ಕೂ ಬೇಟೆಯಾಡುವ ಕುಶಲತೆಗೂ ಹೆಸರಾಗಿದೆ. ಗಿಡುಗ ಸಾಕಣೆಯಲ್ಲಿ ಬಳಸಲಾಗುವ ಗಿಡುಗಗಳಲ್ಲಿ ಇದು ಅತ್ಯಂತ ಮುಖ್ಯವಾದುದು.

6 ಫಾಲ್ಕೊ ರಸ್ಟಿಕಾಲಸ್ (ಜರ್‌ಫಾಲ್ಕನ್) : ಉತ್ತರ ಮೇರು ಪ್ರದೇಶಗಳ ನಿವಾಸಿ. ಗಿಡುಗಗಳಲ್ಲೆಲ್ಲ ಅತ್ಯಂತ ದೊಡ್ಡಗಾತ್ರದ್ದು. ರಾಜಮಹಾರಾಜರುಗಳು ಸಾಕುತ್ತಿದ್ದ ಗಿಡುಗಗಳಲ್ಲೊಂದು. *

**ಗಿಡುಗ ಸಾಕಣೆ :** ಗಿಡುಗ ಇಲ್ಲವೆ ಡೇಗ ಜಾತಿಯ ಪಕ್ಷಿಗಳನ್ನು ಹಿಡಿದು ಪಳಗಿಸಿ, ತರಬೇತಿ ನೀಡಿ ಅವನ್ನು ಭೂ ಬಿಟ್ಟು ಇತರ ಪಕ್ಷಿ, ಪ್ರಾಣಿಗಳ ಬೇಟೆಯಾಡುವ ಪದ್ಧತಿ (ಫ್ಯಾಲ್ಕನ್ರಿ). ಇದು ಅತ್ಯಂತ ಪ್ರಾಚೀನ ಕಾಲದಿಂದಲೂ ಎಂದರೆ, ಮಾನವ ಬರೆವಣಿಗೆಯನ್ನು ಕಲಿಯುವುದಕ್ಕೆ ಎಷ್ಟೋ ಕಾಲ ಮುಂಚಿನಿಂದಲೇ ಬಳಕೆಯಲ್ಲಿದೆ. ಡೇಗೆಗಾರ ಭೂ ಬಿಟ್ಟಾಗ ನುಗ್ಗಿ, ಎದುರಿಗಿನ ಪಕ್ಷಿ, ಇಲ್ಲವೆ ಪ್ರಾಣಿಯನ್ನು ಕೊಂದು ಇಲ್ಲವೆ ಗಾಯಗೊಳಿಸಿ ಅವನು ಕರೆಯುವವರೆಗೂ ಬೇಟೆಯ ಬಳಿಯೇ ಇದ್ದು ಅವನ್ನು ಬೇಟೆಗಾರನಿಗೆ ದೊರಕಿಸಿ ಕೊಡುವುದೇ ಈ ಗಿಡುಗಗಳ ಕೆಲಸ.

ಆರಂಭದಿಂದಲೂ ಗಿಡುಗ ಬೇಟೆ ಒಂದು ಸಾಹಸಿ ಕಾಲಕ್ಷೇಪವಾಗಿ ಬೆಳೆದು ಬಂತು. ಪ್ರ.ಶ.ಪೂ.722–705ರಲ್ಲಿ ಅಸ್ಸಿರಿಯದ ಎರಡನೆಯ ಸಾರ್ಗಾನನ ಕಾಲದಲ್ಲಿ ಗಿಡುಗಶಿಕ್ಷಣ ಜೀವಂತವಾಗಿದ್ದುದಕ್ಕೆ ದಾಖಲೆಗಳಿವೆ. ಪ್ರ.ಶ.875ರಲ್ಲಿದು ಯುರೋಪ್ ಮತ್ತು ಬ್ರಿಟಿಷ್ ದ್ವೀಪಗಳಲ್ಲಿ ಉನ್ನತಿಗೆ ಬಂತು. ಪೌರಸ್ತ್ಯ ದೇಶಗಳಲ್ಲಿ ವ್ಯಾಪಾರಕ್ಕಾಗಿ ಸಂಚರಿಸುತ್ತಿದ್ದ ವರ್ತಕರು, ಸಾಹಸಿ ಸಮುದ್ರಯಾನಿಗಳು ಹಾಗೂ ಧರ್ಮಪ್ರಚಾರಕರು, ತಾವು ಸಂಚರಿಸಿದ ದೇಶಗಳಲ್ಲಿ ಈ ಕ್ರೀಡೆಯ ಅಭಿವೃದ್ಧಿಯನ್ನು ಕಂಡು ತಾವು ಹಿಂತಿರುಗುವಾಗ ತಮ್ಮೊಂದಿಗೆ ಡೇಗೆಗಳನ್ನೂ ಡೇಗೆಗಾರನನ್ನೂ ಕೊಂಡೊಯ್ದು, ಅವರಿಗೆ ಆಶ್ರಯವಿತ್ತು ಯುರೋಪ್ ದೇಶಗಳಲ್ಲೂ ಈ ಕ್ರೀಡೆಯನ್ನು ಅಸ್ತಿತ್ವಕ್ಕೆ ತಂದರು. ಮಧ್ಯ ಯುಗದಲ್ಲಿದು ಪ್ರತಿಷ್ಠಿತ ವರ್ಗದವರ ಮನೋರಂಜನೆಯ ಕಾಲಕ್ಷೇಪವಾಗಿ ಪರಿಣಮಿಸಿತು.

ತಲೆ ಮುಸುಕು – ಸಾಕಿದ ಗಿಡುಗನಿಗೊಂದು ಅಲಂಕರಣ

ಗಿಡುಗಶಿಕ್ಷಣವೂ ಒಂದು ಸೂಕ್ಷ್ಮವಾದ ಕಲೆ. ಇದರ ಶಿಕ್ಷಕನಿಗೆ ಅಪಾರವಾದ ಬುದ್ಧಿಸೂಕ್ಷ್ಮತೆ, ತಾಳ್ಮೆ, ಶ್ರಮಸಹಿಷ್ಣುತೆ ಇರಬೇಕಾಗುತ್ತದೆ. ಎಲ್ಲ ಡೇಗೆಗಳೂ ಯಶಸ್ವೀ ಬೇಟೆಯ ಪಕ್ಷಿಗಳಾಗಲಾರವು. ಗಿಡುಗ, ಗೂಬೆ ಮತ್ತು ಹದ್ದುಗಳು ಸ್ವಭಾವತಃ ಹಿಂಸ್ರ ಪಕ್ಷಿಗಳೇನೋ ಸರಿ. ಅವೆಲ್ಲವೂ ಬೇಟೆಯಾಡಿಯೇ ಜೀವಿಸುತ್ತವೆ. ಆದರೆ ಅವೆಲ್ಲವೂ ಈ ಕೆಲಸವನ್ನು ನಿರ್ವಹಿಸಲಾರವು. ಡೇಗೆಗಾರ ಈ ಎಲ್ಲ ಪಕ್ಷಿಗಳ ಸ್ವಭಾವ ಲಕ್ಷಣಗಳನ್ನರಿತು, ವಿಶಿಷ್ಟ ವರ್ಗದ ಹಕ್ಕಿಮರಿಗಳನ್ನು ಮಾತ್ರ ಆಯ್ದು ಶಿಕ್ಷಣ ಕೊಡಬೇಕಾಗುತ್ತದೆ. ಪೆರಿಗ್ರಿನ್ ಡೇಗೆ ಪ್ರಪಂಚಾದ್ಯಂತ ವಾಸಿಸುತ್ತದೆ. ಇದು ಶ್ರೇಷ್ಠ ಬೇಟೆಯ ಪಕ್ಷಿಯೆಂದು ಹೆಸರುಗೊಂಡಿದೆ. ಡೇಗೆಗಾರ ಬಯಸುವ ಎಲ್ಲ ಲಕ್ಷಣಗಳೂ ಸ್ವಭಾವಗಳೂ ಗುಣಗಳೂ ಈ ಡೇಗೆಯಲ್ಲಿವೆ. ಇದು ಯಾವುದೇ ದೇಶದ ಹವಾ ವೈಪರೀತ್ಯಗಳನ್ನೂ ಸಹಿಸಿಕೊಂಡು ಹೊಂದಿಕೊಳ್ಳಬಲ್ಲದು. ಪಕ್ಷಿ ಬಲಿಷ್ಠ, ತೀವ್ರವಾಗಿ ಚಲಿಸಬಲ್ಲದು. ಅಗತ್ಯಕ್ಕನುಗುಣವಾಗಿ ಸೌಮ್ಯವಾಗಿಯೂ ಉಗ್ರವಾಗಿಯೂ ಇರಬಲ್ಲದು.

ಡೇಗೆಗಳು ಶಿಕ್ಷಕನ ಮನಸ್ಸನ್ನು ಬಹುಬೇಗ ತಿಳಿಯಬಲ್ಲವುಗಳಾಗಿರುವುದರಿಂದ ಅವುಗಳ ಶಿಕ್ಷಣ ಸುಲಭ. ಡೇಗೆಗಳಲ್ಲಿ ಹನ್ನೆರಡು ವರ್ಗಗಳಿವೆ. ಅವುಗಳಲ್ಲಿ ಎರಡು ವರ್ಗದ ಡೇಗೆಗಳು ಮಾತ್ರ ಈ ಕೆಲಸಕ್ಕೆ ಯೋಗ್ಯವೆನಿಸಿವೆ. ನೀಲ ರೆಕ್ಕೆಯ ಡೇಗೆ ಮತ್ತು ಗಿಡ್ಡರೆಕ್ಕೆಯ ಡೇಗೆಗಳು ವಿಶೇಷವಾಗಿ ಡೇಗೆಗಾರರ ಮನಸ್ಸನ್ನು ಸೆಳೆದಿವೆ.

ದೊಡ್ಡ ಹೆಣ್ಣು ಗಿಡುಗವನ್ನು ಮಾತ್ರ ಡೇಗೆಯೆಂದು ಕರೆಯುತ್ತಾರೆ. ಗಂಡು ಇದಕ್ಕಿಂತ ತುಂಬ ಚಿಕ್ಕದು. ಪೂರ್ಣ ಬೆಳೆದಿದ್ದು ಇನ್ನೂ ಹಾರಲು ಬಾರದಿರುವ ಡೇಗೆ ಮರಿಯನ್ನು ಐಯಸ್ (ಗೂಡಿನಲ್ಲಿನ ಮರಿ) ಎಂದೂ ಅರಣ್ಯದ ಮರದ ಪೊಟರೆಯಿಂದ ಹೊರತೆಗೆದ ಮರಿಯನ್ನು ದಾರಿ ಹೋಕ ಹಕ್ಕಿ ಎಂದೂ ಕರೆಯುತ್ತಾರೆ. ವಲಸೆ ಹೋಗುತ್ತಿದ್ದ ಗಿಡುಗನ ಮರಿಯಾಗಿದ್ದರಿಂದ ಎರಡನೆಯದಕ್ಕೆ ದಾರಿ ಹೋಕ ಹಕ್ಕಿ ಎಂಬ ಹೆಸರು ಬಂದಿದೆ. ಯುರೋಪು ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಐಯಸ್‌ಗಳ ಬಳಕೆ ಹೆಚ್ಚು. ಆಫ್ರಿಕ ಮತ್ತು ಭಾರತಗಳಲ್ಲಿ ಅರಣ್ಯ ಡೇಗೆಗಳನ್ನೇ ಹಿಡಿದು ಪಳಗಿಸುತ್ತಾರೆ.

ಡೇಗೆಗಾರ ತನ್ನ ಪ್ರದೇಶ ಪರಿಸ್ಥಿತಿಗಳಿಗನುಸಾರವಾಗಿ ಡೇಗೆಯ ಮರಿಗಳನ್ನು ಆರಿಸಬೇಕಾಗುತ್ತದೆ. ನೀಳ ರೆಕ್ಕೆಯ ಗಿಡುಗಗಳು ಬಯಲು ಪ್ರದೇಶದಲ್ಲೂ ಗಿಡ್ಡ ರೆಕ್ಕೆಯ ಗಿಡುಗಗಳು ಅರಣ್ಯ ಹಾಗೂ ಕುರುಚಲು ಗಿಡಗಳ ಪ್ರದೇಶಗಳಲ್ಲೂ ಚೆನ್ನಾಗಿ ಕೆಲಸ ನಿರ್ವಹಿಸುತ್ತವೆ. ನೀಳರೆಕ್ಕೆಯ ಗಿಡುಗ ಬಯಲು ಪ್ರದೇಶದಲ್ಲಿ ಅತಿ ಎತ್ತರದಲ್ಲಿ ಹಾರಾಡುತ್ತಿದ್ದು, ಶಿಕಾರಿ ಕಣ್ಣಿಗೆ ಬೀಳುತ್ತಿದಂತೆ ಶರವೇಗದಲ್ಲಿ ಆಕ್ರಮಣ ಮಾಡಿ ಕೊಲ್ಲುತ್ತದೆ. ಗಿಡ್ಡ ರೆಕ್ಕೆಯ ಡೇಗೆ ಎತ್ತರವಾದ ಮರಗಳ ಮೇಲೆ ಸುರಕ್ಷಿತ ಸ್ಥಳದಲ್ಲಿ ಕುಳಿತು ಬೇಟೆಗೆ ನಾಯಿ ಹಾಗೂ ಸೋಹುಗಾರರು ಎಬ್ಬಿಸಿದ ಪ್ರಾಣಿಗಳ ಮೇಲೆ ಒಂದೆ ಬಾರಿಗೆ ಎರಗಿ, ತನ್ನ ತೀವ್ರ ನಖಗಳಿಂದ ಅದನ್ನು ಹಿಡಿದು ಮೇಲಕ್ಕೆ ಹಾರಿ ನಿಧಾನವಾಗಿ ಕೆಳಕ್ಕೆ ತರುತ್ತದೆ.

ಹವ್ಯಾಸಿ ಡೇಗೆಗಾರ ಐಯಸ್‌ಗಳನ್ನೇ ಆಯ್ದುಕೊಂಡು ಶಿಕ್ಷಣ ನೀಡುತ್ತಾನೆ. ಅನುಭವಿ ಶ್ಯೇನಗಾರ ಕಾಡು ಗಿಡುಗವನ್ನು ಹಿಡಿದು ಪಳಗಿಸುತ್ತಾನೆ. ಕಾಡು ಗಿಡುಗವನ್ನು ಹಿಡಿಯುವುದು ಸ್ವಲ್ಪ ಕಷ್ಟದ ಕೆಲಸ. ಬಲೆಯೊಡ್ಡಿ ಅದನ್ನು ಹಿಡಿಯಬೇಕಾಗುತ್ತದೆ.



**ತಲೆಮುಸುಕು ಧರಿಸಿರುವ ಸಾಕಿದ ಗಿಡುಗಗಳು**

ಹಿಡಿದ ಅನಂತರ ಡೇಗೆಯ ಕಾಲಿನ ಚರ್ಮದ ಪಟ್ಟಿ ಕಟ್ಟಿ, ಮೃದುಚರ್ಮದ ಮುಖ ಕವಚ ತೊಡಿಸುತ್ತಾರೆ; ಕಾಲಿಗೆ ಕಿರುಗಂಟೆಗಳನ್ನು ಕಟ್ಟುತ್ತಾರೆ. ಈ ಗಂಟೆಗಳಿಂದ ಒಂದು ಅನುಕೂಲವಿದೆ. ಕಾಡಿನಲ್ಲಿ ಗಿಡುಗ ಬೇಟೆಗಾಗಿ ನುಗ್ಗಿದಾಗ ಅದು ಯಾವ ಕಡೆ ಇದೆ ಎಂಬುದನ್ನು ಗಂಟೆಯ ದನಿಯಿಂದ ತಿಳಿಯಲು ಸಾಧ್ಯ.

ಅನಂತರ ಡೇಗೆಯ ಶಿಕ್ಷಣ ಆರಂಭವಾಗುತ್ತದೆ. ಡೇಗೆಯ ಉಗುರುಗಳು ಅತಿ ಚೂಪಾಗಿರುವುದರಿಂದ ಶಿಕ್ಷಣ ಸಮಯದಲ್ಲಿ ಶಿಕ್ಷಕ ತನ್ನ ಕೈಗಳಿಗೆ ಚರ್ಮದ ಕವಚ ಧರಿಸುತ್ತಾನೆ. ಒಂದು ಕೈಯಲ್ಲಿ ಪಕ್ಷಿಯನ್ನು ಹಿಡಿದು ಮತ್ತೊಂದು ಕೈಯಿಂದ ಬೆನ್ನಮೇಲೆ ಮೃದುವಾಗಿ ಕೈಯಾಡಿಸುತ್ತ ಅದನ್ನು ಒಗ್ಗಿಸಿಕೊಳ್ಳುತ್ತಾನೆ. ತನ್ನ ಕೈಯಿಂದಲೇ ಅದಕ್ಕೆ ಆಹಾರ ಉಣಿಸುತ್ತಾನೆ. ಒಮ್ಮೊಮ್ಮೆ ಕಣ್ಣುವಚವನ್ನು ತೆಗೆದು, ಮುಚ್ಚಿ ಮಾಡುತ್ತಾನೆ. ಬಹುಕಾಲ ಹೀಗೆ ಮಾಡಿದ ಮೇಲೆ ಡೇಗೆ ಅವನ ವಿಶಿಷ್ಟ ಭಾಷೆಗೆ, ಸಹವಾಸಕ್ಕೆ ಹೊಂದಿಕೊಳ್ಳುತ್ತದೆ. ಹೀಗೆ ಹೊಂದಿಕೊಂಡ ಮೇಲೆ ಕಣ್ಣುವಚ ತೆಗೆದು ಆಹಾರ ಕೊಡುತ್ತಾನೆ. ಮುಂದೆ ಬೇಟೆಯ ಶಿಕ್ಷಣ ಆರಂಭವಾಗುತ್ತದೆ. ಹಸಿ ಮಾಂಸಕ್ಕೆ ಪಕ್ಷಿಯಾಕಾರದಲ್ಲಿ ಪುಕ್ಕಗಳನ್ನು ಸಿಕ್ಕಿಸಿ, ಉದ್ದವಾದ ತೊಗಲು ಭಾರವನ್ನು ಹೊಂದಿಸಿ ಡೇಗೆಯ ಎದುರಿಗೆ ಅದನ್ನು ಮೇಲೆ ಎಸೆದು ಡೇಗೆಯನ್ನು ಬಿಡುತ್ತಾನೆ. ಡೇಗೆ ಅದರತ್ತ ಹಾರಿ ಅದು ನೆಲಕ್ಕೆ ಬೀಳುವ ಮುಂಚೆಯೇ ಅದನ್ನು ಕಾಲುಗಳಿಂದ ಹಿಡಿದು ಶಿಕ್ಷಕನ ಬಳಿಗೆ ಬರುತ್ತದೆ. ಈ ರೀತಿ ಪೂರ್ಣ ಪಳಗಿದ ಮೇಲೆ ಅದು ಬೇಟೆಯಾಡಲು ತಯಾರಾಯಿತು ಎಂದು ಅರ್ಥ. ಸರಿಸುಮಾರಾಗಿ ಐಯಸ್ ಮರಿಗಳಿಗೂ ಇದೇ ಬಗೆಯ ಶಿಕ್ಷಣ ಕೊಡುತ್ತಾರೆ. ಇದು ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಶ್ಯೇನಶಿಕ್ಷಣ ಪದ್ಧತಿ.

ಆಧುನಿಕ ಜಗತ್ತಿನಲ್ಲಿ, ಬಂದೂಕ ಬಂದು, ಜನ ಬಯಲು ಪ್ರದೇಶಗಳನ್ನು ವಸತಿಗೋ ವ್ಯವಸಾಯಕ್ಕೋ ಆಕ್ರಮಣ ಮಾಡತೊಡಗಿದಾಗ ಹಾಗೂ ಪುರಾತನ ರಾಷ್ಟ್ರಗಳಲ್ಲುಂಟಾದ ಸಾಮಾಜಿಕ ಬದಲಾವಣೆಗಳಿಂದಾಗಿ ಶ್ಯೇನಶಿಕ್ಷಣ ಕೇಳಿ ಕಣ್ಮರೆಯಾಗುತ್ತ ಬಂತು. ಇದರಲ್ಲಿ ಅಲ್ಪಸ್ವಲ್ಪ ಆಸಕ್ತಿ ಮತ್ತೆ ಕುದುರಿದ್ದು ಎರಡನೆಯ ಮಹಾಯುದ್ಧದ ತರುವಾಯ. ಶ್ಯೇನಶಿಕ್ಷಣಪದ್ಧತಿ ಹಾಗೂ ಸಾಹಿತ್ಯಗಳ ಬಗ್ಗೆ ವಿಶೇಷ ಆಸಕ್ತಿಹೊಂದಿದ ಸಾವಿರದ ಐನೂರಕ್ಕಿಂತ ಹೆಚ್ಚು ಜನ ಈಗ ಸಂಯುಕ್ತ ಸಂಸ್ಥಾನ ಒಂದರಲ್ಲೇ ಇದ್ದಾರೆ. ಈ ಹೊಸ ಆಸಕ್ತಿಯಿಂದಾಗಿ ಯುರೋಪಿನ ವಿವಿಧ ರಾಷ್ಟ್ರಗಳಲ್ಲಿ ಹೊಸ ಹೊಸ ಡೇಗೆಗಾರ ಕ್ಲಬ್ಬುಗಳು ಹುಟ್ಟಿಕೊಂಡುವು. 1770ರಲ್ಲಿ ಬ್ರಿಟಿಷ್ ದ್ವೀಪಗಳಲ್ಲಿ ಫಾಲ್ಕನರ್ಸ್ ಸೊಸೈಟಿ ಹುಟ್ಟಿಕೊಂಡಿತು. ಆದರೆ ಇದರ ಮೇಲ್ವಿಚಾರಕ ಲಾರ್ಡ್ ಬರ್ನರ್ಸ್ ನಿಧನಾನಂತರ ಈ ಸೊಸೈಟಿಯೂ ಕಣ್ಮರೆಯಾಯಿತು. ಇಂಗ್ಲೆಂಡಿನ ಡೇಗೆಗಾರ ಕೇಂದ್ರ ಈಸ್ಟ್ ಆಂಗ್ಲಿಯ ಪ್ರದೇಶದಲ್ಲಿ ಹೆರಾನ್ ಪಕ್ಷಿಗಳ ಅಭಾವದಿಂದಾಗಿಯೂ ಬಂಜರು ಭೂಮಿಯ ಉಳುವಿಕೆಯಿಂದಾಗಿಯೂ ನೆದರ್‌ಲೆಂಡ್ಸ್‌ಗೆ ವರ್ಗಾವಣೆ ಗೊಂಡಿತು. 1839ರಲ್ಲಿ ನೆದರ್‌ಲೆಂಡ್ಸಿನ ದೊರೆ ಎರಡನೆಯ ವಿಲಿಯಂನ ಪೋಷಕತ್ವದಲ್ಲಿ ಲೂ ಹಾಕಿಂಗ್ ಕ್ಲಬ್ ಸ್ಥಾಪಿತವಾಯಿತು. ಈ ಕ್ಲಬ್ಬಿನ ಮೊದಲ ಎಂಟು ವರ್ಷಗಳ ಅವಧಿಯಲ್ಲಿ, ಸಂಸ್ಥೆಗೆ ಸೇರಿದ ಡೇಗೆಗಳು ಸಾವಿರದ ಐನೂರು ಶಿಕಾರಿಗಳನ್ನು ಹಿಡಿದಿದ್ದವಂತೆ. 1853ರ ಹೊತ್ತಿಗೆ ರಾಜಾಶ್ರಯವನ್ನು ಕಳೆದುಕೊಂಡ ಈ ಕ್ಲಬ್ಬು ಕಣ್ಮರೆಯಾಯಿತು.

ಕೆಲವು ವಿಲಾಸಿ ಡೇಗೆಗಾರರ ಹಾಗೂ ಉದ್ಯೋಗಸ್ಥರ ಸತತ ಪ್ರಯತ್ನದ ಫಲವಾಗಿ ಇಂಗ್ಲೆಂಡಿನಲ್ಲಿ ಮತ್ತೆ ಗಿಡುಗರಕ್ಷಕಸಂಘಗಳು ಹುಟ್ಟಿಕೊಂಡವು. 1864ರಲ್ಲಿ ವಿಲ್ಟ್‌ಶಿರ್ ನಗರ ಪ್ರದೇಶದ ರೂಕ್ ಪಕ್ಷಿಗಳನ್ನು ಬೇಟೆಯಾಡಲು ಓಲ್ಡ್ ಹಾಕಿಂಗ್ ಕ್ಲಬ್ ಸ್ಥಾಪಿತವಾಗಿ 1926ರ ವರೆಗೂ ನಡೆದು ಬಂತು. ಪುನಃ 1927ರಲ್ಲಿ ಬ್ರಿಟಿಷ್ ಫಾಲ್ಕನರ್ಸ್ ಕ್ಲಬ್ ಆರಂಭವಾಯಿತು. ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಕ್ಲಬ್ಬಿನ ಸದಸ್ಯ ನೂರ ಐವತ್ತಕ್ಕಿಳಿಯಿತು. ಇವರಲ್ಲಿ ಅರ್ಧದಷ್ಟು ಜನ ಸಂಯುಕ್ತ ಸಂಸ್ಥಾನಗಳಿಗೆ ವಲಸೆ ಹೋದರು. ಅಲ್ಲಿಯೂ ಈ ಕೇಳಿಯನ್ನು ಸ್ವಲ್ಪ ಜನ ಉಳಿಸಿಕೊಂಡು ಬಂದರು.

ಕ್ರಮೇಣ ಬೇಟೆಯ ವಿಚಾರದಲ್ಲಿಯೇ ಜನತೆಯ ಅಭಿಪ್ರಾಯ ವ್ಯತ್ಯಾಸವಾಗುತ್ತ ಬಂತು. ವನ ಮತ್ತು ವನ್ಯಮೃಗಗಳ ಸಂರಕ್ಷಣೆಗೆ ಪ್ರಾಮುಖ್ಯ ಬಂತು. ಡೇಗೆಯ ಬೇಟೆಗೆ ಗುರಿಯಾಗಿದ್ದ ಹಲವಾರು ಪಕ್ಷಿ, ಪ್ರಾಣಿಗಳು ಸಾಮ್ರಾಜ್ಯದ ಸಂರಕ್ಷಕ ಪ್ರಾಣಿ ಪಕ್ಷಿಗಳ ಪಟ್ಟಿಯನ್ನು ಸೇರಿದವು. ಡೇಗೆಗಾರರು ಗೃಹ ಇಲಾಖೆಯ ರಹದಾರಿ ಪಡೆದೇ ಬೇಟೆಯಾಡ 'ಬೇಕೆಂಬ ನಿಯಮ ಜಾರಿಗೆ ಬಂತು. ಡೇಗೆಗಾರರ ಆಸಕ್ತಿ ಕಡಿಮೆಯಾಗಲು ಇದು ಪ್ರಮುಖ ಕಾರಣವಾಯಿತು. ಯುರೋಪಿನ ಹಲವಾರು ರಾಷ್ಟ್ರಗಳಲ್ಲಿ ಡೇಗೆಗಾರರ ಕ್ಲಬ್ಬುಗಳು ಅಸ್ತಿತ್ವದಲ್ಲಿವೆಯಾದರೂ ಅವುಗಳ ಕಾರ್ಯಕಲಾಪಗಳಿಗೆ ಅನೇಕ ಕಾರಣಗಳಿಂದಾಗಿ ಒಂದು ಮಿತಿ ಏರ್ಪಟ್ಟಿದೆ. ಫ್ರಾನ್ಸಿನ ಡೇ ಫ್ಯಾಂಪೇನ್ 1870ರಲ್ಲಿ ಕಣ್ಮರೆಯಾಯಿತು. ಅನಂತರ ಫ್ರಾನ್ಸಿನ ಡೇಗೆಗಾರರು ಅಸೋಸಿಯೇಷನ್ ನ್ಯಾಷನಲೆ ಡೆಸ್ ಫಾಕನಿಯರ್ಸ್ ಎಟ್ ಡೆಟೋರ್ಸ್ರಿಸ್ ಫ್ರಾಂಕಾಯ್ ಸಂಘದ ಮೂಲಕ ಒಂದು ಗೂಡಿದರು. ಜರ್ಮನಿಯಲ್ಲಿ ಆಯಟ್‌ಶರ್ ಫಾಲ್ಕೆನೋರ್ಡೆನ್ 1923ರಲ್ಲಿ ಆರಂಭವಾಗಿ ಇಂದಿಗೂ ಅಸ್ತಿತ್ವದಲ್ಲಿದೆ. ಇಟಲಿ ಮತ್ತು ಆಸ್ಟ್ರಿಯಗಳಲ್ಲೂ ಇಂಥ ಕ್ಲಬ್ಬುಗಳು ಉಳಿದು ಬಂದಿವೆ.

ಸಿರೆನೇಯಿಕದ ಅರಬರು, ಪರ್ಷಿಯನ್ ಕೊಲ್ಲಿ ಹಾಗೂ ಸೌದೀ ಅರೇಬಿಯದ ತೈಲ ಶ್ರೀಮಂತ ಷೇಕರು ಇಂದಿಗೂ ಡೇಗೆ ಸಾಕಣೆ, ಶಿಕ್ಷಣ ಹಾಗೂ ಬೇಟೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಭಾರತ ಮತ್ತು ಪಾಕಿಸ್ತಾನಗಳ ಪಂಜಾಬ್ ಹಾಗೂ ವಾಯುವ್ಯ ಗಡಿ ಪ್ರದೇಶಗಳಲ್ಲಿ ಇಂದಿಗೂ ಡೇಗೆಗಳನ್ನು ಪಳಗಿಸಿ ಬಾತುಕೋಳಿಗಳನ್ನು ಹಿಡಿಯುತ್ತಾರೆ. ವಿಶ್ವವಿಖ್ಯಾತ ಗಿಡುಗಗಂಟೆಗಳನ್ನು ಭಾರತ ಪಾಕಿಸ್ತಾನಗಳ ಅಮೃತಸರ ಹಾಗೂ ಲಾಹೋರ್‌ಗಳಲ್ಲಿ ಇಂದಿಗೂ ತಯಾರಿಸುತ್ತಿದ್ದಾರೆ.

ಭರತಖಂಡದಲ್ಲಿ ಈ ಕ್ರೀಡೆ ಅತ್ಯಂತ ಪ್ರಾಚೀನ ಕಾಲದಿಂದಲೂ ಇದ್ದು, ಮೊಗಲರ ಮತ್ತು ರಜಪೂತ ದೊರೆಗಳ ಕಾಲದಲ್ಲಿ ರಾಜಾಶ್ರಯ ಪಡೆದಿತ್ತೆಂದು ತಿಳಿದುಬರುತ್ತದೆ. ಇಂದಿಗೂ ಬಹು ಮಂದಿ ಅರಣ್ಯವಾಸಿಗಳು, ಬೇಟೆಗಾರ ಜನಾಂಗಗಳು ಡೇಗೆ ಜಾತಿಯ ಹಲವು ಪಕ್ಷಿಗಳನ್ನು ಸಾಕಿ, ಬೇಟೆಯಾಡಿಸುವ ಕಸುಬನ್ನು ಉಳಿಸಿಕೊಂಡು ಬಂದಿದ್ದಾರೆ.

(ಜಿ.ಎಸ್.ಪಿ.ಎಂ.)

**ಗಿಣ್ಣು :** ಹಾಲನ್ನು ಗರಣೆಗಟ್ಟಿಸಿ, ದ್ರವಾಂಶವನ್ನು ತೆಗೆದುಹಾಕಿ ಉಳಿಯುವ ಹೆಪ್ಪಿನಿಂದ ತಯಾರಿಸಲಾಗುವ ಒಂದು ಆಹಾರ (ಚೀಸ್). ಗರಣೆ ಗಟ್ಟಿಸಲು ರೆನಿನ್ ಎಂಬ ಕಿಣ್ವವನ್ನೊ ಇಲ್ಲವೆ ಆಮ್ಲವನ್ನೂ ಅಥವಾ ಇವೆರಡರ ಮಿಶ್ರಣವನ್ನೊ ಬಳಸಲಾಗುತ್ತದೆ. ಕೆಲವು ಸಲ ವಿವಿಧ ಬಗೆಯ ಶಿಲೀಂಧ್ರ ಜಾತಿಯ ಸೂಕ್ಷ್ಮಜೀವಿಗಳನ್ನು ಬಳಸುವುದುಂಟು. ಗಿಣ್ಣು ತಯಾರು ಮಾಡುವ ಕಲೆ ಬಹು ಪ್ರಾಚೀನವಾದುದು. ಹಳೆ ಒಡಂಬಡಿಕೆಯಲ್ಲಿ ಇದರ ಉಲ್ಲೇಖವಿದೆ. ಇದರಿಂದ ಪ್ರಸಕ್ತಶಕದ ಆರಂಭಕ್ಕೆ ಸಾವಿರ ವರ್ಷಗಳ ಮೊದಲೇ ಗಿಣ್ಣು ಮಾಡುವುದನ್ನು ಒಬ್ಬ ಅರಬ್ಬೀ ಕುರುಬ ಕಂಡುಹಿಡಿದನೆಂದು ಹೇಳುವ ಹಳೆಯ ಕತೆಯೊಂದಿದೆ. ಪ್ರಾಚೀನ ರೋಮನರು, ಗ್ರೀಕರು ಈ ಕಲೆಯಲ್ಲಿ ನಿಷ್ಣಾತರಾಗಿದ್ದರಲ್ಲದೆ ಗಿಣ್ಣು ಬಹಳ ಪೌಷ್ಟಿಕ ಆಹಾರವೆಂಬುದನ್ನು ಕೂಡ ಕಂಡುಕೊಂಡಿದ್ದರು. ಪ್ರ.ಶ 1000ದ ವೇಳೆಗೆ ಯುರೋಪಿಯನರ ಆಹಾರದಲ್ಲಿ ಗಿಣ್ಣು ಒಂದು ಮುಖ್ಯ ಸ್ಥಾನವನ್ನು ಗಳಿಸಿಕೊಂಡಿತು. ಗಿಣ್ಣು ಇಷ್ಟು ಮುಖ್ಯ ಆಹಾರವಾಗಿದ್ದರೂ ಬಹಳ ವರ್ಷಗಳ ಕಾಲ ಇದರ ತಯಾರಿಕೆ ಗೃಹಕೈಗಾರಿಕೆ ಮಾತ್ರ ಆಗಿತ್ತು. ಕ್ರಮೇಣ ಸಾಕಾಣಿಕೆಯ ಸೌಲಭ್ಯ, ಹಾಲಿನ ಗುಣನಿಯಮತ್ರಣ ಸಾಧನಗಳು, ಗಿಣ್ಣು ಮಾಡುವ ಕಲೆಯಲ್ಲಿ ಉಂಟಾದ ಹೆಚ್ಚಿನ ಜ್ಞಾನ ಮತ್ತು ಯಾಂತ್ರಿಕ ಸಾಧನ–ಇವುಗಳ ಹೆಚ್ಚಳದಿಂದ ಗಿಣ್ಣು ಮಾಡುವುದು ಒಂದು ಪ್ರಮುಖ ಮತ್ತು ಲಾಭದಾಯಕ ಉದ್ಯಮವಾಯಿತು. ಗಿಣ್ಣು ತಯಾರಿಕೆಯಲ್ಲಿ ಬಹಳ ಮುಖ್ಯವಾದ ದೇಶಗಳು ಅಮೆರಿಕ ಸಂಯುಕ್ತಸಂಸ್ಥಾನ, ಫ್ರಾನ್ಸ್, ಇಟಲಿ, ಜರ್ಮನಿ, ನೆದರ್ಲೆಂಡ್ಸ್ ಮತ್ತು ಇಂಗ್ಲೆಂಡ್, ದಕ್ಷಿಣ ಅಮೆರಿಕದ ಬ್ರೆಜ಼ಿಲ್, ಅರ್ಜಂಟೀನಗಳಲ್ಲೂ ನ್ಯೂಜಿಲೆಂಡ್, ಸಿರಿಯ ಮುಂತಾದ ದೇಶಗಳಲ್ಲೂ ಗಿಣ್ಣು ತಯಾರಿಕೆಯ ಉದ್ಯಮ ಇದೆ.

**ಗಿಣ್ಣನ್ನು ತಯಾರಿಸುವ ವಿಧಾನ :** ಗಿಣ್ಣನ್ನು ತಯಾರಿಸುವ ಮುಖ್ಯೋದ್ದೇಶವೆಂದರೆ ಹಾಲಿಗೆ ಹೆಪ್ಪು ಹಾಕಿ ಅದರಲ್ಲಿರುವ ಪೌಷ್ಟಿಕಾಂಶಗಳನ್ನು ಉಳಿಸಿಕೊಳ್ಳುವುದು ಮತ್ತು ನೀರಿನ ಸ್ವಲ್ಪ ಭಾಗವನ್ನು ಹೊರಹಾಕುವುದು. ಗಿಣ್ಣನ್ನು ತಯಾರಿಸಲು ಹಸು, ಕುರಿ, ಮೇಕೆಗಳ ಹಾಲನ್ನೆ ಮುಖ್ಯವಾಗಿ ಉಪಯೋಗಿಸುವುದು. ಆದರೆ ಎಮ್ಮೆ, ಕುದುರೆ, ಲಾಮ, ಯಾಕ್ ಮುಂತಾದ ಪ್ರಾಣಿಗಳ ಹಾಲನ್ನೂ ಬಳಸಬಹುದು. ಗಿಣ್ಣು ತಯಾರಿಕೆಯ ಮೊದಲ ಹಂತ ಹಾಲನ್ನು ಗರಣೆಗಟ್ಟಿಸುವುದು. ಇದಕ್ಕಾಗಿ ರೆಸಿನ್ ಎಂಬ ಕಿಣ್ವವನ್ನು ಹಾಲಿಗೆ ಸೇರಿಸಲಾಗುತ್ತದೆ. ಹಾಲುಣ್ಣುವ ಕರುಗಳ ಜೀರ್ಣಾಂಗವ್ಯವಸ್ಥೆಯಲ್ಲಿನ ಭಾಗವಾದ ಅಬೊಮೇಸಂನಿಂದ (ನಾಲ್ಕನೆಯ ಇಲ್ಲವೆ ನಿಜವಾದ ಜಠರ) ಇದನ್ನು ಪಡೆಯಲಾಗುತ್ತದೆ. ಇದಕ್ಕೆ ರೆನೆಟ್ ಎಂಬ ಹೆಸರೂ ಉಂಟು. ಇದನ್ನು ಹಾಲಿಗೆ ಸೇರಿಸಿದಾಗ ಅದರಲ್ಲಿನ ಕೇಸೀನಿನ ಕಣಗಳು ಕ್ಯಾಲ್ಸಿಯಂ ಲವಣಗಳ ಸಾನ್ನಿಧ್ಯದಲ್ಲಿ ಒಂದುಗೂಡಿ ಹಾಲು ಗರಣೆಯಾಗುವಂತೆ ಮಾಡುತ್ತದೆ. ಇದರಿಂದ ಮೊಸರಿನಂತಾದ ಹಾಲಿನ ಗಟ್ಟಿಭಾಗ ದ್ರವಭಾಗದಿಂದ ಬೇರೆಯಾಗುತ್ತದೆ. ಗಟ್ಟಿಭಾಗದಲ್ಲಿ ಹಾಲಿನಲ್ಲಿದ್ದ ಕೊಬ್ಬು, ಕೇಸೀನ್, ಲ್ಯಾಕ್ಟೋಸ್, ಆಲ್ಬ್ಯುಮಿನ್ ಇವೆಲ್ಲವೂ ಉಳಿದಿರುತ್ತವೆ. ಉಷ್ಣತೆ, ಆಮ್ಲೀಯತೆ ಮತ್ತು ಕಲಾವಧಿ ಹಾಗೂ ರೆನೆಟ್ ಮತ್ತು ಆಮ್ಲಗಳ ಪ್ರಮಾಣ ಇವುಗಳನ್ನು ವ್ಯತ್ಯಾಸಗೊಳಿಸುವುದರಿಂದ ಗರಣೆಗಟ್ಟಿಸುವುದನ್ನೂ ಗರಣೆಯ ಸ್ವಭಾವವನ್ನೂ ಬದಲಾಯಿಸ ಬಹುದು. ಅನಂತರ ಅದರಿಂದ ದ್ರವಾಂಶವನ್ನು ತೆಗೆದುಹಾಕಿ ವಿವಿಧ ಬಗೆಯ ಸಂಸ್ಕರಣ ಕ್ರಿಯೆಗಳಿಗೆ ಒಳಪಡಿಸಲಾಗುತ್ತದೆ. ದ್ರವಾಂಶವನ್ನು ತೆಗೆಯಲು ಗರಣೆಯಾದ ಹಾಲನ್ನು ಕತ್ತರಿಸಿ, ಕಲಕಿ, ಬಿಸಿಮಾಡಿ, ಒತ್ತಡಕ್ಕೊಳಪಡಿಸಲಾಗುತ್ತದೆ. ಆಮೇಲೆ ಇದನ್ನು ಮಾಗಿಸಲಾಗುತ್ತದೆ. ಮಾಗುವ ಮೊದಲಿನ ರೂಪಕ್ಕೆ ಹೊಸ ಇಲ್ಲವೆ ಹಸಿರು ಗಿಣ್ಣು ಎಂದೂ ಅನಂತರದ ರೂಪಕ್ಕೆ ಮಾಗಿದ ಇಲ್ಲವೆ ಸಂಸ್ಕರಿಸಿದ ಗಿಣ್ಣು ಎಂದೂ ಹೆಸರು. ಮಾಗಿದ ಗಿಣ್ಣನ್ನು ತಿಂಗಳುಗಟ್ಟಲೆ ಕೆಡದಂತೆ ಇರಿಸಬಹುದು. ಮಾಗುವಾಗ ಗಿಣ್ಣು ಹಲವಾರು ಭೌತ, ರಾಸಾಯನಿಕ ಹಾಗೂ ಜೈವಿಕ ಬದಲಾವಣೆಗಳಿಗೆ ಒಳಗಾಗುತ್ತದೆ.

ಗಿಣ್ಣುಗಳಲ್ಲಿ ಸುಮಾರು 200ಕ್ಕೂ ಹೆಚ್ಚು ಬಗೆಗಳಿವೆ ಎಂದು ಹೇಳಲಾಗಿದೆ. ಆದರೆ ಇವೆಲ್ಲವನ್ನೂ ಸುಮಾರು 20 ಮುಖ್ಯ ಬಗೆಗಳಿಗೆ ಸೇರಿಸಬಹುದು. ಮುಖ್ಯವಾದ ಗಿಣ್ಣುಗಳನ್ನು ಮುಂದೆ ವಿವರಿಸಿದೆ.

**ಚೆಡ್ಡರ್ ಗಿಣ್ಣು :** ಸಾಮಾನ್ಯವಾಗಿ ಇದನ್ನು ಮಾಡಲು ಕಚ್ಚಾಹಾಲನ್ನು ಉಪಯೋಗಿಸುವುದು ವಾಡಿಕೆ. ಆದರೆ ಗಿಣ್ಣು ತಯಾರಿಕೆಯ ಕಾರ್ಯವಿಧಾನದ ಮೇಲೆ ಉತ್ತಮ ನಿಯಂತ್ರಣವನ್ನು ಸಾಧಿಸಲು ನಿಷ್ಕ್ರಿಮೀಕರಿಸಿದ ಹಾಲು ಉತ್ತಮವೆಂದು ಕಂಡುಬಂದಿದೆ. ಉಪಯೋಗಿಸುವ ಹಾಲಿನ ಸ್ವಲ್ಪ ಭಾಗ ಹಿಂದಿನ ರಾತ್ರಿಯಲ್ಲಿ ಹಿಂಡಿದುದಾಗಿರುತ್ತದೆ. ಅನಂತರ ಶೇ.0.8 ರಷ್ಟು ಲ್ಯಾಕ್ಟಿಕ್ ಆಮ್ಲವಿರುವ ಒಳ್ಳೆ ಹೆಪ್ಪನ್ನು ಹಾಕುತ್ತಾರೆ. ಇದರಲ್ಲಿ ಜಾಗ್ರತೆಯಾಗಿ ಬೆಳೆಯುವ ಜೀವಾಣುಗಳಿದ್ದು ಇವು ಹುಳಿಯನ್ನು ಬೇಗ ಹುಟ್ಟಿಸಿ ಅನಿಲಜನಕಗಳಾದ ಇತರ ಜೀವಾಣುಗಳನ್ನು ನಾಶ ಮಾಡುತ್ತವೆ. ಹೆಚ್ಚಿನ ವಸ್ತುವಿರುವ ಹಾಲಿನಲ್ಲಿ ಹುಳಿಯ ಭಾಗ ಶೇ.0.18–0.19 ರವರೆಗೆ (ಇದು ಪ್ರಾರಂಭದ ಗಾತ್ರಕ್ಕಿಂತ ಶೇ.03ರಷ್ಟು ಹೆಚ್ಚು). ಹೆಚ್ಚುವ ತನಕ ಸುಮಾರು $86^0$ ಫ್ಯಾ. ಉಷ್ಣತೆಯಲ್ಲಿಟ್ಟು ಬಳಿಕ ಅದಕ್ಕೆ ರೆನೆಟನ್ನು ಸೇರಿಸುತ್ತಾರೆ.

ರೆನೆಟನ್ನು ಸೇರಿಸಿ ಚೆನ್ನಾಗಿ ಕಲಸಿದ ಮೇಲೆ ಹಾಲು ಗರಣೆ ಕಟ್ಟುವವರೆಗೂ (ಅಂದರೆ ರೆನೆಟ್ ಸೇರಿಸಿದ ನಲವತ್ತು ನಲವತ್ತೈದು ಮಿನಿಟುಗಳವರೆಗೆ) ಅದನ್ನು ಕದಲಿಸದೆ ಹಾಗೆಯೇ $80^0$ ಫ್ಯಾ. ಉಷ್ಣತೆಯಲ್ಲಿಡುತ್ತಾರೆ. ಬಳಿಕ ಗರಣೆಯನ್ನು ಒಂದು $\frac{1}{8}$" ಗಾತ್ರದ ಘನಾಕೃತಿಯಲ್ಲಿ ನೇರವಾಗಿಯೂ ಅಡ್ಡವಾಗಿಯೂ ಇರುವ ಎರಡು ಅಲಗಿನ ಚಾಕುಗಳಿಂದ ಸಮಗಾತ್ರದಲ್ಲಿ ಕತ್ತರಿಸುತ್ತಾರೆ. ಈ ಹಂತದಲ್ಲಿ ಹುಳಿ ಕಡಿಮೆಯಾಗುತ್ತದೆ. ಇದು ಶೇ.0.12–0.14 ವರೆಗಿರಬಹುದು.

ಗರಣೆಯನ್ನು ನಿಧಾನವಾಗಿ ಕಲಕುತ್ತಿದ್ದು ತೊಟ್ಟಿಯ ಉಷ್ಣತೆಯನ್ನು ನಿಧಾನವಾಗಿ ಏರಿಸಲಾಗುತ್ತದೆ. ಇದರಿಂದ ಪ್ರತಿಯೊಂದು ಗರಣೆ ಹಳುಕೂ ನೀರನ್ನು ಕಳೆದುಕೊಂಡು ಗಟ್ಟಿಯಾಗುತ್ತದೆ. ಬ್ಯಾಕ್ಟೀರಿಯಗಳ ಚಟುವಟಿಕೆಯ ಪರಿಣಾಮವಾಗಿ ಹುಳಿ ಕ್ರಮೇಣ ಅಧಿಕವಾಗುತ್ತದೆ. ಉಷ್ಣತೆ $105^0$ ಫ್ಯಾ. ಆದಾಗ ದ್ರವಾಂಶದಲ್ಲಿ ಶೇ.0.20 ಹುಳಿಯಿರುತ್ತದೆ. ಈ ಹಂತದಲ್ಲಿ ದ್ರವಾಂಶವನ್ನು ಹೊರ ತೆಗೆದು ಗರಣೆಯನ್ನು ಜಡೆಗಟ್ಟುವುದಕ್ಕೆ (ಮ್ಯಾಟಿಂಗ್) ಬಿಡಲಾಗುತ್ತದೆ. ಹೀಗಾಗುವುದನ್ನು ಚೆಡ್ಡರಿಂಗ್ ಎನ್ನುತ್ತಾರೆ. ಬಳಿಕ ಗರಣೆಯಲ್ಲಿರುವ ಕೇಸೀನ್ ಕಣಗಳು ಒಟ್ಟುಗೂಡುವಂತೆ ಮಾಡಲು ಗರಣೆಯನ್ನು ಎತ್ತರವಾಗಿ ಗುಡ್ಡೆ ಹಾಕಲಾಗುತ್ತದೆ. ಅದನ್ನು ಒಂದು ಬಟ್ಟೆಯಲ್ಲಿ ಕಟ್ಟಿ ಅದರಲ್ಲಿರುವ ನೀರನ್ನು ಹಿಂಡಿ ಹೊರಬರಲು ಭಾರವನ್ನು ಅದರ ಮೇಲೆ ಹೇರುತ್ತಾರೆ. ಗರಣೆಗೆ ಈ ಹಂತದಲ್ಲಿ ಹಸಿರು ಗಿಣ್ಣು ಎಂದು ಹೆಸರು. ಇದರಲ್ಲಿ ಜಡೆಗಟ್ಟಿದ ಗರಣೆಯನ್ನು ಯಾಂತ್ರಿಕ ಸಾಧನದಿಂದ ಒಡೆದು ಅದಕ್ಕೆ ಶೇ.2 ಭಾಗದಷ್ಟು ಉತ್ತಮ ದರ್ಜೆಯ ಉಪ್ಪನ್ನು ಸೇರಿಸುತ್ತಾರೆ. ಉಪ್ಪು ಹಾಕಿದ ಗಿಣ್ಣನ್ನು ಮರದ ಅಥವಾ ಲೋಹದ ಸುರುಳಿಗಳಲ್ಲಿ ತುಂಬುತ್ತಾರೆ. ಇದರಿಂದ ಒಳ್ಳೆ ರೂಪ ಬರುವುದಲ್ಲದೆ ಅದರಲ್ಲಿರುವ ತೇವವೂ ಬಸಿದುಹೋಗುತ್ತದೆ. ಈ ಸುರುಳಿಯನ್ನು ಒಂದು ಯಂತ್ರದ ಒತ್ತುಗದಲ್ಲಿ (ಪ್ರೆಸ್)ಇಟ್ಟು ಕ್ರಮೇಣ ತೂಕವನ್ನು ಏರಿಸುತ್ತಾರೆ. ಹೀಗೆ ಒತ್ತಡದಲ್ಲಿ ಸುಮಾರು 48 ಗಂಟೆಗಳ ಕಾಲ ಇಟ್ಟಮೇಲೆ, ಸುರುಳಿಯಿಂದ ಗಿಣ್ಣಿನ ತುಂಡನ್ನು ಹೊರತೆಗೆದು ಅದರ ಮೇಲೆ ಬಿಸಿಬಿಸಿ ನೀರನ್ನು ಹುಯ್ಯುತ್ತಾರೆ. ಇದರಿಂದ ಅದರ ಹೊರಮೈ ಚೆನ್ನಾಗಿ ಪದರಗಟ್ಟುತ್ತದೆ. ಬಳಿಕ ಆ ರಾಶಿಗೆಲ್ಲ ಸೂಕ್ತ ರೂಪ ಕೊಡಲು ಅದನ್ನು ಬಿಗಿಯಾಗಿ ಕಟ್ಟಿಡಲಾಗುತ್ತದೆ. ಕೆಲದಿನಗಳು ಈ ರೀತಿ ಇಟ್ಟ ಬಳಿಕ ಗಿಣ್ಣಿನ ಕಟ್ಟನ್ನು ಕಳಚಿ, ಕರಗಿಸಿದ ಪ್ಯಾರಫಿನ್ನಿನಲ್ಲಿ ಅದ್ದಿ ಅದಕ್ಕೆ ಪ್ಯಾರಫಿನ್ನಿನ ಲೇಪ ಬರುವಂತೆ ಮಾಡುತ್ತಾರೆ. ಅನಂತರ ಮಾಗಿಸುವ ಕೋಣೆಯಲ್ಲಿ ಎರಡು ಮೂರು ತಿಂಗಳು ಅಥವಾ ಇನ್ನೂ ಹೆಚ್ಚುಕಾಲ ಇಡುತ್ತಾರೆ. ಆಗ ಇದರಲ್ಲಿನ ಪ್ರೋಟೀನುಗಳು, ಪೆಪ್ಟೈಡುಗಳಾಗಿ ಇಲ್ಲವೆ ಅಮಿನೋ ಆಮ್ಲಗಳಾಗಿ ಸಂಪೂರ್ಣವಾಗಿ ಒಡೆದು ಹೋಗಿ ವಿಶಿಷ್ಟವಾದ ಸುವಾಸನೆ, ರುಚಿ ಮತ್ತು ಮೈಯ ಹದ ಬರುತ್ತವೆ.

ಚೆಡ್ಡರ್ ಗಿಣ್ಣನ್ನು ತಯಾರು ಮಾಡುವ ವಿಧಾನಗಳನ್ನೇ ಮಿಕ್ಕ ಗಿಣ್ಣುಗಳ ತಯಾರಿಕೆಯಲ್ಲಿಯೂ ಸಾಮಾನ್ಯವಾಗಿ ಬಳಸಲಾಗುತ್ತದೆ. ಆದರೆ ಸಣ್ಣಪುಟ್ಟ ವಿವರಗಳಲ್ಲಿ, ಬ್ಯಾಕ್ಟೀರಿಯಗಳ ಬಗೆಯಲ್ಲಿ, ಗಿಣ್ಣನ್ನು ಮಾಗಿಸಲು ಉಪಯೋಗಿಸುವ ಯೀಸ್ಟ್ ಅಥವಾ ಬೂಷ್ಟುಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿರಬಹುದು, ಅಷ್ಟೆ.

**ಮೃದು ಗಿಣ್ಣು :** ಕಾಟೇಜ್ ಗಿಣ್ಣು ಅಥವಾ ಸುರಟಿ ಗಿಣ್ಣು ಇಲ್ಲವೆ ಪಾನೀರ್, ಮುಂತಾದ ಮೃದು ಗಿಣ್ಣುಗಳ ತಯಾರಿಕೆಯಲ್ಲಿ ಹಾಲು ಗರಣೆಗಟ್ಟಿದ ಮೇಲೆ ಅದನ್ನು ಕತ್ತರಿಸಿ ಸಣ್ಣ ಸಣ್ಣ ಕುಕ್ಕೆಗಳಲ್ಲಿ ಪದರಪದರವಾಗಿ ಪೇರಿಸುತ್ತಾರೆ. ಪ್ರತಿಯೊಂದು ಗರಣೆಯ ಪದರದ ಮೇಲೂ ಸ್ವಲ್ಪ ಉಪ್ಪನ್ನು ಚಿಮುಕಿಸುತ್ತಾರೆ. ಸ್ವಲ್ಪ ಹೊತ್ತಾದ ಬಳಿಕ ಗರಣೆಯ ಪದರಗಳನ್ನು ಮೆಲ್ಲನೆ ತಿರುವಿಹಾಕುತ್ತಾರೆ. ಇದರಿಂದ ಅದಕ್ಕೆ ರೊಟ್ಟಿಯ ರೂಪ ಬರುತ್ತದೆ. ಈ ರೊಟ್ಟಿಗಳನ್ನು ಗರಣೆ ನೀರಿನಲ್ಲಿ ಅದ್ದುತ್ತಾರೆ. ಮಾಗಿಸುವ ಮತ್ತಾವ ವಿಧಾನವನ್ನೂ ಅನುಸರಿಸುವುದಿಲ್ಲ. ಇಂಥ ಗಿಣ್ಣುಗಳಲ್ಲಿ ತೇವ ಬೇಕಾದಷ್ಟಿರುತ್ತದೆ. ಹುಳಿಯಿರುವುದಿಲ್ಲ. ಇವನ್ನು ತಯಾರಿಸಿದ ಮೇಲೆ ಒಂದೆರಡು ದಿನಗಳು ಮಾತ್ರ ಸಂಗ್ರಹಿಸಿಡಬಹುದು.

**ಪರಿಷ್ಕೃತ ಗಿಣ್ಣು :** ಎರಡನೆಯ ಮಹಾಯುದ್ಧ ನಡೆಯುತ್ತಿದ್ದಾಗ ಮತ್ತು ಮುಂದಿನ ದಿನಗಳಲ್ಲಿ ಮತ್ತೊಂದು ಬಗೆಯ ಗಿಣ್ಣಿನ ತಯಾರಿಕೆ ಪ್ರಾರಂಭವಾಯಿತು. ಇದು ಡಬ್ಬಿಯೊಳಗೆ ಹಾಕಿಡುವಂಥ ಪರಿಷ್ಕೃತ ಚೀಸ್. ಸಹಜ ಚೀಸನ್ನು ಕಾಯಿಸುವುದೇ ಪರಿಷ್ಕರಣದ ಮುಖ್ಯ ಅಂಶ. ಒಂದು ಅಥವಾ ಹೆಚ್ಚಿನ ಬಗೆಯ ಗಿಣ್ಣುಗಳನ್ನು ಕುದಿಸಿ, ಕಲಸಿ ಹದಕ್ಕೆ ತರುವ ಒಂದು ಸೂಕ್ತ ಪದಾರ್ಥದೊಡನೆ ಬೆರಸಿ, ಮುದ್ದೆಮಾಡಿ ಒಂದು ಹೊಸತರದ ಗಿಣ್ಣನ್ನು ತಯಾರಿಸುವ ವಿಧಾನವಿದು.

ಪರಿಷ್ಕೃತ ಗಿಣ್ಣಿನ ಮೂಲವಸ್ತು ಸಾಮಾನ್ಯವಾಗಿ ಎರಡನೆಯ ದರ್ಜೆಯ ಗಿಣ್ಣು ಎನಿಸಿದ ಅರೆಗಟ್ಟಿ ಅಥವಾ ಗಟ್ಟಿಯಾಗಿರುವ ಗಿಣ್ಣು. ಗಿಣ್ಣಿನ ಹೊರ ಹೊದಿಕೆಯನ್ನು ಸೀಳುಗಳಾಗಿ ಕತ್ತರಿಸಿ ಪುಡಿ ಮಾಡುತ್ತಾರೆ. ಬಳಿಕ ನೀರಿನಲ್ಲಿ ಶೇಕಡ ಸುಮಾರು ಮೂರು ಭಾಗದಷ್ಟು ಸಾಂದ್ರತೆಯಿರುವ ಗಾತ್ರದಲ್ಲಿ ಸೋಡಿಯಂ ನೈಟ್ರೇಟ್ ಮತ್ತು ಡೈಸೋಡಿಯಂ ಫಾಸ್ಫೇಟ್ ಎಂಬ ವಸ್ತುಗಳನ್ನು ಕರಗಿಸಿ ಅದರಲ್ಲಿ ಗಿಣ್ಣಿನ ಪುಡಿಯನ್ನೊ ಎಳೆಯನ್ನೊ ಅದ್ದುತ್ತಾರೆ. ಅವನ್ನೆಲ್ಲ ಎಡಬಿಡದೆ ಕಲಕುತ್ತ ಕಾಯಿಸುತ್ತಾರೆ. ಪರಿಷ್ಕರಣದ ಈ ಹಂತದಲ್ಲಿ ಉತ್ಪನ್ನದ ಪಾಶ್ಚುರೀಕರಣ ಜರಗುತ್ತದೆ. ಈ ಹದಕ್ಕೆ ಬಂದಿರುವ ಪರಿಷ್ಕೃತ ಗಿಣ್ಣನ್ನು ಡಬ್ಬಿಗಳಲ್ಲಿ ಸಂಗ್ರಹಿಸಿಡಬಹುದಾಗಿದ್ದು ಇದು ಅನಿರ್ದಿಷ್ಟ ಕಾಲದವರೆಗೆ ಕೆಡದೆ ಇರುತ್ತದೆ.

**ಸ್ವಿಸ್ ಅಥವಾ ಎಮೆನ್‌ಥಾಲರ್ ಗಿಣ್ಣು :** ಇದೊಂದು ಗಟ್ಟಿ ಗಿಣ್ಣು. ಇದಕ್ಕೆ ಸ್ವಲ್ಪ ಸಿಹಿ ರುಚಿ ಉಂಟು. ಇದರಲ್ಲಿ ಅಲ್ಲಲ್ಲಿ 1"–3" ಅಂತರಕ್ಕೊಂದರಂತೆ ಅನೇಕ ರಂಧ್ರಗಳಿವೆ. ಇವಕ್ಕೆ ಕಣ್ಣುಗಳೆಂದು ಹೆಸರು. ಪ್ರತಿ ಕಣ್ಣೂ $\frac{1}{2}$" – $\frac{5}{8}$" ವ್ಯಾಸದ್ದಾಗಿದೆ. ಈ ಗಿಣ್ಣಿನ ತಯಾರಿಕೆ ಕ್ಯಾಂಟನ್ ಬೆರ್ನ್, ಎಮೆನ್‌ತಾಲ್ ಮತ್ತು ಸ್ವಿಟ್ಜರ್‌ಲೆಂಡುಗಳಲ್ಲಿ ಪ್ರಾರಂಭವಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ.

ಗಿಣ್ಣನ್ನು ದೊಡ್ಡ ತಾಮ್ರದ ಕಡಾಯಿಗಳಲ್ಲಿ ಮಾಡುತ್ತಾರೆ. ಶುದ್ಧವಾಗಿ ಬೆಳೆಸಿದ ಲ್ಯಾಕ್ಟೋಬ್ಯಾಸಿಲೈ ಮತ್ತು ಸ್ಟ್ರೆಪ್ಟೋಕಾಕಸ್ ಥರ್ಮೋಫೈಲಸ್ ಎಂಬ ಜಾತಿಯ ಬ್ಯಾಕ್ಟೀರಿಯಗಳನ್ನು ಸೇರಿಸಿ ಲ್ಯಾಕ್ಟಿಕ್ ಆಮ್ಲ ರೂಪುಗೊಳ್ಳುವುದನ್ನು ನಿಯಂತ್ರಿಸುತ್ತಾರೆ. ಇದರಿಂದ ಮಾಗಿಸುವ ಹದವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಅನುಕೂಲವಾಗುತ್ತದೆ. ಕಣ್ಣುಗಳು ಹುಟ್ಟುವುದಕ್ಕಾಗಿಯೂ ರುಚಿಯನ್ನು ಹೆಚ್ಚಿಸುವುದಕ್ಕಾಗಿಯೂ ಶುದ್ಧವಾಗಿ ಬೆಳೆಸಿದ ಪ್ರೊಪಿಯೋನಿ–ಬ್ಯಾಕ್ಟೀರಿಯಂ ಷೆರ್‌ಮಾನಿಯೈ ಎಂಬುದನ್ನು ಬೆರೆಸುತ್ತಾರೆ. ಈಗ ರೆನೆಟಿನಿಂದ ಹೆಪ್ಪುಗಟ್ಟಿಸುರುವ ಹಾಲನ್ನು ಚೆಡ್ಡರ್ ಗಿಣ್ಣಿನ ತಯಾರಿಕೆಯಲ್ಲಿ ಹೇಗೋ ಹಾಗೆ ಕತ್ತರಿಸಲಾಗುತ್ತದೆ; ಮತ್ತು ಕಾಯಿಸುವುದಕ್ಕೆ ಮುಂಚೆ ಗರಣೆಯನ್ನು ಹಾರ್ಪ್ ಎಂಬ ವಿಶಿಷ್ಟವಾದ ಆಯುಧದಿಂದ ಗುಂಡಾಗಿ ತಿರುವಿ ಎರಡನೆಯ ಬಾರಿ ಕತ್ತರಿಸಿ ಬ್ರೇಕರ್ ಎಂಬ ಸಾಧನದಿಂದ ಗರಣೆಯ ಚೂರುಗಳನ್ನು ಗೋದಿ ಕಾಳಿನ ಗಾತ್ರಕ್ಕೆ ಒಡೆಯುತ್ತಾರೆ.

ಅನಂತರ ಅವು ಗಟ್ಟಿಯಾಗುವವರೆಗೂ ಕುದಿಸುತ್ತಾರೆ. ಬಳಿಕ ಕಡಾಯಿಯಲ್ಲಿನ ಗರಣೆ ನೀರನ್ನು ಚೆನ್ನಾಗಿ ಹೊರಳಿಸುತ್ತಾರೆ. ಇದರಿಂದ ಗರಣೆ ಶಂಕುವಿನ ಆಕಾರದ ಗುಡ್ಡೆಯಾಗುತ್ತದೆ. ಈ ರೀತಿ ಗುಡ್ಡೆಯಾದ ಗರಣೆಯನ್ನು ಒಂದು ವಸ್ತ್ರದ ಮೂಲಕ ಬೇರ್ಪಡಿಸಿ, ಸುರುಳಿಯೊಳಕ್ಕೆ ಹಾಕಿ ಒತ್ತುಯಂತ್ರದಲ್ಲಿಡುತ್ತಾರೆ. ಇಪ್ಪತ್ತು ನಾಲ್ಕು ಗಂಟೆಗಳಾದ ಬಳಿಕ ಗಿಣ್ಣಿಗೆ ಉಪ್ಪು ಹಾಕಿ ಮಗುಚಿ ಪುನಃ ಒತ್ತುಯಂತ್ರದಲ್ಲಿಡುತ್ತಾರೆ. ಎರಡು ದಿವಸಗಳಾದ ಮೇಲೆ ಗಿಣ್ಣನ್ನು ಉಪ್ಪು ನೀರಿನಲ್ಲಿ 1–4 ದಿವಸಗಳ ಕಾಲ ಇಡುತ್ತಾರೆ. ಬಳಿಕ ಅದನ್ನು 3–6 ತಿಂಗಳವರೆಗೆ ಸಂಸ್ಕರಿಸಲಾಗುತ್ತದೆ.

**ರಾಕ್‌ಫೋರ್ಟ್ ಗಿಣ್ಣು:** ಇದು ದಕ್ಷಿಣ ಫ್ರಾನ್ಸಿನ ರಾಕ್‌ಫೋರ್ಟಿನ ಗುಹೆಗಳಲ್ಲಿ ಮೊದಲು ತಯಾರಾಯಿತು. ಇದರ ಬಣ್ಣ ನೀಲಿ ಮತ್ತು ಹಸುರುಗಳ ಮಿಶ್ರಣವಾಗಿದ್ದು ಇದು ನೋಡುವುದಕ್ಕೆ ವಿಚಿತ್ರವಾಗಿ ಕಾಣುತ್ತದೆ. ಪೆನಿಸಿಲಿಯಂ ರಾಕೆಫೋರ್ಟಿ ಎಂಬ ಬೂಷ್ಟು ಇದಕ್ಕೆ ಹತ್ತಿಕೊಳ್ಳುವುದರಿಂದ ಈ ಬಣ್ಣಗಳು ಬರುತ್ತವೆ. ಮೊದಲು ಇದನ್ನು ಕುರಿಯ ಹಾಲಿನಿಂದ ಮಾಡುತ್ತಿದ್ದರು. ಆದರೆ ಅಮೆರಿಕದಲ್ಲಿ ಶೇ.3.8–4 ಭಾಗದ ವರೆಗೆ ಕೊಬ್ಬು ಇರುವ ಹಸುವಿನ ಹಾಲಿನಿಂದ ಇದನ್ನು ತಯಾರಿಸಲಾಗಿದೆ. ಶೇ.3–ಶೇ.4 ವರೆಗೆ ಹೆಪ್ಪಿನ ವಸ್ತುವನ್ನು ಸೇರಿಸಿ ಶೇ.0.2–9.23 ವರೆಗೂ ಹುಳಿ ಬರುವಂತೆ ಮಾಡಲಾಗುತ್ತದೆ. ಇದಕ್ಕಾಗಿ ಹಾಲಿನ ಪ್ರತಿ ಸಾವಿರ ಪೌಂಡಿನ ತೂಕಕ್ಕೂ 3–4 ಔನ್ಸ್ ರೆನೆಟನ್ನು ಸೇರಿಸಲಾಗುತ್ತದೆ. 1–$\frac{1}{2}$ ಗಂಟೆಗಳಾದ ಮೇಲೆ 3/4"–1 ಘನ ಗಾತ್ರಕ್ಕೆ ಇದನ್ನು ಕತ್ತರಿಸಿ ಹಲಗೆಗಳ ಮೇಲೆ 15–20 ಮಿನಿಟುಗಳ ತನಕ ಬಸಿಯುತ್ತಾರೆ. ಬಳಿಕ ಅದನ್ನು 6" ಎತ್ತರ ಮತ್ತು 7 $\frac{7}{8}$ " ವ್ಯಾಸದ ಗುಂಡುಗಳಾಗಿ ಮಾಡಿ ಅವುಗಳಲ್ಲಿ ಸಣ್ಣ ತೂತುಗಳನ್ನು ಕೊರೆಯುತ್ತಾರೆ. ಗಿಣ್ಣನ್ನು ಅಚ್ಚುಗಳ ಮೇಲೆ ಇಡುವಾಗ ಅದರ ಮೇಲೆ ಪೆನಿಸಿಲಿಯಂ ರಾಕೆಫೋರ್ಟಿಯ ಬೀಜಾಣುಗಳನ್ನು ಚಿಮುಕಿಸುತ್ತಾರೆ. ಬಳಿಕ ಅಚ್ಚನ್ನು ಆಗಾಗ ತಿರುವಿ ಹಾಕುತ್ತ $68^0$ ರಿಂದ $72^0$ ಫ್ಯಾ. ಉಷ್ಣತೆಯಲ್ಲಿ 24 ಗಂಟೆಗಳ ಕಾಲದವರೆಗೂ ಬಸಿಯಬಿಡುತ್ತಾರೆ. ಅನಂತರ ಅದನ್ನು ಮತ್ತೆ ಬಸಿಯುವ ಮಣೆಗಳ ಮೇಲಿರಿಸಿ 3–5 ದಿವಸಗಳ ತನಕ ಇಟ್ಟು ಶೇ.7.5 ಭಾಗ ಉಪ್ಪನ್ನು ಮೂರು ಸಲ ಗಿಣ್ಣಿನೊಳಕ್ಕೆ ಉಜ್ಜಿ ಸೇರಿಸುತ್ತಾರೆ. ಉಪ್ಪು ಹಾಕಿದ ಮೇಲೆ ಗಿಣ್ಣನ್ನು ಸೂಜಿಗಳಿಂದ ಚುಚ್ಚುತ್ತಾರೆ. ಇದರಿಂದ ಗಾಳಿ ಒಳಕ್ಕೆ ಹೋಗುವಂತಾಗುತ್ತದೆ. ಬಳಿಕ ಅದನ್ನು $48^0$–$50^0$ಫಾ. ಉಷ್ಣದಲ್ಲಿ ಶೇ.95 ಸಾಪೇಕ್ಷ ಆರ್ದ್ರತೆಯಲ್ಲಿ ಮೂರು ತಿಂಗಳುಗಳವರೆಗೆ ಸಂಸ್ಕರಿಸುತ್ತಾರೆ. ಅನಂತರ ಅದನ್ನು ತಗಡು ಕಾಗದದಲ್ಲಿ ಸುತ್ತಿ ಉಷ್ಣತೆಯನ್ನು $45^0$ ಫ್ಯಾ. ಗೆ ಇಳಿಸಿ 3–6 ತಿಂಗಳ ಕಾಲ ಇಡುತ್ತಾರೆ. ಆಗ ಅದಕ್ಕೆ ವಿಶಿಷ್ಟವಾದ ರೂಪವೂ ರುಚಿಯೂ ಬರುತ್ತವೆ. ಇತ್ತೀಚೆಗೆ ಈ ಗಿಣ್ಣಿಗೆ ಒಳ್ಳೆಯ ಬಣ್ಣ ಬರುವಂತೆ ಮಾಡಲು ಹೊಸ ಬಗೆಯ ಬಿಳಿವರ್ಣದ ಪೆನಿಸಿಲಿಯಂ ರಾಕೆಫೋರ್ಟಿ ಬೂಷ್ಟನ್ನು ವೃದ್ಧಿಸಲಾಗಿದ್ದು ಇದನ್ನು ಬಳಸುತಿದ್ದಾರೆ.

**ಗಿಣ್ಣಿನ ಉಪಯುಕ್ತತೆ :** ಹಾಲಿನಲ್ಲಿ ಅನೇಕ ಪೌಷ್ಟಿಕಾಂಶಗಳು ಗಿಣ್ಣಿನಲ್ಲಿ ಸಾರರೂಪದಲ್ಲಿರುವುದರಿಂದ ಇದು ತುಂಬ ಪುಷ್ಟಿಕರವಾದ ಆಹಾರ ಎನಿಸಿದೆ. ಸಾಮಾನ್ಯವಾಗಿ ಹತ್ತು ಪೌಂಡು ಹಾಲಿಗೆ ಒಂದು ಪೌಂಡು ಗಿಣ್ಣು, ಒಂಭತ್ತು ಪೌಂಡು ಗರಣೆ ಉತ್ಪತ್ತಿಯಾಗುತ್ತದೆ. ಲ್ಯಾಕ್ಟೋಸ್, ತಯಾಮಿನ್, ರೈಬೊಫ್ಲೇವಿನ್, ನೈಯಾಸಿನ್, ಸ್ವಲ್ಪಭಾಗ ರಂಜಕ, ಸ್ವಲ್ಪ ಕ್ಯಾಲ್ಸಿಯಂ ಮುಂತಾದ ನೀರಿನಲ್ಲಿ ಕರಗುವ ವಸ್ತುಗಳು ದ್ರವಾಂಶದಲ್ಲಿ ಹೊರಟು ಹೋದರೂ ಉಳಿದ ವಸ್ತುಗಳು ಗಿಣ್ಣಿನಲ್ಲಿ ಉಳಿಯುತ್ತದೆ. ಉದಾಹರಣೆಗೆ ಚೆಡ್ಡರ್ ಗಿಣ್ಣಿನಲ್ಲಿ ಶೇ.40 ಕೊಬ್ಬು, ಶೇ.29 ಪ್ರೋಟೀನು, ಮತ್ತು ಶೇ.30 ನೀರು ಇದೆ. ಇದು ಹಾಲಿನ ಪ್ರೋಟೀನು ಮತ್ತು ಕೊಬ್ಬು ಇವೆರಡನ್ನೂ ಸಾರತರ ರೂಪದಲ್ಲಿ ಒಳಗೊಂಡಿರುವ ಆಹಾರ ವಸ್ತು. ಸುಲಭವಾಗಿ ಅರಗುವ ಕ್ಯಾಲ್ಸಿಯಮಿನ ಗಾತ್ರವೂ ಗಿಣ್ಣಿನಲ್ಲಿ ಹೆಚ್ಚು. ಈ ಗಿಣ್ಣನ್ನು ಅನೇಕ ದಿವಸಗಳವರೆಗೆ ಕೆಡದಂತೆ ಇಡಬಹುದು.

ಭಾರತದಲ್ಲಿ ಗಿಣ್ಣನ್ನು ತಯಾರಿಸಲು ಇರುವ ಮುಖ್ಯ ಪ್ರತಿ ಬಂಧಕಗಳೆಂದರೆ– 1 ರೆನೆಟನ್ನು ಎಳೆಗರುಗಳಿಂದ ಪಡೆಯಬೇಕಾಗುವುದರಿಂದ ಅವನ್ನು ಕೊಲ್ಲಬೇಕು. ಭಾರತದಲ್ಲಿನ ಮಾಂಸಾಹಾರಿಗಳಲ್ಲದ ಅನೇಕ ಜನಕ್ಕೆ ಇದು ಹಿಡಿಸುವುದಿಲ್ಲ; 2 ಗಿಣ್ಣಿಗೆ ಇರುವ ವಿಶಿಷ್ಟವಾದ ವಾಸನೆ ಮತ್ತು ರುಚಿ ಎರಡನ್ನೂ ಜನ ಒಗ್ಗಿಸಿಕೊಳ್ಳಬೇಕು. ಇಲ್ಲದಿದ್ದರೆ ಆ ಪದಾರ್ಥವನ್ನು ಸೇವಿಸುವುದು ಕಷ್ಟ.

ಮೊದಲನೆಯ ತೊಡಕಿನ ಪರಿಹಾರಕ್ಕೆ ರಾಷ್ಟ್ರೀಯ ಡೈರಿ ರಿಸರ್ಚ್ ಇನ್‌ಸ್ಟಿಟ್ಯೂಟ್ ಬ್ಯಾಕ್ಟೀರಿಯದಿಂದಾಗಲೀ ಬೂಷ್ಟಿನಿಂದಾಗಲೀ ರೆನೆಟನ್ನು ತಯಾರಿಸುವ ಪ್ರಯೋಗವನ್ನು ನಡೆಸುತ್ತಿದೆ. ಗಿಣ್ಣು ತುಂಬ ಪುಷ್ಟಿಕರ ಆಹಾರವಾದ್ದರಿಂದ ಇದರ ತಯಾರಿಕೆಗೆ ಗಮನ ಕೊಡುವುದು ಬಹಳ ಅವಶ್ಯಕ ಮತ್ತು ಇದನ್ನು ಜನಪ್ರಿಯವಾಗಿ ಮಾಡುವುದಕ್ಕೆ ಸಕಲ ಪ್ರಯತ್ನಗಳನ್ನೂ ಮಾಡಬೇಕು. ಈ ಪ್ರಯತ್ನಗಳ ಜತೆಗೆ ಪ್ರಾಣಿಜನ್ಯ ರೆನೆಟಿಗೆ ಪ್ರತಿಯಾಗಿ ಬೇರೊಂದು ವಸ್ತುವನ್ನು ಆವಿಷ್ಕರಿಸುವ ವಿಷಯಕ್ಕೂ ಅಲ್ಲದೆ ವಾಸನೆ ಅಷ್ಟು ಕಟುವಾಗಿರದ ಮತ್ತು ಜನ ಬೇಗ ಒಗ್ಗಿಸಿಕೊಳ್ಳಬಲ್ಲಂಥ ಗಿಣ್ಣಿನ ತಯಾರಿಕೆಗೂ ತೀವ್ರ ಗಮನ ಕೊಡಬೇಕು. (ಕೆ.ಕೆ.ಎ.)

**ಗಿನಿ :** ಪಶ್ಚಿಮ ಆಫ್ರಿಕದಲ್ಲಿ ಉ.ಅ. $15^0$, ದ.ಅ. $15^0$ ನಡುವೆ–ಕೇಪ್‌ವರ್ಡ್‌ನಿಂದ ಆಂಗೋಲದ ಮೋಕಮಿಡಿಸ್‌ವರೆಗೆ–ಹಬ್ಬಿರುವ ಕರಾವಳಿಪ್ರದೇಶಕ್ಕೆ ಸ್ಥೂಲವಾಗಿ ಈ ಹೆಸರಿದೆ. ಗಿನಿ ಖಾರಿಯಲ್ಲಿರುವ ಆನೋಬಾನ್ ದ್ವೀಪದಿಂದ ಸೌನ್ ತೂಮೇ ದ್ವೀಪದ ಮೂಲಕ ಹಾಯ್ದು ಕ್ಯಾಮರೂನ್ ಪರ್ವತದವರೆಗೆ ಇರುವ ಜ್ವಾಲಾಮುಖೀಯ ಶಿಖರಗಳ ಸಾಲಿಗೆ ಪಶ್ಚಿಮದಲ್ಲಿರುವ ಪ್ರದೇಶ ಮೇಲಣ ಗಿನಿ; ಅದಕ್ಕೆ ದಕ್ಷಿಣದಲ್ಲಿರುವ ಪ್ರದೇಶ ಕೆಳಗಣ ಗಿನಿ. ಈ ಕರಾವಳಿಯ ಮಗ್ಗುಲಿಗೆ ಗಿನಿ ಖಾರಿಯಿದೆ. ಇದು ಅಟ್ಲಾಂಟಿಕ್ ಸಾಗರದ ಭಾಗ. 8ನೆಯ ಶತಮಾನದಲ್ಲಿ ಮೇಲಣ ನೈಜರ್ ನದೀಪ್ರದೇಶದಲ್ಲಿದ್ದ, ಘಿನಿ, ಗೆನಿ, ಜೆನಿ, ಡ್ಜೆನಿ ಎಂದು ಕರೆಯಲಾಗುತ್ತಿದ್ದ ರಾಜ್ಯದಿಂದಲೋ ಪಶ್ಚಿಮ ಸೂಡಾನಿನ ಅತ್ಯಂತ ಪ್ರಾಚೀನ ದೇಶವೆಂದು ಭಾವಿಸಲಾಗಿರುವ ಘಾನದಿಂದಲೋ ಗಿನಿ ಎಂಬ ಹೆಸರು ಬಂದಿರಬೇಕೆಂದು ಊಹಿಸಲಾಗಿದೆ.

ಸುಮಾರು 1350ರಿಂದಲೇ ಗಿನಿಯ ಹೆಸರು ಭೂಪಟಗಳ ಮೇಲೆ ಕಾಣಬರುತ್ತದೆ. 1364–65ರಷ್ಟು ಹಿಂದೆಯೇ ಉತ್ತರ ಫ್ರಾನ್ಸಿನ ಡಿಯೆಪ್ ಬಂದರಿನಿಂದ ಹೊರಟ ಹಡಗುಗಳು ಗಿನಿ ತೀರವನ್ನು ಮುಟ್ಟಿದ್ದುವೆಂದೂ ಘಾನದ ವರೆಗೂ ಫ್ರೆಂಚ್ ವರ್ತಕರು ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದಿದ್ದರೆಂದೂ ಫ್ರೆಂಚರು ಹೇಳಿಕೊಳ್ಳುತ್ತಾರೆ. ಆದರೆ ಇದಕ್ಕೆ ಖಚಿತವಾದ ಆಧಾರಗಳಿಲ್ಲ. ಪೋರ್ಚುಗೀಸ್ ನಾವಿಕರು ಉ.ಅ. $26^0$ ಯಲ್ಲಿರುವ ಬಾಜಡಾರ್ ಭೂಶಿರವನ್ನು 1434ರಲ್ಲಿ ಬಳಸಿದರು. ಕೆಲವು ವರ್ಷಗಳ ಅನಂತರ ಈ ಪ್ರದೇಶದಿಂದ ಸರಕುಗಳನ್ನೂ ಗುಲಾಮರನ್ನೂ ಲಿಸ್ಬನಿಗೆ ಮೊಟ್ಟಮೊದಲಿಗೆ ತರಲಾಯಿತು. ಪೋರ್ಚುಗೀಸರು 1471ರಲ್ಲಿ ಸಮಭಾಜಕವನ್ನು ತಲಪಿದರು. ಕಾಂಗೋದ ಆವಿಷ್ಕಾರವಾದ್ದು 1482ರಲ್ಲಿ. ಇತರ ಐರೋಪ್ಯ ದೇಶಗಳವರು ಈ ಪ್ರದೇಶಕ್ಕೆ ಬಂದದ್ದು

1530ರಲ್ಲಿ ಅನಂತರ. ಅವರೆಲ್ಲ ಇಲ್ಲಿ ವ್ಯಾಪಾರ ಕೇಂದ್ರಗಳನ್ನು ತೆರೆದರು. ಈ ಪ್ರದೇಶದ ಒಂದೊಂದು ಭಾಗಕ್ಕೂ ಅಲ್ಲಿಯ ಪ್ರಧಾನ ವಸ್ತುವಿಗೆ ಅನುಗುಣವಾದ ಹೆಸರು ಬಂತು. ಸಿಯೆರ ಲಿಯೋನಿನಿಂದ ಪಾಲ್ಮಾಸ್ ವರೆಗಿನ ಪ್ರದೇಶ ಗ್ರೇನ್ ಕೋಸ್ಟ್ (ಧಾನ್ಯ ಕರಾವಳಿ) ಎನಿಸಿಕೊಂಡಿದೆ. ಸ್ವರ್ಗದ ಧಾನ್ಯವೆಂದು ಕರೆಯಲಾದ ಗಿನಿ ಪೆಪರ್ ಇಲ್ಲಿಯ ಮುಖ್ಯ ವಸ್ತು. ಪಾಲ್ಮಾಸ್‍ನಿಂದ ಆಚೆಗಿನ ಪ್ರದೇಶ ಐವರಿ ಕೋಸ್ಟ್ (ದಂತ ಕರಾವಳಿ). ವೋಲ್ಟ ನದಿಯಿಂದ ನೈಜರ್ ನದೀಮುಖಜಭೂಮಿಯವರೆಗಿನದು ಸ್ಲೇವ್




ಕೋಸ್ಟ್ (ಗುಲಾಮ ಕರಾವಳಿ). ತ್ರೀ ಪಾಯಿಂಟ್ಸ್ ಭೂಶಿರಕ್ಕೆ ಪೂರ್ವದ ಪ್ರದೇಶ ಗೋಲ್ಡ್ ಕೋಸ್ಟ್ (ಚಿನ್ನದ ಕರಾವಳಿ). ಗಿನಿ ಗಣರಾಜ್ಯ, ಸೆಯೆರ ಲಿಯೋನ್, ಲೈಬೀರಿಯ, ಐವರಿ ಕೋಸ್ಟ್ ಗಣರಾಜ್ಯ, ಉತ್ತರ ವೋಲ್ಟ, ಘಾನ, ಟೋಗೋ, ದಹೋಮಿ ಗಣರಾಜ್ಯ, ನೈಜೀರಿಯ, ಕ್ಯಾಮರೂನ್, ಸಮಭಾಜಕೀಯ ಗಿನಿ, ಗ್ಯಾಬನ್, ಗ್ಯಾಂಬಿಯ, ಪೋರ್ಚುಗೀಸ್ ಗಿನಿ–ಇವು ಗಿನಿ ಪ್ರದೇಶದಲ್ಲಿರುವ ಮುಖ್ಯ ದೇಶಗಳು. ಇವನ್ನು ಕುರಿತ ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ. (ಎಂ.ಎಸ್.ಎಚ್.ಒ.;ಎಸ್.ಎನ್.ಎ.ಆರ್.ಇ.)

**ಗಿನಿ ಕೋಳಿ** : ಗ್ಯಾಲಿಫಾರ್ಮೀಸ್ ಗಣದ ನ್ಯೂಮಿಡಿಡೀ ಕುಟುಂಬಕ್ಕೆ ಸೇರಿದ ಹಕ್ಕಿ. ಇದರಲ್ಲಿ ಸುಮಾರು 5 ಜಾತಿಗಳೂ 7 ಪ್ರಭೇದಗಳೂ ಇವೆ. ಎಲ್ಲವೂ ಕೋಳಿಗಳಿಗೆ ಹತ್ತಿರ ಸಂಬಂಧಿಗಳು. ಆಫ್ರಿಕ, ಮಡಗಾಸ್ಕರ್ ಮತ್ತು ವೆಸ್ಟ್‍ಇಂಡೀಸಿನ ಕೆಲವು ದ್ವೀಪಗಳಲ್ಲಿ ಕಾಣಬರುತ್ತವೆ. ಇವುಗಳಲ್ಲಿ ಕೆಲವು ಬಗೆಗಳನ್ನು ಕೋಳಿಗಳಂತೆ ಸಾಕಲಾಗಿದೆ. ಗಿನಿಕೋಳಿಗಳು ಸುಮಾರು 40–80 ಸೆಂಮೀ ಉದ್ದದ ಹಕ್ಕಿಗಳು. ಇವುಗಳ ತಲೆಯ ಮೇಲೆ ಪುಕ್ಕಗಳಿಲ್ಲ. ಕೆಲವು ಪ್ರಭೇದಗಳಲ್ಲಿ (ನ್ಯೂಮಿಡ್) ನೆತ್ತಿಯ ಮೇಲೆ ಕೊಂಬಿನ ಮುಳ್ಳಿನಂಥ ರಚನೆಯಿದೆ. ಇನ್ನು ಕೆಲವು ಬಗೆಗಳಲ್ಲಿ ಗರಿಗಳ ಕಿರೀಟ ವಿರುವುದೂ ಉಂಟು. ಬಹುಪಾಲು ಬಗೆಗಳಲ್ಲಿ ಕತ್ತು ಕೂಡ ಬರಿದಾಗಿರುವುದಾದರೂ ಕೆಲವು ಪ್ರಭೇದ ಗಳಲ್ಲಿ ನೀಲಿ ಇಲ್ಲವೆ ಕೆಂಪು ಬಣ್ಣದ ಜೋಲು ಮಾಂಸಲ ಭಾಗ (ವ್ಯಾಟಲ್) ಉಂಟು. ಈ ಲಕ್ಷಣದಲ್ಲಿ ಇವು ಟರ್ಕಿ ಕೋಳಿಗಳನ್ನು ಹೋಲುತ್ತವೆ. ಹಿಂದಕ್ಕೆ ಬಾಗಿ ಹೆಚ್ಚು ಕಡಿಮೆ ನೆಲವನ್ನು ಮುಟ್ಟುವಂಥ ಬಾಲ, ಬಾಲವನ್ನು ಸಂಪೂರ್ಣವಾಗಿ ಮುಚ್ಚುವಂಥ ಬಾಲದ ಗರಿಗಳು, ಅಚ್ಚ ಕಪ್ಪು ಬಣ್ಣ ಮತ್ತು ಚೆಲುವಾದ ಬಿಳಿಯ ಮಚ್ಚೆಗಳಿಂದ ಕೂಡಿದ ಗರಿಗಳು–ಇವು ಗಿನಿ ಕೋಳಿಗಳ ಇನ್ನಿತರ ಲಕ್ಷಣಗಳು.

ದಟ್ಟವಾದ ಕಾಡುಗಳಲ್ಲಿ ಇವುಗಳ ವಾಸ. ಸಂಘಜೀವಿಗಳಾದ ಇವು ದೊಡ್ಡ ಗುಂಪುಗಳಲ್ಲಿರುತ್ತವೆ. ಗುಂಪಿಗೆ ಮುದಿ ಹುಂಜವೇ ಯಜಮಾನ. ಹಿಂಡುಗಳಲ್ಲಿರುವಾಗ ಇವು ಜೋರಾಗಿ ಕೇಕೆ ಹಾಕುತ್ತ ಓಡಾಡುತ್ತವೆ. ಇವು ಎಷ್ಟು ಗದ್ದಲ ಪ್ರೇಮಿಗಳೋ ಅಷ್ಟೇ ಪುಕ್ಕಲು ಸ್ವಭಾವದವು ಕೂಡ. ಅಲ್ಪಸ್ವಲ್ಪ ಶಬ್ದಕ್ಕೂ ಗಾಬರಿಗೊಂಡು, ಗುಂಪಿನಿಂದ ಚದರಿ ಪೊದೆಗಳಲ್ಲಿ ಅವಿತುಕೊಳ್ಳುತ್ತವೆ. ಚಿಗುರು, ಬೀಜ ಮುಂತಾದವು ಇವುಗಳ ಮೆಚ್ಚಿನ ಆಹಾರ. ಸಂತಾನೋತ್ಪತ್ತಿಯ ಕಾಲದಲ್ಲಿ ಮಾತ್ರ ಗುಂಪಿನಲ್ಲಿನ ಗಂಡು ಹೆಣ್ಣುಗಳು ಜೊತೆಯಾಗಿ ಗುಂಪಿನಿಂದ ಪ್ರತ್ಯೇಕವಾಗಿ ಜೀವಿಸುತ್ತವೆ. ಈ ಸಮಯದಲ್ಲಿ ಸದ್ದುಗದ್ದಲ ಮಾಡದೆ ಶಾಂತವಾಗಿರುತ್ತವೆ. ಗೂಡು ಕಟ್ಟುವ ಕೆಲಸ ಹೆಣ್ಣಿನದು.

ಗಿನಿ ಕೋಳಿಗಳು ಸಾಮಾನ್ಯವಾಗಿ ನೆಲದ ಮೇಲೆ ನಡೆದಾಡುವುದೇ ಹೆಚ್ಚು. ಆಹಾರವನ್ನು ಅರಸಿಕೊಂಡು ದಿನಕ್ಕೆ ಸುಮಾರು 35 ಕಿಮೀ ವರೆಗೂ ಓಡಾಡುವುದುಂಟು. ಇವಕ್ಕೆ ಚೆನ್ನಾಗಿ ಹಾರಲು ಬಾರದು. ಶತ್ರುಪ್ರಾಣಿಗಳು ಎರಗಿದಾಗ ಹಾರುವ ಬದಲು ವೇಗವಾಗಿ ಓಡುವುದೇ ಸಾಮಾನ್ಯ. ಅತ್ಯಾವಶ್ಯಕವೆನಿಸಿದಾಗ ಮಾತ್ರ ಹಾರುತ್ತವೆ.

ಗಿನಿ ಕೋಳಿಗಳಲ್ಲೆಲ್ಲ ಬಹಳ ಪ್ರಸಿದ್ಧವಾದುದು ಪೂರ್ವ ಆಫ್ರಿಕದ ನಿವಾಸಿಯಾದ ಆಕ್ರಿಲಿಯಮ್ ವಲ್ಚರೈನಮ್ ಎಂಬ ಪ್ರಭೇದ. ಈ ಜಾತಿಯಲ್ಲೇ ಇದು ಅತ್ಯಂತ ದೊಡ್ಡ ಗಾತ್ರದ್ದು. ಇದರ ತಲೆ ಬೋಳಾಗಿದ್ದು ಹೆಚ್ಚು ಕಡಿಮೆ ರಣಹದ್ದಿನ ತಲೆಯನ್ನೇ ಹೋಲುವುದರಿಂದ ಇದನ್ನು ಬಳಕೆಯ ಮಾತಿನಲ್ಲಿ ವಲ್ಚರೈನ್ ಗಿನಿಕೋಳಿ ಎಂದು ಕರೆಯಲಾಗುತ್ತದೆ. ಪಶ್ಚಿಮ ಆಫ್ರಿಕದ ದಟ್ಟವಾದ ಕಾಡುಗಳಲ್ಲಿ ಹೆಲ್ಮೆಟೆಡ್ ಗಿನಿಫೌಲ್ (ನ್ಯೂಮಿಡ ಮಿಲಿಯಾಗ್ರಿಸ್) ಎಂಬ ಇನ್ನೊಂದು ಬಗೆ ಕಾಣಬರುತ್ತದೆ. ಸಾಕಣೆಯಲ್ಲಿರುವ ಗಿನಿಕೋಳಿಗಳನ್ನು ಈ ಬಗೆಯಿಂದಲೇ ಪಡೆಯಲಾಗಿದೆ ಎನ್ನುತ್ತಾರೆ. ಗಿನಿಕೋಳಿಗಳನ್ನು ಅವುಗಳ ಬಲು ರುಚಿಯಾದ ಮಾಂಸಕ್ಕಾಗಿ ಸಾಕುವುದಿದೆ. ಇವುಗಳ ಸಾಕಣೆ ಬಹು ಪ್ರಾಚೀನವಾದ ಕಸಬು. ರೋಮನರು, ಗ್ರೀಕರು ಆಫ್ರಿಕದಿಂದ ಇವನ್ನು ಹಿಡಿದುತಂದು ಸಾಕುತ್ತಿದ್ದರಂತೆ. ಆದರೆ ಪ್ರಸಕ್ತಯುಗ ಆರಂಭವಾಗುವ ಕಾಲಕ್ಕೆ ಇವುಗಳ ಸಾಕಣೆ ನಿಂತುಹೋಯಿತು. ಮತ್ತೆ ಹದಿನೈದನೆಯ ಶತಮಾನದಲ್ಲಿ ಪೋರ್ಚುಗೀಸ್ ನಾವಿಕರು ಗಿನಿ ತೀರ ಪ್ರದೇಶದಲ್ಲಿ ಇವನ್ನು ಕಂಡು ಮತ್ತೆ ಯುರೋಪಿಗೆ ತಂದರು. ಅಲ್ಲಿಂದೀಚೆಗೆ ಯುರೋಪಿನ ದೇಶಗಳಲ್ಲಿ ಕೆಲವೆಡೆ ಗಿನಿಕೋಳಿಗಳ ಸಾಕಣೆ ರೂಢಿಯಲ್ಲಿದೆ. ಹೀಗೆ ಸಾಕುವ ಗಿನಿಕೋಳಿಗಳಲ್ಲಿ ಪರ್ಲ್, ಹ್ವೈಟ್ ಮತ್ತು ಲ್ಯಾವೆಂಡರ್ ಎಂಬ ಮೂರು ಬಗೆಗಳಿವೆ. ಆರ್ಥಿಕ ದೃಷ್ಟಿಯಿಂದ ಗಿನಿಕೋಳಿಗಳ ಸಾಕಣೆ ಲಾಭದಾಯಕವಲ್ಲದ್ದರಿಂದ ಇದು ಹೆಚ್ಚು ಜನಪ್ರಿಯವಾಗಿಲ್ಲ. (ಜಿ.ಎಂ.ಬಿ.)

**ಗಿನಿ ಖಾರಿ** : ಪಶ್ಚಿಮ ಆಫ್ರಿಕದ ಐವರಿ ಕೋಸ್ಟ್‍ನಿಂದ ಗಬಾನ್‍ವರೆಗಿನ ಪ್ರದೇಶದ ಮಗ್ಗುಲಿಗೆ ಮತ್ತು ಪೂ.ರೇ. $7^0$ ಯ ಪೂರ್ವಕ್ಕೆ ಇರುವ ದಕ್ಷಿಣ ಅಟ್ಲಾಂಟಿಕ್ ಸಾಗರ ಭಾಗ. ಬೆನಿನ್ ಕೊಲ್ಲಿಯಿಂದ ದಕ್ಷಿಣಕ್ಕೆ ಸಾಗಿ, ನೈಜರ್ ಮುಖಜಭೂಮಿಯಿಂದ ಪೂರ್ವಾಭಿಮುಖವಾಗಿ ಮುಂದುವರಿಯುವ ಕಡಲ ಕರೆ ಈ ಖಾರಿಯ ಮೂಲೆಯಿಂದ ಮುಂದಕ್ಕೆ ದಕ್ಷಿಣದ ಕಡೆಗೆ ತಿರುಗುತ್ತದೆ. ಖಾರಿಯ ಮೂಲೆಯಲ್ಲಿ–ಮುಖ್ಯ ಭೂಪ್ರದೇಶದಲ್ಲಿರುವ ಕ್ಯಾಮರೂನ್ ಪರ್ವತಕ್ಕೆ ಎದುರು–ಹಲವು ಜ್ವಾಲಾಮುಖೀಯ ದ್ವೀಪಗಳಿವೆ. ಆನೊವಾನ್‍ನಿಂದ ಫರ್ನಾಂಡೋ ಪೋ ವರೆಗೆ ಈ ದ್ವೀಪಗಳು ಈಶಾನ್ಯಕ್ಕೆ ಹಬ್ಬಿವೆ. ಈ ಖಾರಿಯ ಮೂಲೆಯಲ್ಲಿರುವುದೇ ಬಯಾಫ್ರಕೊಲ್ಲಿ. ಪಶ್ಚಿಮದ ಕಡೆಯಿಂದ ಹರಿದು ಬರುವ ಗಿನಿ ಉಷ್ಣೋದಕ ಪ್ರವಾಹ ಎಲ್ಲಿ ಹಿಂದಕ್ಕೆ ತಿರುಗಿ, ತಣ್ಣಗಿನ ದಕ್ಷಿಣ ಸಮಭಾಜಕೀಯ ಪ್ರವಾಹದೊಂದಿಗೆ ಸೇರುತ್ತದೆ. ಆದ್ದರಿಂದ ಈ ಖಾರಿಯ ಉತ್ತರ ದಕ್ಷಿಣ ಅಂಚುಗಳಲ್ಲಿಯ ಮೇಲ್ಪದರದ ನೀರಿನ ಉಷ್ಣತೆಯಲ್ಲಿ ವ್ಯತ್ಯಾಸಗಳುಂಟು. ಇದರಿಂದ ಕರಾವಳಿಯ ವಾಯುಗುಣದಲ್ಲೂ ಭಿನ್ನತೆಯಿರುತ್ತದೆ. ಕರಾವಳಿಯಿಂದ 30 ಕಿಮೀಗಳಿಂದಾಚೆಗೆ ಕಡಲು ಬಲು ಆಳವಾಗಿದೆ. (ಎನ್.ಸಿ.ವಿ.)

**ಗಿನಿ ಗಣರಾಜ್ಯ** : ಪಶ್ಚಿಮ ಆಫ್ರಿಕದ ಗಿನಿ ಪ್ರದೇಶದಲ್ಲಿರುವ ಒಂದು ಗಣರಾಜ್ಯ. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಪೋರ್ಚುಗೀಸ್ ಗಿನಿ, ಉತ್ತರದಲ್ಲಿ ಸೆನಿಗಾಲ್ ಮತ್ತು ಮಾಲಿ, ಪೂರ್ವದಲ್ಲಿ ಐವರಿ ಕೋಸ್ಟ್, ದಕ್ಷಿಣದಲ್ಲಿ ಲೈಬೀರಿಯ ಮತ್ತು ಸೆಯೆರ ಲಿಯೋನ್–ಇವು ಇದರ ಮೇರೆಗಳು. ಗಿನಿ ಗಣರಾಜ್ಯದ ವಿಸ್ತೀರ್ಣ 245,857 ಚ.ಕಿಮೀ, ಜನಸಂಖ್ಯೆ 10,069,000 (2011). ರಾಜಧಾನಿ ಕಾನಕ್ರಿ.

**ಭೌತಲಕ್ಷಣ** : ಗಿನಿಯ ಸಮುದ್ರತೀರ ಅಂಕುಡೊಂಕಾಗಿ ನದೀ ಅಳಿವೆಗಳಿಂದ ಕೂಡಿದೆ. ಕರೆಯ ಬಳಿ ಅಲ್ಲಲ್ಲಿ ಜವುಗು ತುಂಬಿದ ದ್ವೀಪಗಳಿವೆ. ಉಳಿದ ಭಾಗವನ್ನು ಸ್ಥೂಲವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. 1 45–53 ಮೈ. ಅಗಲವಾಗಿರುವ ಕರಾವಳಿಯ ಮೈದಾ ತಗ್ಗಿನಪ್ರದೇಶ. ಇದಕ್ಕೆ ಅಡ್ಡಲಾಗಿ ಹಲವಾರು ನದಿಗಳಿವೆ. ನೆಲ ಬಹುತೇಕ ಮೆಕ್ಕಲು ಮಣ್ಣಿನಿಂದಲೂ ಜಂಬುಮಣ್ಣಿನಿಂದಲೂ ಆವೃತವಾದ್ದು. ಕಡಲಕರೆಗೆ 30 ಮೈ. ದೂರದಲ್ಲಿರುವ ಮರಳುಗಲ್ಲಿನ ಗುಡ್ಡಗಳ ಮುಂದೆ 3,688'

ಎತ್ತರದ ಕಕೌಲಿಯ ಬೆಟ್ಟಗಳಿವೆ. ಮೆಲ್ಲಕೋರಿ, ಕಾಂಕೌರಿ, ರೀಯೊ ಕಪಾಟ್ಚೆಜ್, ರೀಯೊ ನೂನೆಜ್, ರೀಯೊ ಕಾಂಪಿನಿ ಅಥವಾ ಕಾಗಾನ್ ಇವು ಇಲ್ಲಿ ಹರಿಯುವ ನದಿಗಳು. 2 ಮಧ್ಯ ಗಿನಿ ಎತ್ತರ ಪ್ರದೇಶ. ಇಲ್ಲಿರುವ ಫೂಟ ಜ್ಯಾಲಾನ್ ಗುಡ್ಡಗಾಡಿನ ಸರಾಸರಿ ಎತ್ತರ 3,000' ಇದರುತ್ತರಕ್ಕೆ ಇರುವ ಲೌರ ಶಿಖರ 4,970' ಎತ್ತರವಾಗಿದೆ. ಗ್ಯಾಂಬಿಯ ನದಿ ಉಗಮಿಸುವುದು ಇದರ ಬಳಿಯಲ್ಲೆ. ಪಶ್ಚಿಮದ ಕಡೆಯ ನೆಲ ಸ್ವಲ್ಪ ತಗ್ಗು. ಇಲ್ಲಿ ಕಾಗಾನ್, ಟಾಮಿನೆ ಮತ್ತು ಫಟಾಲಾ ನದಿಗಳು ಹರಿಯುತ್ತವೆ. 3




ಈಶಾನ್ಯ ಭಾಗ ಹುಲ್ಲು ತುಂಬಿದ ಮೈದಾನ. ಅಲ್ಲಲ್ಲಿ ಕುಳ್ಳಾದ ಮರಗಳಿವೆ. ಟಿಂಕಿಸ್ಸೊ ನದಿ ಇದರ ಮೂಲಕ ಹರಿದು ಮುಂದೆ ನೈಜರ್ ನದಿಯನ್ನು ಸೇರುತ್ತದೆ. 4 ಗಿನಿಯ ದಕ್ಷಿಣ ಭಾಗ ಪ್ರಸ್ಥಭೂಮಿ ಪ್ರದೇಶ. ಬೆಣಚುಕಲ್ಲು ಮತ್ತು ಕಾಚ ಶಿಲೆಗಳ ಗುಡ್ಡಗಳಿಂದ ಕೂಡಿದ ಈ ಪ್ರದೇಶದ ಎತ್ತರ ಶಿಖರ ನಿಂಬ (6,069).

**ವಾಯುಗುಣ :** ಗಿನಿ ಗಣರಾಜ್ಯ ಉಷ್ಣವಲಯದಲ್ಲಿದೆ. ವರ್ಷದಲ್ಲಿ ಆರು ತಿಂಗಳು (ಜೂನ್–ಡಿಸೆಂಬರ್) ಮಳೆಗಾಲ. ಉಳಿದ ಆರು ತಿಂಗಳು ಶುಷ್ಕ ಹವೆ. ಕರಾವಳಿ ಪ್ರದೇಶದಲ್ಲಿ ಉಷ್ಣತೆಯೂ ಮಳೆಯೂ ಹೆಚ್ಚು. ಉಷ್ಣತೆ ಒಣಹವೆಯ ಕಾಲದಲ್ಲಿ $62^0$ ಫ್ಯಾ. ನಿಂದ ಮಳೆಗಾಲದಲ್ಲಿ $80^0$ ಫ್ಯಾ.ವರೆಗೆ ವ್ಯತ್ಯಾಸವಾಗುತ್ತದೆ. ಎತ್ತರವಾದ ಒಳನಾಡಿನಲ್ಲಿ ಮಳೆ ಕಡಿಮೆ. ಉಷ್ಣತೆಯೂ ಕಡಿಮೆ. ಈಶಾನ್ಯದಲ್ಲಿ ಉಷ್ಣತೆಯ ಅಂತರ ಹೆಚ್ಚು ($64^0$ ಫ್ಯಾ.–$104^0$ ಫ್ಯಾ.); ಮಳೆ ಕಡಿಮೆ

**ಸಸ್ಯಪ್ರಾಣಿ ಜೀವನ :** ಕರಾವಳಿಯಲ್ಲಿ ತಾಳೆ ಮರಗಳು ವಿಶೇಷ. ಮಳೆ ಕಡಿಮೆಯಿರುವಲ್ಲಿ ಹುಲ್ಲು ಹೆಚ್ಚಾಗಿ ಬೆಳೆಯುತ್ತದೆ. ಜಿಂಕೆ, ಮೊಲ, ಆನೆ, ಸಿಂಹ, ಕಾಡುಕೋಣ, ಮೊಸಳೆ, ಹಾಗೂ ನಾನಾಜಾತಿಯ ಹಾವುಗಳು ಇಲ್ಲಿವೆ.

**ಕೃಷಿ, ಕೈಗಾರಿಕೆ, ಅಭಿವೃದ್ಧಿ :** ಗಿನಿಯ ಶೇ.95 ಜನಕ್ಕೆ ಕೃಷಿ ಮುಖ್ಯ ಕಸಬು. ಬಾಳೆಹಣ್ಣು, ಎಣ್ಣೆ ತೆಂಗು, ಅನಾನಾಸ್, ಕಾಫಿ ಮುಖ್ಯ ನಿರ್ಯಾತ ಬೆಳೆಗಳು. ಕಬ್ಬಿಣ ಅದಿರು, ವಜ್ರ, ಬಾಕ್ಸೈಟ್ ಇವನ್ನು ಗಣಿಗಳಿಂದ ತೆಗೆದು ರಫ್ತು ಮಾಡುತ್ತಾರೆ. ಕ್ಯಾಲ್ಸಿಯಂ ಕಾರ್ಬೈಡ್ ನಿಕ್ಷೇಪಗಳು ಇಲ್ಲಿ ಹೇರಳವಾಗಿವೆ. ಹೊಗೆಸೊಪ್ಪು, ಕ್ವಿನೈನ್, ಚಹ ರಬ್ಬರ್ ಇವೂ ಬೆಳೆಯುತ್ತವೆ. ಬತ್ತ ಮಿಲೆಟ್‌ಗಳೂ ಮುಖ್ಯ ಬೆಳೆಗಳು. ಈಶಾನ್ಯ ಗಿನಿಯಲ್ಲಿ ದನಗಳನ್ನು ಸಾಕಿ ರಫ್ತು ಮಾಡುತ್ತಾರೆ. ಮೀನು, ಚರ್ಮ ಇನ್ನೆರಡು ಮುಖ್ಯ ರಫ್ತು ವಸ್ತುಗಳು, ಜವಳಿ, ಪೆಟ್ರೋಲಿಯಂ ಉತ್ಪನ್ನ, ಸಿಮೆಂಟ್ ಇವು ಮುಖ್ಯ ಆಮದುಗಳು.

ಗಿನಿಯ ರಾಜಧಾನಿ ಕಾನಕ್ರಿ , ಕಂಕನ್, ಕಿಂಡಿಯ ಇನ್ನೆರಡು ದೊಡ್ಡ ನಗರಗಳು. ಕಾನಕಿ ಗಿನಿ ಗಣರಾಜ್ಯದ ದೊಡ್ಡ ಬಂದರು. ವಿಮಾನ ನಿಲ್ದಾಣ. ಅಲ್ಲಿಂದ ಕಂಕನ್‌ಗೆ 657.6 ಕಿಮೀ ಉದ್ದದ ರೈಲು ಮಾರ್ಗವಿದೆ. ಗಿನಿಯಲ್ಲಿ ಸುಮಾರು 16000 ಕಿಮೀ ಉದ್ದದ ರಸ್ತೆಗಳಿವೆ. ಕಾನಕ್ರಿಯಿಂದ ಮಾಲಿಯ ರಾಜಧಾನಿಯಾದ ಬ್ಯಾಮ್ಯಾಕೋಗೆ ಸಾಗುವ ರಸ್ತೆಯ ಉದ್ದ 928 ಕಿಮೀ ಸೆನಿಗಾಲ್‌ನ ರಾಜಧಾನಿಯಾದ ಡಾಕಾರ್ ಮತ್ತು ಐವರಿ ಕೋಸ್ಟಿನ ರಾಜಧಾನಿ ಆಬಿಜಾನ್ ನಡುವಣ ರಸ್ತೆ ಗಿನಿಯ ಮೂಲಕ ಹಾದುಹೋಗುತ್ತದೆ.

ಗಿನಿಯ ಅಧಿಕೃತ ಭಾಷೆಗಳು ಫ್ರೆಂಚ್ ಮತ್ತು ಎಂಟು ರಾಷ್ಟ್ರೀಯ ಭಾಷೆಗಳಲ್ಲಿ ಒಂದು ಸೌಸೌ ಅಥವಾ ಮಾನಿಕವನ್ನು ಅಧಿಕೃತ ಭಾಷೆಯಾಗಿ ಮಾಡಬೇಕೆಂಬ ಉದ್ದೇಶವಿದೆ. ಇಲ್ಲಿಯ ಜನರಲ್ಲಿ ಬಹು ಮಂದಿ ಮುಸ್ಲಿಮರು.

ಗಿನಿಯಲ್ಲಿ ಶಿಕ್ಷಣ ಉಚಿತ. ಪ್ರಾಥಮಿಕ, ಉಚ್ಚ ಪ್ರಾಥಮಿಕ, ದ್ವಿತೀಯಕ ಎಂಬ ಮೂರು ಹಂತಗಳಲ್ಲಿ ಶಿಕ್ಷಣ ನೀಡಲಾಗುತ್ತವೆ. 1968 ರಿಂದ ಗಿನಿಯ ಎಂಟು ರಾಷ್ಟ್ರೀಯ ಭಾಷೆಗಳನ್ನೂ ಕಲಿಸಲಾಗುತ್ತಿದೆ. ಸದ್ಯಕ್ಕೆ ಫ್ರೆಂಚ್ ಭಾಷೆ ಹೆಚ್ಚು ಪ್ರಚಾರದಲ್ಲಿದೆ.

1970ರಲ್ಲಿ ಪೋರ್ಚುಗೀಸ್ ದಾಳಿಯ ಸ್ಮಾರಕ

ಎಂಟು ರಾಷ್ಟ್ರೀಯ ಭಾಷೆಗಳಲ್ಲಿ ಒಂದಲ್ಲ ಒಂದು ಭಾಷೆಯನ್ನು ಪ್ರತಿಯೊಬ್ಬರೂ ಕಲಿಯುವಂತೆ ಮಾಡಿ ಫ್ರೆಂಚ್ ಭಾಷೆಯನ್ನು ಉಚ್ಚಾಟಿಸಲು 1968ರಲ್ಲಿ ದೇಶದಲ್ಲಿ ಸಾಂಸ್ಕೃತಿಕ ಕ್ರಾಂತಿಯೊಂದು ಆರಂಭವಾಯಿತು. ದೇಶದ ಅಭಿವೃದ್ಧಿಗಾಗಿ 1964ರಲ್ಲಿ ಏಳು ವರ್ಷಗಳ ಆರ್ಥಿಕಾಭಿವೃದ್ಧಿ ಯೋಜನೆ ಜಾರಿಗೆಬಂತು. ಸರ್ಕಾರ ರಾಷ್ಟ್ರೀಕರಣ ನೀತಿ ಅನುಸರಿಸುತ್ತಿದೆ. ವ್ಯಾಪಾರ ಕೈಗಾರಿಕೆಗಳನ್ನು ಸರ್ಕಾರ ನಿಯಂತ್ರಿಸುವ ಕ್ರಮ ಕೈಗೊಂಡಿದೆ.

ಗಿನಿಯ ನಿಸರ್ಗ ಸೌಂದರ್ಯ ಅನೇಕ ಪ್ರವಾಸಿಗಳನ್ನು ಆಕರ್ಷಿಸಿದೆ. ಫೂಟ ಜ್ಯಾಲಾನ್ ಬೆಟ್ಟಪ್ರದೇಶ ತುಂಬ ಸುಂದರವಾಗಿದೆ. ಗಿನಿಯಲ್ಲಿ ರಾಷ್ಟ್ರೀಯ ರಂಗಮಂದಿರವಿದೆ. ಆಫ್ರಿಕನ್ ನೃತ್ಯಕ್ಕೆ ವಿಶೇಷ ಪ್ರೋತ್ಸಾಹವುಂಟು. ಗಿನಿಯ ರಾಷ್ಟ್ರೀಯ ವಾದ್ಯಮೇಳಕ್ಕೆ ಸಂಪೂರ್ಣ ಆಫ್ರಿಕನ್ ವಾದ್ಯಗಳನ್ನು ಅಳವಡಿಸಲಾಗಿದೆ. ಫುಟ್‌ಬಾಲ್ ಗಿನಿಯ ಅತ್ಯಂತ ಜನಪ್ರಿಯ ಆಟ. ಗಿನಿಯನ್ ಫ್ರಾಂಕ್ ಇಲ್ಲಿಯ ನಾಣ್ಯ.

ಗಿನಿ ಅಧ್ಯಕ್ಷಪ್ರರೂಪಿ ಗಣರಾಜ್ಯ. ಅಧ್ಯಕ್ಷನನ್ನು ಅಲ್ಲಿಯ ರಾಷ್ಟ್ರೀಯ ಸಭೆ ಏಳು ವರ್ಷಗಳಿಗೊಮ್ಮೆ ಆಯ್ಕೆ ಮಾಡುತ್ತವೆ. ರಾಷ್ಟ್ರೀಯ ಸಭೆಯ ಸದಸ್ಯರ ಸಂಖ್ಯೆ 60. ಇವರ ಚುನಾವಣೆ ನಡೆಯುವುದು ಐದು ವರ್ಷಗಳಿಗೊಮ್ಮೆ. ಅಧ್ಯಕ್ಷ ಮಂತ್ರಿಸಂಪುಟದ ಮೂಲಕ ಆಡಳಿತ ನಡೆಸುತ್ತಾನೆ. ದೇಶವನ್ನು ಆಡಳಿತ ಸೌಕರ್ಯಕ್ಕಾಗಿ 26 ವಿಭಾಗಗಳಾಗಿ ವಿಂಗಡಿಸಲಾಗಿದೆ. (ಎಂ.ಎಸ್.ಎಚ್‌ಬಿ.;ಎಸ್.ಎನ್‌ಎಆರ್‌ಇ.)

**ಇತಿಹಾಸ :** ಈ ಪ್ರದೇಶದ ಅನೇಕ ಸ್ಥಳಗಳಲ್ಲಿ ಶಿರೋಕರಣಗಳು ಸಿಕ್ಕಿರುವುದರಿಂದ ಪ್ರಾಗಿತಿಹಾಸಕಾಲದಲ್ಲಿ ಜನರು ಇಲ್ಲಿ ವಾಸಿಸುತ್ತಿದ್ದರೆಂದು ತಿಳಿಯಬಹುದು. ಸುಮಾರು ಪ್ರ.ಶ.ಪೂ. 2000ದಿಂದ ಸಹರ ಪ್ರದೇಶದ ಜನರು ಇಲ್ಲಿಗೆ ವಲಸೆ ಬಂದಿರಬಹುದು. ಮೊದಲ ನಿವಾಸಿಗಳು ಬೇಟೆಯಾಡುವುದು ಮತ್ತು ಅರಣ್ಯ ಫಲಗಳನ್ನು ಶೇಖರಿಸುತ್ತಿದ್ದರು. ಪ್ರ.ಶ.ಪೂ. 1000ರಲ್ಲಿ ಜನರು ಪಶುಪಾಲನೆ ಮತ್ತು ವ್ಯವಸಾಯವನ್ನು ಪ್ರಾರಂಭಿಸಿದರು.

ಗಿನಿಯ ಕೆಲವು ಭಾಗ ಪ್ರ.ಶ. 1000 ದಿಂದ 1500ರವರೆಗೆ ಅನೇಕ ಸಾಮ್ರಾಜ್ಯಗಳ ವಶದಲ್ಲಿತ್ತು. ಗಿನಿಯಲ್ಲಿ ಮೇಲಣ ಪ್ರದೇಶ ಚಿನ್ನ ದೊರಕುವುದು 1000ರಲ್ಲಿ ಗಿನಿಯು ಘಾನ ಸಾಮ್ರಾಜ್ಯದ ಪ್ರಭಾವಕ್ಕೆ ಒಳಪಟ್ಟಿತ್ತು. ಈ ಪ್ರದೇಶದಲ್ಲಿ 1200ರಿಂದ 1500ರವರೆಗೆ ಮಲಿಂಕೆ ಜನರಿಂದ ಸ್ಥಾಪಿತವಾದ ಮಾಲಿ ಸಾಮ್ರಾಜ್ಯ ಬಹಳ ಬಲಿಷ್ಠವಾಗಿತ್ತು. ಇಲ್ಲಿಗೆ 1300 ರಿಂದ 1700ರ ವರೆಗೆ ಉತ್ತರದಿಂದ ಫುಲನಿಗಳು ವಲಸೆ ಬಂದರು. ಇವರಲ್ಲಿ ಮುಸ್ಲಿಂ ಫುಲನಿ ಅಧಿಕ ಸಂಖ್ಯೆಯಲ್ಲಿದ್ದರು. 1700ರ ಮೊದಲಲ್ಲಿ ಮುಸ್ಲಿಂ ಫುಲನಿ ಮತ್ತು ಮಲಿಂಕೆ ಮತ್ತು ಮುಸ್ಲಿಂ ಅಲ್ಲದ ಫುಲನಿ ಮತ್ತು ಮಲಿಂಕೆ ಜನರ ನಡುವೆ ಧರ್ಮಯುದ್ಧ ನಡೆದು ಮುಸ್ಲಿಂ ಫುಲನಿ ಮಲಿಂಕೆ ಜನರು ಫೌಂಟ್ ಡ್ಜಲ್ಲೊನ್ ಮೇಲೆ ಹಿಡಿತ ಸಾಧಿಸಿದರು.

ಗಿನಿಯ ತೀರವನ್ನು ಮೊದಲು ಕಂಡ ಐರೋಪ್ಯರು ಪೋರ್ಚುಗೀಸರು (15ನೆಯ ಶತಮಾನ). ಫ್ರೆಂಚ್ ಪರಿಶೋಧಕ ರೇನೇ ಎ. ಕೈಲಿ 1827ರಲ್ಲಿ ಈ ದೇಶದಲ್ಲಿ ಸಂಚರಿಸಿದ. 1838ರಿಂದ ಅನೇಕ ಫ್ರೆಂಚ್ ನಾವಿಕರು ಇದರ ಕರಾವಳಿಯ ಸರ್ವೇಕ್ಷಣ ನಡೆಸಿ ಕ್ರಮವಾಗಿ ಇದನ್ನು ಆಕ್ರಮಿಸಿಕೊಂಡರು. ಫ್ಯೂಟ ಜ್ಯಾಲಾನ್‌ನ ಅಮೀರ 1881ರಲ್ಲಿ ಫ್ರೆಂಚ್ ರಕ್ಷಣೆಗೆ ಒಳಪಟ್ಟ. 1890ರಲ್ಲಿ ಗಿನಿ ಪ್ರದೇಶವನ್ನು ಸೆನಿಗಾಲ್‌ನಿಂದ

ಪ್ರತ್ಯೇಕಿಸಲಾಯಿತು. ಇದಕ್ಕೆ ಫ್ರೆಂಚ್ ಗಿನಿ ಎಂಬ ಹೆಸರು ಬಂದದ್ದು ಅನಂತರ. 1895ರಲ್ಲಿ ಇದು ಫ್ರೆಂಚ್ ಪಶ್ಚಿಮ ಆಫ್ರಿಕ ಒಕ್ಕೂಟದ ಭಾಗವಾಯಿತು. ಕ್ರಮೇಣ ಅಕ್ಕಪಕ್ಕದ ಪ್ರದೇಶಗಳನ್ನು ಸೇರಿಸಿ ಇದನ್ನು ವಿಸ್ತರಿಸಲಾಯಿತು. (ಎನ್.ಎಸ್.)

ಮಲಿಂಕೆಯ ಬಲಿಷ್ಠನಾಯಕ ಸಮೊರಿತೌರಿ (ಟೌರೆ) ಫ್ರೆಂಚರ ಆಳಿಕೆಯನ್ನು ವಿರೋಧಿಸಿದ. ಆದರೆ ಹೋರಾಟದಲ್ಲಿ ಸೋತು 1898ರಲ್ಲಿ ಸೆರೆಯಾದ. ಗಿನಿಯನ್ನು ಫ್ರೆಂಚ್ ಸಾಗರಾಂತರ ಪ್ರದೇಶವೆಂದು ಕರೆದು ಅದರ ಪ್ರಜೆಗಳನ್ನು ಫ್ರಾನ್ಸಿನ ಪ್ರಜೆಗಳೆಂದು ಪರಿಗಣಿಸಲಾದ್ದು 1946ರಲ್ಲಿ. 2ನೆಯ ಮಹಾಯುದ್ಧ ಮುಗಿದ ಅನಂತರ ಗಿನಿಯಲ್ಲಿ ರಾಜಕೀಯ ಪಕ್ಷಗಳು ಮತ್ತು ಕಾರ್ಮಿಕ ಸಂಘಗಳು ಜಾಗ್ರತವಾದುವು. ಗಿನಿ ಪ್ರಜಾಪ್ರಭುತ್ವ ಪಕ್ಷ (ಪಿಡಿಜಿ)ವು 1947ರಲ್ಲಿ ಪ್ರಾರಂಭವಾಯಿತು. ಸಿಕೌತೌರೆ 1952ರಲ್ಲಿ ಆ ಪಕ್ಷದ ನಾಯಕನಾದ. ಗಿನಿಯಲ್ಲಿ 1957ರಲ್ಲಿ ಮತದಾನ ನಡೆದು 1958ರ ಸೆಪ್ಟೆಂಬರ್ 28ರಂದು ಫ್ರಾನ್ಸ್‌ನಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಿತು. 1958ರ ಅಕ್ಟೋಬರ್ 2 ರಂದು ತೌರೆ ಗಿನಿಯ ಮೊದಲ ಅಧ್ಯಕ್ಷನಾದ. ನವೆಂಬರ್ 12ರಂದು ಸಂವಿಧಾನ ಸರ್ಕಾರ ಪ್ರಾರಂಭವಾಯಿತು. ಆಗ ಪಿ.ಡಿ.ಜಿ ಒಂದೇ ರಾಜಕೀಯ ಪಕ್ಷವಾಯಿತು.

ಗಿನಿಯ ಸಂಪೂರ್ಣ ವಾಣಿಜ್ಯ, ಕೈಗಾರಿಕೆಗಳ ಮೇಲೆ ಹಿಡಿತ ಸಾಧಿಸಿ ಸಮಾಜವಾದಿ ರಾಷ್ಟ್ರವಾಗಿ ಮಾಡಲು ಅಧ್ಯಕ್ಷ ಪ್ರಯತ್ನ ಪಟ್ಟನು. ಆಫ್ರಿಕ ಖಂಡದಲ್ಲಿ ಸ್ವಾತಂತ್ರ್ಯ ಪಡೆದ ದೇಶಗಳ ಮತ್ತು ಸಮಾಜವಾದಿ ರಾಷ್ಟ್ರಗಳೊಡನೆ ಹೊಂದಾಣಿಕೆಯಿಂದ ಒಗ್ಗಟ್ಟಾಗಿ ಇರಲು ಪ್ರಯತ್ನಪಟ್ಟನು. ಆದರೆ ಅನೇಕ ಸಮಸ್ಯೆಗಳು ಎದುರಿಸಬೇಕಾಯಿತು. ನೈಸರ್ಗಿಕ ಸಂಪನ್ಮೂಲಗಳಿಂದ ರಾಷ್ಟ್ರವನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರ ವಿಫಲವಾಯಿತು. ಅಧಿಕ ಜನರು ಬಡವರಾಗಿಯೇ ಉಳಿದರು. 1960ರ ದಶಕ ಮತ್ತು 1970ರ ದಶಕದ ಮೊದಲಲ್ಲಿ ಅಧ್ಯಕ್ಷನ ಕಾರ್ಯ ನೀತಿಗೆ ವಿರೋಧ ವ್ಯಕ್ತವಾಯಿತು. ಅಧ್ಯಕ್ಷ ತೌರೆ ತನ್ನ ಸರ್ಕಾರದ ವಿರೋಧಿಗಳನ್ನು ಮತ್ತು ವಿರೋಧಿಸುವ ಪ್ರಜೆಗಳನ್ನು ಕಾರಣವಿಲ್ಲದೆ ಬಂಧಿಸಿದನು.

ಅಧ್ಯಕ್ಷ ತೌರೆ 1984ರ ಮಾರ್ಚ್ 26ರಂದು ನಿಧನನಾದ. ಏಪ್ರಿಲ್ ಮೊದಲವಾರದಲ್ಲಿ ಸೈನ್ಯದ ನಾಯಕರು ಸರ್ಕಾರವನ್ನು ಹಠೋಟಿಗೆ ತೆಗೆದುಕೊಂಡು ಸಂವಿಧಾನವನ್ನು ತಡೆಹಿಡಿದು ಪಿಡಿಜಿ ಪಕ್ಷವನ್ನು ವಿಸರ್ಜಿಸಿದರು. ಸೈನ್ಯ ಮಂಡಲಿಯ ನಾಯಕ ಕರ್ನಲ್ ಲಂಸನ ಕಾಂಟೆ ಅಧ್ಯಕ್ಷನಾದ. ಇವನ ಸರ್ಕಾರ ಸಮಾಜವಾದವನ್ನು ನಿಷೇಧಿಸಿ ಮುಕ್ತ ವ್ಯಾಪಾರನಿಯಮಗಳನ್ನು ಪ್ರಾರಂಭಿಸಿ, ಫ್ರಾನ್ಸ್ ಮತ್ತು ಇತರ ದೇಶಗಳೊಡನೆ ಉತ್ತಮ ಸಂಬಂಧ ಪ್ರಾರಂಭಿಸಿತು 1990ರಲ್ಲಿ ಜನರು ಅನೇಕ ಪಕ್ಷಗಳ ನಾಗರಿಕ ಆಳಿಕೆಯ ಸಂವಿಧಾನವನ್ನು ಒಪ್ಪಿಕೊಂಡರು. 1993ರಲ್ಲಿ ಇಲ್ಲಿಯ ಮತದಾರರು ಕಾಂಟೆಯನ್ನು ಅಧ್ಯಕ್ಷನಾಗಿ ಚುನಾಯಿಸಿದರು. 1995ರಲ್ಲಿ ಕಾಂಟೆಯ ಪಾರ್ಟಿ ಆಫ್ ಯೂನಿಟಿ ಪಕ್ಷ ಬಹುಮತ ಪಡೆಯಿತು. 1998ರಲ್ಲಿ ಕಾಂಟೆಯನ್ನು ಮತ್ತೆ ಅಧ್ಯಕ್ಷನಾಗಿ ಚುನಾಯಿಸಿದರು. *

**ಗಿನಿಬಿಸ್ಸಾವು :** ಪಶ್ಚಿಮ ಆಫ್ರಿಕ ತೀರದಲ್ಲಿರುವ ಒಂದು ದೇಶ. 1974ಕ್ಕೆ ಮೊದಲು ಇದು ಪೋರ್ಚುಗೀಸ್ ಸಾಗರೋತ್ತರ ಪ್ರಾಂತವಾಗಿತ್ತು. ಉ.ಅ. 10°52'–12°14' ಮತ್ತು ಪ.ರೇ. 13°38'–16°43' ನಡುವೆ ಇದೆ. ಉತ್ತರದಲ್ಲಿ ಸೆನೆಗಲ್, ಪೂರ್ವ ಹಾಗೂ ದಕ್ಷಿಣದಲ್ಲಿ ಗಿನಿ ಗಣರಾಜ್ಯ ಮತ್ತು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಇವೆ. ಇದರ ಸಮೀಪದಲ್ಲಿರುವ ಬಿಜಾಗೋಸ್ (ಬಿಸ್ಸಾಗೋಸ್) ದ್ವೀಪಸ್ತೋಮ ಮತ್ತು ಇತರ ದ್ವೀಪಗಳೂ ಇದರ ಆಡಳಿತಕ್ಕೆ ಒಳಪಟ್ಟಿವೆ. ವಿಸ್ತೀರ್ಣ 36,125 ಚ.ಕಿಮೀ ಜನಸಂಖ್ಯೆ 15,96,677 (2011) ರಾಜಧಾನಿ ಬಿಸ್ಸಾವು.

**ಭೌತಲಕ್ಷಣ:** ಈ ಪ್ರದೇಶ ಉತ್ತರ–ದಕ್ಷಿಣ 193 ಕಿಮೀ ಪೂರ್ವ–ಪಶ್ಚಿಮ 322 ಕಿಮೀ ಮತ್ತು ತೀರಪ್ರದೇಶ 398 ಕಿಮೀ ಇದೆ. ಬಹುಭಾಗ ತಗ್ಗಿನಲ್ಲಿರುವ ಜೌಗಿನಿಂದ ಕೂಡಿದೆ. ಅತ್ಯುನ್ನತ ಪ್ರದೇಶ ಆಗ್ನೇಯ ಭಾಗದಲ್ಲಿ ಸು. 244 ಮೀ ಎತ್ತರದಲ್ಲಿದೆ. ಇದಕ್ಕೆ ಸೇರಿದ ದ್ವೀಪಗಳಲ್ಲಿ ಪ್ರಮುಖವಾದವು ಕಯೋ, ಪೆಸಿಕ್ಸ್, ಬಿಸ್ಸಾವು, ಏರಿಯೀಸ್, ಬೋಲಾಮ, ಕೋಮಾ ಮತ್ತು ಮೆಲೊ. ಹಿಂದೆ ಪೋರ್ಚುಗೀಸರು ಒಳಭಾಗಕ್ಕೆ ಹೋಗುವ ಮೊದಲು ತಂಗುದಾಣವಾಗಿ ಈ ದ್ವೀಪಗಳನ್ನು ಉಪಯೋಗಿಸುತ್ತಿದ್ದರು. 1890–1914ರ ವರೆಗೆ ಬೊಲಾಮ ದ್ವೀಪದಲ್ಲಿನ ಬೊಲಾಮ ಇದರ ರಾಜಧಾನಿಯಾಗಿತ್ತು. ಇಲ್ಲಿಗೆ ದೂರದಲ್ಲಿರುವ ವಿಷಗಾಸ್ ದ್ವೀಪಗಳು ದಟ್ಟವಾದ ಕಾಡುಗಳಿಂದ ಕೂಡಿದ್ದರಿಂದ ಅನೇಕ ವರ್ಷಗಳ ಕಾಲ ಆಫ್ರಿಕನ್ ಕಡಲ್ಗಳ್ಳರ ನೆಲೆಗಳಾಗಿದ್ದವು. ಬೈಬಾಕ್, ರೂಬೇನ್, ಅರಂಗೋಜಿನೊ, ರೋಕ್ಸಾ, ಗಾಲಿನಾಸ್, ಮೈಯೋ, ಪೊಲಿಲಾವೊ, ಉನೋ, ಅರಾಂಗೋ ಮತ್ತು ಉರಾಕೇನ್. ಇವು ವಿಷಗಾಸ್ ದ್ವೀಪಸ್ತೋಮದ ದ್ವೀಪಗಳಲ್ಲಿ ಪ್ರಮುಖವಾದವು ಈ ದೇಶದ ನದಿಗಳಲ್ಲಿ ಚಪ್ಪಟೆ ತಳದ ದೋಣಿಗಳ ಸಂಚಾರ ಸಾಧ್ಯವಿದೆ. ಪ್ರಮುಖ ನದಿಗಳು ಸೆನೆಗಲ್, ಗೇಬಾ, ಕಾಜೆವು, ಮನಸೋವ, ಕೋರುಬಲ್, ರೀಯೋಗ್ರ್ಯಾಂಡ್ ಡಿ ಬುಬಾ ಮತ್ತು ಕ್ಯಾಸೈನ್.

**ವಾಯುಗುಣ, ಸಸ್ಯ, ಪ್ರಾಣಿಸಂಪತ್ತು:** ಇಲ್ಲಿಯ ವಾಯುಗುಣ ಸೆಕೆ ಮತ್ತು ತೇವದಿಂದ ಕೂಡಿದ್ದು ಜೂನ್–ನವೆಂಬರ್‌ವರೆಗೆ ಮಳೆಗಾಲ. ಡಿಸೆಂಬರ್–ಮೇ ವರೆಗೆ ಒಣಹವೆ ಇರುತ್ತದೆ. ತೀರಪ್ರದೇಶದಲ್ಲಿ ಮಾನ್‌ಸೂನ್ ವಾಯುಗುಣವಿರುತ್ತದೆ. ಇಲ್ಲಿಯ ಮಳೆ ಹಾಗೂ ಉಷ್ಣತೆಯಲ್ಲಿ ತೀವ್ರ ಏರುಪೇರುಗಳಿರುತ್ತವೆ. ಡಿಸೆಂಬರ್–ಮೇ ತಿಂಗಳುಗಳಲ್ಲಿ ಸರಾಸರಿ ಉಷ್ಣತೆ 23° ಸೆ (74° ಫ್ಯಾ), ಜೂನ್–ನವೆಂಬರ್ ವರೆಗೆ ಸರಾಸರಿ ಉಷ್ಣತೆ 28° ಸೆ (83° ಫ್ಯಾ). ತೀರಪ್ರದೇಶದಲ್ಲಿ ವರ್ಷಕ್ಕೆ 241 ಸೆಂಮೀ ಮತ್ತು ಒಳನಾಡಿನಲ್ಲಿ 140 ಸೆಂಮೀ ಮಳೆಯಾಗುತ್ತದೆ. ಮೂರು ಸಸ್ಯವಲಯಗಳಿವೆ ತೀರದ ಜವುಗು ನೆಲ ಮತ್ತು ಬಯಲು ನೆಲ ಒಂದು ವಲಯ. ಇಲ್ಲಿ ಗುಲ್ಮ ಮತ್ತು ತಾಳೆ ಮರಗಳು ಬೆಳೆಯುತ್ತವೆ. ಕೆಲವು ಕಡೆ ಬತ್ತವನ್ನು ಬೆಳೆಯುತ್ತಾರೆ. ಒಳಭಾಗದ ಬಯಲು ಎರಡನೆಯ ವಲಯ. ಇದು ದಟ್ಟವಾದ ಕಾಡುಗಳಿಂದ ಕೂಡಿದೆ. ಮೂರನೆಯದು ಸವಾನ ಹುಲ್ಲುಗಾವಲು ವಲಯ. ಇಲ್ಲಿನ ಕಾಡುಗಳಲ್ಲಿ ಪೆಲಿಕನ್, ಫ್ಲೆಮಿಂಗೋ, ಮೊಸಳೆ, ಹಾವು, ಕಾಡೆಮ್ಮೆ, ಗೆಜ಼ಲ್, ಜಿಂಕೆ, ಚಿರತೆ ಮತ್ತು ಹಲವು ಬಗೆಯ ಕಡಲ ಹಕ್ಕಿಗಳಿವೆ. ಸಿಂಹಗಳು ಅಪರೂಪವಾಗಿ ಕಾಣಸಿಗುತ್ತವೆ. ನದಿಯ ಅಳಿವೆಗಳಲ್ಲಿ ಶಾರ್ಕ್‌ಗಳಿವೆ.



ಗ್ರಾಮದ ಒಂದು ನೋಟ

**ಆರ್ಥಿಕತೆ:** ಈ ದೇಶದ ಆರ್ಥಿಕತೆ ಕೃಷಿ ಮತ್ತು ಪಶು ಸಂಪತ್ತನ್ನು ಅವಲಂಬಿಸಿದೆ. ಬತ್ತ ಇಲ್ಲಿಯ ಮುಖ್ಯ ಆಹಾರ. ದ್ವೀಪಗಳಲ್ಲಿ ಹಾಗೂ ತೀರಪ್ರದೇಶದಲ್ಲಿ ಬತ್ತದ ಜೊತೆಗೆ ತಾಳೆಯ ಎಣ್ಣೆಯನ್ನೂ ಉತ್ಪಾದಿಸಲಾಗುತ್ತದೆ. ಫರೀಮ್ ಮತ್ತು ನೋವಾಲಾ ಮೆಗೊಗಳ ಸುತ್ತ ನೆಲಗಡಲೆ ಬೆಳೆಯುತ್ತಾರೆ. ಇದು ಪ್ರಮುಖ ಆರ್ಥಿಕ ಬೆಳೆ. ಇದರ ರಫ್ತು ದೇಶದ ಒಟ್ಟು ರಫ್ತಿನ ಶೇ. 60ರಷ್ಟಿದೆ. ಇಲ್ಲಿಂದ ರಫ್ತಾಗುವ ಕೆಲವು ಸರಕುಗಳು ಮರ, ತೆಂಗು, ಜೇನುಮೇಣ ಮತ್ತು ಚರ್ಮ.

**ಕೈಗಾರಿಕೆ:** ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದಿದೆ. ಬಿಸ್ಸಾವಿನಲ್ಲಿ ಕೆಲವು ತೈಲ ಸಂಸ್ಕರಣ ಕೇಂದ್ರಗಳಿವೆ. ಇಲ್ಲಿ ತೈಲ ಹಾಗೂ ಬಾಕ್ಸೈಟ್, ತಾಮ್ರ, ರಂಜಕ ಮತ್ತು ಸತುವು ಇವುಗಳ ನಿಕ್ಷೇಪ ಹೆಚ್ಚಾಗಿದ್ದರೂ ಇದರ ಪರಿಶೋಧನ ಕಾರ್ಯ ಇನ್ನೂ ನಡೆಯಬೇಕಾಗಿದೆ. ಇಲ್ಲಿಯ ಇತರ ಕೆಲವು ಕೈಗಾರಿಕೆಗಳೆಂದರೆ ನೆಲಗಡಲೆ, ಅಕ್ಕಿ, ರಬ್ಬರ್, ಕಬ್ಬು, ಇವುಗಳ ಸಂಸ್ಕರಣ; ಸಾಬೂನು, ಕಾಗದ, ಸೆರಾಮಿಕ್ ಮತ್ತು ಇಟ್ಟಿಗೆ ತಯಾರಿಕೆ. ನೆಲಗಡಲೆ ಹಾಗೂ ಇತರ ಸರಕುಗಳನ್ನು ನದಿಗಳ ಮೇಲೆ ಸಾಗಿಸಲಾಗುತ್ತದೆ. ದೇಶದ ಪ್ರಮುಖ ಹೆದ್ದಾರಿ ಬಿಸ್ಸಾವಿನಿಂದ ಬಾಗಟವರೆಗೆ ಇದೆ. ಆಧುನಿಕ ಬಂದರು ಬಿಸ್ಸಾವಿನಲ್ಲಿದೆ. ಬಿಸ್ಸಾವಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಬಾಗಟ, ನೋವಾ, ಲೊಮೇಗೊ ಪಟ್ಟಣಗಳಲ್ಲಿ ವಿಮಾನ ನಿಲ್ದಾಣಗಳಿವೆ.

ಇಲ್ಲಿ ಅನೇಕ ಬುಡಕಟ್ಟುಗಳಿಗೆ ಸೇರಿದ ಜನರು ನೆಲಸಿದ್ದಾರೆ. ಬಲಾಂಟಿಗಳು ಶೇ. 30ರಷ್ಟಿದ್ದಾರೆ. ಇವರಲ್ಲದೆ ಫುಲಾನಿ (ಶೇ. 20), ಮಂಡ್ಯಾಕೋ (ಶೇ. 14), ಮಾಲಿಂಕೆ (ಶೇ. 12.5), ಪೆಪಲ್ (ಶೇ. 7), ಇತರರು (ಶೇ. 16.5) ಇದ್ದಾರೆ. ಇವರಲ್ಲಿ ಬಲಾಂಟಿಗಳು ವಿಸ್ತರಣಾಕಾಂಕ್ಷಿಗಳಾಗಿದ್ದು ರಾಷ್ಟ್ರೀಯತಾವಾದಿಗಳಾಗಿದ್ದಾರೆ, ಫುಲಾನಿಗಳು, ಮುಸ್ಲಿಮ್ ಸಂಪ್ರದಾಯವಾದಿಗಳು. ಇಲ್ಲಿಯ ಪ್ರಮುಖ ಧರ್ಮ ಇಸ್ಲಾಂ. ಸ್ಥಳೀಯ ಧರ್ಮದವರೂ ಕೆಥೊಲಿಕರೂ ಇದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ತೀವ್ರ ಬದಲಾವಣೆಗಳಾಗುತ್ತಿವೆ. ಇಲ್ಲಿ 7 ರಿಂದ 13 ವರ್ಷದವರಿಗೆ ವಿದ್ಯಾಭ್ಯಾಸ ಕಡ್ಡಾಯ. ಶಾಲೆಗೆ ಬಾಲಕಿಯರಿಗಿಂತ ಬಾಲಕರ ದಾಖಲಾತಿ ಅಧಿಕವಾಗಿದೆ. ಅಲ್ಪ ಸಂಖ್ಯೆಯಷ್ಟು ಮಾತ್ರ ಅನಕ್ಷರಸ್ಥರಿದ್ದಾರೆ. ಅನೇಕ ಶಾಲೆಗಳಿವೆ. ಇಲ್ಲಿ ಅನೇಕ

ಸ್ವಾಯತ್ತಾಧಿಕಾರದ ವಿಶ್ವವಿದ್ಯಾಲಯಗಳಿರುವುದು ವಿಶೇಷ. ಬಿಸ್ಸಾವಿನಲ್ಲಿ ಒಂದು ವಸ್ತು ಸಂಗ್ರಹಾಲಯವೂ ಒಂದು ಗ್ರಂಥಾಲಯವೂ ಇದೆ. (ಕೆ.ಎಸ್.ಎನ್.)

ಇತಿಹಾಸ: ಈ ಪ್ರದೇಶದಲ್ಲಿ ಪ್ರ.ಶ.ಪೂ.1000 ವರ್ಷಗಳಿಗಿಂತ ಹಿಂದೆ ಕಡಲ ತೀರದಲ್ಲಿ ಕಬ್ಬಿಣದ ಉಪಕರಣಗಳನ್ನು ಉಪಯೋಗಿಸುತ್ತಿದ್ದ ರೈತರು ವಾಸಿಸುತ್ತಿದ್ದರು. ಇವರು ಬತ್ತವನ್ನು ಬೆಳೆದು ಅಕ್ಕಿಯನ್ನು ಉಪಯೋಗಿಸುತ್ತಿದ್ದರು. ಇದು ಮಾಲಿ ಸಾಮ್ರಾಜ್ಯದ, ಗಬು ರಾಜ್ಯದ ಭಾಗವಾಗಿತ್ತು. ಪೋರ್ಚುಗೀಸ್ ಅನ್ವೇಷಕರು 1446ರಲ್ಲಿ ಬರುವುದಕ್ಕೆ ಮೊದಲು ಇಲ್ಲಿ ಆಫ್ರಿಕದ ಕರಿಜನರ ಅನೇಕ ಗುಂಪುಗಳು ವಾಸಿಸುತ್ತಿದ್ದವು. ಇದು 1600 ರಿಂದ 1800ರ ವರೆಗೆ ಪೋರ್ಚುಗೀಸರ ಗುಲಾಮರ ವ್ಯಾಪಾರದ ನೆಲೆಯಾಗಿತ್ತು. 1879ರಲ್ಲಿ ಪೋರ್ಚುಗೀಸ್ ಗಿನಿ ಎಂಬ ವಸಾಹತಾಯಿತು. ಇದು 1951ರಲ್ಲಿ ಪೋರ್ಚುಗೀಸ್ ಸಾಗರೋತ್ತರ ಪ್ರಾಂತವಾಯಿತು.



ಸೇನಾದಳದ ಸಮಾರಂಭ

ಆಫ್ರಿಕದಲ್ಲಿ 1950 ಮತ್ತು 1960ರ ದಶಕದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಪ್ರಾರಂಭವಾಯಿತು. 1956ರಲ್ಲಿ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯವಾದಿ ನಾಯಕರು ಆಫ್ರಿಕನ್ ಪಾರ್ಟಿ ಫಾರ್ ಇಂಡಿಪೆಂಡೆನ್ಸ್ ಆಫ್ ಗಿನಿ ಅಂಡ್ ಕೇಪ್‌ವರ್ಡೆ (ಪಿಎಐಜಿಸಿ) ಎಂಬ ಪಕ್ಷವನ್ನು ಸ್ಥಾಪಿಸಿದರು. ಈ ಪಕ್ಷವು ಪೋರ್ಚುಗೀಸ್ ಗಿನಿ ಮತ್ತು ಕೇಪ್‌ವರ್ಡೆ ದ್ವೀಪಸ್ತೋಮದ ಸ್ವಾತಂತ್ರ್ಯಕ್ಕೆ ಹೋರಾಟ ಪ್ರಾರಂಭಿಸಿತು. ಕೇಪ್‌ವರ್ಡೆ ದ್ವೀಪಸ್ತೋಮವು ಗಿನಿ ಬಿಸ್ಸಾವಿನ ವಾಯವ್ಯಕ್ಕೆ 764ಕಿಮೀ ದೂರದಲ್ಲಿದೆ. 1960ರ ಮೊದಲಲ್ಲಿ ಪಕ್ಷವು ಅನೇಕ ರೈತರಿಗೆ ಗೆರಿಲ ಕಾಳಗದ ತರಬೇತಿ ನೀಡಿತು. ಈ ಹೋರಾಟಕ್ಕೆ ಆಫ್ರಿಕದ ಎಡಪಂಥಿಯ ದೇಶಗಳು, ಕ್ಯೂಬ, ಚೀನ ಮತ್ತು ರಷ್ಯ ದೇಶಗಳಿಂದ ಶಸ್ತ್ರಾಸ್ತ್ರಗಳು ಗಿನಿ ಬಿಸ್ಸಾವು ದೇಶದ ನೆರೆಹೊರೆ ದೇಶಗಳ ಮೂಲಕ ಸರಬರಾಜು ಆಗುತ್ತಿತ್ತು. ರಾಷ್ಟ್ರೀಯವಾದಿ ಹೋರಾಟಗಾರರು ಅಧಿಕ ಪ್ರದೇಶವನ್ನು ವಶಪಡಿಸಿಕೊಂಡರು. ಈ ಹೋರಾಟಕ್ಕೆ 1973ರ ಜನವರಿಯಲ್ಲಿ ನಾಯಕ ಅಮಿಲ್ಕಾರ್ ಕಬ್ರಾಲ್‌ನ ಹತ್ಯೆಯಿಂದ ಸ್ವಲ್ಪ ಹಿನ್ನಡೆ ಉಂಟಾಯಿತು. 1973ರ ಸೆಪ್ಟೆಂಬರ್ 24ರಂದು ಸ್ವಾತಂತ್ರ್ಯ ಹೋರಾಟಗಾರರು ಏಕ ಪಕ್ಷವಾಗಿ ಸ್ವಾತಂತ್ರ್ಯವನ್ನು ಘೋಷಿಸಿದರು. ಪೋರ್ಚುಗಲ್ ಇದರ ಸ್ವಾತಂತ್ರ್ಯವನ್ನು 1974ರ ಏಪ್ರಿಲ್ 25ರಂದು ಒಪ್ಪಿಕೊಂಡಿತು. ಅಮಿಲ್ಕಾರ್ ಕಬ್ರಾಲ್‌ನ ಸಹೋದರ ಲೂಯಿಸ್ ಕಬ್ರಾಲ್ ಮೊದಲ ಅಧ್ಯಕ್ಷನಾದ. ಕೇಪ್‌ವರ್ಡೆ 1975ರಲ್ಲಿ ಸ್ವಾತಂತ್ರ್ಯ ಪಡೆಯಿತು. ಪಿಎಐಜಿಸಿ ಪಕ್ಷವು ಗಿನಿ ಬಿಸ್ಸಾವು ಮತ್ತು ಕೇಪ್‌ವರ್ಡೆ ದ್ವೀಪಸ್ತೋಮವನ್ನು ಒಂದೇ ಸರ್ಕಾರದ ಅಡಿಯಲ್ಲಿ ಒಂದು ಗೂಡಿಸಲು ಪ್ರಯತ್ನಿಸಿತು.

ಸ್ವಾತಂತ್ರ್ಯಾನಂತರ ಪೋರ್ಚುಗೀಸ್ ಸೈನಿಕರ ಜೊತೆಗೂಡಿ ರಾಷ್ಟ್ರೀಯ ವಾದಿಗಳ ವಿರುದ್ಧ ಹೋರಾಡಿದ ಕರಿ ಜನಾಂಗದ ಸೈನಿಕರನ್ನು ಗೆರಿಲ ಸೈನಿಕರು ಹತ್ಯೆಮಾಡಿದರು. ಬಿಸ್ಸಾವು ನಗರದಲ್ಲಿ ಸಾಮೂಹಿಕ ಕಗ್ಗೊಲೆ ನಡೆಯಿತು. ಸರ್ಕಾರ ಅನೇಕರನ್ನು ಮರಣ ದಂಡನೆಗೆ ಗುರಿಪಡಿಸಿ ದೇಹಗಳನ್ನು ಗುಮೆರ, ಪೋರ್ಟೋಗೋಲಿ ಮತ್ತು ಮನ್‌ಸಬ ಅರಣ್ಯಗಳಲ್ಲಿ ಗೌಪ್ಯವಾಗಿ ಸಾಮೂಹಿಕ ಸಮಾಧಿ ಮಾಡಿತೆಂಬ ವಿಚಾರ ತಿಳಿದುಬರುತ್ತದೆ.

1980ರಲ್ಲಿ ಸೈನ್ಯದ ನಾಯಕರು ಸರ್ಕಾರವನ್ನು ಕಿತ್ತೊಗೆದು, ನ್ಯಾಷನಲ್ ಅಸ್ಸೆಂಬಿಯನ್ನು ರದ್ದು ಪಡಿಸಿದರು. ಸೈನ್ಯದ ಆಡಳಿತ ಮಂಡಲಿಯ ಅಧಿಕಾರವನ್ನು ಸ್ಥಾಪಿಸಿದರು. ಸೈನ್ಯದ ಸರ್ಕಾರ ಗಿನಿ ಬಿಸ್ಸಾವು ಮತ್ತು ಕೇಪ್‌ವರ್ಡೆ ದ್ವೀಪಸ್ತೋಮ ಒಂದಾಗುವುದನ್ನು ವಿರೋಧಿಸಿತು. ಸೈನ್ಯದ ಆಡಳಿತ ಮಂಡಲಿಯ ಮುಖ್ಯಸ್ಥ ಬ್ರಿಗೇಡಿಯರ್ ಜನರಲ್ ಜೊವೊ ಬೆರ್ನಾರ್ಡೊವಿಈರ ಅಧ್ಯಕ್ಷ. 1984ರಲ್ಲಿ ಸಂವಿಧಾನವನ್ನು ರಚಿಸಿ ಹೊಸ ನ್ಯಾಷನಲ್ ಅಸ್ಸೆಂಬಿಯನ್ನು ಪ್ರಾರಂಭಿಸಿದರು. ಜೊವೊ ಬೆರ್ನಾರ್ಡೊವಿಈರ ಅಧ್ಯಕ್ಷನಾಗಿ ಚುನಾಯಿತನಾದ. 1991ರ ವರೆಗೆ ಪಿಎಐಜಿಸಿ ಒಂದೇ ರಾಜಕೀಯ ಪಕ್ಷವಾಗಿತ್ತು. ಅದೇ ವರ್ಷ ಬೇರೆ ಪಕ್ಷಗಳಿಗೂ ಅವಕಾಶ

ನ್ಯಾಯಾಂಗ ಮಂಡಲ

ಕಲ್ಪಿಸಲಾಯಿತು. 1994ರ ಚುನಾವಣೆಯಲ್ಲಿ ಪ್ರಥಮವಾಗಿ ಅನೇಕ ಪಕ್ಷಗಳ ಚುನಾವಣೆ ನಡೆದು ವಿಈರ ಜಯಗಳಿಸಿ ಅಧ್ಯಕ್ಷನಾದ. ಬಂಡಾಯಗಾರರು 1999ರ ಮೇ ತಿಂಗಳಲ್ಲಿ ಇವನನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಿ ಗೊಳಿಸಿದರು. ಆಗ ಅಸ್ಸೆಂಬಿಯ ಮುಖ್ಯಸ್ಥ ನಾಗಿದ್ದ ಮಲನ್ ಬಕೈ ಸಿನ್‌ಹ ಹಂಗಾಮಿ ಅಧ್ಯಕ್ಷನಾದ. 1999ರ ನವೆಂಬರ್ ತಿಂಗಳಲ್ಲಿ ಚುನಾವಣೆ ನಡೆದು ಸೋಶಿಯಲ್ ಪಾರ್ಟಿಯ ಅಧಿಕ ಸದಸ್ಯರು ಚುನಾಯಿತರಾದರು. 2000ರ ಜನವರಿಯಲ್ಲಿ ಅನೇಕ ಪಕ್ಷದ ಕುಂಬ ಯಿಯಾಲ ಅಧ್ಯಕ್ಷನಾದ. ಪುನಃ 2003ರ ಸೆಪ್ಟೆಂಬರ್‌ನಲ್ಲಿ ದಂಗೆ ನಡೆದು ಈತನನ್ನು ಪದಚ್ಯುತಿ ಗೊಳಿಸಿದರು. 2004ರ ಮಾರ್ಚ್‌ನಲ್ಲಿ ಚುನಾವಣೆ ನಡೆಯಿತು. ಅಕ್ಟೋಬರ್‌ನಲ್ಲಿ ಸೈನ್ಯದ ಪಂಗಡಗಳ ದಂಗೆಯ ಸಮಯದಲ್ಲಿ ಸೈನ್ಯದ ಮುಖ್ಯಸ್ಥ ನಿಧನವಾದ. ವ್ಯಾಪಕ ಅಶಾಂತಿಗೆ ಕಾರಣವಾಯಿತು. 2005ರ ಜೂನ್‌ನಲ್ಲಿ ಮೊದಲ ಬಾರಿಗೆ ಅಧ್ಯಕ್ಷ ಚುನಾವಣೆ ನಡೆದು ವಿಈರ ಅಧ್ಯಕ್ಷನಾದ. ಸೈನ್ಯದಲ್ಲಿ ಕೆಲವರು ಅಧ್ಯಕ್ಷನ ವಿರೋಧಿಗಳಿದ್ದರು. 2009ರ ಮಾರ್ಚ್ 1 ರಂದು ಭಾನುವಾರ ಸೈನ್ಯದ ಜಂಟಿ ಮುಖ್ಯಸ್ಥ ಜನರಲ್ ಬಟಿಸ್ಟ ಟಗ್ಮೆ ನ ವೈ ಬಾಂಬ್ ಸ್ಫೋಟದಿಂದ ಹತನಾದ. ಇದರಿಂದ ಉದ್ರಿಕ್ತಗೊಂಡ ಸೈನಿಕರ ಒಂದು ಗುಂಪು ಸೇಡು ತೀರಿಸಿಕೊಳ್ಳಲು ಅಧ್ಯಕ್ಷನನ್ನು ಹತ್ಯೆಗೈದಿತು. ನ್ಯಾಷನಲ್ ಅಸೆಂಬ್ಲಿಯ ಅಧ್ಯಕ್ಷನನ್ನು 2009ರ ಜೂನ್ 28ರ ಚುನಾವಣೆವರೆಗೆ ಹಂಗಾಮಿ ಅಧ್ಯಕ್ಷನಾಗಿ ಮಾಡಿದರು. ಚುನಾವಣೆಯಲ್ಲಿ ಮಲಮ್ ಬಕೈ ಸಿನ್‌ಹ ಅಧ್ಯಕ್ಷನಾಗಿ ಚುನಾಯಿತನಾದ. ಈತ 2012ರ ಜನವರಿ 9 ರಂದು ನಿಧನವಾದ ಅನಂತರ 2012ರ ಮೇ 11 ರಿಂದ ಮಾನ್ಯುಯೆಲ್‌ಸೆರಿಫೊ ನಹ್‌ಮದ್‌ಗೊ ಅಧ್ಯಕ್ಷರಾಗಿದ್ದಾರೆ. *

**ಗಿನಿ ಹಂದಿ :** ಕೇವಿ ಎಂಬ ಪ್ರಾಣಿಯಿಂದ ವಿಕಾಸ ಹೊಂದಿದ ಸಾಕುಪ್ರಾಣಿ (ಗಿನಿಪಿಗ್); ರಾಡೆನ್ಷಿಯ ಗಣದ ಕೇವಿಯಿಡೀ ಕುಟುಂಬಕ್ಕೆ ಸೇರಿದೆ. ಕೇವಿಯ ಪಾರ್ಸೆಲಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಜನಪ್ರಿಯವಾಗಿರುವ ಈ ಪ್ರಾಣಿಯ ಹೆಸರಿಗೂ ಆಫ್ರಿಕದ ಗಿನಿ ಮತ್ತು ಆಗ್ನೇಯ ಏಷ್ಯದ ನ್ಯೂಗಿನಿಗಳಿಗೂ ಯಾವ ಬಗೆಯಾದ ಸಂಬಂಧವಿಲ್ಲ. ಗಿನಿ ಎಂಬ ಪದ ಬಹುಶಃ ಗಿಯಾನ ಎಂಬ ಪದದಿಂದ ಪಡೆದುದಾಗಿರ ಬಹುದು. ಡಚ್ ಮತ್ತು ಇಂಗ್ಲಿಷ್ ವ್ಯಾಪಾರಸ್ಥರು ಈ ಪ್ರಾಣಿಗಳನ್ನು ಗಿಯಾನದಿಂದ ಕೊಂಡೊಯ್ದದ್ದರಿಂದ ಈ ಹೆಸರು ಬಂದಿರಬೇಕು.

ದಕ್ಷಿಣ ಅಮೆರಿಕದ ಪೆರು, ಎಕ್ವಡಾರ್ ಮತ್ತು ಕೊಲಂಬಿಯಗಳು ಗಿನಿಹಂದಿಗಳ ತೌರು. ಇವು ಈ ಪ್ರದೇಶಗಳ ಬಯಲಿನ ಮೂಲವಾಸಿಗಳಾದ ಕೇವಿ ಪ್ರಾಣಿಗಳಿಂದ ವಿಕಾಸ ಹೊಂದಿದ ಪ್ರಾಣಿಗಳೆಂದು ತಿಳಿಯಲಾಗಿದೆ. ದಕ್ಷಿಣ ಅಮೆರಿಕಕ್ಕೆ ಸ್ಪ್ಯಾನಿಷರು

ಕಾಲಿಡುವುದಕ್ಕೆ ಮುಂಚೆಯೇ ಅಲ್ಲಿಯ ಮೂಲವಾಸಿಗಳಾದ ಅಮೆರಿಕದ ಇಂಡಿಯನ್ನರು ಈ ದಂಶಕ ಪ್ರಾಣಿಗಳನ್ನು ಆಹಾರಕ್ಕಾಗಿ ಸಾಕುತ್ತಿದ್ದರಂತೆ. ಡಚ್ಚರು ಹದಿನಾರನೆಯ ಶತಮಾನದಲ್ಲಿ ಯುರೋಪಿಗೆ ಇವನ್ನು ಕೊಂಡೊಯ್ದು ಇವುಗಳ ತಳಿಗಳನ್ನು ಅಭಿವೃದ್ಧಿ ಗೊಳಿಸಿದರು. ಅಲ್ಲಿಂದೀಚೆಗೆ ಪ್ರಪಂಚದ ವಿವಿಧ ದೇಶಗಳಿಗೆ ಹರಡಿದ ಇದನ್ನು ಆಹಾರಕ್ಕಾಗಿ ಸಾಕುತ್ತಿಲ್ಲವಾದರೂ ವೈಜ್ಞಾನಿಕ ಪ್ರಯೋಗಮಂದಿರಗಳಲ್ಲಿ ಇದರ ನೆರವು ಅಪಾರ. ವೈದ್ಯಕೀಯ, ಜೈವಿಕ, ತಳಿವಿಜ್ಞಾನ ಮತ್ತು ಪೋಷಣಸಂಬಂಧಿ ಸಂಶೋಧನೆ ಗಳಲ್ಲಿ ಇದನ್ನು ಪ್ರಯೋಗ ಪ್ರಾಣಿಯಾಗಿ ಬಳಸಲಾಗುತ್ತಿದೆ. ಇದು ಎಷ್ಟು ಪ್ರಚಲಿತವೆಂದರೆ ಗಿನಿಹಂದಿಯನ್ನಾಗಿ ಬಳಸು ಎಂಬುದು ಈಗ ಒಂದು ನುಡಿಗಟ್ಟಾಗಿಬಿಟ್ಟಿದೆ.

ಗಿನಿ ಹಂದಿಗಳು

ಗಿನಿ ಹಂದಿಗಳ ಮೈ ಬಣ್ಣ ಸಾಮಾನ್ಯವಾಗಿ ಬಿಳಿ, ಕಪ್ಪು, ಕೆಂಪು, ಕಂದು, ಹೀಗೆ ವೈವಿಧ್ಯಮಯ. ಚೆನ್ನಾಗಿ ಬೆಳೆದ ಪ್ರೌಢಜೀವಿಯ ದೇಹದ ಉದ್ದ 25 ಸೆಂಮೀ, ತೂಕ ಸುಮಾರು 900 ಗ್ರಾಂ. ಗಿನಿ ಹಂದಿಗಳಿಗೆ ಬಾಲವಿಲ್ಲ. ಆದರೆ ಅದಕ್ಕೆ ಸಂಬಂಧಿಸಿದ ಏಳು ಕಶೇರುಕ ಮಣಿಗಳು ದೇಹದೊಳಗೇ ಹುದುಗಿರುತ್ತವೆ. ಸ್ಥೂಲ ದೇಹ, ದಪ್ಪತಲೆ, ಚಿಕ್ಕಕಾಲುಗಳು, ರೋಮರಹಿತವಾದ ಮತ್ತು ಗುಂಡನೆಯ ಚಿಕ್ಕ ಕಿವಿಗಳು, ಮುಂಗಾಲಿನಲ್ಲಿ ನಾಲ್ಕು, ಹಿಂಗಾಲಿನಲ್ಲಿ ಮೂರು ಬೆರಳುಗಳು, ಪ್ರತಿ ಬೆರಳಿನಲ್ಲಿ ಅಗಲವಾದ ನಖಗಳು– ಇವು ಈ ಪ್ರಾಣಿಯ ಮುಖ್ಯ ಲಕ್ಷಣಗಳು. ದೇಹದ ಮೇಲಿರುವ ಕೂದಲು ರೇಷ್ಮೆಯಂತೆ ನಯವಾಗಿರಬಹುದು ಅಥವಾ ಒರಟಾಗಿರಬಹುದು. ಹಾಗೆಯೇ ಚಿಕ್ಕದಾಗಿರಬಹುದು ಇಲ್ಲವೆ ನೀಳವಾಗಿರಬಹುದು.

ಹುಲ್ಲು, ಸೊಪ್ಪುಗಳೇ ಇದರ ಮುಖ್ಯ ಆಹಾರ. ಆಹಾರವನ್ನು ಸಾಕಷ್ಟು ಮೊತ್ತದಲ್ಲಿ ಒದಗಿಸಿದರೆ ಇದು ನೀರಿಲ್ಲದೆಯೇ ಬಹು ಕಾಲ ಬದುಕಬಲ್ಲದು. ಆದರೆ ಮರದ ಪೆಟ್ಟಿಗೆಯಲ್ಲಿ ಗೂಡು ಮಾಡಿ, ಇಲಿ, ಮೊಲ ಮುಂತಾದವಕ್ಕೆ ಕೊಡುವ ಆಹಾರವನ್ನು ಒದಗಿಸಿದಲ್ಲಿ ಇದಕ್ಕೆ ಪ್ರತ್ಯೇಕವಾಗಿ ನೀರನ್ನು ಒದಗಿಸುವುದು ಅನಿವಾರ್ಯ.

ಸಂತಾನಶಕ್ತಿಗೆ ಹೆಸರಾದ ಗಿನಿಹಂದಿ ವರ್ಷಕ್ಕೆ 5–6 ಸಲ ಮರಿ ಹಾಕುತ್ತದೆ. ಒಂದು ಸೂಲಿಗೆ 2–8 ಮರಿಗಳು ಇರುತ್ತವೆ. ಗರ್ಭಾವಧಿಯ ಕಾಲ 63–75 ದಿವಸಗಳು. ಬಸಿರಿನಲ್ಲಿಯೇ ಮರಿಗಳು ಚೆನ್ನಾಗಿ ಬೆಳೆಯುವುದರಿಂದ ಹುಟ್ಟಿದ ಮರಿಗಳಿಗೆ ಕಣ್ಣು ಬಂದಿರುತ್ತವಲ್ಲದೆ ಘನರೂಪದ ಆಹಾರವನ್ನು ಸೇವಿಸುವ ಸಾಮರ್ಥ್ಯವೂ ಇರುತ್ತದೆ. ಹುಟ್ಟಿದ ಒಂದೆರಡು ಗಂಟೆಗಳಲ್ಲಿಯೇ ತಾಯಿಯನ್ನು ಹಿಂಬಾಲಿಸಿ ಓಡಲು ಇವು ಸಮರ್ಥವಾಗಿರುತ್ತವೆ. ಎರಡು ವಾರಗಳ ಕಾಲ ತಾಯಿಯ ಹಾಲನ್ನು ಕುಡಿದು ಬೆಳೆದು ಅನಂತರ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. 2 ತಿಂಗಳುಗಳಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ. ಗಿನಿ ಹಂದಿಗಳ ಆಯಸ್ಸು ಸುಮಾರು 6–8 ವರ್ಷಗಳು. (ಬಿ.ಎನ್.ಬಿ.)

**ಗಿನಿ ಹುಲ್ಲು :** ಪ್ಯಾನಿಕಂ ಮ್ಯಾಕ್ಸಿಮಂ ಎಂಬ ವೈಜ್ಞಾನಿಕ ಹೆಸರಿನ ಒಂದು ಹುಲ್ಲು. ಆಫ್ರಿಕದ ಮೂಲವಾಸಿ. 1.3–3 ಮೀ ಎತ್ತರಕ್ಕೆ ಬೆಳೆಯುವ ಬಹುವಾರ್ಷಿಕ ಹುಲ್ಲು ಇದು. ಅಧಿಕ ಗಾತ್ರದಲ್ಲಿ ಕ್ಯಾಲ್ಸಿಯಮ್ ಮತ್ತು ಫಾಸ್ಫರಸ್‌ಗಳನ್ನೂ ಶೇ.5–8 ರಷ್ಟು ಪ್ರೋಟೀನುಗಳನ್ನೂ ಒಳಗೊಂಡಿದ್ದು ಉತ್ತಮ ಬಗೆಯ ಮೇವುಗಳಲ್ಲೊಂದು ಎನಿಸಿದೆ. ಇದನ್ನು ಹಸಿ ಇಲ್ಲವೆ ಒಣಹುಲ್ಲಾಗಿ ಬಳಸಬಹುದು. ಹಲವಾರು ಬಗೆಯ ಮಣ್ಣಿನಲ್ಲೂ ವಾಯುಪರಿಸ್ಥಿತಿಗಳಲ್ಲೂ ಬೆಳೆಯಬಲ್ಲ ಸಾಮರ್ಥ್ಯ ಇದಕ್ಕೆ ಇದೆ. ಆದರೆ ಮಣ್ಣಿನಲ್ಲಿ ನೀರು ನಿಲ್ಲುವಂತಿರಬಾರದು. ಇದು ಚಳಿಯನ್ನು ತಡೆಯಲಾರದು. ಬೀಜ ಇಲ್ಲವೆ ಬೇರು ತುಂಡುಗಳಿಂದ ಇದನ್ನು ವೃದ್ಧಿಸಬಹುದು. ಬೀಜ ಬಿತ್ತಿದ 2 $^1/_2$ ತಿಂಗಳ ಅನಂತರ ಮೊದಲ ಬಾರಿಗೆ ಇದನ್ನು ಕಟಾಯಿಸಬಹುದು. ಆಮೇಲೆ 6–8 ವಾರಗಳ ಅಂತರಕ್ಕೊಮ್ಮೆ ಹಲವಾರು ವರ್ಷಗಳ ಕಾಲ ಕತ್ತರಿಸಬಹುದು. ಗಿನಿಹುಲ್ಲಿನ ವಾರ್ಷಿಕ ಇಳುವರಿ ಹೆಕ್ಟೇರಿಗೆ 38–62 ಮೆಟ್ರಿಕ್ ಟನ್ನುಗಳಷ್ಟಾಗುತ್ತದೆ. ಆದರೆ ಕೊಟ್ಟಿಗೆ ಗೊಬ್ಬರ, ಕಂಪೋಸ್ಟ್, ಅಮೋನಿಯಂ ಸಲ್ಫೇಟ್, ಚರಂಡಿ ನೀರು ಮುಂತಾದ ಗೊಬ್ಬರಗಳನ್ನು ಕೊಟ್ಟು ಬೆಳೆಸಿದಲ್ಲಿ ಹುಲ್ಲಿನ ಬೆಳವಣಿಗೆ ಇನ್ನೂ ಹುಲುಸಾಗಿ ಇಳುವರಿ ಹೆಕ್ಟೇರಿಗೆ 250 ಮೆಟ್ರಿಕ್ ಟನ್ನುಗಳವರೆಗೆ ಹೆಚ್ಚುವುದುಂಟು.

ಗಿನಿ ಹುಲ್ಲನ್ನು ಅನೇಕ ವರ್ಷಗಳವರೆಗೆ ಬೆಳೆಸಬಹುದಾದರೂ 3–5 ವರ್ಷಗಳ ಮೇಲೆ ಇಳುವರಿ ಕಡಿಮೆಯಾಗುವುದರಿಂದ ಆ ಅವಧಿಯ ಅನಂತರ ಹಳೆಯ ಗಿಡಗಳನ್ನು ಕಿತ್ತು ಹೊಸದಾಗಿ ಕೃಷಿ ಮಾಡಬೇಕು. (ಎಂ.)

**ಗಿಬನ್ :** ಸಸ್ತನಿವರ್ಗದ ಪ್ರೈಮೇಟ್ ಗಣಕ್ಕೆ ಸೇರಿದ ವೃಕ್ಷವಾಸಿ ವಾನರ. ಹೈಲಾಬಟೀಸ್ ಮತ್ತು ಸಿಂಫಲ್ಯಾಂಗಸ್ ಎಂಬ ಎರಡು ಮುಖ್ಯಜಾತಿಗಳನ್ನು ಒಳಗೊಂಡಿದೆ. ಒರಾಂಗೂಟಾನ್(**ನೋಡಿ**), ಗೊರಿಲ, ಚಿಂಪ್ಯಾಂಜಿಗಳ ಹತ್ತಿರ ಸಂಬಂಧಿ. ಅವುಗಳಂತೆಯೇ ಇದಕ್ಕೂ ಬಾಲವಿಲ್ಲ. ಮನುಷ್ಯನನ್ನೂ ಒಳಗೊಂಡಿರುವ ಹೋಮಿನಾಯ್ಡಿಯ ಅಧಿಕುಟುಂಬದ ಹೈಲೋಬ್ಯಾಟಿಡೀ ಕುಟುಂಬಕ್ಕೆ ಸೇರಿದೆ. ಆಗ್ನೇಯ ಏಷ್ಯದ ಮೂಲವಾಸಿಯಾದ ಇದು ಅಸ್ಸಾಂ, ಬರ್ಮ, ಮಲಯ, ಇಂಡೋನೇಷ್ಯಗಳ ದಟ್ಟವಾದ ಕಾಡುಗಳಲ್ಲಿ ಕಾಣಬರುತ್ತದೆ; ಸಮುದ್ರಮಟ್ಟದಿಂದ ಹಿಡಿದು 2500 ಮೀ ಎತ್ತರದ ಪರ್ವತ ಪ್ರದೇಶಗಳಲ್ಲೆಲ್ಲ ಬಲು ಸಾಮಾನ್ಯ.

ಇದು ವಾನರಗಳಲ್ಲೆಲ್ಲ ಅತ್ಯಂತ ಚಿಕ್ಕಗಾತ್ರದ್ದು, ಇದರ ಎತ್ತರ ಸಾಮಾನ್ಯವಾಗಿ 1 ಮೀ, ತೂಕ ಸುಮಾರು 14 ಕೆಜಿ. ಮೈಬಣ್ಣ ಸಾಮಾನ್ಯವಾಗಿ ಕಪ್ಪು. ಕೆಲವು ಬಗೆಗಳಲ್ಲಿ ಕಂದು, ಬೂದಿ ಮುಂತಾದ ಬಣ್ಣವಿರುವುದೂ ಉಂಟು. ಗಿಬನ್ನಿನ ಕೈಗಳು ಬಲು ಉದ್ದ. 1ಮೀ ಎತ್ತರದ ಗಿಬನ್ನಿನ ಕೈಹರವು ಸುಮಾರು 1.3 ಮೀ ಇರುವುದುಂಟು. ಈ ಉದ್ದ ಕೈಗಳ ಸಹಾಯದಿಂದ ಗಿಬನ್ ಮರದಿಂದ ಮರಕ್ಕೆ ಯಾವ ಬಗೆಯ ಶ್ರಮವೂ ಇಲ್ಲದೆ ಅತ್ಯಂತ ವೇಗವಾಗಿ ತೂಗಿ ತೊನೆಯುತ್ತ, ಜಿಗಿಯುತ್ತ ಸಾಗಬಲ್ಲದು. ಒಂದೊಂದು ಸಲದ ಜಿಗಿತಕ್ಕೂ ಸುಮಾರು 6–9 ಮೀ ದೂರವನ್ನು ಕ್ರಮಿಸಬಲ್ಲುದು. ಹೀಗೆ ಗಿಬನ್ ರೆಂಬೆಯಿಂದ ರೆಂಬೆಗೆ ಹಾರಿ ಸಾಗುವ ನೈಪುಣ್ಯವನ್ನೂ ವೇಗವನ್ನೂ ಇನ್ನಾವುದೇ ವಾನರವಾಗಲಿ, ಕಪಿಯಾಗಲಿ ತೋರಲಾರದು. ಈ ರೀತಿಯ ಚಲನೆಗೆ ಮತ್ತು ರೆಂಬೆಗಳನ್ನು ಹಿಡಿಯುವುದಕ್ಕೆ ಅನುಕೂಲವಾಗುವಂತೆ ಗಿಬನ್ನಿನ ಕೈ ಮತ್ತು ಕಾಲುಗಳ ಬೆರಳುಗಳೂ ಬಲು ಉದ್ದವಾಗಿವೆ. ಅಲ್ಲದೆ ತೋರುಬೆರಳು ಮತ್ತು ಹೆಬ್ಬೆರಳುಗಳ ಅಂತರ ಆಳವಾದ ಸೀಳಿನಂತಿದೆ. ಹೆಬ್ಬೆರಳು ಉಳಿದ ಬೆರಳುಗಳಿಗಿಂತ ಮೋಟಾಗಿದೆ. ಹೀಗೆ ಗಿಬನ್ನಿನ ಕೈಕಾಲುಗಳು ಮರಗಳ ಮೇಲಿನ ಚಲನೆಗೆ ಅತ್ಯಂತ ಉಪಯುಕ್ತವಾಗಿದ್ದರೂ ಗಿಬನ್ ನೆಲದ ಮೇಲೆ ಮನುಷ್ಯನಂತೆಯೇ ನೆಟ್ಟಗೆ, ಕೇವಲ ತನ್ನ ಎರಡು ಕಾಲುಗಳಿಂದ ಮಾತ್ರವೇ ನಡೆಯಬಲ್ಲದು. ವಾನರಗಳಲ್ಲೆಲ್ಲ ಇದೊಂದು ಮಾತ್ರವೇ ಹೀಗೆ ನಡೆಯಲು ಸಮರ್ಥವಾಗಿರುವುದು (ಉಳಿದ ವಾನರಗಳು ಹೀಗೆ ನಡೆಯುವಾಗ ಕೈಗಳ ನೆರವನ್ನು ಪಡೆಯುತ್ತವೆ.) ಆದರೆ ಕೈಗಳು ಬಲು ಉದ್ದವಾಗಿದ್ದು ನೆಲವನ್ನು ಮುಟ್ಟುವಂತಿರುವುದರಿಂದ ಗಿಬನ್ ನಡೆಯುವಾಗ ಸರ್ಕಸಿನಲ್ಲಿ ತಂತಿ ಮೇಲೆ ನಡೆಯುವವರಂತೆ ಕೈಗಳನ್ನು ಮೇಲಕ್ಕೆತ್ತಿ ಅಕ್ಕಪಕ್ಕಕ್ಕೆ ಚಾಚಿಕೊಂಡು ವಕ್ರವಾಗಿ ನಡೆಯುತ್ತದೆ. ಕೈಗಳನ್ನು ಮೇಲಕ್ಕೆತ್ತುವುದರಿಂದ ದೇಹವನ್ನು ಸಮತೋಲವಾಗಿರಿಸುವುದಕ್ಕೆ ಸಾಧ್ಯವಾಗುತ್ತದೆ. ಗಿಬನ್ನಿನ ಇನ್ನಿತರ ಲಕ್ಷಣಗಳಲ್ಲಿ ಮುಖ್ಯವಾದವು ಅದರ ತೆಳುವಾದ ದೇಹ, ಉದ್ದವಾದ ಹಾಗೂ ಕಿರಿದಾದ ವಸ್ತಿಕುಹರ, ಚೆನ್ನಾಗಿ ರೂಪುಗೊಂಡಿರುವ ರೊಂಡಿಯ ಜಡ್ಡುಭಾಗಗಳು ಮತ್ತು ಚಪ್ಪಟೆಯಾದ ಮೂತಿ. ಗಿಬನ್ನಿನ ಮಿದುಳು ಬಹಳ ಚಿಕ್ಕಗಾತ್ರದ್ದು, ಬುದ್ಧಿಶಕ್ತಿಯಲ್ಲಿ ಗಿಬನ್ ಉಳಿದ ವಾನರಗಳಿಗಿಂತ ಅತ್ಯಂತ ಕೆಳಮಟ್ಟದಲ್ಲಿದೆ. ಹೆಚ್ಚು ಕಡಿಮೆ ಕೋತಿಗಳಿಗಿ

ರುವಷ್ಟು ಬುದ್ಧಿ ಇದಕ್ಕೆ ಇದೆ ಎನ್ನಬಹುದು. ಆದರೂ ಕೆಲವು ಬಣ್ಣಗಳನ್ನೂ ಗಾತ್ರವ್ಯತ್ಯಾಸಗಳನ್ನೂ ಗುರುತಿಸಬಲ್ಲದು. ಗಿಬನ್ ಸ್ವಭಾವತಃ ಸಾಧುಪ್ರಾಣಿ. ಇದನ್ನು ಪಳಗಿಸಿ ಮುದ್ದಿನ ಪ್ರಾಣಿಯಾಗಿ ಸಾಕಬಹುದು. ಗಿಬನ್ ಸ್ವಇಚ್ಛೆಯಿಂದ ನೀರಿಗಿಳಿಯಲು ಹೆದರುತ್ತದಾದರೂ ತನ್ನ ದೇಹವನ್ನು ಸಾಕಷ್ಟು ಶುದ್ಧವಾಗಿ ಇಟ್ಟುಕೊಳ್ಳುತ್ತದೆ. ಎರಡು ಪ್ರಾಣಿಗಳು ಸೇರಿದುವೆಂದರೆ ಒಂದರ ದೇಹವನ್ನು ಇನ್ನೊಂದು ಶುಚಿಮಾಡುತ್ತವೆ.

ಹಣ್ಣುಹಂಪಲು, ಎಲೆಗಳು, ಎಳೆಯಕುಡಿಗಳು ಗಿಬನ್ನಿನ ಪ್ರಮುಖ ಆಹಾರ. ಕೀಟಗಳನ್ನೂ ತಿನ್ನುವುದುಂಟು. ಜೇಡವನ್ನು ಬಲು ಮೆಚ್ಚಿನಿಂದ ತಿನ್ನುತ್ತದೆ. ಆಗಾಗ್ಗೆ ಹಕ್ಕಿಗಳ ಮೊಟ್ಟೆಗಳನ್ನೂ ಮರಿಹಕ್ಕಿಗಳನ್ನೂ ತಿನ್ನುವುದುಂಟು. ಗಿಬನ್ ಸಂಘಜೀವಿ; ಸಣ್ಣಗುಂಪುಗಳಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಒಂದು ಗುಂಪಿನಲ್ಲಿ ಒಂದು ಗಂಡು, ಒಂದು ಹೆಣ್ಣು ಮತ್ತು ಹಲವಾರು ಮರಿಗಿಬನ್‌ಗಳಿರುತ್ತವೆ. ಒಂದೊಂದು ಕುಟುಂಬಕ್ಕೂ ಅದರದೇ ಆದ ಅಧೀನಗಡಿ ಪ್ರಾಂತ್ಯವಿರುತ್ತದೆ. ಇಂಥ ಪ್ರಾಂತ್ಯದ ವಿಸ್ತಾರ ಸುಮಾರು 30–100 ಎಕರೆಯಷ್ಟಿರಬಹುದು. ಇದರಲ್ಲಿ ಗಿಬನ್‌ಗಳಿಗೆ ಆಹಾರವೊದಗಿಸುವ ಮತ್ತು ಮಲಗಲು ಪ್ರಶಸ್ತವಾದ ಮರಗಳು ವಿಪುಲವಾಗಿರುತ್ತವೆ. ಗಿಬನ್‌ಗಳು ನೆಲಮುಟ್ಟದೆ ಮರದಿಂದ ಮರಕ್ಕೆ ಸುಸೂತ್ರವಾಗಿ ಹೋಗಲು ತಮ್ಮದೇ ಆದ ದಾರಿ ಮಾಡಿಕೊಂಡಿರುತ್ತವೆ. ಒಂದು ಗಿಬನ್ ಕುಟುಂಬದ ಪ್ರಾಂತ್ಯಕ್ಕೆ ಮತ್ತೊಂದು ಗುಂಪು ಬರುವುದು ವಿರಳ. ಹಾಗೇನಾದರೂ ಬಂದರೆ ಅವುಗಳ ನಡುವೆ ಯುದ್ಧವೇ ನಡೆಯುತ್ತದೆ. ಯುದ್ಧವೆಂದರೆ ಮುಷ್ಟಾಮುಷ್ಟಿಯಲ್ಲ, ಬರಿಯ ವಾಗ್ಯುದ್ಧ. ಅದರಲ್ಲಿ ಸೋತ ಗುಂಪು ಓಡಿಹೋಗುತ್ತದೆ. ತಮ್ಮ ಧ್ವನಿಶಕ್ತಿಗೆ ಹೆಸರಾಗಿರುವ ಗಿಬನ್‌ಗಳು ಬಲು ಜೋರಾಗಿ, ಕಿವಿಗಡಚಿಕ್ಕುವಂತೆ, ಕಾಡಿಗೆ ಕಾಡೇ ಅನುರಣಿತವಾಗುವಂತೆ ಕೂಗುತ್ತವೆ. ಬೆಳಗಿನ ಜಾವ ಮತ್ತು ಸಂಜೆ ಸೂರ್ಯ ಮುಳುಗುವ ಮುನ್ನ ಇವುಗಳ ಗದ್ದಲದಿಂದ ಇಡೀ ಕಾಡೇ ಮೊಳಗುತ್ತಿರುತ್ತದೆ. ಆಹಾರವನ್ನು ಅರಸಿಕೊಂಡು ತಮ್ಮ ಎಲ್ಲೆಯನ್ನು ಬಿಟ್ಟು ಹೊರಟಾಗಲೂ ಅಸಾಧ್ಯವಾಗಿ ಬೊಬ್ಬೆಯಿಡುತ್ತವೆ. ಹೀಗೆ ಹೊರಟಾಗ ಎರಡು ಗುಂಪುಗಳು ಪರಸ್ಪರ ಸಂಧಿಸಿದಾಗ ಮತ್ತೆ ಕೂಗಿನ ಕಾಳಗ ನಡೆಯುತ್ತದೆ. ಇಲ್ಲೂ ಹೆಚ್ಚು ಗದ್ದಲ ಮಾಡುವ ಗುಂಪಿಗೇ ಜಯ. ಸಿಂಫಲ್ಯಾಂಗಸ್ ಜಾತಿಯ ಗಿಬನ್‌ಗಳಲ್ಲಿ ಧ್ವನಿವರ್ಧಕಚೀಲಗಳಿರುವುದರಿಂದ ಇವುಗಳ ಕೂಗು ಇನ್ನೂ ತೀವ್ರವಾಗಿರುತ್ತದೆ. ಆದರೆ ಹವೆ ಪ್ರತಿಕೂಲವಾಗಿದ್ದಾಗ ನಿಶ್ಶಬ್ದವಾಗಿಬಿಡುವುದು ಇವುಗಳ ಮರ್ಜಿ. ಗಿಬನ್‌ಗಳು ಗೂಡುಗಳನ್ನೇನೂ ಕಟ್ಟುವುದಿಲ್ಲ. ವಿಶ್ರಮಿಸುವಾಗ ಮರಗಳ ಪೊಟರೆಗಳಲ್ಲಿ ಇಲ್ಲವೆ ರೆಂಬೆಗಳ ಸಂದಿಗಳಲ್ಲಿ ಅಡಗುತ್ತವೆ.

ಗಿಬನ್‌ಗಳ ಗರ್ಭಾವಧಿಯ ಕಾಲ ಸುಮಾರು 7 ತಿಂಗಳುಗಳು. ಒಂದು ಸಲಕ್ಕೆ ಒಂದೇ ಮರಿ; ಸಾಧಾರಣವಾಗಿ 2 ವರ್ಷಕ್ಕೊಂದು. ಮರಿಯ ಪಾಲನೆ, ಪೋಷಣೆಗಳ ಹೊಣೆಯೆಲ್ಲ ತಾಯಿಯದೆ. ಚಿಕ್ಕಮರಿಗಳು ಯಾವಾಗಲೂ ಚಟುವಟಿಕೆಯಿಂದ ಆಟವಾಡುತ್ತಿರುತ್ತವೆ. ಅನೇಕವೇಳೆ ಬೆಳೆದ ಗಿಬನ್‌ಗಳೂ ಮರಿಗಳೊಡನೆ ಸೇರುವುದುಂಟು. 7 ವರ್ಷ ವಯಸ್ಸಾದ ಅನಂತರ ಗಿಬನ್ ಲೈಂಗಿಕ ಪ್ರಬುದ್ಧಾವಸ್ಥೆಗೆ ಬರುತ್ತದೆ. (ಬಿ.ಆರ್.ಸಿ.ಆರ್.)

**ಗಿಬ್ಬನ್, ಎಡ್ವರ್ಡ್ :** 1737–94. ಆಂಗ್ಲ ಇತಿಹಾಸಕಾರ. ದಿ ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್ (ರೋಮ್ ಚಕ್ರಾಧಿಪತ್ಯದ ಅವನತಿ ಮತ್ತು ಪತನ) ಎಂಬ ಆರು ಸಂಪುಟಗಳ ಇತಿಹಾಸ ಗ್ರಂಥದ ಕರ್ತೃ. ಈತ ಜನಿಸಿದುದು 1737ರ ಮೇ 8 ರಂದು ಸರ್ರೆ ಕೌಂಟಿಯ ಪುಟ್ನಿಯಲ್ಲಿ. ಇವನ ತಂದೆ ಎಡ್ವರ್ಡ್, ತಾಯಿ ಜೂಡಿತ್ ಪೋರ್ಟನ್. ಈತ 10 ವರ್ಷದವನಾಗಿದ್ದಾಗ ತಾಯಿ ನಿಧನ ಹೊಂದಿದಳು (1747). ಇವನನ್ನು ಚಿಕ್ಕಮ್ಮ ಕ್ಯಾಥರೀನ್ ಪೋರ್ಟನ್ ಸಾಕಿ ವಿದ್ಯಾಭ್ಯಾಸಕ್ಕೆ ತೊಡಗಿಸಿದಳು. ಮುಂದೆ ತಾನು ಬುದ್ಧಿಜೀವಿ ಯಾಗಲು ಈಕೆಯ ಪ್ರೋತ್ಸಾಹವೇ ಕಾರಣವೆಂದು ತನ್ನ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾನೆ. ಈತ ತನ್ನ 14ನೆಯ ವಯಸ್ಸಿಗೆ ಕೆಲವು ವಿಷಯಗಳಲ್ಲಿ ಅಸಾಧಾರಣ ಪಾಂಡಿತ್ಯ ಸಂಪಾದಿಸಿ ಕೊಂಡಿದ್ದರೂ ಇತರ ವಿಷಯಗಳಲ್ಲಿ ಸಣ್ಣ ಶಾಲಾ ಬಾಲಕನೂ ನಾಚುವಂಥ ಅಜ್ಞಾನಿ ಯಾಗಿದ್ದನೆಂದು ಇವನೇ ಹೇಳಿ ಕೊಂಡಿದ್ದಾನೆ. ಈತ 15ನೆಯ ವಯಸ್ಸಿನಲ್ಲಿ ಆಕ್ಸ್‌ಫರ್ಡಿನ ಮ್ಯಾಗ್ಡಲೀನ್ ಕಾಲೇಜು ಸೇರಿದ. ಆದರೆ ಅಲ್ಲಿ ಈತ ಇದ್ದದ್ದು ಕೇವಲ 14 ತಿಂಗಳು. ಆ ಸಮಯದಲ್ಲಿ ಈತ ಕ್ರೈಸ್ತಧರ್ಮವನ್ನು ಕುರಿತು ಹೆಚ್ಚಿನ ಅಭ್ಯಾಸದಲ್ಲಿ ತೊಡಗಿದ್ದ; ಅದರ ಪರಿಣಾಮವೆಂಬಂತೆ 1753ರ ರೋಮನ್ ಕೆಥೊಲಿಕ್ ಚರ್ಚಿನ ಸದಸ್ಯನಾಗಿ ಜೂನ್ 8ರಂದು ಲಂಡನ್ ನಗರದ ಒಂದು ಚರ್ಚಿನಲ್ಲಿ ಪುರೋಹಿತನಾದ. ಆದರೆ ಇದು ಇವನ ತಂದೆಗೆ ಸರಿಬರಲಿಲ್ಲ. ಕುಪಿತನಾದ ತಂದೆ ಇವನನ್ನು ಲಾಸ್ಯಾನ್ ನಗರದಲ್ಲಿ ಕಾಲ್ವಿನ್ ಪಂಗಡಕ್ಕೆ ಸೇರಿದ ಪೆವಿಲಿಯಾನ ಬಳಿ ಬಿಟ್ಟ. ಇಲ್ಲಿ ಇವನು ಸುಮಾರು ಐದು ವರ್ಷಗಳನ್ನು ಕಳೆದ. ಆಗ ಇವನಿಗೆ ಲ್ಯಾಟಿನ್ ಮತ್ತು ಫ್ರೆಂಚ್ ಭಾಷೆ ಸಾಹಿತ್ಯಗಳಲ್ಲೂ ಗಣಿತ ತರ್ಕಶಾಸ್ತ್ರಗಳಲ್ಲೂ ಕ್ರಮಬದ್ಧವಾದ ಶಿಕ್ಷಣ ದೊರಕಿತು. ಪೆವಿಲಿಯಾನ ಪ್ರಭಾವದಿಂದ 1754ರಲ್ಲಿ ಇವನು ಕೆಥೊಲಿಕ್ ಪಂಗಡವನ್ನು ತ್ಯಜಿಸಿ ಪ್ರಾಟೆಸ್ಟಂಟ್ ಆಗಿ ಮತಾಂತರಗೊಂಡ. ಕ್ರಮೇಣ ಇವನು ಸಾಮಾಜಿಕ ಚಟುವಟಿಕೆಗಳಲ್ಲೆಲ್ಲ ಭಾಗವಹಿಸಲಾರಂಭಿಸಿದ. ಇವನ ಹಿರಿಯ ಸಮಕಾಲೀನನಾಗಿದ್ದ ವಾಲ್ಟೇರ್ ಏರ್ಪಡಿಸುತ್ತಿದ್ದ ಸತ್ಕಾರ ಸಮಾರಂಭಗಳಲ್ಲಿಯೂ ಲಾಸ್ಯಾನ್ ನಗರದ ಪ್ರತಿಷ್ಠಿತ ಸಮಾಜದಲ್ಲಿಯೂ ಈತ ಕಾಣಿಸಿಕೊಳ್ಳತೊಡಗಿದ. (ಎ.ಎಂ.)

ಪ್ರಾಪ್ತವಯಸ್ಕನಾದಾಗ ಇವನ ತಂದೆ ಈತನಿಗೆ ವಾರ್ಷಿಕವಾಗಿ 300 ಪೌಂಡುಗಳ ಆದಾಯ ಬರುವಂತೆ ವ್ಯವಸ್ಥೆ ಮಾಡಿದ (1758). ಇದು ಇವನಿಗೆ ಹೆಚ್ಚು ಸ್ವಾತಂತ್ರ್ಯ ದೊರಕಿಸಿಕೊಟ್ಟಿತು. ಸುಸೇನ್ ಚರ್ಕೋಡಳೊಂದಿಗೆ ಇವನ ಸ್ನೇಹ ಬೆಳೆಯಿತು. ಅವಳನ್ನು ಮದುವೆಯಾಗಬೇಕೆಂಬುದು ಇವನ ಅಪೇಕ್ಷೆಯಾಗಿತ್ತು. ಆದರೆ ಈತನ ತಂದೆ ಇವರ



ಮದುವೆಗೆ ಅನುಮತಿ ನೀಡಲಿಲ್ಲವಾದ ಕಾರಣ ಇವರ ಸಂಬಂಧ ಮುರಿಯಿತು. ಈ ಕಹಿ ಪ್ರಸಂಗದ ಫಲವಾಗಿ ಇವನು ಮುಂದೆ ಅವಿವಾಹಿತನಾಗಿಯೇ ಉಳಿಯ ಬೇಕಾಯಿತು. ಇದನ್ನು ಮರೆಯಲೋಸುಗ ಮುಂದಿನ ಐದು ವರ್ಷಗಳ ಕಾಲ ಪುನಃ ಅಧ್ಯಯನದಲ್ಲಿ ನಿರತನಾದ. ಇವನ ಮೊದಲ ಪ್ರಬಂಧ 1761ರಲ್ಲಿ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಯಿತು. ಅನಂತರ ಇದನ್ನೇ ಇಂಗ್ಲಿಷ್ ಭಾಷೆಯಲ್ಲೂ ಪ್ರಕಟಿಸಿದ. ಅಷ್ಟರಲ್ಲಿ ಏಳು ವರ್ಷಗಳ ಯುದ್ಧ ಆರಂಭವಾಯಿತು (1757–64). ಈ ಕದನದಲ್ಲಿ ಇವನೂ ಪಾಲ್ಗೊಂಡು ಕ್ಯಾಪ್ಟನ್ ಆಗಿ ನಾಡಿಗೆ ಸೇವೆ ಸಲ್ಲಿಸಿದ (1760–62). ಸೇನೆಯಿಂದ ನಿವೃತ್ತಿ ಹೊಂದಿದ ಮೇಲೆ 1763ರ ಅನಂತರ ಪುನಃ ಲಾಸ್ಯಾನ್ ನಗರಕ್ಕೆ ಹಿಂದಿರುಗಿದಾಗ ಇವನಿಗೆ ಜಾನ್‌ಬೇಕರ್ ಹಾಲ್ರಾಯ್ (ಮುಂದೆ ಲಾರ್ಡ್ ಷೆಫೀಲ್ಡ್) ಎಂಬವನ ಸ್ನೇಹ ದೊರಕಿತು. ಆತನೇ ಇವನ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದ.

1764ರಲ್ಲಿ ಇಟಲಿಗೆ ಹೋಗಿ ಅಲ್ಲಿಯ ಪುರಾತನ ಅವಶೇಷಗಳನ್ನು ಕೂಲಂಕಷವಾಗಿ ಪರಿಶೀಲಿಸಿದ. ಅವನತಿಗೀಡಾದ ರೋಮ್ ಚಕ್ರಾಧಿಪತ್ಯದ ಇತಿಹಾಸ ಇವನು ಲ್ಯಾಟಿನ್ ಸಾಹಿತ್ಯದ ಪರಿಚಯ ಪಡೆದಾಗಲೇ ಮನಸೆಳೆದಿತ್ತು. ಮರುವರ್ಷವೇ ನೇಪಲ್ಸ್ ಮುಖಾಂತರ ಮನೆಗೆ ಹಿಂದಿರುಗಿದ. ಮುಂದಿನ ಐದು ವರ್ಷಗಳನ್ನು ವ್ಯರ್ಥವಾಗಿ ಕಳೆದ. ಫ್ರಾನ್ಸಿನಲ್ಲಿದ್ದಾಗ ಅಲ್ಲಿ ಇವನ ಮಿತ್ರರಲ್ಲೊಬ್ಬನಾದ ಜಾರ್ಜಿಸ್ ಡೇವೆರ್ಡನ್‌ನೊಡಗೂಡಿ ಮೆಮ್ವಾರ್ಸ್ ಲಿಟರೇರಿಸ್ ದ ಲಾ ಗ್ರಾಂಡ್ ಬ್ರೆಟಾನೆ ಎಂಬ ಗ್ರಂಥವನ್ನು ಬರೆದ (1768–69). 1770ರಲ್ಲಿ ಕ್ರಿಟಿಕಲ್ ಆಬ್ಸರ್ವೇಷನ್ಸ್ ಆನ್ ದಿ ಸಿಕ್ಸ್ತ್ ಬುಕ್ ಆಫ್ ದಿ ಏನೀಡನ್ನು ಪ್ರಕಟಿಸಿದ.

1770ರಲ್ಲಿ ಈತ ತಂದೆಯ ನಿಧನಾನಂತರ ಲಂಡನ್ ನಗರಕ್ಕೆ ಬಂದು ನೆಲಸಿದ. ನಗರ ಜೀವನದಲ್ಲಿ ಮೈಮರೆತು ವೈಭವೋಪೇತ ಕ್ಲಬ್‌ಗಳ ಸದಸ್ಯನಾದ. ಜಾನ್ಸನ್ ಕ್ಲಬ್ ಸದಸ್ಯನಾಗಿ ಚುನಾಯಿತನಾದ. ಸಾಹಿತಿ ಜಾನ್ಸನನ ಹಾಗೂ ಬಾಸ್ವೆಲನ ಟೀಕೆಗಳಿಗೆ ಗುರಿಯಾದ. ಇವನು 1774ರಲ್ಲಿ ಪಾರ್ಲಿಮೆಂಟಿನ ಸದಸ್ಯನಾದ. ಆ ವೇಳೆಗೆ ನಿಧಾನವಾಗಿ ತನ್ನ ಮುಖ್ಯಗ್ರಂಥವನ್ನು ಬರೆಯಲು ತೊಡಗಿದ. ಇವನ ಆ ಗ್ರಂಥದ ಮೊದಲ ಸಂಪುಟ 1776ರ ಫೆಬ್ರುವರಿ 16ರಂದು ಪ್ರಕಟವಾಯಿತು. ಇದು ಇವನಿಗೆ ಹೆಸರನ್ನೂ ಪ್ರಸಿದ್ಧಿಯನ್ನೂ ತಂದಿತು. ಈ ಗ್ರಂಥ ಅನೇಕರ ಶ್ಲಾಘನೆಗೂ ಕಟುಟೀಕೆಗೂ ಒಳಗಾಯಿತು. ಇದರ 15, 16ನೆಯ ಅಧ್ಯಾಯಗಳು ಕ್ರೈಸ್ತಧರ್ಮದ ಉಗಮವನ್ನು ಕುರಿತವು. ಇವನ ಗ್ರಂಥದ ಪ್ರಚಾರಕ್ಕೆ ಇದೂ ಒಂದು ಕಾರಣ.

ಲಾರ್ಡ್ ನಾರ್ತ್ ಇಂಗ್ಲೆಂಡಿನ ಪ್ರಧಾನಿಯಾದಾಗ 1779 ಇವನಿಗೆ ಲಾಭದಾಯಕವಾದ ಹುದ್ದೆ ದೊರಕಿತು. ಅನ್ ಮೆಮ್ವಾರ್ ಜಸ್ಟಿಫಿಕೇಟಿವ್ ಎಂಬ ಶೀರ್ಷಿಕೆಯಲ್ಲಿ ಒಂದು ರಾಜ್ಯಪತ್ರವನ್ನು ಹೊರಡಿಸಿ ಬ್ರಿಟಿಷ್ ಸರ್ಕಾರದ ಅಮೆರಿಕ ನೀತಿಯನ್ನು ಸಮರ್ಥಿಸಿದ. 1782ರಲ್ಲಿ ನಾರ್ತನ ಸರ್ಕಾರ ಬಿದ್ದಾಗ ಈತನೂ ತನ್ನ ಹುದ್ದೆ ಕಳೆದುಕೊಂಡ. ಅನಂತರ ಈತ ಲಾಸ್ಯಾನ್ ನಗರಕ್ಕೆ ಹಿಂತಿರುಗಿ ಇವನ ಇತಿಹಾಸದ 2, 3ನೆಯ ಸಂಪುಟಗಳು 1781ರಲ್ಲೂ 4, 5 ಮತ್ತು 6ನೆಯ ಸಂಪುಟಗಳು 1787ರಲ್ಲೂ

ಬಂದುವು. ಕೊನೆಯ 6ನೆಯ ಸಂಪುಟ ಪ್ರಕಟವಾದ್ದು ಇವನ 51ನೆಯ ಹುಟ್ಟುಹಬ್ಬದಂದು. ಇವನ ಆಪ್ತಮಿತ್ರ ಜಾರ್ಜಿಸ್ 1789ರಲ್ಲಿ ನಿಧನನಾದ. ಅವನ ಅಗಲಿಕೆ ಇವನಿಗೆ ತೀವ್ರ ಆಘಾತವಾಯಿತು. ಈ ಘಟನೆಯಿಂದ ಇವನು ಅನಾರೋಗ್ಯಕ್ಕೀಡಾಗಿ 1794 ಜನವರಿ 16ರಂದು ಲಂಡನ್‌ನಲ್ಲಿ ನಿಧನನಾದ. ರೋಮ್ ಚಕ್ರಾಧಿಪತ್ಯದ ಅವನತಿ ಕುರಿತು ಬರೆದ ಗ್ರಂಥ ಇಂದಿಗೂ ಮೇರು ಕೃತಿಯಾಗಿದೆ. ಇತಿಹಾಸಕ್ಕೆ–ಅದರ ನಿರೂಪಣೆಗೆ–ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ಇತಿಹಾಸಕಾರರ ಮುಂದೆ ಇಡುವುದರ ಮೂಲಕ ಇವನು ಇತಿಹಾಸದ ಅಧ್ಯಯನಕ್ಕೆ ವಿಶಿಷ್ಟವಾದ ಕಾಣಿಕೆ ನೀಡಿದ್ದಾನೆ. ಇತಿಹಾಸಕ್ಕೆ ಇವನು ನೀಡುವ ಅರ್ಥ ನಿಷ್ಠುರವಾದ್ದು. ಮಾನವ ಎಸಗಿದ ಘೋರ ಅನ್ಯಾಯಗಳ, ಪಾತಕಗಳ ದುರದೃಷ್ಟದ ವರದಿಯೇ ಇತಿಹಾಸ ಎಂದಿದ್ದಾನೆ.

ಅನೇಕ ಪರಿಮಿತಿಗಳಿದ್ದರೂ ಇವನ ಬರೆವಣಿಗೆಯ ಶೈಲಿ ಉತ್ತಮವಾದುದು. ಇವನು ಕೆಲವು ಘಟನೆಗಳನ್ನು ಕುರಿತು ಮಾಡಿರುವ ಅನೇಕ ನಿರ್ಣಯಗಳು ಇತ್ತೀಚಿನ ಶೋಧನೆಗಳಿಂದ ಖಚಿತಗೊಂಡಿವೆ. ತನ್ನ ಗ್ರಂಥವನ್ನು ಬರ್ಬರತೆ ಹಾಗೂ ಮತದ ವಿಜಯೋತ್ಸವದ ದಾಖಲೆ ಎಂದು ಹೇಳಿಕೊಂಡಿದ್ದಾನೆ. ಪ್ರ. ಶ. ಎರಡನೆಯ ಶತಮಾನದಿಂದ ಆರಂಭವಾಗುವ ರೋಮ್ ಚಕ್ರಾಧಿಪತ್ಯದ ಇತಿಹಾಸದ ಮೊದಲನೆಯ ಅರ್ಧ 480ರ ವರೆಗಿನ ಘಟನೆಗಳಿಗೆ ಮೀಸಲಾಗಿದೆ. ಉಳಿದರ್ಧದಲ್ಲಿ 1453ರಲ್ಲಿ ಸಂಭವಿಸಿದ ಕಾನ್‌ಸ್ಟಾಂಟಿನೋಪಲ್ ಪತನದವರೆಗಿನ ಕಥೆ ಇದೆ. ಉತ್ತಮ ನಾಗರಿಕ ಸಂಸ್ಕೃತಿಯನ್ನು ಹೊಂದಿದ್ದ ರೋಮ್‌ನ ನೈತಿಕ ಪತನವೇ ಆ ಚಕ್ರಾಧಿಪತ್ಯದ ಅಳಿವಿಗೆ ಮೂಲ ಕಾರಣ ಎಂದು ಹೇಳಿದ್ದಾನೆ. ಆಂಟೊನೈನ್ ಯುಗ ರೋಮ್ ಇತಿಹಾಸದ ಸುವರ್ಣಯುಗ. ಅನಂತರ ಕಾಣುವುದು ಅದರ ಪತನ ಎಂಬುದು ಇವನ ವಾದದ ರೀತಿ. ಇವನ ಆತ್ಮಕಥೆ ಈತನ ನಿಧನಾನಂತರ ಪ್ರಕಟವಾಯಿತು. (ಬಿ.ಆರ್.ಜಿ.)

**ಗಿಬ್ಸ್, ಜೋಸಯಾ ವಿಲಾರ್ಡ್ :** 1839–1903. ಅಮೆರಿಕದ ಭೌತವಿಜ್ಞಾನಿ. ಅಮೆರಿಕದ ಕನೆಕ್ಟಿಕಟ್ ಪ್ರಾಂತದ ನ್ಯೂ ಹೇವನ್ ಎಂಬಲ್ಲಿ 11 ಫೆಬ್ರವರಿ 1839ರಂದು ಜನಿಸಿದ. 1858ರಲ್ಲಿ ಯೇಲ್ ವಿಶ್ವವಿದ್ಯಾಲಯದಿಂದ ಬಿ.ಎಸ್. ಪದವಿಯನ್ನೂ 1863ರಲ್ಲಿ ಅದೇ ವಿಶ್ವವಿದ್ಯಾಲಯದ ಪಿಎಚ್.ಡಿ.ಪದವಿಯನ್ನೂ ಪಡೆದು 1869ರ ವರೆಗೆ ಸ್ನಾತಕೋತ್ತರ ಅಭ್ಯಾಸಗಳನ್ನು ಯುರೋಪಿನಲ್ಲಿ ಮಾಡಿದ. ಯುರೋಪಿನಿಂದ ಹಿಂತಿರುಗಿದ ಬಳಿಕ 1871ರಿಂದ ತನ್ನ ಕೊನೆಯ ದಿನದ ವರೆಗೂ ಯೇಲ್ ವಿಶ್ವವಿದ್ಯಾಲಯದಲ್ಲಿ ಗಣಿತೀಯ ಭೌತವಿಜ್ಞಾನದ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ.

1873–78ರ ಅವಧಿಯಲ್ಲಿ ರಸಾಯನವಿಜ್ಞಾನದ ಅಧ್ಯಯನದಲ್ಲಿ ಉಷ್ಣಗತಿವಿಜ್ಞಾನದ (ಥರ್ಮೋಡೈನಮಿಕ್ಸ್) ಉಪಯೋಗದ ಬಗ್ಗೆ ಮೂರು ಲೇಖನಗಳನ್ನು ಪ್ರಕಟಿಸಿದ. ಈ ಸಂಶೋಧನರಂಗದಲ್ಲಿ ಅವನ ಮೊದಲ ಲೇಖನವಾದ ದ್ರವಾನಿಲಗಳ ಉಷ್ಣಗತಿ ಶಾಸ್ತ್ರದಲ್ಲಿ ರೇಖಾಪದ್ಧತಿಗಳು 1873ರಲ್ಲಿ ಪ್ರಕಟವಾಗಿ ಉಷ್ಣಗತಿಶಾಸ್ತ್ರ ಮತ್ತು ಭೌತರಸಾಯನವಿಜ್ಞಾನಗಳ ಅಧ್ಯಯನದಲ್ಲಿ ಪ್ರಾವಸ್ಥಾ ಸೂತ್ರವಿಧಿ(ಫೇಸ್ ರೂಲ್) ಎಂಬ ಹೊಸ ಅಧ್ಯಾಯಕ್ಕೆ ಆರಂಭವಾಯಿತು. ಈ ಲೇಖನಮಾಲಿಕೆಯಲ್ಲಿ ಅತಿ ಮುಖ್ಯವಾದ ಮತ್ತು ಅವನಿಗೆ ಬಹು ಕೀರ್ತಿ ತಂದ ಲೇಖನವೆಂದರೆ ವಿಷಮ ವಸ್ತುಗಳ ನಡುವಣ ಸಮತೋಲ. ಇದು 1876–78ರ ಅವಧಿಯಲ್ಲಿ ಹಲವು ಭಾಗಗಳಾಗಿ ಪ್ರಕಟವಾಯಿತು. ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸ್ ಸಂಸ್ಥೆಯು 1880ರಲ್ಲಿ ರುಮ್ ಫೋರ್ಡ್ ಪದಕವನ್ನಿತ್ತು ಸನ್ಮಾನಿಸಿತು.

ಗಣಿತ ಮತ್ತು ಭೌತವಿಜ್ಞಾನಗಳಲ್ಲಿ ಈಗ ಒಂದು ಅತ್ಯವಶ್ಯ ಭಾಗವೆನಿಸಿರುವ ಸದಿಶವಿಶ್ಲೇಷಣೆಯ (ವೆಕ್ಟರ್ ಅನಾಲಿಸಿಸ್) ಅಭ್ಯಾಸಕ್ಕೆ 1881ರಲ್ಲಿ ಅಡಿಗಲ್ಲು ಹಾಕಿ ಅದನ್ನು ಗ್ರಹ, ಧೂಮಕೇತುಗಳ ಕಕ್ಷೆಗಳನ್ನು ಕಂಡುಹಿಡಿಯುವುದಕ್ಕೂ ಹರಳುಗಳ ರಚನೆಗಳನ್ನು ತಿಳಿಯುವುದಕ್ಕೂ ಗಿಬ್ಸ್ ಉಪಯೋಗಿಸಿದ. 1902ರಲ್ಲಿ ಪ್ರಕಟವಾದ ಅವನ ಕೊನೆ ಲೇಖನದ ಹೆಸರು ಸಂಖ್ಯಾಕಲನಶಾಸ್ತ್ರದ (ಸ್ಟ್ಯಾಟಿಸ್ಟಿಕ್ಸ್) ಮೂಲ ನಿಯಮಗಳು. ಇದು ಸಂಖ್ಯಾಕಲನಶಾಸ್ತ್ರದ ಬೆಳವಣಿಗೆಗೆ ಬಹು ನೆರವು ನೀಡಿತು. ಭೌತರಸಾಯನವಿಜ್ಞಾನದ ಆರಂಭಕ್ಕೆ ಕಾರಣನಾದ ಮಹಾವಿಜ್ಞಾನಿಯೆಂದೂ ಉಷ್ಣಗತಿ ಶಾಸ್ತ್ರದ ಎರಡನೆಯ ನಿಯಮವನ್ನು ರಾಸಾಯನಿಕ, ವಿದ್ಯುತ್ ಮತ್ತು ಉಷ್ಣಶಕ್ತಿಗಳಿಗೆ ಅಳವಡಿಸಿ ಅವುಗಳಿಂದ ಪಡೆಯಬಲ್ಲ ಉಪಯುಕ್ತ ಕ್ರಿಯಾಶಕ್ತಿಗಳ ಬಗ್ಗೆ ಸಂಶೋಧನೆ ನಡೆಸಿದ ಮೊದಲಿಗನೆಂದೂ ಗಿಬ್ಸನನ್ನು ಗೌರವಿಸಿ ರಾಯಲ್ ಸೊಸೈಟಿ 1901ರಲ್ಲಿ ಕಾಪ್ಲೇ ಪದಕವನ್ನಿತ್ತು ಸನ್ಮಾನಿಸಿತು. ಗಿಬ್ಸನ ಸಂಶೋಧನೆಗಳು ಉಷ್ಣಗತಿಶಾಸ್ತ್ರದ ಅಧ್ಯಯನದಲ್ಲಿ ಅವನ ಹೆಸರು ಸ್ಥಿರವಾಗಿ ನಿಲ್ಲುವಂತೆ ಮಾಡಿವೆ. ಅವನ ಹೆಸರು ಪಡೆದಿರುವ ಗಿಬ್ಸ್–ಡೂಹೆಮ್ ಮತ್ತು ಗಿಬ್ಸ್–ಹೆಲ್ಮ್‌ಹಾಲ್ಟ್ಸ್ ಸಮೀಕರಣಗಳು ಅವನ ಸಂಶೋಧನೆಗಳ ಮೌಲ್ಯಕ್ಕೆ ಸಾಕ್ಷಿಯಾಗಿವೆ.

ಗಿಬ್ಸನ ಮರಣಾನಂತರ ಯೇಲ್ ವಿಶ್ವವಿದ್ಯಾಲಯ ಆತನ ಬರಹಗಳನ್ನು ಸಂಕಲಿಸಿ 1928ರಲ್ಲಿ ಎರಡು ಸಂಪುಟಗಳಾಗಿ ಪ್ರಕಟಿಸಿತು. ಈ ಸಂಪುಟ ಅನೇಕ ಪ್ರಸಿದ್ಧ ವಿಜ್ಞಾನಿಗಳ ಲೇಖನಗಳಿಂದ ಕೂಡಿದೆ. ಜೆ. ವಿಲಾರ್ಡ್ ಗಿಬ್ಸನ ವೈಜ್ಞಾನಿಕ ಬರೆಹಗಳನ್ನು ಕುರಿತು ವ್ಯಾಖ್ಯಾನ ಎಂಬ ಸನ್ಮಾನ ವಿಶ್ಲೇಷಣ ಗ್ರಂಥ 1936ರಲ್ಲಿ ಎರಡು ಸಂಪುಟಗಳಾಗಿ ಪ್ರಕಟವಾಯಿತು. ಗಿಬ್ಸನ ಶಿಷ್ಯರಲ್ಲೊಬ್ಬನಾದ ಎಲ್. ಪಿ. ವ್ಹೀಲರ್ ಎಂಬಾತ ಬರೆದ ಜೋಸಯಾ ವಿಲಾರ್ಡ್ ಗಿಬ್ಸ್–ಮಹಾ ಪ್ರಜ್ಞೆಯೊಂದರ ಚರಿತ್ರೆ ಎಂಬ ಪುಸ್ತಕ 1852ರಲ್ಲಿ ಪ್ರಕಟವಾಯಿತು. (ಕೆ.ಟಿ.ಎಸ್.)

**ಗಿಬ್ಸನ್, ವಿಲ್ಫ್ರೆಡ್ ವಿಲ್ಸನ್ :** 1878–1962. ಜಾರ್ಜಿಯನ್ ಕಾವ್ಯಪಂಥದ ನಾಯಕರಲ್ಲೊಬ್ಬ. ಟೆನಿಸನ್ ಪಂಥವನ್ನು ವಿರೋಧಿಸಿ ಜನಜೀವನವನ್ನು ಕಾವ್ಯಕ್ಕೆ ವಸ್ತುವನ್ನಾಗಿ ಬಳಸಿಕೊಂಡು ವಿಪುಲವಾಗಿ ಕಾವ್ಯರಚನೆಮಾಡಿದ ಕವಿ. ಈತ ಇಂಗ್ಲೆಂಡಿನ ನಾರ್ತಂಬರ್‌ಲೆಂಡ್ ಜಿಲ್ಲೆಯಲ್ಲಿ ಜನಿಸಿದ. ಆರ್ಲಿನ ದಿ ಹಾರ್ಪರ್ ಮತ್ತು ದಿ ಕ್ವೀನ್ಸ್ ವಿಜಿಲ್ ಇವನ ಪ್ರಥಮ ಕವನ ಸಂಕಲನಗಳು (1902). ಮೊದಲು ಟೆನಿಸನ್ನನನ್ನು ಅನುಕರಿಸಿದನಾದರೂ ಕ್ರಮೇಣ ಆ ಹಾದಿಯನ್ನು ಬಿಟ್ಟು ತನ್ನ ಜಿಲ್ಲೆಯ ವಿಶಿಷ್ಟ ಕವಿಯಾಗಿ, ಅಲ್ಲಿನ ಜನಜೀವನದ ಸಾಹಿತಿಯಾಗಿ ಈತ 1907ರ ವೇಳೆಗೆ ಪ್ರಸಿದ್ಧನಾದ. ವಿಲಿಯಂ ವರ್ಡ್ಸ್‌ವರ್ತನಂತೆಯೇ ಸರಳವಾದ, ನಿಸರ್ಗಕ್ಕೆ ಹತ್ತಿರವಾದ ಕವಿತಾ ವಸ್ತುವನ್ನು ಉಪಯೋಗಿಸಿಕೊಂಡು ಇನ್ನೂ ಒಂದು ಹೆಜ್ಜೆ ಮುಂದುವರಿದ. ನಾರ್ತಂಬರ್‌ಲೆಂಡ್ ಪ್ರದೇಶದ ರೈತರು, ಕೂಲಿಗಳು, ಗಣಿ ಕೆಲಸಗಾರರು, ಬಂಡಿ ಹೊಡೆಯುವವರು, ಕಲ್ಲು ಒಡೆಯುವವರು, ಕುರಿ ಕಾಯುವವರು, ಅಲೆಮಾರಿಗಳು ಮುಂತಾದ ನೆಲದ ಮಕ್ಕಳ ಸರಳವಾದ ಬದುಕಿನ ಸುಖ ದುಃಖಗಳನ್ನು ತನ್ನ ಕವಿತೆಗಳಲ್ಲಿ ನೇರವಾಗಿ, ಮನಮುಟ್ಟುವಂತೆ ಅಭಿವ್ಯಕ್ತಿಗೊಳಿಸಿದ. ಸ್ಟೋನ್‌ಫೋಲ್ಡ್ಸ್ (1906) ಈ ರೀತಿಯ ಮೊದಲ ಕವನ ಸಂಕಲನ. ಅಲ್ಲಲ್ಲಿ ಜನರ ನುಡಿಗಟ್ಟುಗಳನ್ನೇ ಬಳಸಿ ಪ್ರಾದೇಶಿಕ ಭಾಷೆಗೆ ಬರ್ನ್ಸ್‌ನಂತೆ ಕಾವ್ಯದಲ್ಲಿ ಸ್ಥಾನಮಾಡಿಕೊಟ್ಟ ಕೀರ್ತಿ ಗಿಬ್ಸನ್ನನದು. ಡೇಲಿ ಬ್ರೆಡ್ (1910) ಸೊಗಸಾದ ಕಾವ್ಯನಾಟಕ. ನಿಸರ್ಗದ ಚೆಲುವನ್ನೂ ರೈತಕೂಲಿಗಳ ಸಂಕಟವನ್ನೂ ಒಳಗೊಂಡ ಈ ನಾಟಕ ರಂಗಭೂಮಿಗೆ ಪ್ರಜ್ಞಾವಂತ ಸಾಮಾಜಿಕ ಕೊಡುಗೆ. ವಿಮೆನ್‌ಕೈಂಡ್ (1912), ಕೆಸ್ಟ್ರೆಲ್ ಎಜ್ (1924), ವಿದಿನ್ ಫೋರ್ ವಾಲ್ಸ್ (1950)–ಇವು ಇವನ ಇತರ ನಾಟಕಗಳು. ಬಡ ಜನರ ಬದುಕಿನಿಂದ ಒರಟು ಮತ್ತು ಅಸಂಸ್ಕೃತ ಘಟನೆಗಳಿಂದ ತನ್ನ ಕಾವ್ಯಕ್ಕೆ ಪ್ರತಿಮೆಗಳನ್ನು ವಸ್ತುವನ್ನು ಗಿಬ್ಸನ್ ಆಯ್ದುಕೊಂಡು ತನ್ನ ಕೃತಿಗಳಲ್ಲಿ ಮಾನವೀಯ ಸಹೃದಯತೆಯಿಂದ ಈ ಬಡಜನರ ಬಗ್ಗೆ ಅನುಕಂಪ ಮತ್ತು ಸೌಹಾರ್ದಗಳನ್ನು ಸೂಸಿದ್ದಾನೆ. ಜನರ ಭಾಷೆ, ನುಡಿಗಟ್ಟು, ಆಡುಮಾತು– ಇವುಗಳ ಪದಬಂಧ, ಲಯ, ರೀತಿಗಳನ್ನೇ ಉಳಿಸಿಕೊಂಡು ಮಾತನಾಡುವ ಸಾಮಾನ್ಯ ಬಗೆಯನ್ನೇ ಕಾವ್ಯರೂಪವನ್ನಾಗಿ ಮಾಡಿಕೊಂಡು ಮುಕ್ತಛಂದದಲ್ಲಿ ತನ್ನ ಕವಿತೆಗಳನ್ನು ಗಿಬ್ಸನ್ ರಚಿಸಿದ್ದಾನೆ. ಒಮ್ಮೊಮ್ಮೆ ಮಾತ್ರ ಪ್ರಾಸ ಬಳಸಿರುವುದೂ ಉಂಟು. ಛಂದಕ ಬಂಧದಲ್ಲಿ ಸೊಗಸಾದ ಧ್ವನಿಪೂರ್ಣ ಕವಿತೆಗಳಲ್ಲಿಯೂ ಕಾವ್ಯನಾಟಕಗಳಲ್ಲಿಯೂ ತುಂಬಿ, ಅವೆಲ್ಲವನ್ನೂ ಕಾವ್ಯವನ್ನಾಗಿಸಿದೆ. ಈತನ ನಾಟಕಗಳಲ್ಲಿ, ಕಥನ ಕವನಗಳಲ್ಲಿ ಸರಳ ಜೀವಿಗಳ ಸರಳ ಸುಖಸಂಕಟಗಳ ಸರಳನಿರೂಪಣೆಯಿದ್ದು ಅವು ಮನತಾಗುವಂತಿವೆ. ಅದ್ಭುತ ಮತ್ತು ಅಮಾನುಷಗಳ ಗೊಡವೆಗೇ ಹೋಗದಿದ್ದರೂ ಫ್ಲಾನನ್ ಐಲ್‌ನಂಥ ಕವಿತೆಯಲ್ಲಿ ಬಹುಸುಂದರವಾಗಿ ಅದ್ಭುತ ರಮ್ಯ ಭಯಂಕರಗಳ ಧ್ವನಿ ಚಿತ್ರಣ ಕಾಣಬಹುದು.

ಇವನ ಕಥನ ಕವನಗಳೆಲ್ಲ ನಾಟಕಾಂಶದಿಂದ ಬೆಳಗುತ್ತವೆ. ಈ ನಾಟಕೀಯ ಬಗೆಗೆ ದೇಸೀಪದಗಳಿಂದ ಕಳೆಗಟ್ಟಿದೆ. ಕೆಲವೆಡೆಗಳಲ್ಲಿ ಪದ್ಯದ ಗದ್ಯತನ ಕಾಣಿಸಿದಂತೆನಿಸಿದರೂ ಸಾಮಾನ್ಯವಾಗಿ ಆಡುಮಾತಿನ ಲಯ ಮತ್ತು ಜೀವಂತಿಕೆ ಇದೆ. ಬಾರ್ಡರ್ ಲ್ಯಾಂಡ್ (1914). ಫೈರ್ಸ್ (1912), ಹೋಂ (1920), ಘ್ರ್ಯಾಯೆಲ್, ಹಘಾರ್ಡ್ (1930), ಐಲೆಂಡ್ಸ್ (1932), ಚ್ಯಾಲೆಂಜ್ (1942), ದಿ ಔಟ್ ಪೋಸ್ಟ್ (1944), ದಿ ಐಲೆಂಡ್ ಸ್ಟ್ಯಾಗ್ (1947) ಮುಂತಾದವು ಇವನ ಸುಮಾರು 40 ಕವನ ಸಂಗ್ರಹಗಳಲ್ಲಿ ಮುಖ್ಯವಾದುವು. ಕಾರ್ಖಾನೆಯ ಕೂಲಿಗಾರರ ಮತ್ತು ಬಡವರ ಕವಿಯಾಗಿ ಈತ ಅವರ ನೋವು ನಲಿವುಗಳನ್ನೂ ಕೈಗಾರಿಕಾ ಜೀವನದ ನೈಜಚಿತ್ರಣವನ್ನೂ ಈ ಕವನಗಳಲ್ಲಿ ಚಿತ್ರಿಸಿದ್ದಾನೆ. ನಮ್ಮ ಕಣ್ಣಮುಂದೆಯೇ ಘಟನೆಗಳು ನಡೆಯುವಂತೆ ಕಣ್ಣಿಗೆ ಕಟ್ಟುವ ಚಿತ್ರ ನೇಯುತ್ತಾನೆ, ಗಿಬ್ಸನ್. ಆ ಕಾಲದ ಸಮಾಜದ ಮನಸ್ಸಾಕ್ಷಿ ಎಂದೂ ನಾರ್ತಂಬರ್ ಲೆಂಡ್ ನೆಲದ ಕವಿಯೆಂದೂ ಈತ ಪ್ರಖ್ಯಾತ. (ಎಸ್.ಎ.ಎನ್.)

**ಗಿಯರ್ :** ಆವರ್ತಿಸುತ್ತಿರುವ ಎರಡು ತಾಳುಗಳ (ಷ್ಯಾಫ್ಟ್ಸ್) ಕೇಂದ್ರದೂರ ಅತಿ ಹೆಚ್ಚಾಗಿಲ್ಲದಿರುವಾಗ ಅವುಗಳ ನಡುವೆ ಚಲನೆಯನ್ನು ವರ್ಗಾಯಿಸಲು ಬಳಸುವ ಒಂದು ಯಾಂತ್ರಿಕಾಂಶ. ಅಂದರೆ ತಾಳುಗಳು ಪರಸ್ಪರ ಸಮೀಪವಾಗಿರುವಲ್ಲಿ ಮಾತ್ರ

ಗಿಯರಿನ ಉಪಯೋಗ. ಗಿಯರ್ ಎಂದರೆ ಸ್ಥೂಲವಾಗಿ ಒಂದು ದಂತಚಕ್ರ. ಪಟ್ಟಿ ಚಾಲನೆ (ಬೆಲ್ಟ್ ಡ್ರೈವ್), ರಜ್ಜು ಚಾಲನೆ ಮತ್ತು ಘರ್ಷಣ ಚಕ್ರ–ಇವುಗಳಿಗೆ ಹೋಲಿಸಿದಂತೆ ಗಿಯರ್ ಚಾಲನೆಯಲ್ಲಿ ಜಾರುವಿಕೆ ಅಥವಾ ಸರ್ಪಣಕ್ರಿಯೆಯಿಲ್ಲದೆ ಶಕ್ತಿ ಸಾಗಣೆ ಧನಾತ್ಮಕವೂ ವೇಗಾನುಪಾತ ಖಚಿತವೂ ಆಗಿರುತ್ತದೆ. ತಾಳುಗಳು ಕೊಂಚ ದೂರವಾಗಿರುವಾಗ ಇಂಥದೇ ಧನಾತ್ಮಕ ಚಾಲನೆ ಬೇಕಾದರೆ ಸರಪಣಿಯನ್ನು



**ಚಿತ್ರ: 1. ಗಿಯರ್ ದಂತದ ಪ್ರಧಾನ ಭಾಗಗಳು: 1. ಅಡೆಂಡಂ, 2. ಡಿಡೆಂಡಂ, 3. ಸೂತ್ರಾಂತರ, 4. ಫ್ಲಾಂಕ್, 5. ಕೆಳಮೈ, 6. ಮೂಲಫಿಲೆಟ್, 7. ಮೂಲವೃತ್ತ, 8. ಆಧಾರವೃತ್ತ, 9. ಅಡೆಂಡಂ ವೃತ್ತ, 10. ಮೇಲ್ಮೈ, 11. ದಂತಾಂತರ, 12. ವರ್ತುಳೀಯ ಸೂತ್ರಾಂತರ, 13. ಮುಖ, 14. ಮುಖದ ಅಗಲ, 15. ದಂತದ ದಪ್ಪ**

ಉಪಯೋಗಿಸಬೇಕಾಗುತ್ತದೆ. ತಾಳುಗಳು ಪರಸ್ಪರ ಸಮಾಂತರವಾಗಿರುವುದು, ಛೇದಿಸುವಂತಿರುವುದು, ಅಥವಾ ಸಮಾಂತರವೂ ಅಲ್ಲದೆ ಛೇದಕವೂ ಅಲ್ಲದೆ ಇರುವುದು ಇಂಥ ಸಂದರ್ಭಗಳಿಗೆ ಅನುಗುಣವಾಗಿ ಗಿಯರುಗಳ ರೂಪ ವ್ಯತ್ಯಾಸವಾಗುತ್ತದೆ. ಅನುಕ್ರಮವಾಗಿ ಇವನ್ನು ಸ್ಪರ್ ಗಿಯರ್, ಬೆವೆಲ್ ಗಿಯರ್ ಮತ್ತು ವರ್ಮ್ ಗಿಯರುಗಳಿಂದ ಉದಾಹರಿಸಬಹುದು. ಕೂಡಿಕೆಗೊಂಡ ಎರಡು ಗಿಯರುಗಳಿಂದ ವರ್ಗಾವಣೆಗೊಳ್ಳುವ ಚಲನೆ ಶುದ್ಧಗತೀಯವಾಗಿ (ಕೈನ್‌ಮೆಟಿಕಲಿ) ಗಿಯರ್ ಸೂತ್ರಾಂತರ ಮೈಗಳಿಗೆ (ಗಿಯರ್ ಪಿಚ್ ಸರ್ಫೇಸಸ್) ಸರ್ವಸಮವಾಗಿರುವ ಉರುಳುವ ಮೈಗಳ ಚಲನೆಗೆ ಸಮಾನವಾಗಿದ್ದರೂ ಒಂದು ಗಿಯರ್ ಹಲ್ಲಿನ ಮೇಲೆ ಇನ್ನೊಂದು ಗಿಯರ್ ದಂತ ಕ್ರಿಯೆ ಸಾಮಾನ್ಯವಾಗಿ ಉರುಳು ಹಾಗೂ ಜಾರು ಚಲನೆಗಳ ಒಂದು ಸಂಯೋಜನೆ.



**ಚಿತ್ರ 2. ಸ್ಪರ್ ಗಿಯರುಗಳ ಲಕ್ಷಣಗಳು: 1. ಗಿಯರ್, 2. ಆಧಾರವೃತ್ತ, 3. ಸೂತ್ರಾಂತರ ವೃತ್ತ, 4. ಒತ್ತಡ ಕೋನ, 5. ಸೂತ್ರಾಂತರ ಕೋನ, 6. ಆಧಾರವೃತ್ತ, 7. ಪಿನಿಯನ್, 8. ಚಾಲಕ, 9. ಅಂತರ್ವಲಿತ, 10. ಅಂತರ್ವಲಿತ, 11. ಉಭಯಸಾಮಾನ್ಯ ಸ್ಪರ್ಶಕ, 12. ಚಾಲಿತ, 13. ಕ್ರಿಯಾರೇಖೆ**

ಎರಡು ಸಾದಾ ಚಕ್ರಗಳಲ್ಲಿ ಒಂದರ ಅಂಚು ಮತ್ತೊಂದಕ್ಕೆ ಒತ್ತಿ ಹಿಡಿದಂತೆ ಇರುವಾಗ ಒಂದನ್ನು ತಿರುಗಿಸಿದಾಗ ಮತ್ತೊಂದು ತಿರುಗುವುದಷ್ಟೆ. ಶಕ್ತಿಯ ಅಥವಾ ಚಾಲನೆಯ ಸಾಗಣೆಗೆ ಇಲ್ಲಿ ಎರಡು ಮೈಗಳ ನಡುವಣ ಘರ್ಷಣೆ ಮಾತ್ರ ಕಾರಣ. ಚಕ್ರಗಳ ಅಂಚಿನ ಮೇಲ್ಮೈಯಲ್ಲಿ ದಂತಗಳನ್ನು ಎಂದರೆ ಹಲ್ಲುಗಳನ್ನು ಕೊರೆದರೆ ಅವು ಗಿಯರ್ ಚಕ್ರಗಳಾಗುತ್ತವೆ. ದಂತಗಳು ಕೊಂಚ ಭಾಗ ಈ ಸಾದಾ ಚಕ್ರದ ಅಂಚಿನ ಮೇಲುಗಡೆಗೂ ಉಳಿದ ಭಾಗ ಕೆಳಗಡೆಗೂ ಇರುತ್ತವೆ. ದಂತದ ನಡುವಣ ಹಿಡಿತದಿಂದಾಗಿ ಶಕ್ತಿಯ ಸಾಗಣೆ ಹೆಚ್ಚು ಭದ್ರವಾಗುತ್ತದೆ. ಗಿಯರ್ ಚಕ್ರಕ್ಕೆ ಸಂಬಂಧಿಸಿದಂತೆ ಈ ಕಲ್ಪಿತ ಸಾದಾ ಚಕ್ರವನ್ನು ಪ್ರತಿನಿಧಿಸುವ ವೃತ್ತಕ್ಕೆ ಸೂತ್ರಾಂತರ ವೃತ್ತ (ಪಿಚ್ ಸರ್ಕಲ್) ಎಂದು ಹೆಸರು. ಗಿಯರ್ ಚಕ್ರದ ಈ ಕಲ್ಪಿತ ಸೂತ್ರಾಂತರ ವೃತ್ತ ಅಡೆಂಡಂ ವೃತ್ತ ಎಂಬ ಹೆಸರಿನ ದಂತಗಳ ಹೊರ ವೃತ್ತಕ್ಕೂ ಇರುವ ಅರೀಯ (ರೇಡಿಯಲ್) ಅಂತರಕ್ಕೆ ಅಡೆಂಡಂ ಎಂದು ಹೆಸರು. ಸ್ಪರ್ ಗಿಯರುಗಳಲ್ಲಿ (ದುಂಡು ಚಕ್ರದ ಮೇಲೆ ದಂಶ ಕೊರೆದಿರುವಂಥವು) ಅಡೆಂಡಂ ಒಂದೇ ಅಳತೆಯದಾಗಿದ್ದರೆ, ಬೆವೆಲ್ ಗಿಯರುಗಳಲ್ಲಿ (ಶಂಕು ಭಾಗದ ಮೇಲೆ ದಂತ ಕೊರೆದಿರುವಂಥವು) ಚಕ್ರದ ಒಳ ಮುಖದಿಂದ ಹೊರಮುಖದ ವರೆಗೆ ಅಡೆಂಡಂ ಅಳತೆ ಹೆಚ್ಚುತ್ತ ಹೋಗುತ್ತದೆ. ಒಳಮುಖದ ಅಡೆಂಡಂ ವೃತ್ತದ ಮತ್ತು ಹೊರಮುಖದ ಅಡೆಂಡಂ ವೃತ್ತದ ವ್ಯಾಸಗಳ ವ್ಯತ್ಯಾಸದ ಅರ್ಧದಷ್ಟಕ್ಕೆ ಅಡೆಂಡಂ ಏರಿಕೆ ಎಂದು ಹೆಸರು. ಸೂತ್ರಾಂತರ ಮೈಯ ಶಂಕುವಿಗೂ ಹೊರ ಅಥವಾ ಅಡೆಂಡಂ ಮೈಯ ಶಂಕುವಿಗೂ ಇರುವ ಕೋನಾಂತರಕ್ಕೆ ಅಡೆಂಡಂ ಕೋನ ಎಂದು ಹೆಸರು. ಬೆವೆಲ್ ಗಿಯರ್ ಚಕ್ರದ ಅಗಲ ಜಾಸ್ತಿಯಾದಂತೆ ಅಡೆಂಡಮಿನ ಅಳತೆ ಹೆಚ್ಚುತ್ತ ಹೋದರೂ ಅಡೆಂಡಂ ಕೋನ ಒಂದೇ ಗಾತ್ರದ್ದಾಗಿರುತ್ತದೆ. ಅಡೆಂಡಂ ಸಾಮಾನ್ಯವಾಗಿ ಹಲ್ಲಿನ ಒಟ್ಟು ಎತ್ತರದ ಅರ್ಧದಷ್ಟೇ ಇರುವುದಾದರೂ ದಂತಕ್ರಿಯೆಯನ್ನು ನಿರ್ದಿಷ್ಟ ರೀತಿಯಲ್ಲಿ ಮಾರ್ಪಡಿಸಲೋಸುಗ ಅದನ್ನು ಕಡಿಮೆ ಅಥವಾ ಹೆಚ್ಚು ಎತ್ತರದ್ದನ್ನಾಗಿ ಮಾಡಿರುವುದೂ ಉಂಟು. ಇಂಥವಕ್ಕೆ ಕುಬ್ಜ ಅಡೆಂಡಂ ಮತ್ತು ನೀಳ ಅಡೆಂಡಂ ಎಂದೂ ಹೆಸರುಂಟು.




**ಚಿತ್ರ 3. ಅಂತರ್ವಲಿತ ಮತ್ತು ಚಕ್ರಜೇಯ ವಕ್ರಗಳನ್ನು ರೇಖಿಸುವ ವಿಧಾನವನ್ನು ಅನುಕ್ರಮವಾಗಿ (a) ಮತ್ತು (b) ಚಿತ್ರಗಳಲ್ಲಿ ತೋರಿಸಿದೆ. ಚಿತ್ರದಲ್ಲಿ 1 ರೇಖಿಸುವ ಬಿಂದು, 2. ಸೂತ್ರಾಂತರ ವೃತ್ತ, 3. ಆಧಾರ ವೃತ್ತ**

ಗಿಯರಿನ ಭಾಗಗಳ ನಾಮಾಂಕಿತಗಳನ್ನು (ಸರಳತೆಗಾಗಿ ಸ್ಪರ್ ಮಾದರಿಯನ್ನು ಉದಾಹರಿಸಿದೆ) ಚಿತ್ರಗಳು (1) ಮತ್ತು (2) ತಿಳಿಯಬಹುದು. ಕೂಡಿಕೆಗೊಂಡಿರುವ ಎರಡು ಗಿಯರುಗಳಲ್ಲಿ ಚಿಕ್ಕವನ್ನು ಪಿನಿಯನ್ ಎನ್ನುತ್ತಾರೆ. ಸೂತ್ರಾಂತರ ಮೈಯ ವೃತ್ತ ಸೂತ್ರಾಂತರ ವೃತ್ತವಾದರೆ ಇಲ್ಲಿಂದ ದಂತದ ತುದಿಯವರೆಗಿನ ಅರೀಯ ದೂರ ಅಡೆಂಡಂ. ಇಲ್ಲಿಂದಲೇ ಕೂಡಿಕೆಗೊಂಡ ಗಿಯರಿನ ದಂತಾಂತರ (ಟೂತ್ ಸ್ಪೇಸ್) ತಳದವರೆಗಿನ ಅರೀಯ ಆಳ ಅಡೆಂಡಂ. ದಂತದ ತುದಿಗೂ ದಂತಾಂತರದ ತಳಕ್ಕೂ ನಡುವಿನ ಅರೀಯ ದೂರ ದಂತಾಂತರಾಳ (ಕ್ಲಿಯೆರೆನ್ಸ್). ಎರಡೂ ಸೂತ್ರಾಂತರ




**ಚಿತ್ರ 4. ಸ್ಪರ್ ಗಿಯರುಗಳು. (a) ಹೊರಸ್ಪರ್ಶವಿರುವ ಸ್ಪರ್ ಗಿಯರ್ ಮತ್ತು ಪಿನಿಯನ್, (b) ಒಂಟಿ ಕುಂಡಲಿನೀಯ ಗಿಯರ್, (c) ಒಳಸ್ಪರ್ಶವಿರುವ ಗಿಯರ್ ಮತ್ತು ಪಿನಿಯನ್**

ವೃತ್ತಗಳ ಸಂಸ್ಪರ್ಶ ಬಿಂದುವಿಗೆ ಸೂತ್ರಾಂತರ ಬಿಂದುವೆಂದೂ ಎರಡೂ ಸೂತ್ರಾಂತರ ಮೈಗಳ ಸಂಸ್ಪರ್ಶರೇಖೆಗೆ ಸೂತ್ರಾಂತರ ರೇಖೆಯೆಂದೂ ಹೆಸರು. ಈ ರೇಖೆಯಿಂದ ಮೈಯ ಮೇಲುಭಾಗಕ್ಕೆ ದಂತಫಲಕವೆಂದೂ ದಂತದ ತಳದವರೆಗಿನ ಮೈಗೆ ದಂತಪಾರ್ಶ್ವವೆಂದೂ ಹೆಸರು. ಫಲಕ ಪಾರ್ಶ್ವಗಳೆರಡೂ ಸೇರಿ ದಂತಮೈ ಆಗುತ್ತದೆ. ಸೂತ್ರಾಂತರ ವೃತ್ತದ ಪರಿಧಿಯಲ್ಲಿರುವುದನ್ನೇ ದಂತದ ದಪ್ಪ ಎನ್ನುವುದು. ಅಡೆಂಡಂ ಡಿಡೆಂಡಂ ಸೇರಿ ಒಟ್ಟು ಆಳವಾದರೆ ಇದರಲ್ಲಿ ದಂತಾಂತರಾಳವನ್ನು ಕಳೆದದ್ದು ಕಾರ್ಯಕಾರೀ ಆಳವಾಗುತ್ತದೆ. ದಂತದ ಮೇಲುಭಾಗದ ಮೈಗೆ ಪ್ರದೇಶವೆಂದೂ ದಂತಾಂತರದ ತಳ ಭಾಗದ ಮೈಗೆ ತಳಪ್ರದೇಶವೆಂದೂ ಹೆಸರು. ಸೂತ್ರಾಂತರ ವೃತ್ತದ ಪರಿಧಿಯ ಮೇಲೆ ಅಳೆದಂತೆ ಯಾವುದೇ ದಂತದ ಒಂದು ಬಿಂದುವಿಗೂ ಅದರ ಮುಂದಿನ ದಂತದ ಅಂಥದೇ ಬಿಂದುವಿಗೂ ಇರುವ ದೂರ ವರ್ತುಳೀಯ

ಸೂತ್ರಾಂತರ. ಮಿಲಿಮೀಟರುಗಳಲ್ಲಿರುವ ಸೂತ್ರಾಂತರ ವ್ಯಾಸವನ್ನು ದಂತಗಳ ಸಂಖ್ಯೆಯಿಂದ ಭಾಗಿಸಿದ ಲಬ್ಧ ಮಾಡ್ಯೂಲ್ ಆದರೆ, ಬ್ರಿಟಿಷ್ ಪದ್ಧತಿಯಲ್ಲಿ ದಂತಗಳ ಸಂಖ್ಯೆಯನ್ನು ಸೂತ್ರಾಂತರ ವ್ಯಾಸದಿಂದ (ಅಂಗುಲಗಳಲ್ಲಿ) ಭಾಗಿಸಿ ಬರುವುದನ್ನು ವ್ಯಾಸೀಯ ಸೂತ್ರಾಂತರ ಎನ್ನುತ್ತಾರೆ. ಎರಡೂ ಸೂತ್ರಾಂತರ ವೃತ್ತಗಳ ಸಂಸ್ಪರ್ಶ ಬಿಂದುವಿನಲ್ಲಿ ಎಳೆದ ಉಭಯ ಸಾಮಾನ್ಯ ಸ್ಪರ್ಶರೇಖೆಯಿಂದ ಕೂಡಿಕೆಯಾಗಿರುವ ಎರಡೂ ದಂತಗಳ ಸಂಸ್ಪರ್ಶಬಿಂದುವಿನಲ್ಲಿ ಎಳೆದ ಉಭಯ ಸಾಮಾನ್ಯ ಲಂಬಕ್ಕೆ ಇರುವ ಕೋನಕ್ಕೆ ಒತ್ತಡದ ಕೋನ ಎಂದು ಹೆಸರು. ಶಿಷ್ಟಮಾನಕ ದಂತ ರೂಪವೆನ್ನಬಹುದಾದ ಅಂತರ್ವಲಿತ (ಇನ್‌ವೊಲ್ಯೂಟ್) ದಂತಗಳಲ್ಲಿ ಈ ಒತ್ತಡ ಕೋನ ಒಂದೇ ಸಮವಾಗಿರುತ್ತದೆ. ಗಿಯರ್ ತಯಾರಿಕೆಯಲ್ಲಿ ಏಕರೂಪ ಸಾಧನೆಗಾಗಿ ಒತ್ತಡ ಕೋನ 14 ½$^0$ ಮತ್ತು 20$^0$ ಗಳನ್ನು ಶಿಷ್ಟಮಾನಕವೆಂದು ಅಂಗೀಕರಿಸಿ ರುತ್ತದೆ. ದಂತರೂಪದಲ್ಲಿ ಇನ್ನೊಂದು ಚಕ್ರಜ (ಸೈಕ್ಲಾಯಿಡ್) ದಂತದಲ್ಲಿ ಈ ಒತ್ತಡ ಕೋನ ಸಂಸ್ಪರ್ಶಬಿಂದುವಿನೊಡನೆ ವ್ಯತ್ಯಾಸವಾಗುತ್ತ ಹೋಗುತ್ತದೆ.



**ಚಿತ್ರ 5.** ಆಂತರಿಕ ಸ್ಪರ್ ಗಿಯರ್

ದಂತರೂಪಗಳು : ಒಂದು ಆಧಾರವೃತ್ತದ ಮೇಲೆ ಬಿಗಿಯಾಗಿ ಸುತ್ತಿರುವ ದಾರವನ್ನು ಅಳಕ ಬಿಡದೆ ಬಿಚ್ಚುತ್ತ ಹೋದಾಗ ದಾರದ ಮೇಲಿನ ಒಂದು ಬಿಂದು ರೇಖಿಸುವ ವಕ್ರವೇ ಅಂತರ್ವಲಿತ. ಆಧಾರವೃತ್ತದಿಂದಾಚೆಗೆ ದಂತದ ಪರಿಧಿ ರೇಖೆಗಳಿರುವುದು ಈ ಆಕಾರದಲ್ಲಿ. ಆಧಾರವೃತ್ತದೊಳಗಡೆ ದಂತಪಾರ್ಶ್ವ ಸಾಮಾನ್ಯವಾಗಿ ಅರೀಯ ರೇಖೆಯಲ್ಲಿದ್ದು ತಳ ಪ್ರದೇಶಕ್ಕೆ ಒಂದು ಬಾಗು ರೇಖೆಯಿಂದ ಸೇರಿಸಲ್ಪಟ್ಟಿರುತ್ತದೆ.

ಅದೇ ರೀತಿ ಆಧಾರವೃತ್ತದ ಪರಿಧಿಯ ಮೇಲೆ ಅಥವಾ ಒಳಗೆ ಜಾರುವಿಕೆಯಿಲ್ಲದೆ ಉರುಳುತ್ತಿರುವ ಮತ್ತೊಂದು ಸಣ್ಣ ವೃತ್ತದ ಪರಿಧಿಯ ಮೇಲಿನ ಬಿಂದುವೊಂದು ರೇಖಿಸುವ ವಕ್ರವೇ ಚಕ್ರಜ. ಈ ಎರಡೂ ದಂತ ಆಕಾರಗಳ ಉತ್ಪಾದನೆಯನ್ನು ಚಿತ್ರದ(3)ರಲ್ಲಿ ತೋರಿಸಿದೆ. ಚಕ್ರಜ ದಂತಗಳು ಉಪಯೋಗದಲ್ಲಿರುವ ಗಡಿಯಾರಗಳು, ಮಾಪನಯಂತ್ರಗಳು ಮುಂತಾದ ಕೆಲವೆಡೆಗಳಲ್ಲುಳಿದು ಸರ್ವತ್ರ ಅಂತರ್ವಲಿತ ಗಿಯರುಗಳೇ ಬಳಕೆಯಲ್ಲಿವೆ ಎನ್ನಬಹುದು.

ವೇಗಾನುಪಾತ : ಶಕ್ತಿಸಾಗಣೆಯ ಜೊತೆಗೆ ಗಿಯರುಗಳ ಮುಖ್ಯಕಾರ್ಯ ಪರಿಕ್ರಮಣ ವೇಗದ ಬದಲಾವಣೆ ಮಾಡುವುದು. ಈ ವೇಗಾನುಪಾತ ಗಿಯರುಗಳಲ್ಲಿನ ದಂತಗಳ ಸಂಖ್ಯೆಯನ್ನು ಅವಲಂಬಿಸಿದೆ. ಜಾರುವಿಕೆ ಇಲ್ಲದಿರುವುದರಿಂದ ಯಾವುದೇ ಅವಧಿಯಲ್ಲಿ ಎರಡೂ ಗಿಯರುಗಳ ಸೂತ್ರಾಂತರ ವೃತ್ತದ ಪರಿಧಿಯಲ್ಲಿ ಕ್ರಮಿಸುವ ದೂರ ಒಂದೇ ಸಮ. ಹೀಗಾಗಿ $\pi d_1 n_1 = \pi d_2 n_2$ (ಇಲ್ಲಿ $d_1$ ಮತ್ತು $d_2$ ಎರಡೂ ಗಿಯರುಗಳ ಸೂತ್ರಾಂತರ ವ್ಯಾಸ ಹಾಗೂ $n_1$ ಮತ್ತು $n_2$ ಅನುಕ್ರಮವಾಗಿ ಅವುಗಳ ಪ್ರತಿಮಿನಿಟ್ ಪರಿಕ್ರಮಣ–ಪ್ರ.ಮಿ.ಪ.) ಕೂಡಿಕೊಳ್ಳಬೇಕಾದರೆ ಎರಡೂ ಗಿಯರುಗಳ ವರ್ತುಳೀಯ ಸೂತ್ರಾಂತರ ಒಂದೇ ಇರಬೇಕಾದ್ದರಿಂದ ಗಿಯರುಗಳ ಸೂತ್ರಾಂತರ ಪರಿಧಿ ಅವುಗಳ ದಂತಸಂಖ್ಯೆ z ಗೆ ಅನುಗುಣವಾಗಿರುತ್ತದೆ.

ಆದ್ದರಿಂದ $$\frac{n_1}{n_2} = \frac{\pi d_2}{\pi d_1} = \frac{z_2}{z_1}$$

ಗಿಯರುಗಳ ಹಿಂದೊದೆತ ಹಾಗೂ ಅಂತಃಕ್ಷೇಪ : ಒಂದು ದಿಶೆಯಲ್ಲಿ ತಿರುಗುತ್ತಿರುವ ಗಿಯರುಗಳನ್ನು ವಿರುದ್ಧ ದಿಶೆಯಲ್ಲಿ ತಿರುಗಿಸಿದಾಗ ಕೊಂಚ ನಿಷ್ಕ್ರಿಯ ಅವಧಿಯಿದ್ದು ಅನಂತರ ಅವು ಕ್ರಿಯಾಶೀಲವಾಗುವುದನ್ನು ಗಮನಿಸಬಹುದು. ಇದಕ್ಕೆ ಹಿಂದೊದೆತ (ಬ್ಯಾಕ್‌ಲ್ಯಾಷ್) ಎಂದು ಹೆಸರು. ಗಿಯರಿನ ದಂತದ ದಪ್ಪಕ್ಕಿಂತ ಕೂಡಿಕೆಯ ಗಿಯರಿನ ದಂತಾಂತರ ಅಗಲವಾಗಿರುವುದೇ ಇದರ ಕಾರಣ. ಕೂಡಿರುವ ಗಿಯರುಗಳಲ್ಲಿ ಈ ಹಿಂದೊದೆತ ಪೂರ್ಣವಾಗಿ ಇಲ್ಲದಿರಬೇಕಾದರೆ ಗಿಯರಿನ ಎಲ್ಲ ಭಾಗಗಳೂ ಅಳತೆ ಗಾತ್ರಗಳಲ್ಲಿ ಪರಿಪೂರ್ಣವಾಗಿದ್ದು ಗಿಯರುಗಳ ಉಷ್ಣ ವಿಸರಣ ಗುಣಾಂಕವೂ ಒಂದೇ ಇರಬೇಕಾಗುತ್ತದೆ. ಇವನ್ನು ಸಾಧಿಸುವುದು ಕಷ್ಟವಾದ್ದರಿಂದಲೂ ಎಣ್ಣೆ ಹಚ್ಚಲು (ಲ್ಯೂಬ್ರಿಕೇಷನ್) ಅನುಕೂಲವಾಗಿರಲಿ ಎಂದೂ ಗಿಯರ್ ದಂತಗಳ ನಡುವೆ ಸ್ವಲ್ಪ ಅಂತರ ಉಳಿಸಿರುತ್ತದೆ. ನಿಯಂತ್ರಣ ವಿನ್ಯಾಸಗಳು ಮುಂತಾದ ಕರಾರುವಾಕ್ಕದ ಗಿಯರಣವಿರಬೇಕಾದಲ್ಲಿ (ಕಂಟ್ರೋಲ್ ಗಿಯರಿಂಗ್) ಸ್ಪ್ರಿಂಗು ಗಳು ಮುಂತಾದವುಗಳ ಉಪಯೋಗದಿಂದ ಹಿಂದೊದೆತ ವನ್ನು ತಪ್ಪಿಸಲಾಗುತ್ತದೆ. ಗಿಯರ್ ದಂತಗಳಲ್ಲಿ ಅಂತಃಕ್ಷೇಪವಿರುತ್ತದೆ (ಇಂಟರ್‌ಫಿಯರೆನ್ಸ್) ಎಂದರೆ ಒಂದು ದಂತದ ತುದಿ ಮತ್ತೊಂದು ಪಾರ್ಶ್ವದೊಳಕ್ಕೆ ಅಗೆಯುತ್ತದೆ. ಗಿಯರಿಗೆ ಹೋಲಿಸಿದಂತೆ ಪಿನಿಯನ್ನಿನಲ್ಲಿ ಅತಿ ಕಡಿಮೆ ಸಂಖ್ಯೆಯ ದಂತಗಳಿರುವಾಗ ಹೀಗಾಗುವ ಸಂಭವವುಂಟು. ಗಿಯರಿನ ಅಡೆಂಡಮ್ಮನ್ನು ಕಡಿಮೆ ಮಾಡುವುದರಿಂದ, ಒತ್ತಡಕೋನ ವನ್ನು ಹೆಚ್ಚಿಸುವುದರಿಂದ, ಗಿಯರು ಗಳ ನಡುವಿನ ಕೇಂದ್ರಾಂತರವನ್ನು ಹೆಚ್ಚಿಸಿ ಹಿಂದೊದೆತವನ್ನು ಸ್ವಲ್ಪ ಜಾಸ್ತಿಮಾಡುವುದ ರಿಂದ. ಪಿನಿಯನ್ನಿನ ಪಾರ್ಶ್ವವನ್ನು ಕೆಳಗೆ ಕತ್ತರಿಸುವುದರಿಂದ ಈ ಅಂತಃಕ್ಷೇಪ ಆಗದಂತೆ ನೋಡಿಕೊಳ್ಳಬಹುದು.



**ಚಿತ್ರ 6.** ಕುಂಡಲಿನೀ ಗಿಯರುಗಳು: ಎಡಗಡೆಯದು ಸಮಾಂತರ ಕುಂಡಲಿನೀ ಗಿಯರ್, ಬಲಗಡೆಯದು ಭೇದಿಸಿದ ಕುಂಡಲಿನೀ ಗಿಯರ್

ಸ್ಪರ್ ಗಿಯರುಗಳು : ಅಕ್ಷಗಳು ಸಮಾಂತರವಾಗಿದ್ದು ದಂತಗಳು ಕೂಡ ಗಿಯರಿನ ಕೇಂದ್ರರೇಖೆಗೆ ಸಮಾಂತರವಾಗಿರುವ ಗಿಯರುಗಳಿವು. ಸೂಕ್ಷ್ಮ ಗಡಿಯಾರಗಳಿಂದ ಹಿಡಿದು ಭಾರಿ ಯಂತ್ರೋಪಕರಣಗಳು. ಮೋಟಾರುಕಾರು ಹಾಗೂ ವಾಯು ಎಂಜಿನ್ ಗಿಯರ್ ಪೆಟ್ಟಿಗೆಗಳ ವರೆಗೂ ಇವು ಬಹಳ ಉಪಯೋಗದಲ್ಲಿವೆ. (ಚಿತ್ರ.4 ನೋಡಿ)



**ಚಿತ್ರ 7.** ಪಿನಿಯನ್ನುಗಳು ಇರುವ ಬೆವೆಲ್ ಗಿಯರುಗಳು ಉದಾ: (a) ನೇರವಾಗಿರುವ (b) ಕುಂಡಲಿನೀಯ (c) ಒಳಬಾಗಿರುವ (d) ಹೈಪಾಯಿಡ್

ರ್‍ಯಾಕ ಮತ್ತು ಪಿನಿಯನ್ : ಒಂದು ಗಿಯರಿನ ಸೂತ್ರಾಂತರ ವೃತ್ತದ ವ್ಯಾಸವನ್ನು ಹೆಚ್ಚಿಸುತ್ತ ಹೋಗಿ ಅದು ಅನಂತವಾಯಿತೆಂದಿಟ್ಟುಕೊಂಡರೆ ಆಗ ಅದರ ಪರಿಧಿ ಒಂದು ಸರಳರೇಖೆಯಾಗಿ ಸೂತ್ರಾಂತರ ಮೈ ಒಂದು ಸಮತಲ ಪಟ್ಟಿಯಾಗುತ್ತದೆ. ಆಗ ಅದಕ್ಕೆ ರ್‍ಯಾಕ್ ಎಂದು ಹೆಸರು. ಇನ್ನೊಂದು ಗಿಯರ್ ಪಿನಿಯನ್ ಆಗುತ್ತದೆ. ರ್‍ಯಾಕ್ ಮತ್ತು ಪಿನಿಯನ್ನಿಂದ ವರ್ತುಳೀಯ ಚಲನೆಯನ್ನು ರೇಖೀಯ ಚಲನೆಯಾಗಿ ಅಥವಾ ವಿಪರ್ಯವಾಗಿ ಪರಿವರ್ತಿಸಲು ಸಾಧ್ಯ ಉಂಟು.

ಆಂತರಿಕ ಗಿಯರ್ : ಹೊರ ಮುಖದಲ್ಲಿ ಕೂಡಿಕೊಳ್ಳುವ ಎರಡು ಸ್ಪರ್ ಗಿಯರುಗಳು ವಿರುದ್ಧ ದಿಶೆಗಳಲ್ಲಿ ಓಡುತ್ತವೆ. ದೊಡ್ಡದಾದ ಗಿಯರ್ ಚಕ್ರದ ಹೊರಬದಿಯಲ್ಲಲ್ಲದೆ ಒಳಬದಿಯಲ್ಲಿ ದಂತಗಳು ರೂಪಿತವಾಗಿದ್ದು ಪಿನಿಯನ್ ಅದರ ಒಳಗಡೆ ಯಿಂದಲೇ ಕೂಡಿಕೊಳ್ಳುವ ವ್ಯವಸ್ಥೆಗೆ ಆಂತರಿಕ ಗಿಯರಣವೆಂದು ಹೆಸರು. (ಚಿತ್ರ.5 ನೋಡಿ)

ಇಲ್ಲಿ ಎರಡೂ ಒಂದೇ ದಿಶೆಯಲ್ಲಿ ತಿರುಗುವುದನ್ನು ಕಾಣಬಹುದು. ಎರಡೂ ತಾಳುಗಳ ಅಂತರ ಕಡಿಮೆಯಿದ್ದು ಘಟಕ ಅಡಕವಾಗಿಯೂ ದಂತಕ್ರಿಯೆ ದಕ್ಷವಾಗಿಯೂ ಇರುವುದರಿಂದ ವೇಗ ಕಡಿಮೆ ಮಾಡಲು ಉದ್ದೇಶಗಳಿಗೆ ಇದು ಬಹಳ ಸೂಕ್ತವಾದದ್ದಾಗಿರುತ್ತದೆ. (ಚಿತ್ರ.6 ನೋಡಿ)

ಕುಂಡಲಿನೀ (ಹೆಲಿಕಲ್) ಗಿಯರ್ : ಸಮಾಂತರ ಅಕ್ಷಗಳ ಮೇಲೆಯೇ ಓಡುವ ಗಿಯರುಗಳ ದಂತಗಳು ಅಕ್ಷಕ್ಕೆ ಸಮಾಂತರವಾಗಿರುವುದನ್ನು ಬಿಟ್ಟು ಅಕ್ಷಕ್ಕೆ ಓರೆಯಾಗಿ ತಿರುಚಿದಂತಿದ್ದರೆ (ಅಥವಾ ಗಿಯರಿನ ಸುತ್ತ ಕುಂಡಲಿನಿಯಂತೆ ಸುತ್ತುವಂತಿದ್ದರೆ) ಕುಂಡಲಿನೀ ಗಿಯರ್ ಆಗುತ್ತದೆ. ಈ ತಿರುಚಿನಿಂದಾಗಿ ದಂತಗಳ ನಡುವಣ ಸಂಪರ್ಕ ಒಮ್ಮೆಗೇ ಆಗದೆ ಒಂದು ತುದಿಯಲ್ಲಿ ಪ್ರಾರಂಭಿಸಿ ದಂತಫಲಕದ ಅಡ್ಡವಾಗಿ ಮುಂದುವರಿಯುತ್ತ ಹೊಗುತ್ತದೆ. ಇದರಿಂದಾಗಿ ಅದರಲ್ಲೂ ಅಧಿಕ ವೇಗಗಳಲ್ಲಿ ಗಿಯರಣ ಕ್ರಿಯೆಯಲ್ಲಿನ ಆಘಾತ ಕಡಿಮೆಯಾಗಿ ಶಬ್ದವೂ ಅಷ್ಟಾಗಿ ಇರುವುದಿಲ್ಲ. ತಿರುಚು ಒಂದೇ ಕಡೆಗಿರದೆ ನಡುವಿನಿಂದ ಎರಡೂ ಕಡೆಗಿರುವಾಗ ಅದನ್ನು ದ್ವಿಕುಂಡಲಿನೀ ಗಿಯರ್ ಅಥವಾ ಹೆರ್‍ರಿಂಗ್ ಬೋನ್ ಗಿಯರ್ ಎನ್ನಲಾಗುತ್ತದೆ. (ಚಿತ್ರ.7 ನೋಡಿ)

ಇದರ ಕ್ರಿಯೆ ನಿಶ್ಶಬ್ದವಾಗಿರುವುದರ ಜೊತೆಗೆ ಅಕ್ಷೀಯ ನೂಕುಬಲವೂ (ಥ್ರಸ್ಟ್) ಸಮತುಲಿತಗೊಂಡು ಬಹಳ ಸಲೀಸಾಗಿ ಓಡುತ್ತದೆ. ಸಮಾಂತರವಲ್ಲದ ಹಾಗೂ ಪರಸ್ಪರ ಛೇದಿಸದೆಯೂ ಇರುವ ತಾಳುಗಳಿಗಾಗಿ ಸಹ ಕುಂಡಲಿನೀ ಗಿಯರುಗಳನ್ನು ಅಭಿಕಲ್ಪಿಸುವುದು ಸಾಧ್ಯ. ಇಲ್ಲಿನ ದಂತಕ್ರಿಯೆ ಸಮಾಂತರ ತಾಳುಗಳಲ್ಲಿನದಕ್ಕಿಂತ ಭಿನ್ನವಾಗಿರುತ್ತದೆ. ಹಾಗೂ ಇದು ಹೋಲಿಕೆಯಲ್ಲಿ ಲಘುವಾಗಿರುವ ಸೇವೆಗೆ ಮಾತ್ರ ಉಪಯೋಗಕ್ಕೆ ಬರುತ್ತದೆ.



ಚಿತ್ರ 8. ವರ್ಮ್ ಮತ್ತು ವರ್ಮ್ ಗಿಯರ್

ಬೆವೆಲ್ ಗಿಯರ್ : ತಾಳುಗಳು ಸಮಾಂತರವಾಗಿರದೆ ಪರಸ್ಪರ ಛೇದಿಸುವಂತಿರುವಾಗ ಇವುಗಳ ಉಪಯೋಗ ಶಕ್ತಿಸಾಗಣೆಯಲ್ಲಿ ದಿಕ್ಕಿನ ಬದಲಾವಣೆಗಾಗಿ ಮಾತ್ರ. ಇವು ಬೇಕಾದರೆ ಎರಡು ಗಿಯರುಗಳೂ ಸಮ ಅಳತೆಯವಾಗಿರುತ್ತವೆ. ದಿಕ್ಕಿನ ಬದಲಾವಣೆಯೊಡನೆ ವೇಗದ ವ್ಯತ್ಯಾಸವನ್ನು ಪಡೆಯ ಬೇಕಾಗಿರುವಾಗ ಗಿಯರುಗಳು ಭಿನ್ನ ಅಳತೆಯವಾಗಿರುತ್ತವೆ. ತಾಳು ಅಕ್ಷಗಳು ಪರಸ್ಪರ $90^0$ ಯಲ್ಲಿ ಛೇಧಿಸುವಂತಿರುವ ಹಾಗೂ ಸಮ ಅಳತೆಯ ಬೆವೆಲ್ ಗಿಯರುಗಳ ಜೋಡಿಯನ್ನು ಮೈಟರ್ ಗಿಯರುಗಳು ಎನ್ನುತ್ತಾರೆ. ಬೆವೆಲ್ ಗಿಯರುಗಳ ದಂತಗಳು ನೇರವಾಗಿರಬಹುದು, ಕುಂಡಲಿನೀಯವಾಗಿರಬಹುದು.(ಚಿತ್ರ.8 ನೋಡಿ) ಒಳಬಾಗಿರಬಹುದು. ಅಲ್ಲದೆ ಹೈಪಾಯಿಡ್ ಗಿಯರುಗಳೆಂಬ ಹೆಸರಿನ ಒಂದು ವಿಶೇಷ ರೀತಿಯ ಬೆವೆಲ್ ಸಾಮಾನ್ಯ ನೋಟಕ್ಕೆ ಕುಂಡಲಿನೀ ಗಿಯರಿನಂತೆಯೇ ಇರುವುದಾದರೂ ಅಸಮಾಂತರ ಅಛೇಧಕ, ಪರಸ್ಪರ ಲಂಬ ಕೋನದಲ್ಲಿ ಅಡ್ಡವಾಗಿರುವ ಹಾಗೂ ಅಂತರ ಹೆಚ್ಚಿಲ್ಲದ ತಾಳುಗಳನ್ನು ಕೂಡಿಸುವುದಾಗಿರುತ್ತದೆ. ವೇಗ ಅತಿಯಾಗಿ ಕಡಿಮೆಯಾಗಬೇಕಾದಾಗ (ಅನುಪಾತ 60:1 ಅಥವಾ ಇನ್ನೂ ಅಧಿಕ) ಇದನ್ನು ಉಪಯೋಗಿಸುತ್ತದೆ.

ವರ್ಮ್ ಗಿಯರ್ : ಅಸಮಾಂತರ ಅಛೇದಕ ಅಂದರೆ ಅಸಮತಲೀಯವಾದ ತಾಳುಗಳನ್ನು ಸೇರಿಸುವ ಸಾಮಾನ್ಯ ವಿಧಾನ ವರ್ಮ್ ಗಿಯರಣದಿಂದ. ತಾಳುಗಳು ಸುಮಾರು ದೂರದಲ್ಲಿದ್ದು ವಾಸ್ತವ ಬಳಕೆಯಲ್ಲಿ ಲಂಬ ಕೋನವೆಂಬಂತೆ ಅಡ್ಡಡ್ಡವಾಗಿರುತ್ತವೆ. ಸಾಮಾನ್ಯವಾಗಿ ಚಾಲಕವಾಗಿರುವ ವರ್ಮ್ ಒಂದು ಸ್ಕ್ರೂ ಇದ್ದಂತೆ ಇರುತ್ತದೆ. ದೊಡ್ಡದಾಗಿರುವ ಚಕ್ರ ವರ್ಮ್ ಚಕ್ರವೆನ್ನಿಸಿಕೊಳ್ಳುತ್ತದೆ. ವರ್ಮ್ ಸುತ್ತುತ್ತಿರುವಾಗ ಅದರ ಸೂತ್ರಗಳು (ತ್ರೆಡ್ಸ್) ಚಕ್ರದ ಪರಿಧಿಯ ಮೇಲಿರುವ ದಂತಗಳ ಮೇಲೆ ಒತ್ತಿದಂತಾಗಿ ಅದು ತಿರುಗುವಂತೆ ಮಾಡುತ್ತದೆ. ವರ್ಮ್ ಗಿಯರಣವನ್ನು ಸಹ ಅಧಿಕವಾದ ವೇಗಾನುಪಾತಗಳಿಗೆ ಉಪಯೋಗಿಸುತ್ತಾರೆ. (ಕೆ.ವಿ.ಎಸ್.)

**ಗಿರ್ ಅರಣ್ಯ :** ಗುಜರಾತ್ ರಾಜ್ಯದ ಜುನಾಗಢ ಜಿಲ್ಲೆಯ ದಕ್ಷಿಣಭಾಗದಲ್ಲಿರುವ ಗಿರ್ ಗಿರಿಶ್ರೇಣಿಯ ತಳಭಾಗದಲ್ಲಿರುವ ಅತ್ಯಂತ ಆಕರ್ಷಕವೂ ವರ್ಣಮಯವೂ ಆಗಿರುವ ಅರಣ್ಯ. ಇದು ಸಾಮಾನ್ಯ ಅರ್ಥದಲ್ಲಿ ಅರಣ್ಯವೇ ಅಲ್ಲ; ಅರೆ ಮರುಭೂಮಿಯಿಂದ ಕೂಡಿದ 1412 ಚ.ಕಿಮೀ ವಿಸ್ತೀರ್ಣದ ಪ್ರದೇಶ. ಅಲ್ಲಲ್ಲಿ ಮುಳ್ಳು ಪೊದೆಗಳುಂಟು. ಇಲ್ಲಿಯ ಮರಗಳು ಸಾಗುವಾನಿಯ ದೃಷ್ಟಿಯಿಂದ ಅಷ್ಟೇನೂ ಉತ್ತಮವಲ್ಲ. ಈ ಕಾಡಿನಲ್ಲಿ ಕೆಲವು ತೇಗದ ಮರಗಳು ಉಂಟೂ. ಇಡೀ ಪ್ರದೇಶದಲ್ಲಿ ಅಲ್ಲಲ್ಲಿ ಸಾಗುವಳಿಯಾದ ನೆಲವೂ ಹಳ್ಳಿಗಳು ಇವೆ.

ಗಿರ್ ಅರಣ್ಯದ ಸಿಂಹಗಳು

ಭಾರತದಲ್ಲಿ ಉಳಿದಿರುವ ಕೆಲವೇ ಸಿಂಹಗಳು ಗಿರ್ ಅರಣ್ಯದಲ್ಲಿರುವುದರಿಂದ ಇದು ಬಹಳ ಪ್ರಸಿದ್ಧವಾಗಿದೆ ಇದೊಂದು ಅಭಯಾರಣ್ಯ. ಈ ಅರಣ್ಯದಲ್ಲಿರುವ ಸಿಂಹಗಳ ರಕ್ಷಣೆಗೆ ಸರ್ಕಾರ ವಿಶೇಷ ಕ್ರಮ ಕೈಗೊಂಡಿದೆ. 1950ರಲ್ಲಿ ನಡೆಸಿದ ಗಣತಿಯ ಪ್ರಕಾರ ಸುಮಾರು 240 ಸಿಂಹಗಳಿದ್ದುವು. 1955ರಲ್ಲಿ 290 ಸಿಂಹಗಳಿದ್ದುವೆಂದು ಅಂದಾಜು ಮಾಡಲಾಗಿತ್ತು. ಅರಣ್ಯದಲ್ಲಿ ಆಹಾರ ಸಿಕ್ಕದಿದ್ದಾಗ ಹಳ್ಳಿಗಳೊಳಕ್ಕೆ ನುಗ್ಗಿ ದನಕರುಗಳನ್ನು ಕೊಂದು ತಿನ್ನುತ್ತಿದ್ದ ಸಿಂಹಗಳ ಹಾವಳಿಯನ್ನು ತಪ್ಪಿಸಲು ಹಳ್ಳಿಗರು ವಿಷ ಹಾಕಿ ಇವನ್ನು ಕೊಲ್ಲುತ್ತಿದ್ದರೆಂದೂ ಇದರಿಂದಾಗಿ ಇವುಗಳ ಸಂಖ್ಯೆ ಸುಮಾರು 200ಕ್ಕೆ ಕಡಿಮೆಯಾಗಿದೆಯೆಂದೂ ಭಾವಿಸಲಾಗಿತ್ತು. 2011ರ ಜನಗಣತಿಯ ಪ್ರಕಾರ ಈಗ ಇಲ್ಲಿ ಸು. 526 ಸಿಂಹಗಳಿವೆ.

ಸೌರಾಷ್ಟ್ರದ ದಕ್ಷಿಣ ತೀರಕ್ಕೆ 75 ಕಿಮೀ ದೂರದಲ್ಲಿರುವ ಗಿರ್ ಗಿರಿಸಾಲು ಪೂರ್ವ ಪಶ್ಚಿಮವಾಗಿ 180 ಕಿಮೀ ದೂರ ಹಬ್ಬಿದೆ. ಅಲ್ಲಲ್ಲಿ ಕತ್ತರಿಸಿದಂತಿರುವ ಗಿರ್ ಶ್ರೇಣಿಯ ಪಶ್ಚಿಮದಲ್ಲಿ ಓಜಾತ್ ನದಿಯೂ ಪೂರ್ವದಲ್ಲಿ ಶೆತ್ರುಂಜಿ ನದಿಯೂ ಹರಿಯುತ್ತವೆ. ಓಜಾತ್ ನದಿ ಗಿರ್ ಶ್ರೇಣಿಗೂ ಗಿರ್ನಾರ್ ಶ್ರೇಣಿಗೂ (**ನೋಡಿ– ಗಿರ್ನಾರ್**) ನಡುವಣ ಗಡಿರೇಖೆಯಂತಿದೆ. ಗಿರ್ ಶ್ರೇಣಿಯ ಅತ್ಯುನ್ನತ ಶಿಖರದ ಎತ್ತರ 643ಮೀ. (ಎಸ್.ಎನ್‌ಎಆರ್‌ಇ.)

**ಗಿರಕಿ ರೋಗ :** ಕುರಿ, ದನ, ಮೇಕೆ ಮುಂತಾದ ಸಾಕುಪ್ರಾಣಿಗಳ ಮಿದುಳಿನ ರೋಗ (ಗಿಡ್). ತಲೆತಿರುಗು ರೋಗ, ತತ್ತರ ರೋಗ ಇದರ ಪರ್ಯಾಯನಾಮಗಳು. ಇಂಗ್ಲಿಷಿನಲ್ಲಿ ಟರ್ನ್‌ಸಿಕ್, ಸ್ಟರ್ಡಿ, ಬ್ಲಾಬ್‌ಸ್ಟಿರ್ಲ್, ಪಂಟ್ ಮುಂತಾದ ಹೆಸರುಗಳಿವೆ. ಸೆಸ್ಟೋಡ ಗಣದ ಟೀನಿಯ ಮಲ್ಟಿಸೆಪ್ಸ್ ಅಥವಾ ಮಲ್ಟಿಸೆಪ್ಸ್ ಎಂಬ ಲಾಡಿಹುಳುವಿನ ಡಿಂಬಾವಸ್ಥೆಯಾದ ಸೀನ್ಯೂರಸ್ ಸೆರಬ್ರಾಲಿಸ್ ಎಂಬುದರಿಂದ ಈ ರೋಗ

ಉಂಟಾಗುತ್ತದೆ. ಇದು ಪ್ರಮುಖವಾಗಿ ಕುರಿ, ದನ ಮುಂತಾದವುಗಳ ರೋಗವಾದರೂ ರೋ, ಜಿಂಕೆ, ಗೆಜ್ಜೆಲ್ ಮುಂತಾದ ಕಾಡುಪ್ರಾಣಿಗಳಲ್ಲೂ ಒಂಟೆ, ಕುದುರೆಗಳಲ್ಲೂ ಅಪೂರ್ವವಾಗಿ ಮನುಷ್ಯನಲ್ಲೂ ಕಾಣಬರುವುದುಂಟು.

ಮಲ್ಟಿಸೆಪ್ಸ್ ಹುಳು ತನ್ನ ಜೀವನಚಕ್ರವನ್ನು ಎರಡು ಭಿನ್ನ ಆತಿಥೇಯ ಪ್ರಾಣಿಗಳಲ್ಲಿ ನಡೆಸುತ್ತದೆ. ಇದರ ಪ್ರೌಢಹುಳು ನಾಯಿ, ನರಿ ಮುಂತಾದ ಮಾಂಸಹಾರಿ ಪ್ರಾಣಿಗಳ ಕರುಳಿನಲ್ಲೂ ಡಿಂಬ ಕುರಿ, ಮೇಕೆ, ದನ ಮುಂತಾದ ಸಸ್ಯಹಾರಿ ಪ್ರಾಣಿಗಳ ದೇಹದಲ್ಲೂ ಕಾಣಬರುತ್ತವೆ. ಪ್ರೌಢಹುಳು ಸುಮಾರು 100ಸೆಂಮೀ. ಉದ್ದವಿದ್ದು ಸುಮಾರು 200 ಖಂಡಗಳನ್ನೂ ಒಳಗೊಂಡಿದೆ. ಇದರ ತಲೆಯ ಭಾಗದಲ್ಲಿ (ಸ್ಕೋಲೆಕ್ಸ್) 22–32 ದೊಡ್ಡ ಹಾಗೂ ಚಿಕ್ಕ ಮುಳ್ಳುಗಳಿವೆ. ಇವುಗಳ ಸಹಾಯದಿಂದ ಆತಿಥೇಯ ಪ್ರಾಣಿಯ ಕರುಳಿನ ಒಳಭಿತ್ತಿಗೆ ಹುಳು ಅಂಟಿರುತ್ತದೆ. ಹುಳುವಿನ ದೇಹದ ಹಿಂತುದಿಯ ಖಂಡಗಳಲ್ಲೆಲ್ಲ ಫಲವಂತಿ ಕೋಶಗಳಿದ್ದು ಅವು ಅಸಂಖ್ಯಾತ ಮೊಟ್ಟೆಗಳನ್ನು ಉತ್ಪಾದಿಸುತ್ತವೆ. ಪ್ರಾಣಿಗಳ ಮಲದೊಂದಿಗೆ ಹೊರಬರುವ ಈ ಮೊಟ್ಟೆಗಳು ಹುಲ್ಲು ಮುಂತಾದ ಗಿಡಗಳ ಮೇಲೆಲ್ಲ ಹರಡಿರುತ್ತವೆ. ಕುರಿ, ದನಗಳು ಹುಲ್ಲನ್ನು ತಿಂದಾಗ ಮೊಟ್ಟೆಗಳು ಅವುಗಳೊಳಕ್ಕೆ ಹೋಗಿ ದೇಹದ ವಿವಿಧ ಭಾಗಗಳಲ್ಲಿ ಪಸರಿಸಿ ಆಂಕೊಸ್ಫಿಯರುಗಳೆಂಬ ಡಿಂಬಗಳನ್ನು ಉತ್ಪಾದಿಸುತ್ತವೆ. ಇವು ಕ್ರಮೇಣ ಮಿದುಳು ಮತ್ತು ಬೆನ್ನು ಹುರಿಗಳನ್ನು ಸೇರಿಕೊಂಡು ಸೀನ್ಯೂರಸ್ ಡಿಂಬಗಳಾಗಿ ಬೆಳೆಯುತ್ತವೆ. ಒಂದೊಂದು ಡಿಂಬವೂ ಒಂದು ಬಗೆಯ ಗುಂಡನೆಯ ಇಲ್ಲವೆ ಕೊಳವೆಯಂಥ ಚೀಲದಂತಿದ್ದು ಅನೇಕ ಸ್ಕೋಲೆಕ್ಸ್ ತಲೆಗಳನ್ನು ಒಳಗೊಂಡಿದೆ. ಪ್ರತಿ ಸ್ಕೋಲೆಕ್ಸ್ ತಲೆಯೂ ಒಂದು ಲಾಡಿ ಹುಳುವಾಗಿ ಬೆಳೆಯಬಲ್ಲದು. ಡಿಂಬ ಈ ಹಂತಕ್ಕೆ ಬರುವ ವೇಳೆಗೆ ಆತಿಥೇಯ ಪ್ರಾಣಿ ವಿಶಿಷ್ಟ ರೋಗಲಕ್ಷಣಗಳನ್ನು ಪ್ರದರ್ಶಿಸುತ್ತಿದ್ದು ಕೊನೆಗೆ ಸತ್ತು ಹೋಗುತ್ತದೆ. ಹೀಗೆ ಸತ್ತ ಪ್ರಾಣಿಯ ಮಿದುಳನ್ನು ಮತ್ತೆ ನಾಯಿಯೋ, ನರಿಯೊ ತಿಂದಾಗ ಅದರಲ್ಲಿನ ಡಿಂಬದ ತಲೆಭಾಗ ಪ್ರೌಢಹುಳುವಾಗಿ ಬೆಳೆದು ಮತ್ತೆ ಮೊಟ್ಟೆಗಳನ್ನು ಉತ್ಪಾದಿಸತೊಡಗುತ್ತದೆ.

ರೋಗ ಲಕ್ಷಣಗಳು: ಜಾಡ್ಯ ತಗುಲಿದ ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಮೊದಲು 1–3 ವಾರಗಳ ತನಕ ಜ್ವರ ಬರುತ್ತದೆ. ಅಲ್ಲದೆ ಮಿದುಳು ಪೊರೆಯ ಉರಿಯೂತದ (ಕಾರ್ಟಿಕಲ್ ಎನ್‌ಸೆಫಲೈಟಿಸ್) ಲಕ್ಷಣಗಳು ತೋರುತ್ತವೆ. ಕೆಲವೊಮ್ಮೆ ರೋಗದ ಈ ಪ್ರಥಮ ಲಕ್ಷಣಗಳು ಕಾಣದೇ ಹೋಗುವುದುಂಟು. ಸೋಂಕು ತಗುಲಿದ 2–7 ತಿಂಗಳುಗಳ ಅನಂತರ ರೋಗದ ಇತರ ಲಕ್ಷಣಗಳು ಕಾಣತೊಡುಗುತ್ತವೆ. ಪ್ರಾಣಿ ಆಹಾರಸೇವೆಯನ್ನು ನಿಲ್ಲಿಸಿ ಜಡವಾಗುತ್ತದೆ. ತನ್ನ ತಲೆಯನ್ನು ಒಂದು ದಿಕ್ಕಿನಲ್ಲಿ (ಮಿದುಳಿನ ಯಾವ ಭಾಗದಲ್ಲಿ ಡಿಂಬ ಸೇರಿಕೊಂಡಿದೆಯೋ ಆ ದಿಕ್ಕಿನಲ್ಲಿ) ವಾಲಿಸುವುದಲ್ಲದೆ ಅದೇ ದಿಕ್ಕಿನಲ್ಲಿ ಸುತ್ತು ಹಾಕುತ್ತಾ ನಡೆದಾಡುತ್ತದೆ. ಈ ರೀತಿ ಸುತ್ತು ಹಾಕುವಾಗ ಮತ್ತೊಂದು ದಿಕ್ಕಿಗೆ ದೃಷ್ಟಿಯನ್ನು ಬೀರುವುದೇ ಇಲ್ಲ. ಆಗಿಂದಾಗ್ಗೆ ಸೆಡೆತಕ್ಕ ಈಡಾದಂತೆ ಅಡ್ಡಡ್ಡವಾಗಿ ತಲೆಯನ್ನು ಚಲಿಸುವುದೂ ಉಂಟು. ಉಳಿದ ಸಮಯದಲ್ಲಿ ತಲೆಯನ್ನು ತಗ್ಗಿಸಿ ನಿಶ್ಚೇಷ್ಟವಾಗಿ ನಿಂತುಬಿಡುತ್ತದೆ. ಡಿಂಬ ಮಿದುಳಿನ ಮುಂಭಾಗದಲ್ಲಿದ್ದರೆ ತಲೆಯನ್ನು ಎದೆಗೆ ಒತ್ತಿಕೊಂಡು ನೆಗೆಯುವುದುಂಟು. ಈ ಸ್ಥಿತಿಯಲ್ಲಿ ಎದುರಿಗೆ ಕಲ್ಲು, ಮರದ ಕಂಬ ಮುಂತಾದ ವಸ್ತುಗಳು ಸಿಕ್ಕಿದರೆ ಅವಕ್ಕೆ ಗಟ್ಟಿಯಾಗಿ ಹಾಯುವುದು, ಹಲ್ಲು ಮಸೆಯುವುದು ಮುಂತಾದವನ್ನು ಮಾಡುತ್ತದೆ. ಆಗಿಂದಾಗ್ಗೆ ಜೊಲ್ಲು ಸುರಿಯುತ್ತಾ ಇರುತ್ತದೆ. ಕ್ರಮೇಣ ಪ್ರಾಣಿಗೆ ಸರಿಯಾಗಿ ನಿಲ್ಲುವುದಕ್ಕಾಗಲಿ ಆಹಾರವನ್ನು ಅಗಿಯುವುದಕ್ಕಾಗಲಿ ಆಗುವುದೇ ಇಲ್ಲ. ರೋಗ ಪೀಡಿತ ಪ್ರಾಣಿ ತನ್ನ ಗುಂಪಿನಿಂದ ಬೇರೆ ಯಾಗಲು ಇಚ್ಚಿಸುತ್ತದೆ. ಹೀಗೆ ಒಂಟಿಯಾಗಿ ಹಲವಾರು ರೀತಿಯಲ್ಲಿ ನರಳಿ, ಆಹಾರ ಸೇವನೆಯಿಲ್ಲದೆ ಕೃಶವಾಗಿ ಕೊನೆಗೆ ಸತ್ತು ಹೋಗುತ್ತದೆ.

ಮಲ್ಟಿಸೆಪ್ಸ್ ಮಲ್ಟಿಸೆಪ್ಸ್ ಹುಳುವನ್ನೇ ಹೋಲುವ ಮ.ಗೈಗರಯ್ ಎಂಬ ಇನ್ನೊಂದು ಬಗೆಯ ಲಾಡಿಹುಳುವಿನ ಡಿಂಬ ಮೇಕೆಗಳಲ್ಲಿ ರೋಗವನ್ನು ಉಂಟು ಮಾಡುತ್ತದೆ. ಡಿಂಬದ ಹೆಸರು ಸೀನ್ಯೂರಸ್ ಗೈಗರಯ್. ಭಾರತ, ಪಾಕಿಸ್ತಾನ ಮತ್ತು ಶ್ರೀಲಂಕಾದಲ್ಲಿ ಈ ರೋಗ ಬಲುಸಾಮಾನ್ಯ. ಡಿಂಬ ಸಿ.ಸೆರೆಬ್ರಾಲಿಸ್ ರೀತಿಯಂತೆ ನರಮಂಡಲಕ್ಕೆ ಮಾತ್ರ ಮೀಸಲಾಗಿಲ್ಲ. ತೊಡೆಯ ಅಂಗಾಂಶ, ನಡುವಿನ ಭಾಗ, ವಪೆ, ಮೂತ್ರಪಿಂಡ, ಹೃದಯ, ಉದರ ಪರಿವೇಷ್ಟನ ಪಟಲ, ಕಿಬ್ಬೊಟ್ಟೆಗಳಲ್ಲಿ ಕಂಡುಬರುತ್ತದೆ. ಈ ರೋಗದ ಬಗೆಗೆ ಭಾರತದಲ್ಲಿ ಮಾಥೂರ್ ಮತ್ತು ದತ್ (1969), ರಹಮುದ್ದೀನ್ (1941) ಬಾಳೇರಾಯರು(1939) ಸಂಶೋಧನೆ ನಡೆಸಿದ್ದಾರೆ.

ರೋಗ ಚಿಕಿತ್ಸೆ ಹಾಗೂ ತಡೆಗಟ್ಟುವ ಕ್ರಮಗಳು: ಗಿರಕಿ ರೋಗಕ್ಕೆ ಸರಿಯಾದ ಔಷಧಿಗಳಿಲ್ಲ. ಕೆಲವೊಮ್ಮೆ ಶಸ್ತ್ರಚಿಕಿತ್ಸೆಯಿಂದ ಗುಣಪಡಿಸಬಹುದಾದರೂ ತಡೆಗಟ್ಟುವಿಕೆಯೇ ಅತ್ಯುತ್ತಮ ಮಾರ್ಗ. ಡಿಂಬ ನಿಯತ ಜೀವಿಯ ಸಂಪರ್ಕ ಹೊಂದದಂತೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ನಾಯಿ, ನರಿಗಳು ರೋಗಪೀಡಿತ ಪ್ರಾಣಿಗಳನ್ನು ತಿನ್ನದಂತೆ ನೋಡಿಕೊಳ್ಳಬೇಕು. (ಜಿ.ಆರ್.ಆರ್.ಎಸ್)

**ಗಿರವಿದಾರ :** ಬೆಲೆಬಾಳುವ ಪದಾರ್ಥಗಳ ಮೇಲೆ, ಆಧಾರದ ಮೇಲೆ ಹಣವನ್ನು ಸಾಲವಾಗಿ ಕೊಡುವ ವ್ಯಕ್ತಿ (ಅಥವಾ ಸಂಸ್ಥೆ) (ಪಾನ್‌ಬ್ರೋಕರ್) ಹೀಗೆ ಸಾಲವಾಗಿಕೊಟ್ಟ ಹಣದ ಮೇಲೆ ಋಣಿಯಿಂದ ಆತ ನಿಗದಿಯಾದ ದರದಲ್ಲಿ ಬಡ್ಡಿಯನ್ನು ತೆಗೆದು ಕೊಳ್ಳುತ್ತಾನೆ. ಗಿರವಿಗಾಗಿ ಬಂದ ಪದಾರ್ಥಗಳನ್ನು ಗಿರವಿದಾರ ಕೂಲಂಕುಷವಾಗಿ ಪರೀಕ್ಷಿಸಿ, ಅದರ ಮಾರುಕಟ್ಟೆಯ ಬೆಲೆಯನ್ನು ನಿರ್ಣಯಿಸಿ ಅದರ ಆಧಾರದ ಮೇಲೆ ಸಾಲ ಕೊಡುವ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತಾನೆ. ಕೊಟ್ಟ ಸಾಲಕ್ಕೆ ಪ್ರತಿಯಾಗಿ ಆ ಪದಾರ್ಥವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತಾನೆ. ಈ ವ್ಯವಹಾರಕ್ಕೆ ಅಡವು ಇಡುವುದೆಂದೂ ಹೆಸರು. ಸಾಲವನ್ನು ಪಡೆಯುವ ವ್ಯಕ್ತಿ ಗಿರವಿದಾರನಿಗೆ, ತಾನು ಗಿರವಿ ಇಡುತ್ತಿರುವ ಪದಾರ್ಥಧ ಪೂರ್ಣ ವಿವರಗಳೊಡನೆ, ಅದು ತನ್ನ ಸ್ವಂತ ಸ್ವತ್ತೆಂದು ಬರವಣಿಗೆಯಲ್ಲಿ ಕೊಡಬೇಕು. ಗಿರವಿದಾರ ತಾನು ಅಡವು ಇಟ್ಟುಕೊಂಡಿರುವ ಪದಾರ್ಥದ ಪೂರ್ಣ ವಿವರ, ಅದರ ಅಂದಾಜು ಬೆಲೆ ಇತ್ಯಾದಿ ವಿವರಗಳನ್ನು ನಮೂದಿಸಿರುವ ಪತ್ರವನ್ನು ಸಾಲಗಾರನಿಗೆ ಕೊಡಬೇಕು. ಯಾವ ಕಾರಣದಿಂದಲಾದರೂ ಸಾಲಗಾರ ಅಡವಿಟ್ಟ ಪದಾರ್ಥವನ್ನು ಒಪ್ಪಲಾದ ವಾಯಿದೆಯೊಳಗೆ, ಒಪ್ಪಂದಕ್ಕೆ ಅನುಗುಣವಾಗಿ ಬಿಡಿಸಿಕೊಳ್ಳದಿದ್ದಲ್ಲಿ ಗಿರವಿದಾರ ಸೂಕ್ತ ತಿಳಿವಳಿಕೆಯಿತ್ತು ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಅದನ್ನು ಸೂಕ್ತರೀತಿಯಲ್ಲಿ ವಿಲೆ ಮಾಡಲು ಹಕ್ಕು ಪಡೆದಿರುತ್ತಾನೆ.

ಭಾರತದಲ್ಲಿ ಗಿರವಿದಾರರು ಕಾನೂನಿನ ಪ್ರಕಾರ ಪರವಾನೆ ಪಡೆದು, ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಕೊಳ್ಳಬೇಕು. ಗಿರವಿದಾರರು ತಾವು ಮಾಡುವ ಪ್ರತಿಯೊಂದು ವ್ಯವಹಾರಕ್ಕೂ ಸೂಕ್ತ ದಾಖಲೆಗಳನ್ನಿಟ್ಟರಬೇಕು. ಗಿರವಿದಾರ ಕಾನೂನು ರೀತಿ ಇಡಬೇಕಾದ ದಾಖಲೆಯಲ್ಲಿ ಯಾವ ರೀತಿಯಲ್ಲಾದರೂ ನ್ಯೂನತೆಗಳಿಗೆ ಅವಕಾಶ ನೀಡಿದರೆ, ತನಿಖೆಗೆ ಬರುವ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳಿಗೆ ದಾಖಲೆ ತೋರಿಸಿದಿದ್ದರೆ ಅಥವಾ ತನಿಖೆಗೆ ಒದಗಿಸದಿದ್ದರೆ, ಗಿರವಿದಾರನ ವ್ಯವಹಾರ ಕಾನೂನು ರೀತಿಯಾಗಿಲ್ಲವೆಂದು ಯಾವುದಾದರೂ ಕಾರಣಗಳಿಂದ ನಿರ್ಧರಿಸಲ್ಪಟ್ಟರೆ ಗಿರವಿದಾರನ ಪರವಾನೆಯನ್ನು ವಾಪಾಸು ಪಡೆದು, ಕಾನೂನು ರೀತ್ಯ ಅವನ ಮೇಲೆ ಕ್ರಮ ಜರುಗಿಸುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ.

ಗಿರವಿದಾರನ ಆಧಾರದಲ್ಲಿರುವ, ಗಿರವಿಗಾಗಿ ಬಂದಿರುವ, ಪದಾರ್ಥ ಕಳವು ಮಾಲೆಂದು ಸ್ಥಿರಪಟ್ಟರೆ, ಆ ಪದಾರ್ಥಗಳನ್ನು ಮುಟ್ಟಗೋಲು ಹಾಕಿಕೊಂಡು ಗಿರವಿದಾರನಿಗೆ ಯಾವ ರೀತಿಯ ಪರಿಹಾರವನ್ನೂ ಕೊಡದೆ ಇರುವ, ಗಿರವಿದಾರ ಕಳ್ಳತನಕ್ಕೆ ಪರೋಕ್ಷವಾಗಿ ಸಹಾಯಕನಾಗಿರುವನೆಂದು ನಿರ್ಧರಿಸಿ ಅವನ ಮೇಲೆ ಕ್ರಮ ಕೈಗೊಂಡು ಗಿರವಿದಾರನನ್ನು ಶಿಕ್ಷಾರ್ಹನನ್ನಾಗಿ ಮಾಡುವ ಹಕ್ಕು ಸರ್ಕಾರಕ್ಕೆ ಇರುತ್ತದೆ. (ಎ.ಕೆ.ಎಸ್.ಎಚ್.)

**ಗಿರಿಧರ ಕವಿರಾಯ :** 18ನೆಯ ಶತಮಾನದ ಒಬ್ಬ ಹಿಂದೀ ಕವಿ. ಈತನ ಜೀವನ ವಿಷಯ ಹೆಚ್ಚಾಗಿ ಉಪಲಬ್ಧವಿಲ್ಲ. ಶಿವಸಿಂಹ ಸೇಂಗರನ ಪ್ರಕಾರ ಈತ ಹುಟ್ಟಿದ್ದು 1713ರಲ್ಲಿ. ಈತ ಭಾಟಕವಿಯಾಗಿದ್ದು ಅವಧಿ ಭಾಷೆಯಲ್ಲಿ ಕಾವ್ಯ ರಚಿಸಿದ್ದರಿಂದ ಅವಧ (ಅಯೋಧ್ಯೆ) ಪ್ರದೇಶದವನಿರಬಹುದೆಂದು ಹೇಳಬಹುದು. ಈತ ಅನೇಕ ಕುಂಡಲಿಯಗಳನ್ನು (ಆರು ಪಂಕ್ತಿಗಳ ಪದ್ಯ) ರಚಿಸಿದ್ದಾನೆ. ಈತನ ವಿಷಯದಲ್ಲಿ ಒಂದು ಕಥೆ ಪ್ರಚಲಿತವಿದೆ–

ಗಿರಿಧರನ ಮನೆಯ ಪಕ್ಕದಲ್ಲಿ ಒಬ್ಬ ಬಡಗಿ ವಿಚಿತ್ರವಾದ ಒಂದು ಮಂಚ ತಯಾರಿಸಿದ. ಯಾರಾದರೂ ಆ ಮಂಚದ ಮೇಲೆ ಕುಳಿತರೆಂದರೆ ಅದರ ಕಾಲುಗಳಿಗೆ ಅಳವಡಿಸಿದ್ದ ಗಾಳಿಚಕ್ಕೆಗಳು (ಬೀಸಣಿಗೆ) ತಮ್ಮಷ್ಟಕ್ಕೆ ತಾವೇ ತಿರುಗುತ್ತಿದ್ದುವು. ಇದನ್ನು ರಾಜನಿಗೆ ಕೊಡಲಾಯಿತು. ಇದೇ ತರಹದ ಇನ್ನೊಂದನ್ನು ಮಾಡಲು ರಾಜ ಬಡಗಿಗೆ ಆಜ್ಞೆಮಾಡಿದ. ಇದನ್ನು ತಯಾರಿಸಲು ಗಿರಿಧರನ ಅಂಗಳದಲ್ಲಿದ್ದ ಬೋರಿ ಮರ ಬೇಕೆಂದು ರಾಜನನ್ನು ಬಡಗಿ ಕೇಳಿದ. ಈ ಬೋರಿ ಮರವನ್ನು ಕಡಿಯಬಾರದಾಗಿ ರಾಜನಿಗೆ ವಿನಂತಿಸಿದರೂ ಪ್ರಯೋಜನವಾಗಲಿಲ್ಲ. ಆಗ ಸಪತ್ನೀಕನಾಗಿ ಗಿರಿಧರ ಆ ರಾಜ್ಯವನ್ನು ಬಿಟ್ಟು ಹೊರಟ. ಹೊರಟವನು ಭಾರತದಲ್ಲೆಲ್ಲ ಸಂಚರಿಸಿದ. ಈ ಸಮಯದಲ್ಲಿ ಪತಿಪತ್ನಿಯರು ಕುಂಡಲಿಯಗಳನ್ನು ರಚಿಸಿದರು ಎಂದು ಪ್ರತೀತಿ. ಸಾಈ ಎಂಬ ಶಬ್ದಪ್ರಯೋಗಿಸಿದ ಕುಂಡಲಿಯಗಳು ಆತನ ಹೆಂಡತಿ ರಚಿಸಿದುವು. ಈಕೆಯ ಪದ್ಯಗಳು ಸುಮಾರು ನಾಲ್ಕುನೂರ ಎಪ್ಪತ್ತೈದು. ಬಹುಮಟ್ಟಿಗೆ ಅವು ಕುಂಡಲಿಯಗಳೇ ಆಗಿವೆ.

ದೈನಂದಿನ ಜೀವನದಲ್ಲಿಯ ಮಹತ್ತ್ವದ ಘಟನೆಗಳನ್ನು ಸರಳವಾಗಿ ತನ್ನ ಕಾವ್ಯಗಳಲ್ಲಿ ನಿರೂಪಿಸಿರುವುದರಿಂದ ಉತ್ತರಭಾರತದ ಹಿಂದೀ ಜನರಲ್ಲಿ ಈತನ ಕುಂಡಲಿಯಗಳು ತುಂಬ ಬಳಕೆಯಲ್ಲಿವೆ. ಜನ ಆಗಿ ಹೋದ ವಿಷಯಗಳನ್ನು ಮರೆತು ಬಿಟ್ಟು ತಮ್ಮ ಭವಿಷ್ಯ ಜೀವನವನ್ನು ಸುಧಾರಿಸಲೆತ್ನಿಸಬೇಕು ಎಂಬುದು ಈತನ ಕಾವ್ಯಗಳಲ್ಲಿನ ದೃಷ್ಟಿ. ಕಾವ್ಯಗುಣವನ್ನು ಅರಸುವವರಿಗೂ ಈತನ ಕಾವ್ಯಗಳಲ್ಲಿ ಸ್ವಾರಸ್ಯ ಕಂಡುಬರುತ್ತದೆ. *

**ಗಿರಿಧಾಮಗಳು :** ಪರ್ವತಗಳ ಹಾಗೂ ಬೆಟ್ಟಗಳ ನೆತ್ತಿಯಲ್ಲೋ ಸಾನು ಪ್ರದೇಶಗಳಲ್ಲೋ ವಿಶ್ರಾಂತಿ, ವಿಹಾರಗಳಿಗಾಗಿ ಗೊತ್ತು ಮಾಡಿರುವ ಸ್ಥಳಗಳು (ಹಿಲ್ ಸ್ಟೇಷನ್ಸ್). ರೋಗದಿಂದ ಆಗತಾನೆ ಚೇತರಿಸಿಕೊಳ್ಳುತ್ತಿರುವ ಜನರೂ ದಣಿದು ವಿಶ್ರಾಂತಿ ಬಯಸುವ ಇತರರೂ ಅನೇಕ ವೇಳೆ ವಿಹಾರಾಕಾಂಕ್ಷಿಗಳೂ ಇಲ್ಲಿಗೆ ಬಂದು ಕೆಲಕಾಲ ತಂಗಿದ್ದು ಚೇತರಿಸಿಕೊಂಡು ಹಿಂದಿರುಗುತ್ತಾರೆ. ದಗೆಯಿಂದ ಪಾರಾಗಲು ಬೇಸಗೆಯಲ್ಲಿ ಜನ ಈ ಸ್ಥಳಗಳಿಗೆ ಬರುವುದು ಹೆಚ್ಚು. ಇಂದಿನ ಗಿರಿಧಾಮಗಳ ಕಲ್ಪನೆ ಲೌಕಿಕವಾದದು. ಹಿಂದಾದರೋ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಇಂಥ ಸ್ಥಳಗಳನ್ನು ನಿರ್ಮಿಸುತ್ತಿದ್ದರು. ಜನವಸತಿಯಿದ್ದು ಸುತ್ತಲೂ ಅರಣ್ಯವಿರುವ ಬೆಟ್ಟಗಳ ನೆತ್ತಿಯಲ್ಲಿ ದೇವಾಲಯಗಳನ್ನು ಕಟ್ಟುವ ಪದ್ಧತಿ ಗ್ರೀಕರ ಕಾಲದಿಂದಲೂ ನಡೆದುಬಂದಿದೆ. ಒಂದು ದೇವಾಲಯ, ಅದಕ್ಕೆ ಹೊಂದಿದಂತೆ ಒಂದು ಪುಷ್ಕರಣಿ, ಒಂದು ಅನ್ನಸತ್ರ–ಇಷ್ಟನ್ನು ಎಲ್ಲ ಯಾತ್ರಸ್ಥಳಗಳಲ್ಲೂ ಕಾಣಬಹುದು. ಮಧ್ಯಯುಗದ ಕಾಲದಲ್ಲಿ ಮಧ್ಯ ಯುರೋಪಿನ ಅನೇಕ ಬೆಟ್ಟಗಳಲ್ಲಿ ಚರ್ಚುಗಳನ್ನು ಕಟ್ಟಿದ್ದಾರೆ. ಭಾರತದಲ್ಲಿ ಪವಿತ್ರ ಯಾತ್ರಸ್ಥಳಗಳಾದ ತಿರುಪತಿ, ದೇವರಾಯನದುರ್ಗ, ಆಲ್ಮೋರ, ಅಬು ಮೊದಲಾದವು ಗಿರಿಧಾಮಗಳಾಗಿರುವುದಲ್ಲದೆ ಭಕ್ತಾದಿಗಳನ್ನೂ ತಮ್ಮತ್ತ ಸೆಳೆಯುತ್ತಿವೆ.

ಹಳ್ಳಿಗಳೇ ಹೆಚ್ಚಾಗಿದ್ದು ಪಟ್ಟಣಗಳಲ್ಲಿನ ಜನಸಂಖ್ಯೆ ಅಷ್ಟು ನಿಬಿಡವಾಗಿಲ್ಲದಾಗ ಗಿರಿಧಾಮಗಳ ಅಗತ್ಯ ಕಂಡುಬರುತ್ತಿರಲಿಲ್ಲ. ಕ್ರಮೇಣ ದೊಡ್ಡ ದೊಡ್ಡ ಪಟ್ಟಣಗಳ ಬೆಳವಣಿಗೆಯಿಂದಾಗಿ ಜನಕ್ಕೆ ಏಕಾಂತ, ವಿರಾಮ, ವಿಶ್ರಾಂತಿ, ಶುದ್ಧವಾದ ಗಾಳಿ, ಬೆಳಕು, ಸುಂದರವಾದ ಪ್ರಾಕೃತಿಕ ಸನ್ನಿವೇಶ–ಇವು ಸಿಗದಂತಾದವು. ಈ ಕೊರೆಯನ್ನು ತುಂಬಲು ಸರ್ಕಾರಗಳು ರಾಷ್ಟ್ರೀಯ ಉದ್ಯಾನಗಳನ್ನೂ, ಅಭಯಾರಣ್ಯಗಳನ್ನೂ, ಗಿರಿಧಾಮಗಳನ್ನೂ, ಅಭಿವೃದ್ಧಿಪಡಿಸತೊಡಗಿದರು. ಭಾರತದಲ್ಲಿ ಬ್ರಿಟಿಷರೂ ರಾಜ ಮಹಾರಾಜರುಗಳೂ ಈ ಕೆಲಸವನ್ನು ತುಂಬ ಆಸಕ್ತಿಯಿಂದ ಮಾಡಿದರು. ಕೆಮ್ಮಣ್ಣುಗುಂಡಿಯನ್ನು (ಕೃಷ್ಣರಾಜೇಂದ್ರ ಗಿರಿಧಾಮ) ಗುರುತಿಸಿ ಬೆಳೆಸಿದ ಕೀರ್ತಿ ನಾಲ್ವಡಿ



ಕೃಷ್ಣರಾಜೇಂದ್ರ ಗಿರಿಧಾಮದ ಒಂದು ದೃಶ್ಯ

ಕೃಷ್ಣರಾಜ ಒಡೆಯರದು. ಸ್ವತಂತ್ರ ಭಾರತದಲ್ಲಿ, ಪ್ರವಾಸೋದ್ಯಮ ಬೆಳೆದಂತೆಲ್ಲ, ಗಿರಿಧಾಮಗಳಲ್ಲಿನ ಸೌಕರ್ಯಗಳು ಹೆಚ್ಚುತ್ತಿವೆ. ಈಗ ಪ್ರಸಿದ್ಧವಾದ ಗಿರಿಧಾಮಗಳಿಗೆ ಸರಾಗವಾಗಿ ಹೋಗಿಬರಲು ರಸ್ತೆಗಳಿವೆ. ವಾಹನ ಸೌಕರ್ಯವಿದೆ, ಸಿಮ್ಲ, ಶ್ರೀನಗರ, ಡಾರ್ಜಲಿಂಗ್ ಮೊದಲಾದ ಪ್ರಮುಖ ಗಿರಿಧಾಮಗಳಿಗೆ ವಿಮಾನ ಸೌಕರ್ಯವೂ ಉಂಟು. ಈಚೆಗೆ ಅಲ್ಲೆಲ್ಲ ಉತ್ತಮ ಉದ್ಯಾನಗಳನ್ನು ಬೆಳೆಸಿದ್ದಾರೆ. ಉದಾಹರಣೆಗೆ ಸಿಮ್ಲ ಮತ್ತು ಶ್ರೀನಗರಗಳನ್ನು ನೋಡಬಹುದು. ಕೆಲವು ಕಡೆ ಸಸ್ಯವೈಜ್ಞಾನಿಕ ಉದ್ಯಾನಗಳನ್ನು ಎಬ್ಬಿಸಿರುವುದೂ ಉಂಟು. ಒಂದೊಂದು ಗಿರಿಧಾಮದಲ್ಲಿ ಒಂದೊಂದು ಬಗೆಯ ಕ್ರೀಡೆಗೆ ಅವಕಾಶ ಉಂಟು. ಈಜುಕೊಳ, ದೋಣಿ ಸೌಕರ್ಯ, ಮೀನು ಹಿಡಿಯಲು ತಕ್ಕ ಸ್ಥಳಗಳು, ಬೇಟೆಯ ಸೌಲಭ್ಯ, ಸ್ಕೇಟಿಂಗ್, ಸ್ಕೀಯಿಂಗ್, ಮೊದಲಾದವುಗಳಿಗೆ ಏರ್ಪಾಟು, ಸುತ್ತಣ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿಬರಲು ಮಾಡಿರುವ ವ್ಯವಸ್ಥೆ– ಇವುಗಳಿಂದಾಗಿ ಅನೇಕ ಗಿರಿಧಾಮಗಳು ಜನಪ್ರಿಯವಾಗಿವೆ.

ಭಾರತದಲ್ಲಿ ಪ್ರಸಿದ್ಧ ಗಿರಿಧಾಮಗಳಾದ ಸಿಮ್ಲ, ಷಿಲ್ಲಾಂಗ್, ಶ್ರೀನಗರ, ಅಬು ಮೊದಲಾದವು ಆಯಾ ರಾಜ್ಯಗಳ ರಾಜಧಾನಿಗಳಾಗಿವೆ. ಭಾರತದ ಸ್ವಿಟ್ಜರ್ಲೆಂಡ್ ಎಂದು ಖ್ಯಾತಿ ಪಡೆದ ಉದಕಮಂಡಲ, ಲ್ಯಾಂಡ್ ಆಫ್ ದಿ ಹ್ವೈಟ್ ಆರ್ಕಿಡ್ಸ್ ಎಂದು ಪ್ರಸಿದ್ಧವಿರುವ ಕುರ್ಸಿಯಾಂಗ್, ಪೂರ್ವದ ಸ್ಕಾಟ್ಲೆಂಡ್ ಎಂಬ ಹೆಸರಿಗೆ ತಕ್ಕುದಾದ ಷಿಲ್ಲಾಂಗ್, ಭೂಸ್ವರ್ಗವೆನಿಸಿಕೊಂಡಿರುವ ಶ್ರೀನಗರ, ಜವಹರಲಾಲ್ ನೆಹರು ಅವರ ಪ್ರಿಯ ವಿಶ್ರಾಂತಿ ಸ್ಥಳವಾದ ಕುಲು–ಈ ಮೊದಲಾದವು ಭಾರತದಲ್ಲಿನ ಪ್ರಸಿದ್ಧ ಗಿರಿಧಾಮಗಳು. ಇವಲ್ಲದೆ ನಂದಿ, ಕೂನೂರು, ಕೋಟಗಿರಿ, ಕೊಡೈಕ್ಕಾನಲ್, ಎರ್ಕಾಡ್, ಮಹಾಬಲೇಶ್ವರ, ಪಂಚಗನಿ, ಕಾಲಿಂಪಾಂಗ್, ರಾಂಚಿ, ಹಜಾರಿಬಾಗ್ ಮುಸ್ಸೋರಿ ಮತ್ತು ನೈನಿತಾಲ್–ಮೊದಲಾದ ಅನೇಕ ಸುಂದರ ಗಿರಿಧಾಮಗಳು ಇವೆ. ಇವುಗಳಲ್ಲಿ ಅನೇಕ ಗಿರಿಧಾಮಗಳ ವಿವರಗಳು ಆಯಾ ಶೀರ್ಷಿಕೆಗಳಲ್ಲಿ ಸಿಗುತ್ತವೆ. (ಕೆ.ಟಿ.ಕೆ.)

**ಗಿರಿ, ವಿ.ವಿ. :** 1894–1980. 1969 ಆಗಸ್ಟ್ 24ರಿಂದ ಭಾರತ ಗಣರಾಜ್ಯದ ನಾಲ್ಕನೆಯ ಅಧ್ಯಕ್ಷರು. 1894ರ ಆಗಸ್ಟ್ 10ರಂದು ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಇಂದಿನ ಒರಿಸ್ಸಾದ ಬರ್ಹಾಂಪುರದಲ್ಲಿ ಜನ್ಮತಾಳಿದರು. ಏಳು ಗಂಡು ಐದು ಹೆಣ್ಣುಮಕ್ಕಳ ಸಂಸಾರದಲ್ಲಿ ಇವರು ಎರಡನೆಯ ಮಗ. ತಂದೆ ವಿ ವಿ ಜೋಗಯ್ಯ ಪಂತಲು, ವಕೀಲರು; ರಾಜಕಾರಣದಲ್ಲೂ ಅವರಿಗೆ ಆಸಕ್ತಿಯಿತ್ತು. ರಾಷ್ಟ್ರೀಯ ಚಳವಳಿಯಲ್ಲಿ ಆಸಕ್ತಿ; 20ರ ದಶಕಗಳಲ್ಲಿ ಪಂಡಿತ್ ಮೋತಿಲಾಲ ನೆಹರೂ ಹಾಗೂ ಚಿತ್ತರಂಜನ್‌ದಾಸರ



ಸ್ವರಾಜ್ಯ ಪಾರ್ಟಿ ಯಲ್ಲಿ ಸಕ್ರಿಯ. ಇದು ಎಳೆಯ ವಿ.ವಿ. ಗಿರಿಯ ಮೇಲೆ ಸಹಜವಾಗಿ ಪ್ರಭಾವ ಬೀರಿತು. ಗಿರಿಯವರ ಒಬ್ಬ ಚಿಕ್ಕಪ್ಪ ಹನುಮಂತರಾವ್ ಸಾರ್ವಜನಿಕ ಸೇವೆಯಲ್ಲಿ ಆಸಕ್ತರಾಗಿದ್ದರು. ಇನ್ನೊಬ್ಬ ಚಿಕ್ಕಪ್ಪ ವಿಶ್ವನಾಥ ರಾವ್ ಸ್ಥಾಪಿಸಿದ್ದ ತರುಣ ಸಂಘಕ್ಕೆ ಗಿರಿಯವರು ಬಾಲ್ಯದಲ್ಲೇ ಸದಸ್ಯರಾಗಿದ್ದರು. ಆ ಸಂಘದ ಗ್ರಂಥಾಲಯಕ್ಕೆ ದಾನವಾಗಿ ಶೇಖರಿಸಲಾಗಿದ್ದ ಸುಮಾರು 2,000 ಗ್ರಂಥಗಳಲ್ಲಿ ರಾಜಕೀಯ ನಾಯಕರ ಚರಿತ್ರೆಗಳೇ ಹೆಚ್ಚಾಗಿದ್ದವು. ಆ ಸಂಘ ಬಡವರಿಗೆ ಅನ್ನದಾನಕ್ಕಾಗಿ ಮಧುಕರಿ ವ್ಯವಸ್ಥೆಯನ್ನೂ ತಿಲಕರ ಪೈಸಾ ನಿಧಿಗಾಗಿ ಧನ ಸಂಗ್ರಹದ ವ್ಯವಸ್ಥೆಯನ್ನೂ ಮಾಡಿತ್ತು. ಬಾಲ್ಯದಲ್ಲಿ ಗಿರಿಯವರಿಗೆ ಮಾರ್ಗದರ್ಶನ ನೀಡಿದವರು ಶಿಕ್ಷಕ ರಾಮಲಿಂಗಂ. ಆಗಿನ ಇವರ ಚಟುವಟಿಕೆಗಳು ಗಾಂಧಿಯವರ ಸತ್ಯಾಗ್ರಹವೇ ಮುಂತಾದ ಅನಂತರದ ಚಳವಳಿಗಳಲ್ಲಿ ಭಾಗವಹಿಸಲು ಗಿರಿಯವರಿಗೆ ಪೂರ್ವಭಾವಿ ಸಿದ್ಧತೆಯನ್ನೊದಗಿಸಿದವು.

ಗಿರಿಯವರು ತಮ್ಮಂತೆಯೇ ವಕೀಲರಾಗಬೇಕೆಂದು ಅವರ ತಂದೆಯವರ ಬಯಕೆಯಾಗಿತ್ತು. ಮದ್ರಾಸಿನಲ್ಲಿ ಕೇಂಬ್ರಿಜ್ ಸೀನಿಯರ್ ಪರೀಕ್ಷೆ ಮಾಡಿ ಐರ್ಲೆಂಡಿನ ಡಬ್ಲಿನ್ ರಾಷ್ಟ್ರೀಯ ವಿದ್ಯಾಲಯವನ್ನು ಸೇರಿ ಕಿಂಗ್ಸ್ ಇನ್‌ನಲ್ಲಿ ಬ್ಯಾರಿಸ್ಟರ್ ಆದರು. ಸಂಪ್ರದಾಯಸ್ಥ ಬ್ರಾಹ್ಮಣ ಮನೆತನಕ್ಕೆ ಸೇರಿದ ಗಿರಿಯವರು ತಮ್ಮ ತಾಯಿಗೆ ಕೊಟ್ಟ ಮಾತಿನಂತೆ ಶಾಕಾಹಾರಿಗಳಾಗಿಯೇ ಅಲ್ಲಿ ಕಾಲ ಕಳೆದರು. ಐರ್ಲೆಂಡು ಇಂಗ್ಲೆಂಡಿನಿಂದ ಸ್ವತಂತ್ರವಾಗಲು ಹೋರಾಟದ ಹವಣಿಕೆಯಲ್ಲಿದ್ದದ್ದನ್ನು ಕಂಡಾಗ ಗಿರಿಯವರಿಗೆ ಭಾರತ ಐರ್ಲೆಂಡ್‌ಗಳ ಆಶೋತ್ತರಗಳಲ್ಲಿದ್ದ ಸಾಮ್ಯ ಗೋಚರವಾಯಿತು. ಐರ್ಲೆಂಡಿನವರು ಇಂಗ್ಲೆಂಡಿನವರಿಗಿಂತ ಹೆಚ್ಚಾಗಿ ಭಾರತೀಯರನ್ನು ಗೌರವಿಸುತ್ತಿದ್ದದ್ದನ್ನು ಗಮನಿಸಿದರು. ಐರ್ಲೆಂಡಿನ ನಾಯಕ ಡ ವಲೇರ ಅವರನ್ನು ಗಿರಿಯವರು ಸಂದರ್ಶಿಸಿದರು.

ಗಿರಿ ಅವರು ಬಿ.ಎ. ಪದವಿಗೆ ಸಾಹಿತ್ಯ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಂವಿಧಾನ, ನ್ಯಾಯ, ಅಂತರಾಷ್ಟ್ರೀಯ ಕಾನೂನುಗಳನ್ನು ಆರಿಸಿಕೊಂಡಿದ್ದರು. ಅಲ್ಲಿ ಅನೇಕ ಭಾರತೀಯ ವಿದ್ಯಾರ್ಥಿಗಳು ಸೇರಿ ಕ್ರಾಂತಿಕಾರಿ ಸಂಘವನ್ನು ಸ್ಥಾಪಿಸಿಕೊಂಡರು. ರಾಷ್ಟ್ರಪ್ರೇಮವನ್ನು ತೋರಿಸಲು ವಿದೇಶಿ ಅರಿವೆಗಳನ್ನು ಸುಟ್ಟುಹಾಕಿದರು.

ಗಿರಿಯವರು 1914ರಲ್ಲಿ ಗಾಂಧಿಯವರನ್ನು ಲಂಡನ್ನಿನಲ್ಲಿ ಸಂದರ್ಶಿಸಿದರು. ಅವರ ಎಲ್ಲಾ ವಿಚಾರಧಾರೆಗಳನ್ನೂ, ಉದಾಹರಣೆಗೆ ಅಹಿಂಸೆಯನ್ನು, ಆಗ ಗಿರಿ ಒಪ್ಪಲಿಲ್ಲವಾದರೂ ಗಾಂಧಿಯವರಿಂದ ಬಹಳಮಟ್ಟಿಗೆ ಪ್ರಭಾವಿತರಾದರು. ಯುದ್ಧದಲ್ಲಿ ಬ್ರಿಟಿಷರಿಗೆ ನೆರವಾಗಲು ಗಾಂಧಿಯವರ ಮಾತಿನಂತೆ ಗಿರಿಯವರು ರೆಡ್ ಕ್ರಾಸ್ ಸಂಸ್ಥೆಯನ್ನು ಸೇರಿದ್ದರೂ

ಅನಂತರ ವಿಚಾರಮಾಡಿದಾಗ ತಾವು ಅದಕ್ಕೆ ಸೇರಿದ್ದು ತಪ್ಪೆನಿಸಿ ಕೂಡಲೇ ಗಾಂಧಿಯವರಿಗೆ ಪತ್ರ ಬರೆದು ಆ ಸಂಸ್ಥೆಯಿಂದ ಬಿಡುಗಡೆ ಹೊಂದಿದರು. ಅವರ ಈ ಕ್ರಮ ಆಗ ಕಾನೂನು ವಿರೋಧವಾಗಿತ್ತಾದರೂ ಗಿರಿಯವರು ಹೆದರಲಿಲ್ಲ.

1916ರಲ್ಲಿ ಜರುಗಿದ ಈಸ್ಟರ್ ದಂಗೆಯ ಅನಂತರ ಸಂಭವಿಸಿದ ದುರ್ಘಟನೆಗಳ ವಿಶೇಷ ಪರಿಣಾಮ ಗಿರಿಯವರ ಮೇಲಾಯಿತು. ಬಂದರು, ಗಣಿ ಮತ್ತು ರೈಲ್ವೆಗಳ ಸುಸಂಘಟಿತ ಕಾರ್ಮಿಕರು ಮುಷ್ಕರದ ಮೂಲಕ ಏನು ಮಾಡಬಲ್ಲರೆಂಬುದು ಗಿರಿಯವರಿಗೆ ಮನವರಿಕೆಯಾಯಿತು. ಅವರು ಭಾರತಕ್ಕೆ ಮರಳಿದ ಮೇಲೆ ಇದೇ ರೀತಿ ಕಾರ್ಮಿಕ ಶಕ್ತಿಯನ್ನು ಸಂಘಟಿಸಿ ಅದನ್ನು ರಾಜಕೀಯ ಹೋರಾಟದಲ್ಲಿ ಬಳಸಿಕೊಳ್ಳಬೇಕೆಂದು ಗಿರಿಯವರು ನಿರ್ಧರಿಸಿದರು. ಆ ವೇಳೆಗಾಗಲೇ ಬ್ರಿಟಿಷ್ ಸರ್ಕಾರಕ್ಕೆ ಇವರ ಮೇಲೆ ಸಂಶಯ ಬಂದಿತ್ತು. ಆಗಿನ ಸೆಕ್ರೆಟರಿ ಆಫ್ ಸ್ಟೇಟ್ಸ್ ಚೇಂಬರ್ಲಿನ್, ಕಾಮನ್ಸ್ ಸಭೆಯಲ್ಲಿ ಹೇಳಿಕೆ ಕೊಡುತ್ತ, ಗಿರಿಯವರಿಗೂ ಐರಿಷ್ ನಾಯಕರಿಗೂ ಸಂಪರ್ಕವಿದೆಯೆಂದು ಘೋಷಿಸಿದ. ಇದರ ಪರಿಣಾಮವಾಗಿ ಗಿರಿಯವರಿಗೆ ಅಮೆರಿಕಕ್ಕೆ ಹೋಗಲು ರಹದಾರಿ ಸಿಗಲಿಲ್ಲ. ಇವರು ಸ್ವದೇಶಕ್ಕೆ ಮರಳಿದರು. 1917ರಲ್ಲಿ ಸರಸ್ವತಿಬಾಯಿಯವರೊಡನೆ ಗಿರಿಯವರ ಮದುವೆಯಾಯಿತು.

ಕಾರ್ಮಿಕ ಕ್ಷೇತ್ರವೆಂದರೇನೆಂಬುದು ಇನ್ನೂ ತಿಳಿಯದಿದ್ದ ಆ ಸಮಯದಲ್ಲಿ ಗಿರಿಯವರು ಆ ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದರು. 1915ರಲ್ಲಿಯೇ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಸದಸ್ಯರಾಗಿ ಸೇರಿದ್ದ ಗಿರಿಯವರು ಮಹಾತ್ಮಗಾಂಧಿಯವರ ಸಾಬರ್‌ಮತಿ ಆಶ್ರಮದಲ್ಲೂ ಕೆಲವು ದಿನ ಇದ್ದರು.

ಗಿರಿಯವರು ಭಾರತಕ್ಕೆ ಮರಳಿದ ಮೇಲೆ ಆಗ ಸುಪ್ರಸಿದ್ಧ ಬ್ಯಾರಿಸ್ಟರರೂ ರಾಜಕಾರಣಿಯೂ ಆಗಿದ್ದ ಟಿ. ಪ್ರಕಾಶಂ ಅವರನ್ನು ವೃತ್ತಿಸಂಬಂಧವಾಗಿ ಭೇಟಿಮಾಡಿದರು. ಗಿರಿಯವರು ಅಡ್ವೊಕೇಟ್ ಆಗಿ ಸೇರಿದಾಗ ಗಂಜಾಮಿನ ಜಿಲ್ಲಾ ನ್ಯಾಯಾಧೀಶ ಅವರಿಗೆ ಮುನ್ಸಿಫ್ ಸ್ಥಾನ ಕೊಡಿಸುವುದಾಗಿ ಹೇಳಿದನೆಂದೂ ಗಿರಿಯವರ ಕ್ರಾಂತಿಕಾರೀ ವಿಚಾರಗಳನ್ನು ಅರಿತಮೇಲೆ ಆತ ಹೆದರಿದನೆಂದೂ ಹೇಳಲಾಗಿದೆ. ಗಿರಿಯವರು ವಕೀಲಿವೃತ್ತಿಯಲ್ಲಿ ಐದುವರ್ಷ ಕಳೆಯುವುದರೊಳಗಾಗಿ ಸ್ವಾತಂತ್ರ್ಯ ಹೋರಾಟ ಇವರನ್ನು ಸೆಳೆಯಿತು. 1916ರಲ್ಲಿ ಇವರು ಲಖನೌದಲ್ಲಿ ಸೇರಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. 1921ರಲ್ಲಿ ಸತ್ಯಾಗ್ರಹ ಚಳವಳಿಯಲ್ಲಿ 350 ಜನರೊಂದಿಗೆ ಇವರು ಗಂಜಾಮಿನಲ್ಲಿ ಸತ್ಯಾಗ್ರಹ ಹೂಡಿ ಬಂಧಿತರಾದರು. 1922ರಲ್ಲಿ ಇವರು ಜೈಲಿನಲ್ಲಿದ್ದಾಗ ರಾಜಕೀಯ ಸ್ನೇಹಿತರನ್ನು ಗಳಿಸಿಕೊಳ್ಳುವ ಅವಕಾಶ ಸಿಕ್ಕಿತು. ಕಾರಾಗೃಹದ ಸುಧಾರಣೆಗಾಗಿ ಅದರ ಒಳಗೆ ಸಂಘಟನೆ ಆಂದೋಲನಗಳನ್ನು ಪ್ರಾರಂಭಿಸಿದರು. 1922ರ ವೇಳೆಗೆ ವಿ ವಿ ಗಿರಿ ಅವರ ಶ್ರಮಜೀವಿವರ್ಗದ ಜತೆ ಸಂಬಂಧ ನಿಕಟಗೊಂಡು, ಎನ್ ಎಮ್ ಜೋಶಿಯವರ ಬಲಗೈ ಭಂಟರಾದರು. ಅಲ್ಲಿಂದ ಮುಂದಕ್ಕೆ ಅವರ ಬಹುಮುಖ್ಯ ಕಾರ್ಯಕ್ಷೇತ್ರ ಕಾರ್ಮಿಕರಂಗವಾಯಿತು.

ಮೂರು ತಿಂಗಳುಗಳ ಅನಂತರ ಕಾರಾಗೃಹದಿಂದ ಹೊರಬಂದ ಕೂಡಲೇ ಖರಗ್‌ಪುರದ ರೈಲ್ವೆ ಕಾರ್ಮಿಕ ನಿಯೋಗವೊಂದು ಸೆರಮನೆಯ ಹೆಬ್ಬಾಗಿಲಿನಲ್ಲೆ ಗಿರಿಯವರನ್ನು ಸಂದರ್ಶಿಸಿ ತಮ್ಮ ಸಂಘವನ್ನು ಸಂಘಟಿಸಬೇಕೆಂದು ಕೋರಿತು. ಕೂಡಲೇ ಗಿರಿಯವರು ಒಪ್ಪಿಕೊಂಡು ಬಂಗಾಳ, ನಾಗಪುರ ರೈಲ್ವೆ ಸಂಘವನ್ನು ಸ್ಥಾಪಿಸಿದರು. ಒಂದೇ ದಶಕದಲ್ಲಿ ಈ ಸಂಘ ದೊಡ್ಡದಾಗಿ ಬೆಳೆಯಿತು. ಈ ರೈಲ್ವೆಯಲ್ಲಿ ಗಿರಿ ಅವರು ಅತ್ಯಂತ ಯಶಸ್ವಿಯಾದ ಮುಷ್ಕರವನ್ನು ಸಹ ಸಂಘಟಿಸಿದರು. ಇವರು ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಅಧ್ಯಕ್ಷರಾಗಿದ್ದರು. ಎರಡು ಬಾರಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಇದ್ದರು. 1927ರಲ್ಲಿ ಜಿನೀವದಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಇವರು ಭಾರತದ ಕಾರ್ಮಿಕರ ನಿಯೋಗಿಯಾಗಿ ಭಾಗವಹಿಸಿದರು. 1927–1930ರ ಅವಧಿಯಲ್ಲಿ ಹಲವು ಮುಷ್ಕರಗಳನ್ನು ಸಂಘಟಿಸಿದರಾದರೂ ಗಿರಿಯವರು ಮುಷ್ಕರಗಳನ್ನು ಎಂದೂ ಸ್ವಾಗತಿಸುತ್ತಿರಲಿಲ್ಲ. ಕಾರ್ಮಿಕರು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ, ಮಾಲೀಕರಿಗೆ ಮುನ್ಸೂಚನೆಯನ್ನು ಕೊಟ್ಟು, ಸಂವಿಧಾನದ ಎಲ್ಲಾ ಪ್ರಯತ್ನಗಳೂ ವಿಫಲವಾದಾಗ, ಮುಷ್ಕರ ಹೂಡಬೇಕೆಂಬುದು ಅವರ ಮತ.

ಬಂಗಾಳ, ನಾಗಪುರ ರೈಲ್ವೆ ಮುಷ್ಕರದಲ್ಲಿ ಸು. 60,000 ಕಾರ್ಮಿಕರು ಒಂದು ತಿಂಗಳ ಕಾಲ ಕೆಲಸಕ್ಕೆ ಹಾಜರಾಗದಿದ್ದಾಗ ಅವರ ಕುಟುಂಬಗಳ ರಕ್ಷಣೆ, ಪೋಷಣೆಗಳ ವ್ಯವಸ್ಥೆಯ ಪ್ರತಿಯೊಂದು ವಿವರವನ್ನೂ ಗಿರಿಯವರು ಪ್ರತ್ಯಕ್ಷ ಪ್ರವಾಸ ಭೇಟಿಗಳಿಂದ ನಿಯಂತ್ರಿಸಿದರು. ಇಂಥ ಬೃಹತ್ ಮುಷ್ಕರವನ್ನು ಗೌರವಯುತವಾಗಿ ನಿರ್ವಹಿಸಿ ಕಾರ್ಮಿಕ ಸಂಘಟನೆಯ ಸಾಮರ್ಥ್ಯ ಆಡಳಿತಕ್ಕೆ ಗೊತ್ತಾಗುವಂತೆ ಮಾಡಿದರು. ಆ ಸಂಘವನ್ನು ಸರ್ಕಾರ ಮನ್ನಿಸಬೇಕಾಯಿತು. ಕಾರ್ಮಿಕ ಕ್ಷೇತ್ರದಲ್ಲಿ ಗಿರಿಯವರಿಗೆ ಎಂ. ಎನ್. ಜೋಷಿಯವರು ಮಾರ್ಗದರ್ಶಕರಾಗಿದ್ದರು.

ಗಿರಿಯವರ ತಂದೆ ಕೇಂದ್ರ ವಿಧಾನ ಪರಿಷತ್‌ನಲ್ಲಿ 1927 ರಿಂದ 1930 ರವರಗೆ ಸದಸ್ಯರಾಗಿದ್ದರೂ ಗಿರಿಯವರು ವಿಧಾನಸಭಾ ಪ್ರವೇಶಕ್ಕಾಗಿ ಪ್ರಯತ್ನಮಾಡಿದವರಲ್ಲ. ಆದರೆ ಕಾರ್ಮಿಕರ ಹಿತ ಪಾರ್ಲಿಮೆಂಟರಿ ಚಟುವಟಿಕೆಗಳಿಂದ ಸಾಧಿತವಾಗುವುದೆಂದು ಅನಿಸಿದ ಮೇಲೆ ಆ ಬಗ್ಗೆ ಅವರಲ್ಲಿದ್ದ ವಿರೋಧಭಾವ ಹೋಯಿತು. 1934ರಲ್ಲಿ ಗಿರಿ ಅವರು ತಮ್ಮ ಸ್ನೇಹಿತರಾದ ರಾಜು ಅವರನ್ನು ಸೋಲಿಸಿ ಕೇಂದ್ರ ವಿಧಾನಸಭೆಗೆ ಚುನಾಯಿತರಾದರು (1934–37). ಆಗ ಅವರು ಕಾರ್ಮಿಕ ಸಮಸ್ಯೆಗಳತ್ತ ಸರ್ಕಾರದ ಗಮನಸೆಳೆಯಲು ಯತ್ನಿಸಿದರು. ಭಾರತದಲ್ಲೇ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವುದು ಉಳಿತಾಯದ ಮಾರ್ಗವೆಂದು ಆಗಲೇ ಸೂಚಿಸಿದ್ದರು. ಸತ್ಯಮೂರ್ತಿ, ಭೂಲಾಬಾಯಿ ದೇಸಾಯಿ, ಜಿನ್ನಾ, ಗೋವಿಂದವಲ್ಲಭಪಂತ್, ಮದನಮೋಹನ ಮಾಳವೀಯ, ಅಸಫ್ ಆಲಿ ಮುಂತಾದ ದಿಗ್ಗಜರಿಂದ ಕೇಂದ್ರೀಯ ವಿಧಾನಸಭೆಯಲ್ಲಿ ವಿ ವಿ ಗಿರಿ ಕಾರ್ಮಿಕ ಪ್ರಶ್ನೆಗಳನ್ನು ಪ್ರಬಲವಾಗಿ ಪ್ರತಿಪಾದಿಸಿ, ಎಲ್ಲರ ಗಮನ ಸೆಳೆದರು.

ಭಾರತದಲ್ಲಿ ಆರ್ಥಿಕ ಯೋಜನೆಗಳ ಮಾತು ಹೊಸದಾಗಿದ್ದ ಆ ಕಾಲದಲ್ಲಿ ಗ್ರಾಮೀಣ ಪ್ರಗತಿಗಾಗಿ ಆರ್ಥಿಕ ಯೋಜನೆಯೊಂದನ್ನು ರೂಪಿಸಿ ಕೇಂದ್ರ ವಿಧಾನ ಮಂಡಲದ ಮುಂದೆ ಗಿರಿಯವರು ಮಂಡಿಸಿದ್ದರು. ಕೈಗಾರಿಕೆಗಳ ವ್ಯಾಜ್ಯಗಳಲ್ಲಿ ಸಂಧಾನದ ಸಾಧನಗಳಾಗಿ ಮಂಡಳಿಗಳು ಇರಬೇಕೆಂದು ಆಗ ವಾದಿಸಿದ ಪರಿಣಾಮವಾಗಿ ಇಂದು ಆ ಬಗ್ಗೆ ಅನೇಕ ಕಾನೂನುಗಳಾಗಿ ಕೈಗಾರಿಕಾ ಸಂಸ್ಥೆಗಳು ವಿಫುಲ ಸೌಲಭ್ಯ ಪಡೆದಿವೆ. ಆದರೆ ಆಗ ಗಿರಿ ಅವರ ಈ ಮಾತುಗಳು ಹೊಸದಾಗಿ ಕಾಣುತ್ತಿದ್ದುವು.

1937ರಲ್ಲಿ ಪ್ರಾಂತೀಯ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆದಾಗ, ಬ್ರಿಟಿಷ್ ಸರ್ಕಾರದ ಬೆಂಬಲವನ್ನೂ ಶ್ರೀಮಂತಿಕೆ, ಜಾತೀಯತೆ, ಹಾಗೂ ಅಧಿಕಾರ ಬಲವನ್ನೂ ಪಡೆದಿದ್ದ ಬೊಬ್ಬಿಲಿ ರಾಜರ ವಿರುದ್ಧವಾಗಿ ಗಿರಿಯವರು ಕಾಂಗ್ರೆಸ್ ಸ್ಪರ್ಧಿಯಾಗಿ ನಿಂತು ಗೆದ್ದು ನೆಹರೂ ಅವರ ಪ್ರಶಂಸೆಗೆ ಪಾತ್ರರಾದರು.

1937–39 ಮದ್ರಾಸಿನಲ್ಲಿ ಸಿ ರಾಜಗೋಪಾಲಾಚಾರಿ ಅವರು ರಚಿಸಿದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಕಾರ್ಮಿಕ, ಕೈಗಾರಿಕೆ, ಮತ್ತು ಸಹಕಾರ ಮಂತ್ರಿಯಾಗಿದ್ದ ಗಿರಿಯವರು ಕಾರ್ಮಿಕ ನೀತಿಯನ್ನು ಸ್ಪಷ್ಟೀಕರಿಸುತ್ತ ಮಾಲೀಕರ, ಕಾರ್ಮಿಕರ ಮತ್ತು ಸರ್ಕಾರದ ತ್ರಿಪಕ್ಷ ಸಮ್ಮೇಳನವನ್ನು ಕರೆದರು. ಆಗ ಆ ಪ್ರಾಂತ್ಯದ ಮುಖ್ಯ ಮಂತ್ರಿಯಾಗಿದ್ದ ರಾಜಗೋಪಾಲಾಚಾರಿಯವರು ಇದನ್ನು ಗಿರಿಯವರ ದರ್ಬಾರ್ ಎಂದು ನಗೆಯಾಡಿದರು. ಆಗಿನ ರಾಜ್ಯಪಾಲರೂ ಇದರ ಬಗ್ಗೆ ತಾತ್ಸಾರ ಭಾವ ತಳೆದರು. ಭಾರತೀಯ ವಲಸೆಗಾರರ ಸಮಸ್ಯೆಯನ್ನು ಗಿರಿಯವರು ಆಗ ಕೈಗೆತ್ತಿಕೊಂಡರು. 1938ರಲ್ಲಿ ಕಾಂಗ್ರೆಸ್ ರಚಿಸಿದ ರಾಷ್ಟ್ರೀಯ ಯೋಜನಾ ಆಯೋಗಕ್ಕೆ ಗಿರಿಯವರು ಸಂಚಾಲಕರಾದರು. ಭಾರತದ ಪಂಚವಾರ್ಷಿಕ ಯೋಜನೆಗಳ ಭಾವನೆ ರೂಪುಗೊಂಡದ್ದು ಆಗ.

ಪ್ರಕಾಶಂ ಅವರು ಮದ್ರಾಸಿನಲ್ಲಿ ರಚಿಸಿದ ಸರ್ಕಾರದಲ್ಲೂ ಗಿರಿಯವರು ಮಂತ್ರಿಯಾಗಿದ್ದರು (1946–1947). ಅನಂತರ ಇವರು ಶ್ರೀಲಂಕ (ಸಿಂಹಳ)ದಲ್ಲಿ ಭಾರತದ ಹೈಕಮಿಷನರಾಗಿದ್ದರು (1947–1951). 1952ರ ಮೇ ತಿಂಗಳಿಂದ 1954ರ ಸೆಪ್ಟೆಂಬರ್‌ವರೆಗೆ ಇವರು ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿಯಾಗಿದ್ದರು. ಕಾರ್ಮಿಕ ನೀತಿಯ ವಿಚಾರವಾಗಿ ಭಿನ್ನಾಭಿಪ್ರಾಯ ಬಂದುದರಿಂದ ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. 1952ರಿಂದ 1957ರವರಗೆ ಇವರು ಲೋಕಸಭಾ ಸದಸ್ಯರಾಗಿದ್ದರು. 1958ರಲ್ಲಿ ಇವರು ಸಾಮಾಜಿಕ ಕಾರ್ಯದ ಭಾರತೀಯ ಸಮ್ಮೇಳನದ ಚುನಾಯಿತ ಅಧ್ಯಕ್ಷರಾಗಿದ್ದರು. ಇವರು ಕಾರ್ಮಿಕ ಅರ್ಥಶಾಸ್ತ್ರದ ಭಾರತೀಯ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದರು. ಭಾರತೀಯ ಕಾರ್ಮಿಕ ಸಂಘ ಚಳವಳಿ, ಕಾರ್ಮಿಕ ಅರ್ಥಶಾಸ್ತ್ರ ಇವುಗಳ ಬೆಳವಣಿಗೆಗೆ ಗಿರಿಯವರು ಬಹಳ ಮಟ್ಟಿಗೆ ಕಾರಣ.

ಗಿರಿಯವರು 1957–1960ರಲ್ಲಿ ಉತ್ತರ ಪ್ರದೇಶಕ್ಕೂ 1960–1965ರಲ್ಲಿ ಕೇರಳಕ್ಕೂ 1965–1967ರಲ್ಲಿ ಕರ್ನಾಟಕಕ್ಕೂ ರಾಜ್ಯಪಾಲರಾಗಿದ್ದರು. 1967ರ ಮೇ 13ರಿಂದ 1969ರ ಮೇ 3ರವರೆಗೆ ಇವರು ಭಾರತದ ಮೂರನೆ ಉಪರಾಷ್ಟ್ರಪತಿಯಾಗಿಯೂ ರಾಜ್ಯಸಭೆಯ ಅಧ್ಯಕ್ಷರಾಗಿಯೂ ಇದ್ದರು. ಭಾರತದ ರಾಷ್ಟ್ರಪತಿಯಾಗಿದ್ದ ಜ಼ಾಕಿರ್ ಹುಸೇನ್ 1969ರ ಮೇ 3ರಂದು ನಿಧನರಾದಾಗ ಹಂಗಾಮಿರಾಷ್ಟ್ರಪತಿಯಾದರು. ಅನಂತರ ಸ್ಪರ್ಧಿಸಿ ಜಯಶೀಲರಾಗಿ 1969ರ ಆಗಸ್ಟ್ 24ರಂದು ರಾಷ್ಟ್ರಪತಿಯಾದರು.

ಗಿರಿಯವರ ಪತ್ನಿ ಸರಸ್ವತಿಬಾಯಿ ಗಿರಿಯವರು ಬಳ್ಳಾರಿ ಜಿಲ್ಲೆಯವರು. ಗಿರಿದಂಪತಿಗಳಿಗೆ ಹದಿನಾರು ಮಕ್ಕಳೂ ನಲವತ್ತು ಮೊಮ್ಮಕ್ಕಳೂ ಹದಿಮೂರು ಮರಿಮಕ್ಕಳೂ ಇದ್ದಾರೆ.

ಗಿರಿಯವರು ಒಳ್ಳೆಯ ಲೇಖಕ, ವಾಗ್ಮಿ. ಇಂಡಸ್ಟ್ರಿಯಲ್ ರಿಲೇಷನ್ಸ್, ಲೇಬರ್ ಪ್ರಾಬ್ಲೆಮ್ಸ್ ಇನ್ ಇಂಡಿಯನ್ ಇಂಡಸ್ಟ್ರಿ ಮುಂತಾದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಹಲವು ಇಂದಿಗೂ ಆಯಾ ಕ್ಷೇತ್ರಗಳಲ್ಲಿ ಪ್ರಮಾಣ ಗ್ರಂಥಗಳಾಗಿವೆ. ಇವರಿಗೆ 1975ರಲ್ಲಿ ಭಾರತ ಸರ್ಕಾರ 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಿತು. ಇವರು 1980ರಲ್ಲಿ ನಿಧನರಾದರು.

ಆಜೀವಪರ್ಯಂತ ಸಮಾಜವಾದಿ ವಿಚಾರಧಾರೆಯ ಒಲವಿದ್ದರೂ, ಒಣ ಸೈದ್ಧಾಂತಿ ಸಮಾಜವಾದಿಯಾಗಿರಲಿಲ್ಲ. ಇವರದು ವ್ಯಾವಹಾರಿಕ ಹಾಗೂ ಮಾನವೀಯ ದೃಷ್ಟಿ. ಇವರ ದೃಷ್ಟಿಯಲ್ಲಿ ಸಮಾಜವೆಂಬ ಮತದ ಬೇರು ಮನುಷ್ಯ. 'ಲಕ್ಷಾಂತರ ಜನರಿಗೆ ಉದ್ಯೋಗ' ವಿ.ವಿ. ಗಿರಿ ಇವರ ನಿತ್ಯ ಜಪವಾಗಿತ್ತು. (ಜೆ.ಆರ್.ಪಿ.)

**ಗಿರಿವ್ರಜ :** ಪ್ರಾಚೀನ ಮಗಧ ದೇಶದ ರಾಜಧಾನಿ. ಪಾಟ್ನದಿಂದ 62 ಕಿಮೀ ದೂರದಲ್ಲಿರುವ ಈ ಸ್ಥಳದ ಈಗಿನ ಹೆಸರು ರಾಜ್‍ಗಿರ್. ಉಪರಿಚರ ವಸುವಿನಿಂದ ಈ ನಗರ ನಿರ್ಮಾಣವಾದ್ದರಿಂದ ಇದಕ್ಕೆ ವಸುಮತೀ ಎಂಬ ಹೆಸರೂ ಉಂಟು. ಬೌದ್ಧರ ಕಾಲದಲ್ಲಿ ಇದನ್ನು ರಾಜಗೃಹ ಎಂದು ಕರೆದರು. ಬಿಂಬಸಾರ (ಪ್ರ.ಶ.ಪೂ. 550) ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಅನಂತರ ಬಂದ ಕಲಾಶೋಕ ಎಂಬ ರಾಜ ತನ್ನ ರಾಜಧಾನಿಯನ್ನು ರಾಜಗ್ರಹದಿಂದ ಪಾಟಲಿಪುತ್ರಕ್ಕೆ ಬದಲಾಯಿಸಿದ. ಗಿರಿವ್ರಜ ಬಾರ್ಹದ್ರಥ ವಂಶದ ರಾಜಧಾನಿಯಾಗಿದ್ದುದರಿಂದ ಇದಕ್ಕೆ ಬಾರ್ಹದ್ರಥಪುರ ಎಂಬ ಹೆಸರಿತ್ತೆಂದು ತಿಳಿಯುತ್ತದೆ. ಬೌದ್ಧ ಗ್ರಂಥಗಳ ಪ್ರಕಾರ ಇದಕ್ಕೆ ಕುಶಾಗ್ರಪುರಿ ಎಂದೂ ಹೆಸರಿತ್ತು. ಬೃಹತ್‍ಸಂಹಿತೆ ಮತ್ತು ವಿಷ್ಣುಪುರಾಣಗಳಲ್ಲೂ ಗಿರಿವ್ರಜದ ಉಲ್ಲೇಖ ಬಂದಿದೆ. ಕೃಷ್ಣ, ಅರ್ಜುನ, ಭೀಮ–ಇವರು ಜರಾಸಂಧವಧೆಗಾಗಿ ಇಲ್ಲಿಗೆ ಬಂದಿದ್ದರೆಂದು ಭಾಗವತ ಪುರಾಣ ತಿಳಿಸುತ್ತದೆ. ಗೌತಮ ಬುದ್ಧ ವಿಶ್ರಾಂತಿಗಾಗಿ ಒಂದು ವರ್ಷಗಳ ಕಾಲ ಇಲ್ಲಿ ತಂಗಿದ್ದನೆಂದು ತಿಳಿದುಬರುತ್ತದೆ.

ಚೀನಿ ಪ್ರವಾಸಿ ಫಾಹಿಯಾನ್ ಮತ್ತು ಯುವಾನ್‍ಚಾಂಗ್ ಪ್ರಕಾರ ಈ ಪಟ್ಟಣ ಈಗಿನ ರಾಜ್‍ಗಿರ್‍ನ ದಕ್ಷಿಣಕ್ಕೆ ಒಂದು ಕಿಮೀ ದೂರದಲ್ಲಿ ಐದು ಪರ್ವತಗಳ ಮಧ್ಯೆ ಇತ್ತೆಂದು ತಿಳಿದುಬರುತ್ತದೆ. ರಾಮಾಯಣದಲ್ಲೂ ಇದೇ ರೀತಿ ಉಲ್ಲೇಖವಿದೆ. 1. ವೈಹಾರ (ವೈಭಾರ), 2. ವರಾಲ(ವಿಪುಲಗಿರಿ), 3. ವೃಷಭ (ರಾನ), 4. ಋಷಿ (ಉದಯ) 5. ಚೈತ್ಯಕ (ಸೋನರಾಗಿರಿ)– ಇವೇ ಆ ಪಂಚ ಪರ್ವತಗಳು. ಬುದ್ಧನ ಪರಿನಿರ್ವಾಣದ ಅನಂತರ (ಪ್ರ.ಶ.ಪೂ.486) ಬೌದ್ಧರ ಪ್ರಥಮ ಪರಿಷತ್ತು ಸೇರಿದ್ದು ವೈಭಾರದಲ್ಲಿ. ಗಿರಿವ್ರಜದಲ್ಲಿ ಕೆಲವು ಜೈನ ಶಾಸನಗಳೂ ಉಂಟು. ಇಲ್ಲಿ ಅನೇಕ ಬಿಸಿನೀರಿನ ಚಿಲುಮೆಗಳಿರುವುದರಿಂದ ರಾಜ್‍ಗಿರ್ ಈಗ ಒಂದು ಆರೋಗ್ಯಧಾಮವೆಂದು ಪ್ರಸಿದ್ಧವಾಗಿದೆ. *

**ಗಿರೀಶ್ ಕಾರ್ನಾಡ್ :** 1938–. ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ನಾಟಕಕಾರ, ನಟ, ಚಲನಚಿತ್ರನಿರ್ದೇಶಕ. 1938 ಮೇ 19ರಂದು ಮುಂಬಯಿ ಸಮೀಪದ ಮಾಥೇರಾನ ಎಂಬ ಊರಲ್ಲಿ ಜನಿಸಿದರು. ತಂದೆ ರಘುನಾಥ ಕಾರ್ನಾಡ್, ವೈದ್ಯರು. ತಾಯಿ ಕೃಷ್ಣಬಾಯಿ. ಗಿರೀಶ್ ಕಾರ್ನಾಡ್‍ರು ಶಾಲ ಶಿಕ್ಷಣವನ್ನು ಶಿರಸಿಯಲ್ಲಿ ಪಡೆದರು. 1958 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರ ಮತ್ತು ಸಂಖ್ಯಾಕಲನಶಾಸ್ತ್ರದಲ್ಲಿ ಬಿ.ಎ.ಪದವಿ ಗಳಿಸಿದರು. ಅನಂತರ ಮುಂಬಯಿಯಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ರೋಡ್ಸ್ ವಿದ್ಯಾರ್ಥಿವೇತನ ಪಡೆದು ಮುಂಬಯಿನಲ್ಲಿ ಅಧ್ಯಯನ ಅರ್ಧಕ್ಕೆ ನಿಲ್ಲಿಸಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. 1963ರಲ್ಲಿ ಆಕ್ಸ್‌ಫರ್ಡಿನ ಎಂ.ಎ. ಪದವಿ ಸಂಪಾದಿಸಿದರು. ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್ ಯೂನಿಯನ್ನಿನ ಅಧ್ಯಕ್ಷರಾಗಿ ಇದ್ದರು. ಯೂನಿಯನ್ನಿಗೆ ಪ್ರಪ್ರಥಮವಾಗಿ ಮಹಿಳೆಯರಿಗೂ ಪ್ರವೇಶ ದೊರಕಿದ್ದು ಕಾರ್ನಾಡರ ಅಧ್ಯಕ್ಷತೆಯ ಅವಧಿಯಲ್ಲಿ. ಅವರು ಇಂಗ್ಲೆಂಡಿನಿಂದ ಭಾರತಕ್ಕೆ ಹಿಂದಿರುಗಿದ ಮೇಲೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಸಂಸ್ಥೆಯ ಮದರಾಸು ಶಾಖೆಯಲ್ಲಿ ಉಪವ್ಯವಸ್ಥಾಪಕರಾದರು (1963–69); ಅನಂತರ ಅದರ ವ್ಯವಸ್ಥಾಪಕರಾದರು (1969–70). ಕಾನಾರ್ಡ್‍ರವರು ಬೆಂಗಳೂರಿನರಾದ ಡಾ.ಸರಸ್ವತಿ ಗಣಪತಿ ಈಕೆಯ ತಾಯಿ ಫಾರಸಿ ನರ್ಗಿಸ್‍ಮುಗಾಸೇಥ್ ಮತ್ತು ತಂದೆ ಕೊಡವ, ಕೊಡಂದೆರ ಗಣಪತಿ ಈಕೆಯನ್ನು ತಮ್ಮ 48 ವಯಸ್ಸಿನಲ್ಲಿ ವಿವಾಹವಾದರು. ಇವರಿಗೆ ಇಬ್ಬರು ಮಕ್ಕಳು; ಮಗಳು ಶಲ್ಮಲಿ (1981), ರಘು ಅಮಯ್ (1983) ಮಗ.

ಇವರು ಹವ್ಯಾಸಿ ರಂಗಭೂಮಿಯ ಒಳ್ಳೆಯ ನಟರೆಂದೂ ನಾಟಕ ಲೇಖಕರೆಂದೂ ಹೆಸರುಗಳಿಸಿದ್ದಾರೆ. ಇವರು 1961 ರಲ್ಲಿ ಪ್ರಕಟಿಸಿದ ಯಯಾತಿ ನಾಟಕ ಹಲವು ಬಾರಿ ರಂಗಭೂಮಿಯ ಮೇಲೆ ಪ್ರದರ್ಶಿತವಾಗಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಪುರಾಣದ ಯಯಾತಿಯನ್ನು ಆಧುನಿಕ ದೃಷ್ಟಿಕೋನದಿಂದ ಪರಿವೀಕ್ಷಿಸಿ ಅವನ ಬಾಳಿನ ದುರಂತತೆಯನ್ನು ಎತ್ತಿ ತೋರುವ ಯಯಾತಿಯ ತಂತ್ರ ಅತ್ಯಂತ ಯಶಸ್ವಿಯಾಗಿದೆ. ಭಾರತೀಯ ಇತಿಹಾಸದ ವಾದಗ್ರಸ್ತ ಸುಲ್ತಾನರಲ್ಲೊಬ್ಬನ ಬಾಳಿನ ಸುತ್ತ ಹೆಣೆದಿರುವ 'ತುಘಲಕ್' ನಾಟಕವೂ (1964) ನವೀನ ತಂತ್ರದಿಂದ ಕೂಡಿ, ಅವನ ಬಾಳಿನ ಕಥೆಗೆ ಹೊಸ ಆಯಾಮವೊಂದನ್ನು ನೀಡುತ್ತದೆ. ಅದು ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷ್, ಹಿಂದಿ ಮತ್ತು ಮರಾಠಿಯಲ್ಲೂ ರಂಗಪ್ರಯೋಗಗೊಂಡು ಆ ಭಾಷೆಗಳ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಮಾ ನಿಷಾದ (1964), ಹಯವದನ (1977), ಅಂಜುಮಲ್ಲಿಗೆ (1980), ಹಿಟ್ಟಿನ ಹುಂಜ (1980), ನಾಗಮಂಡಲ (1988), ತಲೆದಂಡ (1990), ಅಗ್ನಿ ಮತ್ತು ಮಳೆ (1995), ಟಿಪ್ಪುವಿನಕನಸುಗಳು(2000) ಮತ್ತು ಒಡಕಲು ಬಿಂಬ (2005) ಇವು ಕಾರ್ನಾಡರು ಬರೆದ ಇತರ ನಾಟಕಗಳು. ಇವರ ಯಯಾತಿಗೆ ರಾಜ್ಯಪ್ರಶಸ್ತಿಯೂ (1961) ತುಘಲಕ್‍ಗೆ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ (1969) ಲಭಿಸಿವೆ. 1971ರಲ್ಲಿ ಭಾರತೀಯ ಭಾಷೆಗಳಲ್ಲಿ ಸೃಷ್ಟಿಯಾದ ನಾಟಕಗಳ ಪೈಕಿ ಅತ್ಯುತ್ಕೃಷ್ಟವಾದದ್ದೆಂದು ಭಾರತೀಯ ನಾಟ್ಯ ಸಂಘದ ಬಹುಮಾನ ಗಳಿಸಿದ ಹಯವದನದಲ್ಲಿ ಯಕ್ಷಗಾನದ ತಂತ್ರವನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ. ಕಾರ್ನಾಡರು ನಾಟಕಗಳಿಗೆ ಆಯ್ದುಕೊಳ್ಳುವ ವಸ್ತು ಪುರಾಣ, ಇತಿಹಾಸ, ಜನಪದಗಳಾದರೂ ಅವರ ಕೃತಿಗಳಲ್ಲಿ ಸಮಕಾಲೀನ ಸಮಸ್ಯೆ ಸಂವೇದನಗಳನ್ನು ಅರ್ಥೈಸುವ ಪ್ರಾಮಾಣಿಕ ಪ್ರಯತ್ನ ಗಮನಾರ್ಹ.

ಗಿರೀಶ್ ಕಾರ್ನಾಡರು ಹೆಚ್ಚು ಪ್ರಸಿದ್ಧಿ ಪಡೆದದ್ದು ಯು.ಆರ್.ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯನ್ನು ಆಧರಿಸಿ ತಯಾರಿಸಲಾದ ಅದೇ ಹೆಸರಿನ ಕನ್ನಡ ಚಲನಚಿತ್ರದಿಂದಾಗಿ. ಸಂಸ್ಕಾರದ ಚಿತ್ರಕಥಾ ಲೇಖಕರೂ ಅದರಲ್ಲಿ ಪ್ರಾಣೇಶಾಚಾರ್ಯನ ಪಾತ್ರ ವಹಿಸಿದವರೂ ಗಿರೀಶ್‍ಕಾರ್ನಾಡರೇ. ತುಂಬ ವಾದಗ್ರಸ್ತವಾದ ಈ ಚಿತ್ರ ಮೊದಲು ಭಾರತದ ಸೆನ್ಸಾರ್ ಬೋರ್ಡಿನಿಂದ ಬಹಿಷ್ಕೃತವಾಗಿ ಅನಂತರ ಒಪ್ಪಿಗೆಯ ಮುದ್ರೆ ದೊರಕಿಸಿಕೊಂಡಿತು. ಇದು ಅನೇಕ ವಿಮರ್ಶಕರ ಮೆಚ್ಚುಗೆ ಗಳಿಸಿತಲ್ಲದೆ, 1971ರ ಶ್ರೇಷ್ಠ ಚಿತ್ರವೆಂದು ರಾಷ್ಟ್ರಪತಿಗಳ ಸ್ವರ್ಣಪದಕ ಗಳಿಸಿತು. ಬಿ.ವಿ.ಕಾರಂತರ ಸಹಯೋಗದಲ್ಲಿ ಇವರು ನಿರ್ದೇಶಿಸಿದ ಎಸ್.ಎಲ್.ಭೈರಪ್ಪನವರ ವಂಶವೃಕ್ಷ ಕಾದಂಬರಿ ಆಧಾರಿತ ಚಿತ್ರವೂ ತುಂಬ ಯಶಸ್ಸು ಗಳಿಸಿತು. ಇದರ ಚಿತ್ರ ಕಥೆಯನ್ನು ಬರೆದವರೂ ಕಾರ್ನಾಡರೇ. ಇದರಲ್ಲೂ ಕಾರ್ನಾಡರು ಪಾತ್ರವಹಿಸಿದ್ದಾರೆ. ಇದಕ್ಕೆ ರಾಜ್ಯ ಪ್ರಶಸ್ತಿಯೂ ಫಿಲ್ಮ್‌ಫೇರ್ ಪ್ರಶಸ್ತಿಯೂ ದೊರಕಿವೆ. ಇವರು ನಿರ್ದೇಶಿಸಿರುವ ಇನ್ನೊಂದು ಚಿತ್ರ ಶ್ರೀಕೃಷ್ಣ ಆಲನಹಳ್ಳಿಯವರ ಕಾಡು ಕಾದಂಬರಿಯನ್ನು ಆಧರಿಸಿದ್ದು. ಉತ್ಸವ್ ಇವರು ನಿರ್ದೇಶಿಸಿದ ಹಿಂದಿ ಚಿತ್ರ. ನಿಶಾಂತ್ ಎಂಬ ಹಿಂದಿ ಚಿತ್ರದಲ್ಲಿ ಕಾರ್ನಾಡರು ಅಭಿನಯಿಸಿದ್ದಾರೆ. ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯನ್ನು ಆಧರಿಸಿ ಅದೇ ಹೆಸರಿನ ಚಿತ್ರವನ್ನು ನಿರ್ದೇಶಿಸಿ, ಅಭಿನಯಿಸಿದ್ದಾರೆ (1999). ನಾಗಮಂಡಲವು ಸೇರಿದಂತೆ ಇವರ ನಾಟಕಗಳು ವಿದೇಶಗಳಲ್ಲೂ ಪ್ರದರ್ಶಿಸಲ್ಪಟ್ಟಿವೆ. ಇವು ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಸಾಹಿತ್ಯ, ರಂಗಭೂಮಿ, ಚಲನಚಿತ್ರ–ಇವುಗಳ ನಡುವೆ ನಿಕಟಬಾಂಧವ್ಯ ಇದ್ದಾಗಲೇ ಹೊಸಹೊಸ ಪ್ರಯೋಗಗಳು ಸಾಧ್ಯವೆಂದೂ ಬಂಗಾಲದಲ್ಲಿ ಇವು ಮೂರೂ ಪರಸ್ಪರ ಪೂರಕವಾಗಿರುವುದರಿಂದಲೇ ಅಲ್ಲಿಯ ಚಲನಚಿತ್ರ ನವ್ಯತೆಯ ಹಾದಿ ಹಿಡಿದಿದೆಯೆಂದೂ ಭಾವಿಸಿರುವ ಕಾರ್ನಾಡರು ಈ ಮೂರೂ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಗಣಿತಶಾಸ್ತ್ರದ ಶಿಸ್ತಿನಂತೆಯೇ ರಂಗಕರ್ಮಕೂಡ ಎಂಬುದು ಕಾರ್ನಾಡರ ನಂಬುಗೆ. ಸ್ವತಃ ಗಣಿತಶಾಸ್ತ್ರದ ವಿದ್ಯಾರ್ಥಿಯಾಗಿ, ವಿದೇಶಯಾತ್ರೆ ಮಾಡಿ ಅಲ್ಲಿಯ ರಂಗಭೂಮಿ, ಚಿತ್ರರಂಗವನ್ನು ವೀಕ್ಷಿಸಿರುವ ಗಿರೀಶ ಕಾರ್ನಾಡರು ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಲ್ಲೂ ನವ್ಯ ವಿಧಾನವನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ತೆರೆಯ ಮೇಲೆ ಪ್ರಸಿದ್ಧರಾದ ಮತ್ತು ಹಣ ದೊರಕಿಸುವ ಭರವಸೆ ಇರುವ ನಟನಟಿಯರನ್ನು ಬಿಟ್ಟು ತಾವು ಚಿತ್ರೀಕರಿಸಲಿರುವ ಕಥೆಗೆ ಸೂಕ್ತರಾದವರನ್ನು ಅಭಿನಯಕ್ಕೆ ಆರಿಸಿಕೊಳ್ಳುವುದೂ ವೇಷಭೂಷಣಗಳಿಗಾಗಲಿ ಚಿತ್ರನಿರ್ಮಾಣ ಶಾಲೆಯ ಪೂರ್ವಸಿದ್ಧ ದೃಶ್ಯ ಸಂಯೋಜನೆಗಾಗಲಿ ಪ್ರಾಮುಖ್ಯ ಕೊಡದೆ ಹೊರಾಂಗಣದ ಸಹಜ ಪರಿಸರದಲ್ಲಿ ನೇರವಾಗಿ ಚಿತ್ರ

ತೆಗೆಯುವುದೂ ಇವರು ಸಾಮಾನ್ಯವಾಗಿ ಅನುಸರಿಸುವ ಕ್ರಮ. ಇವರು ಸ್ವಲ್ಪ ಕಾಲ ಪುಣೆಯ ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ನಿರ್ದೇಶಕರಾಗಿದ್ದರು. ಇವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಪದ್ಮಶ್ರೀ (1974), ಪದ್ಮಭೂಷಣ (1992), ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ (1976) ಮತ್ತು ಜ್ಞಾನಪೀಠ ಪ್ರಶಸ್ತಿ (1998) ದೊರಕಿವೆ. (ಎಚ್.ಎಸ್.ಕೆ.)

ಇವರು 'ಆಡಾಡತ ಆಯುಷ್ಯ' ಎಂಬ ತಮ್ಮ ಆತ್ಮಚರಿತ್ರೆಯ ಒಂದನೆಯ ಸಂಪುಟವನ್ನು 2011ರಲ್ಲಿ ಪ್ರಕಟಿಸಿದ್ದಾರೆ. ಎರಡನೆಯ ಸಂಪುಟ 'ನೋಡ ನೋಡತಾ ದಿನಮಾನ' ಪ್ರಕಟವಾಗಲಿದೆ. ಇವರ ತಾಯಿ ಕೃಷ್ಣಬಾಯಿ ಗೌಡ ಸಾರಸ್ವತ ಸಮುದಾಯಕ್ಕೆ ಸೇರಿದವರು. ಈಕೆ ಗೋಕರ್ಣದ ಮನ್‌ಕೀಕ್ರಾ ಕುಟುಂಬಕ್ಕೆ ಮದುವೆಯಾಗಿದ್ದರು. ಚಿಕ್ಕವಯಸ್ಸಿನಲ್ಲೇ ವಿಧವೆಯಾದಾಗ ಪತಿಯ ಕುಟುಂಬದವರು ನಿರ್ಲಕ್ಷಿಸಿದರು. ಈಕೆಯ ಕಷ್ಟಕಾಲದಲ್ಲಿ ಈಕೆಗೆ ನೆರವು ನೀಡಿದ್ದು ಈಕೆಯ ಭಾವ (ಅಕ್ಕನಗಂಡ) ಮಂಗೇಶ್‌ರಾವ್. ಆಗ ಬೆಳಗಾವಿಯಲ್ಲಿ ಸರ್ಕಾರಿ ವೈದ್ಯಾಧಿಕಾರಿಯಾಗಿದ್ದ ಸಂಬಂಧಿ ಡಾ. ಕಾರ್ನಾಡರ ಸಹಾಯದಿಂದ ನರ್ಸಿಂಗ್ ಶಾಲೆಯಲ್ಲಿ ಸ್ಥಾನಪಡೆಯಲು ಸಹಾಯ ಮಾಡಿದರು. ಈಕೆ ಕಾರ್ನಾಡರ ಮನೆಯಲ್ಲೇ 5 ವರ್ಷವಾಸವಿದ್ದು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಕಾರ್ನಾಡರ ಮನೆಯಲ್ಲಿ ಹಾಸಿಗೆ ಹಿಡಿದ ಅವರ ಪತ್ನಿಯನ್ನು ನೋಡಿಕೊಳ್ಳುತ್ತಿದ್ದರು. ಆಕೆ ನಿಧನವಾದ ಅನಂತರ ಕಾನಾರ್ಡರು ಕೃಷ್ಣಬಾಯಿಯನ್ನು ಆರ್ಯ ಸಮಾಜದ ಪದ್ಧತಿಯಂತೆ ವಿವಾಹವಾದರು. ಈ ವಿಷಯವನ್ನು ಗಿರೀಶ್‌ಕಾರ್ನಾಡರು ತಮ್ಮ ಆತ್ಮ ಚರಿತ್ರೆಯಲ್ಲಿ ಬರೆದಿದ್ದಾರೆ. (ಎಸ್.ಎಲ್.)

**ಗಿರೀಶ್ ಕಾಸರವಳ್ಳಿ:** 1950–. ಕನ್ನಡದ ಹೊಸ ಅಲೆಯ ಚಿತ್ರ ನಿರ್ದೇಶಕ. ಶಿವಮೊಗ್ಗ ಜಿಲ್ಲೆ ಕಾಸರವಳ್ಳಿಯಲ್ಲಿ 1950ರ ಡಿಸೆಂಬರ್ 3ರಂದು ಜನಿಸಿದರು. ತಂದೆ ಗಣೇಶರಾವ್ ಕಾಸರವಳ್ಳಿಯಲ್ಲಿ ಕೃಷಿಕರು, ಗಾಂಧಿವಾದಿಯೂ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ತಾಯಿ, ಲಕ್ಷ್ಮೀದೇವಿ ಈಕೆಯ ತಂದೆ ಪಂಡಿತ ನರಸಿಂಹಶಾಸ್ತ್ರಿ ಪ್ರಸಿದ್ಧ ಸಂಸ್ಕೃತ ಪಂಡಿತರು ಮತ್ತು ಶಿಕ್ಷಕರೂ ಆಗಿದ್ದರು. ಗಿರೀಶ್ ಕಾಸರವಳ್ಳಿಯವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಶಿವಮೊಗ್ಗ ಸಮೀಪದ ಕಮ್ಮರಡಿಯ ಶಾಲೆಯಲ್ಲಿ ಪಡೆದರು. ಮಣಿಪಾಲದಲ್ಲಿ ಬಿ.ಫಾರ್ಮ ಅಧ್ಯಯನ ಮಾಡಿದರು. ಅನಂತರ ಚಿಕ್ಕಪ್ಪ ಕೆ.ವಿ.ಸುಬ್ಬಣ್ಣನವರಿಂದ ಸ್ಫೂರ್ತಿ ಪಡೆದು ಅನಂತರ ಚಲನಚಿತ್ರ ನಿರ್ದೇಶನದ ಬಗೆಗೆ ಆಸಕ್ತಿ ಹೊಂದಿ ಪುಣೆಯ ಚಲನ ಚಿತ್ರ ಸಂಸ್ಥೆಯಲ್ಲಿ ನಿರ್ದೇಶನದ ಡಿಪ್ಲೊಮಾ ತರಗತಿಗೆ ಸೇರಿದರು. ತರಬೇತಿಯ ಅವಧಿ ಯಲ್ಲಿ 'ಅವಶೇಷ' ಕಿರುಚಿತ್ರ ನಿರ್ದೇಶಿಸಿದರು. ಈ ಚಿತ್ರ ಅತ್ಯುತ್ತಮ ಪ್ರಯೋಗಾತ್ಮಕ ಚಿತ್ರವೆಂದು ಪ್ರಶಸ್ತಿ ಗಳಿಸಿತು (1975). ಬೆಂಗಳೂರಿನ ಆದರ್ಶ ಚಲನಚಿತ್ರ ಸಂಸ್ಥೆಯ ಪ್ರಾಂಶುಪಾಲರಾಗಿಯೂ ಸ್ವಲ್ಪಕಾಲ ಇವರು ಸೇವೆಸಲ್ಲಿಸಿದರು. ಅನಂತರ ಇವರು ಬಿ.ವಿ.ಕಾರಂತರೊಂದಿಗೆ ಚೋಮನ ದುಡಿ, ಸಿ.ಆರ್.ಸಿಂಹರೊಂದಿಗೆ ಕಾಕನಕೋಟೆ ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ಅನುಭವ ಗಳಿಸಿದರು. ಯು.ಆರ್.ಅನಂತಮೂರ್ತಿಯವರ ಕಥೆ ಆಧಾರಿತ ಘಟಶ್ರಾದ್ಧ ಇವರು ಸ್ವತಂತ್ರವಾಗಿ ನಿರ್ದೇಶಿಸಿದ ಮೊದಲ ಚಿತ್ರ (1977). ಈ ಚಿತ್ರ ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ ಗಳಿಸಿತು. ಅನಂತರ ಇವರು ನಿರ್ದೇಶಿಸಿದ ಹಲವು ಚಿತ್ರಗಳು ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಗಳನ್ನು ಗಳಿಸಿದವು. ಆಕ್ರಮಣ (1980), ಮೂರು ದಾರಿಗಳು (1981), ತಬರನ ಕಥೆ (1987), ಬಣ್ಣದವೇಷ (1988), ಮನೆ (1990), ಕ್ರೌರ್ಯ, ತಾಯಿಸಾಹೇಬ (1996), ದ್ವೀಪ (2002, ಹಸೀನಾ (2005) – ಇವು ಇವರು ನಿರ್ದೇಶಿಸಿದ ಪ್ರಮುಖ ಚಿತ್ರಗಳು.



ತಬರನ ಕಥೆ (ಪೂರ್ಣಚಂದ್ರತೇಜಸ್ವಿ), ಬಣ್ಣದವೇಷ (ಸುಂದರ ನಾಡಕರ್ಣಿ), ತಾಯಿಸಾಹೇಬ (ರಂ.ಶಾ.) ಹಾಗೂ ದ್ವೀಪ (ನಾ.ಡಿಸೋಜ) ಚಿತ್ರಗಳೂ ಇವರಿಗೆ ಸ್ವರ್ಣಕಮಲ ಪ್ರಶಸ್ತಿ ತಂದುಕೊಟ್ಟಿವೆ. ಇವರು ನಿರ್ದೇಶಿಸಿದ ಹಸೀನಾ ಚಿತ್ರಕ್ಕೆ (ಕಥೆ: ಭಾನುಮುಷ್ತಾಕ್) ಅತ್ಯುತ್ತಮ ಸಾಮಾಜಿಕ ಸಂದೇಶವುಳ್ಳ ಚಿತ್ರವೆಂದು ರಾಷ್ಟ್ರಪ್ರಶಸ್ತಿ ಬಂದಿದೆ (2005). ಸಮಾಜ ಅರ್ಥವಂತಿಕೆಯ ಚಿತ್ರ ನಿರ್ಮಾಣದೊಂದಿಗೆ ಗಿರೀಶ್ ಕಾಸರವಳ್ಳಿ ಸೃಜನಶೀಲ ನಿರ್ದೇಶಕರಾಗಿ ಉಳಿದಿದ್ದಾರೆ. ಇವರು ಕಿರುತರೆಯಲ್ಲೂ ಯಶಸ್ವಿಯಾಗಿರುವ ನಿರ್ದೇಶಕ, ಇವರ ಚಿತ್ರಗಳು ಭಾರತೀಯ ಚಿತ್ರರಂಗದಲ್ಲೇ ಗಮನಾರ್ಹ ಸ್ಥಾನ ಸಂಪಾದಿಸಿಕೊಂಡಿವೆ. ಕಾಸರವಳ್ಳಿಯವರ ಇತ್ತೀಚಿನ ನಿರ್ದೇಶನದ ಚಿತ್ರ ಕೂರ್ಮಾವತಾರಕ್ಕೆ(2012) ರಾಷ್ಟ್ರಪ್ರಶಸ್ತಿ ದೊರೆತಿದೆ. ಇವರ ಪತ್ನಿ ವೈಶಾಲಿ. ಅವರು ಕೂಡ ರಂಗಭೂಮಿ ನಟಿ. ಚಲನಚಿತ್ರಗಳಲ್ಲಿ ಅಭಿನಯಿಸುವುದರೊಂದಿಗೆ ಕಿರುತೆರೆಯ ಧಾರಾವಾಹಿಗಳನ್ನು ನಿರ್ದೇಶಿಸುತ್ತಿದ್ದರು. ವೈಶಾಲಿಯವರು 2011ರಲ್ಲಿ ನಿಧನವಾದರು. (ಜಿ.ಎಂಯು.;ಎಸ್.ಎಲ್.)

**ಗಿರ್ನಾರ್ :** ಗುಜರಾತ್ ರಾಜ್ಯದ ಸೌರಾಷ್ಟ್ರ ವಿಭಾಗದ ದಕ್ಷಿಣ ಭಾಗದಲ್ಲಿರುವ ಮುಖ್ಯ ಪರ್ವತ; ಜೈನರ ಸಿದ್ಧ ಕ್ಷೇತ್ರ. ಉ.ಅ. $29^0$ 39', ಪೂ.ರೇ. $78^0$ 42', ಮಧ್ಯೆ, ಜುನಾಗಢದಿಂದ 16 ಕಿಮೀ ಅಂತರದಲ್ಲಿದೆ; ಇತರ ಪರ್ವತಗಳ ಸಾಲಿನಲ್ಲಿರದೆ ಪ್ರತ್ಯೇಕವಾಗಿ ಹಬ್ಬಿದೆ. ಹಿಂದೆ ಈ ಪರ್ವತ ಒಂದು ಜ್ವಾಲಾಮುಖಿಯಾಗಿತ್ತೆನ್ನಲಾಗಿದೆ. ಗುಜಾರಾತಿನಲ್ಲೆ ಅತ್ಯುನ್ನತವಾದ ಈ ಪರ್ವತದ ಸರಾಸರಿ ಎತ್ತರ 1,060 ಮೀ. ಅಂಬಾ, ಗೋರಖ್‌ನಾಥ್, ಕಾಳಿಂಕಾ, ಗುರುನೇಮಿನಾಥ್ ಇವು ಪ್ರಸಿದ್ಧವಾದ ಶಿಖರಗಳು. ಅತ್ಯುನ್ನತ ಶಿಖರ ಗೋರಖ್‌ನಾಥ್ (1,117ಮೀ). ಉಷ್ಣತೆ $25^0$ ಸೆಂ,– $35^0$ ಸೆಂ, ವಾರ್ಷಿಕ ಮಳೆ 60–80 ಸೆಂಮೀ. ಸುವರ್ಣರೇಖಾ, ಗುಡಾಜಲೀ ಮತ್ತು ಕಾಲವೋ ನದಿಗಳ ಉಗಮಸ್ಥಾನ ಗಿರ್ನಾರ್. ಹಿಂದಿನ ಕಾಲದಲ್ಲಿ ಇದಕ್ಕೆ ಉಜ್ಜಯಂತ,



ಗಿರ್ನಾರ್

ರೈವತಕ ಪರ್ವತ, ಪ್ರಭಾಸ್ ಪರ್ವತ, ವಸ್ತ್ರಾಪಥ ಕ್ಷೇತ್ರ ಎಂಬ ಹೆಸರುಗಳಿದ್ದವು. ಹಿಂದೂ, ಜೈನ, ಇಸ್ಲಾಂ ಸಂಸ್ಕೃತಿ ಪ್ರವಾಹಗಳು ಇಲ್ಲಿ ಸಂಗಮಿಸಿವೆ. ಗಿರ್ನಾರ್ ಶಿಖರಗಳ ಮೇಲೆ ಗೋರಖ್‌ನಾಥ್, ದತ್ತಾತ್ರೇಯ, ಅಂಬಾದೇವಿ ಮುಂತಾದ ದೇವಾಲಯಗಳೂ ಶ್ರಾವಕರ ದೇವಸ್ಥಾನಗಳೂ ಜೈನ ಧರ್ಮಶಾಲೆಗಳೂ ಇವೆ. 52 ಶಕ್ತಿಪೀಠಗಳ ಪೈಕಿ ಇಲ್ಲಿಯ ಅಂಬಾ ದೇವಿಯ ಗುಡಿಯೂ ಒಂದು. ಇಷ್ಟಲ್ಲದೆ ಇಲ್ಲಿ ಗೋಮುಖಿ, ಹನುಮಾನ್‌ಧಾರಾ, ಕಮಂಡಲು ಎಂಬ ಮೂರು ಜಲಕುಂಡಗಳಿವೆ. ಅಶೋಕ ಮೌರ್ಯನ ಶಿಲಾಶಾಸನವೂ, ಕ್ಷತ್ರಪ ರುದ್ರದಾಮನನ ಶಾಸನಗಳೂ ಇಲ್ಲುಂಟು. ಅಶೋಕನ ಶಾಸನ (ಪ್ರ.ಶ.ಪೂ. 250) ಅತ್ಯಂತ ಪ್ರಾಚೀನ. ಗಿರ್ನಾರ್ ಸುತ್ತಮುತ್ತಣ ಪ್ರದೇಶದಲ್ಲಿ ಅಶೋಕನ ಕಾಲದಲ್ಲಿ ಬೌದ್ಧಧರ್ಮ ಪ್ರಚಾರವಾಗಿ ಅಲ್ಲಿ ಬೌದ್ಧವಿಹಾರಗಳು ಸ್ಥಾಪನೆಯಾಗಿದ್ದುವೆಂಬುದು ಈ ಶಾಸನದಿಂದ ತಿಳಿದುಬರುತ್ತದೆ. ಯುವಾನ್‌ಚಾಂಗ್ ಪ್ರ.ಶ. 7ನೆಯ ಶತಮಾನದಲ್ಲಿ ಗಿರ್ನಾರನ್ನು ಸಂದರ್ಶಿಸಿದಾಗ ಅಲ್ಲಿ ಮಹಾಯಾನ ಬೌದ್ಧ ಪಂಥದ ಸ್ಥವಿರ ಶಾಖೆಯ ಐವತ್ತು ಗವಿ ಮಠಗಳಿದ್ದುದಾಗಿಯೂ ಬೆಟ್ಟದ ತುದಿಯಲ್ಲಿಯ ಬಂಡೆಯನ್ನು ಕೊರೆದು ಒಂದು ಮಠವನ್ನು ನಿರ್ಮಿಸಲಾಗಿತ್ತೆಂದೂ ವರ್ಣಿಸಿದ್ದಾನೆ. 1889ರಲ್ಲಿ ಗಿರ್ನಾರ್ ಬೆಟ್ಟದ ಇಳಿಜಾರಿನಲ್ಲಿ ಒಂದು ಸ್ತೂಪದ ಭಗ್ನಾವಶೇಷ ಪತ್ತೆಯಾಯಿತು.

ರುದ್ರದಾಮನನ ಶಾಸನ ಗಿರ್ನಾರ್ ಬಳಿಯಲ್ಲಿ ದೊರೆತಿರುವ ಮತ್ತೊಂದು ಐತಿಹಾಸಿಕ ದಾಖಲೆ. ಇದನ್ನು ಅಶೋಕನ ಶಾಸನದ ಬಂಡೆಗಲ್ಲಿನಲ್ಲಿಯೇ ಪ್ರ.ಶ.150 ರಲ್ಲಿ ಕೆತ್ತಲಾಯಿತು. ರುದ್ರದಾಮನ್ ಶಾತಕರ್ಣಿಯನ್ನು ಸೋಲಿಸಿದ ಹಾಗೂ ಗಿರ್ನಾರ್ ಬಳಿಯಿರುವ ಅಶೋಕನ ಕಾಲದಲ್ಲಿ ಕಟ್ಟಲಾಗಿದ್ದ ಸೇತುವೆಯನ್ನು ದುರಸ್ತು ಮಾಡಿಸಿದ ಸಂಗತಿಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿಯ ಸುದರ್ಶನ ಜಲಾಶಯವನ್ನು ಚಂದ್ರಗುಪ್ತನ (ಪ್ರ.ಶ.ಪೂ. 322–298) ಆಜ್ಞಾನುಸಾರ ನಿರ್ಮಿಸ

ಲಾಯಿತೆಂದು ಉಲ್ಲೇಖಿವಿದೆ. ಇದು ಶಿಥಿಲಗೊಂಡು ಅಪ್ರಯೋಜಕವಾಗಿತ್ತೆಂದೂ ರುದ್ರದಾಮನ್ ಇದನ್ನು ದುರಸ್ತಿ ಮಾಡಿಸಿ ಮತ್ತೆ ಉಪಯುಕ್ತವಾಗುವಂತೆ ಮಾಡಿದನೆಂದೂ ಹೇಳಿದೆ. ಅದೇ ಬಂಡೆಯ ಮೇಲೆ ಗುಪ್ತ ಚಕ್ರವರ್ತಿ ಸ್ಕಂದಗುಪ್ತನೂ ಪ್ರ.ಶ. 457 ರಲ್ಲಿ ತನ್ನ ಶಾಸನವನ್ನು ಕೆತ್ತಿಸಿದ್ದಾನೆ. ಈ ಶಾಸನದ ಪ್ರಕಾರ ಸ್ಕಂದಗುಪ್ತನೂ ಸುದರ್ಶನ ಜಲಾಶಯಕ್ಕೆ ಆವಶ್ಯಕವಿದ್ದ ದುರಸ್ತಿ ಕಾರ್ಯವನ್ನು ಮಾಡಿಸಿದ.



ಗಿರ್ನಾರದ ದೇಗುಲಗಳು

ಅಲ್ಲಿ ದೊರೆತಿರುವ ಶಾಸನಗಳಿಂದಲೂ ಕಾಣಬರುವ ಭಗ್ನಾವಶೇಷಗಳಿಂದಲೂ ಗಿರ್ನಾರ್ ಅತ್ಯಂತ ಪ್ರಾಚೀನ ಕಾಲದಿಂದಲೂ ಇತಿಹಾಸ ಪ್ರಸಿದ್ಧ ಸ್ಥಳವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ದೇವಾಲಯಗಳೂ ಗುಹಾಲಯಗಳು ನಿರ್ಮಾಣವಾದವು. 400 ವರ್ಷಗಳ ಕಾಲ ಗಿರ್ನಾರ್ ಪ್ರದೇಶ ಮಹಮ್ಮದೀಯರ ಆಳ್ವಿಕೆಗೊಳಪಟ್ಟಿತ್ತು. ಅಲ್ಲಿಯ ಹೆಚ್ಚು ಸ್ಮಾರಕಗಳು ನಾಶವಾದುವು. ಅಲ್ಲಿಯ ಉಪರ್ ಕೋಟೆಯಲ್ಲಿ ಅಥವಾ ಕೋಟೆಯ ಪ್ರದೇಶದಲ್ಲಿ ಅಶೋಕ ಚಕ್ರವರ್ತಿಯ ಕಾಲದಲ್ಲೇ ಬೌದ್ಧ ಗುಹಾಲಯಗಳು ಕೊರೆಯಲ್ಪಟ್ಟವು. ಅವನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಗಿರ್ನಾರ್ ಪ್ರದೇಶ ಕ್ಷತ್ರಪರ ಆಳ್ವಿಕೆಗೊಳಗಾಗಿದ್ದಾಗ ಅಲ್ಲಿ ಜೈನಮತೀಯರಿಂದ ಅನೇಕ ಗುಹಾಲಯಗಳು ನಿರ್ಮಾಣವಾದವು. ಗಿರ್ನಾರ್‌ಬೆಟ್ಟದ ತುದಿಯಿಂದ ಸುಮಾರು 210 ಮೀಟರ್‌ಗಳ ಕೆಳಗೆ ಹಾಗೂ ಸಮುದ್ರಮಟ್ಟದಿಂದ 1050 ಮೀಟರ್‌ಗಳ ಮೇಲೆ ಹದಿನಾರು ಗುಹಾಲಯಗಳನ್ನೂ ಕೊರೆಯಲಾಗಿದೆ. ಅವುಗಳಲ್ಲಿ ಅತ್ಯಂತ ದೊಡ್ಡದೂ ಪ್ರಾಚೀನವೂ ಆದದ್ದು ನೇಮಿನಾಥ ದೇವಾಲಯ. ಇದು 68.25 ಮೀಟರ್ ಉದ್ದವಾಗಿಯೂ 45 ಮೀಟರ್ ಅಗಲವಾಗಿಯೂ ಇದೆ. ದೇವಾಲಯದ ಅಂಗಳದಲ್ಲಿ ತೀರ್ಥಂಕರರ ಮತ್ತು ಯಕ್ಷರ ವಿಗ್ರಹಗಳನ್ನು ಕೆತ್ತಲಾಗಿದೆ. ನೇಮಿನಾಥ ದೇವಾಲಯದ ದ್ವಾರದ ಬಳಿ 1230 ರಲ್ಲಿ ತೇಜಪಾಲ ಮತ್ತು ವಸ್ತುಪಾಲರು ಕೆತ್ತಿಸಿದ ಚಿಕ್ಕ ತ್ರಿಕೂಟಾಲಯವೊಂದಿದೆ. ಇದರ ಮುಖ್ಯ ಗರ್ಭಗುಡಿಯಲ್ಲಿ 19ನೆಯ ತೀರ್ಥಂಕರನಾದ ಮಲ್ಲಿನಾಥನ ವಿಗ್ರಹವುಂಟು.

ಚಾಳುಕ್ಯರ ಕಾಲದಲ್ಲಿ ನಿರ್ಮಿತವಾದ ದೇವಸ್ಥಾನಗಳು ಸುಂದರವಾಗಿದ್ದವು. ಗಿರ್ನಾರದಲ್ಲಿ ಪ್ರಾಚೀನ ಕಾಲದಲ್ಲಿ ಶಾಕ್ತಪಂಥೀಯರು ವಾಸವಾಗಿದ್ದರು. ಕಾರ್ತಿಕ ಶುದ್ಧ ಏಕಾದಶಿಯ ದಿನ ಅಲ್ಲಿ ಜಾತ್ರೆ ನಡೆಯುತ್ತದೆ. ಈ ಜಾತ್ರೆ ಶ್ರೀಕೃಷ್ಣನ ಕಾಲದಿಂದಲೂ ನಡೆದುಬಂದಿದೆಯೆಂಬುದು ಪ್ರತೀತಿ. ದಕ್ಷಿಣದ ಗಿರ್ ಬೆಟ್ಟ ಅರಣ್ಯಮಯ, ಭಾರತದ ಸಿಂಹಗಳ ನೆಲೆಯಿದು (**ನೋಡಿ– ಗಿರ್ ಅರಣ್ಯ**). (ಬಿ.ಆರ್.ಆರ್.)

ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥ ಗಿರ್ನಾರ್ ಪರ್ವತದ ಮೇಲೆ ದೀಕ್ಷೆಯನ್ನು ಪಡೆದು, ತಪಸ್ಸು ಮಾಡಿ ಮುಕ್ತಿಯನ್ನು ಹೊಂದಿದ. ಅವನಿಗೆ ನಿಶ್ಚಯಿಸಿದ ವಧು ರಾಜೀಮತಿ ಇಲ್ಲಿಯೇ ದೀಕ್ಷೆಯನ್ನು ಕೈಗೊಂಡಳು. ಮೊದಲನೆಯ ಪರ್ವತದ ಮೇಲೆ ಒಂದು ಗುಹೆಯಲ್ಲಿ ರಾಜೀಮತಿಯ ಮೂರ್ತಿ ಇದೆ. ಈ ಪರ್ವತದ ಮೇಲೆ ಬೇರೆ ಜೈನಮುನಿಗಳು ಮುಕ್ತಿಯನ್ನು ಹೊಂದಿದ ಪರಂಪರೆಯುಂಟು. ಐದನೆಯ ಪರ್ವತ ಅತ್ಯಂತ ಎತ್ತರವಾಗಿದೆ. ಮತ್ತು ಅದರ ಮೇಲೆ ನೇಮಿನಾಥನ ಚರಣ ಚಿಹ್ನೆಗಳಿವೆ. ನೇಮಿನಾಥ ಮತ್ತು ರಾಜೀಮತಿಯ ಚರಿತ್ರೆ ಅತ್ಯಂತ ರೋಮಾಂಚನಕಾರಿ ಯಾಗಿದ್ದರಿಂದ ಈ ಕ್ಷೇತ್ರಕ್ಕೆ ವಿಶೇಷ ಮಹತ್ತ್ವ ಬಂದಿದೆ. ವಿವಾಹದಲ್ಲಿ ಪ್ರಾಣಿ ಹಿಂಸೆಯಾಗುವುದನ್ನು ನೋಡಿದ ನೇಮಿನಾಥ ವಿವಾಹದ ವಿಚಾರವನ್ನು ಬಿಟ್ಟು ದೀಕ್ಷೆಯನ್ನು ಪಡೆದನೆಂಬ ಪ್ರತೀತಿ. ನಿಯೋಜಿತ ಪತಿ ದೀಕ್ಷೆ ಕೈಗೊಂಡಿದ್ದರಿಂದ ರಾಜೀಮತಿಯೂ ದೀಕ್ಷೆ ಪಡೆದಳಂತೆ. (ಎ.ಎನ್.ಯು.;ಬಿ.ಜಿ.)

**ಗಿಲೆರೊನ್, ಯೂಲ್ಸ್ :** 1854–1926. ಸ್ವಿಟ್ಜರ್ಲೆಂಡಿನ ಒಬ್ಬ ಪ್ರಮುಖ ಭಾಷಾವಿಜ್ಞಾನಿ. ಹುಟ್ಟಿದ್ದು ಸ್ವಿಟ್ಜರ್ಲೆಂಡಿನ ನೂವೆವಿಲ್ ಎಂಬಲ್ಲಿ. ವಿದ್ಯಾಭ್ಯಾಸ ಮಾಡಿದ್ದು ಬಾಸೆಲ್ ಮತ್ತು ಪ್ಯಾರಿಸ್‌ಗಳಲ್ಲಿ. ಚಿಕ್ಕಂದಿನಿಂದಲೂ ಭಾಷಶಾಸ್ತ್ರದ ಬಗ್ಗೆ ತುಂಬ ಆಸಕ್ತಿ ಇತ್ತಾಗಿ ಅಲ್ಲಿನ ಕೆಲವು ಉಪಭಾಷೆಗಳನ್ನು ಅಧ್ಯಯನ ಮಾಡತೊಡಗಿದ. ಅಧ್ಯಾಪಕನಾಗಿದ್ದುಕೊಂಡು ನವ ವೈಯಾಕರಣಿಗಳ ಎಲ್ಲ ಬರೆಹಗಳನ್ನು ಆಳವಾಗಿ ಅಭ್ಯಸಿಸಿದ. ಪ್ರಮುಖ ಭಾಷಾವಿಜ್ಞಾನಿ ಜಿ.ಐ. ಓಸ್ಕಾಲಿ ಹಾಕಿಕೊಟ್ಟ ಮಾರ್ಗದಲ್ಲಿ ಮುಂದುವರಿದು ಫ್ರಾನ್ಸಿನ ಎಲ್ಲ ಉಪಭಾಷೆಗಳನ್ನು ಅತಿ ವೈಜ್ಞಾನಿಕವಾಗಿ ಅಭ್ಯಸಿಸುವ ಸಾಹಸಕ್ಕೆ ಕೈಹಾಕಿ ಉಪಭಾಷಾ ವಿಜ್ಞಾನದ ಪಿತಾಮಹನೆಂಬ ಹೆಸರಿಗೆ ಭಾಜನನಾದ. ಹತ್ತೊಂಬತ್ತನೆಯ ಶತಮಾನದ ಅಂತ್ಯಭಾಗದಲ್ಲಿ, ಭಾಷಿಕ ಭೂಗೋಳದ ಬಗ್ಗೆ ಆಳವಾದ ಸಂಶೋಧನೆ ನಡೆಸಿದವರಲ್ಲಿ ಈತ ಮುಖ್ಯನಾದವ. ಇದೇ ಸಮಯದಲ್ಲಿ ಜರ್ಮನಿ ಮತ್ತು ಇಟಲಿಯ ಅನೇಕ ವಿದ್ವಾಂಸರು ಉಪಭಾಷಾ ಅಧ್ಯಯನವನ್ನು ಕೈಗೊಂಡಿದ್ದರು. 1876 ರಲ್ಲಿ ಜರ್ಮನಿಯ ಖ್ಯಾತ ಉಪಭಾಷಾವಿಜ್ಞಾನಿ ಜಾರ್ಜ್ ವೆಂಕರ್ ರಾಇನ್ ಪ್ರದೇಶದ ಕೆಲವು ಉಪಭಾಷೆಗಳನ್ನು ಅಭ್ಯಸಿಸಲಾರಂಭಿಸಿದ್ದ. ಇವನು ಸಂಗ್ರಹಿಸಿದ ಸಾಮಾಗ್ರಿಯನ್ನೇ ಉಪಯೋಗಿಸಿಕೊಂಡು ಯುದ್ ಮತ್ತು ಯೂಬರ್ಗ್ ಎಂಬ ವಿದ್ವಾಂಸರು ಕೆಲವು ಉಪಭಾಷಾನಕ್ಷೆಗಳನ್ನು ತಯಾರಿಸಿ ಪ್ರಕಟಿಸಿದ್ದರು. 1895 ರ ಹೊತ್ತಿಗೆ ರೀಡ್, ಫಿಶರ್ ಮುಂತಾದ ಭಾಷಾವಿಜ್ಞಾನಿಗಳು ಈ ಕಾರ್ಯದಲ್ಲಿ ಸಾಕಷ್ಟು ಜಯಶೀಲರೆನಿಸಿಕೊಂಡಿದ್ದ ಸಮಯದಲ್ಲಿ ಗಿಲೊರೆನ್ ಫ್ರಾನ್ಸಿನ ಎಲ್ಲ ಉಪಭಾಷೆಗಳನ್ನೂ ಆಳವಾಗಿ ಅಭ್ಯಸಿಸುವ ಯೋಜನೆಯನ್ನು ಕೈಗೊಂಡು ಎ. ಎಡ್‌ಮಾಂಟ್ ಎಂಬ ಧ್ವನಿವಿಜ್ಞಾನಿಯ ಸಹಾಯದಿಂದ ಫ್ರಾನ್ಸಿನ ಸುಮಾರು 639 ಕ್ಕೂ ಹೆಚ್ಚು ಸ್ಥಳಗಳ ಉಪಭಾಷಾ ಸಾಮಗ್ರಿಯನ್ನು ಸಂಗ್ರಹಿಸಿದ. 1896 ರಲ್ಲಿ ಆರಂಭಗೊಂಡ ಈ ಕಾರ್ಯ 1900 ರ ಹೊತ್ತಿಗೆ ಮುಗಿಯಿತು. ಹೀಗೆ ಸಂಗ್ರಹಿತವಾದ 2000 ಪದಗಳನ್ನೂ ವಾಕ್ಯಗಳನ್ನೂ ಗಿಲೆರೊನ್ ತನ್ನ ಮಿತ್ರ ಎಡ್‌ಮಾಂಟ್‌ನ ಸಹಾಯದಿಂದ ಆಳವಾಗಿ, ಅತಿ ವೈಜ್ಞಾನಿಕವಾಗಿ ಪರೀಶೀಲಿಸಿ, ವಿಶ್ಲೇಷಿಸಿ 1902–1908 ರ ಹೊತ್ತಿಗೆ ಫ್ರಾನ್ಸಿನ ಉಪಭಾಷಾನಕ್ಷೆಯೊಂದನ್ನು ಪ್ರಕಟಿಸಿದ. ಈ ನಕ್ಷೆಯ ಜೊತೆಗೆ ಗಿಲೆರೊನ್ ಇನ್ನೂ ಅನೇಕ ಗ್ರಂಥ ಹಾಗೂ ಲೇಖನಗಳನ್ನು ಬರೆದು ಪ್ರಕಟಿಸಿದ್ದಾನೆ ಇವನು ಫ್ರೆಂಚ್ ಭಾಷೆಯ ವ್ಯುತ್ಪತ್ತಿ ಕೋಶದ ನಿರ್ಮಾಣಕ್ಕೆ ಸಾಕಷ್ಟು ತಳಹದಿಯನ್ನು ಹಾಕಿಕೊಟ್ಟ. ಪದ ಮತ್ತು ವಸ್ತುಗಳ ನಡುವಿನ ಸಂಬಂಧವನ್ನು ಈತ ವಿವೇಚಿಸಿದ್ದಾನಲ್ಲದೆ ಧ್ವನಿ ಮತ್ತು ಲಿಪಿಗಳ ಇರುವ ಸಂಬಂಧವನ್ನು ಚರ್ಚಿಸುತ್ತ ನವ ವೈಯಾಕರಣಿಗಳ ಕೆಲವು ವಿಚಾರಗಳನ್ನು ಪ್ರಶ್ನಿಸಿದ್ದಾನೆ. ಧ್ವನಿ ಬದಲಾವಣೆಯಲ್ಲಿ ವ್ಯಕ್ತಿ ಪಾತ್ರವೇ ವಿಶಿಷ್ಟವಾದದು ಎಂಬುದು ಇವನ ಮತವಾದರೂ ಕೆಲವು ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಸನ್ನಿವೇಶಗಳೂ ಕಾರಣವಾಗುತ್ತವೆ. ಎಂಬುದನ್ನು ಈತ ಸಮರ್ಥಿಸಿದ್ದಾನೆ. ಪ್ರತಿಯೊಂದು ಪದಕ್ಕೂ ತನ್ನದೇ ಆದ ಇತಿಹಾಸವಿರುತ್ತದೆ–ಎಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಅದನ್ನು ಸವಿಸ್ತಾರವಾಗಿ ಚರ್ಚಿಸಿದ್ದಾನೆ. ಆಗಿನ ಕಾಲದ ಭಾಷಾವಿಜ್ಞಾನ ಕ್ಷೇತ್ರದಲ್ಲಿ ನವ ವೈಯಾಕರಣಿಗಳು ಧ್ವನಿ ನಿಯಮಗಳನ್ನು ಅಪವಾದರಹಿತವೆಂದು ಹೇಳುತ್ತಿರುವುದನ್ನು ಸಕಾರಣವಾಗಿ ಖಂಡಿಸಿದ್ದಾನೆ. ಇವನ ಫ್ರಾನ್ಸ್ ಉಪ ಭಾಷಾನಕ್ಷೆ ಯಂತೂ ಈಗಲೂ ತುಂಬ ಉಪಯುಕ್ತವೆನಿಸಿಕೊಂಡಿದೆ.

ಗಿಲೆರೋನನ ಮರಣಾನಂತರ ಶಿಷ್ಯರು ಅವನ ಅನೇಕ ವಿಚಾರಗಳನ್ನು ಪ್ರಚಾರಕ್ಕೆ ತಂದರು. (ಕೆ.ಕೆ.ಜಿ.)

**ಗಿಲೆಸ್ಪಿ, ರಾಬಟ್ ರಾಲೋ :** 1766–1814. ಬ್ರಿಟಿಷ್ ಸೈನಿಕ. 1783 ರಲ್ಲಿ ಐರಿಷ್ ಅಶ್ವಸೈನ್ಯವನ್ನು ಸೇರಿ ಜಮೈಕ (1794) ಸೇಂಟ್ ಡೊಮಿಂಗೊಗಳಲ್ಲಿ ಕಾರ್ಯಚರಣೆಗಳಲ್ಲಿ ಭಾಗವಹಿಸಿ ಏಕಾಕಿಯಾಗಿ ಆರು ಜನ ಡಕಾಯಿತರನ್ನು ಕೊಂದು ಪ್ರಸಿದ್ಧನಾದ. 1806ರಲ್ಲಿ ವೆಲ್ಲೂರಿನಲ್ಲಿ ದಂಗೆ ಸಂಭವಿಸಿದಾಗ ಆರ್ಕಾಟಿನಲ್ಲಿ ಬ್ರಿಟಿಷ್ ಸೈನ್ಯದ ದಳಪತಿಯಾಗಿದ್ದ ಗಿಲೆಸ್ಪಿ ಆ ದಂಗೆಯನ್ನು ಅಡಗಿಸಲು ವೆಲ್ಲೂರಿನ ಮೇಲೆ ಉಗ್ರವಾದ ದಾಳಿ ಮಾಡಿದ. 1811ರಲ್ಲಿ ಜಾವದಲ್ಲೂ ಮರುವರ್ಷ ಸುಮಾತ್ರದಲ್ಲೂ ನಡೆದ ಕದನಗಳಲ್ಲಿ ಬ್ರಿಗೇಡಿಯರ್– ಜನರಲ್ ಆಗಿ ಭಾಗವಹಿಸಿದ್ದ. ಆ ಕದನಗಳೂ ಇವನಿಗೆ ಕೀರ್ತಿ ತಂದುವು. ಗೂರ್ಖರ ಪ್ರಾಂತ್ಯದ ಅಂಚಿನಲ್ಲಿದ್ದ ಗೋರಖ್‌ಪುರವು ಗೂರ್ಖರು ಮತ್ತು ಬ್ರಿಟಿಷರ ಯುದ್ಧಕ್ಕೆ ಕಾರಣವಾಗಿತ್ತು. 1814ರಲ್ಲಿ ನಡೆದ ಸೈನ್ಯ ತುಕಡಿಯೊಂದರ ನಾಯಕತ್ವವನ್ನು ವಹಿಸಿ, ಗೂರ್ಖ ಪ್ರಬಲ ನೆಲೆಯೊಂದರ ಮೇಲೆ ಮುತ್ತಿಗೆಯಲ್ಲಿ ತೊಡಗಿದ್ದಾಗ ಈತ ಹತನಾದ. ಈ ಪರಾಭವದಿಂದಾಗಿ ಬ್ರಿಟಿಷರ ಮರ್ಯಾದೆಗೆ ಕೆಲಕಾಲ ಭಂಗ ಬಂದಿತು. ಗಿಲೆಸ್ಪಿಗೆ ಬ್ರಿಟಿಷ್ ದೊರೆಯಿಂದ ಮರೋಣೋತ್ತರ ಕೆ.ಸಿ.ಬಿ. ಪ್ರಶಸ್ತಿ ದೊರಕಿತು. (ಆರ್.ಜಿ.ಎಸ್.)

**ಗಿಲೊಟೀನ್ :** ಫ್ರೆಂಚ್ ಕ್ರಾಂತಿಯ ಸಮಯದಲ್ಲಿ (1789) ಶಿರಚ್ಛೇದನ ದಂಡನೆಯನ್ನು ಕಾರ್ಯಗತಗೊಳಿಸಲು ಬಳಸುತ್ತಿದ್ದ ಒಂದು ಯಂತ್ರ. ಮೊದಲಿಗೆ ಈ ಯಂತ್ರವನ್ನು ಲೋಹದ ತಗಡು, ಲೋಹದ ಸರಳು, ಕಾಗದದ ರಟ್ಟು ಮುಂತಾದುವನ್ನು ಕತ್ತರಿಸಲು ಬಳಸಲಾಗುತ್ತಿತ್ತು. ಇದಕ್ಕೆ ಕೊಯ್ಯು ಯಂತ್ರ (ಷಿಯರಿಂಗ್ ಮಷೀನ್) ಅಥವಾ ಕೊಯ್ಲುಒತ್ತಗೆ (ಷಿಯಾರಿಂಗ್ ಪ್ರೆಸ್) ಎಂಬ ಹೆಸರುಗಳೂ ಇದ್ದುದುಂಟು. ಶಿರಚ್ಛೇದನಕೋಸ್ಕರ ಇದನ್ನು ಬಳಸಬಹುದೆಂದು ಸಲಹೆ ಮಾಡಿದವ ಜೋಸೆಫ್ ಇಗ್ನೇಸ್ ಗಿಲೊಟೀನ್ (1738–1814) ಎಂಬ ಒಬ್ಬ ಫ್ರೆಂಚ್ ವೈದ್ಯ. ಅಪರಾಧಿಗಳಿಗೆ ಅವರ ಮರಣದಂಡನೆಯ ಸಮಯದಲ್ಲಿ ಸಾಧ್ಯವಾದಷ್ಟೂ ಕಡಿಮೆ ಬಾಧೆ ತಟ್ಟಲಿ ಎಂಬುದೇ ಈ ಸಲಹೆಯ ಉದ್ದೇಶ. ಮೊದಲಿಗೆ ಇಂಗ್ಲೆಂಡಿನಲ್ಲಿ ಈ ವಿಧಾನವನ್ನು ಅನುಸರಿಸಲಾಗುತ್ತಿತ್ತು. ಇಂಗ್ಲೆಂಡಿನಲ್ಲಿ ಇದನ್ನು ಹ್ಯಾಲಿಫಾಕ್ಸ್ ಗಿಬ್ಬಟ್ ಎಂದೂ ಸ್ಕಾಟ್ಲೆಂಡಿನಲ್ಲಿ ಮೈಡನ್ ಎಂದೂ ಕರೆಯುತ್ತಿದ್ದರು. ಹ್ಯಾಲಿಫಾಕ್ಸ್ ಅಂಡ್ ಇಟ್ಸ್ ಗಿಬ್ಬಟ್ ಲಾ (1708) ಎಂಬ ಕಿರುಪುಸ್ತಕದಲ್ಲೂ ಕ್ಯಾಮ್‌ಡನ್ ಎಂಬುವ ಬರೆದಿರುವ, ಗಿಬ್ಬನ್ ಸಂಪಾದಿಸಿರುವ ಬ್ರಿಟಾನಿಯ (1722) ಎಂಬ ಪುಸ್ತಕದಲ್ಲೂ ಉಲ್ಲೇಖವಿದೆ. ಮೈಡನ್ ಶಿರಚ್ಛೇದಕ ಯಂತ್ರವನ್ನು ಎಡಿನ್‌ಬರಾದ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಸ್ಕಾಟ್ಲೆಂಡಿನ ರೀಜೆಂಟ್ ಆಗಿದ್ದ ಜೇಮ್ಸ್ ಡೊಗ್ಲಾಸ್ ಮಾರ್ಟನ್ ಎಂಬುವನ ಶಿರಚ್ಛೇದನ (1581) ಮೈಡನಿನಿಂದಾಯಿತು. ಮೈಡನ್ ಶಿರಚ್ಛೇದನಕ್ಕೆ ಅಂತಿಮವಾಗಿ ಒಳಗಾದವರೆಂದರೆ ಸ್ಕಾಟ್ಲೆಂಡಿನ ಮಾರ್ಕ್ವಿಸ್ ಆಫ್ ಆರ್ಗೈಲ್ (1661) ಮತ್ತು ಅವನ ಮಗ ಅರ್ಲ್ ಆಫ್ ಆರ್ಗೈಲ್ (1685).



ಜರ್ಮನಿಯಲ್ಲಿ ಮಧ್ಯಯುಗದ ಸಮಯದಲ್ಲಿ ಈ ಯಂತ್ರ ಬಳಕೆ ಯಲ್ಲಿತ್ತಲ್ಲದೆ ಆಗ ಇದಕ್ಕೆ ಡೈಲಿ, ಹಾಬೆಲ್ ಅಥವಾ ಡೋಲಬ್ರಮುಂತಾದ ಹೆಸರುಗಳಿದ್ದವು.

ಫ್ರಾನ್ಸಿನಲ್ಲಿ ಕೆಲವೆಡೆ ಮಾತ್ರ ಬಳಕೆಯಲ್ಲಿದ್ದ ಈ ಯಂತ್ರ ಅಲ್ಲಿನ ಒಬ್ಬ ಶಸ್ತ್ರವೈದ್ಯ ಮತ್ತು ಒಬ್ಬ ಸರ್ಕಾರಿ ಅಧಿಕಾರಿಯ ಸಲಹೆಯ ಮೇರೆಗೆ ಫ್ರಾನ್ಸಿನ ಇತರ ಭಾಗಗಳಲ್ಲೂ ಬಳಕೆಗೆ ಬಂತು. ಕ್ರಮೇಣ ಫ್ರೆಂಚರು ಗೆದ್ದುಕೊಂಡ ಭಾಗಗಳಲ್ಲೂ ಇದರ ಬಳಕೆ ಹೆಚ್ಚಿತು. ಗಿಲೊಟೀನಿಗೆ ಒಳಗಾದ ಪ್ರಮುಖ ವ್ಯಕ್ತಿಗಳೆಂದರೆ ಫ್ರಾನ್ಸಿನ 14ನೆಯ ಲೂಯಿ ಮತ್ತು ರಾಣಿ ಮೇರಿ ಆಂಟೋಯ್ನಿ.

ಸನ್ನೆ (ಲೀವರ್) ಗಿಲೊಟೀನ್, ಸಮಾಂತರ (ಪ್ಯಾರಲಲ್) ಗಿಲೊಟೀನ್ ಮತ್ತು ವರ್ತುಳೀಯ (ಸರ್ಕ್ಯುಲರ್) ಗಿಲೊಟೀನ್ ಎಂಬ ಮೂರು ಬಗೆಯ ಯಂತ್ರಗಳುಂಟು. ಮೊದಲ ಬಗೆಯದರಲ್ಲಿ ಎರಡು ಅಲಗುಗಳಿದ್ದು, ಕತ್ತರಿಯಂತೆ ಅದು ಕೆಲಸಮಾಡುತ್ತಿತ್ತು. ಎರಡನೆಯ ಬಗೆಯದರಲ್ಲೂ ಎರಡು ಅಲಗುಗಳಿರುತ್ತಿದ್ದುವು. ಒಂದು ಸ್ಥಿರವಾಗಿದ್ದು ಮತ್ತೊಂದನ್ನು ಯಾಂತ್ರಿಕವಾಗಿ ಆಡಿಸಬೇಕಾಗಿತ್ತು. ವರ್ತುಳೀಯ ಗಿಲೊಟೀನಿನಲ್ಲಿ ಅಲಗುಗಳು ಚಕ್ರಾಕಾರವಾಗಿರುತ್ತಿದ್ದುವು. ಲೋಹದ ತಗಡು ಅಥವಾ ಪಟ್ಟಿಯನ್ನು ಕತ್ತರಿಸಲು ಈ ಯಂತ್ರವನ್ನು ಉಪಯೋಗಿಸಲಾಗಿತ್ತು. *

**ಗಿಲ್ಗಮೆಷ್ :** ಸುಮೇರಿಯನ್ನರ ಅತಿಪ್ರಾಚೀನ ಸಂಪ್ರದಾಯಕ್ಕೆ ಸೇರಿದ, ಮೆಸಪೊಟೇಮಿಯದ ಪೌರಾಣಿಕ ಮಹಾಕಾವ್ಯವೊಂದರ ನಾಯಕ. ಈ ಮಹಾಕಾವ್ಯ ಅಕ್ಕೇಡಿಯನ್ ಭಾಷೆಯಲ್ಲಿಯೇ ಒಂದು ಬಹು ಮುಖ್ಯವಾದ ಸಾಹಿತ್ಯ ಕೃತಿ ಮತ್ತು ಇದರ ನಾಯಕ ಗಿಲ್ಗಮೆಷ್ ಸುಮೇರಿಯನ್ ನಾಯಕರಲ್ಲೆಲ್ಲ ಅಗ್ರಗಣ್ಯ. ಈ ಕಥೆ ಪ್ರ.ಶ.ಪೂ. 3000 ವರ್ಷಗಳ ಹಿಂದೆ ದಕ್ಷಿಣ ಮೆಸಪೊಟೇಮಿಯದಲ್ಲಿದ್ದ ನಾಗರಿಕತೆಯ ಸ್ವರೂಪವನ್ನು ತಿಳಿಸುತ್ತದೆ. ಗಿಲ್ಗಮೆಷ್‌ನ ವಿಷಯದಲ್ಲಿ ಹುಟ್ಟಿಕೊಂಡಿರುವಷ್ಟು ಕಥೆಗಳು ಇತರರ ವಿಷಯದಲ್ಲಿಲ್ಲ. ಅಲ್ಲದೆ ಇವನು ತನ್ನ ಸ್ನೇಹಿತ ಎಂಕಿಡುವಿನೊಂದಿಗೆ (**ನೋಡಿ– ಎಂಕಿಡು**) ಸೇರಿ ತೋರಿಸಿದ ಸಾಹಸ ಬೇರೆಯವರಲ್ಲಿ ಕಂಡುಬರದು. ಸುಮೇರಿಯದಲ್ಲಿನ ಈತನ ಕಥೆಯ ಮೂಲವನ್ನು ಪ್ರ.ಶ.ಪೂ. 1500ಕ್ಕಿಂತ ಹಿಂದಕ್ಕೆ ಒಯ್ಯಬಹುದು. ನಿನೆವದಲ್ಲಿ ಅಸ್ಸೀರಿಯದ ದೊರೆ ಅಷೂರ್‌ಬನಿಪಾಲನ (ಪ್ರ.ಶ.ಪೂ. 669–630?) ಗ್ರಂಥ ಭಂಡಾರದಲ್ಲಿ ಈ ಕಥೆಯ ಅಪೂರ್ಣಪಾಠ (ಕೇವಲ 12 ಫಲಕಗಳು ಮಾತ್ರ) ದೊರೆತಿವೆ. ಹಿಟೈಟ್ ಮತ್ತು ಹುರಿಯನ್ ಭಾಷೆಗಳಲ್ಲಿ ಏಷ್ಯ ಮೈನರಿನಲ್ಲಿ ಕೆಲವು ಬದಲಾವಣೆಗಳೊಂದಿಗೆ ಪ್ರಚಲಿತವಿದ್ದ ಈ ಕಥೆ ಗ್ರೀಕರ ಒಡಿಸ್ಸಿಯ ಮೇಲೆ ಪ್ರಭಾವ ಬೀರಿರಬಹುದು. ಹೋಮರನಿಗಿಂತ 1500 ವರ್ಷಗಳಷ್ಟು ಹಿಂದೆಯೇ ಇದ್ದ ಅತ್ಯಂತ ಪ್ರಾಚೀನ ಮಹಾಕಾವ್ಯ ಈ ಗಿಲ್ಗಮೆಷ್ ಇತಿಹಾಸ.

ಈ ಕಥೆಯಲ್ಲಿ ಮಾನವ ಮತ್ತು ಪ್ರಕೃತಿ, ಪ್ರೀತಿ ಮತ್ತು ಸಾಹಸ, ಸ್ನೇಹ ಮತ್ತು ಯುದ್ಧ ಮುಂತಾದ ಪ್ರಾಪಂಚಿಕ ವಿಷಯಗಳನ್ನು ಅಪರಿಹಾರ್ಯವಾದ ಸಾವಿನ ಹಿನ್ನಲೆಯಲ್ಲಿ ವಿವರಿಸಿದೆ. ಸಾವಿನ ವಿಷಯದಲ್ಲಿ ಆಗಿನ ಜನತೆಯಲ್ಲಿದ್ದ ನಂಬಿಕೆಯನ್ನು ಇದು ವ್ಯಕ್ತಪಡಿಸುತ್ತದೆ.

ಈ ಮಹಾಕಾವ್ಯದ ಗಿಲ್ಗಮೆಷ್ ಬಹುಶಃ ಪ್ರ.ಶ.ಪೂ. 3000 ವರ್ಷಗಳ ಹಿಂದೆ ಕಿಷ್‌ನಲ್ಲಿದ್ದ ಅಗ್ಗನ ಸಮಕಾಲೀನನಾಗಿ ಉರುಕ್‌ನಲ್ಲಿ ಆಳುತ್ತಿದ್ದವನೆನ್ನಲಾಗಿದೆ. ಗಿಲ್ಗಮೆಷ್ ಎಂಬ ಸುಮೇರಿಯನ್ ಭಾಷೆಯ ಹೆಸರನ್ನು ತಂದೆ ವೀರ, ಪುರಾತನ ವೀರ ಎಂದು ಮುಂತಾಗಿ ಅರ್ಥೈಸಿದ್ದಾರೆ. ಕಾವ್ಯ, ಕಥೆಗಳಲ್ಲಿ ವಿವರಿಸಿರುವ ಈತನ ಸಾಹಸ ಕಾರ್ಯಗಳಿಗೆ ಚಾರಿತ್ರಿಕಾಧಾರಗಳೇನೂ ಇಲ್ಲ. ಹಾಗೆಯೆ ಸ್ನೇಹಿತ ಮತ್ತು ಸಂಗಾತಿ ಎಂಕಿಡುವಿನ ಹೆಸರೂ ಬೇರೆಲ್ಲಿಯೂ ಇಲ್ಲ.

ಗಿಲ್ಗಮೆಷ್: ಪ್ರ.ಶ.ಪೂ. 8ನೆಯ ಶತಮಾನದ ಒಂದು ಶಿಲ್ಪ

ಈ ಕಥೆ ಮುಖ್ಯವಾಗಿ ಗಿಲ್ಗಮೆಷ್ ಮತ್ತು ಎಂಕಿಡು ಇವರ ಸ್ನೇಹ ಬಂಧನವನ್ನು ಕುರಿತದ್ದು. ಇಬ್ಬರೂ ವೀರಾಧಿವೀರರು. ಗಿಲ್ಗಮೆಷ್ ಶೌರ್ಯದ ಉನ್ನತ ಆದರ್ಶವುಳ್ಳವ, ಕೀರ್ತಿ ತರುವ ಕಾರ್ಯಕ್ಕಾಗಿ ಏನನ್ನೇ ಆಗಲಿ, ಪ್ರಾಣವನ್ನು ಕೂಡ ತ್ಯಾಗ ಮಾಡಲು ಸಿದ್ಧನಾಗಿದ್ದವ. ಅರೆದೈವತ್ವ ಅರೆ ಮಾನವತ್ವವನ್ನು ಪಡೆದಿದ್ದ ಗಿಲ್ಗಮೆಷನಿಗೆ ಭೂಮಿ, ಸಾಗರಗಳ ಮೇಲಿನ ಎಲ್ಲ ವಿಷಯಗಳೂ ತಿಳಿದಿದ್ದವು. ಅನು ದೇವತೆ ಇವನ ದರ್ಪವನ್ನಡಗಿಸಲು ಎಂಕಿಡುವನ್ನು ಸೃಷ್ಟಿಸುತ್ತಾನೆ. ಗಿಲ್ಗಮೆಷ್‌ನಿಗೂ ಇವನಿಗೂ ನಡೆದ ಶಕ್ತಿ ಪ್ರದರ್ಶನದಲ್ಲಿ ಗಿಲ್ಗಮೆಷ್ ಜಯಶಾಲಿಯಾಗುತ್ತಾನೆ. ಮುಂದೆ ಇಬ್ಬರೂ ನಿಕಟವರ್ತಿಗಳಾಗಿ ಹುಂಬಾಬನ ಮೇಲೆ ಯುದ್ಧ ಹೂಡುತ್ತಾರೆ. ತನ್ನನ್ನು ಮದುವೆಯಾಗಲು ನಿರಾಕರಿಸಿದ ಗಿಲ್ಗಮೆಷ್‌ನ ಮೇಲೆ ಇಷ್ಟಾರ್ ದೇವತೆ ದೇವಲೋಕದ ಗೂಳಿಯನ್ನು ನುಗ್ಗಿಸಿದಾಗ ಎಂಕಿಡುವಿನ ಸಹಾಯದಿಂದ ಅದನ್ನು ಗಿಲ್ಗಮೆಷ್ ಕೊಲ್ಲುತ್ತಾನೆ. ಇದರಿಂದ ಕುಪಿತ ಗೊಂಡ ಅನು ಮೊದಲಾದ ದೇವತೆಗಳು ಎಂಕಿಡು ಸಾಯ ಬೇಕೆಂದು ನಿರ್ಧರಿಸುತ್ತಾರೆ. ರೋಗ ಬಂದು ಎಂಕಿಡು ಸಾಯು ತ್ತಾನೆ. ಸ್ನೇಹಿತನ ಸಾವಿನ ದುಃಖ ದಿಂದ ಪರಿತಪಿಸುತ್ತಿದ್ದ ಗಿಲ್ಗಮೆಷ್ ನಿಗೆ ಸಾವನ್ನೇ ಎದುರಿಸಬೇಕೆಂಬ ಸಂಕಲ್ಪ ಉಂಟಾಗುತ್ತದೆ; ಪ್ರಳಯ ದಿಂದ ಪಾರಾಗಿ ಸಾವನ್ನು ಗೆದ್ದ ಉತ್ನಪಿಷ್ಟಿಮನನ್ನು ಹುಡುಕಿ ಕೊಂಡು ಹೋಗುತ್ತಾನೆ. ಆಪತ್ತಾರಕ ವಾದಾಗ ನಿಡುಪಯಣದ ಅನಂತರ ಉತ್ನಪಿಷ್ಟಿಮನ ದರ್ಶನವಾಗುತ್ತದೆ. ಆತನಿಂದ ಪ್ರಳಯದ ಕಥೆಯನ್ನು ತಿಳಿದು ನವ ಯೌವನವನ್ನುಂಟು ಮಾಡುವ

ಗಿಡವೊಂದನ್ನು ಪಡೆಯುತ್ತಾನೆ; ಜೊತೆಗೆ ಅಮರತ್ವ ದೇವತೆಗಳಿಗೆ ಮಾತ್ರ ಎಂಬ ಎಚ್ಚರಿಕೆಯನ್ನೂ ಉತ್ನಪಿಷ್ಟಿಮ್ ಕೊಡುತ್ತಾನೆ. ಮುಂದೆ ಆ ಗಿಡವನ್ನು ಸರ್ಪವೊಂದು ಅಪಹರಿಸುತ್ತದೆ. ಮತ್ತೊಂದು ಐತಿಹ್ಯದಂತೆ ಇಷ್ಟಾರ್ ಗಿಲ್ಗಮೆಷನಿಗೆ ಕೊಟ್ಟಿದ್ದ ಪುಕ್ಕು, ಮಿಕ್ಕು ಎಂಬ ಪದಾರ್ಥಗಳು (ಬಹುಶಃ ಡೋಲು ಮತ್ತು ಅದರ ಕೋಲು) ಕಳೆದು ಹೋದಂತೆಯೂ ಮತ್ತೆ ಬದುಕಿಬಂದ ಎಂಕಿಡು ಅವನ್ನು ಹುಡುಕಿ ತರುವುದಾಗಿ ವಾತು ಕೊಟ್ಟು ಮೃತ್ಯುಲೋಕದ ಗಂಭೀರವರದಿಯನ್ನು ಒಪ್ಪಿಸಿದಂತೆಯೂ ತಿಳಿದುಬರುತ್ತದೆ. (ಎಂ.ಎಚ್.)

**ಗಿಲ್ಗಿಟ್ :** ಕಾಶ್ಮೀರ ವಾಯುವ್ಯದಲ್ಲಿರುವ ಒಂದು ನಗರ. ಇದೇ ಹೆಸರಿನ ನದಿಯೊಂದಿದೆ. ಅದರ ದಕ್ಷಿಣಕ್ಕಿರುವ ವಜ಼ಾರತ್‍ಗೂ ಈ ಹೆಸರಿದೆ. ಗುಪಿಸ್, ಪುನ್ಯಾಲ್, ಅಷ್ಕುಮಾನ್, ಯಾಸಿನ್ ರಾಜಕೀಯ ಜಿಲ್ಲೆಗಳು, ಗಿಲ್ಗಿಟ್ ಆಸ್ಟರ್‍ನ ಉಪವಿಭಾಗಗಳು, ಹುನ್‍ಜ಼ ಮತ್ತು ನಗರ್ ಸಂಸ್ಥಾನಗಳು ಜಿಲಾಸ್ ಉಪ ಏಜೆನ್ಸಿ-ಇವನ್ನೆಲ್ಲ ಒಳಗೊಂಡ ಏಜೆನ್ಸಿಗೂ ಗಿಲ್ಗಿಟ್ ಎಂದೇ ಹೆಸರು. ಚಿತ್ರಾಲ್, ಅಫ್ಘಾನಿಸ್ತಾನ್, ಸೋವಿಯತ್ ದೇಶ ಮತ್ತು ಸಿಂಕಿಯಾಂಗ್(ಚೀನ)ವರೆಗೆ ಈ ಪ್ರದೇಶ ವ್ಯಾಪಿಸಿದೆ. 1947 ರಿಂದ ಈ ಪ್ರದೇಶ ಪಾಕಿಸ್ತಾನದ ಆಕ್ರಮಣಕ್ಕೊಳಗಾಗಿ ಅದರ ಹತೋಟಿಯಲ್ಲಿದೆ. ಆದರೆ ನ್ಯಾಯವಾಗಿ ಇದು ಭಾರತದ ಭಾಗ.

**ಭೌತಲಕ್ಷಣಗಳು:** ಇದು ಪರ್ವತ ಪ್ರದೇಶ. ಹಿಂದೂಕುಷ್ ಮತ್ತು ಕಾರಕೋರಮ್ ಪರ್ವತಗಳು ಸಂಧಿಸುವ ಸ್ಥಳಕ್ಕೆ ಸಮೀಪದಲ್ಲಿದೆ; ನಗರ್ ಪ್ರದೇಶದ ನೀರ್ಗಲ್ಲ ನದಿಗಳು ಈಶಾನ್ಯದ ಮುಜ಼್-ತಾಗ್-ಆಟ ಪರ್ವತಶ್ರೇಣಿಗಳ ಮತ್ತು ನೈರುತ್ಯದ ಕಾಶ್ಮೀರದ ಗಡಿ ಶಿಖರಗಳ ನಡುವೆ ಹರಿದು ಒಟ್ಟಾಗಿ, ಹುನ್‍ಜ಼ ಕಣಿವೆಯಿಂದ ಗಾಡ್ವಿನ್ ಆಸ್ಟೆನ್ ಶಿಖರದ ಬುಡಕ್ಕೆ ಧಾರಾಕಾರವಾಗಿ ಇಳಿಯುತ್ತವೆ. ತಲೆಯಿಂದ ಕೊನೆಯವರೆಗೆ ನೀರ್ಗಲ್ಲ ನದೀಪಾತ್ರದ ಉದ್ದ 144 ಕಿಮೀ ಇದನ್ನು ಬೈಯಾಪೋ ಎಂದು ಕರೆಯುತ್ತಾರೆ. ಹುನಜ಼ ಮತ್ತು ನಗರ್ ಪರ್ವತ ಪ್ರದೇಶದ ಉದ್ದಕ್ಕೂ ಕಣಿವೆಗಳು ಸುಮಾರು 5250 ಮೀಟರ್‍ಗಳಿಗೆ ಕಡಿಮೆ ಇಲ್ಲದ ಮತ್ತು ಸರಾಸರಿ 7000 ಮೀಟರ್ ಎತ್ತರವುಳ್ಳ ಪರ್ವತಶ್ರೇಣಿಗಳ ನಡುವೆ ಆಳವಾಗಿ ಹಬ್ಬಿವೆ. ಇಲ್ಲಿ ಸಾಮಾನ್ಯವಾಗಿ ಯಾವ ಸಸ್ಯವೂ ಇಲ್ಲ.

ಇದುವರೆಗೆ ತಿಳಿದಿರುವಂತೆ ಈ ಪ್ರದೇಶದ ಒಂದು ಅತ್ಯಂತ ಪ್ರಾಚೀನ ಮಾರ್ಗವೆಂದರೆ ಗಿಲ್ಗಿಟ್‍ಗೂ ಚಿತ್ರಾಲ್ ಕಣಿವೆಯ ಮಸ್ತೂಜಿಗೂ ಸಂಬಂಧ ಕಲ್ಪಿಸುವ ಹಾದಿ. ಇದು ಈಗ ಚಿತ್ರಾಲ್- ಗಿಲ್ಗಿಟ್ ಹೆದ್ದಾರಿಯಾಗಿದೆ. ಗಿಲ್ಗಿಟ್ ನದಿಯ ಉತ್ತರದ ಒಂದೊಂದು ಕವಲಿನ ಕೊನೆಗೂ ಒಂದೊಂದು ಅಥವಾ ಹಲವಾರು ಕಣಿವೆ ದಾರಿಗಳಿವೆ. ಇವೆಲ್ಲ ಪಾಮಿರ್ ಪ್ರದೇಶವನ್ನೊ ಪಾಮಿರ್ ಹಾದಿಯ ಉಗಮ ಸ್ಥಳವಾದ ಮೇಲಣ ಯಾರ್ಬುಂ ಕಣಿವೆಯನ್ನೂ ಕೂಡಿಕೊಳ್ಳುತ್ತವೆ. ಯಾಸಿನ್ ಕಣಿವೆಯಲ್ಲಿರುವ ದಾರ್ಕೋಟ್ ಕಣಿವೆ ಮಾರ್ಗದ ಎತ್ತರ 5253.5 ಮೀಟರ್, ಇದು ಯಾರ್ಬುಂ ಕಣಿವೆಗೆ ಇಳಿಯುತ್ತದೆ. ಅಷ್ಕುಮಾನ್ ತಲೆಯ ಬಳಿ ಗಾಘಾರ್ ಮತ್ತು ಕೋರ ಬೋರ್ಟ್ ಕಣಿವೆಮಾರ್ಗಗಳಾಗಿವೆ. ಇವೆಲ್ಲ ವರ್ಷದಲ್ಲಿ ಸ್ವಲ್ಪಕಾಲ ಮಾತ್ರ ಸಂಚಾರಕ್ಕೆ ಅರ್ಹ.

ಬುಂಜಿಗೆ ಮೇಲೆ ಸ್ವಲ್ಪ ದೂರದಲ್ಲಿ ಗಿಲ್ಗಿಟ್ ನದಿ ಸಿಂಧೂ ನದಿಯನ್ನು ಸೇರುತ್ತದೆ. ಬುಂಜಿಯ ಕೆಳಗೆ ಅಸ್ತಾರ್ ನದಿ ಆಗ್ನೇಯದಿಂದ ಹರಿದು ಬಂದು ಸಿಂಧುವನ್ನು ಸೇರುತ್ತದೆ. ಗಿಲ್ಗಿಟ್‍ನಿಂದ ದಕ್ಷಿಣಕ್ಕೆ ಸಾಗುವ ಹೆದ್ದಾರಿ ದಟ್ಟವಾದ ಪೈನ್ ಮರಗಳಿಂದ ಕೂಡಿದೆ. ಈ ಕಣಿವೆಯ ಮೂಲಕ ಹಾದು ಹೋಗುತ್ತದೆ. ಪಾಕಿಸ್ತಾನಕ್ಕೂ ಗಿಲ್ಗಿಟ್‍ಗೂ ನಡುವಣ ಇನ್ನೊಂದು ಮಾರ್ಗ ಬಾಬುಸಾರ ಕಣಿವೆಯ ಮೂಲಕ ಸಾಗುತ್ತದೆ.

ಗಿಲ್ಗಿಟ್‍ನ ವ್ಯಾಪಕ ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ವಿವಿಧ ಜನಾಂಗಗಳಿವೆ. ಈ ಜನರನ್ನೆಲ್ಲ ದಾರ್ದ ಎಂಬ ಹೆಸರಿನಿಂದ ಸಾಮಾನ್ಯವಾಗಿ ಕರೆಯಲಾಗುತ್ತಿದೆ. ಚಿತ್ರಾಲ್ ಮತ್ತು ಸಿಂಧೂ ನಡುವೆ ಇರುವ ದಾರ್ದಿಸ್ತಾನದ ದಾರ್ದರು ಮುಖ್ಯವಾಗಿ ಅಷ್ಕುನ್ ಅಥವಾ ಯೆಷ್ಕುನ್ ಹಾಗೂ ಷಿನ್ ಜನ. ಸತತ ಧಾಳಿಗಳ ಪರಿಣಾಮವಾಗಿ ಅಷ್ಕುನ್ನರೂ ಅನಂತರ ಷಿನ್ನರೂ ಸಿಂಧೂ ಕಣಿವೆಯಿಂದ ಇಲ್ಲಿಗೆ ಬಂದಿರಬೇಕು. ಷಿನ್ ಜನರ ಮೂಲಪುರುಷರು ಹಿಂದೂಗಳು. ಇವರು ಉತ್ತರಪೂರ್ವಗಳಲ್ಲಿ ಬಾಲ್ಟಿಸ್ತಾನದವರೆಗೂ ಪ್ರಸರಿಸಿದ್ದಾರೆ. ಅಲ್ಲಿ ಇವರು ತಾತರ್ ಜನರೊಂದಿಗೆ ಬೆರೆತು ಹೋಗಿದ್ದಾರೆ. ಷಿನ್ನರ ಪ್ರಮುಖ ಭಾಷೆ ಷೀನಾ ಇಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಇದೊಂದು ಪೈಶಾಚೀಭಾಷೆಯೆಂದು ಹೇಳಲಾಗಿದೆ. ಇರಾನಿಯನ್ ಮತ್ತು ಸಂಸ್ಕೃತಗಳ ನಡುವಣ ಆರ್ಯಭಾಷೆಯ ಆರ್ಷೇಯ ರೂಪವಿದು.

ಉತ್ತರದ ಪರ್ವತ ಜಿಲ್ಲೆಗಳ ಎಲ್ಲ ಜನರೂ ಮೈಕಟ್ಟು ವೇಷಭೂಷಣಗಳಲ್ಲಿ ಸಾಮಾನ್ಯವಾಗಿ ಒಂದೇ ತೆರ. ಇವರು ಗಟ್ಟಿಮುಟ್ಟಾಗಿರುವರಲ್ಲದೆ ಸ್ಫುರದ್ರೂಪಿಗಳು. ಇವರು ಮೊಣಕಾಲನ್ನು ಮುಟ್ಟುವ ದಪ್ಪ ಉಣ್ಣೆ ನಿಲುವಂಗಿಗಳನ್ನೂ ಸಡಿಲ ಪೈಜಾಮುಗಳನ್ನೂ ಕಣಕಾಲುಪಟ್ಟಿ ಮತ್ತು ಬೂಟುಗಳನ್ನೂ ಪದರಪದರವಾಗಿ ತಲೆಗೆ ಸುತ್ತಿದಂತಿರುವ ಫೆಲ್ಟ್ ಟೋಪಿಗಳನ್ನೂ ಸಾಮಾನ್ಯವಾಗಿ ಧರಿಸುತ್ತಾರೆ. ಇವರು ಪೋಲೋ ಆಟಪ್ರಿಯರು, ನೃತ್ಯದಲ್ಲಿ ಆಸಕ್ತರು.

ಅಕ್ಕಿ, ಗೋಧಿ ಮತ್ತಿತರ ಆಹಾರಧಾನ್ಯಗಳೂ ಹಣ್ಣುಗಳೂ ವಿಫುಲವಾಗಿ ಗಿಲ್ಗಿಟ್‍ನಲ್ಲಿ ಬೆಳೆಯುತ್ತವೆ. ಅಸ್ತಾರ್‍ನಲ್ಲಿ ಎತ್ತರದ ಬೆಟ್ಟಗುಡ್ಡ ಪ್ರದೇಶದಿಂದಾಗಿ ವ್ಯವಸಾಯ ಕಷ್ಟಕರ, ಉಣ್ಣೆ ನೇಯ್ಗೆ ಪ್ರಮುಖ ಕೈಗಾರಿಕೆ.

**ಚರಿತ್ರೆ:** ಮೇಲಣ ಸಿಂಧೂನದಿಯ ಪಶ್ಚಿಮದಲ್ಲಿ ಸ್ವಾತ್ ನದಿಯ ತಲೆಯ ಬಳಿಯ ಪ್ರದೇಶದಿಂದಾಚೆಗೆ ಗಾಂಧಾರ ಪ್ರದೇಶದ ಉತ್ತರಕ್ಕೆ ವಾಸಿಸುತ್ತಿದ್ದವರೆಂದು ದಾರ್ದರನ್ನು ಬಲು ಹಿಂದೆಯೇ ಟಾಲೆಮಿ ಗುರುತಿಸಿದ್ದ. ಉತ್ತರದಿಂದ ಸು. 400 ರಲ್ಲಿ ಇಲ್ಲಿಗೆ ಬಂದ ಫಾಹಿಯಾನನೂ 629 ರಲ್ಲಿ ಸ್ವಾತ್ ಮೂಲಕ ಬಂದ ಯುವಾನ್‍ಚಾಂಗ್‍ನೂ ಇದರ ಬಗ್ಗೆ ಬರೆದಿದ್ದಾರೆ. ಗಿಲ್ಗಿಟ್ ಪ್ರದೇಶದ ತ್ರಾಕನ್ ಎಂಬ ಮನೆತನಕ್ಕೆ ಸೇರಿದ ದೊರೆಗಳಿಂದ ಆಳಲ್ಪಡುತ್ತಿತ್ತೆಂಬುದು ಹಳೆಯ ಐತಿಹ್ಯ. ಈ ರಾಜಮನೆತನದ ಆಳ್ವಿಕೆ ಕೊನೆಗೊಂಡ ಅನಂತರ ಈ ಪ್ರದೇಶ ನೆರೆಹೊರೆಯ ದೊರೆಗಳ ಸತತ ಧಾಳಿಗೆ ತುತ್ತಾಯಿತು. 1842 ಕ್ಕೆ ಹಿಂದಿನ ಎರಡು ಮೂರು ದಶಕಗಳಲ್ಲಿ ಇದರ ಮೇಲಣ ಒಡೆತನಕ್ಕಾಗಿ ಐದು ಬಾರಿ ರಾಜವಂಶದಲ್ಲೇ ಹೊಡೆದಾಟಗಳಾದವು. 1842 ರ ಸುಮಾರಿನಲ್ಲಿ ಸಿಕ್ಖರು ಇಲ್ಲಿಗೆ ಬಂದು ಇಲ್ಲೊಂದು ಸೇನೆಯನ್ನಿಟ್ಟರು. 1846 ರಲ್ಲಿ ಲಾರ್ಡ್ ಹಾರ್ಡಿಂಜ್ ಜಮ್ಮುವಿನ ಮಹಾರಾಜ ಗುಲಾಬ್ ಸಿಂಗನಿಗೆ ಕಾಶ್ಮೀರವನ್ನು ಒಪ್ಪಿಸಿದಾಗ ಗಿಲ್ಗಿಟ್ ಕೂಡ ಅದರೊಂದಿಗೆ ಅವನ ವಶವಾಯಿತು. ಗುಲಾಬ್ ಸಿಂಗನ ಕಡೆಯ ಡೋಗ್ರ ಜನ 1852 ರಲ್ಲಿ ಇಲ್ಲಿಂದ ಹೊರದೂಡಲ್ಪಟ್ಟರು. ಎಂಟು ವರ್ಷಗಳ ಕಾಲ ಅವರು ಇಲ್ಲಿಗೆ ಪ್ರವೇಶಿಸಿರಲಿಲ್ಲ. ಅವರ ಪೈಕಿ ಎರಡು ಸಾವಿರ ಜನ ಹತರಾದರು. 1860 ರಲ್ಲಿ ಅವರು ಗಿಲ್ಗಿಟ್‍ಗೆ ಹಿಂದಿರುಗಿದರು. ಅವರು ಗಿಲ್ಗಿಟಿನ ಕೆಲವು ಭಾಗಗಳನ್ನು ಹಿಡಿದುಕೊಂಡರಾದರೂ ಚಿರಕಾಲ ಅವರ ಕೈಯಲ್ಲಿ ಅವು ಉಳಿಯಲಿಲ್ಲ. 1889 ರಲ್ಲಿ ರಷ್ಯ ಮುನ್ನಡೆಯದಂತೆ ತಡೆಯಲು ಬ್ರಿಟಿಷ್ ಸರ್ಕಾರ ಗಿಲ್ಗಿಟ್ ಏಜೆನ್ಸಿಯನ್ನು ಸ್ಥಾಪಿಸಿತು. 1947 ರಲ್ಲಿ ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿದಾಗ ಇದರ ಆಡಳಿತದ ಹೊಣೆ ಕಾಶ್ಮೀರದ ರಾಜ್ಯಪಾಲನದಾಯಿತು. 1947 ರ ನವೆಂಬರಿನಲ್ಲಿ ಪಾಕ್ ಆಕ್ರಮಣಕಾರಿ ಪಡೆಗಳು ರಾಜ್ಯಪಾಲನನ್ನು ಸೆರೆಹಿಡಿದು ಗಿಲ್ಗಿಟನ್ನು ವಶಪಡಿಸಿಕೊಂಡವು.

**ಗಿಲ್ಗಿಟ್ ಪಟ್ಟಣ :** ಇದೊಂದು ಚಿಕ್ಕ ಗಿರಿಧಾಮ. ಗಿಲ್ಗಿಟ್ ಪ್ರದೇಶದ ಆಡಳಿತ ಕೇಂದ್ರ. ಸಮುದ್ರಮಟ್ಟದಿಂದ 1715 ಮೀಟರ್ ಎತ್ತರದಲ್ಲಿದೆ ಹಿಂದೂಕುಷ್‍ನ ಕೋಡುಗಲ್ಲುಗಳ ಕೆಳಗೆ ಇರುವ ಈ ಪಟ್ಟಣ ಆಯಕಟ್ಟಿನ ಸ್ಥಳದಲ್ಲಿದೆ. ಪರ್ವತ ಮಾರ್ಗಗಳು ಸುತ್ತಮುತ್ತಲ ಕಣಿವೆಗಳತ್ತ ಸಾಗುತ್ತವೆ. ಹಿಂದೂಗಳು ಆಳುತ್ತಿದ್ದಾಗ ಇದಕ್ಕೆ ಸಾರ್ಗಿನ್ ಎಂಬ ಹೆಸರಿತ್ತು. ಅನಂತರ ಇದಕ್ಕೆ ಗಿಲಿಟ್ ಎಂಬ ಹೆಸರು ಬಂತು. ಇದೇ ಕ್ರಮೇಣ ಗಿಲ್ಗಿಟ್ ಆಯಿತು. ಇಲ್ಲಿ ಕೆಲವು ಹಳೆಯ ಕಲ್ಲುಕಟ್ಟಡಗಳೂ ಬೌದ್ಧಶಿಲ್ಪಗಳೂ ಉಂಟು. ಇದು ಬಹಳ ಹಿಂದೆ ಒಂದು ಬೌದ್ಧ ಕೇಂದ್ರವಾಗಿತ್ತು. (ಎಚ್.ಎಂ.ಎಸ್.ಆರ್.)

**ಗಿಲ್ಬರ್ಟ್ ದ್ವೀಪಗಳು :** ಪೆಸಿಫಿಕ್ ಸಾಗರದಲ್ಲಿರುವ ಹದಿನಾರು ಹವಳ ದ್ವೀಪಗಳ ಸಮೂಹ. ಉ.ಅ. $4^0$-ದ.ಅ.$3^0$ ಮತ್ತು ಪೂ.ರೇ.$172^0$-$178^0$ ಮಧ್ಯದಲ್ಲಿ ಇವು ಹರಡಿದೆ. ವಿಸ್ತೀರ್ಣ ಸು. 861 ಚ.ಕಿಮೀ ಈ ಸಮೂಹದಲ್ಲಿ ಮುಖ್ಯವಾದ ದ್ವೀಪಗಳು ಮಾಕಿನ್ ಅಥವಾ ಬೂಟಾರಿಟಾರಿ, ಅಬೈಯಾಂಗ್, ತರಾವಾ. ಈ ದ್ವೀಪಗಳು ಸಾಮಾನ್ಯವಾಗಿ ತಗ್ಗಾಗಿವೆ. ಇಲ್ಲಿಯದು ತೇವದಿಂದ ಕೂಡಿದ ವಾಯುಗುಣ. ಸರಾಸರಿ ಮಳೆ 40"-100". ಕೇದಗೆ, ಹಣ್ಣುಗಳು ಮತ್ತು ತೆಂಗು ಇಲ್ಲಿಯ ಬೆಳೆಗಳು. ಕೊಬ್ಬರಿ ಪರದೇಶಕ್ಕೆ ರಫ್ತಾಗುತ್ತದೆ. ಇಲ್ಲಿಯ ಜನ ಮೈಕ್ರೊನೇಷಿಯನರು. ಎಲ್ಲ ದ್ವೀಪಗಳ ಒಟ್ಟು ಜನಸಂಖ್ಯೆ 98,000(2011). ಗಿಲ್ಬರ್ಟ್ ದ್ವೀಪಗಳನ್ನು ಪರಿಶೋಧಿಸಿದವರು ಜಾನ್ ಬೈರನ್ (1765) ಥಾಮಸ್ ಗಿಲ್ಬರ್ಟ್ ಮತ್ತು ಜಾನ್ ಮಾರ್ಷಲ್(1788). 1892 ರಲ್ಲಿ ಇವು ಬ್ರಿಟಿಷರ ಆಡಳಿತಕ್ಕೆ ಬಂದುವು. 1915 ರಲ್ಲಿ ಈ ದ್ವೀಪಗಳ ಮತ್ತು ಎಲಿಸ್ ದ್ವೀಪಗಳು ಸೇರಿ ಬ್ರಿಟಿಷ್ ವಸಾಹತುಗಳಾದವು. 1941 ರಲ್ಲಿ ಈ ದ್ವೀಪಗಳನ್ನು ಜಪಾನ್ ವಶಪಡಿಸಿಕೊಂಡಿತ್ತು. 1943 ರಲ್ಲಿ ಇವು ಮಿತ್ರಸೇನೆಗಳ ವಶಕ್ಕೆ ಬಂದವು. ಎಲಿಸ್ ದ್ವೀಪಗಳೂ ಸೇರಿದಂತೆ ಇವುಗಳ ಆಡಳಿತ ಬ್ರಿಟಿಷರ ಅಧೀನದಲ್ಲಿ 1979 ಜುಲೈರವರೆಗೆ ಇದ್ದಿತು. ಅನಂತರ 1979 ಜುಲೈ 12ರಿಂದ ಕಿರಿಬತಿ ಎಂಬ ಹೆಸರಿನಿಂದ ಸ್ವತಂತ್ರವಾಗಿದೆ. ಈಗ ಸುಮಾರು 33 ದ್ವೀಪಗಳ ಸಮೂಹವಾಗಿದೆ. ಈಗ ವಿಸ್ತೀರ್ಣ 861 ಚ.ಕಿಮೀ. ಇದರ ರಾಜಧಾನಿ ತರಾವಾ. *

**ಗಿಲ್ಬರ್ಟ್, ವಿಲಿಯಮ್ :** 1544-1603. ಇಂಗ್ಲಿಷ್ ವೈದ್ಯ ಹಾಗೂ ಭೌತವಿಜ್ಞಾನಿ. ಒಂದನೆಯ ಎಲಿಜಬೆತ್ ರಾಣಿಯ ಆಳ್ವಿಕೆಯ ವೇಳೆ ಇಂಗ್ಲೆಂಡಿನಲ್ಲಿ ಬಲು ಪ್ರಸಿದ್ಧನಾಗಿದ್ದ. ಗಿಲ್ಬರ್ಟ್ ಕಾಲ್ಚೆಸ್ಟರ್‍ನಲ್ಲಿ ಹುಟ್ಟಿ ಅಲ್ಲಿನ ಶಾಲೆಯಲ್ಲಿ ಓದಿ

ಕೇಂಬ್ರಿಜ್‌ನ ಸೇಂಟ್ ಜಾನ್ ಕಾಲೇಜು ಸೇರಿ (1558) ಬಿ.ಎ.,ಎಂ.ಎ. ಪದವಿಗಳನ್ನೂ ಬಳಿಕ ಎಂ.ಡಿ. ವೈದ್ಯಪದವಿಯನ್ನೂ (1569) ಪಡೆದು ತನ್ನ ಕಾಲೇಜಿನ ಹಿರಿಯ ಸದಸ್ಯನಾಗಿ ಚುನಾಯಿತನಾದ. ಯುರೋಪಿನಲ್ಲಿ ಸುತ್ತಾಡಿ ಲಂಡನ್ನಿನಲ್ಲಿ ವೈದ್ಯನಾಗಿ ನೆಲೆಸಿದ (1573). ವೈದ್ಯರ ಕಾಲೇಜು ಸದಸ್ಯನಾಗಿ (1576) ಮುಖ್ಯ ಹುದ್ದೆಗಳಲ್ಲಿ ಕೆಲಸ ಮಾಡಿದ. ಆ ಕಾಲೇಜು ಹೊರತರಲು ನಿರ್ಧರಿಸಿದ್ದ ಲಂಡನ್ನಿನ ಔಷಧಸಂಹಿತೆ (ಫಾರ್ಮಕೋಪಿಯ) ಪ್ರಕಟಣೆಯ ಮೇಲ್ವಿಚಾರಕರ ಸಮಿತಿಯಲ್ಲಿ ಈತ ಒಬ್ಬ ಸದಸ್ಯನಾಗಿದ್ದ (1589). ಆದರೆ ಈ ಸಂಹಿತೆ 1618 ರ ತನಕ ಹೊರಬೀಳಲಿಲ್ಲ. ಮೊದಲನೆಯ ಎಲಿಜಬೆತ್ ರಾಣಿಯ ಸ್ವಂತ ವೈದ್ಯನಾಗಿದ್ದ (1601). ಕಾಲ್ಚೆಸ್ಟರಿನ ಹೋಲಿ ಟ್ರಿನಿಟಿ ಚರ್ಚಿನಲ್ಲಿ ಅವನ ಸ್ಮಾರಕವಿದೆ. ವೈದ್ಯರಕಾಲೇಜಿಗೆ ದಾನಮಾಡಿದ ಅವನ ಪುಸ್ತಕಗಳು, ಗೋಳಗಳು, ಪರಿಕರಗಳು, ಲೋಹಸಂಗ್ರಹವೆಲ್ಲ ಲಂಡನ್ನಿನ ದಳ್ಳುರಿಯಲ್ಲಿ ನಾಶವಾದವು. ಈತ ಗೆಲಿಲಿಯೋನಂತೆ (1564–1642) ಪ್ರಯೋಗ ಕುಶಲಿ ಹಾಗೂ ಪರಿಣತಮತಿ. ಯಾವುದನ್ನೂ ಪ್ರಾಯೋಗಿಕವಾಗಿ ರುಜುವಾತಿಲ್ಲದೇ ಸ್ವೀಕರಿಸುತ್ತಿರಲಿಲ್ಲ. ಉದಾಹರಣೆಗೆ, ಒಂದು ಅಯಸ್ಕಾಂತದ ಕಾಂತತ್ವವನ್ನು ಬೆಳ್ಳುಳ್ಳಿ ನಾಶಮಾಡುತ್ತದೆ ಎಂದು ವಿಜ್ಞಾನಿಗಳು ಕೂಡ ನಂಬಿದ್ದುದನ್ನು ನೇರ ಪ್ರಯೋಗ ಮಾಡಿ ತೋರಿಸಿ ಅಲ್ಲಗಳೆದ. ಕಾಂತತ್ವದ ವಿಚಾರ ಪ್ರಮುಖ ಲಕ್ಷಣ ಗ್ರಂಥವನ್ನು (1600) ಬರೆದ ಮೊದಲಿಗನಿವ. ಆಗಿನ ಕಾಲದಲ್ಲಿ ಕೇವಲ ವಿಜ್ಞಾನ ವಿಧಾನಗಳನ್ನು ಅನುಸರಿಸಿ ಹಲವು ವರ್ಷ ಸಂಶೋಧನೆ ನಡೆಸಿ ಕಂಡುಹಿಡಿದ ವಿಚಾರಗಳನ್ನು ಮೊತ್ತಮೊದಲು ಇದರಲ್ಲಿ ನಿರೂಪಿಸಿದ್ದ. ಕಾಂತವಾಹಕ ಶಕ್ತಿಯನ್ನು ಅಳತೆ ಮಾಡುವ ಏಕಮಾನವನ್ನು ಈತನ ಗೌರವಾರ್ಥ ಗಿಲ್ಬರ್ಟ್ ಎಂದೇ ಹೆಸರಿಸಲಾಗಿದೆ. ಸೂಜಿಗಲ್ಲು ಗಳು, ಸೂಜಿಗಲ್ಲಿನಂಥ ವಸ್ತುಗಳು, ವಿದ್ಯುತ್ತಿನ ಸೆಳೆತಗಳ ವಿಚಾರ, ಭೂಮಿ ಕೇವಲ ಒಂದು ಭಾರಿ ಸೂಜಿಗಲ್ಲೆಂದೂ, ಸೂಜಿಗಲ್ಲು ಉತ್ತರ ದಕ್ಷಿಣ ತೋರುವುದಕ್ಕೂ ಸೂಜಿಗಲ್ಲಿನ ದಿಕ್ಕಿಗೂ ಈ ಕಲ್ಪನೆಯೇ ಕಾರಣವೆಂದೂ ಆಗಲೆ ಬರೆದಿದ್ದ.

ಕಾಂತಾಕರ್ಷಣ ಬಲವಲ್ಲದೇ ವಿಶ್ವದಲ್ಲಿರುವ ಇತರ ಆಕರ್ಷಣ ಬಲಗಳನ್ನು ಕುರಿತು ಸಹ ಗಿಲ್ಬರ್ಟ್ ತೀವ್ರವಾಗಿ ಅನ್ವೇಷಿಸಿದ. ಉದಾಹರಣೆಗೆ, ಶಿಲಾರಾಳವನ್ನು (ಆ್ಯಂಬರ್) ಉಜ್ಜಿದಾಗ ಅದು ಹಗುರ ಪದಾರ್ಥಗಳನ್ನು ಆಕರ್ಷಿಸುವ ಸಾಮರ್ಥ್ಯ ಪಡೆಯುವುದೆಂದು ಪ್ರಾಚೀನ ಕಾಲದಿಂದಲೂ ತಿಳಿದಿತ್ತು. ಇಂಥ ಆಕರ್ಷಣ ಸಾಮರ್ಥ್ಯವನ್ನು ಪಡೆಯಬಲ್ಲ ಇತರ ವಸ್ತುಗಳ ಸಾಧನೆಯನ್ನು ಗಿಲ್ಬರ್ಟ್ ಮಾಡಿ ಅವೆಲ್ಲವನ್ನೂ 'ಎಲೆಕ್ಟ್ರಿಕ್ಸ್' ಎಂಬ ಸಾಮೂಹಿಕ ನಾಮದಿಂದ ಹೆಸರಿಸಿದ. ಗ್ರೀಕ್ ಭಾಷೆಯ ಎಲೆಕ್ಟ್ರಾನಿನಿಂದ (ಅರ್ಥ ಶಿಲಾರಾಳ) ಈ ಎಲೆಕ್ಟ್ರಿಕ್ ಪದವನ್ನು ಗಿಲ್ಬರ್ಟ್ ಉತ್ಪಾದಿಸಿದ.

ಗಿಲ್ಬರ್ಟ್ ಸತ್ತಮೇಲೆ ಅವನ ಸೋದರ ಗಿಲ್ಬರ್ಟ್‌ನ ಎರಡು ಕೈಬರೆಹಗಳ ಆಧಾರದ ಮೇಲೆ ಒಂದು ಗ್ರಂಥವನ್ನು ಪ್ರಕಟಿಸಿದ (1651). ಕೊಪರ್ನಿಕಸನ ವಾದವನ್ನು ಇಂಗ್ಲೆಂಡಿನಲ್ಲಿ ಮೊತ್ತಮೊದಲು ಪ್ರತಿಪಾದಿಸಿದ ಮತ್ತು ಸ್ಥಿರ ನಕ್ಷತ್ರಗಳು ಭೂಮಿಯಿಂದ ಸಮದೂರದಲ್ಲಿ ಇಲ್ಲವೆಂದು ಹೇಳಿದ. (ಎಸ್.ಟಿ.ಪಿ.;ಡಿ.ಎಸ್.ಎಸ್.)

**ಗಿಲ್ಬರ್ಟ್, ವಿಲಿಯಂ ಶ್ವೆಂಕ್ :** 1836–1911. ಇಂಗ್ಲಿಷ್ ನಾಟಕಕಾರ, ಹಾಸ್ಯ ಲೇಖಕ, ತಂದೆ ಕಾದಂಬರಿಕಾರ ವಿಲಿಯಂ ಗಿಲ್ಬರ್ಟ್. ಎಲಿಜಬೆತ್ ರಾಣಿಯ ಕಾಲದಲ್ಲಿ ಸಾಹಸಿಯಾದ ನಾವಿಕನೆಂದು ರಾಜಮನ್ನಣೆ ಪಡೆದಿದ್ದ ಸರ್ ಹಂಫ್ರಿ ಗಿಲ್ಬರ್ಟ್‌ನ ವಂಶ ಇವನದು. ವಿಲಿಯಂ ಲಂಡನ್ ನಗರದಲ್ಲಿ 1836 ನವೆಂಬರ್ 18ರಂದು ಜನಿಸಿದ. ಶ್ವೆಂಕ್ ಎಂಬ ಹೆಸರು ಈತನಿಗೆ ಅಜ್ಜಿಯಿಂದ ಬಂದದು. ತಂದೆ ತಾಯಿ ಇಟಲಿಯಲ್ಲಿ ಪ್ರವಾಸ ಮಾಡುತ್ತಿದ್ದ ಸಮಯದಲ್ಲಿ ಡಕಾಯಿತರ ಗುಂಪೊಂದು ಚಿಕ್ಕಮಗುವಾಗಿದ್ದ ವಿಲಿಯಂನನ್ನು ಅಪಹರಿಸಿಕೊಂಡು ಹೋಯಿತು. ಡಕಾಯಿತರ ನಾಯಕನಿಗೆ 25 ಪೌಂಡ್ ಹಣ ಕೊಟ್ಟು ತಂದೆ ಮಗುವನ್ನು ಬಿಡಿಸಿಕೊಂಡು ಬರಬೇಕಾಯಿತು. ಫ್ರಾನ್ಸಿನ ಬೊಲೋನ್ ಈಲಿಂಗ್‌ಗಳ ಶ್ರೀಮಂತ ಶಾಲೆಗಳಲ್ಲಿ ವಿದ್ಯಾಭ್ಯಾಸವಾದ ಅನಂತರ ಲಂಡನಿನ ಕಿಂಗ್ಸ್ ಕಾಲೇಜಿನಲ್ಲಿ ವಿಲಿಯಂ ವ್ಯಾಸಂಗ ಮುಂದುವರಿಯಿತು. 1863ರಲ್ಲಿ ಲಾ ಪಧವೀದರನಾಗಿ ವಕೀಲವೃತ್ತಿಯನ್ನು ಆರಂಭಿಸಿದ. ಆದರೆ ಕೇಸುಗಳೇ ಸಿಕ್ಕದೆ ಸಂಪಾದನೆಗೆ ಕಷ್ಟವಾಗಿ, ಸಂತೋಷಕರ ಹವ್ಯಾಸವಾಗಿ ಬೆಳೆದುಬಂದಿದ್ದ ಹಾಸ್ಯಲೇಖನ, ಚಿತ್ರಕಲೆಗಳ ಕಡೆ ಹೆಚ್ಚು ಗಮನವನ್ನು ಕೊಡತೊಡಗಿದ. ತಂದೆ ಬರೆದ ಷರ್ಲಿ ಹಾಲ್ ಅಸ್ಸೆಲಮ್ (1863), ಡಾಕ್ಟರ್ ಆಸ್ಟಿನ್ಸ್ ಗೆಸ್ಟ್ಸ್ (1866) ಎಂಬ ಕಾದಂಬರಿಗಳಿಗೆ ಚಿತ್ರಗಳನ್ನು ಬರೆದುಕೊಟ್ಟ. 1861ರಲ್ಲಿ ಫನ್ ಎಂಬ ಹಾಸ್ಯ ಪತ್ರಿಕೆಯಲ್ಲಿ ಗಿಲ್ಬರ್ಟ್ ಬ್ಯಾಬ್ ಎಂಬ ಕಾವ್ಯನಾಮದಲ್ಲಿ ಚಿತ್ರಸಹಿತವಾಗಿ ಕಳಿಸಿದ್ದ ಬಹಳ ಸೊಗಸಾದ ವಿನೋದಕವಿತೆಯೊಂದು ಪ್ರಕಟವಾಗಿ ಎಲ್ಲರ ಗಮನವನ್ನೂ ಸೆಳೆಯಿತು. ಬ್ಯಾಬ್ ಎಂಬುದು ಕವಿಯ ಬಾಲ್ಯದ ಅಡ್ಡ ಹೆಸರು. 1866ರಲ್ಲಿ ಪಂಚ್ ಪತ್ರಿಕೆಗೆ ಕಳಿಸಿದ ಸೊಗಸಾದ ಕಥೆ ನ್ಯಾನ್ಸಿಬೆಲ್ ಎಂಬುದು ತಿರಸ್ಕೃತವಾಯಿತು. ಆದರೆ ಇದೇ ಬಗೆಯ ಕತೆಗಳೆಲ್ಲ ಸೇರಿ ಮುಂದೆ 1869ರಲ್ಲಿ ಪ್ರಕಟವಾಗಿ ಬ್ಯಾಬ್ ಬ್ಯಾಲಡ್ಸ್ ಎಂಬುದು ವಿಖ್ಯಾತ ಕೃತಿಯಾಯಿತು. ಹಾಸ್ಯ ಸಾಹಿತ್ಯ ಕ್ಷಿತಿಜದಲ್ಲಿ ಹೊಸದಾಗಿ ಮೂಡಿದ ತಾರೆ ಎಂದು ಈ ಗ್ರಂಥವನ್ನು ವಿಮರ್ಶಕರು ಕೊಂಡಾಡಿದ್ದಾರೆ. ಈ ಪುಸ್ತಕಕ್ಕೆ ಸಿಕ್ಕ ಪ್ರೋತ್ಸಾಹ ಕೆಲವೇ ವರ್ಷಗಳಲ್ಲಿ ಮೋರ್ ಬ್ಯಾಬ್ ಬ್ಯಾಲಡ್ಸ್ ಎಂಬ ಇನ್ನೊಂದು ಸಂಕಲನ ಬರಲು ಕಾರಣವಾಯಿತು. ಸಾಗ್ಸ್ ಆಫ್ ಸವಾಯಾರ್ಡ್ ಎಂಬುದು ಮೂರನೆಯ ಕೃತಿ. 1898ರಲ್ಲಿ ಈ ಮೂರನ್ನೂ ಸೇರಿಸಿ ಇನ್ನೂ ಹಲವು ಚಿತ್ರಗಳನ್ನೂ ಜೋಡಿಸಿ ಸಂಪುಟವಾಗಿ ಪ್ರಕಟಿಸಲಾಯಿತು.

ಆ ವೇಳೆಗೆ ಫನ್ ಪತ್ರಿಕೆಯ ಅಚ್ಚುಮೆಚ್ಚಿನ ಲೇಖಕನೆನಿಸಿದ್ದ ಗಿಲ್ಬರ್ಟ್ ಇಲಸ್ಟ್ರೇಟೆಡ್ ಟೈಮ್ಸ್ ಪತ್ರಿಕೆಯ ನಾಟಕ ವಿಮರ್ಶಕನಾದ. ಒಮ್ಮೆ ಸೇಂಟ್ ಜೇಮ್ಸ್ ರಂಗಮಂದಿರದ ಮಿಸ್ ಹರ್ಬರ್ಟ್ ಲೆಸ್ಸಿ ಎಂಬಾಕೆ ಕ್ರಿಸ್ಮಸ್ ಹಬ್ಬದ ನಾಟ್ಯೋತ್ಸವಕ್ಕಾಗಿ ಹದಿನೈದೇ ದಿನಗಳಲ್ಲಿ ಒಂದು ಹಾಸ್ಯರಸ ಪ್ರಧಾನವಾದ ನಾಟಕವನ್ನು ಬರೆದುಕೊಡಬಲ್ಲವರು ಯಾರಾದರೂ ಸಿಕ್ಕುವರೇ ಎಂದು ರಾಬರ್ಟ್ಸನ್ನನನ್ನು ಕೇಳಿದಳು. ಆತ ಗಿಲ್ಬರ್ಟ್‌ನನ್ನು



ನಾಟಕ ಬರೆದು ಕೊಡಲು ಕೇಳಿದ ಹತ್ತೆ ದಿನಗಳಲ್ಲಿ ಗಿಲ್ಬರ್ಟ್ ಡಲ್‌ಕಾಮರ ಎಂಬ ವಿಕಟನಾಟಕವನ್ನು ಬರೆದುಕೊಟ್ಟ. ಒಂದೇ ವಾರದಲ್ಲಿ ನಾಟಕವನ್ನು ಅಭ್ಯಾಸಮಾಡಿ ನಾಟ್ಯೋತ್ಸವ ಸಂದರ್ಭದಲ್ಲಿ ಪ್ರದರ್ಶಿಸಿಯೂ ಆಯಿತು. ಅದೇ ಗಿಲ್ಬರ್ಟ್‌ನ ಮೊದಲ ನಾಟಕ. ಯಾವುದೋ ಗಳಿಗೆಯಲ್ಲಿ ನಾಟಕ ಮಂಡಳಿಯವರಿಗೆ ಕೇವಲ ಮೂವತ್ತು ಪೌಂಡಿಗೆ ಆ ನಾಟಕವನ್ನು ಸಂಪೂರ್ಣ ಹಕ್ಕುಗಳ ಸಮೇತ ಮಾರಿಬಿಟ್ಟ ಗಿಲ್ಬರ್ಟ್ ಅನಂತರ ಕೈಕೈ ಹಿಚುಕಿ ಕೊಳ್ಳಬೇಕಾಯಿತು. ಏಕೆಂದರೆ ಆ ನಾಟಕ ಪ್ರದರ್ಶನದ ಮೇಲೆ ಪ್ರದರ್ಶನ ಕಂಡು ದುಡ್ಡಿನ ಮಳೆ ಸುರಿಸಿತು. 1870ರಲ್ಲಿ ಬಕ್‌ಸ್ಟನ್ ಎಂಬಾತ ಸರಳ ರಗಳೆಯಲ್ಲಿ ಒಂದು ಸುಖಾಂತನಾಟಕ ಬರೆದುಕೊಡಲು ಕೇಳಿದ. ಅದರ ಫಲ ಕಿನ್ನರ ಕಥಾವಸ್ತುವಿನ ಮೇಲೆ ರಚಿತವಾದ ದಿ ಪ್ಯಾಲೇಸ್ ಆಫ್ ಟ್ರೂತ್ ಎಂಬ ನಾಟಕ. ಕತೆಯ ಹಂದರ ಶಿಥಿಲವಾಗಿದ್ದರೂ ರಚನಾ ಕೌಶಲದಿಂದಾಗಿ ನಾಟಕ ಮನ್ನಣೆ ಪಡೆಯಿತು. ಹೇ ಮಾರ್ಕೆಟ್ ರಂಗಮಂದಿರದಲ್ಲಿ ಕೆಂಡಲ್ ದಂಪತಿಗಳು ಈ ನಾಟಕವನ್ನು ಆಡಿಸಿದರು. ಮರುವರ್ಷ ಮೂರಂಕದ ಮತ್ತೊಂದು ಹರ್ಷ ನಾಟಕ ಪಿಗ್ಮೆಲಿಯನ್ ಅಂಡ್ ಗೆಲೇಷಿಯಾ. 1873ರಲ್ಲಿ ದಿ ವಿಕೆಡ್ ವರ್ಲ್ಡ್ ಮತ್ತು ದಿ ಹ್ಯಾಪಿ ಲ್ಯಾಂಡ್ ನಾಟಕಗಳು ಬಂದವು. ಆಮೇಲೆ ಗಿಲ್ಬರ್ಟ್ ತನ್ನ ತಂದೆಯ ಮನೋಭಾವವನ್ನು ಅನುಸರಿಸಿ ವಿಕಟಹಾಸ್ಯದ ಇಲ್ಲವೆ ಭಾವಾತಿರೇಕದ ನಾಟಕಗಳನ್ನು ಬರೆಯತೊಡಗಿದ. ಹೀಗೆ ಬಂದ ನಾಲ್ಕು ನಾಟಕಗಳಲ್ಲಿ ಸ್ವೀಟ್ ಹಾರ್ಟ್ಸ್ ಮತ್ತು ಎಂಗೇಜ್ಡ್ ಎಂಬ ನಾಟಕಗಳು ಬಹು ಜನಪ್ರಿಯವಾದವು. ಗದ್ಯ ಮತ್ತು ಪದ್ಯ ಎರಡರಲ್ಲೂ ಅನೇಕ ವಿನೋದನಾಟಕಗಳನ್ನು ಬರೆದು ರಸಿಕರ ಮೆಚ್ಚುಗೆ ಸಂಪಾದಿಸಿದುದಲ್ಲದೆ ಈತ ಫಾರ್ಗೆಟ್ಟೀಸ್ ಫೇರಿ ಅಂಡ್ ಅದರ್ ಸ್ಟೋರೀಸ್ ಎಂಬ ಹಾಸ್ಯಕಥೆಗಳ ಸಂಕಲನವನ್ನೂ ಪ್ರಕಟಿಸಿದ.

ಈ ನಡುವೆ ಆರ್ಥರ್ ಸಲಿವನ್ **(ನೋಡಿ – ಸಲಿವನ್ ಆರ್ಥರ್)** ಎಂಬ ಸಂಗೀತಕಾರನೊಂದಿಗೆ ಆದ ನಿಕಟವಾದ ಸ್ನೇಹ ಗಿಲ್ಬರ್ಟನ ಜೀವನದಲ್ಲಿ ಒಂದು ಮಹತ್ತ್ವಪೂರ್ಣವಾದ ಘಟನೆ. ಇಬ್ಬರೂ ಜೊತೆಗೂಡಿ ಗೀತನಾಟಕಗಳನ್ನು (ಆಪೆರ) ರಚಿಸಿ ಪ್ರದರ್ಶಿಸಬೇಕೆಂದು ಮಾತನಾಡಿ ಕೊಂಡರು. ಈ ಜೋಡಿಯಿಂದ ರಚಿತವಾದ ಮಧುರಗೇಯದ ಸವಾಯ್ ಗೀತ ನಾಟಕಗಳು ಅತ್ಯಂತ ಜನಪ್ರಿಯವಾಗಿ ಕೀರ್ತಿ ಶಿಖರದ ತುದಿಯನ್ನೇರಿದವು. ಗಿಲ್ಬರ್ಟ್ ವಿವಿಧ ಛಂದೋವಿಲಾಸಗಳಲ್ಲಿ ಪ್ರವೀಣ. ಜೊತೆಗೆ ಚತುರವಾದ ವಾಕ್ಸರಣಿಯನ್ನು ಹೆಣೆಯುವುದರಲ್ಲಿ, ಪರಿಹಾಸಯುಕ್ತವಾದ ಸಂದಿಗ್ಧ ಸನ್ನಿವೇಶಗಳನ್ನು ಸೃಷ್ಟಿಸುವುದರಲ್ಲಿ, ವಿರೋಧಾಭಾಸ ಅಲಂಕಾರದ ಮಾತಿನ ಚಟಾಕಿಗಳಲ್ಲಿ ಅದ್ವಿತೀಯ. 19ನೆಯ ಶತಕದ ಇತರ ನಾಟಕಕಾರರು ಸಂಗೀತವನ್ನು ಗೌಣವಾಗಿ ಬಳಸಿಕೊಳ್ಳುತ್ತಿದ್ದರು. ಪಾತ್ರ ಪೋಷಣೆಗೂ ಕಥಾಸಂವಿಧಾನಕ್ಕೂ ಅಭಿನ್ನವಾಗಿ

ಸೇರಿಕೊಂಡಂತೆ ಸಂಗೀತವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಮೊದಲಿಗರೆಂದರೆ ಗಿಲ್ಬರ್ಟ್ ಮತ್ತು ಸಲಿವನ್. ಕವಿ ಗಿಲ್ಬರ್ಟ್ ಬಳಸಿದ ಛಂದೋವೈಖರಿಯೇ ತನಗೆ ಇಂಥ ರಾಗ ಹೊಂದುತ್ತೆಂಬು ದನ್ನು ಸಲಿವನನಿಗೆ ಸೂಚನೆ ಕೊಡುವಷ್ಟು ಸಂಗೀತಗುಣವನ್ನು ಒಳಗೊಂಡಿರುತ್ತಿತ್ತಂತೆ ಗೀತ–ಸಂಗೀತ ಅಷ್ಟು ಮಧುರವಾಗಿ ಮೇಳವಿಸುತ್ತಿದ್ದುದರಿಂದಲೇ ನಾಟಕಗಳು ರಸಿಕರ ಮೆಚ್ಚುಗೆ ಪಡೆದವು. ಆಂಗ್ಲೋಸ್ಯಾಕ್ಸನ್ ಸಂಸ್ಕೃತಿಯ ಪರಂಪರೆಯಲ್ಲಿ ಬೆಳೆದುಬಂದ ಸಮಾಜಕ್ಕೆ ಈ ಇಬ್ಬರೂ ತಮ್ಮ ನಾಟಕಗಳ ಮೂಲಕ ಹೊಸ ನುಡಿಗಟ್ಟುಗಳನ್ನೂ ಪಾತ್ರಗಳನ್ನೂ ಹೊಸ ಹೊಸ ರಾಗಗಳನ್ನೂ ಕೊಟ್ಟರು. ಇವರ ಕೃತಿಗಳಲ್ಲಿ ಎಚ್. ಎಂ. ಎಸ್. ಪಿನಾಫೋರ್ ಮತ್ತು ದಿ ಮಿಕ್ಯಾಡೊ ಶ್ರೇಷ್ಠವಾದ ಗೀತನಾಟಕಗಳೆಂದು ಹೆಸರಾಗಿವೆ. ಮೊದಲನೆಯದು ನೌಕಾದಳವನ್ನು ಕುರಿತ ವಿಡಂಬನೆ. ಎರಡೂ ವಿಕ್ಟೋರಿಯ ಕಾಲದ ಸಾಮಾಜಿಕ ಶಿಷ್ಟಾಚಾರದ ಢಾಂಬಿಕತೆಯನ್ನು ಅತಿ ಆಡಂಬರ ದಿಂದ ಕೂಡಿದ ಅಪ್ರಾಮಣಿಕತೆಯನ್ನೂ ಕಟುವಾಗಿ ವಿಡಂಬಿಸುವ ನಾಟಕಗಳು. ಅಂದಿನಿಂದ ಇಂದಿನವರೆಗೂ ಈ ನಾಟಕಗಳು ಪ್ರದರ್ಶನವಾದಾಗಲೆಲ್ಲ ರಂಗಮಂದಿರ ತುಂಬ ಜನ ಕಿಕ್ಕಿರಿದು ನೋಡಿ ಆನಂದಿಸುವುದು ಪರಿಪಾಠವಾಗಿದೆ.

ಗಿಲ್ಬರ್ಟ್–ಸಲಿವನ್ ಜೋಡಿ ಮನೆಮಾತಾಯಿತು. ಇಬ್ಬರೂ ಪ್ರತಿಭಾವಂತರೇ. ವೈಯಕ್ತಿಕವಾಗಿ ಸ್ವತಂತ್ರವಾಗಿ ಇಬ್ಬರೂ ತಮ್ಮದೇ ಆದ ಶ್ರೇಷ್ಠಕೃತಿಗಳನ್ನು ರಚಿಸಿದವರೇ. ಆದರೆ ಜೊತೆಗೂಡಿ ರಚಿಸಿದ ಕೃತಿಗಳ ಅಸಾದರಣ ಪ್ರಕಾಶದಲ್ಲಿ ಅವೆಲ್ಲ ಮಸುಕಾಗಿ ಹೋದವು. 1890ರ ಅನಂತರ ಅವರ ಸ್ನೇಹದ ಹಾಲು ಒಡೆಯಿತು. ವೈಮನಸ್ಯ ಬೆಳೆದು ಕೆಲಕಾಲ ಇಬ್ಬರೂ ಬೇರೆಬೇರೆಯಾಗಿ ನಾಟಕಗಳನ್ನು ಬರೆಯ ತೊಡಗಿದರು. ಅವೆಲ್ಲ ಸಪ್ಪೆಯಾದವು. ಮತ್ತೆ ರಾಜಿ ಆಗಿ ಕೆಲವು ನಾಟಕಗಳನ್ನು ಜೊತೆಗೂಡಿ ಬರೆದರು. ಯುಟೋಪಿಯಾ ಅನ್‌ಲಿಮಿಟೆಡ್ (1893), ದಿ ಗ್ರ್ಯಾಂಡ್ ಡ್ಯೂಕ್ (1896) ಹಿಂದಿನ ನಾಟಕಗಳಷ್ಟು ಯಶಸ್ವಿಯಾಗಲಿಲ್ಲ.

ಗಿಲ್ಬರ್ಟ್‌ನಿಗೆ ವಿನೋದಶೀಲತೆ ದೈವದತ್ತವಾಗಿ ಬಂದ ಸ್ವಭಾವವಾಗಿತ್ತು. ಅಸಂಖ್ಯಾತ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸಿ ಅವರ ಮನಸ್ಸನ್ನು ಆತ ಉಲ್ಲಾಸಗೊಳಿಸಿದ. ಹಾಸ್ಯಪ್ರಕಾರಕ್ಕೆ ಅವನದೇ ಒಂದು ವಿಶಿಷ್ಟ ಕೊಡುಗೆ. ಅವನ ಹಾಸ್ಯ ತುಂಬ ಸೂಕ್ಷ್ಮ, ಮಾರ್ಮಿಕ, ಸರ್ವದಾ ನಿರ್ದುಷ್ಟವಾದ ಮನೋಧರ್ಮದಿಂದ ಕೂಡಿದುದು. ನಿರ್ಮಲವಾದ ಹಾಸ್ಯರಸಾಯನದಲ್ಲಿ ಹಿತವಾಗಿ ಬೆರೆತ ಸರಸವಾದ ಕಟಕಿಯ ಕಂಪು ಗಿಲ್ಬರ್ಟಿಯನ್ ಹಾಸ್ಯ ಎಂಬ ಹೊಸ ಹೆಸರನ್ನೇ ಸಂಪಾದಿಸಿತು.

1907ರಲ್ಲಿ ಚಕ್ರವರ್ತಿಯ ವರ್ಧಂತ್ಯುತ್ಸವ ಸಂದರ್ಭದಲ್ಲಿ ಗಿಲ್ಬರ್ಟ್‌ನಿಗೆ ನೈಟ್ ಹುಡ್ ಪ್ರಶಸ್ತಿಯನ್ನು ಕೊಡಲಾಯಿತು. ಯಶಸ್ಸಿನೊಂದಿಗೆ ಅಪಾರ ಹಣವೂ ಬಂದು ಗಿಲ್ಬರ್ಟ್ ಭಾರಿ ಶ್ರೀಮಂತನಾದ. ಭವ್ಯವಾದ ಗ್ಯಾರಿಕ್ ರಂಗಮಂದಿರವನ್ನು ಕಟ್ಟಿಸಿದ. ಹ್ಯಾರೋದಲ್ಲಿ ಸ್ವಂತ ವಾಸಕ್ಕಾಗಿ ಒಂದು ಸುಂದರವಾದ ಮನೆಯನ್ನೂ ಅದರ ಪಕ್ಕದಲ್ಲೇ ಅವನ ಮೆಚ್ಚಿನ ಹವ್ಯಾಸವಾದ ಜ್ಯೋತಿರ್ವಿಜ್ಞಾನದ ಅಧ್ಯಯನಕ್ಕಾಗಿ ಒಂದು ಪುಟ್ಟ ಖಗೋಳ ವೀಕ್ಷಣಾಲಯವನ್ನು ಕಟ್ಟಿಸಿಕೊಂಡ. ಮನೆಯ ಶ್ರೀಮಂತಿಕೆಗೆ ಶೋಭೆ ಎನಿಸುವಂಥ ಒಂದು ವಿಲಾಸಮಯವಾದ ಈಜುಕೊಳವೂ ಉದ್ಯಾನದಲ್ಲಿ ನಿರ್ಮಿತವಾಗಿತ್ತು. ತನಗೆ ಅತ್ಯಂತ ಪ್ರಿಯವಾದ ಆ ಕೊಳವೇ ಮುಂದೆ ತನಗೆ ಮೃತ್ಯುದ್ವಾರವಾಗುವುದೆಂಬುದನ್ನು ಅರಿಯದೆ ಮನೆಗೆ ಬಂದ ಸ್ನೇಹಿತರಿಗೂ ಅತಿಥಿಗಳಿಗೂ ಅದನ್ನು ತೋರಿಸುತ್ತ ಗಿಲ್ಬರ್ಟ್ ಹೆಮ್ಮೆ ಪಡುತ್ತಿದ್ದ.

ಒಂದು ಸಾರಿ ಅವನ ಅತಿಥಿಯಾಗಿ ಬಂದ ಮಹಿಳೆಯೊಬ್ಬಳು ಆ ಕೊಳದಲ್ಲಿ ಈಜುತ್ತಿರುವಾಗ ಪ್ರಮಾದವಶಾತ್ ಮುಳುಗುವಾಗ ಅಪಾಯದಲ್ಲಿರುವುದನ್ನು ನೋಡಿದ ಗಿಲ್ಬರ್ಟ್ ಆಕೆಯನ್ನು ರಕ್ಷಿಸಲು ನೀರಿನೊಳಕ್ಕೆ ದುಮುಕಿದ. ಆಕೆಯೇನೋ ಅವನ ಸಹಾಯದಿಂದ ಬದುಕಿದಳು. ಆದರೆ ಆತ ತನ್ನ ಪ್ರಾಣವನ್ನೇ ಉಳಿಸಿಕೊಳ್ಳಲಾರದೆ ಹೋದ. ನಿಪುಣ ಈಜುಗಾರನಾದರೂ ಉದ್ವೇಗದಿಂದಲೊ ದಣಿವಿನಿಂದಲೊ ಈಜಿ ದಡ ಸೇರಲು ಅಸಮರ್ಥನಾದ. 1911 ಮೇ 29ರಂದು ನೀರಿನಲ್ಲಿ ಮುಳುಗಿ ಪ್ರಾಣ ನೀಗಿದ. ಆಗಲೇ ಉಂಟಾದ ಹೃದಯಾಘಾತದಿಂದ ಹಾಗಾಗಿರಬಹುದು ಎಂದು ವೈದ್ಯರು ಶಂಕೆ ಪಟ್ಟರು. **(ಕೆ.ಬಿ.ಪಿ.)**

**ಗಿಲ್ಬಟ್, ಹಂಫ್ರಿ :** 1539–83. ಬ್ರಿಟಿಷ್ ಸೈನಿಕ. ನಾವಿಕ. 1539ರಲ್ಲಿ ಡಾರ್ಟ್‌ಮತ್ ಬಳಿಯ ಕಾಂಪ್ಟನಿನಲ್ಲಿ ಜನಿಸಿದ. ತಂದೆ ಆತೋ ಗಿಲ್ಬರ್ಟ್. ಸಾಹಸಿಯಾದ ಗಿಲ್ಬರ್ಟ್ ತನ್ನ ಜೀವಮಾನವನ್ನೆಲ್ಲ ವಸಾಹತು ಸ್ಥಾಪನೆಯ ಯೋಜನೆಗಳನ್ನು ರೂಪಿಸುವುದರಲ್ಲಿ ಮತ್ತು ಅವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಕಳೆದ. ಈಟನ್ ಮತ್ತು ಆಕ್ಸ್‌ಫರ್ಡ್‌ನಲ್ಲಿ ಯುದ್ಧತಂತ್ರ ಮತ್ತು ನಾವಿಕ ಕಲೆಯನ್ನ ಅಭ್ಯಸಿಸಿ 1544 ಅಥವಾ 1545 ರಲ್ಲಿ ರಾಜಕುಮಾರಿ ಎಲಿಜ಼ಬೆತಳ ಸೇವೆಗೆ ಸೇರಿಕೊಂಡ. 1563ರಲ್ಲಿ ಲಿ ಹಾವ್ರ್ ಮುತ್ತಿಗೆಯಲ್ಲಿ ಭಾಗವಹಿಸಿ ಗಾಯಗೊಂಡ.

ಗಿಲ್ಬರ್ಟನಿಗೆ ವಿಶೇಷ ಆಸಕ್ತಿಯಿದ್ದದ್ದು ಭೌಗೋಳಿಕ ಅನ್ವೇಷಣೆ ಮತ್ತು ಇಂಗ್ಲೆಂಡಿನ ಸಾಮ್ರಾಜ್ಯ ವಿಸ್ತರಣೆಯ ಯೋಜನೆಗಳಲ್ಲಿ. 1565–66ರಲ್ಲಿ ಆಂಟೋನಿ ಜೆಂಕಿನ್ಸನನೊಡ ಗೂಡಿ ಚೀನಕ್ಕೆ ಉತ್ತರಾಭಿಮುಖವಾದ ಮಾರ್ಗವೊಂದನ್ನು ಕಂಡು ಹಿಡಿಯುವ ಯೋಜನೆಗಳಲ್ಲಿ ಮಗ್ನನಾಗಿದ್ದ. ಅಲ್ಲದೆ ಆ ಬಗ್ಗೆ ಒಂದು ಗ್ರಂಥವನ್ನೇ ಬರೆದ. ತನ್ನ ಮೊದಲ ವೃತ್ತಿಯನ್ನು ಬಿಡಲಾರದೆ ಮಧ್ಯದಲ್ಲಿ ಅವನು ಕ್ಯಾಪ್ಟನ್ ಆಗಿ 1566ರಲ್ಲಿ ಐರ್ಲೆಂಡಿಗೆ ಹೋಗಿ ಆ ವರ್ಷದ ಕೊನೆಯಲ್ಲಿ ಹಿಂದಿರುಗಿದ. ಚೀನಕ್ಕೆ ವಾಯವ್ಯ ಮಾರ್ಗವನ್ನು ಕಂಡುಹಿಡಿಯುವ ಬಗ್ಗೆ ಪರಿಶೀಲನಾತ್ಮಕ ಪ್ರವಾಸವೊಂದರ ಯೋಜನೆಯನ್ನು ರೂಪಿಸಿದ. ಆದರೆ ಮಸ್ಕೊವಿ ಕಂಪೆನಿ ಈ ಯೋಜನೆಯನ್ನು ವಿರೋಧಿಸಿದ್ದರಿಂದ ಇದನ್ನು ಕೈಬಿಟ್ಟ.

ವಸಾಹತುಗಳನ್ನು ಸ್ಥಾಪಿಸುವ ಯೋಜನೆಗಳನ್ನು ಐರ್ಲೆಂಡಿನಲ್ಲಿ ಗಿಲ್ಬರ್ಟನೂ ಅವನ ಸಂಗಡಿಗರೂ ಮುಂದುವರಿಸಿದರು. ಐರ್ಲೆಂಡಿನ ಮನ್‌ಸ್ಟರ್ ದಂಗೆಯನ್ನು ಅಡಗಿಸುವ ಕಾರ್ಯಕ್ರಮದ ಹೊಣೆಹೊತ್ತು ಅದನ್ನು ಕೂಡ ಯಶಸ್ವಿಯಾಗಿ ನಿರ್ವಹಿಸಿದ. ಗಿಲ್ಬರ್ಟನ ಸಾಹಸಕಾರ್ಯಕ್ಕಾಗಿ ರಾಣಿ ಎಲಿಜ಼ಬೆತ್ ಇವನಿಗೆ 1570ರಲ್ಲಿ ನೈಟ್ ಪ್ರಶಸ್ತಿ ನೀಡಿದಳು. ಆದರೆ ಗಿಲ್ಬರ್ಟ್ ರೂಪಿಸಿದ ಯಾವ ವಸಾಹತು ಯೋಜನೆಗಳೂ ಯಶಸ್ವಿಯಾಗಿರಲಿಲ್ಲ.

ಗಿಲ್ಬರ್ಟ್ ರಾಜಕೀಯವನ್ನು ಪ್ರವೇಶಿಸಿ 1571ರಲ್ಲೂ 1581ರಲ್ಲೂ ಪ್ಲೈಮತ್ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಆಯ್ಕೆಹೊಂದಿದ. ನೆದರ್ಲೆಂಡಿನ ಜನ ಸ್ಪೇನಿನ ವಿರುದ್ಧ 1572ರಲ್ಲಿ ದಂಗೆಯೆದ್ದಾಗ ಗಿಲ್ಬರ್ಟ್ ಇಂಗ್ಲೆಂಡಿನ ಸ್ವೈಚ್ಛಿಕ ತಂಡವೊಂದರ ನಾಯಕನಾಗಿ ನೆದರ್ಲೆಂಡಿಗೆ ನೆರವು ನೀಡಿದ. ಅದರಲ್ಲಿ ಅವನು ಅಷ್ಟೇನೂ ಯಶಸ್ಸುಗಳಿಸಲಿಲ್ಲ. ಅಪರಾಧಿಗಳ ಪಾಲನೆಯ ಕ್ರಮವನ್ನು ಸುಧಾರಿಸುವ ಮತ್ತು ಲಂಡನಿನಲ್ಲಿ ಅದಕ್ಕಾಗಿ ಅಕಾಡೆಮಿಯನ್ನು ಸ್ಥಾಪಿಸುವ ಯೋಜನೆಯೊಂದನ್ನು 1573–78ರಲ್ಲಿ ರಚಿಸಿದ. 1575ರಲ್ಲಿ ಅವನು ಮತ್ತೇ ಚೀನಕ್ಕೆ ವಾಯವ್ಯ ದಿಕ್ಕಿನಿಂದ ಸಮುದ್ರ ಮಾರ್ಗ ಕಂಡು ಹಿಡಿಯುವ ಯೋಜನೆಯಲ್ಲಿ ಆಸಕ್ತಿ ತಳೆದ. ಈ ಯತ್ನದಲ್ಲಿ ಮಾರ್ಟಿ ಫ್ರಾಭಿಷರನಿಗೆ ಈತ ಪ್ರೋತ್ಸಾಹ ನೀಡಿದನಾದರೂ ಅದರಲ್ಲಿ ನೇರವಾಗಿ ಭಾಗವಹಿಸಲಿಲ್ಲ. ಇವನ ಗಮನ ಅಮೆರಿಕದ ಕಡೆಗೆ ಹರಿಯಿತು. ನ್ಯೂಫೌಂಡ್‌ಲೆಂಡಿನ ಫ್ರೆಂಚ್, ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಮತ್ಸ್ಯನೌಕೆಗಳನ್ನು ವಶಪಡಿಸಿಕೊಳ್ಳುವ, ಸಾಂತೊ ಡೊಮಿಂಗೋ ಮತ್ತು ಕ್ಯೂಬವನ್ನು ಆಕ್ರಮಿಸಿಕೊಳ್ಳುವ, ಅಮೆರಿಕದಿಂದ ಸ್ಪೇನಿಗೆ ಸಾಗುತ್ತಿದ್ದ ಬೆಳ್ಳಿಯನ್ನು ಲೂಟಿಮಾಡುವ ಯೋಜನೆಯೊಂದನ್ನು ಈತ ಪ್ರತಿಪಾದಿಸಿದ. ಯಾವ ಕ್ರೈಸ್ತದೊರೆ ಅಥವಾ ಜನಕ್ಕೂ ಸೇರದ ವಿಧರ್ಮೀಯರ ನೆಲವನ್ನು ಹಿಡಿದುಕೊಳ್ಳುವ ಅಧಿಕಾರವನ್ನು ರಾಣಿ ಇವನಿಗೆ 6 ವರ್ಷಗಳ ಅವಧಿಗೆ ನೀಡಿದಳು.

ದುರಾಶಾಪಿಡಿತನಾದ ಗಿಲ್ಬರ್ಟ್ ತನ್ನೆಲ್ಲ ಸಂಪತ್ತನ್ನೂ ವಿನಿಯೋಗಿಸಿ ಈ ಸಾಹಸಕೃತ್ಯದಲ್ಲಿ ತೊಡಗಿದ. ಇವನ ನೌಕಾಪಡೆ ಡಾರ್ಟ್‌ಮತ್‌ನಿಂದ ಹೊರಟಿತು. ಆದರೆ ಇವನಿಗೆ ಯಶಸ್ಸು ದೊರಕಲಿಲ್ಲ. ಇವನ ಕೈಕೆಳಗಿನವರು ಅಶಿಸ್ತಿನಿಂದ ವರ್ತಿಸಿದರು.

1583ರಲ್ಲಿ ಗಿಲ್ಬರ್ಟ್ ಮತ್ತೊಮ್ಮೆ ಇಂಥ ಸಾಹಸ ಕಾರ್ಯದಲ್ಲಿ ತೊಡಗಿದ. ಹಾಗೂ ಹೀಗೂ ಹಣ ಸಂಗ್ರಹಿಸಿ ಮತ್ತೆ ಹೊರಟ. ಉತ್ತರ ಅಮೆರಿಕದ ನ್ಯೂಫೌಂಡ್ ಲೆಂಡನ್ನು ರಾಣಿಯ ಹೆಸರಿನಲ್ಲಿ ವಶಪಡಿಕೊಂಡ. ಗಿಲ್ಬರ್ಟ್ ಸ್ವದೇಶಾಭಿಮುಖವಾಗಿ ಹೊರಟ. ಆದರೆ ಮಧ್ಯಮಾರ್ಗದಲ್ಲಿ ಅವನ ದೋಣಿ ಬಿರುಗಾಳಿಗೆ ಸಿಕ್ಕಿ ಮುಳುಗಿತು. ಆಗ ಗಿಲ್ಬರ್ಟ್ ಶಾಂತವಾಗಿ ಕುಳಿತು ಪುಸ್ತಕವನ್ನು ಓದುವುದರಲ್ಲಿ ಮಗ್ನನಾಗಿದ್ದನೆಂದೂ ಭೂಮಿಯಿಂದ ಸ್ವರ್ಗಕ್ಕೆ ಎಷ್ಟು ದೂರವೋ ಸಮುದ್ರದಿಂದಲೂ ಅಷ್ಟೇ ದೂರವೆಂದು ಕೂಗಿ ಹೇಳಿದನೆಂದೂ ಬಳಿಯ ಇನ್ನೊಂದು ಹಡಗಿನ ಕ್ಯಾಪ್ಟನನಾಗಿದ್ದ ಹೇಯ್ಸ್ ಹೇಳಿದ್ದಾನೆ. **(ಕೆ.ಟಿ.ಆರ್.)**

**ಗಿಲ್ಲೋಮೆ ಡುಪ್ಯೀಟ್ರಾನ್ :** 1777–1835. ಫ್ರಾನ್ಸಿನ ಶಸ್ತ್ರವೈದ್ಯ ಮತ್ತು ಅಂಗರಚನಾಶಾಸ್ತ್ರಜ್ಞ. ಶಸ್ತ್ರಕ್ರಿಯಾವಿಧಾನಗಳನ್ನು ಸುಧಾರಿಸಿದ್ದು ಮಾತ್ರವಲ್ಲ ಹೊಸ ಉಪಕರಣಗಳನ್ನು ಕಂಡುಹಿಡಿದ. ಡುಪ್ಯೀಟ್ರಾನ್ ತೀರ ಬಡ ಕುಟುಂಬದಲ್ಲಿ 1777ರ ಅಕ್ಟೋಬರ್ 5ರಂದು ಜನಿಸಿದ. ಸ್ವಂತ ಪರಿಶ್ರಮ ಸಾಮರ್ಥ್ಯಗಳಿಂದ ಮುಂದೆ ಬಂದು ವೈದ್ಯಶಾಸ್ತ್ರವನ್ನು ಅಭ್ಯಾಸಿಸಿ 1802ರಲ್ಲಿ ಡಿ ಯು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಕನಾದ. ಶಸ್ತ್ರಚಿಕಿತ್ಸೆಯಲ್ಲಿ ಆಗಾಧ ಚಾತುರ್ಯವನ್ನು ಪ್ರದರ್ಶಿಸಿ ಚಿಕಿತ್ಸೆಯಲ್ಲಿ ಅನೇಕ ಹೊಸತಂತ್ರಗಳನ್ನೂ ಉಪಕರಣಗಳನ್ನೂ ಶೋಧಿಸಿದ. ಮೂವತ್ತೆಂಟನೆಯ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸ ಶಾಸ್ತ್ರದ ಪ್ರಾಧ್ಯಾಪಕನಾದ. ಈತ ನೀಡುತ್ತಿದ್ದ ಪಾಂಡಿತ್ಯಪೂರ್ಣ ಉಪನ್ಯಾಸಗಳು ಮತ್ತು ರೋಗನಿದಾನ ಹಾಗೂ ಚಿಕಿತ್ಸೆಯಲ್ಲಿ ತೋರುತ್ತಿದ್ದ ಕಾರ್ಯಕೌಶಲ ಅನೇಕ ರಾಷ್ಟ್ರಗಳಿಂದ ವಿದ್ಯಾರ್ಥಿಗಳನ್ನು ಇವನೆಡೆಗೆ ಆಕರ್ಷಿಸಿದವು.

ಈತನ ಶಸ್ತ್ರಕೌಶಲಕ್ಕೆ ಸರ್ಕಾರ ಮಾನ್ಯತೆಯನ್ನು ನೀಡಿತು. 18ನೆಯ ಲ್ಯೂಯಿ ಮತ್ತು ಹತ್ತನೆಯ ಚಾರಲ್ಸ್ ದೊರೆಗಳಿಗೆ ಡುಪ್ಯೀಟ್ರಾನನು ಶಸ್ತ್ರಚಿಕಿತ್ಸಕನಾಗಿ ನೇಮಕಗೊಂಡಿದ್ದ. ರಕ್ತನಾಳ ರೋಗಗಳು, ಕಾಳಗದಲ್ಲಿ ಉಂಟಾದ ಹುಣ್ಣುಗಳು, ಮುಂದೆ ಕಣಕಾಲ, ಹೊರ ಎಲುಬು ಶಸ್ತ್ರಚಿಕಿತ್ಸೆ – ಇವುಗಳಲ್ಲಿ ಹೊಸ ವಿಧಾನಗಳನ್ನು ಬಳಕೆಗೆ ತಂದ. ಅಂಗೈ ತಂತುಕಟ್ಟಿನ ಬಿಗಿತದಿಂದ ಕೈಬೆರಳುಗಳು ಹಿಂದಕ್ಕೆಳೆಯಲ್ಪಟ್ಟು ಉಂಟಾದ ವಿಕಲತೆಯನ್ನು ಅಭ್ಯಾಸಿಸಿ, ಆ ತಂತುಕಟ್ಟಿನ ಅಡ್ಡಕೊಯ್ತ ಬೆರಳುಗಳ ಸರಾಗ ಚಲನೆಗೆ ಸಹಾಯಕವಾಗು ವುದೆಂದು ತೋರಿಸಿದ; ಅಂಗೈಯಲ್ಲಿ ಉಂಟಾಗುವ ಆ ತೆರನಾದ ಎಳೆದುಕೊಳ್ಳುವಿಕೆಗೆ ಡುಪ್ಯೀಟ್ರಾನನ ಎಳೆದುಕೊಳ್ಳುವಿಕೆ ಎಂದೇ ಹೆಸರಿಡಲಾಗಿದೆ. ಡುಪ್ಯೀಟ್ರಾನನು ಬಲು ಧೈರ್ಯವಂತನಾದ ಶಸ್ತ್ರಕಾರ್ಯತಜ್ಞ. ಎಂಥ ಆತಂಕ ಸನ್ನಿವೇಶಗಳಲ್ಲೂ ಮನಸ್ಸಿನ ಸ್ಥೈರ್ಯವನ್ನು ಕೆಡಿಸಿ ಕೊಳ್ಳುತ್ತಿರಲಿಲ್ಲ. ಶಸ್ತ್ರಕ್ರಿಯೆಯಿಂದ ಕೆಳದವಡೆಯನ್ನು ಪೂರ್ತಿಯಾಗಿ ತೆಗೆದು ಹಾಕಿದ ಮೊದಲಿಗ (1812). ಏಡಿಗಂತಿ ಚಿಕಿತ್ಸೆಗೆ ಗರ್ಭಕೋಶದ ಕಂಠವನ್ನು ಶಸ್ತ್ರಕ್ರಿಯೆಯಿಂದ ಪ್ರಥಮವಾಗಿ ತೆಗೆದು ಹಾಕಿದ್ದೂ ಇವನೇ. ತೊಡೆ ಕೀಲಿನ ಆಜನ್ಮ ಸರಿತವನ್ನು (ಕನ್‌ಜೆನಿಟಲ್ ಡಿಸ್‌ಲೊಕೇಷನ್ ಆಫ್ ದಿ ಹಿಪ್) ವಿವರವಾಗಿ, ವೈಜ್ಞಾನಿಕವಾಗಿ ಮೊದಲು ವಿವರಿಸಿದ್ದೂ ಇವನೇ (1826). 1835ರ ಫೆಬ್ರವರಿ 8ರಂದು ಪ್ಯಾರಿಸಿನಲ್ಲಿ ನಿಧನನಾದ. (ಪಿ.ಎಸ್.ಎಸ್.)

**ಗಿಸ್ಸಿಂಗ್, ಜಾರ್ಜ್ ರಾಬರ್ಟ್ :** 1857–1903. ಇಂಗ್ಲಿಷ್ ಕಾದಂಬರಿಕಾರ. ಉತ್ತರ ಇಂಗ್ಲೆಂಡಿನ ಯಾರ್ಕ್‌ಷೈರ್‌ನ ವೇಕ್‌ಫೀಲ್ಡ್ ಎಂಬಲ್ಲಿ ಮಧ್ಯಮವರ್ಗದ ಮನೆತನವೊಂದರಲ್ಲಿ 1857ರ ನವೆಂಬರ್ 22ರಂದು ಹುಟ್ಟಿದ. ತಂದೆ ಔಷಧಿ ಮುಂತಾದ ರಾಸಾಯನಿಕ ವಸ್ತುಗಳ ವ್ಯಾಪಾರಿ. ಸಾಹಿತ್ಯದಲ್ಲೂ ಆಸಕ್ತಿಯಿತ್ತು. ಮ್ಯಾಂಚೆಸ್ಟರಿನ ಓವೆನ್ಸ್ ಕಾಲೇಜಿನಲ್ಲಿ ಓದಿ ಲಂಡನ್ ವಿಶ್ವವಿದ್ಯಾನಿಲಯದ ಪದವೀಧರನಾದ. ಶಾಲೆಯಲ್ಲಿ, ಕಾಲೇಜಿನಲ್ಲಿ ತುಂಬ ಬುದ್ಧಿವಂತನಾದ ವಿದ್ಯಾರ್ಥಿಯೆನಿಸಿಕೊಂಡಿದ್ದ. ಗ್ರೀಕ್ ಮತ್ತು ಲ್ಯಾಟಿನ್ ಭಾಷಾಸಾಹಿತ್ಯಗಳಲ್ಲಿ ಶ್ರೇಷ್ಠವರ್ಗದಲ್ಲಿ ಉತ್ತೀರ್ಣನಾಗಿ ವಿದ್ವತ್‌ವೇತನವನ್ನೂ ಬಹುಮಾನಗಳನ್ನೂ ಪಡೆದ. ಆಗಿನಿಂದಲೇ ಸಾಹಿತ್ಯದಲ್ಲಿ ಅಪರಿಮಿತವಾದ ಶ್ರದ್ಧೆಯನ್ನು ಬೆಳೆಸಿಕೊಂಡ. ಮ್ಯಾಂಚೆಸ್ಟರಿನ ಒಬ್ಬ ವೇಶ್ಯಾತರುಣಿಯನ್ನು ಉದ್ಧಾರಮಾಡುವ ಆದರ್ಶಕ್ಕಾಗಿ, ಕಳ್ಳತನ ಮಾಡಿ ಸಿಕ್ಕಿಕೊಂಡು ತನ್ನ ಉನ್ನತ ವ್ಯಾಸಂಗವನ್ನೇ ಈತ ಬಲಿಕೊಟ್ಟುದನ್ನು ಕಂಡಾಗ ಇವನ ವಿಷಯದಲ್ಲಿ ಭರವಸೆಯಿಟ್ಟು ಕೊಂಡವರಿಗೆ ಬಹಳ ನಿರಾಸೆಯಾಯಿತು. ಆ ವೇಶ್ಯೆಯನ್ನೇ ಮದುವೆಯಾಗಿ ಸಂಸಾರವನ್ನಾರಂಭಿಸಿದ. ಮೊದಲು ಗುಮಾಸ್ತನಾದ. ಅನಂತರ ಶಾಲಾ ಅಧ್ಯಾಪಕನಾದ. ಜೀವನ ನಡೆಸುವುದು ದುರ್ಭರವಾಗಿ ಅಮೆರಿಕಕ್ಕೆ ವಲಸೆ ಹೋಗಿ ಬಾಸ್ಟನ್ ನಗರದಲ್ಲಿ ಗ್ಯಾಸ್ ಫಿಟ್ಟರ್ ಆಗಿ ಕೆಲಸ ಮಾಡಿದ. ಷಿಕಾಗೊ ನಗರಕ್ಕೆ ಹೋಗಿ ಅಲ್ಲಿನ ಟ್ರಿಬ್ಯೂನ್ ಪತ್ರಿಕೆಗೆ ಸಣ್ಣಕತೆಗಳನ್ನು ಬರೆದುಕೊಟ್ಟ. ಅದರಿಂದ ಸಾಕಷ್ಟು ಹಣ ಬರಲಿಲ್ಲ. ಬಡತನದ ಬೇಗೆ ಹೆಚ್ಚಾಯಿತು. ಒಪ್ಪೊತ್ತಿನ ಊಟಕ್ಕೂ ಗತಿ ಇಲ್ಲದ ಹಾಗಾಯಿತು. ಆಗಿನ ಬಡತನದ ಬವಣೆ, ಹೊಟ್ಟೆಗಿಲ್ಲದೆ ನರಳಿದ್ದು–ಮುಂತಾದ ಅನುಭವಗಳನ್ನೆಲ್ಲ ಮುಂದೆ 1891ರಲ್ಲಿ ಬರೆದ ನ್ಯೂ ಗ್ರಬ್ ಸ್ಟ್ರೀಟ್ ಎಂಬ ಕಾದಂಬರಿಯಲ್ಲಿ ಈತ ವ್ಯಕ್ತಗೊಳಿಸಿದ್ದಾನೆ. ಇದರಲ್ಲಿ ನೀತಿ ನಿಯಮವಿಲ್ಲದ ಪ್ರಕಾಶಕರನ್ನೂ ಶತಮೂರ್ಖರಾದ ವಾಚಕ ಮಹಾಶಯರನ್ನೂ ತರಾಟೆಗೆ ತೆಗೆದುಕೊಂಡಿದ್ದಾನೆ. ಈತನ ಜೀವನದ ಉದ್ದಕ್ಕೂ ಏಳರ ಶನಿ ಅಂಟಿಕೊಂಡಿದ್ದ ಹಾಗೆ ತೋರುತ್ತದೆ. ಎಲ್ಲೆಲ್ಲೂ ಸೋಲು, ನಿರಾಶೆ, ಕಷ್ಟಕಾರ್ಪಣ್ಯಗಳೇ ಒದಗಿದ್ದರ ಪರಿಣಾಮವಾಗಿ ಈತ ಬರೆದ ಕಾದಂಬರಿಗಳಲ್ಲೆಲ್ಲ ನೈರಾಶ್ಯ ಮನೋಭಾವ, ಉತ್ಸಾಹೀನತೆ, ನೊಂದುಬೆಂದ ಕಂಗೆಟ್ಟ ಮುಖ, ಕಷ್ಟದ ಕಾರ್ಮೋಡ–ಇವೇ ಕಾಣುತ್ತವೆ.

1878ರಲ್ಲಿ ಗಿಸ್ಸಿಂಗ್ ಇಂಗ್ಲೆಂಡಿಗೆ ಹಿಂತಿರುಗಿದ. ಆಗ ಬರೆದ ಇವನ ಪ್ರಥಮ ಕಾದಂಬರಿಯನ್ನು ಪ್ರಕಟಿಸಲು ಯಾವ ಪ್ರಕಾಶಕನೂ ಧೈರ್ಯ ಮಾಡಲಿಲ್ಲ. ಅದರ ಹಸ್ತಪ್ರತಿ ಅಲ್ಲಿ ಬಿದ್ದು ಇಲ್ಲಿ ಬಿದ್ದು ಕಳೆದೇ ಹೋಯಿತು. ತೀವ್ರ ನಿರಾಶೆಯಲ್ಲಿ ಸಿಕ್ಕು ಹೀನ ಭ್ರಷ್ಟಚಾರಕ್ಕೆ ಇಳಿಯುವ ಅಪಾಯದಿಂದ ಈತನನ್ನು ಕೆಲವು ಮಿತ್ರರು ತಪ್ಪಿಸಿ ಇವನ ಲೇಖನ ವ್ಯವಸಾಯವನ್ನು ಪ್ರೋತ್ಸಾಹಿಸಿದರು. 1880ರಲ್ಲಿ ವರ್ಕರ್ಸ್ ಇನ್ ಡಾನ್ ಎಂಬ ಕಾದಂಬರಿಯನ್ನು ಬರೆದು, ಅಲ್ಲಿ ಇಲ್ಲಿ ದುಡಿದು ಉಳಿತಾಯ ಮಾಡಿದ ಹಣ ಹಾಕಿ ತಾನೇ ಪ್ರಕಟಿಸಿದ. ಪ್ರತಿಗಳು ಖರ್ಚಾಗುವುದೇ ಕಷ್ಟವಾಯಿತು. ಮತ್ತೆ ಮಿತ್ರರು ನೆರವಿಗೆ ಬಂದುದರಿಂದ ನಿರಾಶೆಯಿಂದ ಚೇತರಿಸಿಕೊಂಡು ದಿ ಅನ್‌ಕ್ಲ್ಯಾಸ್ಡ್ (1884) ಮತ್ತು ಇಸಾಬೆಲ್ ಕ್ಲ್ಯಾರೆಂಡನ್ (1886) ಎಂಬೆರಡು ಕಾದಂಬರಿ ಗಳನ್ನು ಬರೆದು ಪ್ರಕಾಶಕರ ಸಹಾಯದಿಂದ ಪ್ರಕಟಿಸಿದ. ಮತ್ತೊಂದು ಕಾದಂಬರಿ ಡಿಮೋಸ್(1886) ಮೊಟ್ಟಮೊದಲಿಗೆ ಯಶಸ್ವಿಯಾಗಿ ಹೆಸರು ತಂದಿತು. ದಿ ಅನ್‌ಕ್ಲ್ಯಾಸ್ಡ್ ಕಾದಂಬರಿ ವೇಶ್ಯಾ ಸಮಸ್ಯೆಯನ್ನು ಕುರಿತದ್ದು. ಡಿಮೋಸ್ ಕಾರ್ಮಿಕರ ಸಾಮಾಜಿಕ ಹೋರಾಟದ ಅಪ್ರಿಯ ಸತ್ಯ ಚಿತ್ರವನ್ನು ಕುರಿತದ್ದು. 1887 ರಲ್ಲಿ ಪ್ರಕಟವಾದ ಥೈರ್ಝಾ ಕಾದಂಬರಿ ಲಂಡನ್ನಿನ ಬಡಹುಡುಗಿಯೊಬ್ಬಳ ದುಡಿತದ ದಾರುಣ ಕತೆ. ಈ ಎರಡೂ ಕಾದಂಬರಿಗಳಲ್ಲಿ ಬಡತನದಿಂದಾಗುವ ಮಾನವನ ಅವನತಿಯನ್ನು ಕಾಣಬಹುದು. 1884 ರಿಂದ 1904ರ ವರೆಗೆ ಸರಾಸರಿ ವರ್ಷಕೊಂದು ಕಾದಂಬರಿಯಂತೆ ಹಲವು ಕಾದಂಬರಿಗಳನ್ನು ಈತ ಬರೆದ. ಒಟ್ಟು ಈತ ಬರೆದ ಕಾದಂಬರಿಗಳು 23. ದೀನದಲಿತರು ವಾಸಿಸುವ ಕೊಳಚೆ ಪ್ರದೇಶದ ವಾಸ್ತವಕತೆ ಹೇಳುವ ನೆದರ್ ವರ್ಲ್ಡ್ (1889) ಸಾಹಿತಿಯಾಗಿ ತಾನು ಅನುಭವಿಸಿದ ಬವಣೆಗಳನ್ನು ಹೇಳುತ್ತದೆ. ಬಡವರ ಬಗ್ಗೆ ಈತನಿಗೆ ಅನುಕಂಪವಿಲ್ಲ. ಇಂದಲ್ಲ ನಾಳೆ ಸಮಾಜ ಸುಧಾರಣೆ ಆದಿತೆಂಬ ಆಶಾವಾದವಿಲ್ಲ. ಈತನ ಎಲ್ಲ ಕತೆಗಳಲ್ಲೂ ವಾಸ್ತವ ಜೀವನದ ವ್ಯಥೆಯೇ ಹಬ್ಬಿದೆ. ಪ್ರೀತಿ–ಮರುಕ ಮುಂತಾದ ಯಾವ ಭಾವನೆಗಳೂ ಇಲ್ಲ; ನಗು ಇಲ್ಲ; ಆಸೆ ಭರವಸೆಗಳಿಲ್ಲ.

ಇವನ ಕಾದಂಬರಿಗಳಲ್ಲಿ 1888ರಲ್ಲಿ ಪ್ರಕಟವಾದ ಎ ಲೈಫ್ಸ್ ಮಾರ್ನಿಂಗ್ ಹೆಚ್ಚು ಪ್ರಸನ್ನವಾಗಿಯೂ ಲಘುವಾಗಿಯೂ ಇದೆ. ದಿ ನೆದರ್ ವರ್ಲ್ಡ್. ದಿ ಆಡ್ ವಿಮೆನ್ (1893) ಮತ್ತು ಇನ್ ದಿ ಈಯರ್ ಆಫ್ ಜ್ಯೂಬಿಲಿ (1894)– ಇವು ಇವನ ಶ್ರೇಷ್ಠ ಕಾದಂಬರಿಗಳೆನಿಸಿವೆ.

ಕಾದಂಬರಿಗಳಲ್ಲದೆ ದಿ ಪ್ರೈವೇಟ್ ಪೇಪರ್ಸ್ ಆಫ್ ಹೆನ್ರಿ ರೈಕ್ರ್ಯಾಫ್ಟ್ ಎಂಬ ಆತ್ಮೀಯ ಶೈಲಿಯ ಆಹ್ಲಾದಕರವಾದ ಪ್ರಬಂಧಗಳ ಸಂಕಲನವನ್ನೂ (1903) ಚಾರ್ಲ್ಸ್ ಡಿಕನ್ಸನ ಸಾಹಿತ್ಯವನ್ನು ಕುರಿತ ಅತ್ಯುತ್ತಮವಾದ ಒಂದು ವಿಮರ್ಶಾತ್ಮಕ ಸಮೀಕ್ಷಾಗ್ರಂಥವನ್ನೂ (1898) ಈತ ಬರೆದಿದ್ದಾನೆ.

ಗಿಸ್ಸಿಂಗ್ ಆದರ್ಶ ಮನೋಭಾವದಿಂದ ಆದ ಮದುವೆ ಸುಖದಾಂಪತ್ಯವನ್ನು ತರಲಿಲ್ಲ. ಇಂಗ್ಲೆಂಡಿಗೆ ಹಿಂತಿರುಗಿದ ಮೇಲೆ, ತನ್ನ ಸರ್ವಸ್ವವನ್ನೂ ತ್ಯಾಗಮಾಡಿ ಮದುವೆಯಾದ ಆ ವೇಶ್ಯಾ ತರುಣಿಯೊಡನೆ ಬಾಳನ್ನು ನಡೆಸಲು ಸಾಧ್ಯವಿಲ್ಲವೆಂಬ ಕಟು ನಿರ್ಧಾರಕ್ಕೆ ಬಂದು ವಿವಾಹ ವಿಚ್ಛೇದನ ಮಾಡಿಕೊಂಡ. ಕೆಲವು ಕಾಲಾ ನಂತರ ಆದ ಮತ್ತೊಂದು ಮದುವೆಯೂ ಶಾಪವಾಗಿ ಪರಿಣಮಿಸಿತು. ಬಾಳಿನ ಉದ್ದಕ್ಕೂ ಕಟುವಾದ ಅನುಭವಗಳನ್ನೆ ಕಂಡ ಈತ ಸುಖದ ಹೊಂಬಿಸಲನ್ನು ಕಂಡದ್ದು ಕಡೆಯ ಕಾಲದಲ್ಲಿ. ದಕ್ಷಿಣ ಫ್ರಾನ್ಸಿಗೆ ಹೋಗಿ ಅಲ್ಲಿ ನೆಲಸಿದ ಮೇಲೆ ಹೊಟ್ಟೆ ಬಟ್ಟೆಗಳ ತಾಪತ್ರಯವಿರಲಿಲ್ಲ. ತನ್ನ ಮನಸ್ಸನ್ನರಿತು ನಡೆದುಕೊಳ್ಳುವ ಸುಸಂಸ್ಕೃತ ಫ್ರೆಂಚ್ ಮಹಿಳೆಯೊಬ್ಬಳ ಸಖ್ಯದಲ್ಲಿ ದಿನಗಳು ಮಧುರವಾಗಿ ಕಳೆದವು. ಆ ದಿನಗಳಲ್ಲೇ ದಿ ಐಯೊನಿಯನ್ ಸೀಸ್ ಎಂಬ ಒಂದು ಸೊಗಸಾದ ಪ್ರವಾಸ ಕಥನವನ್ನು ಬರೆದ. 1904ರಲ್ಲಿ ವೆರಾನಿಲ್ಡಾ ಎಂಬ ರೋಮನ್ ಇತಿಹಾಸದ ವಸ್ತುವೊಂದನ್ನು ಕುರಿತ ಕಾದಂಬರಿಯನ್ನು ಬರೆಯಲು ಆರಂಭಿಸಿದ. ಆದರೆ ಅದು ಪೂರ್ಣವಾಗಲಿಲ್ಲ. ದಕ್ಷಿಣ ಫ್ರಾನ್ಸಿನ ಸೇಂಟ್ ಜೀನ್ ಡಿ ಲುಜ಼್ ಎಂಬಲ್ಲಿ 1903ರ ಡಿಸೆಂಬರ್ 28 ರಂದು ಕೊನೆಯುಸಿರೆಳೆದ. ಈತನ ಕಾದಂಬರಿಗಳು ಸ್ವರೂಪದಲ್ಲಿ ವಿಕ್ಟೋರಿಯನ್ ಸಾಹಿತ್ಯ ಮಾದರಿಯಂತೆ ಇದ್ದರೂ ವಸ್ತುವಿನಲ್ಲಾಗಲಿ ಮನೋಧರ್ಮದಲ್ಲಾಗಲೀ ಹಾಗಿಲ್ಲ. ಸಾಮಾನ್ಯವಾಗಿ ಈತನ ಎಲ್ಲ ಕಾದಂಬರಿಗಳಲ್ಲೂ ವಿಷಾದದ ಛಾಯೆಯ ತುಂಬಿದೆ. ತುಂಬ ಬುದ್ಧಿವಂತನೂ ಪ್ರತಿಭಾಶಾಲಿಯೂ ಆಗಿದ್ದ ಈತ ತನ್ನ ಜೀವನದಲ್ಲಿ ಕೊಂಚ ಉತ್ತಮವಾದ ಸನ್ನಿವೇಶದಲ್ಲಿ ಇದ್ದಿದ್ದರೆ ಪ್ರಥಮ ದರ್ಜೆಯ ಕಾದಂಬರಿಕಾರನೇ ಆಗುತ್ತಿದ್ದನೇನೋ. ಜೋಲಾ ಮುಂತಾದ ಫ್ರೆಂಚ್ ನಿಸರ್ಗವಾದಿಗಳ ಪ್ರಭಾವ ಈತನ ಮೇಲೆ ತುಂಬ ಬಿದ್ದಿರುವುದು ಈತನ ಕತೆಗಳ ವಾಸ್ತವ ಚಿತ್ರಣಗಳಲ್ಲೆಲ್ಲ ಕಂಡುಬರುತ್ತದೆ.

ಹೆನ್ರಿ ಜೇಮ್ಸ್. ಎಚ್. ಜಿ. ವೆಲ್ಸ್, ವರ್ಜೀನಿಯ ವುಲ್ಫ್ ಮೊದಲಾದ ಹೆಸರಾಂತ ಶ್ರೇಷ್ಠ ಕಾದಂಬರಿಕಾರರು ಈತ ಒಬ್ಬ ಉತ್ತಮ ಕಾದಂಬರಿಕಾರನೆಂದು ಪ್ರಶಂಸಿಸಿದ್ದಾರೆ. (ಕೆ.ಬಿ.ಪಿ.)

**ಗಿಳಿ :** ಸಿಟಾಸಿಫಾರ್ಮೀಸ್ ಗಣದ ಸಿಟಾಸಿಡೀ ಕುಟುಂಬಕ್ಕೆ ಸೇರಿದ ಸಿಟಾಕ್ಯುಲ ಜಾತಿಯ ವಿವಿಧ ಪ್ರಭೇದಗಳಿಗಿರುವ ಸಾಮಾನ್ಯ ಹೆಸರು (ಪ್ಯಾರೆಟ್, ಪ್ಯಾರಕೀಟ್). ಭಾರತದಲ್ಲಿ ಈ ಜಾತಿಯ *ಯೂಪ್ಯಾಟ್ರಿಯ, ಕ್ರಾಮೆರಿ* ಮತ್ತು *ಸಯಾನೊಸಿಫ್ಯಾಲ*

ಎಂಬ ಮೂರು ಪ್ರಭೇದಗಳು ಕಂಡುಬರುತ್ತವೆ. ಅಲ್ಲದೆ ಗಿಳಿಗಳ ಕುಟುಂಬದಲ್ಲಿ ಗಿಳಿಗಳನ್ನೇ ಹೋಲುವ ಕಾಕಟೂ, ಕಾಕಟೀಲ್, ಲೋರಿಸ್, ಲೋರಿಕೀಟ್, ಮಕಾವ್, ಬಡ್ಜರಿಗಾರ್, ಕಿಯಾ, ಒಲವಿನ ಹಕ್ಕಿಗಳು (ಲವ್ ಬರ್ಡ್ಸ್) ಮುಂತಾದವೂ ಸೇರಿವೆಯಾದ್ದರಿಂದ ಒಟ್ಟಾಗಿ ಇವನ್ನೂ ಗಿಳಿಗಳೆಂದು ನಿರ್ದೇಶಿಸುವುದುಂಟು. ಮೈ ಬಣ್ಣದ ಬೆಡಗಿಗೂ ಮನುಷ್ಯನ ಧ್ವನಿಯನ್ನು ಅನುಕರಿಸುವ ಅಸಾಧಾರಣ ಶಕ್ತಿಗೂ ಹೆಸರಾಗಿ ರುವ ಇವನ್ನು ಬಹುಪ್ರಾಚೀನ ಕಾಲದಿಂದಲೂ ಮಾನವ ಸಾಕುತ್ತಿದ್ದಾನೆ. ಇವನ್ನು ಸಾಕುವುದು ಸುಲಭವೂ ಹೌದು. ಗಿಳಿಯನ್ನು ಗಿಣಿ, ಪಂಡಿತವಕ್ಕಿ, ಕನ್ನಡವಕ್ಕಿ ಎಂದೂ ಕೀರ, ಶುಕ ಎಂದೂ ಕವಿಗಳು ಕರೆದಿದ್ದಾರೆ. ಪುರುಳಿ ಎಂಬುದು ಹೆಣ್ಣು ಗಿಳಿಯ ಹೆಸರು. ಗಿಳಿ ಬಹುಹಿಂದಿನಿಂದಲೂ ಕವಿಗಳಿಗೆ, ರಸಿಕರಿಗೆ ಬಹು ಮೆಚ್ಚಿನ ಹಕ್ಕಿಯಾಗಿದೆ.

ಗಿಳಿ ಎಲ್ಲರಿಗೂ ಪರಿಚಿತವಾದ ಪಕ್ಷಿ. ದೊಡ್ಡ ತಲೆ, ಮೋಟುಕತ್ತು, ವಿಶಿಷ್ಟವಾದ ಕೊಕ್ಕೆಯಂತೆ ಬಾಗಿದ, ಬಲಯುತವಾದ ಹಾಗೂ ಕೆಂಪು ಬಣ್ಣದ ಕೊಕ್ಕು, ಹಸಿರು ಮೈಬಣ್ಣ, ಚೂಪು ಬಾಲ ಇವೆಲ್ಲ ಗಿಳಿಯ ಪ್ರಮುಖ ಲಕ್ಷಣಗಳು. ಗಿಳಿಯ ಇನ್ನೊಂದು ಮುಖ್ಯ ಲಕ್ಷಣ ಅದರ ಕಾಲು. ಕಾಲಿನ 4 ಬೆರಳುಗಳಲ್ಲಿ ಎರಡು ಹಿಂದಕ್ಕೂ ಎರಡು ಮುಂದಕ್ಕೂ ಬಾಗಿವೆ. ಇದರಿಂದ ಗಿಳಿ ಮರದ ರೆಂಬೆಗಳನ್ನು ಹಿಡಿದುಕೊಂಡು ಚಲಿಸಬಲ್ಲುದು. ಅಲ್ಲದೆ ಆಹಾರವನ್ನು ಹಿಡಿದುಕೊಂಡು ಬಾಯಿಗೆ ಸಾಗಿಸುವ ಸೌಲಭ್ಯವೂ ಗಿಳಿಗೆ ಇದರಿಂದ ದೊರೆತಿದೆ. ಇದು ಬೇರಾವ ಹಕ್ಕಿಗಳಲ್ಲೂ ಇಲ್ಲ. ಇದೊಂದು ಜೀವಿಕಾಸದ ಪ್ರಕ್ರಿಯೆ. ಕೊಕ್ಕಿನ ಬುಡದಲ್ಲಿ ಸೆರೆ ಎಂಬ ಅಗಲವಾದ ಭಾಗವಿದೆ. ಇದರ ಮೂಲಕ ನಾಸಿಕ ರಂಧ್ರಗಳು ಹೊರತೆರೆಯುತ್ತವೆ. ಕೊಕ್ಕಿನ ಮೇಲ್ಭಾಗ ತಲೆಬುರುಡೆಗೆ ಬಂಧಿತವಾಗಿರುವುದರಿಂದ ಇದು ಅತ್ಯಂತ ಬಲಯುತವಾಗಿದೆ. ಅಲ್ಲದೆ ಗಿಳಿ ತನ್ನ ಕೊಕ್ಕನ್ನು ಮೂರನೆಯ ಕಾಲಿನಂತೆ ಬಳಸಿಕೊಂಡು ಮರವನ್ನು ಹತ್ತಬಲ್ಲದು. ಗಿಳಿಯ ನಾಲಗೆ ಉರುಳೆಯಾಕಾರದ್ದೂ, ತುಂಬ ಮೆತುವಾದದೂ ಆಗಿದೆ.



ಬಹುಪಾಲು ಗಿಳಿಗಳು ಮರದ ಪೊಟರೆಗಳಲ್ಲಿ ಗೂಡುಗಳನ್ನು ಕಟ್ಟುತ್ತವೆ. ಕೆಲವು ಮಾತ್ರ ನೆಲದ ಬಿಲಗಳಲ್ಲಿ ಗೂಡುಮಾಡಿ ಕೊಳ್ಳುತ್ತವೆ. ಹೆಣ್ಣು 1 ರಿಂದ 12 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಬಣ್ಣ ಬಿಳಿ. ಕಾವು ಕೂರುವ ಕೆಲಸದಲ್ಲಿ ಸಾಮಾನ್ಯವಾಗಿ ಗಂಡು ಹೆಣ್ಣುಗಳೆರಡೂ ಪಾಲುಗೊಳ್ಳುತ್ತವೆ. ಕಾವು ಕೊಡುವ ಅವಧಿ ಚಿಕ್ಕ ಜಾತಿಗಳಲ್ಲಿ 16–19 ದಿವಸಗಳವರೆಗೂ ದೊಡ್ಡ ಜಾತಿಗಳಲ್ಲಿ ಸುಮಾರು 30 ದಿವಸಗಳವರೆಗೂ ಇರುತ್ತದೆ. ಆಗ ತಾನೆ ಹುಟ್ಟಿದ ಮರಿಗಳಿಗೆ ಪುಕ್ಕದ ಹೊದಿಕೆಯಿರುವುದಿಲ್ಲ; ಕಣ್ಣುಗಳೂ ಮುಚ್ಚಿರುತ್ತವೆ. ಸುಮಾರು 2–3 ತಿಂಗಳ ವರೆಗೆ ಮರಿಗಳನ್ನು ತಂದೆ ಮತ್ತು ತಾಯಿ ಗಿಳಿಗಳು ಗುಟುಕು ಕೊಟ್ಟು ಪೋಷಿಸುತ್ತವೆ. ಗಿಳಿಗಳು ಸುಮಾರು 50 ವರ್ಷ ಬದುಕಬಲ್ಲವು (ಕೆಲವು ದೊಡ್ಡ ಜಾತಿ ಗಿಳಿಗಳು 80 ಕ್ಕೂ ಹೆಚ್ಚು ವರ್ಷ ಬದುಕಿರುವ ಅನಧಿಕೃತ ವರದಿ ಉಂಟು.) ಆದರೆ ಚಿಕ್ಕ, ಪಂಜರದ ಗಿಳಿಗಳಾದ ಪ್ಯಾರಕೀಟ್ ಮತ್ತು ಬಡ್ಜರಿಗಾರ್‌ಗಳು 5 ವರ್ಷ ಮಾತ್ರ ಬದುಕುತ್ತವೆ. ಬಡ್ಜರಿಗಾರ್ ಆಸ್ಟ್ರೇಲಿಯಾದ ಹಕ್ಕಿಯಾಗಿದ್ದು ಪಂಜರದ ಹಕ್ಕಿಯಾಗಿ ಶೋಷಣೆಗೊಳಗಾಗಿದೆ. ಹೊರಬಿಟ್ಟರೆ ಇವು ಪರಿಸರದಲ್ಲಿ ಬದುಕಲಾರವು.

ಗಿಳಿಗಳು ಸಮಭಾಜಕವೃತ್ತಪ್ರದೇಶಕ್ಕೆ ಸೀಮಿತವಾಗಿವೆ. ಅದರಲ್ಲೂ ಆಸ್ಟ್ರೇಲಿಯ ಖಂಡದಲ್ಲಿ ವಿವಿಧ ಜಾತಿಗಳು ಅಧಿಕಸಂಖ್ಯೆಯಲ್ಲಿ ವಾಸಿಸುತ್ತವೆ. ಕೆಲವು ಪ್ರಭೇದದ ಗಿಳಿಗಳು ಮಣ್ಣಿನಲ್ಲಿರುವ ಖನಿಜಾಂಶಗಳನ್ನು ಬಳಸಿಕೊಳ್ಳುವ ಸಲುವಾಗಿ ಆಯ್ದ ಸ್ಥಳದ ಮಣ್ಣನ್ನು ತಿನ್ನುತ್ತವೆ. ಇದನ್ನು ಆನೆಗಳು ಉಪ್ಪುನೆಕ್ಕುವುದಕ್ಕೆ ಹೋಲಿಸಬಹುದು **(ನೋಡಿ–ಆನೆ)**. (ಕೆ.ಎಂ.ವಿ)

**ಗಿಳಿಮೀನು :** ಪರ್ಸಿಫಾರ್ಮೀಸ್ ಗಣದ ಸ್ಕಾರಿಡೀ ಕುಟುಂಬಕ್ಕೆ ಸೇರಿದ ಸ್ಕಾರಸ್ ಜಾತಿಯ ಮೀನಗಳಿಗೆ ಇರುವ ಸಾಮಾನ್ಯ ಹೆಸರು (ಪ್ಯಾರಟ್ ಫಿಶ್). ಅಟ್ಲಾಂಟಿಕ್, ಫೆಸಿಫಿಕ್, ಹಿಂದೂ ಮಹಾಸಾಗರ, ಮೆಡಿಟರೇನಿಯನ್ ಸಮುದ್ರಗಳಲ್ಲೆಲ್ಲ ಇವೆ. ಇವುಗಳ ದೇಹ ವರ್ಣ ರಂಜಿತವಾಗಿರುವುದರಿಂದ ಹಾಗೂ ಮೂತಿಯು ಗಿಳಿಯ ಕೊಕ್ಕಿನಂತೆ ಇರುವುದರಿಂದ ಇವಕ್ಕೆ ಗಿಳಿಮೀನುಗಳೆಂಬ ಹೆಸರು ಬಂದಿದೆ.



ಈ ಮೀನುಗಳ ದೇಹದ ಉದ್ದ ಸುಮಾರು 30.5–71ಸೆಂಮೀ ಕೆಲವು ಪ್ರಭೇದಗಳು 2 ಮೀ ಗಳವರೆಗೆ ಬೆಳೆಯುವುದುಂಟು. ಕೆಲವು ಗಂಡು ಮೀನುಗಳಲ್ಲಿ ವಯಸ್ಸು ಮತ್ತು ಗಾತ್ರ ಹೆಚ್ಚಿದಂತೆ ಅವುಗಳ ತಲೆಯ ಮೇಲೆ ಎಲುಬಿನ ಒಂದು ಗುಬುಟು ಬೆಳೆಯುತ್ತದೆ. ಗಿಳಿಮೀನುಗಳ ದವಡೆಗಳಲ್ಲಿ ಒಂದೊಂದು ಜೊತೆ ಬಹಳ ಗಡುಸಾದ ಹಲ್ಲುಗಳಿವೆ. ಬಾಯಿ ಗಿಳಿಯ ಕೊಕ್ಕಿನಂತಿರುವುದಕ್ಕೆ ಅದೇ ಕಾರಣ. ಗಿಳಿಮೀನಿನ ಗಂಟಲಿನಲ್ಲಿರುವ ಹಲ್ಲುಗಳೂ ಬಹಳ ಗಟ್ಟಿಯಾಗಿವೆ. ಇವು ಲಗೂನ್ ಗಳಲ್ಲಿ ಹವಳ ದಿಬ್ಬಗಳಲ್ಲಿ ಇತರೆ ರಾಸ್, ಮತ್ತು ಚಿಟ್ಟೆ ಮೀನುಗಳ ಜೊತೆ ಇರುತ್ತವೆ. ವಯಸ್ಕ ಮೀನುಗಳು ಒಂಟಿಯಾಗಿ ಅಥವಾ ಸಣ್ಣ ಗುಂಪಿನಲ್ಲಿ ಕಂಡುಬರುತ್ತವೆ. ಬಂಡೆಗಳ ಮೇಲಿನ ಹವಳ ದಿಬ್ಬದ ಮೇಲೆ ಬೆಳೆಯುವ ವಿವಿಧ ರೀತಿಯ ಪಾಚಿ (ಆಲ್ಗೀ) ಗಳನ್ನು ತಮ್ಮ ಗಟ್ಟಿಯಾದ ಹಲ್ಲುಗಳಿಂದ ಕೆರೆದು ತಿನ್ನುತ್ತವೆ. ರಾಸ್ ಮೀನುಗಳಂತೆಯೇ ಇವು ರಾತ್ರಿ ವೇಳೆ ಸಮುದ್ರದ ತಳದಲ್ಲಿ ನಿದ್ರಿಸುತ್ತವೆ. ಹೀಗೆ ವಿಶ್ರಮಿಸುವಾಗ ತಮ್ಮ ಸುತ್ತ ಲೋಳೆವಸ್ತುವಿನ ಹೊದಿಕೆಯನ್ನು ನಿರ್ಮಿಸಿಕೊಳ್ಳುವುದುಂಟು. ಗಿಳಿಮೀನುಗಳಲ್ಲಿ ಮುಖ್ಯವಾದವು ಮೆಡಿಟರೇನಿಯನ್ ಸಮುದ್ರದ ಸ್ಕಾರಸ್ ಕ್ರಟೆನ್ಸಿಸ್, ಅಟ್ಲಾಂಟಿಕ್ ಸಾಗರದ ಸ್ಕಾರಸ್ ಟೀನಿಯಾಪ್ಟರಸ್ ಮತ್ತು ಹಿಂದೂ ಮತ್ತು ಫೆಸಿಫಿಕ್ ಸಾಗರಗಳಲ್ಲಿ ಕಂಡು ಬರುವ ಕ್ಲೋರಸ್ ಪ್ರಭೇದ. (ಆರ್.ಎಲ್.)

**ಗೀಗೀ ಪದ :** ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಗೀಯ ಗೀಯ ಗೀಗೀ ಹರೇ ಗೀಯ ಗಾ ಎಂಬ ಪಲ್ಲವಿಯೊಂದಿಗೆ ಹಾಡುವ ಒಂದು ಜನಪದ ಗೀತಸಂಪ್ರದಾಯ. ಈ ಗೀಗೀ ಪದದ ಜನನವಾದುದು 1875ರಲ್ಲಿ. ಮೊದಲಿನಿಂದಲೂ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಚಿಂಚಲಿ ಗ್ರಾಮದ ಮಾಯಾಮ್ಮನ ಜಾತ್ರೆಯಲ್ಲಿ ಕನ್ನಡ ಲಾವಣಿಕಾರರೂ ಮರಾಠಿ ಲಾವಣಿಕಾರರೂ ಕೂಡಿ ವಾದದ ಲಾವಣಿಗಳನ್ನು ಹಾಡುತ್ತಿದ್ದರು. 1875ರ ಮಾಯಮ್ಮನ ಜಾತ್ರೆಯಲ್ಲಿ ಮರಾಠಿ ಲಾವಣಿಕಾರರು ಡಪ್ಪು ಉಪಯೋಗಿಸಿ ಲಾವಣಿ ಹಾಡಿದರು. ಅದೇ ದಿನ ರಾತ್ರಿ ಕನ್ನಡಿಗರು ಡಪ್ಪು, ತುಂತುಣಿ, ತಾಳ ಬಾರಿಸಿ ಮೇಳ ಮಾಡಿದರು. ತುಂತುಣಿ, ತಾಳ ಬಾರಿಸುವವರು ಗೀಗೀ ದನಿ ಎಳೆದರು. ಈ ರಚನೆ ಮಾಡಿದವರಲ್ಲಿ ತೇರದಾಳ ಅಣ್ಣು ಯಂಕಾರಾಮ ಮುಖ್ಯನಾದವ. ಇವನೇ ಗೀಗೀ ಶ್ರುತಿ ಹಾಕಿ, ಶ್ರುತಿದೇವ (ಗಣಪತಿ) ಶ್ರುತಿದೇವಿ (ಸರಸ್ವತಿ) ಎಂದು ಹಾಡಿ ಗೀಗೀ ಪದಗಳ ಜನಕನೆಂದು ಕರೆಯಿಸಿಕೊಂಡ. ಅನಂತರ ಚಿಂಚಲಿ ಜಾತ್ರೆಯಲ್ಲಿ ಹಾಡುಗಳನ್ನು ಕೇಳಲು ಜನ ಕೂಡುವ ಸ್ಥಳ (ನಾಕಾಕಟ್ಟೆ) ಗೀಗೀಕಟ್ಟೆ ಎಂದು ಹೆಸರಾಯಿತು. ಗೀಗೀ ಮೇಳದವರಿಗೆ ಚಿಂಚಲಿ ಮೂಲಸ್ಥಳವಾಯಿತು. ಕನ್ನಡ ಲಾವಣಿಯೇ ಗೀಗೀ ಪದವಾಗಿ ಮಾರ್ಪಟ್ಟಿತು. ಅನಂತರ ಕನ್ನಡ ಗೀಗೀ ಪದ ಮರಾಠಿ ಜೀಜೀ ಪದಗಳ ಹುಟ್ಟಿಗೆ ಕಾರಣವಾಯಿತು.

ಗೀಗೀ ಪದಗಳಲ್ಲಿ ಮುಖ್ಯ ಗೀಗೀ ಹಾಡುಗಾರ 'ಡಪ್ಪಿಗೆ' ಗತ್ತಿನ ಕಡಿತ (ಪೆಟ್ಟು) ಹಾಕಿ ಪದ ಹಾಡುತ್ತಾನೆ. ಅವನ ಹಿಂದೆ ತುಂತುಣಿ ಹಾಗೂ ತಾಳ ಹಿಡಿದ ಇಬ್ಬರು ತಾಳ ಮತ್ತು ಲಯಗಳನ್ನೊಳಗೊಂಡ ಗೀಗೀ ದನಿ ಬೀರುತ್ತಾರೆ. ಜನಾಕರ್ಷಣೆಗಾಗಿ ರಮ್ಯವಾಗಿ ಡಪ್ಪು, ತುಂತುಣಿ ಮತ್ತು ತಾಳನುಡಿಸುತ್ತಾರೆ. ಡಪ್ಪು ವರ್ತುಳಾಕಾರದ 5–7.5ಸೆಂಮೀ. ದಪ್ಪವಾದ, 1.20–1.5ಮೀ ಪರಿಘವಿರುವ ಗಾಲಿಗೆ ಮತ್ತು ಅದಕ್ಕಿಂತ ಸಣ್ಣದಾದ ಕಬ್ಬಿಣದ ವರ್ತುಲಕ್ಕೆ ಸೇರಿದಂತೆ ಆಡಿನ ಚರ್ಮದಿಂದ ಹಲಗೆ ತಯಾರಿಸಿ ಎಡಗೈಯಲ್ಲಿ ಹಿಡಿದು ಬಲಗೈಯಿಂದ ಹದರು ಹಚ್ಚಿ ಬೆರಳು ಆಡಿಸಿ ಬಡಿದು ನಾದ ಹೊರಡಿಸುವ ವಾದ್ಯ. ತುಂತುಣಿ ಮರದ ತುಂಡಿನ 2.5ಸೆಂ.ಮೀ ಸಿಲಿಂಡರಿನಾಕಾರದ್ದಾಗಿದ್ದು, ಹಿಂಬದಿಗೆ ಮೇಕೆಯ ಆಡಿನ ಚರ್ಮವನ್ನು ಬಿಗಿದು ಒಂದು 90ಸೆಂಮೀ. ಬಿದರಿನ ತುಂಡನ್ನು ಸಿಲಿಂಡರಿಗೆ ಜೋಡಿಸಿ, ಅದರ ತುದಿಯಲ್ಲಿ ಒಂದು ಬೆಣೆಯನ್ನು ಕೂರಿಸಿ ತಂತಿಯನ್ನು ಬೆಣೆಗೂ ಹಿಂಬದಿಯ ಚರ್ಮದ ಮಧ್ಯಕ್ಕೂ ಜೋಡಿಸಿ ತಯಾರಿಸಿದ, ಬಲಗೈಯಲ್ಲಿ ಹಿಡಿದ ಕಡ್ಡಿಯಿಂದ ತಂತಿಯನ್ನು ಮಿಡಿದು ನಾದ ಹೊಮ್ಮಿಸುವ ವಾದ್ಯ. ಗೀಗೀ ಮೇಳದವರಿಗೆ ಚಾಲು (ಆರಂಭ) ನುಡಿತ, ಏರು ನುಡಿತಗಳೂ ಮುಖ್ಯ. ಇಳುವಿನಲ್ಲಿ ಸೌಮ್ಯ ಸಂಗೀತವಿರುತ್ತದೆ. ಒಮ್ಮೇಳವಾಗಿ (ಸಂಗಡಿಗರು) ಹಾಡುವುದು, ಬಾರಿಸುವುದು ಸಾಗುತ್ತದೆ.

ಗೀಗೀ ಮೇಳದಲ್ಲಿ ಮೊದಲಿಗೆ ಹರದೇಶಿ (ತುರಾಯಿ) ಗೀಗೀ ಮೇಳ, ನಾಗೇಶಿ (ಕಲ್ಕಿ) ಗೀಗೀ ಮೇಳ ಎಂದು ಗಂಡು–ಹೆಣ್ಣಿನ ವಾದದ ಮೇಳಗಳು ಪ್ರಾರಂಭವಾದವು. ಗಂಡಸರ ಪಂಗಡ ಪುರುಷನನ್ನು (ಶಿವ) ಹೆಚ್ಚುಮಾಡಿ ಹಾಡುವುದು, ಹೆಂಗಸರ ಪಂಗಡ ಸ್ತ್ರೀಯನ್ನು (ಶಕ್ತಿ) ಹೆಚ್ಚುಮಾಡಿ ಹಾಡುವುದು ಸಂಪ್ರದಾಯವಾಯಿತು. 1925ರಿಂದ ಈಚೆಗೆ ಗೀಗೀ ಮೇಳದವರು ಲೌಕಿಕ ಹಾಡುಗಾರರಾಗಿ ಮಾರ್ಪಟ್ಟರು. ರಾಷ್ಟ್ರೀಯ ಗೀಗೀಮೇಳಗಳು ಹುಟ್ಟಿಕೊಂಡವು. ಭಾರತದೇಶ, ದೇಶದ ಜನ, ದೇಶದ ಸ್ಥಿತಿ, ಸಂಸ್ಕೃತಿ, ರೀತಿ, ನೀತಿ ಇತ್ಯಾದಿ ಕುರಿತು ಗೀಗೀ ಪದಗಳು ಪ್ರಾರಂಭವಾದವು. ಇಂಥ ಗೀಗೀಮೇಳಗಳಲ್ಲಿ ಹುಲಕುಂದ ಗೀಗೀ ಮೇಳ ಮುಖ್ಯವಾದ್ದು. ಹುಲಕುಂದದ ಭೀಮಸಿಂಗ ಕವಿ, ಶಿವಲಿಂಗ, ಪಾಂಡುರಂಗ, ಚನಬಸು, ಕಂದಭೀಮಸಿಂಗ ಇವರು ಗೀಗೀ ಗಂಗೋತ್ರಿಯನ್ನೇ ಹರಿಸಿದರು. ತಿಗಡೊಳ್ಳಿ ಗೀಗೀಮೇಳ, ಹೊಸೂರು ಗೀಗೀ ಮೇಳ, ಹೊಸಕೋಟೆ ತಮ್ಮಣ್ಣನ ಗೀಗೀಮೇಳ, ಗೋಕಾಂವಿ ಗೀಗೀ ಮೇಳ, ಬಿದರೆ ಗೀಗೀ ಮೇಳ, ರಾಯಚೂರು ಗೀಗೀ ಮೇಳ, ಬೆಳಗಾಂವಿ ಗೀಗೀ ಮೇಳ, ಬಿಜಾಪುರ ಗೀಗೀಮೇಳ, ಕಲಬುರ್ಗಿ ಗೀಗೀಮೇಳ, ಚಿತ್ರದುರ್ಗ ಗೀಗೀಮೇಳ, ಬೆಂಗಳೂರು ಗೀಗೀಮೇಳ, ಇತ್ಯಾದಿ ಮೇಳಗಳು ಹುಟ್ಟಿಕೊಂಡು ರಾಷ್ಟ್ರದ ಸ್ವಾತಂತ್ರ್ಯಹೋರಾಟ ಕಾಲದಲ್ಲಿ ಜನಜಾಗೃತಿಯನ್ನುಂಟುಮಾಡಿದವು. ಜ್ಞಾನಪ್ರಸಾರಕಾರ್ಯ ಕೈಗೊಂಡವು. ಇಂದು ಕರ್ನಾಟಕದಲ್ಲಿ ಎರಡು ನೂರಕ್ಕೂ ಹೆಚ್ಚು ಗೀಗೀ ಮೇಳಗಳಿವೆಯೆಂದು ತಿಳಿದುಬರುತ್ತದೆ.

ಗೀಗೀ ಪದದ ಹಾಡುಗಾರರು ಸ್ತೋತ್ರ ಪದಗಳು, ಪೌರಾಣಿಕ ಪದಗಳು, ಐತಿಹಾಸಿಕ ಪದಗಳು, ಚಾರಿತ್ರಿಕ ಪದಗಳು, ಆರ್ಥಿಕ ಪದಗಳು, ಸಾಮಾಜಿಕ ಪದಗಳು, ನೈತಿಕ ಪದಗಳು, ಹಾಸ್ಯದ ಪದಗಳು, ಒಗಟಿನ ಪದಗಳು ಇತ್ಯಾದಿಗಳನ್ನು ಹಾಡುತ್ತಾರೆ. ಪದಗಳ ಮುಕ್ತಾಯದಲ್ಲಿ ಹಾಡು ರಚಿಸಿದ ಕವಿಯ ಊರು ಹೆಸರುಗಳಿರುತ್ತವೆ. ಗೀಗೀ ಪದಗಳು ಜನಮನವನ್ನು ತಿದ್ದುವ, ಜ್ಞಾನ ಹೆಚ್ಚಿಸುವ, ನೀತಿ ತಿಳಿಸುವ, ವೈಚಾರಿಕ ಜನಪದ ಪರಂಪರೆಯ ಗೀತೆಗಳಾಗಿವೆ. ಈ ಪದಗಳಲ್ಲಿ ಜಾನಪದ ಶಬ್ದಸಂಪತ್ತು ಬಹುವಾಗಿವೆ. ಉತ್ತರ ಕರ್ನಾಟಕದಲ್ಲಿ ಗೀಗೀ ಮೇಳ ಕಟ್ಟಿಕೊಂಡು ಗೀಗೀ ಪದ ಹಾಡುವವರು ಹೆಚ್ಚಾಗಿ ಹರಿಜನ ಮಹಿಳೆಯರು. ಸ್ತ್ರೀಪಂಗಡದಲ್ಲಿ ಒಬ್ಬರು ಮುಮ್ಮೇಳ ಹಾಡುಗಾರ್ತಿಯೂ ಹಿಮ್ಮೇಳಕ್ಕೆ ಈರ್ವರು ಪುರುಷರೂ ಇರುತ್ತಾರೆ. ಈ ಕಲೆ ಅವರ ಹೆಮ್ಮೆಯ ಪರಂಪರೆಯಾಗಿದೆ. ಹಾಡುಗಾರರು ತಮಗೆ ಸುಂದರವಾಗಿ ಕಾಣುವ ಇಷ್ಟವಾದ ಉಡುಗೆ ತೊಡುಗೆಗಳನ್ನು ಧರಿಸುತ್ತಾರೆ.

ಗೀಗೀ ಪದಗಳನ್ನು ಚೌಡಿಕೆಯವರೂ ಗೊಂದಲಿಗರೂ ಸಿದ್ಧಕ ಸಿದ್ಧಿಗಳೂ (ಜಾತಿಗಾರರು) ಕರ್ಬಲ್ ಹಾಡುಗಾರರೂ ಹಾಡತೊಡಗಿದ್ದಾರೆ.

ಹುಲಕುಂದ ಭೀಮಕವಿಯ ಸರ್ವೋದಯ ಗ್ರಾಮೀಣ ಜನಪದ ಗೀತೆಗಳು (1962), ಹುಬ್ಬಳ್ಳಿಯ ಕರಡಿ ಪ್ರಕಾಶಕರ 3–4 ಗೀಗೀ ಪದಗಳ ಸಣ್ಣ ಪುಸ್ತಕಗಳು ಈ ಸಾಹಿತ್ಯವನ್ನು ಕುರಿತು ಪ್ರಕಟಗೊಂಡಿವೆ. (ಎನ್.ಎನ್.ಎಸ್.)

**ಗೀಜ಼ :** ಉತ್ತರ ಈಜಿಪ್ಟಿನಲ್ಲಿ ನೈಲ್ ನದಿಯ ಪಶ್ಚಿಮ ದಂಡೆಯ ಮೇಲೆ, ಕೈರೋ ನಗರಕ್ಕೆ ಇದಿರಾಗಿದ್ದ ಒಂದು ನಗರ. ಗೀಜ಼ ಆಡಳಿತ ವಿಭಾಗದ ಮುಖ್ಯ ಪಟ್ಟಣ. ಕೈರೋದ ಉಪನಗರದಂತಿದೆ. ಕೈರೋಗೂ ಗೀಜ಼ಕ್ಕೂ ನೈಲ್ ನದೀ ದ್ವೀಪಗಳಾದ ರೋಡ ಮತ್ತು ಗೆಜ಼ೀರಗಳ ಮೂಲಕ ಸೇತುವೆಗಳಿವೆ. ಇದು ಕೈರೋ ವಿಶ್ವವಿದ್ಯಾಲಯದ ಕೇಂದ್ರ. ಇಲ್ಲಿ ಪ್ರಾಣಿ ಮತ್ತು ಸಸ್ಯಶಾಸ್ತ್ರಕ ಉದ್ಯಾನಗಳುಂಟು. ಇದು ಈಜಿಪ್ಟಿನ ಚಲನಚಿತ್ರ ಉದ್ಯಮದ ಕೇಂದ್ರ. ಇಲ್ಲಿ ಹತ್ತಿ, ಜವಳಿ, ಪಾದರಕ್ಷೆ, ಬೀರ್, ಇಟ್ಟಿಗೆ ಕೈಗಾರಿಕೆಗಳಿವೆ. ಪ್ರಸಿದ್ಧ ಪಿರಮಿಡ್‌ಗಳು ಇರುವುದು ಇಲ್ಲಿಂದ ಪಶ್ಚಿಮಕ್ಕೆ, 8 ಕಿಮೀ ದೂರದಲ್ಲಿ.

ಹಳೆಯ ಈಜಿಪ್ಟ್ ರಾಜ್ಯವನ್ನು ಆಳಿದ ಮೂರನೆಯ ವಂಶದ ರಾಜರ (ಪ್ರ.ಶ.ಪೂ. 2649–2620) ಕಾಲದಿಂದ ಕಲ್ಲಿನ ಪಿರಮಿಡ್ಡುಗಳನ್ನು ಕಟ್ಟುವ ಪದ್ಧತಿ ಆರಂಭವಾಯಿತು. ಈ ವಾಸ್ತುಶಿಲ್ಪ ಕುಶಲತೆ ಬಹುಬೇಗ ನಾಲ್ಕನೆಯ ವಂಶದ ರಾಜರ ಕಾಲದಲ್ಲಿ (ಪ್ರ.ಶ.ಪೂ. 2600–2500) ಅತ್ಯಂತ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಇವರು ಗೀಜ಼ದಲ್ಲಿ ಕಟ್ಟಿಸಿದ 2 ಪಿರಮಿಡ್‌ಗಳಲ್ಲಿ ಈ ವಾಸ್ತುಶಿಲ್ಪದ ಶ್ರೇಷ್ಠಮಟ್ಟವನ್ನು ನೋಡಬಹುದು. ಗೀಜ಼ದಲ್ಲಿ ಪಿರಮಿಡ್‌ಗಳಲ್ಲದೆ, ಒಂದು ಸಿಂಹದ ದೇಹ ಮತ್ತು ಮನುಷ್ಯನ ತಲೆಯುಳ್ಳ ಸ್ಫಿಂಕ್ಸ್, ಭೂಮಿಯಲ್ಲಿ ಸುಮಾರು 25 ಮೀ ಕೆಳಗೆ ಕೊರೆದು ಮಾಡಿದ ಸುರಂಗಮಾರ್ಗವುಳ್ಳ ಅನೇಕ ಕೋಣೆ ಗೋರಿಗಳು ಇವೆ.

ಗೀಜ಼ದಲ್ಲಿ 10 ಪಿರಮಿಡುಗಳಿವೆ. ಇವುಗಳಲ್ಲಿ 3 ದೊಡ್ಡ ಪಿರಮಿಡುಗಳು. ಇವುಗಳನ್ನು ಈಜಿಪ್ಟಿನ ನಾಲ್ಕನೆಯ ರಾಜವಂಶದ (ಪ್ರ.ಶ.ಪೂ 2720–2560) ಖುಫು (ಚಿಯೋಪ್ಸ್), ಖಾಫ್ರೆ (ಖೆಫ್ರೆನ್) ಮತ್ತು ಮೆಂಕುರೆ (ಮೈಸಿರಿನಸ್) ರಾಜರುಗಳು ಕಟ್ಟಿಸಿದರು. ಇವುಗಳು ಪ್ರ.ಶ.ಪೂ 2600 ರಿಂದ 2500ರಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಇವರು ಗೀಜ಼ದಲ್ಲಿ ನಿರ್ಮಿಸಿದ 2 ಪಿರಮಿಡುಗಳಲ್ಲಿ ಈ ವಾಸ್ತು ಶಿಲ್ಪದ ಶ್ರೇಷ್ಠಮಟ್ಟವನ್ನು ಕಾಣಬಹುದು. ಹಿರೋಡಾಟಸ್ ಇವನ್ನು ಪ್ರಪಂಚದ ಏಳು ಪ್ರಾಚೀನ ಅದ್ಭುತಗಳಲ್ಲಿ ಸೇರಿಸಿದ್ದಾನೆ.

ಇವುಗಳಲ್ಲಿ ಅತ್ಯಂತ ದೊಡ್ಡದೂ ಪುರಾತನವೂ ಆದ ಖುಫುವಿನ ಪಿರಮಿಡು ಸು. 232 ಮೀ ಉದ್ದಗಲದ 5 ಹೆಕ್ಟೇರು ವಿಸ್ತೀರ್ಣದ ಮತ್ತು ಸು. 147 ಮೀ ಎತ್ತರದ ಬೃಹತ್ ನಿರ್ಮಾಣ. ಇದರ ಪಾರ್ಶ್ವಗಳು $51^0$–52' ಕೋನದಲ್ಲಿದೆ ಮತ್ತು ಪ್ರತಿ ಮೂಲೆಯೂ ದಿಕ್ಕುಗಳಿಗೆ ಸರಿಯಾಗಿವೆ. ಪಿರಮಿಡಿನ ಒಳಭಾಗವನ್ನು ಹಳದಿ ಬಣ್ಣದ ಸುಣ್ಣಕಲ್ಲಿನ ದಿಮ್ಮಿಗಳಿಂದ ನಿರ್ಮಿಸಲಾಗಿದೆ. ಒಳಗಿನ ಮೊಗಸಾಲೆಗಳಿಗೆ ಜಬಾಲ್ ಟುರಾ ಪ್ರಾಂತ್ಯದ ಸುಣ್ಣಕಲ್ಲನ್ನು ಉಪಯೋಗಿಸಲಾಗಿದೆ. ಶವಕೋಣೆಗೆ ಆಸ್ವಾನ್ ಪ್ರಾಂತ್ಯದ


ಗೀಜ಼ ಪಿರಮಿಡ್ಡುಗಳು

ಗ್ರಾನೈಟ್ ಕಲ್ಲಿನ ದೊಡ್ಡ ದಿಮ್ಮಿಗಳನ್ನು ಬಳಸಲಾಗಿದೆ. ಇದರ ನಿರ್ಮಾಣಕ್ಕೆ 2.3 ಮೆಟ್ರಿಕ್ ಟನ್ ತೂಕದ 23 ಲಕ್ಷ ಕಲ್ಲುಗಳನ್ನು ಬಳಸಲಾಗಿದೆ. ಅಷ್ಟು ಭಾರದ ಕಲ್ಲು ದಿಮ್ಮಿಗಳನ್ನು ಎತ್ತಲು (ಕೆಲವು ದಿಮ್ಮಿಗಳು 16.25 ಮೆಟ್ರಿಕ್ ಟನ್ ತೂಕದ್ದಾಗಿವೆ) ಇಳಿಜಾರಾದ ರಸ್ತೆಗಳನ್ನು ನಿರ್ಮಿಸಿದ್ದರೆಂದು ಊಹಿಸಲಾಗಿದೆ. ಅಷ್ಟು ದೊಡ್ಡ ದಿಮ್ಮಿಗಳನ್ನು ಕೂಡಿಸಿರುವ ಸಂಧಿಗಳು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾಗಿವೆ. ಇದರ ಪಾರ್ಶ್ವಗಳೂ ಸು. 233 ಮೀ ಉದ್ದವಿದ್ದರೂ ವಕ್ರತೆ 1/2 ಡಿಗ್ರಿಗಳಷ್ಟೂ ಇಲ್ಲ. ಇದರ ನಾಲ್ಕು ಕೋನಗಳು ನಿರ್ದಿಷ್ಟ $90^0$ಗೆ ಸಮವಾಗಿವೆ. ಪಿರಮಿಡಿನೊಳಕ್ಕೆ ಹೋಗುವ ಮಾರ್ಗ ಇದರ ಉತ್ತರದಿಕ್ಕಿನಲ್ಲಿ ಭೂ ಮಟ್ಟದಿಂದ ಸು. 18ಮೀ ಎತ್ತರದಲ್ಲಿದೆ. ಕಟ್ಟಡದೊಳಗಿನ ಇಳಿಜಾರಾದ ಮಾರ್ಗ ಒಳಕೋಣೆಗೆ ಸಾಗುತ್ತದೆ. ಅಲ್ಲಿಂದ ಮುಂದೆ ಭೂ ಮಟ್ಟದಿಂದ ತಳಕ್ಕೆ ಒಂದು ಸುರಂಗ ಮಾರ್ಗ ಹೋಗಿ ಒಳಗಿನ ಶವಕೋಣೆಯನ್ನು ತಲುಪುತ್ತದೆ. ಮತ್ತೊಂದು ಮಾರ್ಗ ಹೆಚ್ಚು ಕಡಿಮೆ ಸಮಾನಾಂತರವಾಗಿ ಮುಂದೆ ಸಾಗಿ ರಾಣಿಯ ಕೋಣೆಯನ್ನು ತಲುಪುತ್ತದೆ. ಒಳಕೋಣೆಯಿಂದ ಮತ್ತೊಂದು ಮಾರ್ಗ ಮೇಲ್ಮುಖವಾಗಿ ಸಾಗಿ ಸು. 8.5 ಮೀಗಳೆತ್ತರ ಮತ್ತು ಸು. 47 ಮೀ ಗಳುದ್ದದ ಮೊಗಸಾಲೆಗೆ ಹೋಗುತ್ತದೆ. ಮೊಗಸಾಲೆಯ ತುದಿಯಲ್ಲಿ ರಾಜನ ಕೋಣೆ ಅಥವಾ ಮುಖ್ಯ ಶವಕೋಣೆ ಇದೆ. ಇದು ಸು. 10 ಮೀ X 5ಮೀ X 3ಮೀ ಪ್ರಮಾಣದಲ್ಲಿದೆ. ರಾಜನ ಕೋಣೆ ಭೂ ಮಟ್ಟದಿಂದ ಸು. 42 ಮೀ ಎತ್ತರದಲ್ಲಿದೆ. ಈ ಕೋಣೆಯಿಂದ ಪಿರಮಿಡಿನ ಹೊರಕ್ಕೆ ಎರಡು ಬೆಳಕಿನ ಕೊಳವೆಕಿಂಡಿಗಳಿವೆ. ರಾಜನ ಕೋಣೆಯಲ್ಲಿ ಬರಿದಾದ ಕೆಂಪು ಗ್ರಾನೈಟ್ ಶಿಲೆಯ ಶವತೊಟ್ಟಿಯಿದೆ. ಕೋಣೆಯ ಮೇಲೆ ಗ್ರಾನೈಟ್ ಚಪ್ಪಡಿಗಳಿಂದ ಪ್ರತ್ಯೇಕಿಸಲ್ಪಟ್ಟ 5 ಅಂತಸ್ತುಗಳಿವೆ. ಬಹುಶಃ ಬೃಹತ್ ಪಿರಮಿಡಿನ ಅಗ್ರಭಾಗದ ಭಾರವನ್ನು ವಹಿಸಲು ಇಂಥ ಖಾಲಿ ಅಂತಸ್ತುಗಳನ್ನು ನಿರ್ಮಿಸಿರಬಹುದು. ಪಿರಮಿಡಿನ ಪ್ರವೇಶ ಮಾರ್ಗದ ಬಾಯನ್ನು ಭಾರವಾದ ಆದರೆ, ನಿಖರವಾಗಿ ಹೊಂದುವ ಕಲ್ಲಿನ ದಿಮ್ಮಿಯಿಂದ ಮುಚ್ಚಲಾಗಿತ್ತು. ಬಾಗಿಲಿನ ಸ್ಥಳ ಗೊತ್ತಾಗದಂತೆ ಕಟ್ಟಡದ ಇಡೀ ಹೊರಭಾಗವನ್ನು ಚಪ್ಪಡಿಗಳಿಂದ ಆವರಿಸಲಾಗಿತ್ತು. 19ನೆಯ ಶತಮಾನದಲ್ಲಿ ಪಿರಮಿಡುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದುದೇ ಅಲ್ಲದೆ, ಖುಫುವಿನ ಬೃಹತ್ ಪಿರಮಿಡಿನ ಯಂತ್ರ ಶಿಲ್ಪಿಕ ವಿವರಗಳನ್ನು ಒದಗಿಸಿದ ಕೀರ್ತಿ 1880–82 ನಡುವೆ ಸಂಶೋಧನೆ ಮಾಡಿದ ಸರ್‌ಫ್ಲಿಂಡರ್ಸ್‌ಪೆಟ್ರಿಗೆ ಸಲ್ಲುತ್ತದೆ. (ಬಿ.ಕೆ.ಜಿ.)

ಪ್ರತಿಯೊಂದು ಪಿರಮಿಡೂ ಸಣ್ಣ ಪಿರಮಿಡ್‌ಗಳಿಂದ ಕೂಡಿದೆ. ಅಲ್ಲದೆ ತಾತ್ಕಾಲಿಕವಾಗಿ ಶವಗಳನ್ನಿಡುವ ಮನೆಗಳೂ ಇವೆ. ಇವೆಲ್ಲವೂ ಪೌಳಿಗೋಡೆಯಿಂದ ಸುತ್ತುವರಿಯಲ್ಪಟ್ಟಿವೆ. ಇವುಗಳಿಂದ ನೈಲ್ ನದಿಯ ದಂಡೆಯ ಮೇಲಿರುವ ಒಂದು ದೇವಾಲಯಕ್ಕೆ ಹೋಗಲು ಸುರಂಗ ಮಾರ್ಗವಿದೆ.

ಮೂರನೆಯ ರಾಜ ಖಾಫ್ರೆ (ಪ್ರ.ಶ.ಪೂ. 2552–2521). ಪಿರಮಿಡ್ಡು ಖುಫುವಿನ ಪಿರಮಿಡ್ಡಿಗಿಂತ ಸ್ವಲ್ಪ ಸಣ್ಣ ಪ್ರಮಾಣದ್ದಾಗಿದೆ. ಇದರ ಉದ್ದಗಲ ಸು. 217 ಮೀ ಎತ್ತರ ಸು. 145 ಮೀ ಆದರೆ, ಖುಫುವಿನ ಪಿರಮಿಡ್ಡಿಗಿಂತಲೂ ಎತ್ತರ ಸ್ಥಾನದಲ್ಲಿರುವುದರಿಂದ ದೊಡ್ಡದಾಗಿ ಕಾಣುತ್ತದೆ. ಪಿರಮಿಡಿನ ಕೆಂಪು ಗ್ರಾನೈಟ್ ಕಲ್ಲಿನ ಮೇಲ್ಛಾವಣಿ ಕೆಳಗಿನ ಕಿಟಕಿಯಿಂದ ಬರುವ ಸೂರ್ಯನ ಬೆಳಕು ನೆಲಕ್ಕೆ ಹಾಸಿದ ಹೊಳಪಾದ ಹಾಲುಗಲ್ಲಿನ ಮೇಲೆ ಬಿದ್ದು, ಅಲ್ಲಿಂದ ಬೂದು ಜೇಡಿಮಣ್ಣು ಮತ್ತು ಹಸುರು ಡಯೊರೈಟ್‌ನಿಂದ ಮಾಡಿದ 23 ರಾಜರುಗಳ ಮೂರ್ತಿಗಳ ಮೇಲೆ ಸೌಮ್ಯವಾಗಿ ಪ್ರಸರಿಸಿ ಅವುಗಳ ಚೆಲುವನ್ನು ಹೆಚ್ಚಿಸಿದೆ.

ಮೊದಲನೆಯ ರಾಜ ಸ್ನೆಫೆರುವಿನ (ಪ್ರ.ಶ.ಪೂ. 2590–2575) ಮಹಾರಾಣಿ ಖುಫುವಿನ ತಾಯಿ ಹೆಟೆಪ್–ಹೆರಸಳ್ ಕುರ್ಚಿ, ಆಭರಣ ಪೆಟ್ಟಿಗೆ, ತಲೆ ಕೊರಡುಳ್ಳ ಹಾಸಿಗೆ, ಮೇಲ್ಮೈಯನ್ನು ಕೊರೆದು ತುಂಬಿದ ಚಿತ್ರಗಳುಳ್ಳ ಕಾಲುಮಣೆ ಮುಂತಾದ ಭೋಗವಸ್ತುಗಳ ಆಕಾರ, ಪ್ರಮಾಣಬದ್ಧತೆ, ಕರಕುಶಲತೆ ಇವು ಆಗಿನ ಉತ್ಕೃಷ್ಟ ಕಲಾವಂತಿಕೆಗೆ ಉತ್ತಮ ನಿದರ್ಶನಗಳು.

ಖಾಫ್ರೆಯ ಪಿರಮಿಡ್‌ನ ಹತ್ತಿರ ಸುಮಾರು 4,000 ಜನ ವಾಸ ಮಾಡಬಹುದಾದ ಉದ್ದ ಕೋಣೆಗಳುಳ್ಳ ಕೆಲಸಗಾರರ ಸಾಲುಮನೆಗಳಿವೆ.

ಒಂದೇ ಕಲ್ಲಿನಲ್ಲಿ ಕೊರೆದ ಸುಮಾರು 56.5 ಮೀ ಉದ್ದವಾದ ಬೃಹದಾಕಾರದ ಸ್ಫಿಂಕ್ಸ್ ಪ್ರತಿಮೆ ನೈಲ್‌ನದಿ ಬಯಲನ್ನು ರಕ್ಷಣೆ ಮಾಡುವ ಹಾಗೆ ನಿಂತಿದೆ. ಇದರ ಕಾಲುಗಳ ಮಧ್ಯದಲ್ಲಿ ಹರ್ಮಾಕಿಸ್ ಸೂರ್ಯದೇವತೆಯ ಸಣ್ಣ ಗುಡಿಯಿದೆ.

ಮೆಂಕುರೆ ಪಿರಮಿಡ್ಡು ಖುಫುವಿನ ಪಿರಮಿಡ್ಡಿನಲ್ಲಿ ಅರ್ಧದಷ್ಟು ಮಾತ್ರವಿದೆ. ಆದರೆ, ಅತ್ಯಂತ ಗಟ್ಟಿಕಲ್ಲನ್ನು ಅಳತೆಗೆ ಸರಿಯಾಗಿ ಕಂಡರಿಸುವ ಕುಶಲತೆ ಸಾಕಷ್ಟು ಕರಗತವಾಗಿತ್ತೆಂದು ಇದರಲ್ಲಿ ಕಾಣುತ್ತದೆ. ಇದರ ಹೊದಿಕೆಗೆ ಕೆಂಪು ಗ್ರಾನೈಟನ್ನು ಉಪಯೋಗಿಸಿದೆ. ಈ ಪಿರಮಿಡ್ಡು ಮಾತ್ರ ಚಿತ್ರಿತ ದೃಶ್ಯಗಳಿಂದ ಅಲಂಕೃತವಾಗಿದೆ.

(ಎ.ಎಸ್.)

ನೈಲ್ ನದಿಯ ಆಚೀಚೆ, ಉತ್ತರದಲ್ಲಿರುವ ನೈಲ್‌ನದಿ ಶಾಖೆಯಾದ ರೊಸೆಟ್ಟದಿಂದ ಹಿಡಿದು ದಕ್ಷಿಣದ ಬನಿಸುವೇಫ್ ಆಡಳಿತ ವಿಭಾಗದವರೆಗೆ, ಇರುವ ಕಿರಿದಾದ ಪ್ರದೇಶ ಗೀಜ಼ ಆಡಳಿತ ವಿಭಾಗವಾಗಿದೆ. ಇದರ ವಿಸ್ತೀರ್ಣ 867.5 ಚ.ಕಿಮೀ ಸ್ಫಿಂಕ್ಸ್ ಮತ್ತು ಹಲವು ಪ್ರಸಿದ್ಧ ಪಿರಮಿಡ್‌ಗಳು ಇರುವುದು ಈ ಪ್ರದೇಶದಲ್ಲಿ. ಕಟ್ಟಡಗಳಿಗೆ ಉಪಯುಕ್ತವಾದ ಸುಣ್ಣದ ಕಲ್ಲುಗಳನ್ನು ತೆಗೆಯುತ್ತಿದ್ದ ಸ್ಥಳ ಟುರಾ. ಈಗಲೂ ಸಿಮೆಂಟ್ ಕೈಗಾರಿಕೆಗಳಿಗೆ ಇಲ್ಲಿಂದ ಸುಣ್ಣಕಲ್ಲುಗಳನ್ನು ಸಾಗಿಸಲಾಗುತ್ತಿದೆ. ಈ ಪ್ರದೇಶದ ಮುಖ್ಯ ಕಸಬು ಬೇಸಾಯ. ಉದ್ಯೋಗನಿರತರಾದ ಜನರಲ್ಲಿ ಶೇ.55 ಮಂದಿ ಬೇಸಾಯದಲ್ಲಿ ತೊಡಗಿದವರು. ನೀರಾವರಿ ಸೌಲಭ್ಯವಿದೆ. ಮುಸುಕಿನ ಜೋಳ, ಹತ್ತಿ, ಗೋದಿ ಮುಖ್ಯವಾದ ಬೆಳೆಗಳು. ಟುರಾಗೆ ದಕ್ಷಿಣದಲ್ಲಿ ಸಕ್ಕರೆ ಕಾರ್ಖಾನೆ ಇದೆ. ಮದ್ಯ ಇಲ್ಲಿಯ ಒಂದು ಉಪೋತ್ಪನ್ನ.

*

**ಗೀಜಗನ ಹಕ್ಕಿ :** ಪೆಸ್ಸಾರಿಡೇ ಕುಟುಂಬಕ್ಕೆ ಸೇರಿದ ಒಂದು ಹಕ್ಕಿ. ನೇಯ್ಗೆ ಹಕ್ಕಿ ಪರ್ಯಾಯನಾಮ. ಪ್ಲೋಸಿಯಸ್ ಈ ಜಾತಿಯ ವೈಜ್ಞಾನಿಕ ನಾಮ. ಭಾರತದಲ್ಲಿ ಪ್ಲೋಸಿಯಸ್ ಫಿಲಿಪಿನೆನ್ಸಿಸ್, ಪ್ಲೊ. ಮನ್ಯಾರ್ ಮತ್ತು ಪ್ಲೊ. ಬೆಂಗಾಲೆನ್ಸಿಸ್ ಎಂಬ ಮೂರು ಪ್ರಭೇದಗಳಿವೆ. ಇವುಗಳಲ್ಲಿ ಬಲು ಸಾಮಾನ್ಯವಾದ ಪ್ರಭೇದವೆಂದರೆ ಪ್ಲೋಸಿಯಸ್ ಫಿಲಿಪಿನೆನ್ಸಿಸ್. ಈ ಹಕ್ಕಿ ಗುಬ್ಬಚ್ಚಿಯ ಗಾತ್ರದಷ್ಟೆ ಇದೆ : ಸಂತಾನೋತ್ಪತ್ತಿ ಕಾಲದಲ್ಲಿ ಬಿಟ್ಟು ಮಿಕ್ಕ ಕಾಲದಲ್ಲಿ ಇದರ ಬಣ್ಣ ಗುಬ್ಬಚ್ಚಿಯ ಬಣ್ಣದಂತೆಯೆ ಇರುತ್ತದೆ. ಕೊಕ್ಕು ದೃಢವಾಗಿ ಶಂಕುವಿನಾಕಾರಕ್ಕಿದೆ. ಬಾಲ ಮೋಟಾಗಿ ಚಚ್ಚೌಕವಾಗಿ ಕತ್ತರಿಸಿದ ಹಾಗಿದೆ. ಗೀಜಗನ ಹಕ್ಕಿಗಳ ವಾಸ ಕೃಷಿಯ ಬಯಲು ಪ್ರದೇಶಗಳಲ್ಲಿ. ಸಾಮಾನ್ಯವಾಗಿ ಗುಂಪುಗಳಲ್ಲಿರುವುದೇ ವಾಡಿಕೆ. ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬರ್ಮಾಗಳಲ್ಲಿ ಈ ಹಕ್ಕಿಗಳ ವ್ಯಾಪ್ತಿ ಇದೆ. ಇವುಗಳಲ್ಲಿ ವಲಸೆ ಹೋಗುವ ಕ್ರಮವೂ ಉಂಟು. ಸಾಮಾನ್ಯವಾಗಿ ದೊಡ್ಡ ಗುಂಪುಗಳು ಕೊಯ್ಲಿಗೆ ಬಂದ ಬತ್ತ ಮತ್ತು ಇತರ ಧಾನ್ಯಗಳ ಕೃಷಿಭೂಮಿಗಳ ಬಳಿ ಮಾತ್ರ ಇರುತ್ತವೆ. ಕೆಲವೊಮ್ಮೆ ಬಲಿಯುತ್ತಿರುವ ತೆನೆಗಳನ್ನು ಹಾಳು ಮಾಡುವುದುಂಟು. ಸಾಮಾನ್ಯವಾಗಿ ಸಸ್ಯಾಹಾರಿಗಳಾದ ಇವು ಕೆಲವೊಮ್ಮೆ ಕೀಟಗಳನ್ನೂ ತಿನ್ನುತ್ತವೆ. ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಚೀ ಚೀ ಎಂದು ಕೂಗುತ್ತ ಹೆಣ್ಣನ್ನು ಬಹುದೂರ ಅಟ್ಟಿಸಿಕೊಂಡು ಹೋಗುವುದುಂಟು. ಗೂಡು ಕಟ್ಟುವ ಕಾಲ ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ, ಈ ಅವಧಿ ಮುಂಗಾರು ಮಳೆಗಾಲಕ್ಕೂ ಬತ್ತದ ಅಥವಾ ದವಸಗಳ ಕೊಯ್ಲಿಗೂ ಹೊಂದಿಕೊಳ್ಳುತ್ತದೆ. ಗೀಜಗನ ಹಕ್ಕಿಗಳು ಗೂಡುಕಟ್ಟುವುದರಲ್ಲಿ ಬಹಳ ಬುದ್ಧಿಶಕ್ತಿಯನ್ನೂ ಕುಶಲತೆಯನ್ನೂ ಪ್ರದರ್ಶಿಸುತ್ತದೆ. ಸಾಧಾರಣವಾಗಿ ನದಿ, ಕೆರೆ ನೀರಿನ ಮೇಲೆ ಬಾಗಿರುವ ಮರದ ರೆಂಬೆಗಳ, ಈಚಲುಗರಿಗಳ ತುದಿಯಲ್ಲಿ ಇಲ್ಲವೆ ನೀರಿನಲ್ಲಿ ಬೆಳೆಯುವ ಜೊಂಡುಗಳ ಮಧ್ಯೆ ಗೂಡನ್ನು ನಿರ್ಮಿಸುತ್ತವೆ. ಗೂಡುಗಳ ನಿರ್ಮಾಣಕ್ಕೆ ಬತ್ತದ ಹುಲ್ಲುಗಳನ್ನು ಬಳಸುತ್ತವೆ. ತಮ್ಮ ಕೊಕ್ಕು ಕಾಲುಗಳನ್ನು ಕುಶಲತೆಯಿಂದ ಬಳಸುತ್ತ ರೆಕ್ಕೆಗಳನ್ನು ಬಡಿಯುತ್ತ ಗೂಡು ನಿರ್ಮಿಸುವುದನ್ನು ನೋಡಲು ಚೆನ್ನ. ಗೂಡು ಹೂಜಿಯಂತೆ ಇಲ್ಲವೆ ಬಟ್ಟಿಪಾತ್ರೆಯಂತೆ ಇರುತ್ತದೆ. ಇದರಲ್ಲಿ ಕೊಂಬೆಗೆ ತೂಗುಹಾಕುವ ಭಾಗ, ಮೊಟ್ಟೆಯಿಡುವ ವಿಶಾಲವಾದ ಗುಂಡು ಭಾಗ ಮತ್ತು ಉದ್ದವಾದ ನೇರವಾದ ಪ್ರವೇಶದ್ವಾರ ಭಾಗ ಎಂಬ ಮೂರು ಭಾಗಗಳಿವೆ. ಪ್ರವೇಶದ್ವಾರ ಕೆಳಮುಖವಾಗಿ ತೆರೆಯುತ್ತದೆ. ಮೊಟ್ಟೆಯಿಡುವ ಭಾಗದ ತಳಕ್ಕೆ ಹಸಿ ಜೇಡಿಮಣ್ಣನ್ನು ಮೆತ್ತಿರುವುದುಂಟು. ಗೂಡು ನಿರ್ಮಾಣದ ಕೆಲಸ ಗಂಡಿನದಾದರೆ, ಮೊಟ್ಟೆಗೆ ಕಾವು ಕೊಡುವ ಕೆಲಸ ಹೆಣ್ಣಿನದು. ಸಾಮಾನ್ಯವಾಗಿ ಒಂದು ಗಂಡು ಹಕ್ಕಿ ಹಲವಾರು ಹೆಣ್ಣು ಹಕ್ಕಿ ಗಳೊಂದಿಗೆ ಸಂಪರ್ಕವಿಟ್ಟು ಕೊಂಡಿರುತ್ತದೆ.

ನೇಯ್ಗೆ ಹಕ್ಕಿಯು ಹೆಣ್ಣನ್ನು ಒಲಿಸಿಕೊಳ್ಳುವ ಪರಿ ವಿಶೇಷ ವಾದದ್ದು. ಗಂಡುಹಕ್ಕಿ ತನ್ನ ಪ್ರಭೇದಕ್ಕೆ ವಿಶಿಷ್ಟವಾದ (ಮೇಲೆ ವಿವರಿಸಿರುವ)ಗೂಡನ್ನು ಅರ್ಧ ನಿರ್ಮಿಸಿ ಹೆಣ್ಣಿಗೆ ತೋರಿಸುತ್ತದೆ. ಅದು ಒಪ್ಪಿದರೆ, ಗಂಡು ಮುಂದುವರೆದು ಗೂಡನ್ನು ಪೂರೈಸಿ ಸಂತಾನೋತ್ಪತ್ತಿ ಯಾಗುತ್ತದೆ. ಇಲ್ಲದಿದ್ದಲ್ಲಿ ಗಂಡು ಆ ಗೂಡನ್ನು ಅಷ್ಟಕ್ಕೇ ಬಿಟ್ಟು ಮತ್ತೊಂದು ಗೂಡು ನಿರ್ಮಿಸಿ ಹೆಣ್ಣಿಗೆ ತೋರಿಸುತ್ತದೆ ಮತ್ತು ಪ್ರಕ್ರಿಯೆ ಮುಂದುವರೆಯುತ್ತದೆ. ಹೀಗಾಗಿ ಅರೆನಿರ್ಮಿತ ಅನೇಕ ಗೂಡುಗಳು ನೇಯ್ಗೆ ಹಕ್ಕಿ ಗೂಡು ಮಾಡುವ ಸ್ಥಳಗಳಲ್ಲಿ (ಸಾಮಾನ್ಯವಾಗಿ ನೀರಿನ ಬಳಿ ಬಳಸದ ಆದರೆ ನೀರಿರುವ ಬಾವಿಗಳು) ಕಂಡುಬರುತ್ತದೆ. ಈ ಹಕ್ಕಿಗಳ ವಿಶಿಷ್ಟ ಈ ನಡವಳಿಕೆಯನ್ನು ಜಗತ್ತಿಗೆ ಪರಿಚಯಿಸಿದವರು ಭಾರತದ ಹಕ್ಕಿ ಮನುಷ್ಯ ಸಲೀಂ ಅಲಿ. ಸಲೀಂ ಅಲಿಯವರ ಮುಖ್ಯ ವೈಜ್ಞಾನಿಕ ಕೊಡುಗೆಗಳಲ್ಲಿ ಇದು ಪ್ರಮುಖವಾದದ್ದು **(ನೋಡಿ–ಸಲೀಂ ಅಲಿ)**.

(ಎನ್.ವಿ.ಎ.)

**ಗೀಜೋ ಫ್ರಾಂಕಾಯ್ :** 1787–1874. ಫ್ರಾನ್ಸಿನ ಒಬ್ಬ ರಾಜಕಾರಣಿ, ಇತಿಹಾಸಕಾರ, ಪ್ರಾಟೆಸ್ಟಂಟ್ ಮತಸ್ಥ, ಸಂಪ್ರದಾಯವಾದಿ ರಾಜತ್ವದ ಪ್ರತಿಪಾದಕ. ನೆಪೋಲಿಯನ್ ಪ್ರಭುತ್ವವನ್ನು ವಿರೋಧಿಸಿದ. ರಾಜತ್ವದ ಪುನರ್ ಸ್ಥಾಪನೆಗೆ ಇವನ ಬೆಂಬಲವಿತ್ತು. ಜನನ: 1787ರ ಅಕ್ಟೋಬರ್ 4ರಂದು, ನೀಮ್‌ನಲ್ಲಿ. ತಂದೆ ನ್ಯಾಯವಾದಿ; ಫ್ರಾನ್ಸಿನ ಕ್ರಾಂತಿಯ ಆರಂಭದಲ್ಲಿ ಸ್ಥಳೀಯ ಪೇಟ್ರೀಯಟ್ ಪಕ್ಷದ ನಾಯಕರಲ್ಲೊಬ್ಬ. ಕನ್ವೆನ್ಷನ್ ವಿರುದ್ಧ ಒಕ್ಕೂಟವಾದಿ ಬಂಡಾಯವನ್ನೆಬ್ಬಿಸಿದ್ದಕ್ಕಾಗಿ ತಂದೆ ಮರಣದಂಡನೆಗೆ ಗುರಿಯಾದ. ತಾಯಿ ತನ್ನ ಮಕ್ಕಳೊಂದಿಗೆ ಜಿನೀವಕ್ಕೆ ಹೋದಳು. ಅಲ್ಲಿ ಗೀಜೋ ಲ್ಯಾಟಿನ್, ಗ್ರೀಕ್, ಇಟಾಲಿಯನ್ ಮತ್ತು ಜರ್ಮನ್ ಭಾಷೆಗಳನ್ನು ಕಲಿತ. ಇವನು ವಿಧ್ಯಾಭ್ಯಾಸ ಮಾಡಿ ಸ್ಥಳದ ವಾತಾವರಣ, ಇವನ ತಾಯಿಯ ಧೀಶಕ್ತಿ, ನಿಷ್ಠೆ ಗೀಜೋನ ಮೇಲೆ ಪ್ರಭಾವ ಬೀರಿದುವು. ಆರು ವರ್ಷಗಳ ಅನಂತರ ತಾಯಿ–ಮಕ್ಕಳು ನೀಮ್‌ಗೆ ಹಿಂದಿರುಗಿದರು. 1805ರಲ್ಲಿ ಗೀಜೋ ಪ್ಯಾರಿಸ್‌ಗೆ ನ್ಯಾಯಶಾಸ್ತ್ರ ಕಲಿಯಲು ಹೋದ. 1812ರಲ್ಲಿ ಪ್ಯಾರಿಸ್ ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕನಿಗೆ ಸಹಾಯಕನಾಗಿ ನೇಮಕವಾದ. ಅನಂತರ ಗೀಜೋಗಾಗಿ ಆಧುನಿಕ ಇತಿಹಾಸ ಪ್ರಾಧ್ಯಾಪಕ ಸ್ಥಾನವೊಂದು ನಿರ್ಮಿತವಾಯಿತು. ಇತಿಹಾಸದ ಅಧ್ಯಯನಕ್ಕೆ ಇವನೊಂದು ಹೊಸ ದೃಷ್ಟಿಯನ್ನು ಮೂಡಿಸಲು ಯತ್ನಿಸಿದ. 1814ರಲ್ಲಿ ನೆಪೋಲಿಯನನ ಪತನವಾದ ಅನಂತರ ಗೀಜೋ

ಗೃಹಸಚಿವಾಲಯದಲ್ಲಿ ಮಹಾಕಾರ್ಯದರ್ಶಿಯಾಗಿ ನೇಮಕಗೊಂಡ. ಅನಂತರ ಇವನು ನ್ಯಾಯಸಚಿವಾಲಯದಲ್ಲಿ ಮಹಾಕಾರ್ಯದರ್ಶಿಯಾಗಿದ್ದ. 1816ರಲ್ಲಿ ಗ್ವೀಜೋ ಆ ಹುದ್ದೆಗೆ ರಾಜೀನಾಮೆ ನೀಡಿದ. 1819ರಲ್ಲಿ ಗೃಹಸಚಿವಾಲಯದಲ್ಲಿ ಸ್ಥಳೀಯ ಆಡಳಿತ ವಿಭಾಗದ ನಿರ್ದೇಶಕನಾಗಿದ್ದ. 1820ರಲ್ಲಿ ಈತ ವಿಶ್ವವಿದ್ಯಾಲಯಕ್ಕೆ ಮರಳಿ ಇತಿಹಾಸಕಾರನಾಗಿ ಪತ್ರಿಕೋದ್ಯಮಿಯಾಗಿ ಕೆಲಸ ಮುಂದುವರಿಸಿದ. ಇವನು ಪ್ರಸಿದ್ಧನಾಗಿರುವುದು ಈ ಕಾರ್ಯದಿಂದಾಗಿ.

1830ರಲ್ಲಿ ಈತ ಒಬ್ಬ ಪ್ರತಿನಿಧಿಯಾಗಿ ಶಾಸನಸಭೆಗೆ ಆಯ್ಕೆ ಹೊಂದಿದ. ಇವನ 18 ವರ್ಷಗಳ ರಾಜಕೀಯ ಚಟುವಟಿಕೆ ಆರಂಭವಾದದ್ದು ಆಗ. ದೊರೆ 10ನೆಯ ಚಾರಲ್ಸನ ಆಳ್ವಿಕೆಯ ಉದಾರವಾದಿ ಧೋರಣೆಗಳಲ್ಲಿ ಇವನಿಗೆ ನಂಬಿಕೆ ಹೋಯಿತು. ಲೂಯಿ ಫಿಲಿಪ್ಪನ ಆಡಳಿತದಲ್ಲಿ ಗೀಜೋ ಗೃಹಶಾಖಾ ಮಂತ್ರಿಯಾಗಿ (1830) ಮೂರು ತಿಂಗಳುಗಳ ಕಾಲ ಇದ್ದ. ಮತ್ತೆ 1832ರಲ್ಲಿ ಶಿಕ್ಷಣಮಂತ್ರಿಯಾಗಿ (ನಡುವೆ ಆರು ತಿಂಗಳ ವಿನಾ) 1839ರವರೆಗೂ ಆ ಸ್ಥಾನದಲ್ಲಿದ್ದು ಅನೇಕ ಶಿಕ್ಷಣ ಸುಧಾರಣೆಗಳನ್ನು ತಂದ. 1840ರಲ್ಲಿ ಇವನಿಗೆ ಲಂಡನಿನಲ್ಲಿ ರಾಯಭಾರಿ ಹುದ್ದೆ ಪ್ರಾಪ್ತವಾಯಿತು. ಬ್ರಿಟನಿನೊಂದಿಗೆ ಫ್ರಾನ್ಸಿನ ಸ್ನೇಹ ಸ್ಥಾಪಿಸಲು ಇವನು ಪ್ರಯತ್ನ ನಡೆಸಿದ. ಅದೇ ವರ್ಷ ಅಕ್ಟೋಬರ್‌ನಲ್ಲಿ ಮಾರ್ಷಲ್ ಸೌಲ್ಟನ ಸರ್ಕಾರದಲ್ಲಿ ವಿದೇಶಾಂಗ ಖಾತೆಯ ಮಂತ್ರಿಯಾಗಿದ್ದ. ಸೌಲ್ಟ ಮುದುಕನಾಗಿದ್ದುದರಿಂದ ತಾನೇ ಪ್ರಧಾನ ಮಂತ್ರಿಯ ಅಧಿಕಾರ ಚಲಾಯಿಸುತ್ತಿದ್ದ ಗ್ವೀಜೋ 1847ರಲ್ಲಿ ಪ್ರಧಾನಿಯಾಗಿದ್ದು, ಅನಂತರ ರಾಜೀನಾಮೆ ನೀಡಿದ. ರಾಜತ್ವವೂ ಕುಸಿಯಿತು.

ಗೀಜೋ ಬೆಲ್ಜಿಯಂನಲ್ಲೂ ಇಂಗ್ಲೆಂಡಿನಲ್ಲೂ ತಲೆಮರೆಸಿಕೊಂಡಿದ್ದು ಅನಂತರ ಫ್ರಾನ್ಸಿಗೆ ಮರಳಿದ. (1849). ತನ್ನ ಕೊನೆಯ 25 ವರ್ಷಗಳ ಅವಧಿಯಲ್ಲಿ ಇವನು ಆಂತರಿಕ ರಾಜಕೀಯದಲ್ಲಿ ಭಾಗವಹಿಸಲಿಲ್ಲ. ಗೀಜೋ ಅನೇಕ ಅಕಾಡೆಮಿಗಳ ಸದಸ್ಯನಾಗಿ ಆಯ್ಕೆ ಹೊಂದಿದ. ಇವನು ತೀರಿಕೊಂಡದ್ದು 1874ರ ಅಕ್ಟೋಬರ್ 12 ರಂದು. ಗ್ವೀಜೋ ಅನೇಕ ಇತಿಹಾಸ ಗ್ರಂಥಗಳನ್ನು ರಚಿಸಿದ್ದಾನೆ. ಹಿಸ್ಟಾಯಿರ್ ದ ಲ ರೆವಲ್ಯೂಷನ್ ದ ಆಂಗ್ಲಟೆರ್, ಜನರಲ್ ಹಿಸ್ಟೊರಿ ಆಫ್ ಸಿವಿಲಿಸೇಷನ್ ಇನ್ ಮಾಡರ್ನ್ ಯುರೋಪ್–ಇವು ಇವನ ಮುಖ್ಯ ಕೃತಿಗಳು. (ಎಸ್.ಬಿ.ಪಿ.; ಕೆ.ಜಿ.)

**ಗೀಟ್ರೀ, ಸಾಚಾ :** 1885–1957. ಫ್ರೆಂಚ್ ನಟ, ನಾಟಕಕಾರ, ಚಲನಚಿತ್ರ ನಿರ್ಮಾಪಕ ಹಾಗು ನಿರ್ದೇಶಕ. ಹುಟ್ಟಿದುದು ರಷ್ಯದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ. ತಂದೆ ಲೂಸಿಯನ್ ಗೀಟ್ರೀ ರಂಗಭೂಮಿಯ ನಟ. ವಂಶಾನುಗುಣವಾಗಿ ಬಂದ ಅಭಿನಯಕಲೆಯ ಜೊತೆಗೆ ಸ್ವಪ್ರತಿಭೆಯೂ ಸೇರಿ 21ರ ಕಿರಿಯ ಪ್ರಾಯದಲ್ಲೇ ನೋನೊ ಎಂಬ ನಾಟಕವನ್ನು ಬರೆದು ಪ್ರಯೋಗ ಮಾಡಿ ಯಶಸ್ಸನ್ನು ಸಂಪಾದಿಸಿದ. ಪ್ರೋತ್ಸಾಹಿತನಾಗಿ ಚೆಙ್‌ಲೆ ಜೋವಾಕ್ವೆಸ್ (1906) ಎಂಬ ಮತ್ತೊಂದು ನಾಟಕವನ್ನು ಬರೆದು ಪ್ರದರ್ಶಿಸಿದ. ಹೀಗೆಯೇ 1908ರಲ್ಲಿ ಪೆಟೀಟ್ ಹಾಲ್ಲಂಡ್ ಮತ್ತು ಲೆ ಸ್ಕ್ಯಾಂಡಲ್ ಡಿ ಮಾಂಟ್ ಕಾರ್ಲೋ ಎಂಬ ಮತ್ತೆರಡು ನಾಟಕಗಳನ್ನು ರಂಗಭೂಮಿಯ ಮೇಲೆ ತಂದ. 1911ರಲ್ಲಿ ಇವನ ಅತ್ಯುತ್ಕೃಷ್ಟ ನಾಟಕಗಳಲ್ಲಿ ಒಂದಾದ ಲೆ ವೀಲ್ಯೂರ್ ಡಿ ನ್ಯೂಟ್ ಮತ್ತು ಉನ್ ಬೊ ಮ್ಯಾರಿಯೇಜ್ ಎಂಬ ನಾಟಕಗಳೂ ಪ್ರಕಾಶಗೊಂಡವು.

ಲಘು ಪ್ರಹಸನಗಳಲ್ಲಿ ಸಾಚಾ ಗೀಟ್ರೀ ಎತ್ತಿದ ಕೈ ಎಂದೆನಿಸಿ ಬಹುಜನರ ಮೆಚ್ಚುಗೆಯನ್ನು ಪಡೆದ. ಮೋಲ್ಯೇರನ ಹರ್ಷಕಗಳಿಗೆ ಸಮನಾದ ಶ್ರೇಷ್ಠ ಪ್ರಹಸನಗಳನ್ನು ಈತ ಬರೆದಿದ್ದಾನೆ. ರಂಗದ ಮೇಲೆ ಪ್ರದರ್ಶಿತವಾದಾಗ ಮನ ಸೆಳೆಯುವಂತಿದ್ದರೂ ಈ ನಾಟಕಗಳು ಓದಿದಾಗ ತೀರ ಸಾಧಾರಣ ಎನಿಸುತ್ತವೆ. ನಾಟಕ ಪ್ರಯೋಗ ತಂತ್ರ ಪರಿಣಿತನೂ ಅಭಿನಯ ವಿಶಾರದನೂ ಆಗಿದ್ದ ಗೀಟ್ರೀಯ ನಿರ್ದೇಶನ ಕೌಶಲದಿಂದ ಅವು ರಂಗದ ಮೇಲೆ ರಂಜಿಸುತ್ತಿದ್ದವು. ಅವು ಎಂದಿಗೂ ಅಲ್ಪತೆಗಿಳಿಯದೆ ಸದಾ ಜನಮನೋರಂಜನೆ ಮಾಡುತ್ತಿದ್ದುದರಿಂದ ಜಾರ್ಜ್ ಬರ್ನಾಡ್ ಷಾ ಇವನ್ನು ಬಹುವಾಗಿ ಪ್ರಶಂಸಿಸಿದ್ದಾನೆ.

ಈತ ಸುಮಾರು 90 ನಾಟಕಗಳನ್ನು ಬರೆದು ಆಡಿಸಿದ. ತನ್ನ ತಂದೆಯ ಅಭಿನಯಕ್ಕೆಂದು ವಿಶೇಷವಾಗಿ ಬರೆದ ನಾಟಕಗಳಾದ ಡಿ ಬ್ಯೂರೊ (1918), ಬಿರೆಂಜರ್ (1920), ಪ್ಯಾಶ್ಚರ್ (1919) ನಿಜವಾಗಿಯೂ ಪ್ರತಿಭಾಪೂರ್ಣವಾಗಿವೆ

ಗೀಟ್ರೀ ಚಲನಚಿತ್ರ ಪ್ರಪಂಚವನ್ನೂ ಪ್ರವೇಶಿಸಿ ಹಲವಾರು ಚಿತ್ರಗಳ ನಿರ್ಮಾಪಕನೂ ನಿರ್ದೇಶಕನೂ ಆಗಿ ಹೆಸರುಗಳಿಸಿದ. 1935ರ ಅನಂತರ ಈತನ ದಿಗ್ದರ್ಶನದಲ್ಲಿ ನಿರ್ಮಿತವಾದ ಚಿತ್ರಗಳಲ್ಲಿ ರೋಮನ್ ಡಿ' ಉನ್ ಟ್ರಿಚ್ಯೂರ್ ಮತ್ತು ನೆಪೋಲಿಯನ್ ಎಂಬ ಚಿತ್ರಗಳು ಬಹು ಪ್ರಸಿದ್ಧವಾದವು. 1935ರಲ್ಲಿ ಈತನ ಆತ್ಮಕಥೆ ಮೆಮಾಯಿರ್ಸ್ ಡಿ ಉನ್ ಟ್ರಿಚ್ಯೂರ್ ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಇಫ್ ಐ ರಿಮೆಂಬರ್ ರೈಟ್ ಎಂದು ಈ ಪುಸ್ತಕ ಇಂಗ್ಲಿಷಿಗೂ ಭಾಷಾಂತರವಾಗಿದೆ. ಗೀಟ್ರೀಯ ಜೀವನ ಅವನ ನಾಟಕಗಳ ವಸ್ತುವಿನಂತೆಯೇ ಚತುರ, ಅದ್ಭುತ ಹಾಗೂ ಅಸಂಭಾವ್ಯ; ಅವನ ವ್ಯಕ್ತಿತ್ವ ಸದಾ ಆಕರ್ಷಕ, ಸಂಕೀರ್ಣ–ಎಂದು ವಿಮರ್ಶಕರ ಅಭಿಪ್ರಾಯ. (ಕೆ.ಬಿ.ಪಿ.)

**ಗೀತಪ್ರಿಯ :** 1931–. ಕನ್ನಡ ಚಲನಚಿತ್ರ ನಿರ್ದೇಶಕ, ಗೀತೆ ಹಾಗೂ ಸಂಭಾಷಣೆಯ ರಚನಕಾರ. ಇವರ ನಿಜವಾದ ಹೆಸರು ಲಕ್ಷ್ಮಣರಾವ್ ಮೋಹಿತೆ. 1931ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ರಾಮರಾವ್ ಮೋಹಿತೆ, ತಾಯಿ ಲಕ್ಷ್ಮೀಬಾಯಿ. ಬೆಂಗಳೂರಿನ ಮಲ್ಲೇಶ್ವರಂ ಪ್ರೌಢಶಾಲೆಯಲ್ಲಿ ಓದಿದ ಇವರಿಗೆ ಕವಿ ಹೊಯಿಸಳರು ಗುರುಗಳಾಗಿದ್ದರು. ಇಂಟರ್‌ಮೀಡಿಯಟ್‌ನಲ್ಲಿ ಜಿ.ಪಿ.ರಾಜರತ್ನಂ ಗುರುಗಳಾಗಿ ದೊರೆತರು. ಸಾಹಿತ್ಯ ದಿಗ್ಗಜಗಳ ಪರಿಚಯ ಪ್ರಭಾವಗಳಿಂದಾಗಿ ಸುಪ್ತವಾಗಿದ್ದ ಇವರ ಸಾಹಿತ್ಯ ರಚನಾಶಕ್ತಿಗೆ ಇಂಬು ದೊರೆಯಿತು. ಇವರು ಪ್ರೌಢಶಾಲೆಯ ದಿನಗಳಲ್ಲೇ ಪದ್ಯ, ನಾಟಕಗಳನ್ನು ಬರೆಯಲಾರಂಭಿಸಿದರು. ಇವರ ರಚನೆಗಳು ಅಂದಿನ ತಾಯಿನಾಡು ಪತ್ರಿಕೆಯಲ್ಲಿ ಬೆಳಕು ಕಂಡವು. ಶಾಲಾದಿನಗಳಲ್ಲಿಯೇ



ಉರ್ದು ಶಾಯರಿಗಳು ಇವರನ್ನು ವಿಶೇಷವಾಗಿ ಆಕರ್ಷಿಸಿದವು. ನಾಟಕದತ್ತ ಒಲವು ಬೆಳೆದು ಹವ್ಯಾಸಿ ಕಲಾವಿದರ ಒಡನಾಟ ಒದಗಿ ಬಂತು. ಆ ವೇಳೆಯಲ್ಲಿ ಇವರು ಬರೆದ ಮದ್ವೆ ಮಾರ್ಕೆಟ್ ನಾಟಕ ಅಂದಿನ ದಿನಗಳಲ್ಲಿ ಅತ್ಯಂತ ಜನಪ್ರಿಯತೆ ಗಳಿಸಿತು. ತಾವೇ ನಾಟಕಗಳಲ್ಲಿ ಕೂಡ ಅಭಿನಯಿಸಿದರು. ಹೆಸರಾಂತ ಬಿ.ಆರ್.ಕೃಷ್ಣಮೂರ್ತಿಯವರು ಶ್ರೀರಾಮಪೂಜಾ ಚಿತ್ರಕ್ಕೆ ಗೀತರಚನಾಕಾರರಾಗಿ ಇವರನ್ನು ನಿಯೋಜಿಸಿದರು. ಮೋಹಿತೆಯವರಿಗೆ ಗೀತಪ್ರಿಯ ಎಂಬ ಕಾವ್ಯನಾಮ ಇಟ್ಟವರು ಸಂಗೀತ ಸಂಯೋಜಕ ವಿಜಯಭಾಸ್ಕರ್. ಹೀಗೆ ಗೀತಪ್ರಿಯರಾಗಿ ಇವರು ಚಿತ್ರಗಳಿಗೆ ಗೀತರಚನೆಯ ಜವಾಬ್ದಾರಿ ಹೊತ್ತರು. ಭಾಗ್ಯ ಚಕ್ರ (1956) ಎಂಬುದು ಇವರು ಸಂಭಾಷಣೆ ಹಾಗೂ ಹಾಡುಗಳನ್ನು ರಚಿಸಿದ ಮೊದಲ ಚಿತ್ರ. ಇವರಲ್ಲಿ ಅಡಗಿದ್ದ ನಿರ್ದೇಶಕನನ್ನು ಗುರುತಿಸಿದವರು ಕರ್ನಾಟಕ ಫಿಲಂಸ್ ಸಂಸ್ಥೆಯಲ್ಲಿದ್ದ ಎಂ.ವಿ. ವೆಂಕಟಾಚಲಂ. ಅವರು ತಮ್ಮ ಮಣ್ಣಿನ ಮಗ ಚಿತ್ರದ ನಿರ್ದೇಶನದ ಹೊಣೆಗಾರಿಕೆಯನ್ನು ಇವರಿಗೆ ವಹಿಸಿದರು (1968). ಬೆಂಗಳೂರಿನ ಕಪಾಲಿ ಚಿತ್ರ ಮಂದಿರದಲ್ಲಿ ಶತದಿನೋತ್ಸವ ಕಂಡ ಪ್ರಥಮ ಕನ್ನಡ ಚಿತ್ರವೆಂಬ ಹೆಗ್ಗಳಿಕೆಗೆ ಈ ಚಿತ್ರ ಪಾತ್ರವಾಯಿತು. ಎಂ.ಪಿ. ಶಂಕರರ ಕಾಡಿನ ರಹಸ್ಯ (1969) ಇವರು ನಿರ್ದೇಶಿಸಿದ ಎರಡನೆಯ ಚಿತ್ರ. ಅದೇ ವರ್ಷ ಮದುವೆ, ಮದುವೆ, ಮದುವೆ, ಎಂಬ ಹಾಸ್ಯ ಚಿತ್ರವನ್ನೂ ಇವರು ನಿರ್ದೇಶಿಸಿ ದರು. ಇವರು ನಿರ್ದೇಶಿಸಿದ ಬಹುತೇಕ ಚಿತ್ರಗಳ ಸಾಹಿತ್ಯವನ್ನು ರಚಿಸಿದವರು ಇವರೇ. ಹಿಂದಿ, ಮರಾಠಿ, ಉರ್ದು, ಕನ್ನಡ ಭಾಷೆಗಳಲ್ಲಿ ಇವರಿಗಿರುವ ಪರಿಣತಿಯಿಂದಾಗಿ ಕವಿಯಾಗಿ, ಸಾಹಿತಿಯಾಗಿ ತಮ್ಮ ಕಲ್ಪನೆಗಳಿಗೆ ಈ ಚಲನಚಿತ್ರಗಳು ಒಂದು ಯಶಸ್ವಿ ಮಜಲಾಗಿ ಪರಿಣಮಿಸಿದುವು. ಪುಟಾಣಿ ಏಜೆಂಟ್ 1 2 3, ಪ್ರಚಂಡ ಪುಟಾಣಿಗಳು ಇವರ ನಿರ್ದೇಶನದಲ್ಲಿ ಮೂಡಿಬಂದ ಮಕ್ಕಳ ಚಿತ್ರಗಳು. ಪುಟಾಣಿ ಏಜೆಂಟ್ 1 2 3 ಇವರದೇ ನಿರ್ದೇಶನದಲ್ಲಿ ಅನ್ಮೋಲ್ ಸಿತಾರೆ ಎಂಬ ಹೆಸರಿನಲ್ಲಿ ಹಿಂದಿ ಚಲನಚಿತ್ರವಾಗಿ ಪುನರ್‌ನಿರ್ಮಾಣಗೊಂಡಿದೆ. ಇವಲ್ಲದೆ ಕನ್ನಡ ಕಾದಂಬರಿಗಳನ್ನು ಆಧರಿಸಿ ಅನೇಕ ಚಲನಚಿತ್ರಗಳನ್ನು ಇವರು ನಿರ್ದೇಶಿಸಿದ್ದಾರೆ. ಯಾವ ಜನ್ಮದ ಮೈತ್ರಿ, ಬೆಸುಗೆ, ಬೆಳುವಲದ ಮಡಿಲಲ್ಲಿ, ಹೊಂಬಿಸಿಲು, ಸುವರ್ಣಸೇತುವೆ ಅವುಗಳಲ್ಲಿ ಮುಖ್ಯವಾದವು.

ಭಾರತೀಯ ಸಂಸ್ಕೃತಿ, ಪರಂಪರೆ, ಶ್ರಮ ಜೀವಿಗಳು, ಮಣ್ಣಿನ ಮಕ್ಕಳ ಬಗೆಗೆ ಅಪಾರ ಕಾಳಜಿ ಸೈನಿಕ ಕುಟುಂಬದಿಂದ ಬಂದ ಕಾರಣ, ಜೈ ಜವಾನ್, ಜೈ ಕಿಸಾನ್ ಕಲ್ಪನೆಗೆ ಒತ್ತು ಕೊಡುವುದು ಇವರ ಚಿತ್ರಗಳಲ್ಲಿನ ವಿಶೇಷ. ಇವರ ಚಿತ್ರಗಳಲ್ಲಿ ನಾಯಕ ಭಾರತೀಯ ಮೌಲ್ಯಗಳ ಪ್ರತಿಪಾದಕ, ಹಿಂಸೆಯಿಂದ ದೂರ, ನ್ಯಾಯಪರ, ನಾಯಕಿಯೂ ಆದರ್ಶನಾರಿ. ಇವರು ತಮ್ಮ ನಿರ್ದೇಶನದ ಚಿತ್ರಗಳಲ್ಲಿ ಉತ್ತಮ ಮೌಲ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ.

ಇವರಿಗೆ ಅನೇಕ ಗೌರವ, ಪ್ರಶಸ್ತಿ, ಸನ್ಮಾನಗಳು ದೊರೆತಿವೆ. ಪುಟ್ಟಣ್ಣ ಕಣಗಾಲ್ ಪ್ರಶಸ್ತಿ(1992–93),ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಕೆ.ಸಿ.ಎನ್.ಪ್ರಶಸ್ತಿ

(1993), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1992), ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ರಾಜಕುಮಾರ್ ಪ್ರಶಸ್ತಿ (1996–97) –ಇವು ಕೆಲವು ಮುಖ್ಯ ಪ್ರಶಸ್ತಿಗಳು. (ಎಚ್.ಆರ್.ಎಲ್.)

**ಗೀತರೂಪಕ :** ಸಂಗೀತಕ್ಕೆ ಅಳವಡಿಸಿರುವ ನಾಟಕಗಳಿಗೆ ಈ ಹೆಸರಿದೆ. ಇವನ್ನು ಸಂಗೀತನಾಟಕ, ಗೇಯರೂಪಕ ಎಂದೂ ಕರೆವುದಿದೆ. ಸಾಮಾನ್ಯವಾಗಿ ಹಿಂದಿನ ಮತ್ತು ಇಂದಿನ ಅನೇಕ ನಾಟಕಗಳಲ್ಲಿ ನಡುನಡುವೆ ವಿಫುಲವಾಗಿ ಛಂದೋಬದ್ಧವಾದ ಪದ್ಯಗಳು, ಹಾಡುಗಳೂ ಇರುತ್ತವೆ. ಅವನ್ನು ರಾಗವಾಗಿ ಹಾಡುವುದೂ ಸಂಪ್ರದಾಯ. ಆದರೆ ಅವುಗಳಲ್ಲಿ ಉಳಿದ ಭಾಗಗಳು ಗದ್ಯದಲ್ಲಿರುತ್ತವೆ. ಆದ್ದರಿಂದ ಆ ಭಾಗಗಳನ್ನು ಯಾರೂ ಹಾಡುವುದಿಲ್ಲ. ಹೀಗಾಗಿ ಅವನ್ನು ಗೀತರೂಪಕಗಳೆನ್ನಲಾಗದು. ಗೀತರೂಪಕಗಳಲ್ಲಿ ಎಲ್ಲವೂ ಗೇಯಯೋಗ್ಯವಾದ ಮಾತುಗಳೇ ಬರುತ್ತವೆ.

ಇಂದಿನ ರಂಗಭೂಮಿಯ ಪ್ರದರ್ಶನ ವೈವಿಧ್ಯಗಳಲ್ಲಿ ಗೀತರೂಪಕ ಪರಿಪೂರ್ಣವಾದ ಒಂದು ಪ್ರಭೇದವಾಗಿ ಬೆಳೆದಿದೆ. (ಮುಂದೆ ಆಪೆರ ಎಂಬ ಉಪಶಿರೋನಾಮೆಯಲ್ಲಿ ಇದರ ವಿವರಗಳಿವೆ.) ಇಲ್ಲಿ ಸಾಹಿತ್ಯ ಸಂಗೀತಗಳೆರಡಕ್ಕೂ ಒಂದಕ್ಕೊಂದು ಪೋಷಕವಾಗಿ, ಒಂದಕ್ಕೊಂದು ಎರಕಗೊಂಡಂತೆ ಜೊತೆ ಸೇರುತ್ತವೆ. ಸಂಗೀತದಲ್ಲಿ ರಸಾಭಿವ್ಯಕ್ತಿಗೆ ಅವಕಾಶ ಹೆಚ್ಚು. ಭಾವಗಳು ಪ್ರಭಾವಪೂರ್ಣವಾಗಿ, ತೀವ್ರತೆಯಿಂದ ಈ ಮಾಧ್ಯಮದಲ್ಲಿ ಪ್ರಕಟವಾಗುತ್ತವೆ; ಆದರೆ, ವಿವಿಧ ಭಾವ, ರಸಗಳ ಚಿತ್ರಣ ಒಡಮೂಡಿದರೂ ಸನ್ನಿವೇಶಗಳ ವಿವರವಾದ ಪರಿಸ್ಥಿತಿಗಳ ಅರಿವು ಮಾತುಗಳಷ್ಟು ಸ್ಪಷ್ಟವಾಗುವುದು ಇಲ್ಲಿ ಕಷ್ಟಸಾಧ್ಯ. ಈ ಕಾರ್ಯವನ್ನು ಇಲ್ಲಿ ಗೀತಗಳು ಮಾಡುತ್ತವೆ. ಆಗ ರಂಗಭೂಮಿಯ ಮೇಲೆ ಪರಿಪೂರ್ಣವಾದ ಪ್ರದರ್ಶನ ಸ್ಥಿತಿಯೊದಗುತ್ತದೆ.

ಗೀತರೂಪಕಗಳಲ್ಲಿ ಸಾಹಿತ್ಯ ಅಥವಾ ಗೀತಗಳನ್ನು ಪಾತ್ರವರ್ಗ ಮತ್ತು ಹಿಮ್ಮೇಳದವರು ಹಾಡುತ್ತಾರೆ. ಸಂಗೀತ ವಾದ್ಯಮೇಳದ ರೂಪದಲ್ಲಿ ಮೊದಲಿನಿಂದ ಕೊನೆಯವರೆಗೂ ಜೊತೆಗೂಡಿರುತ್ತದೆ. ಕೆಲವೊಮ್ಮೆ ರೂಪಕಗಳ ಆರಂಭ, ಮಧ್ಯಂತರಗಳಲ್ಲಿ ಪಾತ್ರಗಳೆರಡರ ಮಾತುಗಳ ನಡುವೆ, ವಿಶೇಷ ರಸಭಾವಗಳ ನಿರೂಪಣೆಗಾಗಿ ವಾದ್ಯಮೇಳವನ್ನು ಮಾತ್ರ ಹೊಂದಿಸಿಕೊಳ್ಳುವುದೂ ಇದೆ.

ಸ್ಥೂಲವಾಗಿ ನಾವು ಗೀತರೂಪಕಗಳೆಂದು ಕರೆಯುವ ಪ್ರದರ್ಶನ ಪ್ರಕಾರವನ್ನು ಅವುಗಳ ನಿರೂಪಣಾ ವೈವಿಧ್ಯಗಳಿಗನುಸಾರವಾಗಿ ಹಲವು ರೀತಿಗಳಲ್ಲಿ ವರ್ಗೀಕರಿಸಲು ಸಾಧ್ಯವಾಗುತ್ತದೆ. ಹಾಡುಗಳನ್ನು ಹಿನ್ನಲೆಯಲ್ಲಿ ಮಾತ್ರ ಇರಿಸಿಕೊಂಡು ಅವುಗಳಿಗನುಗುಣವಾಗಿ ಪಾತ್ರಗಳು ರಂಗದ ಮೇಲೆ ಮೂಕಾಭಿನಯವೆಸಗುವ ರೀತಿಯವು ಮೂಕರೂಪಗಳು. ಬಿಳಿದೆರೆಯ ಹಿಂದೆ ಪಾತ್ರಗಳಿದ್ದು ಅವುಗಳ ಅಭಿನಯವನ್ನು ತೆರೆಯ ಮೇಲೆ ಛಾಯರೂಪದಲ್ಲಿ ಮೂಡಿಸುವ ವಿಧಾನವು ಛಾಯರೂಪಕ. ಹಿನ್ನಲೆಯ ಹಾಡುಗಳಿಗನುಗುಣವಾಗಿ ರಂಗದ ಮೇಲೆ ಪಾತ್ರಗಳು ನೃತ್ಯಾಭಿನಯ ಮಾಡಿದಾಗ ಇಲ್ಲವೇ ಹಾಡುಗಳೇ ಇಲ್ಲದೆ ವಾದ್ಯಸಂಗೀತದ ಹಿನ್ನಲೆಯಲ್ಲಿ ಕೇವಲ ನಾಟ್ಯರೂಪದಲ್ಲಿ ನಿರೂಪಣೆಯೊದಗಿಸಿದಾಗ ಅವು ನೃತ್ಯರೂಪಕಗಳಾಗುತ್ತವೆ.

ಭಾರತದಲ್ಲಿ ಪ್ರಚಾರದಲ್ಲಿರುವ ಹಳೆಯ ಗೀತರೂಪಕಗಳು ಈ ಬಗೆಯ ನಿರ್ದಿಷ್ಟವಾದ ವಿಭಜನೆಗೆ ಅಳವಡುವುದಿಲ್ಲ. ಅವು ಗೀತನೃತ್ಯಗಳ ಪ್ರತ್ಯೇಕತೆಯನ್ನು ಇರಿಸಿಕೊಂಡು ರಚನೆಗೊಂಡವುಗಳೂ ಅಲ್ಲ; ಆ ರೀತಿಯಲ್ಲಿ ಬೆಳೆದುಬಂದುವುಗಳೂ ಅಲ್ಲ. ಗೀತರೂಪಕಗಳಲ್ಲಿ ನೃತ್ಯವೂ ನೃತ್ಯರೂಪಕಗಳಲ್ಲಿ ಗೀತವೂ ಬೆರೆದುಕೊಂಡೇ ರೂಪಕಗಳು ರಚನೆಯಾಗಿರುವ ಕಾರಣ ಭಾರತೀಯ ಸಂಗೀತವೆಂದರೆ ಗೀತವಾದ್ಯ ನೃತ್ಯಗಳೆಂಬ ತ್ರಿವಿಧಗಳ ಸಮ್ಮಿಲನವಾಗಿದ್ದುದೂ ಇರಬಹುದು. ಗೀತಂ ವಾದ್ಯಂಚ ನೃತ್ಯಂಚ ತ್ರಯಂ ಸಂಗೀತಮುಚ್ಯತೇ ಎನ್ನುವುದು ಸಂಗೀತಕ್ಕೆ ಹಿಂದಿನ ಶಾಸ್ತ್ರಕಾರರು ಹೇಳಿದ ಲಕ್ಷಣ. ಮುಂದೆ ಸಂಗೀತ ನೃತ್ಯಗಳು ತಮ್ಮ ಪ್ರತ್ಯೇಕತೆಯನ್ನು ಪ್ರದರ್ಶಿಸಿ ಬೆಳೆದಾಗ ಲಾಕ್ಷಣಿಕರು ಗೀತ ವಾದ್ಯೋಭಯಂ ಯತ್ರ ಸಂಗೀತಮಿತಿ ಕೇಚನ ಎಂದರು.

ಭಾರತೀಯ ಗೀತರೂಪಕಗಳ ಮೂಲವನ್ನು ಪ್ರಚಲಿತಶಕದ ಪ್ರಾರಂಭದಿಂದಲೇ ಗುರುತಿಸಬಹುದು. ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ ನಾಲ್ಕನೆಯ ಅಂಕ ಅಭಿನಯದೊಂದಿಗೆ ಹಾಡಿದ ಗೀತಗಳ ಸಂಕಲನವಾಗಿದೆ. ಪುರೂರವ ಊರ್ವಶಿಯ ವಿರಹದಿಂದ ಉನ್ಮತ್ತನಾಗಿ ವನದಲ್ಲಿ ಅಲೆಯುತ್ತ ಗಿಡಮರ ಪಕ್ಷಿಸಂಕುಲಗಳನ್ನು ಕುರಿತು ಊರ್ವಶಿಯನ್ನು ಕಂಡಿರಾ ಎಂದು ಕೇಳುವ ಸಂದರ್ಭಗಳೆಲ್ಲ ಸಂಸ್ಕೃತ ಭಾಷೆಯಲ್ಲಿರದೆ ಪ್ರಾಕೃತ ಅಪಭ್ರಂಶ ಗೀತಗಳಾಗಿವೆ. ಇವನ್ನು ರಂಗನಿರ್ದೇಶನದಲ್ಲಿ ಕವಿ ಚರ್ಚರಿಕಾ ಎಂದು ಕರೆದಿದ್ದಾನೆ. ಚರ್ಚರಿಕಾ ಎಂದರೆ ನೃತ್ಯಗೀತೆ, ಸಂಗೀತ ನೃತ್ಯವಿಧಾನವಿಶೇಷ ಎಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ಕಥಾಭಾಗಗಳನ್ನು ರಂಗದ ಮೇಲೆ ಪ್ರದರ್ಶಿಸುವಾಗ ಗೀತನೃತ್ಯರೂಪಕಗಳಾಗಿ ಪ್ರದರ್ಶಿಸುವ ಕ್ರಮವೂ ಭರತಖಂಡದಲ್ಲಿ ಹಿಂದಿನಿಂದಲೇ ಇತ್ತೆಂದು ಕಂಡುಬರುತ್ತದೆ.

ಸಂಪೂರ್ಣ ಕಥಾನಕವನ್ನು ಗೀತನೃತ್ಯವಾಗಿ ಪ್ರದರ್ಶಿಸಿದ ಆಧುನಿಕ ಗೀತರೂಪಕಗಳ ಮತ್ತು ನೃತ್ಯರೂಪಕಗಳ ಮೂಲವನ್ನು 12ನೆಯ ಶತಮಾನದ ಜಯದೇವ ಕವಿಯ ಗೀತಗೋವಿಂದ ಕಾವ್ಯದಲ್ಲಿ ಕಾಣುತ್ತೇವೆ. ಇದು ನೃತ್ಯಸಂಗೀತಗಳಿಂದಲೇ ಪ್ರದರ್ಶಿಸುವ ಸಲುವಾಗಿ ರಚಿಸಲ್ಪಟ್ಟ ಕಾವ್ಯವೆಂಬುದನ್ನು ಅಷ್ಟಪದಿಗಳಿಗೆ ಹೇಳಿರುವ ರಾಗತಾಳಗಳ ಸ್ಪಷ್ಟವಾದ ನಿರ್ದೇಶನದಿಂದ ಕಂಡುಕೊಳ್ಳಬಹುದು. ಈ ಸಂಸ್ಕೃತ ಕಾವ್ಯ 12 ಸರ್ಗಗಳಿಂದಲೂ 24 ಅಷ್ಟಪದಿಗಳಿಂದಲೂ ಕೂಡಿದೆ. ಇದನ್ನೇ ಅನುಸರಿಸಿದ ಇನ್ನೊಂದು ಸಂಸ್ಕೃತಗೀತ–ನೃತ್ಯರೂಪಕವೆಂದರೆ 16ನೆಯ ಶತಮಾನದ ಯತಿನಾರಾಯಣತೀರ್ಥರ ಕೃಷ್ಣಲೀಲಾ ತರಂಗಿಣಿ. ಈ ಕಾವ್ಯ 12 ತರಂಗಗಳಿಂದಲೂ ಹಲವು ಶ್ಲೋಕ, ಗದ್ಯನಿರ್ದೇಶನಗಳಿಂದಲೂ ಕೂಡಿದೆ.

ಕರ್ನಾಟಕ ಸಂಗೀತ ಪಿತಾಮಹರೆನಿಸಿದ ವಾಗ್ಗೇಯಕಾರ ತ್ಯಾಗರಾಜರು (1759–1847) ನೌಕಚರಿತ್ರೆ, ಪ್ರಹ್ಲಾದಭಕ್ತಿವಿಜಯ ಮತ್ತು ಸೀತಾರಾಮವಿಜಯ ಎಂಬ ಮೂರು ತೆಲುಗು ಸಂಗೀತನಾಟಕಗಳನ್ನು ಬರೆದಿದ್ದಾರೆ. ಅರುಣಾಚಲ ಕವಿರಾಯ (1711–1778) ಎಂಬುವವರು ತಮಿಳಿನಲ್ಲಿ ರಾಮನಾಟಕ ಎಂಬವ ಸಂಗೀತ ನಾಟಕವನ್ನು ರಚಿಸಿದ್ದಾರೆ. 19ನೆಯ ಶತಮಾನದಲ್ಲಿದ್ದ ಗೋಪಾಲಕೃಷ್ಣಭಾರತಿ ಎಂಬುವರಿಂದ ರಚಿತವಾದ ನಂದನಾರ್ ಚರಿತ್ರೆ ತಮಿಳಿನಲ್ಲಿ ಅತ್ಯಂತ ಪ್ರಸಿದ್ಧವಾದ ಸಂಗೀತನಾಟಕವೆನಿಸಿದೆ. ಇವುಗಳೆಲ್ಲವನ್ನು ಗೀತನಾಟಕ ಎನ್ನುವುದಕ್ಕಿಂತ ಸಂಗೀತನಾಟಕ ಎಂದು ಕರೆಯುವುದು ಉಚಿತ. ಭಕ್ತಶಿರೋಮಣಿಗಳೂ ಅಪ್ರತಿಮ ಸಂಗೀತವಿದ್ವಾಂಸರೂ ವಾಗ್ಗೇಯಕಾರರೂ ಆದ ಇವರ ಈ ನಾಟಕಗಳು ಅತ್ಯುತ್ತಮ ಸಂಗೀತಕೃತಿಮಾಲಿಕೆಗಳಾಗಿ ಕಂಗೊಳಿಸಿದವು. ರಂಗಭೂಮಿಯ ಮೇಲೆ ವಿವಿಧಪಾತ್ರಗಳು ಇವನ್ನು ಹಾಡುವಾಗ ಸಾಹಿತ್ಯಕ್ಕಿಂತಲೂ ಸಂಗೀತದ ಕಡೆಗೇ ಇವುಗಳ ಭಾರ ಹೆಚ್ಚಾಗುವುದು ಸ್ವಾಭಾವಿಕವಾದುದರಿಂದ ಆಧುನಿಕ ಗೀತರೂಪಕಗಳಿಗೆ ಇವನ್ನು ಮೊದಲ ಮೆಟ್ಟಲುಗಳೆನ್ನಬಹುದು.

ಹೀಗೆಯೇ, ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಯಕ್ಷಗಾನ, ಕೇರಳದ ಕಥಕಳಿ ತಮಿಳು ನಾಡಿನ ಭಾಗವತಮೇಳ, ಆಂಧ್ರದ ಕೂಚುಪುಡಿಗಳಲ್ಲೂ ಇಂದಿನ ಗೀತರೂಪಕಗಳ ಮೂಲವನ್ನು ಗುರುತಿಸಬಹುದು. ಕಥಾನಕವನ್ನು ಹಿಮ್ಮೇಳವಾಗಿ ಹಾಡುವುದು. ರಂಗದಲ್ಲಿ ಉಚಿತವಾದ ವೇಷಭೂಷಣಗಳನ್ನು ಧರಿಸಿದ ಪಾತ್ರವರ್ಗ ಹಾಡುಗಳಿಗನುಗುಣವಾಗಿ ನೃತ್ಯ, ಅಭಿನಯಗಳನ್ನೆಸಗುವುದು– ಇದು ಈ ಬಗೆಯ ಪ್ರದರ್ಶನಗಳಲ್ಲಿ ಕಂಡುಬರುವ ಸಾಮಾನ್ಯಕ್ರಮ. ಕನ್ನಡದ ಯಕ್ಷಗಾನದಲ್ಲಿ ಪಾತ್ರಗಳಿಗೆ ನೃತ್ಯದೊಂದಿಗೆ ಮಾತುಗಾರಿಕೆಗೂ ಅವಕಾಶವಿದೆ. ಕಥಕಳಿಯಲ್ಲಿ ಪಾತ್ರಗಳ ಕಾರ್ಯವೆಲ್ಲವೂ ನೃತ್ಯ, ಮೂಕಾಭಿನಯಗಳ ಮೂಲಕವೇ ಸಾಗುತ್ತದೆ. ಆದುದರಿಂದ ಈ ಬಗೆಯ ಪ್ರದರ್ಶನಗಳು ಗೀತ ನೃತ್ಯಸಂಗೀತಗಳಿಂದ ಕೂಡಿದಂಥವು, ಅಷ್ಟೆ.

**ಆಪೆರ:** ಇಂದು ನಾವು ಗೀತರೂಪಕ ಎನ್ನುವಾಗ ಪಾಶ್ಚಾತ್ಯನಾಟಕ ಪ್ರಕಾರಗಳಲ್ಲೊಂದಾದ ಆಪೆರ ಎಂಬ ನಿರೂಪಣ ವಿಧಾನವೊಂದನ್ನು ಲಕ್ಷ್ಯದಲ್ಲಿರಿಸಿಕೊಂಡಿರುತ್ತೇವೆ. ಪಾಶ್ಚಾತ್ಯ ವಿದ್ವಾಂಸರು ಆಪೆರಗಳ ಮೂಲವನ್ನು ಗ್ರೀಕ್ ದುರಂತನಾಟಕಗಳಿಗೆ ಕೊಂಡೊಯ್ಯುತ್ತಾರೆ. ದುರಂತ ಚಿತ್ರಣವನ್ನು ಕಾವ್ಯ, ಸಂಗೀತ, ನೃತ್ಯಗಳ ಮೂಲಕ ಪ್ರದರ್ಶಿಸುವ ವಿಧಾನದಿಂದಲೇ ಆಪೆರ ವಿಧಾನಗಳ ಅನುಸರಣೆಯಿಂದಲೇ ಇಂದಿನ ಗೀತರೂಪಕಗಳು ಉಂಟಾದುವು ಎಂದೂ ಹೇಳುತ್ತಾರೆ. ಇಂದು ನಾವು ಆಪೆರ ಎಂದು ಖಚಿತವಾಗಿ ಕರೆಯುವ, ಪಾಶ್ಚಾತ್ಯ ರಂಗಭೂಮಿ ಪ್ರದರ್ಶನ ಪ್ರಕಾರ ಹುಟ್ಟಿದುದು ಇಟಲಿಯಲ್ಲಿ, 16ನೆಯ ಶತಮಾನದ ಬರೋಕ್ ಕಲಾವಿಧಾನ ಪ್ರಬುದ್ಧ ಸ್ಥಿತಿಯಲ್ಲಿದ್ದಾಗ. ಸದ್ಯಕ್ಕೆ ಸಿಕ್ಕಿರುವ ಸಾಹಿತ್ಯದ ದೃಷ್ಟಿಯಿಂದ ಹೇಳುವುದಾದರೆ ಇಟಲಿಯ ಪ್ರಥಮ ಆಪೆರ ಜಾಕೊಪೊ ಪೆರಿಯ (1597) ದಾಫ್ನೆ. ಈಗ ಇದರ ಸಂಗೀತ ವಿವರಗಳು ಕಳೆದುಹೋಗಿವೆ. ನಿಜವಾಗಿ ಆಪೆರಗಳನ್ನು ಮೊದಲ ಭಾರಿಗೆ ಸಮರ್ಥವಾಗಿ ರಚಿಸಿದವನೆಂದರೆ ಮಾಂಟೆವೆರ್ಡಿ. ಮೊದಲ ಆಪೆರ ಭವನ ನಿರ್ಮಾಣವಾದದ್ದು ವೆನಿಸಿನಲ್ಲಿ, 1637ರಲ್ಲಿ. ಸಂಗೀತ ಭಾಷಣ ಮತ್ತು ಮೇಳ ವಾದ್ಯ ಹಾಗೂ ಹಾಡುಗಾರಿಕೆಗಿದ್ದ ಪ್ರಾಶಸ್ತ್ಯ ಕಡಿಮೆಯಾಗಿ ರಾಗಕ್ಕೂ ತಜ್ಞಹಾಡುಗಾರನಿಗೂ ಪ್ರಾಧಾನ್ಯ ಬಂದಾಗ ಆಪೆರಕ್ಕೆ ನಿರ್ದಿಷ್ಟವಾದ ಒಂದು ರೂಪು ಬಂದಿತೆನ್ನಬಹುದು. ಪ್ರಾರಂಭದಲ್ಲಿ ಪುರಾಣಗಳಿಂದ ಆಪೆರ ಕಥಾವಸ್ತುವನ್ನು ಆಯ್ಕೆ ಮಾಡುತ್ತಿದ್ದರು. ಅನಂತರ ಹರ್ಷನಾಟಕಗಳು ಪ್ರಹಸನಗಳು ಬಳಕೆಗೆ ಬಂದುವು. 17ನೆಯ ಶತಮಾನದಲ್ಲಿ ಮೂರು ಅಂಕಗಳ ಆಪೆರ ಸೀರಿಯ ಉದಯವಾಗಿ ಹಿಂದಿನ ಆಪೆರಗಳಲ್ಲಿರುತ್ತಿದ್ದ ಅಸಂಬದ್ಧ ಸಂಗತಿಗಳು ಅತ್ಯಲಂಕಾರ ಮಾತುಕತೆಗಳು ಕಡಿಮೆಯಾದವು. ಆಪೆರ ಬಫಾದಲ್ಲಿ ಸಂಗೀತವಿಲ್ಲದ ಸಂಭಾಷಣೆಗೆ ಸ್ಥಾನವಿರಲಿಲ್ಲ. ಆಪೆರಕಾಮೀಕ್ ಬಂದ ಮೇಲೆ ಸಂಗೀತವಿಲ್ಲದ ಸಂಭಾಷಣೆಗೆ ಎಡೆಸಿಕ್ಕಂತಾಯಿತು. ಫ್ರೆಂಚ್ ಮಹಾಕ್ರಾಂತಿಯಾದ ಮೇಲೆ, ನಯನಮನೋಹರವೂ, ರಸೋದ್ರೇಕ ಉಳ್ಳವೂ ಆದ ಅನೇಕ ಆಪೆರಗಳು

ನಿರ್ಮಾಣವಾದವು. ಅನಂತರ, ಐತಿಹಾಸಿಕ ವಸ್ತುವನ್ನುಳ್ಳ, ಧಾರ್ಮಿಕ, ಮನೋಭಾವವನ್ನು ಶ್ರುತಪಡಿಸುವ ತೀವ್ರರಾಗಭಾವಗಳನ್ನುಳ್ಳ ಗ್ರಾಂಡ್ ಆಪೆರಗಳು ಬಂದವು. ಆಪೆರ ಕರ್ತೃಗಳಲ್ಲಿ ಬಹು ಮುಖ್ಯರಾದವರೆಂದರೆ ಗ್ಲುಕ್, ಮೋಟ್ಸಾರ್ಟ್, ವೆರ್ಡಿ, ಪೂಷೀನಿ.

ಆಪೆರಕಾಮೀಕ್‌ನಿಂದ ಕವಲೊಡೆದು ಮೇಲೆದ್ದ ಒಂದು ಬಗೆಯ ನಾಟಕವನ್ನು ಆಪೆರೆಟ್ಟ ಎನ್ನುತ್ತಾರೆ. ಇವುಗಳ ವಸ್ತು ಲಘುವೂ ಕರುಳು ಕರಗಿಸುವಂಥದ್ದೂ ಆಗಿರುತ್ತದೆ. ಅನೇಕ ವೇಳೆ ಇವುಗಳಲ್ಲಿ ವ್ಯಂಗ್ಯ ಪ್ರಧಾನವಾಗಿರುತ್ತದೆ. ಸಂಭಾಷಣೆ ಗದ್ಯದಲ್ಲಿದ್ದರೂ ಹಿತವಾದ ಲಘುಸಂಗೀತ ಉದ್ದಕ್ಕೂ ಇರುತ್ತದೆ. ಆಫೆನ್‌ಬಾಕ್, ಜೋಹಾನ್ ಸ್ಟ್ರೌಸ್ (ಕಿರಿಯ), ಗಿಲ್ಬರ್ಟ್ ಮತ್ತು ಸಲಿವನ್, ವಿಕ್ಟರ್ ಹರ್ಬರ್ಟ್, ರಾಮ್‌ಬರ್ಗ್ ಸಿಗ್ಮಂಡ್–ಇವರು ಪ್ರಸಿದ್ಧ ಆಪರೆಟ್ಟ ಕರ್ತೃಗಳು.

ಮಾರಿಯಾ ಕಲಾಸ್, ಲಿಸಾ ಡೆಲ್ಲ ಕಾಸಾ, ಸಿಯೊ ಪಿಂತ್ಯಾ, ಆನಾ ಲಿಸೆ ರಾಥೆನ್‌ಬರ್ಗರ್, ಎನ್ರಿಕೊ ಕರೂಸೊ, ಜಾನ್ ಪಿಯರ್ಸ್, ಜೋನ್ ಸದರ್ಲೆಂಡ್, ಕ್ಯಾತಲೀನ್ ಫೆರಿಯರ್ ಮೊದಲಾದವರು. ಆಧುನಿಕರಲ್ಲಿ ಖ್ಯಾತ ಆಪೆರ ಕಲಾವಿದರು.

ಪಾಶ್ಚಾತ್ಯ ಆಪೆರಗಳು ಒಬ್ಬ ವ್ಯಕ್ತಿಯ ಕಲ್ಪನೆ ಅಥವಾ ರಚನೆಗಳಲ್ಲ; ನಾಲ್ಕು ಮಂದಿ ಪ್ರತಿಭಾಶಾಲಿಗಳ ಒಮ್ಮತದ ನಿರ್ಮಾಣಗಳು. ಸಂಯೋಜಕನಾದವ ವಸ್ತು ಮತ್ತು ಇಡಿಯ ರೂಪಕದ ರೀತಿ, ನೀತಿಗಳ ವಿವರಗಳನ್ನು ನಿಶ್ಚಯಿಸುತ್ತಾನೆ; ಸಾಹಿತಿ ಹಾಡುಗಳನ್ನು ರಚಿಸುತ್ತಾನೆ; ಸಂಗೀತ ವಿದ್ವಾಂಸ ಇಡಿಯ ರೂಪಕವನ್ನು ಸ್ವರ ಸಂಯೋಜನೆಗೆ ಒಳಪಡಿಸುತ್ತಾನೆ; ನಿರ್ದೇಶಕ ರಂಗಸಿದ್ಧತೆ, ವೇಷಭೂಷಣ, ಪರಿಕರಗಳನ್ನು ತೀರ್ಮಾನಿಸುತ್ತಾನೆ. ಆಪೆರಗಳಲ್ಲಿ ವಾದ್ಯಸಂಗೀತಕ್ಕೆ ತುಂಬ ಪ್ರಾಮುಖ್ಯ ಇದೆ. ವಿವಿಧ ಸನ್ನಿವೇಶಗಳಲ್ಲಿ ಭಾವಪ್ರದರ್ಶನ, ಪರಿವರ್ತನೆ, ತೀವ್ರತೆ, ಪ್ರಖರತೆಗಳನ್ನು ಪರಿಣಾಕಾರಿಯಾಗಿ ನಿರೂಪಿಸಲು ವಾದ್ಯಮೇಳ ಸಂಗೀತ ಅತ್ಯಂತ ಸಹಕಾರಿಯಾಗುವಂತೆ ಮಾಡಿದ್ದಾರೆ. ಕಥಾ ಸಂದರ್ಭಗಳಿಗೆ ಪೋಷಕವಾಗಿ ಮತ್ತು ರೂಪಕದ ಮಧ್ಯಂತರಗಳಲ್ಲಿ ನೃತ್ಯವನ್ನೂ ಸಂಯೋಜಿಸುತ್ತಾರೆ. ಆದರೆ ಇಡಿಯ ಪ್ರದರ್ಶನವೇ ನೃತ್ಯಗಳಿಂದ ಪೂರೈಸುವ ರೀತಿ ರೂಪುಗೊಂಡಾಗ ಬ್ಯಾಲೆ ಎಂಬ ಇನ್ನೊಂದು ಬಗೆಯ ನಿರೂಪಣ ವಿಧಾನ ರೂಪುಗೊಳ್ಳುತ್ತದೆ.

ಪಾಶ್ಚಾತ್ಯ ಆಪೆರಗಳು ಅವುಗಳ ವಸ್ತುಭಿನ್ನತೆಯಿಂದಾಗಿ ಎರಡು ವಿಧಗಳಲ್ಲಿ ವರ್ಗೀಕರಣ ಹೊಂದಿವೆ. ಆಪೆರ ಗ್ರಾಂಡ್ ಎಂಬುದು ಗಂಭೀರವಾದ ಕಥಾವಸ್ತುವನ್ನೊಳಗೊಂಡಿದ್ದು ಕಾರುಣ್ಯ, ದುರಂತಗಳಲ್ಲಿ ಅಂತ್ಯವಾಗುತ್ತದೆ. ಆಪೆರ ಕಾಮಿಕ್ ಎಂಬುದು ಇನ್ನೊಂದು ವರ್ಗ. ಇದರಲ್ಲಿನ ಕಥಾಸನ್ನಿವೇಶದಲ್ಲಿ ಹಾಸ್ಯ, ವಿಡಂಬನೆಗಳಿಗೆ ಅವಕಾಶ ಹೆಚ್ಚು. ಪಾತ್ರಧಾರಿಗಳಲ್ಲಿ ಹೆಚ್ಚಿನವರು ವಿದೂಷಕವರ್ಗಕ್ಕೆ ಸೇರಿದವರು. ವಿನೋದಪೂರ್ಣವಾದ ಹಾಡುಗಳೂ ಕೆಲವೊಮ್ಮೆ ಗದ್ಯ ಸಂಭಾಷಣೆಗಳೂ ಇದರಲ್ಲಿ ಕಾಣಿಸಿಕೊಳ್ಳುತ್ತವೆ. ಕೇವಲ ಉತ್ತೇಜಕ ಪರಿಸರಗಳ ಪ್ರದರ್ಶನ ವಿನ್ಯಾಸಗಳಿಂದಲೇ ಈ ವರ್ಗದ ಆಪೆರಗಳು ಮುಂದುವರಿಯುತ್ತವೆ.

**ಸಂಗೀತದ ಸ್ಥಾನ:** ಗೀತರೂಪಕಗಳು ಸಾಹಿತ್ಯ ಸಂಗೀತಗಳ ಸಂಗಮ. ಆದರೆ ಪ್ರದರ್ಶನಾವಕಾಶದಲ್ಲಿ, ಅವು ಒಂದನ್ನೊಂದು ಮೀರಿಸುವಂತೆ ತಮ್ಮ ವೈಯಕ್ತಿಕತೆಯನ್ನು ಮೆರೆಸಬಾರದು. ಸಾಹಿತ್ಯ ವೈಖರಿಯ ಅಥವಾ ಸಂಗೀತ ಸೌಂದರ್ಯದ ಪ್ರದರ್ಶನ ಗೀತರೂಪಕಗಳ ಉದ್ದೇಶವಲ್ಲ. ಇಡಿಯ ರೂಪಕದ ಯಾವುದೇ ಒಂದು ಭಾಗವೂ ಕೇವಲ ಸಾಹಿತ್ಯ ಇಲ್ಲವೆ ಸಂಗೀತಕ್ಕೆ ಪ್ರಧಾನ್ಯ ತೋರಿಸುವ ಲಕ್ಷಣವನ್ನು ಹೊಂದಿರಬಾರದು. ಸಂಗೀತ ಸಾಹಿತ್ಯಗಳು ಪ್ರತಿಯೊಂದು ಹೆಜ್ಜೆಗೂ ಒಂದನ್ನೊಂದು ಅನುಸರಿಸಬೇಕು; ಒಂದರಲ್ಲೊಂದು ಬೆರೆಯಬೇಕು; ಒಂದೇ ಆಗಿ ಕಂಗೊಳಿಸಬೇಕು.

ಹಿನ್ನಲೆಯ ವಾದ್ಯಮೇಳ ಗೀತರೂಪಕಗಳಲ್ಲಿ ಪ್ರಮುಖವಾದ ಒಂದು ಅಂಗ. ಆದರೆ ಇದು ಯಾವುದೇ ಒಂದು ವಾದ್ಯವೈಖರಿಯನ್ನು ಪ್ರದರ್ಶಿಸುವ ಅಂಗವಲ್ಲ. ಒಂದು ಭಾವಪ್ರತಿಪಾದನೆಯ ಅವಕಾಶದಲ್ಲಿ ಒಂದೊಂದು ವಾದ್ಯ ವಿಶೇಷ ಪ್ರಮುಖಪಾತ್ರವಹಿಸಿದರೂ ಅವುಗಳೆಲ್ಲವುಗಳ ಒಮ್ಮತವೇ ಕೊನೆಯಲ್ಲಿ ಉಳಿಯುವಂತಾಗಬೇಕು. ವಾದ್ಯಮೇಳದ ಸಾಮೂಹಿಕ ಧ್ವನಿರೂಪಕದ ಸಾಹಿತ್ಯವನ್ನು ಮುಳುಗಿಸಬಾರದು; ಅಭಿನಯಕ್ಕೆ ರಸಾನುಭವಕ್ಕೆ ಅದು ಆತಂಕವಾಗಬಾರದು.

ಗೀತರೂಪಕಗಳಲ್ಲಿ ಸಾಹಿತ್ಯ ಅನಿವಾರ್ಯವಾದರೂ ಅದು ಕಾವ್ಯಲಕ್ಷಣಗಳನ್ನೆಲ್ಲ ಹೊಂದಿರಬೇಕಾಗಿಲ್ಲ. ಚಿಂತನಾವಕಾಶವುಳ್ಳ ಸಾಹಿತ್ಯದ ಸ್ವಾರಸ್ಯನುಭವ ಓದು ಗಬ್ಬವಾಗಿ ರಂಜಿಸಬಹುದಲ್ಲದೆ ರಂಗಭೂಮಿ ಪ್ರದರ್ಶನಗಳಲ್ಲಿ ಕಂಗೊಳಿಸಲಾರದು. ವಾದ್ಯಮೇಳ ಸಂಗೀತದ ಹೊನಲಿನಲ್ಲಿ, ರಂಗವ್ಯವಸ್ಥೆ, ವೇಷಭೂಷಣಗಳ ಅಪೂರ್ವ ಶೋಭೆಗಳಲ್ಲಿ ಪ್ರದರ್ಶನ ಸಾಗುತ್ತಿರುವಾಗ ವಿರಾಮ ವಿಶ್ಲೇಷಣಾರ್ಹವಾದ ಸಾಹಿತ್ಯ ಸ್ವಾರಸ್ಯಾನುಭವಕ್ಕೆ ಅವಕಾಶ ದೊರೆಯುವುದಿಲ್ಲ. ಸಂಗೀತದಲ್ಲಿ ಮೂಡಿದ ಭಾವಗಳನ್ನು ಸ್ಪಷ್ಟಪಡಿಸುವ, ಕಥಾನಕವನ್ನು ವಿವರಿಸಿ ಮುಂದುವರಿಸುವ, ಸುಲಭ ಸ್ವರಸಂಯೋಜನೆಗೆ ಅವಕಾಶವಿರುವಂತೆ ಲಾಲಿತ್ಯಪೂರ್ಣವಾದ ಪದರಚನೆಗಳುಳ್ಳ, ಅಂತ್ಯಪ್ರಾಸಹಿತವಾದ ಸಾಹಿತ್ಯವೇ ಗೀತರೂಪಕಗಳಿಗೆ ಉತ್ತಮ ಸಾಹಿತ್ಯವೆನಿಸುತ್ತದೆ.

ಗೀತರೂಪಕ ಸಂಗೀತ ಕಥಾವಸ್ತುವಿನ ಭಾವ, ರಸಗಳನ್ನು ಪ್ರತಿಬಿಂಬಿಸುವಂತಿರಬೇಕು. ಇವುಗಳ ಸಂಗೀತ ಮಾರ್ಗಪದ್ಧತಿಯಲ್ಲೇ ಇರಬೇಕಾದ ಅವಶ್ಯವಿಲ್ಲ. ಭಾರತೀಯ ಮಾರ್ಗಸಂಗೀತ ಪದ್ಧತಿಯಲ್ಲಿ ರಾಗಗಳು ಕರುಣ, ಶೃಂಗಾರ ವೀರರಸಗಳನ್ನು ಪ್ರತಿಬಿಂಬಿಸಿದಷ್ಟು ಪ್ರಭಾವಯುತವಾಗಿ ಉಳಿದ ರಸಗಳನ್ನು ಪ್ರತಿಪಾದಿಸುವುದಿಲ್ಲ. ಹಿಂದಿನ ಸಂಗೀತ ವಿದ್ವಾಂಸರು, ವಾಗ್ಗೇಯಕಾರರು, ಎಲ್ಲರೂ ಪರಮಭಾಗವತರೂ ಭಕ್ತಿಪಂಥಿಗಳೂ ಆಗಿದ್ದು ಸಂಗೀತವನ್ನು ಪರಮಾರ್ಥ ಸಾಧನಮಾರ್ಗವೆಂದು ತಿಳಿದಿದ್ದರು. ಅಂಥವರಿಗೆ ಲೌಕಿಕ ರೀತಿನೀತಿಗಳಿಗಾಗಿ ಸಂಗೀತವನ್ನು ಬಳಸುವ ಅವಶ್ಯಕತೆಯಾಗಲಿ ಔಚಿತ್ಯವಾಗಲಿ ಕಾಣಿಸಲಿಲ್ಲ. ಆದುದರಿಂದ ಭಾರತೀಯ ಮಾರ್ಗ ಸಂಗೀತದಲ್ಲಿ ಹಾಸ್ಯ, ಅದ್ಭುತ, ಭೀಭತ್ಸ, ರೌದ್ರ ಮೊದಲಾದ ಯಶಸ್ವೀ ನಿರೂಪಣ ಕಷ್ಟಸಾಧ್ಯವಾಗುತ್ತದೆ. ರಂಗಭೂಮಿಯ ಮೇಲೆ ಎಲ್ಲ ರಸಗಳ ಪ್ರತಿಪಾದನೆಯೂ ಅನಿವಾರ್ಯ. ಆದುದರಿಂದ ದೇಶ್ಯರಾಗಗಳೂ ರಸಭಾವಗಳಿಗನುಗುಣವಾಗಿ ಮೇಳೈಸಿದ ಸಂಗೀತ ಸ್ವರಗಳೂ, ಮಿಶ್ರರಾಗಗಳು ಲಲಿತ ಅಥವಾ ಸುಗಮ ಸಂಗೀತ ಎನಿಸಿ ಗೀತರೂಪಕಗಳಲ್ಲಿ ಮಾರ್ಗಸಂಗೀತದೊಡನೆ ಪ್ರಮುಖ ಸ್ಥಾನ ಪಡೆಯಬೇಕಾಗುತ್ತದೆ.

ಸಾಹಿತ್ಯ ಸಂಗೀತಗಳೆರಡರ ಏರಕವಾದ ಗೀತರೂಪಕದ ನಿರ್ಮಾಣ ಇಬ್ಬಗೆಯಲ್ಲಾಗಬಹುದು. ಸಾಹಿತಿ ವಸ್ತು ವಸ್ತುವನ್ನು ಆರಿಸಿಕೊಂಡು ಉಚಿತನುಡಿಗಳಿಂದ ರೂಪಕವನ್ನು ಪೂರೈಸಿದ ಬಳಿಕ ಸಂಗೀತಗಾರ ಆ ಹಾಡುಗಳಿಗೆ ಸನ್ನಿವೇಶಗಳಿಗೆ ಒಪ್ಪುವ ಸ್ವರಸಂಯೋಜನೆಯನ್ನು ಮಾಡುವುದು ಒಂದು ವಿಧದ ರಚನಾಕ್ರಮ. ಸಂಗೀತಗಾರ ವಸ್ತುವಿನ ರಚನಾವಿಧಾನವನ್ನು ಕಲ್ಪಿಸಿಕೊಂಡು ವಿವಿಧ ಸನ್ನಿವೇಶಗಳಿಗೆ ಮತ್ತು ಹಾಡುಗಳ ಸ್ಥಳಗಳಿಗೆ ಅನುಗುಣವಾದ ಸ್ವರಸಂಯೋಜನೆಯನ್ನು ಪೂರೈಸಿದ ಬಳಿಕ ಗೀತಭಾಗಗಳನ್ನು ರಚಿಸುವ ಹೊಣೆಯನ್ನು ಸಾಹಿತಿಗೊಪ್ಪಿಸುವುದು ಎರಡನೆಯ ವಿಧ. ಸಂಗೀತ ಸಾಹಿತ್ಯಗಳೆರಡರಲ್ಲೂ ರಚನಾಶಕ್ತಿಯನ್ನು ಹೊಂದಿದವರು ವಿರಳವಾದುದರಿಂದ ಕವಿ ಮತ್ತು ಸಂಗೀತಗಾರರ ಈ ರೀತಿಯ ಪರಸ್ಪರ ಸಹಕಾರ ಅನಿವಾರ್ಯವಾಗುತ್ತದೆ. ಸಾಮಾನ್ಯ ಸಂಗೀತಜ್ಞಾನವಿದ್ದ ಸಾಹಿತಿ, ಸಾಹಿತ್ಯಾಭಿರುಚಿವುಳ್ಳ ಸಂಗೀತಗಾರ, ಇವರಿಂದ ನಿರ್ಮಾಣವಾದ ಗೀತರೂಪಕಗಳು ಉತ್ತಮವಾಗಿರುತ್ತವೆ. ಆದರೂ, ಸಾಹಿತಿ ಮತ್ತು ಸಂಗೀತಗಾರರು ತಮಗೆ ಪಾಂಡಿತ್ಯವಿಲ್ಲದ ಕ್ಷೇತ್ರದಲ್ಲಿ ಎಷ್ಟೊಂದು ಅಭಿರುಚಿಯುಳ್ಳವರಾಗಿದ್ದರೂ ಒಬ್ಬರೊಡನೊಬ್ಬರು ಎಷ್ಟೇ ಸಹಮತದಿಂದ ವರ್ತಿಸಿದರೂ ಭಾವರಸಗಳ ಪರಿಪೋಷಣೆಯಲ್ಲಿ ಹೆಜ್ಜೆ ಹೆಜ್ಜೆಗೂ ಏಕತ್ವವನ್ನು ಸಾಧಿಸಿ ಗೀತರೂಪಕಗಳನ್ನು ಪರಿಪೂರ್ಣಗೊಳಿಸುವುದು ಅಷ್ಟೊಂದು ಸುಲಭವಲ್ಲ. ಆದುದರಿಂದ ಸಂಗೀತ–ಗೀತ ಅಥವಾ ಧಾತು ಮಾತುಗಳೆರಡೂ ಒಬ್ಬನಿಂದಲೇ, ಎಂದರೆ ವಾಗ್ಗೇಯಕಾರನಿಂದ ರಚನೆಗೊಂಡ ಗೀತರೂಪಕಗಳು ಮಾತ್ರ ಅತ್ಯುತ್ತಮ ಗೀತರೂಪಕಗಳಾಗುತ್ತವೆ.

ಆಧುನಿಕ ಗೀತರೂಪಕಗಳಲ್ಲಿ ಪೌರಾಣಿಕ, ಚಾರಿತ್ರಿಕ, ಅಥವಾ ಕಾಲ್ಪನಿಕವಾದ ನಿರುಪಾಧಿಕ ವಸ್ತುಗಳಿರುವಂಥವು. ಮತ್ತು ಲಘು ವಿನೋದ ಅಥವಾ ಕುಚೇಷ್ಟೆಯೇ ಉದ್ದೇಶವಾಗಿರುವ ವಿಡಂಬನಾತ್ಮಕ ರೂಪಕಗಳು ಎಂಬ ಎರಡು ವರ್ಗಗಳನ್ನು ಗುರುತಿಸಬಹುದು. ಮೊದಲನೆಯ ವರ್ಗದಲ್ಲಿ ಸಾಹಿತ್ಯ ಸಂಗೀತಗಳೆರಡಕ್ಕೂ ಸಮಾನವಾದ ಪ್ರಾಧಾನ್ಯ. ಗೀತಗಳು ಕಾವ್ಯಲಕ್ಷಣಗಳನ್ನೂ, ಸಂಗೀತವು ಮಾರ್ಗಸಂಪ್ರದಾಯವನ್ನು ಹೆಚ್ಚಾಗಿ ಹೊಂದಿರುತ್ತದೆ. ಕೆಲವೊಮ್ಮೆ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯ ದೊರೆಯುವುದೂ ಇದೆ. ವಿಡಂಬನ ವರ್ಗದಲ್ಲಿ ಸಾಹಿತ್ಯಕ್ಕೆ ಪ್ರಾಧಾನ್ಯ ಹೆಚ್ಚು. ಗೀತಗಳೆಲ್ಲವೂ ಸಾಮಾನ್ಯವಾಗಿ ಜಾನಪದಶೈಲಿಯಲ್ಲಿರುತ್ತವೆ ಅಥವಾ ಪದ್ಯ ಗಂಧಿ ಗದ್ಯಗಳಾಗಿರುತ್ತವೆ. ಸರಳ ರಗಳೆಗಳಾಗಿರುವುದೂ ಉಂಟು. ಇಂಥ ರೂಪಕಗಳಲ್ಲಿ ಸಾಹಿತ್ಯದ ಪ್ರತಿಯೊಂದು ಶಬ್ದವೂ ಅರ್ಥವಾಗದಿದ್ದಲ್ಲಿ ಸ್ವಾರಸ್ಯಾನುಭವಕ್ಕೆ ಕೊರತೆಯಾಗುತ್ತದೆ. ಸಂಗೀತ ಇಲ್ಲಿ ಕೇವಲ ಹಿನ್ನಲೆಯನ್ನಾಶ್ರಯಿಸುತ್ತದೆ; ಕೆಲವೊಮ್ಮೆ ಮಧ್ಯಂತರಗಳಲ್ಲಿ ಸ್ವಲ್ಪ ಪ್ರಾಮುಖ್ಯವನ್ನು ಪಡೆಯಲೂಬಹುದು. ಗೀತಗಳೆಲ್ಲವನ್ನೂ ಜಾನಪದ ಧಾಟಿಗಳಲ್ಲಿ ಅಥವಾ ಸಂಗೀತಸ್ವರಗಳ ಆಧಾರದಲ್ಲಿ ರಾಗ ನಿರ್ದೇಶನವಿರಹಿತವಾಗಿ, ಕೇವಲ ಭಾವಕ್ಕನುಗುಣವಾದ, ಶ್ರಾವ್ಯ ಮೌಲ್ಯದ ಸ್ವರಜೋಡಣೆಗಳಿಂದ ರೂಪಿಸಿಕೊಳ್ಳಬೇಕಾಗುತ್ತದೆ.

**ಕನ್ನಡ ಗೀತರೂಪಕಗಳು:** ಕನ್ನಡದಲ್ಲಿ ಆಧುನಿಕ ಗೀತರೂಪಕಗಳ ಮೂಲ ಪುರುಷರು ಇಬ್ಬರು –ಶಿವರಾಮ ಕಾರಂತರು ಮತ್ತು ಪು. ತಿ.ನರಸಿಂಹಾಚಾರ್ಯರು. ಕಾರಂತರ ಗೀತರೂಪಕಗಳು ಸಂಗೀತ ಮಾಧ್ಯಮದ ಮೂಲಕವೇ ಸಾಗವಂಥವು. ಅವುಗಳಿಂದ ಸಂಗೀತವನ್ನು ಹೊರತಾಗಿಸಿದರೆ ರೂಪಕವೇ ಇಲ್ಲವಾಗುತ್ತದೆ. ಗೀತಗಳ

ಹಾಡುವಿಕೆಯನ್ನು ಅವರು ಹಿಂದೂಸ್ತಾನೀ ಸಂಗೀತ ಪದ್ಧತಿಯಲ್ಲಿರಿಸಿದ್ದಾರೆ. ಅವರ ರೂಪಕಗಳನ್ನು ಸಂಗೀತ ರಹಿತವಾಗಿ ಓದಿದಲ್ಲಿ ನೀರಸವಾಗಿ ಕಾಣಿಸಬಹುದು. ಆದರೆ, ರಂಗಭೂಮಿಯ ಮೇಲೆ, ಪ್ರದರ್ಶನದಲ್ಲಿ ಇವು ಸಂಗೀತದೊಡನೆ ಸೇರಿದಾಗ ಸತ್ತ್ವಪೂರ್ಣವಾದ ಹಾಡುಗಳಾಗಿ ಪರಿಣಮಿಸುತ್ತವೆ; ಇವು ಸಂಗೀತದೊಂದಿಗೆ ಸಮರಸವಾಗಿ ಬೆರೆಯುತ್ತವೆ; ಸಾಹಿತ್ಯ ಸಂಗೀತಗಳೆರಡರ ಸಂಗಮವಾದ ಅದ್ಭುತ ರಸಲೋಕವೊಂದನ್ನು ಕಾಣಿಸುತ್ತವೆ. ಗೀತರೂಪಕಗಳ ಎಲ್ಲ ಪ್ರಕಾರಗಳಿಗೂ ಕಾರಂತರ ರೂಪಕಗಳಲ್ಲಿ ಉದಾಹರಣೆಗಳಿವೆ. ಲವಕುಶ, ಸಾವಿತ್ರಿ ಸತ್ಯವಾನ ರೂಪಕಗಳು ಗಂಭೀರವಾದ ಪೌರಾಣಿಕ ಕಥಾವಸ್ತುವನ್ನೊಳಗೊಂಡವು. ಬುದ್ಧೋದಯ, ಕಿಸಾಗೌತಮಿಗಳು ಚಾರಿತ್ರಿಕ ರೂಪಕಗಳು. ಮುಕ್ತದ್ವಾರವೆಂಬುದು ನರ್ತನ ಸಹಿತವಾದ ನೇಪಥ್ಯಮೇಳ ಗಾನವನ್ನೊಳಗೊಂಡ, ವಿಚಾರಪೂರ್ಣವಾದ ಸುಂದರ ಕಲ್ಪನೆ. ಸೋಮಿಯ ಸೌಭಾಗ್ಯ, ಯಾರೋ ಅಂದರು– ರೂಪಕಗಳ ವಸ್ತು, ಶೈಲಿಗಳು ಜಾನಪದ. ಸುಲಿಗೆಗೆ ಇಲ್ಲವು ಸಾವು ಎಂಬುದು ವಿಡಂಬನಾತ್ಮಕ ಪ್ರಹಸನ. ನರಸಿಂಹಾಚಾರ್ಯರ ಗೀತರೂಪಕಗಳಲ್ಲಿನ ಹಾಡುಗಳು ಕಾವ್ಯಸೌರಭವನ್ನು ಸೂಸುತ್ತಿರುವ ಸುಂದರಕವನಗಳು. ಕರ್ಣಾಟಕ ಸಂಗೀತಜ್ಞಾನ ಅವರಿಗೆ ಸಾಕಷ್ಟು ಚೆನ್ನಾಗಿಯೇ ಇರುವುದರಿಂದ ಹಾಡುಗಳೆಲ್ಲವನ್ನೂ ಛಂದೋಬದ್ಧ ಸಂಗೀತ ಕೃತಿಗಳನ್ನನುಸರಿಸಿ ರಚಿಸಿದ್ದಾರೆ. ಅವರ ರೂಪಕಗಳಲ್ಲಿ ಕೆಲವು ಬಿಡಿಗೀತಗಳನ್ನು ರಾಗತಾಳ ನಿಬದ್ಧವಾದ ಸಂಗೀತಕೃತಿಗಳಂತೆಯೇ ಹಾಡಲು ಸಾಧ್ಯವಾಗುತ್ತದೆ; ಮಾತ್ರವಲ್ಲ, ಹಾಗೆ ಹಾಡಿದಾಗ ಅವುಗಳ ಶೋಭೆಗೂ ಕೊರತೆ ಯಾಗುವುದಿಲ್ಲ. ಆಚಾರ್ಯರ ಗೀತರೂಪಕಗಳನ್ನು ಓದುಗಬ್ಬವಾಗಿ, ಸಂಗೀತ ವಿರಹಿತವಾಗಿ ಹಾಡಿದಾಗಲೂ ಅವುಗಳ ಅನುಪಮ ಸೌಂದರ್ಯದ ಅರಿವಾಗುತ್ತದೆ. ಕವಿಯ ಚಿಂತನಫಲವಾದ ವಿಶ್ಲೇಷಣೆ, ವಿಶೇಷಾರ್ಥಗಳು ಮನಮುಟ್ಟುತ್ತವೆ. ರಂಗಭೂಮಿಯ ಮೇಲೆ ಈ ರೂಪಕಗಳನ್ನು ಅಭಿನಯಿಸುವಾಗಲಂತೂ ಅವಕ್ಕೆ ಇನ್ನೂ ಹೆಚ್ಚಿನ ಶೋಭೆಯುಂಟಾಗುತ್ತದೆ. ಆದರೆ ಕವಿಯ ಪ್ರತಿಭಾ ಮೂಲವಾದ ಚಿಂತನವೈಶಿಷ್ಟ್ಯಗಳನ್ನು ಮಾತ್ರ, ಮೊದಲೊಮ್ಮೆ ಗೀತರೂಪಕಗಳನ್ನು ಓದಿರದ ಪ್ರೇಕ್ಷಕರು ಸಂಪೂರ್ಣವಾಗಿ ಅರಿತು, ಅನುಭವಿಸುವುದು ಕಷ್ಟಸಾಧ್ಯ. ಆದುದರಿಂದ ಆಚಾರ್ಯರ ಗೀತರೂಪಕಗಳು ರಂಗಪ್ರದರ್ಶನದಲ್ಲಿ ಸಂಗೀತಕ್ಕೆ ಅತ್ಯುತ್ತಮವಾಗಿ ಅಳವಡಿಸುವ ಕೃತಿಮಾಲಿಕೆಗಳಾಗಿ ಪರಿಣಮಿಸಲೂ ಸಾಧ್ಯವಿದೆ. ಅವರ ಹಂಸದಮಯಂತಿ, ಗೋಕುಲ ನಿರ್ಗಮನಗಳು ಶ್ರಾವ್ಯ ಗೀತರೂಪಕಗಳ ದೃಷ್ಟಿಯಿಂದ ಅತ್ಯುತ್ತಮವಾದ ಗೀತರೂಪಕಗಳು. ಡಿ.ವಿ. ಗುಂಡಪ್ಪನವರ ಭಸ್ಮಾಸುರ ಮೋಹಿನಿ ಗೀತ ಶಾಕುಂತಲ ಎಂಬೆರಡು ಗೀತರೂಪಕ ಗಳು ಇದೇ ವರ್ಗಕ್ಕೆ ಸೇರುವಂಥವು. (ಎಸ್‌ಆರ್.ಯು.;ಎಚ್.ಕೆ.ಆರ್.;ಸಿ.ಎಚ್.ಡಿ.)

ಶಿವರಾಮ ಕಾರಂತ ಮತ್ತು ಪು.ತಿ.ನರಸಿಂಹಾಚಾರ್ಯರು ಕನ್ನಡದಲ್ಲಿ ಆಧುನಿಕ ಗೀತರೂಪಕಗಳ ಮೂಲ ಪುರುಷರು. ಗೀತಗಳ ಹಾಡುವಿಕೆಯನ್ನು ಕಾರಂತರು ಹಿಂದುಸ್ತಾನೀ ಸಂಗೀತ ಪದ್ಧತಿಯಲ್ಲಿರಿಸಿದ್ದಾರೆ. ಇವರ ರೂಪಕಗಳನ್ನು ಸಂಗೀತ ರಹಿತವಾಗಿ ಓದಿದಲ್ಲಿ ನೀರಸವಾಗಿ ಕಾಣಿಸಬಹುದು. ಆದರೆ ರಂಗಭೂಮಿಯ ಮೇಲೆ, ಪ್ರದರ್ಶನದಲ್ಲಿ ಇವು ಸಂಗೀತದೊಡನೆ ಸೇರಿದಾಗ ಸತ್ತ್ವಪೂರ್ಣವಾದ ಹಾಡುಗಳಾಗಿ ಪರಿಣಮಿಸುತ್ತವೆ; ಸಂಗೀತದೊಂದಿಗೆ ಸಮರಸವಾಗಿ ಬೆರೆಯುತ್ತವೆ; ಸಾಹಿತ್ಯ ಸಂಗೀತಗಳೆರಡರ ಸಂಗಮವಾದ ಅದ್ಭುತ ರಸಲೋಕವೊಂದನ್ನು ಕಾಣಿಸುತ್ತವೆ. ಗೀತರೂಪಕಗಳ ಎಲ್ಲ ಪ್ರಕಾರಗಳಿಗೂ ಕಾರಂತರ ರೂಪಕಗಳಲ್ಲಿ ಉದಾಹರಣೆಗಳಿವೆ. ಲವಕುಶ, ಸಾವಿತ್ರಿ ಸತ್ಯವಾನ ರೂಪಕಗಳು ಗಂಭೀರವಾದ ಪೌರಾಣಿಕ ಕಥಾವಸ್ತುವನ್ನೊಳಗೊಂಡವು. ಬುದ್ಧೋದಯ, ಕಿಸಾಗೌತಮಿಗಳು ಚಾರಿತ್ರಿಕ ರೂಪಕಗಳು. ಮುಕ್ತದ್ವಾರವೆಂಬುದು ನರ್ತನಸಹಿತವಾದ ನೇಪಥ್ಯಮೇಳ ಗಾನವನ್ನೊಳಗೊಂಡ, ವಿಚಾರಪೂರ್ಣವಾದ ಸುಂದರ ಕಲ್ಪನೆ. ಸೋಮಿಯ ಸೌಭಾಗ್ಯ, ಯಾರೋ ಅಂದರು ರೂಪಕಗಳ ವಸ್ತು ಶೈಲಿಗಳು ಜನಪದದವು. ಸುಲಿಗೆಗೆ ಇಲ್ಲವು ಸಾವು ಎಂಬುದು ವಿಡಂಬನಾತ್ಮಕ ಪ್ರಹಸನ. ಪು.ತಿ.ನರಸಿಂಹಾಚಾರ್ಯರ ಗೀತರೂಪಕಗಳಲ್ಲಿನ ಹಾಡುಗಳು ಕಾವ್ಯಸೌರಭವನ್ನು ಸೂಸುತ್ತಿರುವ ಸುಂದರ ಕವನಗಳು. ಕರ್ಣಾಟಕ ಸಂಗೀತಜ್ಞಾನದ ಹಿನ್ನೆಲೆಯಲ್ಲಿ ಹಾಡುಗಳೆಲ್ಲವನ್ನೂ ಛಂದೋಬದ್ಧ ಸಂಗೀತ ಕೃತಿಗಳನ್ನನುಸರಿಸಿ ಇವರು ರಚಿಸಿದ್ದಾರೆ. ಇವರ ರೂಪಕಗಳಲ್ಲಿನ ಕೆಲವು ಬಿಡಿಗೀತಗಳನ್ನು ರಾಗತಾಳನಿಬದ್ಧವಾದ ಸಂಗೀತಕೃತಿಗಳಂತೆಯೇ ಹಾಡಲು ಸಾಧ್ಯ; ಮಾತ್ರವಲ್ಲ, ಹಾಗೆ ಹಾಡಿದಾಗ ಅವುಗಳ ಶೋಭೆಗೂ ಕೊರತೆಯಾಗುವುದಿಲ್ಲ. ಈ ಗೀತರೂಪಕಗಳನ್ನು ಓದುಗಬ್ಬವಾಗಿ, ಸಂಗೀತರಹಿತವಾಗಿ ಹಾಡಿದಾಗಲೂ ಅವುಗಳ ಅನುಪಮ ಸೌಂದರ್ಯದ ಅರಿವಾಗುತ್ತದೆ. ಕವಿಯ ಚಿಂತನಫಲವಾದ ವಿಶ್ಲೇಷಣೆ ವಿಶೇಷಾರ್ಥಗಳು ಮನಮುಟ್ಟುತ್ತವೆ. ರಂಗಭೂಮಿಯ ಮೇಲೆ ಈ ರೂಪಕಗಳನ್ನು ಅಭಿನಯಿಸುವಾಗಲಂತೂ ಅವಕ್ಕೆ ಇನ್ನೂ ಹೆಚ್ಚಿನ ಶೋಭೆಯುಂಟಾಗುತ್ತದೆ. ಆದರೆ ಕವಿಯ ಪ್ರತಿಭಾಮೂಲವಾದ ಚಿಂತನವೈಶಿಷ್ಟ್ಯಗಳನ್ನು ಮಾತ್ರ ಮೊದಲೊಮ್ಮೆ ಗೀತರೂಪಕಗಳನ್ನು ಓದಿರದ ಪ್ರೇಕ್ಷಕರು ಸಂಪೂರ್ಣವಾಗಿ ಅರಿತು ಅನುಭವಿಸುವುದು ಕಷ್ಟಸಾಧ್ಯ. ಆದುದರಿಂದ ಪು.ತಿ.ನ. ಅವರ ಗೀತರೂಪಕಗಳು ರಂಗಪ್ರದರ್ಶನದಲ್ಲಿ ಸಂಗೀತಕ್ಕೆ ಅತ್ಯುತ್ತಮವಾಗಿ ಅಳವಡುವ ಕೃತಿಮಾಲಿಕೆಗಳಾಗಿ ಪರಿಣಮಿಸಲೂ ಸಾಧ್ಯವಿದೆ. ಇವರ ಹಂಸದಮಯಂತಿ, ಗೋಕುಲನಿರ್ಗಮನ ಇವು ಶ್ರವ್ಯ ಗೀತರೂಪಕಗಳ ದೃಷ್ಟಿಯಿಂದ ಅತ್ಯುತ್ತಮವಾದವು. ಡಿ.ವಿ.ಗುಂಡಪ್ಪನವರ ಭಸ್ಮಾಸುರ ಮೋಹಿನಿ, ಗೀತ ಶಾಕುಂತಲ ಎಂಬೆರಡು ಗೀತರೂಪಕಗಳೂ ಇದೇ ವರ್ಗಕ್ಕೆ ಸೇರುವಂಥವು. *

**ಗೀತಾನಾಗಭೂಷಣ** : 1942–. ಕನ್ನಡದ ಹೆಸರಾಂತ ದಲಿತ ಲೇಖಕಿ. ಇವರು ಗುಲ್ಬರ್ಗ ಜಿಲ್ಲೆ ಸಾವಳಗಿ ಗ್ರಾಮದಲ್ಲಿ 1942 ಮಾರ್ಚ್ 25ರಂದು ಜನಿಸಿದರು. ತಂದೆ ಶಾಂತಪ್ಪ, ತಾಯಿ ಶರಣಮ್ಮ. ಬಿ.ಎಡ್. ಹಾಗೂ ಕನ್ನಡ ಎಂ.ಎ. ಪದವಿ ಪಡೆದು ಅಧ್ಯಾಪಕಿಯಾಗಿ, ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ 35ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು 26 ಕಾದಂಬರಿ ಗಳನ್ನೂ 5 ನಾಟಕಗಳನ್ನೂ 2 ಕಥಾ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ತಾವರೆಯ ಹೂ ಇವರ ಮೊದಲ ಕಾದಂಬರಿ (1968). ಚಂದನದಚಿಗುರು(1969),

ಸಪ್ತವರ್ಣದ ಸ್ವಪ್ನ (1973), ಪ್ರೀತಿಸಿದ್ದು ನಿನ್ನನ್ನೇ (1986), ನಿನ್ನ ತೋಳುಗಳಲ್ಲಿ (1987), ನನ್ನ ನಿನ್ನ ನಡುವೆ (1992), ಆಸರೆಗಳು (1996), ಅಭಿಮಾನ (1998) – ಈ ಕೃತಿಗಳು ಮಧ್ಯಮ ವರ್ಗದ ಬದುಕಿನ ಪ್ರೀತಿ, ಪ್ರಣಯ ಮತ್ತು ಕೌಟುಂಬಿಕ ಸಮಸ್ಯೆಗಳ ಸುತ್ತ ಹೆಣೆದ ಜನಪ್ರಿಯ ಸ್ವರೂಪದ ಕಾದಂಬರಿಗಳು. ಹಸಿ ಮಾಂಸ ಮತ್ತು ಹದ್ದುಗಳು (1978), ಮಾಪುರ, ತಾಯಿಯ ಮಕ್ಕಳು (1978), ಆಘಾತ (1980), ಚಿಕ್ಕಿಯ ಹರೆಯದ ದಿನಗಳು (1983), ನೀಲಗಂಗಾ (1986), ದುಮ್ಮಸು (1994), ದಂಗೆ (1997), ಬದುಕು (2001) – ಈ ಕಾದಂಬರಿಗಳಲ್ಲಿ ಸ್ತ್ರೀಪ್ರಪಂಚದ ದುರಂತ ಚಿತ್ರಗಳಿವೆ. ಜಾತಿವ್ಯವಸ್ಥೆಯ ಅಮಾನವೀಯ ಆಚರಣೆಗಳಿಂದ ಅಪಮಾನಿತರಾದ ದಲಿತವರ್ಗದ ತಾಪತಲ್ಲಣಗಳನ್ನೂ ಬಡತನ, ಮೌಢ್ಯ, ಲೈಂಗಿಕ ಹಿಂಸೆಗಳಿಂದ ನೊಂದ ಶೋಷಿತ ಸ್ತ್ರೀಯರ ಸಂಕಟ ಸಮಸ್ಯೆಗಳನ್ನೂ ಅವುಗಳಲ್ಲಿ ಸೂಕ್ಷ್ಮತೆ ಭಾವತೀವ್ರತೆಯೊಂದಿಗೆ ಕಲಾತ್ಮಕವಾಗಿ ಅನಾವರಣ ಗೊಳಿಸಿದೆ. ಅಪೂರ್ವ ಸೃಜನ ಶೀಲತೆ, ಸಾಮಾಜಿಕ ಕಾಳಜಿ ಇವರ ಕಥೆ ಕಾದಂಬರಿಗಳ ಅನನ್ಯತೆ. ದಲಿತಸಂವೇದನೆ, ಸ್ತ್ರೀಪರತೆ, ಪ್ರತಿಭಟನೆ ಮತ್ತು ಪರಿಷ್ಕಾರದ ಆಶಯಗಳು ಇವರ ಕೃತಿಗಳ ಜೀವಪರ ನೆಲೆಯನ್ನು ಗಟ್ಟಿಗೊಳಿಸಿವೆ.

ಜ್ವಲಂತ (1989), ಅವ್ವ ಮತ್ತು ಇತರ ಕಥೆಗಳು (1993) ಇವು ಕಥಾ ಸಂಕಲನಗಳು. ಜೋಗಿಣಿ ಎಂಬುದು ಕೆಳವರ್ಗದ ಮಹಿಳೆಯರ ಲೈಂಗಿಕ ಶೋಷಣೆಯ ಸುತ್ತ ಹೆಣೆದ ನಾಟಕ. ಅವ್ವ, ಸತ್ತ ಹೆಣ್ಣಿನ ಸುತ್ತ, ಜೀವನಚಕ್ರ, ನೀಲಗಂಗಾ – ಇವು ಮುಗ್ಧ ಗ್ರಾಮೀಣ ಮಹಿಳೆಯರ ಭಾವನಾತ್ಮಕ ಸಂಘರ್ಷಗಳನ್ನೂ ಅವರ ಜ್ವಲಂತ ಸಮಸ್ಯೆಗಳನ್ನೂ ಬಿಂಬಿಸುವ ಇತರ ನಾಟಕಗಳು.

ಅಲೆಮಾರಿ ಜನಾಂಗವಾದ ದುರಗ ಮುರಗಿಯವರನ್ನು ಕುರಿತಂತೆ ಇವರು ಸಂಶೋಧನೆ ನಡೆಸಿ ದುರಗ ಮುರಗಿಯವರ ಸಂಸ್ಕೃತಿ (1993) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಖೇಮಣ್ಣ (1998) ಇವರ ಒಂದು ಸಂಪಾದಿತ ಕೃತಿ.

ಇವರ ಹಸಿ ಮಾಂಸ ಮತ್ತು ಹದ್ದುಗಳು ಕಾದಂಬರಿಗಳು ಮರಾಠಿಗೆ ಅನುವಾದಗೊಂಡಿವೆ. ಹೆಣ್ಣಿನ ಕೂಗು ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಚಲನಚಿತ್ರವಾಗಿವೆ. ಇವರ ಅನೇಕ ಕಥೆಗಳು ತೆಲುಗು ಮತ್ತು ತಮಿಳಿಗೆ ಭಾಷಾಂತರಗೊಂಡಿವೆ.

ಇವರ ಸಾಹಿತ್ಯ ಸೇವೆಗಾಗಿ ಅನೇಕ ಪ್ರಶಸ್ತಿಗಳು ದೊರಕಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ, ಗುಲ್ಬರ್ಗದ ಎಸ್.ಆರ್. ಪಾಟೀಲ ಪ್ರತಿಷ್ಠಾನದ ಕಾಯಕರತ್ನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವ ಪ್ರಶಸ್ತಿ (1995), ಕರ್ನಾಟಕರಾಜ್ಯೋತ್ಸವ ಪ್ರಶಸ್ತಿ (1998) ಮತ್ತು ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ (2002) ಇವರಿಗೆ ಲಭ್ಯವಾಗಿವೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ

ನಾಡೋಜ ಗೌರವಕ್ಕೆ ಇವರು ಪಾತ್ರರಾಗಿದ್ದಾರೆ (2004). ಇವರ ಬದುಕು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಲಭಿಸಿದೆ (2004). ಇವರು ಈಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ (2005). (ಎಸ್‌ಎಚ್‌ಎ.ಐ.)

ನಾಡೋಜ ಪದವಿ ಪಡೆದ ಪ್ರಥಮ ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷಳಾದ ಪ್ರಥಮ ಮಹಿಳೆ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಕರ್ನಾಟಕದ ಪ್ರಥಮ ಮಹಿಳೆ. ಹೀಗೆ ಹಲವಾರು ಪ್ರಥಮಗಳನ್ನು ತಮ್ಮದಾಗಿಸಿಕೊಂಡ ವಿಶಿಷ್ಟ ವ್ಯಕ್ತಿತ್ವ ಇವರದು. *

**ಗೀತಾಂಜಲಿ :** ಕವಿವರ್ಯ ರವೀಂದ್ರನಾಥ ಠಾಕೂರರ (1861–1941) ಭಕ್ತಿ ಅಥವಾ ಅನುಭಾವಗೀತಗಳ ಸಂಕಲನವಿದು. ಒಂದೇ ಹೆಸರಿನ ಈ ಗ್ರಂಥ ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿದ್ದರೂ ಆವೃತ್ತಿಗಳು ಏಕರೂಪವಾಗಿರದೆ ಬಹು ಭಿನ್ನವಾಗಿವೆ. ಗೀತಾಂಜಲಿಯ ಬಂಗಾಳಿ ಆವೃತ್ತಿ 1909–10ರಲ್ಲಿ ಪ್ರಕಟಿತವಾಗಿದ್ದು ಒಟ್ಟು 157 ಗೀತಗಳನ್ನು ಒಳಗೊಂಡಿದೆ; ಇಂಗ್ಲಿಷ್ ಆವೃತ್ತಿಯಲ್ಲಿಯೋ ಒಟ್ಟು 103 ಪದ್ಯಗಳಿದ್ದು ಅವು ಕವಿವರ್ಯರ ನಾನಾ ಬಂಗಾಳಿ ಕವನ ಸಂಕಲಗಳಿಂದ ಆಯ್ದವುಗಳಾಗಿ ಅವರಿಂದಲೇ ಹೃದ್ಯ ಗದ್ಯದಲ್ಲಿ ಅನುವಾದಿತವಾದವಾಗಿವೆ. ಈ 103 ಪದ್ಯಗಳಲ್ಲಿ 51 ಮಾತ್ರ ಗೀತಾಂಜಲಿಯೊಳಗಿನವು; ಮಿಕ್ಕ 52 ಪದ್ಯಗಳಲ್ಲಿ ಗೀತಿಮಾಲ್ಯದಿಂದ 17, ನೈವೇದ್ಯದಿಂದ 16, ಖೇಯಾದಿಂದ 11, ಶಿಶುವಿನಿಂದ 3 ಮತ್ತು ಚೈತಾಲಿ, ಸ್ಮರಣ, ಕಲ್ಪನಾ ಉತ್ಸರ್ಗ, ಅಚಲಾಯತನ ಎಂಬುವುಗಳಿಂದ ಒಂದೊಂದು –ಹೀಗೆ ಆಯ್ದುಕೊಳ್ಳಲಾಗಿದೆ. ಈ ಎಲ್ಲ ಬಂಗಾಳಿ ಗ್ರಂಥಗಳು ಗೀತಾಂಜಲಿಗಿಂತ ಮೊದಲು ಎಂದರೆ 1900ರ ಎಡಬಲದಲ್ಲಿ ರಚಿತವಾದವು. ನೈವೇದ್ಯವೇ ಕವಿಯ ಭಕ್ತಿಗೀತಗಳ ಪ್ರಥಮ ಸಂಕಲನ. ಸ್ಮರಣವೆಂಬುದು 1902ರಲ್ಲಿ ತೀರಿಕೊಂಡ ಕವಿಪತ್ನಿಯ ಸ್ಮರಣ ಗೀತಗಳ ಸಂಕಲನ.

ಇಂಗ್ಲಿಷ್ ಗೀತಾಂಜಲಿ 1912ರಲ್ಲಿ ಕವಿ ಇಂಗ್ಲೆಂಡಿನಲ್ಲಿದ್ದಾಗ, ಅಲ್ಲಿಯ ಆಂಗ್ಲ ಕವಿವರ್ಯ ಡಬ್ಲೂ. ಬಿ. ಯೇಟ್ಸ್‌ನ ಮುನ್ನುಡಿಯೊಂದಿಗೆ ಮೊತ್ತಮೊದಲು ಅಚ್ಚಾಯಿತು. ಮುಖ್ಯವಾಗಿ ಈ ಆವೃತ್ತಿಗೇನೆ ವಿಶ್ವದ ಸರ್ವೋಚ್ಚ ಸಾಹಿತ್ಯಕ ಗೌರವವೆನಿಸಿದ ನೊಬೆಲ್ ಬಹುಮಾನ 1913ರಲ್ಲಿ ದೊರೆಯಿತು. ಹೀಗೆ ರವೀಂದ್ರರನ್ನು ವಿಶ್ವಕವಿಗಳನ್ನಾಗಿ ಮಾಡಿದ ಅಮರ ಕೃತಿಯೇ ಗೀತಾಂಜಲಿ. ಈ ಕೃತಿ ಲೋಕಪ್ರಿಯವಾಗಲು ಕಾರಣಪುರುಷರಾದ ಆಂಗ್ಲ ಚಿತ್ರಶಿಲ್ಪಿವರ್ಯ ವಿಲಿಯ್‌ಂ ರೊಥೇನ್‌ಸ್ಟೇನ್‌ಗೆ ಇದು ಅರ್ಪಿತವಾಗಿದೆ. ಈ ಕಿರು ಗ್ರಂಥ ಪ್ರಪಂಚದ ಸುಮಾರು 35 ಭಾಷೆಗಳಲ್ಲಿ ಗದ್ಯ ಇಲ್ಲವೆ ಪದ್ಯದಲ್ಲಿ ಅನುವಾದಿತವಾಗಿದ್ದು ಇಂಗ್ಲಿಷ್ ಆವೃತ್ತಿ ಲಕ್ಷಗಟ್ಟಲೇ ಪ್ರಸಾರವುಳ್ಳ 50 ಮುದ್ರಣಗಳನ್ನು ಇದುವರೆಗೆ ಕಂಡಿದೆ. ಕೆಲವು ಭಾಷೆಗಳಲ್ಲಂತೂ ಬೇರೆ ಬೇರೆ ಅನುವಾದಕರಿಂದ ರೂಪಾಂತರಗೊಂಡ ನಾಲ್ಕೈದು ಆವೃತ್ತಿಗಳೂ ಬೆಳಕಿಗೆ ಬಂದದುಂಟು. ಕನ್ನಡದಲ್ಲಿಯೇ ನಾಲ್ಕು ಅನುವಾದಗಳು ಪುಸ್ತಕರೂಪದಲ್ಲಿ ಪ್ರಕಟವಾಗಿದ್ದು ಅವುಗಳಲ್ಲಿ ಒಂದು ನೇರವಾಗಿ ಬಂಗಾಳಿ ಆವೃತ್ತಿಯಿಂದ ಗೀತರೂಪದಲ್ಲಿ ಕನ್ನಡಿಸಲ್ಪಟ್ಟಿದೆ. (ಪ್ರಹ್ಲಾದ ನರೇಗಲ್ಲ); ಉಳಿದ ಮೂರು ಅನುವಾದಗಳು ಇಂಗ್ಲಿಷ್ ಆವೃತ್ತಿಯಿಂದ ಕನ್ನಡಕ್ಕೆ ಇಳಿದಿದ್ದು ಅವುಗಳಲ್ಲಿ ಒಂದು ಪದ್ಯರೂಪದಲ್ಲಿಯೂ ಇನ್ನೆರಡು ಗದ್ಯರೂಪದಲ್ಲಿಯೂ ಇವೆ (ಸ.ಪ. ಗಾಂವಕರ, ಮೃತ್ಯುಂಜಯ ಬಸವಯ್ಯ ಬೂದಿಹಾಳಮಠ, ಶಣೈ)

ಶ್ರೀ ರವೀಂದ್ರರ 80 ವರ್ಷಗಳ ತುಂಬು ಬಾಳುವೆಯಲ್ಲಿ 1905ರಿಂದ 1941 ರವರೆಗಿನ ಅವಧಿ ನಿಜಕ್ಕೂ ಮಹತ್ತ್ವದ್ದಾಗಿದೆ. ನವಸಾಂಕೇತಿಕತೆಯ ಬೆಳೆವಣಿಗೆ, ದೈವಸಿದ್ಧಿಯ ಕುರುಹುಗಳಾದ ಭಕ್ತಿಗೀತಗಳ ಉದಯ, ನವೋನವನಾಟಕಗಳ ನಿರ್ಮಾಣ, ಸ್ವದೇಶಿ ಚಳವಳಿಯಲ್ಲಿ ಅಗ್ರನಾಯಕತ್ವ ಮತ್ತು ಪಲ್ಲೀಸಂಘಟನೆ, ರಾಷ್ಟ್ರೀಯತೆ ಅಂತಾರಾಷ್ಟ್ರೀಯತೆಗೆ ದಾರಿದೀಪವಾದದ್ದು, ವಿಶ್ವಭಾರತೀಯ ಮನುಕುಲದೈಕ್ಯದ ಭವ್ಯ ಆದರ್ಶಸಿದ್ಧಿಗಾಗಿ ತಪಗೈಯುತ್ತ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ನಾನಾಪೃಥ್ವೀ ಪ್ರವಾಸಗಳ ಯೋಜನಾಬದ್ಧ ದಿಗ್ವಿಜಯ ನಡೆಸಿದ್ದು –ಇಂಥ ಅಪೂರ್ವಸಂಘಟನೆಗಳ ಹಿನ್ನಲೆಯಲ್ಲಿ ರಚಿತವಾದ ಮಹಾಕೃತಿಯೇ ಗೀತಾಂಜಲಿ.

ಉಪನಿಷತ್ತುಗಳ ಪ್ರಾಚೀನಯುಗದ ಅದ್ವೈತಜ್ಞಾನ, ಮಧ್ಯಯುಗೀನ ವೈಷ್ಣವ ಸಂತರ ಭಕ್ತಿ ಪ್ರೇಮ ಹಾಗೂ ಆಧುನಿಕಯುಗದ ಸಾಮಾಜಿಕ ಆದರ್ಶಮಯ ಕರ್ಮ ಪ್ರವೃತ್ತಿ–ಇವುಗಳ ತ್ರಿವೇಣಿ ಸಂಗಮ ಶ್ರೀ ರವೀಂದ್ರರ ಜೀವನದರ್ಶನದಲ್ಲಿದೆ. ಆದುದರಿಂದ ವಿಶ್ವದಲ್ಲಿ ಶಾಂತಿ–ಶಿವ–ಆನಂದಗಳ ಪ್ರೇಮಸಾಮ್ರಾಜ್ಯ ನೆಲೆಗೊಳ್ಳಬೇಕೆಂಬ ವೈಚಾರಿಕ ಭೂಮಿಕೆಯೇ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿದೆ. ಅಂತೆಯೇ ಅರವಿಂದರು ರವೀಂದ್ರರ ಸ್ವರ್ಣಗ್ರಂಥದಲ್ಲಿ ರವೀಂದ್ರರ ಕಾವ್ಯವೈಶಿಷ್ಟ್ಯವನ್ನು ಕುರಿತು ಹೇಳಿರುವ ಈ ಮಾತುಗಳು ಅವರ ಗೀತಾಂಜಲಿಗೂ ಅನ್ವಯವಾಗುತ್ತವೆ : ರವೀಂದ್ರನಾಥರಲ್ಲಿ ಹೆಚ್ಚು ಒಡೆದು ಕಾಣುವ ಅಂಶವೆಂದರೆ– ಅವರು ವೈಷ್ಣವ ಕಾವ್ಯದ, ಭಾಗವತಭಕ್ತಿಯ ಭಾವರಹಸ್ಯವನ್ನು ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ. ಮತ್ತು ತಮ್ಮದೇ ಆದ ಹೊಸಬಗೆಯಲ್ಲಿ, ಹೊಸಮನ್ವಂತರಕ್ಕೆ ಹೊಂದಿಕೆಯಾಗುವ ಹಾಗೆ ಅದನ್ನು ಹೊರಹೊಮ್ಮಿಸಿದ್ದಾರೆ. ಹೀಗೆ ಮಾಡುವಾಗ ಅವರು ವೈಷ್ಣವ ವೈಶಿಷ್ಟ್ಯಕ್ಕೆ ಎಳ್ಳಷ್ಟೂ ಕುಂದು ತಂದಿಲ್ಲ. ಅವರು ಭಾರತದ ಸರ್ವಶ್ರೇಷ್ಠ ಭಾವಕವಿಗಳು; ಅವರ ಸುಕುಮಾರ ಮೃದುಮಾದುರ್ಯ, ಭಾವಾವೇಗ, ರುಚಿರತೆ, ರಮ್ಯತೆ, ಅವರ ಆಧ್ಯಾತ್ಮಿಕ ಗಂಭೀರತೆ, ರಹಸ್ಯಮಯ ಕವನಕೌಶಲ ಸದಾ ಬೆಂಬತ್ತಿಬರುವ ಮತ್ತು ಗುಣಗುಣಿಸಿ ಅನುಕರಿಸುವ ಕಾಲ–ಲಯಗಳ ತರಲ ತರಂಗಲೀಲೆ, ಅವರ ಮಧುಸಿಕ್ತವಾದ ಹಿತಮಿತದ ಅಭಿವ್ಯಕ್ತಿ ಇವು ಎಲ್ಲರಿಗೂ ಹೇಗೆ ಸಿದ್ಧಿಸಿಯಾವು ? ಈ ಜಾಣ್ಮೆ ನಿಗೂಢ ಆತ್ಮಾನುಭವದಿಂದ ಮಾತ್ರ ಸಾಧಿಸತಕ್ಕಂಥದು.

ಇದೇ ಮಾತನ್ನು ಪಾಶ್ಚಾತ್ಯ ಮನೀಷಿ ಯೇಟ್ಸ್ ಗೀತಾಂಜಲಿಗೆ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: 'ಠಾಕೂರರು ಭಾರತೀಯ ಸಂಸ್ಕೃತಿಯಂತೆ ಅಂತರಾತ್ಮವನ್ನು ಶೋಧಿಸುವುದರಲ್ಲಿ ತೃಪ್ತಿಪಡುತ್ತಾರೆ. ಅಂತರಂಗದ ಅಧಿನಾಯಕನ ಅಂತಃಪ್ರೇರಣೆಗೆ ತಮ್ಮನ್ನು ಕೊಟ್ಟುಕೊಂಡು ಬಿಡುತ್ತಾರೆ. ಜಗತ್ತಿನ ಬೇರಾವ ಸಾಹಿತ್ಯದಲ್ಲಿಯೂ ಸಿಗದ ಅದೊಂದು ಸರಳ ಸುಂದರ ಮುಗ್ಧತೆ ಇಲ್ಲಿ ಕಂಡು ಬರುವುದು..., ನಮಗೆ ಅತೀವ ಅಪರಿಚಿತವಾಗಿರುವ ಅದೊಂದು ಸಂಸ್ಕೃತಿಯು ಜನಾಂಗವೂ ಈ ಭಾವಕಾವ್ಯದ ಭಾವಲೋಕದಲ್ಲಿ ಕಂಡುಬರುವುವು... ದೇಶದ ಹಿಂಸಾಮಯ ಚರಿತ್ರೆಯಲ್ಲಿ ನಾವು ಮರೆತುಬಿಟ್ಟಂಥ ಸಂತ ಫ್ರಾನ್ಸಿಸ್, ವಿಲಿಯಂ ಬ್ಲೇಕರಂಥವರ ಧ್ವನಿ ನಮಗೆ ಇಲ್ಲಿ ಕೇಳಿಬರುತ್ತದೆ.'

ಕನ್ನಡದಲ್ಲಿ ಠಾಕೂರರ ಚರಿತ್ರಕಾರರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಗೀತಾಂಜಲಿಯಲ್ಲಿ ಕಂಡುಬರುವ ದೈವಸಿದ್ಧಿಯನ್ನು ಹೀಗೆ ಪ್ರಶಂಸಿಸಿದ್ದಾರೆ.

'ಕವಿವರರು ತಮ್ಮ ಬಾಳಿನಲ್ಲಿ ಭಗವಂತನ ಲೀಲೆಯನ್ನು ಕಂಡಿದ್ದಾರೆ... ಠಾಕೂರರ ಜೀವ ಹತ್ತಾರು ಸಲ ಕರೆದಿದೆ; ಅದರ ದೈವ ಅದಕ್ಕೆ ಓ ಎಂದು ಉತ್ತರ ಕೊಟ್ಟಿದೆ... ಠಾಕೂರರ ದೈವ ಅದರ ಒಡನಾಡಿ; ತನ್ನ ಸಿಂಹಾಸನವನ್ನುಳಿದು ಅವರ ಜೊತೆಗೆ ಆಡಬಂದಿರುವ ರಾಜ; ಅವರನ್ನು ಹಾಡಹೇಳಿ ಸಂತೋಷಿಸುವ ಪ್ರಭು; ಅವರ ತಪ್ಪುಗಳನ್ನು ಮನ್ನಿಸುವ ಅವರ ಗುಣಕ್ಕೆ ಮೆಚ್ಚುವ ಸದಾ ಅವರನ್ನು ಹಿಡಿದು ಮೇಲಕ್ಕೆ ಎತ್ತುವ ಸುಹೃತ್‌ತತ್ತ್ವ... ಠಾಕೂರರು ಬಾಳು ದೇವರ ಲೀಲೆಯೆಂದರಿತು ಅವನ ನಿಯಮವನ್ನು ಸದಾ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆ; ಸೋತು ಬಿದ್ದಂದು ನನ್ನನ್ನು ಹಿಡಿದೆತ್ತು ಎಂದು ದೈವವನ್ನು ಬೇಡಿಕೊಂಡಿದ್ದಾರೆ. ಆ ದೈವ ತಮ್ಮನ್ನು ಹಿಡಿದೆತ್ತಿ ಸಲಹುತ್ತಿರುವುದನ್ನು ಅನುಭವಿಸಿದ್ದಾರೆ. ಇದೇ ದೈವಸಿದ್ಧಿ. ಇದರಿಂದಲೇ ಅವರು ಪ್ರಪಂಚದ ಸಾವಿರಾರು ಚೇತನಗಳನ್ನೂ ಎತ್ತಿ ಎಚ್ಚರಗೊಳಿಸಲು ಶಕ್ತರಾದುದು.'

ಸರೋಜಿನಿ ನಾಯ್ಡು ಅವರು ಒಂದೆಡೆ ಠಾಕೂರರ ಬಗ್ಗೆ ಬರೆಯುತ್ತ ಸ್ವೀಡನ್, ನಾರ್ವೆ, ಫ್ರಾನ್ಸ್ ಜರ್ಮನಿ, ಇಟಲಿ, ಅಮೆರಿಕ, ಕೆನಡ ಮೊದಲಾದ ದೇಶಗಳಲ್ಲಿ ಠಾಕೂರರ ಮತ್ತು ಅವರ ಗೀತಾಂಜಲಿಯ ಬಗೆಗೆ ಜನರಲ್ಲಿ ಹೇಗೆ ಅದರ ಕುತೂಹಲಗಳು ಇದ್ದವೆಂಬುದನ್ನು ಚೆನ್ನಾಗಿ ಬಣ್ಣಿಸಿದ್ದಾರೆ. ಆ ದೇಶಗಳಲ್ಲಿ ಮನೆಮನೆಯಲ್ಲೂ ಈ ಗ್ರಂಥದ ಪ್ರತಿಗಳು ಇದ್ದವೆಂದೂ ಬುಡಾಪೆಸ್ಟ್ ನಗರದಲ್ಲಂತೂ ರುಗ್ಣಾಲಯ ಒಂದರಲ್ಲಿ ಪ್ರತಿಯೊಬ್ಬ ರೋಗಿಯ ತಲೆದಿಂಬಿನ ಬುಡದಲ್ಲಿ ಗೀತಾಂಜಲಿಯ ಒಂದೊಂದು ಪ್ರತಿ ಇದ್ದುದನ್ನು ಕಂಡು ತಾವು ಬೆರಗಾದುದಾಗಿಯೂ ಅವರು ತಿಳಿಸುತ್ತಾರೆ.

ಗೀತಾಂಜಲಿಯ ಯಾವುದೇ ಆವೃತ್ತಿಯ ಗೀತಗಳಲ್ಲಿಯ ಭಾವಾವೇಗಗಳನ್ನು ಸನ್ನಿವೇಶಗಳನ್ನು ವಿಶ್ಲೇಷಿಸಿ ನೋಡಿದಾಗ ಅವುಗಳಲ್ಲಿ ಈ ಮುಂದಿನ ಏಳು ನೆಲೆಗಳನ್ನು ನಾವು ಕಾಣುತ್ತೇವೆ:

1 ಭಗವತ್ ಪ್ರಾರ್ಥನೆಯ ಪದ್ಯಗಳು : ಬಾಳಿನಲ್ಲಿಯ ಆಶೆನಿರಾಶೆಗಳಲ್ಲಿ ಹೊಯ್ದಾಡುತ್ತ ಉಚ್ಚಜೀವನಕ್ಕಾಗಿ ಅಲವರಿಯುವ ಹಿರಿಹಂಬಲದ ಪದ್ಯಗಳು :

ಅಂತರಂಗವನು ಅರಳಿಸು ಒಲವೇ, ಅಂತಃಕರಣದ ಒಳನಲಿವೇ !
ನಿರ್ಮಲಗೊಳಿಸೈ ಉಜ್ವಲಗೊಳಿಸೈ ಸುಂದರಗೊಳಿಸೈ ಓ ಚೆಲುವೇ !
ನವನವ ರೂಪದಿ ಬಾರೈ ಪ್ರಾಣದಲಿ
ವಿಧವಿಧ ವರ್ಣದಿ ಗಂಧದಿ ಗಾನದಲಿ

* * *

ಸಂಕಟದಲಿ ಸಂರಕ್ಷಿಸು ಎಂಬುದು ನನ್ನ ಪ್ರಾರ್ಥನೆಯೆ ಅಲ್ಲಾ !
ಸಂಕಟದಲಿ ಭಯವಿರದಿರೆ ಸಾಕೈ ಹೆಚ್ಚಿನ ಬಯಕೆಯೆ ಇಲ್ಲಾ !

* * *

ಇಕೋ ನನ್ನ ಈ ಶಿರವ ಬಾಗಿಸಿಕೊ ಚರಣಧೂಳಿತಲದಿ
ಸಕಲ ಈ ಅಹಂಕಾರ ಮುಳುಗಿಸೈ ನನ್ನ ನಯನಜಲದಿ !
ನನ್ನಯ ಬಾಳೊಳು ನಿನ್ನಯ ಲೀಲೆಯು ಒಡಮೂಡಿರಲೆಂದು
ಸುಂದರನೇ ಓ ಬಂದಿಹೆನೋ ಈ ಭವದಲಿ ನಾನಿಂದು

* * *

ಒಂದೆ ನಮಸ್ಕಾರ ಪ್ರಭೋ ಒಂದೆ ನಮಸ್ಕಾರಾ !
ಒಂದೆ ನಮಸ್ಕಾರದಲ್ಲಿ ಇಂದು ನಿನ್ನ ಚರಣದಲ್ಲಿ
ದೇಹವೆಲ್ಲ ಚಾಚಲಿ–ವಿಶ್ವವೆಲ್ಲ ತೋಚಲಿ
ಒಂದೆ ನಮಸ್ಕಾರದಿ –ಸಕಲ ಸಂಸಾರದಿ !

2 ಬಾಳುವೆಯ ಸಾಧನೆಯಲ್ಲಿ ಅಂತರ್ಮುಖತೆಯ ಮತ್ತು ಆತ್ಮ ವಿಕಾಸದ ಹಂತಗಳನ್ನು ಸೂಕ್ಷ್ಮವಾಗಿ ಬಣ್ಣಿಸುವ ಮನೋವಿಶ್ಲೇಷಣೆಯ ಪದ್ಯಗಳು :

ಕೊರಗಿಸಿವೆ ಬಹು ಆಸೆ ಪ್ರಾಣವ ಗಾಸಿಗೊಳಿಸುತೆ ಪೀಡಿಸಿ !
ಪೊರೆಯುತಿಹೆ, ಪ್ರಿಯ ವಂಚಕನೆ, ಈ ಆಸೆಗಳ ಹುಡಿಗೂಡಿಸಿ !

* * *

ನಿನ್ನನು ಕಾಣುವ ಪುಣ್ಯವೆ ಇರದಿರೆ ನನ್ನೀ ಜೀವನದಿ–
ನಿನ್ನನೆ ಪಡೆಯದೆ ಖಿನ್ನತೆ ಉಳಿಯಲಿ ಪ್ರಭುವೇ ಈ ಮನದಿ !
ಕರುಣದ ಕಥೆಯಿದು ಮರೆಯದೆ ಇರಲೈ ಎಂದಿಗು ಸ್ಮರಣದಲಿ
ಕೊರಗಿದು ಜನ್ಮಾಂತರದಲಿ ಸಾಗಲಿ ಸ್ವಪ್ನದಿ ಶಯನದಲಿ !

* * *

ತಡವೇಕೆ ತಡವೇಕೆ ಈ ಹೂವ ಕೊಯ್ದುಕೊಳ್ಳೈ
ಹುಡಿಗೂಡುವುದೊ ಎಂಬ ಸ್ನೇಹಮಯ ಭಯವ ತಳ್ಳೈ !
ಇಂದು ಹೂವೊಳು ಬಣ್ಣ ಕಳಕಳಿಸುತಿರುವಾಗಲೇ
ಗಂಧ ಮಕರಂದಗಳು ನಳನಳಿಸುತಿರುವಾಗಲೇ
ಚೆನ್ನ, ಇಕೊ ಕೊಯ್ದುಕೋ ಇಲ್ಲದ ವಿಲಂಬ ಬೇಡೈ
ಬಿನ್ನವಿಸುವೆನು ಕರದಿ ಮೆಲ್ಲನೆಯ ಮುದ್ದಿ ಸಾಡೈ !

3. ಜೀವಾತ್ಮ ವಿಶ್ವಾತ್ಮನೊಂದಿಗೆ ಸಹಯೋಗ ಗೈಯುತ್ತ ಸಮರಸನಾಗಿ ಆನಂದಿಸುವ ಅನುಭವಗೀತೆಗಳು :

ಅಹಹ, ನನ್ನಯ ದೇವ, ತುಂಬುತ ತುಂಬುತಲಿ ತನುಪ್ರಾಣವ
ಇಹದಿ ಈಗಳೆ ಮಾಡಬಯಸುವೆ ಯಾವ ಅಮೃತದ ಪಾನವ ?
ನನ್ನ ಕಣ್ಣೊಳು ನಿನ್ನ ವಿಶ್ವವ ಕಂಡುಕೊಳ್ಳುತ ನಲಿವೆಯಾ?
ನಿನ್ನ ಹಾಡನೆ ಕೇಳಿಕೊಳ್ಳಲು, ಕವಿಯೇ ಕಿವಿಯೊಳು ಸುಳಿವೆಯಾ ?

* * *

ಓವೊ ನೀನಿಹೆ ನನ್ನ ಬಾಳ್ವೆಯ ಕೊನೆಯ ಗಳಿಗೆಯ ಪೂರ್ಣತೆ !
ಸಾವೆ, ನನ್ನಯ ಸಾವೆ, ಒಡನುಡಿ ಕಿವಿಯೊಳೇ ಆ ಈ ಕಥೆ !

* * *

ಹೊರಡುವ ದಿನದೊಳು ಒರೆಯಲು ಬಳಗಕೆ ನನ್ನೊಳು ಈ ಮಾತೊಂದಿರಲಿ!
ಕಂಡುದುದೆಲ್ಲಾ ಉಂಡುದುದೆಲ್ಲಾ ಉಪಮಾತೀತವೆ ಎಂದಿರಲಿ !

4 ನಿಸರ್ಗನಿಷ್ಠ ಕವಿ ಪ್ರತಿ ವರ್ಷ ನಾನಾ ಋತುಗಳಲ್ಲಿ ಮತ್ತು ಪಂಚಮಹಾಭೂತ ಗಳಲ್ಲಿ ಭಗವಂತನ ಬಹುಮುಖಗಳನ್ನು ಕಂಡು ಕೊಂಡಾಡುವ ಪ್ರಕೃತಿ ಪ್ರೇಮದ ಪದ್ಯಗಳು :

ಇಂದು ಬಸಂತನು ಬಂದಿಹನೈ ಬಾಗಿಲಲಿ
ನಿಂದಿಹನೈ ಬಾಳ್‌ದೇಗುಲಲಿ
ಕುಂಠಿತವಿರೆ ಅವಗುಂಠಿತವಿರೆ ತವ ಜೀವನಾ
ಎಂಥ ವಿಡಂಬನೆಯೋ ಅವನಾ !

* * *

ಮತ್ತೆ ಬಂತಾಷಾಢಮಾಸವು ಮುಚ್ಚುತಲಿ ಆಕಾಶವಾ
ವೃಷ್ಟಿಯೊಳಗಿನ ಕಂಪು ಭರದಲಿ ಬಂತು ಗಾಳಿಗೆ ಅಹ ಅಹಾ

* * *

ಇಂದು ಮೇಘದಲಿ ಜಲ ವೇಗದಿಂದಲಿ ತುಂಬಿ ಧೋಧೋಗರೆವುದು !
ಮುಗಿಲ ಕರುಳನು ಬಗಿದು ವ್ಯಾಕುಲಧಾರೆ ಸಂತತ ಹರಿವುದು !
ಶಾಲಿಬನದಲಿ ಗಾಳಿ ತೂಗುಯ್ಯಾಲೆಯಲಿ ಗುಡುಗುಡುಗಿರೆ
ನೀರು ಹರಿವುದು ಮೇರೆವರಿಯುತ ನೆಲದ ನೆಲೆಯೇ ಅಡಗಿರೆ
ಅಂತರಂಗದೊಳೆಂಥ ಕಳವಳ ! ಬಾಗಿಲಡೆತಡೆ ಒಡೆದಿದೆ
ಭದ್ರ ಹೃದಯದಿ ಭಾದ್ರಪದದೊಳು ಮರುಳಿನಾಟವು ನಡೆದಿದೆ!

* * *

ಬಾರೆ ಬಾರೌ ಶರದಲಕ್ಷ್ಮಿಯೆ ಶುಭ್ರಮೇಘದ ರಥದಲಿ
ನೀಲ ನಿರ್ಮಲ ಪಥದಲಿ
ಬೆಳಗಿ ತೊಳಗುವ ಶಾಂತಿಶ್ಯಾಮಲ ವನದಿ ಗಿರಿಪರ್ವತದಲಿ
ಶಿಶಿರ ಶೀತಲ ಶ್ವೇತ ಶತದಲ ಮುಕುಟ ಧರಿಸುತ ದ್ರುತದಲಿ
ನಿನ್ನ ಆ ಬಂಗಾರಬೀಣೆಯ ಮಿಡಿದು ಮಧುಮಧು ತಾನದಿ
ನುಡಿಸು ಇಂಚರ ಧ್ಯಾನದಿ !

5 ಪ್ರವೃತ್ತಿಮಾರ್ಗದ ಪ್ರೇಯಃಪಥದ ಜಯಘೋಷವನ್ನು ಗೈವ ಉತ್ಸಾಹಮಯ ಉಜ್ಜ್ವಲ ಪದ್ಯಗಳು :

ಜಗದ ಈ ಆನಂದಯಜ್ಞಕ್ಕೆ ಬಂತು ನನಗೆ ನಿಮಂತ್ರಣಾ !
ಸೊಗದ ಬಾಳ್ ಇದು; ಧನ್ಯಧನ್ಯವು ಇಂತು ಮಾನವ ಜೀವನಾ !
ಸಾಕು ಸಾಕೀ ಭಜನೆ ಪೂಜನೆ ಸಾಕು ಈ ಆರಾಧನೆ !
ದೇಗುಲದ ಕದ ಬಿಗಿದು ಮೂಲೆಯೊಳೇಕೆ ಪಡುತಿಹೆ ವೇದನೆ ?

* * *

ಎನಿತೊ ಅರಿಯದಂಥ ಜನರ ಗುರುತುಗೊಳಿಸಿಹೆ !
ಎನಿತೊ ಮನೆಯೊಳೆನಗೆ ಸ್ಥಳವನಿರಿಸಿ ಬೆಳೆಸಿಹೆ !

* * *

ಅಧಮರಲಿ ಅಧಮರಾದವರ ಅಡಿಯಲ್ಲಿ
ಕಳೆದು ಕಂಗೆಟ್ಟವರ ಕಟ್ಟಕಡೆಯಲ್ಲಿ ನಿನ್ನಡಿಯು ರಾಜಿಸುವುದು !
ಬಡವರಲಿ ಬಡವರಾದವರ ಬುಡದಲ್ಲಿ
ದೀನರಲಿ ದೀನರಾದವರ ದಡದಲ್ಲಿ ನಿನ್ನಡಿಯು ರಾಜಿಸುವುದು !

6 ನಾದಪ್ರಿಯ ಕವಿ ತನ್ನ ಹೃದಯದಲಿ ಗಾನದೊಂದಿಗೆ ಧ್ಯಾನಸ್ಥನಾದಾಗ ತನ್ಮಯತೆಯನ್ನು ಪಡೆಯುವ ಸ್ವಾನಂದಾನುಭೂತಿಯ ಪದ್ಯಗಳು :

ಎಂತು ಹಾಡುತಲಿರುವೆಯೋ ಗುಣವಂತ ! ನನಗತಿ ವಿಸ್ಮಯಾ !
ಇಂತು ಕೇಳುತ ಕೇಳುತಲಿ ಏಕಾಂತದಲಿ ಮತಿ ತನ್ಮಯಾ !
ನಿನ್ನ ಇನಿದನಿ ತುಳುತುಳುಕುತಿದೆ ಬೆಳಕ ಭುವನದಿ ಚೆಲ್ಲುತ
ಚೆನ್ನ! ತವಸ್ವರ ಕುಸುರುತಿದೆ–ಆ ಪುಳಕ ಗಗನದಿ ಗೆಲ್ಲುತ !

* * *

ಗಾನದಿಂದಲೆ ಒಳಗು ಹೊರಗೂ ನಿನ್ನನರಸುವೆ ಮನದಲಿ
ನನ್ನ ಇಡಿ ಜೀವನದಲಿ !
ನನ್ನ ಹಾಡಿವು ನನ್ನನೊಯ್ದಿವೆ ದೂರದೂರಕೆ ದೂರಕೆ
ಚಾರುಗೃಹಗಳ ದ್ವಾರಕೆ !

7 ಕವಿ ಸಾಕ್ಷಾತ್ತಾಗಿ ಭಗವಂತನ ಬಿಂಬಾನುಭವವನ್ನು ಪಡೆದು ಅದನ್ನು ಪ್ರತಿಬಿಂಬಿಸುವ ಅಂತಃಸತ್ತ್ವದ ಪದ್ಯಗಳು. ಭಗವಂತ ಭಕ್ತನಿಗೆ ರಾಜ, ಒಡೆಯ, ಗೆಳೆಯ, ಮಾತೆ, ಪಿತ, ಪತಿ, ಎಂಬುದಾಗಿ ತೋರುತ್ತಾನೆ. ಭಗವಂತನಿಗಾಗಿ ಭಕ್ತನ ಅಭಿಸಾರವೂ ಭಕ್ತನಿಗಾಗಿ ಭಗವಂತನ ಅಭಿಸಾರವು ಇಲ್ಲಿ ವರ್ಣಿತವಾಗಿವೆ :

ಬಳಿಯಲಿ ಬಂದನು ಕೆಲದಲಿ ಕುಳಿತನು ಅರಿವೆ ಆಗ್ಗೆ ಇಲ್ಲಾ
ಎಂಥಾ ನಿದ್ದೆಯು ಬಂತೋ ಕಣ್ಣಿಗೆ ಬರಿದು ಭಾಗ್ಯವೆಲ್ಲಾ
ನೀರವ ನಿಶೆಯಲಿ ತೋರಿದನಾತನು ಕನಸೋ ನನಗಂತೂ !
ಪಾಣಿಯೊಳಿಂಪಿನ ಬೀಣೆಯ ಬಾಜನೆ ! –ಕನಸಿಗು ಸವಿಬಂತು !

* * *

ನನ್ನಲಿ ಬೆರೆಯಲು ಎಂದಿನ ದಿನದಿಂದಿಲ್ಲಿಗೆ ಬರುತಿರುವಿ !
ನಿನ್ನನು ತಡೆಯಲು ಯಾರಿಹರಾರ್ಪರು ಇಲ್ಲವೊ ಚಂದ್ರ–ರವಿ !

* * *

ಬೆಳಕಿನ ಬೆಳಕೇ ಬೆಳಕಿಗೆ ಬೆಳಕನು ಸುರಿಯುತ ನೀ ಬಂದೆ !
ಕಳೆಯಿತು ಕತ್ತಲೆ, ಬೆಳಕೋ ಬೆಳಕಿದೆ ನನ್ನಯ ಕಣ್ಮುಂದೆ !

* * *

ಇಲ್ಲಿಯೆ ಹಾಡನು ಮುಗಿಸಲು ಬಯಸುವೆ ಎಲ್ಲಿದೆಯೋ ಕೊನೆಯು ?
ತವ ಸಭೆಯಿಂದಿದೆ ಪುನರಾದೇಶವು ತಪ್ಪಿತು ಯೋಜನೆಯು !

ಹೀಗೆ ಗೀತಗಳ ಅಂಜಲಿ, ಇಷ್ಟದೈವಕ್ಕೆ ಕವಿಯಿಂದ ಅನಂತ ರೀತಿಯಲ್ಲಿ ಅರ್ಪಿತವಾಗಿದೆ. (ಪಿ.ಬಿ.ಎಸ್.)

**ಗೀತಿಕೆ :** ಅಚ್ಚಕನ್ನಡ ಛಂದಸ್ಸಿನ ಒಂದು ಮಟ್ಟು. ನಾಗವರ್ಮನ (ಸು. 990) ಛಂದೋಂಬುಧಿಯ ಪಂಚಮಾಧಿಕಾರದಲ್ಲಿಯೂ (ಪ. 18) ಜಯಕೀರ್ತಿಯ (ಸು. 1050) ಸಂಸ್ಕೃತ ಛಂದೋನುಶಾಸನದ ಸಪ್ತಮಾಧಿಕಾರದಲ್ಲಿಯೂ (ಪ. 20) ಇದರ ಲಕ್ಷಣವನ್ನು ಕುರಿತಿದೆ. ಸಾಮಾನ್ಯವಾಗಿ ವಿದ್ವಾಂಸರಿಂದ ಅಂಗೀಕೃತವಾಗಿರುವ ಪದ್ಯಪಾಠದ ಪ್ರಕಾರ, ಛಂದೋಬುಧಿಯಲ್ಲಿ ಉಕ್ತವಾಗಿರುವ ಗೀತಿಕೆಯ ಲಕ್ಷಣ ಹೀಗಿದೆ: ನಾಲ್ಕು ಪಾದಗಳು; ಎರಡೆರಡು ಪಾದಗಳಿಗೆ ಒಂದು ಅರ್ಧ; ಪ್ರತಿಯರ್ಧದಲ್ಲಿಯೂ 2ನೆಯ ಮತ್ತು 6ನೆಯ ಗಣಗಳು ಬ್ರಹ್ಮಗಣಗಳಾಗಿಯೂ ಉಳಿದವು ಕವಿಯ ಇಷ್ಟಪ್ರಕಾರವಾಗಿಯೂ (ಎಂದರೆ ಬ್ರಹ್ಮ ಇಲ್ಲವೆ ವಿಷ್ಣು ಇಲ್ಲವೆ ರುದ್ರ ಯಾವುದಾದರೂ ಗಣಗಳಾಗಿರುವಂತೆಯೂ) ಇರುತ್ತವೆ. ಜಯಕೀರ್ತಿಯ ಛಂದೋನುಶಾಸನದಲ್ಲಿ ಈ ರೀತಿಯಾಗಿದೆ : ನಾಲ್ಕು ಪಾದಗಳು; ಎರಡೆರಡು ಪಾದಗಳಿಗೆ ಒಂದು ಅರ್ಧ ಪ್ರತಿಯರ್ಧದಲ್ಲಿಯೂ 2ನೆಯ ಮತ್ತು 6ನೆಯ ಗಣಗಳು ರತಿಗಣಗಳಾಗಿಯೂ ಉಳಿದ 5 ಗಣಗಳು ಮದನಗಣಗಳೋ ಶರಗಣಗಳೋ ಆಗಿರುತ್ತವೆ; ಸಮಪಾದಗಳಲ್ಲಿ 4 ಗಣಗಳೂ ವಿಷಮಪಾದಗಳಲ್ಲಿ 3 ಗಣಗಳೂ ಇರುತ್ತವೆ.

ಮೇಲಿನ ಎರಡು ಗ್ರಂಥಗಳಲ್ಲಿಯೂ ಗೀತಿಕೆಯ ಲಕ್ಷಣದ ಮುಖ್ಯಾಂಶ ಒಂದೇ ಆಗಿದೆ ಎನ್ನುವುದು ಲಕ್ಷಣ ಮತ್ತು ಲಕ್ಷ್ಯ ಏಕೀಭವಿಸಿರುವ ಆಯಾ ಗೀತಿಕೆಯ ಪದ್ಯವನ್ನು ಪರಸ್ಪರವಾಗಿ ಹೋಲಿಸಿದಾಗ ತಿಳಿಯುತ್ತದೆ. ಜಯಕೀರ್ತಿ ನಾಗವರ್ಮ ನಿಗಿಂತ ಸ್ಪಷ್ಟವಾಗಿ ಕೆಲವು ವಿವರಗಳನ್ನು ಕೊಟ್ಟಿದ್ದಾನೆ. ಪಾದಪಾದಕ್ಕೆ ಎಷ್ಟುಗಣಗಳಿರ ಬೇಕೆಂಬ ಸೂಚನೆ ಜಯಕೀರ್ತಿಯದು; 2ಮತ್ತು 6ನೆಯ ಸ್ಥಾನಗಳನ್ನು ಬಿಟ್ಟು ಉಳಿದವು ವಿಷ್ಣುವೋ ರುದ್ರವೋ ಆಗಿರುತ್ತವೆ ಎಂಬ ಸೂಚನೆಯೂ ಆತನದೇ. 'ಉಳಿದವು ಮಚ್ಚುವ ತೆಱದಿಂ' ಎಂಬ ನಾಗವರ್ಮನ ಮಾತಿನಲ್ಲಿ ವಿಷ್ಣು ರುದ್ರಗಳ ಜೊತೆಗೆ ಬ್ರಹ್ಮವೂ ಬರಬಹುದು– ಎಂಬ ತಿಳಿವಳಿಕೆಗೆ ಅವಕಾಶವಿದೆ. ಆದರೆ ಆತನ ಲಕ್ಷಣ–ಲಕ್ಷ್ಯ ಸಮೀಕೃತವಾದ ಗೀತಿಕೆಯ ಪದ್ಯವನ್ನು ಪ್ರಸ್ತಾರಿಸಿದರೆ ಅಲ್ಲಿ ವಿಷ್ಣು ರುದ್ರಗಳೇ ಕಂಡುಬರುವುದರಿಂದ ಜಯಕೀರ್ತಿಯ ಆಶಯವೇ ಸರಿಯಿರಬಹುದು ಎಂದೆನಿಸುತ್ತದೆ. ಈತನಿಗಾದರೂ ಲಕ್ಷಣನಿರ್ವಚನಕ್ಕೆ ನಾಗವರ್ಮನ ಪದ್ಯವೇ ಮಾದರಿಯಾಗಿದ್ದರ ಬಹುದು. ಹಾಗಾದರೆ ನಾಗವರ್ಮ 'ಉಳಿದವು ಮಚ್ಚುವ ತೆಱದಿಂ' ಎಂದು ಹೇಳಿದ್ದೇಕೆ? ಗೀತಿಕೆಯ ಆ ಉಳಿದೈದು ಗಣಗಳಲ್ಲಿ ವಿಷ್ಣು ಅಥವಾ ರುದ್ರ ಬರುವುದೇ ಸಾಮಾನ್ಯವಾಗಿದ್ದರೂ ಆಗಾಗ ಬ್ರಹ್ಮವೂ ಬರುವ ಸಾಧ್ಯತೆಯನ್ನು ಲಕ್ಷ್ಯಪದ್ಯಗಳಿಂದ ಮನಗಂಡು ಹಾಗೆ ಹೇಳಿರಬಹುದು; ಮಾದರಿಯನ್ನು ಮಾತ್ರ ವಿಷ್ಣುರುದ್ರರು ಬರುವಂತೆಯೇ ಕಟ್ಟಿರಬಹುದು. ಈಗ ನಮಗೆ ದೊರೆಯುತ್ತಿರುವ ನಿದರ್ಶನಗಳು, ಹಾಗೆ ವಿಷ್ಣುರುದ್ರಗಳು ಬರುವ ಹಾಗೆಯೇ ಬ್ರಹ್ಮ ಬರುವುದನ್ನೂ ತೋರಿಸುತ್ತವೆ. ಇಷ್ಟು ಮಾತ್ರವಲ್ಲದೆ ಅಂಶವೃತ್ತಗಳಿಗೆ ಸಹಜವಾದ ಪ್ರವೃತ್ತಿಯಂತೆ 2 ಮತ್ತು 6ನೆಯ ಬ್ರಹ್ಮಗಣಸ್ಥಾನದಲ್ಲಿಯೂ ಅಪೂರ್ವವಾಗಿ ವಿಷ್ಣುವೂ ರುದ್ರವೂ ಬರುವುದಾದರೆ, ಅದರಲ್ಲಿ ಆಶ್ಚರ್ಯವೇನಿಲ್ಲ. ಗೀತಿಕೆಯ ಉಪಲಬ್ಧ ನಿದರ್ಶನಗಳನ್ನು ಪ್ರಸ್ತಾರಿಸುವಾಗ, ಕೆಲವೊಮ್ಮೆ ಈ ಪ್ರವೃತ್ತಿ ಕಾಣುವ ಹಾಗೆ ತೋರುತ್ತದೆ.

ಮುಖ್ಯವಾಗಿ ಕವಿರಾಜಮಾರ್ಗದ ಗೀತಿಕೆಯ ಪದ್ಯಗಳಲ್ಲಿ ಕೆಲವು ಕಡೆ ನಿರ್ದಿಷ್ಟಗಣ ಸಂಖ್ಯೆಯ ಅಗತ್ಯಕ್ಕಿಂತ ಹೆಚ್ಚಾಗಿ ಕೆಲವು ಅಕ್ಷರಗಳು ಉಳಿದುಬಿಡುತ್ತಿರುವುದು ಗೀತಿಕೆಯನ್ನು ಒಂದು ಸಮಸ್ಯಾತ್ಮಕ ಛಂದೋಬಂಧವನ್ನಾಗಿ ಮಾಡಿದೆ. ಒಂದೆರಡೇ ಅಕ್ಷರಗಳು ಉಳಿಯುವಂತಿದ್ದರೆ ಅದೊಂದು ಬಗೆಯಾಗಿ ಸಮಾಧಾನವನ್ನು ಹೇಳಬಹುದು; ಗೀತಿಕೆಯ ವೈಲಕ್ಷಣ್ಯದಲ್ಲಿ ಅದನ್ನು ಸೇರಿಸಬಹುದು. ಆದರೆ ಒಮ್ಮೊಮ್ಮೆ ದೀರ್ಘತರ ಪಾದಗಳ ಪದ್ಯಗಳು ಕೂಡ ಎದುರಾಗಿ ಇವೇನು ದಿಟವಾಗಿ ಗೀತಿಕೆಗಳೇ ಎಂಬ ಸಂಶಯವನ್ನೂ ಉಂಟುಮಾಡುತ್ತವೆ. 2 ಮತ್ತು 6ರ ಬ್ರಹ್ಮಗಣಗಳಿಗೆ ಅಪೂರ್ವವಾಗಿ ವಿಷ್ಣು (ಇಲ್ಲವೆ ರುದ್ರ) ಬರಬಹುದು ಎಂಬ ಗ್ರಹಿಕೆಯಿಂದ ಮುನ್ನಡೆದರೆ ತೊಡಕು ಕೆಲಮಟ್ಟಿಗೆ ಬಗೆಹರಿಯುತ್ತದೆಂದು ಹೇಳಬಹುದು; ಆದರೆ ಸಮಸ್ಯೆಯ ಪರಿಹಾರ ಈಗಿನ ಮಟ್ಟಿಗೆ ಪೂರ್ತಿಯಾಗಿ ಸಾಧ್ಯವಿಲ್ಲ.

ಇದನ್ನು ಗಮನಿಸಿ ಗೀತಿಕೆಯ ಲಕ್ಷಣವನ್ನು ತಾತ್ಕಾಲಿಕವಾಗಿ ಹೀಗೆ ಹೇಳಬಹುದು: ನಾಲ್ಕು ಪಾದಗಳು; ಎರಡೆರಡು ಪಾದಗಳಿಗೆ ಒಂದು ಅರ್ಧ; ಪ್ರತಿಯರ್ಧದಲ್ಲಿಯೂ 7ರಂತೆ ಗಣಗಳಿರುತ್ತವೆ. ಅವುಗಳ ಮೊದಲನೆಯ ಪಾದದಲ್ಲಿ 3 ಗಣಗಳೂ ಎರಡನೆಯ ಪಾದದಲ್ಲಿ 4 ಗಣಗಳೂ ಇರುತ್ತವೆ. (ಅಥವಾ ಒಟ್ಟು ಪದ್ಯದಲ್ಲಿ 1 ಮತ್ತು 3ನೆಯ ಪಾದಗಳಲ್ಲಿ 3 ಗಣಗಳು 2 ಮತ್ತು 4ನೆಯ ಪಾದಗಳಲ್ಲಿ 4 ಗಣಗಳೂ ಇರುತ್ತವೆ.) ಪ್ರತಿಯರ್ಧದ 2 ಮತ್ತು 6ನೆಯ ಗಣಗಳು ಬ್ರಹ್ಮ ಗಣಗಳು; ಉಳಿದ 5 ಗಣಗಳು ಬ್ರಹ್ಮ ಅಥವಾ ವಿಷ್ಣು ಅಥವಾ ರುದ್ರ ಆಗಿರುತ್ತವೆ. (ಅಪೂರ್ವವಾಗಿ 2 ಮತ್ತು 6ನೆಯ ಬ್ರಹ್ಮಗಣ ಸ್ಥಾನದಲ್ಲಿ ಲಯಕ್ಕೆ ಹೊಂದಿ ವಿಷ್ಣು ಇಲ್ಲವೆ ರುದ್ರ ಬರಬಹುದು.)

ಲಕ್ಷಣಾನ್ವಿತವಾದ ಗೀತಿಕೆಯ ಎರಡು ಪದ್ಯಗಳು :

ಕಾವ್ಯಾವಲೋಕನದಿಂದ :

ಇಂತಿರೆ, ಶಬ್ದಂ. ಸಂದೇಹ
ಧ್ವಾಂತೌಘಂ. ಪಿಂಗಿರೆ. ಜಲಕ. ನಾಗೆ ಬುಧಂ
ಸಂತತಿಗ. ಪ್ಪಂತು. ಪೇೞ್ದನಿದಂ
ಶಾಂತಮ. ನಂ ಕವಿ. ತಾಗು. ಣೋದಯಂ (ಪದ್ಯ 422)

ಕವಿರಾಜಮಾರ್ಗದಿಂದ :

ಪ್ರತಿಪದಾರ್ಥ. ತತ್ತ್ವ. ಭೇದದೊಳ್
ಪ್ರತಿಷೇಧಮಂ, ನೆಗೞ್ಗ. ಮನಿತೆ. ಮಾೞ್ಕೆಯಿಂ
ದತಿಶಯಾ. ಕ್ಷೇಪ. ಗಣನಾವೃತಿ
ಗತಿ ನೃಪ.ತುಂಗ ದೇವ. ಮಾರ್ಗದೊಳ್ ॥ (ಪ. 3–107)

2 ಮತ್ತು 6ನೆಯ ಸ್ಥಾನಗಳಲ್ಲಿ ಪರ್ಯಾಯ ಗಣ ಬರಬಹುದೆಂಬುದಕ್ಕೆ ಒಂದು ನಿದರ್ಶನ :

ಇಂತು. ಮಿಕ್ಕ. ವರ್ಣನೆಗಳ್
ಸಂತತ. ಮೊಂದಾಗಿ. ಪೇೞ್ದ **ಕಾವ್ಯಂ** ಧರೆಯೊಳ್
ಸಂತತಿ ಕೆಡದೆ. ನಿಲ್ಕುಮಾಕ.
ಲ್ಪಾತಂ. ಬರ. ಮಮೋಘ. ವರ್ಷಯ. ಶಂಬೋಲ್ (ಪ. 3–217)

(ಟಿ.ವಿ.ವಿ.)

**ಗೀತೆ : ನೋಡಿ–ಭಗವದ್ಗೀತೆ**

**ಗೀಸರ್ :** ಸರಿ ಸುಮಾರು ನಿಯತಾಂತರಗಳಲ್ಲಿ ಬಿಸಿನೀರಿನ ಒಂದು ರಾಶಿಯನ್ನೋ ಉಗಿಯ ಮೊತ್ತವನ್ನೋ ವಾಯು ಮಂಡಲಕ್ಕೆ ಚಿಮ್ಮಿಸುವ ನೈಸರ್ಗಿಕ ಚಿಲುಮೆ ಇಲ್ಲವೇ ಒರತೆ. ಇದೊಂದು ವಿಶಿಷ್ಟ ರೀತಿಯ ಊಟೆ. ಗೀಸರಿನಿಂದ ಚಿಮ್ಮಿದ ನೀರು ಕೆಲವು ಮೀಟರುಗಳಿಂದ ಹಲವು ನೂರು ಮೀಟರುಗಳಷ್ಟು ಎತ್ತರಕ್ಕೂ ರಟ್ಟುವುದುಂಟು. ಆ ವೇಳೆಗೆ ಉಗಿ ಇನ್ನಷ್ಟು ಎತ್ತರ ಏರಬಹುದು. ಗೀಸರ್ ಪದ ಐಸ್‌ಲೆಂಡಿನವರ ಭಾಷೆಯದು; ಇದರ ಅರ್ಥ ಚಿಮ್ಮುಗ ಎಂದು.

ಗೀಸರುಗಳು ಪ್ರಪಂಚದ ಅಪೂರ್ವ ವಿದ್ಯಮಾನಗಳಲ್ಲಿ ಒಂದು. ಅಮೆರಿಕದ ಸಂಯುಕ್ತ ಸಂಸ್ಥಾನಗಳ ವ್ಯೋಮಿಂಗಿನ ಎಲ್ಲೋಸ್ಟೋನ್ ನ್ಯಾಷನಲ್ ಪಾರ್ಕ್, ನ್ಯೂಜಿಲೆಂಡ್, ಐಸ್‌ಲೆಂಡ್, ಅಲಾಸ್ಕ, ಚಿಲಿ, ಟಿಬೆಟ್, ಜಪಾನ್ ಮತ್ತು ಇಂಡೊನೇಷ್ಯಗಳಲ್ಲಿ ಗೀಸರುಗಳನ್ನು ಕಾಣಬಹುದು. ಇವುಗಳ ಪೈಕಿ ಯೆಲ್ಲೋಸ್ಟೋನ್ ಪಾರ್ಕ್

ಸುಪ್ರಸಿದ್ಧವಾದದ್ದು. ಅಲ್ಲಿ 100ಕ್ಕೂ ಮಿಕ್ಕಿದ ಪಟುಗೀಸರುಗಳೂ 3,000ಕ್ಕೂ ಮಿಕ್ಕಿದ ಚಿಮ್ಮದ ಬಿಸಿನೀರಿನ ಒರತೆಗಳೂ ಇವೆ. ಇವುಗಳ ಪೈಕಿ ಓಲ್ಡ್ ಫೇತ್‌ಫುಲ್ ಎಂಬ ಹೆಸರಿನ ಗೀಸರ್ ಪ್ರಸಿದ್ಧವಾದದ್ದು. ಸುಮಾರಾಗಿ ಗಂಟೆಗೊಂದು ಸಲ ಇದು ನೆಗೆಯುತ್ತದೆ. ಐದು ಮಿನಿಟುಗಳ ವರೆಗೆ ಚಿಮ್ಮುತ್ತಿದ್ದು ಮತ್ತೆ ಶಾಂತವಾಗುತ್ತದೆ. ಇದರಿಂದ ರಟ್ಟುವ ಕುದಿನೀರು ಸುಮಾರು 45.5 ಮೀ.ಗಳಷ್ಟು ಎತ್ತರ ಏರುವುದು; ಅದರೊಂದಿಗೆ ಸಾಕಷ್ಟು ಉಗಿಯೂ ಹೊರ ಹೊಮ್ಮುವುದು. ಅದೇ ಪಾರ್ಕಿನಲ್ಲಿರುವ ಕ್ಯಾಸಲ್ ಎನ್ನುವ ಇನ್ನೊಂದು ಗೀಸರಿನಿಂದ ಹಾರುವ ನೀರು 79 ಮೀ.ಗಳನ್ನು ಮೀರಿದ ಎತ್ತರ ತಲಪುವುದುಂಟು.

ಗೀಸರುಗಳ ಉದ್ರೇಕದ ಪ್ರವೃತ್ತಿಯ ಕಾರಣ ನೆಲದಡಿಯಲ್ಲೇ ಅನತಿ ಆಳದಲ್ಲಿರುವ ಬಲುಕಾವಿನ ಕಲ್ಲುಗಳ ರಾಶಿ ಎಂದು ಊಹಿಸಲಾಗಿದೆ. ಜ್ವಾಲಾಮುಖಿಪಟುತ್ವ ತೀರ ಈಚೆಗಿದ್ದ ಪ್ರದೇಶಗಳಿಗೆ ಮಾತ್ರ ಗೀಸರುಗಳ ವಿತರಣೆ ಸೀಮಿತವಾಗಿರುವುದು ಮೇಲಿನ ಊಹೆಗೆ ಸಮರ್ಥನೆ ನೀಡುವುದು. ಗೀಸರಿನ ಕತ್ತು ಸಾಮಾನ್ಯವಾಗಿ ಅನಿಯತಾಕಾರದ ಒಂದು ನಾಳ. ಆಸುಪಾಸಿನ ಕಲ್ಲುಗಳಿಂದ ಒಸರಿದ ನೀರು ಅದರಲ್ಲಿ ಆಂಶಿಕವಾಗಿ ತುಂಬಿಕೊಂಡಿರುತ್ತದೆ. ಅಲ್ಲಿಂದ ಸಾಕಷ್ಟು ಆಳದಲ್ಲಿರುವ ನೀರು ತಳದ ಸುಡುಗಲ್ಲಿನ ಪ್ರಭಾವದಿಂದ ಕುದಿಬಿಂದುವಿನಲ್ಲಿರುತ್ತದೆ. ಒಸರು ನೀರು ಈ ವಲಯದಲ್ಲಿ ಒಟ್ಟಾದಂತೆ ನೀರಿನ ಗಾತ್ರ ಮತ್ತು ಒತ್ತಡ ಉಷ್ಣತೆಯೊಂದಿಗೆ ಏರುತ್ತವೆ. ಒಂದಷ್ಟು ಅಂಶ ಉಗಿಯಾಗಿ ರಭಸದಿಂದ ಮೇಲೇರಲು ತೊಡಗುತ್ತದೆ. ಅದರೊಂದಿಗೆ ನೀರು ಮೇಲಕ್ಕೆ ಚಿಮ್ಮುತ್ತದೆ. ಈ ಉಗಿಮಿಶ್ರಿತ ಬಿಸಿನೀರು ಗೀಸರಿನ ಕತ್ತಿನಲ್ಲಿದ್ದ ನೀರನ್ನು ಬಾಯಿಯೆಡೆಗೆ ತಳ್ಳುತ್ತ ದಾರಿಮಾಡಿಕೊಂಡು ಮಹಾ ವೇಗದಿಂದ ಆಕಾಶಕ್ಕೆ ನೆಗೆಯುತ್ತದೆ. ಇದೇ ಗೀಸರ್.

(ಎ.ಎನ್.ಎಸ್.ಐ.)

**ಗೀಳು :** ಅಭಿಪ್ರಾಯ. ಕಲ್ಪನೆ, ಆಶೆ ಇತ್ಯಾದಿಗಳಲ್ಲಿ ಯಾವುದಾದರೂ ಒಂದು ವ್ಯಕ್ತಿಯ ಆಲೋಚನೆಗಳನ್ನು ಇಲ್ಲವೆ ಭಾವನೆಗಳನ್ನು ಆಕ್ರಮಿಸಿ ಕಾಡುವುದು (ಅಬ್‌ಸೆಷನ್). ಅಸಂಬದ್ಧ ಎಂಬುದಾಗಿ ವ್ಯಕ್ತಿಗೆ ಅರಿವಿದ್ದರೂ ಅವನನ್ನು ಎಡೆ ಬಿಡದೆ ಪಟ್ಟುಹಿಡಿದು ಕಾಡುವ ಅಂಥ ಅಹಿತವಾದ ಯೋಚನೆಗಳು ಇಲ್ಲವೆ ಭಾವನೆಗಳಿಗೂ ಇದೇ ಹೆಸರಿದೆ. ಇವು ವ್ಯಕ್ತಿಯ ಇಚ್ಛಾ ಪೂರ್ಣ ಹತೋಟಿಗೆ ಹೊರತಾಗಿಯೇ ಇರುತ್ತವೆ. ಅಸಂಗತ ರೀತಿಯಲ್ಲಿ ಅವನ ಚೇತನಕ್ಕೆ ಹಾಯ್ದು ಬರುತ್ತವೆ ಮತ್ತು ಎಷ್ಟೇ ಪ್ರಯತ್ನಪಟ್ಟರು ಸ್ವಇಚ್ಛೆಯಿಂದ ಅವನ್ನು ಹೊರಹಾಕುವುದು ವ್ಯಕ್ತಿಗೆ ಅಸಾಧ್ಯವಾಗಿ ತೋರಬಹುದು. ಕಾಯಂ ಅಲ್ಲದ, ಲಘು ಗೀಳಿನ ಅನುಭವಕ್ಕೆ ಪ್ರತಿಯೊಬ್ಬನೂ ಒಂದಲ್ಲ ಒಂದು ಭಾರಿ ತುತ್ತಾಗಿಯೇ ಇರುತ್ತಾನೆ. ಇಂದು ಮನೆಯಿಂದ ಹೊರಟಾಗ ಬಾಗಿಲಿಗೆ ಬೀಗ ಹಾಕಿದೆನೇ ಅಥವಾ ಕಾಗದವನ್ನು ಅಂಚೆಗೆ ಕಳಿಸುವ ಮುನ್ನ ಸಹಿ ಮಾಡಿದೆನೇ ಈ ಮುಂತಾದ ಯೋಚನೆಗಳು ಲಘು ಗೀಳಿನ ನಿದರ್ಶನಗಳಾಗಿವೆ. ಶಬ್ದಗಳು ತಲೆಯಲ್ಲಿ ಗುಂಯ್‌ಗುಟ್ಟುವಿಕೆ ಲಘು ಗೀಳಿನ ಇನ್ನೊಂದು ಅನುಭವ. ಈ ಬಗೆಯ ಲಘು ಗೀಳಿನ ಅನುಭವಗಳು ವ್ಯಕ್ತಿಗೆ ಕಿರಿಕಿರಿ ಎನ್ನಿಸಬಹುದಾದರೂ ಅವನ ಮಾನಸಿಕ ಹೊಂದಾಣಿಕೆಗೆ ಅಡ್ಡಿ ಬರುವುದಿಲ್ಲ.

ತೀವ್ರತರವಾದ ಗೀಳುಗಳು ಮನೋಬೇನೆಯ ರೂಪಗಳೇ ಆಗಿವೆ. ಅವು ವ್ಯಕ್ತಿಯ ಹೊಂದಾಣಿಕೆಗೆ ಅಡ್ಡಿಯುಂಟುಮಾಡುತ್ತವೆ. ಅಂಥವು ಸಾವು, ಆತ್ಮಹತ್ಯೆ, ಕೊಲೆ–ಈ ವಿಚಾರಗಳ ಸುತ್ತ ಕೇಂದ್ರಿಕೃತವಾಗಿರುತ್ತವೆ. ಸಾಮಾನ್ಯವಾಗಿ ಗೀಳುಗಳು ಹತ್ತಿಕ್ಕಲಾರದ ಹಠಾತ್ತಾದ ಪ್ರವೃತ್ತಿಗಳಲ್ಲಿ ತೊಡಗಬಹುದೆಂಬ ಭಯವನ್ನು ಒಳಗೊಂಡಿರುತ್ತವೆ. ಯಾರ ಎದುರಿನಲ್ಲಾದರೂ ಅಶ್ಲೀಲ ಪದವೊಂದನ್ನು ಕೂಗಿಕೊಳ್ಳುತ್ತೇನೋ ಏನೋ ಅಥವಾ ನನ್ನ ಗಂಡನನ್ನು ಚೂರಿಯಿಂದ ತಿವಿದು ಹಾಕುತ್ತೀನೇನೋ ಈ ಮೊದಲಾದ ಭಯಗಳು ವ್ಯಕ್ತಿಯನ್ನು ಕಾಡಬಹುದು. ಕೆಲವೊಮ್ಮೆ ಗೀಳುಗಳು ಹಠಾತ್ತಾದ ಕಾರ್ಯಪ್ರವೃತ್ತಿಗಳ ರೂಪದಲ್ಲಿ ಕಾಣಿಸಿಕೊಳ್ಳಬಹುದು. ಉದಾ: ತನ್ನ ತಾಯಿಯೋ ಅತ್ತೆಯೋ ಸತ್ತುಹೋದರೊಳ್ಳೆಯದೆಂದು ಪದೇ ಪದೇ ಹಾರೈಸುವಿಕೆ. ಈ ಬಗೆಯ ಯೋಚನೆಗಳು ಅಸಂಬದ್ಧ ಮಾತ್ರವಲ್ಲ ; ಅನೈತಿಕವೂ ಜುಗುಪ್ಸೆ ಮತ್ತು ಭಯ ಹುಟ್ಟಿಸುವಂಥವೂ ಆಗಿರುತ್ತವೆ. ಆ ಯೋಚನೆಗಳು ಕಾರ್ಯರೂಪಕ್ಕೆ ಬಾರದಿದ್ದರೂ ವ್ಯಕ್ತಿಗೆ ನೋವನ್ನು ಒದಗಿಸುವ ಮೂಲಗಳಾಗಿರುತ್ತವೆ. ಅನೇಕ ವೇಳೆ ರೋಗಿ ತಾನು ಹುಚ್ಚನಾಗುತ್ತಿದ್ದೇನೆಂದು ಭಾವಿಸುತ್ತಾನೆ. ಇಲ್ಲವೆ ತಾನು ಬದುಕಿರಲು ಯೋಗ್ಯನಲ್ಲ ಎಂದುಕೊಳ್ಳುತ್ತಾನೆ. ಗೀಳು ತೀವ್ರತರವಾದಾಗ ವ್ಯಕ್ತಿಯು ಸಂಪೂರ್ಣ ಅಪ್ರಯೋಜಕನಾಗುತ್ತಾನೆ ; ಇನ್ನಾವುದೇ ಬಗೆಯ ಯೋಚನೆಯನ್ನು ಮಾಡಲು ಅಸಮರ್ಥನಾಗುತ್ತಾನೆ.

ಕ್ರೈಯನ್ಸ್ ಎಂಬಾತ ವರದಿ ಮಾಡಿರುವ ಒಬ್ಬ ಹುಡುಗಿಯ ಘಟನೆ ಗೀಳಿನ ತೀವ್ರಾವಸ್ಥೆಯ ಒಂದು ಉತ್ತಮ ನಿದರ್ಶನವನ್ನು ಒದಗಿಸುತ್ತದೆ. ಆ ಹುಡುಗಿ ಭೀಕರ ಯೋಚನೆಯನ್ನು ಹೊಂದಿದ್ದಳು. ಅವಳು ತಾನು ಪ್ರೀತಿಸಿದ ಸ್ನೇಹಿತನ ಬಗೆಗೆ ಯೋಚಿಸಿದಾಗ ಅವನು ಸಾಯಬಾರದೇ ಎಂದು ಹಾರೈಸುತ್ತಿದ್ದಳು ; ಅವಳ ತಾಯಿ ಮೆಟ್ಟಿಲುಗಳನ್ನಿಳಿದು ಕೆಳಕ್ಕೆ ಹೋಗುತ್ತಿದ್ದರೆ ಅವಳು ಕೆಳಕ್ಕೆ ಬಿದ್ದು ಕತ್ತನ್ನು ಮುರಿದುಕೊಳ್ಳ ಬಾರದೇ ಎಂದು ಹಾರೈಸುತ್ತಿದ್ದಳು ; ಅವಳ ಸೋದರಿ ತನ್ನ ಪುಟ್ಟ ಮಗಳೊಂದಿಗೆ ಸಮುದ್ರತೀರಕ್ಕೆ ಹೋಗುವ ಪ್ರಸ್ತಾಪ ಮಾಡಿದಾಗ, ಅವರಿಬ್ಬರೂ ನೀರಿನಲ್ಲಿ ಮುಳುಗಿ ಸಾಯಬಾರದೇ ಎಂದು ಆಶಿಸುತ್ತಿದ್ದಳು. 'ಈ ಬಗೆಯ ಯೋಚನೆಗಳು ನನ್ನನ್ನು ಉದ್ರೇಕಗೊಳಿಸುತ್ತವೆ. ನಾನು ಅವರನ್ನು ಪ್ರೀತಿಸುತ್ತೇನೆ. ಹಾಗಾದರೂ ನಾನೇಕೆ ಈ ಬಗೆಯ ಭಯಂಕರ ವಿಚಾರಗಳನ್ನು ಹಾರೈಸಬೇಕು? ಇದೆಲ್ಲ ನನಗೆ ಹುಚ್ಚನ್ನೇ ಹಿಡಿಸುತ್ತದೆ. ನಾನು ಪ್ರೀತಿಸುವವರ ಬಗೆಗೆ ಈ ರೀತಿಯ ಭಯಂಕರ ಯೋಚನೆಗಳನ್ನು ಮಾಡುವುದಕ್ಕೆ ಬದಲಾಗಿ ನಾನು ಸಾಯುವ ಮೂಲಕ ಈ ಯೋಚನೆಗಳನ್ನು ಕೊನೆಗೊಳಿಸುವುದು ಮೇಲು ಎಂದು ಅವಳು ಅಂದುಕೊಳ್ಳುತ್ತಿದ್ದುದುಂಟು.

ಒಂದು ದೃಷ್ಟಿಯಲ್ಲಿ ಗೀಳುಗಳನ್ನು ಆಂತರಿಕ ಘರ್ಷಣೆಯಿಂದ ಪರಿಣಮಿಸುವ ಉದ್ವಿಗ್ನತೆಯನ್ನು ಪರಿಹರಿಸುವ ರಕ್ಷಣಾತಂತ್ರಗಳು ಎಂಬುದಾಗಿ ತಿಳಿಯಬಹುದು. ವ್ಯಕ್ತಿಯಲ್ಲಿ ಹುದುಗಿರುವ ಆಶೆಗಳು ಮತ್ತು ದ್ವೇಷಭಾವನೆಗಳನ್ನೂ ಕ್ರಿಯಾರೂಪಕ್ಕೆ ಬಾರದಂತೆ ತಡೆಹಿಡಿಯುವಲ್ಲಿ ಗೀಳುಗಳು ಸಹಾಯಕವಾಗಬಹುದು. ಗೀಳುಗಳನ್ನು ಹೆಚ್ಚು ಆತಂಕಕಾರಿ ವಿಚಾರಗಳಿಂದ ವಿಮುಕ್ತಿ ಪಡೆಯಲು ಸಹಾಯಮಾಡುವ ಬದಲೀ ಚಟುವಟಿಕೆಗಳು ಎಂಬುದಾಗಿಯೂ ವಿವರಿಸಬಹುದು **(ನೋಡಿ–ಚಟ)**. (ಎಚ್.ಎಸ್.ಐ.)

**ಗುಂಜಿ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರ ದಿಂದ 13ಕಿಮೀ ದೂರದಲ್ಲಿ ಬೆಳಗಾಂವಿ ಪಣಜಿ ಹೆದ್ದಾರಿಯಲ್ಲಿದೆ. ಇಲ್ಲಿ ಕಮಲೇಶ್ವರ, ಗಣಪತಿ, ರಾವಳನಾಥ, ಮಾವೂಲಿದೇವಿ ಮುಂತಾದ ದೇವಾಲಯಗಳಿವೆ. ಕಮಲೇಶ್ವರ ದೇವಾಲಯದ ಗರ್ಭಗುಡಿ ಮಾತ್ರ ಪುರಾತನವಾದ್ದು, ಶಿವಲಿಂಗ ಪೀಠ ತರುವಾಯದ ಚಾಳುಕ್ಯ ಶೈಲಿಯಲ್ಲಿದೆ. ಗಣಪತಿ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಚಾಳುಕ್ಯ ಶೈಲಿಯ ಶಿವಲಿಂಗ ಮತ್ತು ವಿಷ್ಣು ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ರಾವಳನಾಥ ದೇವಾಲಯ ಇತ್ತೀಚಿನ ಸಿಮೆಂಟ್ ಕಟ್ಟಡವಾಗಿದ್ದು ಸೊಗಸಾಗಿದೆ. ಈ ದೇವಾಲಯದ ಮುಂದೆ ಐದು ವೀರಗಲ್ಲುಗಳಿವೆ. ದೊಡ್ಡದಾದ ಶಿವಲಿಂಗವನ್ನೊಳಗೊಂಡ ಶಿವ ದೇವಾಲಯವೂ ಊರ ಹೊರವಲಯದಲ್ಲಿದೆ. ದಸರ ಮಹೋತ್ಸವದಲ್ಲಿ ಈ ದೇವಾಲಯ ಮತ್ತು ರಾವಳನಾಥ ದೇವಾಲಯದಲ್ಲಿ 5 ದಿನಗಳಕಾಲ ಹಬ್ಬವನ್ನು ಆಚರಿಸಲಾಗುತ್ತದೆ. ಈ ಊರಲ್ಲಿ ಖಾಜಿ ಪೀರ್‌ರ ದರ್ಗಾ ಇದೆ. ಗುಂಜಿಗೆ ಸು.5ಕಿಮೀ ಅಂತರದಲ್ಲಿರುವ ಕಿರವಾಲಿ ಎಂಬ ಸ್ಥಳ ನಾಥಪಂಥದ ಒಂದು ಪ್ರಾಚೀನ ಕೇಂದ್ರವಾಗಿತ್ತು. ಅಲ್ಲಿ ಗೋರಖನಾಥ ಮಠವಿದೆ; ಕಾಲಭೈರವನ ಉಪಾಸನೆ ನಡೆಯುತ್ತದೆ. ನಾಥಪಂಥಕ್ಕೆ ಸೇರಿದ ಮತ್ಸೇಂದ್ರನಾಥ ಮಠ ಗುಂಜಿಗೆ ಸು.7ಕಿಮೀ ದೂರದ ದೊಂಗುಗಾಂವ್‌ನಲ್ಲಿದೆ. (ಎಂ.ಬಿ.ಎಚ್.)

**ಗುಂಟಕಲ್ :** ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗುಟ್ಟಿ ತಾಲ್ಲೂಕಿನ ಒಂದು ಪಟ್ಟಣ. ಉ. ಅ. $15^0$ 9' ಮತ್ತು ಪೂ. ರೇ. $72^0$ 23' ಮೇಲೆ ಇದೆ. ಬಳ್ಳಾರಿ–ಗೂಟಿ ಹೆದ್ದಾರಿಯಲ್ಲಿರುವ ಈ ಪಟ್ಟಣ ದಕ್ಷಿಣ–ಮಧ್ಯ ರೈಲ್ವೆಯ ಪ್ರಮುಖ ಜಂಕ್ಷನ್. ಮುಂಬಯಿ, ಮದ್ರಾಸು, ಬೆಂಗಳೂರು, ಬಳ್ಳಾರಿ, ಸಿಕಂದರಬಾದ್, ಗುಂಟೂರು, ಹುಬ್ಬಳ್ಳಿಗಳ ರೈಲು ಮಾರ್ಗಗಳು ಇಲ್ಲಿ ಕೂಡುತ್ತವೆ. ಆದ್ದರಿಂದ ಈ ನಿಲ್ದಾಣ ಹಗಲು–ರಾತ್ರಿ ರೈಲುಗಳ ಓಡಾಟವೂ ಜನಸಂದಣಿಯೂ ಇರುತ್ತದೆ. ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಹೋಗುವ ಅಂಚೆ ಚೀಲಗಳನ್ನು ಕೊಡುವ ತೆಗೆದುಕೊಳ್ಳುವ ಕೆಲಸ ಸತತವಾಗಿ ನಡೆದಿರುತ್ತದೆ.

ರೈಲ್ವೆ ಬರುವುದಕ್ಕೆ ಮುಂಚೆ ಇದೊಂದು ಸಣ್ಣ ಹಳ್ಳಿಯಾಗಿತ್ತು. ಈಗ ಆ ಭಾಗ ಹಳೆ ಗುಂಟಕಲ್ ಎನಿಸಿಕೊಂಡಿದೆ. ಗುಂಟಕಲ್ ರಾಯಲಸೀಮೆ ಪ್ರದೇಶದ ಒಂದು ಮುಖ್ಯ ವ್ಯಾಪಾರ ಕೇಂದ್ರ. ಸುತ್ತಣ ಪ್ರದೇಶದಲ್ಲಿ ಬೇಳೆಯುವ ಹತ್ತಿ, ನೆಲಗಡಲೆ, ಎಣ್ಣೆಬೀಜ ಇಲ್ಲಿ ಸಂಗ್ರಹವಾಗುತ್ತವೆ. ಇಲ್ಲಿ ಅರಳೆ ಬಿತ್ತುವ ಮತ್ತು ಹಿಂಜುವ ಗಿರಣಿಗಳಿವೆ. ನೀರಿನ ಅಭಾವದಿಂದಾಗಿ ಇದರ ಬೆಳವಣಿಗೆ ಕುಂಠಿತವಾಗಿದೆ.

ಗುಂಟಕಲ್ಲಿನ ಸುತ್ತ ಅನೇಕ ಪ್ರಾಚೀನ ಅವಶೇಷಗಳುಂಟು. ಇಲ್ಲಿಂದ 8 ಕಿ.ಮೀ. ದೂರದಲ್ಲಿರುವ ಚಿಪ್ಪಗಿರಿಯಲ್ಲಿ ವಿಜಯದಾಸರು ತಪಸ್ಸು ಮಾಡಿದ ಸ್ಥಳವಿದೆ. *

**ಗುಂಟೂರು :** ಆಂಧ್ರ ಪ್ರದೇಶದ ಒಂದು ಜಿಲ್ಲೆ. ಮತ್ತು ಆ ಜಿಲ್ಲೆಯ ಮುಖ್ಯಪಟ್ಟಣ. ಉ. ಅ. $16^0$ 18' ಮತ್ತು ಪೂ.ರೇ. $80^0$ 28' ಮೇಲೆ. ಹೈದರಾಬಾದ್ ನಗರದ ಆಗ್ನೇಯಕ್ಕೆ 400 ಕಿ.ಮೀ. ದೂರದಲ್ಲಿದೆ. ಇದು ದಕ್ಷಿಣ ರೈಲ್ವೆಯ ವಿಜಯವಾಡ–ಗುಂಟಕಲ್ ಮಾರ್ಗದ ಒಂದು ಮುಖ್ಯ ರೈಲು ನಿಲ್ದಾಣ. ಜಂಕ್ಷನ್. ವಿಶಾಖಪಟ್ಟಣ–ಮದ್ರಾಸ್ ರಸ್ತೆಯಲ್ಲಿದೆ. ಬೇಸಗೆಯಲ್ಲಿ ಉಷ್ಣತೆಯ ಸರಾಸರಿ $32^0$ ಸೆಂ., ಚಳಿಗಾಲದಲ್ಲಿ $20^0$ ಸೆಂ. ಇಲ್ಲಿ ಆಂಧ್ರ ವಿಶ್ವವಿದ್ಯಾಲಯದ ಮನ್ನಣೆ ಪಡೆದ ಕಾಲೇಜುಗಳಿವೆ.

ಸೆಣಬು, ಎಣ್ಣೆ ಮತ್ತು ಅಕ್ಕಿ ಗಿರಣಿಗಳು, ಹೊಗೆಸೊಪ್ಪು ಪರಿಷ್ಕರಣ, ಎಂಜಿನಿಯರಿಂಗ್– ಇವು ಇಲ್ಲಿಯ ಕೈಗಾರಿಕೆಗಳು. ಇತರ ಪಟ್ಟಣಗಳೊಂದಿಗೆ ರೈಲ್ವೆ ಮತ್ತು ರಸ್ತೆ ಸಂಪರ್ಕ ಹೊಂದಿರುವುದರಿಂದ ಇದೊಂದು ಪ್ರಮುಖ ವ್ಯಾಪಾರ ಸ್ಥಳ. 18ನೆಯ ಶತಮಾನದ ಉತ್ತರಾರ್ಧದಲ್ಲಿ ಫ್ರೆಂಚರು ಈ ಪಟ್ಟಣವನ್ನು ಸ್ಥಾಪಿಸಿದರೆಂದು ಕಾಣುತ್ತದೆ. ಗುಂಟೂರು ಸ್ವಲ್ಪ ಕಾಲ ನಿಜಾಮನ ಅಧೀನದಲ್ಲಿತ್ತು. 1788ರಲ್ಲಿ ಇದು ಬ್ರಿಟಿಷರ ಅಧೀನಕ್ಕೆ ಬಂತು. 1866ರಲ್ಲಿ ಇಲ್ಲಿ ಪೌರಸಭೆ ಸ್ಥಾಪಿತವಾಯಿತು.

ಗುಂಟೂರು ಜಿಲ್ಲೆಯ ವಿಸ್ತೀರ್ಣ 5,802 ಚ.ಕಿ.ಮೀ ಜನಸಂಖ್ಯೆ 48.89.230 (2011) ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯವುಂಟು. ಅಕ್ಕಿ, ಜೋಳ, ಮೆಣಸಿನಕಾಯಿ, ನೆಲಗಡಲೆ, ಹೊಗೆಸೊಪ್ಪು ಇಲ್ಲಿಯ ಬೆಳೆಗಳು, ವನಸ್ಪತಿ, ಜವಳಿ, ಸಿಮೆಂಟ್ ಮತ್ತು ಹೊಗೆಸೊಪ್ಪಿನ ಕಾರ್ಖಾನೆಗಳು ಈ ಜಿಲ್ಲೆಯಲ್ಲಿವೆ. ಜಿಲ್ಲೆಗೆ ಸೇರಿದ ಅಮರಾವತಿಯಲ್ಲಿ ಆಂಧ್ರ ಸಾತವಾಹನ ರಾಜರು ಕಟ್ಟಿಸಿದ ಮಹಾಯಾನ ಬೌದ್ಧಧರ್ಮದ ಚೈತ್ಯಗಳನ್ನೂ ವಿಹಾರಗಳನ್ನೂ ಸ್ತೂಪಗಳನ್ನು ಮತ್ತ ನಾಗಾರ್ಜುನ ಕೊಂಡಗಳು ಬೌದ್ಧರ ಕಾಲದ ಅವಶೇಷಗಳ ನೆಲೆಗಳು. (ಆರ್.ಪಿ.ಎಸ್.)

**ಗುಂಡಪ್ಪ, ಡಿ.ವಿ. :** 1889–1975. ಪ್ರಸಿದ್ಧ ಸಾಹಿತಿ, ಪತ್ರಿಕೋದ್ಯಮಿ, ಸಾರ್ವಜನಿಕ. ಡಿ.ವಿ.ಜಿ. ಎಂಬ ಮೂರಕ್ಷರದ ಸಂಕ್ಷಿಪ್ತನಾಮದಿಂದ ಚಿರಪರಿಚಿತ ರಾಗಿದ್ದಾರೆ. ಹುಟ್ಟಿದ್ದು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ. ತಂದೆ ದೇವನಹಳ್ಳಿ ವೆಂಕಟರಮಣಯ್ಯ. ತಾಯಿ ಅಲಮೇಲಮ್ಮ. ವಿದ್ಯಾಭ್ಯಾಸ ಲೋಯರ್ ಸೆಕೆಂಡರಿವರೆಗೆ–ಮುಳಬಾಗಿಲಿನ ಆಂಗ್ಲೋ ವೆರ್ನಾಕ್ಯುಲರ್ ಶಾಲೆಯಲ್ಲಿ; ಮೆಟ್ರಿಕ್ಯುಲೇಷನ್‌ವರಗೆ–ಮೈಸೂರು ಮತ್ತು ಕೋಲಾರ ಪ್ರೌಢಶಾಲೆಗಳಲ್ಲಿ.

ಗುಂಡಪ್ಪನವರಿಗೆ ಪತ್ರಿಕೋದ್ಯಮದಲ್ಲಿ ಮೊದಲಿನಿಂದಲೂ ಅಮಿತವಾದ ಆಸಕ್ತಿ. ಬೆಂಗಳೂರಿನ ಸೂರ್ಯೋದಯ ಪ್ರಕಾಶಿಕಾ ವಾರಪತ್ರಿಕೆಯ ಕಾರ್ಖಾನೆಯಲ್ಲಿವರು ಎರಡು ವರ್ಷ ಕೆಲಸಮಾಡಿದರು (1905–06). ಸ್ಥಾಪಕ–ಸಂಪಾದಕರಾಗಿ 'ಭಾರತಿ' ಎಂಬ ಕನ್ನಡ ದಿನಪತ್ರಿಕೆಯನ್ನು ಕೆಲವು ಕಾಲ (1907–08) ನಡೆಸಿದರು. ಮೈಸೂರು ಸ್ಟ್ಯಾಂಡರ್ಡ್, ನಗೆಗನ್ನಡಿ, ಮೈಸೂರು ಮೇಲ್, ಇಂಡಿಯನ್ ಪೇಟ್ರಿಯಟ್, ಹಿಂದೂ, ಇಂಡಿಯನ್ ರೆವ್ಯು ಮುಂತಾದ ಪತ್ರಿಕೆಗಳಿಗೆ ಇವರು ಮೂರು ವರ್ಷಕಾಲ (1908–11) ಲೇಖನಗಳನ್ನು ಬರೆದುದುಂಟು. ಸಹಸಂಪಾದಕರಾಗಿ ಮೈಸೂರು ಟೈಮ್ಸ್ ಎಂಬ ವಾರಾರ್ಧ ಪತ್ರಿಕೆಯನ್ನೂ (1909–10) ಪ್ರಕಾಶಕ–ಸಂಪಾದಕರಾಗಿ ಕರ್ನಾಟಕ ಎಂಬ ಇಂಗ್ಲಿಷಿನ ವಾರಾರ್ಧಪತ್ರಿಕೆಯನ್ನೂ (1921–22) ಇವರು ನಡೆಸಿರುವುದುಂಟು. ತಾವೇ ಕಟ್ಟಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಅಂಗಪತ್ರಿಕೆಯಾದ ಪಬ್ಲಿಕ್ ಅಫೇರ್ಸ್ ಎಂಬ ಮಾಸ ಪತ್ರಿಕೆಗೆ 1949 ರಿಂದಲೂ ಸಂಪಾದಕರಾಗಿದ್ದರು. ಗುಂಡಪ್ಪನವರು ಬಾಗಲಕೋಟೆಯಲ್ಲಿ ಸಮಾವೇಶಗೊಂಡ (1928) ಅಖಿಲ ಕರ್ನಾಟಕ ವೃತ್ತಪತ್ರಿಕಾಕರ್ತರ ಪ್ರಥಮ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದುದಲ್ಲದೇ ಮೈಸೂರು ಸಂಸ್ಥಾನದ ಪತ್ರಿಕೋದ್ಯಮಿಗಳ ಸಂಘದ ಪ್ರಥಮ ಅಧ್ಯಕ್ಷರಾಗಿಯೂ ಕೆಲಸಮಾಡಿದ್ದರು.



ಭಾರತದ ನೂತನ ಸಂವಿಧಾನದಲ್ಲಿ ದೇಶೀಯ ಸಂಸ್ಥಾನಗಳ ಹಾಗೂ ಸಾಂಸ್ಥಾನಿಕ ಪ್ರಜೆಗಳ ಸ್ಥಾನಮಾನಗಳೇನಿರಬೇಕೆಂಬುದನ್ನು ಕುರಿತು ಗುಂಡಪ್ಪನವರು ಗಾಢವಾದ ಅಧ್ಯಯನ ನಡೆಸಿ ಅನೇಕ ಲೇಖನಗಳನ್ನು ಬರೆದಿದ್ದಾರಲ್ಲದೇ ಪ್ರಮುಖರಿಗೆ ಮನವಿಗಳನ್ನು ಸಲ್ಲಿಸಿದ್ದುಂಟು. ಅವುಗಳಲ್ಲಿ ಬಿಕನೀರ್ ಮಹಾರಾಜರಿಗೆ (1917). ಮಾಂಟಗು ಅವರಿಗೆ (1928) ಮತ್ತು ಬಟ್ಲರ್ ಸಮಿತಿಗೆ (1928) ಸಲ್ಲಿಸಿದ ಮನವಿಗಳನ್ನು ನೆನೆಯಬಹುದು.

ಈ ಬಗ್ಗೆ ಶ್ರೀಯುತರು ಇಂಗ್ಲಿಷಿನಲ್ಲಿ 'ದಿ ಪ್ರಾಬ್ಲಮ್ ಆಫ್ ಇಂಡಿಯನ್ ನೇಟಿವ್ ಸ್ಟೇಟ್ಸ್' (1917), 'ದಿ ಗೌರ್ನಮೆಂಟ್ ಆಫ್ ಇಂಡಿಯ ಅಂಡ್ ದಿ ಇಂಡಿಯನ್ ಸ್ಟೇಟ್ಸ್' (1926), 'ದಿ ಸ್ಟೇಟ್ಸ್ ಅಂಡ್ ದೇರ್ ಪೀಪಲ್ ಇನ್ ದಿ ಇಂಡಿಯನ್ ಕಾನ್ಸ್ಟಿಟ್ಯೂಷನ್' (1931)– ಈ ಪುಸ್ತಕಗಳನ್ನು ರಚಿಸಿದ್ದಾರೆ. ತಿರುವಾಂಕೂರಿನಲ್ಲಿ ನಡೆದ ದಕ್ಷಿಣ ಭಾರತ ದೇಶೀಯ ಪ್ರಜೆಗಳ ಸಮ್ಮೇಳನದ ಸಂದರ್ಭದಲ್ಲಿ (1929) ಅಧ್ಯಕ್ಷರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ಗುಂಡಪ್ಪ ನವರು ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದಾರೆ.

ಬೆಂಗಳೂರಿನಲ್ಲಿ (1) ಪಾಪ್ಯುಲರ್ ಎಜ್ಯುಕೇಷನ್ ಲೀಗ್, (2) ಸೋಷಿಯಲ್ ಸರ್ವೀಸ್ ಲೀಗ್ (1915–20), (3) ಪ್ರಜಾಜನ ಪರಿಷತ್ತು (ಮೈಸೂರು ಪೀಪಲ್ಸ್ ಕನ್‌ವೆನ್‌ಷನ್, 1919 ಡಿಸೆಂಬರ್), (4) ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತು (ಸ್ಟೇಟ್ಸ್ ಪೀಪಲ್ಸ್ ಕಾನ್‌ಫರೆನ್ಸ್. 1931). (5) ದ್ವಿತೀಯ ಮಹಾಯುದ್ಧ ಸಮಯದಲ್ಲಿ ಸೆಲ್ಫ್–ಪ್ರೊಟೆಕ್ಷನ್ ಲೀಗ್ (1938–39) ಮೊದಲಾದ ಹತ್ತಾರು ಸಾರ್ವಜನಿಕ ಸಂಘ ಸಮಾರಂಭಗಳ ಮುಖ್ಯ ಪ್ರವರ್ತಕರಾದವರು ಗುಂಡಪ್ಪನವರು. ಬೆಂಗಳೂರು ಪುರಸಭೆಯ ಸದಸ್ಯರಾಗಿ (1912ರಿಂದ), ಮೈಸೂರು ಸಂಸ್ಥಾನ ಶಾಸನ ಪರಿಷತ್ತಿನ ಸದಸ್ಯರಾಗಿ (1926–40), ಮೈಸೂರು ವಿಶ್ವವಿದ್ಯಾನಿಲಯದ ಸನೆಟ್ ಸದಸ್ಯರಾಗಿ (1927–43), ಯೂನಿವರ್ಸಿಟಿ ಕೌನ್ಸಿಲ್ ಸದಸ್ಯರಾಗಿ (1933–39), ಮಿರ್ಜಾ ಸರ್ಕಾರ ನಿಯಮಿಸಿದ ರಾಜ್ಯಾಂಗ ಸುಧಾರಣ ಸಮಿತಿ (1939) ಹಾಗೂ ಇತರ ವಿಶೇಷ ಸಮಿತಿಗಳ ಸದಸ್ಯರಾಗಿ ಶ್ರೀಯುತರು ಅಪಾರ ಜನಸೇವೆಯನ್ನು ಮಾಡಿರುವರಲ್ಲದೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ (1945ರಿಂದ) ಸ್ಥಾಪಕ ಪ್ರಮುಖರೂ ಕಾರ್ಯದರ್ಶಿಗಳೂ ಆಗಿ ಕೆಲಸಮಾಡಿದ್ದಾರೆ. ಈ ಸಂಸ್ಥೆಯ ಬಗೆಗಿನ ವಿವರಗಳು ಈ ಲೇಖನದ ಕೊನೆಯಲ್ಲಿವೆ.

ಸಾರ್ವಜನಿಕ ಕ್ಷೇತ್ರದಲ್ಲಿ ಹೇಗೋ ಹಾಗೇ ಸಾಹಿತ್ಯ ಕ್ಷೇತ್ರದಲ್ಲೂ ಗುಂಡಪ್ಪನವರ ಕಾರ್ಯವ್ಯಾಪ್ತಿ ಅಮೋಘವಾದದು. ಮಡಿಕೇರಿಯಲ್ಲಿ ಸಮಾವೇಶಗೊಂಡ 18ನೆಯ ಕನ್ನಡ ಸಾಹಿತ್ಯ ಸಮಾವೇಶಕ್ಕೆ (1932) ಅವರು ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ (1933–37) ಅವರು ವಸಂತ ಸಾಹಿತ್ಯೋತ್ಸವ, ಗಮಕ ಕಲಾಭ್ಯಾಸ ತರಗತಿಗಳು, ಕನ್ನಡ ಶಿಕ್ಷಕರಿಗೆ ತರಬೇತಿ ಶಿಬಿರ, ಗ್ರಂಥಪ್ರದರ್ಶನ ಮುಂತಾದ ನಾಲ್ಕಾರು ನೂತನ ಯೋಜನೆಗಳ ಪ್ರವರ್ತಕರೆಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದೊಂದಿಗೆ ಅವರು ನಿಕಟ ಸಂಬಂಧವನ್ನು (1928–44) ಇಟ್ಟುಕೊಂಡಿದ್ದರಲ್ಲದೆ ಆ ಸಂಘದ ರಜತೋತ್ಸವದ ಅಧ್ಯಕ್ಷರೂ ಆಗಿದ್ದರು. (1944). ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಸಂಪಾದಕ ಮಂಡಲಿಯ ಸದಸ್ಯರಾಗಿ (1933–46), ಬೆಂಗಳೂರಿನ ರಾಮಾಯಣ ಪ್ರಕಾಶನ ಸಮಿತಿ, ರಾಮಾಯಣ ಮಹಾಭಾರತಾದಿ ಪ್ರಕಟನ ಸಮಿತಿ (1964–70) ಮೊದಲಾದ ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ ಗುಂಡಪ್ಪನವರು ಅವಿರತವಾಗಿ ಸಾಹಿತ್ಯಸೇವೆ ಮಾಡಿದ್ದಾರೆ.

ಸಾಹಿತ್ಯ ರಾಜಕೀಯಾದಿ ವಿಭಿನ್ನ ಕ್ಷೇತ್ರಗಳಲ್ಲಿ ಶತಮಾನದ ಪ್ರಾರಂಭದಿಂದ 65 ವರ್ಷಕಾಲ ಡಿ.ವಿ.ಜಿ. ಯವರಷ್ಟು ಸತತವಾಗಿ ಸಾರ್ವಜನಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ವ್ಯವಸಾಯ ಮಾಡಿದವರು ನಾಡಿನಲ್ಲಿ ಹೆಚ್ಚು ಮಂದಿ ಇಲ್ಲ. ನಿರಂತರ ಪತ್ರಿಕೋದ್ಯಮ, ವಿಫುಲ ಸಾಹಿತ್ಯ ಸೃಷ್ಟಿ, ಸಂಗೀತಾದಿ ಕಲಾಭಿಜ್ಞತೆ, ರಾಜಕೀಯ ಚರ್ಚೆ, ಸಮಾಜಸೇವೆ, ನಾನಾ ಸಂಸ್ಥೆಗಳ ನೇತೃತ್ವ, ಇವೆಲ್ಲಕ್ಕೂ ಹಿನ್ನೆಲೆಯಾಗಿ ಉದ್ದಾಮಪಾಂಡಿತ್ಯ, ಪ್ರತಿಭೆ, ದೈವಶ್ರದ್ಧೆ, ಆದರ್ಶನಿಷ್ಠೆ, ಉದಾರಚಿಂತನೆ, ಪೂರ್ವ ಸಂಪ್ರದಾಯಕ್ಕೂ ಸಾಂಪ್ರತಲೋಕದ ರೀತಿನೀತಿಗೂ ಸ್ನೇಹಸೇತುವಾಗಿ ಅವೆರಡಕ್ಕೂ ವಿರಸ ಬಾರದಂಥ ಒಂದು ಜೀವನದರ್ಶನವನ್ನು ಜನತೆಗೀಯುವ ಮಹೋತ್ಸಾಹ, ತಮ್ಮ ವೈಯಕ್ತಿಕ ಜೀವನವನ್ನು ಬದಿಗಿರಿಸಿ ಸಮಾಜದ ಎಲ್ಲ ವರ್ಗಗಳಲ್ಲೂ ಸರಸವಾಗಿ ಬೆರೆತುಕೊಳ್ಳುವ ಸಹೃದಯತೆ– ಈ ಹಲವಾರು ಕಾರಣಗಳಿಂದ ಡಿ.ವಿ.ಜಿ. ಭಾರತ ಜನತೆಯ, ವಿಶೇಷವಾಗಿ ಕನ್ನಡ ಜನತೆಯ ಅಭಿಮಾನವನ್ನು ಗಳಿಸಿದ್ದಾರೆ. ಜನತೆಯಲ್ಲಿ ರಾಷ್ಟ್ರಕಪ್ರಜ್ಞೆಯನ್ನು ಜಾಗೃತಗೊಳಿಸಲು ಗೋಖಲೆ ಸಂಸ್ಥೆ ಮತ್ತು ಇತರ ಸಂಘಸಂಸ್ಥೆಗಳ ನಿರ್ಮಿತಿ–ಪೋಷಣೆ, ಆರ್ಥಿಕ–ಸಾಮಾಜಿಕ ಶೈಕ್ಷಣಿಕ ವಿಚಾರಗಳ ವಿದ್ವತ್‌ಪೂರ್ಣ ಪರಾಮರ್ಶೆ, ಪ್ರಾಂತೀಯ ಹಾಗೂ ಕೇಂದ್ರದ ಆಡಳಿತಗಳ ನಿರಂತರ ಪರೀಕ್ಷಣೆ, ವಿಮರ್ಶೆ–ಮನವಿ–ನಿರೂಪಗಳು– ಈ ದಿಶೆಯಲ್ಲಿ ಆರು ದಶಕಗಳುದ್ದಕ್ಕೂ ಡಿ.ವಿ.ಜಿ. ಮಾಡಿರುವ ಕಾರ್ಯ ಅವರ ಸಾಹಿತ್ಯ ಸೃಷ್ಟಿಯಷ್ಟೇ ಗಣನೀಯವಾಗಿದೆ. ಒಂದೇ ಸಮ್ಯಗ್ದರ್ಶನದ ಚಿಲುಮೆ ಡಿ.ವಿ.ಜಿ.ಯವರಲ್ಲಿ ಒಂದೆಡೆ ತಾತ್ತ್ವಿಕ ಚಿಂತನೆಯಾಗಿ ಇನ್ನೊಂದೆಡೆ ಕಾವ್ಯಾದಿ ಸಾಹಿತ್ಯನಿರ್ಮಿತಿಯಾಗಿ, ಮತ್ತೊಂದೆಡೆ ರಾಜಕೀಯ ಟೀಕೆಯಾಗಿ ಹೊರಹೊಮ್ಮಿದೆ.

ಈ ಸಮನ್ವಯ ಬುದ್ಧಿಯ ಪ್ರಕಟರೂಪಗಳೇ ವಸಂತ ಕುಸುಮಾಂಜಲಿ (1922). ನಿವೇದನೆ (1924) ಮುಂತಾದ ಕಾವ್ಯಮಾಲೆಗಳು; ಜೀವನ ಸೌಂದರ್ಯ ಮತ್ತು ಸಾಹಿತ್ಯ (1932). ಸಾಹಿತ್ಯ ಶಕ್ತಿ (1950) ಮುಂತಾದ ವೈಚಾರಿಕ ಪ್ರಬಂಧ ಸಂಚಯಗಳು; ಅನುವಾದದ ಆಕಾರ ತಳೆದಿದ್ದರೂ ನೂತನ ಕಾವ್ಯದಂತೆ ಸೊಗಯಿಸುವ ಉಮರನ

ಒಸಗೆ (1930), ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ನಾಟಕದ ಪದ್ಯಾನುವಾದ (1936); ಶ್ರೀರಾಮ ಕಥೆಯ ನೆವದಿಂದ ಧರ್ಮದ್ವೈಧಕ್ಲೇಶಗಳಿಗೆ ಪರಿಹಾರವನ್ನು ವಿವೇಚಿಸುವ ಶ್ರೀರಾಮಪರೀಕ್ಷಣಂ (1945); ಬೇಲೂರು ಚೆನ್ನಕೇಶವ ಅಂತಃಪುರದ ಮದನಿಕೆಯರ ಶೃಂಗಾರವಿಲಾಸಗಳ ಸಂಗೀತ ಚಿತ್ರಣವಾದ ಅಂತಃಪುರ ಗೀತೆ (1950), ಶಾಕುಂತಲ ನಾಟಕದ ಸರಸ ಸಂದರ್ಭಗಳ ಸಂಗೀತಾನುವಾದ ಗೀತ ಶಾಕುಂತಲ (1960); ಉತ್ತಮ ಜೀವಿತದ ನಡೆವಳಿಕೆಗಳನ್ನು ವರ್ಣಿಸುವ ಬಾಳಿಗೊಂದು ನಂಬಿಕೆ (1950), ಸಂಸ್ಕೃತಿ (1953) ಮುಂತಾದ ಪ್ರಬಂಧಗಳು; ವಿದ್ಯಾರಣ್ಯರು, ರಂಗಾಚಾರ್ಲು, ಗೋಖಲೆ ಇತ್ಯಾದಿ ಜೀವಿತವೃತ್ತಗಳು; ರಾಜ್ಯಶಾಸ್ತ್ರ (1951) ಮೊದಲಾದ ಶಾಸ್ತ್ರಗ್ರಂಥಗಳು; ಪ್ರವೃತ್ತಿ–ನಿವೃತ್ತಿ ಸಮನ್ವಯವನ್ನೂ ಜೀವೋತ್ಕರ್ಷವು ಅಪೇಕ್ಷಿಸುವ ಪ್ರತ್ಯಗ್ದೃಷ್ಟಿಯನ್ನೂ ಪ್ರತಿಪಾದಿಸುವ ಪುರುಷಸೂಕ್ತ (1953) ಮತ್ತು ಈಶೋಪನಿಷತ್ತು (1953) – ಈ ಮೊದಲಾದ ಸಾಹಿತ್ಯ ಕೃತಿಗಳು.

ಭೋಗೇಚ್ಛೆ ಪಾಪವಲ್ಲ, ಜೀವನಕ್ಕೆ ಉಲ್ಲಾಸಕ್ಕೆ ಮಹತ್ತ್ವದ ಸ್ಥಾನ ಸಲ್ಲುತ್ತದೆ. ಸೌಂದರ್ಯಾನುಭವ ಆತ್ಮೋತ್ಕರ್ಷಕ್ಕೆ ಸಾಧಕವೇ ಆಗಬಲ್ಲದು ಎಂಬುದು ಶೃಂಗಾರ ಮಂಗಳಂ ಎಂಬ (1970) ಪದ್ಯಮಾಲಿಕೆಯ ಆಶಯ.

ಸುಖಮುಂ ಸಂಸ್ಕಾರಂ ಜೀ ।<br>
ವಕೆ ದುಃಖದವೋಲೆ ಚಿತ್ತಪರಿಪಾಚನಕಂ ॥<br>
ವಿಕಸಿತಮದರಿಂ ಹೃತ್ಕೋ ।<br>
ರಕಮಾ ಸೌರಭದೆ ಜೀವಕಾತ್ಮಾನುಭವಂ ॥

ಇದೇ ವಾದಧಾರೆ ಶ್ರೀ ಕೃಷ್ಣಪರೀಕ್ಷಣಂ (1971) ಎಂಬ ಗೀತರೂಪಕದಲ್ಲಿಯೂ ಅನುವೃತ್ತವಾಗಿದೆ.

ಬ್ರಹ್ಮಕೆ ಹೃದಯವನಿತ್ತು ಜ ।<br>
ಗನ್ಮಂಗಲಕಾರ್ಯಕೊಡಲನೆಲ್ಲವನಿತ್ತುಂ ॥<br>
ಇಮ್ಮಿದಲೊಡನಾಡುತ ಸ ।<br>
ಚ್ಚಿನ್ಮಯನಂ ಮರೆಯದಿರ್ದೊಡದು ನಿರ್ವಾಣಂ ॥

1953ರಿಂದ ಪತ್ರಿಕೆಗಳಲ್ಲಿ ಧಾರವಾಹಿಯಾಗಿ (1969ರಿಂದ ಗ್ರಂಥರೂಪವಾಗಿ) ಪ್ರಕಟವಾಗುತ್ತಿದ್ದ ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆಯ ಎಂಟು ಸಂಪುಟಗಳು 1969–74ರ ಅವಧಿಯಲ್ಲಿ ಪ್ರಕಟವಾದವು. ಹತ್ತಾರು ಮಂದಿ ಪ್ರಸಿದ್ಧಪುರುಷರ, ವಿದ್ವದ್ರಸಿಕರ, ಹಾಗೂ ಸಾಮಾನ್ಯ ವೃತ್ತಿ ವೈಲಕ್ಷಣ್ಯಗಳ ಚಿತ್ರಣಗಳಿಂದಲೂ ಹಾಸ್ಯ ಸನ್ನಿವೇಶಗಳಿಂದಲೂ ತುಂಬಿ, ಡಿ. ವಿ. ಜಿ. ಯವರ ಸ್ವಾರಸ್ಯಗ್ರಹಣಪಟುತೆಗೂ ಕಥನಕೌಶಲಕ್ಕೂ ನಿದರ್ಶನವಾಗಿರುವುವಲ್ಲದೆ, ಸಾಂಪ್ರತಶತಮಾನದ ಸಮಾಜೇತಿಹಾಸ ವೆನ್ನಬಹುದಾದ ಒಂದು ವಿಶಿಷ್ಟ ಪ್ರಕಾರದ ಸಾಹಿತ್ಯರಾಶಿಯಾಗಿ ಪರಿಣಮಿಸಿದೆ.

ಜೀವಾನುಭವದ ರಸಪಾಕ ಸೂತ್ರವಾಗಿ ಹೊರಹೊಮ್ಮಿರುವ ಮನನ ಕಾವ್ಯಧಾರೆ ಮಂಕುತಿಮ್ಮನ ಕಗ್ಗ (1943) ಕನ್ನಡದ ಅತ್ಯಂತ ಜನಪ್ರಿಯ ಕೃತಿಗಳಲ್ಲೊಂದೆನಿಸಿದೆ; ಜೀವನದ ಆಘಾತಗಳನ್ನೆದುರಿಸುವಲ್ಲಿ ಒಂದು ಸ್ಥೈರ್ಯವನ್ನೂ ನಯನೋಪಾಯವನ್ನೂ ಬೋಧಿಸುವ ಕಗ್ಗದ ಸೂಚ್ಯುಕ್ತಿಗಳು ಮನಃಸ್ಪರ್ಶಿಯೂ ಅವಿಸ್ಮರಣೀಯವೂ ಆಗಿದ್ದು, ಡಿ.ವಿ.ಜಿ. ಯವರಿಗೆ ಆಧುನಿಕ ಸರ್ವಜ್ಞ ಎಂಬ ಅಭಿಧಾನವನ್ನು ತಂದುಕೊಟ್ಟಿವೆ. ಯಾವುದೇ ಕಾರಣದಿಂದ ಮನ ಕುಗ್ಗಿದವರಿಗೆ

ಒಲ್ಲೆನೆನದಿರು ಬಾಳನ್, ಒಲವದೇನೆನ್ನದಿರು ।<br>
ಉಲ್ಲಾಸಕೆಡೆಮಾಡು ನಿನ್ನಿನಾದನಿತು ॥<br>
ನಿಲ್ಲು ಕೆಚ್ಚೆದೆಯಿಂದಲನ್ಯಾಯಗಳನಳಿಸೆ ।<br>
ಎಲ್ಲಕಂ ಸಿದ್ಧನಿರು– ಮಂಕುತಿಮ್ಮ ॥

ಮುಂತಾದ ಸ್ನೇಹವಚನಗಳು ಧೈರ್ಯೋತ್ಸಾಹಪ್ರದಗಳಾಗಿವೆ.

ಇದೇ ಚಿಂತನಧೋರಣೆ ಡಿ.ವಿ.ಜಿ. ಯವರ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ (1966) ಎಂಬ ಉಪನ್ಯಾಸ ಗ್ರಂಥದಲ್ಲಿ ಶಾಸ್ತ್ರಪರಿಷ್ಕೃತಿಯಿಂದ ವಿಸ್ತರಿಸಲ್ಪಟ್ಟಿದೆ. ಲೋಕಜೀವನ ಗೌರವಾರ್ಹ; ಸಮ್ಯಗ್ಜೀವನವೇ ಭಗವದಾರಾಧನೆ–ಇದು ಭಗವದ್ಗೀತೆಯ ಪ್ರಧಾನೋಪದೇಶವೆಂದಿದ್ದಾರೆ. ಡಿ.ವಿ.ಜಿ; ಅಂತರಂಗ– ಬಹಿರಂಗ ಸಾಮರಸ್ಯವೂ ದ್ವೈತ–ಅದ್ವೈತಾದಿ ವಿವಿಧ ಮತಸಾಮರಸ್ಯವೂ ಸಾಧ್ಯ ಹಾಗೂ ಅವಶ್ಯವೆಂದು ಪ್ರತಿಪಾದಿಸಿದ್ದಾರೆ.

ವಿವಿಧಮತಗಂಭೀರಂ ಸಾಮರಸ್ಯಪ್ರಕಾರಂ ।<br>
ಗೃಹಿ–ಯತಿಸಮುದಾರಂ ಸರ್ವಜೀವೋಪಚಾರಂ ॥<br>
ಸುರ–ನರಸಹಕಾರಂ ಸ್ವಾತ್ಮಸಾರ್ವಾತ್ಮ್ಯಸಾರಂ ।<br>
ಭವಜಲನಿಧಿಪಾರಂ ಕೃಷ್ಣಗೀತಾವತಾರಂ ॥

ಡಿ.ವಿ.ಜಿ. ಯವರ ಬಹುಮುಖಸೇವೆಗಾಗಿ 1961ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ ಡಾಕ್ಟರೇಟ್ (ಡಿ.ಲಿಟ್.) ಪದವಿಯನ್ನಿತ್ತು ಗೌರವಿಸಿತು. ಶ್ರೀಮದ್ಭಗವದ್ಗೀತಾ ತಾತ್ಪರ್ಯ ವೆಂಬ ಕೃತಿ 1967ರಲ್ಲಿ ಭಾರತ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿತು. ಇವರು 7–10–1975 ರಂದು ನಿಧನರಾದರು. (ಎಸ್.ಆರ್.ಆರ್.ಎಸ್.)

**ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ :** ಪ್ರಜಾಸೇವೆಯೊಂದನ್ನೇ ತಮ್ಮ ಜೀವಿತಧರ್ಮವೆಂದು ಭಾವಿಸಿ ಸಾರ್ವಜನಿಕ ಜೀವನ ನಡೆಸಿದ ಗೋಪಾಲ ಕೃಷ್ಣ ಗೋಖಲೆಯವರ ಮೇಲ್ಪಂಕ್ತಿಯನ್ನನುಸರಿಸಿ, ದೇಶಸೇವಾವ್ರತವನ್ನು ತೊಟ್ಟು ಕೆಲಸ ಮಾಡಬಲ್ಲ ಜನರನ್ನು ತಯಾರು ಮಾಡಬೇಕೆಂಬ ಡಿ.ವಿ.ಗುಂಡಪ್ಪನವರ ಸಂಕಲ್ಪದ ಚರಿತ್ರೆಯೇ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಚರಿತ್ರೆಯಾಗಿದೆ. ಡಿ.ವಿ.ಜಿ.ಯವರ ಕಾರ್ಯಗೌರವ ಅವರನ್ನು ಪತ್ರಿಕೋದ್ಯಮ, ಸಾಹಿತ್ಯ ರಚನೆ, ಶಾಸನಸಭೆ, ಪೌರಸಭೆ, ರಾಜಕೀಯ ರಂಗಗಳಿಗೆ ಕರೆದೊಯ್ದರೂ ಅವರ ಮೂಲಧ್ಯೇಯ ಅವರ ಎಲ್ಲ ಪ್ರಯತ್ನಗಳಲ್ಲಿಯೂ ಕಾಣಬರುತ್ತದೆ. ಆದ್ದರಿಂದ ಗೋಖಲೆ ಸಂಸ್ಥೆ ಶಾಸನತಃ ಪ್ರಾರಂಭವಾದದ್ದು 1945ರಲ್ಲಿಯಾದರೂ ಅದಕೋಸ್ಕರ ಆದ ಪ್ರಯತ್ನದ ಕಥೆ ಮೊದಲಾದದ್ದು 1915ರಲ್ಲಿ.

ಫೆಬ್ರುವರಿ 1915ರಲ್ಲಿ ಗೋಖಲೆಯವರು ಕಾಲಾಧೀನರಾದ ತರುಣದಲ್ಲಿ ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಎಂ. ವಿಶ್ವೇಶ್ವರಯ್ಯನವರು ಗೋಖಲೆಯವರ ರಾಜ್ಯತಂತ್ರ ನಿಪುಣತೆಯನ್ನು ಕೊಂಡಾಡಿದರು. ಆ ಹೊತ್ತಿಗಾಗಲೆ ಗೋಖಲೆಯವರ ಕಾರ್ಯನೀತಿಯನ್ನು ಮೆಚ್ಚಿಕೊಂಡಿದ್ದ ಕೆಲವು ಸ್ನೇಹಿತರು, ಅಂಥ ದೇಶಸೇವಕರ ಕಾರ್ಯವಿಧಾನ, ಮತ್ತು ಧ್ಯೇಯಗಳನ್ನು ಜನಸಾಮಾನ್ಯಕ್ಕೆ ಪರಿಚಯ ಮಾಡಿಸುವುದು ದೇಶದ ಹಿತದೃಷ್ಟಿಯಿಂದ ಕರ್ತವ್ಯವೆಂದು ತಿಳಿದು, ಬೆಂಗಳೂರಿನಲ್ಲಿ ಮೈಸೂರು ಸಮಾಜ ಸೇವಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅದೇ ಸಮಯದಲ್ಲಿ ಮದರಾಸಿಗೆ ಬಂದಿದ್ದ ಮಹಾತ್ಮ ಗಾಂಧೀಜಿಯವರು ಈ ಸಂಘದ ಆಹ್ವಾನವನ್ನು ಅಂಗೀಕರಿಸಿ ಬೆಂಗಳೂರಿನಲ್ಲಿ 8–5–1915ರಂದು ಗೋಖಲೆಯವರ ಭಾವಚಿತ್ರವೊಂದನ್ನು ಅನಾವರಣ ಮಾಡಿ, ತಮ್ಮ ಮೇಲೆ ಗೋಖಲೆಯವರಿಂದ ಆದ ಪ್ರಭಾವವನ್ನು ಪ್ರಕಟಪಡಿಸಿದರು. (ಆ ಮೂಲ ಭಾವಚಿತ್ರವೂ ಅದರ ಪ್ರತಿಕೃತಿಯು ಈಗ ಗೋಖಲೆ ಸಂಸ್ಥೆಯಲ್ಲಿದೆ.) ಆ ಸಂಘದ ಕಾರ್ಯಕ್ರಮಗಳಲ್ಲಿ ಮುಖ್ಯವಾದವು; ಉಪನ್ಯಾಸಗಳು, ವಯಸ್ಕರಿಗೂ ಮಕ್ಕಳಿಗೂ ಪಾಠಶಾಲೆಗಳು, ಬಡವರಿಗೂ ರೋಗಿಗಳಿಗೂ ಹಬ್ಬದ ದಿನಗಳಲ್ಲಿ ತಿಂಡಿಯ ಹಂಚಿಕೆ– ಇತ್ಯಾದಿ. ಇನ್‌ಫ್ಲುಯೆಂಜಾ ಜ್ವರ ಸಾಂಕ್ರಾಮಿಕವಾಗಿ ಹರಡಿದಾಗ (1918–19) ಈ ಸಂಘದ ಸದಸ್ಯರು ರೋಗಿಗಳ ಔಷಧೋಪಚಾರದಲ್ಲಿ ನೆರವಾದರು. ಇದರಲ್ಲಿ ಪಿ. ಕೋದಂಡರಾಯರು ಮತ್ತು ಎಚ್. ವಿ. ಆರ್ ಅಯ್ಯಂಗಾರ್ಯರು ಸೇರಿದ್ದರು. 1920ರ ವೇಳೆಗೆ ಈ ಸಂಘದ ನೆನಪೂ ಅಳಿಸಿಹೋಗುತ್ತಾ ಬಂತು.

1944ರಲ್ಲಿ ಡಿ.ವಿ.ಜಿ. ಯವರು ಸ್ನೇಹಿತರನೇಕರ ಬೆಂಬಲದಿಂದಲೂ ಸಹಾನುಭೂತಿ ಯಿಂದಲೂ ಈಗಿನ ಗೋಖಲೆ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಯತ್ನವನ್ನು ಕೈಗೊಂಡರು. ಜಾತಿಮತ ಭೇದಭಾವನೆಗಳಿಗೆ ಅವಕಾಶ ಕೊಡದೆ, ಯಾವ ರಾಜಕೀಯ ಪಕ್ಷಕ್ಕೂ ಒಳಪಡದೆ, ಜನಸಮುದಾಯದ ಮತ್ತು ಒಟ್ಟು ದೇಶದ ಹಿತದೃಷ್ಟಿಯಿಂದ ಸಾರ್ವಜನಿಕ ವಿಚಾರಗಳನ್ನು ಆಲೋಚನೆ ಮಾಡುವ ಉದ್ದೇಶವಿಟ್ಟುಕೊಂಡ ಸಂಸ್ಥೆಯ ಸ್ಥಾಪನೆಗಾಗಿ 18–2–1945ರಲ್ಲಿ ಡಿ. ವಿ. ಜಿ. ಯವರ ಮನೆಯಲ್ಲಿಯೇ ಪ್ರಾರಂಭ ಸದಸ್ಯರ ಮೊದಲನೆಯ ಸಭೆ ನಡೆಯಿತು. ಮೈಸೂರು ಸೊಸೈಟಿಗಳ ರಿಜಿಸ್ಟ್ರೇಷನ್ ಕಾನೂನಿನ ಪ್ರಕಾರ ಈ ಸಂಸ್ಥೆ 6–4–1945ರಲ್ಲಿ ರಿಜಿಸ್ಟರ್ ಆಯಿತು. ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್, ಬಿ. ಕೆ. ಗರುಡಾಚಾರ್, ಸಿ. ಪಿ. ರಾಮಸ್ವಾಮಿ ಅಯ್ಯರ್, ಎ. ಆರ್. ಕೃಷ್ಣಶಾಸ್ತ್ರೀ ಮುಂತಾದ ಅನೇಕ ಮಹನೀಯರು ಸಂಸ್ಥೆಯ ಸದಸ್ಯರಾದರು. ಬೆಂಗಳೂರು ಬಸವನಗುಡಿಯಲ್ಲಿ, ಎಂ. ಎನ್. ಕೃಷ್ಣರಾಯರ ಪಾರ್ಕಿನ ಬಳಿಯಿರುವ (ಆಗ್ಗೆ ಪಾಮಡಿ ಸುಬ್ಬರಾಮಶೆಟ್ಟರ ಸ್ವಾಧೀನದಲ್ಲಿದ್ದ) ಕಟ್ಟಡದ ಒಂದು ಭಾಗವನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ಯುವಜನರನ್ನು ರಾಷ್ಟ್ರಕಾರ್ಯಗಳಿಗೆ ಸಿದ್ಧಪಡಿಸಲು ವ್ಯಾಸಂಗಗೋಷ್ಠಿಯೊಂದು 15–12–1947ರಲ್ಲಿ ಪ್ರಾರಂಭವಾಯಿತು. ಜನವರಿ 1948ರಿಂದ ವ್ಯಾಸಂಗಗೋಷ್ಠಿಯ ಸದಸ್ಯರು ಪ್ರತಿ ಭಾನುವಾರ ಸೇರಿ ಗ್ರಂಥವ್ಯಾಸಂಗ ಮಾಡುವ ಪದ್ಧತಿಯನ್ನು ಮೊದಲು ಮಾಡಿದರು. 8–3–1948ರಲ್ಲಿ ನಿಟ್ಟೂರು ಶ್ರೀನಿವಾಸರಾಯರು ವಾಚನಾಲಯವನ್ನೂ 15–8–1948ರಲ್ಲಿ ಬಿ. ಪಿ. ವಾಡಿಯಾ ಅವರು ಪುಸ್ತಕ ಭಂಡಾರವನ್ನೂ ಸಮಾರಂಭಗೊಳಿಸಿದರು. ಜನವರಿ 1949ರಿಂದ ಪಬ್ಲಿಕ್ ಅಫೇರ್ಸ್ (ಸಾರ್ವಜನಿಕ) ಎಂಬ ಮಾಸಪತ್ರಿಕೆ ಇಂಗ್ಲಿಷ್

ಮತ್ತು ಕನ್ನಡ ಭಾಷೆಗಳಲ್ಲಿ ಪ್ರಾರಂಭವಾಯಿತು. ರಾಷ್ಟ್ರಕರ್ಧರ್ಮವನ್ನು ಕುರಿತು ಜನರಲ್ಲಿ ಪ್ರಚಾರಮಾಡುವುದೂ ಸಂಸ್ಥೆ ಹಾಗೂ ಅದರ ಸದಸ್ಯರೊಡನೆ ಸಂಪರ್ಕ ಸಾಧನವನ್ನಳವಡಿಸುವುದೂ ಪತ್ರಿಕೆಯ ಧ್ಯೇಯ. ಆಗಾಗ್ಗೆ ವಿಘ್ನಗಳನ್ನು ದಾಟಿ 1963ರಿಂದ ಪತ್ರಿಕೆ ಇಂಗ್ಲಿಷಿನಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತಿದೆ. ಕನ್ನಡ ವಿಭಾಗವನ್ನೂ ಮತ್ತೆ ಆರಂಭಿಸುವ ಆಸೆಯುಂಟು.

ಬೆಂಗಳೂರು ಪುರಸಭೆಯವರು 1949ರಲ್ಲಿ ಸಂಸ್ಥೆಯ ಕಟ್ಟಡಕ್ಕಾಗಿ ಒಂದು ನಿವೇಶನವನ್ನು ದಾನವಾಗಿ ಕೊಟ್ಟರು. 26–7–1956ರಲ್ಲಿ ಸಂಸ್ಥೆಯ ನೂತನ ಭವನ ಪ್ರವೇಶೋತ್ಸವ ನಡೆಯಿತು. 1959 ಮತ್ತು 1962ರಲ್ಲಿ ಇನ್ನಷ್ಟು ಸ್ಥಳವನ್ನು ಬೆಂಗಳೂರು ಪುರಸಭೆಯವರು ದಾನವಾಗಿ ಕೊಟ್ಟದ್ದರಿಂದ ಸಂಸ್ಥೆಯನ್ನು ವಿಸ್ತರಿಸಲು ಅನುಕೂಲವಾಯಿತು. ಯಂತ್ರೋದ್ಯಮಿಗಳಾದ ವಿ. ಎಸ್. ನಟರಾಜನ್ ಅವರು ಕಟ್ಟಡದ ಮೊದಲನೆಯ ಮಹಡಿಯ ಮಧ್ಯಭಾಗದ ಸಭಾಂಗಣವನ್ನು ಕಟ್ಟಿಸಿಕೊಟ್ಟರು.

ಕಟ್ಟಡದ ವಿಸ್ತರಣೆಗೆ ಮತ್ತು ಇತರ ವಿಧವಾಗಿ, ಸಹಾಯ ಮಾಡಿರುವವರಲ್ಲಿ ಟಿ. ಸದಾಶಿವಂ, ಎಂ.ಎಸ್. ಸುಬ್ಬಲಕ್ಷ್ಮಿ, ನಾಟಕರತ್ನ ಗುಬ್ಬಿ ವೀರಣ್ಣ, ನಿಜಾಮರ ನ್ಯಾಸನಿಧಿಯಿಂದ ಸಹಾಯ ಬರಲು ನೆರವಾದ ವಿ. ಪಿ. ಮೆನನ್, ಎಂ. ವಿ. ಕೃಷ್ಣಮೂರ್ತಿ. ಶಿವಮೊಗ್ಗದ ಜಿ. ಶ್ರೀನಿವಾಸ ಅಯ್ಯಂಗಾರ್, ಕಿರ್ಲೋಸ್ಕರ್ ಕಂಪನಿಯವರು, ದೀಪಕ್ ಕೇಬಲ್ಸ್ ಕಂಪನಿಯವರು, ತಾತಾ ಟ್ರಸ್ಟ್–ಮೊದಲಾದವರು ಸೇರಿದ್ದಾರೆ. 1965ರಲ್ಲಿ ಸಂಸ್ಥೆ ಶಾಸನತಃ ಸ್ಥಾಪನೆಯಾದ 20ನೆಯ ವರ್ಷದ ಉತ್ಸವದ ಸಂದರ್ಭದಲ್ಲಿ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರು 5,000 ರೂ ಗಳ ಸಹಾಯ, ಡಿ. ವಿ. ಜಿ. ಅವರಿಗೆ ಅವರ 'ಭಗವದ್ಗೀತಾ ತಾತ್ಪರ್ಯ' ಗ್ರಂಥಕ್ಕಾಗಿ ಭಾರತ ಸಾಹಿತ್ಯ ಅಕಾಡೆಮಿಯವರು ಕೊಟ್ಟ 5,000 ರೂಗಳ ಗೌರವ ಸಂಭಾವನೆ ಮತ್ತು 1970ರಲ್ಲಿ ದೇಶದ ಜನ ಡಿ. ವಿ. ಜಿ. ಅವರಿಗೆ ಕೊಟ್ಟ ಸುಮಾರು ಒಂದು ಲಕ್ಷ ರೂಪಾಯಿಗಳ ಗೌರವನಿಧಿ– ಇವೆಲ್ಲವೂ ಸಂಸ್ಥೆಯ ಪುರೋಭಿವೃದ್ಧಿಗೆ ವಿನಿಯೋಗವಾಗಿದೆ. ಈ ಸಂಸ್ಥೆ ಸಹಾಯ ಮಾಡಿರುವವರಲ್ಲಿ ಎಲ್ಲ ಜನವರ್ಗದವರೂ ನಾನಾ ಸಾಮಾಜಿಕ ಹಂತಗಳವರೂ ಎಲ್ಲ ಮತ ಕಸುಬಿನವರೂ, ಉದ್ಯೋಗಗಳವರು– ಎಲ್ಲ ಪ್ರಾಂತಗಳವರೂ ಇದ್ದಾರೆ. 2002ರಲ್ಲಿ ಡಿ.ವಿ.ಜಿ. ಸಭಾಂಗಣದ ಉದ್ಘಾಟನೆ ಆಯಿತು.

ಪ್ರಜಾಜನರು ನೆರವೇರಿಸಬೇಕಾದ ಕರ್ತವ್ಯಗಳೂ ಸಾಧಿಸಿಕೊಳ್ಳಬೇಕಾದ ಹಕ್ಕುಗಳೂ ಕೆಲವಿರುತ್ತವೆ. ಇವನ್ನು ಇವರು ಚೆನ್ನಾಗಿ ತಿಳಿದುಕೊಂಡು ರಾಷ್ಟ್ರ ಜೀವನಕ್ಕೂ ಸಹಾಯವಾಗುವುದೇ ರಾಷ್ಟ್ರಕಧರ್ಮ. ಈ ಮಹತ್ತರವಾದ ಧರ್ಮದ ಆಚರಣೆಗೆ ಸಹಾಯವನ್ನೊದಗಿಸುವುದು ಈ ಸಂಸ್ಥೆಯ ಮುಖ್ಯೋದ್ದೇಶ. ಸಮಸ್ತ ಜನಹಿತಕ್ಕೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನೂ ಶಾಸ್ತ್ರವಿಹಿತ ದೃಷ್ಟಿಯಿಂದಲೂ ನಿಷ್ಪಕ್ಷಪಾತ ಮನೋಭಾವದಿಂದಲೂ ವಾಸ್ತವಿಕ ಸಂಗತಿಗಳ ಪರಾಮರ್ಶನದ ಮೂಲಕವೂ ವ್ಯಾಸಂಗ ಮಾಡಿಸುವುದು, ಜನಕ್ಕಿರುವ ಕಷ್ಟಗಳನ್ನೂ ಕೊರತೆಗಳನ್ನೂ ಆಗಿಂದಾಗ್ಗೆ ಆಯಾ ಅಧಿಕಾರಿಗಳ ಗಮನಕ್ಕೆ ತರುವುದು – ಒಟ್ಟಿನಲ್ಲಿ ಸಾರ್ವಜನಿಕ ಪ್ರಶ್ನೆಗಳನ್ನು ಕುರಿತು ಜನಾಭಿಪ್ರಾಯವು ವಿವೇಕದಿಂದಲೂ ಸ್ಫುಟವಾಗಿಯೂ ವ್ಯಕ್ತಪಡುವಂತೆ ಮಾಡುವುದಕ್ಕೆ ಸಹಾಯ ಕೊಡುವುದು; ಮತ್ತು ನಾನಾ ಜನವರ್ಗಗಳಲ್ಲಿ ಸ್ನೇಹವನ್ನೂ ಐಕ್ಯಮತವನ್ನೂ ಬೆಳೆಸುವುದು, ಜನದ ನಡೆನುಡಿಗಳಲ್ಲಿ ಸೌಜನ್ಯಸೌಶೀಲ್ಯಗಳು ಅಭಿವೃದ್ಧಿಯಾಗುವಂತೆ ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು–ಇವು ಈ ಸಂಸ್ಥೆಯ ಕಾರ್ಯವಿಧಾನಗಳು. ಸಂಸ್ಥೆ ಅಧಿಕಾರಪ್ರಸಕ್ತಿಯ ರಾಜಕೀಯಕ್ಕೆ ಕೈಹಾಕತಕ್ಕದಲ್ಲ.

**ಸಂಸ್ಥೆಯ ಕಾರ್ಯಾಂಗಗಳು :** ಸುಮಾರು ನಾಲ್ಕು ಲಕ್ಷ ರೂಪಾಯಿ ಬೆಲೆಬಾಳುವ ಸಂಸ್ಥೆಯ ಆಸ್ತಿಸ್ವತ್ತುಗಳ ಉಸ್ತುವಾರಿಯನ್ನು ಒಂದು ನ್ಯಾಸ ನಿರ್ವಾಹಕ ಸಮಿತಿ ನಡೆಸುತ್ತದೆ. ಸಂಸ್ಥೆಯ ದೈನಂದಿನ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಚುನಾಯಿಸಲ್ಪಡುವ ಕಾರ್ಯ ಸಮಿತಿ ನೋಡಿಕೊಳ್ಳುತ್ತದೆ.

ಸಂಸ್ಥೆಯ ಸ್ವಂತ ಕಟ್ಟಡ ಬೆಂಗಳೂರು ಬಸವನಗುಡಿಯಲ್ಲಿರುವ ಬಸವಣ್ಣನ ಗುಡಿಯ ಪಕ್ಕದ ರಸ್ತೆಯಲ್ಲಿದೆ.

ಸಾರ್ವಜನಿಕನಾಗುವವ ತನ್ನ ಉದ್ದೇಶಕ್ಕಾಗಿ ಒಂದು ಉದ್ಯೋಗವನ್ನಿಟ್ಟುಕೊಂಡು ತನ್ನ ಮಿಕ್ಕ ಕಾಲವನ್ನೂ ಬುದ್ಧಿಯನ್ನೂ ಪ್ರತಿಫಲ ನಿರೀಕ್ಷೆಯಿಲ್ಲದೆ ದೇಶಕ್ಕೆ ಮೀಸಲಿಡಬೇಕು. ರಾಜಕೀಯವನ್ನೇ ಜೀವಿತದ ಕಸುಬನ್ನಾಗಿ ಮಾಡಿಕೊಳ್ಳಬಾರದು– ಎಂಬ ಡಿ.ವಿ.ಜಿ ಯವರ ಅಭಿಪ್ರಾಯದಂತೆ ನಡೆಯಲು ಸಂಸ್ಥೆ ಪ್ರಯತ್ನಪಡುತ್ತಿದೆ.

ಇಲ್ಲಿಯ ಪುಸ್ತಕ ಭಂಡಾರದಲ್ಲಿ ಸಾಹಿತ್ಯ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅಂತಾರಾಷ್ಟ್ರೀಯ ಕಾನೂನು, ದರ್ಶನಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು 30,000 ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಪುಸ್ತಕಗಳಿವೆ. ಅನೇಕ ವಿದ್ವಾಂಸ ಮಹನೀಯರು ಗ್ರಂಥದಾನ ಮಾಡಿದ್ದಾರೆ. ಜಿ.ಪಿ. ರಾಜರತ್ನಂ ಅವರು ಪ್ರಾರಂಭಿಸಿದ 'ಶ್ರೀಗಂಧಕುಟಿ' ಎಂಬ ಪರಾಮರ್ಶ ಗ್ರಂಥಶಾಖೆಯಲ್ಲಿ ಹಳಗನ್ನಡ ಕಾವ್ಯಗಳೂ 1862ರಿಂದ ಪ್ರಕಟವಾಗುತ್ತಿದ್ದ ವೃತ್ತಾಂತಬೋಧಿನಿ, ಕರ್ನಾಟಕ ಪ್ರಕಾಶಿಕೆ ಪತ್ರಿಕೆಗಳ ಸಂಪುಟಗಳೂ ಸರ್ಕಾರದ ಆಡಳಿತ ಮತ್ತು ವಿಶೇಷ ವರದಿಗಳೂ ಇಂಗ್ಲಿಷ್ ಕನ್ನಡ ಮುಖ್ಯ ಪತ್ರಿಕೆಗಳ ಹಳೆಯ ಸಂಚಿಕೆ ಸಂಪುಟಗಳೂ ಶಾಸನ ವರದಿಗಳೂ ತಾಳೆಯೋಲೆ ಗ್ರಂಥಗಳೂ ಇವೆ. ಸಂಸ್ಥೆಯು ವ್ಯವಸ್ಥೆ ಮಾಡುವ ರಾಜಾಜಿ ಸ್ಮಾರಕ ಉಪನ್ಯಾಸದ ಕಾರ್ಯಕ್ರಮದಲ್ಲಿ ನಾನಿ ಫಾಲ್ಕಿ ವಾಲಿ, ಬಿ.ಎ. ನೆಹರು, ಡಾ॥ ಆರ್. ವೆಂಕಟರಾಮನ್, ಎಚ್. ವೈ. ಶಾರದಾ ಪ್ರಸಾದ್, ಸ್ವಾಮಿ ರಂಗನಾಥಾನಂದಜಿ, ಟಿ. ಎನ್. ಶೇಷನ್ ಮೊದಲಾದ ಗಣ್ಯರು ಉಪನ್ಯಾಸ ಮಾಡಿದ್ದಾರೆ. 2001ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತದ ರಾಜ್ಯಾಂಗವನ್ನು ಕುರಿತ ವಿಚಾರಸಂಕಿರಣದಲ್ಲಿ ನ್ಯಾಯಮೂರ್ತಿ ಎಂ. ಎನ್. ವೆಂಕಟಾಚಲಯ್ಯ, ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್, ಡಾ॥ ಜಿ. ತಿಮ್ಮಯ್ಯ ಮೊದಲಾದ ತಜ್ಞರು ಭಾಗವಹಿಸಿದರು.

ಹೀಗೆ ಡಿ.ವಿ.ಜಿ. ಯವರ ಕಲ್ಪನೆಯಂತೆ ರಾಷ್ಟ್ರಕ ತತ್ತ್ವಧ್ಯೇಯಗಳಿಗೆ ಕೇಂದ್ರಸ್ಥಾನವೂ ಪ್ರತ್ಯಕ್ಷ ನಿದರ್ಶನವೂ ಆಗಬೇಕೆಂದು ಗೋಖಲೆ ಸಂಸ್ಥೆ ಶ್ರಮಿಸುತ್ತಿದೆ. ಡಿ.ವಿ.ಜಿ. ಅವರು ತೀರಿಕೊಂಡನಂತರ ಅವರ ನಿಕಟಸಹವರ್ತಿಗಳಾಗಿದ್ದ ನಿಟ್ಟೂರು ಶ್ರೀನಿವಾಸ ರಾಯರು 2003ರ ವರೆಗೆ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ, ಸ್ವಲ್ಪ ಕಾಲ ಸಂಸ್ಥೆಯ ಆಶ್ರಯದಾತರೂ (ಪೇಟ್ರನ್) ಆಗಿದ್ದರು. (ಡಿ.ಆರ್.ವಿ.; ಬಿ.ಎಸ್.ಎಸ್.ಆರ್.)

**ಗುಂಡರ್ಟ್, ಹರ್ಮನ್ :** 1814–93. ಮಲಯಾಳಂ ಭಾಷೆ ಮತ್ತು ಸಾಹಿತ್ಯ ಬೆಳವಣಿಗೆ ಮತ್ತು ಅದರ ಪ್ರಗತಿಗಾಗಿ ಹೆಚ್ಚಿನ ಕೆಲಸ ಮಾಡಿರುವ ವಿದ್ವಾಂಸ. ಜರ್ಮನಿಯಿಂದ ಭಾರತಕ್ಕೆ ಪಾದ್ರಿಯಾಗಿ ಬಂದ ಈತ ತನ್ನ ಜೀವಿತದ ಬಹು ಮುಖ್ಯ ಭಾಗವನ್ನು ಆ ಭಾಷೆ ಮತ್ತು ಸಾಹಿತ್ಯಕ್ಕೆ ಮೀಸಲಾಗಿಟ್ಟು ದುಡಿದಿದ್ದಾನೆ. ಮಲೆಯಾಳಿಗಳು ಈತನನ್ನು ಗುರುಸಮಾನನೆಂದು ಗೌರವಿಸುತ್ತಾರೆ.

ಮಲೆಯಾಳಿ ಭಾಷೆಯಲ್ಲಿರುವ ಅನೇಕ ಪ್ರಥಮಗಳಿಗೆ ಗುಂಡರ್ಟ್ ಕಾರಣನಾಗಿದ್ದಾನೆ. ಈತ ರಚಿಸಿರುವ ಮಲೆಯಾಳಂ–ಇಂಗ್ಲಿಷ್ ನಿಘಂಟು ಶಾಸ್ತ್ರೀಯವೂ ಸಮಗ್ರವೂ ಆಗಿದೆ. ಈತನ ಮಲೆಯಾಳಂ ಭಾಷಾ ವ್ಯಾಕರಣ ಮತ್ತೊಂದು ಅದ್ಭುತ

ಸಾಧನೆ. ಮಲೆಯಾಳಂ ಮೊದಲ ಭೂಗೋಳಶಾಸ್ತ್ರದ ಪುಸ್ತಕವನ್ನು ಬರೆದ ಹಾಗೂ ಗಾದೆಗಳನ್ನು ಸಂಗ್ರಹಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಮಲೆಯಾಳಂ ಭಾಷೆಯನ್ನು ಬರೆಯುವಾಗ ಅಗತ್ಯವಾದ ಲೇಖನ ಚಿಹ್ನೆಗಳನ್ನು ಪ್ರಥಮಬಾರಿಗೆ ಬಳಸಿದ ಈತನೇ. ಹಾಗೆಯೇ ಆ ಭಾಷೆಯಲ್ಲಿ ವೃತ್ತಾಂತ ಪತ್ರಿಕೆಗಳನ್ನು ಪ್ರಥಮ ಬಾರಿಗೆ ಹೊರಡಿಸಲು ಪ್ರಯತ್ನಿಸಿದವನೂ ಈತನೇ. ಗುಂಡರ್ಟ್‌ನ ಕೃತಿಗಳ ಸಂಖ್ಯೆ ಒಟ್ಟು 26 ಎನ್ನಲಾಗಿದೆ. ಮಲೆಯಾಳಂ ಭಾಷೆಯಲ್ಲಿನ ಆಧುನಿಕ ಗದ್ಯ ಒಂದು ನಿರ್ದಿಷ್ಟ ಶೈಲಿಯನ್ನು ಪಡೆದದ್ದು ಈತನಿಂದ ಎನ್ನಲಾಗಿದೆ. ಗುಂಡರ್ಟ್ ಜರ್ಮನಿಯ ವರ್ಟೆನ್‌ಬರ್ಗ್ ಎಂಬಲ್ಲಿ ಜನಿಸಿದ. ಟ್ಯೂಬಿಂಗೆನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದು, ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಸ್ವಿಟ್ಜರ್‌ಲೆಂಡಿನಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದು ಪಾದ್ರಿಯಾದ. ನೋರಿಸ್ ಗ್ರೀನೆಜ್‌ನೊಂದಿಗೆ ಧರ್ಮಪ್ರಚಾರಕ ಮಂಡಲಿಯನ್ನು ಸೇರಿ ಕೆಲಸ ಮಾಡತೊಡಗಿದ. 1836ನೆಯ ಇಸವಿಯಲ್ಲಿ ಮತ ಪ್ರಚಾರಕ್ಕಾಗಿ ಜರ್ಮನಿಯನ್ನು ಬಿಟ್ಟು ಭಾರತಕ್ಕೆ ಬಂದ. ಸಮುದ್ರ ಮಾರ್ಗವಾಗಿ ಭಾರತಕ್ಕೆ ಪ್ರಯಾಣ ಮಾಡುವಾಗಲೇ ಬಂಗಾಳಿ, ಹಿಂದೂಸ್ತಾನಿ ಮತ್ತು ತೆಲುಗು ಭಾಷೆಗಳನ್ನು ಕಲಿತುಕೊಂಡ. 1836ರಲ್ಲಿ ಚೆನ್ನೈಯನ್ನು ತಲುಪಿದ. ತಿನ್ನೆಲ್ ವೇಲ್ ಮತ್ತು ಚಿತ್ತೂರಿನಲ್ಲಿ ತನ್ನ ಪ್ರಚಾರಕಾರ್ಯವನ್ನು ಆರಂಭಿಸಿದ. ಈ ಅವಧಿಯಲ್ಲಿ ತಮಿಳು ಭಾಷೆಯನ್ನು ಕಲಿತ. ತಮಿಳು ಭಾಷೆಯಲ್ಲಿಯೂ ಈತ ಒಂದು ಕೃತಿಯನ್ನು ರಚಿಸಿರುವುದಾಗಿ ಹೇಳುತ್ತಾರೆ.

ಅಲ್ಲಿಂದ ಗುಂಡರ್ಟ್ ಮೂಲ ಕ್ರೈಸ್ತಧರ್ಮ ಪ್ರಚಾರಕ ಮಂಡಲಿಯ ಸದಸ್ಯನಾಗಿ ಮಂಗಳೂರಿಗೆ ಬಂದ. ಬರುವ ಮಾರ್ಗದಲ್ಲಿ, ಇಂದಿನ ಕೇರಳದ ಒಂದು ಭಾಗವಾದ ತಿರುವನಂತಪುರದ ಆಗಿನ ರಾಜನಾದ ಸ್ವಾತಿ ತಿರುನಾಳ್ ಮಹಾರಾಜನ ಭೇಟಿಯಾಗುವ ಅವಕಾಶ ಆಕಸ್ಮಿಕವಾಗಿ ಒದಗಿತು. ಈತನಿಗೆ ಪ್ರಥಮವಾಗಿ ಮಲಯಾಳಂ ಭಾಷೆಯನ್ನು ಕೇಳುವ ಅವಕಾಶ ದೊರೆತದ್ದು ಅಲ್ಲಿಯೇ. 1839ರ ಏಪ್ರಿಲ್‌ನಲ್ಲಿ ಕೇರಳಕ್ಕೆ ಬಂದು ತಲ್ಲಿಚೇರಿಯ ಇಲ್ಲಿಕ್ಕುಣ್ಣುವಿನಲ್ಲಿ ನೆಲೆಸಿದ. ಅನಂತರ 1859ರ ವರೆಗೂ ಅಂದರೆ ಭಾರತವನ್ನು ಬಿಟ್ಟು ಹೊರಡುವವರೆಗೂ ತನ್ನ ಹೆಚ್ಚು ಕಾಲವನ್ನೆಲ್ಲ ಅಲ್ಲಿಯೇ ಕಳೆದು, ಅದನ್ನು ಮಲಯಾಳಂ ಭಾಷೆಯ ಅಭಿವೃದ್ಧಿಗೆ ವಿನಿಯೋಗಿಸಿದ. ಜರ್ಮನಿಗೆ ಹಿಂತಿರುಗಿದ ಮೇಲೂ ತನ್ನ ತಂದೆಯೊಡನೆ ಸೇರಿ ಮಲಯಾಳಂ ಭಾಷೆಗಾಗಿ ಕೆಲಸ ಮಾಡಿದ. ಈತನ ನಿಘಂಟು ಕೆಲಸ ಪೂರ್ತಿಯಾದದ್ದು ಜರ್ಮನಿಯಲ್ಲೆ. ಶಾಲಾ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾಗ ಶಾಲೆಯ ಮಕ್ಕಳಿಗೆ ಉಪಯುಕ್ತವಾಗುವಂತೆ ಈತ ಮಲಯಾಳಂನಲ್ಲಿ ಪಾಠಾಮಾಲಾ ಎಂಬ ಪಠ್ಯ ಪುಸ್ತಕವೊಂದನ್ನು ಸಿದ್ಧಪಡಿಸಿದ. ಇದರಲ್ಲಿ ಗದ್ಯ ಭಾಗವನ್ನೆಲ್ಲ ತಾನೇ ಬರೆದು ಸೇರಿಸಿದ್ದಾನಲ್ಲದೆ ಪ್ರಾಚೀನ ಸಾಹಿತ್ಯಕೃತಿಗಳಿಂದ ಪದ್ಯಗಳನ್ನೂ ಹೊಸ ಯುಗದ ಕವನಗಳನ್ನೂ ಸಂಪಾದಿಸಿ ಕೊಟ್ಟಿದ್ದಾನೆ. ಈತ ಬರೆದ ಇತಿಹಾಸ ಪುಸ್ತಕ (ಕೇರಳ ಪಟಮ) ಎಂಬುದು ವಾಸ್ಕೋಡ ಗ್ಯಾಮನ ಆಗಮನದ ಕಾಲದಿಂದ ಹಿಡಿದು ಅನಂತರದ 31ವರ್ಷಗಳ ಅವಧಿಯ ಕೇರಳದ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ. 1847ರ ತರುವಾಯ ರಾಜ್ಯ ಸಮಾಚಾರಂ ಮತ್ತು ಪಶ್ಚಿಮೋದಯಂ ಪತ್ರಿಕೆಗಳ ಸಂಪಾದಕನಾಗಿ ಗುಂಡರ್ಟ್ ತನ್ನ ಸ್ವಲ್ಪಕಾಲವನ್ನು ಮೀಸಲಾಗಿರಿಸಿದ. ಈ ಪತ್ರಿಕೆಗಳಲ್ಲಿ ಮೊದಲನೆಯದು ಸಂಪೂರ್ಣವಾಗಿ ಕ್ರೈಸ್ತ ಧರ್ಮ ಪ್ರಸಾರಕ್ಕೆ ಮೀಸಲಾದದ್ದು. ಎರಡನೆಯದು ಇತಿಹಾಸ, ಭೂಗೋಳ, ಖಗೋಳಶಾಸ್ತ್ರ ಮತ್ತು ಇತರ ಅನೇಕ ಅಂದಿನ ಗಮನಾರ್ಹ ವಿಷಯಗಳನ್ನು ಒಳಗೊಂಡದ್ದು. ಈತ ಪತ್ರಿಕೆಯಲ್ಲಿ ಬರೆದ ಲೇಖನಗಳೆಲ್ಲ ಮುಂದೆ ಮಲಯಾಳಂ ರಾಜ್ಯ ಎನ್ನುವ ಕೃತಿಯಲ್ಲಿ ಒಟ್ಟಾಗಿ ಪ್ರಕಟಗೊಂಡವು. ಅನಂತರ ಜಾನ್ ಬನ್ಯನ್ನನ ಪಿಲ್‌ಗ್ರಿಮ್ಸ್ ಪ್ರಾಗ್ರೆಸ್ ಎಂಬ ಪ್ರಸಿದ್ಧ ಗ್ರಂಥವನ್ನು ಈತ ಸಂಚಾರಿ ಕಳುಟಿ ಪ್ರಯಾಣಂ ಎಂಬ ಹೆಸರಿನಲ್ಲಿ ಭಾಷಾಂತರಿಸಿ ಪ್ರಕಟಿಸಿದ. ಗುಂಡರ್ಟ್‌ನ ಅತಿ ಮುಖ್ಯ ಕೃತಿಯಾದ ಮಲಯಾಳಂ–ಇಂಗ್ಲಿಷ್ ನಿಘಂಟು 1872ರಲ್ಲಿ ಪ್ರಕಟಗೊಂಡಿತು. ಇದರಲ್ಲಿ 25 ವರ್ಷಗಳ ಶ್ರಮದ ಫಲವನ್ನು ಕಾಣಬಹುದು. ಎಲ್ಲ ದರ್ಜೆಯ ಜನಗಳ ಆಡುಮಾತು ಮತ್ತು ಪ್ರಚಲಿತ ಸಾಹಿತ್ಯ, ಶಾಸ್ತ್ರಗ್ರಂಥಗಳಿಂದ ಇಲ್ಲಿ ಪದಗಳನ್ನು ಆಯಲಾಗಿದೆ. ಅರ್ಥೈಸುವಲ್ಲಿ ಶಾಸ್ತ್ರೀಯ ಕ್ರಮವನ್ನು ಅನುಸರಿಸಲಾಗಿದೆ. ಈ ನಿಘಂಟಿನ ವಿಶೇಷತೆಯೆಂದರೆ ಇದರಲ್ಲಿ ಎಲ್ಲ ಉಪಭಾಷಾ ರೂಪಗಳೂ ಗ್ರಾಮ್ಯಶಬ್ದಗಳೂ ಪೋರ್ಚುಗೀಸ್, ಪಾರಸಿ, ಹಿಂದೂಸ್ತಾನಿ, ಮತ್ತು ಇತರ ಭಾಷೆಗಳಿಂದ ಎರವಲಾಗಿ ಬಂದ ಪದಗಳೂ ಸೇರಿವೆ. ಪ್ರತಿಯೊಂದು ಪದದ ವ್ಯಾಕರಣ ಸ್ವರೂಪ, ಅದರ ಸಾಮಾನ್ಯ ಅರ್ಥಗಳನ್ನು ಸಕ್ರಮವಾಗಿ ಕೊಟ್ಟು ತಿಳಿಸಲಾಗಿದೆ. ಅನೇಕ ಕಡೆ ಪದಗಳಿಗೆ ಇತರೆ ಭಾಷಾಶಬ್ದಗಳೊಂದಿಗೆ ಇರುವ ಏಕ ಮೂಲವನ್ನು ಪತ್ತೆ ಹಚ್ಚಿ ತೋರಿಸಲಾಗಿದೆ.

ಗುಂಡರ್ಟನಿಗೆ ಬಹು ಭಾಷೆಗಳ ಪರಿಚಯವಿತ್ತಲ್ಲದೆ ಆತ ಅನೇಕ ಭಾಷೆಗಳಲ್ಲಿ ಪೂರ್ಣ ಪಂಡಿತನೂ ಆಗಿದ್ದ. ಜರ್ಮನ್, ಫ್ರೆಂಚ್, ಗ್ರೀಕ್, ಲ್ಯಾಟಿನ್, ಹೀಬ್ರು, ಇಂಗ್ಲಿಷ್, ಪರ್ಷಿಯನ್, ಬಂಗಾಳಿ, ಹಿಂದೂಸ್ತಾನಿ, ತೆಲುಗು, ಮಲಯಾಳಂ, ತಮಿಳು ಇತ್ಯಾದಿ ಹದಿನೆಂಟು ಭಾಷೆಗಳನ್ನು ಆತ ಕಲಿತಿದ್ದ.

ತಲ್ಲಿಚೇರಿಯ ಇಲ್ಲಿಕ್ಕುಣ್ಣುವಿನಲ್ಲಿ ಈತ ಕಳೆದ 20 ವರ್ಷಗಳಲ್ಲಿ ಸ್ವಲ್ಪ ಕಾಲ ಕರ್ನಾಟಕ ಹಾಗೂ ಮಲಯಾಳಂ ಜಿಲ್ಲೆಗಳಲ್ಲಿ ಶಾಲಾ ಇನ್‌ಸ್ಪೆಕ್ಟರಾಗಿ ಕೆಲಸ ಮಾಡಿದ. ಆ ಸಮಯದಲ್ಲಿ ಬೈಬಲ್ ಗ್ರಂಥವನ್ನು ಮಲಯಾಳಂನಲ್ಲಿ ವೇದಪುಸ್ತಕ ಪರಿಭಾಷಾ ಎಂಬ ಹೆಸರಿನಲ್ಲಿ ಅನುವಾದ ಮಾಡಿದ. ಹಾಗೆ ಮಾಡುವಾಗ ಹಳೆಯ ಒಡಂಬಡಿಕೆಯನ್ನು ಗ್ರೀಕ್‌ನಿಂದಲೂ ಹೊಸ ಒಡಂಬಡಿಕೆಯನ್ನು ಹೀಬ್ರುವಿನಿಂದಲೂ ನೇರವಾಗಿ ಈತ ಅವಲಂಬಿಸಿದ್ದಾನೆ. ಆಗ ಈತ ಬಳಸಿದ ಹೀಬ್ರು ಮತ್ತು ಗ್ರೀಕ್ ನಿಘಂಟುಗಳನ್ನು ಇಂದೂ ತಲ್ಲಿಚೇರಿಯ ಇಲ್ಲಿಕ್ಕುಣ್ಣುವಿನ ಇವನ ನಿವಾಸದಲ್ಲಿ ಸಂಗ್ರಹಿಸಿಡಲಾಗಿದೆ.

1843ರಲ್ಲಿ ಗುಂಡರ್ಟ್ ಕೇರಳೋಲ್ ಎಂಬ ಒಂದು ಕೃತಿಯನ್ನು ಪ್ರಕಟಿಸಿದ. ಅನೇಕ ತಾಳೆಗರಿಯ ಹೊತ್ತಗೆಗಳನ್ನೆಲ್ಲ ಅಭ್ಯಸಿಸಿ ಅವುಗಳನ್ನು ಇದರಲ್ಲಿ ವಿಮರ್ಶಿಸಲಾಗಿದೆ. ಇದಾದ ಎರಡುವರ್ಷಗಳ ಒಳಗೆ ರಂಜೊಗೊ ಮಾಲ ಎಂಬ ಹೆಸರಿನಲ್ಲಿ ಒಂದು ಸಾವಿರ ಗಾದೆಗಳ ಸಂಕಲನವೊಂದನ್ನು ಈತ ಹೊರತಂದ. 1851ರ ವೇಳೆಗೆ ಮಲಯಾಳಂ ಭಾಷಾ ವ್ಯಾಕರಣಂ ಗ್ರಂಥದ ಒಂದು ಭಾಗವನ್ನು ಪ್ರಕಟಿಸಿದ. 1860ರಲ್ಲಿ ಮಲಯಾಳಂ ವ್ಯಾಕರಣಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ರೂಪದ ಪುಸ್ತಕವೊಂದನ್ನು ಬೆಳಕಿಗೆ ತಂದ. 1868ರಲ್ಲಿ ಸಂಪೂರ್ಣ ವ್ಯಾಕರಣದ ತಿದ್ದಿದ ಆವೃತ್ತಿ ಹೊರಬಂತು.

ಗುಂಡರ್ಟ್ ಜರ್ಮನಿಯಲ್ಲಿ ನಿಧನಹೊಂದಿದ. ಈತನ ಹೆಂಡತಿ ಇವನಿಗಿಂತ ಮೊದಲೇ ಅಂದರೆ 1855ರಲ್ಲಿ ನಿಧನಳಾಗಿದ್ದಳು. ತನ್ನ ಅಂತಿಮ ಕಾಲದವರೆಗೂ ಒಂದಲ್ಲ ಒಂದು ಭಾಷೆಗೆ ಗುಂಡರ್ಟ್ ಸೇವೆ ಸಲ್ಲಿಸುತ್ತಲೇ ಬಂದ. ಭಾರತದಿಂದ ಜರ್ಮನಿಗೆ ತೆರಳಿದ ಮೇಲೂ ಅಲ್ಲಿಂದ ಎರಡು ಮೂರು ಪತ್ರಿಕೆಗಳನ್ನು ಈತ ನಡೆಸುತ್ತಿದ್ದ. (ಎಸ್.ಎಸ್.ಆರ್.ಐ.)

**ಗುಂಡಿಗೆ ಮತ್ತು ಪುಪ್ಪುಸಗಳ ಶಸ್ತ್ರಚಿಕಿತ್ಸೆ :** ಯಾವುದೇ ಬಾಹ್ಯ ಉಪಕರಣಕ್ಕೆ ಅಪ್ರವೇಶ್ಯವಾಗಿದ್ದ ಎದೆಗೂಡಿನ ಒಳಭಾಗ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದು ಶಸ್ತ್ರಗಳಲ್ಲೂ ಶಸ್ತ್ರಚಿಕಿತ್ಸಾ ತಂತ್ರದಲ್ಲೂ ಬಲು ನಾಜೂಕಾದ ಪ್ರಗತಿ ಸಿದ್ಧಿಸಿದ ಬಳಿಕವೇ ಗುಂಡಿಗೆಯ ಮೇಲಿನ ಶಸ್ತ್ರಚಿಕಿತ್ಸೆ ಬಳಕೆಗೆ ಬಂದದು 20ನೆಯ ಶತಮಾನದಲ್ಲಿ; ಗಮನಾರ್ಹವಾಗಿ 1939ರ ತರುವಾಯ.

ಗುಂಡಿಗೆ ಮತ್ತು ಮಹಾರಕ್ತನಾಳಗಳ ಶಸ್ತ್ರಚಿಕಿತ್ಸೆ : ಗುಂಡಿಗೆಗೆ ಪರಕೀಯ ವಸ್ತುವಿನ ಪ್ರವೇಶ ಅಥವಾ ಚೂಪಾದ ವಸ್ತುವಿನಿಂದಾಗುವ ಗಾಯ ಸಾಧಾರಣವಾಗಿ ಪ್ರಾಣಾಂತಿಕವೇ ಆಗುತ್ತದೆ. ಗುಂಡಿಗೆ ಪೊರೆಯಲ್ಲಿ ರಕ್ತ ತುಂಬಿಕೊಂಡು ಗುಂಡಿಗೆಯ ಅವಿಚ್ಛಿನ್ನ ಬಡಿತಕ್ಕೆ ಅಡಚಣೆ ಉಂಟಾಗುವುದೇ ಇದರ ಕಾರಣ. ಒಂದು ವೇಳೆ ಗುಂಡಿಗೆಗೆ ಗಾಯವಾದ ಕೂಡಲೇ ಸಾವು ಸಂಭವಿಸದಿದ್ದರೆ ಅದರ ಚುಚ್ಚುಗಾಯಗಳನ್ನು ಹೊಲಿದು ಸರಿಪಡಿಸುವವರೆಗೂ ಪೊರೆಯಲ್ಲಿ ಸೇರುವ ರಕ್ತವನ್ನು ತೆಗೆದುಹಾಕುವುದರ ಮೂಲಕ ಅದರ ಕಾರ್ಯ ಮುಂದುವರಿಯುವಂತೆ ಮಾಡಬಹುದು. ಈ ದಿಸೆಯಲ್ಲಿ, ಎಂದರೆ ಗುಂಡಿಗೆಯ ಶಸ್ತ್ರಚಿಕಿತ್ಸೆಯಲ್ಲಿ ಮೊದಲ ಯಶಸ್ಸು ವರದಿಯಾದದ್ದು 1896ರಲ್ಲಿ. ಆ ಬಳಿಕ ಇಂಥ ವರದಿಗಳು ವಿಪುಲ ಸಂಖ್ಯೆಯಲ್ಲಿ ಬಂದಿವೆ. 1940ರವರೆಗೂ ಗುಂಡಿಗೆಯ ಎಲ್ಲ ಗಾಯಗಳಿಗೂ ಹೊಲಿಗೆಯೊಂದೇ ಸರಿಯಾದ ಕ್ರಮ ಎಂದು ಭಾವಿಸಲಾಗಿತ್ತು. 1943ರ ವೇಳೆಗೆ ಹೊಸದೊಂದು ಶಸ್ತ್ರಚಿಕಿತ್ಸೆಕ್ರಮವನ್ನು ಎ. ಬ್ಲಲಾಕ್ ಮತ್ತು ಎ. ಎಂ. ರ್‍ಯಾವಿಚ್ ಸೂಚಿಸಿದರು. ಅವರ ಚಿಂತನೆ ಹರಿದಿದ್ದು ಹೀಗೆ. ಗುಂಡಿಗೆಯ ಗಾಯದಿಂದ ನಿಧಾನವಾಗಿ ರಕ್ತ ಸೋರಿಹೋಗಿ ಗುಂಡಿಗೆಗೆ ರಕ್ತದ ಮರಳಿಕೆಗೆ ಸಾಧ್ಯವಾಗದ್ದರಿಂದ ವ್ಯಕ್ತಿ ಸಾಯುತ್ತಾನೆ. ಈಗ ಗಾಯದಿಂದ ಒಸರುವ ರಕ್ತವನ್ನು ಯಾವುದೇ ವಿಧಾನದಿಂದ ಗುಂಡಿಗೆಗೆ ಮರಳಿಸುವುದು ಸಾಧ್ಯವಾದರೆ ಗಾಯವನ್ನು ಹೊಲಿಯದೇ ಚಿಕಿತ್ಸೆಯನ್ನು ಮುಂದುವರಿಸಬಹುದು; ಗಾಯದಿಂದಾಗುವ ರಕ್ತಸ್ರಾವ ಅಗಾಧವಾಗಿದ್ದು ಅದನ್ನು ತಡೆಗಟ್ಟಲು ಸಾಧ್ಯವೇ ಆಗದಾಗ ಮಾತ್ರ ಹೊಲಿಗೆ ಹಾಕಿ ಗಾಯವನ್ನು ಮುಚ್ಚಬೇಕು.

ಗುಂಡಿಗೆ ಪೊರೆಯೊಳಗಿರುವ ದೊಡ್ಡ ರಕ್ತನಾಳಗಳ ಚುಚ್ಚು ಗಾಯಗಳಿಂದ ಸಾವು ಉಂಟಾಗುವ ಸಾಧ್ಯತೆ ಹೆಚ್ಚು. ಏಕೆಂದರೆ ಗುಂಡಿಗೆ ಭಿತ್ತಿಯ ಗಾಯಗಳು ಮುಚ್ಚಿಕೊಳ್ಳುವಂತೆ ರಕ್ತನಾಳದ ಗಾಯಗಳು ಮುಚ್ಚಿಕೊಳ್ಳುವುದಿಲ್ಲ. ಇದರಿಂದ ಗುಂಡಿಗೆ ಮೇಲಿನ ಪೊರೆಯೊಳಗೆ ರಕ್ತ ಬೇಗ ಬೇಗ ತುಂಬಿಕೊಂಡು ಗುಂಡಿಗೆಯ ಕೆಲಸಕ್ಕೆ ಅಪಾಯಕರ ಅಡ್ಡಿಯನ್ನುಂಟುಮಾಡುತ್ತದೆ. ಪರಕೀಯ ವಸ್ತುಗಳು ಗುಂಡಿಗೆ ಪೇಶಿಯಲ್ಲಿ ಸಿಕ್ಕಿಕೊಂಡು ಅನಿರ್ದಿಷ್ಟಕಾಲ ಅಲ್ಲಿರಬಹುದು. ಗುಂಡಿಗೆ ಭಿತ್ತಿಯ ರಕ್ತನಾಳಗಳಲ್ಲಿ ರಕ್ತಚಲನೆಗೆ ಅಡ್ಡಿಯಾಗದೆ ಪರಕೀಯ ವಸ್ತು ದೊಡ್ಡದಾಗದಿದ್ದಲ್ಲಿ ಗುಂಡಿಗೆಯ ಕೆಲಸಕ್ಕೆ ಚ್ಯುತಿಬರುವುದಿಲ್ಲ. ದೊಡ್ಡ ವಸ್ತುಗಳಿಂದ ಹಾನಿಯಿರುವುದರಿಂದ ಅವನ್ನು ತೆಗೆದುಹಾಕಬೇಕು. ಈ ಶಸ್ತ್ರಕಾರ್ಯದಲ್ಲಿ ಸಾಧಾರಣವಾಗಿ ಹೆಚ್ಚು ಅಪಾಯವಿಲ್ಲ.

ಹೃದಯ ರಕ್ತನಾಳಗಳ ಹುಟ್ಟುವಿಕಲತೆಗಳು. 1 ಮುಚ್ಚಿಕೊಳ್ಳದ ಡಕ್ಟಸ್ ಆರ್ಟೀರಿಯೋಸಸ್: ಇದು ಗರ್ಭಾವ್ಯಸ್ಥೆಯಲ್ಲಿ ಮಹಾಪಧಮನಿ ಮತ್ತು ಫುಪ್ಪುಸ ಅಪಧಮನಿಗಳನ್ನು ಸೇರಿಸುವ ನಾಳ. ಗರ್ಭಸ್ಥ ಶಿಶುವಿನಲ್ಲಿ ಫುಪ್ಪುಸಗಳಿಗೆ ಹೋಗದೆ ಮಹಾಪಧಮನಿಯನ್ನು ಸೇರಲು ಈ ನಾಳಗಳಿರುತ್ತವೆ. ಜನನದ ಬಳಿಕ ಉಸಿರಾಟ ಪ್ರಾರಂಭಿಸಿದ ಮೇಲೆ ಇದು ಮುಚ್ಚಿಕೊಳ್ಳುತ್ತದೆ. ಹೀಗಾಗದೆ ನಾಳ ತೆರೆದಿದ್ದರೆ ರಕ್ತ ಫುಪ್ಪುಸಗಳಿಗೆ ಸಾಕಷ್ಟು ಹೋಗದೆ ದೇಹಕ್ಕೆ ಆಕ್ಸಿಜನ್ನಿನ ಕೊರತೆಯಾಗಿ ಶಿಶುವಿನ ಬಣ್ಣ ನೀಲಿಯಾಗಿ ಗುಂಡಿಗೆಯ ಕಾರ್ಯ ಹೆಚ್ಚುತ್ತದೆ. ಆಗ ಅದು ದೊಡ್ಡದಾಗುತ್ತದೆ. ಕೂಸು ಬೆಳೆದಂತೆ ಹೆಚ್ಚು ಆಟವಾಡಲಾರದು: ಆಡಿದರೆ ಅದಕ್ಕೆ ಉಸಿರುಕಟ್ಟಿದಂತಾಗುವುದು. ಕೆಲವು ವೇಳೆ ರೋಗಕ್ರಿಮಿಗಳು ಈ ನಾಳದಲ್ಲಿ ಬೆಳೆದು ರಕ್ತದ ನಂಜು ಉಂಟಾಗುತ್ತದೆ. ನಾಳ ಉಬ್ಬುತ್ತಾ ಒಂದು ದಿನ ಒಡೆದು ಮಗು ಸಾಯಬಹುದು. ಆದರೆ ಹೀಗಾಗವುದು ಅಪರೂಪ. ಮುಚ್ಚಿಕೊಳ್ಳದ ಡಕ್ಟಸ್ ಆರ್ಟೀರಿಯೋಸಸ್ಸನ್ನು

ಶಸ್ತ್ರಕ್ರಿಯೆಯಿಂದ ಮುಚ್ಚಬೇಕೆಂದು 1907ರಲ್ಲೇ ಸೂಚನೆ ಬಂದಿದ್ದರೂ ಅದು ಸಾಧ್ಯವಾಗಲಿಲ್ಲ. ಈ ಶಸ್ತ್ರಕ್ರಿಯೆ ಯಶಸ್ವಿಯಾಗಿ ನಡೆದದ್ದು 1939ರಲ್ಲಿ. ಅಂದಿನಿಂದ ಇದು ಅನೇಕ ಕಡೆ ತೃಪ್ತಿಕರವಾಗಿ ನಡೆದಿದೆ. ಈ ನಾಳವನ್ನು ದಾರದಿಂದ ಕಟ್ಟಿದರೆ ಅಥವಾ ಕತ್ತರಿಸಿ ಹೊಲಿದರೆ ಫುಪ್ಪಸಗಳಲ್ಲಿ ರಕ್ತಚಲನೆ ಸಮರ್ಪಕವಾಗಿ ಏರುವುದು ನಿಂತು ಎಲ್ಲವೂ ಸರಿಹೋಗುತ್ತವೆ. ಈ ವೇಳೆಗೆ ಗುಂಡಿಗೆ ಸರಿಹೋಗಲಾರದಷ್ಟು ಕೆಡದಿದ್ದರೆ ಆಯುಷ್ಯ ಕಡಿಮೆಯಾಗುವುದಿಲ್ಲ.

2 ಫ್ಯಾಲಟ್‌ನ ಚತುಷ್ಟಯ (ಫ್ಯಾಲಟ್ಸ್ ಟೆಟ್ರಾಲಜಿ) : ಎಂದರೆ ಹುಟ್ಟಿನಿಂದ ನಾಲ್ಕು ಆಕ್ರಮಗಳಿರುತ್ತವೆ. ಈ ರೋಗವನ್ನು ನೀಲಿ ಶಿಶುವಿನ ರೋಗವೆನ್ನುತ್ತಿದ್ದರು. ಇದರ ವಿವರಗಳು ಹೀಗಿವೆ. (1) ಕಿರಿದಾದ ಫುಪ್ಪಸ ಅಪಧಮನಿ. (2) ಎಡಬಲ ಹೃತ್ಕುಕ್ಷಿಗಳ ನಡುವೆ ತಡಿಕೆಯಿಲ್ಲದಿರುವುದು ಅಥವಾ ಅದರಲ್ಲಿ ತೂತಿರುವುದು. (3) ಎರಡೂ ಹೃತ್ಕುಕ್ಷಿಗಳಿಂದ ರಕ್ತ ಅಗಲವಾದ ಮಹಾಪಧಮನಿಯೊಳಗೆ ನುಗ್ಗುವುದು. (4) ಬಲಹೃತ್ಕುಕ್ಷಿ ಭಿತ್ತಿ ಹೆಚ್ಚು ದಪ್ಪವಾಗುವುದು. 1945ರಲ್ಲಿ ಬ್ಲಲಾಕ್ ಮತ್ತು ಟಾಸಿಗ್ ಎಂಬುವರು ಇದಕ್ಕೆ ನಡೆಸಿದ ಶಸ್ತ್ರಕ್ರಮ ಶಸ್ತ್ರವೈದ್ಯದ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲಾಯಿತು. ಮೇಲೆ ಹೇಳಿರುವ ನಾಲ್ಕು ಆಕ್ರಮಗಳ ಮುಖ್ಯ ಪರಿಣಾಮ ಫುಪ್ಪಸದಲ್ಲಿ ಕಡಿಮೆ ರಕ್ತ ಚಲನೆ. ಬ್ಲಲಾಕ್ ಕ್ರಮದಲ್ಲಿ ತೋಳಿನ ರಕ್ತನಾಳವನ್ನು (ಸಿಸ್ಟೆಮಿಕ್ ಆರ್ಟರಿ) ಫುಪ್ಪಸ ಅಪಧಮನಿಯ (ಪಲ್ಮನರಿ ಆರ್ಟರಿ) ಒಂದು ಶಾಖೆಗೆ ಹೊಲಿಯುವುದರಿಂದ ಫುಪ್ಪಸ ಅಪಧಮನಿಯ ಮೂಲದಲ್ಲಿ ರಕ್ತಕ್ಕಿರುವ ಅಡಚಣೆ ಪರಿಣಾಮ ತಪ್ಪಿದಂತಾಗಿ, ರಕ್ತ ತೋಳಿನ ರಕ್ತನಾಳದಿಂದ ಫುಪ್ಪಸಗಳಿಗೆ ನುಗ್ಗುತ್ತದೆ. ಇದೇ ಉದ್ದೇಶ್ಯದಿಂದ ಬೇರೆ ತಂತ್ರಗಳನ್ನೊಳಗೊಂಡ ಚಿಕಿತ್ಸೆಗಳು 1946ರಲ್ಲಿ ವರದಿಯಾದವು. ಒಂದು ವಿಶೇಷ ರೀತಿಯ ಉಪಕರಣದಿಂದ ಫುಪ್ಪಸ ರಕ್ತನಾಳ ಮತ್ತು ಅರ್ಯೋಟಗಳನ್ನು ಕೂಡಿಸುವುದು ಈ ತಂತ್ರಗಳಲ್ಲೊಂದು. ಫ್ಯಾಲಟ್ ಚತುಷ್ಟಯದಲ್ಲಿ ಶಸ್ತ್ರಪ್ರಯೋಗದ ಫಲಗಳು ಅದ್ಭುತ ಮತ್ತು ತೃಪ್ತಿಕರ. ಪ್ರಯೋಗವಾದ ಕೂಡಲೆ ಚರ್ಮದ ನೀಲಿಬಣ್ಣ ಮಾಯವಾಗಿ ನೈಸರ್ಗಿಕ ಬಣ್ಣ ಬರುತ್ತದೆ; ಶ್ರಮಸಹಿಷ್ಣುತೆ ಹೆಚ್ಚುತ್ತದೆ ಮತ್ತು ರಕ್ತದಲ್ಲಿ ಆಕ್ಸಿಜನ್ ಪ್ರಮಾಣ ಸರಿಹೋಗುತ್ತದೆ. ಈ ಶಸ್ತ್ರವೈದ್ಯದ ಅಪಾಯ ಕೇವಲ ಶೇ.10ರ ವರೆಗೆ. ಇದರ ಫಲಿತಾಂಶಗಳು ತೃಪ್ತಿಕರವಾಗಿವೆ. ಗುಂಡಿಗೆ–ಫುಪ್ಪಸ ಯಂತ್ರದಿಂದ ಕೃತಕವಾಗಿ ರಕ್ತಪರಿಚಲನೆ ಏರ್ಪಡಿಸಿ ನೇರವಾಗಿ ಗುಂಡಿಗೆಯ ಮೇಲೆ ಶಸ್ತ್ರಚಿಕಿತ್ಸೆ ನಡೆಸಿ ಎಡಬಲಹೃತ್ಕುಕ್ಷಿ ಮಧ್ಯೆ ತಡಿಕೆಯನ್ನು ಕೃತಕವಾಗಿ ಸೃಷ್ಟಿಸುವುದು ಮತ್ತು ಅಗತ್ಯವಾದ ಬದಲಾವಣೆಯನ್ನು ಮಾಡುವುದು ಹೆಚ್ಚು ತೃಪ್ತಿಕರವಾದ ಚಿಕಿತ್ಸೆಯಾಗಿದೆ. ಆದರೆ ಇದು ಸ್ವಲ್ಪ ಅಪಾಯಕಾರಿ ಕ್ರಮ.

3 ಫುಪ್ಪಸ ಅಪಧಮನಿಯ ಕಿರಿದಾದ ಮೂಲ: ಇದು ಹೃದಯ ಮತ್ತು ರಕ್ತನಾಳಗಳ ಇತರ ಕುಂದುಗಳಿಲ್ಲದೆ ಒಂಟಿಯಾಗಿರಬಹುದು. ಇದಿರುವ ಹೆಚ್ಚು ರೋಗಿಗಳಲ್ಲಿ ಹೃತ್ಕರ್ಣಗಳನ್ನು ಬೇರ್ಪಡಿಸುವ ತಡಿಕೆಯಲ್ಲಿ ರಂಧ್ರವಿರುತ್ತದೆ. ಈ ರೋಗದ ಕೆಟ್ಟ ಪರಿಣಾಮಗಳು ಫ್ಯಾಲೋನ ಚತುಷ್ಟಯದಿಂದಾದಂತಿರುತ್ತವೆ. ಏಕೆಂದರೆ ಫುಪ್ಪಸಗಳ ಮೂಲಕ ಆಕ್ಸಿಜನ್ ರಕ್ತವನ್ನು ಸಾಕಷ್ಟು ಸೇರಲಾರದು. ಈ ಸಮಸ್ಯೆಗೆ ನೇರ ಪರಿಹಾರವನ್ನು 1948ರಲ್ಲಿ ಲಂಡನಿನ ಆರ್. ಸಿ ಬ್ರಾಕ್ ಎಂಬಾತ ಕಂಡುಹಿಡಿದ. ಒಂದು ವಿಶೇಷ ರೀತಿಯ ಕತ್ತಿಯಿಂದ ಫುಪ್ಪಸ ಅಪಧಮನಿಯ ಮೂಲವನ್ನು ದೊಡ್ಡದು ಮಾಡುವುದೇ ಈ ಪರಿಹಾರ. ಮೂಲದಲ್ಲಿ ಮಾತ್ರ ಕಿರಿದಾಗಿರುವ ಫುಪ್ಪಸ ಅಪಧಮನಿ ಇರುವ ಫ್ಯಾಲಟ್‌ನ ಚತುಷ್ಟಯ ರೋಗಿಗಳಲ್ಲೂ ಈತನ ವಿಧಾನವನ್ನು ಉಪಯೋಗಿಸಲಾಗಿದೆ. ಫುಪ್ಪಸ ಅಪಧಮನಿ ಕಿರುಮೂಲವನ್ನು ಹೀಗೆ ಹಿಗ್ಗಿಸುವುದರಿಂದ ಬಲ ಹೃತ್ಕುಕ್ಷಿಯಿಂದ ಫುಪ್ಪಸ ರಕ್ತನಾಳಕ್ಕೆ ಸಾಕಷ್ಟು ರಕ್ತ ನುಗ್ಗಿ ಫುಪ್ಪಸಗಳಲ್ಲಿ ರಕ್ತ ಪರಿಚಲನೆ ಸಮರ್ಪಕವಾಗುವುದರಿಂದ ಫಲಿತಾಂಶ ಅದ್ಭುತವಾಗಿರುವುದು. ದೇಹದೋಷ್ಣತೆಯನ್ನು ತಗ್ಗಿಸಿ ಗುಂಡಿಗೆಯನ್ನು ನೋಡಲು ಸಾಧ್ಯವಾಗುವಂತೆ ಎದೆಯನ್ನು ಛೇದಿಸಿ ಗುಂಡಿಗೆ ಮತ್ತು ನಾಳಗಳ ಮೇಲೆ ನೇರಪ್ರಯೋಗ ನಡೆಸುವುದರಿಂದ ಶಸ್ತ್ರಕಾರ್ಯಗಳು ಹೆಚ್ಚು ತೃಪ್ತಿಕರವಾಗುತ್ತವೆ. ಇಲ್ಲಿ ಅಪಾಯ ಕಡಿಮೆ. ಹೃತ್ಕರ್ಣಗಳ ನಡುವೆ ಇರುವ ತೂತನ್ನು ಮುಚ್ಚಿದ ಕೂಡಲೆ ನೀಲಿಬಣ್ಣ ಮಾಯವಾಗಿ ಬಲಹೃತ್ಕರ್ಣ ಮತ್ತು ಬಲಹೃತ್ಕುಕ್ಷಿಗಳ ಮೇಲೆ ಬಿದ್ದಿರುವ ಕೆಲಸದ ಭಾರ ತಗ್ಗುತ್ತದೆ.

4 ಮಹಾಪಧಮನಿಯ ಕೊಆರ್ಕ್ಟೇಷನ್: ಎಂದರೆ ಡಕ್ಟಸ್ ಆರ್ಟೀರಿಯೋಸಸ್ ಸೇರುವಡೆ ಮಹಾಪಧಮನಿಯು ಚಿಕ್ಕದಾಗಿದ್ದು ಜನನದ ಬಳಿಕವೂ ಹಾಗೆಯೇ ಚಿಕ್ಕದಾಗಿರುವುದು. ಇದರಿಂದ ರಕ್ತ ಒತ್ತಡ ತಲೆತೋಳುಗಳಲ್ಲಿ ಹೆಚ್ಚು ಮತ್ತು ಮುಂಡ ಕಾಲುಗಳಲ್ಲಿ ಕಡಿಮೆ ಇರುತ್ತದೆ. ಚಿಕ್ಕದಾಗಿರುವ ಅರ್ಯೋಟ ಭಾಗದ ಮೇಲೆ ಕೆಳಗೆ ಇರುವ ಭಾಗಗಳನ್ನು ಸಂಬಂಧಿಸುವ ರಕ್ತನಾಳಗಳು ಹಿಗ್ಗಿ ದೊಡ್ಡವಾದರೂ ರಕ್ತದ ಒತ್ತಡಗಳ ವ್ಯತ್ಯಾಸವಿದ್ದೇ ಇರುತ್ತದೆ. ಇದರಿಂದ ಗುಂಡಿಗೆಗೆ ಹೆಚ್ಚು ಶ್ರಮವಾಗುವುದು. ರಕ್ತನಾಳಗಳು ಉಬ್ಬಿಕೊಳ್ಳುವುದು ಮತ್ತು ಮಿದುಳಿನಲ್ಲಿ ರಕ್ತಸ್ರಾವವಾಗುವುದು ಸಾಮಾನ್ಯ ಪರಿಣಾಮಗಳು. 1945ರಲ್ಲಿ ಸ್ಟಾಕೋಮಿನ ಸಿ. ಕ್ರಾಫರ್ಡ್ ಎಂಬಾತ ಚಿಕ್ಕದಾಗಿರುವ ಅರ್ಯೋಟ ಭಾಗವನ್ನು ಕತ್ತರಿಸಿಹಾಕಿ ಮಿಕ್ಕ ಅರ್ಯೋಟ ಭಾಗಗಳನ್ನು ಕೂಡಿಸಿ ಹೊಲಿಯುವ ತಂತ್ರವನ್ನು ಪ್ರಪಂಚಕ್ಕೆ ತಿಳಿಸುವವರೆಗೂ ಚಿಕ್ಕ ಅರ್ಯೋಟ ಭಾಗವಿರುವವರ ಆಯುಷ್ಯ ತೀರ ಕಡಿಮೆಯೇ ಇತ್ತು. ಈ ವೈದ್ಯದಲ್ಲಿ ಅಪಾಯ ಶೇ.5 ಕ್ಕಿಂತ ಕಡಿಮೆ.

5 ತಡಿಕೆಗಳ ಕೊರತೆಗಳು : ಬಲ ಎಡ ಹೃತ್ಕರ್ಣಗಳಿಗೂ ಬಲ ಹೃತ್ಕುಕ್ಷಿಗಳಿಗೂ ಸಂಬಂಧವನ್ನು ಕಲ್ಪಿಸುತ್ತವೆ. ಭ್ರೂಣಾವಸ್ಥೆಯಲ್ಲಿ ಈ ತಡಿಕೆಗಳು ಪೂರ್ತಿಯಾಗಿ ಬೆಳೆಯದೆ ಇರುವುದರಿಂದ ಇವು ಆಗುತ್ತವೆ. ಹೃತ್ಕರ್ಣಗಳ ನಡುವೆ ಇರುವ ತಡಿಕೆ ಕೊರತೆಗಿಂತಲೂ ಹೃತ್ಕುಕ್ಷಿಗಳ ನಡುವೆ ಇರುವ ತಡಿಕೆಯ ಕೊರತೆಯಿಂದ ಹೆಚ್ಚು ಕೆಡಕು. ಇದನ್ನು ಶಸ್ತ್ರವೈದ್ಯರಿಂದ ಸರಿಪಡಿಸುವುದೂ ಕಷ್ಟ. ಈ ಕೊರತೆಯಿಂದಾಗಿ ಗುಂಡಿಗೆ ಸಾಧಾರಣವಾಗಿ ಹೆಚ್ಚು ಶ್ರಮದಿಂದ ದಣಿದು ಕೊನೆಗೆ ಪೂರ್ತಿ ಸೋಲುವುದು. 1950ರ ದಶಕದಲ್ಲಿ ಯಶಸ್ವೀ ಶಸ್ತ್ರ ಚಿಕಿತ್ಸೆಯ ವರದಿಗಳು ಕೆಲವಾಗಿದ್ದರೂ ಈ ಕೊರತೆಗಳನ್ನು ಶಸ್ತ್ರಗಳಿಂದ ಸರಿಪಡಿಸುವ ವಿಧಾನಗಳು ಖಚಿತವಾಗಿ ನಿರ್ಧರಿಸಲ್ಪಟ್ಟಿಲ್ಲ. ಗುಂಡಿಗೆಯನ್ನು ಕೊಯ್ಯದೆಯೇ ಸರಿಪಡಿಸುವ ವಿಧಾನವನ್ನು ಮೊತ್ತಮೊದಲು ವರದಿಯಾದದ್ದು 1952ರಲ್ಲಿ. ಪೂರ್ತಿ ಅಥವಾ ಸ್ವಲ್ಪ ಗುಂಡಿಗೆಯನ್ನು ಬಿಚ್ಚಿ ನೇರವಾಗಿ ಕಣ್ಣಿನಿಂದ ನೋಡುತ್ತ ಸರಿಪಡಿಸುವ ವಿಧಾನಗಳನ್ನು ಉಪಯೋಗಿಸಲಾಯಿತು. ತಡಿಕೆ ತೂತುಗಳನ್ನು ಶಸ್ತ್ರಗಳಿಂದ ಮುಚ್ಚುವದರಿಂದಾಗುವ ಪ್ರಯೋಜನ ಪ್ರಶಸ್ತವಾಗಿರಬಹುದು. ಆದರೆ ಹೊಲಿಯಲು ಸಾಕಷ್ಟು ಆಧಾರವಿಲ್ಲದಂಥ ದೊಡ್ಡ ತೂತುಗಳನ್ನು ಸರಿಪಡಿಸುವುದರಿಂದ ಫಲ ತೃಪ್ತಿಕರವಾಗಿಲ್ಲ. ಈ ಶಸ್ತ್ರಚಿಕಿತ್ಸೆಯ ಕಾಲದಲ್ಲಿ ಉಪಯುಕ್ತವಾದ ಅಂಶಗಳಿವು : (1) ದೇಹೋಷ್ಣತೆಯನ್ನು $30^0$ ಸೆಂ.ವರೆಗೆ ತಗ್ಗಿಸುವುದು. (2) ದೇಹಬಾಹಿರ ರಕ್ತಚಲನೆ ಅಂದರೆ ಕೊಳವೆಗಳ ಸಹಾಯದಿಂದ ಆಕ್ಸಿಜನ್ ವಿರಳ ರಕ್ತವನ್ನು ಮಹಾಭಿಧಮನಿಗಳಿಂದ ಹೊರತೆಗೆದು ಆಕ್ಸಿಜನನ್ನು ಕೊಳವೆಗಳ ಸಹಾಯದಿಂದ ಅದರೊಳಗೆ ಗುಳುಗುಳು ಎಂದು ಪ್ರವಹಿಸಿ ಪುನಃ ಅಪಧಮನಿಗಳಿಗೆ ಪಂಪ್ ಮಾಡುವುದು ; ಇದರಿಂದ ರಕ್ತ ಗುಂಡಿಗೆ ಮತ್ತು ಫುಪ್ಪಸಗಳಿಗೆ ಹೋಗದಂತಾಗಿ ಗುಂಡಿಗೆ ಮೇಲಿನ ಶಸ್ತ್ರಪ್ರಯೋಗದಿಂದ ರಕ್ತನಷ್ಟವಾಗದಂತೆ ತಡೆಯಲು ಸಾಧ್ಯ. ಈ ರೀತಿ ಗುಂಡಿಗೆಯನ್ನು ಬಿಚ್ಚಿ ತಡಿಕೆ ತೂತುಗಳನ್ನು ನೇರದೃಷ್ಟಿಯಲ್ಲಿ ಸರಿಪಡಿಸುವುದು 1956ರಿಂದ ಈಚೆಗೆ ಉತ್ತಮ ವಿಧಾನವಾಗಿದೆ.

ಜನನಾಂತರ ಉಂಟಾಗುವ ಕುಂದುಗಳು. 1 ಎಡ ಅರೆಚಂದ್ರಾಕಾರದ ಕವಾಟ ಮತ್ತು ಮೈಟ್ರಲ್ ಕವಾಟಗಳ ಅಶಕ್ತತೆ ಇಲ್ಲವೆ ಚಿಕ್ಕದಾಗುವಿಕೆ: ಕೀಲು ನೋವು ಜ್ವರ (ರ್‍ಯೂಮ್ಯಾಟಿಕ್ ಫೀವರ್) ಬಂದಾಗ ರೋಗಾಣುಗಳ ಮಹಾಪಧಮನಿ ಮತ್ತು ಮೈಟ್ರಲ್ ಕವಾಟಗಳಲ್ಲಿ ರೋಗವನ್ನು ಉಂಟುಮಾಡುವುದರಿಂದ ಕವಾಟಗಳು ಚಿಕ್ಕವಾಗಿ ರಕ್ತ ನುಗ್ಗುವಿಕೆಗೆ ಅಡಚಣೆ, ಇಲ್ಲವೆ ದಳಗಳ ನಾಶ ಅಥವಾ ವಿಕಲತೆ ಉಂಟಾಗಿ ಅವು ಸರಿಯಾಗಿ ಕೆಲಸ ಮಾಡದೆ ರಕ್ತ ಮೈಟ್ರಲ್ ಕವಾಟದ ಮೂಲಕ ಎಡಹೃತ್ಕುಕ್ಷಿಯಿಂದ ಎಡಹೃತ್ಕರ್ಣಕ್ಕೆ ಇಲ್ಲವೆ ಮಹಾಪಧಮನಿಯಿಂದ ಎಡಹೃತ್ಕುಕ್ಷಿಗೆ ಹಿನ್ನುಗ್ಗುವಂತಾಗುವುದು. ಇದರಿಂದಾಗುವ ಮುಖ್ಯ ಕೆಡುಕೆಂದರೆ ಗುಂಡಿಗೆಗೆ ಹೆಚ್ಚು ಶ್ರಮವಾಗಿ ಕೊನೆಗೆ ಅದು ಪೂರ್ತಿ ಸೋತು ನಿಂತು ಹೋಗುವುದು. ಮೈಟ್ರಲ್ (ದ್ವಿದಳ) ಕವಾಟ ಚಿಕ್ಕದಾಗಿರುವುದರ ನಿರ್ಣಯ ಮತ್ತು ಇದನ್ನು ಶಸ್ತ್ರದಿಂದ ಸರಿಪಡಿಸುವ ಪ್ರಯತ್ನದ ವರದಿ 1922ರಲ್ಲೇ ಆಗಿದ್ದರೂ 1948ರಲ್ಲಿ ಕಾಮಿಶ್ಯೂರಾಟಮಿ ಎಂಬ ಶಸ್ತ್ರವಿಧಾನದ ಆವಿಷ್ಕಾರವಾಗುವವರಗೆ ನಿಜವಾದ ತೃಪ್ತಿಕರ ಮಾರ್ಗವಿರಲಿಲ್ಲ. ಬೆರಳು ಅಥವಾ ಶಸ್ತ್ರದಿಂದ ಚಿಕ್ಕದಾದ ಕವಾಟವನ್ನು ಹಿಗ್ಗಿಸುವುದರಿಂದ ಹಲವು ವೇಳೆ ಕವಾಟಕಾರ್ಯ ಸರಿಹೋಗಿ ರೋಗಿ ನಿರೋಗಿಯಾಗುತ್ತಾನೆ. ಶಸ್ತ್ರಕ್ರಮದ ಕಾಲದಲ್ಲಿರುವ ಕವಾಟದ ಮತ್ತು ಗುಂಡಿಗೆಯ ಸ್ಥಿತಿಗಳಿಗೆ ಅನುಸಾರವಾಗಿ ಶಸ್ತ್ರ ವೈದ್ಯದ ಅಪಾಯ ಉಂಟು. ರೋಗದ ತರುಣ ಸ್ಥಿತಿಯಲ್ಲಿ ಅಪಾಯ ಶೇ.5 ಕ್ಕಿಂತ ಕಡಿಮೆ; ರೋಗ ತೀವ್ರವಾಗಿದ್ದರೆ ಅಪಾಯ ಶೇ.25 ಅಥವಾ ಹೆಚ್ಚು ಇರಬಹುದು. 1950ರ ದಶಕದ ಕೊನೆಯ ವರ್ಷಗಳಲ್ಲಿ ಮೈಟ್ರಲ್ ಅಶಕ್ತತೆ ಮತ್ತು ಚಿಕ್ಕದಾದ ಹಾಗೂ ಅಶಕ್ತ ಕವಾಟದ ಶಸ್ತ್ರವೈದ್ಯ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ದೇಹಬಾಹಿರ ರಕ್ತಚಲನೆ ಮತ್ತು ತಗ್ಗಿಸಿದ ದೇಹೋಷ್ಣತೆಗಳಿಂದ ಗುಂಡಿಗೆಯನ್ನು ಬಿಚ್ಚಿ ಶಸ್ತ್ರವೈದ್ಯ ಮಾಡುವುದು ರೂಢಿಗೆ ಬಂದ ಮೇಲೆ ಆಶಾಭಾವನೆ ಹುಟ್ಟಿತು. ಆ ವೇಳೆಗೆ ಉಪಜ್ಞೆಗೊಂಡು ಬಳಕೆಗೆ ಬಂದ ಪ್ಲಾಸ್ಟಿಕ್ ಕವಾಟದಿಂದ ಅಶಕ್ತ ಮಹಾಪಧಮನಿಯ ಅರೆಚಂದ್ರಾಕಾರ ಕವಾಟದ ರೋಗಿಗಳಿಗೆ ಹೆಚ್ಚು ಒಳ್ಳೆಯದಾಯಿತು. ಪ್ರಯೋಗ ಶಾಲೆಯ ಪ್ರಾಣಿಗಳಲ್ಲಿ ಪ್ಲಾಸ್ಟಿಕ್, ಉಕ್ಕು ಮತ್ತು ಇತರ

ಪದಾರ್ಥಗಳಿಂದ ಮಾಡಿದ ಕವಾಟಗಳು ಹೆಚ್ಚು ಕಡಿಮೆ ತೃಪ್ತಿಕರ ಫಲಗಳು ನೀಡಿದವು. 1950ರ ದಶಕದ ಕೊನೆಯ ವರ್ಷಗಳಲ್ಲಿ ಈ ಕೃತಕ ಕವಾಟಗಳಿಗಿಂತ ಶಸ್ತ್ರವೈದ್ಯೆ ತನ್ನ ಕಣ್ಣೆದರು ಕವಾಟಕುಂದುಗಳನ್ನು ಸರಿಪಡಿಸುವುದು ಉತ್ತಮ ಮಾರ್ಗವೆಂದು ಕಂಡುಬಂದಿತು.

2 ಹಿಸುಕುವ ಹೃದಯಪೊರೆ ಉರಿತ (ಕನ್‌ಸ್ಟ್ರಿಕ್ಟಿವ್ ಪೆರಿಕಾರ್ಡೈಟಿಸ್): ರೋಗಕ್ರಿಮಿಗಳು ಗುಂಡಿಗೆ ಮೇಲಿನ ಪೊರೆಯೊಳಗೆ ಸೇರಿ ದೀರ್ಘಕಾಲದ ಊತವನ್ನು ಉಂಟು ಮಾಡಿ ದೃಢಗೊಂಡು ಗುಂಡಿಗೆಯನ್ನು ಬಿಗಿಯಾಗಿ ಸುತ್ತುವರಿದು ಅದರ ವಿಕಾಸಕ್ಕೆ ಆತಂಕವನ್ನು ಉಂಟುಮಾಡುತ್ತವೆ. ಕೀಲುನೋವುಜ್ವರ ಮತ್ತು ಕ್ಷಯರೋಗಕ್ರಿಮಿಗಳು ಇದಕ್ಕೆ ಬಹುಸಾಮಾನ್ಯ ಕಾರಣಗಳೆಂದು ತಿಳಿಯಲಾಗಿದೆ. ಮೇಲುಪೊರೆಯ ಬಿಗಿಹಿಡಿತದಿಂದಾಗಿ ದೇಹದ ಭಾಗಗಳಿಂದ ಆಕ್ಸಿಜನ್‌ವಿರಳ ರಕ್ತ ಗುಂಡಿಗೆಗೆ ಹಿಂತಿರುಗಲು ಅಡ್ಡಿಯಾಗುವುದರಿಂದ ಕೆಡಕುಂಟಾಗುವುದು. ಕ್ರಮೇಣ ಮೇಲುಪೊರೆ ಚಿಕ್ಕದಾಗುತ್ತಿರಬಹುದು. 1898ರಲ್ಲಿ ಫ್ರಾನ್ಸಿನ ಇ. ಡಿ. ಡೀಲಾರ್ಮ್ ಎಂಬಾತ ದೃಢವಾದ ಮತ್ತು ಬಿಗಿಯುವ ಈ ಮೇಲುಪೊರೆಯನ್ನು ತೆಗೆಯುವುದು ಒಳ್ಳೆಯದೆಂದು ಹೇಳಿದ. ಇದನ್ನು ತೃಪ್ತಿಕರವಾಗಿ ಮಾಡುವುದು 1920ರಲ್ಲಿ ಸಿದ್ಧಿಸಿತು. ಗುಂಡಿಗೆ ಸರಿಯೇ ಆಗಲಾರದಷ್ಟು ಕೆಟ್ಟುಹೋಗಿದ್ದರೆ ಅಂಥ ರೋಗಿಯಲ್ಲಿ ಶಸ್ತ್ರಚಿಕಿತ್ಸೆಯನ್ನು ಸರಿಯಾಗಿ ಮಾಡಿದರೆ ಬಾಳು ಮುಂದುವರಿಯಲು ತೊಂದರೆ ಆಗದು.

ಫುಪ್ಫುಸಗಳ ಶಸ್ತ್ರವೈದ್ಯ. 1 ಫುಪ್ಫುಸದ ಏಡಿಗಂತಿ: ದುರ್ಮಾಂಸಗಳ ಬೆಳೆವಣಿಗೆಯಲ್ಲಿ ಶೇ.10 ರಷ್ಟು ಕಾಣಿಸುತ್ತದೆ. 1925ರ ತರುವಾಯ ಇದು ಮುಂಚೆಗಿಂತ ಶೇ.40 ಮೇಲ್ಪಟ್ಟು ಹೆಚ್ಚಿತು. ಇದಕ್ಕೆ ಕಾರಣಗಳು ಸರಿಯಾಗಿ ಗೊತ್ತಿಲ್ಲದಿದ್ದರೂ ಶ್ವಾಸನಾಳ ಶಾಖೆಗಳಲ್ಲಿ ಕೆಲವು ರಾಸಾಯನಿಕ ವಸ್ತುಗಳ ಪ್ರಭಾವ ನಿಸ್ಸಂದೇಹವಾಗಿ ಈ ಬೆಳವಣಿಗೆಯನ್ನು ಉಂಟುಮಾಡುತ್ತದೆ ಎಂದು ತಿಳಿದಿದೆ. 1933ರ ವರೆಗೆ ಫುಪ್ಫುಸದ ಏಡಗಂತಿಗೆ ಚಿಕಿತ್ಸೆಯೇ ಇರಲಿಲ್ಲ. ಆ ವರ್ಷದಲ್ಲಿ ಇ. ಎ. ಗ್ರಾಹಾಂ ಮತ್ತು ಜೆ. ಜೆ. ಸಿಂಗರ್ ಎಂಬುವರು ಏಡಿಗಂತಿ ವ್ಯಾಪಿಸಿದ್ದ ಫುಪ್ಫುಸವನ್ನು ಪೂರ್ತಿಯಾಗಿ ತೆಗೆದುಹಾಕಿ ಮೊದಲ ಜಯವನ್ನು ಪಡೆದರು. ಆ ರೋಗಿ ಒಬ್ಬ ವೈದ್ಯನೇ ಆಗಿದ್ದ. ಆತ ಮುಂದೆ ಏಡಿಗಂತಿಯ ಸೂಚನೆಯೇ ಇಲ್ಲದೆ 25 ವರ್ಷ ಬದುಕಿದ್ದ. ಫುಪ್ಫುಸದ ಏಡಗಂತಿ ಮತ್ತು ಅದರ ಶಸ್ತ್ರವೈದ್ಯದ ಅಧ್ಯಯನ ಬಹಳವಾಗಿ ನಡೆದಿವೆ. ಕೆಲವು ವೇಳೆ, ಅದರಲ್ಲೂ ಮುದುಕರಲ್ಲಿ ಫುಪ್ಫುಸದ ಬಹುಭಾಗವನ್ನು ತೆಗೆಯುವುದರಿಂದ ಕಡಿಮೆ ಅಪಾಯ ಮತ್ತು ಹೆಚ್ಚು ಗುಣ ಕಂಡುಬಂದಿದೆ. ಎಕ್ಸ್‌ಕಿರಣಗಳ ನೆರವಿನಿಂದ ಫುಪ್ಫುಸದ ಏಡಗಂತಿಯನ್ನು ಆರಂಬದಲ್ಲೇ ಗುರುತಿಸುವುದು ಸಾಧ್ಯ. ಹೀಗಾಗಿ ಈ ವ್ಯಾಧಿಯಿಂದ ನರಳುವವರಿಗೆ ಯುಕ್ತ ವೇಳೆ ಸಮರ್ಪಕ ಚಿಕಿತ್ಸೆ ಮಾಡಬಹುದು. 50 ವರ್ಷಕ್ಕಿಂತ ಕಡಿಮೆ ವಯಸ್ಸಾದವರಲ್ಲಿ ಫುಪ್ಫುಸದ ಶಸ್ತ್ರವೈದ್ಯದ ಅಪಾಯ ಶೇ.5 ಕ್ಕಿಂತ ಕಡಿಮೆ ; ಹೆಚ್ಚು ವಯಸ್ಸಿನವರಲ್ಲಿ ಅಪಾಯ ಸುಮಾರು ಶೇ.15.

3 ಫುಪ್ಫುಸದ ಹುಟ್ಟುವಿಕಲತೆ : ಬುಡ್ಡೆಗಳ ರೋಗ ಹುಟ್ಟುವಾಗಲೇ ಇರಬಹುದು. ಅನೈಸರ್ಗಿಕ ಬೆಳವಣಿಗೆಯಿಂದ ಫುಪ್ಫುಸದಲ್ಲಿ ಒಂದು ಅಥವಾ ಹೆಚ್ಚು ಸಣ್ಣ ಅಥವಾ ದೊಡ್ಡ ಬುಡ್ಡೆಗಳಾಗಬಹುದು. ಇದರಿಂದ (1) ಬುಡ್ಡೆಗಳಲ್ಲಿ ರೋಗಕ್ರಿಮಿಗಳು ಸೇರಿ ಕೀವು ಬುಡ್ಡೆಗಳಾಗವುವು ಅಥವಾ ಶ್ವಾಸನಾಳ ಶಾಖೆಗಳು ಶಿಥಿಲಗೊಂಡು ದೊಗಳೆ ಗಾಳಿಕೊಳವೆಗಳಾಗುವುವು; ಇಲ್ಲವೆ (2) ಬುಡ್ಡೆಗಳು ದೊಡ್ಡವಾಗಿ ಫುಪ್ಫುಸದ ಗಾಳಿಕೊಳವೆಗಳನ್ನು ಅಮುಕುವುದರಿಂದ ಶ್ವಾಸ ಕಾರ್ಯಕ್ಕೆ ಆತಂಕವುಂಟಾಗುವುದು. ಈ ಹುಟ್ಟುಬುಡ್ಡೆಗಳಿಗೂ ಬೆಳೆದವರಲ್ಲಿ ಕಾಲಕ್ರಮೇಣ ಉಂಟಾಗುವ ಬುಡ್ಡೆಗಳಿಗೂ ವ್ಯತ್ಯಾಸ ಉಂಟು. ನಿಧಾನವಾಗಿ ಬೆಳೆಯುವ ಬುಡ್ಡೆಗಳು 40–50 ವರ್ಷ ವಯಸ್ಸು ದಾಟಿದವರಲ್ಲಿ ಕಾಣಬರುತ್ತವೆ. ಫುಪ್ಫುಸದ ಭಾಗವನ್ನು ಅಪಾಯವಿಲ್ಲದೆ ತೆಗೆದುಹಾಕುವ ರೀತಿಯನ್ನು 1931ರಲ್ಲಿ ಕಂಡುಹಿಡಿದ ಬಳಿಕ ಈ ವೈದ್ಯವನ್ನು ಫುಪ್ಫುಸದ ಬುಡ್ಡೆಗಳ ಚಿಕಿತ್ಸೆಗೂ ಉಪಯೋಗಿಸಲಾಯಿತು. ಸರಿಯಾಗಿ ಕೆಲಸ ಮಾಡುವ ಫುಪ್ಫುಸದ ಭಾಗಗಳನ್ನು ಬಿಟ್ಟು ಬುಡ್ಡೆಗಳಿರುವ ಭಾಗಗಳನ್ನು ಮಾತ್ರ ತೆಗೆಯುವುದೇ ಶಸ್ತ್ರವೈದ್ಯದ ಗುರಿ. ಬುಡ್ಡೆರೋಗ ಫುಪ್ಫುಸದ ಕಾಲುಭಾಗಕ್ಕಿಂತ ಕಡಿಮೆ ಭಾಗದಲ್ಲಿರುವುದರಿಂದ ಬುಡ್ಡೆ ಭಾಗವನ್ನು ಮಾತ್ರ ತೆಗೆದುಹಾಕುವುದರಿಂದ ರೋಗಿ ಸಂಪೂರ್ಣ ಗುಣ ಹೊಂದುತ್ತಾನೆ. ಹುಟ್ಟುವಿಕಲತೆ ಮುಖ್ಯವಾಗಿ ಫುಪ್ಫುಸದ ರಕ್ತನಾಳಗಳಲ್ಲಿ ಮಾತ್ರ ಇರಬಹುದು. ಅಪಧಮನಿ ಅಭಿಧಮನಿ ಸಂಯೋಗ ಒಂದು ಸಾಮಾನ್ಯ ವಿಕಲತೆ. ಇದರಿಂದ ಆಕ್ಸಿಜನ್ನಿನ ಕೊರತೆ ಉಂಟಾಗುವುದು. ಈ ರಕ್ತನಾಳಗಳ ಸಂಯೋಗಗಳು ಕ್ರಮೇಣ ದೊಡ್ಡವಾಗುತ್ತ ಕೊನೆಗೆ ಒಡೆದು ರಕ್ತ ಸೋರಿ ಸಾವು ಸಂಭವಿಸಬಹುದು. ಇದಕ್ಕಿರುವ ಒಂದೇ ಮಾರ್ಗವೆಂದರೆ ವಿಕಲಭಾಗಗಳನ್ನು ತೆಗೆದುಹಾಕುವ ಶಸ್ತ್ರವೈದ್ಯ. ಈ ವಿಕಲತೆ ಅಲ್ಲದೆ ಇತರ ನ್ಯೂನತೆ ಇಲ್ಲದೆ ಇಂಥ ರೋಗಿಯಲ್ಲಿ ಶಸ್ತ್ರವೈದ್ಯದ ಅಪಾಯ ಶೇ.5 ಕ್ಕಿಂತ ಕಡಿಮೆ.

4 ಫುಪ್ಫುಸ ಕ್ಷಯ ರೋಗ : ಎದೆಯ ಶಸ್ತ್ರವೈದ್ಯರಿಂದ ಗುಣ ಕಾಣಿಸುವ ರೋಗಗಳಲ್ಲಿ ಫುಪ್ಫುಸ ಕ್ಷಯವೊಂದು. 1940ಕ್ಕಿಂತ ಮುಂಚೆ ಪಕ್ಕೆಲುಬುಗಳ ಭಾಗಗಳನ್ನು ಕತ್ತರಿಸಿಹಾಕಿ ಎದೆಯ ಭಿತ್ತಿ ಒಳಕ್ಕೆ ಹೋಗುವಂತೆ ಮಾಡುವ ಥೊರೆಕೊಪ್ಲಾಸ್ಟಿ ಎಂಬ ಶಸ್ತ್ರವೈದ್ಯ ಕ್ಷೇಮಕರ ಮತ್ತು ಪರಿಣಾಮಕಾರಿಯಾಗಿತ್ತು. ಕೆಲವು ಪ್ಯಾರಾಫಿನ್ ಮೇಣವನ್ನು ತುಂಬುವ ಪರಿಷ್ಕರಿಸಿದ ಥೊರೆಕೊಪ್ಲಾಸ್ಟಿ ಯಶಸ್ವಿ ಆಗುತ್ತಿತ್ತು. ಕ್ಷಯರೋಗಕ್ರಿಮಿಗಳನ್ನು ತಡೆಗಟ್ಟುವ ಮದ್ದುಗಳು ತಯಾರಾಗುವವರೆಗೂ ಫುಪ್ಫುಸದ ರೋಗಪೀಡಿತ ಭಾಗಗಳನ್ನು ತೆಗೆದುಹಾಕುವ ಕ್ರಮ ಮುಂದುವರಿಯಲಿಲ್ಲ. ಇಡೀ ಫುಪ್ಫುಸವನ್ನು ತೆಗೆದುಹಾಕುವುದರಿಂದ ಅಪಾಯ ಸುಮಾರು ಶೇ.45 ಮತ್ತು ಫುಪ್ಫುಸಭಾಗವನ್ನು ತೆಗೆದುಹಾಕುವುದರಿಂದ ಸುಮಾರು ಶೇ.26ರಷ್ಟಿದ್ದಿತು (1942). ರೋಗಕ್ರಿಮಿಗಳನ್ನು ನಾಶಪಡಿಸುವ ಸ್ಟ್ರೆಪ್ಟೊಮೈಸಿನ್ 1944ರಲ್ಲೂ ಪ್ಯಾರ ಅಮೈನೊಸಾಲಿಸಿಲಿಕ್ ಆಮ್ಲ 1946ರಲ್ಲಿ ಐಸೋನಿಕೊಟಿನಿಕ್ ಆಮ್ಲ 1952ರಲ್ಲೂ ಚಾಲ್ತಿಗೆ ಬಂದ ಮೇಲೆ ಶಸ್ತ್ರವೈದ್ಯದ ಸುರಕ್ಷತೆ ಹೆಚ್ಚಿತು; ಮತ್ತು ರೋಗ ಮುಂದುವರಿದಿದ್ದಾಗಲು ಶಸ್ತ್ರಪ್ರಯೋಗ ನಡೆಸುವ ಸಾಧ್ಯತೆ ಹೆಚ್ಚಿತು. ಅಷ್ಟೇ ಅಲ್ಲದೆ ಈ ಮದ್ದುಗಳ ಉಪಯೋಗದಿಂದ ರೋಗ ಹತೋಟಿಗೆ ಬಂದು ಶಸ್ತ್ರವೈದ್ಯ ಬೇಕಾಗುವ ರೋಗಭಾಗಗಳು ಚಿಕ್ಕವಾಗಿರುವ ಸಾಧ್ಯತೆ ಅಧಿಕವಾಯಿತು. ಇಡೀ ಫುಪ್ಫುಸವನ್ನು ತೆಗೆದುಹಾಕುವುದು (ಇದು 1955ರ ಬಳಿಕ ಬಹಳ ಅಪರೂಪವಾಯಿತು) ಹಾಗೂ ಫುಪ್ಫುಸದ ಒಂದು ಹಾಲೆಯನ್ನು ಮಾತ್ರ ತೆಗೆದುಹಾಕುವುದು ಇವುಗಳೇ ಅಲ್ಲದೆ ರೋಗವಿರುವ ಶ್ವಾಸನಾಳದ ಶಾಖೆಗಳ ಭಾಗವನ್ನು ಮಾತ್ರ ಕತ್ತರಿಸಿ ತೆಗೆಯುವ ಶಸ್ತ್ರವೈದ್ಯವೂ ಬೆಳೆಯಿತು. ಇವೆಲ್ಲಕ್ಕಿಂತ ಮುಖ್ಯ ವಿಷಯವೆಂದರೆ ಔಷಧ ಚಿಕಿತ್ಸೆಯಿಂದಲೆ ಒಳ್ಳೆಯ ಫಲ ಸಿಗುವ ಸಾಧ್ಯತೆ ಹೆಚ್ಚಿತು. ಇಡೀ ಫುಪ್ಫುಸವನ್ನು ತೆಗೆದುಹಾಕುವುದು ಬಳಕೆಗೆ ಬಂದ ಮೇಲೆ (1942) ಶೇ.41 ರಷ್ಟು ಮತ್ತು ಫುಪ್ಫುಸದ ಹಾಲೆಯನ್ನು ಮಾತ್ರ ತೆಗೆದುಹಾಕಿದ ಮೇಲೆ ಶೇ.69 ರಷ್ಟು ತೃಪ್ತಿ ಲಭಿಸುತ್ತಿತ್ತು. ರೋಗವಿರುವ ಶ್ವಾಸನಾಳ ಶಾಖೆಗಳ ಭಾಗ ಅಥವಾ ಒಂದು ಹಾಲೆಯನ್ನು ತೆಗೆಯುವುದು 1955ರಲ್ಲಿ ಬಳಕೆಗೆ ಬಂದ ಬಳಿಕ ಶೇ.95 ರಷ್ಟು ಮತ್ತು ಪೂರ್ತಿ ಫುಪ್ಫುಸವನ್ನು ತೆಗೆಯುವುದರಿಂದ ಶೇ.85–ಶೇ.90 ರಷ್ಟು ಒಳ್ಳೆಯ ಫಲ ಸಿಕ್ಕುವಂತಾಯಿತು. ಇಂದು ವ್ಯಾಪಕವಾಗಿ ಕ್ಷಯರೋಗ ಚಿಕಿತ್ಸೆಗೆ ಪ್ರಬಲ ಔಷಧಗಳು ಲಭ್ಯವಿದ್ದು, ಅವುಗಳ ಬಳಕೆಯಿಂದ ರೋಗವನ್ನು ಹತೋಟಿಗೆ ತರಲಾಗುತ್ತದೆ. ಹಾಗಾಗಿ ಫುಪ್ಫುಸದ ಮೇಲೆ ಕೈಗೊಳ್ಳುವ ಶಸ್ತ್ರಚಿಕಿತ್ಸೆ ಅಪರೂಪವೆನಿಸಿದೆ.

5 ಶ್ವಾಸನಾಳ ಶಾಖೆಗಳ ಹಿಗ್ಗುರೋಗ : ರೋಗಕ್ರಿಮಿಗಳು ಗಾಳಿಕೊಳವೆಗಳ ಭಿತ್ತಿಗಳನ್ನು ಶಿಥಿಲಗೊಳಿಸಿ ಕೊಳವೆಗಳು ದೊಗಳೆಯಾಗುವಂತೆ ಮಾಡಿ ಅವುಗಳ ಸುತ್ತಲಿನ ಫುಪ್ಫುಸ ಭಾಗಗಳನ್ನು ಸೇರುತ್ತವೆ. ತರುವಾಯ ಫುಪ್ಫುಸವನ್ನು ತೆಗೆದುಹಾಕುವುದರಿಂದ ಆಗುವ ಅಪಾಯ 1930ರ ಅನಂತರ ಕಡಿಮೆಯಾದ್ದರಿಂದ ಈ ಹಿಗ್ಗುರೋಗಕ್ಕೆ ಶಸ್ತ್ರಚಿಕಿತ್ಸೆಯೊಂದೇ ದಾರಿಯಾಗಿತ್ತು. 1945ರ ಬಳಿಕ ಶಸ್ತ್ರತಂತ್ರದ ಅಪಾಯ ಶೇ.2 ಕ್ಕಿಂತ ಕಡಿಮೆಯಾಯಿತು. ಈಗ ರೋಗವಿರುವ ಶಾಖಾಭಾಗಗಳನ್ನು ಮಾತ್ರ ತೆಗೆಯುವುದು ಸಾಮಾನ್ಯ ಕ್ರಮವಾಗಿದೆ. ರೋಗ ಹಲವು ವೇಳೆ ಬಲ ಎಡ ಫುಪ್ಫುಸಗಳೆರಡರಲ್ಲೂ ವ್ಯಾಪಿಸಿರುವುದರಿಂದ ಈ ಹಂತಗಳಲ್ಲಿ ಒಂದೊಂದು ಫುಪ್ಫುಸ ಭಾಗವನ್ನು ತೆಗೆಯುವುದು ತೃಪ್ತಿಕರ ಫಲವನ್ನು ಕೊಡುತ್ತದೆ.

6 ಫುಪ್ಫುಸ ಕುರು : ಸಲ್ಫೋನಮೈಡ್ ಮತ್ತಿತರ ಬೂಷ್ಟು ಮದ್ದುಗಳ ಉಪಯೋಗ ಪ್ರಾರಂಭವಾದ ಬಳಿಕ ಫುಪ್ಫುಸ ಕುರು ಬಹಳ ಅಪರೂಪವಾಗಿದೆ. ಇದೇ ಅಲ್ಲದೆ ಬಾಯಿ ಮೂಗು ಗಂಟಲು ಶಸ್ತ್ರವೈದ್ಯ ಮುಂದುವರಿದು ಯೋಗ್ಯ ಚಿಕಿತ್ಸೆಯಾಗುತ್ತಿರುವುದು ಫುಪ್ಫುಸ ಕುರು ಅಪರೂಪವಾಗುವುದಕ್ಕೆ ಕಾರಣವಾಗಿದೆ; ಮತ್ತು ಈಗಿನ ಮದ್ದುಗಳಿಂದಲೇ ಫುಪ್ಫುಸ ಕುರುಗಳು ಕರಗುತ್ತವೆ. ಮದ್ದುಗಳಿಗೆ ಜಗ್ಗದ ಕುರುಗಳಿಗೆ ಶಸ್ತ್ರವೈದ್ಯ ಬೇಕು. ಇದು ಕೀವನ್ನು ಕೊಳವೆ ಇತ್ಯಾದಿಗಳ ಸಹಾಯದಿಂದ ಆಚೆಗೆ ಸೋರುವಂತೆ ಮಾಡುವುದು ಅಥವಾ ಫುಪ್ಫುಸದ ರೋಗ ಪೀಡಿತ ಭಾಗವನ್ನು ತೆಗೆದುಹಾಕುವುದರಿಂದ ನಡೆಯುತ್ತದೆ. ಈ ಶಸ್ತ್ರವೈದ್ಯದ ಅಪಾಯ ಶೇ. 5 ಕ್ಕೂ ಕಡಿಮೆ. ಇದರಿಂದ ಬಹು ತೃಪ್ತಿಕರ ಫಲವನ್ನು ಹೊಂದಬಹುದು. (ಎಂ.ಡಿ.)

**ಗುಂಡಿಗೆಯ ಅಂಗರಚನೆ :** ಮನುಷ್ಯ ದೇಹದ ಸಮಸ್ತ ಭಾಗಗಳಲ್ಲೂ ಸದಾ ರಕ್ತ ಪರಿಚಲನೆ ಇರುವಂತೆ ಮಾಡುವ ಅಂಗ ಗುಂಡಿಗೆ. ಇದು ಗುಂಡಿಗೆಸ್ನಾಯು (ಕಾರ್ಡಿಯಕ್ ಮಸಲ್) ಎಂಬ ವಿಶೇಷ ಸ್ನಾಯುವಿನಿಂದ ನಿರ್ಮಿತವಾಗಿದೆ. ಇದರ ಸ್ಥಾನ ಎದೆಯಲ್ಲಿ (ನಿಖರವಾಗಿ ಮೂಳೆಗಳಿಂದ ರಚಿತವಾದ ಎದೆಗೂಡಿನ ಒಳಗೆ),

ಎರಡು ಪುಪ್ಪಸಗಳ ನಡುವೆ, ಎಡ ಪುಪ್ಪಸ ಕೊಂಚ ಮರೆಮಾಡಿದಂತೆ, ಮುಂಭಾಗಕ್ಕೆ ಎಡಕ್ಕೆ ಓರೆಯಾಗಿ ವಪೆಯ ಮೇಲೆ ಉಂಟು. ಗುಂಡಿಗೆಯ $\frac{2}{3}$ ಭಾಗ ದೇಹದ ಮಧ್ಯರೇಖೆಯ ಎಡಕ್ಕೂ $\frac{1}{3}$ ಭಾಗ ಬಲಕ್ಕೂ ವ್ಯಾಪಿಸಿದೆ. ಇಡೀ ಗುಂಡಿಗೆ ಮಾವಿನಕಾಯಿಯ ಆಕಾರವಾಗಿದ್ದು ಕೈಮುಷ್ಟಿಗಿಂತಲೂ ಕೊಂಚ ದೊಡ್ಡದಾಗಿರುತ್ತದೆ. ವಯಸ್ಕರಲ್ಲಿ ಇದರ ತೂಕ ಸುಮಾರು 300 ಗ್ರಾಂ. ಮಕ್ಕಳಲ್ಲಿ ಅದು, ಅವರ ಮೈ ತೂಕಕ್ಕೆ ಹೋಲಿಸಿದರೆ, ಹೆಚ್ಚು ತೂಕವಾಗಿರುತ್ತದೆ. 25 ದಿವಸಗಳ ಗರ್ಭಾವಸ್ಥೆಯಲ್ಲಿ ಪ್ರಾರಂಭವಾಗುವ ಗುಂಡಿಗೆಯ ಬಡಿತ, ಜೀವಮಾನ ಪರ್ಯಂತ ಬಡಿಯುತ್ತಲೇ ಇರುತ್ತದೆ. ಗರ್ಭಾವಸ್ಥೆಯಲ್ಲಿ ಬಡಿತದ ದರ ಮಿನಿಟಿಗೆ 130–140; ಹುಟ್ಟಿದ ತರುಣದಲ್ಲಿ ಅದು 90–100 ಆಗಿ, ಬಾಲ್ಯಾವಸ್ಥೆಯಲ್ಲಿ ಕ್ರಮೇಣ ಕಡಿಮೆಯಾಗುತ್ತ ಯೌವನದಿಂದಾಚೆಗೆ ಮಿನಿಟಿಗೆ ಸುಮಾರು 72 ಆಗುತ್ತದೆ. ಗುಂಡಿಗೆಯ ಸುತ್ತ (ಬುಡದ ಹೊರತಾಗಿ) ಕವಚದ ಹಾಗೆ, ಗುಂಡಿಗೆಯ ಹೊರಪೊರೆ (ಪೆರಿಕಾರ್ಡಿಯಂ) ಉಂಟು. ವಾಸ್ತವವಾಗಿ ಇದು ಮೂರು ಪದರಗಳಿಂದಾಗಿದೆ. ಹೊರಪದರ ಗಡಸು, ಉಳಿದೆರಡು ನುಣುಪು. ಈ ಎರಡು ಪದರಗಳಲ್ಲಿ ಹೊರಗಿನದು ಗಡಸು ಪದರಕ್ಕೆ ಅಂಟಿಕೊಂಡಿದೆ. ಒಳಗಿನದು ಗುಂಡಿಗೆಯ ಹೊರಪದರವಾಗಿದೆ. ಇವೆರಡು ಪದರಗಳ ನಡುವೆ ಕೀಲೆಣ್ಣೆಯಂತೆ ನುಣುಪಿಸುವ ಬಹುಸ್ವಲ್ಪ ದ್ರವವಿದ್ದು, ಇದರಿಂದ ಗುಂಡಿಗೆ ತಿಕ್ಕಾಟವಿಲ್ಲದೆ ಹಿಗ್ಗುವುದಕ್ಕೂ ಕುಗ್ಗುವುದಕ್ಕೂ ಸಾಧ್ಯವಾಗಿದೆ.

ಮುಂದಿನಿಂದ ನೋಡಿದರೆ ಗುಂಡಿಗೆಯ ಬಲಗಡೆ ಅಂಚು ಎದೆಮೂಳೆಯ (ಸ್ಟರ್ನಂ) ಬಲ ಅಂಚಿಗಿಂತ ಒಂದು ಬೆರಳಗಲ ಬಲಕ್ಕಿರುತ್ತದೆ. ಹಾಗೆಯೇ ಎಡ ಅಂಚು ಎದೆಮೂಳೆಯ ಎಡ ಅಂಚಿಗಿಂತ ಒಂದು ಬೆರಳಗಲ ಎಡಕ್ಕಿರುತ್ತದೆ. ಗುಂಡಿಗೆಯ




**ಚಿತ್ರ 1. ಗುಂಡಿಗೆಯ ಮುಂಭಾಗ: 1. ಉನ್ನತ ಮಹಾಭಿಧಮನಿ, 2. ಬಲ ಹೃತ್ಕುಕ್ಷಿ, 3. ಮಹಾಪಧಮನಿಯ ಕಮಾನು, 4. ಎಡ ಪುಪ್ಪಸದ ಅಪಧಮನಿ, 5. ಎಡ ಹೃತ್ಕರ್ಣ, 6. ಎಡ ಹೃತ್ಕುಕ್ಷಿ, 7. ಗುಂಡಿಗೆಯ ತುದಿ.**

ಎಡಬಲಭಾಗಗಳಲ್ಲಿ ರಕ್ತವನ್ನು ಪಡೆಯಲು ಒಂದೊಂದು ಹೃತ್ಕರ್ಣ (ಏಟ್ರಿಯಂ) ರಕ್ತವನ್ನು ಹೊರತಳ್ಳಲು ಒಂದು ಹೃತ್ಕುಕ್ಷಿ (ವೆಂಟ್ರಿಕಲ್) ಹೀಗೆ ಒಟ್ಟು ನಾಲ್ಕು ಕೋಶಗಳಿವೆ (ಚಿತ್ರ 1). ಹೃತ್ಕರ್ಣಗಳಿಗೂ ಹೃತ್ಕುಕ್ಷಿಗಳಿಗೂ ನಡುವೆ ಆಳವಾದ ರೇಖೆ ಉಂಟು. ಈ ರೇಖೆಯಲ್ಲಿ ಕೊಬ್ಬು ತುಂಬಿದ್ದು ಗುಂಡಿಗೆಗೆ ಆಕ್ಸಿಜನ್‌ಯುಕ್ತ ರಕ್ತವನ್ನು ಭಾಗಶಃ ಒದಗಿಸುವ ಬಲಗುಂಡಿಗೆ ಅಪಧಮನಿ (ರೈಟ್ ಕರೋನರಿ ಆರ್ಟರಿ) ಇರುತ್ತದೆ. ಎರಡು ಹೃತ್ಕುಕ್ಷಿಗಳ ನಡುವೆಯೂ ಒಂದು ರೇಖೆ ಇದೆ. ಈ ರೇಖೆಯಲ್ಲಿ ಎಡಗುಂಡಿಗೆ ಅಪಧಮನಿಯ ಒಂದು ಮುಖ್ಯಶಾಖೆ ಉಂಟು. ಎರಡು ಹೃತ್ಕರ್ಣಗಳನ್ನು ಪ್ರತ್ಯೇಕಿಸುವ ಯಾವ ಗುರುತೂ ಹೊರಗಿನಿಂದ ಕಾಣಿಸುವುದಿಲ್ಲ. ಏಕೆಂದರೆ ಆ ಸ್ಥಳ ಪುಪ್ಪಸ ಧಮನಿ (ಪಲ್ಮನರಿ ಆರ್ಟರಿ) ಮತ್ತು ಮಹಾಪಧಮನಿಯ ಆರೋಹಣ ಭಾಗಗಳಿಂದ (ಅಸೆಂಡಿಂಗ್ ಪಾರ್ಟ್ ಆಫ್ ದಿ ಅಯೋರ್ಟ) ಮರೆಮಾಡಲ್ಪಟ್ಟಿದೆ. ಗುಂಡಿಗೆಯ ತುತ್ತತುದಿ ಎಡ ಹೃತ್ಕುಕ್ಷಿಯ ಕೆಳಮೂತಿಯಾಗಿದ್ದು ಎದೆಯ ಎಡಗಡೆ 5–6ನೆಯ




**ಚಿತ್ರ 2. ಗುಂಡಿಗೆಯ ಹಿಂಭಾಗ. 1. ಮಹಾಪಧಮನಿ, 2. ಎಡ ಪುಪ್ಪಸದ ಅಪಧಮನಿ, 3. ಎಡ ಪುಪ್ಪಸದ ಅಭಿಧಮನಿಗಳು, 4. ಎಡ ಹೃತ್ಕರ್ಣ, 5. ಎಡ ಹೃತ್ಕುಕ್ಷಿ, 6. ಗುಂಡಿಗೆಯ ಅಭಿದಮನಿ, 7. ಉನ್ನತ ಮಹಾಭಿಧಮನಿ, 8. ಬಲ ಪುಪ್ಪಸದ ಅಪಧಮನಿ, 9. ಬಲ ಪುಪ್ಪಸದ ಅಭಿಧಮನಿ, 10. ಬಲ ಹೃತ್ಕರ್ಣ, 11. ಅವನತ ಮಹಾಭಿಧಮನಿ**

ಪಕ್ಕೆಲುಬುಗಳ ನಡುವೆ ಇರುತ್ತದೆ. ರೋಗದಿಂದ ಗುಂಡಿಗೆ ವಿಕಾರವಾದಾಗ ಅಥವಾ ದೊಡ್ಡದಾದಾಗ ಇದು ಜಾಗವನ್ನು ಬದಲಾಯಿಸಿರುತ್ತದೆ. ಎದೆಮೂಳೆಯ ಹಿಂದೆ ಕಾಣುವ ಗುಂಡಿಗೆಯ ಬಲ ಅಂಚು ಬಲ ಹೃತ್ಕರ್ಣದಿಂದಲೂ ಎಡ ಅಂಚು ವಿಶೇಷವಾಗಿ ಎಡ ಹೃತ್ಕುಕ್ಷಿ ಮತ್ತು ಸ್ವಲ್ಪ ಮಾತ್ರ ಎಡ ಹೃತ್ಕರ್ಣದಿಂದಲೂ ಆಗಿವೆ. ಎದೆಮೂಳೆಯ ಹಿಂದೆಯೇ ಇರುವ ಗುಂಡಿಗೆಯ ಮುಂಬದಿಯಲ್ಲಿ ಸುಮಾರು $\frac{2}{3}$ ಭಾಗ ಬಲ ಹೃತ್ಕುಕ್ಷಿಯಿಂದ ಆಗಿದೆ. ಗುಂಡಿಗೆ ಕೆಳ ಅಂಚೂ ಇದರಿಂದಲೇ ಆಗಿದೆ. ಗುಂಡಿಯ ತಳ ಹಿಮ್ಮುಖವಾಗಿರುತ್ತದೆ. ಇದು ಎದೆಪ್ರದೇಶದ 5ನೆಯ ಬೆನ್ನುಮೂಳೆ ಯಿಂದ 8ನೆಯ ಬೆನ್ನುಮೂಳೆವರೆಗೆ (ತೊರ್‍ಯಾಸಿಕ್ ವರ್ಟಬ್ರ) ಪಸರಿಸಿರುತ್ತದೆ. ಇದಕ್ಕೂ ಬೆನ್ನು ಮೂಳೆಗೂ ನಡುವೆ ಮಹಾಪಧಮನಿಯ ಅವರೋಹಣ ಭಾಗವೂ ಅನ್ನನಾಳವೂ ಇರುತ್ತವೆ. ಈ ಭಾಗ ಬಹುವಾಗಿ ಎಡ ಹೃತ್ಕರ್ಣದಿಂದಾಗಿದ್ದು ಇಲ್ಲೆ ಬಲಗಡೆಯಿಂದ 2 ಪುಪ್ಪಸ ಅಭಿಧಮನಿಗಳೂ (ಪಲ್ಮನರಿ ವೇನ್ಸ್) ಎಡಗಡೆಯಿಂದ ಎರಡು ಪುಪ್ಪಸ ಅಭಿಧಮನಿಗಳೂ ಬಂದು ಎಡಹೃತ್ಕರ್ಣವನ್ನು ಸೇರುತ್ತವೆ. ಇವು ಆಕ್ಸಿಜನ್‌ಯುಕ್ತ ರಕ್ತವನ್ನು ಪುಪ್ಪಸಗಳಿಂದ ಎಡಹೃತ್ಕರ್ಣಕ್ಕೆ ಒಯ್ಯುತ್ತವೆ (ಚಿತ್ರ 2). ವಪೆಗೆ ತಗುಲಿದ ಹಾಗಿರುವ ಗುಂಡಿಗೆಯ ಭಾಗ 2/3ರಷ್ಟು ಎಡಹೃತ್ಕುಕ್ಷಿಯಿಂದಲೂ 1/3ರಷ್ಟು ಬಲಹೃತ್ಕುಕ್ಷಿಯಿಂದಲೂ ಆಗಿದೆ. ವಪೆ ಗುಂಡಿಗೆಯನ್ನು ಯಕೃತ್ತಿನ ಎಡಭಾಗ ಮತ್ತು ಜಠರದಿಂದ ಪ್ರತ್ಯೇಕಿಸುತ್ತದೆ.

ಬಲಪಕ್ಕದಿಂದ ನೋಡಿದರೆ ಬಲಹೃತ್ಕುಕ್ಷಿಗೂ ಬೆನ್ನುಮೂಳೆಗೂ ನಡುವೆ ಬಲ ಹೃತ್ಕರ್ಣ ಕಾಣಿಸುತ್ತದೆ. ತಲೆ ತೋಳುಗಳು ಮತ್ತು ಎದೆಯ ಮೇಲುಭಾಗದಿಂದ ಆಕ್ಸಿಜನ್‌ವಿರಳರಕ್ತವನ್ನು ಒಯ್ಯುವ ಉನ್ನತಮಹಾಭಿಧಮನಿ (ಸುಪೀರಿಯರ್ ವೀನ ಕೇವ) ಬಲ ಹೃತ್ಕರ್ಣದ ಮೇಲಿನ ಭಾಗಕ್ಕೆ ತೆರೆದುಕೊಳ್ಳುತ್ತದೆ. ಹೀಗೆಯೇ ದೇಹದಲ್ಲಿ ಉಳಿದ ಭಾಗಗಳಿಂದ ರಕ್ತವನ್ನು ಒಯ್ಯುವ ಅವನತಮಹಾಭಿಧಮನಿ (ಇನ್ಫೀರಿಯರ್ ವೀನ ಕೇವ) ಕೆಳಗಿನಿಂದ ವಪೆಯಲ್ಲಿ ತೂರಿ ಬಲಹೃತ್ಕರ್ಣದ ಕೆಳಭಾಗದಲ್ಲಿ ತೆರೆದುಕೊಳ್ಳುತ್ತದೆ. ಕವಾಟವಿರುವ ಗುಂಡಿಗೆಯ ಮಹಾಭಿಧಮನಿ (ಕರೋನರಿ ಸೈನಸ್) ಇಡೀ ಗುಂಡಿಗೆಯ ಸ್ನಾಯುಗಳಿಂದ ಬರುವ ಆಕ್ಸಿಜನ್ ವಿರಳರಕ್ತವನ್ನು ಬಲಹೃತ್ಕರ್ಣಕ್ಕೆ ತಲುಪಿಸುತ್ತದೆ. ಬಲಹೃತ್ಕರ್ಣದಲ್ಲಿ ಉನ್ನತ ಮಹಾಭಿಧಮನಿ ಸೇರುವ ಕಡೆ ಸೈನೊ ಏಟ್ರಿಯಲ್ ಗಿಣ್ಣು ಮತ್ತು ಗುಂಡಿಗೆಯ ಮಹಾಭಿಧಮನಿಯ ಹತ್ತಿರ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣು ಎಂಬ ಎರಡು ವಿಶಿಷ್ಟ ಮಾಂಸದ ಗಂಟುಗಳು ಬಲಹೃತ್ಕರ್ಣದ ಮಾಂಸಭಿತ್ತಿಯಲ್ಲಿ ಹುದುಗಿಕೊಂಡಿರುತ್ತವೆ. ಇವುಗಳ ಸ್ವಯಂ ಪ್ರಚೋದಿತ ಕಾರ್ಯಕ್ರಮದಿಂದ ಗುಂಡಿಗೆ ನಿಯತವಾದ ತಾಳಕ್ರಮದಲ್ಲಿರುತ್ತದೆ. ಬಲಹೃತ್ಕರ್ಣದ ಹಿಂದಕ್ಕೂ ಎಡಕ್ಕೂ ಎಡಹೃತ್ಕರ್ಣ ಉಂಟು. ಹೀಗಿರುವುದು ಎರಡು ಹೃತ್ಕರ್ಣಗಳನ್ನು ವಿಭಾಗಿಸುವ ನಡುವಣ ತಡಿಕೆ ಓರೆಯಾಗಿರುವುದರ ಪರಿಣಾಮ. ಭ್ರೂಣಾವಸ್ಥೆಯಲ್ಲಿ ಈ ತಡಿಕೆಯಲ್ಲಿ ಅಂಡಾಕಾರದ ಕಂಡಿ (ಫೊರಾಮನ್ ಓವಾಲೀ) ಇದ್ದು ಅದು ಅವನತಮಹಾಭಿಧಮನಿಯಿಂದ ಬಲಹೃತ್ಕರ್ಣವನ್ನು ತಲುಪಿದ ರಕ್ತವನ್ನು ಕೂಡಲೇ ಎಡಹೃತ್ಕರ್ಣಕ್ಕೆ ಹೋಗಗೊಡುತ್ತದೆ. ರಕ್ತದ ಚಲನೆಯನ್ನು ಈ ರೀತಿ ನಿಯಂತ್ರಿಸಲು ಅವನತಮಹಾಭಿಧಮನಿಯ ಬಾಯಲ್ಲಿ ಯೂಸ್ಟೇಕಿಯಸ್ಸನ ಕವಾಟಗಳಿರುತ್ತವೆ. ಜನನವಾದ ಮೇಲೆ ಎರಡು ಹೃತ್ಕರ್ಣಗಳ ಒಳಪೊರೆಗಳೂ ಅಂಡಾಕಾರದ ಕಂಡಿಯನ್ನು ಮುಚ್ಚಿ ತಡಿಕೆಯಲ್ಲಿ ಒಂದು ತಗ್ಗು ಮಾತ್ರ ಇರುವಂತೆ ಕಾಣುತ್ತದೆ. ಯೂಸ್ಟೇಕಿಯಸ್ಸನ ಕವಾಟಗಳ ಉಳಿಕೆಗಳೂ ಅವನತಮಹಾಭಿಧಮನಿಯ ಬಾಯ ಸುತ್ತ ಕಾಣಬರುತ್ತವೆ. ಗುಂಡಿಗೆಯ ಮಿಕ್ಕ ಎಲ್ಲ ಕೋಶಗಳಂತೆ ಬಲಹೃತ್ಕರ್ಣದ ಒಳಗೆ ಕೂಡ ನುಣುಪಾದ ಪೊರೆ ಇದ್ದರೂ ಆ ಪೊರೆಯ ಒಳಗೆ ಇರುವ ಸ್ನಾಯು ತಂತುಗಳ ವಿನ್ಯಾಸದಿಂದ ಅದು ಜುಂಗುಜುಂಗಾಗಿರುವುದು.




**ಚಿತ್ರ 3. ಹೃತ್ಕುಕ್ಷಿಗಳ ನೇರದಲ್ಲಿ ಗುಂಡಿಗೆಯ ಅಡ್ಡಛೇದನೆ ಮೇಲಿನಿಂದ ಕಾಣುವಂತೆ: 1. ಬಲ ಹೃತ್ಕುಕ್ಷಿಯ ಕುಹರ, 2. ಎಡ ಹೃತ್ಕುಕ್ಷಿಯ ಕುಹರ, 3. ಹೃತ್ಕುಕ್ಷಿಗಳ ಅಡ್ಡ ತಡಿಕೆ, 4. ಎಡ ಹೃತ್ಕುಕ್ಷಿಯ ದಪ್ಪ ತಡಿಕೆ, 5. ಬಲ ಹೃತ್ಕುಕ್ಷಿಯ ತೆಳು ತಡಿಕೆ, 6. ಗುಂಡಿಗೆಯ ಬಲ ಅಪಧಮನಿಯ ಮುಖ್ಯ ಕವಲು, 7. ಗುಂಡಿಗೆಯ ಎಡ ಅಪಧಮನಿಯ ಹೃತ್ಕುಕ್ಷಿಗಳ ನಡುವಿನ ಕವಲು.**

ಬಲಹೃತ್ಕರ್ಣದಿಂದ ಬಲಹೃತ್ಕುಕ್ಷಿಗೆ ರಕ್ತ ಇವುಗಳ ನಡುವೆ ಇರುವ ದ್ವಾರದ ಮೂಲಕ ಹರಿದು ತುಂಬಿಕೊಳ್ಳುತ್ತದೆ. ಬಲಹೃತ್ಕರ್ಣ ಸಂಕುಚಿಸಿದಾಗ ಬಲ ಹೃತ್ಕುಕ್ಷಿ ಪೂರ್ಣವಾಗಿ ತುಂಬಿಕೊಳ್ಳುತ್ತದೆ. ಬಲಹೃತ್ಕರ್ಣ ಹೃತ್ಕುಕ್ಷಿಗಳ ನಡುವಿನ ಈ ದ್ವಾರದಲ್ಲಿ ತ್ರಿದಳ ಕವಾಟ (ಟ್ರೈಕಸ್ಪಿಡ್ ವಾಲ್ವ್) ಉಂಟು. ಇದು ಬಲಹೃತ್ಕರ್ಣದಿಂದ ಬಲಹೃತ್ಕುಕ್ಷಿಗೆ ರಕ್ತ ಹರಿಯಲು ಅವಕಾಶ ಮಾಡಿಕೊಡುತ್ತದಾದರೂ ಬಲಹೃತ್ಕುಕ್ಷಿ ಸಂಕುಚಿಸಿದಾಗ ಇದರ ಮೂರು ದಳಗಳೂ ತೇಲಿ ಸಂಪರ್ಕಗೊಂಡು ದ್ವಾರ ಮುಚ್ಚಿಕೊಳ್ಳುವುದರಿಂದ ರಕ್ತ ಪುನಃ ಹೃತ್ಕರ್ಣಕ್ಕೆ ಬರದಂತೆ ತಡೆಯುತ್ತದೆ. ಕವಾಟದ ದಳಗಳ ಕೆಳಗಿನ ಕುಚ್ಚುಕುಚ್ಚಾದ ಅಂಚುಗಳ ಕಾರ್ಡೇಟೆಂಡಿನೆ ಎಂಬ ತಂತುಗಳಿಂದ, ಬಲ ಹೃತ್ಕುಕ್ಷಿಯ ಒಳಗಿರುವ ಬೆರಳಿನೋಪಾದಿಯ ಸ್ನಾಯುಗಳ ತುದಿಗೆ ಸೇರಿಸಲ್ಪಟ್ಟಿರುವುದರಿಂದ, ಕವಾಟ ಮುಚ್ಚಿಕೊಂಡಾಗ ದಳಗಳು ದೃಢವಾಗಿದ್ದು ರಕ್ತದ ವಾಪಸಾತಿಯ ತಡೆಯನ್ನು ಯಶಸ್ವಿಯಾಗಿ ನೆರವೇರಿಸುತ್ತದೆ. ಬಲಹೃತ್ಕುಕ್ಷಿಯಿಂದ ರಕ್ತ ಫುಪ್ಪುಸ ಅಪಧಮನಿಯೊಳಕ್ಕೆ ನೂಕಲ್ಪಡುತ್ತದೆ. ಈ ಅಪಧಮನಿಯ ಪ್ರಾರಂಭದಲ್ಲಿ ಮೂರು ಅರೆಚಂದ್ರಾಕಾರ ದಳಗಳುಳ್ಳ ಅರೆಚಂದ್ರಾಕಾರ ಕವಾಟವಿದ್ದು ಹೃತ್ಕುಕ್ಷಿ ಸಂಕುಚಿಸಿದಾಗ ವಾಟ್ಸಾಲ್ವನ ಸೈನಸ್‌ಗಳೆಂಬ ಸಣ್ಣ ಪೊಟರೆಗಳೊಳಕ್ಕೆ ಬರಿದಾದ ದಳಗಳು ತಳ್ಳಲ್ಪಟ್ಟು ರಕ್ತ ಅಪಧಮನಿಯೊಳಗೆ ಹೋಗಲು ಅವಕಾಶ ಮಾಡಿಕೊಡುತ್ತದೆ. ಹೃತ್ಕುಕ್ಷಿಯ ವಿಕಾಸ (ರಿಲ್ಯಾಕ್ಸೇಷನ್) ಪ್ರಾರಂಭವಾದಾಗ ಕವಾಟದ ದಳಗಳಲ್ಲಿ ರಕ್ತತುಂಬಿ ಅವು ಹಿಂದಕ್ಕೆ ಬಿದ್ದು ಅಪಧಮನಿಯನ್ನು ಅಡ್ಡಕಟ್ಟಿ ರಕ್ತ ಪುನಃ ಹೃತ್ಕುಕ್ಷಿಯೊಳಗೆ ಹೋಗದಂತೆ ತಡೆಯುತ್ತವೆ. ಫುಪ್ಪುಸ ಅಪಧಮನಿ ರಕ್ತವನ್ನು ಎರಡು ಫುಪ್ಪುಸಗಳಿಗೂ ಒಯ್ಯುತ್ತದೆ. ಅಲ್ಲಿ ರಕ್ತ ಆಕ್ಸಿಜನ್ನನ್ನು ಹೀರಿಕೊಂಡು ಎಡಫುಪ್ಪುಸದಿಂದ ಎರಡು, ಬಲ ಫುಪ್ಪುಸದಿಂದ ಎರಡು ಫುಪ್ಪುಸ ಅಭಿಧಮನಿಗಳ ಮೂಲಕ ಎಡ ಹೃತ್ಕರ್ಣಕ್ಕೆ ಬಂದು ಸೇರುತ್ತದೆ. ಎಡಹೃತ್ಕರ್ಣದಿಂದ ರಕ್ತ ಎಡಹೃತ್ಕುಕ್ಷಿಗೆ ಇವೆರಡರ ನಡುವಣ ದ್ವಾರದ ಮೂಲಕ ಹರಿದು ತುಂಬಿಕೊಳ್ಳುತ್ತದೆ. ಬಲಭಾಗದಲ್ಲಿನಂತೆ ಈ ದ್ವಾರದಲ್ಲೂ ಕವಾಟ ಉಂಟು. ಆದರೆ ಇದರಲ್ಲಿ ಎರಡು ದಳಗಳು ಮಾತ್ರ ಇರುವುದರಿಂದ ಇದನ್ನು ದ್ವಿದಳಕವಾಟವೆಂದು ಕರೆಯಲಾಗಿದೆ. ಇದಕ್ಕೆ ಮೈಟ್ರಲ್ ಕವಾಟವೆಂದು ಕೂಡ ಹೆಸರುಂಟು. ಈ ಕವಾಟ ಸಹ ಎಡಹೃತ್ಕರ್ಣ ಸಂಕುಚಿಸುವಾಗಲೂ ತೆರೆದುಕೊಂಡಿದ್ದು ಎಡಹೃತ್ಕುಕ್ಷಿ ಸಂಪೂರ್ಣ ವಾಗಿ ತುಂಬಿ ಅದರ ಸಂಕುಚನೆ ಪ್ರಾರಂಭವಾದಾಗ ಇದರ ಎರಡು ದಳಗಳೂ ತೇಲಿ ಸಂಪರ್ಕಗೊಂಡು ದ್ವಾರ ಮುಚ್ಚಿಕೊಂಡು ಹೃತ್ಕರ್ಣಕ್ಕೆ ರಕ್ತದ ವಾಪಸಾತಿಯನ್ನು ತಡೆಯುತ್ತದೆ. ಈ ದಳಗಳ ಕುಚ್ಚುಕುಚ್ಚಾದ ಅಂಚು ತಂತುಗಳಿಂದ ಎಡಹೃತ್ಕುಕ್ಷಿಯ ಒಳಗಿರುವ ಬೆರಳಿನೋಪಾದಿಯ ಸ್ನಾಯುಗಳ ತುದಿಗೆ ಸೇರಿಕೊಂಡಿರುವುದರಿಂದ ದೃಢಗೊಳಿಸಲ್ಪಟ್ಟು ರಕ್ತದ ತಡೆ ಯಶಸ್ವಿಯಾಗಿರುತ್ತದೆ. ಎಡಹೃತ್ಕುಕ್ಷಿಯ ಸಂಕುಚನದಿಂದ ರಕ್ತ ಮಹಾಪಧಮನಿಗೆ (ಅಯೋರ್ಟ) ನುಗ್ಗಿಸಲ್ಪಡುತ್ತದೆ. ಮಹಾಪಧಮನಿಯ ಪ್ರಾರಂಭದಲ್ಲೂ ಅರೆಚಂದ್ರಾಕಾರ ಕವಾಟವಿದ್ದು ಎಡಹೃತ್ಕುಕ್ಷಿಯ ವಿಕಾಸ ಪ್ರಾರಂಭವಾದಾಗ ಅಪಧಮನಿಯಿಂದ ರಕ್ತದ ಹಿನ್ನುಗ್ಗುವಿಕೆಯನ್ನು ಅದು ತಡೆಯುತ್ತದೆ. ರಕ್ತ ಮಹಾಪಧಮನಿಯ ಮೂಲಕ ಮುಂದೆ ಹರಿದು ದೇಹದ ಎಲ್ಲ ಕಡೆಗಳಿಗೂ ಪೂರೈಸಲ್ಪಡುತ್ತದೆ. ಗುಂಡಿಗೆಗೇ ರಕ್ತವನ್ನು ಪೂರೈಸುವ ಎಡ, ಬಲ ಎಂಬ ಎರಡು ಗುಂಡಿಗೆ ಅಪಧಮನಿಗಳು ಮಹಾಪಧಮನಿಯ ಪ್ರಾರಂಭದ ಕವಲುಗಳು. ಎಡಬಲ ಹೃತ್ಕುಕ್ಷಿಗಳ ನಡುವೆ ಇರುವ ತಡಿಕೆಯೂ ಸ್ವಲ್ಪಮಟ್ಟಿಗೆ ಓರೆಯಾಗಿರುವುದರಿಂದ ಬಲ ಹೃತ್ಕುಕ್ಷಿ ಸ್ವಲ್ಪ ಮುಂದಕ್ಕೂ ಎಡಹೃತ್ಕುಕ್ಷಿ ಸ್ವಲ್ಪ ಹಿಂದಕ್ಕೂ ಇವೆ. ಈ ತಡಿಕೆ ಕೆಳಭಾಗದಲ್ಲಿ ಸ್ನಾಯುಯುಕ್ತವಾಗಿ ದಪ್ಪವಾಗಿಯೂ ಮಹಾಪಧಮನಿಯ ಉಗಮಸ್ಥಾನದ ಹತ್ತಿರ ಸ್ನಾಯುರಹಿತವಾಗಿ ತೆಳ್ಳಗೂ ಇದೆ. ಅಲ್ಲದೆ ತಡಿಕೆ ಬಲಗಡೆಗೆ ಡೊಂಕಾಗಿ ಉಬ್ಬಿಕೊಂಡಿರುವುದರಿಂದ ಹೃತ್ಕುಕ್ಷಿಗಳ ನೇರದಲ್ಲಿ ಗುಂಡಿಗೆಯನ್ನು ಅಡ್ಡವಾಗಿ ಛೇದಿಸಿದರೆ ಬಲಹೃತ್ಕುಕ್ಷಿ ಅರ್ಧಚಂದ್ರಾಕಾರವಾಗಿದ್ದು ಗುಂಡಗಿರುವ ಎಡಹೃತ್ಕುಕ್ಷಿಯನ್ನು ಆವರಿಸಿದಂತೆ ಕಾಣುವುದು (ಚಿತ್ರ 3). ಹಾಗೆಯೇ ಎಡಹೃತ್ಕುಕ್ಷಿಯ ಭಿತ್ತಿ ಬಲಹೃತ್ಕುಕ್ಷಿಯ ಭಿತ್ತಿಗಿಂತ ಬಹು ದಪ್ಪವಾಗಿರುವುದಾಗಿ ಕಾಣುವುದು. ಹೃತ್ಕುಕ್ಷಿಗಳ ಭಿತ್ತಿ ಬಲಹೃತ್ಕುಕ್ಷಿಯ ಭಿತ್ತಿಗಿಂತಲೂ ತೆಳುವಾಗಿರುತ್ತದೆ. ಹೃತ್ಕರ್ಣ ಹೃತ್ಕುಕ್ಷಿಗಳ ತಡಿಕೆಗಳು ಗುಂಡಿಗೆಯ ಎಡಬಲ ಭಾಗಗಳನ್ನು ನೇರ ಸಂಪರ್ಕವಿಲ್ಲದಂತೆ ಪ್ರತ್ಯೇಕಿಸುತ್ತವೆ.

ಹೃತ್ಕರ್ಣ ಹೃತ್ಕುಕ್ಷಿಗಳ ನಡುವೆ ಯಾವ ನೇರವಾದ ಸಂಬಂಧವೂ ಇಲ್ಲಿ ಕಾಣಿಸುವುದಿಲ್ಲ. ಆದರೂ ಹೃತ್ಕರ್ಣಗಳು ಕುಗ್ಗಿ ಪುನಃ ಹಿಗ್ಗುವುದಕ್ಕೆ ಪ್ರಾರಂಭಿಸಿದ ಮೇಲೆಯೇ ಹೃತ್ಕುಕ್ಷಿಗಳು ಕುಗ್ಗುವುದಕ್ಕೆ ಪ್ರಾರಂಭಿಸುತ್ತವೆ. ಈ ನಿಯಂತ್ರಣ ಕ್ರಮ ಮೇಲೆ ಹೇಳಿದಂತೆ ಸೈನೋ ಏಟ್ರಿಯಲ್ ಮತ್ತು ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣುಗಳಿಂದ ಸಾಧ್ಯವಾಗಿದೆ. ಸೈನೋ ಏಟ್ರಿಯಲ್ ಗಿಣ್ಣಿನಲ್ಲಿ ಗುಂಡಿಗೆಯ ಬಡಿತಕ್ಕೆ ಸ್ವಯಂಪ್ರಚೋದನೆ ಯಾಗುತ್ತದೆ. ಇದು ಎರಡು ಹೃತ್ಕರ್ಣಗಳನ್ನೂ ಒಟ್ಟಿಗೆ ಸಂಕುಚಿಸಿ ಜೊತೆಗೇ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣನ್ನು ಪ್ರಚೋದಿಸುತ್ತದೆ. ಅಲ್ಲಿಂದ ಪ್ರಚೋದನೆ ಹಿಸ್ಸನ ಬೊಂತೆ (ಬಂಡಲ್ ಆಫ್ ಹಿಸ್) ಎಂಬ ಅವ್ಯಕ್ತವಾದ ವಿಶೇಷ ಸ್ನಾಯುಗಳ ಪಟ್ಟಿಯ ಮೂಲಕ ಮುಂದುವರಿಯುತ್ತದೆ. ಹಿಸ್ಸನ ಬೊಂತೆ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣಿನಿಂದ ಪ್ರಾರಂಭವಾಗಿ ಹೃತ್ಕುಕ್ಷಿಗಳ ನಡುವಿನ ತಡಿಕೆಯ ಮೇಲುಭಾಗವನ್ನು ಸೇರುತ್ತದೆ. ಅಲ್ಲಿ ಎರಡು ಕವಲಾಗಿ ತಡಿಕೆಯ ಎಡಬಲ ಮೈಮೇಲೆ ಮುಂದುವರಿದು ಗುಂಡಿಗೆಯ ತುದಿಯನ್ನು ಸೇರುತ್ತದೆ. ಅಲ್ಲಿಂದ ಹೃತ್ಕುಕ್ಷಿಗಳ ಎಡ ಬಲ ಅಂಚುಗಳಲ್ಲಿ ಕ್ರಮಿಸುತ್ತ ಅನೇಕ ಎಳೆಗಳಾಗಿ ಗುಂಡಿಗೆಯ ಸ್ನಾಯುವಿನ ಜೀವಕಣಗಳೊಡನೆ ವಿಲೀನವಾಗುತ್ತದೆ. ಇದರಿಂದ ಸ್ನಾಯುಗಳೆಲ್ಲ ಹೊಂದಿಕೊಂಡು ಚೋದನೆಗೆ ಈಡಾಗುವಂತೆ ನೆರವಾಗುತ್ತದೆ ಮತ್ತು ಎರಡು ಹೃತ್ಕರ್ಣಗಳು ಒಟ್ಟಿಗೇ ಸಂಕುಚಿಸಿದ ಮೇಲೆ ಸುಮಾರು 0.1 ಸೆಕೆಂಡು ತಡೆದು ಎರಡು ಹೃತ್ಕುಕ್ಷಿಗಳೂ ಒಟ್ಟಿಗೇ ಸಂಕುಚಿಸುವುದಕ್ಕೆ ಸಾಧ್ಯವಾಗಿದೆ.

ಗುಂಡಿಗೆಗೆ ಪೂರೈಕೆಯಾಗುವ ನರಗಳಲ್ಲಿ ಉಪಾನುವೇದನ (ಪ್ಯಾರಾಸಿಂಪತೆಟಿಕ್) ನರವಾದ ವೇಗಸ್ ನರವೂ ಕೊರಳು ಮತ್ತು ಎದೆಯ ಮೇಲ್ಗಡೆಯ ನರಗಂಟುಗಳಿಂದ (ಗ್ಯಾಂಗ್ಲಿಯ) ಬರುವ ಅನುವೇದನ ನರಕವಲುಗಳೂ ಇವೆ. ಇವು ಗುಂಡಿಗೆಯ

ಮೇಲ್ಮೈಯಲ್ಲಿ ಮತ್ತು ಆಳದಲ್ಲಿ ಹಿಣಿಲುಗಳಾಗಿರುತ್ತವೆ. ಈ ನರಗಳು ಗುಂಡಿಗೆಯ ಬಡಿತವನ್ನು ಸಂದರ್ಭಕ್ಕೆ ಅನುಸಾರವಾಗಿ ನಿಯಂತ್ರಿಸುತ್ತವೆ. **(ಕೆ.ಕೆ.ಎಸ್‌ಡಬ್ಲ್ಯು.;ಡಿ.ಎಸ್.ಎಸ್.)**

**ಪ್ರಾಣಿಗಳಲ್ಲಿ ಗುಂಡಿಗೆಯ ರಚನೆ :** ತೀರ ಪ್ರಾಥಮಿಕ ದರ್ಜೆಯ ಪ್ರಾಣಿಗಳನ್ನು (ಉದಾಹರಣೆಗೆ ಏಕಾಣು ಜೀವಿಗಳು) ಬಿಟ್ಟು ಇತರ ಎಲ್ಲ ಪ್ರಾಣಿಗಳಿಗೂ ಎರೆಹುಳುಗಳನ್ನೂ ಒಳಗೊಂಡಂತೆ ಅಕಶೇರುಕಗಳಿಗೆ ಸಹ ಗುಂಡಿಗೆ ಉಂಟು. ಪ್ರಾಣಿ ದೇಹದಲ್ಲಿ ರಕ್ತಪರಿಚಲನೆಯ ನಿರಂತರತೆಯನ್ನು ಕೂಡಿಟ್ಟುಕೊಳ್ಳುವುದೇ ಇದು ನಿರ್ವಹಿಸುವ ಕ್ರಿಯೆ. ಪ್ರಸಕ್ತ ಲೇಖನದಲ್ಲಿ ಕಶೇರುಕಗಳಲ್ಲಿ ಗುಂಡಿಗೆಯ ವಿಕಾಸವನ್ನು ವಿವರಿಸಿದೆ.

ಪ್ರಪ್ರಥಮವಾಗಿ ಮಾಂಸಲವಾದ ಒಂದು ಗುಂಡಿಗೆ ಆದಿಮ ಕಶೇರುಕಗಳಲ್ಲಿ ಕಾಣಿಸಿಕೊಂಡಿದೆ. ಚಕ್ರಾಸ್ಯಮೀನುಗಳಲ್ಲಿ ಬಹಳ ಸರಳವಾದ ಮತ್ತು ಮೂಲ ರಚನೆಯನ್ನು ತೋರುವ ಗುಂಡಿಗೆಯನ್ನು ಕಾಣಬಹುದು. ಇದರಲ್ಲಿ ನಾಲ್ಕು ಕೋಣೆಗಳಿದ್ದರೂ ಪ್ರಮುಖವಾದವು ಎರಡು ಮಾತ್ರ – ಹೃತ್ಕರ್ಣ ಮತ್ತು ಹೃತ್ಕುಕ್ಷಿ. ಹೃತ್ಕರ್ಣ ತೆಳುಭಿತ್ತಿನ ಕೋಣೆ. ದೇಹದ ನಾನಾ ಭಾಗಗಳಿಂದ ಬರುವ ಮಲಿನ ರಕ್ತ ಮೊದಲು ಈ ಭಾಗಕ್ಕೆ ಬರುತ್ತದೆ. ಹೀಗೆ ರಕ್ತವನ್ನು ಸಂಗ್ರಹಿಸಿ ತಂದು ಹೃತ್ಕರ್ಣಕ್ಕೆ ಸೇರಿಸುವ ಕ್ರಿಯೆಯಲ್ಲಿ ಸೈನಸ್ ವಿನೋಸಸ್ ಎಂಬ ಇನ್ನೊಂದು ಕೋಣೆ ಪಾತ್ರ ವಹಿಸುತ್ತದೆ. ಹೃತ್ಕರ್ಣದಿಂದ ರಕ್ತ ಮಾಂಸಲವಾದ ಹೃತ್ಕುಕ್ಷಿಗೆ ಹೋಗುತ್ತದೆ. ಅಲ್ಲಿಂದ ಕೋನಸ್ ಎಂಬ ಇನ್ನೊಂದು ಕೋಣೆಯ ಮೂಲಕ ದೇಹದ ವಿವಿಧ ಭಾಗಗಳಿಗೆ ಹರಿಯುತ್ತದೆ. ಗುಂಡಿಗೆಯ ಸುತ್ತ ಸೀಲೋಮಿನಿಂದ ಉದ್ಭವಿಸಿದ ಪೆರಿಕಾರ್ಡಿಯಂ ಎಂಬ ಆವರಣವಿದೆ. ಇದನ್ನು ತೆಳುವಾದ ಭಿತ್ತಿಯೊಂದು ಸುತ್ತುವರಿದಿದೆ. ಪೆರಿಕಾರ್ಡಿಯಮಿನಲ್ಲಿ ಒಂದು ರೀತಿಯ ದ್ರವ ಉಂಟು. ಅದು ಮೃದುಚಾಲಕದ ರೀತಿಯಲ್ಲಿ ವರ್ತಿಸುತ್ತದೆ.

ಪ್ರಾಣಿಯ ಬೆಳವಣಿಗೆಯ ಕಾಲದಲ್ಲಿ ಗುಂಡಿಗೆ ಮೂಲತಃ ಒಂದು ರಕ್ತನಾಳದಿಂದ ಆರಂಭವಾಗುತ್ತದೆ. ಈ ರಕ್ತನಾಳ S– ಆಕಾರದಲ್ಲಿ ಬಾಗಿ ವಿಭೇದೀಕರಣಗೊಂಡು ವಿವಿಧ ಕೋಣೆಗಳಾಗಿ ವಿಭಾಗವಾಗಿ ಸಮರ್ಥವಾದ ಪ್ರಬುದ್ಧ ಗುಂಡಿಗೆಯಾಗಿ ರೂಪುಗೊಳ್ಳುತ್ತದೆ. ಕಶೇರುಕಗಳಲ್ಲಿ ಗುಂಡಿಗೆಯ ರಚನೆಯ ವಿಕಾಸವನ್ನು ಕಾಣಬಹುದು.

ಮೀನುಗಳಲ್ಲಿ ಮೇಲೆ ತಿಳಿಸಿದ ನಾಲ್ಕು ಕೋಣೆಗಳೂ ಇದ್ದು ಕೇವಲ ಮಲಿನ ರಕ್ತ ಮಾತ್ರ ಗುಂಡಿಗೆಗೆ ಬರುತ್ತದೆ. ಇದಕ್ಕೆ ಮಲಿನ ರಕ್ತದ ಗುಂಡಿಗೆ ಎಂದು ಹೆಸರು. ಮೀನುಗಳಲ್ಲಿ ಏಕ ರಕ್ತಾಭಿಸರಣೆ ಮಾತ್ರ ಕಂಡುಬರುತ್ತದೆ. ಸೈನಸ್ ವಿನೋಸಸ್ ಮತ್ತು ಹೃತ್ಕರ್ಣದ ಮಧ್ಯೆ ತೆಳುವಾದ ಅಪೂರ್ಣ ಮಾಂಸಲ ಭಿತ್ತಿ ಇದೆ. ಇವೆರಡರ ನಡುವೆ ದ್ವಾರದಲ್ಲಿ ಕವಾಟಗಳಿವೆ. ಸ್ವಲ್ಪ ಒತ್ತಡದಿಂದಲೇ ರಕ್ತ ಹೃತ್ಕರ್ಣದಿಂದ ಹೃತ್ಕುಕ್ಷಿಗೆ ಹರಿಯುತ್ತದೆ. ಹೃತ್ಕುಕ್ಷಿಯ ಮುಂದೆ ಕೋನಸ್ ಆರ್ಟಿಯೋಸಸ್ ಕೋಣೆ ವೆಂಟ್ರಲ್ ಅಯೋರ್ಟ (ವೆಂಟ್ರಲ್ ಮಹಾಪಧಮನಿ) ಅಥವಾ ಬಲ್ಬಸ್ ಆರ್ಟೀರಿಯೋಸಸ್‌ಗೆ ತೆರೆಯುವುದು. ಬಲ್ಬಸ್ ಆರ್ಟೀರಿಯೋಸಸ್ ಟೀಲಿಯಾಸ್ಟ್ ಮೀನುಗಳಲ್ಲಿ ಮಾತ್ರ ಇದೆ. ಆದ್ದರಿಂದ ಈ ಮೀನುಗಳಲ್ಲಿ ಕೋನಸ್ ಮತ್ತು ಅದರಲ್ಲಿನ ಕವಾಟಗಳು ಕಣ್ಮರೆಯಾಗಿವೆ. ಪುಪ್ಪುಸ ಮೀನುಗಳ ಗುಂಡಿಗೆಯಲ್ಲಿ ಕೆಲವು ವಿಶೇಷಗಳನ್ನು ಕಾಣಬಹುದು. ಅಪೂರ್ಣ ಅಡ್ಡ ಭಿತ್ತಿಯೊಂದು ಹೃತ್ಕರ್ಣವನ್ನು ವಿಭಾಗಿಸಿದೆ. ಇದರ ಎಡಭಾಗ ಬಲಭಾಗಕ್ಕಿಂತ ಚಿಕ್ಕದು. ಇಲ್ಲಿಗೆ ಈಜುಕೋಶದಿಂದ ಬಂದ ರಕ್ತ ಸೇರುತ್ತದೆ. ಈ ದೃಷ್ಟಿಯಿಂದ ಪುಪ್ಪುಸ ಮೀನುಗಳ ಗುಂಡಿಗೆ ಯೂರೊಡಿಲ್ ದ್ವಿಚರಿಗಳ ಗುಂಡಿಗೆಯನ್ನು ಹೋಲುತ್ತದೆ.

ದ್ವಿಚರಿಗಳ ಗುಂಡಿಗೆಯ ರಚನೆ ಮೀನುಗಳ ಗುಂಡಿಗೆಯ ರಚನೆಗಿಂತ ಮುಂದುವರಿದಿದೆ. ದ್ವಿಚರಿಗಳಲ್ಲಿನ ಗುಂಡಿಗೆಯಲ್ಲಿ 3 ಪ್ರಧಾನ ಕೋಣೆಗಳನ್ನು ನೋಡಬಹುದು. ಹೃತ್ಕರ್ಣ ಪೂರ್ಣ ಅಡ್ಡ ಭಿತ್ತಿಯಿಂದ ಎರಡು ಭಾಗವಾಗಿದ್ದು ಎಡಭಾಗಕ್ಕೆ ಶ್ವಾಸಕೋಶಗಳಿಂದಲೂ ಬಲಭಾಗಕ್ಕೆ ದೇಹದ ಮಿಕ್ಕ ಭಾಗಗಳಿಂದಲೂ ರಕ್ತ ಬಂದು ಸೇರುತ್ತದೆ. ಕಿವಿರುಗಳುಳ್ಳ ಯೂರೊಡಿಲ್ ದ್ವಿಚರಿಗಳಲ್ಲಿ ಶ್ವಾಸಕೋಶಗಳು ಕೃಶವಾಗಿದ್ದರೂ ಹೃತ್ಕರ್ಣ ಮಾತ್ರ ಎರಡು ಭಾಗಗಳನ್ನು ಪಡೆದೇ ಇದೆ. ಕೋನಸ್ ಸರಳವಾಗಿದೆ. ಸುರುಳಿ ಕವಾಟವಿಲ್ಲ. ಬಲ್ಬಸ್ ಆರ್ಟೀರಿಯೋಸಸ್ ಅಯೋರ್ಟದ ಬುಡದಲ್ಲಿದೆ. ದ್ವಿಚರಿಗಳ ಗುಂಡಿಗೆ ಮೀನುಗಳ ಗುಂಡಿಗೆಯಂತೆ ಬರಿಯ ಮಲಿನ ರಕ್ತದ ಗುಂಡಿಗೆಯಲ್ಲ. ಇದರಲ್ಲಿ ಮಲಿನ ಮತ್ತು ಶುದ್ಧ ರಕ್ತಗಳೆರಡೂ ಇವೆ. ಮಲಿನ ರಕ್ತವನ್ನು ದೇಹದ ಭಾಗಗಳಿಂದ ಸಂಗ್ರಹಿಸಿ ಶುದ್ಧೀಕರಣಕ್ಕಾಗಿ ಪುಪ್ಪುಸಗಳಿಗೆ ಕಳುಹಿಸುತ್ತದೆ. ಪುಪ್ಪುಸಗಳಿಂದ ಆಮ್ಲಜನಕವನ್ನು ಹೊತ್ತ ರಕ್ತ ದೇಹದ ವಿವಿಧ ಭಾಗಗಳಿಗೆ ಹಂಚುವುದು. ಆದ್ದರಿಂದ ಇವುಗಳಲ್ಲಿ ದ್ವಿರಕ್ತಾಭಿಸರಣೆ ಇದೆ.

ಕಪ್ಪೆ ಮತ್ತು ನೆಲಗಪ್ಪೆಗಳ ಗುಂಡಿಗೆ ಮಿಕ್ಕ ದ್ವಿಚರಿಗಳ ಗುಂಡಿಗೆಗಿಂತ ರಚನೆಯಲ್ಲಿ ಹೆಚ್ಚು ಮುಂದುವರಿದಿದೆ. ಕಪ್ಪೆಯಲ್ಲಿ ಇರುವ ಹೃತ್ಕರ್ಣದ ಅಡ್ಡಭಿತ್ತಿ ಹೃತ್ಕರ್ಣವನ್ನು ಬಲ ಮತ್ತು ಎಡ ಹೃತ್ಕರ್ಣಗಳೆಂಬ ಎರಡು ಭಾಗ ಮಾಡುತ್ತದೆ. ಹೃತ್ಕರ್ಣದ ಕೆಳಗೆ ಹೃತ್ಕುಕ್ಷಿಯಿದೆ. ಇದು ದಪ್ಪ ಮಾಂಸಲ ಭಿತ್ತಿಯಿಂದಾದುದು. ಗುಂಡಿಗೆಯ ಬೆನ್ನುಭಾಗದಲ್ಲಿರುವ ಸೈನಸ್ ವಿನೋಸಸ್ ಬಲ ಹೃತ್ಕರ್ಣಕ್ಕೆ ಸೈನು ಆರಿಕ್ಯುಲಾರ್ ದ್ವಾರದ ಮೂಲಕ ತೆರೆಯುತ್ತದೆ. ಈ ತೆರಪಿನ ಬಳಿ ಸೈನು ಆರಿಕ್ಯುಲಾರ್ ಕವಾಟವಿದೆ. ಇದು ಇರುವುದರಿಂದ ರಕ್ತ ಸೈನಸ್ ವಿನೋಸಸ್‌ನಿಂದ ಹೃತ್ಕರ್ಣಕ್ಕೆ ಮಾತ್ರ ಹರಿಯಲು ಸಾಧ್ಯ. ಸೈನಸ್ ವಿನೋಸಸ್ ಕೋಣೆಗೆ ಮೂರು ಅಭಿಧಮನಿಗಳು ಬಂದು ಸೇರುತ್ತವೆ. ಮುಂಭಾಗದಿಂದ ಎಡ ಮತ್ತು ಬಲ ಉನ್ನತ ಮಹಾಭಿಧಮನಿಗಳೂ (ಸುಪೀರಿಯರ್ ವೀನ ಕೇವ) ಮತ್ತು ಹಿಂಭಾಗದಿಂದ ಅವನತ ಮಹಾಭಿಧಮನಿಯೂ (ಇನ್ಫೀರಿಯರ್ ವೀನ ಕೇವ) ಸೇರುತ್ತವೆ. ಎಡಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿ ತೆರೆಯುತ್ತದೆ. ಹೃತ್ಕರ್ಣಗಳೆರಡೂ ಹೃತ್ಕುಕ್ಷಿಗೆ ಆರಿಕ್ಯುಲೊ ವೆಂಟ್ರಿಕ್ಯುಲಾರ್ ರಂಧ್ರದ ಮೂಲಕ ತೆರೆಯುತ್ತವೆ. ಈ ರಂಧ್ರವನ್ನು ಪಟಲಗಳಂತೆ ಇರುವ ಎರಡು ಆರಿಕ್ಯುಲೋ ವೆಂಟ್ರಿಕ್ಯುಲಾರ್ ಕವಾಟಗಳು ಮುಚ್ಚುತ್ತವೆ. ಕವಾಟದ ಮಡಿಕೆಗಳು ತಂತುಸ್ತಂಭಗಳ ಮೂಲಕ ಹೃತ್ಕುಕ್ಷಿಯ ಮಾಂಸಲ ಭಿತ್ತಿಗೆ ನೇತುಬಿದ್ದಿವೆ. ಈ ತಂತುಸ್ತಂಭಗಳಿಗೆ ಕಾರ್ಡ ಟೆಂಡಿನೆ ಎಂದು ಹೆಸರು. ಹೃತ್ಕುಕ್ಷಿಯ ಬುಡದ ಬಲಭಾಗದಿಂದ ಟ್ರಂಕಸ್ ಆರ್ಟೀರಿಯೋಸಸ್ ಎಂಬ ಅಪಧಮನಿ ಹೊರಡುತ್ತದೆ. ಟ್ರಂಕಸ್ ಬುಡಭಾಗವನ್ನು ಕೋನಸ್ ಆರ್ಟೀರಿಯೋಸಸ್ ಅಥವಾ ಪೈಲ್ಯಾಂಜಿಯಂ ಎಂದೂ ತುದಿಭಾಗವನ್ನು ಬಲ್ಬಸ್ ಅಥವಾ ಸೈನಾಂಜಿಯಂ ಭಾಗವೆಂದೂ ಕರೆಯಲಾಗುತ್ತದೆ. ಕೋನಸ್ ಹೃತ್ಕುಕ್ಷಿಯನ್ನು ಸೇರುವ ಸ್ಥಳದಲ್ಲಿ ಮೂರು ಅರ್ಧಚಂದ್ರಾಕಾರದ ಕವಾಟಗಳಿವೆ. ಕೋನಸ್‌ನಲ್ಲಿ ಉದ್ದವಾದ, ಸುರುಳಿ ಸುತ್ತಿದ ಹಾಗೂ ಓರೆಯಾದ ಕವಾಟ ಉಂಟು. ಈ ಕವಾಟ ಕೋನಸನ್ನು ಅಸಮರ್ಪಕವಾದ ಎರಡು ಭಾಗಗಳನ್ನಾಗಿ ವಿಭಾಗಿಸುತ್ತದೆ. ಬಲಭಾಗಕ್ಕೆ ಕೇವಮ್ ಅಯೋರ್ಟಿಕಂ ಎಂದೂ ಎಡಭಾಗಕ್ಕೆ ಕೇವಮ್ ಪಲ್ಮೊಕ್ಯುಟೇನಿಯಂ ಎಂದೂ ಹೆಸರು. ಟ್ರಂಕಸ್ ಆರ್ಟೀರಿಯೋಸಸ್ ಎರಡು ಕವಲಾಗುತ್ತದೆ. ಪ್ರತಿಯೊಂದು ಕವಲೂ ಮತ್ತೆ ಮೂರು ಕವಲುಗಳಾಗಿ ಒಡೆಯುತ್ತದೆ. ಇವೇ ಕರೋಟಿಡ್, ಸಿಸ್ಟಮಿಕ್ ಮತ್ತು ಪಲ್ಮೊಕುಟೇನಿಯಸ್ ಅಪಧಮನಿಗಳು. ಸರೀಸೃಪಗಳ ಗುಂಡಿಗೆಯಲ್ಲಿ ಹೃತ್ಕರ್ಣ ಎರಡು ವಿಭಾಗವಾಗಿದೆ. ಪ್ರಪ್ರಥಮವಾಗಿ ಹೃತ್ಕುಕ್ಷಿಯಲ್ಲಿ ಅಪೂರ್ಣ ಅಡ್ಡ ಭಿತ್ತಿಯೊಂದು ಕಾಣಿಸಿಕೊಳ್ಳುತ್ತದೆ. ಇದರಿಂದಾಗಿ ಹೃತ್ಕುಕ್ಷಿ ಅಪೂರ್ಣವಾಗಿ ಬಲ ಮತ್ತು ಎಡಭಾಗಗಳಾಗಿ ವಿಭಾಗವಾಗಿದೆ. ಅಯೋರ್ಟ ಮತ್ತು ಕೋನಸ್‌ಗಳು ಬುಡಭಾಗದಲ್ಲೇ ಬೇರೆಯಾಗುವುದರಿಂದ ಪಲ್ಮನರಿ ಅಪಧಮನಿ ಹೃದಯದಿಂದ ಪ್ರತ್ಯೇಕ ಧಮನಿಯಾಗಿಯೇ ಹೊರಡುತ್ತದೆ. ಅಯೋರ್ಟದ ಎರಡು ಕವಲುಗಳು ಕೋನಸಿನ ಬುಡದಲ್ಲೇ ಬೇರೆಯಾಗುತ್ತವೆ. ಆದ್ದರಿಂದ ಮೂರು ಅಪಧಮನಿಗಳು ಹೃದಯದಿಂದಲೇ ಹೊರಡುತ್ತವೆ. ಎಲ್ಲ ಅಪಧಮನಿಗಳ ಬುಡದಲ್ಲಿ ಕವಾಟಗಳಿವೆ. ಸೈನಸ್ ವಿನೋಸಸ್ ಸಣ್ಣದಾಗಿದೆ. ಇದು ಬಲ ಹೃತ್ಕರ್ಣದ ಹತ್ತಿರವಿದ್ದು ಅದಕ್ಕೆ ತಾಗಿಕೊಂಡಿದೆ.

ಸಾಮಾನ್ಯವಾಗಿ ಕಾಣಬರುವ ಸರೀಸೃಪವಾದ ಓತಿಕೇತದ ಹೃದಯದಲ್ಲೂ ಮೇಲೆ ತಿಳಿಸಿದ ರಚನೆಯೇ ಕಂಡುಬರುತ್ತದೆ. ಪೂರ್ಣವಾದ ಅಂತರ ಭಿತ್ತಿಯಿಂದಾಗಿ ಹೃತ್ಕುಕ್ಷಿ ಎರಡು ಭಾಗಗಳಾಗಿ ವಿಭಾಗವಾಗಿರುವುದರಿಂದ ಗುಂಡಿಗೆಯಲ್ಲಿ ಒಟ್ಟು ನಾಲ್ಕು ಕೋಣೆಗಳಿವೆ. ಸೈನಸ್ ವಿನೋಸಸ್ ಸಣ್ಣದಾಗಿದೆ. ಈ ಕೋಣೆಗೆ ಮೂರು ಪ್ರಧಾನ ಅಭಿಧಮನಿಗಳಾದ ಕೇವಲ್‌ಗಳು ಮಲಿನ ರಕ್ತವನ್ನು ತರುತ್ತವೆ. ಸೈನಸ್ ವಿನೋಸಸ್ ಬಲಹೃತ್ಕರ್ಣಕ್ಕೆ ಒಂದು ರಂಧ್ರದ ಮೂಲಕ ತೆರೆಯುತ್ತದೆ. ಈ ರಂಧ್ರವನ್ನು ಸೈನು ಆರಿಕ್ಯುಲಾರ್ ಕವಾಟ ಕಾಪಾಡುತ್ತದೆ. ಎಡಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿ ತೆರೆಯುತ್ತದೆ. ಇದು ಪುಪ್ಪುಸಗಳಿಂದ ಶುದ್ಧರಕ್ತವನ್ನು ತರುತ್ತದೆ. ಎರಡು ಹೃತ್ಕರ್ಣಗಳಿಂದಲೂ ಹೃತ್ಕುಕ್ಷಿಗಳಿಗೆ ಬೇರೆ ಬೇರೆಯಾಗಿಯೇ ಹರಿಯುತ್ತದೆ. ಹೃತ್ಕುಕ್ಷಿ ಬಲವಾದ ದಪ್ಪ ಸ್ಪಂಜಿನ ಮಾಂಸ ಭಿತ್ತಿಯಿಂದಾಗಿದೆ. ಬಲಹೃತ್ಕರ್ಣ ಮತ್ತು ಬಲ ಹೃತ್ಕುಕ್ಷಿಗಳಲ್ಲಿ ಮಲಿನರಕ್ತವೂ ಎಡಹೃತ್ಕರ್ಣ ಮತ್ತು ಹೃತ್ಕುಕ್ಷಿಗಳಲ್ಲಿ ಆಕ್ಸಿಜನೀಕೃತವಾದ ರಕ್ತವೂ (ಶುದ್ಧರಕ್ತ) ಇರುತ್ತದೆ. ಹೃತ್ಕುಕ್ಷಿಯ ಅಂತರ ಭಿತ್ತಿ ಅಪೂರ್ಣವಾಗಿದ್ದರೂ ಸಾಧಾರಣವಾಗಿ ಮಲಿನ ರಕ್ತ ಮತ್ತು ಶುದ್ಧರಕ್ತಗಳು ಬೆರೆಯುವುದಿಲ್ಲ. ಟ್ರಂಕಸ್ ಆರ್ಟೀರಿಯೋಸಸ್ ಬುಡದಲ್ಲೇ ಕವಲೊಡೆದಿರುವುದರಿಂದ ಎಲ್ಲ ಮಹಾಪಧಮನಿಗಳು – ಬಲ ಮತ್ತು ಎಡ ಸಿಸ್ಟಮಿಕ್ ಮತ್ತು ಪಲ್ಮನರಿ ಅಪಧಮನಿಗಳು – ಹೃತ್ಕುಕ್ಷಿಯಿಂದಲೇ ಹೊರಡುತ್ತವೆ. ಇವೆಲ್ಲವೂ ಸಂಯೋಜಿತ ಅಂಗಕೋಶದಿಂದ ಆವೃತವಾಗಿವೆ. ಪಲ್ಮನರಿ ಅಪಧಮನಿಯೂ ಬಲಹೃತ್ಕುಕ್ಷಿಯ ಮೇಲ್ಭಾಗದಿಂದ ಹುಟ್ಟುತ್ತದೆ. ಬಲ ಸಿಸ್ಟಮಿಕ್ ಅಪಧಮನಿ ಎಡ ಹೃತ್ಕುಕ್ಷಿಯಿಂದಲೂ ಎಡ ಸಿಸ್ಟಮಿಕ್ ಅಪಧಮನಿ ಬಲ ಹೃತ್ಕುಕ್ಷಿಯಿಂದಲೂ ಹುಟ್ಟುತ್ತವೆ. ಈ ಎರಡು ಸಿಸ್ಟಮಿಕ್ ಅಪಧಮನಿಗಳು ಮುಂಭಾಗಕ್ಕೆ ಹೋಗುವಾಗ ಒಂದರ ಮೇಲೊಂದು ಅಡ್ಡಹಾಯುವುದರಿಂದ ಟ್ರಂಕಸ್ ಆರ್ಟೀರಿಯೋಸಸ್ ಸ್ವಲ್ಪ ತಿರುಚಿಕೊಂಡಿದೆ. ಇದರಿಂದ ಇವುಗಳ ಹಾದಿ ಬೇರೆಯಾಗಿದೆ.

ಅಂದರೆ ಬಲ ಸಿಸ್ಟಮಿಕ್ ಎಡಗಡೆಗೂ ಎಡ ಸಿಸ್ಟಮಿಕ್ ಬಲಗಡೆಗೂ ಹೋಗುತ್ತವೆ. ಅಪಧಮನಿಗಳ ಬುಡಗಳಲ್ಲಿ ಒಂದು ಜೋಡಿ ಅರ್ಧಚಂದ್ರಾಕಾರದ ಕವಾಟಗಳಿವೆ. ಎಡ ಸಿಸ್ಟಮಿಕ್ ಅಪಧಮನಿ ಅಪೂರ್ಣ ಅಂತರ ಭಿತ್ತಿಯ ಮುಂಭಾಗದಲ್ಲೇ ಇರುತ್ತದೆ. ಅಪಧಮನಿಯಲ್ಲಿ ಮಲಿನ ಮತ್ತು ಶುದ್ಧರಕ್ತಗಳು ಬೆರೆತು ಹರಿಯುತ್ತವೆ.

ಇನ್ನೂ ಹೆಚ್ಚಾಗಿ ಮುಂದುವರಿದ ಗುಂಡಿಗೆಯ ರಚನೆಯನ್ನು ಮೊಸಳೆಗಳಲ್ಲಿ ಕಾಣಬಹುದು. ಇಲ್ಲಿ ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳು ಪೂರ್ಣವಾಗಿ ಬಲ ಮತ್ತು ಎಡ ಭಾಗಗಳಾಗಿ ವಿಭಾಗವಾಗಿದೆ. ಎಡ ಸಿಸ್ಟಮಿಕ್ ಅಪಧಮನಿ ಬಲ ಹೃತ್ಕುಕ್ಷಿಯಿಂದ ಹೊರಡುವುದರಿಂದ ಮಲಿನ ರಕ್ತವನ್ನು ಒಯ್ಯುತ್ತದೆ. ಶುದ್ಧ ರಕ್ತವನ್ನು ಹೊತ್ತ ಬಲ ಸಿಸ್ಟಮಿಕ್ ಮಹಾಪಧಮನಿ ಎಡ ಹೃತ್ಕುಕ್ಷಿಯಿಂದ ಹೊರಡುತ್ತದೆ. ಈ ಎರಡು ಸಿಸ್ಟಮಿಕ್ ಅಪಧಮನಿಗಳಿಗೂ ಅವುಗಳ ಬುಡದಲ್ಲಿರುವ ವೆನಿಸ್ಸ ರಂಧ್ರ ಸಂಬಂಧ ಕಲ್ಪಿಸುತ್ತದೆ. ಒತ್ತಡ ಹೆಚ್ಚಾಗಿರುವ ಎಡಹೃತ್ಕುಕ್ಷಿ ಸಂಕುಚಿಸಿದಾಗ ಎಡ ಸಿಸ್ಟಮಿಕ್ ಅಪಧಮನಿಗೆ ಸ್ವಲ್ಪ ಆಕ್ಸಿಜನೀಕೃತ ರಕ್ತ ಸೇರುವುದು. ಅದೂ ಅಲ್ಲದೆ ಮೊಸಳೆ ನೀರಿಗೆ ಧುಮುಕಿದಾಗ ಬಲ ಹೃತ್ಕುಕ್ಷಿಯಲ್ಲಿ ಒತ್ತಡ ಹೆಚ್ಚಾಗಿ ರಕ್ತ ವೆನಿಸ್ಸ ರಂಧ್ರದ ಮೂಲಕ ಬಲದಿಂದ ಎಡಭಾಗಕ್ಕೆ ಹರಿಯುವುದು.

ಪಕ್ಷಿಗಳ ಗುಂಡಿಗೆಯಲ್ಲಿ ಖಚಿತವಾದ ನಾಲ್ಕು ಕೋಣೆಗಳಿವೆ. ಶುದ್ಧ ಮತ್ತು ಮಲಿನ ರಕ್ತದ ಮಿಶ್ರಣಕ್ಕೆ ಯಾವುದೇ ಅವಕಾಶವೂ ಇಲ್ಲ. ಸೈನಸ್ ವಿನೋಸಸ್ ಇಲ್ಲವೆಂದೇ ಹೇಳಬಹುದು. ಇದರ ಬಹುತೇಕ ಭಾಗ ಬಲಹೃತ್ಕರ್ಣದಲ್ಲಿ ಸೇರಿಹೋಗಿದೆ. ಬಲ ಹೃತ್ಕುಕ್ಷಿಯನ್ನು ಸ್ವಲ್ಪ ಸುತ್ತುವರಿದಿದ್ದು ರಕ್ತವನ್ನು ಪಲ್ಮನರಿ ಅಪಧಮನಿಗೆ ಕಳುಹಿಸುತ್ತದೆ. ಎಡಹೃತ್ಕುಕ್ಷಿಯ ದ್ವಾರ ತೆಳುವಾದ ಕವಾಟದಿಂದ ರಕ್ಷಿತವಾಗಿದೆ. ಈ ಕವಾಟದ ಪದರಗಳು ಹೃತ್ಕುಕ್ಷಿಯ ಗೋಡೆಗೆ ತಂತುಸ್ತಂಭಗಳಿಂದ ಅಂಟಿಕೊಂಡಿದೆ. ಬಲಹೃತ್ಕರ್ಣ–ಹೃತ್ಕುಕ್ಷಿಯ ಮಧ್ಯೆ ಇರುವ ಕವಾಟ ಅಗಲವಾದ ಮಾಂಸಲ ಪದರದಿಂದ ಕೂಡಿದೆ. ಬಲ ಹೃತ್ಕರ್ಣಕ್ಕೆ ಉನ್ನತ ಮತ್ತು ಅವನತ ಅಭಿಧಮನಿಗಳೂ ಎಡ ಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿಯೂ ಬಂದು ಸೇರುತ್ತವೆ. ಪಲ್ಮನರಿ ಅಪಧಮನಿ ಬಲಹೃತ್ಕುಕ್ಷಿಯಿಂದಲೂ ಅಯೋರ್ಟಿಕ್ ಮಹಾಪಧಮನಿ ಎಡಹೃತ್ಕುಕ್ಷಿಯಿಂದಲೂ ಹೊರಡುತ್ತವೆ. ಮೂರು ಅರ್ಧಚಂದ್ರಾಕೃತಿಯ ಕವಾಟಗಳು ಪಲ್ಮನರಿ ಅಪಧಮನಿ ಮತ್ತು ಬಲಹೃತ್ಕುಕ್ಷಿಯ ಮಧ್ಯೆಯೂ ಮತ್ತು ಎಡಹೃತ್ಕುಕ್ಷಿ ಮತ್ತು ಮಹಾಪಧಮನಿಯ ಮಧ್ಯೆಯೂ ಇವೆ. ಪಕ್ಷಿಗಳಲ್ಲಿ ಬಲ ಅಯೋರ್ಟಿಕ್ ಅಪಧಮನಿ (ಸಿಸ್ಟಮಿಕ್) ಮಾತ್ರ ಇದೆ. ಎಡ ಸಿಸ್ಟಮಿಕ್ ಅಪಧಮನಿ ಇಲ್ಲ. ಪಕ್ಷಿಗಳ ಗುಂಡಿಗೆ ಬಹು ವಿಶಿಷ್ಟವಾದರೂ ಇದು ಸರೀಸೃಪ ಮಾದರಿಯ ಗುಂಡಿಗೆಯಿಂದ ಮಾರ್ಪಾಡಾದುದೆಂದು ಹೇಳಲಾಗಿದೆ.

ಸಸ್ತನಿಗಳ ಗುಂಡಿಗೆಯಲ್ಲಿಯೂ ನಾಲ್ಕು ಪ್ರಮುಖ ಕೋಣೆಗಳಿವೆ. ಇದು ಪಕ್ಷಿಗಳ ಗುಂಡಿಗೆಯಷ್ಟೇ ಸಮರ್ಥವಾದುದು. ಹೃತ್ಕರ್ಣದ ಅಂತರಪಟಲ ಮತ್ತು ಹೃತ್ಕುಕ್ಷಿಯ ಅಂತರಪಟಲಗಳು ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳನ್ನು ಎರಡೆರಡು ಭಾಗಗಳನ್ನಾಗಿ ಮಾಡಿವೆ. ಆದ್ದರಿಂದ ಮಲಿನ ರಕ್ತ ಶುದ್ಧ ರಕ್ತದೊಡನೆ ಮಿಶ್ರವಾಗುವುದಿಲ್ಲ. ಸೈನಸ್ ವಿನೋಸಸ್ ಕೋಣೆ ಶೇಷ ಮಾತ್ರವೂ ಇಲ್ಲದೆ ಬಲ ಹೃತ್ಕರ್ಣದೊಡನೆ ಸೇರಿಹೋಗಿದೆ. ಕೋನಸ್ ಕೂಡ ಇಲ್ಲ. ಇದು ಪಲ್ಮನರಿ ಅಯೋರ್ಟ ಮತ್ತು ಸಿಸ್ಟಮಿಕ್ ಮಹಾಪಧಮನಿಗಳಾಗಿ ಪರಿವರ್ತಿತವಾಗಿದೆ. ಬಲಹೃತ್ಕರ್ಣ ಭಿತ್ತಿಯಲ್ಲಿ ಪದವರ್ಧಕ (ಪೇಸ್‌ಮೇಕರ್) ಅಥವಾ ಸೈನು ಆರಿಕ್ಯುಲಾರ್ ಗೆಣ್ಣಿನ ರಚನೆ ಇದೆ. ಇದು ಸೈನಸ್ ವಿನೋಸಸ್‌ನ ಅಂಗಾಂಶ. ಹೃತ್ಕರ್ಣಗಳು ಸುಲಭವಾಗಿ ಹಿಗ್ಗಬಲ್ಲವು. ರಕ್ತ ನುಗ್ಗಿದಾಗ ಅದರ ಒತ್ತಡವನ್ನು ಸಮರ್ಪಕವಾಗಿ ಹತೋಟಿಯಲ್ಲಿಟ್ಟುಕೊಳ್ಳುತ್ತವೆ. ಹೃತ್ಕರ್ಣಗಳು ಹೃತ್ಕುಕ್ಷಿಗೆ ತೆರೆಯುವ ಬಳಿ ಜೇಬಿನ ರೀತಿಯ ಕವಾಟಗಳಿವೆ. ಎಡಹೃತ್ಕರ್ಣ ಮತ್ತು ಹೃತ್ಕುಕ್ಷಿಗಳ ನಡುವಣ ದ್ವಾರವನ್ನು ಎರಡು ಪದರಗಳ ಕವಾಟ ರಕ್ಷಿಸುತ್ತದೆ. ಇದೇ ಬೈಕಸ್ಪಿಡ್ ಕವಾಟ (ಮಿಟ್ರಲ್ ಕವಾಟ ಅಥವಾ ದ್ವೈವಲನ). ಬಲ ಹೃತ್ಕರ್ಣ ಮತ್ತು ಬಲ ಹೃತ್ಕುಕ್ಷಿಗಳ ನಡುವಣ ದ್ವಾರದಲ್ಲಿ ಮೂರು ಪದರಗಳ ಕವಾಟವಿದೆ. ಇದನ್ನು ಟ್ರೈಕಸ್ಪಿಡ್ ಕವಾಟವೆಂದು (ತ್ರೈವಲನ) ಕರೆಯುತ್ತಾರೆ. ಈ ಕವಾಟದ ಅಂಚುಗಳು ಹೃತ್ಕುಕ್ಷಿಯ ಏಣುಗಳಿಗೆ ಅಸ್ಥಿರಜ್ಜಿನ ಹುರಿಗಳಿಂದ ಅಂಟಿಕೊಂಡಿವೆ. ಇವೇ ಕಾರ್ಡ ಟೆಂಡಿನೆ ಕವಾಟಗಳು. ಇವು ರಕ್ತ ಹೃತ್ಕರ್ಣದಿಂದ ಹೃತ್ಕುಕ್ಷಿಗೆ ಮಾತ್ರ ಹರಿಯಲು ಬಿಡುತ್ತವೆ. ವಾಪಸು ಹೋಗಲು ಬಿಡುವುದಿಲ್ಲ. ಎಡ ಹೃತ್ಕುಕ್ಷಿಯ ಮುಂಭಾಗದಿಂದ ಸಿಸ್ಟಮಿಕ್ ಅಯೋರ್ಟ ಹೊರಡುತ್ತದೆ. ಪಲ್ಮನರಿ ಅಪಧಮನಿ ಬಲ ಹೃತ್ಕುಕ್ಷಿಯಿಂದ ಹೊರಟು ಎರಡು ಕವಲಾಗಿ ಒಂದೊಂದು ಕವಲೂ ಫುಪ್ಪಸಕ್ಕೆ ಹೋಗುತ್ತದೆ. ಈ ಅಪಧಮನಿಗಳ ಬುಡಗಳಲ್ಲಿ ಮೂರು ಕವಾಟಗಳಿವೆ. ಇವು ರಕ್ತ ವಾಪಸು ಬರದ ಹಾಗೆ ತಡೆಯುತ್ತವೆ. ಸಸ್ತನಿಗಳಲ್ಲಿ ಎಡ ಸಿಸ್ಟಮಿಕ್ ಮಹಾಪಧಮನಿ ಮಾತ್ರ ಉಂಟು. (ಎನ್.ವಿ.ಎ.)

**ಗುಂಡಿಗೆಯ ರೋಗಗಳು :** ಇಂದು ನಾವು ಕಾಣುತ್ತಿರುವ ಗುಂಡಿಗೆಯ ಅನೇಕ ರೋಗಗಳು ಪ್ರಾಚೀನ ಕಾಲದಿಂದಲೂ ಇದ್ದವೆಂಬ ಅಂಶ ಈಜಿಪ್ಟಿನಲ್ಲಿ ಸುಗಂಧದ್ರವ್ಯಗಳಿಂದ ಕಾಯ್ದಿರಿಸಿದ ಶವಗಳ ಪರಿಶೀಲನೆಯಿಂದ ದೃಢಪಡುತ್ತದೆ. ಗುಂಡಿಗೆಯ ಬಗ್ಗೆ ಮತ್ತು ಅದರ ಕಾರ್ಯವೈಪರೀತ್ಯಗಳ ಬಗ್ಗೆ ಗ್ರೀಕರಲ್ಲಿ ತಿಳಿವಳಿಕೆಯಿದ್ದರೂ ಅನಂತರದ ಅನೇಕ ಶತಮಾನಗಳಲ್ಲಿ ಈ ವಿಷಯದಲ್ಲಿ ಅಜ್ಞಾನವೇ ಇದ್ದಿತು. ಭಾರತದಲ್ಲಿ ಎರಡು ಸಹಸ್ರ ವರ್ಷಗಳಷ್ಟು ಪ್ರಾಚೀನವಾದ ಅಥರ್ವವೇದದಲ್ಲಿನ ಶ್ಲೋಕಗಳಲ್ಲಿ ಗುಂಡಿಗೆಯ ರೋಗಗಳು ಮತ್ತು ಅವುಗಳ ನಿವಾರಣೆಗೆ ಅನುಪಾನ ಕ್ರಮದ ಬಗ್ಗೆ ಉಲ್ಲೇಖ ಉಂಟು. 1628ರಲ್ಲಿ ವಿಲಿಯಂ ಹಾರ್ವೆ ರಕ್ತಪರಿಚಲನ ಕ್ರಮವನ್ನು ಪ್ರಾಣಿಗಳಲ್ಲಿ ಖಚಿತವಾಗಿ ಪ್ರಕಟಪಡಿಸಿದ ಮೇಲೆಯೇ ಗುಂಡಿಗೆಯ ಬಗ್ಗೆ ಯೋಗ್ಯ ತಿಳಿವಳಿಕೆ ಮೂಡಿ ಬಂದು ಹೊಸ ಶೋಧಗಳಿಗೆ ಹೆಚ್ಚಿನ ಚಾಲನೆ ದೊರೆತದ್ದು. 19ನೆಯ ಶತಮಾನದಲ್ಲಿ ಬಳಕೆಗೆ ಬಂದ ಎದೆದರ್ಶಕ, ರಕ್ತ ಒತ್ತಡಮಾಪಕ ಮತ್ತು ಎಕ್ಸ್‌ಕಿರಣ ಚಿತ್ರ ಮತ್ತು 20ನೆಯ ಶತಮಾನದಲ್ಲಿ ಬಳಕೆಗೆ ತರಲಾದ ಗುಂಡಿಗೆಯ ವಿದ್ಯುತ್ ಚಿತ್ರಕ, ಗುಂಡಿಗೆ ಪ್ರತಿಧ್ವನಿ ಚಿತ್ರಕ, ಗುಂಡಿಗೆಯೊಳಗೆ ನಳಿಕೆ ತೂರಿಕೆ, ಹಾಗು ರಕ್ತನಾಳ ಚಿತ್ರಣ ಗುಂಡಿಗೆ ಫುಪ್ಪುಸ ಯಂತ್ರ ಮತ್ತು ಹೃದಯದ ಮೇಲೆ ಶಸ್ತ್ರಚಿಕಿತ್ಸಾ ವಿಧಾನಗಳು ಗುಂಡಿಗೆಯ ರೋಗಗಳು ಬಗ್ಗೆ ಹೆಚ್ಚು ಅರಿವನ್ನು ಉಂಟು ಮಾಡಿವೆ. ಗುಂಡಿಗೆ ಮತ್ತು ಅದರೊಡನೆ ನೇರ ಸಂಬಂಧವಿರುವ ರಕ್ತನಾಳಗಳ ಕಾರ್ಯದಲ್ಲಿ ಬದಲಾವಣೆಯಾದಾಗ ಮನುಷ್ಯ ಗುಂಡಿಗೆಯ ರೋಗದಿಂದ ಪೀಡಿತನಾಗುತ್ತಾನೆ. ಇಂದಿನ ನಾಗರಿಕ ಜಗತ್ತಿನಲ್ಲಿ ಗುಂಡಿಗೆಯ ರೋಗದಿಂದ ನರಳುವವರ ಸಂಖ್ಯೆ ಹೆಚ್ಚುತ್ತಿದ್ದು, ಅದರಿಂದಾಗಿ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಿದೆ. ಗುಂಡಿಗೆಯ ರೋಗಗಳಲ್ಲಿ ಬಹುಪಾಲು ರೋಗಗಳು ನಮ್ಮ ದೇಹದ ಬೆಳವಣಿಗೆಯ ಕಾಲದಲ್ಲಿ ಲಭ್ಯವಾಗುತ್ತವೆ. ಕೆಲವು ಹುಟ್ಟಿನೊಡನೆಯೇ ಬರಬಹುದು. ಅದರಿಂದಾಗಿ ಗುಂಡಿಗೆಯ ರೋಗಗಳನ್ನು ಹುಟ್ಟು (ಆಜನ್ಮ) ಮತ್ತು ಅರ್ಜಿತ ಗುಂಡಿಗೆಯ ರೋಗಗಳೆಂದು ವಿಂಗಡಿಸಲಾಗಿದೆ. ಗುಂಡಿಗೆಯ ಅರ್ಜಿತ ರೋಗಗಳಲ್ಲಿ ಕೀಲುವಾತ ಸಂಬಂಧವಾದ ಹೃದಯರೋಗ, ಜೀವಾಣುಕೃತ ಹೃದಯರೋಗ, ಏರಿದ ರಕ್ತ ಒತ್ತಡ, ಗುಂಡಿಗೆ ನಾಳರೋಗ, ಫುಪ್ಪುಸ ಗುಂಡಿಗೆರೋಗ ಮತ್ತು ಇತರ ಕಾರಣಗಳಿಂದ ಬರುವ ಗುಂಡಿಗೆರೋಗಗಳಿವೆ.

ಗುಂಡಿಗೆಯ ಚಟುವಟಿಕೆಯಲ್ಲಿ ವ್ಯತ್ಯಾಸ ಉಂಟಾದಾಗ ಮನುಷ್ಯ ಗುಂಡಿಗೆ ರೋಗವನ್ನು ಪಡೆಯುತ್ತಾನೆ. ರೋಗ ತನ್ನ ಇರುವಿಕೆಯನ್ನು ವಿಶಿಷ್ಟ ಲಕ್ಷಣಗಳ ಮೂಲಕ ಪ್ರಕಟಪಡಿಸುತ್ತದೆ. ಆದರೂ ಕೆಲವು ಬಾರಿ ಅದು ಯಾವುದೇ ಲಕ್ಷಣಗಳನ್ನು ತೋರ್ಪಡಿಸದೆ ಇರಬಹುದು. ಪ್ರಾಸಂಗಿಕವಾಗಿ ನಡೆಸುವ ವೈದ್ಯಕೀಯ ಪರೀಕ್ಷೆಯ ಕಾಲದಲ್ಲಿ ಗುಂಡಿಗೆಯಲ್ಲಿ ಮರ್ಮರ ಶಬ್ದ ಇಲ್ಲವೆ ದೊಡ್ಡದಾದ ಗುಂಡಿಗೆ ಇರುವುದನ್ನು ಅರಿಯಬಹುದು. ಉಬ್ಬಸ, ಎದೆನೋವು, ಎದೆ ಬಡಿದುಕೊಳ್ಳುವಿಕೆ, ಆಯಾಸ, ಕಾಲುಬಾವು ಕೆಮ್ಮು – ಈ ಪ್ರಮುಖ ಲಕ್ಷಣಗಳ ಮೂಲಕ ಗುಂಡಿಗೆರೋಗ ಪ್ರಕಟವಾಗುತ್ತದೆ. ಗುಂಡಿಗೆಯ ರೋಗದ ಇರುವಿಕೆಯನ್ನು ರೋಗದ ಇತಿಹಾಸ, ದೈಹಿಕ ಪರೀಕ್ಷೆ ಮತ್ತು ಹೃದಯ ಪರೀಕ್ಷೆಯ ಮೂಲಕ ತಿಳಿದುಕೊಳ್ಳಬಹುದು. ರಕ್ತ ಒತ್ತಡಮಾಪನ, ಕಣ್ಣಾಲದರ್ಶನ, ಎಕ್ಸ್ ಕಿರಣ ಪರೀಕ್ಷೆ ಮತ್ತು ಗುಂಡಿಗೆಯ ವಿದ್ಯುಚ್ಚಿತ್ರಣ ಗುಂಡಿಗೆ ಪ್ರತಿಧ್ವನಿ ಚಿತ್ರಣ ಇವು ರೋಗದ ಇರುವಿಕೆಯನ್ನು ದೃಢಪಡಿಸುತ್ತವೆ. ಕೆಲವು ವಿಶಿಷ್ಟ ರೋಗಗಳಲ್ಲಿ ಗುಂಡಿಗೆಯ ವಿವಿಧ ಭಾಗಗಳಲ್ಲಿ ನಳಿಕೆಯೊಂದನ್ನು ಸೇರಿಸಿ ಅಲ್ಲಿನ ರಕ್ತದ ಒತ್ತಡ ಮತ್ತು ಆಕ್ಸಿಜನ್ನಿನ ಪ್ರಮಾಣವನ್ನು ಮತ್ತು ರಕ್ತನಾಳ ಮತ್ತು ಹೃದಯದ ಚಿತ್ರಣವನ್ನು ತಿಳಿದುಕೊಳ್ಳಬಹುದು.

**ಗುಂಡಿಗೆಯ ಆಜನ್ಮ ರೋಗಗಳು :** ತಾಯಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ಗುಂಡಿಗೆಯ ಅಂಗರಚನೆಯಲ್ಲಿ ತೋರಿಬರುವ ವಿಕೃತಿಯಿಂದಾಗಿ ಗುಂಡಿಗೆಯ ಆಜನ್ಮ ರೋಗಗಳು ತಲೆದೋರುತ್ತವೆ. ಗುಂಡಿಗೆಯನ್ನು ಎಡ ಬಲ ಎಂದು ವಿಂಗಡಿಸುವ ಮಧ್ಯದ ತೆರೆಯ ಬೆಳವಣಿಗೆ ಸಮರ್ಪಕವಾಗಿ ಆಗದೆ ರಂಧ್ರವೇರ್ಪಟ್ಟು ಎರಡು ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳ ಮಧ್ಯೆ ಸಂಪರ್ಕವನ್ನು ಕಲ್ಪಿಸಬಹುದು. ಗುಂಡಿಗೆಯಿಂದ ಹೊರಹೊಮ್ಮುವ ಮಹಾಪಧಮನಿ ಮತ್ತು ಫುಪ್ಫುಸ ಅಪಧಮನಿಗಳ ಮಧ್ಯೆ ರಂಧ್ರ ಉಂಟಾಗಿ ಆಕ್ಸಿಜನ್‌ಯುಕ್ತ ಮತ್ತು ಆಕ್ಸಿಜನ್‌ವಿರಳರಕ್ತಗಳ ಸೇರ್ಪಡೆಯಾಗಬಹುದು. ಮಹಾಪಧಮನಿ ಮತ್ತು ಪುಪ್ಪುಸ ಅಪಧಮನಿಗಳೊಡನೆ ಸಂಪರ್ಕವನ್ನು ಉಂಟು ಮಾಡುವ ನಾಳ ಶಿಶು ಜನ್ಮತಳೆದ ಕೆಲದಿವಸಗಳಲ್ಲಿ ಮುಚ್ಚಲ್ಪಡದಿದ್ದರೆ ಇಲ್ಲವೆ ಮಹಾಪಧಮನಿ ತನ್ನ ಮಾರ್ಗ ಮಧ್ಯದಲ್ಲಿ ಕಿರಿದಾಗಿದ್ದರೆ ಗುಂಡಿಗೆಯ ರೋಗ ಉಂಟಾಗುತ್ತದೆ. ಈ ರೋಗಗಳ ತೀವ್ರತೆ ವಿವಿಧ ಮಟ್ಟಗಳದು. ಸ್ಥಳಪಲ್ಲಟಗೊಂಡು

ಬಲಗಡೆಯಿರುವ ಗುಂಡಿಗೆ ಯಾವುದೇ ಲಕ್ಷಣಗಳನ್ನು ತೋರಿಸದೇ ಇರುತ್ತದೆ. ಆದರೆ ಸ್ಥಳಪಲ್ಲಟಗೊಂಡ ಮಹಾರಕ್ತನಾಳಗಳು ಜೀವದ ಉಳಿವಿಗೇ ಮಾರಕವಾಗಿ ಪರಿಣಮಿಸುತ್ತವೆ. ಗುಂಡಿಗೆಯ ಆಜನ್ಮರೋಗಗಳು ತಮ್ಮ ಲಕ್ಷಣಗಳನ್ನು ಚಿಕ್ಕ ವಯಸ್ಸಿನಲ್ಲಿ ತೋರ್ಪಡಿಸುತ್ತವೆ. ಏದುಸಿರು, ದೈಹಿಕ ದುರ್ಬಲತೆ, ಅಸಮರ್ಪಕ ಬೆಳವಣಿಗೆ, ಕೆಮ್ಮು ಮತ್ತು ನೀಲಿ ಛಾಯೆಯ ಚರ್ಮ ಇವೇ ಮುಂತಾದವು ಪ್ರಮುಖ ಲಕ್ಷಣಗಳು. ಕೃತಕ ರೀತಿಯಿಂದ ಆಕ್ಸಿಜನ್ನನ್ನು ಪೂರೈಕೆ ಮಾಡುವ ಗುಂಡಿಗೆ ಘುಪ್ಪುಸ ಯಂತ್ರ ಮತ್ತು ತೆರೆದ ಹೃದಯ ಚಿಕಿತ್ಸೆಯ ಮೂಲಕ ಗುಂಡಿಗೆಯಲ್ಲಿ ತೋರಿಬರುವ ವಿಕೃತಿಗಳನ್ನು ಸರಿಪಡಿಸಬಹುದಾಗಿದೆ.

**ಕೀಲುವಾತ ಸಂಬಂಧದ ಗುಂಡಿಗೆರೋಗ :** ಆರ್ಜಿತ ಗುಂಡಿಗೆರೋಗಗಳಲ್ಲಿ ಕೀಲುವಾತ ಸಂಬಂಧದ ರೋಗ ಪ್ರಮುಖವಾದುದು. ಉಸಿರುನಾಳದ ಮೇಲ್ಭಾಗ ಅಥವಾ ಗಂಟಲಿನಲ್ಲಿ ಬೆಳವಣಿಗೆ ಹೊಂದುವ ಸ್ಟ್ರೆಪ್ಟೋಕಾಕಸ್ ಅಣುಜೀವಿಯ ವಿರುದ್ಧ ದೇಹದಲ್ಲಿ ತೋರಿಬರುವ ಪ್ರತಿಕ್ರಿಯೆಯ ಫಲವಾಗಿ ಜ್ವರ, ಒಗ್ಗದಿಕೆಯ ರೂಪದಲ್ಲಿ 5 ರಿಂದ 15 ವರ್ಷದ ಎಳೆಯರಲ್ಲಿ ತೋರಿಬರುವುದು. ಒಗ್ಗದಿಕೆಯ ಪ್ರಭಾವ ಗುಂಡಿಗೆಯ ವಿವಿಧ ಪದರಗಳ ಮತ್ತು ಕವಾಟಗಳ ಮೇಲೆ ಬೀರಲ್ಪಟ್ಟು ಅಲ್ಲಿ ಊತ ಉಂಟಾಗುವುದು. ಕಾಲ ಕಳೆದಂತೆ ಕವಾಟಗಳು ಬಿರುಸಾಗಿ ಅವುಗಳ ಅಂಚು ಸೇರಿಕೊಂಡು ಗುಂಡಿಗೆಯಲ್ಲಿ ರಕ್ತ ಹರಿದುಹೋಗುವ ಮಾರ್ಗವನ್ನು ಕಿರಿದುಗೊಳಿಸುತ್ತವೆ, ಇಲ್ಲವೆ ಕವಾಟಗಳು ಮುರುಟಿಕೊಂಡು ಗುಂಡಿಗೆಯ ಸಂಕುಚನ ಕಾರ್ಯ ಜರಗುವಾಗ ಅವು ಸಂಪೂರ್ಣವಾಗಿ ಮುಚ್ಚದೆ ಮುಂದೆ ಹರಿದು ಹೋಗುತ್ತಿದ್ದ ರಕ್ತ ಹಿಂದಕ್ಕೆ ಪ್ರವಹಿಸುವಂತೆ ಮಾಡುತ್ತದೆ. ಈ ಲಕ್ಷಣಗಳು ಹೃದಯದ ಎಡಭಾಗದಲ್ಲಿರುವ ದ್ವಿದಳ ಕವಾಟ ಮತ್ತು ಮಹಾಪಧಮನಿ ಅರೆಚಂದ್ರಾಕಾರ ಕವಾಟದಲ್ಲಿ ಸಾಮಾನ್ಯವಾಗಿ ತೋರಿಬರುತ್ತವೆ. ಕಿರಿದುಗೊಂಡ ಕವಾಟ ಮತ್ತು ಅವುಗಳ ಅಸಮರ್ಪಕ ಕ್ರಿಯೆಯಿಂದಾಗಿ ಗುಂಡಿಗೆಯ ಕಾರ್ಯ ಅಸಮರ್ಪಕವಾಗುವುದು. ದಿನ ಕಳೆದಂತೆ ಅದು ದೇಹದ ವಿವಿಧ ಅಂಗಭಾಗಗಳಿಗೆ ರಕ್ತವನ್ನು ಪೂರೈಸಲು ಅಸಮರ್ಥವಾಗಿ ಗುಂಡಿಗೆ ಸೋಲುವಿಕೆಯ ಲಕ್ಷಣಗಳನ್ನು ತೋರ್ಪಡಿಸುವುದು. ಹೃದಯ ಪರೀಕ್ಷೆ ಮಾಡಿ ಎದೆಯನ್ನು ಆಲಿಸಿದಾಗ ಮರ್ಮರ ಶಬ್ದಗಳು ಕೇಳಿಬರುತ್ತವೆ. ಎಳೆಯ ವಯಸ್ಸಿನಲ್ಲಿಯೇ ಈ ರೋಗದಿಂದ ಬಳಲಿ ಸಾವನ್ನಪ್ಪುವವರ ಸಂಖ್ಯೆ ಭಾರತದಲ್ಲಿ ಅಧಿಕವಾಗಿದೆ. ದಂಡಾಣು ಜೀವಿಗಳು ದೇಹದಲ್ಲಿ ಒಗ್ಗದಿಕೆಯನ್ನು ಉಂಟು ಮಾಡಿ ಗುಂಡಿಗೆಯನ್ನು ರೋಗಯುಕ್ತವಾಗಿ ಮಾಡುತ್ತವಾದ್ದರಿಂದ ಶೀತಸ್ರಾವ ಜ್ವರವನ್ನು ತೋರ್ಪಡಿಸುವ ಮಕ್ಕಳಿಗೆ ವಿಶ್ರಾಂತಿ, ಸ್ಯಾಲಿಸಿಲೇಟ್ ಎಂಬ ಔಷಧಿ, ದೀರ್ಘಾವಧಿ ಕಾಲ ಪೆನಿಸಿಲಿನ್ ಮುಂತಾದವನ್ನು ಒದಗಿಸಿ ಜೀವಾಣುಗಳ ಬೆಳವಣಿಗೆಯನ್ನು ತಪ್ಪಿಸಿ ದೇಹದಲ್ಲಿ ಈ ಒಗ್ಗದಿಕೆಯನ್ನು ಹಿಡಿತದಲ್ಲಿ ತರಬಹುದು. ಗುಂಡಿಗೆಯ ರೋಗವಿರುವ ವ್ಯಕ್ತಿ ಗುಂಡಿಗೆಯ ಸೋಲುವಿಕೆ, ರೋಗಾಣುಗಳ ಬೆಳವಣಿಗೆಯಿಂದ ಹೃದಯದ ಒಳಪೊರೆಯುರಿಯೂತ, ರಕ್ತಕರಣೆ ತುಣುಕುಗಳು ಸಡಿಲಗೊಂಡು ದೂರಪ್ರದೇಶಗಳಿಗೆ ಹೋಗಿ ರಕ್ತಪರಿಚಲನೆಗೆ ಅಡ್ಡಿ ಇವುಗಳಿಂದ ಮಡಿಯುವ ಸಂಭಾವ್ಯತೆ ಅಧಿಕ. ಈ ತೊಡಕುಗಳು ಗೋಚರಿಸಿದಾಗ ರೋಗಿಯನ್ನು ಚಿಕಿತ್ಸೆಗೆ ಒಳಪಡಿಸಿ ರೋಗವನ್ನು ಹಿಡಿತದಲ್ಲಿ ತಂದು ಕಿರಿದಾದ ಕವಾಟವನ್ನು ಶಸ್ತ್ರಚಿಕಿತ್ಸೆಯಿಂದ ವಿಶಾಲಗೊಳಿಸಬೇಕು. ಇಲ್ಲವೆ ಅಸಮರ್ಥ ಕವಾಟಗಳ ಬದಲು ಕೃತಕ ಕವಾಟಗಳನ್ನು ಅಳವಡಿಸಬೇಕು.

**ಏರಿದ ರಕ್ತದೊತ್ತಡ :** ನಾಗರಿಕ ಜಗತ್ತಿನ ಕಷ್ಟತರವಾದ ಜೀವನ ಸಾಗಿಸುತ್ತಿರುವ ಅನೇಕರು ಏರಿದ ರಕ್ತದೊತ್ತಡದಿಂದ ಬಳಲುತ್ತಿರುವರು. ಈ ವ್ಯಾಧಿಯಿಂದ ಅನೇಕ ಮಧ್ಯವಯಸ್ಕರು ಸಾವಿಗೀಡಾಗುತ್ತಿದ್ದಾರೆ. ರಕ್ತದೊತ್ತಡ ಸಕಾರಣವಾಗಿ ಇಲ್ಲವೆ ಯಾವ ಕಾರಣವೂ ಗೋಚರಕ್ಕೆ ಬರದೆ ಹೆಚ್ಚಬಹುದು. ಮೂತ್ರಜನಕಾಂಗದ ಊತ, ಅದರ ರಕ್ತಪೂರೈಕೆಗೆ ಅಡ್ಡಿ, ರೋಗಾಣುಗಳ ಸೋಂಕಿನಿಂದುಂಟಾದ ಮೂತ್ರಜನಕಾಂಗದ ರೋಗಗಳು, ಕಿರಿದಾದ ಮಹಾಪಧಮನಿ, ಸುಪ್ರರೀನಲ್ ಗ್ರಂಥಿಯ ವೈಪರೀತ್ಯ, ಗುರಾಣಿಕಗ್ರಂಥಿಯ ಕಾರ್ಯ ವೈಷಮ್ಯ ಮತ್ತು ಗರ್ಭಿಣಿಯರಲ್ಲಿ ಕೆಲವು ವೇಳೆ ಕಾಣಬರುವ ನಂಜು ಇವೇ ಮುಂತಾದವು ರಕ್ತದೊತ್ತಡವನ್ನು ಹೆಚ್ಚಿಸಬಲ್ಲವು. ಈ ತೆರನಾದ ಕಾರಣಗಳು ಕೆಲವು ಜನರಲ್ಲಿ ಮಾತ್ರ ಕಾಣಸಿಗುತ್ತವೆ. ಶೇ. 90 ರಷ್ಟು ರೋಗಿಗಳಲ್ಲಿ ತಿಳಿದುಕೊಳ್ಳಬಹುದಾದ ಕಾರಣ ದೊರೆಯುವುದೇ ಇಲ್ಲ. ಅವರು ಸಾಮಾನ್ಯವಾಗಿ ಮಧ್ಯ ವಯಸ್ಕರು. ಏರಿದ ರಕ್ತದೊತ್ತಡದ ಇರುವಿಕೆ ಅನೇಕರಲ್ಲಿ ಆಕಸ್ಮಿಕವಾಗಿ ಗುರುತಿಸಲ್ಪಡುವುದು. ಬಹುಮಂದಿಗೆ ಇದು ಇದ್ದರೂ ಪ್ರಕಟಿತವಾಗಿ ಯಾವುದೇ ಲಕ್ಷಣಗಳು ವೇದ್ಯವಾಗದಿರಬಹುದು. ಅಂಥವರಲ್ಲಿ ವೈದ್ಯ ಒತ್ತಡ ಹೆಚ್ಚಿರುವುದನ್ನು ತಿಳಿಸಿ ಅದರ ಬಗ್ಗೆ ಹೆದರಿಕೆಯನ್ನು ಉಂಟುಮಾಡಿ ಒತ್ತಡದ ಇನ್ನೂ ಹೆಚ್ಚು ಏರಿಕೆಗೆ ಕಾರಣನಾಗಲೂಬಹುದು. ಇನ್ನೂ ಕೆಲವರು ತಲೆನೋವು, ತಲೆಸುತ್ತು, ಉಬ್ಬಸದಂಥ ಲಕ್ಷಣಗಳನ್ನು ತೋರ್ಪಡಿಸುತ್ತಾರೆ. ಏರಿದ ರಕ್ತದೊತ್ತಡ ತನ್ನ ಪ್ರಭಾವವನ್ನು ಮೂತ್ರಜನಕಾಂಗ ಮತ್ತು ಗುಂಡಿಗೆಯ ಎಡಭಾಗದ ಮೇಲೆ ಬೀರಿ ಅವುಗಳ ಚಟುವಟಿಕೆಗಳಲ್ಲಿ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಮಿದುಳಿನಲ್ಲಿ ರಕ್ತಸ್ರಾವವನ್ನು ಉಂಟುಮಾಡಿ ಸಾವಿಗೆ ಕಾರಣವಾಗಲೂಬಹುದು. ಏರಿದ ರಕ್ತದೊತ್ತಡವನ್ನು ಸಾಮಾನ್ಯ, ಮಧ್ಯಮ ಮತ್ತು ಪ್ರಬಲವೆಂದು ವಿಭಾಗಿಸಲಾಗಿದೆ. ಸಕಾರಣವಾಗಿ ರಕ್ತದೊತ್ತಡ ಏರಿದ್ದಲ್ಲಿ ಅದು ಮೂಲಭೂತ ಕಾರಣದ ಚಿಕಿತ್ಸೆಗೆ ಮಣಿಯುತ್ತದೆ. ಅನೇಕರಲ್ಲಿ ಏರಿಕೆಯ ಕಾರಣ ತಿಳಿಯದ್ದರಿಂದ ಅದನ್ನು ಇಳಿಸುವ ಔಷಧಿಗಳ ಉಪಯೋಗದಿಂದ (ಮೂತ್ರವರ್ಧಕಗಳು ಬೀಟಾತಡೆಗಳು, ಕಾಲ್ಸಿಯಂ ವಿರೋಧಿವಸ್ತುಗಳು ಆಂಜಿಯೋಟೆನ್ಸಿನ್ ಬದಲಿಸುವ ಕಿಣ್ವ ನಿರೋಧಕಗಳು) ಅದನ್ನು ಕೆಳಕ್ಕಿಳಿಸಿ, ರಕ್ತನಾಳಗಳ ಮೇಲೆ ಉಂಟಾಗುವ ಹಾನಿಯನ್ನು ಕಡಿಮೆ ಮಾಡಬೇಕು.

ಗುಂಡಿಗೆ ಅಪಧಮನಿ (ಕರೋನರಿ ಆರ್ಟರಿ) ಗಡಸಾಗುವುದರಿಂದ ತಲೆದೋರುವ ರೋಗಗಳು : ಗಡಸಾಗುವಿಕೆಯ ಪರಿಣಾಮವಾಗಿ ಗುಂಡಿಗೆಗೆ ರಕ್ತ ಪೂರೈಕೆ ಮಾಡುವ ಗುಂಡಿಗೆ ಅಪಧಮನಿಗಳ ಗಾತ್ರ ಕಿರಿದಾಗಿ ಗುಂಡಿಗೆಗೆ ರಕ್ತ ಪೂರೈಕೆ ಸ್ವಲ್ಪ ಮಟ್ಟಿಗೆ ಇಲ್ಲವೆ ಸಂಪೂರ್ಣವಾಗಿ ತಾತ್ಕಾಲಿಕವಾಗಿ ಅಥವಾ ಬಹುಕಾಲಿಕವಾಗಿ ನಿಲುಗಡೆಗೆ ಬರಬಹುದು. ಇದು ಅತಿ ಅಪಾಯಕರ ಪರಿಸ್ಥಿತಿ. ಗುಂಡಿಗೆ ಅಪಧಮನಿಗಳ ಒಳಪದರಿನಲ್ಲಿ ಶೇಖರವಾಗುವ ಸ್ನಿಗ್ಧಪದಾರ್ಥಗಳ ಫಲವಾಗಿ ಅವುಗಳ ಗಾತ್ರ ಅಲ್ಲಲ್ಲಿ ಕಿರಿದಾಗುವುದು. ಒಳಪದರು ಮೃದುತ್ವವನ್ನು ಕಳೆದುಕೊಂಡು ಒರಟಾಗುವುದು. ಇದರಿಂದಾಗಿ ರಕ್ತಪರಿಚಲನೆ ಸ್ಥಗಿತಗೊಳ್ಳುವ ಸನ್ನಿವೇಶಗಳು ವಿಪುಲವಾಗಿವೆ. ವಯಸ್ಸಾದಂತೆ ಇಂಥ ಬದಲಾವಣೆ ದೇಹದ ಎಲ್ಲ ಭಾಗದ ರಕ್ತನಾಳಗಳಲ್ಲೂ ನಡೆಯುತ್ತಲೇ ಇರುತ್ತದೆ. ಗುಂಡಿಗೆ ಅಪಧಮನಿಯ ರಕ್ತ ಪರಿಚಲನೆ ತಾತ್ಕಾಲಿಕವಾಗಿ ತೀರ ಕಡಿಮೆಯಾದಾಗ ಅದು ಗುಂಡಿಗೆ ನೋವು ಅಥವಾ ಗುಂಡಿಗೆ ಅಪಧಮನಿಯ ತೀವ್ರ ಅರಕ್ತತೆಯ ರೂಪದಲ್ಲಿ ತೋರಿಬರುತ್ತದೆ. ಇಲ್ಲವೆ ಅಲ್ಲಿ ರಕ್ತಕರಣೆಗೊಂಡು ಶಾಶ್ವತವಾಗಿ ರಕ್ತಪರಿಚಲನೆಯ ನಿಲುಗಡೆ ಉಂಟಾಗಿ ಹೃದಯಾಘಾತದ ಲಕ್ಷಣಗಳನ್ನು ತೋರ್ಪಡಿಸುತ್ತದೆ. ದೈಹಿಕ ಶ್ರಮ ಹೆಚ್ಚಿದಾಗ ಗುಂಡಿಗೆನೋವು ಎದೆಯ ಮಧ್ಯಭಾಗದಲ್ಲಿ ಪ್ರಕಟಗೊಳ್ಳುತ್ತದೆ. ರಕ್ತಪೂರೈಕೆಯ ಕೊರತೆಯಿಂದಾಗಿ ಗುಂಡಿಗೆಯ ಸ್ನಾಯುವಿಗೆ ಬೇಕಾದಷ್ಟು ಆಕ್ಸಿಜನ್ ದೊರೆಯುವುದಿಲ್ಲವಾದ್ದರಿಂದ ಈ ಕ್ಷಣಿಕನೋವು ತಲೆದೋರುವುದು. ವಿಶ್ರಾಂತಿಯ ಬಳಿಕ ಅದು ಮಾಯವಾಗುವುದು. ನೈಟ್ರೋಗ್ಲಿಸರೀನ್ ಮಾತ್ರೆಯ ಸೇವನೆಯಿಂದ ನೋವು ಕೂಡಲೇ ಶಮನವಾಗುತ್ತದೆ. ರೋಗ ಬಲಿತಂತೆ ನೋವು ಅನುಭವವಾಗುವ ಅವಧಿ ಹೆಚ್ಚುತ್ತದೆ. ಮೊದಮೊದಲು ಶ್ರಮವಾದಾಗ ಬರುತ್ತಿದ್ದ ನೋವು ಈಗ ವಿಶ್ರಾಂತಿಸುತ್ತಿರುವಾಗಲೂ ಬರುತ್ತದೆ. ಅದು ಗುಂಡಿಗೆ ಅಪಧಮನಿಯ ತೀವ್ರ ಅರಕ್ತತೆಯ ಲಕ್ಷಣವಾಗಿದ್ದು ಮುಂದೆ ಬರಬಹುದಾದ ಹೃದಯಾಘಾತಕ್ಕೆ ನಾಂದಿಯಾಗಿ ಪರಿಣಮಿಸುವುದು. ಆಗ್ಗೆ ಕಟ್ಟುನಿಟ್ಟಿನ ವಿಶ್ರಾಂತಿ ಮತ್ತು ದೀರ್ಘಾವಧಿ ಕಾಲ ಕಿರುಫಲಕ ಅಂಟಿಕೆ ಪ್ರತಿರೋಧಕ ಕರಣೆರೋಧಕ ಔಷಧಿಗಳ ಸೇವನೆಯನ್ನು ಮಾಡುವುದರಿಂದ ಹೃದಯಾಘಾತವನ್ನು ತಡೆಗಟ್ಟುವುದು ಸಾಧ್ಯ. ಹೃದಯಾಘಾತದಲ್ಲಿ ಗುಂಡಿಗೆಯ ಒಂದು ಭಾಗಕ್ಕೆ ರಕ್ತ ಪರಿಚಲನೆಯಲ್ಲಿ ಸಂಪೂರ್ಣ ತಡೆಯುಂಟಾಗಿ ಅದು ನಿರ್ಜೀವವಾಗುವುದು. ನೋವು ರೋಗದ ಪ್ರಮುಖ ಲಕ್ಷಣ. ಅದು ಎದೆಯ ಮಧ್ಯ ತೋರಿ ಬಂದು ದೀರ್ಘಕಾಲ ಶಮನ ಹೊಂದದೆ ಇರುವುದು. ಆವೇಳೆ ದೇಹ ಬೆವರಿ ಬಿಳಿಚಿಕೊಳ್ಳುತ್ತದೆ. ನೋವಿನ ಕರಾಳ ಹಿಡಿತದೊಡನೆ ರಕ್ತಪರಿಚಲನೆಯ ಕುಸಿಯುವಿಕೆ ಅಥವಾ ಗುಂಡಿಗೆಯ ಸೋಲುವಿಕೆ ಲಕ್ಷಣಗಳು ಪ್ರಕಟವಾಗುತ್ತವೆ. ಈ ರೋಗದ ಇರುವಿಕೆಯನ್ನು ಗುಂಡಿಗೆಯ ವಿದ್ಯುತ್ ಹೃದಯ ಚಿತ್ರಣ (ಎಲೆಕ್ಟ್ರೊಕಾರ್ಡಿಯೋಗ್ರಾಂ – ಇಸಿಜಿ) ಕ್ರಿಯಟಿನ್ – ಕೀನೇಸ್– ಎಂಬಿ ಎಂಬ ಕಿಣ್ವ ಮತ್ತು ಟ್ರೊಪೊನಿನ್ ಟಿ ಮತ್ತು ಐ ಎಂಬ ಹೃದಯಕ್ಕೆ ನಿರ್ದಿಷ್ಟವಾದ ಪ್ರೋಟಿನ್‌ಗಳ ಏರಿಕೆ ಇರುವುದರಿಂದ ಖಚಿತಪಡಿಸುತ್ತದೆ. ರೋಗಿ ಮರಳಿ ಚೇತರಿಸಿಕೊಳ್ಳಲು ವಿಶ್ರಾಂತಿ, ನೋವನ್ನು ಶಮನಗೊಳಿಸುವ ಔಷಧಿಗಳು (ಮಾರ್ಫಿಯಾ, ಪೆಥೆಡೀನ್) ಸೇವನೆ ಕಿರುಫಲಕಗಳು ಒಗ್ಗೂಡದಂತೆ ಆಸ್ಪಿರಿನ್ ಕೊಡಬೇಕು. ಅರಕ್ತಗೊಂಡ ಹೃದಯ ಸ್ನಾಯುವಿಗೆ ಪುನಃ ರಕ್ತಪ್ರವಾಹ ಉಂಟಾಗುವಂತೆ ರಕ್ತ ಕರಣೆಯನ್ನು ಭಗ್ನಗೊಳಿಸುವ (ಥಾಂಬೊಲೈಸಿನ್) ಮತ್ತು ರಕ್ತಕರಣೆ ರೋಧಕಗಳನ್ನು ಬೀಟಾತಡೆ ಮತ್ತು ನೈಟ್ರೇಟ್‌ಗಳನ್ನು ಕೊಡಬೇಕು. ನಂತರ ಆಂಜೀಯೋಪ್ಲಾಸ್ಟಿ ಅಥವಾ ಬದಲಿ ರಕ್ತನಾಳ ನಾಟಿಯ ಅವಶ್ಯಕತೆಯನ್ನು ನಿರ್ಧರಿಸಲಾಗುತ್ತದೆ.

ಘುಪ್ಪುಸ ಗುಂಡಿಗೆಯ ರೋಗ : ದೀರ್ಘಕಾಲ ಧೂಮಪಾನ ಮಾಡುವ ವ್ಯಕ್ತಿಯಲ್ಲಿ ಶ್ವಾಸನಾಳದಲ್ಲಿನ ಶ್ಲೇಷ್ಮಗ್ರಂಥಿಗಳ ಸಂಖ್ಯೆ ಅಪರಿಮಿತವಾಗಿ ಅಲ್ಲಿ ಹೆಚ್ಚು ಶ್ಲೇಷ್ಮ ಉತ್ಪಾದನೆಯಾಗಿ ಹೊರಬರುತ್ತದೆ. ಇದು ಕೆಮ್ಮಿನ ರೂಪದಲ್ಲಿ ಪ್ರಕಟಗೊಂಡು

ವರ್ಷ ವರ್ಷ ಬೆಳೆದು ಶ್ವಾಸನಾಳದ ಕವಲುಗಳನ್ನು ಕಿರಿದುಗೊಳಿಸಿ ಉಸಿರು ಒಳಹೋಗದಂತೆ ಮಾಡುವುದು. ಅಲ್ಲಿ ಜೀವಾಣುಗಳ ಬೆಳವಣಿಗೆಗೂ ಸಹಾಯಕ ವಾಗುತ್ತದೆ. ಇದರ ಫಲವಾಗಿ ಶ್ವಾಸನಾಳದ ಕವಲುಗಳು ಮತ್ತು ಅವಕ್ಕೆ ಸಂಪರ್ಕ ಪಡೆದ ರಕ್ತನಾಳಗಳಲ್ಲಿ ಅವ್ಯವಸ್ಥೆ ಉಂಟಾಗಿ ರಕ್ತ ಪರಿಚಲನೆಗೆ ತಡೆ ಉಂಟಾಗುತ್ತದೆ. ಆ ಪ್ರದೇಶದಲ್ಲಿ ರಕ್ತಪರಿಚಲನೆಯನ್ನು ಮುಂದುವರಿಸಲು ಬಲ ಹೃತ್ಕುಕ್ಷಿ ಶ್ರಮದಿಂದ ಕೆಲಸ ಮಾಡಬೇಕಾಗುವುದು. ಕ್ರಮೇಣ ಅದು, ದುರ್ಬಲಗೊಂಡು ಸೋತುಹೋಗುತ್ತದೆ. ಆ ಕಾಲದಲ್ಲಿ ಉಬ್ಬಸ, ಕಾಲುಬಾವು ಪ್ರಕಟಗೊಳ್ಳುತ್ತದೆ. ರೋಗ ಬೆಳವಣಿಗೆಗೊಳ್ಳದಂತೆ ತಡೆಗಟ್ಟುವಲ್ಲಿ ಧೂಮಪಾನ ನಿರೋಧವೇ ಮುಖ್ಯವಾದದ್ದು. ಚಿಕಿತ್ಸೆಯಿಂದ ಗುಂಡಿಗೆಯ ಸೋಲುವಿಕೆಯ ಲಕ್ಷಣವನ್ನು ಮತ್ತು ಜೀವಾಣುಗಳ ಬೆಳವಣಿಗೆಯನ್ನು ತಡೆಗಟ್ಟಬಹುದೇ ವಿನಾ ಘಾತಗೊಂಡ ಶ್ವಾಸನಾಳ ಮತ್ತು ರಕ್ತನಾಳಗಳನ್ನು ಮರಳಿ ಆರೋಗ್ಯಸ್ಥಿತಿಗೆ ತರಲು ಸಾಧ್ಯವಿಲ್ಲ.

ಇತರ ಹೃದಯ ರೋಗಗಳು : ಇವುಗಳಲ್ಲಿ ಜೀವಾಣುವಿನಿಂದ ಗುಂಡಿಗೆಯ ಒಳಪೊರೆಯ ಊತ, ಫರಂಗಿ ರೋಗ, ಗುರಾಣಿಕ ಗ್ರಂಥಿಯ ರೋಗಗಳು, ಆಹಾರಸತ್ತ್ವದ ಕೊರತೆ, ಗುಂಡಿಗೆ ಮೇಲುಪೊರೆಯ ರೋಗಗಳು, ರಕ್ತಹೀನತೆ, ಮಾನಸಿಕ ಅಸ್ಥಿರತೆ ಮತ್ತು ಬಡಿತದ ವೈಪರೀತ್ಯಗಳು ಮುಖ್ಯವಾದವು.

ಜೀವಾಣುವಿನಿಂದ ಗುಂಡಿಗೆಯ ಒಳಪೊರೆಯ ಊತ : ಕೀಲುವಾತ ಸಂಬಂಧವಾದ ಹೃದಯರೋಗ ಮತ್ತು ಆಜನ್ಮ ಹೃದಯರೋಗಗಳಿಂದಾಗಿ ಉಂಟಾಗಿರುವ ವಿಕೃತ ಕವಾಟಗಳು ಮತ್ತು ರಂಧ್ರಗಳು ಸ್ಟ್ರೆಪ್ಟೊಕಾಕಸ್ ವಿರಿಡನ್ಸ್ ಮತ್ತಿತರ ಅಣುಜೀವಿಗಳ ಬೆಳವಣಿಗೆಗೆ ಆಸ್ಪದ ಮಾಡಿಕೊಡುತ್ತವೆ. ಈ ರೋಗವನ್ನು ಪೆನಿಸಿಲಿನ್ ಜೀವಾಣು ನಿರೋಧಕವನ್ನು ಕೂಡಲೇ ಹೆಚ್ಚು ಮೊತ್ತದಲ್ಲಿ ದೀರ್ಘಕಾಲ ಕೊಡುವುದರಿಂದ ಹಿಡಿತದಲ್ಲಿ ತರಬಹುದು.

ಫರಂಗಿ ರೋಗ : ಫರಂಗಿ ರೋಗದ ಬೆಳವಣಿಗೆಯ ತೃತೀಯ ಹಂತದಲ್ಲಿ ಗುಂಡಿಗೆ ರೋಗಿಷ್ಠವಾಗಬಹುದು. ಎಡಹೃತ್ಕುಕ್ಷಿಯಿಂದ ಉಗಮಿಸುವ ಮಹಾಪಧಮನಿಯ ರೋಗಕ್ಕೆ ಬಲಿಯಾಗುವುದು. ಅಲ್ಲಿ ಉಂಟಾಗುವ ಅವ್ಯವಸ್ಥೆಯ ಫಲವಾಗಿ ಮಹಾಪಧಮನಿ ಹಿಗ್ಗಬಹುದು (ಡೈಲೇಟ್). ಹೀಗೆ ಹಿಗ್ಗಿದ ರಕ್ತನಾಳ ಒಡೆದು ರಕ್ತಸ್ರಾವವನ್ನು ಉಂಟು ಮಾಡಿ ವ್ಯಕ್ತಿಯ ಸಾವಿಗೆ ಕಾರಣವಾಗಬಹುದು. ಈ ಹಿಗ್ಗುವಿಕೆಯಿಂದ ಅರೆಚಂದ್ರಾಕಾರದ ಕವಾಟದ ದಳಗಳು ಮುರುಟಿಕೊಂಡು ಗುಂಡಿಗೆಯ ಸಂಕುಚನಕ್ರಿಯೆಯಲ್ಲಿ ಮಹಾಪಧಮನಿಯನ್ನು ಮುಚ್ಚಲು ಅಸಮರ್ಥವಾಗಿ ಒತ್ತಳ್ಳಿದ ರಕ್ತ ಮರಳಿ ಹರಿದು ಬರುವಂತೆ ಮಾಡುತ್ತವೆ. ಮಹಾಪಧಮನಿಯ ಆದಿಭಾಗದಲ್ಲಿಯೇ ಗುಂಡಿಗೆಯ ಅಪಧಮನಿಗಳು ಉದ್ಭವಗೊಳ್ಳುವ ಪ್ರದೇಶ ಉಂಟು. ರೋಗದ ಫಲವಾಗಿ ಈ ಅಪಧಮನಿಗಳ ದ್ವಾರಗಳು ಕಿರಿದುಗೊಂಡು ಮುಚ್ಚಿಹೋಗುವ ಸಂಭಾವ್ಯತೆಗಳು ವಿಪುಲವಾಗಿವೆ.

ಗುರಾಣಿಕ ಗ್ರಂಥಿಯ (ಥೈರಾಯಿಡ್ ಗ್ಲ್ಯಾಂಡ್) ರೋಗಗಳು : ಗುರಾಣಿಕ ಗ್ರಂಥಿ ಸಿದ್ಧಪಡಿಸುವ ರಸ ಥೈರಾಕ್ಸಿನ್, ಇದರ ಸ್ರಾವ ಹೆಚ್ಚಾದಾಗ ಇಲ್ಲವೆ ಕಡಿಮೆಯಾದಾಗ ಅದು ಗುಂಡಿಗೆಯ ಮೇಲೆ ಪರಿಣಾಮ ಬೀರಬಲ್ಲದು.

ಆಹಾರಸತ್ತ್ವದ ಕೊರತೆ ಮತ್ತು ರಕ್ತಹೀನತೆ : ರಕ್ತಹೀನತೆ ಉಂಟಾದಾಗ ದೇಹದಲ್ಲಿ ಆಕ್ಸಿಜನ್ನಿನ ಪೂರೈಕೆಯನ್ನು ಕಾಯ್ದುಕೊಳ್ಳುವ ಪ್ರಯತ್ನದಲ್ಲಿ ಗುಂಡಿಗೆ ಹೆಚ್ಚು ಬಾರಿ ಸಂಕುಚನಗೊಳ್ಳಬೇಕಾಗುವುದು. ಅದರಿಂದಾಗಿ ಗುಂಡಿಗೆ ಹಿಗ್ಗುವುದು. ಕಬ್ಬಿಣದ ಅಂಶವಿರುವ ರಕ್ತವರ್ಧಕ ರೋಗಕ್ಕೆ ಮದ್ದು. ಜೀವಾತು ಬಿ – ೧ರ ಅಭಾವ ಉಂಟಾದಾಗ ಸಹ ದೇಹದಲ್ಲಿ ಜಲಸಂಚಯನವಾಗಿ ಗುಂಡಿಗೆ ದೊಡ್ಡದಾಗಿ ಸೋಲುವಿಕೆಯ ಲಕ್ಷಣಗಳನ್ನು ತೋರಿಸುವುದು.

ಗುಂಡಿಗೆಯ ಮೇಲುಪೊರೆ ರೋಗಗಳು : ಗುಂಡಿಗೆಯ ಸುತ್ತ ಇರುವ ಮೇಲು ಪೊರೆ ಶೀತಸ್ರಾವ, ಕ್ಷಯಜೀವಾಣು. ಕೀವು ಉತ್ಪಾದಕ ಜೀವಾಣುಗಳ ಬೆಳವಣಿಗೆ ಮುಂತಾದವುಗಳಿಂದ ಊತಗೊಂಡು ಅಲ್ಲಿ ಜಲಸಂಚಯನವಾಗಬಹುದು. ಹೃದಯಾಘಾತದ ಅನಂತರವೂ ಇಲ್ಲಿ ಊತ ತೋರಿಬರಬಲ್ಲದು.

ಮಾನಸಿಕ ಅಸ್ಥಿರತೆ : ಮಾನಸಿಕ ಅಸ್ಥಿರತೆಯಿಂದ ಗುಂಡಿಗೆಯ ಕಾರ್ಯ ಅಸಮರ್ಪಕವಾಗಿರುವುದರ ಬಗ್ಗೆ ಅನೇಕರಲ್ಲಿ ಆತಂಕ ಮೂಡಿಬಂದು ಅವರು ರೋಗಿಷ್ಠರಾಗುತ್ತಾರೆ. ಆದರೆ, ಪರೀಕ್ಷೆ ಮಾಡುವಾಗ ಗುಂಡಿಗೆಯ ಕಾರ್ಯದಲ್ಲಿ ಯಾವುದೇ ತೊಡಕು ಕಂಡುಬರುವುದಿಲ್ಲ.

ಬಡಿತದ ವೈಪರೀತ್ಯಗಳು : ಸಾಮಾನ್ಯವಾಗಿ ಗಡಿಯಾರದ ರೀತಿಯಲ್ಲಿ ಕ್ರಮವಾಗಿ ಗುಂಡಿಗೆ ನಿರಂತರವಾಗಿ ಬಡಿಯುತ್ತಿರುವುದು. ಯಾವುದೇ ತೆರನಾದ ಹೃದಯರೋಗದಲ್ಲಿ ಬಡಿತದ ಗತಿ ವಿಕೃತವಾಗಬಹುದು. ಕೆಲವು ಬಾರಿ ರೋಗವಿಲ್ಲದೆ ತಾತ್ಕಾಲಿಕವಾಗಿ ಬಡಿತದ ವಿಕೃತಿ ತೋರಿರಬಹುದು. ಬಡಿತದ ವೈಪರೀತ್ಯಗಳು ವಿವಿಧ ರೀತಿಯವುಗಳಾಗಿವೆ. ಆಗಾಗ್ಗೆ ಕಾಣಿಸಿಕೊಂಡು ಗುಂಡಿಗೆ ಬಡಿತ 150ರಿಂದ 200ರ ವರೆಗೆ ಏರಬಹುದು. ಇಲ್ಲವೆ ಜೀವಕ್ಕೆ ಮಾರಕವಾಗಿ 300ಕ್ಕೆ ಏರಿ ಪಟಪಟನೆ ಬಿಡುವಿಲ್ಲದೆ ಬಡಿದುಕೊಳ್ಳಬಹುದು. ಈ ವೈಪರೀತ್ಯಗಳು ದೇಹದ ರಕ್ತಪೂರೈಕೆಯಲ್ಲಿ ತೀವ್ರ ಏರಿಳಿತಗಳನ್ನು ಉಂಟುಮಾಡುತ್ತವೆ. ಹೃದಯರೋಗದಿಂದ ಹೃದಯಸ್ಪಂದನದ ಅಲೆಯ ಮಾರ್ಗದಲ್ಲಿ ತಡೆಯುಂಟಾಗಬಹುದು. ಆಗ ಹೃತ್ಕರ್ಣ ಮತ್ತು ಹೃತ್ಕುಕ್ಷಿಯ ಆಕುಂಚನದಲ್ಲಿ ಏರುಪೇರಾಗುತ್ತದೆ. ಮಿದುಳಿನ ರಕ್ತಪೂರೈಕೆಗೆ ಕ್ಷಣಿಕವಾಗಿ ತಡೆ ಉಂಟಾಗಬಹುದು.

ಗುಂಡಿಗೆಯ ಸೋಲುವಿಕೆ : ಗುಂಡಿಗೆ ತನ್ನ ಕಾರ್ಯವನ್ನು ಸಮರ್ಪಕವಾಗಿ ಮಾಡಲು ಶಕ್ತಿಗುಂದಿ, ದೇಹದ ಬೇರೆ ಬೇರೆ ಅಂಗಗಳಿಗೆ ಅವಶ್ಯಕತೆ ಬೇಕಾದಂತೆ ರಕ್ತಪೂರೈಕೆಯನ್ನು ಮಾಡಲು ಅಸಮರ್ಥವಾದಾಗ ಸೋಲುತ್ತದೆ. ಹೃದಯ ಪರೀಕ್ಷೆ ಮಾಡಿದಾಗ ರೋಗದಿಂದಾದ ವಿಕೃತಿ ಗೋಚರವಾಗುತ್ತದೆ. ಪ್ರಾರಂಭದಲ್ಲಿ ದೇಹದ ಜೀವಕೋಶಗಳಿಗೆ ಬೇಕಾಗುವ ಆಕ್ಸಿಜನ್ನನ್ನು ಪೂರೈಸಲು ಗುಂಡಿಗೆ ಹೆಚ್ಚು ಬಾರಿ ಬಡಿಯುತ್ತದೆ ಮತ್ತು ಹೀಚಿ ದೊಡ್ಡದಾಗುತ್ತದೆ. ಅನಂತರ ಅದು ಶಕ್ತಿ ಗುಂದಿ ದೇಹದ ಬೇಡಿಕೆಯನ್ನು ಪೂರೈಸಲು ಅಸಮರ್ಥವಾಗುತ್ತದೆ. ಆಗ ರೋಗಿಯಲ್ಲಿ ಏದುಸಿರು, ಉಬ್ಬಸ, ಕಾಲಿನಲ್ಲಿ ಬಾವು, ಮೂತ್ರದ ಇಳುವರಿ, ಕತ್ತಿನ ಅಭಿಧಮನಿಗಳ ಹಿಗ್ಗುವಿಕೆ ಮುಂತಾದ ಸೋಲುವಿಕೆಯ ಲಕ್ಷಣಗಳು ಪ್ರಕಟವಾಗುತ್ತವೆ. ಇವು ಏಕಾಏಕಿಯಾಗಿ ಇಲ್ಲವೆ ನಿಧಾನವಾಗಿ ಪ್ರಕಟಗೊಳ್ಳಬಹುದು. ಈ ಲಕ್ಷಣಗಳನ್ನು ವಿಶ್ರಾಂತಿ ಪಡೆಯುವುದರಿಂದ ಮತ್ತು ಸೂಕ್ತ ಔಷಧಿಗಳ ಸೇವನೆಯಿಂದ ಉಪಶಮನಗೊಳಿಸಬಹುದು. (ಪಿ.ಎಸ್.ಎಸ್.)

ಗುಂಡಿಕೆಯೊಳಕ್ಕೆ ನಳಿಕೆತೂರಿಕೆ (ಕ್ಯಾಥೀಟರೈಸೇಷನ್) : ಸೂಕ್ತಗಾತ್ರದ ರಬ್ಬರ್ ಇಲ್ಲವೇ ಪ್ಲಾಸ್ಟಿಕ್ಕಿನ ತೆಳುವಾದ ಬಳುಕುವ ನಳಿಕೆಯನ್ನು ತೊಡೆಬಲ ಮೊಣಕೈಯಲ್ಲಿನ ಅಥವಾ ಅಭಿಧಮನಿಯನ್ನು (ವೇನ್) ಗಾಯಮಾಡಿ ಅದರೊಳಕ್ಕೆ ಹೊಗಿಸಿ ಕ್ರಮೇಣ ಮೇಲೆ ಮೇಲೆ ತಳ್ಳುತ್ತ ಮುಂದುವರಿದಂತೆ ನಳಿಕೆಯ ಕೊನೆ ಗುಂಡಿಗೆಯ ಬಲಭಾಗವನ್ನು ತಲಪುತ್ತದೆ. ಗುಂಡಿಗೆಯನ್ನು ಯಾವುದೇ ಬಾಹ್ಯವಸ್ತು ಸ್ಪರ್ಶಿಸುವುದು ಕೂಡ ಪ್ರಾಣಾಂತಿಕವೇ ಆಗಬಹುದು ಎಂದು ವೈದ್ಯರು ಭಾವಿಸಿದ್ದ ಕಾಲದಲ್ಲಿ ಸ್ವತಃ ತನ್ನ ಮೇಲೆಯೇ ಈ ಪ್ರಯೋಗವನ್ನು ಮಾಡಿ (1929) ಇದರ ಯಶಸ್ಸನ್ನು ಸಾರಿದವ ಜರ್ಮನಿಯ ವೈದ್ಯವಿಜ್ಞಾನಿ ವರ್ನರ್ ಫಾರ್ಸ್ ಮನ್. **(ನೋಡಿ – ಫಾರ್ಸ್‌ಮನ್, ವರ್ನರ್, ಥಿಯೋಡೊರ್ ಆಟೋ)** ಇಡೀ ಪ್ರಯೋಗವನ್ನು ಎಕ್ಸ್‌ಕಿರಣ ಚಿತ್ರದಿಂದ ಕಾಣುವುದು ಸಾಧ್ಯ. ಗುಂಡಿಗೆಯ ಬಲಭಾಗದಿಂದ ನೇರವಾಗಿ ರಕ್ತದ ಮಾದರಿಯನ್ನು ಪರೀಕ್ಷೆಯ ಸಲುವಾಗಿ ಹೊರತೆಗೆಯಲು, ಗುಂಡಿಗೆ ಇಲ್ಲವೆ ಅದರ ದೊಡ್ಡ ರಕ್ತನಾಳದೊಳಗಿನ ರಕ್ತಪರಿಚಲನೆಯದರ ಹಾಗೂ ರಕ್ತದ ಒತ್ತಡವನ್ನು ಅಳೆಯಲು, ಗುಂಡಿಗೆ, ಪುಪ್ಪುಸ ಮತ್ತಿತರ ಅಂಗಗಳ ಕ್ರಿಯೆಯನ್ನು ತಿಳಿಯಲು ನಳಿಕೆತೂರಿಕೆಯ ವಿಧಾನವನ್ನು ಬಳಸುವುದುಂಟು. ಗುಂಡಿಗೆಯ ಶಸ್ತ್ರಕ್ರಿಯೆ ಮಾಡುವ ಮೊದಲು ಅದರ ಪರೀಕ್ಷೆಯನ್ನು ತೊಡೆಯ ಧಮನಿಯ ಮೂಲಕ ನಳಿಕೆತೂರಿಕೆಯ ವಿಧಾನದಿಂದ ಕೂಡ ಮಾಡಬೇಕಾಗುತ್ತದೆ. ನಳಿಕೆತೂರಿಕೆಯಿಂದ ವ್ಯಕ್ತಿಗೆ ಅಪಾಯವಿಲ್ಲ, ನೋವಿಲ್ಲವೆಂದು ಗೊತ್ತಾದ ಬಳಿಕ ಈ ವಿಧಾನ ಬಹುವಾಗಿ ಬಳಕೆಗೆ ಬಂದಿದೆ. ಚಿಕಿತ್ಸೆಯಲ್ಲಿ ರಕ್ತರಸ (ಪ್ಲಾಸ್ಮ) ಇಲ್ಲವೇ ಪೂರ್ತಿ ರಕ್ತವನ್ನು ಕೊಡುವುದರ ಪರಿಣಾಮಗಳನ್ನು ಈ ವಿಧಾನದಿಂದ ಎರಡನೆಯ ಮಹಾಯುದ್ಧ ಕಾಲದಲ್ಲಿ ಕಂಡುಕೊಳ್ಳಲಾಯಿತು. ಹುಟ್ಟಿನಿಂದ ಬಂದ ಗುಂಡಿಗೆಯ ಊನಗಳನ್ನು, ತೀರ ಕಿರಿದಾಗಿರುವ ಸಾಗುದಾರಿಗಳನ್ನು ಮತ್ತು ಗುಂಡಿಗೆಯಲ್ಲಿ ಅಸಹಜ ಕಂಡಿಗಳಿರುವುದನ್ನು ಕಂಡುಹಿಡಿಯಲು ಈ ವಿಧಾನ ಹೆಚ್ಚು ಬಳಕೆಯಲ್ಲಿದೆ. ಕಿರೀಟಕಧಮನಿಯಲ್ಲಿ ರಕ್ತ ಪ್ರವಾಹಕ್ಕೆ ತಡೆಯಿರುವ ಸ್ಥಳ ಮತ್ತು ಅದರ ವ್ಯಾಪಕತೆಯನ್ನು ಅಯೋಡೀನ್‌ಯುಕ್ತ ಅಪಾರಕ ವಸ್ತುವನ್ನು ನೀಡಿ ತಿಳಿದುಕೊಳ್ಳಬಹುದು. ಈ ಬಗೆಯ ಪರೀಕ್ಷೆ ಹೃದಯಾಘಾತದನಂತರ ಹೊರಗಿನಿಂದ ಯಾವುದೇ ವಸ್ತುವನ್ನು ಸೇರಿಸದೆ ಮಾಡುವ ಪರೀಕ್ಷೆಗಳು ಹೃದಯಕ್ಕೆ ಪೆಟ್ಟು ಬಿದ್ದು ಅದು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದು ನಿರ್ಧರಿಸಲ್ಪಟ್ಟನಂತರ ಕೈಕೊಳ್ಳಲಾಗುತ್ತದೆ. ಅದು ನಂತರ ಕೈಕೊಳ್ಳಬಹುದಾದ ಆಂಜಿಯೋಪ್ಲಾಸ್ಟಿ, ಇಲ್ಲವೆ ಸ್ಟೆಂಟ್ ಸೇರ್ಪಡೆಗೆ, ಅಥವಾ ಆ ರಕ್ತಗೊಂಡ ಹೃದಯಸ್ನಾಯುವಿಗೆ ರಕ್ತಪೂರೈಕೆಮಾಡಲು ರಕ್ತ ನಾಳನಾಟಿಮಾಡಿ ರಕ್ತಪ್ರವಾಹಕ್ಕೆ ಬದಲಿ ಮಾರ್ಗರಚನೆಯ ಶಸ್ತ್ರಕ್ರಿಯೆಗೆ ಉಪಯುಕ್ತಕರವಾಗುವುದು. (ಡಿ.ಎಸ್.ಎಸ್.)

**ಗುಂಡಿಗೆ ಸುತ್ತುಪೊರೆಯ ರೋಗ :** ಗುಂಡಿಗೆಯ ಆಕುಂಚನ ಹಾಗೂ ಸಂಕುಚನ ಕ್ರಿಯೆ ಸರಾಗವಾಗಿ ನಡೆಯಲೋಸುಗ ಗುಂಡಿಗೆ ಒಂದು ಸೂಕ್ಷ್ಮವೂ ನಯವುಳ್ಳದ್ದೂ ಆದ ಚೀಲವೊಂದರಲ್ಲಿ ಅಡಕವಾಗಿದೆ. ಶೀತಸ್ರಾವದ ಒಗ್ಗದಿಕೆ, ಕ್ಷಯಾಣು, ಕೀವು ಉತ್ಪಾದಕ ಜೀವಾಣುಗಳು ಮತ್ತು ವಿಷಾಣುಗಳು ಇವುಗಳ ಪ್ರಭಾವಕ್ಕೆ ಒಳಗಾಗಿ

ಈ ಚೀಲದಲ್ಲಿ ಊತ ಉಂಟಾಗಬಹುದು. ಆಗ ಇದರ ಎರಡೂ ಪದರುಗಳು ತಮ್ಮ ಹೊಳಪನ್ನು ನಯವನ್ನು ಕಳೆದುಕೊಂಡು ಒರಟಾಗಿ ಅಲ್ಲಿ ಒಸರಿದ ದ್ರವ ಬ್ರೆಡ್ಡಿಗೆ ಬೆಣ್ಣೆ ಹಚ್ಚಿದಂತೆ ತೋರಿಬರುತ್ತದೆ. ಈ ಪ್ರತಿಕ್ರಿಯೆ ಮುಂದುವರಿದು ಅಲ್ಲಿ ಜಲ, ಕೀವು ಇಲ್ಲವೇ ರಕ್ತ ಸಂಚಯನಗೊಳ್ಳಬಹುದು. ಹೃದಯಾಘಾತದ ಬಳಿಕ, ಗುರಾಣಿ ಗ್ರಂಥಿಯ ರಸದೂತದ ಅಭಾವ ರೋಗದಲ್ಲಿ, ಮೂತ್ರ ಜನಕಾಂಗದ ಕ್ರಿಯಾವೈಫಲ್ಯದ ಅಂತಿಮ ಕಾಲದಲ್ಲಿ ಗುಂಡಿಗೆಯ ಮೇಲೆ ತೀವ್ರವಾದ ಪೆಟ್ಟು ಬಿದ್ದಾಗ ಅಥವಾ ಏಡಿಗಂತಿ ರೋಗದ ಫಲವಾಗಿ ಮುಂತಾದ ಸಂದರ್ಭಗಳಲ್ಲಿ ಗುಂಡಿಗೆಯ ಸುತ್ತುಪೊರೆಯ ಚೀಲದ ಊತ ತೋರಿಬರಬಹುದು.

ದೇಹದಲ್ಲಿ ಕಂಡುಬರುವ ಅನೇಕ ತೆರನಾದ ರೋಗಗಳ ಫಲವಾಗಿ ಈ ಚೀಲದ ಊತ ಉಂಟಾದರೂ ಅದಕ್ಕೆ ಎಲ್ಲ ಸಂದರ್ಭಗಳಲ್ಲೂ ತನ್ನದೇ ಆದ ಕೆಲವು ವಿಶಿಷ್ಟ ಗುಣಲಕ್ಷಣಗಳಿರುವವು. ಪ್ರಾರಂಭದಲ್ಲಿ ಎದೆಮೂಳೆಯ ಪ್ರದೇಶದಲ್ಲಿ ನೋವು ಅಥವಾ ಏನೋ ತೂಕದ ವಸ್ತುವನ್ನು ಇಟ್ಟ ಭಾವನೆ ಉಂಟಾಗುತ್ತದೆ. ಎದೆದರ್ಶಕದ ನೆರವಿನಿಂದ ಗುಂಡಿಗೆ ಇರುವ ಸ್ಥಳವನ್ನು ಆಲಿಸಿದಾಗ ಕೆರೆದಂತೆ ಪರಪರ ಶಬ್ದ ಕೇಳಿಬರುವುದು. ಆ ಶಬ್ದ ಗುಂಡಿಗೆಯ ಶಬ್ದಗಳಿಂದ ಬೇರೆಯಾಗಿ ಕೇಳಿಸುತ್ತದೆ. ರೋಗದ ಮುಂದುವರಿಕೆಯ ಫಲವಾಗಿ ಜಲಸಂಚಯನವಾದಾಗ ಗುಂಡಿಗೆಯ ಪ್ರದೇಶದ ಮೇಲೆ ಬೆರಳಿನಿಂದ ಬಡಿದು ನಿರ್ಣಯಿಸಬಹುದಾದ ಮಂದಶಬ್ದದ ಪ್ರದೇಶ ವಿಸ್ತಾರವಾಗುತ್ತದೆ. ಗುಂಡಿಗೆಯ ಶಬ್ದಗಳು ಅಸ್ಪಷ್ಟವಾಗಿ ಕೇಳಿ ಬರುತ್ತವೆ. ಜಲಸಂಚಯನದಿಂದ ಹಿಗ್ಗಿದ ಗುಂಡಿಗೆ ಚೀಲ ಸುತ್ತಲಿನ ಫುಪ್ಫುಸದ ಮೇಲೆ ಒತ್ತಡವನ್ನು ಬೀರಿ ಉಬ್ಬಸ, ಕೆಮ್ಮು ಉಂಟುಮಾಡುವುದು. ಇದು ಅತಿಯಾದಾಗ ಗುಂಡಿಗೆಯ ಕಾರ್ಯಚಟುವಟಿಕೆ ತೀವ್ರ ವ್ಯತ್ಯಸ್ತಗೊಂಡು ಗುಂಡಿಗೆ ಹಿಗ್ಗುವ ಕಾಲದಲ್ಲಿ ಅದರೊಳಕ್ಕೆ ರಕ್ತ ಹರಿದು ಬರಲು ಅಡ್ಡಿಯಾಗುತ್ತದೆ. ಇದರ ಫಲವಾಗಿ ಅಲ್ಲಿಂದ ಹೊರಹೊಮ್ಮುವ ರಕ್ತದ ಮೊತ್ತ ಕಡಿಮೆಯಾಗುತ್ತದೆ. ನಾಡಿ ಬಡಿತ ತೀವ್ರಗೊಳ್ಳುತ್ತದೆ. ಅಪಧಮನಿಗಳಲ್ಲಿ ರಕ್ತದ ಒತ್ತಡ ಕಡಿಮೆಯಾಗಿ ಕತ್ತಿನ ಅಭಿಧಮನಿಗಳಲ್ಲಿ ಅದರ ಒತ್ತಡ ಹೆಚ್ಚುತ್ತದೆ. ಎಕ್ಸ್‌ಕಿರಣ ಚಿತ್ರವನ್ನು ಪರೀಕ್ಷಿಸಿದರೆ ಗುಂಡಿಗೆ ತನ್ನ ಆಕೃತಿಯನ್ನು ಕಳೆದುಕೊಂಡಿರುವುದು ವಿಸ್ತಾರವಾಗಿರುವುದೂ ಕಾಣಿಸುತ್ತದೆ. ಎಲೆಕ್ಟ್ರೊಕಾರ್ಡಿಯೊಗ್ರಾಫಿನಲ್ಲಿ ಹೃತ್ಕುಕ್ಷಿಯ ಸಂಕುಚನದ ಮುಖ್ಯ ಅಲೆ ತಗ್ಗಾಗಿರುತ್ತದೆ. ಎಸ್‌ಟಿ ರೇಖೆ ಮೇಲಕ್ಕೆ ಬಾಗಿ, ಟಿ ಅಲೆ ಅಧೋಮುಖಿಯಾಗಿರುತ್ತದೆ. ಎಕೋಕಾರ್ಡಿಯೋಗ್ರಾಫಿ ರೋಗನಿದಾನದಲ್ಲಿ ತುಂಬ ಉಪಯುಕ್ತ. ಅದರಿಂದ ಸಂಚಯಗೊಂಡ ದ್ರವದ ಪ್ರಮಾಣ ಮತ್ತು ಅದರ ಸ್ಥಳವನ್ನು ಗುರುತಿಸಬಹುದು. ಗುಂಡಿಗೆಯ ಸುತ್ತುಪೊರೆ ಚೀಲದಲ್ಲಿ ಹೆಚ್ಚು ಜಲ ಸಂಚಯನಗೊಂಡು ಗುಂಡಿಗೆಯ ಮೇಲೆ ತುಂಬ ಒತ್ತಡ ಉಂಟಾದಾಗ ಚೀಲದೊಳಗೆ ಸೂಜಿಯನ್ನು ಹಾಕಿ ಅಲ್ಲಿರುವ ದ್ರವವನ್ನು ಹೊರಕ್ಕೆ ತೆಗೆಯಬೇಕು. ಶೀತಸ್ರಾವದಿಂದ ರೋಗ ಬಂದಿದ್ದರೆ ಗುಂಡಿಗೆಯ ಒಳಪದರಗಳು ಮತ್ತು ಕವಾಟಗಳು ಊತದಲ್ಲಿ ಪಾಲ್ಗೊಂಡು ಮರ್ಮರ ಶಬ್ದಗಳನ್ನು ಹೊರಡಿಸುತ್ತವೆ. ಕ್ಷಯರೋಗದಲ್ಲಿ ಗುಂಡಿಗೆಚೀಲ ದಪ್ಪವಾಗಿ ಒರಟಾಗಿ ಅದರ ಕುಗ್ಗುವಿಕೆಗೆ ತಡೆಯನ್ನು ಉಂಟುಮಾಡಬಲ್ಲದು. ರಾಸಾಯನಿಕ ಚಿಕಿತ್ಸೆಯಿಂದ ಕ್ಷಯ ಮತ್ತು ಕೀವುಜನ್ಯ ರೋಗಾಣುಗಳು ದೂರವಾಗುತ್ತವೆ.

ಹೃದಯಾಘಾತದ ಅನಂತರ ಮತ್ತು ಮೂತ್ರಜನಕಾಂಗದ ಕ್ರಿಯಾವೈಫಲ್ಯದ ಫಲವಾಗಿ ತೋರಿಬರುವ ಗುಂಡಿಗೆ ಚೀಲದ ಊತದಲ್ಲಿ ನೋವು ಗೋಚರಿಸುವುದಿಲ್ಲ. ಏಡಿಗಂತಿ ರೋಗದ ಫಲವಾಗಿ ರೋಗೋತ್ಪನ್ನವಾದಾಗ ರಕ್ತ ಸಂಚಯನಗೊಳ್ಳುತ್ತದೆ.

ಕ್ಷಯ ಮತ್ತು ಕೀವುಜನ್ಯ ರೋಗಾಣುಗಳಿಂದ ಬಂದ ಗುಂಡಿಗೆ ಚೀಲದ ಊತದ ಪ್ರಮುಖ ತೊಡಕಾಗಿ ದೀರ್ಘಕಾಲಿಕ ಹಿಸುಕಿದ ಗುಂಡಿಗೆ ಚೀಲದ ತಡೆ ಉಂಟಾಗಬಲ್ಲದು. ಅಲ್ಲಿ ಒಸರಿದ ದ್ರವ ಗಟ್ಟಿಯಾಗಿ, ನಾರೆಳೆ ಸುತ್ತ ಹರಡಿ ಗುಂಡಿಗೆ ಚೀಲದ ಪದರಗಳು ದಪ್ಪವಾಗಿ ತಮ್ಮ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಅದರ ಮೇಲೆ ಸುಣ್ಣದ ಕಣಗಳು ನೆಲೆಸಿ ಗುಂಡಿಗೆಯ ಸುತ್ತ ಶಿಲಾರೂಪಿ ಪೊರೆಯಾಗಿ ಗುಂಡಿಗೆಯ ಹಿಗ್ಗುವಿಕೆಗೆ ನಿರಂತರ ಆತಂಕವನ್ನು ತಂದೊಡ್ಡುತ್ತವೆ. ಇದರಿಂದ ಗುಂಡಿಗೆಗೆ ಹರಿದು ಬರುವ ರಕ್ತಪ್ರವಾಹಕ್ಕೆ ಅಡ್ಡಿಯಾಗಿ ಕತ್ತಿನ ಅಭಿಧಮನಿಗಳಲ್ಲಿ ರಕ್ತದ ಒತ್ತಡ ಹೆಚ್ಚುವುದು. ಅಲ್ಲಿನ ಮಹಾ ಅಪಧಮನಿಗಳು ಅಲೆ ತೋರಿಸದೆ ದಪ್ಪವಾಗಿ ಉಬ್ಬಿರುತ್ತವೆ. ಜಲೋದರವಾಗಿ ಹೊಟ್ಟೆಯೂ ದಪ್ಪವಾಗಿರುತ್ತದೆ. ಕಾಲಲ್ಲಿ ಜಲಸಂಚಯನದ ಬಾವು ಹೆಚ್ಚಿರುವುದಿಲ್ಲ. ಕಲಿಜ ದೊಡ್ಡದಾಗಿರುವುದು. ನಾಡಿ ಬಡಿತ ತೀವ್ರಗೊಳ್ಳುತ್ತದೆ. ಉಚ್ಛ್ವಾಸ ಕಾಲದಲ್ಲಿ ನಾಡಿ ಕೈಗೆ ಸಿಕ್ಕದಂತಾಗುವುದು. ಗುಂಡಿಗೆ ಸ್ಥಳದಲ್ಲಿ ಆಲಿಸಿದಾಗ ಅದರ ಶಬ್ದಗಳಲ್ಲಿ ಯಾವ ಬದಲಾವಣೆಯೂ ತಿಳಿದುಬರುವುದಿಲ್ಲ. ಗುಂಡಿಗೆಯ ಗಾತ್ರ ಹೆಚ್ಚುವುದಿಲ್ಲ. ಎಕ್ಸ್ ಕಿರಣ ಚಿತ್ರದಲ್ಲಿ ಗುಂಡಿಗೆ ಚೀಲದಲ್ಲಿ ಸುಣ್ಣಸೇರ್ಪಡೆಯಾಗಿ ರುವುದನ್ನು ಕಾಣಬಹುದು. ದಪ್ಪವಾದ ಹೃದಯ ಚೀಲದ ಪದರಗಳನ್ನು ಶಸ್ತ್ರಕ್ರಿಯೆಯಿಂದ ಕತ್ತರಿಸಿ ತೆಗೆದು ಹೃದಯದ ಹಿಗ್ಗುವಿಕೆಗೆ ಅನುಕೂಲ ಮಾಡಿಕೊಡುವುದು ಚಿಕಿತ್ಸೆಯ ಮುಖ್ಯ ವಿಧಾನವಾಗಿದೆ. (ಪಿ.ಎಸ್.ಎಸ್.)

**ಗುಂಡುಸ್ತರಗಳು :** 203.2 ಮಿಮೀಗಳಿಗಿಂತ ಹೆಚ್ಚು ಉದ್ದ ವ್ಯಾಸವಿರುವ ಬೌಲ್ಡರ್ ಜಾತಿಯ ಗುಂಡುಶಿಲೆಗಳ ಹರವಿನಿಂದ ಉಂಟಾದ ನದೀ ಪಾತಳಿಗಳು (ಬೌಲ್ಡರ್ ಬೆಡ್ಸ್). ಇವು ಬಲುಮಟ್ಟಿಗೆ ನದಿಯ ಕಾರ್ಯಾಚರಣೆಯಿಂದಾದವು. ಸಾಮಾನ್ಯವಾಗಿ ಇವನ್ನು ಪರ್ವತಗಳ ತಪ್ಪಲು ಪ್ರದೇಶದಲ್ಲಿ ಕಾಣಬಹುದು. ಅದರಲ್ಲೂ ನದಿಗಳು ಪರ್ವತಗಳ ಪ್ರಪಾತಗಳಲ್ಲಿ, ಕಣಿವೆ ಕಂದರಗಳಲ್ಲಿ ರಭಸದಿಂದ ಹರಿದು ಕೆಳಮಟ್ಟದಲ್ಲಿರುವ ಮೈದಾನಪ್ರದೇಶವನ್ನು ಸಂಧಿಸುವ ಸ್ಥಳದಲ್ಲಿ ಗುಂಡುಸ್ತರಗಳು ಶೇಖರವಾಗುತ್ತವೆ. ಅಲ್ಲಿ ನದಿಯ ವೇಗ ಹಠಾತ್ತನೇ ಕಡಿಮೆಯಾಗುವುದೇ ಇದಕ್ಕೆ ಮುಖ್ಯ ಕಾರಣ. ಇಲ್ಲಿ ನದಿಯ ಮೆಕ್ಕಲೂ ಶೇಖರವಾಗಿ ವಿಶಾಲವಾದ ಪ್ರದೇಶದಲ್ಲಿ ಹರಡಿರುತ್ತದೆ. ವಿಹಂಗಮ ನೋಟದಲ್ಲಿ ಈ ಪ್ರದೇಶ ಬೀಸಣಿಗೆಯಾಕಾರವನ್ನು ತಳೆದಿರುತ್ತದೆ. ಇದನ್ನು ಅಲ್ಯೂವಿಯಲ್ ಫ್ಯಾನ್ ಎನ್ನುತ್ತಾರೆ. ಅನೇಕ ವೇಳೆ ಅಕ್ಕಪಕ್ಕದ ಮೆಕ್ಕಲುಮೈದಾನಗಳು ಒಂದುಗೂಡಿ ಇಡೀ ಪರ್ವತಶ್ರೇಣಿಯ ತಪ್ಪಲಿನುದ್ದಕ್ಕೂ ಗುಂಡುಸ್ತರಗಳ ಶಿಲಾಶ್ರೇಣಿಯನ್ನು ಕಾಣಬಹುದು. ಅನೇಕ ವೇಳೆ ಇವು ನೂರಾರು ಇಲ್ಲವೆ ಸಾವಿರಾರು ಮೀಟರುಗಳಷ್ಟು ಮಂದವಾಗಿದ್ದು ಹತ್ತಾರು ಅಥವಾ ನೂರಾರು ಕಿ.ಮೀ. ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿರುತ್ತವೆ.

ಗುಂಡುಸ್ತರ ಮುಖ್ಯವಾದ ಜಲಜಶಿಲೆ. ಈ ಸ್ತರ ಗುಂಡನೆಯ ನುಣುಪಾದ ನಾನಾ ಗಾತ್ರದ ಶಿಲೆಗಳಿಂದ ಕೂಡಿರುತ್ತದೆ. ಇವುಗಳ ಆಕಾರ ವೈವಿಧ್ಯಮಯ. ಇವು ಅಗ್ನಿಶಿಲೆ, ಜಲಜಶಿಲೆ, ಮತ್ತು ರೂಪಾಂತರಿತ ಶಿಲೆಗಳಿಂದ ಉಂಟಾದವು. ಈ ಶಿಲೆಗಳು ವಿಧ್ವಂಸಕ ಕಾರ್ಯಾಚರಣೆಗೆ ಒಳಗಾಗಿ ಛಿದ್ರಗೊಂಡು ಬೀಸುವ ಗಾಳಿಯಿಂದಲೋ ಹರಿಯುವ ನೀರಿನಿಂದಲೋ ದೂರದ ಸ್ಥಳಗಳಿಗೆ ಒಯ್ಯಲ್ಪಡುತ್ತವೆ. ಈ ಸಾಗಾಣಿಕೆಯಲ್ಲಿ ಶಿಲಾಛಿದ್ರಗಳು ಪರಸ್ಪರ ತೇಯಲ್ಪಟ್ಟು ಅಥವಾ ನದಿಯ ಪಾತ್ರದಲ್ಲಿ ತೆವಳಿ ಹೋಗುವಾಗ ಆ ಗಡುಸಾದ ಭೂಭಾಗಕ್ಕೆ ಉಜ್ಜಲ್ಪಟ್ಟು ಅಂಕುಡೊಂಕುಗಳೆಲ್ಲ ಸವೆದು ಹೊರಮೈ ನುಣುಪಾಗುತ್ತದೆ. ಹಿಮನದಿಯ ಕಾರ್ಯಾಚರಣೆಯಿಂದಲೂ ಇದೇ ರೀತಿಯ ಗುಂಡುಶಿಲೆಗಳುಂಟಾಗುತ್ತವೆ. ಆದರೆ ಅವುಗಳ ಮೈಮೇಲೆ ಅಸಂಖ್ಯಾತ ಬಹುಸೂಕ್ಷ್ಮವಾದ ಸಮಾಂತರ ಗೀರುಗಳನ್ನು ಕಾಣಬಹುದು.

ಗುಂಡುಶಿಲೆಗಳ ವ್ಯಾಸ 203.2 ಮಿಮೀ. ಅಂಗುಲಕ್ಕೂ ಹೆಚ್ಚಾದಾಗ ಬೌಲ್ಡರ್ 203.2ಮಿಮೀ ರಿಂದ 51 ಮಿಮೀಗಳಿದ್ದಲ್ಲಿ ಕಾಬ್ಲ್ 51 ಮಿಮೀಗೂ ಕಡಿಮೆಯಿದ್ದಲ್ಲಿ ಪೆಬ್ಲ್ ಎಂದು ವರ್ಗೀಕರಿಸಲಾಗಿದೆ. ಈ ಶಿಲಾಗುಂಡುಗಳನ್ನು ಯಾವುದೋ ಒಂದು ಬಂಧಕ ವಸ್ತು ಒಟ್ಟುಗೂಡಿಸಿ ಶಿಲೆಯಾಗಿ ಮಾರ್ಪಡಿಸುತ್ತದೆ. ಇದು ಸಿಲಿಕ, ಸುಣ್ಣ ಅಥವಾ ಜೇಡುವಸ್ತುವಾಗಿರುತ್ತವೆ. ಹೀಗುಂಟಾದ ಶಿಲೆಯಲ್ಲಿ ಬೌಲ್ಡರುಗಳೇ ಹೆಚ್ಚು ಮೊತ್ತದಲ್ಲಿ ಇದ್ದಾಗ ಆ ಶಿಲೆಯನ್ನು ಗುಂಡುಸ್ತರ ಎನ್ನುತ್ತಾರೆ. (ಬಿ.ವಿ.ಜಿ.)

**ಗುಂಡ್ಲುಪೇಟೆ:** ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಮುಖ್ಯಸ್ಥಳ. ಈ ತಾಲ್ಲೂಕಿನ ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು, ಪೂರ್ವದಲ್ಲಿ ಚಾಮರಾಜನಗರ, ಉತ್ತರದಲ್ಲಿ ನಂಜನಗೂಡು, ಪಶ್ಚಿಮಉತ್ತರದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕು ಇವು ಸುತ್ತುವರಿದಿವೆ. ಕಸಬೆ, ಹಂಗಳ, ಬೇಗೂರು ಮತ್ತು ತೆರಕಣಾಂಬಿ ಹೋಬಳಿಗಳು ಗ್ರಾಮಗಳು 162. ತಾಲ್ಲೂಕಿನ ವಿಸ್ತೀರ್ಣ 14,062ಚ.ಕಿಮೀ. ಜನಸಂಖ್ಯೆ 2,12,895.

ತಾಲ್ಲೂಕಿನ ದಕ್ಷಿಣ ಹಾಗೂ ಪಶ್ಚಿಮ ಭಾಗ ಅರಣ್ಯ ಮತ್ತು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಬಂಡೀಪುರ ಮತ್ತು ಬೇರಂಬಾಡಿ ರಕ್ಷಿತ ಅರಣ್ಯಗಳು ಇರುವುದು ಇಲ್ಲಿಯೇ. ಈ ತಾಲ್ಲೂಕಿನ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಜನವಸತಿ ಹೆಚ್ಚು. ಈ ಜನವಸತಿ ಪ್ರದೇಶಗಳು ಮತ್ತು ಅರಣ್ಯಗಳ ನಡುವೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಮೇರೆಗಳಿಗೆ ಸಮಾನಾಂತರವಾಗಿ ಹಬ್ಬಿರುವ ಒಂದು ಬೆಟ್ಟಸಾಲಿದೆ. ಎರಡು ದಿಕ್ಕುಗಳ ಈ ಬೆಟ್ಟದ ಹರವುಗಳು ಗೋಪಾಲಸ್ವಾಮಿ ಬೆಟ್ಟದಲ್ಲಿ ಸಂಧಿಸುತ್ತವೆ. ತಾಲ್ಲೂಕಿನ ದಕ್ಷಿಣ ಗಡಿಯಲ್ಲಿ ಮೋಯರ್ ನದಿ ಹರಿಯುತ್ತದೆ. ಇದೇ ಕರ್ನಾಟಕ ಮತ್ತು ತಮಿಳುನಾಡಿನ ಈ ಭಾಗದ ಗಡಿ ರೇಖೆ. ತಾಲ್ಲೂಕಿನ ಮುಖ್ಯ ನದಿ ಗುಂಡ್ಲುಹೊಳೆ. ಈ ನದಿ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತದೆ. ಮುಂದೆ ನಂಜನಗೂಡಿನಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ತಾಲ್ಲೂಕಿನಲ್ಲಿ ಎರೆಮಣ್ಣು ಇದೆ. ಹೆಚ್ಚು ಭಾಗ ನುರುಜುಭೂಮಿ, ಮಳೆ ಕಡಿಮೆ. ಜೋಳ ಮುಖ್ಯ ಬೆಳೆ. ರಾಗಿ,

ಅವರೆ, ಹರಳು ಇತ್ಯಾದಿಗಳ ವ್ಯವಸಾಯ ಸಹ ಇದೆ. ಕೆರೆಗಳಿಂದ ಸ್ವಲ್ಪಮಟ್ಟಿಗೆ ಬತ್ತದ ಬೆಳೆ ಆಗುತ್ತದೆ. ತೋಟಗಳೂ ಇವೆ. ಇಲ್ಲಿಯ ವೀಳ್ಯದ ಎಲೆ ಪ್ರಸಿದ್ಧ.

ಗುಂಡ್ಲುಪೇಟೆ ಈ ತಾಲ್ಲೂಕಿನ ಕೇಂದ್ರ. ಗುಂಡ್ಲುಹೊಳೆಯ ಎಡದಂಡೆಯ ಮೇಲಿರುವ ಈ ಊರು ಮೈಸೂರು–ಉದಕಮಂಡಲ (ಊಟಿ) ಹೆದ್ದಾರಿಯಲ್ಲಿ ಮೈಸೂರಿನ ದಕ್ಷಿಣಕ್ಕೆ 61ಕಿಮೀ ದೂರದಲ್ಲಿದೆ. ಗುಂಡ್ಲುಪೇಟೆಯಿಂದ ಪೂರ್ವಕ್ಕಿರುವ ಚಾಮರಾಜನಗರಕ್ಕೆ, ಪಶ್ಚಿಮದೆಡೆ ಕೇರಳದ ಸುಲ್ತಾನ ಬತ್ತೇರಿ ಮತ್ತು ಮುಂದೆ ಕಣ್ಣಾನೂರಿಗೆ, ವಾಯವ್ಯದಲ್ಲಿ ಹೆಗ್ಗಡದೇವನಕೋಟೆ ಕಡೆಗೆ ರಸ್ತೆಗಳಿವೆ.

ಪರವಾಸುದೇವ ದೇವಾಲಯ, ಗುಂಡ್ಲುಪೇಟೆ

ಈ ಊರಿನ ಪ್ರಾಚೀನನಾಮ ವಿಜಯಪುರ. ಇದು ತೆರಕಣಾಂಬಿ ಅರಸರ ವಶದಲ್ಲಿ ಬಹಳ ಕಾಲ ಇತ್ತೆಂದು ತೋರುತ್ತದೆ. 1674ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರು ಈ ಸ್ಥಳ ಬೆಳೆಯಲು ಕಾರಣ. ಇವರು ತಮ್ಮ ಬಾಲ್ಯವನ್ನು ಗುಂಡ್ಲುಪೇಟೆಯ ಸಮೀಪದಲ್ಲಿನ ಹಂಗಳದಲ್ಲಿರುವ ಒಂದು ಕೋಟೆಯಲ್ಲಿ ಬಂಧನದಲ್ಲಿ ಕಳೆಯುತ್ತಿದ್ದಾಗ ಇವರ ತಂದೆ ವಿಧಿವಶರಾಗಲು ಅವರ ಅಂತ್ಯಕ್ರಿಯೆಯನ್ನು ವಿಜಯಪುರದ ಬಳಿ ಇರುವ ಗುಂಡ್ಲುಹೊಳೆ ಬಳಿ ನೆರವೇರಿಸಿ ಮತ್ತೆ ಸೆರೆಮನೆಗೆ ಹಿಂದಿರುಗಿದರು. ಕಾಲಾನಂತರ ತಂದೆಯ ಅಂತ್ಯಕ್ರಿಯೆ ನಡೆದ ಸ್ಥಳದ ಬಳಿ ಒಂದು ಅಗ್ರಹಾರವನ್ನು ಕಟ್ಟಿಸಿ, ವಿಜಯಪುರದ ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಿ, ತಂದೆಯ ಸಮಾಧಿಯ ಮೇಲೆ ಪರವಾಸುದೇವ ದೇವಾಲಯವನ್ನು ಕಟ್ಟಿಸಿದರು. ಅಂದಿನಿಂದ ವಿಜಯಪುರ ಪೇಟೆ ಸ್ಥಳವಾಗಿ ಬೆಳೆದು ಗುಂಡ್ಲುಪೇಟೆ ಎಂಬ ಹೆಸರನ್ನು ಗಳಿಸಿತು. ಈಗ ಅಗ್ರಹಾರವಾಗಲಿ ಕೋಟೆಯಾಗಲಿ ಉಳಿದಿಲ್ಲ. ಪರವಾಸುದೇವ ದೇವಾಲಯ ಟಿಪ್ಪು ಸುಲ್ತಾನನ ಆಳಿಕೆಯವರೆಗೂ ಉತ್ತಮ ಸ್ಥಿತಿಯಲ್ಲಿತ್ತು. ಅನಂತರದ ವರ್ಷಗಳಲ್ಲಿ ಸರಿಯಾದ ರಕ್ಷಣೆಯಿಲ್ಲದೆ ಪಾಳುಬಿದ್ದಿದೆ. ಕಣಶಿಲೆಯಿಂದ ಕಟ್ಟಿರುವ ಈ ದೇವಾಲಯ ಸಾಕಷ್ಟು ವಿಶಾಲವಾಗಿದ್ದು ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ವಿಶಾಲವಾದ ಮತ್ತು ಚೌಕಟ್ಟಾದ 13 ಕಂಬಗಳಿರುವ ನವರಂಗ ಮತ್ತು ಅದಕ್ಕೆ ಉತ್ತರ ಹಾಗೂ ದಕ್ಷಿಣದ ಕಡೆ ಒಂದೊಂದು ಸಣ್ಣ ಕೋಣೆ ಇವೆ. ದೇವಾಲಯದ ಮುಂದುಗಡೆ ಒಂದು ಮುಖಮಂಟಪವಿತ್ತು. ಈಚೆಗೆ ಅದನ್ನು ವಿಜಯನಾರಾಯಣ ದೇವಾಲಯದ ಮುಂಭಾಗಕ್ಕೆ ಸ್ಥಳಾಂತರಿಸಲಾಗಿದೆ. ದೇವಾಲಯದ ವಿನ್ಯಾಸ, ಅಲಂಕೃತವಾದ ಸುಕನಾಸಿಯ ದ್ವಾರ, ಶಿಲ್ಪಗಳು ಮತ್ತು ಕಂಬಗಳು ವಾಸ್ತುಶಿಲ್ಪದ ದೃಷ್ಟಿಯಿಂದ ವಿಶೇಷವಾದದ್ದು. ಈ ದೇವಾಲಯದ ಎಡಪಾರ್ಶ್ವದಲ್ಲಿ ಪರವಾಸುದೇವನ ದೇವಿಯಾದ ಕಮಲವಲ್ಲಿಯ ದೇವಾಲಯವಿದೆ. ಈ ಎರಡೂ ದೇವಾಲಯಗಳ ವಿಗ್ರಹಗಳನ್ನು ಈಗ ವಿಜಯನಾರಾಯಣ ದೇವಾಲಯಕ್ಕೆ ಸ್ಥಳಾಂತರಿಸಲಾಗಿದೆ.

ವಿಜಯನಾರಾಯಣ ದೇವಾಲಯ ಕೋಟೆಯ ಒಳಗಿದೆ. ಇದನ್ನು ಹೊಯ್ಸಳ ವಿಷ್ಣುವರ್ಧನ ಕಟ್ಟಿಸಿದನೆಂದು ಪ್ರತೀತಿ. ಆದರೆ ಇದು ವಿವಿಧ ಹಂತಗಳ ರಚನೆ. ಮುಖಮಂಟಪ ಈಚಿನದು. ನವರಂಗದ ಮೇಲ್ಛಾವಣಿ ವಿಜಯನಗರ ಶೈಲಿಯಂತೆ ಒಳಭಾಗದಲ್ಲಿ ಸಮತಟ್ಟಾಗಿದ್ದು ಮಧ್ಯದಲ್ಲಿ ಕಮಲವನ್ನು ಕೆತ್ತಲಾಗಿದೆ. ನವರಂಗದ ದಕ್ಷಿಣ ಭಾಗದಲ್ಲಿ ಈಗ ಮೂರು ಕೋಣೆಗಳನ್ನು ಮಾಡಿ ಪರವಾಸುದೇವ ಮತ್ತು ಆತನ ಪತ್ನಿಯರ ವಿಗ್ರಹಗಳನ್ನು ಮತ್ತು ಆಳ್ವಾರರ ವಿಗ್ರಹಗಳನ್ನು ಇಡಲಾಗಿದೆ. 13–14ನೆಯ ಶತಮಾನಕ್ಕೆ ಸೇರಿದ ಮೂಲ ವಿಜಯನಾರಾಯಣ ದೇವಾಲಯ ತಲಕಾಡಿನ ವೈದ್ಯೇಶ್ವರ ದೇವಾಲಯದಂತೆ ಮೂಲತಃ ಗರ್ಭಗೃಹ ಮತ್ತು ಸುಕನಾಸಿಯನ್ನು ಮಾತ್ರ ಹೊಂದಿತ್ತು. ಅನಂತರ ಶ್ರೀರಂಗಪಟ್ಟಣ ಹಾಗೂ ತೊಣ್ಣೂರಿನಲ್ಲಿರುವಂತೆ ಮುಚ್ಚಿರುವ ಪ್ರದಕ್ಷಿಣಾಪಥವನ್ನು ಕಲ್ಪಿಸಲಾಯಿತು. ಗರ್ಭಗೃಹದ ದ್ವಾರ ಪರವಾಸುದೇವ ದೇವಾಲಯದಲ್ಲಿರುವಂತೆಯೇ ಸುಂದರವಾಗಿದೆ. ಇಲ್ಲಿಯ ಮೂರ್ತಿ ಅಭಯ ಮುದ್ರೆಯಲ್ಲಿ ನಿಂತಿದ್ದು ಬಲಗೈಯಲ್ಲಿ ಕಮಲವನ್ನು ಹಿಡಿದಿದೆ. ಇದರ ಹಿಂಭಾಗದಲ್ಲಿರುವ ತೋರಣದಲ್ಲಿ ದಶಾವತಾರವನ್ನು ಕೆತ್ತಲಾಗಿದ್ದು ಈ ಶಿಲ್ಪ ಹೊಯ್ಸಳರ ಶಿಲ್ಪರಚನೆಯ ಅನುಕರಣೆಯಂತೆ ಕಾಣುತ್ತದೆ. ಇದು ವಿಜಯನಗರದ ಆರಂಭ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಇಲ್ಲಿಯ ಪರವಾಸುದೇವ ವಿಗ್ರಹ ಸುಂದರವೂ ಸರಳವೂ ಆಗಿದೆ. ತಲೆಯ ಮೇಲ್ಭಾಗದಲ್ಲಿ ಬಿಚ್ಚಿರುವ ಹೆಡೆಯುಳ್ಳ ಆದಿಶೇಷನ ಸುರುಳಿಯ ಮೇಲೆ ಶಂಖಚಕ್ರ ಧಾರಿಯಾದ ವಾಸುದೇವ ಸುಖಾಸೀನನಾಗಿದ್ದಾನೆ. ಪರವಾಸುದೇವನ ಉತ್ಸವಮೂರ್ತಿಯೂ ಒಳ್ಳೆಯ ಶಿಲ್ಪ. ಹಸ್ತಿನಾವತಿಯಲ್ಲಿದ್ದ ಈ ವಿಗ್ರಹವನ್ನು ಶಿವಸಮುದ್ರಕ್ಕೆ ತಂದು ಅನಂತರ ಇಲ್ಲಿಗೆ ತರಲಾಯಿತೆಂದು ಪ್ರತೀತಿ.

ಪರವಾಸುದೇವ, ಗುಂಡ್ಲುಪೇಟೆಯಲ್ಲಿರುವ ಪರವಾಸುದೇವ ದೇವಾಲಯದಲ್ಲಿನ ಒಂದು ಸುಂದರ ಶಿಲ್ಪ

ಈ ದೇವಾಲಯಕ್ಕೆ ಒಂದೂವರೆ ಕಿಮೀ ಈಶಾನ್ಯದಲ್ಲಿ ರಾಮೇಶ್ವರ ದೇವಾಲಯವಿದೆ. ಈಗ ಶಿಥಿಲವಾಗಿರುವ ಈ ಗುಡಿಯನ್ನು 1337ರಲ್ಲಿ ಕುಮಾರ ಕಂಪಣ್ಣನೆಂಬುವನು ಕಟ್ಟಿಸಿದ. ಇದರ ರಚನೆ ತಲಕಾಡಿನ ವೈದ್ಯೇಶ್ವರ ದೇವಾಲಯ ದಂತಿದೆ. ಚೌಕಟ್ಟಾದ ಗರ್ಭಗೃಹ, ಸುಕನಾಸಿ, ನಾಲ್ಕು ಕಂಬಗಳಿರುವ ನವರಂಗ ಮತ್ತು ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಕೈಸಾಲೆ ಹಾಗೂ ಪ್ರವೇಶ ದ್ವಾರಗಳಿವೆ. ಈ ದೇವಾಲಯವನ್ನು ಕಣಶಿಲೆಯಿಂದ ಕಟ್ಟಿ ಗೋಪುರವನ್ನು ಮಾತ್ರ ಇಟ್ಟಿಗೆಯಿಂದ ರಚಿಸಲಾಗಿದೆ. ದೇವಾಲಯದ ಅಧಿಷ್ಠಾನ ಪಟ್ಟಿಕೆಗಳ ಮೇಲೆ ಅನೇಕ ಕನ್ನಡ ಶಾಸನಗಳಿವೆ.

(ಎಂ.ಎಸ್.ಕೆ.)

**ಗುಂತಗೋಳ ಪಾಳೆಯಗಾರರು :** 1491–1948. ಮೂಲತಃ ಕಂಚಿಯಿಂದ ಬಂದ ಇವರು ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ (1489–1686) ಒಂದು ಸಂಸ್ಥಾನವನ್ನು ಸ್ಥಾಪಿಸಿ ಬ್ರಿಟಿಷ್ ಮತ್ತು ಹೈದರಾಬಾದ್ ನಿಜಾಮರ

ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಳಿಕೆ ನಡೆಸಿದ್ದರು. ಗುಂತಗೋಳ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಿಂದ 30 ಕಿಮೀ ದೂರದಲ್ಲಿದೆ.

ಇವರ ಮೊದಲ ರಾಜಧಾನಿ ಜಲದುರ್ಗ. ಅನಂತರ ಗುಂತಗೋಳಕ್ಕೆ ಬಂದು ನೆಲೆಸಿದರು. ಈ ಸ್ಥಳೀಯ ಪ್ರಭುಗಳ ಮೂಲಪುರುಷ ಕಾಳಭೈರವನಾಯಕ. ಇವನ ಅನಂತರ ಅಮರಪ್ಪನಾಯಕ, ಬಸಪ್ಪನಾಯಕ, ಶ್ರೀನಿವಾಸನಾಯಕ, ರಾಯಪ್ಪನಾಯಕ, ನರಸಿಂಹನಾಯಕ ಆಳಿಕೆ ಮಾಡಿದರು. ಇವರಿಗೆ ಬಹರಿಬಹಾದ್ದೂರ್, ನಾಯಕಾಚಾರ್ಯ, ಮಹಾನಾಯಕ ಎಂಬ ಬಿರುದುಗಳನ್ನು ಆದಿಲ್‌ಶಾಹಿಗಳು ನೀಡಿದ್ದರು. ಇವರ ಆಡಳಿತಕ್ಕೆ ಸು. 130 ಹಳ್ಳಿಗಳು ಸೇರಿದ್ದವು. ಪಾಟೀಲ, ಕುಲಕರ್ಣಿ, ನಾಡಗೌಡ, ದೇಸಾಯಿ ಎಂಬ ಅಧಿಕಾರಿಗಳು ಸ್ಥಳೀಯ ಆಡಳಿತವನ್ನು ನಿರ್ವಹಿಸುತ್ತಿದ್ದರು. ಇವರಲ್ಲಿ ಕಾಲಾಪುರದ ನಾಡಗೌಡರು, ನೀರಲಕೇರಿಯ ನಾಡಗೌಡರು, ಬೆಲ್ಲದ ಮರಡಿಯ ದೇಸಾಯಿಗಳು ಪ್ರಮುಖರಾಗಿದ್ದರು.

ಇವರ ಕುಲದೇವರು ಕಂಚಿಯ ಏಕಾಮ್ರೇಶ್ವರ. ಆರಾಧ್ಯದೈವ ಗೋನಾವಾಟ್ಲದ ವೇಣುಗೋಪಾಲ. ಇವರ ರಾಜಗುರುಗಳು ದೇವರಭೂಪೂರದ ಜಗದಂಡ ಮಹಾಸ್ವಾಮಿಗಳು. ಚಿತ್ತರಗಿ ಇಳಕಲ್ಲು ಮಹಾಂತಸ್ವಾಮಿಗಳ ಮಠ, ಶ್ರೀ ಹಿರೇಮಠ, ಶ್ರೀಕಿದ್‌ಮತಿಮಠಗಳಿಗೆ ಭಕ್ತರಾಗಿದ್ದರು. ರಾಜಾ ರಾಯಪ್ಪನಾಯಕ ಆಧ್ಯಾತ್ಮಿಕ ಪುರುಷನೂ ನರಸಿಂಹನಾಯಕ ಕಲಾಪ್ರೇಮಿಯೂ ಅಮರೇಶ್ವರ ಕಲಾ ಸಂಘವನ್ನು ಹುಟ್ಟು ಹಾಕಿದ. ಇವನ ಆಸ್ಥಾನದಲ್ಲಿ ಬಸಣ್ಣ ಜಾವೂರ ಎಂಬ ಪ್ರಸಿದ್ಧ ರಂಗ ಕಲಾವಿದನಿದ್ದ. ಅಮರೇಶ್ವರ, ಗೋನವಾಟ್ಲದ ಗೋಪಾಲಸ್ವಾಮಿ, ಮಾಳಗುಂಡಮ್ಮ, ವೀರಯೋಧ, ಕಾಳಭೈರವ, ಶರಣ ಗಂಗಪ್ಪಯ್ಯ ಮೊದಲಾದ ದೇವಾಲಯಗಳನ್ನು, ಅಮರೇಶ್ವರ ಬಾವಿ, ದರ್ಬಾರ ಬಾವಿ, ರಾಜರ ಕೆರೆ, ಗಿರಿಸೀಮೆ ಕೆರೆಗಳನ್ನು ನಿರ್ಮಿಸಿದ. ಇವನ ಸುಸಜ್ಜಿತವಾದ ಅರಮನೆಯನ್ನು ಗುಂತಗೋಳದಲ್ಲಿ ಇಂದಿಗೂ ಕಾಣಬಹುದು. ಈ ಪ್ರಭುಗಳು ಕೋಟೆಯನ್ನು ನಿರ್ಮಿಸಿದ್ದರು. ಕೋಟೆಯ ಕಾವಲುಗಾರನ ಹೆಂಡತಿ ಮಾಳಗುಂಡಮ್ಮಳೆಂಬ ಮಹಿಳೆ ಸಂಸ್ಥಾನದ ರಕ್ಷಣೆಗಾಗಿ ಹೋರಾಡಿ ಮಡಿದ ಕತೆ ಜನಪದ ಸಾಹಿತ್ಯದಲ್ಲಿ ಜನಜನಿತವಾಗಿದೆ. ಈ ವಂಶಸ್ಥರು ಗುಡಗುಂಟಿ, ಗುಂತಗೋಳದಲ್ಲಿ ಇಂದಿಗೂ ನೆಲೆಸಿದ್ದಾರೆ.

**ಗುಂಥರ್, ಜಾನ್ :** 1901–70. ಹೆಸರಾಂತ ಗ್ರಂಥಕರ್ತ, ಅಮೆರಿಕದ ಪತ್ರಿಕೋದ್ಯಮಿ. ಷಿಕಾಗೋ ನಗರದಲ್ಲಿ 1901ರ ಆಗಸ್ಟ್ 30ರಂದು ಹುಟ್ಟಿದ. ಅದೇ ಊರಿನ ಪಬ್ಲಿಕ್ ಸ್ಕೂಲಿನಲ್ಲಿ ವಿದ್ಯಾಭ್ಯಾಸವಾಯಿತು. ಆಗಿನಿಂದಲೇ ಬರೆಯುವ ಹವ್ಯಾಸಕ್ಕೆ ಬಿದ್ದು ಡೆಯ್ಲಿಮರೂನ್ ಎಂಬ ಶಾಲಾಪತ್ರಿಕೆಯ ಸಂಪಾದಕನೂ ಆಗಿದ್ದ. ರಷ್ಯದ ಕ್ರಾಂತಿಯನ್ನು ಕುರಿತು ಈತ ಬರೆದ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದವು.



ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಬುಕ್‌ಮನ್ ಮತ್ತು ಸ್ಮಾರ್ಟ್ ಸೆಟ್ ಎಂಬ ಜನಪ್ರಿಯ ಮಾಸಿಕಗಳ ಪ್ರತಿಸಂಚಿಕೆಯಲ್ಲೂ ಈತನ ಲೇಖನಗಳು ಇರುತ್ತಿದ್ದುವು. ಷಿಕಾಗೋ ವಿಶ್ವವಿದ್ಯಾಲಯದ ಪದವೀಧರನಾದ ಮೇಲೆ 1924ರಲ್ಲಿ ಷಿಕಾಗೋ ಡೆಯ್ಲಿನ್ಯೂಸ್ ಪತ್ರಿಕೆಯ ಲಂಡನ್ ಶಾಖೆಯಲ್ಲಿ ವರದಿಗಾರನಾಗಿ ನೇಮಕಗೊಂಡು ಇಂಗ್ಲೆಂಡಿಗೆ ಪಯಣ ಬೆಳೆಸಿದ. ಪ್ರತಿಭೆ ಹಾಗೂ ಲೇಖನಸಾಮರ್ಥ್ಯಗಳು ಪ್ರಕಾಶವಾಗುವಂಥ ಅನುಕೂಲವಾದ ಸಂದರ್ಭಗಳೇ ಒದಗಿ ಬಂದುದರಿಂದ ಗುಂಥರನ ಅದೃಷ್ಟ ಕುದುರಿತು. ಇಂಗ್ಲೆಂಡ್ ಮತ್ತು ಯುರೋಪ್‌ಗಳಲ್ಲಿನ ಪ್ರಮುಖ ರಾಜಧಾನಿಗಳಲ್ಲಿ 1924 ರಿಂದ 1936ರ ವರೆಗಿನ ಹನ್ನೆರಡು ವರ್ಷಕಾಲ ಡೆಯ್ಲಿನ್ಯೂಸ್ ಪತ್ರಿಕೆಯ ವರದಿಗಾರನಾಗಿ ಕೆಲಸಮಾಡಿದ. ಈತ ಬರ್ಲಿನ್, ವಿಯನ್ನ, ಮಾಸ್ಕೊ, ರೋಮ್, ಪ್ಯಾರಿಸ್ ಮುಂತಾದ ಪ್ರಮುಖ ಕೇಂದ್ರಗಳಲ್ಲಿರುವಾಗಲೇ ಜಾಗತಿಕ ಭವಿಷ್ಯವನ್ನೇ ಬದಲಾಯಿಸುವಂಥ ರಾಜಕೀಯ ಸನ್ನಾಹಗಳು ಯುರೋಪಿನಲ್ಲಿ ನಡೆದಿದ್ದವು. ಅನುಕೂಲವಾದ ಸನ್ನಿವೇಶಗಳಲ್ಲಿ ಜನನಾಯಕರಾಗಿ ಮೇಲೆ ಬಂದು ಪ್ರಚಂಡ ಸರ್ವಾಧಿಕಾರಿಗಳಾಗಿದ್ದ ಹಿಟ್ಲರ್, ಮುಸ್ಸೋಲಿನಿ, ಸ್ಟ್ಯಾಲಿನ್ – ಈ ತ್ರಿಮೂರ್ತಿಗಳ ಬಗ್ಗೆ ತಿಳಿಯಲು ಇಡೀ ಜಗತ್ತೇ ಅತ್ಯಂತ ಕುತೂಹಲಿಯಾಗಿತ್ತು. ಎರಡನೆಯ ಮಹಾಯುದ್ಧದ ಆಸ್ಫೋಟನೆಗೆ ಸಿದ್ಧವಾಗುತ್ತಿದ್ದ ಯುರೋಪಿನ ಮಹತ್ತರ ರಾಜಕೀಯ ಪರಿಸ್ಥಿತಿಯನ್ನೆಲ್ಲ ಪ್ರತ್ಯಕ್ಷದರ್ಶಿಯಾಗಿ ವರದಿಮಾಡುವ ವಿಶೇಷ ಅವಕಾಶ ಗುಂಥರನಿಗೆ ದೊರಕಿತು. ಈ ಸಂಬಂಧವಾಗಿ ಪೋರ್ಚುಗಲ್ ಒಂದು ಬಿಟ್ಟು ಉಳಿದೆಲ್ಲ ಭಾಗಗಳಲ್ಲೂ ಈತ ಪ್ರವಾಸ ಮಾಡಬೇಕಾಗಿ ಬಂತು. ಆಗ ಸಂಗ್ರಹಿಸಿದ ಸುದ್ದಿ ಸಮಾಚಾರಗಳನ್ನೇ ರುಚಿಗಟ್ಟಾದ ಶೈಲಿಯಲ್ಲಿ ಮಿತ್ರ ಸಂಭಾಷಣೆಯಷ್ಟು ಸರಸವಾಗಿ ಇನ್‌ಸೈಡ್ ಯುರೋಪ್ ಎಂಬ ತನ್ನ ಬೃಹತ್ ಗ್ರಂಥದಲ್ಲಿ ಗುಂಥರ್ ನೆಯ್ದಿದ್ದಾನೆ (1936). ರಾಜಕೀಯ ಸಂಗತಿಗಳನ್ನು ವಿಶ್ಲೇಷಿಸಿ ಅನೇಕ ರಹಸ್ಯಗಳನ್ನೂ ಮುಂದಿನ ಆಗು ಹೋಗುಗಳನ್ನೂ ಸಮಂಜಸವಾಗಿ ಊಹಿಸುವಂಥ ಈ ರಂಜಕವಾದ ಪುಸ್ತಕ ಪ್ರಕಟವಾದ ಕೂಡಲೇ ಪ್ರಚಂಡ ಲೋಕಪ್ರಿಯತೆಯನ್ನು ಪಡೆಯಿತು. ಇದರ ಸುಮಾರು ಐದುಲಕ್ಷ ಪ್ರತಿಗಳು ಮಾರಾಟವಾದವು. ಜಗತ್ತಿನ ಹದಿನಾಲ್ಕು ಮುಖ್ಯ ಭಾಷೆಗಳಿಗಿದು ಅನುವಾದಗೊಂಡಿತು.

ಇದೇ ಅವಧಿಯಲ್ಲಿ ಗುಂಥರನ ಮದುವೆ ಆಯಿತು. ಗುಂಥರ್ ತುಂಬ ಸರಸಿ, ಸ್ನೇಹಶೀಲ. ಒಳ್ಳೆಯ ಆರೋಗ್ಯಭಾಗ್ಯವನ್ನು ಪಡೆದಿದ್ದ. ಭೋಜನ, ಪೇಯಗಳಲ್ಲಿ ರಸಜ್ಞನೆನಿಸಿದ್ದ.

ಪತ್ರಿಕಾವೃತ್ತಿಯಲ್ಲಿ ಬಂದ ಯಶಸ್ಸಿನ ಪರಿಣಾಮವಾಗಿ ಅನೇಕ ಕಡೆಗಳಿಂದ ಗುಂಥರನಿಗೆ ಕೆಲಸದ ಕರೆ ಬರತೊಡಗಿದವು. ಬಾನುಲಿ ಬಾತ್ಮೀದಾರನಾಗಿ, ಸಮರದ ಸುದ್ದಿಗಾರನಾಗಿ ಗುಂಥರ್ ಕೆಲಕಾಲ ಪ್ರಪಂಚ ಪರ್ಯಟನೆ ಮಾಡಿಬಂದ. ಇನ್‌ಸೈಡ್ ಯುರೋಪ್ ಮಾದರಿಯಲ್ಲೇ ಏಷ್ಯ ರಾಜಕೀಯ ಪರಿಸ್ಥಿತಿಯನ್ನೂ ವರ್ಣರಂಜಕವಾಗಿ ಚಿತ್ರಿಸಿ ಇನ್‌ಸೈಡ್ ಏಷ್ಯ ಎಂಬ ಪುಸ್ತಕವನ್ನು ಬರೆದ (1939). ಇದೇ ಸರಣಿಯಲ್ಲಿ ಇನ್‌ಸೈಡ್ ಲ್ಯಾಟಿನ್ ಅಮೆರಿಕ (1941) ಇನ್‌ಸೈಡ್ ಯು. ಎಸ್. ಎ. (1947), ಇನ್‌ಸೈಡ್ ರಷ್ಯ ಟು ಡೇ (1958), ಇನ್‌ಸೈಡ್ ಯುರೋಪ್ ಟು ಡೇ (1961) ಎಂಬ ಪುಸ್ತಕಗಳು ಇವನ ಲೇಖನಿಯಿಂದ ಹೊರಬಂದುವು. ಈ ಸರಣಿಯ ಪುಸ್ತಕಗಳು ಪಡೆದಷ್ಟು ಜನಪ್ರಿಯತೆಯನ್ನು ಈತನೇ ಬರೆದ ಕಾದಂಬರಿ, ಜೀವನಚರಿತ್ರೆ ಮುಂತಾದ ಹಲವಾರು ಇತರ ಪುಸ್ತಕಗಳು ಪಡೆಯಲಿಲ್ಲ. ಎ ಫ್ರ್ಯಾಗ್ಮೆಂಟ್ ಆಫ್ ಆಟೊಬಯಾಗ್ರಫಿ (1962) ಎಂಬುದು ಈತನ ಆತ್ಮಕಥೆ. ಈ ಪುಸ್ತಕ ಮತ್ತು ಡೆತ್ ಬಿ ನಾಟ್ ಪ್ರೌಡ್ ಎಂಬ ಪುಸ್ತಕ ತುಂಬ ಆತ್ಮೀಯವೂ ಹೃದಯಂಗಮವೂ ಆಗಿ ಗುಂಥರನ ವ್ಯಕ್ತಿತ್ವವನ್ನು ನಿರೂಪಿಸುತ್ತವೆ. 1964ರಲ್ಲಿ ದಿ ಲಾಸ್ಟ್ ಸಿಟಿ ಎಂಬ ಪುಸ್ತಕವನ್ನೂ 1965ರಲ್ಲಿ ಪ್ರೊಸೆಷನ್ ಎಂಬ ಪುಸ್ತಕವನ್ನೂ ಈತ ಬರೆದ. ಅನುಭವದ ಪರಿಪಕ್ವತೆಯನ್ನು ಈ ಕೃತಿಗಳಲ್ಲಿ ಕಾಣಬಹುದು. ವೃದ್ಧಾಪ್ಯದಲ್ಲಿ ನ್ಯೂಯಾರ್ಕ ನಗರದಲ್ಲಿದ್ದುಕೊಂಡು ಗುಂಥರ್ ಬ್ರಿಟಿಷ್, ಅಮೆರಿಕನ್ ಮತ್ತು ಯುರೋಪಿಯನ್ ಅಗ್ರಪತ್ರಿಕೆಗಳಿಗೆ ಕಾಲೋಚಿತ ಲೇಖನಗಳನ್ನು ಬರೆದ. ಈತ 1970ರ ಮೇ 29ರಂದು ನ್ಯೂಯಾರ್ಕ್‌ನಲ್ಲಿಯೆ ನಿಧನನಾದ.

ಪತ್ರಿಕೋದ್ಯಮದಲ್ಲಿ ಈತನಷ್ಟು ಲೋಕವಿಖ್ಯಾತಿಯನ್ನು ಪಡೆದ ಭಾಗ್ಯಶಾಲಿಗಳು ಅಪೂರ್ವ. (ಕೆ.ಬಿ.ಪಿ.)

**ಗುಂಥರ್, ಯೋಹಾನ್ ಕ್ರಿಶ್ಚನ್ :** 1695–1723. 18ನೆಯ ಶತಮಾನದ ಆದಿಯಲ್ಲಿದ್ದ ಜರ್ಮನ್ ಕವಿ. ಉತ್ತಮ ಭಾವಗೀತೆಗಳನ್ನು ಬರೆದು ಹೆಸರಾದವ. ಸೈಲೇಸಿಯದ ಸ್ಟ್ರೀಗನ್‌ನಲ್ಲಿ ಹುಟ್ಟಿದ ಈತ ವೈದ್ಯನ ಮಗ. ತನ್ನ ವೃತ್ತಿಯನ್ನೇ ಮಗನೂ ಅವಲಂಬಿಸಲೆಂದು ತಂದೆ ಈತನನ್ನು ವೈದ್ಯಶಿಕ್ಷಣಕ್ಕಾಗಿ ವಿಟ್ಟೆನ್ ಬರ್ಗ್ ಕಾಲೇಜಿಗೆ ಕಳಿಸಿದ. ಗುಂಥರನಿಗಾದರೂ ಸಾಹಿತ್ಯದ ಕಡೆಗೇ ಒಲವು; ವೈದ್ಯಕೀಯ ಅಧ್ಯಯನದಲ್ಲಿ ಎಳ್ಳಷ್ಟೂ ಆಸಕ್ತಿ ಯಿರಲಿಲ್ಲ. ಈತನಲ್ಲಿ ಸಹಜವಾಗಿದ್ದ ಕಾವ್ಯ ಪ್ರತಿಭೆ ಪ್ರಕಟವಾಗತೊಡಗಿತು. ಭಗ್ನ ಪ್ರೇಮವನ್ನೇ ವಸ್ತುವನ್ನಾಗಿ ಮಾಡಿಕೊಂಡು ಅನೇಕ ಸುಂದರ ಭಾವಗೀತೆಗಳನ್ನು ರಚಿಸಿದ.

ಅಧ್ಯಯನದಲ್ಲಿ ಬೇಸರ ಹೊಂದಿದ್ದ ಈತನ ಮನಸ್ಸು ವಿಲಾಸ ಜೀವನದ ಕಡೆ ತಿರುಗಿತು. ಅನೇಕ ದುಶ್ಚಟಗಳು ಅಂಟಿಕೊಂಡವು. ಓದಿನಲ್ಲಿ ಯಾವ ಪ್ರಗತಿಯನ್ನೂ ಸಾಧಿಸದೆ 2 ವರ್ಷ ವ್ಯರ್ಥವಾಗಿ ಕಳೆದ ಮೇಲೆ ಲೀಪ್ಜಿಗ್ ನಗರಕ್ಕೆ ತೆರಳಿದ. ಅಲ್ಲಿ ಈತನ ಕವಿತಾ ಸಾಮರ್ಥ್ಯವನ್ನು ಗುರುತಿಸಿದ ಹಿರಿಯ ಸಾಹಿತಿ ಜೆ. ಬಿ. ಮೆಂಕೆಯ ಸ್ನೇಹವಾಗಿ ಅವನಿಂದ ಅಪಾರ ಪ್ರೋತ್ಸಾಹ ದೊರೆಯಿತು. ದಿ ಪೀಸ್ ಆಫ್ ಪಾಸರೋವಿಟ್ಸ್ ಎಂಬ ಕವಿತೆ (1718) ಈತನಿಗೆ ಹೆಚ್ಚಿನ ಗೌರವವನ್ನು ತಂದಿತು. ಮೆಂಕೆ ಪ್ರತಿಭಾಶಾಲಿಯಾದ ಈ ಕವಿಗೆ ಪೋಲೆಂಡಿನ ದೊರೆ ಎರಡನೆಯ ಅಗಸ್ಟಸ್‌ನ ಕೃಪಾಶ್ರಯವನ್ನು ದೊರಕಿಸಿಕೊಡಲು ಪ್ರಯತ್ನಿಸಿದ. ಆದರೆ ಕವಿಯ ಚಾರಿತ್ರ್ಯದ ಬಗ್ಗೆ ಆರೋಪಗಳನ್ನು ಕೇಳಿದ್ದ ರಾಜ ತನ್ನ ಕೃಪಾದೃಷ್ಟಿ ಹರಿಸಲಿಲ್ಲ. ಇದರಿಂದಾಗಿ

ಜೀವನದಲ್ಲಿ ಮತ್ತಷ್ಟು ನಿರಾಸೆಗೊಂಡ ಕವಿ ಕುಡಿತ ಮತ್ತು ವಿಷಯಾಸಕ್ತಿಗಳಲ್ಲಿ ಆಳವಾಗಿ ಮುಳುಗಿದ. ಮಗ ತನ್ನ ನಿರೀಕ್ಷೆಯಂತೆ ಮುಂದೆ ಬರಲಿಲ್ಲವೆಂದು ಮೊದಲೇ ಮುನಿದಿದ್ದ ತಂದೆ ಮಗನ ಇತರ ಹವ್ಯಾಸಗಳ ಬಗ್ಗೆ ಕೇಳಿ ತುಂಬ ವ್ಯಗ್ರನಾಗಿ, ತನ್ನ ಆಸ್ತಿಯಲ್ಲಿ ಯಾವ ಪಾಲನ್ನು ಕೊಡದೆ ಮನೆಯಿಂದ ಹೊರದೂಡಿದ. ತಂದೆಯ ಪ್ರೀತಿಯನ್ನು ಸಂಪಾದಿಸಿಕೊಳ್ಳಬೇಕೆಂದು ಗುಂಥರ್ ತಂದೆಯ ಮನಸ್ಸನ್ನು ಕರಗಿಸುವ ನಾನಾ ಪ್ರಯತ್ನಗಳನ್ನು ಮಾಡಿ ವಿಫಲನಾದ. ಕ್ಷಮೆ ಬೇಡುವ ಅನೇಕ ಕವನಗಳನ್ನು ರಚಿಸಿ ತಂದೆಗೆ ಕಳಿಸಿದ. ಅವು ಒಂದೊಂದು ಎಂಥವರ ಮನಸ್ಸನ್ನಾದರೂ ಕರಗಿಸುವಷ್ಟು ಕರುಣಾಜನಕವಾಗಿದೆ. ಆದರೆ ತಂದೆಯ ಮನಸ್ಸು ಮಾತ್ರ ಕರಗಲಿಲ್ಲ. 1723ರಲ್ಲಿ ತನ್ನ 28ನೆಯ ಹುಟ್ಟುಹಬ್ಬವನ್ನು ಕಾಣುವ ಮೊದಲೆ ಕವಿ ಕಣ್ಮುಚ್ಚಿದ. ಹೀಗಾಗಿ ಈತನ ಅಪೂರ್ವಕಾಂತಿಯ ಕಾವ್ಯಕುಸುಮ ಪೂರ್ಣವಾಗಿ ಅರಳುವ ಮುನ್ನವೇ ಬಾಡಿಹೋಯಿತು. ಕವಿಯ ಜೀವನ ಒಂದು ದಾರುಣಕತೆಯಾಯಿತು.



18ನೆಯ ಶತಮಾನದ ಜರ್ಮನ್ ಕವಿಗಳು ತಮ್ಮ ಇಂದಿನ ತಲೆಮಾರಿನವರ ಶಬ್ದಾಡಂಬರದ ಗೀಳಿಗೆ ಒಳಗಾಗದಂಥ ಸದಭಿರುಚಿಯನ್ನು ಬೆಳೆಸಿಕೊಂಡಿದ್ದರು. ಅವರಲ್ಲೆಲ್ಲ ಅಚ್ಚಕವಿ ಎಂದು ಗಣನೀಯನಾದವ ಗುಂಥರ್. ಪಾಲ್ ಫ್ಲೆಮಿಂಗ್ ಮತ್ತು ಅಂಡ್ರೀಸ್ ಗ್ರೈಫಿಯಸ್ ಈ ಇಬ್ಬರು ಕವಿಗಳನ್ನು ಬಿಟ್ಟರೆ ಮಧ್ಯಯುಗಕ್ಕೂ ಗಯಟೆಯ ಯುಗಕ್ಕೂ ನಡುವಿನ ಕಾಲದ ಅತ್ಯುತ್ತಮ ಕವಿ ಈತನೇ ಎಂದು ವಿಮರ್ಶಕರ ಅಭಿಪ್ರಾಯ. ತನ್ನ ಕಾಲದ ಎಲ್ಲ ತರುಣ ಕವಿಗಳಂತೆ ಈತನಿಗೂ ವಿಮರ್ಶಕ ಬೋಯ್ಲೊ ಬಗ್ಗೆ ಅಪಾರ ಗೌರವವಿತ್ತು. ಫೋಕ್ಸ್ ಲೀಡ್ ಕವಿಯ ಪ್ರಭಾವದಿಂದಾಗಿ ಸ್ವಲ್ಪಮಟ್ಟಿನ ಸರಳತೆ ಈತನ ಭಾವಗೀತೆಗಳಿಗೂ ಬಂತು. ಇತರ ಪ್ರಭಾವಗಳಿಗಿಂತ ತನ್ನ ಕಟು ಅನುಭವಗಳೇ ಹೆಚ್ಚಾಗಿದ್ದುದರಿಂದ ಈತನ ಜೀವನವೇ ಕಾವ್ಯದ ಶೈಲಿಯನ್ನು ರೂಪಿಸಿತು. ಹೃದಯಾಂತರಾಳದಿಂದ ಸಹಜವಾಗಿ ಹೊಮ್ಮಿದ ಈತನ ಭಾವಗೀತೆಗಳನ್ನು ಗಹನಕತೆಯಲ್ಲಾಗಲೀ ಸೊಬಗಿನಲ್ಲಾಗಲೀ ಮೀರಿಸುವ ಗುಣ ಫ್ಲೆಮಿಂಗನ ಕವನಗಳಲ್ಲೂ ಇಲ್ಲ. ಡಾಷ್‌ನ ಕವಿತೆಗಳಲ್ಲೂ ಇಲ್ಲ.

ಬಹು ಹಿಂದೆ ಜರ್ಮನಿಯಲ್ಲಿ ಶ್ರೇಷ್ಠವಾದ ಪ್ರೇಮಗೀತೆಗಳನ್ನು ಬರೆದು ಹೆಸರಾಗಿದ್ದ ಮಿನ್ನೆಸಾಂಗನ ಅನಂತರ ಜರ್ಮನಿಯ ವಿಶಿಷ್ಟವಾದ ಪ್ರೇಮಗೀತೆಗಳ ಎಳೆಯನ್ನು ಮತ್ತೆ ಎತ್ತಿಕೊಂಡ ಶ್ರೇಯಸ್ಸು ಗುಂಥರನಿಗೆ ಸಲ್ಲುತ್ತದೆ.

ಸುಲಲಿತವಾದ ಭಾವಧಾರೆ, ಸಾಂಪ್ರದಾಯಿಕತೆಯ ಕಟ್ಟನ್ನು ಕಿತ್ತು ಹೊರಬಂದ ಹೊಸತನ, ನಿಶಿತಮತಿಯಿಂದ ಮಿಂಚುವ ಪ್ರತಿಭೆ, ಚತುರತೆ ಹಾಗೂ ಹಾಸ್ಯ ಮನೋಧರ್ಮ ಈತನ ಕವನಗಳ ಕೆಲವು ಲಕ್ಷಣಗಳು. ಕೆಲವು ಕಡೆ ಮಾತ್ರ ಹಾಸ್ಯ ತೀರ ಕೆಳಮಟ್ಟಕ್ಕೂ ಇಳಿದು ಹೀನ ಅಭಿರುಚಿಯನ್ನು ತೋರಿಸುವುದುಂಟು.

ಈತನ ಮರಣಾನಂತರ 1724ರಲ್ಲಿ ಗೆದಿಷ್ಟೆ ಎಂಬ ಕವನ ಸಂಕಲನ ಪ್ರಕಟವಾಯಿತು. ಈತನ ಎಲ್ಲ ಕವನಗಳನ್ನೂ ಒಟ್ಟುಗೂಡಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಲಾಯಿತು. ಲಿಯೊ ನೊರೆನ್ ಲಿಡರ್ ಎಂಬಂಥ ಕವನಗಳಲ್ಲಿ ಕವಿ ತನ್ನ ಅಂತರಂಗದ ವೇದನೆಯನ್ನು ತೋಡಿಕೊಂಡಿದ್ದಾನೆ. ತನ್ನ ತಂದೆಗೆ ಬರೆದ ಕ್ಷಮಾಪರಾಧದ ಕವನಗಳಲ್ಲಿ ಈತನ ನಿಜವಾದ ಕಾವ್ಯಸಿದ್ಧಿಯನ್ನು ಕಾಣಬಹುದು. (ಕೆ.ಬಿ.ಟಿ.)

**ಗುಂಪುಗಳು :** ಸಾಮಾನ್ಯ ಆಸಕ್ತಿ, ಉದ್ದೇಶಗಳನ್ನು ಹೊಂದಿದ್ದು ಅವಕ್ಕಾಗಿ ಒಟ್ಟಾಗಿ ಕಾರ್ಯನಿರತವಾಗಬಲ್ಲ ಜನಸಮೂಹಕ್ಕೆ ಸಮಾಜಶಾಸ್ತ್ರದಲ್ಲಿ ಈ ಹೆಸರಿದೆ (ಗ್ರೂಪ್ಸ್). ನಾವು ಹೆಚ್ಚು ಕಡಿಮೆ ನಮ್ಮ ಇಡೀ ಆಯುಷ್ಯವನ್ನು ಗುಂಪುಗಳಲ್ಲಿಯೇ ಕಳೆಯುತ್ತೇವೆ. ಕುಟುಂಬದಲ್ಲಿ ಹುಟ್ಟಿ, ಬಳಗ, ನೆರೆಹೊರೆ, ಆಟದ ಗುಂಪು, ವಿದ್ಯಾಲಯ, ಮತ, ವೃತ್ತಿ ಗುಂಪುಗಳು, ರಾಜಕೀಯ ಪಕ್ಷ ಮುಂತಾದ ಗುಂಪುಗಳನ್ನು ಸೇರುತ್ತ, ಕಟ್ಟುತ್ತ ಜೀವಿಸುತ್ತೇವೆ. ಈ ಗುಂಪುಗಳು ಅಸಂಖ್ಯ. ರಚನೆ ಮತ್ತು ಕ್ರಿಯೆಗಳಲ್ಲೂ ಇವು ಭಿನ್ನವಾಗಿವೆ. ವ್ಯಕ್ತಿಜೀವನದ ಮೇಲೆ ಇವು ಬೀರುವ ಪ್ರಭಾವದಲ್ಲಿಯೂ ಅಂತರವಿದೆ. ಈ ಬಗೆಗಿನ ಶಾಸ್ತ್ರೀಯ ಅಭ್ಯಾಸವನ್ನು ಸಮಾಜವಿಜ್ಞಾನಿಗಳು ಮಾಡುತ್ತಿದ್ದಾರೆ. ಇಲ್ಲಿ ಸಾಮಾಜಿಕವಾಗಿ ಅವುಗಳ ರಚನೆ ಮತ್ತು ಮನಶ್ಶಾಸ್ತ್ರರೀತ್ಯ ಅವುಗಳ ವರ್ತನೆಗಳ ಬಗ್ಗೆ ವಿವೇಚಿಸಿದೆ.

ಸಾಮಾಜಿಕ ಪ್ರಕಾರಗಳು, ಸಮಷ್ಟಿಗಳು ಮತ್ತು ಸಾಮಾಜಿಕ ಗುಂಪುಗಳು: ಗುಂಪು ಅಥವಾ ಸಮೂಹದ ವ್ಯಾಖ್ಯೆಯ ಬಗ್ಗೆ ಒಮ್ಮತವಿಲ್ಲ. ಒಬ್ಬರಿಗಿಂತ ಹೆಚ್ಚು ಜನರನ್ನು ಇದು ಸೂಚಿಸುತ್ತದೆ – ಎಂಬುದು ಮಾತ್ರ ನಿರ್ವಿವಾದವಾದ ಅಂಶ. ಸಮಾಜವಿಜ್ಞಾನಿ ಸ್ಮಾಲ್ ಹೇಳುವಂತೆ ಗುಂಪು ಎಂಬುದು ಸಮಾಜವಿಜ್ಞಾನಿಗಳು ಬಳಸುವ ಅತಿಸಾಮಾನ್ಯವಾದ ಮತ್ತು ವರ್ಣರಹಿತವಾದ ಶಬ್ದ. ಅನೇಕ ರೀತಿಯ ಮಾನವ ಸಮುಚ್ಚಯಗಳಿಗೆ ಇದನ್ನು ಅನ್ವಯಿಸಲಾಗುತ್ತದೆ. ಹಲವು ಸಂದರ್ಭಗಳಲ್ಲಿ ನಾವು ಕೆಲವು ಸಮಾನ ಗುಣವಿಶೇಷಗಳಿರುವ ಜನರನ್ನು ಗುಂಪುಗಳೆಂದು ಕರೆಯುತ್ತೇವೆ. ಉದಾಹರಣೆಗೆ ಮುದುಕರು, ಕಪ್ಪುವರ್ಣದವರು, ಗ್ರಾಮವಾಸಿಗಳು, ಪದವೀಧರರು, ಆದಾಯತೆರಿಗೆ ಕೊಡುವವರು, ಕ್ರಿಕೆಟ್ ಅಭಿಮಾನಿಗಳು, ವಿವಾಹಿತರು, ಚಪ್ಪಟೆ ಮೂಗಿನವರು ಇತ್ಯಾದಿ. ಇವರೆಲ್ಲ ಬೇರೆ ಬೇರೆ ಪ್ರಕಾರಗಳಿಗೆ ಸೇರಿದವರು. ಎಲ್ಲ ಮುದುಕರೂ ಅಥವಾ ಎಲ್ಲ ವಿವಾಹಿತರೂ ಅಥವಾ ಎಲ್ಲ ಚಪ್ಪಟೆ ಮೂಗಿನವರು ಒಂದೇ ಗುಂಪಿಗೆ ಸೇರಿದ ಸದಸ್ಯರಲ್ಲ. ಸಾಮಾಜಿಕ ಗುಂಪುಗಳಿಗೆ ಅವಶ್ಯವಾದ ಸಾಮಾನ್ಯ ಉದ್ದೇಶ, ಪರಸ್ಪರ ಸಂಬಂಧ, ಮಾನಸಿಕ ಸಂಪರ್ಕಗಳು ಇಲ್ಲದಿರುವುದರಿಂದ ಅವನ್ನು ಗುಂಪುಗಳು ಎನ್ನಲಾಗದು. ಅವು ಕೇವಲ ಸಾಮಾಜಿಕ ಪ್ರಕಾರಗಳು. ಅವು ಎಂದಾದರೊಮ್ಮೆ ಸಾಮಾನ್ಯ ಆಸಕ್ತಿಯನ್ನು ಹೊಂದಿ ಸಂಘಟಿತವಾಗಿ ಸಾಮಾಜಿಕ ಗುಂಪುಗಳಾಗಬಹುದು.

ವ್ಯಕ್ತಿಗಳು ಅನೇಕ ಸಂದರ್ಭಗಳಲ್ಲಿ ಭೌಗೋಳಿಕವಾಗಿ ಒಬ್ಬರಿಗೊಬ್ಬರು ಹತ್ತಿರ ಇರುವುದುಂಟು. ರೈಲು ನಿಲ್ದಾಣದಲ್ಲಿ ನೂರಾರು ಜನ ಒಂದೆಡೆ ಸೇರುತ್ತಾರೆ. ಅಷ್ಟರಿಂದಲೇ ಅದೊಂದು ಸಾಮಾಜಿಕ ಗುಂಪು ಆಗಲಾರದು. ಆದರೆ ಅದೊಂದು ಗುಂಪಾಗಿ ಪರಿವರ್ತನೆಗೊಳ್ಳಲು ಹೆಚ್ಚು ಹೊತ್ತು ಬೇಕಿಲ್ಲ. ಒಬ್ಬಿಬ್ಬರು ಜಗಳವಾಡಿದರೆನ್ನಿ. ಉಳಿದವರು ಹೇಳುತ್ತ, ಕೇಳುತ್ತ, ಕೈಕಾಲು ಬಾಯಿಗಳನ್ನು ಅಲುಗಾಡಿಸುತ್ತ ಕೂಡಿಕೊಳ್ಳುತ್ತಲೇ ಅದೊಂದು ಅಲ್ಪಾಯುವಾದ ಸಾಮಾಜಿಕ ಗುಂಪಾಗುವುದು. ಹಾಗೆಯೇ ಬೀದಿಗಳಲ್ಲಿ, ಮೂಲೆಗಳಲ್ಲಿ ಸಣ್ಣದೊಡ್ಡ ಸಮುದಾಯಗಳಲ್ಲಿ, ಪ್ರದೇಶಗಳಲ್ಲಿ, ರಾಷ್ಟ್ರಗಳಲ್ಲಿ ಇರುವ ಜನರೆಲ್ಲ ಗುಂಪುಗಳಲ್ಲ, ಕೇವಲ ಸಮಷ್ಟಿಗಳು. ಈ ಸಮಷ್ಟಿಗಳಲ್ಲಿ ಅಂತರ್ಗತವಾಗಿ ಕುಟುಂಬಗಳು, ಒಡನಾಡಿ ಗುಂಪುಗಳು, ಕಾರ್ಮಿಕ ಸಂಘಗಳು, ಪ್ರೇಕ್ಷಕ ವೃಂದದವರು, ಸೈನ್ಯ, ರಾಜಕೀಯ ಪಕ್ಷಗಳೇ ಮೊದಲಾದ ಅನೇಕ ಸಾಮಾಜಿಕ ಗುಂಪುಗಳಿರುತ್ತವೆ.

ಹಾಗಾದರೆ ಸಾಮಾಜಿಕ ಗುಂಪುಗಳೆಂಬ ಸಂಕಲನಗಳು ಯಾವುವು? ಪರಸ್ಪರ ಅಂತರಕ್ರಿಯೆಯಲ್ಲಿರುವ ಇಬ್ಬರು ಅಥವಾ ಹೆಚ್ಚು ಜನರ ಸಂಕಲನವೇ ಗುಂಪು ಎನ್ನಬಹುದು. ಸಮಾಜಶಾಸ್ತ್ರಜ್ಞರಾದ ರಾಬರ್ಟ್ ಮೆಕಾಯ್ವರ್ ಹೇಳುವಂತೆ ಪರಸ್ಪರ ಸಾಮಾಜಿಕ ಸಂಬಂಧಗಳಿಂದ ಬಿಗಿಯಲ್ಪಟ್ಟ ವ್ಯಕ್ತಿಗಳ ಸಂಕಲನಕ್ಕೆ ಸಾಮಾಜಿಕ ಗುಂಪು ಎಂಬ ಹೆಸರು ಸಲ್ಲುತ್ತದೆ. ಯುಬಾಂಕನ ಪ್ರಕಾರ ಮಾನಸಿಕ ಸಂಪರ್ಕದ ಮೂಲಕ ಪರಸ್ಪರ ಪ್ರಭಾವ ಬೀರುವ ಇಬ್ಬರು ಅಥವಾ ಹೆಚ್ಚು ಜನರಿದ್ದರೆ ಅದು ಗುಂಪು. ಬೋಗಾರ್ಡಸ್ ಕೊಟ್ಟ ವ್ಯಾಖ್ಯೆ ಹೀಗಿದೆ: ಸಾಮಾನ್ಯ ಉದ್ದೇಶಗಳನ್ನುಳ್ಳ, ಪರಸ್ಪರ ಪ್ರಚೋದಿಸುವ, ಸಮನಿಷ್ಠೆಯನ್ನು ಹೊಂದಿದ, ಒಂದೇ ತೆರನಾದ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಿರುವ ಇಬ್ಬರು ಅಥವಾ ಹೆಚ್ಚು ಜನರನ್ನು ಗುಂಪೆನ್ನಬಹುದು; ಒಟ್ಟಿನಲ್ಲಿ, ಸಾಮಾಜಿಕ ಗುಂಪುಗಳಾಗಲು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಪರಸ್ಪರ ಸಾಮಾಜಿಕ ಸಂಬಂಧಗಳನ್ನು ಹೊಂದಿರಬೇಕು. ಭೌತಿಕ ಸಾಮೀಪ್ಯ ಬೇಕಾಗಿಲ್ಲ. ಆದರೆ ಮಾನಸಿಕ ಸಂಪರ್ಕವಿರಬೇಕು. ಕಿಂಚಿತ್ತಾದರೂ ಸದಸ್ಯತ್ವ ಹಾಗೂ ಪ್ರಭೇದದ ಅರಿವು ಹೊಂದಿರಬೇಕು; ಸಮಾನ ಉದ್ದೇಶ ಮತ್ತು ಒಮ್ಮನಸ್ಸು ಇರಬೇಕು. ಈ ಎಲ್ಲ ಲಕ್ಷಣಗಳು ಎಲ್ಲ ಗುಂಪುಗಳಲ್ಲಿ ಒಂದೇ ಸಮನಾಗಿ ಇರುವುದಿಲ್ಲ. ಹಾಗೆಂದೇ ಗುಂಪುಗಳ ಸ್ವರೂಪ, ರಚನೆ ಮತ್ತು ಕಾರ್ಯಗಳಲ್ಲಿ ವೈವಿಧ್ಯ ಕಂಡುಬರುತ್ತದೆ.

**ಗುಂಪಿನ ಹುಟ್ಟು :** ಗುಂಪುಗಳು ಹುಟ್ಟುವುದೇಕೆ ಎಂಬ ಪ್ರಶ್ನೆಯನ್ನು ಚಿಂತಕರು ಇಂದಿಗೂ ಸಮರ್ಪಕವಾಗಿ ಉತ್ತರಿಸಿಲ್ಲ. ಹಿಂದಿನ ಸಮಾಜಶಾಸ್ತ್ರಜ್ಞರು ಗುಂಪುಕಟ್ಟುವುದಕ್ಕೆ ನಮ್ಮಲ್ಲಿರುವ ಯೂಥ ಪ್ರವೃತ್ತಿಯೇ ಮೂಲವೆಂದು ನಂಬಿದ್ದರು. ಆ ಮೂಲಪ್ರವೃತ್ತಿಯನ್ನು ಕಂಡವರಿಲ್ಲ. ತಿಳಿಯದ ಕಾರಣವೊಂದಕ್ಕೆ ನಾಮಕರಣ ಮಾಡಿದಂತಾಯಿತು ಅಷ್ಟೆ. ಕೆಲವರ ಪ್ರಕಾರ ಗುಂಪಿನ ಸೃಷ್ಟಿ ಆಕಸ್ಮಿಕ. ಒಮ್ಮೆ ಅದು ಹುಟ್ಟಿತೋ ಅದರಿಂದ ನಮ್ಮ ಅಸ್ತಿತ್ವಕ್ಕೆ ಲಾಭವಿದೆಯೆಂದು ಗೋಚರಿಸಿ ನಾವು ಸಮೂಹ ಜೀವನವನ್ನು ಮುಂದುವರೆಸಿಕೊಂಡು ಬಂದೆವು. ಇನ್ನು ಕೆಲವರ ಪ್ರಕಾರ ಸಮೂಹ ಜೀವನ ಮಾನವನ ಅನುಭವದಿಂದ ಬಂದುದು. ಅದು ಕಲಿತ ಗುಣ. ಸೊರೋಕಿನ್ ಮತ್ತಿತರ ಲೇಖಕರು ಸಮೂಹರಚನೆಗೆ ಕಾರಣವಾದ ಕೆಲವು ಅಂಶಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ ರಕ್ತಸಂಬಂಧ, ವಿವಾಹ, ಸಮಾನ ಧರ್ಮ ಮತ್ತು ಸಂಸ್ಕಾರಗಳು, ಭಾಷೆ, ಕಟ್ಟಳೆಗಳು, ಭೌಗೋಳಿಕ ಕಾರಣಗಳು,

ಪ್ರಭೇದದ ಅರಿವು, ಆರ್ಥಿಕ ಅಗತ್ಯಗಳು, ಸಾಮಾನ್ಯ ವೈರಿ ಮತ್ತು ಸಂಕಟಗಳಿಂದ ಸಂರಕ್ಷಣೆ, ಸಮಾನ ಅನುಭವ – ಇವು ಕೆಲವು. ಗುಂಪುಗಳ ಹುಟ್ಟಿನ ಬಗ್ಗೆ ಇನ್ನೂ ಒಂದು ವಿವಾದವಿದೆ. ಮಾನವರ ಮೊದಲ ಗುಂಪು ಯಾವುದು? ಬಣವೇ? ತಂಡವೇ? ಕುಟುಂಬವೇ? ಸಮಾಜವಿಜ್ಞಾನಿಗಳು ಈ ಪ್ರಶ್ನೆಗೆ ಇನ್ನೂ ಉತ್ತರಿಸಿಲ್ಲ. ಅನೇಕರು ಕುಟುಂಬವೇ ಆದಿಮ ಗುಂಪೆಂದು ನಂಬುತ್ತಾರೆ.

**ಮಹತ್ತ್ವ :** ನಮ್ಮ ದೈಹಿಕ ಮತ್ತು ಮಾನಸಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಗುಂಪುಗಳು ಬೇಕು. ಗುಂಪುಗೂಡುವಿಕೆ ಮೂಲಪ್ರವೃತ್ತಿಯಿಂದ ಬಂದಿರಲಿ ಅಥವಾ ಸಮಾಜಜನ್ಯವಿರಲಿ, ಅದು ಅನಿವಾರ್ಯ. ನಮ್ಮ ವಿಘ್ನಗಳಿಗೆ ಸಂಕಟಗಳಿಗೆ ಗುಂಪಿನಿಂದಲೇ ಪರಿಹಾರ ಸಾಧ್ಯ. ಏಕಾಕಿಯಾಗಿ ಬಾಳುವುದು ಒಂದು ಶಿಕ್ಷೆ ಎಂದು ಎಲ್ಲ ಸಮಾಜಗಳೂ ಭಾವಿಸುತ್ತವೆ. ನಮ್ಮ ಮೌಲ್ಯಗಳೂ ಒಳಿತು ಕೆಡಕುಗಳೂ ವ್ಯಕ್ತಿತ್ವದ ಹಾಸುಹೊಕ್ಕಗಳೂ ಗುಂಪಿನಿಂದಲೇ ಬರುತ್ತವೆ. ವ್ಯಕ್ತಿಗಳ ನಿಯಂತ್ರಣವೂ ಗುಂಪಿನ ಕೆಲಸ. ವಿವಿಧ ರೀತಿಯ ಗುಂಪುಗಳು ವ್ಯಕ್ತಿ ಮತ್ತು ವಿಸ್ತೃತ ಸಮಾಜದ ನಡುವೆ ಇರುವ ಕೊಂಡಿಗಳಂತಿವೆ. ಭಾವನಾತ್ಮಕ ಸ್ಥಿರತೆಯೂ ಗುಂಪುಗಳ ಕಾಣಿಕೆ. ಕುಟುಂಬದಂಥ ಆತ್ಮೀಯ ಗುಂಪುಗಳಿಲ್ಲದೆ ಮಕ್ಕಳು ದಾರಿ ತಪ್ಪುವುದನ್ನು ನೋಡಿದಾಗ ಈ ಮಾತಿನ ಅರ್ಥವಾಗುತ್ತದೆ. ಗುಂಪುಗಳಿಂದಲೇ ನಮ್ಮ ಅನೇಕ ಮಾನಸಿಕ ತೊಡಕುಗಳಿಗೂ ರೋಗಗಳಿಗೂ ಚಿಕಿತ್ಸೆ ಸಿಕ್ಕುವುದೆಂದು ನಾವೀಗ ತಿಳಿದಿದ್ದೇವೆ. ಅಪರಾಧ ನಿವಾರಣಾ ಕೇಂದ್ರಗಳಲ್ಲಿ ತಪ್ಪಿತಸ್ಥರನ್ನು ಆತ್ಮೀಯ ವೃಂದಗಳಲ್ಲಿ ತೊಡಗಿಸುವುದನ್ನು ನಾವು ಕಾಣುತ್ತೇವೆ. ದುಶ್ಚಟಗಳನ್ನು ಬಿಡಿಸುವಾಗ, ಮಾನಸಿಕ ರೋಗಗಳನ್ನು ನಿವಾರಿಸುವಾಗ ವೃಂದಗತ ಉಪಚಾರ ನೀಡುತ್ತಾರೆ. ಹೀಗೆ ಮಾನವನ ಮಾನವೀಕರಣಕ್ಕೆ ಗುಂಪುಗಳು ಅತ್ಯವಶ್ಯವಾಗಿವೆ.

**ಗುಂಪುಗಳ ವರ್ಗೀಕರಣ :** ಗುಂಪುಗಳನ್ನು ವಿವಿಧ ರೀತಿಗಳಲ್ಲಿ ವರ್ಗೀಕರಿಸುವುದು ಸಾಧ್ಯ. ಸದ್ಯಕ್ಕಂತೂ ಜೀವಶಾಸ್ತ್ರದಲ್ಲಿ ದೊರೆಯುವಂಥ ಸರ್ವಸಾಮಾನ್ಯವಾದ ಯಾವ ಒಂದು ವರ್ಗೀಕರಣವೂ ಲಭ್ಯವಿಲ್ಲ. ಗುಂಪುಗಳ ಗಾತ್ರವನ್ನು ಆಧರಿಸಿ ಜಾರ್ಜ್ ಸಿಮೆಲ್ ಎಂಬಾತ ದ್ವಯಗಳು, ತ್ರಯಗಳು, ವಿಸ್ತೃತ ಗುಂಪುಗಳು – ಎಂದು ವರ್ಗೀಕರಿಸಿದರೆ, ಜಾರ್ಜ ಮೆಕಾಯ್ವರ್ ಅವುಗಳ ಸಂಘಟನೆಯನ್ನು ಲಕ್ಷಿಸಿ ಸಂಘಟಿತ ಮತ್ತು ಅಸಂಘಟಿತ ಗುಂಪುಗಳೆಂದು ವಿಭಜಿಸುತ್ತಾನೆ. ಚಾರ್ಲ್ಸ್ ಹಾರ್ಟನ್ ಕೂಲೆ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಆಧರಿಸಿ ಕುಟುಂಬ ಮುಂತಾದ ಕೆಲವನ್ನು ಪ್ರಾಥಮಿಕ ಗುಂಪುಗಳೆಂದೂ ಪಕ್ಷ, ಕಾರ್ಮಿಕ ಸಂಘಗಳಂಥ ಗುಂಪುಗಳನ್ನು ಮಾಧ್ಯಮಿಕ ಗುಂಪುಗಳೆಂದೂ ಕರೆದಿದ್ದಾನೆ. ನಾವು, ನಮ್ಮವರು ಎಂಬ ಆತ್ಮೀಯ ಭಾವನೆಯಿಂದ ಕೂಡಿದ ಗುಂಪುಗಳನ್ನು ವಿಲಿಯಮ್ ಗ್ರಹಾಮ್ ಸಮ್ನರ್ ಒಳಗುಂಪುಗಳೆಂದು ಕರೆದು, ಪರಕೀಯವೆಂದು ನಾವು ನೋಡುವ ಗುಂಪುಗಳನ್ನು ಹೊರಗುಂಪುಗಳೆಂದು ಕರೆದಿದ್ದಾನೆ. ಜನಸಂದಣಿ, ಪ್ರೇಕ್ಷಕ ವೃಂದಗಳಂಥ ಗುಂಪುಗಳನ್ನು ನೆರೆದ ಗುಂಪುಗಳೆಂದು ಕರೆಯುವುದಿದೆ. ಸಾರ್ವಜನಿಕರು ಚದರಿದ ಗುಂಪು, ಕಾಲಾವಧಿಯ ದೃಷ್ಟಿಯಿಂದ ಕೆಲವು ಶಾಶ್ವತ ಗುಂಪುಗಳಾದರೆ ಮತ್ತೆ ಕೆಲವು ಅಲ್ಪಕಾಲಿಕ ಗುಂಪುಗಳು. ಕೆಲವು ಗುಂಪುಗಳು ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ವರ್ಗೀಕರಣದಲ್ಲಿ ಸಿಕ್ಕಿಯಾವು. ಉದಾಹರಣೆಗೆ ಜನಸಂದಣಿ ಅಸಂಘಟಿತ ಗುಂಪು ಹೇಗೋ ಹಾಗೆಯೇ ಅಶಾಶ್ವತ ಗುಂಪೂ ಹೌದು, ನೆರೆದ ಗುಂಪೂ ಹೌದು, ಮುಖ್ಯವಾದ ಕೆಲವು ಪ್ರಭೇದಗಳನ್ನು ಮಾತ್ರ ಇಲ್ಲಿ ನೋಡಬಹುದು.

**ದ್ವಯಗಳು :** ಇಬ್ಬರೇ ಸದಸ್ಯರಿರುವ ದ್ವಯಗಳು (ಜೋಡಿಗಳು; ಜೊತೆ ಗುಂಪುಗಳು) ನಮಗೆ ಸುಪರಿಚಿತವಾದ ಗುಂಪುಗಳು. ಜರ್ಮನ್ ಸಮಾಜವಿಜ್ಞಾನಿ ಸಿಮೆಲ್ ಇಂಥ ಚಿಕ್ಕ ಗುಂಪುಗಳ ಅಭ್ಯಾಸಕ್ಕೆ ಶ್ರೀಕಾರ ಹಾಕಿದ. ಪ್ರಸಂಗವಶಾತ್ ಎಲ್ಲೋ ಒಮ್ಮೆ ಸಂಧಿಸುವ, ಸಂಭಾಷಿಸುವ ಇಬ್ಬರು ಮಾತ್ರ ಜೋಡಿಯಲ್ಲ. ಅದೇ ನಿರಂತರವಾಗಿ ಸಂಪರ್ಕ ಹೊಂದಿದ, ಆತ್ಮೀಯ ಸಂಬಂಧವುಳ್ಳ ಇಬ್ಬರು ಮಾತ್ರ ಜೋಡಿಯಾಗುತ್ತಾರೆ. ವಿವಾಹಿತ ದಂಪತಿಗಳು, ಆತ್ಮೀಯ ಗೆಳೆಯರಿಬ್ಬರು, ತಾಯಿ – ಮಗ, ತಂದೆ – ಮಗ, ಪ್ರೇಮಿಗಳು, ವೃತ್ತಿಯಲ್ಲಿ ಅಥವಾ ವ್ಯಾಪಾರದಲ್ಲಿ ಪಾಲುಗಾರರು ಮುಂತಾದ ಜೋಡಿಗುಂಪುಗಳನ್ನು ನಾವು ಕಾಣುತ್ತೇವೆ. ಪರಸ್ಪರ ಪೂರಕವಾದ ಆಸಕ್ತಿಗಳ ಪ್ರೇರಣೆಯಿಂದ, ನಿರಂತರ ಸಾಹಚರ್ಯದ ಬಲದಿಂದ ಜೋಡಿಗುಂಪು ಹುಟ್ಟುತ್ತದೆ; ಮುಂದುವರಿಯುತ್ತದೆ. ಜೋಡಿಯ ಒಬ್ಬರು ಇಲ್ಲವಾದಾಗ ಅದು ನಿಲ್ಲುತ್ತದೆ. ಒಮ್ಮೊಮ್ಮೆ ಮೂರನೆಯ ವ್ಯಕ್ತಿ ಮಧ್ಯ ಪ್ರವೇಶಿಸಿದಾಗಲೂ ಜೋಡಿಗೆ ಚ್ಯುತಿ ಬಂದಂತೆಯೇ ಸರಿ. ಆತ್ಮೀಯವಾದ ಸಂಬಂಧವಿರುವುದರಿಂದ ವ್ಯಕ್ತಿತ್ವದ ಮೇಲೆ ಪರಸ್ಪರ ಪ್ರಭಾವ ಇಲ್ಲಿ ಅತ್ಯಂತ ಹೆಚ್ಚು. ಹಾಗೆಯೇ ಈ ಸಂಬಂಧಗಳು ಕೆಟ್ಟರೆ ಉಂಟಾಗುವ ಕಹಿಯೂ ಹೆಚ್ಚು. ಈ ಜೋಡಿಗಳ ಹುಟ್ಟನ್ನೂ ಮುಕ್ತಾಯವನ್ನೂ ಸಮಾಜ ನಿಯಂತ್ರಿಸುವುದಿದೆ. ಉದಾಹರಣೆಗೆ ವಿವಾಹಿತರ ಜೋಡಿಯಾಗಲಿ ವ್ಯಾಪಾರದ ಪಾಲುಗಾರರಾಗಲೀ ಬೇರೆಯಾಗುವುದನ್ನು ನಾವು ನಿಯಮಬದ್ಧಗೊಳಿಸಿದ್ದೇವೆ. ಮ್ಯಾಲಿನಾಫ್ಸ್ಕಿಯ ಪ್ರಕಾರ ಕೆಲವು ಆದಿವಾಸಿ ಸಮಾಜಗಳಲ್ಲಿ ಕುಲಾವಿನಿಮಯ ಪದ್ಧತಿಯಂತೆ ಯಾರು ಯಾರ ಜೋಡಿಯಾಗಬೇಕೆಂಬುದನ್ನು ವಿಧಿಸುತ್ತಾರೆ.

**ತ್ರಯಗಳು :** ಜೋಡಿಯಂತೆಯೇ ಸ್ವಾರಸ್ಯಕರವಾದ ಇನ್ನೊಂದು ಪ್ರಕಾರ, ಮೂವರ ಈ ಗುಂಪಿನಲ್ಲಿ ಜೋಡಿಯ ಐಕ್ಯ ಅಸಂಭವ. ಜಾರ್ಜ ಸಿಮೆಲ್ ಹೇಳುವಂತೆ ಇಲ್ಲಿ ಮೂವರಲ್ಲಿ ಒಬ್ಬ ಮಧ್ಯಸ್ಥಿಕೆ ವಹಿಸಬಹುದು. ಸಮತೋಲ ಕಾಯುವ ಕೆಲಸ ಮಾಡಬಹುದು. ಅಥವಾ ಉಳಿದಿಬ್ಬರನ್ನು ಸದಾ ದೂರ ಇಡುವ ಪ್ರಯತ್ನ ಮಾಡಬಹುದು. ಅಲ್ಲದೆ, ಮೂವರಲ್ಲಿ ಒಬ್ಬ ಹೊರಗುಳಿದರೂ ಇಬ್ಬರ ಜೋಡಿ ಗುಂಪು ಉಳಿಯಲು ಸಾಧ್ಯವಿರುವುದರಿಂದ ಮುಕ್ಕೂಟದ ಮೂವರೂ ಐಕಮತ್ಯದಿಂದಿರುವುದು ಅತ್ಯಾವಶ್ಯಕವೆಂದೇನೂ ಅಲ್ಲ. ಹೀಗಾಗಿ ತ್ರಯಗಳು ಹೆಚ್ಚಾಗಿ ಒಬ್ಬನ ವಿರುದ್ಧವಿರುವ ಇಬ್ಬರ ತಾತ್ಕಾಲಿಕ ಒಕ್ಕೂಟಗಳು. ಜೋಡಿಗಳಲ್ಲಿ ಮುಕ್ಕೂಟಗಳಿಗಿಂತ ಐಕ್ಯವೂ ಕಾರ್ಯಸಾಧನೆಯೂ ಚೆನ್ನಾಗಿ ಸಾಧ್ಯವೆಂದು ವಿವಿಧ ಪ್ರಯೋಗಗಳಿಂದ ಕಂಡುಬಂದಿದೆ. ಆದರೆ ತ್ರಯಗಳು ಚರ್ಚೆ, ಪರಾಮರ್ಶೆ, ಜಾಗರೂಕತೆಗಳಲ್ಲಿ ಮಿಗಿಲು. ಪ್ರಾಯಶಃ ಇದಕ್ಕಾಗಿಯೇ ಮೂವರು ಸದಸ್ಯರಿರುವ ಸಮಿತಿಗಳಿರುವುದೇ ಹೆಚ್ಚು.

**ಪ್ರಾಥಮಿಕ ಗುಂಪುಗಳು :** ಗುಂಪುಗಳ ವರ್ಗೀಕರಣದಲ್ಲಿ ಅತಿ ಹೆಚ್ಚು ಪ್ರಸಿದ್ಧವಾದ ಹಾಗೂ ಅರ್ಥವತ್ತಾದ ವರ್ಗೀಕರಣವೆಂದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಗುಂಪುಗಳೆಂಬುದು. ಪ್ರಾಥಮಿಕ ಗುಂಪುಗಳ ಕಲ್ಪನೆಯನ್ನು ಸಮಾಜಶಾಸ್ತ್ರೀಯ ಬರೆಹಗಳಲ್ಲಿ ಮೊದಲಿಗೆ ತಂದವ ಚಾರ್ಲ್ಸ್ ಹಾರ್ಟನ್ ಕೂಲೆ. ಆತನೇ ಹೇಳಿದಂತೆ ಅವು ಅನ್ಯೋನ್ಯವಾದ, ಮುಖಾಮುಖಿ ಸಂಬಂಧವುಳ್ಳ ಮತ್ತು ಸಹಕಾರ ಲಕ್ಷಣಗಳಿಂದ ಕೂಡಿದ ಗುಂಪುಗಳು. ಕುಟುಂಬ, ಮಕ್ಕಳ ಆಟದ ಗುಂಪು, ನೆರೆಹೊರೆ, ಹಿರಿಯರ ಸಮುದಾಯಗಳು ಇಂಥ ಗುಂಪುಗಳೆಂದು ಆತ ಹೇಳಿದ್ದಾನೆ. ಒಟ್ಟೊಟ್ಟಿಗೇ ಇರುವ, ಆತ್ಮೀಯ ಸಂಬಂಧಗಳನ್ನು ಹೊಂದಿದ ಸಹಪಾಠಿಗಳು, ಸಹವರ್ತಿಗಳು, ಕಾರ್ಖಾನೆ, ಕಚೇರಿ, ಸೈನ್ಯ, ಶಾಲೆ, ಕ್ಲಬ್ಬುಗಳಲ್ಲಿ ಕಾಣುವ ಆತ್ಮೀಯ ಗೆಳೆಯರ ಚಿಕ್ಕ ಗುಂಪುಗಳೂ ಇಂಥವೇ. ಅವು ಅನೇಕ ದೃಷ್ಟಿಗಳಿಂದ ಪ್ರಾಥಮಿಕವಾದರೂ ವ್ಯಕ್ತಿಯ ಸಾಮಾಜಿಕ ಸ್ವಭಾವ ಹಾಗೂ ಆದರ್ಶಗಳನ್ನೂ ರೂಪಿಸುವಲ್ಲಿ ಅತ್ಯಂತ ಮಹತ್ತ್ವ ಪಡೆದಿವೆ. ಇಲ್ಲಿನ ನಿರಂತರವಾದ ಅನ್ಯೋನ್ಯ ಸಹವಾಸಗಳಿಂದ ವ್ಯಕ್ತಿಗಳು ಒಬ್ಬರಿಗೊಬ್ಬರು ಬೆಸೆಯಲ್ಪಡುತ್ತಾರೆ. ಕೂಲೆ ಹೇಳಿದಂತೆ ನಾವು ಎಂಬ ತಾದಾತ್ಮ್ಯ ಭಾವನೆ ಈ ಗುಂಪುಗಳಲ್ಲಿ ಇರುತ್ತವೆ. ಪ್ರೇಮ, ಅನುಕಂಪ ಮತ್ತು ಸಹಕಾರ ಭಾವನೆ ಇಲ್ಲಿನ ಪ್ರಮುಖ ಲಕ್ಷಣಗಳು. ಕುಟುಂಬ ಮೊದಲುಗೊಂಡು ಈ ಎಲ್ಲ ಗುಂಪುಗಳೂ ಚಿಕ್ಕ ಗಾತ್ರದವು. ಇದರಿಂದಾಗಿ ಸದಸ್ಯರ ನಡುವೆ ನಿರಂತರವಾದ ಮುಖಾಮುಖಿ ಸಂಬಂಧ ಸಾಧ್ಯ. ತೀರ ಆತ್ಮೀಯರಾದ ವೈಯಕ್ತಿಕ ಸಂಬಂಧಗಳು ಬೆಳೆಯುತ್ತವೆ. ಸಮೋದ್ದೇಶಗಳು ಸಾಧ್ಯ. ಸಂಬಂಧಗಳು ಲಾಭಕ್ಕಾಗಿ ಹೆಣೆದುಕೊಂಡವುಗಳಲ್ಲ; ಸ್ವಾಭಾವಿಕವಾಗಿ, ನಿಃಸ್ವಾರ್ಥವಾಗಿ ಬಂದವು. ಯಾವುದೇ ಕಾರ್ಯ ನಿಮಿತ್ತ ಅಷ್ಟರಮಟ್ಟಿಗೆ ಮಾತ್ರ ಸದಸ್ಯರಾಗುವುದು ಇಲ್ಲಿ ಸಾಧ್ಯವಿಲ್ಲ. ನಮ್ಮನ್ನು ನಾವು ಇಡಿಯಾಗಿ ಇಲ್ಲಿ ತೊಡಗಿಸಿಕೊಳ್ಳುತ್ತೇವೆ. ಕುಟುಂಬವೆಂಬ ಅತಿ ಮಹತ್ತ್ವದ ಪ್ರಾಥಮಿಕ ಸಮೂಹದಲ್ಲಿ ಹುಟ್ಟಿ ಬಾಳಿನುದ್ದಕ್ಕೂ ಅನೇಕ ಪ್ರಾಥಮಿಕ ಸಮೂಹಗಳಿಂದ ಪ್ರಭಾವಿತರಾಗುತ್ತೇವೆ. ನಮ್ಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವು ಅನುಪಮ. ಹಾಗೆಂದೇ ಕೂಲೆ ಅವನ್ನು ಮಾನವನ ಸ್ವಭಾವದ ಸಂಪೋಷಣ ಸ್ಥಾನಗಳೆಂದು ಕರೆದಿದ್ದಾನೆ.

ಹಿಂದೆ ಪ್ರಾಥಮಿಕ ಗುಂಪುಗಳೆಂದರೆ ಸಮಾಜೀಕರಣದ ದೀಕ್ಷೆ ಕೊಡುವ ಕುಟುಂಬ. ಗೆಳೆಯರ ಆಟದ ಗುಂಪುಗಳಂಥ ಚಿಕ್ಕ ಗುಂಪುಗಳೆಂದು ತಿಳಿಯಲಾಗುತ್ತಿತ್ತು. ಆದರೆ ಮುಂದೆ ಅನೇಕ ಸಮಾಜವಿಜ್ಞಾನಿಗಳು ಬೇರೆ ಬೇರೆ ಕ್ಷೇತ್ರಗಳಲ್ಲಿ ಕಂಡುಬರುವ ಇಂಥ ಗುಂಪುಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ, ಎಲ್ಟನ್ ಮೇಯೊ ಮತ್ತು ಸಂಗಡಿಗರು ಬೃಹತ್ ವಿದ್ಯುತ್‌ಕಂಪನಿಯೊಂದರ ಕೆಲಸಗಾರರಲ್ಲಿ ಈ ಪುಟ್ಟ ಗುಂಪುಗಳನ್ನು ಗುರುತಿಸಿ ಅವು ಹೇಗೆ ಉತ್ಪಾದನೆಯನ್ನು ನಿಯಂತ್ರಿಸುತ್ತವೆಂದು ತಿಳಿಸಿದ್ದಾರೆ. ವಿಲಿಯಂ ಹ್ವೈಟ್ ಅವರು ಬಾಸ್ಟನ್ ನಗರದ ಬೀದಿ ಮೂಲೆಯ ಎಳೆಯರ ಗುಂಪನ್ನು ಅಭ್ಯಾಸ ಮಾಡಿದ್ದಾರೆ. ಹಾಗೆಯೇ ಸ್ಟೌಫರ್ ಮತ್ತಿತರರು ಅಮೆರಿಕೆಯ ಯೋಧರಲ್ಲಿರುವ ಕೆಳಗುಂಪುಗಳ ಮಹತ್ತ್ವವನ್ನು ತಿಳಿಸಿದ್ದಾರೆ. ಹೀಗೆ ಚಿಕ್ಕಗಾತ್ರದ, ನಿರಂತರವಾದ ಆತ್ಮೀಯ ಸಂಬಂಧದ ಈ ಗುಂಪುಗಳು ಸಾರ್ವತ್ರಿಕವಾಗಿವೆ ಮತ್ತು ಅತ್ಯವಶ್ಯಕವಾಗಿದೆ.

ನಗರೀಕರಣ, ಯಾಂತ್ರೀಕರಣ, ಔದ್ಯೋಗೀಕರಣದೊಂದಿಗೆ ಬೃಹತ್ ಸಮೂಹಗಳು ಬೆಳೆದು ಪ್ರಾಥಮಿಕ ಸಮೂಹಗಳು ಕಣ್ಮರೆಯಾಗುತ್ತಿವೆಯೆಂದು ಅನೇಕರು ಹೇಳಿದ್ದಾರೆ. ಹಿಂದೊಮ್ಮೆ ಪ್ರಭಾವಶಾಲಿಯಾಗಿದ್ದ ಕುಟುಂಬ, ನೆರೆಹೊರೆ, ಆಟದ ಗುಂಪುಗಳು

ತಮ್ಮ ಮಹತ್ತ್ವ ಕಳೆದುಕೊಳ್ಳುತ್ತಿವೆ. ಎಂಬ ಹೆದರಿಕೆಯೂ ಇದೆ. ಆದರೆ ಒಂದೇ ಸಮನಾಗಿ ವೃದ್ಧಿಗೊಳ್ಳುತ್ತಿರುವ ಮಾಧ್ಯಮಿಕ ಗುಂಪುಗಳ ಒಡಲಿನಲ್ಲೇ ಹೊಸಹೊಸ ಪ್ರಾಥಮಿಕ ಗುಂಪುಗಳು ಹುಟ್ಟುತ್ತಿವೆಯೆಂದು ಇತ್ತೀಚಿನ ಲೇಖಕರು ನಂಬಿದ್ದಾರೆ.

**ಮಾಧ್ಯಮಿಕ ಗುಂಪುಗಳು :** ಮಾಧ್ಯಮಿಕ ಗುಂಪುಗಳನ್ನು ವರ್ಣಿಸುವ ಒಂದು ಸುಲಭ ಉಪಾಯವೆಂದರೆ ಅವನ್ನು ಪ್ರಾಥಮಿಕ ಗುಂಪುಗಳಿಗೆ ವ್ಯತಿರಿಕ್ತವಾದ ಲಕ್ಷಣಗಳುಳ್ಳ ಗುಂಪುಗಳೆಂದು ಹೇಳುವುದು, ವ್ಯಾಪಾರೀ ಸಂಘಟನೆಗಳು, ಬೃಹತ್ ರಾಜಕೀಯ ಪಕ್ಷಗಳು, ಕಾರ್ಮಿಕರ ಸಂಘ, ನಗರಗಳು ಬೇರೆ ಬೇರೆ ವೃತ್ತಿಯವರ ರಾಷ್ಟ್ರಿಯ ಸಂಘಟನೆಗಳು, ಏಣಿಶ್ರೇಣಿಗಳಿಂದ ಹಾಗೂ ಬಿಗುವಾದ ನಿಯಮಗಳಿಂದ ಕೂಡಿದ ಸೈನ್ಯ ಮತ್ತಿತರ ಗುಂಪುಗಳು ಮಾಧ್ಯಮಿಕ ಗುಂಪುಗಳು ಕೂಲೆ ಅವನ್ನು ಹೆಸರಿಸಿಲ್ಲವಾದರೂ ಅನಂತರದ ಲೇಖಕರು ಅವುಗಳ ಲಕ್ಷಣಗಳನ್ನು ತಿಳಿಸಿದ್ದಾರೆ. ದೊಡ್ಡ ಗಾತ್ರ, ಆಕಸ್ಮಿಕ ಮತ್ತು ಔಪಚಾರಿಕ ಸಂಬಂಧಗಳು, ಔಪಚಾರಿಕ ರಚನೆ, ಪರೋಕ್ಷ ಸಂಪರ್ಕ, ಉದ್ದೇಶಸಾಧನೆಗೆಂದೇ ಕಟ್ಟಿದ ಬಿಗುವು, ನಿಯಂತ್ರಣ ಇವು ಕೆಲವು ಲಕ್ಷಣಗಳು. ಸದಸ್ಯರ ನಡುವೆ ನಿರಂತರವಾದ ಮುಖಾಮುಖಿಯಾದ ಸಂಬಂಧಗಳಿಲ್ಲದೆ ಇರುವುದರಿಂದ ಅನ್ಯೋನ್ಯತೆ ಬೆಳೆಯುವುದು ದುಸ್ಸಾಧ್ಯ. ಹತ್ತಾರು ವರ್ಷಗಳ ತನಕ ಸದಸ್ಯರಾಗಿದ್ದರೂ ಒಬ್ಬರನ್ನೊಬ್ಬರು ನೋಡದಿರುವುದಿದೆ. ಇಲ್ಲಿ ಕೊಟ್ಟಷ್ಟೇ ಕೆಲಸ: ಒಪ್ಪಿಸಿದಷ್ಟೇ ಹೊಣೆಗಾರಿಕೆ. ವಿಶೇಷ ಆಸಕ್ತಿಗಳನ್ನು ಪೂರೈಸಲು ಬುದ್ಧಿಪೂರ್ವಕವಾಗಿ ಕಟ್ಟಿದ ವ್ಯವಸ್ಥೆಗಳೇ ಹೆಚ್ಚು ವ್ಯಕ್ತಿಗಳು ಇಲ್ಲಿ ಪೂರ್ಣವಾಗಿ ತೊಡಗಿಕೊಳ್ಳುವುದಿಲ್ಲ: ಅಷ್ಟಿಷ್ಟೇ ಮಾತ್ರ. ವ್ಯಕ್ತಿತ್ವದ ಪೂರ್ಣವಿಕಾಸ ಇಲ್ಲಿ ಅಸಾಧ್ಯ. ಆದರೆ ಕಾರ್ಯಸಾಧನೆಗೆ ಬೇಕಾದ ಕಾರ್ಯಕ್ಷಮತೆ, ಸುವ್ಯವಸ್ಥೆ ಮಾಧ್ಯಮಿಕ ಸಮೂಹಗಳಲ್ಲಿ ಮಾತ್ರ ಇರುತ್ತದೆ. ಆಧುನಿಕ ಜಗತ್ತಿನಲ್ಲಿ ಅವು ಬಹಳ ಮಹತ್ತ್ವ ಪಡೆದಿದೆ.

**ಒಳಗುಂಪು :** ವಿಲಿಯಮ್ ಗ್ರಹಾಮ್ ಸಮ್ನರ್ ತನ್ನ ಲೋಕಾಚಾರಗಳನ್ನು ಕುರಿತ ಗ್ರಂಥದಲ್ಲಿ ಒಳಗುಂಪುಗಳೂ (ಸ್ವಜನರು) ಮತ್ತು ಹೊರಗುಂಪುಗಳು ಎಂಬ ವಿಭೇದಗಳನ್ನು ಹೇಳಿದ್ದಾನೆ. ಆತ ಹೇಳುವಂತೆ ಸದಸ್ಯರ ದೃಷ್ಟಿಯಲ್ಲಿ ಗುಂಪುಗಳಲ್ಲಿ ಎರಡೇ ಎರಡು ವಿಧಗಳು. ನಾವು ನಮ್ಮವರು. ಸ್ವಜನ ಸ್ವಕೀಯರು, ಇರುವ ಒಳಗುಂಪೊಂದು: ಆ ಜನ, ಪರಜನ, ಪರಕೀಯರು ಇರುವ ಹೊರಗುಂಪೊಂದು. ತಮ್ಮ ಕುಟುಂಬ, ಶಾಲೆ, ನೆರೆಹೊರೆ, ಆಟದ ಗುಂಪು, ಊರು, ಧರ್ಮ ಪಕ್ಷ, ಜಾತಿಗಳು ಅವರಿಗೆ ಒಳಗುಂಪುಗಳು ಕನ್ನಡಿಗರಿಗೆ ಉಳಿದೆಲ್ಲ ಕನ್ನಡಿಗರು ಒಳಗುಂಪುಗಳು. ಮಿಕ್ಕವರು ಹೊರಗಿನವರು. ಹಾಗೆಯೇ ಹಿಂದೂ ಧರ್ಮಾನುಯಾಯಿಗಳಿಗೆ ತಮ್ಮ ಧರ್ಮ ಬಾಂಧವರು ಒಳ ಗುಂಪಿಗೆ ಸೇರಿದವರು; ಉಳಿದ ಧರ್ಮಗಳ ಜನರು ಹೊರಗುಂಪಿನವರು. ಸ್ವಜನರ ಬಗ್ಗೆ ಸದಸ್ಯರಿಗೆ ಅಭಿಮಾನ, ಅಕ್ಕರೆ, ಸಹಾನುಭೂತಿ, ಸಹಕಾರ, ವಿಶ್ವಾಸ, ನಿಷ್ಠೆ ವಿಧೇಯತೆ ಮತ್ತು ಸಾಮರಸ್ಯದ ಭಾವನೆಗಳಿರುತ್ತದೆ. ತಮ್ಮ ಭಾಷೆಯೇ ಇಂಪಾದ ಭಾಷೆಯೆಂದೂ ತಮ್ಮ ದೇವರುಗಳೇ ಸರ್ವಶ್ರೇಷ್ಠರೆಂದೂ ಅಭಿಮಾನ ಪಡುವುದು ಸಾಮಾನ್ಯ ದೇಶಭಕ್ತಿಯ ಗೀತೆಗಳೂ ರಾಷ್ಟ್ರಧ್ವಜವೂ, ಸ್ಥಳಪುರಾಣಗಳೂ, ವೀರರ ಕಥೆಗಳೂ, ಪವಿತ್ರ ಸಂಕೇತಗಳೂ ಸ್ವಜನಾಭಿಮಾನದ ದ್ಯೋತಕಗಳು. ಒಳಗುಂಪಿಗೆ ಹೊರಗಿನವರು ಸುಲಭವಾಗಿ ಸೇರಲಾರರು. ಪ್ರವೇಶಕ್ಕೆ ಅನೇಕ ನಿರ್ಬಂಧನೆಗಳಿವೆ. ಕುಲ, ಜಾತಿ, ವೃತ್ತಿ, ಅಭಿರುಚಿ, ಧರ್ಮ, ಭಾಷೆ, ರಾಷ್ಟ್ರೀಯತೆ ಮುಂತಾದ ಆಧಾರಗಳ ಮೇಲೆ ಒಳಗುಂಪಿನವರಾಗುತ್ತಾರೆ. ಸದಸ್ಯರಲ್ಲಿ ತಮ್ಮ ಗುಂಪಿನ ರಕ್ಷಣೆ ತಮ್ಮ ಹೊಣೆಯೆಂಬ ಭಾವನೆಯೂ ಹಾಗೆಯೇ ತಮ್ಮ ರಕ್ಷಣೆ ಗುಂಪಿನ ಹೊಣೆ ಎಂಬ ಭಾವನೆಯೂ ಇರುತ್ತದೆ. ಅವರು ಆಪತ್ಕಾಲದಲ್ಲಿ ಒಳಗುಂಪಿಗಾಗಿ ಯಾವ ತ್ಯಾಗಕ್ಕೂ ಸಿದ್ಧ. ಹಾಗೆಯೇ ಶತ್ರುಗಳ ವಿರುದ್ಧ ಅವರು ತೋರುವ ವರ್ತನೆಯೂ ಕ್ಷಮ್ಯ. ಸ್ವಜನರ ಬಗೆಗಿನ ಅಭಿಮಾನ ಕೆಲವೊಮ್ಮೆ ಅತಿರೇಕಕ್ಕೆ ಹೋಗುವುದಿದೆ. ಈ ಸ್ವಜನ ದುರಭಿಮಾನವೇ ಯುದ್ಧಗಳಿಗೂ ಬೇರೆ ರೀತಿಯ ಸಂಘರ್ಷಣೆಗಳಿಗೂ ಮೂಲವಾಗ ಬಹುದು. ವಾಸ್ತವಿಕ ಅಥವಾ ಕಾಲ್ಪನಿಕ ಗಂಡಾಂತರಗಳು ಬಂದಾಗಲೆಲ್ಲ ಈ ಒಳಗುಂಪಿನ ಭಾವನೆ ಜಾಗ್ರತವಾಗಿ ಗುಂಪಿನ ಐಕಮತ್ಯ ಬಲಿಯುವುದನ್ನು ಕಾಣುತ್ತೇವೆ.

**ಹೊರಗುಂಪು :** ನಾವು ಸದಸ್ಯರಲ್ಲದ ಗುಂಪುಗಳೆಲ್ಲ ನಮಗೆ ಹೊರಗುಂಪುಗಳು (ಪರರು) ನಾವು ಸದಸ್ಯರಲ್ಲದ ಕ್ಲಬ್ಬು, ನೆರೆಹೊರೆ, ನಗರ, ದೇಶಗಳ ಜನ ನಮಗೆ ಪರಕೀಯರು. ಈ ಗುಂಪುಗಳ ಬಗ್ಗೆ ನಾವು ಕೆಲವೊಮ್ಮೆ ಅನಾಸ್ಥೆ, ಅಸಡ್ಡೆಗಳಿಂದ ನೋಡಿದರೆ, ಕೆಲವೊಮ್ಮೆ ಸ್ಪರ್ಧೆ, ಜುಗುಪ್ಸೆ ಹಾಗೂ ಸಂಘರ್ಷದ ಭಾವನೆಗಳನ್ನು ಹೊಂದಿರುತ್ತೇವೆ. ಹೊರಗುಂಪಿನವರ ಆಚಾರವಿಚಾರಗಳು ದೇವರುಗಳು ತುಂಬ ವಿಚಿತ್ರವಾಗಿ ಕಂಡರೆ ಆಶ್ಚರ್ಯವಿಲ್ಲ. ಕೆಲವೊಮ್ಮೆ ಅವು ಅರ್ಥಹೀನ, ಅನಾಗರಿಕ ಇಲ್ಲವೆ ಕ್ರೂರ ಎನ್ನಿಸಲೂ ಬಹುದು. ಹೊರಗುಂಪಿನ ಸದಸ್ಯರನ್ನು ವ್ಯಕ್ತಿಗಳೆಂದು ಪರಿಗಣಿಸುವ ಗೋಜಿಗೆ ನಾವು ಹೋಗುವುದಿಲ್ಲ. ಅವರೆಲ್ಲರೂ ಒಟ್ಟಿನಲ್ಲಿ ಒಂದೇ ರೀತಿಯ ಜನ ಎಂಬುದೇ ನಮ್ಮ ಭಾವನೆ. ಒಟ್ಟಿನಲ್ಲಿ ಎಲ್ಲ ಆಂಗ್ಲರೂ ನಗೆಗಾರಿಕೆ ತಿಳಿಯದ ಗೊಡ್ಡುಗಳು; ಪಾಶ್ಚಾತ್ಯರ ದೃಷ್ಟಿಯಲ್ಲಿ ಎಲ್ಲ ಭಾರತೀಯರೂ ಸಂಪ್ರದಾಯ ಶರಣರು; ಬಿಳಿಯರಿಗೆ ಎಲ್ಲ ನೀಗ್ರೊ ಜನರೂ ಮೈಗಳ್ಳರು. ಸುದೈವದಿಂದ ನಾವು ಏಕಕಾಲಕ್ಕೆ ಅನೇಕ ಒಳ ಹಾಗೂ ಹೊರ ಗುಂಪುಗಳಿಗೆ ಸೇರಿರುತ್ತೇವೆ. ಒಬ್ಬ ಭಾರತೀಯನಿಗೆ ಉಳಿದ ಭಾರತೀಯರೆಲ್ಲ ಒಂದು ದೃಷ್ಟಿಯಿಂದ ಒಳಗುಂಪಿನವರು. ಅವರಲ್ಲಿ ಕೆಲವರು ಬೇರೆ ಧರ್ಮಕ್ಕೆ, ಭಾಷೆಗೆ, ಇಲ್ಲವೆ ಜಾತಿಗೆ ಸೇರಿರುವುದರಿಂದ ಹೊರಗಿನವರೂ ಹೌದು. ಇದರಿಂದಾಗಿ ಯಾವ ಗುಂಪೂ ನಮ್ಮ ನಿಷ್ಠೆಯನ್ನು ನೂರಕ್ಕೆ ನೂರು ಸಂಪೂರ್ಣವಾಗಿ ಪಡೆಯಲಾರದು.

ಸಮಸ್ತರ ಮತ್ತು ಲಂಬಸ್ತರ ಗುಂಪುಗಳು: ಸಮಾಜಶಾಸ್ತ್ರಜ್ಞ ಪಿಟಿರಿಮ್ ಸೊರೊಕಿನ್ ಸಮಾಜ ವ್ಯವಸ್ಥೆಯ ಎರಡು ಪ್ರಭೇದಗಳನ್ನು ವಿವೇಚಿಸಿದ್ದಾನೆ. ಬೃಹತ್ ಸಮಾಜವನ್ನು ಉದ್ದವಾಗಿ ಸೀಳುವುದು ಸಾಧ್ಯ ಎಂದು ಊಹಿಸೋಣ. ಆಗ ವಿಶಾಲವೂ ಸರ್ವಾಂಗೀಣವೂ ಆದ ರಾಷ್ಟ್ರಗಳೂ ಧಾರ್ಮಿಕ ಗುಂಪುಗಳೂ ರಾಜಕೀಯ ಪಕ್ಷಗಳೂ ಕುಲನಿಷ್ಠ ವರ್ಗಗಳೂ ಕಾಣುತ್ತದೆ. ಇಂಥ ರಾಷ್ಟ್ರಗಳಲ್ಲಿ, ಪಕ್ಷಗಳಲ್ಲಿ ಮತ್ತಿತರ ಗುಂಪುಗಳಲ್ಲಿ ವಿವಿಧ ವೃತ್ತಿಗಳಿಗೆ, ಅಂತಸ್ತುಗಳಿಗೆ, ವರಮಾನ, ವಯೋಮಾನ, ದರ್ಜೆಗಳಿಗೆ ಸೇರಿದ ಜನರಿರುತ್ತಾರೆ. ಹೀಗೆ ಮೇಲು ಕೆಳಗಿನ ಸ್ತರಗಳಿಂದ ಕೂಡಿದ ಜನರಿರುವ ಈ ಗುಂಪುಗಳನ್ನು ಸೊರೊಕಿನ್ ಲಂಬಸ್ತರ ಅಥವಾ ಊರ್ಧ್ವಮುಖಿ (ವರ್ಟಿಕಲ್ ಗ್ರೂಪ್ಸ್) ಗುಂಪುಗಳೆಂದು ಕರೆದಿದ್ದಾನೆ. ಅನೇಕ ಸಮಸ್ತರ ಗುಂಪುಗಳನ್ನು ವಿಷಮಸ್ತರ ಗುಂಪುಗಳೆಂದೂ ಕರೆಯಬಹುದು.

ಸಮಾಜರಚನೆಯನ್ನು ಅಡ್ಡ ಸೀಳಿ ನೋಡುವಾಗ ಬೇರೆಬೇರೆ ಸಮತಲ ಗುಂಪುಗಳನ್ನು ಕಾಣಬಹುದು. ಒಂದೇತೆರನಾದ ಆದಾಯವಿರುವ ಸಾವಿರಾರು ಜನರಿದ್ದಾರೆ. ಒಂದೇ ವೃತ್ತಿಗೆ ಸೇರಿದ ಲಕ್ಷಾವಧಿ ಜನರಿದ್ದಾರೆ. ಸಮಾನ ಅಂತಸ್ತುಗಳಿಗೆ ಸೇರಿದ ಜನರ ಗುಂಪುಗಳಿವೆ. ಇವನ್ನು ಸಮತಲ ಅಥವಾ ಸಮಸ್ತರ ಗುಂಪುಗಳೆಂದು (ಹಾರಿಜಾಂಟಲ್ ಗ್ರೂಪ್) ಕರೆಯಬಹುದು. ಆರ್ಥಿಕ ವರ್ಗಗಳು, ಸಾಮಾಜಿಕ ಶ್ರೇಣಿಗಳು ಇಂಥ ಗುಂಪುಗಳು, ಒಂದೇ ವೃತ್ತಿ ಆದಾಯ, ಅಂತಸ್ತು ಇರುವ ಜನರೆಲ್ಲ ಸಮಯ ಬಂದಾಗಲೆಲ್ಲ ಸುಸಂಘಟಿತವಾಗಿ ತಮ್ಮ ಆಸ್ತಿಗಳನ್ನು ಸಂರಕ್ಷಿಸಿಕೊಳ್ಳುವುದನ್ನು ನೋಡುತ್ತೇವೆ.

**ಜನಸಂದಣಿ :** ಸಮಾಜ ವಿಜ್ಞಾನಿಗಳ, ರಾಜಕಾರಣಿಗಳ, ಆಡಳಿತಗಾರರ ಹಾಗೂ ಸಾಮಾನ್ಯ ಪ್ರಜೆಗಳ ಗಮನವನ್ನು ಸೆಳೆಯುವ ಇನ್ನೊಂದು ಗುಂಪೆಂದರೆ ಜನಸಂದಣಿ. ಹತ್ತಾರು ಜನರಿಂದ ಹಿಡಿದು ಸಾವಿರಗಟ್ಟಲೆ ಜನರು ಒಂದೆಡೆ ಸೇರಿ ಯಾವುದಾದ ರೊಂದು ವಸ್ತು ಅಥವಾ ಸನ್ನಿವೇಶದ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಕೆಲಕಾಲದ ಮಟ್ಟಿಗೆ ಪರಸ್ಪರ ಪ್ರಚೋದಿಸುತ್ತಿದ್ದರೆ ಅದು ಜನಸಂದಣಿಯಾಗುತ್ತದೆ. ಅದು ಅಲ್ಪಾಯುವೂ ಹೆಚ್ಚುಕಡಿಮೆ ಅಸಂಘಟಿತವೂ ಆಗಿರುವ ಗುಂಪು, ಒಂದಿಷ್ಟು ಜನ ಒಂದೇ ಕಡೆಯಲ್ಲಿ ಕೂಡಿದರೆ ಸಂದಣಿಯಾಗುವುದಿಲ್ಲ. ಅದು ಸಮಷ್ಟಿ. ಬಸ್ಸಿನಲ್ಲಿ ಕುಳಿತ ಪ್ರಯಾಣಿಕರು, ಪಾರ್ಕಿನಲ್ಲಿ ಚದರಿ ಕುಳಿತು ವಿರಮಿಸುತ್ತಿರುವ ಜನ, ಬೀದಿಯ ಅಂಚಿನಲ್ಲಿ ತಮ್ಮಷ್ಟಕ್ಕೆ ತಾವು ಓಡಾಡುವ ದಾರಿಹೋಕರು ಸಂದಣಿಯಲ್ಲ. ಎಲ್ಲರನ್ನು ಪ್ರಚೋದಿಸುವ ಸಾಮಾನ್ಯ ವಸ್ತು ಇಲ್ಲಿಲ್ಲ. ಅಂತರಕ್ರಿಯೆಗಳೂ ಇಲ್ಲವೆನ್ನಿಸುವ ಮಟ್ಟಿಗೆ ಅತ್ಯಲ್ಪ. ಆದರೆ ಇಂಥ ಸಮಷ್ಟಿಗಳೇ ಏನಾದರೊಂದು ನೆವದಿಂದಾಗಿ ಕ್ಷಣಾರ್ಧದಲ್ಲಿ ಸಂದಣಿಗಳಾಗುವುದಿದೆ. ಜನಸಂದಣಿಗೆ ನಿಶ್ಚಿತ ಗಾತ್ರವಿಲ್ಲ. ಆದರೂ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರುವುದೂ ಜನಸಂದಣಿಯ ಭೌತಿಕ ಲಕ್ಷಣಗಳು. ಕಾಲಾವಧಿಯ ದೃಷ್ಟಿಯಿಂದ ಅದು ಕ್ಷಣಿಕವಾದ ಗುಂಪೂ ಹೌದು. ಈಗಿರುವ ಸದಸ್ಯರು ಅರೆಗಳಿಗೆಯೊಳಗೆ ಇಲ್ಲದಿರುವುದರಿಂದ ಅದಕ್ಕೆ ಭೂತ ಭವಿಷ್ಯತ್ತುಗಳೆರಡೂ ಇಲ್ಲ. ಸಂದಣಿಯನ್ನು ಸೇರಲೂ ಬಿಡಲೂ ಹೆಚ್ಚಿನ ನಿಯಮಗಳಿಲ್ಲ. ಏಣಿಶ್ರೇಣಿಯ ವ್ಯವಸ್ಥೆಯಿಲ್ಲ. ಸರ್ವಮಾನ್ಯವಾದ ನಾಯಕತ್ವವಿಲ್ಲ. ಎಲ್ಲ ರೀತಿಯ ಜನ ನುಗ್ಗಿಕೊಳ್ಳಬಹುದು. ಹೆಗಲಿಗೆ ಹೆಗಲು ತಿಕ್ಕಿದರೂ ಒಬ್ಬರ ಪರಿಚಯ ಇನ್ನೊಬ್ಬರಿಗೆ ಇರಲಿಕ್ಕಿಲ್ಲ. ಎಲ್ಲರೂ ನಾವು ಸಾವಿರದಲ್ಲಿ ಒಬ್ಬರು ಎಂಬ ಅನಾಮಧೇಯತ್ವವನ್ನು ಪಡೆಯುತ್ತಾರೆ. ಉಳಿದವರಂತೆ ಕೂಗುವುದು, ಓಡುವುದು ಮುಂತಾಗಿ ವರ್ತಿಸುತ್ತ ಸಮಾನ ಲಕ್ಷಣಗಳನ್ನು ಹೊಂದುತ್ತಾರೆ. ಭಾವೋದ್ರೇಕವು ಇಲ್ಲಿಯ ಒಂದು ಮುಖ್ಯ ಲಕ್ಷಣ. ಕೆಲವೊಮ್ಮೆ ಮುಷ್ಕರ, ಮೆರವಣಿಗೆ, ಮತಪ್ರದರ್ಶನಗಳಲ್ಲಿ ಆಗುವಂತೆ ಭಾವೋದ್ರೇಕದಿಂದ ಕೆರಳಿದ ಜನ ವಿಧ್ವಂಸಕ ಕಾರ್ಯಗಳಲ್ಲಿ ನಿರತರಾಗುತ್ತಾರೆ. ಆಗ ಅದು ದೊಂಬಿ ಗುಂಪು ಎನ್ನಿಸಿಕೊಳ್ಳುತ್ತದೆ. ಅಸಂಖ್ಯ ಜನರ ಬೆಂಬಲ ಇರುವುದರಿಂದ ತಮ್ಮನ್ನು ಯಾರೂ ಕೆಣಕಲಾರರು ಎಂಬ ಧೈರ್ಯವೂ ಸಾವಿರ ಸಾವಿರ ಸಂಖ್ಯೆಯ ತಾವು ತಪ್ಪು ಮಾಡಲಾರೆವು ಎಂಬ ಭರವಸೆಯೂ ಜನಸಂದಣಿಗಳ ಶಕ್ತಿಯ ಮೂಲ, ಜನಸಂದಣಿಯ ಅಭ್ಯಾಸಕ್ಕೆ ಶ್ರೀಕಾರ ಹಾಕಿದ ಫ್ರೆಂಚ್ ಚಿಂತಕನಾದ ಗಸ್ಟಾವ್ ಲೆ ಬಾನ್ ಅವನ್ನು ವಿನಾಶಕಾರಿ ಹಾಗೂ ನೀತಿಹೀನ ಎಂದು ಅಭಿಪ್ರಾಯಪಟ್ಟಿದ್ದರೂ ಅವು ಹಾಗಿರಬೇಕೆಂದೇನೂ ಇಲ್ಲ. ಕೆಡುಕು ಮಾಡದ, ಶಾಂತರೀತಿಯಲ್ಲಿ ವರ್ತಿಸುವ ನೂರಾರು

ವಿಧದ ಸಂದಣಿಗಳಿವೆ. ವೀರರನ್ನು ಸ್ವಾಗತಿಸುವ, ವಿಜಯವನ್ನು ಆಚರಿಸುವ, ಹಬ್ಬಹುಣ್ಣಿಮೆಗಳಲ್ಲಿ ಪಾಲುಗೊಳ್ಳುವ, ತಮ್ಮ ಸಂತೋಷವನ್ನು ವ್ಯಕ್ತಗೊಳಿಸಲು ನೆರೆವ ಸಂದಣಿಗಳೂ ಕಡಿಮೆಯಿಲ್ಲ.

ಸಂದಣಿಗಳಲ್ಲಿ ನಾವು ಅನೇಕ ವಿಧಗಳನ್ನು ಗುರುತಿಸಬಹುದು. ಕೆಲವು ಆಕಸ್ಮಿಕ ಸಂದಣಿಗಳು (ಕ್ಯಾಷುಅಲ್ ಕ್ರೌಡ್ಸ್). ದೈನಂದಿನ ಜೀವನದ ಯಾವುದೇ ಘಟನೆ ಆಕಸ್ಮಿಕವಾಗಿ ಅನೇಕ ಜನರನ್ನು ಒಂದೆಡೆಗೆ ತರಬಹುದು. ಬೀದಿಯಲ್ಲಿ ಜಗಳವಾಡುವುದಾಗಲಿ ರೈಲು ಹಳಿ ತಪ್ಪುವುದಾಗಲಿ ಅಥವಾ ಬೇರೊಂದು ಘಟನೆಯಾಗಲಿ ನೂರಾರು ಜನರನ್ನು ಹತ್ತಿರ ತರುತ್ತದೆ. ಕೆಲವು ಸಾಂಪ್ರದಾಯಿಕ ಸಂದಣಿಗಳು (ಕನ್ವೆನ್ಷನಲ್ ಕ್ರೌಡ್ಸ್) ಪ್ರೇಕ್ಷಕ ವೃಂದಗಳಂತೆ ಹೆಚ್ಚು ವ್ಯವಸ್ಥಿತವಾಗಿವೆ. ಇವಲ್ಲದೆ ಭಾವನೆಗಳನ್ನು ವ್ಯಕ್ತಗೊಳಿಸುವ (ಎಕ್ಸ್‌ಪ್ರೆಸಿವ್) ಜನಸಂದಣಿಗಳೂ ಇವೆ. ಇವುಗಳಲ್ಲಿ ಜನರು ತಮ್ಮ ಸಂತೋಷ, ಭಯ, ಉತ್ಸಾಹ, ಭಕ್ತಿ ಮೊದಲಾದ ಭಾವನೆಗಳನ್ನು ತೋಡಿಕೊಳ್ಳುತ್ತಾರೆ. ಭಜನೆ ಮಾಡುವುದು, ಕುಣಿಯುವುದು, ಹಾಡುವುದು, ಕೈಬೀಸುವುದು ಮುಂತಾದವುಗಳ ಮೂಲಕ ಇದು ನಡೆಯುತ್ತದೆ. ಮತ್ತೆ ಕೆಲವು ಕೋಪೋದ್ರಿಕ್ತ ಸಂದಣಿಗಳು. ಥಳಿಸುವ, ಹಿಂಸೆ ಕೊಡುವ, ಲೂಟಿ ಮಾಡುವ, ಬೆಂಕಿ ಹಚ್ಚುವ ಇಂಥ ಗುಂಪುಗಳನ್ನು ಕ್ರಿಯಾಶೀಲ (ಆಕ್ಟಿವ್) ಗುಂಪುಗಳೆಂದು ದೊಂಬಿಗುಂಪುಗಳೆಂದೂ (ಮಾಬ್) ಕರೆಯುತ್ತಾರೆ.

ಜನಸಂದಣಿಗಳಲ್ಲಿ ವ್ಯಕ್ತಿಗಳ ವರ್ತನೆ ಬೇರೆ ಸನ್ನಿವೇಶಗಳಲ್ಲಿನ ವರ್ತನೆಗಿಂತ ಭಿನ್ನವಾದುದೆಂದು ಅನೇಕರು ಗುರುತಿಸಿದ್ದಾರೆ. ಈ ವಿಪರೀತ ವರ್ತನೆಗೆ ಕಾರಣಗಳೇನೆಂದು ಕೆದಕಿದ್ದಾರೆ. ಗಸ್ಟಾವ್ ಲೆ–ಬಾನ್ ಜನಸಂದಣಿಯಲ್ಲಿ ವ್ಯಕ್ತಿಗಳ ಮನಸ್ಸಿಗಿಂತ ಭಿನ್ನವಾದ ಸಾಮೂಹಿಕ ಮನಸ್ಸು ಉದ್ಭವಿಸುವುದೇ ಕಾರಣವೆಂದು ಪ್ರತಿಪಾದಿಸಿದ್ದಾರೆ. ಅವನ ಪ್ರಕಾರ ಜನಸಂದಣಿಯ ಸದಸ್ಯರು ಅಮಿತ ಶಕ್ತಿಯ ಭಾವನೆ, ಭಯನಿವೃತ್ತಿ, ಹೆಚ್ಚಿನ ಸೂಚ್ಯತೆ ಹಾಗೂ ಅನುಕರಣಗಳ ಸಹಾಯದಿಂದ ವಿಪರೀತ ವರ್ತನೆಯಲ್ಲಿ ತೊಡಗುತ್ತಾರೆ. ಆಲ್‌ಪೋರ್ಟ್ ಮೊದಲಾದ ಅನಂತರದ ಲೇಖಕರು ಈ ಸಾಮೂಹಿಕ ಮನಸ್ಸಿನ ಸಿದ್ಧಾಂತವನ್ನು ಖಂಡಿಸಿ ಬರೆದಿದ್ದಾರೆ.

**ಪ್ರೇಕ್ಷಕ ವೃಂದ :** ಇದು ಜನಸಂದಣಿಯಿಂದ ಸ್ವಲ್ಪ ಭಿನ್ನವಾದ ಇನ್ನೊಂದು ಅಶಾಶ್ವತ ಗುಂಪು. ಭಾಷಣ, ಸಂಗೀತ, ಕೀರ್ತನೆ, ಧಾರ್ಮಿಕ ಪ್ರವಚನ ಮುಂತಾದುವನ್ನು ಕೇಳಲು ಒಂದೆಡೆಗೆ ಕಲೆತ ಜನರೂ ನರ್ತನ, ನಾಟಕ, ಜಾದೂ ಆಟಗಳನ್ನು ನೋಡಲು ಕಲೆತ ಜನರೂ ಪ್ರೇಕ್ಷಕ ವೃಂದಕ್ಕೆ ಸೇರಿದವರು. ಗೊತ್ತಾದ ಜಾಗದಲ್ಲಿ, ಗೊತ್ತಾದ ಕಾಲದಲ್ಲಿ ಅವರು ಕೂಡುತ್ತಾರೆ. ಅವರೆಲ್ಲರನ್ನೂ ಪ್ರಚೋದಿಸುವ ಒಂದು ವ್ಯಕ್ತಿ, ವಸ್ತು ಅಥವಾ ಸನ್ನಿವೇಶ ಕೇಂದ್ರಬಿಂದುವಾಗಿರುತ್ತದೆ. ಸದಸ್ಯರೆಲ್ಲ ಈ ಬಿಂದುವಿನ ಕಡೆಗೆ ಗಮನ ಕೊಡುತ್ತಾರೆಯೇ ವಿನಾ ಉಳಿದ ಸದಸ್ಯರ ಕಡೆಗಲ್ಲ. ಗಂಟೆ ಬಾರಿಸುವುದು, ಪರದೆ ಎಳೆಯುವುದು, ದೀಪವಾರಿಸುವುದು, ವೇದಿಕೆ ಸಿದ್ಧಪಡಿಸುವುದು ಮುಂತಾದ ಚಟುವಟಿಕೆಗಳಿಂದ ಸದಸ್ಯರ ಗಮನ ಆಕಡೆಗೆ ಆಕರ್ಷಿತವಾಗುತ್ತದೆ. ಪ್ರೇಕ್ಷಕ ವೃಂದದಲ್ಲಿ ಸದಸ್ಯರು ಅನುಸರಿಸಬೇಕಾದ ನೀತಿನಿಯಮಾವಳಿಗಳು ಇವೆ. ಜನಸಂದಣಿಗಳಂತೆ ಇವು ಅಸ್ಥಿರವಿದ್ದರೂ ಅಸಂಘಟಿತವಿದ್ದರೂ ಇಲ್ಲಿ ಸಂಪ್ರದಾಯದ ಅಂಶವಿದೆ. ಸಭೆಯನ್ನು ಪ್ರವೇಶಿಸುವುದು ಅಥವಾ ಸಭೆಯಿಂದ ಹೊರಬರುವುದು, ಕುಳಿತುಕೊಳ್ಳುವುದು ಅಥವಾ ಎದ್ದು ನಿಲ್ಲುವುದು, ಕೈಚಪ್ಪಾಳೆ ತಟ್ಟುವುದು ಅಥವಾ ಪ್ರಶ್ನೆ ಕೇಳುವುದು ಎಲ್ಲವೂ ಕ್ರಮಬದ್ಧ. ಹಾಗೆಂದೇ ಕೆಲವರು ಇಂಥ ಗುಂಪುಗಳನ್ನು ಸಾಂಪ್ರದಾಯಿಕ ಜನಸಂದಣಿಗಳೆಂದು ಕರೆದಿದ್ದಾರೆ. ಪ್ರೇಕ್ಷಕ ವೃಂದಗಳ ಇನ್ನೊಂದು ಲಕ್ಷಣವೆಂದರೆ ಭೌತಿಕ ಸಾಮೀಪ್ಯ. ಪ್ರೇಕ್ಷಕರಾಗಲು ಒಂದೆಡೆ ಕೂಡಲೇಬೇಕು. ರೇಡಿಯೋ ಕೇಳುವ ಚದರಿದ ಶ್ರೋತೃವರ್ಗ ಅಥವಾ ಟೆಲಿವಿಷನ್ ನೋಡುತ್ತಿರುವ ಜಗತ್ತಿನ ಲಕ್ಷಾವಧಿ ಜನರು ಪ್ರೇಕ್ಷಕರಲ್ಲ. ಅವರನ್ನು ಸಾರ್ವಜನಿಕರು ಎನ್ನಬಹುದು ಅಷ್ಟೆ. ಪ್ರೇಕ್ಷಕ ವೃಂದಗಳಲ್ಲಿಯೂ ವೈವಿಧ್ಯವಿದೆ. ಕೆಲವು ಮಾಹಿತಿ ಬಯಸುವ ವೃಂದಗಳಾದರೆ ಮತ್ತೆ ಕೆಲವು ಮನೋರಂಜನೆ ಬಯಸುವ ವೃಂದಗಳು. ಇನ್ನು ಕೆಲವು ಗುಂಪುಗಳಲ್ಲಿ ಸದಸ್ಯರನ್ನು ಬೇರೊಂದು ಧರ್ಮಕ್ಕೆ ಸೇರಲು ಅಥವಾ ಬೇರೊಂದು ವಿಚಾರ ಇಲ್ಲವೆ ಆದರ್ಶವನ್ನು ಒಪ್ಪಲು ಮನವೊಲಿಸುವ ಪ್ರಯತ್ನ ನಡೆಯುತ್ತದೆ. ಪಾದ್ರಿಯ ಉಪದೇಶ, ಮುಂದಾಳುವಿನವಾದ, ಹಿರಿಯರ ಹಿತವಚನ ಮುಂತಾದುವನ್ನು ಕೇಳುವ ಈ ಗುಂಪುಗಳನ್ನು ಪರಿವರ್ತನೆಗೆ ಪಕ್ಕಾಗುತ್ತಿರುವ ವೃಂದಗಳೆನ್ನಬಹುದು. ಪ್ರೇಕ್ಷಕ ವೃಂದಗಳಲ್ಲಿ ಶಾಂತ ರೀತಿಯಿಂದ ಕೇಳುವ ನೋಡುವ ಜಡಗುಂಪುಗಳೂ ಇವೆ; ಸಂಪ್ರದಾಯಕ್ಕೆ ಗೌರವ ನೀಡಲು ಹಾಗೂ ಹೆಚ್ಚು ಕ್ರಿಯಾಶೀಲವಾಗಿ ವರ್ತಿಸುವ ಪಟುಗುಂಪುಗಳೂ ಇವೆ.

**ದೊಂಬಿ ಗುಂಪುಗಳು :** ಜನಸಂದಣಿಗಳಲ್ಲಿ ಕೆಲವು ಹೆಚ್ಚು ತೀವ್ರಗತಿಯ ಅಂತರ ಕ್ರಿಯೆಗಳಿಂದ ಕೂಡಿದ್ದು ಕ್ರಿಯಾಶೀಲವಾಗಿರುತ್ತವೆ. ಬೇರೆ ಸಂದಣಿಗಳಂತೆ ಅವು ಅಲ್ಪಾಯುವಾಗಿದ್ದರೂ ಒಮ್ಮೊಮ್ಮೆ ಮಾತ್ರ ಸೇರಿ ಮಾಯವಾಗುವಂಥ ಗುಂಪುಗಳಾಗಿದ್ದರೂ ಅಲ್ಲಿನ ಸದಸ್ಯರ ಭಾವನೆಗಳು ತೀಕ್ಷ್ಣವಾಗಿದ್ದು ಪರಸ್ಪರ ಅಂತರಕ್ರಿಯೆಗಳು ತೀವ್ರವಾಗಿರುತ್ತವೆ. ವರ್ಗಕಲಹ, ರಾಜಕೀಯ ಸಂಘರ್ಷ, ಕಾರ್ಮಿಕರ ಜಗಳ, ಜನಾಂಗದ್ವೇಷ ಮುಂತಾದ ಕಾರಣಗಳಿಗಾಗಿ ಇಂಥ ದೊಂಬಿಗಳು ಹುಟ್ಟುತ್ತವೆ. ಹಾಗೆ ನೋಡಿದರೆ, ಅನೇಕ ಸಲ ಮೊದ ಮೊದಲು ಆಕಸ್ಮಿಕವಾಗಿ ಕೂಡಿದ ಜನರು ಇಲ್ಲವೆ ಸಾಂಪ್ರದಾಯಿಕವಾಗಿ ಸೇರಿದ ಜನರು ಮುಂದೆ ದೊಂಬಿಗುಂಪಾಗಿ ಮಾರ್ಪಡಲೂಬಹುದು. ಆಗ ನಾವು ಮತ್ತು ಅವರು ಎಂಬ ಭಾವನೆಗಳು ತೀವ್ರಗತಿಯಿಂದ ಹುಟ್ಟಿಕೊಳ್ಳುತ್ತವೆ. ಸ್ನೇಹಿತರು ಯಾರು, ವೈರಿಗಳು ಯಾರು ಎಂದು ನಿರ್ಣಯವಾಗುತ್ತದೆ. ದೊಂಬಿ ಗುಂಪುಗಳಲ್ಲಿ ತಪ್ಪು ಒಪ್ಪುಗಳ ಚರ್ಚೆ ಅಸಾಧ್ಯ. ಆಲೋಚನೆಗೆ ವ್ಯವಧಾನವಿಲ್ಲ. ಎಲ್ಲ ವ್ಯಕ್ತಿಗಳೂ ತಮ್ಮ ಸ್ವತಂತ್ರವಾದ ಅಸ್ತಿತ್ವವನ್ನು ಕಳೆದುಕೊಂಡು ಅನಾಮಧೇಯರಾಗುತ್ತಾರೆ. ಗುಂಪಿನಲ್ಲಿ ಪೂರ್ಣವಾಗಿ ತಾದಾತ್ಮ್ಯ ಹೊಂದುತ್ತಾರೆ. ಅವರಿಗೆ ಕೆಲವು ವ್ಯಕ್ತಿಗಳು ಇಲ್ಲವೆ ವಸ್ತುಗಳು ಇಲ್ಲವೆ ಗುಂಪುಗಳು ಆಕ್ರಮಣದ ಕೇಂದ್ರಗಳಾಗುತ್ತವೆ. ಉಲ್ಬಣಿಸಿದ ಭಾವೋದ್ರೇಕದಿಂದ ಜನ ವರ್ತಿಸುತ್ತಾರೆ. ಕಲ್ಲು ತೂರುವುದು, ಕೊಳ್ಳೆ ಹೊಡೆಯುವುದು, ಬೆಂಕಿ ಹಚ್ಚುವುದು, ಥಳಿಸುವುದು ಇತ್ಯಾದಿ ಹಿಂಸಾತ್ಮಕ ಕಾರ್ಯಗಳಲ್ಲಿ ತೊಡಗುತ್ತಾರೆ. ತತ್ಕಾಲಕ್ಕೆ ದೊಂಬಿ ಗುಂಪಿಗೊಬ್ಬ ನಾಯಕನಿರಬಹುದು. ಆತ ಎಲ್ಲ ಜನರ ಗಮನ ಆಕ್ರಮಣದ ಕಡೆಗೆ ಕೇಂದ್ರೀಕೃತವಾಗುವಂತೆ ನೋಡಿಕೊಳ್ಳುತ್ತಾನೆ. ದೊಂಬಿಗುಂಪನ್ನು ಚದರಿಸಬೇಕಾದರೆ ಈ ನಾಯಕನನ್ನು ಗುಂಪಿನಿಂದ ಬೇರ್ಪಡಿಸುತ್ತಾರೆ. ಇಲ್ಲವೆ ಜನರ ಗಮನ ಬೇರೆ ಕಡೆಗೆ ಹರಿಯುವಂತೆ ಮಾಡುತ್ತಾರೆ ಎಂಬುದು ಸರ್ವವಿದಿತವಾದ ವಿಷಯ. ಗಾಳಿಸುದ್ದಿ, ಕಟ್ಟುಕತೆಗಳು, ವದಂತಿಗಳು ದೊಂಬಿಗುಂಪುಗಳಲ್ಲಿ ಮಹತ್ತ್ವದ ಪಾತ್ರ ವಹಿಸುತ್ತವೆ. ಮುಷ್ಕರ, ಪಿಕೆಟಿಂಗ್, ಮತಪ್ರದರ್ಶನ, ಮೆರವಣಿಗೆ, ಕಪ್ಪುಬಾವುಟ ತೋರಿಸುವುದು ಹೀಗೆ ಪ್ರಾರಂಭವಾಗುವ ಕಾರ್ಮಿಕರ, ಮತ್ತಿತರರ ಗುಂಪುಗಳು ನಮಗೆ ಪರಿಚಿತವಾದ ದೊಂಬಿಗುಂಪುಗಳು. ಈಚೆಗೆ ಜನಾಂಗೀಣ ದೊಂಬಿಗುಂಪುಗಳು ಮತ್ತು ಯುವಜನರ ದೊಂಬಿಗುಂಪುಗಳು ಕೂಡ ಹೆಚ್ಚುತ್ತಿರುವುದನ್ನು ನೋಡುತ್ತೇವೆ. ಇವುಗಳ ಮೂಲ ಎಲ್ಲಿ ಎಂದು ಹೇಳುವುದು ಕಷ್ಟ. ಮಾರ್ಟಿನ್ ಹೇಳುವಂತೆ ನಾವೆಲ್ಲ ತಾತ್ಕಾಲಿಕವಾಗಿ ಸಾಮೂಹಿಕವಾಗಿ ಹುಚ್ಚರಾಗುವುದರ ಪರಿಣಾಮವೇ ದೊಂಬಿಗುಂಪು. ಏನಾದರೂ ಹೊಸತು ಬೇಕೆಂಬ ಹಂಬಲಕ್ಕಾಗಿ, ಏಕತಾನ ಮೀರುವುದಕ್ಕಾಗಿ, ನಮ್ಮಲ್ಲಿ ಅದುಮಿ ಹಿಡಿದಿಟ್ಟಿರುವ ಭಯ, ರಾಗ ದ್ವೇಷಗಳನ್ನು ಹೊರಗೆಡಹುವುದಕ್ಕಾಗಿ ಹೀಗೆ ಬಗೆ ಬಗೆಯ ಸಾಮೂಹಿಕ ಉನ್ಮಾದದಲ್ಲಿ ಪಾಲುಗೊಳ್ಳುತ್ತೇವೆ. ಸಾಮಾಜಿಕ ಬದಲಾವಣೆ ಮತ್ತು ಅಶಾಂತಿಯ ಕಾಲದಲ್ಲಿ ದೊಂಬಿಗುಂಪುಗಳಿಗೆ ಅವಕಾಶ ಹೆಚ್ಚು.

**ಪಲಾಯನ ಗುಂಪುಗಳು :** ಭೂಕಂಪ, ನೆರೆಹಾವಳಿ, ಬೆಂಕಿ ಹೊತ್ತಿಕೊಳ್ಳುವುದು, ಬಾಂಬ್ ದಾಳಿ, ವೈರಿಗಳ ಆಕ್ರಮಣ ಮುಂತಾದ ಆಕಸ್ಮಿಕಗಳಲ್ಲಿ ಹಾಗೂ ಸಂಕಟಗಳಲ್ಲಿ ಜನ ತಮ್ಮ ಮಾನಸಿಕ ಸ್ಥೈರ್ಯವನ್ನು ಕಳೆದುಕೊಳ್ಳುವುದನ್ನೂ, ಕೈಕಾಲು ಕಳೆದುಕೊಂಡವರಂತೆ ವರ್ತಿಸುವುದನ್ನೂ ದಿಙ್ಮೂಢರಂತೆ ಅಳುವುದನ್ನೂ, ಪಲಾಯನ ಮಾಡುವುದನ್ನೂ ನಾವು ನೋಡಿದ್ದೇವೆ. ಇಂಥ ಗುಂಪುಗಳನ್ನು ಪಲಾಯನ ಗುಂಪುಗಳೆಂದೂ ಭಯಗ್ರಸ್ತ ಜನಸಂದಣಿಗಳೆಂದೂ ಕರೆಯುತ್ತಾರೆ. ದೊಂಬಿಗುಂಪುಗಳಂತೆ ಇವು ಕೂಡ ಕ್ರಿಯಾಶೀಲ ಸಂದಣಿಗಳು. ಆದರೆ ಕೋಪೋದ್ರಿಕ್ತವಾದ ದೊಂಬಿಗುಂಪುಗಳಲ್ಲಿ ಜನರು ವಿಧ್ವಂಸಕ ಕೃತ್ಯಗಳಿಗೆ ಮುನ್ನುಗ್ಗಿದರೆ ಪಲಾಯನ ಗುಂಪುಗಳಲ್ಲಿ ಸ್ವರಕ್ಷಣೆಗಾಗಿ ಚಲ್ಲಾಪಿಲ್ಲಿಯಾಗಿ ಓಡುತ್ತಾರೆ. ದೊಂಬಿಗುಂಪುಗಳಲ್ಲಿ ಜನ ತಮ್ಮ ಸ್ವಂತ ಅಸ್ತಿತ್ವವನ್ನು ಸಂಪೂರ್ಣವಾಗಿ ಮರೆತರೆ ಪಲಾಯನ ಗುಂಪುಗಳಲ್ಲಿ ಸ್ವಂತ ರಕ್ಷಣೆಗಾಗಿ ಉಳಿದ ಎಲ್ಲರನ್ನೂ ಮರೆಯುತ್ತಾರೆ. ದೇಶ ಬಿಟ್ಟು ಓಡಿಬರುವ ನಿರಾಶ್ರಿತರು ಮಕ್ಕಳು ಮರಿಗಳನ್ನೂ ಬಂಧುಗಳನ್ನೂ ಬಿಟ್ಟು ಜೀವದಾಸೆಯಿಂದ ಓಡಿಬರುವುದನ್ನು ನೋಡಿದ್ದೇವೆ. ಸಮಾಜ ವಿಜ್ಞಾನಿಗಳು ಚೆನ್ನಾಗಿ ವಿಶ್ಲೇಷಿಸಿದ ಒಂದು ಪಲಾಯನ ಗುಂಪಿನ ಉದಾಹರಣೆಯೆಂದರೆ ಕ್ಯಾಂಟ್ರಿಲ್ ಮತ್ತು ಸಂಗಡಿಗರು 1938ರಲ್ಲಿ ಅಮೆರಿಕೆಯಲ್ಲಿ ನಡೆಸಿದ ಪ್ರಯೋಗ. ಆರ್ಸನ್ ವೆಲ್ಸ್ ಎಂಬ ಪ್ರಸಿದ್ಧ ನಟ ಅಭಿನಯಿಸಿದ ಮಂಗಳ ಲೋಕದಿಂದ ಆಕ್ರಮಣ ಎಂಬ ನಾಟಕವನ್ನು ರೇಡಿಯೋದಿಂದ ಬಿತ್ತರಿಸಲಾಯಿತು. ಅದು ನಾಟಕದಂತೆ ಇರದೆ ವೀಕ್ಷಕ ವಿವರಣೆಯಂತೆ ಇದ್ದುದರಿಂದ ಜನ ಅದನ್ನು ಮಂಗಳ ಲೋಕದವರ ನಿಜವಾದ ಆಕ್ರಮಣವೆಂದು ನಂಬಿ ಭಯಗ್ರಸ್ತರಾಗಿ ವರ್ತಿಸಿದರು. ಸಾವಿರಾರು ಜನ ರಸ್ತೆಗಳಲ್ಲಿ ನೆರೆದರು; ಪೋಲಿಸ್ ಕಚೇರಿಗಳಿಂದ ಮಾಹಿತಿ ಕೇಳಿದರು; ಕೈಗೆ ಸಿಕ್ಕ ಕಾರುಗಳಲ್ಲಿ ಕೂತು ಪಲಾಯನ ಮಾಡಿದರು; ಚರ್ಚುಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು; ಅತ್ತರು. ಒಟ್ಟಿನಲ್ಲಿ ಪಲಾಯನ ಗುಂಪುಗಳಲ್ಲಿ ಸುವ್ಯವಸ್ಥಿತ ಜೀವನಕ್ಕೆ ಬೇಕಾದ ವಿವೇಚನೆ ಮತ್ತು ಹತೋಟಿಗಳು ಇರುವುದಿಲ್ಲ.

**ಸಾರ್ವಜನಿಕರು :** ಸಾರ್ವಜನಿಕರೆಂದರೆ ಸಮಾಜದ ಪ್ರತಿಯೊಬ್ಬರೂ ಎಂದು ಅರ್ಥವಲ್ಲ. ಅದು ಯಾವುದಾದರೊಂದು ಸಮಾನ ಆಸಕ್ತಿಯನ್ನು ಉಳ್ಳ ಜನರ ಅಸಂಘಟಿತ ಮತ್ತು ಚದರಿದ ಗುಂಪು. ಸಾಮಾನ್ಯವಾಗಿ ವಿವಾದಾಸ್ಪದ ವಿಷಯವೊಂದಕ್ಕೆ ಸಂಬಂಧಿಸಿದಂತೆ ಇರುವ ಅನೇಕ ವ್ಯಕ್ತಿಗಳ ಚದರಿದ ಮತ್ತು ಅಸಂಘಟಿತ ಸಂಕಲನಕ್ಕೆ ಸಾರ್ವಜನಿಕರು ಎನ್ನಬಹುದು. ಇಲ್ಲಿ ಸುಸಂಘಟಿತವಾದ ಗುಂಪಿನ ರಚನೆಯಿಲ್ಲ; ಅಧಿಕಾರಿಗಳಿಲ್ಲ; ಏಣಿಶ್ರೇಣಿಯಿಲ್ಲ. ಜನಸಂದಣಿಯಲ್ಲಿರುವಂತೆ ವ್ಯಕ್ತಿಗಳು ಒಂದೆಡೆಗೆ ಸೇರಿರುವುದಿಲ್ಲ. ಒಬ್ಬ ದೇಶದ ಒಂದು ಮೂಲೆಯಲ್ಲಿದ್ದರೆ ಇನ್ನೊಬ್ಬ ನೂರಾರು ಮೈಲಿಗಳ ದೂರದ ಮತ್ತೊಂದು ಮೂಲೆಯಲ್ಲಿ ಇರಬಹುದು. ಅವರ ನಡುವಿನ ಸಂಪರ್ಕ ತೀರ ಅತ್ಯಲ್ಪ; ಇರುವಷ್ಟು ಸಂಪರ್ಕ ಕೂಡ ಪರೋಕ್ಷವಾದುದು. ಸಾರ್ವಜನಿಕ ಸಂಪರ್ಕದ ಮಾಧ್ಯಮಗಳಾದ ರೇಡಿಯೊ, ಟೆಲಿವಿಷನ್, ವಾರ್ತಾಪತ್ರಿಕೆಗಳ ಮೂಲಕವೇ ಅವರು ತಮ್ಮ ಸಮಾನ ಆಸಕ್ತಿಗಳನ್ನು ಗುರುತಿಸಿಕೊಳ್ಳುತ್ತಾರೆ. ಆ ಕಾರಣದಿಂದಲೇ ಗ್ಯಾಬ್ರಿಯೆಲ್ ತಾರ್ಡ್ ಎಂಬಾತ ಸಾರ್ವಜನಿಕರು ಮುದ್ರಣಾಲಯದ ಸೃಷ್ಟಿಗಳೆಂದು ಕರೆದಿದ್ದಾನೆ. ಸಾರ್ವಜನಿಕರು ಹೆಚ್ಚು ಕಡಿಮೆ ಜನಸಂದಣಿಯಂತೆಯೇ ವರ್ತಿಸುತ್ತಾರೆ. ಆದರೂ ಈ ಎರಡು ಗುಂಪುಗಳ ನಡುವೆ ಕೆಲವು ಭೇದಗಳಿವೆ. ಭಾವೋದ್ವೇಗ, ಚಂಚಲತೆಗಳಂಥ ಗುಣಗಳಿದ್ದರೂ ಸಾರ್ವಜನಿಕರಲ್ಲಿ ವಾದಮಂಡನೆ, ಚರ್ಚೆ, ವಿವೇಚನೆ, ಭಿನ್ನಾಭಿಪ್ರಾಯಗಳಿಗೆ ಸಾಕಷ್ಟು ಅವಕಾಶವಿದೆ. ಜನಸಂದಣಿಯಲ್ಲಿ ಇದು ಸಾಧ್ಯವಿಲ್ಲ. ಅಲ್ಲಿ ಮನಸ್ಸಿಗೆ ಆವೇಗ ಹೆಚ್ಚು; ರಭಸ ಹೆಚ್ಚು. ಇದಲ್ಲದೆ ನಾವು ಏಕಕಾಲಕ್ಕೆ ಅನೇಕ ಸಾರ್ವಜನಿಕ ಗುಂಪುಗಳಿಗೆ ಸೇರುವ ಸಾಧ್ಯತೆ ಇದೆ. ಆದರೆ ಒಮ್ಮೆಗೆ ಒಂದೇ ಜನಸಂದಣಿಯನ್ನು ಸೇರಲು ಮಾತ್ರ ಸಾಧ್ಯ. ನಮ್ಮ ಆಸ್ಥೆಗಳು ಬೆಳೆಯುತ್ತಿರುವ ಹಾಗೆಯೇ ನಾವು ಅನೇಕ ಸಾರ್ವಜನಿಕರ ಗುಂಪುಗಳ ಸದಸ್ಯರಾಗುತ್ತೇವೆ. ಯುದ್ಧ ತೆರಿಗೆ, ಸಾರ್ವಜನಿಕ ಆರೋಗ್ಯ, ಬೆಲೆನಿಯಂತ್ರಣ, ಚಂದ್ರಲೋಕ ಯಾತ್ರೆ, ನದಿಗಳ ನೀರಿನ ಹಂಚಿಕೆ, ರಾಜ್ಯಗಳ ಪುನರ್ಘಟನೆ –ಹೀಗೆ ಅನೇಕ ಸಾರ್ವಜನಿಕ ವಿಚಾರಗಳು ತತ್ಸಂಬಂಧದ ಸಾರ್ವಜನಿಕರನ್ನು ಸೃಷ್ಟಿಸುತ್ತವೆ. ಒಟ್ಟಿನಲ್ಲಿ ಸಾರ್ವಜನಿಕರೆಂದರೆ ಸಾರ್ವಜನಿಕ ವಿಚಾರವೊಂದರ ಸುತ್ತ ಇರುವ ಜನರ ಗುಂಪು. ಸಾರ್ವಜನಿಕ ಸಂಪರ್ಕ ಮಾಧ್ಯಮಗಳಿಂದ ಈ ಗುಂಪು ಹೆಣೆಯಲ್ಪಟ್ಟಿದೆ. ಇಲ್ಲಿ ಚರ್ಚೆ ವಿವೇಚನೆಗಳಿಗೆ ಹೆಚ್ಚು ಅವಕಾಶವಿದೆ. ಪ್ರಜಾಪ್ರಭುತ್ವದಲ್ಲಿ ಈ ಗುಂಪುಗಳು ಬಹಳ ಮಹತ್ತ್ವ ಪಡೆದಿವೆ. ಈಗ ಅಭಿಪ್ರಾಯಗಳು ಒಂದು ಚಿಕ್ಕ ಸಮುದಾಯಕ್ಕಷ್ಟೇ ಸೀಮಿತವಾಗದೆ ವಿಶ್ವವ್ಯಾಪ್ತಿಯಾಗುತ್ತಿವೆ. ಮುದ್ರಣಾಲಯ ಮತ್ತು ಸಾರ್ವಜನಿಕ ಸಂಪರ್ಕ ಮಾಧ್ಯಮಗಳು ಬೆಳೆದಂತೆಲ್ಲ ಸಾರ್ವಜನಿಕರ ಗುಂಪುಗಳು ವಿಸ್ತಾರವಾಗುತ್ತಲೂ ವೈವಿಧ್ಯಮಯ ವಾಗುತ್ತಲೂ ಇವೆ. ಇವರ ಅಭಿಪ್ರಾಯವೇ ಉದ್ದಿಮೆಯೊಂದನ್ನು ಉಳಿಸಬಹುದು ಅಥವಾ ಅಳಿಸಬಹುದು. ಯುದ್ಧದ ಕಿಡಿ ಹೊತ್ತಿಸಬಹುದು ಅಥವಾ ಸರಕಾರವೊಂದನ್ನು ಉರುಳಿಸಬಹುದು.

**ಜನಸ್ತೋಮಗಳು :** ಜನಸಂದಣಿಗಳಂತಿರುವ, ಆದರೆ ಕೆಲವು ಸಂಗತಿಗಳಲ್ಲಿ ಅವುಗಳಿಗಿಂತ ಭಿನ್ನವಾಗಿರುವ, ಕೆಲವು ಸಂಕಲನಗಳನ್ನು ಜನಸ್ತೋಮಗಳೆಂದು ಕರೆಯುತ್ತಾರೆ. ಅನೇಕ ಜನ ಒಂದು ಸಾಮಾನ್ಯವಾದ ಪ್ರಚೋದಕ ವಸ್ತುವಿನ ಬಗೆಗೆ ಒಂದೇ ರೀತಿಯಲ್ಲಿ ವ್ಯಕ್ತಿಗತವಾಗಿ ವರ್ತಿಸುತ್ತಾರೆ. ಉದಾಹರಣೆಗೆ, ಎಲ್ಲೋ ಒಂದೆಡೆ ಧಾರಾಳವಾಗಿ ವಜ್ರವೋ ಚಿನ್ನವೋ, ಪುಕ್ಕಟೆ ಭೂಮಿಯೋ ಸಿಗುತ್ತದೆಂದು ವಂದತಿ ಹಬ್ಬಿ ಲಕ್ಷಗಟ್ಟಲೆ ಜನ ಉಳಿದವರ ಹಾಗೆ ಅವುಗಳ ಬೆನ್ನು ಹತ್ತಿ ಓಡಿಹೋದದ್ದನ್ನು, ವಿಚಿತ್ರವಾಗಿ ವರ್ತಿಸಿದ್ದನ್ನು ಕೇಳಿದ್ದೇವೆ. ಹಾಗೆಯೇ ತಾತ್ಕಾಲಿಕ ಫ್ಯಾಷನ್ನುಗಳನ್ನು ವಿಚಿತ್ರ ಪದ್ಧತಿಗಳನ್ನು ಇತರರಂತೆ ಅನುಸರಿಸುವ ಸಾವಿರಾರು ಜನರಿದ್ದಾರೆ. ಇತರರು ದೇಶ ಬಿಟ್ಟರೆಂದು ತಾವೂ ಬಿಡುವ ಜನರಾಶಿಗಳಿವೆ. ಇತರರಂತೆ ಸುದ್ದಿಗಳಿಗೆ ಕಾಯುವ ಲಕ್ಷಗಟ್ಟಲೆ ಜನರಿದ್ದಾರೆ. ಇವರೆಲ್ಲ ಒಂದು ಸುಸಂಘಟಿತ ಗುಂಪಿಗೆ ಸೇರಿದ ಜನರಲ್ಲ. ಇವರು ಬೇರೆ ಬೇರೆ ವರ್ಗಗಳಿಗೆ ಹಾಗೂ ಸಾಂಸ್ಕೃತಿಕ ಮಟ್ಟಗಳಿಗೆ ಸೇರಿದವರು. ಇವರು ಪರಸ್ಪರ ಸಂಪರ್ಕ ಹೊಂದಿರುವುದಿಲ್ಲ. ಅನಾಮಧೇಯರಾಗಿದ್ದು, ಒಬ್ಬರಿಗೊಬ್ಬರು ಅಪರಿಚಿತರಾಗಿದ್ದು, ತಮ್ಮಷ್ಟಕ್ಕೆ ನಾವು ಸಮಾನರೀತಿಯಿಂದ ವರ್ತಿಸುತ್ತಾರೆ. ಇವರು ಜನಸಂದಣೀಯ ವ್ಯಕ್ತಿಗಳಂತೆ ಏಕತ್ರವಿರುವುದಿಲ್ಲ. ಸಾಮೂಹಿಕವಾಗಿ ವರ್ತಿಸುವುದೂ ಇಲ್ಲ. ಒಬ್ಬ ವ್ಯಕ್ತಿ ಇನ್ನೊಬ್ಬನಿಗೆ ಯಾವುದೇ ರೀತಿಯಿಂದ ಅಂಟಿಕೊಂಡಿಲ್ಲ. ಅವನಿಗೆ ನಿಶ್ಚಿತ ಅಂತಸ್ತು ಪಾತ್ರಗಳಿಲ್ಲ. ಆತ ಪ್ರತ್ಯೇಕಿತ, ಅನಾಮಧೇಯ, ಹೀಗಾಗಿ ತನ್ನಷ್ಟಕ್ಕೆ ನಾನು ವರ್ತಿಸಲು ಸ್ವತಂತ್ರ. ನಗರೀಕರಣ ಮತ್ತು ಔದ್ಯೋಗೀಕರಣದೊಡನೆ ಬಂದ ಸಾಮಾಜಿಕ ಸನ್ನಿವೇಶಗಳಲ್ಲಿ ಜನಸ್ತೋಮಗಳು ಬೆಳೆದಿವೆಯೆಂದು ಹೇಳುತ್ತಾರೆ. ರೇಡಿಯೊ, ಟೆಲಿವಿಷನ್, ಚಲನಚಿತ್ರಗಳು, ಹೊಸ ವಿದ್ಯಾಕ್ರಮಗಳು, ಪ್ರಚಾರ ಸಾಧನಗಳು, ವಲಸೆಗಳು, ದೊಡ್ಡದೊಡ್ಡ ಕಾರ್ಖಾನೆಗಳು, ಬೀದಿಗಳು ನಮ್ಮನ್ನು ಚಿಕ್ಕ ಪರಿಚಿತ ಲೋಕಗಳಿಂದ ವಿಶಾಲವಾದ ಅಪರಿಚಿತ ಲೋಕಗಳತ್ತ ಒಯ್ಯುತ್ತಿವೆಯೆಂದೂ ನಾವು ಹತ್ತಿರದ ಕುಟುಂಬ, ನೆರೆಹೊರೆಗಳಂಥ ಸಾಮುದಾಯಿಕ ಸನ್ನಿವೇಶಗಳನ್ನು ಬಿಟ್ಟು ಬೃಹತ್ ಸಂಘಟನೆಗಳನ್ನು ಸೇರುತ್ತಿರುವೆವೆಂದೂ ಫರ್ಡಿನೆಂಡ್ ಟೊನ್ನೀಸ್ ಮತ್ತು ಅನಂತರದ ಲೇಖಕರು ಹೇಳುತ್ತ ಬಂದಿದ್ದಾರೆ. ಇವರಲ್ಲಿ ಅನೇಕರ ಪ್ರಕಾರ (ಅ) ಜನಸ್ತೋಮಗಳು ಹೆಚ್ಚುತ್ತಿವೆ; (ಆ) ಹಿಂದಿನ ಸ್ಥಳೀಯ ಗುಂಪುಗಳು ಧಾರ್ಮಿಕ ಹಾಗೂ ಕುಲನಿಷ್ಠ ಗುಂಪುಗಳು ಮಾಯವಾಗುತ್ತಿವೆ; (ಇ) ಸಂಘಟನೆ ಪ್ರಬಲವಾಗುತ್ತಿದೆ; (ಈ) ರಾಷ್ಟ್ರೀಯ ಮಾರುಕಟ್ಟೆ, ರಾಷ್ಟ್ರೀಯ ಚುನಾವಣೆ ಮುಂತಾಗಿ ನಮ್ಮ ಸಾಮಾಜಿಕ ವಲಯಗಳು ವಿಸ್ತರಿಸುತ್ತಿವೆ; (ಉ) ಸಾರ್ವಜನಿಕ ಸಂಪರ್ಕ ಮಾಧ್ಯಮಗಳು ಮಹತ್ತ್ವ ಪಡೆಯುತ್ತಿವೆ. (ಎಚ್.ವಿ.ಎನ್.)

**ಗುಂಪುಮದುವೆ :** ಒಂದು ಗಂಡಸರ ಗುಂಪು ಮತ್ತೊಂದು ಹೆಂಗಸರ ಗುಂಪನ್ನು ವಿವಾಹವಾದಲ್ಲಿ ಆ ಸಂಬಂಧವನ್ನು ಈ ಹೆಸರಿನಿಂದ ಕರೆಯುತ್ತಾರೆ. (ಗ್ರೂಪ್ ಮ್ಯಾರೇಜ್, ಕಮ್ಯೂನಲ್ ಮ್ಯಾರೇಜ್). ಇದರ ಪ್ರಕಾರ ಗುಂಪಿನ ಪ್ರತಿಯೊಬ್ಬ ಗಂಡಸಿಗೂ ಇನ್ನೊಂದು ಗುಂಪಿನ ಪ್ರತಿ ಹೆಂಗಸೂ ಹೆಂಡತಿಯಾಗುತ್ತಾಳೆ. ರಾಬರ್ಟ್ ಎಚ್ ಲೋವಿ ಎಂಬ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಈ ಬಗ್ಗೆ ಇರುವ ವಿವಿಧ ಅಭಿಪ್ರಾಯಗಳನ್ನು ಪರಿಶೀಲಿಸಿ ತನ್ನದೇ ಆದ ಇತ್ಯರ್ಥಕ್ಕೆ ಬರುತ್ತಾನೆ.

ಬಹುಪತ್ನೀತ್ವ (ಪಾಲಿಗಮಿ), ಬಹುಪತಿತ್ವ (ಪಾಲಿಯಾಂಡ್ರಿ). ಏಕ ಪತ್ನಿತ್ವ ಅಥವಾ ಏಕಪತಿತ್ವ (ಮಾನೊಗಮಿ), ಒಬ್ಬ ಹೆಂಡತಿ ಬದುಕಿರುವಾಗಲೆ ಮತ್ತೊಬ್ಬಳನ್ನೊ ಮತ್ತೆ ಅನೇಕರನ್ನೊ ಮದುವೆಯಾಗುವುದು (ಪಾಲಿಜಿನಿ)– ಈ ವಿಷಯಗಳನ್ನು ಎಲ್ಲ ಶಾಸ್ತ್ರಜ್ಞರೂ ಒಪ್ಪಿದ್ದಾರಾದರೂ ಗುಂಪು ಮದುವೆಯ ವ್ಯಾಪ್ತಿ ಮತ್ತು ಅದರಲ್ಲಿನ ದಾಂಪತ್ಯ ಸಂಬಂಧದ ಬಗ್ಗೆ ಅವರಲ್ಲಿ ಏಕಮತವಿಲ್ಲ.

ಎಲ್ಲಿ ವ್ಯಕ್ತಿಗಳ ಇಚ್ಛೆಗೆ ಪುರಸ್ಕಾರವಿಲ್ಲದೆ ಸಂಪೂರ್ಣವಾಗಿ ಗುಂಪೊಂದು ಮದುವೆಗಳನ್ನು ಏರ್ಪಡಿಸುತ್ತದೆಯೋ ಅಂಥ ವಿವಾಹಗಳನ್ನು ಗುಂಪು ಮದುವೆಗಳೆಂದು ರಾಬರ್ಟ್ ಬ್ರಿಫಾಲ್ಟ್ ಎಂಬಾತ ಕರೆದಿದ್ದಾನೆ. ಅಂದರೆ ವ್ಯಕ್ತಿ ತನಗೆ ಒಪ್ಪಿಗೆಯಾದ ಸಂಗಾತಿಯನ್ನು ತಾನೇ ಹುಡುಕಿ ಮದುವೆಯಾಗುವಂತಿಲ್ಲ. ಕುಟುಂಬ ಅಥವಾ ಗುಂಪು ಅವನ ಪರವಾಗಿ ಆ ಕೆಲಸವನ್ನು ತಾನು ಮಾಡುತ್ತದೆ. ಇನ್ನೊಂದು ಪದ್ಧತಿಯ ಪ್ರಕಾರ ಸಮುದಾಯ ತನಗಾಗಿ ಆರಿಸಿಟ್ಟ ಹೆಣ್ಣುಗಳಲ್ಲಿ ಒಂದನ್ನು ಗಂಡು ಆರಿಸಬೇಕಾಗುತ್ತದೆ. ಸಮುದಾಯ ಆರಿಸಿದ ಹುಡುಗಿಯರನ್ನು ಬಿಟ್ಟು ಬೇರಾವ ಗುಂಪಿನ ಹುಡುಗಿಯನ್ನು ಆಯ್ದು ಮದುವೆಯಾದರೂ ಅಂಥವರಿಗೆ ಮರಣದಂಡನೆ ವಿಧಿಸಲ್ಪಡುತ್ತದೆ. ಅರವಾಕರಲ್ಲಿ ಈ ಪದ್ಧತಿಯನ್ನು ಕಾಣುತ್ತೇವೆ. ಕಾದಿರರಲ್ಲಿ ಒಂದು ಹಳ್ಳಿಯ ಒಬ್ಬ ಯುವಕ ಬೇರೊಂದು ಗೊತ್ತಾದ ಹಳ್ಳಿಯ ಹುಡುಗಿಯ ಸಂಗಡ ವಿವಾಹವಾಗಬೇಕಾದ ಅಗತ್ಯವಿತ್ತು. ಯುವಕ ಆ ಹಳ್ಳಿಗೆ ಹೋಗಿ ಒಂದು ವರ್ಷ ದುಡಿದು, ಅಲ್ಲಿಯ ಹುಡುಗಿಯರನ್ನು ಪರಿಶೀಲಿಸಿ, ಒಬ್ಬಳನ್ನು ಮದುವೆಯಾಗಲು ನಿರ್ಧರಿಸುತ್ತಿದ್ದ. ಆದರೆ ವಿವಾಹದ ವಿಚಾರದಲ್ಲಿ ಹುಡುಗಿಯ ನಂಟರಲ್ಲಿ ಯಾವ ಮಾತುಕತೆಯನ್ನೂ ಆತ ಆರಂಭಿಸುವಂತಿರಲಿಲ್ಲ. ತನ್ನ ಸ್ವಂತ ಗ್ರಾಮಕ್ಕೆ ಹೋಗಿ ಅಲ್ಲಿ ಗ್ರಾಮಸ್ಥರ ಅನುಮತಿಯನ್ನು ಪಡೆದು ಅನಂತರ ಮದುವೆಯಾಗಬೇಕಿತ್ತು. ಈ ಸಂದರ್ಭಗಳಲ್ಲಿ ಒಂದು ಗ್ರಾಮದಲ್ಲಿ ವಾಸವಾಗಿರುವವರೆಲ್ಲರೂ ಒಂದೇ ಬುಡಕಟ್ಟಿಗೆ ಸೇರಿದವರಾಗಿರುತ್ತಿದ್ದರು ಎಂಬುದನ್ನು ಮರೆಯಬಾರದು.

ಪೂರ್ವ ಮಂಗೋಲರಲ್ಲಿ ಮದುವೆಯ ವಿಷಯವಾಗಿ ವ್ಯವಹಾರ ಮಾಡಲು ವಿವಾಹವಾಗುವ ವ್ಯಕ್ತಿಗಳಿಗಾಗಲೀ ಅಥವಾ ಅವರ ಕುಟುಂಬದವರಿಗಾಗಲೀ ಸ್ವಲ್ಪವೂ ಸ್ವಾತಂತ್ರ್ಯವಿರಲಿಲ್ಲ. ಹುಡುಗನ ಬಂಧುಗಳೆಲ್ಲರೂ ಹುಡುಗಿಯ ಬಂಧುಗಳ ಸಂಗಡ ಒಂದು ಸಂತೆಯ ದಿವಸ ಚರ್ಚಿಸಿ ಒಪ್ಪಂದಕ್ಕೆ ಬರುತ್ತಿದ್ದರು. ಅಂದು ಒಪ್ಪಂದವಾಗದಿದ್ದರೆ ಮುಂದಿನ ಸಂತೆಗೆ ತಮ್ಮ ಚರ್ಚೆಯನ್ನು ಮುಂದೆ ಹಾಕುತ್ತಿದ್ದರು.

ಗಿಲಿಯಾಕರಲ್ಲಿರುವ ಪದ್ಧತಿಯನ್ನು ಬ್ರಿಫಾಲ್ಟ್ ವಿವರಿಸಿದ್ದಾನೆ. ಇವರಲ್ಲಿ ಒಂದೂರಿನಲ್ಲಿ ಒಂದೇ ಕುಟುಂಬದ ಸದಸ್ಯರು ವಾಸಿಸುತ್ತಿದ್ದರು. ಅಲ್ಲಿದ್ದ ದೊಡ್ಡವರೆಲ್ಲರೂ ತಂದೆತಾಯಿಗಳು, ಸಣ್ಣವರೆಲ್ಲರೂ ಮಕ್ಕಳು ಮತ್ತು ಕಿರಿಯರು; ಪರಸ್ಪರವಾಗಿ ಅಕ್ಕತಂಗಿಯರು ಅಣ್ಣತಮ್ಮಂದಿರು. ಆದುದರಿಂದ ಮದುವೆಯ ಕಾರ್ಯ ಅವರವರಲ್ಲೇ ನಡೆಯುವಂತಿರಲಿಲ್ಲ. ಒಂದು ಬುಡಕಟ್ಟಿನವರು ಮತ್ತೊಂದು ಬುಡಕಟ್ಟಿನವರೊಡನೆ ಸಂಬಂಧ ಬೆಳೆಸುತ್ತಿದ್ದರು. ಒಬ್ಬ ವಿವಾಹವಾಗಬಹುದಾದ ಹುಡುಗಿಗೆ ಅಂಗೇಜ್ ಎಂದು ಹೆಸರು; ಹುಡುಗನಿಗೆ ಪೂ ಎಂದು ಹೆಸರು. ವಿವಾಹ ಪ್ರಮುಖವಾಗಿ ಆರ್ಥಿಕ ದೃಷ್ಟಿಯಿಂದ ಜರುಗುತ್ತಿತ್ತು. ಇಂಥ ಮದುವೆಯಲ್ಲಿ ಪತಿಗೆ ವಿವಾಹವಾದ ಹುಡುಗಿಯ ಮೇಲೆ ಸಂಪೂರ್ಣವಾದ ಲೈಂಗಿಕ ಅಧಿಕಾರವಿಲ್ಲ. ಆಕೆಯ ಮೇಲೆ ಎಲ್ಲ ಪೂಗಳಿಗೂ ಲೈಂಗಿಕ ಸಂಬಂಧದ ಅಧಿಕಾರವಿರುತ್ತದೆ. ಒಟ್ಟಿನಲ್ಲಿ ಪೂ ಮತ್ತು

ಅಂಗೇಜ್ ವಿವಾಹ ಪೂರ್ವದಲ್ಲಿ ಹೇಗೋ ಹಾಗೆ ವಿವಾಹವಾದ ಮೇಲೆಯೂ ಲೈಂಗಿಕ ವಿಚಾರವಾಗಿ ಸ್ವತಂತ್ರರು ಒಂದು ಬುಡಕಟ್ಟಿನವರೆಲ್ಲರೂ ಸೋದರಸೋದರಿಯರೆಂದು ಪರಿಗಣಿಸಲ್ಪಟ್ಟಿರುವುದರಿಂದ ಆ ಬುಡಕಟ್ಟಿನ ಯುವಕರೆಲ್ಲರೂ ಪೂ ಗಳಾಗುತ್ತಾರೆ; ಅದರಂತೆ ಮದುವೆಯಾಗ ಬೇಕಾದ ಬುಡಕಟ್ಟಿನ ಯುವತಿಯರೆಲ್ಲ ಅಂಗೇಜ್‌ಗಳಾಗುತ್ತಾರೆ.

ಈ ಗಿಲಿಯಾಕರಲ್ಲಿ ಪೂರ್ವ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟಿನವರಿಗೂ ಪಶ್ಚಿಮ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟಿನವರಿಗೂ ಒಂದು ವ್ಯತ್ಯಾಸವಿದೆ. ಪೂರ್ವ ಗಿಲಿಯಾಕರಲ್ಲಿ ತಮ್ಮಂದಿರು ಅಣ್ಣಂದಿರ ಹೆಂಡತಿಯರೊಡನೆ ಲೈಂಗಿಕ ಸಂಬಂಧವನ್ನು ಬೆಳೆಸುವ ಹಕ್ಕಿದೆ. ಆದರೆ ಅಣ್ಣಂದಿರು ತಮ್ಮಂದಿರ ಹೆಂಡತಿಯರ ಮೇಲೆ ಅಂಥ ಅಧಿಕಾರವನ್ನು ಹೊಂದಿಲ್ಲ.

ಆಸ್ಟ್ರೇಲಿಯ ಡ್ಯೆಯರಿ ಜನಾಂಗದಲ್ಲಿ ಇದೇ ಪದ್ಧತಿಗಳಿವೆ. ಸ್ತ್ರೀಗೆ ಗಂಡನೊಬ್ಬನೇ ಆದರೂ ಅನೇಕ ಪುರುಷರು ಆಕೆಯ ಸಂಗಡ ಲೈಂಗಿಕ ಸಂಬಂಧವನ್ನು ಹೊಂದಿರುತ್ತಾರೆ. ಆದರೆ ಉರಬನ್ನರಲ್ಲಿ, ಸ್ಪೆನ್ಸರ್ ಮತ್ತು ಗಿಲ್ಲಿನ್ನರ ಪ್ರಕಾರ, ವ್ಯೆಯಕ್ತಿಕ ವಿವಾಹ ಹೆಸರಿಗಾಗಲೀ ನಡವಳಿಕೆಯಲ್ಲಾಗಲೀ ಇಲ್ಲ. ಯಾವ ಹೆಂಗಸಿನ ಮೇಲೆ ಯಾವ ಗಂಡಸಿಗೂ ಲೈಂಗಿಕ ವಿಚಾರದಲ್ಲಿ ಪ್ರತ್ಯೇಕ ಅಧಿಕಾರವಿಲ್ಲ ಎಂಬುದು ಅವರ ಅಭಿಪ್ರಾಯ.

ಬ್ರಿಫಾಲ್ಟ್ ಮತ್ತು ಮಾರ್ಗನರು ವಿವಾಹದ ಬೆಳವಣಿಗೆಯನ್ನು ವಿಕಾಸವಾದದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ಇವರ ಪ್ರಕಾರ ಲೈಂಗಿಕ ಸಾಮ್ಯವಾದ ಮಾನವ ಸಮಾಜದಲ್ಲಿ ಮೊಟ್ಟಮೊದಲು, ಇತರ ಪ್ರಾಣಿಗಳಲ್ಲಿದ್ದಂತೆ ಇದ್ದಿತೆಂದು ತಿಳಿಸಿ, ಎರಡನೆಯ ಹಂತ ಗುಂಪು ವಿವಾಹವೆಂದೂ ಅನಂತರ ಕ್ರಮವಾಗಿ ಬಹುಪತಿವಿವಾಹ ಬಹುಪತ್ನಿ ವಿವಾಹ ಕೊನೆಗೆ ಏಕಪತ್ನಿ ವಿವಾಹ. ಹೀಗೆ ವಿವಾಹ ಪದ್ಧತಿಯ ಬೆಳವಣಿಗೆಯಾಗಿದೆ ಎಂದೂ ಅವರ ಅಭಿಪ್ರಾಯ.

ಸತ್ತವನ ಹೆಂಡತಿಯನ್ನು ಅವನ ತಮ್ಮ ಅಥವಾ ಹತ್ತಿರದ ಸಂಬಂಧಿ ಮದುವೆಯಾಗುವುದು (ಲೀವಿರೆಟ್), ಹೆಂಡತಿ ಇರುವಾಗಲೂ ಆಕೆ ಸತ್ತ ಮೇಲೋ ಅವಳ ತಂಗಿಯನ್ನು ಮದುವೆಯಾಗುವುದು (ಸೊರೊರೆಟ್). ಹವಾಯಿ ಜನರಲ್ಲಿ ಬಳಕೆಯಲ್ಲಿದ್ದಂತೆ ಸಹೋದರರು ಒಟ್ಟಾಗಿ ಬೇರೊಂದು ಗುಂಪಿನ ಸಹೋದರಿಯನ್ನು ವರಿಸುವುದು (ಪುನಾಲ), ಆಸ್ಟ್ರೇಲಿಯದ ಆದಿವಾಸಿಗಳಲ್ಲಿದ್ದಂತೆ ಮದುವೆಯಾದ ಗಂಡ ಅಥವಾ ಹೆಂಡತಿಯಲ್ಲದೆ ಬೇರೊಬ್ಬ ಸಂಗಾತಿಯನ್ನು ಹೊಂದುವುದು (ಪಿರೌರ) – ಇವು ಕೂಡ ವಿವಾಹ ವಿಕಾಸದಲ್ಲಿನ ಕೆಲವು ಮುಖ್ಯ ಸ್ತರಗಳು.

ಬ್ರಿಫಾಲ್ಟ್, ಮಾರ್ಗನ್ ಸ್ಪೆನ್ಸರ್ ಮತ್ತು ಗಿಲಿನ್ನರ ಅಧ್ಯಯನಗಳು ಲೈಂಗಿಕ ಸಂಬಂಧದಲ್ಲಿನ ವಿವಿಧ ಹಂತಗಳನ್ನು ತೋರುತ್ತವೆಯೇ ಹೊರತು ಅವು ಗುಂಪು ಮದುವೆಯ ಅಸ್ತಿತ್ವಕ್ಕೆ ಸಾಕಷ್ಟು ಆಧಾರಗಳನ್ನು ಒದಗಿಸುವುದಿಲ್ಲ – ಎಂಬುದು ಲೋವಿಯ ಅಭಿಮತ. (ಎಚ್.ಎಂ.ಎಸ್.)

**ಗುಗ್ಗುಳದ ಮರ :** ಬರ್‌ಸೆರೇಸೀ ಕುಟುಂಬಕ್ಕೆ ಸೇರಿದ ಬಾಸ್‌ವೆಲಿಯ ಸೆರ್ರೇಟ ಎಂಬ ವೈಜ್ಞಾನಿಕ ಹೆಸರುಳ್ಳ ಒಂದು ಮರ. ಮಡ್ಡಿ ಮರ ಇದರ ಪರ್ಯಾಯನಾಮ. ಭಾರತದಲ್ಲಿ ಬಿಹಾರ, ಒರಿಸ್ಸ, ರಾಜಾಸ್ತಾನ ಮತ್ತು ಪೂರ್ವ ಪ್ರಾಂತ್ಯಗಳ ಒಣ ಹವೆಯಿರುವ ಬೆಟ್ಟಗಾಡುಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ. ಸುಮಾರು 7–9 ಮೀ ಎತ್ತರಕ್ಕೆ ಬೆಳೆಯುವ ಮರ ಇದು. ಮುಖ್ಯ ಕಾಂಡವೇ ಸಾಮಾನ್ಯವಾಗಿ 4–5 ಮೀ ಉದ್ದ ಇರುತ್ತದೆ. ಎಲೆಗಳು ಸಂಯುಕ್ತ ಮಾದರಿಯವು. ಎಲೆಗಳ ಮೇಲೆಲ್ಲ ತುಪ್ಪಳದಂಥ ಕೂದಲುಗಳ ಹೊದಿಕೆ ಉಂಟು. ಎಲೆಗಳ ಅಂಚು ಗರಗಸದಂತೆ ಇದೆ.

ಗುಗ್ಗುಳದ ಮರದ ಕಾಂಡದಿಂದ ಪಾರದರ್ಶಕವಾದ ಅಂಟುದ್ರವ ಸ್ರವಿಸುತ್ತದೆ. ಇದನ್ನು ಗುಗ್ಗುಳ ಎಂದು ಕರೆಯುತ್ತಾರೆ. ಸುವಾಸನೆಯುಳ್ಳ ಈ ದ್ರವ ತೆಳುಹಳದಿ ಬಣ್ಣದ್ದು. ಗಾಳಿಯ ಸಂಪರ್ಕಕ್ಕೆ ಬಂದಾಗ ನಿಧಾನವಾಗಿ ಗಟ್ಟಿಯಾಗುತ್ತದೆ. ಒಂದು ಮರದಿಂದ ವರ್ಷಕ್ಕೆ ಸುಮಾರು ಎರಡು ಪೌಂಡುಗಳಷ್ಟು ಗುಗ್ಗುಳ ದೊರೆಯುತ್ತದೆ. ಸಾಮಾನ್ಯವಾಗಿ 75 ಸೆಂಮೀ ಮತ್ತು ಅದಕ್ಕಿಂತ ಹೆಚ್ಚು ದಪ್ಪದ ಕಾಂಡಗಳಿರುವ ಮರಗಳಿಂದ ಗುಗ್ಗುಳವನ್ನು ತೆಗೆಯುತ್ತಾರೆ. ಗುಗ್ಗುಳವನ್ನು ತೆಗೆಯಲು ಸುಮಾರು 30 ಸೆಂಮೀ ಗಳಷ್ಟು ಅಗಲದ ತೊಗಟೆಯನ್ನು ಮರದ ಬುಡದಿಂದ 60–75 ಸೆಂಮೀ ಗಳ ಎತ್ತರದಲ್ಲಿ ಕೆತ್ತುತ್ತಾರೆ. ಇದರಿಂದ ಸ್ರವಿಸುವ ಅಂಟು ದ್ರವವನ್ನು ಶೇಖರಿಸುತ್ತಾರೆ. ಅಂಟನ್ನು ತೆಗೆಯುವ ಕಾಲ ನವೆಂಬರಿನಿಂದ ಜುಲೈವರೆಗೆ. ಗುಗ್ಗುಳವನ್ನು ಧೂಪ ಹಾಕಲು ಬಳಸುತ್ತಾರೆ. ಗುಗ್ಗುಳದಲ್ಲಿ ಶೇ. 10–11ರಷ್ಟು ತೇವಾಂಶ. ಶೇ. 8–9ರಷ್ಟು ಚಂಚಲ ತೈಲ, ಶೇ. 55–57ರಷ್ಟು ರಾಳ ಮತ್ತು ಶೇ. 4–5ರಷ್ಟು ಕರಗದಿರುವ ವಸ್ತುಗಳಿವೆ. ಗುಗ್ಗುಳದಲ್ಲಿ ಕೆಲವು ಉಪಯುಕ್ತ ಸಾರತೈಲಗಳಿರುವುದರಿಂದ ಇದನ್ನು ಸಂಧಿವಾತ ಮತ್ತು ನರದೌರ್ಬಲ್ಯಗಳನ್ನು ಗುಣಪಡಿಸಲು ಆಯುರ್ವೇದ ಚಿಕಿತ್ಸೆಗಳಲ್ಲಿ ಉಪಯೋಗಿಸುತ್ತಾರೆ.

ಗುಗ್ಗುಳದ ಮರದ ಚೌಬೀನೆ ಮೃದುವಾಗಿಯೂ ಸಾಕಷ್ಟು ಗಟ್ಟಿಯಾಗಿಯೂ ಇರುವುದರಿಂದ ಹಲಗೆ, ಸಾಧಾರಣ ದರ್ಜೆಯ ಪೀಠೋಪಕರಣಗಳು, ಪೆಟ್ಟಿಗೆಗಳು, ಎರಡನೆಯ ದರ್ಜೆಯ ಪ್ಲೈವುಡ್ ಮುಂತಾದವನ್ನು ತಯಾರಿಸಲು ಬಳಸುತ್ತಾರೆ.

(ಎಸ್.ಆರ್.ಜಿ.)

**ಗುಜರಾತ್ :** ಭಾರತದ ಒಂದು ರಾಜ್ಯ. ಅರಬ್ಬೀ ಸಮುದ್ರದ ತೀರದಲ್ಲಿ, ಉ. ಅ. $20^0 1'$ – $24^0 7'$ ಮತ್ತು ಪೂ. ರೇ. $68^0 4'$ – $74^0 4'$ ನಡುವೆ ಇದೆ. ಉತ್ತರದಲ್ಲಿ ಪಾಕಿಸ್ತಾನ, ಈಶಾನ್ಯದಲ್ಲಿ ರಾಜಸ್ತಾನ, ಪೂರ್ವದಲ್ಲಿ ಮಧ್ಯಪ್ರದೇಶ ಮತ್ತು ದಕ್ಷಿಣದಲ್ಲಿ ಮಹಾರಾಷ್ಟ್ರ ಪಶ್ಚಿಮ, ನೈರುತ್ಯ ಮತ್ತು ದಕ್ಷಿಣದಲ್ಲಿ ಅರಬ್ಬೀ ಸಮುದ್ರ ಮತ್ತು ಖಂಭತ್ ಹಾಗೂ ಕಚ್ ಖಾರಿ ಸುತ್ತುವರೆದಿವೆ. ಈ ರಾಜ್ಯದ ವಿಸ್ತೀರ್ಣ 1,96,024 ಚ.ಕಿಮೀ. ಜನಸಂಖ್ಯೆ 6,03,83,628 (2011).

ಗುಜರಾತಿನ ಒಂದು ವೈಶಿಷ್ಟ್ಯವೆಂದರೆ ಅದರ ಕರಾವಳಿ. ಭಾರತದ ಬೇರಾವ ರಾಜ್ಯಕ್ಕೂ ಇಷ್ಟು ಉದ್ದವಾದ ಸಮುದ್ರತೀರವಿಲ್ಲ. ಇದು ಗುಜರಾತಿನ ವಾಯುಗುಣ, ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೆ ಬಹಳ ಹೆಚ್ಚಿನ ಪ್ರಭಾವ ಬೀರಿದೆ. ಭಾರತದ ಒಟ್ಟು ವಿಸ್ತೀರ್ಣದಲ್ಲಿ ಶೇ. 6.1 ರಷ್ಟಿರುವ ಈ ರಾಜ್ಯದ ಜನಸಂಖ್ಯೆ ಭಾರತದ್ದರ ಶೇ.4.8 ರಷ್ಟಿದೆ. ಗುಜರಾತಿನ ಭಾಷೆ ಗುಜರಾತಿ. ರಾಜಧಾನಿ ಗಾಂಧಿನಗರ. (ಬಿ.ಎ.ಎಸ್.)

**ಭೂವೈಜ್ಞಾನಿಕ ಲಕ್ಷಣ :** ಪ್ರಪಂಚದ ಎಂಟು ಸ್ಥಿರಭಾಗಗಳಲ್ಲಿ ಒಂದಾದ ಭಾರತ ಪರ್ಯಾಯದ್ವೀಪ ಭೂಇತಿಹಾಸದ ಯಾವ ಕಾಲದಲ್ಲೂ ಸಂಪೂರ್ಣವಾಗಿ ಸಮುದ್ರಾಕ್ರಮಣಕ್ಕೆ ಒಳಪಟ್ಟಿರಲಿಲ್ಲ. ಜುರಾಸಿಕ್, ಕ್ರಿಟೇಷಸ್ ಮತ್ತು ತೃತೀಯ ಭೂಕಾಲ ಯುಗಗಳಲ್ಲಿ ಗುಜರಾತಿನ ಕೆಲವು ಭಾಗಗಳು ಮಾತ್ರ ಸಮುದ್ರಾಕ್ರಮಣಕ್ಕೆ ಒಳಪಟ್ಟಿದ್ದವು. ಆದ್ದರಿಂದ ಗುಜರಾತಿನ ಭೂಇತಿಹಾಸ ಈ ಕಾಲಗಳ ಶಿಲೆಗಳಿಂದ ಮಾತ್ರ ಪ್ರತಿನಿಧಿತವಾಗಿದೆ. ಇವನ್ನು ಹೀಗೆ ವರ್ಗೀಕರಿಸಬಹುದು. ತೃತೀಯ ಭೂಕಾಲ ಯುಗದ ಶಿಲಾವರ್ಗಗಳು – ಡೆಕ್ಕನ್ ಟ್ರ್ಯಾಪ್; ನರ್ಮದಾ ಕಣಿವೆಯ ಬಾಗ್ ಪದರಗಳು – ಕ್ರಿಟೇಷಸ್ ಅಂತ್ಯಕಾಲ; ಕಚ್ಛ್ ಪ್ರದೇಶದ ತೀರ ನಿಕ್ಷೇಪಗಳು – ಜುರಾಸಿಕ್ ಮಧ್ಯಕಾಲದಿಂದ ಕ್ರಿಟೇಷಸ್ ಆದಿಯವರೆಗೆ; ಚಾಂಪ್ನರ್ ಶಿಲಾವರ್ಗ – ಆರ್ಷೇಯ ಕಲ್ಪ.

**ಚಾಂಪ್ನರ್ ಶಿಲಾವರ್ಗ :** ವಡೋದರಕ್ಕೆ ಸುಮಾರು 65ಕಿಮೀ ಪೂರ್ವದಲ್ಲಿ ನೈಸ್ ಶಿಲೆಯಿಂದೊಡಗೂಡಿದ ಅತ್ಯಂತ ಪುರಾತನ ಕಾಲದ ಪದರಶಿಲೆಗಳು ಹೊರಕಂಡಿವೆ. ಡಬ್ಲ್ಯು. ಟಿ. ಬ್ಲ್ಯಾನ್‌ಫೋರ್ಡ್ ಎಂಬಾತ ಇವನ್ನು ಚಾಂಪ್ನರ್ ಶಿಲಾವರ್ಗ ಎಂದು ಕರೆದು, ಇವು ರಾಜಸ್ತಾನದ ಆರಾವಳಿ ಶಿಲಾವರ್ಗಕ್ಕೆ ಸಮಕಾಲೀನವಾದವುಗಳೆಂದು ಸ್ಥಾಪಿಸಿದ. ಚಾಂಪ್ನರ್ ಶಿಲಾವರ್ಗಕ್ಕೂ ಈಗ ಕರ್ನಾಟಕದಲ್ಲಿರುವ ಮಾದರಿ ಧಾರವಾಡ ಶಿಲಾವರ್ಗಕ್ಕೂ ಬಹಳ ಸಾಮ್ಯವಿರುವುದರಿಂದ, ಇವೆರಡು ಶಿಲಾವರ್ಗಗಳು ಡೆಕ್ಕನ್ ಟ್ರ್ಯಾಪಿನ ಕೆಳಗೆ ಒಂದಾಗಿವೆ ಎಂಬುದರಲ್ಲಿ ಸಂಶಯವಿಲ್ಲ.

ಕಚ್ಛ್ ತೀರ ನಿಕ್ಷೇಪಗಳು: ವಿಂಧ್ಯನ್ ಕಾಲದಿಂದಲೂ ಸಮುದ್ರ ನಿಕ್ಷೇಪಗಳನ್ನೇ ಕಾಣದಿದ್ದ ಪರ್ಯಾಯ ದ್ವೀಪಭಾಗ ಜುರಾಸಿಕ್ ಮಧ್ಯಕಾಲದಲ್ಲಿ ಸಮುದ್ರಾಕ್ರಮಣಕ್ಕೆ ಒಳಪಟ್ಟಿತು. ಕಾಠಿಯಾವಾಡದ ಉತ್ತರಭಾಗ ಸಮುದ್ರದ ಅಡಿಯಲ್ಲಿ ಮುಳುಗಿ ಅಲ್ಲಿ ಸುಮಾರು 1829 ಮೀ ದಪ್ಪದ ನಿಕ್ಷೇಪಗಳು ಸಂಚಯನವಾಗಿವೆ. ಇವು ಪೂರ್ವ – ಪಶ್ಚಿಮವಾಗಿ ಹಬ್ಬಿರುವ ಮೂರು ಶೃಂಗಮಡಿಕೆಗಳಾಗಿ ಹೊರಕಂಡಿವೆ. ಈ ಶಿಲಾಪರಂಪರೆಯನ್ನು ಪಚಂ, ಚಾರಿ, ಕಟ್ರೋಲ್ ಮತ್ತು ಉಮಿಯ ಎಂದು ನಾಲ್ಕು ಭಾಗಗಳಾಗಿ ವಿಭಜಿಸಲಾಗಿದೆ. ಇದು ಜುರಾಸಿಕ್ ಯುಗದ ಬಾಕೋನಿಯನ್ ಕಾಲದಿಂದ ಕ್ರಿಟೇಷಸ್ ಯುಗದ ನಿಯೊಕೋಮಿಯನ್ ಅಥವಾ ಅಪ್ಟಿಯನ್ ಕಾಲದವರೆಗಿನ ಶಿಲಾನಿಕ್ಷೇಪ ಗಳಿಂದ ಕೂಡಿದೆ. ಈ ಶಿಲಾಸಮುದಾಯದ ಮೇಲೆ ಡೆಕ್ಕನ್ ಟ್ರ್ಯಾಪ್ ಅಥವಾ ಇಯೊಸೀನ್ ಯುಗದ ಶಿಲೆಗಳಿವೆ. ಪಚಂ ಶ್ರೇಣಿ ಕಚ್ ಖಾರಿಯಲ್ಲಿರುವ ಪಚಂ ದ್ವೀಪದಲ್ಲಿ ಹೊರಕಂಡಿರುವುದರಿಂದ ಈ ಹೆಸರು ಬಂದಿದೆ. ಈ ಶಿಲೆಗಳ ದಪ್ಪ ಸುಮಾರು 305 ಮೀ. ಭೂಜ್‌ಗೆ ಸುಮಾರು 49 ಕಿಮೀ. ವಾಯವ್ಯದಲ್ಲಿ ಚಾರಿ ಎಂಬ ಹಳ್ಳಿಯ ಹತ್ತಿರ ಪಚಂ ಶ್ರೇಣಿಗಿಂತ ಕಿರಿಯ ಶಿಲೆಗಳು ಹೊರಕಂಡಿವೆ. ಆದ್ದರಿಂದ ಇವನ್ನು ಚಾರಿ ಶ್ರೇಣಿ ಎಂದು ಹೆಸರಿಸಲಾಗಿದೆ. ಕಟ್ರೋಲ್ ಶಿಲಾಶ್ರೇಣಿ ಅನೇಕ ವಿಧದ ಮರಳುಶಿಲೆಗಳು ಮತ್ತು ಜೇಡುಶಿಲೆಗಳಿಂದಾಗಿದೆ. ಇವನ್ನು ಆರೋಹಣ ಕ್ರಮದಲ್ಲಿ ಕಂಟ್ಕೋಟ್ ಮರಳು ಶಿಲೆ, ಕಟ್ರೋಲ್ ಶಿಲೆ ಮತ್ತು ಗಾಜನ್ಸಾರ್ ಪದರಗಳಾಗಿ ವಿಂಗಡಿಸಿದೆ. ಇವು ಆರ್ಗೋವಿಯನ್ ಕಾಲದ ಅಂತ್ಯದಿಂದ ಪೋರ್ಟ್ ಲ್ಯಾಂಡಿಯನ್ ಕಾಲದವು. ಕಂಟ್ಕೋಟ್ ಮರಳು ಶಿಲೆ ವಾಗಡ್ ಸುತ್ತಮುತ್ತ ಹೊರಕಂಡಿದೆ. ಇದರಲ್ಲಿ ಎಪಿಮಾಯೈಟಿಸ್ ಟ್ರಾನ್ಸಿಯನ್ಸ್, ಪ್ರಾಸ್ಪೊದಿಸ್ಪಿಂಕ್ಟೆಸ್ ವಿರ್ಗುಲಾಯಿಡ್ಸ್, ಟಾರ್ಕುಟಿಸ್ಪಿಂಕ್ಟೆಸ್ ಟಾರ್ಕುಟಿಸ್ ಎಂಬ ಅವಶೇಷಗಳಿವೆ. ಕಟ್ರೋಲ್ ಶಿಲಾಪದರದ ಕೆಳ ಮತ್ತು

ಮಧ್ಯಭಾಗಗಳಲ್ಲಿ ಒಪ್ಪೆಲೈಡ್ಸ್, ಕಟ್ರೋಲಿಸೆರಾಸ್, ಅಸ್ಪಿಡೊಸೆರಾಸ್, ಸ್ಪ್ರೆಬ್ಲೈಟಿಸ್ ಮತ್ತು ವಾಗೆನಿಯಗಳ ಅವಶೇಷಗಳಿವೆ. ಕಟ್ರೋಲ್ ಶಿಲಾಶ್ರೇಣಿಯ ಮೇಲ್ಭಾಗ ಅವಶೇಷರಹಿತ ವಾಗಿದೆ. ಗಾಜನ್ಸಾರ್ ಪದರಗಳಲ್ಲಿ ಗ್ಲೋಕಿಸೆರಾಸ್ ಮತ್ತು ಪಿಲ್ಲೊಸೆರಾಸ್‍ಗಳಿವೆ. ಈ ಶಿಲಾಶ್ರೇಣಿಗಿಂತ ಕಿರಿಯ ಶಿಲೆಗಳು ಭೂಜ್‍ಗೆ ವಾಯವ್ಯಕ್ಕೆ ಸುಮಾರು 80 ಕಿಮೀ ದೂರದಲ್ಲಿರುವ ಉಮಿಯ ಎಂಬ ಹಳ್ಳಿಯ ಹತ್ತಿರ ಉತ್ತಮವಾಗಿ ಹೊರಕಂಡಿವೆ. ಇವುಗಳಿಗೆ ಉಮಿಯ ಶ್ರೇಣಿ ಎಂದು ಹೆಸರು. ಇದರ ದಪ್ಪ ಸುಮಾರು 915 ಮೀಟರುಗಳು. ರಾಜನಾಥ್ ಎಂಬವರು ಈ ಶಿಲಾಶ್ರೇಣಿಯನ್ನು ಉಮಿಯ, ಉಕ್ರ ಮತ್ತು ಭೂಜ್ ಎಂದು ಮೂರು ಶಿಲಾಪಾದಗಳಾಗಿ ವಿಂಗಡಿಸಿದ್ದಾರೆ. ಉಮಿಯ ಪಾದದಲ್ಲಿ ಫಾಸಿಲ್ ಮರಳುಶಿಲೆ ಮತ್ತು ಜೇಡುಶಿಲೆಗಳು ಇವೆ. ಇವುಗಳ ಮಧ್ಯದ ಒಂದು ಪದರದಲ್ಲಿ ಟ್ರೈಗೋನಿಯ ಎಂಬ ಲೆಮಲಿಬ್ರ್ಯಾಂಕಿನ ಅವಶೇಷಗಳಿವೆ. ಇವು ಜುರಾಸಿಕ್ ಅಂತ್ಯದಿಂದ ಕ್ರಿಟೇಷಸ್ ಯುಗದ ಆದಿಕಾಲವನ್ನು ಸೂಚಿಸುತ್ತವೆ. ಉಮಿಯಪಾದದ ಮೇಲಿರುವ ಉಕ್ರಪಾದವೂ ಸಾಗರಜನಿತವಾದುದು. ಇದರಲ್ಲಿರುವ ಅಮ್ಮೊನೈಟುಗಳು ಕೂಡ ಇದೇ ಕಾಲವನ್ನು ಸೂಚಿಸುತ್ತವೆ. ಭೂಜ್‍ಪಾದದಲ್ಲಿ ಝುಮಿಯ ಟೀಲೋಫಿಲ್ಲಂ ಮತ್ತು ಪಾಮೊಕ್ಸೈಲಾನ್ ಮುಂತಾದ ಸಸ್ಯಗಳು ಇವೆ. ಈ ಸಸ್ಯಗಳು ಜುರಾಸಿಕ್ ಅಂತ್ಯಕಾಲವನ್ನು ಸೂಚಿಸುತ್ತವೆ. ಆದರೆ ಇವುಗಳ ಕೆಳಗಿನ ಶಿಲೆಗಳು ಕ್ರಿಟೇಷಸ್ ಆದಿಕಾಲದವುಗಳಾದ್ದರಿಂದ ಇವು ಸಹ ಕ್ರಿಟೇಷಸ್ ಆದಿಕಾಲದವೆಂದು ನಿರ್ಧರಿಸಲಾಗಿದೆ.

**ಬಾಗ್ ಪದರಗಳು :** ನರ್ಮದಾ ನದಿ ಕಣಿವೆಯಲ್ಲಿ ಗ್ವಾಲಿಯರ್ ಹತ್ತಿರವಿರುವ ಬಾಗ್ ಎಂಬ ಪಟ್ಟಣದಿಂದ ಪೂರ್ವಪಶ್ಚಿಮವಾಗಿ ಕಾಠಿಯಾವಾಡದವರೆಗೆ ಪರಸ್ಪರ ಬೇರ್ಪಟ್ಟ ನಿಕ್ಷೇಪಗಳು ಅನೇಕ ಕಡೆ ರೂಪುಗೊಂಡಿವೆ. ಚೆರ್ಟ್ ಮತ್ತು ಚಿಪ್ಪುಗಳಿಂದ ಕೂಡಿದ ಅಶುದ್ಧ ಸುಣ್ಣ ಶಿಲೆ, ಬೆಣಚುಶಿಲೆ, ಮತ್ತು ಜೇಡುಶಿಲೆಗಳು ಇಲ್ಲಿನ ಪ್ರಮುಖ ಶಿಲೆಗಳು. ಇವು ಡೆಕ್ಕನ್ ಟ್ರ್ಯಾಪ್ ಶಿಲೆಗಳ ಕೆಳಗಿದ್ದು ಅವು ಶಿಥಿಲೀಕರಿಸಿದ ಮೇಲೆ ಹೊರಕಂಡಿವೆ. ಸಿನಮೇನಿಯನ್ ಕಾಲದಲ್ಲಿ ಟೆತಿಸ್ ಸಾಗರ ನರ್ಮದಾ ನದಿಕಣಿವೆಯನ್ನು ಆಕ್ರಮಿಸಿದಾಗ ಇವು ನಿಕ್ಷೇಪಗೊಂಡವು. ಇವುಗಳಲ್ಲಿ ಫಾಸಿಲುಗಳು ಸುಮಾರು 18–22 ಮೀ ನಷ್ಟು ಶಿಲೆಗಳಲ್ಲಿ ಮಾತ್ರ ಇವೆಯಷ್ಟೆ. ಇವನ್ನು ಈ ರೀತಿ ವರ್ಗೀಕರಿಸಲಾಗಿದೆ:



ಬಾಗ್ ಪದರಗಳು
- ಮೇಲ್ಭಾಗ–
  - ಹವಳದ ಸುಣ್ಣಶಿಲೆ
  - ದಿಯೋಲ ಸುಣ್ಣಮಿಶ್ರಜೇಡು
  - ಗಂಟುಜೇಡುಮಿಶ್ರ ಸುಣ್ಣಶಿಲೆ
- ಕೆಳಭಾಗ– ನಿಮಾರ್ ಮರಳುಶಿಲೆಗಳು

ನಿಮಾರ್ ಮರಳುಶಿಲೆ ಪಶ್ಚಿಮಕ್ಕೆ ಹೋದಹಾಗೆಲ್ಲ ದಪ್ಪವಾಗುತ್ತದೆ. ಇದು ಉತ್ತಮ ಕಟ್ಟಡ ಶಿಲೆ. ಇದನ್ನು ವಡೋದರ ಹತ್ತಿರದ ಸಾಂಘಿರ್ ಎಂಬಲ್ಲಿ ತೆಗೆಯುತ್ತಾರೆ. ಗಂಟು ಜೇಡು ಮಿಶ್ರ ಸುಣ್ಣಶಿಲೆ ಬಹುಗಟ್ಟಿ. ದಿಯೋಲ ಸುಣ್ಣ ಮಿಶ್ರ ಜೇಡು 3 ಮೀ ದಪ್ಪವಿದ್ದರೂ ಫಾಸಿಲುಗಳು ವಿಶೇಷವಾಗಿವೆ. ಇದರ ಮೇಲೆ ಹವಳದ ಸುಣ್ಣಶಿಲೆ ಇದೆ. ಇದರಲ್ಲಿ ಬ್ರಿಯೊಜ಼ೋವಗಳ ಅವಶೇಷಗಳು ಹೆಚ್ಚಾಗಿವೆ. ಬಾಗ್ ಪದರಗಳಲ್ಲಿರುವ ಫಾಸಿಲುಗಳು ಕ್ರಿಟೇಷಸ್ ಯುಗದ ಸಿನಮೇನಿಯನ್ ಕಾಲದಿಂದ ಸಿನೋನಿಯನ್ ಕಾಲದವರೆಗಿನ ಅವಧಿಯನ್ನು ಸೂಚಿಸುತ್ತವೆ. ಆದರೆ ಈ ಫಾಸಿಲುಗಳು ಸಮೀಪದ ತಿರುಚನಾಪಲ್ಲಿ ಶಿಲಾಸ್ತೋಮಗಳಲ್ಲಿನ ಸಮಕಾಲೀನ ಅವಶೇಷಗಳಿಗಿಂತ ತೀರ ಭಿನ್ನವಾಗಿವೆ; ಬದಲು ಅರೇಬಿಯ ಮತ್ತು ಯುರೋಪಿನ ಕ್ರಿಟೇಷಸ್ ಅವಶೇಷಗಳನ್ನು ಹೋಲುತ್ತವೆ. ಅಂದರೆ ಇವೆರಡು ಪ್ರದೇಶಗಳು ಬೇರೆ ಬೇರೆ ಸಾಗರಗಳ ಆಕ್ರಮಣಕ್ಕೆ ಒಳಪಟ್ಟಿದ್ದುದೇ ಅಲ್ಲದೆ, ಆ ಎರಡು ಸಾಗರಗಳು ಅಗಲವಾದ ಭೂಭಾಗದಿಂದ ಬೇರ್ಪಟ್ಟಿದ್ದುವೆಂದು ಸಹ ಅರಿವಾಗುತ್ತದೆ. ಒಂದು ಟೆತಿಸ್ ಸಾಗರದ ಶಾಖೆ, ಮತ್ತೊಂದು ದಕ್ಷಿಣ ಸಮುದ್ರದ ಶಾಖೆ.

**ಡೆಕ್ಕನ್ ಟ್ರ್ಯಾಪ್ :** ಕ್ರಿಟೇಷಸ್ ಯುಗದ ತರುವಾಯ ಮಹಾ ಭೂ ಪ್ರಳಯವಾಯಿತು. ಆಗ ಮಹತ್ತರ ಬದಲಾವಣೆಗಳಾದವು: ಅಗಾಧ ಪ್ರಮಾಣದ ಭೂ ಚಲನೆಯಾಯಿತು. ಅದುವರೆಗೂ ಅಸ್ತಿತ್ವದಲ್ಲಿದ್ದ ಗೊಂಡವಾನ ಭೂಭಾಗ ಭಾರತ ಪರ್ಯಾಯದ್ವೀಪ, ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್‌ಟಿಕ್ ಎಂಬ ಖಂಡಗಳಾಗಿ ಬೇರ್ಪಟ್ಟಿತು. ಬೇರ್ಪಟ್ಟ ಭೂಭಾಗಗಳನ್ನೆಲ್ಲ ಹಿಂದೆಂದೂ ಕಂಡರಿಯದ (ನಿರ್ಜೀವಕಲ್ಪವನ್ನುಳಿದು) ಶಿಲಾರಸದ ಉಗುಳುವಿಕೆ ಆಯಿತು. ಆ ಕಾಲದಲ್ಲಿ ಹೊರಹೊಮ್ಮಿದ ಶಿಲಾರಸದಿಂದ ಡೆಕ್ಕನ್ ಟ್ರ್ಯಾಪ್ ಆಯಿತು. ಈ ಶಿಲಾವರ್ಗ ಗುಜರಾತಿನ ಬಹುಭಾಗವನ್ನು ಆಕ್ರಮಿಸಿದೆ. ಶಿಲಾರಸ ಹೊರಹೊಮ್ಮುವಿಕೆ ಸಾಮಾನ್ಯರೀತಿಯ ಅಗ್ನಿಪರ್ವತದಿಂದಾದುದಲ್ಲ. ನೂರಾರು ಮೀಟರ್ ಅಗಲ, ಅನೇಕ ಕಿಲೋಮೀಟರ್ ಉದ್ದದ ಕವಲಾಗಿದ್ದ ಬಿರುಕುಗಳ ಮೂಲಕ ಹೊರಹೊಮ್ಮುವಿಕೆ. ಇದು ಘನೀಭವಿಸಿರುವ ಬಿರುಕುಗಳು ಈಗಲೂ ಬ್ರೋಚ್‌ನ ಸಮೀಪದ ರಾಜಪಿಪ್ಲ ಬೆಟ್ಟಗಳು, ಕಚ್ಛ್, ಕಾಠಿಯಾವಾಡ ಮತ್ತಿತರ ಪ್ರದೇಶಗಳಲ್ಲಿವೆ. ಇವುಗಳಿಗೆ ಡೈಕುಗಳೆಂದು ಹೆಸರು. ಸೌರಾಷ್ಟ್ರ ಪ್ರದೇಶದ



ಅಮ್ರೋಲಿ ಮತ್ತು ಜಾಸ್‍ಡನ್ ಸುತ್ತಲಿರುವ ಡೈಕುಗಳು ಹೊರಗಾಮಿಯಾಗಿ ಹಂಚಿವೆ. ಗಿರ್ನಾರ್ ಮತ್ತು ಚೊಗತ್ ಚಮರ್ಡಿಗಳಲ್ಲಿ ನಿರ್ದಿಷ್ಟದ್ವಾರದ ಸಾಮಾನ್ಯ ಅಗ್ನಿಪರ್ವತಗಳಿವೆ. ಪೂರ್ವಸೌರಾಷ್ಟ್ರ ಮತ್ತು ನರ್ಮದಾ ಕಣಿವೆಗಳಲ್ಲಿಯೂ ಡೈಕುಗಳಸಮೂಹಗಳಿವೆ. ಕಚ್ಛ್ ಮತ್ತು ಕಾಠಿಯಾವಾಡ ಪ್ರದೇಶದ ಡೆಕ್ಕನ್ ಟ್ರ್ಯಾಪಿನಲ್ಲಿ ಆಮ್ಲೀಯ, ಮಧ್ಯವರ್ತಿ ಮತ್ತು ಪ್ರತ್ಯಾಮ್ಲೀಯ ಶಿಲಾ ವಿಧಗಳಿವೆ. ಇವೆಲ್ಲ ಶಿಲಾರಸ ಪ್ರಭೇದಗೊಳ್ಳುವಿಕೆಯಿಂದಾದವು. ಗಿರ್ನಾರ್ ಮತ್ತು ಓಷಮ್ ಬೆಟ್ಟಗಳಲ್ಲಿ ಸಾಮಾನ್ಯ ಬೆಸಾಲ್ಟ್ ವಿಧವಲ್ಲದೆ ಲಿಂಬರ್ಗೈಟ್, ಆಂಡೆಸೈಟ್, ರೈಯೊಲೈಟ್, ಆಬ್ಸಿಡಿಯಾನ್, ಪಿಚ್‍ಸ್ಟೋನ್ ಮುಂತಾದ ಜ್ವಾಲಾಮುಖಜ ಶಿಲೆಗಳೂ ಲ್ಯಾಂಪ್ರೋಫೈರ್ ಆಲಿವೀನ್, ಗ್ಯಾಬ್ರೊ, ಮಾನ್‍ಜೊನೈಟ್, ನೆಫೆಲೀನ್ ಸಯನೈಟ್, ಗ್ರ್ಯಾನೋಫೈರ್ ಮುಂತಾದ ಮಧ್ಯಾಂತರ ಶಿಲೆಗಳೂ ಇವೆ. ನರ್ಮದಾ ಕಣಿವೆಯಲ್ಲಿ ಡೆಕ್ಕನ್ ಟ್ರ್ಯಾಪ್ ಶಿಲೆ ಬಾಗ್ ಪದರಗಳ ಮೇಲೆ ಅನನುರೂಪವಾಗಿರುವುದನ್ನೂ ಸೂರತ್ ಮತ್ತು ಭಡೋಚ ಪ್ರದೇಶದಲ್ಲಿ ಡೆಕ್ಕನ್ ಟ್ರ್ಯಾಪ್ ಮೇಲೆ ನಮ್ಮುಲಿಟಿಕ್ ಸುಣ್ಣಶಿಲೆ ಅನನುರೂಪತೆಯಿಂದ ನಿಕ್ಷೇಪಗೊಂಡಿರುವುದನ್ನೂ ಬ್ಲ್ಯಾನ್ ಫೋರ್ಡ್ ಗುರುತಿಸಿದ (1879). ಕಚ್ಛ್ ಪ್ರದೇಶದಲ್ಲಿ ಡೆಕ್ಕನ್ ಟ್ರ್ಯಾಪ್ ಶಿಲೆ ಜುರಾಸಿಕ್ ಕಾಲದ ತೀರನಿಕ್ಷೇಪಗಳ ಮೇಲೆ ಮತ್ತು ನಮ್ಮುಲಿಟಿಕ್ ಸುಣ್ಣಶಿಲೆಯ ಕೆಳಗಿರುವುದನ್ನೂ ವರದಿ ಮಾಡಿದ. ಆದ್ದರಿಂದ ಟ್ರ್ಯಾಪ್ ಶಿಲೆ ಮಧ್ಯ ಕ್ರಿಟೇಷಸ್ ಕಾಲದಿಂದ ಅಂತ್ಯ ಕ್ರಿಟೇಷಸ್ ಕಾಲದ್ದಾಗಿರಬೇಕೆಂದು ಆತನ ಅಭಿಪ್ರಾಯ.

**ತೃತೀಯ ಭೂಕಾಲಯುಗದ ನಿಕ್ಷೇಪಗಳು :** ಸೂರತ್ , ಭಡೋಚ, ನರ್ಮದಾ ಕಣವೆ ಪ್ರದೇಶಗಳಲ್ಲಿ ಇಯೋಸೀನ್ ಕಾಲದ ನಮ್ಮುಲಿಟಿಕ್ ಸುಣ್ಣಶಿಲೆ ಎರಡು ಕಡೆಗಳಲ್ಲಿ ಹೊರಕಂಡಿದೆ. ಇವೆರಡರ ಮಧ್ಯ ಕಿಮ್ ನದಿಯ ಮೆಕ್ಕಲು ನಿಕ್ಷೇಪವಾಗಿದೆ. ಇವೆರಡರಲ್ಲಿ ಕಿಮ್ ಮತ್ತು ನರ್ಮದಾಗಳ ನಡುವೆ ಇರುವುದು ದೊಡ್ಡದು. ಇದರ ಉದ್ದ 48ಕಿಮೀ. ಅಗಲ ಸು. 19ಕಿಮೀ. ಇನ್ನೊಂದು ತಪತಿ ನದಿಯ ಉತ್ತರಕ್ಕೆ 16 ಕಿಮೀ ವಿಸ್ತರಿಸಿದೆ. ಇದರ ಅಗಲ 24 ಕಿಮೀ. ಇವು ಲಾಕಿ ಮತ್ತು ಕಿರ್ತಾರ್ ಶಿಲಾವರ್ಗಗಳಿಗೆ ಸಮದೂಗುತ್ತವೆ. ಈ ಶಿಲೆಗಳ ಮೇಲೆ ಕಾಕಿ ಬಣ್ಣದ ಜೇಡುಶಿಲೆಗಳಿವೆ. ಇವುಗಳ ಮಧ್ಯೆ ಜೇಡು ಮತ್ತು ಸುಣ್ಣಮಿಶ್ರ ಜೇಡು ಪದರಗಳಿವೆ. ಗುಜರಾತಿನಲ್ಲಿ ಇದೇ ಕಾಲದ ಶಿಲೆಗಳು ಮರಳು ಶಿಲೆ, ನೊರಜುಗಳು ಮತ್ತು ಜೇಡುಶಿಲೆಗಳಿಂದ ಕೂಡಿ 1220 – 1525 ಮೀಟರುಗಳಷ್ಟು ದಪ್ಪ ರೂಪುಗೊಂಡಿವೆ. ಇವು ನಾರಿ ಮತ್ತು ಗಾಜ್ (ಆಲಿಗೋಸೀನ್ ಮತ್ತು ಮಯೋಸೀನ್ ಆದಿಕಾಲ) ಶಿಲಾವರ್ಗಗಳಿಗೆ ಸರಿದೂಗುತ್ತವೆ. ಇವುಗಳಲ್ಲಿ ಪೊರಮಿನಿಫೆರಗಳ ಅವಶೇಷಗಳು ಅಧಿಕವಾಗಿವೆ. ಇವು ತೈಲಭರಿತ ಶಿಲೆಗಳು. ಭೂಜ್, ಅಂಕಲೇಶ್ವರ್ ಮುಂತಾದ ಕಡೆಗಳಲ್ಲಿ ತೈಲಬಾವಿಗಳಿವೆ. ಕ್ಯಾಂಬೆ ಮತ್ತು ರಾಜಪಿಪ್ಲಗಳಲ್ಲಿ ಗುಂಡುಶಿಲೆಗಳಲ್ಲಿರುವ ಜಾಸ್ಪರಿನಿಂದ ಸಾಧಾರಣ ರತ್ನ ಶಿಲೆಗಳನ್ನು ತಯಾರಿಸಲಾಗುತ್ತಿದೆ. ಸೌರಾಷ್ಟ್ರದ ಅತ್ಯಂತ ಪಶ್ಚಿಮಭಾಗದಲ್ಲಿ ಗಾಜ್ ಕಾಲದ ಶಿಲೆಗಳ ಮೇಲೆ ಜಿಪ್ಸಂನಿಂದ ಕೂಡಿದ ಜೇಡು ಮತ್ತು ಪೊರಮಿನಿಫೆರಗಳಿಂದ ಕೂಡಿದ ಸುಣ್ಣಶಿಲೆಗಳಿವೆ. ಇವಕ್ಕೆ ದ್ವಾರಕಾಪದರಗಳೆಂದು ಹೆಸರು. ಇವು ಮಯೋಸೀನ್ ಯುಗದ ಮಧ್ಯ ಮತ್ತು ಅಂತ್ಯಕಾಲದವು. ಕ್ಯಾಂಬೆ ಖಾರಿಯಲ್ಲಿರುವ ಪಿರಾಂನಲ್ಲಿ ಮಧ್ಯಶಿವಾಲಿಕ್ ಕಾಲದ ಶಿಲೆಗಳಿವೆ. ಇವುಗಳಲ್ಲಿ ಸಸ್ತನಿಗಳ ಅವಶೇಷಗಳಿವೆ. ಅಹಮದಾಬಾದಿನ ಸಮೀಪದಲ್ಲಿರುವ ತಗ್ಗುಪ್ರದೇಶದಲ್ಲಿ ನೆರಿತಿಯಂ, ಪೊಟಮೈಡಿಸ್‍ಗಳ ಅವಶೇಷಗಳಿರುವ ನಿಕ್ಷೇಪಗಳಿವೆ. ಆದ್ದರಿಂದ ಈ ಪ್ರದೇಶ ಪ್ಲೀಸ್ಟೊಸೀನ್ ಕಾಲದಲ್ಲಿ ಸಮುದ್ರ ಅಳಿವೆಯಾಗಿತ್ತೆಂದು ಭಾವಿಸಬಹುದು. ಕಾಠಿಯಾವಾಡ ಪೂರ್ವಭಾಗದಲ್ಲಿ ಮಿಲಿಯೊಲೈಟ್ ಪೊರಮಿನಿಫೆರಗಳಿಂದ ಕೂಡಿದ ವರ್ತಮಾನಕಾಲದ ಸುಣ್ಣಶಿಲೆ ಇದೆ. ಇದಕ್ಕೆ ಪೋರ್ಬಂದರ್ ಶಿಲೆ ಎಂದು ಹೆಸರು. ಈ ಪ್ರದೇಶ ಇತ್ತೀಚೆಗೆ ಮೇಲೆದ್ದಿರುವುದರ ಕುರುಹು ಈ ಶಿಲೆ.

ರಾಜಪುತಾನ ಮರುಭೂಮಿ ನೈಋತ್ಯದಲ್ಲಿ ಒಂದು ವಿಶಾಲವಾದ ತಗ್ಗುಭೂಮಿ ಯೊಂದಿಗೆ ಸೇರಿಕೊಳ್ಳುತ್ತದೆ. ಇದಕ್ಕೆ ಕಚ್ಛಿನ ರಣ್ ಪ್ರದೇಶ ಎಂದು ಹೆಸರು. ವರ್ಷದ ಕೆಲವು ದಿವಸಗಳಲ್ಲಿ ಇದು ಕೆಸರು ಪ್ರದೇಶವಾಗಿದ್ದು, ಬೇಸಗೆಯಲ್ಲಿ ಒಣಗಿರುತ್ತದೆ. ಹಿಂದೆ ಇದು ಅರಬ್ಬೀ ಸಮುದ್ರದ ಒಂದು ಕೋವೆಯಾಗಿತ್ತು. ಅನೇಕ ಚಿಕ್ಕ ನದಿಗಳು ಮೆಕ್ಕಲನ್ನು ತಂದು ಇದರಲ್ಲಿ ತುಂಬಿ ಕೋವೆಯನ್ನು ಮುಚ್ಚಿವೆ. (ಡಿ.ಆರ್.)

**ಭೌತಲಕ್ಷಣ :** ಗುಜರಾತ್ ರಾಜ್ಯವನ್ನು ಸ್ಥೂಲವಾಗಿ ಐದು ಭಾಗಗಳಾಗಿ ವಿಂಗಡಿಸಬಹುದು : 1. ತೀರದ ತಗ್ಗುನೆಲ, ರಣ್ ಪ್ರದೇಶ ಮತ್ತು ಒಳನಾಡಿನ ಸರೋವರಗಳು; 2. ಗುಜರಾತಿನ ಮೈದಾನ; 3. ಸೌರಾಷ್ಟ್ರ ಪ್ರಸ್ಥಭೂಮಿ; 4. ಬೆಟ್ಟಗಳಂಚಿನ ಬರಡು ನೆಲಪಟ್ಟಿ; 5. ಬೆಟ್ಟಗಳ ಪ್ರದೇಶ, ತೀರದ ತಗ್ಗುನೆಲ ಸಾಮಾನ್ಯವಾಗಿ ಜವುಗಿನಿಂದ ಕೂಡಿದ್ದು; ಸಮುದ್ರತಳದಿಂದ ಈಚೆಗೆ ಮೇಲೆದ್ದ ಈ ಪ್ರದೇಶದ ಜಲೋತ್ಸಾರಣ ಇನ್ನೂ ಕ್ರಮಬದ್ಧವಾಗಿಲ್ಲ. ಇಲ್ಲಿಯ ಅನೇಕ ನದಿ ತೊರೆಗಳು ಬಲು ಸಣ್ಣವು. ಕಚ್ಛಿಗೆ ಉತ್ತರದಲ್ಲೂ ಕಚ್ಛಿನ ಮತ್ತು ಗುಜರಾತಿನ ಮುಖ್ಯ ಭೂಮಿಯ ನಡುವೆಯೂ ಇರುವ ರಣ್‍ಗಳೂ ಕರಾವಳಿಯ ಜವುಗು ನೆಲದಂತೆ ಉದ್ಭವವಾದಂಥವು. ಕಚ್ಛ್ ರಣದ ವಿಸ್ತೀರ್ಣ 11,270 ಕಿಮೀ. ಚಿಕ್ಕ ರಣ್ ಕಿರಿದು. ಇದರ ವಿಸ್ತೀರ್ಣ 4,000 ಚ. ಕಿಮೀ ಗಿಂತ ಹೆಚ್ಚಿಲ್ಲ. ಮಳೆಯಿಲ್ಲದಾಗ ಇವೆರಡೂ ಪ್ರದೇಶಗಳೂ ಒಣನೆಲಗಳಾಗಿರುತ್ತವೆ. ಮಳೆಗಾಲದಲ್ಲಿ ಜಲೋತ್ಸಾರಣ ಕ್ರಿಯೆ ಸರಿಯಾಗಿ ನಡೆಯದೆ ಇವು ಜಲಭರಿತವಾಗುತ್ತವೆ.

ಕರಾವಳಿಯ ಜವುಗು ನೆಲಕ್ಕೂ ಒಳನಾಡಿನ ಪ್ರಸ್ಥಭೂಮಿ ಮತ್ತು ಪರ್ವತಗಳಿಗೂ ನಡುವೆ ಗುಜರಾತಿನ ಮೈದಾನ ಹಬ್ಬಿದೆ. ಇದು ಸಾಬರ್ಮತೀ, ಮಾಹೀ, ನರ್ಮದಾ, ತಾಪಿ ಮತ್ತು ಅವುಗಳ ಉಪನದಿಗಳಿಂದ ಕೂಡಿದ್ದು. ಮಧ್ಯಭಾರತದ ಎತ್ತರದ ನೆಲದಿಂದ ಥಟ್ಟನೆ ಕೆಳಕ್ಕೆ ಇಳಿಯುವ ನದಿಗಳು ಇಲ್ಲಿ ನಿಧಾನವಾಗಿ, ಅಂಕುಡೊಂಕಾಗಿ, ಅಲ್ಲಲ್ಲಿ ನಿಂತು ಸಾಗುತ್ತವೆ. ನದಿಗಳು ತಂದುಹಾಕಿದ ಮೆಕ್ಕಲು ಮಣ್ಣಿನಿಂದ ಮೈದಾನ ಆವೃತವಾಗಿದೆ. ಇಲ್ಲಿಯ ಮಣ್ಣು ವೈವಿಧ್ಯಮಯ.

ಸೌರಾಷ್ಟ್ರ ಪ್ರಸ್ಥಭೂಮಿ 75 ಮೀ ನಿಂದ 300 ಮೀ ವರೆಗೆ ಎತ್ತರವಾಗಿದೆ. ಪಶ್ಚಿಮ ಭಾರತದ ಬಹುಭಾಗವನ್ನು ಒಮ್ಮೆ ಆವರಿಸಿದ್ದ ಲಾವದ ಉಳಿಕೆಯ ನೆಲವಿದು. ಕವಿಚಿಟ್ಟ ಸಕ್ಕರೆ ಪೊಟ್ಟಣದ ರೀತಿಯಲ್ಲಿ ಪ್ರಸ್ಥಭೂಮಿ ಸ್ವಲ್ಪ ಸ್ವಲ್ಪವಾಗಿ ಮೇಲೇರಿ, ಮಧ್ಯ ಭಾಗದಲ್ಲಿ ಬೆಟ್ಟಗುಡ್ಡಗಳಾಗಿ ಪರಿಣಮಿಸಿದೆ. ಇದರ ಉತ್ತರದಲ್ಲಿ ಮಂಡ ಬೆಟ್ಟಗಳೂ ದಕ್ಷಿಣದಲ್ಲಿ ಗಿರ್ ಬೆಟ್ಟಗಳೂ ಇವೆ. ಇವೆರಡನ್ನೂ ಕೂಡಿಸುವ ಕಿರಿದಾದ ಪ್ರದೇಶ ಈ ಪ್ರಸ್ಥಭೂಮಿಯ ಉಳಿದ ಭಾಗಕ್ಕಿಂತ ಎತ್ತರವಾದ್ದು. ಪ್ರಸ್ಥಭೂಮಿಯ ಒಂದು ಮುಖ್ಯ ವೈಶಿಷ್ಟ್ಯವೆಂದರೆ 60 ಮೀ ವರೆಗೆ ಅಗಲವಾಗಿರುವ, 60 ಕಿಮೀ ವರೆಗಿನ ಉದ್ದದ ಡೈಕುಗಳು. ನದಿಗಳು ಮಧ್ಯದ ಎತ್ತರದ ನೆಲದಲ್ಲಿ ಹುಟ್ಟಿ ಎಲ್ಲ ದಿಕ್ಕುಗಳಲ್ಲೂ ಹರಿಯುತ್ತವೆ. ಮಛೂ, ಆಜಿ, ಭಾದರ್, ಶತ್ರುಂಜೀ, ಮತ್ತು ಭಗವಾ ಇಲ್ಲಿಯ ಮುಖ್ಯ ನದಿಗಳು.

ಕಚ್ಛಿನ ಪ್ರಸ್ಥಭೂಮಿ ಪ್ರದೇಶ ಪೂರ್ವದಿಂದ ಪಶ್ಚಿಮದ ಕಡೆಗೆ ಇಳಿಜಾರಾಗಿದೆ. ಇಲ್ಲಿಯ ನದಿಗಳು ಕಚ್ಛ್ ಖಾರಿಯೊಳಕ್ಕೆ ಹರಿಯುತ್ತವೆ.

ಬೆಟ್ಟಗಳ ಸಾನುಪ್ರದೇಶ 75 ಮೀ – 150 ಮೀ ಎತ್ತರದ ಕಿರು ಅಗಲದ ನಡುಪಟ್ಟಿ, ನರ್ಮದಾ ತಾಪಿಗಳ ನಡುವೆ ಕಿರಿದಾಗಿರುವ ಈ ಪ್ರದೇಶ ನರ್ಮದೆಯಿಂದ ಉತ್ತರಕ್ಕೆ 25 ಕಿಮೀ. ಮತ್ತು ಇನ್ನೂ ಹೆಚ್ಚಿನ ಅಗಲವಾಗುತ್ತದೆ. ಈ ಇಳಿಜಾರು ನೆಲದ ಪ್ರದೇಶದಲ್ಲಿ ಮಣ್ಣು ಶೇಖರವಾಗಲು ಅವಕಾಶವಿಲ್ಲ. ಇದು ನುರುಜು ಕಲ್ಲಿನಿಂದ ಕೂಡಿದೆ. ಅಲ್ಲಲ್ಲಿ ಮಾತ್ರ ಹುಲ್ಲೂ ಕಾಡೂ ಉಂಟು. ಬೆಟ್ಟಗಳ ಪ್ರದೇಶದಲ್ಲಿ ವಾಸಿಸುವ ಕೆಲವು ಹಿಂದುಳಿದ ಬುಡಕಟ್ಟುಗಳ ಜನ ಇಲ್ಲಿ ಬೆಳೆಯುವ ಸಾವೆ, ರಾಗಿ ಮುಂತಾದ ಧಾನ್ಯ ವಿನಾ ಬೇರೇನೂ ಇಲ್ಲಿ ಬೆಳೆಯುವುದಿಲ್ಲ.

ಗುಜರಾತಿನ ಬೆಟ್ಟಗಳ ಪ್ರದೇಶ ಕಚ್ಛ್, ಕಾಠಿಯಾವಾಡ್‍ಗಳ ಮಧ್ಯಭಾಗಗಳಲ್ಲೂ ರಾಜ್ಯದ ಪೂರ್ವ ಎಲ್ಲೆಯಲ್ಲೂ ಇದೆ. ಇದು 300 ಮೀಗಿಂತ ಎತ್ತರದ ಪ್ರದೇಶ. ಇದು ಬಹುತೇಕ ಶಿಲಾಮಯ; ಹೆಚ್ಚು ಮಳೆ ಬೀಳುವಲ್ಲಿ ಕಾಡುಗಳಿವೆ. ಇದು ದೀರ್ಘಕಾಲದ ಸವೆತಕ್ಕೆ ಒಳಗಾಗಿದೆ. ಕಚ್ಛಿನ ಬೆಟ್ಟಗಳು ಪೂರ್ವಪಶ್ಚಿಮವಾಗಿ ಹಬ್ಬಿವೆ. ಇವುಗಳಲ್ಲಿ ಅತ್ಯಂತ ಎತ್ತರವಾದ್ದು ಧಿನೋಧರ್ (388 ಮೀ) ಇತರ ಬೆಟ್ಟಗಳು ಉಮಿಯ (274 ಮೀ), ಝುರಾ (316 ಮೀ), ವರಾದ್ (344 ಮೀ) ಮತ್ತು ರತ್ನಾಲ್ (349 ಮೀ).

ಕಾಠಿಯಾವಾಡದ ಉನ್ನತ ಪ್ರದೇಶದ ಉತ್ತರ ಭಾಗದಲ್ಲಿ ಮಂಡ ಬೆಟ್ಟಗಳೂ ದಕ್ಷಿಣದಲ್ಲಿ ಗಿರ್ ಶ್ರೇಣಿಯೂ ಇವೆ. ದಕ್ಷಿಣದ ಶ್ರೇಣಿ ಹೆಚ್ಚು ಎತ್ತರ. ಇದರ ಉನ್ನತ ಬೆಟ್ಟ ಸರ್ಕಲ (643 ಮೀ). ನಂದಿವೇಲ 529 ಮೀ ಎತ್ತರವಾಗಿದೆ. ಗಿರ್ ಶ್ರೇಣಿ ಅರಣ್ಯಮಯ. ಇಲ್ಲಿ ಸಿಂಹಗಳಿವೆ **(ನೋಡಿ– ಗಿರ್ ಅರಣ್ಯ)**.

ಗುಜರಾತಿನ ಅತ್ಯುನ್ನತ ಬೆಟ್ಟ ಗಿರ್ನಾರ್ **(ನೋಡಿ– ಗಿರ್ನಾರ್)**. ಇದರ ಗರಿಷ್ಠ ಎತ್ತರ 1,117 ಮೀ (ಗೋರಖ್ ನಾಥ್ ಶಿಖರ). ಇದು ಜುನಾಗಢದ ಬಳಿ ಇದೆ. ಪೋರ್ಬಂದರಿಗೆ ಪೂರ್ವದಲ್ಲಿರುವ ಬಾರ್ದಾ, ಅದಕ್ಕೂ ಪೂರ್ವದ ಅಲೆಚ್ ಇವು ಇತರ ಬೆಟ್ಟಗಳು.

ರಾಜ್ಯದ ಉತ್ತರ, ಈಶಾನ್ಯ ಮತ್ತು ಪೂರ್ವ ಗಡಿಗಳನ್ನು ಬಳಸಿರುವ ಶ್ರೇಣಿಗಳು ಉನ್ನತವಾದವು. ಇವು ಗಡಿಯಾಚೆಗಿನ ಶ್ರೇಣಿಗಳ ಅಂಚಿನ ಭಾಗಗಳು. ಸಬರಕಂಟ, ಪಂಚಮಹಲ, ವಡೋದರ, ಸೂರತ್ ಮತ್ತು ಭಡೋಚ ಜಿಲ್ಲೆಗಳಲ್ಲಿ ಇವು ಚಾಚಿವೆ. ಉತ್ತರದ ಬೆಟ್ಟಗಳು ಆರಾವಳಿಯ ಭಾಗ. ಇವು ಹಿಮ್ಮತ ನಗರದಿಂದ ಉತ್ತರಕ್ಕೆ ಕ್ರಮಕ್ರಮವಾಗಿ ಏರುತ್ತ ನಡೆಯುತ್ತವೆ. ರಾಜ್ಯದಿಂದ ಹೊರಕ್ಕೆ ಅಬು ಶಿಖರದ ಗುಂಪಿನಲ್ಲಿ ಗುರುಶಿಖರ ಅತ್ಯಂತ ಎತ್ತರವಾದ್ದು. ಸಸ್ಯ ರಹಿತವಾದ ಈ ಪ್ರದೇಶದ ಮುಖ್ಯ ಬೆಟ್ಟಗಳು ರತನ್‍ಮಲ್ ಮತ್ತು ಪಾವಗಢ ಪಶ್ಚಿಮ ಭಾಗದಲ್ಲಿ ಬನಾಸ್ ನದಿಯೂ ಪೂರ್ವದಲ್ಲಿ ಸಾಬರ್ಮತಿಯೂ ಹುಟ್ಟುತ್ತವೆ. ಥೋಟಾ ಉದಯಪುರಕ್ಕೆ ದಕ್ಷಿಣಕ್ಕಿರುವ

ಶ್ರೇಣಿ ನರ್ಮದಾ ಮತ್ತು ತಾಪಿ ನದಿಗಳ ಉಗಮದ ಪ್ರದೇಶ. ನರ್ಮದೆಯ ಉತ್ತರದ ಪ್ರದೇಶ ವಿಂಧ್ಯಪರ್ವತಗಳ ಭಾಗ. ಅದಕ್ಕೆ ವನಮಾಲಾ ಬೆಟ್ಟಗಳೆಂಬ ಹೆಸರಿದೆ. ನರ್ಮದೆಗೆ ದಕ್ಷಿಣದಲ್ಲಿರುವುದು ಸಾತ್ಪುರ ಬೆಟ್ಟಗಳ ಪಶ್ಚಿಮದ ಚಾಚು. ಇದು ರಾಜಪಿಪ್ಲ ಎನಿಸಿಕೊಂಡಿದೆ. ತಾಪಿಗೆ ದಕ್ಷಿಣದ್ದು ಸಹ್ಯಾದ್ರಿಯ ಅಂಚು. ಇಲ್ಲಿಂದ ಹಲವು ಸಣ್ಣ ನದಿಗಳು ಹರಿದು ಬಂದು ನೆಟ್ಟಗೆ ಸಮುದ್ರ ಸೇರುತ್ತವೆ. ಇವುಗಳ ಪೈಕಿ ಪೂರ್ಣಾ,ಅಂಬಿಕಾ, ಪಾರ್ ಮತ್ತು ದಮಣಗಂಗಾ ಮುಖ್ಯವಾದವು.



**ಸೂರತ್‌ನ ಕೋಟೆ**

ಗುಜರಾತಿನ ಸಹಜ ಜಲೋತ್ಸಾರಣ ವ್ಯವಸ್ಥೆ ಏಕಮುಖವಾದ್ದಲ್ಲ. ಕಚ್ಚಿನಲ್ಲಿ ನದಿಗಳು ಮಧ್ಯದ ಎತ್ತರ ಪ್ರದೇಶದಿಂದ ಉತ್ತರಕ್ಕೂ ದಕ್ಷಿಣಕ್ಕೂ ಹರಿಯುತ್ತವೆ. ದಕ್ಷಿಣಕ್ಕೆ ಹರಿಯುವ ನದಿಗಳಲ್ಲಿ ಮುಖ್ಯವಾದವು ಮತೀ, ನಯೀರಾ, ಕನಕಮತೀ ಮತ್ತು ರುಕ್ಮಮತೀ. ಇವಕ್ಕೆ ಉಪನದಿಗಳು ಹೆಚ್ಚಾಗಿಲ್ಲ. ಪ್ರತಿಯೊಂದು ತೊರೆಯೂ ರಣನಲ್ಲೋ ಕಚ್ಛ್ ಖಾರಿಯಲ್ಲೋ ಕೊನೆಗೊಳ್ಳುತ್ತದೆ. ನದಿಗಳು ಬೇಸಗೆಯಲ್ಲಿ ಒಣಗಿಹೋಗುತ್ತವೆ; ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ.

ಸೌರಾಷ್ಟ್ರದಲ್ಲಿ ಮಧ್ಯದ ದಿಣ್ಣೆನೆಲದಿಂದ ಎಲ್ಲ ದಿಕ್ಕುಗಳಿಗೂ ನದಿಗಳು ಪ್ರವಹಿಸುತ್ತವೆ. ಭಾದರ್ ಅತ್ಯಂತ ಉದ್ದವಾದ ನದಿ (260 ಕಿಮೀ). ಇದು ಪಶ್ಚಿಮಕ್ಕೆ ಹರಿದು ಪೋರ್ಬಂದರಿನ ಬಳಿಯ ನವೀಬಂದರಿನಲ್ಲಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಶತ್ರುಂಜೀ, ಮಚ್ಛೂ ಮತ್ತು ಆಜೀ ಇತರ ಮುಖ್ಯ ನದಿಗಳು. ಶತ್ರುಂಜೀ ನದಿ ಗಿರ್ ಶ್ರೇಣಿಯಲ್ಲಿ ಉಗಮಿಸಿ ಪೂರ್ವಾಭಿಮುಖವಾಗಿ ಹರಿದು ಸುಲ್ತಾನ್‌ಪುರದಲ್ಲಿ ಕ್ಯಾಂಬೇ ಖಾರಿಯನ್ನು ಸೇರುತ್ತದೆ. ಮಚ್ಛೂ ಮತ್ತು ಆಜೀ ನದಿಗಳು ಅನುಕ್ರಮವಾಗಿ ಚಿಕ್ಕ ರಣ್ ಮತ್ತು ಕಚ್ಛ್ ಖಾರಿಯನ್ನು ಸೇರುತ್ತವೆ. ಇವುಗಳಲ್ಲದೆ ಹಲವಾರು ಸಣ್ಣ ಹೊಳೆಗಳು ಸೌರಾಷ್ಟ್ರದ ಕರಾವಳಿಯಲ್ಲಿ ಹರಿಯುತ್ತವೆ. ಕಚ್ಛ್ ಖಾರಿ ಮತ್ತು ಅರಬ್ಬೀ ಸಮುದ್ರದ ಕರಾವಳಿಗಳೇ ಅಲ್ಲದೆ ಕ್ಯಾಂಬೇ ಖಾರಿಯ ಕರಾವಳಿಯಲ್ಲಿ ಕೂಡ ಜಲೋತ್ಸಾರಣ ಸಮರ್ಪಕವಾಗಿಲ್ಲದೆ ನೀರು ನಿಂತು ಜವುಗುಂಟಾಗಿದೆ.

ಗುಜರಾತ್ ಮೈದಾನದ ನದಿಗಳು ದೂರದ ಬೆಟ್ಟಗಳಲ್ಲಿ ಹುಟ್ಟಿ ಹರಿದುಬರುತ್ತವೆ. ಬನಾಸ್, ಸರಸ್ವತಿ ಮತ್ತು ರೂಪೆನ್ ನದಿಗಳು ಚಿಕ್ಕ ರಣ್ ಅನ್ನು ಸೇರುತ್ತವೆ. ಉಳಿದವು ಸಮುದ್ರ ಸೇರುವುದು ಕ್ಯಾಂಬೇ ಖಾರಿಯಲ್ಲಿ. ಚಿಕ್ಕ ರಣ್ ಸೇರುವ ನದಿಗಳು ಬೇಸಗೆಯಲ್ಲಿ ಒಣಗಿರುತ್ತವೆ. ಬೆಟ್ಟದಿಂದ ಹೊತ್ತು ತಂದ ಮಣ್ಣನ್ನು ಹೊರಲಾರದೆ ಮೈದಾನದಲ್ಲಿ ಬಿಟ್ಟು ಹೊರಳುತ್ತವೆ. ಇವುಗಳ ಪಾತ್ರಗಳು ಬಲು ವಿಶಾಲ.

ಸಾಬರ್ಮತಿಯ ಉದ್ದ 300 ಕಿಮೀ. ಅಹಮದಾಬಾದಿನಿಂದ ಮುಂದಕ್ಕೆ ನದಿಯ ಪಾತ್ರ ಪದೇ ಪದೇ ಬದಲಾಗುತ್ತಿರುವುದುಂಟು. ಮಾಹೀನದಿ 500 ಕಿಮೀ ಉದ್ದವಾಗಿದೆ. ಅದು ಗುಜರಾತಿನಲ್ಲಿ 180 ಕಿಮೀ.ಗಿಂತಲೂ ಉದ್ದವಾಗಿ ಹರಿದು ಸಮುದ್ರ ಸೇರುತ್ತದೆ. ಸಾಬರ್ಮತಿ ಮತ್ತು ಮಾಹೀ, ಇವೆರಡೂ ನದಿಗಳ ಉಪನದಿಗಳು ಇವುಗಳ ಎಡ ದಂಡೆಗಳಲ್ಲಿ ಬಂದು ಸೇರುತ್ತವೆ.

ಗುಜರಾತಿನ ಅತ್ಯಂತ ಮುಖ್ಯ ನದಿಗಳು ನರ್ಮದಾ ಮತ್ತು ತಾಪಿ. ಗುಜರಾತಿನಲ್ಲಿ ನರ್ಮದಾ ನದಿ ಹರಿಯುವ ದೂರ 150 ಕಿಮೀ. ಇದು ಭಡೋಚದ ಬಳಿ ಕ್ಯಾಂಬೇ ಖಾರಿಯನ್ನು ಸೇರುತ್ತದೆ. ಓರ್ಸಂಗ್, ಕರ್ಜನ್, ಅಮರಾವತಿ, ಭೂಖಿ ಇವು ನರ್ಮದೆಯ ಮುಖ್ಯ ಉಪನದಿಗಳು. ಸಮುದ್ರ ಸಂಗಮದ ಕಡೆಯಿಂದ ಮೇಲಣ ನೂರು ಕಿಮೀ.ಗಳ ದೂರ ಇದು ಗುಜರಾತಿನ ಅತ್ಯಂತ ಫಲವತ್ತಾದ ಮೈದಾನದ ಮೂಲಕ ಹರಿಯುತ್ತದೆ. ನದೀಪಾತ್ರ ಬದಲಿಸಿದ್ದರ ಪರಿಣಾಮವಾಗಿ, ಇದರಲ್ಲಿ ಕೆಲವು ದ್ವೀಪಗಳು ಸಂಭವಿಸಿವೆ. ಭಡೋಚದಿಂದ ಮೇಲಕ್ಕೆ ಸು. 23 ಕಿಮೀ ದೂರದಲ್ಲಿರುವ ಶುಕ್ಲತೀರ್ಥ, ನದೀಮುಖಜ ಭೂಮಿಯಲ್ಲಿರುವ ಆಲಿಯ ಮುಖ್ಯವಾದವು.

ತಾಪೀ ನದಿ ನರ್ಮದೆಗಿಂತ ಚಿಕ್ಕದಾದರೂ ಗುಜರಾತಿನಲ್ಲಿ ಇದರ ಹರಿವಿನ ಉದ್ದ ನರ್ಮದೆಯದಕ್ಕಿಂತ ಹೆಚ್ಚು. ಗುಜರಾತಿನಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶ ಇದರ ಜಲಾನಯನ ಭೂಮಿಯಾದ್ದರಿಂದ ನೀರಾವರಿ ಮತ್ತು ವಿದ್ಯುತ್ತಿನ ದೃಷ್ಟಿಯಲ್ಲಿ ಇದರ ವಿಭವ ಅಧಿಕ. ಪೂರ್ವದ ಬೆಟ್ಟಸೀಮೆಯನ್ನು ಕಕ್ರ ಪಾರದ ಬಳಿ ಬಿಟ್ಟು 100 ಕಿಮೀ ದೂರ ಸಾಗಿ ಸೂರತ್ತಿನಿಂದ ಮುಂದೆ ಇದು ಸಮುದ್ರವನ್ನು ಕೂಡಿಕೊಳ್ಳುತ್ತದೆ. ಇದರ ಪಾತ್ರ ನರ್ಮದೆಯದರಷ್ಟು ವಿಶಾಲವಲ್ಲ. ಈ ನದಿಯ ಕೆಳಭಾಗದ ನೆಲ ಹತ್ತಿ ಬೆಳೆಯಬಲ್ಲ ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದೆ.

ಒಟ್ಟಿನಲ್ಲಿ ದಕ್ಷಿಣ ಗುಜರಾತಿನ ನದಿಗಳು ಸಮಾನಾಂತರಗಳಲ್ಲಿ ಹರಿದು ಸಮುದ್ರ ಸೇರುತ್ತವೆ. ಸಾತ್ಪುರಾ ಮತ್ತು ಪಶ್ಚಿಮ ಘಟ್ಟಗಳ ಸಣ್ಣ ಚಾಚುಗಳು ಈ ನದಿಗಳು ಪರಸ್ಪರ ಕೂಡದಂತೆ ಪ್ರತ್ಯೇಕಿಸಿವೆ. ನರ್ಮದಾ, ಕಿಂ, ತಾಪಿ, ಪೂರ್ಣಾ, ಅಂಬಿಕಾ, ಪಾರಾ ಮತ್ತು ದಮಣಗಂಗಾ – ಇವು ಮುಖ್ಯ ನದಿಗಳು. ಸಮುದ್ರದ ಭರತದಿಂದಾಗಿ ಇವುಗಳ ಮುಖಭಾಗಗಳಲ್ಲಿ ಉಪ್ಪು ನೀರು ಒಳಗೆ ನುಗ್ಗುತ್ತದೆ. ಆದ್ದರಿಂದ ಈ ನದಿಗಳ ತಳಭಾಗದ ಬಳಿ ಇರುವ ಪಟ್ಟಣಗಳಿಗೆ ಇವುಗಳ ನೀರು ಕುಡಿಯಲು ಉಪಯುಕ್ತವಾಗಿಲ್ಲ. ಕರಾವಳಿಯ ಬಳಿ ನೆಲ ಬಹಳ ತಗ್ಗಾಗಿರುವುದರಿಂದ ಜಲೋತ್ಸಾರಣಕ್ಕೆ ತಡೆಯುಂಟಾಗಿದೆ.



**ಜಾಗ್ ಮತ್ತು ಗಾರ್ಬಾ ನೃತ್ಯ**

**ವಾಯುಗುಣ :** ಉತ್ತರದಲ್ಲಿ ರಾಜಸ್ತಾನದಿಂದ ದಕ್ಷಿಣದಲ್ಲಿ ಕೊಂಕಣ ಸೀಮೆಯ ವರೆಗೆ ಹಬ್ಬಿರುವ ಗುಜರಾತು ಅತಿ ಹೆಚ್ಚಿನ ಮಳೆ ಪ್ರದೇಶದಿಂದ ಮರುಭೂಮಿಯ ವರೆಗಿನ ನಾನಾ ವಾಯುಗುಣಗಳಿಂದ ಕೂಡಿದ ಭಾಗಗಳನ್ನೊಳಗೊಂಡಿದೆ. ರಾಜ್ಯದ ದಕ್ಷಿಣ ಭಾಗದಲ್ಲಿ 2,000 ಮಿಮೀ ಗಳಷ್ಟು ಮಳೆಯಾದರೆ, ಅತ್ಯಂತ ಉತ್ತರದಲ್ಲಿ, ಬನಾಸ್ಕಂಟಾ ಜಿಲ್ಲೆಯ ಕೆಲವು ಭಾಗಗಳಲ್ಲಿ, 300 – 400 ಮಿಮೀ ಗಳಿಗಿಂತ ಹೆಚ್ಚು ಮಳೆಯಿಲ್ಲ. ಇಡೀ ರಾಜ್ಯ ಮಾನ್ಸೂನ್ ವಲಯದಲ್ಲಿದೆ. ಜೂನ್ ನಡುಗಾಲದಿಂದ ಅಕ್ಟೋಬರ್ ನಡುಗಾಲದವರೆಗೆ ಮಳೆ – ನೈಋತ್ಯ ಮಾನ್ಸೂನಿನಿಂದ. ಚಳಿಗಾಲದಲ್ಲಿ ಹವೆ ಶುಷ್ಕವಾಗಿಯೂ ಹಿತವಾಗಿಯೂ ಇರುತ್ತದೆ. ಆದರೆ ಉತ್ತರ ಭಾರತದಲ್ಲಿ ಬೀಸುವ ಶೀತಮಾರುತಗಳು ಗುಜರಾತನ್ನೂ ಒಮ್ಮೊಮ್ಮೆ ಪ್ರವೇಶಿಸುವುದುಂಟು. ವರ್ಷದಲ್ಲಿ ಜನವರಿ ಅತ್ಯಂತ ಶೀತಮಾಸ. ನವೆಂಬರಿನ ಮಧ್ಯದಿಂದ ಫೆಬ್ರವರಿಯ ಮಧ್ಯದವರೆಗೆ ಚಳಿಗಾಲ. ಅಲ್ಲಿಂದ ಮುಂದೆ ಉಷ್ಣತೆ ಏರುತ್ತ ಸಾಗಿ, ಮೇ ತಿಂಗಳಲ್ಲಿ ಗರಿಷ್ಠವಾಗುತ್ತದೆ. ನೈಋತ್ಯ ಮಾನ್ಸೂನಿನ ಆಗಮನದಿಂದಾಗಿ ಜೂನ್ ತಿಂಗಳು ಥಟ್ಟನೆ ತಂಪಾಗುತ್ತದೆ. ಆದರೆ ಮುಖ್ಯವಾಗಿ ಕರಾವಳಿಯಲ್ಲಿ ವಾತಾವರಣದ ತೇವದಿಂದಾಗಿ ಹವೆ ಅಷ್ಟೇನೂ ಹಿತಕರವಾಗಿರುವುದಿಲ್ಲ. ಚಳಿಗಾಲವೇ ಹೆಚ್ಚು ಚೈತನ್ಯದಾಯಕ ಕಾಲ. ರಾಜ್ಯದ ಕೆಲವು ಭಾಗಗಳಲ್ಲಿ ಮೇ ತಿಂಗಳಲ್ಲಿ ಉಷ್ಣತೆ $45^0$ ಸೆಂ. ಮುಟ್ಟುವುದುಂಟು. ರಾಜ್ಯದ ಬಹುಭಾಗ $35^0$ ಮತ್ತು $42.5^0$ ಸೆಂ. ಸಮಶಾಖರೇಖೆಯ ನಡುವೆ ಬರುತ್ತದೆ. ಕಚ್ಛ್, ಸೌರಾಷ್ಟ್ರಗಳ ಕರಾವಳಿಯಲ್ಲಿ ಉಷ್ಣತೆ ಕನಿಷ್ಠ. ಇದು ಕಡಲಿನ ಪ್ರಭಾವ. ಸಮುದ್ರದ ಗಾಳಿ ಒಳನಾಡಿನಲ್ಲಿ 30 – 40 ಕಿಮೀವರೆಗೆ ಬೀಸುವುದುಂಟು. ಜನವರಿಯಲ್ಲಿ ಎಲ್ಲೂ ಗರಿಷ್ಠ ಉಷ್ಣತೆ $30^0$ ಸೆಂ.ನ್ನು ದಾಟುವುದಿಲ್ಲ. ದಕ್ಷಿಣಕ್ಕೆ ಬಂದಂತೆ ಉಷ್ಣತೆ ಅಧಿಕವಾಗುತ್ತದೆ.

ಗುಜರಾತಿನಲ್ಲಿ ಮಳೆಯ ಪರಿಮಾಣ ಒಂದೆಡೆಯಿಂದ ಇನ್ನೊಂದೆಡೆಗೆ ತೀವ್ರವಾಗಿ ವ್ಯತ್ಯಾಸವಾಗುತ್ತದೆ. ದಕ್ಷಿಣದಲ್ಲಿರುವ ಬಲ್ಸಾರ್ ಜಿಲ್ಲೆಯಲ್ಲಿ 2,000 ಮಿಮೀ. ಮಳೆ. ಉತ್ತರಕ್ಕೆ ಹೋದಂತೆ ಇದು ಥಟ್ಟನೆ ಇಳಿಯುತ್ತದೆ. ಕೇವಲ 100 ಕಿಮೀ. ಉತ್ತರದಲ್ಲೆ (ಉದಾ : ಸೂರತ್) ಇದು 1,040 ಮಿಮೀ. ಅಲ್ಲಿಂದ ಮುಂದಕ್ಕೆ ಕ್ರಮಕ್ರಮವಾಗಿ ಕಡಿಮೆಯಾಗುತ್ತದೆ. ಸೌರಾಷ್ಟ್ರದಲ್ಲಿ 500 ಮಿಮೀ.ಗಿಂತ ಕಡಿಮೆ ಮಳೆ. ಗಿರ್ನಾರಿನಲ್ಲಿ ಮಾತ್ರ 700 ಮಿಮೀ. ಮಳೆಯಾಗುತ್ತದೆ. ಅದು ಹಸಿರು ತುಂಬಿದ ಪ್ರದೇಶ. ಕಚ್ಛ್ ಅರೆ – ಮರುಭೂಮಿ. ಅಲ್ಲಿ ಬಹುಭಾಗದಲ್ಲಿ 400 ಮಿಮೀ.ಗಿಂತ ಕಡಿಮೆ ಮಳೆಯಾಗುತ್ತದೆ. ಭುಜನಲ್ಲಿ ಕೇವಲ 340 ಮಿಮೀ. ಗುಜರಾತಿನ ಬಯಲುಸೀಮೆಯಲ್ಲಿ ಉತ್ತರಕ್ಕೆ ಹೋದಂತೆ ಮಳೆ ಕಡಿಮೆ. ವಡೋದರದಲ್ಲಿ 910 ಮಿಮೀ. ಅಹಮದಾಬಾದಿನಲ್ಲಿ 730 ಮಿಮೀ. ಭಾವನಗರದಲ್ಲಿ 500 ಮಿಮೀ. ದೀಸದಲ್ಲಿ 60 ಮಿಮೀ. ಎಲ್ಲೆಲ್ಲಿ ಬೆಟ್ಟಗಳಿವೆಯೊ ಅಲ್ಲಿ ನೆರೆಯ ನೆಲದ್ದಕ್ಕಿಂತ ಹೆಚ್ಚು ಮಳೆಯಾಗುತ್ತದೆ. ಬನಾಸ್ಕಂಟಾದಲ್ಲಿ ಆರಾವಳಿ ಮತ್ತು ಅಬು ಶ್ರೇಣಿಗಳ ನೆರೆಯ ಪ್ರದೇಶದಲ್ಲಿ 800 ಮಿಮೀ ಗಿಂತ ಹೆಚ್ಚು ಮಳೆಯಾಗುತ್ತದೆ.

ಮಳೆಯ ದೃಷ್ಟಿಯಿಂದ ಗುಜರಾತ್ ರಾಜ್ಯದ ಮುಖ್ಯ ವಲಯಗಳು ಇವು : 1) ವರ್ಷಕ್ಕೆ 1,000 ಮಿಮೀ ಗಿಂತ ಹೆಚ್ಚು ಮಳೆಯಾಗುವ ಪ್ರದೇಶಗಳು – ಬಲ್ಸಾರ್, ಡಾಂಗ್ಸ್ ಜಿಲ್ಲೆಗಳು, ರಾಜಪಿಪ್ಲಾ ಬೆಟ್ಟವೂ ಸೇರಿದಂತೆ ಭಡೋಚ ಜಿಲ್ಲೆಯ ಪೂರ್ವಭಾಗ; 2) ವರ್ಷಕ್ಕೆ 800 – 1,000 ಮಿಮೀ ಮಳೆಯಾಗುವ ಪ್ರದೇಶಗಳು – ವಡೋದರ, ಪಂಚಮಹಲ್, ಖೇಡಾ ಜಿಲ್ಲೆಗಳು, ಅಹಮದಾಬಾದಿನ ಒಂದು ಭಾಗ; 3) ವರ್ಷಕ್ಕೆ 400 – 800 ಮಿಮೀ ಮಳೆ ಬೀಳುವ ಪ್ರದೇಶಗಳು – ಸೌರಾಷ್ಟ್ರ, ಅಹಮದಾಬಾದಿನಿಂದ ಉತ್ತರಕ್ಕಿರುವ ಗುಜರಾತಿನ ಭಾಗ; 4) ವರ್ಷಕ್ಕೆ 400 ಮಿಮೀ ಗಿಂತ ಕಡಿಮೆ ಮಳೆಯಾಗುವ ಪ್ರದೇಶಗಳು – ಕಚ್ಛ್, ಸಬರಕಂಟಾ ಜಿಲ್ಲೆಯ ಪಶ್ಚಿಮ ಭಾಗ.

**ಸ್ವಾಭಾವಿಕ ಸಸ್ಯಸಂಪತ್ತು :** ಗುಜರಾತಿನ ಸಸ್ಯಸಂಪತ್ತು ಮಳೆಗೆ ಅನುಸಾರವಾಗಿ ವ್ಯತ್ಯಾಸಗೊಳ್ಳುತ್ತದೆ. ಸಾಕಷ್ಟು ಮಳೆಯಾಗಿಯೂ ಕೃಷಿಗೆ ಉಪಯೋಗವಿಲ್ಲದ ಪ್ರದೇಶಗಳಲ್ಲಿ ಕಾಡುಗಳು ಇವೆ. ಗುಜರಾತಿನಲ್ಲಿ ಮೈದಾನಕ್ಕಿಂತ ಬೆಟ್ಟಗಳ ಪ್ರದೇಶದಲ್ಲಿ ಉತ್ತರಕ್ಕಿಂತ ದಕ್ಷಿಣದಲ್ಲಿ ಮಳೆ ಹೆಚ್ಚಾಗಿರುವುದರಿಂದ ರಾಜ್ಯದ ಆಗ್ನೇಯ ಭಾಗದ ಮತ್ತು ಸೌರಾಷ್ಟ್ರದ ಬೆಟ್ಟಗಳಲ್ಲಿ ಕಾಡುಗಳು ಸಾಂದ್ರಿಕರಿಸಿವೆ. ಕಚ್ಛಿನ ಬೆಟ್ಟಗಳು ಉತ್ತರದಲ್ಲಿರುವುದರಿಂದಲೂ ಮಳೆ ಮಾರುತಗಳಿಗೆ ಹೆಚ್ಚಿನ ಅಡಚಣೆ ಒಡ್ಡದಿರುವುದರಿಂದಲೂ ಅಲ್ಲಿ ಕಾಡುಗಳಿಲ್ಲ. ಗುಜರಾತಿನ ಶೇ. 8.99 ಪ್ರದೇಶ ಅರಣ್ಯಗಳಿಂದ ಆವೃತವಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಕಾಡಿನ ಪ್ರದೇಶ ಅಲ್ಪಸ್ವಲ್ಪವಾದರೂ ಇದ್ದೇ ಇರುವುದಾದರೂ ಆರ್ಥಿಕ ದೃಷ್ಟಿಯಿಂದ ಮುಖ್ಯವಾದ ಜಿಲ್ಲೆಗಳು ಇವು : ಡಾಂಗ್ಸ್, ಪಂಚಮಹಲ್, ಭಡೋಚ, ಸೂರತ್, ಬಲ್ಸಾರ್, ಜುನಾಗಢ, ಸಬರಕಂಟಾ ಮತ್ತು ಬನಾಸ್ಕಂಟಾ. ದಕ್ಷಿಣದ ಮೂರು ಜಿಲ್ಲೆಗಳಾದ ಡಾಂಗ್ಸ್, ಸೂರತ್, ಭಡೋಚಗಳಲ್ಲಿ ರಾಜ್ಯದ ಶೇ. 40 ರಷ್ಟು ಅರಣ್ಯ ಪ್ರದೇಶವಿದೆ. 1,250 ಮಿಮೀ ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ತೇಗ, ಮತ್ತಿ, ಮತ್ತು ದಿಂಡಲು ಮುಖ್ಯ ಮರಗಳು. ಮಳೆ ಕಡಿಮೆಯಾದಂತೆ ತೇಗ ಕಡಿಮೆಯಾಗಿ ಎಲಚಿ, ಮುತ್ತುಗ, ಕಾಚು ಮರಗಳು ಬೆಳೆಯುತ್ತವೆ. ಮಳೆ ಇನ್ನೂ ಕಡಿಮೆಯಾಗಿರುವ ಉತ್ತರ ಭಾಗದಲ್ಲಿ ಕರಿಜಾಲಿ, ಬಿಳಿಗೊಬ್ಬಳಿ, ಚಿಪ್ಪೂರಿ, ಎಲಚಿ, ಕಳ್ಳಿ ಜಾತಿಯ ಗಿಡಗಳು ಬೆಳೆಯುತ್ತವೆ. ಹೆಚ್ಚು ಅಥವಾ ಸಾಮಾನ್ಯ ಮಳೆಯ ಪ್ರದೇಶಗಳಲ್ಲಿ ಬಿದಿರು ಒಂದು ಮುಖ್ಯ ಸಸ್ಯ. ಗುಜರಾತಿನಲ್ಲಿ ಬಿದಿರು ಕಾಡುಗಳ ಒಟ್ಟು ವಿಸ್ತೀರ್ಣ 1927.5 ಚ.ಕಿಮೀ ಉತ್ತರಕ್ಕಿಂತ ದಕ್ಷಿಣದಲ್ಲಿ ಬಿದಿರು ಕಾಡುಗಳು ಹೆಚ್ಚು.

ಗುಜರಾತಿನ ಕಾಡುಗಳ ಪ್ರಯೋಜನವನ್ನು ಸಂಪೂರ್ಣವಾಗಿ ಪಡೆದಿಲ್ಲ. ಅವನ್ನು ಸರಿಯಾಗಿ ರಕ್ಷಿಸುವ ಕ್ರಮವನ್ನು ಕೈಗೊಂಡಿಲ್ಲ. ಅರಣ್ಯಗಳ ವಿಸ್ತೀರ್ಣ ಕ್ರಮ ಕ್ರಮವಾಗಿ ಕಡಿಮೆಯಾಗುತ್ತಿದೆ. ಗಿರ್ ಅರಣ್ಯ ಕಳೆದ 140 ವರ್ಷಗಳಲ್ಲಿ ಅರ್ಧಕ್ಕೆ ಕುಗ್ಗಿದೆ. ರಾಜ್ಯದ ವಾರ್ಷಿಕ ಸಾಗುವಾನಿ ಉತ್ಪಾದನೆ 36ಲಕ್ಷ ಘ. ಅಡಿ. ಗುಜರಾತಿನ ಬಿದಿರಿನ ವಿಭವ 2 ಲಕ್ಷ ಟನ್ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ 80,000 ಟನ್ ಬಿದಿರು ಡಾಂಗ್ಸ್ ಮತ್ತು ರಾಜಪಿಪ್ಲ ಪ್ರದೇಶದಲ್ಲಿದೆ.

**ಜನವಸತಿ :** ಗುಜರಾತಿಗಳು ಹೆಚ್ಚು ಮೈಕಟ್ಟಿನ ಜನರಲ್ಲವಾದರೂ ಸ್ವಭಾವತಃ ಸಜ್ಜನರು, ಸೌಜನ್ಯಶೀಲರು, ಶಾಂತಿಪ್ರಿಯರು, ಧೈರ್ಯ, ಶೌರ್ಯ, ಔದಾರ್ಯ, ದೇಶಭಕ್ತಿ ಮತ್ತು ಅತಿಥಿಸತ್ಕಾರಗಳಿಗಾಗಿ ಹೆಸರಾದವರು. ಉದ್ಯೋಗ ಪ್ರಿಯತೆಯೊಡನೆ ಉಲ್ಲಾ ಪ್ರವೃತ್ತಿಯನ್ನೂ ಹೊಂದಿದವರು. ಸಮುದ್ರದ ಸಾಮೀಪ್ಯ ಮತ್ತು ಆರ್ಥಿಕ ಅನುಕೂಲತೆಗಳಿಗಾಗಿ ಸ್ವಾಭಾವಿಕವಾಗಿಯೇ ಈ ಜನರಲ್ಲೊಂದು ವಿಶೇಷ ಸಾಹಸ ಮತ್ತು ಸಂಚರೋತ್ಸಾಹ ಕಂಡುಬರುತ್ತದೆ.

2011ರ ಜನಗಣತಿ ಪ್ರಕಾರ ಈ ರಾಜ್ಯದ 6,03,83,628 ಪ್ರಜೆಗಳಲ್ಲಿ ಪುರಷರು 26,385,577 ಮಂದಿ. ಮಹಿಳೆಯರು 24,285,440 ಮಂದಿ ಇದ್ದಾರೆ. ಚ.ಕಿಮೀ. ಜನಸಾಂದ್ರತೆ 258 ಮಂದಿ. ನಗರವಾಸಿಗಳು ಶೇ 37.4 ಮಂದಿ ಇದ್ದಾರೆ.

ಗುಜರಾತ್ ರಾಜ್ಯದಲ್ಲಿ 25 ಜಿಲ್ಲೆಗಳೂ, 242 ಪಟ್ಟಣಗಳೂ 18,539 ಗ್ರಾಮಗಳೂ ಇವೆ. ಜಿಲ್ಲಾವಾರು ಜನಸಂಖ್ಯೆಯ ವಿವರಗಳು ಕೆಳಗಿನಂತಿವೆ :

| ಜಿಲ್ಲೆ | ವಿಸ್ತೀರ್ಣ ಚ.ಕಿಮೀ | ಜನಸಂಖ್ಯೆ (2011) | ಆಡಳಿತ ಕೇಂದ್ರ ನಗರ |
|---|---|---|---|
| 1. ಅಹಮದಾಬಾದ್ | 8087 | 72,08,200 | ಅಹಮದಾಬಾದ್ |
| 2. ಅಮ್ರೇಲಿ | 7397 | 15,13,614 | ಅಮ್ರೇಲಿ |
| 3. ಆನಂದ್ | 2941 | 20,90,276 | ಆನಂದ್ |
| 4. ಬನಾಸ್ಕಂಟ | 10,757 | 31,16,045 | ಪಾಲನ್‌ಪುರ್ |
| 5. ಬರೂಚ್ | 6527 | 15,50,822 | ಬರೂಚ್ |
| 6. ಭಾವನಗರ್ | 9981 | 28,77,961 | ಭಾವನಗರ್ |
| 7. ದಾಹೋದ್ | 3,646 | 21,26,558 | ದಾಹೋದ್ |
| 8. ದಾಂಗ್ | 1764 | 2,26,769 | ಆಹ್ವಾ |
| 9. ಗಾಂದಿನಗರ್ | 2163 | 13,87,478 | ಗಾಂಧಿನಗರ್ |
| 10. ಜಾಮ್‌ನಗರ್ | 14125 | 21,59,130 | ಜಾಮ್‌ನಗರ್ |
| 11. ಜುನಾಘಡ್ | 8846 | 27,42,291 | ಜುನಾಘಡ್ |
| 12. ಖೇಡ | 4219 | 22,98,934 | ನಡಿಯಾಡ್ |
| 13. ಮೆಹಸಾನ | 4384 | 20,27,727 | ಮೆಹಸಾನ |
| 14. ಕಚ್ಛ್ | 45652 | 20,90,313 | ಭುಜ್ |
| 15. ನರ್ಮದ | 2755 | 5,90,379 | ರಾಜ್‌ಪಿಪ್ಲ |
| 16. ನೌಸಾರಿ | 2209 | 13,30,711 | ನೌಸಾರಿ |
| 17. ಪಂಚಮಹಲ್ | 5220 | 23,88,267 | ಗೋಧ್ರಾ |
| 18. ಪಠಾಣ | 5730 | 13,42,746 | ಪಠಾಣ |
| 19. ಪೋರ್‌ಬಂದರ್ | 2298 | 5,86,062 | ಪೋರ್‌ಬಂದರ್ |
| 20. ರಾಜ್‌ಕೋಟ್ | 1203 | 37,99,770 | ರಾಜ್‌ಕೋಟ |
| 21. ಸಬರ್‌ಕಾಂಟ | 7390 | 24,27,346 | ಹಿಮ್ಮತ್‌ನಗರ್ |
| 22. ಸೂರತ್ | 7657 | 60,79,231 | ಸೂರತ್ |
| 23. ಸುರೇಂದ್ರ ನಗರ್ | 10489 | 17,55,873 | ಸುರೇಂದ್ರನಗರ್ |
| 24. ವಡೋದರ | 7549 | 41,57,568 | ವಡೋದರ |
| 25. ವಾಲ್ಸದ್ | 3035 | 17,03,068 | ವಾಲ್ಸದ್ |

ಗುಜರಾತಿನ ಪ್ರಾದೇಶಿಕ ಭಾಷೆ ಗುಜರಾತಿ. ಬಹುಜನರು ಹಿಂದಿಯನ್ನು ಸುಲಭವಾಗಿ ಮಾತನಾಡಬಲ್ಲರು. ಬಲು ದೀರ್ಘವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಇಲ್ಲಿಯ ಜನಜೀವನಕ್ಕೆ ತನ್ನದೇ ಆದ ಮೆರುಗು ಬಂದಿದೆ. ಶ್ರೀಕೃಷ್ಣ, ದಯಾನಂದ ಸರಸ್ವತೀ, ನರಸಿಂಹ ಮೆಹ್ತಾ, ಮಹಾತ್ಮ ಗಾಂಧೀ ಮತ್ತಿತರರ ಜೀವನ ದರ್ಶನ ಸಾಹಿತ್ಯಗಳು ಗುಜರಾತಿನ ಸಾಂಸ್ಕೃತಿಕ ಶ್ರೀಮಂತಿಕೆ ಹೆಚ್ಚಿಸಲು ಕಾರಣವಾಗಿದೆ. ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನ ಮಡದಿ ಉಷಾ ಆರಂಭಿಸಿದ ಲಾಸ್ಯ ಪರಂಪರೆ ಇಂದಿಗೂ ಈ ರಾಜ್ಯದ ಹಬ್ಬಹುಣ್ಣಿಮೆಗಳಲ್ಲಿ, ಮುಖ್ಯವಾಗಿ ನವರಾತ್ರಿ ಹಬ್ಬದಲ್ಲಿ, ಗರಬಾ ನೃತ್ಯದಲ್ಲಿ ಉಳಿದುಬಂದಿದೆ.

**ಕೃಷಿ ಮತ್ತು ನೀರಾವರಿ :** ಭಾರತದಲ್ಲಿ ಪ್ರಗತಿಪರ ಬೇಸಾಯಕ್ಕೆ ಹೆಸರಾದ ಪ್ರದೇಶಗಳಲ್ಲಿ ಗುಜರಾತ್ ರಾಜ್ಯವೂ ಒಂದು. ಹತ್ತಿ ಮತ್ತು ನೆಲಗಡಲೆ ಬೆಳೆಗಳಲ್ಲಿ ಇಡಿಯ ರಾಷ್ಟ್ರದಲ್ಲಿ ಈ ರಾಜ್ಯ ಪ್ರಮುಖವಾಗಿದೆ. ಈ ಬೆಳೆಗಳು ರಾಜ್ಯದ ಅನೇಕ ಕೈಗಾರಿಕೆಗಳ ಅಭಿವೃದ್ಧಿಗೂ ತನ್ಮೂಲಕ ರಾಜ್ಯದ ಆರ್ಥಿಕ ಪ್ರಗತಿಗೂ ಬುನಾದಿಯಾಗಿ ಪರಿಣಮಿಸಿದೆ. ಒಟ್ಟು 1,95,93,000 ಹೆಕ್ಟೇರ್ ಭೂವಿಸ್ತಾರವುಳ್ಳ ಈ ರಾಜ್ಯದಲ್ಲಿ 35.15 ಲಕ್ಷ ಹೆಕ್ಟೇರ್ (2003) ಭೂಮಿ ಕೃಷಿಗೆ ಉಪಯುಕ್ತವಾದ್ದು. ಅದರಲ್ಲಿ 16,27,000 ಹೆಕ್ಟೇರ್ ಅರಣ್ಯಪ್ರದೇಶ; 5,37,000 ಹೆಕ್ಟೇರ್ ಬೇಸಾಯವಲ್ಲದ ಇತರ ಉದ್ದೇಶಗಳಿಗೆ ಬಳಸಲಾದ ಜಮೀನು; 43,41,000 ಹೆಕ್ಟೇರ್ ಸಾಗುವಳಿ ಮಾಡಲಾಗದ ಬಂಜರು ಭೂಮಿ; 1,11,000 ಹೆಕ್ಟೇರ್ ಹುಲ್ಲುಗಾವಲು; 22,000 ಹೆಕ್ಟೇರ್ ವಿವಿಧ ಗಿಡಮರಗಳುಳ್ಳ ಪ್ರದೇಶ; 5,08,000 ಹೆಕ್ಟೇರ್ ಸಾಗುವಳಿ ಮಾಡಬಹುದಾದ ಪಾಳುಭೂಮಿ; 685 ಹೆಕ್ಟೇರ್ ಉತ್ತು ಬಿತ್ತದೆ ಬಿಟ್ಟ ನಿರ್ಲಕ್ಷಿತ ಭೂಮಿ. ಸುಮಾರು 1,05,00,000 ಹೆಕ್ಟೇರ್ ಭೂಮಿ ಮಾತ್ರವೇ ನೀರಾವರಿಗೆ ಒಳಪಟ್ಟಿದ್ದು. ಶೇ. 90ರಷ್ಟು ಭೂಮಿ ಮುಂಗಾರು ಮಳೆಯನ್ನೇ ಅವಲಂಬಿಸಿದೆ.

ಈ ರಾಜ್ಯದಲ್ಲಿ ನೀರಾವರಿಯ ವಿಶೇಷ ಸೌಲಭ್ಯಗಳಿಲ್ಲದಿದ್ದರೂ ಬೇಸಾಯಕ್ಕೆ ಬಳಸುವ ಶಾಸ್ತ್ರೀಯ ಪದ್ಧತಿಗಳಿಂದಾಗಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಕಾಲಕಾಲಕ್ಕೆ ಹೆಚ್ಚಳವನ್ನೇ ಸಾಧಿಸಲಾಗಿದೆ.

ನೆಲಗಡಲೆ ಮತ್ತು ಹತ್ತಿ ಈ ರಾಜ್ಯದ ಎರಡು ಮುಖ್ಯ ಬೆಳೆಗಳು. ಇಡೀ ದೇಶದಲ್ಲಿ ನೆಲಗಡಲೆಯ ಬೆಳೆಗೆ ಒಳಪಟ್ಟ ಭೂಮಿಯ ಶೇ. 25 ಭಾಗವೂ ಹತ್ತಿಯ ಬೆಳೆಗೊಳಪಟ್ಟ ಭೂಮಿಯ ಶೇ. 21 ಭಾಗವೂ ಈ ರಾಜ್ಯದಲ್ಲಿದೆ. ನೆಲಗಡಲೆ ಮತ್ತು ಹತ್ತಿಯ ಇಡೀ ದೇಶದ ವಾರ್ಷಿಕ ಉತ್ಪನ್ನಗಳಲ್ಲಿ ಅನುಕ್ರಮವಾಗಿ ಶೇ. 23 ಮತ್ತು ಶೇ. 29 ಗುಜರಾತಿನಲ್ಲಿ ಬೆಳೆಯುತ್ತವೆ.



ಅರಳೆ, ಗುಜರಾತಿನ ಒಂದು ಮುಖ್ಯ ಉತ್ಪನ್ನ

ಬೇಸಾಯ ಶಿಕ್ಷಣ ಪ್ರಸಾರಕ್ಕಾಗಿ ಜುನಾಗಢ, ಆನಂದ್, ನವಸಾರಗಳಲ್ಲಿ ವ್ಯವಸಾಯದ ಮಹಾವಿದ್ಯಾಲಯಗಳನ್ನು ತೆರೆಯಲಾಗಿದೆ. ಅಹಮದಾಬಾದಿನಲ್ಲಿ 1972 ರಲ್ಲಿ ಕೃಷಿ ವಿಶ್ವವಿದ್ಯಾಲಯ ಆರಂಭವಾಯಿತು. ರಾಜ್ಯದಲ್ಲಿ 13 ಕೃಷಿ ಶಾಲೆಗಳಿವೆ. ಸೂರತ್, ವಡೋದರ, ಆನಂದ್ ಮತ್ತು ಜುನಾಗಢದಲ್ಲಿ ಗ್ರಾಮ ಸೇವಕರ ತರಬೇತು ಕೇಂದ್ರಗಳಿವೆ.

ಗುಜರಾತಿನಲ್ಲಿ ಬಾವಿ ಕೆರೆಗಳಲ್ಲದೆ ಸುಮಾರು 50 ಮಧ್ಯಮ ಗಾತ್ರದ ನೀರಾವರಿ ಯೋಜನೆಗಳೂ ಮುಂದಿನ ಪುಟದಲ್ಲಿ ಕಾಣಿಸಿರುವ ದೊಡ್ಡ ಗಾತ್ರದ ನೀರಾವರಿ ಯೋಜನೆಗಳೂ ಉಂಟು. ಯೋಜನೆಗಳಿಂದ ದೊರೆಯುವ ನೀರು ರಾಜ್ಯದ ಒಟ್ಟು ಸಾಗುವಳಿ ಕ್ಷೇತ್ರದ ಶೇ. 11 ಭಾಗವನ್ನು ಮಾತ್ರ ತಣಿಸಬಲ್ಲದು. ರಾಜ್ಯದ ನದಿಗಳಿಂದ ಇನ್ನೂ ಹೆಚ್ಚಿನ ಪ್ರಯೋಜನ ಪಡೆಯುವ ಪ್ರಯತ್ನಗಳಲ್ಲದೆ, ಸಹಸ್ರಾರು ನೀರಾವರಿ ಬಾವಿಗಳನ್ನು ತೋಡಿಸುವ ಕಾರ್ಯ ನಡೆದಿದೆ. ಜೊತೆಗೆ ಒಣ ಬೇಸಾಯದ ವ್ಯವಸ್ಥಿತ ಕ್ರಮಗಳಿಗಾಗಿಯೂ ವಿಶೇಷ ಗಮನ ಕೊಡುವುದು ಅನಿವಾರ್ಯವೆನಿಸಿದೆ. ಅದಕ್ಕಾಗಿ 1949ರಿಂದ ಜಮೀನಿನಲ್ಲಿ ಸಮಪಾತಳೀ ಒಡ್ಡು ರಚಿಸುವ ಯೋಜನೆಯನ್ನಾರಂಭಿಸಿ ಮೊದಲೆರಡು ದಶಕಗಳಲ್ಲಿಯೇ 22 ಲಕ್ಷ ಎಕರೆಗಳ ಜಮೀನಿನಲ್ಲಿ ಇಂಥ ಒಡ್ಡುಗಳನ್ನು ಹಾಕಲಾಯಿತು. ಖೇಡಾ ಜಿಲ್ಲೆಯ ಕೋಠಿಯಖಾಡ ಒಣ ಬೇಸಾಯದ ಪ್ರಾತ್ಯಕ್ಷಿಕಾ ಕೇಂದ್ರದಲ್ಲಿ ಭೂ ಸಂರಕ್ಷಣೆಯ ವಿವಿಧ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು ರೈತರಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಜುನಾಗಢ, ಮಂಗ್ರೋಲ, ಮುಂದ್ರಾ, ಊನಾ, ಕೋಡಿನಾರ್, ಧಾರಿ, ಮಾಹುವಾ, ಮೊಟೇರಾ, ದೇಹಗಾಮ್, ವಡೋದರ, ನವಸಾರಿ, ಗಾಂಡೇವಿ, ಪಾರ್ದಿ, ಪಾರಿಯಗಳಲ್ಲಿರುವ ಸರ್ಕಾರಿ ಸಸಿದೋಟಗಳಿಂದ ಹೂ – ಹಣ್ಣುಗಳು ಸಸಿಗಳನ್ನು ರೈತರಿಗೆ ಹಂಚಲಾಗುತ್ತದೆ. ಅಲ್ಲದೆ ರಾಜ್ಯದ ವಿವಿಧ ಭಾಗಗಳಲ್ಲಿರುವ ಸಂಶೋಧನ ಕೇಂದ್ರಗಳ ಮೂಲಕ ತೋಟಗಾರಿಕೆಯ ಅಭಿವೃದ್ಧಿಯ ಮಾಹಿತಿಯನ್ನು ಪೂರೈಸಲಾಗುತ್ತಿದೆ.

**ವಿದ್ಯುತ್ ಉತ್ಪಾದನೆ :** ಈ ರಾಜ್ಯದಲ್ಲಿರುವ ವಿದ್ಯುದುತ್ಪಾದನ ಕೇಂದ್ರಗಳಿವು:

| | | | |
|---|---|---|---|
| 1. | ಧುವರನ್ ವಿದ್ಯುತ್ ಕೇಂದ್ರ | ... | 254.0 |
| 2. | ಧುವರನ್ ವಿದ್ಯುತ್ ಕೇಂದ್ರ ( 2ನೆಯ ಹಂತ) | ... | 280.0 |
| 3. | ಉಗಿಚಕ್ರ ವಿದ್ಯುತ್ ಕೇಂದ್ರ | ... | 54.0 |
| 4. | ಉತ್ರನ್ ವಿದ್ಯುತ್ ಕೇಂದ್ರ | ... | 67.5 |
| 5. | ಶಹಾಪುರ | ... | 16.0 |
| 6. | ಪೋರ್ಬಂದರ್ | ... | 15.0 |
| 7. | ಸಿಕ್ಕಾ | ... | 16.0 |
| 8. | ಕಾಂಡ್ಲಾ | ... | 16.0 |
| 9. | ಭಾವನಗರ | ... | 16.0 |
| 10. | ಸಾಬರ್ಮತಿ | ... | 217.5 |
| 11. | ತಾರಾಪುರ್ ಪರಮಾಣು ವಿದ್ಯುತ್ ಕೇಂದ್ರ | ... | 190.0 |
| 12. | ಉಕಾಯಿ ಜಲವಿದ್ಯುತ್ ಕೇಂದ್ರ | ... | 300.00 |

ರಾಜ್ಯದ ನಗರಗಳಲ್ಲದೆ ಸು. 3,500 ಗ್ರಾಮಗಳಿಗೂ 52,000 ನೀರಿನ ಪಂಪ್‌ಸೆಟ್‌ಗಳಿಗೂ ವಿದ್ಯುತ್ ಪೂರೈಕೆಯಾಗಿದೆ. $5\frac{1}{2}$ ಲಕ್ಷ ಮನೆಗಳಿಗೆ ವಿದ್ಯುತ್ತನ್ನೊದಗಿಸಲಾಗಿದೆ. ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆ. 2005ರಲ್ಲಿ ಒಟ್ಟು 8763 ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗಿತ್ತು.

**ಮೀನುಗಾರಿಕೆ :** ಗುಜರಾತಿಗೆ 1,600 ಕಿಮೀ ಕರಾವಳಿ ಇರುವುದರಿಂದ ಮೀನುಗಾರಿಕೆಯ ಅಭಿವೃದ್ಧಿಗೆ ಇಲ್ಲಿ ಸಾಕಷ್ಟು ಅವಕಾಶವುಂಟು. ಒಳನಾಡಿನಲ್ಲಿರುವ ನಾಲ್ಕು ದೊಡ್ಡ ನದಿಗಳೂ ಕೆರೆ ಕಾಲುವೆಗಳೂ ಇದಕ್ಕೆ ಉಪಯುಕ್ತವಾಗಿವೆ. ರಾಜ್ಯದಲ್ಲಿ ವರ್ಷಕ್ಕೆ ಸರಾಸರಿ 2 ಲಕ್ಷ ಟನ್ ಮೀನಿನ ಉತ್ಪಾದನೆಯಾಗುತ್ತದೆ. ಇದರ ಅಭಿವೃದ್ಧಿಗಾಗಿ ವೀರಾವಲ, ಪೋರ್ಬಂದರ್, ಬಲಸಾರ್, ಮಧವಾಡ ಮತ್ತು ಅಂಬರ್‌ಗಾಂವ್‌ಗಳಲ್ಲಿ ಸೇವಾಕೇಂದ್ರಗಳನ್ನೂ ಅಂಬರ್‌ಗಾಂವ್, ವೀರಾವಲ ಮತ್ತು ಬಲ್‌ಸಾರ್‌ಗಳಲ್ಲಿ ಆಧುನಿಕ ದೋಣಿಗಳ ನಿರ್ಮಾಣ ಕೇಂದ್ರಗಳನ್ನೂ ತೆರೆಯಲಾಗಿದೆ. ವೀರಾವಲ, ಜಾಫರಾಬಾದ್, ಅಂಬರಗಾಂವ್, ಪೋರ್‌ಬಂದರ್, ಮಂಗ್ರೋಲ್ ಮತ್ತು ಹೀರಾತೋಟ್ ಬಂದರುಗಳಲ್ಲಿ ಈ ಉದ್ಯಮ ದೊಡ್ಡ ಗಾತ್ರದಲ್ಲಿ ನಡೆಯುತ್ತಿದೆ. ಗುಜರಾತಿನಿಂದ ಹೊರದೇಶಗಳಿಗೆ ಸು.1 ಕೋಟಿ ರೂ. ಮೌಲ್ಯದ ಮೀನು ರಫ್ತಾಗುತ್ತದೆ.

**ಖನಿಜಗಳು :** ಗುಜರಾತಿನಲ್ಲಿ ಉಪ್ಪು, ಸುಣ್ಣದಕಲ್ಲು, ಮ್ಯಾಂಗನೀಸ್, ಜಿಪ್ಸಮ್, ಪಿಂಗಾಣಿ ಮಣ್ಣು, ಕ್ಯಾಲ್ಸೈಟ್, ಬಾಕ್ಸೈಟ್, ಪೆಟ್ರೋಲಿಯಂ, ಅಮೂಲ್ಯ ಶಿಲೆ, ಬಣ್ಣಕ್ಕೆ ಬಳಸುವ ಕೆಮ್ಮಣ್ಣು ಅಗೇಟ್ ಶಿಲೆ ಮುಂತಾದ ಖನಿಜಗಳು ವಿಪುಲವಾಗಿ ದೊರೆಯುತ್ತವೆ. ಸೌರಾಷ್ಟ್ರ ಮತ್ತು ಕಚ್ಛ್ ಉತ್ತಮ ದರ್ಜೆಯ ಬಾಕ್ಸೈಟ್ ಮತ್ತು ಸುಣ್ಣದ ಕಲ್ಲುಗಳಿಗೆ ಹೆಸರಾಗಿದ್ದರೆ, ವಡೋದರ ಜಿಲ್ಲೆಯ ಛೋಟಾ ಉದಯಪುರದ ಬಳಿ ಫ್ಲೂರೈಟ್ ದೊರೆಯುತ್ತದೆ. ವಡೋದರ, ಬನಾಸ್ಕಂಟ, ಭಡೋಚ, ಭಾವನಗರ, ಕಚ್ಛ, ರಾಜಕೋಟೆ ಜಿಲ್ಲೆಗಳಲ್ಲಿ ದೊರೆಯುವ ಬೆಲೆ ಬಾಳುವ ಕಲ್ಲುಗಳು ಗುಜರಾತಿನ ಮುಖ್ಯವಾಗಿ ಖಂಬಾತ್ ಮತ್ತು ಸೂರತಿನ, ಕಲಾವಿದರ ಕೈಗಳಲ್ಲಿ ವಿವಿಧ ಆಕರ್ಷಕ ರೂಪ ತಳೆದು ದೇಶವಿದೇಶಗಳಲ್ಲಿ ವಿಶೇಷ ಬೇಡಿಕೆಗೆ ಪಾತ್ರವಾಗಿದೆ. ಗುಜರಾತಿನ ತೈಲ ಮತ್ತು ಅನಿಲ ಸಂಪತ್ತಿನ ಸರ್ವೇಕ್ಷಣೆ ನಡೆಸಿ ಅದನ್ನು ಹೊರತೆಗೆಯುವ ಕೆಲಸ ನಡೆದಿದೆ. ತೈಲ ಮತ್ತು ನೈಸರ್ಗಿಕ ಅನಿಲ ಆಯೋಗದ ನೇತೃತ್ವದಲ್ಲಿ 530 ಬಾವಿಗಳನ್ನು ತೋಡಲಾಗಿದೆ. ಪ್ರತಿವರ್ಷ 11.275 ಟನ್ ತೈಲ ತೆಗೆಯುವ ಉದ್ದೇಶವಿರಿಸಿಕೊಂಡು ಕಾರ್ಯ ನಡೆದಿದೆ. ಅಂಕಲೇಶ್ವರ, ಕಲೋಲ, ನವಾಗಾಮ್‌ಗಳು ತೈಲೋತ್ಪಾದನೆಯ ಮುಖ್ಯ ಕೇಂದ್ರಗಳು.

**ಸಹಕಾರ, ಕೈಗಾರಿಕೆ :** ಸಹಕಾರೀ ಆಂದೋಲನದಲ್ಲೂ ಈ ರಾಜ್ಯ ಸಾಕಷ್ಟು ಪ್ರಗತಿ ಸಾಧಿಸಿದೆ. ಗ್ರಾಮ ಮಟ್ಟದಲ್ಲಿ 28 ಲಕ್ಷ ಸದಸ್ಯರುಳ್ಳ 9.885 ಪ್ರಾಥಮಿಕ ಸಂಘಗಳುಂಟು. 325 ಸಹಕಾರೀ ಬೇಸಾಯ ಸಂಘಗಳೂ. 58 ಸಂಯುಕ್ತ ಸಹಕಾರೀ ಬೇಸಾಯ ಸಂಘಗಳೂ 450 ನೀರೆತ್ತುವ ಸಹಕಾರೀ ಸಂಘಗಳೂ ಕಾರ್ಯನಿರತವಾಗಿವೆ. ಇವಲ್ಲದೆ ವರ್ಷಕ್ಕೆ ಸರಾಸರಿ 1,000–1.250 ದಶಲಕ್ಷ ಟನ್ ಕಬ್ಬಿನಿಂದ ಸಕ್ಕರೆ ತಯಾರಿಸುವ 11 ಸಹಕಾರಿ ಸಕ್ಕರೆ ಕಾರ್ಖಾನೆಗಳುಂಟು. 63 ಪ್ರಾಥಮಿಕ ಮೀನುಗಾರಿಕೆ ಸಂಘಗಳೂ 14 ಒಣ ಮೀನುಗಳ ಮಾರಾಟ ಸಂಘಗಳೂ 8 ತಾಜಾ ಮೀನುಗಳ ಮಾರಾಟ ಸಂಘಗಳೂ ಇವೆ. ಹಾಲಿನ ಉತ್ಪಾದನೆ, ಪೂರೈಕೆ, ಗೃಹ ನಿರ್ಮಾಣ ಮತ್ತು ವಸತಿ ವ್ಯವಸ್ಥೆಗಳಿಗಾಗಿ ಈ ರಾಜ್ಯದಲ್ಲಿ ಆಗಿರುವ ಸಹಕಾರೀ ಸಂಘಟನೆ

ವಿಶಿಷ್ಟವಾದ್ದು. 2.88.399 ಸದಸ್ಯರುಳ್ಳ 1.552 ಹಾಲುಪೂರೈಕೆಯ ಸಹಕಾರೀ ಸಂಘಗಳೂ 1.43.522 ಸದಸ್ಯರುಳ್ಳ 4.215 ಗೃಹನಿರ್ಮಾಣ ಸಂಘಗಳೂ ಈ ರಾಜ್ಯದಲ್ಲಿವೆ. 166 ನೇಕಾರರ ಸಂಘಗಳೂ 779 ಇತರ ಕೈಗಾರಿಕೆಗಳ ಸಂಘಗಳೂ 959 ಗ್ರಾಹಕರ ಸಂಘಗಳೂ, 89 ವ್ಯವಸಾಯೇತರ ಸಂಘಗಳೂ ರಾಜ್ಯದಲ್ಲಿವೆ.

**ದೊಡ್ಡ ಗಾತ್ರದ ನೀರಾವರಿ ಯೋಜನೆಗಳು**

| ಹೆಸರು | ಯೋಜನೆಯ ವಿವರ | ಉದ್ದ (ಮೀಗಳಲ್ಲಿ) | ಎತ್ತರ (ಮೀಗಳಲ್ಲಿ) | ಕಾಲುವೆ (ಕಿಮೀ) | ಪ್ರಯೋಜನ ಪಡೆದ ಕ್ಷೇತ್ರ (ಹೆ.ಗಳಲ್ಲಿ) |
|---|---|---|---|---|---|
| ಬನಾಸ್ | ಬನಾಸ್ಕಾಂಟಾ ಜಿಲ್ಲೆಯಲ್ಲಿ ದಂತಿವಾಡಾ ಗ್ರಾಮದ ಬಳಿಬನಾಸ್ ನದಿಗೆ ಕಟ್ಟೆ. | 4.815.00 | 61.00 | 651.77 | 44.517 |
| ಹಾತ್ಮತಿ | ಸಬರ ಕಾಂಟಾ ಜಿಲ್ಲೆಯಲ್ಲಿ ಫತೆಹಪುರ ಬಳಿಯಲ್ಲಿ ಹಾತ್ಮತಿ ನದಿಗೆ ಕಟ್ಟೆ. | 1,411.3 | 23.5 | 191.2 | 37.604 |
| ಕಕ್ರಪಾರ | ಕಕ್ರಪಾರ ಗ್ರಾಮದ ಬಳಿ ತಾಪಿ ನದಿಗೆ ಅಡ್ಡ ಕಟ್ಟೆ. | 621.00 | 14.00 | 435.00 | 2,27,543 |
| ಮಾಹೀ (1ನೆಯ ಹಂತ) | ವಾಣಕಬೋರಿ ಗ್ರಾಮದ ಬಳಿ ಮಾಹೀ ನದಿಗೆ ಅಡ್ಡಕಟ್ಟೆ. | 790.00 | 20.6 | 304.00 | 1,86,162 |
| ಮಾಹೀ (2ನೆಯ ಹಂತ) | ವಾಣಕ ಬೋರಿಯಿಂದ 70 ಕಿಮೀ. ಅಂತರದಲ್ಲಿ ಕಡಣಾದ ಬಳಿ ಮಾಹೀ ನದಿಗೆ ಕಟ್ಟೆ. | 2,225.00 | 58.2 | 106.00 | 2,86,554 |
| ನರ್ಮದಾ | ನವಾಗಾಮದ ಬಳಿ ನರ್ಮದಾ ನದಿಗೆ ಕಟ್ಟೆ. | 2,012.00 | 69.2 | 143 | 4,03,688 |
| ಶತ್ರುಂಜೀ | ಫಾಲಿತಾಣಾ ಬಳಿ ಶತ್ರುಂಜೀ ನದಿಗೆ ಕಟ್ಟೆ. | 3,126.00 | 38.10 | 154.5 | 34,804 |
| ಉಕಾಯಿ | ಸೂರತ್ ಜಿಲ್ಲೆಯ ಉಕಾಯಿ ಗ್ರಾಮದ ಬಳಿ ತಾಪಿ ನದಿಗೆ ಕಟ್ಟೆ. | 4,928.00 | 68.6 | 949.00 | 1,52,400 |

ಇಲ್ಲಿ 14.123 ಸಣ್ಣ ಕೈಗಾರಿಕೆಗಳಿವೆ. ಗೃಹ-ಗುಡಿ ಕೈಗಾರಿಕೆಗಳು ಮಾತ್ರವಲ್ಲದೆ ದೊಡ್ಡ ಮತ್ತು ಮಧ್ಯಮ ಗಾತ್ರಗಳ ಕೈಗಾರಿಕೆಗಳಲ್ಲೂ ರಾಜ್ಯ ಮುಂದುವರಿದಿದೆ.

ಅಹಮದಾಬಾದ್ ಸೂರತ್, ವಡೋದರ, ಖೇಡಾ, ಭಾವನಗರ, ಸುರೇಂದ್ರನಗರ, ರಾಜಕೋಟೆ, ಜಾಮ್‌ನಗರಗಳಲ್ಲಿ ಕಾರ್ಖಾನೆಗಳು ಹೆಚ್ಚಾಗಿ ಬೆಳೆದಿವೆಯಾದರೂ ಇತರ ಕಡೆಗಳಲ್ಲೂ ಕೆಲವು ಕೈಗಾರಿಕೆಗಳುಂಟು. ಜವಳಿ ಕೈಗಾರಿಕೆ ಅತ್ಯಂತ ಮುಖ್ಯವಾದ್ದು. ಎಂಜಿಯರಿಂಗ್, ರಸಾಯನವಸ್ತು. ಔಷಧಗಳು, ಸಿಮೆಂಟ್, ಕುಂಭ, ಗಾಜು, ಗೊಬ್ಬರ, ಕಾಗದ ಇವು ಇತರ ಕೈಗಾರಿಕೆಗಳು. ವಡೋದರದಲ್ಲಿ ಪೆಟ್ರೋಲಿಯಂ ಪರಿಷ್ಕರಣ ಕೇಂದ್ರವಿದೆ. ಭಾರತದ ಔದ್ಯೋಗಿಕ ನಕ್ಷೆಯಲ್ಲಿ ಈ ರಾಜ್ಯಕ್ಕೊಂದು ಮಹತ್ತ್ವದ ಸ್ಥಾನ ಪ್ರಾಪ್ತವಾಗಿದೆ. 2002ರ ಅಂತ್ಯದಲ್ಲಿ 19,696 ಕಾರ್ಯನಿರತ ಕೈಗಾರಿಕಾ ಘಟಕಗಳಿದ್ದವು. ಸೆಪ್ಟೆಂಬರ್ 2003ರಲ್ಲಿ 2.83 ಲಕ್ಷ ಸಣ್ಣ ಕೈಗಾರಿಕೆಗಳಿದ್ದವು. ಸರಾಸರಿ 8.40 ಲಕ್ಷ ಮಂದಿಗೆ ಉದ್ಯೋಗಾವಕಾಶವಿತ್ತು.

**ಪಂಚಾಯತಿ ರಾಜ್ಯ :** ಈ ರಾಜ್ಯದಲ್ಲಿ 11.928 ಗ್ರಾಮ ಪಂಚಾಯತಿಗಳೂ 56 ಪಟ್ಟಣ ಪಂಚಾಯತಿಗಳೂ 182 ತಾಲ್ಲೂಕು ಪಂಚಾಯತಿಗಳೂ 17 ಜಿಲ್ಲಾ ಪಂಚಾಯತಿಗಳೂ (ಗಾಂಧೀನಗರ ಮತ್ತು ಡಾಂಗ್ಸ ಜಿಲ್ಲೆಗಳ ಹೊರತಾಗಿ) ಇವೆ. ಗಿರಿಜನರ ಜೀವನಾಭಿವೃದ್ಧಿಗಾಗಿ 53 ವಿಶೇಷ ಅಭಿವೃದ್ಧಿ ಘಟಕಗಳನ್ನು ರಾಜ್ಯದಲ್ಲಿ ರಚಿಸಲಾಗಿದೆ. ತಮ್ಮ ಸೇವಾ ಸಿಬ್ಬಂದಿಯನ್ನು ತಾವೇ ಆಯ್ದುಕೊಳ್ಳುವ ಅಧಿಕಾರವನ್ನಲ್ಲದೆ ಆಯಾ ಪ್ರದೇಶಗಳ ಅಭಿವೃದ್ಧಿಗಾಗಿ ನೂರಕ್ಕೆ ನೂರರಷ್ಟು ಭೂಕಂದಾಯವನ್ನು ಬಳಸಿಕೊಳ್ಳುವ ಸವಲತ್ತನ್ನೂ ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲಾಗಿದೆ.

ಉಕಾಯಿ ಕಟ್ಟೆ

**ಸಮಾಜ ಕಲ್ಯಾಣ :** ಹಿಂದುಳಿದ ಜನಗಳ ಕಲ್ಯಾಣ ದೃಷ್ಟಿಯಿಂದ ರಾಜ್ಯದಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಸುಮಾರು 120 ಲಕ್ಷ ಜನ ಹಿಂದುಳಿದ ಸಮಾಜಕ್ಕೆ ಸೇರಿದ್ದು ಅವರಲ್ಲಿ ಸುಮಾರು 36 ಲಕ್ಷ ಜನ ಪರಿಶಿಷ್ಟ ಜಾತಿಯವರೂ 75 ಲಕ್ಷ ಜನ ಪರಿಶಿಷ್ಟ ಜನಾಂಗದವರೂ 4 ಲಕ್ಷ ಜನ ಅಲೆಮಾರಿ ಜನಾಂಗಕ್ಕೆ ಸೇರಿದವರೂ, 4 ಲಕ್ಷ ಜನ ಇತರರೂ ಇದ್ದಾರೆ. ಈ ಜನರ ಶಿಕ್ಷಣ ಆರ್ಥಿಕ ಅಭಿವೃದ್ಧಿ, ಆರೋಗ್ಯ ವಸತಿಸೌಕರ್ಯ ಇತ್ಯಾದಿ ಕಾರ್ಯಯೋಜನೆಗಳ ಮೂಲಕ ಸಮಾಜಕಲ್ಯಾಣದ ಪ್ರಯತ್ನಗಳು ನಡೆದಿದೆ. ಹಿಂದುಳಿದ ಜನರ ಮಕ್ಕಳಿಗೆ ಉಚಿತವಾದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ದೊರೆಯುತ್ತದೆ. ಬಾಲಕಿಯರ ಹೆಚ್ಚಿನ ಶಿಕ್ಷಣಕ್ಕಾಗಿ 117 ಆಶ್ರಮ ಶಾಲೆಗಳನ್ನು ತೆರೆಯಲಾಗಿದೆ. ಸರ್ಕಾರಿ ಭೂಮಿಯ ವಿತರಣೆ, ಭೂಸುಧಾರಣೆ ಬೇಸಾಯದ ಸಲಕರಣೆಗಳ ಪೂರೈಕೆ ಕೈಗಾರಿಕೆಗಳಲ್ಲಿ ತರಬೇತು ಮತ್ತು ಆರ್ಥಿಕ ನೆರವುಗಳ

ಕೋಯಲಿ ತೈಲಶೋಧನ ಕೇಂದ್ರ

ಮೂಲಕ ಹಿಂದುಳಿದ ಜನಾಂಗಗಳ ಜನ ಮುಂದುವರಿಯುವಂತೆ ಯತ್ನಿಸಲಾಗುವುದು. ಅವರ ಶಾರೀರಿಕ ದುಡಿಮೆಗೆ ತಕ್ಕ ಫಲ ಸಿಗಬೇಕೆಂಬ ದೃಷ್ಟಿಯಿಂದ ಈ ಜನಾಂಗಗಳ ಜನರುಳ್ಳ ಸಹಕಾರಿ ಸಂಘಗಳ ರಚನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಅಹಮದಾಬಾದ್ ಸೂರತ್, ರಾಜಕೋಟೆ, ದಾಹೋದ ವಡೋದರ, ಸುರೇಂದ್ರನಗರ, ಜುನಾಗಢ, ಪೋರ್ಬಂದರ್, ಫಾನ್ಸಾ, ಮೆಹಸಾನಾ, ಮಾಂಡವಿ ಮತ್ತು ಭಾವನಗರಗಳಲ್ಲಿರುವ

ಅಂಗವಿಕಲರ ಮತ್ತು ಕುರುಡ ಕಿವುಡ–ಮೂಕರ ಶಿಕ್ಷಣ ಸಂಸ್ಥೆಗಳು ಸಮಾಜಕಲ್ಯಾಣ ಕಾರ್ಯಕ್ರಮದಲ್ಲಿ ಮಹತ್ತ್ವದ ಪಾತ್ರವಹಿಸುತ್ತವೆ.

**ಆರೋಗ್ಯ** : ಈ ರಾಜ್ಯದ ನಗರಗಳಲ್ಲದೆ ಗ್ರಾಮಾಂತರ ಪ್ರದೇಶದ ಜನರ ಆರೋಗ್ಯ ರಕ್ಷಣೆಗಾಗಿ 60–80 ಸಾವಿರ ಜನಕ್ಕೊಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟು 251 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ರಾಜ್ಯದಲ್ಲಿವೆ.

ಅಹಮದಾಬಾದ್, ವಡೋದರ, ಜಾಮ್‌ನಗರ ಮತ್ತು ಸೂರತ್‌ಗಳಲ್ಲಿ ವೈದ್ಯಕೀಯ ಕಾಲೇಜುಗಳೂ ಜಾಮ್‌ನಗರದಲ್ಲಿ ಗುಜರಾತ್ ಆಯುರ್ವೇದ ವಿಶ್ವವಿದ್ಯಾಲಯವೂ ಇವೆ. ಜಾಮ್‌ನಗರದಲ್ಲಿರುವ ಸೂರ್ಯಕಿರಣ ಚಿಕಿತ್ಸಾಕೇಂದ್ರ ರಾಷ್ಟ್ರದಲ್ಲಿಯೇ ಅನನ್ಯಸದೃಶವಾದ್ದು.

ರಾಸಾಯನಿಕ ಗೊಬ್ಬರ ಕಾರ್ಖಾನೆ, ವಡೋದರ

**ಶಿಕ್ಷಣ** : ಈ ರಾಜ್ಯದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ 1961ರಲ್ಲಿ ಸ್ವೀಕೃತವಾಗಿ 1964ರಿಂದ ಜಾರಿಗೆ ಬಂತು. ರಾಜ್ಯದ ಒಟ್ಟು 21,900 ಪ್ರಾಥಮಿಕ ಶಾಲೆಗಳಲ್ಲಿ 86,000 ಶಿಕ್ಷಕರು ದುಡಿಯುತ್ತಿದ್ದಾರೆ. 2,150 ಮಾಧ್ಯಮಿಕ ಶಾಲೆಗಳೂ 134 ವಿವಿಧೋದ್ದೇಶ ಶಾಲೆಗಳೂ 270 ಉಚ್ಚ ಶಿಕ್ಷಣ ಶಾಲೆಗಳೂ ಇವೆ. ಬೆಳಕಿಯರ ಶಿಕ್ಷಣ ಪ್ರಸಾರಕ್ಕಾಗಿ ಮಾಧ್ಯಮಿಕ ಹಂತದಲ್ಲಿ ವಿಶೇಷ ಸವಲತ್ತುಗಳನ್ನು ನೀಡಲಾಗಿದೆ. ರಾಜ್ಯದ ಮಾಧ್ಯಮಿಕ ಶಿಕ್ಷಣ ಮಂಡಲಿ ಮಾಧ್ಯಮಿಕ ಶಿಕ್ಷಣ ರೂಪರೇಷೆಗಳನ್ನು ಹಾಕುವುದಲ್ಲದೆ ವಿದ್ಯಾರ್ಥಿಗಳ ಪರೀಕ್ಷೆಗಳ ಏರ್ಪಾಡು ಮಾಡುತ್ತದೆ.

ಈ ರಾಜ್ಯದಲ್ಲಿ 13 ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ ಅಹಮದಾಬಾದಿನಲ್ಲಿ ಗಾಂಧಿಯವರು ಸ್ಥಾಪಿಸಿದ ಗುಜರಾತ್ ವಿದ್ಯಾಪೀಠವೂ ಒಂದು. ಗುಜರಾತ್‌ನಲ್ಲಿ 4 ಕೃಷಿ ವಿಶ್ವವಿದ್ಯಾಲಯಗಳಿವೆ. ರಾಜ್ಯದಲ್ಲಿರುವ ಕಾಲೇಜುಗಳ ಸಂಖ್ಯೆ 255 ವಡೋದರ

ಗೋಪುರ ಗಡಿಯಾರ, ಗುಜರಾತ್ ವಿಶ್ವವಿದ್ಯಾಲಯ, ಅಹಮದಾಬಾದ್

ನಗರದಲ್ಲಿರುವ ಕೇಂದ್ರ ವಾಚನಾಲಯವಲ್ಲದೆ ರಾಜಕೋಟೆ. ಜಾಮ್‌ನಗರ ಸುರೇಂದ್ರನಗರ. ಜುನಾಗಢ, ಭಾವನಗರ, ಮತ್ತು ಭುಜ್‌ಗಳಲ್ಲಿರುವ ಸರ್ಕಾರಿ ಜಿಲ್ಲಾ ವಾಚನಾಲಯಗಳೂ ಇನ್ನಿತರ ಸಾರ್ವಜನಿಕ ವಾಚನಾಲಯಗಳೂ ಜನರಿಗೆ ವಾಚನ ಸೌಕರ್ಯ ಒದಗಿಸುತ್ತವೆ. ಈ ರಾಜ್ಯದಲ್ಲಿ ಒಟ್ಟು 34 ನಗರ ವಾಚನಾಲಯಗಳೂ 235 ಪಟ್ಟಣ ವಾಚನಾಲಯಗಳೂ, 40 ಮಹಿಳಾ ವಾಚನಾಲಯಗಳೂ 34 ಬಾಲ ವಾಚನಾಲಯಗಳೂ 4,027 ಗ್ರಾಮ ವಾಚನಾಲಯಗಳು ರಾಜಪಿಪ್ಲಾ ಮತ್ತು ತ್ರಾಪಜಗಳಲ್ಲಿ ಎರಡು ಸರ್ಕಾರಿ ಸಂಚಾರಿ ವಾಚನಾಲಯಗಳೂ ಇವೆ. ಗುಜರಾತ್ ವಾಚನಾಲಯ ಸಮಿತಿ ಮತ್ತು ಗುಜರಾತ್ ವಾಚನಾಲಯ ಸಹಕಾರಿ ಸಂಘಗಳು ಸರ್ಕಾರದ ಸಹಾಯದಿಂದ ರಾಜ್ಯದ ವಾಚನಾಲಯುಗಳು ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿವೆ. ರಾಜ್ಯದಲ್ಲಿ ಒಟ್ಟು 46 ದಿನಪತ್ರಿಕೆಗಳೂ 132 ವಾರಪತ್ರಿಕೆಗಳೂ 70 ಪಕ್ಷಪತ್ರಿಕೆಗಳೂ 241 ಮಾಸಪತ್ರಿಕೆಗಳು 22 ತ್ರೈಮಾಸಿಕಗಳೂ ಪ್ರಕಟವಾಗುತ್ತಿದ್ದುವು.

ಅಹಮದಾಬಾದಿನ ಆಧುನಿಕ ಕಟ್ಟಡಗಳಲ್ಲೊಂದು: ಕ್ಷೀರೋತ್ಪಾದಕರ ಸಂಘದ ಕಟ್ಟಡ. ಶಿಲ್ಪಿ: ಲ ಕಾರ್ಬೂಸಿಯೇ

**ಸಾರಿಗೆ ಸಂಪರ್ಕ:** ಈ ರಾಜ್ಯದಲ್ಲಿ ವಿವಿಧ ಮಾರ್ಗಗಳ ಸೌಕರ್ಯ ಸಾಕಷ್ಟಿದೆ. ರಾಷ್ಟ್ರೀಯ ಮತ್ತು ರಾಜ್ಯದ ಹೆದ್ದಾರಿಗಳನ್ನೊಳಗೊಂಡು 2002–03ರ ಅಂತ್ಯದಲ್ಲಿ ನಗರ ಪಾಲಿಕೆ ರಸ್ತೆಗಳನ್ನು ಬಿಟ್ಟು ಒಟ್ಟು 74,075 ಕಿಮೀ ರಸ್ತೆಯಿದ್ದು ಇದರಲ್ಲಿ 70,743 ಕಿಮೀ ಉತ್ತಮ ರಸ್ತೆಯಿತ್ತು. ರಾಜ್ಯದಲ್ಲಿ 1,134 ಕಿಮೀ ಬ್ರಾಡ್ ಗೇಜ್, 3,381 ಕಿಮೀ ಮೀಟರ್ ಗೇಜ್, 1,141 ಕಿಮೀ ನ್ಯಾರೋ ಗೇಜ್ ರೈಲುಮಾರ್ಗಗಳಿವೆ. ಅಹಮದಾಬಾದ್–ಗಾಂಧಿನಗರಗಳಲ್ಲಿ ಮೆಟ್ರೋ ರೈಲಿನ ಯೋಚನೆಗಳು 2011ರಿಂದ ಪ್ರಾರಂಭವಾಗಿದೆ. ಇಡೀ ದೇಶದ 21 ಮಧ್ಯಮ ಮತ್ತು 150 ಸಣ್ಣ ಬಂದರುಗಳು ಇದೊಂದೇ ರಾಜ್ಯದಲ್ಲಿವೆ. ಕಾಂಡ್ಲಾ ದೊಡ್ಡ ಬಂದರು. ಓಖಾ, ಭಾವನಗರ, ಖೇಡಿ ಸಿಕ್ಕ ವಿರಾವಲ್, ನವಲಾಖಿ, ಪೋರ್‌ಬಂದರ್, ಭಡೋಚ್, ಸೂರತ್, ಜಾಖಾನ್, ಮುಂದ್ರ ಪುಂಧರ, ದ್ವಾರಕಾ, ಮುಂಗ್ರೋಳ್, ಮಾಧವಾಡ, ಜವಾಬಂದರ್, ರಾಜ್‌ಪಾರಾ, ಜಾಫರಾಬಾದ್, ರಜುಲಾ, ಮಹುವಾ. ತಲಾಜ, ಘೋಘಾ, ಭಗ್ದವಾ, ವಾನ್ಸಿ, ವೋರ್ಸಿ, ಬಿಲಿವೋರಾ, ಬಲ್ಸಾರ್, ಉಮರ್ಸಾದಿ, ಕೋಲಾಕ್, ಮರೋಳಿ ಉಮರ್‌ಗಾಂವ್–ಇವು ಇತರ ಬಂದರುಗಳು. ಅಹಮದಾಬಾದ್, ಭಾವನಗರ, ರಾಜಕೋಟೆ, ಪೋರ್‌ಬಂದರ್, ಜಾಮ್‌ನಗರ ಕೇಶೋದ್, ಭುಜ್, ಸೂರತ್, ವಡೋದರ, ಮತ್ತು ಕಾಂಡ್ಲಾಗಳಲ್ಲಿ ವಿಮಾನ ನಿಲ್ದಾಣಗಳಿವೆ. ದೆಹಲಿ ಮುಂಬಯಿ ಗಳೊಂದಿಗೆ ನೇರ ವಾಯುಸಂಪರ್ಕವೇರ್ಪಟ್ಟಿದೆ.

**ಮುಖ್ಯ ಸ್ಥಳಗಳು** : 1411ರಲ್ಲಿ ಸುಲ್ತಾನ್ ಅಹಮ್ಮದ್ ಷಹ ಕಟ್ಟಿಸಿದ ಅಹಮದಾಬಾದ್ ಪಶ್ಚಿಮ ಭಾರತದ ಎರಡನೆಯ ಅತಿ ದೊಡ್ಡ ನಗರ. ಇದು ಬಟ್ಟೆಯ ಉತ್ಪಾದನೆಯ ದೃಷ್ಟಿಯಿಂದ ಭಾರತದ ಮ್ಯಾಂಚೆಸ್ಟರ್ ಎನಿಸಿಕೊಂಡಿದೆ. 1615ರಲ್ಲಿ ಈ ನಗರವನ್ನು ಕಣ್ಣಾರೆ ಕಂಡ ಥಾಮಸ್ ರೋ ಈ ನಗರ ಲಂಡನ್ನಿನಷ್ಟು ದೊಡ್ಡದೆಂದೂ ಹಿಂದೂಸ್ತಾನದಲ್ಲೇ ಅಲ್ಲದೆ ಜಗತ್ತಿನಲ್ಲೆ ಸುಂದರ ನಗರಗಳಲ್ಲೊಂದೆನಿಸಿದೆ ಯೆಂದೂ ಅಭಿಪ್ರಾಯ ಪಟ್ಟಿದ್ದ. ಇಲ್ಲಿರುವ ಹಿಂದು ಮತ್ತು ಜೈನಮಂದಿರಗಳ ಶಿಲ್ಪಕಲಾ ವೈಭವವನ್ನು ಮೆರೆಸುವ ಮಸೀದಿ ಮತ್ತು ಸ್ಮಾರಕಗಳೂ ನೋಡುವಂತಿವೆ. ಗಾಂಧಿಯವರು ಸ್ಥಾಪಿಸಿದ ಸಾಬರಮತಿ ಆಶ್ರಮ ಬಳಿಯಲ್ಲೇ ಇದೆ. ಬಾಲವನ, ಪ್ರಾಣಿಸಂಗ್ರಹಾಲಯ, ಮತ್ಸ್ಯಾಲಯಗಳಿಂದ ಕೂಡಿದ ಕಂಕರಿಯಾ ಸರೋವರ ಸುಂದರವಾಗಿದೆ. ಇಲ್ಲಿಯ ಜುಮ್ಮಾ ಮಸೀದಿ ಶಹಾ ಅಲಮ್ ಸ್ಮಾರಕ, ಮೊಹಮ್ಮದ್ ಬೇಗ್ಡಾ ಮತ್ತು ಗಾಂಜ ಬಕ್ಸರ ಸ್ಮಾರಕಗಳು ಪ್ರೇಕ್ಷಣೀಯ, ಅಹಮದಾಬಾದಿನಿಂದ 80 ಕಿಮೀ ಅಂತರದಲ್ಲಿ ಇರುವ ಲೋಥಾಲ್‌ನಲ್ಲಿ ದೊರೆತ ಅವಶೇಷಗಳು ಗುಜರಾತಿನ ನಾಗರಿಕತೆ ಹರಪ್ಪ

ನಾಗರಿಕತೆಯಷ್ಟು ಹಿಂದಿನದಿರಬಹುದೆಂದು ಸೂಚಿಸುತ್ತವೆ. ಈ ಬೆಟ್ಟವನ್ನು ಅಗೆದು ತೆಗೆದ ಸುಯೋಜಿತ ನಗರರಚನೆ ಮತ್ತು ಬಂದರಿನ ವ್ಯವಸ್ಥೆ ಅಖಿಲಭಾರತ ಮಹತ್ತ್ವ ಪಡೆದಿವೆ. ಅಹಮದಾಬಾದಿನಿಂದ 106 ಕಿಮೀ ದೂರದಲ್ಲಿರುವ ಮೊಧೇರದ ಸೂರ್ಯಮಂದಿರ ಸೋಳಂಕಿ ದೊರೆ 1026–27 ರಲ್ಲಿ ಕಟ್ಟಿಸಿದ್ದು. ಇದರ ಶಿಲ್ಪ ಒರಿಸ್ಸದ ಕೊನಾರ್ಕದ ಪ್ರಖ್ಯಾತ ಸೂರ್ಯಮಂದಿರವನ್ನು ಹೋಲುತ್ತದೆ. ಜುನಾಗಢದ ಬಳಿಯ ಗಿರ್ನಾರದಲ್ಲಿ ಜೈನಮಂದಿರಗಳಿವೆ. ಸಿಂಹಗಳಿಂದಾಗಿ ಗಿರ್ ಅರಣ್ಯ ಪ್ರಸಿದ್ಧವಾದ್ದು. ಸೌರಾಷ್ಟ್ರದಲ್ಲಿ ಕೃಷ್ಣಲೀಲೆಯ ಕೇಂದ್ರಗಳಾಗಿದ್ದ ದ್ವಾರಕಾ ಮತ್ತು ವೀರಾವಲಗಳಲ್ಲಿ ಸುಂದರವಾದ ಮಂದಿರಗಳಿವೆ. ಸೋಮನಾಥ ದೇವಾಲಯವು



ಕೃಷ್ಣದೇವಾಲಯ, ದ್ವಾರಕಾ

ಸೌರಾಷ್ಟ್ರದ ಆಕರ್ಷಣೆಗಳಲ್ಲೊಂದು. ಗಾಂಧಿಯವರ ಜನ್ಮ ಸ್ಥಳವಾದ ಪೋರ್‌ಬಂದರ್ ತನ್ನ ಹಳೆಯ ಮತ್ತು ಹೊಸ ನಾಗರಿಕತೆಗಳ ಕುರುಹುಗಳಿಗಾಗಿ ಹೆಸರಾಗಿದೆ. ಪಾಲಿಟಾಣಾ ಜೈನಮಂದಿರಗಳ ನಗರ. ಉತ್ತರ ಗುಜರಾತಿನಲ್ಲಿ ಪಾಟಣ ಮತ್ತು ಸಿದ್ಧಪುರಗಳು ಸಹಸ್ರಲಿಂಗ ದೇವಾಲಯ ಮತ್ತು ರುದ್ರ ಮಹಲುಗಳಿಗಾಗಿ ಪ್ರಸಿದ್ಧವಾದಂಥವು. ವಡೋದರ, ಸೂರತ್, ಜಾಮ್‌ನಗರ, ಭಾವನಗರ, ಖಂಬಾತ್, ರಾಜಕೋಟೆ, ಜುನಾಗಢ ಮುಂತಾದ ನಗರಗಳು ತಮ್ಮ ಐತಿಹಾಸಿಕ ಪರಂಪರೆಯಿಂದಲೂ ಆಧುನಿಕ ಸಾಧನೆಗಳಿಂದಲೂ ಮಹತ್ತ್ವದ ನಗರಗಳೆನಿಸಿವೆ. ಗಾಂಧೀನಗರ (**ನೋಡಿ**) ಆಧುನಿಕ ರೀತಿಯಲ್ಲಿ ನಿರ್ಮಿತವಾದ ರಾಜಧಾನಿ, ನಲ್ ಸರೋವರ ಪಕ್ಷಿಧಾಮ. (ಬಿ.ಎ.ಎಸ್.)

**ಗುಜರಾತ್ ಕದನ :** 1848–49ರಲ್ಲಿ ನಡೆದ ಎರಡನೆಯ ಸಿಖ್–ಇಂಗ್ಲಿಷ್ ಯುದ್ಧದ ಪ್ರಮುಖ ಮತ್ತು ಕೊನೆಯ ಕದನ. ಸಿಕ್ಖರು ಸಂಘಟಿತರಾಗಿ ಇಂಗ್ಲಿಷರನ್ನು ಪಂಜಾಬಿನಿಂದ ಹೊಡೆದೋಡಿಸುವ ಪಣತೊಟ್ಟಿದ್ದರು. ಹ್ಯೂಗಾಫನ ನೇತೃತ್ವದಲ್ಲಿ ಬ್ರಿಟಿಷರ ಸೈನ್ಯ ಚೀನಾಬ್ ನದಿಯನ್ನು ದಾಟಿ ಸಿಕ್ಖರ ಮೇಲೆ ಧಾಳಿ ಮಾಡಿತು. ಸಿಕ್ಖರು ಚಿಲಿಯನ್‌ವಾಲ ಬಳಿ ಸಂಘಟಿತರಾಗಿ ಭೀಕರವಾಗಿ ಹೋರಾಡಿದರು. ಬ್ರಿಟಿಷರು ಅಂತಿಮವಾಗಿ ಜಯ ಗಳಿಸಿದರೂ ಅಪಾರ ಸಾವು ನೋವು ನಷ್ಟ ಅನುಭವಿಸಿದರು.

ಈ ನಷ್ಟದ ಸುದ್ದಿ ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕರಿಗೆ ಮುಟ್ಟಿದಾಗ ಅವರು ಇದಕ್ಕೆಲ್ಲ ಹ್ಯೂ ಗಾಫನೇ ಜವಾಬ್ದಾರನೆಂದು ನಿರ್ಧರಿಸಿ, ಅವನ ಬದಲು ಚಾರ್ಲ್ಸ್ ನೇಪಿಯರನನ್ನು ಸೇನಾಪತಿಯಾಗಿ ನೇಮಿಸಿದರು. ಆದರೆ ಆತ ಭಾರತಕ್ಕೆ ಬರುವ ಮೊದಲೇ ಗಾಫ್ ಸಿಕ್ಖರನ್ನೂ ಅವರ ಮಿತ್ರರಾಗಿದ್ದ ಆಫ್ಘನರನ್ನೂ ಚೀನಾಬ್ ನದಿಯ ಬಳಿಯ ಗುಜರಾತ್ ಎಂಬ ಸ್ಥಳದಲ್ಲಿ ಸಂಪೂರ್ಣವಾಗಿ ಸೋಲಿಸಿದ. ಚಿಲಿಯನ್‌ವಾಲ ಕದನದ ಅನಂತರ ಸಿಕ್ಖರು ಆಫ್ಘನ್ ಸೇನೆಯೊಡನೆ ಗುಜರಾತಿನ ಬಳಿ ತಂಗಿದ್ದರು.

1849ರ ಫೆಬ್ರವರಿ 21 ರಂದು ನಡೆದ ಗುಜರಾತ್ ಕದನದಲ್ಲಿ ಬ್ರಿಟಿಷರು ಅತ್ಯಲ್ಪಕಾಲದಲ್ಲಿ ಸಿಕ್ಖರನ್ನೂ ಆಫ್ಘನರನ್ನೂ ಸೋಲಿಸಿದರು. ಈ ಕದನದಲ್ಲಿ ಫಿರಂಗಿಗಳ ಪಾತ್ರವೇ ಮುಖ್ಯವಾಗಿದ್ದುದರಿಂದ ಇದನ್ನು ಫಿರಂಗಿ ಕದನವೆಂದು ಇತಿಹಾಸಕಾರರು ಕರೆದಿದ್ದಾರೆ.

ಗುಜರಾತ್ ಯುದ್ಧದಲ್ಲಿ ಸುಮಾರು 50,000 ಸಿಕ್ಖರು ಭಾಗವಹಿಸಿದ್ದರು. ಆದರೆ ಬ್ರಿಟಿಷ್ ಸೇನಾಪತಿ ಗಾಫ್ ಮೊದಲು ಗುಜರಾತಿನ ಪೂರ್ಣ ಪರಿಚಯ ಮಾಡಿಕೊಂಡು ಸಿಕ್ಖರ ಸೇನಾ ಶಿಬಿರಗಳನ್ನು ಗುರ್ತಿಸಿಕೊಂಡು, ತನ್ನ ಕಡೆಯ ಫಿರಂಗಿ ಪಡೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ, ಸಿಕ್ಖರ ಬತೇರಿಗಳನ್ನು ಸ್ತಬ್ಧಗೊಳಿಸಿ ಅನಂತರ ಸಿಕ್ಖರನ್ನು ಸದೆಬಡಿಯಲು ಕಾಲಾಳು ಪಡೆಯನ್ನು ಉಪಯೋಗಿಸಿದ. ಗಾಫನ ಚಾಕಚಕ್ಯವನ್ನು ನೋಡಿ ಧೃತಿಗೆಟ್ಟ ಸಿಕ್ಖರನ್ನು ಜೀಲಂ ನದಿಯವರೆಗೂ ಅಟ್ಟಿಸಿಕೊಂಡು ಹೋಗಿ ಅವರನ್ನು ಸದೆಬಡಿದ. ಸಿಕ್ಖರು ಅತ್ಯುತ್ತಮ ಧೈರ್ಯಸಾಹಸಗಳಿಂದ ಹೋರಾಡಿದರು. ಅವರ ಕಡೆ ದಕ್ಷ ನಾಯಕತ್ವ ಇಲ್ಲದಿದ್ದುದು ಸೋಲಿಗೆ ಕಾರಣವಾಯಿತು. ಯಾವ ಸೇನೆಯೂ ಅಷ್ಟರಮಟ್ಟಿಗೆ ಹೋರಾಡಲಾರದು. ನಾಯಕತ್ವದ ಅಷ್ಟೊಂದು ಕೊರತೆಯನ್ನೂ ಹೊಂದಿರಲಾರದು ಎಂದು ಮಾಲಿಸನ್ ಅಭಿಪ್ರಾಯಪಟ್ಟಿದ್ದಾನೆ. ಅವರು ಮತ್ತೆ ಬ್ರಿಟಿಷರನ್ನು ಎದುರಿಸುವ ಚೈತನ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡರು. ಬ್ರಿಟಿಷರ ಕಡೆ ಕೇವಲ 69 ಸೈನಿಕರು ಸತ್ತು, 670 ಸೈನಿಕರು ಗಾಯಗೊಂಡರು. ಬ್ರಿಟಿಷರು ಭಾರತದಲ್ಲಿ ನಡೆಸಿದ ಯುದ್ಧಕಾರ್ಯಾಚರಣೆಗಳ ಚರಿತ್ರೆಯಲ್ಲಿ ಗುಜರಾತ್ ಕದನ ಸ್ಮರಣೀಯವೆಂದೂ ಆ ಸಂದರ್ಭದ ಮಹತ್ತ್ವ ಮತ್ತು ಆ ಸಮರದ ಅಂತ್ಯ ಈ ಎರಡು ದೃಷ್ಟಿಗಳಿಂದಲೂ ಇದನ್ನು ನೆನಪಿನಲ್ಲಿಡಬೇಕೆಂದು ಗವರ್ನರ್–ಜನರಲ್ ಡಾಲ್ ಹೌಸಿ ಹೇಳಿದ.

ಗುಜರಾತ್ ಕದನದ ಅನಂತರ, 1849ರ ಮಾರ್ಚ್ 12ರಂದು, ಷೇರ್‌ಸಿಂಗ್, ಛತ್ತರ್‌ಸಿಂಗ್ ಮೊದಲಾದ ಸಿಖ್ ನಾಯಕರು ಮತ್ತು ಯೋಧರು ಬ್ರಿಟಿಷರಿಗೆ ಶರಣಾಗತರಾದರು. ದೋಸ್ತ್ ಮಹಮ್ಮದನ ನಾಯಕತ್ವದಲ್ಲಿದ್ದ ಆಫ್ಘನರನ್ನು ಬ್ರಿಟಿಷರು ಖೈಬರ್ ಕಣಿವೆಯ ಕಡೆಗೆ ಓಡಿಸಿದರು. ಪಂಜಾಬು ಬ್ರಿಟಿಷರ ಆಡಳಿತಕ್ಕೊಳ ಪಟ್ಟಿದೆಯೆಂದು 1849ರ ಮಾರ್ಚ್ 30ರಂದು ಘೋಷಿಸಲಾಯಿತು. (ಕೆ.ಟಿ.ಆರ್.)

**ಗುಜರಾತ್ ಸಮಾಚಾರ್ :** ಗುಜರಾತ್ ರಾಜ್ಯದ ಅಹಮದಾಬಾದಿನಿಂದ ಪ್ರಕಟವಾಗುತ್ತಿರುವ ಗುಜರಾತಿ ಭಾಷಾಪತ್ರಿಕೆ. ಪ್ರತಿದಿನ ಬೆಳಗ್ಗೆ ಹೊರಡುತ್ತದೆ. ಪ್ರಸಾರದ ದೃಷ್ಟಿಯಿಂದ ಇದು ಗುಜರಾತಿ ಪತ್ರಿಕೆಗಳಲ್ಲಿ ಎರಡನೆಯದು. ಲೋಕ ಪ್ರಕಾಶನ ಲಿಮಿಟೆಡ್ ಸಂಸ್ಥೆ 1932ರಲ್ಲಿ ಈ ಪತ್ರಿಕೆಯ ಪ್ರಕಾಶನವನ್ನು ಪ್ರಾರಂಭಿಸಿತು. ರಾಷ್ಟ್ರೀಯ ಧೋರಣೆಯುಳ್ಳ ಈ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ಶಾಂತಿಲಾಲ ಎ.ಶಹಾ. ಶ್ರೇಯಾಂಸ ಎಸ್. ಶಹಾ ಸಂಪಾದಕರು. ಅಗ್ರಲೇಖನ, ರಾಜಕೀಯ, ಆರ್ಥಿಕ, ಸಾಮಾಜಿಕ ಲೇಖನಗಳು ಇವು ನಿತ್ಯದ ವೈಶಿಷ್ಟ್ಯಗಳು. ಭಾನುವಾರದ ಸಂಚಿಕೆಯಲ್ಲಿ ಸಾಹಿತ್ಯಕ ಲೇಖನಗಳಿರುತ್ತವೆ. ಅಹಮದಾಬಾದ್ ಅಲ್ಲದೆ ವಡೋದರ, ಸೂರತ್, ರಾಜ್‌ಕೋಟ್, ಭಾವನಗರ ಮತ್ತು ಮುಂಬೈನಿಂದಲೂ ಪ್ರಕಟವಾಗುತ್ತಿದೆ. (ಪಿ.ಆರ್.ಪಿ.)

**ಗುಜರಾತಿನ ಇತಿಹಾಸ :** 1. ಪ್ರಾಗಿತಿಹಾಸ : ಶಿಲಾಯುಗದಿಂದಲೂ ಗುಜರಾತು ಮಾನವನ ನೆಲೆಯಾಗಿತ್ತೆಂಬುದು 1890ರ ದಶಕದಲ್ಲಿ ಬ್ರೂಸ್‌ಫುಟ್‌ನಿಂದ ಮತ್ತು ಇತ್ತೀಚೆಗೆ ಶೋಧವಾದ ಆದಿಶಿಲಾಯುಗದ ನೆಲೆಗಳಿಂದ ತಿಳಿದುಬಂದಿದೆ. ಕಚ್ಛ್ ಪ್ರದೇಶದ ವಿರಾಣಿ ನದಿಯ ಬಯಲಿನಲ್ಲಿ ಬಲ್‌ಸಾರ್ ಜಿಲ್ಲೆಯಲ್ಲಿಯ ಮಾನ್, ತಾನ್ ನದಿಗಳ ಪ್ರದೇಶದಲ್ಲಿ ಆದಿಶಿಲಾಯುಗದ ಕೈಗೊಡಲಿ, ಮಚ್ಚು, ಸೀಳುಗತ್ತಿ, ಹೆರೆಯುವ ಚಕ್ಕೆಗಳು ಮುಂತಾದ ಶಿಲಾ ಉಪಕರಣಗಳು ದೊರೆತಿವೆ. ರಾಜಕೋಟೆ ಜಿಲ್ಲೆಯಲ್ಲಿರುವ ಭದರ್ ಹತ್ತಿರ ನದಿದಂಡೆಯ ಕೆಳಭಾಗದ ಮರಳಿನ ಪದರದಲ್ಲಿ ಆದಿಶಿಲಾಯುಗದ ಕಲ್ಲಿನ ಉಪಕರಣಗಳೂ ಮೇಲಿನ ಮರಳಿನ ಪದರದಲ್ಲಿ ಮಧ್ಯ ಶಿಲಾಯುಗದ ಕಲ್ಲಿನ ಉಪಕರಣಗಳೂ ದೊರೆತಿವೆ. ಇವುಗಳಿಂದ ಗುಜರಾತಿನ ಶಿಲಾಯುಗ ಸಂಸ್ಕೃತಿಗಳ ಅನುಕ್ರಮ ತಿಳಿದಿದೆ.

ಕಚ್ಛ್‌ನಲ್ಲಿರುವ ರೋಜ್‌ಡಿಯದ ಹತ್ತಿರದ ನದಿಯ ದಡದಲ್ಲಿಯ ಮೇಲಿನ ಪದರಗಳಲ್ಲಿ ಮಧ್ಯಶಿಲಾಯುಗದ ನೀಳ ಚಕ್ಕೆಗಳು, ಮೊನೆಗಳು, ತಿರುಳುಗಲ್ಲು ಮುಂತಾದ ಟರ್ಪ್ ಮತ್ತು ಕ್ವಾರ್ಟ್‌ಜೈಟ್ ಕಲ್ಲಿನಲ್ಲಿ ಮಾಡಿದ ಉಪಕರಣಗಳು ದೊರೆತಿರುವುದು ಗಮನಾರ್ಹ. ಆದಿ ಹಾಗೂ ಮಧ್ಯಶಿಲಾಯುಗದ ಇನ್ನೂ ಕೆಲವು ನೆಲೆಗಳ ಶೋಧವಾಗಿದೆ.

ನರ್ಮದಾ ಮತ್ತು ಅದರ ಉಪನದಿಗಳ ಪ್ರದೇಶದಲ್ಲಿ ತೋರಿಬಂದ ಶಿಲಾಯುಗ ಸಂಸ್ಕೃತಿಗಳು ಮತ್ತು ಅವುಗಳ ಕಾಲದ ಬಗ್ಗೆ ಗಮನಾರ್ಹವಾದ ವೈಜ್ಞಾನಿಕ ಅಧ್ಯಯನ ನಡೆದಿದೆ.

ಈ ಸಂಶೋಧನೆಯ ಕಾರ್ಯ ಸಂಕಾಳಿಯಾ ಅವರಿಂದ 1946ರ ಪೂರ್ವದಲ್ಲಿ ಪ್ರಾರಂಭವಾಗಿ, ಅನಂತರ ಎಫ್.ಇ. ಝಾಯ್‌ನರರ ನೇತೃತ್ವದಲ್ಲಿ ಭಾರತ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಶಾಖೆ ಮತ್ತು ಪುಣೆಯ ಡೆಕ್ಕನ್ ಕಾಲೇಜ್ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ಪುರಾತತ್ತ್ವ ಶಾಖೆಯಿಂದ ಮುಂದುವರಿಯಿತು. ಪುನಃ ಡಾ. ಝಾಯ್‌ನರ್ 1960ರಲ್ಲಿ ಮಾಹೀ ನದಿಯ ಪ್ರದೇಶದಲ್ಲಿ ಸಂಶೋಧನೆ ನಡೆಸಿ, ಪ್ಲೀಸ್ಟೊಸೀನ್ ಯುಗದಲ್ಲಿ ಉಂಟಾದ ಸಮುದ್ರದ ಏರಿಳಿತಗಳ ಕುರುಹುಗಳಿಂದ ಗುಜರಾತಿನ ಶಿಲಾಯುಗ ಸಂಸ್ಕೃತಿಗಳ ಕಾಲವನ್ನು ಗೊತ್ತು ಮಾಡುವ

ಸಾಧ್ಯತೆಯನ್ನು ತೋರಿಸಿಕೊಟ್ಟರು. ಮುಂದೆ ಜಿ. ಜೆ.ವೈನ್‌ರೈಟ್ ನರ್ಮದಾ ನದಿತೀರದ ಚಂದೋಡ್‌ನಿಂದ ಅರಬ್ಬೀ ಸಮುದ್ರದವರೆಗೆ, ಅಂದರೆ ಸುಮಾರು 110 ಕಿಮೀ ದೂರದ ನದಿ ಪ್ರದೇಶವನ್ನು ಕೂಲಂಕುಷವಾಗಿ ಪರೀಕ್ಷಿಸಿದರು. ಯುರೋಪಿನ ಅಶೂಲಿಯನ್ ಪದ್ಧತಿಯ ಶಿಲಾ ಉಪಕರಣಗಳಂತಿರುವ ಆದಿಶಿಲಾಯುಗದ ಕೈಗೊಡಲಿ ಮತ್ತು ಮಚ್ಚುಗತ್ತಿಯಂಥವು ಮತ್ತು ಲೆವಾಲ್ವ ಪದ್ಧತಿಯ ಗಟ್ಟಿಗಳು ದೊರೆತುವು. ಇವು ಯುರೋಪಿನ ಕೊನೆಯ ಮಧ್ಯಂತರ ಹಿಮ ಪ್ರವಾಹ ಕಾಲದ ಒಂದು ಭಾಗಕ್ಕೆ ಸೇರಿದವೆಂದು ಕಾಣುತ್ತದೆ.



ರಂಗಪುರ ಉತ್ಖನನ

ಸಾಬರಮತಿ, ಮಾಹಿ ಮತ್ತು ನರ್ಮದಾ ನದಿಗಳ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದ ಅನೇಕ ನೆಲೆಗಳು 1941ರಿಂದ ಈಚೆಗೆ ಬೆಳಕಿಗೆ ಬಂದಿವೆ. ಇವುಗಳಲ್ಲಿ ಲಾಂಘನಾಜ್ ಎಂಬ ಒಂದು ನೆಲೆಯನ್ನು ವಿಶೇಷವಾಗಿ ಸಂಕಾಳಿಯಾ ಮತ್ತು ಅವರ ಸಹೋದ್ಯೋಗಿಗಳು ಪರೀಕ್ಷಿಸಿ 1944–63ರ ನಡುವೆ ಇಲ್ಲಿ ಉತ್ಖನನ ನಡೆಸಿ, ಅಲ್ಲಿಯ ಸೂಕ್ಷ್ಮ ಶಿಲಾಯುಗದ ಜನಜೀವನದ ಕೆಲವೊಂದು ವಿಷಯಗಳನ್ನು ಬೆಳಕಿಗೆ ತಂದಿದ್ದಾರೆ. ಈ ಜನ ಅಲ್ಲಲ್ಲಿ ಮರುಳುದಿಣ್ಣೆಗಳ ಮೇಲೆ ಹಾಗೂ ನದಿಗಳ ದಂಡೆಗಳ ಮೇಲೆ ವಾಸಿಸುತ್ತಿದ್ದರು. ಆದರೆ ಇವರ ವಸತಿಗೃಹಗಳ ಅವಶೇಷಗಳೇನೂ ದೊರೆತಿಲ್ಲ. ಪ್ರಾಯಶಃ ಮಣ್ಣು ಬಳಿಯದ, ಗಿಡ ಸೊಪ್ಪುಗಳ ತಡಿಕೆಯುಳ್ಳ ಗುಡಿಸಿಲುಗಳನ್ನು ಕಟ್ಟಿಕೊಂಡಿದ್ದರೆಂದು ತೋರುತ್ತದೆ. ಇವರು ಮೊದಲು ಅಗೇಟ್, ಜಾಸ್ಪರ್, ಬೆಣಚುಕಲ್ಲು ಮುಂತಾದವುಗಳಿಂದ ಅತಿ ಸಣ್ಣ, ತ್ರಿಕೋಣಾಕೃತಿಯ, ನೀಳವಾದ ಚಕ್ಕೆಗಳ ವಿವಿಧ ಉಪಕರಣಗಳನ್ನೂ ಕ್ರಮೇಣ, ಅಪರೂಪವಾಗಿ ಮಧ್ಯೆ ತೂತುಳ್ಳ ಕವಣೆಗಲ್ಲುಗಳನ್ನೂ ನಯಮಾಡಿದ ಮೇಲ್ಮೈಯುಳ್ಳ ಕೊಡಲಿಗಳನ್ನೂ ಮಾಡಿಕೊಳ್ಳುತ್ತಿದ್ದರು. ಈ ಕಲ್ಲುಗಳನ್ನು 50 ರಿಂದ 150 ಕಿಮೀ ದೂರದ ಪ್ರದೇಶಗಳಿಂದ ತರಿಸಿಕೊಳ್ಳುತ್ತಿದ್ದಾರೆಂದು ಕಾಣುತ್ತದೆ. ಇವರು ಆಹಾರಕ್ಕಾಗಿ ಖಡ್ಗಮೃಗ, ಕಾಡುಹಂದಿ, ನೀಲ್ಗಾಯ್, ಚಿಗರಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಮಜ್ಜೆಗಾಗಿ ಎಲುಬುಗಳನ್ನು ಸೀಳಿದ, ಮಿದುಳಿಗಾಗಿ ತಲೆಬರುಡೆಗಳನ್ನು ಒಡೆದ ಗುರುತುಗಳು ಇಲ್ಲಿ ದೊರೆತ ಪ್ರಾಣಿಗಳ ಎಲುಬುಗಳಲ್ಲಿ ತೋರಿಬಂದಿವೆ. ಮೀನು ಆಮೆಗಳೂ ಇವರ ಆಹಾರವಾಗಿದ್ದುವು. ಇವರು ಅರ್ಧಗೋಲಾಕೃತಿಯ ಗುಡಾಣದಂಥ ಮತ್ತು ಇತರ ಅರೆಸುಟ್ಟ ಮಣ್ಣಿನ ಪಾತ್ರೆಗಳನ್ನು ಮಾಡುತ್ತಿದ್ದರು. ಇವುಗಳಲ್ಲಿ ಕೆಲವು ಪಾತ್ರೆಗಳ ಮೇಲೆ, ಅವು ಅರೆಹಸಿಯಾಗಿದ್ದಾಗ, ಮೊನೆಚಾದ ಕಡ್ಡಿಯಿಂದ ರೇಖಾಚಿತ್ರಗಳನ್ನು ಕೊರೆಯುತ್ತಿದ್ದರು. ಕೆಮ್ಮಣ್ಣನ್ನು ನೀರಿನಲ್ಲಿ ಕದಡಿಕೆಲವು ಪಾತ್ರೆಗಳ ಮೇಲೆ ಬಳಿಯುತ್ತಿದ್ದರು. ಶವಗಳ ಕಾಲುಗಳನ್ನು ಹಿಂದಕ್ಕೆ ಮಡಿಚಿ, ತಲೆ ಬಲಮಗ್ಗುಲಿಗೆ ಬರುವಂತೆ ಮಾಡಿ ಪೂರ್ವ ಪಶ್ಚಿಮವಾಗಿ ಅವನ್ನು ಕುಣಿಗಳಲ್ಲಿ ಮಲಗಿಸಿ ಮುಚ್ಚುತ್ತಿದ್ದರು. ಈ ಜನ ಮಿಶ್ರಜನಾಂಗದವರಾಗಿದ್ದು ಇವರಲ್ಲಿ ಮೆಡಿಟರೆನಿಡ್ ಮತ್ತು ವೆಡಿಡ್ ಜನಾಂಗಗಳ ಲಕ್ಷಣಗಳಿದ್ದುವೆಂಬುದು ಉತ್ಖನನದಲ್ಲಿ ದೊರೆತ ಅಸ್ಥಿಪಂಜರಗಳ ಅವಶೇಷಗಳಿಂದ ತಿಳಿದುಬರುತ್ತದೆ. ಈ ಸಂಸ್ಕೃತಿ ಪ್ರ.ಶ.ಪೂ. ಸುಮಾರು 2000ಕ್ಕೆ ಇತ್ತೆಂದು ಹೇಳಬಹುದು. ರಂಗಪುರದಲ್ಲೂ, ಹರಪ್ಪ ಸಂಸ್ಕೃತಿಯ ಅವಶೇಷಗಳ ಕೆಳಭಾಗದಲ್ಲಿ, ಈ ಶಿಲಾಯುಗದ ಅವಶೇಷಗಳು ತೋರಿಬಂದಿವೆ.

ಸಿಂಧೂ ಬಯಲಿನ (ಹರಪ್ಪ) ನಾಗರಿಕತೆಯ ಅನೇಕ ನೆಲೆಗಳು 1934ರಿಂದ ಈಚೆಗೆ ಬೆಳಕಿಗೆ ಬಂದಿವೆ. ಮುಖ್ಯವಾಗಿ ರಂಗಪುರ, ರೋಜ್‌ಡಿ, ದೇಸಲ್‌ಪುರ, ಸೋಮನಾಥ, ಲೋಥಾಲ್ ಮತ್ತು ಸುರಕೋಟಡ ನೆಲೆಗಳಲ್ಲಿ ಉತ್ಖನನಗಳನ್ನು ನಡೆಸಿ, ಈ ನಾಗರಿಕತೆಯ ಬಗ್ಗೆ ಕೆಲವು ಹೊಸ ವಿಷಯಗಳನ್ನು ತಿಳಿದುಕೊಳ್ಳಲಾಗಿದೆ. ಲೋಥಾಲ್‌ನಲ್ಲಿ ದೊರೆತ ಈ ನಾಗರಿಕತೆಯ ಅವಶೇಷಗಳಲ್ಲಿ ಹಡಗು ಕಟ್ಟೆ ಬಹು ಮುಖ್ಯವಾದ್ದು. ಇದು ಆ ಜನರ ಸಮುದ್ರ ವ್ಯಾಪಾರದ ಸಾಮರ್ಥ್ಯವನ್ನು ತೋರಿಸುತ್ತದೆ. ಪ್ರಪಂಚದಲ್ಲಿಯೇ ಇದು ಅತ್ಯಂತ ಪ್ರಾಚೀನವಾದ್ದು. ಹರಪ್ಪ, ಮೊಹೆಂಜೋದಾರೋಗಳ ಅನಂತರ, ಭಾರತದಲ್ಲಿ ದೊರೆತ ಈ ನಾಗರಿಕತೆಯ ದೊಡ್ಡ ನಗರಗಳಲ್ಲಿ ಲೋಥಾಲ್ ಒಂದು. ಇದು ಅಹಮದಾಬಾದ್ ಜಿಲ್ಲೆಯಲ್ಲಿದೆ; ಆ ನಗರದ ದಕ್ಷಿಣಕ್ಕೆ, ಸು. 100 ಕಿಮೀ ದೂರದಲ್ಲಿ ಇದೆ. ಈ ಪ್ರಾಚೀನ ನಗರ ಉನ್ನತಿಯಲ್ಲಿದ್ದಾಗ ಅರಬ್ಬಿ ಸಮುದ್ರ ಇದರ ಸಮೀಪದವರೆಗೂ ವಿಸ್ತರಿಸಿತ್ತು. ಕ್ರಮೇಣ ಸಮುದ್ರದ ಮಟ್ಟದ ಇಳಿತದಿಂದ ಈ ಪ್ರದೇಶ ಸಮುದ್ರದಿಂದ ದೂರವಾಯಿತು. ಇಲ್ಲಿಯ ನಗರ ಸಂಸ್ಕೃತಿಯ ಬೆಳವಣಿಗೆಯಲ್ಲಿ ಎರಡು ಹಂತಗಳು ತೋರುತ್ತವೆ. ಪೂರ್ವದ ಹಂತದಲ್ಲಿ ಇದು ಹರಪ್ಪ ನಗರದ ಹಾಗೆ, ಆದರೆ ಸಣ್ಣ ಗಾತ್ರದಲ್ಲಿ, ಕ್ರಮಬದ್ಧವಾಗಿ ಕಟ್ಟಲಾದ ನಗರವಾಗಿತ್ತು. ನಗರದ ಪ್ರಮುಖ ಭಾಗ ಬಲವಾದ ಗೋಡೆಯಿಂದ ಆವೃತವಾಗಿತ್ತು. ಹೊರಭಾಗದಲ್ಲಿ ಸುಮಾರು ಒಂದೂವರೆ ಕಿಮೀ ದೂರದಲ್ಲಿ ವಾಯವ್ಯದ ಕಡೆಗೆ ಒಂದು ಸ್ಮಶಾನವೂ ಪೂರ್ವಭಾಗದಲ್ಲಿ ಚತುರ್ಭುಜಾಕೃತಿಯ ಹಡಗುಕಟ್ಟೆಯೂ (213 ಮೀ X 36 ಮೀ) ಇದ್ದುವು. ಇದು 4.20 ಮೀ ಎತ್ತರವಿತ್ತೆಂಬುದಾಗಿ ಉತ್ಖನನದಲ್ಲಿ ಕಂಡುಬಂದಿದೆ; ಇನ್ನೂ ಎತ್ತರವಿದ್ದಿರಬಹುದು.

ಹಡಗು ಕಟ್ಟೆ, ಲೋಥಾಲ್

ನಗರದಲ್ಲಿ ಆರು ಭಾಗಗಳಿದ್ದವು. ಪ್ರತಿಯೊಂದು ಭಾಗದಲ್ಲೂ ವಿಶಾಲವಾದ ಇಟ್ಟಿಗೆ ಕಟ್ಟೆಯ ಮೇಲೆ ಮನೆಗಳನ್ನು ಕಟ್ಟಲಾಗಿತ್ತು. ಪೂರ್ವಪಶ್ಚಿಮ ಮತ್ತು ಉತ್ತರದಕ್ಷಿಣವಾಗಿ ಹಾದುಹೋಗುವ ಎರಡೆರಡು ಬೀದಿಗಳಿದ್ದುವು ಮತ್ತು ಎರಡೆರಡು ಓಣಿಗಳಿದ್ದುವು. ಒಂದು ಬೀದಿಯ ಬದಿಯಲ್ಲಿ ಸಾಲಾಗಿ ಮನೆಗಳಿದ್ದುವು. ಇವಲ್ಲದೆ ಎದುರುಬದುರಾಗಿರುವ ಎರಡು ಮೂರು ಕೋಣೆಗಳುಳ್ಳ ಮನೆಗಳಿದ್ದುವು. ಇವು ಅಂಗಡಿಗಳಾಗಿದ್ದಿರಬಹುದು. ದೊಡ್ಡ ಮನೆಗಳು ಮುಂಭಾಗದಲ್ಲಿ ಅಂಗಳಗಳಿಂದ ಕೂಡಿದ್ದವು. ಮತ್ತೆ ಕೆಲವು ಮನೆಗಳ ಮಧ್ಯದಲ್ಲಿ ಅಂಗಳಗಳಿದ್ದು ಸುತ್ತಲೂ ಕೋಣೆಗಳಿದ್ದುವು. ಚಿನಿವಾರರ, ಇತರ ಲೋಹ ಕೆಲಸ ಮಾಡುವವರ ಮನೆಗಳು ಸಣ್ಣವಿದ್ದುವು. ನಗರನೈರ್ಮಲ್ಯ ವ್ಯವಸ್ಥೆ ಚೆನ್ನಾಗಿತ್ತು. ಈ ಬೀದಿಯ ಬದಿಯ ದೊಡ್ಡ ಚರಂಡಿಗಳಿಗೆ ಮನೆಯ ಒಳ ಚರಂಡಿಗಳನ್ನು ಸೇರಿಸಲಾಗಿತ್ತು. ಮನೆಗಳಲ್ಲಿ ಬಿಟುಮೆನ್ ಸವರಿದ ನೆಲವುಳ್ಳ ಸ್ನಾನಗೃಹಗಳು, ಶೌಚಗೃಹ ಮತ್ತು ಹಿಂಗುಣಿಗಳಿದ್ದುವು. ನಗರದ ದಕ್ಷಿಣ ಭಾಗದಲ್ಲಿ ಎತ್ತರದ ಕಟ್ಟೆಯ ಮೇಲೆ ನಿರ್ಮಿಸಿದ ದೊಡ್ಡದೊಂದು ಮನೆಗೆ ಸುವ್ಯವಸ್ಥಿತವೂ ವಿಶಾಲವೂ ಆದ ಚರಂಡಿಯೂ ಪ್ರತ್ಯೇಕ ಬಾವಿಯೂ ಇದ್ದುವು. ರೋಜ್‌ಡಿಯಲ್ಲಿ ಈ ನಾಗರಿಕತೆಯ ಕೊನೆಯ ಹಂತದಲ್ಲಿ ತುಂಡುಕಲ್ಲುಗಳಿಂದ ಮನೆಗಳನ್ನು ಕಟ್ಟಲಾಗಿತ್ತು. ಸುರ್‌ಕೋಟಡದಲ್ಲಿ ನಗರದ ಸುತ್ತಲೂ ರಕ್ಷಣಾರ್ಥವಾಗಿ ಬಲವಾದ ಗೋಡೆಗಳಿದ್ದುವು.

ಹರಪ್ಪದಲ್ಲಿಯ ಹಾಗೆ ಲೋಥಾಲಿನಲ್ಲಿ ಕೆಂಪುವರ್ಣದ ಮೃಣ್‌ಪಾತ್ರೆಗಳು ವೈವಿಧ್ಯಪೂರಿತವಾಗಿದ್ದು, ಕಪ್ಪು ನೀಲಿ ಬಣ್ಣಗಳ ಚಿತ್ರಗಳಿಂದ ಅಲಂಕೃತವಾಗಿದ್ದುವು; ದೇಸಲ್‌ಪುರದಲ್ಲಿ ಕಪ್ಪು ನೀಲಿ ಮತ್ತು ಕೆಂಪು ಕೂಡಿದ ಚಿತ್ರಗಳಿಂದ ಅಲಂಕೃತ ವಾಗಿದ್ದುವು. ಜೊತೆಗೆ ಇಲ್ಲಿ ಮಾತ್ರ ಮತ್ತೊಂದು ವಿಧವಾದ, ಕೆಂಪು ಕಪ್ಪು ಬಣ್ಣವುಳ್ಳ ದ್ವಿವರ್ಣ ಪಾತ್ರೆಗಳು ಉಪಯೋಗದಲ್ಲಿದ್ದುವು. ಕಂಚು ಅಥವಾ ತಾಮ್ರದ ಉಪಕರಣಗಳ ಜೊತೆಗೆ ಫ್ಲಿಂಟ್ ಕಲ್ಲಿನ ನೀಳ ಚಕ್ಕೆಗಳು ನಿತ್ಯ ಕೆಲಸಗಳಿಗೆ ಬೇಕಾಗುವ ಉಪಕರಣಗಳಾಗಿ ಉಪಯೋಗದಲ್ಲಿದ್ದುವು.

ಸುಟ್ಟ ಮಣ್ಣಿನಿಂದ, ಆನೆಯ ಮತ್ತು ಇತರ ದಂತಗಳಿಂದ, ಒಳ್ಳೆಯ ಜಾತಿಯ ಕಲ್ಲುಗಳಿಂದ, ತಾಮ್ರ, ಚಿನ್ನ ಮುಂತಾದವುಗಳಿಂದ ಮಾಡಿದ ವಿವಿಧ ಆಕಾರಗಳ ಆಭರಣಗಳು ಅಲ್ಲಿಯ ಜನರ ಕುಶಲಕೆಲಸಕ್ಕೆ, ಸೌಂದರ್ಯಪ್ರಿಯತೆಗೆ ಸಾಕ್ಷಿಗಳಾಗಿವೆ. ಒಂದು ಚಿನ್ನದ ಸರದಲ್ಲಿ 5 ಲಕ್ಷ ಅತಿ ಸಣ್ಣ ಗುಂಡುಗಳು ಮತ್ತು ಕೊಳವೆಗಳಿದ್ದುವು. ಒಂದು ತಾಮ್ರದ ನಾಯಿಯ ಗೊಂಬೆಯ ಮುಖಭಾವ ಮಾರ್ಮಿಕವಾಗಿದೆ. ತಾಮ್ರ, ಕಂಚಿನ ಕೊರೆಯುವ ತಂತಿ ಒಂದು ಮುಖ್ಯವಾದ ಶೋಧ. ಚದುರಂಗದ ಕಾಯಿಗಳಾಗಿದ್ದಿರ ಬಹುದಾದ, ಹೋತದ ತಲೆಯುಳ್ಳ, ಪ್ರಾಣಿ, ಎತ್ತು ಮುಂತಾದ ಗೊಂಬೆಗಳು ಆಕರ್ಷಕವಾಗಿವೆ. ಸು. 17.5 ಸೆಂಮೀ ಉದ್ದದ, 1.7 ಮಿಮೀ ಅಂತರದಲ್ಲಿ ಎಳೆದ ಗೆರೆಗುಳುಳ್ಳ ದಂತದ ಅಳತೆಪಟ್ಟಿ, ಸುಣ್ಣ ಮಣ್ಣಿನ ಅಳತೆಗುಂಡುಗಳು ಇವು ಇವರ



ಪ್ರಾಣಿಗಳ ಮಣ್ಣಿನ ಪ್ರತಿಮೆಗಳು, ಲೋಥಾಲ್

ಮಾಪನ ಜ್ಞಾನದ ಗುರುತುಗಳಾಗಿವೆ. ಮಣ್ಣಿನ ಗೊಂಬೆಗಳಲ್ಲಿ ಒಂದು ಕುದುರೆಯ ಹಾಗೆ ಇದೆ. ಇದು ಕುದುರೆಯೋ ಹೇಸರಗತ್ತೆಯೋ ಅಷ್ಟು ಸ್ಪಷ್ಟವಾಗಿಲ್ಲ. ಕುದುರೆಯಾಗಿದ್ದಲ್ಲಿ ಈ ನಾಗರಿಕತೆಯ ಜನರಲ್ಲಿ ಈ ಪ್ರಾಣಿ ಉಪಯೋಗದಲ್ಲಿದ್ದುದು ಪ್ರಥಮ ಬಾರಿಗೆ ತಿಳಿದ ಹಾಗಾಗುತ್ತದೆ. ಹರಪ್ಪ, ಮೊಹೆಂಜೋದಾರೊಗಳಲ್ಲಿ ದೊರೆತ ಹಾಗೆ ಲೋಥಾಲಿನಲ್ಲಿಯೂ ಅಕ್ಷರಗಳುಳ್ಳ ಚಿತ್ರಿತ ಮುದ್ರಿಕೆಗಳು ದೊರೆತಿವೆ; ಪರ್ಷಿಯನ್ ಕೊಲ್ಲಿ ಪ್ರದೇಶದಲ್ಲಿಯ ಸಮಕಾಲೀನ ಸಂಸ್ಕೃತಿಯ ಗುರುತುಗಳಲ್ಲಿ ಒಂದಾದ ದುಂಡು ಮುದ್ರಿಕೆಗಳು ಒಂದೆರಡು ಇಲ್ಲಿ ದೊರೆತು ಈ ಎರಡೂ ಪ್ರದೇಶಗಳ ನಡುವಿನ ಸಮುದ್ರವ್ಯಾಪಾರ ಸಂಬಂಧವನ್ನು ಇವು ಪುಷ್ಟೀಕರಿಸಿವೆ. ಹರಪ್ಪ ಮೊಹೆಂಜೋದಾರೊ ಪ್ರದೇಶಕ್ಕೆ ಮತ್ತು ಗುಜರಾತಿನ ಸೌರಾಷ್ಟ್ರಭಾಗಕ್ಕೆ ಭೂಮಾರ್ಗ ಸಂಪರ್ಕವೂ ಇತ್ತು ಎಂಬುದು ಕಚ್ಛ್ ಪ್ರದೇಶದ ಉತ್ಖನನದಿಂದ ತಿಳಿದುಬಂದಿದೆ.

ಅಲ್ಲಿ ಎರಡು ವಿಧವಾದ ಶವಸಂಸ್ಕಾರ ಪದ್ಧತಿಗಳು ಇದ್ದುವು : ಶವವನ್ನು ಉತ್ತರ ದಕ್ಷಿಣವಾಗಿ ಅಥವಾ ಕ್ವಚಿತ್ತಾಗಿ ಪೂರ್ವ ಪಶ್ಚಿಮವಾಗಿ ಹುಗಿಯುವುದು; ಇಲ್ಲವೇ ಶವದ ಅಸ್ಥಿಗಳನ್ನು ಕಾಲಕ್ರಮದಲ್ಲಿ ಸಂಗ್ರಹಿಸಿ ಮೃಣ್‍ಪಾತ್ರೆಯಲ್ಲಿ ಹಾಕಿ ಅವನ್ನು ಕ್ರಮವಾಗಿ ಹುಗಿಯುವುದು. ಅಪರೂಪವಾಗಿ ಶವದ ಕುಣಿಯ ಬದಿಯನ್ನು ಇಟ್ಟಿಗೆಗಳಿಂದ ಭದ್ರ ಮಾಡುತ್ತಿದ್ದುದುಂಟು.

ಎರಡನೆಯ ಹಂತದಲ್ಲಿ ಹರಪ್ಪ ನಾಗರಿಕತೆ ಇಳಿಮುಖವಾದ ಲಕ್ಷಣಗಳು ತೋರುವುವು. ಅಲ್ಲದೆ ಫ್ಲಿಂಟ್ ಬದಲು ಜಾಸ್ಪರ್ ಮತ್ತು ಅಗೇಟ್ ಕಲ್ಲಿನ ನೀಳ ಚಕ್ಕೆಗಳನ್ನು ಉಪಕರಣಗಳಾಗಿ ಉಪಯೋಗಿಸುತ್ತಿದ್ದ ಬೇರೆ ಜನವರ್ಗದವರು ಇಲ್ಲಿ ಬಂದು ನೆಲೆಸಿದ ಹಾಗೆ ಕಾಣುತ್ತದೆ. ಈ ಹಂತದ ಮೃಣ್‍ಪಾತ್ರೆಗಳು ಹಿಂದಿನವುಗಳಿಗಿಂತ ತೀರ ಭಿನ್ನವಾಗಿವೆ; ಮತ್ತು ಈ ಸಂಸ್ಕೃತಿಯ ಲಕ್ಷಣಗಳಲ್ಲಿ ದಖನ್ ಪ್ರಸ್ಥಭೂಮಿಯ ಶಿಲಾ ತಾಮ್ರಯುಗದ ಸಂಸ್ಕೃತಿಗೆ ಹೆಚ್ಚು ಹೋಲಿಕೆಯಿದೆ. ಈ ಸಾಧಾರಣ ಸಂಸ್ಕೃತಿಯ ಲಕ್ಷಣಗಳು ರಂಗಪುರದಲ್ಲಿಯೂ ಕಂಡಿವೆ. ಆದರೆ ಲೋಥಾಲ್‍ನಲ್ಲಿ ಇದು ಸರಿಯಾಗಿ ಬೇರೂರುವುದರಲ್ಲಿಯೇ ಅಲ್ಲಿಯ ನದಿಪ್ರವಾಹದಿಂದ ಹಾಳಾಯಿತು. ರಂಗಪುರದಲ್ಲಿ ಸುಡದ ಮಣ್ಣಿನ ಇಟ್ಟಿಗೆ ಮನೆಗಳಿದ್ದುವು. ಬಿಳಿಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸಲ್ಪಟ್ಟ ಕಪ್ಪು ಕೆಂಪು ಬಣ್ಣಗಳ ಮಣ್ಣಿನ ಪಾತ್ರೆಗಳು ಉಪಯೋಗದಲ್ಲಿದ್ದುವು. ಕ್ರಮೇಣ ವಿಶೇಷ ಹೊಳಪುಳ್ಳ ಬಣ್ಣದ ಮೃಣ್‍ಪಾತ್ರೆಗಳು ಬಳಕೆಯಲ್ಲಿದ್ದುವು.



ಮುದ್ರೆಗಳು, ಲೋಥಾಲ್ ಉತ್ಖನನ

ಸೋಮನಾಥದಲ್ಲಿ ಹರಪ್ಪ ನಾಗರಿಕತೆಯ ಕೊನೆಯ ಹಂತದ ಗುರುತುಗಳುಂಟು. ಈ ಹಂತದಲ್ಲಿ ಕಂದುಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸಿದ ಬಿಳಿ ಅಥವಾ ಸ್ವಲ್ಪ ಬಿಳಿಹಳದಿ ಬಣ್ಣದ ಮೃಣ್‍ಪಾತ್ರೆಗಳೂ ಬಳಕೆಯಲ್ಲಿದ್ದುದು ಒಂದು ವೈಶಿಷ್ಟ್ಯ. ಜೊತೆಗೆ ಹೊಸ ಮಾದರಿಯ ಮೃಣ್‍ಪಾತ್ರೆಯ ಬಟ್ಟಲುಗಳು (ಪ್ರಭಾಸ್ ಅಥವಾ ಸೋಮನಾಥ್ ಬೋಲ್) ಇದ್ದವು. ಇದಕ್ಕೂ ಪೂರ್ವದಲ್ಲಿ, ಕೊರೆದ ಗೆರೆಚಿತ್ರಗಳಿಂದ ಅಲಂಕರಿಸಿದ, ಒರಟಾದ, ಬೂದು ಮತ್ತು ಕೆಂಪುಬಣ್ಣಗಳ ಮೃಣ್‍ಪಾತ್ರೆಗಳನ್ನು ಉಪಯೋಗಿಸುತ್ತಿದ್ದ ಜನರಿದ್ದರು. ಹರಪ್ಪ ನಾಗರಿಕತೆಯ ತರುವಾಯ ಅನುಕ್ರಮವಾಗಿ ವಿಶೇಷ ಹೊಳಪುಳ್ಳ ಕೆಂಪು ಮೃಣ್‍ಪಾತ್ರೆಗಳನ್ನು, ಬಿಳಿ ಬಣ್ಣದ ರೇಖಾಚಿತ್ರಗಳುಳ್ಳ ಕಪ್ಪು – ಕೆಂಪು ವರ್ಣದ ಪಾತ್ರೆಗಳನ್ನು ಹಾಗೂ ಕಬ್ಬಿಣವನ್ನು, ಅನಂತರ ವಿಶೇಷ ಹೊಳಪುಳ್ಳ ಕಪ್ಪು ವರ್ಣದ ಪಾತ್ರೆಗಳನ್ನು (ನಾರ್ದರನ್ ಬ್ಲಾಕ್ ಪಾಲಿಷ್ಡ್ ವೇರ್) ಉಪಯೋಗಿಸುತ್ತಿದ್ದ ಜನ ಇಲ್ಲಿ ನೆಲೆಸಿದ್ದರು.

ಸೂಕ್ಷ್ಮಶಿಲಾಯುಗದ ಅನಂತರದ ಈ ವಿವಿಧ ಸಂಸ್ಕೃತಿಗಳು ಅನುಕ್ರಮವಾಗಿ ಪ್ರ.ಶ.ಪೂ. 2000–100ರವರೆಗೆ ಬೆಳೆದು ನಶಿಸಿಹೋದುವು. ಇವುಗಳಲ್ಲಿ ಮುಖ್ಯವಾಗಿ ಹರಪ್ಪ ನಾಗರಿಕತೆ ಪ್ರ.ಶ.ಪೂ. 2000–1700ರವರೆಗೆ ಊರ್ಜಿತವಾಗಿತ್ತು. ಗಿರ್ನಾರದಲ್ಲಿರುವ ಅಶೋಕನ ಕಲ್ಲುಬಂಡೆ ಶಾಸನವೇ ಮುಂತಾದ ಐತಿಹಾಸಿಕ ಆಧಾರಗಳಿಂದ ಪ್ರ.ಶ.ಪೂ 3ನೆಯ ಶತಮಾನದಲ್ಲಿ ಗುಜರಾತು ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತೆಂದು ಹೇಳಬಹುದು. ಇಲ್ಲಿ ಇತಿಹಾಸಯುಗ ಪ್ರಾರಂಭವಾಯಿತು. (ಎ.ಎಸ್)

**2. ಇತಿಹಾಸ :** ಅಥರ್ವವೇದ ಹಾಗೂ ಐತರೇಯ ಬ್ರಾಹ್ಮಣಗಳಲ್ಲಿ ಭಾರತವನ್ನು ಐದು ಭಾಗಗಳಾಗಿ – ಪ್ರಾಚ್ಯ, ದಕ್ಷಿಣ, ಪ್ರತೀಚಿ, ಉದೀಚಿ, ಮತ್ತು ಧ್ರುವಾಮಧ್ಯಮಾ ಎಂದು – ವಿಂಗಡಿಸಲಾಗಿದೆ. ಇದರಲ್ಲಿ ಪ್ರತೀಚಿ ಅಥವಾ ಪಶ್ಚಿಮ ಭಾಗಕ್ಕೆ ಅಪರಾಂತ

ವೆಂಬ ಹೆಸರೂ ಇದೆ. ಪ್ರ.ಶ.ಪೂ 6ನೆಯ ಶತಮಾನದಿಂದ ಮೌರ್ಯರ ಕಾಲದ ಅಂತ್ಯದವರೆಗೂ ಉಜ್ಜಯಿನಿಯಿಂದ ಸಿಂಧಿನ ಮತ್ತು ಸಿಂಧಿನಿಂದ ಸುರ್ಪಾರಕದ (ಸೋಪಾರಾ) ವರೆಗಿನ ಭಾಗಕ್ಕೆ ಅಪರಾಂತವೆಂಬ ಹೆಸರಿತ್ತು. ಅನಂತರ ಮಾಹೆಯಿಂದ ಗೋವದವರೆಗಿನ ಭಾಗಕ್ಕೂ ಈ ಹೆಸರೂ ಹಲವು ಬಾರಿ ಅನ್ವಯವಾಗುತ್ತಿತ್ತು. ಪ್ರ.ಶ.ಪೂ 1ನೆಯ ಶತಮಾನದ ಬಳಿಕ ಲಾಟ, ಉತ್ತರ, ಮತ್ತು ದಕ್ಷಿಣ ಕೊಂಕಣ ಪ್ರದೇಶಗಳನ್ನೊಳಗೊಂಡ ಭಾಗಕ್ಕೆ ಅಪರಾಂತವೆಂಬ ಹೆಸರಾಯಿತು. ಅನಂತರ ಈ ಪ್ರದೇಶಗಳಿಗೆ ಬೇರೆ ಬೇರೆ ಹೆಸರುಗಳು ಬಂದುವಾದರೂ ಈಗಿನ ಗುಜರಾತಿನ ಪ್ರದೇಶದಲ್ಲಿ ಹಿಂದೆ ಆನರ್ತ, ಸೌರಾಷ್ಟ್ರ ಮತ್ತು ಲಾಟವೆಂಬ ಮೂರು ಭೌಗೋಳಿಕ ಭಾಗಗಳಿದ್ದುವು. ಆನರ್ತವೆಂಬುದು ಗುಜರಾತಿನ ಉತ್ತರ ಭಾಗ. ಇದರ ರಾಜಧಾನಿ ಕುಶಸ್ಥಲೀ ಎಂದು ಮಹಾಭಾರತದಲ್ಲಿ ಹೇಳಿದೆ. ಈ ನಗರ ನಾಶವಾದ ಬಳಿಕ ದ್ವಾರಕಾನಗರವನ್ನು ಹೊಸದಾಗಿ ಸ್ಥಾಪಿಸಲಾಯಿತೆಂದೂ ಅದು ಯಾದವರ ರಾಜಧಾನಿಯಾಯಿತೆಂದೂ ದ್ವಾರಕಾ ಮತ್ತು ಪ್ರಭಾಸಗಳೆರಡೂ ಸೌರಾಷ್ಟ್ರದಲ್ಲಿದ್ದುವೆಂದು ಆ ಗ್ರಂಥದಲ್ಲಿಯೇ ಹೇಳಿದೆ. ಇದರಿಂದ ಬಹುಶಃ ರುದ್ರದಾಮನ ಕಾಲಕ್ಕೂ ಹಿಂದೆ ಸೌರಾಷ್ಟ್ರ ಹಾಗೂ ಗುಜರಾತಿನ ಉತ್ತರ ಭಾಗಗಳು ಕೂಡಿ ಆನರ್ತವಾಗಿದ್ದುವೆಂದು ಊಹಿಸಬಹುದು. ರುದ್ರದಾಮನ ಜುನಾಗಢ ಶಾಸನದಲ್ಲಿ ಆನರ್ತ ಎಂಬ ಹೆಸರೇ ಉಲ್ಲೇಖಿಸಲ್ಪಟ್ಟಿದೆ. ಆನರ್ತದ ಮುಖ್ಯಪಟ್ಟಣ ಆನಂದ (ಆನರ್ತ್ತ) ಪುರ, ಈಗಿನ ವಡ್ನಗರ. ಸೌರಾಷ್ಟ್ರವೆಂಬುದು ಈಗಿನ ಕಾಠಿಯಾವಾಡಕ್ಕೆ 18ನೆಯ ಶತಮಾನದವರೆಗೂ ಇದ್ದ ಹೆಸರು. ಈ ಹೆಸರು ಸುರಠ ಎಂಬ ಹೆಸರಿನಿಂದ ಬಂದಿರಬಹುದೆಂದೂ ಅಭಿಪ್ರಾಯಪಡಲಾಗಿದೆ. ಈಚೆಗೆ ಕಾಠಿಯಾವಾಡದ ದಕ್ಷಿಣ ಭಾಗವನ್ನು ಮಾತ್ರ ಸೊರಠ್ ಎಂದು ಕರೆಯುತ್ತಾರೆ. ಸ್ವಾಭಾವಿಕ ಸಂಪತ್ತಿನಿಂದ ಕೂಡಿದ ಈ ಭಾಗಕ್ಕೆ ಈ ಹೆಸರು ಅನ್ವರ್ಥನಾಮವಾಗಿದೆ. ಮಾಹಿಯಿಂದ ತಾಪಿ ನದಿಯವರೆಗಿನ ಗುಜರಾತಿನ ಪ್ರದೇಶಕ್ಕೆ ಲಾಟ ಎಂಬ ಹೆಸರಿದೆ. ಮೊದಲಬಾರಿಗೆ ಟಾಲೆಮಿ ಇದನ್ನು ಲಾರಿಕೆ ಎಂದಿದ್ದಾನೆ. ಮೂರನೆಯ ಶತಮಾನದ ಬಳಿಕ ಈ ಹೆಸರು ಹೆಚ್ಚಾಗಿ ಬಳಕೆಗೆ ಬಂತು.

ವಿಷ್ಣುಪುರಾಣದಲ್ಲಿ ಸೌರಾಷ್ಟ್ರವನ್ನು ಕುರಿತಾದ ಕಥೆಯೊಂದಿದೆ. ಅದರಂತೆ ಆನರ್ತ್ತ ಎಂಬ ದೊರೆ ಕುಶಸ್ಥಲೀ ರಾಜಧಾನಿಯಿಂದ ಆಳುತ್ತಿದ್ದ. ಆನರ್ತ್ತ ಸಹ ಇವನ ರಾಜ್ಯದ ಒಂದು ಭಾಗವಾಗಿತ್ತು. ಇವನ ಮಗ ರೇವತನ ಮೊಮ್ಮಗಳು ರೇವತಿ. ಈಕೆ ಯಾದವ ವಂಶದ ಅರಸನಾದ ದ್ವಾರಕೆಯ ಬಲದೇವನ ಪತ್ನಿ. ಇವಳ ತಂದೆಯಾದ ರೈವತನನ್ನು ಬಲದೇವ ಸೋಲಿಸಿ ಸೌರಾಷ್ಟ್ರದ ಅಧಿಪತಿಯಾದ. ಆದರೆ ಪುರಾಣದಲ್ಲಿ ಈ ಕತೆ ಬೇರೆಯಾಗಿದೆ. ಯಾದವ ವಂಶದಲ್ಲಿ ಜನಿಸಿದವನು ಕೃಷ್ಣ ಬಲದೇವರ ತಂದೆಯಾದ ವಸುದೇವ. ಕಂಸನ ಮರಣಾನಂತರ ಅವನ ಮಾವನಾದ ಜರಾಸಂಧನ ಉಪಟಳವನ್ನು ತಡೆಯಲಾರದೆ ಅವರು ಮಧುರೆಯನ್ನು ಬಿಟ್ಟು ಆನರ್ತ್ತ ದೇಶದಲ್ಲಿ ದ್ವಾರಕೆಯನ್ನು ನಿರ್ಮಿಸಿದರು. ಸೌರಾಷ್ಟ್ರದಲ್ಲಿ ಆಳಿದ ಯಾದವರು ಅಂತಃಕಲಹಗಳ ಪರಿಣಾಮವಾಗಿ ಮಹಾಭಾರತದ ಯುದ್ಧ ಮುಗಿದ 36 ವರ್ಷದೊಳಗಾಗಿಯೇ ತಮ್ಮ ರಾಜ್ಯವನ್ನು ಕಳೆದುಕೊಂಡರು. ನಿರ್ಜನವಾದ ದ್ವಾರಕೆಯನ್ನು ಸಮುದ್ರ ನುಂಗಿತಂತೆ.

ಇದು ಗುಜರಾತಿಗೆ ಸಂಬಂಧಿಸಿದ ಪುರಾಣಕತೆ. ಆದರೆ ನಮಗೆ ತಿಳಿದಂತೆ ಇದರ ರಾಜಕೀಯ ಇತಿಹಾಸ ಆರಂಭವಾಗುವುದು ಮೌರ್ಯರ ಕಾಲದಿಂದಲೇ. ಆ ವಂಶದ ಚಂದ್ರಗುಪ್ತ ಸೆಲ್ಯೂಕಸನನ್ನು ಸೋಲಿಸಿದ ಬಳಿಕ ಕಾಠಿಯಾವಾಡವನ್ನು ಸ್ವಾಧೀನಪಡಿಸಿಕೊಂಡು ಆ ಪ್ರಾಂತ್ಯದ ಆಡಳಿತಕ್ಕೆ ತನ್ನ ಅಧಿಕಾರಿಗಳನ್ನು ನೇಮಿಸಿದ. ವೈಶ್ಯ ಪುಷ್ಯಗುಪ್ತ ಇವನಿಂದ ಹಾಗೆ ನೇಮಿತವಾದ ಒಬ್ಬ ರಾಷ್ಟ್ರೀಯ (ಪ್ರಾಂತ್ಯಾಧಿಕಾರಿ). ಜುನಾಗಢದ ಸುದರ್ಶನ ಸರೋವರವನ್ನು ಕಟ್ಟಿಸಿದವನೀತನೇ. ಆದರೂ ಇಲ್ಲಿ ಆಳುತ್ತಿದ್ದ ಒಂದು ಅರಸುಮನೆತನ ಮೌರ್ಯರ ಅಧೀನತೆಯನ್ನು ಒಪ್ಪಿಕೊಂಡಿತ್ತೆಂದೂ ಬಿಂದುಸಾರನ ಆಳ್ವಿಕೆಯ 16ನೆಯ ವರ್ಷದಲ್ಲಿ ಆ ಮನೆತನದ ಪಿಂಗಲ ಪಟ್ಟಕ್ಕೆ ಬಂದನೆಂದೂ ಹೇಳಿದೆ. ಅಶೋಕನ ಕಾಲದಲ್ಲಿ ಯವನರ ತುಶಾಷ್ಪ ಇಲ್ಲಿಯ ಪ್ರಾಂತ್ಯಾಧಿಕಾರಿಯಾಗಿದ್ದ. ಅಶೋಕನ 14 ಬಂಡೆ ಶಾಸನಗಳು ಜುನಾಗಢದಲ್ಲಿ ದೊರೆತಿವೆ. ಮೌರ್ಯರ ಅವನತಿಯ ಕಾಲದಲ್ಲಿ ಅವರ ಸಾಮ್ರಾಜ್ಯದ ಇತರ ಭಾಗಗಳು ಬೇರೆಯವರ ಅಧೀನವಾದರೂ ಕಾಠಿಯವಾಡದ ಭಾಗದಲ್ಲಿ ಆ ವಂಶದ ಅರಸನೊಬ್ಬ ಆಳುತ್ತಿದ್ದನೆಂದು ತೋರುತ್ತದೆ. ಅನಂತರ ವಾಯವ್ಯದಿಂದ ಗ್ರೀಕರು ಮತ್ತು ಪಾರ್ಥಿಯನರು ಈ ಭಾಗದಲ್ಲಿ ಕೆಲಕಾಲ ಅಧಿಕಾರ ನಡೆಸಿದರು. ಗ್ರೀಕರ ರಾಜ ಡೆಮಿಟ್ರಿಯೆಸ್‌ನ ಇಬ್ಬರು ಸೇನಾನಿಗಳು ಭಾರತದ ಮೇಲೆ ಧಾಳಿ ಮಾಡಿದರು. ಅಪೋಲೊಡೋಟಸ್ (ಪ್ರ.ಶ.ಪೂ 175 – ಪ್ರ.ಶ.ಪೂ 156) ಅವರಲ್ಲೊಬ್ಬ. ಅವನ ಬಳಿಕ ಮಿನಾಂಡರ್, ಅನಂತರ ಇವನ ಮಗನಾದ 1ನೆಯ ಸೋತರ್ ಈ ಪ್ರದೇಶವನ್ನು ಆಳಿದರು. ಸೋತರನ ಕಾಲದಲ್ಲಿ ಅವನ ಅಧೀನದಲ್ಲಿ ಸತ್ರಪನಾದ (ಕ್ಷತ್ರಪ) ಇಮ್ಮಡಿ ಅಪೋಲೊಡೋಟಸ್ ಕಾಠಿಯಾವಾಡದಲ್ಲಿ ಅಧಿಕಾರ ನಡೆಸಿದ.

ಕ್ಷತ್ರಪ ಎಂಬುದು ಪ್ರಾಂತ್ಯಾಧಿಕಾರಿಯ ಬಿರುದು. ಇದೆ ಮುಂದೆ ಉತ್ತರದಲ್ಲಿ ಸ್ವತಂತ್ರವಾಗಿ ಆಳಿದ ಮನೆತನಗಳ ಹೆಸರೂ ಆಯಿತು. ಅಂತೆಯೇ ಉಜ್ಜಯಿನಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಮಾಳವ, ಕಾಠಿಯಾವಾಡ ಮತ್ತು ಗುಜರಾತಗಳಲ್ಲಿ ಆಳತೊಡಗಿದ ಕ್ಷತ್ರಪರು ಭೂಮಕ ಮತ್ತು ನಹಪಾಣರು. ಇವರು ಕ್ಷಹರಾತ ಕುಲಕ್ಕೆ ಸೇರಿದವರು. ನಹಪಾಣನ ರಾಜ್ಯ ನಾಸಿಕದಿಂದ ಸೂರ್ಪಾರಕದವರೆಗೂ ಹಬ್ಬಿತ್ತು. ಆದರೆ ಇವನನ್ನು ಶಾತವಾಹನ ಕುಲದ ಗೌತಮೀಪುತ್ರ ಶಾತಕರ್ಣಿ ಸೋಲಿಸಿ, ಅಶಿಕ, ಅಸಕ, ಮುಲಕ, ಸುರಠ, ಕುಕರ, ಅಪರಾಂತ ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡ. ಆದರೆ ಸುರಾಷ್ಟ್ರ, ಮಾಳವ ಮತ್ತು ಗುಜರಾತ್‌ಗಳ ಮೇಲೆ ಶಾತಕರ್ಣಿಯ ಹಿಡಿತ ಕ್ರಮೇಣ ಸಡಿಲವಾಯಿತು. ಕ್ಷತ್ರಪರಾದ ಚಷ್ಟನ ಮತ್ತು ರುದ್ರದಾಮರು ಶಾತಕರ್ಣಿಯನ್ನೂ ಸೋಲಿಸಿ ಈ ಪ್ರದೇಶಗಳನ್ನು ತಮ್ಮ ಅಧೀನಕ್ಕೆ ತಂದುಕೊಂಡರು. ರುದ್ರದಾಮನ ಕೈಕೆಳಗಿನ ಪ್ರಾಂತ್ಯಾಧಿಕಾರಿಯಾಗಿ ಸೌರಾಷ್ಟ್ರ, ಆನರ್ತ್ತ ಪ್ರದೇಶಗಳನ್ನು ಪಹ್ಲವ ಕುಲೈಪನ ಮಗನಾದ ಸುವಿಶಾಖ ಆಳುತ್ತಿದ್ದ. ಈತನ ಕಾಲದಲ್ಲಿ ಪ್ರವಾಹದ ಹಾವಳಿಯಿಂದ ಒಡೆದು ಹಾಳಾದ ಸುದರ್ಶನ ಸರೋವರವನ್ನು ಮತ್ತೊಮ್ಮೆ ಜೀರ್ಣೋದ್ಧಾರ ಮಾಡಲಾಯಿತು.

ರುದ್ರದಾಮನ ಬಳಿಕ ಅವನ ಮಗ ದಾಮಘಸದ ಆಳಿದ. ಅವನ ಬಳಿಕ ಅವನ ಮಕ್ಕಳಲ್ಲಿ ಅಂತಃಕಲಹಗಳುಂಟಾಗಿ, ಸೇನಪತಿಗಳಾಗಿದ್ದ ಆಭೀರರು ಕೊನೆಗೆ ಈ ಭಾಗದ ಅರಸರಾದರು. 236 – 239ರಲ್ಲಿ ಇಲ್ಲಿ ಆಳಿದ ಈಶ್ವರದತ್ತ ಆಭೀರ ಕುಲದವರು. 4ನೆಯ ಶತಮಾನದಲ್ಲಿ ಶಕರ ಆಳ್ವಿಕೆಗೊಳಪಟ್ಟ ಈ ಪ್ರದೇಶದ ಮೇಲೆ ಗುಪ್ತರ ಇಮ್ಮಡಿ ಚಂದ್ರಗುಪ್ತ ದಂಡೆತ್ತಿ ಶಕರ 3ನೆಯ ರುದ್ರಸಿಂಹನನ್ನು ಸೋಲಿಸಿ ಅವನ ರಾಜ್ಯವನ್ನು ತನ್ನ ಅಧೀನಕ್ಕೆ ತಂದುಕೊಂಡ. ಸ್ಕಂದಗುಪ್ತನ ಕಾಲದಲ್ಲಿ ಸುರಾಷ್ಟ್ರ ಪ್ರಾಂತ್ಯವನ್ನು ಅವನ ಅಧಿಕಾರಿಯಾದ ಪರ್ಣದತ್ತ ಆಳುತ್ತಿದ್ದ. ಇವನ ಅನಂತರ ಇವನ ಕೈಕೆಳಗಿನ ಭಟಾರ್ಕ ಇಲ್ಲಿ ಆಳತೊಡಗಿದ. ಈತ ಮೈತ್ರಕ ವಂಶಕ್ಕೆ ಸೇರಿದವನು. ವಲ್ಲಭಿನಗರವನ್ನು ಈತ ಸ್ಥಾಪಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಜುನಾಗಢ (ಗಿರಿನಗರ) ತನ್ನ ಮೊದಲಿನ ಖ್ಯಾತಿಯನ್ನು ಕಳೆದುಕೊಂಡಿತು. ಹೊಸದಾಗಿ ಕಟ್ಟಿದ ವಲ್ಲಭಿನಗರದ ಹೆಸರಿನಲ್ಲಿ ವಲ್ಲಭಿಶಕೆ ಎಂಬ ಒಂದು ಕಾಲಗಣನೆ ಆರಂಭವಾಗಿ ಅದು ಮೈತ್ರಕರ ಶಾಸನಗಳಲ್ಲಿ ಉಕ್ತವಾಗಿದೆ. ವಲ್ಲಭಿ ಶಕೆ ಮತ್ತು ಗುಪ್ತರ ಶಕೆ ಎರಡೂ ಒಂದೇ ಎಂದೂ ಈ ಎರಡರ ಮೊದಲ ವರ್ಷ ಪ್ರ. ಶ. 319 ಎಂದೂ ಅನೇಕರು ಅಬಿಪ್ರಾಯಪಟ್ಟಿದ್ದಾರಾದರೂ ಇದಿನ್ನೂ ಸರ್ವಸಮ್ಮತವಾಗಿಲ್ಲ.

ಸು. 472ರಲ್ಲಿ ಭಟಾರ್ಕನಿಂದ ಆರಂಭವಾದ ಮೈತ್ರಕ ವಂಶದ ಅರಸರು ಮೂರು ಶತಮಾನಗಳ ಕಾಲ – 776 ರವರೆಗೆ – ವಲ್ಲಭಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದರು. ಆರಂಭದಲ್ಲಿ ಇವರು ಗುಪ್ತರ ಸಾಮಂತರಾಗಿದ್ದರು. ಅನಂತರ ವಾಕಾಟಕರ ಅಧೀನತೆಯನ್ನು ಒಪ್ಪಿದರು. ವಾಕಾಟಕ ಹರಿಷೇಣನ ಮಗಳಾದ ಚಂದ್ರಲೇಖೆಯನ್ನು ಮೈತ್ರಕ 1ನೆಯ ಧ್ರುವಸೇನ ಮದುವೆಯಾಗಿದ್ದ. ಹರಿಷೇಣನ ಉತ್ತರಾಧಿಕಾರಿಯನ್ನು ಮಂಡಸರಸ್ತಂಭ ಶಾಸನದ ಮಾಳವದ ಯಶೋಧರ್ಮ ಸೋಲಿಸಿ ಧ್ರುವಸೇನನನ್ನು ತನ್ನ ದಂಡನಾಯಕನಾಗಿ ನೇಮಿಸಿಕೊಂಡಂತೆ ತೋರುತ್ತದೆ. ಆದರೆ ಯಶೋಧರ್ಮನ ವಿಜಯ ಕ್ಷಣಿಕವಾದ್ದಾಗಿದ್ದು ಧ್ರುವಸೇನ ಪುನಃ ಮಹಾರಾಜ, ಮಹಾಸಾಮಂತ ಎಂಬ ತನ್ನ ಮೊದಲಿನ ಬಿರುದುಗಳನ್ನೇ ಧರಿಸಿದ. ಇವನ ಆಳ್ವಿಕೆಯ ಕಾಲದಲ್ಲಿ ಸು. 525ರಲ್ಲಿ ವಲ್ಲಭಿನಗರದಲ್ಲಿ ಜೈನರ ಮಹಾಸಭೆಯೊಂದು ನೆರೆದಿತ್ತು. ಇಮ್ಮಡಿ ಧರಸೇನನ (569 – 589) ಕಾಲದಲ್ಲಿ ಮೌಖರಿ ಕುಲದ ಈಶಾನವರ್ಮ ಮೈತ್ರಕರನ್ನು ಸೋಲಿಸಿದ. ಧರಸೇನನ ತಂದೆಯಾದ ಗುಹಸೇನ ಮಹಾರಾಜನೆಂದು ಬಿರುದಾಂಕಿತನಾಗಿದ್ದ. ಆದರೆ ಆಗ ಈತ ಪುನಃ ಮಹಾಸಾಮಂತ ಪದವಿಯಲ್ಲೇ ತೃಪ್ತಿಗೊಳ್ಳಬೇಕಾಯಿತು. ಆದರೆ ಇವನ ಮಗ 1ನೆಯ ಶೀಲಾದಿತ್ಯನ (590–615) ಕಾಲದಲ್ಲಿ ಇವನ ರಾಜ್ಯ ವಿಸ್ತಾರಗೊಂಡು ಪೂರ್ವ ಮಾಳವ ಸಹ ಇವರಿಗೆ ಸೇರಿತ್ತೆಂದು ತಿಳಿದುಬರುತ್ತದೆ. ಯುವಾನ್‌ಚಾಂಗ್ ನಮೂದಿಸಿರುವ ಮೊ ಲ ಪೊದ (ಮಾಳವ) ಶೀಲಾದಿತ್ಯ ಇವನೇ ಎಂದು ಹಲವರು ಸೂಚಿಸಿದ್ದಾರೆ. ಅಂದು ಮಾಳವದ ಅರಸನಾಗಿದ್ದ ದೇವಗುಪ್ತನಿಗೂ ಕಳಚುರಿಗಳಿಗೂ ಹೋರಾಟಗಳಾದವು. ಆ ಕಲಹದಲ್ಲಿ ಅನಂತರ ಕನೌಜಿನ ಶ್ರೀಹರ್ಷನೂ ಗೌಡ ದೇಶದ ಶಶಾಂಕನೂ ಪಾಲುಗೊಂಡಿದ್ದರು. ಶೀಲಾದಿತ್ಯ ಆ ಸಂದರ್ಭದಲ್ಲಿ ಶಶಾಂಕನ ಬೆಂಬಲಿಗನಾಗಿದ್ದ ಕಾರಣ ದೇವಗುಪ್ತನ ಮರಣಾನಂತರ ಹರ್ಷ ಮಾಳವವನ್ನು ಆಕ್ರಮಿಸದೆ ಅದು ಶೀಲಾದಿತ್ಯನ ಕರಗತವಾಯಿತೆಂದು ಊಹಿಸಲಾಗಿದೆ. ಆದರೆ ಶಶಾಂಕ ಸತ್ತ ಕೂಡಲೇ ಶ್ರೀಹರ್ಷ ಮೈತ್ರಕರ ಮೇಲೆರಿ

ಹೋಗಿ ಮಾಳವನನ್ನು ಕಸಿದುಕೊಂಡ. ಇದು ನಡೆದದ್ದು ಇಮ್ಮಡಿ ಧ್ರುವಸೇನ ಬಾಲಾದಿತ್ಯನ ಆಳ್ವಿಕೆಯ ಕಾಲದಲ್ಲಿ (ಸು. 627–641) ಎಂದು ಊಹಿಸಲಾಗಿದೆ. ಈ ಸಂದರ್ಭದಲ್ಲಿ ಬಾಲಾದಿತ್ಯ ಗೂರ್ಜರಾಧಿಪತಿಯಾದ ನಾಲ್ಕನೆಯ ದದ್ದನ ಆಶ್ರಯಪಡೆದನೆಂದೂ ಈ ಇಬ್ಬರೂ ಕರ್ನಾಟಕದಲ್ಲಿ ಆಳುತ್ತಿದ್ದ ಚಳುಕ್ಯ ಇಮ್ಮಡಿ ಪುಲಕೇಶಿಯ ಸಾಮಂತಿಕೆಯನ್ನು ಒಪ್ಪಿದ್ದರೆಂದೂ ಇವರಿಂದ ಸ್ವಲ್ಪಮಟ್ಟಿಗೆ ಹೆದರಿದ ಶ್ರೀಹರ್ಷ ತನ್ನ ಮಗಳನ್ನು ಬಾಲಾದಿತ್ಯನಿಗೆ ವಿವಾಹ ಮಾಡಿಕೊಟ್ಟು ಅವನನ್ನು ತನ್ನ ಸಾಮಂತನಾಗಿ ಮಾಡಿಕೊಂಡನೆಂದೂ ಹೇಳಲಾಗಿದೆ.

ನಾಲ್ಕನೆಯ ಧರಸೇನ (641 – 650) ಮೈತ್ರಕರಲ್ಲೆಲ್ಲ ಅತ್ಯಂತ ಪ್ರಸಿದ್ಧನಾದ ದೊರೆ. ಈತ ಮಹಾರಾಜಾಧಿರಾಜ, ಪರಮೇಶ್ವರ ಚಕ್ರವರ್ತಿ ಇತ್ಯಾದಿ ಸಾರ್ವಭೌಮ ಸೂಚಕ ಬಿರುದುಗಳನ್ನು ಪಡೆದಿದ್ದ. 642ರ ಬಳಿಕ ಕೆಲವು ಕಾಲ ಬಾದಾಮಿಯ ಚಳುಕ್ಯರ ಬಲ ಗ್ರಹಣ ಪೀಡಿತವಾಗಿದ್ದ ಸಮಯದಲ್ಲಿ ಅವರ ಸಾಮಂತರಾಗಿದ್ದ ಗೂರ್ಜರರನ್ನು ಧರಸೇನ ಸೋಲಿಸಿ ಭರುಕಚ್ಛವನ್ನು ಆಕ್ರಮಿಸಿದ. ಶ್ರೀಹರ್ಷನ ಮರಣಾನಂತರ ಅವನಿಗೆ ಗಂಡು ಸಂತತಿ ಇಲ್ಲದ ಕಾರಣ ಧರಸೇನನೇ ಪುಷ್ಪಭೂತಿ ರಾಜ್ಯದ ಉತ್ತರ ಾಧಿಕಾರಿಯಾದನೆಂದೂ ಇದು ಇವನ ಸಾರ್ವಭೌಮ ಪದವಿಗೆ ನಿಮಿತ್ತವಾಯಿತೆಂದೂ ಹಲವರು ಸೂಚಿಸಿದ್ದಾರಾದರೂ ಇದು ಸಂದೇಹಾಸ್ಪದವೇ.

ಮೈತ್ರಕರ ತಾಮ್ರಮುದ್ರೆ

ಚಳುಕ್ಯ 1ನೆಯ ವಿಕ್ರಮಾದಿತ್ಯ ತನ್ನ ತಂದೆಯ ರಾಜ್ಯವನ್ನು ಪುನಃ ಪ್ರತಿಷ್ಠಾಪಿಸಿ ಅದು ತನ್ನ ಹಿಂದಿನ ಯಶಸ್ಸನ್ನು ಗಳಿಸಲು ಶ್ರಮಿಸಿದ. ಇದರ ಪರಿಣಾಮವಾಗಿ ಮೈತ್ರಕರ ಬಲವೂ ಕುಗ್ಗಿತು. ಮುಮ್ಮಡಿ ಧ್ರುವಸೇನ (650 – 55) ದಕ್ಷಿಣ ಗುಜರಾತಿನ ಪ್ರದೇಶಗಳನ್ನು ಪುನಃ ಕಳೆದುಕೊಂಡ. ಚಳುಕ್ಯರ ಸಾಮಂತನಾದ ಅಲ್ಲಶಕ್ತಿ ಪೃಥ್ವಿವಲ್ಲಭ ಇಲ್ಲಿಯ ಪ್ರಾಂತ್ಯಾಧಿಕಾರಿಯಾಗಿ ನಿಯಮಿತನಾದ. ಅನಂತರ ಆಳಿದ ಮೈತ್ರಕರು ಕಳೆದುಹೋದ ತಮ್ಮ ರಾಜ್ಯದ ಭಾಗಗಳನ್ನು ಪುನಃ ಪಡೆಯಲು ಯತ್ನಿಸಿದರಾದರೂ ಅವರಿಗೆ ಹೆಚ್ಚಿನ ಯಶಸ್ಸು ದೊರೆಯಲಿಲ್ಲ. ಚಳುಕ್ಯ ವಿನಯಾದಿತ್ಯ ತನ್ನ ಉತ್ತರ ದಂಡಯಾತ್ರೆಯ ಸಮಯದಲ್ಲಿ ಮಾಳವವನ್ನು ಆಕ್ರಮಿಸಿದನೆಂದು ಹೇಳಿದೆ. ಆಗ ಅಲ್ಲಿ ಆಳುತ್ತಿದ್ದವರು ಮೈತ್ರಕರೇ ಆದ ಕಾರಣ ಚಳುಕ್ಯರ ಸಾಮಂತಿಕೆಯನ್ನು 3 ನೆಯ ಶೀಲಾದಿತ್ಯ ಒಪ್ಪಬೇಕಾಯಿತೆಂದೂ ತೋರುತ್ತದೆ. ಈ ಮಧ್ಯೆ ಅರಬರ ಸೈನ್ಯ ಜುನೈದನ ನೇತೃತ್ವದಲ್ಲಿ ಗುಜರಾತಿನ ಕರಾವಳಿಯನ್ನು ಮುತ್ತಿ ಅಲ್ಲಿ ಆಳುತ್ತಿದ್ದ ಗೂರ್ಜರ, ಮೈತ್ರಕ ಇತ್ಯಾದಿ ಅರಸರನ್ನು ತೊಂದರೆಗೀಡು ಮಾಡಿತು. 4ನೆಯ ಹಾಗೂ 5ನೆಯ ಶೀಲಾದಿತ್ಯರು ಇವರ ಧಾಳಿಗಳನ್ನು ಎದುರಿಸ ಬೇಕಾಯಿತು. ಆದರೆ ಮೈತ್ರಕರ ಆಳ್ವಿಕೆ ಬಹುಕಾಲ ಮುಂದುವರಿಯಲು ಸಾಧ್ಯವಿರಲಿಲ್ಲ. ಮಾಳವ, ಗುಜರಾತ್ ಪ್ರದೇಶಗಳಲ್ಲಿ ರಾಷ್ಟ್ರಕೂಟರೂ, ಗೂರ್ಜರ ಪ್ರತೀಹಾರರೂ ತಲೆ ಎತ್ತಿದರು. ರಾಷ್ಟ್ರಕೂಟರು ಕ್ರಮೇಣ ಬಾದಾಮಿಯ ಚಳುಕ್ಯರನ್ನು ಸೋಲಿಸಿ ಅವರ ರಾಜ್ಯವನ್ನು ಕಸಿದುಕೊಂಡರು. ಮೈತ್ರಕರು ಗೂರ್ಜರ – ಪ್ರತೀಹಾರರ ವಿರೋಧ ವನ್ನೆದುರಿಸಲಾರದೆ ಹೋದರು. ಕೊನೆಗೆ ಅವರ ರಾಜ್ಯವನ್ನು ಆ ಶತ್ರುಗಳು ಕಬಳಿಸಿದರು. ಆರನೆಯ ಶೀಲಾದಿತ್ಯನೇ ಈ ಮನೆತನದ ಕೊನೆಯ ಅರಸ (ಸು. 762 – 776).

ಭರುಕಚ್ಛದ ಸುತ್ತಲಿನ ಪ್ರದೇಶದಲ್ಲಿ ಗೂರ್ಜರ ವಂಶಕ್ಕೆ ಸೇರಿದ ಒಂದು ಶಾಖೆಯ ಅರಸರು ಕೆಲಕಾಲ ಆಳುತ್ತಿದ್ದರು. ಇವರನ್ನು ನಂದಿಪುರಿಯ (ಈಗಿನ ನಾಂದೋಡ್) ಗೂರ್ಜರರೆಂದು ಕರೆಯಲಾಗಿದೆ. ಈ ಮನೆತನದ ಮೊದಲ ಅರಸ ದದ್ದ; ರಾಜಸ್ತಾನದ ಜೋಧಪುರದಲ್ಲಿ ಆಳಿದ ಗೂರ್ಜರ ವಂಶದ ಮೂಲಪುರುಷನಾದ ಹರಿಚಂದ್ರನ ನಾಲ್ವರು ಮಕ್ಕಳಲ್ಲಿ ಕಿರಿಯವನು. ಈತ ಮೊದಲು ರಾಜಸ್ತಾನದ ದಕ್ಷಿಣದಲ್ಲಿ ಆಳ್ವಿಕೆಯನ್ನು ಆರಂಭಿಸಿ, ಕ್ರಮೇಣ, ಕಳಚುರಿಗಳ ಅವನತಿಯ ಅನಂತರ, ಭರುಕಚ್ಛವನ್ನು ಆಕ್ರಮಿಸಿರಬೇಕು. ಇವನು ಈ ರಾಜ್ಯ ವಿಸ್ತರಣೆಗಾಗಿ ಬಾದಾಮಿಯ ಚಳುಕ್ಯರ ನೆರವನ್ನು ಪಡೆದು ಅವರ ಸಾಮಂತಿಕೆಯನ್ನೂ ಒಪ್ಪಿಕೊಂಡ. ಈತನ ಮೊಮ್ಮಗ ಇಮ್ಮಡಿ ದದ್ದ ಹರ್ಷನ ಹೆದರಿಕೆಯಿಂದ ಓಡಿ ಬಂದ ವಲ್ಲಭಿಯ ಮೈತ್ರಕ ಅರಸನಿಗೆ ಆಶ್ರಯವಿತ್ತ. ಆದರೆ ಇವರೇ ಗೂರ್ಜರರ ಶತ್ರುಗಳಾಗಿ ಅವರ ರಾಜ್ಯವನ್ನು ಕಸಿಯಲು ಹವಣಿಸಿದರು. ಆದರೆ ಇದು ಸಾಧ್ಯವಾಗಲಿಲ್ಲ. ಇಮ್ಮಡಿ ದದ್ದನ ಅನಂತರ ಐದನೆಯ ತಲೆಮಾರಿನವನಾದ ನಾಲ್ವಡಿ ಜಯಭಟನೆಂಬವನು ಚಳುಕ್ಯ ಅವನಿಜನಾಶ್ರಯ ಪುಲಿಕೇಶಿ ರಾಜನ ಸಹಾಯದಿಂದ ಅರಬರನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದ. ಈತ ನಂದಿಪುರಿಯ ಗೂರ್ಜರರ ಕೊನೆಯ ಅರಸ. 4 ನೆಯ ಶತಮಾನದ ಮಧ್ಯಭಾಗದಲ್ಲಿ ಈತನ ರಾಜ್ಯ ಮೊದಲು ಚಳುಕ್ಯರಿಂದ, ಅನಂತರ ರಾಷ್ಟ್ರಕೂಟರಿಂದ ಮುತ್ತಲ್ಪಟ್ಟು ಕೊನೆಗೆ ಅವಂತಿಯ ಪ್ರತೀಹಾರ ವಂಶದ ನಾಗಭಟನ ವಶವಾಯಿತು.

ಕಾಠಿಯಾವಾಡ ಹಾಗೂ ಉತ್ತರ ಗುಜರಾತಿನ ನಡುವಣ ಪ್ರದೇಶದಲ್ಲಿ 8ನೆಯ ಶತಮಾನದ ಆರಂಭದಿಂದ 10ನೆಯ ಶತಮಾನದ ಮಧ್ಯಭಾಗದವರೆಗೂ ಚಾಪ ಅಥವಾ ಚಾಮೋತ್ಕಟರು ಆಳಿದರು. ಇವರನ್ನು ಚಾವೋಟಕರೆಂದೂ ಚಾವಡಾರೆಂದೂ ಸಹ ಕರೆಯಲಾಗಿದೆ. ಅಣಹಿಲಪಾಟಕ ನಗರವನ್ನು (ಈಗಿನ ಪಾಟಣ) ಪಂಚಾಶರದ ಜಯಶೇಖರನ ಮಗ ವನರಾಜ 746ರಲ್ಲಿ ಕಟ್ಟಿಸಿದ. 914ರಲ್ಲಿ ಈ ಮನೆತನದ ಧರಣೀವರಾಹ ಪೂರ್ವ ಕಾಠಿಯಾವಾಡವನ್ನು ಆಳುತ್ತಿದ್ದ.

ವಡೋದರದ ಸುತ್ತಲಿನ ಪ್ರದೇಶ 6 – 7ನೆಯ ಶತಮಾನಗಳಲ್ಲಿ ಕಳಚುರಿಗಳ ಆಳ್ವಿಕೆಗೊಳಪಟ್ಟಿತ್ತು. ಆರನೆಯ ಶತಮಾನದ ಉತ್ತರ ಭಾಗದಲ್ಲಿ ಮಹಾರಾಷ್ಟ್ರದ ನಾಸಿಕ್ ಹಾಗೂ ಸುತ್ತಲಿನ ಪ್ರಾಂತ್ಯದಲ್ಲಿ ಪ್ರಾಬಲ್ಯಕ್ಕೆ ಬಂದ ಇವರು ಕ್ರಮೇಣ ಗುಜರಾತಿನ ಭಾಗಗಳನ್ನು ಆಕ್ರಮಿಸಿದರು. ಕೃಷ್ಣರಾಜ, ಶಂಕರಗಣ ಹಾಗೂ ಬುದ್ಧರಾಜರೆಂಬ ಈ ವಂಶದ ಮೂವರೂ ಅರಸರನ್ನು ಕುರಿತು ನಮಗೆ ಹೆಚ್ಚಿನ ವಿವರಗಳು ಲಭ್ಯವಾಗಿವೆ. ಆದರೆ ಬುದ್ಧರಾಜನನ್ನು ಬಾದಾಮಿ ಚಳುಕ್ಯ ಮಂಗಲೇಶ ಸೋಲಿಸಿದನೆಂದು ಮಹಾಕೂಟ ಶಾಸನದಿಂದ ತಿಳಿದಿದೆ. ಇದು ಏಳನೆಯ ಶತಮಾನದ ಆರಂಭದಲ್ಲಿ. ಹೀಗೆ ಚಳುಕ್ಯರಿಂದಲೂ ಇನ್ನೊಂದು ಕಡೆ ವಲ್ಲಭಿಯ ಮೈತ್ರಕರಿಂದಲೂ ಆಕ್ರಮಣಕ್ಕೊಳಗಾದ ಕಳಚುರಿಗಳು ಕ್ರಮೇಣ ಪೂರ್ವಾಭಿಮುಖವಾಗಿ ಸರಿದು ಜಬ್ಬಲ್ಪುರ ಪ್ರದೇಶದಲ್ಲಿ ಅಂತಿಮವಾಗಿ ನೆಲೆಸಿದರು.

ಕರ್ನಾಟಕದಲ್ಲಿ ಆಳಿದ ಚಳುಕ್ಯ ಮತ್ತು ರಾಷ್ಟ್ರಕೂಟ ವಂಶಗಳಿಗೆ ಸಂಬಂಧಿಸಿದ ಮನೆತನಗಳು ಗುಜರಾತಿನಲ್ಲಿಯೂ ಆಳಿದುವು. ಚಳುಕ್ಯ ಮನೆತನಕ್ಕೆ ಸೇರಿದವನೆಂದು ಹೇಳಲಾದ ವಿಜಯವರ್ಮರಾಜ (ಸು. 643) ಇವರಲ್ಲಿ ಮೊದಲಿಗ. ಈತ ಜಯಸಿಂಹ ರಾಜನ ಮೊಮ್ಮಗ ಹಾಗೂ ರಣವಿಕ್ರಾಂತ ಬುದ್ಧವರ್ಮ ರಾಜನ ಮಗ. ಮೂಲ ಚಳುಕ್ಯ ವಂಶದ ಅರಸರೊಡನೆ ಇವನ ಬಾಂಧವ್ಯವೇಂಥದೆಂಬುದು ತಿಳಿದಿಲ್ಲ. ಒಂದನೆಯ ಕೀರ್ತಿವರ್ಮನ ಮಗನಾದ ಧರಾಶ್ರಯ ಜಯಸಿಂಹವರ್ಮನೆಂಬುವನು ಸಹ ಗುಜರಾತಿನಲ್ಲಿ ಅಧಿಕಾರದಲ್ಲಿದ್ದನೆಂದು ಹೇಳಿದೆ. ಇಮ್ಮಡಿ ಪುಲಿಕೇಶಿಯ ಮಕ್ಕಳಲ್ಲಿ ಒಬ್ಬನಾದ ಧರಾಶ್ರಯ ಜಯಸಿಂಹವರ್ಮ ಲಾಟಮಂಡಲವನ್ನು ಆಳುತ್ತಿದ್ದ. ಇವನ ಮಗ ಶ್ರ್ಯಾಶ್ರಯಶೀಲಾದಿತ್ಯ. ಈತನಿಗೆ ಇನ್ನೂ ಇಬ್ಬರು ತಮ್ಮಂದಿರು–ವಿನಯಾದಿತ್ಯ ಯುದ್ಧಮಲ್ಲ ಜಯಾಶ್ರಯ ಮಂಗಲರಸ ಮತ್ತು ಅವನಿಜನಾಶ್ರಯ ಪುಲಕೇಶಿ – ಇದ್ದರೆಂಬುದು ಅವರ ಬಲ್ಸಾರ ಮತ್ತು ನವಸಾರಿ ತಾಮ್ರ ಶಾಸನಗಳಿಂದ ತಿಳಿದಿದೆ. ಇವರು ಸೂರತ್, ವಡೋದರ ಜಿಲ್ಲೆಗಳ ಸುತ್ತಲಿನ ಪ್ರಾಂತ್ಯವನ್ನು ಆಳುತ್ತಿದ್ದರೆಂದು ತಿಳಿದುಬಂದಿದೆ.

ಇದರಂತೆಯೇ ರಾಷ್ಟ್ರಕೂಟ ಮನೆತನಕ್ಕೆ ಸೇರಿದ ಕೆಲವು ಶಾಖೆಗಳು ಸಹ ಈ ಭಾಗದಲ್ಲಿ ಆಳುತ್ತಿದ್ದುವು. ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ರಾಹಪ್ಪನೆಂಬವನಿಂದ ಬಾದಾಮಿಯ ಚಳುಕ್ಯರ ರಾಜ್ಯವನ್ನು ಕಸಿದುಕೊಂಡ ಮೊದಲನೆಯ ಕೃಷ್ಣ ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದನೆಂದು ಹೇಳಿದೆ. ಸೂರತ್ ಜಿಲ್ಲೆಯಲ್ಲಿ ದೊರೆತ ತಾಮ್ರ ಶಾಸನವೊಂದರಲ್ಲಿ ಗುಜರಾತಿನಲ್ಲಿ ಆಳಿದ ರಾಷ್ಟ್ರಕೂಟ ಮನೆತನವೊಂದರ ವಂಶಾವಳಿಯನ್ನು ಕೊಟ್ಟಿದೆ. ಅದರ ಪ್ರಕಾರ ಅವರ ಮೊದಲ ಅರಸ 1ನೆಯ ಕಕ್ಕರಾಜ; ಇವನ ಮಗ ಧ್ರುವರಾಜ; ಈತನ ಮಗ ಗೋವಿಂದರಾಜ ಮತ್ತು ಮೊಮ್ಮಗ ಇಮ್ಮಡಿ ಕಕ್ಕರಾಜ. ಈತನನ್ನೂ ಪರಮೇಶ್ವರ, ಪರಮಭಟ್ಟಾರಕ ಎಂದೆಲ್ಲ ವರ್ಣಿಸಲಾಗಿದೆ. ಈತನೇ ರಾಹಪ್ಪನಾಗಿರಬಹುದೆಂದು ಊಹಿಸಲಾಗಿದೆ.

ರಾಷ್ಟ್ರಕೂಟರ ಮುಮ್ಮಡಿ ಗೋವಿಂದ ಲಾಟಮಂಡಲವನ್ನು ಗೆದ್ದುಕೊಂಡು ಅಲ್ಲಿ ತನ್ನ ತಮ್ಮನಾದ ಇಂದ್ರರಾಜನನ್ನು ಅಧಿಕಾರದಲ್ಲಿ ಸ್ಥಾಪಿಸಿದ. ಇಂದ್ರ ಲಾಟಮಂಡಲದಲ್ಲಿ ಆಳಿದ ಇನ್ನೊಂದು ರಾಷ್ಟ್ರಕೂಟ ಮನೆತನದ ಮೊದಲ ಅರಸನಾದ.

ಈತ ತನ್ನ ಅಣ್ಣನ ಉತ್ತರದ ದಂಡಯಾತ್ರೆಯಲ್ಲಿ ಆತನಿಗೆ ಬೆಂಬಲವಾಗಿ ನಿಂತು, ಶತ್ರುಗಳಿಂದ ಆತನನ್ನು ಕಾಪಾಡಿದ. ಗೋವಿಂದ ಸಾಯುವ ಮೊದಲು ತನ್ನ ಅಲ್ಪವಯಸ್ಕ ಮಗನಾದ ಅಮೋಘವರ್ಷನ ರಕ್ಷಣೆಗಾಗಿ ಇಂದ್ರನ ಮಗ ಸುವರ್ಣವರ್ಷ ಕರ್ಕರಾಜನನ್ನು ರಾಜಪ್ರತಿನಿಧಿಯಾಗಿ ನೇಮಿಸಿದ (814). ಕರ್ಕ ತನ್ನ ಜವಾಬ್ದಾರಿಯನ್ನು ಯಶಸ್ವಿಯಾಗಿ ಹೊತ್ತು ಅಮೋಘವರ್ಷನನ್ನು ಸಂಕಟಗಳಿಂದ ಪಾರು ಮಾಡಿ, ಸು. 821ರಲ್ಲಿ ಆತನನ್ನು ಸಿಂಹಸನದಲ್ಲಿ ಕುಳ್ಳಿರಿಸಿದ. ಕರ್ಕನ ಮಗ ಧಾರಾವರ್ಷ ನಿರುಪಮ ಧ್ರುವರಾಜ. ಈತನ 834 – 35ರ ಶಾಸನ ಲಭ್ಯವಿದೆ. ಈತನ ಮೊಮ್ಮಗ, ಅಕಾಲವರ್ಷ ಶುಭತುಂಗನ ಮಗನಾದ ಧಾರಾವರ್ಷ ಧ್ರುವರಾಜ ಸಹ ಮಾನ್ಯಖೇಟದಲ್ಲಿ ಆಳಿದ ಅಮೋಘವರ್ಷನ ಸಮಕಾಲೀನನೇ. ಇವನ 866 – 67ರ ತಾಮ್ರ ಶಾಸನವೊಂದು ನವಸಾರಿ ಜಿಲ್ಲೆಯಲ್ಲಿ ದೊರತಿದೆ. 888ರ ಬಾಗುಮ್ರಾ ಶಾಸನದಲ್ಲಿ ಉಕ್ತನದ ಅಕಾಲವರ್ಷ ಕೃಷ್ಣರಾಜ ಇಮ್ಮಡಿ ಧ್ರುವರಾಜನ ಮೊಮ್ಮಗನೆಂದು ತೋರುತ್ತದೆ. ಈತ ವಲ್ಲಭನ ಸಮಕ್ಷದಲ್ಲಿಯೆ ಉಜ್ಜಯಿನಿಯ ಶತ್ರುಗಳನ್ನು ಸೋಲಿಸಿದನೆಂದು ಶಾಸನದಲ್ಲಿ ಹೇಳಿದೆ. ಈ ವಲ್ಲಭ ಮಾನ್ಯಖೇಟದಲ್ಲಿ ಆಳುತ್ತಿದ್ದ ರಾಷ್ಟ್ರಕೂಟ ಇಮ್ಮಡಿ ಕೃಷ್ಣನಾಗಿರಬೇಕು. ಇವರೆಲ್ಲ ತಮ್ಮ ಶಾಸನಗಳಲ್ಲಿ ಮಹಸಾಮಂತಾಧಿಪತಿಗಳೆಂದೇ ವರ್ಣಿತರಾಗಿದ್ದಾರೆ. ಇವರು ತಮ್ಮ ಸ್ವಾಮಿಯ ಬೆಂಬಲಿಗರಾಗಿ, ವಿಧೇಯರಾಗಿ ಲಾಟಮಂಡಲದಲ್ಲಿ ಆಳುತ್ತಿದ್ದರೆನ್ನಲು ಆಧಾರಗಳಿವೆ.

ಖೇಟಕ ಮಂಡಲದ (ಈಗಿನ ಖೇಡಾ ಜಿಲ್ಲೆ) ವರೆಗಿನ ದಕ್ಷಿಣ ಗುಜರಾತು ರಾಷ್ಟ್ರಕೂಟರ ಅಧೀನದಲ್ಲಿದ್ದುದನ್ನು ನೋಡಿದ್ದೇವೆ. ಧ್ರುವ, ಮುಮ್ಮಡಿ ಗೋವಿಂದ, ಮುಮ್ಮಡಿ ಇಂದ್ರರು ಉತ್ತರ ದಿಗ್ವಿಜಯವನ್ನು ಕೈಗೊಂಡು ಗೂರ್ಜರ–ಪ್ರತೀಹಾರ ಹಾಗೂ ಪಾಲರೊಡಗೂಡಿದ ತ್ರಿಕೂಟ ಸಮರದಲ್ಲಿ ಪ್ರತಿಬಾರಿಯೂ ವಿಜಯವನ್ನು ಗಳಿಸಿ ಭಾರತದಲ್ಲಿಯೇ ಅತಿ ಪ್ರಬಲ ಅರಸರೆನಿಸಿಕೊಂಡರು. ಆ ಸಂದರ್ಭದಲ್ಲಿ ಜ್ಞಾತಿಗಳೂ ಸಾಮಂತರೂ ಆಗಿದ್ದ ಗುಜರಾತಿನ ರಾಷ್ಟ್ರಕೂಟರು ಇವರಿಗೆ ನೀಡಿದ ಸಹಾಯ ಸ್ಮರಣೀಯವಾದದ್ದು.

ಇದೇ ಸಮಯದಲ್ಲಿ ಸೌರಾಷ್ಟ್ರ ಮತ್ತು ಕಚ್ಛ್ ಪ್ರದೇಶಗಳಲ್ಲಿ ಅನೇಕ ಸಣ್ಣಪುಟ್ಟ ಸಾಮಂತರು ಆಳುತ್ತಿದ್ದರು. ಚಾವೋಟಕರು ಅವರಲ್ಲಿ ಒಬ್ಬರು. ಪಶ್ಚಿಮ ಸೌರಾಷ್ಟ್ರದಲ್ಲಿ (ಅಪರ ಸೌರಾಷ್ಟ್ರ ಮಂಡಲ) ಭೂಮಿಲಿಕಾವನ್ನು (ಈಗಿನ ಕಾಠಿಯಾವಾಡದಲ್ಲಿಯ ಭುಮಿಲಿ) ರಾಜಧಾನಿಯಾಗಿ ಮಾಡಿಕೊಂಡಿದ್ದ ಸೈಂಧವರು 8ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಆಳುತ್ತಿದ್ದರು. ಇವರು ಪ್ರತೀಹಾರರಿಗೆ ಸಾಮಂತರಾಗಿದ್ದರೆಂದು ತೋರುತ್ತದೆ. ಇವರ ಸರ್ವಕಾಲೀನರಾಗಿ ಜುನಾಗಢದಲ್ಲಿ ಚಳುಕ್ಯರೂ ದಕ್ಷಿಣ ಹಾಗೂ ಪಶ್ಚಿಮ ಸೌರಾಷ್ಟ್ರದಲ್ಲಿ ಅಭೀರರೂ ಸೌರ್ಯಮಂಡಲದ ವರಾಹರೂ ಅಧಿಕಾರದಲ್ಲಿದ್ದರು.

ಕಲ್ಯಾಣ ಚಾಳುಕ್ಯರು ಮಾನ್ಯಖೇಟದಿಂದ ರಾಷ್ಟ್ರಕೂಟರನ್ನು ಓಡಿಸಿದ ಸಮಯದಲ್ಲಿ, ಇಮ್ಮಡಿ ತೈಲಪನ ಸೇನಾನಿ ಎನಿಸಿದ ಚೌಳುಕ್ಯ ಮನೆತನದ ಬಾರಪ್ಪನೆಂಬವನು ಖೇಟಕ ಮಂಡಲದಲ್ಲಿದ್ದ ರಾಷ್ಟ್ರಕೂಟರನ್ನು ಸೋಲಿಸಿ, ಭೃಗುಕಚ್ಛವನ್ನು ರಾಜಧಾನಿಯಾಗಿ ಹೊಂದಿದ್ದ ಲಾಟಮಂಡಲದ ಅಧಿಪತಿಯಾದ. ಆದರೆ ಇವನು ಪರಮಾರ ಮುಂಜನನ್ನು ಎದುರಿಸಬೇಕಾಯಿತು. ಚೌಳುಕ್ಯ ಚಾಮುಂಡರಾಜ ಇವನ್ನು ಸೋಲಿಸಿ ಇವನ ರಾಜ್ಯವನ್ನು ಕಸಿದುಕೊಂಡನಾದರೂ ಬಾರಪ್ಪನ ಮಗನಾದ ಗೊಗಿರಾಜ ಇದನ್ನು ಪುನಃ ತನ್ನ ವಶಕ್ಕೆ ತಂದುಕೊಂಡ. ಈತನ ಮಗನಾದ ಕೀರ್ತಿರಾಜನ ಕಾಲದಲ್ಲಿ ದುರ್ಲಭರಾಜ ಮತ್ತೊಮ್ಮೆ ಇವನ ರಾಜ್ಯವನ್ನು ಕಸಿಯಲು ಯತ್ನಿಸಿ ವಿಫಲನಾದ. ಕೀರ್ತಿರಾಜನ ಮಗ ವತ್ಸರಾಜ ಮತ್ತು ಮೊಮ್ಮಗ ತ್ರಿಲೋಚನಪಾಲ 1051ರವರೆಗೆ ಆಳಿದರು. ಅನಂತರ ಇವರ ರಾಜ್ಯವನ್ನು ಗುಜರಾತಿನ ಚಾಳುಕ್ಯರು ವಶಪಡಿಸಿಕೊಂಡರು.

ಮುಮ್ಮಡಿ ಕೃಷ್ಣನ ತರುವಾಯ ಮಾನ್ಯಖೇಟದ ರಾಷ್ಟ್ರಕೂಟ ರಾಜ್ಯ ಮತ್ತೊಮ್ಮೆ ಚಾಳುಕ್ಯರ ವಶವಾಯಿತು. ಇಮ್ಮಡಿ ತೈಲಪ ಚಾಳುಕ್ಯ ರಾಜ್ಯದ ಪುನಃಪ್ರತಿಷ್ಠಾಕನೆನಿಸಿಕೊಂಡ. ಆ ವೇಳೆಗೆ ಗುಜರಾತಿನಲ್ಲಿಯೂ ಅದುವರೆಗೆ ಆಳಿದ ಅರಸು ಮನೆತನಗಳು ಅಳಿದು ಇನ್ನೊಂದು ಚಾಳುಕ್ಯ (ಚೌಳುಕ್ಯ) ಮನೆತನ ಪ್ರಾಬಲ್ಯಕ್ಕೆ ಬಂದಿತು. ಅಣಹಿಲಪಾಟಕವನ್ನು ರಾಜಧಾನಿಯಾಗಿ ಮಾಡಿಕೊಂಡ ಈ ವಂಶದ ಮೂಲರಾಜ ಕ್ರಮೇಣ ತನ್ನ ರಾಜ್ಯವನ್ನು ವಿಸ್ತರಿಸಿದ. ಅಭೀರರ ಗ್ರಾಹರಿಪು ಬ್ರಾಹ್ಮಣ ದ್ವೇಷಿಯಾಗಿ, ಪ್ರಭಾಸತೀರ್ಥಕ್ಕೆ (ಸೋಮನಾಥ) ಹೋಗುತ್ತಿದ್ದ ಯಾತ್ರಾರ್ಥಿಗಳನ್ನು ನಿಷೇಧಿಸಿ ಪ್ರಜೆಗಳನ್ನು ತೊಂದರೆಗೀಡು ಮಾಡಿದ್ದ. ಮೂಲರಾಜ ಇವನ ವಿರುದ್ಧ ದಂಡೆತ್ತಿ ಗ್ರಾಹರಿಪುವನ್ನು ಸೋಲಿಸಿ ಸೆರೆಹಿಡಿದ. ಚಾಹಮಾನ ವಿಗ್ರಹರಾಜ, ಪರಮಾರ ಮುಂಜ, ಕಳಚುರಿ ಲಕ್ಷ್ಮಣ ಇವರ ವಿರುದ್ಧ ತನ್ನ ರಾಜ್ಯವನ್ನು ಉಳಿಸಿಕೊಳ್ಳಲು ಈತ ಹೋರಾಡಬೇಕಾಯಿತು.

ಮೂಲರಾಜನ ಮಗ ಚಾಮುಂಡರಾಜ ಸಹ ವಿರೋಧಿಗಳನ್ನೆದುರಿಸಬೇಕಾಯಿತು. ತಾನು ಎಸಗಿದ ಯಾವುದೋ ಪಾಪಕಾರ್ಯಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಈತ ವಾರಾಣಸಿಗೆ ಹೋಗುವ ಮುನ್ನ ರಾಜ್ಯವನ್ನು ಮಗನಾದ ವಲ್ಲಭರಾಜನಿಗೆ ಒಪ್ಪಿಸಿದ. ಮಾರ್ಗಮಧ್ಯದಲ್ಲಿ ಇವನ ಮೇಲೆರಗಿ ಇವನ ರಾಜಚಿಹ್ನೆಗಳನ್ನು ಕಸಿದುಕೊಂಡ ಪರಮಾರ ಭೋಜನನ್ನು ಶಿಕ್ಷಿಸಲು, ಈತ ಸ್ವರಾಜ್ಯಕ್ಕೆ ಹಿಂದಿರುಗಿದ ಬಳಿಕ ಮಗನನ್ನು ಸೇನೆಯೊಡನೆ ಕಳಿಸಿದ. ಆದರೆ ಆತ ಹಾದಿಯಲ್ಲಿ ಸಿಡುಬುರೋಗದಿಂದ ಸತ್ತ. ರಾಜ್ಯ ಎರಡನೆಯ ಮಗನಾದ ದುರ್ಲಭರಾಜನಿಗೆ ಲಭಿಸಿತು (1009–10). ದುರ್ಲಭ ತನ್ನ ಸೋದರಳಿಯನಾದ ಭೀಮದೇವನಿಗೆ 1022ರಲ್ಲಿ ರಾಜ್ಯವನ್ನೊಪ್ಪಿಸಿ ತಾನು ಅಧಿಕಾರದಿಂದ ನಿವೃತ್ತನಾದ. ಭೀಮನ ಕಾಲದಲ್ಲಿ ಘಜ್ನಿಯ ಮಹಮೂದ ಗುಜರಾತನ್ನು ಮುತ್ತಿ ಸೋಮನಾಥ ದೇವಾಲಯದಲ್ಲಿಯ ಅಪಾರ ಸಂಪತ್ತನ್ನು ಕೊಳ್ಳೆಹೊಡೆದ(1025). 1031ರ ಅನಂತರ ಅಬೂ ಪರ್ವತ ಪ್ರದೇಶವನ್ನು ಭೀಮದೇವ ಗೆದ್ದುಕೊಂಡ. ಕಳಚುರಿ ಕರ್ಣನೊಡಗೂಡಿ ಪರಮಾರ ಭೋಜನನ್ನು ಸೋಲಿಸಿದ.

1064ರ ಸುಮಾರಿಗೆ ಭೀಮನ ಕಿರಿಯ ಮಗ ಕರ್ಣ ಪಟ್ಟಕ್ಕೆ ಬಂದ. ಈತ ಕರ್ನಾಟಕದ ಚಾಳುಕ್ಯರೊಡಗೂಡಿ ಪರಮಾರ ಜಯಸಿಂಹನನ್ನು ಸೋಲಿಸಿದನಾದರೂ ಮಾಳವ ದೇಶದಿಂದ ಹಿಂದಿರುಗಬೇಕಾಯಿತು. ಪರಮಾರ ಉದಯಾದಿತ್ಯ ಇವನನ್ನು ಅಲ್ಲಿಂದ ಓಡಿಸಿದ. ಇನ್ನೊಮ್ಮೆ ಪರಮಾರ ಜಗದ್ದೇವ ಇವನನ್ನು ಸೋಲಿಸಿದ. ಗೋವೆಯ ಕದಂಬ ವಂಶದ ಜಯಕೇಶಿಯ ಮಗಳಾದ ಮಯಣಲ್ಲಾ ದೇವಿಯನ್ನು ಕರ್ಣ ಮದುವೆಯಾದ. 1094ರಲ್ಲಿ ಈತ ಮರಣ ಹೊಂದಿದಾಗ, ಇವನ ಮಗ ಜಯಸಿಂಹ ಇನ್ನೂ ಕಿರಿಯನಾಗಿದ್ದ ಕಾರಣ ಮಯಣಲ್ಲಾದೇವಿ ರಾಜಪ್ರತಿನಿಧಿಯಾಗಿ ಕೆಲಕಾಲ ರಾಜ್ಯಭಾರ ಮಾಡಿದಳು.

ಸಿದ್ಧಪುರದಲ್ಲಿ ಸಿದ್ಧರಾಜ ಜಯಸಿಂಹನಿಂದ ನಿರ್ಮಿತವಾದ ರುದ್ರಮಹಾಕಾಲ ದೇವಾಲಯದ ತೋರಣ

ಜಯಸಿಂಹ ಚಾಳುಕ್ಯರಲ್ಲಿ ಅತಿ ಪ್ರಸಿದ್ಧನಾದ ಅರಸ. ಸಿದ್ಧರಾಜನೆನಿಸಿದ ಈತನ ಕಾಲದಲ್ಲಿ ಚಾಳುಕ್ಯರ ರಾಜ್ಯ ಉತ್ತರದಲ್ಲಿ ಜೋಧಪುರದ ಬಲಿ ಮತ್ತು ಜಯಪುರದ ಸಾಂಭರ್‌ವರೆಗೂ ಪೂರ್ವದಲ್ಲಿ ಭಿಲ್ಸಾ ಮತ್ತು ಪಶ್ಚಿಮದಲ್ಲಿ ಕಾಠಿಯಾವಾಡ ಮತ್ತು ಕಚ್ಛ್ ವರೆಗೂ ಹಬ್ಬಿತ್ತು. ಚಾಹಮಾನ ಅರ್ಣೋ ರಾಜ, ಪರಮಾರ ನರವರ್ಮ, ಚಂದೇಲ ಮದನವರ್ಮ, ಕಲ್ಯಾಣದ 6ನೆಯ ವಿಕ್ರಮಾದಿತ್ಯ, ಡಾಹಲದ ಕಳಚುರಿ ಗಯಾಕರ್ಣ ಇವರು ಇವನ ಸಮಕಾಲೀನರು. ಇವರ ವಿರುದ್ಧ ಸೆಣಸಾಡಿ ಇವರಿಗೆ ಸೇರಿದ ಕೆಲವು ಪ್ರದೇಶಗಳನ್ನು ಈತ ವಶಪಡಿಸಿಕೊಂಡ. ಸಿದ್ಧಪುರದ ರುದ್ರಮಹಾಕಾಲ ದೇವಾಲಯವನ್ನು ಈತ ಕಟ್ಟಿಸಿ, ಜ್ಯೋತಿಷ, ನ್ಯಾಯ ಮುಂತಾದ ಶಾಸ್ತ್ರಗಳನ್ನು ಕಲಿಸುವ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ. ಜೈನ ಕವಿ ಹೇಮಚಂದ್ರ ಈತನ ಆಸ್ಥಾನವನ್ನು ಬೆಳಗಿದ.

ಜಯಸಿಂಹನಿಗೆ ಮಕ್ಕಳಿರಲಿಲ್ಲವಾದ ಕಾರಣ ಹತ್ತಿರದ ಸೋದರ ಸಂಬಂಧಿಯಾದ ಕುಮಾರಪಾಲ ಪಟ್ಟಕ್ಕೆ ಬಂದ ಆದರೆ ಈತ ರಾಜನಾಗುವುದು ಜಯಸಿಂಹನಿಗೆ ಒಪ್ಪಿಗೆಯಾಗಿರಲಿಲ್ಲವಾದ ಕಾರಣ. ಕುಮಾರಪಾಲ ಅಧಿಕಾರಕ್ಕೆ ಬರುವ ಮೊದಲು ಶತ್ರುಗಳನ್ನು ಸೋಲಿಸಬೇಕಾಯಿತು. ಹೇಮಚಂದ್ರನಿಂದಾಗಿ ಜೈನಮತವನ್ನು ಸ್ವೀಕರಿಸಿದ ಕುಮಾರಪಾಲ ತನ್ನ ವಿಜಯಗಳಿಗಿಂತ ಹೆಚ್ಚಾಗಿ ಜೈನಧರ್ಮ ಪೋಷಕನೆಂದೇ ಖ್ಯಾತಿ ಪಡೆದಿದ್ದಾನೆ. ಕುಮಾರಪಾಲನ (1143–44 ರಿಂದ 1171–72) ಬಳಿಕ ರಾಜ್ಯಕ್ಕಾಗಿ ಅಂತಃಕಲಹಗಳುಂಟಾದವು. ಕೊನೆಗೆ ಅಜಯಪಾಲ ಯಶಸ್ವಿಯಾದ. ಇವನ ಮಗ ಇಮ್ಮಡಿ ಮೂಲರಾಜನ ಕಾಲದಲ್ಲಿ ಮಹಮದ್ ಘೋರಿ ಗುಜರಾತನ್ನು ಧಾಳಿ ಮಾಡಿದ. ಇಮ್ಮಡಿ ಭೀಮ ಆಳಲು ಬಂದಾಗ ಗುಜರಾತಿನ ಬಲ ಕುಗ್ಗಿ ಸೇವುಣರು, ಪರಮಾರರು, ಮಹಮ್ಮದೀಯರು ಈ ಪ್ರದೇಶಕ್ಕೆ ದಂಡೆತ್ತಿ ಬಂದರು. ಚೌಳುಕ್ಯರ ಸಾಮಂತರಾಗಿದ್ದ ವಾಘೇಲರ ಲವಣ ಪ್ರಸಾದ ಭೀಮನ ನೆರವಿಗೆ ಬಂದ. ಈ ಮನೆತನದ ಕೊನೆಯ ಅರಸ ಕರ್ಣ. ಈತನ ಕಾಲದಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಪತಿಗಳಾದ ಉಲುಘ್ ಖಾನ್ ಮತ್ತು ನಸರತ್‌ಖಾನರು ಗುಜರಾತನ್ನು ಆಕ್ರಮಿಸಿ ಕರ್ಣನನ್ನು ಸೋಲಿಸಿ, ಅವನ ಪತ್ನಿ ಕಮಲಾದೇವಿಯನ್ನೂ ಮಗಳು ದೇವಲದೇವಿಯನ್ನೂ ಸೆರೆಹಿಡಿದು ದೆಹಲಿಗೆ ಸಾಗಿಸಿದರು. ಅವನ ರಾಜಧಾನಿಯನ್ನು ಸೈನಿಕರು ಮುತ್ತಿ ಅಲ್ಲಿಯ ಅಪಾರ ಸಂಪತ್ತನ್ನು ಲೂಟಿ ಮಾಡಿದರು. ಅನಂತರ ಪಾಟಣದಿಂದ (ಅಣಹಿಲ ಪಟ್ಟಣ) ಸೋಮನಾಥಕ್ಕೆ ಹೋಗಿ ಅಲ್ಲಿಯ ಪ್ರಸಿದ್ಧ ದೇವಾಲಯವನ್ನು ಹಾಳುಗೆಡವಿ, ಆಲಯದಲ್ಲಿದ್ದ ಲಿಂಗವನ್ನು ಭಗ್ನ ಮಾಡಿ ದೆಹಲಿಗೆ ಒಯ್ದರು. ದೇವಾಲಯದ ಧನಕನಕಗಳು ಅವರ ವಶವಾದುವು. ಇನ್ನೊಮ್ಮೆ 1034–05ರಲ್ಲಿ ಅಲ್ಲಾವುದ್ದೀನ್ ತನ್ನ ಸೇನಾನಿಗಳನ್ನು ಗುಜರಾತಿಗೆ ಕಳಿಸಿದ. ಪುನಃ ರಾಜಧಾನಿಯಿಂದ ಓಡಿಹೋದ ಕರ್ಣ ವಾರಂಗಲ್ಲಿನ ಕಾಕತೀಯ ಪ್ರತಾಪರುದ್ರನ ಆಶ್ರಯ ಪಡೆದು ಅಲ್ಲಿಯೇ ತನ್ನ ಕೊನೆಯುಸಿರೆಳೆದ.

ಅಂದಿನಿಂದ ಗುಜರಾತು ದೆಹಲಿಯ ಸುಲ್ತಾನರ ಅಧಿಪತ್ಯಕ್ಕೊಳಪಟ್ಟಿತು. ಆದರೆ ಸೌರಾಷ್ಟ್ರ ಮಾತ್ರ ಇವರ ಸ್ವಾಧೀನಕ್ಕೆ ಬರದೆ, ಅಲ್ಲಿ ರಜಪೂತ ಮನೆತನಗಳವರು ಆಳುತ್ತಿದ್ದರು. ಒಂದು ಶತಮಾನದ ಬಳಿಕ ಗುಜರಾತಿನಲ್ಲಿ ಹೊಸದೊಂದು ಸುಲ್ತಾನ ಮನೆತನ ಆಳ್ವಿಕೆಗೆ ತೊಡಗುವವರೆಗೆ ಪರಿಸ್ಥಿತಿ ಹೀಗೆಯೇ ಮುಂದುವರಿದಿತ್ತು. ಅಲ್ಲಾವುದ್ದೀನ್ ಆಲ್ಫ್‌ಖಾನನನ್ನು ಈ ಪ್ರಾಂತ್ಯದ ಅಧಿಕಾರಿಯಾಗಿ ನೇಮಿಸಿದ. ಆದರೆ ಕೆಲಕಾಲದ ಬಳಿಕ ಈತನನ್ನು ಮಲಿಕ್ ಕಾಫರ್ ದೆಹಲಿಗೆ ಬರಮಾಡಿಕೊಂಡು ಕೊಲೆಮಾಡಿದ. ಗುಜರಾತಿನಲ್ಲಿದ್ದ ಅವನ ಹಿಂಬಾಲಕರು ಇದರಿಂದ ದಂಗೆ ಎದ್ದರು. ದೆಹಲಿಯಲ್ಲಿ ಘಟನೆಗಳು ತೀವ್ರ ಸ್ವರೂಪ ಪಡೆದು ಮಲಿಕ್ ಕಾಫರನೇ ತನ್ನ ಪ್ರಾಣವನ್ನು ಕಳೆದುಕೊಂಡ. ಮುಬಾರಕ್ ಷಹ ದೆಹಲಿಯ ಸುಲ್ತಾನನಾದ (1316). ಬಳಿಕ ಗುಜರಾತಿನ ದಂಗೆಯನ್ನು ಅಡಗಿಸಲಾಯಿತು.

ಮಹಮ್ಮದ್ ಬಿನ್ ತುಘಲಕನ ಕಾಲದಲ್ಲಿ ಗುಜರಾತು ಅವನ ರಾಜ್ಯದ ಒಂದು ಪ್ರಾಂತ್ಯವಾಗಿ ಮುಂದುವರಿಯಿತಾದರೂ, ಅಲ್ಲಿ ಅವನಿಂದ ನೇಮಿತರಾದ ಅಧಿಕಾರಿಗಳ ಪರಸ್ಪರ ದ್ವೇಷಾಸೂಯೆಗಳಿಂದ ಆಡಳಿತ ಸಡಿಲಗೊಂಡಿತು. ಅಲ್ಲಲ್ಲಿ ದಂಗೆಗಳು ಸಂಭವಿಸಿದುವು. ಇವನ್ನು ಅಡಗಿಸಲು ಸುಲ್ತಾನ ಸ್ವತಃ ದೆಹಲಿಯಿಂದ ಬಂದ (1345). ಪಾಟಣದಿಂದ ವಡೋದರಕ್ಕೆ ದಂಗೆಕೋರರನ್ನು ಬೆನ್ನಟ್ಟಿ ಕೊನೆಗೆ ಭರುಕಚ್ಛವನ್ನು ತಲಪಿ ಅದನ್ನು ತನ್ನ ನೆಲೆವೀಡಾಗಿ ಮಾಡಿಕೊಂಡ. ದಂಗೆಕೋರರನ್ನು ಅಡಗಿಸುವುದರಲ್ಲಿ ಯಶಸ್ವಿಯಾದ ಬಳಿಕ ಗುಜರಾತಿನ ಆಡಳಿತವನ್ನು ಕ್ರಮಬದ್ಧಗೊಳಿಸಲು ಉದ್ಯುಕ್ತನಾಗಿದ್ದಾಗ ದೌಲತಾಬಾದದ ದಂಗೆ ಅವನ ಗಮನ ಸೆಳೆದು ಆತ ಗುಜರಾತನ್ನು ಬಿಟ್ಟ. ಆರು ತಿಂಗಳುಗಳ ಬಳಿಕ ಪುನಃ ಗುಜರಾತಿಗೆ ಬಂದು (1347) ಪುನಃ ತಲೆ ಎತ್ತಿದ ದಂಗೆಕೋರರನ್ನು ಸೋಲಿಸಿದ. ಈ ಅವಾಂತರಗಳಲ್ಲಿ ದೌಲತಾಬಾದ್ ತುಘಲಕನ ಕೈಯಿಂದ ಜಾರಿತ್ತು. ಸೌರಾಷ್ಟ್ರ ಹಾಗೂ ಜುನಾಗಢದಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಇದ್ದ ಮಹಮ್ಮದ್ ಅನಂತರ ಸಿಂಧ್ ಮೂಲಕ ದೆಹಲಿಗೆ ಹಿಂದಿರುಗುವಾಗ ಥಟ್ಟಾದಲ್ಲಿ ಅನಾರೋಗ್ಯದಿಂದ 1351ರ ಮಾರ್ಚ್ 20 ರಂದು ಮರಣಹೊಂದಿದ. ಅನಂತರ ಬಂದ ಫಿರೋಜ್‌ಷಹ ಜಫರ್‌ಖಾನನ್ನು ಗುಜರಾತಿನ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿ ದೆಹಲಿಗೆ ಹಿಂದಿರುಗಿದ. ಈತನ ಬಳಿಕ ಇತರರು ಕೆಲವರು ಅಧಿಕಾರಕ್ಕೆ ಬಂದ ಮೇಲೆ, ಗುಜರಾತಿನಲ್ಲಿ ನೆಲಸಿದ್ದ ಮಹಮ್ಮದೀಯರ ಅಪೇಕ್ಷೆಯಂತೆ ದೆಹಲಿಯಲ್ಲಿ ಆಗ ಸುಲ್ತಾನನಾಗಿದ್ದ ಇಮ್ಮಡಿ ಮಹಮೂದ ಜಫರ್‌ಖಾನನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿ ಕಳಿಸಿದ. ಇವನಿಗೆ ಮುಜಫರ್‌ಖಾನ್ ಎಂಬ ಬಿರುದನ್ನು ಇತ್ತ. ಈ ಮೊದಲೇ ಆ ಅಧಿಕಾರ ಪಡೆದಿದ್ದ ಫರ್‌ಹತ್ ಉಲ್‌ಮುಲ್ಕ್ ಇವನನ್ನು ವಿರೋಧಿಸಿ ಕಂಬೋಇ ಕದನದಲ್ಲಿ ಮಡಿದ (1392). ಅನಂತರ ಅಣಹಿಲವಾಡವನ್ನು ಮುಜಫರ್‌ಖಾನ್ ಆಕ್ರಮಿಸಿದ. 1394ರಲ್ಲಿ ಸುಲ್ತಾನ್ ಮಹಮೂದ ಸತ್ತ ಬಳಿಕ ಗುಜರಾತಿನ ಹಿಂದೂ ನಾಯಕರು ಕೆಲವರು ದಂಗೆ ಎದ್ದರಾದರೂ ಮುಜಫರ್‌ಖಾನ್ ಅವರನ್ನು ಅಡಗಿಸಿದ. ಆದರೆ ದೆಹಲಿಯಲ್ಲಿ ಸುಲ್ತಾನನೊಡನೆ ಇದ್ದ ಈತನ ಮಗ ತಾತರ್‌ಖಾನ್, ತೈಮೂರ ದೆಹಲಿಯಿಂದ ಹಿಂದಿರುಗಿದ ಬಳಿಕ ಸುಲ್ತಾನ್ ಪದವಿಯನ್ನು ಪಡೆಯಬೇಕೆಂದು ಮುಜಫರನನ್ನು ಪ್ರೋತ್ಸಾಹಿಸಿದನಾದರೂ ಮುಜಫರ್ ಅದಕ್ಕೆ ಒಪ್ಪಲಿಲ್ಲ. ಕೊನೆಗೆ ತಾತರ್ ತಂದೆಯನ್ನು ಸೆರೆಹಿಡಿದು ತಾನೆ ಗುಜರಾತನ ಸ್ವತಂತ್ರ ಸುಲ್ತಾನನೆಂದು ಘೋಷಿಸಿಕೊಂಡನೆಂದು ಹಲವರ ಹೇಳಿಕೆ.



**ಗುಜರಾತಿನ ಶ್ರೀಮಂತರು ಅಕ್ಬರನಿಗೆ ಗೌರವ ಸಲ್ಲಿಸುತ್ತಿರುವುದು–ವರ್ಣಚಿತ್ರ**

ಒಂದು ವಿಧದಲ್ಲಿ ಈತನೇ ಗುಜರಾತಿನಲ್ಲಿ ಆಳಿದ ಮೊದಲನೆಯ ಸುಲ್ತಾನ. ಈತ ಮಹಮ್ಮದ್‌ಷಹ ಎಂಬ ಹೆಸರಿನಿಂದ ಆಳತೊಡಗಿದ(1403). ಇವನು ಮರುವರುಷವೇ ಸತ್ತ. ಇವನ ತಂದೆ ಸೆರೆಯಿಂದ ಮುಕ್ತನಾದ. ಬೆಂಬಲಿಗರ ಕೋರಿಕೆಯನ್ನು ಮನ್ನಿಸಿ ಆತ ಸುಲ್ತಾನ್ ಮುಜಫರ್‌ಷಹ ಎಂಬ ಹೆಸರಿನಿಂದ ಸ್ವತಂತ್ರವಾಗಿ ಆಳಲು ಒಪ್ಪಿದ (1407). ಅನಂತರ ಆತನ ಮೊಮ್ಮಗ ಅಹಮದ್‌ಷಹ 32 ವರ್ಷಗಳ ಕಾಲ (1411–43) ಆಳಿದ. ಸೌರಾಷ್ಟ್ರದಲ್ಲಿ ಆಳುತ್ತಿದ್ದ ಹಿಂದೂ ಮಾಂಡಲಿಕರನ್ನು ಸೋಲಿಸುವ ಇವನ ಯತ್ನ ವಿಫಲವಾಯಿತು. ಅನ್ಯಮತ ದ್ವೇಷಿಯಾದ ಈತ ಅನೇಕ ದೇವಾಲಯಗಳನ್ನು ಹಾಳುಗೆಡವಿದ. ಅಹಮದಾಬಾದ್ ನಗರವನ್ನು ಕಟ್ಟಿ ರಾಜಧಾನಿಯನ್ನು ಅಣಹಿಲವಾಡದಿಂದ ಈ ಹೊಸ ನಗರಕ್ಕೆ ಬದಲಾಯಿಸಿಕೊಂಡ.

1458ರಿಂದ ಆಳತೊಡಗಿದ ಫತ್‌ಖಾನ್ ಈ ಸುಲ್ತಾನರಲ್ಲಿ ಪ್ರಮುಖ. ಈತ ಮಹಮೂದ್ ಬೇಗಡಾ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಸೌರಾಷ್ಟ್ರವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳುವುದರಲ್ಲಿ ಈತ ಯಶಸ್ವಿಯಾದ. ಜುನಾಗಢಕ್ಕೆ ಮುಸ್ತಫಾಬಾದ್

ಎಂದು ನಾಮಕರಣವಾಯಿತು. ದ್ವಾರಕಾದಲ್ಲಿ ಅಧಿಕಾರದಲ್ಲಿದ್ದ ಭೀಮನನ್ನು ಈತ ಸೋಲಿಸಿ ಕೊಂದು ಆ ನಗರವನ್ನು ಲೂಟಿಮಾಡಿದ. ಚಂಪಾನೇರಿಯ ಅರಸನಾದ ಜಯಸಿಂಹನನ್ನು ಸೋಲಿಸಿ ಆ ಪ್ರಾಂತ್ಯವನ್ನು ವಶಪಡಿಸಿಕೊಂಡ. ಇಪ್ಪತ್ತು ತಿಂಗಳ ಮುತ್ತಿಗೆಯ ಅನಂತರ ಪಾವಾಗಢದ ಕೋಟೆ ಇವನ ವಶವಾಯಿತು. ಚಂಪಾನೇರಿಗೆ ಮುಹಮ್ಮದಾಬಾದ್ ಎಂಬ ಹೊಸ ಹೆಸರು ಬಂತು. ಎರಡು (ಜುನಾಗಢ ಮತ್ತು ಚಂಪಾನೇರ್) ಕೋಟೆಗಳನ್ನು ಗೆದ್ದ ಕಾರಣ ಈತ ಬೇಗಢಾ ಎನಿಸಿಕೊಂಡ. ಇವನು ಹಿಂದೂಗಳಿಗೆ ವಿಶೇಷವಾಗಿ ಕಿರುಕುಳ ಕೊಟ್ಟನೆಂದು ತಿಳಿದುಬರುತ್ತದೆ. ಈ ವೇಳೆಗೆ ಕ್ಯಾಂಬೆಯಲ್ಲಿ ಕೋಠಿಯನ್ನು ಕಟ್ಟಿಕೊಂಡು ವ್ಯಾಪಾರದಲ್ಲಿ ತೊಡಗಿದ್ದ ಪೋರ್ಚುಗೀಸರನ್ನು ಹಿಂದೂಡುವುದರಲ್ಲಿ ಈತ ವಿಫಲನಾದ. ದೀವ್ ದ್ವೀಪ ಅವರ ವಶವಾಯಿತು. ಅವರ ಪ್ರಾಬಲ್ಯ ಕ್ರಮೇಣ ಬೆಳೆಯಿತು. ಈತ 1511ರಲ್ಲಿ ತೀರಿಕೊಂಡ.

ಇವನ ಮಗ ಇಮ್ಮಡಿ ಮುಝಫರ್‌ಷಹ ಹಿಂದೂ ಅರಸರ–ಮುಖ್ಯವಾಗಿ ಮೇವಾಡದ ರಾಣಾ ಸಾಂಗಾನ–ವಿರುದ್ಧ ಕದನಗಳಲ್ಲಿ ತೊಡಗಿದ್ದನಾದರೂ ಸಾಂಗಾನನ್ನು ಸೋಲಿಸಲಾಗಲಿಲ್ಲ. 1526ರಿಂದ ಆಳತೊಡಗಿದ ಬಹದೂರ್‌ಷಹನ ಕಾಲದಲ್ಲಿ, ಆ ವೇಳೆಗೆ ದೆಹಲಿಯನ್ನು ಆಕ್ರಮಿಸಿದ ಮೊಗಲ್ ಅರಸ ಹುಮಾಯೂನ್ ಗುಜರಾತಿನ ವಿರುದ್ಧ ದಂಡೆತ್ತಿ ಬಂದ. ಇವನನ್ನು ಎದುರಿಸಲಾರದ ಬಹದೂರ್ ಪೋರ್ಚುಗೀಸರ ಸ್ನೇಹಹಸ್ತವನ್ನು ಬಯಸಿದ. ತಲೆಮರೆಸಿಕೊಂಡು ದೇಶದಿಂದ ಓಡಿಹೋಗುವುದರಲ್ಲಿದ್ದ ಈತನಿಂದ ಪೋರ್ಚುಗೀಸರು ಕೆಲವು ಅನುಕೂಲಗಳನ್ನು ಪಡೆದುಕೊಂಡರು. ಸ್ವಲ್ಪ ಕಾಲ ಗುಜರಾತು ಹುಮಾಯೂನನ ವಶವಾಗಿದ್ದರೂ, ಷೇರ್ ಷಹ ಹುಮಾಯೂನನನ್ನು ಓಡಿಸಲು ಮಾಡಿದ ಯತ್ನಗಳ ಸಂದರ್ಭದಲ್ಲಿ ಬಹದೂರ್ ಸ್ವಸ್ಥಾನಕ್ಕೆ ಮರಳಿದ. ಆದರೆ ಪೋರ್ಚುಗೀಸರಿಗೆ ಇವನು ನೀಡಿದ್ದ ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಂಡು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿದ್ದ ಅವರನ್ನು ಹತ್ತಿಕ್ಕಲು ಇವನು ಮಾಡಿದ ಯತ್ನ ವಿಫಲವಾಯಿತಷ್ಟೇ ಅಲ್ಲ, ಅವರಿಂದ ಈತ ಹತನಾದ (1551). ಮುಮ್ಮಡಿ ಮಹಮೂದ (1537–54) ಬೆಸಿನ್, ದೀವ್, ದಮನ್‌ಗಳನ್ನು ಇವರಿಗೆ ಬಿಟ್ಟುಕೊಡಬೇಕಾಯಿತು. (ಜಿ.ಬಿ.ಆರ್.)

ಸೋಮನಾಥ ದೇವಾಲಯ

ಅಕ್ಬರನ ಕಾಲದಲ್ಲಿ 1572ರ ವೇಳೆಗೆ ಮೊಗಲರು 1572ರಲ್ಲಿ ಗುಜರಾತಿನ ಮೇಲೆ ದಂಡೆತ್ತಿ ಹೊರಟು 1573ರ ಫೆಬ್ರವರಿ 26ರಂದು ಸೂರತ್ ಕೋಟೆಯನ್ನು ವಶಪಡಿಸಿಕೊಂಡನು. ಗುಜರಾತಿನಲ್ಲಿ ದಂಗೆಯೆದ್ದ ಸುದ್ದಿ ತಿಳಿದು ರಾಜಧಾನಿಯಿಂದ ಹಿಂತಿರುಗಿ ಅಹಮದಾಬಾದ್ ಬಳಿ ಯುದ್ಧದಲ್ಲಿ ದಂಗೆಕೋರರನ್ನು ಸೋಲಿಸಿ 1573ರ ಸೆಪ್ಟೆಂಬರ್ 2ರಂದು ಸಂಪೂರ್ಣವಾಗಿ ಗುಜರಾತನ್ನು ಆಕ್ರಮಿಸಿಕೊಂಡು ಅದರ ಪ್ರತ್ಯೇಕ ಇತಿಹಾಸವನ್ನು ಕೊನೆಗಾಣಿಸಿದರು. ತೋದರಮಲ್ಲನ ಸಹಾಯದಿಂದ ಅಕ್ಬರ್ ಕಂದಾಯದ ಜಮಾಬಂದಿಯನ್ನು (1575) ನಡೆಸಿದ. ಷಹಜಹಾನ ಅಲ್ಲಿಯ ವೈಸ್‌ರಾಯ್ ಆಗಿ ನೇಮಿಸಲ್ಪಟ್ಟಾಗ ಶಾಹಿಬಾಗನ್ನು ಕಟ್ಟಿಸಿದ. ಷಹಜಹಾನನ ಆಳ್ವಿಕೆಯ ಕಾಲದಲ್ಲಿ 1631ರಲ್ಲಿ ಅಲ್ಲಿ ಒಂದು ದೊಡ್ಡ ಕ್ಷಾಮ ತಲೆದೋರಿತು.

1760ರ ಮೊದಲೇ ಮರಾಠರು ಗುಜರಾತಿನ ಮೇಲೆ ತಮ್ಮ ಪ್ರಭಾವವನ್ನು ಸ್ಥಾಪಿಸಿ 1819ರ ವೇಳೆಗೆ ಬ್ರಿಟಿಷರ ಮುನ್ನಡೆಯಿಂದ ತಮ್ಮ ಅಧಿಕಾರವನ್ನು ಕಳೆದುಕೊಂಡರು. ಈ ಅವಧಿಯಲ್ಲಿ ಮರಾಠರು ಗುಜರಾತಿನ ಸಂಪೂರ್ಣ ಸ್ವಾಮ್ಯವನ್ನು ಪಡೆದಿದ್ದರು. ಔರಂಗ್‌ಜೇಬನ ಕಾಲದಲ್ಲಿ ಶಿವಾಜಿಯಿಂದ ಗುಜರಾತಿನಲ್ಲಿ ಮರಾಠರ ಕಾರ್ಯಾಚರಣೆ ಪ್ರಾರಂಭವಾಯಿತು. ಸೂರತ್ ಮತ್ತು ಭಡೋಚ ಸಮುದ್ರದ ಕಡೆಯಿಂದ ಸೂರೆಗೆ ಒಳಗಾದುವು. 1699 ಮತ್ತು 1716ರಲ್ಲಿ ದಾಭಡೆ ಗುಜರಾತ್ ಪ್ರದೇಶಗಳನ್ನು ಕೊಳ್ಳೆಹೊಡೆದ. ತ್ರಿಂಬಕ್‌ರಾವ್ ದಾಭಡೆ, ಪೀಲಾಜಿ ಗಾಯಕವಾಡ್ ಗುಜರಾತಿನಲ್ಲಿ ಆಸಕ್ತಿವಹಿಸಿದರು. ಒಂದನೆಯ ಬಾಜೀರಾಯನ ಅನುಯಾಯಿಯಾಗಿದ್ದ ಪೀಲಾಜಿ ಗಾಯಕವಾಡ ವಡೋದರದಲ್ಲಿ ನೆಲೆಸಿ, ಗಾಯಕವಾಡ ಮನೆತನದ ಆಳ್ವಿಕೆಯನ್ನು ಆರಂಭಿಸಿದ. ಈತನ ಮಗ ಇಮ್ಮಡಿ ದಾಮಾಜಿ 1761ರಲ್ಲಿ ನಡೆದ ಪಾಣೀಪಟ್ ಕದನದಲ್ಲಿ ಭಾಗವಹಿಸಿ ಜೀವಸಹಿತ ಹಿಂದಿರುಗಿದ. ಬಳಿಕ (1763) ಇವನ ಮಕ್ಕಳಲ್ಲಿ ಕಲಹಗಳುಂಟಾಗಿ, ಕೊನೆಗೆ ಹಿರಿಯ ಮೊಮ್ಮಗನಾದ ಆನಂದರಾಯ ರಾಜ್ಯವನ್ನು ಪಡೆದ. ಈತ 1805ರಲ್ಲಿ ಬ್ರಿಟಿಷರೊಡನೆ ಮಾಡಿಕೊಂಡ ಒಪ್ಪಂದದ ಫಲವಾಗಿ, ಮರಾಠರು ಅವರೊಡನೆ ನಡೆಸಿದ ಕದನಗಳಲ್ಲಿ ಈತ ಭಾಗವಹಿಸಬೇಕಾಗಲಿಲ್ಲ. ಆದರೆ 1875ರಲ್ಲಿ ದುರಾಡಳಿತದ ನೆಪವನ್ನು ಒಡ್ಡಿ ಆಗಿನ ಗಾಯಕವಾಡನಾಗಿದ್ದ ಮಲ್ಹಾರ್‌ರಾಯನನ್ನು ಸಿಂಹಾಸನದಿಂದ ಇಳಿಸಿ ಆತನ ಸ್ಥಾನಕ್ಕೆ ಬಾಲಕನಾಗಿದ್ದ ಸಯಾಜಿರಾಯನನ್ನು ಬ್ರಿಟಿಷರು ತಂದರು. ಈ ಅರಸ 1930ರವರೆಗೂ ಆಳಿದ. ಈತನ ಕಾಲದಲ್ಲಿ ವಡೋದರ ಸಂಸ್ಥಾನ ಬಹಳ ಅಭಿವೃದ್ಧಿ ಹೊಂದಿತು. ವಡೋದರದಂತೆಯೇ ಕಾಠಿಯಾವಾಡ್ ಅಥವಾ ಸೌರಾಷ್ಟ್ರ ಸಹ ಮೂರನೆಯ ಮರಾಠಾ ಯುದ್ಧದ ಬಳಿಕ ಬ್ರಿಟಿಷರ ಆಡಳಿತಕ್ಕೆ ಸೇರಿತು.

ಕ್ಯಾಂಬೆ, ಛೋಟ ಉದಯಪುರ, ಬರಿಯ, ಬಲಾಸಿನೋರ್ ಮತ್ತಿತರ ಹಲವು ಸಣ್ಣ ಸಂಸ್ಥಾನಗಳ ರಾಜರು ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡು ಆಶ್ರಿತರಾಗಿ ಉಳಿದುಕೊಂಡರು. ದೇಶೀಯ ಸಂಸ್ಥಾನಗಳನ್ನುಳಿದ ಭಾಗ ಆಗಿನ ಮುಂಬಯಿ ಪ್ರಾಂತ್ಯದ ಅಂಗವಾಗಿತ್ತು. 1947ರಲ್ಲಿ ದೇಶೀಯ ಸಂಸ್ಥಾನಗಳು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡುವು. 1948ರಲ್ಲಿ ಕಾಠಿಯಾವಾಡದ ಬಹು ಭಾಗ ಸೌರಾಷ್ಟ್ರವೆನಿಸಿಕೊಂಡು ರಾಜಪ್ರಮುಖರ ರಾಜ್ಯವಾಗಿ ರೂಪಗೊಂಡಿತು. 1956ರಲ್ಲಿ ಭಾಷಾನುಗುಣ ರಾಜ್ಯ ವಿಂಗಡಣೆಯಾದಾಗ ಗುಜರಾತ್–ಮಹಾರಾಷ್ಟ್ರಗಳು ಒಂದಾದ ದ್ವಿಭಾಷಾ ಮುಂಬಯಿ ರಾಜ್ಯದ ರಚನೆಯಾಯಿತು. ಇವೆರಡೂ ಪ್ರತ್ಯೇಕ ರಾಜ್ಯಗಳಾದ್ದು ಮೇ 1, 1960ರಲ್ಲಿ. 1960ರಿಂದ 1995ರವರೆಗೆ ಕಾಂಗ್ರೆಸ್ ಪಕ್ಷ ಅಧಿಕಾರ ನಡೆಸಿತು. 1995ರಿಂದ ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿದೆ. 2011 ಅಕ್ಟೋಬರ್ 7ಕ್ಕೆ ನರೇಂದ್ರ ಮೋದಿ ಮುಖ್ಯಮಂತ್ರಿಯಾಗಿ 10 ವರ್ಷಗಳಾಯಿತು, ಇಂದಿಗೂ ನರೇಂದ್ರಮೋದಿ ಮುಖ್ಯ ಮಂತ್ರಿಯಾಗಿದ್ದಾರೆ.

ಗುಜರಾತಿನಲ್ಲಿ ಪ್ರಾಚೀನ ಕಾಲದ ಅನೇಕ ಸಾಂಸ್ಕೃತಿಕ ಕುರುಹುಗಳುಂಟು. ಮೌರ್ಯರ ಆಳ್ವಿಕೆಯ ಕುರುಹುಗಳು ವಿರಳವಾಗಿದ್ದರೂ ಚಾಳುಕ್ಯರ ಕೋಟೆಗಳು, ಧಾರ್ಮಿಕ ಕಟ್ಟಡಗಳು, ಸರೋವರಗಳು, ಬಾವಿಗಳಿವೆ. ಉದಯಮತಿ ರಾಣಿಯ ರಾಣಿವಾವ್, ಕರ್ಣನ ಕರ್ಣಸಾಗರ ಮತ್ತು ಸಿದ್ಧರಾಜ ಜಯಸಿಂಹನ ಸಹಸ್ರಲಿಂಗ ತಲಾಬ್, ವಿರಂಗಾಂ ಎಂಬಲ್ಲಿಯ ಕೆರೆಗಳು ಉದಾಹರಣೆಗಳು. ಚಾಳುಕ್ಯರ ಕಾಲ ದೇವಾಲಯ ನಿರ್ಮಾಣದಲ್ಲಿ ಅತ್ಯುತ್ತಮ ಹೆಸರನ್ನು ಪಡೆದಿದೆ. ಉತ್ತರ ಗುಜರಾತಿನಲ್ಲಿ ಆರಂಭಿಸಿ, ಸೋಮನಾಥ ದೇವಾಲಯವೇ ಮೊದಲಾದ ಪ್ರಮುಖ ದೇವಾಲಯಗಳನ್ನು ಕಟ್ಟಿದ್ದು ಆ ಕಾಲದಲ್ಲಿ. ಆದರೆ, ಮುಸ್ಲಿಮರು ಅನೇಕ ಸಲ ದಾಳಿ ಮಾಡಿ ಅವನ್ನು ಧ್ವಂಸ ಮಾಡಿದರು. **(ನೋಡಿ–ಗುಜರಾತಿನ ವಾಸ್ತು–ಶಿಲ್ಪ)**

ಗುಜರಾತಿನ ರಾಜಮನೆತನದಲ್ಲಿ 13ನೆಯ ಶತಮಾನದವರೆಗೆ ಸೂರ್ಯಪೂಜೆ ಪ್ರಚಲಿತವಾಗಿತ್ತು. ಮೊದಲಲ್ಲಿ ಶಿವಪೂಜೆ ಅಷ್ಟೇನೂ ಜನಪ್ರಿಯವಾಗಿದ್ದಂತೆ ಕಾಣುವುದಿಲ್ಲ. ರಾಷ್ಟ್ರಕೂಟರು ಮತ್ತು ಚಾಳುಕ್ಯರು ಶೈವ ಮತ್ತು ವೈಷ್ಣವ ಧರ್ಮಗಳನ್ನು ಸಮನಾಗಿ ಕಾಣುತ್ತಿದ್ದರು. 10ನೆಯ ಶತಮಾನದಲ್ಲಿ ಶೈವ ಧರ್ಮದ ಪ್ರಚಾರವಾಯಿತು. ಸೋಮನಾಥ ಒಂದು ಮುಖ್ಯ ಯಾತ್ರಾಸ್ಥಳವಾಗಿತ್ತು. ಮೂಲರಾಜ, ಸಿದ್ಧರಾಜರು ಶೈವಧರ್ಮಕ್ಕೆ ಉತ್ತೇಜನ ಕೊಟ್ಟರು. ಕುಮಾರಪಾಲ ಜೈನಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ. ಕೆಲವು ಕಾಲ ಅದು ರಾಜ್ಯದ ಮುಖ್ಯ ಧರ್ಮವಾಗಿತ್ತು. ಸಂಸ್ಕೃತ, ಗುಜರಾತಿ ಭಾಷೆಗಳಲ್ಲಿ ಅನೇಕ ಧಾರ್ಮಿಕ ಮತ್ತು ಇತರ ಗ್ರಂಥಗಳ ರಚನೆಯಾಗಿದೆ. **(ನೋಡಿ–ಗುಜರಾತಿ ಸಾಹಿತ್ಯ)** (ಜಿ.ಆರ್.ಕೆ.)

**ಗುಜರಾತಿನ ವಾಸ್ತು, ಶಿಲ್ಪ :** ಈ ಪ್ರದೇಶದ ಅತ್ಯಂತ ಪ್ರಾಚೀನ ವಾಸ್ತುಶಿಲ್ಪ ಸ್ಮಾರಕಗಳೆಂದರೆ ಸಿಂಧೂ ಬಯಲಿನ ನಾಗರಿಕತೆಯ ಕಟ್ಟಡಗಳು. ಲೋಥಾಲ್, ರಂಗಪುರ, ರೋಜ್‌ಡಿ, ಸುರ್‌ಕೋಟಡ ಮುಂತಾದವು ಇದರ ನೆಲೆಗಳು. **(ನೋಡಿ–ಗುಜರಾತಿನ ಇತಿಹಾಸ)** ಅನಂತರಕಾಲದ ವಾಸ್ತುವಿನ ಉಲ್ಲೇಖವೆಂದರೆ ರುದ್ರದಾಮನನ ಶಾಸನದಲ್ಲಿ ಹೇಳಿರುವ, ಮೌರ್ಯರ ಕಾಲಕ್ಕೆ ಸಂಬಂಧಿಸಿದ, ಸುದರ್ಶನ ಸರೋವರ **(ನೋಡಿ– ಗುಜರಾತಿನ ಶಾಸನಗಳು, ನಾಣ್ಯಗಳು)**. ಆದರೆ ಈ ಸರೋವರದ ಒಡ್ಡು, ಕಾಲುವೆಗಳು ಯಾವುವೂ ಈಗ ಕಾಣಿಸುವುದಿಲ್ಲ. ಕಲ್ಲಿನಲ್ಲಿ ಕೊರೆದ ಜೈನ ವಿಹಾರ ಮತ್ತು ಚೈತ್ಯಗಳು ಜುನಾಗಢ, ತಲಾಜಾ ಮತ್ತು ಧಾಂಕಗಳಲ್ಲಿವೆ. ಜುನಾಗಢದಲ್ಲಿಯ

ಭಾವೆ ಪ್ಯಾರಾ ಮಠದ ಸಮೀಪದಲ್ಲಿ ಚೈತ್ಯವಿಹಾರಗಳ ಮೂರು ಸಾಲುಗಳುಂಟು. ಚೈತ್ಯದ್ದು ಗಜಪೃಷ್ಠಾಕೃತಿ. ಉಳಿದೆಲ್ಲವೂ ಸಾಮಾನ್ಯವಾಗಿ ಚತುರ್ಭುಜಾಕಾರದ ಕೋಣೆಗಳು. ಕೆಲವಕ್ಕೆ ಕಂಬಗಳುಳ್ಳ ಹೊರಾಂಗಣಗಳುಂಟು. ಎರಡರಲ್ಲಿ ಚೈತ್ಯಾಕಾರದ ಗವಾಕ್ಷಿಗಳಿವೆ. ಇವುಗಳಲ್ಲೊಂದರಲ್ಲಿ ಜೈನಧರ್ಮದ ಸಂಕೇತಗಳಾದ ಸ್ವಸ್ತಿಕ, ಭದ್ರಾಸನ, ನಂದಿಪಾದ, ಜೋಡಿಮೀನು, ಕಲಶ ಇವುಗಳ ಚಿಹ್ನೆಗಳಿವೆ. ಗಜಪೃಷ್ಠಾಕೃತಿಯ ಚೈತ್ಯ ಪ್ರ.ಶ.ಪೂ. 2 ನೆಯ ಶತಮಾನದ್ದಿರಬಹುದು. ಉಳಿದವುಗಳ ನಿರ್ಮಾಣ ಪ್ರ.ಶ. 200–300ರ ಕಾಲದಲ್ಲಿ ಆಗಿರಬಹುದು.

**ಮೊಢೇರದ ಸೂರ್ಯದೇವಾಲಯದ ಕೆತ್ತನೆ ಕಂಬಗಳು**

ಇದೇ ಸ್ಥಳದ ಉಪರಕೋಟದಲ್ಲಿರುವ ಕೊರೆದ ಕಲ್ಲಿನ ಚೈತ್ಯ ಎರಡು ಅಂತಸ್ತುಗಳುಳ್ಳದ್ದು. ಮೊದನೆಯದರಲ್ಲಿ 3.30 ಮೀ ಚದರದ ಒಂದು ಕುಂಡವಿದೆ. ಇದರ ಮೂರು ಬದಿಗಳಲ್ಲಿ ಅಂಗಳವಿದೆ. ಅಂಗಳದ ಬದಿಯಲ್ಲಿ ಕುಳಿತುಕೊಳ್ಳಲು ಆಸನವುಳ್ಳ ಗೂಡುಗಳುಂಟು. ಉಳಿದ ಬದಿಯಲ್ಲಿ ವಿಶಾಲವಾದ ಕಂಬಗಳುಳ್ಳ ಕೋಣೆಯಿದೆ. ಅಲ್ಲಲ್ಲಿ ಸುಂದರವಾದ ಪ್ರಾಣಿಗಳ, ಹೂವುಗಳ ಚಿತ್ರಗಳುಂಟು. ಕಂಬಗಳ ವೈವಿಧ್ಯದಿಂದ ಇವೆಲ್ಲವೂ ಪ್ರ.ಶ. 1–7ನೆಯ ಶತಮಾನಗಳಲ್ಲಿ ಆಗಿರಬಹುದೆಂದು ತೋರುವುದು. ತಲಾಜಾದಲ್ಲಿರುವ 30 ಕೊರೆದ ಚೈತ್ಯ ವಿಹಾರಗಳು ಇವುಗಳನ್ನು ಹೆಚ್ಚು ಕಡಿಮೆ ಹೋಲುವುವು. ಇವುಗಳಲ್ಲಿ ಒಂದು ಚೈತ್ಯದ ಗವಾಕ್ಷಿಯ ಆಕಾರ ವಿಶಿಷ್ಟವಾಗಿದೆ. ಸಾನಾದಲ್ಲಿ ಇಂಥ ಸುಮಾರು 62 ಕೊರೆದ ಗುಹಾಚೈತ್ಯ ವಿಹಾರಗಳಿವೆ. ಧಾಂಕದಲ್ಲಿಯ ಗುಹಾಚೈತ್ಯಗಳಲ್ಲಿ ಮೂರ್ತಿಗಳೂ ಕೆತ್ತಲ್ಪಟ್ಟಿವೆ.

**ತಾಯಿ ಮಗು, ಕೋಟ್ಯರ್ಕ ದೇವಾಲಯ, ಮೆಹಸಾನಾ ಜಿಲ್ಲೆ (ಸು. 7ನೆಯ ಶತಮಾನ)**

ಗುಪ್ತರ ಕಾಲದ ಯಾವ ವಿಧವಾದ ಕಟ್ಟಡಗಳೂ ಬೆಳಕಿಗೆ ಬಂದಿಲ್ಲ. ಸ್ಕಂದ ಗುಪ್ತನ ಪ್ರಾಂತ್ಯಾಧಿಕಾರಿಯಾಗಿದ್ದ ಚಕ್ರಪಾಲಿತ ಗಿರ್ನಾರಿನಲ್ಲಿ ವಿಷ್ಣುದೇವಾಲಯವನ್ನು ಕಟ್ಟಿಸಿದ್ದನೆಂಬುದಕ್ಕೆ ಅಲ್ಲಿಯ ಶಾಸನದಲ್ಲಿ ಉಲ್ಲೇಖವಿದೆ. ಅಲ್ಲಿಯ ದಾಮೋದರ ಮಂದಿರದಲ್ಲಿ ಇದರ ಅವಶೇಷಗಳಿರಬಹುದು.

ಗುಪ್ತರ ಅನಂತರ ಚಾಳುಕ್ಯರ ಕಾಲದವರೆಗೆ ದೇವಾಲಯದ ವಾಸ್ತುಶಿಲ್ಪದಲ್ಲಿ ಬೆಳವಣಿಗೆಯಾಗುತ್ತ ಚಾಳುಕ್ಯರ ಕಾಲದಲ್ಲಿ ಅದು ತನ್ನದೇ ಆದ ಸುಸ್ಪಷ್ಟವಾದ ಶೈಲಿಯಾಗಿ ಮಾರ್ಪಟ್ಟಿತು. ಚಾಳುಕ್ಯರ ಶೈಲಿಯ ಪೂರ್ವದ ಬೆಳವಣಿಗೆಯನ್ನು ಗೊಪ್, ವಿಸಾವಾದ, ಬಿಲೇಸ್ವರ್, ಸುತ್ರಪಾದ, ಥಾನ್ ಮತ್ತು ಕದ್ವಾರದಲ್ಲಿಯ ದೇವಾಲಯಗಳಲ್ಲಿ ಕಾಣಬಹುದು. ಗೊಪ್‌ದಲ್ಲಿಯ ದೇವಾಲಯ ಹಳೆಯದು ಮತ್ತು ಬಲು ಸರಳವಾದ್ದು. ಇದು ಎರಡು ಪ್ರಾಕಾರಗಳಿಂದ ಸುತ್ತುವರಿಯಲ್ಪಟ್ಟ, ಸಮಬಾಹುವಿನ ಗರ್ಭಗೃಹವುಳ್ಳ ದೇವಾಲಯ. ಶಿಖರ ತ್ರಿತಲವಾಗಿದೆ. ಕದ್ವಾರದಲ್ಲಿಯ ದೇವಾಲಯ ಉದ್ದವಾದ ಕೋಣೆಯಾಗಿದೆ; ಪ್ರಾಕಾರದಿಂದ ಸುತ್ತುವರಿಯಲ್ಪಟ್ಟಿದೆ. ಪ್ರಾಕಾರದ ಒಂದು ಬದಿಯಲ್ಲಿ ಮಂಟಪವಿದೆ. ಇದರ ದ್ವಾರದ ಚೌಕಟ್ಟಿನ ಕೆಳಗಿನ ಬದಿಯಲ್ಲಿ ಗಂಗೆ–ಯಮುನೆಯರ ಮೇಲೆ ಅಡ್ಡಜಂತಿಯಲ್ಲಿ ವಿಷ್ಣು, ಗಣಪತಿಗಳ ಮೂರ್ತಿ ಗಳಿವೆ. ಸ್ವಲ್ಪ ಮೇಲೆ ಸೂರ್ಯ, ಬ್ರಹ್ಮ, ವಿಷ್ಣು, ಶಿವ ಮತ್ತು ಬಹುಶಃ ಚಂದ್ರನ ಮೂರ್ತಿಗಳ ಸಾಲು ಇದೆ.



**ಶಿವಪಾರ್ವತಿ ದೇವಾಲಯ, ರೋಡಾ**

ಇದೇ ಕಾಲದ ಕಿಂದರ್‌ಖೇಡ್, ಸೋನ್ ಕನ್ಸಾರೀ ಮತ್ತು ಪಾಸ್ತರ ದೇವಾಲಯಗಳು ಶಿಖರದ ಶೈಲಿಯಲ್ಲಿ ಇತರ ದೇವಾಲಯಗಳಿಗಿಂತ ಭಿನ್ನವಾದಂಥವು.

ಒಟ್ಟಿನಲ್ಲಿ ಈ ಕಾಲದ ದೇವಾಲಯಗಳನ್ನು ಅವುಗಳ ವಾಸ್ತುಶಿಲ್ಪ ಲಕ್ಷಣದ ಮೇರೆಗೆ ವಿಸಾವಾದ –ಥಾನ್ ಮತ್ತು ಕದ್ವಾನ್–ಪಾಸ್ತಾರ್ ಎಂದು ಎರಡು ಪಂಗಡಗಳಾಗಿ ವಿಂಗಡಿಸಬಹುದು.

ಕ್ರಮೇಣ, ಚಾಳುಕ್ಯರ ಕಾಲದಲ್ಲಿ ದೇವಾಲಯದ ನಿರ್ಮಾಣದಲ್ಲಿ ಒಂದು ವಿಶಿಷ್ಟ ಶೈಲಿ ವಿಕಾಸ ಹೊಂದಿತು. ಈ ಕಾಲದ ಕಟ್ಟಡಗಳನ್ನು ಕೋಟೆಗಳು, ಹೆಬ್ಬಾಗಿಲುಗಳು, ಸರೋವರಗಳು, ದೇವಾಲಯಗಳು, ತೋರಣಗಳೆಂದು ವಿಭಾಗಿಸ ಬಹುದು. ಶಾಸನಗಳಲ್ಲಿ ಪ್ರಾಕಾರಗಳೆಂದು ಕರೆಯಲಾದ ಕೋಟೆಗಳು ಕ್ರಮೇಣ ಹಾಳಾಗಿ ಈಗ ಅಲ್ಲಲ್ಲಿ ದಿಬ್ಬಗಳಾಗಿ ಕಾಣುತ್ತವೆ. ದಾಭೋಯಿಕೋಟೆಯ ನಿರ್ಮಾಣ ಪ್ರಾಯಶಃ ಜಯಸಿಂಹ ಸಿದ್ಧರಾಜ ಮತ್ತು ಅವನ ಹಿಂದಿನವ ರಿಂದ ಪ್ರಾರಂಭವಾಗಿ ವಾಘಲಾರಾಜನಾದ ವಿಸಾಲಿ ದೇವನ (1244–61) ಕಾಲದವರೆಗೂ ಮುಂದುವರಿಯಿತು. ವಸ್ತುಪಾಲಚರಿತ ಎಂಬ ಗ್ರಂಥದ ಪ್ರಕಾರ ವಸ್ತುಪಾಲನ ಸಹೋದರನಾದ ತೇಜಪಾಲ ಮತ್ತು ವಾಘೇಲದ ರಾಜ ವೀರಧವಲನ ಮಂತ್ರಿ ಈ ನಗರದ ಪ್ರಾಕಾರವನ್ನು ಕಟ್ಟಿಸಿದರು. ಈಗ ಇದರ ನಾಲ್ಕು ಬದಿಗಳಲ್ಲಿಯ ಹೆಬ್ಬಾಗಿಲುಗಳು ಉಳಿದಿವೆ. ವಡೋದರದ ಕೋಟೆಯ ಹೆಬ್ಬಾಗಿಲಿನ ಕಂಬಗಳು ಸುಂದರವಾದ ಚಿತ್ರಗಳಿಂದಲೂ ಮೂರ್ತಿಗಳಿಂದಲೂ ಅಲಂಕೃತವಾಗಿವೆ. ಝಿಂಜೂವಾದ, ಗುಮ್ಲಿ, ಜುನಾಗಢಗಳಲ್ಲಿಯೂ ಇಂಥ ಕೋಟೆಗಳ ಅವಶೇಷಗಳಿವೆ.

ಮಹಾರಾಣಿ ಮಯಣಲ್ಲದೇವಿ ಕಟ್ಟಿಸಿದ (1,100), ವಿರಂಗಾಮಿನಲ್ಲಿಯ ಮಾನಸರ್ ಸರೋವರ ಪ್ರಾಯಶಃ ಶಂಖಾಕೃತಿಯದು; ಇಳಿಯಲು ಹಾಗೂ ಮೇಲೇರಲು ಹಲವು ದಾರಿಗಳಿಂದ ಕೂಡಿದ್ದು. ಘಾಟಿನಲ್ಲಿ ಈಗ ಸುಮಾರು 357 ಸಣ್ಣ ಶೈವ ವೈಷ್ಣವ

ಗುಡಿಗಳಿವೆ. ಮೊದಲು 520 ಗುಡಿಗಳಿದ್ದವು. ಮೊಧೇರದಲ್ಲಿಯ ಸೂರ್ಯ ದೇವಾಲಯದ ಪಕ್ಕದ ರಾಮಕುಂಡದ (ಸು. 11 ನೆಯ ಶತಮಾನ) ನೀರಿನ ಮಟ್ಟದ ತನಕ ಅಲ್ಲಲ್ಲಿ ಸುತ್ತಲೂ ಅಗಲವಾದ ಸ್ಥಳ ಬಿಟ್ಟಿದೆ. ಪ್ರತಿಯೊಂದು ಮೂಲೆಯಲ್ಲೂ ಹಂತಹಂತದ ಮಧ್ಯೆ ಒಂದೊಂದು ಸಣ್ಣ ಗುಡಿಯುಂಟು. ಅನ್ಹಿಲ್‌ವಾಡದ ರಾಣಿ ಬಾವಿ, ಬಾರೋತ್ ಬಾವಿಗಳು, ವಾಯಡದಲ್ಲಿಯ ಬಾವಿ, ವರ್ಧ್ವಾನ್‌ದ ಮಾಧವ ಮತ್ತು ಗಂಗಾ ಬಾವಿಗಳು ಹಾಗೂ ಧಾಂಡಲ್‌ಪುರದ ಬಾವಿಗಳು ವಾಸ್ತುಶೈಲಿಯ ದೃಷ್ಟಿಯಿಂದ ಪ್ರೇಕ್ಷಣೀಯ.



ಕೀರ್ತಿಸ್ತಂಭ, ವಡನಗರ

ಚಾಳುಕ್ಯರ ಕಾಲದ ದೇವಾಲಯಗಳನ್ನು ಎರಡು ಗುಂಪುಗಳಾಗಿ ವಿಂಗಡಿಸ ಬಹುದು. ಮೊದಲಿನ ಗುಂಪಿನ ದೇವಾಲಯಗಳನ್ನು ಅಳತೆ ಪ್ರಮಾಣಗಳ ದೃಷ್ಟಿಯಿಂದ ಮತ್ತೆ ಎರಡು ಗುಂಪುಗಳನ್ನಾಗಿ ವಿಭಾಗಿಸಬಹುದು. ಉತ್ತರ ಗುಜರಾತಿನಲ್ಲಿರುವ ಸೂನಕ್, ಸಂಡೇರ್, ರುಹಾವಿ, ದಿಲ್‌ಮಾಲ್, ಕಸರ್, ಧಿನೋಜ್, ಮಾಮೊಡ ಮತ್ತು ಕಾಠಿಯಾವಾಡದ ಪರಬಾದಿ, ಚೌಬಾರಿಗಳಲ್ಲಿಯ ದೇವಾಲಯಗಳು ಸಾಮಾನ್ಯವಾಗಿ ಸಣ್ಣವಾಗಿವೆ. ಮೊಧೇರ, ರುದ್ರಮಾಲ್ (ಉತ್ತರ ಗುಜರಾತ್), ಥಾನ್, ಸೋಮನಾಥ್ ಬಳಿಯ ಭೀಮನಾಥ್ ಮತ್ತು ಹಿರಣ್ಯ ನದಿಯ ಹತ್ತಿರದ ಸೂರ್ಯ ದೇವಾಲಯ-ಇವು ದೊಡ್ಡವಾಗಿವೆ. ಮೊಧೇರ ಸೂರ್ಯ ದೇವಾಲಯವನ್ನು 1026ರಲ್ಲಿ ನಿರ್ಮಿಸಲಾಗಿದೆ ಎಂದು ಶಾಸನಗಳಿಂದ ತಿಳಿಯುತ್ತದೆ. ಈ ದೇವಾಲಯದಲ್ಲಿ ಸೂರ್ಯಕುಂಡ ಅಥವಾ ರಾಮಕುಂಡ, ಸಭಾ ಮಂಟಪ ಮತ್ತು ಗೂಢ ಮಂಟಪವಿದೆ. ಸಭಾ ಮಂಟಪದಲ್ಲಿ ಸುಂದರ ಕೆತ್ತನೆ ಕೆಲಸ ಮತ್ತು ಕೆಳಭಾಗದಲ್ಲಿ ಅನೇಕ ಉಬ್ಬು ಶಿಲ್ಪಿಗಳನ್ನೊಳಗೊಂಡ 52 ಕಂಬಗಳಿವೆ. ಈ ಕಂಬಗಳಲ್ಲಿ ಅನೇಕ ಶಿಲ್ಪಗಳಿದ್ದು, ಕೆಲವು ಅಪರೂಪದ ಜೀವನ ಚಕ್ರದ ಶಿಲ್ಪಗಳಿವೆ. ಇವುಗಳಲ್ಲಿ ಯುವಕ-ಯುವತಿಯರಲ್ಲಿಯ ಸಹಜ ಕಾಮೋನ್ಮಾದದಿಂದ ಹಿಡಿದು, ಗರ್ಭದಾರಣೆ, ಹುಟ್ಟು ಮೊದಲಾದ ಹಂತಗಳ ಮೂಲಕ ಕಡೆಯಲ್ಲಿ ಸಾವಿನವರೆಗೆ ಜೀವನ ಚಕ್ರದ ಪ್ರಮುಖ ಹಂತಗಳನ್ನು ನಿರೂಪಿಸಲಾಗಿದೆ. ಪ್ರಪಂಚದಲ್ಲಿ ನಿರಂತರವಾಗಿ ನಡೆಯುತ್ತಿರುವ ಸೃಷ್ಟಿ, ಸ್ಥಿತಿ ಮತ್ತು ಲಯದ ವಾಸ್ತವಾಂಶವನ್ನು ಮುಕ್ತವಾಗಿ ಚಿತ್ರಿಸಿರುವುದು ಈ ದೇವಾಲಯದ ಒಂದು ವಿಶೇಷವಾಗಿದೆ. ಸೋಮನಾಥದ ಶಿವದೇವಾಲಯ ಮತ್ತು ಗುಮ್ಲಿ ಸೆಜಕ್‌ಪುರದ ದೇವಾಲಯಗಳು ಎರಡನೆಯ ಗುಂಪಿಗೆ ಸೇರಿವೆ. ಇವಲ್ಲದೆ ತಾರಿಂಗ, ಸರೋತ್ರ, ಆಬು, ಗಿರ್ನಾರ್ ಮತ್ತು ಶತ್ರುಂಜಯದಲ್ಲಿಯ ಜೈನದೇವಾಲಯಗಳದು ಅವುಗಳ ವಾಸ್ತು ವೈಶಿಷ್ಟ್ಯದಿಂದ ಒಂದು ಪ್ರತ್ಯೇಕವಾದ ಗುಂಪು.

ಸೂರ್ಯದೇವಾಲಯ, ಮೊಧೇರ

ಸಾಮಾನ್ಯವಾಗಿ ಈ ದೇವಾಲಯಗಳ ಗೋಡೆಗಳ ಹೊರಬದಿಯಲ್ಲಿ, ಗರ್ಭಗುಡಿಯ ಮುಂದಿನ ಮಂಟಪದ ಮಧ್ಯದ ಗುಮ್ಮಟಾಕಾರದ ಚಾವಣಿಯಲ್ಲಿ ಮತ್ತು ಕಂಬಗಳ ಮೇಲೆ ವಿಶೇಷವಾಗಿ ದೇವಮಾನವ ಮೂರ್ತಿಗಳೂ ರೇಖಾ ಹೂಬಳ್ಳಿ ಚಿತ್ರಗಳೂ ಇರುತ್ತವೆ. ಗೋಡೆಗಳು ಅಲ್ಲಲ್ಲಿ ಕ್ರಮವಾಗಿ ಹಿಂದಕ್ಕೆ ಸರಿದು ಮುಂದಕ್ಕೆ ಚಾಚಿರುವುದರಿಂದ ತಳವಿನ್ಯಾಸ ಚತುಷ್ಕೋಣವಾಗಿರದೆ ಸಮಸಂಖ್ಯೆಯ ಅನೇಕ ಕೋಣಗಳುಳ್ಳ ಹಲವು ಭುಜುಗಳನ್ನುಳ್ಳದ್ದಾಗಿದೆ. ಈ ಎರಡು ಲಕ್ಷಣಗಳು 500-1000ದ ಕಾಲದ ಗುಡಿಗಳಲ್ಲಿ ಇಲ್ಲ. ಮಂಟಪದ ಮೇಲೆ ಗುಮ್ಮಟವೂ ಗರ್ಭಗುಡಿಯ ಮೇಲೆ ರೇಖಾನಾಗರ ಶೈಲಿಯ ಶಿಖರವೂ ಇವೆ. ಸರ್ನೆಲ್‌ದಲ್ಲಿಯ ಗಲ್ತೇಶ್ವರ ದೇವಾಲಯ 38 ಕಂಬಗಳ ಸಭಾ ಮಂಟಪದಿಂದ ಮತ್ತು ವರ್ತುಳಾಕಾರದ ನಕ್ಷತ್ರಾಕೃತಿಯ ತಳವಿನ್ಯಾಸದ ಗರ್ಭಗುಡಿಯಿಂದ ಕೂಡಿದೆ. ಗಿರ್ನಾರದ ನೇಮಿನಾಥ ದೇವಾಲಯಕ್ಕೆ ಸುತ್ತಲೂ ಸರಾಯಿಯ ಪ್ರಾಕಾರವಿದೆ. ಹಾಗೆಯ ಗುಮ್ಲಿಯ ನವಲಾಖ ದೇವಾಲಯಕ್ಕೆ ಸರಾಯಿಯಿಲ್ಲದ ಪ್ರಾಕಾರವುಂಟು. ಕಸರ್ ಮತ್ತು ಗಿರ್ನಾರ್‌ಗಳಲ್ಲಿ ತ್ರಿಕೂಟಾಚಲ ದೇವಾಲಯಗಳಿವೆ. ಪ್ರಸಿದ್ಧವಾದ ಸೋಮನಾಥ ದೇವಾಲಯ ಪದೇಪದೇ ಶತ್ರುಗಳ ಹಾವಳಿಗಳಿಂದ ಹಾಳಾಗಿ ಜೀರ್ಣೋದ್ಧಾರಗೊಂಡು, ಅದರ ಮೊದಲಿನ ಸ್ವರೂಪ ಬದಲಾಗಿದೆ.

ವಡನಗರ, ಕಪಡ್ವಂಜ್, ಐಲುದ್ರ, ರೇವ-ಈ ಸ್ಥಳಗಳಲ್ಲಿಯ ಕೀರ್ತಿ ತೋರಣಗಳು ಗುಜರಾತಿನ ವಾಸ್ತುಶಿಲ್ಪದ ಗುರುತುಗಳು. ಇವುಗಳಲ್ಲಿ ವಡನಗರದಲ್ಲಿರುವುದು ಪ್ರರೂಪಿ ಸ್ವರೂಪದ್ದು. ಇದು ಸಂಪೂರ್ಣ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಅಲಂಕೃತವಾಗಿದೆ.

(ಎ.ಎಸ್.)

**ಗುಜರಾತಿನ ಶಾಸನಗಳು, ನಾಣ್ಯಗಳು :** 1. **ಶಾಸನಗಳು** : ಗುಜರಾತು ಪ್ರ.ಶ.ಪೂ. ಸು. 3ನೆಯ ಶತಮಾನದಿಂದ ಪ್ರ.ಶ. 14ನೆಯ ಶತಮಾನದವರೆಗೆ ಕ್ರಮವಾಗಿ ಮೌರ್ಯ, ಕ್ಷತ್ರಪ, ಗುಪ್ತ, ತ್ರೈಕೂಟಕ, ಗೂರ್ಜರ, ಚಾಳುಕ್ಯ, ರಾಷ್ಟ್ರಕೂಟ, ವಲ್ಲಭಿ, ಮೈತ್ರಕ, ಸೋಲಂಕಿ ಮತ್ತು ವಾಘೇಲದ ಚಾಳುಕ್ಯ ಮುಂತಾದ ರಾಜವಂಶದವರ ಆಳ್ವಿಕೆಗೆ ಒಳಪಟ್ಟಿತ್ತೆಂಬುದೂ ಅವರಲ್ಲಿ ಕೆಲವರ ವಂಶಾವಳಿಯೂ ಧಾರ್ಮಿಕ ರಾಜಕೀಯ ಲೋಕೋಪಯೋಗಿ ವಿಷಯಗಳೂ ಚಟುವಟಿಕೆಗಳೂ ಇದುವರೆಗೆ ದೊರೆತ ಸುಮಾರು 300 ಶಾಸನಗಳಿಂದ ತಿಳಿದಿವೆ.

ಅಶೋಕ ಪ್ರಾಣಿಹತ್ಯೆಯನ್ನು ನಿಷೇಧಿಸಿದ್ದು, ಮಾರ್ಗಬದಿಗಳಲ್ಲಿ ಗಿಡ ಮರಗಳನ್ನು ನೆಡಿಸಿದ್ದು, ಬಾವಿಗಳನ್ನು ತೋಡಿಸಿದ್ದು, ಧರ್ಮಪ್ರಚಾರಕ್ಕೂ ನ್ಯಾಯ ಪರಿಪಾಲನೆಗೂ ಅಧಿಕಾರಿಗಳನ್ನು ನೇಮಿಸಿ ಅವರ ಕರ್ತವ್ಯಗಳನ್ನು ನಿರೂಪಿಸಿದ್ದು, ಜನಸಾಮಾನ್ಯರಲ್ಲಿ ನೀತಿಯ ಮಟ್ಟವನ್ನು ಹೆಚ್ಚಿಸಿ ಧರ್ಮಾಂಧತೆಯನ್ನು ಹೋಗಲಾಡಿಸಿ ಧರ್ಮಸಮನ್ವಯಕ್ಕೆ ಪ್ರಯತ್ನ ಮಾಡಿದ್ದು-ಮುಂತಾದ ವಿಷಯಗಳು ಗಿರ್ನಾರ್‌ನಲ್ಲಿ ದೊರೆತ, ಅಶೋಕ ಚಕ್ರವರ್ತಿಯ 14 ಕಲ್ಲುಬಂಡೆ ಶಾಸನಗಳಲ್ಲಿವೆ. ತರುವಾಯದ ಕ್ಷತ್ರಪರ ಶಾಸನಗಳಲ್ಲಿ

ಮುಖ್ಯವಾದವೆಂದರೆ ಜುನಾಗಢದ ರುದ್ರದಾಮನ ಶಾಸನ. ಭೀಕರ ಮಳೆಗಾಳಿಯಿಂದಾಗಿ ಅಲ್ಲಿಯ ಸುದರ್ಶನ ಸರೋವರದ ಕಟ್ಟೆ ಒಡೆದು ಅದನ್ನು ತಿರುಗಿ ಕಟ್ಟಿಸಲಸಾಧ್ಯ ವೆನ್ನುವಂಥ ಸ್ಥಿತಿಯಲ್ಲಿದಾಗ ಕ್ಷತ್ರಪರುದ್ರದಾಮನ್ ಧೈರ್ಯದಿಂದ ತನ್ನ ಪ್ರಾಂತ್ಯಾಧಿಕಾರಿ ಸುವಿಶಾಖನಿಂದ (ಕುಲೇಪನ ಮಗ) ಮತ್ತೆ ಅದನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ, ಈ ಸರೋವರವನ್ನು ಚಂದ್ರಗುಪ್ತ ಮೌರ್ಯನ ಪ್ರಾಂತ್ಯಾಧಿಕಾರಿಯಾಗಿದ್ದ ವೈಶ್ಯ ಪುಷ್ಯಗುಪ್ತ ನಿರ್ಮಿಸಿದನೆಂದೂ ಅನಂತರ ಅಶೋಕಮೌರ್ಯನ ಪ್ರಾಂತ್ಯಾಧಿಕಾರಿ ತುಶಾಷ್ಪ ಅದಕ್ಕೆ ಕಾಲುವೆಗಳನ್ನು ಮಾಡಿಸಿ ಜನರಿಗೆ ಹೆಚ್ಚು ಉಪಯೋಗವಾಗುವ ಹಾಗೆ ಮಾಡಿದನೆಂದೂ ಇದರಲ್ಲಿ ಹೇಳಿದೆ. ಸ್ಕಂದಗುಪ್ತ ಈ ಸರೋವರವನ್ನು ಮತ್ತೆ ಜೀರ್ಣೋದ್ಧಾರ ಮಾಡಿಸಿದನೆಂಬುದೂ ಇವರ ಪ್ರಾಂತ್ಯಾಧಿಕಾರಿಯಾದ ಚಕ್ರಪಾಲಿತ ಒಂದು ವಿಷ್ಣು ದೇವಾಲಯವನ್ನು ಇಲ್ಲಿ ಕಟ್ಟಿಸಿದನೆಂಬುದೂ ಇಲ್ಲಿ ದೊರಕಿರುವ ಸ್ಕಂದಗುಪ್ತನ ಶಾಸನದಿಂದ ತಿಳಿದುಬರುತ್ತದೆ.



**ಅಶೋಕನ ಬಂಡೆ ಶಾಸನ, ಗಿರ್ನಾರ್**

ಗೂರ್ಜರ ವಂಶದ ಮುಮ್ಮಡಿ ಜಯಭಟನ ತಾಮ್ರಶಾಸನದಲ್ಲಿ (ಶಕವರ್ಷ 456) ಅವನ ವಂಶಾವಳಿ ಮತ್ತು ಸಮಿಪದ್ರಕ ಗ್ರಾಮದಲ್ಲಿಯ ಭೂಮಿದಾನದ ವಿಷಯ ಇವೆ. ನವಸರಿತದ ಚಾಳುಕ್ಯರ ಶ್ಯಾಶ್ರಯ ಶೀಲಾದಿತ್ಯನ ತಾಮ್ರಶಾಸನದಲ್ಲಿ (ಶ.ವ. 421) ಆ ರಾಜನ ವಂಶಾವಳಿಯ ಜೊತೆಗೆ ಆಸಟ್ಟಿ ಗ್ರಾಮ ದಾನಮಾಡಿದ್ದಾಗಿ ಹೇಳಿದೆ. ಸೂರತ್ ಸಮೀಪದ ಅಂತ್ರೋಳಿ–ಚ್ಚರೋಳಿಯಲ್ಲಿ ದೊರೆತ, ರಾಷ್ಟ್ರಕೂಟ ಇಮ್ಮಡಿ ಕಕ್ಕನ ತಾಮ್ರಶಾಸನದಲ್ಲಿ (ಶ.ವ. 679) ಇವನ ಗ್ರಾಮದಾನದ ವಿಷಯ ಹೇಳುವಾಗ ಇವನ ವಂಶಾವಳಿ ಇದೆ. ಮೌಂಟ್ ಅಬುದಲ್ಲಿಯ ವಿಮಲದೇವಸ್ಥಾನ ಚಾಳುಕ್ಯ (ಸೋಲಂಕಿ) ವಂಶದ ಒಂದನೆಯ ಭೀಮನ ಕಾಲದಲ್ಲಿ ಕಟ್ಟಲ್ಪಟ್ಟಿತೆಂದು ಆ ದೇವಾಲಯದಲ್ಲಿಯ ಶಾಸನ (ಶ.ವ. 1119) ತಿಳಿಸುತ್ತದೆ. ಇದೇ ವಂಶದ ಜಯಸಿಂಹ ಮಾಳವದ ಯಶೋವರ್ಮನನ್ನು ಸೋಲಿಸಿದನೆಂದೂ ಅವಂತಿಮಂಡಳ ಅವನ ಅಧೀನವಾಗಿತ್ತೆಂದೂ ಉಜ್ಜಯನಿಯ ಒಂದು ಶಾಸನದಲ್ಲಿದೆ (ಪ್ರ.ಶ. 1195). ವಡನಗರದ ಪ್ರಶಸ್ತಿಯಲ್ಲಿ (ಶ.ವ. 1208) ಮೂಲರಾಜನಿಂದ ಹಿಡಿದು, ಚಾಮುಂಡ, ವಲ್ಲಭ ಮತ್ತು ದುರ್ಲಭರಿಂದ ಕೂಡಿದ ಚಾಳುಕ್ಯ ರಾಜರ ವಂಶಾವಳಿಯನ್ನು ಹಾಗೂ ಈ ವಂಶದ ಕುಮಾರಪಾಲ ಕೋಟೆಯನ್ನು ಕಟ್ಟಿಸಿದನೆಂಬ ವಿಷಯವನ್ನು ಹೇಳಿದೆ. ಕುಮಾರಪಾಲನ ಕಾಲದಲ್ಲಿ ಗಂಡ ಬೃಹಸ್ಪತಿ ಸೋಮನಾಥ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನೆಂದು ಪ್ರಭಾಸ್ ಪಾಟನ್ ಶಾಸನದಲ್ಲಿ (ವಿಕ್ರಮ ಶಕೆ 850) ಇದೆ. ಈಗ ಸಿಂತ್ರದಲ್ಲಿಟ್ಟಿರುವ (ಪೋರ್ಚುಗಲ್), ಸೋಮನಾಥದಲ್ಲಿಯ ಒಂದು ಶಾಸನದಲ್ಲಿ (ಶ.ವ. 1342) ತ್ರಿಪುರಾಂತಕನೆಂಬ ಲಾಕುಳಿಶ ಪಾಶುಪತ ಸಂನ್ಯಾಸಿ ಸೋಮನಾಥ ದೇವಾಲಯಕ್ಕೆ ಕೊಡಮಾಡಿದ ದತ್ತಿಯ ವಿಷಯವಿದೆ.

ವಲ್ಲಭಿಯಿಂದ ಆಳಿದ ಮೈತ್ರಕರ ಶಾಸನಗಳು ಸುಮಾರು 110 ದೊರೆತಿವೆ. ಇವುಗಳಲ್ಲಿ 90ಕ್ಕೂ ಹೆಚ್ಚಿನವು ತಾಮ್ರ ಶಾಸನಗಳು. ಮೈತ್ರಕರ ಶಾಸನಗಳಲ್ಲಿ ಕಂಡುಬರುವ ರಾಜಮುದ್ರೆಯ ಮೇಲಿನ ಚಿಹ್ನೆ ಕುಳಿತಿರುವ ನಂದಿಯದು. ಇದರ ಕೆಳಗೆ ಶ್ರೀ ಭಟ್ಟಾಕಃ ಎಂಬ ಅಂಕಿತ ಕಂಡುಬಂದಿದೆ. ಇದು ಮನೆತನದ ಮೂಲಪುರುಷನಾದ ಭಟ್ಟಾರ್ಕನ ಅಂಕಿತ. ಅನಂತರ ಆಳಿದ ಎಲ್ಲರೂ ಇದನ್ನೇ ಬಳಸಿರುವುದು ಗಮನಾರ್ಹ.

ಪ್ರಾಚೀನತಮ ತಾಮ್ರ ಶಾಸನ ಭಾವನಗರ ಜಿಲ್ಲೆಯ ಭಮೋದ್ರ – ಮೊಹೊತದಲ್ಲಿ ದೊರೆತ. ಗುಪ್ತವಲ್ಲಭೀ 183ನೆಯ ಸಂವತ್ಸರದ (ಪ್ರ.ಶ. 502) ದ್ರೋಣಸಿಂಹನದು. ಹಸ್ತವಪ್ರ ಆಹಾರದಲ್ಲಿಯ ಭಗವತೀ ದೇವಾಲಯಕ್ಕೆ ತ್ರಿಸಂಗಮಕ ಗ್ರಾಮವನ್ನು ದತ್ತಿಯಾಗಿ ಬಿಟ್ಟಿದ್ದು ಶಾಸನ ವಿಷಯ. ಶಾಸನವನ್ನು ಅರಸನ ಆಜ್ಞೆಯ ಮೇರೆಗೆ ಬರೆದ ಲೇಖಕ ಷಷ್ಟಿದತ್ತನ ಮಗ ಕುಮಾರಿಲ ಕ್ಷತ್ರಿಕ. ಇದು ದ್ರೋಣಸಿಂಹನ ಏಕೈಕ ಶಾಸನ.

ಒಂದನೆಯ ಧ್ರುವಸೇನನ 15 ತಾಮ್ರ ಶಾಸನಗಳಲ್ಲಿ ಹದಿನಾಲ್ಕರ ಲೇಖಕ ಕಿಕ್ಕುಕ; ಹದಿನೈದನೆಯದರ ಲೇಖಕ ಭದ್ರ, ಇಮ್ಮಡಿ ಧರಸೇನನ ಹನ್ನೆರಡು ಶಾಸನಗಳನ್ನೂ ಅತನಿಗೆ ಮೊದಲು ಆಳಿದ ಗುಹಸೇನನ ಎರಡು ಶಾಸನಗಳನ್ನೂ ಬರೆದಿರುವ ಅಧಿಕಾರಿ ಸ್ಕಂದಭಟ್ಟ. ಅಂತೆಯೇ ಶೀಲಾದಿತ್ಯನ 9 ಶಾಸನಗಳ, ಖರಗ್ರಹನ 2 ಶಾಸನಗಳ, ಮುಮ್ಮಡಿ ಧರಸೇನನ 1 ಶಾಸನದ, ಇಮ್ಮಡಿ ಧ್ರುವಸೇನನ 3 ಶಾಸನಗಳ ಲೇಖಕ ವತ್ರಭಟ್ಟಿ. ಇವರ ಕೆಲವು ಶಾಸನಗಳ ಸಾಹಿತ್ಯದಲ್ಲಿ ಪ್ರಸಿದ್ಧ ಕವಿಗಳಾದ ಕಾಳಿದಾಸ ಮುಂತಾದವರ ಶೈಲಿಯ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

ಇದುವರೆಗೆ ದೊರೆತಿರುವ ಶಿಲಾಶಾಸನಗಳೆಲ್ಲ ಭಗ್ನಗೊಂಡ ಸ್ಥಿತಿಯಲ್ಲಿವೆ. ಯಾವ ಒಂದು ಶಾಸನವೂ ಸಂಪೂರ್ಣವಾಗಿಲ್ಲ. ಕೆಲವರಲ್ಲಿ ಹಲವರ ಹೆಸರುಗಳ ಅಥವಾ ತಥಾಗತನಿಗೆ ಸಂಬಂಧಿಸಿದ ಉಲ್ಲೇಖಗಳನ್ನು ಕಾಣಬಹುದು. ಇವಲ್ಲದೆ ಇವರ ಶಾಸನಗಳಿರುವ ಮುದ್ರೆಗಳೂ ಹಲವಾರು ದೊರೆತಿವೆ. ಇವುಗಳಲ್ಲಿ ಬಹಳ ಮಟ್ಟಿಗೆ ಬೌದ್ಧಧರ್ಮಕ್ಕೆ ಸಂಬಂಧಿಸಿದ, ಯೇ ಧಮ್ಮ ಹೇತು ಪ್ರಭವಾ ಎಂದು ಆರಂಭವಾಗುವ ಸೂತ್ರವನ್ನು ಕೆತ್ತಲಾಗಿದೆ. ಸುಮಾರು 1.3 ಸೆಂಮೀ ಕಾಗದದ ಮೇಲೆ ಒತ್ತುವ ಮುದ್ರೆಯೊಂದರಲ್ಲಿ ಶ್ರೀ ಶೀಲಾದಿತ್ಯನೆಂಬ ಹೆಸರನ್ನು ಹಿಮ್ಮುಖವಾಗಿ ಕೆತ್ತಲಾಗಿದೆ.

**2. ನಾಣ್ಯಗಳು:** ಭಾರತದ ವಾಯುವ್ಯ ಭಾಗದಲ್ಲಿ ಪ್ರ.ಶ.ಪೂ. 2ನೆಯ ಶತಮಾನದಿಂದ ಪ್ರ.ಶ. 1ನೆಯ ಶತಮಾನದವರೆಗೆ ಆಳುತ್ತಿದ್ದ ಗ್ರೀಕರಿಂದ ಗುಜರಾತಿನ ಭಾಗದಲ್ಲಿ ನಾಣ್ಯ ಪದ್ಧತಿ ಸ್ಥಿರವಾಯಿತೆಂದು ಹೇಳಬಹುದು. ಇವರ ಪೂರ್ವದಲ್ಲಿ 5 ಗ್ರೇನ್ ತೂಕದ ಸ್ವಸ್ತಿಕ, ತ್ರಿಶೂಲ, ವೃತ್ತ, ಆನೆ, ಚಕ್ರ ಮುಂತಾದ ಚಿಹ್ನೆಗಳುಳ್ಳ ನಾಣ್ಯಗಳು ಉಪಯೋಗದಲ್ಲಿದ್ದುವು. ಕಾಮ್ರೇಜ್‌ನಲ್ಲಿ ದೊರೆತ ನಾಣ್ಯಗಳಲ್ಲಿ ಕೆಲವು ಅಚ್ಚೊತ್ತಿದವು. ಕೆಲವು ಎರಕ ಹೊಯ್ದವು; ಮತ್ತು ಅವಂತಿ, ಉಜ್ಜಯನಿ ನಾಣ್ಯಗಳು. ಗ್ರೀಕರ ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ವೃತ್ತಾಕಾರ ಅಥವಾ ಸಮಬಾಹುಗಳುಳ್ಳ ಚತುರ್ಭುಜಾಕಾರದವಾಗಿವೆ; ಅವುಗಳ ಮೇಲೆ ಗ್ರೀಕ್ ಮತ್ತು ಖರೋಷ್ಠಿ ಅಕ್ಷರಗಳೂ ರಾಜನ ತಲೆಯ ಚಿತ್ರವೂ ಇವೆ. ಕ್ಷಹರಾತ ಮತ್ತು ಕ್ಷತ್ರಪರ ನಾಣ್ಯಗಳಲ್ಲಿ ಬಾಣ, ಚಕ್ರ, ವಜ್ರಾಯುಧ, ಧರ್ಮಚಕ್ರ ಮುಂತಾದ ಚಿತ್ರಗಳು, ರಾಜನ ತಲೆಯ ಚಿತ್ರ ಮತ್ತು ಬ್ರಾಹ್ಮಿ ಮತ್ತು ಖರೋಷ್ಠಿ ಅಕ್ಷರಗಳಿವೆ. ಕಾರ್ದಮಕ ಕ್ಷತ್ರಪರ ನಾಣ್ಯಗಳು ಮಾತ್ರ ಹೆಚ್ಚು ವೈವಿಧ್ಯಪೂರ್ಣವಾದಂಥವು. ಇವು ತಾಮ್ರ, ಬೆಳ್ಳಿ ಮತ್ತು ಸತುವಿನಿಂದ ಮಾಡಿದವು; ವೃತ್ತಾಕಾರ ಅಥವಾ ಸಮಬಾಹುಗಳುಳ್ಳ ಚತುರ್ಭುಜಾಕಾರದವು. ಇವುಗಳ ಒಂದು ಬದಿಯಲ್ಲಿ ರಾಜನ ತಲೆಯ ಚಿತ್ರವೂ ಗ್ರೀಕ್ ಅಕ್ಷರವೂ ಮತ್ತೊಂದು ಬದಿಯಲ್ಲಿ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಯಲ್ಲಿ ರಾಜನ ಹೆಸರೂ ಇವೆ. ಬ್ರಾಹ್ಮಿ ಸಂಖ್ಯೆಯಲ್ಲಿ ಶಾಲಿವಾಹನ ಶಕೆಯೂ ನಕ್ಷತ್ರ, ಚಂದ್ರ, ಚೈತ್ಯ ಮುಂತಾದ ಚಿಹ್ನೆಗಳೂ ಇರುತ್ತವೆ. ಭಾರತ – ರೋಂ ವ್ಯಾಪಾರಕ್ಕೆ ಭಡೋಚ ಒಂದು ಕೇಂದ್ರವಾಗಿದ್ದುದರಿಂದ ಇಲ್ಲೂ ಬೆಳ್ಳಿ ಚಿನ್ನಗಳ ರೋಮನ್ ನಾಣ್ಯಗಳು ಇದ್ದಿರಬೇಕು. ರೋಮನ್ ಚಕ್ರವರ್ತಿ ಲೂಸಿಯಸ್ ವೀರಸನ (130 – 169) ಒಂದು ನಾಣ್ಯ ದೊರೆತಿದೆ. ಉಳಿದ ನಾಣ್ಯಗಳನ್ನು ಚಿನ್ನ ಬೆಳ್ಳಿಗಾಗಿ ಪ್ರಾಯಶಃ ಕರಗಿಸಿರಬೇಕು. ಗುಪ್ತರವು ಬೆಳ್ಳಿ ಮತ್ತು ತಾಮ್ರ ನಾಣ್ಯಗಳು. ಇಲ್ಲವೇ ರಜತಲೇಪಿತ ತಾಮ್ರ ನಾಣ್ಯಗಳು; ವೃತ್ತಾಕಾರದವು. ರಾಜನ ತಲೆಯ ಚಿತ್ರ, ಗುಪ್ತ ಶಕೆ, ರಾಜನ ಹೆಸರು ಮತ್ತು ಗರುಡ, ವಕ್ರಗೆರೆ, ಮಲಗಿದ ನಂದಿ, ಅಗ್ನಿಯುಳ್ಳ ವೇದಿಕೆ ಮುಂತಾದ ಚಿಹ್ನೆಗಳಿವೆ. ತ್ರೈಕೂಟಕರ ನಾಣ್ಯಗಳು ದುಂಡಾಗಿವೆ; ಬೆಳ್ಳಿಯವು. ರಾಜನ ತಲೆ, ಚೈತ್ಯ ನಕ್ಷತ್ರಗಳ ಚಿಹ್ನೆ ರಾಜನ ಹೆಸರು ಇವೆ. ಹೆಸರನ್ನು ಸೂಚಿಸುವಲ್ಲಿ ಕ್ಷತ್ರಪರ, ಗುಪ್ತರ ಪ್ರಭಾವವನ್ನು ಕಾಣಬಹುದು.

ಗುಜರಾತಿನ ನಾಣ್ಯಪದ್ಧತಿಯ ವೈಶಿಷ್ಟ್ಯವೆಂದರೆ ಇಂಡೋ – ಗ್ರೀಕರ ಕಾಲದಿಂದ ತ್ರೈಕೂಟಕರವರೆಗೆ ಬೆಳ್ಳಿಯ ಬಳಕೆ ಒಂದೇ ತೆರನಾಗಿರುವುದು ಮತ್ತು ರಾಜನ ತಲೆಯನ್ನು ಮೂಡಿಸುವ ಪದ್ಧತಿ ಏಕಪ್ರಕಾರವಾಗಿ ಉಳಿದುಬಂದಿರುವುದು.

ತ್ರೈಕೂಟಕರ ಅನಂತರ ಬಂದ ರಾಜರ ನಾಣ್ಯಗಳು, ವಲ್ಲಭಿಯ ಮೈತ್ರಕರವು ಹೊರತು, ಸಿಕ್ಕಿಲ್ಲ. ಮೈತ್ರಕರು ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದರು ಬೆಳ್ಳಿ ನಾಣ್ಯಗಳು ಸಂಪೂರ್ಣ ಬೆಳ್ಳಿಯವಾಗಿರದೆ ಬೆಳ್ಳಿಯ ಲೇಪನವನ್ನು ಹೊಂದಿವೆ. ಇವರ ಮೊದಲಿಗೆ ಅಚ್ಚಾದ ನಾಣ್ಯಗಳು ಸಾಧಾರಣವಾಗಿ 15 ಸೆಂಮೀ ಸುತ್ತಳತೆ ಹೊಂದಿದ್ದು 29 ಗ್ರೇನ್ ತೂಕದವಾಗಿವೆ. ನಾಣ್ಯದ ಒಂದು ಬದಿಯಲ್ಲಿ ಅರಸರ ಬಲಮುಖವನ್ನು ಕಾಣಬಹುದು. ಇನ್ನೊಂದು ಬದಿಯಲ್ಲಿ ತ್ರಿಶೂಲದ ಚಿಹ್ನೆಯಿದೆ. ಇದರ ಸುತ್ತಲೂ ಬ್ರಾಹ್ಮೀಲಿಪಿಯಲ್ಲಿ ಬರೆಹವಿದೆ. ಇದನ್ನು ಓದಲು ಅನೇಕರು ಪ್ರಯತ್ನಿಸಿರುವರಾದರೂ, ಅಕ್ಷರದಲ್ಲಿ ಸ್ಪಷ್ಟತೆ ಇಲ್ಲದ ಕಾರಣ ತೊಡಕುಗಳೂ ಭಿನ್ನಾಭಿಪ್ರಾಯಗಳೂ ಉಂಟಾಗಿವೆ. ಭಟಾರ್ಕ ಎಂಬಷ್ಟನ್ನು ಮಾತ್ರ ಎಲ್ಲರೂ ಓದಿದ್ದಾರೆ. ಈ ನಾಣ್ಯಗಳು ಬಹಳ ಮಟ್ಟಿಗೆ ಅನಂತರದ ಗುಪ್ತರ ನಾಣ್ಯಗಳನ್ನು ಹೋಲುತ್ತಿದ್ದುವು. ಆವುಗಳಿಂದ ಪ್ರಭಾವಿತಗೊಂಡಿವೆ ಎನ್ನಬಹುದು.

ಗುಜರಾತಿನಲ್ಲಿ ಸ್ವತಂತ್ರವಾಗಿ ಆಳಿದ ಸುಲ್ತಾನರ ನಾಣ್ಯಗಳು ದೊರೆತಿವೆ. ಇವನ್ನು ಮೊದಲು ಅಚ್ಚು ಹಾಕಿಸಿದವನು 1ನೆಯ ಅಹಮದ್ ಷಹ. ಸುಲ್ತಾನರ ನಾಣ್ಯಗಳೆಲ್ಲ ಹೆಚ್ಚಾಗಿ ಬೆಳ್ಳಿ ಹಾಗೂ ತಾಮ್ರದಲ್ಲಿ ಎರಕ ಹೊಯ್ದಂಥವು. ಚಿನ್ನದ ನಾಣ್ಯಗಳೂ ಇಲ್ಲದಿಲ್ಲ; ಆದರೆ ಅಪರೂಪ. ಅಹಮದಾಬಾದ್, ಅಹಮದ್‌ನಗರ (ಇದರ್), ಮುಸ್ತಫಾಬಾದ್ (ಗಿರಿನಗರ), ಮಹಮದಾಬಾದ್ (ಚಂಪಾನೇರ್) ಮತ್ತು ಖಾನ್ಪುರಗಳಲ್ಲಿ ಇವರ ಟಂಕಸಾಲೆಗಳಿದ್ದುವು. ಆದರೆ ಸಾಮಾನ್ಯವಾಗಿ ನಾಣ್ಯಗಳ ಮೇಲೆ ಇವುಗಳ ಸೂಚನೆ ಇರದೆ ಕೇವಲ ಷಹರ್ ಇ ಮುಕರ್ರಮ್ ಎಂದಿದೆ.

ಸಾಮಾನ್ಯವಾಗಿ ಸುಲ್ತಾನನ ಹೆಸರನ್ನು ಚೌಕಾಕಾರವಾಗಿ ಕೆತ್ತಲಾಗಿದ್ದು, ಪಕ್ಕದಲ್ಲಿ ಟಂಕಸಾಲೆಯ ಹೆಸರು ಅಥವಾ ಷಹರ್ ಇ ಮುಕರ್ರಮ್ ಎಂಬ ಅಕ್ಷರಗಳಿರುತ್ತವೆ. ಅಲ್ ಸುಲ್ತಾನ, ಅಲ್ ಅಜ಼ಮ್ ಎಂಬ ಇವರ ಬಿರುದುಗಳನ್ನು, ಒಮ್ಮೊಮ್ಮೆ ಇವರ ಧರ್ಮಸೂಚಕವಾದ ಅಬು ಅಲ್ ಮುಹಮ್ಮದ್, ಅಬುಲ್‌ಫತ್, ಅಲ್ ಮುತಸ್ಸಿಮ್ ಬೆ ಅಲ್ಲಾಹ್ ಅಲ್ ರಹ್ಮಾನ್ ಎಂಬ ಮತೀಯ ಬಿರುದುಗಳನ್ನು ಕಾಣಬಹುದು. ಇಮ್ಮಡಿ ಮುಹಮ್ಮದ್ ಷಹನ ನಾಣ್ಯಗಳಲ್ಲಿ ಪದ್ಯಗಳ ಛಾಯೆ ಕಂಡುಬರುತ್ತದೆ.

ಹೆಚ್ಚು ಗಮನಾರ್ಹವೆಂದರೆ ಇವರ ವಂಶಾವಳಿಯನ್ನು ಕೊಟ್ಟಿರುವ ನಾಣ್ಯಗಳು. ಇವುಗಳಲ್ಲಿ ವಂಶದ ಮೂಲಪುರುಷನಿಂದಾರಂಭಿಸಿ, ಆಳುತ್ತಿರುವ ಸುಲ್ತಾನನವರೆಗಿನ ರಾಜವಂಶಾವಳಿ ಇದೆ. 1ನೆಯ ಅಹಮದ್, 1ನೆಯ ಮಹಮ್ಮದ್ ಮತ್ತು ಬಹದೂರ್ ಷಹ-ಇವರ ನಾಣ್ಯಗಳನ್ನು ಇಲ್ಲಿ ಉದಾಹರಿಸಬಹುದು.

ಮುಮ್ಮಡಿ ಮಹಮದ್ ಮತ್ತು ಇಮ್ಮಡಿ ಮುಜ಼ಫರರ ಚಿನ್ನದ ನಾಣ್ಯಗಳು 185 ಗ್ರೇನ್ ತೂಕದವು. ಮೊದಲ ಅರಸರ ನಾಣ್ಯಗಳು 176–180 ಗ್ರೇನ್ ತೂಗುತ್ತವೆ. ಬೆಳ್ಳಿ ನಾಣ್ಯಗಳು 163–176 ಗ್ರೇನ್, ಅರ್ಧನಾಣ್ಯಗಳು 88 ಗ್ರೇನ್, ಕಾಲು ನಾಣ್ಯಗಳು 44 ಗ್ರೇನ್ ತೂಕದವಾಗಿವೆ. ಇಮ್ಮಡಿ ಮಹಮದ್ 229 ಗ್ರೇನ್ ತೂಕದ ತಾಮ್ರದ ನಾಣ್ಯಗಳನ್ನು ಅಚ್ಚುಹಾಕಿಸಿದ. ಆದರೆ ಅವನ ನಾಣ್ಯಗಳು ಸಾಮಾನ್ಯವಾಗಿ 148 ಗ್ರೇನ್ ತೂಕದವುಗಳಾಗಿದ್ದುವು.

ಅನ್ಹಿಲ್‌ವಾಡದ ಚಾಳುಕ್ಯರು ರಾಜ್ಯವನ್ನು ಕಟ್ಟಿ ವೈಭವದಿಂದ ಸಾಕಷ್ಟು ಸಮಯ ಆಳಿದರೂ ಅವರ ನಾಣ್ಯಗಳೊಂದೂ ಸಿಗದಿರುವುದು ಆಶ್ಚರ್ಯಕರ. (ಜಿ.ಬಿ.ಆರ್.;ಎ.ಎಸ್.)

**ಗುಜರಾತಿ ಭಾಷೆ :** ಭಾರತ ರಾಜ್ಯಾಂಗದಲ್ಲಿ ನಮೂದಾಗಿರುವ 18 ಭಾರತೀಯ ಭಾಷೆಗಳಲ್ಲಿ ಒಂದು; ಗುಜರಾತಿನ ಪ್ರಾಂತಭಾಷೆ. ಗುಜರಾತ್ ರಾಜ್ಯದಲ್ಲೂ ಗುಜರಾತಿ ಸಮುದಾಯಗಳು ನೆಲೆಸಿರುವ ಭಾರತದ ವಿವಿಧ ಭಾಗಗಳಲ್ಲೂ ಭಾರತದ ಹೊರಗೆ ಏಷ್ಯ, ಆಫ್ರಿಕಗಳಲ್ಲೂ ಈ ಭಾಷೆಯನ್ನಾಡುವ ಜನ ನೆಲೆಸಿದ್ದಾರೆ. ಗುಜರಾತಿ ಮಾತನಾಡುವವರ ಸಂಖ್ಯೆ 46,091,617 (2001), ಗುಜರಾತಿ ಇಂಡೋ–ಆರ್ಯನ್ ಭಾಷೆಗಳಲ್ಲೊಂದು. ಇದರ ಪೂರ್ವ ಮತ್ತು ಈಶಾನ್ಯ ಗಡಿಯಲ್ಲಿ ರಾಜಸ್ತಾನಿ ಇದೆ. ಸಹಜವಾಗಿ ಇವೆರಡು ಭಾಷೆಗಳೂ ಕ್ರಮೇಣ ಬೆರೆಯುತ್ತ ಬಂದಿವೆಯಾಗಿ ಎಲ್ಲೆಕಟ್ಟಿನ ಭಾಗಗಳಲ್ಲಿ ಉಪಭಾಷೆಗಳು ಯಾವ ಮೂಲದಿಂದ ಬಂದಿವೆಯೆಂಬುದನ್ನು ನಿರ್ಧರಿಸುವುದು ಕಷ್ಟ.

ವಾಙ್ಮಯ ಮತ್ತು ವೈಚಾರಿಕ ಗದ್ಯ ಸಾಹಿತ್ಯದ ದೃಷ್ಟಿಯಿಂದ ಆಧುನಿಕ ಗುಜರಾತಿ ಸಾಹಿತ್ಯ ಸಮೃದ್ಧವಾಗಿವೆ. ಇದರ ಸಾಹಿತ್ಯಕ ಪರಂಪರೆಯ ಇತಿಹಾಸ ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಉಪದೇಶಾತ್ಮಕ ಗದ್ಯ ಹಾಗೂ ಭಾವಗೀತಾತ್ಮಕ ಮತ್ತು ಪ್ರಶಂಸಾತ್ಮಕ (ಅಥವಾ ಮಾಗಧ) ಪದ್ಯ ರೂಪದ ರಚನೆಗಳು ಈ ಹಂತದಲ್ಲಿ ಕಾಣದೊರೆಯುತ್ತವೆ. ಗುಜರಾತಿ ಲಿಪಿ ದೇವನಾಗರಿ ಲಿಪಿಯ ಸುತ್ತು ಬರೆಹದ ರೂಪದ್ದಾಗಿದ್ದು, ಕಳೆದ ಆರೇಳು ಶತಮಾನಗಳಿಂದಲೂ ಪಶ್ಚಿಮ ಭಾರತದಲ್ಲಿ (ವಿಶೇಷವಾಗಿ ಗುಜರಾತ್ ಮತ್ತು ರಾಜಸ್ತಾನ ರಾಜ್ಯಗಳಲ್ಲಿ) ಬಳಕೆಯಲ್ಲಿತ್ತು. ಇದನ್ನು ಮಹಾಜನಿ ಎಂದು ಕರೆಯುತ್ತಾರೆ. ಇದರ ವರ್ಣಮಾಲೆ ಸಂಸ್ಕೃತಜನ್ಯವಾಗಿದ್ದು, ಅಕ್ಷರಗಳ ಆಕಾರ ದೇವನಾಗರಿಯನ್ನು ತುಂಬ ನಿಕಟವಾಗಿ ಹೋಲುತ್ತದೆ.

ಗುಜರಾತಿಯು ಇಂಡೋ–ಯುರೋಪಿಯನ್ (ಭಾರೋಪೀಯ) ಭಾಷಾ ಪರಿವಾರದ ಇಂಡೋ–ಇರಾನಿಯನ್ (ಭಾರತೀಯ ಇರಾನಿ) ಉಪವರ್ಗದ ಇಂಡೋ–ಆರ್ಯನ್ (ಭಾರತೀಯ–ಆರ್ಯ) ಶಾಖೆಗೆ ಸೇರಿದೆ. ಇಂಡೋ–ಆರ್ಯನ್ ಶಾಖೆಯ ಎರಡು ಮುಖ್ಯಕವಲುಗಳು (ಉತ್ತರದ ಕವಲು–ಪಹಾಡಿ. ಪಂಜಾಬಿ, ಲಹಂದ, ಸಿಂಧಿ, ಕಚ್ಛಿ; ಪೂರ್ವದ ಕವಲು–ಬಂಗಾಲಿ ಅಸ್ಸಾಮಿ ಮತ್ತು ಒರಿಯ) ಬೇರ್ಪಟ್ಟ ತರುವಾಯ ಪಶ್ಚಿಮ, ದಕ್ಷಿಣ ಮತ್ತು ನಡುವಣ ಶಾಖೆಗಳು ಮತ್ತೆ ಕವಲೊಡೆದವು. ದಕ್ಷಿಣದ ಭಾಷೆಗಳ (ಮರಾಠಿ–ಕೊಂಕಣಿ) ಬೇರ್ಪಡೆಯನ್ನು ಹಿಂಬಾಲಿಸಿ, ಪಶ್ಚಿಮದ ಭಾಷೆಗಳೂ (ಗುಜರಾತಿ, ರಾಜಸ್ತಾನಿ, ಭೀಲಿ) ನಡುವಣ ವಲಯದ (ಪಶ್ಚಿಮ ಹಿಂದಿ) ಭಾಷೆಗಳಿಂದ ಬೇರ್ಪಟ್ಟವು. ನಡುವಣ ವಲಯದಲ್ಲಿ ನಾಮವಾಚೀ ಏಕವಚನ ಪುಲ್ಲಿಂಗದ ಆ ಕಾರಾಂತ್ಯದ ರೂಪದಲ್ಲೂ ಪಶ್ಚಿಮ ವಲಯದಲ್ಲಿ ಓ ಕಾರಾಂತ್ಯದ ರೂಪದಲ್ಲೂ ಈ ಬೇರ್ಪಡೆ ಎದ್ದು ಕಾಣುತ್ತದೆ. ಹೀಗಾಗಿ ಪಶ್ಚಿಮ ವಲಯದಲ್ಲಿ ಘೋಡ (ಕುದುರೆ) ರೂಪವೂ ಗುಜರಾತಿಯಲ್ಲಿ ಘೋಡೊ ರೂಪವೂ ಕಾಣದೊರೆಯುತ್ತವೆ. ಪಶ್ಚಿಮ ಮತ್ತು ದಕ್ಷಿಣ ವರ್ಗದ ಭಾಷೆಗಳೂ ನಪುಂಸಕ ಲಿಂಗವನ್ನು ಉಳಿಸಿಕೊಂಡಿವೆ. ಪಶ್ಚಿಮ ವಲಯದ ಭಾಷೆಗಳಲ್ಲಿ ಮೊದಲಿಗೆ ಭೀಲಿಯೂ ಅನಂತರದಲ್ಲಿ ಗುಜರಾತಿ ಹಾಗೂ ರಾಜಸ್ತಾನದ ಉಪಭಾಷೆಗಳೂ ಬೇರ್ಪಡುತ್ತವೆ.

| | | | | |
|---|---|---|---|---|
| અ<br>ಅ | આ<br>ಆ | ઇ<br>ಇ | ઈ<br>ಈ | ઉ<br>ಉ |
| ઊ<br>ಊ | ઋ<br>ಋ | એ<br>ಏ | ઐ<br>ಐ | ઓ<br>ಓ |
| | ઔ<br>ಔ | અં<br>ಅಂ | અઃ<br>ಅಃ | |
| ક<br>ಕ | ખ<br>ಖ | ગ<br>ಗ | ઘ<br>ಘ | ઙ<br>ಙ |
| ચ<br>ಚ | છ<br>ಛ | જ<br>ಜ | ઝ<br>ಝ | ઞ<br>ಞ |
| ટ<br>ಟ | ઠ<br>ಠ | ડ<br>ಡ | ઢ<br>ಢ | ણ<br>ಣ |
| ત<br>ತ | થ<br>ಥ | દ<br>ದ | ધ<br>ಧ | ન<br>ನ |
| પ<br>ಪ | ફ<br>ಫ | બ<br>ಬ | ભ<br>ಭ | મ<br>ಮ |
| ય<br>ಯ | ર<br>ರ | લ<br>ಲ | વ<br>ವ | શ<br>ಶ |
| ષ<br>ಷ | સ<br>ಸ | હ<br>ಹ | ળ<br>ಳ | ક્ષ<br>ಕ್ಷ |
| | ત્ર<br>ತ್ರ | | જ્ઞ<br>ಜ್ಞ | |

**ಧ್ವನಿ ವ್ಯವಸ್ಥೆ:** ಗುಜರಾತಿ ಧ್ವನಿಮಾವ್ಯವಸ್ಥೆಯ ವಿಶಿಷ್ಟ ಲಕ್ಷಣಗಳೆಂದರೆ ಎಂಟು ಸ್ವರಗಳ – ಇ, ಎ ∊ ಉ ಓ ∂ ಅಆ–ವ್ಯವಸ್ಥೆ ಮತ್ತು ನ ಹಾಗೂ ಣ ಗಳ ಮತ್ತು ಲ ಮತ್ತು ಳ ಗಳ ಸ್ಪಷ್ಟ ಧ್ವನಿಘಟಕಗಳು. ಆರು ಸ್ವರಗಳೂ – ಇ ∊, ಉ ∂, ಆ, ಆ – ಅನುನಾಸಿಕಗಳಾಗಿಯೂ ಬರಬಹುದು. ಎಲ್ಲ ಸ್ವರಗಳೂ ಘೋಷ ಅಥವಾ ಅರ್ಧಘೋಷ ಸ್ವರಗಳಾಗಿರಬಹುದು. ಹೀಗಾಗಿ, ಬಾರ್ (ಹನ್ನೆರಡು) ಬಾರ್ (ಹೊರಗೆ) (ಅಕ್ಷರದ ಕೆಳಗಿನ ಕಿರುಗೀಟು ಅರ್ಧಘೋಷ ಸ್ವರವನ್ನು ಸೂಚಿಸುತ್ತವೆ) ಮತ್ತು ಭಾರ್ (ಹೊರೆ) ನಂಥ ಶಬ್ದಗಳಲ್ಲಿ ಬಾರ್‌ನಲ್ಲಿ ಬರುವ ಅರ್ಧಘೋಷಸ್ವರ ಬಾರ್ ಮತ್ತು ಭಾರ್‌ನಲ್ಲಿ ಬರುವ ಸಾಮಾನ್ಯ ದೀರ್ಘ ಸ್ವರವಾದ ಆ ಕ್ಕಿಂತ ಭಿನ್ನವಾಗಿದೆ. ಸ್ವರಗಳ ಮಾತ್ರೆಗೆ ಗುಜರಾತಿಯಲ್ಲಿ ಅಂಥ ಮಹತ್ತ್ವವಿಲ್ಲ. ಲಿಪಿಯಲ್ಲೇನೋ ಇ, ಉ, ಕಾರಗಳ ಹ್ರಸ್ವ ಮತ್ತು ದೀರ್ಘ ಸ್ವರಗಳನ್ನೇ ಸೂಚಿಸುವ ಪ್ರತ್ಯೇಕ ವರ್ಣಗಳಿವೆ; ∊ ಮತ್ತು ∂ ಕಾರಗಳಿಗೆ (ದೇವನಾಗರಿ ಸಂಪ್ರದಾಯದಂತೆ) ಪ್ರತ್ಯೇಕ ವರ್ಣಗಳಿಲ್ಲ.

**ವ್ಯಾಕರಣ :** ನಾಮರೂಪಗಳಲ್ಲಿ ಗುಜರಾತಿ ಮೂರು ಲಿಂಗಗಳನ್ನೂ ಎರಡು ವಚನಗಳನ್ನೂ ಹೊಂದಿದೆ. ವಿಶೇಷ್ಯ, ವಿಶೇಷಣ ಮತ್ತು ಕೃದಂತ ರೂಪಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಲ್ಲಿಯೂ ಏಕ ಮತ್ತು ಬಹು ವಚನಗಳಲ್ಲಿಯೂ ಸಾಧಿಸಬಹುದು. ವಿಭಕ್ತಿ ರೂಪಕ್ಕೆ ಸಂಬಂಧಿಸಿದಂತೆ ಹೆಚ್ಚೆಂದರೆ ಮೂರು ವಿಭಕ್ತಿ ರೂಪಗಳನ್ನು ಸ್ಪಷ್ಟವಾಗಿ ಗುರುತಿಸಬಹುದು: ಪ್ರತ್ಯಕ್ಷ ಏಕವಚನ, ಪ್ರತ್ಯಕ್ಷ ಬಹುವಚನ ಮತ್ತು ಪರೋಕ್ಷ ರೂಪ. ಈ ಬಗೆಗಳಲ್ಲಿ ಪುಲ್ಲಿಂಗ ನಾಮಪದಗಳು ಎರಡು ರೂಪಗಳನ್ನು

ನಪುಂಸಕ ಲಿಂಗನಾಮಪದಗಳು ಮೂರು ರೂಪಗಳನ್ನು ಹೊಂದಿರುತ್ತವೆ. ಸಬಲ ನಾಮಪದಗಳಿಗೆ ಹಾಗೂ ಸ್ತ್ರೀಲಿಂಗ ನಾಮಪದಗಳಿಗೆ ವಿಭಕ್ತಿ ಪ್ರತ್ಯಗಳಾವುವೂ ಇರುವುದಿಲ್ಲ.

ದಿಕ್ರೋ ನಂಥ ಪುಲ್ಲಿಂಗದ ನಾಮಪದ ಹಾಗೂ ಮಾಥೊ̃ ನಂಥ ನಪುಂಸಕ ನಾಮಪದಗಳಿಗೆ ಈ ರೀತಿ ಪ್ರತ್ಯಯಗಳನ್ನು ಹಚ್ಚಬಹುದು.

| | | | | |
|---|---|---|---|---|
| ಪ್ರತ್ಯಕ್ಷ | ಏಕವಚನ | ಬಹುವಚನ | ಏಕವಚನ | ಬಹುವಚನ |
| | ದಿಕ್ರ್ + ಓ | ದಿಕ್ರ್ + ಆ | ಮಾಥ್ + ಉ̃ | ಮಾಥ್ + ಆ̃ |
| ಪರೋಕ್ಷ | | ದಿಕ್ರ್ + ಆ | | ಮಾಥಾ |

ಹಾಥಿ (ಆನೆ) ಮತ್ತು ಮಚ್ಛರ್ (ಸೊಳ್ಳೆ) ಯಂಥ ಸಬಲ ನಾಮಪದಗಳಿಗೆ ವಿಭಕ್ತಿರೂಪಗಳನ್ನು ಹಚ್ಚುವುದಿಲ್ಲ. ಅಂತೆಯೇ, ದಿಕ್ರಿ (ಮಗಳು), ತವಾಕು (ಹೊಗೆಸೊಪ್ಪು), ಬೋ (ರಿಬ್ಬನ್), ಸತ್ತಾ (ಅಧಿಕಾರ) ದಂಥ ಸ್ತ್ರೀಲಿಂಗ ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳನ್ನಾಗಲೀ ವಚನ ಪ್ರತ್ಯಯಗಳನ್ನಾಗಲೀ ಹಚ್ಚುವುದಿಲ್ಲ. ಪ್ರಾಚೀನ ವಿಭಕ್ತಿ ಪ್ರತ್ಯಯಗಳಿಗೆ ಬದಲಾಗಿ ಅನೇಕ ಬಗೆಯ ಪರಪ್ರತ್ಯಯಗಳನ್ನು ಬಳಸಲಾಗುತ್ತದೆ. ಓ ಎಂಬ ಹೊಸ ಬಹುವಚನ ಪ್ರತ್ಯಯವನ್ನು (18 ನೆಯ ಶತಮಾನದಿಂದ ಈಚೆಗೆ) ಬಳಸಲಾಗುತ್ತಿದೆ ಐಚ್ಛಿಕವಾಗಿ ವಿಭಕ್ತಿ ಪ್ರತ್ಯಯ ಸಹಿತವಾದ ಬಹುವಚನ ರೂಪದಲ್ಲಿ ಆ ಪ್ರತ್ಯಯವನ್ನೂ ಬಳಸಲಾಗುತ್ತಿದೆ. ಉದಾ: ದಿಕ್ರ್ + ಆ ~ ದಿಕ್ರ್ + ಆ + ಓ (ಮಕ್ಕಳು),

~ ಮಾಥ್ +̃ ಆ ಮಾಥ್ +̃ ಆ + ಓ (ತಲೆಗಳು)

ಗುಜರಾತಿ ಪುರುಷವಾಚಕ ಸರ್ವನಾಮಗಳಲ್ಲಿ ಲಿಂಗವಿವಕ್ಷೆಯಿಲ್ಲ. ಉತ್ತಮ ಪುರುಷ ಬಹುವಚನದಲ್ಲಿ ಸಮಾವೇಶಿ ಮತ್ತು ಅಸಮಾವೇಶಿ ಸರ್ವನಾಮಗಳಿಗೆ ಪ್ರತ್ಯೇಕ ರೂಪಗಳಿವೆ: ಅಮೆ (ನಾವು–ಅಸಮಾವೇಶಿ), ಆಪ್ಣೆ (ನಾವು–ಸಮಾವೇಶಿ).

ಕ್ರಿಯಾರೂಪದಲ್ಲಿ ಗುಜರಾತಿ ಪುರುಷ ಮತ್ತು ವಚನ ರೂಪ ನಿದರ್ಶನವನ್ನು ಹೊಂದಿದೆ. ಪರಪ್ರತ್ಯಯಗಳನ್ನು ಹಚ್ಚುವುದರ ಮೂಲಕ ಕಾಲ ಮತ್ತು ಅವಸ್ಥಾ ವಿಶೇಷಗಳನ್ನು ಅಥವಾ ಕ್ರಿಯಾರೂಪಗಳನ್ನು (ಮೂಡ್ಸ್) ಸೂಚಿಸಲಾಗುತ್ತದೆ. ಹೋ (ಇರು) ಎಂಬ ಸಹಾಯಕ ಕ್ರಿಯಾಪದಯುಕ್ತವಾದ ಬಹುಪದ ರಚನೆಗಳ ಮೂಲಕ ಪೂರ್ಣಕಾಲಗಳನ್ನು ಸೂಚಿಸಲಾಗುತ್ತದೆ. ತಾತ್ಕಾಲಿಕ ವರ್ತಮಾನಕಾಲ. ಭೂತಕಾಲ ಮತ್ತು ಪೂರ್ವಕಾಲಿಕ ರೂಪಗಳು ಕೃದಂತಗಳಾಗಿದ್ದು, ನಾಮಪದಗಳಂತೆಯೇ ಅವುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಲಾಗುತ್ತದೆ. ಕಾರಕ ರೂಪಗಳಂತೆಯೇ ಧಾತುರೂಪಗಳನ್ನೂ ನಡೆಸಬಹುದು. ಏಕವಚನದಲ್ಲಿ ಎರಡು, ಬಹುವಚನದಲ್ಲಿ ಎರಡು–ಹೀಗೆ ಕ್ರಿಯಾರೂಪನಿದರ್ಶನದಲ್ಲಿ ಅಥವಾ ಕ್ರಿಯಾರೂಪ ಕಾಲಿಕೆಯಲ್ಲಿ ಹೆಚ್ಚೆಂದರೆ ನಾಲ್ಕು ರೂಪಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

| | | | | |
|---|---|---|---|---|
| | ಏಕವಚನ | ಬಹುವಚನ | ಏಕವಚನ | ಬಹುವಚನ |
| ಉತ್ತಮಪುರುಷ | ಬೋಲ್+ಉ̃ | ಬೋಲ್+ಇಏ | ಬೋಲ್+ಇಶ್ | ಬೋಲ್+ಇಶ್+ಉ̃ |
| ಇತರ ಪುರುಷಗಳು | ಬೋಲ್+ಏ | ಬೋಲ್+ಏ | ಬೋಲ್+ಶ್+ಓ | ಬೋಲ್+ಶ್+ಓ |

**ಉಪ ಭಾಷೆಗಳು** : ದಕ್ಷಿಣ, ಮಧ್ಯ ಹಾಗೂ ಉತ್ತರ ಗುಜರಾತ್ ಮತ್ತು ಸೌರಾಷ್ಟ್ರ ಪರ್ಯಾಯದ್ವೀಪ–ಇವು ಗುಜರಾತಿಯ ನಾಲ್ಕು ಪ್ರಮುಖ ಉಪಭಾಷಾ ವಲಯಗಳು. ಸೌರಾಷ್ಟ್ರದ ಉಪಭಾಷೆಗಳು ಪ್ರಾಚೀನವಾದುವಾಗಿದ್ದು ಕೆಲವು ಪ್ರಾಚೀನತರ ರೂಪಗಳನ್ನು ಉಳಿಸಿಕೊಂಡಿವೆ. ಅವುಗಳಲ್ಲಿ ಕೆಲವು ಆರು ಸ್ವರ (~ ಮತ್ತು $\partial$ ಗಳನ್ನು ಬಿಟ್ಟು) ವ್ಯವಸ್ಥೆಯನ್ನು ಹೊಂದಿವೆ. ಉತ್ತರದ ಉಪಭಾಷೆಗಳು ನೆರೆಯ ಪ್ರದೇಶದ ಭೀಲಿ ಭಾಷೆಯ ಕೆಲವು ಲಕ್ಷಣಗಳನ್ನು ಒಳಗೊಂಡಿವೆ. ಅನುನಾಸಿಕ ~ ಅಥವಾ ಇ ಅನುನಾಸಿಕ ವ್ಯಂಜನಗಳ ಸನಿಹದಲ್ಲಿದ್ದಾಗ ವಿವೃತ ~ ಅಥವಾ ε ಆಗಿಯೂ ಬದಲಾಗುವುದು ಹಾಗೂ ಕ ಕಾರ ಗ ಕಾರಗಳು ಇ, ಏ ಅಥವಾ ಯ ಕಾರದ ಎದುರಿನಲ್ಲಿ ಚಕಾರ ಜ ಕಾರಗಳಾಗಿ ತಾಲವ್ಯೀಕರಣಕ್ಕೊಳ ಗಾಗುವುದು–ಇವು ಉತ್ತರ ಹಾಗೂ ಮಧ್ಯ ಗುಜರಾತಿ ಉಪಭಾಷೆಗಳ ವಿಶಿಷ್ಟ ಲಕ್ಷಣ. ಮುಂದಿನ ವರ್ಣದಲ್ಲಿ ಯ ಕಾರವಿದ್ದರೆ ವರ್ಣವ್ಯತ್ಯಯವಾಗುವುದು ದಕ್ಷಿಣದ ಉಪಭಾಷೆಗಳ ವಿಶಿಷ್ಟ ಲಕ್ಷಣ. ಹೀಗಾಗಿ ಶಿಷ್ಟ ಆಪ್ಯೋ ರೂಪ ದಕ್ಷಿಣದ ಉಪಭಾಷೆಗಳಲ್ಲಿ ಅಯೋ ಎಂಬ ರೂಪದಲ್ಲಿ ಕಾಣದೊರೆಯುತ್ತದೆ. ವೃತ್ತಿಪರ ಭಾಷಾಶೈಲಿಯಗಳಲ್ಲಿ ಗಮನಾರ್ಹವಾದುವೆಂದರೆ ಸೌರಾಷ್ಟ್ರ ಹಾಗೂ ದಕ್ಷಿಣ ಗುಜರಾತಿನ ಕರಾವಳಿಯ ಬೆಸ್ತರ ಮಾತು. ಸೌರಾಷ್ಟ್ರದ ವಂದಿಮಾಗಧೀಯ ಹಾಗೂ ಹುಲ್ಲುಗಾವಲಿನ ಜನಸಮುದಾಯಗಳ ಮಾತು. ಸೌರಾಷ್ಟ್ರದ ಇಸ್ಮಾಯಿಲೀ ಖೋಜಾಗಳ ಮಾತು ಮತ್ತು ದಕ್ಷಿಣ ಗುಜರಾತಿನ ಪಾರ್ಸಿಗಳ ಮಾತು. ಒಟ್ಟಿನಲ್ಲಿ ಮಧ್ಯ ಹಾಗೂ ಉತ್ತರ ಗುಜರಾತಿನ ಉಪಭಾಷೆಗಳು ಆವಿಷ್ಕಾರಕ ಉಪಭಾಷೆಗಳು. ಸುಶಿಕ್ಷಿತ, ಮೇಲು ಜಾತಿಯ ಜನಸಮುದಾಯದ ಮಾತೇ ಆಧುನಿಕ ಶಿಷ್ಟ ಗುಜರಾತಿಗೆ ಆಧಾರವಾಗಿದೆ. (ಪಿ.ಬಿ.ಪಿ.)

**ಗುಜರಾತಿ ಸಾಹಿತ್ಯ :** ಗುಜರಾತಿ ಸಾಹಿತ್ಯದ ಇತಿಹಾಸವನ್ನು ಸಮೀಕ್ಷಿಸುವಾಗ ಗುಜರಾತಿನ ಮುಖ್ಯ ಭೂಮಿ ಮತ್ತು ಸೌರಾಷ್ಟ್ರ ಹಾಗೂ ಕಚ್ ಅನ್ನು ಒಳಗೊಂಡಿರುವ ಪರ್ಯಾಯ ದ್ವೀಪ ಭಾಗಗಳ ಸಾಹಿತ್ಯ ಕೃತಿಗಳನ್ನಲ್ಲದೆ ಮೌಂಟ್ ಅಬುವಿನ ಉತ್ತರಕ್ಕಿರುವ ಪ್ರದೇಶಗಳ ಸಾಹಿತ್ಯ ಕೃತಿಗಳನ್ನೂ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು, ಏಕೆಂದರೆ ಅಹಮದಾಬಾದಿನಲ್ಲಿ ಹದಿನೈದನೆಯ ಶತಮಾನ ಮತ್ತು ಪ್ರಾಯಶಃ ಹದಿನಾರನೆಯ ಶತಮಾನಗಳ ಅವಧಿಯಲ್ಲಿ, ಗುಜರಾತೀ ಸುಲ್ತಾನಿಕೆ ಸ್ಥಾಪಿತವಾಗುವ ವರೆಗೆ, ಗುಜರಾತು ಮತ್ತು ರಾಜಸ್ತಾನಗಳಿಗೆ ಒಂದೇ ಒಂದು ಭಾಷೆಯಿತ್ತು. ಇದರಿಂದಲೇ ಟೆಸ್ಸಿಟೋರಿ ಮೊದಲಾದ ವಿದ್ವಾಂಸರು ಪ್ರಾಚೀನ ಗುಜರಾತಿಯೆಂದು ಹೆಸರಾಂತ ಈ ಪ್ರಾಂತಗಳ ಭಾಷೆಯ ಪ್ರಾಚೀನ ರೂಪವನ್ನು ಪ್ರಾಚೀನ ಪಶ್ಚಿಮ ರಾಜಸ್ತಾನೀ ಎಂದು ಕರೆದಿರುವುದು. ಈ ಎರಡು ಪ್ರಾಂತಗಳಿಗೂ ಸಾಧಾರಣವಾಗಿರುವ ಪ್ರಾಚೀನ ರೂಪಗಳನ್ನೂ ಈ ಭಾಷೆಯಲ್ಲಿ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ಇದನ್ನು ಮಾರೂ ಗುರ್ಜರ್ (ಮಾರವಾಡ ಮತ್ತು ಗುಜರಾತುಗಳ ಭಾಷೆ) ಎಂದೇ ಕರೆಯಬೇಕೆಂದು ಯು. ಜೆ. ಜೋಷಿಯವರು ಸೂಚಿಸಿದ್ದಾರೆ.

ಗುಜರಾತ್ ಮತ್ತು ಲಾಟ (ದಕ್ಷಿಣ ಗುಜರಾತ್) ದೇಶಗಳ ಜನಗಳ ಭಾಷೆಯನ್ನು ಕುರಿತ ಬಹು ಹಳೆಯ ಪ್ರಸ್ತಾಪ ಉದ್ಯೋತನಸೂರಿಯ ಕುವಲಯ ಮಾಲಾ (ಪ್ರ.ಶ. 798) ಎಂಬ ಗ್ರಂಥದಲ್ಲಿ ಗೋಚರಿಸುತ್ತದೆ. ಪ್ರಾಕೃತದಲ್ಲಿ ರಚಿತವಾಗಿರುವ ಈ ಗ್ರಂಥ ಭಾರತ ದೇಶದ ವಿವಿಧ ಪ್ರಾಂತಗಳಲ್ಲಿ ಪ್ರಚಲಿತವಾಗಿದ್ದ ಭಾಷೆಗಳನ್ನು ಕುರಿತು ಹೇಳುತ್ತದೆ. ಗುಜರಾತ್ ಮತ್ತು ಲಾಟಗಳ ಭಾಷೆಯನ್ನು ಕುರಿತು ಅಲ್ಲಿನ ಶ್ಲೋಕಗಳ ಅರ್ಥ ಇದು: 'ಬಳಿಕ ಆತ ಗುಜ್ಜರರನ್ನು (ಗುಜರಾತ್ ದೇಶದವರನ್ನು) ಕಂಡ. ಅವರು ಅಲ್ಲಿ ಸಮೃದ್ಧವಾಗಿದ್ದ ಬೆಣ್ಣೆಯನ್ನು ಮೆದ್ದು ಪುಷ್ಟರಾಗಿದ್ದರು. ಅವರು ಧಾರ್ಮಿಕರು. ಯುದ್ಧದಲ್ಲಿಯೂ ಶಾಂತಿಯಲ್ಲಿಯೂ ನಿಷ್ಣಾತರು ಮತ್ತು 'ನೌರೇ ಭಲ್ಲೌ' ಮುಂತಾದ ಉಗ್ಗಡಣೆಗಳು ಅವರ ಮುಖದಿಂದ ಹೊರಡುತ್ತಿದ್ದವು.' ಬಳಿಕ ಆತ ಲಾಟರನ್ನು ಎಂದರೆ ಲಾಟದೇಶದ ಜನರನ್ನು ಕಂಡನು. ಅವರು ಸ್ನಾನಾಂತರದಲ್ಲಿ ತಮ್ಮ ಮೈಗೆ ಶ್ರೀಗಂಧವನ್ನು ಬಳಿದುಕೊಳ್ಳುತ್ತಿದ್ದರು; ತಲೆಯನ್ನು ಆ ಕಡೆ ಈ ಕಡೆಗೆ ಬಾಚಿಕೊಳ್ಳುತ್ತಿದ್ದರು. ಅವರ ಅಂಗಗಳು ಸುಂದರವಾಗಿದ್ದವು. 'ಅಂಹನ್ ಕೌತುಂಹ್' ಮುಂತಾದ ಶಬ್ದಗಳನ್ನು ಅವರು ಉಚ್ಚರಿಸುತ್ತಿದ್ದರು.

ಈ ತೆಳ್ಳನೆ ಸಾಕ್ಷ್ಯದಿಂದ ಗುಜರಾತಿನಲ್ಲೂ ಲಾಟದಲ್ಲೂ ಎಂಟನೆಯ ಶತಮಾನದಲ್ಲಿ ಪ್ರಚಲಿತವಾಗಿದ್ದ ಭಾಷೆಯ ಸ್ವರೂಪವನ್ನು ಕುರಿತು ಯಾವುದನ್ನೂ ಖಚಿತವಾಗಿ ಹೇಳುವುದು ಕಷ್ಟ; ಆದರೆ ಒಂದು ಬಗೆಯ ಅಪಭ್ರಂಶ ಅಲ್ಲಿ ಪ್ರಚಲಿತವಾಗಿತ್ತೆಂದು ನಿಸ್ಸಂಶಯವಾಗಿ ಹೇಳಬಹುದು.

ಇದಕ್ಕೆ ಭೋಜ (1000) ತನ್ನ ಸರಸ್ವತೀ ಕಂಠಾಭರಣದಲ್ಲಿ ಹೇಳುವ ಈ ಮಾತು ಒತ್ತು ನುಡಿಯಾಗಿದೆ. ಆತ ಹೇಳುತ್ತಾನೆ: ಅಪಭ್ರಂಶೇನ ತುಷಂತಿ ಸ್ವೇನ ನಾನ್ಯೇನ ಗುರ್ಜರಾಃ (ತಮ್ಮ ಅಪಭ್ರಂಶದಿಂದಲೇ ಗುರ್ಜರರು ಸಂತುಷ್ಟಿಗೊಳ್ಳುತ್ತಾರೆ, ಮತ್ತೊಂದನ್ನು ಒಲ್ಲರು.) ಮಾರ್ಕಂಡೇಯನೆಂಬ (1000) ಪ್ರಾಕೃತ ವೈಯಾಕರಣಿ ಅಪಭ್ರಂಶದ ಇಪ್ಪತ್ತೇಳು ಪ್ರಕಾರಗಳನ್ನು ಹೇಳುತ್ತ ಗುರ್ಜರೀ ಎಂಬೊಂದನ್ನು ಹೆಸರಿಸುತ್ತಾನೆ. ಇವುಗಳೆಲ್ಲದರ ಮಥಿತಾರ್ಥವೇನೆಂದರೆ ದೇಶದ ಈ ಭಾಗಗಳಲ್ಲಿ ಪ್ರಚಲಿತವಾಗಿದ್ದ ಅಪಭ್ರಂಶದ ಒಂದು ಪ್ರಕಾರದಿಂದ ಪ್ರಾಚೀನ ಗುಜರಾತಿ ಭಾಷೆ (ಅಥವಾ ಪ್ರಾಚೀನ ಪಶ್ಚಿಮ ರಾಜಸ್ತಾನೀ ಭಾಷೆ) ಹುಟ್ಟಿತು ಎಂದು.

ಭಾರತದ ಉತ್ತರ ಮತ್ತು ಪಶ್ಚಿಮ ಪ್ರಾಂತಗಳ ಭಾಷೆಗಳೆಲ್ಲ ಇಂಡೊ – ಆರ್ಯನ್ ಭಾಷೆ ಅಪಭ್ರಂಶದ ಘಟ್ಟವನ್ನು ಮುಟ್ಟಿದಾಗ ವಿಕಾಸಗೊಂಡವೆಂಬುದು ಭಾರತೀಯ ಭಾಷೆಗಳ ಭಾಷಾ ಶಾಸ್ತ್ರಜ್ಞರಿಗೆ ಚೆನ್ನಾಗಿ ತಿಳಿದಿರುವ ವಿಷಯ. ಅಪಭ್ರಂಶದ ಇತಿಹಾಸವನ್ನು ಕುರಿತು ಹೇಳಲು ಇದು ಸ್ಥಳವಲ್ಲ. ಈಗಿಷ್ಟು ಹೇಳಿದರೆ ಸಾಕು. ಅಪಭ್ರಂಶ ಮೊದಲು ಜನರಾಡುವ ಒಂದು ಉಪಭಾಷೆಯಾಗಿತ್ತು. ಇಂಡೋ – ಆರ್ಯನ್ ಭಾಷೆಯ ಒಂದು ಘಟ್ಟದಲ್ಲಿ ಪ್ರಾಕೃತವನ್ನು ಬೇಗ ಹಿಂಬಾಲಿಸಿ ಬಂದ ಜನರಾಡುವ ಭಾಷೆಯಾಗಿತ್ತು ಅಪಭ್ರಂಶ. ಆ ಬಳಿಕ ಅದು ಸಾಹಿತ್ಯ ಭಾಷೆ ಆಯಿತು ಮತ್ತು ಅದರದೊಂದು ವಿಪುಲ ಸಾಹಿತ್ಯರಾಶಿ ಈಗಲೂ ಉಳಿದುಕೊಂಡು ಬಂದಿದೆ. ಈ ಸಾಹಿತ್ಯಕ ಅಪಭ್ರಂಶ ಉತ್ತರ ಮತ್ತು ಪಶ್ಚಿಮ ಭಾರತದ ಸಾಹಿತ್ಯ ಭಾಷೆಯಾಗಿ ಪರಿಣಮಿಸಿತು. ಹಾಗೂ ಗುಜರಾತ್ ಮತ್ತು ಮಹಾರಾಷ್ಟ್ರಗಳಿಂದ ಅಸ್ಸಾಂ ಮತ್ತು ನೇಪಾಲಗಳ ವರೆಗೆ ಭಾರತದ ವಿವಿಧ ಪ್ರಾಂತಗಳ ಕವಿಗಳು ಅಲ್ಪಸ್ವಲ್ಪ ಸ್ಥಳೀಯ ವ್ಯತ್ಯಾಸಗಳೊಡನೆ ಈ ಅಪಭ್ರಂಶವನ್ನು ತಮ್ಮ ಕವಿತೆಗಳಿಗೆ ಉಪಯೋಗಿಸಿಕೊಂಡರು.

ಆದರೆ ಚಾಳುಕ್ಯರ ಕಾಲದಲ್ಲಿ (942–1304) ಗುಜರಾತಿನಲ್ಲೂ ರಾಜಸ್ತಾನದಲ್ಲೂ ಅಪಭ್ರಂಶದಲ್ಲಿ ಪ್ರಚಲಿತ ಸಾಹಿತ್ಯರಾಶಿಯೊಂದಿತ್ತು. ಅದು ಜನಪದ ಸಾಹಿತ್ಯದೊಂದು ಭಾಗವಾಗಿತ್ತು. ಅದರ ಹೆಚ್ಚು ಪಾಲು ನಮಗೀಗ ಲಭ್ಯವಾಗಿಲ್ಲ. ಅದೃಷ್ಟವಶಾತ್, ಈ ತೇಲುವ ಸಾಹಿತ್ಯದ ಅನೇಕ ದ್ವಿಪದಿಗಳನ್ನು ಪ್ರಸಿದ್ಧ ಜೈನ ಸಾಧು ಹೇಮಚಂದ್ರ (1087–1174) ತನ್ನ ಪ್ರಾಕೃತ ವ್ಯಾಕರಣದಲ್ಲಿ ಅಪಭ್ರಂಶದ ಉದಾಹರಣೆಗಳಾಗಿ ಎತ್ತಿಕೊಂಡು ಕೂಡಿಟ್ಟಿದ್ದಾನೆ. ಈ ದ್ವಿಪದಿಗಳು ಯಾವ ಗ್ರಂಥದ ಭಾಗಗಳಾಗಿವೆಯೋ ಆ ಗ್ರಂಥವನ್ನು ರಚಿಸಲು ಹೇಮಚಂದ್ರನನ್ನು ಸಿದ್ಧರಾಜ ಜಯಸಿಂಹ ಎಂಬ ಅರಸ ಕೋರಿದ. ಇದರಿಂದ ಇವುಗಳ ಬೆಳಸು ಹೆಚ್ಚಿದೆ ಮತ್ತು ಈ ಉದಾಹೃತಪದ್ಯಗಳು 11 ಮತ್ತು 12ನೆಯ ಶತಮಾನದ ಗುಜರಾತಿನ ಜನಪದ ಸಾಹಿತ್ಯವನ್ನು ಪ್ರತಿನಿಧಿಸುತ್ತವೆ ಎಂದು ಧಾರಾಳವಾಗಿ ಹೇಳಬಹುದು. ವಸ್ತುತಃ ಹೇಮಚಂದ್ರ ಉದ್ಧರಿಸಿರುವ ಪದ್ಯಗಳು ಪಶ್ಚಿಮ ಭಾರತದ ಆ ಭಾಗದ ಅತಿ ಪ್ರಾಚೀನ ಸಾಹಿತ್ಯದಲ್ಲೂ ಮಾದರಿಗಳಾಗಿವೆ.

ಹೇಮಚಂದ್ರ ಉದಹರಿಸಿರುವ ಪದ್ಯಗಳಲ್ಲಿ ಬಹುಭಾಗ ವೀರರಸವನ್ನೂ ಶೃಂಗಾರ ರಸವನ್ನೂ ಪ್ರತಿಪಾದಿಸುತ್ತವೆ. ಈ ರಸಗಳೇ ಆ ಕಾಲದ ಜನಪದ ಸಾಹಿತ್ಯದಲ್ಲಿನ ಬಹುಪ್ರಧಾನ ರಸಗಳಾಗಿದ್ದು ಸ್ವಲ್ಪ ಮಟ್ಟಿಗೆ ಆ ಕಾಲದ ಜನಜೀವನದ ಕೆಲವು ಮುಖಗಳನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ಅನೇಕ ಸುಭಾಷಿತಗಳಾಗಿವೆ; ಮತ್ತೆ ಕೆಲವು ಜೈನ ಮತ್ತು ಬ್ರಾಹ್ಮಣ ಪುರಾಣಗಳನ್ನು ಕುರಿತವಾಗಿವೆ. ಈ ಪದ್ಯಗಳ ಮನೋಜ್ಞವಾದ ಶೈಲಿ, ಚಿತ್ರಮಯವಾದ ಕಲ್ಪನೆ, ಸಮರ್ಥವಾದ ಉಪಮೆಗಳು ಆಗಿನ ಸಾಹಿತ್ಯ ಚೆನ್ನಾಗಿ ಬೆಳವಣಿಗೆ ಹೊಂದಿತ್ತೆಂಬುದನ್ನು ಸೂಚಿಸುತ್ತವೆ. ಹೇಮಚಂದ್ರನ ತರುವಾಯ ಸಂಸ್ಕೃತ ಪ್ರಬಂಧಗಳನ್ನು (ಐತಿಹಾಸಿಕ ಕಥೆಗಳನ್ನು ವರ್ಣಿಸಿರುವ ಕೃತಿಗಳನ್ನು) ಬರೆದ ಅನೇಕ ಲೇಖಕರು ಇಂಥ ಅಪಭ್ರಂಶ ಪದ್ಯಗಳನ್ನು ಉಲ್ಲೇಖಿಸಿದ್ದಾರೆ. ಇವುಗಳ ಪೈಕಿ ಮೇರುತುಂಗನ ಪ್ರಬಂಧ ಚಿಂತಾಮಣಿ (1305) ಎಂಬ ಗ್ರಂಥವನ್ನು ಎತ್ತಿ ಹೇಳಬಹುದಾಗಿದೆ. ಅದರಲ್ಲಿ ಸಿದ್ಧರಾಜ ಜಯಸಿಂಹ ಜುನಾಗಡದ ಅರಸ ಖಂಗಾರನನ್ನು ಕೊಂದಾಗ, ಅವನ ರಾಣಿಗೆ ಸೋನಲ ದೇವಿ ಹೇಳಿದ ಹಾಗೆ ಅನೇಕ ಅಪಭ್ರಂಶ ದುಹಾಗಳು ಉದ್ಧೃತವಾಗಿವೆ. ಈ ದುಹಾಗಳಲ್ಲಿ ಪ್ರಾಯಶಃ ಎಲ್ಲವೂ ಈಗಿನ ಗುಜರಾತ್ ಮತ್ತು ಸೌರಾಷ್ಟ್ರಗಳ ಜನಪದ ಸಾಹಿತ್ಯದಲ್ಲಿಯೂ ಜೀವಂತವಾಗಿರುವುದು ಗಮನಾರ್ಹವಾದ ಸಂಗತಿ. ಆದರೆ ಇವುಗಳ ಭಾಷೆ ಈಗಿನ ಜನರಾಡುವ ಭಾಷೆ. ಇವು ಎಲ್ಲ ಕಾಲದಲ್ಲೂ ಜನಪ್ರಿಯವಾಗಿದ್ದವೆಂಬುದಕ್ಕೆ ಇದೇ ಸಾಕ್ಷಿ. ಗುಜರಾತಿನ ಇನ್ನೂ ಕೆಲವು ಪ್ರಾಚೀನ ದುಹಾಗಳು ತಲೆಮಾರಿನಿಂದ ತಲೆಮಾರಿಗೆ ಅನುಸ್ಯೂತವಾಗಿ ಇಳಿದು ಬಂದು ಇಂದೂ ಸೌರಾಷ್ಟ್ರ ರಾಜಸ್ತಾನಗಳಲ್ಲಿ ಗೋಚರಿಸುತ್ತವೆ ಎಂಬುದನ್ನು ಪ್ರಖ್ಯಾತ ಜನಪದ ಸಾಹಿತ್ಯ ಸಂಗ್ರಾಹಕ ಜಾವೇರ್‌ಚಂದ್ ಮೇಘಾನಿ ಮತ್ತು ಇತರ ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ.

ಪ್ರಾಚೀನ ಗುಜರಾತೀ ಸಾಹಿತ್ಯವನ್ನು ಮೂರು ಅವಧಿಗಳಾಗಿ ವಿಂಗಡಿಸಬಹುದು.

1. ಹೇಮಚಂದ್ರನಿಂದ ಮುಗ್ಧಾವಬೋಧ ಔಕ್ತಿಕವೆಂಬ ವ್ಯಾಕರಣ ಗ್ರಂಥದ (1394) ವರೆಗೆ. ಈ ವ್ಯಾಕರಣ ಗ್ರಂಥ ಭಾಷೆಯ ಇತಿಹಾಸದಲ್ಲಿ ಒಂದು ದೊಡ್ಡ ಮೈಲಿಗಲ್ಲು. ಈ ಅವಧಿ ಸುಮಾರು 12ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಹರಡಿದೆ.
2. ಹದಿನೈದನೆಯ ಶತಮಾನದ ಆದಿಯಿಂದ 17ನೆಯ ಶತಮಾನದ ಮಧ್ಯ ಭಾಗದವರೆಗೆ, ಎಂದರೆ, ಪ್ರೇಮಾನಂದ ಮಹಾಕವಿ ಇನ್ನು ತರುಣನಾಗಿ ದ್ದಾಗಿನವರೆಗೆ.
3. ಹದಿನೇಳನೆಯ ಶತಮಾನದ ಉತ್ತರಾರ್ಧದಿಂದ 1853ರವರೆಗೆ ಎಂದರೆ, ಪ್ರೇಮಾನಂದನಿಂದ ಹಿಡಿದು ಪ್ರಾಚೀನ ಕವಿತಾಸಂಪ್ರದಾಯದ ಬಹು ಸಮರ್ಥ ಪ್ರತಿನಿಧಿಯಾಗಿದ್ದ ದಯರಾಮನವರೆಗೆ.

**ಮೊದಲನೆಯ ಅವಧಿ:** ಈ ಅವಧಿಯಲ್ಲಿ ಈ ಸಾಹಿತ್ಯ ರೂಪಗಳು ಗೋಚರಿಸುತ್ತವೆ. (1) ರಾಸು, ರಾಸ, ಅಥವಾ ರಾಸೋ –ಇದು ಮತೀಯ ಕಥೆಗಳನ್ನು ಪದ್ಯಗಳಲ್ಲಿ ಹೇಳುವ ಅಖ್ಯಾನ, (2) ಕಥಾ, (3) ಅನ್ಯಾಪದೇಸ, (4) ಫಾಗು ಅಥವಾ ವಸಂತಕಾಲದ ಕವಿತೆ, (5) ಬಾರಾಮಾಸೀ ಅಥವಾ ಹನ್ನೆರಡು ತಿಂಗಳುಗಳನ್ನು ವರ್ಣಿಸುವ ಕವಿತೆ, (6) ಮಾತೃಕಾ ಮತ್ತು ಕಕ್ಕ, ಎಂದರೆ ನೀತಿಯನ್ನು ಬೋಧಿಸುವ ಪದ್ಯಗಳು, ಇವುಗಳಲ್ಲಿ ಒಂದೊಂದೂ ಒಂದೊಂದು ಅಕ್ಷರಮಾಲಿಕೆಯ ಅಕ್ಷರದಿಂದ ಪ್ರಾರಂಭವಾಗುತ್ತದೆ. (7) ಸ್ತೋತ್ರಗಳು, ಭಾವಗೀತೆಗಳು, (8) ಗದ್ಯಕೃತಿಗಳು (9) ಔಕ್ತಿಕಗಳು ಅಥವಾ ಸಂಸ್ಕೃತ ವ್ಯಾಕರಣವನ್ನು ಕುರಿತ ಗುಜರಾತಿ ಗ್ರಂಥಗಳು. ಈ ರೂಪಗಳೆಲ್ಲವೂ ಇತರ ಕೆಲವೂ 19ನೆಯ ಶತಮಾನದವರೆಗೂ ಅನುಸ್ಯೂತವಾಗಿ ಬೆಳೆದುಬಂದವು. ಈ ಅವಧಿಗೆ ಮುಂಚೆ ಪ್ರಣೀತವಾದ ಅನೇಕ ಗ್ರಂಥಗಳು ಬಹುಮುಖ್ಯವಾದ ಭಾಷಾ ಶಾಸ್ತ್ರೀಯ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಒದಗಿಸುತ್ತವೆ. ಈ ಪುಟ್ಟ ಲೇಖನದಲ್ಲಿ ಪ್ರಧಾನ ಗ್ರಂಥಕರ್ತರನ್ನಾಗಲೀ ಅವರ ಕೃತಿಗಳನ್ನಾಗಲಿ ಕುರಿತು ಹೇಳುವುದು ಕೂಡ ಅಸಾಧ್ಯವಾಗಿದೆ.

**ಎರಡನೆಯ ಅವಧಿ :** ಇಲ್ಲಿ ಗುಜರಾತೀ ಸಾಹಿತ್ಯದ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಒಬ್ಬನಾದ ನರಸಿಂಹ ಮೆಹತನ ಕೃತಿಗಳನ್ನು ಕುರಿತು ಪ್ರತ್ಯೇಕವಾಗಿ ಪ್ರಸ್ತಾವಿಸಬೇಕಾಗಿದೆ. ನರಸಿಂಹ ಸೌರಾಷ್ಟ್ರದ ಜುನಾಗಡದಲ್ಲಿನ ನಾಗರ ಬ್ರಾಹ್ಮಣ. ತನ್ನ ಅತ್ತಿಗೆಯ ಕಾಟದಿಂದ ಈತ ಭಕ್ತಿಯತ್ತ ತಿರುಗಿದನೆಂದು ಹೇಳಲಾಗಿದೆ. ಹನ್ನೆರಡರಿಂದ ಹದಿನಾರನೆಯ ಶತಮಾನದವರೆಗೆ ಉತ್ತರ ಭಾರತದ ವಿವಿಧ ಭಾಗಗಳಲ್ಲಿ ಪ್ರವೃದ್ಧವಾಗುತ್ತಿದ್ದ ಭಕ್ತಿಪಂಥಗಳನ್ನು ಈ ಕವಿ ಬಹುಸಮರ್ಥವಾಗಿ ಪ್ರತಿನಿಧಿಸಿ ಅವುಗಳ ಮೇಲೆ ತನ್ನ ಮುದ್ರೆಯೊತ್ತಿ ಕವಿತಾ ಪ್ರತಿಭೆಯಿಂದ ಅವಕ್ಕೆ ನುಡಿಗೊಡುತ್ತಾನೆ. ಒಂದು ದೃಷ್ಟಿಯಲ್ಲಿ ಈತ ಸಮಾಜ ಸುಧಾರಕ; ಸಮಾಜದ ಕೆಲಸಕ್ಕೆ ಬಾರದ ಸತ್ತರೂಢಿಗಳಿಗೆ ಯಾವ ಗಮನವನ್ನೂ ಕೊಡಲಿಲ್ಲ. ಸ್ವತಃ ಅಸ್ಪೃಶ್ಯರೊಂದಿಗೆ ಸ್ವೇಚ್ಛೆಯಾಗಿ ಬೆರೆಯುತ್ತಿದ್ದ. ಅವರನ್ನು ಅವರ ಭಕ್ತಿಗಾಗಿ ಪ್ರೀತಿಸುತ್ತಿದ್ದ. ನರಸಿಂಹನ ಒಂದು ಪ್ರಖ್ಯಾತ ಪದ್ಯದಿಂದ ಮಹಾತ್ಮಗಾಂಧಿ ಹರಿಜನ ಎಂಬ ಶಬ್ದವನ್ನು ಎತ್ತಿಕೊಂಡರು. ಗಾಂಧಿಯವರಿಂದ ಪ್ರಖ್ಯಾತಿಯನ್ನು ಹೊಂದಿದ ಈತನ ವೈಷ್ಣವ ಜನತೋ ಎಂಬ ಕವಿತೆ ಈತನ ಜೀವನ ತತ್ತ್ವವನ್ನು ಬಹು ವಿಶದವಾಗಿ ಸಂಕ್ಷೇಪಿಸುತ್ತದೆ. ನರಸಿಂಹನ ಮುಖ್ಯ ಕೃತಿಗಳೆಂದರೆ ಜ್ಞಾನಭಕ್ತಿಶೃಂಗಾರ ಪರವಾದ ಪದಗಳು. ಈತನ ಶೃಂಗಾರ ಬಹಳ ಸಲ ಅಷ್ಟು ನವಿರಾಗಿರದೆ ಅಸಂಸ್ಕೃತವೆನಿಸಿದರೂ ಕೊನೆಗೆ ಭಕ್ತಿಯಲ್ಲಿ ಲೀನವಾಗುತ್ತದೆ. ಪದಗಳಲ್ಲಿನ ಈತನ ಶೈಲಿ ನಿಸ್ಸಂಶಯವಾಗಿ ತುಂಬ ಶ್ರೇಷ್ಠವಾದದ್ದು.

ಯಾರ ಹೆಸರು ಎಲ್ಲರ ಮನೆಮಾತಾಗಿದೆಯೋ ಅಂಥ ಮಹಾಭಕ್ತಳೂ ಅಸಮಾನ ಕವಯಿತ್ರಿಯೂ ಆದ ಮೀರಾಬಾಯಿಯ (1499–1547) ಕೃತಿಗಳನ್ನು ಪರಿಶೀಲಿಸದಿದ್ದರೆ ಗುಜರಾತೀ ಸಾಹಿತ್ಯದ ಯಾವ ಸಮೀಕ್ಷೆಯೂ ಸಮಗ್ರವೆನಿಸುವುದಿಲ್ಲ. ಗುಜರಾತು ಮತ್ತು ರಾಜಸ್ತಾನಗಳೆರಡೂ ಮೀರಾಬಾಯಿ ತಮಗೆ ಸೇರಿದವಳೆಂದು ಸ್ಪರ್ಧಿಸುತ್ತಿವೆ. ಆದರೆ ಹದಿನಾರನೆಯ ಶತಮಾನದವರೆಗೂ ಗುಜರಾತಿನಲ್ಲೂ ರಾಜಸ್ತಾನದಲ್ಲೂ ಒಂದೇ ಒಂದು ಭಾಷೆ ಪ್ರಚಲಿತವಾಗಿತ್ತೆಂಬ ಐತಿಹಾಸಿಕ ಸಂಗತಿಯನ್ನು ನೆನಪಿಗೆ ತಂದುಕೊಂಡರೆ ಈ ವಿವಾದ ಕೊನೆಗಾಣುತ್ತದೆ. ರಾಜಸ್ತಾನದ ಮೆಡ್ತಾ ಎಂಬ ಒಂದು ಸಣ್ಣ ಸಂಸ್ಥಾನದ ಅರಸನಾದ ರಾವ್ ದೂದಾಜೀ ಎಂಬ ಕೃಷ್ಣಭಕ್ತನ ಮೊಮ್ಮಗಳು ಮೀರಾ. ಈಕೆಯನ್ನು ಚಿತ್ತೋಡಿನ ಪ್ರಖ್ಯಾತ ರಾಣಾಸಿಂಗ ಅಥವಾ ಸಂಗ್ರಾಮಸಿಂಹನ ಮಗ ಭೋಜರಾಜನಿಗೆ ಕೊಟ್ಟು ಮದುವೆಯಾಗಿತ್ತು. ಮದುವೆಯಾದ ಸ್ವಲ್ಪಕಾಲದೊಳಗೆಯೇ ಮೀರಾ ವಿಧವೆಯಾದಳು. ತನ್ನ ಕೃಷ್ಣಭಕ್ತಿಯ ನಿಮಿತ್ತವಾಗಿ ತನ್ನ ಪತಿಯ ಸಂಬಂಧಿಕರಿಗೂ ಆಕೆಗೂ ಮನಸ್ಸು ಹೊಂದಿಕೊಳ್ಳಲಿಲ್ಲವಾದುದರಿಂದ ಆಕೆ ಮೇವಾಡವನ್ನು ತ್ಯಜಿಸಿ ದ್ವಾರಕೆಯಲ್ಲಿರತೊಡಗಿದಳು. ಮೀರಾ ಯಾವ ದೊಡ್ಡ ಗ್ರಂಥವನ್ನೂ ರಚಿಸಲಿಲ್ಲ. ಆದರೆ ಅವಳ ಪ್ರತಿಭೆ ಸಣ್ಣ ಸಣ್ಣ ಪದಗಳಲ್ಲಿ ವ್ಯಕ್ತವಾಗತೊಡಗಿತು. ಆಕೆಯ ಅತಿ ಮನೋಹರವಾದ ಕವಿತೆಯಲ್ಲಿ ಒಂದೇ ಒಂದು ಭಾವವಾದ ಅವಳ ಕೃಷ್ಣಪ್ರೇಮ ಹರಿದು ಬರುತ್ತದೆ. ಮೀರಾ ತನ್ನ ಪ್ರಭುವಿನ ಹಂಬಲವನ್ನು ಚೆಲುವಾದ ಕೆಲವೇ ಮಾತುಗಳಲ್ಲಿ ತೋಡಿಕೊಳ್ಳುತ್ತಾಳೆ. ಆಕೆಯ ಕವಿತೆಯಲ್ಲಿ ಗುಜರಾತು ಪ್ರಖರ ಪ್ರತಿಭಾವಿಲಾಸದಿಂದ ಶೋಭಿಸುವ ಅತಿಮಧುರ ಭಾವಗೀತಗಳನ್ನು ಪಡೆದಿದೆ.

ಭಾಲಣ ಮತ್ತು ಪದ್ಮನಾಭ ಎಂಬುವರು ನರಸಿಂಹನ ಸಮಕಾಲೀನ ಪ್ರಸಿದ್ಧ ಕವಿಗಳ ಪೈಕಿ ಶ್ರೇಷ್ಠರಾಗಿದ್ದಾರೆ. ಗುಜರಾತೀ ಭಾಷೆಯಲ್ಲಿ ಸಮಗ್ರವಾದ ಆಖ್ಯಾನಗಳನ್ನು ಮೊದಲು ರಚಿಸಿದವ ಕವಿ ಭಾಲಣ. ಇದಕ್ಕಾಗಿ ಈತನನ್ನು ಕೆಲವರು ಆಖ್ಯಾನ ರೂಪದ ಜನಕನೆಂದು ಕರೆಯುತ್ತಾರೆ. ಕಾನ್‌ಹಡದೇ ಪ್ರಬಂಧವೆಂಬ ಶಕ್ತಿಯುತವಾದ ಐತಿಹಾಸಿಕ ಚರಿತ್ರೆಯನ್ನು ಬರೆದ ಕವಿ ಪದ್ಮನಾಭ. ಮುಖ್ಯ ಅಖ್ಯಾನ ಲೇಖಕರಾದ ಭಾಲಣ ಮತ್ತು ಪ್ರೇಮಾನಂದ ಎಂಬಿಬ್ಬರ ನಡುವಣ ಅವಧಿಯನ್ನು ನಾಕರ್ ಮತ್ತು ವಿಷ್ಣುದಾಸರು ತುಂಬಿದ್ದಾರೆ.

ಆದರೆ ಪ್ರೇಮಾನಂದನ ವಿಷಯಕ್ಕೆ ಬರುವ ಮುಂಚೆ ಆಖೋ ಎಂಬ ಶ್ರೇಷ್ಠ ವೇದಾಂತ ಕವಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯ. ಈತ ಹದಿನೇಳನೆಯ ಶತಮಾನದಲ್ಲಿ ಬಾಳಿದವ. ಈತನ ಆಖೋಗೀತ (1659), ಅನುಭವ ಬಿಂದು ಮುಂತಾದ ಕೃತಿಗಳ ಹೆಸರನ್ನು ಓದಿದರೆ ಅವು ವೇದಾಂತ ತತ್ತ್ವವನ್ನು ಕುರಿತ ಗ್ರಂಥಗಳೆಂಬುದು ಸ್ಪಷ್ಟವಾಗುತ್ತದೆ. ಇಂಥ ಕೃತಿಗಳಲ್ಲಿ ಆಖೋವಿನ ಶೈಲಿ ಪೆಡಸಾಗಿದೆ. ಆದರೆ ಈತನ ದಾರ್ಶನಿಕ ಪದಗಳ ಪರಿಯೇ ಬೇರೆ. ಇವಕ್ಕೆ ಒಂದು ಸಾಂಪ್ರದಾಯಿಕ ಶೈಲಿಯ ಸೌಕರ್ಯವೂ ಒದಗಿದೆ. ಈ ಶೈಲಿ ನರಸಿಂಹ

ಮೆಹತನ ಕಾಲದಿಂದಲೂ ಬೆಳೆದು ಬಂದಿರುವ ರಚನೆಗಳಿಂದಲೂ ಮತ್ತು ಗುಜರಾತಿನ ಜನಪದ ಸಾಹಿತ್ಯದಲ್ಲಿ ರೂಪಗೊಂಡಿರುವ ತತ್ತ್ವಜ್ಞಾನಿಗಳ ಉಪದೇಶಗಳಿಂದಲೂ ಈತನದೇ ಆದ ಛಪ್ಪಾಗಳಿಂದ, ಎಂದರೆ, ಆರು ಸಾಲಾಗಿ ರಚಿಸಿದ ಛೋಪಾಯಿಗಳಿಂದಲೂ ಪುಷ್ಟಗೊಂಡಿದೆ.

ಗುಜರಾತಿಯಲ್ಲಿ ನಿಸ್ಸಂದೇಹವಾಗಿ ಆಖೋ ತುಂಬ ಶ್ರೇಷ್ಠನಾದ ದಾರ್ಶನಿಕ ಕವಿ.

ಆಖೋವಿನ ಹಿಂದುಗಡೆಯೇ ಪ್ರೇಮಾನಂದ (1634–1700) ಗೋಚರಿಸುತ್ತಾನೆ. ಈತ ಅತ್ಯಂತ ಶ್ರೇಷ್ಠನಾದ ಆಖ್ಯಾನ ಕವಿ. ನಾಕರನ ಸಾಹಿತ್ಯಕರ್ಮದ ಬೀಡಾದ ವಡೋದರಕ್ಕೆ ಸೇರಿದವನೀತ. ಇವನು ಅನೇಕ ಆಖ್ಯಾನಗಳನ್ನು ರಚಿಸಿದ್ದಾನೆ. ಅವುಗಳ ಪೈಕಿ ನಳಾಖ್ಯಾನ, ಸುದಾಮ ಚರಿತ್ರೆ, ಮಾಮೇರುಣ್ (ನರಸಿಂಹ ಮೆಹತನ ಜೀವನ ಚರಿತೆಯಲ್ಲಿನ ಒಂದು ಪ್ರಸಂಗವನ್ನು ಕುರಿತದ್ದು) ಮತ್ತು ದಶಮಸ್ಕಂಧ ತುಂಬ ಗಮನಾರ್ಹವಾಗಿವೆ. ಪ್ರೇಮಾನಂದನ ಕೃತಿಗಳು ಗುಜರಾತಿನಲ್ಲೆಲ್ಲ ಜನಪ್ರಿಯವಾಗಿವೆ. ಒಬ್ಬ ವಿಮರ್ಶಕ ಮನಮುಟ್ಟ ಹೇಳಿರುವಂತೆ ಪ್ರೇಮಾನಂದ ಎಲ್ಲ ಗುಜಾರಾತೀ ಕವಿಗಳಿಗಿಂತಲೂ ಅಚ್ಚಗುಜರಾತೀ ಕವಿ. ಆತನನ್ನು ಜನತೆ ಮೆಚ್ಚಿಕೊಂಡಿರುವುದಕ್ಕೆ ಇದೂ ಒಂದು ಕಾರಣ. ಗುಜರಾತೀ ಸಮಾಜದ ಪ್ರತಿಯೊಂದು ಜಾತಿ ಮತ್ತು ಪಂಗಡಗಳ ಜೀವನಕ್ರಮಗಳನ್ನು ಆತ ಬಹು ಚೆನ್ನಾಗಿಯೂ ವಿಶದವಾಗಿಯೂ ಕಂಡಿದ್ದಾನಲ್ಲದೆ ತನ್ನ ಕವಿತೆಗಳಲ್ಲಿ ಅವನ್ನು ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ಕೆಲವು ಸಲ ಪುರಾಣಗಳಲ್ಲಿ ಗೋಚರಿಸುವ ಮಹಾ ಪಾತ್ರಗಳ ಗುಜರಾತೀರೂಪ ಮೂಲದ ಘನತೆಗೆ ಭಂಗ ತರುವಂತಿತ್ತು. ಆದರೆ ಒಟ್ಟಿನಲ್ಲಿ ಪ್ರೇಮಾನಂದನಿಗೆ ಅದೊಂದು ಮೂಲಧನವಾಗಿತ್ತು. ಏಕೆಂದರೆ ಗುಜರಾತೀ ಜನರ ಅನುಭವದ ಮಿತಿಗೆ ತನ್ನ ಕೃತಿಗಳನ್ನು ತರಲು ಅದು ಮುಖ್ಯ ಸಾಧನವಾಗಿತ್ತು. ಪ್ರೇಮಾನಂದನ ವಿಪುಲ ಲೇಖನಗಳನ್ನು ವ್ಯಾಸಂಗ ಮಾಡಿದ ವಿದ್ವಾಂಸನೊಬ್ಬ ಹದಿನೇಳನೆಯ ಶತಮಾನದ ಗುಜರಾತಿನ ಸಮಾಜದ ಅನೇಕ ಮುಖಗಳ ನೈಜಚಿತ್ರವನ್ನು ಇಲ್ಲಿ ಕಾಣಬಹುದು ಎಂದು ಹೇಳಿದ್ದರೆ ಅದು ಅತ್ಯುಕ್ತಿಯಾಗಲಾರದು. ಕಥೆ ಹೇಳುವುದರಲ್ಲೂ ವರ್ಣನೆಗಳಲ್ಲೂ ಗುಜರಾತೀ ಸಾಹಿತ್ಯದಲ್ಲಿ ಪ್ರೇಮಾನಂದನಿಗೆ ಸರಿಸಮವಾದವರು ಯಾರೂ ಇಲ್ಲ. ಈ ಕೆಲಸಕ್ಕೆ ಆತನಿಗೆ ಬಹು ದಕ್ಷವಾದ ಶೈಲಿಯೂ ವಿಪುಲವಾದ ಭಾಷಾಪ್ರಭುತ್ವವೂ ಇದೆ. ಆತನ ಕವಿತೆಗಳೆಲ್ಲವೂ ಅಪಭ್ರಂಶದ ಕಥಾ – ಕಾವ್ಯಗಳ ಕಾಲದಿಂದಲೂ ಜನರಿಗೆ ಇಷ್ಟವಾಗಿದ್ದ ದೇಸೀ ಛಂದಸ್ಸುಗಳಲ್ಲಿವೆ. ಈ ದೆಸೆಯಿಂದ ಆತನ ಕೃತಿಗಳನ್ನು ಹಾಡುವವರು ಎಷ್ಟು ದೊಡ್ಡ ಸಭೆಗಳಲ್ಲೂ ಜನರ ಗಮನವನ್ನು ಸೆಳೆದು ಮೆಚ್ಚುಗೆಯನ್ನು ಪಡೆಯಬಹುದಾಗಿತ್ತು. ಪ್ರೇಮಾನಂದ ಆಖ್ಯಾನ ರೂಪದ ಪರಮೋಚ್ಚಸ್ತರವನ್ನು ಮುಟ್ಟಿರುವ ಕವಿ. ಆತನ ಹಿಂದೆಯೂ ತರುವಾಯವೂ ಯಾರೂ ಈ ಮಟ್ಟಕ್ಕೆ ಏರಲಿಲ್ಲ.

ಪ್ರೇಮಾನಂದನ ತರುವಾಯ ಶಾಮಲಭಟ್ಟನೆಡೆಗೆ (1718–1765) ಬರುತ್ತೇವೆ. ಪದ್ಯಗಳಲ್ಲಿ ಈತ ಜನಪ್ರಿಯ ಕಥೆಗಳನ್ನು ವಿಪುಲವಾಗಿ ರಚಿಸಿದ್ದಾನೆ. ಅಹಮದಾಬಾದಿನ ಒಂದು ಹರವಿನಲ್ಲಿ ಈತ ವಾಸಿಸುತ್ತಿದ್ದ. ಮುಂದೆ ಖೇಡಾ ಜಿಲ್ಲೆಯ ರಖಿದಾಸ್ ಎಂಬೊಬ್ಬ ಜಮೀನುದಾರನ ಆಶ್ರಯದಲ್ಲಿದ್ದ. ಶಾಮಲನ ಮುಖ್ಯ ಕೃತಿಗಳೆಂದರೆ, ಆತನ ಕಥಾಪುಸ್ತಕಗಳು. ಇವುಗಳೆಲ್ಲ ಬಹುತರವಾಗಿ ವಿಕ್ರಮ ಭೋಜ ಮತ್ತು ಇಂಥ ಇತರ ಜನಪ್ರಿಯ ಶೂರರ ಕತೆಗಳ ಸುತ್ತ ಹೆಣೆದುಕೊಳ್ಳುತ್ತ ಹೋಗುತ್ತವೆ. ಇಲ್ಲಿ ಗುಜರಾತಿನ ಜೈನ ಲೇಖಕರು ಸಂಸ್ಕೃತ, ಪ್ರಾಕೃತ ಮತ್ತು ಪ್ರಾಚೀನ ಗುಜರಾತಿಯಲ್ಲಿ ರಚಿಸಿದ ವಿಪುಲ ಜಾನಪದ ಕಥೆಗಳು ಮತ್ತು ಜನಪ್ರಿಯ ಕಥೆಗಳನ್ನು ಎತ್ತಿ ಹೇಳಬಹುದು. ಈ ಹಳೆಯ ಗ್ರಂಥಗಳಿಗೆ ತಾನು ತುಂಬ ಋಣಿ ಎಂದು ಶಾಮಲ ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದಾನೆ.

ವರ್ಣನೆಯಲ್ಲೂ ಕಥೆ ಹೇಳುವುದರಲ್ಲೂ ಶಾಮಲ ತುಂಬ ಗಟ್ಟಿಗ. ಈ ಕಾರಣದಿಂದಲೇ ಈತನ ಕಥೆಗಳು ಹುಟ್ಟಿಕೊಂಡು ಹರಡಿದ ಮೇಲೆ ಹಿಂದಿನ ಕಥೆಗಳೆಲ್ಲ ಮೂಲೆಪಾಲಾಗಿ ಜನ ಅವನ್ನು ಮರೆತುಬಿಟ್ಟರು. ಜನಪ್ರಿಯ ಕಥಾ ಕ್ಷೇತ್ರದಲ್ಲಿ ಶಾಮಲನ ಸ್ಥಾನ ಆಖ್ಯಾನ ಕ್ಷೇತ್ರದಲ್ಲಿ ಪ್ರೇಮಾನಂದನದಕ್ಕೆ ಸಮಾನವಾಗಿದೆ.

**ಮೂರನೆಯ ಅವಧಿ:** ಪ್ರಾಚೀನ ಕವಿತಾ ಸಂಪ್ರದಾಯದ ಕೊನೆಯ ಸಮರ್ಥ ಪ್ರತಿನಿಧಿ ದಯಾರಾಮ (1783–1853). ಈತ ವಡೋದರದ ಹತ್ತಿರವಿರುವ ಚಾಂದೋಡಿಯಲ್ಲಿ ಜನಿಸಿದ ಮತ್ತು ತನ್ನ ಜೀವಿತ ಕಾಲದ ಬಹು ಭಾಗವನ್ನು ಚಾಂದೋಡಿಗೆ ಕೆಲವು ಮೈಲಿಗಳ ದೂರದಲ್ಲಿದ್ದ ದಭೋಯೀಯಲ್ಲಿ ಕಳೆದ. ಈತ ಅನೇಕ ದೇಶಗಳನ್ನು ಸುತ್ತಿದವ ಮತ್ತು ಸಂಗೀತದಲ್ಲಿ ಒಳ್ಳೆ ಪರಿಶ್ರಮಿ. ಸಾಂಪ್ರದಾಯಿಕವಾಗಿ ಹೇಳುವ ಅರ್ಥದಲ್ಲಿ ಈತ ಪಂಡಿತನಲ್ಲ. ಆದರೆ ಸಂಸ್ಕೃತದಲ್ಲಿ ನಿಷ್ಣಾತ, ಗುಜರಾತಿಯೊಂದರಲ್ಲಿ ಅಲ್ಲದೆ, ಈತ ವ್ರಜ, ಮರಾಠಿ, ಪಂಜಾಬೀ, ಸಂಸ್ಕೃತ ಮತ್ತು ಉರ್ದು ಭಾಷೆಗಳಲ್ಲೂ ಪದಗಳನ್ನು ರಚಿಸಿದ್ದಾನೆ. ವಲ್ಲಭಾಚಾರ್ಯ ಪಂಥದ ನಿಷ್ಠಭಕ್ತನಾದ ಈತ ಆ ಪಂಥದ ಶುದ್ಧಾದ್ವೈತ ದರ್ಶನವನ್ನು ವಿವರಿಸಿ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಆದರೆ ಕವಿ ಎಂಬ ಈತನ ಮಹಾಯಶಸ್ಸು ಇವನ ಕೃತಿಗಳ ಪೈಕಿ ಬಹು ಸ್ವಲ್ಪ ಭಾಗದ ಮೇಲೆ, ಎಂದರೆ ಈತನ ಕೃಷ್ಣ ಗೋಪಿಯರ ಪ್ರಣಯವನ್ನು ಕುರಿತ ಭಾವಗೀತಗಳ ಮೇಲೆ ನಿಂತಿದೆ. ಇದಕ್ಕೇನು ಕಾರಣ ಎಂದರೆ, ಈ ಗರಬೀಗಳು ಗುಜರಾತಿಗೆ ವಿಶಿಷ್ಟವಾಗಿರುವ ಗರ್‍ಬಾ ನರ್ತನಕ್ಕೆ ಅನುಗುಣವಾದ ಜನಪ್ರಿಯ ಹಾಡುಗಳನ್ನು ಒದಗಿಸುತ್ತವೆ. ಈ ಪದಗಳು ಮತ್ತು ಗರಬೀಗಳು ಅನೇಕ ಶತಸಂಖ್ಯೆಯಲ್ಲಿ ಈಗಲೂ ರಕ್ಷಿತವಾಗಿವೆ. ಇವು ಗುಜರಾತಿನಲ್ಲಿ ಈ ಕವಿಯನ್ನು ಅಮರನನ್ನಾಗಿ ಮಾಡಿವೆ.

ದಯಾರಾಮನ ಕಾಲಕ್ಕಾಗಲೇ ಗುಜರಾತಿನಲ್ಲಿ ಮೊಗಲರ, ಪೇಷ್ವೆಗಳ ಪ್ರಭುತ್ವ ಕೊನೆಗೊಂಡಿತ್ತು. ಕೆಲವು ಜಿಲ್ಲೆಗಳಲ್ಲಿ ಗಾಯಕವಾಡರೂ ಮತ್ತೆ ಕೆಲವು ಕಡೆ ಬ್ರಿಟಿಷರೂ ನೆಲೆಗೊಂಡಿದ್ದರು. ನರ್ಮದನೆಂದು ಜನಾಖ್ಯಾತನಾಗಿ ನವೋದಯದ ಕಹಳೆಯನ್ನೂದಿದ ನರ್ಮದಾಶಂಕರನೆಂಬ ಕವಿ 1833 ರಲ್ಲಿ ಸ್ವರ್ಗಸ್ಥನಾದ. ಆದರೆ ಆತ ಗತಿಸುವುದಕ್ಕೆ ಎಂಟು ವರ್ಷಗಳ ಮುಂಚೆ, 1844 ರಲ್ಲಿ ದುರ್ಗಾರಾಮ ಮಂಛಾರಾಮ ಮೆಹತಾಜೀ ಎಂಬ ಗುಜರಾತಿನ ಪ್ರಥಮ ಸಮಾಜ ಸುಧಾರಕ ಸೂರತ್ತಿನಲ್ಲಿ ತನ್ನ ಮಾನವ ಧರ್ಮ ಸಭೆಯನ್ನು ಸಂಸ್ಥಾಪಿಸಿದ. ಒಂದು ನೂರು ವರ್ಷಗಳ ಕಾಲ ಸಾಹಿತ್ಯದಲ್ಲೂ ವಿದ್ಯಾ ಪ್ರಸಾರದಲ್ಲೂ ಪ್ರಧಾನ ಕಾರ್ಯವನ್ನೆಸಗಿರುವ ಗುಜರಾತ್ ಭಾಷಾ ಸಂಘ (ಈಗಿನ ಗುಜರಾತ್ ವಿದ್ಯಾಸಭಾ) ಎ. ಕೆ. ಫೋರ್ಬ್ಸ್ ಎಂಬ ಗುಜರಾತಿನ ಪ್ರಥಮ ಆಂಗ್ಲ ಚರಿತ್ರೆಕಾರ ಮತ್ತು ಕವಿ ದಲಪತರಾಮ–ಇವರಿಂದ 1848 ರಲ್ಲಿ ಸ್ಥಾಪಿತವಾಯಿತು. ನರ್ಮದಾಶಂಕರ ಈ ಸಂಘಸ್ಥಾಪನೆಯ ಪ್ರಯೋಜನಗಳನ್ನು ಕುರಿತು ತನ್ನ ಪ್ರಥಮ ಗದ್ಯ ಲೇಖನವನ್ನು ಬೊಂಬಾಯಿಯಲ್ಲಿ ಬುದ್ಧಿವರ್ಧಕ ಸಭೆಯ ಮುಂದೆ 1851 ರಲ್ಲಿ ಓದಿದ. ಈ ಸಂಗತಿ ನಡೆದ ಸ್ವಲ್ಪ ಕಾಲದಲ್ಲೇ, 1857 ರಲ್ಲಿ, ಬೊಂಬಾಯಿಯ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಪಾಶ್ಚಾತ್ಯ ಸಂಪರ್ಕದಿಂದ ಒಂದು ಹೊಸಯುಗ ಆಗಲೇ ಉದಿಸಿತ್ತು. ಸಂಸ್ಕೃತ ಸಾಹಿತ್ಯವನ್ನೂ ಭಾರತದ ಪ್ರಾಚೀನ ಸಂಸ್ಕೃತಿಯ ಜನ ಹೊಸ ದೃಷ್ಟಿಯಿಂದ ವ್ಯಾಸಂಗಿಸಲು ತೊಡಗಿದ್ದರು. ಪ್ರಬಂಧ, ನಾಟಕ, ಕಾದಂಬರಿ, ಸಣ್ಣ ಕಥೆ, ಜೀವನಚರಿತ್ರೆ ಮುಂತಾದ ಹೊಸ ಸಾಹಿತ್ಯದ ಪ್ರಕಾರಗಳನ್ನು ಬೆಳೆಸಲು, ವರ್ಧಿಸುತ್ತಿರುವ ಸಾಮರ್ಥ್ಯದಿಂದ ಬೆಳೆಸಲು ಸಾಹಿತಿಗಳು ಯತ್ನಗೊಂಡರು. ಇಂಗ್ಲಿಷ್ ಕವಿಗಳಲ್ಲಿ ಅತ್ಯುತ್ತಮರಾದವರ ಕೃತಿಗಳಿಂದ ಪ್ರಭಾವಿತವಾಗಿ ಭಾವಗೀತೆಗಳು ಹುಟ್ಟಿಕೊಂಡವು. ಗುಜರಾತಿನ ಪ್ರತಿಭಾವಂತ ಕಲೆಗಾರ ತನ್ನ ಮನಸ್ಸನ್ನು ಜೀವನ ಮತ್ತು ಸಾಹಿತ್ಯಗಳಲ್ಲೇಳುವ ಹೊಸ ತರಂಗಗಳಿಗೆ ಯಾವಾಗಲೂ ತೆರೆದೇ ಇದ್ದಾನೆ ಮತ್ತು ಈ ಸಾಹಿತ್ಯ ರೂಪಗಳೆಲ್ಲ ಈಗಿನ ಕಾಲದವರೆಗೂ ಅನೇಕ ವಿಧಗಳಲ್ಲಿ ವಿಕಾಸಗೊಳ್ಳುತ್ತಲೇ ಬಂದಿವೆ. ಆಧುನಿಕ ಕಾಲದಲ್ಲಿ ಸಾಹಿತ್ಯದ ವಿವಿಧ ರೂಪಗಳಲ್ಲಿ ಜಯಪ್ರದವಾದ ಪ್ರಯತ್ನಗಳನ್ನು ನಡೆಸಿರುವ ಪ್ರಧಾನ ಲೇಖಕರ ಹೆಸರನ್ನು ಸಹ ಎತ್ತಿ ಹೇಳಲು ಇಲ್ಲಿ ಅವಕಾಶವಿಲ್ಲ. ಎಲ್ಲೋ ಕೆಲವು ಗ್ರಂಥಕರ್ತರ ಮತ್ತು ಅವರ ಮುಖ್ಯ ಕೃತಿಗಳು– ಇವು ಕೂಡ ಸಮಗ್ರವಾಗಿಲ್ಲದಿರಬಹುದು– ಒಂದು ಚಿಕ್ಕ ಪಟ್ಟಿಯನ್ನು ಇಲ್ಲಿ ಕೊಡಬಹುದು, ಅಷ್ಟೆ.

ಈಗ ನಮ್ಮ ವಿವೇಚನೆ 19ನೆಯ ಶತಮಾನವನ್ನು ದಾಟಿ 20ನೆಯ ಶತಮಾನದ ಮೊದಲ ಅರ್ಧಕ್ಕೆ ಕಾಲಿಡುತ್ತದೆ.

**ಕವಿತೆ:** ಇಂಗ್ಲೀಷ್ ಸಾಹಿತ್ಯದಿಂದಲೂ ಸಮಾಜ ಪರಿಷ್ಕರಣದ ಭಾವನೆಗಳಿಂದಲೂ ಪ್ರೇರಿತನಾದ ನರ್ಮದ ಕಾದಂಬರಿಯನ್ನು ಬಿಟ್ಟು ಮಿಕ್ಕೆಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಪ್ರಯತ್ನಗಳನ್ನು ನಡೆಸಿದ್ದಾನೆ. ಆದರೆ ಕವಿತೆಯಲ್ಲಿ ಆತನ ಶೈಲಿ ಅಷ್ಟು ನವುರಾಗಿಲ್ಲ. ಸಕಲ ವಿಶಾರದನಾದ ನರಸಿಂಹರಾಲ್ ಎಂಬಾತನ ಲೇಖನಿಯಿಂದ ಮಾತ್ರ ಮೊದಲ ಬಾರಿಗೆ ಅತ್ಯುತ್ತಮವಾದ ಕೆಲವು ಭಾವಗೀತೆಗಳು ಹೊರಹೊಮ್ಮಿವೆ. ಮಣಿಶಂಕರಭಟ್ಟ (ಕಾಂತ) ಮತ್ತು ಕಲಾಪೀ ಎಂಬವರು ಸಹ ಗಮನಾರ್ಹರಾದ ಸಮಕಾಲೀನರು. ಅನೇಕ ಧ್ಯೇಯಪೂರ್ಣ ನಾಟಕಗಳನ್ನೂ ಅತಿ ಮನೋಹರವಾದ ಭಾವಗೀತೆಗಳನ್ನೂ ರಚಿಸಿರುವ ಕವಿ ನಾನಾಲಾಲ ಆಧುನಿಕ ಗುಜರಾತಿ ಸಾಹಿತ್ಯದಲ್ಲಿನ ಅತಿ ವಿಲಕ್ಷಣಕವಿ. ವಿದ್ವಾಂಸ – ವಿಮರ್ಶಕ ಮತ್ತು ಕವಿಯಾದ ಬಿ. ಕೆ. ಠಾಕೂರ್ ಎಂಬಾತ ತಲೆಮಾರಿಗೆ ಸೇರುತ್ತಾನೆ. ಸುಂದರರಾಮ್ ಮತ್ತು ಉಮಾಶಂಕರ ಜೋಶಿ ಎಂಬವರು ಠಾಕೂರ್ ಪಂಥದ ಕವಿತ್ವವನ್ನು ರಚಿಸುವುದರಲ್ಲಿ ಅತ್ಯಂತ ಯಶಸ್ವಿಗಳಾಗಿದ್ದಾರೆ. ಆದರೆ ಇವರು ಠಾಕೂರ ನಂತಲ್ಲದೆ ಗಾಂಧಿಯವರ ಭಾವನೆ ಮತ್ತು ಸ್ವಾತಂತ್ರ್ಯ ಚಳುವಳಿಗಳಿಂದ ಗಾಢವಾಗಿ ಪ್ರಭಾವಿತರಾಗಿದ್ದಾರೆ. ಜೋಶಿ (1967) ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿರುವ ಕವಿಶ್ರೇಷ್ಠ (ನಿಶೀತ್). ಶೇಷ್ (ಆರ್. ವಿ. ಪಾಠಕ್) ಮತ್ತು ಮುಸಿಕಾರ್ (ಆರ್. ಸಿ.

ಪರೀಖ್) ಎಂಬವರು ಶ್ಲಾಘ್ಯವಾದ ಕವಿತೆಯನ್ನು ಬರೆದಿದ್ದಾರೆ. ಮನ್‌ಶುಖಿಲಾಲ್ ಜ್ಞಾವೇರಿ, ಸ್ನೇಹರಶ್ಮಿ, ಚಂದ್ರವದನ ಮೆಹತಾ ಬೇಟೈ, ಕರ್‌ಸಂದಾಸ್ ಮಾಣಿಕ್ ಮತ್ತು ಇಂದೂಲಾಲ್ ಗಾಂಧಿ, ರಾಜೇಂದ್ರಷಹ ಮತ್ತು ನಿರಂಜನ ಭಗತ್ ಎಂಬವರು ಇತರ ಪ್ರಸಿದ್ಧ ಗುಜರಾತೀ ಕವಿಗಳು.

**ನಾಟಕ:** ನರ್ಮದ ಸಾಹಿತ್ಯಗುಣವುಳ್ಳ ಅನೇಕ ನಾಟಕಗಳನ್ನು ಬರೆದಿದ್ದಾನೆ. ಆದರೆ ರಣಛೋಡ್‌ಭಾಯ್ ಉದ್ಯೆರಾಂ ಎಂಬಾತ ನಾಟಕರಂಗದ ಮೇಲೆ ತುಂಬ ಹೆಸರು ಗಳಿಸಿರುವ ನಾಟಕಗಳನ್ನು ರಚಿಸಿದ ಪ್ರಥಮ ಗುಜರಾತಿ ನಾಟಕಕಾರ. ಈತನದಾದ ಮೇಲೆ ನಭುಭಾಯಿಯ ಕಾಂತಾನಾಟಕ ಮತ್ತು ರಮಣ್ ಭಾಯ್ ನೀಲಕಂಠನ ರಾಯ್‌ನೋ ಪರ್ವತ ಎಂಬ ನಾಟಕಗಳು ಬರುತ್ತವೆ. ಇವೆರಡೂ ತಮ್ಮ ಶ್ರೇಷ್ಠಗುಣಗಳಿಂದ ಸ್ಥಿರವಾಗಿ ನಿಲ್ಲಬಲ್ಲ ನಾಟಕಗಳು. ಇದಾದ ಮೇಲೆ ಕೆ. ಎಂ. ಮುನ್ಷಿಯ (ಪೌರಾಣಿಕ ಮತ್ತು ಸಾಮಾಜಿಕ) ಗದ್ಯನಾಟಕಗಳತ್ತಲೂ ಬಟುಭಾಯಿಯ ಏಕಾಂಕ ನಾಟಕಗಳತ್ತಲೂ ನಾವು ಬರುತ್ತೇವೆ. ಉಮಾಶಂಕರ ಜೋಶಿ ತುಂಬ ಯಶಸ್ವಿಗಳಾದ ಏಕಾಂಗ ನಾಟಕಗಳನ್ನು ಬರೆದಿದ್ದಾನೆ. ಚಂದ್ರವದನ ಮೆಹತ, ತಾನೇ ಒಳ್ಳೆ ನಟನೂ ನಿರ್ದೇಶಕನೂ ಆಗಿದ್ದು, ರಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಸಾಹಿತ್ಯಕ ನಾಟಕಗಳನ್ನು ರಚಿಸಿದ್ದಾನೆ. ಶ್ರೀಮತಿ ಹಂಸಾ ಮೆಹತ ಷೇಕ್ಸ್‌ಪಿಯರಿನ ಎರಡು ನಾಟಕಗಳನ್ನು ತರ್ಜುಮೆ ಮಾಡುವುದರ ಜೊತೆಗೆ ಕೆಲವು ಸ್ವಂತ ನಾಟಕಗಳನ್ನೂ ಬರೆದು ರಾಮಾಯಣವನ್ನು ಪದ್ಯರೂಪದಲ್ಲಿ ಭಾಷಾಂತರಿಸಿ ಪ್ರಕಟಿಸಿದ್ದಾಳೆ. ಯಶವಂತ ಪಾಂಡ್ಯ, ಆರ್. ಸಿ. ಪರೀಖ್, ಜಯಂತೀಲಾಲ್, ಶ್ರೀಧರಾಣಿ, ಚುನಿಲಾಲ್ ಮಡಿಯಾ, ಗುಲಾಬ್‌ದಾಸ್ ಬ್ರೋಕರ್, ಪುಷ್ಕರ್ ಚಂದರವಾರ್ಕರ್ ಎಂಬವರು ಇತರ ಯಶಸ್ವಿ ನಾಟಕಕಾರರು.

**ಕಾದಂಬರಿ:** ಹತ್ತೊಂಬತ್ತನೆಯ ಶತಮಾನದಲ್ಲಿ ಅನೇಕ ಕಾದಂಬರಿಗಳು ಇಂಗ್ಲಿಷ್ ಮತ್ತು ಇತರ ಭಾಷೆಗಳಿಂದ ಭಾಷಾಂತರಗೊಂಡವು. ಆದರೆ ಗುಜರಾತಿಯಲ್ಲೇ ಬರೆದ ಸ್ವತಂತ್ರ ಪ್ರಥಮ ಕಾದಂಬರಿ ಎಂದರೆ 1868ರಲ್ಲಿ ಪ್ರಕಟವಾದ ನಂದಶಂಕರನ ಕರಣ್ ಘೆಲೋ ಎಂಬುದು. ಆ ಕಾದಂಬರಿ ವಸ್ತು ಮಧ್ಯಯುಗದ ಗುಜರಾತಿನ ಚರಿತ್ರೆಯಿಂದ ಆರಿಸಿಕೊಂಡದ್ದು. ಇದು ಪ್ರಕಟವಾದ ಹತ್ತು ವರ್ಷಗಳೊಳಗೆ ಗೋವರ್ಧನ ರಾಮನ ಸರಸ್ವತೀ ಚಂದ್ರವೆಂಬ ಕಾದಂಬರಿ ಬರುತ್ತದೆ. ಮುಂದೆ ಬರುವ ಜನ ತನ್ನನ್ನು ಕಡೆಗಾಣಿಸಲಾಗದಷ್ಟು ಮಹಾಕಾವ್ಯದ ಗಾಂಭೀರ್ಯವನ್ನು ಮೆರೆಸುವ ಬಹು ಘನವಾದ ಕಾದಂಬರಿ ಇದು. ಕೆ.ಎಂ. ಮುನ್ಷಿಯ ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳು ಕತೆಯನ್ನು ಕಳಕಳನೆ ಹೊಳೆವಂತೆ ಹೇಳುತ್ತವೆಯಲ್ಲದೆ ಬೆರಗು ಮೂಡಿಸುವಂತೆ ನಾಟಕೀಯವಾಗಿಯೂ ಇದ್ದು ವಿಲಕ್ಷಣವಾಗಿವೆ. ಗುಜರಾತಿ, ಹಿಂದೀ ಮತ್ತು ಸಂಸ್ಕೃತ ಭಾಷಾ ಪ್ರಸಾರಕ್ಕಾಗಿ ಭಾರತೀಯ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಮುನ್ಷಿ ದಂಪತಿಗಳು ಮಾಡಿದ ಕೆಲಸಗಳು ಅದ್ವಿತೀಯವಾದುವು. ಅವರು ಸ್ಥಾಪಿಸಿದ ಭಾರತೀಯ ವಿದ್ಯಾಭವನ ಭಾರತದ ಚರಿತ್ರೆಯಲ್ಲಿ ಮರೆಯಲಾಗದ ಹೆಸರಾಗಿದೆ. ಯುಗಮೂರ್ತಿ ವಾರ್ತಾಕರ್ ಎಂದು ನ್ಯಾಯವಾಗಿಯೇ ವಿಮರ್ಶಕರು ಹೊಗಳುವ ರಮಣಲಾಲ ದೇಸಾಯಿ ನಾಟಕಗಳು, ಸಣ್ಣ ಕಥೆಗಳು, ಕಾದಂಬರಿಗಳು, ಸಾಹಿತ್ಯ ಮತ್ತು ಇತಿಹಾಸಗಳ ಮೇಲಿನ ಪ್ರಬಂಧಗಳು–ಹೀಗೆ ಹಲವು ಪ್ರಕಾರಗಳಲ್ಲಿ ದುಡಿದಿದ್ದಾನೆ. ಸತ್ಯಾಗ್ರಹ ಚಳವಳಿಯನ್ನು ಕುರಿತ ದಿವ್ಯ ಚಕ್ಷು ಎಂಬುದು ಅವುಗಳಲ್ಲೊಂದು. ಮೇಘಾಣಿ, ಧೂಮಕೇತು, ಚುನಿಲಾಲ್ ಷಹ, ಪನ್ನಾಲಾಲ್ ಪಟೇಲ್, ಗುಣವಂತರಾಯ್ ಆಚಾರ್ಯ ಮತ್ತು ದರ್ಶಕ ಎಂಬುವರು ಇತರ ಜನಪ್ರಿಯ ಕಾದಂಬರಿಕಾರರು. ಮಡಿಯಾ, ಪೆಟ್ಲೀಕರ್. ಚಂದರವಾರ್ಕರ್, ಪೀತಾಂಬರ್ ಪಟೇಲ್, ಮುಂತಾದವರು ಕಿರಿಯ ಕಾದಂಬರಿಕಾರರಲ್ಲಿ ಕೆಲವರು.

**ಸಣ್ಣಕಥೆ:** ಮಲಯಾನಿಲ (ಕಾಂಚನಲಾಲ್ ಮೆಹತ) ಮೊದಲು ಆಮೇಲೆ ಮಟುಭಾಯ್ ಕಾಂತಾವಾಲಾ ಮತ್ತು ಕೆ. ಎಂ. ಮುನ್ಷಿಯವರು ಯಶಸ್ವೀ ಸಣ್ಣ ಕಥೆಗಳನ್ನು ಬರೆದರು. ಗುಜರಾತಿಯಲ್ಲಿ ಆರ್.ವಿ. ಪಾಠಕ್ ಅವರು ಧೂಮಕೇತು ಮತ್ತು ದ್ವಿರೇಫ್ ಎಂಬ ಕೆಲವು ಅತ್ಯುತ್ತಮ ಸಣ್ಣ ಕಥೆಗಳನ್ನು ಬರೆದಿದ್ದಾರೆ. ರಮಣಲಾಲ್ ದೇಸಾಯಿ, ಮೇಘಾನಿ, ಸೋಪಾನ್, ಉಮಾಶಂಕರ್, ಸುಂದರಂ, ಪನ್ನಾಲಾಲ್ ಪಟೇಲ್, ಗುಲಾಬ್‌ದಾಸ್, ಮಡಿಯಾ, ಪೆಟ್ಲೀಕರ್ ಮುಂತಾದವರು ಪ್ರತ್ಯೇಕವಾಗಿ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.

ನೂರು ವರ್ಷಗಳಿಂದೀಚೆಗೆ ಗುಜರಾತಿಯಲ್ಲಿ ಅನೇಕ ಮನೋಹರ ಜೀವನ ಚರಿತ್ರೆಗಳೂ ಆತ್ಮಕಥೆಗಳೂ ರಚಿತವಾಗಿವೆ. ಅವುಗಳ ಪೈಕಿ ಅತಿವಿಲಕ್ಷಣವಾಗಿರುವುದು ಮಹಾತ್ಮಾ ಗಾಂಧೀಜಿಯ ಆತ್ಮಕಥೆ. ಗಾಂಧಿಯವರ ಬರೆಹಗಳಿಂದಾಗಿ ಗುಜರಾತಿ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವಸಾಹಿತ್ಯದಲ್ಲಿ ಶಾಶ್ವತ ಸ್ಥಾನವನ್ನು ಗಳಿಸುವಂತಾಗಿದೆ. ಸಮಾಜ ಪರಿಷ್ಕರಣೆಗೆ ಬಹು ಉತ್ಸಾಹದಿಂದ ನರ್ಮದನೂ ಬಳಿಕ ಆರ್ಯ ಸಂಸ್ಕೃತಿಯ ಮೇಲಣ ಧಾಳಿಯನ್ನು ಎದುರಿಸುವುದಕ್ಕೂ ಮತ್ತು ಅದರ ಗುಣಗಳನ್ನು ವಿವರಿಸುವುದಕ್ಕೂ ಮಣಿಲಾಲನೂ ಬಳಸಿಕೊಂಡ ಪ್ರಬಂಧವನ್ನು ಇತರರೂ ಬಳಸಿಕೊಂಡಿದ್ದಾರೆ. ಅವರ ಪೈಕಿ, ಆನಂದ ಶಂಕರ ಧ್ರುವ, ಮಹಾತ್ಮಗಾಂಧಿ, ಕಾಕಾ ಕಾಲೇಲ್‌ಕರ್ ಮತ್ತು ಮಶ್ರುವಾಲರು ಪ್ರಸಿದ್ಧರಾದವರು. ಲಘು ಪ್ರಬಂಧಗಳನ್ನು ಸ್ವೈರವಿಹಾರಿ (ಆರ್.ವಿ.ಪಾಠಕ್), ಜ್ಯೋತೀಂದ್ರ ದಾವೆ, ದೂರ್‌ಕಾಲ್, ವಿ.ಕೆ. ವೈದ್ಯ, ಮುನಿಕುಮಾರ ಭಟ್, ಜಿ.ಎಲ್.ಮೆಹತ. ನವಲ್ ರಾಂ ತ್ರಿವೇದಿ ಮತ್ತು ಇತರರು ಬರೆದಿದ್ದಾರೆ.

ಗುಜರಾತಿನಲ್ಲಿ ಐತಿಹಾಸಿಕ ಮತ್ತು ಸಾಹಿತ್ಯಕ ಸಂಶೋಧನೆಗಳು: ಎ.ಕೆ. ಫೋರ್ಬ್ಸ್ ಮತ್ತು ಕವಿ ದಲಪತರಾಮ ಎಂಬವರು ಮೊದಲ ಬಾರಿಗೆ ಗುಜರಾತಿ ಮಾತಿನ ಇತಿಹಾಸವನ್ನು ರಚಿಸಲು ಬೇಕಾದ ವಸ್ತುಗಳೆಲ್ಲದರ ಶೋಧನೆಗೆ ತೊಡಗಿದಂದಿನಿಂದ ಪ್ರಾರಂಭವಾದವು. ಈ ಕೆಲಸವನ್ನು ಇಂದಿನವರೆಗೂ ಅನೇಕ ವಿದ್ವಾಂಸರು ಮುಂದುವರಿಸಿಕೊಂಡು ಬಂದಿದ್ದಾರೆ. ವ್ರಜಲಾಲಶಾಸ್ತ್ರಿ ತನ್ನ ಗ್ರಂಥಗಳನ್ನೂ ಗುಜರಾತಿಯಲ್ಲಿನ ಗಮನಾರ್ಹವಾದ ಪ್ರಥಮ ಶಬ್ದಕೋಶವಾದ ನರ್ಮಕೋಶಕ್ಕೆ ನರ್ಮದ ಪೀಠಕೆಯನ್ನೂ ಬರೆದಂದಿನಿಂದ, ಭಾಷಾಶಾಸ್ತ್ರ ಸಂಶೋಧನೆಗಳೂ ಉಪಕ್ರಮಿಸಿವೆ. ಪ್ರವೃದ್ಧವಾಗಿರುವ ಭಾಷಾಶಾಸ್ತ್ರದ ದೃಷ್ಟಿಯಿಂದ ನೋಡಿದರೆ ಈ ದಿವಸ ಈ ಕೃತಿಗಳು ಹಳೆಯವೆನ್ನಿಸಬಹುದು. ಆದರೆ ಈ ಶಾಸ್ತ್ರ ತುಂಬ ಪ್ರಧಾನವಾದುದೆಂಬುದನ್ನು ಬಲು ಹಿಂದೆಯೇ ವಿದ್ವಾಂಸರು ಕಂಡುಕೊಂಡ ವಿಷಯವನ್ನು ಇವು ಜ್ಞಾಪಿಸುತ್ತವೆ. ಎನ್. ಬಿ. ದಿವೇಟಿಯಾ ಎಂಬ ಗುಜರಾತಿ ಭಾಷೆಯ ಘನ ಪಂಡಿತ. ತಾನು ಬೊಂಬಾಯಿ ವಿಶ್ವವಿದ್ಯಾಲಯದ ಆಸರೆಯಲ್ಲಿ ಕೊಟ್ಟ ವಿಲ್ಸನ್ ಭಾಷಾ ಶಾಸ್ತ್ರೋಪನ್ಯಾಸಗಳಲ್ಲಿಯೂ ಸ್ವಂತ ಪ್ರಬಂಧಗಳಲ್ಲಿಯೂ ವಿಶೇಷವಾದ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಈ ಕ್ಷೇತ್ರದಲ್ಲಿ ಆತನ ಕೆಲಸವನ್ನು ಈ ದಿವಸ ವಿದ್ವಾಂಸರ ಸಂಘವೊಂದು ಮುಂದುವರಿಸುತ್ತಿದೆ. ನರ್ಮದನ ತರುವಾಯ ಅನೇಕ ಗುಜರಾತೀ ಶಬ್ದಕೋಶಗಳು ರಚಿತವಾಗಿವೆ; ಇವನ್ನು ಕುರಿತ ವ್ಯಾಸಂಗವೇ ತುಂಬ ಕುತೂಹಲಜನಕವಾಗಿದೆ. ಮಹಾತ್ಮ ಗಾಂಧಿಯವರ ಆಶೀರ್ವಚನದಿಂದ ಪುಷ್ಟಿಗೊಂಡು, ಗುಜರಾತ್ ವಿದ್ಯಾಪೀಠದಿಂದ 1929ರಲ್ಲಿ ಪ್ರಕಟವಾದ ಸಾರ್ಥ ಜೋಡಣೀ ಕೋಶ, ಗುಜರಾತೀ ಶಬ್ದ ರೂಪಗಳನ್ನು ಶಿಷ್ಟೀಕರಿಸುವ ಕೆಲಸದಲ್ಲಿ ಮುಖ್ಯ ಸಾಧನವಾಯಿತು.

ವಿಷಯಗಳ ಸಾಮಾನ್ಯ ಜ್ಞಾನವನ್ನು ಪ್ರಸರಿಸುವ ಅನೇಕ ಗ್ರಂಥಗಳನ್ನು ವಿವಿಧ ಸಂಘಗಳೂ ವ್ಯಕ್ತಿಗಳೂ ಪ್ರಕಟಿಸಿದ್ದಾರೆ. ಪ್ರಮಾಣ ಮತ್ತು ಗುಣದ ದೃಷ್ಟಿಯಿಂದ ವಡೋದರ ಮತ್ತು ಅಹಮದಾಬಾದುಗಳಲ್ಲಿ ನಡೆದಿರುವ ಕೆಲಸ ಗಮನಾರ್ಹವಾಗಿದೆ. ಹಳೆಯ ವಡೋದರ ಸಂಸ್ಥಾನ ವಿವಿಧ ಜ್ಞಾನ ಶಾಖೆಗಳಲ್ಲಿ 1500ಕ್ಕಿಂತಲೂ ಹೆಚ್ಚಿನ ಪುಸ್ತಕಗಳನ್ನು ಗುಜರಾತಿಯಲ್ಲಿ ಒಂದರಲ್ಲೇ ಅಲ್ಲದೆ ಹಿಂದಿ, ಮರಾಠಿ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲೂ ಪ್ರಕಟಿಸಿದೆ. ಇಂಥ ಪುಸ್ತಕಗಳ ಪಟ್ಟಿಯೊಂದನ್ನು ವಡೋದರ ವಿಶ್ವವಿದ್ಯಾಲಯ ಅಚ್ಚುಹಾಕಿದೆಯಲ್ಲದೆ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿದೆ. ವಡೋದರದ ಶ್ರೀಮಂತ ಗಾಯಕವಾಡರ ಆಶ್ರಯದಲ್ಲಿ ಇನ್ನೂ ಅನೇಕ ಪುಸ್ತಕಗಳ ಪ್ರಕಟನೆಗೆ ಧನಸಹಾಯ ಲಭಿಸಿತು. ಅಹಮದಾಬಾದಿನ ಗುಜರಾತ್ ವೆರ್‌ನಾಕ್ಯುಲರ್ ಸೊಸೈಟಿ (ಈಗಿನ ಗುಜರಾತ್‌ವಿದ್ಯಾಸಭಾ) 500ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅನೇಕ ಶಾಸ್ತ್ರ ಮತ್ತು ವೈಜ್ಞಾನಿಕ ಗ್ರಂಥಗಳನ್ನು ಪ್ರಕಟಿಸಿದೆ.; ಅದರ ಕಾರ್ಯ ಇನ್ನೂ ಮುಂದುವರಿಯುತ್ತಲೇ ಇದೆ. ಫೋರ್ಬ್ಸ್ ಗುಜರಾತೀ ಸಭಾ, ಭಾರತೀಯ ವಿದ್ಯಾಭವನ ಮತ್ತು ಮುಂಬಯಿಯ ಗುಜರಾತ್ ರಿಸರ್ಚ್ ಸೊಸೈಟಿ ಸಹ ಶ್ಲಾಘ್ಯವಾದ ಕೆಲಸ ಮಾಡಿವೆ.

ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದಿಂದ ವಿಜ್ಞಾನ ಮತ್ತು ಯಂತ್ರತಂತ್ರ ಸಂಬಂಧೀ ಗ್ರಂಥಗಳು ಗುಜರಾತಿಯಲ್ಲಿ ಅನೇಕವಾಗಿ ಪ್ರಕಟವಾಗಿವೆ. ಇವುಗಳಲ್ಲಿ ಕೆಲವು ಸಾಮಾನ್ಯ ಓದುಗರಿಗಾಗಿ ರಚಿತವಾದವು ಮತ್ತೆ ಕೆಲವು–– ಹಳೆಯ ವಡೋದರ ರಾಜ್ಯ ಪ್ರಕಟಿಸಿದ ಶ್ರೀ ಸಯ್ಯಾಜೀ ಜ್ಞಾನ ಮಂಜೂಷ್‌ದಂಥವು–ಪ್ರೌಢ ವಿದ್ಯಾರ್ಥಿಗಳಿಗಾಗಿ ರಚಿತವಾದವು. ಸದಾ ಬೆಳೆಯುತ್ತಲೇ ಇರುವ ವೈಜ್ಞಾನಿಕ ವಿಷಯಗಳನ್ನು ಕುರಿತವಾದುದರಿಂದ ಈ ದಿವಸ ಅವುಗಳಲ್ಲಿ ಎಲ್ಲವೂ ಉಪಯುಕ್ತವಾದ ವೆಂದೆನಿಸದಿರಬಹುದು; ಆದರೆ ವೈಜ್ಞಾನಿಕ ವಿಷಯಗಳ ಪ್ರಾಧಾನ್ಯವನ್ನು ವಿದ್ಯಾವಂತರು ಮುಂಚೆಯೇ ಮನಗಂಡಿದ್ದರೆಂಬ ಬಗೆಗೆ ಇವು ದೊಡ್ಡ ಸಾಕ್ಷಿಗಳಂತಿವೆ.

ಕೊನೆಗೆ ನಾವು ವೈಜ್ಞಾನಿಕ ಶಬ್ದಕೋಶದತ್ತ ಬರುತ್ತೇವೆ. ವೈಜ್ಞಾನಿಕ ಶಬ್ದಗಳಿಗೆ ಗುಜರಾತಿ ಪಾರಿಭಾಷಿಕ ಕೋಶವೊಂದನ್ನು ರಚಿಸಲು ಅನೇಕ ಪ್ರಯತ್ನಗಳು ಜರುಗಿವೆ. ಹಳೆಯ ವಡೋದರ ರಾಜ್ಯದ ಆಸರೆಯಲ್ಲಿ ಟಿ.ಕೆ. ಗಜ್ಜರ್ ಎಂಬಾತ ಒಂದು ಶಬ್ದಕೋಶವನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಿದ. ಆದರೆ ಅದು ಪ್ರಕಟವಾಗದೆ ಹಾಗೆಯೇ ಉಳಿಯಿತು. ಇದರ ಕೈಬರೆಹದ ಸಂಪುಟಗಳನ್ನು ಓರಿಯಂಟಲ್

ಇನ್ಸ್ಟಿಟ್ಯೂಟ್ ಆಫ್ ಬರೋಡದ ಪುಸ್ತಕಾಲಯದಲ್ಲಿ ಪರಿಶೀಲಿಸಬಹುದು. ಪಿ.ಜಿ.ಷಾಹ, ಎಂ.ಪಿ ದೇಸಾಯಿ, ವೈ ಜಿ. ನಾಯಕ್ ಮತ್ತು ಇತರ ಅನೇಕ ವಿದ್ವಾಂಸರೂ ಮತ್ತು ಬರೋಡ ವಿಶ್ವವಿದ್ಯಾಲಯವೂ ಇಂಥ ಶಬ್ದಕೋಶವನ್ನು ತಯಾರಿಸಿ ಪ್ರಕಟಿಸಿವೆ. ಅನೇಕ ದೃಷ್ಟಿಗಳಿಂದ, ಅದರಲ್ಲೂ ಭಾರತ ದೇಶಕ್ಕೆಲ್ಲ ಅನ್ವಯಿಸುವಂತೆ, ಒಂದು ಶಬ್ದಕೋಶವನ್ನು ರಚಿಸುವುದು ಅಗತ್ಯದ ಕೆಲಸವೆಂದು ಎಲ್ಲರೂ ಭಾವಿಸುತ್ತಿರುವ ಈ ವೇಳೆಯಲ್ಲಿ ಇವೆಲ್ಲ ಕೃತಿಗಳ ಉಪಯೋಗಕ್ಕೆ ಬರುತ್ತವೆ. (ಬಿ.ಜಿ.ಎಸ್.)

ಸಮಕಾಲೀನ ಗುಜರಾತಿ ಸಾಹಿತ್ಯದಲ್ಲಿ 1967ರಲ್ಲಿ ಉಮಾಶಂಕರ ಜೋಶಿ, 1985ರಲ್ಲಿ ಪನ್ನಲಾಲ್ ಪಟೇಲ್ ಮತ್ತು 2001ರಲ್ಲಿ ರಾಜೇಂದ್ರ ಕೇಶವಲಾಲ್ ಷಹ ಅವರು ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿರುವ ಕವಿ ಶ್ರೇಷ್ಠರು. *

**ಗುಜರಾತ್ ವಿದ್ಯಾಪೀಠ :** 1920ರಲ್ಲಿ ಗಾಂಧೀಜಿ ಅಹಮದಾಬಾದಿನಲ್ಲಿ ಆರಂಭಿಸಿದ ರಾಷ್ಟ್ರೀಯ ವಿದ್ಯಾಸಂಸ್ಥೆ. ನಾಡಿನಲ್ಲಿ ಅಸಹಕಾರ ಚಳವಳಿ ನಡೆಯುತ್ತಿದ್ದಾಗ ಹೋರಾಟದಲ್ಲಿ ಭಾಗವಹಿಸಲು ಶಿಸ್ತಿನ ಯುವಜನರನ್ನು ಸಿದ್ಧಪಡಿಸುವ ಕಾರ್ಯವನ್ನು ಈ ಸಂಸ್ಥೆ ಕೈಗೊಂಡಿತ್ತು. 1932ರಲ್ಲಿ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಇದನ್ನು ಕಾನೂನು ಬಾಹಿರಸಂಸ್ಥೆಯೆಂದು ಅಂದಿನ ಸರ್ಕಾರ ಘೋಷಿಸಿತು. 1935ರಲ್ಲಿ ಮತ್ತೆ ಈ ಸಂಸ್ಥೆ ತನ್ನ ಕಾರ್ಯವನ್ನು ಆರಂಭಿಸಿದರೂ ಕ್ವಿಟ್ ಇಂಡಿಯ ಚಳವಳಿಯಲ್ಲಿ

ಗುಜರಾತ್ ವಿದ್ಯಾಪೀಠ

ಭಾಗವಹಿಸುವುದಕ್ಕಾಗಿ 1942ರಲ್ಲಿದನ್ನು ಮುಚ್ಚಲಾಯಿತು. ಆಮೇಲೆ 1945ರಲ್ಲಿದು ಪುನಃಚೇತನಗೊಂಡಿತು. 1947ರಲ್ಲಿ ಇದರ ವತಿಯಲ್ಲಿ ಮಹದೇವದೇಸಾಯ್ ಸಮಾಜಸೇವಾ ಕಾಲೇಜು ಆರಂಭವಾಯಿತು. 1963ರಲ್ಲಿ ಪಾರ್ಲಿಮೆಂಟು ಇದನ್ನು ರಾಷ್ಟ್ರೀಯ ಪ್ರಾಮುಖ್ಯವುಳ್ಳ ವಿದ್ಯಾಸಂಸ್ಥೆಯೆಂದು ಘೋಷಿಸಿ ಪದವಿ ನೀಡುವ ಅಧಿಕಾರವಿತ್ತು, ಪರಿಗಣಿತ ವಿಶ್ವವಿದ್ಯಾಲಯವನ್ನಾಗಿ ಅಂಗೀಕರಿಸಿತು. ಗಾಂಧೀಜಿ ಅಜೀವಪರ್ಯಂತ ಇದರ ಕುಲಪತಿಗಳಾಗಿದ್ದರು. ಅನಂತರ ಬಾಬು ರಾಜೇಂದ್ರ ಪ್ರಸಾದರು ಕುಲಪತಿಗಳಾದರು. ಅನಂತರ ಇದರ ಕುಲಪತಿ ಮುರಾರ್ಜಿ ದೇಸಾಯಿ.

ಗಾಂಧೀಜಿಯವರ ಆದರ್ಶದಂತೆ ನಾಡಿನ ಪುನರುಜ್ಜೀವನಕ್ಕಾಗಿ ದುಡಿಯಬಲ್ಲ ದಕ್ಷರೂ ಶೀಲಸಂಪನ್ನರೂ ಪ್ರಾಜ್ಞರೂ ಸುಶಿಕ್ಷಿತರೂ ಆದ ಯುವಜನರನ್ನು ರೂಪಿಸುವುದು ಈ ವಿದ್ಯಾಪೀಠದ ಮುಖ್ಯ ಉದ್ದೇಶ. ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ ಅಧ್ಯಾಪಕರೂ ಆಡಳಿತ ಮಂಡಳಿಯವರೂ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಸ್ಪೃಶ್ಯತೆಯ ನಿವಾರಣೆ, ನೂಲುವುದು, ನೇಯುವುದು, ಗ್ರಾಮಾಭಿವೃದ್ಧಿ, ಶ್ರಮದಾನ, ಮಾತೃಭಾಷೆಗೆ ಪ್ರಾಮುಖ್ಯ, ಧರ್ಮಸಹಿಷ್ಣುತೆ, ದೈಹಿಕ ಶಿಕ್ಷಣ ಮುಂತಾದ ಅಂಶಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ.

1930ರವರೆಗೆ ಈ ಸಂಸ್ಥೆಯಲ್ಲಿ ಗುಜರಾತಿ, ಮರಾಠಿ, ಬಂಗಾಳಿ, ಸಂಸ್ಕೃತ , ಇಂಗ್ಲಿಷ್, ಪರ್ಷಿಯನ್ ಮೊದಲಾದ ಭಾಷೆಗಳಲ್ಲೂ ಇಂಡಾಲಜಿ, ಸಮಾಜ ವಿಜ್ಞಾನಗಳು. ಔಷಧನಿರ್ಮಾಣಶಾಸ್ತ್ರ, ತತ್ತ್ವಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ಮುಂತಾದ ಶಾಸ್ತ್ರಗಳಲ್ಲೂ ಪದವಿಮಟ್ಟದ ಶಿಕ್ಷಣಕ್ಕೆ ಅವಕಾಶವಿತ್ತು. 1947ರ ಅನಂತರ ಸ್ನಾತಕೋತ್ತರ ತರಗತಿಗಳನ್ನು ತೆರೆಯಲಾಯಿತು. ಗಾಂಧೀತತ್ತ್ವ, ಅರ್ಥಶಾಸ್ತ್ರ, ಶಿಕ್ಷಣ, ಭಾಷೆ ಮತ್ತು ಸಾಹಿತ್ಯ, ಭಾರತೀಯ ಸಂಸ್ಕೃತಿ–ಈ ವಿಶೇಷ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗಿದೆ. ಶಿಕ್ಷಣ ಮಾಧ್ಯಮ ಗುಜರಾತಿ.

ಏಕ ಘಟಕ ವಸತಿ ವಿಶ್ವವಿದ್ಯಾಲಯವಾದ್ದರಿಂದ ಇದಕ್ಕೆ ಸೇರಿದಂತೆ ಯಾವ ಅಂಗೀಕೃತ ಕಾಲೇಜುಗಳೂ ಇಲ್ಲ. ಇಲ್ಲಿಂದ ಹೊರಬಂದ ಪದವೀಧರರು ಗುಜರಾತಿನ 200 ಗ್ರಾಮಗಳಲ್ಲಿ ಏರ್ಪಡಿಸಿರುವ ಆಶ್ರಮಪಾಠಶಾಲೆಗಳಲ್ಲೂ ಇತರ ಸಂಸ್ಥೆಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಈಗ ಈ ವಿಶ್ವವಿದ್ಯಾಲಯ ಶಿಶುವಿಹಾರದಿಂದ ಸ್ನಾತಕೋತ್ತರ ತರಗತಿಗಳ ಎಲ್ಲ ಮಟ್ಟದ ಶಿಕ್ಷಣ ಸಂಸ್ಥೆಗಳನ್ನೂ ಅಂತರ್ಗತಗೊಳಿಸಿಕೊಂಡು ಕೆಲಸ ಮಾಡುತ್ತಿದೆ. 1970ರಲ್ಲಿ ಈ ಸಂಸ್ಥೆ ಸುವರ್ಣಮಹೋತ್ಸವವನ್ನು ಆಚರಿಸಿತು. (ಟಿ.ಆರ್.ಎನ್.)

**ಗುಜ್ರನ್‌ವಾಲಾ :** ಪಾಕಿಸ್ತಾನದ ಲಾಹೋರ್ ವಿಭಾಗದಲ್ಲಿರುವ ಒಂದು ಜಿಲ್ಲೆ; ತಹಸೀಲು; ಲಾಹೋರಿಗೆ 64 ಕಿಮೀ ಉತ್ತರದಲ್ಲಿರುವ ಪಟ್ಟಣ. ಹಿಂದೆ ಈ ಪಟ್ಟಣ ಒಂದು ಹಳ್ಳಿಯಾಗಿತ್ತು. ಇದನ್ನು ಸ್ಥಾಪಿಸಿದವರು ಗುಜರರು. ಇಲ್ಲಿ ನೆಲಸಿದ ಅಮೃತಸರದ ಶಾನ್ಸಿ ಜಾಟರು ಖಾನ್ಪುರವೆಂದು ಇದನ್ನು ಕರೆದರು. ಆದರೂ ಹಳೆಯ ಹೆಸರೇ ಉಳಿಯಿತು. ಸಿಕ್ಖರ ಕಾಲದಲ್ಲಿ ಇದಕ್ಕೆ ಪ್ರಾಮುಖ್ಯ ಬಂತು. ಮಹಾನ್‌ಸಿಂಗನ ಗೋರಿ, ಅವನ ಉದ್ಯಾನ ಇವು ಪ್ರೇಕ್ಷಣೀಯ ಸ್ಥಳಗಳು. ಪಂಜಾಬ್ ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಎರಡು ಕಾಲೇಜುಗಳಿವೆ. ಪೆಷಾವರ್ ರೈಲುಮಾರ್ಗವೂ ಮಹಾ ಹೆದ್ದಾರಿಯೂ ಈ ಮೂಲಕ ಹಾದುಹೋಗುತ್ತವೆ. ಇಲ್ಲಿ ತಿಜೋರಿ ಮತ್ತು ಪಾತ್ರೆಗಳು ತಯಾರಾಗುತ್ತವೆ. ಜವಳಿ, ಹೆಣಿಗೆ, ವಿದ್ಯುತ್‌ಪಂಖ ಇವು ಈಚಿನ ತಯಾರಿಕೆಗಳು.

ಗುಜ್ರನ್‌ವಾಲಾ ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಅಖಂಡ ಪಂಜಾಬ್ ಪ್ರಾಂತ್ಯಕ್ಕೆ ಸೇರಿತ್ತು. 630ರಲ್ಲಿ ಚೀನದ ಬೌದ್ಧಯಾತ್ರಿಕ ಯುವಾನ್‌ಚಾಂಗ್ ಈ ಜಿಲ್ಲೆಯ ತಕಾಯಿ ಪ್ರದೇಶಕ್ಕೆ ಭೇಟಿ ನೀಡಿದ್ದ. ಈಗಿನ ಅಸುರಾರ ಗ್ರಾಮದ ಬಳಿ ಇರುವ ಒಡ್ಡು ಗತಕಾಲದ ರಾಜಧಾನಿಯ ಸ್ಥಳವೆಂದು ಪರಿಗಣಿಸಲ್ಪಟ್ಟಿದೆ. ಚರತ್‌ಸಿಂಗ್ ಗುಜ್ರನ್‌ವಾಲಾವನ್ನು ತನ್ನ ಆಡಳಿತಕೇಂದ್ರವನ್ನಾಗಿ ಮಾಡಿಕೊಂಡಿದ್ದ. ಮುಂದೆ ಅವನ ಮೊಮ್ಮಗ ರಣಜಿತ್‌ಸಿಂಗ್ ಇಲ್ಲಿ ಜನಿಸಿ ಮಹಾರಾಜನಾದ. 1847ರಲ್ಲಿ ಈ ಪ್ರದೇಶವನ್ನು ಬ್ರಿಟಿಷರು ಲಾಹೋರಿನಲ್ಲಿ ಸೇರಿಸಿದರು. ಗೋದಿ, ಹತ್ತಿ ಇಲ್ಲಿಯ ಬೆಳೆಗಳು. ಇಲ್ಲಿಯ ಕೃಷಿ ಭೂಮಿಗೆ 1892ರಲ್ಲಿ ಚೀನಾಬ್ ನದಿಯ ಕೆಳಕಾಲುವೆಯಿಂದಲೂ 1912ರಲ್ಲಿ ಮೇಲುಕಾಲುವೆಯಿಂದಲೂ ನೀರಾವರಿ ಸೌಲಭ್ಯ ಒದಗಿಸಲಾಯಿತು.

ಗುಜ್ರನ್‌ವಾಲಾ ತಹಸೀಲಿನ ವಿಸ್ತೀರ್ಣ 936 ಚ.ಕಿ.ಮೀ. (ಎಸ್.ಎನ್.ಎಆರ್.ಇ.)

**ಗುಜ್ರಾಲ್, ಐ.ಕೆ. :** 1919–2012. ಭಾರತ ಗಣರಾಜ್ಯದ 12ನೆಯ ಪ್ರಧಾನಮಂತ್ರಿ ಇವರ ಪೂರ್ಣ ಹೆಸರು ಇಂದ್ರಕುಮಾರ್ ಗುಜ್ರಾಲ್. 1919ರ ಡಿಸೆಂಬರ್ 4ರಂದು ಜನಿಸಿದರು. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಇವರು 23 ವರ್ಷದವರಾಗಿದ್ದಾಗ 1942ರ ಆಗಸ್ಟ್‌ನಲ್ಲಿ ಕ್ವಿಟ್ ಇಂಡಿಯ ಚಳವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾದರು. ಸ್ವಾತಂತ್ರ್ಯಾನಂತರ ಇಂದಿರಾಗಾಂಧಿಯವರ ಸಚಿವ ಸಂಪುಟದಲ್ಲಿ 1975ರಲ್ಲಿ ವಾರ್ತಾ ಮತ್ತು ಪ್ರಸಾರಖಾತೆಯ ಸಚಿವರಾಗಿದ್ದರು. 1975ರ ಜೂನ್ 12ರಂದು ಅಲಹಬಾದ್ ಹೈಕೋರ್ಟು ಇಂದಿರಾಗಾಂಧಿಯವರ 1976 ಚುನಾವಣೆಯ ಲೋಕಸಭೆಯ ಸದಸ್ಯತ್ವ ಅಸಿಂಧುವೆಂದು ತೀರ್ಪುಕೊಟ್ಟಾಗ ಆ ಸಂಪುಟದಲ್ಲಿದ್ದರು. ಅನಂತರ ರಷ್ಯಕ್ಕೆ ರಾಯಭಾರಿಯಾಗಿ ನೇಮಕವಾಗಿ ಮಾಸ್ಕೋನಲ್ಲಿದ್ದರು.

1980ರ ಮಧ್ಯದಲ್ಲಿ ಇವರು ಕಾಂಗ್ರೆಸ್ ಪಕ್ಷವನ್ನು ತೊರೆದು ಜನತಾ ಪಕ್ಷವನ್ನು ಸೇರಿದರು. 1989ರ ಚುನಾವಣೆಯಲ್ಲಿ ಪಂಜಾಬ್ ಪ್ರಾಂತದ ಜಲಂಧರ್ ಲೋಕಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾದರು. ಪ್ರಧಾನಿ ವಿಶ್ವನಾಥ ಪ್ರತಾಪಸಿಂಗ್‌ರ (ವಿ.ಪಿ. ಸಿಂಗ್) ಸಂಪುಟದಲ್ಲಿ ವಿದೇಶಾಂಗ ವ್ಯವಹಾರ ಖಾತೆ ಸಚಿವರಾಗಿದ್ದರು. ಅದೇ ವರ್ಷ ರುಬಿಯ ಸಯೇದ್ ಅಪಹರಣದ ವಿಷಯವಾಗಿ ಅಪಹರಣಕಾರರೊಡನೆ ಸಂಧಾನ ನಡೆಸಲು ಗುಜ್ರಾಲ್ ಅವರನ್ನು ಶ್ರೀನಗರಕ್ಕೆ ಕಳಿಸಲಾಯಿತು. ಅನಂತರ ಕುವೈತ್ ಮೇಲೆ ಇರಾಕ್ 1990 ಆಗಸ್ಟ್ 2ರಂದು ಧಾಳಿ ನಡೆಸಿತು. ಇದು 1991 ಜನವರಿಯಲ್ಲಿ ಮೊದಲ ಗಲ್ಫ್ ಯುದ್ಧಕ್ಕೆ ಕಾರಣವಾಯಿತು. ಅಮೆರಿಕ ಮತ್ತು ಬ್ರಿಟನ್ ಕುವೈತ್ ಸಹಾಯಕ್ಕೆ ಬಂದು ಇರಾಕ್ ಕುವೈತ್‌ನಿಂದ ಕಾಲ್ತೆಗೆಯುವಂತೆ ಮಾಡಿದವು. ಭಾರತದ ಪ್ರತಿನಿಧಿಯಾಗಿ ಇವರು ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ರನ್ನು ಖುದ್ದಾಗಿ ಭೇಟಿಯಾದರು. ಆ ಸಮಯದಲ್ಲಿ ಇವರು ಹುಸೇನ್‌ರನ್ನು ತಬ್ಬಿಕೊಂಡಿದ್ದು ಚರ್ಚೆಗೆ ಗ್ರಾಸವಾಗಿತ್ತು.

1991ರ ಮಧ್ಯಾಂತರ ಚುನಾವಣೆಯಲ್ಲಿ ಇವರು ಬಿಹಾರದ ಪಾಟ್ನ (ಪಟಣ) ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದರು. ಆದರೆ ಅಲ್ಲಿಯ ಚುನಾವಣೆಯು ರದ್ದಾಯಿತು. 1992ರಲ್ಲಿ ರಾಜ್ಯಸಭೆ ಸದಸ್ಯರಾಗಿ ಚುನಾಯಿತರಾದರು. ಇವರು ಜನತಾದಳ ಪಕ್ಷದ ಒಬ್ಬ ಮುಖ್ಯ ನಾಯಕರಾಗಿದ್ದರು. 1996ರ ಚುನಾವಣೆಯ ಅನಂತರ ಅನೇಕ ರಾಜಕೀಯ ಪಕ್ಷಗಳು ಜೊತೆಗೂಡಿ ಕರ್ನಾಟಕದ ಎಚ್.ಡಿ. ದೇವೇಗೌಡರ ನೇತೃತ್ವದಲ್ಲಿ ಯುನೈಟೆಡ್ ಫ್ರಂಟ್ ಸರ್ಕಾರ ರಚನೆಯಾಯಿತು. ಅದರಲ್ಲಿ ಮತ್ತೆ ವಿದೇಶಾಂಗ ವ್ಯವಹಾರಗಳ ಸಚಿವರಾದರು. ಈ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುತ್ತಿದ್ದ ಕಾಂಗ್ರೆಸ್ ಪಕ್ಷದವರು ತಮ್ಮ ಬೆಂಬಲವನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿದರಿಂದ ಸರ್ಕಾರದ ಪತನಕ್ಕೆ ಹಾದಿಯಾಯಿತು. ಚುನಾವಣೆಯನ್ನು ತಪ್ಪಿಸಲು ಸಂಧಾನ ಏರ್ಪಟ್ಟು ನಾಯಕರನ್ನು ಬದಲಾಯಿಸಿದರೆ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುವುದಾಗಿಯೂ, ಅನೇಕ ವಿಷಯಗಳಲ್ಲಿ ಕಾಂಗ್ರೆಸ್ ಸಲಹೆಯನ್ನು ಪಡೆಯಬೇಕೆಂದೂ ಷರತ್ತು ವಿಧಿಸಿದರು. ಯುನೈಟೆಡ್ ಫ್ರಂಟ್ (ಸಂಯುಕ್ತ ರಂಗ) ಅದಕ್ಕೆ ಒಪ್ಪಿಕೊಂಡು ಇವರನ್ನು ನಾಯಕನನ್ನಾಗಿ ಚುನಾಯಿಸಿತು. ಆಗ ಇವರು 1997 ಏಪ್ರಿಲ್ 21ರಂದು ಪ್ರಧಾನಿಯಾಗಿ



ಪ್ರಮಾಣ ವಚನ ಸ್ವೀಕರಿಸಿದರು. ಇವರು ಪ್ರಧಾನಿಯಾದ ಕೆಲವೇ ವಾರಗಳಲ್ಲಿ ಒಂದು ತೊಂದರೆ ಪ್ರಾರಂಭವಾಯಿತು. ಜನತಾ ಪಕ್ಷದವರೇ ಆದ ಬಿಹಾರ್‌ನ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್ ಪಶುಗಳ ಮೇವಿನ ಹಗರಣದಲ್ಲಿ ಸಿಲುಕಿಕೊಂಡರು. ಆಗ ಈ ಅವ್ಯವಹಾರದ ಮೊಕದ್ದಮೆ ಹೂಡಲು ಸಿ.ಬಿ.ಐ. ಬಿಹಾರಿನ ರಾಜ್ಯಪಾಲರಾಗಿದ್ದ ಎ.ಆರ್. ಕಿದ್ವಾಯಿಯವರ ಅನುಮತಿ ಕೇಳಿತು. ರಾಜ್ಯಪಾಲರು ಅನುಮತಿ ನೀಡಿದರು. ಪಕ್ಷದ ಒಳಗೆ ಮತ್ತು ಹೊರಗೆ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕೆಂದು ಒತ್ತಾಯ ಮಾಡಿದರು. ಈ ಬೇಡಿಕೆಯನ್ನು ಯಾದವ್ ನಿಷ್ಠುರವಾಗಿ ತಿರಸ್ಕರಿಸಿದರು. ಗುಜ್ರಾಲ್ ಯಾದವ್‌ಗೆ ಮಂತ್ರಿಪದವಿಯಿಂದ ಕೆಳಗಿಳಿಯಲು ಸೂಚಿಸಿದರು. ಆದರೆ ಸರ್ಕಾರದ ಮೇಲೆ ಯಾವ ಕ್ರಮವನ್ನೂ ಜರುಗಿಸಲಿಲ್ಲ. ಆಗ ಸಿ.ಬಿ.ಐ. ನಿರ್ದೇಶಕರಾಗಿದ್ದ ಜೋಗಿಂದರ್ ಸಿಂಗ್ ಅವರನ್ನು ವರ್ಗ ಮಾಡಿದರು. ಇದು ಲಾಲುಪ್ರಸಾದ್ ಅವರನ್ನು ಗುಜ್ರಾಲ್ ರಕ್ಷಿಸುತ್ತಿರುವರೆಂಬ ಆಪಾದನೆಗೆ ಹಾದಿ ಮಾಡಿಕೊಟ್ಟಿತು. ಅನಂತರ ಯಾದವ್ ಜನತಾದಳ ತೊರೆದು 1997ರ ಜುಲೈ 3ರಂದು ರಾಷ್ಟ್ರೀಯ ಜನತಾದಳ ಎಂಬ ಪಕ್ಷವನ್ನು ಪ್ರಾರಂಭ ಮಾಡಿದರು. ಈ ಹೊಸ ಪಕ್ಷದಲ್ಲಿ ಸಂಸತ್ತಿನ 17 ಸದಸ್ಯರಿದ್ದರು. ಹೊಸ ಪಕ್ಷ ಗುಜ್ರಾಲ್‌ಗೆ ಬೆಂಬಲ ಸೂಚಿಸಿತು. ಇದರಿಂದ ಸರ್ಕಾರಕ್ಕೆ ಅಪಾಯ ತಪ್ಪಿತು.

ಇವರ ಸರ್ಕಾರದ ಒಂದು ವಿವಾದಾಸ್ಪದ ನಿರ್ಧಾರ ಎಂದರೆ ಉತ್ತರಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸ್ಸು ಮಾಡಿದ್ದು. ಆದರೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಆ ಶಿಫಾರಸನ್ನು ಹಿಂದಕ್ಕೆ ಕಳುಹಿಸಿದರು. ಜೊತೆಗೆ ಉತ್ತರಪ್ರದೇಶದ ಅಲಹಬಾದ್ ಉಚ್ಚ ನ್ಯಾಯಾಲಯ ಸಹಿತ ರಾಷ್ಟ್ರಪತಿ ಆಡಳಿತವನ್ನು ವಿರೋಧಿಸಿ ತೀರ್ಪು ನೀಡಿತು. ರಾಜೀವ್‌ಗಾಂಧಿ ಹತ್ಯೆಯ ತನಿಖೆಯನ್ನು ನಡೆಸಿದ ಜೈನ್ ನಿಯೋಗದ ಮಧ್ಯಾಂತರ ವರದಿಯ ರಹಸ್ಯ ಹೊರಬಿದ್ದು ಅನಂತರದಲ್ಲಿ ಡಿ.ಎಂ.ಕೆ. (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷ ಗುಪ್ತವಾಗಿ ಎಲ್.ಟಿ.ಟಿ.ಇ.ಗೆ ಬೆಂಬಲ ನೀಡಿದೆ ಎಂಬ ವಿಷಯ ಬಹಿರಂಗವಾಯಿತು. ಗುಜ್ರಾಲ್ ಮಂತ್ರಿಮಂಡಲದಲ್ಲಿ ಡಿ.ಎಂ.ಕೆ. ಸಚಿವರುಗಳಿದ್ದರು. ಕಾಂಗ್ರೆಸ್ ಪಕ್ಷ ಸಂಸತ್ತಿನಲ್ಲಿ ಜೈನ್‌ವರದಿಯನ್ನು ಮಂಡಿಸಲು ಒತ್ತಾಯಿಸಿತು. 1997 ನವೆಂಬರ್ 19ರಂದು ವರದಿ ಮಂಡನೆಯಾಗಿ ಅದರಲ್ಲಿ ಡಿ.ಎಂ.ಕೆ. ಪಕ್ಷ ಎಲ್.ಟಿ.ಟಿ.ಇ.ಗೆ ಬೆಂಬಲಿಸಿರುವುದು ಖಚಿತವಾಯಿತು. ಕಾಂಗ್ರೆಸ್ ಪಕ್ಷ ಡಿ.ಎಂ.ಕೆ. ಸಚಿವರನ್ನು ಕೈಬಿಡಲು ಒತ್ತಾಯಿಸಿತು. ಈ ವಿಷಯವಾಗಿ ಕಾಂಗ್ರೆಸ್ ಅಧ್ಯಕ್ಷ ಸೀತಾರಾಮ್ ಕೇಸರಿ ಮತ್ತು ಪ್ರಧಾನಿ ಗುಜ್ರಾಲ್ ಮಧ್ಯೆ ಪತ್ರವ್ಯವಹಾರ ನಡೆಯಿತು. ಆದರೆ ಇದಕ್ಕೆ ಪ್ರಧಾನಿ ಒಪ್ಪಲಿಲ್ಲ. 1997ರ ನವೆಂಬರ್ 28ರಂದು ಕಾಂಗ್ರೆಸ್ ಪಕ್ಷ ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ಸು ಪಡೆಯಿತು. ಅನಂತರ ಗುಜ್ರಾಲ್ ರಾಜೀನಾಮೆ ಕೊಟ್ಟರು. 1998ರಲ್ಲಿ ನಡೆದ ಚುನಾವಣೆಯಲ್ಲಿ ಪಂಜಾಬಿನ ಜಲಂಧರ್ ಲೋಕಸಭಾ ಕ್ಷೇತ್ರದಿಂದ ಅಕಾಲಿದಳದಿಂದ ಬೆಂಬಲಿತರಾಗಿ ಸ್ಪರ್ಧಿಸಿ ಕಾಂಗ್ರೆಸ್ ಅಭ್ಯರ್ಥಿಗಿಂತ 1,31,000 ಅಧಿಕಮತದಿಂದ ಜಯಗಳಿಸಿದರು. ಅನಂತರ ಇವರು 1999ರ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ಇವರು ರಾಜಕೀಯದಿಂದ ನಿವೃತ್ತರಾಗಿ ವಿಶ್ರಾಂತ ಜೀವನವನ್ನು ಆಯ್ಕೆ ಮಾಡಿಕೊಂಡರು. ಇವರು 2012ರ ನವೆಂಬರ್ 30ರಂದು ನಿಧನವಾದರು.

ಗುಜ್ರಾಲ್ ಅವರು ಉರ್ದು ಭಾಷೆಯ ಸರಳ ಮಾತುಗಳ ವಾಗ್ಮಿ. ತಮಗೆ ಅವಕಾಶ ದೊರೆತಾಗೆಲ್ಲಾ ಉರ್ದುವಿನಲ್ಲಿ ದ್ವಿಪದಿಗಳನ್ನು ರಚಿಸಿ ವಾಚಿಸುತ್ತಿದ್ದುದುಂಟು. ಇವರ ಪತ್ನಿ ಶೈಲಗುಜ್ರಾಲ್. ಪಂಜಾಬಿ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಈಕೆ 2011ರ ಜುಲೈ 11ರಂದು ನಿಧನರಾದರು. ಈ ದಂಪತಿಗಳಿಗೆ ಇಬ್ಬರು ಪುತ್ರರು, ಮೂರು ಮೊಮ್ಮಕ್ಕಳು ಇದ್ದಾರೆ. (ಎನ್.ಎಲ್.)

**ಗುಟ್ಸ್‌ಕೊ, ಕಾರ್ಲ್ ಫರ್ಡಿನಾಂಡ್ :** 1811–78. ಜರ್ಮನ್ ಕಾದಂಬರಿಕಾರ, ನಾಟಕಕಾರ ಮತ್ತು ಪತ್ರಿಕೋದ್ಯಮಿ. ಜರ್ಮನ್ ಸಾಹಿತ್ಯದ ಪ್ರಥಮ ಸಾಮಾಜಿಕ ಕಾದಂಬರಿಕರ್ತೃ. ಹುಟ್ಟಿದ್ದು ಬಡಕುಟುಂಬದಲ್ಲಿ. ಆದರೆ ಈತನಲ್ಲಿ ನೆಲೆಸಿದ್ದ ಮಹತ್ತ್ವಾಕಾಂಕ್ಷೆಗಳು ಈತನ ಪುರೋಭಿವೃದ್ಧಿಗೆ ದಾರಿ ತೋರಿಸಿದವು. ಈತನ ಸೂಕ್ಷ್ಮಮತಿ ಹಾಗೂ ಗ್ರಹಣಶಕ್ತಿ ಈತನ ಮಹತ್ತ್ವಾಕಾಂಕ್ಷೆಗಳಿಗೆ ಪೂರಕವಾದವು. ಗಯಟೆ ಮಹಾಕವಿಯನ್ನು ರಮ್ಯ ಸಾಹಿತ್ಯ ಪಂಥದ ಪ್ರವರ್ತಕನೆಂದು ಜರ್ಮನ್ ಸಾಹಿತ್ಯ ಹೇಳಿದರೆ, ಗುಟ್ಸ್‌ಕೊನನ್ನು ಆ ಪಂಥದ ವಿರೋಧಿಗಳ ನಾಯಕನೆಂದು ನಿರೂಪಿಸುತ್ತದೆ. ಹೀಗಾಗಿ ಈತನ ಹೆಸರು ಜರ್ಮನ್ ಸಾಹಿತ್ಯದಲ್ಲಿ ಪ್ರಸಿದ್ಧವಾದುದು. ಯುರೋಪಿನಲ್ಲಾದ 1830ರ ಕ್ರಾಂತಿ ಈತನ ಮೇಲೆ ಅಪೂರ್ವವಾದ ಪ್ರಭಾವ ಬೀರಿತೆನ್ನಬಹುದು.

1835ರಲ್ಲಿ ಪ್ರಕಟವಾದ ವಲ್ಲಿ ಡಿ ತ್ವೈಫ್ಲೆರಿನ್ ಕಾದಂಬರಿ ವಿವಾಹ ಪದ್ಧತಿಯನ್ನು ಕುರಿತದ್ದು. ಇದರಲ್ಲಿ ಅಂದಿನ ಧಾರ್ಮಿಕ ಪದ್ಧತಿಗಳಲ್ಲಿನ ನ್ಯೂನತೆಗಳನ್ನು ವಿವರಿಸಲಾಗಿತ್ತು. ಅದಕ್ಕಾಗಿ ಈತ ಮೂರು ತಿಂಗಳ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. 1836ರಲ್ಲಿ ಇತಿಹಾಸದ ಮೂಲತತ್ತ್ವಗಳು (ಟ್ಸುರ್ ಫಿಲೋಸೋಫಿ ಡೆರ್ ಗೆಶಿಷ್ಟೆ) ಎಂಬ ಉದ್ಗ್ರಂಥ ಪ್ರಕಟವಾಯಿತು. 1839 ರಿಂದ ಈತನ ನಾಟಕಗಳು ರಂಗಸ್ಥಳದ ಮೇಲೆ ಬರಲಾರಂಭಿಸಿದವು. ಈತ ಬರೆದ ನಾಟಕಗಳು 20 ಸಂಪುಟಗಳಲ್ಲಿ ಹೊರಬಿದ್ದಿವೆ. ವಲ್ಲಿಯನ್ನು ಬಿಟ್ಟರೆ ಪ್ರೇತಸರ್ದಾರರು (ಡೀ ರೆಟೆರ್ ಫ್ರೋಮ್ ಗೈಸ್ಟೆ) ಮತ್ತು ರೋಮ್ ನಗರದ ಮಾಂತ್ರಿಕರು (ಡೀ ಜ್ಞಾನೆರೆರ್ ಫಾನ್ ರೋಮ್) ಎಂಬುವು ಅನೇಕ ಸಂಪುಟಗಳಲ್ಲಿ ಪ್ರಕಟಗೊಂಡಿದ್ದು ಪ್ರಸಿದ್ಧವೆನಿಸಿವೆ. ಈತನ ಕೃತಿಗಳಲ್ಲಿ ಅಂದಿನ ಸ್ತ್ರೀ ಜೀವನ, ಸಾಮಾಜಿಕ, ರಾಜಕೀಯ ವಿಷಯಗಳ ನೈಜ ಚಿತ್ರಣವನ್ನು ಕಾಣಬಹುದು. (ಕೆ.ಕೆ.ಐ.)

**ಗುಡ್ ಫ್ರೈಡೆ :** ಕ್ರಿಸ್ತನ ಮರಣದ ವಾರ್ಷಿಕಾಬ್ದಿಕದ ಆಚರಣೆ. ಈಸ್ಟರ್ ದಿನದ ಹಿಂದಿನ ಶುಕ್ರವಾರ ಎಲ್ಲ ಕ್ರೈಸ್ತರೂ ಇದನ್ನು ಆಚರಿಸುತ್ತಾರೆ. ಬಹುಶಃ ಮೊದಲಲ್ಲಿ ಗಾಡ್ಸ್ ಫ್ರೈಡೆಯಾಗಿದ್ದು ಕಾಲಾಂತರದಲ್ಲಿ ಗುಡ್‌ಫ್ರೈಡೆ ಆಗಿರಬಹುದು. ಗುಡ್‌ಫ್ರೈಡ್ ಆಚರಣೆ ಪ್ರ.ಶ. 100ರಲ್ಲಿ ಪ್ರಾರಂಭವಾಯಿತೆಂಬುದಕ್ಕೆ ದಾಖಲೆ ದೊರಕುತ್ತದೆ. ಇದು ಸಾಮಾನ್ಯವಾಗಿ ಈಸ್ಟರ್ ದಿನದ ಹಿಂದಿನ ಶುಕ್ರವಾರ ಉಪವಾಸವನ್ನು ಆಚರಿಸುತ್ತಿದ್ದರು. ಇದು ಪ್ರ.ಶ. 300ರ ಅನಂತರ ಆಚರಣೆಗೆ ಪ್ರಾರಂಭವಾಗಿದೆ. ಇದರ ಆಚರಣೆ ಕ್ರೈಸ್ತರೆಲ್ಲರಲ್ಲೂ ಒಂದೇ ತೆರನಾಗಿರುವುದಿಲ್ಲ. ಪ್ರಾಟೆಸ್ಟಂಟರು ಅಂದು ದೇವರ ಸ್ತೋತ್ರ ಮಾಡುತ್ತಾರೆ. ಇದು ತುಂಬ ಸರಳ ಸಂಸ್ಕಾರ. ರೋಮನ್ ಕೆಥೊಲಿಕರ ಆಚರಣೆ ಹೆಚ್ಚು ವಿಸ್ತಾರವಾದದ್ದು. ಅವರ ಚರ್ಚುಗಳಲ್ಲಿ ಅದು ಗುರುವಾರ ಸಂಜೆಯಿಂದ ಪ್ರಾರಂಭವಾಗಿ ಶುಕ್ರವಾರ ಸಂಜೆಯ ಪರ್ಯಂತ ನಡೆಯುತ್ತದೆ. ಪ್ರಭುಭೋಜನಕ್ಕೆ ಸಂಬಂಧಪಟ್ಟಂತೆ ಶುಕ್ರವಾರ ಬೆಳಗ್ಗೆ ನಡೆಯುವ ಪೂಜಾವಿಧಾನ ಇದರ ಮುಖ್ಯ ಅಂಗ. (ಜಿ.ಎಚ್.)

**ಗುಡಗುಂಟಿ ಪಾಳೆಯಗಾರರು :** ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಲಿಂಗಸುಗೂರಿಗೆ 19ಕಿಮೀ ದೂರದಲ್ಲಿರುವ (ಸು.3 ಶತಮಾನಗಳ ಕಾಲ ಆಳಿದ) ಗುಡಗುಂಟಿಯ ಒಂದು ಸ್ಥಳೀಯ ಅರಸು ಮನೆತನ. ಇವರು ಗೋಸಲ ವಂಶದವರು. ಜಕ್ಕಪ್ಪದೇಸಾಯಿ ಹಿರಿಯ ಮಗ. ಗಡ್ಡಿಲಿಂಗನಾಯಕ ಈ ಮನೆತನದ ಸ್ಥಾಪಕ. ಈ ಸಂದರ್ಭದಲ್ಲಿ ಕಕ್ಕೇರಿ ಪ್ರದೇಶ ಬಿಜಾಪುರದ ಆದಿಲ್‌ಶಾಹಿಗಳ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟಿದ್ದರಿಂದ ಗಡ್ಡಿಲಿಂಗನಾಯಕ ಗುಡಗುಂಟಿ ಪರಗಣದ ಸರದೇಸಾಯಿಯಾಗಿ ಬಡ್ತಿ ಹೊಂದಿ ಆಳಿಕೆ ಪ್ರಾರಂಭಿಸಿದ. ಇವನು ಬಿಜಾಪುರದ ಆದಿಲ್‌ಶಾಹಿಗಳ ಜೊತೆ ಹೋದಾಗ ಷೇಖ್‌ಮಿನಹಾಜ ಸರದಾರನಿಂದ ಕೊಲ್ಲಲ್ಪಟ್ಟ. ಅನಂತರ

ಪಾಮನಾಯಕ, ಲಿಂಗನಾಯಕ, ಜಡಿಸೋಮಪ್ಪ ನಾಯಕ ಅನುಕ್ರಮವಾಗಿ ಆಡಳಿತ ನಡೆಸಿದರು. ಜಡಿಸೋಮಪ್ಪನಾಯಕ ಬಿಜಾಪುರದಲ್ಲಿ ತನ್ನ ಶೌರ್ಯ ಸಾಹಸಗಳನ್ನು ಪ್ರದರ್ಶಿಸಿದ್ದಕ್ಕಾಗಿ ಸರ್ಜಾಬಹಾದ್ದೂರ್ ಎಂಬ ಬಿರುದು ಪಡೆದ. ಈತನಿಗೆ 1669ರಲ್ಲಿ 2ನೆಯ ಅಲಿ ಆದಿಲ್‌ಷಾನಿಂದ ಒಂದು ಫಾರಸಿ ಸನ್ನದು ದೊರಕಿತ್ತು. ಅನಂತರ 2ನೆಯ ಲಿಂಗನಾಯಕ, ಸೋಮಪ್ಪನಾಯಕ, ಸೋಮಲಿಂಗನಾಯಕ, ರಾಣಿ ಕಾಟಮ್ಮ ಆಳಿಕೆ ಮಾಡಿದರು. ಕೊನೆಯ ಅರಸ ಜಡಿಸೋಮಪ್ಪನಾಯಕ (1901–48). ಇವನಿಗೆ ತಿಪ್ಪರಾಜಾ ಸರ್ಜಾಬಹದ್ದೂರ್ ಎಂಬ ಬಿರುದಿತ್ತು.

ಆಡಳಿತದ ಅನುಕೂಲಕ್ಕಾಗಿ ಮೌಲ್, ಫೌಜದಾರಿ, ದಿವಾನಿ, ಪೊಲೀಸ್ ಎಂಬ ನಾಲ್ಕು ವಿಭಾಗಗಳಿದ್ದವು. ಪ್ರಜೆಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದ ಇವರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಇವರು ಎಲ್ಲಾ ಧರ್ಮದವರನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದರು. ಕಕ್ಕೇರಿಯ ಸೋಮನಾಥ ಇವರ ಕುಲದೈವ. ಗುಡಗುಂಟಿಯ ಅಮರೇಶ್ವರ ಆರಾಧ್ಯ ದೈವ. ಪ್ರತಿವರ್ಷ ನಡೆಯುವ ಅಮರೇಶ್ವರನ ರಥೋತ್ಸವದಲ್ಲಿ ಈ ಮನೆತನದ ಪ್ರಭುಗಳು ಫಲಪುಷ್ಪಗಳನ್ನು ಅರ್ಪಿಸಿದ ಬಳಿಕವೇ ರಥ ಸಾಗುತ್ತಿತ್ತು. ಇದು ಇಂದಿಗೂ ಮುಂದುವರೆದಿದೆ. ಇವರು ಕಲೆ, ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಅನೇಕ ದೇವಾಲಯ, ಮಸೀದಿ, ಕೋಟೆ, ಕೆರೆ, ಬಾವಿಗಳನ್ನು ನಿರ್ಮಿಸಿದ್ದಾರೆ. ಇವರು ನಿರ್ಮಿಸಿದ ಅರಮನೆ ಇಂದಿಗೂ ಸುಸಜ್ಜಿತವಾಗಿದೆ. ಇಲ್ಲಿಯ ರಂಗಮಹಲ್ ಮತ್ತು ದರ್ಬಾರ್ ಹಾಲ್‌ಗಳು ಸೊಗಸಾಗಿವೆ. (ಎ.ವೈ.)

**ಗುಡಾರ :** ಗುಡಾರಗಳು, ಹಗ್ಗ, ದಪ್ಪ ಬಟ್ಟೆಗಳಿಂದ ಕಟ್ಟಿ ನಿಲ್ಲಿಸಬಹುದಾದ ಮತ್ತು ಸ್ಥಳದಿಂದ ಸ್ಥಳಕ್ಕೆ ಒಯ್ಯಬಹುದಾದ ಹಂಗಾಮಿ ತಂಗುಸಾಧನ. ಡೇರೆ ಎಂದೂ ಕರೆವುದಿದೆ (ಟೆಂಟ್). ಗುಡಾರದ ಮೂಲವನ್ನು ಪ್ರಾಚೀನ ಕಾಲದಿಂದಲೂ ಮಾನವ ಬುಡಕಟ್ಟುಗಳು ನಿರ್ಮಿಸಿಕೊಳ್ಳುತ್ತ ಉಪಯೋಗಿಸುತ್ತ ಬಂದಿರುವ ಗಾಳಿತಡೆ, ನೆರಳುಮರೆ ಮುಂತಾದವುಗಳಲ್ಲಿ ಕಾಣುತ್ತೇವೆ. ಗಾಳಿತಡೆಗಳು ಹಂಬುರೆಂಬೆಗಳಿಂದ ಸುಲಭವಾಗಿಯೂ ಕ್ಷಿಪ್ರವಾಗಿಯೂ ಎಬ್ಬಿಸಬಲ್ಲಂಥವು. ಇವುಗಳ ಚಾವಣಿಗಳು ಒಪ್ಪಾರವಾಗೂ (ಚಿತ್ರ 1) ಇಪ್ಪಾರವಾಗೂ (ಚಿತ್ರ 2) ಇರುತ್ತವೆ. ಇಪ್ಪಾರವನ್ನು ಕವೆಕೋಲುಗಳಿಂದ ಭದ್ರಗೊಳಿಸಿದರೆ (ಚಿತ್ರ 3) ಮರೆಯೂ ನೆರಳೂ ಹೆಚ್ಚಾಗುತ್ತವೆಂದು ಹೇಳಬೇಕಾಗಿಲ್ಲ. ಹೆಣೆದ ಗರಿಗಳನ್ನು ಚಾವಣಿಗಳ ಮುಚ್ಚಾಗಿ ಬಳಸುವುದು ವಾಡಿಕೆಯಾಗಿದೆ. ಲ್ಯಾಪ್‌ಲೆಂಡಿನ ಗುಡಿಸಲುಗಳ ದೂಲಗಳ ಮಧ್ಯೆ ಎರೆಮಣ್ಣನ್ನು ಮೆತ್ತಿ ಬಿರುಕಿಲ್ಲದಂತೆ ಮಾಡಿರುತ್ತಾರೆ (ಚಿತ್ರ 4) ಬೆತ್ತದಂಥ ಸಣ್ಣರೆಂಬೆಗಳಿಂದ ಕಟ್ಟಿದ ಗುಡಿಸಲು ತೆರನ ಬಿಡಾರ (ಚಿತ್ರ 5) ಬ್ರಿಟನ್ನಿನ ವಸಾಹತುಗಳಲ್ಲಿ ಇರುತ್ತಿತ್ತು. ಬೆತ್ತ ಅಥವಾ ಬಿದಿರು ದೆಬ್ಬೆಗಳನ್ನು ಕಮಾನಾಗಿ ಬಗ್ಗಿಸಿ, ಎರಡು ಕೊನೆಯನ್ನೂ ನೆಲದೊಳಕ್ಕೆ ಹುದುಗಿಸಿ ಇಟ್ಟು, ಮೇಲೆ ನೀರು ತೂರದ



ಬಟ್ಟೆಯ ಕಿರುಗೋಡೆ ಮತ್ತು ಬಟ್ಟೆಯ ಕದ ಇರುವಂತಹ ಗುಡಾರ

ಮೇಣಗಬಟವನ್ನೊ ರಟ್ಟುಬಟ್ಟೆಯನ್ನೊ ಹೊದಿಸಿ, ಅದರ ಅಂಚುಗಳನ್ನು ದಪ್ಪ ಕಲ್ಲುಗಳ ಮೂಲಕ ನೆಲಕ್ಕೆ ಗುತ್ತಾಗಿ ಹೊಂದಿಸಿಟ್ಟು, ಕಂದಾರೆಯವರೂ ಜಿಪ್ಸಿಗಳೂ ಗಂಗೆಯ ಮಕ್ಕಳೂ ಗುಡಾರ ಮಾಡಿಕೊಳ್ಳುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ (ಚಿತ್ರ 6). ಎಸ್ಕಿಮೊ ಜನರದ್ದು ಇನ್ನೂ ಸರಳವಾದ ಉಪಾಯ. ಕೋಲನ್ನು ನಿಲ್ಲಿಸಿ ಹಗ್ಗವನ್ನು ಎಳೆದು ಚಾವಣಿಯ ಏಣು ಮಾಡಿ, ಅಗಲ ಚಕ್ಕಳವನ್ನು ಮೇಲಿನಿಂದ ಇಕ್ಕಡೆಗೂ ಇಳಿಬೀಳಿಸಿ, ಅಂಚಿನ ಮೇಲೆ ಭಾರದ ಕಲ್ಲುಗಳನ್ನಿಟ್ಟು ಮರೆ ಮಾಡಿಕೊಳ್ಳುತ್ತಾರೆ (ಚಿತ್ರ 7).

ಏಷ್ಯಖಂಡದ ಪಶ್ಚಿಮ ಉತ್ತರ ಮಧ್ಯೆ ಭಾಗಗಳಲ್ಲಿ ಹಲವು ತಾಂಡ್ಯಗಳು ಅನಿವಾರ್ಯವಾಗಿ ಬೀಡು ಬದಲಾಯಿಸುತ್ತ ಬದುಕಬೇಕಾಗುತ್ತಿತ್ತು. ಏತಕ್ಕೆಂದರೆ ಋತುಧರ್ಮದ ಪರಿಣಾಮವಾಗಿ ನೀರಿನ ಕೊರತೆ, ಮೇವು ಹುಲ್ಲು ಮೈದಾನ ಅಭಾವ, ಅತಿಉಷ್ಣ, ಅತಿಶೀತ, ಮೊದಲಾದುವನ್ನು ಅವರು ಎದುರಿಸಿ ಗೆಲ್ಲಬೇಕಾಗುತ್ತಿತ್ತು. ಚಿರಕಾಲದ ಅನುಭವದಿಂದ ಅವರು ಬಿಡಾರ ನಿರ್ಮಾಣದಲ್ಲಿ ನಿಪುಣರಾಗಿದ್ದಾರೆ. ಅರೇಬಿಯದ ಚಿರಜೀವಿಗಳ ಕುಟುಂಬ ವಸತಿಯ ಉದ್ದ 6.1ರಿಂದ 7.6 ಮೀ ಕೆಲವು ಕಡೆ 12.2ಮೀ ನಷ್ಟು ಉದ್ದವೂ ಉಂಟು. ಅವುಗಳ ಆ ಪಕ್ಕ ಈ ಪಕ್ಕದಲ್ಲಿ ಮೂರು ಮೂರು ನಿಲುಕಂಬಗಳೂ ನಡುಭಾಗದಲ್ಲಿ ಮೂರು ಹೆಚ್ಚು ಎತ್ತರದ ಕಂಬಗಳೂ ಇರುತ್ತವೆ. ಅವುಗಳ ನೆತ್ತಿಯಲ್ಲಿ ಅಡ್ಡ ತೊಲೆಗಳ ಹಾಸೊಂದುಂಟು. ನಡುವಣ ಎತ್ತರ 2.1ಮೀ ಪಾರ್ಶ್ವ ಗೋಡೆಗಳ ಎತ್ತರ 1.5 ಮೀ ಕಡಿಮೆ ಇರುವುದಿಲ್ಲ. ಏಣಿನಿಂದ ಆ ಕಡೆಗೂ ಈ ಕಡೆಗೂ ಬಿಗಿಯಿಂದ ಇಳಿಯುವ ಕಪ್ಪು ಉಣ್ಣೆಯ ಫೆಲ್ಟು ಬಟ್ಟೆಯೇ ಮೇಲುಚಾವಣಿ; ಕೆಲವೊಮ್ಮೆ ಹೊರಗಡೆಗೆ ಬಿಳಿಯ ಪಟ್ಟಿಗಳನ್ನು ಬಳಿದಿರುವುದುಂಟು. ಪಕ್ಕದ ಗೋಡೆಗಳೂ ಫೆಲ್ಟು ಬಟ್ಟೆಯಿಂದ ಆದವು; ಅವನ್ನು ಬೇಕಾದಾಗ ಎತ್ತಿ ಕಟ್ಟಬಹುದು (ಚಿತ್ರ 8). ಬಾಗಿಲಿನ ಅವಕಾಶ ಇರುವುದು ಅಪೂರ್ವ. ಗುಡಾರದ ಒಳಗಡೆ ಎರಡು ಭಾಗ; ಹಿಂಬದಿಯದು ಅಡುಗೆ ಮನೆ, ಮಹಿಳಾವಿಲಾಸ. ಮುಂಬದಿಯದು ಪುರುಷರದ್ದು.

ಮಂಗೋಲಿಯದ ಕಿರ್ಗಿಸರ ಗರ್ ಅಥವಾ ಯೂರ್ಟ್ ಇನ್ನೂ ಅಚ್ಚು ಕಟ್ಟಾದ ಹೆಚ್ಚು ಸೌಕರ್ಯವುಳ್ಳ ಗೃಹರಚನೆ. ಕುಕ್ಕೆ ಕಡ್ಡಿ ಅಥವಾ ವಿಲೊ ಎಂಬ ಬಗೆಯ ಮೆತುಕಡ್ಡಿಗಳಿಂದ ಹೆಣೆದು ಮಾಡಿದ ಭಾಗಗಳನ್ನು ವರ್ತುಳಾಕಾರವಾಗಿ ಜೋಡಿಸಿ, ಬಾಗಿಲು ಮತ್ತು ಬಾಗಿಲುವಾಡದೊಡನೆ ನೆಲದ ಮೇಲೆ ಇಡುತ್ತಾರೆ. ಮೇಲೆ ಎರಡು ಸಾಲು ಗಟ್ಟಿ ಕಡ್ಡಿಗಳನ್ನು ಇರಿಸಿ ಶಿಖರದ ಲೋಹದುಂಗುರಕ್ಕೆ ಬಿಗಿಯುತ್ತಾರೆ. ಹೀಗೆ ಒಂದು ದೈತ್ಯ ಮಂಕರಿ ಸಿದ್ಧವಾಗುತ್ತದೆ (ಚಿತ್ರ 9). ತರುವಾಯ ದಪ್ಪ ಫೆಲ್ಟು ಬಟ್ಟೆಯ ಉದ್ದಗಲದ ಹೊದಿಕೆಗಳನ್ನು ಸಮನಾಗಿ ಹೊಂದಿಸಿ, ಹಗ್ಗಗಳಿಂದ ಬಿಗಿದು ಕಟ್ಟಿ ಡೇರೆ ಮನೆಯನ್ನು ತಯಾರಿಸಿಕೊಳ್ಳುತ್ತಾರೆ (ಚಿತ್ರ 10). ಫೆಲ್ಟು ಮೇಲು ಮುಸುಕಿನ ಕೆಳಗಡೆ ಅಂಚುಗಳನ್ನು ಹೊಲಿದು ಕೂಡಿಸಬಹುದು ಅಥವಾ ಅಲ್ಲಲ್ಲಿ ಭಾರದ ಕಲ್ಲು ಹೇರಬಹುದು.



ಗಂಟೆ ಡೇರೆ

ಪಾಶ್ಚಾತ್ಯ ದೇಶಗಳಲ್ಲಿ ಸೈನಿಕರು ಪಯಣಿಗರು ಶೋಧಕರು ಪರ್ವತಾರೋಹಿಗಳು ಸ್ಕೌಟುಗಳು ಇತ್ಯಾದಿ ಪ್ರವಾಸಿಗರಿಗೆ ಸಮಂಜಸವಾದ ಗುಡಾರ ಅತ್ಯಾವಶ್ಯಕ. ಅಲ್ಲದೆ ಔತಣ ಸಮಾರಂಭಗಳಿಗೂ ಮಾರ್ಕೀ ಎಂಬ ಎತ್ತರದ ವಿಶಾಲ ಡೇರೆ ಬಹಳ ಉಪಯುಕ್ತ; ಸುತ್ತ ಎಷ್ಟು ಎತ್ತರಕ್ಕೆ ಬೇಕೊ ಅಷ್ಟು ಕನಾತು ಕಿರುಗೋಡೆಗಳನ್ನು ಕಟ್ಟಿ ಮರೆ ಮಾಡಿಕೊಳ್ಳಬಹುದು. ಬಟ್ಟೆ ಬಾವುಟ ಗೊಂಡೆ ಮುಂತಾದ ಅಲಂಕಾರ ವಸ್ತುಗಳನ್ನು ತೂಗುಬಿಟ್ಟು ಮಾರ್ಕೀಯನ್ನು ಇಷ್ಟಬಂದಂತೆ ಸಿಂಗರಿಸಲು ಬರುತ್ತದೆ. ಅದರ ಕ್ಯಾನ್‌ವಾಸ್ ಅಥವಾ ಲಿನೆನ್ ಬಟ್ಟೆಗೆ ಬಣ್ಣ ಬಣ್ಣದ ಉದ್ದಪಟ್ಟೆ ಬಳಿಯುವುದೂ ಉಂಟು (ಚಿತ್ರ11).

ವನಪಾಲಕರೂ ಇತರ ಸಂಚಾರಿಗಳೂ ತಾತ್ಕಾಲಿಕವಾಗಿ ನೆರಳನ್ನೂ ಮರೆಯನ್ನೂ ಸುಲಭವಾಗಿ ಮಾಡಿಕೊಳ್ಳಲು ಕ್ಯಾನ್‌ವಾಸ್ ಅಥವಾ ರಟ್ಟುಬಟ್ಟೆಯನ್ನು ಪರಿಸರದಲ್ಲಿಯೇ ದೊರಕುವ ಕೋಲು ಕಡ್ಡಿಗಳ ಮೇಲೆ ಹಾಸು ಬಿಟ್ಟು (ಚಿತ್ರ12). ಹುರಿಗಳಿಂದ ಭದ್ರಪಡಿಸಿ, ನೆಮ್ಮದಿ ಪಡೆಯುತ್ತಾರೆ. ಹೆಚ್ಚು ವಜನ್ನಿನ ಸಾಮಾನಾವುದೂ ಅವರಿಗೆ ಬೇಡ.

ಆದರೆ ವಿಶೇಷವಾಗಿ ಬಳಕೆಯಲ್ಲಿ ಇರುವ ಉಪಕರಣ ಟೆಂಟ್‌ದ ಆಬ್ರಿಯೆಂಬ ಸಾಮಾನ್ಯ ಗುಡಾರ; ಹಂಸಪಾದದ ಆಕಾರದಲ್ಲಿ ನಿಲ್ಲುತ್ತದೆ. ಪಕ್ಕಗಳಲ್ಲಿ ಕಿರುಗೋಡೆಯಂಥ ಬಟ್ಟೆಗಳಿರಬಹುದು (ಚಿತ್ರ 13). ಅವು ಇಲ್ಲದೆ ಮುಂದೂ ಹಿಂದೂ ತ್ರಿಕೋನಾಕಾರದ ಬಟ್ಟೆಕದ ಇರಬಹುದು (ಚಿತ್ರ 14). ನೆಲದ ಮೇಲೆ ಕಟ್ಟಿದ ಜಗಲಿಯ ಮೇಲೆ ಗುಡಾರವನ್ನು ನಿಲ್ಲಿಸಲೂ ಬರುತ್ತದೆ (ಚಿತ್ರ 15). ಪಕ್ಕದ ಭಿತ್ತಿ ಬಟ್ಟೆಗಳನ್ನು ಸ್ವಲ್ಪ ಎತ್ತರವಾಗಿ ಇರಿಸಿಕೊಳ್ಳುವುದೂ ಸಾಧ್ಯ (ಚಿತ್ರ 16). ಅದರಿಂದ ಒಳಗಡೆಯ ಇಕ್ಕಟ್ಟು ಕೊಂಚ ಕಡಿಮೆಯಾಗುತ್ತದೆ. ಆದರೂ ಈ ಗುಡಾರ ಆರು ಜನರಿಗೆ ಮಲಗಲೂ

ಗುಡಾರದ ವಿವಿಧ ಬಗೆಗಳು

ಕೂರಲೂ ಅವಕಾಶ ಒದಗಿಸುವುದಕ್ಕಾಗಿ ಮಾತ್ರ ರಚಿತವಾಗಿದೆ; ಅದರ ಮಧ್ಯದಲ್ಲಿ ತಲೆಯೆತ್ತಿ ನಿಲ್ಲಬಹುದೇ ಹೊರತು ಮಿಕ್ಕ ಕಡೆ ಆಗುವುದಿಲ್ಲ. ಬಹಳ ಉಪಯುಕ್ತವೂ ವಿಶ್ವವ್ಯಾಪಿಯೂ ಆದ ಈ ಗುಡಾರದ ಅಂಗಾಂಗಗಳನ್ನು (ಚಿತ್ರ 17) ಅರಿತುಕೊಳ್ಳುವುದು ಅಗತ್ಯ.

a : ಮೇಲ್ಚಾವಣಿ ಬಟ್ಟೆ (ಇನ್ನೊಂದು ಕಡೆಯಲ್ಲೂ ಅದೇ ಬಗೆಯ ಇಳಿಜಾರು). b : ಕಿರುಗೋಡೆ ಬಟ್ಟೆ. c : ಚಾವಣಿಯ ಏಣು. ಜ: ತ್ರಿಕೋಣಾಕೃತಿಯ ಬಾಗಿಲು ಬಟ್ಟೆ. e : ನಿಲುಗಂಬ. (ಮುಂದಣ ಮತ್ತು ಹಿಂದಣ ನಿಲುಗಂಬಗಳ ಮೇಲಿರುವ ಅಡ್ಡತೊಲೆ ಕಾಣಿಸುತ್ತಿಲ್ಲ). f : ಬಿಗಿ ಹಗ್ಗಗಳು. g : ಕಬ್ಬಿಣದ ಅಥವಾ ಮರದ ಗೂಟಗಳು. ಈ ಗುಡಾರವನ್ನು ಕೇವಲ ಐದಾರು ನಿಮಿಷದಲ್ಲಿ ಎತ್ತಿ ನಿಲ್ಲಿಸಬಹುದು, ಬಿಚ್ಚಿಡಬಹುದು; ಹೆಚ್ಚು ತೂಕವೂ ಇಲ್ಲದ್ದರಿಂದ ಸಾಗಾಣಿಕೆಗೆ ಅಷ್ಟೇನೂ ತ್ರಾಸ ಪಡಬೇಕಾದ್ದಿಲ್ಲ. ಕೆಲಮೊಮ್ಮೆ ಚಾವಣಿಯ ಮೇಲೆ ಇನ್ನೊಂದು ಚಾವಣಿ ಬಟ್ಟೆಯನ್ನೂ ಹರಡುತ್ತಾರೆ. ಕನಾತು ಬಟ್ಟೆಗಳ ಮೂಲಕ ಒಳಗಡೆ ಏಕಾಂತ ಕೊಠಡಿ ಏರ್ಪಡಿಸಿ ಕೊಳ್ಳಬಹುದು; ಆದರೆ ಅದಕ್ಕೆ ಗುಡಾರ ದೊಡ್ಡದಾಗಿ ಇರಬೇಕು. ಸೈನ್ಯದ ಕಾರ್ಯಾಚರಣೆಯಲ್ಲಿ ಟೆಂಟ್‍ದ ಆಬ್ರಿಗಳ ಜೊತೆಗೆ ಶಂಕುವಿನ ಆಕೃತಿಯ ಗಂಟೆ ಡೇರೆ (ಬೆಲ್ ಟೆಂಟ್) ಅಧಿಕಾರಿಗಳಿಗಾಗಿ ಇರುತ್ತವೆ. ಇದು ಒಳಗೆ ಸಾಕಷ್ಟು ಎತ್ತರವೂ ವಿಶಾಲವೂ ಆಗಿರುತ್ತದೆ. ಮಹಲಿನ ದಿವಾನಖಾನೆಯಂತೆಯೇ ಅಲ್ಲಿಯೂ ಮೇಜು ಕುರ್ಚಿ ಹಾಕಿಕೊಂಡು, ಮಾತುಕಥೆ ಮಂತ್ರಾಲೋಚನೆ ನಡೆಸಬಹುದು.

ಇವಲ್ಲದೆ ಛತ್ರಿ ಗುಡಾರ (ಅಂಬ್ರೇಲಾ ಟೆಂಟ್), ಆಕಾಶಬುಟ್ಟಿ ಗುಡಾರ (ಬಲೂನ್ ಟೆಂಟ್) ಮೊದಲಾದ ವಿರಚನೆಗಳೂ ಉಂಟು. ಅವುಗಳಲ್ಲಿ ನಿಲುಗಂಬಗಳ ಅವಶ್ಯಕತೆ ಬಹಳ ಕಡಿಮೆ. ಗೋಳಾಕಾರದ ಚಾವಣಿ ಬಟ್ಟೆಗಳನ್ನು ಬಿಗಿಯಾಗಿ ಎಳೆದು ನೆಲದ ಮೇಲೆ ಭದ್ರವಾಗಿ ಹಿಡಿದಿಡುವುದು ಸಾಧ್ಯ.

ಸರ್ಕಸ್ಸಿನವರು, ಕೆಲವೊಮ್ಮೆ ಟೆಂಟ್ ಸಿನಿಮಾದವರೂ ಊರ ಹೊರಗಿನ ಮೈದಾನದಲ್ಲಿ ದೊಡ್ಡ ಗುಡಾರ ಕಟ್ಟುವುದನ್ನು ಎಲ್ಲರೂ ಕಂಡಿದ್ದಾರೆ. ನೆಲವನ್ನು ಅಗೆದು ಕಂಬಗಳನ್ನು ನೆಡದೆ ಗುಡಾರ ಎಬ್ಬಿಸುವ ಜಾಣ್ಮೆಯನ್ನು ಸರ್ಕಸ್ಸಿನವರಲ್ಲಿ ಕಾಣಬಹುದು.

ಈಚೆಗೆ ಗುಡಾರಗಳ ಬಳಕೆ ಬಹಳ ಹೆಚ್ಚುತ್ತಿದೆ. ಸ್ಕೌಟುಗಳು, ಸೈನಿಕ ಇಲಾಖೆಯವರು, ಟೆಲಿಫೋನ್ ಕೆಲಸಗಾರರು, ವಾರಾಂತ್ಯ ವಿಹಾರಕ್ಕಾಗಿ ಹೋಗುವ ಕುಟುಂಬದವರು ಬೇಕೆಂದಲ್ಲಿ ತಮ್ಮ ಗುಡಾರಗಳನ್ನು ಎಬ್ಬಿಸುತ್ತಾರೆ. ಹೀಗೆ ಕ್ಯಾನ್‍ವಾಸ್ ಪ್ರಪಂಚ ವೈವಿಧ್ಯಮಯವೂ ವಿಶಾಲವೂ ಆಗಿದೆ. (ಎಸ್.ವಿ.ಆರ್.)

**ಗುಡಿಕೋಟೆ :** ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಕಸಬೆಯಿಂದ 28ಕಿಮೀ ಪೂರ್ವಕ್ಕಿರುವ ಗ್ರಾಮ, ಹೋಬಳಿ ಕೇಂದ್ರ.

ಇದು ಹಿಂದೆ ಒಂದು ಪಾಳೆಯಪಟ್ಟಿನ ಕೇಂದ್ರವಾಗಿದ್ದು ಪಾಳೆಯಗಾರರ ಕಾಲದಲ್ಲಿ ಕಟ್ಟಿದ ಕೋಟೆ ಊರಿಗೆ ತಾಗಿ ನಿಂತ ಬೆಟ್ಟದ ಮೇಲೆ ಇದೆ. ಆ ಕೋಟೆಗೆ ಹೊಂದಿಸಿರುವ ಬಂಡೆಗಳ ಗಾತ್ರ ಬೆರಗುಗೊಳಿಸುತವಂತಹುದು. ಬ್ರೂಸ್‍ಫುಟ್ ಎಂಬಾತ ಇದರ ವಿಷಯವಾಗಿ ಬರೆಯುತ್ತ ದಕ್ಷಿಣ ಭಾರತದ ಯಾವ ಕೋಟೆಯಲ್ಲಿಯೂ ಇಷ್ಟು ಭಾರಿ ಬಂಡೆಗಳನ್ನು ತಾನು ಕಂಡಿಲ್ಲವೆನ್ನುತ್ತಾನೆ. ಈ ಬೆಟ್ಟವೇರಲು ಅನೇಕ ಕಡಿದಾದ ಒಳದಾರಿಗಳಿವೆ. ಬೆಟ್ಟದ ಮೇಲೆ ಎರಡು ಭಿನ್ನ ರೀತಿಯ ಬಾವಿಗಳಿವೆ. ತೊಟ್ಟಿಲುಬಾವಿ ಎಂದು ಕರೆಯುವ ಒಂದರ ಬಾಯಿ ದೋಣಿಯಂತಿದೆ. ಇನ್ನೊಂದು 35' ಚದುರದ ಚೌಕನೆಯದು. ಇದರ ಒಳಮೈ ಸೈಜುಗಲ್ಲುಗಳಿಂದ ನಿರ್ಮಿತವಾಗಿದೆ. ಅದನ್ನು ನಿರ್ಮಿಸಿರುವ ತಾಣ ಸ್ವಾರಸ್ಯಕರವಾಗಿದೆ. ನೋಡಿದಾಗ ಗೂಡಿನೊಳಗೆ ಬಾವಿ ತೋಡಿಸಿದಂತೆ ಭಾಸವಾಗುತ್ತದೆ. ಏಕೆಂದರೆ ಬಾವಿಯ ಮೇಲೆ ಮುಂಚಾವಣಿಯಂತೆ ಚಾಚಿ ನಿಂತಿರುವ ಬಂಡೆಗಳ ಕೂಡುವಿಕೆ ಹಾಗೆ ಇದೆ. ಈ ಚಾಚುಬಂಡೆಗಳು ತೂಗುಬಂಡೆಗಳಂತೆ ಗೋಚರಿಸುತ್ತವೆ. ಗ್ರಾಮದಲ್ಲಿ ಕೆಲವು ಚಿಕ್ಕ ದೇವಸ್ಥಾನಗಳಿವೆ. ಇಲ್ಲಿಯ ಪಾಳೆಯಗಾರ ಕಟ್ಟಿಸಿದನೆನ್ನಲಾದ ಬೊಮ್ಮಲಿಂಗನ ಕೆರೆಯ ಬಳಿ ಅನೇಕ ನಾಗರಕಲ್ಲುಗಳೂ ಇವೆ. ಕೆಲವು ನಾಗರಕಲ್ಲುಗಳು 6' ಎತ್ತರ ಇವೆ.

ಗುಡಿಕೋಟೆಯ ಪಾಳೆಯಗಾರರು ಬೇಡ ಕುಲದವರು. ಇವರು ಅಸ್ತಿತ್ವಕ್ಕೆ ಬಂದ ತರುಣದಲ್ಲಿಯೇ (ಸು.16ನೆಯ ಶತಮಾನ) ಗುಡಿಕೋಟೆಗೆ ಹೊಂದಿದ ಸುತ್ತಮುತ್ತಲಿನ ಗ್ರಾಮಗಳನ್ನು ಅಧೀನಕ್ಕೆ ತಂದುಕೊಂಡು ಪಾಳೆಯಪಟ್ಟನ್ನು ವಿಸ್ತರಿಸಿದರು. ಇವರು ಚಿತ್ರದುರ್ಗದ ಪಾಳೆಯಗಾರರಿಗೆ ಅಧೀನರಾಗಿದ್ದರೆಂದು ತಿಳಿದುಬರುತ್ತದೆ. ಬಿಳಿಚೋಡು ಮನೆತನಕ್ಕೆ ಸೇರಿದ ಚಿತ್ರದುರ್ಗದ ಪಾಳೆಯಗಾರ 1ನೆಯ ಭರಮಪ್ಪನಾಯಕನ ಹೆಂಡತಿ ಬಂಗಾರವ್ವ ನಾಗಿತಿ ಗುಡಿಕೋಟೆ ಪಾಳೆಯಗಾರರ ಸಂತತಿಯವಳು. ಕೈಬಿಟ್ಟುಹೋಗಿದ್ದ ಅಣಜಿ ಕೋಟೆಯನ್ನು ಹರಪನಹಳ್ಳಿ ಪಾಳೆಯಗಾರರಿಂದ ಗೆದ್ದುಕೊಳ್ಳಲು ಗುಡಿಕೋಟೆ ಪಾಳೆಯಗಾರರು ಭರಮಪ್ಪನಾಯಕನಿಗೆ ನೆರವಾಗಿದ್ದರು. ಈ ಪಾಳೆಯಪಟ್ಟು 1777ರಲ್ಲಿ ಹೈದರ್ ಅಲಿಯಿಂದ ನಾಶವಾಯಿತು. ಎರಡು ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದರೂ ಅವರ ಪೀಳಿಗೆಯ ಬಗೆಗಿನ ಹೆಚ್ಚಿನ ದಾಖಲೆಗಳು ಉಪಲಬ್ಧವಾಗಿಲ್ಲ. ಚೇರನೂರು ಗ್ರಾಮದಲ್ಲಿ ದೊರೆತ ಎರಡು ಶಾಸನಗಳಿಂದ ಒಂದಿಬ್ಬರು ಪಾಳೆಯಗಾರರ ಹೆಸರು ಅವರು ಆಳಿದ ಕಾಲ ತಿಳಿದುಬರುತ್ತದೆ. 1676ರಲ್ಲಿ ಸೊಂಡೂರು ರಾಜಪ್ಪನಾಯಕ ಪಾಳೆಯಗಾರನಾಗಿದ್ದ. ಚೆಲಿಮಿನಾಯಕ ವಿಧಿಸಿದ್ದ ತಲೆಹೊರೆ, ಗಾಡಿಹೊರೆ, ಮಿತಸಂತಾನ ಮತ್ತು ನಾಯಿಂದ ತೆರಿಗೆಗಳಿಗೆ ಈ ರಾಜಪ್ಪ ನಾಯಕ ಚೇಕದಕೆರೆ, ಚಿಕೇರು ವಿಭಾಗದಲ್ಲಿ ಶಾಶ್ವತವಾದ ವಿನಾಯಿತಿ ಕೊಟ್ಟ. ಇವನ ಮಗ ಇಮ್ಮಡಿ ರಾಜಪ್ಪನಾಯಕ 1690ರಲ್ಲಿ ಪಾಳೆಯಗಾರನಾಗಿದ್ದನೆಂದೂ ಅವನಿಗೊಬ್ಬ ಸೋದರನಿದ್ದನೆಂದೂ ತಿಳಿದುಬರುತ್ತದೆ. ಈ ಪಾಳೆಯಗಾರರ ಹೆಸರಿನೊಂದಿಗೆ ಸಂಡೂರು ಎಂದು ಸೇರಿರುವುದರಿಂದ ಮೂಲತಃ ಇವರು ಸಂಡೂರಿನವರಿರಬಹುದು ಎಂದು ಊಹಿಸುವ ಅವಕಾಶವಿದೆ. (ಸಿ.ಕೆ.ಎನ್.)

**ಗುಡಿಗಾರಿಕೆ :** ಗಂಧದ ಕಟ್ಟಿಗೆ, ಬೆಂಡು, ಕೆಲಮಟ್ಟಿಗೆ ಮಣ್ಣು–ಇವುಗಳ ಕುಶಲ ಕೆಲಸಕ್ಕೆ ಈ ಹೆಸರಿದೆ. ಕಟ್ಟಿಗೆಯ ಕುಶಲ ಕೈಗಾರಿಕೆ ವಾಸ್ತು ಶಿಲ್ಪಗಳಷ್ಟೇ ಪ್ರಾಚೀನವಾದುದು. ಅರಮನೆಗಳ, ದೇವಸ್ಥಾನಗಳ, ಹಳೆಯ ಕಾಲದ ಮನೆಗಳ ಮಹಾದ್ವಾರ, ಮೊದಲ ಬಾಗಿಲು, ಛತ್ತು, ರಥ, ಕಿಟಕಿಯ ಚೌಕಟ್ಟುಗಳು ಮೊದಲಾದುವನ್ನು ಚಿತ್ರವಿಚಿತ್ರವಾಗಿ ಕೆತ್ತಿ ಅಲಂಕರಣ ಮಾಡುವುದು ಹಿಂದಿನಿಂದ ಬಂದಿರುವ ಸಂಪ್ರದಾಯ. ಗಂಧದ ಕಟ್ಟಿಗೆಯಲ್ಲಿ ಕೆತ್ತನೆಯ ಕೌಶಲವನ್ನು ತೋರಿಸುವ ಒಂದು ಸಾಂಪ್ರದಾಯಿಕ ಕಾಯಕಕ್ಕೆ ಸಂಬಂಧಿಸಿದವರನ್ನು ಈಗ ಗುಡಿಗಾರರೆನ್ನುತ್ತಾರೆ.

ಭಾರತ ಭಾಗ್ಯವಿಧಾತರು: ತಯಾರಿಸಿದವರು – ಶಾಂಬಾ ಅನಂತ ಶೇಟಿ ಗುಡಿಗಾರ, ಕುಮಟ

ಕನ್ನಡ ನಾಡಿನ ಗುಡಿಗಾರರು ಗೋವದಿಂದ ಬಂದವರು. ಶಿವಮೊಗ್ಗ ಜಿಲ್ಲೆಯ ಸೊರಬ ಸಾಗರ ತಾಲ್ಲೂಕುಗಳಲ್ಲಿಯೂ ಉತ್ತರ ಕನ್ನಡದ ಶಿರಸಿ, ಕುಮಟ, ಹೊನ್ನಾವರ, ಸಿದ್ದಾಪುರ ತಾಲ್ಲೂಕುಗಳಲ್ಲಿ ಇವರು ವಾಸಿಸುತ್ತಿದ್ದಾರೆ. ಜಡೆ, ಬಿಳಿಗೋಡು, ತವಂದೆ, ಜಿಂಗಿಕೊಪ್ಪ, ತಾಳಗುಪ್ಪ, ಹೊನ್ನೆಕೇರಿ, ಬನವಾಸಿ, ಕೊಪ್ಪ, ಇಸಳೂರ, ಹೆಬ್ಬಳ್ಳಿ, ಖಿರ್ಲೂ, ಬೀಳಗಿ, ಹೆರೂರಗಳಲ್ಲಿನವರು ಗುಡಿಗಾರಿಕೆಯನ್ನೂ ಕೃಷಿಯನ್ನೂ ಒಟ್ಟಾಗಿ ನಡೆಸಿಕೊಂಡು ಬಂದಿದ್ದಾರೆ. ಕುಮಟ, ಹೊನ್ನಾವರಗಳಲ್ಲಿ ಇವರನ್ನು ಶೆಟ್ಟಿಗಳೆಂದು ಕರೆಯುತ್ತಾರೆ. ಸಾಗರ ಸೊರಬಗಳಲ್ಲಿ ವೃತ್ತಿಯಿಂದಲೇ ಇವರನ್ನು ಗುರುತಿಸಬೇಕಾಗುತ್ತದೆ. ಶೆಟ್ಟಿಗಳ ಮನೆಮಾತು ಕೊಂಕಣಿಯಾದರೆ ಉಳಿದವರದು ಕನ್ನಡ.

ಇವರು ಶೈವ ಧರ್ಮೀಯರು : ಜನಿವಾರ ಧರಿಸುತ್ತಾರೆ. ಇವರ ಮಠ ಶೃಂಗೇರಿ; ಕುಲದೇವತೆಗಳ ದೇವಸ್ಥಾನಗಳು ಗೋವದಲ್ಲಿವೆ. ಹವ್ಯಕ ಬ್ರಾಹ್ಮಣರು ಇವರ ಧರ್ಮಕಾರ್ಯಗಳನ್ನು ನಡೆಸಿಕೊಡುತ್ತಾರೆ. ಗೌಡ ಚಿತ್ರಕರೆಂಬ ಮತ್ತೊಂದು ಹೆಸರು ಇವರಿಗುಂಟು. ಇವರು ಭಾರದ್ವಾಜ, ವಸಿಷ್ಠ, ಗೌತಮ, ಕಶ್ಯಪ ಮತ್ತು ಕೌಂಡಿಣ್ಯ ಗೋತ್ರದವರು. ಇವರಲ್ಲಿ ಮಾಂಸಾಹಾರಕ್ಕೆ ನಿಷೇಧವಿಲ್ಲ. ಕುಟುಂಬ ಅವಿಭಕ್ತ ಪದ್ಧತಿಯದು. ಗಂಡಸರು ಗಂಧದ ಕೆಲಸವನ್ನೂ ಹೆಂಗಸರು ಬೆಂಡಿನ ಕೆಲಸವನ್ನೂ ಮಾಡುತ್ತಾರೆ. ಬೆಂಡಿನಿಂದ ಹೂ, ಹೂಮಾಲೆ, ಗುಚ್ಛಗಳನ್ನು ಹೆಂಗಸರು ಮಾಡಿದರೆ, ಬಾಸಿಂಗ, ಮೊಗ್ಗಿನ ತುರಾಯಿಯನ್ನು ಗಂಡಸರೇ ಮಾಡುತ್ತಾರೆ. ಪ್ರತಿವರ್ಷ ಶ್ರಾವಣ, ಭಾದ್ರಪದ ಮಾಸಗಳಲ್ಲಿ ಗುಡಿಗಾರರು ಗಣಪತಿಯನ್ನು ಮಾಡಿ ಮಾರುತ್ತಾರೆ. ಇದೂ ಬಾಸಿಂಗ ತಯಾರಿಕೆಯೂ ತಕ್ಕಮಟ್ಟಿಗೆ ಆದಾಯ ತರುವ ಬಾಬುಗಳು. ಗಂಧದ

ಕಟ್ಟಿಗೆ, ಹಸ್ತಿದಂತ, ಉಸುಕಿನ ಕಾಗದ, ಮೇಣದ ಪಾಲೀಷು-ಇವು ಗುಡಿಗಾರರ ಕಚ್ಚಾಸಾಮಗ್ರಿಗಳು. ತಮ್ಮ ಕೆಲಸದಲ್ಲಿವರು ಗರಗಸ, ಉಜ್ಜುಗೊರಡು, ನಾನಾತರದ ಚಾಣ, ಮೊಳೆ, ತಿರುಗು ಮೊಳೆ, ಮರಡುಗಳನ್ನು (ಹಿಂಜಸ್) ಬಳಸುತ್ತಾರೆ. ಮೊದಲು ತಾವು ಮಾಡಬಯಸಿದ ಕಲಾಕೃತಿಗೆ ಅಳತೆಗನುಗುಣವಾಗಿ ಕಟ್ಟಿಗೆಯನ್ನು ಕತ್ತರಿಸಿಕೊಳ್ಳುತ್ತಾರೆ. ಆಮೇಲೆ ಆ ತುಂಡಿಗೆ ಸಾಮಾನ್ಯ ಕಲಾಕೃತಿಯ ರೂಪಕೊಟ್ಟು ತದನಂತರ ಅದನ್ನು ಸೂಕ್ಷ್ಮ ಕೆತ್ತನೆಯಿಂದ ತಿದ್ದುತ್ತಾರೆ. ಕೊನೆಯಲ್ಲಿ ಉಸುಕಿನ ಕಾಗದ ಮತ್ತು ಮೇಣದ ಪಾಲೀಷಿನಿಂದ ಹೊಳಪು ಕೊಡುತ್ತಾರೆ.

ಗಂಧದ ಮೂರ್ತಿಗಳ ಕೆತ್ತನೆ

ಗುಡಿಗಾರರ ಕೃತಿಗಳು ವಾಸ್ತು ಮತ್ತು ಶಿಲ್ಪದ ಸಾಂಪ್ರದಾಯಿಕ ಶೈಲಿಯನ್ನು ಹೋಲುತ್ತದೆ. ರಾಮಾಯಣ, ಮಹಾಭಾರತ, ಹಿಂದೂ ಪುರಾಣಗಳು ಇವರ ಆಕಾರಗಳು. ದೇವರ ಮೂರ್ತಿಗಳು, ಒಡವೆಯ ಪೆಟ್ಟಿಗೆಗಳು, ಫೋಟೋ ಚೌಕಟ್ಟುಗಳು, ವ್ಯಾಸಪೀಠ, ಕಾಗದವನ್ನು ಕತ್ತರಿಸುವ ಚಾಕುಗಳು, ಬೀಸಣಿಕೆಗಳು, ವಿಸಿಟಿಂಗ್ ಕಾರ್ಡುಗಳು, ಆನೆ, ಹೂಮಾಲೆ ಇತ್ಯಾದಿಗಳನ್ನು ಇವರು ಸಾಮಾನ್ಯವಾಗಿ ತಯಾರಿಸುತ್ತಾರೆ. ಈಗೀಗ ಆಧುನಿಕ ಬೇಡಿಕೆಗಳನ್ನು ಗಮನಿಸಿ ಹೊಸ ಹೊಸ ವಸ್ತುಗಳನ್ನು ಸಿದ್ಧಪಡಿಸಿಕೊಡುತ್ತಿದ್ದಾರೆ. ಗುಡಿಗಾರಿಕೆಯಲ್ಲಿ ಕಚ್ಚಾವಸ್ತುವಿನ ಕಿಮ್ಮತ್ತಿಗೂ ಕಲಾಕೃತಿಯ ಬೆಲೆಗೂ ನೇರವಾದ ಸಂಬಂಧವಿಲ್ಲ. ಗುಡಿಗಾರರು ಸ್ವತಂತ್ರ ವೃತ್ತಿಯವರು. ಕೇವಲ ಕೆಲವೇ ಕೆಲಸಗಾರರನ್ನು ನಿಯಮಿಸಿಕೊಳ್ಳುತ್ತಾರೆ. ಬೆಂಗಳೂರು, ಮೈಸೂರು, ತಮಿಳುನಾಡು, ಮುಂಬೈ, ಕೋಲ್ಕತ ದೆಹಲಿಗಳು ಗುಡಿಗಾರರ ಮಾರುಕಟ್ಟೆಗಳು. ನೂರಕ್ಕೆ ಅರವತ್ತರಷ್ಟು ಗುಡಿಗಾರರಿಗೆ ಸ್ವಂತ ಜಮೀನಿದ್ದು ಕೃಷಿ ಮಾಡುತ್ತಾರೆ. ಶೇ.80 ಗುಡಿಗಾರರ ಉತ್ಪನ್ನ ಸಾಮಾನ್ಯವಾಗಿ ತಿಂಗಳಿಗೆ ಸುಮಾರು 500-1000 ರೂಪಾಯಿಗಳವರೆಗೆ ಇದೆ. ಶೇ. 30 ಭಾಗ ವ್ಯಾಪಾರ ಸಹಕಾರಿ ಸಂಘಗಳ ಮುಖಾಂತರವೂ, ಉಳಿದುದು ನೇರವಾಗೂ ಆಗುತ್ತದೆ. ಶಿವಮೊಗ್ಗ, ಕುಮಟಗಳಲ್ಲಿ ಗುಡಿಗಾರರ ತರಬೇತಿಗಾಗಿ ಅರ್ಟಿಸಾನ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಗಳಿರುವವಲ್ಲದೆ, ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಮತ್ತು ಮುಂಬೈಯಿನ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಗಳಲ್ಲೂ ತರಬೇತಿಯ ಅವಕಾಶವುಂಟು. ಗುಡಿಗಾರರ ಕಲಾಕೌಶಲ ಜಗತ್ಪ್ರಸಿದ್ಧವಾಗಿದೆ. 1871ರಲ್ಲಿ ಅಂತಾರಾಷ್ಟ್ರೀಯ ವಾರ್ಷಿಕ ಪ್ರದರ್ಶನದಲ್ಲಿ ಇವರ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ಪ್ಯಾರಿಸ್‌ನಲ್ಲಿ ನಡೆದ ಜಾಗತಿಕ ವಸ್ತುಪ್ರದರ್ಶನದಲ್ಲಿ ಕೆಲವು ಕೃತಿಗಳು ಬೆಳ್ಳಿಯ ಪದಕಗಳನ್ನು ಪಡೆದಿವೆ. ಈ ಉದ್ಯೋಗ ಲಾಭದಾಯಕವಲ್ಲದ್ದರಿಂದ ಹೊಸ ಪೀಳಿಗೆ ನೌಕರಿಯನ್ನು ಸೇರತೊಡಗಿದೆ. ಇಂದು ಈ ಉದ್ಯೋಗದಲ್ಲಿರುವವರು ಜಾತಿಯ ವೈಶಿಷ್ಟ್ಯವೆಂಬ ಅಭಿಮಾನದಿಂದ ಮಾತ್ರ ಈ ಕಲೆಯನ್ನು ನಡೆಯಿಸಿಕೊಂಡು ಹೋಗುತ್ತಿದಾರೆ. ಈಚೆಗೆ ಆಲ್ ಇಂಡಿಯ ಹ್ಯಾಂಡಿಕ್ರಾಫ್ಟ್ ಬೋರ್ಡ್ ಈ ಕೈಕಸಬನ್ನು ಸಂರಕ್ಷಿಸುವುದಕ್ಕಾಗಿ ಶ್ರಮಿಸುತ್ತಿದೆ. ಹೊನ್ನಾವರದ ಎಸ್. ವೆಂಕಪ್ಪ, ಸೊರಬದ

ಮುರಲೀಧರ; ಗಂಧ ಹಾಗೂ ಹಸ್ತಿದಂತದ ಸೂಕ್ಷ್ಮ ಕಲಾಕೃತಿ: ತಯಾರಿಸಿದವರು ಶಾಂಬಾ ಅನಂತ ಶೇಟ ಗುಡಿಗಾರ, ಕುಮಟ

ಹಿರಿಯಣ್ಣಪ್ಪಾ, ಕುಮಟದ ವಾಮನ ಸುಬ್ರಾಯ ಸೇಟ್, ಅದೇ ಊರಿನ ಸುಬ್ರಾಯ ರಾಮಚಂದ್ರ ಸೇಟ್ ಮತ್ತು ಶಂಬಾ ಅನಂತ ಶೇಟ್, ಸಿದ್ದಾಪುರದ ವೆಂಕಟಗಿರಿ ಚಿದಂಬರ ಚಿತ್ರಕ್ ಮೊದಲಾದವರು ಗುಡಿಗಾರಿಕೆಯಲ್ಲಿ ಪ್ರಸಿದ್ಧರಾದವರು (**ನೋಡಿ- ಕೆತ್ತನೆ ಕೆಲಸ; ಗಂಧದಮರ; ತೇರು; ದಂತದ ಕೆತ್ತನೆ**). (ಆರ್.ಜಿ.ಆರ್.ಎ.)

**ಗುಡಿಬಂಡೆ :** ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರಿದ ಒಂದು ತಾಲ್ಲೂಕು. ಜಿಲ್ಲೆಯ ಅತ್ಯಂತ ಚಿಕ್ಕ ತಾಲ್ಲೂಕು. ಹಿಂದೆ ಬಾಗೇಪಲ್ಲಿಯ ಉಪತಾಲ್ಲೂಕಾಗಿತ್ತು. ದಕ್ಷಿಣದಲ್ಲಿ ಚಿಕ್ಕಬಳ್ಳಾಪುರ, ಪೂರ್ವದಲ್ಲಿ ಶಿಡ್ಲಘಟ್ಟ ಮತ್ತು ಬಾಗೇಪಲ್ಲಿ, ಪಶ್ಚಿಮದಲ್ಲಿ ಗೌರಿಬಿದನೂರು ತಾಲ್ಲೂಕುಗಳು, ಉತ್ತರದಲ್ಲಿ ಸ್ವಲ್ಪ ದೂರದವರೆಗೆ ಆಂಧ್ರಪ್ರದೇಶದ ಗಡಿ ಇವುಗಳಿಂದ ಸುತ್ತುವರಿಯಲ್ಪಟ್ಟಿದೆ. ತಾಲ್ಲೂಕಿನ ವಿಸ್ತೀರ್ಣ 222ಚ.ಕಿಮೀ. ಕಸಬೆ ಮತ್ತು ಸೋಮೇನ ಹಳ್ಳಿ ಹೋಬಳಿಗಳು. ಒಟ್ಟು ಗ್ರಾಮಗಳು 105. ಜನಸಂಖ್ಯೆ 55618 (2011).

ತಾಲ್ಲೂಕು ಹೆಚ್ಚುಮಟ್ಟಿಗೆ ಕಣಶಿಲೆಯ ಬೆಟ್ಟಗಳ ಪ್ರದೇಶ. ಭೂಮಿ ಉತ್ತರಕ್ಕೆ ಇಳಿಜಾರಾಗಿದ್ದು ಅನೇಕ ಏರು ತಗ್ಗುಗಳಿಂದ ಕೂಡಿದೆ. ನಂದಿಬೆಟ್ಟದ ಉತ್ತರದಲ್ಲಿ ಅವಲುಕೊಂಡ ಎಂಬಲ್ಲಿ ಹುಟ್ಟುವ ಕುಶಾವತಿ ನದಿ ಈ ತಾಲ್ಲೂಕಿನ ಮೂಲಕ ಉತ್ತರಕ್ಕೆ ಹರಿದು ಮುಂದೆ ಚಿತ್ರಾವತಿ ನದಿಯನ್ನು ಸೇರಿಕೊಳ್ಳುತ್ತದೆ. ತಾಲ್ಲೂಕಿನ ಮುಖ್ಯ ಕೆರೆಯಾಗಿರುವ ಬೈರಸಾಗರಕ್ಕೆ ಇದೇ ಮುಖ್ಯ ಆಸರೆ. ಈ ಕೆರೆಯ ಎರಡು ನಾಲೆಗಳಲ್ಲಿ ಒಂದು ಸುಮಾರು 2.5ಕಿಮೀ ದೂರದವರೆಗೂ ಮತ್ತೊಂದು 6.5ಕಿಮೀ ದೂರದವರೆಗೂ ಸಾಗುತ್ತದೆ. ಈ ತಾಲ್ಲೂಕಿನಲ್ಲಿ ನುರುಜುಗಲ್ಲಿನಿಂದ, ಕಲ್ಲುಗಳಿಂದ ಕೂಡಿದ ಭೂಪ್ರದೇಶವೇ ಹೆಚ್ಚು. ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 733.84ಮಿಮೀ. ಮಳೆ ಕಡಿಮೆಯಾದರೂ ಕೆರೆ ಬಾವಿಗಳ ಆಸರೆಯಿಂದ ನೆಲಗಡಲೆ, ರಾಗಿ, ಬತ್ತ, ಕಬ್ಬು, ಆಲೂಗೆಡ್ಡೆ, ಈರುಳ್ಳಿ, ಮೆಣಸಿನಕಾಯಿ ಮತ್ತು ದ್ವಿದಳ ಧಾನ್ಯಗಳನ್ನು

ಬೆಳೆಯುತ್ತಾರೆ. ಗುಡಿಬಂಡೆಯ ಸುತ್ತಮುತ್ತಲೂ ಹುಣಿಸೆ ಮರಗಳನ್ನು ಹೆಚ್ಚಾಗಿ ಕಾಣಬಹುದು. ಮೈದಾನ ಪ್ರದೇಶಗಳಲ್ಲಿ ಮಾವಿನ ತೋಪುಗಳಿವೆ. ಪಶುಸಂಪತ್ತಿನ ಅಭಿವೃದ್ಧಿಗೆ ಹೆಚ್ಚು ಗಮನ ನೀಡಲಾಗುತ್ತಿದ್ದು, ಗುಡಿಬಂಡೆಯಲ್ಲಿ ತಾಲ್ಲೂಕು ಮಟ್ಟದ ಒಂದು ಪಶುವೈದ್ಯಾಲಯವೂ ಯಲ್ಲೋಡಿನಲ್ಲಿ ಗ್ರಾಮಮಟ್ಟದ ಪಶುವೈದ್ಯಾಲಯವೂ ಇವೆ.

ಗುಡಿಬಂಡೆ ತಾಲ್ಲೂಕು ಬೆಲ್ಲ ಮತ್ತು ಕಲ್ಲುಸಕ್ಕರೆ ತಯಾರಿಕೆಗೆ, ರೇಷ್ಮೆನೂಲಿಗೆ ಮತ್ತು ಕೊಟ್ಟಣದ ಅಕ್ಕಿಗೆ ಪ್ರಸಿದ್ಧ. ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರದ ರೈಲು ನಿಲ್ದಾಣಗಳೇ ಈ ತಾಲ್ಲೂಕಿಗೆ ಹತ್ತಿರವಿರುವ ರೈಲುಸಂಪರ್ಕ. ಗುಡಿಬಂಡೆಯಿಂದ ಸುತ್ತಲ ಮುಖ್ಯ ಸ್ಥಳಗಳಿಗೆ ಉತ್ತಮ ಮಾರ್ಗಗಳಿವೆ. *

ಗುಡಿಬಂಡೆ ಈ ತಾಲ್ಲೂಕಿನ ಮುಖ್ಯ ಸ್ಥಳ. ನಂದಿದುರ್ಗ ಬೆಟ್ಟಸಾಲಿನಲ್ಲಿ ಕೋಲಾರದ ವಾಯವ್ಯಕ್ಕೆ 95ಕಿಮೀ ದೂರದಲ್ಲಿದೆ. ಗುಡಿಯಿಂದ ಕೂಡಿದ ಬಂಡೆಯೊಂದರ ದಕ್ಷಿಣದ ಬುಡದಲ್ಲಿ ಈ ಪಟ್ಟಣವಿರುವುದರಿಂದ ಇದಕ್ಕೆ ಗುಡಿಬಂಡೆ ಎಂಬ ಹೆಸರು ಬಂದಿದೆ. ಈ ಸುತ್ತಲ ಪ್ರದೇಶಕ್ಕೆ ಇದೇ ವ್ಯಾಪಾರಕೇಂದ್ರ.

ಔರಂಗಜೇಬನ ಕರ್ನಾಟಕ ಭಾಗದ ಫೌಜುದಾರ ಖಾಸಿಂಖಾನ್ ದೊಡ್ಡಬಳ್ಳಾಪುರ ವನ್ನು ವಶಪಡಿಸಿಕೊಂಡಮೇಲೆ ಗುಡಿಬಂಡೆ ಮತ್ತು ಅದರ ಸುತ್ತಲಿನ ಅರಣ್ಯ ಭಾಗಗಳನ್ನು ಹಾವಳಿ ಬೈರೇಗೌಡನಿಗೆ ಕೊಟ್ಟ. ಹಾವಳಿ ಬೈರೇಗೌಡ ಮಕ್ಕಳಿಲ್ಲದೆ ಮೃತಪಟ್ಟ. ಅವನ ಮೈದುನ ರಾಮೇಗೌಡ ಉತ್ತರಾಧಿಕಾರಿಯಾದ. 1689ರಲ್ಲಿ ಗುಡಿಬಂಡೆ ಚಿಕ್ಕಬಳ್ಳಾಪುರದ ಪಾಳೆಯಗಾರ ಬೈಚೇಗೌಡನ ವಶವಾಯಿತು.

ಹಾವಳಿ ಬೈರೇಗೌಡ ಮೊದಲು ಹಳೆಯ ಗುಡಿಬಂಡೆಯ ಕೋಟೆಯನ್ನೂ ಅನಂತರ ಈಗಿನ ಬಂಡೆಯ ತಳದ ಗುಡಿಬಂಡೆ ಪಾಳೆಯವನ್ನೂ ಸ್ಥಾಪಿಸಿದ. ಕೋಟೆಯ ಭಾಗದಲ್ಲಿ ಈಗಲೂ ಅನೇಕ ಬಂಡೆದ್ವಾರಗಳು, ಬಂಡೆಗಳಲ್ಲಿ ಬಿಡಿಸಿದ ಸೋಪಾನಗಳು, ಸಿಹಿನೀರಿನ ದೋಣೆಗಳು, ಗುಡಿಗಳು, ಹಗೇವುಗಳು, ಮದ್ದಿನ ಉಗ್ರಾಣಗಳು ಇವೆ. ಕೋವಿಯ ಮದ್ದನ್ನು ತಯಾರಿಸಲು ಉಪಯೋಗಿಸುತ್ತಿದ್ದ ಬೀಸುವ ಕಲ್ಲು ಸಹ ಇದೆ.

ಈ ಊರಿನ ಹೆಸರಿಗೆ ಕಾರಣವಾದ ಬಂಡೆಯ ಮೇಲಿರುವ ಗುಡಿ ಅಹೋಬಲ ಓಬಲ ನರಸಿಂಹಸ್ವಾಮಿಯದು. ಇದೊಂದು ನೈಸರ್ಗಿಕ ಗವಿ. ಗವಿಯು ಗರ್ಭಗುಡಿ ಮತ್ತು ಹೊರ ಅಂಕಣವೆಂದು ಎರಡಾಗಿ ವಿಂಗಡಿತವಾಗಿದೆ. ಹೊರ ಅಂಕಣದ ಮಂಟಪದ ದ್ವಾರದಲ್ಲಿ ದ್ವಾರಪಾಲಕ ವಿಗ್ರಹಗಳೂ ಮಂಟಪದ ಉತ್ತರದ ಗೋಡೆಯ ಮೇಲೆ ವಾಮನ, ರಾಮ, ವರಾಹ ಮತ್ತು ಉಗ್ರನರಸಿಂಹಸ್ವಾಮಿಯ ಉಬ್ಬುಚಿತ್ರಗಳೂ ಇವೆ. ಗರ್ಭಗುಡಿಯಲ್ಲಿ ವಿಗ್ರಹದ ಬದಲು ಉದ್ಭವ ಶಿಲೆ ಇದೆ. ಗವಿಯ ಸುತ್ತಲೂ ಕಲ್ಲಿನ ಗೋಡೆ ಇದೆ. ಗುಡಿಬಂಡೆಯಲ್ಲಿ ಎರಡು ಜಿನಾಲಯಗಳೂ ಇವೆ. (ಎಚ್.ಪಿ.ಕೆ.)

**ಗುಡಿಯಮ್ :** ತಮಿಳುನಾಡು ರಾಜ್ಯದ ತಿರುವಳ್ಳೂರು ಜಿಲ್ಲೆಯಲ್ಲಿರುವ ಹಳೆಶಿಲಾಯುಗದ ಗುಹಾನೆಲೆ. ಕೋರ್ತಲಯಾರ್ ನದಿ ತೀರದಲ್ಲಿರುವ ಈ ಗುಹೆ ಅಳ್ಳಿಕುಳ್ಳಿ ಬೆಟ್ಟಶ್ರೇಣಿಯಲ್ಲಿದೆ. ಗುಹೆಯೊಳಗಿನ ಅವಶೇಷಗಳನ್ನು ರಾಬರ್ಟ್ ಬ್ರೂಸ್‌ಫುಟ್ ಪತ್ತೆಹಚ್ಚಿದ. ಕೆ.ಡಿ.ಬ್ಯಾನರ್ಜಿಯವರು 1963-64 ರಲ್ಲಿ ಇಲ್ಲಿ ಉತ್ಖನನ ನಡೆಸಿದರು. ಗುಹೆಯ ಒಳಗೆ ಅಗೆದ ಗುಂಡಿಯಲ್ಲಿ ಅತ್ಯಂತ ಕೆಳಗಿನ ಜಲ್ಲಿಕಲ್ಲಿನ ಸ್ತರದಿಂದ ಅತ್ಯಂತ ಮೇಲಿನ ಹೂಳುಮಣ್ಣಿನ ಸ್ತರದವರೆಗೆ ಹಳೆ ಶಿಲಾಯುಗದ ಉಪಕರಣಗಳು ಅಧಿಕವಾಗಿ ಕಂಡುಬಂದವು. ಕೆಳಗಿನ ಸ್ತರಗಳಲ್ಲಿ ಆದಿ ಹಳೆಶಿಲಾಯುಗೊತ್ತರ ಉಪಕರಣಗಳೂ ಮೇಲಿನ ಸ್ತರಗಳಲ್ಲಿ ಮಧ್ಯ ಹಳೆಶಿಲಾಯುಗೋತ್ತರ ಉಪಕರಣಗಳೂ ಬೆರಳೆಣಿಕೆಯಲ್ಲಿ ಲಭಿಸಿದವು.

ಈ ಹಳ್ಳಿಯ ಬಳಿಯಿರುವ ಗದ್ದೆಯೊಂದರಲ್ಲಿ ಅಗೆದ ಒಂದು ಗುಂಡಿಯಲ್ಲಿ ಜಲ್ಲಿಕಲ್ಲಿನ ಭೂಸ್ತರದಲ್ಲಿ ಹಳೆಶಿಲಾಯುಗದ ಉಪಕರಣಗಳಿದ್ದವು. ಅಪೂರ್ಣ ಕೈಗೊಡಲಿ, ಕಡಿಕತ್ತಿ, ಕೊಚ್ಚುಗತ್ತಿ, ಮೂಲ ಶಿಲೆಗಳಲ್ಲದೆ ದೊಡ್ಡ ಚಕ್ಕೆಗಳು ಇದರಲ್ಲಿ ಅನೇಕ ಸಂಖ್ಯೆಯಲ್ಲಿದ್ದವು. ಇದರ ಮೇಲಿದ್ದ ಕಂದುಮಣ್ಣಿನ ಸಡಿಲವಾದ ಪದರದಲ್ಲಿ ಮಿಶ್ರ ಉಪಕರಣಗಳು, ಅಂದರೆ ಚಕ್ಕೆ, ಮೊನೆ, ಹೆರೆಚಕ್ಕೆ, ಕೈಗೊಡಲಿ, ಕಡಿಕತ್ತಿ, ಅಲಗುಗಳು ಮೊದಲಾದವು ಇದ್ದವು.

ಶ್ರೀಕೃಷ್ಣಪುರಂ ಹಳ್ಳಿಯ ಬಳಿ ಅಗೆದ ಗುಂಡಿಯಲ್ಲಿ ಜಂಬುಮಣ್ಣಿನ ಪದರದಲ್ಲಿ ಮಧ್ಯ ಹಳೆಶಿಲಾಯುಗ ಮತ್ತು ಅಂತ್ಯ ಅಶೂಲಿಯನ್ ಮಾದರಿಯ ಉಪಕರಣಗಳು ಮಿಶ್ರವಾಗಿದ್ದವು. ಈ ಪದರದ ಕೆಳಗೆ ಸವೆದು ಚೂರಾದ ಜಂಬುಕಲ್ಲಿನ ಪದರವಿದ್ದು ಇದರಲ್ಲಿ ಅಂತ್ಯ ಅಶೂಲಿಯನ್ ಮಾದರಿಯ ಉಪಕರಣಗಳಿದ್ದವು. ಕ್ವಾರ್ಟ್ಸೈಟ್ ಕಲ್ಲಿನಿಂದ ಮಾಡಿದ ಮೊನೆ, ಸಣ್ಣ ಚಕ್ಕೆ, ಹೆರೆಚಕ್ಕೆ, ಬಿಲ್ಲೆಯಾಕಾರದ ಉಪಕರಣಗಳು, ಮೂಲಶಿಲೆ, ಕೊಚ್ಚುಗತ್ತಿ, ಕಡಿಗತ್ತಿ, ಕೈಗೊಡಲಿಗಳು ಇಲ್ಲಿ ಸಿಕ್ಕ ಇತರ ಉಪಕರಣಗಳು. (ಪಿ.ಕೆ.)

**ಗುಡಿಸಿಲು ಕೈಗಾರಿಕೆಗಳು :** ಮನೆಯಲ್ಲಿ ಅಥವಾ ಗುಡಿಸಿಲಿನಲ್ಲಿ ನಡೆಸುವ ಕೈಗಾರಿಕೆಗಳು, ಕುಟೀರ ಕೈಗಾರಿಕೆಗಳು (ಕಾಟೇಜ್ ಇಂಡಸ್ಟ್ರೀಸ್). ಇದು ನಾಗರಿಕತೆಯಷ್ಟೇ ಹಳೆಯದು. ಮನುಷ್ಯ ಸ್ವರಕ್ಷಣೆಗಾಗಿ ಮತ್ತು ಬೇಟೆಗಾಗಿ ಆಯುಧಗಳನ್ನೂ ಉಪಕರಣಗಳನ್ನೂ ತಯಾರಿಸತೊಡಗಿದಾಗ ಈ ಕೈಗಾರಿಕೆಯ ಉದಯವಾಯಿತು. ಅವನು ಮುಂದೆ ಉಡುಪು, ವ್ಯವಸಾಯದ ಉಪಕರಣ ಮುಂತಾದವನ್ನು ಮಾಡಲು ಪ್ರಾರಂಭಿಸಿದಾಗ ಇದು ಬೆಳೆಯಿತು. ಪುರಾತನ ನಾಗರಿಕತೆಗಳಲ್ಲಿ ನಾನಾ ಉಪಯುಕ್ತ ಮತ್ತು ಭೋಗ ವಸ್ತುಗಳ ಕೈಗಾರಿಕೆಗಳಿಗೆ ರಾಜರಿಂದಲೂ ಚಕ್ರವರ್ತಿಗಳಿಂದಲೂ ಶ್ರೀಮಂತರಿಂದಲೂ ಪೋಷಣೆಯಿತ್ತು. ಅವರು ತಯಾರಿಸಿದ ಸರಕುಗಳು ದೂರದ ಮಾರುಕಟ್ಟೆಗಳಲ್ಲಿ ವಿಕ್ರಯವಾಗುತ್ತಿದ್ದುವು. ಆದರೆ ಕೈಗಾರಿಕಾ ಕ್ರಾಂತಿಯಾದ ಮೇಲೆ

ಪಾತ್ರೆ ತಯಾರಿಕೆ

ಉಂಟಾದ ತ್ವರಿತ ಮತ್ತ ವ್ಯಾಪಕವಾದ ಕೈಗಾರಿಕಾಕರಣ ಗೃಹ ಕೈಗಾರಿಕೆಗಳ ಕ್ಷೀಣ ದಶೆಗೆ ಕಾರಣವಾಯಿತು. ಆದರೂ ಈ ಕೈಗಾರಿಕೆಗಳು ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ. ಕೆಲವು ಕಾರಣಗಳಿಂದಾಗಿ ಅವು ಇಂದಿಗೂ ಉಳಿದುಬಂದಿವೆ. ಕೆಲವು ಉಪಯುಕ್ತ ವಸ್ತುಗಳಿಗೆ ಬೇಡಿಕೆ ಸ್ಥಳೀಯವೂ ಪರಿಮಿತವೂ ಆಗಿರುತ್ತದೆ. ಅಂಥ ವಸ್ತುಗಳನ್ನು ದೊಡ್ಡ ಕೈಗಾರಿಕೆಗಳಲ್ಲಿ ಬೃಹದ್ಗಾತ್ರದಲ್ಲಿ ಉತ್ಪಾದನೆ ಮಾಡುವುದು ಸಾಧ್ಯವಿಲ್ಲ ಗುಡಿಸಿಲು ಕೈಗಾರಿಕೆಗಳಲ್ಲಿ ಅವನ್ನು ಸಣ್ಣ ಗಾತ್ರದಲ್ಲಿ ಉತ್ಪಾದಿಸಬಹುದು. ಅದೂ ಅಲ್ಲದೆ ಗೃಹ ಕೈಗಾರಿಕೆಗಳು ಜನಗಳ ರುಚಿ ಮತ್ತು ಬೇಡಿಕೆಗಳಿಗೆ ಅನುಗುಣವಾಗಿ ಸರಕುಗಳನ್ನು ತಯಾರಿಸುತ್ತವೆ. ಈ ಕಾರಣಗಳಿಂದಾಗಿ ಗುಡಿಸಿಲು ಕೈಗಾರಿಕೆಗಳು ಈಗಿನ ಬೃಹತ್ ಕೈಗಾರಿಕಾ ಪ್ರಪಂಚದಲ್ಲೂ ಜೀವಂತವಾಗಿ ಉಳಿದಿವೆ. ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಪ್ರವರ್ಧಮಾನವಾಗಿವೆ. ಈಚೆಗೆ ಸರ್ಕಾರಗಳು ಇವಕ್ಕೆ ಉತ್ತೇಜನ ನೀಡುತ್ತಿವೆ. ಇದಕ್ಕೆ ನಾನಾ ಕಾರಣಗಳುಂಟು : 1. ಈ ಕೈಗಾರಿಕೆಗಳು ಕೂಲಿಗಾರರ ಹೆಚ್ಚಳವಿರುವ ಮತ್ತು ಕಡಿಮೆ ಬಂಡವಾಳವಿರುವ ದೇಶಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. 2. ಇವು ಸ್ಥಳೀಯವಾಗಿ ದೊರೆಯುವ ಕಚ್ಚಾಸಾಮಗ್ರಿ ಮತ್ತು ಕುಶಲತೆಯನ್ನು ಉಪಯೋಗಿಸಿ ಕೊಂಡು ಅನೇಕ ಉಪಯುಕ್ತ ಮತ್ತು ಅನುಭೋಗ ವಸ್ತುಗಳನ್ನು ತಯಾರಿಸುವುದರಿಂದ ದೇಶದ ಆರ್ಥಿಕ ಪ್ರಗತಿಗೆ ಸಹಾಯ ಮಾಡುತ್ತವೆ. 3. ಗುಡಿಸಲು ಕೈಗಾರಿಕೆಗಳು ಮನೆಯಲ್ಲೇ ಇರುವ ಮುದುಕರು, ಕುರುಡರು ಮತ್ತು ಮಕ್ಕಳುಗಳ ಸೇವೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಸಹಾಯಕವಾಗುತ್ತದೆ. 4. ಸಮಾನ ಆರ್ಥಿಕ ಅವಕಾಶ ಕಲ್ಪಿಸುವುದಕ್ಕೂ ರಾಷ್ಟ್ರದ ವರಮಾನ ಮತ್ತು ಸಂಪತ್ತಿನ ಸಮಾನ ಹಂಚಿಕೆಗೂ ಕೆಲವು ದೇಶಗಳು ಗುಡಿಸಿಲು ಕೈಗಾರಿಕೆಗಳನ್ನು ಉತ್ತೇಜಿಸುತ್ತಿವೆ. ಈ ರಂಗಗಳಲ್ಲಿ ಗೃಹಕೈಗಾರಿಕೆಗಳು ವ್ಯಾಪಕವಾಗಿ ಕಂಡುಬರುತ್ತವೆ; ಪುಸ್ತಕಗಳನ್ನು ಹೊಲಿಯುವುದು; ನೂಲಿಗೆ ಬಣ್ಣ ಕಟ್ಟುವುದು; ಬಟ್ಟೆಬರೆಗಳ ತಯಾರಿಕೆ; ಬೀಜಗಳಿಂದ ಎಣ್ಣೆ ತೆಗೆಯುವುದು; ಚಿನ್ನ, ಬೆಳ್ಳಿ ಮತ್ತು ಇತರ ಆಭರಣಗಳ ತಯಾರಿಕೆ; ಚರ್ಮವಸ್ತುಗಳ ತಯಾರಿಕೆ; ಚಾಪೆ ಹೆಣೆಯುವುದು: ಸಂಗೀತ ಸಾಧನಗಳ ತಯಾರಿಕೆ; ವ್ಯವಸಾಯೋ ಪಕರಣಗಳ ತಯಾರಿಕೆ: ಮಣ್ಣಿನ ಕೆಲಸ ಮತ್ತು ಕುಂಬಾರಿಕೆ; ಬಿದಿರು ಮತ್ತು ಅನೇಕ ಬೆತ್ತದ ಸಾಮಾನುಗಳ ತಯಾರಿಕೆ; ಜಮಖಾನದ ತಯಾರಿಕೆ; ಮಣ್ಣಿನ ಪ್ರತಿಮೆಗಳ ತಯಾರಿಕೆ; ತಾಮ್ರದ ಸಾಮಾನುಗಳ ತಯಾರಿಕೆ; ಗರಿಯಿಂದ ಸಾಮಾನುಗಳ ತಯಾರಿಕೆ; ಆಟದ ಸಾಮಾನುಗಳು ಮತ್ತು ಬೊಂಬೆ ಮಾಡುವುದು; ರಬ್ಬರ್ ವಸ್ತುಗಳು ಮತ್ತು ರಬ್ಬರ್ ಅಚ್ಚುಗಳು; ಕಸೂತಿ ಕೆಲಸ ಮತ್ತು ವಸ್ತುಗಳು.

ಗುಡಿಸಿಲು ಕೈಗಾರಿಕೆಗಳಲ್ಲಿ ತೊಡಕಿಲ್ಲದ ಮತ್ತು ಸಾಮಾನ್ಯವಾದ ಉತ್ಪಾದನ ತಂತ್ರಗಳನ್ನು ಉಪಯೋಗಿಸುತ್ತಾರೆ. ಅನೇಕ ಕೈಗಾರಿಕೆಗಳಲ್ಲಿ ಹಳೆಯ ಕಾಲದ ಯಂತ್ರ ಸಲಕರಣೆಗಳಿಂದ ಉತ್ಪಾದನ ಕಾರ್ಯ ನಡೆಯುತ್ತದೆ. ಕೆಲವರು ಸುಧಾರಿಸಿದ ಉತ್ಪಾದನ ಕ್ರಮ ಮತ್ತು ಉಪಕರಣಗಳನ್ನು ಬಳಸುವುದೂ ವಾಡಿಕೆಯಲ್ಲಿದೆ. ಈ ಕೈಗಾರಿಕೆಗಳು ತಾಂತ್ರಿಕ ಪ್ರಗತಿಯಿಂದ ಸಂಪೂರ್ಣವಾಗಿ ವಂಚಿತವಾಗಿಯೇನೂ ಇಲ್ಲ. ಆದರೆ ನವೀನ ಉತ್ಪಾದನ ವಿಧಾನಗಳನ್ನು ಅಳವಡಿಸುವುದರಲ್ಲಿ ನಿಧಾನ ಹೆಚ್ಚು. ಕೆಲವು ಕೈಗಾರಿಕೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವುದುಂಟು. ಆಧುನಿಕ ಕಾರ್ಖಾನೆಗಳೊಂದಿಗೆ ಹೊಂದಿಕೊಂಡು ಉತ್ಪಾದನ ಕಾರ್ಯನಿರತರಾದ ಗುಡಿಸಿಲು ಕೈಗಾರಿಕೆಗಳು ಇವೆ. ಗಿರಣಿಯ ನೂಲನ್ನು ಬಳಸಿಕೊಂಡು ಮಗ್ಗದಲ್ಲಿ ಬಟ್ಟೆ ನೇಯುವುದು ಒಂದು ಉದಾಹರಣೆ. ಕಮ್ಮಾರರಲ್ಲಿ ತಿರುಗು ಯಂತ್ರದ ಬಳಕೆ ಹೆಚ್ಚುತ್ತಿದೆ. ಹೀಗೆ ನಿಧಾನವಾಗಿ ಯಾದರೂ ತಾಂತ್ರಿಕ ಪ್ರಗತಿ ಗುಡಿಸಿಲು ಕೈಗಾರಿಕೆಗಳ ಉತ್ಪಾದನ ಕ್ರಮವನ್ನು ಬದಲಾಯಿಸುತ್ತಿದೆ.

ಬಿದಿರಿನ ಕೆಲಸ

ಅನೇಕ ಗುಡಿಸಿಲು ಕೈಗಾರಿಕೆಗಳಲ್ಲಿ ವಿಶೇಷ ಕುಶಲತೆಯ ಅವಶ್ಯಕತೆಯಿರುವುದಿಲ್ಲ. ಅನೇಕ ಉಪಯುಕ್ತ ಸರಕುಗಳನ್ನು ಸಾಧಾರಣವಾದ ಕುಶಲತೆಯಿಂದಲೇ ಉತ್ಪಾದಿಸಬಹುದು. ಆದರೆ ಕೆಲವು ಕೈಗಾರಿಕೆಗಳಲ್ಲಿ ಉನ್ನತ ಮಟ್ಟದ ಕುಶಲತೆ ಮತ್ತು ಕೆಲಸಗಾರಿಕೆ ಅಗತ್ಯವಾಗುತ್ತದೆ. ವಂಶಪಾರಂಪರ್ಯವಾದ ಕೌಶಲದ ಬಲದಿಂದ ನಡೆಯುವ ಕೈಗಾರಿಕೆಗಳೂ ಉಂಟು. ಕುಶಲ ಕರ್ಮಿ ತನ್ನ ಮಕ್ಕಳಿಗೆ ತರಬೇತಿಕೊಟ್ಟು ಅವರನ್ನು ಆ ಕೆಲಸದಲ್ಲಿ ನಿಪುಣರನ್ನಾಗಿ ಮಾಡುತ್ತಾನೆ. ಈ ಕಾರಣದಿಂದಾಗಿ ಕೆಲವು ಉತ್ಪಾದನ ವಿಧಾನಗಳು ಮತ್ತು ಕೌಶಲಗಳು ಕೆಲವೇ ಕುಟುಂಬಗಳಿಗೆ ಸೀಮಿತವಾಗಿರುತ್ತವೆ. ಈಚಿನ ವರ್ಷಗಳಲ್ಲಿ ಕೆಲವು ವೃತ್ತಿ ಸಂಸ್ಥೆಗಳು ಗುಡಿಸಿಲು ಕೈಗಾರಿಕೆಯಲ್ಲಿ ತೊಡಗಿರುವ ಮತ್ತು ತೊಡಗುವ ಕೆಲಸಗಾರರಿಗೆ ತರಬೇತು ಒದಗಿಸುತ್ತಿವೆ. ಆದಾಗ್ಯೂ ಇದು ಸಾಕಷ್ಟು ವ್ಯಾಪಕವಾಗಿಲ್ಲ. ಗುಡಿಸಿಲು ಕೈಗಾರಿಕೆಯಲ್ಲಿ ತೊಡಗಿರುವ ಬಹಳ ಜನ ಯಾವ ವಿಧವಾದ ವ್ಯವಸ್ಥಿತ ತರಬೇತನ್ನೂ ಪಡೆದಿಲ್ಲದಿರುವುದೇ ಸಾಮಾನ್ಯವಾಗಿದೆ.

ಎಲ್ಲ ಗುಡಿಸಿಲು ಕೈಗಾರಿಕೆಗಳಿಗೂ ಸಾಮಾನ್ಯವಾದ ಕೆಲವು ಸಮಸ್ಯೆಗಳುಂಟು. ಬಂಡವಾಳದ ಅಭಾವ ಒಂದು ಮುಖ್ಯ ಸಮಸ್ಯೆ. ಈ ಕೈಗಾರಿಕೆಗಳಿಗೆ ಅಲ್ಪ ಬಂಡವಾಳವೇ ಸಾಕಾದರೂ ಅಷ್ಟು ಬಂಡವಾಳವನ್ನು ಕೂಡ ಅನೇಕ ಉತ್ಪಾದಕರು ಹೊಂದಿಸಿಕೊಳ್ಳಲು ಅಸಮರ್ಥರಾಗಿರುತ್ತಾರೆ. ಬೃಹತ್ ಕೈಗಾರಿಕೆಗಳಂತೆ ಇವಕ್ಕೂ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳು ಬೇಕಾಗುತ್ತವೆ. ಉಪಕರಣಗಳು, ಯಂತ್ರಗಳು ಮತ್ತು ಕಟ್ಟಡಗಳಿಗಾಗಿ ದೀರ್ಘಾವಧಿ ಸಾಲಗಳು ಅಗತ್ಯ. ಕಚ್ಚಾ ಸಾಮಗ್ರಿಯನ್ನು ಕೊಳ್ಳಲು, ತಯಾರಾದ ಪದಾರ್ಥಗಳನ್ನು ಮತ್ತು ತಯಾರಿಕೆಗೆ ಬೇಕಾದ ವಸ್ತುಗಳನ್ನು ಶೇಖರಿಸಲು, ಮಾರಾಟ ಮಾಡಲು ಮತ್ತು ಕೆಲಸಗಾರರಿಗೆ ಕೂಲಿ ಕೊಡಲು ಅಲ್ಪಾವಧಿ ಸಾಲ ಬೇಕಾಗುತ್ತದೆ. ಗುಡಿಸಿಲು ಕೈಗಾರಿಕೆಗಳು ಸಂಘಟಿತ ಉದ್ಯಮಗಳಲ್ಲವಾದ್ದರಿಂದ ಬಂಡವಾಳ ಒದಗಿಸುವುದು ಮತ್ತು ಸಾಲ ಪಡೆಯುವುದು ಸುಲಭವಲ್ಲ. ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳಿಂದ ಹಣ ಪಡೆಯಲು ಇವು ಅಗತ್ಯವಾದ ಆಧಾರ ಮತ್ತು ಆಸ್ತಿ ಒದಗಿಸಲಾರವು. ಈ ಕಾರಣಗಳಿಂದಾಗಿ ಇವು ಸಂಘಟಿತ ಸಂಸ್ಥೆಗಳಿಂದ ಹಣ ಪಡೆಯುವುದು ಕಷ್ಟ. ಗುಡಿಸಿಲು ಕೈಗಾರಿಕೆಗಳಲ್ಲಿ ತೊಡಗಿರುವವರಿಗೆ ಅಗತ್ಯವಾದ ಬಂಡವಾಳ ಬಹುತೇಕ ಒದಗುತ್ತಿರುವುದು ಸಾಹುಕಾರರು ಮತ್ತು ವರ್ತಕರಿಂದ, ಸ್ನೇಹಿತರಿಂದ ಮತ್ತು ಸಂಬಂಧಿಕರಿಂದ ಹಣ ಪಡೆಯುವುದೂ ಸಾಮಾನ್ಯ. ಕೆಲವು ದೇಶಗಳಲ್ಲಿ ಸರ್ಕಾರಗಳು ಪರಿಮಿತ ಗಾತ್ರದಲ್ಲಿ ಈ ಕೈಗಾರಿಕೆಗಳಿಗೆ ಹಣ ಸಹಾಯ ಮಾಡುತ್ತವೆ. ಪರಿಸ್ಥಿತಿಗಳಲ್ಲಿ ಸಹಕಾರ ಸಂಘಗಳು ಹಣವನ್ನೂ ಕಚ್ಚಾ ಸಾಮಗ್ರಿಯನ್ನೂ ಒದಗಿಸುತ್ತವೆ. ಭಾರತದಲ್ಲಿ ಈಗ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಇವಕ್ಕೆ ಹಣ ಒದಗಿಸಲು ಆಸಕ್ತಿ ವಹಿಸುತ್ತಿವೆ. ಇಷ್ಟಾದರೂ ಗುಡಿಸಿಲು ಕೈಗಾರಿಕೆಗಳ ಹಣಕಾಸಿನ ಸ್ಥಿತಿ ತೃಪ್ತಿಕರವಾಗಿಲ್ಲವೆಂದೇ ಹೇಳಬೇಕು.

ಬೆತ್ತದ ಕೆಲಸ

ಕಚ್ಚಾ ಸಾಮಗ್ರಿಯನ್ನು ಹೊಂದಿಸಿಕೊಳ್ಳುವುದು ಗುಡಿಸಿಲು ಕೈಗಾರಿಕೆಗಳ ಮತ್ತೊಂದು ಮುಖ್ಯ ಸಮಸ್ಯೆ. ವಿವಿಧ ವಸ್ತುಗಳ ತಯಾರಿಕೆಯಲ್ಲಿ ತೊಡಗಿರುವ ಅವಕ್ಕೆ ನಾನಾ ಬಗೆಯ ಕಚ್ಚಾ ಸಾಮಗ್ರಿಗಳು ಬೇಕಾಗುತ್ತವೆ. ಕಚ್ಚಾ ಸಾಮಗ್ರಿಕೊಳ್ಳಲು ಮತ್ತು ಸಾಕಷ್ಟು ಶೇಖರಿಸಲು ಹಣ ಇರುವುದಿಲ್ಲ. ಈ ವಿಚಾರದಲ್ಲಿ ಬೃಹದ್ಗಾತ್ರ ಕೈಗಾರಿಕೆಗಳ ಸ್ಥಿತಿ ಉತ್ತಮವಾದದ್ದು. ಹೆಚ್ಚು ಗಾತ್ರದಲ್ಲಿ ಕಚ್ಚಾ ಸಾಮಗ್ರಿಯನ್ನೂ ತಮಗೆ ಬೇಕಾದ ಇತರ ವಸ್ತುಗಳನ್ನೂ ಕೊಳ್ಳುತ್ತವೆ. ಆದ್ದರಿಂದ ಆ ಕೈಗಾರಿಕೆಗಳಿಗೆ ಅವನ್ನು ಕೊಳ್ಳುವಾಗ ಬೆಲೆಯಲ್ಲಿ ಮಿಗಿತಾಯವಾಗುತ್ತದೆ. ಗುಡಿಸಿಲು ಕೈಗಾರಿಕೆಗಳಿಗೆ ಈ ಅವಕಾಶಗಳಿರುವುದಿಲ್ಲ. ಈ ಉತ್ಪಾದಕರು ಕೆಲವು ವಾರಗಳಿಗೆ ಸಾಕಾಗುವಷ್ಟು ಕೂಡ ಕಚ್ಚಾ ಸಾಮಗ್ರಿಯನ್ನು ಕೊಂಡು ಶೇಖರಿಸುವುದಕ್ಕಾಗುವುದಿಲ್ಲ. ಅಲ್ಲದೆ ಇವರು ಅವನ್ನು ಅಲ್ಪ ಪ್ರಮಾಣಗಳಲ್ಲಿ ಕೊಳ್ಳುವುದರಿಂದ ಒಟ್ಟು ಕೊಳ್ಳುವಿಕೆಯ ಅನುಕೂಲಗಳು ಲಭ್ಯವಾಗುವುದಿಲ್ಲ. ಗುಡಿಸಿಲು ಕೈಗಾರಿಕೆಯ ಉತ್ಪಾದಕರು ತಮಗೆ ಅಗತ್ಯವಾದ ಕಚ್ಚಾ ಸಾಮಗ್ರಿಯನ್ನು ವರ್ತಕರಿಂದಲೋ ದಳ್ಳಾಳಿಗಳ ಮೂಲಕವೋ ಪಡೆಯುತ್ತಾರೆ. ತಾವು ತಯಾರಿಸಿದ ವಸ್ತುಗಳನ್ನು ಸಾಮಾನ್ಯವಾಗಿ ಅವರಿಗೇ ಮಾರುತ್ತಾರೆ. ಕೆಲವು ವೇಳೆ ಕಚ್ಚಾಸಾಮಗ್ರಿಯನ್ನು ಸ್ಥಳೀಯ ವರ್ತಕರಿಂದ ಸಾಲದ ಮೇಲೆ ಪಡೆಯುತ್ತಾರೆ. ತಯಾರಿಸಿದ ವಸ್ತುಗಳನ್ನು ಮಾರಿದ ಮೇಲೆ ಅವರಿಗೆ ಹಣ ಸಂದಾಯ ಮಾಡುತ್ತಾರೆ. ಕಚ್ಚಾಸಾಮಗ್ರಿಯ ಮತ್ತು ಉತ್ಪಾದನೆಗೆ ಅಗತ್ಯವಾದ ಇತರ ವಸ್ತುಗಳ ಪೂರೈಕೆ ಸಾಕಾಗದೆ ಗುಡಿಸಿಲು ಕೈಗಾರಿಕೆಗಳ ಉತ್ಪಾದನೆ ಆಗಾಗ್ಗೆ ನಿಲ್ಲುವುದು ಸಾಮಾನ್ಯ.

ಗುಡಿಸಿಲು ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಪದಾರ್ಥಗಳನ್ನು ಮಾರಲು ವ್ಯವಸ್ಥಿತ ಮಾರುಕಟ್ಟೆಗಳಿಲ್ಲ. ಅವುಗಳ ಉತ್ಪಾದಕರು ಬೃಹದ್ಗಾತ್ರ ಕೈಗಾರಿಕೆಗಳಂತೆ, ತಮ್ಮ ಸರಕುಗಳ ಮಾರಾಟಕ್ಕೆ ಸೂಕ್ತವಾದ ಮತ್ತು ಸಂಘಟಿತವಾದ ಏರ್ಪಾಡು ಮಾಡಲು ಶಕ್ತರಲ್ಲ. ಅನೇಕ ವೇಳೆ ಸರಕುಗಳನ್ನು ನೇರವಾಗಿ ತಾವೇ ತಮ್ಮ ಹಳ್ಳಿಯ ಅಥವಾ ಸುತ್ತಮುತ್ತಲಿನ ಹಳ್ಳಿಗಳ ಗ್ರಾಹಕರಿಗೆ ವಿಕ್ರಯಿಸುತ್ತಾರೆ. ಕೆಲವರು ಹತ್ತಿರದ ಸಂತೆಗಳಿಗೆ ಸರಕುಗಳನ್ನು ತೆಗೆದುಕೊಂಡು ಹೋಗಿ ವಿಕ್ರಯಿಸುತ್ತಾರೆ. ಹಲವೊಮ್ಮೆ ಸರಕುಗಳನ್ನು ಪಟ್ಟಣಗಳಲ್ಲಿಯ ಸಗಟು ವ್ಯಾಪಾರಿಗೋ ಚಿಲ್ಲರೆ ವ್ಯಾಪಾರಿಗೋ ವಿಕ್ರಯಿಸುವುದುಂಟು. ದಳ್ಳಾಳಿಗಳನ್ನು ಅಥವಾ ಬಂಡವಾಳಿಗರನ್ನು ಆಶ್ರಯಿಸುವ ಸಂದರ್ಭಗಳಿಲ್ಲದಿಲ್ಲ. ಅವರಿಂದ ಸಾಲವನ್ನೋ ಕಚ್ಚಾ ಸಾಮಗ್ರಿಯನ್ನೋ ಪಡೆದಿದ್ದು, ತಾವು ಉತ್ಪಾದಿಸಿದ ಸರಕುಗಳನ್ನು ಅವರಿಗೇ ಒಪ್ಪಿಸುವುದುಂಟು. ಅವರು ಆ ಸಾಮಾನುಗಳನ್ನು ಸ್ಥಳೀಯ ಮಾರುಕಟ್ಟೆಗಳಲ್ಲೋ ದೂರದ ಮಾರುಕಟ್ಟೆಗಳಲ್ಲೋ ವಿಕ್ರಯಿಸಿ ಹೆಚ್ಚು ಲಾಭ ಪಡೆಯುವುದುಂಟು. ಗುಡಿಸಿಲು ಕೈಗಾರಿಕೆಗಳ ಸರಕುಗಳ ಮಾರಾಟ ಕಷ್ಟವಿರುವುದರಿಂದ ಕೆಲವು ದೇಶಗಳಲ್ಲಿ ಸರ್ಕಾರಗಳು ಇವುಗಳ ಮಾರಾಟಕ್ಕೆ ಸಂಸ್ಥೆಗಳನ್ನು ಸ್ಥಾಪಿಸಿವೆ. ಸಹಕಾರ ಸಂಘಗಳೂ ಇವುಗಳ ಮಾರಾಟಕ್ಕೆ ಸಹಾಯ ಮಾಡುತ್ತವೆ. ಗುಡಿಸಿಲು ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಹಲವು ಸರಕುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯುಂಟು.

**ವಿವಿಧ ದೇಶಗಳಲ್ಲಿ:** ಹಿಂದುಳಿದ ದೇಶಗಳಲ್ಲಿ ಮಾತ್ರವಲ್ಲದೆ ಆರ್ಥಿಕಾಭಿವೃದ್ಧಿ ಹೊಂದಿದ ದೇಶಗಳಲ್ಲೂ ಗುಡಿಸಿಲು ಕೈಗಾರಿಕೆಗಳು ವ್ಯಾಪಕವಾಗಿವೆ. ದೊಡ್ಡ ಯಂತ್ರಗಳನ್ನು ಸ್ಥಾಪಿಸಲಾಗದ, ಸಣ್ಣ ಹಾಗೂ ಸೂಕ್ಷ್ಮ ಯಂತ್ರಗಳನ್ನು ಬಳಸಬೇಕಾಗಿರುವ, ಕೌಶಲಪೂರ್ಣವಾದ, ಉತ್ಪಾದನ ಕ್ಷೇತ್ರಗಳಲ್ಲಿ ಗುಡಿಸಿಲು ಕೈಗಾರಿಕೆಗಳಿವೆ. ಕೆಲವು ಗ್ರಾಹಕರು ಗುಡಿಸಿಲು ಕೈಗಾರಿಕೆಗಳ ವಸ್ತುಗಳನ್ನೇ ಬೇಡುವುದರಿಂದ ಕೆಲವು ವಲಯಗಳಲ್ಲಿ ಈ ಕೈಗಾರಿಕೆಗಳು ಉಳಿದುಕೊಂಡು ಬಂದಿವೆ. ಆರ್ಥಿಕವಾಗಿ ಹಿಂದುಳಿದಿರುವ ದೇಶಗಳಲ್ಲಿ ಕೆಲವು ಮುಖ್ಯ ಕಾರಣಗಳಿಗಾಗಿ ಗುಡಿಸಿಲು ಕೈಗಾರಿಕೆಗಳಿಗೆ ಉತ್ತೇಜನ ಕೊಡಲಾಗುತ್ತಿದೆ. ಈ ಕೈಗಾರಿಕೆಗಳು ನಿರುದ್ಯೋಗ ಸಮಸ್ಯೆಯನ್ನು ದಮನ ಮಾಡಲು ಸಹಾಯಕವಾಗುತ್ತವೆ. ಸ್ಥಳೀಯವಾಗಿ ದೊರೆಯುವ ಕೌಶಲ, ಕಚ್ಚಾಸಾಮಗ್ರಿ ಮುಂತಾದವುಗಳನ್ನು ಉಪಯೋಗಿಸಿಕೊಂಡು ಗ್ರಾಹಕರಿಗೆ ಬೇಕಾದ ವಸ್ತುಗಳನ್ನು ತಯಾರಿಸಿ ಅವರ ಬೇಡಿಕೆಗಳನ್ನು ಇವು ಪೂರೈಸುತ್ತವೆ. ದೇಶದ ಐಶ್ವರ್ಯ ಮತ್ತು ವರಮಾನಗಳ ವಿತರಣೆಯಲ್ಲಿ ಅಸಮತೆಯನ್ನು ಕಡಿಮೆ ಮಾಡಲು ಈ ಕೈಗಾರಿಕೆಗಳು ಸಹಾಯಕವಾಗುವುವೆಂದು ನಂಬಲಾಗಿದೆ. ಈ ಕಾರಣಗಳಿಗಾಗಿ ಹಿಂದುಳಿದ ರಾಷ್ಟ್ರಗಳು ಈ ಕೈಗಾರಿಕೆಗಳ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಗುಡಿಸಿಲು ಕೈಗಾರಿಕೆಗಳು ಎಲ್ಲ ದೇಶಗಳಲ್ಲೂ ಕಂಡುಬಂದರೂ ಅವುಗಳಲ್ಲಿ ತೊಡಗಿಸಿರುವ ಬಂಡವಾಳ, ಕೆಲಸ ಮಾಡುವ ಕೂಲಿಗಾರರು, ರಾಷ್ಟ್ರದ ವರಮಾನಕ್ಕೆ ಅವುಗಳ ಕೊಡುಗೆ ಇವುಗಳ ಬಗ್ಗೆ ಖಚಿತವಾದ ಅಂಕಿಅಂಶಗಳು ದೊರೆಯುವುದಿಲ್ಲ. ಪ್ರಪಂಚದ ಅತ್ಯಂತ ಮುಂದುವರಿದ ರಾಷ್ಟ್ರವಾದ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಗುಡಿಸಿಲು ಕೈಗಾರಿಕೆಗಳು ಇವೆ. ಆ ದೇಶದಲ್ಲಿ ಈ ಕೈಗಾರಿಕೆಗಳು ನಗರಗಳಲ್ಲೂ ಪಟ್ಟಣಗಳಲ್ಲೂ ವ್ಯಾಪಕವಾಗಿವೆ. ಅವು ವ್ಯವಸಾಯ ಮತ್ತು ಗಣಿಗಾರಿಕೆ ಕ್ಷೇತ್ರಗಳಲ್ಲಿ ಅಪರೂಪ. ಆ ದೇಶದಲ್ಲಿ ಸಾಮಾನ್ಯವಾಗಿ ಕಸೂತಿ, ಕೃತಕ ಹೂ, ಗುಂಡು ಸೂಜಿ, ಗುಂಡಿಗಳು, ಮಕ್ಕಳ ಬಟ್ಟೆ, ಆಟಿಕೆ ಮತ್ತು ಗೊಂಬೆ, ರಟ್ಟಿನ ಪೆಟ್ಟಿಗೆ, ಆಹಾರ, ಒಡವೆ, ಕುಂಚ ಇತ್ಯಾದಿಗಳ ತಯಾರಿಕೆಯಲ್ಲಿ ತೊಡಗಿವೆ. ಕೆಲವು ವ್ಯವಸಾಯ ಪ್ರದೇಶಗಳಲ್ಲಿ ರೈತರ ಹೆಂಗಸರು ಬಟ್ಟೆಗಳನ್ನು ಮಾಡುವುದರಲ್ಲೂ, ಹೊಗೆಸೊಪ್ಪಿನ ವಸ್ತುಗಳ ತಯಾರಿಕೆಯಲ್ಲಿಯೂ ತೊಡಗಿರುತ್ತಾರೆ. ಅವರಿಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ನಗರದ ಉತ್ಪಾದಕರು ಒದಗಿಸುತ್ತಾರೆ. ಅನಂತರ ಅವರು ತಯಾರಿಸಿದ ವಸ್ತುಗಳನ್ನು ಮಾರಾಟಕ್ಕಾಗಿ ಸಂಗ್ರಹ ಮಾಡುತ್ತಾರೆ. ಬ್ರಿಟನ್ನಿನಲ್ಲಿ ಗುಡಿಸಿಲು ಕೈಗಾರಿಕೆಗಳು ಬಹಳ ಕಡಿಮೆ. ಇರುವ ಗುಡಿಸಿಲು ಕೈಗಾರಿಕೆಗಳಲ್ಲಿ ಬಹುಪಾಲು ಉಡುಪುಗಳ ತಯಾರಿಕೆಯಲ್ಲಿ ತೊಡಗಿವೆ. ಕೆಲವು ಕಲಾತ್ಮಕ ವಸ್ತುಗಳೂ ತಯಾರಾಗುತ್ತವೆ. ಫ್ರಾನ್ಸಿನಲ್ಲಿ ಗುಡಿಸಿಲು ಕೈಗಾರಿಕೆಗಳು ಬಹಳವಾಗಿವೆ. ಅವುಗಳಲ್ಲಿ ಹೆಚ್ಚು ಮಂದಿ ಕೆಲಸಗಾರರು ಉಡುಪುಗಳ ತಯಾರಿಕೆ ಮತ್ತು ಕಸೂತಿ ಕೆಲಸದಲ್ಲಿ ತೊಡಗಿದ್ದಾರೆ. ಗುಡಿಸಲು ಕೈಗಾರಿಕೆಗಳಲ್ಲಿ ಪಾದರಕ್ಷೆ ತಯಾರಿಕೆ ಸಾಮಾನ್ಯ. ಪಾದರಕ್ಷೆ ಉದ್ಯಮಗಳಲ್ಲಿ ಬಹಳವಾಗಿ ಗಂಡಸರೇ ಕೆಲಸ ಮಾಡುತ್ತಾರೆ. ಇವು ನಗರಗಳ ಬಳಿ ಹೆಚ್ಚು. ಪ್ಯಾರಿಸ್ ಮತ್ತು ಇತರ ಮುಖ್ಯ ನಗರಗಳಲ್ಲಿ ಅನೇಕ ಗುಡಿಸಿಲು ಕೈಗಾರಿಕೆಗಳು ಕೃತಕ ಹೂಗಳು ಮತ್ತು ಇತರ ಕಲಾತ್ಮಕ ವಸ್ತುಗಳನ್ನು ತಯಾರಿಸುತ್ತವೆ. ಇನ್ನು ಕೆಲವು ಸರಿಗೆ, ಗರಿ ಕೆಲಸ, ಪೂಜಾವಸ್ತುಗಳು, ಒಡವೆ, ಕೆತ್ತನೆ ಕೆಲಸ, ಕೊಡೆ ಇತ್ಯಾದಿಗಳ ತಯಾರಿಕೆಯಲ್ಲಿ ತೊಡಗಿವೆ. ರಷ್ಯದಲ್ಲಿ ಕ್ರಾಂತಿಗೆ ಮುಂಚೆ ಗುಡಿಸಿಲು ಕೈಗಾರಿಕೆಗಳು ಅತ್ಯಂತ ವ್ಯಾಪಕವಾಗಿದ್ದುವು. ಆಗ ಅವು ಬಹುಮಟ್ಟಿಗೆ ಕೃಷಿಗೆ ಅಗತ್ಯವಾದ ವಸ್ತುಗಳನ್ನು– ಮರದ ಸಾಮಾನು, ಮರದ ತಟ್ಟೆಗಳು ಮತ್ತು ಚಮಚ, ಆಟಿಕೆ, ಚಾಪೆ ಮುಂತಾದವನ್ನು–ಉತ್ಪಾದಿಸುತ್ತಿದ್ದುವು. ಚರ್ಮ ಹದಮಾಡುವುದು, ಕುರಿ ಚರ್ಮದಿಂದ ಉಡುಪು ತಯಾರಿಕೆ, ಇಟ್ಟಿಗೆ ಮತ್ತು ಹೆಂಚು ತಯಾರಿಕೆ–ಇವು ಇನ್ನೂ ಕೆಲವು ಕೈಗಾರಿಕೆಗಳು. ಈಚಿನ ವರ್ಷಗಳಲ್ಲಿ ರಷ್ಯದಲ್ಲಿ ಗುಡಿಸಿಲು ಕೈಗಾರಿಕೆಗಳು ಕ್ಷೀಣಿಸುತ್ತಿರುವಂತೆ ಕಾಣುತ್ತದೆ. ಈಗ ಇರುವ ಗುಡಿಸಿಲು ಕೈಗಾರಿಕೆಗಳಿಗೆ ಸರ್ಕಾರ ಮತ್ತು ಸಹಕಾರ ಸಂಘಗಳು ಕಚ್ಚಾ ಸಾಮಗ್ರಿ ಮತ್ತು ಬಂಡವಾಳ ಒದಗಿಸುತ್ತವೆ. ಇವು ಉತ್ಪತ್ತಿ ಮಾಡಿದ ವಸ್ತುಗಳನ್ನು ಸರ್ಕಾರ ಅಥವಾ ಸಹಕಾರ ಸಂಘಗಳು ಸಂಗ್ರಹಿಸಿ ಮಾರಾಟಕ್ಕೆ ತಕ್ಕ ವ್ಯವಸ್ಥೆ ಮಾಡುತ್ತವೆ.

ಭಾರತದಲ್ಲಿ ಗುಡಿಸಿಲು ಕೈಗಾರಿಕೆಗಳು ಪ್ರಾಚೀನ ಕಾಲದಿಂದಲೂ ಬಂದಿವೆ. ಬ್ರಿಟಿಷರ ಕಾಲದಲ್ಲಿ ಯಂತ್ರೋದ್ಯಮ ಕೈಗಾರಿಕೆಗಳ ಪೈಪೋಟಿಯಿಂದ ಇವು ಕ್ಷೀಣ ಸ್ಥಿತಿಗೆ ಬಂದಿದ್ದವು. ಸ್ವಾತಂತ್ರ್ಯದ ಅನಂತರ ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳು ಗೃಹ ಕೈಗಾರಿಕೆಗಳಿಗೆ ಉತ್ತೇಜನ ನೀಡಿ ಅವುಗಳ ಅಭಿವೃದ್ಧಿಗೆ ನಾನಾ ರೀತಿಯಲ್ಲಿ ಶ್ರಮಿಸುತ್ತಿವೆ. ಈ ಕೈಗಾರಿಕೆಗಳು ನಾನಾ ವಿಧವಾದ ಉಪಯುಕ್ತವಾದ ಮತ್ತು ಭೋಗವಸ್ತುಗಳನ್ನು ತಯಾರಿಸುತ್ತಿವೆ. ಗುಡಿಸಿಲು ಕೈಗಾರಿಕೆಗಳು ಮನೆಗೆಲಸದ ಪದಾರ್ಥಗಳಾದ ಕೊಡಗಳು, ನೀರಿನ ಹೂಜಿಗಳು, ಲೋಟಗಳು, ತಟ್ಟೆಗಳು ಮೊದಲಾದವನ್ನು ಹಿತ್ತಾಳೆ ಮತ್ತು ತಾಮ್ರದಿಂದ ತಯಾರಿಸುತ್ತಿವೆ. ಚಿನಿವಾರಿಕೆ ಭಾರತದ ಅತಿ ಪ್ರಾಚೀನ ಗುಡಿಸಲು ಕೈಗಾರಿಕೆ, ಇವು ಹಳ್ಳಿಗಳು, ಪಟ್ಟಣ ಮತ್ತು ನಗರಗಳಲ್ಲೂ ಹರಡಿವೆ. ಇವು ಚಿನ್ನ ಮತ್ತು ಬೆಳ್ಳಿಯಿಂದ ಅನೇಕ ವಿಧವಾದ ಒಡವೆಗಳನ್ನು ತಯಾರಿಸುತ್ತಿವೆ. ಅಗರಬತ್ತಿ ಮತ್ತು ಧೂಪ ಸರಕು ಕೈಗಾರಿಕೆ ಕೆಲವು ಸಂಸಾರಗಳಲ್ಲಿ ಮಾತ್ರ ಕಾಣಬರುತ್ತದೆ. ಅವರಲ್ಲಿ ಮುಸಲ್ಮಾನರೇ ಹೆಚ್ಚು. ಶ್ರೀಗಂಧದ ಕೆತ್ತನೆ ಕೆಲಸ ಮತ್ತೊಂದು ಚಿರಪರಿಚಿತ ಗೃಹಕೈಗಾರಿಕೆ. ಸುಂದರ ಚಿತ್ರಗಳು, ದೇವರ ಮತ್ತು ಇತರ ಪ್ರತಿಮೆಗಳು ಶ್ರೀಗಂಧದ ಮರದಿಂದ ತಯಾರಾಗುತ್ತವೆ. ಇನ್ನೂ ಕೆಲವು ಗೃಹ ಕೈಗಾರಿಕೆಗಳು ಬೊಂಬು ಮತ್ತು ಬೆತ್ತದ ಕೆಲಸಗಳಲ್ಲಿ ತೊಡಗಿವೆ. ಅವು ಉಪಯುಕ್ತವಾದ ನಾನಾ ರೀತಿಯ ಬುಟ್ಟಿಗಳು, ಕುರ್ಚಿಗಳು, ಅಚ್ಚ ಮಣೆಗಳು ಮತ್ತು ಮಂಚಗಳನ್ನು ಸಹ ಉತ್ಪಾದಿಸುತ್ತವೆ. ಕೊಂಬಿನ ಬಾಚಣಿಗೆ, ಹೂವಿನ ಕುಂಡಗಳು, ಅಳತೆಕೋಲುಗಳು, ಆಟದ ಸಾಮಾನುಗಳು, ಹಕ್ಕಿಗಳು, ಬೂದಿ ಹರಿವಾಣಗಳು ಮುಂತಾದ ಉಪಯುಕ್ತವಾದ ಸಾಮಾನುಗಳ ತಯಾರಿಕೆಯೂ ಗುಡಿಸಲು ಕೈಗಾರಿಕೆಯೇ. ಗ್ರಾಮಪ್ರದೇಶಗಳಲ್ಲಿ ಅನೇಕ ಗುಡಿಸಿಲು ಕೈಗಾರಿಕೆಗಳುಂಟು. ಅವುಗಳಲ್ಲಿ ಬಹುಪಾಲು ಕೃಷಿ ಉಪಕರಣಗಳ ತಯಾರಿಕೆಯಲ್ಲಿ ತೊಡಗಿವೆ. (ಎಸ್.ಎನ್.ಎಸ್.)

**ಗುಡ್ನಾಪುರ :** ಉತ್ತರಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನಲ್ಲಿ ಬನವಾಸಿಯ ವಾಯವ್ಯಕ್ಕೆ ಸು. 8 ಕಿಮೀ ದೂರದಲ್ಲಿರುವ ಗ್ರಾಮ. ಕದಂಬರ ಕಾಲದಲ್ಲಿ ಇದು ಬನವಾಸಿ ರಾಜಧಾನಿಯ ಭಾಗವಾಗಿದ್ದಂತೆ ತೋರುತ್ತದೆ. ಇಲ್ಲಿಯ ವೀರಭದ್ರ ದೇವಾಲಯದ ಬಳಿ ಸು. 6 ಮೀ ಎತ್ತರದ ಭಗ್ನವಾದ ಒಂದು ಶಾಸನ ಕಂಬವಿದೆ. ಕಂಬದ ಮೇಲ್ಭಾಗ ಒಡೆದು ಹೋಗಿರುವುದರಿಂದ ಇಡೀ ಕಂಬದ ಉದ್ದ ಎಷ್ಟಿತ್ತೆಂದು ಹೇಳಲಾಗದು.



ಅರಮನೆ ಮತ್ತು ದೇವಾಲಯದ ಆವರಣ

ಕಂಬದ ನಾಲ್ಕೂ ಮುಖಗಳಲ್ಲಿ ಶಾಸನವೊಂದನ್ನು ಕೆತ್ತಿದೆ. ಇದು ಕದಂಬ ರವಿವರ್ಮನ (ಸು.485–519) ಶಾಸನ. ಇದರಿಂದ ಕದಂಬ ಮಯೂರಶರ್ಮನ ತಂದೆ ಬಂಧುಷೇಣ, ತಾತ ವೀರಶರ್ಮ ಎಂಬ ಹೊಸ ವಿಷಯಗಳು ತಿಳಿದುಬಂದಿವೆ. ಶಾಸನದಲ್ಲಿ ರವಿವರ್ಮ ಮನ್ಮಥನಿಗಾಗಿ ಆಲಯವೊಂದನ್ನು ಕಟ್ಟಿಸಿದನೆಂದು ಹೇಳಿದೆ. ಜಿನಾಲಯವೆಂದು ಓದಿದಲ್ಲಿ ಆಲಯ ಬಾಹುಬಲಿಯದೆಂದು, ಬಾಹುಬಲಿಯ ಕಲ್ಪನೆ ಮತ್ತು ಒಂದು ದೇವಾಲಯ 6ನೆಯ ಶತಮಾನದಲ್ಲಿಯೇ ಇತ್ತು ಎಂದು ಧೃಢವಾಗುತ್ತದೆ. ಪ್ರಸ್ತುತ ಶಾಸನದಲ್ಲಿ ಗುಡ್ನಾಪುರವನ್ನು ಗುಡ್ಡತಟಾಕ ಎಂದು ಕರೆಯಲಾಗಿದೆ. ಈಗಲೂ ಗುಡ್ನಾಪುರಕ್ಕೆ ಹೊಂದಿದಂತೆ ಆ ಭಾಗದಲ್ಲಿಯ ವಿಸ್ತಾರವಾದ ದೊಡ್ಡಕೆರೆಯನ್ನು ಶಾಸನೋಲ್ಲೇಖಿತ ಗುಡ್ಡತಟಾಕವೆಂದು ಗುರುತಿಸಬಹುದು.

ಈ ಶಾಸನದಲ್ಲಿ ಗಮನಾರ್ಹವಾದ ಅನೇಕ ಸಂಗತಿಗಳನ್ನು ಪ್ರಸ್ತಾಪಿಸಿದೆ. ಶಾಸನ ಹತ್ತಿರದಲ್ಲಿ ಅರಸರ ಅರಮನೆಯಿದ್ದು ಅದರ ಬದಿಯಲ್ಲಿ ನಾಟ್ಯಶಾಲೆಯಿರುವ ವಿಷಯ, ಕಲ್ಲಿಲ್ಲಿ ಎಂಬ ಗ್ರಾಮದಲ್ಲಿ ಪದ್ಮಾವತಿ ಚೈತ್ಯಾಲಯವಿರುವ ವಿಷಯ, ಪದ್ಮಾವತಿ ಪಾರ್ಶ್ವನಾಥ ತೀರ್ಥಂಕರ ಯಕ್ಷಿ ವಿಷಯ (ಇದುವರೆಗೆ ತಿಳಿದಮಟ್ಟಿಗೆ ಈ ಪದ್ಮಾವತಿ ಯಕ್ಷಿಯ ಪ್ರತ್ಯೇಕ ಚೈತ್ಯಾಲಯ ಅತ್ಯಂತ ಪ್ರಾಚೀನವಾದದ್ದು ಇದೊಂದೆ) ದಾಖಲಾಗಿದೆ. ಈ ಶಾಸನದಲ್ಲಿ 1–10ರವರೆಗಿನ ಸಂಖ್ಯೆಗಳು ಉಲ್ಲೇಖಗೊಂಡಿವೆ. (ಬಿ.ಆರ್.ಜಿ.)

ಈ ನೆಲೆಯ ಅಂಚಿನಲ್ಲಿದ್ದ ಒಂದು ಬಂಡೆಯ ಮೇಲೆ ಕುತೂಹಲಕರವಾದ ರೇಖಾಚಿತ್ರಗಳಿವೆ. ಅವು ವಜ್ರ, ನಾಲ್ಕು ಸಮಬಾಹು ಚತುರ್ಭುಜವುಳ್ಳ ಒಂದು ಆಯಾತಾಕೃತಿ, ಕೊನೆಯಿಲ್ಲದ ನಾಲ್ಕು ಗಂಟಿನಾಕೃತಿ, ಅಕ್ಕಪಕ್ಕದಲ್ಲಿ ಚಕ್ರಗಳು. ನಾಲ್ಕು ಗಂಟಿನಾಕೃತಿ ಚಿತ್ರ ಮೊಹೆಂಜೋದಾರೊದಲ್ಲಿಯ ಹರಪ್ಪ ನಾಗರಿಕತೆಯ ಎರಡು ತಾಮ್ರದ ಬಿಲ್ಲೆಗಳ ಮೇಲೂ ಇದೆ. ಪ್ರಾಯಶಃ ಶ್ರೀವತ್ಸ ಚಿಹ್ನೆ ಸೂಕ್ಷ್ಮ ಸಂಕೇತವೆಂದು ಕಾಣುತ್ತದೆ.

ಉತ್ಖನನ: ಅಂತಃಪುರದ ಸಹಿತ ಅರಮನೆ, ನಾಟ್ಯಶಾಲೆ, ಮನ್ಮಥ ದೇವಾಲಯ/ಜಿನಾಲಯ ಮುಂತಾದವುಗಳ ಶಾಸನದ ಉಲ್ಲೇಖಗಳನ್ನು ಗಮನಿಸಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವಿಭಾಗ ಶಾಸನವಿದ್ದ ನೆಲೆಯಲ್ಲಿ 1994–96ರಲ್ಲಿ ಉತ್ಖನನ ನಡೆಸಿತು. ಸ್ವಾರಸ್ಯವೆಂದರೆ ಶಾಸನದಲ್ಲಿ ಉಲ್ಲೇಖಗೊಂಡಿರುವಂತೆ ವ್ಯವಸ್ಥಿತವಾಗಿ ಇಟ್ಟಿಗೆಯಿಂದ ನಿರ್ಮಿಸಿದ ಪ್ರದಕ್ಷಿಣಾಪಥ, ಸಭಾಮಂಟಪ ಮತ್ತು ಗರ್ಭಗೃಹವುಳ್ಳ ಮನ್ಮಥ ಆಲಯ, ಅರಮನೆ ಮತ್ತು ನಾಟ್ಯಶಾಲೆ ಮುಂತಾದ ಅಪರೂಪದ ವಾಸ್ತುಶಿಲ್ಪ ವಿಶೇಷಗಳು ಹಾಗೂ ಇತಿಹಾಸ ಕಾಲದ ಲೌಕಿಕ ಕಟ್ಟಡಗಳಿದ್ದುದ್ದು.

ಇಲ್ಲಿ ಕೆಲವು ಅಪೂರ್ವ ವಿಗ್ರಹಗಳು ದೊರೆತಿವೆ. ಕೆರೆಯ ಸಮೀಪದಲ್ಲಿ ಕೆಸರಿನಲ್ಲಿ ಹುದುಗಿಹೋಗಿದ್ದ ಸು. 12ನೆಯ ಶತಮಾನದ ಒಂದು ಜಿನವಿಗ್ರಹ ಮತ್ತು ಪ್ರಾಯಶಃ ಕುಳಿತ ಭಂಗಿಯಲ್ಲಿಯ ಯಕ್ಷ–ಯಕ್ಷಿಯರ ಚೆಲುವಾದ ಶಿಲಾಮೂರ್ತಿಗಳಿವೆ. ಜಿನಮೂರ್ತಿ ಸಿದ್ಧಾಸನದಲ್ಲಿದೆ. ಆದರೆ ಅದರ ಶಿರ ಮತ್ತು ಬಾಹುಗಳು ಒಡೆದು ಹೋಗಿವೆ. ಯಕ್ಷ ವಿಗ್ರಹ ಕುಸುರಿನ ಕೆತ್ತನೆಯುಳ್ಳ ಕಿರೀಟ ಹಾಗೂ ಹಾರಗಳನ್ನು ಧರಿಸಿದೆ. ಇದರಂತೆಯೇ ಯಕ್ಷಿ ವಿಗ್ರಹವೂ ಇವಲ್ಲದೆ ಊರೊಳಗೆ ಸು. 2ನೆಯ ಶತಮಾನದ ಕುಬ್ಜ ಯಕ್ಷ ಶಿಲಾಮೂರ್ತಿಯಿದೆ. ಕುಬ್ಜವಿಗ್ರಹ ಸ್ಥೂಲವಾದ ದುಂಡುಶರೀರದ ಪುರುಷನದು. ಉಬ್ಬಿದ ಹೊಟ್ಟೆ, ಕುತ್ತಿಗೆ ಕಾಣಿಸದೆ ದೇಹಕ್ಕೆ ಅಂಟಿದಂತಿರುವ ಶಿರ, ಹೊಟ್ಟೆ ಮೊಣಕಾಲವರೆಗೂ ಜೋತು ಬಿದ್ದಂತಿದ್ದು, ಕಾಲುಗಳು ಪ್ರತ್ಯೇಕವಾಗಿ ಕಾಣಿಸದಿರುವುದು, ಮೇಲಕ್ಕೆತ್ತಿ ಕಟ್ಟಿದ ಗುಂಗುರುಕೂದಲು, ಕಚ್ಚೆ ಹಾಕಿ ಧೋತರ ಉಟ್ಟು ಹಲವು ಎಳೆಗಳ ಹಾರದಿಂದ ಅಲಂಕೃತವಾಗಿದೆ. ಈ ವಿಗ್ರಹಗಳು ಕಲ್ಯಾಣ ಚಾಳುಕ್ಯ ಕಾಲದ ಶಿಲ್ಪಗಳನ್ನು ಹೋಲುತ್ತವೆ. ಇದೇ ಗ್ರಾಮದಲ್ಲಿ ಒಂದೇ ಕಲ್ಲಿನಲ್ಲಿ ಕೆತ್ತಿದ ರತಿಮನ್ಮಥರ ವಿಗ್ರಹ ವೀರಭದ್ರ ದೇವಾಲಯದಲ್ಲಿ ದೊರೆತಿದ್ದು, ಮನ್ಮಥನ ಕೈಯಲ್ಲಿ ಕಬ್ಬಿನ ಜಲ್ಲೆ, ರತಿಯ ಕೈಯಲ್ಲಿ ಕಮಲದ ದಂಟು ಕಾಣಿಸುತ್ತದೆ. ಇದು ಸು. 11–12ನೆಯ ಶತಮಾನದ ವಿಗ್ರಹ. (ಎಸ್.ಜಿ.ಎಸ್.)

**ಗುಡ್‌ಇಯರ್, ಚಾರ್ಲ್ಸ್ :** 1800–60. ಅಮೆರಿಕದ ಉಪಜ್ಞೆಕಾರ. ರಬ್ಬರನ್ನು ಅನೇಕ ರಂಗಗಳಲ್ಲಿ ಉಪಯೋಗಿಸಲು ಸಾಧ್ಯವಾಗುವಂಥ ವಲ್ಕನೀಕರಣ ವಿಧಾನವನ್ನು ಕಂಡುಹಿಡಿದು ಇಂದಿನ ರಬ್ಬರ್ ಉದ್ಯಮಕ್ಕೆ ನಾಂದಿ ಹಾಕಿದವ. ಜೀವಮಾನವಿಡೀ ಸಾಲದ ಬವಣೆ, ಸೋಲಿನ ಹತಾಶೆ ಅನುಭವಿಸುತ್ತಿದ್ದರೂ ಅದಮ್ಯ ಸಾಹಸ ಪ್ರವೃತ್ತಿಯಿಂದ ಮುನ್ನುಗ್ಗಿದ ಉದ್ಯಮ ಶೀಲ ವ್ಯಕ್ತಿ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಕನೆಕ್ಟಿಕಟ್ ಪ್ರಾಂತದ ಮುಖ್ಯ ಪಟ್ಟಣ ನ್ಯೂಹೇವನ್‌ನಲ್ಲಿ 29 ಡಿಸೆಂಬರ್ 1800ರಂದು ಜನಿಸಿದ. ಬಾಲ್ಯವನ್ನೂ ನ್ಯೂಹೇವನ್‌ನಲ್ಲಿಯೇ ಮುಗಿಸಿದ ಬಳಿಕ ವ್ಯವಸಾಯ ಉಪಕರಣ ಮತ್ತು ಇತರ ಲೋಹ ಸಲಕರಣೆಗಳ ತಯಾರಿಕೆಯಲ್ಲಿ ನಿಪುಣನಾಗಿದ್ದ ತನ್ನ ತಂದೆಯ ಸಂಸ್ಥೆಯಲ್ಲಿ ಕೆಲಸ ಮಾಡಿ (1821–30) ಅನಂತರ ಸ್ವತಂತ್ರವಾಗಿ ಕೆಲಸ ಮಾಡಲು ತೊಡಗಿದ. ಈತ ತನ್ನ ತಂದೆಯಿಂದ ಬೇರೆಯಾಗುವ ವೇಳೆಗಾಗಲೇ ರಬ್ಬರ್ ಇವನನ್ನು ಆಕರ್ಷಿಸಿತ್ತು. ಅತಿ ಶೀತ ಮತ್ತು ಅತಿ ಉಷ್ಣದ ಪರಿಸ್ಥಿತಿಗಳಲ್ಲಿಯೂ ಸಮರ್ಪಕವಾಗಿ ಕೆಲಸಮಾಡುವಂತೆ ರಬ್ಬರ್‌ನ್ನು ಮಾರ್ಪಡಿಸುವುದೇ ಇವನ ಕನಸಾಯಿತು. ಈ ಮಾರ್ಪಾಡಿಗಾಗಿ ಇವನು ಲೆಕ್ಕವಿಲ್ಲದಷ್ಟು ಪ್ರಯೋಗಗಳನ್ನು ನಡೆಸಿದ. ರಬ್ಬರ್ ನೈಟ್ರಿಕ್ ಆಮ್ಲ ಮಿಶ್ರಣಗಳೊಡನೆ ಇವನು ಮಾಡಿದ ಆರಂಭ ಪ್ರಯೋಗಗಳು ಮೊದಮೊದಲು ಆಶಾದಾಯಕವೆಂಬಂತೆ ತೋರಿದರೂ ಈ ಬಗೆಯಲ್ಲಿ ಮಾರ್ಪಡಿಸಿದ ರಬ್ಬರ್ ಅತ್ಯುಷ್ಣ ಪರಿಸ್ಥಿತಿಗಳಲ್ಲಿ ಸಮರ್ಪಕವಾಗಿರಲಿಲ್ಲ. ಅದೇ ಸಮಯದಲ್ಲಿ ನೆರೆಯೂರಾದ ರಾಕ್ಸ್ ಬರಿಯ ರಬ್ಬರ್ ಕಾರ್ಖಾನೆಗಳಲ್ಲಿ ನೇಥೇನಿಯಲ್ ಹ್ಯಾವರ್ಡ್ ಎಂಬಾತ ರಬ್ಬರಿನ ಮೇಲೆ ಗಂಧಕದ ಪರಿಣಾಮಗಳನ್ನು ಕುರಿತು ಅಭ್ಯಾಸ ಮತ್ತು ಪ್ರಯೋಗಗಳನ್ನು ನಡೆಸುತ್ತಿದ್ದ. ಹ್ಯಾವರ್ಡನ ಪರಿಚಯವಾದ ಮೇಲೆ ಆತ ಉಪಯೋಗಿಸುತ್ತಿದ್ದ ವಿಧಾನಗಳ ಮೇಲೆ ಹಕ್ಕನ್ನು ಕೊಂಡುಕೊಂಡು ಗುಡ್‌ಇಯರ್ ಆ ವಿಧಾನಗಳನ್ನು ಉತ್ತಮಗೊಳಿಸಲು ಪ್ರಯತ್ನ ಮಾಡತೊಡಗಿದ. ಈ ಪ್ರಯೋಗಗಳಲ್ಲಿ ನಿರತನಾಗಿದ್ದಾಗ 1839ರಲ್ಲಿ ಒಂದು ದಿನ ಆಕಸ್ಮಿಕವಾಗಿ ರಬ್ಬರ್–ಗಂಧಕದ ಮಿಶ್ರಣ ಗುಡ್‌ಇಯರ್‌ನ ಕೈಯಿಂದ ಹಾರಿ ಬೆಂಕಿಯಲ್ಲಿ ಬಿತ್ತು. ಬೆಂಕಿಯಲ್ಲಿ ಬಿದ್ದ ಮಿಶ್ರಣವನ್ನು ಹೊರತೆಗೆದಾಗ ಪಡೆದಿದ್ದನ್ನು ಈತ ಗಮನಿಸಿದ. ರಬ್ಬರ್‌ಗಳನ್ನು ಗಂಧಕದೊಡನೆ ಕಾಯಿಸಿ ರಬ್ಬರಿನ ಗುಣಗಳನ್ನು ಮಾರ್ಪಡಿಸುವ ಈ ವಿಧಾನವನ್ನು ಮತ್ತೆ ಹಲವಾರು ಪ್ರಯೋಗಗಳನ್ನು ಮಾಡಿ ಖಚಿತಗೊಳಿಸಿ ಪರಿಪೂರ್ಣಗೊಳಿಸಿದ. ಇದಕ್ಕೆ ವಲ್ಕನೀಕರಣವೆಂದು (ರೋಮನ್ ಪುರಾಣದಲ್ಲಿ ವಲ್ಕನ್ ಎಂದರೆ ಅಗ್ನಿದೇವತೆ) ಹೆಸರಿಟ್ಟು 1844 ರಲ್ಲಿ ತನ್ನ ಮೊದಲ ಏಕಸ್ವಾಮ್ಯವನ್ನು ಪಡೆದ. ಈ ವಿಧಾನ ಬಲು ಸರಳವಾದದ್ದರಿಂದ ಏಕಸ್ವಾಮ್ಯದ ನಿಯಮಗಳನ್ನು ಉಲ್ಲಂಘಿಸಿ ಸ್ವತಂತ್ರವಾಗಿ ವಲ್ಕನೀಕೃತ ರಬ್ಬರನ್ನು ತಯಾರಿಸುವ ಅನುಕರಣಕಾರರು ಪ್ರಪಂಚದಾದ್ಯಂತ ತಲೆ ಎತ್ತಿದರು. ಇವರ ವಿರುದ್ಧ ಕಾದಾಡಬೇಕಾಯಿತು. ಏಕಸ್ವಾಮ್ಯದ ಬರೆವಣಿಗೆಯಲ್ಲಿ ಕುಂದುಕೊರತೆಗಳಿದ್ದುದರಿಂದ ಫ್ರಾನ್ಸ್ ಮತ್ತು ಇಂಗ್ಲೆಂಡಿನ ಕೋರ್ಟುಗಳಲ್ಲಿ ಇವನಿಗೆ ಸೋಲಾಯಿತು. ಅಮೆರಿಕದ ನ್ಯಾಯಾಲಯದಲ್ಲಿ ಇವನಿಗೆ ವಿಜಯ ದೊರೆಯಿತು (1852). ಆದರೆ ಇವನಿಗೆ ಸ್ವಲ್ಪವೂ ಲಾಭವಾಗದಂತೆ ಆ ವಿಧಾನವನ್ನು ಇವನ ಅನುಮತಿಯಿಲ್ಲದೆ ಅನೇಕ ಮಂದಿ ಉಪಯೋಗಿಸಿದರು.



ತನ್ನ ಸಂಶೋಧನೆಗಳನ್ನು ಕುರಿತ 'ಗಮ್ ಇಲಾಸ್ಟಿಕ್ಸ್, ಅಂಡ್ ಇಟ್ಸ್ ವೆರೈಟೀಸ್' ಎಂಬ ಪುಸ್ತಕವನ್ನು 1853–55ರ ಅವಧಿಯಲ್ಲಿ ಬರೆದು ಎರಡು ಸಂಪುಟಗಳಾಗಿ ಪ್ರಕಟಿಸಿದ. ಗುಡ್ ಇಯರ್‌ನ ಸಂಶೋಧನೆ ಹಾಗೂ ವಿಧಾನಗಳನ್ನು ಉಪಯೋಗಿಸಿ ಅನೇಕ ಜನ ಲಕ್ಷಾಧೀಶರಾದರೂ ಈತ ಮಾತ್ರ ನಿರ್ಗತಿಕನಾಗಿಯೇ ಉಳಿದ. ಫ್ರಾನ್ಸಿನಲ್ಲಿ ಇವನಿಗೆ ಸಂಭಾವನೆ ಹಣ ಕೊಟ್ಟು ಇವನ ವಿಧಾನವನ್ನು ಉಪಯೋಗಿಸುತ್ತಿದ್ದ ಕಾರ್ಖಾನೆಯೊಂದು ದಿವಾಳಿಯೆದ್ದಿತು. ಬಾಕಿಯಿದ್ದ ಸಾಲಗಳನ್ನು ತೀರಿಸದೇ ಹೋದದ್ದರಿಂದ ಈತ ಪ್ಯಾರಿಸಿನಲ್ಲಿ ಸೆರೆಮನೆ ಕಾಣಬೇಕಾಯಿತು (1853). ಐದು ವರ್ಷಗಳ ಅನಂತರ ಮಾಡಲು ಉದ್ಯೋಗವಿಲ್ಲದೆ, ಜೀವನದಲ್ಲಿ ಪೂರ್ಣ ನಿರಾಶನಾಗಿ, ನಿರ್ಗತಿಕನಾಗಿ ನ್ಯೂಯಾರ್ಕ್ ನಗರದಲ್ಲಿ 1 ಜುಲೈ 1860ರಂದು ನಿಧನ ಹೊಂದಿದ. ಇವನ ಹೆಸರಿನಲ್ಲಿ ಗುಡ್‌ಇಯರ್ ಟೈರ್ ಅಂಡ್ ರಬ್ಬರ್ ಕಂಪನಿಯನ್ನು 1898ರಲ್ಲಿ ಸ್ಥಾಪಿಸಲಾಯಿತು. (ಕೆ.ಟಿ.ಎಸ್.)

**ಗುಡ್ರುನ್ :** ಸಾಹಿತ್ಯಾಭ್ಯಾಸಿಗಳಿಗೆ ಪರಿಚಿತವಾಗಿರುವ ಕಾವ್ಯನಾಯಿಕೆಯ ಹೆಸರು. 12ನೆಯ ಶತಮಾನದ್ದೆಂದು ವಿದ್ವಾಂಸರು ನಿರ್ಣಯಿಸಿರುವ ಎಡ (**ನೋಡಿ**) ಎಂಬ ಸ್ಕ್ಯಾಂಡಿನೇವಿಯದ ಪುರಾಣ ಕಾವ್ಯದಲ್ಲಿ ಬರುವ ನಾಯಕಿಯ ಹೆಸರು ಇದು. ಈ ಕಾವ್ಯವನ್ನು ಸೀಮುಂಡ್ ಸೀಗ್‌ಫ್ಯೂಸನ್ ಎಂಬಾತ ಸಂಗ್ರಹಿಸಿದ್ದಾನೆ. ಗುಡ್ರುನ್ ನಾಯಕಿಯ ಮೂರು ವಿವಾಹಗಳು ಈ ಕಾವ್ಯದ ವಸ್ತುವಾಗಿದೆ. ಈಕೆಯ ಮೊದಲ ಪತಿ ಸಿಗುರ್ಡ್. ಆತನ ಮರಣದ ಅನಂತರ ಆಟ್ಲಿ ಎಂಬಾತನನ್ನು ಈಕೆ ವಿವಾಹವಾದಳು. ಆದರೆ, ಆತ ಕ್ರೂರಿಯಾಗಿದ್ದುದರಿಂದ ಆತನನ್ನು ಕೊಂದು, ತಾನೂ ಸಮುದ್ರಕ್ಕೆ ಹಾರಿಕೊಂಡಳು. ಈಕೆಯನ್ನು ಸಮುದ್ರದಿಂದ ಎತ್ತಿದ ಯೊನಾಕುಮ್ ದೊರೆ ಈಕೆಯನ್ನು ವರಿಸಿದ ಮೂರನೆಯ ಪತಿ.

ಗುಡ್ರುನ್ ಎಂಬ ಹೆಸರಿನ 13ನೆಯ ಶತಮಾನದ ಹಳೆಯ ಕಾವ್ಯವೊಂದರ ನಾಯಕಿಯೊಬ್ಬಳ ಹೆಸರು ಗುಡ್ರುನ್. ಇದು ಆಂಗ್ಲೋ – ಸ್ಯಾಕ್ಸನ್ ಕಾವ್ಯ. ಇದರಲ್ಲಿ ಬರುವ ಗುಡ್ರುನ್ ಪತಿವ್ರತೆಯ ಪ್ರತೀಕವಾಗಿದ್ದಾಳೆ. ಈಕೆಯನ್ನು ಹರ್ವಿಗ್ ಎಂಬ ದೊರೆಗೆ ಮದುವೆ ಮಾಡಿಕೊಡಲು ನಿರ್ಧಾರವಾಗಿತ್ತು. ಆದರೆ, ನಾರ್ವೆಯ ರಾಜ ಹರ್‌ಮೂತ್ ಎಂಬಾತ ಈಕೆಯ ತಂದೆಯಾದ ಹೆಟ್ಟೆಲ್‌ನನ್ನು ಕೊಂದು ತನ್ನನ್ನು ಮದುವೆಯಾಗುವಂತೆ ಈಕೆಯನ್ನು ಬಲತ್ಕರಿಸಿದ. ಕೊನೆಗೂ ಈಕೆ ಹರ್‌ಮೂತ್‌ನನ್ನು ಜಯಿಸಿದ ಹರ್‌ವಿಗ್‌ನನ್ನು ವಿವಾಹವಾದಳು.

19ನೆಯ ಶತಮಾನದ ವಿಲಿಯಂ ಮಾರಿಸ್ ಎಂಬ ಕವಿ ಐಸ್ಲೆಂಡಿನ ಲಾಕ್ಸ್‌ಲೇಲ್ ಸಾಗಾ ಎಂಬ ಪದ್ಯದ ಪರಿಚಯವನ್ನು ಮಾಡಿಕೊಡುವ ಅರ್ಥ್‌ಲಿ ಪ್ಯಾರಡೈಸ್ (ಭೂಲೋಕ ಸ್ವರ್ಗ) ಎಂಬ ಕಥನಕವನವನ್ನು ಬರೆದಿದ್ದಾನೆ. ಅದರಲ್ಲಿ ಗುಡ್ರುನ್ನಳ ಪ್ರೇಮಿಗಳು ಎಂಬ ಕಥನಕವನವೊಂದಿದೆ. ಅದರ ಕಥಾನಾಯಕಿ ಗುಡ್ರುನ್. (ಕೆ.ಕೆ.ಐ.)

**ಗುಣಕ :** ವಿನಿಯೋಜನೆಯಲ್ಲಿಯ (ಇನ್ವೆಸ್ಟ್‌ಮೆಂಟ್) ವ್ಯತ್ಯಾಸದ ಪರಿಣಾಮವಾಗಿ ವರಮಾನದಲ್ಲಾಗುವ ವ್ಯತ್ಯಾಸವೆಷ್ಟೆಂಬುದನ್ನು ಸೂಚಿಸುವ ಸಂಖ್ಯೆ (ಮಲ್ಟಿಪ್ಲೈಯರ್). ಅರ್ಥಶಾಸ್ತ್ರಜ್ಞ ಜೆ.ಎಂ. ಕೇನ್ಸನ ಒಂದು ವಿವರಣೆ. ಒಂದು ಆರ್ಥಿಕತೆಯಲ್ಲಿಯ ವಿನಿಯೋಜನೆಯಲ್ಲಾಗುವ ಬದಲಾವಣೆಗಳು ಅನುಭೋಗದ ಮೇಲೆ ಪ್ರಭಾವ ಬೀರುವುದರ ಮೂಲಕ ವರಮಾನದ ಮೇಲೆ ಉಂಟುಮಾಡುವ ಸಂಚಿತ ಪರಿಣಾಮವನ್ನು ಗುಣಕತತ್ತ್ವ ವಿವರಿಸುತ್ತದೆ. ಗುಣಕತತ್ತ್ವ ಕೆಲಸಮಾಡುವ ಬಗೆಯನ್ನು ವಿವರಿಸಲು ಒಂದು

ಉದಾಹರಣೆಯನ್ನು ಕೊಡಬಹುದು. ರಾಷ್ಟ್ರೀಯ ವರಮಾನ ರೂ. 100 ಕೋಟಿ ಆಗಿದ್ದು, ಅದರಲ್ಲಿ ರೂ. 80 ಕೋಟಿಗಳನ್ನು ಅನುಭೋಗಕ್ಕಾಗಿಯೂ ರೂ. 20 ಕೋಟಿಗಳನ್ನು ಉತ್ಪಾದನೆಯ ಮೇಲೂ ಖರ್ಚು ಮಾಡಲಾಗುತ್ತಿರಬಹುದು. ಅನುಭೋಗ ಪ್ರವೃತ್ತಿ (ಪ್ರೊಪೆನ್ಸಿಟಿ ಟು ಕನ್ಸ್ಯೂಂ) ಮತ್ತು ವಿನಿಯೋಜನೆಗಳು ಸ್ಥಿರವಾಗಿರುವವರೆಗೆ ರಾಷ್ಟ್ರೀಯ ವರಮಾನದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ.

ಯಾವುದೇ ಕಾರಣದಿಂದ ವಿನಿಯೋಜನೆ ರೂ. 10 ಕೋಟಿಗಳಷ್ಟು ಹೆಚ್ಚಿದಾಗ ಒಟ್ಟು ವಿನಿಯೋಜನೆ ರೂ. 30 ಕೋಟಿ ಆಗುತ್ತದೆ. ಇದರಿಂದ ರಾಷ್ಟ್ರೀಯ ವರಮಾನದ ಮೇಲೆ ಯಾವ ಬದಲಾವಣೆಯಾಗುತ್ತದೆ ಎಂಬುದನ್ನು ನೋಡಬೇಕು. ರೂ.10 ಕೋಟಿಗಳ ಹೆಚ್ಚು ವಿನಿಯೋಜನೆಯಿಂದ ಬಂಡವಾಳ ಸರಕುಗಳ ಉತ್ಪಾದನೆಯಲ್ಲಿ ನಿರತರಾದವರ ವರಮಾನ ರೂ.10 ಕೋಟಿಗಳಷ್ಟು ಅಧಿಕವಾಗುತ್ತದೆ. ಅವರ ವರಮಾನ ಅಧಿಕವಾಗುವುದರಿಂದ ಅವರು ಅನುಭೋಗ ಸರಕುಗಳ ಮೇಲೆ ಹೆಚ್ಚಾಗಿ ಖರ್ಚು ಮಾಡುತ್ತಾರೆ. ಅನುಭೋಗ ಸರಕುಗಳ ಮೇಲೆ ಮಾಡುವ ಖರ್ಚು ಸೀಮಾಂತ ಅನುಭೋಗ ಪ್ರವೃತ್ತಿಯಿಂದ ನಿರ್ಧರಿಸಲ್ಪಡುತ್ತದೆ. ವರಮಾನದಲ್ಲಿ ಬದಲಾವಣೆಯಾದಾಗ ಅನುಭೋಗ ಖರ್ಚು ಯಾವ ಪ್ರಮಾಣದಲ್ಲಿ ಬದಲಾಗುತ್ತದೆಯೆಂಬುದೇ ಸೀಮಾಂತ ಅನುಭೋಗ ಪ್ರವೃತ್ತಿ. ಸೀಮಾಂತ ಅನುಭೋಗ ಪ್ರವೃತ್ತಿ ವರಮಾನದ 1/2 ಅಥವಾ 0.5 ಎಂದು ಭಾವಿಸಬಹುದು. ಬಂಡವಾಳ ಸರಕುಗಳನ್ನು ವಿಕ್ರಯಿಸಿ ಬಂದ ರೂ. 10 ಕೋಟಿ ವರಮಾನದಲ್ಲಿ ರೂ. 5 ಕೋಟಿ (1/2 ಅಥವಾ 0.5) ಅನುಭೋಗಕ್ಕಾಗಿ ಖರ್ಚಾಗುತ್ತದೆ. ಆಗ ಅನುಭೋಗ ಸರಕುಗಳ ಉತ್ಪಾದಕರ ವರಮಾನ ರೂ. 5 ಕೋಟಿಗಳಷ್ಟು ಅಧಿಕವಾಗುತ್ತದೆ. ಅವರು ರೂ. 5 ಕೋಟಿಗಳ 1/2 ಭಾಗವನ್ನು ಅಂದರೆ 2.5 ಕೋಟಿ ರೂಪಾಯಿಗಳನ್ನು ಅನುಭೋಗಕ್ಕಾಗಿ ಖರ್ಚು ಮಾಡುತ್ತಾರೆ. ವರಮಾನದ ಮೊತ್ತ ಬರಿದಾಗುವವರೆಗೆ ಇದೇ ಬಗೆಯ ಪ್ರಕ್ರಿಯೆ ಮುಂದುವರಿಯುತ್ತದೆ. ಹೀಗೆ ಜನರು ತಮ್ಮ ವರಮಾನ ಹೆಚ್ಚಿದಂತೆಲ್ಲ ಅದರ 1/2 ಭಾಗವನ್ನು ಅನುಭೋಗದ ಮೇಲೆ ಖರ್ಚು ಮಾಡುತ್ತ ಹೋದರೆ ಕೊನೆಯಲ್ಲಿ ಒಟ್ಟು ವರಮಾನ ರೂ. 20 ಕೋಟಿಗಳಷ್ಟು ಅಧಿಕವಾಗುತ್ತದೆ. (10 + 5 + 2.5 + 1.25 + 0.625 + 0.3125 + 0.15625 ........) ಎಂದರೆ ರೂ. 10 ಕೋಟಿಗಳ ವಿನಿಯೋಜನೆಯಿಂದ ರಾಷ್ಟ್ರೀಯ ವರಮಾನ ರೂ. 20 ಕೋಟಿಗಳವರೆಗೆ ವಿಸ್ತರಣೆಯಾಗುತ್ತದೆ. ಇದರಲ್ಲಿ ರೂ. 10 ಕೋಟಿ ಪ್ರಾಥಮಿಕ ವಿನಿಯೋಜನೆ ರೂ. 10 ಕೋಟಿ ದ್ವಿತೀಯಕ ಅನುಭೋಗ ಪುನರ್ ಖರ್ಚು.

**ಗುಣಕ ಮತ್ತು ಸೀಮಾಂತ ಅನುಭೋಗ ಪ್ರವೃತ್ತಿ:** ಗುಣಕದ ಬೆಲೆಗೂ ಸೀಮಾಂತ ಅನುಭೋಗ ಪ್ರವೃತ್ತಿಗೂ ಇರುವ ಸಂಬಂಧ ನಿಕಟವಾದ್ದು. ಸೀಮಾಂತ ಅನುಭೋಗ ಪ್ರವೃತ್ತಿ ಅಧಿಕವಾದರೆ ಗುಣಕವೂ ಅಧಿಕವಾಗುತ್ತದೆ. ವರಮಾನದ ಪ್ರಮಾಣ ಹೆಚ್ಚಾಗುತ್ತದೆ. ಸೀಮಾಂತ ಕಡಿಮೆಯಾದರೆ ಗುಣಕವೂ ಕಡಿಮೆಯಾಗುತ್ತದೆ. ವರಮಾನದ ಪ್ರಮಾಣವೂ ಕಡಿಮೆಯಾಗುತ್ತದೆ. ಗುಣಕ, ಸೀಮಾಂತ ಅನುಭೋಗ ಪ್ರವೃತ್ತಿ ಇವುಗಳ ಸಂಬಂಧವನ್ನು ಸೂಚಿಸುವ ಸಮೀಕರಣವನ್ನು ಮುಂದೆ ಕೊಟ್ಟಿದೆ.

$$M = \frac{1}{1-r}$$

ಇಲ್ಲಿ $M =$ ಗುಣಕ, $r =$ ಸೀಮಾಂತ ಅನುಭೋಗ ಪ್ರವೃತ್ತಿ.

ಕೇನ್ಸನ ಗುಣಕ ತತ್ತ್ವದ ವಿರುದ್ಧವಾಗಿ ಮೂರು ಮುಖ್ಯ ಟೀಕೆಗಳುಂಟು: 1 ವರಮಾನದ ಮೇಲೆ ಪ್ರಚೋದಿತ ಅನುಭೋಗದ ಪರಿಣಾಮವನ್ನು ಮಾತ್ರ ಗುಣಕ ಗಣನೆಗೆ ತೆಗೆದುಕೊಂಡು, ವಿನಿಯೋಜನೆಯ ಮೇಲೆ ಪ್ರಚೋದಿತ ಅನುಭೋಗದ ಪರಿಣಾಮವೇನೆಂಬುದನ್ನು ಕಡೆಗಣಿಸಿದೆ. 2 ಕೇನ್ಸನ ಗುಣಕ ತತ್ತ್ವ ನಿಂತಿರುವುದು ಎರಡು ಸಾಮಾನ್ಯ ಊಹೆಗಳ ಆಧಾರದ ಮೇಲೆ: ವರಮಾನಗಳನ್ನು ಅನುಭೋಗ ಅವಲಂಬಿಸಿದೆ ಎಂಬುದು ಒಂದು ಊಹೆ. ಆದ್ದರಿಂದ ವರಮಾನ ಅಧಿಕವಾದಾಗ ಅನುಭೋಗವೂ ಅಧಿಕವಾಗುತ್ತದೆಯೆನ್ನಲಾಗಿದೆ. ಸೀಮಾಂತ ಅನುಭೋಗ ಪ್ರವೃತ್ತಿ ವರಮಾನದ ಸಮಾನತೆಗಿಂತ ಕಡಿಮೆ ಇದ್ದು ಸ್ಥಿರವಾಗಿದೆ ಎಂಬುದು ಇನ್ನೊಂದು ಊಹೆ. ಆದರೆ ವಾಸ್ತವವಾಗಿ ವರಮಾನವನ್ನು ಅನುಭೋಗ ಅವಲಂಬಿಸಿರುವುದಿಲ್ಲ ಮತ್ತು ಸೀಮಾಂತ ಪ್ರವೃತ್ತಿ ಸ್ಥಿರವಾಗಿರುವುದಿಲ್ಲ. 3 ಕೇನ್ಸನ ಗುಣಕ ತತ್ತ್ವ ಸ್ಥಿತ್ಯಾತ್ಮಕವಾದ್ದೇ ಹೊರತು ಚಲನಾತ್ಮಕವಾದ್ದಲ್ಲ.

ಕೇನ್ಸನ ಗುಣಕ ತತ್ತ್ವದ ವಿರುದ್ಧ ಇರುವ ಟೀಕೆಗಳಲ್ಲಿ ಸತ್ಯಾಂಶವಿದ್ದರೂ ಆರ್ಥಿಕ ವಿಶ್ಲೇಷಣೆಯಲ್ಲಿ ಅದರ ಮಹತ್ತ್ವವನ್ನು ಯಾರೂ ಕಡೆಗಣಿಸುವಂತಿಲ್ಲ. ಆರ್ಥಿಕ ನಿಯಮಗಳ ಮೇಲೆ ಗುಣಕದ ಪ್ರಭಾವ ಬಹಳವಿದೆ. ಕೇನ್ಸ್ ಗುಣಕವನ್ನು ವರಮಾನ ವೃದ್ಧಿ ವಿಶ್ಲೇಷಣೆಗೆ ಒಂದು ಪ್ರಮುಖ ಸಾಧನವಾಗಿಸಿದ್ದಾನೆ. ಕೇನ್ಸ್ ಗುಣಕದ ಆಧಾರದ ಮೇಲೆ ಮುಗ್ಗಟ್ಟಿನ ಸಮಯದಲ್ಲಿ ಸಾರ್ವಜನಿಕ ವಿನಿಯೋಜನೆಯನ್ನು ಪ್ರತಿಪಾದಿಸಿದ್ದಾನೆ. ವಿನಿಯೋಜನೆ ಅಧಿಕವಾದರೆ ವರಮಾನ ಅಧಿಕವಾಗುತ್ತದೆ ಮತ್ತು ಉದ್ಯೋಗಾವ ಕಾಶಗಳು ಹೆಚ್ಚಾಗುತ್ತವೆ– ಎಂಬುದನ್ನು ಗುಣಕ ತತ್ತ್ವ ಸಾರುತ್ತದೆ. ಮುಗ್ಗಟ್ಟಿನ ಕಾಲದಲ್ಲಿ ಸರ್ಕಾರ ಲೋಕೋಪಯೋಗಿ ಕಾರ್ಯಗಳಲ್ಲಿ ವಿನಿಯೋಜನೆಯನ್ನು ಹೆಚ್ಚಿಸುವುದರ ಮೂಲಕ ವರಮಾನ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸಬಹುದು. ವ್ಯಾಪಾರ ಆವರ್ತಗಳ ವಿವಿಧಾವಸ್ಥೆಗಳನ್ನು ವಿವರಿಸಲು ಗುಣಕ ವಿಧಾನ ಉಪಯುಕ್ತವಾಗಿದೆ. (ಕೆ.ಜಿ.ಓ.)

**ಗುಣಕ, ಗೀಗರ್ – ಮುಲ್ಲರ್ :** ಅಯಾನೀಕರಿಸುವ ವಿಕಿರಣವನ್ನು (ಅಯನೈಸಿಂಗ್ ರೇಡಿಯೇಷನ್) ಅಳತೆ ಮಾಡುವ ಒಂದು ಉಪಕರಣ (ಗೀಗರ್– ಮುಲ್ಲರ್ ಕೌಂಟರ್). ಸಂಕ್ಷೇಪವಾಗಿ ಜಿಎಂ ಗುಣಕ ಇಲ್ಲವೇ ಗೀಗರ್ ಗುಣಕ ಎಂದು ಹೇಳುವುದುಂಟು. ವಿಕಿರಣ ಪಟುತ್ವವನ್ನು (ರೇಡಿಯೋ ಆ್ಯಕ್ಟಿವಿಟಿ) ಪತ್ತೆ ಮಾಡುವಲ್ಲಿ ಇದರ ಪಾತ್ರ ಬಲು ಮುಖ್ಯ. ವೇಗವಾಗಿ ಚಲಿಸುವ ವಿದ್ಯುದಾವಿಷ್ಟಕಣ (ಚಾರ್ಜ್‌ಡ್ ಪಾರ್ಟಿಕಲ್) ಅನಿಲಗಳ ಮೂಲಕ ಹಾದುಹೋದಾಗ ಉಂಟಾಗುವ ಆಘಾತಗಳನ್ನು ಎಲೆಕ್ಟ್ರಾನಿಕ್ ಆವರ್ತಕಗಳಿಂದ ಗುರ್ತಿಸಿ ಎಣಿಸಬಹುದಾದ ಸಾಧ್ಯತೆಯ ಮೇಲೆ ಗುಣಕಗಳು ರಚಿನೆಗೊಂಡಿವೆ. ಸಾಮಾನ್ಯವಾಗಿ ಗುಣಕಗಳಲ್ಲಿ, ಕಡಿಮೆ ಒತ್ತಡದಲ್ಲಿರುವ ಆರ್ಗಾನ್ ಅಥವಾ ಯಾವುದಾದರೂ ಒಂದು ಹ್ಯಾಲೋಜೆನ್ನಿನಿಂದ ತುಂಬಿದ ಗಾಜಿನ ಕೊಳವೆಯಲ್ಲಿ ಕೊಳವೆಯ ಒಳಪದರಕ್ಕೆ ಸೇರಿದಂತೆ ವರ್ತುಲ ಸ್ತಂಭಾಕೃತಿಯ, ತಾಮ್ರ ಅಥವಾ ಅಲ್ಯೂಮಿನಿಯಮಿನ ಋಣ ವಿದ್ಯುತ್ ಧ್ರುವವೂ (ಕ್ಯಾಥೋಡ್) ಋಣ ವಿದ್ಯುತ್ ಧ್ರುವದ ಅಕ್ಷದಲ್ಲಿ ಹಾದು ಹೋಗುವ ಟಂಗ್‌ಸ್ಟನ್ ತಂತಿಯ ಧನವಿದ್ಯುತ್ ಧ್ರುವವೂ (ಆ್ಯನೋಡ್) ಇರುತ್ತವೆ. ಸುಮಾರು 1000 ವೋಲ್ಟುಗಳಷ್ಟು ವಿಭವದಲ್ಲಿ (ಪೊಟೆನ್ಶಿಯಲ್) ಆ್ಯನೋಡ್‌ನ್ನು ಇಟ್ಟು ಯಾವುದಾದರೂ ಒಂದು ವಿದ್ಯುದಾವಿಷ್ಟಕಣವನ್ನು ಗುಣಕದಲ್ಲಿ ಕಳುಹಿಸಿದಾಗ ಅದು ಅನಿಲದ ಅಣುಗಳೊಡನೆ ಘರ್ಷಿಸಿ ಅವನ್ನು ಅಯಾನೀಕೃತ ಕಣಗಳನ್ನಾಗಿ ಮಾರ್ಪಡಿಸುತ್ತದೆ. ಆ್ಯನೋಡ್ ಹೆಚ್ಚಿನ ವಿಭವದಲ್ಲಿರುವುದರಿಂದ ಎಲೆಕ್ಟ್ರಾನುಗಳು ಹೆಚ್ಚಿನ ಶಕ್ತಿಯನ್ನು ರೂಢಿಸಿಕೊಂಡು ಟಂಗ್‌ಸ್ಟನ್ ತಂತಿಯನ್ನು ತಲಪುವ ಮುಂಚೆ ಮತ್ತೆ ಅನಿಲದ ಅಣುಗಳೊಡನೆ ಅನುಕ್ರಮ ಘರ್ಷಣೆಯಿಂದ ಎಲೆಕ್ಟ್ರಾನುಗಳ ಪ್ರವಾಹವನ್ನೇ ಉಂಟು ಮಾಡುತ್ತವೆ. ಎಲೆಕ್ಟ್ರಾನ್ ಸಮೂಹಗಳಿಂದಾದ ವಿದ್ಯುದಾಘಾತಗಳನ್ನು ಪ್ರವರ್ಧಿಸಿ (ಆ್ಯಂಪ್ಲಿ ಫೈ) ಅವನ್ನು ವಿದ್ಯುದ್ಯಂತ್ರಗಳಿಂದ ದಾಖಲೆ ಮಾಡಬಹುದು ಅಥವಾ ಧ್ವನಿವರ್ಧಕಗಳಲ್ಲಿ ಶಬ್ದದ ರೂಪದಲ್ಲಿ ಆಲಿಸಬಹುದು.



**ಚಿತ್ರ 1. 1. ಸ್ತಂಭಾಕೃತ್ತಿಯ ಗೈರ್ ಮುಲ್ಲರ್ ಗುಣಕ: 1. ಧನ ವಿದ್ಯುತ್ ಧ್ರುವ (ಆ್ಯನೋಡ್), 2. ಗಾಜಿನ ಕೊಳವೆ, 3. ಕೊಳವೆಯನ್ನು ಸುತ್ತಿರುವ ಋಣ ವಿದ್ಯುತ್ ಧ್ರುವ, 4. ಟಂಗ್‌ಸ್ಟನ್ ತಂತಿ ಸುರುಳಿ, G ಕೊಳವೆಯೊಳಗಣ ಅನಿಲ**

ಗುಣಕಗಳ ಪರಿಣಾಮ, ಅವುಗಳಲ್ಲಿ ಉಪಯೋಗಿಬೇಕಾದ ಲೋಹ, ತುಂಬಿರಬೇಕಾದ ಅನಿಲ ಮುಂತಾದವು ಆ ಗುಣಕಗಳನ್ನು ಉಪಯೋಗಿಸುವ ರೀತಿಯ ಅನುಕೂಲಕ್ಕೆ ಸಂಬಂಧಪಟ್ಟಿರುತ್ತವೆ. ಆ್ಯನೋಡಿನಲ್ಲಿಡಬೇಕಾದ ವಿಭವ ನಿರ್ದಿಷ್ಟ ಗುಣಕದ ವಿಶೇಷ ಲಕ್ಷಣಗಳನ್ನು ಅವಲಂಬಿಸಿರುತ್ತದೆ. ಯಾವುದಾದರೂ ಒಂದು ಗುಣಕದ ಘಟನಾವಳಿಗಳ ಎಣಿಕೆಯ ವೇಗವನ್ನು (ಚಿತ್ರ 2ರಲ್ಲಿ *Oy* ಅಕ್ಷ) ವಿಭವದ (*Ox* ಅಕ್ಷ) ಎದುರಾಗಿ ಗ್ರಾಫ್ ತಯಾರಿಸಿದರೆ ಚಿತ್ರದಲ್ಲಿರುವಂತೆ ರೇಖೆ ಬರುತ್ತದೆ. A ಜಾಗದ ವಿಭವಕ್ಕೆ ದೇಹಲೀ ವಿಭವ (ಥ್ರೆಶೋಲ್ಡ್ ಪೊಟೆನ್ಶಿಯಲ್) ಎಂದೂ B ಭಾಗಕ್ಕೆ ಪೀಠ ವಿಭವ (ಪ್ಲ್ಯಾಟೂ ಪೊಟೆನ್ಶಿಯಲ್) ಎಂದೂ ಹೆಸರು. ಗುಣಕದ ದಕ್ಷತಮ ಕಾರ್ಯ ಸಾಮರ್ಥ್ಯ ಪೀಠ ವಿಭವರೇಖೆಯ ಸಂವಾದಿಯಾಗಿರುವ ವಿಭವದಲ್ಲಿ ಇರುತ್ತದೆ.




ಗುಣಕಗಳನ್ನು ಕೈಗಾರಿಕೆಗಳಲ್ಲಿ, ಔಷಧ ವೈದ್ಯದಲ್ಲಿ, ಖನಿಜ ಪರಿಶೋಧನೆಯಲ್ಲಿ ಮತ್ತು ವೈಜ್ಞಾನಿಕ ಸಂಶೋಧನೆಗಳಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. (ಜಿ.ಎಸ್.)

**ಗುಣಗಳು :** ಸಾಂಖ್ಯದ ಪ್ರಕಾರ ಗುಣಗಳು ಮೂರು–ಸತ್ತ್ವ, ರಜಸ್ಸು ಮತ್ತು ತಮಸ್ಸು. ಇವನ್ನು ಕುರಿತ ಪ್ರಕ್ರಿಯೆ ಆ ದರ್ಶನದಲ್ಲಿ ಬಹು ಮುಖ್ಯವಾದದು. ಗುಣಗಳ ಸಾಮ್ಯಾವಸ್ಥೆ ಎನ್ನುವುದೇ ಪ್ರಕೃತಿ. ಪುರುಷನ ಸಂಯೋಗದಿಂದ ಈ ಸಾಮ್ಯಾವಸ್ಥೆ

ಒಡೆದು ಪ್ರಕೃತಿಯ ಪರಿಣಾಮಕ್ಕೆ ದಾರಿಯಾಗುತ್ತದೆ. ಎಲ್ಲ ಪ್ರಕೃತಿವಿಕೃತಿಗಳಿಗೂ ವಿಕಾರಗಳಿಗೂ ಕಾರಣ ಈ ಗುಣಗಳೇ. ಇವುಗಳ ವಿಶೇಷ ಭೇದದಿಂದ ಪ್ರಕೃತಿ ವಿಕೃತಿಯಾಗುವುದೆಂದು ಸಾಂಖ್ಯರ ಮತ. ಸತ್ತ್ವವೆನ್ನುವುದು ಲಘು, ಪ್ರಕಾಶ ಮತ್ತು ಪ್ರಿಯದಾಯಕ, ರಜಸ್ಸೆನ್ನುವುದು ಚಲನಕಾರಿ, ಉದ್ರೇಕಕಾರಿ, ತಮಸ್ಸೆನ್ನುವುದು ಭಾರವಾದದ್ದು ಮತ್ತು ಆವರಿಸತಕ್ಕದ್ದು. (ಕೆ.ಬಿ.ಆರ್.)

ಕಾವ್ಯಮೀಮಾಂಸೆಯಲ್ಲಿ ಗುಣಗಳ ಪ್ರಸ್ತಾಪ ಬರುತ್ತದೆ. ಶ್ಲೇಷೆ, ಪ್ರಸಾದ, ಸಮತೆ, ಮಾಧುರ್ಯ, ಸೌಕುಮಾರ್ಯ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ, ಸಮಾಧಿ– ಈ ಹತ್ತೂ ಕಾವ್ಯಗುಣಗಳೆಂದು ಭರತಾದಿ ಪ್ರಾಚೀನಾಲಂಕಾರಿಕರ ಮತ. ದಂಡಿ ಮತ್ತು ನಾಗವರ್ಮರು ಇವನ್ನು ಹೇಳಿದ್ದಾರೆ. ಇವುಗಳ ಲಕ್ಷಣಗಳನ್ನು ನೋಡಿದರೆ ಶ್ಲೇಷೆ, ಸಮತೆ, ಸೌಕುಮಾರ್ಯ ಮತ್ತು ಓಜಸ್ಸುಗಳು ಶಬ್ದಗುಣಗಳೆಂದೂ ಮಾಧುರ್ಯ ಉಭಯಗುಣವೆಂದೂ ಉಳಿದವು ಅರ್ಥಗುಣಗಳೆಂದೂ ತಿಳಿದುಬರುತ್ತದೆ.

ಧ್ವನಿ, ರಸ, ವಕ್ರೋಕ್ತಿ, ರೀತಿ ಮತ್ತು ಗುಣಗಳು ಕಾವ್ಯಸೌಂದರ್ಯಕ್ಕೆ ಕಾರಣಗಳಷ್ಟೆ. ಇವುಗಳಲ್ಲಿ ಧ್ವನಿ ಮತ್ತು ರಸಗಳು ಕಾವ್ಯದ ಆತ್ಮವಿದ್ದಂತೆ. ರೀತಿ ಮಾರ್ಗ ಮೊದಲಾದವು ಅಂಗಾಂಗ ಸನ್ನಿವೇಶ ವಿಶೇಷತೆಗಳಂತೆ. ಗುಣಗಳು ಶೌರ್ಯಧೈರ್ಯಾದಿಗಳಂತೆ. ಅಲಂಕಾರಗಳೋ ಮೇಲೆ ತೊಡುವ ಆಭರಣಾದಿಗಳಿದ್ದಂತೆ. *

**ಗುಣನಂದಿ :** ಪ್ರಾಚೀನ ಕನ್ನಡ ಕವಿಗಳಲ್ಲಿ ಗುಣನಂದಿಯೆಂಬ ಹೆಸರಿನ ಕವಿಯೊಬ್ಬನಿದ್ದನೆಂಬುದು ಮುಖ್ಯವಾಗಿ ಮಲ್ಲಿಕಾರ್ಜುನನ (ಸು. 1245) ಸೂಕ್ತಿ ಸುಧಾರ್ಣವ ಮತ್ತು ಕೇಶಿರಾಜನ (ಸು.1260) ಶಬ್ದಮಣಿದರ್ಪಣ ಎಂಬ ಗ್ರಂಥಗಳಲ್ಲಿ ದೊರೆಯುವ ಎರಡು ಸ್ಪಷ್ಟವಾದ ಉಲ್ಲೇಖಗಳಿಂದ ತಿಳಿದುಬಂದಿದೆ. ಸೂಕ್ತಿಸುಧಾರ್ಣವದ ಪೀಠಿಕಾಪ್ರಕರಣದಲ್ಲಿ 'ಜನ್ನನ ದೇಸೆ ಪಂಪನ ಗುಣಂ ಗುಣನಂದಿಯ ತೊಂಡು..... ಸಮಾನುರುಕ್ತಿಯಿಂ । ದನ್ನೆಲಸಿರ್ಪುವೀ ಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್' ಎಂದೂ ಶಬ್ದಮಣಿದರ್ಪಣದಲ್ಲಿ 'ಗಜಗನಗುಣನಂದಿಯ ಮನ । ಸಿಜನಸಗನ...... ಸುಮಾರ್ಗಮಿದಱೊಳೆ ಲಕ್ಷ್ಯಂ' ಎಂದೂ ಉಕ್ತವಾಗಿದೆ. ಇಷ್ಟಲ್ಲದೆ, ಶಬ್ದಮಣಿದರ್ಪಣದಲ್ಲಿಯೇ ಸಂಧಿ ಪ್ರಕರಣದಲ್ಲಿ ಸೂತ್ರವೊಂದಕ್ಕೆ ಪ್ರಯೋಗವಾಗಿ 'ಚುರ್ಚಿದವೋಲ್ ಬಿಸಿಲಳುರೆ ಕಿ । ಮುಚ್ಚಿದ ಲತೆಯಂತೆ ನೊಂದು ಗುಣನಂದಿ....' ಎಂಬ ಕಂದಪದ್ಯದ ಭಾಗವೊಂದುಂಟು.

ಇಲ್ಲಿ ಬಂದಿರುವ ಗುಣನಂದಿಯೆಂಬ ಹೆಸರಿನ ಮೇಲೆ, ಈ ಕಂದಭಾಗ ಗುಣನಂದಿ ಕೃತವಾದ ಗ್ರಂಥದಿಂದ ತೆಗೆದುದೋ ಇಲ್ಲವೇ ಅವನ ವಿಷಯವಾಗಿ ಹುಟ್ಟಿರುವ ಬೇರೆ ಗ್ರಂಥದಿಂದ ತೆಗೆದುದೋ ತಿಳಿಯದು– ಎಂಬುದಾಗಿ ಕರ್ಣಾಟಕ ಕವಿಚರಿತೆಕಾರರು ತಮ್ಮ ಊಹೆಯನ್ನು ಮಂಡಿಸಿದ್ದಾರೆ. ಸ್ವಲ್ಪ ಈಚಿನ ನಂಜುಂಡಕವಿ (ಸು.1525) ರಾಮನಾಥಚರಿತವೆಂಬ ತನ್ನ ಸಾಂಗತ್ಯಗ್ರಂಥದಲ್ಲಿ ಗುಣನಂದಿಯೆಂಬವನನ್ನು ಸ್ತುತಿಸಿರುವುದು ಕಾಣುತ್ತದೆ. ಈ ಗುಣನಂದಿಯೂ ಮೊದಲಿನೆರಡು ಉಲ್ಲೇಖಗಳ ಗುಣನಂದಿಯೂ ಒಬ್ಬ ವ್ಯಕ್ತಿಯೋ ಬೇರೆಬೇರೆಯೋ ಹೇಳುವುದು ಕಷ್ಟ. ಶಬ್ದಮಣಿದರ್ಪಣದ ಪ್ರಯೋಗಭಾಗದ ಆಶಯವೂ ಸಂದಿಗ್ಧವಾದ್ದು. ಇದಕ್ಕೆ ಮೊದಲಿನ ಎರಡು ಉಲ್ಲೇಖಗಳೇ ಗುಣನಂದಿಯೆಂಬ ಕನ್ನಡ ಕವಿಯೊಬ್ಬನ ಅಸ್ತಿತ್ವವನ್ನು ಸ್ಥಾಪಿಸಲು ಸಮರ್ಥವಾದವು. ಮಲ್ಲಿಕಾರ್ಜುನನೂ ಆತನ ಮಗ ಕೇಶಿರಾಜನೂ ತಂತಮ್ಮ ಗ್ರಂಥಗಳಿಗೆ ಗುಣನಂದಿಯೆಂಬ ಪೂರ್ವಕವಿಯೊಬ್ಬನ ಒಂದೋ ಹಲವೋ ಗ್ರಂಥಗಳಿಂದ ಪದ್ಯಗಳನ್ನೂ ಪ್ರಯೋಗಗಳನ್ನೂ ಕ್ರಮವಾಗಿ ಆಯ್ದುಕೊಂಡಿರುವ ಸಾಧ್ಯತೆಯನ್ನು ಒಪ್ಪಬಹುದು. ಆ ಗ್ರಂಥ ಅಥವಾ ಗ್ರಂಥಗಳು ಯಾವುವೆಂಬುದು ಮಾತ್ರ ತಿಳಿಯವಂತಿಲ್ಲ. ಕವಿಚರಿತೆಕಾರರು, ಪೂಜ್ಯಪಾದಕೃತವಾದ ಜೈನೇಂದ್ರ ವ್ಯಾಕರಣಕ್ಕೆ ಈ ಗುಣನಂದಿ ಪ್ರಕ್ರಿಯಾವತಾರ ಎಂಬ ವ್ಯಾಖ್ಯಾನ ಗ್ರಂಥವೊಂದನ್ನು ಬರೆದಿದ್ದಾನೆಂದು ತಿಳಿಸಿದ್ದಾರೆ. ಈ ವ್ಯಾಖ್ಯಾನಕರ್ತೃ ಗುಣನಂದಿಯೂ ಮಲ್ಲಿಕಾರ್ಜುನಕೇಶಿರಾಜೋಕ್ತ ಕನ್ನಡಕವಿ ಗುಣನಂದಿಯೂ ಒಬ್ಬನೇ ವ್ಯಕ್ತಿಯೆಂದು ತಿಳಿಯುವುದಕ್ಕೆ ತಕ್ಕ ಪ್ರಮಾಣಗಳಿಲ್ಲ. ಕನ್ನಡ ಕವಿ ಗುಣನಂದಿ ಬರೆದ ಕೃತಿ ಲಭ್ಯವಾಗದೆ ಇದರ ವಿಮರ್ಶೆ ಸಾಧ್ಯವಾಗಲಾರದು.

ಗುಣನಂದಿ ಕವಿಯ ಕಾಲವನ್ನು ಕರ್ಣಾಟಕ ಕವಿಚರಿತಕಾರರು ಸು.900 ಎಂದು ಹೇಳಿದ್ದಾರೆ. ಶ್ರವಣಬೆಳ್ಗೊಳದ 66,117, 127ನೆಯ ಶಾಸನಗಳಲ್ಲಿ ಕೀರ್ತಿತ ನಾಗಿರುವ ಗುಣನಂದಿಪಂಡಿತಯತಿಯೇ ಮೇಲೆ ಉಲ್ಲೇಖಿಸಿರುವ ಗುಣನಂದಿಕವಿ ಯೆಂಬುದು ಅವರ ಗ್ರಹಿಕೆ. ಈ ಗ್ರಹಿಕೆಗೆ ಕಾಲನಿರ್ಣಯಕ್ಕೆ ಮುಖ್ಯ ಕಾರಣವೆಂದರೆ ಆ ಯತಿಗೆ ಹೇಳಿರುವ ವಿಶೇಷಣಗಳು ಮತ್ತು ಶಾಸನೋಕ್ತ ಗುರುಪರಂಪರೆ. ಪೂರ್ವೋಕ್ತ ಶಾಸನಗಳಲ್ಲಿ ಈತನನ್ನು ಚಾರಿತ್ರಚಕ್ರೇಶ್ವರ, ತರ್ಕವ್ಯಾಕರಣಾದಿ ಶಾಸ್ತ್ರನಿಪುಣ, ಸಾಹಿತ್ಯವಿದ್ಯಾಪತಿ ಮುಂತಾಗಿ ಕರೆದಿದೆ. ಅಲ್ಲದೆ ಈತನಿಗೆ 300 ಜನ ಶಿಷ್ಯರಿದ್ದರೆಂದೂ ಇವರಲ್ಲಿ ದೇವೇಂದ್ರಸೈದ್ಧಂತಿಕನೆಂಬುವನು ಉತ್ಕೃಷ್ಟತಮನೆಂದೂ ಹೇಳಿದೆ. 1115ರಲ್ಲಿ ಹುಟ್ಟಿದ 127ನೆಯ ಶಾಸನದ ಗುರುಪರಂಪರೆಯನ್ನು ಗಮನಿಸಿ. ಈ ದೇವೇಂದ್ರ ಸೈದ್ಧಾಂತಿಕನೇ ಪಂಪನ (941) ಗುರುವಾದ ದೇವೇಂದ್ರಮುನಿಯಾಗಿರಬೇಕೆಂದೂ ಆದಕಾರಣ, ಪಂಪನ ಗುರುವಿನ ಗುರು ಗುಣನಂದಿ ಸು. 900 ರಲ್ಲಿದ್ದಿರಬಹುದೆಂದೂ ಕವಿಚರಿತಕಾರರು ಊಹೆ ಮಾಡಿದ್ದಾರೆ.

ಈ ಊಹೆಯನ್ನು ಎ. ವೆಂಕಟಸುಬ್ಬಯ್ಯನವರು ಅಲ್ಲಗಳೆದಿದ್ದಾರೆ. ಶ್ರವಣಬೆಳ್ಗೊಳದ 127ನೆಯ ಶಾಸನದ ಗುರುಪರಂಪರೆಯನ್ನು ಕುರಿತು ಕವಿಚರಿತಕಾರರು ಅಭಿಪ್ರಾಯ ಸಾಧುವಾಗಿಲ್ಲವೆಂದು ಹೇಳಿ ಅದನ್ನು ವಿಮರ್ಶಿಸಿ, ಶಾಸನೋಕ್ತ ಗುಣನಂದಿಯೂ ಆತನ ಶಿಷ್ಯ ದೇವೇಂದ್ರಮುನಿಯೂ ಪ್ರ.ಶ. 700ಕ್ಕಿಂತ ಹಿಂದೆ ಇದ್ದವರು, ಪ್ರ.ಶ.ಸು. 900 ರಲ್ಲಿದ್ದವರಲ್ಲ ಎಂದು ವಾದಿಸಿದ್ದಾರೆ. ಹಾಗಾದರೆ ಶ್ರವಣಬೆಳ್ಗೊಳದ ಶಾಸನದಲ್ಲಿ ಈತನನ್ನು ಸಾಹಿತ್ಯ ವಿದ್ಯಾಪತಿ ಮುಂತಾಗಿ ಸ್ತುತಿಸಿದೆಯಲ್ಲ. ಕನ್ನಡದಲ್ಲಿ ಅಷ್ಟು ಹಿಂದೆಯೇ ಈತ ಏನಾದರೂ ಬರೆದಿದ್ದಿರಬಹುದೇ ಎಂಬ ಪ್ರಶ್ನೆಗೆ ಏನು ಉತ್ತರ? ಈತನಿಗೆ ಹೇಳಿರುವ ವಿಶೇಷಣಗಳಿಂದ ಈತನನ್ನು ಪಂಡಿತನೆಂದು ತಿಳಿಯಬಹುದಲ್ಲದೆ ಕವಿಯೆಂದೇನೂ ತಿಳಿಯಬೇಕಾಗಿಲ್ಲ. ಒಂದು ಪಕ್ಷ ಈತ ಕನ್ನಡದಲ್ಲಿ ಕೃತಿರಚನೆ ಮಾಡಿದ್ದಿದ್ದರೆ ಕವಿರಾಜಮಾರ್ಗ, ಕಾವ್ಯಾವಲೋಕನಗಳಲ್ಲಿ ಈತನ ಹೆಸರಿನ ಪ್ರಸ್ತಾಪವಿರುತ್ತಿದ್ದಿತು– ಎಂದು ವೆಂಕಟಸುಬ್ಬಯ್ಯನವರು ಹೇಳಿ, ಅಂಥ ಸಾಧ್ಯತೆಯನ್ನು ಅಲ್ಲಗಳೆದಿದ್ದಾರೆ. ಅವರ ನಿರ್ಣಯ ಎಂದರೆ– ಶಾಸನೋಕ್ತ ಗುಣನಂದಿ ಪ್ರ.ಶ.ಸು. 700ಕ್ಕೆ ಪೂರ್ವದಲ್ಲಿದ್ದ ಒಬ್ಬ ಬೇರೆಯೇ ವ್ಯಕ್ತಿ. ಸೂಕ್ತಿ ಸುಧಾರ್ಣವ, ಶಬ್ದಮಣಿದರ್ಪಣ ಗಳಲ್ಲಿ ಉಕ್ತನಾಗಿರುವ ಗುಣನಂದಿ ಇನ್ನೊಬ್ಬ ಬೇರೆಯೇ ವ್ಯಕ್ತಿ. ಈ ಎರಡನೆಯಾತ ಆಚಣ್ಣ, ಜನ್ನ, ಪಾರ್ಶ್ವಪಂಡಿತ, ಗುಣವರ್ಮ ಮುಂತಾದ 13ನೆಯ ಶತಮಾನದ ಕವಿಗಳಿಂದ ಉಲ್ಲೇಖಿಸಲ್ಪಡದಿರುವ ಕಾರಣ ಅವರಿಂದ ಈಚೆಗೆ ಸೂಕ್ತಿಸುಧಾರ್ಣವ, ಶಬ್ದಮಣಿದರ್ಪಣಗಳ ಕಾಲಕ್ಕಿಂತ ಮುಂಚೆ, ಸು.1250ರಲ್ಲಿದ್ದು ಕನ್ನಡದಲ್ಲಿ ಕಾವ್ಯರಚನೆ ಮಾಡಿದ.

ಹೀಗೆ ಗುಣನಂದಿಕವಿಯ ಚರಿತ್ರೆಯಲ್ಲಿ ಕೆಲವು ತೊಡಕುಗಳಿರುವುದು ದಿಟವಾದರೂ ಮಲ್ಲಿಕಾರ್ಜುನ ಕೇಶಿರಾಜರಿಗೆ ಮೊದಲು ಗುಣನಂದಿಯೆಂಬ ಒಬ್ಬ ಕವಿಯಿದ್ದುದೂ ಆತ ಕನ್ನಡದಲ್ಲಿ ಕೃತಿರಚನೆ ಮಾಡಿದ್ದುದೂ ಸ್ಪಷ್ಟವಾದ ವಿಷಯ. ಆಯಿಬ್ಬರೂ ಉಲ್ಲೇಖಿಸಿರುವ ಗುಣನಂದಿ ಹಾಗೂ ಶಾಸನಗಳಲ್ಲಿ ಉಕ್ತನಾಗಿರುವ ಗುಣನಂದಿ ಇಬ್ಬರೂ ಅಭಿನ್ನರೋ ಅನ್ಯಾನ್ಯರೋ ಎನ್ನುವ ಅಂಶ ಮಾತ್ರ ಇನ್ನೂ ನಿಷ್ಕೃಷ್ಟವಾಗಿ ತಿಳಿದಿಲ್ಲ. ಪ್ರಸ್ತುತ ಗುಣನಂದಿಕವಿಯ ಪ್ರಸ್ತಾಪ ಬಂದಾಗ, ವಿದ್ವಾಂಸರು ಕರ್ಣಾಟಕ ಕವಿಚರಿತೆಕಾರರ ಅಭಿಪ್ರಾಯವನ್ನೇ ಉದ್ಧರಿಸುವುದು ಕಾಣುತ್ತೇವೆ. (ಟಿ.ವಿ.ವಿ.)

**ಗುಣನಿಯಂತ್ರಣ, ಸಂಖ್ಯಾಕಲನೀಯ :** ಕಾರ್ಖಾನೆಗಳಲ್ಲಿ ಭಾರಿ ಪ್ರಮಾಣದಲ್ಲಿ ತಯಾರಾಗುವ ವಸ್ತುಗಳ ಗುಣವನ್ನು ನಿಶ್ಚಿತಮಟ್ಟದಲ್ಲಿ ಇಡಲು ಆ ವಸ್ತುಗಳಿಂದ ಯಾದೃಚ್ಛಿಕವಾಗಿ ಕೆಲವನ್ನು ಆಯ್ದು ಅವುಗಳ ಮೇಲೆ ಪರೀಕ್ಷಣೆ ಮತ್ತು ವಿಶ್ಲೇಷಣೆ ನಡೆಸಿ ಬಳಿಕ ಸಂಖ್ಯಾಕಲನೀಯ ವಿಧಾನಗಳ ಅನ್ವಯದಿಂದ ತೀರ್ಮಾನ ತಳೆಯುವಿಕೆ (ಸ್ಟ್ಯಾಟಿಸ್ಟಿಕಲ್ ಕ್ವಾಲಿಟಿ ಕಂಟ್ರೋಲ್). 1920ರಿಂದ ಈಚೆಗೆ ವಿಶೇಷವಾಗಿ ವಿಕಸಿಸಿರುವ ಶಾಸ್ತ್ರವಿದು. ಇದು ತಿಳಿಸುವ ತಂತ್ರಗಳ ಉಪಯೋಗ ಕೈಗಾರಿಕೆಗಳಲ್ಲಿ ಬಹಳ ವ್ಯಾಪಕ. ಉತ್ಪಾದಿತ ವಸ್ತುಗಳ ಅಳೆಯಲ್ಪಟ್ಟ ಗುಣ ಸಾಂದರ್ಭಿಕತೆಯ ಪರಿಣಾಮವಾಗಿ ಯಾವಾಗಲೂ ಸ್ವಲ್ಪ ಏರಿಳಿತಗಳಿಗೆ ಒಳಗಾಗಿರುವುದು ಸಹಜ. ಯಾವುದೇ ಒಂದು ಉತ್ಪಾದನಾ ಮತ್ತು ಪರೀಕ್ಷಾ ವಿಧಾನದಲ್ಲಿ ಸಾಂದರ್ಭಿಕ ಕಾರಣಗಳ ಒಂದು ನಿಶ್ಚಲವ್ಯವಸ್ಥೆ ಅಡಕವಾಗಿರುತ್ತದೆ. ಇದರ ಒಳಗೆ ಏರಿಳಿತ ಅನಿವಾರ್ಯ; ಹೊರಗೆ ಇರುವ ಏರಿಳಿತಗಳ ಕಾರಣಗಳನ್ನು ಪತ್ತೆಹಚ್ಚಿ ತೊಡೆದು ಹಾಕಬಹುದು. ಈ ಉದ್ದೇಶ ಸಾಧನೆಗೆ ಶೂಹಾರ್ಟ್ ನಿಯಂತ್ರಣ ನಕ್ಷೆ ಒಂದು ಸರಳ ಆದರೂ ಪ್ರಬಲ ಸಲಕರಣೆ. ಇದು ಮೂಲತಃ ಅಮೆರಿಕದ ಬೆಲ್ ಟೆಲಿಫೋನ್ ಪ್ರಯೋಗಾಲಯಗಳ ಮೇಧಾವಿತಜ್ಞ ವಾಲ್ಟರ್ ಎ. ಶೂಹಾರ್ಟ್ ಎಂಬಾತನ ಸಾಧನೆಯ (1921–24) ಮೂರ್ತಫಲ.

ಏರಿಳಿತ ಪ್ರಕೃತಿಗತ ಮತ್ತು ಸಾರ್ವತ್ರಿಕ. ನಿಜಜೀವನದಲ್ಲಿ ನಿಶ್ಚಲತೆ ಎಂಬುದಿಲ್ಲ. ಆದರೂ ನಿಶ್ಚಲ ಕಾರಣವ್ಯವಸ್ಥೆ ಎಂಬುದಿದೆ. ಈ ವ್ಯವಸ್ಥೆಯಿಂದ ಪ್ರೇರಿತ ಫಲಿತಾಂಶಗಳು ಒಂದು ಅಗಲವಾದ ಅಥವಾ ಅಗಲಕಿರಿದಾದ ಪಟ್ಟಿಯಲ್ಲಿ ಏರಿಳಿಯುತ್ತಿರಬಹುದು. ಆದರೂ ನಿಶ್ಚಲ ಕಾರಣ ವ್ಯವಸ್ಥೆ ಕಾರ್ಯಲಿಪ್ತವಾಗಿರುವ ವರೆಗೆ ಈ ಏರಿಳಿಯುತ್ತಿರುವ ಫಲಿತಾಂಶಗಳ ನಿರ್ದಿಷ್ಟ ಶೇಕಡಾ ಭಾಗಗಳು ಸತತವಾಗಿ ನಿರ್ದಿಷ್ಟ ಪರಿಮಿತಿಗಳ ನಡುವೆ ಬೀಳುತ್ತಿರುತ್ತವೆ. ಹೀಗಾಗಿ ವೈಯಕ್ತಿಕ ಮೌಲ್ಯಗಳು ಏರಿಳಿಯುತ್ತಿದ್ದರೂ ಅವು ಒಟ್ಟಾಗಿ ಒಂದು ಸ್ಥಿರ ಪ್ರರೂಪದ (ಪ್ಯಾಟರ್ನ್) ಒಳಗೆ ಓರಣವಾಗಿ ಹೊಂದಿಕೊಳ್ಳುತ್ತವೆ. ಇಲ್ಲಿ ನಿಶ್ಚಲವಾಗಿರುವುದು ಕಾರಣವ್ಯವಸ್ಥೆ ಮತ್ತು ಅದರಿಂದಾಗಿ ಸ್ಥಿರವಾಗಿರುವುದು ಫಲಿತಾಂಶಗಳ ಸಂಭಾವ್ಯತಾ ವಿತರಣೆ (ಪ್ರಾಬೆಬಿಲಿಟಿ ಡಿಸ್ಟ್ರಿಬ್ಯೂಷನ್). ಉತ್ಪಾದನವಿಧಾನ ಇಂಥ ಸ್ಥಿರತೆಯನ್ನು ತೋರ್ಪಡಿಸುವ ಫಲಿತಾಂಶಗಳನ್ನು ಉತ್ಪಾದಿಸುವ ಮೂಲಕ

ನಿಶ್ಚಲ ಕಾರಣವ್ಯವಸ್ಥೆಯಂತೆ ವರ್ತಿಸುತ್ತಿದ್ದರೆ ಆಗ ಆ ವಿಧಾನ ಸಂಖ್ಯಾಕಲನೀಯ ನಿಯಂತ್ರಣದಲ್ಲಿದೆ ಎನ್ನುತ್ತೇವೆ.

ಏರಿಳಿತಗಳ ಹಿನ್ನಲೆಯಲ್ಲಿ ಕಾರಣಗಳನ್ನು ನಿರ್ದಿಷ್ಟಕಾರಣಗಳು (ಅಸ್ಸೈನೆಬಲ್ ಕಾಸಸ್) ಮತ್ತು ಅನಿರ್ದಿಷ್ಟ ಕಾರಣಗಳು (ಚಾನ್ಸ್ ಕಾಸಸ್) ಎಂದು ದ್ವಿವಿಧವಾಗಿ ವರ್ಗೀಕರಿಸಬಹುದು. ನಿದರ್ಶನಕ್ಕಾಗಿ, ಮಕ್ಕಳ ಆಹಾರವನ್ನು ಉತ್ಪಾದಿಸುವ ಒಂದು ಕಾರ್ಖಾನೆ ತನ್ನ ಉತ್ಪನ್ನವನ್ನು ಡಬ್ಬಗಳಲ್ಲಿ ಒಂದೊಂದು ಕಿಲೋಗ್ರಾಮಿನಂತೆ ಯಾಂತ್ರಿಕವಾಗಿ ತುಂಬಿಸಿ ಮಾರುಕಟ್ಟೆಗೆ ಕಳುಹಿಸುತ್ತಿದೆ ಎಂದು ಭಾವಿಸೋಣ. ಹೆಚ್ಚಿನ ಸಂಖ್ಯೆಯಲ್ಲಿ ಅಂಥ ಡಬ್ಬಗಳನ್ನು ತುಂಬಿಸುವಾಗ ಪ್ರತಿಯೊಂದರಲ್ಲಿರುವ ಆಹಾರದ ತೂಕವನ್ನು ನಿಖರವಾಗಿ ಒಂದು ಕಿಲೋಗ್ರಾಮಿಗೆ ಬಂಧಿಸಿಡುವುದು ಅಸಾಧ್ಯ. ಆ ತೂಕದಲ್ಲಿ ತುಸು ಏರಿಳಿತ ಸಹಜ, ಅನಿವಾರ್ಯ. ಆದರೂ ಆ ತೂಕ ನಿಗದಿಮಾಡಲ್ಪಟ್ಟ ಎರಡು ಪರಿಮಿತಿಗಳ ನಡುವೆ (ಉದಾಹರಣೆಗೆ 998 ಮತ್ತು 1002 ಗ್ರಾಮುಗಳ ನಡುವೆ) ಇರುವಂತೆ ಪ್ರಯತ್ನಿಸಬಹುದು. ಇದು ಸಾಧ್ಯ ಕೂಡ. ಮೇಲೆ ವಿವರಿಸಿದ ತೂಕದ ಏರಿಳಿತ ಯಾಂತ್ರಿಕ ಸಂಯೋಜನೆಯ ದೋಷದಿಂದ ಉಂಟಾಗುತ್ತಿರಬಹುದು. ಇದು ಒಂದು ನಿರ್ದಿಷ್ಟ ಕಾರಣ. ಒಂದು ದತ್ತ ಸಂದರ್ಭದಲ್ಲಿ ಇಂಥ ಕಾರಣಗಳು ಒಂದು ಅಥವಾ ಎರಡು ಇರಬಹುದು ಅಥವಾ ಒಂದೂ ಇಲ್ಲದಿರಬಹುದು. ಅವು ಇದ್ದಾಗ ಉತ್ಪಾದಿತ ವಸ್ತುಗಳ ಗುಣದ ಮೌಲ್ಯಗಳ ಮೇಲೆ ಅವುಗಳ ಪ್ರಭಾವ ಲಕ್ಷ್ಯಾರ್ಹ ವಾಗಿರುತ್ತದೆ. ಅಂಥ ಕಾರಣಗಳ ಇರುವಿಕೆಯನ್ನು ಪತ್ತೆಹಚ್ಚಿ ವಿಧಾನಗಳಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಮಾಡುವುದರ ಮೂಲಕ ಅವನ್ನು ತೊಡೆದು ಹಾಕಬಹುದು. ಹಾಗೆ ಮಾಡುವುದು ಆರ್ಥಿಕವಾಗಿಯೂ ಸೂಕ್ತ. ಇನ್ನು ಉಳಿದ ಕಾರಣಗಳ ಪ್ರಭಾವ ಲಕ್ಷ್ಯಾರ್ಹವಲ್ಲದಿರಬಹುದು. ಅವನ್ನು ಪತ್ತೆಹಚ್ಚುವುದು ಕಷ್ಟ ಮತ್ತು ಆರ್ಥಿಕವಾಗಿಯೂ ಸೂಕ್ತವಲ್ಲ. ಇವು ಅನಿರ್ದಿಷ್ಟ ಕಾರಣಗಳು. ಶೂಹಾರ್ಟ್ ವಿಧಾನದ ಸಾಫಲ್ಯ ನಿರ್ದಿಷ್ಟಕಾರಣಗಳನ್ನು ಅನಿರ್ದಿಷ್ಟಕಾರಣಗಳಿಂದ ಪ್ರತ್ಯೇಕಿಸುವ ಅದರ ಸಾಮರ್ಥ್ಯದಲ್ಲಿದೆ. ವಿಧಾನದಲ್ಲಿರುವ ನಿರ್ದಿಷ್ಟಕಾರಣಗಳನ್ನು ಪತ್ತೆಹಚ್ಚಿ ತೊಡೆದುಹಾಕುವುದಕ್ಕೆ ವಿಧಾನವನ್ನು ಸಂಖ್ಯಾಕಲನೀಯ ನಿಯಂತ್ರಣಕ್ಕೆ ತರುವುದು ಎಂದು ಹೆಸರು.

ಹಿನ್ನಲೆಯಲ್ಲಿರುವ ಸಂಭಾವ್ಯತಾ ವಿತರಣೆ ಸ್ಥಿರವಾಗಿರುವಾಗ ವಸ್ತುಗುಣದ ಮೌಲ್ಯಗಳ ಏರಿಳಿತಗಳಿಗೆ ಸ್ವಾಭಾವಿಕ ಪರಿಮಿತಿಗಳನ್ನು (ನ್ಯಾಚುರಲ್ ಲಿಮಿಟ್ಸ್) ರಚಿಸಬಹುದು. ಅಂದರೆ, ಹಿನ್ನಲೆಯಲ್ಲಿರುವ ಸಂಭಾವ್ಯತಾ ವಿತರಣೆ ಬದಲಾಗದ ಹೊರತು ಯಾವುದೇ ಒಂದು ಮೌಲ್ಯ ಇಂಥ ಪರಿಮಿತಿಗಳನ್ನು ಉಲ್ಲಂಘಿಸುವುದು ಅಪರೂಪ. ಹೀಗಾಗಿ ಇಂಥ ವಿದ್ಯಾಮಾನವನ್ನು ಹಿನ್ನಲೆಯಲ್ಲಿರುವ ವಿತರಣೆ ಬದಲಾವಣೆಗೊಂಡುದರ ಸೂಚಕವಾಗಿ ತೆಗೆದುಕೊಳ್ಳುತ್ತೇವೆ.

ಉಪಯೋಗಕ್ಕೆ ಅರ್ಹತೆಯೇ ವಸ್ತುವಿನ ಗುಣ. ಮಕ್ಕಳ ಆಹಾರದ ಡಬ್ಬಗಳ ನಿದರ್ಶನದಲ್ಲಿ ಡಬ್ಬಗಳ ಒಂದು ಗುಣ ಅವುಗಳಲ್ಲಿರುವ ಆಹಾರದ ತೂಕ. ಈ ಗುಣವನ್ನು ಅಳೆದು ಸಂಖ್ಯಾರೂಪದಲ್ಲಿ ಹೇಳಬಹುದು. ಉದಾಹರಣೆಗೆ 998 ಗ್ರಾಮುಗಳು. ಇಂಥ ಗುಣಗಳು ಚರಗಳು. ವಸ್ತುಗಳನ್ನು ಇಂಥ ಒಂದು ಗುಣಕ್ಕೆ ಅನುಸಾರವಾಗಿ ವರ್ಗೀಕರಿಸಿದರೆ, ಆ ವರ್ಗೀಕರಣಕ್ಕೆ ಚರಾತ್ಮಕ ವರ್ಗೀಕರಣ ಎಂದು ಹೆಸರು. ಅನೇಕ ವೇಳೆ ಗುಣಗಳನ್ನು ಅಳೆದು ಸಂಖ್ಯಾರೂಪದಲ್ಲಿ ಹೇಳುವುದು ಸಾಧ್ಯವಿಲ್ಲ ಅಥವಾ ಸೂಕ್ತವಲ್ಲ. ನಿದರ್ಶನಕ್ಕಾಗಿ, ಗಾಜಿನ ಒಂದು ಹಾಳೆಯಲ್ಲಿ ಬಿರುಕು ಇರಬಹುದು ಅಥವಾ ಇಲ್ಲದಿರಬಹುದು. ಇದು ವಸ್ತುಗಳ ದೋಷಯುಕ್ತ–ದೋಷಮುಕ್ತ ಎಂಬ ದ್ವಿವಿಧ ವರ್ಗೀಕರಣ. ಎರಡೂ ತರದ ವರ್ಗೀಕರಣಗಳಿಗೆ ಹೊಂದಿಕೊಳ್ಳುವ ನಿಯಂತ್ರಣ ನಕ್ಷೆಗಳಿವೆ. ಗಣಿತೀಯ ಸಂಖ್ಯಾಕಲನಶಾಸ್ತ್ರದಲ್ಲಿ ದತ್ತಾಂಶಗಳ ವಿಶ್ಲೇಷಣೆಗೆ ಉಪಯೋಗಿಸುವ ಹೆಚ್ಚಿನ ಎಲ್ಲ ತಂತ್ರಗಳನ್ನು ವಸ್ತುಗುಣದ ನಿಯಂತ್ರಣಕ್ಕೆ ಉಪಯೋಗಿಸಿಕೊಳ್ಳಬಹುದು. ಇಂಥ ಎಲ್ಲ ತಂತ್ರಗಳ ಉಪಯೋಗದ ಸಮಗ್ರತೆಯನ್ನು ಸಂಖ್ಯಾಕಲನೀಯ ಗುಣನಿಯಂತ್ರಣ ಎನ್ನಬಹುದು. ಆಚರಣೆಯಲ್ಲಿ ನಾಲ್ಕು ವಿಭಿನ್ನ ಆದರೆ ಸಂಬಂಧಿತ ತಂತ್ರಗಳ ಬಳಕೆ ವ್ಯಾಪಕವಾಗಿದೆ.

**1 ಚರಾತ್ಮಕ ವರ್ಗೀಕರಣಕ್ಕೆ ಸರಿಹೊಂದುವ ನಿಯಂತ್ರಣ ನಕ್ಷೆಗಳು ($\bar{X}$ ಮತ್ತು $\bar{R}$ ಅಥವಾ $X$ ಮತ್ತು σ–ನಕ್ಷೆಗಳು)**. ಪರೀಕ್ಷೆಗೆ ಒಳಪಟ್ಟಿರುವ ವಸ್ತುಗುಣವನ್ನು $X$ ಎಂದು ಸೂಚಿಸೋಣ. ಸಮಷ್ಟಿಯಲ್ಲಿ (ಯೂನಿವರ್ಸ್) $X$ನ ಸಂಭಾವ್ಯತಾ ವಿತರಣೆ ನಿರೀಕ್ಷೆ (ಎಕ್ಸ್‌ಪೆಕ್ಟೆಡ್ ವ್ಯಾಲ್ಯೂ) $\bar{X}'$ ಮತ್ತು ವಿಚರಣೆ (ವೇರಿಯನ್ಸ್) $\sigma'^2$ ಇರುವ ಪ್ರಸಾಮಾನ್ಯ ವಿತರಣೆ (ನಾರ್ಮಲ್ ಡಿಸ್ಟ್ರಿಬ್ಯೂಷನ್) ಎಂದು ಭಾವಿಸೋಣ. ಈ ಸಮಷ್ಟಿಯಿಂದ ಪ್ರತಿಯೊಂದರಲ್ಲಿ $n$ ವಸ್ತುಗಳಿರುವ $k$ ಉಪಗುಂಪುಗಳನ್ನು ಆರಿಸಲಾಗಿದೆ, ಉಪಗುಂಪು i ಯಲ್ಲಿರುವ ವಸ್ತು jಯ ಗುಣದ ಮೌಲ್ಯ $X_{ij}\left(j=1,2,\cdots,n\,;\, i=1,2,\cdots k\right)$

$$\bar{X}_i=\frac{1}{n}\sum_{j=1}^{n}X_{ij} \quad , \quad i=1,2,\cdots,k$$

$$\bar{\bar{X}}=\frac{1}{k}\sum_{i=1}^{k}\bar{X}_i$$

$$R_i = X_{i(max)} - X_{i(min)} \quad , \quad i=1,2,\cdots,k$$

=ಉಪಗುಂಪು $i$ ಯಲ್ಲಿ ಮೌಲ್ಯಗಳ ವ್ಯಾಪ್ತಿ

$$\bar{R}=\frac{1}{k}\sum_{i=1}^{k}R_i$$

$$\sigma_i^{\,2}=\frac{1}{n}\sum_{i=1}^{n}\left(X_{ij}-\bar{X}_i\right)^2, \quad i=1,2,\cdots,k$$

$$\bar{\sigma}=\frac{1}{k}\sum_{i=1}^{k}\sigma_i$$

$\bar{X}$–ನಕ್ಷೆಯಲ್ಲಿ $\bar{X}_i$ ಯು ಮೌಲ್ಯಗಳನ್ನು ಗುರುತಿಸಲಾಗುವುದು. $\left(\bar{X}' \mp 3\sigma'/\sqrt{n}\right)$ ಗಳು $\bar{X}_i$ ಯ ಮೌಲ್ಯಗಳಿಗೆ ಸ್ವಾಭಾವಿಕ ಪರಿಮಿತಿಗಳು. ಹೀಗಾಗಿ $\bar{X}_i$ ಯ ಮೌಲ್ಯಕ್ಕೆ $\left(\bar{X}' - 3\sigma'/\sqrt{n}\right)$ ಎಂಬುದನ್ನು ಕನಿಷ್ಠ ನಿಯಂತ್ರಣ ಪರಿಮಿತಿ (ಕ.ನಿ.ಪ. $\bar{X}$) ಮತ್ತು $\left(\bar{X}' + 3\sigma'/\sqrt{n}\right)$ ಎಂಬುದನ್ನು ಗರಿಷ್ಠ ನಿಯಂತ್ರಣ ಪರಿಮಿತಿ (ಗ.ನಿ.ಪ. $\bar{X}$) ಆಗಿ ಉಪಯೋಗಿಸಬಹುದು. $\bar{X}'$ ಎಂಬುದು $\bar{X}$– ನಕ್ಷೆಯಲ್ಲಿ ಮಧ್ಯರೇಖೆ. ನಿರ್ದಿಷ್ಟ ಕಾರಣಗಳ ಇರುವಿಕೆಯನ್ನು ಇಂಥ ನಕ್ಷೆಯಲ್ಲಿ ಕೆಳಗಿನ ವೈಶಿಷ್ಟ್ಯಗಳು ತೋರಿಸುತ್ತವೆ.

(a) ಗ.ನಿ.ಪ. $\bar{X}$ನ ಮೇಲಿರುವ ಬಿಂದುಗಳು

(b) ಕ.ನಿ.ಪ $\bar{X}$ನ ಕೆಳಗಿರುವ ಬಿಂದುಗಳು

(c) ಮಧ್ಯರೇಖೆ $\bar{X}$ನ ಒಂದೇ ಪಾರ್ಶ್ವದಲ್ಲಿ ಇರುವ ಹಲವು ಬಿಂದುಗಳ ಅವಿರತ ಸರಣಿ. ಉದಾಹರಣೆಗೆ 14 ಬಿಂದುಗಳ ಪೈಕಿ 12 ಅಥವಾ ಅದಕ್ಕಿಂತ ಹೆಚ್ಚು ಬಿಂದುಗಳ ಸರಣಿ.

$\bar{X}', \sigma'$ ಗಳ ಮೌಲ್ಯಗಳು ಅವ್ಯಕ್ತವಾಗಿರುವಾಗ ಅವುಗಳ ಅಂದಾಜು ಮೌಲ್ಯಗಳಾಗಿ ಅನುಕ್ರಮವಾಗಿ $\bar{\bar{X}}, \;\; \bar{R}/d_2$ ಗಳನ್ನು ಉಪಯೋಗಿಸುತ್ತೇವೆ. ಗುಣಾಂಕ $d_2$ರ ಮೌಲ್ಯಗಳನ್ನು ಕೊಡುವ ಮುದ್ರಿತ ಕೋಷ್ಟಕಗಳಿವೆ.

$R$–ನಕ್ಷೆ ಉಪಗುಂಪುಗಳ ವ್ಯಾಪ್ತಿಗಳನ್ನು ತೋರಿಸುತ್ತದೆ. ಇದರಲ್ಲಿ ಮಧ್ಯರೇಖೆ $_R = \bar{R}$ ಕ.ನಿ.ಪ $R = D_3\bar{R}$ ಮತ್ತು ಗ.ನಿ.ಪ. $R = D_4\bar{R}$. $\sigma$ – ನಕ್ಷೆಯಲ್ಲಿ ಮಧ್ಯರೇಖೆ $\sigma = \bar{\sigma}$; ಕ.ನಿ.ಪ $\sigma = B_3\bar{\sigma}$; ಗ.ನಿ.ಪ. $= B_4\bar{\sigma}$ ಗುಣಾಂಕಗಳಾದ $D_3, D_4, B_3$ ಮತ್ತು $B_4$ಗಳ ಮೌಲ್ಯಗಳನ್ನು ಕೊಡುವ ಮುದ್ರಿತ ಕೋಷ್ಟಕಗಳಿವೆ. $R$ ಮತ್ತು $\sigma$ – ನಕ್ಷೆಗಳೆರಡೂ ಮೌಲ್ಯಗಳ ಚದರಿಕೆಯನ್ನು (ಡಿಸ್ಪರ್ಶನ್) ತೋರಿಸುವ ನಕ್ಷೆಗಳಾದ್ದರಿಂದ ಆಚರಣೆಯಲ್ಲಿ ಅವುಗಳ ಪೈಕಿ ಯಾವುದಾದರೂ ಒಂದನ್ನೇ ಬಳಸುವುದು ರೂಢಿ. ಅದರಲ್ಲೂ $R$–ನಕ್ಷೆಯ ಉಪಯೋಗವೇ ಜಾಸ್ತಿ. ಕೆಲವೊಂದು ವಿಶಿಷ್ಟ ಸಂದರ್ಭಗಳಿಗೆ ಹೊಂದಿಕೊಳ್ಳುವ $\bar{X}, R$ ಮತ್ತು $\sigma$–ನಕ್ಷೆಗಳ ರೂಪಾಂತರಗಳಿವೆ.

**(2) $p$ – ನಕ್ಷೆ:** ಒಂದು ವಸ್ತುವಿನಲ್ಲಿ ನಿಗದಿಮಾಡಿದ ಅರ್ಹತೆಗಳು ಇಲ್ಲದಿದ್ದರೆ ಅದನ್ನು ದೋಷಯುಕ್ತ ಎನ್ನುತ್ತೇವೆ. ಅದರಲ್ಲಿ ಅಂಥ ಅರ್ಹತೆಗಳು ಇದ್ದರೆ ಅದು ದೋಷಮುಕ್ತ. ಯಾವುದೇ ಒಂದು ಪರೀಕ್ಷಾ ವಿಧಾನದಲ್ಲಿ ದೊರೆತ ದೋಷಯುಕ್ತ ವಸ್ತುಗಳ ಸಂಖ್ಯೆಯನ್ನು ಪರೀಕ್ಷಿಸಲ್ಪಟ್ಟ ವಸ್ತುಗಳ ಒಟ್ಟು ಸಂಖ್ಯೆಯಿಂದ ಭಾಗಿಸಿದರೆ ಸಿಗುವ ಭಿನ್ನರಾಶಿ $p$, $p$- ನಕ್ಷೆಯಲ್ಲಿ ಈ ಭಿನ್ನರಾಶಿಯ ಮೌಲ್ಯಗಳನ್ನು ಗುರುತಿಸಲಾಗುವುದು. ಈ ನಕ್ಷೆಯ ಸೈದ್ಧಾಂತಿಕ ತಳಹದಿ ದ್ವಿಪದಸಂಭಾವ್ಯತಾ ವಿತರಣೆ (ಬೈನಾಮಿಯಲ್ ಪ್ರಾಬೆಬಿಲಿಟಿ ಡಿಸ್ಟ್ರಿಬ್ಯೂಷನ್). ಪರೀಕ್ಷಿಸಲ್ಪಟ್ಟ ವಸ್ತುಗಳ ಸಂಖ್ಯೆ $n$ ಆಗಿದ್ದು ದೊರೆತ ದೋಷಯುಕ್ತ ವಸ್ತುಗಳ ಸಂಖ್ಯೆ $d$ ಆಗಿದ್ದರೆ $p$ ತೆಗೆದುಕೊಳ್ಳ ಬಹುದಾದ ಮೌಲ್ಯಗಳು, $0, \frac{1}{n}, \frac{2}{n}, \cdots \frac{d}{n}, \cdots, 1$ ಮತ್ತು ಅನುರೂಪವಾದ ಸಂಭಾವ್ಯತೆಗಳು $\left[p' + (1-p')\right]^n$ ನ ದ್ವಿಪದ ವಿಸ್ತರಣೆಯ ಅನುಕ್ರಮಪದಗಳು.

ಇಲ್ಲಿ $p'$= ಉತ್ಪಾದನಾ ವಿಧಾನದಲ್ಲಿ ದೋಷಯುಕ್ತ ವಸ್ತುಗಳ ಪ್ರಮಾಣ. ಆಗ ಮಧ್ಯರೇಖೆ $p = p'$ ಕ.ನಿ.ಪ. $p = p' - 3\sqrt{\frac{p'(1-p')}{n}}$, ಗ.ನಿ.ಪ. $p = p' + 3\sqrt{\frac{p'(1-p')}{n}}$ . $p'$ ಅವ್ಯಕ್ತವಾಗಿರುವಾಗ ಅದನ್ನು $\overline{p}$ =ಒಟ್ಟು ದೊರೆತ ದೋಷಯುಕ್ತ ವಸ್ತುಗಳ ಪ್ರಮಾಣ ಎಂದು ಅಂದಾಜು ಮಾಡಬಹುದು. $np$ – ನಕ್ಷೆ $p$ – ನಕ್ಷೆಯ ಒಂದು ರೂಪಾಂತರ. ಅದು ದೋಷಯುಕ್ತ ವಸ್ತುಗಳ ಸಂಖ್ಯೆ $np\,(=d)$ಯನ್ನು ತೋರಿಸುತ್ತದೆ.

**(3) $C$-ನಕ್ಷೆ** : ಯಾವುದೇ ಒಂದು ಪರೀಕ್ಷಾ ವಿಧಾನದಲ್ಲಿ ಒಂದು ವಸ್ತುವಿನಲ್ಲಿ (ಅಥವಾ ವಸ್ತುಗಳ ಒಂದು ಗುಂಪಿನಲ್ಲಿ) ಕಂಡುಹಿಡಿಯಲ್ಪಟ್ಟ ದೋಷಗಳ ಸಂಖ್ಯೆಯನ್ನು $C$ ಎಂದು ಸೂಚಿಸುತ್ತೇವೆ. $C$– ನಕ್ಷೆಯಲ್ಲಿ $C$ಯ ಮೌಲ್ಯಗಳನ್ನು ಗುರುತಿಸಲಾಗುವುದು. ವಸ್ತುವಿನಲ್ಲಿ ದೋಷಗಳಿರಲು ವಿಪುಲ ಅವಕಾಶವಿದ್ದರೂ ಅದರ ಯಾವುದೇ ಒಂದು ಬಿಂದುವಿನಲ್ಲಿ ದೋಷವಿರುವ ಸಂಭಾವ್ಯತೆ ಬಹಳ ಕಡಿಮೆ ಇದ್ದರೆ ಅಂಥ ಸಂರ್ಭದಲ್ಲಿ $C$ ಒಂದು ಪ್ವೊಸೋನ್ ವಿತರಣೆಯುಳ್ಳ ಯಾದೃಚ್ಛಿಕ ಚರ ಎಂದು ಹೇಳಬಹುದು. $C'$ಎಂಬುದು ಈ ವಿತರಣೆಯ ನಿರೀಕ್ಷೆಯಾದರೆ ಆಗ ಮಧ್ಯರೇಖೆ $c = C'$, ಕ.ನಿ.ಪ. $c = C' - 3\sqrt{C^{1}}$ ಮತ್ತು ಗ.ನಿ.ಪ. $c = C' + 3\sqrt{C^{1}}$ . $C^{1}$ ಅವ್ಯಕ್ತವಾಗಿದ್ದರೆ ಅದನ್ನು $\overline{C}$ =ಒಟ್ಟು ದೊರೆತ ದೋಷಗಳ ಸರಾಸರಿ ಸಂಖ್ಯೆ ಎಂದು ಅಂದಾಜು ಮಾಡಬಹುದು. $p$ ಮತ್ತು $C$- ನಕ್ಷೆಗಳು ಮತ್ತು ಅವುಗಳ ರೂಪಾಂತರಗಳು ದ್ವಿವಿಧ ವರ್ಗೀಕರಣಕ್ಕೆ ಸೂಕ್ತವಾಗಿವೆ.

ನಿಯಂತ್ರಣನಕ್ಷೆಯ ವಿಧಾನ ಪರಿಣಾಮಕಾರಿಯಾಗಬೇಕಾದರೆ ಯಾವುದೇ ಒಂದು ಉಪಗುಂಪಿನಲ್ಲಿರುವ ವಸ್ತುಗಳ ಗುಣದ ಮೌಲ್ಯಗಳಲ್ಲಿ ಏರಿಳಿತಕ್ಕೆ ಆದಷ್ಟು ಕಡಿಮೆ ಅವಕಾಶ ಇದ್ದು ಏರಿಳಿತಗಳು ಉಪಗುಂಪುಗಳ ನಡುವೆ ಹಂಚಿಹೋಗಬೇಕು. ಶೂಹಾರ್ಟ್ ಇವನ್ನು ಪರಿಮೇಯ ಉಪಗುಂಪುಗಳು ಎಂದು ಕರೆದಿದ್ದಾನೆ. G¥ÀÄAiÀÄ¥ÀÄUÀÄgÀ Àª ÀÄUÀÄDzÀÀ ÀSÉ $n = 4$ಎಂದೂ ಸೂಚಿಸಿದ್ದಾನೆ. ಬಳಕೆಯಲ್ಲಿ $n = 5$ರ ಉಪಯೋಗ ವ್ಯಾಪಕವಾಗಿದೆ.

**4 ಸ್ವೀಕಾರ ಪ್ರತಿಚಯನ ವಿಧಾನಗಳು (ಆ್ಯಕ್ಸೆಪ್ಟೆನ್ಸ್ ಸ್ಯಾಂಪ್ಲಿಂಗ್ ಪ್ರೊಸೀಜರ್ಸ್):** ವಸ್ತುಗಳನ್ನು ಸ್ವೀಕರಿಸುವ ಮೊದಲು ಅವುಗಳ ಗುಣಮಟ್ಟವನ್ನು ಖಾತ್ರಿಮಾಡಿಕೊಳ್ಳಲು ಉತ್ಪಾದನೆಯ ಹಲವು ಹಂತಗಳಲ್ಲಿ ಮತ್ತು ಕೊನೆಗೆ ಬಳಕೆದಾರರು ಕೊಂಡುಕೊಳ್ಳುವ ಮೊದಲು ಪರೀಕ್ಷಿಸುವ ಪದ್ಧತಿ ಬಳಕೆಯಲ್ಲಿದೆ. ಈ ಉದ್ದೇಶಸಾಧನೆಗೆ ಬಳಸಬಹುದಾದ ವಿವಿಧ ತಂತ್ರಗಳ ಸಮಗ್ರತೆಗೆ ಸ್ವೀಕಾರ ಪ್ರತಿಚಯನ ವಿಧಾನಗಳು ಎಂದು ಹೆಸರು. ಚರಾತ್ಮಕ ಮತ್ತು ದ್ವಿವಿಧ ವರ್ಗೀಕರಣಗಳಿಗೆ ಅನ್ವಯಿಸುವ ಇಂಥ ವಿಧಾನಗಳಿವೆ.

ಸಂಖ್ಯಾಕಲನೀಯ ಗುಣನಿಯಂತ್ರಣ ಅನೇಕ ಉತ್ಪಾದನಾತೊಡಕುಗಳನ್ನು ಗುರುತಿಸಿ ನಿವಾರಿಸಲು ಎಡೆಮಾಡಿಕೊಡುತ್ತದೆ; ವಸ್ತುಗುಣದಲ್ಲಿ ಗಮನಾರ್ಹ ಅಭಿವೃದ್ಧಿಗೆ ಕಾರಣವಾಗುತ್ತದೆ. ಅದೂ ಅಲ್ಲದೆ ಕೆಲವೊಂದು ಏರಿಳಿತಗಳನ್ನು ಅನಿವಾರ್ಯವೆಂದು ಗುರುತಿಸಿ ಅನಾವಶ್ಯಕವಾದ ಪದೇ ಪದೇ ಬದಲಾವಣೆಗಳನ್ನು ತಡೆಯುತ್ತದೆ. ಈ ವಿಧಾನದ ಉಪಯೋಗ ಕೇವಲ ಕೈಗಾರಿಕಾ ರಂಗಕ್ಕೆ ಸೀಮಿತವಾಗಿಲ್ಲ. ವಸ್ತುಗುಣದ ಬಗ್ಗೆ ಆಸಕ್ತಿವಹಿಸಬೇಕಾದ ಎಲ್ಲ ರಂಗಗಳಿಗೆ ಇದರ ವ್ಯಾಪ್ತಿಯಾಗುತ್ತದೆ. **(ಎಸ್.ಟಿ.)**

**ಭಾರತದಲ್ಲಿ ಗುಣನಿಯಂತ್ರಣ:** 1936ರಿಂದೀಚೆಗೆ ಭಾರತದಲ್ಲಿ ಗುಣನಿಯಂತ್ರಣ ಬಳಕೆಗೆ ಬಂದಿದೆ. ಮಹಾಲನೋಬಿಸ್ ಇದರ ಆದ್ಯಪ್ರವರ್ತಕರೆನ್ನಬಹುದು. 1944ರಲ್ಲಿ ಕೇಂದ್ರ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾಮಂಡಲಿ ಸಂಖ್ಯಾಕಲನೀಯ ಗುಣನಿಯಂತ್ರಣದ ಉಪಯೋಗ ಪಡೆಯುವ ಸಾಧ್ಯತೆಯ ಬಗ್ಗೆ ಪರಿಶೀಲನೆ ನಡೆಸಲು ಸಂಖ್ಯಾಸಂಗ್ರಹಣ ದರ್ಜೆ ಮತ್ತು ಗುಣನಿಯಂತ್ರಣ ಮಂಡಲಿಯೊಂದನ್ನು ಸ್ಥಾಪಿಸಿತು. ಇದಾದ ಬಳಿಕ ಭಾರತ ಗುಣಯಂತ್ರಣ ಕ್ಷೇತ್ರದಲ್ಲಿ ಉತ್ತಮಪ್ರಗತಿ ಸಾಧಿಸಿದೆ. ಈಗ ಪ್ರತಿಯೊಂದು ರಾಜ್ಯದಲ್ಲೂ ಸಂಖ್ಯಾಕಲನೀಯ ಗುಣನಿಯಂತ್ರಣ ಕೇಂದ್ರಗಳು ಕೇಂದ್ರಸರ್ಕಾರದ ಸ್ವಾಮ್ಯದಲ್ಲಿ ನಡೆಯುತ್ತಿದ್ದು ಪದಾರ್ಥಗಳ ಗುಣಮಟ್ಟವನ್ನು ನಿಯಂತ್ರಿಸಲು ಮತ್ತು ಸಾಧಿಸಲು ಬಹುವಾಗಿ ಶ್ರಮಿಸುತ್ತಿವೆ. ಭಾರತದಲ್ಲಿ ಈಗಾಗಲೇ ಅನೇಕ ವಸ್ತುಗಳು ಗುಣನಿಯಂತ್ರಣಕ್ಕೊಳಗಾಗಿವೆ. ಅವುಗಳಲ್ಲಿ ಮುಖ್ಯವಾದವು ಸೆಣಬು, ಹೊಗೆಸೊಪ್ಪು, ಉಣ್ಣೆ, ಗಂಧದೆಣ್ಣೆ, ಅಲ್ಯೂಮಿನಿಯಂ ವಸ್ತುಗಳು ಮತ್ತು ಚಹಾರವಾನೆ ಪೆಟ್ಟಿಗೆ. ಪ್ರಪಂಚದಲ್ಲಿ ಗುಣನಿಯಂತ್ರಣದ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವ ದೇಶ ಜಪಾನ್. ಆದ್ದರಿಂದಲೇ ಅದಕ್ಕೆ ಪ್ರಪಂಚದ ಮಾರುಕಟ್ಟೆಯಲ್ಲಿಯೇ ಬಹುಮುಂದುವರಿದಿರುವ ರಾಷ್ಟ್ರಗಳ ಸಂಗಡ ಸ್ಪರ್ಧಿಸಿ ತನ್ನ ವಸ್ತುಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಲು ಸಾಧ್ಯವಾಗಿದೆ. **(ಕೆ.ಎಸ್.ಎಸ್.)**

**ಗುಣಭದ್ರ :** ಆದಿಪುರಾಣಕಾರರಾದ ಜಿನಸೇನರ ಶಿಷ್ಯ; ಉತ್ತರಪುರಾಣದ ಕರ್ತೃ. ತ್ರಿಷಷ್ಟಿಶಲಾಕಾಪುರುಷರ ಚರಿತ್ರೆಯನ್ನು ವಿಸ್ತಾರವಾಗಿ ವರ್ಣಿಸಬೇಕೆಂಬ ಬಯಕೆಯಿಂದ ಗುರು ಜಿನಸೇನರು ಮಹಾಪುರಾಣವನ್ನು ಆರಂಭಿಸಿದರು. ರಾಷ್ಟ್ರಕೂಟ ಅರಸನಾದ ನೃಪತುಂಗನ (ಪ್ರ.ಶ. 9ನೆಯ ಶತಮಾನ) ಆಶ್ರಯದಲ್ಲಿ. ಆದರೆ 42 ಪರ್ವಗಳ 15000 ಶ್ಲೋಕಗಳನ್ನು ಅವರು ರಚಿಸಿದರೂ ಮರಣಕಾಲಕ್ಕೆ ಮೊದಲನೆಯ ತೀರ್ಥಂಕರನಾದ ಆದಿನಾಥನ ಚರಿತ್ರೆಯೇ ಇನ್ನೂ ಮುಗಿದಿರಲಿಲ್ಲ; ಅಷ್ಟು ಬೃಹತ್ತಾದ ಕಲ್ಪನೆ ಜಿನಸೇನರದು. ಗುರುಗಳು ಆರಂಭಿಸಿದ ಮಹಾಕಾರ್ಯವನ್ನು ಸಮರ್ಥವಾಗಿ ಮುಗಿಸಿದ ಮಹಾಕೀರ್ತಿ ಶಿಷ್ಯ ಗುಣಭದ್ರನದು. ಉಳಿದ 23 ತೀರ್ಥಂಕರರ ಚರಿತ್ರೆಯನ್ನೂ ಜೀವಂಧರನೇ ಮುಂತಾದವರ ವೃತ್ತಾಂತವನ್ನೂ ಶಲಾಕಾಪುರುಷರ ಜೀವನವನ್ನೂ ಸಂಕ್ಷಿಪ್ತವಾದರೂ ಸಮಗ್ರವಾಗಿ ನಿರೂಪಿಸಿ, ಮುಂದಿನ ಜೈನಪುರಾಣಕಾರರೆಲ್ಲರಿಗೂ ಏಕಮಾನ್ಯ ಆಕರಗ್ರಂಥವೆನಿಸಿದ ಉತ್ತರಪುರಾಣವನ್ನು ಈತ ಕರ್ನಾಟಕದಲ್ಲಿಯೇ ಬರೆದು ಮುಗಿಸಿದ. ಮುನಿಸುವ್ರತನ ಚರಿತ್ರೆಯ ಅಂಗವಾಗಿ ಜೈನ ರಾಮಾಯಣದ ಕಥಾಭಾಗವೂ ಇಲ್ಲಿಯೇ ಬರುತ್ತದೆ. ಪ್ರಹೀಣಕಾಲದ ಅಭಿರುಚಿಯನ್ನು ಗಮನಿಸಿ, ಈತ ಅತಿ ವಿಸ್ತಾರಕ್ಕೆ ಹೋಗಿಲ್ಲ.

ಆದಿಪುರಾಣದ ಕಡೆಯ 4 ಪರ್ವ (ಮತ್ತು ಮೂರು ಶ್ಲೋಕಗಳು), ಮತ್ತು ಉತ್ತರಪುರಾಣದ ಸುಮಾರು 8,000 ಶ್ಲೋಕಗಳು ಗುಣಭದ್ರನ ರಚನೆ. ಈತನಿಗೆ ಗುರುಭಕ್ತಿ ಅಪಾರ; ಕಬ್ಬಿನಂತೆ ಪೂರ್ವಾರ್ಧವು ರಸವತ್ತಾಗಿರುತ್ತದೆ; ಅದರಂತೆಯೆ ಉತ್ತರಾರ್ಧವು ಆಗಿರಲಿ; ನನ್ನ ಮಾತು ಸವಿಯಾಗಿದ್ದರೆ ಅದಕ್ಕೆ ಗುರುಗಳ ಮಹಿಮೆಯೇ ಕಾರಣ–ಎನ್ನುತ್ತಾನೆ, ಗುಣಭದ್ರ. ಉತ್ತರಪುರಾಣದಲ್ಲಿ ಕಥಾಭಾಗಕ್ಕೆ, ಘಟನಾಬಾಹುಲ್ಯಕ್ಕೆ, ಪ್ರಾಧಾನ್ಯವಿದ್ದರೂ ವರ್ಣನಾಚಮತ್ಕಾರ ಕಡಿಮೆಯಾಗಿಲ್ಲ. ಜಿನಸೇನರ ಸಮಕ್ಕೆ ಬಾರದಿದ್ದರೂ ಕವಿತಾಗುಣದಲ್ಲಿ ಪ್ರಸನ್ನತೆ, ಮಾಧುರ್ಯಗಳಿವೆ. ಹೀಗೆ ಧಾರ್ಮಿಕ ಪುರಾಣವೆಂಬ ದೃಷ್ಟಿಯಿಂದ ಇದು ಪೂಜ್ಯ ಗ್ರಂಥವಾಗಿರುವುದಷ್ಟೇ ಅಲ್ಲ, ಕಥಾಗಾತ್ರದ ದೃಷ್ಟಿಯಿಂದ ಗೌರವಾಸ್ಪದವಾಗಿದೆ. ಕಾವ್ಯಸೌಂದರ್ಯದ ದೃಷ್ಟಿಯಿಂದಲೂ ಆದರಣೀಯವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಈ ಗ್ರಂಥ ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಕನ್ನಡ, ತಮಿಳು, ಗುಜರಾತಿ ಮುಂತಾದ ಭಾರತೀಯ ಭಾಷೆಗಳಲ್ಲೆಲ್ಲ ಮುಂದಿನ ಜೈನಕಾವ್ಯಕಾರರಿಗೆ ಉಪಜೀವ್ಯವಾದ ಆಧಾರಗ್ರಂಥವೆಂಬ ಅದ್ವಿತೀಯ ಪುರಸ್ಕಾರಕ್ಕೆ ಪಾತ್ರವಾಗಿದೆ.

ಉತ್ತರಪುರಾಣವಲ್ಲದೆ ಗುಣಭದ್ರ ಆತ್ಮಾನುಶಾಸನವೆಂಬ ಮತ್ತೊಂದು ಧರ್ಮ–ನೀತಿ–ವೈರಾಗ್ಯಪರ 272 ಸಂಸ್ಕೃತ ವಿವಿಧ ವೃತ್ತದಲ್ಲಿಯ ಪದ್ಯಗಳುಳ್ಳ ಚಿಕ್ಕ ಗ್ರಂಥವನ್ನು ರಚಿಸಿದ್ದಾನೆ. ಇದರ ಮೇಲೆ ಪ್ರಭಾಚಂದ್ರನ ಸಂಸ್ಕೃತ ಟೀಕೆಯು ಉಪಲಬ್ಧವಿದೆ. ಮತ್ತು ಹಲವು ಭಾಷೆಗಳಲ್ಲಿದು ಅನುವಾದಿತವಾಗಿದೆ.

ಉತ್ತರಪುರಾಣದ ಪ್ರಶಸ್ತಿಯಲ್ಲಿ ಶಕ ವರ್ಷ 820 (ಪ್ರ.ಶ. 898)ರಲ್ಲಿ ಸಮಾಪ್ತವಾದ ಉಲ್ಲೇಖವಿದೆ. ಮುಂದೆ ರಾಷ್ಟ್ರಕೂಟ ಅರಸ ಅಕಾಲವರ್ಷ ಕೃಷ್ಣ II (878–914), ಬಂಕಾಪುರದ ಅವನ ಸಾಮಂತ ಲೋಕಾದಿತ್ಯರ ಪ್ರಶಂಸೆಯಿದೆ. ಈ ಕಾಲನಿರ್ದೇಶ ಪುರಾಣರಚನಾ ಕಾಲಕ್ಕೆ ಅನ್ವಯಿಸುವುದೋ ಇಲ್ಲವೆ ಲಿಪಿಕರಣದ ಸಮಾಪ್ತಿಕಾಲಕ್ಕೆ ಅನ್ವಯಿಸುವುದೋ ಸ್ಪಷ್ಟವಿಲ್ಲ. **(ಕಿ.ಕಿ.)**

**ಗುಣರತ್ನಸೂರಿ :** ಅನೇಕ ಶಾಖೋಪಶಾಖೆಗಳಿಂದೊಡಗೂಡಿ ವಿಪುಲವಾಗಿ ಬೆಳೆದಿರುವ ಭಾರತೀಯ ತತ್ತ್ವಶಾಸ್ತ್ರದ ಎಲ್ಲ ವಿಭಾಗಗಳಲ್ಲಿಯೂ ನೈಪುಣ್ಯ ಪಡೆದ ಕೆಲವೇ ವ್ಯಕ್ತಿಗಳಲ್ಲಿ ಒಬ್ಬ. ಕಾಲ ಪ್ರ.ಶ.ಸು. 1343 ರಿಂದ 1418. ತತ್ತ್ವಶಾಸ್ತ್ರದಲ್ಲಿ ಮಾತ್ರವಲ್ಲದೆ ವ್ಯಾಕರಣವೇ ಮುಂತಾದ ಇತರ ಶಾಸ್ತ್ರಗಳಲ್ಲಿಯೂ ಈತನ ಪಾಂಡಿತ್ಯ ಅಗಾಧ. ಈತನ ಸಮಕಾಲೀನವಾದ ಮುನಿಸುಂದರಸೂರಿಯಿಂದ ರಚಿತವಾಗಿರುವ ಗುರ್ವಾವಲಿಯಲ್ಲಿ ಹೇಳಿರುವಂತೆ ವಾದ ವಿದ್ಯೆಯಲ್ಲಿ ಕುಶಲನಾಗಿದ್ದ ಈತ ಅನೇಕ ಪರವಾದಿಗಳನ್ನು ಜಯಿಸಿದ. ತರ್ಕ, ವ್ಯಾಕರಣ, ಸಾಹಿತ್ಯ, ಆಗಮ ಮತ್ತು ಜ್ಯೋತಿಷ್ಯ ವಿದ್ಯೆಗಳಲ್ಲಿ ಈತ ನಿಪುಣ. ಸತತವಾಗಿ ಧರ್ಮ ಪ್ರಭಾವನಾ ಕಾರ್ಯದಲ್ಲಿ ನಿರತನಾಗಿದ್ದು ಶ್ವೇತಾಂಬರ ಜೈನಪಂಥದ ಆಚಾರ್ಯ ಸಂತತಿಯಲ್ಲಿ ಸನ್ಮಾನ್ಯಸ್ಥಾನ ಪಡೆದ ಈತನ ಕಾರ್ಯಕ್ಷೇತ್ರ ಗುಜರಾತ್ ಮತ್ತು ರಾಜಸ್ತಾನಗಳಾಗಿದ್ದುವೆಂದು ತಿಳಿದುಬರುತ್ತದೆ.

ಆಚಾರ್ಯ ಹರಿಭದ್ರಸೂರಿ ವಿರಚಿತ ಷಡ್ದರ್ಶನ ಸಮುಚ್ಚಯಕ್ಕೆ ಈತ ರಚಿಸಿರುವ ತರ್ಕರಹಸ್ಯ ದೀಪಿಕಾ ಎಂಬ ಟೀಕೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ಈತನಿಗಿದ್ದ ಅಸೀಮ ಪಾಂಡಿತ್ಯವನ್ನು ಸಾಕ್ಷೀಕರಿಸುವುದು. ಕ್ರಿಯಾರತ್ನಸಮುಚ್ಚಯ ಇವನ ವ್ಯಾಕರಣಪಾಂಡಿತ್ಯದ ಸಾಕ್ಷಿಯಾಗಿದೆ. ಕಲಾಂತರ್ವಾಚ್ಯ, ಚತುಃಶರಣಾದಿ ಪ್ರಕೀರ್ಣ ಕಾವಚೂರಿ, ಕರ್ಮಗ್ರಂಥ ಅವಚೂರಿ, ಕ್ಷೇತ್ರಸಮಾಸ ಅವಚೂರ್ಣಿ ಮತ್ತು ವಾಸೋಂತಿಕ ವಿತಂಡಾ ವಿಡಂಬನ ಪ್ರಕರಣಗಳು–ಇವು ಈತನ ಆಗಮ ಜ್ಞಾನಸಂಪತ್ತಿಯ ದ್ಯೋತಕಗಳಾಗಿವೆ. **(ಎಂ.ಡಿ.ವಿ.)**

**ಗುಣವರ್ಮ 2 :** ಪುಷ್ಪದಂತ ಪುರಾಣ ಮತ್ತು ಚಂದ್ರನಾಥಾಷ್ಟಕಗಳ ಕರ್ತೃ. ಕವಿ ತನ್ನ ಕೃತಿರಚನೆಯ ಕಾಲದ ಬಗೆಗೆ ತನ್ನ ಬರೆಹಗಳಲ್ಲೆಲ್ಲೂ ನೇರವಾದ ನಿರ್ದೇಶವನ್ನು ಮಾಡಿಲ್ಲ. ಆದರೆ ಈತ 13ನೆಯ ಶತಮಾನದ ಪೂರ್ವಭಾಗದಲ್ಲಿ ಜೀವಿಸಿದ್ದನೆಂಬುದಕ್ಕೆ ಆಧಾರಗಳುಂಟು. 13ನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿದ್ದ ಜನ್ನನನ್ನು ಈತ ಸ್ಮರಿಸಿರುವುದರಿಂದಲೂ 13ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಮಲ್ಲಿಕಾರ್ಜುನ ತನ್ನ ಸೂಕ್ತಿಸುಧಾರ್ಣವದಲ್ಲಿ ಈತನ ಪದ್ಯಗಳನ್ನು ಉದ್ಧರಿಸಿರುವುದರಿಂದಲೂ ಈತನ ಕಾಲ 13ನೆಯ ಶತಮಾನದ ಪೂರ್ವಭಾಗವೆಂದು ನಿಸ್ಸಂದೇಹವಾಗಿ ಹೇಳಬಹುದು. ಈತ ತನ್ನ ಪುಷ್ಪದಂತ ಪುರಾಣದಲ್ಲಿ ಆದರಪೂರ್ವಕವಾಗಿ ಹೆಸರಿಸಿದ ಗುರು ಮುನಿಚಂದ್ರ ಹಾಗೂ ಪೋಷಕ ಶಾಂತಿವರ್ಮನ ಹೆಸರುಗಳು ಪ್ರಶ. 1229ರಲ್ಲಿ ರಚಿತವಾದ ಸೌಂದತ್ತಿಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಈ ಸಂಗತಿಯೂ ಮೇಲೆ ಸೂಚಿಸಿದ ಕಾಲನಿರ್ಣಯಕ್ಕೆ ಪುಷ್ಟಿ ಕೊಡುತ್ತದೆ.

ಪುಷ್ಪದಂತ ಪುರಾಣ ಜೈನ ಸಂಪ್ರದಾಯದಂತೆ ರಚಿತವಾದ ಪುರಾಣಕಾವ್ಯ; ಚಂಪೂಕೃತಿ. ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಒಂಬತ್ತನೆಯವನಾದ ಪುಷ್ಪದಂತನ ಚರಿತ್ರೆ ಈ ಪುರಾಣಕಾವ್ಯದ ಕಥಾವಸ್ತು. ಈ ಕಥಾವಸ್ತು ಗಾತ್ರದಲ್ಲಿ ಕಿರಿದು. ಆದರೆ ಕಥಾನಾಯಕ ಉನ್ನತನೆಂಬ ಕಾರಣದಿಂದ ಕವಿ ಅದನ್ನು ವಿಸ್ತರಿಸಿ 14 ಆಶ್ವಾಸಗಳಾಗಿ ವಿಸ್ತರಿಸಿದ್ದಾನೆ; ಪೋಷಕನೂ ನಾಡಪ್ರಭುವೂ ಆಗಿದ್ದ ಶಾಂತಿವರ್ಮನಿಗೆ ಅದನ್ನು ವಿನಯಪೂರ್ವಕ ಸಮರ್ಪಿಸಿದ್ದಾನೆ. ಗ್ರಂಥದ ಆರಂಭದಲ್ಲಿ ಕೊಂಡ ಕುಂದಾಚಾರ್ಯ ನಿಂದ ಹಿಡಿದು ಸ್ವಗುರುವಾದ ಮುನಿಚಂದ್ರನವರೆಗಿನ ತನ್ನ ಗುರುಪರಂಪರೆಯನ್ನು ಅರುಹಿದ್ದಾನೆ. ಪೂರ್ವದಲ್ಲಿ ಕೃತಿರಚನೆ ಮಾಡಿದಂತೆ ತಿಳಿದುಬಂದ ಸಮಂತಭದ್ರ, ಪೂಜ್ಯಪಾದ, ಕವಿಪರಮೇಷ್ಠಿಗಳ ಹೆಸರುಗಳು ಈ ಗುರುಪರಂಪರೆಯಲ್ಲಿ ಸಮಾವೇಶ ವಾಗಿರುವುದು ಗಮನಾರ್ಹವಾಗಿದೆ. ಪೂರ್ವದ ಕವಿಗಳಲ್ಲಿ ಪಂಪ, ಪೊನ್ನ, ರನ್ನ, ನಾಗಮರ್ಮ, ನಾಗಚಂದ್ರ, ನೇಮಿಚಂದ್ರರನ್ನು ಮಾತ್ರವಲ್ಲದೆ ಹೆಚ್ಚು ಕಡಿಮೆ ಸಮಕಾಲೀನನಾಗಿರಬಹುದಾದ ಜನ್ನ ಕವಿಯನ್ನೂ ಸ್ಮರಿಸಿದ್ದಾನೆ.

ಗುಣವರ್ಮನ ಕಾವ್ಯಬಂಧ ಪ್ರೌಢವಾಗಿದೆ; ಪ್ರಾಸಬದ್ಧವಾಗಿದೆ. ಭಾಷಾಸರಣಿ ತಿಳಿಗನ್ನಡವನ್ನು ಹಿತವಾಗಿ ಒಳಗೊಂಡಿದೆ. ಮೃದುಪದಗತಿಯಲ್ಲಿ ಸುರುಚಿರ ಅರ್ಥವೂ ಅಲ್ಲಲ್ಲಿ ಸೂಸಿದೆ. ಪ್ರಕೃತಿವರ್ಣನೆ ಋತುವರ್ಣನೆಗಳು ಮನೋಹರವಾಗಿವೆ. 13ನೆಯ ಶತಮಾನದ ಹೊತ್ತಿಗಾಗಲೆ ಇಳಿಮುಖವಾಗಿದ್ದ ಚಂಪೂ ಶೈಲಿಯನ್ನು ಮತ್ತೆ ಸಮರ್ಥವಾಗಿ ಕೈಗೆತ್ತಿಕೊಂಡ ಕೀರ್ತಿ ಗುಣವರ್ಮನಿಗೆ ಸಲ್ಲುತ್ತದೆ.

ಚಂದ್ರನಾಥಾಷ್ಟಕದಲ್ಲಿ ಮಹಾಸ್ರಗ್ಧರಾವೃತ್ತದಲ್ಲಿ ರಚಿತವಾದ ಸ್ತುತಿಪದ್ಯಗಳಿವೆ. ಕೊಲ್ಹಾಪುರದ ತ್ರಿಭುವನತಿಲಕ ಜಿನಾಲಯದ ಚಂದ್ರನಾಥನಲ್ಲಿ ಕವಿ ತಳೆದ ಭಕ್ತಿ ಅವುಗಳಲ್ಲಿ ಅಭಿವ್ಯಕ್ತವಾಗಿದೆ. ಚಂದ್ರನಾಥಾಷ್ಟಕದ ಪ್ರತಿ ಪದ್ಯದ ಕೊನೆಯಲ್ಲೂ ಚಂದ್ರನಾಥನ ಹೆಸರು ಬಂದಿದೆಯಲ್ಲದೆ ಎಂಟು ಪದ್ಯಗಳ ಕೊನೆಯಲ್ಲಿ ಬರುವ ಒಂಬತ್ತನೆಯ ಪದ್ಯ '...ಮಾಟ್ಕೆ ಭವ್ಯರ್ಗೆ ಸೌಖ್ಯಾವಹಮಂ ಕೊಲ್ಹಾಪುರಶ್ರೀ ತ್ರಿಭುವನಾಲಂಕೃತಂ ಚಂದ್ರನಾಥಂ' ಎಂದು ಕೊನೆಗೊಳ್ಳುತ್ತದೆ. (ಡಿ.ಎಸ್.ಕೆ.)

**ಗುಣವಾ :** ಬಿಹಾರ ಪ್ರಾಂತ್ಯದ ಪಟಣ ಜಿಲ್ಲೆಯಲ್ಲಿ ಗಯೆಯ ಬಳಿಯಿರುವ ಒಂದು ಜೈನ ಕ್ಷೇತ್ರ. ಇದು ಗಯ-ಪಟಣ ರೈಲುಮಾರ್ಗದಲ್ಲಿ ನವದಾ ರೈಲು ನಿಲ್ದಾಣದಿಂದ 3 ಕಿಮೀ ದೂರದಲ್ಲಿದೆ. ಈ ಕ್ಷೇತ್ರದಲ್ಲಿ ಮಹಾವೀರನ ಗಣಧರನಾದ ಗೌತಮಸ್ವಾಮಿ ನಿರ್ವಾಣವಾದನೆನ್ನಲಾಗಿದೆ. (ಬಿ.ಜಿ.)

**ಗುಣಾಢ್ಯ :** ಖ್ಯಾತ ಬೃಹತ್ಕಥೆಯ ಕರ್ತೃ. ಈ ಬೃಹತ್ಕಥೆ ಪೈಶಾಚೀ ಎಂಬ ಒಂದು ಬಗೆಯ ಪ್ರಾಕೃತಭಾಷೆಯಲ್ಲಿ ರಚಿತವಾಗಿತ್ತು ಎಂದು ತಿಳಿದುಬಂದಿದೆ. ಗ್ರಂಥ ಈಗ ಇಲ್ಲ. ಲುಪ್ತವಾಗಿ ಹೋಗಿದೆ. ಪ್ರಕೃತ ಉಪಲಬ್ಧವಾಗಿರುವುದು ಅದರ ಕೇವಲ ಮೂರು ಸಂಸ್ಕೃತ ಪದ್ಯಾತ್ಮಕ ಸಂಗ್ರಹರೂಪಗಳು-ಮೊದಲನೆಯದು ನೇಪಾಳದ ಬುಧ ಸ್ವಾಮಿಯಿಂದ ಪ್ರಶ. ಒಂಬತ್ತನೆಯ ಶತಮಾನದಲ್ಲಿ ರಚಿತವಾದ ಬೃಹತ್ಕಥಾ ಶ್ಲೋಕಸಂಗ್ರಹ. ಎರಡನೆಯದು ಪ್ರಶ. 1047ರಲ್ಲಿ ಕಾಶ್ಮೀರದ ಕ್ಷೇಮೇಂದ್ರ ರಚಿಸಿದ ಬೃಹತ್ಕಥಾಮಂಜರಿ, ಮೂರನೆಯದು ಪ್ರಶ. 1070ರಲ್ಲಿ ಕಾಶ್ಮೀರದ ಸೋಮದೇವ ಬರೆದ ಕಥಾಸರಿತ್ಸಾಗರ. ಇವುಗಳ ಜೊತೆಗೆ ಪೆರುಂಗತ್ಯೆ ಎಂಬ ತಮಿಳು ರೂಪಾಂತರವೂ ಇದೆ. ಇವುಗಳ ಆಕಾರ ಸ್ವರೂಪಗಳನ್ನು ಪರೀಶೀಲಿಸಿದರೆ ಮೂಲಬೃಹತ್ಕಥೆ ನಿಜವಾಗಿಯೂ ಬೃಹದ್ಗ್ರಂಥವೆಂಬುದನ್ನೂ ಅದು ಅನೇಕಾನೇಕ ಸ್ವಾರಸ್ಯವಾದ ಕಥೆಗಳ ಆಕರವಾಗಿತ್ತೆಂಬುದನ್ನೂ ಮನಗಾಣಬಹುದು. ಅಷ್ಟೇ ಅಲ್ಲದೆ ಆರ್ಯಾಸಪ್ತಶತಿಯ ಕರ್ತೃ ಗೋವರ್ಧನ ಗುಣಾಢ್ಯನನ್ನು ವಾಲ್ಮೀಕಿ ವ್ಯಾಸರ ಪಂಕ್ತಿಯಲ್ಲಿ ಮೂರನೆಯವನನ್ನಾಗಿ ಪರಿಗಣಿಸಿರುವುದೂ ರಾಮಾಯಣ ಮಹಾಭಾರತಗಳಂತೆಯೇ ಬೃಹತ್ಕಥೆಯೂ ಭಾರತೀಯ ಕವಿಗಳಿಗೆ ಉಪಜೀವ್ಯಕಾವ್ಯವಾಗಿರುವುದೂ ಗಮನಾರ್ಹ.

ಗುಣಾಢ್ಯನ ಮತ್ತು ಅವನ ಬೃಹತ್ಕಥಾ ರಚನೆಯ ವಿಚಾರವಾಗಿ ಸೋಮದೇವ ಕಥಾಸರಿತ್ಸಾಗರದಲ್ಲಿ ಹೇಳಿರುವುದು ಹೀಗಿದೆ; ಒಂದು ದಿನ ಶಿವ ಪಾರ್ವತಿಗೆ ಏಕಾಂತವಾಗಿ ಸಪ್ತ ವಿದ್ಯಾಧರ ಚಕ್ರವರ್ತಿಗಳ ಮನೋಹರವಾದ ಕಥೆಗಳನ್ನು ಹೇಳುತ್ತಿದ್ದ. ಅದನ್ನು ಶಿವಗಣಗಳಲ್ಲೊಬ್ಬನಾದ ಪುಷ್ಪದಂತ ಮರೆಯಲ್ಲಿ ನಿಂತು ಕೇಳಿದ್ದಲ್ಲದೆ ತನ್ನ ಹೆಂಡತಿ ಜಯಾ ಎಂಬುವಳಿಗೆ ತಿಳಿಸಿದ. ಜಯಾ ಪಾರ್ವತಿಯ ಚೇಟಿ. ಅವಳು ತನ್ನ ಸಖಿಯರಿಗೆಲ್ಲ ಆ ಕಥೆಯನ್ನು ಹೇಳಿದಳು. ಕ್ರಮೇಣ ಅದು ಕರ್ಣಾಕರ್ಣಿಕೆಯಾಗಿ ಪಾರ್ವತಿಯ ಕಿವಿಗೂ ಬಿತ್ತು. ಆಗ ಅವಳು ಪುಷ್ಪದಂತನನ್ನೂ ಮಧ್ಯೆ ಪ್ರವೇಶಿಸಿದ ಅವನ ಸೋದರ ಮಾಲ್ಯವಂತನನ್ನೂ ಭೂಲೋಕದಲ್ಲಿ ಹುಟ್ಟುವಂತೆ ಶಪಿಸಿಬಿಟ್ಟಳು. ಆಗ ಜಯೆ ಮೊರೆಯಿಡಲು ಪುಷ್ಪದಂತ ತಾನು ಕೇಳಿದ್ದ ಕಥೆಗಳನ್ನು ವಿಂಧ್ಯಾಟವಿಯಲ್ಲಿ ವಾಸಿಸುತ್ತಿದ್ದ ಕಾಣಭೂತಿಯೆಂಬ ಪಿಶಾಚಕ್ಕೆ ಹೇಳಿತಿಳಿಸಿದರೆ ಅವನು ಶಾಪವಿಮುಕ್ತ ನಾಗುವನೆಂದೂ ಮಾಲ್ಯವಂತ ಅದೇ ಕಥೆಗಳನ್ನು ಕಾಣಭೂತಿಯಿಂದ ತಿಳಿದು ಭೂಲೋಕದಲ್ಲಿ ಪ್ರಚುರಪಡಿಸಿದರೆ ಅವನ ಶಾಪವಿಮೋಚನೆ ಆಗುವುದೆಂದೂ ಪಾರ್ವತಿ ಹೇಳಿದಳು. ಅದರಂತೆ ಪುಷ್ಪದಂತ ಕೌಶಾಂಬಿಯಲ್ಲಿ ವರರುಚಿಯಾಗಿ ಹುಟ್ಟಿ ನವನಂದರ ಕೊನೆಯ ಅಮಾತ್ಯನಾದ; ಕೊನೆಗೆ ಅಧಿಕಾರವನ್ನು ತ್ಯಜಿಸಿ, ವಿಂಧ್ಯಾಟವಿಗೆ ಹೋಗಿ, ಕಾಣಭೂತಿಯನ್ನು ಸಂಧಿಸಿ, ಅವನಿಗೆ ಸಪ್ತವಿದ್ಯಾಧರ ಚಕ್ರವರ್ತಿಗಳ ಕಥೆಯನ್ನು ಹೇಳಿ ಶಾಪದಿಂದ ಬಿಡುಗಡೆ ಹೊಂದಿದ. ಮಾಲ್ಯವಂತ ಗುಣಾಢ್ಯನಾಗಿ ಹುಟ್ಟಿ ಪ್ರತಿಷ್ಠಾನದ ರಾಜ ಶಾತವಾಹನನ ಅಮಾತ್ಯನಾದ; ರಾಜನಿಗೆ ಸಂಸ್ಕೃತ ಕಲಿಸುವ ವಿಚಾರವಾಗಿ ಮತ್ತೊಬ್ಬ ಮಂತ್ರಿಯಾದ ಶರ್ವವರ್ಮನೊಡನೆ ಪಣ ತೊಟ್ಟು ಸೋತು, ಆ ಪಣದಂತೆ ತಾನು ಅಲ್ಲಿಂದ ಮುಂದೆ ಸಂಸ್ಕೃತವನ್ನು ಉಪಯೋಗಿಸುವುದಿಲ್ಲವೆಂದು ಶಪಥಮಾಡಿ ರಾಜಸೇವೆಯನ್ನು ತ್ಯಜಿಸಿಬಿಟ್ಟ. ಬಳಿಕ ವಿಂಧ್ಯಾಟವಿಯಲ್ಲಿ ಸುತ್ತಾಡಿ ಕಾಣಭೂತಿಯನ್ನು ಕಂಡು ಅವನಿಂದ ಸಪ್ತವಿದ್ಯಾಧರ ಚಕ್ರವರ್ತಿಗಳ ಕಥೆಯನ್ನು ಕೇಳಿ ತಿಳಿದುಕೊಂಡು ತನ್ನ ಶಪಥದಂತೆ ಸಂಸ್ಕೃತವನ್ನು ಬಳಸದೆ, ಪ್ರಾಕೃತಭಾಷೆಯ ಒಂದು ಪ್ರಭೇದವಾದ ಪೈಶಾಚೀ ಎಂಬ, ಆ ಪ್ರಾಂತ್ಯದ ಆಡುಭಾಷೆಯಲ್ಲಿ ಆ ಕಥೆಗಳನ್ನು ಅಚ್ಚುಮೆಚ್ಚಾದ ರೀತಿಯಲ್ಲಿ ತನ್ನ ರಕ್ತದಿಂದಲೇ ಬರೆದಿಟ್ಟ. ಅಮೋಘವಾದ ಕೃತಿಯನ್ನು ಗುಣಾಢ್ಯನ ಶಿಷ್ಯರು ರಾಜನಿಗೆ ತೋರಿಸಲು ಅವನು ಅದನ್ನು ಓದದೆಯೇ ಅಲ್ಲಗಳೆದುದರಿಂದ ವಿಷಣ್ಣನಾದ ಗುಣಾಢ್ಯ ಆ ಕಥೆಗಳನ್ನು ಒಂದೊಂದಾಗಿ ಅಗ್ನಿಯೊಳಕ್ಕೆ ಎಸೆಯಲಾರಂಭಿಸಿದ; ಶಿಷ್ಯರ ನಿರ್ಬಂಧದಿಂದ ಕೊನೆಯ ಕಥೆಯನ್ನು ಮಾತ್ರ ಬೆಂಕಿಗೆ ಹಾಕಲಿಲ್ಲ. ಹೀಗೆ ಉಳಿದ ಕಥೆಯೇ ಬೃಹತ್ಕಥೆ-ಒಂದು ಲಕ್ಷಗ್ರಂಥಗಳ ಬೃಹತ್ಕೃತಿ. ಪ್ರಚಲಿತವಾಗಿರುವ ಜನಪ್ರಿಯ ಕಥೆಗಳಲ್ಲಿ ಇದೇ ಅತ್ಯಂತ ಪ್ರಾಚೀನ.

ಕೌಶಾಂಬಿಯ ಉದಯನರಾಜನ ಮಗನಾದ ನರವಾಹನದತ್ತನ ಸಾಹಸಗಳ ವೃತ್ತಾಂತವೇ ಬೃಹತ್ಕಥೆಯ ವಸ್ತು. ನರವಾಹನ ಮದನಮಂಜೂಷಿಕಾ ಎಂಬ ವಿದ್ಯಾಧರ ರಾಜಕುಮಾರಿಯನ್ನು ಮದುವೆಯಾದುದು, ಮಾನಸವೇಗ ಅವಳನ್ನು ಅಪಹರಿಸಿದುದು, ತನ್ನ ಗೆಳೆಯನಾದ ಗೋಮುಖನ ಸಹಾಯದಿಂದ ನರವಾಹನ ಅವಳನ್ನು ಪುನಃ ಪಡೆದು ವಿದ್ಯಾಧರ ಚಕ್ರವರ್ತಿಯಾದುದು-ಇದೇ ಕಥೆಯ ಸ್ಥೂಲರೂಪ. ಇದರೊಡನೆ ಅನೇಕ ಉಪಕಥೆಗಳೂ ಅವುಗಳ ವ್ಯೂಹಗಳೂ ಸೇರಿ ಪ್ರಧಾನಕಥೆ ತೀರ ಜಟಿಲವಾಗಿ ಬೃಹದಾಕಾರ ತಾಳಿಬಿಟ್ಟಿದೆ.

ಬೃಹತ್ಕಥೆಯಲ್ಲಿರುವ ಉದಯನಚರಿತವನ್ನು ಭಾಸ ಕಾಳಿದಾಸಾದಿಗಳು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ ಇಲ್ಲವೆ ಬಳಸಿಕೊಂಡಿದ್ದಾರೆ. ಆಂಧ್ರಭೃತ್ಯವಂಶದ ಶಾತವಾಹನ ನನ್ನು ಗುಣಾಢ್ಯ ಆಶ್ರಯದಾತನೆಂದು ಸೋಮದೇವ ಹೇಳಿದ್ದಾನೆ. ಈ ಕಾರಣಗಳಿಂದ ಗುಣಾಢ್ಯ ಪ್ರಶ. ಒಂದನೆಯ ಶತಮಾನದವನೆಂದು ಹೇಳಬೇಕಾಗುತ್ತದೆ. ಬಾಣನೂ ದಂಡಿಯೂ ಬೃಹತ್ಕಥೆಯನ್ನು ಉಲ್ಲೇಖಿಸಿರುವುದರಿಂದ ಅದರ ಕರ್ತೃ ಪ್ರಶ. ಐದನೆಯ ಶತಮಾನಕ್ಕಿಂತ ಹಿಂದಿನವನೇ ಆಗಿರಬೇಕೆಂಬುದರಲ್ಲಿ ಸಂಶಯವಿಲ್ಲ.

ಗುಣಾಢ್ಯನ ಬೃಹತ್ಕಥೆಯ ರಚನೆಗೆ ಬಳಸಿದ ಪೈಶಾಚೀ ಪ್ರಾಕೃತಭಾಷೆ ಗೋದಾವರೀ ತೀರದ ವಿಂಧ್ಯಪ್ರದೇಶ ಭಾಗದಲ್ಲಿ ಬಳಕೆಯಲ್ಲಿತ್ತು. ಆ ಪ್ರದೇಶದ ನೆರೆಯ ಪ್ರತಿಷ್ಠಾನದಲ್ಲೇ ಗುಣಾಢ್ಯ ವಾಸವಾಗಿದ್ದುದು. ಅವನ ತಾಯಿ ಶ್ರುತಾರ್ಥಾ ಎಂಬ ಬ್ರಾಹ್ಮಣಕನ್ಯೆಯೆಂದೂ ತಂದೆ ನಾಗರಾಜ ವಾಸುಕಿಯ ಸಂಬಂಧಿ ಕೀರ್ತಿಸೇನನೆಂದೂ ಕಥಾಸರಿತ್ಸಾಗರದಲ್ಲಿ ಹೇಳಿದೆ **(ನೋಡಿ- ಬೃಹತ್ಕಥೆ).** (ಎಸ್.ಆರ್.)

**ಗುಣೋತ್ತರ ವಿತರಣೆ: ನೋಡಿ – ಜ್ಯಾಮಿತೀಯ ವಿತರಣೆ**

**ಗುತ್ತರು :** ಕರ್ನಾಟಕದಲ್ಲಿ ಆಳಿದ ಮಹಾಮಂಡಲೇಶ್ವರ ಮನೆತನಗಳಲ್ಲಿ ಪ್ರಮುಖವಾದ ಒಂದರ ದೊರೆಗಳು. ಪ್ರಶ.ಸು. 12ನೆಯ ಶತಮಾನದ ಪ್ರಾರಂಭದಿಂದ 13ನೆಯ ಶತಮಾನದ ಕೊನೆಯವರೆಗೆ ಇವರು ಸಾಮಂತರಾಗಿ ಕರ್ನಾಟಕದ ರಾಜಕೀಯದಲ್ಲಿ ಪಾಲ್ಗೊಂಡಿದ್ದರು.

ಗುತ್ತು ಎನ್ನುವ ಪದ ಗುಪ್ತ ಎಂಬ ಸಂಸ್ಕೃತ ಪದದಿಂದ ಬಂದಿರಬೇಕೆಂದು ಅನೇಕ ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಗುತ್ತರ ಶಾಸನಗಳಲ್ಲಿ ಇವರಿಗೆ ಚಂದ್ರಗುಪ್ತ ವಂಶೋದ್ಭವ. ವಿಕ್ರಮಾದಿತ್ಯವಂಶೋದ್ಭವ, ಗುಪ್ತವಂಶತ್ರಿನೇತ್ರ, ಉಜ್ಜಯಿನೀಪುರವಾಧೀಶ್ವರ, ಪಾಟಲೀಪುರವರಾಧೀಶ್ವರ ಎಂಬ ಬಿರುದುಗಳು ಇರುವುದು ಕಾಣಬರುತ್ತದೆ. ಆದ್ದರಿಂದ ಗುತ್ತರು ಗುಪ್ತವಂಶದ ಎರಡನೇ ಚಂದ್ರಗುಪ್ತನ ವಂಶದವರೆಂದು ಇವರು ಮೊದಲು ಉಜ್ಜಯಿನಿಯಲ್ಲಿ ಆಳುತ್ತಿದ್ದರೆಂದು ಕೆಲವರ ಮತ. ವಿಕ್ರಮಶಕೆಯನ್ನು ಸ್ಥಾಪಿಸಿದ ವಿಕ್ರಮಾದಿತ್ಯನೇ ಗುತ್ತರ ಮೂಲ ಪುರುಷ ಎಂದು ಮತ್ತೆ ಕೆಲವರ ವಾದ. ಇವರು ಪಾಟಲೀಪುತ್ರದಲ್ಲಿ ಆಳಿದ ಮೌರ್ಯದೊರೆ ಚಂದ್ರಗುಪ್ತನ ವಂಶಜರಾಗಿದ್ದಿರುವುದು ಸಾಧ್ಯವೆಂದು ಮತ್ತೆ ಕೆಲವರ ಅಭಿಪ್ರಾಯ. ಈ ವಾದಗಳೆಲ್ಲ ನಿಜವಲ್ಲವೆಂದು ಗುತ್ತರದು ಕರ್ನಾಟಕದಲ್ಲಿಯೇ ಬೆಳಕಿಗೆ ಬಂದ ಸಾಮಂತ ರಾಜಮನೆತನವೆಂದು ಇವರ ಮೂಲನಿವಾಸ ಸ್ಥಾನ ಉಜ್ಜಯಿನೀ ಅಥವಾ ಪಾಟಲೀಪುತ್ರವಲ್ಲವೆಂದೂ ಇವರು ಕರ್ನಾಟಕದವರೆಂದೂ ಕೆಲವರ ಅಭಿಪ್ರಾಯ ಪಡುತ್ತಾರೆ. ಈ ವಾದದಲ್ಲಿಯೇ ಹೆಚ್ಚು ತಿರುಳಿರುವಂತೆ ತೋರುತ್ತದೆ. ಗುತ್ತವೊಳಲು ಇವರ ಸ್ಥಳ. ಈಗಿನ ರಾಣೆಬೆನ್ನೂರು, ಕರಜಗಿ ಮುಂತಾದ ಪ್ರದೇಶಗಳನ್ನೊಳಗೊಂಡ ಗುತ್ತವೊಳಲು ಪ್ರಾಂತ್ಯಕ್ಕೆ ಗುತ್ತವೊಳಲು ನಗರ ರಾಜಧಾನಿಯಾಗಿತ್ತು. ಈ ನಗರ ಕರಜಗಿಗೆ ಪೂರ್ವದಲ್ಲಿ 10 ಕಿಮೀ ದೂರದಲ್ಲಿದೆ.

ಮಹಾಗುತ್ತ ಅಥವಾ ಮಾಗುತ್ತನೇ ಗುತ್ತವಂಶದ ಮೊದಲನೆಯ ದೊರೆ. ಇವನು ಬಹುಶಃ ಪ್ರಶ. 11ನೆಯ ಶತಮಾನದಲ್ಲಿ ಚಾಳುಕ್ಯರ ಸಾಮಂತನಾಗಿದ್ದಿರಬೇಕೆಂದು ಊಹೆ. ಇವನ ಅನಂತರ ಇವನ ಮಗನಾದ 1ನೆಯ ಗುತ್ತ ರಾಜನಾದ. ಇವನು ಹಾನುಗಲ್ ಕದಂಬರ ಮೇಲೆ ಯುದ್ಧ ಮಾಡಿ ಅವರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಇವನಾದ ಅನಂತರ ಇವನ ಮಗನಾದ ಮಲ್ಲಿದೇವ ರಾಜನಾದ. ಇವನೊಬ್ಬ ಪ್ರಸಿದ್ಧರಾಜ. ಇವನು ಬನವಾಸಿಯ ರಾಜ್ಯಪಾಲ ಗೋವಿಂದರಸನ ಆಶ್ರಯದಲ್ಲಿ ಗುತ್ತವೊಳಲಿನಲ್ಲಿ ಆಳುತ್ತಿದ್ದ. ಮಲ್ಲಿದೇವ ಸಾಮಂತನಾಗಿಯೇ ಇದ್ದ. ಇವನ ಸಮಕಾಲೀನ ಹೊಯ್ಸಳ ದೊರೆ ವಿಷ್ಣುವರ್ಧನ ಇವನನ್ನು ಜಯಿಸಿದಂತೆ ಕಾಣಬರುವುದಿಲ್ಲ. 1139ರಲ್ಲಿ ಇವನು ಮರಣಹೊಂದಲು ಇವನ ಮಗನಾದ ಮೊದಲನೆಯ ವಿಕ್ರಮಾದಿತ್ಯ ರಾಜನಾದ. ಈ ವೇಳೆಗೆ ಕರ್ನಾಟಕದಲ್ಲಿ ಅನೇಕ ರಾಜಕೀಯ ಬದಲಾವಣೆಗಳುಂಟಾಗಿದ್ದುವು. ಚಾಳುಕ್ಯರ ಪ್ರಾಬಲ್ಯ ಕಡಿಮೆಯಾಗಿ, ಕಲ್ಯಾಣದ ಕಳಚೂರ್ಯರು ತಲೆ ಎತ್ತುತ್ತಿದ್ದರು. ಬಹುಶಃ ವಿಕ್ರಮಾದಿತ್ಯ, ಇತರ ಸಾಮಂತ ರಾಜರಂತೆ ಚಾಳುಕ್ಯರನ್ನು ಕಡೆಗಣಿಸಿ ಕಳಚೂರ್ಯರ ಸಾಮಂತನಾಗಿರಬೇಕು. ಇವನು ಸು. 1170ರಲ್ಲಿ ಮರಣಹೊಂದಿದ. ಇವನ ಮಗನಾದ 1ನೆಯ ಜೋಯಿದೇವ ರಾಜನಾದ. 1179 ಮತ್ತು 1181ರಲ್ಲಿ ಇವನು ಬರೆಯಿಸಿದ ಎರಡು ಶಾಸನಗಳಲ್ಲಿ ಇವನು ಕಳಚೂರ್ಯ ದೊರೆಗಳಾದ ಸಂಕಮದೇವ ಮತ್ತು ಆಹವಮಲ್ಲರ ಅಧೀನದಲ್ಲಿ ಮಹಾ ಮಂಡಲೇಶ್ವರನಾಗಿದ್ದನೆಂದು ಹೇಳಿದೆ. ಇಷ್ಟರಲ್ಲಿ ಕಳಚೂರ್ಯರ ಪ್ರಾಬಲ್ಯ ಕಡಿಮೆಯಾಗಿ ಚಾಳುಕ್ಯರು ಮತ್ತೆ ತಲೆ ಎತ್ತಿದ್ದರು. ಇದನ್ನು ಗಮನಿಸಿದ ಜೋಯಿದೇವ ಕಳಚೂರ್ಯರನ್ನು ಕಡೆಗಣಿಸಿ, ಚಾಳುಕ್ಯರ ಸಾಮಂತನಾದ. ಇವನ ರಾಜ್ಯಕ್ಕೆ ನಾಗರಖಂಡ ಪ್ರಾಂತ್ಯದ ಕೆಲವು ಭಾಗಗಳು ಸೇರಿದ್ದುವು.

ಜೋಯಿದೇವನ ಮರಣಾನಂತರ ಅವನ ಸಹೋದರನ ಮಗನಾದ 2ನೆಯ ವಿಕ್ರಮಾದಿತ್ಯ 1185ರಲ್ಲಿ ರಾಜನಾದ. ಇವನು ಗುತ್ತರಲ್ಲೆಲ್ಲ ಅತ್ಯಂತ ಶ್ರೇಷ್ಠನಾದ ಮಹಾಮಂಡಲೇಶ್ವರ. ಇವನು ರಾಜನಾದಾಗ ಕರ್ನಾಟಕದ ರಾಜಕೀಯದಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳನೂ ಸೇವುಣ 5ನೆಯ ಭಿಲ್ಲಮನೂ ತಮ್ಮ ತಮ್ಮಲ್ಲೇ ಯುದ್ಧಗಳನ್ನು ಮಾಡುತ್ತಿದ್ದರು. ಇದರಿಂದ ಇವರಿಬ್ಬರಿಗೂ ಗುತ್ತರನ್ನು ಸೋಲಿಸುವಷ್ಟು ವ್ಯವಧಾನವಿರಲಿಲ್ಲ. ಇದನ್ನು ಗಮನಿಸಿದ ವಿಕ್ರಮಾದಿತ್ಯ ಸ್ವತಂತ್ರನಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದ. ಇವನ ಈ ಕಾಲದ ಶಾಸನಗಳಲ್ಲಿ ಹೊಯ್ಸಳರ ಅಥವಾ ಸೇವುಣರಾಜರ ಉಲ್ಲೇಖವೇ ಕಾಣುವುದಿಲ್ಲ. 1233ರಲ್ಲಿ ಬರೆಸಲಾದ ಕನಕವಳ್ಳಿಯ ಶಾಸನದಲ್ಲಿ ಮಹಾಮಂಡಲೇಶ್ವರ ವಿಕ್ರಮಾದಿತ್ಯ ತನ್ನ ಪ್ರಧಾನಿಯೊಂದಿಗೆ ಬನವಾಸಿ ನಾಡನ್ನು ಆಳುತ್ತಿದ್ದನೆಂದು ಹೇಳಿದೆ. ಬಹುಶಃ ಇವನು ತನ್ನ ಮರಣದವರೆಗೂ ಸ್ವತಂತ್ರನಾಗಿಯೇ ಇದ್ದನೆಂದು ತೋರುತ್ತದೆ. ಇವನಿಗೆ ಪಟ್ಟಮಹಾದೇವಿ ಎಂಬ ರಾಣಿಯಿಂದ ಜೋಯಿದೇವ, ವಿಕ್ರಮಾದಿತ್ಯ ಮತ್ತು ತುಳುವಲಾದೇವಿ ಎಂಬ ಮಕ್ಕಳಿದ್ದರು. ವಿಕ್ರಮಾದಿತ್ಯನ ಮರಣಾನಂತರ 2ನೆಯ ಜೋಯಿದೇವ 1233ರಲ್ಲಿ ದೊರೆಯಾದ. ಈ ಸಮಯದಲ್ಲಿ ಸೇವುಣ ಸಿಂಘಣ ಅತ್ಯಂತ ಬಲಿಷ್ಠನಾಗಿ ಕರ್ನಾಟಕದ ಬಹು ಭಾಗವನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದ. ಗುತ್ತ ಎರಡನೆಯ ಜೋಯಿದೇವನನ್ನು ಸಿಂಘಣನ ಮಂತ್ರಿಯಾದ ಬೀಚ ತನ್ನ ಅಧೀನಕ್ಕೆ ತಂದ. 1238ರಲ್ಲಿ ಬರೆಸಲಾದ ಶಾಸನವೊಂದರಲ್ಲಿ 2ನೆಯ ಜೋಯಿದೇವ ಸಿಂಘಣನ ಪಾದಪದ್ಮೋಪ ಜೀವಿ ಎಂದು ಹೇಳಿಕೊಂಡಿದ್ದಾನೆ. ಸೇವುಣರ ಪರವಾಗಿ ಸಿಂಘಣ ತನ್ನ ದಂಡ ನಾಯಕ ಚಿಕ್ಕದೇವನನ್ನು ಗುತ್ತವೊಳಲಿನಲ್ಲಿ ಇರಿಸಿದ. ಜೋಯಿದೇವ 1248ರಲ್ಲಿ ಮರಣಹೊಂದಿದಾಗ ಅವನ ತಮ್ಮನಾದ 3ನೆಯ ವಿಕ್ರಮಾದಿತ್ಯ ಮಹಾಮಂಡಲೇಶ್ವರನಾದ. ಈತ ಸೇವುಣ ದೊರೆ ಕೃಷ್ಣನ ಆಶ್ರಯದಲ್ಲಿದ್ದ. 3ನೆಯ ಗುತ್ತದೇವ, ಹಿರಿಯದೇವ ಮತ್ತು 3ನೆಯ ಜೋಯಿದೇವ ಇವರು ವಿಕ್ರಮಾದಿತ್ಯನಿಗೆ ರಾಣಿ ಮೈಲಾಳದೇವಿಯಿಂದ ಜನಿಸಿದ ಮಕ್ಕಳು. ವಿಕ್ರಮಾದಿತ್ಯನ ಮರಣಾನಂತರ ಇವನ ಜ್ಯೇಷ್ಠಪುತ್ರ 3ನೆಯ ಗುತ್ತ 1259ರಲ್ಲಿ ಮಹಾಮಂಡಲೇಶ್ವರನಾದ. ಇವನು ಸ್ವಲ್ಪಕಾಲದಲ್ಲಿಯೇ ಸೇವುಣ ಕೃಷ್ಣನ ಆಧಿಪತ್ಯದಿಂದ ಸ್ವತಂತ್ರನಾಗಲು ಹವಣಿಸಿದ. ಆದರೆ ಕೃಷ್ಣ ತನ್ನ ಸೇನಾಧಿಪತಿಗಳನ್ನು ಕಳುಹಿಸಿ ಈ ಪ್ರಯತ್ನವನ್ನು ಅಡಗಿಸಿದ. ಇಷ್ಟರಲ್ಲಿ ಸೇವುಣ ಕೃಷ್ಣ ಮರಣ ಹೊಂದಿ ಮಹಾದೇವ ಸೇವುಣ ರಾಜನಾಗಿದ್ದ. ಮಹಾದೇವ ಸಾಳುವ ತಿಕ್ಕಮನೆಂಬ ದಳಪತಿಯ ನೇತೃತ್ವದಲ್ಲಿ ಹೊಯ್ಸಳರ ಮೇಲೆ ಒಂದು ಸೈನ್ಯವನ್ನು ಕಳುಹಿಸಿದ. ಈ ಸೈನ್ಯ ಗುತ್ತವೊಳಲಿಗೆ ಬಂದು ಅಲ್ಲಿ ತಂಗಿತು. ಇಷ್ಟರಲ್ಲಿ ಸೇವುಣ ರಾಮಚಂದ್ರ ದೊರೆಯಾಗಿದ್ದ. ರಾಮಚಂದ್ರನ ಆದೇಶದಂತೆ ಗುತ್ತರಾಜ ಸಾಳುವ ತಿಕ್ಕಮನಿಗೆ ಸೈನ್ಯ ಸಹಾಯವನ್ನು ಒದಗಿಸಿದ. ಈ ಯುದ್ಧದಲ್ಲಿ ಸಹಾಯ ನೀಡುವುದರಲ್ಲಿಯೇ ಗುತ್ತನ ಕಾಲವೆಲ್ಲ ಕಳೆಯಿತು. ಸು. 1280ರಲ್ಲಿ ಇವನು ಮರಣಹೊಂದಿದ. ಇವನ ಅನಂತರ ಇವನ ಸಹೋದರರು ಮಹಾಮಂಡಲೇಶ್ವರ ರಾಜರಾಗಿದ್ದರೇ ಎಂಬುದು ಖಚಿತವಾಗಿ ಗೊತ್ತಿಲ್ಲ. ಆದರೆ ಇವನ ತಮ್ಮ 3ನೆಯ ಜೋಯಿದೇವನ ಮಗ 4ನೆಯ ವಿಕ್ರಮಾದಿತ್ಯ 1283ರಲ್ಲಿ ಸೇವುಣ ರಾಮಚಂದ್ರನ ಆಶ್ರಯದಲ್ಲಿದ್ದನೆಂದು ಹಿರೇಬಿದ್ರಿ ಎಂಬಲ್ಲಿ ದೊರಕಿರುವ ಶಾಸನದಿಂದ ಗೊತ್ತಾಗುತ್ತದೆ. ಇವನು ತನ್ನ ರಾಣಿ ಪದ್ಮಲಾದೇವಿಯ ಸಮೇತ ಕಲ್ಲಿನಾಥ ದೇವಾಲಯಕ್ಕೆ ಕೆಲವು ದತ್ತಿಗಳನ್ನು ಬಿಟ್ಟ ವಿಚಾರವನ್ನು ಈ ಶಾಸನ ತಿಳಿಸುತ್ತದೆ. ಈ ವಿಕ್ರಮಾದಿತ್ಯ ಎಲ್ಲಿಯವರೆಗೆ ಆಳಿದನೆಂಬುದು ತಿಳಿದಿಲ್ಲ. ಬಹುಶಃ ರಾಮಚಂದ್ರ ಮಹಮ್ಮದೀಯರಿಗೆ ಸೋತ ಅನಂತರ ಗುತ್ತರ ವಂಶವೂ ನಾಶವಾಗಿರಬೇಕೆಂದು ಊಹಿಸಬಹುದು.




(ಎ.ವಿ.ಎನ್.)

**ಗುದ** : ಜಠರಗರುಳಿನ ನಾಳದ ಕೆಳಕೊನೆಯ ಕಂಡಿ (ಏನಸ್). ಇದನ್ನು ಸ್ನಾಯುಗಳು ಸುತ್ತುವರಿದಿವೆ. ಮಲ ಹೊರದೂಡಿಕೆಯನ್ನು ಹತೋಟಿಗೊಳಿಸುವ ಈ ಸ್ನಾಯುಗಳಿಗೆ ಗುದವನ್ನು ಕುಗ್ಗಿಸುವ ಸ್ನಾಯು (ಏನಲ್ ಸ್ಫಿಂಕ್ಟರ್) ಎಂದು ಹೆಸರಿಸಲಾಗಿದೆ. ಇದು ಕುಗ್ಗಿದಾಗ ಒಳಪಕ್ಕದಲ್ಲಿರುವ ಲೋಳೆ ಪೊರೆಯೂ ಹೊರಗಡೆ ಇರುವ ಚರ್ಮವೂ ಸುಕ್ಕುಗಟ್ಟುತ್ತವೆ. ಗುದದೊಳಗಿರುವ ಲೋಳೆಪೊರೆಯಲ್ಲಿನ ಅಪಧಮನಿಗಳು ಬಲವಿಲ್ಲದವಾಗಿ, ಹಿಗ್ಗಿ ರಕ್ತ ಗೂಡಿರುವುದಕ್ಕೆ ಮೊಳೆಗಳು (ಪೈಲ್ಸ್)

ಎಂದು ಹೆಸರು. ಇವು ಕೆಲವು ಸಂದರ್ಭಗಳಲ್ಲಿ ಗುದದಿಂದ ಹೊರಗೂ ಕಾಣಿಸಿಕೊಳ್ಳುವುವು. ಕೆಲವೇಳೆ ಮಲ ವಿಸರ್ಜನೆಯೊಂದಿಗೆ ನೋವಿಲ್ಲದೆಯೇ ಇವುಗಳಿಂದ ರಕ್ತ ಸುರಿದು ಹೋಗಬಹುದು. (ಡಿ.ಎಸ್.ಎಸ್.)

**ಗುನಾ :** ಮಧ್ಯಪ್ರದೇಶದ ಒಂದು ಜಿಲ್ಲೆ; ಜಿಲ್ಲೆಯ ಮುಖ್ಯಪಟ್ಟಣ. ಜಿಲ್ಲೆಯ ವಿಸ್ತೀರ್ಣ 11065ಚ.ಕಿಮೀ. ಜನಸಂಖ್ಯೆ 12.40.938 (2011). ಜಿಲ್ಲೆಯ ಹೆಚ್ಚಿನ ಭಾಗ ಗುಡ್ಡಗಳಿಂದ ಕೂಡಿದೆ; ಸಮುದ್ರಮಟ್ಟದಿಂದ 488 ಮೀ ಎತ್ತರದಲ್ಲಿದೆ. ಬೇತವಾ, ಪಾರ್ವತಿ, ಸಿಂಧ ಮತ್ತು ಬಿಲಾಸ್ ಇಲ್ಲಿಯ ಮುಖ್ಯ ನದಿಗಳು.

ಐತಿಹಾಸಿಕ ಮತ್ತು ಪುರಾತತ್ವ ದೃಷ್ಟಿಯಿಂದ ಈ ಜಿಲ್ಲೆ ಮಹತ್ತ್ವದ ಸ್ಥಾನ ಪಡೆದಿದೆ. ತುಂಭವನ್, ಚಾಚೋಡಾ, ಮ್ಯಾನಾ (ಮಾಯಾಪುರ), ಈಸಾಗಢ, ಚಂದೇರಿ ಮುಂತಾದ ಐತಿಹಾಸಿಕ ಸ್ಥಳಗಳು ಇಲ್ಲಿವೆ. ವ್ಯಾಪಾರ, ಕೈಗಾರಿಕೆ, ಸರಕು ಸಾಗಣೆ, ಶಿಕ್ಷಣ ಮತ್ತು ಸಾಂಸ್ಕೃತಿಕ ದೃಷ್ಟಿಗಳಿಂದ ಜಿಲ್ಲೆ ಅಷ್ಟಾಗಿ ಮುಂದುವರಿದಿಲ್ಲ. 1951ರಿಂದ ಈಚೆಗೆ ಎಣ್ಣೆ, ಬೇಳೆ, ಮಂಜುಗೆಡ್ಡೆ, ಸಕ್ಕರೆ ಮತ್ತು ಜವಳಿ ಕೈಗಾರಿಕೆಗಳು ಪ್ರಾರಂಭವಾಗಿವೆ. ಚಂದೇರಿಯಲ್ಲಿ ತಯಾರಾಗುವ ನೂಲು ಮತ್ತು ರೇಷ್ಮೆ ಬಟ್ಟೆಗಳು ದೇಶವಿದೇಶಗಳಲ್ಲಿ ಪ್ರಸಿದ್ಧವಾಗಿವೆ. ಇವಲ್ಲದೆ ಜರಿ ಕೆಲಸ, ಚರ್ಮ ಹದಮಾಡುವ ಮತ್ತು ಬೀಡಿ ಕಟ್ಟುವ ಉದ್ಯಮಗಳು ಬೆಳೆದಿವೆ.

ಗುನಾ ಪಟ್ಟಣ (ಉ.ಅ. $24^0$ 39' ಪೂ.ರೇ. $77^0$ 19') ಆಗ್ರಾ–ಮುಂಬಯಿ ಹೆದ್ದಾರಿಯಲ್ಲಿದೆ. ಮಧ್ಯ ರೈಲ್ವೆಯ ಬೀನಾ–ಬಾರನ್ ಉಪಶಾಖೆಯಲ್ಲಿ ಇದು ಒಂದು ನಿಲ್ದಾಣ. ಮೊದಲು ಇದೊಂದು ಚಿಕ್ಕ ಗ್ರಾಮವಾಗಿತ್ತು. 1844ರಲ್ಲಿ ಗ್ವಾಲಿಯರಿನ ಅಶ್ವಾರೋಹಿ ದಳದವರು ಇಲ್ಲಿ ಬೀಡುಬಿಟ್ಟರು. ಅಂದಿನಿಂದ ಗುನಾದ ಮಹತ್ತ್ವ ಹೆಚ್ಚುತ್ತಿದೆ. 1897ರಲ್ಲಿ ರೈಲುಮಾರ್ಗದ ವಿಸ್ತರಣ ಕಾರ್ಯ ನಡೆದದ್ದರಿಂದ ಇದು ವ್ಯಾಪಾರ ಕೇಂದ್ರವಾಯಿತು. (ಎಂ.ಎಸ್.ಎಚ್‌ಒ.;ಎಸ್.ಎನ್.ಎಆರ್‌ಇ.)

**ಗುನ್ನಾರ್‌ಸ್ಸನ್, ಗುನ್ನಾರ್ :** 1889–1975 ಐಸ್ಲೆಂಡಿನ ಪ್ರಸಿದ್ಧ ಕಾದಂಬರಿಕಾರ. ಸಮಕಾಲೀನ ಐಸ್ಲೆಂಡಿನ ಸಾಹಿತ್ಯ ಪ್ರಪಂಚದಲ್ಲಿ ಹಾಲ್‌ಡೊರ್ ಲ್ಯಾಕ್ಸ್‌ನೆಸ್‌ನಂತೆ ಹೆಸರಾದವ. ಈತ 1889ರ ಮೇ 18ರಂದು ಜನಿಸಿದ. ಎಳೆಯ ವಯಸ್ಸಿನಲ್ಲಿಯೆ ತಾಯಿಯನ್ನು ಕಳೆದುಕೊಂಡ. ಈತ 18 ವರ್ಷದವರೆಗೆ ಕುಟುಂಬಕ್ಕೆ ಸೇರಿದ ಜಮೀನಲ್ಲಿ ಕೆಲಸ ಮಾಡುತ್ತಾ ಹಳ್ಳಿಯ ಶಾಲೆಯಲ್ಲಿ ಅಭ್ಯಯಿಸುತ್ತಿದ್ದ. ಈತನ ಕುಟುಂಬ ಬಡತನದಲ್ಲಿ ಇದ್ದುದರಿಂದ ಸಂಪ್ರದಾಯಿಕ ಶಾಲೆಯಲ್ಲಿ ಅಭ್ಯಾಸ ಮಾಡಲು ಸಾಧ್ಯವಾಗಲಿಲ್ಲ. ಈತ 17ನೆಯ ವರ್ಷದಲ್ಲಿಯೇ ಪದ್ಯಗಳನ್ನು ಮತ್ತು ಸಣ್ಣ ಕಥೆಗಳನ್ನು ಪ್ರಾರಂಭಿಸಿದ. 1907ರಲ್ಲಿ ವಿದ್ಯಾರ್ಥಿಯಾಗಿ ಡೆನ್ಮಾರ್ಕಗೆ ಹೊರಟ. ವಿದ್ಯಾಭ್ಯಾಸ ಮಾಡುವಾಗ ಅಲ್ಲಿ 1912ರಲ್ಲಿ ಫ್ರಾನ್ಸಿಕ ಅಂತೋನಿಯಳನ್ನು ವಿವಾಹವಾದ. ಇತನ ಪತ್ನಿ ರೋಮನ್ ಕೆಥೊಲಿಕ್ ಪಂಗಡಕ್ಕೆ ಸೇರಿದವಳು. ಈತ ಪ್ರಾಟೆಸ್ಟೆಂಟ್ ಪಂಗಡದವನು. ಈತ 1938ರವರೆಗೆ ಅಲ್ಲಿಯೇ ಇದ್ದು ಐಸ್ಲೆಂಡಿಗೆ ಬಂದ. 1939ರಲ್ಲಿ ಪೂರ್ವ ಐಸ್ಲೆಂಡಿನಲ್ಲಿರುವ ಜಮೀನಿನಲ್ಲಿ ನೆಲಸಿ ಜರ್ಮನಿಯ ವಾಸ್ತುಶಿಲ್ಪಿಯ ವಿನ್ಯಾಸದಂತೆ ಮನೆಯನ್ನು ನಿರ್ಮಿಸಿದನು. ಅಲ್ಲಿ ವಾಸಿಸುತ್ತಿದ್ದನ್ನು ಅನಂತರ ಆ ಮನೆಯನ್ನು ಐಸ್ಲೆಂಡ್ ದೇಶಕ್ಕೆ ಕೊಡುಗೆಯಾಗಿ ನೀಡಿದನು. ಇದನ್ನು ಕಾದಂಬರಿಕಾರನ ನೆನಪಿನಲ್ಲಿ ಸಂಗ್ರಹಾಲಯವನ್ನಾಗಿ ಮಾರ್ಪಾಡು ಮಾಡಲಾಗಿದೆ. 1948ರಲ್ಲಿ ತನ್ನ ವಾಸಸ್ಥಳವನ್ನು ರಿಕಯವಿಕ್‌ಗೆ ಬದಲಾಯಿಸಿ ಅಲ್ಲೆಯೆ 1975ರವರೆಗೆ ವಾಸ ಮಾಡಿದ. 1975ರ ನವೆಂಬರ್ 21ರಂದು ನಿಧನವಾದ. 1976ರಲ್ಲಿ ಈತನ ಪತ್ನಿ ನಿಧನವಾದಳು. ಇವರಿಬ್ಬರ ಸಮಾಧಿಗಳು ಅಲ್ಲಿಯ ಕೆಥೊಲಿಕ್ ಚರ್ಚ್‌ನ ಸ್ಮಶಾನದಲ್ಲಿದೆ. (ಎನ್.ಎಲ್.)

ಈತ ಡೇನಿಷ್ ಭಾಷೆಯಲ್ಲಿ ಮೊದಲು ಕಾದಂಬರಿಗಳನ್ನು ಬರೆದ. ಅವು ಅನಂತರ ಐಸ್‌ಲ್ಯಾಂಡಿಕ್ ಭಾಷೆಗೆ ಅನುವಾದಗೊಂಡಿವೆ. ಐಸ್‌ಲ್ಯಾಂಡಿಕ್ ಭಾಷೆಯಲ್ಲೂ ಕ್ವಚಿತ್ತಾಗಿ ಈತ ಬರೆದುದುಂಟು.

ಈತನ ಶೈಶವ ಮತ್ತು ಯೌವನದ ನೆನಪುಗಳೇ ಈತನ ಕಾದಂಬರಿಯ ವಸ್ತು. ಸಾಮಾನ್ಯರ ಜೀವನ ಮತ್ತು ಜೀವನ ಸಾರ್ಥಕತೆಗಳನ್ನೂ ಈತನ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಗೆಸ್ಟ್ ದಿ ಒನ್–ಐಯ್ಡ್ (1912–14, ನಾಲ್ಕು ಸಂಪುಟ; ಇಂಗ್ಲಿಷ್ ಅನು: 1920) ಎಂಬುದರಲ್ಲಿ ಐಸ್ಲೆಂಡಿನ ಜನಜೀವನದ ಯಥಾರ್ಥ ಚಿತ್ರಣವಿದೆ. ಸೆವೆನ್ ಡೇಸ್ ಡಾರ್ಕ್‌ನೆಸ್‌ನಲ್ಲಿ (1920: ಇಂಗ್ಲಿಷ್ ಅನು : 1930) ಯುದ್ಧದಿಂದ ಉಂಟಾಗುವ ಸಮಸ್ಯೆಗಳ ನಿರೂಪಣೆ ಇದೆ. ಈತನ ಜೀವನಚರಿತ್ರೆಯಾದ ದಿ ಚರ್ಚ್ ಆನ್ ದಿ ಮೌಂಟನ್ (ಐದು ಸಂಪುಟಗಳು; 1924–28) ಎಂಬುದರ ಸ್ವಲ್ಪ ಭಾಗ ಷಿಪ್ಸ್ ಇನ್ ದಿ ಸ್ಕೈ (1938) ಮತ್ತು ದಿ ನೈಟ್ ಅಂಡ್ ದಿ ಡ್ರೀಮ್ ಎಂಬ ಹೆಸರಿನಲ್ಲಿ ಇಂಗ್ಲಿಷಿಗೆ ಅನುವಾದವಾಗಿದೆ. ಈತ ಆಧುನಿಕ ಐಸ್ಲೆಂಡಿನ ಹೆಸರಾಂತ ದ್ವಿಭಾಷಿ ಎನಿಸಿಕೊಂಡಿದ್ದಾನೆ. (ಕೆ.ಕೆ.ಐ.)

**ಗುಪ್ತಕೂಟ :** ವಿಧಾನಸಭೆಗಳಿಗೆ ಮತ್ತು ಚುನಾವಣೆ ಮಾಡಬೇಕಾದ ರಾಜಕೀಯ ಹುದ್ದೆಗಳಿಗೆ ಸ್ಪರ್ಧಿಗಳನ್ನು ಗೊತ್ತುಮಾಡಲೂ ಪಕ್ಷದ ಉದ್ದೇಶ, ರೀತಿ, ನೀತಿ ಇತ್ಯಾದಿಗಳನ್ನು ನಿರ್ಧರಿಸಲೂ ಗುಪ್ತವಾಗಿ ಸೇರುವ ಮುಖಂಡರ ಇಲ್ಲವೆ ಆಸಕ್ತರ ಕೂಟ (ಕಾಕಸ್). ಇದಕ್ಕೆ ನಿರ್ಧರಿಸಲ್ಪಟ್ಟ ಸದಸ್ಯರಾಗಲಿ ನಿಯಮಾವಳಿಯಾಗಲಿ ಇರುವುದಿಲ್ಲ. ಇದರ ವ್ಯವಹಾರಗಳು ಯಾವ ಕಟ್ಟುಪಾಡಿಗೂ ಒಳಪಟ್ಟಿರುವುದಿಲ್ಲ. ಇದರಲ್ಲಿ ಸೇರಿರುವ ಮುಖಂಡರ ಪ್ರಭಾವದಿಂದಾಗಿ, ಇಲ್ಲವೆ ಪಕ್ಷದ ಹೆಚ್ಚು ಸಂಖ್ಯೆಯ ಸದಸ್ಯರು ಇದರಲ್ಲಿ ಆಸಕ್ತರಾಗಿಲ್ಲದಿರುವುದರಿಂದ. ಇದರ ನಿರ್ಣಯಗಳನ್ನು ನಿರಾತಂಕವಾಗಿ ಪಕ್ಷ ಅನುಮೋದಿಸುವುದು.

ಇಂಗ್ಲಿಷಿನ ಕಾಕಸ್ ಎಂಬ ಶಬ್ದ ಉದ್ಭವವಾದ್ದು ಅಮೆರಿಕ ಸಂಯುಕ್ತ ಸಂಸ್ಥಾನದ ಬಾಸ್ಟನಿನಲ್ಲಿ, 18ನೆಯ ಶತಮಾನದ ಆರಂಭಕಾಲದಲ್ಲಿ. ಸಾರ್ವಜನಿಕ ವಿಚಾರಗಳನ್ನು ಚರ್ಚಿಸುವ, ಸ್ಥಳೀಯ ಚುನಾವಣೆಗಳಿಗೆ ವ್ಯವಸ್ಥೆ ಮಾಡುವ, ಅಧಿಕಾರಿಗಳಿಗೆ ಅಭ್ಯರ್ಥಿಗಳನ್ನು ಆರಿಸುವ ರಾಜಕೀಯ ಸಂಘವನ್ನು ಈ ಹೆಸರಿನಿಂದ ಕರೆಯಲಾಗುತ್ತಿತ್ತು. 1800ರಿಂದ 1824ರ ವರೆಗೆ ಅಲ್ಲಿಯ ಕಾಂಗ್ರೆಸಿನೊಳಗಿನ ಪಕ್ಷದ ಗುಪ್ತಕೂಟ ದೇಶದ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಗಳಿಗೆ ಉಮೇದುವಾರರನ್ನು ನಾಮಕರಣ ಮಾಡುತ್ತಿತ್ತು. ನಾಮಕರಣಕ್ಕಾಗಿ ಸಭೆ ಸೇರುವ ಪದ್ಧತಿ ಆಮೇಲೆ ಬಂತು. ಗವರ್ನರ್ ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳನ್ನು ಚುನಾಯಿಸಲೂ ಪಕ್ಷದ ವಿಧಾನಮಂಡಲದ ಸದಸ್ಯರು ಸಭೆ ಸೇರುತ್ತಿದ್ದರು. ಕಾಂಗ್ರೆಸ್, ರಾಜ್ಯ ವಿಧಾನಮಂಡಲ ಅಥವಾ ನಗರ ಸಭೆಯ ಒಂದು ಪಕ್ಷದ ಸದಸ್ಯರು ಯಾವೊಂದು ವಿಧೇಯಕದ ಬಗ್ಗೆ ಅಥವಾ ಅಧಿಕಾರಸ್ಥಾನದ ಬಗ್ಗೆ ತಮ್ಮ ಪಕ್ಷದ ನೀತಿಯೇನೆಂಬುದನ್ನು ನಿರ್ಧರಿಸಲು ಸೇರುವ ಸಭೆ–ಎಂಬ ವ್ಯಾಪಕಾರ್ಥದಲ್ಲಿ ಈ ಶಬ್ದ ಅಮೆರಿಕದಲ್ಲಿ ಬಳಕೆಯಲ್ಲಿದೆ. ಆದರೆ ಒಂದು ಪಕ್ಷದಲ್ಲಿರುವ, ಅತ್ಯಂತ ಶಿಸ್ತಿನ ಮನೋಭಾವದಿಂದ ವರ್ತಿಸುವ ಸಂವೃತ ಕೂಟವೆಂಬ ಅರ್ಥದಲ್ಲಿ ಇದು ಬಳಕೆಗೆ ಬಂದದ್ದು ಇಂಗ್ಲೆಂಡಿನಲ್ಲಿ. ಭಾರತದಲ್ಲೂ ರಾಜಕೀಯ ಪಕ್ಷಗಳ ಮುಖಂಡರೆನಿಸಿಕೊಂಡವರ ಒಳಕೂಟಗಳನ್ನು ಈ ರೀತಿ ಸಂಬೋಧಿಸುವುದುಂಟು. ಮಧ್ಯಮವರ್ಗದ ಸಹಾನುಭೂತಿಯೇ ಆಧಾರವಾಗಿ ಉಳ್ಳ ಸಂಪ್ರದಾಯವಾದಿ ಪಕ್ಷಗಳಲ್ಲಿ ಗುಪ್ತಕೂಟಗಳ ಪ್ರಭಾವ ಹೆಚ್ಚು. (ಎಸ್.ವಿ.ಡಿ.)

**ಗುಪ್ತನಿಧಿ :** ನೆಲದಲ್ಲಿ ಅಡಗಿದ್ದು ಸಿಕ್ಕಿದ, ಮಾಲೀಕರು ಗೊತ್ತಿಲ್ಲದ ನಾಣ್ಯ, ಚಿನ್ನ, ಬೆಳ್ಳಿ ಗಟ್ಟಿ, ನಗ ಮುಂತಾದ ಪದಾರ್ಥಗಳು (ಟ್ರೆಷರ್ ಟ್ರೋವ್). ಗುಪ್ತನಿಧಿ ಕಾಯಿದೆಯ ಪ್ರಕಾರ ಇದರ ಹಕ್ಕು ಸರ್ಕಾರದ್ದು. ಇದಕ್ಕೆ ಒಮ್ಮೆ ಮಾಲೀಕನಿದ್ದನಾದರೂ ಪತ್ತೆಯಾದಾಗ ಅವನು ಯಾರೆಂಬುದು ಗೊತ್ತಿರುವುದಿಲ್ಲವಾದ್ದರಿಂದ ಇದು ಸರ್ಕಾರಕ್ಕೆ ಸೇರತಕ್ಕದ್ದೇ ಹೊರತು, ಇದನ್ನು ಕಂಡವನಿಗಲ್ಲ. ಇದನ್ನು ಬಚ್ಚಿಡುವುದು ಆಪಾದಿಸಬಹುದಾದ ಅಪರಾಧ. ಆದರೆ ಇದನ್ನು ಬಳಸಿಕೊಳ್ಳುವ ಉದ್ದೇಶವಿದ್ದ ವಿನಾ ಇದು ಕ್ರಿಮಿನಲ್ ಅಪರಾಧವಾಗುವುದಿಲ್ಲ. ಇದನ್ನು ಪತ್ತೆ ಹಚ್ಚಿದವನು ಮತ್ತು ಈ ಬಗ್ಗೆ ತಿಳಿವಳಿಕೆ ಉಳ್ಳ ಯಾವನೂ ಸಂಬಂಧಪಟ್ಟ ಅಧಿಕಾರಿಗೆ ಈ ಬಗ್ಗೆ ವರದಿ ಮಾಡತಕ್ಕದ್ದು. ಪತ್ತೆಯಾದ್ದು ಗುಪ್ತನಿಧಿ ಹೌದೇ ಅಲ್ಲವೆ ಎಂಬುದನ್ನು ನಿರ್ಧರಿಸಲು ಆ ಅಧಿಕಾರಿ ಮಹಜರು ನಡೆಸುತ್ತಾನೆ. ಸ್ಥೂಲವಾಗಿ ಇವು ಇಂಗ್ಲೆಂಡಿನಲ್ಲೂ ಭಾರತದಲ್ಲೂ ಜಾರಿಯಲ್ಲಿರುವ ಕಾನೂನಿನ ಮುಖ್ಯಾಂಶಗಳು. ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಸಾಮಾನ್ಯ ನ್ಯಾಯದ ಪ್ರಕಾರ ಗುಪ್ತನಿಧಿ ಸರ್ಕಾರದ ಬೊಕ್ಕಸಕ್ಕೆ ಸೇರಬೇಕಾಗಿದ್ದರೂ ವಾಸ್ತವವಾಗಿ ಅದನ್ನು ಕಂಡವನೆ ಇಟ್ಟುಕೊಳ್ಳಲು ಅವಕಾಶವಿದೆ. ಲುಯಿಸಿಯಾನದಲ್ಲಿ ನಿಧಿಯ ಅರ್ಧ ಅದನ್ನು ಕಂಡವನಿಗೂ ಉಳಿದರ್ಧ ನೆಲದ ಮಾಲೀಕನಿಗೂ ಹೋಗುತ್ತದೆ. (ಬಿ.ಡಿ.ಎಚ್.)

**ಗುಪ್ತ, ಬಿ.ಎನ್. :** 1895–1976. ಕರ್ನಾಟಕದ ಹಿರಿಯ ಪತ್ರಿಕೋದ್ಯಮಿಗಳಲ್ಲೊಬ್ಬರು. ಬೈಸಾನಿ ನರಸಿಂಹೇಶ್ವರ ಗುಪ್ತ ಆಂಧ್ರಪ್ರದೇಶದ ಚಿತ್ತೂರಿನಲ್ಲಿ 1895ರ ಡಿಸೆಂಬರ್ 16ರಂದು ಜನಿಸಿದರು. ತಂದೆ ರಂಗಯ್ಯ ಶೆಟ್ಟಿ, ತಾಯಿ ಶ್ರೀರಂಗ ನಾಂದಾರಮ್ಮ ತಮಿಳುನಾಡಿನಲ್ಲಿ (ಮದರಾಸು) ವಿದ್ಯಾಭ್ಯಾಸ ಮಾಡಿ ಕರ್ನಾಟಕದಲ್ಲಿ ಅನೇಕ ಕನ್ನಡ ಪತ್ರಿಕೆಗಳ ಹುಟ್ಟು ಬೆಳವಣಿಗೆಗಳಿಗೆ ಕಾರಣರಾದ ಇವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನೂ ಅಳವಡಿಸಿದರು. ಇವರು ಮದರಾಸಿನಲ್ಲಿ ಆನಿಬೆಸೆಂಟರ ಪತ್ರಿಕೋದ್ಯಮ ಕಾಲೇಜಿನಲ್ಲಿ ಶಿಕ್ಷಣ ಪಡೆದು ಮದರಾಸಿನಲ್ಲೇ ನ್ಯೂ ಇಂಡಿಯ (ದಿನಪತ್ರಿಕೆ) ಮತ್ತು ಕಾಮನ್ ವೀಲ್ (ವಾರಪತ್ರಿಕೆ) ಇವುಗಳ ಸಂಪಾದಕೀಯ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದು, ಬೆಂಗಳೂರಿಗೆ ಮಾರುಹೋಗಿ ಅಲ್ಲೇ ನೆಲಸಲು ನಿರ್ಧರಿಸಿದರು. ಆಗಿನ ಮೈಸೂರು ಸಂಸ್ಥಾನದ ರಾಜಕೀಯ ಕ್ಷೇತ್ರಕ್ಕೆ ಧುಮುಕಿ ಪ್ರಜಾಪಕ್ಷ ಸ್ಥಾಪನೆಗೆ ದುಡಿದರು. ಮೈಸೂರಿನ ಪ್ರಥಮ ರಾಜಕೀಯ ಪಕ್ಷವೂ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಪ್ರಥಮವಾಗಿ ಮಂಡಿಸಿದ್ದೂ ಆದ ಪ್ರಜಾಪಕ್ಷವನ್ನು

ಬೆಳೆಸುವುದಕ್ಕಾಗಿ ಪ್ರಜಾಮತ ವಾರಪತ್ರಿಕೆಯನ್ನು ಪ್ರಕಟಿಸಲು ಗುಪ್ತ ಅವರು ನಿರ್ಧರಿಸಿದರು. ಆದರೆ ಮಿರ್ಜಾ ಇಸ್ಮಾಯಿಲ್ ದಿವಾನರಾಗಿದ್ದ ಮೈಸೂರು ಸರ್ಕಾರ ಅದಕ್ಕೆ ಅನುಮತಿ ಕೊಡಲಿಲ್ಲ. ಗುಪ್ತ ಅವರು ಮದರಾಸಿಗೆ ಹೋಗಿ 1929ರಲ್ಲಿ ಪ್ರಜಾಮತ ಪ್ರಾರಂಭಿಸಿದರಲ್ಲದೆ ಎರಡು ವರ್ಷಗಳ ಅನಂತರ (1931) ಜನವಾಣಿ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಜನವಾಣಿಯಲ್ಲಿ ಪ್ರಕಟವಾದ ಒಂದು ಲೇಖನದಿಂದಾಗಿ ಆ ಪತ್ರಿಕೆ ನಿಂತುಹೋಯಿತು. ಅಷ್ಟರಲ್ಲಿ ಮಿರ್ಜಾ ಅವರು ಆ ಪತ್ರಿಕೆಗಳನ್ನು ಬೆಂಗಳೂರಿನಲ್ಲಿ ಪ್ರಕಟಿಸಲು ಅನುಮತಿ ನೀಡಿದ್ದರಿಂದ 1933ರಲ್ಲಿ ಅವೆರಡೂ ಬೆಂಗಳೂರಿನಿಂದ ಪ್ರಕಟವಾಗಲಾ ರಂಭಿಸಿದುವು.

ಬೆಂಗಳೂರಿಗೆ ಹಿಂದಿರುಗಿದ ಕೂಡಲೆ ಗುಪ್ತ ಅವರು ಮೈಸೂರು ಕಾಂಗ್ರೆಸ್ ಸ್ಥಾಪನೆಗಾಗಿ ಹೋರಾಡಲು ಪ್ರಾರಂಭಿಸಿದರು. ತಾವೇ ಹಿಂದೆ ಸ್ಥಾಪಿಸಿದ್ದ ಪ್ರಜಾಪಕ್ಷದ ವಿರುದ್ಧವಾಗಿಯೇ ಅಭ್ಯರ್ಥಿಗಳನ್ನು ನಿಲ್ಲಿಸ ಬೇಕಾಯಿತು. ಗುಪ್ತ ಅವರ ರಾಜಕೀಯ ಚಟುವಟಿಕೆಗಳು ಹೆಚ್ಚಾದಾಗ, ಅವರು ಮೈಸೂರಿನವರಲ್ಲವೆಂಬ ಕಾರಣವನ್ನು ನೀಡಿ, ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಸಂಸ್ಥಾನವನ್ನು ಬಿಟ್ಟು ಹೋಗುವಂತೆ ಮೈಸೂರು ಸರ್ಕಾರ ಆಜ್ಞೆ ಮಾಡಿತು. ಗುಪ್ತ ಅವರು ಹುಬ್ಬಳ್ಳಿಗೆ (ಆಗ ಹುಬ್ಬಳ್ಳಿ ಮುಂಬೈ ಪ್ರಾಂತ್ಯಕ್ಕೆ ಸೇರಿತು.) ತೆರಳಿ (1936) ಅಲ್ಲಿಂದ ಪ್ರಜಾಮತವನ್ನು ಪ್ರಕಟಿಸಲು ಪ್ರಾರಂಭಿಸಿದರು. (ಆ ವೇಳೆಗೆ ಜನವಾಣಿಯನ್ನು ಅವರು ಬೇರೆಯವರಿಗೆ ಕೊಟ್ಟಿದ್ದರು.) ಸಂಸ್ಥಾನದೊಳಕ್ಕೆ ಪ್ರಜಾಮತ ಬರಕೂಡದೆಂದು ಮೈಸೂರು ಸರ್ಕಾರ ಬಹಿಷ್ಕಾರ ಹಾಕಿತು. ಸಂಸ್ಥಾನದ ಹೊರಗೆ ಪ್ರಜಾಮತವೆಂಬ ಹೆಸರಿನಲ್ಲೇ ಪತ್ರಿಕೆ ನಡೆಯುತ್ತಿದ್ದರೂ ಇನ್ನೊಂದು ಹೆಸರಿನಲ್ಲಿ ಆ ಪತ್ರಿಕೆಯ ಸಂಚಿಕೆಗಳನ್ನು ಮೈಸೂರು ಸಂಸ್ಥಾನಕ್ಕೆ ಕಳುಹಿಸಲು ಗುಪ್ತ ಅವರು ಪ್ರಾರಂಭಿಸಿದರು. ಆ ಹೆಸರಿನ ಪತ್ರಿಕೆಗೂ ಸರ್ಕಾರ ಬಹಿಷ್ಕಾರ ಹಾಕಿತು. ಮತ್ತೆ ಪತ್ರಿಕೆಯ ಹೆಸರನ್ನು ಬದಲಾಯಿಸಲಾಯಿತು. ಮತ್ತೆ ಸರ್ಕಾರದ ಬಹಿಷ್ಕಾರ, ಮತ್ತೆ ಹೆಸರಿನ ಬದಲಾವಣೆ; ಹೀಗೆಯೇ ಸಾಗಿತು. ಇನ್ನು ಬಹಿಷ್ಕಾರ ಹಾಕುವುದರಿಂದ ಪ್ರಯೋಜನವಿಲ್ಲವೆಂದು ಸರ್ಕಾರ ಸುಮ್ಮನಾಯಿತು. 1938ರಲ್ಲಿ ಮಿರ್ಜಾ ಅವರು ಮತ್ತೆ ಗುಪ್ತ ಅವರನ್ನು ಬೆಂಗಳೂರಿಗೆ ಆಹ್ವಾನಿಸಿದರು. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಗುಪ್ತ ಅವರು ಜನವಾಣಿಯನ್ನು ಪಡೆದುಕೊಂಡರು. ಬಹಿಷ್ಕಾರಗಳಿಂದಾಗಿ ಪ್ರಜಾಮತ ಪತ್ರಿಕೆ ಸ್ಥಳಾಂತರವಾಗುತ್ತಿದ್ದರೂ ಒಂದು ವಾರವೂ ಅದು ನಿಲ್ಲದೆ ಪ್ರಕಟವಾಗುತ್ತಿತ್ತು. 1948ರಲ್ಲಿ ಗುಪ್ತರು ಇವೆರಡು ಪತ್ರಿಕೆಗಳನ್ನೂ ಮಾರಿದರು. ಪ್ರಜಾಮತ ಆ ವೇಳೆಗೆ 36,000 ಪ್ರತಿಗಳ ಪ್ರಸಾರ ಸಂಖ್ಯೆಯನ್ನು ಮುಟ್ಟಿದ್ದ ಪ್ರಥಮ ಕನ್ನಡ ವಾರಪತ್ರಿಕೆಯಾಗಿತ್ತು. ಅನಂತರ 1959ರಲ್ಲಿ ಅವರು ಜನಪ್ರಗತಿ ವಾರಪತ್ರಿಕೆಯನ್ನು ಕೊಂಡರು. 1961ರಲ್ಲಿ ಮಲ್ಲಿಗೆ ಮಾಸಪತ್ರಿಕೆಯನ್ನು ಸ್ಥಾಪಿಸಿದರು. 1971ರ ವರೆಗೂ ನಡೆಸಿಕೊಂಡುಬಂದು ಅನಂತರ ಬೇರೆಯವರಿಗೆ ವಹಿಸಿಕೊಟ್ಟರು.

ಗುಪ್ತ ಅವರು ರಾಜಕೀಯ, ಪತ್ರಿಕೋದ್ಯಮ, ವಾಣಿಜ್ಯ-ಈ ಮೂರು ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿದವರು. 1942ರಿಂದ 1946ರ ವರೆಗೆ ಅವರು ಬೆಂಗಳೂರು ಪೌರಸಭೆಯ, 1948ರಿಂದ ಮೈಸೂರು ವಿಶ್ವವಿದ್ಯಾನಿಲಯದ ಸೆನೇಟಿನ, 1949ರಿಂದ ಮೈಸೂರು ವಿಶ್ವವಿದ್ಯಾನಿಲಯ ಕೌನ್ಸಿಲಿನ, 1945ರಿಂದ 1949ರ ವರೆಗೆ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಆ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಇದ್ದರು. ಮೈಸೂರು ಬ್ಯಾಂಕಿನ ಮತ್ತು ಅನೇಕ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಗಳ ನಿರ್ದೇಶಕರಾಗಿದ್ದರು. ಚಲನಚಿತ್ರ ಕ್ಷೇತ್ರದಲ್ಲಿ ವಿಜಯಾ ಟಾಕೀಸ್ ಡಿಸ್ಟ್ರಿಬ್ಯೂಟರ್ಸ್‌ನ ಪಾಲುದಾರರಾಗಿದ್ದರು. ಇದರ ಒಡೆತನದಲ್ಲಿ ಕೆಲವು ಚಿತ್ರಮಂದಿರಗಳೂ ಇದ್ದುವು. ಇವರ ಪ್ರಗತಿ ಪ್ರಕಟನಾಲಯ ಎಂಬತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಇವರು ಜಪಾನ್ ಮತ್ತು ಐರೋಪ್ಯ ದೇಶಗಳ ಪ್ರವಾಸ ಮಾಡಿದ್ದಾರೆ. ಇವರು ಅಖಿಲ ಭಾರತ ಉತ್ಪಾದಕ ಸಂಘದ ಉಪಾಧ್ಯಕ್ಷರಾಗಿಯೂ ಅದರ ರಾಜ್ಯಶಾಖೆಯ ಅಧ್ಯಕ್ಷರಾಗಿಯೂ ಇದ್ದರು. ವಿಶ್ವೇಶ್ವರಯ್ಯ ತಾಂತ್ರಿಕ ವಸ್ತು ಸಂಗ್ರಹಾಲಯ ಸ್ಥಾಪನೆಗೆ ಮುಖ್ಯ ಕಾರಣರು ಇವರು.

ಬಿ.ಎನ್. ಗುಪ್ತರದು ಧರ್ಮಕಾರ್ಯಗಳಿಗೆ ಪ್ರಸಿದ್ಧವಾದ ವಂಶ. ಅವರ ತಾತನವರು ಮದರಾಸಿನ ಬೈಸಾನಿ ಮಾಧವಚೆಟ್ಟಿ ಚಾರಿಟೀಸಿನ ಸ್ಥಾಪಕರು. ಗುಪ್ತರು ಅದಕ್ಕೆ ಅಧ್ಯಕ್ಷರಾಗಿದ್ದರು. 1970ರಲ್ಲಿ ಗುಪ್ತರು ಜನ್ಮಭೂಮಿ ಟ್ರಸ್ಟ್ ಸ್ಥಾಪಿಸಿದರು. ಪತ್ರಿಕೋದ್ಯಮ ಮತ್ತು ಕನ್ನಡ ಸಾಹಿತ್ಯಗಳ ಬೆಳೆವಣಿಗೆಯೂ ಈ ಕ್ಷೇತ್ರಗಳಲ್ಲಿ ದುಡಿದಿರುವ ಮಹನೀಯರ ಸನ್ಮಾನವೂ ಈ ನ್ಯಾಸದ ಉದ್ದೇಶಗಳು. ಇದರಿಂದ ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳಿಗೆ ಗುಪ್ತರು ದತ್ತಿಗಳನ್ನು ನೀಡಿದ್ದಾರೆ. ಸದಾಕ್ರಿಯಾಶೀಲರಾಗಿದ್ದು ಗುಪ್ತ 1976ರ ಜುಲೈ 28ರಂದು ನಿಧನರಾದರು. (ಬಿ.ಎ.ಎ.ವೈ.)

**ಗುಪ್ತ, ಪರಮೇಶ್ವರಿಲಾಲ್ :** 1914-2001. ಭಾರತದ ಹೆಸರಾಂತ ನಾಣ್ಯಶಾಸ್ತ್ರ ತಜ್ಞರು. ಭಾರತೀಯ ನಾಣ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ಸಂಸ್ಥಾಪಕರು. ಉತ್ತರ ಪ್ರದೇಶದ ಆಜ಼ಮ್‌ಗಡ್‌ನಲ್ಲಿ ಜನಿಸಿದರು. 8ನೆಯ ತರಗತಿಯಲ್ಲಿದ್ದಾಗ ಜವಹರಲಾಲ್ ನೆಹರು ಬಂಧಿತರಾದಾಗ ಶಾಲೆಯನ್ನು ಬಹಿಷ್ಕರಿಸಿದರು. ಶಾಲೆ ಇವರಿಗೆ ದಂಡವನ್ನು ವಿಧಿಸಿತು. ಆದರೆ ಇವರು ದಂಡವನ್ನು ಕೊಡಲು ನಿರಾಕರಿಸಿದಾಗ ಇವರನ್ನು ಶಾಲೆಯಿಂದ ಹೊರಹಾಕಲಾಯಿತು. ಅನಂತರ



ಇವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿ ಕಾನೂನು ಭಂಗ ಚಳವಳಿಯ ನೇತೃತ್ವ ವಹಿಸಿದರು. ಇದರ ಪರಿಣಾಮವಾಗಿ ತಮ್ಮ ಪ್ರದೇಶದಲ್ಲಿ ಆಜ಼ಮ್‌ಗಟ್-ಕ-ನೆಹರು ಎಂದು ಪ್ರಸಿದ್ಧರಾದರು. ಸ್ವಾತಂತ್ರ್ಯ ಬಂದ ಅನಂತರ ರಾಜಕೀಯದಿಂದ ದೂರಸರಿದು ಶಾಸ್ತ್ರೀಯ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1948ರಿಂದ (18 ವರ್ಷಗಳ ಅನಂತರ) ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು. ಬಾಹ್ಯವಿದ್ಯಾರ್ಥಿಯಾಗಿ ಪದವಿ ಹಾಗೂ ಎಂ.ಎ. ಪದವಿಯನ್ನು ಮೊದಲ ಶ್ರೇಣಿಯಲ್ಲಿ ಪಡೆದರು. ಪಂಚ್ ಮಾರ್ಕ್ಡ್ ಕಾಯಿನ್ಸ್ ಇನ್ ಏನ್ಷೆಂಟ್ ಇಂಡಿಯ-ಇವರ ಪಿಎಚ್.ಡಿ. ಪ್ರಬಂಧ. ಈ ಸಂಶೋಧನೆ ಇವರಿಗೆ ಒಳ್ಳೆಯ ಹೆಸರನ್ನು ತಂದಿತು. 1953ರಲ್ಲಿ ಬೊಂಬಾಯಿನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿ ಶಾಸನತಜ್ಞರಾಗಿ ನೇಮಕಗೊಂಡರು. 1962ರ ತನಕ ಅಲ್ಲಿ ಕೆಲಸ ಮಾಡಿದರು. 6 ತಿಂಗಳು ಬ್ರಿಟಿಷ್ ಮ್ಯೂಸಿಯಂನಲ್ಲಿ ಕೆಲಸ ಮಾಡಿದರು. 1963ರಲ್ಲಿ ಪಾಟ್ನ ವಸ್ತುಸಂಗ್ರಹಾಲಯದ ನಿರ್ದೇಶಕರಾದರು. 1972ರಲ್ಲಿ ನಿವೃತ್ತಿ ಹೊಂದಿದರು. ಇವರ ಪ್ರಶಂಸನೀಯ ಕಾರ್ಯವೆಂದರೆ ನಾಸಿಕದಲ್ಲಿಯ ಅಂಜನೇರಿ ಬಳಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಸರ್ಚ್ ಇನ್ ನ್ಯೂಮಿಸ್‌ಮ್ಯಾಟಿಕ್ ಸ್ಟಡೀಸ್ ಸಂಸ್ಥೆಯನ್ನು ತನ್ನ ಶಿಷ್ಯ ಕೆ.ಕೆ. ಮಹೇಶ್ವರಿಯವರನ್ನು ಪ್ರೇರೇಪಿಸಿ ಸ್ಥಾಪನೆ ಮಾಡಿದ್ದು. ಇದಕ್ಕೆ ತಮ್ಮ ಗ್ರಂಥ ಭಂಡಾರವನ್ನು ದಾನ ಮಾಡಿದರು. ಶಿಷ್ಯನ ಕೋರಿಕೆಯ ಮೇರೆಗೆ ಈ ಸಂಸ್ಥೆಯ ಮುಖ್ಯಸ್ಥರಾದರು. ಅನಾರೋಗ್ಯ ದಿಂದ 1989ರಲ್ಲಿ ಈ ಜವಾಬ್ದಾರಿ ಯಿಂದ ಬಿಡುಗಡೆ ಹೊಂದಿದರು. 2001 ಜುಲೈ 27ರಂದು ನಿಧನರಾದರು. ಇವರು ನಾಣ್ಯಗಳನ್ನು ಕುರಿತು ಸು. 250ಕ್ಕೂ ಹೆಚ್ಚು ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. ರಾಷ್ಟ್ರೀಯ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಕಾಯಿನ್ಸ್ ಇವರ ಒಂದು ಮುಖ್ಯ ಕೃತಿ. ಇವರಿಗೆ ಯು.ಕೆ.ಯ ದಿ ರಾಯಲ್ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿಯ ಲೋಟ್ಕ ಪಾರಿತೋಷಕ (1969), ಅಮೆರಿಕದ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿಯ ಹಂಟಿಂಗ್‌ಟನ್ ಪ್ರಶಸ್ತಿ, ಭಾರತದ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯದ ಚಕ್ರವಿಕ್ರಮ ಪದಕ (1954), ಏಷ್ಯಾಟಿಕ್ ಸೊಸೈಟಿ ಆಫ್ ಕಲ್ಕತ್ತ ಸಂಸ್ಥೆಯ ಜದುನಾಥ್ ಸರ್ಕಾರ್ ಪದಕ ಮೊದಲಾದ ಪ್ರತಿಷ್ಠಿತ ಪ್ರಶಸ್ತಿ ಪದಕಗಳು ಲಭಿಸಿವೆ. 1969-86ರ ವರೆಗೆ ಹಲವಾರು ಪ್ರತಿಷ್ಠಿತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಇವರಿಗೆ ವಿಶಿಷ್ಟ ಪದಕಗಳನ್ನು ನೀಡಿ, ತಮ್ಮ ತಮ್ಮ ಸಂಸ್ಥೆಗಳ ಗೌರವ ಸದಸ್ಯರನ್ನಾಗಿ ಮಾಡಿಕೊಂಡವು. (ಎ.ಎಸ್.)

**ಗುಪ್ತ ಭಾಷೆಗಳು :** ಒಬ್ಬಿಬ್ಬರಿಗೊ ಕೇವಲ ಕೆಲವರಿಗೊ ಮಾತ್ರ ಅರ್ಥವಾಗಬಲ್ಲ ಭಾಷೆಗಳು (ಸೀಕ್ರೆಟ್ ಲ್ಯಾಂಗ್‌ವೇಜಸ್). ಸಾಮಾನ್ಯವಾಗಿ ಭಾಷೆಯ ಉದ್ದೇಶ ಎಲ್ಲರಿಗೂ ಅರ್ಥವಾಗುವಂತಿರಬೇಕು ಎಂಬುದು. ಇದಕ್ಕೆ ವಿರುದ್ಧವಾದ ಉದ್ದೇಶ ಗುಪ್ತಭಾಷೆಗಳಿಗಿವೆ. ಗುಪ್ತಕಾರ್ಯಾಚರಣೆ ನಡೆಸುವ ಅನೇಕರಿಗೆ ಇಂಥ ಭಾಷೆಗಳ ಅಗತ್ಯ ಕಂಡುಬಂದಿದೆ. ಆಟಕ್ಕಾಗಿ ಮಕ್ಕಳು, ಪ್ರಣಯ ವಿನೋದಕ್ಕಾಗಿ ಪ್ರೇಮಿಗಳು, ರಹಸ್ಯ ವಾರ್ತಾವಹನಕ್ಕಾಗಿ ಗೂಢಚಾರರು ಹಾಗೂ ದರೋಡೆಕಾರರು ಇಂಥ ಭಾಷೆಗಳನ್ನು ಬಳಸುತ್ತಾರೆ. ಪ್ರಚಲಿತ ಭಾಷೆಯೊಂದನ್ನು ಗುಪ್ತಭಾಷೆಯಾಗಿ ಬಳಸಬಹುದು. ಉದಾಹರಣೆಗೆ, ತೋಡ ಭಾಷೆ. ಅದು ನೀಲಗಿರಿಯ ಸುತ್ತಣ ಪ್ರದೇಶಕ್ಕೆ ಮಾತ್ರ ಮೀಸಲಾದ ಒಂದು ಆದಿವಾಸಿ ಭಾಷೆ. ಅದನ್ನು ಬಳಸಿ ಲಂಡನ್ನಿನಲ್ಲಿರುವವರಿಗೆ ಪತ್ರ ಬರೆದಲ್ಲಿ ಅದರ ಅರ್ಥ ಉದ್ದೇಶಿತ ವ್ಯಕ್ತಿಗಳಿಗಲ್ಲದೆ ಉಳಿದವರಿಗೆ ಆಗದು. ಬಳಕೆ ತಪ್ಪಿದ್ದು ಕೇವಲ ವಸ್ತುಪ್ರದರ್ಶನಾಲಯದ ಆಶ್ಚರ್ಯವಾಗುಳಿದಿರುವ ಭಾಷೆಯೂ ಗುಪ್ತಭಾಷೆಯಾಗಬಲ್ಲದು. ಉದಾಹರಣೆಗೆ ಕ್ಯೂಬದಲ್ಲಿನ ಲುಕೂಮಿ ಎಂಬ ಆಫ್ರಿಕನ್ ಭಾಷೆ. ಎಷ್ಟೋ ವೇಳೆ ಕೃತಕಭಾಷೆಯೊಂದು ಗುಪ್ತಭಾಷೆಯಾಗಿ ಬಳಕೆಗೆ ಬರಬಹುದು. ಉದಾಹರಣೆಗಳಿಗೆ (**ನೋಡಿ–ಕೃತಕ ಭಾಷೆಗಳು**).

ರಹಸ್ಯ ಸಮಾಚಾರಗಳ ರಚನೆ ಮತ್ತು ರವಾನೆಗಳಿಗಾಗಿ ಬಗೆಬಗೆಯ ಗುಪ್ತ ಲೇಖನ ವಿಧಾನಗಳು ಜನ್ಮತಾಳಿವೆ. ರಹಸ್ಯ ಲೇಖನದಲ್ಲಿ ಮೂರು ಹಂತಗಳಿರುತ್ತವೆ. ಒಂದು–ಸಹಜ ಭಾಷೆಯಲ್ಲಿರುವ ಮಾಹಿತಿಗಳನ್ನು ಕೋಷ್ಟಕದ ಸಹಾಯದಿಂದ ಗುಪ್ತಭಾಷೆಗೆ ಪರಿವರ್ತಿಸುವುದು. ಎರಡು–ಗುಪ್ತಭಾಷೆಗಳನ್ನು ಗುರಿಗೆ ಪ್ರೇಷಿಸುವುದು. ಮೂರು–ಗುಪ್ತಲೇಖನವನ್ನು ಸಹಜ ಭಾಷೆಗೆ ಪರಿವರ್ತಿಸುವುದು. ಉದಾಹರಣೆಗೆ ಇಂಗ್ಲಿಷ್ ವರ್ಣಮಾಲೆಯ 26 ಅಕ್ಷರಗಳಿಗೂ ಬೇರೆ ಬೇರೆ ಅಕ್ಷರಗಳನ್ನು ಪ್ರತಿಕಿಸುವುದು. A ಗೆ L, B ಗೆ M ಹೀಗೆ. ಅನಂತರ ತಿಳಿಸಬೇಕಾದ ಮಾಹಿತಿ OPEN WESTERN FRONT ಎಂಬುದನ್ನು ಗುಪ್ತ ಅಕ್ಷರಗಳಾಗಿ ಪರಿವರ್ತಿಸುವುದು. ಈ ಪರಿವರ್ತಿತ ಸಂದೇಶವನ್ನು ಕೋಷ್ಟಕ ಗೊತ್ತಿದ್ದವನು ಮಾತ್ರ ಓದಲು ಸಾಧ್ಯ (**ನೋಡಿ– ಗುಪ್ತಲೇಖ ಶಾಸ್ತ್ರ**). (ಕೆ.ಕೆ.ಜಿ.)

**ಗುಪ್ತ ಮತದಾನ :** ಮತದಾರ ಯಾರಿಗೆ ಮತ ನೀಡಿದನೆಂಬುದು ಬೇರಾರಿಗೂ ಗೊತ್ತಾಗದಂತೆ ಮಾಡಿದ ಮತದಾನ; ಅಂಥ ಪದ್ಧತಿ, ವ್ಯವಸ್ಥೆ (ಸೀಕ್ರೆಟ್ ಬ್ಯಾಲಟ್). ಹೊರಗಿನ ಪ್ರಭಾವಗಳಿಂದ ಮತದಾರನನ್ನು ಮುಕ್ತನನ್ನಾಗಿ ಮಾಡಲು ಬಹುತೇಕ ಎಲ್ಲ ಪ್ರಜಾಸತ್ತಾತ್ಮಕ ದೇಶಗಳ ಸಂಘಸಂಸ್ಥೆ ಸಭೆಗಳ ಚುನಾವಣೆಗಳಲ್ಲೂ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಮತದಾನದಲ್ಲಿ ರಹಸ್ಯವನ್ನು ಮೊಟ್ಟಮೊದಲು ಜಾರಿಗೆ ತಂದ ರಾಜ್ಯ ದಕ್ಷಿಣ ಆಸ್ಟ್ರೇಲಿಯ, 1858ರಲ್ಲಿ. ಆದ್ದರಿಂದ ಇದಕ್ಕೆ ಆಸ್ಟ್ರೇಲಿಯನ್ ಮತದಾನ ಪದ್ಧತಿ ಎಂದೂ ಹೆಸರಿದೆ.

ಭಾರತದಲ್ಲಿ ಇದಕ್ಕಾಗಿ ಚಚ್ಚೌಕವಾದ, ಮೇಲುಗಡೆ ಮುಚ್ಚಳವಿರುವ ಪೆಟ್ಟಿಗೆಯನ್ನು ಬಳಸಲಾಗುತ್ತದೆ. ಮತಪತ್ರವನ್ನು ಪೆಟ್ಟಿಗೆಯೊಳಕ್ಕೆ ಹಾಕುವುದು ಸಾಧ್ಯವಾಗುವಂತೆ ಈ ಪೆಟ್ಟಿಗೆಯ ಮುಚ್ಚಳದ ಮಧ್ಯದಲ್ಲಿ ಸೀಳುಗಂಡಿಯೊಂದಿರುತ್ತದೆ. ಚುನಾವಣೆ ಆರಂಭವಾಗುವುದಕ್ಕೆ ಮೊದಲು ಮತಗಟ್ಟೆಯ ಅಧಿಕಾರಿ ಅಭ್ಯರ್ಥಿಗಳ ಅಥವಾ ಅವರ ಪ್ರತಿನಿಧಿಗಳ ಎದುರಿನಲ್ಲಿ ಪೆಟ್ಟಿಗೆಯನ್ನು ತೆರೆದು ಅದು ಬರಿದೆಂಬುದನ್ನು ದೃಢಪಡಿಸಿ ಅದನ್ನು ಮುಚ್ಚಿ ಬಾಗಿಲಿಗೆ ಮುದ್ರೆ ಹಾಕುತ್ತಾನೆ. ಚುನಾವಣೆಯ ಕಾಲದಲ್ಲಿ ಮತದಾರರು ಇದರೊಳಕ್ಕೆ ತಮ್ಮ ಮತಪತ್ರಗಳನ್ನು ಹಾಕುತ್ತಾರೆ. ಚುನಾವಣೆ ಗೊತ್ತುಮಾಡಿದ ಕಾಲ ಮುಗಿದ ಮೇಲೆ ಅದನ್ನು ಸರಿಯಾದ ರಕ್ಷಣೆಗೆ ಒಳಪಡಿಸಿ ಇಟ್ಟಿದ್ದು, ಗೊತ್ತಾದ ಕಾಲದಲ್ಲಿ ಅಭ್ಯರ್ಥಿಗಳ ಅಥವಾ ಅವರ ಪ್ರತಿನಿಧಿಗಳ, ಸಾರ್ವಜನಿಕರ ಎದುರಿನಲ್ಲಿ ಪೆಟ್ಟಿಗೆಯ ಮುದ್ರೆಯೊಡೆದು ಅದನ್ನು ತೆರೆದು ಮತಪತ್ರಗಳನ್ನು ಎಣಿಸಲಾಗುತ್ತದೆ. ಮತ ನೀಡಿದವರನ್ನು ಗುರುತಿಸುವ ಯಾವ ಚಿಹ್ನೆಯಾಗಲಿ ಬರಹವಾಗಲಿ ಪತ್ರದ ಮೇಲೆ ಇರುವುದಿಲ್ಲವಾದ್ದರಿಂದ ಸರ್ವರೀತಿಯಲ್ಲೂ ರಹಸ್ಯವನ್ನು ಪಾಲಿಸಲು ಸಾಧ್ಯವಾಗುತ್ತದೆ.

ಮತದಾರ ಚುನಾವಣೆಯ ದಿನದಂದು, ಅದಕ್ಕಾಗಿ ನಿಗದಿಯಾದ ಕಾಲದಲ್ಲಿ, ಅವನಿಗಾಗಿ ಗೊತ್ತುಮಾಡಿದ ಮತಗಟ್ಟೆಗೆ ಮತ ನೀಡಲು ಹೋದಾಗ ಚುನಾವಣಾಧಿಕಾರಿ ಅವನ ಹೆಸರು, ವಯಸ್ಸು, ವಿಳಾಸ ಇತ್ಯಾದಿಗಳನ್ನು ಮತದಾರರ ಪಟ್ಟಿಯಲ್ಲಿ ಪರಿಶೀಲಿಸಿ ಅವನನ್ನು ಕುರಿತ ವಿವರಗಳು ಆ ಕಟ್ಟೆಗೆ ಸಂಬಂಧಿಸಿದಂತೆ ಪಟ್ಟಿಯಲ್ಲಿವೆಯೆಂಬುದು ದೃಢಪಟ್ಟಾಗ ಅವನ ಸಹಿ ತೆಗೆದುಕೊಂಡು ಕಾನೂನು ರೀತ್ಯ ಗೊತ್ತುಪಡಿಸಲಾದ ಆಕಾರದ ಕಾಗದದಲ್ಲಿ ಮುದ್ರಿಸಿದ, ಚುನಾವಣಾ ಅಭ್ಯರ್ಥಿಗಳ ಹೆಸರು, ಚಿಹ್ನೆ ಇರುವ, ಮತಪತ್ರ ಕೊಡುತ್ತಾನೆ. ಇದಲ್ಲದೆ ಬೇರೆ ಪತ್ರವನ್ನು ಉಪಯೋಗಿಸುವಂತಿಲ್ಲ. ಮತನೀಡಿಕೆಯ ರಹಸ್ಯವನ್ನು ಕಾಪಾಡಲು ಅದಕ್ಕಾಗಿ ಮರೆಯಾದ ಸ್ಥಳಗಳನ್ನು ನಿರ್ಮಿಸಲಾಗಿರುತ್ತದೆ. ಮತ ಪತ್ರ ಪಡೆದ ಮತದಾರ ಆ ಸ್ಥಳಕ್ಕೆ ಹೋಗಿ ತಾನು ಮತ ನೀಡಬಯಸುವ ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆಯ ಮುಂದೆ ಆ ಕಟ್ಟೆಯ ಮುಖ್ಯಾಧಿಕಾರಿ ಕೊಟ್ಟ ಮುದ್ರೆಯನ್ನೊತ್ತಿ ಮುದ್ರೆಯ ಭಾಗ ಮಡಿಕೆಯ ಒಳಗಡೆ ಬರುವಂತೆ ಪತ್ರವನ್ನು ನಾಲ್ಕು ಮಡಿಕೆಗಳಾಗಿ ಅದನ್ನು ಮುಖ್ಯಾಧಿಕಾರಿಯ ಮುಂದೆ ಇಟ್ಟಿರುವ ಮತಪೆಟ್ಟಿಗೆಯೊಳಗೆ ಹಾಕುತ್ತಾನೆ. ಒಂದು ಸಾರಿ ಮತ ನೀಡಿದವನು ಮತ್ತೆ ಆ ಚುನಾವಣೆಯಲ್ಲಿ ಮತ ನೀಡುವುದನ್ನು ತಪ್ಪಿಸಲು, ಅವನ ಮತ ನೀಡಿಕೆಯಾಗಿದೆಯೆಂಬುದನ್ನು ಗುರುತಿಸಲು, ಶೀಘ್ರವಾಗಿ ಅಳಿಸಿಹೋಗದ ಶಾಯಿಯಿಂದ ಅವನ ತೋರುಬೆರಳಿನ ಮೇಲೆ ಗುರುತು ಮಾಡಲಾಗುತ್ತದೆ.

ಗ್ರೇಟ್ ಬ್ರಿಟನಿನಲ್ಲಿ ಪಾರ್ಲಿಮೆಂಟ್ ಮತ್ತು ಪೌರಸಭೆಗಳ ಚುನಾವಣೆಗಳಲ್ಲಿ ಗುಪ್ತಮತದಾನ ಪದ್ಧತಿಗಳನ್ನು 1872ರ ಕಾಯಿದೆಯ ಮೂಲಕ ಜಾರಿಗೆ ತರಲಾಯಿತು. 1913ರ ವರೆಗೂ ಫ್ರಾನ್ಸಿನ ಮತದಾನ ಪದ್ಧತಿ ಅಸಮರ್ಪಕವಾಗಿತ್ತು. ಅಭ್ಯರ್ಥಿಗಳು ಮತಪತ್ರಗಳನ್ನು ಮತದಾನ ಕೇಂದ್ರಗಳ ಹೊರಗಡೆ ಹಂಚುತ್ತಿದ್ದರು. ಮತದಾರರು ಪತ್ರಗಳನ್ನು ಮಡಿಸಿ, ಅದನ್ನು ಮತಪೆಟ್ಟಿಗೆಯಲ್ಲಿ ಹಾಕಲು ಮತಗಟ್ಟೆಯ ಮುಖ್ಯಾಧಿಕಾರಿಗೆ ಕೊಡುತ್ತಿದ್ದರು. ಅವನ್ನು ಲಕೋಟೆಗಳಲ್ಲಿ ಹಾಕುವ ಕ್ರಮವನ್ನು ಆ ವರ್ಷ ಜಾರಿಗೆ ತರಲಾಯಿತು. 1919ರಿಂದ ಮುಂದಕ್ಕೆ ಸರ್ಕಾರವೇ ಅಭ್ಯರ್ಥಿಗಳ ಖರ್ಚಿನಲ್ಲಿ ಮತಪತ್ರಗಳನ್ನು ಅಚ್ಚುಮಾಡಿ ಅವನ್ನು ಅಂಚೆಯ ಮೂಲಕ ಮತದಾರರಿಗೆ ಕಳುಹಿಸುತ್ತಿತ್ತು.

ಅಮೆರಿಕದ ಸಂಯುಕ್ತಸಂಸ್ಥಾನ 1884ರ ಅಧ್ಯಕ್ಷ ಚುನಾವಣೆಯ ಅನಂತರ ಗುಪ್ತಮತದಾನ ಪದ್ಧತಿಯನ್ನು ಜಾರಿಗೆ ತಂದಿತು. 1960ರಿಂದ ಈಚೆಗೆ ಸಾಮಾನ್ಯವಾಗಿ ಮತಪತ್ರಗಳನ್ನು ಸರ್ಕಾರದ ವೆಚ್ಚದಲ್ಲಿ ಅಚ್ಚುಮಾಡಿಸಿ, ಮತದಾನ ಕೇಂದ್ರಗಳಲ್ಲಿ ಹಂಚಲಾಗುತ್ತಿದೆ. ಮತನೀಡಿಕೆ ರಹಸ್ಯವಾಗಿ ನಡೆಯುತ್ತದೆ.

ಇಂಡೋನೇಷ್ಯದಲ್ಲಿ ಅನಕ್ಷರಸ್ಥರು ಅಧಿಕ ಸಂಖ್ಯೆಯಲ್ಲಿರುವುದರಿಂದ ಪ್ರತಿಯೊಂದು ಪಕ್ಷಕ್ಕೂ ಒಂದು ಚಿಹ್ನೆಯನ್ನು ಕೊಟ್ಟು ಅದನ್ನು ಮತ ಪತ್ರದ ಮೇಲೆ ಅಚ್ಚುಮಾಡಿರುತ್ತದೆ. ಮತಕೇಂದ್ರದಲ್ಲಿ ಮತನೀಡಿಕೆಗಾಗಿ ಇಟ್ಟಿರುವ ಮೊಳೆಯಿಂದ ಮತದಾರರ ಆ ಪತ್ರದ ಮೇಲೆ ರಂಧ್ರ ಮಾಡುತ್ತಾನೆ. ಭಾರತದಲ್ಲೂ ಮೊದಲನೆಯ ಮಹಾಚುನಾವಣೆಗಳಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ಅವನ ಚಿಹ್ನೆಯಿರುವ ಪೆಟ್ಟಿಗೆಯನ್ನಿಡಲಾಗಿತ್ತು. ಮತದಾರ ತಾನು ಮತ ಕೊಡಬಯಸುವ ಅಭ್ಯರ್ಥಿಯ ಚಿಹ್ನೆಯಿರುವ ಪೆಟ್ಟಿಗೆಯೊಳಕ್ಕೆ ತನ್ನ ಮತ ಪತ್ರವನ್ನು ಹಾಕಬೇಕಾಗಿತ್ತು. ಭಾರತ, ಬ್ರಿಟನ್ ಮುಂತಾದ ಕಡೆ ಚುನಾವಣೆಯ ಸಮಯದಲ್ಲಿ ಮತಗಟ್ಟೆಗಳಲ್ಲಿ ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳು ಹಾಜರಿರುತ್ತಾರೆ. ಮತಗಳ ಎಣಿಕೆಯ ಕಾಲದಲ್ಲೂ ಅವರು ಹಾಜರಿರುತ್ತಾರೆ; ಕುಲಗೆಟ್ಟ ಅಥವಾ ನಿರ್ಣಯಿಸಲಾಗದ ಮತಗಳ ಬಗ್ಗೆ ಇರಬಹುದಾದ ತಕರಾರುಗಳನ್ನು ಸೂಚಿಸುತ್ತಾರೆ.

ಈಚೆಗೆ ಚುನಾವಣೆಗಳಲ್ಲಿ ಯಂತ್ರಗಳು ಬಳಕೆಗೆ ಬಂದಿವೆ. ಇವುಗಳಿಂದ ರಹಸ್ಯ ಪಾಲನೆಗೂ ತಪ್ಪಿಲ್ಲದ ಮತ್ತು ಪ್ರಾಮಾಣಿಕ ಮತ ಎಣಿಕೆಗೂ ಅವಕಾಶವುಂಟಾಗಿದೆ. ಮತಪತ್ರ ಮತ್ತು ಮತದಾನ ವಿಧಾನಗಳಲ್ಲಿ ಸುಧಾರಣೆಯ ಪ್ರಯತ್ನಗಳು ನಡೆಯುತ್ತಲೇ ಇದೆ. (ಬಿ.ಎಚ್.ಎಸ್.)

**ಗುಪ್ತರ ನಾಣ್ಯಗಳು :** ಭಾರತದ ಇತಿಹಾಸವನ್ನು ಪುನರ್ರಚಿಸುವಲ್ಲಿ ಸಹಕಾರಿಯಾಗಿರುವ ಮುಖ್ಯ ಚಾರಿತ್ರಿಕ ಮೂಲವಸ್ತುಗಳಲ್ಲೊಂದೆನಿಸಿಕೊಂಡಿರುವ ನಾಣ್ಯ ಸಾಮಗ್ರಿಗಳಲ್ಲಿ 4–6ನೆಯ ಶತಮಾನಗಳಲ್ಲಿ ಉತ್ತರ ಭಾರತದಲ್ಲಿ ಹೊರಡಿಸಲಾದ ಗುಪ್ತ ನಾಣ್ಯಗಳ ಸ್ಥಾನ– ಅವುಗಳ ಐತಿಹಾಸಿಕ ಹಾಗೂ ಕಲಾಮೌಲ್ಯಗಳ ದೃಷ್ಟಿಯಿಂದ– ಮಹತ್ತ್ವದ್ದು. 1783ರಿಂದೀಚೆಗೆ ಬಾಂಗ್ಲಾದೇಶದ ಮಹಮ್ಮದ್‌ಪುರ, ಪಶ್ಚಿಮ ಬಂಗಾಳದ ಕಾಲೀಘಟ್ಟ ಮತ್ತು ಹೂಗ್ಲಿ, ಉತ್ತರ ಪ್ರದೇಶದ ಭರ್ಸರ್, ಅಲಾಹಾಬಾದ್, ತಾಂಡ, ಕೋಟ್ವಾ, ಬಸ್ತಿ, ಟೇಕ್ರಿ ದೇಬ್ರಾ, ಕಸರ್ವಾ, ಜಾನ್‌ಪುರ, ಗೋಪಾಲಪುರ ಮತ್ತು ಝೂನ್ಸಿ, ಬಿಹಾರಿನ ಹಾಜೀಪುರ, ಪಂಜಾಬಿನ ಮೀತಾಥಾಲ್ ಮತ್ತು ರಾಜಸ್ಥಾನದ ಬಯಾನಾ ಮುಂತಾದ ಸ್ಥಳಗಳಲ್ಲಿ ಆಕಸ್ಮಿಕವಾಗಿ ದೊರೆತ ಪ್ರಾಚೀನ ನಾಣ್ಯಗಳ ರಾಶಿಗಳಿಂದ ಗುಪ್ತ ಅರಸರು ಹೊರಡಿಸಿದ ನೂರಾರು ವರ್ತುಲಾಕಾರದ ಬಂಗಾರದ, ಬೆಳ್ಳಿಯ, ಬೆಳ್ಳಿ ಮುಲಾಮಿರುವ ತಾಮ್ರದ ಮತ್ತು ತಾಮ್ರದ ನಾಣ್ಯಗಳು ಬೆಳಕಿಗೆ ಬಂದಿವೆ.

ಶಾಸನಗಳಿಂದ ತಿಳಿದುಬರುವಂತೆ ಗುಪ್ತರ ಬಂಗಾರ ನಾಣ್ಯಗಳಿಗೆ ದಿನಾರವೆಂಬ ಹೆಸರಿತ್ತು. ಅವರ ಹಲವು ಬಂಗಾರ ನಾಣ್ಯಗಳ ಹಿಂಬದಿಯಲ್ಲಿ ಲಕ್ಷ್ಮೀ, ಗಂಗಾಮಾತೆ, ಗರುಡ, ಕಲಶ, ಮಯೂರವಾಹನ ಕಾರ್ತಿಕೇಯ, ಯಜ್ಞವೇದಿಕೆ ಇತ್ಯಾದಿ ಚಿತ್ರಗಳ ಮತ್ತು ಗುಪ್ತ ಬ್ರಾಹ್ಮೀ ಲಿಪಿಯ ಸಂಸ್ಕೃತ ಭಾಷೆಯ ಆಲೇಖ್ಯಗಳ ಜೊತೆಗೆ ಹಲವು ತೆರೆದ ಚಿಹ್ನೆಗಳಲ್ಲೊಂದನ್ನು ಚಿತ್ರಿಸಲಾಗಿದೆ. ಈ ಚಿಹ್ನೆಗಳಾವುವೂ ಅವರ ತಾಮ್ರ ನಾಣ್ಯಗಳಲ್ಲಿ ಕಂಡುಬರುವುದಿಲ್ಲ. ಗುಪ್ತರು ತಮ್ಮ ನಾಣ್ಯಗಳನ್ನು ರಚಿಸುವಲ್ಲಿ ಯಾವುದೇ ನಿರ್ದಿಷ್ಟ

ತೂಕ, ಸುತ್ತಳತೆಗಳನ್ನು ಅನುಸರಿಸಿದವರಲ್ಲ. ಅವರ ಬಂಗಾರದ ನಾಣ್ಯಗಳಲ್ಲಿ 112–146, ಬೆಳ್ಳಿ ನಾಣ್ಯಗಳಲ್ಲಿ 27–34, ತಾಮ್ರ ನಾಣ್ಯಗಳಲ್ಲಿ 18–87 ಗುಂಜಿ ತೂಕಗಳ ಅಂತರ ಕಂಡುಬರುತ್ತದೆ. ಇದರಲ್ಲಿ ಒಂದು ಗಮನೀಯ ಅಂಶವೆಂದರೆ, ಪ್ರತಿಯೊಬ್ಬ ಹೊಸ ಅರಸ ಪಟ್ಟಕ್ಕೆ ಬಂದಂತೆ ಗುಪ್ತರ ಬಂಗಾರ ನಾಣ್ಯಗಳ ತೂಕ ಹೆಚ್ಚುತ್ತ ಬಂದಿರುವುದು.

ಗುಪ್ತ ಸಾಮ್ರಾಟರ ಶಾಸನಗಳಲ್ಲಿ ನೀಡಲಾಗಿರುವ ವಂಶಾವಳಿಗಳಿಂದ ತಿಳಿದು ಬರುವಂತೆ ಶ್ರೀಗುಪ್ತನೂ (ಸು. 260–80) ಅವನ ಮಗನಾದ ಘಟೋತ್ಕಚನೂ (ಸು. 280–300) ಆ ಮನೆತನದ ಮೊದಲ ಇಬ್ಬರು ಅರಸರಾದರೂ, ಘಟೋತ್ಕಚನ ಮಗನೂ 319–20ರಲ್ಲಿ ಗುಪ್ತಶಕವನ್ನು ಪ್ರಾರಂಭಿಸಿದವನೂ ಆದ ಮಹಾರಾಜಾಧಿರಾಜ 1ನೆಯ



ಗುಪ್ತರ ಕಾಲದ ವಿವಿಧ ನಾಣ್ಯಗಳು: 1–5 ಚಂದ್ರಗುಪ್ತ; 6–7; ಕುಮಾರಗುಪ್ತ ; 8–11; ಬುಧಗುಪ್ತ ; 12. ವಿಷ್ಣುಗುಪ್ತ; 13– ವೈನ್ಯಗುಪ್ತ ; 14–15 ಸಮುದ್ರಗುಪ್ತ

ಚಂದ್ರಗುಪ್ತನೇ (ಸು. 320–35) ಗುಪ್ತರ ಪೈಕಿ ನಾಣ್ಯಗಳನ್ನು ಹೊರಡಿಸಿದ ಮೊದಲ ಅರಸ. ಅವನ ಆಳ್ವಿಕೆಯಲ್ಲಿ ಹೊರಡಿಸಲಾದ ಬಂಗಾರ ನಾಣ್ಯಗಳು ಆರಂಭದಲ್ಲಿ ಕುಷಾಣರ ನಾಣ್ಯಗಳ ಅನುಕರಣೆಗಳಂತೆಯೇ ಕಂಡುಬರುತ್ತವೆಯಾದರೂ, ಅಲ್ಪ ಕಾಲದಲ್ಲಿ ಅವು ಗುಪ್ತರಿಂದ ಆಗತಾನೆ ಪುನರುದ್ಧಾರಗೊಂಡಿದ್ದ ವೈದಿಕ ಧರ್ಮಕ್ಕನುಗುಣವಾಗಿ ರಾಮಾಯಣ, ಮಹಾಭಾರತ ಮಹಾಕಾವ್ಯಗಳಿಂದ ಪರಿಚಿತವಾಗಿರುವ ಪ್ರಾಚೀನ ಹಿಂದೂ ಸಂಸ್ಕೃತಿಯನ್ನು ಪ್ರತಿಬಿಂಬಿಸಲಾರಂಭಿಸಿದುವು. ಹೀಗಾಗಿ ಗುಪ್ತರ ನಾಣ್ಯಗಳು ಅಂದಿನ ಭಾರತೀಯರ ಕಲಾಕೌಶಲದ, ವಿನ್ಯಾಸದ, ಪ್ರಯೋಗತಂತ್ರದ ಉತ್ತಮ ನಿದರ್ಶನಗಳಾಗಿವೆ.

1. ಒಂದನೆಯ ಚಂದ್ರಗುಪ್ತ (ಸು.320–35) ತನ್ನ ಆಳ್ವಿಕೆಯ ಕಾಲದಲ್ಲಿ ಹೊರಡಿಸಿದ ಒಂದೇ ವಿಧದ ಬಂಗಾರ ನಾಣ್ಯಗಳ ಮುಂಬದಿಯಲ್ಲಿ ವಸ್ತ್ರಾಭರಣಗಳಿಂದ ಅಲಂಕೃತರಾದ ಚಂದ್ರಗುಪ್ತ ಮತ್ತು ಅವನ ರಾಣಿ ಲಿಚ್ಛವಿವಂಶದ ಕುಮಾರದೇವಿಯವರು ನಿಂತಿರುವ ಚಿತ್ರಣವೂ ಚಂದ್ರಗುಪ್ತ, ಶ್ರೀ ಕುಮಾರದೇವಿ ಅಥವಾ ಕುಮಾರ ದೇವಿಶ್ರೀ ಎಂಬ ಆಲೇಖ್ಯಗಳೂ ಹಿಂಬದಿಯಲ್ಲಿ ವಸ್ತ್ರಾಭರಣಗಳಿಂದ ಅಲಂಕೃತಳಾದ ದೇವತೆಯೊಬ್ಬಳ ಚಿತ್ರಣವೂ ಲಿಚ್ಛವಯಃ ಎಂಬ ಆಲೇಖ್ಯವೂ ಕಂಡುಬರುತ್ತದೆ.

2. ಸಮುದ್ರಗುಪ್ತನ (ಸು.335–75) ಬಂಗಾರದ ನಾಣ್ಯಗಳ ಮುಂಬದಿಯಲ್ಲಿ ಚಿತ್ರಿಸಿರುವ ದೃಶ್ಯಗಳ ಆಧಾರದ ಮೇಲೆ ಇವನ ಬೇರೆ ಬೇರೆ ರೀತಿಯ ನಾಣ್ಯಗಳನ್ನು ಧ್ವಜ, ಬಿಲ್ಲುಗಾರ, ಗಂಡುಗೊಡಲಿ, ಅಶ್ವಮೇಧ, ವ್ಯಾಘ್ರಾಂತಕ, ವೀಣಾಪಾಠಕ ಪ್ರರೂಪಗಳೆಂದು ಗುರುತಿಸಲಾಗಿದೆ. ಸಾಮಾನ್ಯವಾಗಿ ಇವನ ಬಂಗಾರ ನಾಣ್ಯಗಳ ಮುಂಬದಿಯಲ್ಲಿ ಸಮರ ಶತ ವಿತತ ವಿಜಯೋ ಜಿತರಿಪುರಜಿತೋ ದಿವಂ ಜಯತಿ, ರಾಜಾಧಿರಾಜಃ ಪೃಥ್ವಿವೀ ಮವಿತ್ವಾ ದಿವಂ ಜಯತ್ಯಾಹೃತ ವಾಜಿ ಮೇಧಃ, ರಾಜಾಧಿರಾಜಃ ಪೃಥ್ವಿವೀಂ ವಿಜಿತ್ಯ ದಿವಂ ಜಯತ್ಯಾಹೃತ ವಾಜಿಮೇಧಃ ಮಹಾರಾಜಾಧಿರಾಜ ಶ್ರೀ ಸಮುದ್ರಗುಪ್ತಃ, ಕೃತಾಂತ ಪರಶುರ್ಜಯ ತ್ಯಜಿತರಾಜ ಜೇತಾಜಿತಃ, ವ್ಯಾಘ್ರಪರಾಕ್ರಮಃ, ಅಪ್ರತಿರಥೋಜಿ ವಿಜಿತ್ಯ ಕ್ಷಿತಿಂ ಸುಚರಿತೈರ್ದಿವಂ ಜಯತಿ, ಅಪ್ರತಿರಥೋ ವಿಜಿತ್ಯಕ್ಷಿತಿಮವನೀಶೋ ದಿವಂ ಜಯತಿ ಎಂಬ ಅಲೇಖ್ಯಗಳಲ್ಲೊಂದನ್ನೂ ಹಿಂಬದಿಯಲ್ಲಿ ಲಕ್ಷ್ಮೀ, ಗಂಗಾಮಾತೆ ಅಥವಾ ಪಟ್ಟದ ರಾಣಿ ದತ್ತದೇವಿಯ ಚಿತ್ರದ ಜೊತೆಗೆ ಪರಾಕ್ರಮಃ, ಶ್ರೀವಿಕ್ರಮಃ ಅಪ್ರತಿರಥಃ, ಕೃತಾಂತಪರಶುಃ, ಅಶ್ವಮೇಧಪರಾಕ್ರಮಃ, ವ್ಯಾಘ್ರಪರಾಕ್ರಮಃ, ರಾಜಾ ಸಮುದ್ರಗುಪ್ತಃ, ಸಮುದ್ರಗುಪ್ತಃ ಎಂಬೀ ಅಲೇಖ್ಯಗಳಲ್ಲೊಂದನ್ನೂ ಕಾಣಬಹುದು.



ಗುಪ್ತರ ನಾಣ್ಯಗಳ ಮೇಲೆ ಕಂಡು ಬರುವ ವಿವಿಧ ಚಿಹ್ನೆಗಳು

3. ಎರಡನೆಯ ಚಂದ್ರಗುಪ್ತನ (ಸು.375–415) ಬಂಗಾರ ನಾಣ್ಯಗಳ ಪೈಕಿ ಕೆಲವು ನಾಣ್ಯಗಳ ಮುಂಬದಿಯಲ್ಲೂ ಇನ್ನು ಕೆಲವು ನಾಣ್ಯಗಳ ಹಿಂಬದಿಯಲ್ಲೂ ಇರುವ ಚಿತ್ರಗಳ ಆಧಾರದ ಮೇಲೆ ಈ ನಾಣ್ಯಗಳನ್ನು ಹಲವು ಬಗೆಗಳಾಗಿ ವಿಂಗಡಿಸಬಹುದು. ಬಿಲ್ಲುಗಾರ, ಸಿಂಹಾಂತಕ, ಆಶ್ವಾರೋಹಿ, ಛತ್ರ, ಮಂಚ, ಮಂಚದ ಮೇಲೆ ಆಸೀನರಾಗಿರುವ ರಾಜದಂಪತಿ, ಧ್ವಜ, ಚಕ್ರವಿಕ್ರಮ ಇವು ಈ ಬಗೆಗಳು. ಅಂತೆಯೇ ಇವನ ತಾಮ್ರನಾಣ್ಯಗಳಲ್ಲೂ ಛತ್ರ, ನಿಂತ ರಾಜ, ಬಿಲ್ಲುಗಾರ, ರಾಜನ ಎದೆ ವಿಗ್ರಹ, ಚಕ್ರ ಮತ್ತು ಕಲಶ ಪ್ರರೂಪಗಳಿವೆ. ಇವನ ಬಂಗಾರ ನಾಣ್ಯಗಳ ಮುಂಬದಿಯಲ್ಲಿ ದೇವಶ್ರೀ ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತಃ, ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತಃ, ಕ್ಷಿತಿಮವಜಿತ್ಯ ಸುಚರಿತೈರ್ದಿವಂಜಯತಿ ವಿಕ್ರಮಾದಿತ್ಯಃ, ಪರಮ ಭಾಗವತೋ ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತಃ, ದೇವಶ್ರೀ ನರೇಂದ್ರ ಚಂದ್ರಃ, ಪ್ರಥಿತರಣೋರಣೇ ಜಯತ್ಯಜಯ್ಯೋ ಭುವಿ ಸಿಂಹವಿಕ್ರಮಃ, ವಸುಧಾಂ ವಿಜಿತ್ಯ ಜಯತಿ ತ್ರಿದಿವಂ ಪೃಥ್ವಿವೀಶ್ವರಃ ಪುಣ್ಯೈಃ ಎಂಬೀ ಅಲೇಖ್ಯಗಳಲ್ಲೊಂದು ಹಿಂಬದಿಯಲ್ಲಿ ಲಕ್ಷ್ಮಿಯ ಚಿತ್ರದೊಂದಿಗೆ ಸಾಮಾನ್ಯವಾಗಿ ಶ್ರೀವಿಕ್ರಮಃ, ಸಿಂಹ ವಿಕ್ರಮಃ, ಅಥವಾ ಶ್ರೀಸಿಂಹವಿಕ್ರಮಃ, ಅಜಿತವಿಕ್ರಮಃ, ವಿಕ್ರಮಾದಿತ್ಯಃ, ಪರಮ ಭಾಗವತಃ, ಚಕ್ರ ವಿಕ್ರಮಃ ಎಂಬ ಅಲೇಖ್ಯಗಳಲ್ಲೊಂದೂ ಕಂಡುಬರುತ್ತವೆ.

ಎರಡನೆಯ ಚಂದ್ರಗುಪ್ತನ ಬೆಳ್ಳಿ ನಾಣ್ಯಗಳು ಪಶ್ಚಿಮ ಭಾರತದಲ್ಲಿ ಮಾತ್ರ ದೊರೆತಿವೆ. ಅವುಗಳ ಮುಂಬದಿಯಲ್ಲಿ ರಾಜನ ಎದೆ ಚಿತ್ರವೂ ಗುಪ್ತಶಕದ ವರ್ಷವೂ ಕೆಲವು ನಾಣ್ಯಗಳ ಹಿಂಬದಿಯಲ್ಲಿ ಗರುಡನ ಚಿತ್ರವೂ ಪರಮ ಭಾಗವತ ಮಹಾರಾಜಾಧಿರಾಜ ಶ್ರೀಚಂದ್ರಗುಪ್ತ ವಿಕ್ರಮಾದಿತ್ಯ (ಅಥವಾ ವಿಕ್ರಮಾಂಕಸ್ಯ) ಎಂಬ ಅಲೇಖ್ಯವೂ ಕಂಡುಬರುತ್ತವೆ. ಅದರಂತೆಯೇ ಅವನ ತಾಮ್ರನಾಣ್ಯಗಳ ಹಿಂಬದಿಯಲ್ಲಿ ದೇವತೆ ಅಥವಾ ಗರುಡನ ಚಿತ್ರವೂ ಮಹಾರಾಜ ಶ್ರೀಚಂದ್ರಗುಪ್ತಃ, ಶ್ರೀ ಚಂದ್ರಗುಪ್ತಃ ಅಥವಾ ಚಂದ್ರಗುಪ್ತಃ ಎಂಬ ಅಲೇಖ್ಯಗಳಲ್ಲಿ ಒಂದೂ ಇರುತ್ತವೆ.

4. ಒಂದನೆಯ ಕುಮಾರ ಗುಪ್ತನ (ಸು.415–55) ಆಳ್ವಿಕೆಯಲ್ಲಿ ಹೊರಡಿಸಲಾದ ಬಿಲ್ಲುಗಾರ, ಅಶ್ವಾರೋಹಿ, ಸಿಂಹಾಂತಕ, ವ್ಯಾಘ್ರಾಂತಕ, ಹಸ್ತ್ಯಾರೋಹಿ, ಹಸ್ತ್ಯಾರೋಹಿ–

ಸಿಂಹಾಂತಕ, ಖಡ್ಗಮೃಗಾಂತಕ, ಅಶ್ವಮೇಧ, ಕಾರ್ತಿಕೇಯ, ಛತ್ರ, ಅಪ್ರತಿಘ, ವೀಣಾಪಾತಕ, ರಾಜದಂಪತಿ ಮತ್ತು ಗರುಡ ಬಂಗಾರ ನಾಣ್ಯಗಳು ದೊರೆತಿವೆ.

ಒಂದನೆಯ ಕುಮಾರಗುಪ್ತನ ಹಲವು ಬಗೆಯ ಅನೇಕ ಬೆಳ್ಳಿ ನಾಣ್ಯಗಳು ಅಂದಿನ ಗುಪ್ತ ಸಾಮ್ರಾಜ್ಯದ ಎಲ್ಲೆಡೆಗಳಲ್ಲೂ ಬೆಳಕಿಗೆ ಬಂದಿವೆ. ಸಾಮಾನ್ಯವಾಗಿ ಈ ನಾಣ್ಯಗಳ ಮುಂಬದಿಯಲ್ಲಿ ರಾಜನ ಎದೆವರೆಗಿನ ಅಥವಾ ಮುಖಮಾತ್ರದ ಚಿತ್ರವೂ ಗುಪ್ತಶಕದ ವರ್ಷವೂ ಕೆಲವು ಗ್ರೀಕ್ ಅಕ್ಷರಗಳೂ ಕಂಡುಬರುತ್ತವೆ; ಹಿಂಬದಿಯಲ್ಲಿ ಗರುಡನ ಚಿತ್ರವೂ ಪರಮ ಭಾಗವತ ಮಹಾರಾಜಾಧಿರಾಜ ಶ್ರೀ ಕುಮಾರಗುಪ್ತ ಮಹೇಂದ್ರಾದಿತ್ಯಸ್ಯ, ಪರಮ ಭಾಗವತ ರಾಜಾಧಿರಾಜ ಶ್ರೀ ಕುಮಾರಗುಪ್ತ ಮಹೇಂದ್ರಾದಿತ್ಯ, ಭಾಗವತ ರಾಜಾಧಿರಾಜ ಶ್ರೀಕುಮಾರಗುಪ್ತ ಮಹೇಂದ್ರಾದಿತ್ಯ, ವಿಜಿತಾವನಿರವನಿಪತಿ ಕುಮಾರಗುಪ್ತೋದಿವಂ ಜಯತಿ ಎಂಬೀ ಅಲೇಖ್ಯಗಳಲ್ಲೊಂದೂ ಕಂಡುಬರುತ್ತವೆ. ಇವನ ಬೆಳ್ಳಿ ಮುಲಾಮಿನ ತಾಮ್ರನಾಣ್ಯಗಳ ಹಿಂಬದಿಯಲ್ಲಿ ಗರುಡ ಅಥವಾ ನವಿಲಿನ ಚಿತ್ರವಿರುತ್ತದೆ. ತಾಮ್ರನಾಣ್ಯಗಳ ಮುಂಬದಿಯಲ್ಲಿ ನಿಂತ ರಾಜನ ಇಲ್ಲವೇ ಯಜ್ಞವೇದಿಕೆಯ ಚಿತ್ರವೂ ಹಿಂಬದಿಯಲ್ಲಿ ಗರುಡನ ಅಥವಾ ದೇವತೆಯೊಬ್ಬಳ ಚಿತ್ರವೂ ಮಹಾರಾಜಶ್ರೀ ಕುಮಾರಗುಪ್ತಃ, ಶ್ರೀಕುಮಾರ ಗುಪ್ತಃ ಅಥವಾ ಕುಮಾರಗುಪ್ತಃ ಎಂಬೀ ಅಲೇಖ್ಯಗಳಲ್ಲೊಂದೂ ಕಂಡುಬರುತ್ತವೆ.

5. ಸ್ಕಂದಗುಪ್ತ (ಸು. 455–68) ಹೊರಡಿಸಿದ ಬಂಗಾರ ನಾಣ್ಯಗಳಲ್ಲಿ ಬಿಲ್ಲುಗಾರ, ರಾಜದಂಪತಿ, ಛತ್ರ ಮತ್ತು ಅಶ್ವಾರೋಹಿ ನಾಣ್ಯಗಳು ದೊರೆತಿವೆ. ಇವುಗಳ ಮುಂಬದಿಯಲ್ಲಿ ನಿಂತ ರಾಜದಂಪತಿಗಳ ಅಥವಾ ರಾಜನ ಚಿತ್ರವೂ ಜಯತಿ ಮಹೀತಲಂ ಸ್ಕಂದಗುಪ್ತಃ ಸುಧನ್ವೀ, ಪರಹಿತಕಾರೀ ಎಂಬ ಅಲೇಖಗಳಲ್ಲೊಂದೂ ಹಿಂಬದಿಯಲ್ಲಿ ಲಕ್ಷ್ಮೀ ಚಿತ್ರವೂ ಶ್ರೀಸ್ಕಂದಗುಪ್ತಃ ಕ್ರಮಾದಿತ್ಯಃ ಎಂಬ ಅಲೇಖ್ಯಗಳಲ್ಲೊಂದೂ ಕಂಡುಬರುತ್ತವೆ.

ಇವನ ಬೆಳ್ಳಿ ನಾಣ್ಯಗಳ ಮುಂಬದಿಯಲ್ಲಿ ರಾಜನ ಎದೆವರೆಗಿನ ಅಥವಾ ಮುಖಮಾತ್ರದ ಚಿತ್ರವನ್ನೂ ಗುಪ್ತಶಕದ ವರ್ಷವನ್ನೂ ಕೆಲವು ಗ್ರೀಕ್ ಅಕ್ಷರಗಳನ್ನೂ ಹಿಂಬದಿಯಲ್ಲಿ ಗರುಡ, ನಂದಿ, ಯಜ್ಞವೇದಿಕೆ ಅಥವಾ ಚೈತ್ಯದ ಚಿತ್ರವನ್ನೂ ಪರಮ ಭಾಗವತ ಮಹಾರಾಜಾಧಿರಾಜ ಶ್ರೀಸ್ಕಂದಗುಪ್ತಕ್ರಮಾದಿತ್ಯಃ, ಪರಮ ಭಾಗವತ ಶ್ರೀವಿಕ್ರಮಾದಿತ್ಯ ಸ್ಕಂದಗುಪ್ತಃ, ಪರಮಭಾಗವತ ಶ್ರೀಸ್ಕಂದಗುಪ್ತಕ್ರಮಾದಿತ್ಯಃ, ವಿಜಿತಾವನಿರವನಿಪತಿರ್ಜಯತಿದಿವಂ ಸ್ಕಂದಗುಪ್ತಃ, ವಿಜಿತಾವನಿರವನಿಪತಿ ಶ್ರೀಸ್ಕಂದ ಗುಪ್ತೋದಿವಂ ಜಯತಿ, ಮಹಾರಾಜ ಕುಮಾರಗುಪ್ತ ಪರಮ ಮಹಾದಿತ್ಯ ಮಹಾರಾಜಸ್ಕಂದಗುಪ್ತಃ ಎಂಬ ಆಲೇಖ್ಯಗಳಲ್ಲೊಂದನ್ನೂ ಕಾಣಬಹುದಾಗಿದೆ.

ಮೇಲಣ ನಾಣ್ಯಗಳೆಲ್ಲವೂ ಗುಪ್ತ ಸಾಮ್ರಾಜ್ಯವನ್ನಾಳಿದ ಹೆಸರಾಂತ ಚಕ್ರವರ್ತಿಗಳು ಹೊರಡಿಸಿದವು. ಇತರ ಗುಪ್ತ ಅರಸರು ಹೊರಡಿಸಿದ ಹಲವು ಬಂಗಾರದ ಮತ್ತು ಕೆಲವು ಬೆಳ್ಳಿಯ ಹಾಗೂ ತಾಮ್ರದ ನಾಣ್ಯಗಳೂ ದೊರೆತಿವೆ. ಈ ನಾಣ್ಯಗಳ ವಿಚಾರವಾಗಿ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ, ಮುಂಬದಿಯಲ್ಲಿ ಸಿಂಹದಂಥ ಒಂದು ಮೃಗದ ಚಿತ್ರವೂ ಹಿಂಬದಿಯಲ್ಲಿ ರಾಮಗುಪ್ತ ಎಂಬ ಆಲೇಖ್ಯವೂ ಇರುವ ಕೆಲವು ತಾಮ್ರ ನಾಣ್ಯಗಳು 4ನೆಯ ಶತಮಾನದಲ್ಲಿ ಆಳಿರಬಹುದಾದ 2ನೆಯ ಚಂದ್ರಗುಪ್ತನ ಅಣ್ಣ ರಾಮಗುಪ್ತನ ಆಳ್ವಿಕೆಯವೋ 5ನೆಯ ಶತಮಾನದಲ್ಲಿ ರಾಮಗುಪ್ತನೆಂಬ ಯಾವನೋ ತುಂಡರಸ ಹೊರಡಿಸಿದವೋ ಎಂಬ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಅಂತೆಯೇ ಸಮುದ್ರಗುಪ್ತನ ಧ್ವಜಪ್ರರೂಪಿ ನಾಣ್ಯಗಳ ಅನುಕರಣೆಗಳಂತೆ ಕಂಡುಬರುವ ಕೆಲವು ಬಂಗಾರ ನಾಣ್ಯಗಳ ಮುಂಬದಿಯಲ್ಲಿ ಚಕ್ರಧ್ವಜವನ್ನು ಹಿಡಿದು ನಿಂತಿರುವ ರಾಜನ ಚಿತ್ರವೂ ಕಾಚೋಗಾಮವಜಿತ್ಯ ದಿವಂ ಕರ್ಮಭಿರುತ್ತಮೈರ್ಜಯತಿ ಎಂಬ ಆಲೇಖವೂ ಹಿಂಬದಿಯಲ್ಲಿ ಸರ್ವ ರಾಜೋಚ್ಛೇತ್ತಾ ಎಂಬ ಆಲೇಖ್ಯವೂ ಇವೆ. ಆ ನಾಣ್ಯಗಳನ್ನು ಹೊರಡಿಸಿದ ಕಾಚ ಎಂಬ ರಾಜ ಸಮುದ್ರಗುಪ್ತನೇ ಇರಬೇಕೆಂದು ಕೆಲವು ವಿದ್ವಾಂಸರೂ ಸಮುದ್ರಗುಪ್ತನ ಅಣ್ಣನೋ ಮಗನೋ ಇರಬೇಕೆಂದು ಇತರರೂ ವಾದಿಸುತ್ತಾರೆ.

ಸ್ಕಂದಗುಪ್ತನ ಅನಂತರ ಗುಪ್ತ ಸಾಮ್ರಾಜ್ಯದ ಇಳಿಗಾಲದಲ್ಲಿ ರಾಜ್ಯವಾಳಿದ 1ನೆಯ ನರಸಿಂಹಗುಪ್ತ ಬಾಲಾದಿತ್ಯ (ಸು.470–72) 2ನೆಯ ಕುಮಾರಗುಪ್ತ (ಸು.472–75), ಬುಧಗುಪ್ತ (ಸು. 475–96), ಪ್ರಕಾಶಾದಿತ್ಯ (ಸು.496–500), ವೈನ್ಯಗುಪ್ತ (ಸು.500–510), 2ನೆಯ ನರಸಿಂಹಗುಪ್ತ ಬಾಲಾದಿತ್ಯ (ಸು.518–32), 3ನೆಯ ಕುಮಾರಗುಪ್ತ (ಸು.532–40), ಮತ್ತು ವಿಷ್ಣುಗುಪ್ತ ಎಂಬ ದೊರೆಗಳ ಬಂಗಾರ ನಾಣ್ಯಗಳೂ, ಬುಧಗುಪ್ತನ ಕೆಲವು ಬೆಳ್ಳಿ ನಾಣ್ಯಗಳೂ ಬೆಳಕಿಗೆ ಬಂದಿವೆ. ಗುಪ್ತರ ನಾಣ್ಯಗಳ ರಚನಾಶೈಲಿಯನ್ನನುಕರಿಸಿ 6–7ನೆಯ ಶತಮಾನಗಳಲ್ಲಿ ಉತ್ತರ ಭಾರತದ ಕೆಲವು ಅರಸರು ಹೊರಡಿಸಿದ ನಾಣ್ಯಗಳೂ ದೊರೆತಿವೆ. (ಕೆ.ವಿ.ಆರ್.)

**ಗುಪ್ತರ ವಾಸ್ತು ಮತ್ತು ಶಿಲ್ಪಕಲೆ :** ಗುಪ್ತರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ದೇಗುಲ ವಾಸ್ತು ಉದಾಹರಣೆಗಳು ಉತ್ತರ ಭಾರತದ ಕೆಲವೆಡೆ ಮಾತ್ರ ಉಳಿದುಬಂದಿವೆ. ಇವಾವುದನ್ನೂ ಗುಪ್ತ ಅರಸರ ನೇರ ಪ್ರೋತ್ಸಾಹದಿಂದ ರಚಿತವಾದುದೆಂಬುದಾಗಿ ಗುರುತಿಸುವಂತಿಲ್ಲ. ಇವು ಇಟ್ಟಿಗೆ ಇಲ್ಲವೆ ಶಿಲೆಯಿಂದ ನಿರ್ಮಿತವಾಗಿವೆ. ಕಲ್ಲಿನ ನಿಕ್ಷೇಪಗಳ ಕೊರತೆಯಿರುವ ಮಧ್ಯದೇಶದಲ್ಲಿ (ಉತ್ತರ ಪ್ರದೇಶ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ) ಇಟ್ಟಿಗೆಯ ದೇಗುಲಗಳು ನಿರ್ಮಾಣವಾದವು. ಇವುಗಳಲ್ಲಿ ಕೆಲವೇ ಕೆಲವು ಮಾತ್ರ ಉಳಿದಿವೆ. ಸಾಮ್ರಾಜ್ಯದ ದಕ್ಷಿಣ ಭಾಗದಲ್ಲಿ ಶಿಲಾನಿಕ್ಷೇಪಗಳು ಸಮೃದ್ಧವಾಗಿವೆ. ಆದುದರಿಂದ ಈ ಪ್ರದೇಶದಲ್ಲಿ ಕೆಲವು ಶಿಲಾ ದೇಗುಲ ವಾಸ್ತು ಉದಾಹರಣೆಗಳು ಲಭ್ಯವಾಗಿವೆ. ಆದರೆ ಇವುಗಳಲ್ಲಿ ಗುಪ್ತರ ಕಾಲದ ಉತ್ತರಾರ್ಧದ ಉದಾಹರಣೆಗಳೇ ಹೆಚ್ಚು. ಕಟ್ಟಡ ಅಥವಾ ರಚನ ವಾಸ್ತುವಿಗೆ ಈ ಕಾಲದಲ್ಲಿ ಪ್ರಾಧಾನ್ಯ ಬಂದು ದೇಗುಲಗಳಿಗೆ ಶಿಲಾಮಾಧ್ಯಮದ ಬಳಕೆ ಹೆಚ್ಚಾಯಿತು. ಹೀಗಾಗಿ ಮುಂಚಿನ ಕಟ್ಟಿಗೆಯ ವಾಸ್ತುವಿನ ಉದಾಹರಣೆಗಳ ಅನುಕರಣೆಯ ಬದಲು ವಾಸ್ತು ಶಿಲ್ಪಿಗಳು ದೃಢತೆ, ಪ್ರಮಾಣ ಮತ್ತು ಸಮತೋಲನದ ಸಮಸ್ಯೆಗಳ ಬಗ್ಗೆ ಹೆಚ್ಚು ಲಕ್ಷ್ಯವಹಿಸಿದ್ದು ಕಾಣುತ್ತದೆ.

ಗುಪ್ತರ ಕಾಲದ ದೇವಾಲಯಗಳು ಸ್ವರೂಪದಲ್ಲಿ ವೈವಿಧ್ಯಮಯವಾಗಿವೆ. ಈಗ ಉಳಿದುಬಂದಿರುವ ತೀರ ಸರಳ ಮತ್ತು ಜನಪ್ರಿಯ ರೀತಿಯ ದೇಗುಲಗಳಿಗೆ ಚೌಕ ವಿನ್ಯಾಸವುಳ್ಳ, ಸಮತಟ್ಟಾದ ಚಾವಣಿಯುಳ್ಳ ಗರ್ಭಗೃಹವಿದೆ. ಇದಕ್ಕೆ ಅಂಟಿಕೊಂಡಂತೆ ಮುಂದುಗಡೆ ಚಿಕ್ಕಗಾತ್ರದ ಕುಳ್ಳಗಿನ ತೆರೆದ ಮುಖಮಂಟಪವಿದೆ. ಗರ್ಭಗೃಹಕ್ಕೆ ಮುಖಮಂಟಪದ ಮೂಲಕ ಒಂದೇ ಪ್ರವೇಶವಿದ್ದು ಕಿಂಡಿಗಳಿರುವುದಿಲ್ಲ. ಮುಖಮಂಟಪದ ಕಂಬದ ಕೆಳಭಾಗ ಚೌಕವೂ ಅಲಂಕಾರರಹಿತವೂ ಆಗಿದ್ದು ಪೀಠದ ಅಭಾಸ ನೀಡುತ್ತದೆ. 8 ಇಲ್ಲವೇ 16 ಮುಖಗಳಿರುವ ಕಂಬದ ಕಾಂಡಭಾಗ ದುಂಡಗಿನ ದಂಡದಂತಹ ರೂಪು ಪಡೆದಿದೆ. ಕಾಂಡದ ಮೇಲ್ಗಡೆ ಘಟಪಲ್ಲವ ಅಲಂಕರಣವಿದ್ದು ಅದರ ಮೇಲಿರುವ ಗುರುತರ ಫಲಕ ಸಿಂಹಬೋದಿಗೆಯನ್ನು ಹೊತ್ತಿರುತ್ತದೆ. ಮುಖಮಂಟಪದ ಮುಖದಲ್ಲಿರುವ ನಾಲ್ಕು ಕಂಬಗಳ ಸಾಲಿನಲ್ಲಿ ಮಧ್ಯದ ಜೋಡಿಯ ನಡುವಿನ ಅಂತರ ಪಾರ್ಶ್ವದ ಜೋಡಿಗಳ ನಡುವಿನ ಅಂತರಕ್ಕಿಂತ ಹೆಚ್ಚಾಗಿರುತ್ತದೆ. ಸಾಲಂಕೃತ ದ್ವಾರಬಂಧದ ಮೇಲ್ಗಡೆ ಉತ್ತರಾಂಗವಿರುತ್ತದೆ. ಇಂತಹ ಸರಳ ವಿನ್ಯಾಸದ ವಾಸ್ತುವಿನಿಂದ ಕ್ರಮೇಣ ಭಾರತೀಯ ದೇಗುಲವಾಸ್ತು ಸಂಕೀರ್ಣರೂಪದ್ದಾಗಿ ಅಭಿವೃದ್ಧಿಹೊಂದಿದೆ. ಎತ್ತರವಾದ ಜಗತಿ, ಪ್ರದಕ್ಷಿಣಾಪಥದ ಸೇರ್ಪಡೆ ಮತ್ತು ಶಿಖರ ರಚನೆಗಳು ಮೊದಲ ಮಾರ್ಪಾಡುಗಳು. ಅನಂತರದ ಬೆಳೆವಣಿಗೆಯಲ್ಲಿ ಮೂಲ ದೇಗುಲದ ಸುತ್ತ ಉಪದೇಗುಲಗಳನ್ನು ರಚಿಸಲಾಗಿದೆ.

ಗುಪ್ತರ ಕಾಲದ ದೇಗುಲಗಳ ಬಹು ಅಲಂಕೃತ ಭಾಗವೆಂದರೆ ದ್ವಾರಬಂಧ. ಇದು ರೋಮನ್ (ಲ್ಯಾಟಿನ್) ಲಿಪಿಯ ಟಿ ಆಕಾರದಲ್ಲಿರುವುದು ಸಾಮಾನ್ಯ. ದ್ವಾರಬಂಧದ ಭುಜಗಳನ್ನು ಅನೇಕ ಶಾಖೆಗಳಾಗಿ ಅಲಂಕರಿಸಿದೆ. ಪ್ರಾಣಿ, ಹೂಬಳ್ಳಿ, ಮಿಥುನ, ಗಣ, ದೇವತೆಗಳ ಸಾಲುಗಳು ಶಾಖೆಗಳ ಅಲಂಕರಣಕ್ಕೆ ಬಳಕೆಯಾಗಿವೆ. ದ್ವಾರಬಂಧದ ಮೇಲ್ಭಾಗದ ಪಾರ್ಶ್ವಗಳಲ್ಲಿ ಇಲ್ಲವೇ ಭುಜಗಳ ಕೆಳ (ಪೇದ್ಯಾ) ಭಾಗದಲ್ಲಿ ಗಂಗಾ ಮತ್ತು ಯಮುನಾ ನದೀದೇವತೆಗಳ ವಿಗ್ರಹಗಳಿರುವುದು ಸಾಮಾನ್ಯವಾಗಿ ಈ ಕಾಲದ ದೇವಾಲಯಗಳ ವಿಶೇಷ, ಲಲಾಟದಲ್ಲಿ ದೇವತೆಯ ಬಿಂಬವನ್ನು ಅಳವಡಿಸಲಾಗಿರುತ್ತದೆ. ದೇಗುಲಗಳ ಸುತ್ತ ಬಿಡಿಯಾಗಿ ದೊರೆತಿರುವ ಜಾಲಂಧ್ರಗಳು, ಪ್ರನಾಲಗಳು, ಆಮಲಕಗಳು, ಅಲಂಕಾರಪೂರಿತ ವಾಸ್ತುಭಾಗಗಳು ಶುದ್ಧ ಗುಪ್ತ ಶೈಲಿಯ ಅಲಂಕಾರ ವಿನ್ಯಾಸದ ಪ್ರಮುಖ ಲಕ್ಷಣಗಳು. ಕೆಲವು ದೇವಾಲಯಗಳ ಗೋಡೆಗಳಲ್ಲಿ ಮಾತ್ರ ಕೋಷ್ಠಗಳಿದ್ದು ಇವು ದೊಡ್ಡ ಗಾತ್ರದ ದೇವತಾ ಶಿಲ್ಪಗಳನ್ನೊಳಗೊಂಡಿವೆ. ಇವುಗಳಲ್ಲಿ ಟಿ ಆಕಾರದ ದ್ವಾರಬಂಧ, ದ್ವಾರಬಂಧದ ಭುಜಗಳನ್ನು ಶಾಖೆಗಳಾಗಿ ಅಲಂಕರಿಸುವ ಪದ್ಧತಿ, ಹೂ–ಎಲೆ–ಬಳ್ಳಿಗಳ ವಿನ್ಯಾಸ, ಚೌಕಖಾನೆಗಳ ವಿನ್ಯಾಸಕ್ರಮ ಮುಂತಾದ ಹಲವು ಅಂಶಗಳ ಮೂಲವನ್ನು ಕುಷಾಣಕಾಲೀನ ಮಥುರ ಮತ್ತು ಗಾಂಧಾರ ಶಿಲ್ಪ ಪರಂಪರೆಯಲ್ಲಿ ಕಾಣಬಹುದು.

ಈ ಹಿನ್ನೆಲೆಯಲ್ಲಿ ಗುಪ್ತರ ಕಾಲದ ದೇಗುಲಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು: 1. ಸಮತಟ್ಟಾದ ಚಾವಣಿಯುಳ್ಳ, ಚೌಕ ಗರ್ಭಗೃಹವಿರುವ, ಚಿಕ್ಕ ಮುಖಮಂಟಪವನ್ನೊಳಗೊಂಡ ದೇಗುಲಗಳು. ಇದಕ್ಕೆ ಸಾಂಚಿಯ 17ನೆಯ ಗುಡಿ ಮತ್ತು ತಿಗಾವದ ಕಂಕಾಲೀದೇವಿ ಗುಡಿ ಉದಾಹರಣೆಗಳು. 2. ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥ ವಿರುವ ದೇಗುಲಗಳು. ಇದಕ್ಕೆ ನಾಚ್ನಾ ಕುಠಾರದ ಪಾರ್ವತಿ ದೇವಾಲಯ ಹಾಗೂ ಭೂಮರಾದ ಶಿವ ದೇವಾಲಯ ಒಳ್ಳೆಯ ಉದಾಹರಣೆಗಳು.

3. ಗರ್ಭಗೃಹದ ಮೇಲೆ ಕುಳ್ಳ ಶಿಖರವುಳ್ಳ ದೇವಾಲಯಗಳು. ಭಿತರಗಾಂವದಲ್ಲಿರುವ ಇಟ್ಟಿಗೆಯ ದೇಗುಲ ಹಾಗೂ ದೇವಗಢದಲ್ಲಿರುವ ದಶಾವತಾರ ದೇವಾಲಯ ಇದಕ್ಕೆ ಉದಾಹರಣೆಗಳು.

ಸಾಂಚಿಯ 17ನೆಯ ಗುಡಿ ಮತ್ತು ತಿಗಾವದ ಕಂಕಾಲೀದೇವಿ ಗುಡಿಗಳನ್ನು ಗುಪ್ತರ ಕಾಲಾವಧಿಯ ಪ್ರಾಚೀನತಮದೇಗುಲಗಳೆಂದು ಗುರುತಿಸಲಾಗಿ. ಸಾಂಚಿಯ 17ನೆಯ ಗುಡಿ ಚಿಕ್ಕಗಾತ್ರದ, ಸಮತಟ್ಟಾದ ಚಾವಣಿಯುಳ್ಳ ಗರ್ಭಗೃಹ ಮತ್ತು ಚಿಕ್ಕ ಮುಖಮಂಟಪ ವನ್ನೊಳಗೊಂಡ ತೀರ ಸರಳ ದೇಗುಲ. ಮುಖಮಂಟಪದ ಮುಖದಲ್ಲಿ



ಬುದ್ಧ ವಿಗ್ರಹ, ಸು. 5ನೆಯ ಶತಮಾನ, ಮಥುರ

ಒಂದೇ ಸಾಲಿನಲ್ಲಿ ನಾಲ್ಕು ಕಂಬಗಳಿದ್ದು ನಡುವಣ ಜೋಡಿಯ ಅಂತರ ಪಾರ್ಶ್ವಗಳಿಗಿಂತ ಹೆಚ್ಚಾಗಿದೆ. ಗರ್ಭಗೃಹ ದ್ವಾರದ ಪಾರ್ಶ್ವಗಳಲ್ಲಿ ಅರ್ಧಗಂಬಗಳಿವೆ. ವಿಶೇಷ ಅಲಂಕಾರ ಕಂಬಗಳಿಗಷ್ಟೇ ಸೀಮಿತವಾಗಿದೆ. ಕಂಬಗಳು ಕೆಳಭಾಗದಲ್ಲಿ ಚೌಕವಾಗಿದ್ದು, ಅವುಗಳ ಕಾಂಡದ ಕೆಳಭಾಗ 8 ಮುಖವುಳ್ಳದ್ದಾಗಿ, ಮೇಲ್ಭಾಗ 16 ಮುಖವುಳ್ಳದ್ದಾಗಿದೆ. ಇದರ ಮೇಲೆ ಘಂಟಾಕೃತಿಯ (ಮಗುಚಿಹಾಕಿದ ಪದ್ಮದ) ಅಲಂಕಾರವಿದೆ. ಇದಾದ ತರುವಾಯ ದಪ್ಪನೆಯ ಫಲಕ ಹಾಗೂ ಇದರ ಮೇಲೆ ಕುಳಿತ ಸಿಂಹಗಳ ಬೋದಿಗೆ ಇದೆ. ಇದು ಮೌರ್ಯ ಸ್ತಂಭಗಳ ಪರಂಪರೆಯಿಂದ ಉಳಿದು ಬಂದಿರುವ ಲಕ್ಷಣವೆಂದು ಭಾವಿಸಲಾಗಿದೆ. ಉತ್ತರಾಂಗದಲ್ಲಿರುವ ಒಂದು ಮಡಿಕೆ ಇಡೀ ದೇವಾಲಯದ ಸುತ್ತ ಪಟ್ಟಿಯಂತೆ ಸಾಗಿದೆ.

ತಿಗಾವದ ಕಂಕಾಲೀದೇವಿ ಗುಡಿ (ಜಬಲಪುರ ಜಿಲ್ಲೆ) ಬಹುಶಃ ನಿಜ ಗುಪ್ತಶೈಲಿಯ ಪ್ರಾಚೀನ ಉದಾಹರಣೆಯಾಗಿದೆ. ಇದರ ಮುಖಮಂಟಪದ ಕಂಬಗಳಲ್ಲಿ ಘಂಟಾಕೃತಿಯ ಬದಲು ಪೂರ್ಣಘಟ ಅಲಂಕಾರವನ್ನು ಅಳವಡಿಸಿದೆ. ಈ ಲಕ್ಷಣ ಅನಂತರದ ಭಾರತೀಯ ದೇಗುಲ ವಾಸ್ತುವಿನ ಆಕರ್ಷಕ ಭಾಗವಾಗಿ ಅಭಿವೃದ್ಧಿ ಹೊಂದಿತು. ಫಲಕದ ಮುಂದೆ ಸಿಂಹ ಶಿಲ್ಪಗಳಿವೆ. ದ್ವಾರಬಂಧ ಕಟ್ಟಿಗೆಯ ದ್ವಾರಗಳ ಅಲಂಕಾರ ವಿನ್ಯಾಸವನ್ನು ನೆನಪಿಸುತ್ತದೆ. ಟಿ ಆಕಾರದ ಚೌಕಟ್ಟಿನ ಮೇಲ್ಭಾಗದ ಪಾರ್ಶ್ವಗಳಲ್ಲಿ ಮೊಸಳೆಯ ಮೇಲೆ ನಿಂತಿರುವ ಗಂಗಾ ಮತ್ತು ಆಮೆಯ ಮೇಲೆ ನಿಂತಿರುವ ಯಮುನೆಯ ಶಿಲ್ಪಗಳಿವೆ. ಲಲಾಟದಲ್ಲಿ ದೇವತಾ ಬಿಂಬವಿರುವುದು ಉಲ್ಲೇಖಾರ್ಹವಾಗಿದೆ. ಇವೆರಡೂ ದೇಗುಲಗಳಿಗೆ ಈಗ ಸಮತಟ್ಟಾದ ಚಾವಣಿಯಿದೆ. ಆದರೆ ಮೂಲದಲ್ಲಿ ಶಿಖರ ರಚನೆಯಿತ್ತೋ ಇಲ್ಲವೋ ತಿಳಿಯದು. ಹೆಚ್ಚಿನ ವಿದ್ವಾಂಸರು

ಹಾರುತ್ತಿರುವ ವಿದ್ಯಾಧರರು, 5ನೆಯ ಶತಮಾನದ ಶಿಲ್ಪ, ಗ್ವಾಲಿಯರ್

ಈಗಿರುವ ರೀತಿಯಲ್ಲಿಯೇ ದೇಗುಲ ಸ್ವರೂಪವನ್ನು ಅರ್ಥೈಸಿದ್ದಾರೆ. ಆದರೆ ಶಿಖರ ಮತ್ತು ಕಲಶ ರಹಿತ ದೇಗುಲವಾಸ್ತು ಕಲ್ಪನೆ ಭಾರತೀಯ ಪರಂಪರೆಗೆ ತೀರ ಹೊರತಾದುದೆಂದೂ ಮೂಲತಃ ಈ ಗುಡಿಗಳಿಗೆ ಶಿಖರ ರಚನೆ ಇದ್ದೇ ಇದ್ದಿರಬೇಕೆಂದೂ ಈಚೆಗೆ ಕೆಲವು ವಿದ್ವಾಂಸರು ವಾದಿಸಿದ್ದಾರೆ. ಇವೆರಡರ ಕಾಲ ಸು.4ನೆಯ ಶತಮಾನ.

ನಾಚ್ನಾ ಕುಠಾರದ (ಪನ್ನ ಜಿಲ್ಲೆ) ಪಾರ್ವತಿ ದೇವಾಲಯ ಎತ್ತರವಾದ ಜಗತಿ ಮೇಲಿದೆ. ಇಲ್ಲಿಯೂ ಗರ್ಭಗೃಹದ ಮುಂದೆ ಚಿಕ್ಕ ಮುಖಮಂಟಪವಿದೆ. ಮುಖಮಂಟಪಕ್ಕೆ ಏರಿಹೋಗಲು ಸೋಪಾನಗಳಿವೆ. ಪ್ರದಕ್ಷಿಣಾಪಥವನ್ನು ಅಳವಡಿಸಿರುವುದು ಈ ದೇವಾಲಯದ ವೈಶಿಷ್ಟ್ಯವಾಗಿದೆ. ಪ್ರದಕ್ಷಿಣಾಪಥದ ಬೆಳಕುಗಾಳಿಯ ಒಡನಾಟಕ್ಕೆ ಗರ್ಭಗೃಹದ ಹೊರಗೋಡೆಯಲ್ಲಿ ಮೂರು ದಿಕ್ಕುಗಳಲ್ಲಿ ಜಾಲಂಧ್ರಗಳಿವೆ. ಗರ್ಭಗೃಹದ ಒಳಗೋಡೆಗೂ ಪಾರ್ಶ್ವದ ಎರಡು ಗೋಡೆಗಳಿಗೂ ಜಾಲಂಧ್ರಗಳನ್ನು ಅಳವಡಿಸಿದೆ. ದ್ವಾರಬಂಧವನ್ನು ಸಮೃದ್ಧವಾಗಿ ಶಿಲ್ಪಗಳಿಂದ ಅಲಂಕರಿಸಿದೆ. ಗರ್ಭಗೃಹದ ಮೇಲ್ಗಡೆ ಪ್ರದಕ್ಷಿಣಾಪಥದ ಗೋಡೆಯಿಂದ ಹಿಂದೆ ಸರಿದಂತೆ ಮೇಲಣ ಭೂಮಿಯನ್ನು ರಚಿಸಿರುವುದು ಈ ದೇವಾಲಯದ ಇನ್ನೊಂದು ವೈಶಿಷ್ಟ್ಯ. ಈ ದೇವಾಲಯದ ಮೈಯನ್ನು ಬಂಡೆ ಗುಹೆಗಳನ್ನೊಳಗೊಂಡ ಬೆಟ್ಟದಂತೆ ಪ್ರಾಣಿಗಳಿಂದೊಡಗೂಡಿ ಅಲಂಕರಿಸಿರುವುದು ಕುತೂಹಲಕಾರಿಯಾಗಿದೆ. ಈ ಮೂಲಕ ದೇವಾಲಯವನ್ನು ಪರ್ವತಕ್ಕೆ ಹೋಲಿಸುವ ಹಾಗೂ ಶಿವನು ಕೈಲಾಸವಾಸನೂ ಕಾಡು–ಬೆಟ್ಟಗಳ ಯೋಗಿಯೂ ಆಗಿದ್ದಾನೆಂಬುದನ್ನು ಚಿತ್ರಿಸುವ ಪ್ರಯತ್ನ ಇಲ್ಲಿದೆ. ಇದರ ಕಾಲ ಸು.5ನೆಯ ಶತಮಾನ.

ಭೂಮರಾದಲ್ಲಿರುವ (ಪನ್ನ ಜಿಲ್ಲೆ) ಶಿವದೇವಾಲಯದಲ್ಲಿ ತಲವಿನ್ಯಾಸದ ಮತ್ತಷ್ಟು ಬೆಳೆವಣಿಗೆಯನ್ನು ಕಾಣಬಹುದು. ಎತ್ತರ ಜಗತಿ ಮೇಲೆ ನಿರ್ಮಿತವಾಗಿರುವ ಈ ಸಾಂಧಾರ ದೇವಾಲಯ ಬಹಳ ಜೀರ್ಣಗೊಂಡಿದೆ. ಮುಖಮಂಟಕ್ಕೆ ಕೊಂಡೊಯ್ಯುವ ಸೋಪಾನಗಳ ಇಕ್ಕೆಲಗಳಲ್ಲಿ ಒಂದೊಂದರಂತೆ ಎರಡು ಚಿಕ್ಕ ಉಪದೇಗುಲಗಳನ್ನು ರಚಿಸಿರುವುದು ಗಮನಾರ್ಹ.

ದೇವಗಡದ (ಝಾಂಸಿ ಜಿಲ್ಲೆ) ದಶಾವತಾರ ದೇವಾಲಯ ಗುಪ್ತರ ಅಂತ್ಯಕಾಲದಲ್ಲಿ ಹಿಂದು ದೇವಾಲಯದ ಒಂದು ಪ್ರಕಾರದ ಮಾದರಿಯಾಗಿದೆ. ನಾಲ್ಕೂ ದಿಕ್ಕುಗಳಿಂದ ಸೋಪಾನಗಳಿರುವ ಎತ್ತರವಾದ ವಿಶಾಲ ಜಗತಿ ಮಧ್ಯದಲ್ಲಿ ನಿಂತಿರುವ ಈ ದೇಗುಲಕ್ಕೆ ಮೂರು ಪ್ರಮುಖ ವೈಶಿಷ್ಟ್ಯಗಳಿವೆ. ಗರ್ಭಗೃಹದ ಮೇಲ್ಗಡೆ ಶಿಖರವಿರುವುದು ಮೊದಲ ವೈಶಿಷ್ಟ್ಯ. ಈವರೆಗೆ ಉಳಿದುಬಂದಿರುವ ಶಿಖರವುಳ್ಳ ಪ್ರಾಚೀನತಮ ದೇಗುಲವಿದು.

ಗರ್ಭಗೃಹದ ನಾಲ್ಕೂ ಬದಿಗಳಲ್ಲಿ, ಸಮತಟ್ಟಾದ ಚಾವಣಿಯುಳ್ಳ ಮುಖಮಂಟಪವನ್ನು ರಚಿಸಿರುವುದು ಎರಡನೆಯ ವೈಶಿಷ್ಟ್ಯ. ಜಗತಿಯ ನಾಲ್ಕೂ ಮೂಲೆಗಳಲ್ಲಿ, ಕೆಳಗಡೆ ಒಂದೊಂದರಂತೆ ನಾಲ್ಕು ಉಪ ದೇಗುಲಗಳಿರುವುದು ಮೂರನೆಯ ವೈಶಿಷ್ಟ್ಯ. ನಮಗೆ ತಿಳಿದಿರುವ ಪಂಚಾಯತನ ಮಾದರಿಯ ದೇಗುಲದ ಪ್ರಾಚೀನತಮ ಉದಾಹರಣೆ ಇದಾಗಿದೆ. ಮೂಲ ಶಿಖರ ಆಮಲಕ, ಕರ್ಣಾಮಲಕ, ಕಲಶ ಮುಂತಾದ ಅಲಂಕಾರಗಳಿಂದ ಕೂಡಿದ್ದು, ಔತ್ತರೇಯ ರೇಖಾನಾಗರ ಸಂಪ್ರದಾಯ ಇಲ್ಲಿ ನಿಖರತೆಯನ್ನು ಪಡೆಯಿತೆಂದು ಭಾವಿಸ ಬಹುದು. ಗರ್ಭಗೃಹದ ದ್ವಾರಬಂಧ ಬಹು ಸಮೃದ್ಧವಾಗಿ ಅಲಂಕೃತವಾಗಿದ್ದು ಲಲಾಟದಲ್ಲಿ ಅನಂತಾಸೀನ ವಿಷ್ಣುವಿನ ಬಿಂಬವಿದೆ.

ಇಬ್ಬರು ಯೋಧರು ಮತ್ತು ಸಿಂಹ, ಸು. 5ನೆಯ ಶತಮಾನದ ಶಿಲ್ಪ, ಸಾರನಾಥ

ಬಾಹುಗಳ ಕೆಳ ಭಾಗದಲ್ಲಿ ಆಯುಧಪುರುಷರು, ಗಣಗಳು, ದ್ವಾರಪಾಲಕರು, ಸ್ತ್ರೀಯರು ಮುಂತಾದ ಸುಂದರ ಶಿಲ್ಪಗಳಿವೆ. ಶಾಖೆಗಳಲ್ಲಿ ಲತಾ, ಪುಷ್ಪ, ಮಿಥುನ, ಸ್ತಂಭಗಳಿವೆ. ದ್ವಾರಬಂಧದ ತೊಲೆಯ ಹೆಚ್ಚುವರಿ ಪ್ರದೇಶದಲ್ಲಿ ಗಂಗಾ ಮತ್ತು ಯಮುನೆಯ ಶಿಲ್ಪಗಳಿವೆ. ಗರ್ಭಗೃಹದ ಉಳಿದ ಗೋಡೆಗಳಲ್ಲಿ ನರನಾರಾಯಣ, ಅನಂತಶಯನ ಹಾಗೂ ಗಜೇಂದ್ರಮೋಕ್ಷವನ್ನು ಚಿತ್ರಿಸಿರುವ ಮೂರು ಸುಂದರವಾದ ದೊಡ್ಡ ಶಿಲ್ಪಫಲಕಗಳನ್ನು ಅಳವಡಿಸಿದೆ. ದೇವಾಲಯದ ಅಲಂಕಾರಕ್ಕೆ ಸಾಕಷ್ಟು ಲಕ್ಷ್ಯ ಕೊಟ್ಟಿರುವುದನ್ನು ಈ ಉದಾಹರಣೆಯಲ್ಲಿ ಕಾಣಬಹುದು. ಇದು ಸು.5ನೆಯ ಶತಮಾನದ ಅಂತ್ಯ ಇಲ್ಲವೇ 6ನೆಯ ಶತಮಾನದ ಪೂರ್ವಾರ್ಧದದ್ದಿರಬೇಕು.

ಈ ಕಾಲದಲ್ಲಿ ಇತರ ರೀತಿಯ ತಲವಿನ್ಯಾಸಗಳುಳ್ಳ ಶಿಲಾದೇಗುಲಗಳೂ ನಿರ್ಮಾಣವಾಗಿವೆ. ಬಿಹಾರಿನ ಮುಂಡೇಶ್ವರಿಯಲ್ಲಿರುವ ದೇಗುಲಕ್ಕೆ ಅಷ್ಟಕೋಣಾಕೃತಿಯ ವಿನ್ಯಾಸವನ್ನಳವಡಿಸಿದೆಯಾದರೆ ರಾಜಗೀರ್‌ದಲ್ಲಿರುವ ಮಣಿಯರ್ ಮಠ್ ದೇಗುಲ ವೃತ್ತಾಕಾರವಾಗಿದೆ. ಪ್ರಯೋಗ ರೂಪದವು. ಮಹಾರಾಷ್ಟ್ರದ ತೇರ್‌ದಲ್ಲಿರುವ ತ್ರಿವಿಕ್ರಮ ದೇಗುಲ ಈ ಮಾದರಿಯದು. ಆದರೆ ಈ ಕೊನೆಯ ಮಾದರಿಗಳು ಗುಪ್ತ ಸಾಮ್ರಾಜ್ಯದ ಹೊರಗಡೆ ಇವೆ.

ಗುಪ್ತರ ಕಾಲದ ಇಟ್ಟಿಗೆಯ ದೇಗುಲಗಳೂ ಗಮನಾರ್ಹವಾಗಿವೆ. ಇವುಗಳಲ್ಲಿ ಭಿತರಗಾಂವ್‌ದಲ್ಲಿರುವ ಕಾನ್‌ಪೂರ ದೇವಾಲಯ, ಬೋಧಗಯದಲ್ಲಿರುವ ಮೂಲ ಮಹಾಬೋಧಿ ದೇವಾಲಯ ಹಾಗೂ ಸಿರಪುರದಲ್ಲಿರುವ (ರಾಯಪುರ ಜಿಲ್ಲೆ) ಲಕ್ಷ್ಮಣ ದೇವಾಲಯ ಉಲ್ಲೇಖನೀಯವಾಗಿವೆ. ಭೀತರಗಾಂವ್ ದೇವಾಲಯಕ್ಕೆ ಎಲ್ಲ ನಾಲ್ಕು ದಿಕ್ಕುಗಳಲ್ಲಿಯ ಗೋಡೆಯ ಮಧ್ಯಭಾಗ ಮುಂಚಾಚಿದ್ದು ತ್ರಿರಥ ವಿನ್ಯಾಸವಿದೆ. ಇಟ್ಟಿಗೆಯ ಜಗತಿ ಮೇಲೆ ನಿಂತಿರುವ ಈ ದೇವಾಲಯಕ್ಕೆ ದೃಢವಾದ, ಮಡಿಕೆಗಳುಳ್ಳ ಅಧಿಷ್ಠಾನವಿದೆ. ಅದರ ಮೇಲೆ ಗೋಡೆಯಲ್ಲಿ ಜೋಡಿ ಅರ್ಧಗಂಬಗಳ ಮಧ್ಯಂತರದಲ್ಲಿ ಸುಟ್ಟಮಣ್ಣಿನ ವಿಗ್ರಹ ಫಲಕಗಳಿವೆ. ಮೇಲ್ಗಡೆ ಎರಡು ಕಪೋತಗಳಿದ್ದು ಅವುಗಳ ನಡುವಣ ಪ್ರದೇಶದಲ್ಲಿ ಗುಪ್ತರ ಶಿಲ್ಪಶೈಲಿಯ ಸುಂದರ ಉಬ್ಬುಶಿಲ್ಪಗಳ ಪಟ್ಟಿಕೆಯಿದೆ. ಕಪೋತದ ಮೇಲಿರುವ ಶಿಖರ ಬಹಳ ಜೀರ್ಣವಾಗಿದೆ. ಆದರೆ ಮೇಲಕ್ಕೆ ಹೋದಂತೆ ಹಿಂಬಾಗಿದೆ. ಭೂಮಿಗಳಲ್ಲಿ ಮುಖಗಳನ್ನು ತೋರಿಸುವ ಗವಾಕ್ಷಗಳು, ದೇವತಾ ವಿಗ್ರಹಗಳು ಇತ್ಯಾದಿಗಳಿವೆ. ಗೋಡೆಯ ರಥ ವಿನ್ಯಾಸ ಶಿಖರದಲ್ಲಿಯೂ ಮುಂದುವರಿದಿದೆ. ಶಿಖರದ ಮೂಲ ಸ್ವರೂಪದ ಚಿತ್ರ ಈಗ ದೊರೆಯುತ್ತಿಲ್ಲ. ಇದು ಸು.5ನೆಯ ಶತಮಾನದ ದೇಗುಲ.

ಬೋಧಗಯದ ಮೂಲ ಮಹಾಬೋಧಿ ದೇವಾಲಯ ಭೀತರಗಾಂವ್ ಇಟ್ಟಿಗೆ ದೇವಾಲಯವನ್ನು ಕೆಲವು ವಾಸ್ತು ಅಂಶಗಳಲ್ಲಿ ಹೋಲುತ್ತಿತ್ತು. ಈಗಿರುವ ದೇಗುಲಕ್ಕೆ ಅನಂತರ ಕಾಲದ ಜೀರ್ಣೋದ್ಧಾರ ಮತ್ತು ಸೇರ್ಪಡೆಗಳಾಗಿವೆ. ಪಂಚರಥ ವಿನ್ಯಾಸವುಳ್ಳ ಪಿರಮಿಡ್ಡಿನಾಕಾರದ ಶಿಖರ 55 ಮೀ ಎತ್ತರವಿದ್ದು, ಆಮಲಕಗಳಿರುವ 7 ಭೂಮಿಗಳಿವೆ. ವಿಶಾಲವಾದ ಕಮಾನುಳ್ಳ ದ್ವಾರ ಪೂರ್ವದಿಕ್ಕಿನಿಂದ ದೇವಾಲಯದೊಳಕ್ಕೆ ಪ್ರವೇಶ ವೊದಗಿಸುತ್ತದೆ. ಎತ್ತರವಾದ ಜಗತಿಯ ನಾಲ್ಕು ಮೂಲೆಗಳಲ್ಲಿರುವ ಕಿರಿಶಿಖರಗಳು ಅನಂತರದ ಸೇರ್ಪಡೆಗಳು.

ಸಿರಪುರದ ಲಕ್ಷ್ಮಣ ದೇವಾಲಯ ಎತ್ತರವಾದ ಅಧಿಷ್ಠಾನವುಳ್ಳ, ಗರ್ಭಗೃಹ ಮತ್ತು ಮುಖಮಂಟಪವಿರುವ ಪೂರ್ಣ ಬೆಳವಣಿಗೆ ಹೊಂದಿರುವ ಅತ್ಯಂತ ಶ್ರೇಷ್ಠ ಮಾದರಿ ಇಟ್ಟಿಗೆ ದೇವಾಲಯ. ಇದರ ಗೋಡೆಯ ಮುಂಚಾಚುಗಳಿಂದಾಗಿ ಬೆಳಕು ನೆರಳಿನ ಚೆಲ್ಲಾಟ ಪರಿಣಾಮಕಾರಿಯಾಗಿವೆ. ಶಿಖರ ರೇಖಾನಾಗರ ರೀತಿಯದಾಗಿದ್ದು, ನಾಚ್ನಾ ಕುಠಾರದ ಮಹಾದೇವ ದೇವಾಲಯದಲ್ಲಿರುವಂತೆ ಇದ್ದಿರಬೇಕು. ಇವೆರಡೂ ಸು. 7ನೆಯ ಶತಮಾನದ ಗುಡಿಗಳು.

**ಶಿಲ್ಪಕಲೆ:** ಗುಪ್ತರ ಕಾಲದ ದೇಗುಲ ವಾಸ್ತುವಿನಲ್ಲಿ ಕಾಣುವ ವೈವಿಧ್ಯತೆಗೆ ತದ್ವಿರುದ್ಧವಾಗಿ ಶಿಲ್ಪಶೈಲಿಯ ಲಕ್ಷಣಗಳು ಸಾರೂಪ್ಯವಾಗಿರುವುದು ವಿಶಿಷ್ಟವಾಗಿದೆ. ಕೆಲವು ಪ್ರಾದೇಶಿಕ ವೈವಿಧ್ಯಗಳಿದ್ದಾಗ್ಯೂ ಸಾಮ್ರಾಜ್ಯದ ಉದ್ದಗಲಕ್ಕೂ ಶೈಲಿಯ ಮೂಲಭೂತ ಲಕ್ಷಣಗಳಲ್ಲಿ ಇದು ಗುಪ್ತರ ಕಾಲದ್ದು ಎಂದು ಗುರುತಿಸುವಷ್ಟು ಮಟ್ಟಿಗೆ ಅನನ್ಯತೆ ಕಾಣುತ್ತದೆ. ಕುಷಾಣರ ಕಾಲದ ಗಟ್ಟಿಮುಟ್ಟಾದ ಮೈಕಟ್ಟಿನ ಭಾರ ವ್ಯಕ್ತಿತ್ವದ ಚಕ್ರವರ್ತಿ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಮೂಡಿದ ಶಿಲ್ಪಗಳು ಗುಪ್ತರ ಕಾಲದಲ್ಲಿ ಲಾವಣ್ಯಯುತ ರೇಖಾ ರೂಪದ ಪರಿಣಾಮಕಾರಿ ಶಿಲ್ಪಗಳಾಗಿ ವಿಕಾಸ ಹೊಂದಿವೆ. ಆಕರ್ಷಕ ಆದರ್ಶ ಶಾರೀರಿಕ ಸೌಂದರ್ಯ ಆಧ್ಯಾತ್ಮಿಕ ಸೌಂದರ್ಯದ ಸಂಕೇತವಾಗಿ, ಚಕ್ರವರ್ತಿಯ ಪರಿಕಲ್ಪನೆ ಮಹಾ ಯೋಗಿಯ ಪರಿಕಲ್ಪನೆಯಲ್ಲಿ ಲೀನವಾಗಿ, ನೂರಾರು ಸೃಜನಶೀಲ ಶಿಲ್ಪಗಳಾಗಿ ಅರಳಿದೆ. ಮನುಷ್ಯರೂಪನ್ನು ನಿಸರ್ಗದ ರೂಪಗಳೊಂದಿಗೆ ಗುರುತಿಸುವ ಪ್ರಕ್ರಿಯೆಯೂ ಈ ಕಾಲದಲ್ಲಿ ಕಾಣುತ್ತದೆ. ನದೀ ದೇವತೆಗಳು, ನಿಧಿಗಳು, ಕುಬ್ಜಗಣಗಳ ಶರೀರದಿಂದ ಉದ್ಭವಿಸಿರುವ ಸಸ್ಯಲೋಕ, ಆಯುಧಪುರುಷರು ಮುಂತಾದವುಗಳಲ್ಲಿ ಇದನ್ನು ಗುರುತಿಸಬಹುದು. ಹಾಗೆಯೇ ಮನುಷ್ಯಶರೀರದ ಭಾಗಗಳನ್ನು ನಿಸರ್ಗದ ಅಂಶಗಳೊಂದಿಗೆ ಹೋಲಿಸುವ ಸಾಹಿತ್ಯಿಕ ಪರಿಪಾಠವೂ (ಚಂದ್ರವದನ, ಕಮಲನೇತ್ರ, ಕಂಬುಗ್ರೀವ ಇತ್ಯಾದಿ) ಶಿಲ್ಪಗಳಲ್ಲಿ ಪ್ರತಿಫಲಿತವಾಗಿರುವುದು ಕಾಣುತ್ತದೆ. ಗುಪ್ತರ ಕಾಲದ ಶಿಲ್ಪಶೈಲಿಯ ರೂಪಣದಲ್ಲಿ ಕುಷಾಣರ ಕಾಲದ ಗಾಂಧಾರ ಮತ್ತು ಮಥುರ ಶೈಲಿಗಳ ಪಾತ್ರವಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಗುಪ್ತರ ಶೈಲಿಯ ಮೊದಲ ಕಾಲನಿರ್ಣೀತ ಶಿಲ್ಪ ಉದಾಹರಣೆಗಳು ವಿದಿಶಾ ಮತ್ತು ಅದರ ಸಮೀಪದಲ್ಲಿರುವ ಉದಯಗಿರಿಯ ಗುಹಾಲಯಗಳಲ್ಲಿವೆ. ಉದಯಗಿರಿಯ ಗುಹಾಲಯ ಗಳಲ್ಲಿ 2ನೆಯ ಚಂದ್ರಗುಪ್ತನ (380–414) ಅಮಾತ್ಯನ ಹಾಗೂ 402ರ ಶಾಸನಗಳಿವೆ. ಇವೆಲ್ಲವೂ ಹಿಂದು ಗುಹಾಲಯಗಳು. ವಾಸ್ತು ದೃಷ್ಟಿಯಿಂದಲ್ಲದಿದ್ದರೂ ಶಿಲ್ಪಕಲಾ ದೃಷ್ಟಿಯಿಂದ ಇವು ಮಹತ್ತ್ವದ್ದಾಗಿವೆ. ಸಮಪಾದದಲ್ಲಿರುವ, ವೃತ್ತದಂಡಾಕಾರದ ಕಿರೀಟಧರಿಸಿರುವ, ಚತುರ್ಭುಜ ವಿಷ್ಣು ವಿಗ್ರಹಗಳು, ಭೂವರಾಹ, ದುಂಡುಭುಜವುಳ್ಳ ಶಕ್ತಿಯುತ ಕುಮಾರನ ವಿಗ್ರಹಗಳು, ಭಯಂಕರ ಶಕ್ತಿಯ ಪ್ರತಿನಿಧಿಗಳಾಗಿರುವ ಮಹಿಷಮರ್ದಿನಿಯ ವಿಗ್ರಹಗಳು, ದ್ವಾರಪಾಲಕರ ವಿಗ್ರಹಗಳು, ಮುಖಲಿಂಗ ಮುಂತಾದವು ಇಲ್ಲಿವೆ. ವಿಷ್ಣುವಿನ ಆಯುಧಗಳಾದ ಚಕ್ರ ಮತ್ತು ಗದೆಯನ್ನು ಮನುಷ್ಯರೂಪಿನ ಆಯುಧಪುರುಷರಾಗಿ ತೋರಿಸಿರುವುದು ಒಂದು ಶಿಲ್ಪದಲ್ಲಿದೆ. ಆಯುಧಪುರುಷ ಕಲ್ಪನೆ ಗುಪ್ತರ ಕಾಲದ ಅತ್ಯಾಕರ್ಷಕ ಸೃಷ್ಟಿಯಾಗಿದೆ.

ಉದಯಗಿರಿಯ ಗುಹೆಗಳ ಶಿಲ್ಪಗಳಲ್ಲಿ ಭೂವರಾಹ ಶಿಲ್ಪ ಉಲ್ಲೇಖನೀಯವಾಗಿದೆ. ಸು. 6.60–3.90 ಮೀ ವಿಶಾಲವಾಗಿರುವ ಈ ಉಬ್ಬುಶಿಲ್ಪ ವರಾಹರೂಪದ ವಿಷ್ಣುವಿನ ಉಳಿದುಬಂದಿರುವ ಅತ್ಯಂತ ಪ್ರಾಚೀನ ಶಿಲ್ಪದ ಉದಾಹರಣೆಯಾಗಿದೆ. ಮನುಷ್ಯಶರೀರ ದಿಂದೊಡಗೂಡಿರುವ ವರಾಹಮುಖದ ವಿಷ್ಣು ತನ್ನ ಬಲಕೋರೆಯಿಂದ ಸ್ತ್ರೀರೂಪದ ಭೂದೇವಿ ಯನ್ನು ರಸಾತಲದಿಂದ ಎತ್ತಿಹಿಡಿದಿರುವ ದೃಶ್ಯ ಅದ್ಭುತರಮ್ಯವಾಗಿದೆ.

ದುರ್ಗಾ ಮಹಿಷಮರ್ದಿನಿಯ ಶಿಲ್ಪ ಉದಯಗಿರಿಯಲ್ಲಿ ಮೂರೆಡೆಗಳಲ್ಲಿವೆ. 4ನೆಯ ಗುಹೆಯ ಶಿಲ್ಪದಲ್ಲಿ ಆಲೀಢಭಂಗಿಯಲ್ಲಿ ಬಲಗಾಲನ್ನು ಮಹಿಷದ ಶಿರದ ಮೇಲಿರಿಸಿ, ಎಡಗೈಯಿಂದ ಅದರ ಬಾಲವನ್ನು ಹಿಡಿದೆತ್ತಿ, ತ್ರಿಶೂಲದಿಂದ ತಿವಿಯುತ್ತಿರುವ ದೇವಿಯು ಬಾಣ, ವಜ್ರ, ಖಡ್ಗ, ಖೇಟಕಗಳನ್ನು ಧರಿಸಿ, ಮೇಲಿನ ಎರಡು ಕೈಗಳಿಂದ



ಅಹಲ್ಯಾ ಶಾಪವಿಮೋಚನೆ, 5ನೆಯ ಶತಮಾನ

ತನ್ನ ಜಟೆಯನ್ನು ಎತ್ತಿ ಹಿಡಿದಿದ್ದಾಳೆ. ದೇವಿಯ ಶಕ್ತಿ ಇಲ್ಲಿ ಅದ್ಭುತವಾಗಿ ಪ್ರಕಟವಾಗಿದೆ. 4ನೆಯ ಗುಹೆಯಲ್ಲಿರುವ ಏಕಮುಖಲಿಂಗ ದುಂಡುಮುಖವುಳ್ಳ ಜಟಾಧಾರಿ ಶಿವನ ಮನೋಬಲದ ಕಾಂತಿಯನ್ನು ಪ್ರಕಟಿಸುತ್ತದೆ.

ಗುಪ್ತರ ಕಾಲದ ಇತರ ವಿಗ್ರಹಗಳಲ್ಲಿ ಏರಣ (ಪ್ರಾಚೀನ ಐರಿಕಿಣ)ದಲ್ಲಿರುವ ಪೂರ್ತಿ ಪ್ರಾಣಿರೂಪದಲ್ಲಿರುವ ವರಾಹ ವಿಗ್ರಹ ಉಲ್ಲೇಖನೀಯವಾಗಿದೆ. ಹೂಣ ದೊರೆ ತೋರಮಾನನ ಮೊದಲನೆಯ ವರ್ಷದ ಶಾಸನ ಇದಕ್ಕಿದ್ದು ಮೈತುಂಬ ಋಷಿಮುನಿದೇವತೆಗಳ ಉಬ್ಬುಶಿಲ್ಪಗಳನ್ನೊಳಗೊಂಡಿದೆ. ಇಲ್ಲಿಯೇ ದೊರೆತ ಆದರೆ ಈಗ ಸಾಗರ ವಿಶ್ವವಿದ್ಯಾಲಯದ ಸಂಗ್ರಹಾಲಯ ದಲ್ಲಿರುವ ಇನ್ನೊಂದು ಶಾಸನಸಹಿತ ಬೃಹತ್ ದ್ವಿಭುಜ ಭೂವರಾಹನ ದುಂಡುಶಿಲ್ಪವೂ ಉಲ್ಲೇಖನೀಯ. ಇದರಲ್ಲಿ ಭೂದೇವಿ ಬೃಹತ್ ವರಾಹನ ಬಲ ಕೋರೆಯನ್ನು ಆಧರಿಸಿ ಜೋತು ಬಿದ್ದಿರುವಂತೆ ತೋರಿಸಿದೆ. ವರಾಹನ ದೈಹಿಕ ಬಲಶಕ್ತಿಗಳು ಈ ಶಿಲ್ಪದಲ್ಲಿ ಅದ್ಭುತವಾಗಿ ವ್ಯಕ್ತವಾಗಿವೆ.

ಬೆಸನಗರದಲ್ಲಿ ದೊರೆತ ಶಿಲ್ಪಗಳಲ್ಲಿ ವಿಷ್ಣುವಿನ ಶಿರೋಭಾಗ ಮತ್ತು ಸಪ್ತಮಾತೃಕೆಯರ ವಿಗ್ರಹಗಳು ಗಮನಾರ್ಹವಾಗಿವೆ. ಮೈಮಾಟವನ್ನು ಚಿದಾನಂದತ್ವದ ಪ್ರತಿನಿಧಿಯಾಗಿ ಬಳಸಿರುವ ವಿಷ್ಣು ಶಿಲ್ಪದಲ್ಲಿ ಆತ್ಮತೃಪ್ತಿಯ ನಸುನಗು ಸೂಸುತ್ತಿದೆ. ರೂಪಸಂಸ್ಕರಣ ಅದ್ಭುತವಾಗಿದೆ. ಕಿರೀಟ ಸರಳ ಕೀರ್ತಿಮುಖ ಅಲಂಕಾರ ಹೊಂದಿದೆ. ಸಪ್ತಮಾತೃಕೆಯರ ವಿಗ್ರಹಗಳು ದುಂಡುಶಿಲ್ಪಗಳು. ಪ್ರಾಚೀನ ಗುಪ್ತಶೈಲಿಯ ಲಕ್ಷಣಗಳಿರುವ ಈ ಶಿಲ್ಪಗಳಲ್ಲಿ ಮಾತೃಕೆಯರು ಮಕ್ಕಳೊಂದಿಗೆ ಪ್ರಲಂಬಪಾದ ರೀತಿಯಲ್ಲಿ ಕುಳಿತಿದ್ದಾರೆ. ಬೌದ್ಧರ ಕುಷಾಣಕಾಲೀನ ಹಾರೀತಿ ವಿಗ್ರಹಗಳನ್ನಿವು ನೆನಪಿಸುತ್ತವೆ.

ಗುಪ್ತಾಂತ್ಯ ಹಂತದ ಹಿಂದು ಶಿಲ್ಪಗಳಲ್ಲಿ ಪ್ರತಿಮಾವಿಧ್ಯ, ಅದ್ಭುತ ಮೈಮಾಟ, ಆಧ್ಯಾತ್ಮಿಕ ಸಂತೃಪ್ತಿಯನ್ನು ಸೂಸುವ ದೇವಗಡದ ದಶಾವತಾರ ದೇಗುಲದ ಶಿಲ್ಪಗಳನ್ನು ಹೆಸರಿಸಲೇಬೇಕು. ನರನಾರಾಯಣ ಶಿಲ್ಪಫಲಕದಲ್ಲಿ ಅನಾದಿ ಋಷಿಗಳೆನಿಸಿದ ನರನಾರಾಯಣರನ್ನು ಬದರೀ ವೃಕ್ಷದ ಕೆಳಗೆ ಕುಳಿತಿರುವಂತೆ ಚಿತ್ರಿಸಿದೆ. ನಾರಾಯಣನ ಕೈಗಳು ಅಕ್ಷಮಾಲೆ, ಚಿನ್ಮುದ್ರೆ, ಕಮಂಡಲು ಧರಿಸಿವೆ. ಪ್ರಾಯಶಃ ನಾರಾಯಣನು ತನ್ನ ತೊಡೆಯಿಂದ ಊರ್ವಶಿಯನ್ನು ಸೃಜಿಸುವ ಚಿತ್ರವಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಇನ್ನೊಂದು ಫಲಕದಲ್ಲಿ ಯೋಗನಿದ್ರೆಯಲ್ಲಿರುವ ಅನಂತಶಯನ ಸೃಷ್ಟಿಕಾರ್ಯವನ್ನು ಕಲ್ಪಿಸುತ್ತಿರುವ ಅದ್ಭುತ ಪ್ರಭಾವೀ ಶಿಲ್ಪವಿದೆ. ಇದರ ಕೆಳಭಾಗದಲ್ಲಿ ವಿಷ್ಣುವಿನ ಆಯುಧಗಳಾದ ಚಕ್ರ, ಶಂಖ, ಖಡ್ಗ, ಗದಾ ಮುಂತಾದವನ್ನು ಆಯುಧಪುರುಷರಾಗಿ ಚಿತ್ರಿಸಿರುವುದು ಗಮನೀಯ. ಖಡ್ಗಪುರುಷನು ಮಧುಕೈಟಭರನ್ನು ಅಟ್ಟಿಸುವಂತೆ ತೋರಿಸಿದೆ. ಮೂರನೆಯ ಶಿಲ್ಪಫಲಕದಲ್ಲಿ ಗಜೇಂದ್ರಮೋಕ್ಷ ಕಥೆಯನ್ನು ಚಿತ್ರಿಸಿದ್ದು, ಗಜರಾಜನ ಕಾಲನ್ನು ಹಿಡಿದಿರುವ ಪ್ರಾಣಿ ಮೊಸಳೆಯಾಗಿರದೆ ಹೆಬ್ಬಾವಾಗಿರು ವುದು ಕುತೂಹಲಕಾರಿ.

ಗುಪ್ತರ ಕಾಲದ ಅಂತ್ಯಕಾಲಕ್ಕೆ ಅನ್ವಯಿಸಬಹುದಾದ ಬುದ್ಧನ ಶಿಲ್ಪಗಳು ಅತ್ಯಾಕರ್ಷಕವಾಗಿದ್ದು ಪ್ರಪಂಚಪ್ರಸಿದ್ಧ. ಇವುಗಳನ್ನು ಮಥುರ ಮತ್ತು ಸಾರನಾಥ ಉಪಶೈಲಿಗಳಲ್ಲಿ ಗುರುತಿಸಬಹುದು. ಕುಷಾಣರ ಕಾಲದಲ್ಲಿ ಅಭಿವೃದ್ಧಿ ಕಂಡ ಮಥುರ ಶೈಲಿ ಕೆಲವು ಗಾಂಧಾರ ಶೈಲಿಯ ಲಕ್ಷಣಗಳನ್ನು ಮೇಳೈಸಿ ಕೊಂಡು ಗುಪ್ತರ ಕಾಲದಲ್ಲಿ ನಿಂತ ಮತ್ತು ಕುಳಿತ ಬಹು ಸುಂದರ ಬುದ್ಧನ ಶಿಲ್ಪಗಳಾಗಿ ಅರಳಿತು. ಅಂಡಾಕಾರದ ಸುಂದರ ಹಸನ್ಮುಖ, ಗುಂಗುರು ಕೂದಲು, ಅರ್ಧನಿಮೀಲಿತ ಕಣ್ಣುಗಳು, ಎರಡು ಭುಜಗಳನ್ನು ಮುಚ್ಚುವಂತೆ ಹಾಗೂ ಮೈಯ ಏರಿಳಿತಗಳನ್ನು ಬಿಂಬಿ ಸುವಂತೆ ಹೊದ್ದಿರುವ ಸಂಘಾಟಿ, ಸುಲಲಿತವಾಗಿ ಸಾಗುವ ದಾರದಂತೆ ಸಾಗುವ ಸಂಘಾಟಿಯ ಮಡಿಕೆಗಳು, ಶಾಂತ ಕರುಣಾಮಯ ಭಾವ ಇವೇ ಮುಂತಾದ ಲಕ್ಷಣಗಳು ಈ ಕಾಲದ ಮಥುರ ಶಿಲ್ಪಗಳಲ್ಲಿ ಸ್ಫುಟವಾಗಿವೆ. ನವದೆಹಲಿಯ ರಾಷ್ಟ್ರೀಯ ಸಂಗ್ರಹಾಲಯದಲ್ಲಿರುವ ನಿಂತ ಬುದ್ಧನ ವಿಗ್ರಹ ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಹಾಗೆಯೇ ಸುಂದರ ಮೈಮಾಟದಿಂದ ಕೂಡಿರುವ ಸಾರನಾಥದ ಬುದ್ಧ ವಿಗ್ರಹಗಳು, ಪಾರದರ್ಶಕ ವಸ್ತ್ರಧರಿಸಿರುವ ಶಾಂತ ಯೋಗಿಯ ಶರೀರದ ಮೃದುತ್ವ ಕಾಂತಿಗಳನ್ನು ಸೂಸುತ್ತವೆ. ಸಾಮಾನ್ಯವಾಗಿ ವಸ್ತ್ರದ ಮಡಿಕೆಗಳನ್ನು ತೋರಿಸುವ ಕ್ರಮ ಇಲ್ಲಿ ಕಾಣದು. ಇವೆರಡೂ ಶೈಲಿಗಳಲ್ಲಿ ಅಲಂಕಾರವು ಬುದ್ಧನ ಪ್ರಭಾಮಂಡಲಕ್ಕೆ ಮಾತ್ರ ಸೀಮಿತವಾಗಿದೆ. ಒಂದು ಕಾಲನ್ನು ತುಸು ಬಾಗಿಸಿ ಅಭಯಹಸ್ತದಲ್ಲಿ ನಿಂತಿರುವ ಹಾಗೂ ಸಾರನಾಥದ ಮೊದಲ ಉಪದೇಶವನ್ನು ಪ್ರತಿನಿಧಿಸುವ ಧರ್ಮಚಕ್ರಪ್ರವರ್ತನ ಮುದ್ರೆಯಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಬುದ್ಧನ ವಿಗ್ರಹಗಳು ಈ ಶೈಲಿಯ ಅತ್ಯದ್ಭುತ ಶಿಲ್ಪಗಳೆನಿಸಿವೆ. ಸಾರನಾಥದ ಪುರಾತತ್ತ್ವ ಸಂಗ್ರಹಾಲಯದಲ್ಲಿರುವ ಇಂತಹ ಒಂದು ಪ್ರಪಂಚಪ್ರಸಿದ್ಧ ವಿಗ್ರಹದಲ್ಲಿ ಬುದ್ಧನ ಮೈಮಾಟ, ಬಲ, ತೇಜಸ್ಸು, ಕಾಂತಿಗಳನ್ನು ಮೇಳೈಸಲಾಗಿದೆ. ಬಿಲ್ಲಿನಂತಿರುವ ಹುಬ್ಬುಗಳು, ಅರ್ಧನಿಮೀಲಿತ ಕಮಲನೇತ್ರಗಳು, ಅಂಡಾಕಾರದ ಮುಖ, ಕೂದಲುಗಳು, ಉಷ್ಣೀಶ, ಇಳಿಬಿದ್ದಿರುವ ಕಿವಿ, ಮುಖದ ಶಾಂತ ತೇಜಸ್ಸು ಇತ್ಯಾದಿಗಳು ಈ ವಿಗ್ರಹದ ಸುಂದರ ಕರುಣಾ ಭಾವ ಮತ್ತು ಆಧ್ಯಾತ್ಮಿಕ ಅಭಿವ್ಯಕ್ತಿಯ ಔನ್ನತ್ಯಕ್ಕೆ ಮೆರಗು ಕೊಟ್ಟಿವೆ. ಅಜಂತದ ಗುಹೆಗಳಲ್ಲಿ ಗುಪ್ತರಿಗೆ ಸಮಕಾಲೀನರಾದ ವಾಕಾಟಕರು ನಿರ್ಮಿಸಿದ ಶಿಲ್ಪಗಳು ಸಹ ಗುಪ್ತಶೈಲಿಯ ಆಂತರ್ಯದ ಛಾಪನ್ನು ಪ್ರಕಟಿಸುತ್ತವೆ. (ಎಸ್.ವಿ.ಪಿ.)

**ಗುಪ್ತರ ಶಾಸನಗಳು :** ಗುಪ್ತರ ಕಾಲದ ಉತ್ತರ ಭಾರತದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಗಳನ್ನು ಅರಿಯುವಲ್ಲಿ ಅವರ ಶಾಸನಗಳು ಅತ್ಯಮೂಲ್ಯ ಸಾಧನಗಳಾಗಿವೆ. ಇದುವರೆಗೆ ತಿಳಿದಂತೆ ನಾಣ್ಯಗಳನ್ನು ಮೊದಲು ಅಚ್ಚು ಹಾಕಿಸಿದ ಗುಪ್ತ ದೊರೆ 1ನೆಯ ಚಂದ್ರಗುಪ್ತ. ಆದರೆ ಶಾಸನಗಳನ್ನು ಬರೆಯಿಸಿದವನು ಆತನ ಮಗ ಸಮುದ್ರಗುಪ್ತ. ಗುಪ್ತರ ಶಾಸನಗಳೆಲ್ಲ ಸಂಸ್ಕೃತ ಭಾಷೆಯಲ್ಲಿವೆ. ರಚನೆಯ ದೃಷ್ಟಿಯಿಂದ ಅವುಗಳನ್ನು ಗದ್ಯಶಾಸನಗಳು, ಪದ್ಯಶಾಸನಗಳು, ಗದ್ಯ-ಪದ್ಯ ಮಿಶ್ರಿತ ಶಾಸನಗಳೆಂದು ವಿಂಗಡಿಸಬಹುದು. ಗುಪ್ತರ ಶಾಸನಗಳ ಲಿಪಿ ಅಶೋಕನ ಕಾಲದ ಬ್ರಾಹ್ಮೀ ಲಿಪಿಯಿಂದಲೇ ಬೆಳೆದುಬಂದದ್ದು. ಇದನ್ನು ಗುಪ್ತಬ್ರಾಹ್ಮೀ ಲಿಪಿ ಎಂದು ಹೆಸರಿಸಿದೆ. ಇವುಗಳಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿ ಎಂಬ ಎರಡು ಮುಖ್ಯ ಪ್ರಭೇದಗಳನ್ನು ಸಹ ಗುರುತಿಸಲಾಗಿದೆ. ಆದರೂ ಲಿಪಿಯ ಸ್ವರೂಪದ ಸೂಕ್ಷ್ಮ ಪರೀಕ್ಷೆಯಿಂದ 4ನೆಯ ಶತಮಾನದಲ್ಲಿ ಪ್ರಚಲಿತವಾಗಿದ್ದ ಕೌಶಾಂಬೀ, ಪೂರ್ವೀಮಾಳವ ಮತ್ತು ಮಥುರಶೈಲಿಗಳನ್ನೂ 5-6ನೆಯ ಶತಮಾನಗಳ ಮಥುರ ಮತ್ತು ವಾಯವ್ಯಪ್ರಾಂತ್ಯ, ಮಧ್ಯಭಾರತ-ರಾಜಸ್ತಾನೀ ಹಾಗೂ ಕಾಠಿಯಾವಾಡೀ

ಶೈಲಿಗಳನ್ನೂ ಇವುಗಳಲ್ಲಿ ಪ್ರತ್ಯೇಕವಾಗಿ ಗುರುತಿಸಬಹುದಾಗಿದೆ. ಗುಪ್ತರ ಕಾಲ ಸುವರ್ಣಯುಗವಾಗಿತ್ತೆಂಬುದು ಅವರ ಶಾಸನ ಸಾಹಿತ್ಯದಿಂದ ಸ್ಪಷ್ಟವಾಗುತ್ತದೆ.

ಗುಪ್ತರ ಎಲ್ಲ ಶಾಸನಗಳಲ್ಲೂ ತೇದಿಯ ವಿವರಗಳನ್ನು ಕೊಟ್ಟಿಲ್ಲ. ಕೆಲವಲ್ಲಿ ರಾಜನ ಆಳ್ವಿಕೆಯ ಸಂವತ್ಸರದ ಸಂಖ್ಯೆಯನ್ನೋ 319–20ರಲ್ಲಿ ಆರಂಭವಾದ ಗುಪ್ತಶಕೆಯ ಸಂಖ್ಯೆಯನ್ನೋ ನೀಡಲಾಗಿದೆ. ಇಮ್ಮಡಿ ಚಂದ್ರಗುಪ್ತನ ಮಥುರ ಸ್ತಂಭ ಶಾಸನದಲ್ಲಿ ರಾಜನ ಆಳ್ವಿಕೆಯ 5ನೆಯ ವರ್ಷದೊಂದಿಗೆ ಗುಪ್ತಶಕದ 61ನೆಯ ವರ್ಷವನ್ನೂ ಪ್ರಸ್ತಾಪಿಸಲಾಗಿದೆ. 1ನೆಯ ಕುಮಾರಗುಪ್ತನ ಮಾಂಡಸರ್ ಶಿಲಾ ಶಾಸನ ಪ್ರ.ಶ.ಪೂ. 57ರಲ್ಲಿ ಜಾರಿಗೆ ಬಂದ ಮಾಳವ – ವಿಕ್ರಮ ಸಂವತ್ಸರದ 426 ಹಾಗೂ 473ನೆಯ ವರ್ಷಗಳನ್ನು ಪ್ರಸ್ತಾಪಿಸುತ್ತದೆ. ಕೆಲವೊಮ್ಮೆ ಈ ಕಾಲದ ಶಾಸನಗಳಲ್ಲಿ ಚೈತ್ರಾದಿ ಮಾಸಗಳ ಹಾಗೂ ತಿಥಿಯ ನಿರ್ದೇಶನವೂ ಕಂಡುಬರುತ್ತದೆ.

ಇತರ ಎಲ್ಲ ಶಾಸನಗಳಂತೆ ಗುಪ್ತರ ಶಾಸನಗಳನ್ನು ಸಹ ಅಧಿಕೃತ ಇಲ್ಲವೇ ವೈಯಕ್ತಿಕ ಶಾಸನಗಳೆಂದೋ ಅವನ್ನು ಬರೆಯಲಾಗಿರುವ ಸಾಮಗ್ರಿಗಳ ಆಧಾರದ ಮೇಲೆ ಶಿಲಾಶಾಸನ, ಸ್ತಂಭಶಾಸನ, ತಾಮ್ರಶಾಸನ, ಪ್ರತಿಮಾಶಾಸನ, ಮುದ್ರಾಶಾಸನಗಳೆಂದೋ, ಶಾಸನ ವಿಷಯವನ್ನವಲಂಬಿಸಿ ದಾನಶಾಸನ, ಸ್ಮಾರಕಶಾಸನ, ನಿರ್ವಾಹಕ ಶಾಸನ, ಕ್ರಯಾಶಾಸನ, ಪ್ರತಿಷ್ಠಾಶಾಸನ ಅಥವಾ ಪ್ರಶಸ್ತಿಗಳೆಂದೋ ವಿಂಗಡಿಸಬಹುದು. ಕೆಲವು ಶಾಸನಗಳು ಗುಹೆಗಳಲ್ಲಿ ದೊರೆತ ಕಾರಣ ಗುಹಾ ಶಾಸನಗಳೆನಿಸಿಕೊಂಡಿವೆ.

**ಕೆಲವು ಮುಖ್ಯ ಶಾಸನಗಳು :** ಸಮುದ್ರ ಗುಪ್ತನ ಅಲಹಾಬಾದ್ ಶಿಲಾ ಶಾಸನ. ಗುಪ್ತರ ಪ್ರಥಮ (ಇದುವರೆಗೆ ಲಭ್ಯವಿರುವ ಪ್ರಾಚೀನತಮ) ಶಾಸನವಿದು. ಇದರಲ್ಲಿ ತೇದಿಯನ್ನು ನೀಡಿಲ್ಲ. ಈ ಶಾಸನದ ಕವಿ ಸಂಧಿವಿಗ್ರಹಿ, ಕುಮಾರಾಮಾತ್ಯ, ಮಹಾದಂಡನಾಯಕ ಹರಿಷೇಣ. ಇದೊಂದು ಪ್ರಶಸ್ತಿ ಶಾಸನ. ಇದರಿಂದ ನಮಗೆ ಸಮುದ್ರಗುಪ್ತನ ಜೀವನದ ಅನೇಕ ಘಟನೆಗಳು ತಿಳಿದುಬಂದಿವೆ. ಶಾಸನದ ಮೊದಲ ಭಾಗ ಅಲ್ಲಲ್ಲಿ ತ್ರುಟಿತವಾಗಿರುವ ಕಾರಣ, ಕೆಲವು ವಿವರಗಳನ್ನು ತಿಳಿಯಲು ಸಾಧ್ಯವಿಲ್ಲವಾಗಿವೆ. ಒಂದನೆಯ ಚಂದ್ರಗುಪ್ತ ಸಮುದ್ರಗುಪ್ತನನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ್ದು, ಆಸ್ಥಾನದಲ್ಲಿ ನೆರೆದಿದ್ದ ಅನೇಕರಿಗೆ ಇದರಿಂದ ಸಂತೋಷವಾಯಿತಾದರೂ ಕೆಲವರಾದರೂ ಇದರಿಂದ ಅಸಂತುಷ್ಟರಾದ್ದು, ಅವರಲ್ಲಿ ಅಪ್ಪಾಯಿಕ ಮತ್ತು ಗೋವಿಂದ ಎಂಬಿಬ್ಬರನ್ನು ಸಮುದ್ರಗುಪ್ತ ಸೋಲಿಸಿದ್ದು, ಅನಂತರ ದಿಗ್ವಿಜಯ ಯಾತ್ರೆ ಕೈಗೊಂಡ ಈತ ಆರ್ಯಾವರ್ತದ ಅರಸರನ್ನು ಸೋಲಿಸಿ ಅವರ ರಾಜ್ಯವನ್ನು ವಶಪಡಿಸಿಕೊಂಡದ್ದು ಮುಂತಾದವುಗಳ ಪ್ರಸ್ತಾಪ ಇಲ್ಲಿದೆ. ರುದ್ರದೇವ, ಮತಿಲ, ನಾಗದತ್ತ, ಚಂದ್ರವರ್ಮ, ಗಣಪತಿನಾಗ, ನಾಗಸೇನ, ಅಚ್ಯುತ, ನಂದಿ ಮತ್ತು ಬಲವರ್ಮ– ಈ ಒಂಬತ್ತು ಅರಸರ ಹೆಸರುಗಳನ್ನು ಮಾತ್ರ ಹೇಳಿದೆ. ದಕ್ಷಿಣಾಪಥದ ಅರಸರ ವಿರುದ್ಧ ಇವನು ಕೈಗೊಂಡ ನೀತಿ ಭಿನ್ನವಾಗಿತ್ತು. ಅಲ್ಲಿಯವರಾದ, ಕೋಸಲದ ಮಹೇಂದ್ರ, ಮಹಾಕಾಂತಾರದ ವ್ಯಾಘ್ರರಾಜ, ಕೋರಾಲದ ಮಂಟರಾಜ, ಪಿಷ್ಟಪುರದ ಮಹೇಂದ್ರಗಿರಿ (ಮಹೇಂದ್ರ), ಕೊಟ್ಟೂರಿನ (ಗಿರಿಕೊಟ್ಟೂರಿನ) ಸ್ವಾಮಿದತ್ತ, ಏರಂಡಪಲ್ಲದ ದಮನ, ಕಾಂಚಿಯ ವಿಷ್ಣುಗೋಪ, ಅವಮುಕ್ತದ ನೀಲರಾಜ, ವೇಂಗಿಯ ಹಸ್ತಿವರ್ಮ, ಪಲಕ್ಕಾದ ಉಗ್ರಸೇನ, ದೇವರಾಷ್ಟ್ರದ ಕುಬೇರ ಮತ್ತು ಕುಸ್ಥಲಪುರದ ಧನಂಜಯ, ಈ ಅರಸರನ್ನು ಸೋಲಿಸಿದರೂ, ಅವರನ್ನು ಅನಂತರ ಮುಕ್ತಮಾಡಿ ಅವರ ರಾಜ್ಯಗಳನ್ನು ಹಿಂದಿರುಗಿಸಿ, ಅವರ ಸಾಮಂತಿಕೆಯನ್ನು ಒಪ್ಪಿಕೊಂಡ. ಇವನದು ಗ್ರಹಣ, ಮೋಕ್ಷ ಮತ್ತು ಅನುಗ್ರಹದ ನೀತಿಯಾಗಿತ್ತು. ಅಲ್ಲದೆ ಎಲ್ಲ ವನರಾಜರನ್ನೂ ಸಮತಲ, ಡವಾಕ, ಕಾಮರೂಪ, ಮುಂತಾದ ರಾಜ್ಯಗಳನ್ನು ಅರ್ಜುನಾಯನ, ಮಾಲವ ಯಾಧೇಯ ಮುಂತಾದ ಜನಾಂಗಗಳನ್ನೂ ಕುಷಾಣರನ್ನೂ ಶಕರನ್ನೂ ಸಿಂಹಳ ಮುಂತಾದ ದ್ವೀಪವಾಸಿಗಳನ್ನೂ ದಮನ ಮಾಡಿ ಅವರ ಸೇವೆಗೆ ಪಾತ್ರನಾದವನೆಂದೂ ವರ್ಣಿಸಲಾಗಿದೆ. ಇದೊಂದು ಪ್ರಶಸ್ತಿ ಶಾಸನ. ಶಾಸನದ ಉದ್ದಿಶ್ಯವೇ ಅದು. ಈ ಶಾಸನ ಸಮುದ್ರಗುಪ್ತನ ಮರಣಾನಂತರ ಹುಟ್ಟಿತೆಂದು ಫ್ಲೀಟ್‌ವಾದಿಸಿದ್ದರೂ ಇದರಲ್ಲಿ ಇವನು ಮಾಡಿದ ಅಶ್ವಮೇಧ ಯಾಗದ ಉಲ್ಲೇಖವಿಲ್ಲದಿರುವ ಮತ್ತು ಇತರ ಕಾರಣಗಳಿಂದ ಅವರ ವಾದವನ್ನು ಒಪ್ಪಲಾಗಿಲ್ಲ.

ಮಧ್ಯಪ್ರದೇಶದ ಏರಣದಲ್ಲಿ ದೊರೆತ ಸ್ತಂಭಶಾಸನ ಸಮುದ್ರಗುಪ್ತನಿಗೇ ಸೇರಿದ್ದು. ಬಹಳ ಮಟ್ಟಿಗೆ ಭಿನ್ನವಾಗಿರುವ ಈ ಶಾಸನದಲ್ಲಿ ಈತನ ಪತ್ನಿ ದತ್ತಾದೇವಿಯ ಉಲ್ಲೇಖವಿದೆ. ಏರಿಕಿಣ (ಏರಣ) ದಲ್ಲಿ ಆಳುತ್ತಿದ್ದ ಇವನ ಸಾಮಂತನೊಬ್ಬ ಈ ಶಾಸನವನ್ನು ಕೆತ್ತಿಸಿರಬಹುದೆಂದು ಊಹಿಸಲಾಗಿದೆ.

ಸಮುದ್ರಗುಪ್ತ ಅವನ ಆಳ್ವಿಕೆಯ 5ನೆಯ ಹಾಗೂ 9ನೆಯ ವರ್ಷಗಳಲ್ಲಿ ನೀಡಿದುದೆಂದು ಹೇಳಲಾದ–ನಾಲಂದ ಹಾಗೂ ಗಯಗಳ– ಎರಡು ತಾಮ್ರ ಶಾಸನಗಳು ದೊರೆತಿವೆ. ಆದರೆ ಇವು ಕೃತಕ ಶಾಸನಗಳು; ಪ್ರ.ಶ 6ನೆಯ ಶತಮಾನದ ಸುಮಾರಿಗೆ ಹುಟ್ಟಿದಂಥವು. ಬಹುಶಃ ಮೂಲಶಾಸನಗಳು ಕಳೆದುಹೋಗಿದ್ದು, ಅವಕ್ಕೆ ಬದಲಾಗಿ ಇವನ್ನು ಕೆತ್ತಿಸಿದಾಗ ಸಹಜವಾಗಿಯೇ ಅನೇಕ ತಪ್ಪುಗಳು ಶಾಸನಗಳಲ್ಲಿ ನುಸುಳಿ ಇವುಗಳ ಕೃತಕತೆಯನ್ನು ಸಾರಿವೆ.

ಗುಪ್ತಶಕೆಯ 61ನೆಯ ವರ್ಷದಲ್ಲಿ ಬರೆಯಲಾದ, ಆ ಶಕೆಯನ್ನು ಪ್ರಸ್ತಾಪಿಸುವ ಪ್ರಾಚೀನ ಶಾಸನ ಮಥುರದಲ್ಲಿ ದೊರೆತ, ಇಮ್ಮಡಿ ಚಂದ್ರಗುಪ್ತನ ಆಳ್ವಿಕೆಯ 5ನೆಯ ವರ್ಷದ, ಸ್ತಂಭಶಾಸನ, ಆರ್ಯೋದಿತಾಚಾರ್ಯ ಉಪಮಿತೇಶ್ವರ ಮತ್ತು ಕಪಿಲೇಶ್ವರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದನೆಂಬ ಶಾಸನದ ವಿಷಯ. ಇದೇ ಅರಸನ ಎರಡು ಶಾಸನಗಳು ಉದಯಗಿರಿಯ ಬೆಟ್ಟದ ಗುಹೆಗಳಲ್ಲಿ ದೊರೆತಿವೆ. ಇಲ್ಲಿಯ ಗುಹಾಲಯಗಳನ್ನು ಅರಸ ಕೊರೆಯಿಸಿದನೆಂದು ಅವು ತಿಳಿಸುತ್ತವೆ.

ದೆಹಲಿಯ ಸಮೀಪದ ಮೆಹರೋಲಿ ಗ್ರಾಮದಲ್ಲಿ ಕಬ್ಬಿಣದ ಕಂಬದ ಮೇಲೆ ಕೆತ್ತಲಾದ ಶಾಸನ ಚಂದ್ರನೆಂಬ ಅರಸನದು. ಈ ಚಂದ್ರನನ್ನು ಗುರುತಿಸುವುದರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಈತ ಗುಪ್ತವಂಶದ ಇಮ್ಮಡಿ ಚಂದ್ರಗುಪ್ತನೆಂದೇ ಬಹಳಮಟ್ಟಿಗೆ ಒಪ್ಪಲಾಗಿದೆ. 5ನೆಯ ಶತಮಾನಕ್ಕೆ ಸೇರುವ ಈ ಶಾಸನ ಚಂದ್ರನ ಪ್ರಶಸ್ತಿಯನ್ನೊಳಗೊಂಡಿದೆ. ಪಶ್ಚಿಮದಲ್ಲಿ ಸಿಂಧೂ ನದಿ ಪ್ರಾಂತ್ಯ, ಉತ್ತರದಲ್ಲಿ ವಾಹ್ಲಿಕ, ಪೂರ್ವದಲ್ಲಿ ವಂಗ ಮತ್ತು ದಕ್ಷಿಣದಲ್ಲಿ ಸಮುದ್ರದವರೆಗಿನ ವಿಶಾಲ ಪ್ರದೇಶದಲ್ಲಿ ದಿಗ್ವಿಜಯ ಯಾತ್ರೆ ಕೈಗೊಂಡ. ಕೀರ್ತಿಶೇಷನಾಗಿದ್ದ ಚಂದ್ರ ವಿಷ್ಣು ಪದವೆಂಬ ಗುಡ್ಡದ ಮೇಲೆ ವಿಷ್ಣುಧ್ವಜವನ್ನು ನಿಲ್ಲಿಸಿದನೆಂದು ಶಾಸನ ಹೇಳುತ್ತದೆ. ಇದು ಆ ಅರಸನ ಪ್ರಶಸ್ತಿ ಸಾಂಪ್ರದಾಯಿಕವಾಗಿದ್ದರೂ ಇದರಲ್ಲಿ ಕೆಲವು ಸತ್ಯಾಂಶಗಳೂ ಇವೆ.

ಇಮ್ಮಡಿ ಚಂದ್ರಗುಪ್ತನಿಗೆ ರಾಮಗುಪ್ತನೆಂಬ ಒಬ್ಬ ಹಿರಿಯ ಸೋದರನಿದ್ದನೆಂದು ಆ ಹೆಸರಿನ ಕೆಲವು ನಾಣ್ಯಗಳ ಆಧಾರದ ಮೇಲೆ ಊಹಿಸಲಾಗಿದೆ. ಅದು ಇನ್ನೂ ವಾದಾಸ್ಪದವಾಗಿಯೇ ಇತ್ತು. ಆದರೆ ಈಚೆಗೆ, ಸು. 1968–69ರಲ್ಲಿ, ಮಧ್ಯಪ್ರದೇಶದ ದುರ್ಜನ್‌ಪುರವೆಂಬಲ್ಲಿ ಮೂರು ಪ್ರತಿಮಾ ಶಾಸನಗಳು ದೊರೆತಿವೆ. ಅವುಗಳಲ್ಲಿ ಎರಡನ್ನು–ಚಂದ್ರಪ್ರಭ ಮತ್ತು ಪುಷ್ಪದಂತ ತೀರ್ಥಂಕರರ ಪ್ರತಿಮೆಗಳನ್ನು–ಮಹಾರಾಜಾಧಿರಾಜ ರಾಮಗುಪ್ತ ಮಾಡಿಸಿದನೆಂದು ತಿಳಿದಿದೆ. 4ನೆಯ ಶತಮಾನದ ಈ ಶಾಸನಗಳಲ್ಲಿ ಹೆಸರಿಸಲಾದ ಈ ಅರಸ ಸಾರ್ವಭೌಮಪ್ರಶಸ್ತಿ ಹೊಂದಿದ್ದ. ಈತ ಚಂದ್ರಗುಪ್ತನ ಸೋದರನಾದ ರಾಮಗುಪ್ತನೇ ಹೌದೆಂದು ಈಗ ಹೇಳಲಾಗಿದೆ. ಇದರಿಂದ ರಾಮಗುಪ್ತನ ಅಸ್ತಿತ್ವ ಖಚಿತಗೊಂಡಂತಾಗಿದೆ.

ಬಾಂಗ್ಲಾದೇಶದಲ್ಲಿರುವ ದಾಮೋದರಪುರದ ತಾಮ್ರಶಾಸನ 444 ರದು. ಇದು ಕುಮಾರಗುಪ್ತನದು. ಇದೊಂದು ಕ್ರಯಶಾಸನ. ಅರಸನ ಅಧಿಕಾರಿಯಾಗಿ ಪುಂಡ್ರವರ್ಧನಭುಕ್ತಿಯನ್ನು ಆಳುತ್ತಿದ್ದ ಚಿರಾತದತ್ತನ ಆಜ್ಞಾನುಸಾರ ಕೋಟಿ ವರ್ಷ ವಿಷಯದ ಆಡಳಿತಾಧಿಕಾರಿಯಾದ ಕುಮಾರಾಮಾತ್ಯ ಕ್ಷೇತ್ರವರ್ಮ, ಕರ್ಪಟಿಕನೆಂಬ ಬ್ರಾಹ್ಮಣನಿಗೆ, ಆತ ಅಗ್ನಿಹೋತ್ರ ಕಾರ್ಯಗಳನ್ನು ಸಾಂಗವಾಗಿ ನಡೆಸಿಕೊಂಡು ಬರಲೆಂದು, ಮೂರು ದೀನಾರಗಳ ಬೆಲೆಗೆ ಒಂದು ಕುಲ್ಯವಾಪ ಭೂಮಿಯನ್ನು ದಾನಮಾಡಿದನೆಂದು ಶಾಸನ ತಿಳಿಸುತ್ತದೆ. ಮಧ್ಯಪ್ರದೇಶದ ಮಂಡಸೋರಿನಲ್ಲಿಯ 436 ಮತ್ತು 473ರ ಶಾಸನದಲ್ಲೂ ಈ ಅರಸನ ಪ್ರಸ್ತಾಪವಿದೆ. ಇದೊಂದು ವಿಶಿಷ್ಟ ಶಾಸನ; ಪದ್ಯರೂಪದಲ್ಲಿದೆ. ಗುಜರಾತಿನ ಲಾಟವಿಷಯದಿಂದ ದಶಪುರಕ್ಕೆ (ಮಂಡಸೋರ್) ಹಲವಾರು ರೇಷ್ಮೆ ನೇಕಾರ ಕುಟುಂಬದವರು ವಲಸೆ ಹೋದರು. ಅವರಲ್ಲಿ ಕೆಲವರು ಭಿನ್ನ ವೃತ್ತಿಗಳನ್ನವಲಂಬಿಸಿದರೂ, ಇತರರು ಸ್ವವೃತ್ತಿಯಲ್ಲಿ ತೊಡಗಿ, ತಮ್ಮದೇ ಆದ ಸಂಘವೊಂದನ್ನು ಸ್ಥಾಪಿಸಿಕೊಂಡರು. ಕುಮಾರಗುಪ್ತನ ಆಳ್ವಿಕೆಯ ಕಾಲದಲ್ಲಿ, 436ರಲ್ಲಿ, ಅವರು ದಶಪುರದಲ್ಲಿ ಸೂರ್ಯ ದೇವಾಲಯವೊಂದನ್ನು ನಿರ್ಮಿಸಿದ್ದರು. ಆದರೆ ಅದು ಸ್ವಲ್ಪಕಾಲಾನಂತರ ಹಾಳುಬಿದ್ದಿತು. ಮಾಳವ ರಾಜ್ಯದ ಅರಸನಾದ ಬಂಧುವರ್ಮನ ಆಳ್ವಿಕೆಯಲ್ಲಿ, 473ರಲ್ಲಿ, ಅದನ್ನು ಆ ಸಂಘದವರು ಜೀರ್ಣೋದ್ಧಾರಮಾಡಿಸಿದರೆಂದು ಶಾಸನ ತಿಳಿಸುತ್ತದೆ. 44 ಪದ್ಯಗಳ ಶಾಸನದ ಕರ್ತೃ ವತ್ಸಭಟ್ಟಿ.

ಜುನಾಗಢದಲ್ಲಿ (ಗಿರಿನಗರ) ಮಹಾಕ್ಷತ್ರಪ ರುದ್ರದಾಮನ ಶಾಸನದ ಕೆಳಗಡೆಯೇ ಬರೆಯಲಾದ ಸ್ಕಂದಗುಪ್ತನ ಶಾಸನ ಅಲ್ಲಿಯ ಸುದರ್ಶನ ಸರೋವರವನ್ನು ಜೀರ್ಣೋದ್ಧಾರ ಮಾಡಿದ್ದನ್ನು ತಿಳಿಸುತ್ತದೆ. ಸುರಾಷ್ಟ್ರದ ಪ್ರಾಂತ್ಯಾಧಿಕಾರಿಯಾಗಿ ನೇಮಕಗೊಂಡಿದ್ದ ಪರ್ಣದತ್ತನ ಮಗ ಚಕ್ರಪಾಲಿತ ಆ ನಗರದ ಅಧಿಕಾರಿಯಾಗಿದ್ದಾಗ ಆ ಕೆರೆಯ ಕಟ್ಟೆ ಒಡೆಯಲು ಅದನ್ನು ಆತ ಸರಿಪಡಿಸಿದ. ಚಂದ್ರಗುಪ್ತಮೌರ್ಯನ ಕಾಲದಲ್ಲಿ ತೋಡಿಸಲಾದ ಈ ಕರೆಯ ಕಟ್ಟೆ ಒಮ್ಮೆ ಅಶೋಕನ ಕಾಲದಲ್ಲಿ, ಮತ್ತೊಮ್ಮೆ ರುದ್ರದಾಮನ ಕಾಲದಲ್ಲಿ, ಭಗ್ನಗೊಂಡು ಪುನಃ ಕಟ್ಟಲ್ಪಟ್ಟಿತ್ತು. ಬಹುಶಃ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಶಾಸನದ ಮೊದಲ ಭಾಗದಲ್ಲಿ ಇದನ್ನು ಸುದರ್ಶನ ತಟಾಕ ಸಂಸ್ಕಾರ ಗ್ರಂಥವೆಂದು ಕರೆಯಲಾಗಿದೆ. ಇದೇ ಅರಸನದಾದ ಭಿತಾರೀ ಶಿಲಾಸ್ತಂಭಶಾಸನ ವಿಷ್ಣುವಿನ (ಶಾರ್ಙ್ಗ)

ದೇಗುಲದ ರಚನೆ ಹಾಗೂ ಪ್ರತಿಮಾ ಪ್ರತಿಷ್ಠಾಪನೆಗೆ ಸಂಬಂಧಿಸಿದ್ದಾಗಿದೆ. ದುರವಸ್ಥೆಗಿಳಿದಿದ್ದ ಗುಪ್ತರ ವಂಶಸಿರಿಯನ್ನು ಪುನಃ ನೆಲೆಗೊಳಿಸುವಲ್ಲಿ ಅರಸ ಪಟ್ಟ ಪಾಡಿನ, ಒಂದು ಇಡೀ ರಾತ್ರಿ ಆತ ನೆಲದ ಮೇಲೆ ಮಲಗಿರಬೇಕಾಯಿತೆಂಬ ಕುತೂಹಲಕಾರಿಯಾದ ಘಟನೆಯ ನಿರೂಪಣೆ ಈ ಶಾಸನದಲ್ಲಿವೆ.

ಬಿಹಾರದ ಶಿಲಾಸ್ತಂಭ ಶಾಸನವೊಂದು ಪೂರುಗುಪ್ತನ ಆಳ್ವಿಕೆಯದು. ಹೆಚ್ಚಿನ ಭಾಗ ನಷ್ಟವಾಗಿರುವ ಈ ಶಾಸನ ಸ್ಕಂದಗುಪ್ತನದೆಂಬುದು ಫ್ಲೀಟನ ಅಭಿಪ್ರಾಯವಾದರೂ ಇದು ಪೂರುಗುಪ್ತನ ಆಳ್ವಿಕೆಯದೆಂದು ಇತರ ವಿದ್ವಾಂಸರು ಈಚೆಗೆ ನಿರ್ಣಯಿಸಿದ್ದಾರೆ. ಮಹಾರಾಜಾಧಿರಾಜನೆಂದು ಬಿರುದಾಂಕಿತನಾದ ಈತ ಸ್ವಲ್ಪಕಾಲ ಆಳಿದ ಬಳಿಕ ಸ್ಕಂದಗುಪ್ತ ಈತನನ್ನು ಪದಚ್ಯುತಗೊಳಿಸಿರಬಹುದೆಂದು ಊಹಿಸಲಾಗಿದೆ.

ಇಮ್ಮಡಿ ಕುಮಾರಗುಪ್ತನ ಶಾಸನವೊಂದು ಮುದ್ರೆಯ ಮೇಲೆ ದೊರೆತಿದೆ. ಇದರಲ್ಲಿ ಶ್ರೀಗುಪ್ತನಿಂದ ಆರಂಭಿಸಿ ಗುಪ್ತರ ವಂಶಾವಳಿಯನ್ನೂ ಅರಸರ ಹಾಗೂ ಮಹಾರಾಣಿಯರ ಹೆಸರುಗಳನ್ನೂ ಉಲ್ಲೇಖಿಸಿದೆ. 1ನೆಯ ಕುಮಾರಗುಪ್ತನ ಅನಂತರ ಕ್ರಮವಾಗಿ ಪೂರುಗುಪ್ತ, ಆತನ ಮಗ ನರಸಿಂಹಗುಪ್ತ ಆತನ ಮಗ 2ನೆಯ ಕುಮಾರಗುಪ್ತ ಇವರು ಆಳಿದರೆಂದು ಇದರಿಂದ ತಿಳಿದುಬರುತ್ತದೆ. ಸ್ಕಂದಗುಪ್ತನ ಉಲ್ಲೇಖವಿಲ್ಲವಾದ ಕಾರಣ ಆತ ಪಟ್ಟದರಸಿಯ ಮಗನಾಗಿರಲಾರನೆಂಬ ಊಹೆಗೂ ಇದು ಎಡೆಮಾಡಿದೆ.

ಇವು ಗುಪ್ತವಂಶದ ಅರಸರ ಪ್ರಮುಖ ಶಾಸನಗಳು. ರಾಜಕೀಯ ದೃಷ್ಟಿಯಿಂದ ಮಾತ್ರವಲ್ಲದೆ ಅಂದಿನ ಸಾಮಾಜಿಕ, ಧಾರ್ಮಿಕ ಪರಿಸ್ಥಿತಿಗಳ ಮೇಲೂ ವಿಶಿಷ್ಟ ಬೆಳಕನ್ನು ಚೆಲ್ಲುವ ಇವುಗಳಲ್ಲಿ ಹಲವು ಶಾಸನಗಳು ಉತ್ಕೃಷ್ಟ ಶೈಲಿಯನ್ನೊಳಗೊಂಡು ಕಾವ್ಯಮಯವಾಗಿವೆ. ಅಂದಿನ ಸಾಹಿತ್ಯದ ಮೇಲ್ಮೆಯನ್ನರಿಯಲು ಇವು ಬಹಳ ಸಹಾಯಕವಾಗಿದೆ. (ಕೆ.ವಿ.ಆರ್.;ಜಿ.ಬಿ.ಆರ್.)

**ಗುಪ್ತರು :** 4–6ನೆಯ ಶತಮಾನಗಳಲ್ಲಿ ಉತ್ತರ ಭಾರತದಲ್ಲಿ ಆಳುತ್ತಿದ್ದ ಒಂದು ಪ್ರಮುಖ ರಾಜವಂಶ. ಗುಪ್ತರ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳೂ ನಾಣ್ಯಗಳೂ ಸಾಹಿತ್ಯಕ ಆಧಾರಗಳೂ ದೊರೆಯುವುದರಿಂದ ಇವರ ಕಾಲದ ಇತಿಹಾಸವನ್ನು ಕುರಿತ ಅನೇಕ ವಿವರಗಳು ತಿಳಿದುಬಂದಿವೆ. ಗುಪ್ತರು ಸುಮಾರು 200 ವರ್ಷಗಳಿಗೂ ಹೆಚ್ಚು ಕಾಲ ಆಳಿದರು. ಗುಪ್ತರ ಕಾಲವನ್ನು ಭಾರತ ಇತಿಹಾಸದ ಸುವರ್ಣಯುಗವೆಂದು ವರ್ಣಿಸಲಾಗಿದೆ.

ಗುಪ್ತವಂಶಕ್ಕೆ ಸೇರಿದ 1ನೆಯ ಚಂದ್ರಗುಪ್ತನಿಗೂ (320–35) ಹಿಂದಿನ ಅರಸರ ವಿಷಯ ಹೆಚ್ಚಿಗೆ ತಿಳಿದಿಲ್ಲ. ಶುಂಗ ಮತ್ತು ಶಾತವಾಹನರ ಕಾಲಕ್ಕೆ ಸಂಬಂಧಿಸಿದಂತೆ ಗುಪ್ತ ಎಂದು ಕೊನೆಗೊಳ್ಳುತ್ತಿದ್ದ ಹಲವು ಅಧಿಕಾರಿಗಳ ಹೆಸರುಗಳು ಲಬ್ಧವಾಗಿವೆ. ಆದರೆ ಇವು ಗುಪ್ತ ಎಂಬ ವಂಶವನ್ನು ಸೂಚಿಸುತ್ತವೆ ಎಂದು ಹೇಳಲಾಗದು. ಒಂದನೆಯ ಚಂದ್ರಗುಪ್ತನ ತಾತಾ ಮಹಾರಾಜ ಶ್ರೀಗುಪ್ತ, ತಂದೆ ಮಹಾರಾಜ ಘಟೋತ್ಕಚ, ಇವರಿಗೆ ಕೇವಲ 'ಮಹಾರಾಜ' ಎಂಬ ಬಿರುದಿತ್ತು. ಆದರೆ ಶಾಸನಗಳಲ್ಲಿ ಘಟೋತ್ಕಚನ ಮಗನನ್ನು ಮಹಾರಾಜಾಧಿರಾಜ ಚಂದ್ರಗುಪ್ತನೆಂದು ವರ್ಣಿಸಲಾಗಿದೆ. ಚಂದ್ರಗುಪ್ತ ತನ್ನ ಪೂರ್ವಿಕರಿಗಿಂತ ಹೆಚ್ಚಿನ ಪ್ರಾಬಲ್ಯವನ್ನು ಹೊಂದಿದ್ದನೆಂಬುದನ್ನು ಬಹುಶಃ ಇದು ಸೂಚಿಸುತ್ತದೆ. ಮಗಧದೇಶದ ಮೃಗಶಿಖಾವನದಲ್ಲಿ ಮಹಾರಾಜ ಚೆಲಿಕಿ ತೋ ಎಂಬವನು ಚೀನಿ ಯಾತ್ರಿಕರಿಗಾಗಿ ಒಂದು ಧಾರ್ಮಿಕ ಕಟ್ಟಡವನ್ನು ತನಗಿಂತ 500 ವರ್ಷಗಳ ಹಿಂದೆ ಕಟ್ಟಿಸಿದ್ದನೆಂದು ಚೀನ ದೇಶದ ಯಾತ್ರಿಕನಾದ ಇತ್ಸಿಂಗ ಹೇಳಿದ್ದಾನೆ. ಇವನು ಗುಪ್ತವಂಶದ ಮಹಾರಾಜ ಶ್ರೀಗುಪ್ತ ಎಂದು ಊಹಿಸಲಾಗಿದೆ. ಶ್ರೀಗುಪ್ತನೂ ಆತನ ಮಗನಾದ ಘಟೋತ್ಕಚನೂ ಬಂಗಾಲದ ಕೆಲವು ಭಾಗಗಳಲ್ಲಿ ಆಳುತ್ತಿದ್ದಿರಬೇಕು.

ಗುಪ್ತವಂಶ ಪ್ರಾಮುಖ್ಯಕ್ಕೆ ಬಂದದ್ದು ಘಟೋತ್ಕಚನ ಮಗನಾದ 1ನೆಯ ಚಂದ್ರಗುಪ್ತನ ಕಾಲದಲ್ಲಿಯೇ. ಶಾಸನಗಳಲ್ಲಿ ಇವನಿಗೆ ಮಹಾರಾಜಾಧಿರಾಜನೆಂಬ ಬಿರುದಿರುವುದು ಕಂಡುಬರುತ್ತದೆ. ಅಲ್ಲದೆ ಇವನು ಅಚ್ಚುಹಾಕಿಸಿದ ಚಿನ್ನದ ನಾಣ್ಯಗಳೂ ದೊರೆತಿವೆ. ಇವನು ಲಿಚ್ಛವಿ ವಂಶಕ್ಕೆ ಸೇರಿದ ಕುಮಾರದೇವಿಯನ್ನು ಮದುವೆಯಾಗಿದ್ದ. ಆ ವೇಳೆಗೆ ಬಿಹಾರ ಪ್ರಾಂತ್ಯದ ಉತ್ತರ ಭಾಗದಲ್ಲಿ ವೈಶಾಲಿ ಮತ್ತು ನೇಪಾಲಗಳ ನಡುವಣ ಪ್ರದೇಶ ಲಿಚ್ಛವಿಯರ ಆಳ್ವಿಕೆಗೆ ಒಳಪಟ್ಟಿತ್ತು. ಈ ಪ್ರದೇಶ ಗುಪ್ತರು ಆಳುತ್ತಿದ್ದಿರಬಹುದಾದ ಪ್ರದೇಶಕ್ಕೆ ಹೊಂದಿದಂತಿತ್ತು. ಆ ವಂಶಕ್ಕೆ ಉತ್ತರಾಧಿಕಾರಿಗಳಿಲ್ಲದ ಕಾರಣ ಲಿಚ್ಛವಿ ರಾಜ್ಯವೂ ಸ್ವಾಧೀನಕ್ಕೆ ಬಂದಿತು. ಕುಮಾರದೇವಿಯನ್ನು ಮದುವೆಯಾದದ್ದು ಚಂದ್ರಗುಪ್ತನ ಜೀವನದ ಗತಿಯನ್ನೇ ಬದಲಾಯಿಸಿತೆನ್ನಬಹುದು. ಇದರ ಪರಿಣಾಮವಾಗಿ ಇವನ ರಾಜ್ಯ ವಿಸ್ತಾರಗೊಂಡಿತು; ಪ್ರಾಬಲ್ಯ ಹೆಚ್ಚಿತು. ಇವನ ತಂದೆ ಮಹಾರಾಜನೆನಿಸಿಕೊಂಡಿದ್ದ. ಈಗ ಇವನು 'ಮಹಾರಾಜಾಧಿರಾಜ' ನೆಂದು ಬಿರುದಾಂಕಿತನಾದ. ಕವಯಿತ್ರಿ ಚಾಳುಕ್ಯ ಚಂದ್ರಾದಿತ್ಯನ ಪತ್ನಿ ವಿಜ್ಜಿಕಾ ಅಥವಾ ಕಿಸೋರಿಕ್ ಬರೆದಳೆನ್ನಲಾದ ಕೌಮುದೀಮಹೋತ್ಸವವೆಂಬ ನಾಟಕ ಮಗಧರಾಜ್ಯದ ಅರಸನಾದ ಸುಂದರವರ್ಮನ ದತ್ತುಪುತ್ರನಾದ ಚಂಡಸೇನನನ್ನು ಕುರಿತದ್ದು. ಈತ ಲಿಚ್ಛವಿಯರೊಡಗೂಡಿ ಸುಂದರವರ್ಮನನ್ನು ಕೊಂದು ಮಗಧರಾಜ್ಯವನ್ನು ಆಕ್ರಮಿಸಿದನೆಂಬುದು ನಾಟಕದ ಕಥಾವಸ್ತು. ಇದರಲ್ಲಿಯ ಚಂಡಸೇನನೇ 1ನೆಯ ಚಂದ್ರಗುಪ್ತನೆಂದು ಜಯಸ್ವಾಲ್ ಮುಂತಾದ ಕೆಲವು ವಿದ್ವಾಂಸರು ಊಹಿಸಿದ್ದಾರೆ. ಆದರೆ ಇದರಲ್ಲಿ ಸತ್ಯವಿಲ್ಲ. ಚಂದ್ರಗುಪ್ತ ಲಿಚ್ಛವಿಯರೊಡನೆ ಮಾಡಿದ ಸಂಬಂಧ ಅವನಿಗೆ ಲಾಭದಾಯಕವಾಯಿತೆಂಬುದು ನಿಜ. ಲಿಚ್ಛವಿ ವಂಶದೊಡನೆ ತನ್ನ ಸಂಬಂಧದ ಪ್ರಾಮುಖ್ಯವನ್ನು ಸೂಚಿಸಲೆಂಬಂತೆ ಇವನು ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದ. ಸಮುದ್ರಗುಪ್ತ ತನ್ನ ಶಾಸನದಲ್ಲಿ ತಾನು ಲಿಚ್ಛವಿ ದೌಹಿತ್ರನೆಂದು ಹೆಮ್ಮೆಯಿಂದ ಕರೆದುಕೊಂಡಿದ್ದಾನೆ. ಇದನ್ನು ಗಮನಿಸಿದಾಗ ಚಂದ್ರಗುಪ್ತ ಲಿಚ್ಛವಿಯರಿಂದಲೆ ಪ್ರಾಮುಖ್ಯಕ್ಕೆ ಬಂದನೆಂಬ ಅಂಶ ಸ್ಪಷ್ಟವಾಗುತ್ತದೆ.

ಒಂದನೆಯ ಚಂದ್ರಗುಪ್ತ (320–35) ಆಳ್ವಿಕೆಗೆ ಬಂದ ವರ್ಷವಾದ 320ರಿಂದ ಗುಪ್ತರ ಹೆಸರಿನಲ್ಲಿ ಒಂದು ಶಕೆಯನ್ನು ಗಣನೆಗೆ ತರಲಾಯಿತು. ಗುಪ್ತ ಶಕೆಯನ್ನು ಸಮುದ್ರಗುಪ್ತನ ಆಳ್ವಿಕೆಯ ಮೊದಲ ವರ್ಷದಿಂದ ಗಣಿಸಲಾಯಿತೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಚಂದ್ರಗುಪ್ತನ ಆಳ್ವಿಕೆಯ ಮೊದಲ ವರ್ಷದಿಂದಲೇ ಆರಂಭವಾಯಿತೆಂದು ಒಪ್ಪಲಾಗಿದೆ. ಸಮುದ್ರಗುಪ್ತನ ಅಲಾಹಾಬಾದ್ ಸ್ತಂಭಶಾಸನದಲ್ಲಿ ಚಂದ್ರಗುಪ್ತನ ಆಸ್ಥಾನದ ವರ್ಣನೆ ಇದೆ. ತನ್ನ ಆಳ್ವಿಕೆಯ ಕೊನೆಯ ಕಾಲದಲ್ಲಿ ಸಮುದ್ರಗುಪ್ತನೇ ಸಮರ್ಥನಾದ ತನ್ನ ಉತ್ತರಾಧಿಕಾರಿಯೆಂದು ಯೋಚಿಸಿ, ಆಸ್ಥಾನಿಕರ ಸಮ್ಮುಖದಲ್ಲಿ ಚಂದ್ರಗುಪ್ತ ಸಮುದ್ರಗುಪ್ತನನ್ನು ತನ್ನ ಅನಂತರ ರಾಜನಾಗಿ ಆಳಲು ಆರಿಸಿದನೆಂದು ಹೇಳಿದೆ. ಇದರಿಂದ ಬಹುಶಃ ಸಮುದ್ರಗುಪ್ತ ಆತನ ಹಿರಿಯ ಮಗನಾಗಿರದೆ ಅವನ ಹಿರಿಯ ಸೋದರನೊಬ್ಬನಾಗಿದ್ದರೂ ಇರಬಹುದೆಂದು ಊಹೆ ಮಾಡಲಾಗಿದೆ. ಸಮುದ್ರಗುಪ್ತನ ನಾಣ್ಯಗಳನ್ನು ಹೋಲುವ, ಕಚಗುಪ್ತನೆಂಬವನ, ಚಿನ್ನದ ನಾಣ್ಯಗಳು ದೊರೆತಿವೆ. ಇವುಗಳ ಆಧಾರದ ಮೇಲೆ ಕಚಗುಪ್ತ ಸಮುದ್ರಗುಪ್ತನ ಹಿರಿಯ ಸೋದರನಾಗಿದ್ದಿರಬೇಕೆಂದು ಹಲವರು ಸೂಚಿಸಿದ್ದಾರೆ. ಈ ವಿಷಯದಲ್ಲಿ ನಿಶ್ಚಯವಾಗಿ ಏನನ್ನೂ ಹೇಳಲಿಕ್ಕಾಗುವುದಿಲ್ಲ.

ಸಮುದ್ರಗುಪ್ತನ (335–75) ಆಯ್ಕೆ ಅನೇಕ ಸಾಮಂತರಿಗೆ ಸಂತೃಪ್ತಿಯನ್ನುಂಟು ಮಾಡಿತಾದರೂ ಕೆಲವರು ಇದರಿಂದ ಅಸೂಯೆಗೊಂಡರು. ಇವರಲ್ಲಿ ಅಚ್ಯುತ ಮತ್ತು ನಾಗಸೇನರೂ ಕೋಟಾ ಕುಲದ ಒಬ್ಬ ಸಾಮಂತನೂ ಪ್ರಮುಖರು. ಅಚ್ಯುತನೆಂಬುವನು ಅಹಿಚ್ಛತ್ರದ (ರೋಹಿಲ ಖಂಡ) ಭಾಗವನ್ನು ಮತ್ತು ನಾಗಸೇನನು ಪದ್ಮಾವತಿಯನ್ನು (ಮಧ್ಯಭಾರತ) ಆಳುತ್ತಿದ್ದನು. ಕೋಟಾಕುಲದವರು ಆಳುತ್ತಿದ್ದ ರಾಜ್ಯವು ಪೂರ್ವ ಪಂಜಾಬ್ ಮತ್ತು ದೆಹಲಿಯ ಪ್ರದೇಶವನ್ನು ಒಳಗೊಂಡಿತ್ತು. ಆದರೆ ಅಧಿಕಾರಕ್ಕೆ ಬಂದ ಕೂಡಲೇ ಸಮುದ್ರಗುಪ್ತ ಇವರೆಲ್ಲರನ್ನೂ ಸೋಲಿಸಿದ. ಇವರು ಸಮುದ್ರಗುಪ್ತನ ವಿರುದ್ಧವಾಗಿ ಅವನ ಹಿರಿಯ ಸಹೋದರನ ಹಕ್ಕನ್ನು ಎತ್ತಿ ಹಿಡಿದರೆಂದು ಹೇಳಲಾಗಿದೆ. ಆದರೆ ಈ ವಿಷಯಗಳನ್ನು ತಿಳಿಸುವ ಶಾಸನದ ಭಾಗ ಹಾಳಾಗಿರುವುದರಿಂದ ಈ ಬಗ್ಗೆ ಯಾವ ನಿರ್ಣಯವನ್ನೂ ನುಡಿಯುಂತಿಲ್ಲ.

ತದನಂತರ ಸಮುದ್ರಗುಪ್ತ ಉತ್ತರದ ದಿಗ್ವಿಜಯಯಾತ್ರೆ ಕೈಗೊಂಡ. ಈ ಸಂದರ್ಭದಲ್ಲಿ ಇವನು ವಿಶಿಷ್ಟವಾದ ನೀತಿಯನ್ನು ಅವಲಂಬಿಸಿದ. ವಿಶಾಲ ಭಾರತದ ಎಲ್ಲ ಭಾಗಗಳನ್ನೂ ತನ್ನ ನೇರವಾದ ಆಡಳಿತಕ್ಕೊಳಪಡಿಸುವುದು ಕಷ್ಟಸಾಧ್ಯವೆಂಬುದನ್ನು ಅವನು ಅರಿತಿದ್ದಂತೆ ತೋರುತ್ತದೆ. ಆದ್ದರಿಂದಲೇ ಆತ ಉತ್ತರದಲ್ಲಿ ಆಳುತ್ತಿದ್ದ ಅರಸರನ್ನು ಸೋಲಿಸಿ ಅವರ ರಾಜ್ಯಗಳನ್ನು ಮಾತ್ರ ತನ್ನದಕ್ಕೆ ಸೇರಿಸಿಕೊಂಡ. ದಕ್ಷಿಣಾಪಥದ ಅರಸರನ್ನು ಸೋಲಿಸಿದರೂ ಅವರನ್ನು ಬಂಧನದಿಂದ ಮುಕ್ತಗೊಳಿಸಿ ಅವರ ರಾಜ್ಯವನ್ನು ಅವರಿಗೆ ಹಿಂದಿರುಗಿಸಿ, ತನ್ಮೂಲಕ ಅವರು ತನ್ನ ಸಾರ್ವಭೌಮತ್ವ ವನ್ನು ಒಪ್ಪಿಕೊಂಡು ವಿಧೇಯರಾಗಿರುವಂತೆ ಮಾಡಿದ. ಇವನ ಶಕ್ತಿಸಾಮರ್ಥ್ಯಗಳನ್ನು ಕಂಡ ನೆರೆಹೊರೆಯ ಅರಸರು ಇವನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಿ ಇವನ ಸ್ನೇಹಕ್ಕಾಗಿ ತಮ್ಮ ಕೈಚಾಚಿದರು.

ಕವಿ ಹರಿಷೇಣ ಅಲಾಹಾಬಾದ್ ಶಾಸನದಲ್ಲಿ ಸಮುದ್ರಗುಪ್ತನ ದಿಗ್ವಿಜಯಕ್ಕೆ ಸಂಬಂಧಿಸಿದ ಅನೇಕ ವಿವರಣೆಗಳನ್ನು ನೀಡಿದ್ದಾನೆ. ಅದರಂತೆ ಇವನು ಆರ್ಯಾವರ್ತದ ರುದ್ರದೇವ, ಮತಿಲ, ನಾಗದತ್ತ, ಚಂದ್ರವರ್ಮ, ಗಣಪತಿನಾಗ, ನಾಗಸೇನ, ಅಚ್ಯುತ, ನಂದಿ ಮತ್ತು ಬಲವರ್ಮ ಎಂಬ ಅರಸರನ್ನು ಸೋಲಿಸಿ ಅವರ ರಾಜ್ಯವನ್ನು ಸ್ವಾಧೀನಪಡಿಸಿಕೊಂಡ. ಈ ಅರಸರು ಯಾರು? ಇವರು ಆಳುತ್ತಿದ್ದ ರಾಜ್ಯಗಳಾವುವು ಎಂಬುದು ತಿಳಿಯದು. ಇವರ ವಂಶ ಮತ್ತು ಇವರು ಆಳುತ್ತಿದ್ದ ರಾಜ್ಯಗಳನ್ನು ಕುರಿತು ಇತಿಹಾಸಕಾರರು ಹಲವು ಊಹೆಗಳನ್ನು ಮಾಡಿದ್ದಾರೆ. ರುದ್ರದೇವ (1ನೆಯ ರುದ್ರಸೇನ–ವಾಕಾಟಕ), ಮತಿಲ (ಉತ್ತರ ಪ್ರದೇಶದ ಬುಲಂದ್ ಶಹರ್), ನಾಗದತ್ತ (ನಾಗದೊರೆ),

ಚಂದ್ರವರ್ಮ (ಪುಷ್ಕರಣ ರಾಜ– ಬಂಗಾಲದ ಬಾಂಕುರ ಜಿಲ್ಲೆ), ಗಣಪತಿ ನಾಗ (ವಿದಿಶಾದ ನಾಗದೊರೆ), ನಾಗಸೇನ (ಪದ್ಮಾವತಿಯನಾಗ ದೊರೆ), ಅಚ್ಯುತ (ಅಹಿಚ್ಛತ್ರದ ರಾಜ), ನಂದಿ (ನಾಗದೊರೆ ಶಿವನಂದಿ) ಮತ್ತು ಬಲವರ್ಮನ್ (ಅಸ್ಸಾಮಿನ ರಾಜ). ಅವು ಹೇಗೇ ಇರಲಿ, ಇವರನ್ನು ಸೋಲಿಸಿದ ಪರಿಣಾಮವಾಗಿ ಸಮುದ್ರಗುಪ್ತ ಉತ್ತರಪ್ರದೇಶ, ಮಧ್ಯಭಾರತ, ಪೂರ್ವದಲ್ಲಿ ಬಂಗಾಲ, ಬಿಹಾರ ಮುಂತಾದ ಪ್ರದೇಶಗಳನ್ನೊಳಗೊಂಡ, ಉತ್ತರ ಭಾರತದ ವಿಸ್ತಾರಪ್ರದೇಶದ ಸಾಮ್ರಾಟನಾದ.

ಅನಂತರ ಸಮುದ್ರಗುಪ್ತ ದಕ್ಷಿಣಾಪಥದ ಕಡೆಗೆ ದಿಗ್ವಿಜಯಕ್ಕಾಗಿ ಹೊರಟ. ಅದಕ್ಕೆ ಮೊದಲು ದಾರಿಯಲ್ಲಿದ್ದ ಎಲ್ಲ ಆಟವಿಕ ರಾಜರನ್ನೂ ತನ್ನ ಅಧೀನರನ್ನಾಗಿ ಮಾಡಿಕೊಂಡ. ಬಹುಶಃ ವಿಂಧ್ಯ ಪರ್ವತದ ಪೂರ್ವಕ್ಕೆ ಬಾಘೇಲಖಂಡ, ರೇವಾ ಮತ್ತು ಛೋಟಾನಾಗಪುರಗಳನ್ನೊಳಗೊಂಡ ಅಡವಿ ಪ್ರದೇಶದಲ್ಲಿ ಈ ರಾಜರು ಆಳುತ್ತಿದ್ದು ಬಹಳ ಕಿರುಕುಳ ನೀಡುತ್ತಿದ್ದಿರಬೇಕು.

ದಕ್ಷಿಣಾಪಥದ ಅರಸರ ವಿಷಯದಲ್ಲಿ ಸಮುದ್ರಗುಪ್ತನದು ಗ್ರಹಣ, ಮೋಕ್ಷ ಮತ್ತು ಅನುಗ್ರಹ ನೀತಿಯಾಗಿತ್ತು. ಮೇಲೆ ಹೇಳಿದಂತೆ ಅವರ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳದೆ, ಅವರನ್ನು ಸೋಲಿಸಿದ ಬಳಿಕ ಬಿಡುಗಡೆ ಮಾಡಿ, ಅವರ ರಾಜ್ಯದಲ್ಲಿ ಅವರನ್ನು ಮನಃ ಸ್ಥಾಪಿಸಿ ಅವರನ್ನು ತನ್ನ ವಿಧೇಯರಾದ ಸಾಮಂತರನ್ನಾಗಿ ಮಾಡಿಕೊಂಡ. ಇದು ಇವನ ರಾಜನೀತಿ ಚತುರತೆಯನ್ನು ಸೂಚಿಸುತ್ತದೆ. ಈ ವಿಷಯವನ್ನು ಪ್ರಸ್ತಾಪಿಸುವಾಗ ಕವಿಗಳು ಸಮುದ್ರಗುಪ್ತ ಸೋಲಿಸಿದ ರಾಜರ ಹೆಸರುಗಳನ್ನೇ ಅಲ್ಲದೆ ಅವರು ಆಳುತ್ತಿದ್ದ ರಾಜ್ಯಗಳ ಹೆಸರುಗಳನ್ನೂ ಸೂಚಿಸಿದ್ದಾರೆ.



ಅವರು ಹನ್ನೆರಡು ಮಂದಿ ಅರಸರು. ಹರಿಷೇಣನ ಶಾಸನದಲ್ಲಿ ಹೇಳಿರುವ ಪ್ರಕಾರ ಅವರ ಹೆಸರು ಮತ್ತು ರಾಜ್ಯಗಳು ಹೀಗಿವೆ; ಕೋಸಲದ ಮಹೇಂದ್ರ, ಮಹಾಕಾಂತಾರದ ವ್ಯಾಘ್ರರಾಜ, ಕೌರಾಲದ ಮಂಟರಾಜ, ಪಿಷ್ಟಿಪುರದ ಮಹೇಂದ್ರ, ಗಿರಿಕೊಟ್ಟೂರಿನ ಸ್ವಾಮಿದತ್ತ, ಏರಂಡಪಲ್ಲಿಯ ದಮನ, ಕಂಚಿಯ ವಿಷ್ಣುಗೋಪ, ಅವಮುಕ್ತದ ನೀಲರಾಜ, ವೆಂಗಿಯ ಹಸ್ತಿವರ್ಮ, ಪಾಲಕ್ಕದ ಉಗ್ರಸೇನ, ದೇವರಾಷ್ಟ್ರದ ಕುಬೇರ ಮತ್ತು ಕೌಸ್ಥಲಪುರದ ಧನಂಜಯ. ಇಲ್ಲಿ ಹೆಸರಿಸಿರುವ ರಾಜ್ಯಗಳಲ್ಲಿ ಮಹಾಕಾಂತಾರ, ಅವಮುಕ್ತ, ಕೌಸ್ಥಲಪುರ ರಾಜ್ಯಗಳು ಯಾವುವು ಎಂಬುದು ಇನ್ನೂ ತಿಳಿದಿಲ್ಲ. ಕೌರಾಳ ಎಂಬುದನ್ನು ಕೇರಲ ಎಂದು ಓದಿ, ಮಂಟರಾಜನನ್ನು ಕೇರಳದ ದೊರೆಯಾಗಿ ಕೆಲವರು ಮಾಡಿದ್ದಾರೆ. ಪಾಲಕ್ಕ ಎಂಬುದು ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಪಾಲಕ್ಕಡ ಎಂದು ಕೆಲವರೂ ಕೇರಳದ ಪಾಲಕ್ಕಾಡು ಎಂದು ಇತರರೂ ಸೂಚಿಸಿದ್ದಾರೆ. ಅಂತೆಯೇ ದೇವರಾಷ್ಟ್ರ ವಿಶಾಖಪಟ್ಟಣದ ಎಲಮಂಚಲಿ ಎಂದು ಕೆಲವರೆಂದರೆ, ಇನ್ನು ಕೆಲವರು ಇದನ್ನು ಮಹಾರಾಷ್ಟ್ರವೆನ್ನುತ್ತಾರೆ. ಏರಂಡಪಲ್ಲಿ ಸಹ ವಿಶಾಖಪಟ್ಟಣ ಜಿಲ್ಲೆಯ ಅದೇ ಹೆಸರಿನ ಗ್ರಾಮ. ಆದರೆ ಇದು ಮಹಾರಾಷ್ಟ್ರದ ಖಾನ್‌ದೇಶ ಜಿಲ್ಲೆಯ ಏರಂಡೋಲ್ ಎಂದ ಕೆಲವು ಇತಿಹಾಸಕಾರರು ವಾದಿಸಿದ್ದಾರೆ. ಇಲ್ಲಿ ಸೂಚಿಸಿರುವ ರಾಜ್ಯಗಳೆಲ್ಲ ಪೂರ್ವತೀರದಲ್ಲಿಯೇ ಇದ್ದ ಪ್ರದೇಶಗಳು ಎನ್ನುವುದಾದಲ್ಲಿ ಸಮುದ್ರಗುಪ್ತ ಕೇವಲ ಪೂರ್ವ ತೀರದ ತುದಿಯವರೆಗೂ ಬಂದು, ಅದೇ ಮಾರ್ಗವಾಗಿ ಹಿಂದಿರುಗಿದನೆಂದು ಹೇಳಬೇಕಾಗುತ್ತದೆ. ಆದರೆ ಇನ್ನು ಕೆಲವರು ಸೂಚಿಸಿರುವಂತೆ ಈ ರಾಜ್ಯಗಳಲ್ಲಿ ಕೆಲವು ಕೇರಳ ಮತ್ತು ಈಗಿನ ಮಹಾರಾಷ್ಟ್ರಗಳಲ್ಲಿಯೂ ಇದ್ದುವು ಎನ್ನುವ ಪಕ್ಷದಲ್ಲಿ ಸಮುದ್ರಗುಪ್ತ ಪೂರ್ವ ತೀರದ ರಾಜ್ಯಗಳಿಂದಾರಂಭಿಸಿ ದಕ್ಷಿಣದ ತುದಿಯಲ್ಲಿದ್ದ ಚೇರರ ರಾಜ್ಯದಲ್ಲಿ ತನ್ನ ಸಾರ್ವಭೌಮತ್ವವನ್ನು ಸ್ಥಿರೀಕರಿಸಿ ಪಶ್ಚಿಮಕ್ಕೆ ತಿರುಗಿ ಮಹಾರಾಷ್ಟ್ರದ ಮೂಲಕ ತನ್ನ ರಾಜಧಾನಿಗೆ ಹಿಂದಿರುಗಿದನೆಂದು ಊಹಿಸಬೇಕಾಗುತ್ತದೆ.

ಇವನ ಈ ದಿಗ್ವಿಜಯದಿಂದ ಭೀತಿಗೊಂಡು, ಸರಹದ್ದಿನ ಸಮತಟ, ಡವಾಕ, ಕಾಮರೂಪ, ನೇಪಾಲ ಮತ್ತು ಕರ್ತೃಪುರದ ಅರಸರು ಶರಣಾದರೆಂದು ಶಾಸನ ಹೇಳುತ್ತದೆ. ಡವಾಕ ಮತ್ತು ಕರ್ತೃಪುರಗಳನ್ನು ಗುರುತಿಸಲಾಗಿಲ್ಲ. ಉಳಿದ ಪ್ರದೇಶಗಳು ಈಗಿನ ಬಂಗಾಲ, ಅಸ್ಸಾಮಿನ ಉತ್ತರಭಾಗ ಮತ್ತು ನೇಪಾಲ ಪ್ರದೇಶಗಳನ್ನೊಳಗೊಂಡಿದ್ದುವು. ಇವಲ್ಲದೆ ಮಾಳವ, ಅರ್ಜುನಾಯನ, ಯೌಧೇಯ, ಮಾದ್ರಕ, ಅಭೀರ, ಪ್ರಾರ್ಜುನ, ಸನಕಾನೀಕ, ಕಾಕ ಮತ್ತು ಖರಪಲಿಕ ಎಂಬ ಜನಾಂಗಗಳ ಅಧಿಪತಿಗಳು ಸಹ ತಮ್ಮ ವಿಧೇಯತೆಯನ್ನು ಸೂಚಿಸಿದರು. ಇವುಗಳಿಂದೆಲ್ಲ ನಮಗೆ ಸ್ಥೂಲವಾಗಿ ಸಮುದ್ರಗುಪ್ತನ ರಾಜ್ಯದ ವೈಶಾಲ್ಯ ತಿಳಿದುಬರುತ್ತದೆ. ಪಶ್ಚಿಮದಲ್ಲಿ ಪಂಜಾಬಿನಿಂದ ಪೂರ್ವದಲ್ಲಿ ಬಂಗಾಲದವರೆಗೂ ಉತ್ತರದ ಹಿಮಾಲಯದಿಂದ ದಕ್ಷಿಣದ ವಿಂಧ್ಯ ಪರ್ವತದವರೆಗೂ ಸ್ಥೂಲವಾಗಿ ಸಕಲ ಉತ್ತರಾಪಥ ಸಮುದ್ರಗುಪ್ತನ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಅಳಿದುಳಿದ ಕುಷಾಣ, ಶಕ, ಮುರುಂಡ ಮುಂತಾದ ಜನಾಂಗಗಳಿಗೆ ಸೇರಿದವರೂ ಸಿಂಹಳದ ಅರಸನೂ ತಮ್ಮ ಕಪ್ಪಕಾಣಿಕೆಗಳನ್ನು ಸಲ್ಲಿಸಿದರು.

ಅಲಾಹಾಬಾದ್ ಶಾಸನದಲ್ಲಿ ಸಮುದ್ರಗುಪ್ತ ಅಶ್ವಮೇಧಯಾಗವನ್ನು ಮಾಡಿದ ಬಗ್ಗೆ ಉಲ್ಲೇಖವಿಲ್ಲ. ಸಮುದ್ರಗುಪ್ತನ ಕೀರ್ತಿ ಭೂಮಿಯನ್ನೆಲ್ಲ ವ್ಯಾಪಿಸಿ ಸ್ವರ್ಗಕ್ಕೂ ಏರಿತು ಎಂದು ಸೂಚಿಸುವ ಶಾಸನಪದ್ಯದ ಆಧಾರದಿಂದ ಈ ಶಾಸನ ಸಮುದ್ರಗುಪ್ತನ ಮರಣಾನಂತರ ಅಸ್ತಿತ್ವಕ್ಕೆ ಬಂತೆಂದು ಒಂದು ಕಾಲದಲ್ಲಿ ಊಹಿಸಲಾಗಿತ್ತು. ಆದರೆ ಅದು ಸರಿಯಲ್ಲವೆಂದು ಈಗ ಸ್ಥಿರಪಟ್ಟಿದೆ. ಸಮುದ್ರಗುಪ್ತ ಅಶ್ವಮೇಧಯಾಗ ಮಾಡಿದ ಕುರುಹಾಗಿ ನಾಣ್ಯವೊಂದನ್ನು ಅಚ್ಚುಹಾಕಿಸಿದ. ಬಹಳ ದಿನಗಳಿಂದ ನಿಂತುಹೋಗಿದ್ದ ಈ ಯಜ್ಞಯಾಗಾದಿಗಳನ್ನು ಪುನರಾರಂಭಿಸಿದ ಕೀರ್ತಿ ಇವನಿಗೂ ಇವನ ಅನಂತರದವರಿಗೂ ಸಲ್ಲುತ್ತದೆಂದು ಗುಪ್ತರ ಶಾಸನದಲ್ಲಿಯೇ ಹೇಳಲಾಗಿದೆ. ಅಂದಮೇಲೆ ಅಲಾಹಾಬಾದ್ ಸ್ತಂಭಶಾಸನ ಸಮುದ್ರಗುಪ್ತನ ದಿಗ್ವಿಜಯದ ಅನಂತರ, ಆದರೆ ಅಶ್ವಮೇಧಯಾಗ ಮಾಡುವ ಮೊದಲು ಕೆತ್ತಿಸಿದ್ದಿರಬೇಕು.

ಈ ಶಾಸನವನ್ನು ಕಾವ್ಯವೆಂದು ವರ್ಣಿಸಲಾಗಿದೆ. ಇದರ ಕರ್ತೃ ಮಹಾದಂಡ ನಾಯಕ ಧ್ರುವಭೂತಿಯ ಮಗ ಸಂಧಿವಿಗ್ರಹಿ ಕುಮಾರಾಮಾತ್ಯ, ಮಹಾದಂಡನಾಯಕ ಹರಿಷೇಣ. ಸಮುದ್ರಗುಪ್ತ ಸ್ವತಃ ಅನೇಕ ಕಾವ್ಯಗಳನ್ನು ರಚಿಸುವುದರ ಮೂಲಕ ಕವಿರಾಜನೆಂಬ ಪ್ರಶಸ್ತಿಗೆ ಅರ್ಹನಾಗಿದ್ದನೆಂದೂ ಸಂಗೀತಶಾಸ್ತ್ರದಲ್ಲಿ ತುಂಬುರುರನ್ನು ಮೀರಿಸಿದ್ದನೆಂದೂ ಶಾಸನದಲ್ಲಿ ಹೇಳಿದೆ. ಇವನ ಯಾವ ಕಾವ್ಯಗಳು ಲಭ್ಯವಾಗಿಲ್ಲ. ಆದರೆ ಇವನು ಸಂಗೀತ ಶಾಸ್ತ್ರಜ್ಞನೆಂಬ ವಿಷಯವನ್ನು ಅವನು ಅಚ್ಚು ಹಾಕಿಸಿದ ಕೆಲವು ನಾಣ್ಯಗಳು ಸಮರ್ಥಿಸುತ್ತವೆ. ಸಮುದ್ರಗುಪ್ತ ತಾನೇ ವೀಣೆಯನ್ನು ನುಡಿಸುತ್ತಿರುವಂತೆ ಈ ನಾಣ್ಯಗಳಲ್ಲಿ ಚಿತ್ರಿಸಲಾಗಿದೆ.

ಸಮುದ್ರಗುಪ್ತನನ್ನು ಕೆಲವು ಇತಿಹಾಸಕಾರರು ಭಾರತದ ನೆಪೋಲಿಯನ್ ಎಂದು ಕರೆದಿದ್ದಾರೆ. ಆದರೆ ಈ ಹೋಲಿಕೆ ಸಮಂಜಸವಾಗಿಲ್ಲ. ನೆಪೋಲಿಯನನಿಗೆ ಅತೀವವಾದ ರಾಜ್ಯದಾಹವಿತ್ತು, ತನ್ನ ಹಿರಿಮೆಯಲ್ಲಿ ಬಹಳವಾದ ನಂಬಿಕೆಯಿತ್ತು. ಆದರೆ ಸಮುದ್ರಗುಪ್ತನ ಕೈಗೊಂಡ ದಿಗ್ವಿಜಯ ಯಾತ್ರೆಯನ್ನು ಗಮನಿಸಿದಾಗ, ಅದರಲ್ಲಿಯೂ ಅವನು ದಕ್ಷಿಣಾಪಥದ ಅರಸುಗಳ ವಿಷಯದಲ್ಲಿ ಅನುಸರಿಸಿದ ನೀತಿಯನ್ನು ಕಂಡಾಗ ಅವನಿಗೆ ರಾಜ್ಯದಾಹವಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಸಮುದ್ರಗುಪ್ತ ಸು. 375ರ ವರೆಗೂ ಆಳಿದ. ಗುಪ್ತ ಶಕೆಯನ್ನು 1ನೆಯ ಚಂದ್ರಗುಪ್ತನ ಆಳ್ವಿಕೆಯಿಂದ ಗಣಿಸಿದಲ್ಲಿ ಸಮುದ್ರಗುಪ್ತನ ಬಹುಶಃ 335ರ ವೇಳೆಗೆ ಪಟ್ಟಕ್ಕೆ ಬಂದನೆಂದು ಗೊತ್ತಾಗುತ್ತದೆ. ಎಂದರೆ ಇವನು ಸುಮಾರು 35–40 ವರ್ಷಗಳ ಕಾಲ ಆಳಿದ.

ಸಮುದ್ರಗುಪ್ತನ ಅನಂತರ ಇಮ್ಮಡಿ ಚಂದ್ರಗುಪ್ತ (375–415) ಪಟ್ಟಕ್ಕೆ ಬಂದ. ಇವನಿಗೆ ರಾಮಗುಪ್ತನೆಂಬ ಹಿರಿಯ ಸಹೋದರನಿದ್ದನೆಂದೂ ಸಮುದ್ರಗುಪ್ತನ ಅನಂತರ ಅವನೇ ಒಂದೆರಡು ವರ್ಷ ಆಳಿದನೆಂದು ಆದರೆ ಅವನ ಕಾಲದಲ್ಲಿ ಸಾಮ್ರಾಜ್ಯ ಶಕರ ಧಾಳಿಗೆ ತುತ್ತಾಗಿ ಅವನು ಸೋಲನ್ನು ಅನುಭವಿಸಬೇಕಾಗಿ ಬಂದಾಗ ಅವನಿಗಿಂತ ಹೆಚ್ಚು ದಕ್ಷನೂ ಪರಾಕ್ರಮಶಾಲಿಯೂ ಅವನಿಗಿಂತ ಕಿರಿಯನೂ ಆದ ಚಂದ್ರಗುಪ್ತ ದೇಶದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡು ಶಕರನ್ನು ಹೊರದೂಡಿದನೆಂದೂ ಕೆಲವರು ಇತಿಹಾಸಕಾರರು ಹೇಳಿದ್ದಾರೆ. ರಾಮಗುಪ್ತನೆಂಬ ಅರಸನ ನಾಣ್ಯಗಳು ದೊರೆತಿರುವುದೂ ವಿಶಾಖದತ್ತ ಬರೆದುದೆನ್ನಲಾದ ದೇವೀಚಂದ್ರಗುಪ್ತ ಎಂಬ ನಾಟಕದ ಕಥೆಯೂ ಈ ಊಹೆಗೆ ಪ್ರಮುಖ ಆಧಾರಗಳಾಗಿವೆ. ಇತ್ತೀಚೆಗೆ ರಾಮಗುಪ್ತನ ಎರಡು ಶಾಸನಗಳು ಲಭ್ಯವಾಗಿವೆ. ಈ ಶಾಸನಗಳಿಂದ ಅವನು ಗುಪ್ತವಂಶಕ್ಕೆ ಸೇರಿದವನೆಂಬುದಾಗಿ ಹೇಳಲಾಗಿದೆ. ರಾಮಗುಪ್ತನ ಆಳ್ವಿಕೆಯ ಬಗೆಗೆ ಈಗಲೂ ಸಂದೇಹವಿದ್ದೇ ಇದೆಯಾದರೂ ಇವನ ಅಸ್ತಿತ್ವವಂತೂ ಖಚಿತವಾಗಿದೆ.

ಎರಡನೆಯ ಚಂದ್ರಗುಪ್ತನ ಆಳ್ವಿಕೆಯ ಕಾಲದಲ್ಲಿ ಗುಪ್ತರ ಸಾಮ್ರಾಜ್ಯ ಔನ್ನತ್ಯಕ್ಕೆ ಏರಿತು. ಇವನ ತಾಯಿ ದತ್ತಾದೇವಿ. ಇವನಿಗೆ ದೇವಗುಪ್ತ, ದೇವರಾಜ, ದೇವಶ್ರೀ ಎಂಬ ಬಿರುದುಗಳು ಇದ್ದುವು. ಇವನಿಗೆ ಇಬ್ಬರು ಪತ್ನಿಯರು; ಧ್ರುವದೇವಿ ಮತ್ತು ಕುಬೇರನಾಗ. 375ರ ವೇಳೆಗೆ ರಾಜ್ಯವಾಳತೊಡಗಿದ ಈತನೂ ಸುಮಾರು 40 ವರ್ಷಗಳಷ್ಟು ಕಾಲ ಆಳಿದ.

ಇವನ ತಂದೆಯ ಕಾಲದಲ್ಲಿ ಶಕ ಮತ್ತು ಕುಷಾಣ ವಂಶಗಳಿಗೆ ಸೇರಿದ ಕೆಲವು ಸಾಮಂತರು ಸಮುದ್ರಗುಪ್ತನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಿದರೆಂದು ಮೇಲೆ ಹೇಳಿದೆ. ಆ ವಂಶದ ಅರಸರನ್ನು ಸಂಪೂರ್ಣವಾಗಿ ಸೋಲಿಸಿ, ಹೊಡೆದೋಡಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ತಂದೆಯಂತೆಯೇ ಇವನೂ ಕದನಗಳಲ್ಲಿ ಚತುರ. ತಂದೆಯಿಂದ ಪಡೆದ ರಾಜ್ಯವನ್ನು ಇವನು ಮತ್ತಷ್ಟು ವಿಸ್ತಾರಗೊಳಿಸಿ, ತನ್ನ ಸಾಮ್ರಾಜ್ಯದಲ್ಲಿ ಸುಭದ್ರವಾದ ಆಡಳಿತವಿರುವಂತೆ ಮಾಡಿದ. ಗುಜರಾತ್ ಮತ್ತು ಕಾಠಿಯಾವಾಡದ ಶಕ ಅರಸು ಇವನ ಮುಖ್ಯ ಶತ್ರು. ಅವನನ್ನು ಸೋಲಿಸಿ ಅವನ ರಾಜ್ಯವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಇವನು ಪ್ರಾರಂಭದಿಂದಲೂ ವಿಸ್ತೃತವಾದ ಯೋಜನೆಯನ್ನು ಹಾಕಿಕೊಂಡ. ಅದಕ್ಕೆಂದೇ ಇವನು ಇತರ ಹಿಂದೂ ಅರಸುಮನೆತನಗಳೊಡನೆ ರಕ್ತಸಂಬಂಧ ಬೆಳೆಸಿದ. ಇವನ ಪತ್ನಿಯಾದ ಕುಬೇರನಾಗಳು ನಾಗವಂಶಕ್ಕೆ ಸೇರಿದವಳು. ಇವಳಿಂದ ಇವನಿಗೆ ಪ್ರಭಾವತೀಗುಪ್ತಳೆಂಬ ಮಗಳು ಹುಟ್ಟಿದಳು. ಇವಳನ್ನು ವಾಕಾಟಕ ವಂಶದ ಇಮ್ಮಡಿ ರುದ್ರಸೇನನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಭೌಗೋಳಿಕವಾಗಿ ವಾಕಾಟಕರ ಮತ್ತು ನಾಗರ ರಾಜ್ಯಗಳು ಇವನ ರಾಜ್ಯದ ಮೇರೆಗಳಾಗಿದ್ದುವು. ಶಕರೊಡನೆ ಇವನು ಕಾದುವಾಗ ವಾಕಾಟಕರ ಬೆಂಬಲವಿಲ್ಲದಿದ್ದಲ್ಲಿ ನಾಗರು ಸುಲಭವಾಗಿ ಇವನ ರಾಜ್ಯದ ಮೇಲೆ ನುಗ್ಗಬಹುದಾಗಿತ್ತು. ಎಂತಲೇ ವಾಕಾಟಕರೊಡನೆ ಸ್ನೇಹ ಇವನಿಗೆ ಬಹಳವಾಗಿ ಬೇಕಾಗಿತ್ತು.

ಇವನ ಅಳಿಯನಾದ ರುದ್ರಸೇನ ಬಹುಕಾಲ ಆಳದೆ ಮರಣ ಹೊಂದಿದ. ಅವನಿಗೆ ದಿವಾಕರಸೇನ ಮತ್ತು ದಾಮೋದರಸೇನ ಎಂಬ ಇಬ್ಬರು ಮಕ್ಕಳಿದ್ದರು. ಅವರು ಇನ್ನೂ ಕಿರಿಯರಾಗಿದ್ದ ಕಾರಣ ಚಂದ್ರಗುಪ್ತನ ಸಲಹೆಯ ಮೇರೆಗೆ ಪ್ರಭಾಪತೀಗುಪ್ತಳು ತನ್ನ ಮಕ್ಕಳ ಹೆಸರಿನಲ್ಲಿ ತಾನೇ ರಾಜ್ಯಭಾರ ಮಾಡತೊಡಗಿದಳು. ಈ ಸಂದರ್ಭದಲ್ಲಿ ವಾಕಾಟಕರ ರಾಜ್ಯವನ್ನು ಚಂದ್ರಗುಪ್ತ ಸ್ವಾಧೀನಪಡಿಸಿಕೊಳ್ಳಬಹುದಿತ್ತು. ಆದರೆ ಅದರಿಂದ ಶಕರನ್ನು ಹೊಡೆದಟ್ಟುವ ಅವನ ಮನೋರಥ ಈಡೇರುತ್ತಿರಲಿಲ್ಲ. ಕರ್ನಾಟಕದಲ್ಲಿಯ ಕದಂಬ ವಂಶದ ಕಾಕುತ್ಸವರ್ಮ ತನ್ನ ಹೆಣ್ಣು ಮಕ್ಕಳನ್ನು ಗುಪ್ತರಿಗೂ ಇತರ ಅರಸರಿಗೂ ಮದುವೆ ಮಾಡಿಕೊಟ್ಟಿದ್ದುದಾಗಿ ಅವನ ತಾಳಗುಂದ ಶಾಸನದಲ್ಲಿ ಹೇಳಿದೆ. ಈ ರಾಜಕುಮಾರಿ ಇಮ್ಮಡಿ ಚಂದ್ರಗುಪ್ತನನ್ನೋ ಅವನ ಮಗನನ್ನೋ ಬಹುಶಃ ಮದುವೆಯಾಗಿರಬೇಕು. ಇಷ್ಟೆಲ್ಲ ಪೂರ್ವ ಸಿದ್ಧತೆಗಳ ಬಳಿಕ ಚಂದ್ರಗುಪ್ತ

ಶಕರ ಮೇಲೆ ದಂಡೆತ್ತಿ ಹೋದ. ಆಗ ಇವನ ಉದ್ದೇಶ ಈಡೇರಿ ಮಾಳವ, ಗುಜರಾತ್, ಕಾಠಿಯಾವಾಡ ಪ್ರದೇಶಗಳು ಇವನ ಸ್ವಾಧೀನಕ್ಕೆ ಬಂದುವು. ಈತನಿಗೆ ಶಕಾರಿ ಎಂಬ ಬಿರುದಿರುವುದು ಗಮನಾರ್ಹ.

ದೆಹಲಿಯ ಬಳಿಯ ಮೆಹರೋಲಿ ಗ್ರಾಮದಲ್ಲಿರುವ ಕಬ್ಬಿಣದ ಸ್ತಂಭಶಾಸನದಲ್ಲಿ ಚಂದ್ರನೆಂಬ ಅರಸನೊಬ್ಬ ಸಿಂಧೂ ನದಿಯನ್ನು ದಾಟಿ ವಾಲ್ಹಿಕ ದೇಶವನ್ನು ಸ್ವಾಧೀನಪಡಿಸಿಕೊಂಡನೆಂದೂ ವಂಗ ದೇಶದಲ್ಲಿಯ ಶತ್ರುಗಳನ್ನು ಸೋಲಿಸಿದನೆಂದೂ ಹೇಳಲಾಗಿದೆ. ವಾಲ್ಹಿಕ ಎಂಬುದು ಬ್ಯಾಕ್ಟ್ರಿಯ ದೇಶ. ವಂಗ ಪೂರ್ವ ಬಂಗಾಲ. ಇದನ್ನೇ ಸಮತಟ ಎಂದು ಕರೆಯಲಾಗಿತ್ತು. ಇಲ್ಲಿಯ ಅರಸರು ಸಮುದ್ರಗುಪ್ತನಿಗೆ ಕಪ್ಪವನ್ನು ಕೊಡುತ್ತಿದ್ದರೆಂದು ಹಿಂದೆಯೇ ಹೇಳಿದೆ. ಮೆಹರೋಲಿ ಶಾಸನದ ಅರಸನಾದ ಚಂದ್ರ ಯಾರು ಎಂಬ ಬಗೆಗೆ ವಿವಾದಗಳಿವೆ. ಆದರೆ ಇವನು ಗುಪ್ತವಂಶದ ಇಮ್ಮಡಿ ಚಂದ್ರಗುಪ್ತನೆಂದು ಈಗ ಸಾಮಾನ್ಯವಾಗಿ ಒಪ್ಪಲಾಗಿದೆ. ಇದು ನಿಜವಿದ್ದಲ್ಲಿ ಸಮಗ್ರ ಉತ್ತರ ಭಾರತ ಚಂದ್ರಗುಪ್ತನ ಸ್ವಾಧೀನಕ್ಕೆ ಬಂದಿತೆಂಬುದರಲ್ಲಿ ಸಂದೇಹವಿಲ್ಲ.

ಗುಪ್ತ ಸಾಮ್ರಾಜ್ಯಕ್ಕೆ ಭದ್ರವಾದ ಅಡಿಪಾಯ ಹಾಕಿದವನು ಸಮುದ್ರಗುಪ್ತನಾದರೆ, ಆ ತಳಹದಿಯ ಮೇಲೆ ಭವ್ಯವಾದ ಕಟ್ಟಡ ಕಟ್ಟಿದವನು ಇಮ್ಮಡಿ ಚಂದ್ರಗುಪ್ತ. ಇವನ ಕಾಲದಲ್ಲಿ ಪಾಟಲೀಪುತ್ರವೇ ರಾಜಧಾನಿಯಾಗಿದ್ದರೂ ಉಜ್ಜಯಿನಿಯೂ ಅಷ್ಟೇ ಪ್ರಾಮುಖ್ಯ ಪಡೆಯಿತು. ವಿಕ್ರಮಾದಿತ್ಯನೆಂದು ಬಿರುದಾಂಕಿತನಾದ ಈ ಚಂದ್ರಗುಪ್ತನೇ ಪೌರಾಣಿಕ ಖ್ಯಾತಿಯನ್ನು ಪಡೆದ ಉಜ್ಜಯಿನಿಯ ಅರಸನಾದ ವಿಕ್ರಮಾದಿತ್ಯನೆಂದು ಹೇಳಲಾಗಿದೆ. ಚಂದ್ರಗುಪ್ತನ ಶಾಸನಗಳಲ್ಲಿ ಬಹುಭಾಗ ದೊರೆತಿರುವುದು ಮಾಳವ ದೇಶದಲ್ಲಿ. ಬಹುಶಃ ಉಜ್ಜಯಿನಿಯಲ್ಲಿಯೇ ಈ ಅರಸ ಹೆಚ್ಚು ಕಾಲ ವಾಸಿಸಿರಬಹುದು. ಅಯೋಧ್ಯೆ ಸಹ ಇವನ ಮತ್ತೊಂದು ನೆಲೆವೀಡಾಗಿತ್ತು. ತಂದೆಯಿಂದ ಪಡೆದ ರಾಜ್ಯವನ್ನು ವಿಸ್ತರಿಸಿದ ಶ್ರೇಯಸ್ಸು ಈತನಿಗೆ ಸಲ್ಲುತ್ತದೆ. ಶಕರನ್ನು ಹಿಮ್ಮೆಟ್ಟಿಸಿ ಶಕಾರಿ ಎಂಬ ಅನ್ವರ್ಥ ನಾಮವನ್ನು ಪಡೆದ ಇಮ್ಮಡಿ ಚಂದ್ರಗುಪ್ತನ ರಾಜ್ಯದಲ್ಲಿ ಶಾಂತಿ, ಸುಭಿಕ್ಷೆ ನೆಲಸಿದ್ದುವು. ಎಂತಲೇ ಈತ ಸಾಹಿತಿಗಳಿಗೂ ಕವಿಗಳಿಗೂ ಕಲಾಕಾರರಿಗೂ ಆಶ್ರಯದಾತನಾಗಿದ್ದ ಇಮ್ಮಡಿ ಚಂದ್ರಗುಪ್ತ 375ರಿಂದ 415ರವರಗೆ ಸುಮಾರು 40 ವರ್ಷಗಳ ಕಾಲ ಆಳಿದ.

ಚಂದ್ರಗುಪ್ತನ ಬಳಿಕ ಅವನ ಮಗನಾದ ಒಂದನೆಯ ಕುಮಾರಗುಪ್ತ (415–55) ಪಟ್ಟಕ್ಕೆ ಬಂದ. ಈತ ಪಟ್ಟಮಹಿಷಿಯಾದ ಧ್ರುವದೇವಿಯ ಮಗ. ಸುಮಾರು 415ರಲ್ಲಿ ಪಟ್ಟಕ್ಕೆ ಬಂದ ಈತ 40 ವರ್ಷಗಳ ಕಾಲ, ಸುಮಾರು 455ರವರಗೆ, ರಾಜ್ಯವಾಳಿದ. ಕುಮಾರಗುಪ್ತನದು ಶಾಂತಿ ಸುಭಿಕ್ಷೆಗಳ ಕಾಲ. ದೀರ್ಘಕಾಲ ಆಳಿದ ಈತ ಪೂರ್ವಜರಿಂದ ಪಡೆದ ವಿಸ್ತಾರವಾದ ರಾಜ್ಯವನ್ನು ಕಾಪಾಡಿಕೊಂಡು ಬಂದ. ಇದಕ್ಕೆ ಇವನ ದಕ್ಷ ಆಡಳಿತವೂ ಕಾರಣ. ಮಹೇಂದ್ರಾದಿತ್ಯನೆಂಬ ಬಿರುದು ಹೊಂದಿದ್ದ ಈತ ಅಶ್ವಮೇಧಯಾಗ ಮಾಡಿದ. ಸ್ವಾಮಿ ಕಾರ್ತಿಕೇಯನ ಚಿತ್ರವುಳ್ಳ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದ. ಬೆಳ್ಳಿಯ ನಾಣ್ಯಗಳ ಮೇಲೆ ಗರುಡನ ಚಿತ್ರಕ್ಕೆ ಬದಲು ನವಿಲಿನ ಚಿತ್ರವನ್ನು ಅಚ್ಚುಹಾಕಿಸಿದ. ಇವನ ಅಧೀನದಲ್ಲಿದ್ದ ಅನೇಕ ಮಾಂಡಲಿಕರ ಹಾಗೂ ಇತರ ಅಧಿಕಾರಿಗಳ ವಿವರಗಳು ತಿಳಿದಿವೆ.

ಆದರೆ ಇವನ ರಾಜ್ಯಭಾರಕಾಲದ ಕೊನೆಯ ವರ್ಷಗಳಲ್ಲಿ ರಾಜ್ಯಕ್ಕೆ ಶತ್ರುಬಾಧೆ ಯಿಂದ ಗಂಡಾಂತರವೊದಗಿತು. ಆ ಶತ್ರುಗಳು ಯಾರು ಎಂಬುದನ್ನು ಕುರಿತು ವಿವಾದಗಳಿವೆ. ಫ್ಲೀಟರು ಪುಷ್ಯಮಿತ್ರನೆಂದು ಅಭಿಪ್ರಾಯ ಪಟ್ಟಿದ್ದಾರೆ. ಅವರು ಯಾರೇ ಆಗಿದ್ದಿರಲಿ, ಅವರಿಂದ ರಾಜ್ಯಕ್ಕೆ ತೀವ್ರವಾದ ಹಾನಿಯುಂಟಾಯಿತು. ಆದರೂ ಇಂಥ ಸಂದರ್ಭದಲ್ಲಿ ರಾಜಕುಮಾರ ಸ್ಕಂದಗುಪ್ತ ಶತ್ರುವನ್ನು ಧೈರ್ಯದಿಂದ ಎದುರಿಸಿ ಹಿಮ್ಮೆಟ್ಟಿಸಿದ. ಗುಪ್ತ ಸಾಮ್ರಾಜ್ಯವನ್ನು ರಕ್ಷಿಸುವುದರಲ್ಲಿ ಸ್ಕಂದಗುಪ್ತ ವಿಶಿಷ್ಟ ಪಾತ್ರವಹಿಸಿದ. ಸ್ಕಂದಗುಪ್ತ ಶತ್ರುಗಳನ್ನೋಡಿಸುತ್ತಿದ್ದಾಗಲೇ ಕುಮಾರಗುಪ್ತ ಮರಣಹೊಂದಿದ.

ಕುಮಾರಗುಪ್ತನ ಅನಂತರ ಸ್ಕಂದಗುಪ್ತ (455–67) ರಲ್ಲಿ ಪಟ್ಟಕ್ಕೆ ಬಂದ. ಸ್ಕಂದಗುಪ್ತನ ಶಾಸನಗಳಲ್ಲಿ ತಾತ, ಮುತ್ತಾತನನ್ನು ನೆನೆಯುವಾಗ ಅವರ ಪಟ್ಟದರಸಿಯರ ಉಲ್ಲೇಖವೂ ಇದೆ. ಆದರೆ ಈತನ ತಾಯಿಯ ಉಲ್ಲೇಖವೇ ಇಲ್ಲ. ಅಲ್ಲದೆ ಸ್ಕಂದಗುಪ್ತನ ಅನಂತರ ಬಂದ ಅರಸರ ಶಾಸನಗಳಲ್ಲಿರುವ ಗುಪ್ತರ ವಂಶಾವಳಿಯಲ್ಲಿ ಸ್ಕಂದಗುಪ್ತನ ಹೆಸರೇ ಇಲ್ಲದಿರುವುದು ಆಶ್ಚರ್ಯಕರವಾಗಿದೆ. ಇವುಗಳನ್ನು ಗಮನಿಸಿ ಕೆಲವು ವಿದ್ವಾಂಸರು ಸ್ಕಂದಗುಪ್ತ ಕುಮಾರಗುಪ್ತನ ಪಟ್ಟದ ಮಗನಾಗಿರಲಿಕ್ಕಿಲ್ಲವೆಂದೂ ಆತ ಸಿಂಹಾಸನವನ್ನೇರುವ ಮೊದಲು ತನ್ನ ಪ್ರತಿಸ್ಪರ್ಧಿಗಳೊಡನೆ ಹೋರಾಡಬೇಕಾಯಿತೆಂದೂ ಊಹಿಸಿದ್ದಾರೆ. ಶತ್ರುಗಳನ್ನು ಹಿಮ್ಮೆಟ್ಟಿಸುವ ಸಲುವಾಗಿ ಇವನು ರಣರಂಗದಲ್ಲಿದ್ದಾಗ ಇವನ ಮಲತಾಯಿಯ ಮಗನಾದ ಪುರುಗುಪ್ತ ಸಿಂಹಾಸನವನ್ನೇರಿದನೆಂದೂ ಆದರೆ ಅತಿ ಶೀಘ್ರದಲ್ಲೇ ಸ್ಕಂದಗುಪ್ತ ಇವನನ್ನು ಸೋಲಿಸಿ ಪಟ್ಟಕ್ಕೆ ಬಂದನೆಂದೂ ಊಹಿಸಲಾಗಿದೆ. ಇದರಿಂದ ಸ್ಕಂದಗುಪ್ತನ ಆಳ್ವಿಕೆ ವಿಪತ್ತುಗಳಿಂದ ಕೂಡಿತ್ತೆಂದು ಸ್ಪಷ್ಟವಾಗುತ್ತದೆ. ಶತ್ರುಗಳ ಬಾಧೆಯಿಂದ ಸ್ಕಂದಗುಪ್ತನಿಗೆ ಶಾಂತಿಯಿರದೆ ಹೋಯಿತು. ಈ ಶತ್ರುಗಳಾದರೂ ಯಾರೆಂದು ತಿಳಿಯದು. ಅವರನ್ನು ಮ್ಲೇಂಛರೆಂದು ವರ್ಣಿಸಲಾಗಿದೆ.

ಆದರೆ ಎಲ್ಲಕ್ಕಿಂತ ಮಿಗಿಲಾಗಿ, ಅನಾಗರಿಕರಾದ ಹೂಣರೊಡನೆ ಸೆಣಸಾಡಬೇಕಾಗಿ ಬಂದುದು ಸ್ಕಂದಗುಪ್ತನ ದುರದೃಷ್ಟವಾಗಿತ್ತು. ಬಿಳಿಯ ಹೂಣರು ಅಥವಾ ಎಫ್ಥಲೈಟ್ಸ್ ಎನಿಸಿದ ಇವರು 5ನೆಯ ಶತಮಾನದ ಮಧ್ಯಭಾಗದಲ್ಲಿ ಆಕ್ಸಸ್ ಕೊಳ್ಳದಿಂದ ಇಳಿದು ಪರ್ಷಿಯ ಹಿಂದೂಸ್ತಾನಗಳ ಮೇಲೆ ಧಾಳಿ ಮಾಡಿದರು. ಗಾಂಧಾರವನ್ನು ಆಕ್ರಮಿಸಿದ ಇವರು ಅಲ್ಲಿಂದ ಪೂರ್ವಾಭಿಮುಖವಾಗಿ ಮುಂದುವರಿದು ಗುಪ್ತಸಾಮ್ರಾಜ್ಯದ ಮೇಲೆರಗಿದರು. ಇವರ ಧಾಳಿ ರಾಜ್ಯದಲ್ಲಿ ಕೋಲಾಹಲವನ್ನುಂಟು ಮಾಡಿ, ರಾಜ್ಯದ ಆರ್ಥಿಕ ಸ್ಥಿತಿಯನ್ನು ಹದಗೆಡಿಸಿತು. ಸ್ಕಂದಗುಪ್ತನ ಬಂಗಾರದ ನಾಣ್ಯಗಳು ಅತಿ ವಿರಳವೂ ಅವುಗಳ ಚಿನ್ನದ ಪರಿಶುದ್ಧತೆ ಕಡಿಮೆಯೂ ಆಗಿರುವುದು ಆಗಿನ ನಿರಂತರ ಯುದ್ಧಗಳು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಎಷ್ಟರಮಟ್ಟಿಗೆ ಹದಗೆಡಿಸಿದ್ದುವು ಎಂಬುದನ್ನು ಸೂಚಿಸುತ್ತದೆ.

ಇಂಥ ವಿಪತ್ಕಾಲದಲ್ಲೂ ಅರಸ ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ ಸದಾ ಸನ್ನದ್ಧನಿದ್ದನೆಂಬುದು ಗಿರ್ನಾರದಲ್ಲಿ ದೊರೆತ ಸ್ಕಂದಗುಪ್ತ ಶಾಸನದಿಂದ ವ್ಯಕ್ತವಾಗುತ್ತದೆ. ಅಲ್ಲಿಯ ಸುದರ್ಶನ ತಟಾಕವನ್ನು ಮೌರ್ಯವಂಶದ ಚಂದ್ರಗುಪ್ತ ಕಟ್ಟಿಸಿದ. ಕ್ಷತ್ರಪ ರುದ್ರದಾಮನ ಕಾಲದಲ್ಲಿ ಆ ಕೆರೆ ಒಡೆದಾಗ, ಅದನ್ನು ಜೀರ್ಣೋದ್ಧಾರ ಮಾಡಿಸಲಾಯಿತೆಂಬುದನ್ನು ಹಿಂದೆಯೇ ಹೇಳಿದೆ. ಇದರ ಏರಿ ಮತ್ತೊಮ್ಮೆ ಸ್ಕಂದಗುಪ್ತನ ಕಾಲದಲ್ಲಿ, ಬಹುಶಃ ಈತನ ಆಳ್ವಿಕೆಯ ಮೊದಲನೆಯ ವರ್ಷದಲ್ಲಿಯೆ, ಮುರಿದುಬಿತ್ತು. ಆಗ ಆ ಪ್ರಾಂತ್ಯದ ಅಧಿಕಾರಿಯಾಗಿದ್ದ ಪರ್ಣದತ್ತನೂ ಆತನ ಮಗನಾದ ಚಕ್ರಪಾಲಿತನೂ ಪುನಃ ಆ ಕೆರೆಯ ದುರಸ್ತಿಗೆ ಸೂಕ್ತ ಏರ್ಪಾಡುಗಳನ್ನು ಮಾಡಿದರು. ಅತಿ ಕ್ಲಿಷ್ಟಕಾಲದಲ್ಲೂ ಧೈರ್ಯಗೆಡದೆ ಶತ್ರುಗಳನ್ನು ಸದೆಬಡಿದು ರಾಜ್ಯವನ್ನು ರಕ್ಷಿಸಿದ ಸ್ಕಂದಗುಪ್ತನ ಆಳ್ವಿಕೆಯದು ಗುಪ್ತರ ಇತಿಹಾಸದಲ್ಲಿ ಒಂದು ಪ್ರಮುಖ ಕಾಲ. ಇವನ ರಾಜ್ಯ ಅರಬ್ಬೀ ಸಮುದ್ರದಿಂದ ಬಂಗಾಲ ಕೊಲ್ಲಿಯವರೆಗಿನ ಇಡಿಯ ಉತ್ತರಾಪಥವನ್ನು ಒಳಗೊಂಡಿತ್ತು. ಒಂದನೆಯ ಚಂದ್ರಗುಪ್ತ ರಾಜ್ಯವಾಳತೊಡಗಿದಂದಿನಿಂದ 150 ವರ್ಷಗಳಿಗೂ ಹೆಚ್ಚು ಕಾಲ ಗುಪ್ತರು ಭಾರತವನ್ನು ಭದ್ರವಾಗಿ ಕಾಪಾಡಿಕೊಂಡರು.

ಸ್ಕಂದಗುಪ್ತನ ತರುವಾಯ ಆಳಿದ ಗುಪ್ತವಂಶದ ಅರಸರ ವಿಷಯ ನಮಗೆ ವಿಶೇಷವಾಗಿ ತಿಳಿದಿಲ್ಲ. ಸ್ಕಂದಗುಪ್ತನ ಬಳಿಕ ಅವನ ಮಲಸಹೋದರನಾದ ಪುರುಗುಪ್ತ ಸ್ವಲ್ಪ ಕಾಲ ರಾಜ್ಯವಾಳಿದ. ಈತನ ತಾಯಿ ಅನಂತಾದೇವಿ. ಅವರ ಮಕ್ಕಳು ಬುಧಗುಪ್ತ ಮತ್ತು ನರಸಿಂಹಗುಪ್ತ. ಇಮ್ಮಡಿ ಕುಮಾರಗುಪ್ತ 474ರಲ್ಲಿ ರಾಜನಾಗಿದ್ದನೆಂದು ಸೂಚಿಸುವ ಆಧಾರಗಳಿವೆ. ಇವನಾರು ಎಂಬುದು ಗೊತ್ತಿಲ್ಲ. ಬಹುಶಃ ಸ್ಕಂದಗುಪ್ತನ ಮಗನೋ ಬುಧಗುಪ್ತನ ಸೋದರನೋ ಆಗಿದ್ದಿರಬೇಕು.

477ರಲ್ಲಿ ಪಟ್ಟಕ್ಕೆ ಬಂದ ಬುಧಗುಪ್ತ 20 ವರ್ಷಗಳ ಕಾಲ ರಾಜ್ಯವಾಳಿದ. ಈತನ ತಾಯಿ ಚಂದ್ರಾದೇವಿ. ಇವನ ಕಾಲದಲ್ಲಿ ಹೊರನೋಟಕ್ಕೆ ಗುಪ್ತ ಸಾಮ್ರಾಜ್ಯ ಸುಭದ್ರವಾಗಿದ್ದಂತೆ ಕಂಡುಬಂದರೂ ಒಳಗಿಂದೊಳಗೇ ಬಿರುಕುಗಳುಂಟಾಗಿದ್ದುವು. ಗುಜರಾತಿನ ಕಾಠಿಯಾವಾಡದಲ್ಲಿ ವಲ್ಲಭಿನಗರವನ್ನು ರಾಜಧಾನಿಯಾಗಿ ಹೊಂದಿದ್ದ ಮೈತ್ರಕವಂಶದ ಅರಸರು, ಬುಂದೇಲಖಂಡದ ಬಳಿ ಪುವ್ರಾಜಕ ವಂಶದ ಹಸ್ತಿನ, ಸಮೀಪದಲ್ಲಿ ಪಾಂಡುವಂಶದ ಉದಯನ, ಮಾಹಿಷ್ಮತಿಯ ಮಹಾರಾಜ ಸುಬಂಧು, ಇವರೆಲ್ಲ ತೋರಿಕೆಗಾಗಿ ಗುಪ್ತವಂಶದ ಅಧೀನದಲ್ಲಿದ್ದಂತಿದ್ದರೂ, ಸ್ವತಂತ್ರವಾದ ರಾಜ್ಯಗಳನ್ನು ಸ್ಥಾಪಿಸುವ ಹವಣಿಕೆಯಲ್ಲಿದ್ದರು. ಕುಮಾರಗುಪ್ತನ ಮರಣಾನಂತರ ರಾಜ್ಯಕ್ಕಾಗಿ ಅರಸರಲ್ಲಿ ನಡೆದ ಪರಸ್ಪರ ವೈಷಮ್ಯಗಳಲ್ಲದೆ, ಮತ್ತೊಮ್ಮೆ ಪರಕೀಯರ ಧಾಳಿಗೆ ಈ ಸಾಮ್ರಾಜ್ಯ ತುತ್ತಾಯಿತು. ಇದು ಗುಪ್ತರಾಜ್ಯದ ಅವನತಿಗೆ ಒಂದು ಕಾರಣವಾಯಿತು.

ವಾಕಾಟಕ ವಂಶದ ನರೇಂದ್ರಸೇನ ಕೋಸಲ ಮತ್ತು ಮಾಳವ ದೇಶಗಳನ್ನು ಈ ವೇಳೆಗೆ ತನ್ನ ಅಧೀನದೊಳಗೆ ತಂದುಕೊಂಡಿದ್ದ. ಇವು ಗುಪ್ತ ಸಾಮ್ರಾಜ್ಯದ ಭಾಗಗಳಾಗಿದ್ದುವು. ನರೇಂದ್ರಸೇನ ಇವುಗಳನ್ನು ಬಹುಶಃ ಬಲಪ್ರಯೋಗ ಮಾಡಿಯೇ ಪಡೆದಿರಬೇಕು.

ಬುಧಗುಪ್ತನ ಅನಂತರ ಇವನ ಸಹೋದರನಾದ ನರಸಿಂಹಗುಪ್ತನೂ ಇವನ ತರುವಾಯ ಇವನ ಮಗನಾದ ಮುಮ್ಮಡಿ ಕುಮಾರಗುಪ್ತನೂ (ವಿಕ್ರಮಾದಿತ್ಯ) ಮೊಮ್ಮಗನಾದ ವಿಷ್ಣುಗುಪ್ತನೂ (ಚಂದ್ರಾದಿತ್ಯ) ಕ್ರಮವಾಗಿ 500 ರಿಂದ 570ರ ಒಂದು ಶಾಸನದಲ್ಲಿ ವೈನ್ಯಗುಪ್ತನೆಂಬ ಅರಸನೂ 510ರ ಶಾಸನದಲ್ಲಿ ಭಾನುಗುಪ್ತನೆಂಬ ಇನ್ನೊಬ್ಬ ಅರಸನೂ ಹೆಸರಿಸಲ್ಪಟ್ಟಿದ್ದಾರೆ. ಇವರಿಬ್ಬರ ನಡುವಣ ಸಂಬಂಧವಾಗಲಿ

ಇವರ ಮತ್ತು ನರಸಿಂಹಗುಪ್ತನ ನಡುವಣ ಸಂಬಂಧವಾಗಲಿ ತಿಳಿಯದು. ಬುಧಗುಪ್ತನ ಅನಂತರ ಗುಪ್ತಮನೆತನದಲ್ಲಿ ಅಂತಃಕಲಹಗಳೇರ್ಪಟ್ಟು ಈ ಮೂವರೂ ತಾವು ಅಧಿಕಾರದಲ್ಲಿದ್ದ ಪ್ರದೇಶಗಳಲ್ಲಿಯೇ ಸ್ವತಂತ್ರವಾಗಿ ಕೆಲಕಾಲ ಆಳಿದಂತೆ ತೋರುತ್ತದೆ. ಇವರಲ್ಲಿ ಭಾನುಗುಪ್ತ ತನ್ನ ಸಾಮಂತನಾದ ಗೋಪರಾಜನೊಡಗೂಡಿ ಏರಾಣದಲ್ಲಿ ನಡೆದ ಕದನದಲ್ಲಿ ಹೋರಾಡಿದನೆಂದು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಆಗ ಧಾಳಿ ಮಾಡಿದ ಹೂಣರ ನಾಯಕ ತೋರಮಾನನೊಡನೆ ಬಹಶಃ ಇವರಿಬ್ಬರೂ ಹೋರಾಡಿರಬಹುದು.

ಇದರಂತೆಯೇ ನರಸಿಂಹಗುಪ್ತನೂ ಹೂಣವಂಶದ ಮಿಹಿರಕುಲನೊಡನೆ ಕಾದಾಡಿ ಅವನನ್ನು ಸೋಲಿಸಿದ. ಈತ ಬಾಲಾದಿತ್ಯನೆಂಬ ಬಿರುದನ್ನು ಪಡೆದಿದ್ದ. ಯುವಾನ್ ಚಾಂಗ್‌ನ ಹೇಳಿಕೆಯನ್ನು ಗಮನಿಸಿದರೆ ನರಸಿಂಹಗುಪ್ತ ಬಾಲಾದಿತ್ಯ ಮೊದಲು ಮಿಹಿರಕುಲನಿಂದ ಸೋಲನ್ನನುಭವಿಸಿ ಅವನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಿದರೂ ಕೊನೆಗೆ ಅವನನ್ನು ಪರಾಭವಗೊಳಿಸಿದನೆಂದು ತೋರುತ್ತದೆ.

ನರಸಿಂಹಗುಪ್ತನೇ ಗುಪ್ತವಂಶದ ಕೊನೆಯ ಅರಸನೆಂದು ಹೇಳಬಹುದು. ಇವನ ಅನಂತರ ಮಗನಾದ ಮುಮ್ಮಡಿ ಕುಮಾರಗುಪ್ತನೂ ಮೊಮ್ಮಗನಾದ ವಿಷ್ಣುಗುಪ್ತನೂ 535ರಿಂದ 570ರ ವರೆಗೆ ಕ್ರಮವಾಗಿ ಆಳಿದರು. ಆ ವೇಳೆಗಾಗಲೇ ಹೂಣರ ಧಾಳಿಯಿಂದ ಅಂತಃಕಲಹಗಳಿಂದ ಜರ್ಝರಿತವಾಗಿದ್ದ ಗುಪ್ತ ಸಾಮ್ರಾಜ್ಯ ಸು. 570ರ ವೇಳೆಗೆ ಅಸ್ತಂಗತವಾಯಿತು.

**ಗುಪ್ತರ ವಂಶಾವಳಿ**

ಮಹಾರಾಜ ಶ್ರೀಗುಪ್ತ
|
ಮಹಾರಾಜ ಘಟೋತ್ಕಚಗುಪ್ತ
|
ಚಂದ್ರಗುಪ್ತ I (ಹೆಂಡತಿ ಕುಮಾರದೇವಿ) (ಸು.320–35)
- ಕಾಚಗುಪ್ತ(?)
- ಸಮುದ್ರಗುಪ್ತ (ಹೆಂಡತಿ: ದತ್ತಾದೇವಿ) (335–75)
  - ರಾಮಗುಪ್ತ
  - ಚಂದ್ರಗುಪ್ತ II (ಹೆಂಡತಿಯರು: ಧ್ರುವದೇವಿ ಮತ್ತು ಕುಬೇರನಾಗ)(375–415)
    - ಕುಮಾರಗುಪ್ತ (415–55) (ಹೆಂಡತಿಯರು: ಅನಂತಾದೇವಿ ಮತ್ತು ದೇವಕಿ)
      - ಸ್ಕಂದಗುಪ್ತ (ಸು.455–67)
        - ಕುಮಾರಗುಪ್ತ II (473–76)
      - ಪುರುಷಗುಪ್ತ (ಸು.467–72)
        - ಬುಂಧಗುಪ್ತ (477–97)
        - ನರಸಿಂಹಗುಪ್ತ (472–73)
          - ಕುಮಾರಗುಪ್ತ III (473–500)
            - ವಿಷ್ಣುಗುಪ್ತ

ವೈನ್ಯಗುಪ್ತ ಮತ್ತು ಭಾನುಗುಪ್ತರೆಂಬ ಇನ್ನಿಬ್ಬರು ಅರಸರು ಆಳಿದರೆನ್ನಲು ಅವರ ಶಾಸನಗಳಿವೆ. ಆದರೆ ಮೂಲಮನೆತನದೊಡನೆ ಅವರ ಸಂಬಂಧ ತಿಳಿಯದು.

(ಜಿ.ಬಿ.ಆರ್.)

**ಗುಪ್ತಲೇಖ ಶಾಸ್ತ್ರ :** ರಹಸ್ಯ ಸಮಾಚಾರಗಳ ರಚನೆ ಮತ್ತು ರವಾನೆಯಲ್ಲಿ ಬಳಸುವ ವಿಧಾನಗಳ ಅಧ್ಯಯನ (ಕ್ರಿಪ್ಟಾಲಜಿ). ನಾವು ಕಳಿಸಬೇಕೆಂದಿರುವ ಸಂದೇಶ ಉದ್ದಿಷ್ಟ ವ್ಯಕ್ತಿಯ ಹೊರತು ಬೇರೆ ಯಾರಿಗೂ ದೊರೆಯಬಾರದು ಮತ್ತು ಅರ್ಥವಾಗ ಬಾರದು ಎನ್ನುವುದು ಇಲ್ಲಿನ ಉದ್ದೇಶ. ಆದ್ದರಿಂದ ಗುಪ್ತ ಲೇಖಶಾಸ್ತ್ರದಲ್ಲಿ ಮೂರು ಪ್ರಧಾನ ಹಂತಗಳನ್ನು ಗುರುತಿಸಬಹುದು : 1) ಸಹಜ ಭಾಷೆಯಲ್ಲಿರುವ ಮಾಹಿತಿಯನ್ನು ಗುಪ್ತ ಭಾಷೆಗೆ ಪರಿವರ್ತಿಸುವುದು. 2) ಗುಪ್ತಭಾಷೆಯನ್ನು ಗುರಿಗೆ ಪ್ರೇಷಿಸುವುದು. 3) ಗುಪ್ತಭಾಷೆಯಲ್ಲಿರುವ ಮಾಹಿತಿಯನ್ನು ಸಹಜ ಭಾಷೆಗೆ ಪರಿವರ್ತಿಸುವುದು.

ಎರಡನೆಯ ಹಂತ ಮುಖ್ಯವಾಗಿ ಯಂತ್ರ ಮತ್ತು ತಂತ್ರ ವಿಜ್ಞಾನಗಳಿಗೆ ಸಂಬಂಧಿಸಿದ್ದಾದ್ದರಿಂದ ಪ್ರಸಕ್ತ ಲೇಖನದಲ್ಲಿ ಅದನ್ನು ವ್ಯಾಪಕವಾಗಿ ಚರ್ಚಿಸಿಲ್ಲ.

ಸಹಜ ಭಾಷೆಯನ್ನು ಗುಪ್ತಭಾಷೆಗೆ ತಾತ್ತ್ವಿಕವಾಗಿ ಎರಡು ಭಿನ್ನ ರೀತಿಗಳಲ್ಲಿ ಪರಿವರ್ತಿಸಬಹುದು : ಒಂದು, ಗೂಢಲಿಪಿಲೇಖನ (ಎನ್‌ಸೈಫರಿಂಗ್); ಎರಡು, ಸಂಕೇತೀಕರಣ (ಎನ್‌ಕೋಡಿಂಗ್). ಹೀಗೆ ಲಭಿಸಿದ ಗುಪ್ತ ಭಾಷೆಗಳನ್ನು ಸಹಜ ಭಾಷೆಗಳಿಗೆ ಪರಿವರ್ತಿಸುವ ಕ್ರಿಯೆಗಳಿಗೆ ಅನುಕ್ರಮವಾಗಿ ಗೂಢಲಿಪಿವಾಚನ (ಡೀಸೈಫರಿಂಗ್) ಮತ್ತು ವಿಸಂಕೇತೀಕರಣ (ಡೀಕೋಡಿಂಗ್) ಎಂದು ಹೆಸರು.

**ಗೂಢಲಿಪಿ :** ಇದರಲ್ಲಿ ಮೂಲ ಸಂದೇಶದ ಒಂದೊಂದು ಅಕ್ಷರಕ್ಕೂ ಸಂವಾದಿಯಾಗಿ ಇನ್ನೊಂದು ಅಕ್ಷರವೂ ಪ್ರತೀಕವೂ ಇರುತ್ತದೆ. ಅತ್ಯಂತ ಸರಳ ಉದಾಹರಣೆ ಎಂದರೆ ಅಕ್ಷರಗಳ ಸ್ಥಾನಾಂತರಣ :

| | | |
|---|---|---|
| A-L | J-U | S-D |
| B-M | K-V | T-E |
| C-N | L-W | U-F |
| D-O | M-X | V-G |
| E-P | N-Y | W-H |
| F-Q | O-Z | X-I |
| G-R | P-A | Y-J |
| H-S | Q-B | Z-K |
| I-T | R-C | |

ಸಹಜ ಭಾಷೆಯಲ್ಲಿ

OPEN WESTERN FRONT

ಎಂದು ಇರುವ ಸಂದೇಶವನ್ನು ಮೇಲಿನ ಸೂತ್ರಾನುಸಾರ ಗೂಢಲಿಪಿಲೇಖಿಸಿದರೆ

Z A P Y     H P D E P C Y     Q C Z Y E

ಎಂದಾಗುತ್ತದೆ. ಈ ಗೂಢ ಲಿಪೀಕೃತ ಸಂದೇಶವನ್ನು ಪಡೆದವನು ಇದನ್ನು ಓದಬೇಕಾದರೆ ಗೂಢಲಿಪಿಲೇಖನದ ಸೂತ್ರವನ್ನು ಅರಿತಿರಬೇಕಾದದ್ದು ಅಗತ್ಯ. ಅದು ಹೀಗಿದೆ:

| | | |
|---|---|---|
| A-P | J-Y | S-H |
| B-Q | K-Z | T-I |
| C-R | L-A | U-J |
| D-S | M-B | V-K |
| E-T | N-C | W-L |
| F-U | O-D | X-M |
| G-V | P-E | Y-N |
| H-W | Q-F | Z-O |
| I-X | R-G | |

ಇದರ ಅನುಸಾರ ಮೇಲಿನ ಗುಪ್ತಸಂದೇಶವನ್ನು ಮಾಡಿದರೆ ಮೂಲ ಸಂದೇಶ ಲಭಿಸುತ್ತದೆ.

ಅಕ್ಷರಗಳ ಸ್ಥಾನಾಂತರಣದಲ್ಲಿ ಸಂಕೀರ್ಣ ಕ್ರಮಗಳನ್ನು ಅನುಸರಿಸಬಹುದು.

ಗೂಢಲಿಪಿಲೇಖನದಲ್ಲಿ ಇನ್ನೊಂದು ವಿಧಾನವೆಂದರೆ ಸೂತ್ರಪದದ ಮೂಲಕ ಪರವರ್ತನೆ. ಸೂತ್ರಪದದ ಆಯ್ಕೆ ಸ್ವೇಚ್ಛೆಯಂತೆ. ಆದರೆ ಅದು ಖಚಿತವಾಗಿ ಗೂಢಲಿಪಿಲೇಖಕನಿಗೂ ಗೂಢಲಿಪಿವಾಚಕನಿಗೂ ತಿಳಿದಿರಲೇಬೇಕು. ಉದಾರಹರಣೆಗೆ BULLDOZER ಎನ್ನುವುದು ಸೂತ್ರಪದವೆಂದೂ DEMOLISH BRIDGHE NUMBER SEVEN ಸಂದೇಶವೆಂದೂ ಭಾವಿಸೋಣ. ಈ ಸಂದೇಶವನ್ನು ಗೂಢಲಿಪಿಲೇಖಿಸುವಾಗ ಅನುಸರಿಸಬೇಕಾದ ಹಂತಗಳನ್ನು ಮುಂದೆ ಬರೆದಿದೆ.

1) ಸೂತ್ರ ಪದವನ್ನು ಮೊದಲು ಬರೆದು ಅದರ ಅಕ್ಷರಗಳಿಗೆ ಅಕ್ಷರ ಮಾಲೆಯಲ್ಲಿ ಸಾಪೇಕ್ಷವಾಗಿ ಇರುವ ಸ್ಥಾನಗಳನ್ನು ಸಂಖ್ಯೆಗಳಿಂದ ಸೂಚಿಸಬೇಕು. ಆದ್ದರಿಂದ B1, D2 ಇತ್ಯಾದಿ ಆಗುತ್ತದೆ. L ಎರಡು ಸಲ ಬರುವುದರಿಂದ ಮೊದಲನೆಯ L ಗೆ 4ನ್ನೂ ಎರಡನೆಯ L ಗೆ 5ನ್ನೂ ಹೊಂದಿಸಲಾಗಿದೆ.

B U L L D O Z E R
1 8 4 5 2 6 9 3 7

2) ಸಂದೇಶವನ್ನು ಸೂತ್ರಪದದ ಅಡಿಯಲ್ಲಿ ಮುಂದೆ ತೋರಿಸಿರುವಂತೆ ಬರೆಯಬೇಕು.

| B | U | L | L | D | O | Z | E | R |
|---|---|---|---|---|---|---|---|---|
| 1 | 8 | 4 | 5 | 2 | 6 | 9 | 3 | 7 |
| D | E | M | O | L | I | S | H | B |
| R | I | D | G | E | N | U | M | B |
| E | R | S | E | V | E | N | | |

3) ನೀಟಸಾಲುಗಳ ಸಂಖ್ಯಾನುಸಾರ ಅಕ್ಷರಗಳನ್ನು ಪುನಃ ಜೋಡಿಸಬೇಕು. ಎಂದರೆ 1ನೆಯ ನೀಟಸಾಲಿನ D, R, E ಮೊದಲು 2ನೆಯದರ L. E. V. ತರುವಾಯ ಇತ್ಯಾದಿ. ಸಾಮಾನ್ಯವಾಗಿ ಇವನ್ನು ಐದೈದು ಅಕ್ಷರಗಳ ಗುಂಪುಗಳಾಗಿ ಜೋಡಿಸುವುದು ವಾಡಿಕೆ. ಗೂಢಲಿಪಿಯಲ್ಲಿ ಲೇಖಿತವಾದ ಸಂದೇಶ ಈ ಕೆಳಗಿನಂತಿದೆ:

DRELE VHMMD SOGEI NEBBE IRSUN

ಈ ಗೂಢ ಸಂದೇಶವನ್ನು ವಾಚಿಸಬೇಕಾದರೆ ಮೊದಲು ಹಂತ 1ರಲ್ಲಿ ತೋರಿಸಿರುವಂತೆ ಸೂತ್ರಪದ–ಸಂಖ್ಯೆಗಳ ಒಂದು ಯಾದಿಯನ್ನು ತಯಾರಿಸಬೇಕು. ಪ್ರಸಕ್ತ ಗೂಢ ಸಂದೇಶದಲ್ಲಿ 25 ಅಕ್ಷರಗಳಿವೆ. ಆದ್ದರಿಂದ ಯಾದಿಯಲ್ಲಿ ಇವನ್ನು ಹಂಚುವಾಗ ಕೊನೆಯ ಎರಡು ನೀಟಸಾಲುಗಳಲ್ಲಿ (3 ಮತ್ತು 7)ಎರಡೆರಡೇ ಅಕ್ಷರಗಳು, ಉಳಿದವುಗಳಲ್ಲಿ ಮೂರು ಮೂರು ಅಕ್ಷರಗಳು ಇರತಕ್ಕದ್ದು ಎಂಬುದನ್ನು ಗಮನಿಸಬೇಕು. ಈ ಪ್ರಕಾರ ಗೂಢಸಂದೇಶದ ಅಕ್ಷರಗಳನ್ನು ನೀಟಸಾಲುವಾರು ವಿತರಣೆ ಮಾಡಿದಾಗ ಮೂಲ ಸಂದೇಶವನ್ನು ಕ್ಷಿತಿಜೀಯವಾಗಿ ಓದಬಹುದು.

ಸೂತ್ರಪದದಲ್ಲಿ ಇಂತಿಷ್ಟೇ ಅಕ್ಷರಗಳಿರಬೇಕೆಂದೇನೂ ನಿಯಮವಿಲ್ಲ. ಒಂದೇ ಸೂತ್ರಪದದಿಂದ ಇಲ್ಲವೇ ಬೇರೆ ಬೇರೆ ಸೂತ್ರಪದಗಳಿಂದ ಒಂದು ಸಂದೇಶವನ್ನು ಹಲವಾರು ಬಾರಿ ಗೂಢಲಿಪಿಲೇಖಿಸಬಹುದು. ಇಂಥ ಒಂದು ಉದಾಹರಣೆಯ್ನು ಮುಂದೆ ಬರೆದಿದೆ.

ಮೂಲ ಸಂದೇಶ: START BY TODAYS DECCAN QUEEN
ಮೊದಲನೆಯ ಸೂತ್ರ ಪದ: PLEASANT

| P | L | E | A | S | A | N | T’ |
|---|---|---|---|---|---|---|---|
| 6 | 4 | 3 | 1 | 7 | 2 | 5 | 8 |
| S | T | A | R | T | B | V | T |
| O | D | A | Y | S | D | E | C |
| C | A | N | Q | U | E | E | N |

ಗೂಢ ಸಂದೇಶ: RYQBD EAANT DAYEE SOCTS UTCN
ಎರಡನೆಯ ಸೂತ್ರ ಪದ: VISHRAM

| V | I | S | H | R | A | M |
|---|---|---|---|---|---|---|
| 7 | 2 | 6 | 3 | 5 | 1 | 4 |
| R | Y | Q | B | D | E | A |
| A | N | T | D | A | Y | E |
| E | S | O | C | T | S | U |
| T | C | N | | | | |

ಗೂಢ ಸಂದೇಶ:

E Y S Y N S C B D C A E U D A T Q T O N R A E T

ಗೂಢಲಿಪಿಲೇಖನದಲ್ಲಿ ಮೂರನೆಯ ಒಂದು ವಿಧಾನವುಂಟು. ಇದರಲ್ಲಿ ಇಂಗ್ಲಿಷ್ ಅಕ್ಷರ ಮಾಲೆಯನ್ನು ಮುಂದೆ ತೋರಿಸಿರುವಂತೆ ಚೌಕಾಕಾರದಲ್ಲಿ ಅಳವಡಿಸಬೇಕು. ಈ ಅಕ್ಷರ ಚೌಕ ಗೂಢಲಿಪಿಲೇಖನಿಗೂ ವಾಚಕನಿಗೂ ಮೂಲಾಧಾರ.

ಅಕ್ಷರ ಚೌಕ

| | A | B | C | D | E | F | G | H | I | J | K | L | M | N | O | P | Q | R | S | T | U | V | W | X | Y | Z |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| A | A | B | C | D | E | F | G | H | I | J | K | L | M | N | O | P | Q | R | S | T | U | V | W | X | Y | Z |
| B | B | C | D | E | F | G | H | I | J | K | L | M | N | O | P | Q | R | S | T | U | V | W | X | Y | Z | A |
| C | C | D | E | F | G | H | I | J | K | L | M | N | O | P | Q | R | S | T | U | V | W | X | Y | Z | A | B |
| D | D | E | F | G | H | I | J | K | L | M | N | O | P | Q | R | S | T | U | V | W | X | Y | Z | A | B | C |
| E | E | F | G | H | I | J | K | L | M | N | O | P | Q | R | S | T | U | V | W | X | Y | Z | A | B | C | D |
| F | F | G | H | I | J | K | L | M | N | O | P | Q | R | S | T | U | V | W | X | Y | Z | A | B | C | D | E |
| G | G | H | I | J | K | L | M | N | O | P | Q | R | S | T | U | V | W | X | Y | Z | A | B | C | D | E | F |
| H | H | I | J | K | L | M | N | O | P | Q | R | S | T | U | V | W | X | Y | Z | A | B | C | D | E | F | G |
| I | I | J | K | L | M | N | O | P | Q | R | S | T | U | V | W | X | Y | Z | A | B | C | D | E | F | G | H |
| J | J | K | L | M | N | O | P | Q | R | S | T | U | V | W | X | Y | Z | A | B | C | D | E | F | G | H | I |
| K | K | L | M | N | O | P | Q | R | S | T | U | V | W | X | Y | Z | A | B | C | D | E | F | G | H | I | J |
| L | L | M | N | O | P | Q | R | S | T | U | V | W | X | Y | Z | A | B | C | D | E | F | G | H | I | J | K |
| M | M | N | O | P | Q | R | S | T | U | V | W | X | Y | Z | A | B | C | D | E | F | G | H | I | J | K | L |
| N | N | O | P | Q | R | S | T | U | V | W | X | Y | Z | A | B | C | D | E | F | G | H | I | J | K | L | M |
| O | O | P | Q | R | S | T | U | V | W | X | Y | Z | A | B | C | D | E | F | G | H | I | J | K | L | M | N |
| P | P | Q | R | S | T | U | V | W | X | Y | Z | A | B | C | D | E | F | G | H | I | J | K | L | M | N | O |
| Q | Q | R | S | T | U | V | W | X | Y | Z | A | B | C | D | E | F | G | H | I | J | K | L | M | N | O | P |
| R | R | S | T | U | V | W | X | Y | Z | A | B | C | D | E | F | G | H | I | J | K | L | M | N | O | P | Q |
| S | S | T | U | V | W | X | Y | Z | A | B | C | D | E | F | G | H | I | J | K | L | M | N | O | P | Q | R |
| T | T | U | V | W | X | Y | Z | A | B | C | D | E | F | G | H | I | J | K | L | M | N | O | P | Q | R | S |
| U | U | V | W | X | Y | Z | A | B | C | D | E | F | G | H | I | J | K | L | M | N | O | P | Q | R | S | T |
| V | V | W | X | Y | Z | A | B | C | D | E | F | G | H | I | J | K | L | M | N | O | P | Q | R | S | T | U |
| W | W | X | Y | Z | A | B | C | D | E | F | G | H | I | J | K | L | M | N | O | P | Q | R | S | T | U | V |
| X | X | Y | Z | A | B | C | D | E | F | G | H | I | J | K | L | M | N | O | P | Q | R | S | T | U | V | W |
| Y | Y | Z | A | B | C | D | E | F | G | H | I | J | K | L | M | N | O | P | Q | R | S | T | U | V | W | X |
| Z | Z | A | B | C | D | E | F | G | H | I | J | K | L | M | N | O | P | Q | R | S | T | U | V | W | X | Y |

ಮೂಲ ಸಂದೇಶ: DESPATCH TWO DIVISIONS TO KOHIMA ಎಂದಿರಲಿ.

ಗೂಢಲಿಪಿ ಲೇಖಕನಿಗೂ ವಾಚಕನಿಗೂ ಪೂರ್ವ ಒಪ್ಪಂದದ ಪ್ರಕಾರ ತಿಳಿದಿರುವ ಸೂತ್ರಪದ SHACKLE ಆಗಿರಲಿ.

ಮೂಲಸಂದೇಶವನ್ನು ಗೂಢಲಿಪಿಲೇಖಿಸಲು ಈ ಕೆಳಗಿನಂತೆ ಮುಂದುವರಿಸ ಬೇಕು.

ಹಂತ 1. ಮೂಲಸಂದೇಶದ ಅಕ್ಷರಗಳ ಅಡಿಯಲ್ಲಿ ಸೂತ್ರಪದದ ಅಕ್ಷರಗಳನ್ನು ಪುನರಾವರ್ತಿಸುವಂತೆ ಬರೆಯಬೇಕು.

D E S P A T C H T W O D I V I S I O N S T O K O H I M A
S H A C K L E S H A C K L E S H A C K L E S H A C K L E

ಹಂತ 2. ಮೇಲಿನ ನಿರೂಪಣೆಯಲ್ಲಿ ಮೊದಲಿನ ಸಾಲಿನ ಅಕ್ಷರಗಳನ್ನು ಅಕ್ಷರಚೌಕದ ಅಡ್ಡಸಾಲಿಗೂ ಎರಡನೆಯ ಸಾಲಿನ ಅಕ್ಷರಗಳನ್ನು ಅಕ್ಷರಚೌಕದ ನೀಟಸಾಲಿಗೂ ಅನ್ವಯಿಸಬೇಕು. ಈಗ D ನೆಯ ಅಡ್ಡ ಸಾಲು ಮತ್ತು S ನೆಯ ನೀಟಸಾಲಿಗೆ ಸಾಮಾನ್ಯವಾದ ಅಕ್ಷರ V; E ನೆಯ ಅಡ್ಡಸಾಲು ಮತ್ತು H ನೆಯ ನೀಟಸಾಲಿಗೆ ಸಾಮಾನ್ಯವಾದ ಅಕ್ಷರ L; S ನೆಯ ಅಡ್ಡಸಾಲು ಮತ್ತು A ನೆಯ ನೀಟಸಾಲಿಗೆ ಸಾಮಾನ್ಯವಾದ ಅಕ್ಷರ S. ಇದೇ ಪ್ರಕಾರ ಮುಂದುವರಿದರೆ ಕೊನೆಗೆ A ನೆಯ ಅಡ್ಡಸಾಲು ಮತ್ತು E ನೆಯ ನೀಟಸಾಲಿಗೆ ಸಾಮನ್ಯವಾದ ಅಕ್ಷರ E ದೊರೆಯುತ್ತದೆ. ಈ ಸಾಮಾನ್ಯಾಕ್ಷರಗಳನ್ನು ಕೆಳಗೆ ಅವು ಒದಗಿ ಬಂದಿರುವ ಕ್ರಮದಲ್ಲಿ ಬರೆದಿದೆ. ಇದೇ ಗೂಢ ಸಂದೇಶ.

V L S R K E G Z A W Q N T Z A Z I Q X D X G R O J S X E

ಈ ಗೂಢ ಸಂದೇಶವನ್ನು ವಾಚಿಸಲು ಈ ಕೆಳಗಿನಂತೆ ಮುಂದುವರಿಸಬೇಕು (ಮೇಲಿನ ವಿಧಿಗಳ ವಿಪರ್ಯಾಯ ವಿಧಿಗಳಿವು)

ಹಂತ 1. ಗೂಢಸಂದೇಶದ ಅಕ್ಷರಗಳ ಮೇಲೆ ಸೂತ್ರಪದದ ಅಕ್ಷರಗಳನ್ನು ಪುನರಾವರ್ತಿಸುವಂತೆ ಬರೆಯಬೇಕು.

S H A C K L E S H A C K L E S H A C K L E S H A C K L E V L S
R K E G Z A W Q N T Z A Z I Q X D X G R O J S X E

ಹಂತ 2. ಮೇಲಿನ ನಿರೂಪಣೆಯಲ್ಲಿ ಮೊದಲಿನ ಸಾಲಿನ ಅಕ್ಷರಗಳನ್ನು ಅಕ್ಷರಚೌಕದ ಅಡ್ಡ ಸಾಲಿಗೆ ಅನ್ವಯಿಸಬೇಕು ಬಳಿಕ ಅ ಅಕ್ಷರಕ್ಕೆ ಸಂವಾದಿಯಾಗಿ ಎರಡನೆಯ ಸಾಲಿನಲ್ಲಿರುವ ಅಕ್ಷರದ ನೀಟ ಸಾಲಿನ ಅಕ್ಷರವನ್ನು ಹುಡುಕಬೇಕು. ಅಂದರೆ S ನೆಯ ಅಡ್ಡಸಾಲಿನಲ್ಲಿ V ಅಕ್ಷರ ಬರುವುದು Dನೆಯ ನೀಟಸಾಲಿನಲ್ಲಿ: H ನೆಯ ಅಡ್ಡ ಸಾಲಿನಲ್ಲಿ L ಅಕ್ಷರ ಬರುವುದು E ನೆಯ ನೀಟಸಾಲಿನಲ್ಲಿ: ಇತ್ಯಾದಿ. ನೀಟಸಾಲಿನ ಅಕ್ಷರಗಳನ್ನು ಕ್ರಮಾಗತವಾಗಿ ಬರೆದರೆ ಈ ಕೆಳಗಿನ ಮೂಲ ಸಂದೇಶ ದೊರೆಯುತ್ತದೆ.

D E S P A T C H T W O D I V I S I O N S T O K O H I M A

ಈ ಹಿಂದೆ ಎರಡನೆಯ ವಿಧಾನದಲ್ಲಿ ಹೇಳಿದ ಪ್ರಕಾರ ಒಂದು ಮೂಲಸಂದೇಶ ವನ್ನು ಒಂದೇ ಸೂತ್ರಪದದ ನೆರವಿನಿಂದ ಅಥವಾ ಬೇರೆ ಬೇರೆ ಸೂತ್ರಪದಗಳ ಉದಾಹರಣೆಗೆ SHACKLE ಸೂತ್ರಪದದಿಂದ ದೊರೆತ ಗೂಢ ಸಂದೇಶವನ್ನು ಅದೇ ಸೂತ್ರಪದದಿಂದ ಮಗುದೊಮ್ಮೆ ಗೂಢಲಿಪಿ ಲೇಖಿಸಬಹುದು.

V L S R K E G Z A W Q N T Z A Z I Q X D X G R O J S X E
S H A C K L E S H A C K L E S H A C K L E S H A C K L E

ಈಗ ದೊರೆಯುವ ಗೂಢ ಸಂದೇಶವಿದು:

NSSTU PKRHW SXEDS GISHO BYYOL. CII

ಹಿನ್ನೆಲೆಯ ಗಣಿತ: ಗೂಢಲಿಪಿಯ ಹಿನ್ನೆಲೆಯಲ್ಲಿ ಗಣಿತದ ಸೂಕ್ಷ್ಮ ಸೂತ್ರ ಉಂಟು. ಇದನ್ನು ಅರಿಯಲು ಮೂರನೆಯ ಉದಾಹರಣೆಯ ಮೂಲ ಸಂದೇಶವನ್ನು $f$ ಎಂಬ ಪ್ರತೀಕದಿಂದ ಮತ್ತು ಸೂತ್ರಪದವನ್ನು $\rho$ ಎಂಬ ಪ್ರತೀಕದಿಂದ ಸೂಚಿಸೋಣ. ಆಗ $\rho$ ಪ್ರತೀಕ $f$ ಪ್ರತೀಕದ ಮೇಲೆ ವರ್ತಿಸಿ ಗೂಢಸಂದೇಶ ದೊರೆಯುತ್ತದೆ. ಇದನ್ನು $\rho f$ ಎಂದು ಸೂಚಿಸೋಣ.

$f$ :D E S P A T C H T W O D I V I S I O N S T O K O H I M A
$\rho$ : S H A C K L E S H A C K L E S H A C K L E S H A C K L E
$\rho f$: V L S R K E G Z A W Q N T Z A Z I Q X D X G R O J S X E
$\rho^2 f$ :N S S T U P K R H W S X E D S G I S H O B Y Y O L C I I

ಹೀಗೆಯೇ ಮುಂದುವರಿದರೆ

$\rho^{26} f$: DESPATCH TWO DIVISIONS TO KOHIMA

ಎಂದರೆ ಮೂಲ ಸಂದೇಶ $f$ ದೊರೆಯುತ್ತದೆ. ಆದ್ದರಿಂದ ಪ್ರತೀಕಾತ್ಮಕವಾಗಿ $P^{26} f=f$ ಎನ್ನಬಹುದು.

P$f$ನ ಮೇಲೆ σ ಎನ್ನುವ ಸೂತ್ರಪದ ವರ್ತಿಸಿ $f$ ದೊರೆಯುತ್ತದೆಂದು ಭಾವಿಸೋಣ. ಇದುವರೆಗೆ ವಿವರಿಸಿರುವ ನಿಯಮಗಳ ಅನುಸಾರ σ ವನ್ನು ಕಂಡುಹಿಡಿಯುವುದುಸಾಧ್ಯ.

$\rho f$: V L S R K E G Z A W Q N T Z A Z I Q X D X G R O J S X E
σ : I T A Y Q P W I T A Y Q P W I T A Y Q P W I T A Y Q P W
$\sigma\rho f$: D E S P A T C H T W O D I V I S I O N S T O K O H I M A
= $f$ :

∴ ಈಗ σ = ITAYQPW

ಆದ್ದರಿಂದ ಪ್ರತೀಕಾತ್ಮಕವಾಗಿ $\sigma\rho f=f$

ಇದು $\rho\sigma f$ ಗೆ ಸಹ ಸಮಾನವೆಂದು ತೋರಿಸಬಹುದು. ಆದ್ದರಿಂದ ಸೂತ್ರಪದಗಳು ವ್ಯತ್ಯಯ ನಿಯಮವನ್ನು ಪಾಲಿಸುತ್ತವೆ. ( $\rho\sigma=\sigma\rho$ )

$\rho$: S H A C K L E
σ: I T A Y Q P W
ಈಗ $\rho\sigma=\sigma\rho$ : A A A A A A A

ಇವೆಲ್ಲ ಮತ್ತು ಇನ್ನು ಹೆಚ್ಚಿನ ಗುಣಗಳನ್ನು ಅಕ್ಷರಮಾಲೆಯ ಅಕ್ಷರಗಳ ಸ್ಥಾನ ಸಂಖ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಅರಿಯುವುದು ಸಾಧ್ಯ. ಈ ಚರ್ಚೆಯನ್ನು ಸುಲಭೀಕರಿಸಲು 0ಯಿಂದ 9ರ ವರೆಗಿನ ಅಂಕೆಗಳ ಒಂದು ಚೌಕವನ್ನು ಈ ಕೆಳಗಿನಂತೆ ರಚಿಸೋಣ.

**ಅಂಕ ಚೌಕ**

| | 0 | 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|---|---|
| 0 | 0 | 1 | 2 | 3 | 4 | 5 | 6 | 7 | 8 | 9 |
| 1 | 1 | 2 | 3 | 4 | 5 | 6 | 7 | 8 | 9 | 0 |
| 2 | 2 | 3 | 4 | 5 | 6 | 7 | 8 | 9 | 0 | 1 |
| 3 | 3 | 4 | 5 | 6 | 7 | 8 | 9 | 0 | 1 | 2 |
| 4 | 4 | 5 | 6 | 7 | 8 | 9 | 0 | 1 | 2 | 3 |
| 5 | 5 | 6 | 7 | 8 | 9 | 0 | 1 | 2 | 3 | 4 |
| 6 | 6 | 7 | 8 | 9 | 0 | 1 | 2 | 3 | 4 | 5 |
| 7 | 7 | 8 | 9 | 0 | 1 | 2 | 3 | 4 | 5 | 6 |
| 8 | 8 | 9 | 0 | 1 | 2 | 3 | 4 | 5 | 6 | 7 |
| 9 | 9 | 0 | 1 | 2 | 3 | 4 | 5 | 6 | 7 | 8 |

ಈ ಹತ್ತು “ಅಕ್ಷರ”ಗಳಿಂದ ರಚಿತವಾದ ಒಂದು ಸಂದೇಶ $f$ ಮತ್ತು ಅದನ್ನು ಗೂಢಲಿಪಿ ಲೇಖಿಸಲು ಬಳಸುವ ಸೂತ್ರಪದ $\rho$ ಈ ಕೆಳಗಿನಂತಿರಲಿ. (ಅಂಕೆಗಳ ಸ್ವೇಚ್ಛಾ ಜೋಡಣೆ ಇದು).

$f$ : 2 7 0 1 9 6 5 6 3 4 7 9 6 2 6 9 3 4 5 7 1 3 4 0 3
$\rho$ : 3 7 6 1 5 3 7 6 1 5 3 7 6 1 5 3 7 6 1 5 3 7 6 1 5
ಆಗ $\rho f$: 5 4 6 2 4 9 2 2 4 9 0 6 2 3 1 2 0 0 6 2 4 0 0 1 8

ಅಂದರೆ ಅಂಕಚೌಕದ 2ನೆಯ ಅಡ್ಡ ಸಾಲು ಮತ್ತು 3ನೆಯ ನೀಟ ಸಾಲಿಗೆ ಸಾಮಾನ್ಯವಾದ ಅಕ್ಷರ 5; 7ನೆಯ ಅಡ್ಡಸಾಲು ಮತ್ತು 7ನೆಯ ನೀಟಸಾಲಿಗೆ ಸಾಮಾನ್ಯವಾದ ಅಕ್ಷರ 4; 0 ಅಡ್ಡಸಾಲು ಮತ್ತು 6ನೆಯ ನೀಟಸಾಲಿಗೆ ಸಾಮಾನ್ಯವಾದ ಅಕ್ಷರ 6; ಇತ್ಯಾದಿ. $\rho f$ನ ಅಕ್ಷರಗಳು $f$ ಮತ್ತು $\rho$ ಸಾಲುಗಳ ಸಂವಾದೀ ಅಕ್ಷರಗಳ ಅಂಕಸಂಕಲನದಿಂದ (ಎಂದರೆ 7+7 = 14 ರಲ್ಲಿ 4 ನ್ನು ಮಾತ್ರ ತೆಗೆದುಕೊಳ್ಳುತ್ತೇವೆ; 9+2 = 11ರಲ್ಲಿ 1ನ್ನು ಮಾತ್ರ ತೆಗೆದುಕೊಳ್ಳುತ್ತೇವೆ– ಅರ್ಥಾತ್ ಎರಡು ಅಂಕೆಗಳ ಮೊತ್ತದಲ್ಲಿ ಮೊದಲಿನ ಅಂಕೆಯನ್ನು ಮಾತ್ರ ತೆಗೆದುಕೊಳ್ಳುವ ವಿಧಿ) ದೊರೆಯುತ್ತವೆಂಬು ದನ್ನು ಗಮನಿಸಬೇಕು. ಈ ವಿಶಿಷ್ಟ ಗುಣ ಅಕ್ಷರ ಚೌಕದಲ್ಲಿಯೂ ಉಂಟು; ಆದರೆ ಅದು ಅಲ್ಲಿ ಪ್ರಕಟಿತವಾಗಿರಲಿಲ್ಲ ಅಷ್ಟೆ. ಅಂಕ ಚೌಕದ ಮೇಲೆ ಪರಿಕರ್ಮಗಳನ್ನು ನಡೆಸಿ ಈ ಕೆಳಗಿನ ಗುಣಗಳನ್ನು ನೋಡಬಹುದು :

1 $\rho^{10} f = f$

2 $\rho_1$, $\rho_2$, $\rho_3$, ಗಳು ಮೂರು ಭಿನ್ನ ಸೂತ್ರಪದಗಳಾಗಿದ್ದರೆ ಅವು ಅನುಕ್ರಮವಾಗಿ $f$ನ ಮೇಲೆ ವರ್ತಿಸುವುದರಿಂದ $\rho_1\rho_2\rho_3 f$ ದೊರೆಯುವುದಷ್ಟೆ. ಈಗ $\rho$ ಎಂಬ ಒಂದೇ ಸೂತ್ರ ಪದ $f$ ಮೇಲೆ ವರ್ತಿಸಿ $\rho_1\rho_2\rho_3 f$ನ್ನು ಕೊಡಬಲ್ಲದು. ಎಂದರೆ

$$\rho_3\rho_2\rho_1 f = \rho f$$

ಆಗಿರುವಂತೆ $\rho$ ವನ್ನು ಕಂಡುಹಿಡಿಯಬಹುದು. ಆಗ, ಪ್ರತೀಕಾತ್ಮಕವಾಗಿ,

$$\rho = \rho_3\rho_2\rho_1$$

$\rho_3\rho_2\rho_1$ ವ್ಯತ್ಯಯ ನಿಯಮವನ್ನು ಪಾಲಿಸುವುದರಿಂದ ಮೇಲಿನ ಫಲಿತಾಂಶವನ್ನು

$$\rho = \rho_1\rho_2\rho_3$$

ಎಂದು ಸಹ ಬರೆಯಬಹುದು. ಇದನ್ನು ಸಾರ್ವತ್ರೀಕರಿಸಿದರೆ

$$\rho = \rho_1\rho_2\rho_3 \ldots\ldots \rho n$$

ಎಂದಾಗುವುದು. ಈಗ $\rho_1$ ಸೂತ್ರಪದದಲ್ಲಿ $i_1$ ಅಕ್ಷರಗಳೂ $\rho_2$ ನಲ್ಲಿ $i_2$ ಅಕ್ಷರಗಳೂ

ಇತ್ಯಾದಿಯಾಗಿ ಇದ್ದರೆ ಆಗ $\rho$ ಸೂತ್ರಪದದಲ್ಲಿ $i_1, i_2, \ldots \ldots i_n$ ಸಂಖ್ಯೆಗಳ ಲಘುತಮ ಸಾಮಾನ್ಯ ಅಪವರ್ತ್ಯದಷ್ಟು ಅಕ್ಷರಗಳು ಇರುತ್ತವೆ.

ಬಹು ಚಮತ್ಕಾರದ ಗೂಢಲಿಪಿಲೇಖನ ಹಾಗೂ ವಾಚನ ಯಂತ್ರಗಳಿವೆ. ಇವುಗಳ ರಚನೆ, ಕ್ರಿಯಾವಿಧಾನ ಮುಂತಾದವೆಲ್ಲವೂ ಸಹಜವಾಗಿಯೇ ಗೂಢವಾಗಿರುವುವು. ಪ್ರತಿಯೊಂದು ರಾಷ್ಟ್ರವೂ ತನ್ನ ಗೂಢಲಿಪಿ ವಿಭಾಗವನ್ನು ಅತ್ಯಂತ ರಹಸ್ಯವಾಗಿಡಲು ಪ್ರಯತ್ನಿಸುವುದರ ಜೊತೆಗೆ ಇತರ (ವಿಶೇಷವಾಗಿ ಶತ್ರು) ರಾಷ್ಟ್ರಗಳ ಗೂಢ ಸಂದೇಶಗಳನ್ನು ಸಂಗ್ರಹಿಸಿ ಅವನ್ನು ಒಡೆದು ವಾಚಿಸಲು ಪ್ರಯತ್ನಿಸುವುದು ಕೂಡ ವಾಡಿಕೆ.

**ಸಂಕೇತೀಕರಣ** : ಈ ವ್ಯವಸ್ಥೆಗೆ ಎರಡು ಉದ್ದೇಶಗಳಿವೆ. ಮೊದಲನೆಯದು ತಂತಿವರ್ತಮಾನಗಳನ್ನು ಬಹು ಸಂಕ್ಷೇಪಮಾಡಿ ಖರ್ಚನ್ನು ಉಳಿಸುವುದು, ಉದಾಹರಣೆಗೆ. 'ಚಂಡು' ಎಂಬ ಸಂಕೇತ ಶಬ್ದಕ್ಕೆ 'ಈ ಪದಾರ್ಥಕ್ಕೆ ಕಡೇ ಪಕ್ಷ ಎಷ್ಟು ದುಡ್ಡು ಕೊಟ್ಟು ಕೊಂಡುಕೊಳ್ಳಲು ನಿಮಗೆ ಇಷ್ಟವಿದೆ ಎಂಬ ವಿಷಯವನ್ನು ತತ್‌ಕ್ಷಣ ತಂತಿ ಮೂಲಕ ತಿಳಿಸಿ' ಎಂಬ ಸಂಕೇತಾರ್ಥವಿದ್ದರೆ, 16 ಶಬ್ದಗಳ ಈ ವಾಕ್ಯದ ಬದಲು 'ಚಂಡು' ಎಂಬ ಒಂದೇ ಶಬ್ದವನ್ನು ತಂತಿಮೂಲಕ ಕಳಿಸಿದರೆ ಖರ್ಚು ಬಹಳ ಉಳಿಯುತ್ತದೆ. ಅಂತಾರಾಷ್ಟ್ರೀಯ ಸಂಕೇತದಲ್ಲಿ SOS ಎಂದರೆ 'ನಾನು ಬಹು ಅಪಾಯದಲ್ಲಿ ಸಿಕ್ಕಿಕೊಂಡಿದ್ದೇನೆ; ಆದ್ದರಿಂದ ನನಗೆ ತತ್‌ಕ್ಷಣ ಸಹಾಯ ಬೇಕಾಗಿದೆ' ಎಂದು ಅರ್ಥ. ವೃತ್ತಪತ್ರಿಕೆಗಳಿಗೆ ನಾನಾ ದೇಶಗಳಿಂದ ಬೇಕಾಗಿರುವ ಸಂಗತಿಗಳು ಅಪಾರವಾಗಿರುವುದರಿಂದ ಅವನ್ನು ತಂತಿ ಮೂಲಕ ಸಾಮಾನ್ಯ ಭಾಷೆಯಲ್ಲಿ ಕಳಿಸಿದರೆ ವಿಪರೀತ ಖರ್ಚು, ಪ್ರಯಾಸ, ಕಾಲಹರಣಗಳಾಗುವುವು. ಅವನ್ನು ಸಂಕ್ಷಿಪ್ತ ಸಂಕೇತಗಳಲ್ಲಿ ಕಳಿಸುವುದರಿಂದ ಈ ಕಷ್ಟಗಳೆಲ್ಲವೂ ತಪ್ಪುತ್ತವೆ. ವಾರ್ತಾಪತ್ರಗಳ ವಿದೇಶೀಯ ಸುದ್ದಿಗಾರರು 'ಕೇಬಲ್‌ಸೆ' ಎಂಬ ವಿಶಿಷ್ಟ ಅಡಕ ಭಾಷೆಯನ್ನು ಬಳಸುತ್ತಾರೆ. ಅದರಲ್ಲಿ 'ಎ', 'ದಿ', 'ಆರ್' ಮುಂತಾದ ಶಬ್ದಗಳೇ ಇಲ್ಲ; ವಿಶಿಷ್ಟ ಅಂತ್ಯಪ್ರತ್ಯಯಗಳಿವೆ. ನಾನಾ ದೇಶಗಳಲ್ಲಿ ಶಾಖೆಗಳಿರುವ ವರ್ತಕಮಂಡಲಿಗಳು ತಮ್ಮವೇ ಆದ ಸಂಕೇತ ಪುಸ್ತಕಗಳನ್ನು ಬಳಸುತ್ತವೆ. ಕೆಲವರ ಪತ್ರ ಶೀರ್ಷಿಕೆಯಲ್ಲಿ 'ಕೋಡ್ ಎ. ಬಿ. ಸಿ. ಮತ್ತು ಬೆಂಟ್ಲೀಸ್' ಎಂದಿರುತ್ತದೆ. ಈ ವಿಧದಲ್ಲಿ ಅವರಿಗೆ ಸಂಕ್ಷಿಪ್ತ ಸಮಾಚಾರವನ್ನು ತಂತಿ ಅಥವಾ ರೇಡಿಯೋ ಮೂಲಕ ಕಳುಹಿಸಲು ಸಾಧ್ಯ. ಸೇನೆ, ನೌಕೆ ಮತ್ತು ವಾಯುಪಡೆ ಇಲಾಖೆಗಳಲ್ಲೂ ವಿಪರೀತ ತಂತಿಸಮಾಚಾರಗಳಿರುವುದರಿಂದ ಸಂಕೇತಗಳನ್ನು ಬಳಸುತ್ತಾರೆ. ನಿಸ್ತಂತು (ವೈರ್‌ಲೆಸ್) ಸಂದೇಶಗಳಲ್ಲಿ ಮಾರ್ಕೋನಿ ಸಂಕೇತಗಳ ಉಪಯೋಗ ಉಂಟು. ಸಂಕೇತ ಪದಗಳ ಸಂಖ್ಯೆಗಳು ಅಗಾಧವಾಗಿರುವುದರಿಂದ ಅವನ್ನೆಲ್ಲ ನೆನಪಿನಲ್ಲಿಡುವುದು ಅಸಾಧ್ಯ. ಆದ್ದರಿಂದ ಸಂಕೇತ ಸಂದೇಶವನ್ನು ಕಳಿಸುವವರಿಗೂ ತೆಗೆದುಕೊಳ್ಳುವವರಿಗೂ ಸಂಕೇತ ಪುಸ್ತಕಗಳಿರಬೇಕು.

ಸಂಕೇತದ ಇನ್ನೊಂದು ಉದ್ದೇಶ ಸಂಪೂರ್ಣ ರಹಸ್ಯ. ಸೇನಾ ಮತ್ತು ನೌಕಾ ಪಡೆಗಳ ಸಾವಿರಾರು ವಿಷಯಗಳು ಗೋಪ್ಯವಾಗಿರಬೇಕಾದ್ದರಿಂದ ಆ ಸಂಕೇತ ಪದಗಳ ಅರ್ಥಗಳೂ ರಹಸ್ಯವಾಗಿರಬೇಕು. ಸಂಕೇತ ಸಂಖ್ಯೆಗಳನ್ನು ಬರೆದುಕೊಂಡು ಅನಂತರ ಸಂಕೇತ ಪುಸ್ತಕದಲ್ಲಿ ಹೊಂದಿಕೆಯಾಗುವ ಪದ, ವಾಕ್ಯಗಳನ್ನು ಸರಿಹೊಂದಿಸಲಾಗುತ್ತದೆ. ಸಂಕೇತ ಪುಸ್ತಕವನ್ನು ಯಾರು ಕದಿಯದಂತೆ ಎಚ್ಚರಿಕೆಯಿರಬೇಕು. ಶತ್ರುಗಳ ಚಲನವಲನಗಳನ್ನು ತಂತಿಮೂಲಕ ತಿಳಿಯಲು ಹಡಗಿನ ಕ್ಯಾಪ್ಟನ್ನನ ಬಳಿ ಸಂಕೇತಗಳನ್ನು ಒಡನೆ ನಾಶಮಾಡಬೇಕು. ವರ್ತಕಮಂಡಲಿಗಳು ಪ್ರತಿಸ್ಪರ್ಧಿಗಳಿಗೆ ಅರಿವಾಗದಂತೆ ತಮ್ಮದೇ ಆದ ರಹಸ್ಯ ಸಂಕೇತಗಳನ್ನು ಪ್ರಯೋಗಿಸುತ್ತವೆ.

ಬರವಣಿಗೆಯಲ್ಲಿಲ್ಲದೆ ಬಾಯಿಮಾತಿನಲ್ಲೇ ಇರುವ ಕೆಲವು ಗೂಢ ಸಂಕೇತಗಳಿಗೆ ಜಾರ್ಗನ್ ಕೋಡ್‌ಗಳೆಂದು ಹೆಸರು. ಅವು ಮುಖ್ಯವಾಗಿ ವಾಯುಪಡೆ ಚಾಲಕರಿಗೆ ಸಹಕಾರಿ. ಉದಾಹರಣೆಗೆ, 'ತೋಟ' ಎಂದರೆ 'ಗೋವಿಂದನ ಮನೆ', 'ಸೇರು' ಎಂದರೆ 'ಹೋಗು', 'ಯಾವಾಗಲೂ' ಎಂದರೆ 'ಬೇಡ' ಎಂಬ ಸಂಕೇತಗಳಿದ್ದರೆ, 'ನಾವು ಯಾವಾಗಲೂ ತೋಟದಲ್ಲಿ ಸೇರುತ್ತೇವೆ' ಎಂಬ ಕಾಲ್ಪನಿಕ ವಾಕ್ಯದ ನಿಜವಾದ ಅರ್ಥ 'ಗೋವಿಂದನ ಮನೆಗೆ ಹೋಗಬೇಡ' ಎಂದಾಗುತ್ತದೆ. 'ಪಿಗ್ ಲ್ಯಾಟಿನ್' ಎಂಬುದೂ ಒಂದು ಗೂಢ ಭಾಷೆ. ಇದರಲ್ಲಿ ಪ್ರತಿ ಶಬ್ದದ ಮೊದಲನೆಯ ಅಕ್ಷರವನ್ನು ಅದರ ಕೊನೆಯಲ್ಲಿಟ್ಟು ಅದಕ್ಕೆ AY ಎಂಬ ಅಕ್ಷರಗಳನ್ನು ಸೇರಿಸಲಾಗುತ್ತದೆ. MAN ಎಂಬುದು ANMAY ಎಂದೂ WATER ಎಂಬುದು ATERWAY ಎಂದೂ ಆಗುತ್ತವೆ. ಸಂಕೇತ ಸಂದೇಶಗಳನ್ನು ರಚಿಸಲೂ ಅವುಗಳ ರಹಸ್ಯಗಳನ್ನು ವಿಚ್ಛೇದಿಸಲೂ ದೀರ್ಘ ಶಿಕ್ಷಣ ಬೇಕು.

ಐತಿಹಾಸಿಕವಾಗಿ ಗೂಢ ಭಾಷೆ ಪ್ರಪಂಚದ ಚರಿತ್ರೆಯಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದೆ. ಪ್ರಾಚೀನ ಗ್ರೀಕರೂ ರೋಮನರೂ ಗುಪ್ತ ಸಂಕೇತಗಳನ್ನು ಬಳಸುತ್ತಿದ್ದರು. ಪ್ರ.ಶ.ಪೂ. 89ರಲ್ಲಿ ಜೂಲಿಯಸ್ ಸೀಜûರ್ ತನ್ನ ಸೇನಾಪತಿಗಳಿಗೆ ಗುಪ್ತ ಸಂಕೇತಗಳನ್ನು ಗೂಢಲಿಪಿ (ಸೈಫರ್) ವಿಧಾನದಲ್ಲಿ ಕಳುಹಿಸಿದ. ಶಬ್ದಗಳ ಪ್ರತಿಯೊಂದು ಅಕ್ಷರದ ಬದಲು ವರ್ಣಮಾಲೆಯಲ್ಲಿ ಅದರ ಮುಂದಿನ ಮೂರನೆಯ ಅಕ್ಷರವನ್ನು ಉಪಯೋಗಿಸಿದ. A ಬದಲು D, B ಬದಲು E; ಇತ್ಯಾದಿ. ಈ ವ್ಯವಸ್ಥೆಗೆ ಜೂಲಿಯನ್ ಭಾಷೆಯೆಂದು ಹೆಸರು ಬಂದಿತು. ಯಹೂದಿ ಧರ್ಮಗ್ರಂಥಗಳಲ್ಲೂ ಗುಪ್ತ ಲಿಪಿಗಳಿವೆ. ಅಮೆರಿಕದ ಕ್ರಾಂತಿ ಕಾಲದಲ್ಲಿ ಜಾರ್ಜ್ ವಾಷಿಂಗ್‌ಟನ್ನನ ಗೂಢಚಾರರು ಶತ್ರುಗಳ ವಿಷಯವಾಗಿ ಗೂಢ ಸಮಾಚಾರವನ್ನು ಅವನಿಗೆ ಸಂಕೇತ (ಕೋಡ್) ಕ್ರಮದಲ್ಲಿ ಕಳಿಸುತ್ತಿದ್ದರು. ಎರಡನೆಯ ಜಾಗತಿಕ ಮಹಾ ಯುದ್ಧದಲ್ಲಿ ಅಮೆರಿಕನ್ನರು ಜಪಾನರ ಅತಿ ಮುಖ್ಯವಾದ ಒಂದು ರಹಸ್ಯ ನೌಕಾ ಸಂಕೇತ ಭಾಷೆಯನ್ನು ಹಿಡಿದುಕೊಂಡು ಭೇದಿಸಿದ್ದರಿಂದ ಅವರಿಗೆ ಗುಪ್ತ ಸಮಾಚಾರ ದೊರಕಿ ಜಪಾನಿನ ಪ್ರಬಲ ನೌಕಾಪಡೆಯೊಂದನ್ನು ನಾಶಮಾಡಿದರು. ಟಲ್ಲಿಯಸ್ ಟಿರೋ ಎಂಬಾತ ಸಿಸಿರೋನ ಆಜ್ಞೆಯಂತೆ ಒಂದು ಗೂಢಲಿಪಿಯನ್ನು ಆವಿಷ್ಕರಿಸಿದ. ಇದಾದ ಅನೇಕ ಶತಮಾನಗಳ ಬಳಿಕ ಯುರೋಪಿನಲ್ಲಿ ಗೂಢಲಿಪಿಯಲ್ಲಿ ಆಸಕ್ತಿ ಹೆಚ್ಚಿತು. ಯುರೋಪಿನ ನಾನಾ ರಾಷ್ಟ್ರಗಳ ರಾಯಭಾರಿಗಳೂ ಮಂತ್ರಿಗಳೂ ರಾಜಾಸ್ಥಾನಗಳಲ್ಲಿ ಒಳಸಂಚಿನಿಂದ ಮುಖ್ಯ ಕಾಗದಪತ್ರಗಳನ್ನು ಹಿಡಿದುಕೊಳ್ಳತೊಡಗಿದ್ದರಿಂದ ಸರಳ ರಚನೆಯ ಗೂಢ ಲಿಪಿಗಳು ಸಾಕಾಗದೆ ಬಹು ತೊಡಕಾದ ಗೂಢಲಿಪಿಗಳು ತಯಾರಾದವು. 1499ರಲ್ಲಿ ಅಬಟ್ ಜಾನ್ ಟ್ರಿಥೆಮಿಯಸ್ ಎಂಬಾತ ಗೂಢಲಿಪಿಯ ಪಾಲಿಗ್ರಾಫಿಯ ಎಂಬ ಗ್ರಂಥವನ್ನು ಬರೆದ. ಈ ವಿಷಯದಲ್ಲಿ ಅದೇ ಪ್ರಥಮ ಗ್ರಂಥ. ಅದರ ಮೂಲತತ್ತ್ವವನ್ನು ಇತರ ಗೂಢಲಿಪಿಗಳಿಗೆ ಪದೇ ಪದೇ ಪ್ರಯೋಗಿಸಲಾಗಿದೆ. ಅದರ ಆಧಾರದ ಮೇಲೆ ಮುಂದಿನ ಗೂಢಲಿಪಿ ಲೇಖಕರು ಗ್ರಂಥಗಳನ್ನು ರಚಿಸಿದರು. ಸ್ಟೆಗಾನೋ ಗ್ರಾಫಿಯ ಎಂಬ ಗ್ರಂಥವೂ ಪ್ರಕಟವಾಯಿತು. (ಎಂ.ಜಿ.ಕೆ.ಎಂ.)

**ಗುಪ್ತ ಶಕ** : ಮಗಧದ ಸಾಮ್ರಾಟರಾದ ಗುಪ್ತರು 4ನೆಯ ಶತಮಾನದ ಎರಡನೆಯ ದಶಕದ ಕೊನೆಯ ವೇಳೆಗೆ ಸ್ಥಾಪಿಸಿದ ವಂಶಿಕ ಸಂವತ್ಸರ. ಇತಿಹಾಸಕಾರರ ಪರಿಭಾಷೆಯಲ್ಲಿ ಇದು ಗುಪ್ತ ಶಕ, ವಲಭೀ ಶಕ, ಗುಪ್ತ–ವಲಭೀ ಶಕ ಎಂಬುದಾಗಿ ಪ್ರಸಿದ್ಧವಾಗಿದೆ. ಅಸ್ಸಾಂ, ಬಂಗಾಳ ಮತ್ತು ಒರಿಸ್ಸ ಪ್ರಾಂತ್ಯಗಳೂ ಸೇರಿದಂತೆ ಉತ್ತರ ಭಾರತದ ಬಹುಭಾಗದಲ್ಲಿ ದೊರೆತಿರುವ, 5–10ನೆಯ ಶತಮಾನಗಳ ಅವಧಿಯಲ್ಲಿ ಬರೆಯಲಾದ, ಗುಪ್ತರ ಹಾಗೂ ಅವರ ಸಾಮಂತರ ಹಲವು ಶಾಸನಗಳಲ್ಲಿ ಈ ಕಾಲಗಣನೆಯನ್ನು ಗುಪ್ತ ಕಾಲ, ಗುಪ್ತ ಪ್ರಕಾಲ, ಗುಪ್ತ ವರ್ಷ, ಗುಪ್ತ ಸಂವತ್, ಗುಪ್ತ ನೃಪ ರಾಜ್ಯ ಭುಕ್ತಿ, ಗೌಪ್ತಾಬ್ದ ಎಂದೂ ಗುಜರಾತಿನ ಕಾಠಿಯಾವಾಡ ಪ್ರಾಂತ್ಯದಲ್ಲಿ 8–13ನೆಯ ಶತಮಾನಗಳ ಅವಧಿಯ ಶಾಸನಗಳಲ್ಲಿ ವಲಭೀ ಸಂವತ್ ಎಂದೂ ಹೆಸರಿಸಲಾಗಿದೆ. 11ನೆಯ ಶತಮಾನದ ಅರಬ್ಬೀ ಯಾತ್ರಿಕ ಅಲ್‌ಬಿರೂನಿ ಈ ಶಕಗಣನೆಯನ್ನು ಗುಬತ ಕಾಲ ಮತ್ತು ಗುಬಿತ ಕಾಲ ಎಂದು ಹೆಸರಿಸಿದ್ದಾನೆ. ಅಲ್ಲದೆ ಗುಪ್ತ ಶಕ ಪ್ರಾರಂಭವಾದ್ದು ಶಾಲಿವಾಹನ ಶಕವರ್ಷ 241ರಲ್ಲಿ (319–20ರಲ್ಲಿ) ಎಂಬುದನ್ನೂ ತಿಳಿಸುತ್ತಾನೆ. ಈ ಗುಪ್ತರ ಶಕ ಪೂರ್ಣಿಮಾಂತ ಚೈತ್ರ ಶುಕ್ಲ ಪಾಡಿವ (ಪಾಡ್ಯ)ದಂದು ಆರಂಭವಾಯಿತೆಂಬ ಪ್ರತೀತಿ ಇರುವ ಕಾರಣ, ಅದು 318ರ ಡಿಸೆಂಬರ್ 20ರಂದೋ 320ರ ಫೆಬ್ರುವರಿ 26ರಂದೋ ಜಾರಿಗೆ ಬಂದಿರಬೇಕು. ಆದರೂ ಈ ಎರಡು ತೇದಿಗಳಲ್ಲಿ ಯಾವುದು ಸರಿಯೆಂದು ಖಚಿತವಾಗಿ ತಿಳಿದು ಬಾರದ ಕಾರಣ, ಗುಪ್ತ ಶಕ ವರ್ಷಕ್ಕೆ ಈಡಾದ ಪಚಲಿತ ಶಕ ವರ್ಷವನ್ನು ಕಂಡುಹಿಡಿಯುವಲ್ಲಿ ಗುಪ್ತ ಶಕ ವರ್ಷಕ್ಕೆ 316 ವರ್ಷಗಳನ್ನು ಕೂಡಿಸುವುದು ಇತಿಹಾಸಕಾರರಲ್ಲಿ ವಾಡಿಕೆಯಾಗಿದೆ.

ಹೀಗೆ 319ರಲ್ಲಿ ಗುಪ್ತಶಕವನ್ನು ಘೋಷಿಸಿದ ಗುಪ್ತ ಅರಸ ಯಾರೆಂಬ ಬಗ್ಗೆ ವಿದ್ವಾಂಸರಲ್ಲಿ ಒಮ್ಮತ ಕಂಡುಬರುವುದಿಲ್ಲ. ಶ್ರೀಗುಪ್ತ, ಘಟೋತ್ಕಚ, 1ನೆಯ ಚಂದ್ರಗುಪ್ತ ಮತ್ತು ಸಮುದ್ರಗುಪ್ತ–ಈ ನಾಲ್ಕು ಮೊದಲ ಗುಪ್ತ ಅರಸುಗಳಲ್ಲಿ ಒಬ್ಬನಲ್ಲ ಒಬ್ಬ ಈ ಕಾಲಗಣನೆಯ ಪ್ರವರ್ತಕ ಇದ್ದಿರಬಹುದೆಂದು ಸಂಶೋಧಕರು ಭಿನ್ನ ಭಿನ್ನ ಮತಗಳನ್ನು ವ್ಯಕ್ತಪಡಿಸಿರುವರಾದರೂ ಈ ನಾಲ್ವರ ಪೈಕಿ ಮೊದಲ ಬಾರಿಗೆ ಮಹಾರಾಜಾಧಿರಾಜ ಎಂಬ ಬಿರುದನ್ನು ಸ್ವೀಕರಿಸಿದವನೂ ನಾಣ್ಯಗಳನ್ನು ಹೊರಡಿಸಿರುವ ಗುಪ್ತ ಸಾಮ್ರಾಟರಲ್ಲಿ ಮೊದಲಿಗನೂ ಆದ 1ನೆಯ ಚಂದ್ರಗುಪ್ತನೇ ಗುಪ್ತಶಕವನ್ನು ಜಾರಿಗೆ ತಂದವನೆಂಬುದು ಹೆಚ್ಚಿನ ವಿದ್ವಾಂಸರ ಅಭಿಪ್ರಾಯ. ಪ್ರ.ಶ. 319ರಲ್ಲಿ ನಡೆದಿರಬಹುದಾದ ತನ್ನ ಪಟ್ಟಬಂಧೋತ್ಸವದ ಅಥವಾ ಆ ವರ್ಷದಲ್ಲಿ ತಾನು ಗಳಿಸಿಕೊಂಡ ಸಾರ್ವಭೌಮತ್ವದ ಸ್ಮರಣಾರ್ಥವಾಗಿ ಅವನು ಗುಪ್ತಶಕವನ್ನು ಸಾರಿರಬೇಕೆಂಬುದು ಆ ವಿದ್ವಾಂಸರ ಊಹೆ. ಆ ವರ್ಷದಲ್ಲಿ ಅವನ ಆಳ್ವಿಕೆಯಲ್ಲಿ ಜರುಗಿದ ಯಾವುದೋ ಮಹದ್ಘಟನೆಯ ಸವಿನೆನಪಿಗಾಗಿ ಅವನ ಮೊಮ್ಮಗನಾದ 2ನೆಯ ಚಂದ್ರಗುಪ್ತ ಈ ಶಕವನ್ನು ಘೋಷಿಸಿರಬೇಕೆಂಬ ವಾದವೂ ಹುಟ್ಟಿಕೊಂಡಿದೆ.

ಗುಪ್ತ–ವಲಭೀ ಶಕದ ಹುಟ್ಟನ್ನು ಕುರಿತ ಅಲ್‌ಬಿರೂನಿಯ ಹೇಳಿಕೆ ಕುತೂಹಲಕಾರಿಯಾಗಿದೆ. ಜನಸಾಮಾನ್ಯರು ಅವನಿಗೆ ತಿಳಿಸಿದಂತೆ, ದುಷ್ಟರೂ ಬಲಿಷ್ಠರೂ ಆಗಿದ್ದ ಗುಪ್ತ ಅರಸುಗಳಲ್ಲಿ ಕೊನೆಯವನಾದ ವಲಭನೆಂಬಾತನ ಪತನದ ಸವಿನೆನಪಿಗಾಗಿ ವಲಭೀ ಸಂವತ್ಸರವನ್ನು ಘೋಷಿಸಲಾಯಿತಂತೆ. ಗುಪ್ತವಂಶದಲ್ಲಿ ವಲಭನೆಂಬ ರಾಜನಾರೂ ಇರಲಿಲ್ಲವಾಗಿ, ಗುಪ್ತ ಶಕವನ್ನೇ ಗುಪ್ತರ ಅನಂತರವೂ ಅವರ ಸಾಮಂತರಾಗಿದ್ದ ವಲಭಿಯ ಮೈತ್ರಕರು ಉಪಯೋಗಿಸಿದ್ದರಾದ ಕಾರಣ, ಕಾಲಕ್ರಮದಲ್ಲಿ ನಿಜಸಂಗತಿ ಮರೆಯಾಗಿ, 11ನೆಯ ಶತಮಾನದ ವೇಳೆಗೆ ಅಲ್ ಬಿರೂನಿಯ ಕಿವಿಗೆ ಬಿದ್ದ ಕಟ್ಟುಕತೆ ಪ್ರಚಾರಕ್ಕೆ ಬಂದಿರಬೇಕು.

ಗುಪ್ತ ಶಕದ ಹುಟ್ಟು 319ರಷ್ಟು ಹಿಂದಿನದಾದರೂ ಗುಪ್ತರ ವಂಶ ನಾಮದೊಂದಿಗೆ ಜೋಡಿಸಿ ಅದನ್ನು ಪ್ರಸ್ತಾಪಿಸುವ ಪ್ರಾಚೀನತಮ ಶಾಸನ ಪ್ರ.ಶ. 455ರಷ್ಟು ಈಚಿನದಾಗಿದೆ. ಸ್ಕಂದಗುಪ್ತನ ಆಳ್ವಿಕೆಗೊಳಗಾದ ಗುಪ್ತ ಶಕ 136 (ಪ್ರ.ಶ. 455), 137 (ಪ್ರ.ಶ. 456) ಮತ್ತು 138 (ಪ್ರ.ಶ. 457–58)ನೆಯ ವರ್ಷಗಳನ್ನು ಪ್ರಸ್ತಾಪಿಸುವ, ಗುಜರಾತಿನ ಜುನಾಗಢದಲ್ಲಿ ಕಾಣಸಿಗುವ ಈ ಶಾಸನ ಗುಪ್ತಶಕವನ್ನು ಗುಪ್ತ ಪ್ರಕಾಲ, ಗುಪ್ತ ಕಾಲ ಎಂದು ಹೆಸರಿಸುತ್ತದೆ. ಅದಕ್ಕೂ ಹಿಂದಿನ ಮತ್ತು ಅನಂತರದ ಹೆಚ್ಚಿನ ಗುಪ್ತ ಶಾಸನಗಳಲ್ಲಿ ಗುಪ್ತಶಕವನ್ನು ಸಂ, ಸಂವ, ಸಂವತ್, ರಾಜ್ಯಸಂವತ್ಸರ, ವರ್ಷ ಎಂದು ಮುಂತಾಗಿ ಗುಪ್ತರ ವಂಶನಾಮದ ಜೋಡಣೆಯಿಲ್ಲದೆಯೆ ಪ್ರಸ್ತಾಪಿಸಲಾಗಿದೆ.

ಗುಪ್ತರ ಸಾಮಂತರಾಗಿದ್ದ ಕಾಠಿಯಾವಾಡದ ವಲಭಿಯ ಮೈತ್ರಕ ಅರಸುಮನೆತನದವರು ಗುಪ್ತರ ಪತನದ ಅನಂತರವೂ ಗುಪ್ತಶಕವನ್ನೇ ಬಳಸುತ್ತ ಬಂದಿದ್ದು, ಅವರ ರಾಜಧಾನಿ ವಲಭಿಯಾಗಿದ್ದ ಕಾರಣ, ಆ ಶಕಕ್ಕೆ ವಲಭಿ ಸಂವತ್ಸರವೆಂಬ ಹೆಸರು ಹುಟ್ಟಿಕೊಂಡಿತು. ಮೈತ್ರಕರ ಶಾಸನಗಳಲ್ಲಿ ಕೇವಲ ಸಂ, ಸಂವತ್, ಸಂವತ್ಸರ ಎಂದಷ್ಟೇ ಉಕ್ತವಾಗಿರುವ ಈ ಸಂವತ್ಸರದ ವಲಭೀ ಸಂವತ್ ಎಂಬ ವಂಶಿಕನಾಮದ ಪ್ರಾಚೀನತಮ ಉಲ್ಲೇಖವಿರುವುದು ಕಾಠಿಯಾವಾಡದ ಊನಾದಲ್ಲಿ ದೊರೆತಿರುವ, ಪ್ರ.ಶ. 893–94ರಲ್ಲಿ ಹುಟ್ಟಿದ, ಪ್ರತೀಹಾರ ಚಕ್ರವರ್ತಿ ಮಹೇಂದ್ರಾಯುಧದೇವನ ತಾಮ್ರಶಾಸನದಲ್ಲಿ. ಅದೇ ಕಾಲಕ್ಕೆ ಆ ಪ್ರಾಂತ್ಯದಲ್ಲಿ ಈ ಶಕವನ್ನು ಗುಪ್ತಶಕವೆಂದೂ ಕರೆಯುತ್ತಿದ್ದರೆಂಬುದು ಜಾಇಂಕ ರಾಜನ ಪ್ರ.ಶ. 905ರ ಮೋರ್ಬಿ ತಾಮ್ರಶಾಸನದಲ್ಲಿಯ ಗೌಪ್ತಬ್ದದ ಪ್ರಸ್ತಾಪದಿಂದ ವಿಶದವಾಗುತ್ತದೆ. ವಲಭೀ ಸಂವತ್ಸರದ ಪ್ರಸ್ತಾಪವಿರುವ ಇತ್ತೀಚಿನ ಶಾಸನವೆಂದರೆ ಆ ಶಕದ 945ರಲ್ಲಿ (ಪ್ರ.ಶ. 1264) ಬರೆಯಲಾದ ಚಾಳುಕ್ಯ–ವಾಘೇಲ ಮನೆತನದ ಅರಸು ಅರ್ಜುನನ ವೇರಾವಲ್ ಶಿಲಾಶಾಸನ. (ಕೆ.ವಿ.ಆರ್.)

**ಗುಪ್ತ ಸಂಘಗಳು :** ಹೆಸರೇ ತಿಳಿಸುವಂತೆ, ಉದ್ದೇಶಿತ ಕಾರ್ಯಸಾಧನೆಗಾಗಿ ಗುಟ್ಟಾಗಿ ಕೆಲಸ ಮಾಡುವ ಸಂಘಗಳು (ಸೀಕ್ರೆಟ್ ಸೊಸೈಟೀಸ್). ಇಂಥ ಸಂಸ್ಥೆಗಳು ಎಲ್ಲಿರುತ್ತವೆ, ಹೇಗೆ ಕೆಲಸ ಮಾಡುತ್ತವೆ, ಇವುಗಳ ಸದಸ್ಯರಾರು, ಎಷ್ಟು ಮಂದಿ ಇದ್ದಾರೆ, ಏನು ಕೆಲಸ ಮಾಡುತ್ತಿದ್ದಾರೆ– ಮುಂತಾದ ಎಲ್ಲ ವಿಷಯಗಳೂ ಆದಷ್ಟು ಗೋಪ್ಯವಾಗಿರುತ್ತವೆ. ಸದಸ್ಯತ್ವದ ಆರಂಭ ದೀಕ್ಷೆ, ಮುಂದಿನ ಕಾರ್ಯಾಚರಣೆ, ಕೈಗೊಳ್ಳಬೇಕಾದ ಶಪಥಗಳು, ಗುರುತಿನ ಸಂಜ್ಞೆಗಳು– ಇವು ಒಂದೊಂದು ಸಂಸ್ಥೆಗೂ ಒಂದೊಂದು ಬಗೆಯಲ್ಲಿರುತ್ತವೆ. ಬಳಗದ ಭಾಷೆ, ಉಡುವ ತೊಡುವ ಪರಿಕರಗಳು ಸಹ ವಿಶಿಷ್ಟವಾಗಿದ್ದು ಗೋಪ್ಯ ಪಾಲನೆಗೆ ನೆರವಾಗುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕಾಲೇಜು ಸೌಭ್ರಾತೃ ಸಂಘಗಳು, ಕುಕ್ಲುಕ್ಸ್ ಕ್ಲ್ಯಾನ್, ಅಂತಾರಾಷ್ಟ್ರೀಯ ಸೌಭ್ರಾತೃ ಸಂಘಗಳು (ಫ್ರೀ ಮೇಸನ್ರಿ)– ಇವು ಪ್ರಸಿದ್ಧವಾದ ಕೆಲವು ಗುಪ್ತಸಂಘಗಳು.

ತಮ್ಮದೇ ಆದ ನಿಯಮಾವಳಿಗಳನ್ನು ಹೊಂದಿದ್ದ ಪ್ರಾಚೀನ ಧಾರ್ಮಿಕ ಗುಪ್ತ ಸಂಘಗಳು ಪೂರ್ವ ಹಾಗೂ ಪಶ್ಚಿಮ ರಾಷ್ಟ್ರಗಳಲ್ಲಿ ಬಹುಸಂಖ್ಯೆಯಲ್ಲಿದ್ದವೆನ್ನಲು ಚಾರಿತ್ರಿಕ ದಾಖಲೆಗಳಿವೆ. ಇವುಗಳಲ್ಲಿ ಕೆಲವು ಸಂಸ್ಥೆಗಳು ಅನೂಚಾನವಾಗಿ ನಡೆದು ಬಂದ ಧಾರ್ಮಿಕ ಪರಂಪರೆಯನ್ನು ಉಳಿಸಿಕೊಂಡು ಬರಲು ಕೆಲಸ ಮಾಡಿದರೆ, ಮತ್ತೆ ಕೆಲವು ಸಂಸ್ಥೆಗಳು ಇತರ ಪ್ರಬಲ ಸಂಘಗಳು ತುಳಿತ, ಬಹಿಷ್ಕಾರಗಳನ್ನು ತಪ್ಪಿಸಿಕೊಳ್ಳಲು ದುಡಿಯುತ್ತಿದ್ದುವು. ಆ ಕ್ರೈಸ್ತ ನಂಬಿಕೆಗಳನ್ನು ಹೊಂದಿದ್ದ ರೋಮ್ ಚಕ್ರಾಧಿಪತ್ಯದಲ್ಲಿ ಕ್ರೈಸ್ತರೂ ಮಧ್ಯಯುಗದ ಯುರೋಪಿನಲ್ಲಿ ಕ್ರೈಸ್ತ ಮತ ವಿರೋಧಿಗಳು ಗುಪ್ತವಾಗಿಯೇ ತಮ್ಮ ಕೆಲಸಗಳನ್ನು ನಿರ್ವಹಿಸಬೇಕಾಗಿತ್ತು. ಆರ್ಥಿಕ ವ್ಯವಹಾರಗಳಲ್ಲಿ ತೊಡಗಿದ ಮಧ್ಯಯುಗೀನ ಶ್ರೇಣಿಗಳೂ (ಗಿಲ್ಡ್ಸ್) ಅಷ್ಟೆ. ಚರಿತ್ರೆಗಳನ್ನು ಅವಲೋಕಿಸಿದರೆ ಕಾಲಕಾಲಕ್ಕೆ ಅನೇಕ ಕ್ರಾಂತಿಕಾರಿ ಗುಂಪುಗಳು ಗುಪ್ತವಾಗಿದ್ದುಕೊಂಡು ತಮ್ಮ ಗುರಿಸಾಧನೆಗಾಗಿ ಕೆಲಸ ಮಾಡಿರುವುದನ್ನು ಗುರುತಿಸಬಹುದು. 19ನೆಯ ಶತಮಾನದಲ್ಲಿ ಯುರೋಪಿನಲ್ಲಿ ಉದಾರವಾದಿಗಳನ್ನೂ ರಾಷ್ಟ್ರೀಯವಾದಿಗಳನ್ನೂ ಪ್ರಜಾಪ್ರಭುತ್ವವಾದಿಗಳನ್ನೂ ದಮನ ಮಾಡಿದಾಗ ಅನೇಕ ಗುಪ್ತಸಂಘಗಳು ಹುಟ್ಟಿಕೊಂಡವು. ಇಟಲಿ, ಫ್ರಾನ್ಸ್, ಮತ್ತು ಸ್ಪೇನುಗಳಲ್ಲಿ ತಲೆಯೆತ್ತಿದ ಕಾರ್ಬೋನಾರಿ, ನೇಪಲ್ಸ್‌ನಲ್ಲಿ ಹುಟ್ಟಿ ರಾಜಕೀಯ ಉತ್ಕ್ರಾಂತಿಗಳನ್ನೆಸಗಿದ ಕಮೋರ–ಇವನ್ನು ಇಲ್ಲಿ ನೆನೆಯಬಹುದು. ಫೆನಿಯನ್ ಐರಿಷ್ ರಿಪಬ್ಲಿಕನ್ ಬ್ರದರ್‌ಹುಡ್ ಮತ್ತು ಡಿಸೆಂಬರಿಸ್ಟ್ಸ್–ಇವು ಇತರ ಉದಾಹರಣೆಗಳು. ಸಿಸಿಲಿಯಲ್ಲಿ ಮೊದಲಿಗೆ ರೂಪುಗೊಂಡ ಮಾಫಿಯಾ ಎಂಬ ಗುಪ್ತಸಂಸ್ಥೆಯೊಂದು ಅಮೆರಿಕಾ ಸಂಯುಕ್ತಸಂಸ್ಥಾನಗಳು ಮತ್ತು ಇತರ ಕಡೆಗಳಲ್ಲಿ ದರೋಡೆ, ಮಾದಕ ಪದಾರ್ಥ ಸಾಗಣೆ ಮೊದಲಾದ ಹೀನಕೃತ್ಯಗಳಲ್ಲಿ ತೊಡಗಿತ್ತೆಂದು ಹೇಳಲಾಗಿದೆ. ಐರ್ಲೆಂಡಿನಲ್ಲಿ ಮಾಲಿ ಮಾಗ್ವೈರರ ಸಂಘ ರಾಜಕೀಯ ಕ್ರಾಂತಿಗಾಗಿ ಬುಡಮೇಲು ಕಾರ್ಯಾಚರಣೆಗಳನ್ನು ಎಸಗುತ್ತಿತ್ತೆಂದು ತಿಳಿದುಬರುತ್ತದೆ. ಇದರ ಸದಸ್ಯರು ಸ್ತ್ರೀವೇಷಧಾರಿಗಳಾಗಿದ್ದುದು ಈ ಸಂಘದ ಒಂದು ವೈಶಿಷ್ಟ್ಯ.

ದೇಶದ ಹಿತವನ್ನೇ ಗಮನದಲ್ಲಿಟ್ಟುಕೊಂಡು ಗುಪ್ತವಾಗಿ ಕೆಲಸ ಮಾಡುತ್ತಿರುವ ಸಂಘಗಳು ಅಮೆರಿಕದಲ್ಲಿವೆ. ಭಾರತದಲ್ಲಿ ಸ್ವಾತಂತ್ರ್ಯಗಳಿಕೆಗಾಗಿ ಹೆಣಗಿದ ಭಾರತ ರಾಷ್ಟ್ರೀಯ ಸೇನೆ (ಐಎನ್‌ಎ) ಅರೆಗುಪ್ತ ಸಂಘಕ್ಕೆ ಒಂದು ನಿದರ್ಶನ. ಈಚೆಗೆ ಪ್ರಬಲಿಸಿರುವ ನಕ್ಸಲೀಯ ಚಟುವಟಿಕೆಗಳು, ನಾಗಾಲ್ಯಾಂಡಿನ ಗುಪ್ತ ನಾಗಾಕಾರ್ಯಕ್ರಮಗಳು, ಬ್ಲಾಕ್ ಡಿಸೆಂಬರ್ ಕಾರ್ಯಕಲಾಪಗಳು, ಗುಪ್ತಸಂಘಗಳಿಂದಲೇ ನಡೆಯುತ್ತಿವೆ. ಅಮೆರಿಕಾದಲ್ಲಿ ಕುಕ್ಲುಕ್ಸ್ ಕ್ಲ್ಯಾನ್ ಸಂಘ ಮೊದಲಿಗೆ ಪಕ್ಕ ಗುಪ್ತ ಸಂಘವಾಗಿತ್ತು. ಈಚೆಗೆ ಅಂದರೆ ಎರಡನೆಯ ಮಹಾಯುದ್ಧವಾದ ಮೇಲೆ ಅದರ ಕೆಲವು ಉದ್ದೇಶಗಳು ಪ್ರಕಟವಾಗಿವೆ.

ಹೆಚ್ಚು ಹೆಚ್ಚು ಸಂಕೀರ್ಣವಾದ ಉದ್ದೇಶಗಳನ್ನುಳ್ಳ ಗುಪ್ತ ಸಂಘಗಳು ತಮ್ಮ ಗುರಿ ಸಾಧನೆಗಾಗಿ ಕಟ್ಟುನಿಟ್ಟಾದ ನಿಬಂಧನೆಗಳನ್ನು ರೂಪಿಸಿಕೊಂಡಿದೆ. ಸಂಘದ ಸದಸ್ಯರಿಗೆ ಕ್ರಮಕ್ರಮವಾಗಿ ಹಂತಹಂತವಾಗಿ ಬಿಗಿಯಾಗುತ್ತ ಹೋಗುತ್ತದೆ. ಎಲ್ಲ ಸದಸ್ಯರೂ ತಮಗೆ ನಿರ್ವಹಿಸಿದಷ್ಟು ಕೆಲಸಗಳನ್ನು ಮಾಡಿಬಿಡುತ್ತಾರೆ. ಆದರೆ ಸಂಘದ ಅಂತಿಮ ಗುರಿ ಮಾತ್ರ ಮೇಲಿನ ಕೆಲವರಿಗಷ್ಟೆ ತಿಳಿದಿರುತ್ತದೆ. ಎಷ್ಟೋ ಸಂಘಗಳಲ್ಲಿನ ನಾಯಕರು ಯಾರು ಎಂಬುದು ಸದಸ್ಯರಿಗೆ ತಿಳಿದಿರುವುದಿಲ್ಲ. ಇಂಥ ಕಡೆಗಳಲ್ಲೆಲ್ಲ ನಿಯಮಾವಳಿಗಳನ್ನು ಬರೆದಿಡುವ ಪದ್ಧತಿ ಇರುವುದಿಲ್ಲ. ಕಾಲಕಾಲಕ್ಕೆ ಬಾಯಿಂದ ಬಾಯಿಗೆ ಆಜ್ಞೆಗಳು ರವಾನೆಯಾಗುತ್ತವೆ. ವರದಿಗಳೂ ಅಷ್ಟೆ. ಕಿವಿಯಿಂದ ಕಿವಿಗೆ ಒಯ್ಯಲ್ಪಡುತ್ತವೆ. ದೀಕ್ಷೆ ತೆಗೆದುಕೊಳ್ಳುವಾಗ ಸದಸ್ಯರು ಇಟ್ಟ ಆಣೆಗಳನ್ನು ಯಾವಕಾರಣಕ್ಕೆ ಆಗಲಿ ಮೀರುವಂತಿಲ್ಲ. ಹಾಗೆ ಮಾಡಿದ ಸದಸ್ಯರನ್ನು ಸಂಘದಿಂದ ಉಚ್ಚಾಟನೆಗೊಳಿಸುವುದಲ್ಲದೆ ಕಠಿಣ ಶಿಕ್ಷೆಗೂ ಗುರಿ ಮಾಡುವುದುಂಟು.

ನಿರಂಕುಶಾಧಿಕಾರ ಪ್ರಬಲವಾಗಿರುವ– ಉದಾಹರಣೆಗೆ ನಾಜ಼ಿ ಮತ್ತು ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ– ಎಲ್ಲ ಅಭಿಪ್ರಾಯಗಳಿಗೂ ಮನ್ನಣೆ ಇರುವುದಿಲ್ಲವಾಗಿ ಅಂಥ ಕಡೆ ಗುಪ್ತ ಸಂಘಗಳು ಹುಟ್ಟಿ ಬೆಳೆಯುವ ಸಾಧ್ಯತೆ ಹೆಚ್ಚು.

ಪ್ರ.ಶ.ಸು. 4ನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿರಬಹುದಾದ ಇಲ್ಲವೆ ಆ ಕಾಲದಲ್ಲಿ ಪ್ರಬಲಿಸಿತು ಎನ್ನಲಾದ ಹುಂಗ್ ಸಂಘದ (ಮುಕ್ಕೂಟ ಸಂಘ) ವಿವರಗಳು ಸ್ವಾರಸ್ಯವಾಗಿವೆ. ಅಮಿತಾಭ ಬುದ್ಧನ ಪರಂಪರೆಯನ್ನು ಬೆಳೆಸಲು ಈ ಸಂಘವನ್ನು ಚೀನದಲ್ಲಿ ಪ್ರಾರಂಭಿಸಿದವ ಇಯಾನ್ ಇಲ್ಲವೆ ಹುವೈ–ಇನ್ ಎಂಬಾತ. ಅಲ್ಲಿಂದ ಈ ಸಂಘ ಸುಮಾರು 1500 ವರ್ಷಗಳು ಸಜೀವವಾಗಿದ್ದು ಬೇಕಾದಷ್ಟು ಕೆಲಸ ಮಾಡಿತು ಎಂದು ಹೇಳಲಾಗಿದೆ. ಜೀವ ಅಧೋಲೋಕದಿಂದ ಸ್ವರ್ಗಕ್ಕೆ ಪ್ರಯಾಣ ಮಾಡಿ ದೇವನಗರವನ್ನು ಪ್ರವೇಶಿಸುವುದನ್ನು ಈ ಸಂಘದ ಆಚರಣೆಗಳು ಸಂಕೇತಿಸುತ್ತವೆ ಎಂದೂ ಅನುಭಾವಿಯಾದ ಮನುಷ್ಯ ಪರಮಪುರುಷನೊಂದಿಗೆ ಐಕ್ಯವಾಗುವುದನ್ನು ಸೂಚಿಸುತ್ತವೆ ಎಂದೂ ಹೇಳಲಾಗಿದೆ.

ಈ ಸಂಘದ ವಿಧಿಗಳಲ್ಲಿ ಮೊದಲನೆಯದು ಆಶ್ರಮ ಪ್ರವೇಶಕ್ಕೆ ಸಂಬಂಧಿಸಿದ್ದು, ಆ ಮಧ್ಯಾಹ್ನ ಸದಸ್ಯರಿಗೆ ಸಂಘದ ಚರಿತ್ರೆಯನ್ನು ತಿಳಿಸಲಾಗುತ್ತಿತ್ತು. ತನಗೆ ಸಹಾಯ ಮಾಡಿದ ಸಂನ್ಯಾಸಿಗಳನ್ನು ಕೃತಘ್ನವಾದ ದೊರೆ ನಿಷ್ಕರುಣೆಯಿಂದ ಕೊಲ್ಲಿಸುವುದು– ಆಗ ಅಳಿದುಳಿದ ಐವರು ಸಂನ್ಯಾಸಿಗಳು ಸಂಘವೊಂದನ್ನು ಸ್ಥಾಪಿಸುವುದು–ಈ ಮುಂತಾದ ಅಂಶಗಳನ್ನು ಸದಸ್ಯರು ಆಗ ತಿಳಿಯುತ್ತಿದ್ದರು. ಅನಂತರ ಸದಸ್ಯರಿಗೆ ಪೂರ್ಣ ಬಿಳಿಯ ಉಡುಪನ್ನು ಕೊಡಲಾಗುತ್ತಿತ್ತು. ಅದು ದುಃಖ ಮತ್ತು ಮರಣ ಸೂಚಕ. ಅನಂತರ ಅವರ ಬಲತೋಳು, ಎದೆ, ಮೊಣಕಾಲುಗಳ ಮೇಲಿನ ಬಟ್ಟೆಗಳನ್ನು ಓಸರಿಸಿ ಬೆತ್ತಲೆ ಮಾಡಲಾಗುತ್ತಿತ್ತು. ಆಮೇಲೆ ಅವರಿಗೆ ವಿಶಿಷ್ಟವಾದ ಹುಲ್ಲಿನ ಪಾದರಕ್ಷೆಗಳನ್ನು ಕೊಡಲಾಗುತ್ತಿತ್ತು. ಇದಾದ ಒಡನೆಯೆ ಸದಸ್ಯರಿಗೆ ದೀಕ್ಷೆ ನೀಡಲಾಗುತ್ತಿತ್ತು. ಅನಂತರ ಸದಸ್ಯರು ಮೂರು ಬಾಗಿಲುಗಳನ್ನು ದಾಟಿ ಒಳಕೋಣೆಗೆ ಹೋಗಿ ಅಲ್ಲಿ ಸಿದ್ಧವಾಗಿದ್ದ ಮದ್ಯದ ಬಟ್ಟಲಿಗೆ ತಮ್ಮ ರಕ್ತವನ್ನು ಸೇರಿಸಿ ಆ ಮಿಶ್ರಣವನ್ನು ತೀರ್ಥದಂತೆ ಎಲ್ಲರೂ ಕುಡಿಯಲೇಬೇಕಾಗಿತ್ತು. ಪುರುಷರಂತೆ ಸ್ತ್ರೀಯರಿಗೂ ಈ ಸಂಘದಲ್ಲಿ ಸದಸ್ಯತ್ವ ಇತ್ತು. ಕೊನೆಯದಾಗಿ ಧಾರ್ಮಿಕ ಧ್ವನಿಯುಳ್ಳ ಪ್ರಶ್ನೋತ್ತರ ಮಾಲಿಕೆಯೊಂದನ್ನು ಸದಸ್ಯರಿಗೆ ಒಪ್ಪಿಸಲಾಗುತ್ತಿತ್ತು.

ಉದಾಹರಣೆಗಾಗಿ ಈ ಸಂಘದ ವಿವರಗಳನ್ನಿಲ್ಲಿ ಕೊಡಲಾಗಿದೆ. ಅನೇಕ ಇತರ ಸಂಘಗಳಲ್ಲೂ ಇಂಥವೇ ಆದ ನಿಯಮಾವಳಿಗಳಿರುವುದನ್ನು ಗಮನಿಸಲಾಗಿದೆ. ಮುಖ್ಯವಾಗಿ ಇಲ್ಲಿನ ನಿಯಮಗಳಲ್ಲಿನ ಸಾಮ್ಯ ಆಶ್ಚರ್ಯಗೊಳಿಸುವಂಥದು.

ಮಾನವಶಾಸ್ತ್ರಜ್ಞರು ಹಾಗೂ ಸಮಾಜಶಾಸ್ತ್ರಜ್ಞರು ಆಸ್ಟ್ರೇಲಿಯ ಮತ್ತು ಆಫ್ರಿಕಗಳ ಅನೇಕ ಆದಿವಾಸಿ ಬುಡಕಟ್ಟುಗಳಲ್ಲಿ, ಅಮೆರಿಕಾದ ರೆಡ್ ಇಂಡಿಯನರಲ್ಲಿ ಇದ್ದ ಗುಪ್ತಸಂಘಗಳ ವಿಷಯವಾಗಿ ಹೆಚ್ಚಿನ ಅಧ್ಯಯನ ಮಾಡಿದ್ದಾರೆ. (ಎಚ್.ಆರ್.ಆರ್.)

**ಗುಪ್ತೋಷ್ಣ : ನೋಡಿ– ಉಷ್ಣದ ಪರಿಮಾಣ**

**ಗುಪ್ಪಟೆ ಗಿಡ :** ಸೊಲನೇಸೀ ಕುಟುಂಬಕ್ಕೆ ಸೇರಿದ ಫೈಸೇಲಿಸ್ ಜಾತಿಯ ಕೆಲವು ಪ್ರಭೇದಗಳಿರುವ ಸಾಮಾನ್ಯ ಹೆಸರು. ಗುಡ್ಡೆ ಹಣ್ಣು ಪರ್ಯಾಯನಾಮ. ಉತ್ತರ ಹಾಗೂ ದಕ್ಷಿಣ ಅಮೆರಿಕಗಳ ಮೂಲವಾಸಿಗಳಾದ ಇವನ್ನು ಹಣ್ಣುಗಳಿಗಾಗಿ ಭಾರತವೂ ಸೇರಿದಂತೆ ಪ್ರಪಂಚದ ಹಲವಾರು ಉಷ್ಣದೇಶಗಳಲ್ಲಿ ದೊಡ್ಡ ಮೊತ್ತದಲ್ಲಿ ಬೆಳೆಸಲಾಗಿದೆ. ಕೃಷಿಯಲ್ಲಿರುವ ಪ್ರಭೇದಗಳಲ್ಲಿ ಮುಖ್ಯವಾದವು ಪೆರೂವಿಯಾನ ಅಥವಾ ಎಡ್ಯುಲಿಸ್, ಇಕ್ಸೊಕಾರ್ಪ ಮತ್ತು ಮಿನಿಮ ಪ್ರಭೇದಗಳು. ಇವುಗಳಲ್ಲಿ ಪೆರೂವಿಯಾನ ಮತ್ತು ಮಿನಿಮ ಪ್ರಭೇದಗಳು ಕೆಲವೆಡೆ ಕೃಷಿಯಿಂದ ತಪ್ಪಿಸಿಕೊಂಡು ಕಾಡುಗಿಡಗಳಾಗಿ ಬೆಳೆದಿವೆ.

ಒಳಚಿತ್ರದಲ್ಲಿ ಕಾಯಿಗಳನ್ನು ತೋರಿಸಿದೆ

ಏಕವಾರ್ಷಿಕ ಇಲ್ಲವೆ ಬಹುವಾರ್ಷಿಕ ಮೂಲಿಕೆ ಗಿಡಗಳಾಗಿ ಬೆಳೆಯುವ ಇವು ಭಾರತದಲ್ಲಿ ಎಲ್ಲ ಕಡೆಗಳಲ್ಲೂ ಬಯಲು ಭೂಮಿಗಳಲ್ಲಿ, ಗದ್ದೆಗಳ ಬಳಿ, ಸಮುದ್ರ ಮಟ್ಟಕ್ಕಿಂತ 1400 ಮೀ ಎತ್ತರದ ವರೆಗಿನ ಬೆಟ್ಟ ಸೀಮೆಗಳಲ್ಲಿ ಕಾಣದೊರೆಯುತ್ತವೆ.

ಗುಪ್ಪಟೆ ಗಿಡದ ಮೂರು ಮುಖ್ಯ ಪ್ರಭೇದಗಳ ವಿವರಣೆ ಹೀಗಿದೆ :

1 ಫೈಸೇಲಿಸ್ ಪೆರೂವಿಯಾನ ಪ್ರಭೇದ : ಇಂಗ್ಲಿಷಿನಲ್ಲಿ ಇದರ ಹೆಸರು ಕೇಪ್‌ಗೂಸ್‌ಬೆರಿ. ನೇರವಾಗಿ ಹಾಗೂ ಚೆನ್ನಾಗಿ ಕವಲೊಡೆಯುತ್ತ ಬೆಳೆಯುವ ಗಿಡವಿದು. ಇದೊಂದು ಬಹುವಾರ್ಷಿಕ ಪ್ರಭೇದ. ಕಾಂಡದ ಮೇಲೆ ದಟ್ಟ ಕೂದಲುಗಳ ಹೊದಿಕೆ ಉಂಟು. ಎಲೆಗಳ ಆಕಾರ ಅಂಡದಂತೆ. ಹೂಗಳು ಹಳದಿ ಬಣ್ಣಕ್ಕಿವೆ. ದಳಗಳ ಬುಡದಲ್ಲಿ ಒಳಮುಖದ ಮೇಲೆ ಊದಾ ಬಣ್ಣದ ಮಚ್ಚೆಗಳಿವೆ. ಕಾಯಿ ಬೆರಿ ಮಾದರಿಯದು ; ಗುಂಡಗೆ, 2–3 ಸೆಂಮೀ. ಗಾತ್ರಕ್ಕಿದ್ದು ಗಾಳಿ ತುಂಬಿ ಊದಿಕೊಂಡ ಪುಷ್ಪಪಾತ್ರೆಯಿಂದ ಆವೃತವಾಗಿದೆ.

ಮೂಲತಃ ಅಮೆರಿಕದ ಉಷ್ಣ ಪ್ರದೇಶಗಳ ನಿವಾಸಿಯಿದು. ಭಾರತದ ಉತ್ತರ ಪ್ರದೇಶ, ರಾಜಾಸ್ತಾನ, ಪಂಜಾಬುಗಳಲ್ಲಿ ಇದರ ವ್ಯವಸಾಯ ಇದೆ. ಪುಣೆಯ ಸುತ್ತಮುತ್ತಲೂ ಪ್ರದೇಶಗಳು, ಕೂನೂರು ಮತ್ತು ಆಂಧ್ರಪ್ರದೇಶದ ಕೆಲವೆಡೆಗಳಲ್ಲೂ ಇದನ್ನು ಬೆಳೆಸಲಾಗುತ್ತಿದೆ. ಇದು ಕಾಡುಗಿಡವಾಗಿ ಬೆಳೆಯುವುದೂ ಉಂಟು. ಟೊಮ್ಯಾಟೊ ವ್ಯವಸಾಯಕ್ಕೆ ಬೇಕಾಗುವ ಮಣ್ಣು ಮತ್ತು ಹವಾಗುಣಗಳೇ ಇದರ ವ್ಯವಸಾಯಕ್ಕೂ ಬೇಕು. ಗಿಡಗಳ ಬೆಳವಣಿಗೆಯ ಕಾಲದಲ್ಲಿ ಹೆಚ್ಚು ಉಷ್ಣತೆಯೂ ಮಳೆಯೂ ಬೇಕು. ಆದರೆ ಹಣ್ಣುಗಳು ಮಾಗುವಾಗ ಒಣಹವೆಯಿರಬೇಕು. ಮರಳುಮಿಶ್ರಿತ ಗೋಡು ಮಣ್ಣಿನಿಂದ ಲ್ಯಾಟರೈಟ್ ಮಣ್ಣಿನವರೆಗಿನ ವಿವಿಧ ಬಗೆಯ ನೆಲಗಳಲ್ಲಿ ಇದು ಬೆಳೆಯಬಲ್ಲುದು. ಗಿಡಗಳನ್ನು ಬೀಜಬಿತ್ತನೆಯ ಮೂಲಕವೂ, ಒಂದು ವರ್ಷ ವಯಸ್ಸಿನ ಗಿಡಗಳ ಕಾಂಡತುಂಡುಗಳಿಂದಲೂ ವೃದ್ಧಿಸುತ್ತಾರೆ. ಬೀಜದ ಮೂಲಕ ವೃದ್ಧಿಸುವುದಾದರೆ ಮೊದಲು ಒಟ್ಲುಪಾತಿಯಲ್ಲಿ ಬೀಜ ಬಿತ್ತಿ ಸಸಿಗಳನ್ನು ಬೆಳೆಸಿ, ಅನಂತರ ಸಸಿಗಳನ್ನು ನಾಟಿ ಮಾಡಲಾಗುತ್ತದೆ. ನಾಟಿ ಮಾಡುವ ಕಾಲ ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳು. ಕಾಂಡ ತುಂಡಿನಿಂದ ವೃದ್ಧಿಸುವ ಕಾಲ ಮಾರ್ಚ್–ಜುಲೈಗಳಲ್ಲಿ. ಕಾಂಡ ತುಂಡುಗಳಿಂದ ಬೆಳೆಸುವ ಗಿಡಗಳು ಬೇಗ ಹೂ ಬಿಡುತ್ತವೆ. ಮತ್ತು ಇವುಗಳ ಇಳಿವರಿಯೂ ಹೆಚ್ಚು. ಆದರೆ ಬೀಜದಿಂದ ಪಡೆಯಲಾದವುಗಳಂತೆ ಹುಲುಸಾಗಿ ಬೆಳೆಯುವುದಿಲ್ಲ.

ಇದನ್ನು ಶುದ್ಧ ಬೆಳೆಯಾಗಿ ಇಲ್ಲವೆ ಮಿಶ್ರ ಬೆಳೆಯಾಗಿ ಕೃಷಿ ಮಾಡಬಹುದು. ಗಿಡಗಳನ್ನು ನಾಟಿ ಮಾಡುವಾಗ ಒಂದೊಂದಕ್ಕೂ ಸುಮಾರು 2.25 ಕೆಜಿ ಕಾಂಪೋಸ್ಟ್ ಇಲ್ಲವೆ ಕೊಟ್ಟಿಗೆ ಗೊಬ್ಬರವನ್ನು ಹಾಕಿದರೆ ಹಣ್ಣುಗಳ ಗಾತ್ರವೂ ಇಳುವರಿಯೂ ಗಣನೀಯವಾಗಿ ಹೆಚ್ಚುತ್ತದೆ. ನಾಟಿ ಮಾಡಿದ 3 ತಿಂಗಳುಗಳಲ್ಲಿ ಕಾಯಿಗಳು ಮಾಗುತ್ತವೆ. ದಕ್ಷಿಣ ಭಾರತದಲ್ಲಿ ಜನವರಿಯಿಂದ ಏಪ್ರಿಲ್‌ವರೆಗೆ ಹಣ್ಣುಗಳನ್ನು ಮೊದಲ ಸಲಕ್ಕೆ ಕೀಳಲಾಗುತ್ತದೆ. ಗಿಡಗಳು ಮತ್ತೆ ಮೇ ತಿಂಗಳಲ್ಲಿ ಹೂ ಬಿಟ್ಟು ಜುಲೈ–ಸೆಪ್ಟೆಂಬರ್ ವೇಳೆಗೆ ಮತ್ತೊಮ್ಮೆ ಹಣ್ಣುಗಳು ಕೊಯ್ಲಿಗೆ ಸಿದ್ಧವಾಗುತ್ತವೆ. ಹೀಗೆ ವರ್ಷಕ್ಕೆ ಎರಡು ಬೆಳೆ ತೆಗೆಯಬಹುದು. ಗಿಡವೊಂದಕ್ಕೆ ಸುಮಾರು 2–4 ಕೆಜಿ ಹಣ್ಣನ್ನು ಇಳಿಸಬಹುದು. ಮಿಶ್ರಬೆಳೆಯಾಗಿ ಬೆಳೆಸಿದರೆ ಹಣ್ಣಿನ ಇಳುವರಿ ಹೆಕ್ಟೇರಿಗೆ 1650–2025 ಕೆಜಿ ಮಾತ್ರ ಇರುವುದಾದರೂ ಶುದ್ಧ ಬೆಳೆಯಾದರೆ ಇಳುವರಿ 30,000 ಕೆಜಿಯಷ್ಟು ಹೆಚ್ಚಾಗಿರುತ್ತದೆ. ಮಿಶ್ರಬೆಳೆಯಾಗಿ ಬೆಳೆಸಿದರೆ ಬೆಳೆ ಒಂದು ವರ್ಷಕ್ಕಿಂತ ಹೆಚ್ಚು ಬಾಳಲಾರದು. ಆದರೆ ಶುದ್ಧ ಬೆಳೆಯಾಗಿ ಬೆಳೆಸಿದರೆ 3–4 ವರ್ಷ ಕಾಲ ಹಣ್ಣುಗಳನ್ನು ಪಡೆಯುತ್ತಿರಬಹುದು.

ಗುಪ್ಪಟೆ ಹಣ್ಣುಗಳಿಗೆ ತಮ್ಮದೇ ಆದ ಹುಳಿಮಿಶ್ರಿತ ಸಿಹಿರುಚಿಯಿದೆ. ಅಲ್ಲದೆ ಇವುಗಳಲ್ಲಿ ಅನೇಕ ಬಗೆಯ ಪೌಷ್ಟಿಕಾಂಶಗಳೂ ಇವೆ. ಆಸ್ಕಾರ್ಬಿಕ್ ಆಮ್ಲ ಮತ್ತು ಕ್ಯಾರೊಟೀನ್‌ಗಳ ಒಳ್ಳೆಯ ಆಗರ ಎನಿಸಿದೆ ಗುಪ್ಪಟೆ ಹಣ್ಣು. ಇದನ್ನು ಹಾಗೆಯೇ ತಿನ್ನಬಹುದು ಇಲ್ಲವೆ ರಸಪಾಕ (ಜಾಮ್) ಮಾಡಲು ಬಳಸಬಹುದು. ಗುಪ್ಪಟೆ ಹಣ್ಣಿನ ಎಲೆಗಳಿಗೆ ಔಷಧೀಯ ಮಹತ್ತ್ವವೂ ಇದೆ. ಉದರಸಂಬಂಧದ ಹಲವಾರು ಕಾಯಿಲೆಗಳಿಗೆ ಇದರ ಎಲೆಯ ಕಷಾಯವನ್ನು ಔಷಧಿಯಾಗಿ ಕೊಡುತ್ತಾರೆ.

2 ಫೈಸೇಲಿಸ್ ಇಕ್ಸೊಕಾರ್ಪ : 1–1.3 ಮೀ ಎತ್ತರಕ್ಕೆ ಬೆಳೆಯುವ ಇನ್ನೊಂದು ಪ್ರಭೇದ. ಮೆಕ್ಸಿಕೊ ಮತ್ತು ಗ್ವಾಟೆಮಾಲಗಳ ಮೂಲನಿವಾಸಿ. ಇದಕ್ಕೆ ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಟೊಮ್ಯಾಟಿಲ್ಲೊ ಎಂದು ಹೆಸರು. ಇದರ ಎಲೆಗಳು ಈಟಿಯಾಕಾರದವು ಇಲ್ಲವೆ ಅಂಡಾಕಾರದವು. ಇವುಗಳ ಅಂಚು ಗರಗಸದಂತೆ ಇದೆ. ಹೂಗಳ ಬಣ್ಣ ಹಳದಿ. ಕಾಯಿ ಊದಾ ಮಿಶ್ರಿತ ಪಾಟಲ ವರ್ಣದ್ದು; ಪುಷ್ಪಪಾತ್ರೆಯನ್ನೆಲ್ಲ ಆವರಿಸುವಂತೆ ಗುಂಡಗೆ, ದಪ್ಪವಾಗಿ ಬೆಳೆಯುತ್ತದೆ. ಈ ಪ್ರಭೇದಗಳನ್ನು ಬೀಜಗಳ ಮೂಲಕ ವೃದ್ಧಿಸಲಾಗುತ್ತದೆ. ಸಸಿಗಳನ್ನು ಪಡೆದು, ನಾಟಿ ಮಾಡಿದ $1\,{}^{1}/_{2}$ – $2\,{}^{1}/_{2}$ ತಿಂಗಳ ಅನಂತರ ಹಣ್ಣುಗಳು ಕೊಯ್ಲಿಗೆ ಸಿದ್ಧವಾಗುತ್ತವೆ. ಹಣ್ಣುಗಳ ಇಳುವರಿ ಹೆಕ್ಟೇರಿಗೆ 17,000–22,500 ಕೆಜಿ.

3 ಫೈಸೇಲಿಸ್ ಮಿನಿಮ : ಇದೊಂದು ಪುಟ್ಟ ಮೂಲಿಕೆ ಸಸ್ಯ; 15–30 ಸೆಂಮೀ ಎತ್ತರಕ್ಕೆ ಬೆಳೆಯುತ್ತದೆ. ಹೂಗಳು ಒಂಟೊಂಟಿಯಾಗಿರುತ್ತವೆ. ಬಣ್ಣ ಅಚ್ಚ ಹಳದಿ. ಕಾಯಿ ಗುಂಡಗೆ, ಹಸಿರಾಗಿ ಇರುತ್ತದೆ. ಈ ಪ್ರಭೇದ ನೀರಾವರಿ ಗದ್ದೆಗಳ ತೆವರುಗಳ ಮೇಲೆ ಬೆಳೆಯುತ್ತದೆ. ಇದರ ಹಣ್ಣುಗಳು ಉಳಿದ ಪ್ರಭೇದಗಳ ಹಣ್ಣುಗಳಿಗೆ ಹೋಲಿಸಿದರೆ ಅಷ್ಟು ರುಚಿಯಿಲ್ಲ. ಆದರೆ ಇವಕ್ಕೆ ಔಷಧೀಯ ಗುಣಗಳುಂಟು. ಶಕ್ತಿವರ್ಧಕವಾಗಿ, ಮೂತ್ರೋತ್ತೇಜಕವಾಗಿ ಮತ್ತು ವಿರೇಚಕವಾಗಿ ಇವನ್ನು ಬಳಸುತ್ತಾರೆ. (ಬಿ.ಪಿ;ಎಂ.ಎಚ್.ಎಂ)

**ಗುಫ್‌ಕ್ರಾಲ್ :** ಕಾಶ್ಮೀರ ರಾಜ್ಯದ ಪುಲ್‌ವಾಮ ಜಿಲ್ಲೆಯ ತ್ರಾಲ್ ತಹಸೀಲ್‌ನಲ್ಲಿರುವ ನವಶಿಲಾಯುಗ ಸಂಸ್ಕೃತಿಯ ನೆಲೆ. ಇದು ಸು. 35ಮೀ ದಪ್ಪದ ಕರೇವ ನಿಕ್ಷೇಪದ ಮೇಲಿದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ

ಎ.ಕೆ. ಶರ್ಮರ ನಿರ್ದೇಶನದಲ್ಲಿ ಇಲ್ಲಿ ಉತ್ಖನನ ನಡೆಯಿತು (1981). 3 ಸಾಂಸ್ಕೃತಿಕ ಹಂತಗಳನ್ನು ಗುರುತಿಸಲಾಗಿದೆ. ಇವು–ನವಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಆದಿಚಾರಿತ್ರಿಕ ಕಾಲ. ನವಶಿಲಾಯುಗವನ್ನು 3 ಉಪಹಂತಗಳಾಗಿ ವಿಂಗಡಿಸಲಾಗಿದೆ. ಇವು ಮಣ್ಪಾತ್ರೆರಹಿತ ಹಂತ ಹಾಗೂ ಆದಿ ಮತ್ತು ಅಂತ್ಯ ಮಣ್ಪಾತ್ರೆಸಹಿತ ಹಂತಗಳು.




ಮಡಕೆಕುಡಿಕೆಗಳು ಮತ್ತು ತಕಲಿಗಳು

ನವಶಿಲಾಯುಗದ ಮಣ್ಪಾತ್ರೆರಹಿತ ಉಪಹಂತದ ಕೆಳಸ್ತರಗಳಲ್ಲಿ ಬೂರ್ಜಹೋಮ್ **(ನೋಡಿ)** ನಲ್ಲಿರುವಂತೆ ವೃತ್ತಾಕಾರದ ವಸತಿಗುಂಡಿಗಳಿವೆ. ಗುಂಡಿಗಳ ವ್ಯಾಸ 1.5–3.8 ಮೀ; ಇವು 20–30 ಸೆಂಮೀ ಆಳವಾಗಿವೆ. ಭೂಮಟ್ಟದಲ್ಲಿ ಗುಂಡಿಗಳ ಸುತ್ತ ಆಯತಾಕಾರದ ಮಣ್ಣಿನ ಒಲೆ, ಧಾನ್ಯ ಶೇಖರಣ ಗುಳಿ ಮತ್ತು ಇವೆಲ್ಲವನ್ನು ಸುತ್ತುವರಿದ ಆಧಾರಕಂಬಗಳ ಗುಳಿಗಳಿವೆ. ಹಾಗಾಗಿ ಗುಂಡಿಗಳ ಮೇಲೆ ಮರದ ಕೊಂಬೆಗಳಿಂದ ರಚಿತವಾದ ಮಾಡು ಇದ್ದಿರಬಹುದು. ಗುಂಡಿಗಳೊಳಗಿನ ನೆಲ ಮತ್ತು ಗುಂಡಿಗಳ ಗೋಡೆಗೆ ಕೆಮ್ಮಣ್ಣಿನ ದಪ್ಪ ಲೇಪವನ್ನು ಸವರಲಾಗಿದೆ. ಕೆಲವೊಂದು ವಸತಿಗುಂಡಿಗಳನ್ನು ಕಾಲಕ್ರಮೇಣ ವಿಸ್ತರಿಸಿ ಸತತವಾಗಿ ಬಳಸಲಾಗಿದೆ. ಅನಂತರ ಕಾಲದಲ್ಲಿ ಹೆಚ್ಚು ಆಳವಿಲ್ಲದ ಗುಳಿಕೋಣೆಗಳನ್ನೂ ಜನ ಕಟ್ಟತೊಡಗಿದರು. ಆಯತಾಕಾರದ ಒಲೆಗಳ ಜೊತೆಗೆ ಗೋಲಾಕಾರದ ಒಲೆಗಳೂ ಬಳಕೆಗೆ ಬಂದವು. ನೆಲಗಳ ಮೇಲೆ ಕೆಂಪುಬಣ್ಣದ ಲೇಪನವನ್ನು ಹಚ್ಚುವ ಪದ್ಧತಿ ನಿಂತುಹೋಯಿತು. ಬೂರ್ಜಹೋಮ್‌ನಂತೆ ಈ ಉಪಹಂತದ ಜನರು ಚಳಿಗಾಲದಲ್ಲಿ ವಸತಿಗುಂಡಿಗಳೊಳಗೆ ಮತ್ತು ಬೇಸಗೆಯಲ್ಲಿ ಹೊರಗೆ ವಾಸಿಸುತ್ತಿದ್ದಿರಬೇಕು. ಆದರೆ ಅಡುಗೆ ಕಾರ್ಯ ಮಾತ್ರ ವರ್ಷದುದ್ದಕ್ಕೂ ಹೊರಗೆ ನಡೆಯುತ್ತಿತ್ತು; ಏಕೆಂದರೆ ಗುಂಡಿಗಳೊಳಗೆ ಒಲೆಯಾಗಲೀ ಅಗ್ನಿಷ್ಟಿಕೆಯಾಗಲೀ ಕಂಡುಬಂದಿಲ್ಲ. ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಗಳು, ಮೊನೆ, ತೂತಿರುವ ವರ್ತುಲಾಕಾರದ ಕಲ್ಲು, ಅರೆಯುವ ಕಲ್ಲು ಮತ್ತು ಕುಟ್ಟಾಣಿ ಈ ಉಪಹಂತದಲ್ಲಿರುವ ಕಲ್ಲಿನ ಉಪಕರಣಗಳು. ಅರೆಯುವ ಕಲ್ಲೊಂದರಲ್ಲಿ ಕೆಂಪುಬಣ್ಣದ ಗೊಜ್ಜಿನ ಪಳೆಯುಳಿಕೆ ಹಾಗೇ ಅಂಟಿಕೊಂಡಿತ್ತು. ಮೂಳೆಯ ಉಪಕರಣಗಳಲ್ಲಿ ಮೊನೆ ಮತ್ತು ಬಾಣದ ಮೊನೆ ಹೆಚ್ಚಿನ ಸಂಖ್ಯೆಯಲ್ಲಿವೆ. ಸೂಜಿ, ದಬ್ಬಣ, ಹೆರೆಚಕ್ಕೆ, ಕೊರೆಯುಳಿ ಇತರ ಬಗೆಗಳು. ಈ ಉಪಕರಣಗಳನ್ನು ಸಂಪೂರ್ಣವಾಗಿ ಅಥವಾ ತುದಿಯಲ್ಲಿ ಮಾತ್ರ ಉಜ್ಜಿ ನಯಗೊಳಿಸಲಾಗಿದೆ. ಅಲ್ಲದೆ ತುದಿಯನ್ನು ಸುಟ್ಟು ಗಟ್ಟಿಗೊಳಿಸಲಾಗಿದೆ. ಮೂಳೆಯ ಒಂದು ಮಣಿ, ಸ್ಟಿಯಟೈಟಿನ 2 ಮಣಿಗಳು, ಮಣ್ಣಿನ ಗೋಲಿಯೊಂದು ಈ ಸ್ತರಗಳಿಂದ ದೊರೆತಿವೆ. ಪ್ರಾಣಿಮೂಳೆಗಳು ಮತ್ತು ಆಹಾರಧಾನ್ಯಗಳು ಈ ಉಪಹಂತದ ಮತ್ತೊಂದು ಮುಖ್ಯ ಅನ್ವೇಷಣೆ. ಹೆಚ್ಚಿನ ಮೂಳೆಗಳು ಕಾಡುಪ್ರಾಣಿಗಳದ್ದಾಗಿದ್ದು ಬೇಟೆ ಪ್ರಧಾನವಾಗಿತ್ತೆಂದು ಕಾಣುತ್ತದೆ. ಕಾಡುಕುರಿ, ಕಾಡುಮೇಕೆ, ಕಾಡು ದನ, ಕೆಂಪುಜಿಂಕೆ, ತೋಳ, ಹಿಮಾಲಯದ ಕಾಡುಹೋತ ಮತ್ತು ಕರಡಿಯ ಮೂಳೆಗಳನ್ನು ಗುರುತಿಸಲಾಗಿದೆ. ಪಶುಪಾಲನೆ ಪ್ರಾರಂಭಿಕ ಹಂತದಲ್ಲಿದ್ದುದನ್ನು ಸಾಕುಪ್ರಾಣಿಗಳಾದ ಕುರಿ ಮತ್ತು ಮೇಕೆಯ ಮೂಳೆಗಳಿಂದ (ಶೇ. 3–5) ತಿಳಿಯಬಹುದಾಗಿದೆ. ಬೇಟೆ ಮತ್ತು ಪಶುಪಾಲನೆಯೊಂದಿಗೆ ಆಹಾರ ಸಂಗ್ರಹಣೆ/ಉತ್ಪಾದನೆಯೂ ಈ ಸಮಯದಲ್ಲಿ ನಡೆಯುತ್ತಿತ್ತು. ಜವೆ, ಗೋದಿ, ಕೆಂಪು ತೊಗರಿ ಬೇಳೆ ಮುಂತಾದ ಧಾನ್ಯಗಳು ಈ ಸ್ತರಗಳಲ್ಲಿ ಸಿಕ್ಕಿದ್ದು ಇವುಗಳನ್ನು ಸಂಗ್ರಹಿಸುತ್ತಿದ್ದಿರಬೇಕು ಅಥವಾ ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಿದ್ದಿರಬಹುದು.




ಮೂಳೆ ಉಪಕರಣಗಳು

ನವಶಿಲಾಯುಗದ 2ನೆಯ ಉಪಹಂತದಲ್ಲಿ (ಆದಿ ಮಣ್ಪಾತ್ರೆ ಸಹಿತ) ತಿಗುರಿಯನ್ನು ಉಪಯೋಗಿಸದೆ ಮಾಡಿದ ಮಣ್ಪಾತ್ರೆಗಳು ಕಂಡುಬರುತ್ತವೆ. ಬೂದುಬಣ್ಣದ ಪಾತ್ರೆಗಳು ಸಾಮಾನ್ಯ; ಪೇಲಗೆಂಪು ಬಣ್ಣದ ಪಾತ್ರೆಗಳು ಬೆರಳೆಣಿಕೆಯಷ್ಟಿವೆ. ದೊಡ್ಡ ಜಾಡಿ, ಬಟ್ಟಲು, ಬೋಗುಣಿ ಹೆಚ್ಚಾಗಿ ಕಾಣಸಿಗುವ ಆಕಾರಗಳು. ಇವುಗಳ ತಳದಲ್ಲಿ ಚಾಪೆಯ ಅಥವಾ ಹಗ್ಗದ ಗುರುತಿದೆ. ಕುತ್ತಿಗೆಯ ಮೇಲೆ ಚಿವುಟಿ ಮಾಡಿದ ಅಥವಾ ಗೀರಿನ ವಿನ್ಯಾಸವಿದೆ. ಸು. 5–7 ಸೆಂಮೀ ದಪ್ಪದ ಹಳದಿಬಣ್ಣದ ಸುಣ್ಣಮಿಶ್ರಿತ ಮಣ್ಣಿನ ವಿಸ್ತಾರವಾದ ನೆಲಗಟ್ಟನ್ನು ಈ ಉಪಹಂತದಲ್ಲಿ ಹೊರತೆಗೆಯಲಾಗಿದೆ. ಈ ನೆಲವನ್ನು ಕೆಲವೊಂದು ಭಾಗಗಳಲ್ಲಿ ಐದಾರು ಬಾರಿ ಸರಿಪಡಿಸಲಾಗಿದೆ. ನೆಲದ ಮೇಲೆ ಗಟ್ಟಿಮಣ್ಣಿನ ಮತ್ತು ಕಲ್ಲು–ಮಣ್ಣಿನ ಹೆಂಟೆಯ ಗೋಡೆಗಳ ಅವಶೇಷಗಳಿವೆ. ಕೆಂಡ ಮತ್ತು ಕರಕಲಾದ ಮರದ ತುಂಡುಗಳ ಗುಪ್ಪೆಯೊಂದು ಈ ಅವಶೇಷಗಳ ನಡುವೆ ಕಂಡುಬಂದಿದೆ. ಈ ಉಪಹಂತದಲ್ಲಿ ಹಿಂದಿನ ಹಂತಗಳಲ್ಲಿದ್ದಂತೆ ವಸತಿಗುಂಡಿಗಳ ಉಪಯೋಗ ಕಂಡುಬರುವುದಿಲ್ಲ. ಸಾಂಸ್ಕೃತಿಕ ಅವಶೇಷಗಳಲ್ಲಿ ಕಲ್ಲಿನ ಮೊನೆ ಮತ್ತು ತೂತಿರುವ ವರ್ತುಲಾಕಾರದ ಕಲ್ಲು, ಮೂಳೆಯ ಮೊನೆ, ಕೊರೆಯುಳಿ, ಹೆರೆಚಕ್ಕೆ ಮತ್ತು ಸಟ್ಟುಗಗಳಿವೆ. ಸಾಕುಪ್ರಾಣಿಗಳಾದ ಕುರಿ, ಮೇಕೆ ಮತ್ತು ಜಾನುವಾರಿನ ಮೂಳೆಗಳ ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ನಾಯಿ ಮತ್ತೊಂದು ಸಾಕುಪ್ರಾಣಿಯಾಗಿದ್ದಿತ್ತು. ಕಾಡುಕುರಿ, ಕಾಡುಮೇಕೆ, ಕೆಂಪುಜಿಂಕೆ, ಕಾಡುಹೋತ ಮತ್ತು ಕರಡಿ ಪ್ರತಿನಿಧಿತವಾದ ಕಾಡುಪ್ರಾಣಿಗಳು. ಹೆಚ್ಚಿನ ಮೂಳೆಗಳ ಮೇಲೆ ಕಚ್ಚು ಗುರುತಿದೆ. ಆಹಾರಧಾನ್ಯಗಳಲ್ಲಿ ಗೋದಿ, ಜವೆ ಮತ್ತು ಕೆಂಪು ತೊಗರಿಬೇಳೆಗಳಿವೆ.

3ನೆಯ ಉಪಹಂತದಲ್ಲಿ (ಅಂತ್ಯ ಮಣ್ಪಾತ್ರೆ ಸಹಿತ) 3 ರೀತಿಯ ಮನೆಗಳಿವೆ. ಇವು ವೃತ್ತ ವಿನ್ಯಾಸದ ವಸತಿಗುಂಡಿಗಳು, ಮಣ್ಣಿನ ಗೋಡೆಗಳುಳ್ಳ ವರ್ತುಲ ಗುಡಿಸಲುಗಳು ಮತ್ತು ಆಧಾರಕಂಬಗಳ ಗುಳಿಗಳಿಂದ ಸುತ್ತುವರೆದ ಮಣ್ಣು ಅಥವಾ ಕಲ್ಲಿನ ಗೋಡೆಗಳುಳ್ಳ ಗುಡಿಸಲುಗಳು. ವಸತಿಗುಂಡಿಗಳೊಳಗೆ ಧಾನ್ಯ ಸಂಗ್ರಹ ಗುಳಿ ಮತ್ತು ಒಲೆಗಳಿವೆ. ಗುಂಡಿಗಳ ಮೇಲೆ ಬೊಂಬು ಮತ್ತು ಮರದ ಮುಚ್ಚಣಿಕೆ ಇದ್ದಿರಬೇಕು.

ಮುಂಚಿನ ಹಂತಗಳ ಕಲ್ಲಿನ ಉಪಕರಣಗಳು ಮುಂದುವರೆಯುತ್ತವೆ. ಎರಡು ತೂತಿರುವ ಕೊಯ್ಲಿನ ಉಪಕರಣಗಳು ವಿಶೇಷವಾದುವು. ಈ ಹೊತ್ತಿಗೆ ಕೃಷಿ ವ್ಯಾಪಕವಾಗಿತ್ತೆಂದು ತೋರುತ್ತದೆ. ಸುಟ್ಟಮಣ್ಣಿನ ಮತ್ತು ಕಲ್ಲಿನ ತಕ್ಕಲಿ (ಕದಿರಣಿಗೆ-ಗುಂಡಿಗಳು) ಉಣ್ಣೆಬಟ್ಟೆ ಉತ್ಪಾದನೆಯ ಸಾಧನಗಳಾಗಿವೆ. ಮಣ್ಣಿನ ಬಳೆಗಳು, ಮಂದಗೆಂಪುಕಲ್ಲಿನ ಮಣಿಗಳು, ಕವಡೆ, ಗೀರುಚಿತ್ರವುಳ್ಳ ಮಡಕೆ ಚೂರುಗಳು ಇತರ ಸಾಂಸ್ಕೃತಿಕ ವಸ್ತುಗಳು. ಇಲ್ಲಿ ಸಿಕ್ಕ ಒಂದು ಬದಿ ಸುರುಳಿ ಸುತ್ತಿದ ತಲೆಗೂದಲಿಗೆ ಸಿಕ್ಕಿಸುವ ತಾಮ್ರದ ಕೇಶ ಸೂಜಿ ದಕ್ಷಿಣದ ಮುಂದುವರೆದ ಬಯಲು ಸಂಸ್ಕೃತಿಗಳೊಂದಿಗಿನ ಸಂಪರ್ಕ ಸೂಚಕವಾಗಿದೆ. ಮೂಳೆಯ ಉಪಕರಣಗಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಉಪಹಂತದಲ್ಲಿ ಸಿಕ್ಕಿವೆ. ಇವುಗಳಲ್ಲಿ ಹೆಚ್ಚಿನವು ಉಜ್ಜಿ ನಯಗೊಳಿಸಿದ ಮೊನೆಗಳು. ದಬ್ಬಣ, ಈಟಿಗಾಳ, ಸಟ್ಟಗ, ಬಾಣದ ಮೊನೆ ಇತರ ನಮೂನೆಗಳು.

ಈ ಹೊತ್ತಿಗಾಗಲೇ ಪಶುಪಾಲನೆ ಮತ್ತು ಸಂಗೋಪನೆ ಪೂರ್ಣಪ್ರಮಾಣದಲ್ಲಿ ಸ್ಥಾಪಿತವಾಗಿತ್ತು. ನಾಯಿ, ಕುರಿ, ಮೇಕೆ, ಜಾನುವಾರುಗಳನ್ನು ಸಾಕಲಾಗುತ್ತಿತ್ತು. ಹಂದಿ, ಮೊಲ, ಹೆಗ್ಗಣ, ನೀರನಾಯಿ, ಮೀನು ಇವುಗಳ ಮೂಳೆಗಳು ಮೊದಲಬಾರಿಗೆ ಕಂಡುಬರುತ್ತವೆ. ಜಿಂಕೆ ಮತ್ತು ಕಾಡುಹೋತಗಳನ್ನು ಮಾತ್ರ ಒಮ್ಮೊಮ್ಮೆ ಬೇಟೆಯಾಡಲಾಗುತ್ತಿತ್ತು.

ಈ ಹಂತದ ನವಶಿಲಾಯುಗ ಜನರು ಸ್ಥಾಯಿ ಜೀವನಶೈಲಿಯನ್ನು ಅಳವಡಿಸಿಕೊಂಡಿದ್ದರೆಂಬುದು ಮೇಲಿನ ಅಂಶಗಳಿಂದ ಸ್ಪಷ್ಟಪಡುತ್ತದೆ. ಕೃಷಿ, ಪಶು ಸಂಗೋಪನೆ, ಉಣ್ಣೆ ಬಟ್ಟೆಯ ನೇಯ್ಗೆ, ಹೊರ ಜಗತ್ತಿನೊಂದಿಗಿನ ಸಂಪರ್ಕ ಇವೆಲ್ಲವೂ ಈ ಸಮುದಾಯದ ಮುಖ್ಯ ಕಸಬುಗಳಾಗಿದ್ದವು.

2ನೆಯ ಸಾಂಸ್ಕೃತಿಕ ಹಂತ ಬೃಹತ್‌ಶಿಲಾಯುಗದ್ದು. ಈ ಹಂತದ ಪ್ರಮುಖ ಲಕ್ಷಣ ನಿಲಸುಗಲ್ಲುಗಳು. ಬುಡದಲ್ಲಿ ಸಣ್ಣ ಕಲ್ಲುಗಳನ್ನು ಒತ್ತಾಗಿ ತುಂಬಿ ಇವುಗಳನ್ನು ನಿಲ್ಲಿಸಿದಂತೆ ಕಾಣುತ್ತದೆ. ಈ ಹಂತದಲ್ಲಿ 10 ಸೆಂಮೀ ದಪ್ಪದ ವಿಸ್ತಾರವಾದ ನೆಲಗಟ್ಟಿದೆ. ನೆಲದಲ್ಲಿ ಅಲ್ಲಲ್ಲಿ ಗುಳಿಗಳನ್ನು ಅಗೆಯಲಾಗಿದೆ. ಕೆಲವೊಂದು ಗುಳಿಗಳು ಆಳವಾಗಿದ್ದು ಮಣ್ಪಾತ್ರೆ ಮತ್ತು ಪ್ರಾಣಿಮೂಳೆಗಳಿಂದ ತುಂಬಿವೆ. ಹಿಂದಿನ ಹಂತದ ಬೂದುಬಣ್ಣದ ಪಾತ್ರೆ ಇನ್ನೂ ಬಳಕೆಯಲ್ಲಿರುವುದು ಕಂಡುಬರುತ್ತದೆ. ಆದರೆ ತಿಗುರಿಯಿಂದ ತಯಾರಾದ ಪಾತ್ರೆಗಳು ಅಗಾಧ ಪ್ರಮಾಣದಲ್ಲಿವೆ. ಈ ಬಗೆಯಲ್ಲಿ ಪೇಲಗೆಂಪುಬಣ್ಣದ ಪಾತ್ರೆಗಳು ಮೊದಲ ಬಾರಿಗೆ ಕಾಣಬರುತ್ತವೆ. ಉದ್ದ ಕತ್ತಿನ ಅಥವಾ ಕತ್ತಿಲ್ಲದ ಜಾಡಿಗಳು, ಬಟ್ಟಲು, ಬೋಗುಣಿ, ಕಾಲಿರುವ ತಟ್ಟೆ ಮತ್ತು ಮಡಕೆಗಳು ಸಾಮಾನ್ಯವಾಗಿವೆ. ಚಿವುಟಿ ಮಾಡಿದ ಮತ್ತು ಗೀರಿನ ವಿನ್ಯಾಸಗಳು, ದೊರಕಾಗಿಸಿದ ಹೊರಮೈ ಇಲ್ಲಿ ಕಂಡುಬರುವ ಅಲಂಕರಣೆಯ ವಿಧಾನಗಳು. ವರ್ತುಲಾಕಾರದ ತೂತು ಕಲ್ಲುಗಳು, ಕುಟ್ಟಾಣಿ, ತಾಮ್ರದ ಒಂದು ಮೊನೆ, ಮರದ ಒಂದು ಮಣಿ, ತಕಲಿ, ಕವಡೆ, ಕಬ್ಬಿಣದ ಉಪಕರಣಗಳು ಮುಖ್ಯ ಸಾಂಸ್ಕೃತಿಕ ಅವಶೇಷಗಳು. ಈ ಹಂತದಲ್ಲಿ ಮೂಳೆಯ ಉಪಕರಣಗಳ ಉಪಯೋಗ ಕಡಿಮೆಯಾಯಿತು. ಹೊಸ ಬಗೆಯ ಮೂಳೆಯ ಹಿಡಿಗಳು ತಯಾರಾದವು. ಹಿಂದಿನ ಹಂತದಲ್ಲಿರುವ ಆಹಾರಧಾನ್ಯಗಳ ಜೊತೆಗೆ ಅಕ್ಕಿ ಮತ್ತು ರಾಗಿಯ ಕೃಷಿ ದಾಖಲಾಗಿದೆ. ಜಾನುವಾರು, ಕುರಿ, ಮೇಕೆ, ನಾಯಿ, ಹಂದಿ, ಕಾಡುಹೋತ ಮತ್ತು ಕಾಡುಕೋಳಿ ದಾಖಲಾದ ಪ್ರಾಣಿ-ಪಕ್ಷಿಗಳು.

3ನೆಯ ಹಂತದಲ್ಲಿ ಚಾರಿತ್ರಿಕ ಕಾಲಕ್ಕೆ ಸೇರುವ ಅವಶೇಷಗಳಿವೆ. ಬಿಳಿಮಣ್ಣಿನಿಂದ ಮಾಡಿದ ಗಟ್ಟಿ ನೆಲಗಟ್ಟು ಗಮನಾರ್ಹ. ಕಲ್ಲು-ಮಣ್ಣಿನ ಹೆಂಟೆಯ ದಪ್ಪ ಗೋಡೆಗಳ ಅವಶೇಷಗಳು ಈ ಹಂತದಲ್ಲಿವೆ. ತಿಗುರಿಯ ಸಹಾಯದಿಂದ ಮತ್ತು ಕೈಯಿಂದ ಮಾಡಿದ ಮಣ್ಪಾತ್ರೆಗಳು ಕಂಡುಬರುತ್ತವೆ. ಬಟ್ಟಲು, ಹಣತೆ, ತಟ್ಟೆ, ದಾನಿ, ಸಣ್ಣ ಮಡಕೆ, ಹಿಡಿಯಿರುವ ಮುಚ್ಚಳ, ಬಟ್ಟಲಿನಂತಿರುವ ಮುಚ್ಚಳ ಮತ್ತು ಮಡಕೆ ಹೊಳಪುಳ್ಳ ಕೆಂಪುಬಣ್ಣದ ಪಾತ್ರೆ ಬಗೆಯಲ್ಲಿ ಕಾಣಸಿಗುವ ಸಾಮಾನ್ಯ ಆಕಾರಗಳು. ಕಲ್ಲಿನ ಬಟ್ಟಲುಗಳೂ ಇವೆ. ಕಪ್ಪುಬಣ್ಣದ ಚಿತ್ರ ಮತ್ತು ಅಚ್ಚೊತ್ತಿದ ವಿನ್ಯಾಸವುಳ್ಳ ಕೆಂಪುಮಣ್ಪಾತ್ರೆಗಳ ಕೆಲವೊಂದು ಭಾಗಗಳು ಸಿಕ್ಕಿವೆ. ಬಾಣದ ಮೊನೆ ಮತ್ತು ಹಿಡಿ, ವರ್ತುಲಾಕಾರದ ತೂತು ಕಲ್ಲು, ಕುಟ್ಟಾಣಿ, ಕಲ್ಲಿನ ಮೊನೆಗಳು ಈ ಸ್ತರಗಳಿಂದ ದೊರೆತ ಹಲವು ವಸ್ತುಗಳು. ಹಿಂದಿನ ಹಂತದ ಎಲ್ಲ ಆಹಾರಧಾನ್ಯಗಳು ಇಲ್ಲಿ ಸಿಕ್ಕಿವೆ. ಜಾನುವಾರು, ಕುರಿ, ಮೇಕೆ, ನಾಯಿ, ಬೆಕ್ಕು, ಹಂದಿ, ಕಾಡುಕೋಳಿ ಮತ್ತು ಹೆಗ್ಗಣದ ಮೂಳೆಗಳನ್ನು ಗುರುತಿಸಲಾಗಿದೆ.

ಗುಫ್‌ಕ್ರಾಲಿನ ವಿಶೇಷತೆಯೆಂದರೆ ಇಲ್ಲಿ ದಾಖಲಾಗಿರುವ ಮಣ್ಪಾತ್ರೆರಹಿತ ನವಶಿಲಾಯುಗ ಹಂತದ ಅವಶೇಷಗಳು. ಇಂಗಾಲ 14ರ ಕಾಲನಿರ್ಣಯದ ಪ್ರಕಾರ ಈ ಹಂತ ಪ್ರ.ಶ.ಪೂ. 2470±110ರ ಅನಂತರ ಕೊನೆಗೊಂಡಿತು. ಪ್ರ.ಶ.ಪೂ.2100ರ ಹೊತ್ತಿಗೆ ತಿಗುರಿಯ ಸಹಾಯವಿಲ್ಲದೆ ಮಡಕೆಗಳನ್ನು ತಯಾರಿಸುವ ವಿಧಾನವನ್ನು ಇಲ್ಲಿ ಕಂಡುಕೊಳ್ಳಲಾಯಿತು. ಉತ್ತರ ಚೀನ ಮತ್ತು ದಕ್ಷಿಣದ ಬಯಲು ಸಂಸ್ಕೃತಿಗಳೊಂದಿಗೆ ಪ್ರ.ಶ.ಪೂ. 1500ರ ಆಸುಪಾಸಿನಲ್ಲಿ ಸಂಪರ್ಕವೇರ್ಪಟ್ಟಿತು. ಬೃಹತ್‌ಶಿಲಾಯುಗ ಮತ್ತು ಕಬ್ಬಿಣದ ಬಳಕೆ ಪ್ರ.ಶ.ಪೂ. 1400ರ ಹೊತ್ತಿಗೆ ಪ್ರಾರಂಭವಾಯಿತು. ಇಲ್ಲಿಯ ಅವಶೇಷಗಳ ಇಂಗಾಲ 14ರ ಇತರ ಕಾಲಮಾನಗಳು ಇಂತಿವೆ : ಮಣ್ಪಾತ್ರೆರಹಿತ ನವಶಿಲಾಯುಗ- 3130±100; ಮಣ್ಪಾತ್ರೆಸಹಿತ ಆದಿ ನವಶಿಲಾಯುಗ- 3570±100; 3470±100 ; 3980 ± 120; ಮಣ್ಪಾತ್ರೆಸಹಿತ ಅಂತ್ಯ ನವಶಿಲಾಯುಗ-3340 ±100; 2790±110;3570±100. (ವಿ.ಎಸ್.)

**ಗುಬ್ಬಚ್ಚಿ :** ಪ್ಯಾಸೆರಿಫಾರ್ಮೀಸ್ ಗಣದ ಪ್ಲೋಸೈಯಿಡೀ ಕುಟುಂಬಕ್ಕೆ ಸೇರಿದ ಚಿಕ್ಕಗಾತ್ರದ ಒಂದು ಹಕ್ಕಿ (ಹೌಸ್ ಸ್ಪ್ಯಾರೊ). ಗುಬ್ಬಿ, ಗುಂಚಕ್ಕಿ ಇದರ ಪರ್ಯಾಯ ನಾಮಗಳು. ವೈಜ್ಞಾನಿಕ ನಾಮ ಪ್ಯಾಸರ್ ಡೊಮಿಸ್ಟಿಕಸ್. ಎಲ್ಲರಿಗೂ ಹೆಚ್ಚು ಪರಿಚಿತವಿರುವ ಹಕ್ಕಿಯಿದು. ಯುರೋಪ್, ಪಶ್ಚಿಮ ಏಷ್ಯ ಮತ್ತು ಉತ್ತರ ಆಫ್ರಿಕಗಳ ಮೂಲವಾಸಿಯಾದ ಇದು ಪ್ರಪಂಚದಾದ್ಯಂತ, ದಕ್ಷಿಣ ಮೇರು ಪ್ರದೇಶಗಳನ್ನು ಬಿಟ್ಟು, ವ್ಯಾಪಿಸಿದೆ. ಸುಮಾರು 1850ರ ವೇಳೆಗೆ ಉತ್ತರ ಅಮೆರಿಕವನ್ನು ಪ್ರವೇಶಿಸಿದ ಇದು ಇಂದು ಇಡೀ ಖಂಡವನ್ನೇ ಆವರಿಸಿತು.

ಮರಗುಬ್ಬಚ್ಚಿ

ಸುಮಾರು 15 ಸೆಂಮೀ ಉದ್ದದ ಪುಟ್ಟ ಹಕ್ಕಿ ಇದು. ಮೋಟಾದ ಗಟ್ಟಿಯಾದ ಕಾಲುಗಳೂ, ದೃಢವಾದ ಮತ್ತು ಶಂಕುವಿನಾಕಾರದ ಕೊಕ್ಕು, ಗಿಡಗಳ ರೆಂಬೆಗಳನ್ನು ಬಿಗಿಯಾಗಿ ಹಿಡಿಯಲು ಅನುಕೂಲವಾಗುವಂತೆ ಮಾರ್ಪಾಡಾಗಿರುವ ಕಾಲ್ಬೆರಳುಗಳು, ವಿಶೇಷರೀತಿಯ ಅಂಗುಳಾಸ್ಥಿ, ಭಿನ್ನರೀತಿಯ ಶುಕ್ರಾಣುಗಳು, ಕೇವಲ 14 ಎಲುಬುಗಳಿಂದ ಕೂಡಿದ ಕುತ್ತಿಗೆ-ಇವು ಗುಬ್ಬಚ್ಚಿಯ ವೈಶಿಷ್ಟ್ಯ. ಗಂಡು ಮತ್ತು ಹೆಣ್ಣು ಹಕ್ಕಿಗಳ ದೇಹವರ್ಣದಲ್ಲಿ ಸ್ವಲ್ಪ ಭಿನ್ನತೆ ಉಂಟು. ಗಂಡು ಹಕ್ಕಿಯ ದೇಹದ ಮೇಲ್ಭಾಗ ಕಂದು, ಹೊಟ್ಟೆಯ ಭಾಗ ನಸುಹಳದಿ ಬಣ್ಣದ್ದು, ಇದರ ನೆತ್ತಿ ಬೂದು ಬಣ್ಣದ್ದಾಗಿಯೂ ಕೆನ್ನೆಗಳು ಬಿಳಿಯಾಗಿಯೂ ಇವೆ. ಗಂಟಲಿನ ಬಳಿ ಕಪ್ಪು ಬಣ್ಣದ ಮಚ್ಚೆ ಇದೆ. ಹೆಣ್ಣು ಹಕ್ಕಿಗಳಲ್ಲಿ ಬೆನ್ನು ಭಾಗ ಕಂದುಬಣ್ಣಕ್ಕೂ ಉದರಭಾಗ ನಸುಹಳದಿ ಬಣ್ಣಕ್ಕೂ ಇವೆ. ಗಂಟಲಿನ ಬಳಿ ಕಪ್ಪುಮಚ್ಚೆ ಇಲ್ಲ.

ಮಾನವನೆಲೆ ಇರುವೆಡೆಯಲ್ಲೆಲ್ಲ ಗುಬ್ಬಚ್ಚಿಗಳ ವಾಸ್ತವ್ಯ ಇದರ ಹರವು ಇತ್ತು. ಇಂದು ವಿರಳವಾಗುತ್ತಿದೆ. ಪಟ್ಟಣಗಳ ಗದ್ದಲಕ್ಕೂ ಹಳ್ಳಿಗಳ ಶಾಂತ ವಾತಾವರಣಕ್ಕೂ ಹೊಂದಿಕೊಂಡು ಜೀವಿಸುವ ಸಾಮರ್ಥ್ಯ ಗುಬ್ಬಚ್ಚಿಗಳಿಗಿದೆ. ಮಾನವ ತನ್ನ ವಾಸಕ್ಕೆ ಹೊಸ ಹೊಸ ಸ್ಥಳಗಳನ್ನು ಹುಡುಕಿ ನೆಲೆಸುತ್ತ ಬಂದಾಗಲೆಲ್ಲ ಅಂಥ ಜಾಗಗಳಿಗೆ ಮೊಟ್ಟ ಮೊದಲು ಬರುವ ಹಕ್ಕಿಯೆಂದರೆ ಗುಬ್ಬಚ್ಚಿ. ಗುಬ್ಬಚ್ಚಿಗಳು ಸರ್ವಭಕ್ಷಿಗಳು. ಕಾಳುಕಡ್ಡಿ, ಕೀಟಗಳು, ಫಲಗಳು, ಬೀಜಗಳು- ಹೀಗೆ ಇವುಗಳ ಆಹಾರ ವೈವಿಧ್ಯಪೂರ್ಣ. ಹಗಲೆಲ್ಲ ದೊಡ್ಡ ದೊಡ್ಡ ಗುಂಪುಗಳಲ್ಲಿ ಕೂಡಿದ್ದು, ಕುಪ್ಪಳಿಸುತ್ತ, ಹಾರುತ್ತ ಕಾಳುಕಡ್ಡಿಗಳನ್ನು ತಿನ್ನುತ್ತ ಕಾಲಕಳೆಯುತ್ತವೆ. ಕೆಲವೊಮ್ಮೆ ಹೊಲಗದ್ದೆಗಳ ಬಳಿ ಬಲುದೊಡ್ಡ ಗುಂಪುಗಳಲ್ಲಿ

ಸೇರಿಕೊಂಡು ಬೆಳೆಯನ್ನು ಹಾಳುಮಾಡುವುದುಂಟು. ಇದರಿಂದಾಗಿ ಕೆಲವೆಡೆ ಪಿಡುಗು ಎನಿಸಿವೆ. ಆದರೂ ಕೀಟಗಳನ್ನು ತಿಂದು ನಾಶಪಡಿಸುವುದರಿಂದ ಉಪಕಾರಿಗಳೂ ಹೌದು. ಗುಬ್ಬಚ್ಚಿಗಳು ನಡೆಯುವ ಬದಲು ಕುಪ್ಪಳಿಸುತ್ತವೆ ಎಂಬುದು ಗಮನಾರ್ಹ.

ಗುಬ್ಬಚ್ಚಿಯ ಪ್ರಣಯಕ್ರೀಡೆ ವೈಶಿಷ್ಟ್ಯಪೂರ್ಣ. ಗಂಡು ತನ್ನ ಗರಿಕೆದರಿದ ರೆಕ್ಕೆಯನ್ನು ಬಗ್ಗಿಸಿ, ಕಮಾನಿನಂತೆ ಬಾಗಿದ ಪುಕ್ಕವನ್ನು ತಿರುವುತ್ತ, ನಡಿಗೆಯಲ್ಲಿ ಬಿಂಕವನ್ನು ಪ್ರದರ್ಶಿಸುತ್ತ ವಿಚಿತ್ರವಾದ ಕೀಚಲು ಧ್ವನಿಯಿಂದ ಪ್ರಣಯ ಕ್ರೀಡೆಯಲ್ಲಿ ತೊಡಗುತ್ತದೆ. ಗೂಡುಗಳನ್ನು ಗಂಡು ಮತ್ತು ಹೆಣ್ಣುಗಳೆರಡೂ ಕೂಡಿ ನಿರ್ಮಿಸುತ್ತವೆ. ಮರಗಳ ಪೊಟರೆ, ಮನೆಗಳ ಸೂರು, ಕಟ್ಟಡಗಳ ಮೂಲೆ ಮುಂತಾದ ಸ್ಥಳಗಳು ಗೂಡುಕಟ್ಟಲು ಅಚ್ಚುಮೆಚ್ಚಿನ ಸ್ಥಳಗಳು. ಬಿಡಿಬಿಡಿಯಾದ ಗರಿಗಳು, ಒಣಹುಲ್ಲು, ಕಸಕಡ್ಡಿಗಳನ್ನು ಉಪಯೋಗಿಸಿ ಒರಟು ಗೂಡುಗಳನ್ನು ಕಟ್ಟುತ್ತದೆ. ಸ್ಥಳಕ್ಕನುಗುಣವಾಗಿ ವರ್ಷದಲ್ಲಿ ಎರಡಕ್ಕೂ ಹೆಚ್ಚು ಬಾರಿ ಹೆಣ್ಣು ಗುಬ್ಬಚ್ಚಿ ಒಂದು ಸಲಕ್ಕೆ 3–5 ಮೊಟ್ಟೆ ಇಡುತ್ತದೆ. ಮೊಟ್ಟೆಗಳ ಬಣ್ಣ ಬಿಳಿ. ಮೇಲೆಲ್ಲ ಬೂದಿ ಬಣ್ಣದ ಮಚ್ಚೆಗಳಿವೆ. ಹೆಣ್ಣು ಗುಬ್ಬಚ್ಚಿ 13–14 ದಿನಗಳು ಕಾವು ಕೊಟ್ಟ ಬಳಿಕ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ.

ಗಂಡು ಗುಬ್ಬಚ್ಚಿಯನ್ನೇ ಹೋಲುವ ಪ್ಯಾಸ್ಸರ್ ಮೋಂಟ್ಯಾನಸ್ ಎಂಬ ಮರಗುಬ್ಬಚ್ಚಿ (ಟ್ರೀ ಸ್ಪ್ಯಾರೊ) ಚೀನ, ಕೊರಿಯ, ಜಪಾನ್ ಮತ್ತು ಯುರೋಪಿನ ಕೇಂದ್ರ ಭಾಗದಲ್ಲಿ ಹೇರಳವಾಗಿ ವಾಸಿಸುತ್ತವೆ. ಇವು ಸಹ ನಗರವಾಸಿಗಳು. ಆದರೆ ಶರತ್ಕಾಲದಲ್ಲಿ ಪಕ್ವವಾದ ಬತ್ತದ ಬೆಳಸಿಗೆ ಇವುಗಳ ಹಿಂಡು ಊಹಿಸಲಾಗದಷ್ಟು ಹಾನಿ ಎಸಗುತ್ತದೆ. ಆದ್ದರಿಂದ ಜಪಾನೀಯರು ನಾನಾ ಬಗೆಯ ಬೆದರುಗೊಂಬೆಗಳಿಂದ ಹಾಗೂ ಕರ್ಕಶ ಗದ್ದಲದಿಂದ ಇವುಗಳ ಹಾವಳಿಗಳನ್ನು ತಡೆಗಟ್ಟುವರಲ್ಲದೆ ವರ್ಷಂಪ್ರತಿ 5–10 ದಶಲಕ್ಷ ಪಕ್ಷಿಗಳನ್ನು ಹಿಡಿದು ಮಾರುತ್ತಾರೆ.

ಇಂದು ನಾಲ್ಕು ಮುಖ್ಯ ಕಾರಣಗಳಿಂದಾಗಿ ಗುಬ್ಬಚ್ಚಿಗಳ ಪ್ರಮಾಣ ಕಳವಳಕಾರಿಯಾಗಿ ಜಾಗತಿಕ ಮಟ್ಟದಲ್ಲಿ ಕಡಿಮೆಯಾಗುತ್ತಿದೆ. ಮೊದಲನೆಯದಾಗಿ, ಇತ್ತೀಚೆಗೆ ತೀವ್ರವಾಗಿ ಬಳಕೆಗೆ ಬಂದ ಸೀಸರಹಿತ ಪೆಟ್ರೋಲಿನಿಂದ ಹೊಮ್ಮುವ ರಾಸಾಯನಿಕಗಳು ಗುಬ್ಬಚ್ಚಿಗಳು ತಮ್ಮ ಮರಿಗಳಿಗೆ ಮೊದಲ ಕೆಲವು ದಿನಗಳು ತಿನ್ನಿಸುವ ಕ್ರಿಮಿಗಳಿಗೆ ಮಾರಕವಾಗಿರುವುದು. ಎರಡನೆಯದಾಗಿ, ಮಾನವ ಇಂದಿನ ದಿನಗಳಲ್ಲಿ ನಿರ್ಮಿಸುತ್ತಿರುವ ಕಟ್ಟೋಣಗಳಲ್ಲಿ ಗುಬ್ಬಚ್ಚಿಗಳಿಗೆ ಗೂಡು ಕಟ್ಟಲು ತಾವೇ ಇಲ್ಲದಂತಾಗಿರು ವುದು ಮತ್ತು ಮೂರನೆಯದಾಗಿ ಹಿಂದಿನಂತೆ ಕಾಳುಕಡ್ಡಿಗಳು ಹೆಚ್ಚಾಗಿ ಮನೆ ಹೊರಗೆ ಹಾಗೂ ರಸ್ತೆಗಳಲ್ಲಿ ಸಿಗದಿರುವುದು. ನಾಲ್ಕನೆಯದಾಗಿ ಮೊಬೈಲ್ ಫೋನ್‌ಗಳ ಟವರ್‌ಗಳಿಂದ ಹೊರಸೂಸುವ ತರಂಗಗಳೂ ಇವುಗಳ ಸಂತತಿ ಕಡಿಮೆಯಾಗಲು ಕಾರಣ.

ಇವುಗಳ ಸಂತತಿ ಹೆಚ್ಚಿಸಲು ಜಾಗತಿಕ ಮಟ್ಟದಲ್ಲಿ ಅನೇಕ ಸಂಶೋಧನೆಗಳು ನಡೆಯುತ್ತಿವೆ. ಗುಬ್ಬಚ್ಚಿಗಳಿಗೆ ಗೂಡು ನಿರ್ಮಿಸಲು ಅನುವಾಗುವ ಮನೆ ಭಾವಣಿಗಳು, ಹಟ್ಟಿಗಳೂ ಬಂದಿವೆಯಾದರೂ ಆಶಾದಾಯದ ಫಲಿತಾಂಶವೇನೂ ಸಂದಿಲ್ಲ.

ಹಳದಿ ಗಂಟಲಿನ ಗುಬ್ಬಚ್ಚಿ ಭಾರತದ ಕಾಡುಗಳಲ್ಲಿ ಕಂಡುಬರುವ ಮತ್ತೊಂದು ಪ್ರಭೇದದ ಗುಬ್ಬಚ್ಚಿ. ಇದರ ವೈಜ್ಞಾನಿಕ ನಾಮದ್ವಯ *ಪೆಟ್ರೊನಿಯಾ ಜ್ಯಾಂಥೊಕೋಲಿಸ್*. ಈ ಹಕ್ಕಿಯನ್ನು ಕೊಂದ ಸಲೀಂ ಆಲಿ, ಇದರ ಗುರುತು ಪತ್ತೆಗಾಗಿ ಪ್ರಖ್ಯಾತ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಗೆ ಮೊದಲಬಾರಿಗೆ ಹೋದದ್ದು. ಮುಂದೆ ಇದೇ ಅವರನ್ನು ಭಾರತದ ಹಕ್ಕಿ ಮನುಷ್ಯನನ್ನಾಗಿಸಿದ್ದು.

ಹಳದಿ ಗಂಟಲಿನ ಗುಬ್ಬಚ್ಚಿ, ಮನೆ ಗುಬ್ಬಚ್ಚಿಯಲ್ಲದೆ ಇತರೆ ಏಳು ಬಗೆ ಗುಬ್ಬಚ್ಚಿಗಳು ಭಾರತದಲ್ಲಿ ಕಂಡುಬರುತ್ತವೆ. ಅವು : ಸ್ಪಾನಿಶ್ ಗುಬ್ಬಚ್ಚಿ (ಪೆಸ್ಸರ್ ಹಿಸ್ಪಾನಿಯೋಲೆನ್ಸಿಸ್), ಸಿಂಧ್ ಗುಬ್ಬಚ್ಚಿ(ಪೆಸ್ಸರ್ ಪೈರೊಹೊನೊಟಸ್), ಪಿನ್ನಯೊನ್ ಮರ ಗುಬ್ಬಚ್ಚಿ (ಪೆಸ್ಸರ್ ರುಟಿಲಾನ್ಸ್ ಟಿಮಿಂಕ್), ಮೃತ ಸಮುದ್ರ ಗುಬ್ಬಚ್ಚಿ(ಪೆಸ್ಸರ್ ಯೊಬಿಯಾಟಿಕಸ್), ಯುರೇಷಿಯಾ ಮರ ಗುಬ್ಬಚ್ಚಿ (ಪೆಸ್ಸರ್ ಮೊನಟಾನಸ್), ಯುರೇಷಿಯಾದ ಕಲ್ಲು ಗುಬ್ಬಿ(ಪೆಟ್ರೊನಿಯಾ ಪದೆಟ್ರೊನಿಯಾ), ಮಬ್ಬುಕಲ್ಲು ಗುಬ್ಬಿ (ಪೆಟ್ರೊನಿಯಾ ಬ್ರಾಚಿಡಕ್ಟೈಲ).

(ಎಸ್.ಎಚ್.ಒ.)

**ಗುಬ್ಬಿ :** ಕರ್ನಾಟಕದ ತುಮಕೂರು ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು; ತಾಲ್ಲೂಕಿನ ಕೇಂದ್ರ. ತುಮಕೂರು ಉಪವಿಭಾಗಕ್ಕೆ ಸೇರಿರುವ ಗುಬ್ಬಿ ತಾಲ್ಲೂಕಿನ ಉತ್ತರದಲ್ಲಿ ಶಿರಾ ತಾಲ್ಲೂಕು, ಪೂರ್ವದಲ್ಲಿ ತುಮಕೂರು ತಾಲ್ಲೂಕು, ದಕ್ಷಿಣದಲ್ಲಿ ಕುಣಿಗಲ್ ತಾಲ್ಲೂಕು ಮತ್ತು ಪಶ್ಚಿಮದಲ್ಲಿ ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕುಗಳು ಇವೆ. 1886ರವರೆಗೆ ಈ ಪ್ರದೇಶ ಕಡಬ ತಾಲ್ಲೂಕಿನಲ್ಲಿತ್ತು. ತಾಲ್ಲೂಕಿನ ವಿಸ್ತೀರ್ಣ 1,221 ಚ.ಕಿಮೀ. ಜನಸಂಖ್ಯೆ 2,62,291 (2011). ಗುಬ್ಬಿ ತಾಲ್ಲೂಕಿನಲ್ಲಿ ಗುಬ್ಬಿ, ಚಂದ್ರಶೇಖರಪುರ, ಚೇಳೂರು, ಹಾಗಲವಾಡಿ, ನಿಟ್ಟೂರು ಮತ್ತು ಕಡಬ ಹೋಬಳಿಗಳೂ 346 ಗ್ರಾಮಗಳೂ ಇವೆ. ಗುಬ್ಬಿಯೊಂದೇ ಈ ತಾಲ್ಲೂಕಿನಲ್ಲಿರುವ ಪಟ್ಟಣ. ಜಿಲ್ಲೆಯಲ್ಲಿ ಸಮುದ್ರಮಟ್ಟದಿಂದ ಸು.1050 ಮೀ ಎತ್ತರದ ಕೆಲವು ಬೆಟ್ಟಗಳುಂಟು. ಮಳೆ ಕಡಿಮೆ. ವರ್ಷದ ಸರಾಸರಿ 703.39 ಮಿಮೀ. ದೇವರಾಯನದುರ್ಗದ ದಕ್ಷಿಣದಲ್ಲಿ ಹುಟ್ಟುವ ಶಿಂಷಾ ನದಿ ಈ ತಾಲ್ಲೂಕಿನ ಮೂಲಕ ಹರಿದು ಹೋಗುತ್ತದೆ. ತಾಲ್ಲೂಕಿನಲ್ಲಿ ಈ ನದಿಯ ಉದ್ದ 34 ಕಿ.ಮೀ. ತುಮಕೂರು ಪಟ್ಟಣಕ್ಕೆ ಪಶ್ಚಿಮಕ್ಕೆ 21 ಕಿ.ಮೀ. ದೂರದಲ್ಲಿದೆ. ಗುಬ್ಬಿಯಲ್ಲಿ ಪುರಸಭೆ ಇದೆ (ಸ್ಥಾಪನೆ 1909). ಬೆಂಗಳೂರು–ಪುಣೆ ರೈಲ್ವೆ ಮತ್ತು ಬೆಂಗಳೂರು–ಶಿವಮೊಗ್ಗ ಹಾದಿಯ ನಡುವೆ ಇದೆ.

ಈ ಊರಿಗೆ ಅಮರಗೊಂಡ, ಜಟಕಪುರ ಎಂಬ ಹೆಸರುಗಳೂ ಇದ್ದವು. ಅಮರಗೊಂಡ ಹೆಸರಿನ ಪವಿತ್ರ ಸ್ಥಳವಾಗಿತ್ತೆಂದೂ ಇಲ್ಲಿ ಗೋಸಲ ಚನ್ನಬಸವೇಶ್ವರ, ಅಮರಗೊಂಡ ಮಲ್ಲಿಕಾರ್ಜುನ, ಮಲ್ಲಣಾರ್ಯ ಮುಂತಾದ ವೀರಶೈವಾಚಾರ್ಯರು ಇದ್ದರೆಂದೂ ಹೇಳಲಾಗಿದೆ. ಇಲ್ಲಿಯ ಮಲ್ಲಿಕಾರ್ಜುನ ದೇವಾಲಯದಲ್ಲಿ ಮಲ್ಲಿಕಾರ್ಜುನ ಪ್ರವಚನವನ್ನು ನಿತ್ಯವೂ ಕೇಳುತ್ತಿದ್ದ ಎರಡು ಗುಬ್ಬಚ್ಚಿಗಳು ಆ ಪ್ರವಚನ ಪರಿಸಮಾಪ್ತಿಗೊಂಡಾಗ ದೇಹತ್ಯಾಗ ಮಾಡಿ ಸದ್ಗತಿ ಪಡೆದವೆಂದೂ ಆದ್ದರಿಂದಲೇ ಈ ಸ್ಥಳಕ್ಕೆ ಗುಬ್ಬಿ ಎಂಬ ಹೆಸರು ಬಂತೆಂದೂ ಹೇಳುತ್ತಾರೆ. ಮಲ್ಲಿಕಾರ್ಜುನನ ದೇವಾಲಯದಲ್ಲಿ ಆ ಗುಬ್ಬಚ್ಚಿಗಳದೆನ್ನಲಾದ ಸಮಾಧಿಯೊಂದು ಇದೆ. ಶ್ರೀರಾಮ ಈ ಪ್ರದೇಶದಲ್ಲಿ ಕೆಲವು ಸಮಯವಿದ್ದನೆಂದೂ ನಂಬಿಕೆ.

ಗುಬ್ಬಿ ಒಂದು ವ್ಯಾಪಾರಸ್ಥಳ. ಇಲ್ಲಿ ವಾರಕ್ಕೊಮ್ಮೆ ಸೇರುವ ಸಂತೆಗೂ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಗೂ ಸುತ್ತಮುತ್ತಣ ಸ್ಥಳಗಳಿಂದ ವರ್ತಕರೂ ಗ್ರಾಹಕರೂ ಬರುತ್ತಾರೆ. ಬಟ್ಟೆ, ಕಂಬಳಿ, ಅಡಕೆ, ತೆಂಗಿನಕಾಯಿ, ಬೆಲ್ಲ, ಹುಣಸೆಹಣ್ಣು, ಗೋದಿ, ಬತ್ತ, ರಾಗಿ, ಅರಗು ಮುಂತಾದವು ಇದರ ಸುತ್ತಮುತ್ತ ಉತ್ಪಾದನೆಯಾಗುವ ಪದಾರ್ಥಗಳು. ಸುತ್ತಮುತ್ತಣ ಸ್ಥಳಗಳಿಗೆಲ್ಲ ಇದೊಂದು ವ್ಯಾಪಾರಸ್ಥಳ. ಇಲ್ಲೊಂದು ನಿಯಂತ್ರಿತ ಮಾರುಕಟ್ಟೆಯಿದೆ. ಗುಬ್ಬಿಯಲ್ಲಿ ಗಾಡಿಗಳು ತಯಾರಾಗುತ್ತವೆ.

ಗುಬ್ಬಿಗೆ 3 ಕಿಮೀ ದೂರದಲ್ಲಿರುವ ಹೊಸಹಳ್ಳಿಯ ಗೌಡ ಮೈಸೂರಿನ ಸಾಮಂತನಾಗಿದ್ದ. ಈ ಪಟ್ಟಣವನ್ನು 400 ವರ್ಷಗಳ ಹಿಂದೆ ಸ್ಥಾಪಿಸಿದನೆಂದೂ ಈತ 700 ವರ್ಷಗಳ ಹಿಂದೆ ಇದ್ದ ಹೊನ್ನಪ್ಪಗೌಡನೆಂಬ ನೊಣಬ ಮುಖಂಡ ವಂಶಸ್ಥನೆಂದೂ ಹೇಳಲಾಗಿದೆ. ಮೈಸೂರಿನ ದೊರೆಗಳಿಗೆ ಈ ಮನೆತನದವರು ಕಪ್ಪ ಒಪ್ಪಿಸುತ್ತಿದ್ದರು. ಹೈದರನ ಕಾಲದಲ್ಲಿ ಇದನ್ನು 500 ಪಗೋಡಗಳಿಂದ 2,500 ಪಗೋಡಗಳಿಗೆ ಹೆಚ್ಚಿಸಲಾಯಿತು. ಟಿಪ್ಪು ಇವರ ಅಧಿಕಾರವನ್ನು ಕಿತ್ತುಕೊಂಡ.

ಗುಬ್ಬಿಯಲ್ಲಿರುವ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನವಾದ್ದು ಗದ್ದೆ ಮಲ್ಲೇಶ್ವರನ ದೇವಸ್ಥಾನ. ಇದು ಮೊದಲು ಊರ ಹೊರಗಿನ ಗದ್ದೆಯಲ್ಲಿತ್ತೆಂದೂ ಕ್ರಮೇಣ ಇದರ ಸುತ್ತಲೂ ಊರು ಬೆಳೆಯಿತೆಂದೂ ಹೇಳುತ್ತಾರೆ. ದೇವಾಲಯದ ಮೊದಲನೆಯದರಲ್ಲಿ ದಕ್ಷಿಣಾಮೂರ್ತಿ, ಎರಡನೆಯದರಲ್ಲಿ (ಮೂರು ಗರ್ಭಗೃಹದಲ್ಲಿ) ಪಾರ್ವತಿ ಮತ್ತು ಕೊನೆಯದರಲ್ಲಿ ವೀರಭದ್ರ ಮೂರ್ತಿಗಳಿವೆ. ವೈಲಪ್ಪ ಅಥವಾ ಓಹಿಲಪ್ಪ ದೇವಸ್ಥಾನವೂ ಪ್ರಸಿದ್ಧವಾದ್ದು. ಇಲ್ಲಿ ಶೈವ ಭಕ್ತ ಓಹಿಲನ ವಿಗ್ರಹವಿದೆ. ಗುಬ್ಬಿಯಪ್ಪ ಅಥವಾ ಗುಬ್ಬಿ ಚನ್ನಬಸವೇಶ್ವರ ದೇವಾಲಯ ಬಹಳ ದೊಡ್ಡದು. ಹೊಸಹಳ್ಳಿಯ ಪಾಳೆಯಗಾರ ಮುಮ್ಮಡಿ ಹೊನ್ನಪ್ಪಗೌಡನ ಕಾಲದಲ್ಲಿದ್ದ ಗುಬ್ಬಿಯಪ್ಪ ಅಥವಾ ಚನ್ನಬಸವಯ್ಯ ಎಂಬ ವೀರಶೈವ ಗುರುವಿನ ಗದ್ದುಗೆ ಇಲ್ಲಿದೆ. ಇದಕ್ಕೆ ಈಚೆಗೆ ಸುಂದರವಾದ ಗೋಪುರವೊಂದನ್ನು ಕಟ್ಟಲಾಗಿದೆ. ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಜನಾರ್ದನ ಮತ್ತು ಬ್ಯಾಟರಾಯಸ್ವಾಮಿ ದೇವಾಲಯಗಳೂ ಗುಬ್ಬಿಯಲ್ಲಿವೆ. ಗುಬ್ಬಿಗೆ 1.6ಕಿಮೀ. ದೂರದಲ್ಲಿ ಬಯಲ ಆಂಜನೇಯಸ್ವಾಮಿ ದೇವಾಲಯವಿದೆ. ಗುಬ್ಬಿ ರೈಲ್ವೆ ನಿಲ್ದಾಣದ ಬಳಿ ಇರುವ ಚಿದಂಬರಾಶ್ರಮದಲ್ಲಿ ದತ್ತಾತ್ರೇಯ ಮಂದಿರವೂ ಗುರುಕುಲವೂ ಇವೆ.

ಗುಬ್ಬಿಯಲ್ಲಿ ಶಾಲೆ, ಆಸ್ಪತ್ರೆಗಳುಂಟು. ಪೌರಸಭೆಯ ವ್ಯಾಪ್ತಿಗೆ ಒಳಪಟ್ಟ ಪ್ರದೇಶ ಸು. 6 ಚ.ಕಿಮೀ. ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಯಿಲ್ಲ. ನೀರಿನ ಕೊಳಾಯಿಗಳುಂಟು. 1934ರಲ್ಲಿ ವಿದ್ಯುದ್ದೀಪಗಳ ಸೌಲಭ್ಯ ಒದಗಿಸಲಾಯಿತು.

15 ಮತ್ತು 16ನೆಯ ಶತಮಾನಗಳಲ್ಲಿ ಗುಬ್ಬಿ ಪಟ್ಟಣ ಸಾಹಿತ್ಯ ಚಟುವಟಿಕೆಯ ಕೇಂದ್ರವಾಗಿತ್ತು. ವೀರಶೈವ ಧರ್ಮವನ್ನು ಕುರಿತ ಅನೇಕ ಗ್ರಂಥಗಳ ರಚನೆಯಾಯಿತು. ಗಣಭಾಷ್ಯರತ್ನಮಾಲೆಯೇ ಮುಂತಾದ ಅನೇಕ ಕೃತಿಗಳನ್ನು ರಚಿಸಿದ ಮಲ್ಲಣ್ಣ ಗುಬ್ಬಿಯವನು.ಈತ 15ನೆಯ ಶತಮಾನದ ಕೊನೆಯಲ್ಲಿದ್ದ. ಇವನ ಮೊಮ್ಮಗನಾದ ಗುಬ್ಬಿ ಮಲ್ಲಣಾರ್ಯ 1513 ಮತ್ತು 1530ರಲ್ಲಿ ಭಾವಚಿಂತಾರತ್ನ ಮತ್ತು ವೀರಶೈವಾಮೃತ ಪುರಾಣ ಎಂಬ ಎರಡು ಕಾವ್ಯಗಳನ್ನು ರಚಿಸಿದ. ಪ್ರಭುಗ, ಚೇರಮ ಇವರು ಮಲ್ಲಣಾರ್ಯನ ಶಿಷ್ಯರು. ಇವರೂ ಗ್ರಂಥಗಳನ್ನು ರಚಿಸಿದ್ದಾರೆ. ತೋಂಟದ ಸಿದ್ಧೇಶ್ವರ ಪುರಾಣವೆಂಬ ಗ್ರಂಥವನ್ನು ಮಲ್ಲಣಾರ್ಯನ ಮಗ ಶಾಂತೇಶ ರಚಿಸಿದ್ದು 1561ರಲ್ಲಿ. ಕನ್ನಡ ರಂಗಭೂಮಿಗೆ ಗುಬ್ಬಿಯ ಕೊಡುಗೆ ವಿಶಿಷ್ಟವಾದ್ದು. ಗುಬ್ಬಿ ಚನ್ನಬಸವೇಶ್ವರ

ಕೃಪಾಪೋಷಿತ ನಾಟಕಮಂಡಲಿಯ ಒಡೆಯರೂ ಸುಪ್ರಸಿದ್ಧ ನಟರೂ ಆಗಿದ್ದ ನಾಟಕ ಪಿತಾಮಹ ಜಿ.ಎಚ್.ವೀರಣ್ಣನವರು ಗುಬ್ಬಿಯವರು. ಗುಬ್ಬಿಯ ಇನ್ನೊಬ್ಬ ನಿವಾಸಿಯಾಗಿದ್ದ ಚಂದಣ್ಣ ಮತ್ತು ಅವರ ಮಿತ್ರರ ಪ್ರಯತ್ನದಿಂದ ಆರಂಭವಾದ ಈ ನಾಟಕ ಮಂಡಲಿಯನ್ನು ವೀರಣ್ಣನವರು ಅನಂತರ ವಹಿಸಿಕೊಂಡು ನಾಟಕ ಕ್ಷೇತ್ರದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ಸಿದ್ಧಿ ಪಡೆದರು. (ಕೆ.ಆರ್.)

**ಗುಬ್ಬಿವೀರಣ್ಣ :** ಸು.1890–1972. ಕನ್ನಡ ರಂಗಭೂಮಿಗೆ ತಮ್ಮ ಪ್ರಯೋಗಶೀಲತೆಯಿಂದ ವೈವಿಧ್ಯವನ್ನೂ ವಿಸ್ತಾರವನ್ನೂ ತಂದುಕೊಟ್ಟ ಪ್ರಸಿದ್ಧ ನಟರು, ನಿರ್ದೇಶಕರು. ತಮ್ಮ ಐದನೆಯ ವಯಸ್ಸಿನಲ್ಲಿ ಐದು ರೂಪಾಯಿಗಳ ಸಂಬಳಕ್ಕೆ ಗುಬ್ಬಿ ಶ್ರೀ ಚೆನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘದಲ್ಲಿ ಕೆಲಸಕ್ಕೆ ಸೇರಿ, ಕ್ರಮೇಣ ಅದರ ಮಾಲೀಕರಾಗಿ, ತಮ್ಮ ಪ್ರತಿಭಾವಿಲಾಸದಿಂದ ಆ ಸಂಸ್ಥೆಯನ್ನು ಕನ್ನಡ ರಂಗ ಭೂಮಿಯ ಪ್ರಾತಿನಿಧಿಕ ಸಂಸ್ಥೆ ಯನ್ನಾಗಿ ಬೆಳೆಸಿದ ವೀರಣ್ಣನವರು ಐದು ದಶಕಗಳಿಗೂ ಹೆಚ್ಚು ಕಾಲ ನಿಷ್ಠೆಯಿಂದ ರಂಗಭೂಮಿಯ ಸೇವೆ ಮಾಡಿದವರು.



ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ವೀರಣ್ಣನವರ ಜನನ. ತಂದೆ ಗುಬ್ಬಿ ಹಂಪಣ್ಣ, ತಾಯಿ ರುದ್ರಾಂಬೆ. ವೀರಣ್ಣನವರಿಗೆ ಇಬ್ಬರು ಅಕ್ಕಂದಿರು. ವೀರಣ್ಣನವರ ತಾಯಿಯವರ ಆರೋಗ್ಯ ಸರಿಯಾಗಿರದಿದ್ದುದರಿಂದ ತಂದೆ ಎರಡನೆಯ ಮದುವೆಯಾದರು. ಇದರ ಪರಿಣಾಮವಾಗಿ ಹಂಪಣ್ಣ ನವರು ಮೊದಲ ಹೆಂಡತಿ ಮತ್ತು ಮಕ್ಕಳನ್ನು ಅಲಕ್ಷಿಸಿದರು. ವೀರಣ್ಣ ನವರ ತಾಯಿ ಕೂಲಿನಾಲಿ ಮಾಡಿ ಮಕ್ಕಳನ್ನು ಸಾಕಬೇಕಾದ ಸ್ಥಿತಿ ಬಂತು. ಆಗ ವೀರಣ್ಣನವರ ಚಿಕ್ಕಪ್ಪನವರಾದ ವೀರಣ್ಣ ಎನ್ನುವವರು ಇವರನ್ನು ಕರೆದುಕೊಂಡು ಹೋಗಿ ಗುಬ್ಬಿ ನಾಟಕ ಕಂಪನಿಗೆ ಸೇರಿಸಿದರು. ಅದರ ಮಾಲೀಕರಾಗಿದ್ದ ಚಂದಣ್ಣನವರು ಹುಡುಗನಿಗೆ ಚಿಕ್ಕ ಪಾತ್ರಗಳನ್ನು ಕೊಡಲು ಪ್ರಾರಂಭಿಸಿದರು. ಧರ್ಮಪಾಲ ಚರಿತ್ರೆಯಲ್ಲಿ ಸಿರಿಯಾಳ ಕುಮಾರ, ಹರಿಶ್ಚಂದ್ರ ನಾಟಕದಲ್ಲಿ ಲೋಹಿತಾಶ್ವ, ಪಾಂಡವವಿಜಯ ನಾಟಕದಲ್ಲಿ ಮಾಯಾ ಇಂತಹ ಪಾತ್ರಗಳು ಇವರಿಗೆ ಸಿಕ್ಕಿದವು.

ಗುಬ್ಬಿ ಕಂಪನಿ ನಾಟಕ ಸಂಸ್ಥೆಯನ್ನು ಕಟ್ಟಿದವರು ಗುಬ್ಬಿ ಗ್ರಾಮದ ಕೆಲವು ರಸಿಕರು. ಚಂದಣ್ಣ ಎನ್ನುವವರು ಇದರ ಮುಂದಾಳು. ಇವರು ಪ್ರದರ್ಶಿಸಿದ ಪ್ರಥಮ ನಾಟಕ ಕುಮಾರರಾಮ ಎಂಬ ಯಕ್ಷಗಾನ. ಈ ನಾಟಕ ನಡೆಯುತ್ತಿದ್ದ ದಿನ ಆ ದಾರಿಯಲ್ಲಿ ಹಾದು ಹೋಗುತ್ತಿದ್ದ ಚಾಮರಾಜೇಂದ್ರಒಡೆಯರ್ ಅವರು ನಾಟಕವನ್ನು ನೋಡಿ ಪ್ರೋತ್ಸಾಹದ ಮಾತುಗಳ ನ್ನಾಡಿದರು. ಇದರಿಂದ ಪ್ರೋತ್ಸಾಹ ಗೊಂಡ ಕಂಪನಿಯವರು ಅನಂತರ ಚೋರಕಥೆ, ಜಗನ್ಮೋಹನ ಚರಿತ್ರೆ, ಗುಲೇಬಕಾವಲಿ, ಪಾಂಡವವಿಜಯ, ಸತ್ಯ ಹರಿಶ್ಚಂದ್ರ, ಇಂದ್ರಸಭಾ, ಧರ್ಮಪಾಲಚರಿತ್ರೆ, ಸತ್ಯವರ್ಮ ಚರಿತ್ರೆ ಇತ್ಯಾದಿ ನಾಟಕಗಳನ್ನು ಪ್ರದರ್ಶಿಸಿ ಹೆಸರು ಗಳಿಸಿದರು. ದಾವಣಗೆರೆಯಲ್ಲಿ ಈ ನಾಟಕ ಕಂಪನಿ ಮೊಕ್ಕಾಂ ಮಾಡಿದ್ದಾಗ ಮಾಲೀಕ ಚಂದಣ್ಣನವರು ತೀರಿಕೊಂಡರು. ಮೂವತ್ತು ವರ್ಷಗಳಿಂದ ನಡೆದು ಬಂದಿರುವ ಸಂಸ್ಥೆ ನಿಂತುಹೋಗಬಾರದೆಂದು ನಿರ್ಧರಿಸಿದ ಊರಿನ ಜನ ಕಂಪನಿಯ ಒಡೆತನವನ್ನು ಇವರಿಗೆ ಮತ್ತು ಚಂದಣ್ಣನವರ ಅಣ್ಣನ ಮಗ ನಾಗರಾಜಯ್ಯನವರಿಗೆ ವಹಿಸಿದರು. ಇವರಿಬ್ಬರೂ 1917 ಜುಲೈ 13ರಂದು ಕಂಪನಿಯ ಮಾಲೀಕರಾದರು. ಆದರೆ ಕೆಲವು ದಿನಗಳ ಅನಂತರ ನಾಗರಾಜಯ್ಯನವರ ಸಹಕಾರ ದೊರೆಯದಿದ್ದುದರಿಂದ ಇವರು ಅವರ ಪಾಲಿನ ಹಣವನ್ನು ಕೊಟ್ಟು ಸಂಪೂರ್ಣವಾಗಿ ತಾವೇ ಮಾಲೀಕರಾದರು.

ಗುಬ್ಬಿ ಕಂಪನಿಯ ನಿಜವಾದ ಇತಿಹಾಸ ಪ್ರಾರಂಭವಾದದ್ದು ವೀರಣ್ಣನವರು ಈ ಸಂಸ್ಥೆಯ ಮಾಲೀಕರಾದ ಮೇಲೆಯೇ. ಮಾಲೀಕರಾದ ಕೂಡಲೇ ಇವರು ಗಮನ ಹರಿಸಿದ್ದು ಉತ್ತಮ ನಾಟಕಗಳ ಕಡೆಗೆ. ಅದಕ್ಕಾಗಿ ಬೆಳ್ಳಾವೆ ನರಹರಿಶಾಸ್ತ್ರೀಯವ ರಿಂದ ಕೃಷ್ಣಲೀಲಾ, ಶ್ರೀಕೃಷ್ಣ ಪಾರಿಜಾತ, ಜಲಂಧರ, ಕೃಷ್ಣಗಾರುಡಿ ಮೊದಲಾದ ನಾಟಕಗಳನ್ನು ಬರೆಸಿ ಪ್ರದರ್ಶಿಸಿದರು. ರಂಗಸಜ್ಜಿಕೆಯಲ್ಲೂ ಅನೇಕ ಸುಧಾರಣೆಗಳನ್ನು ತಂದು ಅದನ್ನು ಶ್ರೀಮಂತಗೊಳಿಸಿದರು. ಹೀಗಾಗಿ ಆ ದಿನಗಳಲ್ಲಿ ಪ್ರತಿ ಪ್ರದರ್ಶನಕ್ಕೆ ಸಾವಿರ ರೂಪಾಯಿ ವರಮಾನ ಬರುವಂತಾಯಿತು. ಸಂಸ್ಥೆಯ ಸುವರ್ಣ ಮಹೋತ್ಸವ ವನ್ನು 1934ರಲ್ಲಿ ಅದ್ದೂರಿಯಿಂದ ಆಚರಿಸಿದ ವೀರಣ್ಣನವರು ಈ ಸಂದರ್ಭಕ್ಕಾಗಿಯೇ ಬಿ.ಪುಟ್ಟಸ್ವಾಮಯ್ಯನವರಿಂದ ಕುರುಕ್ಷೇತ್ರ ನಾಟಕವನ್ನು ಬರೆಸಿ ಪ್ರದರ್ಶಿಸಿದರು. ರಂಗಸಜ್ಜಿಕೆ, ವೇಷಭೂಷಣಗಳಿಗಾಗಿ ಎಪ್ಪತ್ತು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದರು. ಪ್ರಯೋಗದಲ್ಲಿ ಜೀವಂತಿಕೆಯನ್ನು ತರುವುದಕ್ಕಾಗಿ ನಿಜವಾದ ಆನೆ, ಕುದುರೆಗಳನ್ನೇ ರಂಗದ ಮೇಲೆ ತರಲು ಪ್ರಾರಂಭಿಸಿದರು. ಕುರುಕ್ಷೇತ್ರ ನಾಟಕವನ್ನು ದಿನಕ್ಕೆ ಮೂರು ಬಾರಿ ಪ್ರದರ್ಶಿಸಿ ಪ್ರತಿ ಪ್ರದರ್ಶನದಲ್ಲೂ ಹೊಸತನವನ್ನು ತಂದರು. ಅದುವರೆಗೆ ನಾಟಕ ಕಂಪನಿಗಳು ವಾರಕ್ಕೆ ಮೂರು ಅಥವಾ ನಾಲ್ಕು ದಿನ ನಾಟಕಗಳನ್ನಾಡುತ್ತಿದ್ದರೆ ಹೆಚ್ಚು. ಗುಬ್ಬಿ ಕಂಪನಿ ಪ್ರದರ್ಶಿಸಿದ ಇನ್ನೊಂದು ಪ್ರಸಿದ್ಧ ನಾಟಕ ಬಿ.ಪುಟ್ಟಸ್ವಾಮಯ್ಯನವ ರಿಂದ ರಚಿತವಾದ ದಶಾವತಾರ. ಬೆಂಗಳೂರು ನಗರದಲ್ಲಿಯೇ ಈ ನಾಟಕ ನೂರಾ ಇಪ್ಪತ್ತೆಂಟು ಪ್ರದರ್ಶನಗಳನ್ನು ಕಂಡಿತು.

ನಾಟಕಕಾರರ ಮಾರ್ಗದರ್ಶನದಲ್ಲಿಯೇ ನಾಟಕದ ರಿಹರ್ಸಲ್ ನಡೆಯುವಂತೆ ವೀರಣ್ಣನವರು ವ್ಯವಸ್ಥೆ ಮಾಡಿದ್ದು, ಪ್ರಯೋಗದ ದೃಷ್ಟಿಯಿಂದ ಗಮನಾರ್ಹ. ವೃತ್ತಿರಂಗಭೂಮಿಯಲ್ಲಿ ಈ ಬಗೆಯ ಪ್ರಯೋಗ ಅದೇ ಮೊದಲು. ಪ್ರತಿಭಾವಂತ ನಾಟಕಕಾರರನ್ನು ಪತ್ತೆಮಾಡಿ ಅವರು ಪ್ರಯೋಗದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದಲ್ಲದೆ, ಪ್ರತಿಭಾವಂತ ನಟರನ್ನು ಗುರುತಿಸಿ ತಮ್ಮ ಸಂಸ್ಥೆಗೆ ಸೇರಿಸಿಕೊಂಡು ಪ್ರೋತ್ಸಾಹಿಸಿದರು. ಇವರಿಂದ ಅನೇಕ ನಟರು ಬೆಳಕಿಗೆ ಬಂದರು. ಸಿ.ಬಿ.ಮಲ್ಲಪ್ಪ, ನಟಭಯಂಕರ ಗಂಗಾಧರರಾಯ, ಜಿ.ನಾಗೇಶರಾಯ, ಆರ್.ನಾಗೇಂದ್ರರಾಯ, ಗುರುಮೂರ್ತಪ್ಪ, ಹೊನ್ನಪ್ಪ ಭಾಗವತರ್, ರಾಘವೇಂದ್ರರಾವ್, ವಾಸುದೇವ ಗಿರಿಮಾಜಿ, ರಾಮಚಂದ್ರಶಾಸ್ತ್ರಿ, ಬಿ.ಆರ್.ಪಂತುಲು, ಸುಬ್ಬಯ್ಯ ನಾಯ್ಡು, ಜಿ.ವಿ.ಅಯ್ಯರ್, ರಾಜಕುಮಾರ್, ಟಿ.ಎನ್.ಬಾಲಕೃಷ್ಣ, ನರಸಿಂಹರಾಜು, ಸುಂದರಮ್ಮ, ಅಶ್ವತ್ಥಮ್ಮ, ಬಿ.ಜಯಮ್ಮ, ಬಿ.ವಿ.ಕಾರಂತ ಮೊದಲಾದ ಹೆಸರಾಂತ ಕಲಾವಿದರು ಒಂದಲ್ಲ ಒಂದು ಕಾಲದಲ್ಲಿ ಗುಬ್ಬಿ ಕಂಪನಿಯಲ್ಲಿದ್ದವರೇ.

ಗುಬ್ಬಿ ನಾಟಕ ಸಂಸ್ಥೆ ಪ್ರದರ್ಶಿಸಿದ ಗುಲೇಬಕಾವಲಿ, ಸದಾರಮೆ, ಕುರುಕ್ಷೇತ್ರ, ಅಕ್ಕಮಹಾದೇವಿ, ಸಂಪೂರ್ಣರಾಮಾಯಣ, ಕೃಷ್ಣಲೀಲಾ, ರಾಜಾ ಗೋಪಿಚಂದ, ದಶಾವತಾರ, ಅಣ್ಣ ತಮ್ಮ, ಲವಕುಶ ಮೊದಲಾದ ನಾಟಕಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ ಆಂಧ್ರ ತಮಿಳುನಾಡುಗಳಲ್ಲಿಯೂ ಅಪಾರ ಯಶಸ್ಸನ್ನು ಗಳಿಸಿದವು. ಇವರು ಕಂಪನಿಯ ಸಮಸ್ತ ವ್ಯವಹಾರಗಳನ್ನು ನೋಡಿಕೊಳ್ಳುವುದರ ಜೊತೆಗೆ ಅನೇಕ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತಿದ್ದರು. ಇವರ ಹಾಸ್ಯ ಪಾತ್ರಗಳನ್ನು ನೋಡಿ ಜನ ಹುಚ್ಚೆದ್ದು ಕುಣಿಯುತ್ತಿದ್ದರು. ಸದಾರಮೆಯಲ್ಲಿ ಕಳ್ಳ, ಆದಿಮೂರ್ತಿ; ಪ್ರಭಾಮಣಿವಿಜಯದಲ್ಲಿ ವಿಲೋಚನ; ಗುಲೇಬಕಾವಲಿಯಲ್ಲಿ ಮುತ್ತುಸ್ವಾಮಿ ಮತ್ತು ಕುರುಡು ದೊಂಬಿದಾಸ; ಪ್ರಹ್ಲಾದ ಚರಿತ್ರೆಯಲ್ಲಿ ಸಾಬಿ ಈ ಪಾತ್ರಗಳು ಇವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟವು.

ಮಕ್ಕಳಿಗಾಗಿ ಮಕ್ಕಳಿಂದಲೇ ನಾಟಕಗಳನ್ನು ಆಡಿಸುವ ಉದ್ದೇಶದಿಂದ ಇವರು ಬಾಲಕಲಾವಿವರ್ಧಿನಿ ಎನ್ನುವ ಸಂಸ್ಥೆಯನ್ನು ಕಟ್ಟಿ, ಎಂಟರಿಂದ ಹದಿನಾಲ್ಕು ವರ್ಷದೊಳಗಿನ ಮಕ್ಕಳನ್ನು ಕಲೆಹಾಕಿ ಸಾವಿತ್ರಿ, ಕಬೀರಲೀಲೆ ಮುಂತಾದ ನಾಟಕಗಳನ್ನಾಡಿಸಿದರು. ಇದೇ ಸಮಯದಲ್ಲಿ ಚಿಕ್ಕೋಡಿಯ ಶಿವಲಿಂಗಸ್ವಾಮಿ ಎನ್ನುವವರು ಒಂದು ನಾಟಕ ಸಂಸ್ಥೆಯನ್ನು ಕಟ್ಟಿ, ವಿಪರೀತ ನಷ್ಟಕ್ಕೊಳಗಾಗಿ ವೀರಣ್ಣನವರ ಬಳಿಗೆ ಬಂದರು. ಆ ನಾಟಕ ಸಂಸ್ಥೆಯನ್ನು ವೀರಣ್ಣನವರೇ ವಹಿಸಿಕೊಂಡು ಅದನ್ನು ಒಂದು ವ್ಯವಸ್ಥೆಗೆ ತಂದು ಅಭಿವೃದ್ಧಿಪಡಿಸಿ ಅನಂತರ ಶಿವಲಿಂಗ ಸ್ವಾಮಿಯವರಿಗೆ ವಹಿಸಿಕೊಟ್ಟರು.

ವೀರಣ್ಣನವರು ಚಿತ್ರರಂಗದಲ್ಲಿಯೂ ಗಮನಾರ್ಹ ಕೆಲಸ ಮಾಡಿದ್ದಾರೆ. 1930ರಲ್ಲಿಯೇ ಇವರು ತಮ್ಮ ಕಂಪನಿಗಾಗಿ ಜಾಹೀರಾತು ಮಾಡಲು ಚಿತ್ರ ಮಾಧ್ಯಮವನ್ನು ಉಪಯೋಗಿಸಿಕೊಂಡರು, ಅದು ಮೂಕಿ ಚಿತ್ರಗಳ ಕಾಲ. 1931ರಲ್ಲಿ ದೇವುಡು ಮತ್ತಿತರೊಡನೆ ಸೇರಿ ಹಿಸ್ ಲವ್ ಅಫೇರ್ (ನಿರ್ದೇಶಕರು: ಬೆಲ್ಲಿಯಂನ ಆಲ್‌ಗುಡ್) ಮತ್ತು ಕಳ್ಳರ ಕೂಟ ಎನ್ನುವ ಚಿತ್ರಗಳನ್ನು ತಯಾರಿಸಿದ್ದರು. ಟಾಕಿ ಯುಗ ಪ್ರಾರಂಭವಾದ ಮೇಲೆ 1942ರಲ್ಲಿ ವೀರಣ್ಣನವರು ಕೆಲವು ಮಿತ್ರರೊಡನೆ ಸೇರಿ ಕರ್ನಾಟಕ ಫಿಲ್ಮ್ಸ್ ಸಂಸ್ಥೆಯನ್ನು ಪ್ರಾರಂಭಿಸಿ, ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ, ಸದಾರಮೆ, ಬೇಡರ ಕಣ್ಣಪ್ಪ ಮೊದಲಾದ ಉತ್ತಮ ಚಿತ್ರಗಳನ್ನು ತಯಾರಿಸಿದರು. ಇವರ ಚಿತ್ರಗಳ ಮೂಲಕ ಅನೇಕ ನಿರ್ದೇಶಕರು, ಕಲಾವಿದರು ಬೆಳಕಿಗೆ ಬಂದರು.

ರಂಗಭೂಮಿ ಮತ್ತು ಚಿತ್ರರಂಗ ಕ್ಷೇತ್ರಗಳಲ್ಲಿ ತಮ್ಮ ಅಸಾಧಾರಣ ಪ್ರತಿಭೆಯನ್ನು ಮೆರೆದ ಇವರಿಗೆ ಬಗೆಬಗೆಯ ಗೌರವಪ್ರಶಸ್ತಿಗಳು ಲಭಿಸಿದವು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ವರ್ಸಟೈಲ್ ಕಾಮೆಡಿಯನ್ ಎಂದು ಕರೆಸಿಕೊಂಡರು. ಜಯಚಾಮರಾಜ ಒಡೆಯರ್ ಅವರು 1942ರಲ್ಲಿ ನಾಟಕರತ್ನ ಎಂಬ ಬಿರುದಿತ್ತು ಗೌರವಿಸಿದರು. ಬೆಂಗಳೂರಿನ ಜನತೆ ಇವರನ್ನು ವಿನೋದರತ್ನಾಕರ ಎಂದು ಕರೆದು ಸನ್ಮಾನಿಸಿತು. ಕೇಂದ್ರ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ಪಡೆದಿದ್ದ ಇವರನ್ನು ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್.ಪದವಿ ನೀಡಿ ಗೌರವಿಸಿತು (1970).

ವೀರಣ್ಣನವರು ತಮ್ಮ ಎಂಬತ್ತೆರಡನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ 1972 ಅಕ್ಟೋಬರ್ 18ರಂದು ನಿಧನಹೊಂದಿದರು. ಇವರ ನೆನಪಿಗಾಗಿ ಕರ್ನಾಟಕ ಸರ್ಕಾರ ಗುಬ್ಬಿವೀರಣ್ಣ ಪ್ರಶಸ್ತಿಯನ್ನು ಸ್ಥಾಪಿಸಿದೆ (1994). ಕನ್ನಡ ರಂಗಭೂಮಿಗೆ ಅಪೂರ್ವ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. (ಬಿ.ವಿ.ವಿವೈ.)

**ಗುಬ್ಬಿಯ ಮಲ್ಲಣ್ಣ :** ಸು. 1475. ಗಣಭಾಷ್ಯರತ್ನಮಾಲೆ ಮತ್ತು ವಾತುಲತಂತ್ರ ಟೀಕೆಗಳ ಕರ್ತೃ; ಅಮರ ಗುಂಡದ (ಗುಬ್ಬಿ) ಅಮರ ಗುಂಡಾರ್ಯನ ಮಗ. ಈತನ ವಂಶಸ್ಥರು ವೀರಶೈವ ಮತಕ್ಕೂ ಕನ್ನಡ ಸಾಹಿತ್ಯಕ್ಕೂ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಈತನ ಮೊಮ್ಮಗನೇ ಭಾವಚಿಂತಾರತ್ನದ ಕರ್ತೃವಾದ ಗುಬ್ಬಿಯ ಮಲ್ಲಣಾರ್ಯ. ಮರಿಮಗನಾದ ಶಾಂತೇಶನ ಸಿದ್ಧೇಶ್ವರ ಪುರಾಣದಿಂದ ಮಲ್ಲಣ ತೋಂಟದ ಸಿದ್ಧಲಿಂಗಯತಿಯ (ಸು.1470) ಶಿಷ್ಯನಾಗಿದ್ದನೆಂದು ತಿಳಿದುಬರುತ್ತದೆ.

ವಾತುಲತಂತ್ರಟೀಕೆ ವಾತುಲತಂತ್ರವೆಂಬ ಶೈವಾಗಮ ಸಿದ್ಧಾಂತಕ್ಕೆ ಸಂಬಂಧಿಸಿದ ಸಂಸ್ಕೃತ ಗ್ರಂಥದ ಕನ್ನಡ ವ್ಯಾಖ್ಯಾನವಾಗಿದೆ. ಇದರಲ್ಲಿ ವೀರಶೈವ ಧರ್ಮದ ಪರವಾಗಿ ಮಲ್ಲಣ್ಣ ಕನ್ನಡ ವ್ಯಾಖ್ಯಾನವನ್ನು ವಿವರವಾಗಿ ಕೊಟ್ಟಿದ್ದಾನೆ. ಈ ಕೃತಿಯಲ್ಲಿ ತತ್ತ್ವಭೇದ, ವರ್ಣಭೇದ, ಚಕ್ರಭೇದ, ವರ್ಗಭೇದ, ಮಂತ್ರಭೇದ, ಪ್ರಣವಭೇದ, ಲಿಂಗಭೇದ, ಬ್ರಹ್ಮಭೇದ, ಮಂತ್ರಾಜಾತ, ಮಂತ್ರಕೀಲಕ ಎಂಬ ದಶಪಟಲಗಳಿವೆ.

ಗಣಭಾಷ್ಯ ರತ್ನಮಾಲೆಯಲ್ಲಿ ವೀರಶೈವ ತತ್ತ್ವ ವಿವೇಚನೆಯನ್ನು ಯುಕ್ತಾಯುಕ್ತ ವಾದದಿಂದ ಪ್ರಮಾಣಬದ್ಧವಾಗಿ, ವಿಸ್ತಾರವಾಗಿ, ಸರಳ ರೀತಿಯಲ್ಲಿ ಮಾಡಲಾಗಿದೆ. ವೀರಶೈವ ಆಚರಣೆಗಳನ್ನು ಅನುಭವಾದಿ ಸದ್ಭಕ್ತ ಮಹಿಮಾಂತವಾದ 101 ಸ್ಥಲಗಳೆಂದು ವಿಭಾಗಿಸಿ ವೇದಾಗಮ ಪುರಾಣೇತಿಹಾಸಾದಿ ಗ್ರಂಥಗಳಿಂದ ಪ್ರಮಾಣಗಳನ್ನು ಒದಗಿಸಿ ಉದಾಹರಣೆಯಾಗಿ ಪುರಾತನರ ಕನ್ನಡ ವಚನಗಳನ್ನು ಕೊಡಲಾಗಿದೆ. ಇದರಲ್ಲಿ ಅಂಗಸ್ಥಲ 44, ಲಿಂಗಸ್ಥಲ 45, ನಿರಂಗಲಿಂಗಸ್ಥಲ 12 ಎಂದು ಮೂರು ವಿಭಾಗಗಳಿವೆ. ಅಂಗಸ್ಥಲದಲ್ಲಿ 234 ಶ್ಲೋಕಗಳೂ 225 ವಚನಗಳೂ ಲಿಂಗಸ್ಥಲದಲ್ಲಿ 195 ಶ್ಲೋಕಗಳೂ 193 ವಚನಗಳೂ ನಿರಂಗಲಿಂಗಸ್ಥಲದಲ್ಲಿ 51 ಶ್ಲೋಕಗಳೂ 67 ವಚನಗಳೂ ಇವೆ. ಇವೆಲ್ಲ 38 ಜನ ಶಿವಶರಣರ ವಚನಗಳಿಂದಲೂ 53 ಸಂಸ್ಕೃತ ಗ್ರಂಥಗಳಿಂದಲೂ ಉದಾಹೃತವಾಗಿವೆ. ಸಂಸ್ಕೃತದ ಎಲ್ಲ ಶ್ಲೋಕಗಳಿಗೂ ಕನ್ನಡ ತಾತ್ಪರ್ಯವಿದೆ. ಪ್ರತಿ ಸ್ಥಲದ ಆರಂಭದಲ್ಲಿಯೂ ಕನ್ನಡ ಅವತರಣಿಕೆಯೊಂದಿದೆ. ಅನಂತರ ಸಂಸ್ಕೃತ ಪುರಾಣಶಾಸ್ತ್ರಗಳಿಂದ ಅಲ್ಲಿನ ವಾದವನ್ನು ಸಮರ್ಥಿಸಲಾಗಿದೆ. ಆಮೇಲೆ ವಿಷಯ ಸಮರ್ಥನೆಗಾಗಿ ಪುರಾತನ ವಚನಗಳನ್ನು ಉದಾಹರಿಸಿ ಪ್ರತಿಸ್ಥಲವನ್ನು ಮುಗಿಸಲಾಗಿದೆ. ಇಲ್ಲಿ ಪ್ರತಿಪಾದಿತವಾಗಿರುವ ಇಂದ್ರಿಯ ನಿರಸನಸ್ಥಲ, ಹಿಂಸಾನಿರಸನ ಸ್ಥಲ, ಹುಸಿನಿರಸನ ಸ್ಥಲ, ಕಳವುನಿರಸನ ಸ್ಥಲ, ಆಶಾನಿರಸನ ಸ್ಥಲ, ಪರದಾರನಿರಸನ ಸ್ಥಲ-ಇವುಗಳಲ್ಲಿ ಸಾಮಾನ್ಯ ಧರ್ಮವನ್ನೂ ಕೆಲವು ಸ್ಥಲಗಳಲ್ಲಿ ವಿಶೇಷ ಧರ್ಮವನ್ನೂ ಪ್ರತಿಪಾದಿಸಲಾಗಿದೆ. ಪ್ರಸ್ತಾವನೆಯಲ್ಲಿ ಗ್ರಂಥದ ವಿಷಯವಾಗಿ ಈ ಮಾತುಗಳಿವೆ:

ಇದು ಪರಮ ವೀರಶೈವ ಸಿದ್ಧಾಂತ ಜ್ಞಾನ
ಇದು ವೀರಶೈವ ಪ್ರತಿಷ್ಠಾಸ್ಥಾಪನಾಚಾರ್ಯ
ಇದು ದಿವ್ಯ ವೇದಾಂತ ಶಿರೋಮಣಿ
ಇದು ಸಮಸ್ತ ಶಾಸ್ತ್ರ ಮುಖ್ಯ ಮುಖದರ್ಪಣ
ಇದು ಮಹಾಜ್ಞಾನ ಪ್ರವರ್ಧನ ಪರಮಾನುಭವ ಸಂಬೋಧೆ
ಇದು ಸರ್ವಾಚಾರ ಸಂಪನ್ನರ ಸಮಾರೂಢ ಸಂಗ್ರಹ
ಇದು ಪರಮ ರಾಜಯೋಗಸಾಧ್ಯ ಸನ್ನಿಧಾನ
ಇದು ರಸಾಮೃತ ಪ್ರಸನ್ನ ಪ್ರಸಾದ
ಇದು ಅಜ್ಞಾನ ತಿಮಿರಾಂಜನವಪ್ಪ ಮಹಾ ಪ್ರಸಂಗ

ಎಂದು ವಿಶ್ಲೇಷಿಸಿ ಹೇಳಿಕೊಂಡಿದ್ದಾನೆ. ಸರಳತೆ ಈತನ ಶೈಲಿಯ ಲಕ್ಷಣವಾಗಿದೆ.

ಅರ್ಥಾನಾಮರ್ಜನೇ ದುಃಖ ವರ್ಧಿತಾನಾರಿ ಚ ರಕ್ಷಣೇ।
ನಾಶೇ ದುಃಖ, ವ್ಯಯೇ ದುಃಖ ಮರ್ಥಾತ್ಪುಂಸಃ ಕುತಃ ಸುಖಮ್॥ (ಸ್ಥಲ 10-2)

ಧನವ ಗಳಿಸುವಲ್ಲಿ ದುಃಖವು, ಅದನ್ನು ರಕ್ಷಿಸುವಲ್ಲಿ ದುಃಖವು
ನಾಶವಾಗಿ ಹೋದರೂ ದುಃಖವು, ವೆಚ್ಚಮಾಡಿದಲ್ಲಿಯೂ
ದುಃಖವು. ಈ ಪ್ರಕಾರವಾದ ಅರ್ಥದಿಂದ ಮನುಷ್ಯನಿಗೆ
ಸುಖವೆಲ್ಲಿಯದು?

ಬಸವರಾಜದೇವರು, ಚೆನ್ನಬಸವರಾಜದೇವರು, ಪ್ರಭುದೇವರು, ಮುಖ್ಯವಾದ ಅಸಂಖ್ಯಾತ ಮಹಾಗಣಂಗಳು ನೂರೊಂದು ಸ್ಥಲದಲ್ಲಿ ನಡೆದು ನುಡಿದ ವಚನಂಗಳು ಸ್ಥಲ ಭಿನ್ನವಾಗಿರ್ದಡೆ ಚೆಂದವಲ್ಲೆಂದು ಕಂಠಮಾಲೆಯ ಪವಣಿಗೆಯನರಿದು ಸೇರಿಸಿದೆನು. ನಿಮ್ಮ ಕಾರುಣ್ಯದ ಶಿಶು ಗುಬ್ಬಿಯ ಮಲ್ಲಣ್ಣಗಳು ಶಿವಗಣಂಗಳ ಶಿವಾನುಭವ ಸ್ತೋತ್ರಮಂ ಮಾಡಿ ಶಿವಗಣಂಗಳ ಮುಖಕ್ಕೆ ನಿರ್ಮಲ ದರ್ಪಣ ಮೆನೆ ಸಮರ್ಪಿಸಿದೆನು.

ಈ ಗ್ರಂಥಗಳಿಂದ ಕವಿಗೆ ಕನ್ನಡ ಹಾಗೂ ಸಂಸ್ಕೃತ ಭಾಷೆಗಳ ಮೇಲೆ ಹಿಡಿತವಿತ್ತೆಂಬುದು ವಿದಿತವಾಗುತ್ತದೆ. ಶ್ರೇಷ್ಠ ಸಂಕಲನಕಾರನಾಗಿ, ಉತ್ತಮ ಟೀಕಾಕಾರನಾಗಿ, ವಚನ ವಾಙ್ಮಯಕ್ಕೆ ಗುಬ್ಬಿಯ ಮಲ್ಲಣ್ಣನಿಂದ ಸಂದ ವಿಶಿಷ್ಟ ಸೇವೆ ಗಣನೀಯವಾದದ್ದು. (ಎಸ್.ಕೆ.ಆರ್‌ಎ.;ಬಿ.ಎಸ್.)

**ಗುಬ್ಬಿಯ ಮಲ್ಲಣ್ಣಾರ್ಯ :** ಸು. 1513. ಭಾವಚಿಂತಾರತ್ನ ಮತ್ತು ವೀರಶೈವಾಮೃತ ಮಹಾಪುರಾಣ ಎಂಬ ಷಟ್ಪದಿ ಕಾವ್ಯಗಳ ಕರ್ತೃ. ವೀರಶೈವ ಕವಿ. ಹುಟ್ಟಿದ ಸ್ಥಳ ತುಮಕೂರು ಜಿಲ್ಲೆಯ ಗುಬ್ಬಿ. ಪುರಾತನ ರಗಳೆ ಎಂಬ ಗ್ರಂಥವನ್ನೂ ಬರೆದನೆಂಬ ಪ್ರತೀತಿಯಿದೆ. ಆದರೆ ಅದು ಉಪಲಬ್ಧವಿಲ್ಲ. ಗಣಭಾಷ್ಯರತ್ನಮಾಲೆಯನ್ನು ಬರೆದ ಗುಬ್ಬಿಯ ಮಲ್ಲಣ್ಣ (ಸು.1475) ಈತನ ಪಿತಾಮಹ. ಈತನ ಮಗನೇ ತೋಂಟದ ಸಿದ್ದೇಶ್ವರ ಪುರಾಣವನ್ನು ಬರೆದ ಶಾಂತೇಶ (1561) **(ನೋಡಿ- ಶಾಂತೇಶ)**.

ವೀರಶೈವಾಮೃತ ಪುರಾಣದಲ್ಲಿ ಕವಿ ತನ್ನ ವಂಶ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ. ಅಮರಗುಂಡದ ಮಲ್ಲೇಶ್ವರಾಚಾರ್ಯ; ಅವನ ಶಿಷ್ಯ ಶೂಲವೇರಿದ ಮಹತ್ತ್ವವುಳ್ಳ ಗುರುಭಕ್ತ; ಅವನ ಮಗ ದೇಶಿಕ ಪಟ್ಟವರ್ಧನ ಸೌಂದರ್ಯ ಮಲ್ಲಿಕಾರ್ಜುನ ಪಂಡಿತ; ಅವನ ಮಗ ನಾಗನಾಥಾರ್ಯ; ಅವನ ಮಗ ಅಹಿಯಂ ಲಿಂಗಕೆ ಛತ್ರಮಂ ಮಾಡಿದ ಅಮರ ಗುಂಡಾರ್ಯ; 'ಅವನ ವಂಶದೊಳು ಗುಬ್ಬಿಯ ಮಲ್ಲಣ್ಣನು ಹುಟ್ಟಿ ಅನುಭವಯೋಗ ಷಟ್ಸ್ಥಲಖ್ಯಾತಮಂ ಗಣಭಾಷ್ಯರತ್ನಮಾಲೆಯಂ ಮಾಡಿ ವಾತೂಲಕ್ಕೆ ಟಿಪ್ಪಣವನೆಸಗಿದಂ'; ಅವನ ಮಗ ಗುರುಭಕ್ತ; ಅವನ ಹೆಂಡತಿ ಸಪ್ಪೆಯಮ್ಮ-ಇವರ ಮಗ ಕವಿ ಗುಬ್ಬಿಯ ಮಲ್ಲಣಾರ್ಯ. ಶಿವಗಂಗೆಯ ಶಾಂತನಂಜೇಶ, ಸಿದ್ಧಮಲ್ಲೇಶ ಈತನಿಗೆ ಗುರುವಾಗಿದ್ದರೆಂದು ತಿಳಿದುಬರುತ್ತದೆ.

ಭಾವ ಚಿಂತಾರತ್ನ : ವಾರ್ಧಕ ಷಟ್ಪದಿಯಲ್ಲಿರುವ ಈ ಕಾವ್ಯದಲ್ಲಿ 9 ಸಂಧಿಗಳೂ 391 ಪದ್ಯಗಳೂ ಇವೆ. ಇದಕ್ಕೆ ಸತ್ಯೇಂದ್ರಚೋಳನಾಥ ಕಥೆ ಎಂಬ ಹೆಸರೂ ಇದೆ. ತಿರುಜ್ಞಾನ ಸಂಬಂಧರು ಕುಲಚ್ಚರೆಯಗೆ ಪಂಚಾಕ್ಷರೀ ಮಹಿಮೆಯನ್ನು ತಿಳಿಸುವುದಕ್ಕಾಗಿ ದ್ರಾವಿಡದಲ್ಲಿ ಹೇಳಿದ ಸತ್ಯೇಂದ್ರಚೋಳನ ಕಥೆಯನ್ನು ತಾನು ಕನ್ನಡದಲ್ಲಿ ಹೇಳಿರುವುದಾಗಿ ಕವಿ ತಿಳಿಸುತ್ತಾನೆ. ಈ ಗ್ರಂಥ ಪಂಚಾಕ್ಷರಿಯ ಮಹತ್ತ್ವದ ಬೋಧೆ ಎಂದು ಕವಿ ಸ್ಪಷ್ಟವಾಗಿ ತಿಳಿಸುತ್ತಾನೆ. ಗ್ರಂಥಾವತಾರದಲ್ಲಿ ಅನೇಕ ಕವಿಗಳನ್ನೂ ಬಸವ, ಅಲ್ಲಮ್ಮ ಚೆನ್ನಬಸವ ಮುಂತಾದ ವಚನಕಾರರನ್ನೂ ಸ್ತುತಿಸಿದ್ದಾನೆ. ಕಾವ್ಯಬಂಧ ಪ್ರೌಢವಾಗಿದೆ.

ವೀರಶೈವಾಮೃತ ಪುರಾಣ : ವಾರ್ಧಕ ಷಟ್ಪದಿಯ ಕಾವ್ಯ. ಕಾಂಡ 8, ಸಂಧಿ 136, ಪದ್ಯ 7,099. ಇದರಲ್ಲಿ ವೀರಶೈವ ಸಿದ್ಧಾಂತವನ್ನು ಸವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. 'ಸಾಕ್ಷಿ' ಎಂದು ವೇದಾಗಮ ಪುರಾಣೇತಿಹಾಸ ಸ್ಮೃತಿಗಳಿಂದ ವಾಕ್ಯಗಳು ಅನುವಾದ ಮಾಡಲ್ಪಟ್ಟಿವೆ. ಅಲ್ಲದೆ ಶಿವನ ಪಂಚವಿಂಶತಿ ಲೀಲೆಗಳು ಪುರಾತನ ಹಾಗೂ ನೂತನ ಶರಣರ ಕಥೆಗಳು, ಶೈವ ವೀರಶೈವ ತತ್ತ್ವ ವಿಚಾರ, ಧರ್ಮಾಧರ್ಮ ಸ್ವರೂಪ, ಬಸವ ಪುರಾಣ, ಶಿವತತ್ತ್ವ ಚಿಂತಾಮಣಿ ಮೊದಲಾದ ಕಾವ್ಯಗಳ ಕಥಾಸಂಗ್ರಹ- ಇವನ್ನು ಈ ಕಾವ್ಯದಲ್ಲಿ ಕಾಣಬಹುದು. ಶೀಲವಂತಾರ್ಯನ ಕರಜಾತನಾದ ಹಲಗೆಯಾರ್ಯ ತನ್ನ ಶಿಷ್ಯ ಕೆಂಚವೀರನಿಗೆ ಬೋಧಿಸಿದ ಉಪದೇಶವನ್ನು ಪದ್ಯರೂಪವಾಗಿ ರಚಿಸು ಎಂದು ಹೇಳಲು ತಾನು ಅವನ ಆಜ್ಞಾನುಸಾರವಾಗಿ ಈ ಕೃತಿಯನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ.

ಬಸವ ಪುರಾಣಾರ್ಣವಂ ಪೇಳ್ದೊಡೆ ಅರ್ಣವ ಪ್ರಾಂತದ ಭೂಮಿಯೊಳು ಪೆಸರಾಗಿರ್ದೆ ಎಂದು ಈತನನ್ನು ಇತರರು ಸ್ತುತಿಸಿರುವುದರಿಂದ ಈತ ಉಭಯ ಭಾಷಾ ಕವಿಯೆಂದೂ ಬಸವ ಪುರಾಣದ ಅರ್ಥವನ್ನು ಹೇಳುವುದರಲ್ಲಿ ಪ್ರಸಿದ್ಧನೆಂದೂ ತಿಳಿದುಬರುತ್ತದೆ. ಇವನಿಗೆ ಬಸವಪುರಾಣದ ಮಲ್ಲಣಾರ್ಯನೆಂಬ ಹೆಸರೂ ಉಂಟು. ಭಾವಚಿಂತಾರತ್ನವನ್ನು 1513ರಲ್ಲೂ ವೀರಶೈವಾಮೃತ ಪುರಾಣವನ್ನು 1530ರಲ್ಲೂ ಬರೆದಂತೆ ಕವಿಯ ಹೇಳಿಕೆಯಿಂದ ಗೊತ್ತಾಗುತ್ತದೆ. *

**ಗುಮಟೆ ಪದಗಳು :** ಗುಮಟೆ ಎಂಬ ವಿಶಿಷ್ಟ ತಾಳವಾದ್ಯದೊಡನೆ ಹಾಡುವ ಪದಗಳಿಗೆ ಈ ಹೆಸರಿದೆ. ಆಕಾರದಲ್ಲಿ ಗುಮಟೆ ಉದ್ದುದ್ದವಾಗಿ ಇರುವುದು ಉಂಟು. ಹೆಚ್ಚು ಬಳಕೆಯಲ್ಲಿರುವ ಗುಂಡು ಗುಮಟೆ ಕೊಡದ ಆಕಾರದಲ್ಲಿರುತ್ತದೆ. ಅದನ್ನು ಪಾಂಗು ಎನ್ನುತ್ತಾರೆ. ಪಾಂಗಿಗೆ ಎರಡು ಮೂತಿಗಳಿರುತ್ತವೆ. ಚಿಕ್ಕ ಮೂತಿಯ ಭಾಗವನ್ನು ಎಡಗೈಯಲ್ಲಿ ಹಿಡಿದುಕೊಂಡು ಅಗಲವಾದ ಮೂತಿಯ ಮೇಲೆ ಬಲಗೈಯಿಂದ ಬಾರಿಸುತ್ತಾರೆ. ಬಡಿಯುವ ಬಾಯಿಗೆ ಚಾಪವನ್ನು (ಉಡದ ಅಥವಾ ಕಾನಕುರಿಯ ಚರ್ಮವನ್ನು) ಬಿಗಿದಿರುತ್ತಾರೆ. ಎರಡು ಬಾಯಿಗಳಿಗೂ ಸರದ ಮಾದರಿಯಲ್ಲಿ ಹುರಿ ಕಟ್ಟಿ ಗುಮಟೆಯನ್ನು ಕೊರಳಿಗೆ ಮಾಲೆಯಾಗಿ ಧರಿಸಿಕೊಳ್ಳುವುದು ವಾಡಿಕೆ.

ತಾಳಪ್ರಧಾನವಾಗಿದ್ದು ವೀರ್ಯವತ್ತಾಗಿ ಹಾಡುವ ಗುಮಟೆ ಪದಗಳನ್ನು ಗಂಡಸರ ಪದಗಳು ಎನ್ನುತ್ತಾರೆ. ನಿಧಾನವಾಗಿ ಎಳೆದೆಳೆದು ಹೇಳುವ ಹೆಂಗಸರ ಹಾಡುಗಳು ಗುಮಟೆಗೆ ಹೊಂದುವುದಿಲ್ಲ. ತಾಳದ ಗತ್ತಿಗೆ ಹೊಂದುವ ಯಾವುದೇ ಪದವನ್ನೂ ಅದರ ಜೊತೆಗೆ ಹೇಳಬಹುದು. ಸುಗ್ಗಿಯ ಕುಣಿತದ (ಕೋಲಾಟದ) ಪದಗಳನ್ನೂ ಕಾಮದಹನದ ಪದಗಳನ್ನೂ ಸಂಗ್ಯಾ–ಬಾಳ್ಯಾ ಹಾಗೂ ಗುಂಡಿಬೀರ ಎಂಬ ಜಾನಪದ ನಾಟಕಗಳ ಪದಗಳನ್ನೂ ಗುಮಟೆ ವಾದನದ ಜೊತೆಗೆ ಹೇಳುತ್ತಾರೆ. ಇವನ್ನು ಕ್ರಮವಾಗಿ ಸುಗ್ಗಿಪದಗಳು, ಕಾಮನ ಕರಿಯ (ದುಮಸಾಲೆ) ಪದಗಳು, ಹಾಗೂ ಸಿಂಬೋಳನ ಪದ–ಇತ್ಯಾದಿಯಾಗಿ ಗುರುತಿಸುತ್ತಾರೆ.

ದಾಸರ ಪದಗಳನ್ನೂ ಇತರ ಭಜನೆಯ ಪದಗಳನ್ನೂ 'ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು'– ಮುಂತಾದ ಪಠ್ಯಪುಸ್ತಕದ ಪದಗಳನ್ನೂ ಪಂಚವಟಿಯ ಪ್ರಸಂಗದಂಥ ಯಕ್ಷಗಾನದ ತುಂಡುಪದಗಳನ್ನೂ ಗುಮಟೆ ಪದಗಳಂತೆ ಹೇಳುವುದುಂಟು. ಸ್ವತಂತ್ರವಾದ ಅನೇಕ ಕಥನ ಕವನಗಳೂ ಜಾನಪದ ಪ್ರೇಮಗೀತೆಗಳೂ ಹಾಸ್ಯಗೀತೆಗಳೂ ಇತರ ಜನಜೀವನದ ಚಿತ್ರಗಳೂ ಬಳಕೆಯಲ್ಲಿರುವುದರಿಂದ ಗುಮಟೆ ಪದಗಳ ಕ್ಷೇತ್ರ ಸಾಕಷ್ಟು ವಿಶಾಲವಾಗಿದೆ.

ಉತ್ತರ ಕನ್ನಡದ ಅಂಕೋಲಾ ತಾಲ್ಲೂಕು, ಕಾರವಾರ ತಾಲ್ಲೂಕಿನ ದಕ್ಷಿಣ ಭಾಗ, ಕುಮಟ ತಾಲ್ಲೂಕು, ಹೊನ್ನಾವರ ತಾಲ್ಲೂಕಿನ ಉತ್ತರ ಭಾಗ, ಮತ್ತು ಯಲ್ಲಾಪುರ ತಾಲ್ಲೂಕಿನ ಮಂಚಿಕೇರಿ, ಬಾರೆ ಮುಂತಾದ ಹಳ್ಳಿಗಳಲ್ಲಿ ಈ ಪದಗಳು ಪ್ರಚಾರದಲ್ಲಿವೆ. ಶಿರಸಿ, ಸಿದ್ದಾಪುರ ತಾಲ್ಲೂಕುಗಳ ಕಡೆ ಡೋಲಿನ ಪದಗಳೂ ಭಟ್ಕಳ ತಾಲ್ಲೂಕಿನಲ್ಲಿ ಢಕ್ಕೆಯ ಪದಗಳೂ ರೂಢಿಯಲ್ಲಿವೆ.

ಹರಕಂತ್ರ ಅಂಬಿಗರೆಂಬ ಮೀನುಗಾರರೂ ಹಾಲಕ್ಕಿ ಒಕ್ಕಲಿಗರೂ ಉಪ್ಪಾರರೂ ಕೋಮಾರ ಪಂತರೂ ಸ್ವರ್ಣಕಾರರೂ ಮುಕರಿ ಹಳ್ಳೇರರೆಂಬ ಹರಿಜನರೂ ಯಲ್ಲಾಪುರದ ಹಳ್ಳಿಗಳಲ್ಲಿನ ಕರೇ ಒಕ್ಕಲಿಗರೂ ಸಿದ್ದಿಜನರೂ ಗುಮಟೆಯನ್ನು ಉಪಯೋಗಿಸುತ್ತಾರೆ.

ಗುಮಟೆ ಪದಗಳು ವಿಶೇಷವಾಗಿ ಸಾಮೂಹಿಕ ಕಾರ್ಯಕ್ರಮಗಳು. ಇಬ್ಬರು, ಮೂವರು, ನಾಲ್ವರು ಗುಂಪಾಗಿ ಪದ ಹೇಳುತ್ತ ಗುಮಟೆ ಬಡಿಯುತ್ತಾರೆ. ಒಬ್ಬ ಒಂದು ಸಾಲನ್ನೆತ್ತಿ ಗುಮಟೆ ಬಡಿಯುವಾಗ ಇತರರು ಸುಮ್ಮನೆ ಗುಮಟೆ ಬಡಿಯುತ್ತಿದ್ದು ಆಮೇಲೆ ಒಬ್ಬೊಬ್ಬರೇ ಆ ಸಾಲನ್ನೆತ್ತಿ ಹೇಳಿ, ಗುಮಟೆ ಬಡಿಯುವುದೂ ಉಂಟು. ಹಗಲಿನಲ್ಲಿ ಕೆಲಸಮಾಡಿ ದಣಿದ ಜನ ರಾತ್ರಿಯಲ್ಲಿ ಗುಮಟೆ ಬಡಿದು, ಪದ ಹೇಳಿ, ಕೇಳಿ ಮನೋರಂಜನೆ ಪಡೆಯುತ್ತಾರೆ. ಚೌತಿಯ ಹಬ್ಬದಲ್ಲಿ ಗಣಪತಿ ಮುಂದೆ ಇಂಥ ಗುಮಟೆ ಕಾರ್ಯಕ್ರಮವನ್ನು ಹಗಲಿಗೇ ಮಾಡಿಸುವ ಪದ್ಧತಿಯೂ ಹಿಂದೆ ಇತ್ತು. ಆಗ ಕುಂಬಾರರೂ ಭಂಡಾರಿಗಳೂ ಗಾಮೊಕ್ಕಲೂ ಕೊಂಕಣಿಗರೂ ಈ ಪದಗಳನ್ನು ಹೇಳುತ್ತಿದ್ದರು. ತಿರುಪತಿಯಾತ್ರೆ ಮಾಡಿ ಬಂದ ಮೇಲೆ ಮಾಡುವ ದೇವಕಾರ್ಯಗಳಲ್ಲಿಯೂ, ಮದುವೆಯಂಥ ಸಂತೋಷ ಸಮಾರಂಭದಲ್ಲಿಯೂ ರಾತ್ರಿಯಲ್ಲಿ ಗುಮಟೆಪಾಂಗು ನಡೆಯುತ್ತದೆ. ಅತ್ಯುತ್ತಮವಾಗಿ ಪದ ಹೇಳಿದವರಿಗೆ ಧೋತರದ ಉಡುಗೊರೆ ಮಾಡುವ ಪದ್ಧತಿ ಕೆಲವು ಕಡೆಗಳಲ್ಲಿದೆ. ಅಂತರವಳ್ಳಿಯ ಹುಲಿದೇವರ ಹಬ್ಬದಲ್ಲಿ ಒಂದೊಂದು ದಿನ ಒಂದೊಂದು ಸಮಾಜದವರು ಗುಮಟೆಯ ಪದಗಳ ಸೇವೆಯನ್ನು ಸಲ್ಲಿಸುತ್ತಾರೆ. ಗಂಗಾಷ್ಟಮಿಯಲ್ಲಿ ಗೋಕರ್ಣದ ಮಹಾಬಲೇಶ್ವರ ದೇವರ ಮೆರವಣಿಗೆ ಹೋದಾಗ ಗಂಗಾವಳಿಯಲ್ಲೂ ಇಂಥ ಸೇವೆ ಉಂಟು.

ಗುಮಟೆ ಹಾಡುಗಾರರ ಉತ್ಸಾಹವನ್ನೂ ಆನಂದವನ್ನೂ ನೋಡಿಯೇ ಅನುಭವಿಸಬೇಕು. ಕೇಳುವವರು ಮೈಮರೆಯುವಂತೆ ಮಾಡುವ ನಾಗಮೋಡಿ ಇವರ ಹಾಡುಗಾರಿಕೆಗುಂಟು.

ಗುಮಟೆ ಪದಗಳು ಉತ್ತರ ಕನ್ನಡದ ಕಥನ ಕವನಗಳ ಗಣಿಗಳು. ರಾಮಾಯಣ, ಮಹಾಭಾರತ, ಭಾಗವತ ಕಥೆಗಳ ಜಾನಪದ ಸರಣಿಯ ಕಥನಗಳನ್ನೂ ಇತರ ಜಾನಪದ ಕಥೆಗಳನ್ನೂ ಹಿಂದಿನ ಜನ ದೊಡ್ಡ ದೊಡ್ಡ ಗುಮಟೆಪದಗಳಲ್ಲಿ ಹಿಡಿದಿಟ್ಟು ಅವುಗಳ ಪ್ರಸಾರ ಮಾಡುತ್ತಿದ್ದರು. ಇತ್ತೀಚಿನ ಜನರಲ್ಲಿ ಸೌಲಭ್ಯಾಕಾಂಕ್ಷೆ ಬೆಳೆಯುತ್ತಿದೆಯಾಗಿ ಇಂಥ ದೀರ್ಘ ಕಥನಕವನಗಳನ್ನು ಬೆಳ್ಳಂಬೆಳಗೂ ಹಾಡುವ ಘಟಾನುಘಟಿಗಳೂ ಕೂತು ಕೇಳುವ ರಸಿಕರೂ ಮರೆಯಾಗುತ್ತಿದ್ದಾರೆ. ಈಗಿನವರು ಕೆಲವು ದೀರ್ಘಪದಗಳ ಪ್ರಾರಂಭ ಭಾಗಗಳನ್ನು ಮಾತ್ರ ಹೇಳಿ, ಮುಂದಿನ ಭಾಗಗಳನ್ನು ಹಾರಿಸಿಬಿಡುತ್ತಾರೆ. ಕನ್ನಡ ಜನಪದದಲ್ಲಿ ಗುಮಟೆ ಪದಗಳಲ್ಲಿ ಆದಷ್ಟು ನಷ್ಟ ಇನ್ನು ಯಾವ ಪ್ರಕಾರದಲ್ಲಿಯೂ ಆಗಿಲ್ಲ.

ಎಲ್. ಆರ್. ಹೆಗಡೆಯವರ ಸಂಗ್ರಹದಲ್ಲಿ ವೃದ್ಧರಾದ ಅಡಲೂರು ದೇವುಗೌಡ, ತೊಳಶುಗೌಡ, ಹೊನ್ನಳ್ಳಿ ಅಂತುತಿಮ್ಮ–ಇವರು ಹೇಳಿದ ಮಹಾಭಾರತ, ರಾಮಾಯಣ, ಭಾಗವತಗಳ ಅನೇಕ ಗುಮಟೆ ಪದಗಳಿವೆ. ಅವು ಮೂಲ ಪುರಾಣಗಳಿಗಿಂತ ಬೇರೆಯಾದ ಹಾಗೂ ನೈಜ ಜೀವನದ ಅನೇಕಾನೇಕ ಚಿತ್ರಣಗಳನ್ನು ಮೂಡಿಸುವ ಅಪೂರ್ವ ಕಥೆಗಳನ್ನೊಳಗೊಂಡಿವೆ.

ಒಂದು ಕಥೆಯಲ್ಲಿ ಮೂಡಿನ ಬೆಟ್ಟದ ಬೇಣದಲ್ಲಿ ಗದ್ದೆಮಾಡಿ ಪಾಂಡವರು ಬೆಳೆ ತೆಗೆಯುತ್ತಾರೆ. ಮೈನೆರೆದ ಕನ್ಯೆಯನ್ನು ಅಡವಿಯಲ್ಲಿ ಬಿಟ್ಟಾಗ ಬೇಟೆಗೆ ಹೋದ ಪಾಂಡವರು ಅವಳನ್ನು ಮನೆಗೆ ಕರೆತಂದು ತಾಯಿಯ ಹತ್ತಿರ ಹಣ್ಣು ತಂದೆವೆಂದು ಹೇಳುವ ವೃತ್ತಾಂತ ಮತ್ತೊಂದು ಕಥೆಯಲ್ಲಿದೆ. ಭೀಮನ ತಿಂಡಿಪೋತತನ, ಭಯ ಭಕ್ತಿ, ಶಕ್ತಿಸಾಮರ್ಥ್ಯಗಳನ್ನು ವರ್ಣಿಸುವ ಅನೇಕ ಪ್ರಸಂಗಗಳುಂಟು. ಭೀಮ ಕೆಂದಾಳಿರಾಯನ ತಲೆಯಮೇಲಿನ ಹೂವನ್ನು ತರುವ, ಶಂಬರಾಸುರನನ್ನು ವಧಿಸುವ ಕಥಾನಕಗಳೂ ಸೊಗಸಾಗಿವೆ. ಒಂದು ಕಥೆಯಲ್ಲಿ ದ್ರೌಪದಿ ಜೂಜಾಡಿ ಕೌರವರನ್ನು ಸೋಲಿಸುತ್ತಾಳೆ. ಪಾಂಡವರೇ ದೇವತೆಗಳಲ್ಲಿ ಶ್ರೇಷ್ಠರೆಂದು ಒಂದು ಕಥೆ ತಿಳಿಸುತ್ತದೆ.

ಜಗತ್ತು ಹುಟ್ಟುವ ಮೊದಲು ಏಳು ಹೆಡೆಗಳ ಮಹಾಶೇಷನಿದ್ದನೆಂದು ಒಂದು ಕಥೆ ಹೇಳಿದರೆ ಇನ್ನೊಂದು ವಿಷ್ಣು ದತ್ತಾತ್ರೇಯನಾಗಿ ಒಂಟೆಯನ್ನು ತೆಗೆದುಕೊಂಡು ಬಂದ ವೃತ್ತಾಂತವನ್ನು ತಿಳಿಸುತ್ತದೆ. ಇಂಥವು ಉತ್ತರ ಕನ್ನಡ ಜಿಲ್ಲೆಯ ಜಾನಪದ ಪುರಾಣಗಳ ತುಣುಕುಗಳಾಗಿರಬಹುದು.

ಪ್ರಸಿದ್ಧವಾದ ಭಾನುಮತಿಯ ಕಥೆ. ಕುರುಬನೊಬ್ಬ ದೇವಕನ್ನಿಕೆಯ ದೇವಾಂಗವನ್ನು ಕದ್ದು ತಂದು ಅವಳನ್ನು ಮದುವೆಯಾದ ಕಥೆ. ತನ್ನನ್ನು ಮೋಹಿಸಲಿಲ್ಲವೆಂದು ಮೈದುನನನ್ನು ಕೊಂದ ಅತ್ತಿಗೆಯ ಕಥೆ, ರಾಮಸ್ವಾಮಿ–ಲಕವಿಂದರ ಕಥೆ. ಬಿಸಿಲಲ್ಲೇ ಸುತ್ತಬೇಕೆಂದು ಸೂರ್ಯದೇವ ತಾಯಿಯಿಂದ ಶಾಪ ಪಡೆದ ಕಥೆ, ಸಿರಿಕವಲಿಯ ಕಥೆ, ಮುಂಗುಲಿ ರಾಯನ ಕಥೆ, ಕೊಡವನ್ನು ಒಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಹೆಣ್ಣಿನ ಕಥೆ, ಮನುಷ್ಯನಿಗೆ ನೂರು, ಕಾಗೆಗೆ ಸಾವಿರವರ್ಷ ಆಯುಷ್ಯವಾದುದರ ಕಥೆ, ಜೋಡು ನವಿಲುಗಳ ತಲೆ ತಿಂದವನು ರಾಜ, ದೇಹ ತಿಂದವನು ಮಂತ್ರಿ ಆದ ಕಥೆ–ಇವು ಇನ್ನು ಕೆಲವು ಉದಾಹರಣೆಗಳು. ವಂದೂರು ತಿಮ್ಮಕ್ಕ ಹೇಳಿದ ಈರಸೂರನ ಕಥೆ, ಬಾವಿನೀರಿಗೆ ಬಲಿಯಾದ ಕಥೆ, ಹುಲಿ ಬೇಟೆಯ ಕಥೆ, ಜಂಗಮ ಜೋಗಿಯ ಕಥೆ, ಹೆಂಗಸಿನ ಧೈರ್ಯದ ಕಥೆ–ಇಂಥವುಗಳಲ್ಲಿ ನಮ್ಮ ಜಾನಪದ ಕಥನದ ವಿಶಿಷ್ಟ ಸರಣಿಗಳನ್ನು ಕಾಣಬಹುದು.

ಸುಂಕಸಾಳೆ ರಾಮ ಅವಲೆ (ಮಾವಳೆ?)ಯವರೊಡನೆ ಯುದ್ಧಮಾಡಿ ಮಡಿದ ಕಥೆ, ಮಾರಿಯಮ್ಮನ ಕಥೆ, ಬರ್ಗಿ ಅಮ್ಮನವರು ಆ ಊರಿಗೆ ಬಂದು ನಿಂತ ಕಥೆಗಳನ್ನು ಗುಮಟೆ ಪದಗಳಲ್ಲಿರುವ ಐತಿಹ್ಯಗಳಿಗೆ ನಿದರ್ಶನವಾಗಿ ಉಲ್ಲೇಖಿಸಬಹುದು.

ಸಣ್ಣ ಸಣ್ಣ ಗುಮಟೆಪದಗಳಲ್ಲಿ ಪ್ರಣಯದ ವಿವಿಧಮುಖಗಳ ಪದಗಳೂ ಇತರ ಜೀವನ ಚಿತ್ರಣಗಳೂ ಹಾಸ್ಯದ ಹಾಗೂ ಇತರ ತುಂಡುಪದಗಳೂ ಹೇರಳವಾಗಿವೆ. ಶ್ರಮದಾನ ಮುಂತಾದ ಇತ್ತೀಚಿನ ವಿಷಯಗಳ ಪದಗಳೂ ಉಂಟು.

ಹಾಸ್ಯದ ಹಾಡುಗಳಲ್ಲಿ ದಿನಾಶು ಬರುವವನೋ ಬಾ ವಾ ನೆರಮಣೆ ಮೈದೀಣೋ! ಎಂಬಂಥ ದೇಸಿಯ ಶೈಲಿಯ ಸೊಗಸುಳ್ಳ ಅನೇಕ ಹಾಡುಗಳಿವೆ. ಪಟ್ಟೆ ಉಟ್ಟಿಕೆಂಡಿ ಪಟ್ಟಾಂಗ (ಹರಟೆ) ಮಾಡುತ್ತಾಳೆ ಪಟಗಾರ ಹುಡುಗಿ–ಮುಂತಾದ ಪದಗಳಲ್ಲಿ ಪ್ರಾಸವೂ ಹಾಸ್ಯಕ್ಕೆ ಪೋಷಕವಾಗುತ್ತದೆ.

ಹಲವು ಪದಗಳಲ್ಲಿ ಕಾವ್ಯಗುಣ ಪ್ರಧಾನವಾಗಿಲ್ಲ. ಕಥನಕವನಗಳಲ್ಲಿ ಕಥನ ಕಲೆ ಹೃದ್ಯವಾಗಿರುತ್ತದೆ. ಪ್ರಾಸದ ಹಾಗೂ ಪುನರಾವೃತ್ತಿಯ ಸಾಲುಗಳ ನಾದದ ಸೊಗಸು ಹಲವು ಪದಗಳ ಪ್ರಧಾನಗುಣ. ಆದರೂ ಕೆಲವು ಕಡೆ ಸೊಗಸಾದ ಕಲ್ಪನೆಗಳಿವೆ. ಗಿಳಿಯು ಪಂಜರಕೆ ಬರಲಿಲ್ಲ – ಎಂಬ ಪದದಲ್ಲಿ ಪರರ ಹೆಣ್ಣುಗಳ ಬೆಂಬತ್ತಿ ಹೋದ ಗಂಡನ ಪರಿ ಸಾಂಕೇತಿಕವಾಗಿ ನಿರೂಪಿತವಾಗಿದೆ. ಬರುವೆನೆಂದು ಬಾರದೆ ದಾರಿಕಾಯಲು ಹಚ್ಚಿದ ನಲ್ಲನಿಗೆ, 'ಇನ್ನಾಗಿನ (ನಿನ್ನೆಯ) ಹೂವಾ ಇವತ್ತ ಮುಡಿದರೆ ಪರಿಮಲ ಬೇರಾಯ್ತುವಾ' ಮುಂತಾದ ದೃಷ್ಟಾಂತಗಳನ್ನು ಹೇಳುವ ನಲ್ಲೆಯ ಸರಣಿ ಚೆನ್ನಾಗಿದೆ. ಕನ್ನಡಿವಲಗಿನ ಕಮಲದ ಮೊಕೆಯೇ – ಎಂಬಂಥ ಸುಂದರ ರೂಪಕಗಳಿವೆ.

ಬಿರುಗಾಳಿ ಇರುವೆಗಳ ಸಾಲನ್ನು ಹಾರಿಸಿಕೊಂಡು ಹೋಗುವ ಕಲ್ಪನೆ ಒಂದು ಪದದಲ್ಲಿದ್ದು ಮೆಚ್ಚುವಂಥದಾಗಿದೆ.

ಜಾನಪದ ಗೀತೆಗಳ ರಚನೆಯ ರಹಸ್ಯವನ್ನು ಈ ಪದಗಳಿಂದ ಮನಗಾಣಬಹುದು. ಇವುಗಳಲ್ಲಿ ಹಾಲಕ್ಕಿ ಒಕ್ಕಲಿಗರ, ಅಂಬಿಗರ ಹಾಗೂ ಇತರರ ವಿಶಿಷ್ಟ ದೇಸಿಯ ಸರಣಿಗಳಿವೆ. ಇವು ಭಾಷಾಶಾಸ್ತ್ರದ ಅಭ್ಯಾಸಕ್ಕೆ ನೆರವಾಗುತ್ತವೆ. ಇಲ್ಲಿ ಶ್ರೀಕೃಷ್ಣ ಸಿರಿಕುಟ್ಣನಾಗುತ್ತಾನೆ. ಚಂದ್ರ ಶಂದೋರಾಯನಾಗುತ್ತಾನೆ. ಅಪೂರ್ವ ಶಬ್ದಗಳಿಲ್ಲಿ ದೊರಕುತ್ತವೆ. ಗಾಮೆ (ಸುವಾಸನೆ), ಮುಸ್ತಾಪಾ (ವೇಷಭೂಷಣ), ಪಾಶಾಣ (ಭೋಜನ), ಗಳಿದು ಹೋಗು (ದಾಟಿ ಹೋಗು), ಕುಂಬರಿ (ಕುಮರಿ, ಬೆಟ್ಟ ಕಡಿದು ಸಾಗುವಳಿ ಮಾಡುವ ಭೂಮಿ) – ಇತ್ಯಾದಿ.

ಗುಮಟೆ ಪದಗಳು ಉತ್ತರ ಕನ್ನಡ ಜಿಲ್ಲೆಯ ಅಚ್ಚ ಜನಪದಗೀತೆಗಳು. ಜನಪದ ಸಂಸ್ಕೃತಿಯ ಚಿತ್ರಣ ಹಾಗೂ ಪೋಷಣೆಗಳಲ್ಲಿ ಇವುಗಳ ಪಾತ್ರ ಹಿರಿದು. (ಎಲ್.ಆರ್.ಎಚ್.)

**ಗುಮ್ಮಟ** : ಗೋಳಾಕೃತಿಯ, ಶಂಕ್ವಾಕೃತಿಯ ಅಥವಾ ಅಂಡಾಕಾರದ ಮೇಲ್ಚಾವಣಿ (ಡೋಂ). ಈ ಆಕೃತಿಯ ಗುಮ್ಮಟಗಳನ್ನು ರಚಿಸಬೇಕಾದರೆ ಇವಕ್ಕೆ ಸರಿಹೊಂದುವ ನಕ್ಷೆಯಲ್ಲಿ ಗೋಡೆಯನ್ನು ಸಂವೃತಿಸುವಂತೆ ಕಟ್ಟಿ ಅದರ ಮೇಲೆ ಕಮಾನುರೂಪದ ಗೋಡೆಗಳನ್ನು ಆವರಿಸಿರುವಂತೆ ಎಬ್ಬಿಸಿ ಪೂರೈಸಬೇಕಾಗುತ್ತದೆ. ಹೀಗೆ ಸುತ್ತಲೂ ಆವರಿಸುವ ಕಮಾನು ಗೋಡೆ ಬುಡದಲ್ಲಿ ಸಾಕಷ್ಟು ದಪ್ಪವಿದ್ದು ಕ್ರಮೇಣ ಕಮ್ಮಿಯಾಗುತ್ತ ತುದಿಯಲ್ಲಿ, ಎಂದರೆ ಗುಮ್ಮಟದ ನೆತ್ತಿಯ ಮಟ್ಟದಲ್ಲಿ ಕನಿಷ್ಠವಾಗಿರುತ್ತದೆ. ಚೌಕಾಕಾರದ ನಕ್ಷೆಯ ಕೋಣೆಗೆ ಗೋಳಾಕಾರದ ಗುಮ್ಮಟವನ್ನೊದಗಿಸಬೇಕಾದಾಗ ಆ ಕೋಣೆಯ ಗೋಡೆಗಳ ಮೇಲ್ಭಾಗವನ್ನು ಚೌಕದಿಂದ ಅಷ್ಟಕೋನಾಕೃತಿಗೂ, ಕ್ರಮೇಣ ವೃತ್ತಾಕೃತಿಗೂ ಮಾರ್ಪಡಿಸಬೇಕಾಗುತ್ತದೆ. ಹೀಗೆಯೇ ಇತರ ಆಕಾರದ ಗುಮ್ಮಟಗಳಿಗೋಸ್ಕರ ಅವುಗಳ ಕೆಳಭಾಗದ ಕೋಣೆಗಳ ನಕ್ಷೆಯನ್ನು ಅನುಸಾರವಾಗಿ ಬದಲಾಯಿಸಬೇಕಾಗುತ್ತದೆ.

ಗಂಜಾಂನ ಬಳಿ ಇರುವ ಗುಮ್ಮಟ

ಗುಮ್ಮಟಗಳ ಬಳಕೆ ರೋಮನರ ಕಾಲದಲ್ಲಿ ಪ್ರಾರಂಭವಾಯಿತೆನ್ನಬಹುದು. ಪ್ರಾಚೀನ ಗುಮ್ಮಟಗಳು ರೋಮ್ ಸಾಮ್ರಾಜ್ಯದಲ್ಲಿ ಅಲ್ಲದೆ ಅದೇ ಕಾಲದ ಇತರ ರಾಜ್ಯಗಳಲ್ಲಿ ಕಂಡುಬರುವುದಿಲ್ಲ. ಭಾರತದಲ್ಲಿ ಗುಮ್ಮಟಾಕಾರದ ಸ್ತೂಪಗಳೇ ಮೊದಲಾದ ಕಟ್ಟಡಗಳು ಬೌದ್ಧಕಾಲದಲ್ಲಿ ರಚಿತವಾಗಿದ್ದರೂ ಇವೆಲ್ಲ ಘನ ಗೋಳಗಳಾಗಿದ್ದು ಟೊಳ್ಳು ಗೋಳಾಕಾರದ ಗುಮ್ಮಟಗಳೆಲ್ಲವೂ ರೋಮನರ ಕಾಲದಲ್ಲಿಯೇ ಜನಿತವಾದವು. ವೃತ್ತಕಮಾನುಗಳು ಆರಂಭವಾದದ್ದು ರೋಮನರ ಕಾಲದಲ್ಲಿ ಎಂಬುದು ಖಚಿತವಾಗಿರುವುದರಿಂದ ಕಮಾನಿನ ಆಧಾರದ ಮೇಲೆಯೇ ಗುಮ್ಮಟಗಳು ಜನನವಾದುವೆಂದು ಊಹಿಸಬಹುದು. ರೋಮನರ ಕಾಲದಿಂದೀಚೆಗೆ ರಚಿತವಾದ ಗುಮ್ಮಟಗಳೆಲ್ಲವೂ ಒಂದು ವಿಧದಲ್ಲಿ ಅಲ್ಲದಿದ್ದರೆ ಇನ್ನೊಂದು ವಿಧದಲ್ಲಿ ರೋಮನರ ಆದಿ ಗುಮ್ಮಟಗಳ ಅನುಕರಣಗಳೇ. ಯವನರು ಕೂಡ ಪ್ರಚಲಿತಶಕದ ತರುಣದಲ್ಲಿ ರೋಮನ್ ಗುಮ್ಮಟಗಳಿಂದ ಪ್ರಭಾವಿತರಾಗಿ ಅವುಗಳ ಆಕೃತಿಯಲ್ಲಿ ಸ್ವಲ್ಪ ಮಾರ್ಪಡಿಸಿಕೊಂಡು ಯವನ ಗುಮ್ಮಟಗಳನ್ನು ತಮ್ಮ ಸಾಮ್ರಾಜ್ಯಗಳ ಎಲ್ಲ ಕಡೆಗಳಲ್ಲಿಯೂ ಹರಡಿದರು. ಯವನರು ಕಾಲಕ್ರಮೇಣ ಭಾರತದಲ್ಲಿ ಸಾಮ್ರಾಜ್ಯವನ್ನು ಕಟ್ಟಿದಮೇಲೆ ಯವನ ಗುಮ್ಮಟಗಳು ಇಲ್ಲಿಯೂ ರಚಿಸಲ್ಪಟ್ಟವು. ಬಹಮನಿ ರಾಜ್ಯದೊಂದಿಗೆ ಶುರುವಾದ ಗುಮ್ಮಟಗಳು ಕ್ರಮೇಣ ಹೆಚ್ಚಿ ಮೊಗಲರ ಕಾಲದ ವೇಳೆಗೆ ಅನೇಕ ರೀತಿಯಲ್ಲಿ ಅರಮನೆಗಳು, ಗೋರಿಗಳು, ಮಸೀದಿಗಳು, ಪ್ರವೇಶದ್ವಾರಗಳು ಮುಂತಾದವುಗಳ ಛಾವಣಿಯಲ್ಲಿ ಹೇರಳವಾಗಿ ಪ್ರಯೋಗಿಸಲ್ಪಟ್ಟಿವೆ. ದಕ್ಷಿಣ ಭಾರತದಲ್ಲಿ ಬಿಜಾಪುರದ ಗೋಲ್‌ಗುಂಬಜ್ ಎಂಬ ಅದಿಲ್ ಷಾಹಿ ಗುಮ್ಮಟ ಪ್ರಸಿದ್ಧವಾದುದು. ಆಧುನಿಕ ವಾಸ್ತುಶಿಲ್ಪದಲ್ಲಿ ಗುಮ್ಮಟಗಳ ಬಳಕೆ ಕ್ಷಯಿಸಿದೆ ಎನ್ನಬಹುದು. (ಕೆ.ಎಸ್.ಕೆ.)

**ಗುಮ್ಮನಾಯಕನಪಾಳ್ಯದ ಪಾಳೆಯಗಾರರು** : 13–17ನೆಯ ಶತಮಾನಗಳಲ್ಲಿ ಚಿಕ್ಕಬಳ್ಳಾಪುರ (ಹಿಂದೆ ಕೋಲಾರ ಜಿಲ್ಲೆ) ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಮತ್ತು ಅದರ ಸುತ್ತ ಹೊಂದಿಕೊಂಡಿದ್ದ ನೆರೆ ಪ್ರದೇಶಗಳನ್ನೆಲ್ಲ ಒಳಗೊಂಡಿದ್ದ ಪ್ರದೇಶವನ್ನು ಆಳಿದ ಪಾಳೆಯಗಾರರು. ಇವರು ವೇಕರಿ ಮನೆತನದವರು, ಹಾಲುವ್ಯಾಕರ ಕ್ಷತ್ರಿಯ ಜಾತಿಯವರು, ಅಚ್ಯುತ ಗೋತ್ರ ನಾರಾಯಣಸೂತ್ರದ ಯಜುಶ್ಶಾಖಾನುವರ್ತಿಗಳು ಇವರ ಮನೆ ದೇವರು ಖಾದ್ರಿ ನರಸಿಂಹಸ್ವಾಮಿ ಎಂದು ಇವರ ದಾಖಲೆಗಳಿಂದ ತಿಳಿಯುತ್ತದೆ. ಈ ಪಾಳೆಯಗಾರರ ಇತಿಹಾಸದ ಬಗ್ಗೆ ದೊರಕುವ ಮಾಹಿತಿಗಳು ಅನೇಕ ಅಸಾಂಗತ್ಯ ಅಂಶಗಳಿಂದ ಕೂಡಿದೆ. ಹೊಸ ಸಂಶೋಧನೆಗಳಿಂದಷ್ಟೇ ಇದರ ಪುನರ್ರಚನೆ ಸಾಧ್ಯ. ಈ ಮನೆತನದ ಇತಿಹಾಸವನ್ನು ಸದ್ಯಕ್ಕೆ ಹೀಗೆ ನಿರೂಪಿಸಲಾಗಿದೆ.

ಕಡಪ ಜಿಲ್ಲೆಯ ದೊಡ್ಡ ಪಾಳ್ಯದವರಾದ ನರಸಿಂಹನಾಯಕ ಮತ್ತು ಅವನ ಸೋದರ ಖಾದ್ರಿಪತಿನಾಯಕರು ವಲಸೆ ಬಂದು ಮೊದಲು ಶಿಡ್ಲಘಟ್ಟ ತಾಲ್ಲೂಕಿನ ಯಗುವಕೋಟೆಯಲ್ಲಿ ನೆಲೆಸಿದರು. ಖಾದ್ರಿ ಪತಿನಾಯಕ ಸಮೀಪದ ಪಾತಪಾಳ್ಯದಲ್ಲಿದ್ದ ಶ್ರೀಮಂತ ಸೋದರರಾದ ಗುಮ್ಮರೆಡ್ಡಿ, ಲಕ್ಕರೆಡ್ಡಿಯವರ ನೆರವಿನಿಂದ ಅಲ್ಲಿ ಕೋಟೆ ಕಟ್ಟಿ ಪಾತಪಾಳ್ಯ ಮತ್ತು ಭೈರವನ ಬೆಟ್ಟ ಪ್ರಾಂತವನ್ನು ಆಳತೊಡಗಿದ. ಖಾದ್ರಿಪತಿನಾಯಕ ಪ್ರಧಾನವಾಗಿ ಭೂ ಅಭಿವೃದ್ಧಿಗೆ ಹೆಚ್ಚು ಗಮನ ಕೊಟ್ಟು ಕೆರೆಕಟ್ಟೆಗಳನ್ನು ನಿರ್ಮಿಸಿ ಕಾಡುಗಳನ್ನು ನೆಲಸಮ ಮಾಡಿ ದೇವರಾಜ ಪಳ್ಳಿ ಮೊದಲಾದ ಅನೇಕ ಹೊಸ ಹಳ್ಳಿಗಳನ್ನು ಸ್ಥಾಪಿಸಿದ. ಇವನು ತೀರಿಕೊಂಡಮೇಲೆ (ಸು.1272) ಅಧಿಕಾರಕ್ಕೆ ಬಂದ ಇವನ ಮಗ ಚಿನ್ನಮ್ಮನಾಯಕ (ಸು.1272–96) ತಮ್ಮ ಪಾಳೆಯಪಟ್ಟು ಸ್ಥಾಪನೆಗೆ ನೆರವಾದ ಶ್ರೀಮಂತ ಗುಮ್ಮರೆಡ್ಡಿ, ಲಕ್ಕರೆಡ್ಡಿಯವರ ಹೆಸರು ಶಾಶ್ವತವಾಗಿರಬೇಕೆಂಬ ಇಚ್ಛೆಯಿಂದ ತಮ್ಮ ಪಾಳೆಯಕ್ಕೆ ಗುಮ್ಮನಾಯಕನ ಪಾಳ್ಯವೆಂದು ಹೆಸರಿಟ್ಟ. ಕಲ್ಯಾಣದುರ್ಗದಲ್ಲಿ ಒಂದು ಕೋಟೆಯನ್ನು ಕಟ್ಟಿದ್ದಲ್ಲದೆ ಗುತ್ತಪಾಳ್ಯ, ಮದ್ದೆಪಲ್ಲಿ ಮತ್ತು ಸುತ್ತಣ ಭಾಗಗಳಲ್ಲಿ ಗೆದ್ದ. ಕೆರೆಕಟ್ಟೆಗಳನ್ನೂ ದೇವಾಲಯಗಳನ್ನೂ ಕಟ್ಟಿಸಿದ. ಮಹಾನಾಯಕಾಚಾರ್ಯ ಎಂಬ ಬಿರುದನ್ನೂ ಧರಿಸಿದ. ಇವನ ಮಗ ಗುಮ್ಮನಾಯಕನ (ಸು.1296–1364) ಕಾಲದಲ್ಲಿ ಆನೆಗೊಂದಿಯ ತಿರುಮಲರಾಯ ದಂಡೆತ್ತಿಬಂದಾಗ, ಅವನಿಗೆ ಹಣ ನೀಡಿದ್ದಲ್ಲದೆ ಅವನ ಸಾಮಂತನಾಗಿರಲು ಒಪ್ಪಿದ. ಮುಂದಿನ ರಾಜರೂ ಕಡೆಯವರೆಗೆ ವಿಜಯನಗರದ ಅರಸರಿಗೆ ನಿಷ್ಠಾವಂತರಾಗಿದ್ದರು. ಗುಮ್ಮನಾಯಕನ ಮಗ ಲಕ್ಕನಾಯಕನ (ಸು.1314–46) ಅನಂತರ ಆಳಿದ ಕದಿರಪ್ಪನಾಯಕ (ಸು.1363–88) ಸ್ಮರಣೀಯ ಕೆಲಸಗಳನ್ನು ಮಾಡಿದ. ಇವನ ಕಾಲದಲ್ಲಿ ಆಡಳಿತ ಸುಧಾರಣೆ ಆಗಿ ಅದಕ್ಕೆ ಒಂದು ಸುವ್ಯವಸ್ಥಿತ ರೂಪ ಬಂತು. ಜೊತೆಗೆ ಭೂ ಅಭಿವೃದ್ಧಿಯ ದೃಷ್ಟಿಯಿಂದ ಅವನು ಭೂಸಂಬಂಧದ ಅನೇಕ ಕಾಯದೆಗಳನ್ನು ರೂಪಿಸಿದ. ಗ್ರಾಮ ಗ್ರಾಮಕ್ಕೆ ಗ್ರಾಮಾಧಿಕಾರಿಗಳನ್ನು ನೇಮಿಸಿದ ಮತ್ತು ಅನೇಕ ಹೊಸ ಗ್ರಾಮಗಳನ್ನು ಸ್ಥಾಪಿಸಿದ. ಇವನು ಆಂಧ್ರದ ಪಾಳೆಯಗಾರರನ್ನು ಗೆಲ್ಲಲು ವಿಜಯನಗರದ ಅರಸನಿಗೆ ಸಹಾಯಮಾಡಿದ್ದ. ಆತ ಇವನಿಗೆ ಮಾನ್ಯ ಜಹಗೀರುಗಳನ್ನಿತ್ತ. ಇವನ ಅನಂತರ ಸಿಂಗಪ್ಪನಾಯಕ (ಸು.1388–1457) ಮತ್ತು ದೊಡ್ಡ ವಸಂತನಾಯಕ (1457–67) ಆಳಿದರು. 3ನೆಯ ವಸಂತನಾಯಕ ವಿಜಯನಗರದ ಮಲ್ಲಿಕಾರ್ಜುನನ ಪರವಾಗಿ ಗುಲ್ಬರ್ಗದ ಮೇಲೆ ಧಾಳಿಯಿಟ್ಟು ಅಲ್ಲಿನ ಸುಲ್ತಾನನನ್ನು ಕೊಂದು ಅರಸನಿಂದ ಮತ್ತಷ್ಟು ಪ್ರದೇಶಗಳನ್ನು ಬಹುಮಾನವಾಗಿ ಪಡೆದ. ಇವನ ಅನಂತರ ಆಳಿದ ಮಾಸಲನಾಯಕನು ಪಾತಪಾಳ್ಯ ಮೊದಲಾದ ಅನೇಕ ನೆರೆಪ್ರಾಂತ್ಯದ ಪ್ರದೇಶಗಳನ್ನು ಗೆದ್ದುಕೊಂಡು ರಾಜ್ಯ ವಿಸ್ತರಿಸಿಕೊಂಡ. ತರುವಾಯದ ಪಾಳೆಯಗಾರ ಇಮ್ಮಡಿ ಕದಿರಪ್ಪನಾಯಕ (1482–1508) ವಿಜಯನಗರದ ನವರಾತ್ರಿ ಉತ್ಸವದಲ್ಲಿ ಕಠಾರಿ ಇದಿರಿಸುವ ಶೂರನಿಗೆ ಆಹ್ವಾನ ಬಂದಾಗ ಎದೆಯೊಡ್ಡಿ ತನ್ನ ಸ್ಥೈರ್ಯವನ್ನು ಸ್ಥಾಪಿಸಿ ಸನ್ಮಾನಿತನಾಗಿ ಉಂಬಳಿ ಇನಾಮುನ್ನೂ ಶ್ವೇತಛತ್ರಚಾಮರ ಮೊದಲಾದ ಗೌರವರಕ್ಷೆಯನ್ನೂ ದೊರಕಿಸಿಕೊಂಡ. ಅನಂತರ ಮುಮ್ಮಡಿ ವಸಂತನಾಯಕ (1584–1614) ಮತ್ತು ನಾಲ್ಕನೆಯ ನರಸಿಂಹನಾಯಕ (1614–44) ವಿಜಯನಗರದ ಸಾಮಂತರಾಗಿ ಆಳಿದರು. ಅನಂತರದ ಬಂಗಾರ ತಿಮ್ಮನಾಯಕ (ಸು.1680–1723), ಮೂರನೆಯ ಕದಿರಪ್ಪನಾಯಕ ಮುಂತಾದವರು ಮೊಗಲರು ಹಾಗೂ ಮರಾಠರಿಗೆ ಕಪ್ಪ ಒಪ್ಪಿಸುತ್ತ ತಮ್ಮ ಅಧಿಕಾರವನ್ನು ಉಳಿಸಿಕೊಂಡಿದ್ದರು. ಕೊನೆಯ ದೊರೆ

ನರಸಿಂಹನಾಯಕ ತನ್ನ ಆಡಳಿತ ವ್ಯವಸ್ಥೆಗೆ ಸಾನಿ ನರಸಿಂಹಯ್ಯ ಎಂಬ ದಳವಾಯಿಯನ್ನು ನೇಮಿಸಿಕೊಂಡ. ಆತ ದಕ್ಷನಾದರೂ ಅಧಿಕಾರಲಾಲಸೆಗೆ ಒಳಗಾಗಿ ಸರ್ವಾಧಿಕಾರಿಯಂತೆ ವರ್ತಿಸಿದ. ಆ ಸಮಯದಲ್ಲಿ ನಾಯಕನ ಹಿರಿಯ ಪತ್ನಿ ರಾಮಕ್ಕ ಆಡಳಿತಸೂತ್ರವನ್ನು ದಳವಾಯಿಯಿಂದ ಹಿಂತೆಗೆದುಕೊಳ್ಳಲು ಬಳ್ಳಾಪುರದ ಪಾಳೆಯಗಾರರ ನೇತೃತ್ವದಲ್ಲಿ ಒಂದು ಸ್ನೇಹಕೂಟವನ್ನು ಗುಟ್ಟಾಗಿ ಸ್ಥಾಪಿಸಿ ಸಾನಿ ನರಸಿಂಹಯ್ಯನ ಉಚ್ಚಾಟನೆಗೆ ಸಂಚುಮಾಡಿದಳು. ಅದು ಫಲಿಸಿ ಅವನು ಅಧಿಕಾರ ತ್ಯಜಿಸಿದರೂ ಕೆಲವೇ ದಿನಗಳಲ್ಲಿ ಪಾಳ್ಯ ಹೈದರನ ಧಾಳಿಗೆ ತುತ್ತಾಯಿತು. ನಾಯಕ ಮತ್ತು ನಾಯಕಿ ಸೆರೆಯಾದರು. ಆದರೆ 3ನೆಯ ಮೈಸೂರು ಯುದ್ಧದ ಕಾಲದಲ್ಲಿ ನರಸಿಂಹನಾಯಕ ಆಂಗ್ಲರ ನೆರವನ್ನು ಬೇಡಿದ. ನಾಲ್ಕನೆಯ ಮೈಸೂರು ಯುದ್ಧದ ಕಾಲದಲ್ಲಿ ಅವರ ಸಹಾಯದಿಂದ ತನ್ನ ಪಾಳೆಯಪಟ್ಟನ್ನು ಪಡೆದರೂ ಶೀಘ್ರದಲ್ಲೇ ಆಂಗ್ಲರ ವಚನಭ್ರಷ್ಟತೆಯಿಂದ ಪುನಃ ಅಧಿಕಾರ ಕಳೆದುಕೊಂಡು ಕೆಲವು ದಿನಗಳಲ್ಲೇ ನಿಧನಹೊಂದಿದ. (ಸಿ.ಕೆ.ಎನ್.)

**ಗುಮ್ಮಾಳಪುರ :** ತಮಿಳುನಾಡಿನ ಸೇಲಂ ಜಿಲ್ಲೆಯ ಹೊಸೂರು ತಾಲ್ಲೂಕಿಗೆ ಸೇರಿದ ಒಂದು ಊರು. ಬೆಂಗಳೂರಿಗೆ ಸು. 48 ಕಿಮೀ ದೂರದಲ್ಲಿದೆ. ಬೆಂಗಳೂರು ಜಿಲ್ಲೆಯ ಆನೇಕಲ್ಲಿಗೆ ಸು. 7 ಕಿಮೀ ಇರುವ ಗಡಿ ಊರಿದು.

ಇದು 15–16ನೆಯ ಶತಮಾನಗಳಲ್ಲಿ ತುಂಬ ಪ್ರಸಿದ್ಧಿ ಪಡೆದಿದ್ದು ಪ್ರಖ್ಯಾತ ವೀರಶೈವ ಶರಣರ ಕೇಂದ್ರಗಳಲ್ಲಿ ಒಂದಾಗಿತ್ತೆಂದು ತಿಳಿದು ಬರುತ್ತದೆ. ಮೂರನೆಯ ಶೂನ್ಯ ಸಂಪಾದನೆಕಾರನಾದ ಸಿದ್ಧಲಿಂಗದೇವರ ಜನ್ಮಸ್ಥಳವಿದು. ಇಲ್ಲಿ ಹಲವಾರು ಜೀರ್ಣ ದೇವಾಲಯಗಳೂ ಮಠಗಳೂ ಗವಿಗಳೂ ಇವೆ. ಅವುಗಳಲ್ಲಿ ಸಿದ್ಧಲಿಂಗೇಶ್ವರನ ಮಠ ಇಂದಿಗೂ ಕಂಗೊಳಿಸುತ್ತದೆ. ಇಲ್ಲಿ ಹಲವು ತಾಮ್ರಶಾಸನಗಳು ದೊರೆತಿವೆ. ಒಂದು ತಾಮ್ರ ಶಾಸನದಲ್ಲಿ (ಸು. 1474) ಶಾಂತದೇವ, ಚಿಕ್ಕವೀರದೇವ, ವೀರಣ್ಣ ದೇವ, ನಾಗದೇವ, ಚಿಕ್ಕದೇವಪ್ಪ, ನಿಜಲಿಂಗ ಚಿಕ್ಕಯ್ಯ, ಬಿಟ್ಟಮಂಡೆಯ ಪ್ರಭು, ಶಂಖದ ಸಿದ್ಧಲಿಂಗದೇವ, ಜಂಗುಳಿದೇವ, ಪ್ರಸಾದಿದೇವ, ಮಲ್ಲಿಕಾರ್ಜುನಾರಾಧ್ಯ, ಬಸವಣ್ಣ ದೇವ, ಇವರೇ ಮುಂತಾದ ಮಹಾ ಶರಣರ ಹೆಸರುಗಳು ಉಲ್ಲೇಖಗೊಂಡಿವೆ. ಅಲ್ಲದೆ ಶಿವತತ್ತ್ವ ಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ಚನ್ನಬಸವ ಪುರಾಣ ಮೊದಲಾದ ಕಾವ್ಯಗಳಲ್ಲಿಯೂ ಈ ಊರಿನ ಪ್ರಸ್ತಾಪವಿದೆ.

ಈ ಊರಿನ ಗೌರಮ್ಮ ಬಹಳ ಪ್ರಸಿದ್ಧಿ ಪಡೆದ ದೇವತೆ, ಪ್ರತಿವರ್ಷವೂ ಈ ದೇವತೆಯ ಹೆಸರಿನಲ್ಲಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. (ಬಿ.ಎಸ್.;ಎನ್.ಬಿ.)

**ಗುಯಟ್‌ಹಾರ್ಡ್ :** 1715–86. ಪ್ರಸಿದ್ಧ ಫ್ರೆಂಚ್ ಭೂವಿಜ್ಞಾನಿ. ಈತ ನದಿಗಳಿಂದ ಪರ್ವತಗಳ ಸವೆತವನ್ನು ಕುರಿತು ಚರ್ಚಿಸಿದವನು. ಇವನ ಪ್ರಕಾರ ನದಿಗಳ ಸವೆತದಿಂದ ದೊರೆತ ಎಲ್ಲ ವಸ್ತುಗಳು ಕೂಡಲೇ ಸಮುದ್ರವನ್ನು ಸೇರುವುದಿಲ್ಲ; ಅವುಗಳಿಂದ ಮಹಾಪೂರ (ಪ್ರವಾಹ) ಮೈದಾನಗಳು ನಿರ್ಮಾಣವಾಗುತ್ತವೆ. ಆದರೆ ಸಮುದ್ರ ನದಿಗಳಿಗಿಂತ ಭೂಮಿಯನ್ನು ಪ್ರಬಲವಾಗಿ ಸವೆಸುವ ಒಂದು ನೈಸರ್ಗಿಕ ಕರ್ತೃವಾಗಿದೆ ಎಂಬುದನ್ನು ಗುರುತಿಸಿದ. ಇವನು ತನ್ನ ಈ ವಿಚಾರದ ಸಮರ್ಥನೆಗಾಗಿ ಉತ್ತರ ಫ್ರಾನ್ಸಿನಲ್ಲಿ ಸುಣ್ಣದ, ಕಡಿದಾದ ಕರಾವಳಿ ಮುಖಗಳು ಅಥವಾ ಶಿಲಾಪ್ರಪಾತ (ಕ್ಲಿಫ್ಸ್) ಸಮುದ್ರದ ಅಲೆಗಳಿಂದ ಹೇಗೆ ತೀವ್ರವಾಗಿ ಸವೆಯುತ್ತವೆಂಬುದನ್ನು ಉಲ್ಲೇಖಿಸಿದ. ವಾಸ್ತವವಾಗಿ ಇವನು ನಗ್ನೀಕರಣದ ಮೂಲ ಸಿದ್ಧಾಂತವನ್ನು ಚೆನ್ನಾಗಿ ತಿಳಿದುಕೊಂಡಿದ್ದ. (ಎಸ್.ಎಸ್.ಎನ್.)

**ಗುರಜಾಡ ಅಪ್ಪಾರಾವ್ :** 1861–1916. ಆಧುನಿಕ ತೆಲುಗು ಸಾಹಿತ್ಯದ ಆದ್ಯರಲ್ಲಿ ಒಬ್ಬ; ಕನ್ಯಾ ಶುಲ್ಕಂ ಎಂಬ ನಾಟಕದಿಂದ ಅಭೂತಪೂರ್ವವಾದ ಕೀರ್ತಿ ಪ್ರತಿಷ್ಠೆಗಳನ್ನು ಗಳಿಸಿಕೊಂಡವ. ಬಾಲ್ಯವಿವಾಹ, ಅದರಿಂದ ಒದಗಬಹುದಾದ ಬಾಲವಿಧವಾ ಸಮಸ್ಯೆ, ಕನ್ಯಾಶುಲ್ಕ, ಕನ್ಯಾಬಲಿ, ಗಂಡಸು ಹೆಂಗಸಿಗೆ ಮಾಡುವ ನಾನಾ ರೀತಿಯ ಮೋಸಗಳು – ಇವೆಲ್ಲದರ ಚಿತ್ರಗಳು ಈ ನಾಟಕದಲ್ಲಿ ಹೆಣೆದುಕೊಂಡು ಬರುತ್ತವೆ. ಅಂದು ಆ ಪ್ರಾಂತದಲ್ಲಿ ಹಬ್ಬಿದ್ದ ಸಾಂಘಿಕ ದುಷ್ಟಪದ್ಧತಿಗಳನ್ನು ಖಂಡಿಸುವುದಷ್ಟೇ ಈ ನಾಟಕದ ಮೂಲ ಉದ್ದೇಶವಾಗಿದ್ದರೂ ಅದು ಇನ್ನೂ ಹಲವು ಕಾರ್ಯಗಳನ್ನು ಸಾಧಿಸಿತು. ಈ ನಾಟಕ ಸಂಪೂರ್ಣವಾಗಿ ಗದ್ಯರೂಪಕ. ಇದರಲ್ಲಿ ಅಂದಿನ ತೆಲುಗು ನಾಟಕಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದಂತೆ ಹಾಡುಗಳಿಲ್ಲ, ಪದಗಳೂ ಇಲ್ಲ, ಸಂಗೀತದ ನೆರವಿಲ್ಲದೆಯೇ ಇದು ಪಡೆದುಕೊಂಡ ಜನಪ್ರೀತಿ ಅಸಾಧಾರಣವಾದದ್ದು. ಅಷ್ಟೇ ಅಲ್ಲದೆ, ಇದರಲ್ಲಿ ಬಳಕೆಯಾಗಿರುವುದು ಗದ್ಯವಾದರೂ ವಿದ್ವಾಂಸರ ಮೆಚ್ಚಿಗೆಯನ್ನು ಗಳಿಸಬಹುದಾದ ಗ್ರಾಂಥಿಕ ಭಾಷೆಯದಲ್ಲ. ಗ್ರಾಂಥಿಕ ಭಾಷೆಗೂ ವ್ಯಾವಹಾರಿಕ ಭಾಷೆಗೂ ಅಂತರ ಯಾವ ಕಾಲದಲ್ಲಿಯೂ ಇರತಕ್ಕದ್ದೇ. ಆದರೆ ಅಂದು ತೆಲುಗಿನಲ್ಲಿ ಆ ಅಂತರ ಬಹಳ ತೀವ್ರವಾಗಿತ್ತು. ಅಪ್ಪಾರಾವ್ ತನ್ನ ಮೇರುಕೃತಿಯನ್ನು ತೆಲುಗಿನ ಆಡು ನುಡಿಯಲ್ಲಿಯೇ ರಚಿಸಿ ವ್ಯಾವಹಾರಿಕ ಭಾಷಾವಾದಿಗಳಲ್ಲಿ ಅಗ್ರಗಣ್ಯನಾದ. ಅಷ್ಟೇ ಅಲ್ಲ. ವ್ಯಾವಹಾರಿಕ ಭಾಷೆ ಕಾವ್ಯನಾಟಕಗಳಿಗೂ ಉಪಯುಕ್ತವಾದ ಭಾಷೆಯಾಗಬಲ್ಲದು ಎಂಬುದನ್ನು ಆತ ಪ್ರಯೋಗಿಸಿ ತೋರಿಸಿದ.

ಕನ್ಯಾಶುಲ್ಕವಲ್ಲದೆ ಕೊಂಡುಭಟ್ಟೀಯಂ ಎಂಬ ಇನ್ನೊಂದು ನಾಟಕವನ್ನೂ ಅಪ್ಪಾರಾವ್ ರಚಿಸಿದ್ದಾನೆ. ಈ ಕೃತಿಗಳಲ್ಲಿ ಈತನ ಹಾಸ್ಯದ ವಿಶ್ವರೂಪವೇ ಪ್ರಕಟವಾಗಿದೆಯೆಂದು ಹೇಳಬಹುದು. ಹಾಸ್ಯರಸ ಈತನ ಸೊಮ್ಮು. ಈತ ಕಳಾಭಿಜ್ಞನಾದ



ರಸವೇತ್ತ; ಮಾನಸಿಕ ವ್ಯಾಪಾರಗಳ ಮರ್ಮಗಳನ್ನು ಬಹಳ ಚೆನ್ನಾಗಿ ಅರಿತವನು. ಈತನ ವಿಡಂಬನ ಶೈಲಿ ನಿಜಕ್ಕೂ ಪ್ರಶಂಸಾರ್ಹವಾದುದು. ಅಪ್ಪಾರಾವ್ ಜನಪದ ಗೀತೆಗಳ ಸ್ವಾರಸ್ಯವನ್ನು ಕಂಡುಕೊಂಡು ಅನುಭವಿಸಿ ಆನಂದಿಸಿದ ರಸಿಕ. ಆ ಗೇಯ ಕಾವ್ಯಗಳ ಧಾಟಿಯನ್ನೂ ನುಡಿಕಾರವನ್ನೂ ಮೆಚ್ಚಿ ಅವನ್ನು ತನ್ನ ಭಾವಗೀತೆಗಳಲ್ಲಿ ಅಳವಡಿಸಿಕೊಂಡಿದ್ದಾನೆ. ಮುತ್ಯಾಲ ಸರಾಲು (ಮುತ್ತಿನ ಸರಗಳು) ಎಂಬ ಹೆಸರಿನ ಈತನ ಒಂದು ಕವನ ಸಂಕಲನವೇ ಪ್ರಕಟವಾಗಿದೆ. ಆ ಪದ್ಯಜಾತಿಗೇ ಮುತ್ತಿನಸರವೆಂದು ಕವಿ ಹೆಸರು ಕೊಟ್ಟಿದ್ದಾನೆ. ಅಪ್ಪಾರಾವ್ ಎಂದೂ ತಾನು ನವ್ಯಸಾಹಿತ್ಯದ ಪ್ರಾರಂಭಕರ್ತನೆಂದೂ ತಾನು ಮಹಾಸಾಹಿತಿಯೆಂದೂ ಗರ್ವಪಡಲಿಲ್ಲ. ಈತನಿಗೆ ಕವಿಯಶಸ್ಸಿಗಿಂತ ಸಂಘಸಂಸ್ಕರಣವೇ ಪ್ರಧಾನವಾಗಿತ್ತು. ಈತ ಸಂಘಸಂಸ್ಕರ್ತನೂ ಹೌದು. ಭಾಷಾ ಸಂಸ್ಕರ್ತನೂ ಹೌದು. ಕನ್ಯಾಶುಲ್ಕಂ ಕೃತಿಯ ರಚನೆಯಲ್ಲಿ ಈತನಿಗೆ ವಿಶೇಷವಾದ ಅಭಿನಿವೇಶ. ಅದರಲ್ಲಿ ಆತನ ವಿಡಂಬನಾಸ್ತ್ರ ಅಪ್ರತಿಹತವಾಗಿದೆ.

ಈತ ಆರಂಭಿಸಿದ ವ್ಯಾವಹಾರಿಕ ಭಾಷಾವಾದವೂ ಈತನ ಭಾವ ಕವಿತ್ವವೂ ಪರಸ್ಪರ ಪೋಷಕವಾಗಿವೆ. ಇವುಗಳಿಂದ ಅಂದು ತೆಲುಗು ಸಾಹಿತ್ಯ ಲೋಕದಲ್ಲಿ ಒಂದು ಹೊಸ ಚೈತನ್ಯವೇ ಹುಟ್ಟಿತು. ಆಮೇಲೆ ಬಂದ ಅನೇಕ ತೆಲುಗು ಕವಿಗಳು ಈತ ಕಲ್ಪಿಸಿಕೊಂಡ ಹೊಸ ಛಂದಸ್ಸನ್ನೇ ಹೆಚ್ಚಾಗಿ ಅನುಸರಿಸಿದರು. ಈತನ ಕೃತಿಗಳ ಪ್ರಭಾವ ಆಮೇಲಿನ ತೆಲುಗು ಸಾಹಿತ್ಯದ ಮೇಲೆ ವಿಶೇಷವಾಗಿ ಕಾಣುತ್ತದೆ.

ಈತ 1887ರಿಂದ ಕೆಲವು ವರ್ಷಗಳ ಕಾಲ ಕಾಲೇಜು ಅಧ್ಯಾಪಕನಾಗಿದ್ದು ಶಿಕ್ಷಣಕ್ಷೇತ್ರದಲ್ಲಿಯೂ ಕೃಷಿ ಮಾಡಿದ. ಆಮೇಲೆ ಮಹಾರಾಜ ಆನಂದ ಗಜಪತಿರಾಯನ ಆಪ್ತಕಾರ್ಯದರ್ಶಿಯಾಗಿ ಕೆಲಸ ಮಾಡಿದ. ಇವನಿಗೆ ಇತಿಹಾಸ ಸಂಶೋಧನೆಯಲ್ಲಿಯೂ ಸಂಗೀತ ನೃತ್ಯಾದಿಕಲೆಗಳಲ್ಲಿಯೂ ವಿಶೇಷವಾದ ಆಸಕ್ತಿಯಿತ್ತು. ರಾಜರ ಆಪ್ತಕಾರ್ಯದರ್ಶಿಯಾಗಿದ್ದಾಗ ಪದೇ ಪದೇ ಚನ್ನೈಗೆ ಹೋಗಿ ಬರುತ್ತಿದ್ದ ಅಪ್ಪಾರಾವ್ 1895ರಲ್ಲಿ ಶೇಷಗಿರಿಶಾಸ್ತ್ರಿಯವರ ಮನೆಯಲ್ಲಿ ನಡೆದ ಮೈಸೂರು ವೀಣೆ ಶೇಷಣ್ಣನವರ ಜಲತರಂಗ್ ವಾದನವನ್ನೂ ವೀಣಾ ವಾದನವನ್ನೂ ಕೇಳಿದುದಾಗಿ ತನ್ನ ದಿನಚರಿಯಲ್ಲಿ ಗುರುತಿಸಿದ್ದಾನೆ. ಬೆಂಗಳೂರಿಗೆ ಬಂದು ಸೆಂಟ್ರಲ್ ಕಾಲೇಜಿನ ಪ್ರೊ. ಟೇಟ್‌ನೊಡನೆ ಸಾಹಿತ್ಯ ವಿಮರ್ಶೆಯನ್ನು ಕುರಿತು ಚರ್ಚೆಮಾಡಿದನಂತೆ. ಅಪ್ಪಾರಾವ್ ಕನ್ನಡ ಭಾಷಾ ಸಾಹಿತ್ಯಗಳ ವಿಷಯದಲ್ಲಿಯೂ ಆಸಕ್ತಿ ಹೊಂದಿದ್ದು ಕನ್ನಡವನ್ನು ಕುರಿತು ಕೆಲವು ಲೇಖನಗಳನ್ನೂ ಬರೆದಿದ್ದಾನೆ. (ಕೆ.ವಿ.)

**ಗುರಾಣಿಕ ಗ್ರಂಥಿ :** ಧ್ವನಿಸಂಪುಟದ ಕೆಳಗಡೆ ಮುಂಗೊರಳಿನಲ್ಲಿ ಶ್ವಾಸನಾಳದ ಮೇಲೆ ಇರುವ ನಿರ್ನಾಳ ಗ್ರಂಥಿ (ಥೈರಾಯ್ಡ್). ಚರ್ಮ ಮತ್ತು ಕೆಲವು ಸಣ್ಣ ತೆಳು ಸ್ನಾಯುಗಳು ಇದರ ಮೇಲಿವೆ. ಮುಖ್ಯವಾಗಿ ಇದು ಮೈಯಲ್ಲಿನ ಬೆಳವಣಿಗೆ ಮತ್ತು ಚಯಾಪಚಯ (ಮೆಟಬಾಲಿಸಂ) ಅಂದರೆ ಮೈಯಲ್ಲಿ ನಡೆವ ರಾಸಾಯನಿಕ ಕೆಲಸಗಳ ವೇಗವನ್ನು ನಿಯಂತ್ರಿಸುವ ಒಂದು ಹಾರ್ಮೋನನ್ನು ಉತ್ಪತ್ತಿ ಮಾಡುತ್ತದೆ. ಮೈಯಲ್ಲಿ ಇದರ ಪ್ರಭಾವಕ್ಕೆ ಈಡಾಗದ ಅಂಗವೇ ಇಲ್ಲ ಎನ್ನಬಹುದಾದರೂ ಕೆಲವು ಅಂಗಗಳ ಮೇಲಂತೂ ಇದರ ಪ್ರಭಾವ ಬಲು ಹೆಚ್ಚು. ಶ್ವಾಸನಾಳದ ಎರಡು ಪಕ್ಕಗಳಲ್ಲೂ ಇರುವ ಎರಡು ಹಾಲೆಗಳೂ ಅವನ್ನು ಅಡ್ಡಗೂಡಿಸುವ ಸಂಧಿಸ್ಥಳವೂ (ಇಸ್ತ್‌ಮಸ್) ಗ್ರಂಥಿಭಾಗಗಳಾಗಿವೆ. ನುಂಗುವಾಗಲೆಲ್ಲ ಗುರಾಣಿಕ ಗ್ರಂಥಿ ಮೇಲಕ್ಕೂ ಕೆಳಕ್ಕೂ

ಆಡುವುದು. ಹೆಚ್ಚು ಕಡಿಮೆ ದುಂಡಾಗಿರುವ ಅರೆ ಮಿಲಿಮೀಟರಿಗೂ ಕಿರಿದಾಗಿರುವ ಕೋಶಿಕೆಗಳು (ಫಾಲಿಕಲ್ಸ್) ಗ್ರಂಥಿಯ ತುಂಬ ಇವೆ. ಈ ಕೋಶಿಕೆಗಳ ಗೋಡೆ ಗುತ್ತನಾಗಿ ಅಡಕವಾದ ಜೀವಕಣ ಗಳಿಂದಾಗಿದೆ. ಇದರ ಹೊರಗೆ ಸುತ್ತಲೂ ತೆಳು ಪೊರೆ ಉಂಟು. ಇದನ್ನು ದಟ್ಟವಾಗಿ ಹೆಣೆದುಕೊಂಡು ಸುತ್ತುವರಿದಿರುವ ರಕ್ತದ ಲೋಮನಾಳಗಳಿಂದ ತೆಳು ಪೊರೆಯ ಮೂಲಕ ಜೀವಕಣಗಳಿಗೆ ಒಂದೇ ಸಮನಾಗಿ ರಕ್ತರಸ (ಪ್ಲಾಸ್ಮ) ಧಾರಾಳವಾಗಿ ಸರಬರಾಜಾಗುವುದು. ಮೈಯಲ್ಲಿ ಬಹುವಾಗಿ ರಕ್ತಪೂರೈಕೆಯಾಗುವ ಕೆಲವೇ ಅಂಗಗಳಲ್ಲಿ ಇದೂ ಒಂದು. ಇಷ್ಟು ಸಣ್ಣ ಅಂಗಕ್ಕೆ 4–5 ಅಪಧಮನಿಗಳು (ಆರ್ಟರಿಸ್) ಇವೆ. ಅಭಿಧಮನಿಗಳು (ವೇನ್ಸ್) ಇನ್ನೂ ಹೆಚ್ಚು. ಕೋಶಿಕೆಗಳ ಸುತ್ತಲೂ ರಕ್ತನಾಳಗಳಲ್ಲದೆ ಹಾಲುರಸ ನಾಳಗಳೂ ನರಗಳೂ ಇವೆ. ಕೋಶಿಕೆಗಳಲ್ಲಿ ಹಳದಿ ಬಣ್ಣದ ಮಂದ ದ್ರವವಾದ ಕಲಾಯ್ಡ್, ಎಂದರೆ ಶೇಖರಿಸಿಡಲ್ಪಟ್ಟ ಗುರಾಣಿಕ ಗ್ರಂಥಿಯ ಸ್ರಾವ, ಇದೆ. ಇದೊಂದು ಹಾರ್ಮೋನ್. ಯಾವುದೊಂದು ಕಾಲದಲ್ಲಿರುವ ಈ ಹಾರ್ಮೋನಿನ (ಕಲಾಯ್ಡ್) ಪ್ರಮಾಣ ಅದರ ಬಳಕೆ ತಯಾರಿಕೆಗಳ ವೇಗಗಳಿಗೆ ತಕ್ಕಹಾಗಿರುವುದು. ಎಳೆಮಕ್ಕಳಲ್ಲಿ ತಯಾರಾದ ಹಾರ್ಮೋನ್ ಎಲ್ಲ ಶೀಘ್ರವಾಗಿ ಬಳಕೆಯಾಗುವುದರಿಂದ ಅದು ಶೇಖರವಾಗುವುದು ಕಡಿಮೆ. ಮೆಡ್ಡೆಗಣ್ಣಿನ ಗಳಗಂಡದಲ್ಲಿ (ಎಕ್ಸಾಫ್ಥಾಲ್ಮಿಕ್ ಗಾಯ್ಟರ್) ಗುರಾಣಿಕ ಗ್ರಂಥಿ ಬಲು ಚುರುಕಾಗಿ ಹಾರ್ಮೋನನ್ನು ತಯಾರಿಸುತ್ತಿದ್ದರೂ ಅಷ್ಟೂ ಬಳಕೆಯಾಗುವುದರಿಂದ ಅದು ಶೇಖರವಾಗುವುದೇ ಇಲ್ಲ. ಕಲಾಯ್ಡಿನ ಗಳಗಂಡದಲ್ಲಾದರೋ ಇದರ ತಲೆಕೆಳಗು ಸ್ಥಿತಿ ಕಂಡುಬರುತ್ತದೆ.




**ಗುರಾಣಿಕ ಗ್ರಂಥಿ : 1. ಹಯಾಯ್ಡ್, 2. ಒಳ ಜ್ಯೂಗ್ಯುಲರ್ ಅಭಿಧಮನಿ, 3. ಲಿವೇಟರ್ ಸ್ನಾಯು, 4. ಗ್ರಂಥಿಯ ಎಡಹಾಲೆ, 5. ತೋಳಿನ ಅಪಧಮನಿ, 6. ಎಡ ಅನಾಮಿಕ ಅಭಿಧಮನಿ, 7. ಮಹಾಪಧಮನಿ, 8. ಉಭಯ ಸಾಮಾನ್ಯ ಕೆರೋಟಿಡ್ ಅಪಧಮನಿ, 9. ಶ್ವಾಸನಾಳ, 10. ಗ್ರಂಥಿಯ ಬಲಹಾಲೆ, 11. ಒಳ ಜ್ಯೂಗ್ಯುಲರ್ ಅಭಿಧಮನಿ**

ಗುರಾಣಿಕ ಗ್ರಂಥಿಯ ಒಂದೊಂದು ಕೋಶಿಕೆಯೂ ಗುರಾಣಿಕ ಹಾರ್ಮೋನನ್ನು ತಯಾರಿಸಿ, ಕೂಡಿಟ್ಟುಕೊಂಡಿದ್ದು ಸಂದರ್ಭಾನುಸಾರವಾಗಿ ಬಿಡುಗಡೆ ಮಾಡಿ ರಕ್ತಗತವಾಗುವಂತೆ ಮಾಡುತ್ತದೆ. ಈ ಸ್ರಾವದಲ್ಲಿ ಎಲ್‌ತೈರಾಕ್ಸಿನ್, ಎಲ್–ಟ್ರೈಅಯೊಡೊತೈರೊನೀನ್ ಎಂಬ ಎರಡು ರಾಸಾಯನಿಕಗಳಿರುವುವು. ಸಾಮಾನ್ಯವಾಗಿ ಮೊದಲಿನದೇ ಹೆಚ್ಚಾಗಿರುತ್ತದೆ. ಗ್ರಂಥಿಯಲ್ಲಿರುವ ಇವೆರಡು ರಾಸಾಯನಿಕ ಅಣುಗಳಲ್ಲಿ ಸಂಯುಕ್ತವಾಗಿರುವ ಅಯೊಡೀನ್ ಪರಮಾಣುಗಳ ತೂಕ ಗ್ರಂಥಿಯ ತೂಕದ ಅರೆಪಾಲಿಗೂ ಮೀರಿರುತ್ತದೆ. ಆಹಾರ, ತಿಂಡಿಗಳಲ್ಲಿ ವ್ಯಕ್ತಿ ಸೇವಿಸುವ ಅಯೊಡೀನೆಲ್ಲವೂ ರಕ್ತಗತವಾದ ಬಳಿಕ ಅದು ಗುರಾಣಿಕ ಗ್ರಂಥಿಯಲ್ಲಿ ಮಾತ್ರ ಸೇರಿಕೊಳ್ಳುವುದು. ಆಹಾರದಲ್ಲಿ ಅಯೊಡೀನ್ ಪೂರೈಕೆ ಸಾಕಾಗದಿದ್ದಲ್ಲಿ ಗುರಾಣಿಕ ಗ್ರಂಥಿಯ ಸ್ರಾವದ ತಯಾರಿಕೆಯೂ ತಗ್ಗುವುದು. ಸಮುದ್ರದಿಂದ ಬಲು ದೂರವಿರುವ ಹಿಮಾಲಯದ ತಪ್ಪಲಿನಂಥ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಇಲ್ಲವೇ ಬಳಸುವ ಉಪ್ಪಿನಲ್ಲಿ ಅಥವಾ ಆಹಾರದಲ್ಲಿ ಅಯೊಡೀನ್ ಸಾಕಷ್ಟು ಇಲ್ಲವಾದರೆ ಕೊರಳಿನಲ್ಲಿ ಗಳಗಂಡವಾಗಿ ಈ ಗ್ರಂಥಿ ದಪ್ಪವಾಗುವುದು.

ಅಯೊಡೀನನ್ನು ಸಂಗ್ರಹಿಸಿ ಗ್ರಂಥಿ ಹಾರ್ಮೋನನ್ನು ಹೇಗೆ ತಯಾರಿಸುವುದೆಂಬುದನ್ನೂ ಆಮೇಲೆ ಅದು ಗ್ರಂಥಿಯಲ್ಲಿ ಎಲ್ಲಿ ಸೇರುವುದೆಂಬುದನ್ನೂ ವಿಕಿರಣಪಟು ಅಯೊಡೀನ್ ದ್ರವವನ್ನು ವ್ಯಕ್ತಿಗೆ ಕುಡಿಸಿ ಕಂಡುಕೊಳ್ಳಬಹುದು. ಲೋಮನಾಳಗಳಿಂದ ಜೀವಕಣಗಳೊಳಕ್ಕೆ ಹೀರಲ್ಪಡುವ ಅಯೊಡೈಡು ಜೀವಕಣಗಳಲ್ಲೇ ಉಳಿದು ಸಾಂದ್ರವಾಗುತ್ತದೆ. ಜೈವಿಕ ಸಂಯುಕ್ತಗಳಲ್ಲಿ ಅಯೊಡೈಡು ಸೇರಿಕೊಂಡು ತೈರಾಕ್ಸಿಲ್, ಟ್ರೈಅಯೊಡೊತೈರೊನಿಲ್ ರ್‍ಯಾಡಿಕಲ್ಲುಗಳಾಗಿ ದೊಡ್ಡ ಪ್ರೋಟೀನು ತೈರೊಗ್ಲಾಬ್ಯುಲಿನ್ನಿನೊಂದಿಗೆ ತಗುಲಿಕೊಳ್ಳುವುವು. ಕಲಾಯ್ಡಿನ ಕಡೆ ಇರುವ ಜೀವಕಣದ ಅಂಚಿನಲ್ಲಿ ಇದೆಲ್ಲ ನಡೆಯುತ್ತದೆ. ಕಲಾಯ್ಡಿನಲ್ಲಿರುವ ತೈರೊಗ್ಲಾಬ್ಯುಲಿನ್ನೊಂದಿಗೆ ಬೆರೆತು ಈ ಹೊಸ ತೈರೊಗ್ಲಾಬ್ಯುಲಿನ್ ಅಂತಃಸ್ರಾವದ ಶೇಖರವಾಗಿರುತ್ತದೆ. ಗುರಾಣಿಕದ ಜೀವಕಣಗಳಿಂದ ಉತ್ಪತ್ತಿಯಾಗುವ ಒಂದು ಜೈವಿಕ ಕಿಣ್ವ ಈ ತೈರೊಗ್ಲಾಬ್ಯುಲಿನ್ನನ್ನು ವಿಭಜಿಸಿ ನೈಜಸ್ರಾವವನ್ನು ಬಿಡುಗಡೆ ಮಾಡುವುದು. ಹೀಗೆ ಬಿಡುಗಡೆಯಾದ ನೈಜಸ್ರಾವಗಳಾದ ತೈರಾಕ್ಸಿನ್ ಟ್ರೈ ಅಯೊಡೊತೈರನೀನ್ ಅಣುಗಳು ಸಾಕಷ್ಟು ಸಣ್ಣಗಿರುವುದರಿಂದ ಜೀವಕಣದ ಗೋಡೆಯನ್ನು ದಾಟಿ ಕೋಶಿಕೆಯ ಸುತ್ತ ರಕ್ತಗತವಾಗಿ ಗುಂಡಿಗೆಗೆ ಒಯ್ಯಲ್ಪಟ್ಟು ಮುಂದೆ ದೇಹದ ಎಲ್ಲ ಭಾಗಗಳನ್ನೂ ತಲಪುತ್ತವೆ.

ರಕ್ತದಲ್ಲಿ ಈ ರಾಸಾಯನಿಕಗಳು ರಕ್ತರಸದ ಪ್ರೋಟೀನುಗಳಿಗೆ (ಮುಖ್ಯವಾಗಿ ಆಲ್ಫಗ್ಲಾಬ್ಯುಲಿನ್‌ಗೆ) ಸಡಿಲವಾಗಿ ಅಂಟಿಕೊಳ್ಳುತ್ತವೆ. ಆದ್ದರಿಂದ ರಕ್ತದಲ್ಲಿನ ಸ್ರಾವದ ಪ್ರಮಾಣ ಅಳೆಯಲು, ರಕ್ತರಸದ ಪ್ರೋಟೀನಿಗೆ ಹತ್ತಿರುವ ಅಯೊಡೀನ್ (ಪ್ರೋಟೀನ್ – ಬೌಂಡ್ ಅಯೋಡೀನ್: ಪಿ.ಬಿ.ಐ.) ಪ್ರಮಾಣದಿಂದ, ರಕ್ತದಲ್ಲಿನ ಗುರಾಣಿಕ ಸ್ರಾವದ ಪ್ರಮಾಣ ಸರಿಯಾಗಿದೆಯೋ ಇಲ್ಲವೋ ಗೊತ್ತಾಗುತ್ತದೆ. ಇಡೀ ಮೈಯಲ್ಲಿ ಎಲ್ಲ ಜೀವಕಣಗಳಲ್ಲೂ ಆಹಾರವಸ್ತುಗಳ ಉತ್ಕರ್ಷಣೆಯ ವೇಗವನ್ನು ಈ ರಾಸಾಯನಿಕಗಳೇ ನಿಯಂತ್ರಿಸುವುದರಿಂದ, ಈ ಪ್ರಮಾಣ ಹೆಚ್ಚು ಕಡಿಮೆಯಾದರೆ ನಿಜಗೆಲಸಗಳು ಏರುಪೇರಾಗುತ್ತವೆ.

ಗುರಾಣಿಕ ಗ್ರಂಥಿ ತಯಾರಿಸುವ ಅಂತಃಸ್ರಾವದ ಪ್ರಮಾಣವನ್ನು ಇನ್ನೊಂದು ನಿರ್ನಾಳ ಗ್ರಂಥಿಯಾದ ಪಿಟ್ಯುಟರಿ ನಿಯಂತ್ರಿಸುತ್ತದೆ. ಗುರಾಣಿಕ ಗ್ರಂಥಿಯ ಅಂತಃಸ್ರಾವ ಬಳಕೆಯಾಗಿ ರಕ್ತದಲ್ಲಿನ ಮಟ್ಟ ಇಳಿದಾಗ, ಆ ಗ್ರಂಥಿಯನ್ನು ಚೋದಿಸುವ ಒಂದು ಹಾರ್ಮೋನನ್ನು ಅಂತಃಸ್ರಾವವಾಗಿ ಪಿಟ್ಯುಟರಿ ಗ್ರಂಥಿ ಹೆಚ್ಚಾಗಿ ಸ್ರವಿಸುತ್ತದೆ. ಈ ಅಂತಃಸ್ರಾವ ತೈರೊಗ್ಲಾಬ್ಯುಲಿನ್ ವಿಭಜನೆಯನ್ನು ವೇಗಗೊಳಿಸಿ ಕಲಾಯ್ಡಿನಲ್ಲಿ ಕೂಡಿಟ್ಟಿರುವ ಗುರಾಣಿಕ ಅಂತಃಸ್ರಾವವನ್ನು ಬಿಡುಗಡೆ ಮಾಡಿಸುತ್ತದೆ. ಇದರಿಂದ ಕೋಶಿಕೆಗಳಲ್ಲಿರುವ ಕಲಾಯ್ಡಿನ ಪ್ರಮಾಣ ತಗ್ಗುವುದು. ಒಂದೇ ಸಮನೆ ಹೀಗೆ ಚೋದನೆ ಆಗುತ್ತಲೇ ಇದ್ದರೆ ಕೋಶಗಳು ಪೂರ್ತಿ ಬರಿದಾಗಲೂಬಹುದು. ಗುರಾಣಿಕ ಗ್ರಂಥಿಯೂ ಚುರುಕಾಗಿ ಅಂತಃಸ್ರಾವವನ್ನು ತಯಾರಿಸುತ್ತದೆ. ಇವೆರಡು ಕಣಗಳಿಂದ ಗುರಾಣಿಕ ಹಾರ್ಮೋನಿನ ಪ್ರಮಾಣ ಬೇಗನೆ ಸರಿ ಪ್ರಮಾಣಕ್ಕೆ ಬಂದು ಬಿಡುವುದು. ಹೀಗಾದಾಗ ಪಿಟ್ಯುಟರಿ ಗ್ರಂಥಿ ಗುರಾಣಿಕ ಗ್ರಂಥಿಯನ್ನು ಚೋದಿಸುವುದನ್ನು ನಿಲ್ಲಿಸುತ್ತದೆ. ಗುರಾಣಿಕ ಗ್ರಂಥಿಯ ಜೀವಕಣಗಳು ಎಂದಿನ ಗಾತ್ರಕ್ಕೆ ಹಿಂತಿರುಗುತ್ತವೆ. ಹೀಗೆ ಪಿಟ್ಯುಟರಿ, ಗುರಾಣಿಕ ಗ್ರಂಥಿಗಳು ನಿಜಗೆಲಸದಲ್ಲಿ ಒಂದಕ್ಕೊಂದು ಹೊಂದಿಕೊಂಡು ನಿಯಂತ್ರಿಸುವುವು. (ಡಿ.ಎಸ್.ಎಸ್.)

**ಗುರಾಣಿಕ ಗ್ರಂಥಿಯ ರೋಗಗಳು :** ಗುರಾಣಿಕ ಗ್ರಂಥಿಗೆ ಸಹ ಇತರ ಅಂತಃಸ್ರಾವೀ ಗ್ರಂಥಿಗಳಿಗೆ ಬರುವ ಹಾಗೆ ಕೆಲವು ರೋಗಗಳು ಬರುತ್ತವೆ. ಗ್ರಂಥಿಯ ಸ್ರಾವ (ಹಾರ್ಮೋನ್) ಹೆಚ್ಚಾಗಿರಬಹುದು ಇಲ್ಲವೇ ಕೊರೆಯಾಗಿರಬಹುದು. ರೋಗ ಬಂದ ಗುರಾಣಿಕ ಗ್ರಂಥಿ ಸಾಮಾನ್ಯವಾಗಿ ದೊಡ್ಡದಾಗಿ ಊದಿದಂತೆ ಇರುತ್ತದೆ. ಈ ಸ್ಥಿತಿಗೆ ಗಳಗಂಡ (ಗಾಯ್ಟರ್) ಎಂದು ಹೆಸರು. ಕೆಲವು ಗಳಗಂಡಗಳಲ್ಲಿ ಗುರಾಣಿಕ ಗ್ರಂಥಿ ಗಂಟುಗಂಟಾಗಿರುತ್ತದೆ. ಗ್ರಂಥಿ ಸವೆದು ಕೃಶವೂ (ಅಟ್ರೊಫಿ) ಆಗಬಹುದು. ಗರ್ಭದ ಪಿಂಡದಲ್ಲಿ ಗುರಾಣಿಕದ ವಿಕಾಸ ಕೆಟ್ಟಿದ್ದರೂ ಗುರಾಣಿಕ ಗಂತಿ (ಟ್ಯೂಮರ್) ಉಂಟಾಗಬಹುದು. ಆದರೆ ಇದು ಬಲು ಅಪರೂಪ.

ಗಳಗಂಡ ರೋಗದಲ್ಲಿ ರೋಗಿಗೆ ಅಯೊಡೀನ್‌ಯುಕ್ತ ಉಪ್ಪನ್ನು ಸೇವಿಸಲು ತಿಳಿಸಲಾಗುತ್ತದೆ.

ಗಳಗಂಡ ರೋಗ : ಅಯೊಡೀನ್ ಮಹತ್ವ : ಬೆಳೆಯುವ ಮಕ್ಕಳಲ್ಲಿ ಅಯೊಡೀನ್ ಕೊರತೆಯಾದರೆ, ಮಕ್ಕಳು ಗಳಗಂಡ ರೋಗಕ್ಕೆ ತುತ್ತಾಗುತ್ತಾರೆ. ಬೆಳೆಯುವ ಶಿಶುಗಳಿಗೆ ಅಯೊಡೀನ್ ಕೊರತೆಯಾದರೆ ಮಗುವು ಜೀವನಪರ್ಯಂತ ನರಳುವಂತಾಗುತ್ತದೆ. ಮಗುವಿನಲ್ಲಿ ಮೆದುಳು ಹಾಗೂ ನರಮಂಡಲದ ಬೆಳವಣಿಗೆಯು ಸಂಪೂರ್ಣವಾಗಿ ಕುಂಠಿತವಾಗಿ ಮಗು ಶಾಶ್ವತವಾಗಿ ಬುದ್ಧಿಮಾಂದ್ಯವಾಗಬಹುದು, ಮಗುವಿಗೆ ಶಾಶ್ವತ ಅಂಗವಿಕಲತೆ ಬರಬಹುದು.

ಗರ್ಭಿಣಿಯಲ್ಲಿ ಅಯೊಡೀನ್ ಸೂಕ್ತ ಪ್ರಮಾಣದಲ್ಲಿ ದೇಹದಲ್ಲಿರದಿದ್ದರೆ, ಮತ್ತೆ ಮತ್ತೆ ಗರ್ಭಪಾತವಾಗಬಹುದು (ರಿಪೀಟೆಡ್ ಅಬಾರ್ಷನ್). ತಾಯಿ ಮೃತವಾಗಿರುವ ಮಗುವಿಗೆ ಜನ್ಮ ನೀಡಬಹುದು (ಸ್ಟಿಲ್‌ಬರ್ತ್).

**ಗಳಗಂಡ ರೋಗಕಾರಕಗಳು ಎಂದರೇನು? (ಗಾಯಟ್ರೋಜನ್ಸ್) :** ನಾವು ಸೇವಿಸುವ ಆಹಾರದಲ್ಲಿ (ಉದಾ: ಗಡ್ಡೆಕೋಸು, ಹೂವು ಕೋಸು) ಕೆಲವು ನಾವು ಸೇವಿಸುವ ಆಹಾರದಲ್ಲಿರುವ ಅಯೊಡೀನ್ ಖನಿಜವನ್ನು, ಗುರಾಣಿಕ ಗ್ರಂಥಿ ಉಪಯೋಗಿಸದಂತೆ, ಅಯೊಡೀನ್ ಖನಿಜದೊಂದಿಗೆ ಸಂಯೋಗ ಹೊಂದುತ್ತದೆ. ಆಗ ನಾವು ಎಷ್ಟೆ ಅಯೊಡೀನ್‌ಯುಕ್ತ ಆಹಾರವನ್ನು ಸೇವಿಸಿದರೂ ಅವುಗಳ ಜೊತೆಗೆ ಗಳಗಂಡ ರೋಗಕಾರಕಗಳನ್ನು ಸೇವಿಸುವುದರಿಂದ ಗಳಗಂಡ ರೋಗ ವ್ಯಕ್ತಿಗೆ ಶತಸಿದ್ಧ.

**ಅಯೊಡೀನ್ ಅವಶ್ಯಕತೆ :** ವ್ಯಕ್ತಿಗೆ ದಿನಕ್ಕೆ ಸುಮಾರು 150ಮಿಲಿ ಗ್ರಾಂನಷ್ಟು ಅಯೊಡೀನ್ ಅವಶ್ಯಕತೆ ಇದೆ. ಇಷ್ಟು ಪ್ರಮಾಣವನ್ನು ಒಬ್ಬ ವ್ಯಕ್ತಿ ತಾನು ಸೇವಿಸುವ ಆಹಾರಕ್ಕೆ ತನ್ನ ಅಗತ್ಯಕ್ಕೆ ತಕ್ಕಂತೆ ಅಯೊಡೀನ್‌ಯುಕ್ತ ಉಪ್ಪನ್ನು ಉಪಯೋಗಿಸಿದರೆ ಸಾಕು, ವ್ಯಕ್ತಿ ಗಳಗಂಡ ರೋಗದಿಂದ ದೂರವಿರುತ್ತಾನೆ.

ಅಯೊಡೀನ್ ಸಾಗರದ ಉತ್ಪನ್ನಗಳಲ್ಲಿ ಹೇರಳವಾಗಿದೆ. ಸಮುದ್ರದ ಮೀನು, ಮೀನಿನ ಎಣ್ಣೆ, ಸೊಪ್ಪು ಹಾಲು ಹಾಗೂ ತರಕಾರಿಗಳಲ್ಲಿ ಹೇರಳವಾಗಿದೆ.

**ಗುರಾಣಿಕ ಗ್ರಂಥಿಗೆ ಅರ್ಬುದ ರೋಗ (ಕ್ಯಾನ್ಸರ್) :** ಗುರಾಣಿಕ ಗ್ರಂಥಿಗೆ ಅರ್ಬುದ ರೋಗ ತಗಲಬಹುದು. ಆಗ ಇತರೆ ಯಾವುದೇ ಭಾಗದ ಅರ್ಬುದ ರೋಗದಂತೆಯೇ, ವ್ಯಕ್ತಿ ಅತಿ ಹಸಿವಿನಿಂದ ಬಳಲುತ್ತಾನೆ. ದೇಹದ ಚಯಾಪಚಯ ಹೆಚ್ಚುವುದು, ವ್ಯಕ್ತಿಯ ದೇಹದ ತೂಕ ಕಡಿಮೆಯಾಗುವುದು, ವ್ಯಕ್ತಿಯ ಧ್ವನಿ ಬದಲಾಗುತ್ತದೆ. ಅರ್ಬುದ ರೋಗವು ಪ್ರಾರಂಭಾವಸ್ಥೆಯಲ್ಲಿದ್ದರೆ, ಗುರಾಣಿಕ ಗ್ರಂಥಿಯನ್ನು ಶಸ್ತ್ರ ಚಿಕಿತ್ಸೆಯಿಂದ ತೆಗದು ಹಾಕಿ ಗುರಾಣಿಕ ಗ್ರಂಥಿಯ ಸ್ರಾವ (ತೈರಾಯ್ಡ್ ಹಾರ್ಮೋನ್) ವನ್ನು ಕೃತಕವಾಗಿ ಜೀವನ ಪರ್ಯಂತ ವ್ಯಕ್ತಿಗೆ ನೀಡಬೇಕಾಗುತ್ತದೆ. ಕ್ಷ-ಕಿರಣ ಹಾಗೂ ಔಷಧಿಗಳನ್ನು (ಅರ್ಬುದ ರೋಗಕ್ಕೆ ಕೀಮೋಥೆರಪಿ) ಬಳಸಲಾಗುತ್ತದೆ. *

**ಗುರು[1] :** ವಿದ್ಯಾದಾನಮಾಡುವವನು, ಉಪಾಧ್ಯಾಯ. ಗುರು ಎಂಬ ಪದದಲ್ಲಿನ ಗು ಎಂಬುದಕ್ಕೆ ಅಂಧಕಾರವೆಂದೂ ರು ಎಂಬುದಕ್ಕೆ ಅದನ್ನು ನಿರೋಧಿಸುವವನೆಂದೂ ಅರ್ಥೈಸುತ್ತಾರೆ. ಗುರುಪೂಜೆಯಿಲ್ಲದೆ ಯಾವ ಕಾರ್ಯವನ್ನೂ ಆರಂಭಿಸುವಂತಿಲ್ಲ. ತಂದೆ, ಉಪನಯನ ಮಾಡಿದವ, ವಿದ್ಯಾದಾನ ಮಾಡಿದವ, ಅನ್ನದಾತ, ಭಯದಲ್ಲಿ ರಕ್ಷಿಸಿದವ–ಈ ಐವರನ್ನೂ ಗುರುಗಳೆಂದು ಪರಿಗಣಿಸುತ್ತಾರೆ. ಆಧ್ಯಾತ್ಮಿಕ ಅಥವಾ ಧಾರ್ಮಿಕ ಪಂಥವೊಂದರ ನಾಯಕ ಅಥವಾ ಬೋಧಕ. ಪ್ರಾಚೀನ ಭಾರತದ ಶಿಕ್ಷಣಪದ್ಧತಿಯಲ್ಲಿ ಶಿಷ್ಯರನ್ನು ಗುರು ತನ್ನ ಆಶ್ರಮಕ್ಕೆ ಬರಮಾಡಿಕೊಂಡು ಧಾರ್ಮಿಕ ಮತ್ತು ಲೌಕಿಕ ಶಿಕ್ಷಣಗಳೆರಡನ್ನೂ ನೀಡುತ್ತಿದ್ದ. ಶಿಷ್ಯರು ತಮ್ಮ ಗುರುವಿನ ಬಗ್ಗೆ ಅನನ್ಯಭಕ್ತಿಯಿಂದಿದ್ದು ವಿದ್ಯಾರ್ಜನೆ ಮಾಡುತ್ತಿದ್ದರು; ಅವರ ಮನೆಯಲ್ಲೆ ವಾಸಿಸುತ್ತಿದ್ದು ಮನೆಗೆಲಸವನ್ನು ಮಾಡಿಕೊಡುತ್ತ ಭಕ್ತಿ ಗೌರವಗಳಿಂದ ನಡೆದುಕೊಳ್ಳುತ್ತಿದ್ದರು.

ಒಂದು ಧಾರ್ಮಿಕ ಪಂಥಕ್ಕೆ ಅದು ಆರಾಧಿಸುವ ದೇವತೆಯೇ ಆದಿಗುರು. ಅನಂತರ ಆ ಪಂಥಕ್ಕೆ ನಾಯಕರಾಗತಕ್ಕ ಮಾನವರೂಪಿನ ಗುರು ಅಂದಿಗೆ ಆ ಪರಂಪರೆಯಲ್ಲಿ ಕೊನೆಯ ಗುರು. ಆತ ತನ್ನ ಕೊನೆಗಾಲದಲ್ಲಿ ಯೋಗ್ಯ ಶಿಷ್ಯನೊಬ್ಬನನ್ನು ಆರಿಸಿ ಗುರುಪೀಠಕ್ಕೆ ತರುವ ವಾಡಿಕೆ ಇದೆ. ಪರಂಪರೆಯಲ್ಲಿ ಬರುವ ಆದಿಗುರುವಿನ ಅನಂತರದ ಗುರುಗಳೆಲ್ಲ ಧರ್ಮದ ದೇವತೆಯ ಅವತಾರವೆಂಬ ನಂಬಿಕೆಯುಂಟು.

ಎಲ್ಲ ಧಾರ್ಮಿಕ ಪಂಥಗಳಿಗೂ ಒಬ್ಬ ಗುರು ಅಗತ್ಯವೆಂದು ಭಾವಿಸಲಾಗಿದೆ. ಸತ್ಯಸ್ವರೂಪದ ಮೂಲತತ್ತ್ವಗಳು ಧ್ಯಾನ ಅಥವಾ ಗ್ರಂಥಾವಲೋಕನದಿಂದಲೇ ಲಭಿಸಲಾರವೆಂಬುದೂ ದೈವಪ್ರೇರಣೆಯ ಪರಂಪರೆಯ ಗುರುವೊಬ್ಬ ಅಗತ್ಯವೆಂಬ ಭಾವನೆಯೂ ಇದಕ್ಕೆ ಮುಖ್ಯಕಾರಣ. ಆದಿಗುರುವಿನಿಂದ ಪಡೆದುಕೊಂಡು ಪರಂಪರಾನುಗತವಾಗಿ ಮುಂದಿನ ಗುರುಗಳಿಗೆ ಹಸ್ತಗತವಾಗುತ್ತ ಬಂದಿರುವ ಆ ಸತ್ಯದರ್ಶನ ಕೇವಲ ಮಂತ್ರಪಠನದಿಂದ ಲಭ್ಯವಾಗುವಂತಿಲ್ಲ; ಅದು ಗುರು ಮುಖದಿಂದಲೇ ಲಭಿಸಬೇಕು. ಎಂದರೆ ಸತ್ಯದ ಸಾಕ್ಷಾತ್ಕಾರ ಮಾಡಿಕೊಳ್ಳುವುದು ಗುರು ಅನುಗ್ರಹಿಸುವ ದೀಕ್ಷೆಯಿಂದ ಮಾತ್ರ ಸಾಧ್ಯ. ಧ್ಯಾನಮಾರ್ಗ ಕಠಿಣವೂ ದುರ್ಗಮವೂ ಆದುದು. ಅದಕ್ಕೆ ಪೂರ್ವಭಾವಿಯಾಗಿ ಸಾಧಿಸಬೇಕಾದ ಶಾಂತಿ ಸಂಯಮಗಳೂ ಅಷ್ಟೇ. ಅವನ್ನು ಅನುಷ್ಠಾನಕ್ಕೆ ತರಲೂ ತಕ್ಕ ಗುರುವಿನ ನಿರ್ದೇಶನ ಬೇಕು. ಆದ್ದರಿಂದ ಯಾವ ಧರ್ಮದ ಅನುಷ್ಠಾನಕ್ಕೇ ಆಗಲಿ ತಕ್ಕ ಗುರುವೊಬ್ಬನ ಆಯ್ಕೆ ಅನಿವಾರ್ಯವಾಗುತ್ತದೆ.

ಕೆಲವು ವೇಳೆ ಖ್ಯಾತ ಗುರುಗಳನೇಕರು ಆ ಧಾರ್ಮಿಕ ಪಂಥದ ದೇವತೆಗಿಂತ (ಆದಿಗುರು) ಹೆಚ್ಚು ಪೂಜ್ಯರಾಗಿರುವುದುಂಟು. ಶ್ರೀಕೃಷ್ಣನಿಗಿಂತ ಹೆಚ್ಚಿನ ಭಕ್ತಿಗೌರವ ಪೂಜ್ಯತೆಗಳಿಂದ ಭಕ್ತರು ಆ ಪಂಥದ ಗುರುವಾಗಿದ್ದ ಚೈತನ್ಯನನ್ನು ಕಾಣುವರು. ದೇವತೆಯ ಪ್ರತಿಮೆಗೆ ಅವಕಾಶವಿಲ್ಲದೆಡೆಗಳಲ್ಲೂ ಗುರುವಿನ ಪ್ರತಿಮೆಯ ಪೂಜೆಗೆ ಅವಕಾಶವುಂಟು. ಕೆಲವು ಸಂದರ್ಭಗಳಲ್ಲಿ ಮಾನವರೂಪದ ಸಜೀವ ಗುರುವನ್ನೇ ಪೂಜಿಸುವುದೂ ಉಂಟು. ಅವನಿಗೆ ಆರತಿ ಎತ್ತುವುದು, ಧೂಪ ಹಾಕುವುದು, ಮಂತ್ರ ಹೇಳುವುದು, ಅಡ್ಡಬೀಳುವುದು, ಪಾದಪೂಜೆ ಮಾಡುವುದು, ಭಿಕ್ಷೆಯಿಕ್ಕುವುದು, ಇವೆಲ್ಲ ಸೇವಾಕಾರ್ಯಗಳೂ ನಡೆಯುತ್ತವೆ. ಕೆಲವು ಪಂಥಗಳಲ್ಲಿ ಪಾದಪೂಜೆಮಾಡಿ, ಪಾದತೊಳೆದ ನೀರನ್ನು ಭಕ್ತವೃಂದದವರು ಸೇವಿಸುವರು. ಕೆಲವು ಗುಡ್ಡಗಾಡು ಬಣಗಳಲ್ಲಿ ಗುರು ಅಗಿದ ತಾಂಬೂಲವನ್ನು ಶಿಷ್ಯಾದಿಗಳು ಸೇವಿಸುವುದೂ ಉಂಟು. ಭಾರತದಲ್ಲಿ ಇಂದಿಗೂ ಗುರುವೇ ದೇವರೆಂದು ಪೂಜಿಸುತ್ತಿರುವ ಅನೇಕ ಧಾರ್ಮಿಕ ಪಂಥಗಳಿವೆ.

ಗುರು ಊರಿಗೆ ಬಂದಾಗ ಅವನ ಭಕ್ತರು ನಾನು ಮುಂದೆ ತಾನು ಮುಂದೆ ಎಂದು ತಮ್ಮ ಮನೆಗೆ ಬಿಜಯಮಾಡಲು ಬಿನ್ನವಿಸಿಕೊಳ್ಳುವರು; ತಮ್ಮ ಕಾಣಿಕೆ ಕೈಂಕರ್ಯಗಳನ್ನು ಸಲ್ಲಿಸಿ ಕೃತಕೃತ್ಯರಾದೆವೆಂದು ಭಾವಿಸುವರು.

ಸಿಕ್ಖರಲ್ಲಿ ಗುರುವಿಗೆ ವಿಶಿಷ್ಟ ಅರ್ಥವಿದೆ. ಆ ಪಂಥದ ಪರಂಪರೆಯಲ್ಲಿ ಬಂದ ಹತ್ತುಮಂದಿ ಗುರುಗಳಿಗೆ ಮಾತ್ರ ಅದು ಅನ್ವಯಿಸುತ್ತದೆ. ಅವರಲ್ಲಿ ಕೊನೆಯ ಗುರು ಅದನ್ನು ಮುಂದೆ ಮತ್ತಾರಿಗೂ ಬಳಸದಿರಬೇಕೆಂದೂ ಅದನ್ನು ಮುಂದೆ ಅವರ ಪವಿತ್ರ ಗ್ರಂಥಕ್ಕೆ (ಗ್ರಂಥ್ ಸಾಹೆಬ್) ಮಾತ್ರ ಬಳಸಬೇಕೆಂದೂ ವಿಧಿಸಿದನು. ಈಗ ಆ ಪಂಥದವರು ತಮ್ಮ ಪವಿತ್ರ ಗ್ರಂಥವನ್ನು ಭಕ್ತಿಯಿಂದ ದೇವರೆಂದು ಭಾವಿಸಿ ಪೂಜಿಸುವರು.

ವೀರಶೈವಧರ್ಮದಲ್ಲಿ ಗುರುತತ್ತ್ವವನ್ನು ಮೋಕ್ಷೋಪಾಯಗಳಾದ ಅಷ್ಟಾವರಣದಲ್ಲಿ ಸೇರಿಸಲಾಗಿದೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ, ಮಂತ್ರ –ಇವು ಬಹಿರಂಗ ಅಷ್ಟಾವರಣಗಳು. ಇವುಗಳಲ್ಲಿ ಮೊದಲ ಮೂರು ಪೂಜ್ಯವಾದುವು **(ನೋಡಿ – ಗುರುಕುಲ; ಗುರುಕುಲ ಕಾಂಗ್ರಿ ವಿಶ್ವವಿದ್ಯಾಲಯ; ಗುರುಶಿಷ್ಯ ಬಾಂಧವ್ಯ)** (ಎಸ್.ಎಸ್.ವಿ.)

**ಗುರು[2] :** ಸೌರವ್ಯೂಹದಲ್ಲಿ ಅತ್ಯಂತ ದೊಡ್ಡ ಗಾತ್ರದ ಗ್ರಹ; ಸೂರ್ಯನ ಸುತ್ತಲೂ ಕಕ್ಷಿಸುತ್ತಿರುವ ಎಂಟುಗ್ರಹಗಳನ್ನು ಸೂರ್ಯನಿಂದ ಅವುಗಳ ದೂರಾನುಸಾರ ಪಂಕ್ತಿಸಿದರೆ ಇದರ ಸ್ಥಾನ ಐದನೆಯದು. ಬಾಹ್ಯ ಗ್ರಹಗಳಲ್ಲಿ ಗುರು (ಜ್ಯೂಪಿಟರ್) ಮೊದಲನೆಯದು. ಇದರ ಸೂರ್ಯಪಾರ್ಶ್ವದಲ್ಲಿ ಮಂಗಳದ ಕಕ್ಷೆಯೂ ಎದುರು ಪಾರ್ಶ್ವದಲ್ಲಿ ಶನಿಯ ಕಕ್ಷೆಯೂ ಇವೆ. ಮಂಗಳ ಹಾಗೂ ಗುರು ಕಕ್ಷೆಗಳ ನಡುವೆ ಕ್ಷುದ್ರಗ್ರಹಗಳ ಹೊನಲು ಸಹ ಉಂಟು.



**ಚಿತ್ರ 1. ಗುರು ಮತ್ತು ಭೂಮಿಯ ತೌಲನಿಕ ಗಾತ್ರ**

ಗಾತ್ರ ಮತ್ತು ದ್ರವ್ಯರಾಶಿ: ಗುರುವಿನ ಸರಾಸರಿ ವ್ಯಾಸ 141.968 ಕಿ.ಮೀಗಳು (ಭೂಮಿ 7.927) . ಮೇರುವ್ಯಾಸ (p) ಸುಮಾರು 1,33,308 ಕಿ.ಮೀ ಮತ್ತು ಸಮಭಾಜಕೀಯವ್ಯಾಸ (e) ಸುಮಾರು 1,42,807ಕಿ.ಮೀ. ಈ ವ್ಯತ್ಯಾಸ ಗಮನಾರ್ಹ. ಇದಕ್ಕೆ ಮೇರುಚಪ್ಪಟೆತನದ ಪ್ರಮಾಣ ಎಂದು ಹೆಸರು. ಇದರ ಬೆಲೆ $(e-p) / e$ ಎಂದರೆ ಸುಮಾರು 1/15. ಭೂಮಿಯ ಚಪ್ಪಟೆತನದ ಬೆಲೆ ಸುಮಾರು 1 / 297. ಸೌರವ್ಯೂಹದ ಗ್ರಹಗಳ ಪೈಕಿ ಅತ್ಯಧಿಕ ಚಪ್ಪಟೆತನವಿರುವುದು ಶನಿಗ್ರಹಕ್ಕೆ (1/9.5); ಎರಡನೆಯ ಸ್ಥಾನ ಗುರುವಿಗೆ ಸಲ್ಲುತ್ತದೆ. ಗುರುವಿನ ಘನಗಾತ್ರದಲ್ಲಿ 1,200ಕ್ಕಿಂತಲೂ ಹೆಚ್ಚು ಭೂಮಿಗಳನ್ನು ತುಂಬಬಹುದು. ಆದರೆ ಗುರುವಿನ ದ್ರವ್ಯರಾಶಿ ಈ ಗಾತ್ರಾನುಸಾರ ಬೃಹತ್ತಾಗಿಲ್ಲ. ಗುರುವಿನ ಸರಾಸರಿ ಸಾಂದ್ರತೆ 1.35 (ಭೂಮಿಯದು 5.52). ಸೌರವ್ಯಾಸದ $\frac{1}{10}$ ಕ್ಕಿಂತ ಸ್ವಲ್ಪ ಹೆಚ್ಚು ಉದ್ದದ ವ್ಯಾಸವಿರುವ ಗುರುವಿನ ದ್ರವ್ಯರಾಶಿ ಸೌರವ್ಯೂಹದ ಇತರ ಎಲ್ಲ ಗ್ರಹಗಳ ದ್ರವ್ಯರಾಶಿಗಿಂತ $2\frac{1}{2}$ ಪಟ್ಟು ಜಾಸ್ತಿ ಉಂಟು. ಸೂರ್ಯ ಮತ್ತು ಗುರು ದ್ರವ್ಯರಾಶಿಗಳು 1000:1 ನಿಷ್ಪತ್ತಿಯಲ್ಲಿವೆ. ಭೂಮಿ ಮತ್ತು ಗುರು ದ್ರವ್ಯರಾಶಿಗಳ ನಿಷ್ಪತ್ತಿ 1:318. ಗುರುತಲದಲ್ಲಿ ಗುರುತ್ವ ಭೂತಲದ 2.64 ಪಟ್ಟು ಹೆಚ್ಚಿಗೆ ಉಂಟು. ಆದ್ದರಿಂದ ಭೂತಲದಲ್ಲಿ 150 ಪೌಂಡ್ ತೂಗುವ ಒಬ್ಬ ವ್ಯಕ್ತಿ ಗುರುತಲದಲ್ಲಿ 396 ಪೌಂಡ್ ತೂಗುತ್ತಾನೆ. ಹೀಗಾಗಿ ಗುರುವಿನ ಮೇಲೆ ಇಳಿಯಬಹುದಾದ ಮನುಷ್ಯನ ಕಾಲುಗಳು ದೇಹದ ವಿರಿದ ತೂಕವನ್ನು ಹೊರಲಾಗದೆ ಕುಸಿದರೆ ಆಶ್ಚರ್ಯವಿಲ್ಲ. ಗುರುತಲದಲ್ಲಿ ವಿಮೋಚನವೇಗ (ಎಂದರೆ, ಗ್ರಹದ ಗುರುತ್ವಾಕರ್ಷಣ ಬಲದ ಅಪ್ಪುಗೆಯಿಂದ ಬಿಡುಗಡೆಗೊಂಡು ಆಕಾಶಯಾನ ಮಾಡಲು ಬೇಕಾಗುವ ಪ್ರಾರಂಭಿಕ ಕನಿಷ್ಠ ವೇಗ; ಎಸ್ಕೇಪ್ ವೆಲಾಸಿಟಿ) ಸೆಕೆಂಡಿಗೆ 60ಕಿ.ಮೀ (ಭೂಮಿ 9.6). ಸೌರವ್ಯೂಹದ

ಬೇರೆ ಎಲ್ಲ ಗ್ರಹಗಳ ವಿಮೋಚನ ವೇಗಗಳೂ ಇದಕ್ಕಿಂತ ಕಡಿಮೆ. ಇಷ್ಟು ಹಿರಿದಾದ ವಿಮೋಚನ ವೇಗವಿರುವುದರಿಂದ, ಎಂದರೆ ಗುರು ತನ್ನ ಪರಿಸರದಲ್ಲಿ ಅಷ್ಟೊಂದು ಬಲಯುತವಾಗಿ ವಸ್ತುಗಳನ್ನು ತಲದೆಡೆಗೆ ಸೆಳೆಯುವುದರಿಂದ, ಗುರು ತನ್ನನ್ನು ಆವರಿಸಿರುವ ಎಲ್ಲ ಬಗೆಯ ಅನಿಲಗಳನ್ನೂ ಉಳಿಸಿಕೊಳ್ಳ ಬಲ್ಲುದು.



ಚಿತ್ರ 2. ಗುರುವಿನ ತೀವ್ರ ಆವರ್ತನೆ. ಒಂದು ಗಂಟೆಯ ಅಂತರದಲ್ಲಿ ತೆಗೆದ ಎರಡು ಚಿತ್ರಗಳು

**ಕಕ್ಷೆ:** ಸೂರ್ಯನ ಸುತ್ತ ಗುರುವಿನ ಕಕ್ಷೆ ಒಂದು ದೀರ್ಘ ವೃತ್ತ. ಇದರ ಒಂದು ನಾಭಿಯಲ್ಲಿ ಸೂರ್ಯ ಉಂಟು. ಸೂರ್ಯನಿಂದ ಗುರುವಿನ ಸರಾಸರಿ ದೂರ 7,78,113 ಮಿಲಿಯನ್ ಕಿ.ಮೀ. (ಭೂಮಿ 92.9 ಮಿ.) ಎಂದರೆ 5.2028 ಖಗೋಲಮಾನಗಳು (ಭೂಮಿ 1). ಸೂರ್ಯ–ಗುರು ಅತಿಸಮೀಪವಾಗಿರುವಾಗ (ಸೂರ್ಯನೀಚಬಿಂದು) ಅವುಗಳ ನಡುವಿನ ದೂರ ($d_1$) 459.8ಮಿ.ಮೈ., ಅವು ಅತಿ ದೂರವಾಗಿರುವಾಗ (ಸೂರ್ಯೋಚ್ಚಬಿಂದು) ಈ ದೂರ ($d_2$). 815.95 ಮಿ.ಕಿ.ಮೀ. ಆದ್ದರಿಂದ ಗುರುಕಕ್ಷೆಯ (ದೀರ್ಘ ವೃತ್ತದ) ಉತ್ಕೇಂದ್ರತೆ $e = (d_2-d_1)/(d_2+d_1)$ ಎಂದರೆ 0.048 (ಭೂಮಿ 0.017). ಕಕ್ಷೆಯ ಅಂಡಾಕೃತಿ ಹೆಚ್ಚಾದಂತೆ, ಎಂದರೆ ದೀರ್ಘವೃತ್ತಾಕಾರದಲ್ಲಿ ದೀರ್ಘಾಕ್ಷ ಹಾಗೂ ಹ್ರಸ್ವಾಕ್ಷಗಳ ನಡುವಿನ ವ್ಯತ್ಯಾಸ ಏರಿದಂತೆ, ಉತ್ಕೇಂದ್ರತೆ ಹೆಚ್ಚಾಗುತ್ತದೆ. ಆದ್ದರಿಂದ ಭೂಮಿಕಕ್ಷೆಗೆ ಹೋಲಿಸುವಾಗ ಗುರುಕಕ್ಷೆ ಹೆಚ್ಚಿನ ದೀರ್ಘವೃತ್ತತ್ವವನ್ನು ಪ್ರದರ್ಶಿಸುತ್ತದೆ. ಉತ್ಕೇಂದ್ರತೆಯ ದೃಷ್ಟಿಯಿಂದ ಸೌರವ್ಯೂಹದ ಗ್ರಹಗಳ ಪೈಕಿ ಗುರುವಿಗೆ ನಾಲ್ಕನೆಯ ಸ್ಥಾನ (ಮೊದಲಿನ ಮೂರು ಅನುಕ್ರಮವಾಗಿ ಪ್ಲೂಟೋ, ಬುಧ, ಶನಿ). ಗುರುವಿನ ಕಕ್ಷಾತಲ ಕ್ರಾಂತಿ ವೃತ್ತತಲಕ್ಕೆ $1^0$ 18ಗಳಷ್ಟು ಬಾಗಿದೆ (ಅಭ್ಲೀಕ್ವಿಟಿ). (ಕ್ರಾಂತಿವೃತ್ತತಲವೇ ಭೂಮಿಯ ಕಕ್ಷಾತಲ ವೆಂಬುದನ್ನು




ಚಿತ್ರ 3. ದೂರದರ್ಶಕದಲ್ಲಿ ಗುರುವನ್ನು ನೋಡಿದಾಗ ಕಾಣುವ ನೋಟವನ್ನು (a) ಚಿತ್ರದಲ್ಲೂ ಆ ಚಿತ್ರದಲ್ಲಿ ಕಾಣುವ ವಿವಿಧ ಪಟ್ಟಿಗಳ ವಿವರಗಳನ್ನು (b) ಚಿತ್ರದಲ್ಲೂ ತೋರಿಸಿದೆ. R, S, Nಅನುಕ್ರಮವಾಗಿ ಕೆಂಪು ಮಚ್ಚೆಯನ್ನೂ ದಕ್ಷಿಣ ಮೇರುವನ್ನೂ ಉತ್ತರ ಮೇರುವನ್ನೂ ಸೂಚಿಸುತ್ತವೆ. 1. ದಕ್ಷಿಣ ಮೇರು ಪ್ರದೇಶ, 2. ದಕ್ಷಿಣ ದಕ್ಷಿಣ ದಕ್ಷಿಣ ಸಮಶೀತೋಷ್ಣ ಪಟ್ಟೆ, 3. ದಕ್ಷಿಣದಕ್ಷಿಣ ಸಮಶೀತೋಷ್ಣ ಪಟ್ಟೆ, 4. ದಕ್ಷಿಣ ಸಮಶೀತೋಷ್ಣ ಪಟ್ಟೆ, 5. ದಕ್ಷಿಣ ಉಷ್ಣವಲಯ, 6. ದಕ್ಷಿಣ ಉಷ್ಣವಲಯ ಪಟ್ಟೆ, 7. ಸಮಭಾಜಕೀಯ ವಲಯ, 8. ಉತ್ತರ ಉಷ್ಣವಲಯ ಪಟ್ಟೆ, 9. ಉತ್ತರ ಉಷ್ಣವಲಯ, 10. ಉತ್ತರ ಸಮಶೀತೋಷ್ಣ ಪಟ್ಟೆ, 11. ಉತ್ತರ ಉತ್ತರ ಸಮಶೀತೋಷ್ಣ ವಲಯ, 12. ಉತ್ತರ ಉತ್ತರ ಉತ್ತರ ಸಮಶೀತೋಷ್ಣ ಪಟ್ಟೆ, 13. ಉತ್ತರ ಮೇರು ಪ್ರದೇಶ

ಗಮನಿಸಬೇಕು). ಯುರೇನಸ್ ಕಕ್ಷೆಯ (ಬಾಗು $0^0$ 46) ಬಳಿಕ ಕನಿಷ್ಠ ಬಾಗುಯಿರುವುದು ಗುರುಕಕ್ಷೆಗೆ. ಭೂಮಿ ಮತ್ತು ಗುರು ಪರಸ್ಪರ ಅತಿ ಸಮೀಪ ಬಂದಾಗ ಅವುಗಳ ನಡುವಿನ ದೂರ ಸುಮಾರು 588 ಕಿ.ಮೀ ಸೆಕೆಂಡಿಗೆ 2,99,460ಕಿ.ಮೀ. ದೂರವನ್ನು ಕ್ರಮಿಸುವ ಬೆಳಕಿನ ಕಿರಣಕ್ಕೆ ಈ ಕನಿಷ್ಠ ದೂರವನ್ನು ಕ್ರಮಿಸಲು ಸುಮಾರು 33 ಮಿನಿಟುಗಳೇ ಬೇಕು ಎನ್ನುವಾಗ ಈ ದೂರದ ಅಗಾಧತೆಯ ಅರಿವಾದೀತು. ಗುರುವಿನ ಸರಾಸರಿ ಕಕ್ಷಾವೇಗ ಸೆಕೆಂಡಿಗೆ 13 ಕಿ.ಮೀ. (ಭೂಮಿ

ಚಿತ್ರ 4. ಗುರುವಿನ ಪ್ರಧಾನ ಉಪಗ್ರಹಗಳು.

18.5). ಗುರುವಿನ ವರ್ಷ (ಎಂದರೆ ಸೂರ್ಯನನ್ನು ಒಂದು ಸಲ ಪರಿಭ್ರಮಿಸಲು ಬೇಕಾಗುವ ಅವಧಿ) 11,862 ಭೂ ವರ್ಷಗಳು; ಆವರ್ತನಾವಧಿ (ಎಂದರೆ ತನ್ನ ಅಕ್ಷದ ಸುತ್ತ ಒಂದು ಸಲ ತಿರುಗಲು ಬೇಕಾಗುವ ಕಾಲ; ಭೂಮಿಯನ್ನು ಕುರಿತು ಹೇಳುವಾಗ ಇದನ್ನು ದಿವಸವೆನ್ನುತ್ತೇವೆ). 9 ಗಂ. 56 ಮಿ. (ಭೂಮಿಯ ಆವರ್ತನಾವಧಿ, ಎಂದರೆ ದಿವಸ, 23 ಗಂ. 56ಮಿ.) ಆದ್ದರಿಂದ ಗುರುಮಿನ ಆವರ್ತನ ವೇಗ ಬಲು ತೀವ್ರ. ಈ ದೃಷ್ಟಿಯಿಂದ ಗುರುವಿಗೆ ಸೌರವ್ಯೂಹದಲ್ಲಿ ಪ್ರಥಮ ಸ್ಥಾನ. ಹಿರಿಗಾತ್ರ ಕ್ಷಿಪ್ರತಮ ಆವರ್ತನ ವೇಗ ಇವುಗಳ ಪರಿಣಾಮವಾಗಿ ಗುರುವಿನ ಚಪ್ಪಟೆತನ ಅಧಿಕವಾಗಿರುವುದು ಸಹಜ.

**ಭೌತಸ್ಥಿತಿ :** ಉಷ್ಣದ ಪ್ರಮುಖ ಆಕರವಾದ ಸೂರ್ಯ ಬಲು ದೂರದಲ್ಲಿರುವುದ ರಿಂದ ಗುರುವಿನಲ್ಲಿ ಅತಿ ಶೈತ್ಯ ಪರಿಸರವನ್ನು ನಿರೀಕ್ಷಿಸುವುದು ಸಹಜ. ಸ್ವತಃ ಬೆಳಕು ಇಲ್ಲದ ಈ ಗ್ರಹವನ್ನು ಕುರಿತ ಹೆಚ್ಚಿನ ಮಾಹಿತಿ ನಮಗೆ ದೊರೆಯುವುದು ಗುರು ಪ್ರತಿಫಲಿಸುವ ಸೌರ ಬೆಳಕಿನ ವೀಕ್ಷಣೆಯಿಂದ. ಪ್ರಕಾಶದ ದೃಷ್ಟಿಯಿಂದ ಸೌರವ್ಯೂಹದ ಗ್ರಹಗಳಲ್ಲಿ ಶುಕ್ರನಿಗೆ ಪ್ರಥಮ ಸ್ಥಾನ. ಮಂಗಳದ ಕೆಲವು ವಿಶೇಷ ಸನ್ನಿವೇಶಗಳಲ್ಲದಿದ್ದರೆ ಗುರುವಿಗೇ ದ್ವಿತೀಯ ಸ್ಥಾನ. ದೂರದರ್ಶಕ ವೀಕ್ಷಣೆಗೆ ಅರ್ಧಕ್ಕಿಂತ ಹೆಚ್ಚಿನ ಬಿಂಬವನ್ನು (ಉದಾ–ಶುದ್ಧ ಅಷ್ಟಮಿ ಚಂದ್ರ) ಸದಾ ಪ್ರದರ್ಶಿಸುವ ಗ್ರಹವಿದು. ಇದರ ಪ್ರತಿಫಲನ ಸಾಮರ್ಥ್ಯ (ಆಲ್ಬೆಡೊ)

0.51. ಗುರು ಬಿಂಬವನ್ನು ಬೆಳಕು ಮತ್ತು ಕತ್ತಲೆಯ ಪಟ್ಟೆಗಳು ಪರ್ಯಾಯವಾಗಿ ಆವರಿಸಿರುವಂತೆ ತೋರುವುದು. ಇವು ಗ್ರಹವನ್ನು ಸುತ್ತುವರಿದಿರುವ ಮೋಡಗಳೆಂದು ನಂಬಲಾಗಿದೆ. ಏಕೆಂದರೆ ಇವುಗಳಲ್ಲಿನ ವಿವರಗಳು ಕ್ರಮೇಣ ಬದಲಾಗುವುದು




**ಚಿತ್ರ 5. ಗುರುವಿನ ಉಪಗ್ರಹಗಳು ಪ್ರಧಾನ ಗ್ರಹದ ಮೇಲೆ ಮೂಡಿಸುವ ಛಾಯೆಗಳನ್ನು A ಮತ್ತು B ಚಿತ್ರಗಳಲ್ಲೂ ಕಲಿಸ್ಟೊ (IV) ಉಪಗ್ರಹದ ಸಂಕ್ರಮವನ್ನು C ಚಿತ್ರದಲ್ಲೂ ಕಾಣಬಹುದು**

ಕಂಡುಬಂದಿದೆ, ಅಲ್ಲದೆ ಆವರ್ತನಾವಧಿ (ದಿವಸ) ಗುರುವಿನ ಒಂದೊಂದು ಭಾಗದಲ್ಲಿ ಒಂದೊಂದು ಬೆಲೆಯನ್ನು ಪಡೆದಿದೆ. ನಾವು ನೇರವಾಗಿ ಗ್ರಹದ ಘನ ತಲವನ್ನೇ ನೋಡುತ್ತಿದ್ದರೆ ಇಂಥ ದೃಶ್ಯಗಳು ಗೋಚರವಾಗುತ್ತಿರಲಿಲ್ಲ. ಮೇಲೆ ಹೇಳಿದ ಬೆಳಕಿನ ಪಟ್ಟೆಗಳು ಪೂರ್ಣ ಬಿಳಿಯಾಗಿಲ್ಲ– ಅರಿಸಿನ, ಕೆಂಪು ಮತ್ತು ಕೆಲವು ವೇಳೆ ನೀಲಿ ಬಣ್ಣಗಳನ್ನು ಪ್ರದರ್ಶಿಸುತ್ತವೆ. ಇಂಥ ವಿನ್ಯಾಸಗಳ ಪೈಕಿ ಅತ್ಯಂತ ವೈಶಿಷ್ಟ್ಯ ಪೂರ್ಣವಾದದ್ದೆಂದರೆ 1831 ರಷ್ಟು ಹಿಂದೆಯೇ ದೂರದರ್ಶಕದ ಮೂಲಕ ವೀಕ್ಷಿಸಿದ ಮಹಾ ಕೆಂಪು ಮಚ್ಚೆ. ಇದರ ಗಾತ್ರ ಮತ್ತು ಆಕಾರದಲ್ಲಿ ಮಾತ್ರವಲ್ಲ ಬಣ್ಣದಲ್ಲಿ ಕೂಡ ಅಲ್ಪಸ್ವಲ್ಪ ಬದಲಾವಣೆಗಳನ್ನು ಗಮನಿಸಲಾಗಿದೆ. ಮಚ್ಚೆಯ ಸರಾಸರಿ ಉದ್ದ 48,300ಕಿ.ಮೀ ಮತ್ತು ಅಗಲ 16,100ಕಿ.ಮೀ ದ್ರವ ಅಥವಾ ಘನ ಕಣಗಳ ಒಂದು ಮಹಾ ತೇಲುದ್ವೀಪವೇ ಇದಾಗಿರಬಹುದೆಂದು ಊಹಿಸಿದ್ದುಂಟು. ಆದರೆ ಈ ಕಣಗಳ ಸ್ವರೂಪ ಏನು? ದ್ವೀಪ ತೇಲುತ್ತಿರುವುದಾದರೆ ಅದನ್ನು ಭರಿಸಿರುವ

| ಉಪಗ್ರಹದ ಹೆಸರು | ಆವಿಷ್ಕರ್ತೃ ಮತ್ತು ಆವಿಷ್ಕರಣ ವರ್ಷ | | ಗುರುವಿನಿಂದ ಸರಾಸರಿ ದೂರ ಕಿ.ಮೀ.ಗಳಲ್ಲಿ | ಪರಿಭ್ರಮಣ ಅವಧಿ ದಿ–ಗಂ.–ಮಿ. | ವ್ಯಾಸ ಕಿ.ಮೀ.ಗಳಲ್ಲಿ |
|---|---|---|---|---|---|
| ಐದನೆಯದು | ಬಾರ್ನಾರ್ಡ್ | 1892 | 1,81,930 | 11/1/53 | 240? |
| I ಅಯೋ | ಗೆಲಿಲಿಯೋ | 1610 | 4,21,820 | 118/28 | 3,200 |
| II ಯುರೋಪಾ | ಗೆಲಿಲಿಯೋ | 1610 | 6,71,370 | 313/14 | 2,880 |
| III ಗನಿಮೀಡ್ | ಗೆಲಿಲಿಯೋ | 1610 | 10,72,260 | 73/43 | 4,960 |
| IV ಕಲಿಸ್ಟೊ | ಗೆಲಿಲಿಯೋ | 1610 | 18,83,700 | 1616/32 | 4,480 |
| ಆರನೆಯದು | ಪೆರ್ರೈನ್ | 1904 | 1,14,63,200 | 250/14 | 160? |
| ಏಳನೆಯದು | ಪೆರ್ರೈನ್ | 1905 | 1,17,36,900 | 259/14 | 56? |
| ಹತ್ತನೆಯದು | ನಿಕೊಲ್ಸನ್ | 1938 | 1,17,53,000 | 260/12 | 24? |
| ಹನ್ನೆರಡನೆಯದು | ನಿಕೊಲ್ಸನ್ | 1951 | 2,09,30,000 | 625 | 22? |
| ಹನ್ನೊಂದನೆಯದು | ನಿಕೊಲ್ಸನ್ | 1938 | 2,25,40,000 | 700 | 30? |
| ಎಂಟನೆಯದು | ಮೆಲೋಟ್ | 1908 | 2,35,06,000 | 739 | 56? |
| ಒಂಬತ್ತನೆಯದು | ನಿಕೊಲ್ಸನ್ | 1914 | 2,36,67,000 | 758 | 27? |

ವಸ್ತುವಿನ ಗತಿವೈಜ್ಞಾನಿಕ ಸ್ಥಿತಿ ಏನು ಇವೇ ಮುಂತಾದ ವಿಚಾರಗಳಿಗೆ ಪರಿಹಾರ ಲಭಿಸಿಲ್ಲ. ಗುರುವಿನ ಉಷ್ಣತೆ ಸುಮಾರು 130 ಕೆ. ಹೈಡ್ರೋಜನ್ (ಶೇ.80) ಮತ್ತು ಹೀಲಿಯಂ (ಶೇ.15) ವಿಪುಲವಾಗಿಯೂ ನೈಟ್ರೋಜನ್, ನಿಯಾನ್ ಮತ್ತು ಇತರ ಜಡಾನಿಲಗಳು ಸಾಕಷ್ಟು ವ್ಯಾಪಕವಾಗಿಯೂ ಗುರುವಿನಲ್ಲಿ ಇವೆಯೆಂದು ನಂಬಲಾಗಿದೆ. ಗುರುವಿನಿಂದ ಬರುವ ಬೆಳಕಿನ ರೋಹಿತವೀಕ್ಷಣೆಯಿಂದ ಅಲ್ಲಿ ಅಮೋನಿಯ ಹಾಗೂ ಮೀಥೇನ್ ಯಥೇಚ್ಛವಾಗಿವೆಯೆಂದು ತಿಳಿದಿದೆ. ಗುರುವಿನ ಮೋಡಗಳನ್ನು ಭೇದಿಸಿ ಸುಮಾರು 240ಕಿ.ಮೀಗಳಷ್ಟು ಆಳಕ್ಕೆ ಇಳಿದರೆ ಗಟ್ಟಿ ತಳ ದೊರೆಯಬಹುದೆಂದು ಊಹೆ. ಆದರೆ ಈ ದಿಶೆಯಲ್ಲಿ ಯಾವ ಪ್ರತ್ಯಕ್ಷ ಪ್ರಯೋಗಗಳೂ ನಡೆದಿಲ್ಲ. ಉಪಕರಣಸಮೇತವಾದ ಒಂದು ಅನ್ವೇಷಕ ಆಕಾಶನೌಕೆ ಗೆಲಿಲಿಯೊ ಗುರುವಿನ ತಳದಲ್ಲಿ ಇಳಿದು ಅಲ್ಲಿಂದ ರೇಡಿಯೋ ಸ್ಪಂದನಗಳನ್ನು ಪ್ರೇಷಿಸಿಲು ಪ್ರಯತ್ನಿಸಿತು. ಅಮೆರಿಕ ಹಾರಿಬಿಟ್ಟ ಪಯೋನೀರ್ ಆಕಾಶನೌಕೆಗಳು ಗುರುವಿನ ಅನ್ವೇಷಣೆ ನಡೆಸಿವೆ. ಗೆಲಿಲಿಯೊ ಎಂಬ ನೌಕೆ ಸುಮಾರು 10ವರ್ಷ ಅಧ್ಯಯನ ನಡೆಸಿತು.

**ಉಪಗ್ರಹಗಳು :** ಗುರುವಿಗೆ 12 ಉಪಗ್ರಹಗಳಿವೆ. ಈಗ (2010) ಈ ಸಂಖ್ಯೆ 63ನ್ನು ದಾಟಿದೆ; ಬೇರಾವ ಗ್ರಹಕ್ಕೂ ಇಷ್ಟು ಸಂಖ್ಯೆಯಲ್ಲಿ ಉಪಗ್ರಹಗಳಿಲ್ಲ. ಈ ಉಪಗ್ರಹಗಳ ಕೆಲವು ವಿವರಗಳನ್ನು ಮುಂದಿನ ಯಾದಿಯಲ್ಲಿ ಕೊಟ್ಟಿದೆ. ಗುರುವಿನಿಂದ ಉಪಗ್ರಹಗಳ ದೂರ ಏರುತ್ತಿರುವ ಕ್ರಮದಲ್ಲಿ ಅವನ್ನು ಅಳವಡಿಸಿದೆ.

ಗುರುವಿನ ಗಾತ್ರದೊಡನೆ ಹೋಲಿಸುವಾಗ ಈ ಉಪಗ್ರಹಗಳು ಯಾವುದಕ್ಕೂ ಭೂಮಿಯ ಗಾತ್ರದೊಡನೆ ಹೋಲಿಸುವಾಗ ಚಂದ್ರನಿಗೆ ಒದಗುವ ಹಿರಿಮೆ ಪ್ರಾಪ್ತವಾಗುವುದಿಲ್ಲ. ಕೆಳಗೆ ಬರೆದಿರುವ ಯಾದಿ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ.

| ಉಪಗ್ರಹದ ಹೆಸರು | ಮಾತೃಗ್ರಹದ ಹೆಸರು | ಉಪಗ್ರಹದ | | |
|---|---|---|---|---|
| | | ವ್ಯಾಸ ಮೂ.ಗ್ರ.=1 | ದ್ರವ್ಯರಾಶಿ ಮೂ.ಗ್ರ=1 | ಮಾತೃಗ್ರಹದಿಂದ ಸರಾಸರಿ ದೂರ ಮೂ.ಗ್ರ.ವ್ಯಾಸ=1 |
| ಚಂದ್ರ | ಭೂಮಿ | 0.28 | 0.01 | 30 |
| ಅಯೋ | ಗುರು | 0.02 | 0.00005 | 3 |
| ಯುರೋಪಾ | ಗುರು | 0.02 | 0.00003 | 5 |
| ಗನಿಮಿಡ್ | ಗುರು | 0.04 | 0.00008 | 8 |
| ಕಲಿಸ್ಟೊ | ಗುರು | 0.03 | 0,00005 | 13 |

ಗುರುವಿನ ಮೊದಲ ಐದು ಒಳ ಉಪಗ್ರಹಗಳಿಗೆ (ನಾಲ್ಕು ಗೆಲಿಲಿಯನ್ ಉಪಗ್ರಹಗಳನ್ನೂ ಒಳಗೊಂಡಂತೆ) ಸನ್ನಿಹಿತವಾಗಿ ವರ್ತುಳೀಯ ಕಕ್ಷೆಗಳಿವೆ. ಅವು ಗ್ರಹದ ಸಮಭಾಜಕೀಯ ತಲದ ಒತ್ತಿಗೆ ಇವೆ. ಉಳಿದ ಏಳು ಹೊರ ಉಪಗ್ರಹಗಳಿಗೆ ಉತ್ಕೇಂದ್ರೀಯ ಕಕ್ಷೆಗಳಿವೆ. ಕೆಲವು ಕಕ್ಷೆಗಳಂತೂ ಸಮಭಾಜಕೀಯ ತಲಕ್ಕೆ ವಿಪರೀತ ಬಾಗಿಕೊಂಡು ಕೂಡ ಇವೆ. ತೀರ ಹೊರಗಿನ ನಾಲ್ಕು ಉಪಗ್ರಹಗಳು ಗುರುವಿನ ಸುತ್ತ ಪೂರ್ವದಿಂದ ಪಶ್ಚಿಮಕ್ಕೆ ಪರಿಭ್ರಮಿಸುತ್ತವೆ. ಸೌರವ್ಯೂಹದ ಹೆಚ್ಚಿನ ಕಾಯಗಳ ಚಲನೆಗಿಂತ ಭಿನ್ನವಾದ ಚಲನೆಯಿದು. ಗುರುವಿನ ಉಪಗ್ರಹ ಗಾನಿಮಿಡ್‌ಗೆ ವಾಯುಮಂಡಲ ಇರುವುದು ಕಂಡುಬಂದಿದೆ. (ಆರ್.ಆರ್.ಯು.)

**ಪುರಾಣಗಳಲ್ಲಿ ಗುರು :** ಒಂಬತ್ತು ಗ್ರಹಗಳಲ್ಲಿ ಒಂದು. ಜೀವ, ಆಂಗಿರಸ, ವಾಚಸ್ಪತಿ, ಬೃಹಸ್ಪತಿ, ಸೂರಿ, ಸುರಗುರು ಎಂಬ ಹೆಸರುಗಳೂ ಇವೆ. ಗುರು ದೇವತೆಗಳಿಗೆ ವಿದ್ಯೆಗಳನ್ನು ಉಪದೇಶ ಮಾಡುತ್ತಾನೆ. ಈತನನ್ನು ದೇವ ಗಂಧರ್ವ ಮನುಷ್ಯ ಮಾತ್ರದವರೆಲ್ಲ ಪೂಜಿಸುತ್ತಾರೆ. (ಎಸ್.ಎನ್.ಕೆ.)

**ಗುರುಕುಲ :** ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಗಳು ತಮ್ಮ ಗುರುಗಳ ಮನೆಯಲ್ಲೆ ಉಳಿದುಕೊಂಡು ಅವರಿಂದ ಶಿಕ್ಷಣ ಪಡೆಯಲು ಪ್ರಚಾರದಲ್ಲಿದ್ದ ಒಂದು ವ್ಯವಸ್ಥೆ. ಬೌದ್ಧ ಶಿಕ್ಷಣ ಸಂಸ್ಥೆಗಳು ವ್ಯವಸ್ಥಿತ ಸ್ವರೂಪವನ್ನು ತಾಳುವುದಕ್ಕೆ ಮುಂಚೆ ಎಂದರೆ, ವೈದಿಕ ಶಿಕ್ಷಣದ ಉಚ್ಛ್ರಾಯಕಾಲದಲ್ಲಿ ಗುರುಗಳು ತಮ್ಮ ವೈಯಕ್ತಿಕ ಹೊಣೆಗಾರಿಕೆಯೆಂದು ಭಾವಿಸಿ ಬೋಧನಕಾರ್ಯವನ್ನು ನಿರ್ವಹಿಸುತ್ತಿದ್ದರು. ಉಪನಯನವಾದ ಅನಂತರ ವಿದ್ಯಾರ್ಥಿ ಶಿಕ್ಷಣಕ್ಕಾಗಿ ತನ್ನ ಗುರುವಿನ ಮನೆಗೆ ಹೋಗಿ, ಶಿಕ್ಷಣವನ್ನು ಮುಗಿಸಿಕೊಂಡು ಸಮಾವರ್ತನದ ಎಂದರೆ ತನ್ನ ಮನೆಗೆ ಮತ್ತೆ ಹಿಂದಿರುಗುವವರೆಗೆ ಗುರುವಿನ ಮನೆಯಲ್ಲಿ ಮನೆಯ ಮಗನಂತೆ (ಅಂತೆವಾಸಿ) ಇರುತ್ತಿದ್ದ.

**ಗುರುಕುಲದಲ್ಲಿ ವಿದ್ಯಾರ್ಥಿಜೀವನ:** ಗುರುಗಳ ಮನೆಯಲ್ಲಿ ವಾಸಿಸುವ ವಿದ್ಯಾರ್ಥಿಯನ್ನು ಛಾಂದೋಗ್ಯ ಉಪನಿಷತ್ತು ಆಚಾರ್ಯಕುಲವಾಸಿಯೆಂದು ಸಂಬೋಧಿಸಿ ಆ ಕಾಲದಲ್ಲಿ ವಿದ್ಯಾರ್ಥಿ ನಡೆದುಕೊಳ್ಳಬೇಕಾದ ರೀತಿ ನೀತಿಗಳನ್ನು ವಿವರಿಸುತ್ತದೆ. ಗುರುಗಳು ಏಳುವುದಕ್ಕೆ ಮುಂಚೆ ಎಂದರೆ ಮುಂಜಾನೆ ನಾಲ್ಕೂವರೆ ಗಂಟೆಗೆ ಶಿಷ್ಯ ಏಳಬೇಕು. ಬೆಳಗಿನ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಸ್ನಾನಮಾಡಬೇಕು. ಅನಂತರ ಬೆಳಗಿನ ಪ್ರಾರ್ಥನೆ (ಸಂಧ್ಯಾ). ಮುಗಿಸಿ ಯಜ್ಞಕುಂಡವನ್ನು

ಸಿದ್ಧಪಡಿಸಬೇಕು. ಅಲ್ಲದೆ ಗುರುಗಳಿಗೆ ಹಲ್ಲುಜ್ಜುವ ಕಡ್ಡಿ ಒದಗಿಸುವುದು, ಸ್ನಾನಕ್ಕೆ ನೀರು ಕೊಡುವುದು, ಅವರ ಆಸನವನ್ನು ಸಿದ್ಧಪಡಿಸುವುದು, ಪಾತ್ರೆ ಪದಾರ್ಥಗಳನ್ನು ತೊಳೆದಿಡುವುದು. ದನಕರುಗಳಿದ್ದರೆ ಅವನ್ನು ಮೇವಿಗೆ ಬಿಡುವುದು–ಇವೇ ಮುಂತಾದ ಮನೆಗೆಲಸಗಳನ್ನೂ ಮಾಡಬೇಕಾಗಿತ್ತು. ಬೆಳಗಿನ ಅಧ್ಯಯನಾನಂತರ ಭಿಕ್ಷಾಟನೆಗೆ ಹೋಗಿ, ತಂದ ಅನ್ನವನ್ನು ಗುರುಗಳಿಗೆ ತೋರಿಸಿ ಊಟ ಮಾಡಬೇಕಾಗಿತ್ತು. ಮಧ್ಯಾಹ್ನದ ಅಧ್ಯಯನಾನಂತರ ಸಂಜೆ ಅಗ್ನಿಹೋತ್ರಕ್ಕೆ ಸಂಬಂಧಿಸಿದ ಕಾಷ್ಠಸಂಚಯನಾದಿ ಕ್ರಿಯೆಗಳನ್ನು ನಿರ್ವಹಿಸಬೇಕಾಗಿತ್ತು. ರಾತ್ರಿ ಊಟಕ್ಕೆ ಹೋಗುವವರೆಗೆ ಸ್ವತಃ ಅಧ್ಯಯನ ಮಾಡಬೇಕಾಗಿತ್ತು. ಪುಸ್ತಕಗಳು ಇಲ್ಲದಿದ್ದ ಆ ಕಾಲದಲ್ಲಿ ವೇದಪಠನ, ಚರ್ಚೆ ಮುಂತಾದ ವ್ಯಾಸಂಗ ವಿಧಾನವನ್ನು ಅನುಸರಿಸುತ್ತಿದ್ದರು. ಗುರುಗಳು ಮಲಗಿದ ಮೇಲೆ ಶಿಷ್ಯ ಮಲಗಬೇಕಾಗಿತ್ತು.

ವೈದಿಕ ಬ್ರಾಹ್ಮಣರ ಹಾಗೂ ಪುರೋಹಿತರ ಮನೆಗಳಲ್ಲಿ ಅಗ್ನಿಹೋತ್ರ ಇತ್ತೀಚಿನ ವರೆಗೂ ಎಂದರೆ, ಪ್ರ.ಶ. 10ನೆಯ ಶತಮಾನದವರೆಗೂ ಪ್ರಚಾರದಲ್ಲಿತ್ತು. ಗುರುಕುಲದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ವಿವಾಹವಾಗಿ ಗೃಹಸ್ಥಾಶ್ರಮವನ್ನು ಸೇರಿದ ಮೇಲೆ ಅಗ್ನಿಹೋತ್ರ ಒಂದು ವ್ರತಾಚರಣೆಯಾಗಿ ನಡೆದುಕೊಂಡು ಬರುತ್ತಿತ್ತು. ಆದ್ದರಿಂದ ಗುರುಕುಲ ಜೀವನದಲ್ಲಿ ಅದಕ್ಕೆ ಸಂಬಂಧಿಸಿದ ಆಚರಣೆಗಳನ್ನೆಲ್ಲ ತಪ್ಪದೆ ಅಭ್ಯಸಿಸಬೇಕಾಗಿತ್ತು. ಪೌರೋಹಿತ್ಯವನ್ನು ಮುಂದೆ ವೃತ್ತಿಯಾಗಿ ಅನುಸರಿಸುವವರಿಗಂತೂ ಅದು ಅಗತ್ಯವೇ ಆಗುತ್ತಿತ್ತು.

**ವಿದ್ಯಾಭ್ಯಾಸಕ್ಕೆ ಗುರುಕುಲ ಪದ್ಧತಿಯಲ್ಲಿದ್ದ ಸೌಲಭ್ಯಗಳು:** ವಿದ್ಯಾಭ್ಯಾಸಕ್ಕೆ ಗುರುಕುಲ ಪದ್ಧತಿ ಸೂಕ್ತವಾದ ವ್ಯವಸ್ಥೆಯೆಂದು ಅಂದಿನ ಶಿಕ್ಷಣವೇತ್ತರು ಅರಿತಿದ್ದರು. ಬರೆವಣಿಗೆ ಇನ್ನೂ ಗೊತ್ತಿರದ ಹಾಗೂ ಪುಸ್ತಕಗಳೂ ಇಲ್ಲದ ಆ ಕಾಲದಲ್ಲಿ ಎಲ್ಲವನ್ನೂ ಗುರುಗಳ ಬಾಯಿಂದ ಕೇಳಿ ತಿಳಿದುಕೊಳ್ಳಬೇಕಾಗಿತ್ತು. ವೇದಗಳಂಥ ಪವಿತ್ರ ಸಾಹಿತ್ಯವನ್ನು ಅದರ ಶುದ್ಧ ಸ್ವರೂಪದಲ್ಲಿ ಪಠಿಸಿ ಕಲಿಯಬೇಕಾಗಿದ್ದುದರಿಂದ ಅಧ್ಯಯನಕಾಲದಲ್ಲಿ ಗುರುಗಳ ನೇತೃತ್ವ ಅನಿವಾರ್ಯವೇ ಆಗುತ್ತಿತ್ತು. ಸಂಜೆಯ ವೇಳೆಯಲ್ಲಿ ಬಾಯಿಪಾಠದ ಮೂಲಕ ಹೃದ್ಗತಮಾಡಿಕೊಳ್ಳುವಾಗ ದೋಷಗಳನ್ನು ತಿದ್ದಿಕೊಳ್ಳಲು ಗುರುಗಳ ಸಮ್ಮುಖದಲ್ಲಿ ಆ ಕಾರ್ಯವನ್ನು ಮಾಡುವುದೂ ಅಗತ್ಯವಾಗುತ್ತಿತ್ತು. ಜೊತೆಗೆ ತಂದೆಯ ಮನೆಯಿಂದ ದೂರವಾಗಿ ಗುರುಗಳ ಮನೆಯಲ್ಲಿರುವುದರಿಂದ ಲಭಿಸಬಹುದಾದ ಇತರ ಶಿಕ್ಷಣ ಸೌಲಭ್ಯಗಳನ್ನೂ ಅಂದಿನವರು ಅರಿತುಕೊಂಡಿದ್ದರು. ತಮ್ಮ ನಗರದಲ್ಲೆ ಪ್ರಸಿದ್ಧರೆನಿಸಿದ ಗುರುಗಳಿದ್ದರೂ ರಾಜಗೃಹ, ವಾರಾಣಸಿ, ಮುಂತಾದ ನಗರಗಳ ರಾಜಮಹಾರಾಜರು ಶಿಕ್ಷಣಕ್ಕಾಗಿ ತಮ್ಮ ಮಕ್ಕಳನ್ನು ಬಹುದೂರದಲ್ಲಿದ್ದ ತಕ್ಷಶಿಲೆಯಂಥ ವಿದ್ಯಾಕೇಂದ್ರಗಳಿಗೆ ಕಳಿಸುತ್ತಿದ್ದ ಅಂಶವನ್ನು ತಿಲಮುಟ್ಟಿ ಜಾತಕ ತಿಳಿಸುತ್ತದೆ. ಅದರಿಂದ ತಮ್ಮ ಮಕ್ಕಳಲ್ಲಿರಬಹುದಾದ ಸಿರಿವಂತಿಕೆಯ ಗರ್ವ ಅಹಂಕಾರಾದಿ ಹಮ್ಮುಬಿಮ್ಮುಗಳು ನಿರ್ಮೂಲವಾಗಿ ಅವರು ಜೀವನದಲ್ಲಿ ಶೀತೋಷ್ಣಾದಿ ಕಷ್ಟಗಳನ್ನು ತಡೆದುಕೊಳ್ಳುವ ಶಕ್ತಿಪಡೆಯುವರೆಂದೂ ಜೀವನದ ರೀತಿನೀತಿಗಳನ್ನು ಅರಿತುಕೊಳ್ಳುವರೆಂದೂ ಭಾವಿಸಿದ್ದರು. ಗುರುಗಳ ಮನೆಯಲ್ಲಿ ಉಳಿದುಕೊಂಡು ಅವರ ನೇತೃತ್ವದಲ್ಲಿ ಜೀವನ ನಡೆಸಬೇಕಾಗಿದ್ದುದರಿಂದ ವ್ಯಾಸಂಗ ಸುಸೂತ್ರವಾಗಿ ನಡೆಯುವುದರ ಜೊತೆಗೆ ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ಅನುಕರಿಸುವ ಅವಕಾಶವೂ ದೊರೆಯುತ್ತಿತ್ತು. ಸಮಾನ ವಯಸ್ಸಿನ ಇತರ ವಿದ್ಯಾರ್ಥಿಗಳೊಡನೆಯೂ ಸುತ್ತಣ ಸಾಮಾನ್ಯ ಜನತೆಯೊಡನೆಯೂ ವರ್ತಿಸುವಾಗ ವಿದ್ಯಾರ್ಥಿಗಳಲ್ಲಿ ಇದ್ದಿರಬಹುದಾದ ಭಾವಾತಿರೇಕಗಳೂ ನಡೆನುಡಿಯ ಓರೆಕೋರೆಗಳೂ ಸರಿಹೋಗಿ ಸಮಾಜದಲ್ಲಿ ನಡೆದುಕೊಳ್ಳಬೇಕಾದ ಕ್ರಮದ ಪರಿಚಯವಾಗಲೂ ಅವಕಾಶವಿತ್ತು. ವಿದ್ಯಾರ್ಥಿಗಳ ಊರು ಹತ್ತಿರದಲ್ಲಿದ್ದರೆ ಹಬ್ಬ ಹುಣ್ಣಿಮೆಗಳಲ್ಲಿ ಹೋಗಿ ಬರಲು ಅನುಮತಿಯಿರುತ್ತಿದ್ದರೂ ನೂರಾರು ಮೈಲಿಗಳಿಂದ ಬಂದಿರುತ್ತಿದ್ದ ವಿದ್ಯಾರ್ಥಿಗಳಿಗೆ ಅದು ಸಾಧ್ಯವಾಗುತ್ತಿರಲಿಲ್ಲ. ಶಿಕ್ಷಣವನ್ನು ಮುಗಿಸಿ ಸಮಾವರ್ತನವಾದ ಮೇಲೆಯೆ ಊರಿಗೆ ಅವರು ಹಿಂದಿರುಗಬೇಕಾಗುತ್ತಿತ್ತು. ರಸ್ತೆ ಮತ್ತು ವಾಹನ ಸೌಲಭ್ಯಗಳು ಅಷ್ಟಾಗಿ ಇಲ್ಲದಿದ್ದ ಆ ಕಾಲದಲ್ಲಿ ಅದು ಅನಿವಾರ್ಯವೇ ಆಗುತ್ತಿತ್ತು. ಹಲವು ಸಂದರ್ಭಗಳಲ್ಲಿ ತಂದೆತಾಯಿಗಳು ತಮ್ಮ ಮಕ್ಕಳು ಶಿಕ್ಷಣ ಮುಗಿಸಿ ಬರುವುದನ್ನು ಚಾತಕಪಕ್ಷಿಗಳಂತೆ ಕಾದು ನೋಡಬೇಕಾಗುತ್ತಿತ್ತು. ಕೆಲವರಂತು ತಮ್ಮ ಜೀವಿತಕಾಲದಲ್ಲಿ ಮಕ್ಕಳನ್ನು ನೋಡಬಲ್ಲೆವೇ ಎಂದು ಅನುಮಾನಿಸುತ್ತಿದ್ದುದೂ ಉಂಟು.

ಗುರುಕುಲ ಪದ್ಧತಿ ಶಿಕ್ಷಣಕ್ಕೆ ಉತ್ತಮವಿಧಾನವೆಂದು ಅಂದಿನ ಶಿಕ್ಷಣವೇತ್ತರು ಪರಿಗಣಿಸಿದ್ದರೂ ಎಲ್ಲ ವಿದ್ಯಾರ್ಥಿಗಳೂ ಗುರುಗಳ ಬಳಿಯಲ್ಲೆ ಇದ್ದುಕೊಂಡು ಶಿಕ್ಷಣ ಪಡೆಯುತ್ತಿದ್ದಂತೆ ತೋರುವುದಿಲ್ಲ. ಪ್ರಾಥಮಿಕ ಹಂತದ ವಿದ್ಯಾರ್ಥಿಗಳು ತಮ್ಮ ಮನೆಯಲ್ಲೆ ಇದ್ದುಕೊಂಡು ಹತ್ತಿರದ ಗುರುಮಠವೊಂದಕ್ಕೆ ಹೋಗಿ ಬರುತ್ತಿದ್ದರು. ಉಪನಯನಾನಂತರ ವಿದ್ಯಾರ್ಥಿಗಳು ಗುರುವಿನ ಮನೆಗೆ ಶಿಕ್ಷಣಕ್ಕೆ ಹೋಗಬೇಕೆಂದು ಸ್ಮೃತಿ ಸೂಚಿಸುತ್ತದೆ. ಪೂರ್ವ ಮತ್ತು ಮಧ್ಯ ಭಾರತದಿಂದ ಪಶ್ಚಿಮ ಭಾರತದಲ್ಲಿದ್ದ ತಕ್ಷಶಿಲೆಯಂಥ ದೂರದ ವಿದ್ಯಾಕೇಂದ್ರಗಳಿಗೆ ವೇದ ಮತ್ತು ಹದಿನೆಂಟು ಶಾಸ್ತ್ರಗಳಲ್ಲಿ ಅಧ್ಯಯನ ನಡೆಸತಕ್ಕವರು ಮಾತ್ರ ಹೋಗುತ್ತಿದ್ದರು. ಅಷ್ಟು ದೂರದ ಪ್ರಯಾಣವನ್ನು ಕೈಕೊಳ್ಳಲು ಅವರಿಗೆ 15–16 ವರ್ಷ ವಯಸ್ಸಾದರೂ ಆಗಿರಬೇಕಾಗಿತ್ತು. ಬಡವರ ಮಕ್ಕಳು ಮಾತ್ರ ಅವುಗಳ ಶಿಕ್ಷಣಕ್ಕೆ 12 – 13ನೆಯ ವರ್ಷ ವಯಸ್ಸಿನಲ್ಲೇ ಗುರುಗಳ ಮನೆಯನ್ನು ಸೇರುತ್ತಿದ್ದಂತೆ ತೋರುತ್ತದೆ. ಅವರು ತಮ್ಮ ಆಹಾರಕ್ಕಾಗಿ ಭಿಕ್ಷಾಟನೆ ಮಾಡಬೇಕಾಗುತ್ತಿತ್ತು. ಶ್ರೀಮಂತರು ತಮ್ಮ ಮಕ್ಕಳು ತಮ್ಮ ತಮ್ಮ ಯೋಗ ಕ್ಷೇಮವನ್ನು ನೋಡಿಕೊಳ್ಳುವಷ್ಟು ದೊಡ್ಡವರಾಗುವ ತನಕ ಉಪನಯನವಾಗಿದ್ದರೂ ಹತ್ತಿರದ ಯಾರಾದರೂ ಗುರುಗಳ ಬಳಿ ಶಿಕ್ಷಣ ಪಡೆಯಲು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಿರಬೇಕು. ಬೇಕಾದ ಹಾಗೆ ಐಶ್ವರ್ಯ ಹೊಂದಿದ್ದ ರಾಜ ಮಹಾರಾಜರಂಥ ಶ್ರೀಮಂತರು ಅಗತ್ಯ ವ್ಯವಸ್ಥೆಯನ್ನು ಮಾಡಿಕೊಂಡು ತಮಗೆ ಉಚಿತವೆನಿಸುವ ಗುರುಗಳಿದ್ದ ದೂರದ ಊರುಗಳಿಗೆ ತಮ್ಮ ಮಕ್ಕಳನ್ನು ಶಿಕ್ಷಣಕ್ಕೆ ಕಳಿಸುತ್ತಿದ್ದರು. ಗುರುಗಳು ಒಂದೇ ಊರಿನಲ್ಲಿದ್ದ ಪಕ್ಷದಲ್ಲಿ ವಿದ್ಯಾರ್ಥಿಗಳು ತಂದೆಯ ಮನೆಗೆ ಬದಲು ಗುರುಗಳ ಮನೆಯಲ್ಲಿ ವಾಸಿಸುತ್ತಿದ್ದರೇ ಎಂಬುದು ತಿಳಿಯದ ವಿಷಯ.

**ವನಾಂತರ ಪ್ರದೇಶಗಳಲ್ಲಿ ಗುರುಕುಲಗಳು:** ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣವೀಯುತ್ತಿದ್ದ ಆಶ್ರಮಗಳಂತೆ ಗುರುಕುಲಗಳೂ ವನಾಂತರದ ನೀರವ ಪ್ರದೇಶಗಳಲ್ಲಿ ಏರ್ಪಟ್ಟಿದ್ದುವೆನ್ನುವುದು ನಿಜ. ಭಾರತದ ಸಂಸ್ಕೃತಿ ನಾಗರಿಕತೆಗಳು ವಿಕಸಿಸಿದ್ದು ನಗರಗಳಲ್ಲಲ್ಲ; ವನಾಂತರದ ನೀರವವೂ ರಮ್ಯವೂ ಆದ ಪವಿತ್ರ ಕ್ಷೇತ್ರಗಳಲ್ಲಿ. ಆದರೆ ಈ ಮಾತು ಮುಖ್ಯವಾಗಿ ಧರ್ಮ ಮತ್ತು ತತ್ತ್ವ ಸಿದ್ಧಾಂತಗಳ ವಿಕಾಸಕ್ಕೆ ಅನ್ವಯಿಸುತ್ತದೆ. ವೇದಾಧ್ಯಯನ ಪವಿತ್ರ ಕಾರ್ಯವೆಂದು ಪರಿಗಣಿಸಿದ್ದುದರಿಂದ ಮೊದಮೊದಲು ಅದಕ್ಕಾಗಿ ವನಾಂತರದ ನಿರ್ಜನ ಪ್ರದೇಶಗಳನ್ನು ಆರಿಸಿಕೊಳ್ಳಲಾಗುತ್ತಿತ್ತು. ಗೋಪಥ ಮತ್ತು ಸಾಮ ವಿಧಾನ ಬ್ರಾಹ್ಮಣಗಳು ಬ್ರಹ್ಮಚಾರಿ ಭಿಕ್ಷಾಟನೆಗೆ ಮಾತ್ರ ಊರಿಗೆ ಹೋಗಬೇಕೆಂದೂ ಮಿಕ್ಕ ಕಾಲಗಳಲ್ಲಿ ಊರಹೊರಗಿನ ನೀರವ ವಾತಾವರಣದಲ್ಲಿರಬೇಕೆಂದೂ ವಿಧಿಸುತ್ತವೆ. ಉಪನಿಷತ್ತಿನ ಋಷಿಗಳು ಬೌದ್ಧಗುರುಗಳೂ ತಮ್ಮ ತತ್ತ್ವಸಿದ್ಧಾಂತಗಳನ್ನು ಮೊದಲು ಅಂಥ ವನಾಂತರದ ನೀರವ ಪ್ರದೇಶಗಳಲ್ಲಿ ಕಂಡುಕೊಂಡು ಅನಂತರ ಅವನ್ನು ತಮ್ಮ ಅನುಯಾಯಿಗಳಿಗೆ ಬೋಧಿಸಿದರು. ವಾಲ್ಮೀಕಿ, ಕಣ್ವ, ಸಾಂದೀಪನಿ ಮುಂತಾದ ಋಷಿಗಳು ತಮ್ಮ ಆಶ್ರಮದಲ್ಲಿ ವೈದಿಕ, ಧಾರ್ಮಿಕ ಮತ್ತು ತತ್ತ್ವಶಾಸ್ತ್ರದ ಶಿಕ್ಷಣದಂತೆ ವ್ಯಾಕರಣ, ಭಾಷಾಶಾಸ್ತ್ರ, ಖಗೋಳಶಾಸ್ತ್ರ ಮುಂತಾದ ಲೌಕಿಕ ವಿದ್ಯೆಗಳ ಶಿಕ್ಷಣಕ್ಕೂ ಅವಕಾಶ ಕಲ್ಪಿಸಿದ್ದರೂ ವನಾಂತರ ಪ್ರದೇಶಗಳಲ್ಲೆ ಜೀವಿಸುತ್ತಿದ್ದರು. ವಾರಾಣಸಿಯ ಗುರುಗಳೊಬ್ಬರು ವೇದಾಧ್ಯಯನಕ್ಕಾಗಿ ನಗರ ಜೀವನದ ಜಂಜಡದಿಂದ ದೂರವಿರಲು ಹಿಮಾಲಯದ ತಪ್ಪಲಿಗೆ ತೆರಳಿದ ಅಂಶ ಜಾತಕವೊಂದರ (ತಿತ್ತಿರಿ) ಕಥೆಯಲ್ಲಿ ಬರುತ್ತದೆ. ಅವರ ಆಹಾರಾದಿ ಅವಶ್ಯಕತೆಗಳನ್ನು ಅಲ್ಲಿಗೆ ಅನತಿ ದೂರದಲ್ಲಿದ್ದ ಹಳ್ಳಿಯೊಂದರ ಜನತೆ ಪೂರೈಸುತ್ತಿದ್ದರಂತೆ. ಆದರೆ ಸಾಹಿತ್ಯಾತ್ಮಕ ಹಾಗೂ ವೃತ್ತಿಪರ ವಿದ್ಯೆಯನ್ನು ಕಲಿಯತಕ್ಕವರು ಕಾಡಿಗೆ ಅಧ್ಯಯನಕ್ಕೆ ಹೋಗುತ್ತಿರಲಿಲ್ಲವೆಂದು ತೋರುತ್ತದೆ. ಗ್ರಾಮ ಅಥವಾ ನಗರಗಳಲ್ಲಿ ವಾಸಿಸುತ್ತಿದ್ದ ಗುರುಗಳ ಮನೆಯಲ್ಲಿ ಉಳಿದುಕೊಂಡು ಅವರು ಅಧ್ಯಯನ ಮಾಡುತ್ತಿದ್ದಿರಬೇಕು. ತಕ್ಷಶಿಲೆಯ ವಿದ್ಯಾರ್ಥಿಗಳನೇಕರು ಗಾಂಧಾರದ ಮಹಾನಗರದಲ್ಲಿದ್ದ ತಮ್ಮ ಗುರುಗಳ ಬಳಿಯಲ್ಲಿದ್ದರೆಂಬ ಅಂಶವನ್ನು ಅನೇಕ ಜಾತಕದ ಕಥೆಗಳು ಸೂಚಿಸುತ್ತವೆ. ಸ್ಮೃತಿಗಳೂ ಆ ಬಗ್ಗೆ ಸಾಕ್ಷ್ಯಗಳನ್ನೂ ಒದಗಿಸುತ್ತವೆ. ಊರಿನಲ್ಲಿ ಕಳ್ಳಕಾಕರ ಕಾಟ ಹೆಚ್ಚಿದಾಗ, ಅಥವಾ ಯಾರಾದರೂ ಸತ್ತಾಗ ಗುರುಕುಲಕ್ಕೆ ರಜೆ ಕೊಡಬೇಕೆಂದು ಮನುಸ್ಮೃತಿ ಸೂಚಿಸುತ್ತದೆ. ಅಧ್ಯಾಪಕರೂ ವಿದ್ಯಾರ್ಥಿಗಳೂ ಕಾಡಿನಲ್ಲಿ ವಾಸಿಸುತ್ತಿದ್ದರೆ ಇಂಥ ಸೂಚನೆಗೆ ಅವಕಾಶವಿರುತ್ತಿರಲಿಲ್ಲ.

**ನಿಷ್ಠೆಯ ಜೀವನ:** ಗುರುಕುಲದಲ್ಲಿ ವಿದ್ಯಾರ್ಥಿಗಳು ಬ್ರಹ್ಮಚರ್ಯದ ನಿಷ್ಠಾ ಜೀವನವನ್ನು ನಡೆಸಬೇಕಾಗಿತ್ತು. ಗುಣಶೀಲಗಳ ನಿರೂಪಣೆಗೆ ಮಹತ್ತ್ವವಿದ್ದ ಅಂದಿನ ಶಿಕ್ಷಣದ ಗುರಿಯ ಸಾಧನೆಗೆ ಇದು ತೀರ ಅಗತ್ಯವಾಗಿತ್ತು. ಒಬ್ಬೊಬ್ಬ ಗುರುವಿನ ಬಳಿಯೂ 10–15 ಮಂದಿ ವಿದ್ಯಾರ್ಥಿಗಳಿರುತ್ತಿದ್ದರು. ಅವರೆಲ್ಲರ ನೈತಿಕ ಮತ್ತು ಸಾಮಾಜಿಕ ವರ್ತನೆಗಳ ಮೇಲೂ ಗುರುಗಳು ಕಣ್ಣಿಟ್ಟು ನೋಡುತ್ತಿದ್ದರು. ಅವರಲ್ಲಿ ಬಡವಿದ್ಯಾರ್ಥಿಗಳು ಭಿಕ್ಷಾನ್ನದಿಂದ ಜೀವಿಸುತ್ತಿದ್ದರು. ಮಿಕ್ಕವರು ಗುರುಗಳ ಮನೆಯಲ್ಲಿ ಅವರ ಹಿರಿಯ ಮಕ್ಕಳಂತೆ ಊಟವಸತಿ ಪಡೆಯುತ್ತಿದ್ದರು. ಗುರುಗಳೊಬ್ಬರು ವಾರಾಣಸಿಯ ರಾಜಕುಮಾರನಿಗೂ ತಮ್ಮ ಮನೆಯಲ್ಲೆ ಊಟವಸತಿಗಳಿಗೆ ಏರ್ಪಡಿಸಿದ್ದುದೂ ಅದಕ್ಕಾಗಿ ಅವನು ಸೂಕ್ತವೆನಿಸುವಂತೆ ಗುರುದಕ್ಷಿಣೆ ಕೊಡಲಾಶಿಸಿದ್ದುದೂ ತಿಲಮುಟ್ಟಿ ಜಾತಕದಲ್ಲಿ ಉಲ್ಲೇಖವಾಗಿದೆ.

ಗುರುಕುಲದ ವಿದ್ಯಾರ್ಥಿಗಳು ಹಲವು ಸಾಮಾಜಿಕ ಮತ್ತು ನೈತಿಕ ನಿಯಮಗಳನ್ನು ಪಾಲಿಸುತ್ತಿದ್ದರು. ಗುರುಗಳನ್ನು ದೇವರೆಂದು ಭಾವಿಸಿ ಅನನ್ಯಭಕ್ತಿಯಿಂದ ನಡೆದು ಕೊಳ್ಳುತ್ತಿದ್ದರು. ಅವರು ನೀಡುವ ಶಿಕ್ಷಣ ಮತ್ತು ಬೀರುವ ಆದರ್ಶ ಪರಿಣಾಮಕಾರಿ ಯಾಗಲು ಅದೆಲ್ಲ ತೀರ ಅಗತ್ಯವೆನಿಸಿತ್ತು. ಹಾಗೆಯೇ, ಅವರ ಮನೆಯ ಹಿರಿಯರ ಬಗ್ಗೆಯೂ ಗೌರವದಿಂದ ನಡೆದುಕೊಳ್ಳಬೇಕಾಗಿತ್ತು. ಸಮಾಜ ಎತ್ತಿಹಿಡಿದಿರುವ ಆದರ್ಶ ಮೌಲ್ಯಾದಿಗಳನ್ನು ನಿಷ್ಠೆಯಿಂದ ಪಾಲಿಸಬೇಕಾಗಿತ್ತು. ಜೂಜುಗಾರಿಕೆ, ಸುಳ್ಳು ಹೇಳುವುದು, ಇತರರಿಗೆ ಕೇಡುಬಯಸುವುದು, ಚಾಡಿ ಹೇಳುವುದು–ಇವೆಲ್ಲ ನಿಷಿದ್ಧವೆನಿಸಿದ್ದವು. ವಿದ್ಯಾರ್ಥಿಗಳು ತಲೆ ಪೂರ್ತಿ ಕ್ಷೌರಮಾಡಿಸಿಕೊಳ್ಳಬೇಕಾಗಿತ್ತು. ಇಲ್ಲವೆ ಜುಟ್ಟು ಬಿಡಬೇಕಾಗಿತ್ತು. ಕೊಡೆ ಹಿಡಿದುಕೊಳ್ಳುವುದು, ಚಡಾವು ಮುಂತಾದ ಪಾದರಕ್ಷೆಗಳನ್ನು ಧರಿಸುವುದು, ಮೋಜುಗಾರಿಕೆಯ ಅತ್ತರು ಮುಂತಾದ ಅಲಂಕಾರ ವಸ್ತುಗಳನ್ನು ಬಳಸುವುದು, ಗುರುಗಳಿಗಿಂತ ಹೆಚ್ಚಿನ ಆಡಂಬರದ ಉಡುಪು ತೊಡುವುದು, ಅವರಿಗಿಂತ ಎತ್ತರದ ಸ್ಥಳದಲ್ಲಿ ಕೂಡುವುದು–ಇವಕ್ಕೆಲ್ಲ ಅವಕಾಶವಿರಲಿಲ್ಲ. ಮುಖ್ಯವಾಗಿ ಅವರು ಸರಳಜೀವನವನ್ನು ನಡೆಸಬೇಕಾಗಿತ್ತು. ನಿತ್ಯ ಸ್ನಾನಮಾಡಿ ಚೊಕ್ಕಟವಾದ ಮಡಿ ಬಟ್ಟೆಯನ್ನು ಧರಿಸಬೇಕಾಗಿತ್ತು. ಮಾಂಸಾಹಾರ ತ್ಯಾಜ್ಯವೆನಿಸಿತ್ತು. ಅಧಿಕವಾಗಿ ಸಿಹಿತಿಂಡಿಗಳನ್ನಾಗಲೀ ಸಂಬಾರ ಹೆಚ್ಚಿದ್ದ ಪದಾರ್ಥಗಳನ್ನಾಗಲೀ ತಿನ್ನಲು ಅವಕಾಶವಿರಲಿಲ್ಲ. ನೈತಿಕ ಜೀವನಕ್ಕೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಆಚರಿಸಬೇಕಾಗಿದ್ದರೂ ಮಿಕ್ಕವಕ್ಕೆ ಅಗತ್ಯವೆನಿಸಿದಾಗ ವಿನಾಯಿತಿ ದೊರಕುತ್ತಿತ್ತು. ವೈದ್ಯಕಾರಣಕ್ಕಾಗಿ ಕೆಲವರಿಗೆ ಆಹಾರನಿಯಮದ ಬಗ್ಗೆ ವಿನಾಯಿತಿಯಿರುತ್ತಿತ್ತು. ಬಿಸಿಲಲ್ಲಿ ದೂರದ ಊರುಗಳಿಗೆ ಪ್ರಯಾಣ ಮಾಡಬೇಕಾದಾಗ ವಿದ್ಯಾರ್ಥಿಗಳು ಕೊಡೆ, ಪಾದರಕ್ಷೆ ಮುಂತಾದವನ್ನು ಬಳಸಬಹುದಾಗಿತ್ತು. ನೀತಿನಿಯಮಗಳ ಪಾಲನೆ ವ್ಯಾಸಂಗಕ್ಕೂ ಗುಣಶೀಲಗಳ ನಿರೂಪಣೆಗೂ ಅಗತ್ಯವೆಂದು ಭಾವಿಸಲಾಗಿತ್ತೇ ಹೊರತು ವಿದ್ಯಾರ್ಥಿಗಳು ಜೀವನದ ಸುಖ ಸೌಲಭ್ಯಗಳನ್ನು ತೊರೆದು ಸಂನ್ಯಾಸಿಗಳಾಗಿ ಬಾಳಬೇಕೆಂಬ ಭಾವನೆ ಇರಲಿಲ್ಲ. ದೇಹವನ್ನು ದಂಡಿಸಬೇಕೆಂದು ದೇಹಕ್ಕೆ ಅಸಾಧ್ಯವಾದ ದುಡಿಮೆ ಕೊಡುತ್ತಿರಲಿಲ್ಲ. ವಿದ್ಯಾರ್ಥಿ ದೆಶೆ ದೇಹವರ್ಧನದ ಕಾಲವೆಂಬುದನ್ನು ಅರಿತಿದ್ದ ಅಂದಿನವರು ಮಕ್ಕಳು ತಕ್ಕಷ್ಟು ಪುಷ್ಟಿಕರವಾದ ಆಹಾರವನ್ನು ಸೇವಿಸುವ ಅಗತ್ಯವನ್ನು ಎತ್ತಿಹಿಡಿದಿದ್ದರು. ಚಿಕ್ಕ ಮಕ್ಕಳಿಗೂ ರೋಗಿಗಳಿಗೂ ಆಹಾರನಿಯಮಗಳನ್ನು ಸಡಿಲಗೊಳಿಸುತ್ತಿದ್ದರು. ಸರಳ ಜೀವನವನ್ನು ನಡೆಸುತ್ತಿದ್ದ ಅವರು ಜ್ಞಾನಾರ್ಜನೆಯ ಜೊತೆಗೆ ಸಮಾಜ ಜೀವನಕ್ಕೆ ವಿಹಿತವೆನಿಸುವ ಗುಣಶೀಲಗಳನ್ನೂ ಬೆಳೆಸಿಕೊಳ್ಳಬೇಕೆಂದು ಒತ್ತಿ ಹೇಳುತ್ತಿದ್ದರು. ಅದಕ್ಕೆ ಅನುಕೂಲಿಸುವಂತೆ ನೀತಿನಿಯಮಗಳನ್ನು ರೂಪಿಸಿದ್ದರು.

**ಗುರುಕುಲ ಪದ್ಧತಿಯ ಪ್ರಭಾವ:** ಶಿಕ್ಷಣ ಪರಿಣಾಮಕಾರಿಯಾಗುವುದಕ್ಕೂ ಸೂಕ್ತರೀತಿಯ ವ್ಯಕ್ತಿತ್ವದ ನಿರೂಪಣೆಗೂ ಅನುಕೂಲವೆನಿಸುವ ಅನೇಕ ಲಕ್ಷಣಗಳು ಗುರುಕುಲ ಪದ್ಧತಿಯಲ್ಲಿ ಅಡಕವಾಗಿದ್ದವು. ಆಧುನಿಕ ತತ್ತ್ವ ಚಿಂತಕರು ಅದನ್ನು ಮನಗಂಡುಕೊಂಡಿರುವರು. ಈಚೆಗೆ ಭಾರತದಲ್ಲಿ ಅದರ ಉತ್ತಮಾಂಶಗಳನ್ನು ಅಳವಡಿಸಿಕೊಂಡಂತೆ ಕೆಲವು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಾಗಿದೆ. ಆ ಮೂಲಕ ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯ ವಿಹಿತಲಕ್ಷಣಗಳನ್ನು ಆಧುನಿಕ ಶಿಕ್ಷಣ ಕ್ಷೇತ್ರದಲ್ಲಿ ಪುನರುಜ್ಜೀವನಗೊಳಿಸುವ ಯತ್ನ ನಡೆದಿದೆ **(ನೋಡಿ–ಗುರು; ಗುರುಶಿಷ್ಯ ಬಾಂಧವ್ಯ; ಶಾಂತಿನಿಕೇತನ)**. (ಎನ್.ಎಸ್.ವಿ.)

**ಗುರುಕುಲ ಕಾಂಗ್ರಿ ವಿಶ್ವವಿದ್ಯಾಲಯ :** ಪಂಜಾಬಿನ ಆರ್ಯ ಪ್ರತಿನಿಧಿ ಸಭೆಯವರು ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯನ್ನನುಸರಿಸಿ 1902ರಲ್ಲಿ ಆರಂಭಿಸಿದ ಒಂದು ರಾಷ್ಟ್ರೀಯ ವಿದ್ಯಾಸಂಸ್ಥೆ. ಮೊದಲು ಒಂದು ಪ್ರಾಥಮಿಕ ಶಾಲೆಯಾಗಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ, ಈಗ ಪೂರ್ಣ ಪ್ರಮಾಣದ ಒಂದು ಪರಿಗಣಿತ ವಿಶ್ವವಿದ್ಯಾಲಯವಾಗಿ (ಡೀಮ್ಡ್ ಯೂನಿವರ್ಸಿಟಿ) ರೂಪುಗೊಂಡಿದೆ. ಮೊದಲಿಂದಲೂ ಇದು ಸರ್ಕಾರದ ಸಹಾಯಧನಕ್ಕೆ ಕೈಯೊಡ್ಡದೆ ಸ್ವತಂತ್ರ ವಾತಾವರಣದಲ್ಲಿ ಕೆಲಸ ಮಾಡುತ್ತ ಬಂದಿದೆ; ಸರ್ಕಾರದ ಪರೀಕ್ಷೆ ನಿರೀಕ್ಷೆಗಳಿಂದಲೂ ನಿಯಂತ್ರಣದಿಂದಲೂ ವಿಮುಕ್ತವಾಗುಳಿದು ಕೊಂಡು ತನ್ನದೇ ಆದ ದೃಷ್ಟಿಧ್ಯೇಯಗಳನ್ನು ಹೊಂದಿದ್ದು ತನ್ನವೇ ಆದ ಕಾರ್ಯಕ್ರಮಗಳನ್ನು ಹಾಕಿಕೊಂಡು ಬೆಳೆದುಬರುತ್ತಿದೆ.

ಪ್ರಾಚೀನ ಭಾರತದ ಶಿಕ್ಷಣ ಸಂಪ್ರದಾಯಗಳನ್ನು ಪುನರುಜ್ಜೀವನಗೊಳಿಸುವ ಮಹೋದ್ದೇಶದಿಂದ ಆರಂಭವಾದ ಈ ರಾಷ್ಟ್ರೀಯ ವಿದ್ಯಾಲಯ ತನ್ನ ದೃಷ್ಟಿ ಧ್ಯೇಯಗಳನ್ನು ಸ್ಪಷ್ಟಪಡಿಸುತ್ತ 'ಮನೆ ಮತ್ತು ಶಾಲೆ–ಇವೆರಡರ ಸನ್ನಿವೇಶ ಸೌಲಭ್ಯಗಳನ್ನು ಒಳಗೊಂಡಂತೆ ವಸತಿವಿದ್ಯಾಲಯದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಗೊಳ್ಳಬೇಕು; ಮಕ್ಕಳು ತಂದೆಯ ಸಣ್ಣ ಕುಟುಂಬದಿಂದ ಗುರುಗಳ ವಿಶಾಲ ಕುಟುಂಬಕ್ಕೆ ಕಾಲಿಟ್ಟರೂ ಕುಟುಂಬದ ಸನ್ನಿವೇಶಗಳೇ ಅಲ್ಲೂ ಇದ್ದು, ಮನೆ ಮತ್ತು ಶಾಲೆಗಳೆರಡರ ಸತ್ವಭಾವವನ್ನೂ ಬೀರುವಂತಿರಬೇಕು; ಅಂಥ ಗುರುಕುಲದಲ್ಲಿ ಶಿಕ್ಷಣದಂತೆ ಊಟವಸತಿಗಳೂ ಉಚಿತವಾಗಿ ದೊರಕಬೇಕು; ಅಲ್ಲಿಗೆ ಪ್ರವೇಶಾವಕಾಶ ಕೋರುವವರಿಗೆ ಜಾತಿ, ಮತ, ಅಂತಸ್ತು ಮುಂತಾದ ಭಿನ್ನತೆಗಳು ಅಡ್ಡಿಯಾಗಬಾರದು. ಗುರುಕುಲದಲ್ಲಿ ಎಲ್ಲ ಮಕ್ಕಳನ್ನೂ ಪಕ್ಷಪಾತವಿಲ್ಲದೆ ಏಕರೀತಿಯಲ್ಲಿ ನೋಡಿಕೊಳ್ಳಬೇಕು. ಎಲ್ಲರೂ ಸಮವಸ್ತ್ರಧರಿಸಿ ಒಂದೇ ರೀತಿಯ ಆಹಾರ ಸೇವಿಸುತ್ತ ಒಂದೇ ರೀತಿಯ ಜೀವನ ನಡೆಸುವ ಅವಕಾಶವಿರಬೇಕು. ಸಹನೆ, ಕಷ್ಟಸಹಿಷ್ಣುತೆ ಮುಂತಾದ ವಿಹಿತಗುಣಗಳನ್ನು ಮಕ್ಕಳಲ್ಲಿ ಬೆಳೆಸಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು; ಬ್ರಹ್ಮಚರ್ಯವನ್ನು ನಿಷ್ಠೆಯಿಂದ ಆಚರಿಸಲು ಒತ್ತಾಯಿಸಿ ಅವರಲ್ಲಿ ಗುಣಶೀಲಗಳ ನಿರೂಪಣೆಗೆ ಯತ್ನಿಸಬೇಕು; ಅವರ ಲೈಂಗಿಕ ಆಸಕ್ತಿಯನ್ನು ಫಲದಾಯಕವಾದ ಮಾರ್ಗದಲ್ಲಿ ಉದಾತ್ತಗೊಳಿಸಲು ಯತ್ನಿಸಬೇಕು'– ಎಂದು ಸೂಚಿಸಿದೆ.

ಇಂಗ್ಲಿಷರ ಆಡಳಿತ ಭಾರತದಲ್ಲಿ ಭದ್ರವಾದಂತೆ ಅವರ ಶಿಕ್ಷಣಪದ್ಧತಿಯೂ ದೇಶಾದ್ಯಂತ ಹರಡುತ್ತ ಬರುತ್ತಿತ್ತು. ಮೊದಮೊದಲು ಆರ್ಥಿಕ ಕಾರಣದಿಂದಾಗಿ ಜನತೆ ಅದನ್ನು ಸ್ವಾಗತಿಸಿದರೂ ಕ್ರಮ ಕ್ರಮವಾಗಿ ಅದರ ಬಗ್ಗೆ ವಿರೋಧ ಬೆಳೆದು ಬರುತಿತ್ತು. 1885ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದಮೇಲೆ ಜನತೆಯಲ್ಲಿ ರಾಷ್ಟ್ರೀಯ ಭಾವನೆ ಬೆಳೆಯಲಾರಂಭಿಸಿತು. ಪರಕೀಯರ ಆಡಳಿತಾಧಿಕಾರವನ್ನು ಕೊನೆಗಾಣಿಸಬೇಕೆಂಬ ಆಕಾಂಕ್ಷೆಯೂ ಬಲಿಯುತ್ತ ಬಂತು. 1902ರಲ್ಲಿ ವೈಸ್‌ರಾಯ್ ಲಾರ್ಡ್ ಕರ್ಜನ್ ಕೈಗೊಂಡ ಕೆಲವು ಶೈಕ್ಷಣಿಕ ಕಾರ್ಯಕ್ರಮಗಳು ಸದುದ್ದೇಶದಿಂದ ಕೂಡಿದ್ದರೂ ಭಾರತೀಯರ ನಿಷ್ಠೆ ಮತ್ತು ಪ್ರತಿಭಾಜೀವನದ ಬಗ್ಗೆ ಅಗೌರವ ಸೂಚಿಸುವಂತಿದ್ದುವು. ಅದರ ಫಲವಾಗಿ ಆಗಲೇ ಪುಟವೇರುತ್ತಿದ್ದ ರಾಷ್ಟ್ರೀಯ ಭಾವನೆ ತಮ್ಮವೇ ಆದ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಪ್ರಚೋದಿಸಿತು. ಆಗ ಆರಂಭವಾದ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಈ ಗುರುಕುಲ ವಿದ್ಯಾಲಯವೂ ಒಂದು. ಮುಂದೆ, ಗಾಂಧೀಜಿ ಇಂಗ್ಲಿಷ್ ಶಿಕ್ಷಣ ಸಂಸ್ಥೆಗಳನ್ನು ಬಹಿಷ್ಕರಿಸಬೇಕೆಂದೂ ಅದರಿಂದ ಒಂದು ವರ್ಷದೊಳಗಾಗಿ ಸ್ವರಾಜ್ಯ ಲಭಿಸುವುದೆಂದೂ ಕರೆಯಿತ್ತಾಗ ಅನೇಕ ಅಧ್ಯಾಪಕರೂ ವಿದ್ಯಾರ್ಥಿಗಳೂ ಇಂಗ್ಲಿಷ್ ಶಿಕ್ಷಣ ಸಂಸ್ಥೆಗಳಿಂದ ಹೊರಬಂದರು. ಹೋರಾಟವೇನೊ ನಡೆದು ಒಂದು ವರ್ಷ ಕಳೆಯಿತು. ಆದರೆ ಸ್ವರಾಜ್ಯ ಲಭಿಸುವ ಕಾಲ ಇನ್ನೂ ಬಹುದೂರವಿರುವ ಅಂಶ ಸ್ಪಷ್ಟವಾಯಿತು. ಹೊರಬಂದಿದ್ದ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ದೇಶಾದ್ಯಂತ ಇಂಗ್ಲಿಷ್ ಪದ್ಧತಿಗೆ ಸಮಾಂತರವಾಗಿ ರಾಷ್ಟ್ರೀಯ ಸಂಸ್ಥೆಗಳನ್ನು ಸ್ಥಾಪಿಸಿ ಆಶ್ರಯವೀಯುವ ಕಾರ್ಯ ಅಸಾಧ್ಯದ ಕೆಲಸವೆಂಬುದನ್ನು ನಾಯಕರು ಕಂಡುಕೊಂಡರು. ಅಂಥ ವ್ಯವಸ್ಥೆ ರಾಷ್ಟ್ರೀಯ ಸರ್ಕಾರದಿಂದ ಮಾತ್ರ ಸಾಧ್ಯವೆಂಬುದನ್ನು ಅರಿತುಕೊಂಡಿದ್ದ ಲಾಲಾ ಲಜಪತರಾಯರಂಥ ನಾಯಕರು ಇರತಕ್ಕ ಜನ ಮತ್ತು ಧನಮೂಲಗಳನ್ನು ಬಳಸಿಕೊಂಡು, ಕೆಲವು ಉನ್ನತ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಮಾತ್ರ ಸ್ಥಾಪಿಸಿ, ರಾಷ್ಟ್ರೀಯ ಭಾವನೆಯನ್ನು ಹರಡಬಲ್ಲ ನಾಯಕರನ್ನು ಸಿದ್ಧಪಡಿಸಬೇಕೆಂದು ಸಲಹೆ ಮಾಡಿದರು. ಅಂದಿಗಾಗಲೆ ಅಸ್ತಿತ್ವದಲ್ಲಿದ್ದ ಗುರುಕುಲ ವಿದ್ಯಾಲಯವನ್ನು 1924ರಲ್ಲಿ ಹರಿದ್ವಾರದ ಬಳಿ ಇರುವ ಕಾಂಗ್ರಿ ಎಂಬ ಸ್ಥಳಕ್ಕೆ ವರ್ಗಾಯಿಸಿ ಅದನ್ನು ಒಂದು ಉನ್ನತ ಶಿಕ್ಷಣ ಸಂಸ್ಥೆಯಾಗಿ ಪರಿವರ್ತಿಸಿದರು. ಭಾರತ ಸ್ವತಂತ್ರವಾದ ಮೇಲೆ 1962ರಲ್ಲಿ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದ ಶಾಸನದ ಪ್ರಕಾರ ಪಾರ್ಲಿಮೆಂಟು ಈ ವಿದ್ಯಾಲಯವನ್ನು ಒಂದು ಪರಿಗಣಿತ ವಿಶ್ವವಿದ್ಯಾಲಯವಾಗಿ ಅಂಗೀಕರಿಸಿತು.

**ಕಾರ್ಯಕ್ರಮ :** ಗುರುಕುಲ ವಿದ್ಯಾಲಯ ಕಾಂಗ್ರಿಯ ವನಾಂತರ ಪ್ರದೇಶದಲ್ಲಿದೆ. ನಗರ ಜಂಜಡದಿಂದ ದೂರವಿರುವ ಈ ಪ್ರದೇಶ ಪ್ರಾಚೀನ ಕಾಲದ ಗುರುಕುಲ, ಆಶ್ರಮ ಮುಂತಾದ ವಿದ್ಯಾಕೇಂದ್ರಗಳ ಸ್ಮರಣೆಯನ್ನು ತರುವಂಥ ಹಾಗೂ ಬೋಧನೆಗೂ ಅಧ್ಯಯನಕ್ಕೂ ಅತ್ಯಂತ ಸೂಕ್ತವೆನಿಸುವ ಸನ್ನಿವೇಶಗಳನ್ನು ಹೊಂದಿದೆ. ಅಲ್ಲಿಗೆ 6–10 ವರ್ಷದ ವಯಸ್ಸಿನ ಮಕ್ಕಳನ್ನು ಸೇರಿಸಿಕೊಳ್ಳುವರು. ಹದಿನಾಲ್ಕು ವರ್ಷಗಳ ಶಿಕ್ಷಣದ ಅನಂತರ ವಿದ್ಯಾರ್ಥಿ ಸ್ನಾತಕ ಅಥವಾ ಪದವೀಧರನಾಗುತ್ತಾನೆ. ಅನಂತರ ಇನ್ನೆರಡು ವರ್ಷಗಳ ಮುಂದುವರಿದ ವ್ಯಾಸಂಗದ ಮೂಲಕ ಡಾಕ್ಟರ್ ಅಥವಾ ವಾಚಸ್ಪತಿಯಾಗುತ್ತಾನೆ. ಗುರುಕುಲ ಪದ್ಧತಿಯ ಈ ಶಿಕ್ಷಣ ಗಂಡುಮಕ್ಕಳಂತೆ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ. 1923ರಲ್ಲಿ ಡೆಹರಾಡೂನಿನಲ್ಲಿ ಬಾಲಕಿಯರಿಗಾಗಿಯೇ ಕಾಲೇಜು ಮಟ್ಟದವರೆಗಿನ ಪ್ರತ್ಯೇಕ ಗುರುಕುಲವನ್ನು ಈ ಸಂಸ್ಥೆ ಆರಂಭಿಸಿದೆ.

ಗುರುಕುಲ ವಿದ್ಯಾಲಯ ಹೆಸರಿಗೆ ತಕ್ಕಂತೆ ಪೂರ್ಣವಾಗಿ ವಸತಿ ವಿದ್ಯಾಲಯ ವಾಗಿದ್ದು ಗುರುಶಿಷ್ಯರಿಬ್ಬರೂ ಒಂದೆಡೆ ವಾಸಿಸುವ ಅವಕಾಶ ಕಲ್ಪಿಸಿದೆ.

ಮೊದಲ ನಾಲ್ಕು ವರ್ಷಗಳ ತರಗತಿಗಳಲ್ಲಿ ಸಂಸ್ಕೃತ, ಹಿಂದಿ, ಗಣಿತ, ಭೂವಿವರಣೆ, ಚಿತ್ರಲೇಖನ, ಚರಿತ್ರೆ, ಧರ್ಮಶಾಸ್ತ್ರ, ನೀತಿಶಾಸ್ತ್ರ, ಮುಂತಾದ ವಿಷಯಗಳನ್ನು ಬೋಧಿಸುವರು. ಕಿಂಡರ್‌ಗಾರ್ಟನ್ ಆಟ, ನೂಲುವುದು, ಚಾಪೆ ಹೆಣೆಯುವುದು,

ಮಣ್ಣಿನ ಕೆಲಸ ಮುಂತಾದ ಚಟುವಟಿಕೆಗಳ ಮೂಲಕ ಮಕ್ಕಳ ಕೈ ಮತ್ತು ಕಣ್ಣುಗಳ ಹೊಂದಾಣಿಕೆಯ ಕೌಶಲ್ಯವನ್ನು ವೃದ್ಧಿಪಡಿಸುವರು. ಐದನೆಯ ತರಗತಿಯಲ್ಲಿ ಇಂಗ್ಲಿಷ್ ಮತ್ತು ಭೌತವಿಜ್ಞಾನಗಳನ್ನು ಆರಂಭಿಸುವರು. ಪ್ರೌಢಶಾಲೆಯ ಅಂತಸ್ತಿನಲ್ಲಿ ನಡೆಯುವ ಅಧಿಕಾರಿ ಅಥವಾ ಪ್ರವೇಶ (ಎನ್ಟ್ರೆನ್ಸ್) ಪರೀಕ್ಷೆಯೊಂದರಲ್ಲಿ ಉತ್ತೀರ್ಣರಾದವರು ವಿಶ್ವವಿದ್ಯಾಲಯದ ತರಗತಿಗೆ ಹೋಗುವರು.

ಗುರುಕುಲ ವಿಶ್ವವಿದ್ಯಾಲಯದ ಶಿಕ್ಷಣವನ್ನು ಮೂರು ಪ್ರತ್ಯೇಕ ಮಹಾವಿದ್ಯಾಲಯ ಗಳಲ್ಲಿ ವ್ಯವಸ್ಥೆಗೊಳಿಸಿದೆ. ಮೊದಲನೆಯದಾದ ವೇದ ಮಹಾವಿದ್ಯಾಲಯದಲ್ಲಿ ವೇದಾಧ್ಯಯನಕ್ಕೂ ದರ್ಶನ, ಸಂಸ್ಕೃತ, ಸಾಹಿತ್ಯ, ಇತ್ಯಾದಿ ವಿಷಯಗಳ ವ್ಯಾಸಂಗಕ್ಕೂ ಅವಕಾಶ ಕಲ್ಪಿಸಿದೆ. ಎರಡನೆಯದಾದ ಸಾಧಾರಣ ಮಹಾವಿದ್ಯಾಲಯದಲ್ಲಿ (ಜನರಲ್ ಕಾಲೇಜ್) ಇಂಗ್ಲಿಷ್, ಇತಿಹಾಸ, ಅರ್ಥಶಾಸ್ತ್ರ, ಪಾಶ್ಚಾತ್ಯದರ್ಶನ, ತೌಲನಿಕ ಧರ್ಮಶಾಸ್ತ್ರ, ರಸಾಯನಶಾಸ್ತ್ರ ಇತ್ಯಾದಿ ವಿಷಯಗಳನ್ನು ಬೋಧಿಸುವರು. ಅವುಗಳಲ್ಲಿ ಕೆಲವು ವಿಷಯಗಳಲ್ಲಿ ಸ್ನಾತಕೋತ್ತರ ತರಗತಿಗಳನ್ನೂ ನಡೆಸುವರು. ಮೂರನೆಯದಾದ ಆಯುರ್ವೇದ ಮಹಾವಿದ್ಯಾಲಯದಲ್ಲಿ ಪ್ರಾಚೀನ ಭಾರತದ ವೈದ್ಯವಿದ್ಯೆಯ ಮತ್ತು ಆಧುನಿಕ ವೈದ್ಯಶಾಸ್ತ್ರದ ಅಧ್ಯಯನಕ್ಕೆ ಅವಕಾಶವಿದೆ.

ವಿಶ್ವವಿದ್ಯಾಲಯದಲ್ಲಿ ಆದ್ಯಂತವೂ ಶಿಕ್ಷಣ ಮಾಧ್ಯಮ ಹಿಂದಿ. ಸಂಸ್ಕೃತದ ವ್ಯಾಸಂಗಕ್ಕೆ ಪ್ರಾಮುಖ್ಯವುಂಟು. (ಎನ್.ಎಸ್.ವಿ.)

**ಗುರುತ್ವಾಕರ್ಷಣ ಕುಸಿತ :** ನಕ್ಷತ್ರ ಇಲ್ಲವೇ ಬೇರೆ ಯಾವುದೇ ಆಕಾಶಕಾಯ ಅದರ ಪ್ರಾರಂಭಿಕ ಪ್ರಸಾಮಾನ್ಯ ಗಾತ್ರದಿಂದ ನೂರಾರು ಪಟ್ಟು ಇಲ್ಲವೇ ಸಾವಿರಾರು ಪಟ್ಟು ಅಲ್ಪ ಗಾತ್ರಕ್ಕೆ ತೀವ್ರವಾಗಿ ಅಂತಃ ಸ್ಫೋಟಿಸುವಿಕೆ. ಅತಿಘನ ಅತಿಸಾಂದ್ರತೆಯುಳ್ಳ ನಕ್ಷತ್ರಗಳು ನ್ಯೂಟನ್ನನ ನಿಯಮ ಸೂಚಿಸುವುದಕ್ಕಿಂತಲೂ ಹೆಚ್ಚಾದ ಸಂಪೀಡನ ಗುರುತ್ವಾಕರ್ಣ ಬಲವನ್ನು ಅನುಭವಿಸುತ್ತವೆಂದು ಸಾರ್ವತ್ರಿಕ (ರಿಲೆಟಿವಿಟಿ) ಸಾಪೇಕ್ಷತಾ ಸಿದ್ಧಾಂತ ನಿರೂಪಿಸುತ್ತದೆ. ಅಂಥ ಘನವಸ್ತುಗಳಲ್ಲಿ ಅಥವಾ ನಕ್ಷತ್ರಗಳಲ್ಲಿ ಗುರುತ್ವಾಕರ್ಷಣ ಬಲ ಕಲ್ಪನೆಗೂ ಮೀರಿದ ಆಂತರಿಕ ಒತ್ತಡಗಳಿಗಿಂತಲೂ ಅಧಿಕವಾಗಿದ್ದು ನಕ್ಷತ್ರಗಳು ಗುರುತ್ವಾಕರ್ಷಣ ಕುಸಿತವನ್ನು ಅನುಭವಿಸುತ್ತವೆ. ಇದರಿಂದಾಗಿ ಅವುಗಳ ಗಾತ್ರ ಸರಿಸುಮಾರು ಶೂನ್ಯವೇ ಆಗಿ ಸಾಂದ್ರತೆ ಅತ್ಯಧಿಕವಾಗುತ್ತದೆ.

ಸೂರ್ಯನಂಥ ಸಾಧಾರಣ ನಕ್ಷತ್ರಗಳಲ್ಲಿ ಆಕರ್ಷಕ ಗುರುತ್ವಾತ್ಮಕ ಬಲಗಳನ್ನು ಉಷ್ಣದ ಒತ್ತಡ ಸಮತೋಲನದಲ್ಲಿಡುತ್ತದೆ. ನಕ್ಷತ್ರಗಳು ಹೊರಸೂಸುವ ಉಷ್ಣದ ಶಕ್ತಿಯನ್ನು ಎಲ್ಲಿಯವರೆಗೆ ಉಷ್ಣ ಬೈಜಿಕ (ಥರ್ಮೋನ್ಯೂಕ್ಲಿಯರ್) ಕ್ರಿಯೆಗಳು ಪುನಃ ಭರ್ತಿ ಮಾಡುತ್ತವೆಯೋ ಅಲ್ಲಿಯವರೆಗೆ ಸಾಕಷ್ಟು ಒತ್ತಡವಿದ್ದು ಗುರುತ್ವಾಕರ್ಷಣ ಕುಸಿತವನ್ನು ಅಂದರೆ ನಕ್ಷತ್ರ ಸಂಕುಚಿತಗೊಳ್ಳುವುದನ್ನು ತಡೆಯುತ್ತವೆ. ಕೋಟ್ಯಂತರ ವರ್ಷಗಳ ಅವಧಿಯಲ್ಲಿ ನಕ್ಷತ್ರ ಉಷ್ಣಬೈಜಿಕ ಕ್ರಿಯೆಯಿಂದ ತನ್ನ ಇಂಧನವೆಲ್ಲವನ್ನೂ ವ್ಯಯ ಮಾಡಿದ ಬಳಿಕ ಉಷ್ಣದ ಒತ್ತಡವನ್ನು ಸಮತೋಲದಲ್ಲಿಡಲು ಅದಕ್ಕೆ ಸಾಧ್ಯವಾಗುವುದಿಲ್ಲ. ಆಗ ಕುಸಿತ (ಸಂಪೀಡನೆ) ಪ್ರಾರಂಭವಾಗುತ್ತದೆ. ಈ ಸ್ಥಿತಿಯಲ್ಲಿ ನಕ್ಷತ್ರದ ಅಂತಿಮ ಆಕಾರ ಉಷ್ಣಬೈಜಿಕ ವಿಕಾಸದ ಕೊನೆಯ ಘಟ್ಟದಲ್ಲಿರುವ ಜಡವಸ್ತುವಾಗಿರುತ್ತದೆ. ಈ ವಸ್ತುವಿನ ಸಾಂದ್ರತೆ ಅತಿಯಾಗಿದ್ದು ಅಕ್ಕಪಕ್ಕದ ಪರಮಾಣುಗಳ ಅಥವಾ ಬೀಜಾಣುಗಳ ಪ್ರತಿಯೊಂದು ಧಾತುವಿನ ಒತ್ತಡ ಉಷ್ಣದ ಒತ್ತಡವನ್ನು ಮೀರಿಸುತ್ತದೆ. ಅಂತಿಮ ಆಕಾರದ ರಚನೆಯನ್ನು ಸ್ಥಿತಿ ಸಮೀಕರಣ ಅಂದರೆ ಸಿದ್ಧಾಂತದಿಂದ ನಿರೂಪಿಸಿದ ಸ್ಥಿತಿಸಮೀಕರಣ ಪ್ರಕಾರ ಉಷ್ಣಬೈಜಿಕ ವಿಕಾಸದ ಕೊನೆಯಲ್ಲಿ ಸ್ವಲ್ಪ ಕಡಿಮೆ ಸಾಂದ್ರತೆಯ ಜಡವಸ್ತು ಅತಿನಿರ್ಬಂಧಿತ ಪರಮಾಣುವಾದ $^{56}Fe$ (ಕಬ್ಬಿಣ) ಆಗಿರುತ್ತದೆ; ಮತ್ತು ಒತ್ತಡ ಬಹಳವಾಗಿ ಘನಸ್ಥಿತಿ ಬಲಗಳ ಅಂಶವಾಗಿರುತ್ತದೆ. ಕಬ್ಬಿಣವನ್ನು ಮತ್ತಷ್ಟು ಸಂಪೀಡಿಸಿದಾಗ $^{56}Fe$ ಪರಮಾಣುಗಳ ಕಕ್ಷೆಯ ಎಲೆಕ್ಟ್ರಾನುಗಳ ಒತ್ತಡ ಹೆಚ್ಚಾಗಿ ಘನಸ್ಥಿತಿ ಬಲಗಳ ಅಂಶ ಕುಗ್ಗುತ್ತದೆ; ಆದರೆ ಪೌಲಿಯ ತತ್ತ್ವದ ಪ್ರಕಾರ ಎಲೆಕ್ಟ್ರಾನುಗಳು ಮತ್ತಷ್ಟು ಒಟ್ಟಿಗೆ ಸಂಪೀಡಿಸಲು ವಿರೋಧ ವ್ಯಕ್ತಪಡಿಸುತ್ತವೆ. ಈ ರೀತಿ ಒತ್ತಡ ಹೆಚ್ಚಾಗಿ ಆದಷ್ಟೂ ಘನಸ್ಥಿತಿ ಬಲ ಕ್ಷಯವಾಗುತ್ತದೆ; ಕಕ್ಷೆಯ ಎಲೆಕ್ಟ್ರಾನುಗಳೇ ಸಂಪೂರ್ಣವಾಗಿ ಒತ್ತಡಕ್ಕೆ ಪ್ರೇರಕವಾಗಿ ಫರ್ಮಿ ವಿಕೃತ ಅನಿಲದ (ಫರ್ಮಿ ಡೀಜನರೇಟ್ ಗ್ಯಾಸ್) ರೂಪವನ್ನು ಹೊಂದುತ್ತವೆ; ಮತ್ತು ಇವು $^{56}Fe$ ಬೀಜಾಣುಗಳ ಸುತ್ತ ಸಮುದಾಯವಾಗಲು ಹವಣಿಸುತ್ತಿರುತ್ತವೆ. ಅನಂತರ ಈ ಸಮುದಾಯ ಕಡಿಮೆಯಾಗಿ ಎಲೆಕ್ಟ್ರಾನುಗಳ ಸಮುದ್ರದಲ್ಲಿ ಬೀಜಾಣುಗಳು ಸ್ವತಂತ್ರವಾಗಿ ಚಲಿಸುತ್ತಿರುತ್ತವೆ. ಫರ್ಮಿ ಅನಿಲ ಮತ್ತು $^{56}Fe$ ಬೀಜಾಣುಗಳನ್ನು ಮತ್ತಷ್ಟು ಸಂಪೀಡಿಸಿದಾಗ ಎಲೆಕ್ಟ್ರಾನುಗಳು ಬಲವಂತವಾಗಿ $^{56}Fe$ ಬೀಜಾಣುಗಳಲ್ಲಿ ನೂಕಲ್ಪಟ್ಟು ಪ್ರೋಟಾನುಗಳ ಜತೆಗೂಡಿ ನ್ಯೂಟ್ರಾನುಗಳಾಗಿ ಪರಿವರ್ತನೆ ಹೊಂದುತ್ತವೆ. ಈ ರೀತಿ ಬೀಜಾಣುಗಳಲ್ಲಿ ನ್ಯೂಟ್ರಾನುಗಳ ಸಂಖ್ಯೆ ಅಧಿಕವಾಗುತ್ತದೆ; ಮತ್ತು ಅತಿ ಹೆಚ್ಚಾಗಿ ನ್ಯೂಟ್ರಾನುಗಳು ಬೀಜಾಣುಗಳಿಂದ ಹೊರಹೊಮ್ಮುತ್ತವೆ; ಜಡವಸ್ತು ಅತಿಸಾಂದ್ರ ನ್ಯೂಟ್ರಾನ್ ಅನಿಲವಾಗಿ ಮಾರ್ಪಾಡಾಗುತ್ತದೆ. ಇಂಥ ಮೃತ ನಕ್ಷತ್ರದಲ್ಲಿ (ಡೆಡ್ ಸ್ಟಾರ್) ಸ್ಥಿತಿ ಸಮೀಕರಣದ ಪ್ರಕಾರದ ಒತ್ತಡಕ್ಕೆ ಸಮವಾಗಿ ಸಂಪೀಡಿತ ಗುರುತ್ವಾಕರ್ಷಣ ಬಲವಿರುವಂತೆ ಜಡವಸ್ತು ಹಂಚಲ್ಪಟ್ಟಿರುತ್ತದೆ. ಒಂದು ಮೃತ ನಕ್ಷತ್ರದ ಎರಡು ಸ್ಥಿರ ವಿನ್ಯಾಸಗಳೆಂದರೆ ಶ್ವೇತ ಕುಬ್ಜ ಮತ್ತು ನ್ಯೂಟ್ರಾನ್ ನಕ್ಷತ್ರಗಳು.

ಎಲೆಕ್ಟ್ರಾನ್ ಸಮುದ್ರದಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತಿರುವ ನ್ಯೂಕ್ಲಿಯಗಳಿಂದ ಶ್ವೇತಕುಬ್ಜಗಳು ಮಾಡಲ್ಪಟ್ಟಿರುತ್ತವೆ ಮತ್ತು ನ್ಯೂಟ್ರಾನ್ ನಕ್ಷತ್ರಗಳು ಪ್ರಮುಖವಾಗಿ ನ್ಯೂಟ್ರಾನ್ ಅನಿಲದ್ದಾಗಿರುತ್ತವೆ. ಆದರೆ ಎಲ್ಲ ನ್ಯೂಕ್ಲಿಯರ್ ಇಂಧನವನ್ನು ವ್ಯಯ ಮಾಡಿದ ನಕ್ಷತ್ರದ ಅಂತಿಮ ಭವಿಷ್ಯ ಆ ನಕ್ಷತ್ರ ಎಷ್ಟು ಸ್ಥೂಲವಾಗಿದೆ ಮತ್ತು ಅದು ತನ್ನ ಅಂತಿಮ ಸ್ಥಿತಿಯನ್ನು ಹೊಂದುವ ಮುನ್ನ ಎಷ್ಟು ದ್ರವ್ಯ ರಾಶಿಯನ್ನು ಹೊರಸೂಸುತ್ತದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. 1.2 ಸೌರ ದ್ರವ್ಯ ರಾಶಿ (ಸೋಲಾರ್ ಮಾಸ್) ಅಥವಾ ಅದಕ್ಕಿಂತ ಕಡಿಮೆಯಷ್ಟು ಬಿಟ್ಟು ಮತ್ತೆಲ್ಲವನ್ನು ಈ ನಕ್ಷತ್ರ ನ್ಯೂಕ್ಲಿಯರ್ ಇಂಧನ ವ್ಯಯವಾಗುವ ಮುನ್ನವೇ ಹೊರಸೂಸಿದ್ದರೆ ಅಂಥ ನಕ್ಷತ್ರ ಕುಸಿಯುವುದಿಲ್ಲ ಮತ್ತು ಅದು ಅಂತಿಮವಾಗಿ ಶ್ವೇತಕುಬ್ಜವಾಗಿ ಪರಿವರ್ತನೆ ಹೊಂದುತ್ತದೆ. ನ್ಯೂಕ್ಲಿಯರ್ ಇಂಧನವೆಲ್ಲವೂ ವ್ಯಯವಾದ ಬಳಿಕವೂ 1.2 ಸೌರ ರಾಶಿಗಿಂತ ಹೆಚ್ಚು ಇದ್ದ ಪಕ್ಷದಲ್ಲಿ ಆ ನಕ್ಷತ್ರ ಶ್ವೇತಕುಬ್ಜವಾಗಿ ಪರಿವರ್ತನೆ ಹೊಂದಲು ಸಾಧ್ಯ ವಿಲ್ಲ. ಏಕೆಂದರೆ ಆಗ ಅದು ಅತಿ ಸ್ಥೂಲವಾಗಿರುತ್ತದೆ. ಬದಲಾಗಿ ಅದು ಪ್ರಥಮದಲ್ಲಿ ಸಾಧುವಾಗಿ ಒಂದು ರೀತಿ ಸಂಕುಚಿತವಾಗಿ ಶ್ವೇತಕುಬ್ಜದ ಸ್ಥಿತಿಯ ಕಡೆ ಗಮಿಸುತ್ತದೆ. ಆದರೆ ಮಧ್ಯ ಭಾಗದ ಸಾಂದ್ರತೆ ಸುಮಾರು $10^9$ ಗ್ರಾಮ್/ ಸಿ. ಸಿ ಗಳಷ್ಟಾದಾಗ ನ್ಯೂಕ್ಲಿಯರ್ ಪರಿವರ್ತನೆಗಳು ಇದನ್ನು ಉತ್ಪಾತದ ಕುಸಿತವನ್ನಾಗಿ ಪರಿರ್ತಿಸುತ್ತವೆ. ಇದರಿಂದಾಗಿ ನಕ್ಷತ್ರದ ಗರ್ಭ ಬೇರ್ಪಟ್ಟು ಅತಿ ವೇಗದಿಂದ (ಸುಮಾರು ಬೆಳಕಿನ ವೇಗದಷ್ಟು) ಕುಸಿಯುತ್ತದೆ; ಮತ್ತು ಇದರ ಸುತ್ತಲಿನ ಭಾಗ ಇದರ ಹಿಂದಯೇ ಚಲಿಸುತ್ತಿರುತ್ತದೆ. ಇದರ ತರುವಾಯ ನಕ್ಷತ್ರದ ವಿಕಾಸ ಬಹುವಾಗಿ ಅದರ ಗರ್ಭದ ದ್ರವ್ಯರಾಶಿ ಒಂದು ನಿರ್ದಿಷ್ಟವಾದ $M_{max}$ ಗಿಂತ ಕಡಿಮೆ ಇದೆಯೋ ಇಲ್ಲವೋ ಎಂಬುದರ ಮೇಲೆ ಅವಲಂಬಿಸಿರುತ್ತದೆ. $M_{max}$ ಗಿಂತ ಕಡಿಮೆ ಇದ್ದ ಪಕ್ಷದಲ್ಲಿ ಮಹಾನೋವ ಸಿಡಿತದಿಂದಾಗಿ ನಕ್ಷತ್ರ ಗರ್ಭ ನ್ಯೂಟ್ರಾನ್ ನಕ್ಷತ್ರವಾಗುತ್ತದೆ.




ಚಿತ್ರದಲ್ಲಿ 1. ಕಾಲ, 2. ವೈಚಿತ್ರ್ಯ, 3. ಸಂಜ್ಞೆಗಳು, 4. ನಕ್ಷತ್ರದ ಮೇಲ್ಮೈ, 5. ಪರಿಭ್ರಮಿಸುತ್ತಿರುವ ವೀಕ್ಷಕ, 6. ಅರೀಯದಿಶೆ; S–ನಕ್ಷತ್ರ

ಆದರೆ ಕುಸಿಯುತ್ತಿರುವ ನಕ್ಷತ್ರಗರ್ಭದ ದ್ರವ್ಯರಾಶಿ $M_{max}$ ಗಿಂತ ಜಾಸ್ತಿಯಾಗಿದ್ದಲ್ಲಿ ಯಾವುದೇ ಆಂತರಿಕ ಒತ್ತಡಕ್ಕಿಂತ ಅಧಿಕವಾಗಿ ಗುರುತ್ವಾಕರ್ಷಣ ಬಲಗಳಿರುತ್ತವೆ. ಇದರಿಂದಾಗಿ ಕುಸಿತವನ್ನು ತಡೆಯಲು ಅಸಾಧ್ಯ ಮತ್ತು ಗಾತ್ರ ಶೂನ್ಯವಾಗಿ ಸಾಂದ್ರತೆ ಅಪರಿಮಿತವಾಗುತ್ತದೆ. ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ನಿರೂಪಿಸುವ ಶೂನ್ಯಗಾತ್ರಕ್ಕೆ ಕುಸಿಯುವ ಚಲನಕ್ರಿಯೆಯನ್ನು ಚಿತ್ರದಲ್ಲಿ ತೋರಿಸಿದೆ. ಚಿತ್ರದಲ್ಲಿ ನೀಟ ದಿಶೆಯಲ್ಲಿ ಕಾಲವನ್ನೂ ಕ್ಷಿತಿಜೀಯ ದಿಶೆಯಲ್ಲಿ ಅರೀಯ ದೂರವನ್ನೂ ಗುರುತಿಸಲಾಗಿದೆ. ಅರೀಯ ಬೆಳಕಿನ ಕಿರಣಗಳಿಂದ $45^0$ ರೇಖೆಗಳಲ್ಲಿ ಚಲಿಸುವ ಹಾಗೆ ಕಾಲ ಮತ್ತು ದೂರದ ಪರಿಣಾಮಗಳನ್ನು ಆಯ್ದುಕೊಳ್ಳಲಾಗಿದೆ. ಆದರೆ ನಕ್ಷತ್ರದ ಗುರುತ್ವಾಕರ್ಷಣದ ಕ್ಷೇತ್ರ ಆಕಾಶಕಾಲದ ಜ್ಯಾಮಿತಿಯನ್ನು ಪಾಲಿಸುವ ಕಾರಣ ಸ್ವೇಚ್ಛೆಯಾಗಿ ಚಲಿಸುತ್ತಿರುವ ಕಣಗಳು ಸರಳರೇಖೆಯಲ್ಲಿ ಚಲಿಸುವುದಿಲ್ಲ. ಕುಸಿಯುತ್ತಿರುವ ನಕ್ಷತ್ರದ ಮೇಲ್ಭಾಗ ತೋರಿಸುವ ವಕ್ರರೇಖೆಯ ದಿಕ್ಕಿನಲ್ಲಿ ಚಲಿಸುತ್ತವೆ; ಮತ್ತು ಇಂಥ ನಕ್ಷತ್ರದ ಸುತ್ತ ನಿರ್ದಿಷ್ಟ ತ್ರಿಜ್ಯದಲ್ಲಿ ಸುತ್ತುತ್ತಿರುವ ವೀಕ್ಷಕ ಅತಿಪರವಲಯದಲ್ಲಿ ಚಲಿಸುತ್ತಾನೆ. ಕುಸಿಯುತ್ತಿರುವ ನಕ್ಷತ್ರ ಶೂನ್ಯಗಾತ್ರದ ವೈಚಿತ್ರ್ಯವನ್ನು (ಕ್ರಕಚ ಮಾಡಿ ತೋರಿಸಿರುವ ಅತಿಪರವಲಯ) ಆಕಾಶಕಾಲದಲ್ಲಿ ಉತ್ಪತ್ತಿ ಮಾಡುತ್ತದೆ. ಇದು ನಕ್ಷತ್ರವನ್ನೇ ಕಬಳಿಸುತ್ತದೆ.

ಈ ವೈಚಿತ್ರ್ಯಕ್ಕೆ ಶ್ವಾರ್ಟ್ಸ್‌ಚೈಲ್ಡ್ ವೈಚಿತ್ರ್ಯ ಎಂದು ಹೆಸರು. ಯಾವುದೇ ವಸ್ತುವಾಗಲಿ ಈ ವೈಚಿತ್ರ್ಯವನ್ನು ಹೊಕ್ಕ ಪಕ್ಷದಲ್ಲಿ ಅದು ಅಲ್ಲೇ ನಾಶ ಹೊಂದುತ್ತದೆ.

ಕುಸಿಯುತ್ತಿರುವ ನಕ್ಷತ್ರದ ಮೇಲ್ಭಾಗದಿಂದ ಕುಸಿತದ ಮುನ್ನಡೆಯ ಬಗ್ಗೆ ಒಬ್ಬ ಮನುಷ್ಯ ಬೆಳಕಿನ ಸಂಜ್ಞೆಗಳನ್ನು (ವಕ್ರವಾದ $45^0$ ರೇಖೆಗಳು) ಪರಿಭ್ರಮಿಸುತ್ತಿರುವ ಒಬ್ಬ ವೀಕ್ಷಕನಿಗೆ ಕಳುಹಿಸುತ್ತಿದ್ದಾನೆಂದು ಇಟ್ಟುಕೊಳ್ಳೋಣ. ನಕ್ಷತ್ರದ ಗಾತ್ರ ಸಣ್ಣದಾಗುತ್ತ ಒಂದು ನಿರ್ದಿಷ್ಟವಾದ ಶ್ವಾರ್ಟ್ಸ್ ಚೈಲ್ಡ್ ತ್ರಿಜ್ಯ Rsch ಗೆ ಎಂದರೆ,

$$Rsch = \frac{GM \text{ ನಕ್ಷತ್ರ}}{c^2} = 1.476 \left( \frac{M \text{ ನಕ್ಷತ್ರ}}{M \text{ ಸೂರ್ಯ}} \right) \text{ಕಿಮೀ.}$$

ಇದಕ್ಕೆ ಸಮಾನವಾಗುತ್ತ ಹೋದಹಾಗೆ ಸಂಜ್ಞೆಗಳು ಮನುಷ್ಯನಿಂದ ಸಮಾಂತರವಾಗಿ ಕಳುಹಿಸಲ್ಪಟ್ಟರೂ ಸುತ್ತುತ್ತಿರುವ ವೀಕ್ಷಕನಿಗೆ ಅವು ನಿಧಾನವಾಗಿ ತಲುಪುತ್ತವೆ. ಮತ್ತು Rsch ತ್ರಿಜ್ಯವನ್ನು ತಲುಪುವ ಮುನ್ನ ಕಳುಹಿಸಿದ ಸಂಜ್ಞೆ ಅಪರಿಮಿತ ಕಾಲಾವಧಿಯ ಮೇಲೆ ತಲುಪುತ್ತದೆ. ನಕ್ಷತ್ರದ ತ್ರಿಜ್ಯ Rsch ಆದಾಗ ಅಥವಾ ಅದಕ್ಕಿಂತ ಕಡಿಮೆಯಾದಾಗ ಕಳುಹಿಸಿದ ಸಂಜ್ಞೆಗಳು ತಲುಪುವುದೇ ಇಲ್ಲ. ಸಂಜ್ಞೆ ಹಾಗೂ ಅದನ್ನು ಕಳುಹಿಸಿದ ಮನುಷ್ಯ ಎರಡೂ ವೈಚಿತ್ರ್ಯದಲ್ಲಿ ನಾಶ ಹೊಂದುತ್ತವೆ. ಆದ್ದರಿಂದ ಸುತ್ತುತ್ತಿರುವ ವೀಕ್ಷಕನಿಗೆ ಕುಸಿಯುತ್ತಿರುವ ನಕ್ಷತ್ರ Rsch ಯನ್ನು ತಲುಪುತ್ತಿರುವ ಹಾಗೆ ನಿಧಾನವಾಗುತ್ತಿರುವಂತೆ ಕಾಣುತ್ತದೆ; ಸಂಜ್ಞೆಗಳು ಕ್ಷೀಣಗೊಳ್ಳುತ್ತವೆ. Rsch ಯನ್ನು ತಲುಪಲು ಅಪರಿಮಿತ ಕಾಲವನ್ನು ತೆಗೆದು ಕೊಳ್ಳುವ ಹಾಗೆ ಕಾಣುತ್ತದೆ; ಮತ್ತು Rsch ಬಗ್ಗೆ ಯಾವ ವೈಶಿಷ್ಟ್ಯವೂ ಕಾಣುವುದಿಲ್ಲ. ಆದರೆ ನಕ್ಷತ್ರದ ಮೇಲಿರುವ ವ್ಯಕ್ತಿ Rschಯನ್ನು ತಲುಪಿದ ಕ್ಷಣ ಮಾತ್ರದಲ್ಲಿ ವೈಚಿತ್ರ್ಯದಲ್ಲಿ ನಾಶ ಹೊಂದುತ್ತಾನೆ. ಕುಸಿತ ಸಂಪೂರ್ಣವಾಗಿ, ಗುರುತ್ವಾಕರ್ಷಣದ ಉಬ್ಬರವಿಳಿತದ ಬಲಗಳು ವ್ಯಕ್ತಿಯನ್ನು ಶಿರೋಪಾದಗಳ ನಡುವೆ ಹಿಗ್ಗಿಸಿ ನುಚ್ಚುನೂರು ಮಾಡುತ್ತವೆ. ಈ ವೈಚಿತ್ರ್ಯದ ಹತ್ತಿರ ಉಬ್ಬರವಿಳಿತದ ಬಲಗಳು ಅಪರಿಮಿತವಾಗಿ ವ್ಯಕ್ತಿಯ ದೇಹವನ್ನು ರಬ್ಬರಿನ ತುಂಡಿನಂತೆ ಹಿಗ್ಗಿಸಿ ಏಕಕಾಲದಲ್ಲಿ ಶೂನ್ಯ ಗಾತ್ರ ಮತ್ತು ಅಪರಿಮಿತ ಸಾಂದ್ರತೆಯ ಸ್ಥಿತಿಗೆ ಕರೆದೊಯ್ಯುತ್ತವೆ. ಅದರೆ ಇಂಥ ಸ್ಥಿತಿಗೆ ಹೋದಾಗ ದ್ರವ್ಯರಾಶಿ ಏನಾಗುತ್ತದೆಂಬುದನ್ನು ಇನ್ನೂ ಬಿಡಿಸದ ಪ್ರಶ್ನೆಯಾಗಿಯೇ ಉಳಿದಿದೆ. ಅತಿ ಸಾಂದ್ರತೆಯ ಸ್ಥಿತಿಗೆ ಹೋದಾಗ ಘನವಸ್ತು ವಿಕಿರಣವಾಗಿ (ರೇಡಿಯೇಷನ್) ಪರಿವರ್ತನೆ ಹೊಂದಬಹುದು ಎಂದು ವೀಲರ್ ಸೂಚಿಸಿದ್ದಾನೆ. ಆದರೆ ಸಾರ್ವತ್ರಿಕ ಸಾಪೇಕ್ಷತಾವಾದದ ಪ್ರಕಾರ ಈ ರೀತಿಯ ವೈಚಿತ್ರ್ಯವನ್ನು ಕಲ್ಪಿಸಿಕೊಳ್ಳಬಹುದಾದರೂ ಸುಮಾರು $10^9$ ಗ್ರಾಂ/ಸಿಸಿ.ಯಷ್ಟು ಸಾಂದ್ರತೆಯಾದಾಗ ಅಭಿಜಾತ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ನಿಯಮಗಳು ಪಾಲನೆಯಲ್ಲಿರುವುವೇ? ಆಗ ಗುರುತ್ವಾಕರ್ಷಣ ಕ್ಷೇತ್ರವನ್ನು ಕ್ವಾಂಟೀಕರಿಸಬೇಕಾಗುತ್ತದೆ. ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದ ಮತ್ತು ಕ್ವಾಂಟಮ್ ಸಿದ್ಧಾಂತಗಳನ್ನು ಒಂದುಗೂಡಿಸಬೇಕಾಗುತ್ತದೆ. ಒಟ್ಟಿನಲ್ಲಿ ಹೊಸ ಮತ್ತು ಸದ್ಯಕ್ಕೆ ಅಜ್ಞಾತವಾಗಿರುವ ಭೌತ ನಿಯಮಗಳನ್ನು ಈ ಪ್ರಶ್ನೆಯಲ್ಲಿ ಉತ್ತರಿಸಬೇಕು.

ಇಲ್ಲಿಯವರೆಗೆ ಶೂನ್ಯಗಾತ್ರಕ್ಕೆ ಕುಸಿಯುತ್ತಿರುವ ನಕ್ಷತ್ರವನ್ನು ಗಮನಿಸಿಲ್ಲ. ಆದರೆ ತಾತ್ತ್ವಿಕ ಖಗೋಳಶಾಸ್ತ್ರಜ್ಞರು ಇಂಥ ಪ್ರಕೃತಿ ಘಟನೆ ಆಗುವ ಸಂಭಾವ್ಯತೆ ಬಹಳವಾಗಿದೆ ಎಂದು ನಂಬಿದ್ದಾರೆ. (ಎಂ.ಎಸ್.ಎಂ)

**ಗುರುತ್ವಾಕರ್ಷಣೆ** : ವಿಶ್ವದಲ್ಲಿರುವ ಸಮಸ್ತ ವಸ್ತುಗಳಲ್ಲೂ, ಕಣಗಳನ್ನೂ ಒಳಗೊಂಡಂತೆ ಇರುವ ಪರಸ್ಪರ ಆಕರ್ಷಣೆ (ಗ್ರ್ಯಾವಿಟೇಷನ್). ಒಂದು ವಸ್ತು ಭೂಮಿಗೆ ಬೀಳುವ ಪ್ರವೃತ್ತಿ, ಎಂದರೆ ಅದರ ತೂಕ, ಆ ವಸ್ತುವಿಗೆ ಸಹಜವಾಗಿರುವ ಗುಣ ಎಂದು ಹದಿನೇಳನೆಯ ಶತಮಾನದವರೆಗೂ ಭಾವಿಸಲಾಗಿತ್ತು. ಅಲ್ಲದೆ ಆಕಾಶಕಾಯಗಳ ಚಲನೆಗಳನ್ನು ನಿರ್ಧರಿಸುವ ನಿಯಮಗಳು ಭೂ ವಸ್ತುಗಳ ಚಲನೆಗಳನ್ನು ನಿರ್ಧರಿಸುವ ನಿಯಮಗಳಿಗಿಂತ ಭಿನ್ನವಾದವೆಂದು ಕೂಡ ನಂಬಲಾಗಿತ್ತು. ಸೌರವ್ಯೂಹವನ್ನು ವೈಜ್ಞಾನಿಕವಾಗಿ ಅರ್ಥ ಮಾಡಿಕೊಳ್ಳಲು ನಡೆಸಿದ ಪ್ರಯತ್ನಗಳು ಕೆಪ್ಲರನ (1571–1630) (**ನೋಡಿ–ಕೆಪ್ಲರ್, ಯೋಹಾನ್**) ಸಿದ್ಧಿಯಲ್ಲಿ ಸ್ಪಷ್ಟ ನಿರೂಪಣೆಯನ್ನು ಪಡೆದುವು. ಆತನ ಸುಪ್ರಸಿದ್ಧ ಮೂರು ನಿಯಮಗಳು ಹೀಗಿವೆ.

1 ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ಒಂದು ದೀರ್ಘವೃತ್ತ ಕಕ್ಷೆಯಲ್ಲಿ ಪರಿಭ್ರಮಿಸುತ್ತದೆ; ಸೂರ್ಯ ಈ ದೀರ್ಘವೃತ್ತದ ಒಂದು ನಾಭಿಯಲ್ಲಿದೆ.

2 ಸೂರ್ಯನನ್ನು ಕುರಿತು ಗ್ರಹ ಸಮಕಾಲದಲ್ಲಿ ಸಮಸಲೆಯನ್ನು ರೇಖಿಸುತ್ತದೆ. ಎಂದರೆ ಗ್ರಹದ ಸಲೆವೇಗ ಸ್ಥಿರವಾಗಿದೆ.

3 ಗ್ರಹದ ಅವಧಿಕಾಲದ ವರ್ಗ ಸೂರ್ಯನಿಂದ ಗ್ರಹದ ಸರಾಸರಿ ದೂರದ ಘನದ ಅನುಪಾತದಲ್ಲಿದೆ.

ಆದರೆ ಈ ನಿಯಮಗಳ ಅನುಸಾರವೇ ಗ್ರಹಗಳು ಏಕೆ ವರ್ತಿಸಬೇಕು? ಉದಾಹರಣೆಗೆ, ಏಕಕೇಂದ್ರೀಯ ವೃತ್ತಕಕ್ಷೆಗಳಲ್ಲಿ, ಸ್ಥಿರ ಕೋನವೇಗವಿರುವಂತೆ, ಗ್ರಹಗಳು ಸೂರ್ಯನ ಸುತ್ತ ಏಕೆ ಪರಿಭ್ರಮಿಸಬಾರದು? ಇಂಥ ಪ್ರಶ್ನೆಗಳಿಗೆ ಸಮರ್ಪಕ ಉತ್ತರವನ್ನು ಒದಗಿಸಿ ಸೌರವ್ಯೂಹದ ಮತ್ತು ವಿಶ್ವದ ವಿದ್ಯಮಾನಗಳಿಗೆ ಭೌತವೈಜ್ಞಾನಿಕ ನಿರೂಪಣೆಯನ್ನು ನೀಡಿದವ ಐಸ್ಯಾಕ್ ನ್ಯೂಟನ್ (1642 – 1727). ಗುರುತ್ವಾಕರ್ಷಣೆಯ ನಿಯಮ ಈತನ ಆವಿಷ್ಕಾರ. ಇದರ ಮೂಲಕ ಕೆಪ್ಲರನ ನಿಯಮಗಳಿಗೆ ನ್ಯೂಟನ್ ಸಮರ್ಥ ವಿವರಣೆ ನೀಡಿದ್ದು ಮಾತ್ರವಲ್ಲ. ಇಡೀ ವಿಶ್ವವನ್ನು ಕುರಿತು ಒಂದು ಸ್ಪಷ್ಟ ಭೌತವೈಜ್ಞಾನಿಕ ಚಿತ್ರವನ್ನು ಸಹ ರೂಪಿಸಿದ.

ಮರದಿಂದ ನೆಲಕ್ಕೆ ಬಿದ್ದ ಸೇಬಿನ ಹಣ್ಣು ನ್ಯೂಟನನ ಚಿಂತನೆಯ ಕಿಡಿಯನ್ನು ಹಾರಿಸಿತು ಎನ್ನುವ ಜನಜನಿತ ದಂತಕಥೆಗೆ ಪ್ರಬಲ ಸಾಕ್ಷ್ಯಾಧಾರಗಳೇನೂ ಇಲ್ಲ. ಅಂತೂ ಗುರುತ್ವಾಕರ್ಷಣೆಯ ಅಸ್ತಿತ್ವವನ್ನು ಕುರಿತು ನ್ಯೂಟನನ ಚಿಂತನೆ ಹೇಗೆ ಹರಿದಿರಬಹುದೆನ್ನುವುದನ್ನು. ಈ ನಿದರ್ಶನ ಸ್ಪಷ್ಟಪಡಿಸುತ್ತದೆ. ನೆಲಕ್ಕೆ ಬೀಳುವ ಹಾಗೆ ವರ್ತಿಸುತ್ತವೆಯೇ ವಿನಾ ಅವುಗಳ ಸಹಜ ಪ್ರವೃತ್ತಿಯಿಂದಲ್ಲ ಎಂದು ನ್ಯೂಟನ್ ಕಂಡುಕೊಂಡ. ಹಾಗಾದರೆ ಇದೇ ಬಲ ಚಂದ್ರನನ್ನೂ , ಅಷ್ಟೇ ಏಕೆ ಅದರಿಂದಾಚೆಗಿನ ಪ್ರತಿಯೊಂದು ಕಾಯವನ್ನೂ ಕೂಡ, ಆಕರ್ಷಿಸುತ್ತಿರಬೇಕೆಂದು ಆತ ತರ್ಕಿಸಿದ. ಭೂಮಿಯನ್ನು ಚಂದ್ರ ಪರಿಭ್ರಮಿಸಲು ತೆಗೆದುಕೊಳ್ಳುವ ಕಾಲ (27 ದಿವಸಗಳು) ಮತ್ತು ಅದರ ಕಕ್ಷೆಯ ತ್ರಿಜ್ಯ (386160 ಕಿಮೀ) ಇವನ್ನು ಪರಿಗಣಿಸಿ ಚಂದ್ರನನ್ನು ಭೂಮಿಯ ಕಡೆಗೆ ಎಳೆಯುವ ವೇಗೋತ್ಕರ್ಷವನ್ನು ಲೆಕ್ಕ ಮಾಡಬಹುದು. ಈ ಮೌಲ್ಯ ಸೆಕೆಂಡಿಗೆ 0.002712 ಮೀ ಇದು ಭೂಮಿಯ ಮೇಲ್ಮೈಯಲ್ಲಿ ಇರುವ ಗುರುತ್ವದ ವೇಗೋತ್ಕರ್ಷಕ್ಕಿಂತ (ಸೆಕೆಂಡು ಸೆಕೆಂಡಿಗೆ 9.75 ಮೀ) 3600 ರಷ್ಟು ಕಡಿಮೆಯಾಗಿದೆ. ಈ ವ್ಯತ್ಯಾಸವನ್ನು, ಕೆಳಗೆ ಬೀಳುವ ವಸ್ತುವಿನ ವೇಗೋತ್ಕರ್ಷ ಭೂಮಿಯ ಕೇಂದ್ರದಿಂದ ವಸ್ತುವಿಗೆ ಇರುವ ದೂರದ ವರ್ಗಕ್ಕೆ ವ್ಯಸ್ತಾನುಪಾತದಲ್ಲಿ ಇರುತ್ತದೆ ಎಂದು ಭಾವಿಸಿಕೊಂಡು, ನ್ಯೂಟನ್ ವಿವರಿಸಿದ. ಭೂಮಿಯ ಮತ್ತು ಚಂದ್ರನ ದ್ರವ್ಯರಾಶಿ ಅಯಾ ಕೇಂದ್ರದಲ್ಲಿ ಕೇಂದ್ರೀಕೃತವಾಗಿದೆ ಎಂದು ಊಹಿಸಿಕೊಂಡು ಜ್ಞಾತ ದೂರಗಳನ್ನು ವ್ಯಸ್ತ ವರ್ಗನಿಯಮದ ಪ್ರಕಾರ ಉಪಯೋಗಿಸಿದಲ್ಲಿ ಬರುವ ನಿಷ್ಪತ್ತಿ

$$\left(\frac{4,000}{240,000}\right)^2 = \left(\frac{1}{60}\right)^2 = \frac{1}{3,600}.$$ ಇಲ್ಲಿ ಭೂಮಿಯ ತ್ರಿಜ್ಯ (6436 ಕಿಮೀ) ಈ ಮೌಲ್ಯ ಚಂದ್ರನ ವೇಗೋತ್ಕರ್ಷಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಈ ಲೆಕ್ಕಾಚಾರವನ್ನು ನ್ಯೂಟನ್ 1666ನೆಯ ಇಸವಿಯಲ್ಲಿ ಮಾಡಿದ್ದನೆಂದು ತಿಳಿದುಬರುತ್ತದೆ. ಆದರೂ ಇದನ್ನು 1686ರ ವರೆಗೂ ಆತ ಪ್ರಕಟಿಸಲಿಲ್ಲ. (1688ರಲ್ಲಿ ನ್ಯೂಟನನ ಪ್ರಿನ್ಸಿಪಿಯ ಎಂಬ ಪುಸ್ತಕ ಪ್ರಕಟವಾಯಿತು). ಏಕೆಂದರೆ ಭೂಮಿಯ ದ್ರವ್ಯರಾಶಿ ಭೂಕೇಂದ್ರದಲ್ಲಿ ಒಟ್ಟುಗೂಡಿದೆಯೆಂಬ ಮುಖ್ಯ ನಂಬಿಕೆಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆಂದು ಅವನಿಗೆ ಮೊದಲು ಗೊತ್ತಿರಲಿಲ್ಲ. ಈ ಸಮಸ್ಯೆಯನ್ನು ನಿಷ್ಕೃಷ್ಟವಾಗಿ ಬಿಡಿಸುವುದಕ್ಕಾಗಿ ನ್ಯೂಟನ್ ಕಲನ ಶಾಸ್ತ್ರವನ್ನು ರಚಿಸಬೇಕಾಯಿತು. ಚಂದ್ರನ ಮೇಲೆ ಭೂಮಿಯಿಂದ ಉಂಟಾದ ಬಲ ಚಂದ್ರನ ದ್ರವ್ಯರಾಶಿಯನ್ನು ಅವಲಂಬಿಸಿತ್ತು. ಆದ್ದರಿಂದ ಯಾವುದೇ ಎರಡು ವಸ್ತುಗಳ ನಡುವಿನ ಗುರುತ್ವಾಕರ್ಷಣ ಬಲ ಅವುಗಳ ದ್ರವ್ಯರಾಶಿಗಳ ಗುಣಲಬ್ಧದ ಅನುಪಾತ ದಲ್ಲಿಯೂ ಅವುಗಳ ಗುರುತ್ವಕೇಂದ್ರಗಳ ನಡುವಿನ ದೂರದ ವರ್ಗದ ವ್ಯಸ್ತಾನುಪಾತದಲ್ಲಿಯೂ ಇದೆಯೆಂಬ ಗುರುತ್ವಾಕರ್ಷಣ ನಿಯಮವನ್ನು ಅವನು ರೂಪಿಸಿದ. ಈ ಬಲ ಆ ವಸ್ತುಗಳ ಗುರುತ್ವಕೇಂದ್ರಗಳನ್ನು ಜೋಡಿಸುವ ಸರಳರೇಖೆಯ ನೇರ ವರ್ತಿಸುತ್ತದೆ ಎಂದು ಸಹ ಹೇಳಿದ. (ಈ ರೇಖೆಗೆ ಚಲರೇಖೆ ಎಂದು ಹೆಸರು.) ಭೂಮಿಯ ಮೇಲಿರುವ ವಿವಿಧ ಸೂಕ್ಷ್ಮದರ್ಶಕೀಯ ವಸ್ತುಗಳ ನಡುವೆ ಉಂಟಾಗುವ ಆಕರ್ಷಣ ಬಲ ಅತಿ ಕಡಿಮೆಯಾದ್ದರಿಂದ ನ್ಯೂಟನನ ಕಾಲದಲ್ಲಿ ಇದನ್ನು ಕಂಡುಹಿಡಿಯಲಾಗಲಿಲ್ಲ. ಆದ್ದರಿಂದ ತನ್ನ ಪರಿಕಲ್ಪನೆಯನ್ನು ಸ್ಥಿರಪಡಿಸಲು ನ್ಯೂಟನ್ ಗ್ರಹಚಲನೆಯ ಮೇಲೆ ಗಮನಹರಿಸಿದ. ಕೆಪ್ಲರನ ನಿಯಮಗಳನ್ನು ನ್ಯೂಟನನ ಗುರುತ್ವಕಾರ್ಷಣ ನಿಯಮ ಮತ್ತು ನ್ಯೂಟನನ ಚಲನೆಯ ನಿಯಮಗಳಿಂದ ಸಾಧಿಸಲು ಸಾಧ್ಯವಾದದ್ದು ನ್ಯೂಟನನ ಪರಿಕಲ್ಪನೆಗಳಿಗೆ ಮಹಾ ಸಿದ್ಧಿಯಾದಂತಾಯಿತು. ಹೀಗೆ ಭೂಮಿಯ ಮೇಲಿರುವ ವಸ್ತುಗಳ ಚಲನೆಗಳನ್ನೂ ಸೌರವ್ಯೂಹದಲ್ಲಿರುವ ಗ್ರಹಗಳ ಚಲನೆಗಳನ್ನೂ ಒಂದೇ ಭಾವರೂಪವುಳ್ಳ ನಿಯಮದಿಂದ ವಿಶದಪಡಿಸಲು ಸಾಧ್ಯವಾಯಿತು.




**ಚಿತ್ರ 1. M ಮತ್ತು m ನಡುವಿನ ಗುರುತ್ವಾಕರ್ಷಣ ಬಲ $G\frac{Mm}{d^2}$. ಇಲ್ಲಿ AB-d**

ನ್ಯೂಟನನ ಸಾರ್ವತ್ರಿಕ ಗುರುತ್ವಾಕರ್ಷಣ ನಿಯಮದ ಗಣಿತೀಯ ನಿರೂಪಣೆ ಹೀಗಿದೆ: ಎರಡು ವಸ್ತುಗಳ ದ್ರವ್ಯರಾಶಿಗಳು M, m ಆಗಿದ್ದು ಚಲರೇಖೆಯ (AB) ಉದ್ದ d ಆಗಿದ್ದರೆ ಆಗ ಆ ವಸ್ತುಗಳ ನಡುವಿನ ಗುರುತ್ವಾಕರ್ಷಣ ಬಲ $G\frac{Mm}{d^2}$; ಇದು ಚಲರೇಖೆಯ ನೇರ ವರ್ತಿಸುತ್ತದೆ. G ಗೆ ಗುರುತ್ವಾಕರ್ಷಣ ಸ್ಥಿರಾಂಕ ಎಂದು ಹೆಸರು. ಅದಕ್ಕೆ $[M^{-1}\ L^3\ T^{-2}]$ ಆಯಾಮಗಳಿವೆ (**ನೋಡಿ– ಏಕಕಗಳು ಮತ್ತು ಆಯಾಮಗಳು**). G ಸ್ಥಿರಾಂಕವನ್ನು ಪ್ರಯೋಗದಿಂದ ಕಂಡುಹಿಡಿಯಬೇಕು. ಅಲ್ಲದೆ ಎರಡು ವಸ್ತುಗಳ ಪರಸ್ಪರ ಗುರುತ್ವಾಕರ್ಷಣ ಬಲ ಅವುಗಳ ಮಧ್ಯೆ ಬರುವ ವಾಯುಮಂಡಲ, ಉಷ್ಣತೆ ಮುಂತಾದ ಭೌತ ಪ್ರಾದೇಶಿಕ ಕಾರಕಗಳಿಂದ ವ್ಯತ್ಯಾಸಗೊಳ್ಳುವುದಿಲ್ಲ. ಗುರುತ್ವಾಕರ್ಷಣ ನಿಯಮವನ್ನು ಸೌರವ್ಯೂಹಕ್ಕೆ ಅನ್ವಯಿಸಿದಲ್ಲಿ ಕೆಪ್ಲರನ ಎಲ್ಲ ನಿಯಮಗಳಿಗೂ ತತ್ತ್ವಾಧಾರ ಒದಗಿದಂತಾಗುತ್ತದೆ. ಗ್ರಹಗಳ ಮತ್ತು ಅವುಗಳ ಚಂದ್ರರ (ಸ್ಯಾಟೆಲೈಟ್ಸ್) ಜಟಿಲ ಚಲನೆಗಳನ್ನು ನಿಖರವಾಗಿ ಕಂಡುಹಿಡಿಯಲು ಗುರುತ್ವಾಕರ್ಷಣ ನಿಯಮದಿಂದ ಸಾಧ್ಯವಾಯಿತು. ಅಲ್ಲದೆ ಸಮುದ್ರದ ಚಲನೆಯಿಂದ ಉಂಟಾಗುವ ಉಬ್ಬರವಿಳಿತಗಳಿಗೆ ಕಾರಣವನ್ನು ಈ ನಿಯಮ ತೋರಿಸಿಕೊಟ್ಟಿತು. ಸೂರ್ಯ ಮತ್ತು ಚಂದ್ರರು ಭೂಮಿಯ ನೀರಿನಮೇಲೆ ಉಂಟುಮಾಡುವ ಆಕರ್ಷಣ ಬಲವೇ ಈ ಉಬ್ಬರವಿಳಿತಕ್ಕೆ ಕಾರಣ ಎಂದು ವಿವರಣೆ ನೀಡಲಾಯಿತು.

ಗೆಲಿಲಿಯೋನ (1564–1642) ಕಾಲದವರೆಗೆ ತೂಕವಾದ ವಸ್ತುಗಳು ಹಗುರವಾದ ವಸ್ತುಗಳಿಗಿಂತ ಹೆಚ್ಚು ಬೇಗ ನೆಲಕ್ಕೆ ಬೀಳುತ್ತವೆಂಬ ನಂಬಿಕೆಯಿತ್ತು. ಎಲ್ಲ ವಸ್ತುಗಳೂ (ಬಾಹ್ಯ ನಿರೋಧ ಬಲವನ್ನು ಎದುರಿಸಿದಾಗ, ಅಂದರೆ ನಿರ್ವಾತದಲ್ಲಿ) ಸಮವೇಗದಲ್ಲಿ ಬೀಳುತ್ತವೆಂದು ಗೆಲಿಲಿಯೋ ತೋರಿಸಿದ. ಈ ವಾಸ್ತವಾಂಶದ ಮಹತ್ತ್ವವನ್ನು ಆ ಕಾಲದಲ್ಲಿ ಯಾರೂ ಲಕ್ಷಿಸಲಿಲ್ಲ. ಆದರೆ ಈ ಅಂಶ ಒಂದು ವಸ್ತುವಿನ ತೂಕ ದ್ರವ್ಯರಾಶಿಯ ಅನುಪಾತದಲ್ಲಿರುವುದೆಂದು ಸಿದ್ಧಪಡಿಸುತ್ತದೆ. ಗುರುತ್ವಾಕರ್ಷಣ ನಿಯಮ ಗೆಲಿಲಿಯೋನ ವೀಕ್ಷಣೆಗಳಿಗೆ ಆಧಾರ ನೀಡುವುದು. ಏಕೆಂದರೆ m ದ್ರವ್ಯರಾಶಿ ಇರುವ ವಸ್ತುವಿನ ಮೇಲೆ ವರ್ತಿಸುವ ಬಲ F ಅದರ ತೂಕ W; ಮತ್ತು ಇದು ಭೂಮಿಯ ಪೂರ್ತಿ ದ್ರವ್ಯರಾಶಿ M ನಿಂದ (ಅದರ ಕೇಂದ್ರದಲ್ಲಿ ಒಟ್ಟುಗೂಡಿದಂತೆ) ಆಗುವ ಆಕರ್ಷಣ ಬಲ. ಆದ್ದರಿಂದ $F = W = GMm / R^2$. ಇಲ್ಲಿ R ಭೂಮಿಯ ತ್ರಿಜ್ಯ. ನ್ಯೂಟನನ ಎರಡನೆಯ ಚಲನ ನಿಯಮದಂತೆ $W = mg$ ಆಗಿರುತ್ತದೆ. g ಎಂಬುದು ವಸ್ತುವನ್ನು ಅನಿರ್ಬಂಧಿತವಾಗಿ ಬೀಳಲು ಬಿಟ್ಟಾಗ ಭೂಮಿಯ ಆಕರ್ಷಣ ಬಲದಿಂದ ಉಂಟಾಗುವ ವೇಗೋತ್ಕರ್ಷ g ಗೆ ಗುರುತ್ವ ವೇಗೋತ್ಕರ್ಷ ಎಂದು ಹೆಸರು. ಆದ್ದರಿಂದ $g = GM / R^2$. ಈ ಸಮೀಕರಣ ದಿಂದ ಭೂಮಿಯ ಅಥವಾ ಇತರ ಗ್ರಹಗಳ ದ್ರವ್ಯರಾಶಿಯನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಭೂಮಿಯ ಸರಾಸರಿ ಸಾಂದ್ರತೆ (Δ) ಸುಮಾರು 5.5 ಎಂದು ಭಾವಿಸಿಕೊಂಡು G ಸ್ಥಿರಾಂಕದ ಮೌಲ್ಯವನ್ನು ನ್ಯೂಟನ್ ಅಂದಾಜು ಮಾಡಿದ. $M = (4/3)\ \pi R^3 \Delta$ ಎಂಬ ಸಮೀಕರಣವನ್ನು ಉಪಯೋಗಿಸಿದರೆ

$G = \frac{3g}{4\pi R\Delta}$ ...(1) ಆಗುತ್ತದೆ. cgs ಏಕಮಾನಗಳಲ್ಲಿ G ಯ ಬೆಲೆ $6.6 \times 10^{-8}$.

G ಯ ಮೌಲ್ಯ ನಿರ್ಧರಣೆ : ಗುರುತ್ವಾಕರ್ಷಣ ಸ್ಥಿರಾಂಕ Gಯ ಬೆಲೆ ಕಂಡುಹಿಡಿಯಲು ಹಲವಾರು ನೇರವಾದ ಮತ್ತು ಪರೋಕ್ಷವಾದ ವಿಧಾನಗಳಿವೆ. ಪರ್ವತದ ಆಕರ್ಷಣದಿಂದ ಲೋಲಕ ಊರ್ಧ್ವದೊಡನೆ ಉಂಟು ಮಾಡುವ ವಿಚಲನೆಯನ್ನು ಅಳತೆ ಮಾಡಿ 1774ರಲ್ಲಿ ಎನ್.ಮ್ಯಾಸ್ಕಲೈನ್ Gಯ ಮೌಲ್ಯವನ್ನು ಕಂಡುಹಿಡಿದ. ಈ ವಿಧಾನ ಪ್ರಯೋಗಶಾಲೆಯ ವಿಧಾನಗಳಿಗಿಂತ ಕೆಳಮಟ್ಟದ್ದು. ಪ್ರಯೋಗಶಾಲೆಯಲ್ಲಿ Gಯನ್ನು ಕಂಡುಹಿಡಿಯಲು ಮೊದಲ ಪ್ರಯೋಗ ನಡೆದದ್ದು 1798ರಲ್ಲಿ, ಕ್ಯಾವೆಂಡಿಷ್‌ನಿಂದ (1731–1810). ದೊಡ್ಡ ಸೀಸದ ಗೋಳಕ್ಕೂ ಚಿಕ್ಕ ಸೀಸದ ಗೋಳಕ್ಕೂ ಆಗುವ ಆಕರ್ಷಣೆಯನ್ನು ನಿರ್ಧರಿಸಿದ್ದುದು ಈ ಪ್ರಯೋಗದ ಮುಖ್ಯ ವೈಶಿಷ್ಟ್ಯ. ಈ ಆಕರ್ಷಣ ಬಲವನ್ನು ತಿರುಚು ಮಾಪಕದಿಂದ ಅಳತೆ ಮಾಡಲಾಯಿತು (**ನೋಡಿ–ಕ್ಯಾವೆಂಡಿಷ್, ಹೆನ್ರಿ**).




**ಚಿತ್ರ 2. ಕ್ಯಾವೆಂಡಿಷನ ಉಪಕರಣಗಳ ಸೂತ್ರ, Sಅಳತೆ ಪಟ್ಟಿ, Lಬೆಳಕಿನ ಆಕರ, P–ಸಮತೋಲ ದರ್ಪಣ, M, M–ದೊಡ್ಡ ಗುಂಡುಗಳು, m-mಚಿಕ್ಕ ಗುಂಡುಗಳು**

ಕ್ಯಾವೆಂಡಿಷನ ಉಪಕರಣಗಳ ಸೂತ್ರವನ್ನು ಚಿತ್ರ(2)ರಲ್ಲಿ ತೋರಿಸಲಾಗಿದೆ. ತಲಾ 2" ವ್ಯಾಸ ಮತ್ತು m ದ್ರವ್ಯರಾಶಿ ಇರುವ ಎರಡು ಸೀಸದ ಗೋಳಗಳನ್ನು 21 ಉದ್ದವಿರುವ ಹಗುರವಾದ ಸಲಾಕೆಯ ಕೊನೆಗಳಿಗೆ ಲಗತ್ತಿಸಿದೆ. ಈ ಸಲಾಕೆಯನ್ನು ಅದರ ಅಕ್ಷ ಸಮಮಟ್ಟದಲ್ಲಿರುವಂತೆ ಒಂದು ತೆಳುವಾದ ತಂತಿಯಿಂದ ತೂಗಹಾಕಲಾಗಿದೆ. ತಂತಿಗೆ ಒಂದು ಚಿಕ್ಕ ಸಮತಲದರ್ಪಣವನ್ನು ಸೇರಿಸಿದೆ. ದರ್ಪಣದಿಂದ ಪ್ರತಿಫಲನಗೊಂಡ ಬೆಳಕನ್ನು ವೀಕ್ಷಿಸಿದರೆ ತಂತಿ ಮೇಲೆ ಉಂಟಾದ ತಿರುಚನ್ನು ನಿರ್ಧರಿಸಬಹುದು.

ಗಾಳಿಯ ಚಲನವಲನಗಳಿಗೆ ಸಿಕ್ಕದಂತೆ ಮಾಡಲು ತಿರುಚುಮಾಪಕವನ್ನು ಒಂದು ಆವರಣದಲ್ಲಿ ಇಟ್ಟಿದೆ. ಆವರಣದ ಹೊರಗಡೆ ತಲಾ 12" ವ್ಯಾಸ ಮತ್ತು M ದ್ರವ್ಯರಾಶಿ ಇರುವ ಎರಡು ಸೀಸದ ಗೋಳಗಳನ್ನು ಚಿಕ್ಕ ಸೀಸದ ಗೋಳಗಳ ಹತ್ತಿರ d ದೂರದಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ಇಟ್ಟಾಗ ಚಿಕ್ಕ ಸೀಸದ ಗೋಳಗಳು $\frac{GMm}{d^2}$ ಬಲದಿಂದ ಆಕರ್ಷಣಗೊಳ್ಳುತ್ತವೆ. ಇದರಿಂದಾಗಿ ತಿರುಚುಮಾಪಕದ ಮೇಲೆ θ ಕೋನದಷ್ಟು ತಿರುಚು ಉಂಟಾಗುತ್ತದೆ. (ಅಳತೆಪಟ್ಟಿಯ ಮೇಲಿರುವ ಬೆಳಕಿನ ಪ್ರತಿಫಲಿತ ಬಿಂಬ 2θ ಕೋನದಷ್ಟು ಪಲ್ಲಟವಾಗುತ್ತದೆ). ತಿರುಚುಮಾಪಕದ ಮೇಲೆ ಉಂಟಾದ ಬಲಯುಗ್ಮ ತಂತಿಯನ್ನು ಪೂರ್ವಸ್ಥಿತಿಗೆ ತರುವ cθ ಬಲವನ್ನು ಸರಿದೂಗುತ್ತದೆ. ಇಲ್ಲಿ c ಎನ್ನುವುದು ಒಂದು ರೇಡಿಯನ್ ಕೋನದ ತಿರುಚುವಿಕೆಗೆ ಬೇಕಾದ ಬಲಯುಗ್ಮ. ಆದ್ದರಿಂದ ನಮಗೆ

$$\frac{GMm}{d^2} 2\ell = c\theta \qquad ...(2)$$

ಎಂಬ ಸಮೀಕರಣ ದೊರೆಯುತ್ತದೆ. ತಿರುಚುಮಾಪಕ ಆಂದೋಲನದ ಆವರ್ತಕಾಲ Tಯನ್ನು (ದೊಡ್ಡ ಸೀಸದ ಗೋಳಗಳು ಇಲ್ಲದಿದ್ದಾಗ) ಕಂಡುಹಿಡಿದರೆ cಯನ್ನು $T = 2\pi\sqrt{\frac{I}{c}}$

ಎಂಬ ಸಮೀಕರಣವನ್ನು ಉಪಯೋಗಿಸಿ ಕಂಡುಹಿಡಿಯಬಹುದು. ಇಲ್ಲಿ I ಎನ್ನುವುದು ತಿರುಚುಮಾಪಕದ ಜಡತ್ವದ ಭ್ರಮಣಾಂಕ (ಮೊಮೆಂಟ್ ಆಫ್ ಇನರ್ಷಿಯ). Iಯನ್ನು ಬೇರೆ ಒಂದು ಪ್ರಯೋಗದಿಂದ ಕಂಡುಹಿಡಿಯಬಹುದು. ಇದಾದ ಬಳಿಕ ದೊಡ್ಡ ಗೋಳಗಳನ್ನು ಚಿಕ್ಕ ಗೋಳಗಳ ಮತ್ತೊಂದು ಪಕ್ಕಕ್ಕೆ ಸರಿಸಿದರೆ ತಂತಿಯ ಮೇಲೆ ವಿಮುಖವಾದ ತಿರುಚುಕೋನ ಉಂಟಾಗುತ್ತದೆ. ಹೀಗೆ ಬಂದ ಎರಡು ತಿರುಚುಕೋನಗಳ ಸರಾಸರಿಯನ್ನೂ ತೆಗೆದುಕೊಂಡು ಸಮೀಕರಣ (2)ರಲ್ಲಿ ಆದೇಶಿಸಿ (ಅಲ್ಲಿನ ಎಲ್ಲ ರಾಶಿಗಳೂ ಗೊತ್ತಿರುವುದರಿಂದ) Gಯ ಮೌಲ್ಯವನ್ನು ಕಂಡುಹಿಡಿಯಬಹುದು. ಕ್ಯಾವೆಂಡಿಷ್ ಮಾಡಿದ 29 ಅಳತೆಗಳಿಂದ $G = (6.754 \pm 0.041) \times 10^{-8}$ cgs ಏಕಮಾನ ಎಂಬ ಫಲಿತಾಂಶ ಬಂತು. [ಇದನ್ನು ತಿಳಿದ ಬಳಿಕ Δದ ಗಣನೆ ಸುಲಭ. ಸಮೀಕರಣ (1)ರಿಂದ $\Delta = 5.448 \pm 0.003$ ಗ್ರಾಮ್/ಘನ ಸೆಂ.ಮೀ. ಬರುತ್ತದೆ.] Gಯ ಈ ಬೆಲೆಯನ್ನು ಸುಮಾರು ಒಂದು ಶತಮಾನದವರೆಗೂ ಉತ್ತಮಗೊಳಿಸಲು ಸಾಧ್ಯವಾಗಲಿಲ್ಲ. ಕ್ಯಾವೆಂಡಿಷನ ವಿಧಾನದಲ್ಲಿ ಈಚೆಗೆ ಬಹಳ ಬದಲಾವಣೆಗಳಾಗಿವೆ. ಇವುಗಳಲ್ಲಿ ಮುಖ್ಯವಾದವು 1895ರಲ್ಲಿ ಬಾಯ್ಸ್ ಮತ್ತು 1893ರಲ್ಲಿ ಪಾಯಿಂಟಿಂಗ್ ಮಾಡಿದ ಪ್ರಯೋಗಗಳು. 1930 ಮತ್ತು 1942ರಲ್ಲಿ ಹೈಲ್ ಮಾಡಿದ ಪ್ರಯೋಗಗಳಿಂದ ಬಂದಿರುವ ಅತ್ಯುತ್ತಮ ಮೌಲ್ಯ $G = (6.664 \pm 0.007) \times 10^{-8}$ cgs ಏಕಮಾನ. Gಯ ಮೌಲ್ಯವನ್ನು ಇನ್ನಷ್ಟು ನಿಖರವಾಗಿ ಕಂಡುಹಿಡಿಯಲು ಈಗಲೂ ಪ್ರಯತ್ನಗಳು ನಡೆಯುತ್ತಿವೆ.

ಗುರುತ್ವ ವೇಗೋತ್ಕರ್ಷ $g = \frac{GM}{R^2}$ ಆಗಿರುತ್ತದೆ. ಇಲ್ಲಿ M ಭೂಮಿಯ ದ್ರವ್ಯರಾಶಿ ಮತ್ತು R ಭೂಮಿಯ ತ್ರಿಜ್ಯ. ಭೂಮಿಯ ಮೇಲ್ಮೈಯಲ್ಲಿ ಇರುವ ವಸ್ತುವಿನ ಮೇಲಿನ ಪ್ರಯುಕ್ತ ಬಲವೆಂದರೆ ಗುರುತ್ವಾಕರ್ಷಣ ಬಲವನ್ನೂ ಭೂಮಿಯ ಆವರ್ತನದಿಂದ ಉಂಟಾಗುವ ಬಲವನ್ನೂ ಕೂಡಿ ಆದ ಸಂಘಟಿತ ಬಲ. ಇವೆರಡನ್ನೂ ಪ್ರಯೋಗಗಳಲ್ಲಿ ಬೇರ್ಪಡಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ ಯಾವುದಾದರೂ ಜಾಗದಲ್ಲಿ ಇರುವ ಗುರುತ್ವ ವೇಗೋತ್ಕರ್ಷಣದ ಮೌಲ್ಯ ದ್ರವ್ಯದ ಸ್ಥಳೀಯ ವಿತರಣೆಯನ್ನು ಭೂಮಿಯ ಪೂರ್ಣ ನಿರ್ಮಾಣವನ್ನೂ ಅವಲಂಬಿಸಿರುತ್ತದೆ. ಆದ್ದರಿಂದ gಯ ನಿರಪೇಕ್ಷ ಮೌಲ್ಯದಲ್ಲಿ ನಮಗೆ ಅಷ್ಟೇನೂ ಆಸಕ್ತಿ ಇರುವುದಿಲ್ಲ. ಭೂಮಿಯ ಮೇಲ್ಮೈಯಲ್ಲಾಗುವ gಯ ಬದಲಾವಣೆಗಳನ್ನಾದರೋ ಸುಲಭವಾಗಿ ಮತ್ತು ಶೀಘ್ರವಾಗಿ ಪರಿಶೀಲಿಸಬಹುದು. ಗುರುತ್ವವೇಗೋತ್ಕರ್ಷದ ಮೌಲ್ಯದ ಅಳತೆಗಳನ್ನು

ಭೂಭೌತವಿಜ್ಞಾನದಲ್ಲಿ ಭೂಮಿಯ ವಿವರವಾದ ಆಕಾರವನ್ನು ಪರಿಶೀಲಿಸಲು ಉಪಯೋಗಿಸುವರು. ಭೂಮಿಯ ಮೇಲಿನ ಗುರುತ್ವ ವೇಗೋತ್ಕರ್ಷದ ಮೌಲ್ಯಕ್ಕೂ ದ್ರವ್ಯರಾಶಿಯ ವಿತರಣೆಗೂ ಭೂಮಿಯ ಅಡಿಯಲ್ಲಿ ಆಗುವ ಸಾಂದ್ರತೆಯ ಬದಲಾವಣೆಗಳಿಗೂ ಸಂಬಂಧ ಕಲ್ಪಿಸಲು ಭೂಭೌತವಿಜ್ಞಾನದಲ್ಲಿ ಪ್ರಯತ್ನಗಳು ನಡೆಯುತ್ತಿವೆ.

ಗುರುತ್ವಾಕರ್ಷಣೀಯ ವಿಭವ : ಯಾವುದೇ ವ್ಯವಸ್ಥೆಯಲ್ಲಿನ ದ್ರವ್ಯದ ವಿತರಣೆ ಗೊತ್ತಿದ್ದರೆ ಈ ವಿತರಣೆಯಿಂದ ಬೇರೊಂದು ವಸ್ತುವಿನ ಮೇಲೆ ಉಂಟಾಗುವ ಗುರುತ್ವಾಕರ್ಷಣ ಬಲ Fನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಕೆಲವು ವೇಳೆ ಈ ರೀತಿ ಲೆಕ್ಕಾಚಾರ ಮಾಡಲು ಕಷ್ಟವಾಗಬಹುದು. ಆದರೆ ಗುರುತ್ವಾಕರ್ಷಣೀಯ ವಿಭವ (ಗ್ರ್ಯಾವಿಟೇಷನಲ್ ಪೊಟೆನ್ಷಿಯಲ್) Vಯನ್ನು $F = \frac{dv}{dx}$ ಎಂಬ ಸಮೀಕರಣದೊಂದಿಗೆ ನಿರ್ಣಯಿಸಿದರೆ ಈ ಲೆಕ್ಕಾಚಾರವನ್ನು ಸುಲಭರೂಪಕ್ಕೆ ತರಬಹುದು. ಏಕಮಾನ ದ್ರವ್ಯರಾಶಿ ಇರುವ ವಸ್ತುವನ್ನು ಒಂದು ಬಿಂದುವಿನಿಂದ ಮತ್ತೊಂದು ಬಿಂದುವಿಗೆ (ಇವೆರಡರ ದೂರ $\Delta x$) ಗುರುತ್ವಾಕರ್ಷಣ ಬಲಕ್ಕೆ ಎದುರಾಗಿ ಚಲಿಸಲು ಮಾಡಬೇಕಾದ ಕಾರ್ಯ ಎರಡು ಬಿಂದುಗಳಿಗಿರುವ ವಿಭವಾಂತರ $\Delta v$ ಆಗಿರುತ್ತದೆ. ಎಂದರೆ $\Delta v = F.\Delta x$. ದ್ರವ್ಯರಾಶಿ M ಇರುವ ವಸ್ತುವಿನಿಂದ r ದೂರದ ಬಿಂದುವಿನಲ್ಲಿ ಇರುವ ಗುರುತ್ವಾಕರ್ಷಣೀಯ ವಿಭವ $V = -\frac{GM}{r}$ ಆಗಿರುವುದು. ಅಲ್ಲದೆ ಈ ವಿಭವ ಆ ಬಿಂದುವಿಗಿರುವ ಗುರುತ್ವಾಕರ್ಷಣೀಯ ವಿಭವಶಕ್ತಿ ಕೂಡ ಆಗಿರುತ್ತದೆ. ಎಂದರೆ ಈ ಮೌಲ್ಯ ಒಂದು ಏಕಮಾನವುಳ್ಳ ದ್ರವ್ಯರಾಶಿಯನ್ನು ಅನಂತದೂರದಿಂದ ಆ ಬಿಂದುವಿಗೆ ತರಲು ಮಾಡಬೇಕಾದ ಕಾರ್ಯ. ಆದ್ದರಿಂದ R ತ್ರಿಜ್ಯವುಳ್ಳ ಭೂಮಿಯ ಮೇಲ್ಮೈಯಲ್ಲಿ ಇರುವ m ದ್ರವ್ಯರಾಶಿಯ ಕಣದ ಗುರುತ್ವಾಕರ್ಷಣೀಯ ವಿಭವ ಶಕ್ತಿ $-\frac{GMm}{R}$. ನಾವು ಎಸೆಯುವ ವಸ್ತುವಿಗೆ ಅಥವಾ ಒಂದು ಕ್ಷಿಪಣಿಗೆ ಭೂಮಿಯ ಮೇಲ್ಮೈಯಲ್ಲಿರುವ ಗುರುತ್ವಾಕರ್ಷಣೀಯ ವಿಭವ ಶಕ್ತಿಗಿಂತ ಹೆಚ್ಚು ಶಕ್ತಿಯನ್ನು ಕೊಟ್ಟರೆ (ಮತ್ತು ಭೂಮಿಯ ವಾಯುಮಂಡಲದಲ್ಲಾಗುವ ಘರ್ಷಣೆಯನ್ನು ಉಪೇಕ್ಷಿಸಿದರೆ) ಅದು ಭೂಮಿಯಿಂದ ತಪ್ಪಿಸಿಕೊಂಡು ಹೋಗಿ ಮತ್ತೆ ಎಂದಿಗೂ ಹಿಂದಿರುಗುವುದಿಲ್ಲ. ಈ ಅವಧಿಕ ವೇಗಕ್ಕೆ ($v_0$) ವಿಮೋಚನ ವೇಗ ಎಂದು ಹೆಸರು. ಇಲ್ಲಿ $\frac{1}{2}mv_o^2 = \frac{GMm}{R}$ ಆದ್ದರಿಂದ $v_o = \sqrt{\frac{2GM}{R}} = 7$ ಮೈ. / ಸೆಕೆಂಡ್ = 11.2 ಕಿ.ಮೀ/ಸೆಕೆಂಡ್. ವಸ್ತುಗಳಿಗೆ ಈ ವೇಗಕ್ಕಿಂತ ಕಡಿಮೆ ವೇಗವನ್ನು ಕೊಟ್ಟರೆ ಅವು ಮತ್ತೆ ಭೂಮಿಗೆ ವಾಪಸು ಬರುತ್ತವೆ.

ಜಡತ್ವದ್ರವ್ಯರಾಶಿ ಮತ್ತು ಗುರುತ್ವದ್ರವ್ಯರಾಶಿ : $F = Gm_1m_2/d^2$ ಸಮೀಕರಣದಿಂದ ಕಂಡುಬರುವಂತೆ ಒಂದು ವಸ್ತುವಿನ ಮೇಲೆ ಉಂಟಾಗುವ ಗುರತ್ವಾಕರ್ಷಣ ಬಲ ಅದರ ದ್ರವ್ಯರಾಶಿ m ಗೆ ಅನುಪಾತೀಯವಾಗಿರುವುದು. ಇದನ್ನು ವಸ್ತುವಿನ ಗುರುತ್ವದ್ರವ್ಯರಾಶಿ ಎಂದು ಕರೆಯೋಣ. W = mg ಸಮೀಕರಣದಿಂದ ಕಂಡುಬರುವಂತೆ ಯಾವುದಾದರೊಂದು ಜಾಗದಲ್ಲಿರುವ ವಸ್ತುವಿನ ತೂಕ ಆ ವಸ್ತುವಿನ ಗುರುತ್ವದ್ರವ್ಯರಾಶಿ mಗೆ ಅನುಪಾತೀಯುವಾಗಿರುತ್ತದೆ. ವಸ್ತುವಿನ ಈ ಗುರುತ್ವದ್ರವ್ಯರಾಶಿಯನ್ನು ಆ ವಸ್ತುವನ್ನು ತೂಕ ಮಾಡಿ ಕಂಡುಹಿಡಿಯಬಹುದು. ನ್ಯೂಟನನ ಎರಡನೆಯ ಚಲನ ನಿಯಮ F = m'a ಯಲ್ಲಿ ಬರುವ ರಾಶಿ m' ಎಂಬುದನ್ನು ಜಡತ್ವದ್ರವ್ಯರಾಶಿ ಎಂದು ಕರೆಯೋಣ. ಸಮಮಟ್ಟದ ಮತ್ತು ಘರ್ಷಣೆಯಿಲ್ಲದ ಮೇಲ್ಮೈಯಲ್ಲಿ ಸ್ಥಿರವಾಗಿರುವ ವಸ್ತುವನ್ನು ಕದಲಿಸಲು ಬಲ ಬೇಕಾಗುತ್ತದೆ. ಏಕೆಂದರೆ ವಸ್ತುವಿಗೆ ಸ್ಥಿರವಾಗಿಯೇ ಇರುವ ಪ್ರವೃತ್ತಿ ಇದ್ದು ಆ ವಸ್ತು ನಮಗೆ ಜಡವಾಗಿರುವಂತೆ ಕಂಡುಬರುತ್ತದೆ. ಈ ಪರಿಸ್ಥಿತಿಯಲ್ಲಿ ಗುರುತ್ವಾಕರ್ಷಣ ಬಲ ಪ್ರವೇಶಿಸುವುದಿಲ್ಲ. ಪ್ರಯೋಗಗಳಿಂದ ಕಂಡುಬರುವಂತೆ ಜಡತ್ವ ದ್ರವ್ಯರಾಶಿ ಇರುವ ಎಲ್ಲ ವಸ್ತುಗಳೂ ಭೂಮಿಯ ಗುರುತ್ವಾಕರ್ಷಣ ಕ್ಷೇತ್ರದಲ್ಲಿ ಒಂದೇ ವೇಗೋತ್ಕರ್ಷದಿಂದ ಬೀಳುತ್ತವೆ. ಭೂಮಿಯ ಗುರುತ್ವಾಕರ್ಷಣ ಬಲ ವಸ್ತುವಿನ ತೂಕವಾಗಿರುವುದರಿಂದ W = m'g ಎಂದೂ ಹೇಳಬಹುದು. ಆದ್ದರಿಂದ ವಸ್ತುವಿನ ತೂಕ ಅದರ ಜಡತ್ವದ್ರವ್ಯರಾಶಿಗೆ ಕೂಡ ಅನುಪಾತೀಯವಾಗಿದೆಯೆಂದು ತಿಳಿದುಬರುತ್ತದೆ. ಹೀಗಾಗಿ ಜಡತ್ವದ್ರವ್ಯರಾಶಿ ಮತ್ತು ಗುರುತ್ವದ್ರವ್ಯರಾಶಿಗಳು ಒಂದಕ್ಕೊಂದು ಅನುಪಾತೀಯವಾಗಿವೆ.

ಇವೆರಡೂ ಹೆಚ್ಚುಕಡಿಮೆ ಸಮವೆಂದು ನ್ಯೂಟನ್ ತೋರಿಸಿಕೊಟ್ಟ. ಪ್ರಯೋಗಗಳಿಂದ 1909ರಲ್ಲಿ ಇಟ್ವಾಸ್‌ನೂ ಈಚೆಗೆ 1964ರಲ್ಲಿ ಆರ್.ಎಚ್. ಡಿಕಿಯೂ ಜಡತ್ವದ್ರವ್ಯರಾಶಿ ಮತ್ತು ಗುರುತ್ವದ್ರವ್ಯರಾಶಿಗಳು ಸಮವಾಗಿವೆ ಎಂದು ತೋರಿಸಿಕೊಟ್ಟಿದ್ದಾರೆ. ಆದ್ದರಿಂದಲೇ ಇವೆರಡನ್ನೂ ದ್ರವ್ಯರಾಶಿ ಎಂದೇ ಕರೆಯಬಹುದು. ಜಡತ್ವದ್ರವ್ಯರಾಶಿ ಮತ್ತು ಗುರುತ್ವದ್ರವ್ಯರಾಶಿಗಳ ಸಮಾನತೆಯನ್ನು ಪ್ರಾಚೀನ ಭೌತವಿಜ್ಞಾನದಲ್ಲಿ ಯಾವುದೇ ರೀತಿಯಲ್ಲಿಯೂ ಗಮನಾರ್ಹವಾಗಿರದ (ಮತ್ತು) ಒಂದು ವಿಶೇಷರೀತಿಯ ಆಕಸ್ಮಿಕವೆಂದು ಪರಿಗಣಿಸಲಾಗಿತ್ತು. ಆದರೆ ಈ ಸಮಾನತೆ ಗುರುತ್ವಾಕರ್ಷಣೆಯನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಮಾರ್ಗದರ್ಶಕವಾಗಿರುವ ಸೂಚನೆ ಎಂದು ಆಧುನಿಕ ಭೌತವಿಜ್ಞಾನದಲ್ಲಿ ಗಣಿಸಲಾಗಿದೆ. ವಾಸ್ತವವಾಗಿ ಈ ವಿಷಯ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದ ವಿಕಾಸ ಮಾರ್ಗದಲ್ಲಿ ಒಂದು ಮುಖ್ಯ ಸೂಚನೆಯಾಗಿತ್ತೆಂದು ತಿಳಿದುಬರುತ್ತದೆ.

ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ : ನ್ಯೂಟನ್ನನ ಗುರುತ್ವಾಕರ್ಷಣ ನಿಯಮ ಅತಿ ಹೆಚ್ಚಿನ ಮಟ್ಟಿಗೆ ಯಶಸ್ವಿಯಾದರೂ ಆ ನಿಯಮದಿಂದ ಬುಧ ಕಕ್ಷೆಯ ಸೂರ್ಯನೀಚ ಬಿಂದುವಿನ (ಪೆರಿಹೀಲಿಯನ್) ಪರಿಭ್ರಮಣವೇಗವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ನ್ಯೂಟನ್ನನ ವ್ಯಸ್ತವರ್ಗನಿಯಮ ಕೊಟ್ಟ ಮೌಲ್ಯಕ್ಕಿಂತ ಈ ಪರಿಭ್ರಮಣವೇಗ ಒಂದು ಶತಮಾನಕ್ಕೆ 43 ಸೆಕೆಂಡುಗಳಷ್ಟು ಹೆಚ್ಚಾಗಿತ್ತು. ಇದನ್ನು ಲೆವೆರಿಯರ್ (1811–1877) ಎಂಬ ಫ್ರೆಂಚ್ ಖಗೋಳವಿಜ್ಞಾನಿ ಕಂಡುಹಿಡಿದಿದ್ದ. ಇದು ಮಿಕ್ಕೆಲ್ಲ ಗ್ರಹಗಳು ಬುಧಗ್ರಹದ ಮೇಲೆ ಮಾಡುವ ಕ್ರಿಯೆಯಿಂದ ಉಂಟಾಗುತ್ತದೆ. ಗೊತ್ತಿಲ್ಲದ ಗ್ರಹವೊಂದನ್ನು ಸೇರಿಸಿಯಾಗಲೀ ಇಲ್ಲವೇ ಗ್ರಹಗಳ ಮಧ್ಯೆ ಇರುವ ಮಾಧ್ಯಮದಿಂದ ಉಂಟಾಗುವ ಎಳೆದಾಡುವಿಕೆಯಿಂದಾಗಲೀ ಈ ಪರಿಭ್ರಮಣೆಯನ್ನು ಅರ್ಥ ಮಾಡಿಕೊಳ್ಳಲು ಮಾಡಿದ ಪ್ರಯತ್ನಗಳು ತೃಪ್ತಿಕರವಾಗಿರಲಿಲ್ಲ. ಆಲ್ಬರ್ಟ್ ಐನ್‌ಸ್ಟೈನ್ (1879–1955) 1916ರಲ್ಲಿ ತನ್ನ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದಿಂದ ಇದನ್ನು ವಿವರಿಸಿದ. ಅಲ್ಲದೆ ಗುರುತ್ವಾಕರ್ಷಣೆಯೆಂಬ ಅದ್ಭುತ ಘಟನೆ ಆಕಾಶ–ಕಾಲದ ಜ್ಯಾಮಿತೀಯ ಗುಣಲಕ್ಷಣಗಳ ಪರಿಣಾಮವೆಂದು ನಿರೂಪಿಸಿದ. ಗಣಿತಶಾಸ್ತ್ರದ ದೃಷ್ಟಿಯಿಂದ ನೋಡಿದರೆ ಐನ್‌ಸ್ಟೈನನ ಗುರುತ್ವಾಕರ್ಷಣ ಸಮೀಕರಣಗಳು ನ್ಯೂಟನನ ವ್ಯಸ್ತವರ್ಗ ನಿಯಮಕ್ಕಿಂತಲೂ ಹೆಚ್ಚು ಜಟಿಲವಾಗಿವೆ, ನಿಜ. ಕಾರ್ಯರೂಪದಲ್ಲಿ ಕಂಡುಬರುವ ಪರಿಣಾಮಗಳಲ್ಲಿ ಎರಡು ನಿರೂಪಣೆಗಳೂ ಬಹಳ ನಿಬಿಡವಾಗಿ ಹೊಂದಿಕೊಂಡರೂ ಐನ್‌ಸ್ಟೈನನ ಸಿದ್ಧಾಂತ ಮೂರು ವಿಶಿಷ್ಟ ಘಟನೆಗಳನ್ನು ಕುರಿತ ಭವಿಷ್ಯ ನುಡಿಯಿತು. ಮೊದಲನೆಯದಾಗಿ, ಅದು ಬುಧ ಕಕ್ಷೆಯ ಸೂರ್ಯನೀಚ ಬಿಂದುವಿನ ಪರಿಭ್ರಮಣವೇಗವನ್ನು ಪೂರ್ತಿಯಾಗಿ ವಿವರಿಸಿತು. ಎರಡನೆಯದಾಗಿ, ಸಾಪೇಕ್ಷತಾ ಸಿದ್ಧಾಂತದ ಪ್ರಕಾರ ಸೂರ್ಯನ ಗುರುತ್ವಾಕರ್ಷಣ ಕ್ಷೇತ್ರದಲ್ಲಿ ಬೆಳಕಿನ ಕಿರಣಗಳು ಪಕ್ಕಕ್ಕೆ ಬಾಗಬೇಕು. ಈ ಭವಿಷ್ಯವನ್ನು ಶೇ. 5 ರಷ್ಟು ನಿಖರವಾಗಿ ಸ್ಥಿರಪಡಿಸಲಾಗಿದೆ. ಮೂರನೆಯದಾಗಿ, ತೂಕವಾದ ವಸ್ತುಗಳಿಂದ ಹೊರಹೊಮ್ಮುವ ಬೆಳಕಿನ ಆವರ್ತಾಂಕ (ಫ್ರೀಕ್ವೆನ್ಸಿ) ಸ್ವಲ್ಪ ಕಡಿಮೆಯಾಗಬೇಕು. ಈ ವಿಷಯವಾದರೋ ಸಾರ್ವತ್ರಿಕ ಸಾಪೇಕ್ಷತಾವಾದಕ್ಕಿಂತಲೂ ಹೆಚ್ಚಿನ ಮೂಲಭೂತ ಪರಿಕಲ್ಪನೆಗಳಿಂದ ಹೊರಬೀಳುತ್ತದೆ. ಈ ಹೇಳಿಕೆಯನ್ನು ಮಾಸ್‌ಬವರ್ ಎಂಬ ಭೌತ ವಿಜ್ಞಾನಿ ಕಂಡುಹಿಡಿದ ಪರಿಣಾಮದಲ್ಲಿ ಸ್ಥಿರಪಡಿಸಲಾಗಿದೆ.

ಬ್ರಾನ್ಸ್ ಮತ್ತು ಡಿಕಿ ಎಂಬ ವಿಜ್ಞಾನಿಗಳು ಗುರುತ್ವಾಕರ್ಷಣ ಕ್ಷೇತ್ರದ ಹೊಸತೊಂದು ವಾದವನ್ನು 1961ರಲ್ಲಿ ಪ್ರಕಟಮಾಡಿದ್ದಾರೆ. ಈ ವಾದ ನಮಗೆ ಈಗಾಗಲೇ ಗೊತ್ತಿರುವ ವಾಸ್ತವಾಂಶಗಳನ್ನು ತಿಳಿಯಪಡಿಸುವುದಲ್ಲದೆ ಹೊಸ ಪರಿಣಾಮಗಳನ್ನು ಮುನ್ನುಡಿಯುತ್ತದೆ ಕೂಡ. ಈ ವಾದಕ್ಕೆ ಪ್ರಯೋಗಗಳಿಂದ ಒಪ್ಪಿಗೆ ದೊರೆಯುವಂತೆ ಕಂಡುಬರುತ್ತದೆ.

ಗುರುತ್ವಾಕರ್ಷಣೀಯ ಅಲೆಗಳು : ಗುರುತ್ವಾಕರ್ಷಣೀಯ ಅಲೆಗಳು ಇಲ್ಲವೆ ಗುರುತ್ವಾಕರ್ಷಣೀಯ ವಿಸ್ತರಣೆ ಇರುವುದನ್ನು ಐನ್‌ಸ್ಟೈನ್ ತನ್ನ ಸಾರ್ವತ್ರಿಕ ಸಾಪೇಕ್ಷತಾವಾದವನ್ನು ಸೂತ್ರೀಕರಿಸಿದ ಬಳಿಕ ಮುನ್ನುಡಿದಿದ್ದ : ಗುರುತ್ವಾಕರ್ಷಣೀಯ ಅಲೆ ಎನ್ನುವುದು ಪ್ರಸಾರವಾಗುವಂಥ ಒಂದು ಗುರುತ್ವಾಕರ್ಷಣ ಕ್ಷೇತ್ರ ; ಅದು ಬೆಳಕಿನ ವೇಗದಲ್ಲಿ ಪ್ರಯಾಣ ಮಾಡುತ್ತದೆ. ಮತ್ತು ಅದರ ಹಾದಿಯಲ್ಲಿ ಬರುವ ದ್ರವ್ಯರಾಶಿಗಳ ಮೇಲೆ ಬಲವನ್ನು ಪ್ರಯುಕ್ತಿಸುತ್ತದೆ ; ಯಾವುದಾದರೂ ವಸ್ತುಗಳ (ದ್ರವ್ಯರಾಶಿಗಳ) ವಿತರಣೆ ಬದಲಾವಣೆಯಾದರೆ ಗುರುತ್ವಾಕರ್ಷಣೀಯ ಅಲೆಗಳು ಉತ್ಪನ್ನವಾಗುತ್ತವೆ ಮತ್ತು ಇವನ್ನು ಚರವಿದ್ಯುದಾವಿಷ್ಟ ಸಮುದಾಯದಿಂದ ಉತ್ಪನ್ನವಾಗುವ ವಿದ್ಯುತ್ಕಾಂತ ಅಲೆಗಳಿಗೆ ಹೋಲಿಸಬಹುದು. ಗುರುತ್ವಾಕರ್ಷಣೀಯ ವಿಕಿರಣಕ್ಕೂ ದ್ರವ್ಯರಾಶಿಗೂ ಇರುವ ಅಂತರಕ್ರಿಯೆ ಸಾಪೇಕ್ಷವಾಗಿ ದುರ್ಬಲವಾಗಿದ್ದರೂ ಈ ವಿಕಿರಣವನ್ನು ದ್ರವ್ಯರಾಶಿಗೂ ಇರುವ ಅಂತರಕ್ರಿಯೆ ಸಾಪೇಕ್ಷವಾಗಿ ದುರ್ಬಲವಾಗಿದ್ದರೂ ಈ ವಿಕಿರಣವನ್ನು ಅಳತೆ ಮಾಡಲು ಈಗ ಸಾಧ್ಯವಾಗುವಂತಿದೆ. ವೇಬರ್ ಎಂಬ ಭೌತವಿಜ್ಞಾನಿ ಗುರುತ್ವಾಕರ್ಷಣೀಯ ವಿಕಿರಣವನ್ನು ಪ್ರಯೋಗ ಶಾಲೆಯಲ್ಲಿ

ಉತ್ಪತ್ತಿಮಾಡುವ ಮತ್ತು ಅದನ್ನು ಕಂಡುಹಿಡಿಯುವ ವಿಧಾನವನ್ನು ವಿವರಿಸಿದ್ದಾನೆ. (1968). ಆದರೆ ಈ ಪ್ರಯೋಗದ ಪರಿಣಾಮ ನಿರ್ಣಯವಿಹೀನವಾಗಿದೆಯೆಂದೇ ಹೇಳಬೇಕು. ಗುರುತ್ವಾಕರ್ಷಣೀಯ ವಿಕಿರಣದ ಪ್ರಬಲ ಉತ್ಪತ್ತಿಸ್ಥಾನ ಅಲ್ಪಕಾಲದಲ್ಲಿ ಮುದುಡಿಕೊಳ್ಳುವಂಥ ಸ್ಥಿತಿಯಲ್ಲಿರುವ ಮಹಾನೋವದಲ್ಲಿ ಇರುತ್ತದೆಂದು ನಂಬಿಕೆಯಿದೆ. ಈ ಅಂಶಗಳಿಗೆ ಬಹುಶಃ ಈ ಶತಮಾನದಲ್ಲಿಯೇ ಹೆಚ್ಚಿನ ಸ್ಪಷ್ಟತೆ ದೊರೆಯುವಂತೆ ಕಂಡುಬರುತ್ತದೆ. (ಎನ್.ಜಿ.ಪಿ.)

**ಗುರುದತ್ತ :** 1925–64. ಹಿಂದಿ ಚಿತ್ರರಂಗದಲ್ಲಿ ಪ್ರಸಿದ್ಧಿಯ ಶಿಖರವೇರಿದ ನಟ, ನಿರ್ದೇಶಕ ಹಾಗೂ ನಿರ್ಮಾಪಕ. ಕನ್ನಡಿಗರಾದ ಇವರು 1925ರ ಜುಲೈ 9ರಂದು ಮೈಸೂರಿನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಕಲ್ಕತ್ತದಲ್ಲಿ ಪೂರೈಸಿದರು. ಅನಂತರ ಹೆಸರಾಂತ ನೃತ್ಯ ಪಟು ಉದಯಶಂಕರರ ಬಳಿ ನೃತ್ಯಾಭ್ಯಾಸ ಮಾಡಿದರು. ಪ್ರಭಾತ ಸ್ಟುಡಿಯೋದಲ್ಲಿ ನೃತ್ಯಸಂಯೋಜಕರಾಗಿ ಚಲನಚಿತ್ರರಂಗ ಪ್ರವೇಶಿಸಿದರು. ಅಲ್ಲಿ ಹಿಂದಿ ಚಿತ್ರರಂಗದ ಹೆಸರಾಂತ ನಟ ದೇವಾನಂದರ ಪರಿಚಯ ಗೆಳೆತನ ಲಭಿಸಿತು. ಹಮ್ ಏಕ್ ಹೈ ಚಿತ್ರದ ನೃತ್ಯ ಸಂಯೋಜಕರಾಗಿ ಕೆಲಸ ಮಾಡಿದರು (1946). ಮುಂದೆ ಇವರು ಬಾಂಬೆ ಟಾಕೀಸ್ ಸೇರಿದರು. ಸಹ ನಿರ್ದೇಶಕರಾಗಿ ಲಖರಾನಿ (1945), ಮೋಹನ (1947), ಗರ್ಲ್ಸ್ ಸ್ಕೂಲ್ (1949), ಸಂಗ್ರಾಮ (1950) ಚಲನಚಿತ್ರಗಳಲ್ಲಿ ಕೆಲಸ ಮಾಡಿದರು. ದೇವಾನಂದ್ 1950ರಲ್ಲಿ ನವಕೇತನ ಸಂಸ್ಥೆ ಆರಂಭಿಸಿದರು. ಹಿಂದೆ ಇವರಿಗೆ ಕೊಟ್ಟ ಮಾತಿನಂತೆ ತಮ್ಮ ಪ್ರಥಮ ನಿರ್ಮಾಣದ ಚಿತ್ರ ನಿರ್ದೇಶಿಸಲು ಅವಕಾಶ ಕಲ್ಪಿಸಿದರು. ಗುರುದತ್ ನಿರ್ದೇಶಿಸಿದ ಪ್ರಥಮ ಚಿತ್ರ ಬಾಜಿ (1951). ಇದು ಇವರಿಗೆ ಒಳ್ಳೆಯ ಹೆಸರು ತಂದುಕೊಟ್ಟಿತು. ಅನಂತರ ಜಾಲ್ ಚಿತ್ರವನ್ನು ನಿರ್ದೇಶಿಸಿದರು (1952). ಇದೊಂದು ಹೊಸ ಬಗೆಯ ಕುತೂಹಲ ಮೂಡಿಸುವ ಚಿತ್ರ. ಅದಾದ ಬಳಿಕ ಸೈಲಾಬ್ ಎಂಬ ಚಿತ್ರ ನಿರ್ದೇಶಿಸಿದರು (1956).

ನಿರ್ಮಾಪಕ, ನಟ, ನಿರ್ದೇಶಕರಾಗಿ ತಮ್ಮನ್ನು ತೊಡಗಿಸಿಕೊಂಡು ಎಚ್.ಜಿ. ಫಿಲ್ಮ್ ಲಾಂಛನದಲ್ಲಿ ಬಾಜ಼್ ಚಿತ್ರ ನಿರ್ಮಿಸಿದರು (1953). ಇದರಲ್ಲಿ ಗೀತಾಬಾಲಿ ಯೊಂದಿಗೆ ತಾವೇ ನಾಯಕರಾಗಿ ಅಭಿನಯಿಸಿದರು. ಅನಂತರ ಇವರು ಹಲವು ಚಿತ್ರಗಳನ್ನು ನಿರ್ದೇಶಿಸಿ ಕೆಲವು ಚಿತ್ರಗಳಲ್ಲಿ ನಟಿಸಿದರು. ಅವುಗಳಲ್ಲಿ ಮುಖ್ಯವಾದುವು. ಆರ್‌ಪಾರ್ (1954), ಮಿಸ್ಟರ್ ಅಂಡ್ ಮಿಸೆಸ್ 55 (1955), ಸಿ.ಐ.ಡಿ. (1956), ಪ್ಯಾಸಾ (1957), ಟ್ವೆಲ್ವೋ ಕ್ಲಾಕ್ (1958), ಚೌದವಿಕಾ ಚಾಂದ್ (1960), ಸಾಹೀಬ್ ಬೀಬಿ ಔರ್ ಗುಲಾಮ್ (1962), ಸೌತೆಲಾಭಾಯಿ (1962), ಬಹುರಾನಿ (1963), ಭರೋಸಾ (1963), ಸಾಂಜ್ ಔರ್ ಸವೇರಾ (1964), ಸುಹಾಗನ್ (1964). ಇವೆಲ್ಲವೂ ಗುರುದತ್ತರ ಜನಪ್ರಿಯತೆಯನ್ನು ಶಿಖರಕ್ಕೇರಿಸಿದ ಚಿತ್ರಗಳು.

ಬಾಜ಼ಿ ಚಿತ್ರದಿಂದ ಒಂದೊಂದೇ ಮೆಟ್ಟಲೇರುತ್ತ ಯಶಸ್ವಿ ಶಿಖರಕಂಡ ಇವರು ಬಾಜಿ ಚಿತ್ರದ ರೆಕಾರ್ಡಿಂಗ್ ಸಮಯದಲ್ಲಿ ಗಾಯಕಿ ಗೀತಾರಾಯ್ ಅವರ ಪ್ರೇಮದ ಬಲೆಯಲ್ಲಿ ಸಿಲುಕಿ ಅವರನ್ನು ವಿವಾಹವಾದರು (1953 ಮೇ 26). ಗುರುದತ್ ನಿರ್ಮಿಸಿದ ಚಿತ್ರಗಳು ಭಾರತೀಯ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿವೆ. ಪ್ಯಾಸಾ, ಕಾಗಜ಼್ ಕೆ ಫೂಲ್, ಸಾಹೀಬ್ ಬೀಬಿ ಔರ್ ಗುಲಾಮ್ ಮೊದಲಾದುವು ಉತ್ತಮ ಹಾಡು, ಅಭಿನಯ, ನಿರ್ದೇಶನಗಳಿಂದ ಹೆಸರು ಮಾಡಿದುವು. ನಟಿ ವಹೀದಾ ರೆಹೆಮಾನ್‌ರೊಡನೆ ಪ್ಯಾಸಾ, ಮೀನಾಕುಮಾರಿಯೊಡನೆ ಸಾಹೀಬ್ ಬೀಬಿ ಔಲ್ ಗುಲಾಮ್‌ನಲ್ಲಿ ನಟಿಸಿದರು. ಈ ಚಿತ್ರಗಳಲ್ಲಿಯ ಇವರ ಅಭಿನಯ ಇಂದಿಗೂ ಸ್ಮರಣೀಯ. ಸಾಹೀಬ್ ಬೀಬಿ ಔರ್ ಗುಲಾಮ್ ರಾಷ್ಟ್ರಪತಿಗಳ ರಜತ ಪದಕ ಪಡೆಯಿತು.

ಕಲಾತ್ಮಕತೆ ಮತ್ತು ತಾಂತ್ರಿಕ ಶ್ರೀಮಂತಿಕೆ ಗುರುದತ್ತರ ಚಿತ್ರಗಳ ಜೀವಾಳ. ನೆರಳು ಬೆಳಕುಗಳನ್ನು ಕ್ಯಾಮರದಲ್ಲಿ ಸೆರೆಹಿಡಿಯುವ ಚಾಕಚಕ್ಯತೆ, ಕ್ಯಾಮರ ಕಣ್ಣಿನಲ್ಲಿರುವ ಶಕ್ತಿಯ ಸದ್‌ಬಳಕೆ, ಹಾಡು ಅಭಿನಯಗಳ ಸಮತೂಕ ನಿರ್ವಹಣೆ, ಪ್ರತಿಯೊಂದು ಫ್ರೇಮಿನಲ್ಲೂ ಜೀವ ತುಂಬುವ ಜಾಣ್ಮೆ, ಜೀವನದ ವಾಸ್ತವತೆಯನ್ನು ಚಿತ್ರಿಸುವ ಕಲೆಗಾರಿಕೆ ಇವೇ ಇವರ ಚಿತ್ರಗಳು ಜನಪ್ರಿಯವಾಗಲು ಕಾರಣವಾದುವು. ಇವರ ಚಿತ್ರಗಳು ಇಂದಿಗೂ ತಾಜಾತನ ಉಳಿಸಿಕೊಂಡಿವೆ. ಖ್ಯಾತಿಯ ಉತ್ತುಂಗದಲ್ಲಿರುವಾಗಲೇ ಜೀವನದಲ್ಲಿ ಜುಗುಪ್ಸೆಗೊಂಡು 1964 ಅಕ್ಟೋಬರ್ 10ರಂದು ಆತ್ಮಹತ್ಯೆ ಮಾಡಿಕೊಂಡರು. (ಎಸ್.ಎಂ.ಕೆ.)

**ಗುರುದಾಸಪುರ :** ಪಂಜಾಬಿನ ಒಂದು ಜಿಲ್ಲೆ; ಆ ಜಿಲ್ಲೆಯ ಕೇಂದ್ರ. ಜಿಲ್ಲೆಯ ವಿಸ್ತೀರ್ಣ 3,570. ಚ.ಕಿಮೀ. ಜನಸಂಖ್ಯೆ 22,99,026 (2011) ಜಿಲ್ಲೆಯ ಉತ್ತರಕ್ಕೆ ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ, ದಕ್ಷಿಣದಲ್ಲಿ ಅಮೃತಸರ ಜಿಲ್ಲೆ, ಪೂರ್ವಕ್ಕೆ ಕಾಂಗಡಾ ಮತ್ತು ಹೋಶಿಯಾರ್‌ಪುರ ಜಿಲ್ಲೆ ಮತ್ತು ಪಶ್ಚಿಮಕ್ಕೆ ಅಮೃತಸರ ಮತ್ತು ಸಿಯಾಲ್‌ಕೋಟ್ (ಪಾಕಿಸ್ತಾನ) ಜಿಲ್ಲೆಗಳಿವೆ. ವಾರ್ಷಿಕ ಸರಾಸರಿ ಮಳೆ 100 ಸೆಂಮೀ ಇಲ್ಲಿಯದು ಸಮಶೀತೋಷ್ಣ ವಾಯುಗುಣ. ಈ ಜಿಲ್ಲೆಯಲ್ಲಿ ಹರಿಯುವ ರಾವೀ ಮತ್ತು ಬಿಯಾಸ್ ನದಿಗಳು ಅನೇಕ ಸಲ ಮೇರೆ ಮೀರಿ ಹರಿಯುತ್ತವೆ. ಈ ನದಿಗಳ ಮೇಲೆ ದೋಣಿ ಸಂಚಾರವುಂಟು.

ಜನರು ವ್ಯಾಪಾರ, ಮತ್ತು ಕೃಷಿಯಲ್ಲೂ ಖಾಸಗಿ ಮತ್ತು ಸರ್ಕಾರಿ ಕೆಲಸಗಳಲ್ಲೂ ನಿರತರಾಗಿದ್ದಾರೆ. ಧಾರಿವಾಲ್ ಮತ್ತು ಸುಜಾನ್‌ಪುರಗಳಲ್ಲಿ ಉಣ್ಣೆ, ಜಮಖಾನೆ ಮತ್ತು ಕೃಷಿಯಂತ್ರಗಳ ಕಾರ್ಖಾನೆಗಳುಂಟು. ಬಟಾಲಾ ವ್ಯಾಪಾರ ಕೇಂದ್ರ.

ರಾವೀ ನದಿಯ ದಂಡೆಯ ಮೇಲೆ ಮುಕ್ತೇಶ್ವರದಲ್ಲಿ ಪ್ರಾಚೀನ ಕಾಲದ ಕೆಲವು ಶಿಲ್ಪಕಲಾಕೃತಿಗಳಿವೆ. ಬಟಾಲಾ, ಶಾಹಪುರ ಐತಿಹಾಸಿಕ ಪ್ರಾಮುಖ್ಯ ಪಡೆದಿವೆ. ಪಠಾಣಕೋಟ್‌ನಲ್ಲಿ ಪೂರ್ವದಲ್ಲಿ ಹಿಂದೂಗಳ ರಾಜ್ಯವಿತ್ತು. ಸೂರ್ ವಂಶದವರಿಂದ ಈ ಭಾಗವನ್ನು ಅಕ್ಬರ್ ಗೆದ್ದುಕೊಂಡ. ಈ ಭಾಗದಲ್ಲಿ ಸಿಕ್ಖರ ಮತ್ತು ಮೊಗಲರ ನಡುವೆ ಅನೇಕ ಯುದ್ಧಗಳು ನಡೆದುವು. ಅದೀನಾ ಬೇಗ್ ಈ ಭಾಗದ ಸುಭೇದಾರನಾಗಿದ್ದ. ಅವನ ಅನಂತರ ಸಿಕ್ಖರ ವರ್ಚಸ್ಸು ಹೆಚ್ಚಾಯಿತು. 1841ರಲ್ಲಿ ಇಡೀ ಜಿಲ್ಲೆ ಇಂಗ್ಲಿಷರ ಆಡಳಿತಕ್ಕೊಳಪಟ್ಟಿತು.

ಗುರುದಾಸಪುರ ನಗರ ಉ.ಅ. $32^{0}$ 63’ ಮತ್ತು ಪೂ.ರೇ. $75^{0}$ 25’ ಮೇಲೆ ಇದೆ. ಇಲ್ಲಿ ಸಾರಸ್ವತ ಬ್ರಾಹ್ಮಣರ ಒಂದು ಮಠವಿದೆ. ಇಲ್ಲಿಯ ಕೋಟೆಯನ್ನು ಬಂದಾ (ಸಿಕ್ಖರ 11ನೆಯ ಗುರು) ಕಟ್ಟಿಸಿದ. ಆ ಕೋಟೆಯನ್ನು ಮೊಗಲರು ವಶಪಡಿಸಿಕೊಳ್ಳಲು ಹೆಚ್ಚಿನ ಶ್ರಮ ವಹಿಸಬೇಕಾಯಿತು. ಆ ಕೋಟೆಯ ರಕ್ಷಣೆಗಾಗಿ ಬಂದಾ ಬಹದ್ದೂರ್ ಅತ್ಯಂತ ಸಾಹಸದಿಂದ ಹೋರಾಟ ನಡೆಸಿದ. ಮೊಗಲರ ಚಕ್ರವರ್ತಿ ಬಹದ್ದೂರ್ ಷಹನ ನಿಧನದ ಅನಂತರ ಬಂದಾ ಮತ್ತು ಅವನ ಶಿಷ್ಯರು ತಾವು ಅಡಗಿಕೊಂಡಿದ್ದ ಸ್ಥಳದಿಂದ ಹೊರಬಂದು, ಕೈಬಿಟ್ಟು ಹೋದ ಪ್ರದೇಶವನ್ನು ಮತ್ತೆ ವಶಪಡಿಸಿಕೊಂಡು, ಸರ್‌ಹಿಂದ್ ಪ್ರಾಂತ್ಯವನ್ನು ಲೂಟಿ ಮಾಡಿದರು. ಆದರೆ 1715ರಲ್ಲಿ ಮೊಗಲರು ಗುರುದಾಸಪುರ ಕೋಟೆಗೆ ಮುತ್ತಿಗೆ ಹಾಕಿದರು. ಆಗ ಅಲ್ಲಿದ್ದ ಸಿಕ್ಖರು ಬಂದಾನ ನೇತೃತ್ವದಲ್ಲಿ ತೀವ್ರವಾದ ಹೋರಾಟ ನಡೆಸಿ, ಆ ಕೋಟೆಯನ್ನು ರಕ್ಷಿಸಲು ಪ್ರಯತ್ನಪಟ್ಟರು. ಧೈರ್ಯದಿಂದ ಹೋರಾಡಿದರೂ ಪ್ರಯೋಜನವಾಗದೆ ಬಂದಾ ಮತ್ತು ಅವನ ಅನುಯಾಯಿಗಳು ಶರಣಾಗತರಾದರು. ಬಂದಾ ಮತ್ತು ಅವನ ಮಗನನ್ನು ಮೊಗಲರು ಕ್ರೂರವಾಗಿ ಕೊಲ್ಲಿಸಿದರು. ಸಿಕ್ಖರ ಪ್ರಾಬಲ್ಯ ಕಡಿಮೆಯಾಯಿತು. (ಕೆ.ಟಿ.ಆರ್.)

**ಗುರುದ್ವಾರ :** ಸಿಕ್ಖರ ಉಪಾಸನ ಮಂದಿರಗಳನ್ನು ಈ ಹೆಸರಿನಿಂದ ಕರೆಯುತ್ತಾರೆ. ಗುರುದ್ವಾರಗಳಲ್ಲಿ ಮುಖ್ಯವಾದುವು ಅಮೃತಸರ, ಕಪೂರ್ಥಲ, ಆನಂದಪುರ,

ದುಖ್‌ನಿವಾರನ್ ಗುರುದ್ವಾರ, ಪಾಟಿಯಾಲ

ನಾಂದೇಡಗಳಲ್ಲಿವೆ. ಇವುಗಳಲ್ಲಿ ಸಿಕ್ಖರ ಪವಿತ್ರ ಗ್ರಂಥವಾದ ಗ್ರಂಥ್ ಸಾಹೇಬ್ (**ನೋಡಿ–ಗ್ರಂಥ್‌ಸಾಹೇಬ್**) ಪ್ರತಿಯನ್ನು ಇಟ್ಟಿರುತ್ತಾರೆ. ದೇವಸ್ಥಾನಗಳಲ್ಲಿ ಉತ್ಸವ ವಿಗ್ರಹದ

ಮೆರವಣಿಗೆಯನ್ನು ನಡೆಸುವಂತೆ ಗುರುದ್ವಾರಗಳಲ್ಲಿ ಈ ಗ್ರಂಥವನ್ನು ತುಂಬ ಅಚ್ಚುಕಟ್ಟಾಗಿ ಪ್ರತಿನಿತ್ಯವೂ ಮೆರವಣಿಗೆ ನಡೆಸುತ್ತಾರೆ. ಸಿಕ್ಖರಿಗೆ ಅವರ ಪವಿತ್ರ ಗ್ರಂಥವೇ ದೇವಸಾಕ್ಷಾತ್ಕಾರದ ಪ್ರಮುಖ ಮಾರ್ಗ. ಅಮೃತಸರದಲ್ಲಿರುವ ಅತ್ಯಂತ ಪ್ರಖ್ಯಾತವಾದ ಸುವರ್ಣ ಮಂದಿರದಲ್ಲಿ ಸಿಖ್ ಪೂಜಾರಿಯೊಬ್ಬ ಈ ಗ್ರಂಥದ ಬಳಿ ಕುಳಿತು ಅದರ ಮೇಲೆ ದೂಳು ಅಥವಾ ಕ್ರಿಮಿಕೀಟಗಳು ಎರಗದಂತೆ ಚಾಮರ ಬೀಸುತ್ತಿರುತ್ತಾನೆ. ಪರಂಪರೆಯಿಂದ ಗುರುದ್ವಾರಗಳ ಆಡಳಿತವನ್ನು ನೋಡಿಕೊಳ್ಳುವ ದೀಕ್ಷೆತೊಟ್ಟ ನಿಷ್ಠಾವಂತ ಸಿಕ್ಖರನ್ನು ಅಕಾಲಿಗಳೆಂದು ಕರೆಯುತ್ತಾರೆ. ಗುರುದ್ವಾರಗಳನ್ನು ನೋಡಿಕೊಳ್ಳಲು ಈಗ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ಎಂಬ ಪ್ರಮುಖ ಸಮಿತಿಯೊಂದಿದೆ.

(ಜಿ.ಎಚ್.)

**ಗುರುನಾನಕ್ ವಿಶ್ವವಿದ್ಯಾಲಯ :** ಗುರುನಾನಕರ 500ನೆಯ ಜನ್ಮ ದಿನಾಚರಣೆಯ ಸ್ಮಾರಕವಾಗಿ 1969ರಲ್ಲಿ ಅಮೃತಸರದಲ್ಲಿ ಸ್ಥಾಪನೆಯಾದ ಸಂಸ್ಥೆ. ರಾಷ್ಟ್ರಾಧ್ಯಕ್ಷ ವಿ. ವಿ. ಗಿರಿಯವರಿಂದ ಅದೇ ವರ್ಷ ಅದರ ಶಂಕುಸ್ಥಾಪನೆಯಾಯಿತು. ಮಾರನೆಯ ವರ್ಷದಿಂದ ಅದು ತನ್ನ ಕಾರ್ಯವನ್ನಾರಂಭಿಸಿತು. ಪಂಜಾಬಿನ ಅಮೃತಸರ, ಗುರುದಾಸಪುರ, ಜಲಂಧರ ಮತ್ತು ಕಪೂರ್ಥಲ ಜಿಲ್ಲೆಗಳ ಪ್ರಾದೇಶಿಕ ವ್ಯಾಪ್ತಿಯನ್ನು ಹೊಂದಿರುವ ಈ ವಿಶ್ವವಿದ್ಯಾಲಯಕ್ಕೆ 1971–72ನೆಯ ಸಾಲಿನಿಂದ ಅಂತರವಿಶ್ವವಿದ್ಯಾನಿಲಯದ ಸದಸ್ಯತ್ವ ದೊರೆತಿದೆ.

ವಿಶ್ವವಿದ್ಯಾನಿಲಯಕ್ಕೆ ಮೇಲಿನ ನಾಲ್ಕು ಜಿಲ್ಲೆಗಳ 64 ಕಾಲೇಜುಗಳು ಅಂಗ ಸಂಸ್ಥೆಗಳಾಗಿವೆ. ಅಮೃತಸರದಲ್ಲಿ ರಸಾಯನಶಾಸ್ತ್ರ, ಗುರುನಾನಕ್ ಅಧ್ಯಯನ, ಇತಿಹಾಸ, ಗಣಿತಶಾಸ್ತ್ರ, ಮನೋವಿಜ್ಞಾನ ಈ ಐದು ವಿಷಯಗಳ ವ್ಯಾಸಂಗಕ್ಕೆ ಅವಕಾಶವಿದ್ದು ಸ್ನಾತಕೋತ್ತರ ಶಿಕ್ಷಣಕ್ಕೆ ಯುಕ್ತ ವ್ಯವಸ್ಥೆ ಇದೆ. ಸ್ಥಳೀಯ ಕಾಲೇಜುಗಳಲ್ಲಿ ಇಂಗ್ಲಿಷ್, ಹಿಂದಿ ಮತ್ತು ಪಂಜಾಬಿ ಭಾಷೆಗಳಲ್ಲಿ ಸ್ನಾತಕೋತ್ತರ ಶಿಕ್ಷಣದ ವ್ಯವಸ್ಥೆಯೂ ವಿಶ್ವವಿದ್ಯಾನಿಲಯದ ಜವಾಬ್ದಾರಿಯೇ ಆಗಿದೆ. ವಿಜ್ಞಾನ, ವೈದ್ಯ, ದಂತವೈದ್ಯ, ಕೃಷಿ ಮತ್ತು ಅರಣ್ಯಶಾಸ್ತ್ರ, ಕಲಾಶಾಸ್ತ್ರ ಮತ್ತು ಮಾನವಿಕ ವಿಜ್ಞಾನಗಳು, ಭಾಷೆಗಳು, ಶಿಕ್ಷಣ, ಲಲಿತಕಲೆ ಮತ್ತು ಪ್ರಾಚೀನ ಶಾಸ್ತ್ರ–ಈ ಎಂಟು ವಿಷಯಗಳ ವಿದ್ವನ್ಮಂಡಲಿಗಳಿವೆ (ಫ್ಯಾಕಲ್ಟಿ). 17 ಪಠ್ಯಪರಿಷತ್ತುಗಳಿವೆ (ಬೋರ್ಡ್ ಆಫ್ ಸ್ಟಡೀಸ್). 1972ರ ಜನವರಿ ತಿಂಗಳಿನಲ್ಲಿ ವಿಶ್ವವಿದ್ಯಾಲಯ ತನ್ನ ಪ್ರಥಮ ಘಟಿಕೋತ್ಸವವನ್ನು ನಡೆಸಿತು.

*

**ಗುರುಪುರ :** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಒಂದು ಗ್ರಾಮ. ಮಂಗಳೂರಿಗೆ 16ಕಿಮೀ ದೂರದಲ್ಲಿ ಈಶಾನ್ಯ ದಿಕ್ಕಿನಲ್ಲಿ ಗುರುಪುರ ನದಿಯ ದಡದಲ್ಲಿದೆ. ಕೆಳದಿ ಅರಸರ ಕಾಲದಲ್ಲಿ ಈ ಊರು ಪ್ರಾಮುಖ್ಯ ಪಡೆದಿತ್ತು. ಇಲ್ಲಿ ಅವರು ಕಟ್ಟಿಸಿದ ವೀರಶೈವ ಗುರುಮಠದಿಂದ ಈ ಊರಿಗೆ ಗುರುಪುರ ಎಂಬ ಹೆಸರು ಬಂತು. ಈಗ ಮಠ ಜೀರ್ಣಾವಸ್ಥೆಯಲ್ಲಿದ್ದರೂ ಹಳೆಯ ಕಟ್ಟಡದ ಶಿಲ್ಪಸೌಂದರ್ಯವನ್ನು ಗುರುತಿಸಬಹುದು. ಮಠದ ಆವರಣದಲ್ಲಿ ನೀಲಕಂಠ ದೇವಾಲಯವಿದೆ. ವರದರಾಜ ವೆಂಕಟರಮಣ ದೇವಾಲಯವೂ ಇಲ್ಲಿದೆ. ಪ್ರತಿವರ್ಷ ಕಾರ್ತೀಕ ಮಾಸದಲ್ಲಿ ದೀಪೋತ್ಸವ ನಡೆಯುತ್ತದೆ. ಗುರು ಮಠಕ್ಕೆ ಸಮೀಪದಲ್ಲೇ ಬಡವರಿಗೆ ಗಂಜಿ ದಾನ ಮಾಡುತ್ತಿದ್ದ ಗಂಜಿಮಠದ ಅವಶೇಷಗಳಿವೆ.

(ಎಂ.ಆರ್.ಎ.)

**ಗುರುಬಸವ :** ಸು. 1430. ಕನ್ನಡದಲ್ಲಿ ಸಪ್ತಕಾವ್ಯಗಳ ಕರ್ತೃ; ಸಪ್ತಕಾವ್ಯಗಳ ಗುರುಬಸವನೆಂದೇ ಪ್ರಸಿದ್ಧನಾಗಿದ್ದಾನೆ. ಶಿವಯೋಗಾಂಗ ವಿಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ ಮತ್ತು ಮನೋವಿಜಯ–ಇವೇ ಆ ಏಳು ಕೃತಿಗಳು. ಈತನಿಂದ ಕೆಲವು ಸ್ವರವಚನಗಳು ರಚಿತವಾಗಿರುವುದಾಗಿ ತಿಳಿದುಬಂದಿದೆ. ಗುರುಬಸವನಿಗೆ ಭಕ್ತಜನ ಮನೋಮಂದಿರ, ಶಿವಯೋಗಿಜನಸೇವಿತ ಚರಣಾರವಿಂದ, ಷಟ್‌ಸ್ಥಲ ಜ್ಞಾನ ಪ್ರಭಾಪುಂಜರಂಜಿತಾಂತರಂಗ, ವೀರಶೈವಮತ ಸ್ಥಾಪನಾಚಾರ್ಯ ಮುಂತಾದ ಬಿರುದುಗಳಿದ್ದವೆಂದು ಮನೋವಿಜಯಕ್ಕೆ ತಾತ್ಪರ್ಯವನ್ನು ಬರೆದ ವಿರಕ್ತ ತೋಂಟದಾರ್ಯ ತಿಳಿಸಿದ್ದಾನೆ. ಆದರೆ ಸ್ವವಿಷಯವಾಗಿ ಕವಿ ಏನನ್ನೂ ಹೇಳಿಕೊಂಡಿಲ್ಲ. ಕವಿ ವಿರಕ್ತನಾಗಿದ್ದುದೇ ಇದಕ್ಕೆ ಕಾರಣವಾಗಿರಬೇಕು. ಮುಂದೆ ಬಂದ ಕವಿಗಳು ಹಿಂದಿನವರ ಕಾವ್ಯಗಳ ಹೆಸರೆತ್ತುವುದು ಸಂಪ್ರದಾಯ. ಆದರೆ ಆ ಭಾಗ್ಯವೂ ಈ ಕವಿಗಿಲ್ಲ. ಎಲ್ಲಿಯೂ ಗುರುಬಸವ ಸಪ್ತಕಾವ್ಯಗಳ ಉಲ್ಲೇಖವಿಲ್ಲ. ಈತನ ಸಪ್ತಕಾವ್ಯಗಳ ತಾಡವೋಲೆಯ ಕಟ್ಟುಗಳು ಸಾಕಷ್ಟು ದೊರೆಯುತ್ತವೆ. ಅವುಗಳಲ್ಲಿ ಗುರುಬಸವನ ನಾಮನಿರ್ದೇಶ ಮಾತ್ರ ಸ್ಪಷ್ಟವಾಗಿದೆ.

ಗುರುಬಸವ ಎಂಬ ಹೆಸರಿನ ಒಬ್ಬ ವ್ಯಕ್ತಿ ನೂರೊಂದು ವಿರಕ್ತರಲ್ಲಿ ಪ್ರಸಿದ್ಧನಾಗಿದ್ದನೆಂದು ವೀರಶೈವ ಪುರಾಣಗಳು ಹೇಳುತ್ತವೆ. ಇವನೇ ಸಪ್ತಕಾವ್ಯಗಳ ಕರ್ತೃ ಎಂದು ಜನತೆ ನಂಬಿದೆ. ವಿಜಯನಗರ ಸಾಮ್ರಾಜ್ಯವನ್ನು ಸ್ಥಿರಗೊಳಿಸಿದ ಪ್ರೌಢದೇವರಾಯನ (ಪ್ರ.ಶ. 1419–1446) ಕಾಲದಲ್ಲಿ ಈ ಕವಿಯಿದ್ದನೆಂದು ಚೆನ್ನಬಸವಪುರಾಣದಿಂದ ತಿಳಿದುಬರುತ್ತವೆ. ಪ್ರೌಢದೇವರಾಯ ವೀರಶೈವನಾಗಿದ್ದು ಕನ್ನಡ ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿಗೆ ತುಂಬ ನೆರವಾದುದು ಇತಿಹಾಸಾವಲೋಕನ ದಿಂದ ಶ್ರುತವಾಗಿದೆ. ಆತನ ಕಾಲದಲ್ಲಿ ನೂರೊಂದು ವಿರಕ್ತರು ಉದಿಸಿ, ಹಂಪೆಯಲ್ಲಿ ನೆರೆದು ವೀರಶೈವಧರ್ಮವನ್ನು ಪ್ರಚುರಗೊಳಿಸಿದುದೂ ಅಷ್ಟೇ ಪ್ರಸಿದ್ಧವಾದ ವಿಷಯ. ಈ ವಿರಕ್ತರ ತಪಃಪ್ರಭಾವ ನಿಜವಾಗಿಯೂ ಅವರ್ಣನೀಯವಾದುದು. ಅವರು ಸಂಸಾರದ ಅಸಾರತೆಯನ್ನು ಕಂಡುಕೊಂಡು, ಜಂಗಮಸ್ಥಲವನ್ನಾಶ್ರಯಿಸಿ ಪರಮವೈರಾಗ್ಯಶೀಲರಾಗಿ ಮೆರೆದಿದ್ದಾರೆ. ಅವರಲ್ಲಿ ಕರಸ್ಥಲದ ನಾಗಿದೇವನಿಗೂ ಗುರುಬಸವನಿಗೂ ಮಹತ್ತ್ವದ ಸ್ಥಾನವಿದೆ. ಇವರಿಬ್ಬರ ಒಡನಾಟವನ್ನು ಚೆನ್ನಬಸವಪುರಾಣದಲ್ಲಿ ವಿವರಿಸಲಾಗಿದೆ. ಅಲ್ಲಿ ಹೇಳಿರುವುದನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಒಂದೆರಡು ಮಾತುಗಳು ಸ್ಪಷ್ಟವಾಗುತ್ತವೆ. ಗುರುಬಸವನ ಅರಮನೆ (ಮಠ) ವಿಜಯನಗರದಲ್ಲಿತ್ತು. ಕರಸ್ಥಲದ ನಾಗಿದೇವ ಆ ಮಠಕ್ಕೆ ಒಮ್ಮೆ ಬಂದು ಗುರುಬಸವನನ್ನು ಕಂಡಿದ್ದ. ಗುರುಬಸವ ವೇದ, ವೇದಾಂತ, ಪುರಾಣಾಗಮ, ಇತಿಹಾಸಾದಿಗಳಲ್ಲಿ ಬಲ್ಲಿದನಾಗಿದ್ದು ಯೋಗಶಕ್ತಿಯಿಂದ ಅನೇಕ ಪವಾಡಗಳನ್ನು ಮೆರೆದನೆಂದೂ ಪ್ರೌಢದೇವರಾಯನ ಸಮ್ಮುಖದಲ್ಲಿ ಪರವಾದಿಗಳನ್ನು ಗೆದ್ದು ಶಾರದೆಯ ಪೀಠವನ್ನು ಅಲಂಕರಿಸಿದನೆಂದೂ ಖೇಚರಶಕ್ತಿಯನ್ನು ಪ್ರದರ್ಶಿಸಿ, ಗಗನದಲ್ಲಿ ಈಜುತ್ತ ಸಕಲ ರಾಗಗಳನ್ನು ಹಾಡಿ, ಬಯಲಿನೊಳಗೆ ಬಯಲಾದನೆಂದೂ ಅದೇ ಪುರಾಣದಿಂದ ತಿಳಿದುಬರುತ್ತದೆ.

ಗುರುಬಸವ ವಿಜಯನಗರಕ್ಕೆ ಬರುವ ಪೂರ್ವದಲ್ಲಿ ಎಲ್ಲಿದ್ದ, ಅವನ ಮೂಲ ಮಠ ಯಾವುದು, ತಂದೆತಾಯಿ ಯಾರು–ಎಂಬ ಪ್ರಶ್ನೆಗಳಿಗೆ ಬಿ. ಶಿವಮೂರ್ತಿ ಶಾಸ್ತ್ರಿಗಳು ಕೊಡುವ ಪರಿಹಾರಗಳನ್ನು ಗಮನಿಸಬಹುದು. ಕವಿ ಗುರುಬಸವ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಮಠಾಧ್ಯಕ್ಷನಾಗಿದ್ದನೆಂದೂ ವಿಜಯನಗರದ ರಾಯರ ಕಾಲದಲ್ಲಿಯೂ ಕೆಳದಿಯ ದೊರೆಗಳ ಕಾಲದಲ್ಲಿಯೂ ಕ್ಯಾಸನೂರು ಎಂಬುದಕ್ಕೆ ಸಂಸ್ಕೃತದಲ್ಲಿ ಖೇಚರಪುರಿ ಎಂದು ಹೇಳುವರೆಂದೂ ಶಿವಯೋಗಿಯಾದ ಗುರುಬಸವ ತನ್ನ ಯೋಗ ಸಾಮರ್ಥ್ಯದಿಂದ ಆಕಾಶದಲ್ಲಿ ಸಂಚರಿಸುತ್ತ ಇದ್ದುದರಿಂದ ಅವನಿದ್ದ ಊರಿಗೆ ಖೇಚರಪುರ ಎಂದು ಹೆಸರಾಯಿತೆಂದೂ ಐತಿಹ್ಯವುಂಟು. ಖೇಚರಪುರಿ ಎಂಬುದರ ಅಪಭ್ರಂಶವೇ ಕ್ಯಾಸನೂರು–ಇದು ಅವರ ಮತ.

ಗುರುಬಸವ ಪ್ರೌಢದೇವರಾಯನ ಕಾಲದಲ್ಲಿ ಜೀವಿಸಿದ್ದನೆಂಬುದರ ಮೇಲೆ ಈತನ ಕಾಲ ಪ್ರ.ಶ. 1430ರ ಸುಮಾರು ಎಂದು ಹೇಳಲಡ್ಡಿಯಿಲ್ಲ. ಆದರೆ ಈತನಿಂದಲೇ ಸಪ್ತ ಕಾವ್ಯಗಳು ರಚಿತವಾದವೆಂದು ಹೇಳಲು ಖಚಿತ ಆಧಾರ ಇಂದಿಗೂ ದೊರೆತಿಲ್ಲ. ಈತನ ಸಪ್ತ ಕಾವ್ಯಗಳು ವೇದಾಂತವನ್ನು ಬೋಧಿಸುತ್ತವೆ; ಲಿಂಗಾಂಗಸಾಮರಸ್ಯಕ್ಕೆ ಯೋಗವೇ ಮೂಲವೆಂದು ಸಾರುತ್ತವೆ. ವಚನಾಗಮ, ವೇದೋಪನಿಷತ್ತುಗಳ ಸಾರವನ್ನು ಹೀರಿ, ನಿತ್ಯಸಾಧನೆಯನ್ನು ಬೋಧನೆಯ ರೂಪದಲ್ಲಿ ಕವಿ ನೀಡಿದ್ದಾನೆ.

ಗುರುಬಸವನ ಕೃತಿಗಳಲ್ಲಿ ಸದ್ಗುರು ರಹಸ್ಯ ನಿಜತತ್ತ್ವವನ್ನು ಬೋಧಿಸುತ್ತದೆ. ಈ ಕೃತಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಕಲ್ಯಾಣೇಶ್ವರ ಪರಿವರ್ಧಿನಿಯ ವಿವಿಧ ರಾಗಗಳಲ್ಲಿ ಮೂಡಿಬಂದು ಷಟ್‌ಸ್ಥಲ ವಿವರಣೆ ಮಾಡುತ್ತದೆ. ಸ್ವರೂಪಾಮೃತ ಜೀವಪರಮರ ಸ್ವರೂಪವನ್ನು ತಿಳಿಸಿ, ಅವರ ಪರಸ್ಪರ ಮಿಲನವೇ ಮುಕ್ತಿಯೆಂಬುದನ್ನು ಹೇಳುತ್ತದೆ. ಅವಧೂತಗೀತೆ ನೂರೊಂದು ಚೌಪದಿಗಳಲ್ಲಿ ಮೂಡಿ ಬಂದಿದೆ. ಜ್ಞಾನೋತ್ತರ ಮಾರ್ಗದ ವಿಧವಿಧಗಳನ್ನು ಅನುಭವಿಸುವವನೇ ಅವಧೂತನೆಂದು ಕವಿಯ ಮತವಾಗಿದೆ. ಮನೋವಿಜಯ ಕುಸುಮಷಟ್ಪದಿಯಲ್ಲಿದ್ದು ಮನೋನಿಗ್ರಹವನ್ನು ತಿಳಿಸುವ ಶ್ರೇಷ್ಠ ಕೃತಿ. ಶಿವಯೋಗಾಂಗ ವಿಭೂಷಣ ಯೋಗಗಳ ಅಂಗಗಳನ್ನು ವಿವರಿಸುತ್ತ ಶಿವಯೋಗದ ಮೇಲ್ಮೆಯನ್ನು ಹೇಳುತ್ತದೆ. ವೃಷಭಗೀತೆ ಭೋಗಷಟ್ಪದಿಯಲ್ಲಿದ್ದು ಒಂದು ಶತಕಕೃತಿ ಎನಿಸಿಕೊಂಡಿದೆ.

ಈತನ ಸಪ್ತಕಾವ್ಯಗಳಲ್ಲಿ ವೈವಿಧ್ಯವಿದೆ; ವೈಶಿಷ್ಟ್ಯವಿದೆ. ಈ ಕೃತಿಗಳು ಗುರು ಶಿಷ್ಯರ ಸಂವಾದರೂಪದಲ್ಲಿ ರಚಿತವಾಗಿವೆ. ಸುವಿವೇಕನೆಂಬ ಶಿಷ್ಯನಿಗೆ ದೇಶಿಕರು ಬೋಧೆ ಮಾಡುತ್ತಾರೆ. ವಿಷಯ ಸುಖದಲ್ಲಿ ಲೀನವಾದ ಶಿಷ್ಯನ ಮನಸ್ಸನ್ನು ಶಿವಯೋಗಾನಂದ ಸಾಗರಕ್ಕೆ ಸಾಗಿಸಬೇಕೆಂಬುದೇ ಸದ್ಗುರುವಿನ ಸಾಹಸ. ಗುರುಬಸವನ ಸಂಗೀತಜ್ಞಾನ ಅಗಾಧವಾದ್ದು. ಶಾಸ್ತ್ರಕ್ಕೆ ಸಂಗೀತದ ಒಪ್ಪವಿದ್ದರೆ ಮೃದುಮಧುರವಾಗುವುದೆಂದು ಕವಿ ಅರಿತಿದ್ದಾನೆ. ಕನ್ನಡ ಛಂದೋಮಟ್ಟುಗಳಲ್ಲಿ ರಾಗಬದ್ಧವಾಗಿ ಹಾಡಲು ಕವಿಗೆ ಹೆಚ್ಚಿನ ಉತ್ಸಾಹವಿದೆ. ಸಂಸ್ಕೃತ ಛಂದಸ್ಸನ್ನು ಅಲ್ಲಗಳೆದು ಕನ್ನಡ ಷಟ್ಪದಿಯನ್ನು ಅಪ್ಪಿಕೊಂಡುದು ಕವಿಯ ಶೈಲಿಯ ವೈಶಿಷ್ಟ್ಯವೆನ್ನಬಹುದು. ಕವಿಯ ವಾಣಿಯಲ್ಲಿ ಪ್ರಾಸಾದಗುಣವಿದೆ; ಭಾಷೆಯಲ್ಲಿ ಹದವಿದೆ. ಒಟ್ಟಿನಲ್ಲಿ, ಈ ಕವಿ ತತ್ತ್ವನಿರೂಪಣೆಗಾಗಿ ಬಳಸಿಕೊಂಡಿರುವ ನಿರ್ವಿಕಾರ ಮಾರ್ಗ, ತತ್ತ್ವಸಮನ್ವಯ ರೀತಿ, ಸಂಗೀತದ ಸೊಗಸು

ಮನೋಹರವಾಗಿವೆ. ಸಪ್ತಕಾವ್ಯಗಳು ಶಾಸ್ತ್ರನಿರೂಪಣೆ ಮಾಡುವ ಕೃತಿಗಳಾದುದರಿಂದ ಮೋಕ್ಷಾಪೇಕ್ಷಿಗಳ ಮನಸ್ಸನ್ನು ಸೆಳೆಯಬಲ್ಲವು. (ಎಂ.ಎಸ್.ಯು.ಎಸ್.)

**ಗುರುಮುಖಿ :** ಒಂದು ಪ್ರಾಚೀನ ಲಿಪಿ. ಪಂಜಾಬೀ ಲಿಪಿ ಎಂಬ ಹೆಸರೂ ಉಂಟು. ಪಂಜಾಬೀ ಭಾಷಿಕರಲ್ಲಿ ಹಿಂದೆ ಲಂಡಾ ಎಂಬ ಹೆಸರಿನ ಮಹಾಜನೀ ಲಿಪಿ ಪ್ರಚಲಿತವಿತ್ತು. ಈ ಲಿಪಿಯಲ್ಲಿ ಸ್ವರಚಿಹ್ನೆಗಳು ಬಳಕೆಯಲ್ಲಿದ್ದಿಲ್ಲ. ಈಗಲೂ ಕೆಲವೆಡೆ ಹಾಗೆಯೇ ಇದೆ. ಸಿಕ್ಖರ ಪವಿತ್ರ ಗ್ರಂಥವನ್ನು ಹಿಂದೆ ಈ ಲಿಪಿಯಲ್ಲಿಯೇ ಬರೆಯಲಾಗಿದೆ ಎಂದು ಹೇಳುತ್ತಾರೆ. ಆದರೆ ಅವಶ್ಯಕವಾದ ಸ್ವರಚಿಹ್ನೆಗಳ ಅಭಾವದಿಂದ ಆ ಧರ್ಮಗ್ರಂಥವನ್ನು ಶುದ್ಧ ರೀತಿಯಲ್ಲಿ ಉಚ್ಚರಿಸಲು ಬಾರದಾಗಿದೆ. ಗುರು ಅಂಗದ ಈ ಅಡಚಣೆಯನ್ನು ದೂರ ಮಾಡಲು ಧರ್ಮಗ್ರಂಥದ ಶುದ್ಧ ಬರೆಹಕ್ಕಾಗಿ ನಾಗರೀಲಿಪಿಯಂತೆ ಸ್ವರಚಿಹ್ನಸಹಿತವಾದ ಒಂದು ಲಿಪಿಯನ್ನು ತಯಾರಿಸಿದ. ತನ್ನ ಲಿಪಿಯಲ್ಲಿ ಈತ ಕಾಶ್ಮೀರದ ಶಾರದಾ, ಕಾಂಗಡಾದ ಠಾಕುರೀ, ಮಧ್ಯಪ್ರದೇಶದ ನಾಗರೀ ಇತ್ಯಾದಿ ಲಿಪಿಗಳಿಂದ ಮೂವತ್ತುನಾಲ್ಕು ವರ್ಣಗಳನ್ನು ತೆಗೆದುಕೊಂಡಿದ್ದಾನೆ. ಡ ವರ್ಣದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿ ತೆಗೆದುಕೊಂಡಿದ್ದರಿಂದ ಈ ಲಿಪಿಯಲ್ಲಿ ಮೂವತ್ತೈದು ವರ್ಣಗಳು ಪ್ರಚಲಿತವಿವೆ. ಐದನೆಯ ಗುರುವಾದ ಅರ್ಜನ್‌ದೇವ್ ಈ ಲಿಪಿಯಲ್ಲಿ ಆದಿಗ್ರಂಥವನ್ನು ಬರೆದು ಧಾರ್ಮಿಕ ಲಿಪಿಯಾಗಿ ಗ್ರಹಿಸುವಂತೆ ಮಾಡಿದ. ಪ್ರಕೃತ ಲಿಪಿ ಗುರುಮುಖದಿಂದ ಬಂದುದರಿಂದ ಮುಂದೆ ಇದಕ್ಕೆ ಗುರುಮುಖಿ ಎಂಬ ಹೆಸರು ರೂಢಿಯಾಯಿತು.

ಈ ಲಿಪಿಯಲ್ಲಿ ಮೂರು ಸ್ವರ ಮತ್ತು ಮೂವತ್ತೆರಡು ವ್ಯಂಜನಗಳನ್ನು ಬಳಸಲಾಗಿದೆ. ಮೂಲ ಸ್ವರಗಳಿಗೆ ಮಾತ್ರಾಗಳನ್ನು ಜೋಡಿಸಿ ಅನ್ಯಸ್ವರವನ್ನು ಸೃಷ್ಟಿಸುತ್ತಾರೆ. ಉಡಾ, ಆಯಾ, ಇಡೀ, ಇಹಾ ಇತ್ಯಾದಿ ಅವುಗಳ ಹೆಸರುಗಳು. ಈ ವರ್ಣಮಾಲೆಯಲ್ಲಿ ಸಂಯುಕ್ತಾಕ್ಷರಗಳಿಲ್ಲ; ಆದರೆ ಸಂಯುಕ್ತಧ್ವನಿ ಮಾತ್ರ ಇದೆ. ಉದಾ : ಸರಿತಾ>ಸ್ತ್ರಿತಾ. ಈ ಲಿಪಿಯಲ್ಲಿ ಪದಾಂತ್ಯ ಅ ಕಾರ ಪ್ರಾಯಶಃ ಲೋಪವಾಗುತ್ತದೆ. ಉದಾ : ಪಾಪ>ಪಾಪ್, ಪುನ>ಪುನ್. ಶಬ್ದದ ಪ್ರಾರಂಭದಲ್ಲಿ ಸಘೋಷ ಮಹಾಪ್ರಾಣ ವರ್ಣ ಬಂದರೆ ಅದರ ಉಚ್ಚಾರ ಮಾತ್ರ ಅಘೋಷ ಅಲ್ಪ ಪ್ರಾಣದಂತೆ ಆಗಿ ಅದರ ಮೇಲೆ ಘಾತ ಹೆಚ್ಚಾಗುತ್ತದೆ. ಉದಾ : ಭಗವಾನ ಶಬ್ದದ ಉಚ್ಚಾರ ಪಹಗ್‌ವಾನ ಎಂದಾಗುತ್ತದೆ. ಸಂಯುಕ್ತ ವರ್ಣದಲ್ಲಿ ಬರುವ ಎರಡು ವರ್ಣಗಳ ಉಚ್ಚಾರವನ್ನು ಸ್ವತಂತ್ರ ರೀತಿಯಿಂದ ಮಾಡ ಬಹುದು. ಉದಾ : ಪ್ರಲಯ>ಪರ್‌ಲಯ; ಪ್ರತಾಪ>ಪರ್‌ತಾಪ; ಕೃಷ್ಣ>ಕಿರ್‌ಸನ. *

**ಗುರುಲಿಂಗವಿಭು :** ಸು. 1550. ಭಿಕ್ಷಾಟನ ಚರಿತ್ರೆ ಎಂಬ ಕನ್ನಡ ಕಾವ್ಯವನ್ನು ಬರೆದಿದ್ದಾನೆ. ಈತ ತನ್ನನ್ನು ಕವಿರಾಯ ಎಂದೂ ಆಶುಮಧುರಂ ಚಿತ್ರ ವಿಸ್ತಾರವೆಂದೆಂಬ ನಾಲ್ಕು ಬಗೆಯ ವಿರಚಿಸಲು ಬಲ್ಲವಸ್ತುಕ ಕವೀಂದ್ರರ, ವರ್ಣಕ ಕವೀಶ್ವರರ ಕರ್ಣಾಭರಣ ಎಂದು ಕರೆದುಕೊಂಡಿದ್ದಾನೆ. ಇದನ್ನು ನೋಡಿದರೆ ಭಿಕ್ಷಾಟನ ಚರಿತ್ರೆಯನ್ನಲ್ಲದೆ ಈತ ಇತರ ಕೃತಿಗಳನ್ನೂ ಬರೆದಿರುವಂತೆ ತೋರುತ್ತದೆ. ಆದರೆ ಸಿಕ್ಕಿರುವುದು ಇದೊಂದೇ ಕೃತಿ.

ವಾರ್ಧಕ ಷಟ್ಪದಿಯಲ್ಲಿರುವ ಈ ಕಾವ್ಯ ಮೂರು ಸಂಧಿಗಳಿಂದ ಕೂಡಿ ಒಟ್ಟು 150 ಪದ್ಯಗಳನ್ನೊಳಗೊಂಡಿರುವ ಒಂದು ಚಿಕ್ಕ ಕೃತಿ. ಶಿವ, ಅಜಕಪಾಲವನ್ನು ಹಿಡಿದು ಭಿಕ್ಷಾಟನೆ ಮಾಡಿದುದು ಈ ಕಾವ್ಯದ ವಸ್ತು. ಧರೆಯೊಳಗೆ ಗೋಪಾಲ ಕೃಷ್ಣ ಹರಿನಾಮ ಸಾವಿರ ಗೋಪಿಯರೊಳಿಹುದ ನೋಡಬೇಕೆಂದು ಪುರಹರನು ಭಿಕ್ಷುಕನಾಗಿ ದ್ವಾರಾವತಿಗೆ ಬಂದ ಪರಿಯ ನಾನು ವರ್ಣಿಸುವೆನು–ಎಂದು ಕಥಾ ಬೀಜವನ್ನು ಸೂಚಿಸಿ ಗ್ರಂಥವನ್ನು ಪ್ರಾರಂಭಿಸುತ್ತಾನೆ. ಅಜಕಪಾಲಕ್ಕೆ ರಕ್ತವನ್ನು ತುಂಬುವಂತೆ ಕೃಷ್ಣನಿಗೆ ಹೇಳಲು, ಕೃಷ್ಣ ತನ್ನ ತಲೆಯಿಂದ ರಕ್ತದ ಧಾರೆಯನ್ನು ಹರಿಸಿ ಅದನ್ನು ತುಂಬಲು ಪ್ರಯತ್ನಿಸುತ್ತಾನೆ. ಆದರೆ ಎಷ್ಟು ರಕ್ತ ಹರಿಸಿದರೂ ಅದು ತುಂಬುವುದಿಲ್ಲ. ಶಿವ, ಕುರುಕ್ಷೇತ್ರದ ಯುದ್ಧದಲ್ಲಿ ಕೌರವ ಪಾಂಡವ ಸೈನ್ಯಗಳಿಂದ ಸುರಿಯುವ ರಕ್ತದಿಂದ ಅದು ತುಂಬುತ್ತದೆಂದು ಹೇಳುತ್ತಾನೆ. ಮುಂದೆ ಕುರುಕ್ಷೇತ್ರದ ಯುದ್ಧ ನಡೆದು ಅಲ್ಲಿನ ರಕ್ತವೆಲ್ಲ ಕಪಾಲಕ್ಕೆ ಹರಿದರೂ ಅದು ಅರ್ಧ ಮಾತ್ರ ತುಂಬುತ್ತದೆ. ಆಗ ಶಿವ ಅದನ್ನು ಎಸೆದು ಕಾಳ ಮೇಘಗಳ ನೀರನ್ನೇ ಆಹಾರ ಮಾಡಿಕೊಂಡು ತೃಪ್ತಿ ಹೊಂದುವಂತೆ ಆ ಬ್ರಹ್ಮಕಪಾಲಕ್ಕೆ ಹೇಳಿ ಹೊರಟುಹೋಗುತ್ತಾನೆ. ಇದಿಷ್ಟು ಭಿಕ್ಷಾಟನ ಚರಿತ್ರೆಯ ಕಥೆ. ಇದನ್ನೊಂದು ಚಿಕ್ಕ ಕಾವ್ಯವನ್ನಾಗಿ ರಚಿಸಿ ಕೊಟ್ಟಿದ್ದಾನೆ, ಗುರುಲಿಂಗ ವಿಭು.

ಈ ಕಥೆಯನ್ನು ಹಿಂದೆ ಸೂತಮುನಿಗಳು ನೈಮಿಷಾರಣ್ಯದಲ್ಲಿ ಸನಕಾದಿ ಮುನಿಗಳಿಗೆ ಹೇಳಿದರಂತೆ. ಆ ಕ್ರಮದಲ್ಲಿ ಇಲ್ಲಿ ಇದನ್ನು ನಿರೂಪಿಸಲಾಗಿದೆ. ಗ್ರಂಥದ ಪ್ರಾರಂಭದಲ್ಲಿ ನಂದೀಶನನ್ನು ಸ್ತುತಿಸಿ ಅನಂತರ ಕವಿ ಬಸವ, ಚನ್ನಬಸವ, ಅಲ್ಲಮ, ರೇವಣಾರ್ಯ, ಮಡಿವಾಳ ಮಾಚ, ಸಿದ್ಧರಾಮ, ಮಾದಿರಾಜರನ್ನು ಸ್ಮರಿಸಿದ್ದಾನೆ. ಕೇಳ್ವ ರಸಿಕರ ಹೃದಯವೆಂಬ ರಂಗಮಧ್ಯದೊಳು ನರ್ತಿಸುವ ನಚ್ಚಣೆಯಂತೆ ಶಿವನ ಭಿಕ್ಷಾಟನ ಕೃತಿ ಮೋಹನವನೀವುದು–ಎಂದು ತನ್ನ ಕೃತಿಯನ್ನು ಕುರಿತು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಗುರುಲಿಂಗ ವಿಭು. ಈ ಕೃತಿಯಲ್ಲಿ ಅಲ್ಲಲ್ಲಿ ಬರುವ ವರ್ಣನೆಗಳು ಈತ ತಕ್ಕಮಟ್ಟಿಗೆ ಒಳ್ಳೆಯ ಕವಿ, ಷಟ್ಪದಿಗಳ ರಹಸ್ಯವನ್ನು ಬಲ್ಲವನು–ಎಂಬುದಕ್ಕೆ ಸಾಕ್ಷಿಯಾಗಿವೆ. ಈ ಗ್ರಂಥಕ್ಕೆ ಒಂದು ಕನ್ನಡ ವ್ಯಾಖ್ಯಾನವಿರುವುದು ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ. (ಎಚ್.ಟಿ.)

**ಗುರುವಾಯೂರು :** ಕೇರಳದ ರಾಜ್ಯದ ತ್ರಿಶೂರ್ ಜಿಲ್ಲೆಯಲ್ಲಿರುವ ವೈಷ್ಣವರ ಪ್ರಸಿದ್ಧ ಯಾತ್ರಸ್ಥಳ. 8ನೆಯ ಶತಮಾನದವರೆಗೆ ಇದನ್ನು ಕುರುವಾಯೂರು ಎನ್ನಲಾಗಿತ್ತು. ಮೇಲ ಪೂಂತೂರ್ ಸಂತ ಇದನ್ನು ಗುರುವಾಯೂರು ಎಂದು ಕರೆದ. ಇಲ್ಲಿ ಗುರುವಾಯೂರಪ್ಪನ ದೇವಸ್ಥಾನವಿದೆ. ಇಲ್ಲಿಯ ವಿಷ್ಣು ವಿಗ್ರಹ ಶಂಖ, ಚಕ್ರ ಗದಾಪದ್ಮಧರನಾಗಿರುವುದರಿಂದ ಇದನ್ನು ಪೂರ್ಣಾವತಾರ ವಿಗ್ರಹವೆಂದು ಕರೆಯುತ್ತಾರೆ. ಇಂಥ ವಿಗ್ರಹಗಳು ಈಗ ಇತರ ಕಡೆಗಳಲ್ಲೂ ತುಂಬ ಸಾಮಾನ್ಯವಾಗಿವೆ. ಈ ವಿಗ್ರಹ

ಗುರುವಾಯೂರಪ್ಪನ್ ದೇವಾಲಯ

ಸ್ಫಟಿಕ ಶಿಲೆಯಲ್ಲಿ ರಚಿತವಾಗಿರುವದರಿಂದ ಇದಕ್ಕೆ ಒಂದು ವೈಶಿಷ್ಟ್ಯ ಬಂದಿದೆ. ಈ ವಿಗ್ರಹವನ್ನು ಮಹಾವಿಷ್ಣುವಿನಿಂದ ಬ್ರಹ್ಮ, ಸುತಪ, ಕಶ್ಯಪ, ವಾಸುದೇವ, ಕೃಷ್ಣ– ಇವರು ಪರಂಪರೆಯಾಗಿ ಪಡೆದರೆಂದೂ ಕೃಷ್ಣ ಸ್ವರ್ಗಾರೋಹಣ ಮಾಡುವಾಗ ಇದನ್ನು ಅವನಿಗೆ ಕೊಡಲು ಉದ್ಧವನ ಮುಖೇನ ಬೃಹಸ್ಪತಿಗೆ ನಿರೂಪ ಕಳುಹಿಸಿದನೆಂದೂ ಆದರೆ ಬೃಹಸ್ಪತಿ ದ್ವಾರಕೆಗೆ ಬರುವದರೊಳಗೆ ಇದು ಸಮುದ್ರದಲ್ಲಿ ಮುಳಗಿ ಬಿಟ್ಟಿತ್ತೆಂದೂ ಬೃಹಸ್ಪತಿ ತನ್ನ ಶಿಷ್ಯ ವಾಯುವಿನ ಸಹಾಯದಿಂದ ಈ ವಿಗ್ರಹವನ್ನು ಮೇಲಕ್ಕೆ ತಂದು ಶಿವನ ಪ್ರೇರಣೆಯಂತೆ ಸಮುದ್ರದಂಡೆಯ ಮೇಲೆ ಪ್ರತಿಷ್ಠೆ ಮಾಡಿದನೆಂದೂ ಸ್ಥಳಪುರಾಣವಿದೆ. ವಾಯುವಿನ ನೆರವಿನಿಂದ ಗುರು ವಿಗ್ರಹವನ್ನು ಅಲ್ಲಿ ಪ್ರತಿಷ್ಠೆ ಮಾಡಿದ್ದರಿಂದ ಆ ಸ್ಥಳಕ್ಕೆ ಗುರುವಾಯೂರು ಎಂದು ಹೆಸರು ಬಂತು. ಹದಿನಾರನೆಯ ಶತಮಾನದಲ್ಲಿ ಈ ದೇವರ ಸ್ತೋತ್ರರೂಪವಾದ ನಾರಾಯಣೀಯಂ ಎಂಬ ಗ್ರಂಥ ಈ ಪ್ರಾಂತ್ಯದಲ್ಲಿ ಪ್ರಸಿದ್ಧಿ ಪಡೆಯಿತು. ಇಲ್ಲಿಯ ಪೂಜೆ ಇತರ ಪೂಜೆಯಂತಲ್ಲದೆ ನಿಷ್ಕಲ ಬ್ರಹ್ಮಪೂಜೆಯಾಗಿದೆ. ಭಗವಾನ್ ಶಂಕರಾಚಾರ್ಯರು ಕೆಲಕಾಲ ಇಲ್ಲಿದ್ದು ಇಲ್ಲಿನ ಪೂಜಾ ಪದ್ಧತಿಯಲ್ಲಿ ಸುಧಾರಣೆಗಳನ್ನು ಮಾಡಿದರೆಂದೂ ಪ್ರತೀತಿ.

ನಂತರ 15ನೆಯ ಶತಮಾನದಲ್ಲಿ ಚೆನ್ನ ನಾರಾಯಣ ನಂಬೂದಿರಿ ತಾಂತ್ರಿಕ ಶಾಸ್ತ್ರದ ಪದ್ಧತಿಯಂತೆ ಪೂಜೆಯನ್ನು ಪ್ರಾರಂಭ ಮಾಡಿದರು. ಇಂದಿಗೂ ಆ ಮನೆತನದವರೇ ದೇವರ ಅರ್ಚಕರಾಗಿದ್ದಾರೆ. ಪ್ರಧಾನ ಅರ್ಚಕರನ್ನು ಮೇಲ್‌ಸಂತಿ ಎಂದು ಕರೆಯುತ್ತಾರೆ. ಇಲ್ಲಿ ವೈದಿಕ ನಿಯಮದಂತೆ ಪೂಜೆಯನ್ನು ಕಟ್ಟುನಿಟ್ಟಾಗಿ ಮಾಡುವರು. ಚಾಂದ್ರಮಾನ ಸಂವತ್ಸರದ ಪ್ರತಿಮಾಸದ ಪೂರ್ಣಿಮೆಯಂದು ವಿಶೇಷ ಪೂಜೆಗಳು ನಡೆಯುತ್ತದೆ.

14ನೆಯ ಶತಮಾನದ ತಮಿಳು ಸಾಹಿತ್ಯ 'ಕೊಕ ಸಂದೇಸಮ್'ನಲ್ಲಿ ಕುರುವಾಯೂರು ಎಂದು ಇದೆ. 16ನೆಯ ಶತಮಾನಕ್ಕೆ ಮೊದಲು ಕುರುವಾಯೂರು ಎಂದು ಅನೇಕ ಸಲ ನಮೂದಿಸಲಾಗಿದೆ. ಪ್ರಾಚೀನ ತಮಿಳಿನಲ್ಲಿ ಕುರುವೈ ಎಂದರೆ ಸಮುದ್ರ, ತೀರದಲ್ಲಿರುವ ಗ್ರಾಮವನ್ನು ಕುರುವಾಯೂರು ಎಂದು ಕರೆದಿರಬಹುದು. ಪ್ರಸಿದ್ಧ ಇತಿಹಾಸ ಪ್ರಾಧ್ಯಾಪಕರಾದ ಕೆ.ವಿ. ಕೃಷ್ಣಅಯ್ಯರ್ ಪ್ರ.ಶ.ಪೂ. 321–297ರಲ್ಲಿ ಬ್ರಾಹ್ಮಣರು ಬಂದು ಕೊಡುಂಗಲ್ಲೂರ್‌ನಲ್ಲಿ ನೆಲಸಿದರೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಊರು ಗುರುವಾಯೂರು ಹತ್ತಿರದಲ್ಲಿದೆ. ಗುರುವಾಯೂರು ದಾಖಲೆಯಲ್ಲಿ ತ್ರಿಕ್ಕುನವಾಯ್ ಶಿವದೇವಾಲಯಕ್ಕೆ ಈ ದೇವಾಲಯ ಅಧೀನವಾಗಿತ್ತೆಂದು ಇದೆ. 1755ರಲ್ಲಿ ಡಚ್ಚರು ಶಿವಾಲಯವನ್ನು ನಾಶಪಡಿಸಿದರೆಂದು ಡಚ್ಚರು ಮತ್ತು ಬ್ರಿಟಿಷರ ದಾಖಲೆಗಳಲ್ಲಿದೆ. ತ್ರಿಕ್ಕುನವಾಯ್ ಗುರುವಾಯೂರಿಗೂ ಮತ್ತು ಕೊಡುಂಗಲ್ಲೂರಿಗೂ ಮಧ್ಯದಲ್ಲಿದೆ.

ಇದು 17ನೆಯ ಶತಮಾನದಲ್ಲಿ ಕೇರಳದಲ್ಲಿ ಉದಯಿಸಿದ ಭಕ್ತಿ ಪಂಥದ ಕೇಂದ್ರ ಸ್ಥಾನವೆನಿಸಿದೆ. ಪೂಂತಾನಂ, ಮೇಲಪುಂತೂರ್, ಬಿಲ್ವಮಂಗಲಂ ಮತ್ತು ಮಾನವೇದನ್ ಎಂಬ ಸಂತರು ಇಲ್ಲಿದ್ದರೆಂದು ತಿಳಿದುಬರುತ್ತದೆ. ಈ ಸಂತರ ಪುಣ್ಯಸ್ಮರಣೆಗಾಗಿ ಪ್ರತಿವರ್ಷವೂ ಕೇರಳದ ಅನೇಕ ಹಿಂದೂಗಳು ಇಲ್ಲಿಗೆ ಬರುವುದರಿಂದ ಈ ಸ್ಥಳದ ಮಹತ್ತ್ವ ಹೆಚ್ಚಿದೆ.

ಇಲ್ಲಿಯ ಪೂಜಾ ವಿಶೇಷದಿಂದ ಭಕ್ತರ ರೋಗರುಜಿನಗಳೂ ಸಂಕಷ್ಟಗಳೂ ದೂರವಾಗುತ್ತವೆಂಬ ನಂಬಿಕೆಯುಂಟು. (ಜಿ.ಎಚ್.)

**ಗುರುಶಾಂತಶಾಸ್ತ್ರಿ, ಶಿರಸಿ :** ಸು. 1881–1961. ಕನ್ನಡ ಮತ್ತು ಸಂಸ್ಕೃತ ಭಾಷಾಸಾಹಿತ್ಯಗಳಲ್ಲೂ ಅನೇಕ ಶಾಸ್ತ್ರಗಳಲ್ಲೂ ಪಂಡಿತರು. ವಿದ್ಯಾಭ್ಯಾಸಕ್ಕಾಗಿ ಇವರು 20ನೆಯ ಶತಮಾನದ ಆರಂಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಿಂದ ಮೈಸೂರಿಗೆ ಬಂದರು. ಪಿ. ಆರ್. ಕರಬಸವಶಾಸ್ತ್ರಿಗಳ ಹತ್ತಿರ ಕಲಿತು ಉಭಯಭಾಷಾಪಂಡಿತರಾಗಿ ವೇದಾಧ್ಯಯನದಲ್ಲಿ ಬಲ್ಲಿದರೆನಿಸಿಕೊಂಡು ಪ್ರಖ್ಯಾತರಾದರು. ವಿಶೇಷವಾಗಿ ಶ್ರೀಕಂಠಭಾಷ್ಯ, ಶ್ರೀಕರಭಾಷ್ಯ, ಸಿದ್ಧಾಂತ ಶಿಖಾಮಣಿ, ಕ್ರಿಯಾಸಾರ, ಲಿಂಗಧಾರಣಚಂದ್ರಿಕೆ, ವೀರಶೈವಾನಂದಚಂದ್ರಿಕೆ, ಅನುಭವಸಾರ, ಶಿವಾದ್ವೈತಮಂಜರಿ, ಧರ್ಮಶಿರೋಮಣಿ, ಶತಕತ್ರಯ ಮೊದಲಾದ ವೀರಶೈವ ಮತಗ್ರಂಥಗಳು ಇವರಿಗೆ ಮುಖೋದ್ಗತವಾಗಿದ್ದುವು.

1930ರಲ್ಲಿ ರೇಣುಕ ವಿಜಯವನ್ನೂ 1951ರಲ್ಲಿ ನಂದಿಕೇಶ್ವರ ಶಿವಾಚಾರ್ಯನ ಲಿಂಗಧಾರಣಚಂದ್ರಿಕೆಯನ್ನೂ 1960ರಲ್ಲಿ ವೀರಶೈವಾನಂದಚಂದ್ರಿಕೆಯನ್ನೂ ಇವರು ಕನ್ನಡದಲ್ಲಿ ಬರೆದು ಪ್ರಕಟಿಸಿದರು; ವಿದ್ವಾಂಸರುಗಳ ಭಾಷಣ ಸಂಗ್ರಹವಾದ ಉಪನ್ಯಾಸ ಸಂಗ್ರಹ, ಲಿಂಗಾರ್ಚನ ಪ್ರಯೋಗ (ಶಿವಪೂಜಾವಿಧಿ), ನ್ಯಾಯಶತಕದ ಟೀಕೆ ಟಿಪ್ಪಣಿ, ಈಶಾವಾಸ್ಯ, ಕೇನ, ಸಿದ್ಧಾಂತ ಶಿಖೋಪನಿಷತ್ತುಗಳ ಶಾಂಕರೀ ವ್ಯಾಖ್ಯಾನದ ತಾತ್ಪರ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಲ್ಲದೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಮೇಲೆ ಒಂದು ಪುಸ್ತಕ ಬರೆದರು.

ಶಾಸ್ತ್ರಿಗಳು ಪಂಚಾಚಾರ್ಯಪ್ರಭಾ, ಶರಣಸಾಹಿತ್ಯ ಮುಂತಾದ ಮಾಸಿಕಗಳಲ್ಲಿ ವಿದ್ವತ್‌ಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಕೆಲಕಾಲ ಪಂಚಾಚಾರ್ಯಪ್ರಭಾದ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಶಾಸ್ತ್ರಿಗಳು ಹಲವು ವರ್ಷ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಶಕ್ತಿವಿಶಿಷ್ಟಾದ್ವೈತದ ಪ್ರಾಧ್ಯಾಪಕರಾಗಿದ್ದರು. ಮುಡುಕತೊರೆ ವೀರಶೈವ ಮತಸಂವರ್ಧಿನೀ ಸಭೆಯ ಪುರೋಭಿವೃದ್ಧಿಗೆ ಶ್ರಮಿಸಿದವರಲ್ಲಿ ಶಾಸ್ತ್ರಿಗಳೂ ಒಬ್ಬರು. ಆ ಸಭೆಯ ಆಶ್ರಯದಲ್ಲಿ ನಡೆದ ವಿದ್ವಾಂಸರ ಭಾಷಣಗಳನ್ನು ಶಾಸ್ತ್ರಿಗಳು ಸಂಗ್ರಹಿಸಿ ಪ್ರಕಟಪಡಿಸಿದ್ದಾರೆ. (ಬಿ.ಎಸ್.)

**ಗುರುಶಿಷ್ಯ ಬಾಂಧವ್ಯ :** ಶಿಕ್ಷಣ ಕಾರ್ಯದಲ್ಲಿ ನೇರವಾಗಿ ಪಾತ್ರವಹಿಸುವ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ನಡುವೆ ಇರುವ ಸಂಬಂಧ. ಯಾವ ಶಿಕ್ಷಣ ವ್ಯವಸ್ಥೆಯಲ್ಲೇ ಆಗಲಿ ಅಧ್ಯಾಪಕರು ತಮ್ಮ ಶಿಷ್ಯವೃಂದದೊಡನೆ ಹೊಂದಿರುವ ವಿಹಿತ ರೀತಿಯ ಸಂಬಂಧ ಅದರ ಯಶಸ್ಸಿಗೆ ಪ್ರಧಾನ ಕಾರಣವಾಗಬಲ್ಲುದು. ಹಿಂದಿನಿಂದಲೂ ಶಿಕ್ಷಣವೇತ್ತರು ಒತ್ತಿಹೇಳುತ್ತ ಬಂದಿರುವ ಈ ಅಂಶವನ್ನು ಈಚಿನ ಸಂಶೋಧನೆಗಳು ದೃಢಪಡಿಸಿವೆ.

ಭಾರತದಲ್ಲಿ ಗುರು ಶಿಷ್ಯ ಬಾಂಧವ್ಯ : ಅಧ್ಯಾಪಕವೃತ್ತಿ ಮಿಕ್ಕೆಲ್ಲ ದೇಶಗಳಿಗಿಂತ ಭಾರತದಲ್ಲಿ ಹೆಚ್ಚಿನ ಆದರ್ಶ ನೀತಿನಿಯಮಗಳನ್ನು ಪಾಲಿಸುತ್ತ ಬಂದಿರುವ ಅಂಶ ಸ್ಪಷ್ಟವಾಗಿದೆ. ಪ್ರಾಚೀನ ಕಾಲದಿಂದಲೂ ವಿದ್ಯಾವಂತರು ಬೋಧಿಸುವುದು ತಮ್ಮ ಭಾಗಕ್ಕೆ ಬಂದ ಕರ್ತವ್ಯವೆಂಬ ಅಂಶವನ್ನು ಅರಿತಿದ್ದರು. ಯಾವ ಆದಾಯ ಬರುವಂತಿಲ್ಲದಿದ್ದರೂ ಗುರುವಾದವ ತನ್ನ ಬಳಿಗೆ ಬಂದು ಶಿಕ್ಷಣ ಪಡೆಯಲಾಶಿಸುವ ಯಾವ ವಿದ್ಯಾರ್ಥಿಯನ್ನೂ ಸಾಮಾನ್ಯವಾಗಿ ನಿರಾಕರಿಸುವಂತಿರಲಿಲ್ಲ. ಹಾಗೂ ಬಡವಿದ್ಯಾರ್ಥಿಗಳಾದರೆ ಅವರ ಅನ್ನವಸತಿಗಳಿಗೂ ಇತರ ಆವಶ್ಯಕ ಸೌಲಭ್ಯಗಳಿಗೂ ಅವರೇ ವ್ಯವಸ್ಥೆ ಮಾಡಬೇಕಾಗಿತ್ತು. ಈ ಸಂಪ್ರದಾಯ ಮಧ್ಯಯುಗಗಳಲ್ಲೂ ಅನಂತರದ ದಿನಗಳಲ್ಲೂ ನಡೆದುಕೊಂಡು ಬಂತು. ಇಂದಿಗೂ ಬಂಗಾಳ, ಬಿಹಾರ ಮುಂತಾದೆಡೆ ಗಳಲ್ಲಿ ಇರತಕ್ಕ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ (ಟೋಲ್) ಇದನ್ನು ಕಾಣಬಹುದು. ವಿದ್ಯಾರ್ಥಿಗೆ ಇಂಥ ಸೌಕರ್ಯವನ್ನು ಏರ್ಪಡಿಸಿಕೊಟ್ಟಮೇಲೆ ಅಧ್ಯಾಪಕರು ತಡಮಾಡದೆ ಅವರ ಶಿಕ್ಷಣ ಕಾರ್ಯಕ್ರಮವನ್ನು ಆರಂಭಿಸುತ್ತಿದ್ದರು. ಹಾಗೆ ಮಾಡಿದ್ದ ಪಕ್ಷದಲ್ಲಿ ಶಿಷ್ಯನ ಪಾಪವೆಲ್ಲ ಗುರುಗಳಿಗೆ ವರ್ಗವಾಗುವುದೆಂದು ಕೂರ್ಮಪುರಾಣ ಸೂಚಿಸುತ್ತದೆ. ಯೋಗ್ಯರೆನಿಸಿದ ವಿದ್ಯಾರ್ಥಿಗಳಿಗೆ ತಮ್ಮ ಜ್ಞಾನವನ್ನು ದಾನಮಾಡದೆ ಇರತಕ್ಕ ಅಧ್ಯಾಪಕರ ಬಗ್ಗೆ ದೇವತೆಗಳು ಆಗ್ರಹಗೊಳ್ಳುವರೆಂದು ಛಾಂದೋಗ್ಯ ಉಪನಿಷತ್ತು ಎಚ್ಚರಿಸುತ್ತದೆ. ಕೆಲವು ವಿಶಿಷ್ಟ ತಂತ್ರಗಳನ್ನು ಮಾತ್ರ ವಿದ್ಯಾರ್ಥಿಯ ಯೋಗ್ಯತೆಯನ್ನು ಐದು ವರ್ಷಕಾಲ ಚೆನ್ನಾಗಿ ಪರೀಕ್ಷಿಸಿಯೇ ಬೋಧಿಸಬೇಕೆಂಬ ನಿಯಮವೇನೋ ಇತ್ತು. ವೈದ್ಯ ಶಿಕ್ಷಣಕ್ಕೆ ಆರು ತಿಂಗಳ ಕಾಲ ಪರೀಕ್ಷೆ ಮಾಡಿನೋಡಬೇಕಾಗಿತ್ತು. ಅಧ್ಯಾಪಕರೊಬ್ಬರು ವಿದ್ಯಾರ್ಥಿಗೆ ವೇದಶಿಕ್ಷಣವನ್ನು ನಿರಾಕರಿಸಿದ್ದಕ್ಕಾಗಿ ಮುಂದಿನ ಜನ್ಮದಲ್ಲಿ ವೃಕ್ಷವಾಗಿ ಜನಿಸಬೇಕಾಗಿ ಬಂದ ಕಥೆಯನ್ನು ಸ್ಮೃತಿಕೌಸ್ತುಭ ಉಲ್ಲೇಖಿಸಿದೆ. ಬೃಹಸ್ಪತಿಯ ದೃಷ್ಟಿಯಲ್ಲಿ ಜ್ಞಾನದಾನ ಅತ್ಯಂತ ಹೆಚ್ಚಿನದೆನಿಸಿತ್ತು. ಕೆಲವು ಶೈಕ್ಷಣಿಕ ಕಾರಣಗಳಿಂದಾಗಿ ಕೆಲವರಿಗೆ ಬೋಧಿಸದಿರಬಹುದೆಂಬ ಅಂಶವೂ ಅಂದು ಪ್ರಚಾರದಲ್ಲಿತ್ತು. ನಿರುಕ್ತಿಯಲ್ಲಿ ತಿಳಿಸುವಂತೆ ನೈತಿಕ ಮತ್ತು ಬೌದ್ಧಿಕ ಶಕ್ತಿ ಇಲ್ಲದವರಿಗೆ, ಅದರಲ್ಲೂ ಪವಿತ್ರ ಸಾಹಿತ್ಯವೆನಿಸಿದ ವೇದಾಧ್ಯಯನಕ್ಕೆ ಅವಕಾಶ ಕೊಡಬಾರದೆಂಬ ಸಂಪ್ರದಾಯವಿತ್ತು. ಆದರೆ ಬೌದ್ಧಶಿಕ್ಷಣಪದ್ಧತಿಯಲ್ಲಿ ಮಂದಬುದ್ಧಿಯವರಿಗೂ ಶಿಕ್ಷಣವೀಯಬೇಕೆಂಬ ಸಂಪ್ರದಾಯವಿತ್ತು. ತಕ್ಷಶಿಲೆಯಲ್ಲಿ ಅಂಥ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಆದರೆ ಶಿಕ್ಷಣದಿಂದ ಹೆಚ್ಚಿನ ಪ್ರಯೋಜನ ಪಡೆಯಲಾರರೆಂಬ ಅರಿವಾದಾಗ ಅಂಥವರಿಗೆ ಶಿಕ್ಷಣವನ್ನು ಮುಗಿಸುವಂತೆ ಬುದ್ಧಿ ಹೇಳುತ್ತಿದ್ದರು.

ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಗಳು ಗುರುಗಳಿಗೆ ಇಷ್ಟೇ ಬೋಧನೆಯ ಶುಲ್ಕ ಕೊಡಬೇಕೆಂಬ ಯಾವ ನಿಯಮವೂ ಇರಲಿಲ್ಲ. ಅಧ್ಯಾಪಕರ ಕರ್ತವ್ಯವೇ ಬೋಧಿಸುವ ಕಾರ್ಯವಾಗಿತ್ತು. ಬಡವನೆಂಬ ಕಾರಣದಿಂದ ಯಾರಿಗೂ ಜ್ಞಾನ ಬೋಧನೆಯನ್ನು ನಿರಾಕರಿಸುವಂತಿರಲಿಲ್ಲ. ಹಾಗೂ ತಾನು ಕಲಿತ ಜ್ಞಾನ ಜೀವನೋಪಾಯಕ್ಕೆ ಮಾತ್ರವೆಂದು ಪರಿಗಣಿಸುವವರನ್ನು ಕಾಳಿದಾಸನಂಥ ಸಾಹಿತಿಗಳೂ ಟೀಕಿಸಿರುವರು (ಮಾಳವಿಕಾಗ್ನಿಮಿತ್ರ). ಶುಲ್ಕವನ್ನು ಅಪೇಕ್ಷಿಸಿ, ನಿಗದಿಯಾದ ಹಣಕ್ಕೆ ಬೋಧಿಸುವ ಅಧ್ಯಾಪಕ ಶ್ರಾದ್ಧವೇ ಮುಂತಾದ ಕರ್ಮಗಳಿಗೆ ಆಹ್ವಾನ ಯೋಗ್ಯನಲ್ಲವೆಂದು ಸ್ಮೃತಿಗಳು ಸೂಚಿಸುತ್ತವೆ. ಹಾಗೆ, ಗೊತ್ತುಮಾಡಿದ ಹಣಕ್ಕೆ ವಿದ್ಯೆ ಹೇಳಿದರೆ ಅಧ್ಯಾಪಕ ಮತ್ತು ಶಿಷ್ಯರು ಇಬ್ಬರೂ ನರಕಕ್ಕೆ ಹೋಗುವರೆಂದು ಸೌರಪುರಾಣ ಸೂಚಿಸುತ್ತದೆ. ಆದರೆ ವಿದ್ಯಾರ್ಥಿಗಳಿಂದ ಯಾವ ಪ್ರತಿಫಲವನ್ನೂ ಪಡೆಯಕೂಡದೆಂಬ ನಿಷೇಧವೇನು ಇರಲಿಲ್ಲ. ಕೇವಲ ಮುಂಚೆಯೇ ಗೊತ್ತುಮಾಡಿಕೊಂಡ ನಿಷ್ಕರ್ಷಿತ ಹಣದಾಸೆಗೆ ಪಾಠ ಹೇಳುವುದನ್ನು ಮಾತ್ರ ನಿಷೇಧಿಸಿತ್ತು. ಇಂಥ ಸಂಪ್ರದಾಯ ಪೆರಿಕ್ಲೀಸ್ ಪೂರ್ವದ ಗ್ರೀಸಿನಲ್ಲೂ ಇತ್ತು. ಗುರುಶಿಷ್ಯರ ಅನ್ಯೋನ್ಯ ಬಾಂಧವ್ಯ ಪರಸ್ಪರ ಅಭಿಮಾನ ಗೌರವಗಳ ಮೇಲೆ ರೂಪುಗೊಂಡಿರಬೇಕೇ ಹೊರತು ಆರ್ಥಿಕ ಅವಲಂಬನೆಯ ಮೇಲಲ್ಲ ಎಂಬ ಭಾವನೆ ಅಲ್ಲಿ ಪ್ರಚಾರದಲ್ಲಿತ್ತು. ಅನಂತರ ಬಂದ ಸೋಫಿಸ್ಟರು ಮಾತ್ರ ಹಣಪಡೆದು, ವಿದ್ಯಾರ್ಥಿ ಕೇಳಿದ ವಿದ್ಯೆಕಲಿಸುವ ಸಂಪ್ರದಾಯವನ್ನು ಆಚರಣೆಗೆ ತಂದರು. ಮೊದಮೊದಲು ಈ ಪರಿವರ್ತನೆಯನ್ನು ಶಿಕ್ಷಣವೇತ್ತರು ಅಲ್ಲಗಳೆದರೂ ಪ್ರ.ಶ.ಪೂ. ಮೂರನೆಯ ಶತಮಾನದ ವೇಳೆಗೆ ಅದು ಅಲ್ಲಿ ಸಾಮಾನ್ಯ ಸಂಪ್ರದಾಯವಾಗಿ ಹೋಯಿತು. ಭಾರತದಲ್ಲಿ ಮಾತ್ರ ಸಹಸ್ರಾರು ವರ್ಷಗಳ ಹಿಂದೆ ಆರಂಭವಾದ ಈ ಸಂಪ್ರದಾಯ ಇಂದಿಗೂ ಕೆಲವು ಪಾಠಶಾಲೆಗಳಲ್ಲಿ ಉಳಿದುಕೊಂಡೇ ಬಂದಿದೆ.

ಶಿಷ್ಯ ಸಲ್ಲಿಸಲಾಶಿಸುವ ಗೌರವಧನವನ್ನು (ಗುರುದಕ್ಷಿಣೆ) ಅಧ್ಯಾಪಕ ಆ ಶಿಕ್ಷಣ ಮುಗಿದ ಅನಂತರವೇ ಸ್ವೀಕರಿಸತಕ್ಕದ್ದೆಂಬ ಸಂಪ್ರದಾಯವಿತ್ತು. ಯಾಜ್ಞವಲ್ಕ್ಯ ತನ್ನ ಶಿಷ್ಯನಾದ ಜನಕನಿಂದ ಗುರುದಕ್ಷಿಣೆಯನ್ನು ಅದೇ ಕಾರಣಕ್ಕಾಗಿ ಅನೇಕ ವೇಳೆ ತಿರಸ್ಕರಿಸಿದ ಉಲ್ಲೇಖವುಂಟು (ಬೃಹದಾರಣ್ಯಕ ಉಪನಿಷತ್). ಕೆಲವರ ದೃಷ್ಟಿಯಲ್ಲಾದರೂ ಇದು ಸೂಕ್ತವೆನಿಸಿರಲಾರದು. ಅಧ್ಯಾಪಕರೂ ಜೀವಿಸಿರಬೇಕಲ್ಲವೇ? ಅದಕ್ಕಾಗಿಯೇ ಒಂದಕ್ಷರ ಕಲಿಸಿದ್ದಕ್ಕೂ ಎಷ್ಟು ಕೊಟ್ಟರೂ ಸಾಲದೆಂಬ ಉಲ್ಲೇಖವುಂಟು (ಪರಾಶರಸ್ಮೃತಿಯ ಮೇಲಿನ ಮಾಧವರ ವ್ಯಾಖ್ಯಾನ). ಅನೇಕ ವಿದ್ಯಾರ್ಥಿಗಳಿಗೆ ಒಟ್ಟಿಗೆ ಗುರುದಕ್ಷಿಣೆ ಕೊಡುವುದು ಕಷ್ಟವಾಗುತ್ತಿದ್ದಿರಬೇಕು; ಆದ್ದರಿಂದಲೇ ಅಂದಿಗಂದಿಗೆ ಗುರುದಕ್ಷಿಣೆ ಕೊಡಬಹುದಾದ ಮತ್ತು ಪಡೆಯಬಹುದಾದ ಅವಕಾಶವನ್ನೂ ಕಲ್ಪಿಸಿರುತ್ತದೆ. ಎಂದರೆ ಶಿಕ್ಷಣ ಮುಗಿಯುವವರೆಗೆ ಗುರುದಕ್ಷಿಣೆ ಸ್ವೀಕರಿಸಬಾರದೆಂಬ ವಿಧಿವಾಕ್ಯವಿದ್ದರೂ ಹಾಗೆ ಮಾಡದೆ ಅದನ್ನು ವಿದ್ಯಾರ್ಥಿಗಳು ಅವಕಾಶವಾದಾಗ ಕೊಡುತ್ತಿದ್ದರು. ಕೊಡಲು ಶಕ್ತರಾದವರು ಗುರುಕ್ಷಿಣೆ ಕೊಡದೆ ತಪ್ಪಿಸಿಕೊಳ್ಳುವಂತಿರಲಿಲ್ಲ. ಅದರಿಂದ ಅವರು ಸಮಾಜದ ನಿಂದೆಗೆ ಗುರಿಯಾಗಬೇಕಾಗುತಿತ್ತು. ವಿದ್ಯಾರ್ಥಿ ದಿಶೆಯಲ್ಲಿ ಶಿಷ್ಯನಿಗೆ ದೊರಕುವ ಬಹುಮಾನ, ದಾನ–ಇವೆಲ್ಲ ಗುರುಗಳಿಗೇ ಸಲ್ಲಬೇಕೆಂಬ ನ್ಯಾಯವಿತ್ತು. ಹಾಗೂ ಗುರುಗಳು ಕಷ್ಟದಿಶೆಯಲ್ಲಿದ್ದರೆ ಅದರಲ್ಲಿ (ಭಿಕ್ಷಾನ್ನದಲ್ಲೂ) ಮೂರನೆಯ ಒಂದು ಭಾಗವನ್ನು ತಾವು ಪಡೆಯಬೇಕೆಂಬ ವಿಧಾಯಕವಿತ್ತು (ಆಪಸ್ತಂಭ ಧರ್ಮಸೂತ್ರ). ಒಟ್ಟಿನಲ್ಲಿ ಪ್ರಾಚೀನ ಭಾರತದಲ್ಲಿ ಗುರುಗಳು ಶಿಷ್ಯರಿಂದ ನಿಗದಿಮಾಡಿಕೊಂಡು ಹಣ ಪಡೆಯುತ್ತಿರಲಿಲ್ಲ. ಜ್ಞಾನದ ಪ್ರಚಾರ ತಮ್ಮ ಭಾಗಕ್ಕೆ ಬಂದ ಕರ್ತವ್ಯ ಹೊಣೆಗಾರಿಕೆಗಳೆಂದು ಭಾವಿಸಿ ಬಡವಬಲ್ಲಿದರೆನ್ನದೆ ಎಲ್ಲರಿಗೂ ಜ್ಞಾನದಾನ ಮಾಡುತ್ತಿದ್ದರು. ಆದರೂ ಶಿಷ್ಯರು ತಮ್ಮ ಕೈಲಾದುದನ್ನು ಗುರುದಕ್ಷಿಣೆಯಾಗಿ ಸಲ್ಲಿಸುತ್ತಿದ್ದರು.

ಗುರು, ಶಿಷ್ಯನ ಆಧ್ಯಾತ್ಮಿಕ ಪಿತನೆಂಬ ಭಾವನೆಯಿದ್ದುದರಿಂದ ಅವರ ನಡುವಣ ಬಾಂಧವ್ಯ ಮಮತೆ ವಾತ್ಸಲ್ಯಗಳಿಂದ ಕೂಡಿರುತ್ತಿತ್ತು. ಇದು ಹಿಂದೂ ಮತ್ತು ಬೌದ್ಧ ಶಿಕ್ಷಣಪದ್ಧತಿಗಳೆರಡರಲ್ಲೂ ಪ್ರಧಾನ ಅಂಶವಾಗಿ ಕಂಡುಬರುತ್ತದೆ. ಜ್ಞಾನ ದಾನ ಮಾಡುವ

ಅಧ್ಯಾಪಕನನ್ನು ತಂದೆತಾಯಿಗಳಂತೆ ಗೌರವಿಸಬೇಕೆಂದು ನಿರುಕ್ತಿ ಸೂಚಿಸುತ್ತದೆ. ಅಧ್ಯಾಪಕರು ತಮ್ಮ ಶಿಷ್ಯರನ್ನು ತಮ್ಮ ಮಕ್ಕಳಂತೆಯೇ ಕಾಣಬೇಕೆಂದು ಆಪಸ್ತಂಭ ಧರ್ಮಸೂತ್ರ ವಿಧಿಸುತ್ತದೆ. ತಮ್ಮ ಶಿಷ್ಯರ ಬಗ್ಗೆ ಎಲ್ಲ ಆಸಕ್ತಿಯನ್ನೂ ವಹಿಸಬೇಕೆಂದೂ ಅವರಿಗೆ ಬಟ್ಟೆ, ಭಿಕ್ಷಾಪಾತ್ರೆ ಮುಂತಾದುವನ್ನೆಲ್ಲ ಒದಗಿಸಿಕೊಡಬೇಕೆಂದೂ ಬುದ್ಧದೇವ ಹೇಳಿದ್ದಾನೆ (ದಿಘ್ಘನಿಕಾಯ). ಏಳನೆಯ ಶತಮಾನದಲ್ಲಿ ಬೌದ್ಧಮಠಗಳಲ್ಲಿ ಗುರುಗಳು ತಮ್ಮ ಶಿಷ್ಯರು ಆರೋಗ್ಯ ತಪ್ಪಿರುವಾಗ ತಾವೇ ದಾದಿಯಂತೆ ಉಪಚರಿಸುತ್ತಿದ್ದರೆಂಬ ಅಂಶವನ್ನು ಅಂದು ಇಲ್ಲಿ ಪ್ರವಾಸ ಕೈಕೊಂಡಿದ್ದ ಚೀನ ದೇಶದ ಯಾತ್ರಿಕ ಇತ್ಸಿಂಗ್ ಅಭಿಮಾನದಿಂದ ವಿವರಿಸಿದ್ದಾನೆ (ತಕಾ ಕುಸುವಿನ ಇತ್ಸಿಂಗ್).

ಅಧ್ಯಾಪಕರು ಶಿಷ್ಯರ ಬಗ್ಗೆ ತಳೆದಿದ್ದ ಪುತ್ರವಾತ್ಸಲ್ಯದ ಫಲವಾಗಿ ಅವರ ಭಾಗಕ್ಕೆ ಇತರ ಕೆಲವು ಕರ್ತವ್ಯಗಳೂ ಬೀಳುತ್ತಿದ್ದವು. ಪ್ರಚಲಿತ ಶಕದ ಆರಂಭದಲ್ಲಿ ಅಧ್ಯಾಪಕರು ತಮ್ಮ ಶಿಷ್ಯರ ಜೀವನದ ಬಗ್ಗೆ ಕಣ್ಣಿಟ್ಟು ನೋಡುತ್ತಿದ್ದರು. ಯಾವುದನ್ನು ಅವರು ಅಭ್ಯಾಸ ಮಾಡಬೇಕು, ಯಾವುದನ್ನು ಮಾಡಬಾರದು ಎಂಬ ಬಗ್ಗೆ ಸ್ಪಷ್ಟ ತಿಳಿವಳಿಕೆ ನೀಡುತ್ತಿದ್ದರು. ಯಾವುದರ ಬಗ್ಗೆ ಆಸಕ್ತಿಯಿಂದಿರಬೇಕು ಯಾವುದನ್ನು ನಿರ್ಲಕ್ಷಿಸಬೇಕು ಎಂಬುದನ್ನು ಸೂಚಿಸುತ್ತಿದ್ದರು. ಆಹಾರ, ನಿದ್ರೆ, ಆರೋಗ್ಯ ಈ ವಿಷಯಗಳ ಬಗ್ಗೆಯೂ ಸೂಕ್ತ ತಿಳಿವಳಿಕೆ ನೀಡುತ್ತಿದ್ದರು; ಯಾರ ಸಂಗ ಸೇರಬೇಕು, ಯಾರ ಸಂಗ ಬಿಡಬೇಕು, ಯಾವ ಯಾವ ಗ್ರಾಮ, ವಿಹಾರಾದಿಗಳನ್ನು ದರ್ಶಿಸಬೇಕು ಎಂಬ ಬಗ್ಗೆಯೂ ತಿಳಿವಳಿಕೆ ಹೇಳುತ್ತಿದ್ದರು (ಮಿಲಿಂದ ಪನ್ನ).

ತಮಗೆ ಗೊತ್ತಿರುವ ವಿದ್ಯೆಯನ್ನು ತಮ್ಮ ಶಿಷ್ಯರಿಗೆ ಅಧ್ಯಾಪಕರು ನಿರ್ವಂಚನೆಯಿಂದ ಹೇಳಬೇಕಾಗಿತ್ತು. ತಮ್ಮ ಪ್ರೌಢಿಮೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಯಾವುದನ್ನೂ ಮರೆಮಾಚುವಂತಿರಲಿಲ್ಲ. ವೈದ್ಯವಿದ್ಯೆಯ ಗುರು ಉಪನಯನ ಸಂಸ್ಕಾರದ ವೇಳೆ ಅಗ್ನಿಸಾಕ್ಷಿಯಾಗಿ, ತನ್ನ ಶಿಷ್ಯನಿಂದ ಯಾವುದನ್ನೂ ಮರೆಮಾಚುವುದಿಲ್ಲವೆಂಬ ಭಾಷೆ ಸ್ವೀಕರಿಸಬೇಕೆಂದು ಪ್ರ.ಶ.ಪೂ. 6–7ನೆಯ ಶತಮಾನದಲ್ಲಿದ್ದ ಪ್ರಾಚೀನ ಭಾರತದ ಆಯುರ್ವೇದ ವೈದ್ಯ ಮತ್ತು ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದ ಸುಶ್ರುತ ಸಂಹಿತೆ ಎಂಬ ಕೃತಿ ರಚಿಸಿರುವ ಸುಶ್ರುತ ಸೂಚಿಸಿದ್ದಾನೆ. ಬುದ್ಧ ತನ್ನ ಗುರುವಾದ ಅಲಾರಕಲಾಮರ ಬಳಿ ತನ್ನ ಶಿಕ್ಷಣ ಮುಗಿಸಿದಾಗ ಗುರುಗಳು ಶಿಷ್ಯನನ್ನು ಉದ್ದೇಶಿಸಿ 'ನಾವು ಎಂಥ ಸುಖೀ ಸ್ನೇಹಿತರಾಗಿದ್ದೇವೆ! ನಿನ್ನಂಥ ವಿದ್ಯಾರ್ಥಿ ನಿಷ್ಠರನ್ನು ಪಡೆದ ನಾವು ನಿಜವಾಗಿಯೂ ಸುಖೀಗಳೆಯರು. ನನಗೆ ಗೊತ್ತಿರುವ ತತ್ತ್ವವನ್ನು ನೀನೂ ಅರಿತಿರುವೆ; ನಿನಗೆ ಗೊತ್ತಿರುವ ತತ್ತ್ವವೇ ನನಗೂ ಗೊತ್ತಿದೆ. ನನ್ನಂತೆ ನೀನೂ ಆಗಿರುವೆ; ನೀನು ಸಾಧಿಸಿರುವುದನ್ನೇ ನಾನೂ ಪಡೆದಿರುವೆ. ಈ ಸಂಘದ ಸಂಯುಕ್ತ ರಕ್ಷಕರಾಗಿ ನಾವು ಇರೋಣ. ಇದು ನನ್ನ ಪ್ರಾರ್ಥನೆ' ಎಂದು ನುಡಿದಿರುವುದು ಶಿಷ್ಯರಿಗೆ ಗುರುಗಳು ತಮ್ಮ ಸರ್ವಜ್ಞಾನವನ್ನೂ ಧಾರೆಯೆರೆದು ತಮಗೆ ಸರಿಸಮಾನರಾಗಿ ಮಾಡಿ ಆ ಮೂಲಕ ಪಡೆದುಕೊಳ್ಳುತ್ತಿದ್ದ ಸಾರ್ಥಕ್ಯವನ್ನು ಸ್ಪಷ್ಟಪಡಿಸುತ್ತದೆ. ಆ ಸಮಯದಲ್ಲಿ ಗುರುಗಳನ್ನುದ್ದೇಶಿಸಿ ಬುದ್ಧದೇವ ಭಾವಪೂರಿತನಾಗಿ 'ಅಂಥ ಜ್ಞಾನಿಯಾದ ನನ್ನ ಗುರು ನನ್ನನ್ನು ಅವರಂತೆಯೇ ಸಿದ್ಧ ಪಡಿಸಿರುವರು' ಎಂದು ಅಭಿಮಾನದಿಂದ ಉತ್ತರಿಸಿದ್ದಾನೆ (ಅರಿಯ ಪರಿವೇಶನ ಸುತ್ತ).

ಅಧ್ಯಾಪಕರ ಮನೆಯಲ್ಲಿ ವಾಸಿಸುವಾಗ ವಿದ್ಯಾರ್ಥಿ ಅವರ ಮನೆಗೆಲಸಗಳನ್ನು ಮಾಡಬೇಕಾಗುತ್ತಿತ್ತು. ಸಾಮಾನ್ಯವಾಗಿ ಗುರುದಕ್ಷಿಣೆ ಕೊಡಲು ಶಕ್ತಿಯಿಲ್ಲದ ಬಡವಿದ್ಯಾರ್ಥಿಗಳಿಂದ ಮಾತ್ರ ಅವರು ಅಂಥ ಸೇವಾ ಕಾರ್ಯವನ್ನು ಕೈಗೊಳ್ಳುತ್ತಿದ್ದರು. ಆದರೆ ತಮ್ಮ ಸೇವಾ ಕಾರ್ಯದಿಂದ ವಿದ್ಯಾರ್ಥಿಯ ಶಿಕ್ಷಣಕ್ಕೆ ಅಡ್ಡಿಬರದಂತೆ ನೋಡಿಕೊಳ್ಳುತ್ತಿದ್ದರು. ಅಲ್ಲದೆ, ತಮ್ಮ ಮನೆಗೆಲಸ ಮಾಡುವಾಗ ವಿದ್ಯಾರ್ಥಿಯ ಕ್ಷೇಮ ಚಿಂತನೆಯನ್ನೂ ಅವರು ಮಾಡಬೇಕಾಗಿತ್ತು. ಆ ಕಾರ್ಯದಲ್ಲಿ ತೊಡಗಿರುವಾಗ ಯಾವ ವಿದ್ಯಾರ್ಥಿಯಾದರೂ ಆಕಸ್ಮಿಕಕ್ಕೆ ಸಿಕ್ಕಿ ಮಡಿದರೆ ಅವರು ಘೋರ ತಪಸ್ಸನ್ನಾಚರಿಸಿ ಪ್ರಾಯಶ್ಚಿತ ಮಾಡಿಕೊಳ್ಳಬೇಕೆಂದು ಬೋಧಾಯನ ಧರ್ಮಸೂತ್ರ ಸೂಚಿಸುತ್ತದೆ. ಆದರೂ ಆಗ ದೇವಲ ಋಷಿಯ ತಮ್ಮ, ಪಾಂಡವರ ಪುರೋಹಿತ ಮಹರ್ಷಿ ಧೌಮ್ಯರಂಥ ಕೆಲವು ಗುರುಗಳು ಶಿಷ್ಯರಿಂದ ಅಧಿಕ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುವವರಿದ್ದಿರಬೇಕು. ಹಾಗೆಯೇ ಅವರನ್ನು ಕೆಲಸಕ್ಕೆ ಹಚ್ಚಲು ಹಿಂಜರಿಯುತ್ತಿದ್ದ ಗುರುಗಳೂ ಇರುತ್ತಿದ್ದರು (ಮಹಾಭಾರತ).

ಶಿಸ್ತಿನ ಸಮಸ್ಯೆ: ಸಾಮಾನ್ಯವಾಗಿ ಗುರುಶಿಷ್ಯರಲ್ಲಿ ಸಂಪೂರ್ಣ ಅರಿವಿದ್ದುದರಿಂದ ಶಿಸ್ತಿನ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಆದರೆ ಅಂದಂದೇ ತುಂಟತನದ ವಿದ್ಯಾರ್ಥಿಗಳ ಬಗ್ಗೆ ಶಿಸ್ತಿನ ಕಾರ್ಯಕ್ರಮ ಅಗತ್ಯವಾಗುತ್ತಿತ್ತು. ಕೆಲವರಿಗೆ ದೇಹದಂಡನೆಯೂ ಅಗತ್ಯವೆನಿಸಿರಬೇಕು. ಆದರೆ ಮನು ಒಳ್ಳೆಯ ಮಾತಿನಿಂದಲೇ ಅವರನ್ನು ಸನ್ಮಾರ್ಗಕ್ಕೆ ತರಬೇಕೆಂದು ವಾದಿಸಿದ್ದಾನೆ. ಉಪವಾಸ, ತಣ್ಣೀರು ಸ್ನಾನ ಅಥವಾ ಹೊರ ಹಾಕುವುದು ಈ ಮೊದಲಾದ ಶಿಕ್ಷೆಗಳ ಮೂಲಕ ಅಂಥವರನ್ನು ಒಳ್ಳೆಯ ನಡತೆಗೆ ತಿರುಗಿಸಬೇಕೆಂದು ಆಪಸ್ತಂಭ ಧರ್ಮಸೂತ್ರ ಸೂಚಿಸುತ್ತದೆ. ಸಾಮಾನ್ಯವಾಗಿ ದೇಹದಂಡನೆ ತ್ಯಾಜ್ಯವೆಂದು ಪರಿಗಣಿಸಿದ್ದರೂ ಕೆಲವು ವೇಳೆ ಅದು ಅಗತ್ಯ ಚಿಕಿತ್ಸೆಯೇ ಆಗುತ್ತಿತ್ತು. ಆದರೆ ತೀರ ಕ್ರೂರವಾಗಿರುವಂತಿರಲ್ಲಿಲ್ಲ; ಕೇವಲ ಸಣ್ಣ ಬೆತ್ತದಿಂದ ಕುಂಡಿಯ ಮೇಲೆ ಹೊಡಿಯಬಹುದಾಗಿತ್ತು. ಅಧ್ಯಾಪಕರು ಆ ನಿಯಮವನ್ನು ಉಲ್ಲಂಘಿಸಿದರೆ ಕಾನೂನು ರೀತ್ಯ ಶಿಕ್ಷಾರ್ಹರಾಗುತ್ತಿದ್ದರು.

ಶಿಷ್ಯರು ಗುರುಗಳ ಮನೆಯಲ್ಲೆ ವಾಸಿಸುವಾಗ ಮೊದಮೊದಲು ವಿವಾಹ ಸಂಬಂಧವೂ ಆಗುತ್ತಿದ್ದುದುಂಟು. ಆದರೆ ಅನಂತರದ ದಿನಗಳಲ್ಲಿ ಅದು ನಿಷಿದ್ಧವೆನಿಸಿರಬೇಕು. ಗುರುಪುತ್ರಿಯಾದ ದೇವಯಾನಿ ತನ್ನನ್ನು ಮದುವೆಯಾಗ ಬಯಸಿದಾಗ ಶಿಷ್ಯನಾದ ಕಚ ಆ ಕಾರಣದಿಂದಲೇ ಒಪ್ಪಲಿಲ್ಲ. ಬಹುಶಃ ಹಲವಾರು ವಿದ್ಯಾರ್ಥಿಗಳಿದ್ದ ಮನೆಯಲ್ಲಿ ಸ್ಪರ್ಧೆಗೆ ಅವಕಾಶವಾಗಿ ತೊಂದರೆ ಉದ್ಭವಿಸುವುದೆಂಬ ಕಾರಣದಿಂದ ಈ ನಿಷೇಧ ಪ್ರವೃತ್ತಿ ಕಾಲಕ್ರಮದಲ್ಲಿ ಬೆಳೆದುಕೊಂಡಿರಬೇಕು. ಆದರೆ ಕೆಲವು ಗುರುಗಳು ತಮ್ಮ ಶಿಷ್ಯರನ್ನು ಅಳಿಯಂದಿರನ್ನಾಗಿ ಆರಿಸಿಕೊಳ್ಳುವುದರಲ್ಲಿ ಆಸಕ್ತಿ ಹೊಂದಿದ್ದುದು ಬೌದ್ಧ ಜಾತಕಗಳಿಂದ ತಿಳಿದುಬರುತ್ತದೆ. ಹಾಗೆ ಗುರುಗಳೇ ಆರಿಸಿಕೊಂಡಾಗ ಶಿಷ್ಯ ನಿರಾಕರಿಸುವಂತಿರಲಿಲ್ಲ.

**ಶಿಷ್ಯರ ಕರ್ತವ್ಯ:** ಶಿಷ್ಯರು ತಮ್ಮ ಗುರುಗಳ ಬಗ್ಗೆ ಕಾಯೇನ ಮನಸಾ ವಾಚಾ ಗೌರವದಿಂದ ನಡೆದುಕೊಳ್ಳಬೇಕಾಗಿತ್ತು. ಬೆಳಗ್ಗೆ ಮುಂಚಿತವಾಗಿ ಎದ್ದು ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕಾಗಿತ್ತು. ಅಧ್ಯಾಪಕರಿಗಿಂತ ಎತ್ತರದ ಸ್ಥಳದಲ್ಲಿ ಕೂರುವುದಾಗಲಿ ಅವರಿಗಿಂತ ಹೆಚ್ಚಿನ ಅಲಂಕೃತ ಉಡುಪು ಧರಿಸುವುದಾಗಲಿ ನಿಷಿದ್ಧವೆನಿಸಿತ್ತು. ಆದರೆ ಅವರ ದುರ್ನಡತೆಗಳ ಬಗ್ಗೆ ಶಿಷ್ಯರು ಕಣ್ಣು ಮುಚ್ಚಿಕೊಂಡಿರಬೇಕೆಂದು ಎಲ್ಲಿಯೂ ಸೂಚಿಸಿಲ್ಲ. ಹಿಂದೆ ಟೀಕಿಸುವುದರ ಬದಲು ಅದನ್ನು ಅವರಲ್ಲಿ ಚರ್ಚಿಸಬಹುದಾಗಿತ್ತು. ಹಾಗೂ ಗೌತಮನಂಥವರು ಅಂಥ ಗುರುಗಳ ಬಗ್ಗೆ ವಿದ್ಯಾರ್ಥಿ ವಿಧೇಯನಾಗಿರುವುದು ಸೂಕ್ತವೇ ಎಂದೂ ಅನುಮಾನಿಸಿರುವರು. ಅಂಥವರು ನೀಡುವ ಉಪದೇಶ ಪರಿಣಾಮಕಾರಿಯಾಗಲಾರದೆಂಬ ಭಾವನೆಯೇ ಇದಕ್ಕೆ ಕಾರಣ.

ಗುರುವಿನ ನಮ್ರಸೇವಕನಾಗಿ, ಅವರ ಮಗನಂತೆ ಶಿಷ್ಯ ಅವರಿಗೆ ಸೇವೆ ಸಲ್ಲಿಸಬೇಕೆಂಬ ಭಾವನೆ ಸ್ವಾಭಾವಿಕವಾಗಿ ಅಂದಿನ ಗುರುಶಿಷ್ಯರ ಸಂಬಂಧದಲ್ಲಿ ಎದ್ದು ಕಾಣುತ್ತಿತ್ತು. ಅವರಿಗೆ ಹಲ್ಲುಜ್ಜುವ ಕಡ್ಡಿ ಒದಗಿಸುವುದು, ಸ್ನಾನಕ್ಕೆ ನೀರು ಕೊಡುವುದು, ಅವರ ಆಸನವನ್ನು ಸಿದ್ಧಪಡಿಸುವುದು, ಅವರ ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ದನಕರುಗಳಿದ್ದರೆ ಅವನ್ನು ಮೇಯಿಸುವುದು ಇವನ್ನೆಲ್ಲ ವಿದ್ಯಾರ್ಥಿ ಮಾಡಬೇಕಾಗಿತ್ತು. ಆದರೆ ಆ ಕಾರ್ಯ ಅವರ ಶಿಕ್ಷಣಕ್ಕೆ ಅಡ್ಡಿಯೆನಿಸುತ್ತಿರಲಿಲ್ಲ. ಶ್ರೀಮಂತ ವಿದ್ಯಾರ್ಥಿಗಳಾದರೆ ಅವರು ಅವನ್ನು ಕೇವಲ ಸೇವಾಸೂಚಕವಾಗಿ ಮಾತ್ರ ನಿರ್ವಹಿಸಬೇಕಾಗಿತ್ತು. ಹಗಲು ವೇಳೆ ತಮ್ಮ ಮನೆಗೆಲಸದಲ್ಲಿ ತೊಡಗಿರುವುದಾದರೆ ಅಂಥ ವಿದ್ಯಾರ್ಥಿಗಳಿಗೆ ಗುರುಗಳು ರಾತ್ರಿ ಪಾಠ ಹೇಳುತ್ತಿದ್ದರು.

ವೈದಿಕ ಕಾಲದಲ್ಲಿ ಶಿಕ್ಷಣ ವೈಯಕ್ತಿಕವಾಗಿದ್ದುದರಿಂದ ಗುರು ಶಿಷ್ಯರ ಬಾಂಧವ್ಯ ಕೇವಲ ವೈಯಕ್ತಿಕ ಸ್ವರೂಪದ್ದಾಗಿತ್ತು. ಪ್ರಚಲಿತ ಶಕಪೂರ್ವದಲ್ಲೆ ಬೌದ್ಧಯುಗದಲ್ಲಿ ಶಿಕ್ಷಣ ವ್ಯವಸ್ಥಿತ ಸ್ವರೂಪವನ್ನು ತಾಳಿ ಮಠಗಳೂ ಸಂಘಗಳೂ ಅಸ್ತಿತ್ವಕ್ಕೆ ಬಂದುವು. ಹಿಂದೂ ಶಿಕ್ಷಣ ಪದ್ಧತಿಯಲ್ಲಾದರೆ ಈ ಪರಿವರ್ತನೆಯಾದ್ದು 9 ನೆಯ ಶತಕದ ಆರಂಭದಿಂದ ಮಾತ್ರ. ಬೌದ್ಧ ಶಿಕ್ಷಣ ಪದ್ಧತಿಯಲ್ಲಿ ಶಿಷ್ಯರ ನಿಷ್ಠೆ ಗುರುಗಳಿಗಿಂತ ಸಂಘಕ್ಕೇ ಮೀಸಲಾಗಿತ್ತು.

**ಮುಂದಿನ ಜೀವನದಲ್ಲಿ ಗುರುಗಳ ಪ್ರಭಾವ:** ಶಿಕ್ಷಣ ಮುಗಿದ ಮೇಲೆ ವಿದ್ಯಾರ್ಥಿಗಳು ತಮ್ಮ ಗುರುಗಳೊಡನೆ ಸಂಪರ್ಕ ಹೊಂದಿರುತ್ತಿದ್ದರು. ಆಗಾಗ ಅವರನ್ನು ನೋಡಿ ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. ಸಾಧ್ಯವಾದಷ್ಟು ಗುರುದಕ್ಷಿಣೆಯನ್ನೂ ನೀಡುತ್ತಿದ್ದರು. ಅದರಿಂದ ಅಧ್ಯಾಪಕರೂ ತಮ್ಮ ಶಿಷ್ಯರು ಎಷ್ಟರ ಮಟ್ಟಿಗೆ ಜ್ಞಾನಾರ್ಜನೆಯನ್ನು ಮುಂದುವರಿಸುತ್ತಿದ್ದರು, ಎಷ್ಟರ ಮಟ್ಟಿಗೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿರುವರು, ಯಾವ ಹೊಸ ಜ್ಞಾನವನ್ನು ದರ್ಶಿಸಿರುವರು ಎಂಬುದನ್ನು ಅರಿತುಕೊಳ್ಳುತ್ತಿದ್ದರು. ಹೀಗೆ ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯಲ್ಲಿ ಗುರುಶಿಷ್ಯ ಬಾಂಧವ್ಯ ಅಜೀವವೂ ಮುಂದುವರಿಯುತ್ತಿತ್ತು. ಅದು ಪರಸ್ಪರ ಪರಿಣಾಮಕಾರಿಯೂ ಆಗಿರುತ್ತಿತ್ತು. ಪ್ರಾಚೀನ ಭಾರತದ ವ್ಯವಸ್ಥೆಯ ಧ್ಯೇಯವೇನಿತ್ತೆಂಬುದನ್ನು ತೈತ್ತಿರೀಯ ಉಪನಿಷತ್ತಿನಲ್ಲಿ ಬರುವ ಗುರೂಪದೇಶ ಭಾಗ ಬಹಳ ಚೆನ್ನಾಗಿ ವಿವರಿಸಿದೆ (**ನೋಡಿ– ಉಪದೇಶ ಭಾಷಣ**).

**ಆಧುನಿಕ ಶಿಕ್ಷಣದಲ್ಲಿ ಗುರುಶಿಷ್ಯ ಬಾಂಧವ್ಯ:** ಸಾರ್ವತ್ರಿಕ ಶಿಕ್ಷಣ ಪ್ರಚಾರಕ್ಕೆ ಬಂದು ಒಬ್ಬೊಬ್ಬ ಅಧ್ಯಾಪಕನೂ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಬೇಕಾಗಿರುವ ಆಧುನಿಕ ಕಾಲದಲ್ಲಿ ಅಧ್ಯಾಪಕರು ಹಿಂದಿನಂತೆ ತಮ್ಮ ವಿದ್ಯಾರ್ಥಿಗಳೊಡನೆ ನಿಕಟ ಸಂಬಂಧವನ್ನು ಹೊಂದಿರುವುದು ಸ್ವಾಭಾವಿಕವಾಗಿ ಅಸಾಧ್ಯವೆನಿಸಿದ್ದರೂ ಶಿಕ್ಷಣದ ಕಾರ್ಯಕ್ರಮದ ಯಶಸ್ಸಿಗೆ ಉಚಿತ ರೀತಿಯ ಸಂಬಂಧದ ಮಹತ್ತ್ವವನ್ನೂ ಎಲ್ಲ ಶಿಕ್ಷಣವೇತ್ತರೂ ಮನಗಂಡುಕೊಂಡಿರುವರು. ಹಾಗೂ ಸೂಕ್ತವೂ ಅನಿವಾರ್ಯವೂ ಆದಷ್ಟು ಮಟ್ಟಿಗಾದರೂ ಅಂಥ ಸಂಬಂಧವನ್ನು ಉಳಿಸಿಕೊಳ್ಳಬೇಕೆಂದು ಒತ್ತಿ ಹೇಳಿರುವರು. ಈ ಬಗೆಗೆ ಸಂಶೋಧನೆಗಳು ನಡೆದಿವೆ. ಆ ಸಂಶೋಧನೆಗಳು ಯಾವ ರೀತಿಯ ಸಂಬಂಧಗಳು ಶಿಕ್ಷಣವನ್ನು ಪರಿಣಾಮಗೊಳಿಸಬಲ್ಲವೆಂಬುದನ್ನು ವಿಶ್ಲೇಷಿಸಿ ತೋರಿಸಿಕೊಟ್ಟಿವೆ. ಅಂಥ ಅಂಶಗಳನ್ನು ಇಲ್ಲಿ ಪರಿಶೀಲಿಸಬಹುದು.

ಅಧ್ಯಾಪಕರು ವಿದ್ಯಾರ್ಥಿಗಳ ಬಗ್ಗೆ ಸಹನೆ, ದಯೆ, ಕ್ಷಮೆ, ಸಹಕಾರ, ಸ್ವಾತಂತ್ರ್ಯಕ್ಕೆ ಪುರಸ್ಕಾರ, ನ್ಯಾಯಪರತೆ, ಪಕ್ಷಪಾತರಾಹಿತ್ಯತೆ, ಸರಸಪ್ರವೃತ್ತಿ, ದೃಢಚಿತ್ತ, ಒಳ್ಳೆಯದರ ಬಗ್ಗೆ ಮೆಚ್ಚಿಕೆ ಮುಂತಾದ ಋಜು ಸಂಬಂಧವನ್ನು ಹೊಂದಿರಬೇಕು. ಮಕ್ಕಳ ಮೇಲೆ ಅದು ಸತ್ಪರಿಣಾಮವನ್ನು ಬೀರಬಲ್ಲದು.

ಮಕ್ಕಳಿಗೆ ಭೀತಿ ಹುಟ್ಟಿಸದೆ ಪ್ರೀತಿ ವಿಶ್ವಾಸಗಳಿಂದ ಅವರನ್ನು ಕಾಣುತ್ತ ಅವರು ತಮ್ಮ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿಕೊಳ್ಳಲು ಅವಕಾಶವೀಯುವ ಮನೋಭಾವವನ್ನು ತಳೆದಿರುವುದು, ದರ್ಪ ತೋರಿಸದೇ ಯಾವುದೋ ಕಾರ್ಯವನ್ನು ಅವರ ಮೇಲೆ ಕಡ್ಡಾಯವಾಗಿ ಹೊರಿಸಲು ಯತ್ನಿಸದೇ, ಅವರಲ್ಲಿ ಪ್ರಕಾಶನಕ್ಕೆ ಹಾತೊರೆಯುತ್ತಿರುವ ಆಸಕ್ತಿಗಳಿಗೆ ಯುಕ್ತ ಚಟುವಟಿಕೆಗಳನ್ನು ಒದಗಿಸುವುದು, ಚೆನ್ನಾಗಿ ಕೆಲಸ ಮಾಡುವ ಮಕ್ಕಳಿಗೆ ಪ್ರೋತ್ಸಾಹ ನೀಡುವುದು, ಮಿಕ್ಕವರಿಗೆ ಅನುಕಂಪೆಯಿಂದ, ಮಮತೆಯಿಂದ ಮಾರ್ಗದರ್ಶನ ನೀಡುವುದು, ತಮ್ಮ ವೈಯಕ್ತಿಕ ಸಮಸ್ಯೆಗಳ ಫಲವಾಗಿ ಉದ್ರಿಕ್ತರಾಗದೆ ಮಕ್ಕಳ ಬಗ್ಗೆ ವಿಹಿತ ರೀತಿಯಲ್ಲಿ ನಡೆದುಕೊಳ್ಳುವುದು, ಭಾವನೆಯಲ್ಲೂ ಕೃತಿಯಲ್ಲೂ ಎಲ್ಲ ವಿದ್ಯಾರ್ಥಿಗಳಲ್ಲೂ ಸಮಾನ ದೃಷ್ಟಿಯನ್ನು ವ್ಯಕ್ತಪಡಿಸುವುದು, ಪ್ರತಿಭಾವಂತ ಮಕ್ಕಳ ಪ್ರತಿಭೆಗೊಪ್ಪುವಂತೆ ಕಾರ್ಯಕ್ರಮ ಹಾಕಿಕೊಡುವುದು. ಹಿಂದುಳಿದವರಿಗೆ ವೈಯಕ್ತಿಕ ಗಮನನೀಡಿ ಅವರೂ ತಕ್ಕಷ್ಟು ಶಿಕ್ಷಣ ಪಡೆಯುವಂತೆ ಮಾಡುವುದು–ಈ ರೀತಿಯಲ್ಲಿ ವರ್ತಿಸುವುದರಿಂದ ಅವರ ಬೋಧನೆ ಪರಿಣಾಮಕಾರಿಯಾಗುವುದು.

ಉದ್ಯಮಗಳನ್ನು ಆಚರಿಸುವಾಗ, ಹೊಸ ಕಾರ್ಯಕ್ರಮಗಳನ್ನು ಯೋಜಿಸುವಾಗ, ಸಾಮಾಜಿಕ ಕಾರ್ಯಕ್ರಮಗಳನ್ನು ಏರ್ಪಡಿಸುವಾಗ, ಉತ್ತರಗಳನ್ನು ತಿದ್ದುವಾಗ, ಮೌಲ್ಯಗಳನ್ನು ನಿಷ್ಕರ್ಷಿಸುವಾಗ ಮಕ್ಕಳ ಸಹಕಾರವನ್ನು ರೂಢಿಸಿಕೊಂಡು ಎಲ್ಲರಿಗೂ ಒಂದೊಂದು ಕ್ಷೇತ್ರದಲ್ಲಿ ನಾಯಕತ್ವದ ಕರ್ತವ್ಯ ಹೊಣೆಗಾರಿಕೆಗಳನ್ನು ವಹಿಸುವುದೂ ಆ ಮೂಲಕ ಮಕ್ಕಳಿಗೆ ತೃಪ್ತಿಯನ್ನುಂಟು ಮಾಡುವುದೂ ಶಿಕ್ಷಣದ ಮೇಲೆ ಸತ್ಪರಿಣಾಮ ಬೀರಬಲ್ಲವು.

ಸಾಧ್ಯವಾದ ಮಟ್ಟಿಗೆ ಎಲ್ಲ ಮಕ್ಕಳ ಪರಿಚಯವನ್ನೂ ಮಾಡಿಕೊಂಡು ಅವರವರ ಮಾನಸಿಕ, ಸಂವೇಗಾತ್ಮಕ, ಸಾಮಾಜಿಕ, ನೈತಿಕ ಮತ್ತು ದೈಹಿಕ ಸ್ವರೂಪವನ್ನು ಅರಿತಿರುವುದು ಅವರ ಶಿಕ್ಷಣವನ್ನು ಸುಗಮವಾಗಿಸಲು ನೆರವಾಗುತ್ತದೆ.

ತಮ್ಮ ಹಿತಾಸಕ್ತಿಯೂ ಪುರೋಭಿವೃದ್ಧಿಯೂ ಅಧ್ಯಾಪಕರ ಆಕಾಂಕ್ಷೆಯಾಗಿದೆ ಎಂಬುದನ್ನು ಮಕ್ಕಳು ಕಾರ್ಯತಃ ಮನಗಾಣುವಂತೆ ನಡೆದುಕೊಂಡಲ್ಲಿ ಶಿಕ್ಷಣ ಪರಿಣಾಮಕಾರಿಯಾಗುತ್ತದೆ.

ಗುರುಗಳ ನಿತ್ಯ ಜೀವನದಲ್ಲಿ ಆದರ್ಶ ವ್ಯಕ್ತಪಟ್ಟರೆ ಮಕ್ಕಳಿಗೆ ಅವರಲ್ಲಿ ಅಭಿಮಾನ ಮೂಡುತ್ತದೆ. ಆಗ ಅವರ ನಡೆನುಡಿಗಳನ್ನು ಅನುಕರಿಸಿ ನಡೆಯುವುದು ವಿಹಿತವೆಂಬುದು ಸ್ವಪ್ರೇರಣೆಯಿಂದ ಉದ್ಭವಿಸಿ ಕಲಿವು ಸುಲಭವಾಗಿ ಸಿದ್ಧಿಸುತ್ತದೆ.

ತಾವು ಹಿರಿಯ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಕಿರಿಯ ಅಧ್ಯಾಪಕರು ಎಂಬ ಭಾವನೆಯನ್ನೂ ತಳೆದಿದ್ದು, ತಾವು ಕಿರಿಯ ತಂಡವೊಂದರ ಯೋಗಕ್ಷೇಮವನ್ನೂ ಪುರೋಭಿವೃದ್ಧಿಯನ್ನೂ ಸಾಧಿಸಬೇಕಾಗಿರುವ ಹಿರಿಯ ನಾಯಕರು ಎಂದು ಭಾವಿಸಿ ವರ್ತಿಸಿದಲ್ಲಿ ಅಧ್ಯಾಪಕರ ಉದ್ದೇಶ ಸಫಲವಾಗುತ್ತದೆ,

ಸರಸಪ್ರಸನ್ನತೆ, ಸ್ವಾಭಿಮಾನ, ಕರ್ತವ್ಯಪ್ರಜ್ಞೆ ಈ ಆದರ್ಶಗಳನ್ನೂ ಅಧ್ಯಾಪಕರು ಪಾಲಿಸಿದರೆ ಅವರಲ್ಲಿ ಕಂಡುಬರುವ ಸಹಾನುಭೂತಿ ಗಾಂಭೀರ್ಯಗಳು ಮಕ್ಕಳಲ್ಲೂ ತದನುಗುಣವಾದ ಮನೋಭಾವಗಳನ್ನು ಪೋಷಿಸಿ ಆದರಣೀಯ ವ್ಯಕ್ತಿತ್ವವನ್ನು ಮೂಡಿಸುತ್ತವೆ.

ಮಕ್ಕಳನ್ನು ಮೆಚ್ಚಿಸಲು ಅವರೊಡನೆ ತೀರ ಸಲುಗೆಯಿಂದ, ಸುಮ್ಮಾನದಿಂದ ನಡೆದುಕೊಳ್ಳುವುದರಿಂದ ಅವರ ಬಗ್ಗೆ ಕ್ರಮಕ್ರಮವಾಗಿ ಮಕ್ಕಳು ಹೀನ ಭಾವನೆಯನ್ನು ಬೆಳೆಸಿಕೊಳ್ಳುವರು. ಅದರ ಫಲವಾಗಿ ಬೋಧನೆ ಪ್ರಭಾವ ಹೀನವಾಗುವುದು. ಜೊತೆಗೆ ಮಕ್ಕಳಲ್ಲಿ ಅಶಿಸ್ತು ತಲೆಹಾಕಿಕೊಳ್ಳುವುದು.

ಮಕ್ಕಳಲ್ಲಿ ಕಂಡುಬರುವ ಮೊಂಡಾಟ, ತುಂಟಾಟ, ಅವಧಾನವಿಹೀನತೆ ಇವಾವುವನ್ನೇ ಆಗಲಿ ನಿವಾರಿಸಲು ಯತ್ನಿಸುವಾಗ ಬೈದು ಹಿಯ್ಯಾಳಿಸದೆ, ಆಗಲಿ ನೋಡುವ ಎಂದು ಸುಮ್ಮನೆ ಬಿಡದೆ, ಸಕಾಲದಲ್ಲಿ ಸರಿಯಾದ ರೀತಿಯಲ್ಲಿ ಎಚ್ಚರಿಸುವುದು ಅವರ ಶೈಕ್ಷಣಿಕ ಬೆಳೆವಣಿಗೆಗೆ ಸೂಕ್ತ ಮಾರ್ಗದರ್ಶನವೆನಿಸುತ್ತದೆ.

ಮಕ್ಕಳಲ್ಲಿ ನಿಯಮಪಾಲನೆಯ ಗುಣವನ್ನು ಬೆಳೆಸುವುದು ಅಗತ್ಯವಾದರೂ ಅಧ್ಯಾಪಕರೂ ಆ ಕಾರ್ಯದಲ್ಲಿ ಸರ್ವಾಧಿಕಾರಿಯಂತೆ ವರ್ತಿಸದೆ ಕೌಶಲ್ಯದಿಂದ ವರ್ತಿಸುವುದರಿಂದ ತಮ್ಮ ಬಗ್ಗೆ ಅಧ್ಯಾಪಕರು ಕಠೋರತನದಿಂದಿರುವರೆಂದು ಭಾವಿಸುವುದನ್ನು ತಪ್ಪಿಸಬಹುದು.

ವಿದ್ಯಾರ್ಥಿಗಳು ತಮಗೆ ಒಳ್ಳೆಯವರಾಗಿ ತೋರತಕ್ಕ ಅಧ್ಯಾಪಕರಲ್ಲಿ ಕಂಡುಕೊಂಡಿರುವ ಬಾಂಧವ್ಯವನ್ನು ಕುರಿತು ಸಂಶೋಧನೆಗಳೂ ನಡೆದಿವೆ. ತಮ್ಮ ಕಲಿಕೆಗೆ ತರಗತಿಯಲ್ಲೂ ಹೊರಗೂ ಆಸಕ್ತಿ ವಹಿಸಿ ನೆರವಾಗುವುದು, ಹರ್ಷಚಿತ್ತದಿಂದ ಇರುವುದು, ಸರಸಪ್ರವೃತ್ತಿಯಿಂದ ನಡೆದುಕೊಂಡು ಗಂಭೀರವಾದರೂ ವಿದ್ಯಾರ್ಥಿಗಳ ವಿನೋದಾದಿ ಹುಡುಗತನವನ್ನು ಅರ್ಥಮಾಡಿಕೊಳ್ಳುವುದು, ಹಿರಿಯರಾದರೂ ವಿದ್ಯಾರ್ಥಿಗಳ ಮಿತ್ರರಂತೆ ನಡೆದುಕೊಳ್ಳುವುದು, ವಿದ್ಯಾರ್ಥಿಗಳ ಕಷ್ಟಗಳನ್ನು ಅರಿತು ಅರ್ಥಮಾಡಿಕೊಳ್ಳುವುದರಲ್ಲಿ ಆಸಕ್ತಿ ವಹಿಸುವುದು, ತಮ್ಮ ಆದರ್ಶದಿಂದ ವಿದ್ಯಾರ್ಥಿಗಳಲ್ಲಿ ತಾವೂ ಕ್ರಿಯಾಶೀಲರಾಗಬೇಕೆಂಬ ಪ್ರಜ್ಞೆ ಮೂಡಿಸುವುದು–ಈ ಸಂಬಂಧವುಳ್ಳ ಅಧ್ಯಾಪಕರು ಅವರ ಮೆಚ್ಚಿಗೆಗೆ ಪಾತ್ರರಾಗುವರು **(ನೋಡಿ–ಗುರುಕುಲ; ಗುರುಕುಲ ಕಾಂಗ್ರಿ ವಿಶ್ವವಿದ್ಯಾಲಯ).** (ಎನ್.ಎಸ್.ವಿ.)

**ಗುರೆಳ್ಳು :** ಆಸ್ಟರೇಸೀ (ಕಂಪಾಸಿಟೀ) ಕುಟುಂಬಕ್ಕೆ ಸೇರಿದ ಮತ್ತು ಆರ್ಥಿಕ ಪ್ರಾಮುಖ್ಯವುಳ್ಳ ಒಂದು ಏಕವಾರ್ಷಿಕ ಸಸ್ಯ. ಹುಚ್ಚೆಳ್ಳು, ಕಾರೆಳ್ಳು, ಖುರಾಸಾನಿ ಪರ್ಯಾಯ ನಾಮಗಳು. ಇಂಗ್ಲಿಷಿನಲ್ಲಿ ನೈಜರ್ ಎಂದು ಕರೆಯಲಾಗುತ್ತದೆ. ಗೈಜೋಶಿಯ ಅಬಿಸೀನಿಕ ಇದರ ಶಾಸ್ತ್ರೀಯ ಹೆಸರು. ಆಫ್ರಿಕದ ಉಷ್ಣವಲಯದ ಮೂಲವಾಸಿ. ಇದನ್ನು ಎಣ್ಣೆಗೋಸ್ಕರ ಆಫ್ರಿಕ ಮತ್ತು ಭಾರತದಲ್ಲಿ ಬೆಳೆಸುತ್ತಾರೆ.




**A. ಗಿಡದ ಒಂದು ರೆಂಬೆ, B.ಬಿಂಬ ಪುಷ್ಪಕ, C.ಕದಿರು ಪುಷ್ಪಕ, D.ಬೀಜ**

ಗುರೆಳ್ಳು ನೆಟ್ಟಗೆ 30–90 ಸೆಂಮೀ ಎತ್ತರಕ್ಕೆ ಬೆಳೆಯುವ ಮೂಲಿಕೆ ಸಸ್ಯ. ಕಾಂಡ ಮತ್ತು ಎಲೆಗಳ ಮೇಲೆ ಒರಟಾದ ಮತ್ತು ಸೂಕ್ಷ್ಮ ಗಾತ್ರದ ಕೂದಲಿನ ಹೊದಿಕೆಯಿರುವುದರಿಂದ ಈ ಭಾಗಗಳು ಒರಟಾಗಿವೆ. ಎಲೆಗಳು ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಇವುಗಳ ಉದ್ದ ಸುಮಾರು 7.5–13 ಸೆಂಮೀ

ಆಕಾರ ಈಟಿಯಂತೆ ಮತ್ತು ಅಂಚು ಗರಗಸದಂತೆ. ಎಲೆಗಳ ತೊಟ್ಟು ಬಲು ಚಿಕ್ಕದು; ಎಲೆಗಳ ಬುಡ ಕಾಂಡವನ್ನು ಅರ್ಧ ಸುತ್ತುವರಿದಿದೆ. ಹೂಗಳು ಬಲು ಚಿಕ್ಕವು; ಚಂಡುಮಂಜರಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಹೂ ಗೊಂಚಲಿನ ವ್ಯಾಸ ಸು. 3 ಸೆಂಮೀ ಹೂಗಳು ಅಚ್ಚ ಹಳದಿ ಬಣ್ಣಕ್ಕಿದ್ದು ಬಹಳ ಅಂದವಾಗಿ ಕಾಣುತ್ತದೆ. ಫಲಗಳು ಎಕೀನ್ ಮಾದರಿಯವು. ತುಂಬ ಚಿಕ್ಕದಾಗಿ ಸು. 1 ಸೆಂಮೀ ಉದ್ದಕ್ಕೆ ನೀಳವಾಗಿ ಇವೆ. ಹೊಳೆಯುವ ಕಪ್ಪು ಬಣ್ಣ ಉಂಟು. ಇವು ಗಡುಸಾಗಿವೆ.

ಗುರೆಳ್ಳು ನಸುಗೆಂಪು ಇಲ್ಲವೆ ಕಂದು ಬಣ್ಣದ ಗೋಡುಮಣ್ಣಿನ ಭೂಮಿಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಎರೆಮಣ್ಣಿನಲ್ಲೂ ಕೊಂಚ ಮಟ್ಟಿಗೆ ಬೆಳೆಸಬಹುದು. ಇದಕ್ಕೆ ಹೆಚ್ಚು ಮಳೆ ಬೇಡ. ಮಳೆಯ ವಾರ್ಷಿಕ ಮೊತ್ತ 120 ಸೆಂಮೀ ಮೀರಬಾರದು. ಇದನ್ನು ಸಾಮಾನ್ಯವಾಗಿ ರಾಗಿಯೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಸುತ್ತಾರೆ. ಹುರುಳಿ, ಕಡಲೆಕಾಯಿ, ಹರಳು, ನವಣೆ, ಸಜ್ಜೆ ಮುಂತಾದವುಗಳ ಜೊತೆಗೆ ಬೆಳೆಸುವುದುಂಟು. ಜುಲೈ ಇಲ್ಲವೆ ಸೆಪ್ಟೆಂಬರ್ ಸುಮಾರಿಗೆ ಬಿತ್ತನೆ ಮಾಡಲಾಗುತ್ತದೆ. ರಾಗಿಯೊಂದಿಗೆ ಬೆಳೆಸುವಾಗ 15–30 ಸೆಂಮೀ ಅಂತರವಿರುವ ಸಾಲುಗಳಲ್ಲೂ ಹುರುಳಿಯೊಂದಿಗೆ ಬೆಳೆಸುವಾಗ 15 ಸೆಂಮೀ ಅಂತರಗಳ ಸಾಲುಗಳಲ್ಲೂ ಬಿತ್ತಲಾಗುತ್ತದೆ. ಭೂಮಿಯೊಂದಿಗೆ ಚೆನ್ನಾಗಿ ಉತ್ತು, ಹದ ಮಾಡಿದರೆ ಗಿಡಗಳ ಬೆಳವಣಿಗೆ ಹುಲುಸಾಗಿರುತ್ತದೆ. ಇದರಿಂದಲೆ ರಾಗಿಯೊಂದಿಗೆ ಬೆಳೆಸಿದ ಗುರೆಳ್ಳಿನ ಪೈರು ಬಹಳ ಚೆನ್ನಾಗಿರುತ್ತದೆ. ಬೀಜ ಬಿತ್ತಿದ ಮೂರು ತಿಂಗಳ ಬಳಿಕ ಗಿಡಗಳು ಹೂ ಬಿಡಲು ಆರಂಭಿಸುತ್ತವೆ. ಆಮೇಲೆ 5–6 ವಾರಗಳಲ್ಲಿ ಕೊಯ್ಲಿಗೆ ಸಿದ್ಧವಾಗುತ್ತವೆ. ಕುಡುಗೋಲಿನಿಂದ ಗಿಡಗಳ ಬುಡದವರೆಗೂ ಕೊಯ್ದು ಕಂತೆ ಕಟ್ಟಲಾಗುತ್ತದೆ. ಅನಂತರ ಕೋಲುಗಳ ಸಹಾಯದಿಂದ ತೆನೆಗಳನ್ನು ಬಡಿದು ಕಾಳುಗಳನ್ನು ಬಿಡಿಸಿ, ತೂರಿ, ಜರಡಿಯಾಡಿಸಿ ಚೊಕ್ಕಟ ಮಾಡಲಾಗುತ್ತದೆ. ಆದರೂ ಕಾಳಿನೊಂದಿಗೆ ಮಣ್ಣಿನ ಕಣಗಳು, ಕಳೆಬೀಜಗಳು ಸೇರಿರುವುದರಿಂದ ಗುರೆಳ್ಳನ್ನು ಸಂಗ್ರಹಿಸಿಡುವಾಗ, ಮಾರಾಟಕ್ಕೆ ಸಿದ್ಧಗೊಳಿಸುವಾಗ ಇನ್ನೊಮ್ಮೆ ಶುದ್ಧೀಕರಿಸಬೇಕಾಗುತ್ತದೆ. ರಾಗಿಯೊಂದಿಗೆ ಮಿಶ್ರಬೆಳೆಯಾಗಿ ಬೆಳೆಸಿದಾಗ ಗುರೆಳ್ಳಿನ ಇಳುವರಿ ಎಕರೆಗೆ 45 ಕೆಜಿ. ಇರುವುದಾದರೂ ಶುದ್ಧ ಬೆಳೆಯಾಗಿ ಬೆಳೆಸಿದರೆ ಇದು ಸುಮಾರು 135–180 ಕೆಜಿ. ವರೆಗೆ ಹೆಚ್ಚಬಹುದು.

ಗುರೆಳ್ಳಿನ ಬೀಜಗಳಲ್ಲಿ ಶೇ. 40–45 ರಷ್ಟು ಎಣ್ಣೆ ಉಂಟು. ಇದಕ್ಕೆ ರೂಢಿಯ ಹೆಸರು ಹುಚ್ಚೆಳ್ಳೆಣ್ಣೆ. ಇದು ಉಪಯೋಗಿಸಲು ಯೋಗ್ಯವಾದ ಎಣ್ಣೆ. ಇದರ ಬಣ್ಣ ತಿಳಿ ಹಳದಿ. ಅಡುಗೆಗೆ, ಇತರ ಬಗೆಯ ಎಣ್ಣೆಗಳೊಂದಿಗೆ– ಮುಖ್ಯವಾಗಿ ಎಳ್ಳೆಣ್ಣೆಯೊಂದಿಗೆ ಮಿಶ್ರ ಮಾಡಲು ಹುಚ್ಚೆಳ್ಳೆಣ್ಣೆಯನ್ನು ಬಳಸುತ್ತಾರೆ. ಮೃದುಚಾಲಕಗಳ ಮತ್ತು ಮೃದುಸಾಬೂನುಗಳ ತಯಾರಿಕೆಯಲ್ಲೂ ಇದನ್ನು ಉಪಯೋಗಿಸುವುದಿದೆ. ಎಣ್ಣೆಯನ್ನು ತೆಗೆದು ಮೇಲೆ ಉಳಿಯುವ ಹಿಂಡಿ ದನಕರುಗಳಿಗೆ ಉತ್ತಮವಾದ ಆಹಾರ. ಹಾಲು ಕರೆಯುವ ಹಸು, ಎಮ್ಮೆಗಳಿಗೆ ತಿನ್ನಿಸಿದರೆ ಹಾಲಿನ ಪ್ರಮಾಣ ಹೆಚ್ಚುವುದೆಂದು ಹೇಳಲಾಗಿದೆ. ಹುಚ್ಚೆಳ್ಳನ್ನು ಚಟ್ನಿಪುಡಿ, ಚಟ್ನಿ, ಗೊಜ್ಜು ಮುಂತಾದವಕ್ಕೆ ಬಳಸುತ್ತಾರೆ. (ಎಸ್.ಎಸ್.)

**ಗುಲಗಂಜಿ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪ ಕುಟುಂಬಕ್ಕೆ ಸೇರಿದ ಒಂದು ಬಳ್ಳಿ. ಏಬ್ರಸ್ ಪ್ರಿಕಟೋರಿಯಸ್ ಎಂಬುದು ಇದರ ಶಾಸ್ತ್ರೀಯ ನಾಮ. ಇಂಗ್ಲಿಷಿನ ಸಾಮಾನ್ಯ ಬಳಕೆಯ ಹೆಸರು ಕ್ರ್ಯಾಬ್ಸ್ ಐ. ಇಂಡಿಯನ್ ಲಿಕರಿಸ್ ಎಂಬ ಹೆಸರೂ ಇದಕ್ಕೆ ಉಂಟು.

ಭಾರತಾದ್ಯಂತ ಗುಲಗಂಜಿಯ ವ್ಯಾಪ್ತಿ ಉಂಟು. ಮೈದಾನ ಸೀಮೆಗಳಲ್ಲಿ ಇದು ಹೇರಳವಾಗಿದೆ. ಹಿಮಾಲಯದಲ್ಲಿ 1.100 ಮೀ ಎತ್ತರದ ಪ್ರದೇಶಗಳಲ್ಲಿಯೂ ಚೆನ್ನಾಗಿ ಬೆಳೆಯುತ್ತದೆ. ಶ್ರೀಲಂಕ, ಬರ್ಮ, ಕಾಂಬೋಡಿಯ, ಸಯಾಮ್ ಮುಂತಾದ ದೇಶಗಳಲ್ಲೂ ಗುಲಗಂಜಿ ಕಾಣಬರುತ್ತದೆ. ಇತರ ಆಸರೆ ಸಸ್ಯಗಳನ್ನು ಆಶ್ರಯಿಸಿ ಬೆಳೆಯುವ ಬಳ್ಳಿಯಾದ ಇದು ಸುಮಾರು 5–6 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಇದರ ಎಲೆಗಳು ಗರಿರೂಪದ ಸಂಯುಕ್ತ ಮಾದರಿಯವು. ಒಂದೊಂದು ಎಲೆಯಲ್ಲೂ 20–40 ಕಿರುಎಲೆಗಳಿವೆ. ಎಲೆಗಳ ಜೋಡಣೆ ಪರ್ಯಾಯ ಮಾದರಿಯದು. ಎಲೆಗಳ ಕಂಕುಳಲ್ಲಿ ರೇಸೀಮ್ ಮಾದರಿಯ ಚಿಕ್ಕ ಗಾತ್ರದ ಹೂಗೊಂಚಲುಗಳು ಹುಟ್ಟುತ್ತವೆ. ಹೂಗಳೂ ಗಾತ್ರದಲ್ಲಿ ಚಿಕ್ಕವು. ಅವುಗಳ ಬಣ್ಣ ಬಿಳಿ ಇಲ್ಲವೆ ನಸುಗೆಂಪು. ಫಲ ಲೆಗ್ಯೂಮ್ ಮಾದರಿಯದು. ಸಾಮಾನ್ಯವಾಗಿ ಅನೇಕ ಫಲಗಳು ಒಂದು ಗೊಂಚಲಿನಲ್ಲಿರುತ್ತವೆ. ಬಲಿತು ಒಣಗಿದ ಅನಂತರ ಕಾಯಿಗಳು ಬಿರಿಯುವುದರಿಂದ ಒಳಗಿನ ಬೀಜಗಳು ಚೆನ್ನಾಗಿ ಗೋಚರಿಸುತ್ತವೆ. ಒಂದೊಂದು ಫಲದಲ್ಲೂ 3–5 ಬೀಜಗಳಿರುತ್ತವೆ. ಬೀಜಗಳ ಬಣ್ಣ ಕೆಂಪು. ಕಾಯಿಯ ಒಳಾವರಣಕ್ಕೆ ಬೀಜ ಅಂಟುವ ಬಳಿ ಬೀಜದ ಮೇಲೆ ಕಪ್ಪು ಬಣ್ಣದ ಮಚ್ಚೆಯಿದೆ. ಕೆಲವೊಮ್ಮೆ ಬೀಜಗಳು ಬಳಿ ಬಣ್ಣಕ್ಕಿರುವುದೂ ಉಂಟು ಕೆಂಪು ಮತ್ತು ಕರಿಬಣ್ಣದಿಂದಾಗಿಯೂ ಥಳಥಳನೆ ಹೊಳೆಯುತ್ತಿರುವುದರಿಂದಲೂ ಬೀಜಗಳು ಬಲು ಸುಂದರವಾಗಿ ಕಾಣುತ್ತವೆ.

ಗುಲಗಂಜಿಗೆ ಹಲವಾರು ಉಪಯುಕ್ತ ಗುಣಗಳುಂಟು. ಅತಿಮಧುರ ಎಂಬ ಸಸ್ಯದ ಬೇರಿನಲ್ಲಿರುವ ಲಿಕರಿಸ್ ಎಂಬ ವಸ್ತುವಿನ ಮುಖ್ಯ ಸತ್ತ್ವವಾದ ಗ್ಲೈಸಿರೈಸಿನ್ ಎಂಬುದು ಗುಲಗಂಜಿಯ ಬೇರು ಹಾಗೂ ಎಲೆಗಳಲ್ಲಿದೆ. ಇವುಗಳಿಂದ ತಯಾರಿಸಿದ ಕಷಾಯವನ್ನು ನೆಗಡಿ, ಕೆಮ್ಮು ಮತ್ತು ಹೊಟ್ಟೆನುಲಿತಗಳಿಗೆ (ಕಾಲಿಕ್) ಔಷಧಿಯಾಗಿ ಉಪಯೋಗಿಸುತ್ತಾರೆ. ಶೀತದೋಷದಿಂದ ಉಂಟಾಗುವ ಗೊಗ್ಗರು ಧ್ವನಿಯನ್ನು ಸರಿಪಡಿಸಿಕೊಳ್ಳಲು ಗುಲಗಂಜಿಯ ಎಲೆಗಳನ್ನು ಅಗಿದು ತಿನ್ನುತ್ತಾರೆ.

ಹಾರಗಳು ಮತ್ತು ಜಪಮಾಲೆಗಳನ್ನು ತಯಾರಿಸಲು ಗುಲಗಂಜಿ ಬೀಜಗಳನ್ನು ಉಪಯೋಗಿಸುತ್ತಾರೆ. ಪುರಾತನ ಕಾಲದಿಂದಲೂ ಗುಲಗಂಜಿಯನ್ನು ಚಿನ್ನ ಬೆಳ್ಳಿ ವ್ಯಾಪಾರಿಗಳು ತೂಕದ ಮಾನವಾಗಿ ಉಪಯೋಗಿಸುತ್ತಿದ್ದಾರೆ. ಬೇಯಿಸಿದ ಗುಲಗಂಜಿ ಈಜಿಪ್ಟ್‌ನಲ್ಲಿ ಆಹಾರವಾಗಿ ಬಳಸಲ್ಪಡುತ್ತದೆ. ಭಾರತದಲ್ಲೂ ಕೆಲವು ಕಡೆ ಬರಗಾಲದಲ್ಲಿ ಆಹಾರವಾಗಿ ಉಪಯೋಗಿಸುವುದಿದೆ. ಅತಿಯಾಗಿ ಸೇವಿಸಿದರೆ ತಲೆನೋವು ಬರುತ್ತದೆ.

ಗುಲಗಂಜಿಯ ಬೀಜಗಳಲ್ಲಿ ಏಬ್ರಿನ್ ಎಂಬ ಟಾಕ್ಸಾಲ್ಬ್ಯುಮಿನ್ ರಾಸಾಯನಿಕ ಇದೆ. ಇದೊಂದು ಕಟುವಿಷ. ದೇಹದ ತೂಕದ ಪ್ರತಿ ಕಿಲೋಗ್ರಾಮಿಗೂ 0.0005 ರಿಂದ 0.001 ಮಿಗ್ರಾಂ ಪರಿಮಾಣದಲ್ಲಿ ಏಬ್ರಿನ್ ದೇಹಕ್ಕೆ ಸೇರಿದರೆ ಪ್ರಾಣಹಾನಿಯಾಗುತ್ತದೆ. ಬೀಜಗಳನ್ನು ಪುಡಿಮಾಡಿ ಅದರಿಂದ ತಯಾರಿಸಿದ ದ್ರಾವಣವನ್ನು ರೆಪ್ಪೆಗಳ ಒಳಭಾಗಕ್ಕೆ ಲೇಪಿಸಿದರೆ ರಕ್ತಕ್ಕೆ ಏಬ್ರಿನ್ ಸೇರುವುದರಿಂದ ಪ್ರಾಣಹಾನಿಯಾಗುತ್ತದೆ. ಏಬ್ರಿನ್ ಚರ್ಮದೊಳಕ್ಕೆ ಸೇರಿದರೆ ಆ ಭಾಗದಲ್ಲಿ ಒಂದು ರೀತಿಯ ರಕ್ತದೋಷ ಮತ್ತು ಬಾವು ಉಂಟಾಗುತ್ತದೆ. ಆದರೆ ಬಾಯಿ, ಅನ್ನನಾಳ, ಮತ್ತು ಹೊಟ್ಟೆಯಲ್ಲಿ ಏಬ್ರಿನ್ ಯಾವ ದುಷ್ಪರಿಣಾಮವನ್ನೂ ಮಾಡುವುದಿಲ್ಲ. ಏಕೆಂದರೆ ಅದು ಸುಲಭವಾಗಿ ಪಚನಗೊಂಡು ನಿರುಪದ್ರವಿಯಾಗುತ್ತದೆ. ಒಂದು ಕಾಲದಲ್ಲಿ ಏಬ್ರಿನ್ನನ್ನು ಕಣ್ಣುಸಂಬಂಧಿ ರೋಗಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತಿತ್ತು. ಆದರೆ ಇದರ ಅಪಾಯಕಾರಿ ಪರಿಣಾಮಗಳಿಂದಾಗಿ ಈಗ ಇದರ ಬಳಕೆ ಇಲ್ಲ.

ದನಗಳನ್ನೂ ಮನುಷ್ಯರನ್ನೂ ಸಾಯಿಸಲು ಗುಲಗಂಜಿಯ ಪುಡಿಯನ್ನು ದುರುಪಯೋಗಿಸುವುದೂ ಉಂಟು. ಗುಲಗಂಜಿಗಳನ್ನು ಅರೆದು, ಚೂಪಾದ ಸೂಜಿಗಳನ್ನಾಗಿ ಮಾಡಿ ಬಿಸಿಲಿನಲ್ಲಿ ಒಣಗಿಸಿ, ಗಟ್ಟಿಯಾಗಿಸಿ, ವಿಷದ ಕಣೆಗಳಾಗಿ ಪ್ರಯೋಗಿಸುತ್ತಾರೆ. ಬಲು ವಿಷಪೂರಿತವಾದ ಇವು ದೇಹವನ್ನು ಹೊಕ್ಕ ಭಾಗದಲ್ಲಿ ಊದು ವ್ರಣವನ್ನು ಉಂಟುಮಾಡುತ್ತವೆ. ಬಲುಬೇಗ ಈ ಬಾವು ಹೆಚ್ಚಾಗುತ್ತ ಬರುತ್ತದೆ. ಸೂಕ್ತ ಪರಿಹಾರವಿಲ್ಲದಿದ್ದಲ್ಲಿ 3–5 ದಿವಸಗಳ ಅನಂತರ ಸಾವು ಸಂಭವಿಸುತ್ತದೆ. (ಟಿ.ಎಸ್.ಸಿ.ಎಸ್.)

**ಗುಲಾಬ್ ಸಿಂಗ್ :** 1792–1857. ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಒಬ್ಬ ಡೋಗ್ರಾ ಮಹಾರಾಜ. ಇವನ ತಂದೆ ಮಿಯಾನ್ ಕಿಶೋರ್‌ಸಿಂಗ್. ಗುಲಾಬ್ ಸಿಂಗ್ ಚಿಕ್ಕ ವಯಸ್ಸಿನಲ್ಲೇ ತಾತನ ಬಳಿ ಯುದ್ಧ ವಿದ್ಯೆ ಕಲಿತು, 1809ರಲ್ಲಿ ಲಾಹೋರಿಗೆ ಹೋಗಿ ಅಲ್ಲಿ ಪಂಜಾಬಿನ ಮಹಾರಾಜ ರಣಜಿತ್ ಸಿಂಗನ ಅಶ್ವದಳದಲ್ಲಿ ಉದ್ಯೋಗಕ್ಕೆ

ಸೇರಿದ. ರಣಜಿತ್ ಇವನ ನಿಷ್ಠೆ, ದಕ್ಷತೆ, ಧೈರ್ಯ, ಸಾಹಸಗಳನ್ನು ಮೆಚ್ಚಿ ಇವನಿಗೆ ಜಮ್ಮುವನ್ನು ಬಹುಮಾನವಾಗಿ ಕೊಟ್ಟ. ಗುಲಾಬ್ ಸಿಂಗನ ಅಧಿಕಾರ ಕ್ರಮೇಣ ಲಡಾಖ್‌ಗೂ ವಿಸ್ತರಿಸಿತು. 1839ರಲ್ಲಿ ರಣಜಿತ್ ಸಿಂಗ್ ತೀರಿಕೊಂಡ ಮೇಲೆ ಇವನು ಖಾಲ್ಸದಲ್ಲಿ ತನ್ನ ಪ್ರಭಾವ ಬೆಳಸಿಕೊಂಡು ಅದರಲ್ಲಿ ಅಧಿಕಾರ ಗಳಿಸಿದ. ಬ್ರಿಟಿಷರಿಗೂ ಸಿಕ್ಖರಿಗೂ ನಡೆದ ಸುಬ್ರಾನ್ ಕದನದಲ್ಲಿ (1846 ಫೆಬ್ರವರಿ 10) ಗುಲಾಬ್ ಸಿಂಗನೂ ಪಾತ್ರ ವಹಿಸಿದ್ದ. ಆ ಕದನದಲ್ಲಿ ಇಂಗ್ಲಿಷರು ಜಯ ಗಳಿಸಿದರು. ಲಾಹೋರ್ ಅವರ ವಶವಾಯಿತು. ಬ್ರಿಟಿಷರೊಂದಿಗೆ ನಡೆದ ಸಂಧಾನದಲ್ಲಿ ಗುಲಾಬ್ ಸಿಂಗ್ ಪ್ರಧಾನ ಪಾತ್ರ ವಹಿಸಿದ. 1846ರ ಮಾರ್ಚ್ 9ರಂದು ಲಾಹೋರ್ ಒಂಪದಕ್ಕೆ ಸಹಿ ಬಿತ್ತು. ಇದರ ಪ್ರಕಾರ ಕಾಶ್ಮೀರವೂ ಅದರ ಅಧೀನ ರಾಜ್ಯಗಳೂ ಬ್ರಿಟಿಷರಿಗೆ ಸೇರಿದುವು. ಗುಲಾಬ್ ಸಿಂಗ್ ಕಾಶ್ಮೀರವನ್ನು 10,00,000 ಪೌಂ. ಗಳಿಗೆ ಅವರಿಂದ ಕೊಂಡ. ಇವನಿಗೆ ಮಹಾರಾಜ ಪದವಿ ಪ್ರಾಪ್ತವಾಯಿತು. ಬ್ರಿಟಿಷರೊಂದಿಗೆ ಈತ ಸ್ನೇಹ ಸಂಬಂಧ ಉಳಿಸಿಕೊಂಡಿದ್ದು, 1857ರಲ್ಲಿ ನಡೆದ ಬಂಡಾಯದಲ್ಲಿ ಬ್ರಿಟಿಷರಿಗೆ ನೆರವು ನೀಡಿದ. ಗುಲಾಬ್ ಸಿಂಗ್ ತೀರಿಕೊಂಡಿದ್ದು 1857ರಲ್ಲಿ. 1947ರ ಅಕ್ಟೋಬರ್ 20ರಂದು ಕಾಶ್ಮೀರ ಸ್ವತಂತ್ರ ಭಾರತದಲ್ಲಿ ವಿಲೀನಗೊಳ್ಳುವವರೆಗೂ ಇವನ ವಂಶದವರು ಆ ಸಂಸ್ಥಾನವನ್ನಾಳಿದರು. (ಎಸ್.ಎಸ್‌ಆರ್.)

**ಗುಲಾಬಿ** : ರೋಸೇಸೀ ಕುಟುಂಬಕ್ಕೆ ಸೇರಿದ ಸುಂದರವಾದ, ಜನಪ್ರಿಯವಾದ ಅಲಂಕಾರಸಸ್ಯ (ರೋಸ್). ವೈಜ್ಞಾನಿಕ ಹೆಸರು ರೋಸ. ವಿವಿಧ ಬಣ್ಣಗಳಿಂದ ಕೂಡಿದ ಅತೀ ಚೆಲುವಾದ ಹೂಗಳನ್ನು ಬಿಡುವುದರಿಂದ ಇದು ಅಲಂಕಾರ ಸಸ್ಯಗಳಲ್ಲೆಲ್ಲ ಅತೀ ಪ್ರಸಿದ್ಧವಾದುದೂ ಜನಪ್ರಿಯವಾದುದೂ ಆಗಿದೆಯಲ್ಲದೆ ಉದ್ಯಾನಗಾರಿಕೆಯಲ್ಲಿ ಬಹು ಹಿಂದಿನಿಂದಲೂ ಬಳಕೆಯಲ್ಲಿದೆ. ತನ್ನ ಹೂಗಳ ಅಪ್ರತಿಮ ಸೌಂದರ್ಯದಿಂದಾಗಿ ಗುಲಾಬಿ ಹೂಗಳ ರಾಣಿ ಎನಿಸಿಕೊಂಡಿದೆ. ಹೇನ್ಸ್ ಹೇಳಿದ ಹಾಗೆ ಯಾವಾಗ ಮೊಟ್ಟಮೊದಲ ಬಾರಿಗೆ ಮಾನವ ಗುಲಾಬಿಯನ್ನು ನೋಡಿ ಇದರ ಮಧುರವಾದ ವಾಸನೆಯನ್ನು ಸವಿದನೋ ಆಗಿನಿಂದಲೂ ಅವನ ಮನಸ್ಸನ್ನು ಇದು ಸೆರೆಹಿಡಿದುಬಿಟ್ಟಿದೆ. ಪ್ರಪಂಚದ ಸಮಶೀತೋಷ್ಣವಲಯದ ಉತ್ತರ ಭಾಗದ ದೇಶಗಳಲ್ಲೂ ಮೆಕ್ಸಿಕೊ, ಭಾರತ ಮುಂತಾದ ದೇಶಗಳ ಉನ್ನತ ಪ್ರದೇಶಗಳಲ್ಲೂ ಇದರ ಬೇಸಾಯ ಉಂಟು.

ಗುಲಾಬಿ ಭಾರತದಲ್ಲಿ ಬಹಳ ಹಿಂದಿನಿಂದಲೂ ಬೇಸಾಯದಲ್ಲಿತ್ತೆಂದು ತಿಳಿದುಬಂದಿದೆ. ಪುರಾಣದ ಕಥೆಗಳಲ್ಲಿ, ಕಾವ್ಯಗಳಲ್ಲಿ ಇದರ ಉಲ್ಲೇಖ ಉಂಟು. ಸಂಸ್ಕೃತದಲ್ಲಿ ಇದಕ್ಕೆ ತರುಣಿಪುಷ್ಪ, ಅತಿಮಂಜುಲ, ಸೇಮಂತಿಕ ಮುಂತಾದ ಹೆಸರುಗಳಿವೆ. ಮೊಗಲರಿಗೆ ಗುಲಾಬಿ ಅತಿಮೆಚ್ಚಿನ ಹೂವಾಗಿತ್ತು.

ಗ್ರೀಕರ ಮತ್ತು ರೋಮನರ ಪುರಾಣಗಳ ಪ್ರಕಾರ ಗುಲಾಬಿ ಪ್ರೇಮ ಮತ್ತು ಸೌಂದರ್ಯದೇವತೆಯ ಮೆಚ್ಚಿನ ಹೂ. ಬಾಟಿಸೆಲಿಯ ಸುಪ್ರಸಿದ್ಧ ಕಲಾಕೃತಿಯಾದ “ವೀನಸ್ ದೇವತೆಯ ಜನನ” ಎಂಬುದರಲ್ಲಿ ವೀನಸಿನ ಜನನದೊಂದಿಗೆ ಗುಲಾಬಿ ಹೂವೂ ಉದ್ಭವಿಸುತ್ತಿರುವಂತೆ ತೋರಿಸಲಾಗಿದೆ. ಪ್ರೇಮ ಮತ್ತು ಪ್ರಣಯಗಳಲ್ಲಿ ಗುಲಾಬಿ ಬಹುಮುಖ್ಯ ಪಾತ್ರವಹಿಸುತ್ತದೆ. ಗುಲಾಬಿ ಹೂವನ್ನು ಒಬ್ಬ ಸುಂದರ ಯುವತಿಗೆ ಹೋಲಿಸಲಾಗಿದ್ದು ಅವಳು ತನ್ನ ಪ್ರಣಯಿಯಾದ ಜ಼ೆಫಿರ್‌ನನ್ನು ಮುತ್ತಿಡಲೋಸುಗವೆಂಬಂತೆ ತನ್ನ ದಳಗಳನ್ನು ಅರಳಿಸುತ್ತಾಳೆಂದು ಹೇಳಲಾಗಿದೆ. ರೋಮನರು ಗುಲಾಬಿಯನ್ನು ಬಹಳವಾಗಿ ಮೆಚ್ಚುತ್ತಿದ್ದರು. ಆಂಟೋನಿ ತನ್ನ ಬಳಿಗೆ ಬಂದಿದ್ದಾಗ ಈಜಿಪ್ಟಿನ ಕ್ಲಿಯೋಪಾತ್ರ ಮೊಣಕಾಲಿನಷ್ಟು ಆಳಕ್ಕೆ ಗುಲಾಬಿ ಹೂಗಳನ್ನು ಹರಡಿಸಿದ್ದಳಂತೆ. ಗುಲಾಬಿಯ ಬಗ್ಗೆ ಸಂಗೀತ ಮತ್ತು ಕಾವ್ಯಗಳಲ್ಲಿಯೂ ಉಲ್ಲೇಖವಿದೆ. ಸೌಂದರ್ಯ, ಪ್ರೇಮ ಹಾಗೂ ಪರಿಪೂರ್ಣತೆಗಳ ಪ್ರತೀಕವೆನಿಸಿರುವ ಗುಲಾಬಿಯ ಅಂದಚಂದಗಳನ್ನು, ಸುವಾಸನೆಯನ್ನು ಹೊಗಳಿ ರಿಚರ್ಡ್ ಸ್ಟ್ರಾಸ್, ಯೋಹಾನ್ ಸ್ಟ್ರಾಸ್, ಥಾಮಸ್ ಮೂರ್ ಮೊದಲಾದ ಸಂಗೀತಜ್ಞರು ಹಾಡುಗಳನ್ನು ರಚಿಸಿದ್ದಾರೆ. ಹಂಟ್, ಬ್ಲೇಕ್, ಕೀಟ್ಸ್, ಶೆಲಿ ಮುಂತಾದವರು ಕವನಗಳನ್ನು ರಚಿಸಿದ್ದಾರೆ. ಶೇಕ್ಸ್‌ಪಿಯರ್ ತನ್ನ ಹಲವಾರು ಉಪಮಾಲಂಕಾರಗಳಲ್ಲಿ ಗುಲಾಬಿಯ ಹೆಸರನ್ನು ಬಳಸಿದ್ದಾನೆ. ಇಂಗ್ಲಿಷ್ ಸಾಹಿತ್ಯದಲ್ಲಿ ಮಾತ್ರವಲ್ಲದೆ ಬೇರೆ ಭಾಷಾ ಸಾಹಿತ್ಯಗಳಲ್ಲೂ ಗುಲಾಬಿಯ ವರ್ಣನೆ ಒಂದಿಲ್ಲೊಂದು ಕಡೆ ಬಂದೇ ಇದೆ. ಪುರಾತನ ಕಾಲದ ಚಿತ್ರಕಲೆಯಲ್ಲಂತೂ ಗುಲಾಬಿಗೆ ಪ್ರಧಾನವಾದ ಸ್ಥಾನವಿತ್ತು. ಮಿನೋವದ ಅಕ್ಕಸಾಲಿಗರು ತಮ್ಮ ಒಡವೆಗಳ ರಚನಾವಿನ್ಯಾಸದ ಮಾದರಿಗಳಾಗಿ ಗುಲಾಬಿ ಹೂ ಮತ್ತು ಎಲೆಗಳನ್ನು ಬಳಸಿದ್ದಾರೆ. ಹಲವಾರು ರಾಷ್ಟ್ರಗಳು ಗುಲಾಬಿ ಹೂವಿನ ಗುರುತಿರುವ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿವೆ. ಗುಲಾಬಿ ಇಂಗ್ಲೆಂಡಿನ ರಾಷ್ಟ್ರೀಯ ಪುಷ್ಪ. ಇಂದಿನ ಆಧುನಿಕ ಕಾಲದಲ್ಲೂ ಗುಲಾಬಿ ತನ್ನ ಜನಪ್ರಿಯತೆ ಉಳಿಸಿಕೊಂಡೇ ಇದೆ. ಪ್ರಪಂಚದ ಹಲವಾರು ದೇಶಗಳಲ್ಲಿ ಮನಮೋಹಕ ಗುಲಾಬಿ ತೋಟಗಳಿವೆ. ಪ್ಯಾರಿಸಿನ ಬಾಯ್ ಡ ಬಲೋನ್‌ನಲ್ಲಿನ ಬಗಾಟೆಲ್ ತೋಟ ಇವುಗಳಲ್ಲೆಲ್ಲ ಅತಿ ಪ್ರಸಿದ್ಧವಾದ್ದು. ಇದಕ್ಕೆ ಬಹಳ ಸಮೀಪದಲ್ಲಿರುವ ಲಾ ಹೇ ಎಂಬಲ್ಲಿನ ಗುಲಾಬಿ ತೋಟವೂ ಅಷ್ಟೆ. ಯುರೋಪಿನಲ್ಲಿನ ಎಲ್ಲ ಬಗೆಯ ಗುಲಾಬಿ ಗಿಡಗಳ ಸಂಗ್ರಹ ಇಲ್ಲಿದೆ ಎಂದು ಹೇಳಲಾಗಿದೆ. ಹಾಗೆಯೇ ಜಿನೀವದಲ್ಲಿನ ಪಾರ್ಕ್ ಲಾ ಗ್ರಾಂಜ್, ಇಂಗ್ಲೆಂಡಿನಲ್ಲಿರುವ ಕ್ವೀನ್ ಮೇರೀಸ್ ರೋಸ್ ಗಾರ್ಡನ್ (ರೀಜೆಂಟ್ಸ್ ಪಾರ್ಕಿನಲ್ಲಿದೆ), ಐರ್ಲೆಂಡಿನ ರೂಸ್‌ಬರೋದಲ್ಲಿನ ತೋಟ, ಅಮೆರಿಕದಲ್ಲಿನ ಹಾರ್ಟ್‌ಫರ್ಡ್ ಮತ್ತು ಹರ್ಶೆಗಳಲ್ಲಿನ ತೋಟಗಳು, ಭಾರತದಲ್ಲಿ ಪಾಟಿಯಾಲ ಮಹಾರಾಜರ ಗುಲಾಬಿ ತೋಟ–ಇವು ಇತರ ಜಗತ್ಪ್ರಸಿದ್ಧ ಗುಲಾಬಿ ತೋಟಗಳು. ಭಾರತದ ಗುಲಾಬಿ ಸಂಘ ನವದೆಹಲಿಯ ಸಫ್ದರ್‌ಜಂಗ್ ಬಳಿ ರಾಷ್ಟ್ರೀಯ ಗುಲಾಬಿ ತೋಟವೊಂದನ್ನು ಅಭಿವೃದ್ಧಿ ಗೊಳಿಸಬೇಕೆಂದು ನಿರ್ಧರಿಸಿದೆ.

ಪ್ರಪಂಚಾದ್ಯಂತ ಗುಲಾಬಿ ಬೆಳೆಸುವುದನ್ನು ಉತ್ತೇಜಿಸುವ ಮತ್ತು ಹೊಸ ಗುಲಾಬಿ ಜಾತಿಗಳನ್ನು ಬಿಡುಗಡೆ ಮಾಡುವ ಮುಖ್ಯ ಉದ್ದೇಶಗಳನ್ನುಳ್ಳ ಎರಡು ಅಂತಾರಾಷ್ಟ್ರೀಯ ಗುಲಾಬಿ ಸಂಘಗಳಿವೆ. ಇವೇ ನ್ಯಾಷನಲ್ ರೋಸ್ ಸೊಸೈಟಿ, ಇಂಗ್ಲೆಂಡ್ ಮತ್ತು ಇಂಟರ್‌ನ್ಯಾಷನಲ್ ರೋಸ್ ಸೊಸೈಟಿ, ಅಮೆರಿಕ.

ಪೊದರು ರೀತಿಯ ಗುಲಾಬಿ ಗಿಡ

ಸಸ್ಯ ವೃತ್ತಾಂತ : ಗುಲಾಬಿಯ ಬಹುಪಾಲು ಬಗೆಗಳು ಪೊದೆಸಸ್ಯಗಳು. ಕೆಲವು ಬಳ್ಳಿಗಳೂ ಇವೆ. ಕಾಂಡದ ಮೇಲೆಲ್ಲ ಕೆಳಗೆ ಬಾಗಿರುವ ವಿಶಿಷ್ಟ ರೀತಿಯ ಮುಳ್ಳುಗಳಿವೆ. ಸಾಮಾನ್ಯವಾಗಿ ಪುಟ್ಟ ಗಾತ್ರದವಾದ ಇವು ಬಳ್ಳಿಯಂತೆ ಹಬ್ಬುವ ಗುಲಾಬಿ ಬಗೆಗಳಲ್ಲಿ ದೃಢವಾಗಿಯೂ ಉದ್ದವಾಗಿಯೂ ಇವೆ. ಗುಲಾಬಿ ಗಿಡದ ಎಲೆಗಳು ಸಂಯುಕ್ತ ಮಾದರಿಯವು; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಒಂದೊಂದು ಎಲೆಯಲ್ಲೂ 1–11 ಕಿರುಎಲೆಗಳಿವೆ. ಪ್ರತಿ ಎಲೆಯಲ್ಲಿ ಒಂದು ಅಕ್ಷ (ರೇಕಿಸ್) ಇದೆ. ಅದರ ತುದಿಯಲ್ಲಿ ಒಂದು ಕಿರುಎಲೆಯೂ ಅದರ ಅಕ್ಕಪಕ್ಕಗಳಲ್ಲಿ ಜೊತೆಜೊತೆಯಾಗಿ ಸಮಾವೇಶಗೊಂಡಿರುವ ಇತರ ಕಿರುಎಲೆಗಳೂ ಇವೆ. ಎಲೆಯ ಬುಡದಲ್ಲಿ ತೊಟ್ಟಿಗೆ ಅಂಟಿಕೊಂಡಿರುವ ಎರಡು ವೃಂತಪರ್ಣಗಳಿವೆ. ಗುಲಾಬಿ ಹೂಗಳು ಒಂಟಿಯಾಗಿ, ಇಲ್ಲವೆ ಮಧ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಮೂಡುತ್ತವೆ. ವನ್ಯಗುಲಾಬಿಗಳ ಹೂಗಳಲ್ಲಿ ದಳಗಳ ಸಂಖ್ಯೆ 5. ಉದ್ಯಾನಗಾರಿಕೆಯಲ್ಲಿ ಬೆಳೆಸಲಾಗುವ ಮಿಶ್ರತಳಿಗಳಲ್ಲಿ ದಳಗಳ ಸಂಖ್ಯೆ 5 ಕ್ಕಿಂತ ಹೆಚ್ಚು. ದಳಗಳ ಬಣ್ಣ ಅಚ್ಚಬಿಳಿ. ಕೆನೆ, ಹಳದಿ, ನಸುಗೆಂಪು,

ಕೆಂಪು, ಕಡುಗೆಂಪು,ಊದಾ ಮುಂತಾಗಿ ವೈವಿಧ್ಯಪೂರ್ಣವಾಗಿದೆ. ಅಚ್ಚಬಣ್ಣಗಳಲ್ಲದೆ ಬೇರೆ ಬೇರೆ ಬಣ್ಣ ಗಳ ಮಿಶ್ರಣವನ್ನೂ ಕಾಣಬಹುದು. ಇತ್ತೀಚೆಗೆ ಕಪ್ಪುಬಣ್ಣದ ಗುಲಾಬಿಯನ್ನೂ ವೃದ್ಧಿಸಲಾಗಿದೆ. ಗುಲಾಬಿಗೆ ಮಧುರವಾದ ಸುಮಾಸನೆ ಉಂಟು. ಗುಲಾಬಿಯ ಬಣ್ಣ ಎಷ್ಟು ಮನಮೋಹಕವೋ ಅದರ ವಾಸನೆ ಅಷ್ಟೇ ಚೇತೋಹಾರಿ. ಕೇಸರಗಳೂ ಕಾರ್ಪೆಲುಗಳೂ ಅವೆಷ್ಟೊ ; ಇವು ಬಿಡಿಬಿಡಿಯಾಗಿದ್ದು ಪಾತ್ರೆಯಾಕಾರದ ಪುಷ್ಪಪೀಠದ ಒಳಮೈಮೇಲೆಲ್ಲ ಜೋಡಣೆಗೊಂಡಿವೆ. ಪ್ರತಿ ಕಾರ್ಪೆಲಿಗೂ ಒಂದು ಉದ್ದನೆಯ ಶಲಾಕೆ ಮತ್ತು ಗುಂಡನೆಯ ಶಲಾಕಾಗ್ರ ಇವೆ. ಒಳಗೆ ಒಂದೇ ಒಂದು ಅಂಡಕವಿದೆ. ನಿಷೇಚನಕ್ರಿಯೆ ನಡೆದ ಮೇಲೆ ಇಡೀ ಪುಷ್ಪಪೀಠವೇ ಮತ್ತಷ್ಟು ಬೆಳೆದು, ರಸಭರಿತವಾಗಿ ಹಿಪ್ ಎಂಬ ಹೆಸರಿನ ಕಾಯಿ ಆಗುತ್ತದೆ. ಗುಂಡನೆಯ ಆಕಾರದ ಇದು ಬಲಿತಾಗ ಚೆಲುವಾದ ಬಣ್ಣವನ್ನು ತಳೆಯುತ್ತದೆ. ಕಾಯಿಗಳ ಬಣ್ಣದಿಂದ ಆಕರ್ಷಿತವಾಗುವ ಹಕ್ಕಿಗಳ ಮೂಲಕ ಬೀಜಪ್ರಸಾರ ನಡೆಯುತ್ತದೆ.

ಗುಲಾಬಿಯನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು :

I. ವನ್ಯ (ಬೇಸಾಯದಲ್ಲಿಲ್ಲದ) ಗುಲಾಬಿ

II. ಬೇಸಾಯದಲ್ಲಿರುವ ಗುಲಾಬಿ

I ವನ್ಯ (ಬೇಸಾಯದಲ್ಲಿಲ್ಲದ) ಗುಲಾಬಿ : ರೇಡರ್ ಎಂಬವರ ವಿಂಗಡಣೆಯ ಪ್ರಕಾರ ಇದರಲ್ಲಿ ಸುಮಾರು 120 ಜಾತಿಗಳಿವೆ. ಶೀತ ಮತ್ತು ಸಮಶೀತೋಷ್ಣ ವಲಯಗಳಲ್ಲಿ ಇವುಗಳ ವ್ಯಾಪ್ತಿ ಹೆಚ್ಚು. ನ್ಯೂ ಮೆಕ್ಸಿಕೊದಿಂದ ಹಿಡಿದು ಉತ್ತರ ಅಮೆರಿಕದ ಉತ್ತರ ಮೇರುವೃತ್ತದವರೆಗೂ ಆಫ್ರಿಕದ ಈಶಾನ್ಯ ದಿಕ್ಕಿನ ಅಬಿಸೀನಿಯ, ಹಿಮಾಲಯದ ತಪ್ಪಲು, ಚೀನ ಮತ್ತು ಜಪಾನ್ ದೇಶಗಳ ಪರ್ವತಗಳವರೆಗೂ ಇವನ್ನು ಕಾಣಬಹುದು. ಭಾರತದಲ್ಲಿ ಕಾಣಬರುವ ವನ್ಯಗುಲಾಬಿಗಳ ಮುಖ್ಯ ಪ್ರಭೇದಗಳು ಇವು –

1. ರೋಸ ಎಗ್‌ಲಾಂಟೇರಿಯಾ (ಸ್ವೀಟ್ ಬ್ರಿಯರ್) : ಇದು ಒಂದು ಸಣ್ಣ ಪೊದೆ. ಇದರ ಎಲೆಗಳು ದಟ್ಟವಾಗಿವೆ. 1–3ರ ಗೊಂಚಲುಗಳಲ್ಲಿ ಹೂಗಳು ಅರಳುತ್ತವೆ. ಹೂಗಳ ಬಣ್ಣ ನಸುಗೆಂಪು. ಕಾಯಿ ಗುಂಡಗಿದೆ. ಬಣ್ಣ ರಕ್ತಗೆಂಪು. ಇಲ್ಲವೆ ಕಿತ್ತಳೆಮಿಶ್ರಿತ ಕೆಂಪು. ಈ ಬಗೆ ಸಾಮಾನ್ಯವಾಗಿ ಹಿಮಾಲಯದ ಗಿಲ್‌ಗಿಟ್, ಕಾಶ್ಮೀರ ಮತ್ತು ಟಿಬೆಟ್ಟಿನ ಪಶ್ಚಿಮ ಭಾಗಗಳಲ್ಲಿ ವಿಶೇಷವಾಗಿದೆ.

2. ರೋಸ ಫೀಟಿಡ : ಇದು ನೇರವಾಗಿ ಮಧ್ಯಮ ಎತ್ತರಕ್ಕೆ ಬೆಳೆಯುವ ಪೊದೆ. ಇದರ ಮುಳ್ಳುಗಳು ಡೊಂಕಾಗಿಲ್ಲ. ಹೂ ಹಳದಿ ಬಣ್ಣದ್ದು. ಅದಕ್ಕೆ ಸುವಾಸನೆಯಿದೆ. ಹೂಗಳು ಒಂಟೊಂಟಿಯಾಗಿರಬಹುದು ಇಲ್ಲವೆ ಪುಷ್ಪಮಂಜರಿಗಳಲ್ಲಿರಬಹುದು.

3. ರೋಸ ಇನ್‌ವೊಲ್ಯೂಕ್ರೇಟ : ದೃಢಕಾಯವಾಗಿ ಬೆಳೆಯುವ ಪೊದೆ ಇದು. ಹೂವಿನ ಬಣ್ಣ ಬಿಳಿ. ಹೂಗಳು ಒಂಟಿಯಾಗಿರಬಹುದು ಅಥವಾ ಗುಂಪುಗಳಲ್ಲಿರಬಹುದು. ಕಾಯಿಯ ಬಣ್ಣ ಊದಾ. ಭಾರತದ ಎಲ್ಲೆಡೆಗಳಲ್ಲೂ ಈ ಬಗೆಯ ವ್ಯಾಪ್ತಿಯಿದೆ. ಬಂಗಾಳದ ಮೈದಾನಗಳಲ್ಲಿನ ಜೌಗು ಪ್ರದೇಶಗಳಲ್ಲಿದು ಹೆಚ್ಚಾಗಿ ಬೆಳೆಯುತ್ತದೆ.

4. ರೋಸ ಲೆಶೆನಾಲ್ಟಿಯಾನ : ಹುಲುಸಾಗಿ ಬೆಳೆಯುವ ಬಳ್ಳಿಯಿದು. ಕೊಂಬೆಗಳು ಊದಾ ಬಣ್ಣಕ್ಕಿವೆ. ಮುಳ್ಳುಗಳು ಸಣ್ಣ ಕೊಕ್ಕೆಯಂತಿವೆ. ಹೂಗಳು ದೊಡ್ಡ ಗಾತ್ರದವು. ಗೊಂಚಲುಗಳಲ್ಲಿರುವ ಇವಕ್ಕೆ ಸುವಾಸನೆಯೂ ನಸುಗೆಂಪು ಬಣ್ಣವೂ ಇವೆ. ಕಾಯಿ ಗುಂಡಗಿದೆ. ಬಣ್ಣ ಕೆಂಪು. ಪಶ್ಚಿಮಘಟ್ಟ, ನೀಲಗಿರಿ ಮತ್ತು ಪಳನಿ ಬೆಟ್ಟಗಳಲ್ಲಿ ಈ ಪ್ರಭೇದ ಹೆಚ್ಚಾಗಿದೆ.

5. ರೋಸ ಲಾಂಜಿಕಸ್ಪಿಸ್ : ಇದೊಂದು ನಿತ್ಯಹಸಿರಿನ ಬಳ್ಳಿ. ದೃಢವಾಗಿ ಬೆಳೆಯುತ್ತದೆ. ಹೂಗಳು ಬಿಳಿಯ ಬಣ್ಣದವು, ಗೊಂಚಲುಗಳಲ್ಲಿ ಇರುತ್ತವೆ. ಕಾಯಿಗಳು ಗಾಢಕೆಂಪು ಇಲ್ಲವೆ ಕಿತ್ತಳೆ ಬಣ್ಣದವಾಗಿದ್ದು ಗುಂಡಾಗಿವೆ. ಈ ಜಾತಿಯ ಗುಲಾಬಿ ಖಾಸಿಯ ಮತ್ತು ಮಿಶ್ಮಿ ಬೆಟ್ಟಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

6. ರೋಸ ಮ್ಯಾಕ್ರೊಫಿಲ : ನೇರವಾಗಿ ಬೆಳೆಯುವ ಪೊದೆ ಇದು. ನಸುಗೆಂಪು ಬಣ್ಣದ ಹೂಗಳನ್ನು ಬಿಡುತ್ತದೆ. ಹೂಗಳು ಒಂಟಿಯಾಗಿರಬಹುದು ಇಲ್ಲವೆ ಮಂಜರಿಗಳಲ್ಲಿರಬಹುದು. ಕಾಯಿಯ ಬಣ್ಣ ಕೆಂಪು. ಉತ್ತರ ಭಾರತದ ಬೆಟ್ಟಗಾಡುಗಳಲ್ಲಿ ಈ ಬಗೆ ಹೆಚ್ಚಾಗಿ ಕಾಣಬರುತ್ತದೆ. ಪಾಕಿಸ್ತಾನ ಮತ್ತು ಸಿಕ್ಕಿಮ್‌ಗಳಲ್ಲೂ ಇದೆ.

7. ರೋಸ ಮಾಸ್ಕೇಟ : ಇದು ಹುಲುಸಾಗಿ ಬೆಳೆಯುವ ಬಳ್ಳಿ. ಹೂಗಳ ಬಣ್ಣ ಬಿಳಿ. ಕಾಯಿ ಕಂದು ಬಣ್ಣದ್ದು. ಹಿಮಾಲಯದಲ್ಲಿ 1,000–4,700 ಮೀ ಎತ್ತರದ ಪ್ರದೇಶಗಳಲ್ಲಿ ಬೆಳೆಯುತ್ತದೆ.

8. ರೋಸ ಓಡರೇಟ : ಇದು ಕೂಡ ಒಂದು ಬಳ್ಳಿ. ಇದರಲ್ಲಿ ದಪ್ಪವಾದ ಮತ್ತು ಕೊಕ್ಕೆಯಂಥ ಮುಳ್ಳುಗಳಿವೆ. ಹೂಗಳ ಬಣ್ಣ ಬಿಳಿ ಅಥವಾ ನಸುಹಳದಿ. ಹೂಗಳಿಗೆ ಸುವಾಸನೆಯಿದೆ. ಕಾಯಿಗಳ ಆಕಾರ ಗುಂಡು ಇಲ್ಲವೆ ಪಿಯರ್ ಹಣ್ಣಿನಂತೆ; ಬಣ್ಣ ಹಳದಿ. ಬರ್ಮದಿಂದ ಸಿಕ್ಕಿಂವರೆಗೆ ಈ ಪ್ರಭೇದದ ವ್ಯಾಪ್ತಿಯುಂಟು.

9. ರೋಸ ಸೆರಿಸಿಯ : ಇದೊಂದು ನೇರವಾಗಿ ಬೆಳೆಯುವ ಪೊದೆ. ವಿಪರೀತ ಮುಳ್ಳುಗಳಿರುತ್ತವೆ. ಹೂಗಳ ಬಣ್ಣ ಕೆನೆಹಳದಿ. ಕಾಯಿ ಹೊಳೆಯುವ ಕೆಂಪು ಬಣ್ಣಕ್ಕಿವೆ. ಹಿಮಾಲಯದ ಕುಮಾಂವ್‌ನಿಂದ ಅಸ್ಸಾಂ ವರೆಗೆ ಇದರ ವ್ಯಾಪ್ತಿ.

10. ರೋಸ ವೆಬ್ಬಿಯಾನ : ನೇರವಾಗಿ ಬೆಳೆಯುವ ಪೊದೆಸಸ್ಯ ಇದು. ಹೂಗಳು ನಸುಗೆಂಪು ಬಣ್ಣದವು. ಕಾಯಿಗಳ ಬಣ್ಣ ತಿಳಿಗೆಂಪು. ಇದು ಹಿಮಾಲಯದ ನಿವಾಸಿ. ಲಡಖ್ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಮೇಲೆ ತಿಳಿಸಿದ ಪ್ರಭೇದಗಳಲ್ಲಿ ಇನ್‌ವೊಲ್ಯೂಕ್ರೇಟ, ಲೆಶೆನಾಲ್ಟಿಯಾನ, ಲಾಂಜಿಕಸ್ಪಿಸ್, ಓಡರೇಟ ಮತ್ತು ವೆಬ್ಬಿಯಾನಗಳು ಭಾರತಕ್ಕೆ ಮಾತ್ರ ಸೀಮಿತವಾಗಿವೆ.

II ಬೇಸಾಯದಲ್ಲಿರುವ ಗುಲಾಬಿ : ಬೇಸಾಯದಲ್ಲಿರುವ ಬಹು ಮುಖ್ಯವಾದ ಪ್ರಭೇದಗಳು ಚೈನೆನ್‌ಸಿಸ್, ಡಮಾಸ್ಕೀನ, ಫೀಟಿಡ, ಗ್ಯಾಲಿಕ, ಜೈಗ್ಯಾಂಷಿಯ, ಮಾಸ್ಕೇಟ, ಮಲ್ಟಿಫ್ಲೋರ ಮತ್ತು ವಿಚೂರೈಯಾನ.

ವಿವಿಧ ಬಗೆಯ ಗುಲಾಬಿಗಳು

ಸಾಮಾನ್ಯವಾಗಿ ಇವನ್ನು 19ನೆಯ ಶತಮಾನಕ್ಕಿಂತ ಹಿಂದೆ ಬೇಸಾಯದಲ್ಲಿದ್ದ ಗುಲಾಬಿಗಳು ಮತ್ತು ಅನಂತರ ಬೇಸಾಯಕ್ಕೆ ಬಂದ ಗುಲಾಬಿಗಳು ಎಂದು ಎರಡು ಗುಂಪುಗಳಾಗಿ ವಿಂಗಡಿಸುವುದು ವಾಡಿಕೆ. ಮೊದಲನೆಯ ಗುಂಪಿಗೆ ರೋ.ಗ್ಯಾಲಿಕ ಮತ್ತು ರೋ.ಡಮಾಸ್ಕೀನಗಳು ಸೇರಿವೆ. ಗ್ಯಾಲಿಕ ಮತ್ತು ಮಾಸ್ಕೇಟ ಪ್ರಭೇದಗಳನ್ನು ಅಡ್ಡಹಾಯಿಸಿ ಪಡೆದ ತಳಿಗಳು ಎರಡನೆಯ ಗುಂಪಿಗೆ ಸೇರಿವೆ. ಅಲ್ಲದೆ 19ನೆಯ ಶತಮಾನದಿಂದೀಚೆಗೆ ದೂರ ಪ್ರಾಚ್ಯದ ಪ್ರಭೇದಗಳಾದ ಚೈನೆನ್ಸಿಸ್ ಮತ್ತು ಜೈಗ್ಯಾಂಷಿಯಗಳು ಪ್ರಾಮುಖ್ಯಕ್ಕೆ ಬಂದವು. ಅಲ್ಲದೆ ಇವನ್ನು ಬೇರೆ ಪ್ರಭೇದಗಳೊಂದಿಗೆ ಅಡ್ಡಹಾಯಿಸಿ ಉದ್ಯಾನ ಗಾರಿಕೆಯ ಪರಿಭಾಷೆಯಲ್ಲಿ ನಾಯ್ಸೆಟ್ಸ್ ಮತ್ತು ಬೋರ್ಬನ್ ಎಂದು ಕರೆಯಲಾಗುವ ತಳಿಗಳನ್ನು ಪಡೆಯಲಾಯಿತು. ಅನಂತರ ವಿವಿಧ ಬಗೆಗಳ ಅಂತರತಳೀಕರಣದಿಂದ ಟೀ ರೋಸಸ್ ಮತ್ತು ಹೈಬ್ರಿಡ್ ಪರ್‌ಪೆಟ್ಯುವಲ್ಸ್ ಎಂಬ ಎರಡು ಮುಖ್ಯ ಬಗೆಗಳನ್ನು ಅಭಿವೃದ್ಧಿಪಡಿಸಲಾಯಿತು. ಟೀ ರೋಸಸ್ ಗುಂಪಿನವು ಸದಾ ಹೂ ಬಿಡುವ ಗುಣಕ್ಕೆ ಹೆಸರಾಗಿದ್ದರೆ ಹೈಬ್ರಿಡ್ ಪರ್‌ಪೆಟ್ಯುವಲ್ಸ್ ಬಗೆಯವು ತಮ್ಮ ಹೂಗಳ ಗಾತ್ರಕ್ಕೂ ಮಧುರವಾದ ವಾಸನೆಗೂ ಹೆಸರಾಗಿವೆ. ಆದರೆ ಮೊದಲ ಗುಂಪಿನವು ಎರಡನೆಯವಕ್ಕಿಂತ ಸೂಕ್ಷ್ಮ ಪ್ರಕೃತಿಯವು. 1867ರ ಸುಮಾರಿಗೆ ಫ್ರಾನ್ಸಿನ ಪ್ರಮುಖ ಗುಲಾಬಿ ಬೆಳೆಗಾರ ಗಿಲೋ ಎಂಬಾತ ಇವರೆಡು ಗುಂಪಿನ ಗುಲಾಬಿಗಳನ್ನು ಅಡ್ಡಹಾಯಿಸಿ ಇವೆರಡರ ಅಪೇಕ್ಷಿತ ಲಕ್ಷಣಗಳನ್ನೂ ಪಡೆದಿರುವ ಹೈಬ್ರಿಡ್ ಟೀ ರೋಸಸ್ ಎಂಬ ಇನ್ನೊಂದು ಗುಂಪನ್ನು ಅಭಿವೃದ್ಧಿ ಪಡಿಸಿದ. ಹೀಗೆ ಪಡೆಯಲಾದ ಗುಲಾಬಿಗಳಲ್ಲಿ ಮೊಟ್ಟಮೊದಲಿನದು 'ಲಾ ಫ್ರಾನ್ಸ್' ಎಂಬುದು. ಬಲುಬೇಗ

ಜನಪ್ರಿಯವಾದ ಈ ತಳಿಯನ್ನು ಇಂದಿಗೂ ಭಾರತದಲ್ಲಿ ಬಿಹಾರ, ಬಂಗಾಳ ಮತ್ತು ಬೆಂಗಳೂರುಗಳಲ್ಲಿ ಬೆಳೆಸುತ್ತಾರೆ. ಅನಂತರ ಪರ್ನೆಟ್ ಡ್ಯೂಚರ್ ಎಂಬಾತ ರೋಸ಼ ಫೀಟಿಡ ಪ್ರಭೇದವನ್ನು ತನ್ನ ತಳೀಕರಣ ಪ್ರಯೋಗಗಳಲ್ಲಿ ಬೆಳೆಸಿ ಹಳದಿ ಹೂ ಬಿಡುವ ಸೋಲೈಟ್ ಡ ಓರ್ ಎಂಬ ಬಗೆಯನ್ನು ಪಡೆದ.

ಹೀಗೆ ಹೈಬ್ರಿಡ್ ಟೀ ರೋಸಸ್ ಪ್ರಾಮುಖ್ಯಕ್ಕೆ ಬರುತ್ತಿರುವಾಗಲೇ ಪಾಲಿಯಾಂತ ಪಾಂಪಾನ್ಸ್ ಅಥವಾ ಡ್ವಾರ್ಫ್ ಪಾಲಿಯಾಂತಾಸ್ ಎಂಬ ಇನ್ನೊಂದು ಗುಂಪು ಜನಪ್ರಿಯವಾಗತೊಡಗಿತು. ರೋಸ಼ ಪಾಲಿಯಾಂತ (ಈಗ ಇದಕ್ಕೆ ರೋ.ಮಲ್ಟಿಫ್ಲೋರ ಎಂದು ಹೆಸರು) ಎಂಬುದರಿಂದ ಪಡೆಯಲಾದುವೆಂದು ಹೇಳಲಾದ ಈ ಗುಂಪಿನವು ತಮ್ಮ ಕುಳ್ಳು ಗಾತ್ರಕ್ಕೂ ದೀರ್ಘಕಾಲ ಹೂ ಬಿಡುವ ಗುಣಕ್ಕೂ ಶೀತಸಹಿಷ್ಣುತೆಗೂ ಹೆಸರಾಗಿವೆ.

1910ರಲ್ಲಿ ಡೆನ್ಮಾರ್ಕಿನ ಗುಲಾಬಿ ಬೇಸಾಯಗಾರನಾದ ಪೌಲ್ಸನ್ ಎಂಬಾತ ಪಾಲಿಯಾಂತ ಮತ್ತು ಹೈಬ್ರಿಡ್ ಟೀ ರೋಸುಗಳನ್ನು ಅಡ್ಡಹಾಯಿಸಿ ಫ್ಲಾರಿಬಂಡ ಎಂಬ ಹೊಸ ಬಗೆಯ ಗುಲಾಬಿಗಳನ್ನು ಪಡೆದ. ಇವು ಹೈಬ್ರಿಡ್ ರೋಸುಗಳಂತೆ ಅಗಾಧ ಸಂಖ್ಯೆಯಲ್ಲಿ ಹೂ ಬಿಡುವವಲ್ಲದೆ ಪಾಲಿಯಾಂತಗಳಂತೆ ಸುಂದರವಾದ ಆಕಾರದ ಹೂಗಳನ್ನು ಬಿಡುತ್ತವೆ.

ಮೇಲಿನ ಮುಖ್ಯ ಗುಂಪುಗಳಿಗೆ ಮತ್ತು ಇತರ ಕೆಲವು ಬಗೆಗಳಿಗೆ ಸೇರಿದ ಗುಲಾಬಿಗಳನ್ನು ಮುಂದೆ ಸಂಕ್ಷೇಪವಾಗಿ ವಿವರಿಸಲಾಗಿದೆ.

1. ಟೀ ರೋಸ್‌ : ಟೀ ಸೊಪ್ಪಿನ ವಾಸನೆಯುಳ್ಳ ಹೂಗಳನ್ನು ಬಿಡುತ್ತವೆ. ಹೇರಳವಾಗಿ ಹೂ ಬಿಡುವ ಬಗೆಗಳೆಂದು ಹೆಸರಾಗಿವೆ. ಆದರೆ ಹೆಚ್ಚು ಚಳಿಯನ್ನು ಸಹಿಸಲಾರವು. ಉದಾಹರಣೆಗೆ ಲೇಡಿ ಹಿಲಿಂಗ್ಡನ್, ಮಾಲಿ ಶಾರ್ಮನ್ ಕ್ರಾಫರ್ಡ್, ಮಡ್ಯಾಂ ಫಾಲ್ಕಾಟ್.

2. ಹೈಬ್ರಿಡ್ ಟೀ : ದೊಡ್ಡ ಗಾತ್ರದ ಹೂ ಬಿಡುವಂಥವು ; ಗುಲಾಬಿಗಳಲ್ಲೆಲ್ಲ ಹೆಚ್ಚು ಜನಪ್ರಿಯವಾದವು. ಕ್ರಿಮ್‌ಸನ್ ಗ್ಲೋರಿ, ಪೀಸ್, ಸೂಪರ್ ಸ್ಟಾರ್, ಮ್ಯಾಕ್‌ಗ್ರೆಡೀಸ್ ಸನ್‌ಸೆಟ್ ಮುಂತಾದವು ಹೈಬ್ರಿಡ್ ಟೀಗಳಲ್ಲಿ ಮುಖ್ಯವಾದವು. ಇವುಗಳಲ್ಲಿ ಕೆಲವು ಬಳ್ಳಿಗಳಂತೆಯೂ ಬೆಳೆಯುತ್ತವೆ.

3. ಹೈಬ್ರಿಡ್ ಪರ್‌ಪೆಟ್ಯುವಲ್ಸ್ : ಇವು ತಮ್ಮ ಎತ್ತರದ ಬೆಳವಣಿಗೆಗೆ, ಹೂಗಳ ಗಾತ್ರಕ್ಕೆ, ಚೆಲುವಾದ ಆಕಾರಕ್ಕೆ ಹೆಸರಾಗಿವೆ. ಇವುಗಳಲ್ಲಿ ಜನರಲ್ ಜಾಕ್ವಿಮಿನಾ, ಮಿಸೆಸ್ ಜಾನ್ ಲ್ಯಾಂಗ್ ಮತ್ತು ಪಾಲ್ ನೇಯ್ರಾನ್‌ಗಳು ಮುಖ್ಯವಾದ ಉದಾಹರಣೆಗಳು.

4. ಫ್ಲಾರಿಬಂಡ ಬಗೆಗಳು : ಹೈಬ್ರಿಡ್ ಟೀ ಮತ್ತು ಪಾಲಿಯಾಂತಗಳ ಮಿಶ್ರತಳಿಗಳಿವು. ಈ ಹೂಗಳಿಗೆ ವಾಸನೆಯಿರುವುದಿಲ್ಲ. ಉದಾಹರಣೆಗೆ ರಾಡ್‌ಹೆಟೆ, ಎಲ್ಸಿ ಪೌಲ್ಸನ್, ಕಿರ್ಸ್ಟೆನ್ ಪೌಲ್ಸನ್.

5. ದಿ ಡ್ವಾರ್ಫ್ ಪಾಲಿಯಾಂತಾಸ್ : ಬಹುಸಂಖ್ಯೆಯಲ್ಲಿ ದೀರ್ಘಕಾಲ ಹೂಗಳನ್ನು ಬಿಡುವುದಕ್ಕೆ ಹೆಸರಾದ ಬಗೆಗಳಿವು. ಬೇಬಿ ಫಾರಾಕ್ಸ್, ಕ್ಯಾಮಿಯೊ, ಸೆಸಿಲ್ ಬ್ರುನರ್, ಚಾಟಿಲಾನ್ ರೋಸ್‌, ಎಕೊ, ಯುವೋನ್ ರೇಬಿಯರ್ ಮುಂತಾದವು ಈ ಬಗೆಗಳಲ್ಲಿ ಕೆಲವು.

6. ಚೀನ ರೋಸ್‌ : ಅಂಚು ಸಸ್ಯಗಳಾಗಿ ಬೆಳೆಸಲು ಉತ್ತಮವಾದ ಬಗೆಗಳಿವು. ವರ್ಷದ ಎಲ್ಲ ಕಾಲಗಳಲ್ಲೂ ಹೂ ಬಿಡುತ್ತವೆ. ಇವಕ್ಕೆ ಬಂಗಾಳದ ಗುಲಾಬಿ, ತಿಂಗಳ ಗುಲಾಬಿ ಎಂಬ ಹೆಸರುಗಳೂ ಉಂಟು. ಉದಾಹರಣೆಗೆ ಕಾಮ್ಟೆಸಿ ಡು ಕೇಲ, ಮಡ್ಯಾಂ ಯೂಜೀನ್ ರೆಸಾಲ್, ಬ್ಲಶ್ ಚೈನ. ಹಸಿರು ಬಣ್ಣದ ಗುಲಾಬಿ ಹೂ ಬಿಡುವ ಬಗೆ ಈ ಗುಂಪಿಗೆ ಸೇರಿದೆ.

7. ಮಿನಿಯೇಚರ್ : ಇವು ಈಗ ಬಹಳ ಪ್ರಸಿದ್ಧಿಯಾಗಿರುವ ಪುಟಾಣಿ ಬಗೆಯ ಗುಲಾಬಿಗಳು. ಇದರ ಎಲೆಗಳೂ ಹೂಗಳೂ ಬಲುಸಣ್ಣವಾಗಿರುತ್ತವೆ. ಇವು ಅಂಚು ಸಸ್ಯ ಅಥವಾ ಕುಂಡಸಸ್ಯಗಳಾಗಿ ಬೆಳೆಸಲು ಉತ್ತಮವಾದವು. ಉದಾಹರಣೆಗೆ ಬೇಬಿ ಗೋಲ್ಡ್, ಬೇಬಿ ಮಾಸ್ಕರೇಡ್, ಕೊರಾಲಿನ್, ರೆಡ್ ಇಂಪ್ ಮತ್ತು ಪಿಕ್ಸಿ.

8. ಡಮಾಸ್ಕ್ ಗುಲಾಬಿಗಳು : ಕ್ರೈಸ್ತಧರ್ಮಯುದ್ಧದಲ್ಲಿ ತೊಡಗಿದ್ದ ಯೋಧರು (ಕ್ರುಸೇಡರ್ಸ್) ಡಮಾಸ್ಕಸಿನಿಂದ ಹಿಂತೆರಳುವಾಗ ಯುರೋಪಿಗೆ ಕೊಂಡೊಯ್ದ ಗುಲಾಬಿಗಳಿವು. ಇವುಗಳ ಹೂಗಳು ಅತ್ಯಂತ ಸುಮಾಸನೆಯಿಂದ ಕೂಡಿವೆ. ಇವುಗಳಿಂದ ಗುಲಾಬಿಯ ಅತ್ತರನ್ನು ತಯಾರಿಸುತ್ತಾರೆ. ಈ ಗುಂಪಿನ ಬಹು ಮುಖ್ಯವಾದ ತಳಿಗಳೆಂದರೆ ಸೆಲ್‌ಸಿಯಾನ, ಕಜ಼ಾನ್‌ಲಿಕ್ ಮತ್ತು ಮಡ್ಯಾಂ ಹಾರ್ಡಿ.

9. ಬೋರ್ಬನ್ ಗುಲಾಬಿಗಳು : ಡಮಾಸ್ಕ್ ಮತ್ತು ಚೀನ ಗುಲಾಬಿಗಳ ಮಿಶ್ರತಳಿಗಳಿವು. 18ನೆಯ ಶತಮಾನದ ಕೊನೆಯಲ್ಲಿ ರೀ ಯೂನಿಯನ್ ದ್ವೀಪದಲ್ಲಿ ಮೊಟ್ಟಮೊದಲಿಗೆ ಪಡೆಯಲಾಯಿತು. ಇದರಲ್ಲಿ ಕೂಡ ಸುವಾಸನೆಯಿಂದ ಕೂಡಿದ ಬಗೆಗಳಿವೆ. ಇವುಗಳಲ್ಲಿ ಎಡ್ವರ್ಡ್, ಬೌಲೆ ಡ ನೈಗೆ, ಹೋನೊರೈನ್ ಡ ಬ್ರಬಾಂಟ್ ಮತ್ತು ಲೂಯಿಸ್ ಓಡಿಯರ್ ಮುಖ್ಯವಾದವು.

10. ಫ್ರೆಂಚ್ ಗುಲಾಬಿಗಳು : ಇವಕ್ಕೆ ಗ್ಯಾಲಿಕಾಸ್ ಎಂಬ ಹೆಸರೂ ಇದೆ. ಇವು ಹೈಬ್ರಿಡ್ ಟೀ ಮತ್ತು ಫ್ಲಾರಿಬಂಡ ಜಾತಿಗಳು ಬರುವುದಕ್ಕೆ ಮುಂಚೆ ಹೆಸರುವಾಸಿಯಾಗಿದ್ದುವು. ಈ ಜಾತಿಯ ಮುಖ್ಯ ಲಕ್ಷಣವೆಂದರೆ ವಿವಿಧ ಬಣ್ಣದ ಹೂಗಳನ್ನು ಬಿಡುವುದು. ಉದಾಹರಣೆಗೆ ಅಲೈನ್ ಬ್ಲಾಂಚಾರ್ಡ್, ಬೆಲ್ಲಿಡ ಕ್ರೆಸಿ, ಕಾರ್ಡಿನಲ್ ಡ ರಿಚ್ಲೂ, ರೋಸ಼ ಮುಂಡಿ ಮತ್ತು ವೇರಿಗೇಟ ಡ ಬೊಲೋನ.

11. ಮಸ್ಕ್ ಗುಲಾಬಿಗಳು : ಇವು ಪೊದೆಯಾಗಿ ಬೆಳೆಯುವಂಥವು. ಹೂಗಳು ಜೊಂಪೆಗಳಲ್ಲಿರುವುವು. ಅವುಗಳಿಗೆ ಕಸ್ತೂರಿಯ ವಾಸನೆ ಉಂಟು. ಮಸ್ಕ್ ಗುಲಾಬಿಗಳ ಕೆಲವು ಬಗೆಗಳೆಂದರೆ ಫೆಲಿಸಿಯ, ಪ್ಯಾಕ್ಸ್, ಪೆನಲಪಿ, ಪ್ರಾಸ್ಪರಿಟಿ, ಮತ್ತು ವ್ಯಾನಿಟಿ.

12. ನಾಯ್ಸೆಟೀ ಗುಲಾಬಿಗಳು : ಇವು ಮಸ್ಕ್ ಮತ್ತು ಚೀನ ಗುಲಾಬಿಗಳ ನಡುವಣ ಸಂಯೋಗದಿಂದ ಪಡೆದ ಅಡ್ಡತಳಿಗಳು. ಇವು ಕೆಲವು ಉತ್ತಮ ಬಗೆಯ ಬಳ್ಳಿರೀತಿಯ ಗುಲಾಬಿಗಳನ್ನು ಒಳಗೊಂಡಿರುವುದರಿಂದ ಜನಪ್ರಿಯವಾಗಿವೆ. ಗ್ಲಾಯರ್ ಡ ಡಿಜಾನ್, ಮಡ್ಯಾಂ ಆಲ್‌ಫ್ರೆಡ್ ಕ್ಯಾರಿಯೆರೆ.

13. ರೂಗೊಸಾ ಗುಲಾಬಿಗಳು : ಇವಕ್ಕೆ ಜಪಾನಿನ ಗುಲಾಬಿಗಳು ಎಂಬ ಹೆಸರೂ ಇದೆ. ಚಳಿಯನ್ನು ತಡೆದುಕೊಳ್ಳುವ ಮತ್ತು ಸಮುದ್ರ ತೀರಗಳಲ್ಲಿರುವ ನಿಸ್ಸಾರದ ಮಣ್ಣಿನಲ್ಲಿಯೂ ಬೆಳೆಯುವ ಸಾಮರ್ಥ್ಯ ಇವಕ್ಕೆ ಉಂಟು. ಇವುಗಳಲ್ಲಿ ಮುಳ್ಳುಗಳು ಬಹಳ. ಅಂಚು ಇಲ್ಲವೆ ಪೊದೆಸಸ್ಯಗಳಾಗಿ ಬೆಳೆಸಲು ಉತ್ತಮವಾದವು. ಉದಾಹರಣೆಗೆ ಫ್ರಾ ಡಾಗ್‌ಮಾರ್ ಹಾಸ್ಟ್ರುಪ್, ಪಿರಿಕ್ ಗೂಟೆನ್‌ಡಾರ್ಸ್ಟ್, ಬ್ಲಾಂಕ್ ಡಬಲ್ ಡ ಕೂಬರ್ಟ್ ಮುಂತಾದವು.

14. ಸ್ಕಾಟ್ಸ್‌ಬ್ರಿಯರ್ಸ್ : ಇವನ್ನು ಬರ್ನೆಟ್ ಗುಲಾಬಿಗಳೆಂದು ಕರೆಯುವುದುಂಟು. ದಟ್ಟಪೊದೆಗಳಂತೆ ಬೆಳೆದುಕೊಳ್ಳುತ್ತವೆ. ರೋಸ಼ ಸ್ಪಿನೋಸಿಸ್ಸಿಮ ಅಲ್ಟಾಯಿಕ ಎಂಬ ಪ್ರಭೇದ ಇವುಗಳಲ್ಲಿ ಬಹು ಮುಖ್ಯವಾದ್ದು.

15. ಮಾಡರ್ನ್ ಶ್ರಬ್ಸ್ : ಈ ಜಾತಿಯನ್ನು ಹಲವಾರು ಬಗೆಗಳ ಗುಲಾಬಿಗಳನ್ನು ಅಡ್ಡತಳಿಯೆಬ್ಬಿಕೆಯಿಂದ ಪಡೆಯಲಾಗಿದೆ. ಬಹು ಸುಂದರವಾದ ಗುಲಾಬಿಗಳೆಂದರೆ ಫ್ರಿಟ್ಸ್ ನೋಬಿಸ್, ಫ್ರೂಲಿಂಗ್ಸ್‌ಗೋಲ್ಡ್, ಫ್ರೂಲಿಂಗ್ಸ್ ಮಾರ್ಗೆನ್, ಸ್ಪಾರಿಷೂಪ್ ಮತ್ತು ವಿಲ್‌ಹೆಲ್ಮ್.

ಗುಲಾಬಿ ತೋಟದ ವಿನ್ಯಾಸ : ಗುಲಾಬಿ ಎಲ್ಲಿ ಬೆಳೆದರೂ ಬಹಳ ಸುಂದರವಾಗಿ ಕಾಣಿಸುವುದರಲ್ಲಿ ಸಂದೇಹವಿಲ್ಲ. ಆದರೆ ಹೆಚ್ಚು ಗುಲಾಬಿ ಗಿಡಗಳನ್ನು ಬೆಳೆಸುವಾಗ ಅವು ಆಕರ್ಷಕವಾಗಿ ಕಾಣಲೆಂಬ ಉದ್ದೇಶದಿಂದ ತೋಟದ ವಿನ್ಯಾಸದ ಬಗ್ಗೆ ಗಮನ ಕೊಡಬೇಕು. ಇದರಿಂದಾಗಿ ಗುಲಾಬಿ ತೋಟವನ್ನು ವೃದ್ಧಿಸುವಾಗ ಕೆಳಗೆ ತಿಳಿಸಿರುವ ಅಂಶಗಳನ್ನು ಗಮನಿಸಬೇಕು.

1. ಗುಲಾಬಿಗೆ ಹೆಚ್ಚು ಬೆಳಕು ಬೇಕು. ಕೊನೆಯ ಪಕ್ಷ ಅರ್ಧದಿನಾವಧಿಯ ಬೆಳಕು ಆವಶ್ಯಕ. ಅದರಲ್ಲೂ ಮುಂಜಾವಿನ ಬೆಳಕು ಉತ್ತಮ. ಮಧ್ಯಾಹ್ನದ ಸೂರ್ಯನ ಪ್ರಖರವನ್ನು ಇದು ತಡೆಯಲಾರದು. ಆದ್ದರಿಂದ ಆಗ ನೆರಳಿದ್ದರೆ ಅನುಕೂಲ.

2. ಗುಲಾಬಿ ಗಿಡಗಳನ್ನು ಮರಗಳ ಹತ್ತಿರವಾಗಲಿ, ಗೋಡೆಗಳ ಪಕ್ಕದಲ್ಲಾಗಲಿ ಬೆಳೆಸುವುದು ಸೂಕ್ತವಲ್ಲ. ಏಕೆಂದರೆ ಇದರಿಂದ ಹೆಚ್ಚು ನೆರಳು ಬೀಳುವುದಲ್ಲದೇ ಮರ ತನ್ನ ಆಹಾರಕ್ಕಾಗಿ ಗುಲಾಬಿಯೊಂದಿಗೆ ಸ್ಪರ್ಧಿಸುವುದುಂಟು. ಹೀಗಾಗಿ ಗುಲಾಬಿಯ ಬೆಳವಣಿಗೆ ಕುಂಠಿತವಾಗುತ್ತದೆ.

3. ಗುಲಾಬಿ ಅತಿ ತೇವವನ್ನು ಸಹಿಸುವುದಿಲ್ಲ. ಇದರಿಂದಾಗಿ ಪಾತಿಗಳಲ್ಲಿ ನೀರು ಚೆನ್ನಾಗಿ ಬಸಿದುಹೋಗುವಂತಿರಬೇಕು.

4. ಕೆಲವು ಸಲ ಗುಲಾಬಿ ಬಿರುಸಾದ ಗಾಳಿಯಿಂದ ಹಾನಿಗೊಳಗಾಗುವ ಸಂಭಾವ್ಯತೆ ಇರುವುದರಿಂದ ಅದನ್ನು ತಡೆಯುವುದಕ್ಕೆ ತೋಟದ ಸುತ್ತಲೂ ಬೇಲಿ ಅಥವಾ ಸಾಲುಮರಗಳನ್ನು ನೆಡಬೇಕು.

5. ಗುಲಾಬಿಯನ್ನು ಇತರ ಸಸ್ಯಗಳೊಂದಿಗೆ ನೆಡದೆ ಬೇರೆ ನೆಡುವುದೇ ಉತ್ತಮ.

6. ಗುಲಾಬಿ ತೋಟವನ್ನು ರೂಪಿಸುವಾಗ ತೋಟ ಸುಂದರವಾಗಿ ಕಾಣುವುದೊಂದೇ ಅಲ್ಲದೆ, ಕಳೆ ತೆಗೆಯುವುದಕ್ಕೆ, ಆಗಿಂದಾಗ್ಗೆ ಗಿಡಗಳನ್ನು ಸಮರುವುದಕ್ಕೆ ಅನುಕೂಲವಾಗುವಂತಿರಬೇಕು.

7 ತೋಟದ ವಿನ್ಯಾಸ ಪೂರ್ಣಗೊಂಡ ಮೇಲೆ ಗುಲಾಬಿಯ ಬಗೆಗಳನ್ನು ಆಯುವುದು ಕೂಡ ಬಹಳ ಮುಖ್ಯ.

ಗುಲಾಬಿಯ ವೃದ್ಧಿ : ಗುಲಾಬಿಯನ್ನು ಬೀಜಗಳಿಂದ, ಕಾಂಡದ ತುಂಡುಗಳಿಂದ ಲೇಯರ್ ಮಾಡುವುದರಿಂದ, ಕಣ್ಣುಕಸಿ ಮತ್ತಿತರ ಕಸಿ ಮಾಡುವಿಕೆಯಿಂದ ವೃದ್ಧಿ ಮಾಡಬಹುದು.

ಹೊಸ ತಳಿಗಳನ್ನು ಪಡೆಯಲು ಬೀಜಗಳಿಂದ ಮಾತ್ರ ಸಾಧ್ಯ. ಕೆಲವು ಸಲ ಶೀತವಲಯದಲ್ಲಿ ವನ್ಯಜಾತಿಯ ಬೀಜಗಳನ್ನು ನೆಟ್ಟು ಬೆಳೆಸಿದ ಸಸ್ಯಗಳನ್ನು ಕಣ್ಣುಕಸಿ ವಿಧಾನದಲ್ಲಿ ಬೇರು ಸಸ್ಯವಾಗಿ ಉಪಯೋಗಿಸುತ್ತಾರೆ.

ಕಾಂಡತುಂಡುಗಳಿಂದ ವೃದ್ಧಿ ಮಾಡುವಾಗ ಹದವಾಗಿ ಬಲಿತ ಮತ್ತು ಹಸಿರಾಗಿರುವ ತುಂಡುಗಳನ್ನು ಆಯಬೇಕು. ಆಯ್ಕೆಮಾಡಿದ ತುಂಡಿನ ಕೆಳಭಾಗದಲ್ಲಿ ಓರೆಯಾಗಿ ಕತ್ತರಿಸಬೇಕು. ತುಂಡಿನ ಮೇಲ್ಭಾಗದಲ್ಲಿನ ಸುಮಾರು 2 – 3 ಎಲೆಗಳನ್ನು ಬಿಟ್ಟು ಉಳಿದ ಎಲ್ಲ ಎಲೆಗಳನ್ನು ತೆಗೆದುಹಾಕಬೇಕು. ಆನಂತರ ಮರಳಿನ ಮಡಿಗಳನ್ನು ಮಾಡಿ ತುಂಡುಗಳನ್ನು 10 ಸೆಂ.ಮೀ ಆಳಕ್ಕೆ ನೆಡಬೇಕು. ಗಿಡಗಳನ್ನು ಬಿಸಿಲಿನಿಂದ ರಕ್ಷಿಸಲು ಪಾರ್ಶ್ವ ನೆರಳನ್ನು ಒದಗಿಸಿ ಆಗಾಗ್ಗೆ ಎಚ್ಚರಿಕೆಯಿಂದ ನೀರು ಹಾಕುತ್ತಿರಬೇಕು. ನೆಟ್ಟ ಒಂದು ತಿಂಗಳ ಅನಂತರ ತುಂಡುಗಳು ಬೇರು ಬಿಡಲು ಪ್ರಾರಂಭಿಸುತ್ತವೆ. ಬೇರು ಬಿಟ್ಟ ಮೇಲೆ ಅವನ್ನು ತೆಗೆದು ಬೇರೆ ಕಡೆ ನೆಡಬೇಕು. ಅನಂತರ ಅವುಗಳ ಮೇಲೆ ಅಪೇಕ್ಷಿತ ತಳಿಯ ಕಣ್ಣನ್ನು ಕಸಿಮಾಡಬಹುದು.

ಹಬ್ಬುವ ಜಾತಿಯ ಗುಲಾಬಿಗಳನ್ನು ವೃದ್ಧಿಮಾಡಲು ಲೇಯರಿಂಗ್ ವಿಧಾನವನ್ನು ಅನುಸರಿಸಲಾಗುತ್ತದೆ.

ಕಣ್ಣುಕಸಿ : ಈ ವಿಧಾನ ಬಹಳವಾಗಿ ರೂಢಿಯಲ್ಲಿದೆ. ಅಪೇಕ್ಷಿತ ತಳಿಯ ಕಣ್ಣನ್ನು ತೆಗೆದು ಬೇರುಸಸ್ಯದ ಮೇಲೆ ಹಾಕುವುದರಿಂದ ಬೇರೆ ಬೇರೆ ಬಗೆಯ ಗಿಡಗಳನ್ನು ಪಡೆಯಬಹುದು.

ಕಣ್ಣುಕಸಿಯಲ್ಲಿ ಗಮನಿಸಬೇಕಾದ ಬಹು ಮುಖ್ಯವಾದ ಮೂರು ಅಂಶಗಳೆಂದರೆ ಬೇರು ಸಸ್ಯಗಳನ್ನು ಬೆಳೆಸುವುದು, ಕಣ್ಣಿನ ಆಯ್ಕೆ ಮತ್ತು ಕಣ್ಣನ್ನು ಕಸಿ ಮಾಡುವ ಕ್ರಮ. ಸಾಮಾನ್ಯವಾಗಿ ವನ್ಯ ಗುಲಾಬಿ ಗಿಡದ ಕಾಂಡತುಂಡುಗಳನ್ನು ಮಡಿಗಳಲ್ಲಿ ಜುಲೈ – ಆಗಸ್ಟ್ ಅಥವಾ ಡಿಸೆಂಬರ್ – ಜನವರಿ ತಿಂಗಳುಗಳಲ್ಲಿ ನೆಡಬೇಕು. ಅವು ಚೆನ್ನಾಗಿ ಬೇರು ಬಿಟ್ಟ ಮೇಲೆ ಅವನ್ನು 30 ಸೆಂಮೀ ಅಂತರಕ್ಕೊಂದರಂತೆ ಮಡಿಗಳಲ್ಲಿ ನೆಡಬೇಕು. ಬೇರು ಸಸ್ಯದಿಂದ ಒಂದು ಇಲ್ಲವೆ ಎರಡು ಕೊಂಬೆಗಳನ್ನು ಬೆಳೆಯಲು ಬಿಟ್ಟು ಉಳಿದವನ್ನುತೆಗೆದುಹಾಕಬೇಕು. ಬೇರುಸಸ್ಯದ ಕಾಂಡದ ಮೇಲೆ ಭೂ ಮಟ್ಟದಿಂದ 5.1 – 7.6 ಸೆಂಮೀ ಎತ್ತರದಲ್ಲಿ ಕಣ್ಣನ್ನು ಹಾಕಬೇಕು. ಬೇರುಸಸ್ಯದ ಮೇಲಿರುವ ಇತರ ಕೊಂಬೆಗಳನ್ನು ತೆಗೆದುಹಾಕಬೇಕು. ಕಣ್ಣನ್ನು ಬೇರು ಹಾಗೂ ಕಾಂಡದ ಕೂಡಿಕೆಯ ಸ್ಥಳದಲ್ಲೂ ಹಾಕಬಹುದು. ಅದೇ ತಾನೇ ಹೂಗಳು ಉದುರಿಹೋದ ಬಲಿತ ಕಾಂಡದಿಂದ ಒಳ್ಳೆಯ ಕಣ್ಣನ್ನು ಆಯಬೇಕು. ಅನಂತರ ಕಣ್ಣಿನ ರಕ್ಷಣೆಗೋಸ್ಕರ 2 ಸೆಂಮೀ ಉದ್ದದ ತೊಟ್ಟನ್ನು ಬಿಟ್ಟು ಕಿರು ಎಲೆಗಳನ್ನೆಲ್ಲ ತೆಗೆದುಹಾಕಬೇಕು. 2.5 ಸೆಂಮೀ ಉದ್ದವಿರುವ ಕಣ್ಣನ್ನು ಹರಿತವಾದ ಚಾಕುವಿನಿಂದ ಕಣ್ಣು ಮತ್ತು ತೊಗಟೆಯನ್ನು ಗುರಾಣಿಯಾಕಾರವಿರುವಂತೆ ಕತ್ತರಿಸಿ ತೆಗೆಯಬೇಕು. ಬಳಿಕ ಆರಿಸಿದ ಬೇರು ಸಸ್ಯದ ಮೇಲೆ T – ಆಕಾರಕ್ಕೆ ತೊಗಟೆಯನ್ನು ಮಾತ್ರ ಕತ್ತರಿಸಿ ಕಣ್ಣನ್ನು ಅದರಲ್ಲಿ ಕೂಡಿಸಬೇಕು. ತರುವಾಯ ಆಲ್ಕಥೀನ್ ಸುತ್ತುಪಟ್ಟಿಯನ್ನು ಕಣ್ಣು ಹೊರಕಾಣಿಸುವಂತೆ ಬಿಟ್ಟು ಸುತ್ತಬೇಕು. ಕಣ್ಣು ಬೆಳೆಯಲು ಪ್ರಾರಂಭಿಸಿದ ಮೇಲೆ ಕಣ್ಣಿಗಿಂತ ಮೇಲೆ ಇರುವ ಬೇರು ಸಸಿಯನ್ನು ಕತ್ತರಿಸಿ ಪಟ್ಟಿಯನ್ನು ಬಿಚ್ಚಬೇಕು. ಕಣ್ಣು ಕಸಿ ಮಾಡಿ ಪಡೆದ ಸಸ್ಯ 6 ತಿಂಗಳ ಅನಂತರ ಬೇರೆಡೆಯಲ್ಲಿ ನೆಡಲು ಸಿದ್ಧವಾಗುತ್ತದೆ. ಗುಲಾಬಿಗೆ ಬೆಳಕು ಅತ್ಯಾವಶ್ಯಕವಾದುದರಿಂದ ಅವನ್ನು ಬೆಳಗಿನ ಬಿಸಿಲು ಚೆನ್ನಾಗಿ ಬೀಳುವ ಸ್ಥಳಗಳಲ್ಲಿ ನೆಡಬೇಕು. ಗುಲಾಬಿಯನ್ನು ಒಂಟಿಯಾಗಿ ಬೆಳೆಸುವುದಕ್ಕಿಂತ ಗುಂಪಾಗಿ ಮಡಿಗಳಲ್ಲಿ ಬೆಳೆಸುವುದು ಉತ್ತಮ. ತೋಟದಲ್ಲಿ ಒಂದಕ್ಕಿಂತ ಹೆಚ್ಚು ಮಡಿಗಳಿದ್ದರೆ ಒಂದೊಂದು ಬಗೆಯನ್ನೂ ಒಂದೊಂದು ಮಡಿಯಲ್ಲಿ ಬೆಳೆಸಬೇಕು. ಒಂದೇ ಮಡಿ ಇದ್ದರೆ ಇದೊಂದರಲ್ಲೇ ಒಂದಕ್ಕಿಂತ ಹೆಚ್ಚಿನ ಜಾತಿಗಳನ್ನು ಬೆಳೆಸಬಹುದು. ಹೈಬ್ರಿಡ್ ಟೀ ಮತ್ತು ಫ್ಲಾರಿಬಂಡ ಜಾತಿಗಳನ್ನು ಮಾತ್ರ ಸಾಧ್ಯವಾದಷ್ಟು ಮಟ್ಟಿಗೆ ಬೇರೆ ಬೇರೆ ಪಾತಿಗಳಲ್ಲಿ ನೆಡಬೇಕು. ಮಡಿಗಳಲ್ಲಿ ನೆಡುವಾಗ ಗಿಡದ ಎತ್ತರ ಮತ್ತು ಹೂವಿನ ಬಣ್ಣವನ್ನು ಗಮನದಲ್ಲಿಡಬೇಕು. ಎತ್ತರವಾದ ಗಿಡಗಳನ್ನು ಹಿಂದಿನ ಸಾಲಿನಲ್ಲೂ ಕುಳ್ಳ ಬಗೆಯವನ್ನು ಮುಂದಿನ ಸಾಲಿನಲ್ಲೂ ಮಧ್ಯಮ ಎತ್ತರದ ಸಸ್ಯಗಳನ್ನು ಮಧ್ಯದ ಸಾಲಿನಲ್ಲೂ ನೆಡಬೇಕು. ಪರಸ್ಪರ ಹೊಂದಿಕೆಯಾಗುವಂಥ ಬಣ್ಣದ ಹೂ ಬಿಡುವ ಸಸ್ಯಗಳನ್ನೇ ಬೆಳೆಸುವುದು ತೋಟದ ಸೌಂದರ್ಯದ ದೃಷ್ಟಿಯಿಂದ ಒಳ್ಳೆಯದು.

ಮಡಿಗಳನ್ನು ನೆಡುವುದಕ್ಕೆ ಕೊನೆಯ ಪಕ್ಷ 15 ದಿವಸಗಳ ಮುಂಚೆ 60–75 ಸೆಂಮೀ ಆಳದವರೆಗೆ ಭೂಮಿಯನ್ನು ಚೆನ್ನಾಗಿ ಅಗೆದು ಕೊಟ್ಟಿಗೆ ಗೊಬ್ಬರವನ್ನು ಹಾಕಿ ಮಣ್ಣಿನೊಡನೆ ಮಿಶ್ರ ಮಾಡಬೇಕು. ಗುಲಾಬಿಯನ್ನು ನೆಡಲು ಸೆಪ್ಟೆಂಬರ್ – ನವೆಂಬರ್ ಒಳ್ಳೆಯ ಕಾಲ. ಕೆಲವನ್ನು ಫೆಬ್ರವರಿ ತಿಂಗಳವರೆಗೂ ನೆಡಬಹುದು. ಮಡಿಗಳಲ್ಲಿ ಸಾಲಿನಿಂದ ಸಾಲಿಗೆ 75 ಸೆಂಮೀ ಮತ್ತು ಪ್ರತಿ ಸಾಲಿನಲ್ಲಿ ಸಸಿಯಿಂದ ಸಸಿಗೆ 75 ಸೆಂಮೀ ಅಂತರವನ್ನು ಕೊಟ್ಟು ನೆಡಬೇಕು. ಪೊದೆ ಇಲ್ಲವೆ ಕುಳ್ಳು ಬಗೆಯ ಗುಲಾಬಿಯಾದರೆ 90–105 ಸೆಂಮೀ ಅಂತರವನ್ನೂ ಬಳ್ಳಿಜಾತಿಗಳಾದರೆ 2–3 ಮೀ ಅಂತರವನ್ನೂ ಕೊಡಬೇಕು. ನೆಡುವುದಕ್ಕೆ ಮುಂಚೆ ಗಿಡ ಒಂದಕ್ಕೆ 226–228 ಗ್ರಾಂ ಮೂಳೆಪುಡಿ ಅಥವಾ ಸೂಪರ್ ಫಾಸ್ಫೇಟನ್ನು ಹಾಕಬೇಕು. ಇದರ ಜೊತೆಗೆ 8–10 ಕೆಜಿ. ಕೊಟ್ಟಿಗೆ ಗೊಬ್ಬರವನ್ನೂ ಹಾಕಬೇಕು. ಗುಲಾಬಿಯನ್ನು ನೆಡುವುದಕ್ಕೆ 90 ಸೆಂಮೀ ಸುತ್ತಳತೆಯ ಮತ್ತು 75 ಸೆಂಮೀ ಆಳದ ಗುಂಡಿಗಳನ್ನು ತೆಗೆಯಬೇಕು. ಅನಂತರ ಗುಲಾಬಿ ಗಿಡವನ್ನು ಅದರ ಬೇರುಗಳಿಗೆ ಹಾನಿಯಾಗದಂತೆ ಬೇರುಗಳ ಸುತ್ತಲೂ ಉಂಡೆ ಮಣ್ಣಿರುವಂತೆ ಕಿತ್ತು ಗುಣಿಯ ಮಧ್ಯದಲ್ಲಿ ನೆಡಬೇಕು. ಅನಂತರ ಮಣ್ಣನ್ನು ಹಾಕಿ ಗಿಡ ಬಿಗಿಯಾಗುವಂತೆ ಮಾಡಿ ನೀರು ಹಾಯಿಸಬೇಕು.

ಸವರುವಿಕೆ (ಪ್ರೂನಿಂಗ್) : ಗುಲಾಬಿ ಗಿಡಗಳ ಬೆಳೆವಣಿಗೆ ಹುಲುಸಾಗಿರಲು, ಅವುಗಳ ಆಕಾರ ಚೆಲುವಾಗಿರಲು ಮತ್ತು ಗಿಡಗಳು ಚೆನ್ನಾಗಿ ಹೂ ಬಿಡುವಂತೆ ಮಾಡಲು ಗಿಡಗಳ ಸವರುವಿಕೆ ರೂಢಿಯಲ್ಲಿದೆ. ಗುಲಾಬಿ ಗಿಡಗಳನ್ನು ಸವರುವುದಕ್ಕೆ 4–5 ದಿನಗಳ ಮುಂಚೆಯೇ ನೀರು ಕೊಡುವುದನ್ನು ನಿಲ್ಲಿಸಬೇಕು. ಗುಲಾಬಿ ಸವರಿದ 6–7 ವಾರಗಳ ಅನಂತರ ಹೂ ಬಿಡುತ್ತದೆ. ಕೆಲವು ಜಾತಿಗಳನ್ನು (ಬಳ್ಳಿಯಂತೆ ಬೆಳೆಯುವ ಜಾತಿಗಳು) ಸವರುವುದಿಲ್ಲ. ಪೊದೆಯಾಗಿ ಬೆಳೆಯುವ ಜಾತಿಗಳಲ್ಲಿ ಒಂದೊಂದು ಕೊಂಬೆಯಲ್ಲಿ 6–8 ಕಣ್ಣುಗಳನ್ನು ಬಿಟ್ಟು ಕತ್ತರಿಸಬೇಕು. ಹೊಸದಾಗಿ ನೆಟ್ಟ ಗುಲಾಬಿಯಲ್ಲಿ ತುದಿಯನ್ನು ಆಗಿಂದಾಗ್ಗೆ ಸವರುತ್ತಿರಬೇಕು. ಎರಡು ವರ್ಷ ವಯಸ್ಸಾದ ಗುಲಾಬಿ ಗಿಡದ ಕೊಂಬೆಗಳನ್ನು ಅರ್ಧಕ್ಕೆ ಸವರಿ ವಯಸ್ಸಾದ ಕೊಂಬೆಗಳನ್ನು ತೆಗೆಯಬೇಕು. ಆದರೆ ಹಾನಿಗೊಳಗಾದ, ಒಣಗಿದ ಮತ್ತು ಸತ್ತ ಕೊಂಬೆಗಳನ್ನು ತೆಗೆಯಬೇಕು. ಸ್ಟ್ಯಾಂಡರ್ಡ್ ಮತ್ತು ಪಾಲಿ ಯಾಂತಸ್ ಜಾತಿಗಳನ್ನು ಲಘುವಾಗಿ ಸವರುವುದು ವಾಡಿಕೆ.

ಗೊಬ್ಬರ ಕೊಡುವುದು : ಗುಲಾಬಿ ಗಿಡಗಳನ್ನು ಸವರಿದ ಕೂಡಲೇ, ಬೇರಿನ ಸುತ್ತಲೂ 15 ಸೆಂಮೀ ಆಳಕ್ಕೆ ಮತ್ತು 45 ಸೆಂಮೀ ಸುತ್ತಳತೆಯವರೆಗೆ ಅಗೆದು ಬೇರುಗಳನ್ನು ಆರಲು ಬಿಡಬೇಕು. 3–4 ದಿವಸಗಳವರೆಗೂ ಹೀಗೆ ಬಿಟ್ಟಿದ್ದೂ ಅನಂತರ 8–10 ಕೆಜಿ. ಕೊಟ್ಟಿಗೆ ಗೊಬ್ಬರವನ್ನು ಅದರ ಬೇರಿನ ಸುತ್ತಲೂ ಹಾಕಿ ಮಣ್ಣಿನೊಡನೆ ಮಿಶ್ರ ಮಾಡಿ ತರುವಾಯ ಮೊದಲಿನಂತೆಯೇ ಮುಚ್ಚಿ ನೀರು ಹಾಯಿಸಬೇಕು. ಇದಾದ 15 ದಿವಸಗಳ ಮೇಲೆ ಗಿಡ ಒಂದಕ್ಕೆ ಒಂದು ಚಹಾ ಚಮಚದಷ್ಟು ಅಮೋನಿಯಮ್ ಸಲ್ಫೇಟ್ ಮತ್ತು ಪೊಟ್ಯಾಷನ್ನು ಗಿಡದ ಬುಡದ ಸುತ್ತಲೂ ಹಾಕಿ ನೀರನ್ನು ಹಾಯಿಸಬೇಕು. ಆದರೆ ರಾಸಾಯನಿಕ ಗೊಬ್ಬರಗಳಿಗಿಂತ ಮಾರುಕಟ್ಟೆಗಳಲ್ಲಿ ದೊರೆಯುವ, ಗುಲಾಬಿ ಗಿಡಕ್ಕೆಂದೇ ತಯಾರಿಸಿದ ಮಿಶ್ರ ಗೊಬ್ಬರವನ್ನು ಉಪಯೋಗಿಸುವುದು ಉತ್ತಮ.

ಹೂವಿನ ಕೊಯ್ಲಾದ ಬಳಿಕವೂ ರಾಸಾಯನಿಕ ಗೊಬ್ಬರಗಳನ್ನು ಮೇಲೆ ತಿಳಿಸಿದ ಪ್ರಮಾಣದಲ್ಲಿ ಕೊಡಬೇಕು. ರಾಸಾಯನಿಕ ಗೊಬ್ಬರವನ್ನು ದ್ರಾವಣವಾಗಿಯೂ ಸಿಂಪಡಿಸಬಹುದು. 2 ಭಾಗ ಯೂರಿಯ, 1 ಭಾಗ ಡೈ ಹೈಡ್ರೋಜನ್ ಅಮೋನಿಯಂ ಫಾಸ್ಫೇಟ್, 1 ಭಾಗ ಪೊಟಾಸಿಯಂ ನೈಟ್ರೇಟ್ ಮತ್ತು 1 ಭಾಗ ಪೊಟಾಸಿಯಂ ಫಾಸ್ಫೇಟಿನ ಮಿಶ್ರಣವನ್ನು ಒಂದು ಗ್ಯಾಲನ್ ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು. ಮಿಶ್ರಣದ ಜೊತೆಯಲ್ಲಿ ಕೀಟನಾಶಕಗಳನ್ನೂ ರೋಗನಾಶಕಗಳನ್ನೂ ಸೇರಿಸಿ ಸಿಂಪಡಿಸಬಹುದು. ಗಿಡ ಹೂ ಬಿಟ್ಟಾಗ ಮಾತ್ರ ಹೂಗಳನ್ನು ಪೂರ್ತಿ ಕೊಯ್ಯುವವರೆಗೂ ರಾಸಾಯನಿಕಗಳನ್ನು ಸಿಂಪಡಿಸಬಾರದು. ಇತ್ತೀಚೆಗೆ ದ್ರವ ರೂಪದ ರಾಸಾಯನಿಕ ಗೊಬ್ಬರಗಳನ್ನು ಗಿಡದಮೇಲೆ ಸಿಂಪಡಿಸಿ ಅವು ಎಲೆಗಳ ಮೂಲಕ ಒಳಸೇರುವಂತೆ ಮಾಡುವ ಕ್ರಮ ಬಳಕೆಗೆ ಬರುತ್ತಿದೆ. ಅಮೋಫಾಸ್ ಮತ್ತು ಪೊಟಾಸಿಯಮ್ ನೈಟ್ರೇಟುಗಳ ಮಿಶ್ರಣ, ಮ್ಯಾಂಗನೀಸ್ ಸಲ್ಫೇಟ್, ಮೆಗ್ನೀಷಿಯಮ್ ಸಲ್ಫೇಟ್, ಬೊರ್ಯಾಕ್ಸ್ ಮತ್ತು ಕಬ್ಬಿಣಗಳ ಮಿಶ್ರಣ, ಸೆಕ್ವೆಸ್ಟ್ರೀನ್ ಪ್ಲಸ್ ಮುಂತಾದ ರಾಸಾಯನಿಕಗಳು ಹೀಗೆ ಬಳಸಲಾಗುವ ವಸ್ತುಗಳಲ್ಲಿ ಮುಖ್ಯವಾದವು.

ಗುಲಾಬಿಗೆ ಪದೇ ಪದೇ ಕಡಿಮೆ ಪರಿಮಾಣದಲ್ಲಿ ನೀರನ್ನು ಹಾಕುವುದಕ್ಕಿಂತ ಕೆಲವು ದಿವಸಗಳಿಗೊಮ್ಮೆ ಹೆಚ್ಚಿನ ಮೊತ್ತದಲ್ಲಿ ಹಾಕುವುದು ಉತ್ತಮ. ಚಳಿಗಾಲದಲ್ಲಿ ವಾರಕ್ಕೊಮ್ಮೆ ಹಾಯಿಸಿದರೆ ಸಾಕು.

ಗುಲಾಬಿಯ ರೋಗಗಳು ಮತ್ತು ಕೀಟ ಪಿಡುಗುಗಳು : ಗುಲಾಬಿಯ ರೋಗಗಳಲ್ಲಿ ಡೈಬ್ಯಾಕ್, ಕಪ್ಪುಮಚ್ಚೆರೋಗ, ಬೂದಿ ರೋಗ ಮತ್ತು ಬೂಷ್ಟು ರೋಗಗಳು ಮುಖ್ಯವಾದವು.

1 ಡೈಬ್ಯಾಕ್ ರೋಗ : ಗುಲಾಬಿಯನ್ನು ಸವರಿದ ಬಳಿಕ ತುದಿಯ ಭಾಗದಿಂದ ಹೊರಡುವ ಕೊಂಬೆಗಳು ಕಪ್ಪುಬಣ್ಣಕ್ಕೆ ತಿರುಗಿ ಒಣಗತೊಡಗುತ್ತವೆ. ಕೆಲವು ಸಲ

ಹೂಗಳನ್ನು ಎಲೆಯ ಗೆಣ್ಣಿಗಿಂತ ಬಹು ಮೇಲೆ ಕತ್ತರಿಸಿದಾಗಲೂ ಈ ರೋಗ ಬರುತ್ತದೆ. ಗುಲಾಬಿಯನ್ನು ಸವರಿದ ಅನಂತರ ಕತ್ತರಿಸಿದ ಭಾಗಕ್ಕೆ 4 ಭಾಗ ಕಾಪರ್ ಕಾರ್ಬೊನೇಟ್, 4 ಭಾಗ ಕೆಂಪು ಸತು ಮತ್ತು 5 ಭಾಗ ನಾರಗಸೆ ಎಣ್ಣೆಯ ಮಿಶ್ರಣವನ್ನು ಲೇಪಿಸುವುದರಿಂದ ಡೈಬ್ಯಾಕ್ ರೋಗವನ್ನು ತಡೆಯಬಹುದು.

2 ಕಪ್ಪು ಮಚ್ಚೆ ರೋಗ : ಎಲೆಗಳ ಮೇಲೆ ಸಣ್ಣ ಕಪ್ಪು ಮಚ್ಚೆಗಳು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಅನಂತರ ಮಚ್ಚೆಗಳು ವಿಸ್ತಾರಗೊಂಡು ಎಲೆ ಹಳದಿ ಬಣ್ಣಕ್ಕೆ ತಿರುಗಿ ಕೊನೆಗೆ ಎಲೆಯೇ ಉದುರಿಹೋಗುತ್ತದೆ. ಬೋರ್ಡೋ ದ್ರಾವಣ, ಕ್ಯಾಪ್ಟಾನ್, ಬ್ಲೈಟಾಕ್ಸ್ ಅಥವಾ ಬೇರೆ ಯಾವುದಾದರೂ ತಾಮ್ರದ ಶಿಲೀಂಧ್ರನಾಶಕವನ್ನು ಸಿಂಪಡಿಸುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

3 ಬೂದಿ ರೋಗ : ಈ ರೋಗ ಮೊದಲು ಬೆಳ್ಳಗೆ ಪುಡಿಯಂತೆ ಎಲೆಗಳ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಇದರಿಂದ ಸಸ್ಯದ ಬೆಳವಣಿಗೆ ಕುಂಠಿತವಾಗುವುದು. ರಾತ್ರಿ ತಂಪಾದ ಹವಾಗುಣ, ಹಗಲು ಬಿಸಿಯಾದ ಹವಾಗುಣವಿದ್ದರೆ ಈ ರೋಗ ಬಹು ಬೇಗ ಹರಡುತ್ತದೆ. ಗಂಧಕದ ಪುಡಿಯನ್ನು ಸಿಂಪಡಿಸುವುದರಿಂದ ಇದನ್ನು ತಡೆಗಟ್ಟಬಹುದು.

4 ಬೂಷ್ಟು ರೋಗ : ರೋಗಪೀಡಿತ ಎಲೆಯ ತೊಟ್ಟು ಮತ್ತು ತಳ ಭಾಗದಲ್ಲಿ ಸಾಸಿವೆಯಂತೆ ಕೆಂಪುಮಿಶ್ರಿತ ಕಿತ್ತಳೆ ಬಣ್ಣದಿಂದ ಕೂಡಿದ ಮಚ್ಚೆಗಳಿರುತ್ತವೆ. ಮಚ್ಚೆಗಳು ಬರುಬರುತ್ತ ಕಪ್ಪಗಾಗುತ್ತವೆ. ಈ ರೋಗ ಬಹು ಬೇಗ ಎಲೆಗಳಿಂದ ಕಾಂಡಕ್ಕೆ ಹರಡುತ್ತವೆ. 1 ಔನ್ಸ್ ತಾಮ್ರದ ಸಲ್ಫೇಟನ್ನು 1 ಗ್ಯಾಲನ್ ನೀರಿನಲ್ಲಿ ಕರಗಿಸಿ ಸಿಂಪಡಿಸುವುದರಿಂದ ಬೂಷ್ಟು ರೋಗವನ್ನು ನಿಯಂತ್ರಿಸಬಹುದು.

5 ಹಳದಿ ರೋಗ : ಸಾಮಾನ್ಯವಾಗಿ ಮಣ್ಣಿನಲ್ಲಿ ಸುಣ್ಣದ ಅಂಶ ಹೆಚ್ಚಾಗಿದ್ದರೆ ಈ ರೋಗ ಬರುತ್ತದೆ. ಎಲೆಗಳು ಹಳದಿ ಬಣ್ಣಕ್ಕೆ ತಿರುಗುವುದೇ ಇದರ ಮುಖ್ಯ ಲಕ್ಷಣ. ಒಂದು ಔನ್ಸ್ ಕಬ್ಬಿಣದ ಸಲ್ಫೇಟನ್ನು 1 ಗ್ಯಾಲನ್ ನೀರಿನಲ್ಲಿ ಕರಗಿಸಿ ಸಿಂಪಡಿಸಿ ರೋಗವನ್ನು ಹತೋಟಿಯಲ್ಲಿಡಬಹುದು.

ಕೀಟ ಪಿಡುಗುಗಳು : ಗುಲಾಬಿಗೆ ಕಂಬಳಿಹುಳು, ನುಸಿ, ಏಫಿಡ್ಸ್, ಮೂತಿ ಹುಳು, ಕೆಂಪು ಶಲ್ಕ ಕೀಟ, ಉಣ್ಣೆ, ಗೆದ್ದಲು ಮುಂತಾದ ಕೀಟಗಳು ಅಂಟುತ್ತವೆ.

ಕಂಬಳಿಹುಳು : ಗುಲಾಬಿ ಗಿಡವನ್ನು ಸವರಿದ ತರುವಾಯ ಹೊಸ ಚಿಗುರು ಬರುವಾಗ ಇದು ಕಾಣಿಸಿಕೊಳ್ಳುತ್ತದೆ. ಇದು ಸಣ್ಣಗೆ ಸುಮಾರು 2.5 ಸೆಂ.ಮೀ ಉದ್ದವಿದ್ದು ರಾತ್ರಿಸಮಯದಲ್ಲಿ ಚಿಗುರನ್ನು ತಿಂದು ಹಾಕಿ, ಹಗಲು ಹೊತ್ತು ಎಲೆಯ ತಳಭಾಗದಲ್ಲಿ ಅಡಗಿರುತ್ತದೆ. 1 ಔನ್ಸ್ ಲೆಡ್ ಆರ್ಸಿನೇಟನ್ನು 1 ಗ್ಯಾಲನ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದರಿಂದ ಹುಳುವನ್ನು ನಿವಾರಿಸಬಹುದು.

ನುಸಿ : ಸಾಮಾನ್ಯವಾಗಿ ಬೇಸಗೆಯಲ್ಲಿ ಇವುಗಳ ಹಾವಳಿ ಹೆಚ್ಚು. ಇವು ಬಹುಸಂಖ್ಯಾತವಾಗಿದ್ದು ಬೆಳೆಯುವ ಎಳೆಯ ಭಾಗವನ್ನು ತಿನ್ನುತ್ತವೆ ಮತ್ತು ಎಲೆಯ ಪತ್ರಹರಿತ್ತನ್ನು ಹೀರುತ್ತವೆ. ಇವುಗಳ ಹತೋಟಿಗೆ ಶೇ.0.1 ಬಿ.ಎಚ್.ಸಿ. ಯನ್ನು ಅಥವಾ ಫಾಲಿಡಾಲ್ ಪುಡಿಯನ್ನು ಸಿಂಪಡಿಸಬೇಕು.

ಏಫಿಡ್ಸ್ : ಸಣ್ಣ ಗಾತ್ರದ ಈ ಕೀಟಗಳು ಹೂವಿನ ಮೊಗ್ಗು ಮತ್ತು ಬೆಳೆಯುವ ತುದಿಯನ್ನು ತಿಂದು ಹಾನಿ ಮಾಡುತ್ತವೆ. ಶೇ.0.1 ಬಿ.ಎಚ್.ಸಿ. ಯನ್ನು ಇಲ್ಲವೆ ನಿಕೋಟಿನಿಕ್ ಸಲ್ಫೇಟ್ ಅಥವಾ ಫಾಲಿಡಾಲ್ ಪುಡಿಯನ್ನು ಸಿಂಪಡಿಸುವುದರಿಂದ ಈ ಕೀಟವನ್ನು ತಡೆಗಟ್ಟಬಹುದು.

ಮೂತಿಹುಳು : ಪ್ರೌಢಕೀಟಗಳು ಎಲೆಗಳನ್ನು ತಿನ್ನುತ್ತವೆ. ಡಿಂಬಗಳು ಬೇರಿಗೆ ಹಾನಿಯನ್ನುಂಟುಮಾಡುತ್ತವೆ. ಶೇ.0.1 ಬಿ. ಎಚ್. ಸಿ. ದ್ರಾವಣವನ್ನು ಸಿಂಪಡಿಸುವುದು ಅಥವಾ ಶೇ.10 ಬಿ.ಎಚ್.ಸಿ ಪುಡಿಯನ್ನು ಎರಚುವುದರಿಂದ ಇವನ್ನು ಹತೋಟಿಯಲ್ಲಿಡಬಹುದು.

ಕೆಂಪು ಶಲ್ಕ ಕೀಟಗಳು : ಈ ಕೀಟಗಳು ಗುಂಪುಗುಂಪಾಗಿ ಎಳೆಯ ಕಾಂಡವನ್ನು ಮುತ್ತಿಕೊಂಡಿದ್ದು ರಸವನ್ನು ಹೀರುತ್ತವೆ. ಇದರಿಂದಾಗಿ ಗಿಡ ಒಣಗಿ ಹೋಗುತ್ತದೆ. ಶೇ.0.025 ಪ್ಯಾರಾತಿಯಾನನ್ನು ಸಿಂಪಡಿಸುವುದರ ಮೂಲಕ ಇವನ್ನು ತಡೆಗಟ್ಟಬಹುದು.

ಗೆದ್ದಲು : ಇವು ಸಾಮಾನ್ಯವಾಗಿ ಎಲ್ಲ ತರದ ಮಣ್ಣಿನಲ್ಲಿ ಇರುವುವಾದರೂ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಹೆಚ್ಚಾಗಿರುತ್ತವೆ. ಹೊಸದಾಗಿ ನೆಟ್ಟ ಅಥವಾ ಆರೋಗ್ಯವಾಗಿಲ್ಲದ ಸಸ್ಯಗಳು ಇವುಗಳ ಹಾವಳಿಗೆ ತುತ್ತಾಗುವುವು. ಇವು ಭೂಮಿಯ ಒಳಗಡೆ ಇದ್ದು ಗುಲಾಬಿಯ ತೊಗಟೆಯನ್ನು ತಿನ್ನುತ್ತವಲ್ಲದೆ ಕಾಂಡದ ಮೇಲೆ ಸಣ್ಣ ಸಣ್ಣ ರಂಧ್ರಗಳನ್ನು ಕೊರೆಯುತ್ತವೆ ಕೂಡ. ಇದರಿಂದ ಗಿಡ ಇದ್ದಕ್ಕಿದ್ದಂತೆ ಬಾಡಿದಂತೆ ಕಾಣುತ್ತದೆ. ಗುಲಾಬಿ ಗಿಡಗಳನ್ನು ನೆಡುವುದಕ್ಕೆ ಮುಂಚೆ ಮಡಿಗಳನ್ನು ಸುಮಾರು 60 ಸೆಂ.ಮೀ ಆಳಕ್ಕೆ ಅಗೆಯಬೇಕು. ಕಾಂಡದ ಮೇಲಿರುವ ರಂಧ್ರಗಳಿಗೆ ತಲಾ 1/3 ಔನ್ಸಿನಷ್ಟು ಕಾರ್ಬನ್ ಡೈಸಲ್ಫೇಟ್ ದ್ರಾವಣವನ್ನು ಸುರಿದು ರಂಧ್ರಗಳನ್ನು ಮುಚ್ಚಬೇಕು. ದ್ರಾವಣವನ್ನು ಬೇರುಗಳ ಮೇಲೆ ನೇರವಾಗಿ ಹಾಕಬಾರದು. (ಎಂ.ಎಚ್.ಎಂ)

**ಗುಲಾಬಿಯ ಉಪಯೋಗಗಳು :** ಗುಲಾಬಿ ಬರಿಯ ಅಲಂಕಾರಸಸ್ಯವೊಂದೇ ಅಲ್ಲದೆ ಇನ್ನಿತರ ರೀತಿಗಳಿಂದಲೂ ಉಪಯುಕ್ತವೆನಿಸಿದೆ. ಇದರಿಂದ ಪನ್ನೀರು, ಅತ್ತರು, ಕೇಶತೈಲ, ಗುಲ್ಕನ್, ಮುರಬ್ಬ, ಪೋಪರಿ (ಒಂದು ಖಾದ್ಯವಸ್ತು) ತಯಾರಿಸಲಾಗುತ್ತದೆ. ಪನ್ನೀರು ಮಾಡಲು ಒಳ್ಳೆಯ ಜಾತಿಯ, ಮಧುರವಾಸನೆಯುಳ್ಳ ಗುಲಾಬಿ ಹೂಗಳನ್ನು ಬಟ್ಟಿಯಿಳಿಸಲಾಗುತ್ತದೆ. ಇದು ಬಲು ತಂಪುಕಾರಕವೆಂದು ಹೆಸರಾಗಿದೆ. ಷರಬತ್ತು, ಕಣ್ಣಿಗೆ ಹಾಕುವ ಔಷಧಿದ್ರವ ಮುಂತಾದವನ್ನು ಮಾಡಲು ಇದನ್ನು ಬಳಸುತ್ತಾರೆ. ಅನೇಕ ಸಿಹಿ ತಿಂಡಿಗಳಿಗೆ ಹಾಗೂ ಪೆಪ್ಪರುಮಿಂಟುಗಳಿಗೆ ವಾಸನೆ ಕಟ್ಟಲು ಇದನ್ನು ಉಪಯೋಗಿಸುವುದಿದೆ. ಪನ್ನೀರನ್ನು ನೇರವಾಗಿ ಸುಗಂಧ ದ್ರವ್ಯವಾಗಲ್ಲದೆ ಗುಲಾಬಿ ತೈಲ ತಯಾರಿಕೆಯಲ್ಲೂ ಬಳಸುತ್ತಾರೆ. ಪನ್ನೀರನ್ನು ಮಣ್ಣಿನ ಇಲ್ಲವೆ ಲೋಹದ ಅಗಲವಾದ ಪಾತ್ರೆಗಳಲ್ಲಿ ಸಂಗ್ರಹಿಸಿ ದೂಳು ಹೋಗದಂತೆ ಪಾತ್ರೆಗಳನ್ನು ತೆಳುವಾದ ಮಸ್ಲಿನ್ ಬಟ್ಟೆಯಿಂದ ಮುಚ್ಚಿ ರಾತ್ರಿಯ ತಂಗಾಳಿಗೆ ಒಡ್ಡಿ ಇಡಲಾಗುತ್ತದೆ. ಬೆಳಗಿನ ಜಾವ ಪನ್ನೀರಿನ ಮೇಲೆ ಸುಗಂಧಪೂರಿತವಾದ ಬೆಣ್ಣೆಯಂಥ ಪದಾರ್ಥದ ಕಣಗಳು ತೇಲುತ್ತಿರುತ್ತವೆ. ಇವೇ ಗುಲಾಬಿ ತೈಲದ ಕಣಗಳು. ಇವನ್ನು ಎಚ್ಚರಿಕೆಯಿಂದ ಹೊರತೆಗೆದು ಗಾಜಿನ ಸೀಸೆಗಳಲ್ಲಿ ಸಂಗ್ರಹಿಸಲಾಗುತ್ತದೆ. ದಿನದ ಉಷ್ಣತೆ ಹೆಚ್ಚಿದಂತೆ ಇದು ಕರಗಿ ದ್ರವರೂಪಕ್ಕೆ ಬರುತ್ತದೆ. ಹೊಸದಾಗಿದ್ದಾಗ ವರ್ಣರಹಿತವಾಗಿರುವ ಇದು ವರ್ಷ ಕಳೆದಂತೆ ಕಂದುಬಣ್ಣಕ್ಕೆ ತಿರುಗುತ್ತದೆ. ಗುಲಾಬಿ ತೈಲವನ್ನು ಮೊಗಲ್ ರಾಣಿ ನೂರ್‌ಜಹಾನ್ ಕಂಡುಹಿಡಿದಳೆಂದು ಹೇಳಲಾಗಿದೆ. ಗುಲಾಬಿ ತೈಲವನ್ನೇ ಹೋಲುವ ಗುಲಾಬಿ ಅತ್ತರನ್ನು ತಯಾರಿಸುವ ಕ್ರಮ ಬೇರೆ. ಗುಲಾಬಿ ಹೂಗಳನ್ನು ಬಟ್ಟಿಯಿಳಿಸುವಾಗ ಹೊರಬರುವ ಸುವಾಸನಾಯುಕ್ತಾ ಹಬೆಯನ್ನು ಗಂಧದೆಣ್ಣೆಯ ಮೂಲಕ ಹಾಯಿಸಿ ಅತ್ತರನ್ನು ಪಡೆಯಲಾಗುತ್ತದೆ.

ಉತ್ತರಪ್ರದೇಶದ ಕನೂಜ್, ಜಾನ್‌ಪುರ, ಗಾಜಿಪುರಗಳು ಗುಲಾಬಿ ತೈಲೋದ್ಯಮಕ್ಕೆ ಒಂದು ಕಾಲದಲ್ಲಿ ಪ್ರಸಿದ್ಧವಾಗಿದ್ದವು. ಈಗಲೂ ಅಲಿಘರ್ ಜಿಲ್ಲೆಯ ಬರ್ಮಾನ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಗಾಜಿಪುರ, ಕಾನ್ಪುರ, ಸಹಾರನ್‌ಪುರಗಳು ಗುಲಾಬಿತೈಲದ ಉತ್ಪಾದನೆಗೆ ಹೆಸರಾಗಿವೆ. ಆದರೆ ಬಲ್ಗೇರಿಯ, ಫ್ರಾನ್ಸ್ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಆಧುನಿಕ ಸಾಧನಗಳನ್ನು ಬಳಸಿ ಗುಲಾಬಿ ತೈಲವನ್ನು ಬೃಹತ್‌ಪ್ರಮಾಣದಲ್ಲಿ ತಯಾರಿಸಲಾಗುತ್ತಿದ್ದು ಈ ಉದ್ದಿಮೆಯಲ್ಲಿ ಈ ದೇಶಗಳು ಅಗ್ರಮಾನ್ಯವೆನಿಸಿವೆ. ಗುಲಾಬಿ ತೈಲದ ತಯಾರಿಕೆಯಲ್ಲಿ ಬಳಸಲಾಗುವ ಗುಲಾಬಿ ಬಗೆಗಳಲ್ಲಿ ಅತಿಮುಖ್ಯವಾದವು ರೋಸ ಡಮಾಸ್ಕೀನ, ರೋಸ ಸೆಂಟಿಫೋಲಿಯ ಮತ್ತು ರೋಸ ಆಲ್ಬ ಎಂಬವು. ಭಾರತದಲ್ಲಿ ಎಡ್ವರ್ಡ್ ಮತ್ತು ಬಸೋರ ಎಂಬ ಬಗೆಗಳು ಈ ದೃಷ್ಟಿಯಿಂದ ಮುಖ್ಯವೆನಿಸಿವೆ. ಗುಲಾಬಿಯಿಂದ ಸುವಾಸನೆಯುಳ್ಳ ಕೇಶತೈಲವನ್ನೂ ತಯಾರಿಸುವುದಿದೆ. ಶುಚಿಗೊಳಿಸಿದ ಎಳ್ಳನ್ನೂ ಗುಲಾಬಿ ದಳಗಳನ್ನೂ ಪದರ ಪದರವಾಗಿ ಒಂದರ ಮೇಲೊಂದು ಹರಡಿ ಒತ್ತಡಕ್ಕೊಳಪಡಿಸಲಾಗುತ್ತದೆ. ಗುಲಾಬಿಯ ವಾಸನೆಯೆಲ್ಲ ಎಳ್ಳಿಗೆ ವರ್ಗಾವಣೆಯಗುತ್ತದೆ. ಪ್ರತಿನಿತ್ಯ ಹೊಚ್ಚ ಹೊಸ ಗುಲಾಬಿ ದಳಗಳನ್ನು ಹರಡುತ್ತ ಇದ್ದು ಎಳ್ಳು ಪೂರ್ಣವಾಗಿ ಗುಲಾಬಿ ವಾಸನೆಯನ್ನು ಹೀರಿಕೊಳ್ಳುವಂತೆ ಮಾಡಿ ಅನಂತರ ಅದನ್ನು ಹಿಂಡಿ ಸುವಾಸಿತ ಎಣ್ಣೆಯನ್ನು ಹೊರತೆಗೆಯಲಾಗುತ್ತದೆ. ಶುದ್ಧವಾದ ಎಣ್ಣೆಗೆ ನೇರವಾಗಿ ಗುಲಾಬಿ ದಳಗಳನ್ನು ಹಾಕಿ ಗುಲಾಬಿಯ ಸೌರಭವನ್ನು ಅದು ಹೀರುವಂತೆ ಮಾಡಬಹುದು.

ಎಡ್ವರ್ಡ್ ಬಗೆಯ ಗುಲಾಬಿ ದಳಗಳನ್ನು ಬಿಳಿಯ ಸಕ್ಕರೆಯೊಂದಿಗೆ ಸಮ ಪ್ರಮಾಣದಲ್ಲಿ ಮಿಶ್ರ ಮಾಡಿ, ಕೊಂಚ ಜೇನುತುಪ್ಪ ಸೇರಿಸಿ, ಕುಟ್ಟಿ, ಗುಲ್ಕನ್ ತಯಾರಿಸಲಾಗುತ್ತದೆ. ಕೆಲವರು ಇದನ್ನು ಪೂರ್ತ ಜೇನುತುಪ್ಪದಲ್ಲೇ ಮಾಡುತ್ತಾರೆ. ಗುಲ್ಕನ್ ಬಲು ಒಳ್ಳೆಯ ಶಕ್ತಿವರ್ಧಕ, ಲಘುವಿರೇಚಕ. ಬಾಯಿ ಹುಣ್ಣಿಗೆ ಒಳ್ಳೆಯ ಮದ್ದು. ಗುಲಾಬಿ ದಳಗಳನ್ನು ಒಣಗಿಸಿಟ್ಟುಕೊಂಡಿದ್ದು ಬೇಕೆಂದಾಗ ನೀರು, ಸಕ್ಕರೆಯೊಂದಿಗೆ ಬೆರೆಸಿ ತಂಪುಪಾನೀಯವನ್ನು ತಯಾರಿಸುವ ಕ್ರಮವೂ ಇದೆ.

ಪಾಶ್ಚಾತ್ಯ ದೇಶಗಳಲ್ಲಿ ಗುಲಾಬಿಯಿಂದ ಸುಗಂಧದ್ರವ್ಯಗಳು, ಪನ್ನೀರು ಮುಂತಾದವನ್ನು ಮಾಡುವುದಲ್ಲದೆ ದಳಗಳಿಂದ ಒಂದು ಬಗೆಯ ಮುರಬ್ಬವನ್ನೂ ದಾಲ್ಚಿನ್ನಿ, ಲವಂಗ, ಜಾಪತ್ರೆ, ನಿಂಬೆ ಹಣ್ಣಿನ ಒಣ ಸಿಪ್ಪೆ, ಜಿರ‍್ಯಾನಿಯಮ್ ಎಣ್ಣೆ, ಬರ್ಗಮಾಟ್ ಎಣ್ಣೆ, ಲ್ಯಾವೆಂಡರ್, ಪುದೀನ, ಅಡಿಗೆ ಉಪ್ಪು, ಆರಿಸ್ ಗಿಡದ ಬೇರು – ಇವನ್ನೆಲ್ಲ ಮಿಶ್ರ ಮಾಡಿ ಪೋಪರಿ ಎಂಬ ಖಾದ್ಯವೊಂದನ್ನು ತಯಾರಿಸುತ್ತಾರೆ.

ಗುಲಾಬಿಯ ಕಾಯಿಗಳು ಸಿ ವಿಟಮಿನ್ನಿನ ಒಳ್ಳೆಯ ಆಗರವೆನ್ನಲಾಗಿದೆ. ಪ್ರತಿ 100 ಗ್ರಾಮ್ ಕಾಯಿಗಳಿಂದ 150 ಮಿಗ್ರಾಮ್ ವಿಟಮಿನ್ನನ್ನು ಪಡೆಯಬಹುದು.

ಗುಲಾಬಿಗೆ ಔಷಧೀಯ ಗುಣಗಳೂ ಇವೆ. ಇದರ ದಳಗಳನ್ನು ಜ್ವರದ ತಾಪವನ್ನು ಶಮನಗೊಳಿಸಲೂ ಪಚನಕಾರಿಯಾಗಿಯೂ ಪ್ರತಿಬಂಧಕ, ತಂಪುಕಾರಕಗಳಾಗಿಯೂ ಬಳಸುತ್ತಾರೆ. *

**ಗುಲಾಬಿಗಳ ಯುದ್ಧಗಳು :** 1455–87ರ ಕಾಲದಲ್ಲಿ 6ನೆಯ ಹೆನ್ರಿ, 4ನೆಯ ಎಡ್ವರ್ಡ್ ಮತ್ತು 3ನೆಯ ರಿಚರ್ಡರ ಆಳ್ವಿಕೆಯಲ್ಲಿ ನಡೆದ ಅಂತರ್ಯುದ್ಧಗಳು. ಇವು ಬಿಳಿ ಗುಲಾಬಿ ಲಾಂಛನದ ಯಾರ್ಕ್ ಮನೆತನದವರಿಗೂ, ಕೆಂಪು ಗುಲಾಬಿ ಲಾಂಛನದ ಲ್ಯಾಂಕಾಸ್ಟರ್ ಮನೆತನದವರಿಗೂ ನಡೆದ ಯುದ್ಧಗಳಾದ್ದರಿಂದ ಈ ಯುದ್ಧಗಳು ನಡೆದ ಹಲವು ವರ್ಷಗಳ ಅನಂತರ ಇವಕ್ಕೆ ಗುಲಾಬಿಗಳ ಯುದ್ಧಗಳೆಂಬ ಹೆಸರು ಬಂತು.

ಇವು ಇಂಗ್ಲೆಂಡಿನ ಸಿಂಹಾಸನಕ್ಕಾಗಿ ನಡೆದ ಕದನಗಳೆಂದು ಹೇಳಲಾಗಿದೆಯಾದರೂ ಮೂಲತಃ ಇವು ಸರ್ಕಾರದ ದೌರ್ಬಲ್ಯದ ಮತ್ತು ಆ ಕಾಲದ ಸಾಮಾಜಿಕ ಪರಿಸ್ಥಿತಿಗಳ ಪರಿಣಾಮ. ನೂರು ವರ್ಷಗಳ ಯುದ್ಧದ ಕೊನೆಯ ವೇಳೆಗೆ ಸರ್ಕಾರದ ದೌರ್ಬಲ್ಯ ವ್ಯಕ್ತವಾಗಿತ್ತು. ದೊಡ್ಡ ಪ್ರಭುಗಳು ಕರಾರಿನ ಮೇಲೆ ಖಾಸಗಿ ಸೈನ್ಯಗಳನ್ನು ನೇಮಿಸಿಕೊಳ್ಳುವ ಪದ್ಧತಿ ಬೆಳೆದದ್ದು ಆ ಯುದ್ಧದ ಫಲ. ಇದು ಇಬ್ಬಂದಿ ಊಳಿಗಮಾನ್ಯಪದ್ಧತಿ ಎಂದು ಹೆಸರಾಗಿದೆ. ಇದರಿಂದಾಗಿ ಖಾಸಗಿ ಯುದ್ಧಗಳು ಅನಿವಾರ್ಯವಾಗಿದ್ದವು. ಇಂಗ್ಲೆಂಡಿನಲ್ಲೆಲ್ಲ ಅತಿ ಬಲಿಷ್ಠ ಪ್ರಜೆಗಳು ತುಂಬಿದ್ದರು. ಅರಾಜಕತೆ ಬೆಳೆಯುತ್ತಿದೆ ಯೆಂಬಂತೆ ತೋರುತ್ತಿತ್ತು. ಲ್ಯಾಂಕಾಸ್ಟ್ರಿಯನರಿಂದ ಕಾನೂನೂ ಮತ್ತು ಶಿಸ್ತುಪಾಲನೆಯ ಕಾರ್ಯವಾಗದಿದ್ದರೆ ಯಾರ್ಕಿಸ್ಟರು ಅದನ್ನು ಸಾಧಿಸಬಲ್ಲರೆಂದು ಭಾವಿಸಲಾಗಿತ್ತು. ಹೀಗಾಗಿ 1455 ರಿಂದ 1485ರವರೆಗೆ ಇಂಗ್ಲೆಂಡು ತುಂಬ ವೇದನೆ ಅನುಭವಿಸುತ್ತಿತ್ತು. ಶಾಂತಿ ಸುರಾಜ್ಯಭಾರಗಳಿಗಾಗಿ ಅನ್ವೇಷಣೆ ನಡೆದಿತ್ತು.

ಈ ಅವಧಿಯ ಮೂವತ್ತು ವರ್ಷಗಳ ಪೂರ್ತಿ ಹೋರಾಟ ನಡೆಯುತ್ತಲೇ ಇತ್ತೆಂದು ಭಾವಿಸಲಾಗದು. ಗುಲಾಬಿಗಳ ಯುದ್ಧಗಳ ಕದನಗಳು ಮುಖ್ಯವಾಗಿ ಸಣ್ಣವು. ಈ ಯುದ್ಧಗಳಲ್ಲಿ ನಿರತವಾಗಿದ್ದ ಸೈನಿಕರ ಮತ್ತು ಸಾವುನೋವುಗಳ ಬಗ್ಗೆ ಸಮಕಾಲೀನ ಸುದ್ದಿಕಾರರು ಕೊಡುವ ಅಂಕಿ–ಅಂಶಗಳು ಉತ್ಪ್ರೇಕ್ಷೆಯಿಂದ ಕೂಡಿವೆ.

ಗುಲಾಬಿಗಳ ಯುದ್ಧಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. 1455ರಲ್ಲಿ ಸೇಂಟ್ ಅಲ್ಬನ್ಸ್‌ನಲ್ಲಿ 6ನೆಯ ಹೆನ್ರಿಯ ಸೈನ್ಯದ ಮೇಲೆ ಯಾರ್ಕಿನ ಡ್ಯೂಕನ ಸೈನ್ಯ ಎರಗಿಹೋದಾಗ ಮೊದಲನೆಯ ಭಾಗ ಆರಂಭವಾಗುತ್ತದೆ. ಎರಡು ಪಕ್ಷಗಳೂ ಕೆಲವು ಕದನಗಳಲ್ಲಿ ವಿಜಯ ಗಳಿಸಿದವು. ಯಾರ್ಕಿನ ಡ್ಯೂಕ್ 1460ರಲ್ಲಿ ಸತ್ತನಾದರೂ ಮರುವರ್ಷ ಯಾರ್ಕ್ ಮನೆತನದವರಿಗೆ ದೊರಕಿದ ವಿಜಯಗಳಿಂದಾಗಿ ಅವನ ಮಗ 4ನೆಯ ಎಡ್ವರ್ಡ್ ಎಂಬ ಹೆಸರಿನಿಂದ ಸಿಂಹಾಸನವನ್ನೇರಿದ.

ಗುಲಾಬಿಗಳ ಯುದ್ಧಗಳ ಎರಡನೆಯ ಘಟ್ಟ ಇಂಗ್ಲೆಂಡಿನ ಉತ್ತರಭಾಗಕ್ಕೆ ಸೀಮಿತವಾಗಿತ್ತು. ಅಲ್ಲಿ 1464ರಲ್ಲಿ ಲ್ಯಾಂಕಾಸ್ಟ್ರಿಯನರು ಎರಡು ಕಡೆಗಳಲ್ಲಿ ಸೋತರು. ಮೂರನೆಯ ಅವಧಿಯಲ್ಲಿಯ ಯುದ್ಧಗಳು ನಡೆದದ್ದು 1469–1471ರಲ್ಲಿ 4ನೆಯ ಎಡ್ವರ್ಡ್ ಮತ್ತು ವಾರ್ವಿಕ್ ನಡುವೆ ಆದ್ದು. ಮೊದಲು ವಾರ್ವಿಕ್‌ಗೆ ಜಯ ಲಭಿಸಿತು. ಎಡ್ವರ್ಡ್ ಪದಚ್ಯುತನಾದ. 6ನೆಯ ಹೆನ್ರಿ ಸ್ವಲ್ಪಕಾಲ ಮತ್ತೆ ದೊರೆಯಾಗಿದ್ದ. 1471ರಲ್ಲಿ ಎಡ್ವರ್ಡ್ ಹಿಂದಿರುಗಿ ಬಂದು ಎರಡು ಎಡೆಗಳಲ್ಲಿ ವಾರ್ವಿಕನನ್ನು ಸೋಲಿಸಿ ಮತ್ತೆ ಸಿಂಹಾಸನವನ್ನೇರಿದ.

3ನೆಯ ರಿಚರ್ಡ್‌ನ ವಿರುದ್ಧ ಬಕಿಂಗ್‌ಹ್ಯಾಮ್ ನಡೆಸಿದ ಬಂಡಾಯದಿಂದ ಗುಲಾಬಿಗಳ ಯುದ್ಧಗಳ ಕೊನೆಯ ಘಟ್ಟ ಆರಂಭವಾಯಿತು. ಲ್ಯಾಂಕಾಸ್ಟ್ರಿಯನ್ ಮನೆತನದವನಾದ ರಿಚ್ಮಂಡಿನ ಹೆನ್ರಿ ತನಗಿದ್ದ ಸಿಂಹಾಸನದ ಹಕ್ಕನ್ನು ಸಾಧಿಸಿ ಕೊಳ್ಳುವುದಕ್ಕಾಗಿ ಮಿಲ್ಫರ್ಡ್ ಹೇವನಿನ ಆಕ್ರಮಣ ನಡೆಸಿ, ಬಾಸ್ವರ್ತ್ ಫೀಲ್ಡಿನಲ್ಲಿ ರಿಚರ್ಡನನ್ನು 1485ರಲ್ಲಿ ಸೋಲಿಸಿದಾಗ ಗುಲಾಬಿ ಯುದ್ಧಗಳು ಮುಗಿದುವು. ಅವನು 7ನೆಯ ಹೆನ್ರಿಯಾಗಿ ಸಿಂಹಾಸನಾರೋಹಣ ಮಾಡಿದ. ಟ್ಯೂಡರ್ ಮನೆತನದ ಆಳ್ವಿಕೆ ಪ್ರಾರಂಭವಾಯಿತು.

ಗುಲಾಬಿಗಳ ಯುದ್ಧಗಳು ಅಷ್ಟೇನೂ ದೊಡ್ಡವಾಗಿರಲಿಲ್ಲವಾದರೂ ಅವುಗಳಲ್ಲಿ ನಿರತವಾಗಿದ್ದ ಪಕ್ಷಗಳು ಬಲು ಘೋರವಾಗಿ ಕಾದಾಟ ನಡೆಸಿದವು. ಕದನಗಳಲ್ಲಿ ವಿಜಯ ಗಳಿಸಿದ ಪಕ್ಷಗಳು ಉನ್ಮತ್ತವಾಗಿ ವರ್ತಿಸುತ್ತಿದ್ದದ್ದುಂಟು. ಅತ್ಯಂತ ಕ್ರೂರವಾದ ರೀತಿಯಲ್ಲಿ ಮರಣದಂಡನೆ ವಿಧಿಸುತ್ತಿದ್ದದ್ದುಂಟು. ಆದರೆ ಆಸ್ತಿಗಳಿಗೆ ಅಷ್ಟೇನೂ ಧಕ್ಕೆ ಒದಗಿದಂತೆ ಕಾಣುವುದಿಲ್ಲ. ಈ ಘರ್ಷಣೆಯಲ್ಲಿ ಪಟ್ಟಣಗಳು ನೇರವಾಗಿ ಭಾಗವಹಿಸಲಿಲ್ಲ. ಆದರೆ ಈ ಯುದ್ಧಗಳ ಪರಿಣಾಮಗಳು ಅವುಗಳ ಮೇಲೂ ಉಂಟಾದುವು. ಯುದ್ಧಗಳಿಂದ ವ್ಯಾಪಾರೋದ್ಯಮಿಗಳಿಗೆ ಅಡಚಣೆಯಾದ್ದುಂಟು. ಶ್ರೀಮಂತ ಪ್ರಭುಗಳು ಮತ್ತು ಯುದ್ಧಕ್ಕಾಗಿ ಅವರಿಂದ ನೇಮಕವಾದವರು ಮಾತ್ರ ಯುದ್ಧದಲ್ಲಿ ನಿರತರಾಗಿದ್ದರು. ಯುದ್ಧಕ್ಕೆ ಕಾರಣವಾದ ಅರಾಜಕತೆಯಿಂದ ಲಾಭ ಪಡೆದಿದ್ದವರು ಈ ವರ್ಗದವರೇ. ಗ್ರಾಮದ ಶ್ರೀಮಂತರೂ ಇವರನ್ನೇ ಅನುಸರಿಸಿದರು. ಯುದ್ಧದಿಂದ ಅತಿಯಾಗಿ ನೊಂದವರು ಈ ಜನರೇ. ಗುಲಾಬಿಗಳ ಯುದ್ಧದಿಂದ ಹಳೆಯ ಶ್ರೀಮಂತ ವರ್ಗ ಅಳಿಸಿ ಹೋಯಿತೆನ್ನುವುದು ಸರಿಯಲ್ಲ. ಟ್ಯೂಡರ್ ದೊರೆಗಳ ಒಳ್ಳೆಯ ಆಳ್ವಿಕೆಯ ಕಾಲದಲ್ಲಿ ಮಧ್ಯಮವರ್ಗ ಬೆಳೆಯಿತು. ಆಡಳಿತದಲ್ಲಿ ಅವರು ಹೆಚ್ಚು ಹೆಚ್ಚಾಗಿ ಪ್ರಭಾವ ಬೀರತೊಡಗಿದರು. (ಎ.ವಿ.ವಿ.)

**ಗುಲಾಮರು, ಗುಲಾಮರ ವ್ಯಾಪಾರ :** ಕಾನೂನಿಕವಾಗಿ ಇನ್ನೊಬ್ಬರ ಒಡೆತನಕ್ಕೆ ಒಳಪಟ್ಟಿದ್ದು ಅವರಿಗೆ ವಿಧೇಯನಾಗಿರಬೇಕಾದವನು ಗುಲಾಮ (ಸ್ಲೇವ್). ಗುಲಾಮ ವ್ಯವಸ್ಥೆ ಅಥವಾ ಪದ್ಧತಿ ಗುಲಾಮಗಿರಿ (ಸ್ಲೇವರಿ). ಪ್ರಾಣಿ, ಸರಕು ಮುಂತಾದ ಚರಾಸ್ತಿಗಳಂತೆ ಗುಲಾಮರನ್ನೂ ಪರಿಗಣಿಸಿ, ಅವರನ್ನು ಕೊಳ್ಳುವ ವಿಕ್ರಯಿಸುವ ಪದ್ಧತಿ ಒಂದು ಕಾಲದಲ್ಲಿ ಕಾನೂನುಬದ್ಧವಾಗಿತ್ತು. ಗುಲಾಮರ ಕ್ರಯ–ವಿಕ್ರಯ ವ್ಯವಹಾರವೂ ವಿಕ್ರಯಕ್ಕಾಗಿ ಗುಲಾಮರನ್ನು ಅವರ ಮೂಲ ನಿವಾಸದಿಂದ ದೂರದ ಸ್ಥಳಕ್ಕೆ ಸಾಗಿಸುವ ಸಲುವಾಗಿ ಪಡೆದುಕೊಳ್ಳುವುದೂ ಗುಲಾಮರ ವ್ಯಾಪಾರ (ಸ್ಲೇವ್ ಟ್ರೇಡ್) ಎನಿಸಿಕೊಳ್ಳುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಗುಲಾಮರ ಒಡೆತನ ಕಾನೂನಿಕವಾಗಿದ್ದ ರಾಜ್ಯಗಳನ್ನು ಗುಲಾಮ ರಾಜ್ಯಗಳು (ಸ್ಲೇವ್ ಸ್ಟೇಟ್ಸ್) ಎಂದು ಸಂಬೋಧಿಸಲಾಗುತ್ತಿತ್ತು.

**ಇತಿಹಾಸ :** ಮಾನವ ನಾಗರಿಕತೆಯಲ್ಲಿ ಬೆಳೆದು ಬಂದ ಅನೇಕ ಕೆಟ್ಟ ಪದ್ಧತಿಗಳಲ್ಲಿ ಗುಲಾಮಗಿರಿಯೂ ಒಂದು. ಪ್ರಬಲರೂ ದುಷ್ಟರೂ ಆದವರು ದುರ್ಬಲರನ್ನು ದಾಸ್ಯಕ್ಕೆ ದೂಡುವುದು ಆರಂಭವಾದಾಗ ಈ ಪದ್ಧತಿಯ ಉಗಮವಾಯಿತು. ಮಾನವ ಅನಾಗರಿಕ ಸ್ಥಿತಿಯಲ್ಲಿದ್ದಾಗ ಸೋತವನನ್ನು ದಾಸ್ಯಕ್ಕೆ ತಳ್ಳುತ್ತಿರಲಿಲ್ಲ. ಇಬ್ಬರ ಮಧ್ಯೆ ಹೋರಾಟ ನಡೆದಾಗ ಅವರಲ್ಲಿ ದುರ್ಬಲರಾದವರು ಅಂತಿಮವಾಗಿ ಹತರಾಗುತ್ತಿದ್ದರು. ಕ್ರಮೇಣ ಈ ಸ್ಥಿತಿ ಬದಲಾಯಿತು. ರಣದಲ್ಲಿ ಸೋತ ಶತ್ರುಗಳ ಸ್ತ್ರೀಯರನ್ನು ದಾಸ್ಯಕ್ಕೊಳಪಡಿಸ ಲಾಗುತ್ತಿತ್ತು. ಗುಲಾಮಗಿರಿಗೊಳಗಾದ ವ್ಯಕ್ತಿಗಳಿಂದ ತಮಗೆ ಇಚ್ಛೆ ಬಂದಂತೆ ದುಡಿಸಿಕೊಳ್ಳುವುದರ ಜೊತೆಗೆ ಅವರನ್ನು ವಸ್ತುಗಳಂತೆ ಮಾರಿ ಲಾಭ ಪಡೆಯುವ ಪದ್ಧತಿಯೂ ಆಚರಣೆಗೆ ಬಂತು. ಆದ್ದರಿಂದ ಗುಲಾಮಗಿರಿ ಸ್ವಾಭಾವಿಕವಾಗಿ ಬಂದದ್ದಲ್ಲ; ವ್ಯಕ್ತಿಯ ಸನ್ನಿವೇಶ ಮತ್ತು ದುಸ್ಥಿತಿಯಿಂದಲುದ್ಭವಿಸಿದ್ದು. ಗುಲಾಮಗಿರಿ ಪ್ರಾಚೀನ ಬ್ಯಾಬಿಲೋನಿಯ, ಗ್ರೀಸ್, ರೋಂ ಮತ್ತು ಅನಂತರದ ಇಸ್ಲಾಮೀ ದೇಶಗಳಲ್ಲಿ ವಿಶೇಷವಾಗಿ ಆಚರಣೆಯಲ್ಲಿತ್ತು.



ನ್ಯೂಬಿಯದ ಯುದ್ಧಕೈದಿಗಳನ್ನು ಗುಲಾಮರಾಗಿ ಸಾಗಿಸುತ್ತಿರುವುದು. ಅಬುಸಿಂಬೆಲಿನ ಅಮೆನ್‌ರಾ ದೇಗುಲದ ಒಂದು ಉಬ್ಬು ಚಿತ್ರ

*ಗ್ರೀಸ್ :* ಹೋಮರನ ಕಾಲದಲ್ಲಿ ಗ್ರೀಸಿನಲ್ಲಿ ಗುಲಾಮಗಿರಿ ಸಂಪೂರ್ಣವಾಗಿ ಜಾರಿಯಲ್ಲಿತ್ತೆಂದು ತಿಳಿದುಬರುತ್ತದೆ. ಯುದ್ಧದಲ್ಲಿ ಸೆರೆ ಸಿಕ್ಕವರನ್ನು ಗುಲಾಮರನ್ನಾಗಿ ಪರಿಗಣಿಸಿ ಅಂಥವರನ್ನು ಹಣಕ್ಕಾಗಿ ಬೇರೆಯವರಿಗೆ ಮಾರಾಟ ಮಾಡಲಾಗುತ್ತಿತ್ತು. ಕೆಲವೊಮ್ಮೆ ಯಾವುದಾದರೊಂದು ಪಟ್ಟಣವನ್ನು ಮುತ್ತಿದಾಗ, ಕೈಗೆ ಸಿಕ್ಕ ಗಂಡಸರನ್ನೆಲ್ಲ ಕೊಂದು ಹೆಂಗಸರನ್ನು ಮಾತ್ರ ಸಂಗಡ ಕರೆದೊಯ್ಯುತ್ತಿದ್ದದ್ದುಂಟು. ಸ್ತ್ರೀಪುರುಷರಿಬ್ಬರನ್ನು ದಾಸ್ಯಕ್ಕೆ ತಳ್ಳಿದಾಗ ಪುರುಷರನ್ನು ದನ ಕಾಯಲೂ ವ್ಯವಸಾಯಕ್ಕೂ, ಸ್ತ್ರೀಯರನ್ನು ಮನೆಗೆಲಸಗಳಿಗೂ ಗೃಹೋತ್ಪಾದನ ಕಾರ್ಯಕ್ಕೂ ಬಳಸಿಕೊಳ್ಳಲಾಗುತ್ತಿತ್ತು. ಅನೇಕ ಗುಲಾಮರು ತಮಗೆ ವಹಿಸಿದ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸಿ ತಮ್ಮ ಒಡೆಯರ ಪ್ರೀತ್ಯಾದರಗಳನ್ನು ಗಳಿಸಿಕೊಳ್ಳುತ್ತಿದ್ದರು. ಅಂಥವರು ತಮ್ಮ ಒಡೆಯ ಮೆಚ್ಚಿ ಕೊಟ್ಟ ಭೂಮಿ, ಮನೆ ಮತ್ತಿತರ ವಸ್ತುಗಳ ಸ್ವಂತ ಒಡೆತನವನ್ನನುಭವಿಸುತ್ತಿದ್ದದ್ದೂ ಉಂಟು.

ಗುಲಾಮ ಪದ್ಧತಿ ಮತ್ತು ಅದರ ಅವಶ್ಯಕತೆ ಪ್ರಾಚೀನ ಗ್ರೀಸಿನಲ್ಲಿ ಎಷ್ಟರಮಟ್ಟಿಗೆ ಇದ್ದುವೆಂಬುದನ್ನು ಅರಿಯಲು ಸಾಕಷ್ಟು ಸಾಕ್ಷ್ಯಾಧಾರಗಳು ದೊರಕುತ್ತವೆ. ಜನ್ಮದಿಂದಲೇ ಒಬ್ಬ ವ್ಯಕ್ತಿಗೆ ಗುಲಾಮಗಿರಿ ಇರುತ್ತಿದ್ದದ್ದಕ್ಕೂ ಉದಾಹರಣೆಗಳುಂಟು. ಗುಲಾಮಿಯೊಬ್ಬಳು ತನ್ನ ಯಜಮಾನನ ಇಚ್ಛೆಗೆ ಮಣಿದು, ಇಲ್ಲವೇ ಅವನಿಂದ ಆಕರ್ಷಿತಳಾಗಿ ಲೈಂಗಿಕ ಸಂಬಂಧ ಹೊಂದಿದ್ದರೆ ಪರಿಣಾಮವಾಗಿ ಜನ್ಮ ಕೊಟ್ಟ ಮಗುವಿಗೆ ಹುಟ್ಟಿನಿಂದಲೇ ಗುಲಾಮತನ ಬರುತ್ತಿತ್ತು. ಸ್ವತಂತ್ರ ಪರಿಸರದಲ್ಲಿ ಜೀವಿಸುತ್ತಿದ್ದವರು ತಮ್ಮ ಮಕ್ಕಳನ್ನು ವಿಕ್ರಯಿಸಿ ಅವರನ್ನು ಗುಲಾಮತನಕ್ಕೆ ನೂಕುತ್ತಿದ್ದದ್ದುಂಟು. ಆದರೆ ಈ ಪದ್ಧತಿ ಗ್ರೀಸಿನ ಆಟಿಕ ಮೊದಲಾದ ಪ್ರದೇಶಗಳಲ್ಲಿ ನಿಷೇಧಿಸಲ್ಪಟ್ಟಿತ್ತೆಂದು ತಿಳಿದುಬರುತ್ತದೆ. ಯುದ್ಧದಲ್ಲಿ ಸೆರೆಸಿಕ್ಕವರನ್ನು ಗುಲಾಮರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಗ್ರೀಸಿನಲ್ಲಿ ನಡೆದ ಎಷ್ಟೋ ಯುದ್ಧಗಳಲ್ಲಿ ಗ್ರೀಕರು ತಮ್ಮ ಜನಾಂಗಕ್ಕೆ ಸೇರಿದವರನ್ನೇ ಗುಲಾಮರನ್ನಾಗಿ ಸ್ವೀಕರಿಸಿ, ಗ್ರೀಸಿನಲ್ಲಿ ಗುಲಾಮ ಜನಾಂಗ ಬೃಹತ್ತಾಗಿ ಬೆಳೆಯಲು ಕಾರಣರಾಗಿದ್ದರು. ಕಡಲ್ಗಳ್ಳರೂ ಗುಲಾಮರ ಕ್ರಯ-ವಿಕ್ರಯಗಳಲ್ಲಿ ಪ್ರಧಾನ ಪಾತ್ರವಹಿಸಿದ್ದರು. ಇವರು ಪಟ್ಟಣಗಳಿಂದ ಮಕ್ಕಳನ್ನು ಹಾರಿಸಿ ಅವರನ್ನು ಅನ್ಯದೇಶಗಳಲ್ಲಿ ವಿಕ್ರಯಿಸುತ್ತಿದ್ದರು. ಯುದ್ಧದಲ್ಲಿ ಆಕ್ರಮಣಕ್ಕೊಳಗಾದ ಕೆಲವು ಪಟ್ಟಣಗಳು ಸೈನಿಕ ನೆಲೆಗಳಾಗಿ ಮಾರ್ಪಟ್ಟು, ಗುಲಾಮಗಿರಿಯ ಬೆಳೆವಣಿಗೆಯ ಕೇಂದ್ರಗಳಾಗಿದ್ದುವು. ಗುಲಾಮರ ಸ್ಥಳಾಂತರ ಕಾರ್ಯದಲ್ಲಿ ಇವು ನಿರ್ದಿಷ್ಟ ಪಾತ್ರವಹಿಸಿದ್ದುವು. ಈಜಿಪ್ಟ್ ಮತ್ತು ಇತಿಯೋಪಿಯ ದೇಶಗಳು ಸಾಕಷ್ಟು ಗುಲಾಮರನ್ನು ಒದಗಿಸುತ್ತಿದ್ದುವು. ಗ್ರೀಕರು ವಿದೇಶಗಳಿಂದ ಗುಲಾಮರನ್ನು ತರಿಸಿಕೊಳ್ಳುವಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದರು. ಪೂರ್ವದೇಶಗಳಿಂದ ಸೆರೆಹಿಡಿದು ತರಲಾದ ಸುಂದರ ರಾಜಕುಮಾರಿಯರು, ನರ್ತಕಿಯರು, ಗಾಯಕಿಯರು, ಮತ್ತು ವೇಶ್ಯೆಯರನ್ನು ಗ್ರೀಸ್, ಐಯೋನಿಯಗಳು ವಿದೇಶಗಳಿಗೆ ಸಾಗಹಾಕುತ್ತಿದ್ದುವು. ಅಥೆನ್ಸ್ ಈ ವ್ಯಾಪಾರಕ್ಕೆ ಕೇಂದ್ರವಾಗಿತ್ತು. ಈ ವ್ಯಾಪಾರದ ಮೇಲೆ ಸ್ಥಳೀಯ ಸರ್ಕಾರ ತೆರಿಗೆ ವಿಧಿಸಿ ಹೇರಳ ಹಣ ಗಳಿಸುತ್ತಿತ್ತು.

ಗುಲಾಮರನ್ನು ಗೃಹಕಾರ್ಯಗಳಿಗೂ ವ್ಯವಸಾಯ ಮುಂತಾದ ಕೆಲಸಗಳಿಗೂ ನೇಮಿಸಿಕೊಳ್ಳಲಾಗುತ್ತಿತ್ತು. ಜಮೀನುದಾರರು ನಗರಗಳಲ್ಲಿ ವಾಸಿಸುತ್ತಿದ್ದು ಅವರ ಹಿಡುವಳಿಯೆಲ್ಲ ಅವರ ಗುಲಾಮರ ಹೊಣೆಗೆ ಒಳಪಟ್ಟಿರುತ್ತಿತ್ತು. ಉತ್ಪಾದಕರು ಮತ್ತು ವ್ಯಾಪಾರಿಗಳು ಕ್ರಮೇಣ ಗುಲಾಮರನ್ನು ಉಚಿತವಾಗಿ ತಮ್ಮ ಕೆಲಸಗಳಲ್ಲಿ ಉಪಯೋಗಿಸಿಕೊಳ್ಳಲಾರಂಭಿಸಿದರು. ವ್ಯಾಪಾರಿಗಳು ಗುಲಾಮರನ್ನು ತಮ್ಮ ನಿಯೋಗಿಗಳಂತೆ ಕೆಲಸ ನಿರ್ವಹಿಸಲು ನೇಮಿಸಿಕೊಳ್ಳುತ್ತಿದ್ದರು. ಆದರೆ ಸಮಯ ಬಿದ್ದಾಗ ಗಣಿ ಕಾರ್ಖಾನೆಗಳಲ್ಲಿ ದುಡಿಯಲು, ಖಾಸಗಿಯವರ ಮನೆಗಳಲ್ಲಿ ಅಡುಗೆ ಮಾಡಲು, ಮತ್ತಿತರ ಕೆಲಸಗಳಿಗೆಂದು ಕಳಿಸಿ ಕೊಡುತ್ತಿದ್ದರು. ಒಬ್ಬ ಶ್ರೀಮಂತನ ಬಳಿಯಲ್ಲಿ ಕಾರ್ಯನಿರತರಾಗಿದ್ದವರೇ ಅಲ್ಲದೆ ಸಾರ್ವಜನಿಕರ ಸೇವೆಗೆಂದು ನಿಯುಕ್ತರಾದ ಗುಲಾಮರೂ ಇರುತ್ತಿದ್ದರು. ದೇವಸ್ಥಾನ ಸೇವೆಗೆಂದು ಕೆಲವರು ಗುಲಾಮರನ್ನು ಕಾಣಿಕೆಯಾಗಿ ಒಪ್ಪಿಸುತ್ತಿದ್ದರು. ಅಥೆನ್ಸ್‌ನಲ್ಲಿ 1,200 ಸಿಥಿಯನ್ ಬಿಲ್ಲುಗಾರರು ನಗರರಕ್ಷಣೆಯ ಕಾರ್ಯಕ್ಕೆ ನೇಮಕಗೊಂಡು ಸೇವೆ ಸಲ್ಲಿಸುತ್ತಿದ್ದರೆಂದು ತಿಳಿದುಬರುತ್ತದೆ. ನೌಕೆಗಳಲ್ಲಿ ಕೆಲಸ ಮಾಡಲು, ಸೇನೆಗೂ ಗುಲಾಮರನ್ನು ನೇಮಿಸಿಕೊಳ್ಳುತ್ತಿದ್ದದ್ದುಂಟು. ಸೇನೆಯಲ್ಲಿ ಗುಲಾಮರು ಸೈನಿಕರಿಗೆ ಸಹಾಯಕರಾಗಿಯೂ, ಅಪರೂಪದ ಸಂದರ್ಭಗಳಲ್ಲಿ ಸೈನಿಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು.

ಅಥೆನ್ಸಿನಲ್ಲಿ ಗುಲಾಮರ ಸ್ಥಿತಿ ಸ್ವಲ್ಪ ಉತ್ತಮವಾಗಿತ್ತು. ಗುಲಾಮಗಿರಿಗೆ ಅವರವರ ಮಟ್ಟಕ್ಕೆ ತಕ್ಕ ಹಾಗೆ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಸ್ಥಾನಮಾನಗಳು ದೊರಕುತ್ತಿದ್ದುವು. ಕಾನೂನಿನ ಪ್ರಕಾರ ಅಲ್ಲದಿದ್ದರೂ ಬೆಳೆದು ಬಂದ ಪದ್ಧತಿಯಂತೆ ಗುಲಾಮರು ತಮ್ಮದೇ ಆದ ಆರಕ್ಷಿತ ಹಣವನ್ನು ಇಟ್ಟುಕೊಳ್ಳಲು ಯಾವ ಅಡ್ಡಿಯೂ ಇರಲಿಲ್ಲ. ಅವರ ವಿವಾಹ ಮೊದಲಾದ ವಿಧಿಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲು ಅವಕಾಶ ಕೊಡಲಾಗಿತ್ತು. ಸಾರ್ವತ್ರಿಕ ಉತ್ಸವಗಳಲ್ಲಿ ಹಾಗೂ ಕೆಲವು ಮುಖ್ಯ ಹಬ್ಬಗಳ ಆಚರಣೆಗಳಲ್ಲಿ ಗುಲಾಮರು ಭಾಗವಹಿಸಲು ಅವಕಾಶವಿರದಿದ್ದರೂ ಕೆಲವು ಸಾಂಸ್ಕೃತಿಕ ಹಾಗೂ ಧಾರ್ಮಿಕ ಕೂಟಗಳಲ್ಲಿ ಭಾಗವಹಿಸಬಹುದಾಗಿತ್ತು. ಶವಸಂಸ್ಕಾರಕ್ಕೆ ಸಂಬಂಧಿಸಿದ ವಿಧಿಗಳಲ್ಲಿ ಗುಲಾಮರ ವಿಚಾರದಲ್ಲಿ ಯಾವುದೇ ತಾರತಮ್ಯವೂ ಇರುತ್ತಿರಲ್ಲಿಲ್ಲ. ಒಂದು ಕುಟುಂಬದವರ ಶವಸಂಸ್ಕಾರ ಮಾಡುವ ಪ್ರದೇಶದಲ್ಲಿಯೇ ಆ ಕುಟುಂಬಕ್ಕೆ ಸೇರಿದ ಗುಲಾಮರನ್ನು ಹೂಳಲೂ ಅವಕಾಶವಿತ್ತು. ತನ್ನ ಪ್ರೀತಿಪಾತ್ರನಾದ ಗುಲಾಮನಿಗೆ ಅವನ ಯಜಮಾನ ಸ್ಮಾರಕಶಿಲೆಯನ್ನು ನಿಲ್ಲಿಸುತ್ತಿದ್ದ. ಕೆಲವೊಮ್ಮೆ ಗುಲಾಮರು ಮನೆಯ ಯಜಮಾನನೊಂದಿಗೋ ಆ ಕುಟುಂಬದ ಕಿರಿಯ ಸದಸ್ಯರೊಂದಿಗೋ ನಿಕಟವಾಗಿ ವರ್ತಿಸುತ್ತಿದ್ದದ್ದುಂಟು. ಇಂಥ ನಿಕಟ ಸಂಬಂಧ ಒಮ್ಮೊಮ್ಮೆ ಅತಿಯಾಗಿ ಪ್ರಕೋಪದಲ್ಲಿ ಅಥವಾ ಬಿಕ್ಕಟ್ಟಿನಲ್ಲಿ ಪರ್ಯಾವಸಾನವಾಗುತ್ತಿತ್ತು. ಕೋಪಕ್ಕೆ ಪಾತ್ರನಾದ ಗುಲಾಮನನ್ನು ಸಾಮಾನ್ಯ ಕೆಲಸ ಕಾರ್ಯಗಳಿಂದ ತೆಗೆದುಹಾಕಿ, ಗಣಿ, ಕಾರ್ಖಾನೆ ಮುಂತಾದವುಗಳಲ್ಲಿ ಕಠಿಣ ಕೆಲಸಗಳಿಗೆ ನೇಮಿಸುತ್ತಿದ್ದದ್ದುಂಟು. ಆದರೂ ಅಥೆನ್ಸಿನ ನ್ಯಾಯ ವ್ಯವಸ್ಥೆಯಲ್ಲಿ ಗುಲಾಮರಿಗೆ ರಕ್ಷಣೆ ನೀಡುವ ಶಾಸನವಿಲ್ಲದಿರಲಿಲ್ಲ. ತನ್ನ ಯಜಮಾನನನ್ನು ಕೊಲೆ ಮಾಡಿದ ಗುಲಾಮನ ಕುಟುಂಬದವರು ನಗರ ನ್ಯಾಯಾಧಿಪತಿಯ ಮುಂದೆ ಶರಣಾಗಿ, ಕೊಲೆಗಡುಕ ಗುಲಾಮನನ್ನು ಹಿಡಿದು ತಂದು ಅವನಿಗೆ ಒಪ್ಪಿಸಬೇಕಾಗುತ್ತಿತ್ತು. ಒಡೆಯ ಮತ್ತು ಗುಲಾಮ ಇವರ ನಡುವೆ ವೈಮನಸ್ಯವುಂಟಾದಾಗ ಆ ಗುಲಾಮನನ್ನು ಮತ್ತೊಬ್ಬನಿಗೆ ವಿಕ್ರಯಿಸುವ ಹಕ್ಕು ಯಜಮಾನನಿಗೂ ಇನ್ನೊಬ್ಬನ ಒಡೆತನವನ್ನು ಒಪ್ಪಿಕೊಳ್ಳುವ ಹಕ್ಕು ಗುಲಾಮನಿಗೂ ಇದ್ದುವು.

ಒಬ್ಬ ದಣಿಯ ದಾಸ್ಯದಿಂದ ಬಿಡುಗಡೆ ಹೊಂದುವ ಹಕ್ಕು ಗುಲಾಮನಿಗಿತ್ತು. ಒಡೆಯನೊಡನೆ ಒಪ್ಪಂದ ಮಾಡಿಕೊಂಡು ಆತ ತನ್ನ ಸ್ವಾತಂತ್ರ್ಯವನ್ನು ಪಡೆಯಬಹುದಾಗಿತ್ತು. ಗುಲಾಮ ತನ್ನ ಒಡೆಯನ ಜೀವಿತಕಾಲದಲ್ಲೇ ತನ್ನ ಹೆಸರನ್ನು ಸಾರ್ವಜನಿಕ ದಾಖಲೆ ಪುಸ್ತಕದಲ್ಲಿ ನೋಂದಾಯಿಸಿ ಮತ್ತು ಬಯಲು ರಂಗಮಂಟಪ, ನ್ಯಾಯಸ್ಥಾನ ಮುಂತಾದ ಸ್ಥಳಗಳಲ್ಲಿ ಘೋಷಿಸಿ ಸ್ವತಂತ್ರ ವ್ಯಕ್ತಿಯಾಗಬಹುದಾಗಿತ್ತು. ಕೆಲವೊಮ್ಮೆ ಅವನು ತನ್ನ ಒಡೆಯನಿಗೆ ದಾಸ್ಯದ ವಿಧಿಗಳಿಗನುಸಾರವಾಗಿ ಬರೆದುಕೊಟ್ಟ ಕರಾರುಪತ್ರದಂತೆ ವರ್ತಿಸಬೇಕಾಗುತ್ತಿತ್ತು. ಉದಾಹರಣೆಗೆ ತನ್ನ ಜೀವಿತಕಾಲದ ಇಂತಿಷ್ಟು ವರ್ಷಗಳನ್ನು ಗುಲಾಮನಾಗಿ ಕಳೆಯುವೆನೆಂದೋ ತನ್ನ ಬದಲಾಗಿ ಇಂಥ ವ್ಯಕ್ತಿ ದುಡಿಯುವನೆಂದೋ ಇಲ್ಲವೇ ತನ್ನೆಲ್ಲ ಸ್ವತ್ತನ್ನೂ ಬಿಡುಗಡೆಗಾಗಿ ಒಪ್ಪಿಸಿಕೊಡುವೆನೆಂದೋ

ಶ್ರೀಮಂತ ಮಹಿಳೆಯೊಬ್ಬಳನ್ನು ನಾಲ್ವರು ಗುಲಾಮರು ಉಪಚರಿಸುತ್ತಿರುವುದು. ಪ್ರ.ಶ. 2ನೆಯ ಶತಮಾನದ ರೋಮನ್ ಅರೆಉಬ್ಬು ಚಿತ್ರ

ಕರಾರು ಮಾಡಿಕೊಂಡು ಆ ಪ್ರಕಾರ ನಡೆದು, ಬಿಡುಗಡೆ ಹೊಂದಬಹುದಾಗಿತ್ತು. ಆದರೆ ಗುಲಾಮ ತನ್ನ ವಿಶಿಷ್ಟ ಸೇವೆಯ ಪ್ರಭಾವದಿಂದ ಗುಲಾಮಗಿರಿಯಿಂದ ಬಿಡುಗಡೆ ಹೊಂದುವುದು ಅಪರೂಪದ ಸಂಗತಿಯಾಗಿತ್ತು. ಹೀಗೆ ಗುಲಾಮನಾದವನು ದಾಸ್ಯ ಮತ್ತು ಸಂಪೂರ್ಣ ಬಿಡುಗಡೆ-ಇವೆರಡರ ನಡುವೆ ತೂಗುಯ್ಯಾಲೆ ಆಡುತ್ತಿದ್ದ. ಗುಲಾಮ ಒಂದು ವೇಳೆ ವಿದೇಶೀಯನಾಗಿದ್ದರೆ, ನಾಗರಿಕರು ತಮ್ಮ ಒಪ್ಪಿಗೆಯನ್ನು ನೀಡುವುದರ ಮೂಲಕ ಅವನನ್ನು ಸ್ವತಂತ್ರ ವ್ಯಕ್ತಿಯನ್ನಾಗಿ ಮಾಡಬಹುದಾಗಿತ್ತು. ಶೌರ್ಯದಿಂದ ಕಾದಿದ, ಸಾರ್ವಜನಿಕ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಗುಲಾಮರು ಅರ್ಜಿನ್ಯೂಸೀ ಮತ್ತು ಕೆರೊನೀಯಗಳಲ್ಲಿ ಉತ್ತಮ ನಾಗರಿಕರಂತೆಯೇ ಸಂಭಾವ್ಯರಾಗಿದ್ದರು. ಆದರೂ ಕೆಲವು ವಿಶಿಷ್ಟ ಹಕ್ಕುಗಳು ಅವರಿಗೆ ಲಭ್ಯವಾಗುತ್ತಿರಲಿಲ್ಲ.

**ರೋಂ :** ರೋಮನ್ ಸಾಮ್ರಾಜ್ಯದಲ್ಲೂ ಗುಲಾಮಗಿರಿ ಜಾರಿಯಲ್ಲಿತ್ತು. ಇಟಲಿಯ ರಾಜ್ಯಗಳ ಮೇಲೆ ಧಾಳಿ ಎಸಗುವ ಮುನ್ನವೇ ರೋಮಿನಲ್ಲಿ ಗುಲಾಮಗಿರಿಯಿತ್ತು. ಇತಿಹಾಸದಿಂದ ಹೆಚ್ಚು ಭೂಮಿ ಹೊಂದಿದ್ದ ರೈತ ತನ್ನ ಸಹಾಯಕ್ಕಾಗಿ ಗುಲಾಮರನ್ನು

ನೇಮಿಸಿಕೊಳ್ಳುತ್ತಿದ್ದ. ಕೆಲವೊಮ್ಮೆ ಅವರನ್ನು ಗೇಣಿದಾರರನ್ನಾಗಿಯೂ ಒಪ್ಪಿಕೊಳ್ಳಲಾಗುತ್ತಿತ್ತು. ರೋಮನ್ ಶ್ರೀಮಂತರು ಹೆಚ್ಚು ಹಣವಂತರಾದಂತೆ ಮತ್ತು ಯುದ್ಧಗಳಿಂದಾಗಿ ನಾಗರಿಕರ ಬೇಡಿಕೆ ಹೆಚ್ಚಾದಂತೆ ಕೃಷಿಕಾರ್ಯಕ್ಕೆ ಮತ್ತು ಇತರ ಕೆಲಸಗಳಿಗೆ ಗುಲಾಮರ ಅವಶ್ಯಕತೆ ಹೆಚ್ಚಿತು. ಯುದ್ಧದಲ್ಲಿ ಸೆರೆ ಸಿಕ್ಕವರನ್ನು ಗುಲಾಮರನ್ನಾಗಿ ಮಾರ್ಪಡಿಸಿಕೊಳ್ಳುತ್ತಿದ್ದರು. ಅವರನ್ನು ವಿಕ್ರಯ ಮಾಡುತ್ತಿದ್ದದ್ದೂ ಉಂಟು. ಸೀಸರ್ ಗಾಲ್‌ನಲ್ಲಿ ಏರ್ಪಡಿಸಿದ ಸಮಾರಂಭವೊಂದರಲ್ಲಿಯೆ 63,000 ಯುದ್ಧ ಕೈದಿಗಳನ್ನು ಹರಾಜು ಮಾಡಿದನೆಂದು ತಿಳಿದುಬರುತ್ತದೆ. ಪಾಂಪೇಯ ಪತನಾನಂತರ ಕಡಲ್ಗಳ್ಳರು ಅನೇಕ ಜನರನ್ನು ಸೆರೆಹಿಡಿದು, ಡೀಲಾಸಿನಲ್ಲಿ ವಿಕ್ರಯಿಸಿದರೆಂದು ಉಲ್ಲೇಖಿಸಲಾಗಿದೆ. ಆಫ್ರಿಕ, ಸ್ಪೇನ್, ಗಾಲ್ ಪ್ರದೇಶಗಳಿಂದ ಹಿಡಿದು ತಂದ, ಏಷ್ಯ ಮೈನರಿನ ಬಿಥಿನಿಯ, ಗಲೇಷಿಯ, ಕ್ಯಾಪಡೋಷಿಯ, ಸಿರಿಯಗಳಿಂದ ಸಾಗಿಸಿಕೊಂಡು ಬಂದ ಗುಲಾಮರನ್ನು ರೋಮಿನಲ್ಲಿ ಹರಾಜು ಮಾಡಲಾಗುತ್ತಿತ್ತು. ಗುಲಾಮಗಿರಿಗೆ ಇನ್ನೂ ಹಲವು ಕಾರಣಗಳೂ ವಿಧಾನಗಳೂ ಇದ್ದುವು. ಅಪರಾಧಿಗಳನ್ನು ಗುಲಾಮರಂತೆ ಗಣಿ ಅಥವಾ ಕಾರ್ಖಾನೆಗಳಲ್ಲಿ ದುಡಿಯಲು ನಿಯಮಿಸುತ್ತಿದ್ದರು. ಮೂಲತಃ ತಂದೆಯೊಬ್ಬ ತನ್ನ ಮಕ್ಕಳನ್ನು ಗುಲಾಮರನ್ನಾಗಿ ಬೇರೆಯವರಿಗೆ ವಿಕ್ರಯಿಸಬಹುದಿತ್ತು. ಋಣಿಯಾದವನು ಸಾಲವನ್ನು ಹಿಂದಿರುಗಿಸದಿದ್ದಾಗ ಧಣಿ ಅವನನ್ನು ಗುಲಾಮನನ್ನಾಗಿ ಘೋಷಿಸಿ ದುಡಿಸಿಕೊಳ್ಳಬಹುದಿತ್ತು; ಅಥವಾ ವಿಕ್ರಯಿಸಿ ಹಣ ಪಡೆಯಬಹುದಿತ್ತು. ಆದರೆ ಈ ಪದ್ಧತಿಗೆ ನಿರ್ಬಂಧಗಳನ್ನು ವಿಧಿಸುವ ಶಾಸನವೂ ಇತ್ತು.

ಮೊದಮೊದಲು ಹುದ್ದೆಗಳು ಸ್ವತಂತ್ರ ನಾಗರಿಕರ ಕೈಯಲ್ಲಿ ಭದ್ರವಾಗಿದ್ದುವು. ಕೆಳದರ್ಜೆಯ ಹುದ್ದೆಗಳು, ಕೆಳ ನ್ಯಾಯಾಸ್ಥಾನಗಳ ಸೇವಾವರ್ಗ, ಬಂದೀಖಾನೆ ಮತ್ತು ದೇವಸ್ಥಾನಗಳ ಸಿಬ್ಬಂದಿವರ್ಗ ಮತ್ತಿತರ ಸ್ಥಾನಗಳು ಕ್ರಮೇಣ ಗುಲಾಮರಿಗೆ ತೆರೆದುವು. ಅಲ್ಲದೆ ಕಾಲುವೆಯ ಮೇಲ್ವಿಚಾರಣೆ, ರಸ್ತೆ ನಿರ್ಮಾಣ, ಮೊದಲಾದ ಸಾರ್ವಜನಿಕ ಕಾರ್ಯಗಳನ್ನು ಅವರ ಪಾಲಿಗೊಪ್ಪಿಸಲಾಗುತ್ತಿತ್ತು. ರೋಮಿನಲ್ಲಿ ಮಾತ್ರವಲ್ಲದೆ ಸುತ್ತಮುತ್ತಲ ಪಟ್ಟಣಗಳಲ್ಲೂ ಗುಲಾಮರು ಈ ಬಗೆಯ ಕಾರ್ಯ ನಿರ್ವಹಿಸುತ್ತಿದ್ದರು. ಸಾರ್ವಜನಿಕ ಕ್ಷೇತ್ರದಲ್ಲಲ್ಲದೆ, ಖಾಸಗಿ ಗೃಹಗಳಲ್ಲೂ ಗುಲಾಮರಿಗೆ ತಕ್ಕ ಸ್ಥಾನಮಾನಗಳಿದ್ದುವೆಂಬುದಕ್ಕೆ ಉದಾಹರಣೆಗಳು ಸಿಕ್ಕುತ್ತವೆ. ಖಾಸಗಿ ಗೃಹಗಳಲ್ಲಿದ್ದ ಗುಲಾಮರಲ್ಲಿ ಎರಡು ಬಗೆಗಳಿದ್ದುವು. ಮನೆವಾರ್ತೆ ನೋಡಿಕೊಳ್ಳುವವರದು ಒಂದು ಬಗೆ, ಹೊರಗೆ ಆ ಕುಟುಂಬಕ್ಕೆ ಸೇರಿದ ಎಲ್ಲ ಸ್ವತ್ತಿನ ರಕ್ಷಣೆ ಹಾಗೂ ವೃದ್ಧಿಗಾಗಿ ನೇಮಕಗೊಂಡವರದು ಇನ್ನೊಂದು ಬಗೆ. ಇವರೆಲ್ಲರಿಗೂ ಗುಲಾಮನನ್ನೇ ಮುಖಂಡನಾಗಿ ನೇಮಿಸಲಾಗುತ್ತಿತ್ತು. ಅವನ ಹೆಂಡತಿ ಅವನಿಗೆ ಸಹಾಯಕಿಯಾಗಿ ವರ್ತಿಸುತ್ತಿದ್ದಳು. ಪ್ರಧಾನ ಗುಲಾಮನ ಕೈಕೆಳಗೆ ಹಲವಾರು ಗುಲಾಮರ ಗುಂಪುಗಳಿದ್ದುವು. ಕುಟುಂಬಕ್ಕೆ ಸೇರಿದ ದನ, ಕುರಿಗಳೇ ಮುಂತಾದವುಗಳ ಪಾಲನೆ ಮಾಡುತ್ತಿದ್ದವರದು ಒಂದು ಗುಂಪು. ಗುಲಾಮರಿಗೆ ಊಟ, ಬಟ್ಟೆ ಮೊದಲಾದವನ್ನು ಪೂರೈಸುವ ಮತ್ತೊಂದು ತಂಡವಿರುತ್ತಿತ್ತು. ತಮ್ಮ ಪ್ರದೇಶಗಳಲ್ಲಿ ಏರ್ಪಡುತ್ತಿದ್ದ ಕ್ರೀಡಾ ವಿನೋದಗಳಲ್ಲಿ ಯಜಮಾನನೊಂದಿಗೆ ಭಾಗವಹಿಸುವ ಅವಕಾಶವೂ ಗುಲಾಮರಿಗೆ ಇರುತ್ತಿತ್ತು. ಯಜಮಾನ ಏರ್ಪಡಿಸುತ್ತಿದ್ದ ಸತ್ಕಾರಗಳಲ್ಲಿ, ಆಹ್ವಾನಿತರು ಭಾಗವಹಿಸುತ್ತಿದ್ದ ನೃತ್ಯ ಕಾರ್ಯಕ್ರಮಗಳಿಂದ ಹಿಡಿದು ಅವರ ಸ್ನಾನ, ಶಯನ, ಊಟ, ಉಪಚಾರ ಮುಂತಾದ ಎಲ್ಲ ಕೆಲಸಗಳನ್ನೂ ಗುಲಾಮರು ನೋಡಿಕೊಳ್ಳಬೇಕಾಗುತ್ತಿತ್ತು. ತಪ್ಪಿನ ಆಪಾದನೆಗೆ ಒಳಗಾದ ಗುಲಾಮರನ್ನು ಗುಲಾಮರೇ ವಿಚಾರಿಸಿ, ನ್ಯಾಯಪದ್ಧತಿಗೆ ಅನುಗುಣವಾಗಿ ತೀರ್ಪು ಕೊಡುತ್ತಿದ್ದರು.

**ರೋಮನ್ ಸಾಮ್ರಾಜ್ಯಾನಂತರ :** ರೋಮನ್ ಸಾಮ್ರಾಜ್ಯ ಶಿಥಿಲಗೊಳ್ಳತೊಡಗಿದಾಗ ಗುಲಾಮಗಿರಿ ಅದೃಶ್ಯವಾಗುವಂತೆ ಕಂಡರೂ ಪಶ್ಚಿಮ ಮತ್ತು ಮಧ್ಯಯುರೋಪಿನಲ್ಲಿ ಅದು ಮತ್ತೆ ತಲೆಯೆತ್ತಿತ್ತು. 8–10ನೆಯ ಶತಮಾನಗಳಲ್ಲಿ ಗುಲಾಮಪದ್ಧತಿ ಬಿರುಸಿನಿಂದ ಮರುಕಳಿಸಿತು. ಪಶ್ಚಿಮ ಮತ್ತು ಮಧ್ಯ ಯುರೋಪಿನಲ್ಲಿ ಕ್ರಮೇಣ ಗುಲಾಮಪದ್ಧತಿ ಶಿಥಿಲವಾಯಿತು. ಬಹುಶಃ 13ನೆಯ ಶತಮಾನದ ಅಂತ್ಯಕಾಲಕ್ಕೆ ಈ ಪದ್ಧತಿ ಈ ಪ್ರದೇಶದಿಂದ ಕಣ್ಮರೆಯಾದಂತೆ ಕಾಣುತ್ತದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಜೀತಪದ್ಧತಿ ವಿಕಾಸ ಹೊಂದಿದ್ದು ಇದಕ್ಕೆ ಕಾರಣ.

ಪಶ್ಚಿಮ ಏಷ್ಯ ಪ್ರದೇಶದಲ್ಲಿ ಇಸ್ಲಾಂ ಧರ್ಮ ಉದಯಿಸಿದ ಕಾಲಕ್ಕೆ ಗುಲಾಮಗಿರಿ ಅಲ್ಲಿ ಪ್ರವರ್ಧಮಾನವಾಗಿತ್ತು. ಗುಲಾಮರನ್ನು ಮಾನವೀಯ ದೃಷ್ಟಿಯಿಂದ ಕಾಣಬೇಕೆಂಬುದು ಮಹಮ್ಮದನ ಉಪದೇಶ. ಗುಲಾಮರನ್ನು ವಿಮೋಚನೆಗೊಳಿಸುವುದು ಅಭಿಮಾನದ ಕಾರ್ಯವೆಂದು ಆತ ಬೋಧಿಸಿದ. ಆದರೆ ಮುಸ್ಲಿಮರು ನಡೆಸಿದ ದಂಡಯಾತ್ರೆಗಳಲ್ಲಿ ಬಂಧನಕ್ಕೊಳಗಾದ ಜನರನ್ನು ಗುಲಾಮಗಿರಿಗೆ ತಳ್ಳುತ್ತಿದ್ದದ್ದುಂಟು. ಧರ್ಮಯುದ್ಧ ಕಾಲದಲ್ಲಿ ಕ್ರೈಸ್ತರೂ ಮುಸ್ಲಿಂ ಬಂದಿಗಳನ್ನು ಗುಲಾಮರನ್ನಾಗಿ ಪರಿವರ್ತಿಸುತ್ತಿದ್ದರು. ಇದರಿಂದ ಮುಸ್ಲಿಂ ಮತ್ತು ಕ್ರೈಸ್ತ ಜಗತ್ತಿನಲ್ಲಿ ಗುಲಾಮರ ವ್ಯಾಪಾರ ಹೆಚ್ಚಿತು.

ಮುಸ್ಲಿಂ ರಾಷ್ಟ್ರಗಳಲ್ಲಿ ನಡೆದು ಬಂದ ಗುಲಾಮಗಿರಿ ಪದ್ಧತಿಗೂ ರೋಂ ಮತ್ತು ಅಮೆರಿಕದಲ್ಲಿ ಊರ್ಜಿತಗೊಂಡ ಗುಲಾಮಗಿರಿಗೂ ಸ್ವಲ್ಪ ಮಟ್ಟಿನ ವ್ಯತ್ಯಾಸವಿದೆ. ಮುಸ್ಲಿಂ ಪ್ರಪಂಚದಲ್ಲಿ ಗುಲಾಮರನ್ನು ಜಮೀನುಗಳಲ್ಲಿ, ಗಣಿಗಳಲ್ಲಿ ಅಥವಾ ಉದ್ಯಮಗಳಲ್ಲಿ ತೊಡಗಿಸಿ, ದುಡಿಸುತ್ತಿರಲಿಲ್ಲ. ಗುಲಾಮರನ್ನು ಅವರು ಸಾಮಾನ್ಯವಾಗಿ ಗೃಹಕೃತ್ಯಗಳಿಗಾಗಿ ನಿಯೋಜಿಸಿಕೊಳ್ಳುತ್ತಿದ್ದರು. ಉಳಿದವರನ್ನು ಕುರಾನಿನ ನಿರ್ದೇಶನಗಳನ್ನು ಅನುಸರಿಸಿ ವ್ಯಾಪಾರ ಮಾಡುತ್ತಿದ್ದರು. ಅವರಲ್ಲಿದ್ದ ಒಂದು ಕ್ರೂರ ಪದ್ಧತಿಯೆಂದರೆ ಗುಲಾಮರನ್ನು



**ನೀಗ್ರೋ ಗುಲಾಮರ ಹರಾಜು – 1852ರ ಒಂದು ಚಿತ್ರ**

ನಪುಂಸಕರನ್ನಾಗಿ ಮಾಡುವುದು. ಆದರೆ ಮುಸ್ಲಿಂ ಸಮಾಜದಲ್ಲಿ ಸಾಮಾನ್ಯವಾಗಿ ಜನಾಂಗ ಅಥವಾ ವರ್ಣಭೇದಭಾವನೆಯಿರಲಿಲ್ಲ. ವಿಮೋಚನೆಗೊಂಡ ಗುಲಾಮರಿಗೆ ಅವರು ಸಮಾಜದಲ್ಲಿ ಸರಿಸಮಾನ ಸ್ಥಾನವನ್ನು ಕೊಡುತ್ತಿದ್ದದ್ದುಂಟು. ಅನೇಕ ಗುಲಾಮರು ರಾಜ್ಯವನ್ನಾಳಿದ್ದುಂಟು. ಉದಾಹರಣೆಗೆ, ಮಾಮೆಲೂಕ್ ಗುಲಾಮ ಸಂತತಿ ಈಜಿಪ್ಟನ್ನು 1250ರಿಂದ 1517ರ ವರೆಗೆ ಆಳಿತು. ಭಾರತದಲ್ಲಿ ಅನೇಕ ಗುಲಾಮರು ತಮ್ಮ ಸುಲ್ತಾನರ ವಿಶ್ವಾಸಕ್ಕೆ ಪಾತ್ರರಾಗಿದ್ದುದಲ್ಲದೆ ಅವರಲ್ಲಿ ಅನೇಕರು ಸ್ವಸಾಮರ್ಥ್ಯದಿಂದ ಸುಲ್ತಾನ್ ಪದವಿಯನ್ನೂ ಗಳಿಸಿ ದಕ್ಷತೆಯಿಂದ ರಾಜ್ಯವಾಳಿದರು.

ಐಬೀರಿಯನ್ ಪರ್ಯಾಯ ದ್ವೀಪವನ್ನು 15ನೆಯ ಶತಮಾನದಲ್ಲಿ ಕ್ರೈಸ್ತರು ಮುಸ್ಲಿಮರಿಂದ ಗೆದ್ದುಕೊಂಡ ಮೇಲೂ ಗುಲಾಮಗಿರಿ ಮುಂದುವರಿಯಿತು. ಪೋರ್ಚುಗೀಸರು ಆಫ್ರಿಕದಿಂದ ಗುಲಾಮರನ್ನು ತಂದು ಉಪಯೋಗಿಸಿಕೊಳ್ಳ ತೊಡಗಿದರು. ಗುಲಾಮ ವ್ಯಾಪಾರ ನೇರವಾಗಿ ನಡೆಯಲಾರಂಭವಾಯಿತು. ಅನೇಕ ವ್ಯಾಪಾರ ನೆಲೆಗಳು ಸ್ಥಾಪಿತವಾದವು. ಸ್ಪೇನ್ ಮತ್ತು ಪೋರ್ಚುಗಲ್‌ಗಳಲ್ಲಿ ಯುದ್ಧಗಳಿಂದಾಗಿ ಜನಸಂಖ್ಯೆ ಕಡಿಮೆಯಾದಾಗ ಆಫ್ರಿಕದ ಗುಲಾಮರನ್ನು ತರಿಸಿಕೊಂಡು ಗೃಹಕೃತ್ಯಕ್ಕೆ ಮಾತ್ರವಲ್ಲದೆ ಎಲ್ಲಾ ರೀತಿಯ ಕೆಲಸಗಳಿಗೂ ನಿಯೋಜಿಸಿಕೊಳ್ಳುತ್ತಿದ್ದರು.

**ವಸಾಹತುಗಳಲ್ಲಿ :** ಹೊಸ ಭೂಭಾಗಗಳು ಪತ್ತೆಯಾದ ಮೇಲೆ ಈ ಪದ್ಧತಿ ಕ್ರಮೇಣ ವಸಾಹತುಗಳಿಗೂ ವ್ಯಾಪಿಸಿತು. ಕೊಲಂಬಸ್ ಮತ್ತು ಸಹಪ್ರಯಾಣಿಕರು ಕ್ರೈಸ್ತರಾಗಿ ಮತಾಂತರ ಹೊಂದಿದ ನೀಗ್ರೋಗಳನ್ನು ಸ್ಪೇನಿನಿಂದ ಹೊಸ ಪ್ರಪಂಚಕ್ಕೆ ಮೊಟ್ಟಮೊದಲು ಕರೆದೊಯ್ದರು. ಮೊದಮೊದಲು ಅಮೆರಿಕ ಖಂಡಗಳಲ್ಲಿ ಯುರೋಪಿಯನರು ಸ್ಥಳೀಯ ಇಂಡಿಯನ್ ಜನಗಳನ್ನೇ ದುಡಿಮೆಗಾಗಿ ಬಳಸುತ್ತಿದ್ದರು. ಅಮೆರಿಕದ ಮೂಲನಿವಾಸಿಗಳನ್ನು ಗುಲಾಮರನ್ನಾಗಿ ಉಪಯೋಗಿಸುವಲ್ಲಿ ಕೆಲವು ಬಾಧಕಗಳಿದ್ದವು. ಅವರು ಅಷ್ಟು ಸಾಧುಗಳಾಗಿರಲಿಲ್ಲ; ಸ್ವಾತಂತ್ರ್ಯ ಪ್ರಿಯರಾದ ಅವರು ಅನೇಕ ವೇಳೆ ದಂಗೆಯೇಳುತ್ತಿದ್ದರು. ಇಲ್ಲವೆ ಕಾಡುಗಳಿಗೆ ಓಡಿಹೋಗುತ್ತಿದ್ದರು. ಅವರು ಅಷ್ಟೇನೂ ದೃಢಕಾಯರಾಗಿರಲಿಲ್ಲವಾದ್ದರಿಂದ ಬಹುಸಂಖ್ಯೆಯ ಗುಲಾಮರು ಕಾಯಿಲೆಗಳಿಗೆ ತುತ್ತಾಗಿ ಸಾಯುತ್ತಿದ್ದರು. ಕ್ರೈಸ್ತ ಪಾದ್ರಿಗಳು ಅಮೆರಿಕದ ಮೂಲನಿವಾಸಿಗಳನ್ನು ಶುದ್ಧ ಗುಲಾಮಗಿರಿಗೆ ಒಳಪಡಿಸುವುದನ್ನು ವಿರೋಧಿಸಿದರು. ಆದ್ದರಿಂದ ಈ ಬಗ್ಗೆ ಒಂದು ಒಮ್ಮತಕ್ಕೆ ಬರಲಾಯಿತು; ಅವರನ್ನು ಗುಲಾಮಗಿರಿಗೆ ಒಳಪಡಿಸಲು ಕೆಲವು ನಿಬಂಧನೆಗಳನ್ನು ರಚಿಸಿಕೊಳ್ಳಲಾಯಿತು. ಅವರನ್ನು ಮಾನವೀಯತೆಯಿಂದ ಕಾಣಬೇಕೆಂದು ಮತ್ತು ಅವರ ದುಡಿಮೆಗೆ ಸಾಕಷ್ಟು ಪ್ರತಿಫಲ ನೀಡಬೇಕೆಂದು

ಒಪ್ಪಲಾಯಿತು. ಆದರೆ ಈ ನಿಯಮಗಳನ್ನು ಯುರೋಪಿನ ವಲಸೆಗಾರರು ಕಟ್ಟುನಿಟ್ಟಾಗಿ ಪಾಲಿಸುತ್ತಿರಲಿಲ್ಲ. ಇಂಡಿಯನರನ್ನು ಈ ಕೌರ್ಯದಿಂದ ರಕ್ಷಿಸುವ ಉದ್ದೇಶದಿಂದ ಮೆಕ್ಸಿಕೋದ ಚ್ಯಾಪಾನಿನ ಧರ್ಮಗುರು ಬಾರ್ತೊಲೋಂ ಡಿ ಲಾಸ್ ಕ್ಯಾಸಾಸ್ ಆಗಿನ ಸ್ಪೇನ್ ದೊರೆಗೆ ಒಂದು ಸಲಹೆ ನೀಡಿದ. ಪ್ರತಿಯೊಬ್ಬ ಸ್ಪ್ಯಾನಿಷ್ ನೆಲಸುಗಾರನೂ ಒಂದು ನಿರ್ದಿಷ್ಟ ಸಂಖ್ಯೆಯ ನೀಗ್ರೋ ಗುಲಾಮರನ್ನು ಕರೆತರಲು ಅನುಮತಿ ನೀಡಬೇಕೆಂದು ಸೂಚಿಸಿದ. ಈ ಸಲಹೆಗೆ 1517ರಲ್ಲಿ ಒಪ್ಪಿಗೆ ದೊರಕಿತು. ಇದಕ್ಕೆ ಪ್ರತಿಯಾಗಿ ರಾಜನ ಭಂಡಾರಕ್ಕೆ ಗೊತ್ತಾದ ಸುಂಕ ತೆರಬೇಕಾಗಿತ್ತು. ಕ್ರಮೇಣ ಗುಲಾಮರ ವ್ಯಾಪಾರ ಬೆಳೆಯಿತು. ಸಾವಿರಾರು ಮಂದಿ ಗುಲಾಮರನ್ನು ಕೆರಿಬಿಯನ್ ದ್ವೀಪಗಳಿಗೂ ಅಮೆರಿಕ ಖಂಡ ಪ್ರದೇಶಕ್ಕೂ ತರಲಾಯಿತು. ಅತ್ಯಂತ ಕ್ರೂರವಾದ ಗುಲಾಮ ಪದ್ಧತಿ ಬೆಳೆಯಿತು. ಲಾಸ್ ಕ್ಯಾಸಾಸ್ ತನ್ನ ಸಲಹೆಯಿಂದಾದ ಪ್ರಮಾದವನ್ನು ಅರಿತು ಪಶ್ಚಾತ್ತಾಪಕ್ಕೆ ಒಳಗಾದ.

ಕೆರಿಬಿಯನ್ ದ್ವೀಪಗಳಲ್ಲಿ ಬ್ರಿಟಿಷರು, ಫ್ರೆಂಚರು, ಡಚ್ಚರು ಮತ್ತು ಡೇನಿಷರು ಆದಿವಾಸಿಗಳ ಶೋಷಣೆಯನ್ನೂ ಮುಂದುವರಿಸಿದರು. ನೀಗ್ರೋ ಗುಲಾಮಗಿರಿ ಮಧ್ಯ ಮತ್ತು ದಕ್ಷಿಣ ಅಮೆರಿಕದಲ್ಲಿ ತೋಟಗಾರಿಕೆ ಅರ್ಥವ್ಯವಸ್ಥೆಯೊಂದಿಗೆ ಹೆಣೆದುಕೊಂಡು ಬೆಳೆಯಿತು. ನೀಗ್ರೋಗಳನ್ನು ಗಣಿ ಕೆಲಸ ಮತ್ತಿತರ ಶ್ರಮದಾಯಕ ಕಾರ್ಯಗಳಲ್ಲಿ ತೊಡಗಿಸಲಾಗುತ್ತಿತ್ತು.


TO BE SOLD on board the Ship *Bance-Yland*, on tuesday the 6th of *May* next, at *Ashley-Ferry*; a choice cargo of about 250 fine healthy

NEGROES,

just arrived from the Windward & Rice Coast. —The utmost care has already been taken, and shall be continued, to keep them free from the least danger of being infected with the SMALL-POX, no boat having been on board, and all other communication with people from *Charles-Town* prevented.

*Austin, Laurens, & Appleby.*

*N. B.* Full one Half of the above Negroes have had the SMALL-POX in their own Country.

ಗುಲಾಮರ ವ್ಯಾಪಾರದ ಒಂದು ಜಾಹೀರಾತು

ಆಫ್ರಿಕದಿಂದ ಗುಲಾಮರನ್ನು ಅಧಿಕವಾಗಿ ಆಮದು ಮಾಡಿಕೊಳ್ಳುತ್ತಿದ್ದವರೆಂದರೆ ಇಂಗ್ಲಿಷರು, ಆಫ್ರಿಕದ ಅಟ್ಲಾಂಟಿಕ್ ತೀರಕ್ಕೆ ಬರುತ್ತಿದ್ದ ಹಡಗುಗಳು ಮದ್ಯ, ಬಂದೂಕ, ಹತ್ತಿ ಜವಳಿ ಮತ್ತು ಇತರ ಅನುಭೋಗ ವಸ್ತುಗಳನ್ನು ಹೊತ್ತು ತರುತ್ತಿದ್ದವು. ಇದಕ್ಕೆ ಪ್ರತಿಯಾಗಿ ಆಫ್ರಿಕದಲ್ಲಿ ನೀಗ್ರೋಗಳನ್ನು ಪಡೆಯಲಾಗುತ್ತಿತ್ತು. ಹೀಗೆ ಕೊಂಡ ನೀಗ್ರೋಗಳನ್ನು ಹಡಗಿನಲ್ಲಿ ಬಂಧನದಲ್ಲಿ ಸಾಗಿಸುತ್ತಿದ್ದರು. ಪ್ರಯಾಣ ಮಧ್ಯದಲ್ಲಿ ಅವರು ತೀವ್ರ ಹಿಂಸೆಗೆ ಗುರಿಯಾಗುತ್ತಿದ್ದರು. ಅವರನ್ನು ಪಶುಗಳಂತೆ ಕೂಡಿಡಲಾಗುತ್ತಿತ್ತು. ಶೇ.20ರಷ್ಟು ಜನರು ಮಾರ್ಗಮಧ್ಯದಲ್ಲೇ ಪ್ರಾಣ ಬಿಡುತ್ತಿದ್ದದ್ದು ಸಾಮಾನ್ಯ. ಹೀಗೆ ಸಾಗಿಸಿದ ನೀಗ್ರೋಗಳನ್ನು ಅಮೆರಿಕದಲ್ಲಿ ವಿಕ್ರಯಿಸಲಾಗುತ್ತಿತ್ತು. 1680ರಿಂದ 1786ರ ವರೆಗೆ ಸಾಗಿಸಲಾದ ಗುಲಾಮರ ಸಂಖ್ಯೆ 20,00,000ಕ್ಕೂ ಹೆಚ್ಚು.

ಗುಲಾಮರನ್ನು ನಡೆಸಿಕೊಳ್ಳುವ ಬಗ್ಗೆ 1685ರಲ್ಲಿ ಫ್ರೆಂಚ್ ಸರ್ಕಾರವೂ 1799ರಲ್ಲಿ ಸ್ಪೇನ್ ಸರ್ಕಾರವೂ ನಿಬಂಧನೆಗಳನ್ನು ಜಾರಿಗೆ ತಂದುವು. ಬ್ರಿಟಿಷ್ ವಸಾಹತುಗಳಲ್ಲಿ ಅಲ್ಲಿಯ ಬಿಳಿಯ ನೆಲಸುಗಾರರೇ ತಮಗೆ ಸೂಕ್ತ ಕಂಡಂತೆ ನಿಬಂಧನೆಗಳನ್ನು ಜಾರಿಗೆ ತರಲು ಅವಕಾಶವಿತ್ತು. ಈ ನಿಬಂಧನೆಗಳು ಹಲವು ವೇಳೆ ಬಹಳ ಕಟುವಾಗಿರುತ್ತಿದ್ದವು.

ಗುಲಾಮರು ಮಾಡುತ್ತಿದ್ದ ಕೆಲಸಗಳಿಗೆ ಅನುಗುಣವಾಗಿ ಅವರ ಸ್ಥಿತಿಗತಿಗಳು ವ್ಯತ್ಯಾಸವಾಗುತ್ತಿದ್ದವು. ಅವರಲ್ಲಿ ಗೃಹಸೇವೆಯಲ್ಲಿದ್ದವರನ್ನು ಒಡೆಯರು ಸಾಮಾನ್ಯವಾಗಿ ಹೆಚ್ಚು ಉದಾರವಾಗಿ ಕಾಣುತ್ತಿದ್ದರು. ವ್ಯಾಪಾರಗಳಲ್ಲಿ ನಿರತರಾಗಿದ್ದ ಗುಲಾಮರದು ಎರಡನೆಯ ಬಗೆ. ತೋಟಗಾರಿಕೆಯ ಕೆಲಸದಲ್ಲಿ ನಿರತರಾಗಿದ್ದವರ ಸಂಖ್ಯೆಯೇ ಅಧಿಕ. ಇವರ ಸ್ಥಿತಿ ಬಹು ಕಷ್ಟಕರವಾಗಿತ್ತು.

**ಗುಲಾಮಗಿರಿ ವಿರೋಧಿ ಚಳವಳಿ :** ಈ ಚಳವಳಿ ಪ್ರಥಮತಃ 17ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪ್ರಾರಂಭವಾಯಿತು. ರಾಬರ್ಟ್ ಬಾಕ್ಸ್ಟರ್, ಜಾರ್ಜ್‌ಫಾಕ್ಸ್ ಮುಂತಾದ ಅನೇಕರು ಗುಲಾಮ ವ್ಯಾಪಾರವನ್ನು ಖಂಡಿಸಿ ಬರೆದರು. 1690ರಲ್ಲಿ ಪ್ರಕಟವಾದ ಎ ಟ್ರೀಟಿಸ್ ಆನ್ ಸಿವಿಲ್ ಗವರ್ನ್‌ಮೆಂಟ್ ಗ್ರಂಥದಲ್ಲಿ ಜಾನ್ ಲಾಕ್ ಗುಲಾಮ ಪದ್ಧತಿಯನ್ನು ಖಂಡಿಸಿದ. ತರುವಾಯ ಅನೇಕ ಬರಹಗಾರರು ಇದನ್ನು ವಿರೋಧಿಸಿ ಬರೆದರು.

ಅಮೆರಿಕದಲ್ಲಿದ್ದ ಬ್ರಿಟಿಷರು ತಮ್ಮೊಂದಿಗೆ ತಮ್ಮ ಗುಲಾಮರನ್ನು ಇಂಗ್ಲೆಂಡಿಗೆ ಕರೆತಂದಾಗ ಆ ಗುಲಾಮರ ಸ್ಥಾನಮಾನಗಳೇನೆಂಬ ವಿಚಾರ ತೀವ್ರ ಚರ್ಚೆಗೆ ಒಳಗಾಯಿತು. ವಸಾಹತಿನಿಂದ ಬಂದ ಗುಲಾಮ ಮತ್ತೆ ವಸಾಹತಿಗೆ ಹಿಂದಿರುಗುವಂತೆ ಅವನನ್ನು ಒಡೆಯ ಬಲವಂತ ಮಾಡಬಹುದೆ? ಎಂಬುದು ಮುಖ್ಯ ಪ್ರಶ್ನೆ. 1772ರಲ್ಲಿ ವಿಚಾರಣೆಗೆ ಬಂದ ಮೊಕದ್ದಮೆಯೊಂದರಲ್ಲಿ (ನೀಗ್ರೋ ಸಾಮರ್ಸೆಟ್) ಲಾರ್ಡ್ ಮ್ಯಾನ್ಸ್‌ಫೀಲ್ಡ್ ಇತ್ತ ತೀರ್ಪು ಗಮನಾರ್ಹ. ಬ್ರಿಟಿಷ್ ದ್ವೀಪಗಳನ್ನು ತಲುಪಿದ ಯಾವನೇ ಗುಲಾಮನನ್ನು ಸ್ವತಂತ್ರನೆಂದು ಪರಿಗಣಿಸತಕ್ಕದ್ದೆಂಬುದು ಆ ತೀರ್ಪು. 1774ರಲ್ಲಿ ಎರಡು ಗುಲಾಮ ವ್ಯಾಪಾರ ವಿರೋಧಿ ಸಂಘಗಳು ಜನ್ಮ ತಳೆದವು. 1783ರಲ್ಲಿ, ಮೊಟ್ಟಮೊದಲ ಬಾರಿಗೆ ಗುಲಾಮಗಿರಿ ಮತ್ತು ಗುಲಾಮ ವ್ಯಾಪಾರವನ್ನು ವಿರೋಧಿಸುವ ಬಳಗ ಇಂಗ್ಲೆಂಡಿನಲ್ಲಿ ಜನ್ಮತಾಳಿತು. ಅಮೆರಿಕ ಮತ್ತು ಇಂಗ್ಲೆಂಡಿನಲ್ಲಿ ಕ್ವೇಕರ್‌ಗಳು ಗುಲಾಮಗಿರಿ ವಿರೋಧಿ ಚಳವಳಿಗೆ ಒಂದು ವ್ಯವಸ್ಥಿತ ರೂಪ ಕೊಟ್ಟರು. 1807ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಅಂಗೀಕೃತವಾದ ಒಂದು ವಿಧೇಯಕದ ಪ್ರಕಾರ ಗುಲಾಮರ ವ್ಯಾಪಾರವೂ ಬ್ರಿಟಿಷ್ ಹಡಗುಗಳಲ್ಲಿ ಗುಲಾಮರನ್ನು ಸಾಗಿಸುವುದೂ ನಿಷೇಧಿಸಲ್ಪಟ್ಟುವು. ಆದರೂ ಈ ವ್ಯಾಪಾರ ಮುಂದುವರಿಯಿತು. ಅಂತಿಮವಾಗಿ 1811ರಲ್ಲಿ ಜಾರಿಗೆ ಬಂದ ಇನ್ನೊಂದು ಕಾಯಿದೆಯ ಪ್ರಕಾರ ಗುಲಾಮವ್ಯಾಪಾರ ಶಿಕ್ಷಾರ್ಹ ಅಪರಾಧವೆಂದು ಘೋಷಿತವಾಯಿತು.

ಈ ರೀತಿ ಗುಲಾಮಗಿರಿಯನ್ನು ನಿಯಂತ್ರಣಗೊಳಿಸಲು ಕೆಲವು ಕ್ರಮಗಳನ್ನು ಕೈಗೊಂಡಿದ್ದರಿಂದ ವಸಾಹತುಗಳಲ್ಲಿದ್ದ ಗುಲಾಮರ ಸ್ಥಿತಿ ಇನ್ನೂ ಕಷ್ಟಕರವಾಯಿತು. ಹೊಸ ಗುಲಾಮರು ದೊರೆಯದಿದ್ದುದರಿಂದ ಮಾಲೀಕರು ಇದ್ದವರನ್ನೇ ಹೆಚ್ಚು ದುಡಿಸಿದರು. ಆದರೂ ಸತತವಾಗಿ ಗುಲಾಮಗಿರಿಯ ವಿರುದ್ಧ ಚಳವಳಿ ನಡೆಯುತ್ತಲೇ ಬಂತು. ಕೊನೆಗೆ ಈ ಪದ್ಧತಿಯನ್ನೇ ನಿರ್ಮೂಲ ಮಾಡಬೇಕೆಂದು ಗುಲಾಮಪದ್ಧತಿ ವಿರೋಧಿಸಂಘಗಳು ಒತ್ತಾಯಪಡಿಸಿದವು. 1833ರ ಆಗಸ್ಟ್ 28ರಂದು ಗುಲಾಮಪದ್ಧತಿ ನಿಷೇಧ ಕಾಯಿದೆಯನ್ನು ಅಂಗೀಕರಿಸಲಾಯಿತು. ಆದರೆ ಗುಲಾಮರನ್ನು ತತ್‌ಕ್ಷಣ ಬಿಡುಗಡೆ ಮಾಡಲು ಸಾಧ್ಯವಾಗಲಿಲ್ಲ. 1838ರಲ್ಲಿ ಬ್ರಿಟಿಷ್ ವೆಸ್ಟ್ ಇಂಡೀಸ್‌ನಲ್ಲಿದ್ದ ಎಲ್ಲ ಗುಲಾಮರನ್ನೂ ವಿಮೋಚನೆಗೊಳಿಸಲಾಯಿತು. ತರುವಾಯ ಇಂಥ ಕ್ರಮಗಳನ್ನು ಇತರ ವಸಾಹತುಗಳಲ್ಲಿಯೂ ಕಾರ್ಯರೂಪಕ್ಕೆ ತರಲಾಯಿತು. ಇಂಗ್ಲೆಂಡಿನ ಮಾದರಿಯನ್ನು ಯುರೋಪಿನ ಇತರ ರಾಷ್ಟ್ರಗಳು ಅನುಸರಿಸತೊಡಗಿದುವು. ಫ್ರೆಂಚ್ ವಸಾಹತುಗಳಲ್ಲಿದ್ದ ಗುಲಾಮರ ತತ್‌ಕ್ಷಣದ ವಿಮೋಚನೆಗೆ 1848ರಲ್ಲಿ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿತು. 1878ರಲ್ಲಿ ಪೋರ್ಚುಗಲ್ಲೂ ಗುಲಾಮರನ್ನು ಸ್ವತಂತ್ರಗೊಳಿಸಿತು. 1863ರಲ್ಲಿ ಡಚ್ ಸರ್ಕಾರ ಗುಲಾಮರ ವಿಮೋಚನೆಗೆ ಆಜ್ಞೆ ಹೊರಡಿಸಿತು. 1823ರಲ್ಲಿ ಮೆಕ್ಸಿಕೋದಲ್ಲಿ ಗುಲಾಮರನ್ನು ವಿಮೋಚನೆಗೊಳಿಸಲಾಯಿತು.

ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಸ್ವಾತಂತ್ರ್ಯಕ್ಕಿಂತ ಬಹು ಹಿಂದೆಯೇ ಗುಲಾಮಗಿರಿ ವಿರೋಧಿ ಚಳವಳಿ ಪ್ರಾರಂಭವಾಯಿತು. 1776ರ ಜುಲೈ 4ರಂದು ಹೊರಡಿಸಿದ ಸ್ವಾತಂತ್ರ್ಯ ಘೋಷಣೆಯಲ್ಲಿ ಮಾನವರೆಲ್ಲ ಸಮಾನರೆಂದು ಹೇಳಲಾಗಿತ್ತಾದರೂ ಈ ಘೋಷಣೆ ಕೇವಲ ತಾತ್ತ್ವಿಕವಾಗಿ ಉಳಿಯಿತು. ದಕ್ಷಿಣ ರಾಜ್ಯಗಳಲ್ಲಿ ಗುಲಾಮ ಪದ್ಧತಿ ದೃಢವಾಗಿಯೇ ಬೇರೂರಿತ್ತು. ಎಚ್.ಆರ್.ಸ್ಟೋವ್ಸ್ ರಚಿಸಿದ 'ಅಂಕಲ್ ಟಾಮ್ಸ್ ಕ್ಯಾಬಿನ್' ಎಂಬ ಕಾದಂಬರಿ (1852) ಗುಲಾಮಗಿರಿಯ ವಿರುದ್ಧ ಜನಾಭಿಪ್ರಾಯವನ್ನು ರೂಪಿಸಲು ಬಹುಮಟ್ಟಿಗೆ ಕಾರಣವಾಯಿತು. 1860ರಲ್ಲಿ ಅಬ್ರಹಾಂ ಲಿಂಕನ್ ಅಮೆರಿಕದ ಅಧ್ಯಕ್ಷನಾಗಿ ಆರಿಸಿಬಂದ ಮೇಲೆ ಗುಲಾಮ ಪದ್ಧತಿಯ ವಿರೋಧಿ ಚಳವಳಿ ತೀವ್ರತರವಾಯಿತು. ದಕ್ಷಿಣ ರಾಜ್ಯಗಳು ಒಂದು ಒಕ್ಕೂಟವನ್ನು ರಚಿಸಿಕೊಂಡು ಗುಲಾಮಗಿರಿಯನ್ನು ಉಳಿಸಿಕೊಳ್ಳಲು ಯುದ್ಧಕ್ಕೆ ಸಿದ್ಧವಾದವು.

ಅಂತರ್ಯುದ್ಧದಲ್ಲಿ ಒಕ್ಕೂಟ ಸೋತಿತು. ಅಮೆರಿಕ ಸಂಯುಕ್ತಸಂಸ್ಥಾನಗಳ ಆದ್ಯಂತ ಗುಲಾಮಗಿರಿಯನ್ನು ರದ್ದುಪಡಿಸುವ ಸಂವಿಧಾನ ತಿದ್ದುಪಡಿ 1865ರಲ್ಲಿ ಜಾರಿಗೆ ಬಂತು.

ಫ್ರಾನ್ಸಿನಲ್ಲಿ 18ನೆಯ ಶತಮಾನದ ಮಧ್ಯಭಾಗದಲ್ಲಿ ವಾಲ್ಟೇರ್, ರೂಸೋ, ಮುಂತಾದ ಅನೇಕ ಲೇಖಕರು ಗುಲಾಮಪದ್ಧತಿಯ ದೋಷಗಳನ್ನು ಎತ್ತಿ ತೋರಿಸಿದರು. ಫ್ರೆಂಚ್ ಸಾಮಾಜಿಕರು ಆ ಕಾಲದ ಬ್ರಿಟಿಷರಂತೆ ಗುಲಾಮ ವ್ಯಾಪಾರವನ್ನು ಮಾತ್ರ ವಿರೋಧಿಸಲಿಲ್ಲ; ಗುಲಾಮ ವ್ಯವಸ್ಥೆಯೇ ರದ್ದಾಗಬೇಕೆಂದು ಅವರು ಆರಂಭದಿಂದಲೂ ಚಳವಳಿ ಹೂಡಿದರು. 1788ರಲ್ಲಿ ಪ್ಯಾರಿಸ್‍ನಲ್ಲಿ ಗುಲಾಮಗಿರಿಯ ವಿರುದ್ಧ ಒಂದು ಸಂಘವನ್ನು ರಚಿಸಲಾಯಿತು. 1789ರಲ್ಲಿ ಫ್ರೆಂಚ್ ಸಂವಿಧಾನ ರಚನಾ ಸಭೆಯಲ್ಲಿ ಸ್ವೀಕೃತವಾದ ಮಾನವ ಹಕ್ಕು ಘೋಷಣೆಯ ಪ್ರಕಾರ ಗುಲಾಮ ಪದ್ಧತಿಗೆ ಸ್ಥಾನವಿರಲಿಲ್ಲ. ಆದರೆ ಫ್ರಾನ್ಸಿಗಾಗಿ ರಚಿತವಾಗುತ್ತಿದ್ದ ಸಂವಿಧಾನ ಆ ದೇಶದ ವಸಾಹತುಗಳಿಗೆ ಅನ್ವಯಿಸುವುದಿಲ್ಲವೆಂದು ಆ ಸಭೆ 1790ರಲ್ಲಿ ನಿರ್ಣಯ ಮಾಡಿದ್ದರಿಂದ ಗುಲಾಮಗಿರಿ ವಿರೋಧಿ ಚಳವಳಿಗೆ ಭಾರಿ ಪೆಟ್ಟು ಬಿತ್ತು. 1848ರಲ್ಲಿ ಸಂಭವಿಸಿದ ಕ್ರಾಂತಿಯ ಅನಂತರ ಫ್ರಾನ್ಸಿನಲ್ಲಿ ಸ್ಥಾಪಿತವಾದ ಎರಡನೆಯ ಗಣರಾಜ್ಯ ಸರ್ಕಾರ ಅಂತಿಮವಾಗಿ ತನ್ನ ವಸಾಹತುಗಳಲ್ಲಿ ಗುಲಾಮಗಿರಿಯನ್ನು ರದ್ದು ಮಾಡಿತು.

**ಅಂತಾರಾಷ್ಟ್ರೀಯ ಪ್ರಯತ್ನಗಳು :** ಗುಲಾಮಗಿರಿಯನ್ನು ರದ್ದು ಪಡಿಸಲು ಪ್ರಪಂಚಾದ್ಯಂತ ಅನೇಕ ಅಂತಾರಾಷ್ಟ್ರೀಯ ಚಳವಳಿಗಳು ನಡೆದವು. ಈ ಅಂತಾರಾಷ್ಟ್ರೀಯ ಪ್ರಯತ್ನಗಳನ್ನು ಮೂರು ಘಟ್ಟಗಳಾಗಿ ವಿಂಗಡಿಸಬಹುದು. ಮೊದಲನೆಯ ಘಟ್ಟದ ಅವಧಿ 1814–1885. ಈ ಅವಧಿಯಲ್ಲಿ ಗುಲಾಮ ವ್ಯಾಪಾರದ ವಿರುದ್ಧವಾಗಿ ಪ್ರಯತ್ನ ನಡೆಯಿತು. ಎರಡನೆಯ ಘಟ್ಟ 1885–1919. ಆಫ್ರಿಕದಲ್ಲಿ ಗುಲಾಮರನ್ನು ಸಂಗ್ರಹಿಸುವ, ಅವರನ್ನು ಹಾರಿಸಿಕೊಂಡು ಬರುವ ಚಟುವಟಿಕೆಗಳನ್ನು ಕೊನೆಗೊಳಿಸಲು ಈ ಅವಧಿಯಲ್ಲಿ ಪ್ರಯತ್ನ ನಡೆಯಿತು. 1919ರಿಂದ ಮುಂದಿನದು ಮೂರನೆಯ ಘಟ್ಟ. ಆಗ ಪಶ್ಚಿಮ ಏಷ್ಯವೂ ಸೇರಿದಂತೆ ಜಗತ್ತಿನ ಎಲ್ಲೆಡೆಗಳಲ್ಲೂ ಎಲ್ಲ ಬಗೆಯ ದಾಸ್ಯದ ವಿರುದ್ಧವಾಗಿಯೂ ಕ್ರಮ ಕೈಗೊಳ್ಳಲು ರಾಷ್ಟ್ರಗಳ ಕೂಟವೂ ವಿಶ್ವಸಂಸ್ಥೆಯೂ ಪ್ರಯತ್ನ ನಡೆಸಿದವು.

1814ರಲ್ಲಿ ವಿಯೆನ್ನ ಕಾಂಗ್ರೆಸಿನ ರಾಷ್ಟ್ರಗಳು ಗುಲಾಮ ವ್ಯಾಪಾರ ನಿಷೇಧಕ್ಕೆ ಒಪ್ಪಿಗೆ ನೀಡಿದುವಾದರೂ ಇದು ಸಾರ್ವತ್ರಿಕವಾಗಿ ಜಾರಿಗೆ ಬರಲಿಲ್ಲ. 1822ರಲ್ಲಿ ಸೇರಿದ್ದ ವೆರೋನ ಕಾಂಗ್ರೆಸಿನಲ್ಲಿ ಈ ಪ್ರಯತ್ನ ಮುಂದುವರಿಯಿತು. ಆದರೆ ಆ ಕಾಂಗ್ರೆಸಿನ ಘೋಷಣೆಯಿಂದಲೂ ಪರಿಸ್ಥಿತಿ ಹೆಚ್ಚು ಸುಧಾರಿಸಲಿಲ್ಲ. ಗುಲಾಮ ವ್ಯಾಪಾರವನ್ನು ತಪ್ಪಿಸಲು ರಾಷ್ಟ್ರಗಳ ಪರಸ್ಪರ ಸಹಕಾರದ ಕ್ರಮ ರೂಪಿತವಾಗಲಿಲ್ಲ. ಬ್ರಿಟನ್ ವಿವಿಧ ರಾಷ್ಟ್ರಗಳೊಡನೆ ಒಪ್ಪಂದಗಳನ್ನು ಮಾಡಿಕೊಂಡು ಅವುಗಳ ಬಲದಿಂದ ತನ್ನ ನೌಕಾಪಡೆಯನ್ನು ಬಳಸಿ ಗುಲಾಮ ವ್ಯಾಪಾರವನ್ನು ತಡೆಗಟ್ಟಲು ಪ್ರಯತ್ನಿಸಿತು.

ಮೆಡಿಟರೇನಿಯನ್ ಸಮುದ್ರ, ಕೆಂಪು ಸಮುದ್ರ, ಪರ್ಷಿಯನ್ ಕೊಲ್ಲಿ ಮತ್ತು ಹಿಂದೂ ಸಾಗರದ ತೀರಪ್ರದೇಶಗಳಿಗೆ ಗುಲಾಮರನ್ನು ಹೊತ್ತು ಅನೇಕ ಒಂಟೆಗಳು ಹೋಗುತ್ತಿದ್ದುವು. ಅಲ್ಲಿ ಕೆಲವರನ್ನು ಮಾರಲಾಗುತ್ತಿತ್ತು. ಇನ್ನು ಕೆಲವರನ್ನು ಪಶ್ಚಿಮ ಏಷ್ಯ ರಾಷ್ಟ್ರಗಳಿಗೆ ಸಾಗಿಸಲಾಗುತ್ತಿತ್ತು. ಇವರಲ್ಲಿ ಹೆಂಗಸರು, ಬಾಲಕಿಯರು ಮತ್ತು ಬಾಲಕರೂ ಇದ್ದರು. ಇವರನ್ನು ರಾಜರ ಅಂತಃಪುರಗಳಿಗೆ ಮತ್ತು ಸಾಮಾನ್ಯ ಗುಲಾಮರಾಗಿ ಮಾರಲಾಗುತ್ತಿತ್ತು. ಜ಼ಾಂಜಿಬಾರ್ ಗುಲಾಮ ವ್ಯಾಪಾರದ ಮುಖ್ಯ ಸ್ಥಳವಾಗಿತ್ತು. 1822ರಲ್ಲಿ ಇಂಗ್ಲೆಂಡ್ ಅದರ ರಾಜನೊಂದಿಗೆ ಒಪ್ಪಂದ ಮಾಡಿಕೊಂಡು ಅದನ್ನು ತನ್ನ ಆರಕ್ಷಿತ ಪ್ರದೇಶವನ್ನಾಗಿ ಮಾಡಿಕೊಂಡಿತು. ಅಲ್ಲಿ ಗುಲಾಮ ವ್ಯಾಪಾರ ಇಳಿಮುಖವಾಯಿತು. ಆಫ್ರಿಕದ ಕಾಂಗೋ ಜಲಾನಯನ ಪ್ರದೇಶ ಮತ್ತಿತರ ಭಾಗಗಳಲ್ಲಿ ನೀಗ್ರೋ ಗುಲಾಮರನ್ನು ಬಿಳಿಯರು ಹೇರು ಪ್ರಾಣಿಗಳಂತೆ ಬಳಸುತ್ತಿದ್ದರು. ಇದನ್ನು ತಡೆಗಟ್ಟಲು ಯುರೋಪಿನಲ್ಲಿ ಅನೇಕ ಪ್ರಯತ್ನಗಳಾಗುತ್ತಿದ್ದುವು. 1885ರಲ್ಲಿ ಬರ್ಲಿನಿನಲ್ಲಿ ಒಂದು ಅಂತಾರಾಷ್ಟ್ರೀಯ ರಾಜತಾಂತ್ರಿಕ ಸಭೆ ಸೇರಿ ಇದನ್ನು ನಿಯಂತ್ರಿಸಲು ಪ್ರಯತ್ನಿಸಿತು. 1889ರಲ್ಲಿ ಬ್ರಸಲ್ಸ್‍ನಲ್ಲಿ ಇದೇ ಉದ್ದೇಶಕ್ಕಾಗಿ ಮತ್ತೊಂದು ಕಾಂಗ್ರೆಸ್ ಸೇರಿತು. ಆದರೂ ಫಲವಾಗಲಿಲ್ಲ.

ಗುಲಾಮಗಿರಿಯ ವಿರುದ್ಧ ಅಂತಾರಾಷ್ಟ್ರೀಯ ಹೋರಾಟದ ಎರಡನೆಯ ಹಂತದಲ್ಲಿ ಈ ಪ್ರಯತ್ನಗಳು ಮುಂದುವರಿದುವು. 1890ರಲ್ಲಿ ಎರಡನೆಯ ಬಾರಿಗೆ ಬ್ರಸಲ್ಸ್‍ನಲ್ಲಿ ಸೇರಿದ ಅಂತಾರಾಷ್ಟ್ರೀಯ ಸಭೆ ಮುಖ್ಯವಾದ್ದು. ಅಲ್ಲಿ ಅಂಗೀಕರಿಸಿದ ಬ್ರಸಲ್ಸ್ ಸಾಮಾನ್ಯ ಕಾಯಿದೆಗೆ ಯುರೋಪಿನ ಎಲ್ಲ ರಾಷ್ಟ್ರಗಳೊಂದಿಗೆ ಸಂಯುಕ್ತ ಸಂಸ್ಥಾನ, ತುರ್ಕಿ, ಪರ್ಷಿಯ ಮತ್ತು ಜ಼ಾಂಜಿಬಾರ್‌ಗಳೂ ಸಹಿ ಹಾಕಿದವು.

ಈ ಕಾಯಿದೆಯಲ್ಲಿ ಗುಲಾಮ ವ್ಯಾಪಾರ ಮಾಡುವವರನ್ನು ಕ್ರಿಮಿನಲ್ ಅಪರಾಧಿಗಳೆಂದು ಪರಿಗಣಿಸಲಾಯಿತು. ಬಿಡುಗಡೆಯಾದ ಗುಲಾಮರಿಗೆ ಸ್ವತಂತ್ರವಾಗಿ ಬದುಕಲು ಸಾಕಷ್ಟು ಅನುಕೂಲಗಳನ್ನು ಕಲ್ಪಿಸಲು ಅವಕಾಶ ಮಾಡಿಕೊಡಲಾಯಿತು. ಸಾಗಾಣಿಕೆಯ ವಿರುದ್ಧ ಅಂತಾರಾಷ್ಟ್ರೀಯ ಪ್ರಯತ್ನವನ್ನು ಕ್ರೋಢಿಕರಿಸಲು ಕ್ರಮಕೈಗೊಳ್ಳಲಾಯಿತು. ಈ ಸಂಸ್ಥೆಗಳು ಇತರ ಸಂಸ್ಥೆಗಳ ಸಹಾಯದಿಂದ ಗುಲಾಮರ ಶಿಕ್ಷಣದತ್ತ ಗಮನ ಹರಿಸಿದುವು. ಹೀಗೆ ಬ್ರಸಲ್ಸ್‍ನ ಸಾಮಾನ್ಯ ಕಾಯಿದೆ 1890ರಿಂದ 1914ರ ವರೆಗೂ ಗುಲಾಮಪದ್ಧತಿಯನ್ನು ನಿರ್ಮೂಲ ಮಾಡುವಲ್ಲಿ ಮಹತ್ತ್ವದ ಪಾತ್ರ ವಹಿಸಿತು. ಇದಲ್ಲದೆ ಈಜಿಪ್ಟ್, ತುರ್ಕಿ ಮತ್ತು ಚೀನ ಮತ್ತಿತರ ಪ್ರಾಚ್ಯದೇಶಗಳಲ್ಲಿ ಗುಲಾಮಪದ್ಧತಿಯನ್ನು ನಿಷೇಧಿಸಲಾಯಿತು.

ಗುಲಾಮಗಿರಿಯ ವಿರುದ್ಧ ಅಂತರರಾಷ್ಟ್ರೀಯ ಹೋರಾಟದ ಮೂರನೆಯ ಮತ್ತು ಕೊನೆಯ ಹಂತ 1919ರಲ್ಲಿ ಪ್ರಾರಂಭವಾಯಿತು. ಒಂದನೆಯ ಮಹಾಯುದ್ಧ ಪ್ರಾರಂಭವಾದ ಮೇಲೆ ಬ್ರಸಲ್ಸ್ ಸಾಮಾನ್ಯ ಕಾಯಿದೆ ಕಚೇರಿಯ ಕೆಲಸ ಸ್ಥಗಿತವಾಗಿತ್ತು. ಅನಂತರ ಸ್ಥಾಪನೆಗೊಂಡ ರಾಷ್ಟ್ರಗಳ ಕೂಟ ಗುಲಾಮ ಪದ್ಧತಿ, ಬಲಾತ್ಕಾರದ ದುಡಿಮೆ, ಒತ್ತಾಯದ ವೇಶ್ಯಾವೃತ್ತಿ ಮೊದಲಾದುವುಗಳ ವಿರುದ್ಧ ಕ್ರಮಗಳನ್ನು ಕೈಗೊಂಡಿತು.

ಇತಿಯೋಪಿಯ ಮತ್ತು ಲೈಬೀರಿಯಗಳಲ್ಲಿ ಗುಲಾಮಗಿರಿಯ ನಿರ್ಮೂಲಕ್ಕೆ ರಾಷ್ಟ್ರಗಳ ಕೂಟ ಸಹಾಯ ಮಾಡಿತು. 1926ರಲ್ಲಿ ರಾಷ್ಟ್ರಗಳ ಕೂಟದ ಆಶ್ರಯದಲ್ಲಿ ಏರ್ಪಟ್ಟ ಅಂತಾರಾಷ್ಟ್ರೀಯ ಒಡಂಬಡಿಕೆಯಲ್ಲಿ ಬಲವಂತದ ದುಡಿಮೆಯನ್ನು ಸೇರಿಸಲಿಲ್ಲ. 1932ರಲ್ಲಿ ಗುಲಾಮಗಿರಿಗೆ ಸಂಬಂಧಿಸಿದಂತೆ ಒಂದು ಖಾಯಂ ಸಲಹಾ ಸಮಿತಿಯನ್ನು ರಾಷ್ಟ್ರಗಳ ಕೂಟ ರಚಿಸಿತು. ಎರಡನೆಯ ಮಹಾಯುದ್ಧ ಪ್ರಾರಂಭವಾದುದರಿಂದ ಇದರ ಕಾರ್ಯಕ್ರಮಗಳು ನಿಂತುವು.

1948ರಲ್ಲಿ ಸೇರಿದ್ದ ವಿಶ್ವಸಂಸ್ಥೆಯ ಮೂರನೆಯ ಅಧಿವೇಶನದಲ್ಲಿ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಅಂಗೀಕೃತವಾಯಿತು. ಗುಲಾಮಪದ್ಧತಿಯನ್ನು ಮತ್ತು ವ್ಯಾಪಾರವನ್ನು ಯಾವುದೇ ರೂಪದಲ್ಲಿ ನಡೆಸಬಾರದೆಂದು ಅದು ಜಗತ್ತಿಗೆ ಕರೆ ಕೊಟ್ಟಿತು. ಯಾರನ್ನೂ ನಿರ್ಬಂಧದಲ್ಲಿಡಕೂಡದೆಂದು ತಿಳಿಸಿತು.

1949ರಲ್ಲಿ ಸೇರಿದ್ದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ 4 ಜನ ಸದಸ್ಯರಿರುವ ಒಂದು ತಾತ್ಪೂರ್ತಿಕ ಸಮಿತಿಯನ್ನು ಜಗತ್ತಿನಲ್ಲಿರುವ ಗುಲಾಮಗಿರಿ ಮತ್ತಿತರ ಸಂಸ್ಥೆಗಳ ಬಗ್ಗೆ ಸಮೀಕ್ಷೆ ನಡೆಸಲು ರಚಿಸಲಾಯಿತು. ಈ ಸಮಿತಿ 1957ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಗುಲಾಮಪದ್ಧತಿಯನ್ನು ಮಾತ್ರವಲ್ಲದೆ, ಅದನ್ನು ಹೋಲುವ ಇತರ ಅನೇಕ ಪದ್ಧತಿಗಳನ್ನು ಅದರಲ್ಲಿ ಸೂಚಿಸಿ, ಅವುಗಳ ನಿರ್ಮೂಲಕ್ಕೆ ಸಲಹೆ ನೀಡಲಾಯಿತು. ಈ ಬಗೆಯ ಕಾರ್ಯಕ್ರಮಗಳಿಗಾಗಿ ಒಂದು ಸ್ಥಾಯಿ ಸಮಿತಿಯನ್ನು ರಚಿಸಬೇಕೆಂದೂ ಆ ಸಮಿತಿ ಜಗತ್ತಿನಲ್ಲಿ ಜಾರಿಯಲ್ಲಿರುವ ನಾನಾ ಬಗೆಯ ಮಾನವ ಶೋಷಣೆಗಳ ನಿವಾರಣೆಯ ಕಾರ್ಯವನ್ನು ನಿರ್ವಹಿಸಬೇಕೆಂದೂ ತಿಳಿಸಲಾಯಿತು.

1955ರಲ್ಲಿ ನಾರ್ವೆಯ ಹ್ಯಾನ್ಸ್ ಎಂಗೆನ್ಸ್ ಸಲ್ಲಿಸಿದ ವರದಿಯಲ್ಲಿ ಪ್ರಪಂಚದಾದ್ಯಂತ ಗುಲಾಮಗಿರಿ ಒಂದಲ್ಲ ಒಂದು ರೀತಿಯಲ್ಲಿ ಅಸ್ತಿತ್ವದಲ್ಲಿದೆಯೆಂದು ಹೇಳಲಾಗಿದೆ. ಗುಲಾಮಗಿರಿಯ ಜೊತೆಗೆ ಏಷ್ಯ, ಆಫ್ರಿಕ ಮತ್ತು ಅಮೆರಿಕದ ಅನೇಕ ರಾಷ್ಟ್ರಗಳಲ್ಲಿ ಬಿಟ್ಟಿ ದುಡಿಮೆ, ಅಲ್ಪ ವೇತನದ ದುಡಿಮೆ, ಬಾಲ ಕಾರ್ಮಿಕರ ನೇಮಕ, ಪತ್ನಿಯರನ್ನು ಕೊಂಡುಕೊಳ್ಳುವುದು ಮೊದಲಾದ ಪದ್ಧತಿಗಳು ಬಳಕೆಯಲ್ಲಿವೆಯೆಂದು ವರದಿ ತಿಳಿಸುತ್ತದೆ.

1956ರಲ್ಲಿ ಸೇರಿದ್ದ ಜಿನೀವ ರಾಜತಾಂತ್ರಿಕ ಸಭೆಯಲ್ಲಿ ಜಗತ್ತಿನಲ್ಲಿ ಪ್ರಚಲಿತವಾಗಿರುವ ವಿವಿಧ ರೀತಿಯ ಗುಲಾಮಪದ್ಧತಿಯ ಬಗ್ಗೆ ಚರ್ಚಿಸಲಾಯಿತು. ಅಲ್ಲಿಯ ಒಪ್ಪಂದಕ್ಕೆ ಸಹಿ ಮಾಡಿದ ರಾಷ್ಟ್ರಗಳು ಎಲ್ಲ ಬಗೆಯ ಗುಲಾಮಪದ್ಧತಿಗಳನ್ನೂ ಆದಷ್ಟು ಶೀಘ್ರವಾಗಿ ರದ್ದುಪಡಿಸಲು ಕಾನೂನಿನ ಮತ್ತು ಇತರ ಕ್ರಮಗಳನ್ನು ಕೈಗೊಳ್ಳಲು ಒಪ್ಪಿಕೊಂಡುವು. ಜನರನ್ನು ಅಂಗಹೀನರನ್ನಾಗಿ ಮಾಡುವುದು, ದೇಹದ ಮೇಲೆ ಗುರುತು ಹಾಕುವುದು, ಅವರನ್ನು ದಾಸ್ಯಕ್ಕೆ ಒಳಪಡಿಸುವುದು ಮೊದಲಾದವನ್ನು 1956ರಲ್ಲಿ ಸೇರಿದ್ದ ಸಭೆ ನಿಷೇಧಿಸಿತು. ಆ ವರ್ಷ ಸೇರಿದ್ದ ಇನ್ನೊಂದು ಪೂರಕ ಸಭೆಯಲ್ಲಿ ಗುಲಾಮರನ್ನು ಹೊತ್ತ ಹಡಗುಗಳನ್ನು ಪರಿಶೋಧಿಸಲು ಯುದ್ಧನೌಕೆಗಳನ್ನು ಬಳಸಬೇಕೆಂಬ ಸಲಹೆಗೆ ಸದಸ್ಯ ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯ ವ್ಯಕ್ತಪಟ್ಟಿತು. ಆದರೂ ಸಾಮಾನ್ಯವಾಗಿ ಗುಲಾಮ ಪದ್ಧತಿಯ ನಿರ್ಮೂಲಕ್ಕೆ ಒಪ್ಪಿಗೆ ದೊರಕಿತು.

ಹೀಗೆ 20ನೆಯ ಶತಮಾನದ ದ್ವಿತೀಯಾರ್ಧದ ಹೊತ್ತಿಗೆ ದಕ್ಷಿಣ ಆಫ್ರಿಕವನ್ನು ಉಳಿದು ಪ್ರಪಂಚದ ಎಲ್ಲ ರಾಷ್ಟ್ರಗಳೂ ಗುಲಾಮಗಿರಿಯನ್ನು ನಿರ್ಮೂಲಗೊಳಿಸಲು ಒಪ್ಪಿಕೊಂಡುವಾದರೂ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮೊದಲಾದ ಕಾರಣಗಳಿಂದ ಇತಿಹಾಸದ ಆದಿಕಾಲದಿಂದಲೂ ಒಂದಲ್ಲ ಒಂದು ರೂಪದಲ್ಲಿ ಕಾಣಿಸಿಕೊಂಡಿರುವ

ಗುಲಾಮಪದ್ಧತಿ ಇನ್ನೂ ಪೂರ್ಣವಾಗಿ ಅಳಿದಿಲ್ಲ. ಮಾನವಕುಲದ ಕೆಲವು ವರ್ಗಗಳ ಶೋಷಣೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಡೆಯುತ್ತಲೇ ಇದೆ. ಸಮತಾವಾದ ಮತ್ತು ಸಮಾಜವಾದ ಸಿದ್ಧಾಂತಗಳ ಪ್ರಚಾರದಿಂದಲೂ ನಾಗರಿಕ ಸರ್ಕಾರಗಳ ಸತತ ಪ್ರಯತ್ನದಿಂದಲೂ ಈ ದುಷ್ಟ ಪದ್ಧತಿಯ ಸಂಪೂರ್ಣ ನಿರ್ಮೂಲದ ಹಾದಿಯಲ್ಲಿ ಗಮನಾರ್ಹ ಸಾಧನೆಗಳಾಗಿವೆ. (ಜಿ.ಆರ್.ಆರ್.;ಎಸ್.ಎಂ.ಎಚ್.)

**ಭಾರತದಲ್ಲಿ :** ಪಾಶ್ಚಾತ್ಯ ದೇಶಗಳಲ್ಲಿ ಇತ್ತೀಚೆಗೆ ಜಾರಿಯಲ್ಲಿದ್ದಂಥ ಗುಲಾಮಗಿರಿ ಭಾರತದಲ್ಲಿ ಎಂದೂ ಪ್ರಚಾರದಲ್ಲಿರಲಿಲ್ಲ. ಭಾರತದ ವೈದಿಕ ಸಾಹಿತ್ಯದಲ್ಲಿ ಗುಲಾಮರ ಉಲ್ಲೇಖವಿದೆ. ಋಗ್ವೇದದಲ್ಲಿ ಬರುವ ದಾಸ ಎಂಬ ಪದ ಗುಲಾಮರನ್ನೇ ಕುರಿತದ್ದು ಎಂದು ಪಂಡಿತರ ಅಭಿಪ್ರಾಯ. ಅನಂತರ ಸ್ಮೃತಿಕಾರರು ಗುಲಾಮರ ಬಗ್ಗೆ ನಿರ್ದಿಷ್ಟವಾದ ಉಲ್ಲೇಖಗಳನ್ನು ಕೊಡುತ್ತಾರೆ.

ಮೊದಲು ದಾಸ ಎಂಬ ಪದವನ್ನು ಆರ್ಯರ ವೈರಿಗಳಿಗೆ ಉಪಯೋಗಿಸ ಲಾಗುತ್ತಿತ್ತು. ಯುದ್ಧದಲ್ಲಿ ಸೋತು ಕೈಸೆರೆ ಸಿಕ್ಕ ವೈರಿಗಳನ್ನು ದಾಸರೆಂದು ಪರಿಗಣಿಸ ಲಾಗುತ್ತಿತ್ತು. ಕತ್ತೆ, ಕುರಿಗಳ ಜೊತೆಯಲ್ಲಿ ನೂರು ಜನ ದಾಸರನ್ನೂ ಕಾಣಿಕೆಯಾಗಿ ಕೊಟ್ಟ ಪ್ರಸಂಗವನ್ನು ಋಗ್ವೇದದಲ್ಲಿ ಕಾಣಬಹುದು. ಇಲ್ಲಿ ದಾಸ ಎಂದರೆ ಗುಲಾಮ ಎನ್ನುವುದು ಸ್ಪಷ್ಟ. ಹಾಗೆಯೇ ಗುಲಾಮ ಹುಡುಗಿಯರನ್ನು (ದಾಸಿ) ಕಾಣಿಕೆಯಾಗಿ ಕೊಟ್ಟಿದ್ದರ ಪ್ರಸ್ತಾಪವೂ ಉಂಟು. ಪಟ್ಟಾಭಿಷೇಕ ಮಾಡಿಸಿದ ಪುರೋಹಿತನಿಗೆ ರಾಜನೊಬ್ಬ 10,000 ಆನೆಗಳ ಜೊತೆಗೆ 10,000 ದಾಸಿಯರನ್ನೂ ಕಾಣಿಕೆಯಾಗಿ ಕೊಟ್ಟಿದ್ದನೆಂದು ಐತರೇಯ ಬ್ರಾಹ್ಮಣದಲ್ಲಿ ಹೇಳಿದೆ. ಹೀಗೆಯೇ ತೈತ್ತಿರೀಯ ಸಂಹಿತೆ, ಬೃಹದಾರಣ್ಯಕ ಉಪನಿಷತ್ತು, ಛಾಂದೋಗ್ಯ ಉಪನಿಷತ್ತುಗಳಲ್ಲೂ ದಾಸ ದಾಸಿಯರ ಪ್ರಸ್ತಾಪವುಂಟು. ವೇದೋಪನಿಷತ್ತುಗಳ ಕಾಲದಲ್ಲಿ ದಾಸ ದಾಸಿಯರನ್ನು ಕಾಣಿಕೆಯಾಗಿ ಕೊಡುವ ಪದ್ಧತಿ ಇತ್ತು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಅತಿಥಿಗಳ ಪಾದತೊಳೆಯಲು ದಾಸರನ್ನು ನಿಯಮಿಸುತ್ತಿದ್ದದ್ದಾಗಿ ಗೃಹ್ಯಸೂತ್ರಗಳಲ್ಲಿ ಹೇಳಿದೆ. ದಾಸಿಯರನ್ನು ಕಾಣಿಕೆಯಾಗಿ ಕೊಟ್ಟ ಪ್ರಸಂಗಗಳು ಮಹಾಭಾರತದಲ್ಲೂ ಅನೇಕ ಕಡೆ ಬರುತ್ತವೆ.

ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಭಾರತದಲ್ಲಿ ಗುಲಾಮಗಿರಿ ಇತ್ತು. ಆದರೆ ಗುಲಾಮರನ್ನು ನೋಡಿಕೊಳ್ಳುವ ರೀತಿ ತುಂಬ ಚೆನ್ನಾಗಿದ್ದಿರಬೇಕು. ಅಂತೆಯೇ ಗ್ರೀಸಿನಿಂದ ಬಂದ ಮೆಗಾಸ್ತನೀಸನಿಗೆ ಭಾರತದಲ್ಲಿ ಗುಲಾಮಗಿರಿಯೇ ಇಲ್ಲವೆಂದು ಅನಿಸಿದ್ದು ಸಹಜ. ಭಾರತದಲ್ಲಿ ಯಾರೂ ಗುಲಾಮರನ್ನು ನೇಮಿಸುವುದಿಲ್ಲವೆಂದು ಮೆಗಾಸ್ತನೀಸ್ ಬರೆಯುತ್ತಾನೆ. ಅಶೋಕನ ಧರ್ಮಾನುಶಾಸನದಲ್ಲಿ (9ನೆಯ ಶಾಸನ) ದಾಸರನ್ನು ಹಾಗೂ ಸೇವಕರನ್ನು ಕರುಣೆಯಿಂದ ನೋಡಿಕೊಳ್ಳಬೇಕು ಎಂದು ಹೇಳಲಾಗಿದೆ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸೇವಕರ ಮತ್ತು ದಾಸರ ಸಲುವಾಗಿಯೇ ಒಂದು ಅಧಿಕರಣವನ್ನು ಮೀಸಲಿಡಲಾಗಿದೆ. ಮ್ಲೇಚ್ಛನಾದಾತ ತನ್ನ ಮಕ್ಕಳನ್ನು ಅಡವಿಟ್ಟರೆ ಮಾರಿದರೆ ತಪ್ಪಲ್ಲ. ಆದರೆ ಆರ್ಯನಾದವನನ್ನು ದಾಸನಾಗಿಸಲು ಸಾಧ್ಯವಿಲ್ಲ. ಅಪ್ರಾಪ್ತವಯಸ್ಕರನ್ನು ಮಾರುವುದು ದಂಡಾರ್ಹ. ಕುಟುಂಬದ ತೀರ ಸಂಕಟದ ಪರಿಸ್ಥಿತಿಯಲ್ಲಿ ಆರ್ಯನಾದವನನ್ನು ಅಡವಿಡಬಹುದು. ಇವು ಕೌಟಿಲ್ಯನ ಕೆಲವು ಅಭಿಪ್ರಾಯಗಳು. ಕೌಟಿಲ್ಯ ಅನೇಕ ಬಗೆಯ ದಾಸರನ್ನು ಹೆಸರಿಸುತ್ತಾನೆ. ಯುದ್ಧದಲ್ಲಿ ಸೆರೆಸಿಕ್ಕವ ಧ್ವಜಾತ್ರ, ತನ್ನನ್ನೇ ಮಾರಿಕೊಂಡವ ಆತ್ಮವಿಕ್ರಯಿ, ದಾಸನೊಬ್ಬನಿಂದ ದಾಸಿಯಲ್ಲಿ ಹುಟ್ಟಿದವ ಉದರದಾಸ ಅಥವಾ ಗರ್ಭದಾಸ ಇತ್ಯಾದಿ. ಈ ಅನೇಕ ಬಗೆಯ ದಾಸರನ್ನು ದಾಸ್ಯದಿಂದ ಮುಕ್ತರನ್ನಾಗಿ ಮಾಡುವ ವಿಧಾನಗಳನ್ನು ಆತ ಹೇಳುತ್ತಾನೆ. ಸಾಮಾನ್ಯವಾಗಿ ದಾಸರು ತಮ್ಮ ಮೌಲ್ಯವನ್ನು ಕೊಡುವುದರ ಮೂಲಕ ಬಿಡುಗಡೆ ಪಡೆಯಬಹುದು. ಯಜಮಾನನಾದವನು ತನ್ನ ದಾಸರಿಂದ ಹೆಣ ಹೊರಿಸಿದರೆ, ಮಲಮೂತ್ರ, ಎಂಜಲು ತೆಗೆಸಿದರೆ ಅಥವಾ ದಾಸನನ್ನು ಬೆತ್ತಲೆಯಾಗಿಟ್ಟರೆ ಆಗ ದಾಸನ ಮೇಲಿನ ಅವನ ಅಧಿಕಾರ ಇಲ್ಲವಾಗುತ್ತದೆ. ಎಂದರೆ ಯಜಮಾನನ ಇಂಥ ಕುಕಾರ್ಯಗಳಿಂದಾಗಿ ದಾಸ ಸಹಜವಾಗಿಯೇ ಸ್ವತಂತ್ರನಾಗುತ್ತಾನೆ. ಅವಿವಾಹಿತ ದಾಸಿಯನ್ನು ಬಲತ್ಕಾರದಿಂದ ಸಂಭೋಗಿಸುವುದಾಗಲಿ, ಬೇರೊಬ್ಬರು ಸಂಭೋಗಿಸು ವಂತೆ ಮಾಡುವುದಾಗಲಿ ಮಹಾಪರಾಧವೆನಿಸಿತ್ತು.

ಮನು ಏಳು ಬಗೆಯ ದಾಸರನ್ನು ಹೆಸರಿಸುತ್ತಾನೆ. ಆತ ದಾಸರ ಸ್ವತ್ತಿನ ಬಗ್ಗೆ, ಅದರ ವಿಲೇವಾರಿಯ ಬಗ್ಗೆ ವಿವರಗಳನ್ನು ಕೊಟ್ಟಿದ್ದಾನೆ. ಸ್ಮೃತಿಕಾರರಲ್ಲಿ ನಾರದ ಮತ್ತು ಕಾತ್ಯಾಯನರೂ ದಾಸರ ಬಗ್ಗೆ ದೀರ್ಘವಾಗಿ ಹೇಳಿದ್ದಾರೆ. ಯಜಮಾನ ದಾಸಿಯೊಬ್ಬಳಿಂದ ಮಗುವನ್ನು ಪಡೆದರೆ ಆ ಮಗು ಮತ್ತು ದಾಸಿ ಸ್ವತಂತ್ರರು. ದಾಸನೊಬ್ಬನ ಆಸ್ತಿ ಆತನ ಸಂಬಂಧಿಕರು ಇಲ್ಲದಾಗ ಯಜಮಾನನಿಗೆ ಸೇರುತ್ತದೆ. ದಾಸನೊಬ್ಬನನ್ನು ಮುಕ್ತಗೊಳಿಸುವ ರೀತಿಯನ್ನು ನಾರದ ಹೀಗೆ ತಿಳಿಸುತ್ತಾನೆ: ದಾಸನೊಬ್ಬನನ್ನು ಸ್ವಸಂತೋಷದಿಂದ ಬಿಡುಗಡೆ ಮಾಡಬೇಕೆಂದಾಗ, ಯಜಮಾನ ದಾಸನ ಭುಜದ ಮೇಲಿನ ನೀರು ತುಂಬಿದ ಕೊಡವನ್ನು ಬೀಳಿಸಿ ಒಡೆಯಬೇಕು. ಅನಂತರ ಅಕ್ಕಿ, ಹೂಗಳಿಂದ ಕೂಡಿದ ನೀರನ್ನು ಆತನ ಮೇಲೆ ಸಿಂಪಡಿಸಿ 'ನೀನಿನ್ನು ದಾಸನಲ್ಲ' ಎಂದು ಮೂರು ಸಲ ಹೇಳಿ ದಾಸನನ್ನು ಪೂರ್ವಕ್ಕೆ ಮುಖ ಮಾಡಿ ಕಳಿಸಬೇಕು. ಆಗ ಆ ದಾಸ ಸ್ವತಂತ್ರ.

ಭಾರತದಲ್ಲಿ ಐತಿಹಾಸಿಕವಾಗಿ ಗುಲಾಮಗಿರಿಯ ಚರಿತ್ರೆಯನ್ನು ಗುರುತಿಸಲು ಸಾಕಷ್ಟು ಆಧಾರಗಳಿಲ್ಲ. ಆದರೆ ಇತ್ತೀಚಿನವರೆಗೂ ಇದು ಬೇರೆ ಬೇರೆ ರೂಪಗಳಲ್ಲಿ ಉಳಿದು ಬಂದಿರಬೇಕು. ಬ್ರಿಟಿಷರ ಆಧಿಪತ್ಯಗಳಲ್ಲಿ 1833ರಲ್ಲಿ ಗುಲಾಮಗಿರಿಯನ್ನು ರದ್ದುಗೊಳಿಸುವ ಕಾನೂನು ಜಾರಿಗೆ ಬಂತು. ಬ್ರಿಟಿಷ್ ಭಾರತದಲ್ಲೂ ಇಂಥ ಕಾನೂನು ಜಾರಿಯಾದ್ದು 1843ರಲ್ಲಿ. *

**ಗುಲಾಮೀ ಸಂತತಿ :** ಮಹಮ್ಮದ್ ಘೋರಿಯ ಗುಲಾಮನೂ ನೆಚ್ಚಿನ ಸೇನಾನಿಯೂ ಆಗಿದ್ದ ಕುತುಬ್-ಉದ್-ದೀನ್ ಐಬಕನಿಂದ ಭಾರತದಲ್ಲಿ ಸ್ಥಾಪಿತವಾದ ಮುಸ್ಲಿಂ ರಾಜವಂಶ. ಇವನು ಘೋರಿಯ ಭಾರತ ದಂಡಯಾತ್ರೆಯಲ್ಲಿ ಪಾಲ್ಗೊಂಡಿದ್ದನಲ್ಲದೆ, ಅವನಿಗೆ ಸೇರಿದ ಪ್ರದೇಶಗಳ ಮೇಲ್ವಿಚಾರಕನೂ ಆಗಿದ್ದ. ಮಹಮ್ಮದ್ ಘೋರಿ 1206ರಲ್ಲಿ ಸತ್ತಾಗ ಕುತುಬ್-ಉದ್-ದೀನ್ ಸ್ವತಂತ್ರನಾಗಿ ದೆಹಲಿ ಸುಲ್ತಾನನೆಂದು ಘೋಷಿಸಿಕೊಂಡ. ಇವನು ಮೊದಲು ಗುಲಾಮನಾಗಿದ್ದುದರಿಂದ ಇವನಿಂದ ಮೊದಲಾದ ರಾಜ ಪರಂಪರೆಗೆ ಗುಲಾಮೀ ಸಂತತಿಯೆಂದು ಕರೆಯುವ ರೂಢಿಯಿದೆ. ಆದರೆ ಈ ವಂಶವನ್ನು ಗುಲಾಮೀ ಸಂತತಿ ಎಂದು ಕರೆಯುವುದರ ಔಚಿತ್ಯ ಪ್ರಶ್ನಾರ್ಹವಾದದ್ದು. ಈ ಸಂತತಿಯಲ್ಲಿ ಆಳಿದ ಸುಲ್ತಾನರಲ್ಲಿ ಮೂವರು ಮಾತ್ರ -ಕುತುಬ್-ಉದ್-ದೀನ್-ಐಬಕ್, ಇಲ್ತಮಿಷ್, ಬಲ್ಬನ್-ಮೊದಲು ಗುಲಾಮರಾಗಿದ್ದರು. ಇವರಲ್ಲಿ ಕುತುಬ್-ಉದ್-ದೀನ್ ಸುಲ್ತಾನ ಪದವಿ ಪಡೆಯುವ ವೇಳೆಗೆ ಗುಲಾಮಗಿರಿಯಿಂದ ಬಿಡುಗಡೆ ಹೊಂದಿದ. ಇಲ್ತಮಿಷ್ ಹಾಗೂ ಬಲ್ಬನ್ ತಮ್ಮ ಬಾಳಿನಲ್ಲಿ ಮೊದಲೇ ಗುಲಾಮಗಿರಿಯಿಂದ ಬಿಡುಗಡೆ ಹೊಂದಿದ್ದರು. ವಾಸ್ತವವಾಗಿ ಗುಲಾಮರು ಯಾರೂ ಆಗ ಆಳಿದ್ದಿಲ್ಲ. ಮಧ್ಯಯುಗದ ಚರಿತ್ರಕಾರರು ಇವರನ್ನು ಮಮ್ಲೂಕರೆಂದು (ಮಾಮೆಲುಕ್) ಕರೆದಿದ್ದಾರೆ. ಅದೇ ಅವರಿಗೆ ಸರಿಯಾದ ಹೆಸರೆಂದು ವಾದಿಸಲಾಗಿದೆ.

ಕುತುಬ್-ಉದ್-ದೀನ್ ಐಬಕ್ (1206-1210) ಸುಲ್ತಾನನಾದ ಮೇಲೆ ರಾಜ್ಯದ ಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಪ್ರಭುತ್ವಸೂಚಕವಾದ ಯಾವ ಬಿರುದನ್ನೂ ಈತ ಧರಿಸಲಿಲ್ಲ. ತನ್ನ ಹೆಸರಿನಲ್ಲಿ ನಾಣ್ಯವನ್ನು ಹೊರಡಿಸಲಿಲ್ಲ. ಆದರೆ ತಾನು ಸ್ವತಂತ್ರ ಸುಲ್ತಾನನೆಂದು ಪ್ರಕಟಿಸಿದ್ದು, ಇವನ ರಾಜ್ಯ ಘಜ್ನಿಯಿಂದ ತನ್ನ ಸಂಬಂಧ ತೊಡೆದುಹಾಕಿತೆಂಬುದನ್ನು ಸೂಚಿಸುತ್ತದೆ. ಈ ಕ್ರಮದಿಂದ ವಿರೋಧ ಉಂಟಾಗಬಹುದೆಂದು ಶಂಕಿಸಿ, ಆ ಕಡೆಯಿಂದ ಬರಬಹುದಾದ ಧಾಳಿಯನ್ನು ಎದುರಿಸಲು ತನ್ನ ಸೇನೆಯೊಡನೆ ಬಹುಕಾಲ ಈತ ಲಾಹೋರಿನಲ್ಲಿಯೇ ಉಳಿದಿದ್ದ. ಭಾರತದಲ್ಲಿ ಹಿಂದೂ ರಾಜರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ.

ಕುತುಬ್-ಉದ್-ದೀನನು ಲಾಹೋರ್‌ನಲ್ಲಿ ಹಠಾತ್ತನೆ ಮರಣವಾದ ಅನಂತರ ಅವನ ಅನುಯಾಯಿಗಳಾದ ಅಮೀರರು ಮತ್ತು ಮಲ್ಲಿಕರು ಆರಾಮ್ ಭಕ್ಷನನ್ನು ಸುಲ್ತಾನ್ ಆರಾಮ್ ಷಾ ಎಂಬ ಬಿರುದಿನೊಂದಿಗೆ ಉತ್ತರಾಧಿಕಾರಿಯಾಗಿ ನೇಮಿಸಿದರು. ಆರಾಮ್ ಷಾ ಲಾಹೋರಿನಲ್ಲಿ ಸಿಂಹಾಸನವನ್ನೇರಿದ. ಕುತುಬ್-ಉದ್-ದೀನನ ಅಳಿಯನೂ ದಕ್ಷ ಆಡಳಿತಗಾರನೂ ಬದಾನಿನ ರಾಜ್ಯಪಾಲನೂ ಆಗಿದ್ದ ಇಲ್ತಮಿಷನ ಪಕ್ಷವನ್ನು ದೆಹಲಿಯಲ್ಲಿದ್ದ ಒಂದು ಶಕ್ತಿಯುತ ಪಕ್ಷ ಎತ್ತಿ ಹಿಡಿಯಿತು. ಆ ಜಗಳ ಸುಮಾರು ಎಂಟು ತಿಂಗಳುಗಳ ಕಾಲ ಮುಂದುವರಿಯಿತು. ಆರಾಮ್ ಷಾ ತನ್ನ ಸೇನೆಯೊಡನೆ ದೆಹಲಿಗೆ ಬರುತ್ತಿದ್ದಾಗ ಮಾರ್ಗದಲ್ಲಿ ಸತ್ತಾಗ ಇಲ್ತಮಿಷ್ ಸುಲ್ತಾನನಾದ (1211-36).

ಇಲ್ತಾಮಷ್ ದೆಹಲಿಯ ಸುಲ್ತಾನರ ಆಡಳಿತದ ನಿಜವಾದ ಸ್ಥಾಪಕ. ಇವನು ದಕ್ಷ ಸೇನಾನಿಯಾಗಿದ್ದ. 1221ರಲ್ಲಿ ಮಂಗೋಲರ ಧಾಳಿಯನ್ನು ಅಡಗಿಸಿ, 1225ರಲ್ಲಿ ಬಂಗಾಳವನ್ನು ವಶಪಡಿಸಿಕೊಂಡ. ಕುತುಬ್-ಉದ್-ದೀನನ ಕೈಬಿಟ್ಟಿದ್ದ ರಣಥಂಬೂರ್ 1226ರಲ್ಲಿ ಇವನ ಕೈವಶವಾಯಿತು. ಬಾಗ್ದಾದಿನ ಕಲೀಫ ಇವನನ್ನು ಭಾರತದ ಸುಲ್ತಾನನೆಂದು ಮಾನ್ಯ ಮಾಡಿದ. ಇದರಿಂದ ಸಂತೋಷಗೊಂಡ ಇಲ್ತಮಿಷ್ ಕಲೀಫನ ಹೆಸರನ್ನು ತನ್ನ ನಾಣ್ಯಗಳಲ್ಲಿ ಸೇರಿಸಿದ. 1232ರಲ್ಲಿ ಗ್ವಾಲಿಯರನ್ನು ವಶಪಡಿಸಿಕೊಂಡ. ಇಲ್ತಮಿಷ್ 1236ರಲ್ಲಿ ಮರಣ ಹೊಂದಿದ.

ಕುತುಬ್-ಉದ್-ದೀನನ ಆಳ್ವಿಕೆಯಲ್ಲಿ ಪ್ರಾರಂಭವಾದ ಕುತುಬ್ ಮಿನಾರ್ **(ನೋಡಿ)** ಇವನ ಕಾಲದಲ್ಲಿ ಪೂರ್ಣವಾಯಿತು.

ತನ್ನ ಹಿರಿಯ ಮಗ ಅನಿರೀಕ್ಷಿತವಾಗಿ ಮರಣ ಹೊಂದಿದಾಗ ಹಿರಿಯ ಮಗಳಾದ ರಜ್ಹಿಯಾಳನ್ನು ಉತ್ತರಾಧಿಕಾರಿಣಿಯಾಗಿ ಇಲ್ತಮಿಷ್ ನೇಮಿಸಿದ್ದ. ಆದರೆ ಸಾಯುವ ಮುನ್ನ ಇವನು ಮನಸ್ಸು ಬದಲಿಸಿದನೆಂದು ಬದುಕಿದ್ದ ಪುತ್ರರ ಪೈಕಿ ಹಿರಿಯನಾಗಿದ್ದ

ಫಿರೂಜ್ ತನ್ನ ಅನಂತರ ಸಿಂಹಾಸನವನ್ನೇರಬೇಕೆಂಬುದು ಇವನ ಅಭಿಲಾಷೆಯಾಗಿತ್ತೆಂದೂ ಹೇಳಲಾಗಿದೆ. ಅಂತೂ ಫಿರೂಜ್ ಪಟ್ಟಕ್ಕೆ ಬಂದ. ಆದರೆ ಭೋಗಾಸಕ್ತನಾಗಿದ್ದ ಅವನು ಕೊಲೆಯಾದ. ಅತೃಪ್ತ ಜನತೆಯ ಬೆಂಬಲದಿಂದ ರಜಿಯಾ ಅಧಿಕಾರಕ್ಕೆ ಬಂದಳು.

ರಜಿಯಾ ಬುದ್ಧಿವಂತೆ. ಇಲ್ತುಮಿಷನ ಮರಣಾನಂತರ ರಾಜ್ಯದಲ್ಲಿ ತಲೆದೋರಿದ್ದ ಗಲಭೆಗಳನ್ನು ಅವಳು ಅಡಗಿಸಿ ದೇಶದಲ್ಲಿ ಶಾಂತಿ ಸ್ಥಾಪಿಸಿದಳು. ಅವಳು ಗಂಡಸಿನಂತೆ ಉಡಿಗೆ ತೊಡಿಗೆ ಧರಿಸಿ, ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದಳು. ಆದರೆ ಆಕೆ ಸ್ತ್ರೀಯಾಗಿದ್ದದ್ದರಿಂದಲೂ ಅಧಿಕಾರದ ಹುದ್ದೆಗಳಿಗೆ ಅವಳು ಮಾಡಿದ ನೇಮಕಗಳಿಂದ ಕೆಲವರಲ್ಲಿ ಅತೃಪ್ತಿ ಉಂಟಾದ್ದರಿಂದಲೂ ಅವಳು ಕೊಲೆಗೆ ಈಡಾದಳು. ಅವಳ ಮೂರು ವರ್ಷಗಳ ಆಳ್ವಿಕೆ ಕೊನೆಗೊಂಡಿತು. ಮುಂದೆ ಸುಲ್ತಾನನಾಗುವ ಸರದಿ ಇಲ್ತುಮಿಷನ ಕಿರಿಯ ಮಗ ನಾಸಿರುದ್ದೀನ್ ಮಹಮದನಿಗೆ ಬಂತು (1246).

ನಾಸಿರುದ್ದೀನ್ (ಆ. 1246–66) ಸೌಜನ್ಯ ಮತ್ತು ಶ್ರದ್ಧಾಭಕ್ತಿಗಳ ಪ್ರತಿರೂಪವಾಗಿದ್ದ. ಅವನು ಸಾಹಿತ್ಯಪೋಷಕನೂ ಹೌದು. ಆದರೆ ರಾಜ್ಯಭಾರದಲ್ಲಿ ಆಸಕ್ತಿಯಿರಲಿಲ್ಲ. ಸ್ವಾತಂತ್ರ್ಯಕ್ಕಾಗಿ ಹವಣಿಸುತ್ತಿದ್ದ ಹಿಂದೂ ರಾಜರು ದಂಗೆ ಎದ್ದು ಆಡಳಿತ ಶಿಥಿಲವಾಯಿತು. ಮಂಗೋಲರ ಧಾಳಿಗೆ ಎಡೆ ದೊರಕಿತು. ನಾಸಿರುದ್ದೀನ್ ಅಶಕ್ತನಾದರೂ ಅದೃಷ್ಟವಂತ. ಅವನ ಮಾವ ಘಿಯಾಸುದ್ದೀನ್ ಬಲ್ಬನ್ ರಾಜ್ಯದ ಸುಭದ್ರತೆಗೆ ಶ್ರಮಿಸಿ ಅದು ಛಿದ್ರವಾಗುವುದನ್ನು ತಪ್ಪಿಸಿದ. ನಾಸಿರುದ್ದೀನನ ಮರಣಾನಂತರ ಅವನೇ ಸುಲ್ತಾನನಾದ.

ಘಿಯಾಸುದ್ದೀನ್ ಬಲ್ಬನ್ (1266–1286) ಈ ವಂಶದ ಸುಲ್ತಾನರಲ್ಲಿ ಪ್ರಸಿದ್ಧ. ಅವನು ಸುಲ್ತಾನನದ ಮೇಲೆ ದುರ್ದಮ್ಯವೂ ಕಠಿಣವೂ ಆದ ಸಮಸ್ಯೆಗಳನ್ನು ಎದುರಿಸಬೇಕಾಯಿತು. ರಾಜ್ಯದ ಆಡಳಿತ ವ್ಯವಸ್ಥೆ, ಮಂಗೋಲರ ಧಾಳಿಯನ್ನು ಅಡಗಿಸುವ ಏರ್ಪಾಡು–ಇವುಗಳಿಗೆ ಅವನು ತ್ವರಿತವಾಗಿ ಗಮನ ಹರಿಸಬೇಕಾಯಿತು. ಉಗ್ರವಾದ ಶಿಕ್ಷೆ ಹಾಗೂ ಕಾನೂನಿನ ಸಹಾಯದಿಂದ ಸುವ್ಯವಸ್ಥೆ ಸ್ಥಾಪಿಸಿದ.

ನಾಸಿರುದ್ದೀನನ ಆಳ್ವಿಕೆಯಲ್ಲಿ ತಾನೇ ಆಡಳಿತವನ್ನು ನಿರ್ವಹಿಸುತ್ತಿದ್ದುದರಿಂದ ಆತ ಅಪಾರ ಅನುಭವಗಳನ್ನು ಪಡೆದಿದ್ದ. ಸುಭದ್ರ ಸರ್ಕಾರಕ್ಕೆ ವ್ಯವಸ್ಥಿತ ಸೇನೆ ಆವಶ್ಯಕವೆಂದು ಮನಗಂಡು ಸುಸಜ್ಜಿತ ಅಶ್ವಸೇನೆ ಮತ್ತು ಕಾಲಾಳೂ ಪಡೆಗಳನ್ನು ನಿರ್ಮಿಸಿ, ನುರಿತ ಹಾಗೂ ನಿಷ್ಠರಾದ ಸೇನಾಧಿಕಾರಿಗಳಿಗೆ ಒಪ್ಪಿಸಿದ. ರಾಜ್ಯದ ಸಮಸ್ತ ಅಧಿಕಾರವೂ ಅವನಲ್ಲಿತ್ತು. ಮುಖ್ಯ ಪ್ರಾಂತ್ಯಾಧಿಕಾರಿಗಳಾಗಿದ್ದ ಅವನ ಮಕ್ಕಳಿಗೂ ಹೆಚ್ಚಿನ ಅಧಿಕಾರವಿರಲಿಲ್ಲ. ನ್ಯಾಯಾಡಳಿತದಲ್ಲಿ ಅವನ ಬಂಧುಗಳಿಗೆ ಕೂಡ ಪಕ್ಷಪಾತ ತೋರುತ್ತಿರಲಿಲ್ಲ. ನ್ಯಾಯಾಡಳಿತವನ್ನು ಸಮರ್ಪಕಗೊಳಿಸಲು ಗೂಢಚಾರರನ್ನು ನೇಮಿಸಿದ್ದ. ಅವರು ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ವಿಶಿಷ್ಟ ವಿಚಾರಗಳನ್ನು ಅವನ ಗಮನಕ್ಕೆ ತರುತ್ತಿದ್ದರು. ಗೂಢಚಾರರು ಅಪರಾಧಗಳನ್ನು ತಡೆಗಟ್ಟುತ್ತಿದ್ದರಲ್ಲದೆ, ನಿರಪರಾಧಿಗಳನ್ನು ಅಧಿಕಾರಿಗಳ ಸ್ವೇಚ್ಛಾಪ್ರವೃತ್ತಿಯಿಂದ ಪಾರು ಮಾಡುತ್ತಿದ್ದರು.

ತನ್ನ ಕಡೆಯ ದಿವಸಗಳಲ್ಲಿ ಸುಲ್ತಾನ ದೊಡ್ಡ ವಿಪತ್ತನ್ನು ಎದುರಿಸಬೇಕಾಯಿತು. ತೈಮೂರನ ಮುಖಂಡತ್ವದಲ್ಲಿ ಮಂಗೋಲರು 1285ರಲ್ಲಿ ಪಂಜಾಬನ್ನು ಮುತ್ತಿದರು. ವೃದ್ಧನಾದ ಸುಲ್ತಾನ ತನ್ನ ಹಿರಿಯ ಮಗನನ್ನು ಸೇನೆಯೊಡನೆ ಕಳುಹಿಸಿದ. ಅವನು ಲಾಹೋರಿಗೆ ಸೇನೆಯೊಡನೆ ಹೋಗುತ್ತಿದ್ದಾಗ, ಹೊಂಚು ಹಾಕುತ್ತಿದ್ದ ಮಂಗೋಲರು ಅವನನ್ನು ಕೊಂದರು (1286). ಎಂಬತ್ತು ವರ್ಷದ ಬಲ್ಬನ್ ಈ ಅನೀರಿಕ್ಷಿತ ವಿಪತ್ತನ್ನು ಎದುರಿಸಲಾರದವನಾದ.

ದೆಹಲಿ ಸುಲ್ತಾನರ ಸಂತತಿಯಲ್ಲಿ ಬಲ್ಬನ್ ಚಿರಸ್ಥಾಯಿಯಾದ ಸ್ಥಾನಗಳಿಸಿದ್ದಾನೆ. ಶೈಶವಾವಸ್ಥೆಯಲ್ಲಿದ್ದ ಮುಸಲ್ಮಾನ್ ರಾಜ್ಯವನ್ನು ಮಂಗೋಲರ ಧಾಳಿಯಿಂದ ರಕ್ಷಿಸಿ, ಸುಸಜ್ಜಿತವಾದ ಸೈನ್ಯವನ್ನು ನಿರ್ಮಿಸಿ, ದೇಶದಲ್ಲಿ ಸಾಮಾಜಿಕ ಶಾಂತಿ ನೆಲೆಸುವಂತೆ ಮಾಡಿ ಮುಂದೆ ಅಲ್ಲಾವುದ್ದೀನ್‌ಖಿಲ್ಜಿ ರೂಪಿಸಿದ ಆಡಳಿತ ಸುಧಾರಣೆಗಳಿಗೆ ಅವನು ಮಾರ್ಗದರ್ಶಕನಾದ. ಭಾರತದಲ್ಲಿ ಮುಸಲ್ಮಾನರ ಪ್ರಭುತ್ವಕ್ಕೆ ಪ್ರತಿಷ್ಠೆ ತಂದುಕೊಟ್ಟವರಲ್ಲಿ ಬಲ್ಬನ್ ಮೊದಲಿಗ.

ಬಲ್ಬನನ ಎರಡನೆಯ ಮಗ ಬುಘ್ರಾಖಾನನ ಮಗ ಕೈಕುಬಾದನನ್ನು ಆಸ್ಥಾನಿಕರು ಸುಲ್ತಾನನ್ನಾಗಿ ಮಾಡಿದರು. ವಿಷಯಾಸಕ್ತನಾಗಿದ್ದ ಈತ ಅಧಿಕಾರ ಕಳೆದುಕೊಂಡ. ಇವನ ಮೂರು ವರ್ಷದ ಮಗನನ್ನು ಸುಲ್ತಾನನ್ನಾಗಿ ಘೋಷಿಸಿದರು. ಈ ವ್ಯವಸ್ಥೆ ಬಹುಕಾಲ ಉಳಿಯಲಿಲ್ಲ. ಆಸ್ಥಾನಿಕರಲ್ಲಿ ಒಳಜಗಳ ಪ್ರಾರಂಭವಾಯಿತು. ಸುಲ್ತಾನನ ಹೆಸರಿನಲ್ಲಿ ಅವರು ತಮ್ಮ ಹಗೆಗಳನ್ನು ನಿರ್ಮೂಲ ಮಾಡಲು ಪ್ರಯತ್ನಿಸಿದರು. ಇದು ಅಶಾಂತಿಗೆ ಎಡೆ ಕೊಟ್ಟಿತು. ಬಾಲ ಸುಲ್ತಾನನನ್ನು ಖಿಲ್ಜಿ ವಂಶದ ಸ್ಥಾಪಕನಾದ ಮಾಲಿಕ್ ಫಿರೂಜ್ ಅಪಹರಿಸಿ, ಅವನ ಹೆಸರಿನಲ್ಲಿ ಮೂರು ತಿಂಗಳು ರಾಜ್ಯಭಾರ ಮಾಡಿದ. ಈ ಹುಡುಗನ ಅಂತ್ಯ ಹೇಗಾಯಿತೆಂಬುದು ತಿಳಿಯದು. ಫಿರೂಜ್ 1290ರಲ್ಲಿ ಸುಲ್ತಾನ್ ಜಲಾಲುದ್ದೀನ್ ಖಿಲ್ಜಿಯೆಂದು ಘೋಷಿಸಿಕೊಂಡು ಖಿಲ್ಜಿ ವಂಶದ ಆಳ್ವಿಕೆಯನ್ನು ಪ್ರಾರಂಭಿಸಿದ. ಇದರೊಂದಿಗೆ ಗುಲಾಮಿ ಸಂತತಿಯ ಆಳ್ವಿಕೆ ಕೊನೆಗೊಂಡಿತು.

ಗುಲಾಮೀ ಸಂತತಿಯವರು ತಮ್ಮ ಉತ್ತರಾಧಿಕಾರಿಗಳ ಆಯ್ಕೆಯ ವಿಚಾರದಲ್ಲಿ ಸೂಕ್ತ ನಿಯಮಗಳನ್ನು ರೂಪಿಸುವಲ್ಲಿ ವಿಫಲರಾದರು. ಇದರಿಂದಾಗಿ ಪದೇ ಪದೇ ಸಿಂಹಾಸನಕ್ಕಾಗಿ ಕಾದಾಟ ನಡೆಯುತ್ತಿತ್ತು. ಸುಲ್ತಾನರು ದೇಶದ ರಕ್ಷಣೆ ಹಗೂ ಆಡಳಿತಕ್ಕೆ ಗಮನ ಕೊಡುವುದರ ಬದಲು ತಮ್ಮ ಸ್ಥಾನ ಭದ್ರತೆಗೆ ಹೆಚ್ಚಿನ ಗಮನ ಕೊಡಬೇಕಾಯಿತು. ಇದರಿಂದ ಆಡಳಿತದಲ್ಲಿ ದಕ್ಷತೆ ಇಲ್ಲವಾಯಿತು. ಆಸ್ಥಾನಿಕರು ಮತ್ತು ಶ್ರೀಮಂತ ವರ್ಗದವರಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ಪೈಪೋಟಿ, ಮಂಗೋಲರ ಧಾಳಿಗಳು, ಹಿಂದೂ ರಾಜರು ತಮ್ಮ ಸ್ವಾತಂತ್ರ್ಯವನ್ನು ಗಳಿಸಲು ನಡೆಸುತ್ತಿದ್ದ ಪ್ರಯತ್ನ, ತುರ್ಕಿ ಜನಾಂಗದವರ ಬಗ್ಗೆ ತೋರುತ್ತಿದ್ದ ಪಕ್ಷಪಾತ ಇವು ಅವರ ರಾಜ್ಯ ಕ್ಷೀಣಿಸಲು ಕಾರಣ.

ಗುಲಾಮೀ ಸಂತತಿಯವರು ಭಾರತದಲ್ಲಿ ಮತೀಯ ಪ್ರಭುತ್ವವನ್ನು ಸ್ಥಾಪಿಸಿದರು. ಅವರ ರಾಜ್ಯಾಂಗ ಕುರಾನಿನ ನಿಯಮಗಳ ಮೇಲೆ ರೂಪುಗೊಂಡಿತ್ತು. ಸುಲ್ತಾನನನ್ನು ದೇವರ ಪ್ರತಿನಿಧಿ ಎಂದು ಪರಿಗಣಿಸಲಾಗಿತ್ತು. ಮೌಲ್ವಿಗಳು ನಿರೂಪಿಸಿದ ಇಸ್ಲಾಮಿನ ವಿಧಿಗಳಿಗೆ ಅವನು ಬಾಧ್ಯನಾಗಿದ್ದ. ಆದರೆ ಈ ಕಟ್ಟು ಪಾಡಿಗೆ ಒಪ್ಪಲು ಬಲ್ಬನ್ ನಿರಾಕರಿಸಿದ. ಅವನೇ ಇಸ್ಲಾಂ ರಾಜ್ಯಾಂಗ ವಿಧಿಗಳನ್ನು ಕಡೆಗಣಿಸಿದ್ದಲ್ಲದೆ, ರಾಜತ್ವ ದೇವರ ಕೊಡುಗೆ ಮತ್ತು ರಾಜ ಅಸದೃಶ ಪುರುಷ ಎಂದು ಹೇಳಿದ. ಅಷ್ಟೇ ಅಲ್ಲ, ಮಹಮ್ಮದನ ಅನಂತರದ ಮುಖ್ಯ ಸ್ಥಾನರಾಜನದೆಂದು ಹೇಳಿಕೊಂಡ.

ಗುಲಾಮೀ ಅರಸರ ಪ್ರಭುತ್ವಕ್ಕೆ ಸೈನ್ಯಶಕ್ತಿ ಅಡಿಪಾಯವಾಗಿತ್ತು. ಅಂತೆಯೇ ಸೈನ್ಯವ್ಯವಸ್ಥೆ ಅನಿವಾರ್ಯವಾಯಿತು. ಆದರೆ ಹಿಂದೂ ರಾಜರಂತೆ ಮಂತ್ರಿಮಂಡಲವನ್ನು ಸ್ಥಾಪಿಸದಿದ್ದುದು ಸುಲ್ತಾನರ ನಿರಕುಂಶ ಪ್ರಭುತ್ವಕ್ಕೆ ಎಡೆ ಮಾಡಿಕೊಟ್ಟಿತು.

ಅವರ ರಾಜ್ಯದಲ್ಲಿ ಹಿಂದೂಗಳು ಎರಡನೆಯ ದರ್ಜೆಯ ಪ್ರಜೆತನದಲ್ಲಿ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಹಿಂದೂ – ಮುಸ್ಲಿಂ ಸಾಮರಸ್ಯ ಇಲ್ಲವಾಯಿತು. ಆರ್ಥಿಕ ಸ್ಥಿತಿ ಕ್ಷೀಣಿಸತೊಡಗಿತು. ಕೃಷಿ, ಕೈಗಾರಿಕೆ ಮತ್ತು ವ್ಯಾಪರಕ್ಕೆ ಸರ್ಕಾರದ ಪ್ರೋತ್ಸಾಹ ಅವಶ್ಯಕವೆಂದು ಸುಲ್ತಾನರು ಪರಿಗಣಿಸಲಿಲ್ಲ. ಶ್ರೀಮಂತ ಹಾಗೂ ಬಡಜನರ ಅಂತರ ದಿನೇ ದಿನೇ ಬೆಳೆಯುತ್ತಿತ್ತು. ದೇಶದಲ್ಲಿ ಆಗಾಗ್ಗೆ ಕ್ಷಾಮಗಳು ಸಂಭವಿಸುತ್ತಿದ್ದವು.

ವಾಸ್ತುಶಿಲ್ಪ ಕ್ಷೇತ್ರದಲ್ಲಿ ಇವರು ಹೊಸ ಶೈಲಿಯನ್ನು ರೂಪಿಸಿದಂತೆ ತೊರುವುದಿಲ್ಲ. ಇವರು ಹಿಂದೂ ದೇವಾಲಯಗಳನ್ನು ನಾಶ ಮಾಡಿ ಅವುಗಳ ಸಾಮಗ್ರಿಗಳಿಂದ ಮಸೀದಿಗಳನ್ನು ಕಟ್ಟಿಸಿದರು. ಅವರ ಕಟ್ಟಡಗಳು ಹಿಂದೂ ಶೈಲಿಯನ್ನು ಹೋಲುತ್ತವೆ ಎಂದು ಹಾವೆಲ್ ಹೇಳಿದ್ದಾರೆ. ಆ ಕಾಲದ ಪ್ರಸಿದ್ಧ ಸ್ಮಾರಕಗಳೆಂದರೆ ಕುವ್ವತ್–ವುಲ್–ಇಸ್ಲಾಂ ಮಸೀದಿ ಮತ್ತು ಕುತುಬ್ ಮಿನಾರ್, ಕುವ್ವತ್–ವುಲ್–ಇಸ್ಲಾಂ ಅನ್ನು ಕುತುಬ್–ಉದ್–ದೀನ್ ಕಟ್ಟಿಸಿದ; ಅದರ ಅಂಗಣವನ್ನು ಇಲ್ತುಮಿಷ್ ವಿಸ್ತರಿಸಿದ. ಅದರ ಹೊರ ಆವರಣದಲ್ಲಿ ಕುತುಬ್ ಮಿನಾರ್ ಇದೆ. (ಎಚ್.ವಿ.ಎಸ್.ಎಂ.)

**ನಾಣ್ಯಗಳು** : ಗುಲಾಮೀ ಸಂತತಿಯ ಅರಸರ ನಾಣ್ಯಗಳು ಬಹುಪಾಲು ಚಿನ್ನ ಬೆಳ್ಳಿಗಳ ಟಂಕಗಳು, ಮಿಶ್ರಲೋಹದ ಜಿಕಾಲುಗಳು ಅಥವಾ ದೆಹಲಿವಾಲಾಗಳು ಮತ್ತು ಕಡಿಮೆ ಮೌಲ್ಯದ ತಾಮ್ರದ ನಾಣ್ಯಗಳು. ಈ ನಾಣ್ಯಗಳ ಮುಂಬದಿಯಲ್ಲಿ ಸಾಮಾನ್ಯವಾಗಿ ಇಸ್ಲಾಂ ಮತ ಸಂದೇಶಗಳೂ ಹಿಂಬದಿಯಲ್ಲಿ ಸುಲ್ತಾನನ ಹೆಸರು, ಮುದ್ರಿತ ಸ್ಥಳ, ಇಸವಿ ಮತ್ತು ಬೆಳ್ಳಿ ಟಂಕಗಳು ಒಂದೇ ತೂಕದವಾಗಿರುತ್ತವೆ. ಸುಮಾರು 172 ಗ್ರೇನ್ ತೂಗುತ್ತವೆ. 13ನೆಯ ಶತಮಾನದಲ್ಲಿ ಪ್ರತಿಯೊಂದು ಟಂಕವೂ 96 ರತಿಗಳಿಗೆ ಸಮನಾಗಿತ್ತು. ಒಂದು ರತಿ 1.8 ಗ್ರೇನ್ ತೂಗುತ್ತಿತ್ತು. 2 ರತಿಗಳು ಸೇರಿದರೆ ಒಂದು ಜಿಕಾಲು ಮತ್ತು 48 ಜಿಕಾಲುಗಳು ಸೇರಿದರೆ ಒಂದು ಟಂಕ ಆಗುತ್ತಿದ್ದವು. ಜಿಕಾಲುಗಳನ್ನು ಚಿನ್ನ ಅಥವಾ ಬೆಳ್ಳಿಯ ಅಂಶವಿರುವ ಮಿಶ್ರಲೋಹದಿಂದ ತಯಾರಿಸುತ್ತಿದ್ದರು. ಚಿನ್ನ ಮತ್ತು ಬೆಳ್ಳಿಗಳ ಅನುಪಾತ 1:10; ಬೆಳ್ಳಿ ಮತ್ತು ತಾಮ್ರಗಳ ಅನುಪಾತ 1:80.

**ಚಿನ್ನದ ನಾಣ್ಯಗಳು** : ಈ ಸಂತತಿಯ ಚಿನ್ನದ ನಾಣ್ಯಗಳು ಬಹಳ ವಿರಳ. ಚಿನ್ನದ ಟಂಕಗಳು ಸುಮಾರು 170 ಗ್ರೇನ್ ತೂಗುತ್ತವೆ. ಇವು ಆಕಾರದಲ್ಲಿ ಗುಂಡಾಗಿದ್ದು ಎರಡು ಪ್ರರೂಪಗಳಲ್ಲಿ ದೊರೆತಿವೆ. 1. ಅಶ್ವಾರೋಹಿ ಪ್ರರೂಪ ಮತ್ತು 2. ಖಲೀಫ ಪ್ರರೂಪ.

**ಅಶ್ವಾರೋಹಿ ಪ್ರರೂಪ** : ಈ ಪ್ರರೂಪಿ ನಾಣ್ಯದ ಮುಂಬದಿಯ ವೃತ್ತದೊಳಗೆ ಕೈಯಲ್ಲಿ ದಂಡ ಅಥವಾ ಗದೆಯನ್ನು ಹಿಡಿದಿರುವ ಅಶ್ವಾರೋಹಿಯ ಚಿತ್ರವೂ ಹಿಂಬದಿಯಲ್ಲಿ ಸುಲ್ತಾನನ ಹೆಸರು, ಮುದ್ರಿಸಿದ ಸ್ಥಳ ಇಸವಿ ಮತ್ತು ಇತರ ವಿವರಗಳೂ ಇವೆ.

**ಖಲೀಫ ಪ್ರರೂಪ :** ಈ ಪ್ರರೂಪಿ ನಾಣ್ಯದ ಮುಂಬದಿಯಲ್ಲಿ ಅರಬ್ಬೀ ಲಿಪಿಯಲ್ಲಿ ಖಲೀಫನ ಹೆಸರೂ ಹಿಂಬದಿಯಲ್ಲಿ ಅಶ್ವಾರೋಹಿ ಪ್ರರೂಪಿ ನಾಣ್ಯದಲ್ಲಿರುವಂತೆಯೇ ಸುಲ್ತಾನನ ಹೆಸರು ಮತ್ತು ಇತರ ವಿವರಗಳೂ ಇವೆ. ಇಲ್ತುಮಿಷ್, ಅಲ್ಲಾವುದ್ದೀನ್, ಮಸೂದ್, ಷಹ, ನಾಸಿರುದ್ದೀನ್ ಮಹಮ್ಮದ್ ಮತ್ತು ಘಿಯಾಸುದ್ದೀನ್ ಬಲ್ಬನ್ ಇವರ ಸುವರ್ಣ ನಾಣ್ಯಗಳು ಮಾತ್ರ ಇದುವರೆಗೆ ದೊರೆತಿವೆ. ಚಿನ್ನದ ಟಂಕಗಳಲ್ಲದೆ ಇದೇ ಲೋಹದ ಮತ್ತು ಇದೇ ಬಗೆಯ ಬೇರೆಬೇರೆ ಮೌಲ್ಯಗಳ ನಾಣ್ಯಗಳ ಚಲಾವಣೆಯಲ್ಲಿದ್ದುವು.

ಇಲ್ತುಮಿಷ್ ಮತ್ತು ಬಲ್ಬನರ ನಾಣ್ಯಗಳು

**ಬೆಳ್ಳಿಯ ನಾಣ್ಯಗಳು :** ಚಿನ್ನದ ಟಂಕಗಳಂತೆಯೇ ಬೆಳ್ಳಿಯ ಟಂಕಗಳೂ ಗಾತ್ರ ಮತ್ತು ತೂಕಗಳಲ್ಲಿ ಸಮನಾಗಿದ್ದುವು; ಇವು ಚಿನ್ನದ ನಾಣ್ಯಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ದೊರೆತಿವೆ. ಇಲ್ತುಮಿಷನ ಬೆಳ್ಳಿಯ ಟಂಕಗಳು ಮಾತ್ರ ಖಲೀಫ ಮತ್ತು ಅಶ್ವಾರೋಹಿ ಪ್ರರೂಪಗಳಲ್ಲಿ ಮಾತ್ರ ದೊರೆತಿವೆ. ಉಳಿದ ಸುಲ್ತಾನರ ಬೆಳ್ಳಿಯ ಟಂಕಗಳು ಖಲೀಫ ಪ್ರರೂಪದಲ್ಲಿ ಮಾತ್ರ ದೊರೆತಿವೆ. ಕುತುಬ್-ಉದ್-ದೀನನ ಬೆಳ್ಳಿಯ ನಾಣ್ಯಗಳು ಇದುವರೆಗೆ ದೊರೆತಿಲ್ಲ.

**ಮಿಶ್ರಲೋಹದ ನಾಣ್ಯಗಳು :** ಈ ನಾಣ್ಯಗಳನ್ನು ಚಿನ್ನ ಅಥವಾ ಬೆಳ್ಳಿಯ ಅಂಶವಿರುವ ಮಿಶ್ರಲೋಹದಿಂದ ಮಾಡಲಾಗಿದೆ. ಆ ಕಾಲದ ಜಿಕಾಲುಗಳು ಈ ಲೋಹದವು. ಇವುಗಳ ತೂಕ 45-55 ಗ್ರೇನ್ ಇವನ್ನು ಮುಸ್ಲಿಂ ದೊರೆಗಳು ಮುದ್ರಿಸಿರುವರಾದರೂ ಇವುಗಳಲ್ಲಿ ಭಾರತೀಯ ನಾಣ್ಯಗಳ ಪರಂಪರೆಯನ್ನುಳಿಸಿಕೊಂಡು ಬಂದಿರುವುದು ವಿಶೇಷ ಸಂಗತಿ. ಏಕೆಂದರೆ ಇವು ಅತ್ಯಂತ ಹೆಚ್ಚಾಗಿ ಚಲಾವಣೆಯಲ್ಲಿದ್ದ ನಾಣ್ಯಗಳು ಸಾಮಾನ್ಯವಾಗಿ ಇವುಗಳ ಮುಂಬದಿಯಲ್ಲಿ ಶಿವನ ವಾಹನವಾದ ನಂದಿಯ ಚಿತ್ರವೂ ದೇವನಾಗರೀ ಲಿಪಿಯಲ್ಲಿ ಸುಲ್ತಾನನ ಹೆಸರೂ ಇವೆ. ಹಿಂಬದಿಯಲ್ಲಿ ಚೌಹಾನ್ ಅಶ್ವಾರೋಹಿಯ ಚಿತ್ರವೂ ಸುಲ್ತಾನನ ಬಿರುದುಗಳೂ (ಉದಾ: ಶ್ರೀ ಹಮೀರ, ಶ್ರೀಪೃಥ್ವೀರಾಜದೇವ) ದೇವನಾಗರೀ ಲಿಪಿಯಲ್ಲಿವೆ. ಇವುಗಳಲ್ಲಿ ಇದೇ ಬಗೆಯ ಆದರೆ ಅರಬ್ಬೀ ಲಿಪಿಯಲ್ಲಿ ವಿವರಗಳನ್ನು ಕೊಟ್ಟಿರುವ ನಾಣ್ಯಗಳೂ ಉಂಟು.

**ತಾಮ್ರದ ನಾಣ್ಯಗಳು :** ಇವು ಕಡಿಮೆ ಆಕಾರ ಮತ್ತು ಮೌಲ್ಯಗಳ ನಾಣ್ಯಗಳು. ಇವುಗಳ ತೂಕ 12-70 ಗ್ರೇನ್‍ಗಳು. ಇವುಗಳಲ್ಲಿ ಬಹು ಸಂಖ್ಯೆಯ ನಾಣ್ಯಗಳ ಮೇಲೆ ಎರಡೂ ಬದಿಗಳಲ್ಲಿ ಅರಬ್ಬೀ ಲಿಪಿಯಲ್ಲಿ ವಿವರಗಳಿವೆಯಾದರೂ ದೇವನಾಗರೀ ಲಿಪಿಯಲ್ಲಿ ವಿವರಗಳುಳ್ಳ ಮತ್ತು ಮುಂಬದಿಯಲ್ಲಿ ಗೂಳಿಯ ಚಿತ್ರವಿರುವ ನಾಣ್ಯಗಳೂ ಉಂಟು. (ಎಂ.ಎಸ್.ಕೆ.ಎಂ.)

**ಗುಲಿಸ್ತಾನ್ ಒಪ್ಪಂದ :** ಈಗಿನ ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತದಲ್ಲಿ, ಕ್ವೆಟ್ಟದ ವಾಯವ್ಯಕ್ಕೆ 65 ಕಿಮೀ ದೂರದಲ್ಲಿರುವ ಗುಲಿಸ್ತಾನ ಎಂಬ ಗ್ರಾಮದ ಬಳಿ ರಷ್ಯ ಮತ್ತು ಪರ್ಷಿಯಗಳು 1813ರ ಅಕ್ಟೋಬರ್ 12ರಂದು ಮಾಡಿಕೊಂಡ ಒಪ್ಪಂದ. ಸು.12 ವರ್ಷಗಳ ಕಾಲ ಸತತವಾಗಿ ಯುದ್ಧಮಾಡಿ ಮೊದಮೊದಲು ಒಂದೆರಡು ಕಡೆ ಜಯ ಗಳಿಸಿದರೂ ಆಮೇಲೆ ಸೋಲಿನ ಪರಂಪರೆಯನ್ನೇ ಅನುಭವಿಸಬೇಕಾಗಿ ಬಂದ ಪರ್ಷಿಯ ರಷ್ಯದೊಡನೆ ಈ ಶಾಂತಿಒಪ್ಪಂದವನ್ನು ಮಾಡಿಕೊಂಡಿತು. ಈ ಒಪ್ಪಂದದ ತೀರ್ಮಾನಗಳಿವು: 1. ಡೆರ್ಬೆಂಟ್, ಬಾಕೂ, ಷಿರ್ವಾನ್, ಷಾಕಿ, ಕಾರಾಬಾಗ್ ಮತ್ತು ತಾಲಿಷ್‍ನ ಕೆಲವು ಭಾಗಗಳನ್ನು ರಷ್ಯಕ್ಕೆ ಪರ್ಷಿಯ ವಹಿಸಿಕೊಡಬೇಕು. 2. ಜಾರ್ಜಿಯ, ದಾಗೆಸ್ತಾನ್, ಮಿಂಗ್ರೇಲಿಯ, ಇಮರಿಷಿಯ, ಅಬ್ಖೇಷಿಯ ಇವುಗಳ ಮೇಲಿನ ಸಾರ್ವಭೌಮಾಧಿಕಾರವನ್ನು ರಷ್ಯಕ್ಕೆ ಪರ್ಷಿಯ ವರ್ಗಾಯಿಸಿ ಕೊಡಬೇಕು. 3. ಕ್ಯಾಸ್ಪಿಯನ್ ಸಮುದ್ರದಲ್ಲಿ ಪರ್ಷಿಯ ತನ್ನ ನೌಕಾಬಲವನ್ನು ಇಡಕೂಡದು. 4. ಇದಕ್ಕೆ ಪ್ರತಿಫಲವಾಗಿ ರಷ್ಯ ಪರ್ಷಿಯದ ದೊರೆ ಫತೆ ಅಲಿ ಷಹನ ಉತ್ತರಾಧಿಕಾರಿ ಅಬ್ಬಾಸ್ ಮಿರ್ಜಾನಿಗೆ ಪರ್ಷಿಯ ದೇಶದ ಗಾದಿಯನ್ನು ದೊರಕಿಸಿಕೊಡಲು ಸಹಾಯ ಮಾಡತಕ್ಕದ್ದು.

ಮಧ್ಯಪ್ರಾಚ್ಯದಲ್ಲಿ ಪ್ರಬಲ ಶಕ್ತಿಯಾಗಿದ್ದ ಪರ್ಷಿಯದ ರಾಜಕೀಯ ಚಿತ್ರವನ್ನೇ ಈ ಒಪ್ಪಂದ ಬದಲಾಯಿಸಿತು. ಮೇಲುನೋಟಕ್ಕೆ ಪ್ರಬಲವಾಗಿ ಕಂಡರೂ ರಷ್ಯಕ್ಕೆ ನೆಪೋಲಿಯನನ ದಂಡಯಾತ್ರೆಗಳ ಭಯ ತಪ್ಪಿರಲಿಲ್ಲ. ಇದಕ್ಕಾಗಿಯೇ ಅದು ಇಂಗ್ಲೆಂಡಿನೊಡನೆ 1812ರಲ್ಲಿ ಒಪ್ಪಂದವನ್ನು ಮಾಡಿಕೊಂಡಿತ್ತು. ದಕ್ಷಿಣದ ಪ್ರಬಲ ರಾಷ್ಟ್ರವಾದ ಪರ್ಷಿಯದೊಡನೆ ಹೇಗಾದರೂ ಶಾಂತಿ ಒಪ್ಪಂದವ ಮಾಡಿಕೊಳ್ಳಬೇಕೆಂಬ ಅದರ ಉದ್ದೇಶ ಗುಲಿಸ್ತಾನ್ ಒಪ್ಪಂದದಿಂದ ಫಲಿಸಿತು. ಆಗ ಅದು ತನ್ನ ಗಮನವನ್ನು ಪಶ್ಚಿಮದತ್ತ ಹರಿಸಲು ಅನುಕೂಲವಾಯಿತು. ಮೊದಲೇ ಉತ್ತರಾಧಿಕಾರಕ್ಕಾಗಿ ಅಂತಃಕಲಹದಲ್ಲಿ ತೊಡಗಿದ್ದ ಅಬ್ಬಾಸ್ ಮಿರ್ಜಾ ಮತ್ತು ಸೋದರರು ತಮ್ಮ ರಾಷ್ಟ್ರದ ಹಿತಾಸಕ್ತಿಯನ್ನು ಕಡೆಗಣಿಸಿದರು. ಅಬ್ಬಾಸ್ ಮಿರ್ಜಾ ಪ್ರಬಲವಾಗಿ ರಷ್ಯದೊಡನೆ ಮಾಡಿಕೊಂಡ ಒಪ್ಪಂದ ಪರ್ಷಿಯಕ್ಕೆ ಮಾರಕವಾಯಿತು. ಕಳೆದುಕೊಂಡಿದ್ದ ಭಾಗಗಳನ್ನು ಮತ್ತೆ ಬ್ರಿಟಿಷರ ಸಹಾಯದಿಂದ ಗಳಿಸಿಕೊಳ್ಳುವೆನೆಂಬ ಅವನ ಆಶೆ ಹಗಲು ಗನಸಾಯಿತು. ಅಂತೂ ಗುಲಿಸ್ತಾನ್ ಒಪ್ಪಂದ ಮುಂದೆ ಹತ್ತು ಹನ್ನೆರಡು ವರ್ಷಗಳ ಶಾಂತಿಗೆ ಕಾರಣವಾಯಿತು. 1826ರ ತನಕ ಪರ್ಷಿಯ - ರಷ್ಯಗಳ ಮಧ್ಯೆ ಯುದ್ಧವಾಗದಿದ್ದರೂ 1814ರಲ್ಲಿ ಬ್ರಿಟಿಷರು ಟೆಹರಾನ್ ಒಪ್ಪಂದ ಮಾಡಿಕೊಂಡು ಮತ್ತೆ ಪರ್ಷಿಯದ ಸ್ನೇಹಿತರಾದರು. ಇದರಿಂದ ಪರ್ಷಿಯ ರಷ್ಯದೊಡನೆ ತನ್ನ ರಾಜಕೀಯ ಸಂಬಂಧ ಕಡಿದುಕೊಳ್ಳಬೇಕಾಯಿತು. ಮತ್ತಾವ ಐರೋಪ್ಯ ರಾಷ್ಟ್ರವೂ ಬ್ರಿಟಿಷರ ಅನುಮತಿಯಿಲ್ಲದೆ ಪರ್ಷಿಯವನ್ನು ಪ್ರವೇಶಿಸ ದಂತಾಯಿತು. ಪೂರ್ವದ ಆಫ್ಘಾನಿಸ್ತಾನದೊಡನೆ ಪರ್ಷಿಯ ಆಗಾಗ್ಗೆ ಸಣ್ಣ ಪುಟ್ಟ ಕದನಗಳನ್ನು ಮಾಡುವಲ್ಲಿ ತನ್ನ ಗಮನವನ್ನು ಕೇಂದ್ರೀಕರಿಸಿತು. (ಸಿ.ಜಿ.ಪಿ.)

**ಗುಲ್ಜಾರಿಲಾಲ್ ನಂದಾ :** 1898-1998. ಭಾರತದ ಒಬ್ಬ ಹಿರಿಯ ರಾಜಕಾರಣಿ, ಕಾರ್ಮಿಕ ಸಂಘಟಕ, ಸಮಾಜ ಸುಧಾರಕ. ಕೇಂದ್ರ ಸರ್ಕಾರದ ಮಾಜಿ ಮಂತ್ರಿ. ಎರಡು ಸಾರಿ ಇವರು ಹಂಗಾಮಿ ಪ್ರಧಾನಮಂತ್ರಿಯಾಗಿದ್ದರು. 1898ರ ಜುಲೈ 4ರಂದು ಪಂಜಾಬಿನ ಸಿಯಾಲ್‍ಕೋಟ್‍ನಲ್ಲಿ ಜನಿಸಿದ ಇವರು ಲಾಹೋರಿನ ಫೋರ್ಮನ್ ಕ್ರಿಶ್ಚನ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಎಂ.ಎ., ಎಲ್.ಎಲ್.ಬಿ. ಪದವೀಧರರಾದರು. ಆಗ್ರ ಹಾಗೂ ಅಲಹಾಬಾದ್‍ಗಳಲ್ಲೂ ವ್ಯಾಸಂಗ ಮಾಡಿದರು. 1924ರಲ್ಲಿ ಗಾಂಧೀಜಿಯವರ ಅನುಯಾಯಿಯಾಗಿ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದರು. 1921ರಿಂದ 1946ರವರೆಗೆ ಮುಂಬಯಿಯ ನ್ಯಾಷನಲ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಇವರನ್ನು ಸರ್ಕಾರ 1932ರಲ್ಲೂ 1942-44 ರಲ್ಲೂ ಬಂಧನದಲ್ಲಿಟ್ಟಿತ್ತು. 1945 ರ ಡಿಸೆಂಬರ್‍ನಲ್ಲಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯನ್ನು ರೂಪಿಸಲು



ರಚಿತವಾಗಿದ್ದ ಸಮಿತಿಯಲ್ಲೂ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಆರ್ಥಿಕ ಕಾರ್ಯಕ್ರಮ ಸಮಿತಿಯಲ್ಲೂ ಇವರು ಸದಸ್ಯರಾಗಿದ್ದರು. ಸಮಾಜವಾದಿ ಕ್ರಿಯೆಗಾಗಿ ಕಾಂಗ್ರೆಸ್ ವೇದಿಕೆ ಎಂಬುದರ ಪ್ರವರ್ತಕರು ಇವರು (1962).

ನಂದಾ ಅವರು ಕಾರ್ಮಿಕ ಸಂಘಟನೆಯಲ್ಲಿ ಮೊದಲಿನಿಂದಲೂ ಆಸಕ್ತಿ ವಹಿಸುತ್ತಿದ್ದರು. 1922 ರಿಂದ 1946ರವರೆಗೆ ಇವರು ಅಹಮದಾಬಾದ್ ಜವಳಿ ಕಾರ್ಮಿಕ ಸಂಘಕ್ಕೂ ಹಿಂದೂಸ್ತಾನ್ ಮಜ್ದೂರ್ ಸೇವಕ್ ಸಂಘಕ್ಕೂ ಕಾರ್ಯದರ್ಶಿಯಾಗಿದ್ದರು. 1947ರ ಮೇ ತಿಂಗಳಲ್ಲಿ ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಸಮ್ಮೇಳನವನ್ನು ವ್ಯವಸ್ಥೆಗೊಳಿಸಲು ಕಾರಣರಾದ ಪ್ರಮುಖರಲ್ಲಿ ಇವರೊಬ್ಬರು. ಇವರು ಮಂತ್ರಿಯಾಗಿದ್ದಾಗ ಕಾರ್ಮಿಕಕ್ಷೇಮದ ಅನೇಕ ವಿಧೇಯಕಗಳು ಮಂಡಿತವಾದುವು. ಇವರು 1937–39ರಲ್ಲಿ ಮುಂಬಯಿ ಪ್ರಾಂತದ ಸಂಸದೀಯ ಕಾರ್ಯದರ್ಶಿಯಾಗಿದ್ದರು; 1948–50ರಲ್ಲಿ ಮುಂಬಯಿಯ ಕಾರ್ಮಿಕ ಹಾಗೂ ವಸತಿ ಮಂತ್ರಿಯಾಗಿದ್ದರು; 1950–51ರಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು. ಇವರು ಮರುವರ್ಷ ಯೋಜನಾ ಮಂತ್ರಿಯಾದರು. 1952ರಿಂದ 1957ರವರೆಗೆ ಯೋಜನೆ, ನೀರಾವರಿ ಮತ್ತು ವಿದ್ಯುತ್ ಮಂತ್ರಿಯಾಗಿದ್ದರು. ಇವರು ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ಇತರ ಖಾತೆಗಳು ಇವು: ಕಾರ್ಮಿಕ, ಉದ್ಯೋಗ ಮತ್ತು ಯೋಜನೆ (1957–63), ಗೃಹ (1963–66) ಮತ್ತು ರೈಲ್ವೆ (1970–71).

1964ರಲ್ಲಿ ಪ್ರಧಾನಿ ಜವಾಹರಲಾಲ ನೆಹರೂ ನಿಧನ ಹೊಂದಿದಾಗ (ಮೇ27), ಲಾಲ್ ಬಹಾದೂರ್ ಶಾಸ್ತ್ರಿ ಅವರು ಪ್ರಧಾನಿ ಆಗುವವರೆಗೂ (ಜೂನ್ 11) 1966ರಲ್ಲಿ ಲಾಲ್ ಬಹಾದೂರ್ ಶಾಸ್ತ್ರಿ ತೀರಿಕೊಂಡಾಗ (ಜನವರಿ 11) ಇಂದಿರಾಗಾಂಧಿಯವರು ಪ್ರಧಾನಿಯಾಗುವ ತನಕವೂ (ಜನವರಿ 24) ಇವರು ಹಂಗಾಮಿ ಪ್ರಧಾನಿಯಾಗಿದ್ದರು. ಆ ಸಮಯದಲ್ಲಿ ಇವರು ಸಂಪುಟದ ಹಿರಿಯ ಸದಸ್ಯರಾಗಿದ್ದರು. ಇವರು ಕಸ್ತೂರಿ ಬಾ ಸ್ಮಾರಕ ಟ್ರಸ್ಟಿನ ಟ್ರಸ್ಟಿಯಾಗಿ ದುಡಿದರಲ್ಲದೆ ಭಾರತ ಸೇವಕ ಸಮಾಜದ ಅಧ್ಯಕ್ಷರಾಗಿದ್ದರು. ಭಾರತ ಸಾಧು ಸಮಾಜದ ಸಲಹಾ ಸಮಿತಿಯ ಸದಸ್ಯರಾಗಿದ್ದರು. 1971ರ ಸೆಪ್ಟೆಂಬರ್ 27ರಿಂದ ಸಿಟಿಜನ್ಸ್ ಸೆಂಟ್ರಲ್ ಕೌನ್ಸಿಲಿನ ಉಪಾಧ್ಯಕ್ಷರಾಗಿದ್ದರು. 1977ರಲ್ಲಿ ಇವರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಇವರಿಗೆ 1997ರಲ್ಲಿ ಭಾರತ ರತ್ನ ಪ್ರಶಸ್ತಿ ಬಂದಿತು.

ಇವರದು ಸರಳಸ್ವಭಾವ, ನೇರ ವಿಚಾರ ಹಾಗೂ ದಿಟ್ಟ ವ್ಯಕ್ತಿತ್ವ. ಇವರು ಕೇಂದ್ರದಲ್ಲಿ ಗೃಹಸಚಿವರಾಗಿದ್ದಾಗ ಎರಡು ವರ್ಷಗಳೊಳಗೆ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವ ಪಣತೊಟ್ಟಿದ್ದರು. ಇದಕ್ಕಾಗಿ ಅನೇಕ ಸದಾಚಾರ ಸಮಿತಿಗಳನ್ನೂ ಜಾಗೃತ ಮಂಡಲಿಗಳನ್ನೂ ರಚಿಸಿ ತೀವ್ರಕ್ರಮಗಳನ್ನು ಕೈಗೊಂಡಿದ್ದರು. ಗುಲ್ಜಾರಿಲಾಲ್ ನಂದಾ 1998ರಲ್ಲಿ ನಿಧನ ಹೊಂದಿದರು. (ಎಸ್.ಎಸ್.ಎಂ.)

**ಗುಲ್ಬರ್ಗ :** ಕರ್ನಾಟಕದ ಒಂದು ವಿಭಾಗ; ಜಿಲ್ಲೆ; ತಾಲ್ಲೂಕು– ಅವುಗಳ ಆಡಳಿತ ಕೇಂದ್ರ ಮತ್ತು ನಗರ. ಗುಲ್ಬರ್ಗ, ಯಾದಗಿರಿ, ರಾಯಚೂರು, ಬೀದರ್, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಗುಲ್ಬರ್ಗ ವಿಭಾಗಕ್ಕೆ ಒಳಪಟ್ಟಿವೆ.

**ಜಿಲ್ಲೆ:** ಗುಲ್ಬರ್ಗ ಜಿಲ್ಲೆ ಕರ್ನಾಟಕದ ಉತ್ತರ ಭಾಗದಲ್ಲಿದೆ. 1956ರಲ್ಲಿ ಭಾರತದ ರಾಜ್ಯಗಳ ಮರುವಿಂಗಡಣೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಕ್ಕೆ ಸೇರಿದ ಮೂರು ಜಿಲ್ಲೆಗಳಲ್ಲಿ ಒಂದು. ಉಳಿದೆರಡು ಜಿಲ್ಲೆಗಳು ಬೀದರ್ ಮತ್ತು ರಾಯಚೂರು. ಉತ್ತರದಲ್ಲಿ ಬೀದರ್ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆ, ಪೂರ್ವದಲ್ಲಿ ಆಂಧ್ರ ಪ್ರದೇಶ, ದಕ್ಷಿಣದಲ್ಲಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಬಿಜಾಪುರ ಮತ್ತು ಮಹಾರಾಷ್ಟ್ರ ಇವು ಗುಲ್ಬರ್ಗ ಜಿಲ್ಲೆಯನ್ನು ಸುತ್ತುವರಿದಿವೆ. ಜಿಲ್ಲೆಯಲ್ಲಿ ಅಫಜಲಪುರ, ಆಳಂದ, ಗುಲ್ಬರ್ಗ, ಚಿಂಚೋಳಿ, ಚಿತ್ತಾಪುರ, ಜೇವರ್ಗಿ ಮತ್ತು ಸೇಡಂ ತಾಲ್ಲೂಕುಗಳಿವೆ. ಗುಲ್ಬರ್ಗ ಜಿಲ್ಲೆಯ ವಿಸ್ತೀರ್ಣ 16,224 ಚ.ಕಿಮೀ, ಜನಸಂಖ್ಯೆ 25,64,892 (2011).

ಜಿಲ್ಲೆಯ ಹೆಚ್ಚಿನ ಭಾಗ ದಖನ್ ಟ್ರಾಪ್ ಶಿಲಾಪ್ರದೇಶ. ಜಿಲ್ಲೆಯ ಮಧ್ಯದ ಭಾಗದಲ್ಲಿ ಸ್ವಲ್ಪಮಟ್ಟಿಗೆ ಭೀಮಾವರ್ಗಕ್ಕೆ ಸೇರಿದ ಸುಣ್ಣಕಲ್ಲು ಮತ್ತು ಶೇಲ್ ಪದರಗಳಿವೆ. ದಕ್ಷಿಣ ಮತ್ತು ಪೂರ್ವದ ಅಂಚಿನ ಕೆಲವೆಡೆಗಳಲ್ಲಿ ಬಹು ಪ್ರಾಚೀನವಾದ ಪೆನಿನ್ಸುಲರ್ ನೈಸ್ ಮತ್ತು ಧಾರವಾಡ ವರ್ಗಕ್ಕೆ ಸೇರಿದ ಶಿಲೆಗಳು ಕಂಡುಬರುತ್ತವೆ. ಗುಲ್ಬರ್ಗ ಜಿಲ್ಲೆ ದಖನ್ ಪ್ರಸ್ಥಭೂಮಿಯ ಭಾಗ. ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಇಡೀ ಜಿಲ್ಲೆ ಸಾಮಾನ್ಯವಾಗಿ ಸಮುದ್ರಮಟ್ಟದಿಂದ 300ರಿಂದ 600ಮೀ. ಎತ್ತರದಲ್ಲಿದೆ. ಸೇಡಂ ತಾಲ್ಲೂಕಿನಲ್ಲಿ ಕೆಲವು ಭಾಗಗಳು 600 ಮೀಗಿಂತ ಎತ್ತರವಾಗಿದೆ. ಆಳಂದ ತಾಲ್ಲೂಕಿನಲ್ಲಿ ನೆಲ ಏರುತಗ್ಗುಗಳಿಂದ ಕೂಡಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಎತ್ತರವಾದ ಬೆಟ್ಟಗಳಿಲ್ಲ. ವಾಯವ್ಯದಲ್ಲಿ ಪ್ರವೇಶಿಸುವ ಚಿಕ್ಕ ಬೆಟ್ಟಗಳ ಶ್ರೇಣಿಯೊಂದು ಆಗ್ನೇಯಾಭಿಮುಖವಾಗಿ ಸು. 90ಕಿಮೀ ದೂರಸಾಗಿದೆ. ಸೇಡಂ ತಾಲ್ಲೂಕಿನಲ್ಲಿ ಅಷ್ಟೇನೂ ಎತ್ತರವಿಲ್ಲದ ಕೆಲವು ಬೆಟ್ಟಗಳುಂಟು. ಗುಲ್ಬರ್ಗದಲ್ಲಿ ಜಿಪ್ಸಂ, ಚಿಂಚೋಳಿ ತಾಲ್ಲೂಕಿನಲ್ಲಿ ಫುಲ್ಲರ್ಸ್ ಅರ್ತ್ ಸಿಗುತ್ತವೆ. ಸಿಮೆಂಟ್ ಕೈಗಾರಿಕೆಗೆ ಉಪಯುಕ್ತವಾದ ಸುಣ್ಣಕಲ್ಲು ಜಿಲ್ಲೆಯ ಹಲವೆಡೆಗಳಲ್ಲುಂಟು. ಕಟ್ಟಡಗಳಿಗೆ ಉಪಯೋಗಿಸುವ ಉತ್ತಮವಾದ ಕಲ್ಲು ಜಿಲ್ಲೆಯಲ್ಲಿ ಹೇರಳವಾಗಿ ದೊರಕುತ್ತದೆ.

ಜಿಲ್ಲೆಯ ಮುಖ್ಯ ನದಿಗಳು ಕೃಷ್ಣಾ ಮತ್ತು ಭೀಮಾ. ಬೆಳಗಾಂವಿ ಜಿಲ್ಲೆಯಲ್ಲಿ ಕರ್ನಾಟಕವನ್ನು ಪ್ರವೇಶಿಸುವ ಕೃಷ್ಣಾ ನದಿ ಈ ಜಿಲ್ಲೆಯ ದಕ್ಷಿಣ ಎಲ್ಲೆಯಾಗಿ ಹರಿದು ಗುಲ್ಬರ್ಗ ಜಿಲ್ಲೆಯನ್ನು ರಾಯಚೂರು ಜಿಲ್ಲೆಯಿಂದ ಬೇರ್ಪಡಿಸುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿ ಈ ನದಿಯ ಉದ್ದ ಸು.160 ಕಿಮೀ. ಸುರಪುರ ತಾಲ್ಲೂಕಿನ ನಾರಾಯಣಪುರದಿಂದ ಸು.3 ಕಿಮೀ ಕೆಳಗೆ ಈ ನದಿಯ 60 ಮೀ ಎತ್ತರದ ಜಲದುರ್ಗ ಜಲಪಾತವಿದೆ. ಭೀಮಾ ನದಿ ಮಹಾರಾಷ್ಟ್ರದಿಂದ ಕರ್ನಾಟಕವನ್ನು ಪ್ರವೇಶಿಸಿ, ಬಿಜಾಪುರ ಜಿಲ್ಲೆಯ ಎಲ್ಲೆಯ ಉದ್ದಕ್ಕೆ ಸ್ವಲ್ಪ ದೂರ ಹರಿದು ಅನಂತರ ಗುಲ್ಬರ್ಗ ಜಿಲ್ಲೆಯನ್ನು ಹೊಕ್ಕು 219ಕಿಮೀ ದೂರ ಸಾಗಿ ಕೃಷ್ಣಾ ನದಿಗೆ ಸೇರುವುದು. ಮಹಾರಾಷ್ಟ್ರದಲ್ಲಿ ಹುಟ್ಟಿ ಅಫಜಲಪುರ ತಾಲ್ಲೂಕಿನಲ್ಲಿ 24ಕಿಮೀ ದೂರ ಹರಿದು ಅಫಜಲಪುರಕ್ಕೆ ಪಶ್ಚಿಮದಲ್ಲಿ ಭೀಮಾನದಿಯನ್ನು ಸೇರುವ ಬೋರಿ, ಮಹಾರಾಷ್ಟ್ರದಲ್ಲಿ ಉಗಮಿಸಿ ಆಳಂದ ತಾಲ್ಲೂಕಿನಲ್ಲಿ ಗುಲ್ಬರ್ಗ ಜಿಲ್ಲೆಯನ್ನು ಹೊಕ್ಕು ಜಿಲ್ಲೆಯಲ್ಲಿ 88ಕಿಮೀ ದೂರ ಹರಿದು ಅಫಜಲಪುರ ತಾಲ್ಲೂಕಿನ ಗಾಣಗಾಪುರದ ಬಳಿ ಭೀಮಾನದಿಗೆ ಸೇರುವ ಅಮರಜ ನದಿ, ಆಂಧ್ರ ಪ್ರದೇಶದಿಂದ ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸಿ ಸು.64ಕಿಮೀ ದೂರ ಹರಿದು ಚಿತ್ತಾಪುರದ ಹುನಗುಂಟ ಗ್ರಾಮದ ಬಳಿ ಭೀಮೆಯನ್ನು ಕೂಡುವ ಕಾಗಿಣಾ ನದಿ,ಮಹಾರಾಷ್ಟ್ರದಲ್ಲಿ ಹುಟ್ಟಿ ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸಿ ಕಾಗಿಣಾ ನದಿಯನ್ನು ಸೇರುವ ಮುಲ್ಲಾಮಾರಿ ಇವು ಜಿಲ್ಲೆಯ ಇತರ ನದಿಗಳು. ಇಡೀ ಜಿಲ್ಲೆ ಕೃಷ್ಣಾ ಮತ್ತು ಭೀಮಾ ನದಿಗಳ ಜಲಾನಯನ ಪ್ರದೇಶ.

ಗುಲ್ಬರ್ಗ ಜಿಲ್ಲೆಯ ವಾಯುಗುಣ ಶುಷ್ಕ ಮತ್ತು ಆರೋಗ್ಯಕರ. ಇಲ್ಲಿಯ ಹವಾಗುಣ ದಖನ್ ಪ್ರಸ್ಥಭೂಮಿಯ ಮಾದರಿಯದೆ ಆಗಿದೆ. ಫೆಬ್ರುವರಿಯಿಂದ ಜೂನ್ ಆರಂಭದವರೆಗೆ ಬೇಸಗೆ. ಅಲ್ಲಿಂದ ಮುಂದೆ ಸೆಪ್ಟೆಂಬರ್ ಅಂತ್ಯದ ವರೆಗೆ ಮಳೆಗಾಲ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 715.5ಮಿಮೀ. ಡಿಸೆಂಬರಿನಿಂದ ಫೆಬ್ರುವರಿಯವರೆಗೆ ಚಳಿಗಾಲ. ಆಗಿನ ಮಧ್ಯಕ ದೈನಿಕ ಗರಿಷ್ಠ ಉಷ್ಣತೆ 14.8$^{0}$ಸೆಂ. (58.6$^{0}$ಫ್ಯಾ.) ಮೇ ಅತ್ಯಂತ ಉಷ್ಣತೆಯ ತಿಂಗಳು. ಆಗಿನ ಮಧ್ಯಕ ದೈನಿಕ ಗರಿಷ್ಠ ಉಷ್ಣತೆ 40.6$^{0}$ಸೆಂ (105.1$^{0}$ಫ್ಯಾ). ಕೆಲವು ಸಾರಿ ಹಗಲಿನ ಉಷ್ಣತೆ 45$^{0}$ಸೆಂ. (113$^{0}$ಫ್ಯಾ) ವರೆಗೂ ಏರುವುದುಂಟು.

ಗುಲ್ಬರ್ಗ ಜಿಲ್ಲೆಯಲ್ಲಿ ಎರಡು ಬಗೆಯ ಕಾಡುಗಳನ್ನು ಕಾಣಬಹುದು. ಈಶಾನ್ಯ ಭಾಗದ ಪರ್ಣಪಾತಿ ಕಾಡು ಒತ್ತಾಗಿದ್ದು ತೇಗ, ಬೀಟೆ, ನಲ್ಲಮಡ್ಡಿ, ಹುರಗಲು ಮರಗಳಿಂದ ಕೂಡಿದೆ. ಆಗ್ನೇಯ ಭಾಗದಲ್ಲಿರುವ ಕುರುಚಲು ಕಾಡು ಸೌದೆಗೆ ಮಾತ್ರ ಉಪಯುಕ್ತ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 696 ಚ.ಕಿಮೀ. ಇದು ಇಡೀ ಜಿಲ್ಲೆಯ ಶೇ.4ರಷ್ಟು. ಇದರಲ್ಲಿ ಶೇ.41ರಷ್ಟು ಭಾಗ ಚಿಂಚೋಳಿ ತಾಲ್ಲೂಕಿನಲ್ಲೇ ಇದೆ. ಚೌಬೀನೆ, ಸೌದೆ, ಬೀಡಿ ಎಲೆ, ಚರ್ಮ ಹದಮಾಡಲು ಉಪಯೋಗಿಸುವ ತೊಗಟೆ, ಸೀತಾಫಲ, ಜೇನು ಮೇಣ, ಹಣ್ಣು,ರಾಳ, ಗೋಂದು, ಹುಳಿ, ಸೀಗೆ ಇವು ಕೆಲವು ಅರಣ್ಯೋತ್ಪನ್ನಗಳು ಜಿಲ್ಲೆಯ ನೈಸರ್ಗಿಕ ಸಸ್ಯಸಂಪತ್ತು ಅಷ್ಟೇನೂ ಸಮೃದ್ಧವಾಗಿಲ್ಲ.

ಗುಲ್ಬರ್ಗ ಜಿಲ್ಲೆಯಲ್ಲಿ ವನ್ಯಮೃಗಗಳು ಹೆಚ್ಚಾಗಿಲ್ಲ. ಕಾಡುಗಳಲ್ಲಿ ಕೋತಿಗಳಿವೆ. ಕೆಲವು ಕಡೆ ಚಿರತೆಗಳೂ ಕಿರುಬಗಳೂ ಉಂಟು. ಹುಲಿಗಳು ಕಾಣಬರುವುದಿಲ್ಲ. ಚಿಂಚೋಳಿಯ ಕಾಡುಗಳಲ್ಲಿ ಕರಡಿಗಳಿದ್ದು, ಅವುಗಳಿಂದ ಪೈರುಗಳಿಗೆ ಹಾನಿಯಾಗುತ್ತಿರುತ್ತದೆ. ಕತ್ತೆಕಿರುಬ, ತೋಳ, ಕಾಡುನಾಯಿ, ಜಿಂಕೆ, ನರಿ ಇವೆ. ಗಿಣಿ, ಮೈನಾ, ಮರಕುಟುಕ, ನವಿಲು, ಗೂಬೆ, ಹದ್ದು, ಹಾಡುವಕ್ಕಿ ಮತ್ತು ಪಾರಿವಾಳಗಳು ಬಹುತೇಕ ವಿರಳವಾಗುತ್ತಿವೆ. ಗೋಸುಂಬೆ, ಚೇಳು, ಚಿಪ್ಪುಹಂದಿ, ನಾಗರಹಾವು, ಮಂಡಲದಹಾವು ಮೊದಲಾದ ಪ್ರಾಣಿಗಳನ್ನು ಕಾಣಬಹುದು.

ಅಚ್ಚಕಪ್ಪಿನ, ಸಾಧಾರಣ ಕಪ್ಪಿನ, ಕೆಂಪುಮರಳು ಮಿಶ್ರಿತ ಜೇಡಿಯ, ಜಂಬಿನ ಮತ್ತು ಮೆಕ್ಕಲಿನ ಮಣ್ಣುಗಳು ಜಿಲ್ಲೆಯಲ್ಲಿವೆ. ಒಳಬೇಸಾಯಕ್ಕೆ ಸಹಾಯಕವಾದ ಕಪ್ಪುಮಣ್ಣು ಗುಲ್ಬರ್ಗ, ಜೇವರ್ಗಿ, ಚಿತ್ತಾಪುರ, ಸೇಡಂ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಕಾಣಬಹುದು. ಕೆಲವು ಕಡೆಗಳಲ್ಲಿ ಕಪ್ಪು ಮತ್ತು ಕೆಂಪು ಮಣ್ಣುಗಳು ಮಿಶ್ರಿತವಾಗಿವೆ. ಎತ್ತರದ ಪ್ರದೇಶಗಳಲ್ಲಿ ಕೆಂಪು ಮಣ್ಣು ಸಾಧಾರಣ. ಬಾವಿ ಮತ್ತು ಹೊಳೆಗಳ ನೀರಾವರಿ ಸೌಲಭ್ಯವಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಗುಲ್ಬರ್ಗ ಜಿಲ್ಲೆಗೂ ಪ್ರಯೋಜನವಾಗುತ್ತಿದೆ. ಚಂದ್ರಂಪಳ್ಳಿ, ಭೀಮಾನದಿ, ಅಮರಜ, ಬೆಣ್ಣೆತೊರೆ, ಮುಲ್ಲಾಮಾರಿ, ಮುಧೋಳ, ಕಾಗಿಣಾ, ಇಂದನಕಲ್ ಇವು ಜಿಲ್ಲೆಯಲ್ಲಿ ಕಾರ್ಯಗತವಾಗಿರುವ, ಆಗುತ್ತಿರುವ ಕೆಲವು ನೀರಾವರಿ ಯೋಜನೆಗಳು. ಜಿಲ್ಲೆಯಲ್ಲಿ

ಜೋಳ, ತೊಗರಿ, ಸೇಂಗಾ (ಕಡಲೆಕಾಯಿ), ಬತ್ತ, ಹತ್ತಿ, ಗೋದಿ ಮತ್ತು ದ್ವಿದಳ ಧಾನ್ಯಗಳನ್ನೂ ಬೆಳೆಯಲಾಗುತ್ತಿದೆ. ಈ ಮುಖ್ಯ ಬೆಳೆಗಳ ಜೊತೆಗೆ ಜಿಲ್ಲೆಯಲ್ಲಿ ಬಾರ್ಲಿ, ಮುಸುಕಿನ ಜೋಳ, ರಾಗಿ, ಹೆಸರು, ತೊಗರಿ, ಕಬ್ಬು, ಹರಳು, ಎಳ್ಳು, ಮೆಣಸಿನಕಾಯಿ, ಈರುಳ್ಳಿ ಮುಂತಾದುವನ್ನು ಬೆಳೆಯುತ್ತಾರೆ.

ಹೊಸ ಕೈಗಾರಿಕೆಗಳು ಬೆಳೆದುಬಂದಿವೆ. ಅನೇಕ ಸಣ್ಣ ಪ್ರಮಾಣದ ಆಧುನಿಕ ಕೈಗಾರಿಕೆಗಳು ಜಿಲ್ಲೆಯ ನಗರಗಳಲ್ಲಿ ಹರಡಿ ವಿಸ್ತರಿಸುತ್ತಿವೆ. ಅವುಗಳಲ್ಲದೆ ವ್ಯವಸಾಯ ಮತ್ತು ಗೃಹೋಪಕರಣಗಳ ಉತ್ಪಾದನೆಯ ಘಟಕಗಳು ಇವೆ. ಮರದ ಪೀಠೋಪಕರಣಗಳ, ಮರ ಕೊಯ್ಯುವ ಕಾರ್ಖಾನೆ, ಚರ್ಮ ಹದ ಮಾಡುವುದು, ಚರ್ಮದ ಪಾದರಕ್ಷೆ,




ಒಳನಾಡಿನಲ್ಲಿ ಮೀನು ಸಾಕುವ ಹಾಗೂ ಬೆಳೆಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗುಲ್ಬರ್ಗದ ಕೆರೆಗಳಲ್ಲಿ ಮೀನುಗಳನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಜಿಲ್ಲೆಯಲ್ಲಿ ಪಶುಪಾಲನೆಯೂ ವ್ಯವಸಾಯದ ಒಂದು ಅಂಗವಾಗಿ ಮುಂದುವರಿಯುತ್ತಿದೆ.

ಜಿಲ್ಲೆಯಲ್ಲಿ ಬಹಳ ಜನ ಬೇಸಾಯವನ್ನು ಅವಲಂಬಿಸಿದ್ದಾರೆ. ಗೃಹೋದ್ಯೋಗಗಳಲ್ಲಿ ನೇಕಾರಿಕೆ ಮುಖ್ಯ. ಹಿತ್ತಾಳೆ ಪಾತ್ರೆ, ಸೀಗೆ, ಮಸಾಲೆ, ಗಂಧದೆಣ್ಣೆ, ಬೀಡಿ ಕಟ್ಟುವುದು– ಇವು ಇಲ್ಲಿಯ ಕೆಲವು ಹಳೆಯ ಕೈಗಾರಿಕೆಗಳು. ವಿದ್ಯುತ್ತಿನ ಬಳಕೆ ಹೆಚ್ಚಿದಂತೆ ಜಿಲ್ಲೆಯಲ್ಲಿ

ಚೀಲ ಮುಂತಾದವುಗಳ ತಯಾರಿಕೆಯು ಇಲ್ಲಿದೆ. ಜಿಲ್ಲೆಯಲ್ಲಿ 129ಕಾರ್ಖಾನೆಗಳು,11 ಕೈಗಾರಿಕಾ ಪ್ರದೇಶಗಳು,140 ಕೈಗಾರಿಕಾ ಶೆಡ್ಡುಗಳು ಇವೆ. ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳ ತರಬೇತಿ ಕೇಂದ್ರಗಳಿದ್ದು ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ಮಾಡುತ್ತಿವೆ.

ಗುಲ್ಬರ್ಗ, ಸೇಡಂ, ಚಿತ್ತಾಪುರ ಮತ್ತು ಸಯ್ಯಾದ್ಪುರಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳಿವೆ. ಜಿಲ್ಲೆಯಲ್ಲಿ ಅನೇಕ ಬ್ಯಾಂಕುಗಳಿದ್ದು ವಾಣಿಜ್ಯೋದ್ಯಮಿಗಳಿಗೆ ಆರ್ಥಿಕ ನೆರವು ದೊರೆಯುತ್ತಿವೆ. ಶಾಹಬಾದಿನ ಸಿಮೆಂಟ್ ಕಾರ್ಖಾನೆ, ಗುಲ್ಬರ್ಗದ ಜವಳಿ

ಗಿರಣಿ, ಎಣ್ಣೆ ಗಿರಣಿ – ಇವು ಕೆಲವು ದೊಡ್ಡಕೈಗಾರಿಕೆಗಳು. ಇವಲ್ಲದೆ ಸಣ್ಣ ಗಾತ್ರದ ಅನೇಕ ಆಧುನಿಕ ಉದ್ಯಮಗಳಿವೆ.

ಗುಲ್ಬರ್ಗ ಜಿಲ್ಲೆಯಲ್ಲಿ ಎರಡು ಬ್ರಾಡ್‍ಗೇಜ್ ರೈಲು ಮಾರ್ಗಗಳಿವೆ. ಗುಲ್ಬರ್ಗ ನಗರದ ಮೂಲಕ ಹಾದುಹೋಗುವ ಮುಂಬಯಿ– ರಾಯಚೂರು ಮಾರ್ಗವೊಂದು; ವಾಡಿಯಿಂದ ಸಿಕಂದರಾಬಾದಿಗೆ ಇನ್ನೊಂದು. ಯಾದಗಿರಿ, ವಾಡಿ, ಶಾಹಬಾದ, ಗುಲ್ಬರ್ಗ ಮುಖ್ಯ ನಿಲ್ದಾಣಗಳು. ವಾಡಿ–ಸಿಕಂದರಾಬಾದ್ ಮಾರ್ಗದಲ್ಲಿ ವಾಡಿ, ಚಿತ್ತಾಪುರ, ಮಳಖೇಡ ರೋಡ್, ಸೇಡಂ– ಇವು ಮುಖ್ಯ ನಿಲ್ದಾಣಗಳು. ಹುಮನಾಬಾದ್–ಗುಲ್ಬರ್ಗ, ಗುಲ್ಬರ್ಗ–ಶಾಹಪುರ, ಜೇವರ್ಗಿ– ಜೆರಟ್ಗಿ, ಖಾನಾಪುರ–ಲಿಂಗಸುಗೂರು, ಶಾಹಪುರ– ಹತ್ತಿಗುಡೂರ್, ಗುಲ್ಬರ್ಗ–ಕೋಡಂಗಲ್, ಗುಲ್ಬರ್ಗ–ಅಳಂದ, ಅಳಂದ– ವಾಗ್ಧಾರಿ ರಸ್ತೆಗಳು ರಾಜ್ಯ ಹೆದ್ದಾರಿಗಳು. ಇವಲ್ಲದೆ ಜಿಲ್ಲಾ ಮತ್ತು ಗ್ರಾಮಾಂತರ ರಸ್ತೆಗಳೂ ಇವೆ. *

ಶರಣಬಸವೇಶ್ವರ ದೇವಾಲಯ, ಗುಲ್ಬರ್ಗ

ಗುಲ್ಬರ್ಗ ಜಿಲ್ಲೆ 9ನೆಯ ಶತಮಾನದಲ್ಲಿ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಈ ಜಿಲ್ಲೆಯಲ್ಲಿ ಸೇಡಂ ತಾಲ್ಲೂಕಿನಲ್ಲಿರುವ ಮಳಖೇಡ ರಾಷ್ಟ್ರಕೂಟ ಅರಸರ ರಾಜಧಾನಿಯಾಗಿದ್ದು ಮಾನ್ಯಖೇಟವೆಂದು ಪ್ರಸಿದ್ಧಿ ಹೊಂದಿತ್ತು. ಕಲ್ಯಾಣದ ಚಾಳುಕ್ಯರು ಹತ್ತನೆಯ ಶತಮಾನದ ಅಂತ್ಯಭಾಗದಿಂದ ಆಳತೊಡಗಿದಾಗ ಅವರು ತಮ್ಮ ರಾಜಧಾನಿಯನ್ನು ಜಿಲ್ಲೆಯ ಕಲ್ಯಾಣಕ್ಕೆ ಬದಲಾಯಿಸಿಕೊಂಡರು. 11–12ನೆಯ ಶತಮಾನಗಳ ಶಾಸನಗಳಲ್ಲಿ ಗುಲ್ಬರ್ಗ ಕಲುಂಬರಗಿ, ಕಲುಂಬರಗ ಎಂಬ ಹೆಸರುಗಳಲ್ಲಿ ಖ್ಯಾತಿ ಹೊಂದಿತ್ತು. ಅಳಂದ ತಾಲ್ಲೂಕು ಮತ್ತು ಪರಿಸರದ ಪ್ರದೇಶಗಳು ಅಂದು ಅಳಂದೆ ಸಾಸಿರವೆಂಬ ಪ್ರಾಂತ್ಯದಲ್ಲಿ ಸೇರಿದ್ದುವು. ಕಲ್ಯಾಣದ ಚಾಳುಕ್ಯರ ಅಧೀನರಾಗಿ ಬಾಣ ವಂಶಕ್ಕೆ ಸೇರಿದ ಗೊಂಕರಸ ಮುಂತಾದ ಹಲವಾರು ಸಣ್ಣ ಮಂಡಲದ ಅಧಿಪತಿಗಳು ಚಿತ್ತಾಪುರ ತಾಲ್ಲೂಕಿನ ಪರಿಸರದಲ್ಲಿ ಆಳುತ್ತಿದ್ದರೆಂದು ಇತ್ತೀಚಿನ ಶಾಸನಗಳಿಂದ ತಿಳಿದುಬಂದಿದೆ.

ಮಹಮ್ಮದ್ ಬಿನ್ ತುಗಲಕ್ ದೆಹಲಿಯ ಸುಲ್ತಾನನಾಗಿದ್ದಾಗ ದಕ್ಷಿಣಕ್ಕೆ ದಂಡಯಾತ್ರೆ ಮಾಡಿ ವಾರಂಗಲಿನಲ್ಲಿ ಆಳಿದ ಕಾಕತೀಯರನ್ನು ಸೋಲಿಸಿ ಅವರ ರಾಜ್ಯವನ್ನು ಗೆದ್ದುಕೊಂಡಾಗ ಗುಲ್ಬರ್ಗ ಸಹ ಸುಲ್ತಾನರ ಅಧೀನಕ್ಕೆ ಒಳಪಟ್ಟಿತು. ಇದು 13ನೆಯ ಶತಮಾನದ ಅಂತ್ಯದಿಂದ 45 ವರ್ಷಗಳ ಕಾಲ ಇತ್ತು. ಆದರೆ ಅಲಾಉದ್ದೀನ್ ಹಸನ್ ಗಂಗು ಬಹಮನ್ ಷಾ 1347ರಲ್ಲಿ ಬಹಮನೀ ರಾಜ್ಯವನ್ನು ಸ್ಥಾಪಿಸಿದಾಗ ಗುಲ್ಬರ್ಗ ಅವನ ರಾಜಧಾನಿಯಾಯಿತು. 1424ರವರೆಗೂ ರಾಜಧಾನಿಯಾಗಿ ಇದು ಮೆರೆಯಿತು. ಬಹಮನೀ ರಾಜ್ಯ ಐದು ಭಾಗಗಳಾಗಿ ಒಡೆದಾಗ ಇದರ ಸ್ವಲ್ಪಭಾಗ ಬಿದರೆಯ ಬರೀದ್ ಶಾಹೀ ಸುಲ್ತಾನರ ಅಧೀನದಲ್ಲೂ ಸ್ವಲ್ಪ ಭಾಗ ಬಿಜಾಪುರದ ಆದಿಲ್‍ಶಾಹೀ ಸುಲ್ತಾನರ ಅಧೀನದಲ್ಲೂ ಇತ್ತು.

ಔರಂಗಜೇಬ್ ದಕ್ಷಿಣದ ದಂಡಯಾತ್ರೆ ಕೈಗೊಂಡಾಗ ಗುಲ್ಬರ್ಗ ಅವನ ಕೈವಶವಾಯಿತು. ಔರಂಗಜೇಬನ ಮರಣಾನಂತರ ಮೊಗಲ್ ಸಾಮ್ರಾಜ್ಯದಲ್ಲಿ ಅಂತಃಕಲಹಗಳು ಸಂಭವಿಸಿದಾಗ ಅಲ್ಲಿಯ ರಾಜಕೀಯದಲ್ಲಿ ಬೇಸತ್ತ ಸುಬೇದಾರ ಆಸಫ್ ಜಾ ದಕ್ಷಿಣದ ಪ್ರಾಂತ್ಯಾಧಿಪತಿಯಾಗಿ ಬಂದು ಇಲ್ಲಿ ಸ್ವತಂತ್ರನಾದ. ಇದು ಹೈದರಾಬಾದಿನ ನಿಜಾಂ ವಂಶದ ನಾಂದಿಯಾಯಿತು. ಆ ಸಮಯದಲ್ಲಿ ಸುರಪುರ, ಶಾಹಾಪುರ, ಜೇವರಗಿ ತಾಲ್ಲೂಕುಗಳ ಭಾಗ ಸುರಪುರದ ನಾಯಕರ ಆಡಳಿತದಲ್ಲಿ ಸ್ವತಂತ್ರವಾದ ಸಂಸ್ಥಾನವಾಯಿತು. ಗುಲ್ಬರ್ಗದ ಇತರ ಭಾಗಗಳು ನಿಜಾಂ ರಾಜ್ಯಕ್ಕೆ ಸೇರಿದುವು. 1707–1857ರ ವರೆಗೆ ಸ್ವತಂತ್ರವಾಗಿ ಸುರಪುರದಲ್ಲಿ ಆಳಿದ ಬೇಡರ ಮನೆತನದ ರಾಜಾ ವೆಂಕಟಪ್ಪನಾಯಕ 1857ರ ಕ್ರಾಂತಿಯಲ್ಲಿ ಭಾಗವಹಿಸಿದ. ಬ್ರಿಟಿಷರು ಅವನನ್ನು ದಮನಮಾಡಿ ಅವನಿಂದ ಕಸಿದುಕೊಂಡ ರಾಜ್ಯವನ್ನು ನಿಜಾಮನಿಗೆ ವಹಿಸಿಕೊಟ್ಟರು.

ಪ್ರಾಚೀನ ಗೋರಿಗಳು, ಗುಲ್ಬರ್ಗ

ನಿಜಾಮರ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದ ಸಾಲಾರ್ ಜಂಗ್ ಕೈಗೊಂಡ ಆಡಳಿತ ಸುಧಾರಣೆಗಳಲ್ಲಿ ಸಂಸ್ಥಾನದಲ್ಲಿ ಹಲವಾರು ಜಿಲ್ಲೆಗಳು ಅಸ್ತಿತ್ವಕ್ಕೆ ಬಂದುವು. ಆ ಸಂದರ್ಭದಲ್ಲಿ ಗುಲ್ಬರ್ಗ ಸುರಪುರ ಜಿಲ್ಲೆಯ ಒಂದು ಭಾಗವಾಯಿತು. ಗುಲ್ಬರ್ಗವನ್ನು ಒಂದು ಪ್ರತ್ಯೇಕವಾದ ಜಿಲ್ಲೆಯಾಗಿ ಪರಿವರ್ತಿಸಿದ್ದು 1873ರಲ್ಲಿ. ಅಂದಿನಿಂದ ಆ ಜಿಲ್ಲೆಗೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳಾದುವು. 1956ರಲ್ಲಿ ಕೋಡಂಗಲ್ ಮತ್ತು ತಾಂಡೂರ್ ತಾಲ್ಲೂಕುಗಳು ಆಂಧ್ರಪ್ರದೇಶಕ್ಕೆ ಸೇರಿದುವು. ಉಳಿದ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು.

ಗುಲ್ಬರ್ಗ ಜಿಲ್ಲೆಯ ಮಳಖೇಡ ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಕವಿರಾಜಮಾರ್ಗದ ಕರ್ತೃ ಇಲ್ಲಿಯವನು. ಕವಿ ಪೊನ್ನ, ವಚನಕಾರ ದೇವರ ದಾಸಿಮಯ್ಯ ಇವರೂ ಈ ಜಿಲ್ಲೆಯವರು. ದ್ವೈತಮತಸ್ಥಾಪಕರಾದ ಮಧ್ವಾಚಾರ್ಯರ ನಾಲ್ವರು ಪ್ರಮುಖ ಶಿಷ್ಯರ ಪೈಕಿ ಒಬ್ಬರಾದ ಅಕ್ಷೋಭ್ಯತೀರ್ಥರ ಶಿಷ್ಯರಾದ ಜಯತೀರ್ಥರು ಮಳಖೇಡದಲ್ಲಿ ನೆಲಸಿದ್ದರು. ಮಧ್ವಾಚಾರ್ಯರ ಗ್ರಂಥಗಳಿಗೆ ಟೀಕೆಗಳನ್ನು ಬರೆದು ಟೀಕಾಚಾರ್ಯರೆಂದು ಪ್ರಸಿದ್ಧರಾಗಿರುವ ಇವರ ಬೃಂದಾವನ ಇಲ್ಲಿದೆ. ಮಹಾಪುರಾಣ, ನಯಕುಮಾರಚರಿತ ಮುಂತಾದ ಅಪಭ್ರಂಶ ಕಾವ್ಯಗಳ ಕರ್ತೃವಾದ ಪುಷ್ಪದಂತ ಕವಿಗೂ ಇದು ನೆಲೆವೀಡಾಗಿತ್ತು. (ಜಿ.ಆರ್.ಬಿ.)

ಬಂದೇ ನವಾಜ್ ದರ್ಗಾ, ಗುಲ್ಬರ್ಗ

ಈ ಜಿಲ್ಲೆಯಲ್ಲಿ ಪುರಾತತ್ತ್ವ ಅವಶೇಷಗಳು ವಿಪುಲವಾಗಿವೆ. ಮಧ್ಯ ಹಳೆಶಿಲಾಯುಗದ ಅನೇಕ ನೆಲೆಗಳು ಗುಲ್ಬರ್ಗ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಉಡಚಣ ಮತ್ತು ಸೇಡಂ ತಾಲ್ಲೂಕಿನ ಮಳಖೇಡ ಈ ಸ್ಥಳಗಳಲ್ಲೂ ಈ ರೀತಿಯ ಕೆಲವು ಉಪಕರಣಗಳು

ದೊರೆತಿವೆ. ಈ ಘಟ್ಟದ ಉಪಕರಣಗಳು ನದಿದಡದಲ್ಲಿರುವ ಪ್ರಾಕ್ಕಾಲೀನ ಹರಹುಗಳಲ್ಲಿ ಮಧ್ಯಶಿಲಾ ಮತ್ತು ಅಂತ್ಯ ಹಳೆಶಿಲಾಯುಗದ ಉಪಕರಣಗಳು ದೊರಕುವ ಸ್ತರಗಳ ನಡುವಣ ಸ್ತರಗಳಲ್ಲಿ ದೊರಕಿವೆ. ಸೂಕ್ಷ್ಮಶಿಲಾಯುಗದ ಅನೇಕ ನೆಲೆಗಳು ಈ ಜಿಲ್ಲೆಯ ಅಳಂದ ತಾಲ್ಲೂಕಿನ ಜವಳಿ, ಶಾಖಾಪುರ, ಇಕ್ಕಳ್ಕಿ ಮುಂತಾದ ಗ್ರಾಮಗಳ ಬಳಿ ದೊರಕಿವೆ. ನವಶಿಲಾಯುಗದ ಸಂಸ್ಕೃತಿ ಕೂಡ ಗುಲ್ಬರ್ಗ ಜಿಲ್ಲೆಯಲ್ಲಿ ಹರಡಿತ್ತು. ಇಲ್ಲಿಯ ನವಶಿಲಾಯುಗ ಸಂಸ್ಕೃತಿ ಪ್ರ.ಶ.ಪೂ. 2500ರ ಸುಮಾರಿನಲ್ಲೇ ಪ್ರಚಲಿತವಾಗಿತ್ತೆಂದು ತಿಳಿದುಬಂದಿದೆ. ಈ ಘಟ್ಟದ ಜನ ವ್ಯವಸಾಯ ಮತ್ತು

ಶರಣಬಸವೇಶ್ವರ ದೇವಾಲಯದಲ್ಲಿನ ನಾಗಶಿಲ್ಪ, ಗುಲ್ಬರ್ಗ

ಪಶುಪಾಲನೆಗಳನ್ನು ಸಾಧಿಸಿದ್ದರೂ ಸಾರಂಗ, ಜಿಂಕೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರೆಂದು ಆಗ ಮೀನುಗಾರಿಕೆ ಸಾಮಾನ್ಯವಾಗಿತ್ತೆಂದೂ ಗೊತ್ತಾಗಿದೆ. ಕೋಡೆಕಲ್ಲು ಅಲ್ಲದೆ ಮುಳ್ಳೂರು, ತೀರ್ಥ, ಕಕ್ಕೇರಿ, ಬೆನಕನಹಳ್ಳಿ ಮುಂತಾದೆಡೆಗಳಲ್ಲೂ ಸಮಕಾಲೀನ ಬೂದಿಯ ರಾಶಿಗಳಿವೆ. ಇವಲ್ಲದೆ ಆ ಕಾಲದ ಜನ ನೆಲೆಸಿದ್ದ ಕೆಲವು ನೆಲೆಗಳು ಕೂಡ ಬೀರನೂರು, ಕನ್ನೆಕೋಳೂರು, ಬೂದನಾಳು ಮುಂತಾದೆಡೆ ಬೆಳಕಿಗೆ ಬಂದಿವೆ. ಹಾವಿನಮೆಟ್ಟಿ, ಕಿರದಹಳ್ಳಿ, ಮಂಗಳೂರು, ಮಾಕನಗವಿ ಮುಂತಾದೆಡೆಗಳಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನದ ಗಣಿಗಳಿದ್ದ ಕುರುಹುಗಳಿವೆ. ಆದರೆ ಇವು ಯಾವ ಕಾಲದವೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಗುಲ್ಬರ್ಗ ಜಿಲ್ಲೆ ಅಲ್ಲಿಯ ಕಬ್ಬಿಣಯುಗದ ಬೃಹತ್ ಶಿಲಾಸಮಾಧಿಗಳ ಸಂಸ್ಕೃತಿಯ ಅವಶೇಷಗಳಿಗೆ ಹಿಂದಿನಿಂದಲೂ ಪ್ರಸಿದ್ಧವಾಗಿದೆ. ಜೇವರಗಿ ತಾಲ್ಲೂಕಿನಲ್ಲಿ ಹಗರಟಗಿ, ರಾಜನಕೋಳೂರು, ಚಿಕ್ಕನಹಳ್ಳಿ, ವಿಭೂತಿಹಳ್ಳಿ, ಇಜೇರಿ, ಕೊಲ್ಲೂರು, ಜೇವರಗಿ ಮುಂತಾದೆಡೆಗಳಲ್ಲಿ ಈ ಸಂಪ್ರದಾಯದ ಅನೇಕ ಸಮಾಧಿಗಳನ್ನು ಗುರುತಿಸಲಾಗಿದೆ. ಅವಶೇಷಗಳನ್ನು ಹೂತಿರುವ ಅಥವಾ ಅವಶೇಷಗಳನ್ನು ಜಾಡಿಗಳಲ್ಲಿ ಶೇಖರಿಸಿ ಹೂತಿರುವ ಗುಣಿಗಳ ಸುತ್ತ ರಚಿಸಿದ ಶಿಲಾ ವರ್ತುಲಗಳು ಅಥವಾ ತೊಟ್ಟಿಗಳು ಕಂಡು ಬಂದಿವೆ. ಜೇವರಗಿ ಮತ್ತು ಸುತ್ತಲಿನ ಪ್ರದೇಶದಲ್ಲಿ ಹಲವೆಡೆ ದೊಡ್ಡ ಕಲ್ಲುಗಳನ್ನು ಅನೇಕ ಸಮಾನಾಂತರ ಸಾಲುಗಳಲ್ಲಿ ನೆಟ್ಟಿರುವುದು ಕಂಡುಬಂದಿದೆ. ಪ್ರಾಚೀನ ಕಾಲದ ಈ ಶಿಲಾ ಸಾಲುಗಳು ಶವಸಂಸ್ಕಾರ ವಿಧಿಗೆ ಸಂಬಂಧಿಸಿದ್ದೋ ಅಲ್ಲವೋ ಹೇಳುವುದು ಕಷ್ಟ.

ಉತ್ತರ ಭಾರತದಲ್ಲಿ ಪ್ರಚಲಿತ ಶಕ ಪೂರ್ವದ ಕೊನೆಯ ಸಹಸಮಾನದ ಉತ್ತರಾರ್ಧದಲ್ಲಿ ಪ್ರಚಲಿತವಿದ್ದ ಔತ್ತರೇಯ ಕಪ್ಪು ಹೊಳಪಿನ ಮಡಕೆ ಚೂರು ಅಳಂದ ತಾಲ್ಲೂಕಿನಲ್ಲಿ ಕಂಡುಬಂದಿವೆ. ಅಲ್ಲದೆ 1940ರ ಸುಮಾರಿನಲ್ಲಿ ಗುಲ್ಬರ್ಗ ತಾಲ್ಲೂಕಿನ ಹೆಬ್ಬಾಳ ಗ್ರಾಮದಿಂದ 225 ಬೆಳ್ಳಿಯ ಒತ್ತು ಮುದ್ರೆಯ ನಾಣ್ಯಗಳು ದೊರಕಿದುವು. ನಾಣ್ಯಗಳು ಮತ್ತು ಔತ್ತರೇಯ ಹೊಳಪಿನ ಮಡಕೆ ಚೂರುಗಳು ಗುಲ್ಬರ್ಗ ಜಿಲ್ಲೆ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದ ಕಾಲದಲ್ಲಿ ಬಂದವುಗಳಾಗಿರಬೇಕು.

ಮೌರ್ಯ ಮತ್ತು ಸಾತವಾಹನ ಕಾಲಕ್ಕೆ ಸಂಬಂಧಿಸಿದ ಕೆಲವು ನೆಲೆಗಳು ಅಳಂದ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿವೆ. ಚಿತ್ತಾಪುರ ತಾಲ್ಲೂಕಿನ ಭೀಮಾನದಿಯ ಎಡದಂಡೆಯಲ್ಲಿರುವ ಸನ್ನತಿ ಇವುಗಳ ಪೈಕಿ ಪ್ರಸಿದ್ಧವಾದ್ದು. ಸನ್ನತಿ ಒಂದು ಬೌದ್ಧ ಕೇಂದ್ರವೂ ಪ್ರಾಯಶಃ ಸ್ಥಳೀಯ ಮಾಂಡಲಿಕನೊಬ್ಬನ ರಾಜಧಾನಿಯೂ ಆಗಿದ್ದಂತೆ ತೋರುತ್ತದೆ. ಸನ್ನತಿಯ ಕನಗನ ಹಳ್ಳಿಯ ಬೌದ್ಧ ಸ್ತೂಪದ ಅವಶೇಷಗಳಲ್ಲಿ ಅಶೋಕನ ಶಾಸನ ಇರುವ ಚಿತ್ರಣ ಫಲಕ ವಿಶಿಷ್ಟವಾದುದು. ಸನ್ನತಿಯಲ್ಲಿ ದೊರಕಿರುವ ಅಶೋಕನ ಶಾಸನಗಳು ಈ ಜಿಲ್ಲೆಯಲ್ಲಿ ಇದುವರೆಗೆ ದೊರಕಿರುವ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದುವು. ಸಾತವಾಹನರ ಕಾಲದ ಶಾಸನಗಳೂ ದೊರೆತಿವೆ.

ಚಿತ್ತಾಪುರ ತಾಲ್ಲೂಕಿನ ನಾಗಾಯಿ ಹಿಂದು, ಜೈನ ಮತ್ತು ಇಸ್ಲಾಂ ಸಂಸ್ಕೃತಿಗಳಿಗೆ ಸಂಬಂಧಿಸಿದ ವಸ್ತು ಅವಶೇಷಗಳಿಗೆ ಪ್ರಸಿದ್ಧವಾಗಿದೆ (**ನೋಡಿ–ನಾಗಾಯಿ**).

ಚಿತ್ತಾಪುರ ತಾಲ್ಲೂಕಿನ ಸನ್ನತಿಯಲ್ಲಿ ಬಾದಾಮಿ ಚಳುಕ್ಯರ ಕಾಲದ ಒಂದು ಶಾಸನ ದೊರಕಿದೆ. ಇದರಲ್ಲಿ ಚಳುಕ್ಯ ರಾಜವಂಶದ ಕೊನೆಗಾಲ ಅಥವಾ ಅನಂತರದ ಸಂಧಿಕಾಲದಲ್ಲಿದ್ದ ಕೆಲವು ತದ್ವಂಶೀಯರ ಹೆಸರುಗಳಿವೆ. ಕಲ್ಯಾಣದ ಚಾಳುಕ್ಯರ, ಕಳಚುರಿಗಳ ಮತ್ತು ದೇವಗಿರಿ ಯಾದವರ ಕಾಲದ ಸುಮಾರು ಇನ್ನೂರಕ್ಕೂ ಹೆಚ್ಚಿನ ಶಾಸನಗಳು ಬೆಳಕಿಗೆ ಬಂದಿವೆ. ಈ ಕಾಲದ ಅನೇಕ ದೇವಾಲಯಗಳು ನಾಗಾಯಿ, ಮಳಖೇಡ, ಕಾಳಗಿ, ನಿಂಬರ್ಗಿ, ಚಿಂಚಹನಸೂರು, ಪಡಸಾವಳಿ ಮುಂತಾದೆಡೆಗಳಲ್ಲಿವೆ. ಇವೆಲ್ಲ ಸಮಕಾಲೀನ ಚಾಳುಕ್ಯ ಶೈಲಿಯಲ್ಲಿ ಉತ್ತಮ ರಚನಾವಿನ್ಯಾಸದೊಡನೆ ಕಡೆದ ಹೊಳಪಿನ ದುಂಡುಕಂಬಗಳಿಂದ ಕೂಡಿದ್ದು ಸುಂದರ ಶಿಲ್ಪಗಳಿಂದ ಅಲಂಕೃತವಾಗಿರುವ ಕಟ್ಟಡಗಳು.

ಬಹಮನೀಯರ ರಾಜಧಾನಿಯಾಗಿದ್ದ ಗುಲ್ಬರ್ಗ ನಗರವಲ್ಲದೆ ಈ ಜಿಲ್ಲೆಯ ಇತರ ಭಾಗಗಳಲ್ಲೂ ಇಸ್ಲಾಮೀ ವಾಸ್ತುಶೈಲಿಯ ಅನೇಕ ಕಟ್ಟಡಗಳಿವೆ. ಇವುಗಳಲ್ಲಿ ಫಿರೋಜಾಬಾದ್, ಚಿಂಚೋಳಿ ಮತ್ತು ಚಿತ್ತಾಪುರ ಕೋಟೆಗಳನ್ನು ಹೆಸರಿಸಬಹುದು.

ಜುಮ್ಮಾ ಮಸೀದಿ, ಗುಲ್ಬರ್ಗ

ಫಿರೋಜಾಬಾದಿನಲ್ಲಿ 1406ರಲ್ಲಿ ಕಟ್ಟಿದ ಒಂದು ಮಸೀದಿಯಿದೆ. ಸುಲ್ತಾನಾ ಫಾತಿಮಾ ಎಂಬವಳು ಗೋಗಿ ಗ್ರಾಮದ ಕಾಲಿ ಮಸೀದಿಯನ್ನು ಕಟ್ಟಿಸಿದಳು (ಸು.1500). ಇದು ಒಂದು ಸುಂದರ ಕಟ್ಟಡ. ಈ ಮಸೀದಿಯ ಬಳಿಯಲ್ಲಿ ಕೆಲವು ಆದಿಲ್‌ಶಾಹೀ ಅರಸರ ಸಮಾಧಿಗಳುಂಟು. ಚಿಂಚೋಳಿಯಲ್ಲಿ ಪೋರ್ಚ್‌ಗೀಸರು ಒಂದು ಚರ್ಚ್ ಕಟ್ಟಿಸಿದರೆಂದು ಹೇಳಲಾಗಿದೆ. ಆದರೆ ಈಗ ಇರುವ ಚರ್ಚ್‌ನವೀಕೃತವಾಗಿದೆ.

ಮುಸ್ಲಿಂ ಅರಸರ ಕಾಲದ ಅನೇಕ ಪಾರಸೀ ಮತ್ತು ಅರಬ್ಬೀ ಶಾಸನಗಳು ಗುಲ್ಬರ್ಗ ಜಿಲ್ಲೆಯಲ್ಲಿವೆ. ಇವುಗಳಲ್ಲಿ ಗುಲ್ಬರ್ಗ ಕೋಟೆಯಲ್ಲಿ ದೊಡ್ಡ ಮಸೀದಿಯಲ್ಲಿರುವ ರಫಿಯ ಶಾಸನ, ಚಿಂಚೋಳಿಯಲ್ಲಿ ನಸ್ತಾಲಿಕ್ ಲಿಪಿಯಲ್ಲಿರುವ ಶಾಸನ, ಅಳಂದಿನಲ್ಲಿರುವ ಫರ್ಹಾದ್ ಖಾನನ ಶಾಸನ (1656–57), ಮಳಖೇಡದ ಅರಬ್ಬೀ ಶಾಸನ (1469–70) ಉಲ್ಲೇಖಾರ್ಹವಾದವು. ಈ ಕಾಲದ ಬಹಮನೀ, ಆದಿಲ್‌ಶಾಹೀ, ಕುತುಬ್‌ಶಾಹೀ, ಮೊಗಲ್ ಮತ್ತು ನಿಜಾಮ್ ಶಾಹಿ ಅರಸರ ನಾಣ್ಯಗಳು ಗುಲ್ಬರ್ಗ ಜಿಲ್ಲೆಯಲ್ಲಿ ದೊರಕಿವೆ. (ಎಸ್.ಎನ್.)

**ತಾಲ್ಲೂಕು:** ಜಿಲ್ಲೆಯ ಮಧ್ಯ ಮತ್ತು ಉತ್ತರ ಭಾಗದಲ್ಲಿರುವ ಈ ತಾಲ್ಲೂಕನ್ನು ಪೂರ್ವದಲ್ಲಿ ಚಿಂಚೋಳಿ, ಚಿತ್ತಾಪುರ ತಾಲ್ಲೂಕುಗಳೂ ದಕ್ಷಿಣದಲ್ಲಿ ಜೇವರಗಿ, ಪಶ್ಚಿಮದಲ್ಲಿ ಅಳಂದ ಮತ್ತು ಅಫಜಲಪುರ ತಾಲ್ಲೂಕುಗಳೂ ಉತ್ತರದಲ್ಲಿ ಬೀದರ್ ಜಿಲ್ಲೆಯೂ ಸುತ್ತುವರೆದಿವೆ. ಈ ತಾಲ್ಲೂಕಿನ ದಕ್ಷಿಣದಲ್ಲಿ ಹರಿಯುವ ಭೀಮಾ ನದಿ ಈ ತಾಲ್ಲೂಕನ್ನು ಜೇವರಗಿ ತಾಲ್ಲೂಕಿನಿಂದ ಬೇರ್ಪಡಿಸಿದೆ. ಔರಾದ, ಗುಲ್ಬರ್ಗ, ಕಮಲಾಪುರ, ಮಹಾಗಾಂವ್,

ಪರ್ವತಾಬಾದ್ ಮತ್ತು ಪಟ್ಟಣ ಈ ಆರು ಹೋಬಳಿಗಳೂ 144 ಗ್ರಾಮಗಳೂ ಇವೆ. ಈ ತಾಲ್ಲೂಕಿನ ವಿಸ್ತೀರ್ಣ 1,731.6ಚ.ಕಿಮೀ. ಜನಸಂಖ್ಯೆ 4,26,398 (2011).

ತಾಲ್ಲೂಕಿನ ಹೆಚ್ಚು ಭಾಗ ಬೂದು ಮತ್ತು ಕಪ್ಪುಮಿಶ್ರಿತ ಅಥವಾ ಆಳವಾದ ಕಪ್ಪುಮಣ್ಣು ಇರುವ ಮಟ್ಟಸ ಪ್ರದೇಶ. ಹೆಚ್ಚಿನ ಬೆಟ್ಟಗಳಾಗಲಿ ಏರುತಗ್ಗುಗಳಾಗಲೀ ಇಲ್ಲ. ಕೆಲವು ಭಾಗಗಳಲ್ಲಿ ಮರಳು ಮಿಶ್ರಿತ ಕೆಂಪುಮಣ್ಣಿನ ಭೂಮಿ ಕಂಡುಬರುತ್ತದೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 753.30ಮಿಮೀ. ತಾಲ್ಲೂಕಿನಲ್ಲಿ ಜೋಳ, ಸೇಂಗಾ, ಸಜ್ಜೆ, ಗೋದಿ, ತೊಗರಿ, ಹತ್ತಿ, ಮೆಣಸಿನಕಾಯಿ ಬೆಳೆಯುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಇದ್ದು ಅವುಗಳ ರಕ್ಷಣೆಗೆ ಸರ್ಕಾರಿ ಪಶುವೈದ್ಯಾಲಯಗಳಿವೆ.

ತಾಲ್ಲೂಕಿಗೆ ರೈಲು ಸಂಪರ್ಕವೂ ಇವೆ, ಜಿಲ್ಲೆಯ ಎಲ್ಲ ಭಾಗಗಳೂ ವಾಹನ ಸಂಪರ್ಕ ಪಡೆದಿವೆ. ತಾಲ್ಲೂಕಿನಲ್ಲಿ ಬ್ಯಾಂಕ್, ವಿದ್ಯುತ್, ಅಂಚೆ-ತಂತಿ, ದೂರವಾಣಿ ಮುಂತಾದ ಸೌಲಭ್ಯಗಳಿವೆ.

**ಪಟ್ಟಣ:** ಗುಲ್ಬರ್ಗ ವಿಭಾಗದ, ಜಿಲ್ಲೆಯ, ತಾಲ್ಲೂಕಿನ ಮತ್ತು ಹೋಬಳಿಯ ಆಡಳಿತ ಕೇಂದ್ರ. ಇತಿಹಾಸಪ್ರಸಿದ್ಧ ನಗರ, ವಿದ್ಯಾಕೇಂದ್ರ; ಚೆನ್ನೈ-ಮುಂಬಯಿ ಬ್ರಾಡ್‌ಗೇಜ್ ರೈಲು ಮಾರ್ಗದಲ್ಲಿದ್ದು ಬೆಂಗಳೂರಿನಿಂದ 626ಕಿಮೀ ದೂರದಲ್ಲಿದೆ.

ಬಸವೇಶ್ವರ ಆಸ್ಪತ್ರೆ, ಗುಲ್ಬರ್ಗ

ಗುಲ್ಬರ್ಗ ನಗರಕ್ಕೆ ಕಲ್ಬುರ್ಗಿ ಎಂಬ ಹೆಸರು ಸ್ಥಳೀಕರಲ್ಲಿ ಹೆಚ್ಚು ಪ್ರಚಾರದಲ್ಲಿದೆ. 11ನೆಯ ಶತಮಾನದ ಶಾಸನಗಳಲ್ಲಿ ಕಲುಂಬರಗೆ ಎಂದು ಹೆಸರಿಸಲಾಗಿದೆ. ರಾಯವಾಚಕಮು ಎಂಬ ತೆಲುಗು ಗ್ರಂಥದಲ್ಲಿ ಮತ್ತು ಕೆಳದಿನೃಪವಿಜಯದಲ್ಲಿ ಕಲುಬರಿಗ ಎಂಬ ರೂಪ ಕಾಣಿಸಿಕೊಳ್ಳುತ್ತದೆ. ಕಲುಂಬರಗ ಎಂಬ ಪ್ರಾಚೀನ ರೂಪವೇ ಕಲ್ಬುರ್ಗಿಯಾಗಿ ರೂಪಾಂತರಗೊಂಡಿರಬೇಕು. ಗುಲ್ಬರ್ಗ ಎಂಬ ಪದ ಮಹಮ್ಮದಿಯರ ಆಳಿಕೆಯಲ್ಲಿ ಪ್ರಚಾರಕ್ಕೆ ಬಂತು. ಗುಲ್ಬರ್ಗ ಎಂದರೆ ಹೂದೋಟ.

ಗುಲ್ಬರ್ಗ ನಗರ ಅಲೆಯಂತೆ ಏರಿಳಿತಗಳಿಂದ ಕೂಡಿದ ಕರಿ ಎರೆ ಮಣ್ಣಿನ ಪ್ರದೇಶದಲ್ಲಿ ಸು.16ಚ.ಕಿಮೀ ವಿಸ್ತಾರದಲ್ಲಿ ಹಬ್ಬಿದೆ. ಇಲ್ಲಿರುವ ಮನೆಗಳಲ್ಲಿ ಹೆಚ್ಚಿನವು ಕಲ್ಲುಕಟ್ಟಡಗಳು. ರೈಲ್ವೆ ನಿಲ್ದಾಣ ಹಳೆಯ ನಗರದಿಂದ ಸ್ವಲ್ಪ ದೂರದಲ್ಲಿದೆ. ರೈಲ್ವೆ ನಿಲ್ದಾಣದಿಂದ ಒಂದೂವರೆ ಕಿಮೀ ದೂರದೊಳಗೆ ಐವಾನ್ ಎ ಶಾಹೀ ಬಂಗಲೇ ಇದೆ. ಸರ್ಕಾರಿ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜು ಮತ್ತು ವಿದ್ಯಾರ್ಥಿನಿಲಯ ಕಟ್ಟಡಗಳು ರೈಲು ನಿಲ್ದಾಣದ ಬಳಿಯಲ್ಲೇ ಇವೆ. ಶಾಹಪುರ ರಸ್ತೆಯ ಬಳಿಯಲ್ಲಿ ಸರ್ಕಾರಿ ಕಚೇರಿಗಳೂ ಸರ್ಕಾರಿ ನೌಕರರ ವಸತಿಗೃಹಗಳೂ ಇವೆ.

ರೈಲ್ವೆ ನಿಲ್ದಾಣದಿಂದ 4ಕಿಮೀ ದೂರದಲ್ಲಿರುವ ನೆಹ್ರೂಗಂಜ್ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಅನೇಕ ಅಂಗಡಿಗಳೂ ಉಪಾಹಾರಗೃಹಗಳೂ ಇವೆ. ಕಾರಾಗೃಹ ಇರುವುದು ಮುಖ್ಯ ಪೇಟೆಬೀದಿಯ ರಸ್ತೆಯ ಬದಿಯಲ್ಲಿ. ಸ್ಟೇಷನ್ ಬಜಾರ್ ಸುತ್ತ ಮತ್ತು ಜಗತ್ ವಿಭಾಗದಲ್ಲಿ (ಚಾಳ್‌ಗಳು) ವಾಸಗೃಹಗಳು ಇವೆ. ಈಚೆಗೆ ಹೊಸಹೊಸ ಬಡಾವಣೆಗಳು ಬೆಳೆಯುತ್ತಿವೆ. ರೈಲ್ವೆ ನಿಲ್ದಾಣದಿಂದ ಮುಖ್ಯ ಪೇಟೆಬೀದಿಗೆ ಹೋಗುವ ಮಾರ್ಗದಲ್ಲಿರುವ ಮಹಬೂಬ್ ಗುಲ್ಷನ್ ಒಂದು ಸುಂದರ ಉದ್ಯಾನ. ಐವಾನ್ ಎ ಶಾಹೀಯ ಸುತ್ತ ಒಂದು ಉದ್ಯಾನವಿದೆ.

ನಗರ ಔದ್ಯಮಿಕವಾಗಿಯೂ ಬೆಳೆಯಲಾರಂಭಿಸಿದೆ. ಇಲ್ಲಿನ ಎಂ.ಎಸ್.ಕೆ ಮಿಲ್ಸ್ ಎಂಬ ಹತ್ತಿ ಗಿರಣಿ ಕಾರ್ಖಾನೆಗಳಲ್ಲಿ ದೊಡ್ಡದು. ಅಲ್ಲದೆ ಬೇಳೆ ತಯಾರಿಸುವುದು, ಮರ ಕುಯ್ಯುವುದು, ಎಣ್ಣೆ ತೆಗೆಯುವುದು, ಬೀಡಿ ತಯಾರಿಕೆ ಮೊದಲಾದ ಇತರ ಉದ್ಯಮಗಳೂ ಇಲ್ಲಿವೆ.

ಗುಲ್ಬರ್ಗ ರೈಲು ನಿಲ್ದಾಣದ ಬಳಿಯಲ್ಲೇ ಬಸ್ ನಿಲ್ದಾಣ ಇದೆ. ಇಲ್ಲಿಂದ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೂ ರಾಜ್ಯದ ಮತ್ತು ಹೊರಗಿನ ಮುಖ್ಯ ಸ್ಥಳಗಳಿಗೂ ವಾಹನ ಸಂಪರ್ಕವಿದೆ. ಸುತ್ತಣ ಪ್ರದೇಶದೊಳಗಿನ ಉತ್ತಮ ಸಂಪರ್ಕದಿಂದಾಗಿ ಗುಲ್ಬರ್ಗ ವ್ಯಾಪಾರ ಕೇಂದ್ರವೂ ಆಗಿದೆ.

ಗುಲ್ಬರ್ಗದಲ್ಲಿ ಅನೇಕ ಶಾಲಾಕಾಲೇಜುಗಳೂ ಆಸ್ಪತ್ರೆ ಮುಂತಾದವೂ ಉಂಟು. ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಶರಣಬಸವೇಶ್ವರ ಕಾಲೇಜು, ಸೇಠ್ ಶಂಕರಲಾಲ್ ಲಾಹೋಟಿ ಲಾ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ವೈದ್ಯಕೀಯ ಕಾಲೇಜು - ಇವು ಕೆಲವು ಮುಖ್ಯ ಶಿಕ್ಷಣ ಸಂಸ್ಥೆಗಳು. ಗುಲ್ಬರ್ಗ ವಿಶ್ವವಿದ್ಯಾಲಯ ಇಲ್ಲಿ ಸ್ಥಾಪಿತವಾಗಿದೆ (1980). ಇಲ್ಲಿ ಕೇಂದ್ರ ವಿಶ್ವವಿದ್ಯಾಲಯವೂ ಇದೆ. ಗುಲ್ಬರ್ಗ ನಗರ ಎಲ್ಲ ಆಧುನಿಕ ಸೌಕರ್ಯಗಳನ್ನೂ ಹೊಂದಿದೆ.

ಶರಣಬಸವೇಶ್ವರ ದೇವಾಲಯ ಮತ್ತು ಖ್ವಾಜಾ ಬಂದೇ ನವಾಜರ ದರ್ಗಾ ಗುಲ್ಬರ್ಗದ ಪ್ರಮುಖ ಧಾರ್ಮಿಕ ಕೇಂದ್ರಗಳು. ಶರಣಬಸವೇಶ್ವರ ದೇವಾಲಯ ಇತ್ತೀಚಿನದಾದರೂ ಬಹು ಸುಂದರವಾಗಿ ರಚಿತವಾಗಿರುವ ವಾಸ್ತುಕೃತಿ. ಇಲ್ಲಿ ಪ್ರಸಿದ್ಧ ವೀರಶೈವ ಸಂತರಾದ ಶರಣಬಸವೇಶ್ವರರ ಗೌರವಾರ್ಥ ವರ್ಷಂಪ್ರತಿ ಚೈತ್ರ ಬಹುಳ ಪಂಚಮಿಯಿಂದ ಹದಿನೈದು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಖ್ವಾಜಾ ಬಂದೇ ನವಾಜರ ದರ್ಗಾದಲ್ಲಿ ಪ್ರತಿವರ್ಷ ಜಿಕೈದಾ ತಿಂಗಳಿನಲ್ಲಿ ಮೂರು ದಿನಗಳ ಕಾಲ ಉರುಸ್ ನಡೆಯುತ್ತದೆ. ಈ ಎರಡು ಸಂದರ್ಭಗಳಲ್ಲೂ ಲಕ್ಷ ಲಕ್ಷಸಂಖ್ಯೆಯಲ್ಲಿ ಭಕ್ತಾದಿಗಳು ಸೇರುತ್ತಾರೆ. *

ಸಾಹಿತ್ಯ ಮತ್ತು ಜಾನಪದ ಕ್ಷೇತ್ರಕ್ಕೆ ಈ ಜಿಲ್ಲೆ ಅಪೂರ್ವ ಕೊಡುಗೆ ನೀಡಿದೆ. ಕಡಿದಾಳ ಕೃಷ್ಣರಾವ್, ಎಂ.ಎಸ್.ಲಠ್ಠೆ, ಪಿ.ಕೆ.ಖಂಡೋಬ, ಚೆನ್ನಣ್ಣ ವಾಲೀಕಾರ, ತವಗ ಭೀಮಸೇನರಾವ್, ಗೀತಾ ನಾಗಭೂಷಣ, ಶೈಲಜಾ ಉಡಚಣ, ಎ.ಕೆ.ರಾಮೇಶ್ವರ, ಸೀತಾರಾಮ ಜಾಗೀರದಾರ ಇವರನ್ನು ಹೆಸರಿಸಬಹುದು.

ಗುಲ್ಬರ್ಗದಲ್ಲಿ ಅನೇಕ ಐತಿಹಾಸಿಕ ಸ್ಮಾರಕಗಳಿವೆ. ಇದು ಬಹಮನೀ ಅರಸರ ಮೊದಲ ರಾಜಧಾನಿಯಾಗಿದ್ದರಿಂದ ಕರ್ನಾಟಕದಲ್ಲಿರುವ ಭಾರತೀಯ ಇಸ್ಲಾಮೀ ಸಂಪ್ರದಾಯದಲ್ಲಿರುವ ಮೊದಲ ಕೃತಿಗಳೆಲ್ಲ ಈ ನಗರದಲ್ಲೇ ಇವೆ. ಆ ಕಾಲದಲ್ಲಿ ಕಟ್ಟಲಾದ ಗುಲ್ಬರ್ಗ ನಗರದ ಕೋಟೆ 15 ಬುರುಜುಗಳನ್ನೂ 20 ತುಪಾಕಿ ಗೋಪುರಗಳನ್ನೂ ಅಳವಡಿಸಿಕೊಂಡು ನಗರವನ್ನು ಸುತ್ತುವರಿದಿರುವ ಬೃಹತ್ ಕಲ್ಲುಕಟ್ಟಡ. ರಾಜ ಗುಲ್‌ಚಂದ್ ಎಂಬ ಹಿಂದು ದೊರೆ ಇದನ್ನು ಮೊದಲು ಕಟ್ಟಿದನೆಂಬುದು ಸ್ಥಳಪ್ರತೀತಿ. ಈತ ಚರಿತ್ರೆಗೆ ತಿಳಿಯದಿರುವ ವ್ಯಕ್ತಿಯಾದರೂ ಗುಲ್ಬರ್ಗ ನಗರ ಇಸ್ಲಾಮೀ ಆಳಿಕೆಯ ಪೂರ್ವದಲ್ಲೂ ಒಂದು ಮುಖ್ಯ ನಗರ ವಾಗಿದ್ದಿರಬೇಕೆಂಬುದು ಅಲ್ಲಿ ಕಂಡುಬಂದಿರುವ ಅನೇಕ ಹಿಂದು ದೇವಾಲಯಗಳ ಅವಶೇಷಗಳಿಂದಲೂ ಒಂದೆರಡು ಶಾಸನಗಳಿಂದಲೂ ತಿಳಿಯುತ್ತದೆ. ಇಲ್ಲಿಯ ಕೋಟೆ ಅಲಾಉದ್ದೀನ್ ಹಸನ್ ಬಹಮನೀಯ (1347-58) ಕಾಲದಲ್ಲಿ ವಿಸ್ತಾರಗೊಂಡಿತ್ತು.



ಕೋಟೆ ಮಸೀದಿ, ಗುಲ್ಬರ್ಗ

ಗುಲ್ಬರ್ಗ ಕೋಟೆಯೊಳಗಿರುವ ದೊಡ್ಡ ಮಸೀದಿ ಅಪರೂಪ ಶೈಲಿಯಲ್ಲಿರುವ ದೊಡ್ಡ ಕಟ್ಟಡ. 216' ಉದ್ದ ಮತ್ತು 176' ಅಗಲದ ಈ ಕಟ್ಟಡವು 6 ಕಂಬಗಳು ಮೇಲೆ ಎತ್ತಿದ ಅನೇಕ ಗುಮ್ಮಟಗಳಿಂದ ಪೂರ್ಣವಾಗಿ ಆಚ್ಛಾದಿತವಾಗಿದೆ. ಈ ಮಸೀದಿಯನ್ನು ಮಹಮದ್ ಷಾ ಬಹಮನೀಯ ಆಳಿಕೆಯಲ್ಲಿ 1376ರಲ್ಲಿ ಕಟ್ಟಲಾಯಿತೆಂದೂ ಇದರ ಶಿಲ್ಪಿ ಇರಾನಿನ ಕ್ವಾಸ್ವಿನ್‌ನ ನಿವಾಸಿ ರಫಿ ಎಂಬವನೆಂದೂ ಇಲ್ಲಿಯ ಒಂದು ಶಾಸನದಿಂದ ಗೊತ್ತಾಗುತ್ತದೆ. ಈ ಮಸೀದಿಯ ವಿಶಿಷ್ಟ ವಿನ್ಯಾಸವನ್ನು ಆಧರಿಸಿ ಇದು ಸ್ಪೇನಿನ ಕಾರ್ಡೋವದ ಪ್ರಸಿದ್ಧ ಮಸೀದಿಯನ್ನು ಹೋಲುತ್ತದೆ ಎಂದು ಹೇಳುವುದು ರೂಢಿ. ಈ ಮಸೀದಿಯಲ್ಲಿ ಪ್ರಾರ್ಥನಾ ಕೊಠಡಿ ಇರುವ ಪಶ್ಚಿಮ ಭಾಗ ಉಳಿದ ಭಾಗಕ್ಕಿಂತ ಎತ್ತರವಾಗಿದ್ದು ಅದರ ಮೇಲೆ ದೊಡ್ಡ ಗುಮ್ಮಟಗಳಿವೆ.

ಮುಂಭಾಗದ ಹಜಾರದ ಗುಮ್ಮಟಗಳು ಇವಕ್ಕಿಂತ ಕುಳ್ಳು. ಇಲ್ಲಿ ಉಪಯೋಗಿಸಿರುವ ಗುಮ್ಮಟಗಳು ಪಾರಸೀ ಮಾದರಿಯವು.ಗುಲ್ಬರ್ಗ ನಗರದ ಷಾ ಬಜಾರ್ ಮಸೀದಿ ಈ ಕಾಲದ ಇನ್ನೊಂದು ಉಲ್ಲೇಖಾರ್ಹ ಕಟ್ಟಡ. ಇದನ್ನು ಒಂದನೆಯ ಮಹಮ್ಮದ್ ಷಾ ಬಹಮನೀಯ (1358–75) ಕಾಲದಲ್ಲಿ ಕಟ್ಟಿರಬೇಕೆಂದು ಊಹಿಸಲಾಗಿದೆ. ಈ ಮಸೀದಿಯ ಮುಂಭಾಗದ ಇಕ್ಕಡೆಗಳಲ್ಲಿ ಒಂದೊಂದು ಎತ್ತರವಾದ ಮಿನಾರುಗಳೂ ಕಮಾನಿನ ಪ್ರವೇಶ ದ್ವಾರವೂ ಒಳಗೆ ತೆರೆದ ಅಂಗಳವೂ ಅದರ ಹಿಂದೆ ಪ್ರಾರ್ಥನಾ ಹಜಾರವೂ ಇವೆ.

ಗುಲ್ಬರ್ಗ ಕೋಟೆಯ ದಕ್ಷಿಣ ದ್ವಾರದ ಬಳಿ ತುಗಲಕ್ ಶೈಲಿಯಲ್ಲಿ ಕಟ್ಟಿದ ಕೆಲವು ಸಮಾಧಿಗಳು ಉಳಿದಿವೆ. ಅವುಗಳಲ್ಲಿ ಮೂರನ್ನು ಬಹಮನೀ ವಂಶದ ಮೊದಲ ಮೂವರು ಅರಸರವೆಂದು ಗುರುತಿಸಲಾಗಿದೆ. ಅಲಾ ಉದ್ದೀನ್ ಹಸನ್ ಬಹಮನೀಯ (1347–58) ಸಮಾಧಿ ಈ ಗುಂಪಿನ ಪಶ್ಚಿಮದ ಕೊನೆಯಲ್ಲಿದೆ. ಇದು 4' ಎತ್ತರದ ಜಗತಿಯ ಮೇಲೆ ಕಟ್ಟಲಾಗಿರುವ 40' 6" ಚೌಕದ ಕಟ್ಟಡ. ಇದು ಕಲ್ಲು ಮತ್ತು ಗಾರೆಯಿಂದ ಎತ್ತಲಾದ ಹಜಾರ. ಇದರ ಗೋಡೆಗಳು 20' ಎತ್ತರವಾಗಿವೆ. ಮೇಲೆ ಹೋದಂತೆ ಒಳಬಾಗುವ ರೀತಿಯ ಓರೆಯ ಹೊರಮೈಯನ್ನುಳ್ಳವಾಗಿವೆ. ಚಾವಣಿಯ ಗುಮ್ಮಟ ಸುಮಾರು ಮಟ್ಟಸವಾದ್ದು. ಒಳ ಹಜಾರದಲ್ಲಿ ಗುಮ್ಮಟದ ನೇರ ಕೆಳಗೆ ಮೂರು ಸಮಾಧಿಶಿಲೆಗಳಿವೆ. ಅವುಗಳಲ್ಲಿ ಒಂದು ಅಲಾ ಉದ್ದೀನನದೆಂದು ಹೇಳಲಾಗುತ್ತದೆ. ಅಲಾ ಉದ್ದೀನನ ಮಗ 1ನೆಯ ಮಹಮ್ಮದ್ ಷಾ ಮತ್ತು ಮುಂದಿನ ಅರಸ 2ನೆಯ ಮಹಮ್ಮದ್ ಷಾ ಇವರ ಸಮಾಧಿಗಳೂ ಇಲ್ಲಿವೆ.

ಗುಲ್ಬರ್ಗದ ಬಳಿ ಇರುವ ಹಫ್ತ್ ಗುಂಬಜ್ ಎಂಬ ಏಳು ಸಮಾಧಿಗಳ ಸಮೂಹ, ಊರ ಒಳಗಿರುವ ಖ್ವಾಜಾ ಬಂದೇ ನವಾಜ್ ದರ್ಗಾ ಮತ್ತು ಚೋರ್ ಗುಂಬಜ್ ಈ ಕಾಲದ ಇಲ್ಲಿಯ ಇತರ ಗಮನಾರ್ಹ ಕಟ್ಟಡಗಳು. 15ನೆಯ ಶತಮಾನದ ಖಲಂದರ್ ಖಾನನ ಮಸೀದಿ ಉತ್ತಮ ಪ್ರಮಾಣ, ಸರಳ ಅಲಂಕರಣ ಇವುಗಳಿಂದಾಗಿ ಸುಂದರವಾಗಿ ಎದ್ದುಕಾಣುವ ಕಟ್ಟಡ. ಇದು ಚಿಕ್ಕದಾದರೂ ವಿನ್ಯಾಸ ಮತ್ತು ಸೌಂದರ್ಯದಲ್ಲಿ ಕೈರೋದ ಜಾಮಿ ಅಜರ್ ಮಸೀದಿಯನ್ನು ಹೋಲುತ್ತದೆಯೆಂದು ಹೇಳಲಾಗಿದೆ. ಗುಲ್ಬರ್ಗದಲ್ಲಿ ಈಗ ಹಿರಾಪುರ್ ಮಸೀದಿ ಎನಿಸಿಕೊಂಡಿರುವ ಮಸೀದಿಯನ್ನು ಚಾಂದಬೀಬಿ 1585ರಲ್ಲಿ ಕಟ್ಟಿಸಿದಳು. ವಿಶಿಷ್ಟ ಶೈಲಿಯ ಕಮಾನುಗಳನ್ನುಳ್ಳ ಒಂದು ಮನೋಹರ ಕೃತಿ ಇದು. 1687ರಲ್ಲಿ ಔರಂಗಜೇಬ್ ಖ್ವಾಜಾ ಬಂದೇ ನವಾಜ್ ದರ್ಗಾದ ಬಳಿ ಒಂದು ಮಸೀದಿಯನ್ನು ಕಟ್ಟಿಸಿದ. ಇಲ್ಲಿ ಉಪಯೋಗಿಸ ಲಾಗಿರುವ ಉದ್ದನೆಯ ಅಲಂಕೃತ ಮಿನಾರುಗಳು, ಶಿಲ್ಪಿತ ಚಜ್ಜಾಗಳು ಮುಂತಾದ ವಾಸ್ತು ಅಂಶಗಳಿಂದ ಈ ಕಟ್ಟಡ ದಕ್ಷಿಣ ಭಾರತದಲ್ಲಿ ಹಿಂದು ಶೈಲಿಗಳ ಕೈಯಲ್ಲಿ ಬೆಳೆದ ಇಸ್ಲಾಮೀ ಸಂಪ್ರದಾಯದ ಶೈಲಿಯ ಉತ್ತಮ ಉದಾಹರಣೆಯಾಗಿದೆಯೆಂದು ಹೇಳಲಾಗಿದೆ. (ಎಸ್.ಎನ್.)

**ಗುಲ್ಬರ್ಗ ವಿಶ್ವವಿದ್ಯಾಲಯ :** ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಲ್ಲೊಂದಾಗಿತ್ತು. ಈಗ ಕೇಂದ್ರಿಯ ವಿಶ್ವವಿದ್ಯಾಲಯವಾಗಿದೆ. ಗುಲ್ಬರ್ಗದಲ್ಲಿ ಆಡಳಿತ ಕೇಂದ್ರ ಮತ್ತು ಶಿಕ್ಷಣ ಸಂಸ್ಥೆಗಳಿವೆ. ಹೈದರಬಾದ್ ಕರ್ನಾಟಕ ಪ್ರದೇಶ ಆರ್ಥಿಕವಾಗಿ ಹಿಂದುಳಿದ ಪ್ರದೇಶವಾದರೂ ಸಾಹಿತ್ಯ, ಸಂಸ್ಕೃತಿ, ಕಲೆಗಳ ದೃಷ್ಟಿಯಿಂದ ತುಂಬಾ ಸಂಪದ್ಭರಿತವಾದುದು. ಹಿಂದೆ ಈ ಪ್ರದೇಶದ ಜನ ಉನ್ನತ ಶಿಕ್ಷಣ ಪಡೆಯಲು ಹೈದರಬಾದಿಗೋ, ದೂರದ ಧಾರವಾಡಕ್ಕೋ ಹೋಗಬೇಕಾಗುತ್ತಿತ್ತು. 1970ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಗುಲ್ಬರ್ಗದಲ್ಲಿ ಪ್ರಾರಂಭ ಮಾಡಲಾಯಿತು. ಕನ್ನಡ, ರಸಾಯನ ವಿಜ್ಞಾನ, ಗಣಿತ ವಿಜ್ಞಾನ, ಇಂಗ್ಲಿಷ್ ಮತ್ತು ರಾಜ್ಯಶಾಸ್ತ್ರ ಈ ಐದು ವಿಷಯಗಳಲ್ಲಿ ಸ್ನಾತಕೋತ್ತರ ವಿಭಾಗಗಳಿದ್ದವು. ಈ ಪ್ರದೇಶದ ಶಿಕ್ಷಣತಜ್ಞರು, ಸಮಾಜ ಸೇವಕರು ಮತ್ತು ರಾಜಕೀಯ ಮುಂದಾಳುಗಳ ಪ್ರಯತ್ನಗಳಿಂದ 1980 ಸೆಪ್ಟಂಬರ್ 10ರಂದು ಗುಲ್ಬರ್ಗ ವಿಶ್ವವಿದ್ಯಾಲಯ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಅಸ್ತಿತ್ವಕ್ಕೆ ಬಂತು.

ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ 34 ವಿಭಾಗಗಳಿವೆ. ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬೀದರ್, ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ ಮತ್ತು ಗುಲ್ಬರ್ಗ ಈ ಆರು ಜಿಲ್ಲೆಗಳು ಒಳಪಟ್ಟಿವೆ. ಈ ವಿಶ್ವವಿದ್ಯಾಲಯ ಕಕ್ಷೆಯಲ್ಲಿ ನೂರ ನಲವತ್ತೇಳು (147) ಕಾಲೇಜುಗಳಿವೆ. ಇವುಗಳಲ್ಲಿ ಕೆಲವು 35 ಕಾಲೇಜುಗಳು ಸರ್ಕಾರದ ಅನುಧಾನ ಪಡೆದಿದೆ. ಇನ್ನುಳಿದ 112 ಕಾಲೇಜುಗಳು ಅನುದಾನ ಪಡೆಯದೇ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಬೀದರ್, ರಾಯಚೂರು, ಸಂಡೂರು ಮತ್ತು ಬಳ್ಳಾರಿಗಳಲ್ಲಿ ಈ ವಿಶ್ವವಿದ್ಯಾಲಯದ ಅಧೀನದಲ್ಲಿ ಸ್ನಾತಕೋತ್ತರ ಕೇಂದ್ರಗಳಿವೆ. ಶೈಕ್ಷಣಿಕವಾಗಿ ಹಿಂದುಳಿದಿರುವ ಹೈದರಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯ ಈ ಭಾಗದ ಜನರ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವ ಮೂಲಕ ಈ ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಆರು ವಿದ್ವನ್ಮಂಡಳಿ ನಿಕಾಯಗಳಿವೆ. ಕಲಾನಿಕಾಯ ದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ಸಂಸ್ಕೃತ ವಿಭಾಗಗಳಿವೆ. ವಾಣಿಜ್ಯ ಹಾಗೂ ವ್ಯಾಪಾರ ನಿರ್ವಹಣೆ ನಿಕಾಯದಲ್ಲಿ ವಾಣಿಜ್ಯ ಹಾಗೂ ವ್ಯಾಪಾರ ನಿರ್ವಹಣೆ ವಿಭಾಗಗಳಿವೆ. ಶಿಕ್ಷಣ ನಿಕಾಯದಲ್ಲಿ ಶಿಕ್ಷಣ ಹಾಗೂ ದೈಹಿಕಶಿಕ್ಷಣ ವಿಭಾಗಗಳಿವೆ. ಕಾನೂನು ನಿಕಾಯ ಕಾನೂನು ವಿಭಾಗವನ್ನು ಹೊಂದಿದೆ. ವಿಜ್ಞಾನ ಹಾಗೂ ತಂತ್ರಜ್ಞಾನ ನಿಕಾಯದಲ್ಲಿ ಆನ್ವಯಿಕ ವಿದ್ಯುನ್ಮಾನವಿಜ್ಞಾನ, ಜೀವರಸಾಯನ ವಿಜ್ಞಾನ, ಜೀವತಂತ್ರಜ್ಞಾನ, ಸಸ್ಯವಿಜ್ಞಾನ, ರಸಾಯನವಿಜ್ಞಾನ, ಗಣಕವಿಜ್ಞಾನ, ಭೂವಿಜ್ಞಾನ, ಮಿನರಲ್ ಪ್ರಾಸೆಸಿಂಗ್, ಭೂಗರ್ಭವಿಜ್ಞಾನ, ಔದ್ಯೋಗಿಕ ರಸಾಯನವಿಜ್ಞಾನ, ಉಪಕರಣ ತಂತ್ರಜ್ಞಾನ, ಗಣಿತ ವಿಜ್ಞಾನ, ಸೂಕ್ಷ್ಮಾಣುಜೀವವಿಜ್ಞಾನ, ಭೌತವಿಜ್ಞಾನ ಸಂಖ್ಯಾವಿಜ್ಞಾನ, ಸಕ್ಕರೆತಂತ್ರಜ್ಞಾನ, ಪ್ರಾಣಿವಿಜ್ಞಾನ ಈ ವಿಭಾಗಗಳಿವೆ. ಸಮಾಜವಿಜ್ಞಾನ ನಿಕಾಯದಲ್ಲಿ ಅರ್ಥಶಾಸ್ತ್ರ, ಇತಿಹಾಸ, ಗ್ರಂಥಾಲಯ ಹಾಗೂ ಮಾಹಿತಿವಿಜ್ಞಾನ, ರಾಜ್ಯಶಾಸ್ತ್ರ, ಮನೋವಿಜ್ಞಾನ, ಸಮಾಜ ಕಾರ್ಯ, ಸಮಾಜಶಾಸ್ತ್ರ, ಮಹಿಳಾ ಅಧ್ಯಯನ ವಿಭಾಗಗಳಿವೆ.

ರಾಷ್ಟ್ರಕೂಟ ಮಹಾದ್ವಾರ, ಗುಲ್ಬರ್ಗ ವಿಶ್ವವಿದ್ಯಾಲಯ

ಗುಲ್ಬರ್ಗ ವಿಶ್ವವಿದ್ಯಾಲಯ ಜೀವತಂತ್ರಜ್ಞಾನ ವಿಭಾಗ, ಸೂಕ್ಷ್ಮಾಣುಜೀವವಿಜ್ಞಾನ ಹಾಗೂ ಮಹಿಳಾ ಅಧ್ಯಯನ ವಿಭಾಗಗಳನ್ನು ತೆರೆದ ರಾಜ್ಯದ ಪ್ರಪ್ರಥಮ ವಿಶ್ವವಿದ್ಯಾಲಯವೆನಿಸಿದೆ. ಈ ವಿಶ್ವವಿದ್ಯಾಲಯದ ಸಂಶೋಧನೆಯ ಫಲವಾದ ಕಬ್ಬಿನ ಹೊಸ ತಳಿಯನ್ನು ಈ ಪ್ರದೇಶದಲ್ಲಿ ಈಗ ಬೆಳೆಯಲಾಗುತ್ತಿದೆ. ಬೀದರ್‌ನಲ್ಲಿ ಪ್ರಾರಂಭಗೊಂಡಿರುವ ಸಕ್ಕರೆ ತಂತ್ರಜ್ಞಾನ ವಿಭಾಗ ಒಂದು ಮಾದರಿ ವಿಭಾಗವಾಗಿ ಬೆಳೆಯುತ್ತಿದೆ. ರಸಾಯನವಿಜ್ಞಾನ, ಪ್ರಾಣಿವಿಜ್ಞಾನ ಹಾಗೂ ಸೂಕ್ಷ್ಮಾಣುಜೀವವಿಜ್ಞಾನ, ಆನ್ವಯಿಕ ವಿದ್ಯುನ್ಮಾನ ವಿಭಾಗಗಳಲ್ಲಿ ನಡೆದಿರುವ ಸಂಶೋಧನೆಗಳು ಅನೇಕ ಸಂಶೋಧಕರ ಗಮನ ಸೆಳೆದಿವೆ. ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ಆನ್ವಯಿಕ ವಿದ್ಯುನ್ಮಾನ ವಿಭಾಗಗಳು ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ನಡೆಸಿವೆ.

ಇದುವರೆಗೆ ಈ ವಿಶ್ವವಿದ್ಯಾಲಯದಿಂದ ನೂರಾರು ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆದಿದ್ದಾರೆ. ಸದ್ಯ ಹಲವಾರು ವಿದ್ಯಾರ್ಥಿಗಳುಎಂ.ಫಿಲ್. ಪದವಿ ಹಾಗೂ ನಾನೂರು ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಿದ್ದಾರೆ. ಅನೇಕ ಜನ ಗಣ್ಯ ವ್ಯಕ್ತಿಗಳಿಗೆ ಈ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಪರದೇಶಗಳ ಶೈಕ್ಷಣಿಕ ಸಂಸ್ಥೆಗಳ ಸಹಯೋಗದೊಡನೆ ಈ ವಿಶ್ವವಿದ್ಯಾಲಯದ ಸಂಶೋಧಕರು ತಮ್ಮ ಸಂಶೋಧನೆ ನಡೆಸಿದ್ದಾರೆ. ಶ್ರೀ ಗಳಂಗಳಪ್ಪ ಪಾಟೀಲ ಬಸವಾದಿ ಶರಣ ಸಾಹಿತ್ಯ ಕೇಂದ್ರ, ಅಂಬೇಡ್ಕರ್ ಪೀಠ ಹಾಗೂ ಎಸ್.ಎಸ್. ಪಾಟೀಲ ಸೈನ್ಸ್ ಕ್ರಿಯೇಟಿವಿಟಿ ಸೆಂಟರ್ ಇವು ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿವೆ. ಈ ವಿಶ್ವವಿದ್ಯಾಲಯದ ಕಕ್ಷೆಗೆ ಒಳಪಟ್ಟ 21 ಕಾಲೇಜುಗಳಲ್ಲಿ ಯುಜಿಸಿ ನೆರವಿನಿಂದ ವೃತ್ತಿಪರ ಕೋರ್ಸುಗಳು ನಡೆಯುತ್ತಿವೆ.

ಗುಲ್ಬರ್ಗ ವಿಶ್ವವಿದ್ಯಾಲಯ ಸು. 344 ಹೆಕ್ಟೇರ್ ವಿಸ್ತಾರವಾದ ಪ್ರದೇಶದಲ್ಲಿ ವ್ಯಾಪಿಸಿದ್ದು ಸುಸಜ್ಜಿತ ಕಟ್ಟಡಗಳನ್ನು ಹೊಂದಿದೆ. ವಿಶ್ವವಿದ್ಯಾಲಯದ ಬಹುತೇಕ ಎಲ್ಲ ವಿಭಾಗಗಳು ಸ್ವತಂತ್ರ ಕಟ್ಟಡಗಳನ್ನು ಹೊಂದಿವೆ. ಗಣಕವಿಜ್ಞಾನ ವಿಭಾಗ ಅತ್ಯಾಧುನಿಕ

ಗಣಕ ಯಂತ್ರಗಳನ್ನು ಹೊಂದಿದೆ. ಗ್ರಂಥಾಲಯದಲ್ಲಿ ಸೌಲಭ್ಯಗಳು ಸಾಕಷ್ಟಿದ್ದು 2 ಲಕ್ಷ ಗ್ರಂಥಗಳನ್ನು ಹೊಂದಿದೆ. ಗ್ರಂಥಾಲಯ ಇಂಟರ್‌ನೆಟ್ ಸೌಲಭ್ಯ ಹೊಂದಿದ್ದು ವಿದ್ಯಾರ್ಥಿಗಳಿಗೆ ಬಹು ಉಪಯೋಗಿಯಾಗಿದೆ. ಶಿಕ್ಷಕ ಹಾಗೂ ಶಿಕ್ಷಕೇತರರಿಗೆ ವಸತಿಗೃಹಗಳು, ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ವಸತಿನಿಲಯಗಳ ಸೌಲಭ್ಯವಿದೆ. ದೈಹಿಕಶಿಕ್ಷಣ ವಿಭಾಗ ವಿಶ್ವವಿದ್ಯಾಲಯದ ಹೆಮ್ಮೆಯ ಹಾಗೂ ಬೃಹತ್ ವಿಭಾಗವಾಗಿದೆ. ಹೊರಾಂಗಣ ಹಾಗೂ ಒಳಾಂಗಣ ಕ್ರೀಡಾ ಭವನಗಳಿವೆ. ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ಮಹತ್ವದ ಪಾತ್ರವಹಿಸುತ್ತಲಿದೆ. ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ವರ್ಗದ ಸರ್ವತೋನ್ಮುಖ ಬೆಳವಣಿಗೆಗೆ ವಿಶ್ವವಿದ್ಯಾಲಯದಲ್ಲಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ.

**ಕಾರ್ಯಸೌಧ, ಗುಲ್ಬರ್ಗ ವಿಶ್ವವಿದ್ಯಾಲಯ**

**ವ್ಯಾಸಂಗವಿಸ್ತರಣೆ, ಸಂಶೋಧನೆ ಮತ್ತು ಪ್ರಕಟಣೆ :** ಕನ್ನಡ ಅಧ್ಯಯನ ಸಂಸ್ಥೆ ಮೊದಲು ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯದ ದೊಡ್ಡ ವಿಭಾಗವಾಗಿದ್ದು ಈ ಭಾಗದ ಸಾಹಿತ್ಯಕ ಸಾಂಸ್ಕೃತಿಕ ಬೆಳವಣಿಗೆಗೆ ಚಾಲನೆ ನೀಡುತ್ತ ಬಂದಿದೆ. ಸಂಸ್ಥೆಯಲ್ಲಿ ಹಸ್ತಪ್ರತಿ ಭಂಡಾರವಿದೆ. ಈ ಸಂಸ್ಥೆಯ ಕಟ್ಟಡದಲ್ಲಿಯೇ ಶ್ರೀ ಗಳಂಗಳಪ್ಪ ಪಾಟೀಲ ಬಸವಾದಿ ಶರಣ ಸಾಹಿತ್ಯ ಕೇಂದ್ರ ಹಾಗೂ ಪ್ರಸಾರಾಂಗ ವಿಭಾಗಗಳಿವೆ. ಬಸವಾದಿ ಶರಣ ಸಾಹಿತ್ಯ ಕೇಂದ್ರ ಅನೇಕ ಗ್ರಂಥಗಳನ್ನು ಪ್ರಕಟಿಸಿದೆ. ಪ್ರಸಾರಾಂಗ ವಿಶ್ವವಿದ್ಯಾಲಯದ ಶೈಕ್ಷಣಿಕ ಪ್ರಗತಿಯ ಮುಖವಾಣಿ. ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಶಿಕ್ಷಕರಿಗೂ ಹಳ್ಳಿಯ ಸಾಮಾನ್ಯ ಜನರಿಗೂ ಸಂಬಂಧವೇರ್ಪಡಿಸಿ ಶೈಕ್ಷಣಿಕ ವಾತಾವರಣವನ್ನು ಸ್ಥಾಪಿಸುವಲ್ಲಿ ಇದು ಮಹತ್ವದ ಕಾರ್ಯ ಮಾಡುತ್ತಿದೆ. ನೂರಾರು ಪುಸ್ತಕಗಳನ್ನು ಪ್ರಕಟಿಸಿದೆ. ವಿಶ್ವವಿದ್ಯಾಲಯದಲ್ಲಿ ಹದಿಮೂರು ದತ್ತಿಗಳನ್ನು ಸ್ಥಾಪಿಸಲಾಗಿದೆ. ಪ್ರತಿ ವರ್ಷ ಈ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ವಿಶ್ವವಿದ್ಯಾಲಯದ ವತಿಯಿಂದ ಕಲಾಗಂಗಾ, ಜ್ಞಾನಗಂಗಾ, ವಿಜ್ಞಾನಗಂಗಾ ಎಂಬ ಮೂರು ಸಂಶೋಧನ ಪತ್ರಿಕೆಗಳನ್ನು ಪ್ರಸಾರಾಂಗ ಪ್ರಕಟಿಸುತ್ತಿದೆ. ಒಂದು ವಾರ್ತಾ ಪತ್ರವೂ ಪ್ರಕಟವಾಗುತ್ತಿದೆ. ಹೈದರಾಬಾದ್ ಕರ್ನಾಟಕ ಭಾಗದ ಶ್ರೇಷ್ಠ ಲೇಖಕರಿಗೆ, ಕಥೆಗಾರರಿಗೆ, ಪುಸ್ತಕ ಪ್ರಕಾಶಕರಿಗೆ ಹಾಗೂ ಚಿತ್ರಕಲಾವಿದರಿಗೆ ಪ್ರತಿವರ್ಷ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರಶಸ್ತಿ ಪತ್ರ ಹಾಗೂ ಗೌರವಧನ ನೀಡಿ ಪ್ರೋತ್ಸಾಹಿಸುವ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಪ್ರಸಾರಾಂಗ ನಡೆಸಿಕೊಂಡು ಬರುತ್ತಿದೆ. ಈ ಪದ್ಧತಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಇಲ್ಲ.

**ಸ್ನಾತಕೋತ್ತರಕೇಂದ್ರಗಳು :** ಬಳ್ಳಾರಿ, ಸಂಡೂರು, ರಾಯಚೂರು, ಹಾಗೂ ಬೀದರ್‌ಗಳಲ್ಲಿ ಸ್ನಾತಕೋತ್ತರ ಕೇಂದ್ರಗಳಿವೆ. ಬೀದರ್ ಸ್ನಾತಕೋತ್ತರ ಕೇಂದ್ರದಲ್ಲಿ ಸಕ್ಕರೆ ತಂತ್ರಜ್ಞಾನ ಹಾಗೂ ಉರ್ದು ವಿಭಾಗಗಳಿವೆ. ರಾಯಚೂರು ಕೇಂದ್ರದಲ್ಲಿ ಕನ್ನಡ ವಿಭಾಗ, ಉಪಕರಣ ತಂತ್ರಜ್ಞಾನ, ಗಣಕವಿಜ್ಞಾನ, ಆನ್ವಯಿಕ ಗಣಕವಿಜ್ಞಾನದ ಸ್ನಾತಕೋತ್ತರ ಡಿಪ್ಲೊಮಾ ವಿಭಾಗವಿದೆ. ಬಳ್ಳಾರಿ ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಬಿ.ಎ. ಹಾಗೂ ಔದ್ಯೋಗಿಕ ರಸಾಯನವಿಜ್ಞಾನ ವಿಭಾಗಗಳಿವೆ. ಸ್ನಾತಕೋತ್ತರ ವಿಭಾಗಗಳ ಜೊತೆಗೆ ಸಂಡೂರು ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ, ಭೂ ವಿಜ್ಞಾನ, ಖನಿಜ ಸಂಸ್ಕರಣ ಹಾಗೂ ಬಿಎಸ್ಸಿ ಕೋರ್ಸುಗಳನ್ನು ತೆರೆಯಲಾಗಿದೆ. ಭೂ ವಿಜ್ಞಾನ ವಿಭಾಗ ಉನ್ನತ ಸಂಶೋಧನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಪ್ರಶಸ್ತಿ ಹಾಗೂ ಗೌರವಗಳು :** ಗುಲ್ಬರ್ಗ ವಿಶ್ವವಿದ್ಯಾಲಯ ಯು.ಜಿ.ಸಿ.ಯ ನ್ಯಾಕ್ ಸಮಿತಿಯಿಂದ ಮೌಲ್ಯಮಾಪನಕ್ಕೊಳಗಾಗಿದ್ದು ನಾಲ್ಕು ನಕ್ಷತ್ರ ಸ್ಥಾನ ಪಡೆದಿದೆ. ಅನೇಕ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವ್ಯಾಸಂಗ ಮತ್ತು ಸಂಶೋಧನೆಯಲ್ಲಿ ಉತ್ತಮ ಕೊಡುಗೆಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಗೌರವ, ಪ್ರಶಸ್ತಿಗಳನ್ನು ಸ್ವೀಕರಿಸಿದ್ದಾರೆ. 1999ರಲ್ಲಿ ಸಾರ್ಕ್ ಯುವಜನ ಸಮ್ಮೇಳನವನ್ನು ಈ ವಿಶ್ವವಿದ್ಯಾಲಯ ಯಶಸ್ವಿಯಾಗಿ ನಡೆಸಿತು. ಎನ್.ಎಸ್.ಎಸ್. ಘಟಕ ಇಂದಿರಾ ಗಾಂಧಿ ಯುವಜನ ರಾಷ್ಟ್ರೀಯ ಪುರಸ್ಕಾರವನ್ನು ಪಡೆದಿದೆ. ಎಂ.ನಾಗರಾಜ (1980–84) ಈ ವಿಶ್ವವಿದ್ಯಾಲಯದ ಮೊದಲ ಕುಲಪತಿ. ಹಾ.ಮಾ.ನಾಯಕ (1984–87), ಕೆ.ಎಚ್.ಚೆಲುವರಾಜು (1987–90), ಎನ್.ರುದ್ರಯ್ಯ (1990–96), ಎಂ.ಮುನಿಯಮ್ಮ (1996–99), ಜಿ.ಎಸ್.ಪಾಟೀಲ (1999, ಹಂಗಾಮಿ ಕುಲಪತಿ), ಎಂ.ವಿ.ನಾಡಕರ್ಣಿ (1999–2002) ಕುಲಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ಈಗಿನ ಕುಲಪತಿ ಬಿ.ಜಿ. ಮೂಲಿಮನಿ. (ಐ.)

**ಗುಲ್ಮ :** ಮಾನವನ ಉದರದೊಳಗೆ ಎಡಭಾಗದ ಮೇಲಿನ ಮೂಲೆಯಲ್ಲಿರುವ ಒಂದು ಅಂಗ (ಸ್ಪ್ಲೀನ್). ನಮ್ಮ ಎಡ ಅಂಗೈಯನ್ನು ಬೆನ್ನಿನ ಎಡ ಭಾಗದಲ್ಲಿ ಆದಷ್ಟು ಮೇಲೆ ಇಟ್ಟರೆ ಅದು ಉದರದೊಳಗೆ ಗುಲ್ಮ ಇರುವ ಸ್ಥಳವನ್ನು ಸೂಚಿಸುತ್ತದೆ. ಮುಷ್ಟಿಯ ಗಾತ್ರಕ್ಕಿಂತ ಸ್ವಲ್ಪ ದೊಡ್ಡದಾಗಿಯೂ ಉದ್ದವಾಗಿಯೂ ಗುಲ್ಮ ಉಂಟು. ಇದರ ತೂಕ ಸುಮಾರು ೨೦೦ ಗ್ರಾಮ್. ಗುಲ್ಮದ ರಚನೆ ವಿಶಿಷ್ಟವಾಗಿದೆ. ಅದು ನಾನಾ ಕ್ರಿಯೆಗಳನ್ನು ನಿರ್ವಹಿಸಬಲ್ಲುದು. ಆದರೆ ದೇಹದ ಬೇರೆ ಅಂಗಗಳೂ ಈ ಕ್ರಿಯೆಗಳನ್ನು ಮಾಡುವಂತಿರುವುದರಿಂದ ಮತ್ತು ಗುಲ್ಮವೇ ಪ್ರತ್ಯೇಕವಾಗಿ ಯಾವ ಅಗತ್ಯವಾದ ಕಾರ್ಯವನ್ನೂ ಎಸಗದೇ ಇರುವುದರಿಂದ ಇದನ್ನು ಒಂದು ಮುಖ್ಯ ಅಂಗವೆಂದು ಪರಿಗಣಿಸುವಂತಿಲ್ಲ. ಕಾರಣಾಂತರದಿಂದ ಶಸ್ತ್ರಕ್ರಿಯೆಯ ಮೂಲಕ ಗುಲ್ಮವನ್ನು ತೆಗೆದುಹಾಕಿಬಿಡಬೇಕಾದ ಸಂಭಾವ್ಯತೆಗಳಲ್ಲಿ ವ್ಯಕ್ತಿಗೆ ಯಾವ ವಿಶೇಷ ತೊಂದರೆಯೂ ಮುಂದಕ್ಕೆ ಕಂಡುಬಂದಿಲ್ಲ.

ಗುಲ್ಮವನ್ನು ಬಿಗಿಯಾಗಿ ಆವರಿಸಿಕೊಂಡು ಗಟ್ಟಿಯಾಗಿ ತಂತು ಮತ್ತು ಸ್ನಾಯುಯುಕ್ತವಾದ ಕವಚ ಇವೆ. ಇಲ್ಲಿಂದ ಎಲ್ಲ ದಿಕ್ಕುಗಳಲ್ಲಿಯೂ ತಡಿಕೆಗಳು ಹೊರಟು ಕವಲೊಡದು ಸಂಧಿಸಿ ಗುಲ್ಮವನ್ನು ಸಣ್ಣದೊಡ್ಡ ಭಾಗಗಳಾಗಿ ವಿಭಜಿಸುತ್ತವೆ. ಇವು ಸಹ ತಂತು ಮತ್ತು ಸ್ನಾಯುಯುಕ್ತವಾಗಿವೆ. ಈ ಜಾಲತಂತುಗಳು (ರೆಟಿಕ್ಯುಲರ್ ಫೈಬರ್ಸ್) ಆಯಾ ವಿಭಾಗದ ಒಳಗನ್ನೆಲ್ಲ ಆಕ್ರಮಿಸಿ ಅಲ್ಲಿ ಒಂದು ಬಲೆಯನ್ನು ನಿರ್ಮಿಸುತ್ತವೆ. ಇದರ ನೆರವಿನಲ್ಲಿ ಗುಲ್ಮದ ಮಿಕ್ಕ ಅಂಶಗಳು ವಿಭಾಗದ ತುಂಬ ಹೂರಣದಂತೆ ಭರ್ತಿಯಾಗಿ ನೆಲೆಗೊಂಡಿವೆ. ಹೂರಣ ಕೆಂಪಾಗಿದ್ದು ಅದರಲ್ಲಿ ಅಲ್ಲಲ್ಲಿ ಅಡಗಿರುವ ಸಣ್ಣ ಮತ್ತು ದೊಡ್ಡ ಬಿಳಿಭಾಗಗಳನ್ನು ಗಮನಿಸಬಹುದು. ಗುಲ್ಮವನ್ನು ಕೊಯ್ದು ನೋಡಿದರೆ ಈ ರವಾನೆ ಚೆನ್ನಾಗಿ ಕಂಡುಬರುತ್ತದೆ. ಕೆಂಪು ಭಾಗದಲ್ಲಿ ಕೆಂಪು ರಕ್ತಕಣಗಳು ವಿಶೇಷವಾಗಿವೆ. ಮಿಕ್ಕ ರಕ್ತಕಣಗಳು ರಕ್ತದಲ್ಲಿರುವಂತೆಯೇ ಇಲ್ಲೂ ಉಂಟು. ಬಿಳಿ ಭಾಗದಲ್ಲಿ ಶ್ವೇತಕಣಗಳು ಮಾತ್ರ ಅದರಲ್ಲೂ ದುಗ್ಧರಸಕಣಗಳು, ಇವೆಯಷ್ಟೆ. ವಾಸ್ತವವಾಗಿ ಈ ಬಿಳಿ ಹೂರಣದ ಭಾಗಗಳು ಗುಲ್ಮದೊಳಗೆ ಅಪಧಮನಿಗಳನ್ನು ಅಲ್ಲಲ್ಲಿ ಸುತ್ತುವರಿದಿರುವ ದುಗ್ಧ ರಸನಾಳ ಗಿಣ್ಣುಗಳೇ. ದುಗ್ಧರಸಾಣುಗಳನ್ನು ಉತ್ಪತ್ತಿಮಾಡುವುದು ಮಾತ್ರ ಅವುಗಳ ಕ್ರಿಯೆ. ಕೆಂಪು ಭಾಗದಲ್ಲಿ ಸೈನುಸಾಯ್ಡುಗಳೆಂಬ ಅತ್ಯಂತ ತೆಳುಭಿತ್ತಿಯ ಹಿಗ್ಗಿಸಲ್ಪಡಬಹುದಾದ ಅನೇಕ ರಕ್ತನಾಳಗಳಿವೆ. ಇವುಗಳ ಭಿತ್ತಿಯಲ್ಲಿ ಅಲ್ಲಲ್ಲಿ, ಸಾಧಾರಣ ಸೂಕ್ಷ್ಮದರ್ಶಿಯಲ್ಲಿ ಸುಲಭವಾಗಿ ಕಾಣದ, ರಂಧ್ರಗಳಿವೆ. ನಾಳಗಳ ಭಿತ್ತಿಯಲ್ಲೂ ಹೊರಗೂ ಬೇಕಾದಷ್ಟು ಜಾಲ, ಕಣಗಳೂ ಕಣಭುಂಜಕ ಜೀವಕಣಗಳೂ (ಮ್ಯಾಕ್ರೋಫೇಜಸ್) ಉಂಟು. ನಾಳಗಳು ಕೂಡ ಅವುಗಳ ಕೊನೆಯಲ್ಲಿ ತೆರೆದುಕೊಂಡು ಅವುಗಳಲ್ಲಿ ಪ್ರವಹಿಸುವ ರಕ್ತಕೆಂಪು ಹೂರಣದೊಡನೆ ಮಿಶ್ರವಾಗುತ್ತವೆ ಎಂಬ ಒಂದು ಅಭಿಪ್ರಾಯವಿದೆ. ಹೂರಣದ ಜೀವಕಣಗಳೊಡನೆ ರಕ್ತ ಹೀಗೆ ನೇರವಾಗಿ ಮಿಶ್ರಿತವಾಗಿದ್ದರೂ ಈ ರಕ್ತನಾಳಗಳ ಭಿತ್ತಿಯಲ್ಲಿನ ರಂಧ್ರಗಳಿಂದ ಅದು ಜಿನುಗಿ ಹೊರಬಿದ್ದು ಹೂರಣದೊಡನೆ ಮಿಲನವಾಗ ಬಹುದು. ಅಂತೂ ರಕ್ತ ಕಣಭುಂಜಕ ಜೀವಕಣಗಳ ಸನಿಹದಲ್ಲೆ ಇದೆ ಎನ್ನುವ ಅಂಶ ನಿರ್ವಿವಾದ. ಕಣಗಳ ಜಾಲದೊಳಗೆ ರಕ್ತ ಪ್ರವಹಿಸುವುದರಿಂದ ಮತ್ತು / ಅಥವಾ ಕಣಭುಂಜಕ ಕಣಗಳ ಕ್ರಿಯೆಗೆ ಒಳಪಡುವುದರಿಂದ ಅದರೊಳಗಿರುವ ಅನ್ಯಜೈವಿಕ ಮತ್ತು ಅಜೈವಿಕ ಕಣಗಳು ತಡೆಹಿಡಿಯಲ್ಪಡುತ್ತವೆ. ಆಗ ಇವು ಸಾಮಾನ್ಯವಾಗಿ ರಕ್ತಗತವಾದ ವಿಷಾಣುಗಳಾಗಿರುತ್ತವೆ. ಇಲ್ಲವೆ ಕೆಂಪು ರಕ್ತಕಣಗಳ ಅವಸಾನ ಛಿದ್ರಗಳಾಗಿರುತ್ತವೆ. ಕೆಂಪು ರಕ್ತಕಣಗಳ ಛಿದ್ರಗಳು ಕಣಭುಂಜಕ ಜೀವಕಣಗಳಿಂದ ಭುಂಜಿಸಲ್ಪಟ್ಟು ಅವುಗಳೊಳಗೆ ಛಿದ್ರಗಳ ಕೆಂಪು ವಸ್ತು ಹೀಮೋಗ್ಲೋಬಿನ್ ವಿಶೇಷ ರಾಸಾಯನಿಕ ಮಾರ್ಪಾಡಿಗೊಳಪಡುತ್ತದೆ. ಹೀಮೋಗ್ಲೋಬಿನ್ ಕಬ್ಬಿಣದ ಅಂಶ

ಪ್ರತ್ಯೇಕಿಸಲ್ಪಟ್ಟು ಆ ರಾಸಾಯನಿಕ ರಕ್ತಗತವಾಗಿಯೋ ರಕ್ತಪರಿಚಲನೆಯ ಮೂಲಕ ಕಣಸಂಚಾರದಿಂದಲೋ ಎಲುಬಿನ ಕೆಂಪು ಮಜ್ಜೆಗೆ ತಲಪಿ ಅಲ್ಲಿ ಹೊಸ ಹೀಮೋಗ್ಲೋಬಿನ್ನಿನ ಸಂಯೋಜನೆಯಲ್ಲಿ ಪಾಲುಗೊಳ್ಳುತ್ತದೆ. ಕಬ್ಬಿಣ ಸಂಯುಕ್ತಗಳು ಹೆಚ್ಚು ಪರಿಮಾಣದಲ್ಲಿದ್ದರೆ ಕಣಭುಂಜಕ ಜೀವಕಣಗಳಲ್ಲಿ ಅವುಗಳ ಶೇಖರಣೆಯಾಗುತ್ತದೆ. ಹೀಮೋಗ್ಲೋಬಿನ್ನಿನ ವರ್ಣದ ಅಂಶ ಬಿಲಿರೂಬಿನ್ ಎಂಬ ವರ್ಣ ವಸ್ತುವಾಗಿ ಮಾರ್ಪಟ್ಟು ರಕ್ತಗತವಾಗಿ ರಕ್ತಪರಿಚಲನೆಯಿಂದ ಯಕೃತ್ತನ್ನು ಸೇರಿ ಅಲ್ಲಿ ವಿಸರ್ಜಿತ ವಸ್ತುವಾಗಿ ರಕ್ತದಿಂದ ಬೇರ್ಪಡಿಸಲ್ಪಟ್ಟು ಪಿತ್ತರಸದ ಅಂಶವಾಗಿ ಅದರೊಡನೆ ಕರುಳನ್ನು ಸೇರಿ ದೇಹದಿಂದ ಹೊರದೂಡಲ್ಪಡುತ್ತದೆ. ಇಷ್ಟಲ್ಲದೆ ಈ ಸ್ಥಳದಲ್ಲಿ ವಿಷಾಣುಗಳು ಮತ್ತು ಅನ್ಯವಸ್ತುಕಣಗಳು ಪ್ರತಿರೋಧಕ ವಸ್ತುಗಳ ಉತ್ಪತ್ತಿಗೆ ಕಾರಣವಾಗುತ್ತವೆ. ಗುಲ್ಮದ ಕಣಭುಂಜಕ ಜೀವಕಣಗಳು ಕೆಂಪು ಕಣಗಳ ಛಿದ್ರಗಳನ್ನು ಭುಂಜಿಸುವ ಬದಲು ಇಡೀ




ಗುಲ್ಮದ ಅಡ್ಡ ಸೀಳಿಕೆಯ ನೋಟ: 1. ಸ್ನಾಯುಯುಕ್ತ ಹೊರಕವಚ, 2. ಸ್ನಾಯುಯುಕ್ತ ತಡಿಕೆಗಳು, 3. ಗುಲ್ಮದ ಕೆಂಪು ಹೂರಣ, 4. ಸೈನಸ್, ರಕ್ತನಾಳಗಳು, 5. ಬಿಳಿಹೂರಣ, 6. ಗುಲ್ಮದೊಳಗಿನ ಅಪಧಮನಿ, 7. ತಡಿಕೆಯಲ್ಲಿ ಅಭಿಧಮನಿ

ಮತ್ತು ಉಪಯುಕ್ತವಾದ ಕೆಂಪು ರಕ್ತಕಣಗಳನ್ನೇ ಕಬಳಿಸಬಹುದು. ಇದರಿಂದ ರಕ್ತ ಕಣಹೀನತೆಯುಂಟಾಗಬಹುದು. ಹಾಗೆ ತಟ್ಟೆಕಣಗಳ (ಪ್ಲೇಟ್‌ಲೆಟ್ಸ್) ಬಹುವಾದ ಕಬಳಿಕೆಯಿಂದ ರಕ್ತಸ್ರಾವ ಸಂಭಾವ್ಯತೆಗಳು ಉಂಟಾಗಬಹುದು. ವಿಷಾಣುಗಳು ಪ್ರಬಲವಾಗಿದ್ದರೆ ಕಣಭುಂಜಕ ಕಣಗಳೇ ನಾಶವಾಗಿ ಗುಲ್ಮದ ಗಾತ್ರ ಕಡಿಮೆಯಾಗಬಹುದು. ವಿಷಾಣು ಸೋಂಕು ಹಿಡಿತಕ್ಕೆ ಬಂದು ರೋಗ ಗುಣಮುಖವಾದಾಗ ಗುಲ್ಮ ಮೊದಲಿನ ಗಾತ್ರಕ್ಕೆ ಬೆಳೆಯುತ್ತದೆ. ಹೀಗೆ ಗುಲ್ಮದ ಅಂಶಗಳ ಪುನರುತ್ಪತ್ತಿಯಾಗುವಾಗ ಅದರಲ್ಲಿನ ಶ್ವೇತ ಕಣಗಳು-ದುಗ್ಧರಸಕಣ ಮತ್ತು ಮಾನೋಸೈಟುಗಳು-ಪ್ರಧಾನ ಪಾತ್ರ ವಹಿಸಿ, ಅವೇ ಬೇರೆ ಕಣಗಳಾಗಿ ಮಾರ್ಪಡುವುದು ಕಂಡುಬಂದಿದೆ. ಹೀಗೆ ಆದ ಕಣಗಳಲ್ಲಿ ಕಣಭುಂಜಕ ಕಣಗಳು ಬಹುವಾಗಿರುತ್ತವೆ. ಇವುಗಳ ಆಧಿಕ್ಯದಿಂದ ಗುಲ್ಮದ ಗಾತ್ರ ಹೆಚ್ಚಾಗಬಹುದು. ಮೇಲೆ ಹೇಳಿರುವಂತೆ ಕಬ್ಬಿಣ ಸಂಯುಕ್ತಗಳು ಕಾರಣಾಂತರದಿಂದ ಅತ್ಯಧಿಕವಾಗಿದ್ದರೂ ಅವುಗಳ ಶೇಖರಣೆಗೆ ಕಣಭುಂಜಕ ಕಣಗಳ ಅಗತ್ಯ ಉಂಟಾಗಿ ಅವು ವಿಶೇಷವಾಗಿ ಉತ್ಪತ್ತಿಯಾಗುತ್ತವೆ. ಆಗಲೂ ಗುಲ್ಮದ ಗಾತ್ರ ವೃದ್ಧಿ ಕಂಡುಬರುತ್ತದೆ. ಗುಲ್ಮದ ಗಾತ್ರ ಅಗಾಧವಾಗಿದ್ದರೆ ಗೆಡ್ಡೆಹೊಟ್ಟೆ (ಸ್ಪ್ಲೀನೊಮೆಗಾಲಿ) ಕಂಡುಬರುತ್ತದೆ. ಗುಲ್ಮವೃದ್ಧಿ ಮತ್ತು ಕಣಭುಂಜಕ ಕಣಗಳ ಹೆಚ್ಚಿನ ಉತ್ಪತ್ತಿ ವಿಷಾಣು ಸೋಂಕುಂಟಾದಾಗ ಕಂಡುಬಂದರೂ ಕಣಭುಂಜಕಗಳು ಗುಲ್ಮದಲ್ಲಿ ಮಾತ್ರ ಇರುವುದಿಲ್ಲವೆನ್ನುವುದನ್ನು ನೆನಪಿಡಬೇಕು. ಬೇರೆಡೆಗಳಲ್ಲಿ ಎಂದರೆ ಪ್ರಧಾನವಾಗಿ ಯಕೃತ್ತು ಮತ್ತು ದುಗ್ಧರಸನಾಳ ಗಂಟುಗಳಲ್ಲಿ ಕಣಭುಂಜಕ ಕಣಗಳ ಚಟುವಟಿಕೆ ಗಣನೀಯವಾಗಿ ಕಂಡುಬರುತ್ತದೆ. ಹಾಗೆಯೇ ಪ್ರತಿರೋಧಕ ವಸ್ತುಗಳ ಉತ್ಪತ್ತಿಯೂ ಗುಲ್ಮದಲ್ಲಿ ಅಗಾಧವಾಗಿ ಕಂಡುಬಂದರೂ ಅದು ಅಲ್ಲಿ ಮಾತ್ರ ಜರಗುವ ಕ್ರಿಯೆಯಾಗಿರದೆ ಮಜ್ಜೆ ಮುಂತಾದ ಭಾಗಗಳಲ್ಲಿಯೂ ಕಂಡುಬರುತ್ತದೆ. ಗುಲ್ಮದ ಬಿಳೀ ಹೂರಣದ ಭಾಗದಲ್ಲಿ ದುಗ್ಧರಸಕಣಗಳು ಮತ್ತು ಮಾನೊಸೈಟುಗಳು ಉತ್ಪತ್ತಿಯಾಗುತ್ತಿದ್ದರೂ ಈ ಉತ್ಪತ್ತಿ ದೇಹದ ಇತರ ಕಡೆಗಳಲ್ಲಿಯೂ ಗಣನೀಯ ಪರಿಮಾಣದಲ್ಲಿ-ಪ್ರಧಾನವಾಗಿ ಎಂದೇ ಹೇಳಬಹುದು-ಜರಗುತ್ತಿರುತ್ತದೆ. ಗುಲ್ಮದ ಸೈನುಸಾಯ್ಡ್‌ಗಳು ರಕ್ತವನ್ನು ತಡೆಹಿಡಿದು ಹಿಗ್ಗಿದ ಸ್ಥಿತಿಯಲ್ಲಿರಬಹುದಾದ್ದರಿಂದ ಪರಿಚಲನೆಯಲ್ಲಿರುವ ರಕ್ತ ಕೆಲವು ವೇಳೆ ಹೆಚ್ಚಾದಾಗ ಇಲ್ಲಿ ಶೇಖರಿಸಲ್ಪಟ್ಟು ಕಡಿಮೆಯಾದಾಗ ಇಲ್ಲಿಂದ ಭರ್ತಿಯಾಗಬಹುದು. ಆದರೆ ಈ ಕ್ರಿಯೆಯೂ ಗುಲ್ಮದಲ್ಲಿ ಮಾತ್ರ ಕಾಣಬರದೆ ಚರ್ಮ, ಯಕೃತ್ತು, ಪುಪ್ಪುಸಗಳಲ್ಲಿಯೂ ಕಾಣಬರುತ್ತದೆ.

ಹೀಗೆ ಗುಲ್ಮದ ವಿಶಿಷ್ಟ ರಚನೆಯಿಂದ ದೇಹದ ನಾನಾ ಕಾರ್ಯಗಳು ಜರುಗಿಸಲ್ಪಡುತ್ತಿದ್ದರೂ ಅವು ಗುಲ್ಮದಿಂದಲೇ ನಿರ್ವಹಿಸಲ್ಪಡಬೇಕಾದ ಕಾರ್ಯಗಳಾಗಿರದೆ ಇರುವುದರಿಂದ ಅಗತ್ಯ ಬಿದ್ದರೆ ಗುಲ್ಮವನ್ನು ಶಸ್ತ್ರಕ್ರಿಯೆಯಿಂದ ತೆಗೆದುಬಿಡಲು ಸಾಧ್ಯ. ಆದರೂ ಕಶೇರುಕಗಳ ವಿಕಾಸದಲ್ಲಿ ಅಂದರೆ ಮತ್ಸ್ಯದ್ವಿಚರಿಗಳು, ಸರೀಸೃಪ ಪಕ್ಷಿಗಳು ಮತ್ತು ಸಸ್ತನಿಗಳಲ್ಲಿ ಗುಲ್ಮ ಕ್ರಮವಾಗಿ ಕ್ರಿಯಾವೈಶಿಷ್ಟ್ಯವನ್ನು ತೋರುವುದು ಗಮನೀಯ. ದವಡೆ ಇಲ್ಲದ ಮತ್ಸ್ಯಾಕಾರಿಗಳು ಮುಂತಾದ ಕೆಳದರ್ಜೆ ಮೀನುಗಳಲ್ಲಿ ಗುಲ್ಮವನ್ನು ಒಂದು ಅಂಗವಾಗಿ ಗುರುತಿಸುವುದು ಕೂಡ ಕಷ್ಟ. ಆದರೆ ಮಿಕ್ಕ ಮೀನುಗಳಲ್ಲಿ, ಬೇರೆ ಅಂಗಗಳ ಜೊತೆಗೆ ಕೆಂಪು, ಶ್ವೇತ ಮುಂತಾದ ಎಲ್ಲ ರಕ್ತಕಣಗಳ ಉತ್ಪತ್ತಿಯಲ್ಲಿ ಭಾಗವಹಿಸುವ ಒಂದು ಅಂಗವಾಗಿ ಗುಲ್ಮವನ್ನು ಗುರುತಿಸಬಹುದು. ಅದರಿಂದ ಮುಂದಕ್ಕೆ ಕೆಲವು ಸರೀಸೃಪಗಳು ಮತ್ತು ಎಲ್ಲ ಪಕ್ಷಿ ಸಸ್ತನಿಗಳಲ್ಲಿ ಕೆಂಪು ರಕ್ತಕಣಗಳ ಉತ್ಪತ್ತಿ ಗುಲ್ಮದಿಂದ ತಪ್ಪಿ ಕೆಂಪು ಮಜ್ಜೆಗೆ ಸೀಮಿತವಾಗುತ್ತದೆ. ಹಾಗೆಯೇ ಸರೀಸೃಪಗಳು ಮತ್ತು ಪಕ್ಷಿಗಳಲ್ಲಿ ದುಗ್ಧರಸನಾಳ ಗಿಣ್ಣುಗಳಲ್ಲಿಯೂ ಗುಲ್ಮದಲ್ಲಿಯಂತೆಯೇ ಉತ್ಪತ್ತಿಯಾಗುತ್ತವೆ. ಭ್ರೂಣದ ಬೆಳವಣಿಗೆ ಕಾಲದಲ್ಲಿ ಮಾನವರಲ್ಲಿ ಗುಲ್ಮ ವಿಕಾಸದ ಈ ಘಟ್ಟಗಳನ್ನು ಕಾಣಬಹುದು. ಅಂತೆಯೇ ಮಾನವರಲ್ಲಿ ಕೆಲವು ರೋಗಗಳಲ್ಲಿ ಗುಲ್ಮ ತನ್ನ ವಿಕಾಸದ ಕೆಳಮಟ್ಟದ ಚಟುವಟಿಕೆಯನ್ನು ಅನುಸರಿಸಬಹುದು. (ಎಸ್.ಆರ್.ಆರ್.)

**ಗುಲ್ಮ ರೋಗಗಳು :** ಗುಲ್ಮ ರೋಗಗಳು ಸೋಂಕಿನಿಂದ ಅಥವಾ ಬೇರೆ ಕಾರಣಗಳಿಂದ ಉದ್ಭವಿಸಿ ತಾತ್ಕಾಲಿಕವಾಗಿ ಅಥವಾ ಬಹುಕಾಲಿಕವಾಗಿ ಇರುತ್ತವೆ. ರೋಗ ತಗಲಿದಾಗ ಗುಲ್ಮ ದೊಡ್ಡದಾಗುವುದು ಸರ್ವೇಸಾಮಾನ್ಯ. ಗುಲ್ಮದ ಆಜನ್ಮ ಅವ್ಯವಸ್ಥೆಗಳಾಗಿ ಗುಲ್ಮ ಪೂರ್ಣವಾಗಿ ಲೋಪವಾಗಿರುವುದೂ ಬೆನ್ನು ಭಿತ್ತಿಗೆ ಅಂಟಿಕೊಂಡಿರುವುದೂ ಇಲ್ಲವೇ ಉದ್ದವಾದ ದಂಟಿನಿಂದ ನೇತುಹಾಕಿದಂತಿದ್ದು ಚಿಕ್ಕ ಕರುಳಿನಂತೆ ಸ್ಥಳಾಂತರಗೊಳ್ಳುವ ಹಾಗೆ ಇರುವುದೂ ಕಂಡುಬರುತ್ತದೆ. ಸಾಧಾರಣವಾಗಿ ಇವುಗಳಿಂದ ಏನು ತೊಂದರೆಯೂ ಇರುವುದಿಲ್ಲ. ಸ್ಥಳಪಲ್ಲಟವಾದ ಗುಲ್ಮ ಕೆಲವು ವೇಳೆ ಮತ್ತು ಸಾಮಾನ್ಯವಾಗಿ ದೊಡ್ಡದಾದಾಗ ದೇಹಕ್ರಿಯಾ ವೈಪರೀತ್ಯವನ್ನು ಉಂಟುಮಾಡಬಹುದು. ವಿಷಾಣು ಸೋಂಕಿನಿಂದ, ಮುಖ್ಯವಾಗಿ ವಿಷಮಶೀತಜ್ವರಾಣು ಸೋಂಕಿನಿಂದ ಮತ್ತು ವೈರಸುಗಳ ಸೋಂಕಿನಿಂದ, ಗುಲ್ಮ ತಾತ್ಕಾಲಿಕವಾಗಿ ಊದಿಕೊಂಡು ಗೆಡ್ಡೆಯಂತೆ ಸಿಕ್ಕುತ್ತದೆ. ಬಹುಕಾಲಿಕವಾದ ಗೆಡ್ಡೆ ಬಹುಕಾಲಿಕ ವಿಷಾಣು ಸೋಂಕುಗಳಾದ ಕ್ಷಯ, ಫರಂಗಿರೋಗ ಇವುಗಳಲ್ಲಿಯೂ ಅಣುಜೀವಿಕೃತ (ಪ್ರೋಟೋಸೋವ ರೋಗಗಳಾದ ಮಲೇರಿಯ) ಕಾಳಜ್ವರಗಳಲ್ಲಿಯೂ ಶಿಸ್ಟೋಸೋಮ ಕೃತರೋಗದಲ್ಲಿಯೂ ಕಾಣಬರುತ್ತದೆ. ಗುಲ್ಮದಲ್ಲಿ ಅಗಾಧವಾಗಿ ರಕ್ತ ಶೇಖರಣೆ ಆದಾಗಲೂ ಸಹಜವಾಗಿಯೇ ಅದು ದಪ್ಪವಾಗುತ್ತದೆ. ಪೋರ್ಟಲ್ ಅಭಿಧಮನಿಯಲ್ಲಿ ರಕ್ತಕರಣೆ ಕಟ್ಟಿಕೊಂಡು ಇಲ್ಲವೇ ಬೇರೆ ರೀತಿಯಲ್ಲಿ ರಕ್ತಪ್ರವಾಹಕ್ಕೆ ಅಡಚಣೆಯುಂಟಾದಾಗ ಅಥವಾ ಯಕೃತ್ತಿನ ಸಿರೋಸಿಸ್ ಎಂಬ ವ್ಯಾಧಿಯಿಂದ ರಕ್ತಚಲನೆಗೆ ಅಡ್ಡಿಯುಂಟಾದಾಗ ರಕ್ತ ಗುಲ್ಮದಲ್ಲಿ ಶೇಖರಣೆಯಾಗುತ್ತದೆ. ಏಡಿಗಂತಿಗಳಂಥ ಸ್ವಭಾವವುಳ್ಳ ಲ್ಯುಕೀಮಿಯ, ಲಿಂಫೋಮ ಮುಂತಾದ ರೋಗಗಳಲ್ಲಿಯೂ ಗುಲ್ಮದ ಗೆಡ್ಡೆ ಕಂಡುಬರುತ್ತದೆ. ಸ್ನಿಗ್ಧ ಪದಾರ್ಥಗಳು ಗುಲ್ಮದಲ್ಲಿ ಶೇಖರಣೆಯಾಗುವ ಗಾಶರನ ವ್ಯಾಧಿ, ನೀಮನ್‌ಪಿಕ್ಕನ ವ್ಯಾಧಿ ಮುಂತಾದವುಗಳಲ್ಲಿಯೂ ಗುಲ್ಮ ಊದಿಕೊಂಡಿರುತ್ತದೆ. ಗುಲ್ಮದ ಗೆಡ್ಡೆಯಿಂದ ಕೆಲವು ವೇಳೆ ರಕ್ತಕಣಹೀನತೆಯೂ ಕೆಲವು ವೇಳೆ ರಕ್ತಕಣತೆಯೂ (ಪಾಲಿಸೈಟೀಮಿಯಾ)

ಉಂಟಾಗಬಹುದು. ದೇಹಪರೀಕ್ಷೆ ಮತ್ತು ರಕ್ತಪರೀಕ್ಷೆಯಿಂದ ಈ ಅನೇಕ ಸ್ಥಿತಿಗಳನ್ನು ಅರಿತುಕೊಳ್ಳಬಹುದು. ಕೆಲವು ಸಮಯ ವಿಶೇಷ ಪರೀಕ್ಷೆಗಳು ಅಗತ್ಯವಾಗುತ್ತವೆ. ರಕ್ತದ ವಿಷಾಣುಗಳನ್ನು ಪ್ರಯೋಗಶಾಲೆಯಲ್ಲಿ ನೆಟ್ಟು ಬೆಳೆಸುವುದು, ಎದೆಮೂಳೆಯೊಳಗೆ ಸೂಜಿ ಚುಚ್ಚಿ ಅದರೊಳಗಿನ ಮಜ್ಜೆಯನ್ನು ಪರೀಕ್ಷಿಸುವುದು, ಎದೆಯನ್ನು ಕ್ಷಕಿರಣ ಪರೀಕ್ಷೆಗೆ ಒಳಪಡಿಸುವುದು, ಗುಲ್ಮದ ಚೂರೊಂದನ್ನು ವಿಶೇಷ ಶಸ್ತ್ರಕ್ರಿಯೆಯಿಂದ (ಬಯಾಪ್ಸಿ) ತೆಗೆದುಕೊಂಡು ಪರೀಕ್ಷಿಸುವುದು, ಕ್ಷಯಾಣುಸೋಂಕಿಗೆ, ಫರಂಗಿ ರೋಗಾಣು ಸೋಂಕಿಗೆ ವಿಶಿಷ್ಟವಾದ ಪರೀಕ್ಷೆ ನಡೆಸುವುದು ಇತ್ಯಾದಿ ಕ್ರಮಗಳು ಬೇಕಾಗುತ್ತವೆ. ಇವುಗಳಿಂದ ರೋಗ ಮೂಲತಃ ಗುಲ್ಮದ್ದೋ ಅಥವಾ ಬೇರೆಡೆ ರೋಗದಿಂದ ಗುಲ್ಮ ಗೆಡ್ಡೆ ಕಟ್ಟಿಕೊಂಡಿದೆಯೋ ಎನ್ನುವುದನ್ನು ತಿಳಿಯಬಹುದು. ಗುಲ್ಮವೇ ರೋಗಕಾರಕವಾಗಿದ್ದರೆ ಅಥವಾ ಇತರ ರೋಗಗಳಿಂದ ಗುಲ್ಮ ಅತಿ ದೊಡ್ಡದಾಗಿ ತನ್ನ ಗಾತ್ರದಿಂದಲೇ ದೇಹ ಕಾರ್ಯಗಳಿಗೆ ಅನಾನುಕೂಲವಾಗುವಂತಿದ್ದರೆ ಗುಲ್ಮವನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಬೇಕಾಗುತ್ತದೆ. (ಎಸ್.ಜಿ.ಎಸ್.)

**ಗುಲ್ವಾಡಿ ವೆಂಕಟರಾವ್ :** 1844–1907. ಕನ್ನಡದಲ್ಲಿ ಆದ್ಯ ಸ್ವತಂತ್ರ ಸಾಮಾಜಿಕ ಕಾದಂಬರಿಕಾರ. ಇಂದಿನ ಉಡುಪಿ ಜಿಲ್ಲೆಯ ಕುಂದಾಪುರದ ಗುಲ್ವಾಡಿ ಈತನ ಹುಟ್ಟೂರು. ಮನೆತನ ಸಾರಸ್ವತ ಬ್ರಾಹ್ಮಣರದು. ಬಿ.ಎ. ಪದವೀಧರನಾಗಿ ಗುಲ್ವಾಡಿ ಪೋಲಿಸ್ ಖಾತೆಯನ್ನು ಸೇರಿದ. ಈತನದು ಆ ವೃತ್ತಿಗೆ ತಕ್ಕ ಭೀಮಕಾಯ, ಗಂಭೀರ ಮುಖಮುದ್ರೆ. ಪೋಲಿಸ್ ಕೆಲಸದಿಂದ ನಿವೃತ್ತನಾದ ಮೇಲೆ ಸಾಹಿತ್ಯ ರಚನೆಯಲ್ಲಿ ತೊಡಗಿದ. ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ ಈತನ ಮೊದಲ ಕಾದಂಬರಿ (1898). ಭಾಗೀರಥಿ, ಸೀಮಂತಿನೀ(1907) –ಇವು ಇತರ ಕಾದಂಬರಿಗಳು. ಲಾಡುಪ್ರಿಯಾಚಾರ್ಯ ಎಂಬುದು ವಿಡಂಬನಾತ್ಮಕ ಬರೆಹ. ಈತ ಮಿತ್ರೋದಯವೆಂಬ ಪತ್ರಿಕೆಯನ್ನು ನಡೆಸುತ್ತಿದ್ದುದಾಗಿಯೂ ತಿಳಿಯುತ್ತದೆ.

ಗುಲ್ವಾಡಿ ಬಾಳಿದ ಕಾಲದಲ್ಲಿ ಭಾರತೀಯ ಸಮಾಜ ಸನಾತನ ಆವರಣದಿಂದ ಹೊರಬಿದ್ದು, ಪಾಶ್ಚಾತ್ಯ ನಾಗರಿಕತೆಯತ್ತ ಸಾಗುತ್ತಿತ್ತು. ಈ ಘರ್ಷಣೆಯಲ್ಲಿ ಈ ಲೇಖಕನದು ಮಧ್ಯಮಾರ್ಗ. ಸನಾತನ ಧರ್ಮದಲ್ಲಿ, ಗುರುಪೀಠಗಳಲ್ಲಿ ಈತನಿಗೆ ಅಚಲನಿಷ್ಠೆಯಿತ್ತೆಂಬುದೇನೋ ನಿಜ. ಆ ಮನೋಭಾವದಿಂದಲೇ ಈತ ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಂಡದ್ದಿದೆ. ಆದರೆ ಪ್ರಾಮಾಣಿಕತೆಯೇ ಜೀವನದ ಉಸಿರಾಗಿದ್ದ ಈತನಿಗೆ ಹಲವು ಗುರುಪೀಠಗಳ ಡಂಭಾಚಾರ ಸರಿಬರಲಿಲ್ಲ. ಹೊಸ ಶಿಕ್ಷಣದ ಪುರಸ್ಕರ್ತನಾಗಿ ಈತ ಹಲವು ಶಿಕ್ಷಣ ಮಂದಿರಗಳನ್ನು ಪುನರುಜ್ಜೀವನಗೊಳಿಸಿದ. ಸ್ತ್ರೀಯರ ಏಳ್ಗೆ ಮುಂತಾದ ವಿಷಯಗಳಲ್ಲಿ ಈತನಿಗೆ ಸಹಜವಾದ ಕಳಕಳಿ ಇತ್ತು.

ಹಳತು ಹೊಸತರ ಸಂಘರ್ಷ ಇಂದಿರಾಬಾಯಿ ಎಂಬ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಪೋಲಿಸ್ ಖಾತೆಯಲ್ಲಿದ್ದಾಗಿನ ಲೋಕಾನುಭವ ಇಲ್ಲಿ ಸಾಹಿತ್ಯವಾಗಿ ರೂಪುಗೊಂಡಿದೆ. ಇಂದಿರೆಯ ತಂದೆ ತಾಯಿಗಳು ಸ್ವಾರ್ಥಪರರು. ತಮಗೆ ಆಗದವರನ್ನು ವಿಷಹಾಕಿ ಕೊಲ್ಲಿಸುವುದಕ್ಕೂ ಹೇಸರು. ಒಬ್ಬ ವ್ಯಸನಿಯೊಡನೆ ಮಗಳ ಮದುವೆ ಮಾಡಿಸಿದ್ದರ ಫಲವಾಗಿ ಇಂದಿರೆ ಬಾಲವಿಧವೆಯಾಗಿ ಅಮೃತರಾಯನೆಂಬುವನ ಆಶ್ರಯದಲ್ಲಿ ನಿಲ್ಲುತ್ತಾಳೆ. ಆತನ ಪೋಷಣೆಯಲ್ಲಿ ಆಕೆಯೂ ಭಾಸ್ಕರನೆಂಬ ಅನಾಥ ಹುಡುಗನೊಬ್ಬನೂ ವಿದ್ಯೆ ಕಲಿಯುತ್ತಾರೆ. ಕೊನೆಗೆ ಭಾಸ್ಕರನೊಡನೆ ಇಂದಿರೆಯ ಮರುಮದುವೆಯಾಗುತ್ತದೆ. ಈ ಸಂಬಂಧದಿಂದ ನಿಜವಾದ ಸದ್ಧರ್ಮದ ವಿಜಯವಾಯಿತೆಂದು ತೋರಿಸಲಾಗಿದೆ. ಕಥೆಯಲ್ಲಿನ ಘಟನೆಗಳು ವಾಸ್ತವಾಂಶದಿಂದ ಕೂಡಿದುವಾಗಿದ್ದು ಯಾವ ದೃಷ್ಟಿಯಿಂದ ನೋಡಿದರೂ ಕಾದಂಬರಿ ಆಧುನಿಕ ಸಮಾಜದ ಕಥನವೆನ್ನಿಸಿಕೊಳ್ಳುತ್ತದೆ. ಈ ಕಾದಂಬರಿಯ ಗುಣವನ್ನು ಮೆಚ್ಚಿ, ದಕ್ಷಿಣ ಕನ್ನಡದಲ್ಲಿ ಜಿಲ್ಲಾಧಿಕಾರಿಯಾಗಿದ್ದ ಕೌಚ್‌ಮನ್ ಎಂಬಾತ ಇದನ್ನು ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಿದ್ದಾನೆ. (ಎಸ್.ಎಚ್.)

**ಗುಹ :** ಶೃಂಗವೇರಪುರದ ರಾಜ. ದಶರಥನ ಆಪ್ತಮಿತ್ರ. ಶ್ರೀರಾಮ ಅಯೋಧ್ಯೆಯಿಂದ ಅರಣ್ಯಕ್ಕೆ ಹೋಗುವಾಗ ಈತನಿಂದ ಸತ್ಕೃತನಾಗಿ ಒಂದು ರಾತ್ರಿ ಈತನಲ್ಲಿ ತಂಗಿದ್ದ. ಮಾರನೆಯ ದಿನ ಗುಹ ತನ್ನ ಪರಿವಾರದವರ ಮೂಲಕ ದೋಣಿಗಳಲ್ಲಿ ಸೀತಾರಾಮಲಕ್ಷ್ಮಣರನ್ನು ಗಂಗೆಯ ದಕ್ಷಿಣತೀರಕ್ಕೆ ದಾಟಿಸಿದ. ಶ್ರೀರಾಮ ಚಿತ್ರಕೂಟ ಪರ್ವತದಲ್ಲಿದ್ದಾಗ ಭರತ ಅಣ್ಣನನ್ನು ಹಿಂದಕ್ಕೆ ಕರೆತರಲು ಸೇನಾಸಮೇತನಾಗಿ ಬಂದನಷ್ಟೆ. ಭರತನ ಉದ್ದೇಶದ ವಿಷಯವಾಗಿ ಸಂಶಯಗೊಂಡ ಗುಹ ಭರತನನ್ನು ಎದುರಿಸಲು ಸಿದ್ಧನಾದ. ಭರತನ ಆಂತರ್ಯ ಏನೆಂಬುದು ಸ್ಪಷ್ಟವಾದ ಮೇಲೆ ಗುಹ ಆತನನ್ನು ಉಪಚರಿಸಿ ಅವನನ್ನೂ ಅವನ ಪರಿವಾರವನ್ನೂ ಗಂಗೆಯ ಆಚೆಯ ದಡಕ್ಕೆ ಸೇರಿಸಿದ. ಈ ವೃತ್ತಾಂತ ರಾಮಾಯಣದ ಅಯೋಧ್ಯಾಕಾಂಡದಲ್ಲಿದೆ. *

**ಗುಹವಾಸಿ ಪ್ರಾಣಿಗಳು :** ಗುಹೆಗಳಂಥ ವಿಶೇಷ ರೀತಿಯ ಪರಿಸರಗಳಲ್ಲಿ ತಮ್ಮ ಪೂರ್ತಿ ಜೀವನವನ್ನು ಇಲ್ಲವೇ ಜೀವನದ ಅಲ್ಪ ಸಮಯವನ್ನು ಕಳೆಯುವ ಪ್ರಾಣಿಗಳು (ಕೇವ್ ಅನಿಮಲ್ಸ್). ಗುಹೆಯ ಪರಿಸ್ಥಿತಿಗಳು ಬಯಲಿಗಿಂತ ಬೇರೆಯಾಗಿದ್ದು ಕೆಲವು ವಿಧಗಳಲ್ಲಿ ಪ್ರಾಣಿಜೀವನಕ್ಕೆ ಅನುಕೂಲವಾಗಿರುತ್ತವೆ. ಗುಹೆಗಳಲ್ಲಿ ಭೂ ಮತ್ತು ಜಲಜೀವಿಗಳೆರಡನ್ನೂ ಕಾಣಬಹುದು. ಪ್ಲಾಟಿಹೆಲ್ಮಿಂಥೀಸ್, ಅನೆಲಿಡ, ಆರ್ತ್ರಾಪೊಡ, ಮಾಲಸ್ಕ, ಗ್ಯಾಸ್ಟ್ರಾಪೊಡ ಮತ್ತು ಕಾರ್ಡೇಟ (ಪಿಸೀಸ್ ಮತ್ತು ಆಂಫಿಬಿಯ) ಗುಂಪುಗಳಿಗೆ ಸೇರಿದ ಪ್ರಾಣಿಗಳು ಇವುಗಳಲ್ಲಿ ಮುಖ್ಯವಾದವು. ಪ್ರೊಟಿಸ್ಟ ಗುಂಪಿನ ಜೀವಿಗಳಾಗಲಿ ಸಸ್ಯಗಳಾಗಲಿ ಗುಹೆಗಳಲ್ಲಿ ಕಾಣಬರುವುದಿಲ್ಲ.

ಗುಹೆಗಳು ಒಂದು ವಿಶೇಷ ಭೌತಿಕ ಪರಿಸರ ಸೃಷ್ಟಿಸುವ ಆವಾಸಗಳು. ಸದಾಕಾಲ ಕತ್ತಲು ತುಂಬಿರುವುದು, ಆರ್ದ್ರತೆ ಮತ್ತು ಉಷ್ಣತೆಯ ಏರಿಳಿತಗಳಿಲ್ಲದಿರುವುದು, ವಾಯುಪ್ರವಾಹಗಳಿಲ್ಲದಿರುವುದು, ಗುಹೆಯ ಮಣ್ಣಿನಲ್ಲಿ ಸುಣ್ಣಕಲ್ಲು ಇರುವುದರಿಂದ ಉಂಟಾಗುವ ಕಾರ್ಬನ್ ಡೈ ಆಕ್ಸೈಡಿನ ಪರಿಮಾಣದ ಆಧಿಕ್ಯ, ಪ್ರಾದೇಶಿಕ ಪ್ರತ್ಯೇಕತೆ ಮತ್ತು ಇದರಿಂದ ಆಗಾಗ್ಗೆ ಉಂಟಾಗುವ ಆಹಾರದ ಕೊರತೆ– ಇವು ಗುಹೆಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಪರಿಸ್ಥಿತಿಯ ವೈಚಿತ್ರ್ಯಗಳು. ಗುಹೆಗಳಲ್ಲಿ ವಾಸಿಸುವ ಪ್ರಾಣಿಗಳು ಮೇಲೆ ಹೇಳಿದ ಪರಿಸರದ ವೈವಿಧ್ಯಗಳಿಗೆ ಹೊಂದಾಣಿಕೆಯಾಗುವ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತವೆ. ಇಂಥ ಲಕ್ಷಣಗಳಲ್ಲಿ ಮುಖ್ಯವಾದವು ಈ ರೀತಿ ಇವೆ : 1 ದೇಹದಲ್ಲಿನ ವರ್ಣಕಗಳ ಕ್ಷೀಣತೆ ಅಥವಾ ಇಲ್ಲದಿರುವಿಕೆ. ಇದರಿಂದಾಗಿ ಗುಹಾವಾಸಿ ಪ್ರಾಣಿಗಳು ಬಿಳಿಚಿಕೊಂಡಿರುತ್ತವೆ. 2 ಆರ್ತ್ರಾಪೊಡ ಗುಂಪಿನ ಪ್ರಾಣಿಗಳಲ್ಲಿ ದೇಹದ ಹೊರಕವಚ (ಎಕ್ಸೋಸ್ಕೆಲಿಟನ್) ಬಹಳ ದುರ್ಬಲವಾಗಿರುತ್ತದೆ; ಕಾಲೆಂಬೋಲ ಮತ್ತು ಮೀನುಗಳಲ್ಲಿ ಶಲ್ಕಗಳೇ ರೂಪುಗೊಂಡಿರುವುದಿಲ್ಲ; ಯುರೋಡಿಲ ಮುಂತಾದ ಪ್ರಾಣಿಗಳಲ್ಲಿ ಗ್ರಂಥಿಗಳ ಚಟುವಟಿಕೆ ದುರ್ಬಲವಾಗಿರುತ್ತದೆ. 3 ಗುಹೆಗಳಲ್ಲಿ ಬೆಳಕಿನ ಅಭಾವವಿರುವುದರಿಂದ ಕಣ್ಣು, ದ್ಯುತಿಗ್ರಾಹಕಗಳು, ಕಣ್ಣು ಸಂಬಂಧಿ ನರಗಳು ಮತ್ತು ಹಾಲೆಗಳ ಬೆಳವಣಿಗೆ ಕುಂಠಿತವಾಗಿರುತ್ತದೆ. 4 ಗುಹಾವಾಸಿ ಪ್ರಾಣಿಗಳ ದೇಹ ಭೂವಾಸಿ ಪ್ರಾಣಿಗಳಿಗೆ ಹೋಲಿಸಿದರೆ ಬಲು ಉದ್ದವಾಗಿಯೂ ಕೃಶವಾಗಿಯೂ ಇರುತ್ತದೆ. ಉದಾ : ಕ್ರಸ್ಟೇಸಿಯ ಗುಂಪಿನ ಬೇತಿನೆಲ, ಪ್ಯಾರಾಬೇತಿನೆಲ, ಸ್ಟೆನಾಸೆಲಸ್, ಟ್ರೆಕಿಟೀ ಪಂಗಡದ ಕೀಟಗಳು ಮತ್ತು ಯುರೋಡಿಲ. ಹಾಗೆಯೇ ಕೆಲವು ಸಂಧಿಪದಿಗಳ ಮತ್ತು ಕೀಟಗಳ ದೇಹದ ಕೆಲವು ಉಪಾಂಗಗಳು, ಸ್ಪರ್ಶಗ್ರಾಹಿ ತಂತುಗಳು, ಕಾಲುಗಳು, ಕೀಟೇ ಎಂಬ ಅಂಗಗಳು ಬಲು ಉದ್ದವಾಗಿರುತ್ತವೆ. ರೆಕ್ಕೆ, ಈಜುರೆಕ್ಕೆ ಮುಂತಾದ ಅಂಗಗಳು ಮೋಟಾಗಿರಬಹುದು ಅಥವಾ ಇಲ್ಲದೇ ಇರಬಹುದು. ಉದಾ: *ಸೀಕೋ ಬಾರ್ಬಸ್ ಗೀಟ್ಸೆಯೈ* ಎಂಬ ಮೀನು. 5 ಗುಹವಾಸಿ ಪ್ರಾಣಿಗಳ ಅಂತಃಸ್ರಾವ ಗ್ರಂಥಿ ವ್ಯವಸ್ಥೆಯ–ಮುಖ್ಯವಾಗಿ ಗುರಾಣಿಕ (ಥೈರಾಯ್ಡ್) ಗ್ರಂಥಿಯ ಬೆಳವಣಿಗೆ ಕ್ಷೀಣವಾಗಿರುತ್ತದೆ. 6 ಇವುಗಳ ಚಯಾಪಚಯ ಕ್ರಿಯೆಗಳ ವೇಗವೂ ಬಲು ನಿಧಾನ. 7 ಬಹುಪಾಲು ಗುಹವಾಸಿ ಪ್ರಾಣಿಗಳು ಗುಹೆಯ ಉಷ್ಣತೆಗಿಂತ ಹೆಚ್ಚಿನ ಉಷ್ಣತೆಗೆ ಬಂದರೆ ಸತ್ತು ಹೋಗುತ್ತವೆ. ಉದಾಹರಣೆಗೆ, ನೈಸೆಲಸ್ ವೀರೈ ಮತ್ತು ಏಸೆಲಸ್ ಕವಾಟಿಕಸ್ ಎಂಬ ಪ್ರಾಣಿಗಳನ್ನು $15^0$ ಸೆಂ. ಉಷ್ಣತೆಗೆ ಒಡ್ಡಿದಾಗ ಸತ್ತು ಹೋಗುತ್ತದೆ. 8 ಗುಹವಾಸಿ ಪ್ರಾಣಿಗಳ ಡಿಂಭಗಳು ಬೆಳೆದು ಪ್ರೌಢಜೀವಿಗಳಾಗಿದ್ದಾಗಲೂ ತಮ್ಮಲ್ಲಿ ಕೆಲವು ಡಿಂಭಲಕ್ಷಣಗಳನ್ನೋ ಇಲ್ಲವೆ ಮೂಲ ಲಕ್ಷಣಗಳನ್ನೋ ಉಳಿಸಿಕೊಂಡಿರುತ್ತವೆ. 9 ಇವುಗಳ ಸಂತಾನಾಭಿವೃದ್ಧಿ ಶಕ್ತಿಯೂ ಬಹಳ ಕಡಿಮೆ. ಉದಾಹರಣೆಗೆ ಸೀಕೊಸ್ಫಿರೋಮ ಎಂಬ ಪ್ರಾಣಿ ಒಂದು ಸಲಕ್ಕೆ ಕೇವಲ 7–8 ಮೊಟ್ಟೆಗಳನ್ನಿಡುತ್ತದೆ. ಇದರ ಹತ್ತಿರ ಸಂಬಂಧಿಯಾದ ಸ್ಫಿರೋಮ ಎಂಬ ನೆಲವಾಸಿ ಪ್ರಾಣಿ ಒಂದು ಸಲಕ್ಕೆ 67–90 ಮೊಟ್ಟೆಗಳನ್ನಿಡುತ್ತದೆ. 10 ಗುಹವಾಸಿ ಪ್ರಾಣಿಗಳ ದೃಷ್ಟಿಶಕ್ತಿ ದುರ್ಬಲವಾಗಿರುವುದರಿಂದ ಉಂಟಾಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಎಂಬಂತೆ ಇವುಗಳ ಸ್ಪರ್ಶಗ್ರಾಹಕ ಶಕ್ತಿ ಬಲು ಚೆನ್ನಾಗಿ ರೂಪುಗೊಂಡಿದೆ.

ಮೇಲೆ ಹೇಳಿದ ಲಕ್ಷಣಗಳೆಲ್ಲ ಸಂಪೂರ್ಣ ಗುಹವಾಸಿ ಪ್ರಾಣಿಗಳಿಗೆ ಅನ್ವಯವಾಗುತ್ತವೆ. ಇವುಗಳಲ್ಲದೆ ಗುಹೆಗಳಲ್ಲಿ ಮಾತ್ರವಲ್ಲದೆ ಅವುಗಳ ಹೊರಗೆ ಕಲ್ಲು ಪೊಟರೆಗಳಲ್ಲಿ ವಾಸಿಸುವ ಪ್ರಾಣಿಗಳೂ, ಗುಹೆಯಿಂದ ಹೊರಗಡೆಯೇ ಹೆಚ್ಚಿನ ಸಮಯವನ್ನು ಕಳೆದು ಆಗಾಗ್ಗೆ ಗುಹೆಗಳಿಗೆ ಭೇಟಿ ಇಡುವ ಪ್ರಾಣಿಗಳೂ ಇವೆ. ಈ ಎರಡನೆಯ ಬಗೆಯ ಪ್ರಾಣಿಗಳ ಗುಂಪಿಗೆ ಬಾವಲಿಗಳನ್ನು ಮತ್ತು ಡಾಬ್ಸಾನಿಯ ಪ್ಯಾಲಿಯೇಟ ಎಂಬ ಹೆಸರಿನ ಹಾರುವ ಅಳಿಲನ್ನು ಸೇರಿಸಬಹುದು. ಕೆಲವು ಬಾವಲಿಗಳು ಚಳಿಗಾಲದಲ್ಲಿ ಗುಹೆಗಳನ್ನು ಸೇರಿ ಶಿಶಿರಸ್ವಾಪತೆಯಲ್ಲಿ ತೊಡಗುತ್ತವೆ. ಇದೂ ಅಲ್ಲದೆ ಗುಹೆಗಳಲ್ಲಿ ಮಾತ್ರ ಸಂತಾನಾಭಿವೃದ್ಧಿ ಮಾಡುವ ಹಕ್ಕಿಗಳೂ ಉಂಟು. ಉದಾಹರಣೆಗೆ ದಕ್ಷಿಣ ಅಮೆರಿಕದಲ್ಲಿ ಕಾಣಬರುವ ಹಕ್ಕಿ, ಸ್ಟಿಯಟಾರ್ನಿಸ್ ಕ್ಯಾರಿಪೆನ್ಸಿಸ್. (ಎಂ.ಡಿ.ಪಿ.)

**ಗುಹಾ ವಾಸ್ತುಶಿಲ್ಪ :** ಕಲ್ಲು ಬಂಡೆಗಳಿಂದ ಕೂಡಿದ ಬೆಟ್ಟಗಳಲ್ಲಿ ಸ್ವಾಭಾವಿಕವಾಗಿಯೋ ಇಲ್ಲ ಮಾನವ ನಿರ್ಮಿತವಾಗಿಯೋ ಬಂಡೆಗಳ ಒಳಗಡೆ ಇರುವ ಸ್ಥಳವೇ ಗುಹೆ. ದೊಡ್ಡ ಬಂಡೆಯ ಅಥವಾ ಬೆಟ್ಟದ ಕಡಿದಾದ ಮುಖದಲ್ಲಿ ಒಳಭಾಗಕ್ಕೆ ತೋರುವ ಆವರಣವನ್ನೂ ಗುಹೆ ಎನ್ನುವರು. ವಾಸ್ತು ಎಂಬ ಪದ ಮಾನವನಿರ್ಮಿತ ಕೃತಿಗಳಿಗೆ ಮೀಸಲಾಗಿರುವುದರಿಂದ ಗುಹಾ ವಾಸ್ತು ಸಹ ಕೃತಕ ರಚನೆಗಳಿಗೆ ಮಾತ್ರ ಅನ್ವಯಿಸುತ್ತದೆ. ತಂತ್ರ ಮತ್ತು ಉದ್ದಿಶ್ಯದಲ್ಲಿ ಗುಹಾವಾಸ್ತುವನ್ನೇ ಹೋಲುವ ಕೆಲವು ಕೃತಿಗಳನ್ನು, ಅವು ಸ್ವರೂಪದಲ್ಲಿ ಒಳ ಆವರಣವುಳ್ಳ ಗುಹೆಗಳನ್ನು ಹೋಲದಿದ್ದರೂ ಇದೇ ಪದದ ಚೌಕಟ್ಟಿನಲ್ಲಿ ಅಳವಡಿಸುವುದು ಕಲಾ ಇತಿಹಾಸತಜ್ಞರ ರೂಢಿ. ಈ ವಿಸ್ತೃತ ಅರ್ಥವನ್ನು ಒಳಗೊಳ್ಳುವಂತೆ ಗುಹಾ ವಾಸ್ತುವೆಂದರೆ ಶಿಲೆಯಲ್ಲಿ ಕಂಡರಿಸಿದ ವಾಸ್ತು ಎಂದು ಪರ್ಯಾಯವಾಗಿ ಪರಿಗಣಿಸುವ ವಾಡಿಕೆ ಈಚೆಗೆ ಬೆಳೆದಿದೆ.

ಗುಹಾ ವಾಸ್ತು ರಚನಾತಂತ್ರ ಕಟ್ಟಡ ರಚನಾತಂತ್ರಕ್ಕೆ ವ್ಯತಿರಿಕ್ತವಾದದ್ದು. ಕಟ್ಟಡ ನಿರ್ಮಾಣದಲ್ಲಿ ಬಿಡಿ ವಸ್ತುಗಳನ್ನು ಪೂರ್ವ ನಿಷ್ಕರ್ಷಿತ ವಿನ್ಯಾಸದಲ್ಲಿ ಜೋಡಿಸಿ ಒಂದು ಇಡೀ ರಚನೆಯನ್ನಾಗಿಸುವ ತಂತ್ರವಿದ್ದರೆ, ಗುಹಾ ವಾಸ್ತುವಿನಲ್ಲಿ ಇಡಿಯಾದ ಒಂದು ಬಂಡೆಯನ್ನು ಭೇದಿಸಿ ಆವರಣವನ್ನು ಸೃಷ್ಟಿಸುವುದು ಪದ್ಧತಿ. ಮೊದಲನೆಯದರ ಮೂಲಸೂತ್ರ ಸಂಕಲನ, ಎರಡನೆಯದರದು ವ್ಯವಕಲನ. ಗುಹಾ ವಾಸ್ತು ಈ ದೃಷ್ಟಿಯಿಂದ ಶಿಲ್ಪತಂತ್ರಕ್ಕೆ ಸಮೀಪವಾಗಿದೆ. ಭೇದನ ಕ್ರಿಯೆ ಎರಡರಲ್ಲೂ ಸಾಮಾನ್ಯ. ಆದರೆ ಶಿಲ್ಪದಲ್ಲಿ ಈ ಕ್ರಿಯೆಯ ಪರಿಣಾಮ ಘನ; ಗುಹಾ ವಾಸ್ತುವಿನಲ್ಲಿ ಇದು ಶೂನ್ಯಾವರಣ. ಈ ವಿಕೃತ ಸಂಬಂಧದಿಂದಾಗಿ ಗುಹಾ ವಾಸ್ತುವನ್ನು ಋಣವಸ್ತು ಅಥವಾ ಋಣಶಿಲ್ಪ ಎಂದು ಕರೆಯುವುದು ರೂಢಿ.

ಗುಹಾ ವಾಸ್ತು ಕೃತಿಗಳಲ್ಲಿ ಇತರ ವಾಸ್ತುಗಳಲ್ಲಿರುವಂತೆಯೇ ಒಳ ಆವರಣವಿದ್ದರೂ ಮುಮ್ಮುಖವೊಂದನ್ನು ಬಿಟ್ಟು ಬೇರೆ ಹೊರಮೈಯ ಅಭಾವವಿರುವುದರಿಂದ, ಶಿಲ್ಪಾಲಂಕರಣವೆಲ್ಲ ಒಳ ಮತ್ತು ಮುಮ್ಮುಖಗಳಿಗಷ್ಟೇ ಸೀಮಿತವಾಗುತ್ತದೆ. ಈ ಶಿಲ್ಪಗಳು ಗುಹಾ ವಾಸ್ತುವಿನ ಮುಖ್ಯ ಉದ್ದಿಶ್ಯವಾದ ಒಳ ಆವರಣಕ್ಕೆ ಬಾಧೆಯಾಗದಂತೆ ಇರಬೇಕಾಗಿರುವುದರಿಂದ, ಗುಹಾ ವಾಸ್ತುವಿನಲ್ಲಿ ಶಿಲ್ಪವಿದ್ದರೆ ಅದು ಅಲಂಕರಣವಾಗಿ ಸಹಯೋಗಿಯಾಗಿ ಮಾತ್ರ ಇರುತ್ತದೆ.

ಗುಹೆಗಳು ಶಿಲಾಯುಗದ ಕಾಲದಿಂದಲೇ ಮಾನವನ ವಾಸಸ್ಥಾನಗಳಾಗಿದ್ದರೂ ಈ ರೂಢಿಗೂ ಗುಹಾ ವಾಸ್ತುವಿಗೂ ಯಾವ ಸಂಬಂಧವೂ ಇಲ್ಲ. ಗುಹಾ ವಾಸ್ತುವನ್ನು ರಚಿಸಲು ಗಟ್ಟಿಕಲ್ಲನ್ನು ಭೇದಿಸಬೇಕಾದರೆ ಲೋಹದ ಆಯುಧಗಳು ಆವಶ್ಯಕವಾಗುತ್ತವೆ. ಲೋಹದ ಜ್ಞಾನ ಬೆಳೆದದ್ದು ಮಾನವನ ಇತಿಹಾಸದಲ್ಲಿ ಕೇವಲ ಸು.5,000 ವರ್ಷಗಳ ಹಿಂದೆ; ಆ ಹೊತ್ತಿಗೆ ಮಾನವ ಸಮಾಜದ ವ್ಯವಸ್ಥೆ ಶಿಲಾಯುಗದ ಸ್ಥಿತಿಯಿಂದ ಬಹಳಷ್ಟು ಬದಲಾಗಿ ಗ್ರಾಮ ಮತ್ತು ನಗರಗಳು ಬೆಳೆದಿದ್ದು, ಗುಹಾವಾಸ ಪದ್ಧತಿ ನಾಗರಿಕ ಸಮಾಜದಲ್ಲಿ ತೊರೆದುಹೋಗಿದ್ದಿತಲ್ಲದೆ, ನವಸಮಾಜವ್ಯವಸ್ಥೆಗೆ ಅನುಕೂಲವಾಗುವ ಅನೇಕ ರೀತಿಯ ಹೊಸ ವಾಸ್ತು ಪದ್ಧತಿಗಳು ಬಳಕೆಗೆ ಬಂದಿದ್ದುವು. ಸಹಜವಾಗಿ ಈ ಕಾಲದಲ್ಲಿ ಪ್ರಾರಂಭವಾದ ಗುಹಾ ವಾಸ್ತುವೂ ರೂಪ, ಉದ್ದಿಶ್ಯಗಳಲ್ಲಿ ತತ್ಕಾಲೀನ ರಚನಾವಾಸ್ತುವನ್ನೇ ಅನುಸರಿಸುತ್ತದೆ.

**ಪ್ರಪಂಚ:** ಈಜಿಪ್ಟ್ ದೇಶದಲ್ಲಿ ಸುಲಭವಾಗಿ ಕೊರೆಯಲು ಅನುಕೂಲವಾದ ಬಂಡೆಗಳು ಇದ್ದು, ಲೋಹದ ಉಪಯೋಗವೂ ಬಹು ಮುಂಚೆ ಹರಡಿದ್ದುದರಿಂದ ಪ್ರಪಂಚದ ಮೊಟ್ಟಮೊದಲ ಗುಹಾ ವಾಸ್ತು ಕೃತಿಗಳೆಲ್ಲ ಈ ದೇಶದಲ್ಲಿ ಇವೆ. ಈ ಪ್ರಾಚೀನ ಕೃತಿಗಳೆಲ್ಲ ಸಮಾಧಿಗಳು. ತತ್ಪೂರ್ವ ನಾಗರಿಕ ಸಮಾಜದಲ್ಲಿ ಭೇದನದಿಂದ ನಿರ್ಮಿಸಲಾದ ಆವರಣದ ಉಪಯೋಗ ಶವಸಂಸ್ಕಾರಕ್ಕೆ ಮಾತ್ರ ಮೀಸಲಾಗಿತ್ತು. ಹೆಣ ಹೂಳಲು ಗಟ್ಟಿ ನೆಲದಲ್ಲಿ ಹಳ್ಳಗಳನ್ನು ತೋಡುತ್ತಿದ್ದ ಪದ್ಧತಿ ನ್ಯೂಬಿಯ, ಫಯೂಮ್ ಮುಂತಾದೆಡೆಗಳಲ್ಲಿ ಪ್ರ.ಶ.ಪೂ. 4ನೆಯ ಸಹಸ್ರಮಾನದಲ್ಲೆ ಇತ್ತು. ಈ ಭೇದಿತ ಶವಗುಳಿಗಳೇ ಈಜಿಪ್ಟಿನ ಗುಹಾ ವಾಸ್ತುವಿನ ಮೊದಲ ಘಟ್ಟವಾಗಿರಬಹುದೆಂದು ಈ ಎರಡೂ ರೀತಿಯವುಗಳ ಉದ್ದಿಶ್ಯ ಶವಸಂಸ್ಕಾರವೇ ಆಗಿರುವುದರಿಂದ ಊಹಿಸಬಹುದಾಗಿದೆ. ಗುಹಾ ವಾಸ್ತು ರಚನೆ ಸಾಮಾನ್ಯ ಸಮಾಧಿಗಳಿಗಿಂತ ಹೆಚ್ಚು ಶ್ರಮದಾಯಕವೂ ಅಧಿಕ ವೆಚ್ಚದ್ದೂ ಆದ್ದರಿಂದ ಇಂಥ ಕೃತಿಗಳು ರಾಜನ ಅಥವಾ ಶ್ರೀಮಂತ ಆಸ್ಥಾನಿಕರ ಸ್ವತ್ತಾಗಿದ್ದುವು. ಜೊತೆಗೆ ಮೃತನಾದವನು ಬದುಕಿದ್ದಾಗ ಇಹದಲ್ಲಿ ಅನುಭವಿಸುತ್ತಿದ್ದ ಸಮಸ್ತ ಅನುಕೂಲಗಳೂ ಇಲ್ಲಿಯ ರೀತಿಯ ವಾಸಸ್ಥಾನವೂ ಮರಣಾನಂತರವೂ ಅವನಿಗೆ ಬೇಕಾಗುತ್ತವೆ ಎಂಬ, ತತ್ಕಾಲೀನ ಈಜಿಪ್ಟಿನಲ್ಲಿ ಹರಡಿದ್ದ, ಮರಣೋತ್ತರ ಸ್ಥಿತಿಯನ್ನು ಕುರಿತು, ನಂಬಿಕೆಗಳು ಗುಹಾ ವಾಸ್ತುರಚನೆಯನ್ನು ಪ್ರೋತ್ಸಾಹಿಸಿದವು. ಈ ಸಂಪ್ರದಾಯ ಪ್ರ.ಶ.ಪೂ.ಸು.6ನೆಯ ಶತಮಾನದವರೆಗೂ ಅಲ್ಲಿ ನಡೆದು ಬಂದದ್ದಲ್ಲದೆ, ಇದರ ಪ್ರಭಾವ ಸುತ್ತಲಿನ ದೇಶಗಳಿಗೂ ಹರಡಿ ಗುಹಾ ವಾಸ್ತು ರಚನೆಗೆ ಉತ್ತೇಜನ ದೊರೆಯಿತು. ಆಫ್ರಿಕ ಮತ್ತು ಏಷ್ಯದ ಹಲವೆಡೆಗಳಲ್ಲಿ ಈ ಗುಹಾ ವಾಸ್ತು ಸಂಪ್ರದಾಯ ಪ್ರ.ಶ. 16–17ನೆಯ ಶತಮಾನದವರೆಗೂ ನಡೆದು ಬಂತು. ಆದರೆ ಕ್ರಮೇಣ ಗುಹಾ ವಾಸ್ತು ಸಮಾಧಿಗಳಿಗಷ್ಟೇ ಮೀಸಲಾಗದೆ, ದೇಶ ಕಾಲ ಪ್ರಭಾವದಿಂದಾಗಿ ಇತರ ಅನೇಕ ಧಾರ್ಮಿಕ ಅವಶ್ಯಕತೆಗಳಿಗೂ ಬಳಕೆಯಾಯಿತು.

ಗುಹಾ ವಾಸ್ತುವಿನಲ್ಲಿ ಅತ್ಯಂತ ಪ್ರಾಚೀನವಾದ ಕೃತಿ (ಪ್ರ.ಶ.ಪೂ.ಸು.2500) ನೈಲ್ ನದಿಯ ಕೆಳಕಣಿವೆಯಲ್ಲಿ ಮೆದುಮ್ ಎಂಬಲ್ಲಿದೆ. ಇದು ಅತೆತ್ ಎಂಬ ರಾಜ್ಯಾಧಿಕಾರಿಯ ಸಮಾಧಿ. ಇದರ ವಿನ್ಯಾಸ ಶಿಲುಬೆಯಾಕಾರದಲ್ಲಿದೆ. ಒಂದು ನೇರ ಸುರಂಗವೂ ಅದನ್ನು ಮಧ್ಯದಲ್ಲಿ ಕತ್ತರಿಸುವ ಅಡ್ಡವಾದ ಕೋಚು ಅಂಕಣವೂ ಇವೆ. ಶವಕೋಣೆ ಪ್ರವೇಶದ್ವಾರದ ನೇರ ಎದುರಿನಲ್ಲಿ ಹಿಂಗೋಡೆಯಲ್ಲಿದೆ. ಈ ಸಮಾಧಿ ವಿನ್ಯಾಸದಲ್ಲಿ ಸರಳವೂ ಗಾತ್ರದಲ್ಲಿ ಚಿಕ್ಕದೂ ಆಗಿರುವುದಲ್ಲದೆ, ನೈಲ್ ಮುಖಜಭೂಮಿಯ ಬೃಹತ್ ಪಿರಮಿಡ್ಡುಗಳು ಅಥವಾ ಬೃಹತ್ ದೇವಾಲಯಗಳ ಅಡಿಯಲ್ಲಿರುವ ಭೂಗತ ಸಮಾಧಿ ಕೋಣೆಗಳ ವಿನ್ಯಾಸವನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ಈ ಸಮಾಧಿಯಲ್ಲಿ ಅಲಂಕರಣವಿಲ್ಲ. ಆದರೆ ಆ ಸುಮಾರಿನಲ್ಲೆ ಶಿಲ್ಪಾಲಂಕರಣವೂ ಪ್ರಾರಂಭವಾಗಿರಬೇಕೆಂಬುದರ ಕುರುಹು ಗೀಜ ಬಳಿಯಲ್ಲಿರುವ ರಾಣಿ 3ನೆಯ ಮೆರೆಸಂಖಳ ಸಮಾಧಿಯ ಭಾಗವಾಗಿರುವ, ಶಿಲೆಯಿಂದ ಕಂಡರಿಸಿದ ಕೋಣೆಯ ಶಿಲ್ಪಗಳೆಂದು ತಿಳಿಯುತ್ತದೆ.

ಡೇರಿಯಸ್ ಗುಹಾಸಮಾಧಿ

ಈಜಿಪ್ಟಿನ ಹೆಚ್ಚಿನ ಗುಹಾ ಸಮಾಧಿಗಳು ಮೇಲಣ ಈಜಿಪ್ಟ್ ಪ್ರದೇಶದಲ್ಲಿವೆ. ಇವು ಬಹುವಾಗಿ ಅಲ್ಲಿಯ ಮಾಗಣೆಗಾರರವು (ಪ್ರಾಂತಾಧಿಕಾರಿಗಳು). ಹಳೆಯ ರಾಜ್ಯ ಕಾಲದ ಗುಹಾವಾಸ್ತುವಿನ ಉದಾಹರಣೆಗಳಾಗಿ ಎಲ್ ಬೆರ್ಷೇ ಮತ್ತು ಎಲ್ ಶೀಕ್ ಸ ಇದ್ ನ ಸಮಾಧಿಗಳನ್ನು ಹೆಸರಿಸಬಹುದು. ಇವು ಪ್ರ.ಶ.ಪೂ. 2300ರ ಸುಮಾರಿನಲ್ಲಿ ಈಜಿಪ್ಟಿನ 15ನೆಯ ಮಾಗಣೆಯಲ್ಲಿ ಆಳುತ್ತಿದ್ದವರ ಸಮಾಧಿಗಳು. ಇವು ಮೂಲವಿನ್ಯಾಸದಲ್ಲಿ ಮೆದುಮ್ ಸಮಾಧಿಯನ್ನೇ ಹೋಲುತ್ತವೆಯಾದರೂ ಈ ಕಾಲಕ್ಕೆ ಅಲ್ಪಸ್ವಲ್ಪ ಬದಲಾವಣೆಗಳೂ ರೂಢಿಗೆ ಬಂದಿದ್ದುವು. ಇದೇ ಮೂಲ ವಿನ್ಯಾಸವೇ ಮತ್ತಷ್ಟು ಬದಲಾವಣೆಗಳೊಡನೆ ಮಧ್ಯಕಾಲದ (ಪ್ರ.ಶ.ಪೂ.2000–1200) ಗುಹಾ ವಾಸ್ತು ಕೃತಿಗಳಲ್ಲೂ ಕಂಡುಬರುತ್ತದೆ. ಆದರೆ ಈ ಕಾಲದಲ್ಲಿ ಬರಿಯ ಸುರಂಗದ ಬದಲು, ಕಂಬಗಳ ಸಾಲುಗಳನ್ನೂ ಅನೇಕ ಸಣ್ಣ ಕೋಣೆಗಳನ್ನೂ ಅಳವಡಿಸುವ ಪದ್ಧತಿ ಸಾಮಾನ್ಯವಾಗಿತ್ತಲ್ಲದೆ ಈ ಸಮಾಧಿಗಳು ಗಾತ್ರದಲ್ಲೂ ದೊಡ್ಡವಾಗಿರುತ್ತಿದ್ದವು. ಮಧ್ಯ ಕಾಲದ ಅನೇಕ ಗುಹಾ ಸಮಾಧಿಗಳು, ಬೇನೀ ಹಸನ್, ದೀರ್ ಎಲ್ ಬಹರಿ, ಆಸ್ಯೂತ್ ಮುಂತಾದೆಡೆಗಳಲ್ಲಿವೆ. ಬೇನೀ ಹಸನ್‌ನಲ್ಲಿ ಪಖ್ತ್ ದೇವತೆಗಾಗಿ ಮಾಡಿದ ಒಂದು ಗುಹಾ ದೇವಾಲಯವೂ ಇದೆ. ಈ ಕಾಲದ ಸಮಾಧಿಗಳು ಮತ್ತು ದೇವಾಲಯಗಳಲ್ಲಿ ವರ್ಣಚಿತ್ರಾಲಂಕರಣ ಮತ್ತು ಶಿಲ್ಪಾಲಂಕರಣ ವಿಶೇಷವಾಗಿ ಕಂಡುಬರುತ್ತವೆ.

ಬಿಬನ್ ಎಲ್ ಮುಲುಕ್‌ನಲ್ಲಿರುವ 1ನೆಯ ಸೆಟಿ ದೊರೆಯ ಕಾಲದ ಸಮಾಧಿ (ಪ್ರ.ಶ.ಪೂ.ಸು. 1250), ಬೇನೀ ಹಸನ್ ಮತ್ತು ದೀರ್ ಎಲ್ ಬಹರಿಗಳಲ್ಲಿರುವ ಈ ಕಾಲದ ಸಮಾಧಿಗಳು ಉತ್ತಮ ಶಿಲ್ಪಕ್ಕೆ ಪ್ರಸಿದ್ಧವಾಗಿವೆ. ಇವುಗಳಲ್ಲಿ ತತ್ಕಾಲೀನ ದೇವರುಗಳು, ಧಾರ್ಮಿಕ ದೃಶ್ಯಗಳೇ ಅಲ್ಲದೆ, ಮೃತರ ಮತ್ತು ಅವರ ಸಂಬಂಧಿಕರ ಮೂರ್ತಿಗಳು, ಆ ವ್ಯಕ್ತಿಗಳ ಸ್ವಂತ ಸಾಧನೆಗಳು ಮುಂತಾದುವೆಲ್ಲ ಶಿಲ್ಪಿತವಾಗಿವೆ. ಇಲ್ಲಿಯ ಕೆಲವು ಶಿಲ್ಪಗಳ ಜೊತೆಯಲ್ಲಿ ಶಿಲಾಶಾಸನಗಳೂ ಇದ್ದು, ಇವು ಚರಿತ್ರೆಯ ಪುನರ್ರಚನೆಗೆ ಬಹು ಉಪಯುಕ್ತವಾಗಿವೆ.

ಇದೇ ವಾಸ್ತುಶಿಲ್ಪ ಸಂಪ್ರದಾಯ ನವಪ್ರಭುತ್ವ ಕಾಲದಲ್ಲೂ (ಪ್ರ.ಶ.ಪೂ.ಸು. 1200–1000) ಮುಂದುವರಿಯಿತು. ಶಿಲ್ಪದ ದೃಷ್ಟಿಯಿಂದ, 18ನೆಯ ರಾಜವಂಶದ ಅರಸರ ದಿಗ್ವಿಜಯಗಳನ್ನು ರೂಪಿಸಿರುವ ದೀರ್ ಎಲ್ ಬಹರಿಯಲ್ಲಿರುವ ರಾಣಿ ಹ್ಯಾಷೆಪ್ಸೊತ್‌ಳ ಸಮಾಧಿ ಬಹಳ ಮುಖ್ಯವಾದದ್ದು. ಆದರೆ ಇದು ಭಾಗಶಃ ಗುಹೆ,

ಮುಂಭಾಗವೆಲ್ಲ ಕಟ್ಟಡ. ಈಜಿಪ್ಟಿನ ಗುಹಾ ವಾಸ್ತು ಸಂಪ್ರದಾಯದ ಮೇರುಕೃತಿ ಅಬು ಸಿಂಬೆಲ್‌ನಲ್ಲಿರುವ 2ನೆಯ ರ್‍ಯಾಮ್ಸೆಸ್ ದೊರೆಯ ದೇವಾಲಯ. ಇದು ಗುಹಾ ದೇವಾಲಯಗಳಲ್ಲಿ ಅತಿ ದೊಡ್ಡದು. ಅಲ್ಲದೆ, ಮುಂಭಾಗದಲ್ಲಿ ಬೃಹದಾಕಾರದ ರಾಜರ ಮೂರ್ತಿಗಳಿಂದಲೂ ಒಳಗೆ ಕಲಾತ್ಮಕವೂ ಚರಿತ್ರೆಯ ದೃಷ್ಟಿಯಿಂದ ಅಮೂಲ್ಯವೂ ಆದ ಶಿಲ್ಪಗಳಿಂದಲೂ ಅಲಂಕೃತವಾಗಿದೆ (**ನೋಡಿ- ಅಬುಸಿಂಬೆಲ್**). ಗೆಬೆಲ್ ಸಿಲ್‌ಸಿಲೇಯ ಗುಹಾ ದೇವಾಲಯಗಳೂ ಥೀಬ್ಸ್ ಪ್ರದೇಶದಲ್ಲಿರುವ ಮುನ್ನೂರಕ್ಕೂ ಹೆಚ್ಚು ರಾಜ್ಯಾಧಿಕಾರಿಗಳ ಸಮಾಧಿಗಳೂ ಇದೇ ಕಾಲಕ್ಕೆ ಸೇರಿದವು.

ಈಜಿಪ್ಟಿನ ನವಪ್ರಭುತ್ವದ ಅವನತಿಯ ಅನಂತರ ಆ ದೇಶದ ಆಳ್ವಿಕೆ ಪರದೇಶದವರ ಕೈಸೇರಿದ್ದರಿಂದ ಗುಹಾ ವಾಸ್ತು ಸಂಪ್ರದಾಯ ಕೆಲಕಾಲ ಕಡಿದು ಹೋಯಿತು. ಆದರೆ ಪುನಃ ಅಲ್ಲಿಯ 26ನೆಯ ರಾಜವಂಶದ ಕಾಲದಲ್ಲಿ (ಪ್ರ.ಶ.ಪೂ.663–525), ಥೀಬ್ಸ್ ಪ್ರದೇಶದಲ್ಲಿ ಕೆಲವು ಗುಹಾ ಸಮಾಧಿಗಳನ್ನು ಕೊರೆಯಲಾಯಿತು. ಆದರೆ ಇವು ಚಿಕ್ಕವೂ ಅನುಕರಣೆಗಳೂ ಆಗಿದ್ದು, ಈಜಿಪ್ಟಿನ ಗುಹಾ ವಾಸ್ತು ಸಂಪ್ರದಾಯದ ಅವನತಿಯನ್ನು ಸೂಚಿಸುತ್ತವೆ.

**ಮೆಡಿಟರೇನಿಯನ್ ಪ್ರದೇಶ ಮತ್ತು ಪಶ್ಚಿಮ ಏಷ್ಯ :** ಮೆಡಿಟರೇನಿಯನ್ ಸಮುದ್ರದ ದ್ವೀಪಗಳಲ್ಲೂ ಸುತ್ತಲಿನ ಪ್ರದೇಶಗಳಲ್ಲೂ ಈಜಿಪ್ಟಿನಲ್ಲಿದ್ದಂಥ ಮರಣೋತ್ತರ ಸ್ಥಿತಿಯನ್ನು ಕುರಿತ ನಂಬಿಕೆಗಳು ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಹರಡಿದ್ದಂತೆ ಕಾಣುತ್ತದೆ. ಇವು ಗುಹಾ ವಾಸ್ತುವಿನ ಬೆಳವಣಿಗೆಗೆ ಸಹಕಾರಿಯಾಗಿದ್ದರೂ ಪ್ರಾಯಶಃ ಅಲ್ಲಿಯ ಭೌಗೋಳಿಕ ಪರಿಸ್ಥಿತಿಯಿಂದಾಗಿ ಉತ್ತಮ ಗುಹಾ ವಾಸ್ತುಕೃತಿಗಳೇನೂ ಕಂಡುಬರುವುದಿಲ್ಲ. ಕ್ರೀಟ್ ದ್ವೀಪದಲ್ಲಿ ಪ್ರ.ಶ.ಪೂ. 1700–1400ರ ಕಾಲದಲ್ಲಿ ನೆಲದ ಮಟ್ಟಕ್ಕಿಂತ ಕೆಳಗೆ ಬಂಡೆಗಳಲ್ಲಿ ದುಂಡು ಕೋಣೆಗಳನ್ನು ಕೊರೆದು ಅವಕ್ಕೆ ನೇರವಾದ ತೆರೆದ ಹಾದಿಯನ್ನು ರೂಪಿಸಿ ಸಮಾಧಿಗಳನ್ನು ನಿರ್ಮಿಸುವ ರೂಢಿ ಬೆಳೆಯಿತು. ಇವನ್ನು ಥೋಲೋಸ್ ಸಮಾಧಿಗಳೆಂದು ಕರೆಯುತ್ತಾರೆ. ಇವು ಭಾಗಶಃ ಶಿಲೆಯಲ್ಲಿ ಕಂಡರಿಸಿದ ಕೃತಿಗಳಾಗಿದ್ದರೂ ಗುಹಾ ವಾಸ್ತುವೆಂದೆನಿಸಿಕೊಳ್ಳುವುದಿಲ್ಲ. ಆದರೆ ಇದೇ ಸಂಪ್ರದಾಯದ ವ್ಯತ್ಯಸ್ತ ರೂಪದಲ್ಲಿ ನಾಸಸ್‌ನಲ್ಲಿ ಪ್ರಸಿದ್ಧ ಅರಮನೆಯ ದಕ್ಷಿಣದಲ್ಲಿ ಒಂದು ರಾಜಸಮಾಧಿಯಿದೆ. ಇದರಲ್ಲಿ ಗೋರಿ ಕೋಣೆ ಮಾತ್ರ ಪೂರ್ಣವಾಗಿ ಗುಹಾರೂಪದ್ದು. ಇತರ ಭಾಗಗಳು ಶಿಲೆಯಲ್ಲಿ ಕೊರೆದವಾದರೂ ಗೋಡೆ ಮತ್ತು ಚಾವಣಿಗಳನ್ನೂ ರಚಿಸಲಾಗಿದೆ. ಥೋಲೋಸ್ ರೀತಿಯ ಸವಾಧಿಗಳು ಪ್ರ.ಶ.ಪೂ.ದ ಪ್ರಾರಂಭದವರೆಗೂ ಕ್ರೀಟ್‌ನಲ್ಲಿ ಬಳಕೆಯಲ್ಲಿದ್ದುವಲ್ಲದೆ ಇದೇ ರೀತಿಯವು ಗ್ರೀಸಿನಲ್ಲಿ ಸಹ ಮೈಸೀನಿಯನ್ ಸಂಸ್ಕೃತಿಯ ಕಾಲದಲ್ಲಿ ಕಂಡುಬರುತ್ತವೆ. ಇಟಲಿಯ ಎಟ್ರೂರಿಯ ಪ್ರದೇಶದಲ್ಲೂ ಅನೇಕ ಭೂಗರ್ಭ ಗುಹಾಸಮಾಧಿಗಳಿವೆ. ಇವು ಪ್ರ.ಶ.ಪೂ. ಸು.6–3ನೆಯ ಶತಮಾನಕ್ಕೆ ಸೇರಿದವು. ಇವು ವಿನ್ಯಾಸದಲ್ಲಿ ಸಮಕಾಲೀನ ವಾಸ್ತುವನ್ನೇ ಅನುಕರಿಸುತ್ತವೆ. ಇವುಗಳ ಒಳಗೆ ಉತ್ತಮ ವರ್ಣಗಳಿದ್ದುವಲ್ಲದೆ, ಮೃತನ ಉಪಯೋಗಕ್ಕಾಗಿ ಅವಶ್ಯಕ ವ್ಯವಸ್ಥೆಗಳನ್ನೂ ಮಾಡಲಾಗಿರುತ್ತಿತ್ತು.

ಇಟಲಿಯ ರೋಮ್ ಮತ್ತು ಸುತ್ತಣ ಪ್ರದೇಶದಲ್ಲಿ ಅನೇಕ ಸುರಂಗ ಸಮಾಧಿಗಳು ಇವೆ. ಭೂಗರ್ಭದಲ್ಲಿ ಕಿಮೀಗಟ್ಟಲೆ ಅಂಕುಡೊಂಕಾಗಿ ಹರಡುವ ಸುರಂಗಗಳನ್ನು ತೋಡಿ, ಅವುಗಳ ಪಕ್ಕದಲ್ಲಿ ಗೋಡೆಗಳಲ್ಲಿ ಸಣ್ಣ ಕೋಷ್ಠಗಳನ್ನು ನಿರ್ಮಿಸಿ, ಶವ ಅಥವಾ ಶವಾವಶೇಷ ಗಳನ್ನು ಸಂಸ್ಕರಿಸಲಾಗುತ್ತಿತ್ತು. ಇಂಥ ಸುರಂಗ ಸಮಾಧಿಗಳು ಒಂದು ಕುಟುಂಬ ಅಥವಾ ಜನಾಂಗಕ್ಕೆ ಮೀಸಲಾಗಿರುತ್ತಿದ್ದವು. ಬಂಡೆಯಲ್ಲಿ ಕೊರೆದ ಈ ಸುರಂಗಗಳಲ್ಲಿ ಹೆಚ್ಚಿನ ವಾಸ್ತು ಅಂಶಗಳಾಗಲೀ ಶಿಲ್ಪಾಲಂಕರಣವಾಗಲೀ ಕಂಡುಬರುವುದಿಲ್ಲ. ಈ ರೀತಿಯ ಸುರಂಗ ಸಮಾಧಿಗಳು ಮೆಡಿಟರೇನಿಯನ್ ಸಮುದ್ರದ ಆಗ್ನೇಯ ದಂಡೆಯ ಫಿನಿಷಿಯ ಮತ್ತು ಸುತ್ತಣ ಪ್ರದೇಶಗಳಲ್ಲಿ ಪ್ರ.ಶ.ಪೂ.1ನೆಯ ಸಹಸ್ರಮಾನದಲ್ಲೇ ಪ್ರಚಲಿತವಾಗಿದ್ದ ಗುಹಾಸಮಾಧಿಗಳಿಂದ ರೂಢಿಗತವಾದಂತೆ ಕಾಣುತ್ತದೆ. ಈ ಕಾಲದ ಹಲವು ಗುಹಾಸಮಾಧಿಗಳು ಇಸ್ರೇಲಿನ ಬೆತ್‌ಶಿಯರಿಂ ಎಂಬಲ್ಲಿ ಕಂಡುಬಂದಿವೆ. ಬೆಟ್ಟದ ಇಳಿಜಾರಿನಲ್ಲಿ ತೋಡಲಾದ ಈ ಸುರಂಗ ಸಮಾಧಿಗಳಲ್ಲಿ ಸಾಮಾನ್ಯವಾಗಿ ಒಂದೇ ಒಂದು ನೇರ ಸುರಂಗದಂಥ ಗುಹೆಯಿದ್ದು ಅದರ ಪಕ್ಕದ ಗೋಡೆಗಳಲ್ಲಿ ಶವಗೂಡುಗಳಿರುತ್ತವೆ. ಇಸ್ರೇಲಿನ ಫಿನಿಷಿಯ ಕರಾವಳಿಯಲ್ಲಿರುವ ಎಲ್‌ಜಿಬ್ ಎಂಬಲ್ಲಿ ಪ್ರ.ಶ.ಪೂ.8ನೆಯ ಶತಮಾನದ ಗುಹಾ ಸಮಾಧಿಗಳೂ ಜೋರ್ಡಾನ್ ನದಿ ಕಣಿವೆಯ ಹಜೋರ್ ಎಂಬಲ್ಲಿ ಭೂಗರ್ಭ ಸುರಂಗ ಸಮಾಧಿಗಳು ಹಾಗೂ ಗುಹಾ ಸಮಾಧಿಗಳೂ ಬೆಳಕಿಗೆ ಬಂದಿವೆ. ಹಜೋರ್‌ನ ಸುರಂಗ ಸಮಾಧಿಗಳು ಪ್ರ.ಶ.ಪೂ.1500ರ ಸುಮಾರಿನವೆಂದು ಊಹಿಸಲಾಗಿದೆ. ಇದರ ಮುಂಭಾಗದಲ್ಲಿ ಎರಡು ಕಂಬಗಳಲ್ಲದೆ ಒಳಗೆ ವಿಶಾಲವಾದ ಹಜಾರವಿದೆ. ಇದು ಪ್ರ.ಶ.ಪೂ.9ನೆಯ ಶತಮಾನದ್ದು.

ಮೆಡಿಟರೇನಿಯನ್ ಸಮುದ್ರಕ್ಕೆ ಹೊಂದಿಕೊಂಡಂತಿರುವ ತುರ್ಕಿ ದೇಶದ ಪಶ್ಚಿಮ ಭಾಗದಲ್ಲೂ (ಏಷ್ಯ ಮೈನರ್) ಗುಹಾ ವಾಸ್ತು ಶಿಲ್ಪನಿರ್ಮಾಣಗಳಿವೆ. ಇಲ್ಲಿಯ ಫ್ರಿಜಿಯ ಪ್ರದೇಶದ ಎಸ್ಕಿಷೆಹಿರ್, ಅಫ್ಯೋನ್, ಕರಹಿಸಾರ್, ಅರ್ಸ್ಲನ್ ಕಾಯ, ಯಾಜಿಲಿಕಾಯ ಮುಂತಾದೆಡೆಗಳಲ್ಲಿರುವ ಕೃತಿಗಳು ಪ್ರಸಿದ್ಧವಾದವು. ಇಲ್ಲಿಯ ಗುಹಾವಾಸ್ತು ನಿರ್ಮಾಣಗಳು ಪ್ರ.ಶ.ಪೂ.6–ಪ್ರ.ಶ. 3ನೆಯ ಶತಮಾನ ಕಾಲಕ್ಕೆ ಸೇರಿದವು. ಫ್ರಿಜಿಯದ ನಿರ್ಮಾಣಗಳಲ್ಲಿ ಸಮಾಧಿಗಳಲ್ಲದೆ ದೇವಾಲಯಗಳೂ ಇವೆ. ಇವೆಲ್ಲದರಲ್ಲೂ ಮುಮ್ಮುಖ ಮಾತ್ರವೇ ವಿಶಾಲವಾಗಿ ಸುಂದರವಾಗಿ ಕೊರೆಯಲಾಗಿದ್ದು ಒಳ ಆವರಣ ಕೇವಲ ಸಮಾಧಿ ಕೋಣೆ ಅಥವಾ ಚಿಕ್ಕ ದೇವಕೋಷ್ಠಕ್ಕೆ ಸೀಮಿತವಾಗಿರುತ್ತದೆ. ಫ್ರಿಜಿಯದ ಸಮಾಧಿಗಳು ಸ್ವರೂಪದಲ್ಲಿ ಲಿಸಿಯ ಪ್ರದೇಶದ ಮರದ ಕಟ್ಟಡಗಳನ್ನು ಅನುಕರಿಸುತ್ತವೆಯೆಂದು ವಿದ್ವಾಂಸರ ಅಭಿಪ್ರಾಯ. ಇವುಗಳಲ್ಲಿ ಮಟ್ಟ ಚಾವಣಿಯವು, ಇಪ್ಪಾರು ಚಾವಣಿಯವು ಮತ್ತು ಗ್ರೀಕ್ ಸ್ತಂಭರೀತಿಗಳನ್ನು ಅನುಕರಿಸಿರುವಂತಹವು ಎಂದು ಮೂರು ಬಗೆಗಳಿದ್ದು ಈ ಬಗೆಗಳು ಕಾಲಾನುಕ್ರಮವಾಗಿ ಮೇಲೆ ಸೂಚಿಸಿರುವ ಕ್ರಮದಲ್ಲೇ ಬಳಕೆಗೆ ಬಂದಂತೆ ತೋರುತ್ತದೆ. ಹೆಚ್ಚಿನವು ಎರಡನೆಯ ಬಗೆಗೆ ಸೇರಿದವು. ಬ್ಯುಯುಕ್ ಅರ್ಸ್ಲನ್ ತಾಷ್ ಮತ್ತು ದಿಲಿಕಿ ತಾಷ್‌ನ ಸಮಾಧಿಗಳು ಮೊದಲನೆಯ ಬಗೆಗೆ ಉದಾಹರಣೆಗಳು. ಅಲ್ಲದೆ ಇವು ಅತ್ಯಂತ ಪ್ರಾಚೀನವಾದವು. ಯಾಜಿಲಿಕಾಯದ ಸಮಾಧಿ ಎರಡನೆಯ ಬಗೆಯದು. ಕಲೆಕಪಿ (ಪ್ರ.ಶ.ಪೂ.5ನೆಯ ಶತಮಾನ) ಮತ್ತು ಕಸ್ತಮೊನು (ಪ್ರ.ಶ.ಪೂ.4ನೆಯ ಶತಮಾನ) ಮೂರನೆಯ ವರ್ಗದ ಮೊದಲ ನಿರ್ಮಾಣಗಳು. ಇದೇ ಪ್ರದೇಶದಲ್ಲಿರುವ ಸೋಲನ್ ಎಂಬವನ ಸಮಾಧಿ ರೋಮನ್ ಸಾಮ್ರಾಜ್ಯ ಕಾಲಕ್ಕೆ ಸೇರಿದ್ದು, ಇದನ್ನು ಮೂರನೆಯ ಬಗೆಯಲ್ಲಿ ಸುಮಾರು ಕೊನೆಯ ನಿರ್ಮಾಣ ಎಂದು ಪರಿಗಣಿಸಬಹುದು. ಫ್ರಿಜಿಯದ ಸಮಾಧಿಗಳ ಮುಮ್ಮುಖ ಅಲಂಕರಣದಲ್ಲಿ ಗ್ರೀಕ್ ಅಲ್ಲದೆ ಅಖಮೇನಿಯನ್ ಮತ್ತು ಹಿಟೈಟ್ ಶಿಲ್ಪ ಸಂಪ್ರದಾಯದ ಪ್ರಭಾವವೂ ಕಂಡುಬರುತ್ತದೆ.

ಇಲ್ಲಿಯ ದೇವಾಗಾರಗಳೂ ಸಮಾಧಿಗಳಂತೆಯೇ ಕಾಣುತ್ತವೆ. ಆದರೆ ಇಲ್ಲಿ ಸಮಾಧಿ ಕೋಣೆಯ ಬದಲು ವಿಗ್ರಹ ಅಥವಾ ಪವಿತ್ರ ವಸ್ತುವನ್ನಿಡುವ ಕೋಷ್ಠವಿರುತ್ತದೆ. ಈ ದೇವಾಗಾರಗಳಲ್ಲಿ ಬಹಳ ಮುಖ್ಯವಾದವು ಅರ್ಸ್ಲನ್ ಕಾಯ (ಪ್ರ.ಶ.ಪೂ.6ನೆಯ ಶತಮಾನ), ಯಾಜಿಲಿಕಾಯ, ಬಫ್ಸಿಸ್ (ಪ್ರ.ಶ.ಪೂ.5ನೆಯ ಶತಮಾನ)–ಈ ಸ್ಥಳಗಳಲ್ಲಿವೆ. ಇಂಥ ದೇವಾಗಾರಗಳು ಪ್ರ.ಶ.ಪೂ.6–5ನೆಯ ಶತಮಾನಗಳಲ್ಲಷ್ಟೇ ಪ್ರಚಲಿತವಾಗಿದ್ದುವು. ಅರೆಜಸ್ಟಿಸ್ ಎಂಬಲ್ಲಿಯ ದೇವಾಲಯದಲ್ಲಿ ಸಿಬೆಲೀ ದೇವತೆಯ ಒಂದು ಸುಂದರ ಮೂರ್ತಿಯಿದೆ. ಇವಲ್ಲದೆ ಬಂಡೆಯಲ್ಲಿ ಮೆಟ್ಟಿಲುಗಳನ್ನು ಕಡಿದು ಮೇಲೆ ಸಿಂಹಾಸನದಂತೆ ವೇದಿಕೆಯನ್ನು ನಿರ್ಮಿಸಿರುವ ತೆರೆದ ದೇವಾಗಾರಗಳೂ ಫ್ರಿಜಿಯ ಪ್ರದೇಶದಲ್ಲಿದ್ದವು. ಇಂಥ ಒಂದು ಉತ್ತಮ ವಾಸ್ತುನಿರ್ಮಾಣ ಮೈದಾಸ್ ನಗರದಲ್ಲಿ ಇದೆ. ಇದು ಹಿಂದೆ ಸಿಬೆಲೀ ದೇವತೆಗಾಗಿ ಮೀಸಲಾಗಿತ್ತು.

ಫ್ರಿಜಿಯದ ಪಕ್ಕದ ಲಿಸಿಯ ಮತ್ತು ಕಾರಿಯ ಪ್ರದೇಶಗಳಲ್ಲಿ ಸಹ ಬಂಡೆಯಲ್ಲಿ ಕೊರೆದ ಕೆಲವು ನಿರ್ಮಾಣಗಳಿವೆ. ಆದರೆ ಇವು ರಚನಾನಿರ್ಮಾಣಗಳಂತೆಯೇ ಹೊರಮೈಯನ್ನೂ ಪೂರ್ಣವಾಗಿ ಕೊರೆದು ಮಾಡಿದವಾದ್ದರಿಂದ ಗುಹೆಗಳೆನಿಸಿಕೊಳ್ಳುವುದಿಲ್ಲ. ಇವೆಲ್ಲ ಸಮಾಧಿಗಳು. ಲಿಸಿಯದ ಇಂಥ ಮತ್ತು ಕಾರಿಯದ ಇದಿಮಗಳಲ್ಲಿ ಈ ವಾಸ್ತುರೀತಿಯ ಒಳ್ಳೆಯ ಉದಾಹರಣೆಗಳಿವೆ.

ಸಿರಿಯದ ಉತ್ತರ ಗಡಿಯಲ್ಲಿರುವ ಅರ್ಸ್ಲನ್ ತಾಷ್‌ನಲ್ಲೂ ಫ್ರಿಜಿಯದ ರೀತಿಯ ಒಂದು ಸಮಾಧಿಯಿದೆ. ಪಶ್ಚಿಮ ಏಷ್ಯದ ಇರಾಕ್ ಪ್ರದೇಶದ ಶಿರಿ ಮಲಿಕ್ತದಲ್ಲಿ ಅಸ್ಸೀರಿಯನ್ ದೊರೆಯೊಬ್ಬ ದೇವ ಚಿಹ್ನೆಗಳೆದುರು ಪ್ರಾರ್ಥಿಸುತ್ತಿರುವ ಮತ್ತು ಮಲ್ತಾಯ್ ಎಂಬಲ್ಲಿ ಸೆನ್ನಾಚೆರಿಬ್ ದೊರೆ ಇದೇ ರೀತಿ ಪ್ರಾರ್ಥನೆ ಸಲ್ಲಿಸುತ್ತಿರುವ ಶಿಲ್ಪಗಳು ಮತ್ತು ಅಲ್ಲಿಯ ಕುರ್ದಿಸ್ತಾನ ಪ್ರದೇಶದಲ್ಲಿರುವ, ಪ್ರ.ಶ.ಪೂ.6ನೆಯ ಶತಮಾನದ ಒಂದೆರಡು ಗುಹಾ ಸಮಾಧಿಗಳು–ಇವನ್ನು ಬಿಟ್ಟರೆ ಆ ದೇಶದಲ್ಲಿ ಹೆಚ್ಚಿನ ಗುಹಾ ವಾಸ್ತು ಶಿಲ್ಪಗಳಿಲ್ಲ. ಜೋರ್ಡಾನಿನ ಪೆಟ್ರ ಮತ್ತು ಅರೇಬಿಯದ ಹೆಜ್ರಾಫ್‌ಗಳಲ್ಲಿ ಕೇವಲ ಒಂದು ಹಜಾರ ಮಾತ್ರ ಇರುವ ಗುಹಾದೇವಾಲಯಗಳಿವೆ. ಇವು ಇಸ್ಲಾಂ ಧರ್ಮಕ್ಕೆ ಹಿಂದಿದ್ದ ಸ್ಥಳೀಯ ಅರಬ್ಬಿ ಧರ್ಮಪಂಥಗಳ ದೇವಾಲಯಗಳೆಂದೂ ಪ್ರಾಯಶಃ ಪ್ರ.ಶ.ಪೂ.2–1ನೆಯ ಶತಮಾನದವೆಂದೂ ಊಹಿಸಲಾಗಿದೆ. ಇರಾನ್ ದೇಶದ ಅಜ಼ರ್‌ಬೈಜಾನ್ ಪ್ರಾಂತ ಫಖ್ರಿಕ, ಕರ್ದಿಸ್ತಾನ್ ವಿಭಾಗದಲ್ಲಿರುವ ದುಕ್ಕಾನ್–ಇ–ದಾವೂದ್, ಕೆರ್ಮನ್ ಷಾ ಪ್ರದೇಶದಲ್ಲಿರುವ ಸಖ್ನ–ಇಲ್ಲಿ ಮಿಡಿಯ ರಾಜ್ಯದ ಕಾಲದ (ಪ್ರ.ಶ.ಪೂ.7–6ನೆಯ ಶತಮಾನ) ಗುಹಾಸಮಾಧಿಗಳಿವೆ. ಫಖ್ರಿಕದ ಗುಹೆಯ ಮುಂಭಾಗದಲ್ಲಿ ಎರಡು ಕಂಬಗಳಿಂದೆತ್ತಿದ ವರಾಂಡವೂ ಅದರ ಹಿಂದೆ ಮೂರು ಕಂಬಗಳಿರುವ ಸಮಾಧಿ ಕೋಣೆಯೂ ಇದ್ದು ಇದರಲ್ಲಿ ಮೂರು ಸಮಾಧಿಗಳಿವೆ.

ದುಕ್ಕಾನ್–ಇ–ದಾವೂದ್ ಮತ್ತು ಸಖ್ನದ ಗುಹೆಗಳು ಕೂಡ ವಿನ್ಯಾಸದಲ್ಲಿ ಸ್ಥೂಲವಾಗಿ ಮೇಲಿನ ರೀತಿಯಿವೆ. ದುಕ್ಕಾನ್–ಇ–ದಾವೂದ್, ಕೀಲ್–ಇ–ದಾವೂದ್ ಎಂದು ಕರೆಯುವ ಧಾರ್ಮಿಕ ಶಿಲ್ಪಗಳಿರುವ ಭಿತ್ತಿ, ಸಖ್ನದ ಗುಹೆಯ ಮೇಲಿರುವ ಅಹುರ್‌ಮಜ್ದನ ಚಿಹ್ನೆ ಇವು ಉತ್ತಮ ಶಿಲ್ಪಗಳೆಂದು ಪರಿಗಣಿತವಾಗಿವೆ.

ಪರ್ಷಿಯನ್ ಸಾಮ್ರಾಜ್ಯ ಕಾಲಕ್ಕೆ ಸೇರಿದ ಬಹುಮುಖ್ಯವಾದ ಗುಹಾ ವಾಸ್ತು ನಿರ್ಮಾಣಗಳು ಇರಾನಿನ ಪರ್ಸೆಪಲಿಸ್ ಬಳಿ ಇವೆ. ಇವುಗಳಲ್ಲಿ ಅತ್ಯಂತ ಹಳೆಯವು ನಕ್ಷೆ–ಇ–ರಸ್ತುಂ ಎಂಬಲ್ಲಿವೆ. ಇವು 1ನೆಯ ಡೇರಿಯಸ್ (ಪ್ರ.ಶ.ಪೂ.521–485), 1ನೆಯ ಝರ್ಕ್ಸೀಸ್ (ಪ್ರ.ಶ.ಪೂ.485–465), 1ನೆಯ ಆರ್ಟಗ್ಸರ್ಕ್ಸೀಸ್ (ಪ್ರ.ಶ.ಪೂ.465–424) ಮತ್ತು 2ನೆಯ ಡೇರಿಯಸ್ (ಪ್ರ.ಶ.ಪೂ.424–405) ದೊರೆಗಳ ಸಮಾಧಿಗಳು. ಈ ಸಮಾಧಿಗಳಲ್ಲಿ ಶಿಲುಬೆಯಾಕಾರದಲ್ಲಿ ಕೊರೆದ ವಿಶಾಲವಾದ ಮುಮ್ಮುಖವಿದ್ದು ಮುಂದಿನ ಅಡ್ಡಪಟ್ಟಿಯಲ್ಲಿ ಪರ್ಸೆಪಲಿಸ್ ರೀತಿಯವೆಂದು ಕರೆಯುವ ನಾಲ್ಕು ಕಂಬಗಳಿಂದ ಎತ್ತಿದ ವರಾಂಡವೂ ಅದರ ಹಿಂದೆ ಸಮಾಧಿಕೋಣೆಯೂ ಇರುತ್ತವೆ. 1ನೆಯ ಡೇರಿಯಸನ ಸಮಾಧಿಯ ಮೇಲೆ ಅಹುರ್‌ಮಜ್ದ ದೇವತೆಯ ಚಿಹ್ನೆಯೂ ರಾಜನ ಸಿಂಹಾಸನವೂ ಸದೆಬಡಿದ ರಾಷ್ಟ್ರಗಳಿಂದ ಎತ್ತಿಹಿಡಿಯಲ್ಪಟ್ಟಂತೆ ಕೆತ್ತಲ್ಪಟ್ಟಿವೆ. ಪರ್ಸೆಪಲಿಸ್ ಬಳಿಯಲ್ಲೇ ಕೂಹ್–ಎ–ರಹ್ಮತ್ ಬೆಟ್ಟದ ಬುಡದಲ್ಲಿ ಮುಂದಿನ ಪರ್ಷಿಯನ್ ಚಕ್ರಾಧಿಪತಿಗಳಾದ 2ನೆಯ ಆರ್ಟಗ್ಸರ್ಕ್ಸೀಸ್ (ಪ್ರ.ಶ.ಪೂ.404–359) ಮತ್ತು 3ನೆಯ ಆರ್ಟಗ್ಸರ್ಕ್ಸೀಸ್‌ರ (ಪ್ರ.ಶ.ಪೂ.359–338) ಸಮಾಧಿಗಳಿವೆ. ಇವು ವಿನ್ಯಾಸದಲ್ಲಿ ನಕ್ಷ್–ಎ–ರುಸ್ತುಮ್ ಸಮಾಧಿಗಳನ್ನೇ ಹೋಲುತ್ತವೆ. ಇವುಗಳಲ್ಲಿ ಈ ದೊರೆಗಳು ಅಹುರ್‌ಮಜ್ದ ದೇವತೆಯನ್ನು ಪೂಜಿಸುವ ಉತ್ತಮ ಉಬ್ಬುಶಿಲ್ಪಗಳಿವೆ. ಪ್ರ.ಶ. 4–5ನೆಯ ಶತಮಾನಕ್ಕೆ ಸೇರಿದ ಸಸ್ಸಾನೀಯ ಅರಸರ ಶಿಲ್ಪಗಳನ್ನೊಳಗೊಂಡ ಭಿತ್ತಿಗಳು ಮತ್ತು ಗುಹೆಗಳು ಇರಾನಿನ ತಖ್ತ್–ಎ–ಜಮಷಿದ್ ಎಂಬಲ್ಲಿವೆ.

**ಭಾರತದ ಪ್ರಭಾವ:** ಈಜಿಪ್ಟ್, ಪಶ್ಚಿಮ ಏಷ್ಯ ಮತ್ತು ಮೆಡಿಟರೇನಿಯನ್ ಪ್ರದೇಶಗಳಲ್ಲಿ ಹರಡಿದ್ದ ಗುಹಾ ವಾಸ್ತು ಹೆಚ್ಚು ಮಟ್ಟಿಗೆ ಸಮಾಧಿವಾಸ್ತು ಎಂಬುದು ಮೇಲಿನ ಉದಾಹರಣೆಗಳಿಂದ ವ್ಯಕ್ತವಾಗುತ್ತದೆ. ಇವುಗಳಲ್ಲಿ ಕೆಲವು ದೇವಾಗಾರಗಳಾಗಿದ್ದರೂ ಅಂಥವುಗಳ ಸಂಖ್ಯೆ ಅತ್ಯಲ್ಪ. ಆದರೆ ಗುಹಾವಾಸ್ತು ಪ್ರಕಾರ ಪ್ರ.ಶ.ಪೂ.3ನೆಯ ಶತಮಾನದಲ್ಲಿ ಭಾರತದಲ್ಲಿ ಪ್ರಚಲಿತವಾದ ಮೇಲೆ ಅದರ ಸ್ವರೂಪ ಮತ್ತು ಉದ್ದಿಶ್ಯಗಳೇ ಬದಲಾದವು. ಇದರ ಸಮಾಧಿ ಸಂಬಂಧ ಕ್ಷೀಣವಾಗಿ ಗುಹಾವಾಸ್ತುವಿನಲ್ಲಿ ಸ್ಥಳೀಯ ರಚನಾ ವಾಸ್ತುಸ್ವರೂಪವನ್ನು ಅಳವಡಿಸಿ ಕೊಂಡು ಈ ನಿರ್ಮಾಣಗಳು ಹೆಚ್ಚಾಗಿ ದೇವಾಗಾರಗಳಾಗಿಯೋ, ಭಿಕ್ಷು–ಸಂನ್ಯಾಸಿಗಳ ವಾಸಸ್ಥಾನಗಳಾಗಿಯೋ ವಿಜೃಂಭಿಸುತ್ತವೆ. ಈ ಹೊಸ ಸ್ವರೂಪದ ಗುಹಾ ವಾಸ್ತುಶಿಲ್ಪ ಭಾರತೀಯ ಸಂಸ್ಕೃತಿಯ, ಅದರಲ್ಲೂ ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾದ ಹಲವು ದೇಶಗಳಲ್ಲಿ ಹರಡಿತು.

**ಅಫ್ಘಾನಿಸ್ತಾನ:** ಅಫ್ಘಾನಿಸ್ತಾನದಲ್ಲಿ ಸು.20ಕ್ಕೂ ಹೆಚ್ಚು ಸ್ಥಳಗಳಲ್ಲಿ ಬೌದ್ಧ ಗುಹಾ ವಾಸ್ತು ಶಿಲ್ಪದ ಅವಶೇಷಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ದರುತಾ, ಕುಂದುಜ್ಘ್, ಹೈಬಕ್ ಮತ್ತು ಬಾಮಿಯನ್ ಮುಖ್ಯವಾದವು. ದರುತದಲ್ಲಿ ಹಲವು ಬೌದ್ಧ ಸಂಘಾರಾಮಗಳನ್ನು ಬೆಟ್ಟದ ತಪ್ಪಲಿನಲ್ಲಿ ಕಡಿಯಲಾಗಿದೆಯಲ್ಲದೆ ಇಲ್ಲಿ ಕೆಲವು ಸ್ತೂಪಗಳೂ ಇವೆ. ಕುಂದುಜ್ಘ್‌ನಲ್ಲಿಯೂ ಒಂದು ವಿಶಾಲವಾದ ವಿಹಾರವಿದೆ. ಇಲ್ಲಿ ಭಿಕ್ಷುಗಳು ವಾಸಿಸುವ ಕೋಣೆಗಳು ಚಚ್ಚೌಕವಾಗಿದ್ದರೂ ಚಾವಣಿ ಮಾತ್ರ ಗುಮ್ಮಟಾಕಾರದಲ್ಲಿರುವುದು ವಿಶೇಷ. ಬೆಟ್ಟದಲ್ಲಿ ಕಡೆದ ಸು.24ಮೀ ವ್ಯಾಸದ ಸ್ತೂಪವೊಂದು ಹೈಬಕ್‌ನಲ್ಲಿ ಇದೆ. ಇದರ ಬಳಿಯೇ ಅರ್ಧ ಕೆತ್ತಿ ಬಿಟ್ಟಿರುವ ಇನ್ನೊಂದು ವಿಶಾಲವಾದ ವಿಹಾರವೂ ಸಮೀಪದಲ್ಲಿ ಕೆಲವು ಚೈತ್ಯಾಗಾರಗಳೂ ಇವೆ. ಇಲ್ಲಿಯ ಇನ್ನೊಂದು ಗುಹೆಯಲ್ಲಿ ಬೌದ್ಧಭಿಕ್ಷುಗಳ ವಾಸಕ್ಕಾಗಿ ಮಾಡಿದ ವಿಹಾರದಲ್ಲಿ ದೊಡ್ಡ ಹಜಾರವೂ ಸುತ್ತಲೂ ಕೋಣೆಗಳೂ ಅಲ್ಲದೆ ಒಳಗೆ ಬುದ್ಧ ಮೂರ್ತಿಯುಳ್ಳ ಒಂದು ಗರ್ಭಗುಡಿಯೂ ಇದೆ. ಇಲ್ಲಿಯ ಕಂಬಗಳು ಅರೆ ಅಯೋನಿಕ್ ಶೈಲಿಯಲ್ಲಿರುವುವಲ್ಲದೆ ಗರ್ಭಗುಡಿಯ ಮೇಲಿನ ಚಾವಣಿ ಸಣ್ಣ ಅರೆಕಮಾನುಗಳ ಮೇಲೆತ್ತಿದ ಗುಮ್ಮಟದಂತಿದ್ದು ಈ ವಾಸ್ತುವಿನ್ಯಾಸದಲ್ಲಿ ಸಸ್ಸಾನೀಯ ಪ್ರಭಾವವನ್ನು ಕಾಣಬಹುದಾಗಿದೆ. ಈ ವಿಹಾರ ಪ್ರ.ಶ.4–5ನೆಯ ಶತಮಾನದ್ದು. ಬಾಮಿಯನ್ ಪ್ರಪಂಚ ಪ್ರಸಿದ್ಧವಾದ ಕಲಾಕೇಂದ್ರ. ಇಲ್ಲೂ ಹಲವು ಸಂಘಾರಾಮಗಳೂ ಶಿಲ್ಪಿತ ಚೈತ್ಯಾಲಯಗಳೂ ಇವೆ. ಆದರೆ ಕಡಿದಾದ ಬಂಡೆಯಲ್ಲಿ ಉಬ್ಬುಶಿಲ್ಪದಂತೆ ಕಡೆದಿರುವ ಎರಡು ಬೃಹತ್ ಬೌದ್ಧ ಮೂರ್ತಿಗಳು ಇಲ್ಲಿಯವುಗಳಲ್ಲಿ ಬಹುಮುಖ್ಯವಾದವು. ಇವು ಪ್ರಪಂಚದಲ್ಲೇ ಅತಿ ಎತ್ತರದ ಪ್ರತಿಮೆಗಳೆಂದು ಪ್ರಸಿದ್ಧವಾಗಿವೆ. ದೊಡ್ಡ ಬುದ್ಧನ ಪ್ರತಿಮೆ 53.34ಮೀ ಎತ್ತರವೂ ಚಿಕ್ಕದು 36.57ಮೀ ಎತ್ತರವೂ ಇವೆ. ಶಿಲ್ಪನಿರೂಪಣೆಯಲ್ಲಿ ಗುಪ್ತ, ಸಸ್ಸಾನೀಯ ಮತ್ತು ಇರಾನಿ ಶಿಲ್ಪಗಳ ಪ್ರಭಾವ ಕಂಡುಬರುವುದರಿಂದ ಇವು 4–5ನೆಯ ಶತಮಾನದವುಗಳೆಂದು ಊಹಿಸಲಾಗಿದೆ. ಇತ್ತೀಚೆಗೆ ಇಸ್ಲಾಂ ಉಗ್ರವಾದಿಗಳು ಈ ಎರಡೂ ಬುದ್ಧ ವಿಗ್ರಹಗಳನ್ನು ನಾಶ ಮಾಡಿದ್ದುಂಟು. ಅಫ್ಘಾನಿಸ್ತಾನದ ಗುಹಾವಾಸ್ತುಶಿಲ್ಪದ ಅಧ್ಯಯನ ಹೆಚ್ಚು ನಡೆದಿಲ್ಲ. ಆದರೂ ಈಗ ಸಿಗುವ ಮಾಹಿತಿಗಳಿಂದ ಈ ಸಂಪ್ರದಾಯ ಪ್ರ.ಶ.ಪೂ.1 ರಿಂದ ಪ್ರ.ಶ.5–6ನೆಯ ಶತಮಾನಗಳವರೆಗೂ ನಡೆದು ಬಂತು ಎಂದು ಹೇಳಬಹುದು.

**ಮಧ್ಯ ಏಷ್ಯ:** ಮಧ್ಯ ಏಷ್ಯದ ಈಗಿನ ಖೋಟಾನ್ ಪ್ರದೇಶದಲ್ಲಿ ಅನೇಕ ಬೌದ್ಧ ಗುಹಾಲಯಗಳು 4–8ನೆಯ ಶತಮಾನಗಳ ಅವಧಿಯಲ್ಲಿ ಸ್ಥಳೀಯ ರಾಜರಿಂದ ನಿರ್ಮಿತವಾದುವು. ಕಿಜ್ಹಿಲ್ ಮತ್ತು ಕುಂತುರದ ಬೌದ್ಧಾಲಯಗಳು ಶಿಲ್ಪ ಮತ್ತು ಭಿತ್ತಿ ಚಿತ್ರಗಳಿಗೆ ಹೆಸರಾಗಿವೆ. ಇವೆಲ್ಲದರಲ್ಲಿಯೂ ಬೌದ್ಧ ಸಂಘಾರಾಮಗಳೂ ಚೈತ್ಯಾಲಯಗಳೂ ಇವೆ. ಮುಂದೆ ಒಂದು ಮೊಗಸಾಲೆ, ಹಿಂದೆ ಒಂದೋ ಎರಡೇ ಕೋಣೆಗಳುಳ್ಳ ಚೈತ್ಯಾಲಯಗಳು ಸಾಮಾನ್ಯ. ಇವಕ್ಕೆ ಅರೆಪೀಪಾಯಿಯ ಅಥವಾ ಗುಮ್ಮಟದ ಆಕಾರದ ಚಾವಣಿ ಇರುತ್ತದೆ. ಇಲ್ಲಿಯ ಶಿಲ್ಪದ ವಸ್ತು ಪೂರ್ಣವಾಗಿ ಭಾರತೀಯ ಮಹಾಯಾನ ಬೌದ್ಧಧರ್ಮಕ್ಕೆ ಸಂಬಂಧಿಸಿದ್ದಾದರೂ ನಿರೂಪಣೆಯಲ್ಲಿ ಇರಾನಿ, ಸಸ್ಸಾನಿ ಮತ್ತು ಚೀನಿ ಶೈಲಿಗಳ ಮಿಶ್ರಣ ಕಂಡುಬರುತ್ತದೆ.

**ಚೀನ:** ಚೀನ ದೇಶಕ್ಕೆ ಮಹಾಯಾನ ಬೌದ್ಧಪಂಥ ಪ್ರವೇಶಿಸಿದ ಕಾಲದಿಂದ ಅದಕ್ಕೆ ಪೋಷಣೆ ಮತ್ತು ಪ್ರೋತ್ಸಾಹ ಮುಂದುವರಿದವರೆಗೂ ಅಲ್ಲಿ ಅಸಂಖ್ಯಾತ ಬೌದ್ಧ ಗುಹಾಲಯಗಳು ನಿರ್ಮಿತವಾದವು. ಗುಹಾಲಯಗಳ ಸಂಖ್ಯಾಬಾಹುಳ್ಯದಲ್ಲಿ ಚೀನ ಭಾರತವನ್ನು ಮೀರಿಸುತ್ತದೆ. ಆದರೆ ಭಾರತದಲ್ಲಿರುವಷ್ಟು ವೈವಿಧ್ಯ ಇಲ್ಲಿ ಕಾಣುವುದಿಲ್ಲ. ಭಾರತದ ಗುಹಾ ವಾಸ್ತು ಶಿಲ್ಪ ಕಾಲಕಾಲಕ್ಕೆ ಹೊಸ ವಸ್ತು, ಭಾವ ವಿನ್ಯಾಸಗಳ ಅಳವಡಿಕೆಯಿಂದಾಗಿ ವಿಕಾಸ ಹೊಂದಿದೆ. ಆದರೆ ಚೀನದ ಕೃತಿಗಳು ಬಹುಮಟ್ಟಿಗೆ ಸಂಪ್ರದಾಯ ಬದ್ಧವಾಗಿ ಅನುಕರಣಾತ್ಮಕವಾಗಿಯೇ ಮುಂದುವರಿದವು.

ಚೀನದ ಮೊದಲ ಗುಹಾಲಯಗಳು ಕಾನ್ಸೂ ಪ್ರಾಂತದಲ್ಲಿ ಇವೆ. ಪಕ್ಕದ ಮಧ್ಯ ಏಷ್ಯದ ಬೌದ್ಧಾಲಯಗಳೇ ಇಲ್ಲಿಯವಕ್ಕೂ ಮಾದರಿ. ಸ್ಥಳೀಯ ಸಾಹಿತ್ಯಕ ಆಧಾರಗಳ ಪ್ರಕಾರ ಪ್ರ.ಶ. 4ನೆಯ ಶತಮಾನದಲ್ಲೆ ಇಲ್ಲಿ ಗುಹಾನಿರ್ಮಾಣ ಪ್ರಾರಂಭವಾಯಿತೆಂದು ತಿಳಿದರೂ ಇದುವರೆಗೆ ಸಿಕ್ಕಿರುವ ಕೃತಿಗಳಲ್ಲಿ ಯಾವುವೂ 5ನೆಯ ಶತಮಾನಕ್ಕೆ ಮುಂಚಿನವಲ್ಲ. ಕಾನ್ಸೂವಿನ ಒಂದು ಮುಖ್ಯ ಗುಹಾವಾಸ್ತು ಕೇಂದ್ರ ತುನ್‌ಹ್ವಾಂಗ್. ಈ ಒಂದೇ ಸ್ಥಳದಲ್ಲಿ ಸು.480 ಗುಹೆಗಳಿವೆ. ಅತ್ಯಂತ ಪ್ರಾಚೀನವಾದವು ವೇ ರಾಜವಂಶದ ಕಾಲಕ್ಕೆ (4–6ನೆಯ ಶತಮಾನಗಳು) ಸೇರಿದವು. ಇತ್ತೀಚಿನವೆಂದರೆ ಯು ಆನ್ ಅರಸರ (13–14ನೆಯ ಶತಮಾನಗಳು) ಕಾಲದವು. ಹೆಚ್ಚಿನವು ಟಾಂಗ್ (618–707) ಮತ್ತು ಸುಂಗ್ (960–1126) ರಾಜವಂಶಗಳ ಕಾಲದವು. ತುನ್ ಹ್ವಾಂಗ್‌ನ ಗುಹೆಗಳ ವಿನ್ಯಾಸ ಬಹು ಸರಳ. ದೇವಾಲಯಗಳಲ್ಲಿ ಹಲವು ಭಿಕ್ಷು ಕೋಣೆಗಳಿವೆ. ದೇವಗೃಹ ಮತ್ತು ಭಿಕ್ಷು ಕೋಣೆಗಳು ಜೊತೆಯಾಗಿ ಇರುವುದೇ ಹೆಚ್ಚು. ಇಲ್ಲಿಯ ಗುಹೆಗಳು ತಮ್ಮ ವಾಸ್ತುರೂಪಕ್ಕಿಂತಲೂ ಇವುಗಳಲ್ಲಿರುವ ಶಿಲ್ಪಗಳು ಮತ್ತು ವರ್ಣಚಿತ್ರಗಳಿಂದ ಹೆಚ್ಚು ಹೆಸರಾಗಿವೆ. ಇಲ್ಲಿಯ ಶಿಲ್ಪಗಳಲ್ಲಿ ಮಹಾಯಾನ ಬೌದ್ಧಪಂಥದ ಮೂರ್ತಿಗಳಾದ ವಿವಿಧ ರೀತಿಯ ಬುದ್ಧ ಅವಲೋಕಿತೇಶ್ವರ ಮತ್ತು ಉಪದೇವತೆಗಳ ಮೂರ್ತಿಗಳು ಕಂಡುಬರುತ್ತವೆ. ಕಾನ್ಸೂ ಪ್ರಾಂತದ ಯು–ಲಿನ್–ಕು, ತೀನ್–ತಿ–ಷಾನ್, ಯುಂಗ್–ಚಿಂಗ್, ಮೇ–ಚಿ–ಷಾನ್‌ಗಳಲ್ಲೂ ಗುಹಾಲಯಗಳಿವೆ. ಮೇ–ಚಿ–ಷಾನ್‌ನ ಕೆಲವು ಚೈತ್ಯಾಲಯಗಳು ಸು. 5ನೆಯ ಶತಮಾನಕ್ಕೆ ಸೇರಿದವು. ತೀನ್–ಷಾನ್‌ನ ಒಂದು ಬಂಡೆಯಲ್ಲಿರುವ 25.90ಮೀ ಎತ್ತರದ ಕುಳಿತ ಬುದ್ಧಮೂರ್ತಿ, ಯುಂಗ್–ಚಿಂಗ್ ನಲ್ಲಿರುವ ಅನೇಕ ಸೂಪ್ತಗಳ ಉಬ್ಬು ಶಿಲ್ಪಗಳು ಮತ್ತು 24.38ಮೀ ಎತ್ತರದ ಬುದ್ಧ ಮೂರ್ತಿ ಹೆಸರಾಂತ ಶಿಲ್ಪಗಳು. ಮಂಚೂರಿಯ ಪ್ರಾಂತದ ವನ್–ಪೊ–ತಾಂಗ್‌ನಲ್ಲೂ ವೇ ರಾಜವಂಶದ ಕಾಲದ ಪ್ರಾಚೀನ ಗುಹಾ ವಾಸ್ತುಕೃತಿಗಳಿವೆ.

ಷಾನ್ಸೀ ಪ್ರಾಂತದಲ್ಲಿರುವ ಯುನ್ ಕಾಂಗ್‌ನಲ್ಲಿ ಸು.40 ಗುಹೆಗಳಿವೆ. ಈ ಗುಹೆಗಳಲ್ಲಿಯ ರಚನಾತಂತ್ರ ಬಾಮಿಯನವನ್ನು ಅನುಸರಿಸುತ್ತದೆ. 16.76ಮೀ ಎತ್ತರವಿರುವ ಇಲ್ಲಿಯ ಒಂದು ಆಸೀನ ಬುದ್ಧ ಮೂರ್ತಿ ಸುಂದರ ಶಿಲ್ಪ. ತಿಯೆನ್–ಲುಂಗ್–ಷಾನ್‌ನ ಕೆಲವು ಗುಹೆಗಳಲ್ಲಿ ಮನಸೆಳೆಯುವಂಥ ಅಪ್ಸರೆಯರ ಉಬ್ಬು ಶಿಲ್ಪಗಳಿವೆ. ಷಾನ್–ತುಂಗ್ ಪ್ರಾಂತದ ಚಿಯೆನ್–ಪೊ–ಯ್ಯೆ ಎಂಬಲ್ಲಿಯ ಒಂದು ದೊಡ್ಡ ಬಂಡೆ ಸಹಸ್ರ ಬುದ್ಧರ ಬಂಡೆ ಎಂದು ಹೆಸರಾಗಿದೆ. ಇಲ್ಲಿ ಐದು ಗುಹೆಗಳೂ ಸು. 70 ಕ್ಕೂ ಹೆಚ್ಚು ಮೂರ್ತಿ ಕೋಷ್ಠಗಳೂ ಇವೆ. 618ರಲ್ಲಿ ಮಾಡಿದ ಎರಡನೆಯ ಗುಹೆಯಲ್ಲಿರುವ ಬುದ್ಧ ತ್ರಿಮೂರ್ತಿಗಳ ವಿಗ್ರಹಗಳು (ಬುದ್ಧ, ಅಮಿತಾಭ ಮತ್ತು ಶಾಕ್ಯಮುನಿ) ಉತ್ತಮ ಶಿಲ್ಪಗಳು.

ಸಿಂಕಿಯಾಂಗ್ ಪ್ರಾಂತದ ಕೂಚದ ಗುಹೆಗಳು ಸಣ್ಣವಾದರೂ ಭಿತ್ತಿಗಳ ಮೇಲಿರುವ ವರ್ಣಚಿತ್ರಗಳಿಂದಾಗಿ ಗಮನಾರ್ಹವಾದವು. ಇದೇ ಪ್ರಾಂತದ ತತ್ಸು ಎಂಬಲ್ಲಿ 195ಮೀ ಉದ್ದ ಮತ್ತು 19.5ಮೀ ಎತ್ತರದ ವಿಶಾಲ ಬಂಡೆಯ ಮೈಯಲ್ಲಿ ಬುದ್ಧನ ಜೀವನ

ಕಥೆಗಳು, ಪರಿನಿರ್ವಾಣ, ಜಾತಕಕಥೆಗಳು ಮುಂತಾದ ಅಸಂಖ್ಯಾತ ಶಿಲ್ಪಗಳನ್ನು ಕಂಡರಿಸಲಾಗಿದೆ. ಕೆಲವಕ್ಕೆ ವಿವರಣಾತ್ಮಕ ಶಾಸನಗಳೂ ಇವೆ.

ಹೋಪೇ ಪ್ರಾಂತ್ಯದ ಗುಹಾ ವಾಸ್ತು ಕೇಂದ್ರಗಳಲ್ಲಿ ಸಿಯಾಂಗ್-ತಂಗ್-ಷಾನ್ ಮುಖ್ಯವಾದದ್ದು. ಇಲ್ಲಿಯ 6ನೆಯ ಶತಮಾನದ ಶಿಲ್ಪಗಳು ಜೀವಭರಿತವಾಗಿರುವಂತೆ ಕಾಣುವ ಶ್ರೇಷ್ಠ ಶಿಲ್ಪಗಳು. ಇವನ್ನು ಬಂಡೆಯಲ್ಲಿ ಉಬ್ಬುಶಿಲ್ಪದಂತೆ ಕಡೆದಿದ್ದರೂ ಪೂರ್ಣ ಶಿಲ್ಪದಂತೆಯೇ ಇವು ಬಹಳ ಮೇಲೆದ್ದಿವೆ. ಇವುಗಳಲ್ಲಿ ಮೂರನೆಯ ಗುಹೆಯಲ್ಲಿರುವ ಬುದ್ಧಮೂರ್ತಿ ಸಮೂಹ ಹೆಚ್ಚು ಹೆಸರಾಗಿದೆ. ಈ ಶಿಲ್ಪದಲ್ಲಿ ಮಧ್ಯದಲ್ಲಿ ಬುದ್ಧ, ಎರಡೂ ಕಡೆ ಇಬ್ಬರು ಲೋಹನ್‌ರು (ಬೋಧಿಸತ್ತ್ವ) ಮತ್ತು ಇಬ್ಬರು ಪ್ರತ್ಯೇಕ ಬುದ್ಧರನ್ನು ಕೆತ್ತಲಾಗಿದೆ. 16ನೆಯ ಶತಮಾನದ ಕೆಲವು ಗುಹೆಗಳೂ ಇಲ್ಲಿವೆ.

ಹೋನಾನ್ ಪ್ರಾಂತದ ಹಲವು ಸ್ಥಳಗಳಲ್ಲಿರುವ ಗುಹೆಗಳು ಶ್ರೇಷ್ಠ ಶಿಲ್ಪಗಳಿಗೂ ನಾಜೂಕಿನ ವಾಸ್ತುನಿರೂಪಣೆಗೂ ಪ್ರಸಿದ್ಧವಾಗಿವೆ. ಲಂಗ್-ಮೇನ್‌ನಲ್ಲಿ ಯೀ ನದಿಯ ಎರಡೂ ಕಡೆಗಳ ಕಡಿದಾದ ದಡಗಳಲ್ಲಿ ಗುಹೆಗಳನ್ನು ಕಲಾತ್ಮಕವಾಗಿ ಕಡಿಯಲಾಗಿದೆ. ಈ ಗುಹೆಗಳು 5-8ನೆಯ ಶತಮಾನಗಳ ಕಾಲಕ್ಕೆ ಸೇರಿದವು. ಇಲ್ಲಿಯ ಕುನ್ವಂಗ್ ಗುಹೆ (493-525) ಆಯಾಕಾರವಾಗಿದ್ದರೂ ಇದಕ್ಕೆ ಪೀಪಾಯಿಯ ಆಕಾರದ ಚಾವಣಿ ಇದೆ. ಇಲ್ಲಿಯ ಪಿನ್ಯಂಗ್ ಗುಹೆಯಲ್ಲಿ (523) ಇಕ್ಕೆಲಗಳಲ್ಲಿ ಆನಂದ-ಮಹಾಕಶ್ಯಪ ಮತ್ತು ಇಬ್ಬರು ಬೋಧಿಸತ್ವರನ್ನು ಹೊಂದಿರುವ ಬುದ್ಧಮೂರ್ತಿಯೂ ಬೌದ್ಧತ್ರಿಮೂರ್ತಿಗಳ ವಿಗ್ರಹಗಳೂ ಚೀನದ ವೇ ಶಿಲ್ಪ ಸಂಪ್ರದಾಯದ ಉತ್ತಮ ಉದಾಹರಣೆಗಳೆಂದು ಪರಿಗಣಿತ ವಾಗಿವೆಯಲ್ಲದೆ, ಇವೇ ಜಪಾನಿನ ತೋರಿ ಶಿಲ್ಪ ಸಂಪ್ರದಾಯಕ್ಕೆ ಮೂಲ ಮಾದರಿಗಳನ್ನು ಒದಗಿಸಿದುವೆಂದು ತಿಳಿಯಲಾಗಿದೆ. ಲುಂಗ್-ಮೇನ್‌ನ ಇತರ ಗುಹೆಗಳಲ್ಲಿರುವ ಹಾರುತ್ತಿರುವ ಅಪ್ಸರೆಯರಿಂದ ಸುತ್ತುವರಿದ ಕಮಲಪುಷ್ಪ (520) ಮತ್ತು 15ಮೀ ಎತ್ತರದ ವೈರೋಚನನ ವಿಗ್ರಹ (ಸು.675) ಬಹು ಪರಿಣಾಮಕಾರಿ ಶಿಲ್ಪಕೃತಿಗಳು.

ಚೀನದಲ್ಲಿ ಬೌದ್ಧರಲ್ಲದೆ ತಾವೊ ಸಂಪ್ರದಾಯದವರು ಸಹ ಗುಹಾವಾಸ್ತು ರೀತಿಯನ್ನು ಅಪರೂಪವಾಗಿ ಬಳಸಿಕೊಂಡಿದ್ದಾರೆ. ಷಾನ್ಸೀ ಪ್ರಾಂತದ ಲುಂಗ್-ಷಾನ್‌ನಲ್ಲಿ 1234 - 39ರಲ್ಲಿ ಕೊರೆಯಲಾದ ಎರಡು ಗುಹೆಗಳು ತಾವೋ ಧರ್ಮೀಯರದು. ಇವುಗಳಲ್ಲಿ ಆ ಸಂಪ್ರದಾಯದ ಪೌರಾಣಿಕ ವ್ಯಕ್ತಿಗಳಾದ ಷೇನ್-ನುಂಗ್, ಹ್ವಾಂಗ್-ತಿ ಮತ್ತು ಪು-ಹ್ಸಿ ಇವರ ವಿಗ್ರಹಗಳಿವೆ. ಸಿಂಕಿಯಾಂಗ್ ಪ್ರಾಂತದ ತತ್ತುವಿನಲ್ಲೂ ತಾವೋ ಸಂಪ್ರದಾಯದವರ ಶಿಲ್ಪಗಳೂ, ಚೈತ್ಯಾಲಯಗಳು, ವಿಹಾರಗಳೂ ಇವೆ.

**ಶ್ರೀಲಂಕ, ಕಾಂಬೋಡಿಯ:** ಶ್ರೀಲಂಕದಲ್ಲಿ ಪ್ರ.ಶ.ಪೂ. 3ನೆಯ ಶತಮಾನದಲ್ಲೇ ಬೌದ್ಧಧರ್ಮ ಪಸರಿಸಿ ಇಂದಿಗೂ ಅಲ್ಲಿಯ ಪ್ರಧಾನ ಧರ್ಮವಾಗಿರುವುದಾದರೂ ಅಲ್ಲಿ ಹೆಚ್ಚಿನ ಗುಹಾ ವಾಸ್ತುಕೃತಿಗಳಿಲ್ಲ. ಇದು ಕೊರೆಯಲು ಕಠಿಣವಾದ ಗಟ್ಟಿ ಬಂಡೆಗಳ ಪ್ರದೇಶವಾಗಿರುವುದೇ ಇದಕ್ಕೆ ಕಾರಣವಿರಬಹುದು. ಪ್ರ.ಶ.ಪೂ.3-2ನೆಯ ಶತಮಾನಕ್ಕೆ ಸೇರಿದ ಕೆಲವು ಭಿಕ್ಷು ವಾಸ ಗುಹೆಗಳು ಶಾಸನ ಸಹಿತ ಇಲ್ಲಿ ಕಂಡುಬಂದಿವೆಯಾದರೂ ಇವು ವಾಸ್ತುಶಿಲ್ಪ ದೃಷ್ಟಿಯಿಂದ ಮುಖ್ಯವಾದುವಲ್ಲ. ಇವೆಲ್ಲ ಸಾಮಾನ್ಯವಾಗಿ ಸ್ವಾಭಾವಿಕ ಗುಹೆಗಳು. ಭಿಕ್ಷುಗಳ ಮಂಚಗಳು ಮತ್ತು ಸ್ವಲ್ಪಮಟ್ಟಿಗೆ ಚಾವಣಿಯನ್ನು ಮಾತ್ರ ಕೆತ್ತಲಾಗಿದೆ. ಸಿಂಹಳದ ಗುಹಾ ವಾಸ್ತುವಿನಲ್ಲಿ ಮುಖ್ಯವಾದದ್ದು ಒಂದನೆಯ ಪರಾಕ್ರಮ ಬಾಹುವಿನ ಆಳಿಕೆಯಲ್ಲಿ (12ನೆಯ ಶತಮಾನ) ಪೊಲೊನ್ನರುವ ಬಳಿ ಕೊರೆಯಲಾಗಿರುವ ಗಲ್ ವಿಹಾರ. ಇಲ್ಲಿ ಎರಡು ಆಸೀನವಾದ ಒಂದು ನಿಂತಿರುವ ಮತ್ತು ಮತ್ತೊಂದು ಮಲಗಿರುವ ಬುದ್ಧಮೂರ್ತಿಗಳನ್ನು ಕೆತ್ತಲಾಗಿದೆ. ವೆಲಿಗಮ ಮತ್ತು ಇಸುರುಮುನಿಯ ಎಂಬಲ್ಲೂ ಶಿಲೆಯಲ್ಲಿ ಕಂಡರಿಸಿದ ಕೆಲವು ಶಿಲ್ಪಗಳಿವೆ.

ಬೌದ್ಧಧರ್ಮ ಹರಡಿದ್ದ ಕಾಂಬೋಡಿಯ ದೇಶದಲ್ಲೂ ಈ ವಾಸ್ತುಶಿಲ್ಪ ಸಂಪ್ರದಾಯ ಸ್ವಲ್ಪ ಮಟ್ಟಿಗೆ ಪ್ರಚಲಿತವಾಗಿತ್ತು. ಅಲ್ಲಿಯ ಪನಾಮ್ ಕುಲೇನ್ ಎಂಬಲ್ಲಿ ಹಲವು ಭಿಕ್ಷುಗೃಹಗಳೂ ಶಿಲ್ಪಗಳೂ ಶಾಸನಗಳೂ ಇವೆ ಎಂಬ ಹೇಳಿಕೆಯಿದ್ದರೂ ಇವುಗಳ ಬಗ್ಗೆ ಹೆಚ್ಚು ಅಧ್ಯಯನ ನಡೆದಿಲ್ಲ.

**ಇಥಿಯೋಪಿಯ:** ಗುಹಾ ವಾಸ್ತು ಸಂಪ್ರದಾಯದ ಕೆಲವು ಕುತೂಹಲಕರ ಕೃತಿಗಳು ಇಲ್ಲಿವೆ. ಇವೆಲ್ಲ ಕ್ರೈಸ್ತಧರ್ಮಕ್ಕೆ ಸಂಬಂಧಿಸಿದವು. ಉತ್ತರ ಇಥಿಯೋಪಿಯದ ವೆಕ್ರೊ, ಅಂಬ ಮೈಕೆಲ್, ಮುಗ್ಗ, ದಾವೆಂತ್ ಎಂಬ ಸ್ಥಳಗಳಲ್ಲಿ ಗುಹಾ ಇಗರ್ಜಿಗಳಿವೆ. ಇವುಗಳಲ್ಲಿ ಸಾಮಾನ್ಯವಾಗಿ ಕಂಬಗಳುಳ್ಳ ಅಥವಾ ಇಲ್ಲದಿರುವ ಒಂದು ಹಜಾರವಷ್ಟೇ ಇರುತ್ತದೆ. ಇವುಗಳ ಕಾಲನಿಷ್ಕರ್ಷೆ ಕಷ್ಟ. ಆದರೆ 8-12ನೆಯ ಶತಮಾನಗಳವಾಗಿರಬಹುದೆಂದು ಊಹಿಸಲಾಗಿದೆ. ಈ ಗುಹಾ ಇಗರ್ಜಿಗಳಿಂದಲೇ ಸ್ಫೂರ್ತಿಗೊಂಡು ಬೆಳೆದ ಪೂರ್ಣವಾಗಿ ಶಿಲೆಯಲ್ಲಿ ಕೊರೆದ ಅನೇಕ ಇಗರ್ಜಿಗಳು ಲಾಲಿಬಾಲ, ದಾರಸ್ಗೆ, ಆಬ್ರಹ, ಆಸ್ಬೇನ ಮುಂತಾದೆಡೆಗಳಲ್ಲಿವೆ. ಲಾಲಿಬಾಲ ಒಂದರಲ್ಲೇ ಹತ್ತು ಇಗರ್ಜಿಗಳಿವೆ. ಇವೆಲ್ಲ ಸ್ಥಳೀಯ ಕ್ರೈಸ್ತಸಂತ ಮತ್ತು ದೊರೆ ಲಾಲಿಬಾಲ (12ನೆಯ ಶತಮಾನ) ಕಟ್ಟಿಸಿದವೆಂದು ನಂಬಿಕೆ. ಇವುಗಳಲ್ಲಿ ಇಗರ್ಜಿಗಳಲ್ಲಿ ಸಾಮಾನ್ಯವಾಗಿರುವಂತೆ ಪ್ರಾರ್ಥನಾ ಹಜಾರ, ಪವಿತ್ರ ಕೋಷ್ಠ ಅಥವಾ ವೇದಿಕೆ ಮತ್ತು ಪಕ್ಕ ಹಜಾರಗಳು ಇರುತ್ತವೆ. ಲಾಲಿಬಾಲದ ಗಿಯೋರ್ಗಿಸ್ ಇಗರ್ಜಿಯ ತಳವಿನ್ಯಾಸ ಸಮಾನ ಅಳತೆ ತೋಳುಗಳುಳ್ಳ ಗ್ರೀಕ್ ಶಿಲುಬೆಯ ಆಕಾರದಲ್ಲಿವೆ. ಇವುಗಳ ಮೇಲ್ಚಾವಣಿಯೂ ಕಲ್ಲಿನ ಬಂಡೆಯೇ ಆದರೂ ಒಳಗೆ ಮರದ ಭಾಗಗಳನ್ನು ಆಲಂಕಾರಿಕವಾಗಿ ಅಳವಡಿಸಿರುವುದೂ ಉಂಟು. ಇಂಥ ಕೆಲವು ಇಗರ್ಜಿಗಳಲ್ಲಿ ವರ್ಣಚಿತ್ರ ಗಳೂ ಇವೆ. ಪ್ರ.ಶ.6-10ನೆಯ ಶತಮಾನಗಳ ನಡುವೆ ಕೊರೆಯಲಾಗಿರುವ ದಾಬ್ರ ದಾಮ್ಮೊದಲ್ಲಿಯ ಕ್ರೈಸ್ತ ಇಗರ್ಜಿ ಇಥಿಯೋಪಿಯದ ಮುಖ್ಯ ವಾಸ್ತುಕೃತಿಗಳಲ್ಲೊಂದು. ಇದರ ತಳ ವಿನ್ಯಾಸ ಸಿರಿಯದ ಬ್ಯಾಸಿಲಿಕಗಳಂತೆ ಮಧ್ಯ ಮತ್ತು ಪಕ್ಕ ಹಜಾರಗಳು. ಮಧ್ಯ ಹಜಾರದ ಹಿಂದೆ ಅರೆವೃತ್ತಾಕಾರದ ಒಳನಡೆ ಇವೆ. ಇದು ಎರಡು ಅಂತಸ್ತುಗಳಲ್ಲಿದೆ. ಮೊದಲ ಅಂತಸ್ತಿನಲ್ಲಿ ಕ್ರೈಸ್ತ ಗುರುಗಳಿಗಾಗಿ ಕೋಣೆಗಳಿವೆ. ದಾಬ್ರ ದಾಮ್ಮೊದ ಈ ವಿಹಾರದಲ್ಲಿ ಉತ್ತಮ ಅಲಂಕರಣ ಶಿಲ್ಪಗಳು ಸಹ ಇವೆ. ಇಥಿಯೋಪಿಯದ ರಾಜಧಾನಿಯಾದ ಆಡಿಸ್ ಆಬಾಬದಲ್ಲೂ ಶಿಲೆಯಲ್ಲಿ ಕೊರೆದ ಒಂದು ಇಗರ್ಜಿ ಇದೆ. ಆದರೆ ಈಗ ಇದು ಬಹು ಶಿಥಿಲಾವಸ್ಥೆಯಲ್ಲಿದೆ. ಇಲ್ಲಿಂದ ಸು.32 ಕಿಮೀ ಪಶ್ಚಿಮದಲ್ಲಿರುವ ಆಡದಿ ಮರ್ಯಾಮ್ ಇಗರ್ಜಿ ಭೂಗರ್ಭದಲ್ಲಿ ಕೊರೆಯಲಾಗಿರುವ ಒಂದು ಗುಹೆ. ಇದನ್ನು ಲಾಲಿಬಾಲದ ಕಾಲದ ಅನಂತರ ಮತ್ತು 16ನೆಯ ಶತಮಾನಕ್ಕೆ ಮುಂಚೆ ಯಾವುದೋ ಕಾಲದಲ್ಲಿ ಕೊರೆದಿರಬೇಕೆಂದು ಊಹಿಸಲಾಗಿದೆ.

**ಭಾರತ:** ಭಾರತದ ಗುಹಾ ವಾಸ್ತು-ಶಿಲ್ಪ ಇತಿಹಾಸ ಪ್ರಾರಂಭವಾಗುವುದು ಪ್ರ.ಶ.ಪೂ. 3ನೆಯ ಶತಮಾನದಲ್ಲಿ, ಮೌರ್ಯ ಸಾಮ್ರಾಟ ಅಶೋಕನ ಕಾಲದಲ್ಲಿ ಬಿಹಾರ ರಾಜ್ಯದ ಗಯ ಬಳಿ ಇರುವ ಬರಾಬರ್ ಬೆಟ್ಟಗಳಲ್ಲಿ ಏಳು ಗುಹೆಗಳು ಇವೆ. ಹಾಗೆಯೇ ಸಮೀಪದ ರಾಜಗಿರ್ (ಪ್ರಾಚೀನ ಮಗಧ ಸಾಮ್ರಾಜ್ಯದ ರಾಜಧಾನಿ ರಾಜಗೃಹ) ಬಳಿಯ ಬೆಟ್ಟಗಳಲ್ಲಿ ನಾಲ್ಕು ಗುಹೆಗಳಿವೆ. ಇವುಗಳ ಮೂರು ಗುಹೆಗಳಲ್ಲಿ ಅಶೋಕನ ಶಾಸನಗಳೂ ಒಂದರಲ್ಲಿ ಅವನ ಮೊಮ್ಮಗ ದಶರಥನ ಶಾಸನವೂ ಇದ್ದು, ಇವುಗಳ ಕಾಲದ ಬಗ್ಗೆ ಖಚಿತ ಮಾಹಿತಿಯನ್ನು ಒದಗಿಸುತ್ತವೆ. ಇವೆಲ್ಲ ಬಹಳ ಚಿಕ್ಕವೂ ಸಾಮಾನ್ಯ ಸ್ವರೂಪದವೂ ಆಗಿದ್ದು, ಭಾರತದ ಗುಹಾ ವಾಸ್ತುಶಿಲ್ಪದ ಆರಂಭ ಹಂತವನ್ನು ಸೂಚಿಸುತ್ತವೆ.



**ಲೋಮಸ್ ಋಷಿ ಗುಹಾಲಯದ ಮುಂಭಾಗ**

ಬರಾಬರ್ ಬೆಟ್ಟಗಳಲ್ಲಿರುವ 2 ಗುಹೆಗಳು ಗುಹಾ ವಾಸ್ತು-ಶಿಲ್ಪ ಇತಿಹಾಸದ ದೃಷ್ಟಿಯಿಂದ ಗಮನಾರ್ಹ. ಮೊದಲನೆಯದು ಸುಧಾಮ ಗುಹೆ. ಎತ್ತರದ ಬಂಡೆಯೊಂದರಲ್ಲಿ ಸು.1.21 ಮೀ ಅಗಲ, 1.82 ಮೀ ಎತ್ತರದ ಆಯಾಕಾರದ ಒಂದು ದ್ವಾರವನ್ನು ಕೊರೆದು, ಅದರ ಒಳಗೆ ಸು. 10 ಮೀ ಉದ್ದ, 3.64 ಮೀ ಅಗಲದ ಆಯಾಕಾರದ ಒಂದು ದೊಡ್ಡ ಕೋಣೆಯನ್ನೂ ಅದರ ಒಂದು ಪಕ್ಕದ ಕೊನೆಯಲ್ಲಿ ವೃತ್ತಾಕಾರದ ಒಂದು ಕೋಣೆಯನ್ನೂ ನಿರ್ಮಿಸಲಾಗಿದೆ. ದೊಡ್ಡ ಕೋಣೆಯ ಮೇಲ್ಭಾಗವನ್ನು ಅರ್ಧ ಕಮಾನಿನಾಕೃತಿಯಲ್ಲೂ ವೃತ್ತಾಕಾರದ ಕೋಣೆಯ ಮೇಲ್ಭಾಗವನ್ನು ಅರ್ಧ ಗೋಳಾಕಾರದಲ್ಲೂ ಕೆತ್ತಿ ಛತ್ತನ್ನು ರೂಪಿಸಲಾಗಿದೆ. ಲೋಮಸ

ಋಷಿ ಗುಹೆ ಎಂದು ಕರೆಯಲಾಗುವ ಇನ್ನೊಂದರ ವಿನ್ಯಾಸ ಸಹ ಇದೇ ರೀತಿಯಲ್ಲೇ ಇದೆ. ಆದರೆ ಒಳ ಹೋಗುವ ದ್ವಾರದ ಮುಂಬದಿಯ ಚೈತ್ಯ ಕಮಾನಿನಾಕೃತಿಯಲ್ಲಿದ್ದು, ಸುಂದರ ಅಲಂಕರಣದಿಂದ ಕೂಡಿದೆ.

ಶಿಲಾಶಿಲ್ಪದ ತಂತ್ರಗಾರಿಕೆ ಪರ್ಷಿಯ ದೇಶದಲ್ಲಿ ಪ್ರಚಲಿತವಾಗಿದ್ದು ಅಲ್ಲಿಂದ ಭಾರತಕ್ಕೆ ಬಂತೆಂಬುದು ಇತಿಹಾಸಜ್ಞರ ಅಭಿಪ್ರಾಯ (ಆದರೆ ಕೇರಳ–ಕರ್ನಾಟಕದ ಕಡಲ ತೀರದ ಪ್ರದೇಶದಲ್ಲಿ ಪ್ರ.ಶ.ಪೂ. ಸು.5–4 ಶತಮಾನಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಜಂಬಿಟ್ಟಿಗೆಯ ಶಿಲಾ ಸಮತಟ್ಟಿನಲ್ಲಿ ಕೊರೆದು ಸೃಷ್ಟಿಸಿದ ಬಾಗಿಲು ಚೌಕಟ್ಟು ಸಹಿತ ಅರ್ಧ ಗೋಲಾಕೃತಿಯ ಹಲವಾರು ನೆಲಮಾಳಿಗೆಗಳಿವೆ. ಕೆಲವು ಎರಡು ನಾಲ್ಕು ಕೋಣೆಗಳಿಂದಲೂ ಕೂಡಿವೆ. ಇದಕ್ಕೂ ಪೂರ್ವದಲ್ಲಿ ಆದಿ ಹರಪ್ಪ ನಾಗರಿಕತೆಯ ನೆಲೆಯಾದ ಧೋಲಾವೀರದಲ್ಲಿ ಮಳೆಯ ನೀರನ್ನು ಸಂಗ್ರಹಿಸಲು ಕೆಂಪು ಮರಳು ಕಲ್ಲಿನ ಸಮತಟ್ಟಿನಲ್ಲಿ ಕೊರೆದು ಮಾಡಿದ ದೊಡ್ಡ ದೊಡ್ಡ ತೊಟ್ಟಿಗಳಿದ್ದುದು ಬೆಳಕಿಗೆ ಬಂದಿವೆ. ಈ ತಂತ್ರಜ್ಞಾನ ಪರಂಪರೆ ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿಯೂ ಸುಧಾರಿತಗೊಂಡು ಮುಂದುವರೆದಿರುವ ಸಾಧ್ಯತೆ ಇದೆ). ಆದರೆ ಪರ್ಷಿಯ ದೇಶ ಹಾಗೂ ಇತರ ಪಶ್ಚಿಮ ಏಷ್ಯ ಪ್ರದೇಶದಲ್ಲಿ ಗುಹಾ ವಾಸ್ತು ಮೃತರಿಗೆ ಸಂಬಂಧಪಟ್ಟಂತೆ ಮಾತ್ರ ಉಪಯೋಗವಾಗುತ್ತಿತ್ತು. ಭಾರತದ ಈ ಮೊದಲ ಗುಹೆಗಳು ಧಾರ್ಮಿಕ ಆಚರಣೆಗೆ ಸಂಬಂಧಿಸಿದವು. ಹೆಚ್ಚಿನವೆಲ್ಲ ಪ್ರ.ಶ.ಪೂ. ಕಾಲದಲ್ಲಿ ಪ್ರಚಲಿತವಾಗಿದ್ದ ಚೈತ್ಯಾಲಯದ ಮಾದರಿಯಲ್ಲಿದ್ದು, ಬಹುಶಃ ಇವು ಬೌದ್ಧ ಅಥವಾ ಇನ್ನಾವುದೋ ಧರ್ಮಕ್ಕೆ ಸಂಬಂಧಿಸಿದ ಪೂಜಾಗೃಹವಾಗಿರಬಹುದು. ಸುಧಾಮ ಗುಹೆಯನ್ನು ಅಶೋಕ ಆಜೀವಿಕರಿಗೆ ಮಾಡಿಸಿಕೊಟ್ಟನೆಂದು ಅಲ್ಲಿರುವ ಅವನ ಶಾಸನ ತಿಳಿಸುತ್ತದೆ.

ಮೌರ್ಯ ಸಾಮ್ರಾಜ್ಯದ ಸ್ಥಾಪನೆಯೊಡನೆ ಒದಗಿ ಬಂದ ಶಾಂತ ರಾಜಕೀಯ ಪರಿಸ್ಥಿತಿ, ವ್ಯಾಪಾರಿಗಳ ಅಭಿವೃದ್ಧಿ, ಇವುಗಳ ಜೊತೆಗೆ ಜೈನ–ಬೌದ್ಧ ಧರ್ಮಗಳು ಭಾರತಾದ್ಯಂತ ಹಬ್ಬಲು ದೊರಕಿದ ಅವಕಾಶ, ಇವುಗಳಿಂದಾಗಿ ಉತ್ತರ ಭಾರತದ ಅದರಲ್ಲೂ ಮಗಧ ಪ್ರದೇಶದ ಅನೇಕ ರೀತಿ ನೀತಿ ಆಚಾರಗಳು ಭಾರತಾದ್ಯಂತ ಹರಡಲಾರಂಭಿಸಿದವು. ಇದರ ಜೊತೆಯಲ್ಲೇ ಗುಹಾ ವಾಸ್ತು–ಶಿಲ್ಪ ಸಹ ಭಾರತದ ವಿವಿಧೆಡೆಗಳಲ್ಲಿ ಕಾಣಿಸಿಕೊಂಡಿತು. ತಮಿಳುನಾಡಿನ ಮಧುರೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕಂಡು ಬರುವ ಚಿಕ್ಕ ಗುಹೆಗಳು ಪ್ರ.ಶ.ಪೂ. 2ನೆಯ ಶತಮಾನದವಾಗಿದ್ದು, ಪ್ರಾರಂಭಿಕ ಘಟ್ಟವನ್ನು ಸೂಚಿಸುತ್ತವೆ. ಇವುಗಳಲ್ಲಿ ಸಾಮಾನ್ಯವಾಗಿ ಒಂದು ಸ್ವಾಭಾವಿಕ ಗುಹೆಯನ್ನೇ ಉಪಯೋಗಿಸಿಕೊಂಡು ಹಿಂಭಾಗದಲ್ಲಿ ಒಬ್ಬರು ಮಲಗಬಹುದಾದ ಒಂದು ಶೈಯ್ಯಾಸನವನ್ನು ನಿರ್ಮಿಸಿ ತೆರೆದ ಮುಂಭಾಗದಲ್ಲಿ ಛತ್ತಿನ ಮೇಲೆ ಸ್ವಲ್ಪ ಮಟ್ಟ ಮಾಡಿರಲಾಗುತ್ತದೆ. ಇವುಗಳ ಜೊತೆಯಲ್ಲಿ ದೊರಕಿರುವ ಕೆಲವು ಶಾಸನಗಳಿಂದ ಇವು ಜೈನ ಸಂನ್ಯಾಸಿಗಳ ವಸತಿಗಾಗಿ ಮಾಡಿದವು ಎಂದು ತಿಳಿಯುತ್ತದೆ. ಹಾಗೆಯೇ ಒರಿಸ್ಸದ ಭುವನೇಶ್ವರದ ಸಮೀಪದಲ್ಲೇ ಇರುವ ಉದಯಗಿರಿ–ಖಂಡಗಿರಿ ಬೆಟ್ಟಗಳಲ್ಲಿ ಕೆಲವು ಗುಹೆಗಳನ್ನು ನಿರ್ಮಿಸಲಾಗಿದ್ದು, ಇವುಗಳ ಮುಂಭಾಗದಲ್ಲಿ ಒಂದು ತೆರೆದ ಹಜಾರ, ಒಳಗೆ ನಾಲ್ಕಾರು ಕೋಣೆಗಳನ್ನು ಕೊರೆಯಲಾಗಿದೆ. ಕೆಲವು ಗುಹೆಗಳಲ್ಲಿ ಹಜಾರದ ಭಾಗದಲ್ಲಿ ಬಾಗಿಲವಾಡದ ಸುತ್ತ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಗುಹಾ ಸಮೂಹದಲ್ಲಿರುವ ರಾಣಿಗುಂಫ, ಅನಂತಗುಂಫ, ಹಾಥಿಗುಂಫ ಇವು ಪ್ರಸಿದ್ಧವಾಗಿವೆ. ಹಾಥಿಗುಂಫದಲ್ಲಿ ದೊರಕಿರುವ ಶಾಸನವೊಂದರ ಆಧಾರದಿಂದ ಹಾಗೂ ಇದರ ಸಾಂದರ್ಭಿಕ ಸಾಕ್ಷ್ಯಗಳಿಂದ ಈ ಗುಹಾ ಸಮೂಹ ಜೈನ ಯತಿಗಳಿಗಾಗಿ ನಿರ್ಮಿಸಲ್ಪಟ್ಟಿರಬೇಕು ಎಂದು ತರ್ಕಿಸಲಾಗಿದೆ. ಇವುಗಳ ರಚನೆಯ ಕಾಲ ಪ್ರ.ಶ.ಪೂ.ಸು 2ನೆಯ ಶತಮಾನದಿಂದ 1ನೆಯ ಶತಮಾನದವೆನ್ನಲಾಗಿದೆ.

ಗುಹಾ ದೇವಾಲಯಗಳಿಗೆ ಅತ್ಯಂತ ಪ್ರಸಿದ್ಧವಾಗಿರುವುದು ಪಶ್ಚಿಮ ಭಾರತ, ಅದರಲ್ಲೂ ಮಹಾರಾಷ್ಟ್ರದ ಪಶ್ಚಿಮ ಭಾಗದಲ್ಲಿ ಹಬ್ಬಿರುವ ಸಹ್ಯಾದ್ರಿ ಪರ್ವತ ಶ್ರೇಣಿ ಮತ್ತು ಅದರ ಕಿರುಬೆಟ್ಟಗಳ ಪ್ರದೇಶ. ಪಶ್ಚಿಮ ಭಾರತ ಅಶೋಕನ ಸಾಮ್ರಾಜ್ಯದ ಭಾಗವಾಗಿತ್ತು ಎಂಬುದು ಮುಂಬೈ ಬಳಿಯ ಸೋಪಾರದಲ್ಲಿ ದೊರಕಿರುವ ಅವನ ಶಾಸನಗಳಿಂದಷ್ಟೇ ಅಲ್ಲದೆ, ಅಶೋಕನು ಬೌದ್ಧಧರ್ಮ ಪ್ರಚಾರಕ್ಕಾಗಿ ಈ ಪ್ರದೇಶಕ್ಕೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿದ್ದ ನೆಂಬುದಕ್ಕೂ ಸಾಕ್ಷ್ಯಾಧಾರಗಳಿವೆ. ಸಹಜವಾಗಿ, ಅಶೋಕನು ಗಯ ಪ್ರದೇಶದಲ್ಲಿ ಪ್ರಾರಂಭಿಸಿದ ಗುಹಾ ವಾಸ್ತುಶಿಲ್ಪ ಕಲೆ ಸಹ ಬಹು ಮುಂಚೆಯೇ ಇಲ್ಲಿಗೂ ಹರಡಿತು. ಈ ಪ್ರದೇಶದಲ್ಲಿ ಹಬ್ಬಿರುವ ಕರಿವರ್ಣದ ಶಿಲೆಯ ಬೆಟ್ಟಗಳು ಗುಹಾ ವಾಸ್ತುಶಿಲ್ಪ ಇಲ್ಲಿ ವಿಶಿಷ್ಟ ರೀತಿಯಲ್ಲಿ ಬೆಳೆಯುವುದಕ್ಕೆ ಕಾರಣವಾಯಿತು. ಈ ಪ್ರದೇಶದಲ್ಲಿ ಸು. 60ಕ್ಕೂ ಹೆಚ್ಚು ಗುಹಾ ವಾಸ್ತುಕೇಂದ್ರಗಳು ಇದ್ದು ಒಟ್ಟಾರೆಯಾಗಿ ಸು. 1000 ಕ್ಕೂ ಹೆಚ್ಚು ಗುಹಾ ವಾಸ್ತುಶಿಲ್ಪ ಕೃತಿಗಳು ಕಂಡುಬರುತ್ತವೆ.

ಹೊಸ ವಾಸ್ತು ಸಂಪ್ರದಾಯದ ಅಳವಡಿಕೆಯ ಮೊದಲ ಪ್ರಯೋಗಗಳು ಎನ್ನಬಹುದಾದ ಚಿಕ್ಕ ಚಿಕ್ಕ ವಾಸ್ತು ರಚನೆಗಳು ಮುಂಬೈ ಬಳಿಯ ಜೀವದನ್ ವಿಹಾರ, ಕನ್ಹೇರಿ, ಪುಣೆ ಜಿಲ್ಲೆಯಲ್ಲಿರುವ ಭಾಜ, ಜುನ್ನರ್ ಇತ್ಯಾದೆಡೆಗಳಲ್ಲಿವೆ. ಪ್ರ.ಶ.ಪೂ. 2ನೆಯ ಶತಮಾನದ ಪ್ರಾರಂಭದ ಆಸುಪಾಸಿಗೆ ಸೇರಿದ ಇವೆಲ್ಲ ಬೌದ್ಧಧರ್ಮಕ್ಕೆ ಸಂಬಂಧಿಸಿದವು. ಪ್ರಾರಂಭದ ಘಟ್ಟದಲ್ಲಿ ಬೌದ್ಧ ಭಿಕ್ಷುಗಳ ಆಚರಣೆಯಲ್ಲಿ ಇದ್ದ ವಸ್ಸಾವಾಸ (ವರ್ಷಾವಾಸ) ಸಂಪ್ರದಾಯಕ್ಕೆ ಅನುಕೂಲವಾಗುವಂತೆ ರಚಿತವಾದವು. ಬೌದ್ಧ ಭಿಕ್ಷುಗಳು ವರ್ಷಾಕಾಲದ ಅಂದರೆ ಮಳೆಗಾಲದ ನಾಲ್ಕು ತಿಂಗಳ ಕಾಲ ಒಂದೇ ಪ್ರದೇಶದಲ್ಲಿ ನೆಲೆಸಿರಬೇಕು ಎಂಬುದು ಈ ಸಂಪ್ರದಾಯದ ಆಚರಣೆ. ಇದಕ್ಕಾಗಿ ಬುದ್ಧನ ಕಾಲದಲ್ಲಿಯೇ ವಿಹಾರಗಳ ರಚನೆ ಪ್ರಾರಂಭವಾಗಿತ್ತು. ಈ ಪ್ರದೇಶದಲ್ಲಿ ಕಾಣಬರುವ ಗುಹಾ ವಾಸ್ತು ಸಮುದಾಯಗಳು ಬೌದ್ಧ ವಿಹಾರಗಳೇ. ಅತ್ಯಂತ ಪ್ರಾಚೀನ ವಿಹಾರ ಕೇಂದ್ರಗಳಲ್ಲಿ ಚಿಕ್ಕ ಚಿಕ್ಕ ಕೋಣೆಗಳನ್ನು ಸಾಲಾಗಿ ಬೆಟ್ಟದ ಬದಿಯಲ್ಲಿ ಕೊರೆದಿದ್ದು ಅವುಗಳ ಉದ್ದೇಶ ಬೌದ್ಧ ಭಿಕ್ಷುಗಳು ಮಳೆಯಿಂದ ರಕ್ಷಣೆ ಪಡೆಯಲು ಸಾಧ್ಯವಾಗುವುದಕ್ಕಷ್ಟೇ ಸೀಮಿತವಾಗಿದೆ. ಒಂದೆರಡು ಕಡೆಗಳಲ್ಲಿ ಭಿಕ್ಷುಗಳ ಪೂಜಾ ಅವಶ್ಯಕತೆಗಳಿಗಾಗಿ ಚಿಕ್ಕ ಸ್ತೂಪಗಳುಳ್ಳ ಚೈತ್ಯಾಲಯಗಳೂ ಇವೆ. ಯಾವ ನಾಜೂಕಿನ ಅಲಂಕರಣವಾಗಲಿ ಇವುಗಳಲ್ಲಿ ಇರುವುದಿಲ್ಲ. ಆದರೆ ಈ ಚೈತ್ಯಾಲಯಗಳು ಅಂದಿನ ದಿನಗಳಲ್ಲಿ ಉತ್ತರ ಭಾರತದಲ್ಲಿ ಪ್ರಚಲಿತವಾಗಿದ್ದ ಚೈತ್ಯಗಳ ವಿನ್ಯಾಸ ಮತ್ತು ಸ್ವರೂಪದ ಅನುಕರಣೆಗಳೇ ಆಗಿದ್ದವು. ಭಾಜದಲ್ಲಿರುವ ಅತಿ ಪ್ರಾಚೀನ ಗುಹೆ ಸು. 1.80 ಮೀ ವ್ಯಾಸದ ವೃತ್ತಾಕಾರದ ಕೋಣೆಯಾಗಿದ್ದು ಅದರ ಮಧ್ಯದಲ್ಲಿ ಒಂದು ಚಿಕ್ಕ ಸ್ತೂಪವನ್ನು ಕೆತ್ತಲಾಗಿದೆ. ಹಾಗೆಯೇ ಕನ್ಹೇರಿಯಲ್ಲಿರುವ ಅತಿ ಪ್ರಾಚೀನ ಗುಹೆ 3.8 ಮೀ ಅಗಲದ ಚೌಕಾಕಾರವಾಗಿದ್ದು, ಅದರ ಒಂದು ಕೊನೆಯಲ್ಲಿ ಸರಳಾಕಾರದ ಸ್ತೂಪವನ್ನು ಕೆತ್ತಲಾಗಿದೆ. ಜುನ್ನರ್ ಮತ್ತು ಜೀವದನ್ ವಿಹಾರಗಳಲ್ಲಿ ಬೌದ್ಧ ಭಿಕ್ಷುಗಳ ವರ್ಷಾವಾಸಕ್ಕಾಗಿ ಬಹು ಚಿಕ್ಕದಾದ (ಸು. 1.8 ಮೀ, 2.1 ಮೀ) ಆಯಾಕಾರದ ಕೋಣೆಗಳನ್ನು ನಿರ್ಮಿಸಲಾಗಿದೆ. ಚಿಕ್ಕವೂ ಸರಳವೂ ಆಗಿರುವ ಈ ಕಟ್ಟಡಗಳು ಸಹಜವಾಗಿ ಹೊಸ ತಂತ್ರಜ್ಞಾನದ ಅಳವಡಿಕೆಯ ಪ್ರಾರಂಭಿಕ ಹೆಜ್ಜೆಗಳು.

ಉತ್ತರ ಭಾರತದಲ್ಲಿ ಪ್ರಚಲಿತವಾಗಿದ್ದ ಮರದ ಕಟ್ಟಡಗಳ ಸಂಪ್ರದಾಯವನ್ನು ನಿರೂಪಿಸುವ ಅತ್ಯಂತ ಪ್ರಾಚೀನ ಗುಹಾ ವಾಸ್ತು ಕೃತಿಗಳು ಪುಣೆ ಜಿಲ್ಲೆಯ ಭಾಜ, ಕೊಂಡಾನೆ, ಔರಂಗಬಾದ್ ಜಿಲ್ಲೆಯ ಅಜಂತ ಮತ್ತು ಪೀತಲ್‍ಖೋರಾಗಳಲ್ಲಿ ಇವೆ. ಇವುಗಳಲ್ಲೆಲ್ಲ ವಾಸ್ತು ಇತಿಹಾಸಕಾರರಲ್ಲಿ ವಿಶೇಷ ಗಮನ ಸೆಳೆದಿರುವುದು ಭಾಜಾದಲ್ಲಿರುವ ಚೈತ್ಯಾಲಯ. ಸು.17.70 ಮೀ ಉದ್ದ, 11.70 ಮೀ ಅಗಲವಿರುವ ಗಜಪೃಷ್ಠಾಕೃತಿಯ ತಳವಿನ್ಯಾಸ ಇರುವ ಈ ಚೈತ್ಯಾಲಯದ ಒಳ ಎತ್ತರ 9ಮೀ ಹಜಾರದ ಮಧ್ಯಭಾಗ ಆಯಾಕಾರವಿದ್ದು ಅದರ ಎರಡೂ ಕಡೆ ಕಂಬಸಾಲು ಮತ್ತು ಕಂಬ ಸಾಲಿಗೂ ಪಕ್ಕದ ಗೋಡೆಗಳಿಗೂ ಮಧ್ಯೆ ಪಕ್ಷಪಥ ಇದ್ದು ಇವೆಲ್ಲ ಹಿಂಭಾಗದಲ್ಲಿ ಅರ್ಧ ವೃತ್ತವಿನ್ಯಾಸದಲ್ಲಿ ಸೇರುತ್ತವೆ. ಮಧ್ಯದ ಹಜಾರದ ಹಿಂಬದಿಯಲ್ಲಿ ಸರಳ ಆಕಾರದ 3.6 ಮೀ ವ್ಯಾಸ ಮತ್ತು ಸುಮಾರು ಅಷ್ಟೇ ಎತ್ತರದ ಬೃಹತ್ ಸ್ತೂಪ ಇದೆ. ಭಾಜದ ಚೈತ್ಯ ಗೃಹದ ವಾಸ್ತು ವೈಶಿಷ್ಟ್ಯವೆಂದರೆ, ಇದು ಪ್ರಾಚೀನ ಮರದ ಕಟ್ಟಡಗಳ ಪ್ರಾಮಾಣಿಕ ಅನುಕರಣೆ. ಆದರೆ ಇಲ್ಲಿಯ ಶಿಲ್ಪಿಗಳು ಶಿಲಾ ಮಾಧ್ಯಮದ ವೈಶಿಷ್ಟ್ಯ, ಗುಹಾ ವಾಸ್ತು ತಂತ್ರಜ್ಞಾನದ ಮಿತಿ–ಸಾಧ್ಯತೆಗಳನ್ನು ಅರ್ಥಮಾಡಿಕೊಂಡು ಪರಿಣಿತರಾಗುತ್ತಿದ್ದಂತೆ, ಅನಂತರದ ಕಾಲದಲ್ಲಿ ಮರದ ರಚನೆಗಳ ಅನುಕರಣೆಯನ್ನು ಕ್ರಮೇಣ ಕೈಬಿಡಲಾಯಿತು.

ಹೀಗೆ ಬೆಳೆಯುತ್ತಿದ್ದ ಗುಹಾಲಯಗಳ ರಚನಾ ಇತಿಹಾಸವನ್ನು ಅನುಕ್ರಮವಾಗಿ ಪಶ್ಚಿಮ ಭಾರತ ಪ್ರದೇಶದ ಅಜಂತದ ಹತ್ತನೆಯ ಗುಹೆ, ಪೀತಲ್‍ಖೋರಾ, ಕೊಂಡಾನೆ ಇಲ್ಲಿರುವ ಚೈತ್ಯಾಲಯಗಳು ಅನಂತರ ಅಜಂತದ ಒಂಬತ್ತನೆಯ ಗುಹೆ, ಬೇಡ್ಸ ಮತ್ತು ಕಾರ್ಲೆ ಚೈತ್ಯಾಲಯಗಳು, ಕನ್ಹೇರಿಯ ಚೈತ್ಯಾಲಯ ಇವುಗಳಲ್ಲಿ ಗುರ್ತಿಸ ಬಹುದು. ಈ ಘಟ್ಟಗಳಲ್ಲಿ ಇಲ್ಲಿಯ ವಾತಾವರಣ, ಅವಶ್ಯಕತೆಗಳಿಗೆ ಹೊಂದಿ ಕೊಳ್ಳುವಂತೆ ಹೊಸ ಮಾರ್ಪಾಡುಗಳಾದವು. ಉದಾಹರಣೆಗೆ ಭಾಜ, ಪೀತಲ್‍ಖೋರ ಇತ್ಯಾದಿ ಆರಂಭ ನಿರ್ಮಿತ ಚೈತ್ಯಾಲಯದಲ್ಲಿ ತೆರೆದ ಮುಂಭಾಗ ಇರುತ್ತಿತ್ತು. ಆದರೆ, ಅಜಂತ ಒಂಬತ್ತನೆಯ ಗುಹೆಯಲ್ಲಿ ಚೈತ್ಯಾಲಯದ ಮುಂಭಾಗದಲ್ಲಿ ಒಂದು ಅಡ್ಡ ಗೋಡೆಯನ್ನು ನಿರ್ಮಿಸಿ ಅದರಲ್ಲಿ ಮಧ್ಯದ ಬಾಗಿಲನ್ನು ಎರಡೂ ಪಕ್ಕಗಳಲ್ಲಿ ಚಿಕ್ಕ ಬಾಗಿಲನ್ನೂ ನಿರ್ಮಿಸಲಾಗಿದೆ. ಅದೇ ಮುಂದೆ ಬಂದ ಬೇಡ್ಸ ಚೈತ್ಯಾಲಯದಲ್ಲಿ ಈ ಘಟಕಗಳ ಮುಂದೆ ಎರಡು ದೊಡ್ಡ ಕಂಬಗಳು ಮತ್ತು ಎರಡು ಅರೆಗಂಬಗಳ ಮೇಲೆ ಎತ್ತಿದಂತೆ ಇರುವ ಎತ್ತರವಾದ ಮುಂಚಾವಡಿಯನ್ನು ನಿರ್ಮಿಸಲಾಗಿದೆ. ಇದಕ್ಕೆ ಮುಂದಿನ ಕಾರ್ಲೆ ಚೈತ್ಯಾಲಯದಲ್ಲಿ ಇದರ ಮುಂಭಾಗದಲ್ಲಿ ಸಹ ಇನ್ನೊಂದು ಗೋಡೆಯನ್ನು ತೆರೆಯಂತೆ ನಿರ್ಮಿಸಲಾಗಿದೆ. ಅಲ್ಲದೆ ಬೇಡ್ಸ ಮತ್ತು ಕಾರ್ಲೆ

ಚೈತ್ಯಾಲಯಗಳಲ್ಲಿ ಕುಂಭಪೀಠ ಅಷ್ಟಕೋನಾಕೃತಿಯ ಕಂಬ ಮೇಲೆ ಪದ್ಮದಳಗಳಿಂದ ಅಲಂಕೃತವಾದ ಕುಂಭ ಅದರ ಮೇಲೆ ಆನೆ ಅಥವಾ ಕುದುರೆಯ ಸವಾರಿಯಲ್ಲಿರುವ ದಂಪತಿಗಳು ಇತ್ಯಾದಿಗಳನ್ನು ಒಳಗೊಂಡಿರುವ ಹೊಸ ಮಾದರಿಯ ಕಂಬಗಳು ಮೊಟ್ಟಮೊದಲು ಕಾಣಬರುತ್ತವೆ. ಹೀಗೆ ಬೆಳೆದಿರುವ ಪಶ್ಚಿಮ ಭಾರತದ ಗುಹಾ ವಾಸ್ತು–ಶಿಲ್ಪದ ಸರಣಿಯಲ್ಲಿ ಪ್ರಪಂಚ ಪ್ರಸಿದ್ಧವಾಗಿರುವುದು ಕಾರ್ಲೆಯ ಚೈತ್ಯಾಲಯ. 36 ಮೀ ಉದ್ದ, 24.0 ಮೀ ಅಗಲ, 18.0 ಮೀ ಎತ್ತರವಿರುವ ಈ ಗುಹಾಲಯ ಗಜ ಪೃಷ್ಠಾಕಾರದ ವಿನ್ಯಾಸದಲ್ಲಿದ್ದು ಒಳ ಆವರಣವನ್ನು ಎರಡು ಕಂಬ ಸಾಲುಗಳಿಂದ ಮಧ್ಯದ ಹಜಾರ ಮತ್ತು ಎರಡು ಪಕ್ಕಗಳಲ್ಲಿ ಕಿರಿದಾದ ಪಕ್ಷಪಥವನ್ನಾಗಿ ವಿಂಗಡಿಸಲಾಗಿದೆ. ಈ ಕಂಬ ಸಾಲುಗಳು ಹಿಂಭಾಗದಲ್ಲಿ ಗಜ ಪೃಷ್ಠಾಕಾರ ವಿನ್ಯಾಸದಲ್ಲೇ ಕೂಡಿಕೊಳ್ಳುತ್ತವೆ. ಮಧ್ಯ ಹಜಾರದ ಹಿಂಭಾಗದಲ್ಲಿ ಎತ್ತರವಾದ ಶಿಲಾ ಸ್ತೂಪವನ್ನು ಕಂಡರಿಸಲಾಗಿದೆ. ಮೇಲ್ಛಾವಣಿ ಕಮಾನು ಆಕೃತಿಯಲ್ಲಿ ಇದ್ದು ಅಲ್ಲಿ ಕಮಾನು ಆಕೃತಿಯಲ್ಲೇ ಬಾಗುವ ಮರದ ಜಂತಿಗಳನ್ನು ಅಳವಡಿಸ ಲಾಗಿದೆ. ಕುಂಭಪೀಠ, ಅಷ್ಟಕೋನಾಕೃತಿಯ ಕಂಬದ ಮೇಲೆ ಪುನಃ ಕುಂಭ, ಮತ್ತು ಆನೆಯ ಮೇಲೆ ಕುಳಿತ ದಂಪತಿ ಶಿಲ್ಪಗಳಿಂದ ಅಲಂಕೃತವಾಗಿದ್ದು ಇಲ್ಲಿಯ ಒಟ್ಟಾರೆ ದೃಶ್ಯ ಮನಮೋಹಕವಾಗಿದೆ. ಸ್ತೂಪದ ಮೇಲೆ ಸು. 2 ಸಾವಿರದಷ್ಟು ವರ್ಷಗಳ ಹಿಂದೆಯೇ ನಿಲ್ಲಿಸಿದ್ದ ಮರದ ಛತ್ರಿ ಇನ್ನೂ ಇದೆ. ಮುಂಭಾಗದಲ್ಲಿ ಅಶೋಕ ಸ್ತಂಭದ ರೀತಿಯ ಸು.12.0 ಮೀ ಎತ್ತರದ ಎರಡು ಸ್ತಂಭಗಳನ್ನು ಎರಡೂ ಪಕ್ಕಗಳಲ್ಲಿ ರೂಪಿಸಲಾಗಿದೆ. ಈ ಚೈತ್ಯಾಲಯವನ್ನು ಇದು ಜಂಬೂ ದ್ವೀಪದಲ್ಲೇ ಉತ್ತಮವಾದುದು ಎಂದು ಇದರಲ್ಲಿಯ ಆ ಕಾಲದ ಒಂದು ಶಾಸನ ವರ್ಣಿಸುತ್ತದೆ. ಈ ಗುಹಾಲಯವನ್ನು ಮಾಡಿಸಿದವನು ವೈಜಯಂತಿಯ (ಕರ್ನಾಟಕ ಉತ್ತರ ಕನ್ನಡ ಜಿಲ್ಲೆಯ ಬನವಾಸಿ) ಶ್ರೇಷ್ಠಿ ಭೂತಪಾಲ ಎಂಬುವವನು. ಕಾಲ ಪ್ರ.ಶ.ಪೂ.1ನೆಯ ಶತಮಾನದ ಆರಂಭ.

ಚೈತ್ಯಾಲಯಗಳ ರೀತಿಯಲ್ಲೇ ಭಿಕ್ಷುಗಳ ಆವಾಸಗಳಾಗಿ ರೂಪಿಸುತ್ತಿದ್ದ ಲೇಣಗಳಲ್ಲಿ ಸಹ ಹೊಸ ವಿನ್ಯಾಸಗಳ ಅಳವಡಿಕೆಯನ್ನು ಕ್ರಮೇಣ ಕಾಣಬಹುದು. ನಾಸಿಕದಲ್ಲಿರುವ ಪ್ರ.ಶ.ಪೂ 2ನೆಯ ಶತಮಾನದ ಆದಿಭಾಗಕ್ಕೆ ಸೇರಿದ ಗೌತಮೀಪುತ್ರ ಸಾತಕರ್ಣಿಯ ಲೇಣ ಈ ಬೆಳೆವಣಿಗೆಗಳಲ್ಲಿ ಗುರ್ತಿಸಬಹುದಾದ ಒಂದು ಮುಖ್ಯ ಘಟ್ಟವನ್ನು ಸೂಚಿಸುತ್ತದೆ. ಇದರ ವಿಶೇಷವೆಂದರೆ ಇದು ವಿನ್ಯಾಸದಲ್ಲಿ, ಆಕಾರದಲ್ಲಿ ಬಹಳ ನಿಖರವಾಗಿ ಕಂಡರಿಸಲಾಗಿರುವ ಬೃಹತ್ ಲೇಣ. ಚತುಶ್ಶಾಲೆಯ ಮಾದರಿಯ ಈ ಲೇಣದ ಒಳ ಹಜಾರದಲ್ಲಿ ಹಿಂಬದಿಯ ಗೋಡೆಯ ಮೇಲೆ ಒಂದು ಸ್ತೂಪದ ಅರೆ ಉಬ್ಬು ಶಿಲ್ಪ ಸಹ ಕಂಡುಬರುತ್ತದೆ. ಈ ಹಿಂದೆ ಭಿಕ್ಷುಗಳ ವಸತಿ (ಲೇಣ) ಮತ್ತು ಪೂಜಾಗೃಹ (ಚೈತ್ಯಾಲಯ) ಇವು ಬೇರೆ ಬೇರೆಯಾಗಿ ಇರುತ್ತಿದ್ದರೆ ಈ ಗೌತಮೀಪುತ್ರ ಗುಹೆಯಲ್ಲಿ ಲೇಣದ ಒಳಗೆ ಪೂಜಾಸ್ಥಾನವನ್ನು ನಿರ್ಮಿಸಿರುವುದು ಒಂದು ವೈಶಿಷ್ಟ್ಯ. ಹೀಗೆ ಪ್ರಾರಂಭವಾದ ಕ್ರಮ ಮುಂದೆ ಅಜಂತ, ಎಲ್ಲೋರ ಇತ್ಯಾದೆಡೆಗಳಲ್ಲಿ ವಿಶಿಷ್ಟ ರೂಪವನ್ನು ತಾಳಿವೆ.

ಪಶ್ಚಿಮ ಭಾರತದ ಪ್ರದೇಶವಲ್ಲದೆ ಇದೇ ರೀತಿಯ ಪ್ರಾಚೀನ ಮಾದರಿಯ ಚೈತ್ಯಾಲಯ ಲೇಣ ವಿಹಾರಗಳು ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿರುವ ಗುಂಟುಪಲ್ಲಿಯಲ್ಲಿ ಸಹ ಕಂಡುಬಂದಿವೆ. ಆದರೆ ಇವೆಲ್ಲ ಪರಿಮಾಣದಲ್ಲಾಗಲೀ ಸೌಂದರ್ಯದಲ್ಲಾಗಲೀ ಪಶ್ಚಿಮ ಭಾರತದ ಗುಹಾಲಯಗಳಿಗೆ ಸರಿಸಾಟಿಯಾಗಿ ನಿಲ್ಲುವಂತಹವಲ್ಲ. ಆದರೆ ಗುಜರಾತ್‌ನ ಜುನಾಗಡ್‌ನಲ್ಲಿ 30ಕ್ಕೂ ಹೆಚ್ಚು ಗುಹಾಲಯಗಳು ಬೇರೆ ಬೇರೆ ಗುಂಪುಗಳಲ್ಲಿವೆ. ಕೆಲವು ಲೇಣಗಳು ವಿನ್ಯಾಸಾಲಂಕರಣಗಳಲ್ಲಿ, ಮಹಾರಾಷ್ಟ್ರದ ಗುಹಾಲಯಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ತಲಾಜ ಗುಂಪಿನಲ್ಲಿ ಎರಡು ಅಂತಸ್ತುಳ್ಳ ಒಂದು ಬೃಹತ್ ಲೇಣ ಇದೆ. ಇವೆಲ್ಲ 2–3 ನೆಯ ಶತಮಾನದಲ್ಲಿ ಶಕ ಕ್ಷತ್ರಪರ ಕಾಲದಲ್ಲಿ ರಚನೆಯಾದವು.

ಪಶ್ಚಿಮ ಭಾರತದ ಬೌದ್ಧ ಗುಹಾಲಯವನ್ನು ಹೀನಯಾನ ಮತ್ತು ಮಹಾಯಾನ ಗುಹೆಗಳೆಂದು ವಿಂಗಡಿಸಿ ಹೀನಯಾನ ಗುಹೆಗಳು ಪ್ರ.ಶ.ಪೂ. 2–1ನೆಯ ಶತಮಾನದಿಂದ 2–3 ನೆಯ ಶತಮಾನದವರೆವಿಗೂ ಮುಂದೆ ಕೆಲವು ಶತಮಾನಗಳ ಅನಂತರ ಅಂದರೆ 4–7 ನೆಯ ಶತಮಾನಗಳಲ್ಲಿ ಮಹಾಯಾನ ಗುಹೆಗಳು ರಚಿತವಾದವೆಂದೂ ಹೀನಯಾನ ಗುಹೆಗಳಲ್ಲಿ ಬುದ್ಧನ ವಿಗ್ರಹಗಳನ್ನು ಮಾಡುವ ಸಂಪ್ರದಾಯ ಇರಲಿಲ್ಲವೆಂದು ಮಹಾಯಾನ ಗುಹೆಗಳಲ್ಲಿ ಬುದ್ಧ ಅವಲೋಕಿತೇಶ್ವರ ಇತ್ಯಾದಿ ಅನೇಕ ದೇವ ದೇವತೆಗಳ ವಿಗ್ರಹಗಳು ಕಾಣುವವೆಂದು ಸಾಮಾನ್ಯವಾಗಿ ತಿಳಿಯಲಾಗಿತ್ತು. ಆದರೆ ಪಶ್ಚಿಮ ಭಾರತದ ಗುಹಾ ಬೆಳೆವಣಿಗೆಯನ್ನು ಆಳವಾಗಿ ಅವಲೋಕಿಸಿದಾಗ ಈ ರೀತಿಯ ವಿಂಗಡಣೆಯಾಗಲೀ ಗುಹಾ ಸಂಪ್ರದಾಯದಲ್ಲಿ ಕೆಲವು ಶತಮಾನಗಳ ವಿಚ್ಛಿನ್ನತೆ ಇತ್ತೆಂಬುದಾಗಲೀ ಸರಿಯಲ್ಲ ಎಂದು ಕಂಡುಬರುವುದು. 1–2ನೆಯ ಶತಮಾನದ ಹೊತ್ತಿಗಾಗಲೇ ಭಾರತದ ಇತರೆಡೆಗಳಲ್ಲಿ ಕಂಡುಬರುವಂತೆ ಇಲ್ಲಿಯೂ ಬುದ್ಧ ವಿಗ್ರಹ ರೂಪಣೆ ಪ್ರಾರಂಭಿಕವಾಗಿರಬೇಕು ಎಂಬುದಕ್ಕೆ ಕನ್ಹೇರಿಯ ಚೈತ್ಯಾಲಯದಲ್ಲಿ ಇರುವ ಒಂದು ಚಿಕ್ಕ ಬುದ್ಧ ವಿಗ್ರಹ ಸಾಕ್ಷಿಯಾಗಿದೆ.

5–6ನೆಯ ಶತಮಾನದ ಹೊತ್ತಿನಲ್ಲಿ ರಚಿತವಾದ ಅಜಂತ ಸಮೀಪದ ಹರಿಶ್ಚಂದ್ರಗಢ, ಮಧ್ಯಪ್ರದೇಶದ ಬಾಘ್ ಗುಹೆಗಳು ಮುಂದೆ 7–8ನೆಯ ಶತಮಾನದಲ್ಲೂ ಮುಂದುವರೆಯುವ ಎಲ್ಲೋರದ ಮತ್ತು ಔರಂಗಾಬಾದ್‌ನ ಕೆಲವು ಗುಹೆಗಳು ಬೌದ್ಧ ಗುಹಾ ವಾಸ್ತು ಶಿಲ್ಪದ ಮುನ್ನಡೆಯನ್ನು ಸೂಚಿಸುತ್ತವೆ. ಅಜಂತದ ಗುಹೆಗಳಲ್ಲಿ ಮುಂದೆ ಮೊಗಸಾಲೆ, ಮಧ್ಯದಲ್ಲಿ ಹಜಾರ, ಹಿಂಭಾಗದಲ್ಲಿ ಬುದ್ಧ ವಿಗ್ರಹವಿರುವ ಗರ್ಭಗೃಹ, ಹಜಾರದ ಹಿಂಭಾಗ ಮತ್ತು ಪಕ್ಕದ ಗೋಡೆಗಳಲ್ಲಿ ಮಾಡಿರುವ ಭಿಕ್ಷುಗಳ ವಸತಿ ಕೋಣೆಗಳು ಇರುವುದು ಸಾಮಾನ್ಯ. ಆದರೆ ಅಜಂತ ಪ್ರಸಿದ್ಧವಾಗಿರುವುದು ಅಲ್ಲಿಯ ಶಿಲ್ಪಕಲೆ ಹಾಗೂ ಕೆಲವು ಗುಹೆಗಳಲ್ಲಿ ಇರುವ ಅಪೂರ್ವ ಸುಂದರ ಭಿತ್ತಿ ವರ್ಣಚಿತ್ರಗಳಿಂದ. ಅದರಲ್ಲೂ ಅಜಂತದ 1, 2 ಮತ್ತು 17 ನೆಯ ಗುಹೆಗಳಲ್ಲಿ ಮನಮೋಹಕವಾದ ಭಿತ್ತಿ ಚಿತ್ರಗಳು ಉಳಿದುಬಂದಿವೆ. ಇವುಗಳಲ್ಲಿ ಬುದ್ಧನ ಜೀವನ ಮತ್ತು ಜಾತಕ ಕಥೆಗಳ ನಿರೂಪಣೆ ಇವೆ. ಇವೆಲ್ಲ 5–6 ನೆಯ ಶತಮಾನಕ್ಕೆ ಸೇರಿದವು. ಇದೇ ಕಾಲಕ್ಕೆ ಸೇರಿದ ಅಜಂತಾದ 16ನೆಯ ಗುಹೆ ಹಳೆಯ ಸಂಪ್ರದಾಯದ ಗಜಪೃಷ್ಠಾಕಾರದ ವಿನ್ಯಾಸ ಹಾಗೂ ಕಮಾನಿನಾಕೃತಿಯ ಛತ್ತು ಇತ್ಯಾದಿಗಳನ್ನು ಒಳಗೊಂಡಿದೆ. ಆದರೆ ಮಧ್ಯದ ಹಜಾರದ ಹಿಂಬದಿಯಲ್ಲಿರುವ ಸ್ತೂಪದ ಮೇಲೆ ಬುದ್ಧನ ವಿಗ್ರಹವನ್ನು ಕೆತ್ತಲಾಗಿದೆ. ಸ್ತೂಪ ಕಂಬಗಳು ಮೇಲ್ಛಾವಣಿ ಮುಂಭಾಗ ಮೊಗಸಾಲೆ ಈ ಎಲ್ಲ ಭಾಗಗಳು ಶಿಲ್ಪಭರಿತವಾಗಿದ್ದು ಚೈತ್ಯಾಲಯ ಭವ್ಯವಾಗಿ ಕಾಣುತ್ತದೆ. ಮಧ್ಯ ಪ್ರದೇಶದ ಬಾಘ್ ಗುಹೆಗಳು ಸಹ ಸುಮಾರು ಇದೇ ಕಾಲದವು. ಅವು ಬಹು ಶಿಥಿಲವಾಗಿದ್ದರೂ ಇಲ್ಲಿ ಉಳಿದುಬಂದಿರುವ ಭಿತ್ತಿಚಿತ್ರಗಳಿಗಾಗಿ ಪ್ರಸಿದ್ಧವಾಗಿವೆ.

**7ನೆಯ ಗುಹಾಲಯದ ಬೋದಿಗೆಶಿಲ್ಪ, ಬೇಡ್ಸ**

ಸು.7–8ನೆಯ ಶತಮಾನಕ್ಕೆ ಸೇರುವ ಎಲ್ಲೋರದ ಬೌದ್ಧಾಲಯಗಳು ಅಲಂಕರಣಕ್ಕಿಂತ ಹೆಚ್ಚಾಗಿ ಅವುಗಳ ಪರಿಮಾಣದಿಂದ ಗಮನ ಸೆಳೆಯುತ್ತವೆ. ಅಲ್ಲಿಯ ದೋತಲ್, ತೀನ್‌ತಲ್ ಗುಹೆಗಳು 2–3 ಅಂತಸ್ತುಗಳನ್ನು ಹೊಂದಿದ್ದು ಸು. 36 ಮೀ ವಿಸ್ತಾರವಾಗಿಯೂ ಸು. 21 ಮೀ ಎತ್ತರವಾಗಿಯೂ ಇವೆ. ಆದರೆ ಇವುಗಳಲ್ಲಿ ಹೆಚ್ಚು ಶಿಲ್ಪಾಲಂಕರಣ ಇರುವುದಿಲ್ಲ. ಎಲ್ಲೋರದಲ್ಲಿರುವ ವಿಶ್ವಕರ್ಮ ಗುಹೆ (10 ನೆಯ ಸಂಖ್ಯೆಯ ಗುಹೆ) ಒಂದು ಚೈತ್ಯಾಲಯ. 8ನೆಯ ಶತಮಾನಕ್ಕೆ ಸೇರಿದ ಈ ಚೈತ್ಯಾಲಯ ಪಶ್ಚಿಮ ಭಾರತದ ಚೈತ್ಯಾಲಯದ ನಿರ್ಮಾಣದ ಕೊನೆಯ ಸೃಷ್ಟಿ. ಔರಂಗಾಬಾದ್ ಸಮೀಪದ ಬೆಟ್ಟದ ಮೇಲೆ ಸುಮಾರು ಪ್ರಸಕ್ತಶಕಾರಂಭದ ಕೆಲವು ಗುಹೆಗಳಲ್ಲದೆ, ಸು. 7–8ನೆಯ ಶತಮಾನದಲ್ಲಿ ರಚಿತವಾದ ಕೆಲವು ಗುಹಾಲಯಗಳು ಇವೆ. ಅನೇಕ ದೇವದೇವತೆಗಳ ಶಿಲ್ಪಗಳಿರುವ ಇವು ವಜ್ರಯಾನ ಬೌದ್ಧಪಂಥಕ್ಕೆ ಸಂಬಂಧಿಸಿದವು ಎಂದು ತಿಳಿಯುತ್ತದೆ.

ಪ್ರಾಚೀನ ಕಾಲದಲ್ಲಿ ಬೌದ್ಧ–ಜೈನ ಪಂಥಗಳು ಗುಹಾ ವಾಸ್ತುಕಲೆಯನ್ನು ಬೆಳೆಸಿದ್ದು, ವಿಶೇಷವಾಗಿ ಆ ಪಂಥದ ಭಿಕ್ಷು, ಯತಿಗಳ ನಿವಾಸಸ್ಥಾನಗಳ ರಚನೆಯಲ್ಲಿ. ಆದರೆ ಕಾಲ ಕ್ರಮೇಣ ಅವು ಧಾರ್ಮಿಕ ಕೇಂದ್ರಗಳಾಗಿ, ಪೂಜಾ ಸ್ಥಾನಗಳಾಗಿ ಕೂಡ ಬದಲಾವಣೆಗೊಂಡವು.

ಹಿಂದು ಪಂಥಕ್ಕೆ ಸಂಬಂಧಪಟ್ಟಂತೆ ಸಹ ಕಾಲಕ್ರಮೇಣ ಗುಹಾದೇವಾಲಯಗಳು ರಚಿತವಾಗಲಾರಂಭಿಸಿದವು. ಈಗ ತಿಳಿದಿರುವಂತೆ ಅಂಥ ಅತ್ಯಂತ ಪ್ರಾಚೀನ ಹಿಂದು ಗುಹಾ ದೇವಾಲಯ ಮಧ್ಯಪ್ರದೇಶದ ಭೂಪಾಲ್‌ನಿಂದ ಸು. 60 ಕಿಮೀ ದೂರದಲ್ಲಿರುವ ಉದಯಗಿರಿ ಎಂಬಲ್ಲಿದೆ. ಶಾಸನಗಳ ಪ್ರಕಾರ ಈ ವೈಷ್ಣವ ದೇವಾಲಯದ ನಿರ್ಮಾಣ 4ನೆಯ ಶತಮಾನದಲ್ಲಿ ಗುಪ್ತ ಸಾಮ್ರಾಜ್ಯದ 2ನೆಯ ಚಂದ್ರಗುಪ್ತ ಕಟ್ಟಿಸಿದ್ದು. ಸಾಲಾಗಿ ಕೆಲವು ಕೋಣೆಗಳನ್ನು ಕೆತ್ತಲಾಗಿದ್ದು ಗೋಡೆಗಳ ಮೇಲೆ ವಿಷ್ಣು, ನರಸಿಂಹ, ತ್ರಿವಿಕ್ರಮ, ವರಾಹ ಮೊದಲಾದ ಅವತಾರಗಳನ್ನೂ ದ್ವಾರಪಾಲಕ ಇತ್ಯಾದಿ ಶಿಲ್ಪಗಳನ್ನೂ ಕೆತ್ತಲಾಗಿದೆ.

ಪ್ರಾಚೀನ ಹಿಂದು ದೇವಾಲಯಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವುದು ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಗುಹಾ ದೇವಾಲಯಗಳು ವಿಶಾಲವೂ ಸುಂದರವೂ ಆದ ಇವೆಲ್ಲ ಬಾದಾಮಿ ಚಳುಕ್ಯರ ಕಾಲದ 6ನೆಯ ಶತಮಾನದ ರಚನೆಗಳು. ಇವುಗಳಲ್ಲಿ ಬಹು ಪ್ರಾಚೀನವಾದುದು ಐಹೊಳೆಯಲ್ಲಿರುವ ರಾವಳಫಡಿ ಗುಹೆ. ಇದು ಚಿಕ್ಕ ಗುಹೆಯಾಗಿದ್ದರೂ ದಕ್ಷಿಣ ಭಾರತದಲ್ಲಿ ಹಿಂದು ಗುಹಾ ದೇವಾಲಯ ರಚನೆಯ ಪ್ರಥಮ ಪ್ರಯತ್ನ. ಇಲ್ಲಿ ಹಿಂಗೋಡೆಯ ಮೇಲೆ ನೆಲದಿಂದ ಚಾವಣಿಯ ವರೆಗೂ (2.70 ಮೀ) ಹಬ್ಬಿನಿಂತಿರುವ ನಟರಾಜ ವಿಗ್ರಹ ಬಹು ಪ್ರಭಾವಶಾಲಿ ಶಿಲ್ಪ. ಆದರೆ ಹೆಚ್ಚು ಪ್ರಸಿದ್ಧವಾಗಿರುವುವು ಇಲ್ಲಿಯ ಚಳುಕ್ಯರ ರಾಜಧಾನಿಯಾಗಿದ್ದ ಬಾದಾಮಿಯಲ್ಲಿರುವ ಮೇಣ ಬಸ್ತಿಗಳು.

ಬೌದ್ಧ ಚೈತ್ಯಾಲಯ, ಕಾರ್ಲೆ

ಊರಿನ ದಕ್ಷಿಣದ ಬೆಟ್ಟದ ಬೆನ್ನಲ್ಲಿ ನಾಲ್ಕು ಗುಹೆಗಳನ್ನು ಕೊರೆದು ನಿರ್ಮಿಸಲಾಗಿದೆ. ವಿನ್ಯಾಸದಲ್ಲಿ ದೊಡ್ಡ ಮಂಟಪದ ಮಾದರಿಯಲ್ಲಿ ಇವೆ. ಮುಂಭಾಗದಲ್ಲಿ ಬಾಗಿಲಾಗಲೀ ತೆರೆ ಗೋಡೆಗಳಾಗಲೀ ಇಲ್ಲ. ಮುಂಭಾಗದಲ್ಲಿ ಮೊಗಸಾಲೆ, ಅದರ ಹಿಂದೆ ಅನೇಕ ಕಂಬಗಳುಳ್ಳ ಆಯಾಕಾರದ ಸಭಾಂಗಣ, ಹಿಂಬದಿಯ ಗೋಡೆಯಲ್ಲಿ ಒಂದು ಚಿಕ್ಕ ಗರ್ಭಗೃಹ ಇವೆ. ಈ ನಾಲ್ಕರಲ್ಲಿ ಮೊದಲನೆಯದು ಶೈವ, ಎರಡು ಮೂರನೆಯದು ವೈಷ್ಣವ, ನಾಲ್ಕನೆಯದು ಜೈನ ದೇವಾಲಯ. ಈ ನಾಲ್ಕು ಗುಹೆಗಳಲ್ಲಿ ಭವ್ಯ ಶಿಲ್ಪಗಳಿವೆ. ಪ್ರಮಾಣ, ಭಾವ, ಸೌಂದರ್ಯ ಎಲ್ಲವೂ ಮೇಳೈಸಿ ಆಯಾ ದೇವತೆಗಳ ಸ್ವಭಾವ ಇತಿವೃತ್ತವನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತವೆ. ಒಂದನೆಯ ಗುಹೆಯ ಮುಂಭಾಗದಲ್ಲಿರುವ 18 ಕೈಗಳ ನಟರಾಜಮೂರ್ತಿ ಒಂದು ಗಮನಾರ್ಹ ಶಿಲ್ಪ. ಮೂರನೆಯ ಗುಹೆಯಲ್ಲಿರುವ ನರಸಿಂಹ, ವರಾಹ ಇತ್ಯಾದಿ ಬೃಹತ್ ಶಿಲ್ಪಗಳು ದಕ್ಷಿಣ ಭಾರತದ ಹಿಂದುಮೂರ್ತಿ ಶಿಲ್ಪಗಳ ಪ್ರಥಮ ನಿರ್ಮಾಣ ವೆನಿಸುತ್ತವೆ. ನಾಲ್ಕನೆಯದಾದ ಜೈನ ಗುಹೆ ಸಹ ಅದೇ ರೀತಿಯಲ್ಲಿ ಶಿಲ್ಪಾಲಂಕೃತವಾಗಿವೆ. ಇಲ್ಲಿ ಮಹಾವೀರ, ಬಾಹುಬಲಿ, ತೀರ್ಥಂಕರರು, ಯಕ್ಷಯಕ್ಷಿಯರು ಇವುಗಳ ಸಮೂಹವೇ ಇದೆ. ಇವು ಸಹ ದಕ್ಷಿಣ ಭಾರತದಲ್ಲಿ ಜೈನಮೂರ್ತಿ ಶಿಲ್ಪದ ಪ್ರಥಮ ನಿರ್ಮಾಣವೆನ್ನಬಹುದು. ಮೂರನೆಯ ಗುಹೆಯಲ್ಲಿರುವ ಒಂದು ಶಾಸನದಿಂದ ಇದನ್ನು ಬಾದಾಮಿ ಚಳುಕ್ಯ ರಾಜ ಮಂಗಳೇಶ 578ರಲ್ಲಿ ನಿರ್ಮಿಸಿದನೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಮೊದಲ ಎರಡು ಗುಹೆಗಳು ಇದಕ್ಕಿಂತ ಸ್ವಲ್ಪ ಪ್ರಾಚೀನ. ಜೈನ ಗುಹಾಲಯ ಅನಂತರದ್ದು. ದಕ್ಷಿಣ ಭಾರತದಲ್ಲಿ ಬಾದಾಮಿಯಲ್ಲಿ ಪ್ರಾರಂಭವಾದ ಹಿಂದು ಗುಹಾ ದೇವಾಲಯಗಳ ನಿರ್ಮಾಣ ಅದೇ ಬಾದಾಮಿ ಚಳುಕ್ಯರ ಆಳಿಕೆಗೆ ಒಳಪಟ್ಟಿದ್ದ ಮಹಾರಾಷ್ಟ್ರ ಪ್ರದೇಶದಲ್ಲಿ ಹೆಚ್ಚು ನಿರ್ಮಾಣಕ್ಕೆ ಕಾರಣವಾಯಿತು. ಇವುಗಳಲ್ಲಿ ಮುಖ್ಯವಾಗಿ ಹೆಸರಿಸ ಬೇಕಾದುದು ಮುಂಬೈ ಬಳಿಯ ಎಲಿಫೆಂಟ ದ್ವೀಪದಲ್ಲಿ ಇರುವ ಗುಹಾಲಯಗಳು ಮತ್ತು ಅಲ್ಲಿಯ ತ್ರಿಮುಖ ಬೃಹತ್ ಮಹೇಶಮೂರ್ತಿಯ ಮುಖ್ಯ ಗುಹೆ. ಇದು ಕೇವಲ ಒಂದು ವಾಸ್ತುಕೃತಿಯಲ್ಲ. ನೆರಳು-ಬೆಳಕುಗಳ ಸಂಯೋಜನೆಯನ್ನು ಪರಿಣಾಮಕಾರಿಯಾಗಿ ಸಾಧಿಸುವ ವಿನ್ಯಾಸ. ಬೃಹತ್ತಾದರೂ ಕಲಾತ್ಮಕವಾಗಿ ಅರ್ಥಪೂರ್ಣವಾಗಿ ಭಿತ್ತಿಯಂಕರಣಗಳಲ್ಲಿ ನಿರ್ಮಿಸಿರುವ ಪೌರಾಣಿಕ ಕಥಾ ಶಿಲ್ಪಗಳು, ಶಕ್ತಿಶಾಲಿ ದ್ವಾರಪಾಲಕ ವಿಗ್ರಹಗಳು, ತ್ರಿಮುಖೀ ಮಹೇಶ ಶಿಲ್ಪದ ಒಂದೊಂದು ಮುಖವೂ ಸತ್ವ ರಜಸ್ ತಮೋಗುಣಗಳನ್ನು ಬಿಂಬಿಸುತ್ತಿದ್ದು ಒಟ್ಟಾರೆಯಾಗಿ ಇದು ಶಿವನ ಸರ್ವತತ್ವಾತ್ಮಕ ಸ್ವರೂಪವನ್ನು ನಿರೂಪಿಸುವ ಅಪರೂಪ ಸುಂದರ ಶಿಲ್ಪ. ಈ ಗುಹಾ ದೇವಾಲಯ ಲಕುಲೀಶ ಶೈವಪಂಥದ ರೀತ್ಯಾ ಶಿವನ ಗುಣ ವೈಭವಗಳನ್ನು ನಿರೂಪಿಸುವ ಒಬ್ಬ ತಪಸ್ವಿ ಶಿಲ್ಪಿಯ ಅದ್ಭುತ ರಚನೆ. ಈ ಗುಹಾಲಯ ನಿರ್ಮಾಣ ಕಾಲದ ಬಗ್ಗೆ ಭಿನ್ನ ಅಭಿಪ್ರಾಯಗಳು ಇದ್ದರೂ ಇದು ಗುಹಾವಾಸ್ತುಶಿಲ್ಪದ ಬೆಳವಣಿಗೆಯ ದೃಷ್ಟಿಯಲ್ಲಿ ನೋಡಿದರೆ ಬಹುಶಃ 7ನೆಯ ಶತಮಾನದಲ್ಲಿ ರಚಿತವಾಗಿರಬೇಕು. ಗುಣಮಟ್ಟದಲ್ಲಿ ಇದಕ್ಕೆ ಸಾಟಿಯಾಗದಿದ್ದರೂ ಇದೇ ಮುಂಬಯಿಯಲ್ಲಿರುವ ಜೋಗೇಶ್ವರಿ ಈ ಕಾಲ ಘಟ್ಟಕ್ಕೆ ಸೇರಿದುದು.

ಹಿಂದು ಗುಹಾ ದೇವಾಲಯಗಳ ಬೃಹದ್ ರಚನೆಗಳು ಮತ್ತು ಹೊಸ ರೀತಿಯ ಪ್ರಯೋಗಗಳು ಕಂಡು ಬರುವುದು ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯಲ್ಲಿರುವ ಎಲ್ಲೋರದಲ್ಲಿ. ಇವೆಲ್ಲ ರಾಷ್ಟ್ರಕೂಟರ ಕಾಲದ 8-9 ನೆಯ ಶತಮಾನದ ರಚನೆಗಳು. ಈ ಎಲ್ಲ ರಚನೆಗಳಲ್ಲೂ ಒಂದಲ್ಲ ಒಂದು ರೀತಿಯ ನಾವೀನ್ಯತೆಯನ್ನು ಕಂಡರಿಸುವ ಪ್ರಯೋಗಗಳು ಕಾಣುತ್ತವೆ. ಇಲ್ಲಿಯ ರಾಮೇಶ್ವರ, ಡೂಮರ್ ಲೇಣ, ಸೀತಾಸಹಾನಿ ಇತ್ಯಾದಿಗಳು ಒಳ ಆವರಣ ಮಾತ್ರ ಇರುವ ಗುಹೆಗಳಂತೆ ಕೆತ್ತಲಾಗಿದ್ದರೂ ಇವು ಸ್ಪಷ್ಟವಾಗಿ ಗರ್ಭಗುಡಿ, ಸಭಾಂಗಣ, ಮೊಗಸಾಲೆ ಇವೆಲ್ಲವುಗಳನ್ನೊಳಗೊಂಡ ದೇವಾಲಯದಂತೆ ನಿರ್ದಿಷ್ಟ ರೀತಿಯಲ್ಲಿ ರಚನೆಗೊಂಡಿವೆ. ಈ ಎಲ್ಲ ದೇವಾಲಯಗಳಲ್ಲೂ ಬೃಹದಾಕಾರದ ಶೃಂಗಾರ ವೀರಾದಿ ನಾನಾ ರಸಗಳನ್ನು ಶಕ್ತಿಯುತವಾಗಿ ಪ್ರತಿಬಿಂಬಿಸುವ ಶಿವನ ಲೀಲೆಗಳು, ನಟರಾಜ, ವಿಷ್ಣುವಿನ ದಶಾವತಾರ, ಗಣೇಶ, ದುರ್ಗ, ಗಂಗಾ ಯಮುನಾ ಇತ್ಯಾದಿ ದೇವತಾ ಶಿಲ್ಪಗಳು ಕಂಡುಬರುತ್ತವೆ.

ಎಲ್ಲೋರದ ಹಿಂದು ದೇವಾಲಯಗಳಲ್ಲಿ ಬೃಹತ್ ಆದುದೂ ವಿಶಿಷ್ಟವಾದುದೂ ಇಲ್ಲಿಯ ಕೈಲಾಸ ದೇವಾಲಯ. ಇದರ ವೈಶಿಷ್ಟ್ಯ ಇರುವುದು ವಿನ್ಯಾಸ ಮತ್ತು ನಿರೂಪಣೆಯಲ್ಲಿ ಕಂಡುಬರುವ ನವನವೀನ ಕಲ್ಪನಾ ವಿಲಾಸದಲ್ಲಿ. ಇಲ್ಲಿ ಮಧ್ಯದಲ್ಲಿ ಸು. 45 ಮೀ ಉದ್ದ 24.0 ಮೀ ಅಗಲವಿರುವ ಬೊಡ್ಡೆ ಮಧ್ಯಭಾಗದಲ್ಲಿ ಉಳಿಯುವಂತೆ ಇದರ ಎರಡು ಪಕ್ಕಗಳಲ್ಲಿ ಸು. 81 ಮೀ ಉದ್ದ 12 ಮೀ ಅಗಲದ ಬೃಹತ್ತಾದ ಬಾವಿಯಂತಿರುವ ಕುಳಿಗಳನ್ನು ಬೆಟ್ಟದ ನೆತ್ತಿಯಿಂದ 32.10 ಮೀ ಆಳದವರೆಗೆ ತೋಡಿದ್ದಾರೆ. ಇದೇ ರೀತಿ ಹಿಂಭಾಗದಲ್ಲಿ ಇವೆರಡನ್ನೂ ಕೂಡಿಸುವಂತೆ ಸು. 45 ಮೀ ಉದ್ದ, 12.0 ಮೀ ಅಗಲದ ಕುಳಿಯನ್ನು ತೋಡಲಾಗಿದೆ. ಇವುಗಳ ಮಧ್ಯದಲ್ಲಿ ಇರುವ ಬಂಡೆಯನ್ನೇ ದೇವಾಲಯವನ್ನಾಗಿ ಕೆತ್ತಿದ್ದಾರೆ. ಇದು ಹಿಂದಿನ ಒಳ ಆವರಣ ಮಾತ್ರ ಇರುವ ಗುಹಾಲಯವಾಗಿರದೆ, ಇದರಲ್ಲಿ ಒಳ-ಹೊರ ಎಲ್ಲ ಭಾಗಗಳೂ ಶಿಲಾ ಕಟ್ಟಡ ರಚನಾ ಶೈಲಿಯಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಂತೆ ನಿರ್ಮಾಣವಾಗಿವೆ. ಇದನ್ನು ಗುಹಾ ವಾಸ್ತು-ಶಿಲ್ಪ ಎಂಬುವುದಕ್ಕಿಂತ ಏಕಶಿಲಾವಾಸ್ತು ಎಂದು ಕರೆಯುವುದು ಸಮಂಜಸವೆನಿಸುತ್ತದೆ (ಈ ರೀತಿಯ ಏಕಶಿಲಾ ವಾಸ್ತುವಿನ ಮೊದಲ ಕಿರು ಪ್ರಯೋಗಗಳು 5ನೆಯ ಶತಮಾನದಲ್ಲೇ ವಿದರ್ಭ ಪ್ರದೇಶದಲ್ಲಿ ವಾಕಾಟಕ ಅರಸನ ಕಾಲದಲ್ಲಿ ನಡೆದಿತ್ತು ಎಂದು ಈಚಿನ ಸಂಶೋಧನೆಯಿಂದ ತಿಳಿಯುತ್ತದೆ). ಇದರಲ್ಲೂ ಎರಡು ಅಂತಸ್ತುಗಳನ್ನು ಮಾಡಲಾಗಿದ್ದು ಮೇಲಿನ ಅಂತಸ್ತಿನಲ್ಲಿ ಗರ್ಭಗೃಹ, ಅಂತರಾಳ, ಸಭಾಂಗಣ, ನಂದಿಮಂಟಪ ಎಲ್ಲವನ್ನು ಕೊರೆದು ನಿರ್ಮಿಸಿರುವುದಲ್ಲದೆ ಗರ್ಭಗುಡಿಯ ಮೇಲೆ ದೊಡ್ಡ ಶಿಖರವನ್ನು ಹಾಗೂ ಸುತ್ತಲಿನ ಪರಿವಾರ ದೇವತೆಗಳ ಗುಡಿಗಳ ಮೇಲೆ ಕೂಟ ಶಿಖರಗಳನ್ನು ಕಡೆದಿದ್ದಾರೆ. ರಾಷ್ಟ್ರಕೂಟ ಅರಸ ಒಂದನೆಯ ಕೃಷ್ಣ ಇದರ ಸೃಷ್ಟಿಗೆ ಕಾರಣ. ಈ ದೇವಾಲಯ ಶಿಲ್ಪಗಳಿಂದ ಅಲಂಕೃತವಾಗಿದ್ದು ಪ್ರಪಂಚದ ವಾಸ್ತು ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದುಕೊಂಡಿದೆ.

ಇದೇ ರೀತಿಯಲ್ಲಿ ಎಲ್ಲೋರದಲ್ಲಿ ಇರುವ ನಾಲ್ಕು ಜೈನ ದೇವಾಲಯಗಳು ಸಹ ವಿನ್ಯಾಸ ಮತ್ತು ಶಿಲ್ಪಾಲಂಕಾರಗಳಿಂದ ಮನಮೋಹಕವಾಗಿವೆ. ಇವೂ ರಾಷ್ಟ್ರಕೂಟರ ಕಾಲದಲ್ಲಿ ಸು 9-10 ನೆಯ ಶತಮಾನದಲ್ಲಿ ನಿರ್ಮಾಣವಾದವು.

ಪಶ್ಚಿಮ ಭಾರತದ ಗುಹಾ ವಾಸ್ತುಶಿಲ್ಪ ಕೇಂದ್ರಗಳಲ್ಲಿ ಎಲ್ಲೋರವೇ ಮುಖ್ಯವಾದ ಕೊನೆಯ ಸಾಹಸ. ಅನಂತರ ಕೆಲವು ಚಿಕ್ಕಪುಟ್ಟ ಕೇಂದ್ರಗಳಲ್ಲಿ ಈ ಕಾರ್ಯ ಸು. 12-13ನೆಯ ಶತಮಾನದವರೆಗೆ ಮುಂದುವರೆದಿದ್ದರೂ ವಿಶೇಷವಾಗಿ ಯಾವುದೂ ಎದ್ದು ಕಾಣುವುದಿಲ್ಲ. ಆದರೂ ಪುಣೆ ನಗರದ ಮಧ್ಯದಲ್ಲೇ ಇರುವ ಪಾತಾಳೇಶ್ವರ, ಉಸ್ಮಾನಾಬಾದ್ ಜಿಲ್ಲೆಯ ಧಾರಾಸಿಂಹ, ಔರಂಗಾಬಾದ್‌ಜಿಲ್ಲೆಯ ಅಂಕೈ ತಂಕೈಯ ಜೈನ ದೇವಾಲಯ ಈ ಘಟ್ಟದ ಗುಹಾ ದೇವಾಲಯಗಳ ವಾಸ್ತುವಿನ ಪ್ರತಿನಿಧಿಯಾಗಿವೆ ಎಂದು ಸೂಚಿಸಬಹುದು.

7–8ನೆಯ ಶತಮಾನಗಳಲ್ಲಿ ತಮಿಳುನಾಡಿನ ತೊಂಡೈನಾಡು ಪ್ರದೇಶದಲ್ಲಿ ಗುಹಾ ವಾಸ್ತು-ಶಿಲ್ಪ ಹಾಗೂ ಏಕಶಿಲಾವಾಸ್ತು ರಚನೆಗಳು ಕಾಂಚಿಯ ಪಲ್ಲವರ ಪೋಷಣೆಯಲ್ಲಿ ಪ್ರಾರಂಭವಾದವು. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಚೆನ್ನೈಯಿಂದ ಸು. 40ಕಿಮೀ ದಕ್ಷಿಣಕ್ಕಿರುವ ಮಹಾಬಲಿಪುರಂ. ಇದು ಪಲ್ಲವರ ಕಾಲದಲ್ಲಿ ಒಂದು ಮುಖ್ಯ ಸಮುದ್ರ ಬಂದರಾಗಿತ್ತು. ಇಲ್ಲಿಯ ಕಣ ಶಿಲೆಯ ಬೃಹತ್ ಬಂಡೆಗಳಲ್ಲಿ ಅನೇಕ ಗುಹಾಲಯಗಳನ್ನು ಕೊರೆದಿದ್ದಾರೆ. ಈ ಗುಹಾಲಯಗಳಲ್ಲಿ ಹೆಚ್ಚಿನವೆಲ್ಲ ಮುಂಭಾಗ ತೆರೆದಂತಿದ್ದು ಮುಂದುಗಡೆ ಮಾತ್ರ ಒಂದು ಕಂಬ ಸಾಲು ಇರುವ ಆಯಾಕಾರದ ಮಂಟಪಗಳು. ಇದರ ಹಿಂಬದಿಯಲ್ಲಿ ಗರ್ಭಗೃಹವಿದೆ. ಪರಿಮಾಣ, ವಿನ್ಯಾಸ ಮತ್ತು ಶಿಲ್ಪಗಳಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳು ಮಾತ್ರ ಕಂಡುಬಂದರೂ ಈ ಗುಹೆಗಳನ್ನು ಮಹೇಂದ್ರವರ್ಮ ಶೈಲಿ, ರಾಜಸಿಂಹ ಶೈಲಿ ಹೀಗೆ ವಾಸ್ತುಶಾಸ್ತ್ರಜ್ಞರು ವಿಂಗಡಿಸುತ್ತಾರೆ. ಇವುಗಳಲ್ಲಿ ಮಹಿಷಾಸುರಮರ್ದಿನಿ ಗುಹೆ, ರಾಮಾನುಜ ಗುಹೆ, ತ್ರಿಮೂರ್ತಿ ಗುಹೆ ಇವು ಗಮನಾರ್ಹವಾಗಿವೆ. ಹಾಗೆಯೇ ತಿರುಚಿರಾಪಳ್ಳಿಯಲ್ಲಿರುವ ಗಣೇಶ ಗುಹೆ, ಮಹಾಬಲಿಪುರಂ ಸಮೀಪದಲ್ಲೇ ಇರುವ ದಳವನೂರು, ಸಾಳುವಂಕುಪ್ಪಂ ಗುಹೆಗಳು ಪ್ರಸಿದ್ಧವಾಗಿವೆ. ಸಾಳುವಂಕುಪ್ಪಂ ಗುಹಾ ಮುಂಭಾಗ ಹುಲಿಯ ತೆರೆದ ಬಾಯಿಯಂತೆ ನಿರ್ಮಿಸಲಾಗಿದೆ.

ಮಂಗಲೀಶನ ವಿಷ್ಣುಲಯಣ, ಬಾದಾಮಿ

ಮಹಾಬಲಿಪುರಂ ಮತ್ತಷ್ಟು ಪ್ರಸಿದ್ಧವಾಗಿರುವುದು ಅಲ್ಲಿಯ ರಥಗಳಿಂದ. ಪಂಚಪಾಂಡವರ ಹೆಸರಲ್ಲಿರುವ ಧರ್ಮರಾಯ ರಥ, ಭೀಮರಥ, ಅರ್ಜುನರಥ, ನಕುಲಸಹದೇವ ರಥ ಹಾಗೂ ದ್ರೌಪದಿಯ ರಥ ಒಂದೇ ಗುಂಪಿನಲ್ಲಿವೆ. ಇವೆಲ್ಲ ಏಕಶಿಲಾವಾಸ್ತುವಿನ ರಚನೆಗಳು. ಎಲ್ಲದರಲ್ಲೂ ಹೊರಮೈಯನ್ನು ಸ್ಪಷ್ಟವಾಗಿ ದೇವಾಲಯ ರೀತಿಯಲ್ಲಿ ಕಡೆದಿದ್ದರೂ ಇವುಗಳಲ್ಲಿ ಉಪಯೋಗಿಸಬಹುದಾದ ಒಳ ಆವರಣ ಇಲ್ಲ. ವಾಸ್ತುರಚನಾರೀತಿಯಲ್ಲಿ ಚೌಕ, ಆಯಾ ಇತ್ಯಾದಿ ರೀತಿಯ ಶಿಖರಗಳನ್ನು ಹೊಂದಿದ್ದು ಪ್ರತಿಯೊಂದೂ ಒಂದಕ್ಕಿಂತ ಒಂದು ಭಿನ್ನವಾಗಿವೆ. ಒಂದೊಂದೂ ಆ ಕಾಲದಲ್ಲಿ ಪ್ರಚಲಿತವಾಗಿದ್ದ ದೇವಾಲಯ ವಾಸ್ತುರೀತಿಗಳ ಮಾದರಿಯಂತೆ ಕಾಣುತ್ತವೆ. ಈ ಪಂಚಪಾಂಡವ ರಥಗಳಲ್ಲದೆ ಇನ್ನು ಎರಡು ರಥಗಳು ಸಹ ಮಹಾಬಲಿಪುರಂನಲ್ಲಿ ಇವೆ. ಇದಲ್ಲದೆ ಮಹಾಬಲಿಪುರಂನಲ್ಲಿರುವ ಬಯಲ ಬಂಡೆಯ ಮೇಲಿನ ಗಂಗಾವತರಣ ಮತ್ತು ಗೋವರ್ಧನಗಿರಿಧಾರಿಯ ಉಬ್ಬುಶಿಲ್ಪಗಳು ಬೃಹತ್ ರಚನೆಗಳೂ ಆಕರ್ಷಕವಾಗಿವೆ.

ತೊಂಡೈನಾಡಿನಲ್ಲಿ ಪ್ರಾರಂಭವಾದ ಗುಹಾವಾಸ್ತುಶೈಲಿ ಮುಂದೆ ಪಾಂಡ್ಯನಾಡಿನಲ್ಲಿ ಪ್ರಚಾರಕ್ಕೆ ಬಂದಿತು. ಮಧುರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವು ಗುಹಾ ಹಾಗೂ ಏಕಶಿಲಾದೇವಾಲಯಗಳು ಇವೆ. ಇವುಗಳಲ್ಲಿ ಪುದುಕೋಟ್ಟೈ ಬಳಿ ಇರುವ ಸಿತ್ತನವಾಸಲ್ ಗುಹೆ ಸು. 7–8 ನೆಯ ಶತಮಾನದ್ದು. ಇದು ಸರಳ ರಚನೆಯಾಗಿದ್ದು ಇದರ ಗೋಡೆಗಳ ಮೇಲೆ ಆ ಕಾಲದ ವರ್ಣಚಿತ್ರಗಳು ಇನ್ನೂ ಉಳಿದು ಬಂದಿವೆ. ಮಧುರೆ ಪ್ರದೇಶದ ಕಳುಗುಮಲೈ ಎಂಬಲ್ಲಿರುವ ವೇಟ್ಟುವನ್ ಕೋಯಿಲ್ ಪಾಂಡ್ಯ ಮಂಡಲದ ಏಕಶಿಲಾ ವಾಸ್ತುವಿಗೆ ಒಳ್ಳೆಯ ಉದಾಹರಣೆ. ದ್ರಾವಿಡ ಶೈಲಿಯ ದೇವಾಲಯಗಳಂತೆ ಇದನ್ನು ಕಡೆದಿದ್ದರೂ, ಇದರಲ್ಲಿ ಎಲ್ಲೋರಾದ ಕೈಲಾಸದ ರಚನಾ ಪ್ರಭಾವವನ್ನು ಗುರುತಿಸಬಹುದು.

ಗುಹಾ ವಾಸ್ತು-ಶಿಲ್ಪ ರಚನೆಗೆ ಆಶ್ರಯವಾದದ್ದು ಶಿಲಾಶ್ರೇಣಿಗಳು ಹಬ್ಬಿರುವ ಭೂಪ್ರದೇಶ. ಅದರಲ್ಲೂ ಸುಲಭವಾಗಿ ಕೊರೆಯಬಹುದಾದ ಹಾಗೂ ಶಾಶ್ವತವಾಗಿ ಉಳಿದುಬರಬಲ್ಲ ಶಿಲಾವರ್ಗಗಳಲ್ಲಿ ಈ ಪ್ರಯತ್ನಗಳು ಕಾಣುತ್ತವೆ. ಈ ದೃಷ್ಟಿಯಿಂದ ನೋಡಿದರೆ ಸಹಜವಾಗಿ ಇಡೀ ಉತ್ತರ ಭಾರತ ಗುಹಾ ವಾಸ್ತು ರಚನೆಗೆ ತಕ್ಕುದಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಗುಹಾ ವಾಸ್ತು-ಶಿಲ್ಪ ರಚನೆಗಳು ಕಂಡುಬರುವುದಿಲ್ಲ. ಹೀಗಿದ್ದರೂ ಹಿಮಾಲಯದ ಗಡವಾಲ್ ಮತ್ತು ಹಿಮಾಚಲ ಪ್ರದೇಶದ ಭಾಗಗಳಲ್ಲಿ ಕೆಲವು ಪ್ರಯತ್ನಗಳು ನಡೆದಿದ್ದರೂ ಅಲ್ಲಿಯ ಶಿಲೆ ಬಹಳ ಶಿಥಿಲವಾದದ್ದರಿಂದ ಯಾವುವೂ ಸರಿಯಾಗಿ ಉಳಿದುಬಂದಿಲ್ಲ. ಉತ್ತರ ಭಾರತದಲ್ಲಿ ವಿಶಿಷ್ಟವಾಗಿ ಎದ್ದು ಕಾಣುವ ಒಂದು ಗುಂಪು ರಾಜಸ್ತಾನದಲ್ಲಿ ಕೋಟ ನಗರದಿಂದ ಸು. 125 ಕಿಮೀ ದಕ್ಷಿಣದಲ್ಲಿರುವ ಧಮ್ನಾರ್ ಎಂಬಲ್ಲಿದೆ. ಇವು ಎರಡು ಕಾಲ ಘಟ್ಟಗಳಲ್ಲಿ ರಚಿತವಾದವು. ಮೊದಲನೆಯ ಗುಂಪು ಬೌದ್ಧ, ಸು. 3–7 ನೆಯ ಶತಮಾನಕ್ಕೆ ಸೇರಿದವು. ಎರಡನೆಯದು ಎಲ್ಲೋರದ ಕೈಲಾಸದ ಮಾದರಿಯಲ್ಲೇ ಕಂಡರಿಸಲಾಗಿರುವ ವಿಷ್ಣು ದೇವಾಲಯ. ಇದು ಎಲ್ಲೋರದಷ್ಟು ದೊಡ್ಡದಲ್ಲವಾದರೂ ರಚನಾ ತಂತ್ರದಲ್ಲಿ ಅದನ್ನೇ ಹೋಲುತ್ತದೆ. ಆದರೆ ಇಲ್ಲಿಯ ದೇವಾಲಯ ಉತ್ತರ ಭಾರತದ ರೇಖಾನಾಗರದ ರೀತಿಯದು ಕಾಲ ಸು.10ನೆಯ ಶತಮಾನ. ಮಧ್ಯ ಪ್ರದೇಶದ ಗ್ವಾಲಿಯರ್ ನಗರದಲ್ಲೇ ಇರುವ ಬೆಟ್ಟದಲ್ಲಿ ಕೆಲವು ಗುಹಾಲಯಗಳಿವೆ. ಇವು ವಿಶೇಷವಾದ ವಾಸ್ತುರಚನೆಗಳಾಗಿರದೆ ಬಂಡೆಯಲ್ಲಿ ಕೊರೆದ ಸಾಮಾನ್ಯ ಆವರಣಗಳು. ಇವೆಲ್ಲ ಜೈನ ಸು. 8–15ನೆಯ ಶತಮಾನಕ್ಕೆ ಸೇರುವ ಈ ಗುಹೆಗಳಲ್ಲಿ ಅನೇಕ ತೀರ್ಥಂಕರರ ವಿಗ್ರಹಗಳನ್ನು ಕೆತ್ತಲಾಗಿದೆ. ಈ ಶಿಲಾ ಕೆತ್ತನೆಗಳಲ್ಲಿ ಗಮನ ಸೆಳೆಯುವಂತಹದು ಗ್ವಾಲಿಯರ್ ಕೋಟೆಯ ಉರ್ಬೈದ್ವಾರದ ಬಳಿ ಬಂಡೆಯ ಮೇಲೆ ಕೆತ್ತಿರುವ 17.10 ಮೀ ಎತ್ತರದ ಆದಿನಾಥ ತೀರ್ಥಂಕರನ ಉಬ್ಬು ಶಿಲ್ಪ.

ಗುಹಾ ವಾಸ್ತು-ಶಿಲ್ಪ ಸಂಪ್ರದಾಯದ ಈ ಅಂತಿಮಘಟ್ಟ ಸು. 12–13ನೆಯ ಶತಮಾನ ಎಂದು ಹೇಳಬಹುದು. ಆದರೆ ಈ ಅನಂತರದ ಕಾಲದಲ್ಲೂ ಇತ್ತೀಚೆಗೆ 18–19ನೆಯ ಶತಮಾನದವರೆಗೂ ಬಂಡೆಗಳನ್ನು ಕೊರೆದು ಆವರಣಗಳಲ್ಲಿ ನಿರ್ಮಿಸುವ ಕೆಲಸ ಕರ್ನಾಟಕ, ತಮಿಳುನಾಡು, ಆಂಧ್ರ, ಈ ಪ್ರದೇಶಗಳಲ್ಲಿ ಅಲ್ಲಲ್ಲಿ ಕಂಡು ಬರುವುದುಂಟು. ಆದರೆ ಇವುಗಳು ವಿನ್ಯಾಸದಲ್ಲಾಗಲಿ, ಸೌಂದರ್ಯದಲ್ಲಾಗಲಿ ಯಾವ ವೈಶಿಷ್ಟ್ಯ ಇಲ್ಲದ ಬಹಳ ಸರಳ ಅಥವಾ ಅರೆಬರೆ ರಚನೆಗಳು. ಇಂಥ ರಚನೆಗಳು ಕರ್ನಾಟಕದ ಗವಿ ರಂಗಾಪುರ, ಆಂಧ್ರದ ಸಿಂಗರಾಯಕೊಂಡ ಮೊದಲಾದೆಡೆ ಕಾಣುತ್ತವೆ. (ಎಸ್.ಎನ್.)

**ಗುಹಾ ಶಾಸನಗಳು, ಭಾರತದ :** ಭಾರತದ ಗುಹೆಗಳಲ್ಲಿ ಅನೇಕ ಇತಿಹಾಸ ಪ್ರಸಿದ್ಧವಾದ ಶಾಸನಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಬಿಹಾರ್ ರಾಜ್ಯದ ಗಯ ಜಿಲ್ಲೆಯ ಬರಾಬರ್ ಬೆಟ್ಟಗಳಲ್ಲಿಯ ಗುಹೆಯೊಂದರಲ್ಲಿ ಮೌರ್ಯ ಅಶೋಕನ 3 ಶಾಸನಗಳಿವೆ. ಇವು ಬ್ರಾಹ್ಮಿ ಲಿಪಿಯಲ್ಲಿ ಕೊರೆಯಲ್ಪಟ್ಟು ಪ್ರಾಕೃತ ಭಾಷೆಯಲ್ಲಿವೆ. ಈ ಗುಹೆಗಳನ್ನು ಅಜೀವಿಕರ ವಾಸಕ್ಕಾಗಿ ಅರಸನಾದ ಪ್ರಿಯದರ್ಶಿ ದಾನ ಮಾಡಿದನೆಂಬುದು ಇವುಗಳಲ್ಲಿ ಉಕ್ತವಾದ ವಿಷಯ. ಮೊದಲ 2 ಶಾಸನಗಳು ಅರಸನ ಆಳ್ವಿಕೆಯ 12ನೆಯ ವರ್ಷಕ್ಕೆ ಸೇರಿದವು. ಮೂರನೆಯದು 21ನೆಯ ವರ್ಷದಲ್ಲಿ ಹುಟ್ಟಿತು. ಮೊದಲನೆಯ ಶಾಸನದಲ್ಲಿ ಗುಹೆಯನ್ನು ನ್ಯಗ್ರೋಧ ಗುಹೆ ಎಂದು ಕರೆಯಲಾಗಿದೆ. 2 ಮತ್ತು 3ನೆಯ ಶಾಸನಗಳಲ್ಲಿ ಈ ಗುಹೆ ಖಲತಿಕ ಪರ್ವತದಲ್ಲಿತ್ತೆಂದು ಹೇಳಿದೆ. ಇದು ಬರಾಬರ್ ಬೆಟ್ಟಗಳಿಗೆ ಅಂದು ಪ್ರಚಲಿತವಿದ್ದ ಹೆಸರು. ಈ ಗುಹೆ ಸುಪ್ರಿಯವಾಗಿತ್ತೆಂದು ಇದನ್ನು ವರ್ಷಾಕಾಲದಲ್ಲಿ ಆಜೀವಕರ ವಾಸಕ್ಕೆಂದು ದಾನ ಮಾಡಲಾಯಿತೆಂದು 3ನೆಯ ಶಾಸನ ಹೇಳುತ್ತದೆ.

ಇದೇ ಜಿಲ್ಲೆಯ ನಾಗಾರ್ಜುನಿ ಬೆಟ್ಟದ ಗುಹೆಯಲ್ಲಿ ಅಶೋಕನ ಮೊಮ್ಮಗನಾದ ದಶರಥನ ಇಂಥವೇ ಶಾಸನಗಳಿವೆ. ವಹಿಯಕಾ, ಗೋಪಿಕಾ ಮತ್ತು ವಡಥಿಕಾ ಎಂಬ ಮೂರು ಗುಹೆಗಳನ್ನು ದಶರಥ ಪಟ್ಟಾಭಿಷಕ್ತನಾದ ವರ್ಷದಲ್ಲಿ ಆಜೀವಕರು ಮಳೆಗಾಲದಲ್ಲಿ ವಾಸಿಸಲು ದಾನ ಮಾಡಿದನೆಂದು ಈ ಶಾಸನಗಳು ತಿಳಿಸಿವೆ.

ಉತ್ತರ ಪ್ರದೇಶದ ಅಲಹಾಬಾದ್ ಜಿಲ್ಲೆಯಲ್ಲಿ ಕೋಸಂಗೆ ಸಮೀಪದಲ್ಲಿರುವ ಪಭೋಸ ಗುಹೆಯಲ್ಲಿ ಪ್ರಾಕೃತ ಮಿಶ್ರಿತ ಸಂಸ್ಕೃತ ಭಾಷೆಯಲ್ಲಿ ಬ್ರಾಹ್ಮಿ ಲಿಪಿಯ ಎರಡು ಶಾಸನಗಳಿವೆ. ಬಹಸತಿಮಿತನ, ಮಾತುಲನೂ, ವೈಹಿದರೀಪುತ್ರನೂ ಆದ ಆಷಾಢ ಸೇನ ಈ ಲಯನಗಳನ್ನು ಅಂದರೆ ಗುಹಾವಾಸಗಳನ್ನು ಅರ್ಹಂತರಿಗಾಗಿ ಮಾಡಿಸಿದನೆಂದು ಗುಹೆಯ ಹೊರಗಿನ ಬಂಡೆಯ ಮೇಲಿನ ಶಾಸನ ತಿಳಿಸುತ್ತದೆ. ಗುಹೆಯ ಒಳಗಿರುವ ಶಾಸನ ಈತನನ್ನು ಆಹಿಚ್ಛತ್ರದ ಅರಸನೆಂದು ಕರೆದಿದೆ. ಮೊದಲ ಶಾಸನ ಉದಾಕನ ಆಳ್ವಿಕೆಯ 10ನೆಯ ವರ್ಷದ್ದು. ಈ ಅರಸ ಆ ಪ್ರಾಂತ್ಯದ ಅರಸನಾಗಿದ್ದಿರಬಹುದು. ಇವನಾರೆಂಬುದು ಖಚಿತವಾಗಿ ತಿಳಿದಿಲ್ಲ. ಈ ಬಹಸತಿಮಿತನು ಹಾಥಿಗುಂಫಾ ಶಾಸನದಲ್ಲಿ ಹೆಸರಿಸಲಾದ ಅದೇ ಹೆಸರಿನ ಮಗಧ ರಾಜ್ಯದ ಅರಸನು ಒಬ್ಬನೇ ಆಗಿರಬಹುದು. ಈ ಎರಡೂ ಶಾಸನಗಳ ಕಾಲ ಪ್ರ.ಶ.ಪೂ. ಸು. 1ನೆಯ ಶತಮಾನ.

ಕ್ಷಹರಾತವಂಶದ ನಹಪಾಣನ ಶಾಸನಗಳು ಮಹಾರಾಷ್ಟ್ರದಲ್ಲಿ ನಾಸಿಕದ ಗುಹೆಗಳಲ್ಲಿವೆ. ಆತನ ಆಳ್ವಿಕೆಯ 42ನೆಯ ವರ್ಷದಲ್ಲಿ ಆತನ ಜಾಮಾತೃವಾದ ಋಷಭದತ್ತ ಸರ್ವದೇಶೀಯ ಭಿಕ್ಷುಗಳಿಗೆ ವಾಸಕ್ಕಾಗಿ ಈ ಗುಹೆಯನ್ನು ಸಜ್ಜುಗೊಳಿಸಿ, ಅಲ್ಲಿ ಅವರ ಅಶನಾಚ್ಛಾದನಗಳಿಗೂ ತಕ್ಕ ವ್ಯವಸ್ಥೆ ಮಾಡಿದ. ಈತ ಫಾರಾ, ದಮನ, ತಾಟ ಮುಂತಾದ ನದೀತೀರಗಳಲ್ಲಿ ವಿಶ್ರಾಮಾಗಾರಗಳನ್ನು ಪರಿವ್ರಾಜಕರ ವಾಸಕ್ಕಾಗಿ ಕಟ್ಟಿಸಿ ಅವರ ಊಟೋಪಚಾರಗಳಿಗೂ ಸೂಕ್ತವಾದ ಏರ್ಪಾಡನ್ನು ಮಾಡಿದನೆಂದು ಇನ್ನೊಂದು ಶಾಸನದಲ್ಲಿ ಹೇಳಿದೆ. ಇಂಥದೇ ಶಾಸನ ಕಾರ್ಲಾದ ಗುಹೆಯಲ್ಲೂ ಉಂಟು. ಪುಣೆ ಜಿಲ್ಲೆಯ ಜುನ್ನಾರ್ ಗುಹೆ ನಹಪಾಣನ ಅಮಾತ್ಯನಾದ ವತ್ಸಗೋತ್ರದ ಆರ್ಯಮನ ಧರ್ಮ. ಈ ಎಲ್ಲ ಶಾಸನಗಳ ಕಾಲ ಪ್ರ.ಶ. 2ನೆಯ ಶತಮಾನ. ನಾಸಿಕದ ಗುಹೆಗಳಲ್ಲಿಯೇ ಸಾತವಾಹನರ ಅರಸರಾದ ಕೃಷ್ಣ, ಗೌತಮೀಪುತ್ರ ಸಾತಕರ್ಣಿ ಮತ್ತು ವಾಸಿಷ್ಠೀಪುತ್ರ ಪುಳುಮಾವಿಯರ ಶಾಸನಗಳು ಇವೆ. ಪ್ರ.ಶ.ಪೂ. 1ನೆಯ ಶತಮಾನಕ್ಕೆ ಸೇರಿದ 19ನೆಯ ಗುಹೆಯಲ್ಲಿಯ ಶಾಸನ, ಆ ಲಯನವನ್ನು ಸಾತವಾಹನಕುಲದ ಕೃಷ್ಣ ಆಳುತ್ತಿದ್ದಾಗ ನಾಸಿಕ ನಗರದಲ್ಲಿದ್ದ ಭಿಕ್ಷುಗಳ ವಾಸಕ್ಕಾಗಿ ಮಹಾಮಾತ್ರನೊಬ್ಬ ಮಾಡಿಸಿದನೆಂದು ಹೇಳುತ್ತದೆ. ಈ ಮಹಾಮಾತ್ರ ನಾಸಿಕ ನಗರದಲ್ಲಿದ್ದ ಶ್ರವಣರ ಹಿತಾಹಿತಗಳನ್ನು ನೋಡಿಕೊಳ್ಳುವ ಅಧಿಕಾರಿಯೆಂದು ಕೆಲವರು ಅರ್ಥೈಸಿದ್ದಾರೆ.

ಇಲ್ಲಿಯ ಗುಹೆಗಳಲ್ಲಿ ವಾಸಿಸುವ ಪರಿವ್ರಾಜಕರ ಸೌಕರ್ಯಕ್ಕಾಗಿ ಹಿಂದೆ ತಮ್ಮ ಪೂರ್ವಿಕರು ದತ್ತಿಯಾಗಿ ಬಿಟ್ಟಿದ್ದ ಗ್ರಾಮವನ್ನು ಪುನರ್ದತ್ತಿ ಮಾಡಿ, ಅದರ ಜೊತೆಗೆ ಇನ್ನೂ ಸ್ವಲ್ಪ ಭೂಮಿಯನ್ನು ಸೇರಿಸಿ ದಾನ ಮಾಡಿದ್ದನ್ನು ಗೌತಮೀಪುತ್ರನ ಪ್ರ.ಶ. 130ರ ಶಾಸನ ತಿಳಿಸುತ್ತದೆ. ನಾಸಿಕದ 3ನೆಯ ಗುಹೆಯಲ್ಲಿಯ ಶಾಸನ ಪ್ರ.ಶ. 149ರಲ್ಲಿ ಹುಟ್ಟಿದ ವಾಸಿಷ್ಠೀಪುತ್ರ ಪುಳುಮಾವಿಯದು. ಈ ಲಯನವನ್ನು ಮಹಾರಾಜನ ಪತ್ನಿಯೂ ರಾಜನ ಮಾತೆಯೂ ಭದ್ರಾಯಣೀಯ ನಿಕಾಯದ ಭಿಕ್ಷು ಸಂಘಕ್ಕೆ ಬಿಟ್ಟುಕೊಟ್ಟಳು. ಮೂರು ವರ್ಷಗಳ ಬಳಿಕ ಇದೇ ಅರಸ ಈ ಗುಹೆಯನ್ನು ಪ್ರತಿ ಸಂಸ್ಕಾರಗೊಳಿಸಿ ಅದೇ ಭಿಕ್ಷು ಸಂಘಕ್ಕೆ ಬಿಟ್ಟುಕೊಟ್ಟ.

ಇಪ್ಪತ್ತನೆಯ ಗುಹೆಯಲ್ಲಿ ಯಜ್ಞಸಾತಕರ್ಣಿಯ ಪ್ರ.ಶ. 181ರ ಶಾಸನವೊಂದಿದೆ. ಕೌಶಿಕಗೋತ್ರದ ಮಹಾಸೇನಾಪತಿ ಭವಗೋಪನ ಪತ್ನಿ ಬಹು ವರ್ಷಗಳಿಂದ ಸಂಪೂರ್ಣಗೊಳಿಸದೆ ಇದ್ದ ಗುಹೆಯನ್ನು ಪರಿಪೂರ್ಣಗೊಳಿಸಿ ಭಿಕ್ಷುಸಂಘದ ವಸತಿಗಾಗಿ ದಾನ ಮಾಡಿದಳೆಂದು ಅದರಲ್ಲಿ ಹೇಳಿದೆ.

ಕಾರ್ಲಾ ಗುಹೆಯಲ್ಲಿಯ ವಾಸಿಷ್ಠೀಪುತ್ರ ಪುಳುಮಾವಿಯ ಪ್ರ.ಶ. ಸು. 137ರ ಶಾಸನದಲ್ಲಿ ಆತನ ಅಧೀನಾಧಿಕಾರಿಯಾದ ಮಹಾರಥಿ ಸೋಮದೇವ ತನ್ನ ಅನುಭವಣೆಗೆ ಸೇರಿದ ಗ್ರಾಮಗಳಲ್ಲಿ ಒಂದನ್ನು ಅಲ್ಲಿಯ ಗುಹೆಯಲ್ಲಿ ವಾಸಿಸುತ್ತಿದ್ದ ವಲೂರಕ ಸಂಘಕ್ಕೆ ಸೇರಿದ ಭಿಕ್ಷುಗಳಿಗಾಗಿ ದಾನ ಮಾಡಿದನೆಂದು ಹೇಳಿದೆ. ವಲೂರಕ ಎಂಬುದು ಎಲ್ಲೋರದ ಇನ್ನೊಂದು ಹೆಸರೆಂದು ಕೆಲವರು ಭಾವಿಸಿರುವರಾದರೂ ಅದು ಕಾರ್ಲೆಯ ಸುತ್ತಲಿನ ಪ್ರದೇಶಕ್ಕೆ ಅಂದು ಪ್ರಚಲಿತವಿದ್ದ ಹೆಸರೆಂಬ ಊಹೆ ಹೆಚ್ಚು ಸಂಭವವೆನಿಸುತ್ತದೆ. ಇದೇ ಗುಹೆಯಲ್ಲಿಯ ಇದೇ ಅರಸನ, ಪ್ರ.ಶ.ಸು. 154ರ ಇನ್ನೊಂದು ಶಾಸನ ಹೊಸದಾಗಿ ಕೊರೆಯಲಾದ ಮಂಟಪವನ್ನು ಮಹಾಸಾಂಘಿಕರಿಗೆ ಬಿಟ್ಟುಕೊಟ್ಟ ವಿಷಯವನ್ನು ತಿಳಿಸುತ್ತದೆ.

ಒರಿಸ್ಸದ ಭುವನೇಶ್ವರದ ಸಮೀಪದ ಉದಯಗಿರಿ ಬೆಟ್ಟಗಳಲ್ಲಿರುವ ಹಾಥಿಗುಂಫಾ ಮತ್ತು ಮಂಚಪುರೀ ಗುಹೆಗಳಲ್ಲಿಯ ಶಾಸನಗಳು ಜೈನ ಸಂನ್ಯಾಸಿಗಳಿಗಾಗಿ ಅಲ್ಲಿ ಅನುಕೂಲಗಳನ್ನು ಕಲ್ಪಿಸಿದ್ದನ್ನು ತಿಳಿಸುತ್ತದೆ **(ನೋಡಿ- ಖಾರವೇಲ)**, ಮಧ್ಯ ಪ್ರದೇಶದ ವಿದಿಶಾನಗರದ ಸಮೀಪದಲ್ಲಿ ಉದಯಗಿರಿ ಬೆಟ್ಟಗಳಲ್ಲಿಯ ಗುಹೆಯೊಂದರಲ್ಲಿ ಗುಪ್ತವಂಶದ ಇಮ್ಮಡಿ ಚಂದ್ರಗುಪ್ತನ ಎರಡು ಶಾಸನಗಳುಂಟು. ಮೊದಲನೆಯದು ಪ್ರ.ಶ. 401ರದು. ಸಂಸ್ಕೃತ ಭಾಷೆಯ ಈ ಶಾಸನ ಬಹುಶಃ ಆ ಗುಹೆಯನ್ನು ಚಂದ್ರಗುಪ್ತ ಮಾಂಡಲಿಕನಾದ ಸನಕಾನೀಕ ಮಹಾರಾಜ ಮಾಡಿಸಿದುದಾಗಿ ತಿಳಿಸುತ್ತದೆ. ಇನ್ನೊಂದು ಶಾಸನದಲ್ಲಿ ಆ ಗುಹೆಯನ್ನು ಶುಂಭುವಿನ ಗುಹೆ ಎಂದು ಕರೆಯಲಾಗಿದೆ.

ತಮಿಳುನಾಡಿನಲ್ಲೂ ಇಂಥ ಪ್ರಾಚೀನ ಗುಹೆಗಳೂ ಗವಿಗಳೂ ಕಂಡುಬಂದಿವೆ. ಇವುಗಳಲ್ಲಿ ತಪಸ್ವಿಗಳು ಮಲಗಲು ಅನುಕೂಲವಾಗುವಂತೆ ಕಲ್ಲುಮಂಚಗಳನ್ನು ಕೊರೆಯಲಾಗಿದೆ. ಕೆಲವು ಗುಹೆಗಳ ಬಳಿ ಬ್ರಾಹ್ಮೀ ಶಾಸನಗಳುಂಟು. ತಮಿಳು ನಾಡಿನ ಅತ್ಯಂತ ಪ್ರಾಚೀನ ಶಾಸನಗಳು ಇವು. ಆದರೆ ಇವುಗಳ ಭಾಷೆ, ಅರ್ಥ ಮುಂತಾದವನ್ನು ಕುರಿತು ವಿವಾದಗಳುಂಟು. ಇವು ಬೌದ್ಧ ಭಿಕ್ಷುಗಳಿಗೆ ಸಂಬಂಧಿಸಿದವೆಂದು ಹಲವರೂ ಜೈನರಿಗೆ ಸಂಬಂಧಿಸಿದವೆಂದು ಇತರರೂ ವಾದಿಸಿದ್ದಾರೆ. ಆದರೆ ಇವುಗಳ ಸಮೀಪದಲ್ಲಿ ಅಲ್ಲಲ್ಲಿ ಕೊರೆಯಲಾದ ತೀರ್ಥಂಕರರಂಥ ಮೂರ್ತಿಗಳನ್ನು ಗಮನಿಸಿದರೆ ಇವು ಜೈನರ ಗುಹೆಗಳಾಗಿದ್ದಿರಬಹುದೆನಿಸುತ್ತದೆ. ಮಧುರೈ ಜಿಲ್ಲೆಯ ಆನೈಮಲೈ, ತಿರುಪ್ಪರುಕ್ಕುನ್ರಮ್, ಅಳಗರ್‌ಮಲೈ, ವರಿಚ್ಚಿಯಾರ್, ಕೊಂಗರ್ಪ್ಪುಳಿಯಂಗುಳಂ, ಸಿದ್ಧರ್‌ಮಲೈ, ತಿರುನೆಲ್ವೇಲಿ ಜಿಲ್ಲೆಯ ಮರುಗಾಲ್ತಲೈ, ಕಬುಗುಮಲೈ, ವೀರಶೀಖಾಮಣಿ, ಪುದುಕೋಟೆ ಸಮೀಪದ ಸಿತ್ತನ್ನವಾಸಲ್, ನಾರ್ತಾಮಲೈ ಈ ಸ್ಥಳಗಳಲ್ಲಿ ಇಂಥ ಗುಹೆಗಳೂ ಗುಹಾಶಾಸನಗಳೂ ಕಂಡುಬಂದಿವೆ.

ಇಂಥ ಗುಹೆಗಳು ಸಾಮಾನ್ಯವಾಗಿ ಧಾರ್ಮಿಕ ಸಂಬಂಧಗಳನ್ನು ಹೊಂದಿದ್ದು, ಸಂಸಾರವನ್ನು ತ್ಯಜಿಸಿದ ಭಿಕ್ಷುಗಳ, ಸಂನ್ಯಾಸಿಗಳ ಆವಾಸಸ್ಥಾನಗಳಾಗಿದ್ದುವೆಂಬುದು ಶಾಸನಗಳಿಂದಲೂ ಖಚಿತವಾಗುತ್ತದೆ ಎನ್ನಬಹುದು. ಅಲ್ಲದೆ ಇವು ಹೆಚ್ಚಾಗಿ ಬೌದ್ಧ ಅಥವಾ ಜೈನಧರ್ಮಗಳಿಗೆ ಸಂಭಂಧಿಸಿದವು. ಮೇಲೆ ಹೇಳಿದ ಶುಂಭುವಿನ ಗುಹೆಯಂಥ ಕೆಲವು ಗುಹೆಗಳು ಮಾತ್ರ ಈ ಸಾಮಾನ್ಯ ನಿಯಮಕ್ಕೆ ಹೊರತಾಗಿವೆಯೆನ್ನಬಹುದು.

(ಜಿ.ಬಿ.ಆರ್.)

**ಗುಹಾಸಮಾಧಿಗಳು, ಪ್ರಾಗಿತಿಹಾಸ ಕಾಲದ :** ಬೃಹತ್ ಶಿಲಾ ಸಮಾಧಿ ಸಂಸ್ಕೃತಿಯ ಅಂಗವಾಗಿ ದೊಡ್ಡ ಕಲ್ಲಿನ ಬಂಡೆಗಳಲ್ಲಿ ಚಕ್ರಾಕಾರದ ಅಥವಾ ಚತುರಸ್ರಾಕಾರದ ಹಳ್ಳಗಳನ್ನು ಕೊರೆದು ಆ ಹಳ್ಳಗಳ ಒಂದು ಪಾರ್ಶ್ವದಲ್ಲಿ ಪ್ರವೇಶ ದ್ವಾರವನ್ನಿಟ್ಟು ರಚಿಸಲಾದ ಭೂಗತ ಗುಹೆಗಳಲ್ಲಿ ಮಾಡುತ್ತಿದ್ದ ಸಮಾಧಿಗಳು (ರಾಕ್–ಕಟ್ ಬರಿಯಲ್ ಕೇವ್ಸ್).

ಇವು ಮೊದಲಿಗೆ ಪ್ಯಾಲಸ್ತೀನಿನ ಮೆಗಿಡ್ಡೊ, ಗಿಜೆರ್, ಜೆರಿಕೊ, ಟೆಲ್ ಅಜ್ಜುಲ್, ಟೆಲ್ ಫ್ಯಾರಾ ಮುಂತಾದ ನೆಲೆಗಳಲ್ಲೂ ಮೆಡಿಟರೇನಿಯನ್ ಸಮುದ್ರದಲ್ಲಿರುವ ಸೈಪ್ರಸ್ ದ್ವೀಪದ ಲಪಿತಾಸ್, ಅಜಿಯೋಸ್, ಜಕವೋಸ್, ವೌನಿ ಮುಂತಾದ ನೆಲೆಗಳಲ್ಲೂ ಪ್ರ.ಶ.ಪೂ. ನಾಲ್ಕನೆಯ ಸಹಸ್ರಮಾನದ ಕೊನೆಯ ಭಾಗದಿಂದ ಕಂಚಿನ ಮತ್ತು ಕಬ್ಬಿಣಯುಗದ ಸಂಸ್ಕೃತಿಗಳೊಂದಿಗೆ ಮುಂದುವರಿದವು. ಮೊದಲ ಕಾಲದ ಸಮಾಧಿಗಳನ್ನು ಸಾಮಾನ್ಯವಾಗಿ ಮತ್ತೆ ಮತ್ತೆ ಉಪಯೋಗಿಸುತ್ತಿದ್ದರೂ ಆಗಾಗ್ಗೆ ಹೊಸ ಗುಹೆಗಳನ್ನು ಸಮಾಧಿ ಕಾರ್ಯಕ್ಕಾಗಿ ನಿರ್ಮಿಸುತ್ತಿದ್ದದ್ದುಂಟು.

ಪಶ್ಚಿಮ ಏಷ್ಯದ ಈ ಪ್ರದೇಶಗಳನ್ನುಳಿದರೆ ಗುಹಾಸಮಾಧಿಗಳು ಕಂಡುಬರುವುದು ದಕ್ಷಿಣ ಭಾರತದ ಕೇರಳ ರಾಜ್ಯದ ಮಲಬಾರ್ ಮತ್ತು ಕೊಚ್ಚಿ ಪ್ರದೇಶಗಳಲ್ಲಿ ಮಾತ್ರ. ಆದರೆ ಕೇರಳದಲ್ಲಿ ಇವು ಕಬ್ಬಿಣಯುಗದ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿವೆ. ಕೇರಳದಲ್ಲಿ 19ನೆಯ ಶತಮಾನದ ಮೂರನೆಯ ದಶಕದಲ್ಲಿ ಜೆ. ಬ್ಯಾಬಿಂಗ್‌ಟನ್ ಇವನ್ನು ಗಮನಿಸಿದ ಮೇಲೆ ಹಲವಾರು ಹೊಸ ನೆಲೆಗಳನ್ನು ಕಂಡುಹಿಡಿಯಲಾಗಿದೆ.

ಸಾಧಾರಣವಾಗಿ ಕೇರಳದ ಗುಹೆಗಳಲ್ಲಿ ಮೊದಲಿಗೆ ಕಲ್ಲುಬಂಡೆಯ ಮೇಲ್ಭಾಗದಿಂದ ಚತುರಸ್ರ ಅಥವಾ ಚೌಕಾಕಾರದ ಒಂದು ಹಳ್ಳವನ್ನು ಕೊರೆದು ಅದರ ಒಂದು ಪಾರ್ಶ್ವದಲ್ಲಿ ತಳಕ್ಕೆ ಇಳಿಯಲು ಮೆಟ್ಟಿಲುಗಳನ್ನು ಬಿಡಿಸಲಾಗಿರುತ್ತದೆ. ಮೆಟ್ಟಿಲುಗಳ ಎದುರು ಪಾರ್ಶ್ವದಲ್ಲಿ ಹಳ್ಳದ ತಳಭಾಗದಿಂದ ಸ್ವಲ್ಪ ಎತ್ತರದಲ್ಲಿ ಒಂದು ಬಾಗಿಲಿದ್ದು ಅದರ ಮುಖಾಂತರ ಒಳಗಿನ ಅರ್ಧವೃತ್ತ, ವೃತ್ತ ಅಥವಾ ಚತುರಸ್ರಾಕಾರದ ಕೋಣೆಗೆ ಪ್ರವೇಶವಿರುತ್ತಿತ್ತು. ಕೋಣೆಯ ಒಳಭಾಗದ ಒಂದು, ಎರಡು ಅಥವಾ ಮೂರು ಕಡೆಗಳಲ್ಲೂ ಕಲ್ಲನ್ನು ಕೊರೆದು ನಿರ್ಮಿಸಿದ ಜಗುಲಿಗಳಿರುತ್ತಿದ್ದವು. ಅವುಗಳ ಮೇಲೆ ಮೃತದೇಹದ ಅವಶೇಷಗಳನ್ನೂ ಇನ್ನಿತರ ಸಮಾಧಿ ವಸ್ತುಗಳನ್ನೂ ಇಡಲಾಗುತ್ತಿತ್ತು. ಕೆಲವು ಗುಹೆಗಳಲ್ಲಿ ತುಂಡು ಕಂಬ ಮತ್ತು ಒಲೆಗಳನ್ನು ಸಹ ಕೊರೆದಿರಲಾಗುತ್ತಿತ್ತು. ಕೆಲವು ಗುಹೆಗಳಲ್ಲಿ ಮಧ್ಯಭಾಗದಲ್ಲಿ ಒಂದು ಕಂಬವಿದ್ದು, ಅದು ಚಾವಣಿಗೆ ಆಧಾರವಾಗಿರುತ್ತಿದ್ದರೆ ಮತ್ತೆ ಕೆಲವು ಗುಹೆಗಳಲ್ಲಿ ಕಂಬ ಮತ್ತು ರಂಧ್ರಗಳೆರಡೂ ಇರುತ್ತಿದ್ದರೆ ಮತ್ತೆ ಕೆಲವು ಗುಹೆಗಳಲ್ಲಿ ಇವೆರಡೂ ಇರುತ್ತಿರಲಿಲ್ಲ. ಅನೇಕ ಗುಹೆಗಳಲ್ಲಿ ಒಂದೇ ಭೂಗತ ಕೋಣೆಯಿರುತ್ತಿತ್ತು. ಕೆಲವು ಗುಹೆಗಳಲ್ಲಿ ಎರಡು ಮೂರು ಅಥವಾ ನಾಲ್ಕು ಕೋಣೆಗಳಿರುತ್ತಿದ್ದುವು. ಹಲವು ಕೋಣೆಗಳುಳ್ಳ ಗುಹೆಗಳಲ್ಲಿ ಮಧ್ಯದ ಪ್ರವೇಶದ ಹಳ್ಳ ಒಂದೇ ಇರುತ್ತಿತ್ತು. ಮೆಟ್ಟಿಲುಗಳಿರುವ ಪಾರ್ಶ್ವ ಬಿಟ್ಟು ಉಳಿದ ಪಾರ್ಶ್ವಗಳಿಂದ ಕೋಣೆಗಳಿಗೆ ಪ್ರವೇಶದ್ವಾರವನ್ನು ನಿರ್ಮಿಸಲಾಗುತ್ತಿತ್ತು. ಪ್ರವೇಶದ್ವಾರಗಳನ್ನು ಮತ್ತು ಕೋಣೆಯ ಮೇಲಿನ ರಂಧ್ರಗಳನ್ನು ಸಾಮಾನ್ಯವಾಗಿ ಕಲ್ಲು ಚಪ್ಪಡಿಗಳಿಂದ ಮುಚ್ಚಲಾಗುತ್ತಿತ್ತು.

ಕೇರಳ ಮತ್ತು ದಕ್ಷಿಣ ಭಾರತದ ಇತರ ಬೃಹತ್ ಶಿಲಾ ಸಮಾಧಿಗಳಲ್ಲಿ ಕಂಡುಬರುವ ಆ ಸಂಸ್ಕೃತಿಯ ಮುಖ್ಯಲಕ್ಷಣಗಳಾದ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳು, ಕಬ್ಬಿಣದ ಆಯುಧೋಪಕರಣಗಳು ಮತ್ತು ಮೃತದೇಹದ ಅವಶೇಷಗಳು ಕೇರಳದ ಗುಹಾಸಮಾಧಿಗಳಲ್ಲಿ ದೊರಕಿವೆ. ಆದ್ದರಿಂದ ಈ ಗುಹಾಸಮಾಧಿಗಳು ಬೃಹತ್ ಶಿಲಾಸಮಾಧಿ ಸಂಸ್ಕೃತಿಗೆ ಸೇರಿದುವೆಂಬುದು ನಿರ್ವಿವಾದದ ಸಂಗತಿ.

ಪ್ಯಾಲಸ್ತೀನ್, ಸೈಪ್ರಸ್ ಮತ್ತು ಕೇರಳದ ಗುಹಾಸಮಾಧಿಗಳಲ್ಲಿ ಅನೇಕ ಸಾಮ್ಯಗಳಿವೆ. ಈ ಕಾರಣದಿಂದಾಗಿ ಗುಹಾಸಮಾಧಿ ಪದ್ಧತಿ ಪ್ಯಾಲಸ್ತೀನ್‌ನಿಂದ ಸಮುದ್ರ ಮಾರ್ಗವಾಗಿ ದಕ್ಷಿಣ ಭಾರತದ ಪಶ್ಚಿಮ ತೀರಪ್ರದೇಶಕ್ಕೆ ನೇರವಾಗಿ ಬಂದಿರಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಈ ಸಂಸ್ಕೃತಿಯ ಲಕ್ಷಣಗಳಲ್ಲಿ ಕೆಲವು ಮುಖ್ಯ ವ್ಯತ್ಯಾಸಗಳಿರುವುದರಿಂದಲೂ ಕೇರಳದ ಗುಹಾಸಮಾಧಿಪದ್ಧತಿ ಅಲ್ಲಿಯ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವುದರಿಂದಲೂ ಈ ವಿಷಯವಾಗಿ ಖಚಿತವಾಗಿ ಏನನ್ನೂ ಹೇಳುವುದು ಸದ್ಯಕ್ಕೆ ಕಷ್ಟವಾಗುತ್ತದೆ. ಒಟ್ಟಿನಲ್ಲಿ ಇದು ದಕ್ಷಿಣಭಾರತದಲ್ಲಿ ಕಬ್ಬಿಣಯುಗದ ವ್ಯಾಪಕ ಸಂಸ್ಕೃತಿಯಾದ ಬೃಹತ್ ಶಿಲಾಸಮಾಧಿ ಸಂಸ್ಕೃತಿಗೆ ಸೇರುತ್ತದೆಂದು ಮಾತ್ರ ನಿರ್ದಿಷ್ಟವಾಗಿ ಹೇಳಬಹುದಾಗಿದೆ. (ಬಿ.ಕೆ.ಜಿ.)

**ಗುಹಿಲರು :** ಉತ್ತರಭಾರತದಲ್ಲಿಯ ರಾಜಸ್ತಾನ, ಪಂಜಾಬ್ ಮತ್ತು ಕಾಠಿಯಾವಾಡ್ ಪ್ರದೇಶಗಳನ್ನು ಆಳಿದ ಒಂದು ರಾಜವಂಶ. ಈ ವಂಶದವರನ್ನು ಗುಹಿಲ ಪುತ್ರರು, ಗುಹಿಲೋತರು, ಗುಹಿಲೋಟರು, ಗೋಭಿಲಪುತ್ರರು, ಗುಹಿಲಗೋತ್ರರು, ಎಂದೂ ಈ ವಂಶವನ್ನು ಗುಹಿಲಾಂಗಜ, ಗೆಹಲೊಟ ಎಂದೂ ಕರೆಯಲಾಗಿದೆ. ಇವರ ಚರಿತ್ರೆಯ ಪ್ರಾರಂಭದ ಪುಟಗಳು ಇನ್ನೂ ಅನೇಕ ವಿವಾದಯುತ ವಿಷಯಗಳಿಂದಲೇ ಕೂಡಿವೆ. ವಿಕ್ರಮ ಸಂವತ್ 1034ರಲ್ಲಿದ್ದ (977) ಈ ವಂಶದ ಅರಸನಾದ ಶಕ್ತಿಕುಮಾರನ ಆತಪುರ ಶಾಸನದಿಂದ ಇವರು ಮೂಲತಃ ಆನಂದಪುರದ ವಿಪ್ರಕುಲದವರೆಂದು ಮತ್ತು ಶ್ರೀಗುಹದತ್ತ ಈ ವಂಶದ ಮೊದಲ ರಾಜನೆಂದು ತಿಳಿದುಬಂದಿದೆ. ಇವರು ಸೂರ್ಯವಂಶದವರೆಂದೂ ರಾಮನ ವಂಶದವರೆಂದೂ ರಾಜಸ್ತಾನದ ಜನಪದ ಗೀತ ಹಾಗೂ ಕಥಾನಕಗಳಿಂದ ತಿಳಿದುಬರುತ್ತದೆ. ಇವರು ಮೇವಾಡ ಸಂಸ್ಥಾನದ ಅಧಿಪತಿಗಳಾಗಿದ್ದರು. ಆದರೆ ಪ್ರಾರಂಭದಲ್ಲಿ ಇವರು ಚಿತ್ತೋಡ (ಚಿತೋಡಗಡ) ಮೌರ್ಯ (ಮೋರಿ) ರಾಜರ, ಕನೌಜದ ಪ್ರತಿಹಾರರ, ಅಣಿಹಲ ಪಟ್ಟಣದ ಚಾಳುಕ್ಯರ ಮಾಳವದ ಪರಮಾರರ ಮತ್ತು ಶಾಕಂಬರಿಯ ಚಾಹಮಾನರ ಮಾಂಡಲಿಕರಾಗಿದ್ದರು. ಈ ಚಾಳುಕ್ಯ, ಪರಮಾರ ಮತ್ತು ಚಾಹಮಾನರ ಸಾರ್ವಭೌಮತ್ವ ಗುಹಿಲವಂಶಜರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿತ್ತು. ಬಿಜಾಪುರ (ರಾಜಸ್ತಾನ) ಶಾಸನದಿಂದ ಪರಮಾರ ಮುಂಜ, ಚೆರವಾ ಶಾಸನದಿಂದ ಪರಮಾರ ಭೋಜ ಮತ್ತು ಚಿತ್ತೋಡ ಶಾಸನದಿಂದ ಚಾಳುಕ್ಯ ಕುಮಾರಪಾಲ ಇವರು ಈ ಪ್ರದೇಶಕ್ಕೆ ಒಡೆಯರಾಗಿದ್ದರೆಂಬುದು ಸ್ಪಷ್ಟವಿದೆ. ಪೃಥ್ವೀರಾಜ ವಿಜಯ ಗ್ರಂಥದಿಂದ ಚಹಮಾನರ 2ನೆಯ ವಾಕ್ಪತಿ ರಾಜನ ಕಾಲಕ್ಕೆ ಗುಹಿಲರ ರಾಜ್ಯ ಚಹಮಾನರ ಅಧೀನತೆ ಗೊಳಗಾಗಿತ್ತೆಂದು ತಿಳಿದುಬರುತ್ತದೆ. ಪೃಥ್ವೀರಾಜನ ತರುವಾಯ ಮುಸಲ್ಮಾನ ರಾಜರ ಕಾಲದಲ್ಲಿ ಇವರು ವಿಶೇಷ ಪ್ರಸಿದ್ಧಿ ಪಡೆದರು. ಗುಹಿಲವಂಶದ ಬಳ್ಳಿ ಅನೇಕ ಮನೆತನಗಳಾಗಿ ಹಬ್ಬಿಕೊಂಡು ಬೆಳೆದಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ : 1. ಮೇದಾಪಟದ (ಮೇವಾಡ) ಗುಹಿಲಪುತ್ರರದು, 2. ಚಟ್ಸು ಮತ್ತು ದಬೋಕದ ಗುಹಿಲಪುತ್ರರದು 3. ಸೌರಾಷ್ಟ್ರದ ಗುಹಿಲಪುತ್ರರದು, 4. ಆಸಿಕದ ಗುಹಲಪುತ್ರರದು, 5. ನಡೂಲಡಾಗಿಕದ ಗುಹಿಲಪುತ್ರರದು, 6. ಸೆಸೋದಿಯಾದ ಗುಹಿಲಪುತ್ರರದು ಮತ್ತು 7. ದುಂಗಪುರ ಹಾಗೂ ವಾಗ್ಡಾದ ಗುಹಿಲಪುತ್ರರದು. ಇವುಗಳಲ್ಲಿ ಮೇವಾಡದ ಮನೆತನವೇ ಮೂಲ ಹಾಗೂ ಮುಖ್ಯವಾದ್ದು. ನಾಗಹ್ರದ, ಚಿತ್ತೋಡ, ಆತಪುರ (ಆಹರ) ಇವು ಇವರಿಗೆ ರಾಜಧಾನಿಗಳಾಗಿದ್ದವು.

ಪ್ರಾರಂಭದಲ್ಲಿ ಆಳಿದ ರಾಜರ ವಿಷಯ ಆತಪುರ ಶಾಸನದಿಂದ ಈ ರೀತಿ ತಿಳಿದು ಬರುತ್ತದೆ: ಗುಹದತ್ತ – ಭೋಜ –– ಮಹೇಂದ್ರ I – ನಾಗ – ಶೀಲ– ಅಪರಾಜಿತ–ಮಹೇಂದ್ರ II – ಕಾಲಭೋಜ – ಖೊಮ್ಮಾಣ I – ಭರ್ತೃಪಟ್ಟ I – ಸಿಂಹ – ಖೊಮ್ಮಾಣ II – ಮಹಾಯಕೋ–ಖೊಮ್ಮಾಣ III – (936) – ಭರ್ತೃಪಟ್ಟ II – ಅಲ್ಲಟ (951) – ನರವಾಹನ (971) – ಶಾಲಿವಾಹನ– ಶಕ್ತಿಕುಮಾರ (977). ಶಕ್ತಿಕುಮಾರನಿಗೆ ಮೇವಾಡರಾಷ್ಟ್ರದ ಆತಪುರ ರಾಜಧಾನಿಯಾಗಿತ್ತು. ತತ್ಪೂರ್ವದಲ್ಲಿ ಚಿತ್ತೋಡ ರಾಜಧಾನಿಯಾಗಿತ್ತು. ಈ ಅರಸರಲ್ಲಿ ಬಾಪ್ಪನೆಂಬ ಒಬ್ಬ ಬಹಳ ಪ್ರಸಿದ್ಧಿ ಹೊಂದಿದ್ದಾನೆ. ಬಾಪ್ಪನನ್ನು ಗುರುತಿಸುವುದು ಉಪಲಬ್ಧ ಸಾಮಗ್ರಿಯಿಂದ ಸಾಧ್ಯವಿಲ್ಲ. ಏಕೆಂದರೆ ಇವರಲ್ಲಿ ಗುಹದತ್ತನನ್ನು ಬಾಪ್ಪನೆಂದು ಸಿ.ವಿ. ವೈದ್ಯರು ಕಾಲಭೋಜನನ್ನು ಬಾಪ್ಪನೆಂದು ಜಿ.ಎಚ್. ಓಝಾ ಮತ್ತು 1ನೆಯ ಖೊಮ್ಮಾಣನನ್ನು ಬಾಪ್ಪನೆಂದು ಡಿ. ಆರ್. ಭಂಡಾರಕರ್ – ಹೀಗೆ ಭಿನ್ನಭಿನ್ನವಾಗಿ ಗುರುತಿಸಿದ್ದಾರೆ. 1ನೆಯ ಖೊಮ್ಮಾಣನ ಕಾಲಕ್ಕೆ ಅರಬರು ಮೇವಾಡದವರೆಗೆ ಬರಲು ಅವರನ್ನು ಹಿಂದಕ್ಕೆ ಅಟ್ಟಿದುದರಿಂದ ಆತನನ್ನೇ ಬಾಪ್ಪನೆಂದು ಜನ ಕರೆದಿರಬಹುದು. ಮತ್ತು ಖೊಮ್ಮಾಣ ರಾಸೊ ಗ್ರಂಥ ಆತನ ಪ್ರಶಸ್ತಿಯನ್ನು ಸೂಚಿಸುತ್ತದೆಂಬುದು ಭಂಡಾರ್ಕರರ ಅಭಿಪ್ರಾಯ. ಇದು ಗಮನಾರ್ಹವಾದ್ದು.

ಅಲ್ಲಟನ ಕಾಲದ ಪ್ರಾರಂಭದಲ್ಲಿ ಮೇವಾಡ ಗೂರ್ಜರ ಪ್ರತಿಹಾರರ ಅಧೀನದಲ್ಲಿತ್ತು. ಇವನು ಅದನ್ನು ಅವರಿಂದ ಪ್ರತಿಹಾರರ ದೇವಪಾಲನ ಕಾಲದಲ್ಲಿ ಸ್ವತಂತ್ರವನ್ನಾಗಿ ಮಾಡಿದ. ಇವನ ಕಾಲದಲ್ಲಿ ಮೇವಾಡ ಸಂಪತ್‌ಸಮೃದ್ಧಿಯಿಂದ ಕೂಡಿತ್ತೆಂದು ಸಾರಣೇಶ್ವರ ಶಿಲಾಶಾಸನದಿಂದ ತಿಳಿದುಬರುತ್ತದೆ. ಮುಂದೆ ಅಂಬಾಪ್ರಸಾದನ ಕಾಲಕ್ಕೆ ಇವರ ರಾಜ್ಯ ಚಹಮಾನ 2ನೆಯ ವಾಕ್ಪತಿರಾಜನ ಹಸ್ತಗತವಾಯಿತು. ಅನಂತರ ಮೇವಾಡ ಸ್ವಲ್ಪ ಅರಾಜಕತೆಗೆ ಒಳಗಾಯಿತು.

ಸು. 1108–1116ರ ಸಮಯಕ್ಕೆ ವಿಜಯಸಿಂಹನೆಂಬವನು ರಾಜ್ಯವಾಳುತ್ತಿದ್ದ ಬಗ್ಗೆ ತಿಳಿದುಬಂದಿದೆ. ಇವನಿಗೆ ರಾಣಿಯಾದ ಶಾಮಲದೇವಿಯ ಹೊಟ್ಟೆಯಲ್ಲಿ ಹುಟ್ಟಿದ ಅಲ್ಹಣದೇವಿಯೆಂಬ ಮಗಳಿದ್ದಳು. ಆಕೆಯನ್ನು ಕಳಚುರಿ ಗಯಕರ್ಣನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಸು. 1168ರಲ್ಲಿದ್ದ ರಣಸಿಂಹನ ಇಬ್ಬರು ಮಕ್ಕಳಾದ ಕ್ಷೇಮಸಿಂಹ ಮತ್ತು ರಾಹಪ ಇವರಿಂದ ಈ ಮನೆತನ ಎರಡಾಯಿತು. ಕ್ಷೇಮಸಿಂಹನ ವಂಶಜರು ರಾವಲ ಎಂದೂ ರಾಹಪನ ವಂಶಜರು ರಾಣಾ ಎಂದೂ ಪ್ರಸಿದ್ಧರಾದರು. ರಾಹಪನ ಮನೆತನದವರನ್ನು ಸೆಸೋದಿಯಾ ಮನೆತನದವರೆಂದೂ ಹೇಳಲಾಗುತ್ತದೆ. ಕ್ಷೇಮಸಿಂಹನಿಗೆ ಸಾಮಂತಸಿಂಹ ಮತ್ತು ಕುಮಾರಸಿಂಹ ಎಂಬ ಇಬ್ಬರು ಮಕ್ಕಳಿದ್ದರು. ಚಹಮಾನ ಕುಮಾರಪಾಲ ಮೇವಾಡವನ್ನು ಆಕ್ರಮಿಸಲು ಸಾಮಂತಸಿಂಹ ದುಂಗರಪುರ ಪ್ರದೇಶಕ್ಕೆ ಹೋಗಿ ಬನ್ಸವಾರದಲ್ಲಿ (ವಾಗ್ಡಾ) ನೆಲಸಿದ. ಮುಂದೆ ದುಂಗರಪುರದ ವಂಶ ಬೇರೆಯಾಗಿ ಬೆಳೆಯಿತು. ಆದರೆ ಸಾಮಂತಸಿಂಹನ ತಮ್ಮ ಕುಮಾರಸಿಂಹ ಚಹಮಾನರನ್ನು ಸೋಲಿಸಿ ಮೇವಾಡಕ್ಕಧಿಪತಿಯಾದ. ಇವನ ಮೊಮ್ಮಗನಾದ ಜೈತ್ರಸಿಂಹನ ಕಾಲಕ್ಕೆ (1213–56) ಗುಲಾಮಸಂತತಿಯ ಬಾದಶಹನಾದ ಅಲ್ತಮಷ್ ಈ ರಾಜ್ಯದ ಮೇಲೆ ದಾಳಿಮಾಡಿದ್ದ. ಈತನ ಅನಂತರ ತೇಜಸಿಂಹ, ಸಮರಸಿಂಹ ಮತ್ತು ರತನಸಿಂಹ ರಾಜ್ಯವನ್ನಾಳಿದರು.

ರತನಸಿಂಹನ ಕಾಲಕ್ಕೆ ಅಲ್ಲಾವುದ್ದೀನ್ ಖಲ್ಜಿ ರಾಜ್ಯದ ವಿಸ್ತರಕ್ಕೋ ರತನಸಿಂಹನ ಪತ್ನಿ ಪದ್ಮಿನಿಯ ಮೇಲಿನ ಮೋಹಕ್ಕೋ ಚಿತೋಡದ ಮೇಲೆ ಧಾಳಿ ಮಾಡಿ ಆ ದುರ್ಗವನ್ನು ವಶಪಡಿಸಿಕೊಂಡ. ಅಲ್ಲಾವುದ್ದೀನನ ಧಾಳಿಯ ಬಗ್ಗೆ ಅಮೀರ್ ಖುಸ್ರು, ಬರನೀ ಇವರು ಒಬ್ಬೊಬ್ಬರು ಒಂದೊಂದು ಬಗೆಯ ಅಭಿಪ್ರಾಯಗಳನ್ನು ಬರೆದಿದ್ದಾರೆ. ಇಬ್ಬರೂ ಸಮಕಾಲೀನವರೇ ಆಗಿದ್ದುದರಿಂದ ಈ ವಿಷಯ ಹೀಗೆ ಎಂದು ಸದ್ಯದಲ್ಲಿ ಹೇಳುವಂತಿಲ್ಲ. ಅಲ್ಲಾವುದ್ದೀನ ಚಿತ್ತೋಡವನ್ನು 1303ರ ಆಗಸ್ಟ್ 26ರಂದು ವಶಪಡಿಸಿಕೊಂಡ ಅದಕ್ಕೆ ಖಿಜ್ರಾಬಾದ್ ಎಂದು ಹೆಸರಿಟ್ಟು ಆ ಪ್ರಾಂತದ ಆಡಳಿತವನ್ನು ತನ್ನ ಪುತ್ರ ಖಿಜ್ರ್‌ಖಾನನಿಗೆ ವಹಿಸಿಕೊಟ್ಟ : ದಬ್ಬಾಳಿಕೆ, ಗೊಂದಲಗಳು ಹೆಚ್ಚಾಗಲು ಖಿಜ್ರ್‌ಖಾನನು ರಾಜ್ಯಾಡಳಿತವನ್ನು ರಜಪೂತ ಸೋನಿಗರ ವಂಶದ ಜಾಲೋರ್ ರಾಜ್ಯದ ರಾಜನಾದ ಮಾಲದೇವನಿಗೆ ವಹಿಸಿಕೊಟ್ಟ. ಮುಂದೆ ಕೆಲವು ವರ್ಷಗಳಲ್ಲಿ ರತನ್‌ಸಿಂಹನ ವಂಶದವನೇ ಆದ, ರಾಹಪನ ಸೆಸೋದಿಯಾ ಮನೆತನದ ರಾಣಾ ಹಮೀರ್ ಹಾಗೂ ಆತನ ಪುತ್ರ ಕ್ಷೇತ್ರಸಿಂಹ ಇವರು ಚಿತ್ತೋಡವನ್ನು ಪುನಃ ಗೆದ್ದು ಕೊಂಡರು. ಈ ತಂದೆ ಮಕ್ಕಳ ರಾಜ್ಯ ಮೇವಾಡಕ್ಕೆ ಮತ್ತೆ ಸುಕಾಲವನ್ನು ತಂದಿತು. ಸಂಪತ್‌ಸಮೃದ್ಧಿಯಿಂದ ಜನ ಸಂತೋಷಭರಿತರಾದರು. ಪುನರುಜ್ಜೀವನ ಹೊಂದಿದ ಮೇವಾಡದ ವೈಭವ ಕ್ಷೇತ್ರಸಿಂಹನ ತರುವಾಯ ರಾಜ್ಯವಾಳಿದ ಲಾಖ ಮತ್ತು ಮೋಕಲ್ ಇವರ ಸಮಯದಲ್ಲಿ ಸ್ಥಿರವಾಯಿತು. ಮುಂದೆ ಮಹಾರಾಣಾ ಕುಂಭನ ಕಾಲಕ್ಕೆ ಅದು ಇನ್ನಷ್ಟು ವರ್ಧಮಾನವಾಯಿತು. ಆತ ಮುಸಲ್ಮಾನರ ಹಸ್ತಗತವಾಗಿದ್ದ ಅನೇಕ ರಜಪೂತ ರಾಜ್ಯಗಳನ್ನು ಮತ್ತೆ ಗೆದ್ದುಕೊಂಡ. ಹೀಗೆ ಆತನ ಆಡಳಿತಕ್ಕೊಳಪಟ್ಟ ರಾಜ್ಯಗಳೆಂದರೆ; ಬುಂದೇಲ್‌ಖಂಡ, ಮಾಂಡಲಗಡ, ಶಾಗರೋನ್, ಸಾರಂಗಪುರ, ಚಾಟುಸ್, ರಣಥಂಭೊರ್, ಖಾಟೂ, ಅಜಮೇರ್ ಮತ್ತು ನಾಗೋರ್, ಹಿರಿಮೆಗರಿಮೆಗಳ ಕುರುಹಾಗಿ ಆತನ ವಿಜಯ ಸ್ತಂಭ ಚಿತ್ತೋಡದಲ್ಲಿ ಇಂದಿಗೂ ನಿಂತಿದೆ. ಕುಂಭಸಿಂಹ ಶೂರನೂ ಧೀರನೂ ರಸಿಕನೂ ಕಲಾಪ್ರಿಯನೂ ಆಗಿದ್ದ. ಈತನ ಮೊಮ್ಮಗನೇ ರಾಣಾ ಸಾಂಗ.

ರಾಣಾ ಸಾಂಗನ ಮೂಲ ಹೆಸರು ರಾಣಾ ಸಂಗ್ರಾಮಸಿಂಹ. ಇವನು ಗುಜರಾತ್ ಹಾಗೂ ಮಾಲವದ ಸುಲ್ತಾನರನ್ನು ಸೋಲಿಸಿದ. ದಿಲ್ಲಿಯ ಸುಲ್ತಾನ ಇಬ್ರಾಹಿಂ ಲೋದಿಯನ್ನು ಹತ್ತಿಕ್ಕಿದ. ಇವನ ಕಾಲದಲ್ಲಿ ಮೊಗಲರ ಮೂಲಪುರುಷನಾದ ಬಾಬರ್ ಭಾರತದ ಮೇಲೆ ದಂಡೆತ್ತಿಬಂದ. ಬಾಬರ್ ಹಾಗೂ ರಾಣಾ ಸಾಂಗಾ ಇವರ ಮಧ್ಯೆ ಖಾನುವ ಎಂಬ ಸ್ಥಳದಲ್ಲಿ ಯುದ್ಧ ಜರುಗಿತು. ಇದರಲ್ಲಿ ರಾಣಾ ಸೋತ. ಈ ಸೋಲಿನಿಂದ ರಜಪೂತ ರಾಜ್ಯದ ಮೇಲೆ ಅಳಿಸಲಾಗದ ಪರಿಣಾಮವುಂಟಾಯಿತು. 1568ರಲ್ಲಿ ಅಕ್ಬರನ ಕಾಲಕ್ಕೆ ಮೊಗಲರು ಮೇವಾಡವನ್ನು ಪೂರ್ತಿ ಗೆದ್ದುಕೊಂಡರು. ಈ ಸಮಯದಲ್ಲಿ ರಾಜನಾಗಿದ್ದ ರಾಣಾ ಪ್ರತಾಪ ಚಿತ್ತೋಡ ಹಾಗೂ ಉದಯಪುರ

ಗಳನ್ನು ಬಿಟ್ಟು ಭಿಲ್ಲರ ಸೈನ್ಯವನ್ನು ಕಟ್ಟಿಕೊಂಡು ಕಾಡು ಮೇಡುಗಳಲ್ಲಿ ಅಲೆಯುವ ಪ್ರಸಂಗ ಬಂದರೂ ಮೊಗಲರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲಿಲ್ಲ : ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಿಲ್ಲ. ಈತ ಪ್ರಾರಂಭದಲ್ಲಿ ಕಷ್ಟಪಟ್ಟರೂ ಕಳೆದುಕೊಂಡ ರಾಜ್ಯದ ಎಷ್ಟೋ ಭಾಗವನ್ನು ಪುನಃ ಗೆದ್ದುಕೊಂಡ. ರಾಣಾ ಪ್ರತಾಪನ ಜೀವನಚರಿತ್ರೆ ರೋಮಾಂಚಕಾರಿಯಾಗಿದೆ. ಆತ ಸ್ವಾತಂತ್ರ್ಯಕ್ಕಾಗಿ ಕೊನೆಯವರೆಗೂ ಹೋರಾಡಿದ. ಅದಕ್ಕಾಗಿ ಹುಲ್ಲಿನ ಮೇಲೆ ಮಲಗುವ ಶಪಥ ಮಾಡಿದ್ದ. ಆತನ ತರುವಾಯ, ಮೊಗಲರ ಜಹಾಂಗೀರನ ಕಾಲದ ವೇಳೆಗೆ, ಆ ಮನೆತನ ಮೊಗಲರಿಗೆ ಸಂಪೂರ್ಣ ಶರಣಾಗತವಾಯಿತು. ಮುಂದೆ ಎಂದೂ ಅದು ಹಿಂದಿನ ವೈಭವದಿಂದ ಮೆರೆಯಲಿಲ್ಲ.

ಸು. 5–6 ಶತಮಾನದಿಂದ ರಾಜ್ಯಭಾರವನ್ನು ನಿರ್ವಹಿಸಿದ ಗುಹಿಲ ಪುತ್ರರು ರಜಪೂತರ 36 ಮನೆತನಗಳಲ್ಲಿ ಬಹು ಶ್ರೇಷ್ಠಮನೆತನದವರೆಂದು ಪರಿಗಣಿತರಾಗಿದ್ದಾರೆ. ರಾಜಸ್ತಾನದ ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಚಿತ್ರಕಲೆ ಎಲ್ಲವು ವೈಶಿಷ್ಟ್ಯಪೂರ್ಣವಾಗಿ ಬೆಳೆಯಲು ಇವರು ಬಹಳಮಟ್ಟಿಗೆ ಕಾರಣ. ಭಕ್ತೆ ಮೀರಾಬಾಯಿ ಈ ಮನೆತನದವಳು. ಶಿವಾಜಿಯೂ ಈ ವಂಶದವನೆಂದೇ ಹೇಳುವುದಿದೆ. ಆದರೆ ಅದು ನಿರ್ಧರಿಸಲಾಗದಿರುವ ವಿಷಯ. ಇವರ ಮನೆತನದವರು ಅಲ್ಲಲ್ಲಿ ಚಿಕ್ಕ ಸಂಸ್ಥಾನಾಧೀಶರಾಗಿ ಉಳಿದಿದ್ದರು. ಇವರ ಪ್ರದೇಶಗಳು 1947ರ ಅನಂತರ ಸ್ವತಂತ್ರಭಾರತದಲ್ಲಿ ವಿಲೀನವಾದುವು.

(ಎಸ್.ಎಸ್.ಎ.ಜೆ.)

**ಗುಹೆ :** ಭೂಮಿಯ ಮೇಲ್ಪದರದ ಶಿಲೆಯಲ್ಲಿನ ಪೊಳ್ಳುಭಾಗ (ಕೇವ್). ಗುಹೆಗಳ ವೈಶಾಲ್ಯ ಮತ್ತು ದ್ವಾರದ ಅಗಲ ಎತ್ತರಗಳಲ್ಲಿ ಬಹಳ ವ್ಯತ್ಯಾಸ ಉಂಟು. ತೆವಳಿ ಹೋಗುವಷ್ಟು ಕಿರಿದಾದ ದ್ವಾರ ಉಳ್ಳವು ಕೆಲವಾದರೆ ಮತ್ತೆ ಕೆಲವು ಎತ್ತರವಾದ ಆಳು ಸರಾಗವಾಗಿ ನಡೆದು ಹೋಗುವಷ್ಟು ದೊಡ್ಡದಾಗಿರುತ್ತವೆ. ಗುಹೆಗಳನ್ನು ಮಾನವನಿರ್ಮಿತ ಮತ್ತು ಪ್ರಕೃತಿನಿರ್ಮಿತ ಎಂಬುದಾಗಿ ವರ್ಗೀಕರಿಸಬಹುದು. ಪ್ರಕೃತಿಯಲ್ಲಿ ಭೌತ ಮತ್ತು ರಾಸಾಯನಿಕ ಶಿಥಿಲೀಕರಣದಿಂದಲೂ ಜ್ವಾಲಾಮುಖಿಗಳ ಕ್ರಿಯಾವಿಧಿಗಳಿಂದಲೂ ಗುಹೆಗಳು ರೂಪುಗೊಳ್ಳುತ್ತವೆ.

ಸಮುದ್ರ ತೀರದ ಕಡಿದಾದ ಭಾಗಗಳಲ್ಲಿ ಅನೇಕ ಗುಹೆಗಳಿರುತ್ತವೆ. ಇವು ಸಮುದ್ರಮಟ್ಟಕ್ಕಿಂತ ಕೇವಲ ಕೆಲವೇ ಅಡಿಗಳಷ್ಟು ಎತ್ತರದಲ್ಲಿರುವುವು. ಈ ಗುಹೆಗಳ ನೆಲ ಮಟ್ಟವಾಗಿದ್ದು ಮರಳು ಅಥವಾ ನೊರಜುಗಲ್ಲುಗಳ ಹೊದಿಕೆಯಿಂದ ಕೂಡಿರುವುದು. ಇವನ್ನು ಹಲವು ಕಡೆಗಳಿಂದ ಪ್ರವೇಶಿಸಬಹುದು. ಸಮುದ್ರದ ಅಲೆಗಳು ತೀರಕ್ಕೆ ಅಪ್ಪಳಿಸುವಾಗ ಅವುಗಳಲ್ಲಿರುವ ನೊರಜುಗಲ್ಲುಗಳು ತೀರವನ್ನು ಉಜ್ಜುತ್ತವೆ. ಇದರಿಂದ ತೀರದಾದ್ಯಂತ ಪೊಟರೆಗಳಾಗುತ್ತವೆ. ಕೆಲವು ಕಡೆಗಳಲ್ಲಿ ಮೃದು ಶಿಲೆಗಳಿದ್ದರೆ, ಸ್ತರಭಂಗವಾಗಿದ್ದರೆ ಇಲ್ಲವೇ ಚಿಲುಮೆಗಳಿದ್ದರೆ ಪೊಟರೆಗಳು ವಿಸ್ತರಿಸಿ ಗುಹೆಗಳಾಗುತ್ತವೆ. ಇಟಲಿಯಲ್ಲಿರುವ ನೇಪಲ್ಸ್‌ಕೊಲ್ಲಿಯ ಬ್ಲೂಗ್ರೊಟೊ ಗುಹೆ ಈ ಬಗೆಯ ಗುಹೆಗಳಿಗೆ ಉತ್ತಮ ಉದಾಹರಣೆ. ಇದರ ಉದ್ದ 175' ಅಗಲ 90' ಮತ್ತು ಎತ್ತರ 50' ಪ್ರವೇಶದ್ವಾರ ಸಮುದ್ರಮಟ್ಟಕ್ಕಿಂತ ಕೇವಲ 3' ಮಾತ್ರ ಎತ್ತರವಿರುವುದರಿಂದ ವೀಕ್ಷಕರು ದೋಣಿಗಳಲ್ಲಿ ಅಲ್ಲಿಗೆ ಹೋಗುತ್ತಾರೆ. ಈ ಮಾದರಿ ಗುಹೆಗಳನ್ನು ಪ್ರಪಂಚದ ನಾನಾ ಭಾಗಗಳಲ್ಲಿ ತೀರಪ್ರದೇಶಗಳಲ್ಲಿ ಕಾಣಬಹುದು.

ಪದರ ಶಿಲೆಗಳಲ್ಲಿ ಗಡಸು ಮತ್ತು ಮೃದು ಶಿಲೆಗಳು ಪರ್ಯಾಯವಾಗಿದ್ದರೆ, ಮಾರುತ ಶಿಥಿಲೀಕರಣದಿಂದ ಮೃದುಶಿಲೆಗಳು ಬೇಗ ಸವೆದು ಗುಹೆಗಳಾಗುವುದುಂಟು. ಇಂಥ ಪ್ರದೇಶಗಳಲ್ಲಿ ನದಿ ಇದ್ದರೆ, ಅದರ ನೀರು ಚಾಚುಭಾಗಗಳಿಂದ ದುಮುಕುತ್ತದೆ. ಬಳಿಕ ಅದು ಹಿಮ್ಮೊಗವಾಗಿ ಹೊರಳಿ ಶಿಲೆಗಳಿಗೆ ಅಪ್ಪಳಿಸುತ್ತದೆ. ಇದರಿಂದ ಕೆಳಭಾಗ ಹೆಚ್ಚು ಸವೆದು ಗುಹೆ ನಿರ್ಮಿತವಾಗುವುದು. ಘಟಪ್ರಭಾನದಿ ಬೆಳಗಾಂವಿ ಜಿಲ್ಲೆಯ ಗೋಕಾಕ್ ಎಂಬಲ್ಲಿ 180' ಎತ್ತರದಿಂದ ದುಮುಕುತ್ತದೆ. ಬೆಣಚುಶಿಲೆ ಇಲ್ಲಿ ಚಾಚುಭಾಗವಾಗಿದೆ. ಇದರ ತಳದಲ್ಲಿ ಹಿಮ್ಮೊಗ ಶಿಥಿಲೀಕರಣವಾಗಿ ಜಲಪಾತದ ಹಿಂದೆ ಸರಾಗವಾಗಿ ಓಡಾಡಬಹುದಾದ ಗುಹೆ ನಿರ್ಮಿತವಾಗಿದೆ. ಉತ್ತರ ಅಮೆರಿಕದ ನಯಾಗರ ಜಲಪಾತ ಲಾಳದ ಆಕಾರದಲ್ಲಿದೆ. ನೀರಿನ ಹಿಂದೆ ಇರುವ ಗುಹೆಗಳಲ್ಲಿ ಕುಳಿತು ಜಲಪಾತದ ರಮ್ಯ ದೃಶ್ಯವನ್ನು ನೋಡಲು ಅನುಕೂಲ ಮಾಡಿರುತ್ತಾರೆ. ಇವೆಲ್ಲ ಭೌತ ಶಿಥಿಲೀಕರಣದಿಂದಾದ ಗುಹೆಗಳು.

ಪ್ರಪಂಚದ ಬಹುಪಾಲು ಗುಹೆಗಳು ಸುಣ್ಣಶಿಲಾಪ್ರದೇಶಗಳಲ್ಲಿವೆ. ಇಂಗಾಲದ ಡೈ ಆಕ್ಸೈಡ್ ವಿಲೀನವಾಗಿರುವ ನೀರು ಸುಣ್ಣಶಿಲೆಗಳಲ್ಲಿರುವ ಸೀಳುಗಳ ಮೂಲಕ ಒಳಗಿಳಿಯುತ್ತದೆ. ಈ ಅಂತರ್ಜಲ ಸುಣ್ಣಶಿಲೆಗಳನ್ನು ಸುಣ್ಣದ ಬೈಕಾರ್ಬೊನೇಟಾಗಿ ಪರಿವರ್ತಿಸುತ್ತದೆ. ಇದು ನೀರಿನಲ್ಲಿ ಸುಲಭವಾಗಿ ವಿಲೀನವಾಗುವುದರಿಂದ ಪೊಟರೆಗಳಾಗುತ್ತವೆ. ಸುಣ್ಣಶಿಲಾಪ್ರದೇಶಗಳಲ್ಲಿ ನದಿಗಳು ಬಹಳ ವಿರಳ. ಇಲ್ಲಿ ಕಾಣಬರುವ ನೀರಿಲ್ಲದ ಕಣಿವೆಗಳು, ಕಂದರಗಳು ಮತ್ತು ಜಲಪಾತಗಳನ್ನು ಪ್ರತಿನಿಧಿಸುವ ಕಣಿವೆ ಭಾಗಗಳು ಇಲ್ಲಿ ಮೊದಲು ನದಿಗಳಿದ್ದುದನ್ನು ಸೂಚಿಸುತ್ತವೆ. ಇದಕ್ಕೆ ಇಂಗ್ಲೆಂಡಿನಲ್ಲಿರುವ ಚಕ್ಕರ್ ಕಣಿವೆ ಒಂದು ಉದಾಹರಣೆ. ನೀರೆಲ್ಲ ಸುಣ್ಣಶಿಲೆಗಳ ಬಿರುಕುಗಳ ಮೂಲಕ ಕೆಳಗಿಳಿದಿರುತ್ತದೆ. ಈ ಪ್ರದೇಶದ ನದಿಗಳೆಲ್ಲ ಅಂತರಾಳದಲ್ಲಿ ಗುಪ್ತಗಾಮಿಗಳಾಗಿ ಹರಿಯುತ್ತವೆ. ರಷ್ಯದ ಅನೇಕ ನದಿಗಳು ಇದಕ್ಕೆ ಉದಾಹರಣೆಗಳು. ನೆರೆ ಪ್ರದೇಶಗಳಿಂದ ಹರಿದುಬರುವ ನದಿಗಳು ಸುಣ್ಣಶಿಲಾಪ್ರದೇಶವನ್ನು ತಲಪಿದ ಬಳಿಕ ರಂಧ್ರಗಳ ಮೂಲಕ ಒಳಹೋಗುವುದನ್ನು ಕಾಣಬಹುದು. ಇವುಗಳಿಗೆ ಮುಳುಗುರಂಧ್ರಗಳೆಂದು ಹೆಸರು. ಈ ರಂಧ್ರಗಳ ಒಳಭಾಗದಲ್ಲಿ ದೊಡ್ಡ ಗುಹೆಗಳಿರುವುವು. ಅವುಗಳ ತಳದಲ್ಲಿ ನದಿಗಳು ಹರಿದು, ಸುಣ್ಣಶಿಲಾಪ್ರದೇಶವನ್ನು ಬಿಟ್ಟ ತರುವಾಯ ಹೊರಬರುತ್ತವೆ. ಇಂಗ್ಲೆಂಡಿನ ಇಂಗಲ್‌ಬರೊ ಪ್ರದೇಶದಲ್ಲಿರುವ ಗೇಪಿಂಗ್ ಘಿಲ್ ಎಂಬ ದೊಡ್ಡ ಗುಹೆ 365' ಆಳದಲ್ಲಿದೆ. ಇಲ್ಲಿ ಮುಳುಗುರಂಧ್ರದ ಮೂಲಕ ನೀರು 365' ಕೆಳಗೆ ದುಮುಕುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೆಂಟುಕಿ ಪ್ರದೇಶದಲ್ಲಿ 60,000 ಮುಳುಗುರಂಧ್ರಗಳಿವೆ ಹಾಗೂ ನೂರಾರು ಗುಹೆಗಳಿವೆ. ಇವುಗಳಲ್ಲಿ ದಿ ಗ್ರೇಟ್ ಮ್ಯಾಮತ್ ಕೇವ್ ಎಂಬುದು 48 ಕಿಮೀ ಉದ್ದವಿದೆ. ನ್ಯೂ ಮೆಕ್ಸಿಕೊ ಪ್ರಾಂತದ ಕಾರಲ್ಸ್‌ಬಾಡ್ ಗುಹೆಯಲ್ಲಿ 4,000' ಉದ್ದ, 600' ಅಗಲ ಮತ್ತು 300' ಎತ್ತರದ ವಿಶಾಲ ಅಂಗಣ ಉಂಟು. ಇವೆಲ್ಲ ರಾಸಾಯನಿಕ ಶಿಥಿಲೀಕರಣದಿಂದಾದವು. ಈ ಬಗೆಯ ಗುಹೆಗಳ ನೆಲ ಮಟ್ಟಸವಾಗಿರುವುದಿಲ್ಲ. ಇವುಗಳ ಮಾಳಿಗೆಗಳು ಸದಾ ತೇವವಾಗಿರುತ್ತವೆ. ಸಣ್ಣ ಬಿರುಕುಗಳ ಮೂಲಕ ಅಂತರ್ಜಲ ತೊಟ್ಟು ತೊಟ್ಟಾಗಿ ಹೊರಬೀಳುವುದು. ಇವು ಚಿಕ್ಕವಾಗಿದ್ದರೆ ಮಾಳಿಗೆಗಳಲ್ಲಿಯೇ ನೇತಾಡುತ್ತಿರುವುವು. ಕೊನೆಗೆ ಆವಿಯಾಗಿ ವಿಲೀನವಸ್ತು ತೆಳುಪೊರೆಯಾಗಿ ಮಾಳಿಗೆಗೆ ಅಂಟಿಕೊಂಡು

ಫಿಂಗಲ್ಸ್ ಗುಹೆ. ಸ್ಕಾಟ್ಲೆಂಡಿನ ಪಶ್ಚಿಮ ಕರಾವಳಿಗೆ ಸಮೀಪದ ಸ್ಟ್ಯಾಫ ದ್ವೀಪದಲ್ಲಿದೆ. ಉದ್ದ ಸು. 227'. ಸಮುದ್ರ ಗುಹೆಗಳಿಗೆ ಇದೊಂದು ಉತ್ತಮ ನಿದರ್ಶನ

ಉಳಿಯುತ್ತದೆ. ಈ ಕ್ರಿಯೆ ಸಾಕಷ್ಟು ಕಾಲ ನಡೆದು ಮಾಳಿಗೆಗಳಿಂದ ಕೆಳಮುಖವಾಗಿ ಸ್ತಂಭಾಕೃತಿಯ ರಚನೆಗಳು ಬೆಳೆಯುವುವು. ಇವಕ್ಕೆ ತೂಗು ತೊಂಗಲುಗಳು (ಸ್ಟಾಲಕ್ಟೈಟ್ಸ್) ಎಂದು ಹೆಸರು. ಇವು ನೆಲಮುಟ್ಟುವವರೆಗೂ ಬೆಳೆಯುವುದುಂಟು. ಮಾಳಿಗೆಯಲ್ಲಿ ಹೊರಬೀಳುವ ನೀರಿನ ತೊಟ್ಟುಗಳ ಗಾತ್ರ ದೊಡ್ಡದಾಗಿದ್ದರೆ, ಅವು ಕೆಳಕ್ಕೆ ಬಿದ್ದು, ಆವಿಯಾಗಿ, ನೆಲದ ಮೇಲೆ ತೆಳು ಖನಿಜದ ಪೊರೆ ಉಳಿಯುವುದು. ಈ ಕ್ರಿಯೆಯಿಂದ ಮೇಲ್ಮೊಗವಾಗಿ ಬೆಳೆಯುವ ಸ್ತಂಭಾಕೃತಿ ರಚನೆಗಳಾಗುವುವು. ಇವುಗಳಿಗೆ ನೆಲ ತೊಂಗಲುಗಳು (ಸ್ಟಾಲಗ್ಮೈಟ್ಸ್) ಎಂದು ಹೆಸರು.

ಸುಣ್ಣಶಿಲಾಪ್ರದೇಶದಲ್ಲಿ ಅಂತರ್ಜಲದ ರಾಸಾಯನಿಕ ಶಿಥಿಲೀಕರಣ ಮುಂದುವರಿದು ಆ ಪ್ರದೇಶದ ಪ್ರಸ್ಥಭೂಮಿಯೆಲ್ಲ ಮಾಯವಾಗಿ ಬೆಟ್ಟಗಳಾಗುತ್ತವೆ. ಇವುಗಳ ಕೆಲವು ಭಾಗಗಳಲ್ಲಿ ಜೇನುಗೂಡಿನ ಹಾಗೆ ಅನೇಕ ಚಿಕ್ಕ ಗವಿಗಳನ್ನು ಕಾಣಬಹುದು. ಈ ಪ್ರರೂಪದ ಬೆಟ್ಟಗಳನ್ನು ದಕ್ಷಿಣ ಅಮೆರಿಕದ ಪೋರ್ಟೊರಿಕೊದಲ್ಲಿ ಪಿಪಿನೊ ಬೆಟ್ಟಗಳೆಂದು ಕರೆಯುವರು. ಇವನ್ನು ಕ್ಯೂಬ ಮತ್ತು ಜಮೈಕಗಳಲ್ಲೂ ಕಾಣಬಹುದು. ಚೀನದ ಯೂನಾನ್ ಪ್ರದೇಶದಲ್ಲಿರುವ ಬೆಟ್ಟಗಳು ಕಂಬಗಳಂತೆ ಕಾಣುವುದರಿಂದ ಅವನ್ನು ಶಿಲಾಕಾಡುಗಳೆಂದು ವರ್ಣಿಸಲಾಗಿದೆ. ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಬೇತಂಚರ್ಲದ ಹತ್ತಿರ ಸುಣ್ಣಶಿಲೆಗಳಲ್ಲಿ ಹಲವು ಗುಹೆಗಳಿವೆ. ಇವನ್ನು ಬ್ರೂಸ್‌ಫುಟ್ ಮತ್ತು ಆತನ ಮಗ ಅನ್ವೇಷಿಸಿದ್ದಾರೆ. ಇಲ್ಲಿನ ಸುಣ್ಣಮಿಶ್ರ ಕೆಂಪು ಜೇಡು ಶಿಲೆಯಲ್ಲಿ ಪ್ಲೀಸ್ಟೊಸೀನ್ ಯುಗದ ಸಸ್ತನಿಗಳು, ಸರೀಸೃಪಗಳು ಮತ್ತು ದ್ವಿಚರ ಪ್ರಾಣಿಗಳ ಅವಶೇಷಗಳನ್ನು ಕಾಣಲಾಗಿದೆ. ಅವೆಲ್ಲ ಹಾಲಿ ಜೀವಂತ ಪ್ರಾಣಿ ಜಾತಿಗಳಿಗೆ ಸೇರಿದವು. ಭಾರತದಲ್ಲಿ ಗತವಂಶಿಗಳಾದ ಕೆಲವು ಜಾತಿಗಳೂ ಇವೆ: ಕುದುರೆ ಅಸಿನಸ್, ಕತ್ತೆಕಿರುಬ ಕ್ರೊಕುಟ ಮತ್ತು ಮ್ಯಾನಿಸ್ ಜೈಗ್ಯಾಂಟ. ಆದರೆ ಇವು ಆಫ್ರಿಕದಲ್ಲಿ ಇನ್ನೂ ಜೀವಂತವಾಗಿ ಉಳಿದಿವೆ.

ಜ್ವಾಲಾಮುಖಿಗಳಿಂದ ಹೊರಬಂದ ಶಿಲಾರಸದಿಂದ ನಿರ್ಮಿತವಾದ ಗುಹೆಗಳೂ ಉಂಟು. ಇವು ಹವಾಯ್ ದ್ವೀಪದಲ್ಲಿದೆ. ಶಿಲಾರಸ ಹೊರಹರಿದು ಪದರಗಳಾಗುವುದು ಸರಿಯಷ್ಟೆ. ಪದರದ ತಳ, ಪಕ್ಕಗಳು ಮತ್ತು ಮೇಲ್ಭಾಗಗಳು ಬೇಗ ಆರಿ ಘನೀಭವಿಸುತ್ತವೆ. ಆದರೆ ಒಳಭಾಗದ ಶಿಲಾರಸ ದ್ರವರೂಪದಲ್ಲೇ ಇದ್ದು, ಹರಿದು ಹೋಗಿ ಸುರಂಗ ಪ್ರರೂಪದ ಗುಹೆಗಳಾಗುತ್ತವೆ.

ಕೊನೆಯದಾಗಿ ಮಾನವನಿರ್ಮಿತ ಗುಹೆಗಳೂ ಇವೆ. ಭಾರತದ ಎಲ್ಲೋರ, ಅಜಂತ, ಭಾಜ, ಬೇಡ್ಸ, ಕಾರ್ಲ ಮೊದಲಾದ ಕಡೆ ಪ್ರಸಕ್ತಶಕಪೂರ್ವದಲ್ಲಿ ನಿರ್ಮಿತವಾದ ಅನೇಕ ಏಕಶಿಲಾ ಗುಹಾಂತರ್ದೇವಾಲಯಗಳಿವೆ.

ಗುಹೆಗಳು ಆದಿಮಾನವನಿಗೆ ವಸತಿಗಳಾಗಿದ್ದುವೆಂಬುದು ಈಗ ತಿಳಿದಿರುವ ವಿಚಾರ. ಅನೇಕ ಗುಹೆಗಳಲ್ಲಿ ಮಾನವನ ಅಸ್ಥಿ ಮತ್ತು ಅವನ ಶಿಲೋಪಕರಣಗಳು. ಅವನು ಸಾಕಿದ ಮತ್ತು ಬೇಟೆಯಾಡಿದ ಪ್ರಾಣಿಗಳ ಅಸ್ಥಿಗಳೊಡನೆ ದೊರೆತಿವೆ. ಕರಡಿ, ಸಿಂಹ,



ಕಾರ್ಲ್ಸ್‌ಬ್ಯಾಡ್ ಗುಹೆ, ನ್ಯೂ ಮೆಕ್ಸಿಕೊ

ಕುಡುಗೋಲಾಕಾರದ ಹಲ್ಲುಳ್ಳ ಹುಲಿ, ಕತ್ತೆಕಿರುಬ, ಬೃಹದ್ಗಜ ಮುಂತಾದ ಪ್ರಾಣಿಗಳನ್ನು ಮಾನವ ಬೇಟೆಯಾಡಿದ್ದಾನೆ. ಇವುಗಳ ಅಸ್ಥಿಗಳು ದೊರೆತಿವೆ. ಅಲ್ಲದೆ ಇವುಗಳ ಚಿತ್ರ. ವರ್ಣಚಿತ್ರ ಮತ್ತು ಕೆತ್ತನೆಗಳನ್ನು ಗುಹೆಗಳ ಗೋಡೆಗಳ ಮೇಲೆ ಕಾಣಲಾಗಿದೆ. ಇವೆಲ್ಲ ಹಳೆ ಶಿಲಾಯುಗ, ನವಶಿಲಾಯುಗ, ಹಿತ್ತಾಳೆ ಮತ್ತು ಕಬ್ಬಿಣದ ಯುಗಗಳಿಗೆ ಸೇರಿದವು. ಸ್ಪೇನ್ ದೇಶದ ಆಲ್ಟಮೀರ ಗುಹೆಗಳಲ್ಲಿ ಡಾನ್ ಮಾರ್ಸಿಲಿನೊ ಡಿ. ಸೌಟೊಲೊ ಎಂಬಾತ ವರದಿ ಮಾಡಿ ಇವು ಹಳೆಶಿಲಾಯುಗದ ಮಾನವನಿರ್ಮಿತ ಗಳೆಂದು ಸಾರಿದ. ಈ ಹೇಳಿಕೆಯನ್ನು ತೀವ್ರವಾಗಿ ಅಲ್ಲಗಳೆಯಲಾಯಿತು. ಆದರೆ ಲೆ ಐಜೀಸಿನಲ್ಲಿ ಲಾ ಮೌತ್ ಗುಹೆಯಲ್ಲಿ ವರ್ಣಚಿತ್ರಗಳಿರುವುದನ್ನು ಎಮಿಲಿ ರಿವೆರಿ ಎಂಬಾತ ವರದಿಮಾಡಿದ (1895). ಅನಂತರ ಲೆ ಕಂಬರೆಲ್ಲೆಸ್ ಮತ್ತು ಪಾಂಟ್ ಡಿ. ಗಾಮೆಗಳಲ್ಲಿಯೂ ಇವಿರುವುದು ವರದಿಯಾಯಿತು. ಭೂವಿಜ್ಞಾನ, ಪ್ರಾಚೀನ ಇತಿಹಾಸ ಮತ್ತು ಮಾನವಶಾಸ್ತ್ರಗಳ ವಿಧಾನಗಳನ್ನು ಅನುಸರಿಸಿ ಸಂಶೋಧನೆ ನಡೆಸಿದುದರ ಫಲವಾಗಿ ಈ ವರ್ಣಚಿತ್ರಗಳು ಆದಿಮಾನವನಿಂದ ರಚಿತವಾದವುಗಳೆಂದು ನಿರ್ವಿವಾದವಾಗಿ ಸ್ಥಾಪನೆಯಾಯಿತು. ಇದರ ಕೀರ್ತಿ ಇ. ಪಿ. ಬ್ರೆಯಿಲ್ ಎಂಬಾತನಿಗೆ ಸಲ್ಲುತ್ತದೆ. ಸಂಶೋಧನೆ ಸತತವಾಗಿ ಮುಂದುವರಿಯಿತು. ಫ್ರಾನ್ಸಿನ ಲಾಸೆಕ್ಸ್ ಗುಹೆಗಳಲ್ಲಿ ವರ್ಣಚಿತ್ರ ಭಂಡಾರವನ್ನೇ ಶೋಧಿಸಿದ್ದು ಇತ್ತೀಚಿನ ಸಂಶೋಧನೆಗಳಲ್ಲಿ ಪ್ರಮುಖವಾದುದು. ಈ ವರ್ಣರಂಜಿತ ಚಿತ್ರಗಳು ಒಂದು ಬುಡಕಟ್ಟಿನ ಜನ ಅಥವಾ ಒಂದು ಕಾಲದ ಜನಗಳ ರಚನೆಯಲ್ಲ. ಇವು ಆರಿಗ್ನೇಸಿಯನ್, ಸಲ್ಯೂಟ್ರಿಯನ್ ಮತ್ತು ಮ್ಯಾಗ್ಡಲೇನಿಯನ್ ಕಾಲದವು. ಹಳೆ ಶಿಲಾಯುಗದ ಆದಿಮಾನವ ರಚಿತ ಚಿತ್ರ ಮತ್ತು ವರ್ಣಚಿತ್ರಗಳು ರಷ್ಯದ ಉಜ್ಬೆಕಿಸ್ತಾನ ಮತ್ತು ಲೇನಾ ಕಣಿವೆ ಪ್ರದೇಶಗಳನ್ನು ಬಿಟ್ಟರೆ ಬೇರೆ ಕಡೆಗಳಲ್ಲಿ ಇದ್ದಂತೆ ಕಾಣುವುದಿಲ್ಲ. ಗುಹೆಗಳು ಸಮರ ನಿರಾಶ್ರಿತರ ಬೀಡುಗಳೂ ಆಗಿದ್ದುದುಂಟು. ಭಾರತದಲ್ಲಿ ಗುಹೆಗಳು ಸನ್ಯಾಸಿಮಠಗಳಾಗಿದ್ದುವು.

ಮಧ್ಯ ಮತ್ತು ದಕ್ಷಿಣ ಯುರೋಪಿನ ಆಲ್ಪ್ಸ್ ಪರ್ವತಗಳಲ್ಲಿ ಪ್ರಸಿದ್ಧ ಗುಹೆಗಳಿವೆ. ಫ್ರಾನ್ಸಿನ ಗ್ರೆನೊಬಲ್ ಹತ್ತಿರದ ಜಿ. ಬರ್ಜರ್ ಗುಹೆ ನಮಗೆ ತಿಳಿದಿರುವ ಗುಹೆಗಳಲ್ಲೆಲ್ಲ ಅತ್ಯಂತ ಆಳವಾದದ್ದು (3680'). ಸ್ವಿಟ್ಜರ್ಲೆಂಡಿನ ಹಾಲೋಜ್ ಗುಹೆ ಅತಿ ಉದ್ದವಾದದ್ದು (ಸು. 51 ಕಿಮೀ). ಇದೇ ಪ್ರದೇಶದಲ್ಲಿರುವ ಎಲಿಜಬೆತ್ ಗುಹೆಯ ಉದ್ದ 1300'. ಅಗಲ 5,000' ಮತ್ತು ಎತ್ತರ 150'. ಹಿಮಾಲಯದಲ್ಲೂ ಗುಹೆಗಳಿವೆ. ಭಾರತದಲ್ಲಿ ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆಯ ಗುಹೆಗಳು ಪ್ರಸಿದ್ಧವಾದವು. ಇವುಗಳಲ್ಲಿ ಕೆಲವು 300' ಉದ್ದ 40' ಎತ್ತರ ಇವೆ.

**ಗುಹಾಶಾಸ್ತ್ರ :** ಗುಹೆಗಳ ವೈಜ್ಞಾನಿಕ ಅಧ್ಯಯನ ಈ ಶಾಸ್ತ್ರದ ವಸ್ತು (ಸ್ಪೀಲಿಯಾಲಜಿ). ಗುಹೆಗಳನ್ನು ಅಳೆಯುವ ವಿಧಾನ, ಅವುಗಳಲ್ಲಿ ವಾಸಿಸುವ ಸಸ್ಯ ಮತ್ತು ಪ್ರಾಣಿವರ್ಗಗಳ ಪರಿಶೋಧನೆ, ನೀರಿನ ಗುಣ, ವಾತಾವರಣದ ವರ್ತನೆ ಮುಂತಾದವನ್ನು ಇದರಲ್ಲಿ ಅಭ್ಯಸಿಸಲಾಗುವುದು. ಗುಹೆಗಳಲ್ಲಿನ ವಾತಾವರಣ ವಿಶಿಷ್ಟವಾದದ್ದು, ಅಲ್ಲಿಗೆ ಸೂರ್ಯನ ರಶ್ಮಿ ತಲಪುವುದಿಲ್ಲವಾದ್ದರಿಂದ ಅಲ್ಲಿ ಸದಾ ಕತ್ತಲೆ. ಗವಿಗಳ ಮಾಳಿಗೆಗಳು ಸಾಧಾರಣವಾಗಿ ಸದಾ ತೇವಭರಿತವಾಗಿರುತ್ತವೆ ಮತ್ತು ಅಲ್ಲಿ ನೀರು ತೊಟ್ಟಿಕ್ಕುತ್ತಿರುತ್ತದೆ. ಆದ್ದರಿಂದ ಅಲ್ಲಿನ ವಾಯು ಹೆಚ್ಚು ತೇವಾಂಶದಿಂದ ಕೂಡಿರುವುದು. ಅಲ್ಲಿ ಹಸಿರುಗಿಡಗಳು ಬೆಳೆಯಲಾರವು. ಅಣಬೆ ಜಾತಿಯ ಸಸ್ಯಗಳಿರುವುದುಂಟು.



ಕ್ಯಾನರಿ ದ್ವೀಪದ ಗುಹೆಗಳು

ಗುಹೆಗಳಲ್ಲಿಯೆ ಕಾಯಂ ವಾಸಿಸುವ ಪ್ರಾಣಿಗಳು, ಗುಹೆಗಳ ಒಳಗೆ ಮತ್ತು ಹೊರಗೆ ಎರಡು ಕಡೆಗಳಲ್ಲಿಯೂ ವಾಸಮಾಡುವಂಥವು ಮತ್ತು ಅಕಸ್ಮಾತ್ ಗುಹೆ ಪ್ರವೇಶಮಾಡಿದಂಥವು ಅಥವಾ ಅತ್ಯಲ್ಪ ಕಾಲ ಗುಹೆಗಳಲ್ಲಿ ಕಾಲ ಕಳೆಯುವ ಪ್ರಾಣಿಗಳು ಎಂದು ಗುಹಾಪ್ರಾಣಿಗಳನ್ನು ವರ್ಗೀಕರಿಸಬಹುದು. ಗುಹೆಗಳಲ್ಲಿ ಕಾಯಂ ವಾಸಮಾಡುವ ಪ್ರಾಣಿಗಳು ನಿರ್ವರ್ಣ ಹಾಗೂ ಸಂಪೂರ್ಣ ದೃಷ್ಟಿಹೀನವಾಗಿರುತ್ತವೆ. ಸಂಪೂರ್ಣ ದೃಷ್ಟಿಹೀನ ಮತ್ತು ಸಂಪೂರ್ಣ ದೃಷ್ಟಿ ಸಾಮರ್ಥ್ಯವಿರುವವುಗಳ ನಡುವಣ ಅನೇಕ ಮಧ್ಯಾಂತರ ಅವಸ್ಥೆಗಳನ್ನು ಪ್ರತಿನಿಧಿಸುವ ಪ್ರಾಣಿಗಳನ್ನು ಕಾಣಬಹುದು. ಎಲ್ಲರ ಗಮನವನ್ನು ಸೆಳೆಯುವ ಗುಹಾಪ್ರಾಣಿ ಎಂದರೆ ಬಿಳಿಮೀನು. ಇದು ಅಮೆರಿಕ ಸಂಯುಕ್ತ ಸಂಸ್ಥಾನದ ಕೆಂಟುಕಿ ಗುಹೆಗಳಲ್ಲಿ ವಾಸಿಸುತ್ತದೆ. ನ್ಯೂಮೆಕ್ಸಿಕೊ ಗುಹೆಗಳಲ್ಲಿ ವಾಸಿಸುವ ಚಾರಾಸಿನಿಡ್ ಮೀನುಗಳಲ್ಲಿ ದೃಷ್ಟಿಹೀನತೆಯ ವಿವಿಧ ಮಟ್ಟಗಳನ್ನು ಕಾಣಬಹುದು. ಗುಹಾ ವಾಸಿಗಳಲ್ಲಿ ಸಂಧಿಪದಿಗಳು, ಅದರಲ್ಲೂ ಕಠಿಣಚರ್ಮಿಗಳು ಪ್ರಮುಖವಾದವು. ಉತ್ತರ ಅಮೆರಿಕದಲ್ಲಿ ಸ್ಯಾಲಮ್ಯಾಂಡರ್ ಎಂಬ ದ್ವಿಚರಪ್ರಾಣಿ ಮತ್ತು ಇತರ ಪ್ರಾಣಿಗಳು ಗುಹಾವಾಸಿಗಳಾಗಿವೆ. ಬಾವಲಿಗಳು ಮತ್ತು ಗೂಬೆಗಳು ಹಗಲನ್ನು ಗುಹೆಗಳಲ್ಲಿ ಕಳೆಯುತ್ತವೆ. ಟ್ರಿನಿಡಾಡಿನಲ್ಲಿ ತೈಲಪಕ್ಷಿ (ಆಯಿಲ್ ಬರ್ಡ್) ಗುಹೆಗಳಲ್ಲಿ ಗೂಡು ಕಟ್ಟುತ್ತದೆ. ವೆನಿಜೂಲದ ಗುಹೆಗಳಲ್ಲಿ ವಾಸಿಸುವ ಒಂದು ಜಾತಿಯ ಪಕ್ಷಿಯ ರೆಕ್ಕೆಗಳು 1.2 ಮೀ ಉದ್ದ ಇವೆಯಂತೆ. ಅನೇಕ ಪ್ರಾಣಿಗಳಿಗೆ ಗುಹೆಗಳು ಚಳಿಗಾಲದ ಆಶ್ರಯಸ್ಥಾನಗಳು.

ಗುಹೆಯಲ್ಲಿ ವಾಸಿಸುವ ಪ್ರಾಣಿಗಳು ನೀರಿನ ಮೂಲಕ ಹೊರಗಿನಿಂದ ಬರುವ ಆಹಾರವನ್ನು ಅವಲಂಬಿಸಿವೆ. ಆದ್ದರಿಂದ ಇವುಗಳ ಸಂಖ್ಯೆ ಅತ್ಯಲ್ಪ. ಕೆಲವು ವೇಳೆ ಒಂದು ಇನ್ನೊಂದನ್ನು ಕೊಂದು ತಿನ್ನುವುದುಂಟು. ಸಸ್ಯಾಹಾರಿಗಳು ಅಣಬೆ ಮುಂತಾದವನ್ನು ತಿಂದು ಜೀವಿಸುತ್ತವೆ. ಆಹಾರಾಭಾವದಿಂದ ಗುಹಾವಾಸಿಗಳ ದೇಹಗಾತ್ರವೂ ಕಡಿಮೆ. ಒಂದು ಅಡಿ ಉದ್ದವಿರುವ ಓಮ್ ಪ್ರಾಣಿಯೇ ಅತ್ಯಂತ ದೊಡ್ಡದು. ಗುಹಾವಾಸಿಗಳಲ್ಲಿ ದೃಷ್ಟಿಹೀನತೆಯ ಪರಿಹಾರವಾಗಿ ಸ್ಪರ್ಶೇಂದ್ರಿಯಗಳು ವಿಶೇಷ ಬೆಳವಣಿಗೆ ಹೊಂದಿರುವುವು. ಸಂಧಿಪದಿಗಳ ಕುಡಿಮೀಸೆ ಮತ್ತು ಕಾಲುಗಳು ಬಹು ಉದ್ದವಾಗಿರುತ್ತವೆ. ಶರೀರಾದ್ಯಂತ ಸ್ಪರ್ಶ ಗ್ರಾಹಕ ಕೂದಲುಗಳೂ ಇರುವುದುಂಟು. ಋತು ವೈಪರೀತ್ಯವಿಲ್ಲದಿರುವುದರಿಂದ ಈ ಪ್ರಾಣಿಗಳಿಗೆ ಬೇಕಾಲವಿರುವುದಿಲ್ಲ.

ನ್ಯೂಜಿಲೆಂಡಿನಲ್ಲಿ ಮೈಸಿಟೋಫಿಲ್ಲಿಡ್ ನೊಣಗಳ ಮರಿಗಳು ಮಶಕಪ್ರಾಣಿಗಳನ್ನು ಹಿಡಿಯಲು ಗುಹೆಗಳ ಮಾಳಿಗೆಗಳಲ್ಲಿ ಅಂಟುದಾರದ ಬಲೆಯನ್ನು ರಚಿಸುತ್ತವೆ. ಇವು ಮಿನುಗುತ್ತವೆ. ಆಗ ನೀಲಿ ಬೆಳಕಾಗುತ್ತದೆ. ಇದು ರಮ್ಯ ದೃಶ್ಯವಾಗುವುದರಿಂದ ಪ್ರವಾಸಿಗರ ಗಮನ ಸೆಳೆಯುತ್ತದೆ. (ಡಿ.ಆರ್.)

**ಗುಳುಮಾವು** : ಲಾರೇಸೀ ಕುಟುಂಬಕ್ಕೆ ಸೇರಿದ ಒಂದು ನಿತ್ಯಹರಿದ್ವರ್ಣದ ಮರ. ಮ್ಯಾಕಿಲಸ್ ಮ್ಯಾಕ್ರಾಂತ ಅಥವಾ ಪರ್ಸಿಯ ಮ್ಯಾಕ್ರಾಂತ ಇದರ ಶಾಸ್ತ್ರೀಯ ಹೆಸರು. ಚಿಟ್ಟುತಂಡ್ರಿ ಮರ ಇದರ ಪರ್ಯಾಯನಾಮ. ಬಿಹಾರ ರಾಜ್ಯದ ಹಲವಾರು ಪ್ರದೇಶಗಳಲ್ಲೂ ಕರ್ನಾಟಕದ ಉತ್ತರ ಕನ್ನಡ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳ ನಿತ್ಯಹರಿದ್ವರ್ಣದ ಕಾಡುಗಳಲ್ಲೂ ಇದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದು ಸುಮಾರು 27 ಮೀ ಎತ್ತರಕ್ಕೆ ಬೆಳೆಯುವ ದೊಡ್ಡ ಗಾತ್ರದ ಮರ. ಮುಖ್ಯ ಕಾಂಡ ಕವಲೊಡೆಯದೆ ನೇರವಾಗಿ ಸುಮಾರು 7.5 ಮೀ ಉದ್ದಕ್ಕೂ 3 ಮೀ ದಪ್ಪಕ್ಕೂ ಬೆಳೆಯುತ್ತದೆ. ತೊಗಟೆ ತಿಳಿ ಕಂದುಬಣ್ಣದ್ದು. ಬಲು ಒರಟಾಗಿದೆ, ಎಲೆಗಳು ಉದ್ದುದ್ದವಾಗಿ ಭಲ್ಲೆಯಾಕಾರದಲ್ಲಿವೆ. ಹೂಗಳು ಹಳದಿ ಬಣ್ಣದವು; ಪ್ಯಾನಿಕಲ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ.

ಗುಳುಮಾವಿನ ಚೌಬೀನೆ ಸಾಧಾರಣ ದೃಢತೆಯುಳ್ಳದ್ದೂ ಹಗುರವಾದದ್ದೂ ಆಗಿದೆ. ಹೊಳಪಿನಿಂದ ಕೂಡಿ ನುಣುಪಾಗಿರುವುದಲ್ಲದೆ ಸಮರಚನಾ ವಿನ್ಯಾಸವನ್ನು ಪ್ರದರ್ಶಿಸುತ್ತದೆ. ಹೊಸದಾಗಿ ಕಡಿದಾಗ ಕಿತ್ತಳೆಮಿಶ್ರಿತ ಕಂದುಬಣ್ಣದ್ದಾದ ಇದು ಕಾಲಕ್ರಮೇಣ ಕೆಂಪುಮಿಶ್ರಿತ ಕಂದು ಬಣ್ಣಕ್ಕೆ ತಿರುಗುತ್ತದೆ. ಸೀಳದೆ, ಬಿರುಕು ಬಿಡದೆ ಒಣಗುತ್ತದೆ ಮತ್ತು ಬಹು ಕಾಲ ಬಾಳಿಕೆ ಬರುತ್ತದೆ. ಈ ಕಾರಣಗಳಿಂದಾಗಿ ಚೌಬೀನೆಯನ್ನು ಹಲವಾರು ಕಾರ್ಯಗಳಿಗೆ ಬಳಸುತ್ತಾರೆ. ಟೀ ಪೆಟ್ಟಿಗೆ, ಮನೆಕಟ್ಟಲು ಬಳಸುವ ಹಲಗೆ, ಬೆಂಚು ಇತ್ಯಾದಿ ಪೀಠೋಪಕರಣಗಳು, ಚಾವಣಿ ಹಲಗೆ, ಸ್ಲೇಟು ಚೌಕಟ್ಟು ಮುಂತಾದವುಗಳ ತಯಾರಿಕೆಯಲ್ಲಿ ಉಪಯುಕ್ತವೆನಿಸಿದೆ. ದೋಣಿ ಮಾಡಲೂ ಬಳಸುವುದಿದೆ. ಗುಳುಮಾವಿನ ತೊಗಟೆಯನ್ನು ಅಸ್ತಮಾ, ಸಂಧಿವಾತ ರೋಗಗಳಿಗೆ ಔಷಧಿಯನ್ನಾಗಿ ಉಪಯೋಗಿಸುತ್ತಾರೆ. ಎಲೆಗಳನ್ನು ವ್ರಣಗಳಿಗೆ ಹಚ್ಚಲು ಬಳಸುತ್ತಾರೆ. (ಎ.ಕೆ.ಎಸ್.)

**ಗುಳೇದಗುಡ್ಡ** : ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಒಂದು ಪಟ್ಟಣ; ಹೋಬಳಿ ಕೇಂದ್ರ ಉ.ಅ. $16^0$ 3' ಮತ್ತು ಪೂ.ರೇ $75^0$ 47' ಮೇಲೆ ಬಾದಾಮಿಯಿಂದ ಈಶ್ಯಾನಕ್ಕೆ 15 ಕಿಮೀ ದೂರದಲ್ಲಿದೆ; ಗುಳೇದಗುಡ್ಡ ರೋಡ್ ರೈಲು ನಿಲ್ದಾಣಕ್ಕೆ ಈ ಸ್ಥಳದಿಂದ 10 ಕಿಮೀ ದೂರ.

ಗುಳೇದಗುಡ್ಡ ಪಟ್ಟಣ ಹಿಂದೆ ಇಲ್ಲಿರುವ ಬೆಟ್ಟದ ಮೇಲಿತ್ತು. ಈಗಲೂ ಅಲ್ಲಿ ಪಟ್ಟಣದ ಅವಶೇಷಗಳನ್ನು ಕಾಣಬಹುದು. 1580ರಲ್ಲಿ ಬಿಜಾಪುರದ ಎರಡನೆಯ ಇಬ್ರಾಹಿಂ ಆದಿಲ್‌ಶಹ ಇಲ್ಲಿ ಒಂದು ಕೋಟೆ ಕಟ್ಟಿಸಿದ. 1706ರಲ್ಲಿ ಒಂದು ಸುಂದರ ಜಲಾಶಯದ ದಂಡೆಯ ಮೇಲೆ ಈ ಪಟ್ಟಣದ ಸ್ಥಾಪನೆಯಾಯಿತು. 1750ರಲ್ಲಿ ಈ ಪಟ್ಟಣ ಲೂಟಿಗೆ ಒಳಗಾಯಿತು. 1787ರಲ್ಲಿ ಇದು ಟಿಪ್ಪುವಿನ ಅಧೀನಕ್ಕೆ ಬಂತು. ಅನಂತರ ಮರಾಠರು ಇದನ್ನು ಲೂಟಿ ಮಾಡಿದಾಗ ಇಲ್ಲಿಯ ನಿವಾಸಿಗಳನೇಕರು ಇಲ್ಲಿಂದ ಓಡಿಹೋದರು. ದೇಸಾಯಿ ಮನೆತನದ ಪ್ರಭಾವದಿಂದಾಗಿ ಅವರು ಮತ್ತೆ ಇಲ್ಲಿಗೆ ಬಂದು ನೆಲೆಸಿದರು. ಮತ್ತೆ ನರಸಿಂಹನೆಂಬವನು ಈ ನಗರವನ್ನು ಲೂಟಿ ಮಾಡಿದ. ಜನ ಪುನಃ ಓಡಿಹೋದರು. 1818ರಲ್ಲಿ ದೇಸಾಯಿ ಪರಿವಾರದವರ ಒತ್ತಾಯ ಮತ್ತು ಸಹಯೋಗದಿಂದಾಗಿ ಜನರಲ್ ಮನ್ರೋ ಈ ಜನ ಪುನಃ ಇಲ್ಲಿಯೇ ವಾಸ ಮಾಡಲು ಅನುಕೂಲ ಮಾಡಿಕೊಟ್ಟ.

ಬಾದಾಮಿ ತಾಲ್ಲೂಕಿನಲ್ಲಿ ಗುಳೇದಗುಡ್ಡ ಅಭಿವೃದ್ಧಿ ಹೊಂದುತ್ತಿರುವ ಒಂದು ಪಟ್ಟಣ. ಇಲ್ಲಿ ತಯಾರಾಗುವ ಕುಪ್ಪುಸದ ಕಣಗಳು ಭಾರತದಲ್ಲೆಲ್ಲ ಪ್ರಸಿದ್ಧಿ ಪಡೆದಿವೆ. ಇಳಕಲ್ಲ ಸೀರೆ, ಅಮೀನಗಡದ ಕರದಂಟು, ಗುಳೆದಗುಡ್ಡದ ಕಣ–ಇದು ಉತ್ತರ ಕರ್ನಾಟಕದಲ್ಲಿ ಮನೆಮಾತು. ಇಲ್ಲಿ ತಯಾರಾಗುವ ಹತ್ತಿ ಮತ್ತು ರೇಷ್ಮೆ ಬಟ್ಟೆಗಳು ಸೊಲ್ಲಾಪುರ, ಮುಂಬಯಿ, ಪುಣೆ, ಅಹ್ಮದ್‌ನಗರಗಳಿಗೆ ಸಾಗುತ್ತವೆ. ಗುಳೇದಗುಡ್ಡದ ಹತ್ತಿರ ಬೆಲೆಬಾಳುವ ಕಲ್ಲುಗಣಿಗಳುಂಟು. *

**ಗುಳ್ಳೆನರಿ** : ನಾಯಿ ಜಾತಿಗೆ ಸೇರಿದ, ನರಿಯಂತೆ (ಫಾಕ್ಸ್) ಕಾಣುವ ಒಂದು ಮಾಂಸಾಹಾರಿ ಸ್ತನಿ (ಜಾಕಾಲ್). ಕಾರ್ನಿವೊರ ಗಣದ ಕೇನಿಡೀ ಕುಟುಂಬಕ್ಕೆ ಸೇರಿದೆ. ಈ ಜಾತಿಯ ವೈಜ್ಞಾನಿಕ ಹೆಸರು *ಕೇನಿಸ್*. ಇದರಲ್ಲಿ ಅನೇಕ ಪ್ರಭೇದಗಳಿವೆ ; ಮುಖ್ಯವಾದವು ಕೇನಿಸ್ ಆರಿಯಸ್ (ಯುರೋಪ್, ಭಾರತವೂ ಸೇರಿದಂತೆ ಏಷ್ಯದ ಹಲವಾರು ದೇಶಗಳು, ಉತ್ತರ ಆಫ್ರಿಕ, ಈಜಿಪ್ಟ್ ಮುಂತಾದೆಡೆಗಳಲ್ಲಿ ಕಾಣಬರುತ್ತದೆ), ಕೇನಿಸ್ ಮೆಸೋಮೆಲಾಸ್ (ಕಪ್ಪು ಬೆನ್ನಿನ ಗುಳ್ಳೆನರಿ – ದಕ್ಷಿಣ ಆಫ್ರಿಕದಲ್ಲಿರುವಂಥದು), ಕೇನಿಸ್ ಅಡಸ್ಟಸ್ (ದಕ್ಷಿಣ ಆಫ್ರಿಕದ ಮೂಲವಾಸಿ) ಮತ್ತು ಕೇನಿಸ್ ಸೈಮೆನ್ಸಿಸ್ (ಅಬಿಸೀನಿಯದ ಕೆಂಪು ಗುಳ್ಳೆನರಿ ಅಬಿಸೀನಿಯದಲ್ಲಿ ಕಂಡುಬರುವಂಥದು). ಭಾರತದ ವಿವಿಧ ಭಾಗಗಳಲ್ಲಿ *ಕೇ. ಆರಿಯಸ್* ಪ್ರಭೇದದ ಬೇರೆ ಬೇರೆ ಬಗೆಗಳು ಕಂಡುಬರುತ್ತವೆ. ಪಶ್ಚಿಮ ಭಾಗದ ಮರುಭೂಮಿ ಪ್ರದೇಶಗಳಲ್ಲಿ *ಕೆ. ಆರಿಯಸ್* ಬಗೆಯೂ ಅಸ್ಸಾಮ್, ನೇಪಾಳ, ಸಿಕ್ಕಿಮ್‌ಗಳಲ್ಲಿ *ಇಂಡಿಕಸ್* ಬಗೆಯೂ ದಕ್ಷಿಣ ಭಾರತದಲ್ಲಿ *ನೇರಿಯ* ಬಗೆಯೂ ಇವೆ.

ಗುಳ್ಳೆನರಿಗಳ ವಿವಿಧ ಪ್ರಭೇದಗಳ ಗಾತ್ರದಲ್ಲಿ, ಬಣ್ಣದಲ್ಲಿ ಹಲವಾರು ವ್ಯತ್ಯಾಸಗಳಿವೆ. *ಆರಿಯಸ್* ಪ್ರಭೇದದ ಉದ್ದ ಸುಮಾರು 60 ಸೆಂಮೀ ಎತ್ತರ ಸುಮಾರು 35 ಸೆಂಮೀ ದೇಹದ ಬಣ್ಣ ಬೂದುಮಿಶ್ರಿತ ಹಳದಿ. ಇದು ಬೆನ್ನಿನಭಾಗ ಗಾಢವಾಗಿಯೂ ಹೊಟ್ಟೆಯ ಭಾಗ ತಿಳಿಯಾಗಿಯೂ ಇದೆ. *ಮೆಸೋಮೆಲಾಸ್* ಪ್ರಭೇದದ ದೇಹ ಕೆಂಪುಮಿಶ್ರಿತ ತುಕ್ಕು ಬಣ್ಣಕ್ಕಿದೆ. ಬೆನ್ನು ಕರಿಯ ಬಣ್ಣದ್ದು. *ಅಡಸ್ಟಸ್* ಪ್ರಭೇದ ಬೂದುಬಣ್ಣದ್ದು. ಅಲ್ಲದೆ ಇದರ ಎರಡು ಪಕ್ಕಗಳಲ್ಲಿ ಉದ್ದುದ್ದನೆಯ ಪಟ್ಟೆಗಳಿವೆ. *ಸೈಮೆನ್ಸಿಸ್* ಪ್ರಭೇದದ ದೇಹದ ಬಣ್ಣ ಕೆಂಪು. ಉಳಿದ ಪ್ರಭೇದಗಳಿಗೆ ಹೋಲಿಸಿದರೆ ಇದರ ಕಾಲುಗಳು ಹೆಚ್ಚು ಉದ್ದ. ಭಾರತದಲ್ಲಿನ ವಿವಿಧ ಬಗೆಗಳಲ್ಲೂ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಗಮನಿಸಬಹುದು. ಹೀಗೆ ತಮ್ಮ ಕೆಲವು ಲಕ್ಷಣಗಳಲ್ಲಿ ಪರಸ್ಪರ ಭಿನ್ನತೆಗಳನ್ನು ತೋರುವುದಾದರೂ ಎಲ್ಲ ಪ್ರಭೇದಗಳಿಗೂ ಹಲವಾರು ಸಮಾನ ಗುಣಲಕ್ಷಣಗಳಿವೆ. ಮೋಟು ಕಿವಿಗಳು, ಪೊದೆಯಂಥ ಬಾಲ, ಹೆಚ್ಚು ಕಡಿಮೆ ನಾಯಿಯ ಮೂತಿಯನ್ನು ಹೋಲುವಂಥ ಮೂತಿ–ಇವು ಗುಳ್ಳೆನರಿಗಳ ಮುಖ್ಯ ಲಕ್ಷಣಗಳಲ್ಲಿ ಕೆಲವು. ಬಾಲದ ಬುಡದಲ್ಲಿ ಒಂದು ಗ್ರಂಥಿ ಉಂಟು. ಇದರ ಸ್ರಾವದಿಂದಾಗಿ ನರಿಗಳಿಗೆ ಅಸಹ್ಯಕರವಾದ ವಾಸನೆಯಿರುತ್ತದೆ.

ಗುಳ್ಳೆನರಿಗಳು ದಟ್ಟವಾದ ಕಾಡುಗಳಿಗಿಂತ ಹೆಚ್ಚಾಗಿ ಬಯಲು ಪ್ರದೇಶಗಳಲ್ಲಿ ಇಲ್ಲವೆ ಕುರುಚಲು ಕಾಡಿನ ಪ್ರದೇಶಗಳಲ್ಲಿ ವಾಸಿಸುತ್ತವೆ. ಇವು ನಿಶಾಚರಿಗಳು. ಹಾಳು ಬಿದ್ದಿರುವ ಜಾಗಗಳಲ್ಲಿನ ನೆಲಗಳ ಬಿಲಗಳಲ್ಲಿ ಇಲ್ಲವೆ ಪೊದೆಗಳ ನಡುವೆ ಹಗಲಿನಲ್ಲಿ ಅಡಗಿಕೊಂಡಿದ್ದು ಮುಚ್ಚಂಜೆಯಲ್ಲಿ ಆಹಾರವನ್ನು ಅರಸಿಕೊಂಡು ಹೊರಬರುತ್ತವೆ. ಇವು ಬಲುಗೋಪ್ಯ ಸ್ವಭಾವದವಾದ್ದರಿಂದ ಇವುಗಳ ಚಲನವಲನಗಳನ್ನು ಅರಿಯುವುದು ಕಷ್ಟ.

ಗುಳ್ಳೆನರಿಗಳು ಕಾಡಿನ ಝಾಡಮಾಲಿಗಳೆಂದು ಹೆಸರಾಗಿವೆ. ಹುಲಿ, ಚಿರತೆ, ಸಿಂಹ ಮುಂತಾದವುಗಳನ್ನು ಹಿಂಬಾಲಿಸಿ, ಅವು ಕೊಂದು, ತಿಂದು, ಮಿಗಿಸಿದ್ದನ್ನು ತಾವು ತಿಂದು ಬದುಕುತ್ತವೆ. ಎಷ್ಟೋ ಸಲ ಸಿಂಹವೊ ಹುಲಿಯೊ ಎರೆಯೊಂದನ್ನು ಹಿಡಿದು ತನಗೆ ತೃಪ್ತಿಯಾಗುವ ತನಕ ತಿಂದು ಮಿಗಿಸುವವರೆಗೂ ಹಲವಾರು ಗಂಟೆಗಳ ಕಾಲ ಕಾಯುತ್ತಿದ್ದು ಅನಂತರ ಮಿಗುವ ಆಹಾರವನ್ನು ತಿನ್ನುವುದುಂಟು. ಗುಳ್ಳೆನರಿಗಳು ಸತ್ತ ಪ್ರಾಣಿಗಳನ್ನು ತಿನ್ನುತ್ತವೆ. ಅಲ್ಲದೆ ರಾತ್ರಿವೇಳೆ ಹಳ್ಳಿಗಳಿಗೆ ನುಗ್ಗಿ ಅಲ್ಲಿ ಸಿಗುವ ಹೊಲಸನ್ನು ಕೆಲವೊಮ್ಮೆ ಕೋಳಿ, ಕುರಿಮರಿ ಮುಂತಾದ ಪ್ರಾಣಿಗಳನ್ನು ತಿನ್ನುವುದುಂಟು. ಹಲ್ಲಿ, ಓತಿಕೇತ, ಕೀಟಗಳು, ಸಣ್ಣ–ಪುಟ್ಟ ಸಸ್ತನಿಗಳು ಮೊದಲಾದವನ್ನೂ ತಿನ್ನುತ್ತವಲ್ಲದೆ, ಕಾಫಿಹಣ್ಣುಗಳು, ಎಲಚಿಹಣ್ಣು ಮುಂತಾದವನ್ನು ಸೇವಿಸುತ್ತವೆ. ಅನೇಕ ಸಲ ದ್ರಾಕ್ಷಿ, ಕಬ್ಬು, ಇತ್ಯಾದಿ ಕೃಷಿಭೂಮಿಗಳಿಗೂ ನುಗ್ಗಿ ಹಾಳು ಮಾಡುವುದುಂಟು. ಇವು ಸಾಮಾನ್ಯವಾಗಿ ಒಂಟಿಯಾಗಿಯೇ ಆಹಾರಾನ್ವೇಷಣೆ ಮಾಡುವುದಾದರೂ ಕೆಲವು

ಸಲ ಗುಂಪುಗೂಡಿಕೊಂಡು ಎರೆಪ್ರಾಣಿಗಳನ್ನು ಬೇಟೆಯಾಡುವುದುಂಟು. ಆಹಾರ ಪ್ರಾಣಿಗಳನ್ನು ಅಟ್ಟಿಸಿಕೊಂಡು ವೇಗವಾಗಿ ಓಡಬಲ್ಲವು. ಹೀಗೆ ಓಡುವಾಗ ಓಟದ ವೇಗ ಗಂಟೆಗೆ 50 ಕಿಮೀ ಇರುವುದೆಂದು ಹೇಳಲಾಗಿದೆ.

ಸಂಜೆಯ ವೇಳೆ ವಿಶಿಷ್ಟ ರೀತಿಯಲ್ಲಿ ಊಳಿಡುವುದು ಗುಳ್ಳೆನರಿಗಳ ವಿಚಿತ್ರ ಲಕ್ಷಣ. ದೀರ್ಘವಾದ 3–4 ಕೂಗುಗಳನ್ನೂ ಕೊನೆಯಲ್ಲಿ ಕೆಲವು ಹ್ರಸ್ವ ಬಗುಳುವಿಕೆಗಳನ್ನು ಒಳಗೊಂಡಿರುವ ಈ ಗೋಳುಕರೆಯನ್ನು ಕೇಳಿದವರಾರೂ ಸುಲಭವಾಗಿ ಮರೆಯಲಾರರು. ಗುಳ್ಳೆನರಿಗಳು ತಮ್ಮ ಸಂತಾನೋತ್ಪತ್ತಿಯ ಕ್ರಮದಲ್ಲಿ ನಾಯಿ ಮತ್ತು ತೋಳಗಳನ್ನು ಹೋಲುತ್ತವೆ. ಇವುಗಳ ಗರ್ಭಾವಸ್ಥೆಯ ಅವಧಿ 57–70 ದಿವಸಗಳು. ಸಾಮಾನ್ಯವಾಗಿ ಸೂಲಿಗೆ 3–4 ಮರಿಗಳು ಹುಟ್ಟುತ್ತವೆ. ಇತರ ಪ್ರಾಣಿಗಳು ತೊರೆದುಹೋದ ಬಿಲದಲ್ಲೋ ಇಲ್ಲವೆ ತಾವೇ ಸ್ವತಃ ಕೊರೆದು ನಿರ್ಮಿಸಿದ ಬಿಲದಲ್ಲೋ ಮರಿಗಳನ್ನು ಈಯುತ್ತವೆ. ತಂದೆ ತಾಯಿಗಳೆರಡೂ ಮರಿಗಳ ಪಾಲನೆಯಲ್ಲಿ ತೊಡಗಿರುತ್ತವೆ. 7–8 ತಿಂಗಳು ವಯಸ್ಸಾದ ಅನಂತರ ಮರಿಗಳಿಗೆ ಸ್ವತಂತ್ರವಾಗಿ ಬೇಟೆಯಾಡುವ ಸಾಮರ್ಥ್ಯ ಬರುತ್ತದೆ. ಗುಳ್ಳೆನರಿಗಳ ಆಯಸ್ಸು ಸುಮಾರು 15 ವರ್ಷಗಳು. (ಎ.)

**ಗುಳ್ಳೆಮಂದಿರ :** ವಿದ್ಯುದಾವಿಷ್ಟ ಉಪಪರಮಾಣು ಕಣಗಳನ್ನು ಕಂಡು ಹಿಡಿಯಲು ಉಪಯೋಗಿಸುವ ಸಾಧನ ಅಥವಾ ಉಪಕರಣ (ಬಬಲ್ ಚೇಂಬರ್). 1952 ರಲ್ಲಿ ಡೊನಾಲ್ಡ್ ಎ. ಗ್ಲೇಸರ್ ಎಂಬ ಅಮೆರಿಕದ ವಿಜ್ಞಾನಿ ಮಿಷಿಗನ್ ವಿಶ್ವವಿದ್ಯಾಲಯದಲ್ಲಿ ಗುಳ್ಳೆಮಂದಿರವನ್ನು ನಿರ್ಮಿಸಿದ. ಈ ಉಪಕರಣವನ್ನು ಉಪಯೋಗಿಸಿ ವಿದ್ಯುದಾವಿಷ್ಟ ಕಣಗಳ ಪಥಗಳನ್ನು ಕಣ್ಣಿಗೆ ಕಾಣುವಂತೆ ಮಾಡಬಹುದು. ಪಥಗಳ ಛಾಯಾಚಿತ್ರವನ್ನು ತೆಗೆದುಕೊಂಡು ಪರೀಕ್ಷೆಮಾಡಿ ಕಣಗಳ ಗುಣಲಕ್ಷಣಗಳನ್ನು ಗೊತ್ತು ಮಾಡಿಕೊಳ್ಳಬಹುದು. ಕೆಲವು ವಿಧಗಳಲ್ಲಿ ಗುಳ್ಳೆ ಮಂದಿರ ಸಿ.ಟಿ.ಆರ್. ವಿಲ್ಸನ್ ರಚಿಸಿದ ಮೇಘಮಂದಿರವನ್ನು ಹೋಲುತ್ತದೆ (**ನೋಡಿ–ಮೇಘಮಂದಿರ**).



**ಪ್ರೊಪೇನ್ ಗುಳ್ಳೆಮಂದಿರ**

ಕೆಲಸ ಮಾಡುವ ವಿಧಾನ ಮತ್ತು ನಿರ್ಮಾಣ : ಶುಚಿಯಾದ ಮತ್ತು ನಯವಾದ ಮೈಯುಳ್ಳ ಪಾತ್ರೆಗಳಲ್ಲಿ ದ್ರವಗಳನ್ನು ಸಾಮಾನ್ಯ ಕುದಿಯುವ ಬಿಂದುವಿಗಿಂತಲೂ ಹೆಚ್ಚು ಉಷ್ಣತೆಗೆ ಕಾಯಿಸಬಹುದು. ಈ ಸ್ಥಿತಿಯಲ್ಲಿರುವ ಒಂದು ದ್ರವಕ್ಕೆ ಅತಿತಪ್ತ (ಸೂಪರ್ ಹೀಟೆಡ್) ದ್ರವವೆಂದು ಹೆಸರು. ಅತಿತಪ್ತ ದ್ರವಗಳು ಅಸ್ಥಿರ. ಯಾವುದಾದರೂ ಒರಟಾದ ಪದಾರ್ಥಗಳನ್ನು ದ್ರವದೊಳಗೆ ಹಾಕಿದರಾಗಲೀ ಹೆಚ್ಚಿಗೆ ಉಷ್ಣವನ್ನು ಒದಗಿಸಿದರಾಗಲೀ ದ್ರವ ರಭಸದಿಂದ ಕುದಿಯಲು ಪ್ರಾರಂಭಿಸುತ್ತದೆ. ಅತಿತಪ್ತ ದ್ರವಗಳ ಮೂಲಕ ವಿದ್ಯುದಾವೇಶವಿರುವ ಮತ್ತು ವೇಗವಾಗಿ ಚಲಿಸುವ ಕಣಗಳು ಸಾಗಿದರೆ ಅವು ಹೋದ ಜಾಡಿನಲ್ಲಿ ಕಣಗಳು ದ್ರವದ ಪರಮಾಣುಗಳೊಡನೆ ಸಂಘಟಿಸಿ ಆಗುವ ಅಂತರ ಕ್ರಿಯೆಯಿಂದ ಶಕ್ತಿ ಉತ್ಪತ್ತಿಯಾಗಿ ಅಣುಗಳನ್ನು ಅಯಾನುಗಳನ್ನಾಗಿ ಪರಿವರ್ತಿಸುತ್ತವೆ (**ನೋಡಿ–ಕಿಡಿಮಂದಿರ**). ಇಂಥ ಸ್ಥಳಗಳಲ್ಲಿ ದ್ರವ ಕುದಿಯಲು ಪ್ರಾರಂಭಿಸುತ್ತದೆ. ಇದೇ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆದುಕೊಂಡರೆ ಕಣಗಳು ಹೋದ ಹಿಂಜಾಡಿನಲ್ಲೇ ಸಣ್ಣಪುಟ್ಟ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಹೀಗೆ ಕಣಗಳ ಪಥಗಳನ್ನು ಕಣ್ಣಿನಿಂದ ನೋಡಲು ಸಾಧ್ಯವಾಗುತ್ತದೆ.

ಗುಳ್ಳೆ ಮಂದಿರವನ್ನು ಗಾಜಿನ ಪಾತ್ರೆಯನ್ನು ಉಪಯೋಗಿಸಿ ನಿರ್ಮಾಣ ಮಾಡಬಹುದು. ಲೋಹದ ಪಾತ್ರೆಯನ್ನು ಉಪಯೋಗಿಸಿದರೆ ಗಾಜಿನ ಕಿಟಕಿಗಳನ್ನು ಲೋಹಕ್ಕೆ (ಗ್ಯಾಸ್ಕೆಟ್ಟುಗಳನ್ನು ಉಪಯೋಗಿಸಿಕೊಂಡು) ಬೆಸೆಯಬೇಕು. ಈಥರ್, ಪೆಂಟೇನ್, ಬ್ಯೂಟೇನ್ ಅಥವಾ ಪ್ರೊಪೇನ್ ಮುಂತಾದ ಹಲವಾರು ದ್ರವಗಳನ್ನು ಗುಳ್ಳೆಮಂದಿರದಲ್ಲಿ ಉಪಯೋಗಿಸಬಹುದು. ದ್ರವ ಹೀಲಿಯಮ್ ಅಥವಾ ದ್ರವ ಹೈಡ್ರೋಜನ್‌ಗಳನ್ನು ಉಪಯೋಗಿಸಿದರೆ ಗುಳ್ಳೆಮಂದಿರವನ್ನು ಅತಿ ಕಡಿಮೆ ಉಷ್ಣತೆಯಲ್ಲಿ ಇಡಬೇಕು. ಈ ದ್ರವಗಳನ್ನು ಅವುಗಳ ಕುದಿಯುವ ಬಿಂದುವಿಗಿಂತಲೂ ಹೆಚ್ಚು ಉಷ್ಣತೆಯಲ್ಲಿ ಇಟ್ಟಿದ್ದು, ಹೆಚ್ಚು ಒತ್ತಡವನ್ನು ಏರ್ಪಡಿಸಿ ದ್ರವ ಕುದಿಯದಂತೆ ಮಾಡಬೇಕು. ದ್ರವ ಈಥರನ್ನು ಉಪಯೋಗಿಸಿದರೆ ದ್ರವವನ್ನು ಸುಮಾರು 20 ವಾಯು ಮಂಡಲಗಳಲ್ಲಿ ಮತ್ತು 135 ಸೆಂ. ಉಷ್ಣತೆಯಲ್ಲಿ ಇಡಬೇಕು. ಒತ್ತಡವನ್ನು ಬಿಡುಗಡೆಮಾಡಿದ ಹಲವಾರು ಮಿಲಿಸೆಕೆಂಡುಗಳಲ್ಲಿ ದ್ರವ ಅತಿತಪ್ತವಾಗಿ ಅಸ್ಥಿರಗೊಳ್ಳುತ್ತದೆ. ಇಂಥ ವೇಳೆಯಲ್ಲಿ ವಿದ್ಯುದಾವಿಷ್ಟ ಕಣಗಳ ಕಿರಣಾವಳಿಯೊಂದು ಮಂದಿರದ ಮೂಲಕ ಹಾದುಹೋದರೆ ಅದು ಹೋದ ಜಾಗದಲ್ಲಿ ದ್ರವ ಕುದಿಯಲು ಪ್ರಾರಂಭಿಸಿ, ಹೀಗೆ ಉಂಟಾದ ಗುಳ್ಳೆಗಳು ಸಾಕಷ್ಟು ಬೆಳೆದು ಛಾಯಾ ಚಿತ್ರದಲ್ಲಿ ಕಣಗಳ ಪಥಗಳು ಕಾಣಿಸಿಕೊಳ್ಳುತ್ತವೆ. ಮತ್ತೆ ಒತ್ತಡವನ್ನು ಉಪಯೋಗಿಸಿದರೆ ಗುಳ್ಳೆಗಳು ಥಟ್ಟನೆ ಅಳಿದುಹೋಗಿ ಮಂದಿರ ಎಂದಿನಂತೆ ಉಪಯೋಗಿಸಲು ಸಿದ್ಧವಾಗುತ್ತದೆ. ಹೀಗೆ ಒತ್ತಡವನ್ನು ಬಿಡುಗಡೆ ಮಾಡಿ ಮತ್ತೆ ಪ್ರಯೋಗಿಸುವ ಒಂದು ಚಕ್ರಕ್ಕೆ ಸುಮಾರು 1 ಅಥವಾ 2 ಸೆಕೆಂಡುಗಳು ಬೇಕಾಗುತ್ತವೆ.



**ಹೈಡ್ರೋಜನ್ ಗುಳ್ಳೆಮಂದಿರದಲ್ಲಿ ಕಾಣಿಸಿಕೊಳ್ಳುವ ವಿದ್ಯುದಾವಿಷ್ಟ ಕಣಗಳ ಪಥಗಳು**

ಉಪಯೋಗಗಳು : ಗುಳ್ಳೆಮಂದಿರವನ್ನು ಉಪಯೋಗಿಸಿ ವಿದ್ಯುದಾವಿಷ್ಟ ಕಣಗಳ ಹಲವಾರು ಪರಮಾಣುಗಳನ್ನು ಕಂಡು ಹಿಡಿಯಬಹುದು. ಪಥದ ಉದ್ದದಿಂದ ಕಣಗಳ ಶಕ್ತಿಯನ್ನೂ ಪಥದಲ್ಲಿ ಕಾಣುವ ಗುಳ್ಳೆಗಳ ಸಾಂದ್ರತೆಯಿಂದ ಕಣಗಳ ವಿದ್ಯುದಾವೇಶ ಮತ್ತು ವೇಗವನ್ನೂ ಕಂಡುಹಿಡಿಯಬಹುದು. ಗುಳ್ಳೆಮಂದಿರವನ್ನು ಕಾಂತಕ್ಷೇತ್ರದಲ್ಲಿಟ್ಟರೆ ಕಣಗಳ ಪಥದ ವಕ್ರತೆಯಿಂದ ಕಣಗಳ ಸಂವೇಗಗಳನ್ನು (ಮೊಮೆಂಟ) ಗೊತ್ತುಮಾಡಬಹುದು. ಇಂಥ ಪರಿಮಾಣುಗಳ ನ್ಯೂಕ್ಲಿಯರ್ ಪ್ರಕ್ರಿಯೆಗಳಲ್ಲಿ ಉಂಟಾಗುವ ಎಲ್ಲ ಪಥಗಳಿಗೂ ಗೊತ್ತುಮಾಡಿದರೆ ಪ್ರಕ್ರಿಯೆಗಳಲ್ಲಿ ಉಂಟಾದ ಕಣಗಳ ಜಡತ್ವ, ವಿದ್ಯುದಾವೇಶ, ಜೀವಿತಕಾಲ ಮತ್ತಿತರ ಗುಣ ಲಕ್ಷಣಗಳನ್ನು ಕಂಡುಹಿಡಿಯಬಹುದು. ಇಂಥ ಅಂಶಗಳು ನ್ಯೂಕ್ಲಿಯರ್ ರಚನಾ ಕ್ರಮಗಳನ್ನು ಅರ್ಥಮಾಡಿಕೊಳ್ಳಲು ಬಹಳ ಉಪಯೋಗವಾಗುತ್ತವೆ.

ಗುಳ್ಳೆಮಂದಿರಗಳನ್ನು ಅತಿಶಕ್ತಿಯ ಕಣವೇಗವರ್ಧಕ ಅಥವಾ ಕಣವೇಗೋತ್ಕರ್ಷಕ ಯಂತ್ರಗಳ ಬಳಿ ಮಾಡುವ ಪ್ರಯೋಗಗಳಿಗೆ ಬಹಳ ಹೆಚ್ಚಾಗಿ ಉಪಯೋಗಿಸುವರು. ಗುಳ್ಳೆಮಂದಿರದಲ್ಲಿ ಕಣಗಳನ್ನು ಕಂಡುಹಿಡಿಯುವ ಪದಾರ್ಥ ದ್ರವವಾದ್ದರಿಂದ ಮೇಘಮಂದಿರ ಮತ್ತು ಕಿಡಿಮಂದಿರಗಳಲ್ಲಿ ಉಪಯೋಗಿಸುವ ಅನಿಲಗಳಿಗಿಂತ ಇದರ ಸಾಂದ್ರತೆ ಬಲು ಹೆಚ್ಚು. ಆದ್ದರಿಂದ ಗುಳ್ಳೆ ಮಂದಿರದಲ್ಲಿ ಶಕ್ತಿಯುತ ಕಣಗಳ ಪಥದ ಉದ್ದ ಬಹಳ ಕಡಿಮೆ ಇರುತ್ತದೆ. ಈ ಕಾರಣದಿಂದ ಅದನ್ನು ಹೆಚ್ಚು ಪ್ರಯೋಗಗಳಿಗೆ ಉಪಯೋಗಿಸಲು ಸಾಧ್ಯವಾಗುತ್ತದೆ. (ಎನ್.ಜಿ.ಪಿ.)

**ಗೂಂಚ್ ಮೀನು :** ಸೈಲ್ಯೂರಿಫಾರ್ಮೀಸ್ ಗಣದ ಸಿಸೋರಿಡೀ ಕುಟುಂಬಕ್ಕೆ ಸೇರಿದ ಒಂದು ಸಿಹಿನೀರು ಮೀನು. ಮೀಸೆ ಮೀನುಗಳ ಸಂಬಂಧಿ. ಎಲ್ಲ ಮೀಸೆ ಮೀನುಗಳಿಗಿರುವಂತೆ ಬಾಯಿಯ ಸುತ್ತ ಚೆನ್ನಾಗಿ ಬೆಳೆದ ಸ್ಪರ್ಶಾಂಗಗಳಿವೆ. ಇದರ ಶಾಸ್ತ್ರೀಯ ನಾಮ ಬಗೇರಿಯಸ್ ಬಗೇರಿಯಸ್. ನೈರುತ್ಯ ಏಷ್ಯದ ಕೆರೆ, ಕೊಳ ನದಿಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಗಂಗಾನದಿ ಮತ್ತು ಮಣಿಪುರದ ಕಣಿವೆಗಳಲ್ಲಿನ ಝರಿಗಳಲ್ಲಿ ಇವುಗಳನ್ನು ಕಾಣಬಹುದು. ಇದರ ಉಗ್ರ ಸ್ವಭಾವ ಮತ್ತು ತಲೆಯ ಅಧೋಭಾಗದಲ್ಲಿರುವ ಬಾಯಿಯಿಂದಾಗಿ ಇದನ್ನು ಸಿಹಿನೀರಿನ ಶಾರ್ಕ್ ಎಂದೂ ಕರೆಯಲಾಗುತ್ತದೆ. ಇದರ ತಲೆ ತಟ್ಟೆಯಂತೆ ಅಗಲವಾಗಿದೆ. ಬಾಲ ನೀಳವಾಗಿಯೂ

ಕರಿದಾಗಿಯೂ ಇದೆ. ಬಾಲದ ಈಜು ರೆಕ್ಕೆ ಆಳವಾಗಿ ಸೀಳಿದೆ. ಈಜು ರೆಕ್ಕೆಗಳ ಬುಡ ಕಪ್ಪಾಗಿರುವುದಲ್ಲದೆ ಅವುಗಳ ಮೇಲೆ ಕಪ್ಪು ಬಣ್ಣದ ಪಟ್ಟೆಯೊಂದಿದೆ. ಗೂಂಚ್ ಮೀನಿನ ಬಣ್ಣ ಕಂದು ಇಲ್ಲವೆ ನಸುಗೆಂಪು ಮಿಶ್ರಿತ ಆಲಿವ್. ಮೈಯ ಮೇಲ್ಭಾಗದಲ್ಲಿ ಚಿತ್ತಾದ ಕಂದು ಬಣ್ಣದ ಪಟ್ಟೆಗಳೂ ಇರಬಹುದು. ಸಾಮಾನ್ಯವಾಗಿ ಇದು ಚಿಕ್ಕಗಾತ್ರದ್ದು. ಕೆಲವು ವೇಳೆ 6 ಅಡಿವರೆಗೆ ಬೆಳೆಯುವುದುಂಟು.



ಗೂಂಚ್ ಮೀನನ್ನು ಈಟಿಯಿಂದ ತಿವಿದು ಬೇಟೆಯಾಡುತ್ತಾರೆ. ದೊಡ್ಡ ಗಾತ್ರದ ಮೀನುಗಳು ಬಲು ಜಡ ಸ್ವಭಾವದವಾದ್ದರಿಂದ ಇವನ್ನು ಬೇಟೆಯಾಡುವುದು ಸುಲಭ. ಬೆಸ್ತರು ನೀರಲ್ಲಿ ಮುಳುಗಿ ಇವುಗಳ ಬಾಲಕ್ಕೆ ಹಗ್ಗ ಕಟ್ಟಿ ಹೊರಗೆಳೆದು ಹಿಡಿಯುವುದೂ ಉಂಟು. (ಜಿ.ಎಸ್‌ಎಚ್‌ಐ.)

**ಗೂಂಡೂಲಿಚ್, ಐವಾನ್ ಫ್ರೇನಾರ್ :** 1589–1638. ಹದಿನೇಳನೆಯ ಶತಮಾನದ ಆದಿಯಲ್ಲಿದ್ದ ಸರ್ಬೋ–ಕ್ರೋಟ್ ಕವಿ. ಶ್ರೀಮಂತ ಮನೆತನದಲ್ಲಿ ಹುಟ್ಟಿದ ಈತ ಶ್ರೇಷ್ಠಮಟ್ಟದ ಗ್ರೀಕ್ ಮತ್ತು ಲ್ಯಾಟಿನ್ ಭಾಷಾ ಸಾಹಿತ್ಯಗಳ ಜ್ಞಾನವನ್ನು ಪಡೆದಿದ್ದ. ತನ್ನ ಸ್ವಂತ ಊರಾದ ರೆಗೂಸಾದಲ್ಲಿ ಉನ್ನತ ಅಧಿಕಾರ ಸ್ಥಾನಗಳನ್ನು ಅಲಂಕರಿಸಿದ್ದ.

ಈತನ ಕಾವ್ಯರಚನೆ ಕ್ರೈಸ್ತಧರ್ಮವನ್ನು ಕುರಿತದ್ದಾಗಿದೆ. 1621ರಲ್ಲಿ ಹಳೆಯ ಒಡಂಬಡಿಕೆಯಲ್ಲಿರುವ ಸ್ತುತಿಪದ್ಯವನ್ನು ಅವಲಂಬಿಸಿ ದಿ ಪೆನಿಟೆನ್ಷಿಯಲ್ ಸಾಂಗ್ ಆಫ್ ಕಿಂಗ್ ಡೇವಿಡ್ (ದೊರೆ ಡೇವಿಡನ ಪಶ್ಚಾತ್ತಾಪ ಪದ) ಎಂಬ ಕವನವನ್ನು ಬರೆದ. 1622ರಲ್ಲಿ ದಿ ಟಿಯರ್ಸ್ ಆಫ್ ದಿ ಪ್ರಾಡಿಗಲ್ ಸನ್ (ದುಂದುಗಾರ ಮಗನ ಕಂಬನಿ) ಎಂಬ ಕೃತಿ ಪ್ರಕಟಗೊಂಡಿತು. ಈ ಕವಿ ರಚಿಸಿದ ಆಸ್ಮಾನ್ ಎಂಬ ಮಹಾ ಕಾವ್ಯ ಈತನ ಅತ್ಯುತ್ತಮ ಕೃತಿ ಎನಿಸಿದೆ. ಇದು ಇಪ್ಪತ್ತು ಸರ್ಗಗಳನ್ನು ಒಳಗೊಂಡಿರುವ ಕಾವ್ಯ. ಇದರ 14 ಮತ್ತು 15ನೆಯ ಸರ್ಗಗಳು ಈಗ ಲಭ್ಯವಿಲ್ಲ. ಈ ಮಹಾಕಾವ್ಯ ತುರ್ಕಿಯ ದೊರೆ ಆಸ್ಮಾನ್ ಮತ್ತು ಆತನ ಆಡಳಿತ ಕಾಲದಲ್ಲಿ ನಡೆದ ಕ್ರೈಸ್ತರ ಹಾಗೂ ಮಹಮ್ಮದೀಯರ ಕಾಳಗವನ್ನು ಕುರಿತದ್ದಾಗಿದೆ. ಇದು ಇಟಾಲಿಯನ್ ಮಹಾಕವಿ ಟಾಸೊನ ಮಹಾಕಾವ್ಯವನ್ನು ಅನುಸರಣೆ ಮಾಡಿ ರಚಿತವಾದ ಕೃತಿ. (ಕೆ.ಕೆ.ಐ.)

**ಗೂಗಾಲ್ :** ಗಣಿತಶಾಸ್ತ್ರದಲ್ಲಿ ಬಲು ಬೃಹತ್ತಾದ ಒಂದು ಸಂಖ್ಯೆ. 1 ನ್ನು ಬರೆದು ಅದರ ಬಲ ಪಕ್ಕದಲ್ಲಿ ನೂರು ಸಲ 0 ಗಳನ್ನು ಬರೆದಾಗ ದೊರೆಯುವ ಸಂಖ್ಯೆ. ಇದರ ನಿರೂಪಣೆ ಹೀಗಿದೆ :

10, 000, 000, 000, 000, 000, 000, 000, 000, 000, 000, 000
000, 000, 000, 000, 000, 000, 000, 000, 000, 000, 000
000, 000, 000, 000, 000, 000, 000, 000, 000, 000, 000

ಇದನ್ನು ಸಂಕ್ಷೇಪ್ತವಾಗಿ $10^{100}$ ಎಂಬುದಾಗಿ ಬರೆಯಬಹುದು. ಈ ಕೆಳಗಿನ ಉದಾಹರಣೆಗಳಿಂದ ಗೂಗಾಲ್ ಅದೆಷ್ಟು ದೊಡ್ಡ ಸಂಖ್ಯೆ ಎನ್ನುವುದು ಸ್ಪಷ್ಟವಾಗುತ್ತದೆ: 1. ಮನುಷ್ಯನ ಉಗಮದಿಂದ ಇಂದಿನವರೆಗೆ ಎಲ್ಲ ಮನುಷ್ಯರೂ ಉಚ್ಚರಿಸಿದ ಪದಗಳು $10^{16}$ ನ್ನು ಮೀರಿರುವುದಿಲ್ಲ ಎಂದು ಅಂದಾಜು ಮಾಡಿದ್ದಾರೆ. 2. ಸಮಸ್ತ ವಿಶ್ವದಲ್ಲಿ (ಎಂದರೆ ಕಾಣುವ ಕಾಣದಿರುವ ಸಕಲ ಆಕಾಶ ಕಾಯಗಳೂ ಸೇರಿರುವ ಆಕಾಶ) ಒಂದಿಷ್ಟೂ ಖಾಲಿ ಜಾಗವಿಲ್ಲದಂತೆ ಎಲೆಕ್ಟ್ರಾನ್ ಪ್ರೋಟಾನುಗಳನ್ನು ಅತಿನಿಬಿಡವಾಗಿ ಗಿಡಿದರೆ ಆ ಕಣಗಳ ಸಂಖ್ಯೆ $10^{110}$. 3. ಇದುವರೆಗೆ ಪ್ರಪಂಚದಲ್ಲಿ ಮುದ್ರಣವಾಗಿರುವ ಪದಗಳ ಸಂಖ್ಯೆ $10^{16}$ ಕ್ಕಿಂತ ಸ್ವಲ್ಪ ದೊಡ್ಡದಿರಬಹುದು. 4. ವಿಶ್ವದಲ್ಲಿ ಇರುವ ಸಮಸ್ತ ಎಲೆಕ್ಟ್ರಾನುಗಳ ಸಂಖ್ಯೆ ಸುಮಾರು $10^{79}$. 5. ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರಗಳ ಪ್ರಚಲಿತ ವಾರ್ಷಿಕ ಒಟ್ಟು ಆಯ ಸುಮಾರು ರೂ. $10^{11}$. ಇಷ್ಟೇ ಆಯ ಕಳೆದ 10,000 ವರ್ಷಗಳಿಂದಲೂ ಒಂದೇ ಪ್ರಕಾರ ಇತ್ತೆಂದು ಭಾವಿಸಿದರೆ ಈ ಅವಧಿಯ ಸಮಗ್ರ ಆಯ ರೂ. $10^{11}$ x 10,000=00 ರೂ. $10^{15}$.

ಅಮೆರಿಕದ ಒಂದು ಶಾಲೆಯಲ್ಲಿ, ಬೃಹತ್ಸಂಖ್ಯೆಗಳನ್ನು ಕುರಿತು ಜನಪ್ರಿಯ ವಿವರಣೆ ನೀಡುತ್ತಿದ್ದಾಗ ಉಪಾಧ್ಯಾಯರು ಅತಿದೊಡ್ಡದಾದ ಒಂದು ಸಂಖ್ಯೆಗೆ, ಎಂದರೆ 1 ನ್ನು ಬರೆದು ಬಳಿಕ ನೂರು 0 ಗಳನ್ನು ಬರೆದಾಗ ದೊರೆಯುವ ಸಂಖ್ಯೆಗೆ, ಹೆಸರನ್ನು ಸೂಚಿಸಬೇಕೆಂದು ವಿದ್ಯಾರ್ಥಿಗಳಿಗೆ ಸವಾಲು ಹಾಕಿದರು. ಆಗ ಮಿಲ್ಟನ್ ಸಿರೋಟ ಎಂಬ ಒಂಬತ್ತು ವರ್ಷ ಅಣುಗ ಗೂಗಾಲ್ ಎಂಬ ಪದವನ್ನು ಹೇಳಿದ (1955). ಆತನೇ ಗೂಗಾಲ್‌ಪ್ಲೆಕ್ಸ್ ಎಂಬ ಇನ್ನೊಂದು ಬೃಹತ್ಸಂಖ್ಯೆಯನ್ನು ಕೂಡ ಹೆಸರಿಸಿದ್ದಾನೆ. ಇದರ ಬೆಲೆ 1ನ್ನು ಬರೆದು ಅದರ ಬಲಪಕ್ಕದಲ್ಲಿ ಒಂದು ಗೂಗಾಲ್ 0 ಗಳನ್ನು ಬರೆದಷ್ಟು; ಎಂದರೆ ಸಂಕ್ಷೇಪವಾಗಿ $10^{10^{100}}$. ಗೂಗಾಲ್‌ಪ್ಲೆಕ್ಸ್ ಸಂಖ್ಯೆಯ ವಿಸ್ತೃತರೂಪವನ್ನು ಬರೆಯಲು ಭೂಮಿಯ ವಿಸ್ತಾರ ಏನೂ ಸಾಲದು. ಅಷ್ಟೇ ಅಲ್ಲ ವಿಶ್ವದ ವಿಸ್ತಾರವೂ ಸಾಲದು; ಇಷ್ಟಾದರೂ ಗೂಗಾಲ್‌ಪ್ಲೆಕ್ಸ್ ಒದು ಸಾಂತಸಂಖ್ಯೆಯೇ (**ನೋಡಿ–ಬೃಹತ್ಸಂಖ್ಯೆಗಳು**). *

**ಗೂಚ್, ಜಾರ್ಜ್ ಪೀಬಾಡಿ :** 1873–1968. ಒಬ್ಬ ಇಂಗ್ಲಿಷ್ ಇತಿಹಾಸಕಾರ. ಲಂಡನಿನಲ್ಲಿ 1873ರ ಅಕ್ಟೋಬರ್ 21ರಂದು ಈತನ ಜನನ. ಈಟನ್, ಲಂಡನಿನ ಕಿಂಗ್ಸ್ ಕಾಲೇಜ್ ಮತ್ತು ಕೇಂಬ್ರಿಜಿನ ಟ್ರಿನಿಟಿ ಕಾಲೇಜ್‌ಗಳಲ್ಲಿ ಈತ ಶಿಕ್ಷಣ ಪಡೆದ. ಅನಂತರ ಬರ್ಲಿನ್ ಮತ್ತು ಪ್ಯಾರಿಸ್‌ಗಳಲ್ಲೂ ಅಧ್ಯಯನ ಮುಂದುವರಿಸಿದ. ಈತ ಲಿಬರಲ್ ಪಕ್ಷದ ಅಭ್ಯರ್ಥಿಯಾಗಿ ಕಾಮನ್ಸ್ ಸಭೆಗೆ ಆಯ್ಕೆ ಹೊಂದಿದ್ದ; 1906–1910ರಲ್ಲಿ ಬಾತ್ ಕ್ಷೇತ್ರದ ಮತ್ತು 1913ರಲ್ಲಿ ರೀಡಿಂಗ್ ಕ್ಷೇತ್ರದ ಪ್ರತಿನಿಧಿಯಾಗಿದ್ದ. 1911 ರಿಂದ ಕಾಂಟೆಂಪೊರರಿ ರಿವ್ಯೂ ಎಂಬ ಮಾಸಪತ್ರಿಕೆಯ ಸಹ ಸಂಪಾದಕನಾಗಿ ಕೆಲಸ ಮಾಡಿದ. 1922–25ರ ಅವಧಿಯಲ್ಲಿ ಈತ ಇತಿಹಾಸ ಸಂಘದ ಮತ್ತು 1933–36ರಲ್ಲಿ ರಾಷ್ಟ್ರೀಯ ಶಾಂತಿ ಸಮಿತಿಯ ಅಧ್ಯಕ್ಷನಾಗಿದ್ದ. ಗೂಚ್ ತನ್ನ ಕಾಲದ ಜರ್ಮನಿಯ ಇತಿಹಾಸವನ್ನು ಆಳವಾಗಿ ಅಭ್ಯಸಿಸಿದ್ದ. ಅದರ ಬಗ್ಗೆ ಅಧಿಕಾರಯುತವಾಗಿ ಮಾತನಾಡಲು ಅರ್ಹತೆಯಿದ್ದ ವ್ಯಕ್ತಿಯೀತ. ಕೇಂಬ್ರಿಜ್ ಹಿಸ್ಟೊರಿ ಆಫ್ ಬ್ರಿಟಿಷ್ ಫಾರಿನ್ ಪಾಲಿಸಿ, ಬ್ರಿಟಿಷ್ ಡಾಕ್ಯುಮೆಂಟ್ಸ್ ಆನ್ ದಿ ಆರಿಜಿನ್ಸ್ ಆಫ್ ವಾರ್ 1893–1914. ಇವುಗಳಿಗೆ ಅವನು ಅನುಕ್ರಮವಾಗಿ 1922–23 ಮತ್ತು 1926–38ರಲ್ಲಿ ಸಹ ಸಂಪಾದಕನಾಗಿದ್ದ. ಈತ ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್ ಮತ್ತು ಆಧುನಿಕ ಯುರೋಪ್ ಇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಜರ್ಮನಿ ಅಂಡ್ ದಿ ಫ್ರೆಂಚ್ ರೆವೊಲ್ಯೂಷನ್, ಫ್ರಾಂಕೊ–ಜರ್ಮನ್ ರಿಲೇಷನ್ಸ್ 1871–1914, ಇಂಗ್ಲಿಷ್ ಡೆಮೊಕ್ರಾಟಿಕ್ ಐಡಿಯಾಸ್ ಇನ್ ದಿ ಸೆವೆನ್ಟೀನ್ತ್ ಸೆಂಚುರಿ, ಕೋರ್ಟ್ಸ್ ಅಂಡ್ ಕ್ಯಾಬಿನೆಟ್ಸ್, ಮೇರಿಯ ತೆರಿಸ ಅಂಡ್ ಅದರ್ ಸ್ಟಡೀಸ್, ದಿ ಸೆಕೆಂಡ್ ಎಂಪೈರ್ – ಇವು ಈತನ ಕೆಲವು ಕೃತಿಗಳು.

ಇವನಿಗೆ 1939ರಲ್ಲಿ 'ಕಂಪ್ಯಾನ್ಯನ್ ಆಫ್ ಆನರ್' ಮತ್ತು 1963ರಲ್ಲಿ 'ಆರ್ಡರ್ ಆಫ್ ಮೆರಿಟ್' ಎಂಬ ಪದವಿಗಳು ಲಭಿಸಿತು. 1963 ಆಗಸ್ಟ 31ರಂದು ಲಂಡನ್ನಿನ್ನಲ್ಲಿ ನಿಧನವಾದ. (ಎ.ಎಂ.ಆರ್.)

**ಗೂಟೆನ್‌ಬರ್ಗ್, ಯೋಹಾನ್ :** 1395–1468. ಜರ್ಮನ್ ಉಪಜ್ಞೆಕಾರ. ಯುರೋಪಿನಲ್ಲಿ ಮುದ್ರಣತಂತ್ರವನ್ನು ಪ್ರಥಮವಾಗಿ ಆವಿಷ್ಕರಿಸಿದವನೆಂದು ಪ್ರತೀತಿ (**ನೋಡಿ– ಮುದ್ರಣ**). ಬಿಡಿ ಅಕ್ಷರಗಳನ್ನು ಎರಕ ಹೊಯ್ದು ಮೊಳೆಗಳನ್ನು ತಯಾರಿಸಿ ಅವುಗಳ ಯುಕ್ತ ಜೋಡಣೆಯಿಂದ ಮುದ್ರಣಫಲಕವನ್ನು ತಯಾರಿಸಿ ಬೇಕಾದಷ್ಟು ಪ್ರತಿಗಳನ್ನು ಮುದ್ರಿಸುವ ಯೋಜನೆಯೇ ಗೂಟೆನ್‌ಬರ್ಗ್ ತಂತ್ರ. ಇದರ ಅನುಸಾರ

ಮುದ್ರಿತವಾದ ಗೂಟೆನ್‌ಬರ್ಗ್ ಬೈಬಲ್ಲುಗಳು ಇಂದಿಗೂ ಮುದ್ರಣ ಕಲೆಯ ಪರಮೋಚ್ಛಸ್ಥಿತಿಯ ಉತ್ಕೃಷ್ಟ ಉದಾಹರಣೆ ಎಂದು ಪರಿಣತರ ಅಭಿಪ್ರಾಯ. ಆದ್ದರಿಂದ ಗೂಟೆನ್‌ಬರ್ಗ್‌ನಿಂದ ಮುದ್ರಣ ತಂತ್ರ ಪ್ರಾರಂಭವಾದದ್ದು ಮಾತ್ರವಲ್ಲ, ಆ ಕಲೆ ತನ್ನ ಅತ್ಯುನ್ನತ ಮಟ್ಟದಲ್ಲಿಯೇ ವಿಕಾಸವಾಯಿತು. ಪುಟವೊಂದರ 42 ಸಾಲುಗಳ ಎರಡು ಕಾಲಮುಗಳಿರುವ 1282 ಪುಟಗಳ ಗೂಟೆನ್‌ಬರ್ಗ್ ಬೈಬಲ್ಲಿನ 300 ಪ್ರತಿಗಳನ್ನು ಈತ ಮುದ್ರಿಸಿದ್ದ. ಕೈಬರೆಹದ ಪುಸ್ತಕಗಳ ಮೂಲಕ ಮಾತ್ರ ಜ್ಞಾನ ಪ್ರಸಾರ ನಡೆಯುತ್ತಿದ್ದ ದಿನಗಳಲ್ಲಿ ಸಹಜವಾಗಿ ಜ್ಞಾನ ಶ್ರೀಮಂತರ ಹಾಗೂ ಪ್ರಬಲಿಗಳ ಸೊತ್ತಾಗಿತ್ತು. ಪುಸ್ತಕ ಭಂಡಾರಗಳು ವಿರಳ ಸಂಖ್ಯೆಯಲ್ಲಿದ್ದವು. ಮುದ್ರಣ ತಂತ್ರ ಬಳಕೆಗೆ ಬಂದದ್ದರಿಂದ ಒಂದೇ ವಸ್ತುವಿನ ಖಚಿತ ಬಹು ಪ್ರತೀಕರಣಗಳು ಸುಲಭ ಸಾಧ್ಯವಾಯಿತು. ಹೀಗಾಗಿ ಜ್ಞಾನಪ್ರಸಾರಕ್ಕೆ ಬೃಹತ್ ಪ್ರಮಾಣ

ಕುಮ್ಮಕ್ಕು ಲಭ್ಯವಾಯಿತು. ಗೂಟೆನ್ ಬರ್ಗ್‌ನ ಹಿರಿಮೆ ಮತ್ತು ಸಾಧನೆ ಇರುವುದು ಈ ದಿಶೆಯಲ್ಲಿ. ಒಂದು ಶತಮಾನದ ತರುವಾಯ (ಎಂದರೆ 16–17 ನೆಯ ಶತಮಾನ) ಉದಯಿಸಿದ ವೈಜ್ಞಾನಿಕಾಂದೋಲನದ ನಾಂದಿಯನ್ನು ಗೂಟೆನ್‌ಬರ್ಗ್‌ನ ಸಿದ್ಧಿಯಲ್ಲಿ ಗುರುತಿಸಬಹುದು.

ಯೋಹಾನ್ ಗೂಟೆನ್‌ಬರ್ಗ್‌ನ ಬಾಲ್ಯ, ವಿದ್ಯೆ ಮುಂತಾದ ವೈಯಕ್ತಿಕ ವಿವರಗಳು ಖಚಿತವಾಗಿ ತಿಳಿದಿಲ್ಲ. ಮೈನ್ಸ್‌ಟ್ಜ್ ನಗರದಲ್ಲಿ ಸು. 1395ರಲ್ಲಿ ಜನಿಸಿದ. ಮೈನ್ಸ್‌ಟ್ಜ್ ನಗರದ ಮೂಲವಾಸಿಗಳಾದ ಈ ಕುಟುಂಬ ಕಾರಣಾಂತರದಿಂದ ಸ್ಟ್ರಾಸ್‌ಬರ್ಗ್ ನಗರಕ್ಕೆ ಬಂದು ನೆಲೆಸಿತ್ತು. ಯೋಹಾನನ ಬಾಲ್ಯ ಸಂದದ್ದು ಈ ನಗರದಲ್ಲಿ. ಅಕ್ಕಸಾಲಿಯಾಗಿ ಇವನು ವೃತ್ತಿಶಿಕ್ಷಣ ಪಡೆದ. ಇದೇ ಮುಂದೆ ಅವನಿಗೆ ಅಚ್ಚಿನ ಮೊಳೆಗಳನ್ನು ತಯಾರಿಸುವುದಕ್ಕೂ ಕೊರೆಯುವು ದಕ್ಕೂ ಬೇಕಾದ ಮೂಲಜ್ಞಾನವನ್ನು ಒದಗಿಸಿತು. ಅಕ್ಷರಗಳನ್ನು ವಿಪರ್ಯಯವಾಗಿ ಸಮಗಾತ್ರದ ಲೋಹಮೊಳೆಗಳ ತುದಿಗಳಲ್ಲಿ ಕೊರೆಯುವುದು, ಪಾಠಾನುಸಾರ ಈ ಮೊಳೆಗಳನ್ನು ಜೋಡಿಸಿ ನಿರ್ದಿಷ್ಟ ಮುದ್ರಣಫಲಕವನ್ನು ತಯಾರಿಸು ವುದು. ಇದರ ಮೇಲೆ ಯುಕ್ತ ಪ್ರಮಾಣದಲ್ಲಿ ಶಾಯಿಯನ್ನು ಸವರಿ ಸೂಕ್ತ ಕಾಗದದ ಮೇಲೆ ಈ ಫಲಕವನ್ನು ಒತ್ತುವುದರ ಮೂಲಕ ಮುದ್ರಿತಪ್ರತಿಯನ್ನು ಸಿದ್ಧಪಡಿಸುವುದು–ಇವು ಗೂಟೆನ್ ಬರ್ಗ್ ಕನಸು ಕಂಡು ಸುಮಾರು ಇಪ್ಪತ್ತು ವರ್ಷಗಳ ನಿರಂತರ ಪ್ರಯತ್ನದಿಂದ ನನಸಾಗಿಸಿದ ಸಾಹಸಗಳು.

ಮೈನ್ಸ್‌ಟ್ಜ್‌ನಲ್ಲಿರುವ ಗೂಟೆನ್‌ಬರ್ಗ್ ಸ್ಮಾರಕದ ಒಂದು ಭಾಗ–ಅರೆಉಬ್ಬು ಚಿತ್ರಣ

ಹೀಗೆ ಗೂಟೆನ್‌ಬರ್ಗ್ ಇತಿಹಾಸ ನಿರ್ಮಾಪಕ ಉಪಜ್ಞೆಕಾರನಾಗಿದ್ದರೂ ವ್ಯಾವಹಾರಿಕವಾಗಿ ಅವನು ಸೋಲನ್ನೇ ಅನುಭವಿಸುತ್ತಿದ್ದ. ತನ್ನ ಮುದ್ರಣ ತಂತ್ರವನ್ನು ಕಾರ್ಯಗತಗೊಳಿಸಲು ಅವನು ಸಾಲಮಾಡಿ ಮುಂದುವರಿಸಿದ. ಆದರೆ ಮುದ್ರಣ ಪ್ರಾಯೋಗಿಕವಾಗಿ ಯಶಸ್ವಿ ಆದಾಗಲೂ ಈತನಿಗೆ ಅದರ ಆರ್ಥಿಕ ಲಾಭ ಸಿದ್ಧಿಸಲಿಲ್ಲ. ಕಾಲವಿನ್ನೂ ಪಕ್ವವಾಗಿರದಿದ್ದುದೇ ಇದರ ಕಾರಣ. ಹೀಗಾಗಿ ನ್ಯಾಯಾಲಯದ ಪ್ರಕರಣಗಳನ್ನು ಈತ ಎದುರಿಸಬೇಕಾಯಿತು. ಅಲ್ಲಿ ತನ್ನ ಸಮಸ್ತ ಯಂತ್ರಗಳನ್ನೂ ಸಾಲಗಾರರಿಗೆ 1455ರಲ್ಲಿ ಕಳೆದುಕೊಳ್ಳುವ ದುಸ್ಥಿತಿಗೆ ಈಡಾದ. ಸಾಲಗಾರನಾಗಿಯೇ ಇವನು ಸು. 1468ರ ಫೆಬ್ರವರಿ 3 ರಂದು ಮೈನ್ಸ್‌ಜ಼ನಲ್ಲಿ ನಿಧನ ಹೊಂದಿದ. *

**ಗೂಡುಗಳು :** ತಮ್ಮ ವಾಸಕ್ಕೆ, ಮೊಟ್ಟೆಗಳನ್ನಿಡುವುದಕ್ಕೆ, ಮರಿಗಳ ಪಾಲನೆಗೆ ಹಕ್ಕಿ, ಇರುವೆ, ಕಣಜ, ಜೇನುನೊಣ ಮುಂತಾದ ಅನೇಕ ಬಗೆಯ ಪ್ರಾಣಿಗಳು ಕಟ್ಟುವ ಸುರಕ್ಷಿತ ನೆಲೆಗಳು (ನೆಸ್ಟ್ಸ್). ಪ್ರಸಕ್ತ ಲೇಖನದಲ್ಲಿ ಹಕ್ಕಿಯ ಗೂಡುಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ. (ಗೂಡುಗಳ ರಚನೆ) ಅವುಗಳನ್ನು ಕಟ್ಟುವ ಜಾಗವನ್ನು ಆರಿಸುವುದು, ಗೂಡನ್ನು ಕಟ್ಟುವ ವಿಧಾನ, ಇವೆಲ್ಲದರಲ್ಲೂ ಹಕ್ಕಿಗಳು ವೈಶಿಷ್ಟ್ಯವನ್ನು ತೋರಿಸುತ್ತವೆ.

ಮೊಟ್ಟೆಗಳನ್ನು ಗೂಡಿನಲ್ಲಿಟ್ಟು, ಅವುಗಳನ್ನು ಶತ್ರುಗಳಿಂದ ರಕ್ಷಿಸಿ, ಕಾವಿಗೆ ಕುಳಿತು ಮರಿ ಮಾಡಿ ಅವುಗಳನ್ನು ಪೋಷಿಸುವುದು ಸಾಮಾನ್ಯವಾಗಿ ಹೆಣ್ಣುಹಕ್ಕಿಯ ಕೆಲಸವಾದರೂ ಗಂಡುಹಕ್ಕಿಯೂ ಹೆಣ್ಣಿನೊಡನೆ ಸಹಕರಿಸಿ, ಸಂತಾನವನ್ನು ಕಾಪಾಡುವುದರಲ್ಲಿ ಸಮಭಾಗಿಯಾಗುತ್ತದೆ. ಮೊಟ್ಟೆಗಳನ್ನಿಡುವ ಕಾಲಕ್ಕೆ ಮುಂಚಿತವಾಗಿಯೇ, ಒಂದು ಸಂಸಾರದ ಗಂಡು ಹೆಣ್ಣು ಹಕ್ಕಿಗಳೆರಡೂ ಕೂಡಿ ಗೂಡನ್ನು ಕಟ್ಟಲು ತೊಡಗುವುದನ್ನು ಕಾಗೆ, ಗುಬ್ಬಚ್ಚಿ, ಕಾಡುಪಾರಿವಾಳ, ಹದ್ದು ಮುಂತಾದವುಗಳಲ್ಲಿ ಕಾಣಬಹುದು.

ಗೂಡುಗಳಲ್ಲಿ ಸಾಮಾನ್ಯ ವಾದ ಪೊಟರೆಗಳಂತೆ ಕಾಣುವ ಒರಟಾದ ಗೂಡು ಗಳಿಂದ ಹಿಡಿದು ಕುಶಲತೆ ಯಿಂದ ನೇಯ್ದ ಗೀಜಗನ ಸುಂದರವಾದ ಗೂಡುಗಳವರೆಗೆ ವಿವಿಧ ಬಗೆಗಳನ್ನು ಕಾಣಬಹುದು. ಹಕ್ಕಿಗಳು ಪ್ರಕೃತಿಯಲ್ಲಿ ಸಹಜವಾಗಿ ಕಾಣಬರುವ ವಾಸಕ್ಕೆ ಯೋಗ್ಯವಾದ ಸ್ಥಳಗಳನ್ನೇ ಗೂಡುಗಳಾಗಿ ಉಪಯೋಗಿಸಬಹುದು ಅಥವಾ ತಮ್ಮ ತಮ್ಮ ಅರ್ಹತೆ ಮತ್ತು ರೀತಿ ನೀತಿಗನುಗುಣ ವಾದ ಗೂಡುಗಳನ್ನು ಬೇರೆ ಬೇರೆ ವಸ್ತುಗಳಿಂದ ಕಟ್ಟಬಹುದು.

ಕೆಲವು ಹಕ್ಕಿಗಳು ಪ್ರಕೃತಿ ಯಲ್ಲಿ ಸಹಜವಾಗಿರುವ ನೆಲದ ತೂತುಗಳನ್ನೇ ಗೂಡುಗಳನ್ನಾಗಿ ಉಪಯೋಗಿಸಿಕೊಳ್ಳುತ್ತವೆ. ಇನ್ನು ಕೆಲವು ಹಕ್ಕಿಗಳು ಎಲೆಗಳ ರಾಶಿಯಲ್ಲಿ ಮೊಟ್ಟೆಗಳನ್ನಿಡುತ್ತವೆ. ಗೂಬೆಗಳು, ಗಿಳಿಗಳು ಮರದ ಪೊಟರೆಗಳಲ್ಲಿ ಮೊಟ್ಟೆಗಳನ್ನಿಡುತ್ತವೆ. ಇವುಗಳಲ್ಲಿ ಗೂಡುಕಟ್ಟುವ ಕುಶಲತೆ ಏನೂ ಕಂಡುಬರುವುದಿಲ್ಲ. ಆದರೆ ಕೆಲವು ಹಕ್ಕಿಗಳು ಸಹಜವಾಗಿ ಇರುವ ಗೂಡುಗಳನ್ನೇ ಅಲ್ಪಸ್ವಲ್ಪವಾಗಿ ಕೊರೆದೋ, ಬೇರೆ ಸಾಮಗ್ರಿಗಳನ್ನು ಸೇರಿಸಿಯೋ ರಚಿಸುತ್ತವೆ. ಇದು ಗೂಡು ನಿರ್ಮಾಣದ ವಿಕಾಸದ ಮೊದಲ ಹೆಜ್ಜೆ.



ಬೆಳ್ಳಕ್ಕಿ ಗೂಡು

ಮರುಕುಟಿಗ ಹಕ್ಕಿಗಳು ಗೂಡು ಕಟ್ಟುವುದರಲ್ಲಿ ಈ ವಿಧಾನವನ್ನು ಅನುಸರಿಸುತ್ತವೆ. ಕೆಲವೊಮ್ಮೆ ಪೊಟರೆಗಳನ್ನು ಹುಡುಕಿಕೊಂಡು ಹೋಗುವ ಬದಲು, ತಾವೇ ಸ್ವತಃ ತಮ್ಮ ಕೊಕ್ಕಿನಿಂದ ಗೂಡನ್ನು ಕೊರೆಯುತ್ತವೆ.



ಕವಲು ತೋಕೆ ಹಕ್ಕಿಯ ಗೂಡು

ಹಾರನ್‌ಬಿಲ್ (ಮಂಗಟ್ಟೆ ಹಕ್ಕಿ)ಎಂಬ ಹಕ್ಕಿ ಮರದ ಪೊಟರೆಗಳಲ್ಲಿ ಮೊಟ್ಟೆಯನ್ನು ಇಡುತ್ತದೆ. ಹೆಣ್ಣುಹಕ್ಕಿ ಕಾವಿಗೆ ಕೂಡುತ್ತಲೇ ಒಂದು ಸಣ್ಣ ರಂಧ್ರವನ್ನು ಮಾತ್ರ ಬಿಟ್ಟು ಪೊಟರೆಯ ಬಾಯನ್ನು ಮುಚ್ಚಿಬಿಡುತ್ತದೆ. ಈ ತೂತಿನಿಂದ ಗಂಡು ಹಕ್ಕಿ, ಒಳಗಿರುವ ಹೆಣ್ಣುಹಕ್ಕಿಗೆ ಆಹಾರವನ್ನು ಒದಗಿಸುತ್ತದೆ. ಮೊಟ್ಟೆಗಳು ಒಡೆದು ಮರಿಗಳಾಗಿ, ಅವು ಬಲಿತ ಮೇಲೆ ಮುಚ್ಚಳವನ್ನು ಒಡೆದುಕೊಂಡು, ಹೆಣ್ಣುಹಕ್ಕಿ ಹೊರಗೆ ಬರುತ್ತದೆ. ಈ ರೀತಿ ಗೂಡಿನ ಬಾಯನ್ನು ಮುಚ್ಚುವುದು, ಹಾವು ಮುಂತಾದ ಶತ್ರುಗಳು, ಗೂಡಿನ ಒಳಹೊಕ್ಕು, ಮೊಟ್ಟೆ, ಮರಿಗಳನ್ನು ತಿನ್ನದಂತೆ ತಡೆಯಲು ಇರುವ ಉಪಾಯ.



ಚಾಫಿನ್ಸ್ ಹಕ್ಕಿಯ ಗೂಡು

ಗೂಡಿಗೆ ಯೋಗ್ಯವಾದ ಸಹಜವಾದ ಪೊಟರೆಗಳು ಮುಂತಾದ ಸ್ಥಳಗಳು ಎಲ್ಲ ಹಕ್ಕಿಗಳಿಗೂ ಸಿಗುವುದು ಸ್ವಲ್ಪ ಕಷ್ಟ. ಈ ರೀತಿಯ ಅಭಾವವನ್ನು ಕೆಲವು ಹಕ್ಕಿಗಳು ತಾವೇ ಗೂಡನ್ನು ಕಟ್ಟುವುದರಿಂದ ಹೋಗಲಾಡಿ ಸುತ್ತವೆ. ಹೀಗೆ ಸರಳರೀತಿಯಲ್ಲಿ ರಚಿಸಿದ ಗೂಡುಗಳಲ್ಲಿ ಸಾಮಾನ್ಯ ವಾದುದೆಂದರೆ, ಮರಗಳ ಮೇಲೆ ಬರಿಯ ಕಡ್ಡಿಗಳಿಂದ ಕಟ್ಟಿದಂಥವು. ಇಂಥ ಗೂಡುಗಳನ್ನು ಕಾಡು ಪಾರಿವಾಳ,

ಕಾಗೆ, ಹದ್ದುಗಳು ಕಟ್ಟುತ್ತವೆ. ಈ ಗೂಡುಗಳು ಎಷ್ಟು ಒರಟಾಗಿರುತ್ತವೆಂದರೆ ಕಡ್ಡಿಗಳ ಸಂದಿನಿಂದ ಮೊಟ್ಟೆಗಳು ಹೊರಕ್ಕೆ ಕಾಣುತ್ತಿರುತ್ತವೆ. ಅಲ್ಲದೆ ಮಳೆ, ಬಿಸಿಲು, ಗಾಳಿಗಳಿಂದ ಮೊಟ್ಟೆಗಳಿಗೆ ರಕ್ಷಣೆಯಿರುವುದಿಲ್ಲ. ಗೂಡು ಕಟ್ಟುವುದರಲ್ಲಿ ಇದಕ್ಕಿಂತ ಮುಂದುವರಿದ ಹಕ್ಕಿಗಳು ಗೂಡುಗಳಿಗೆ ವಿಶಿಷ್ಟವಾದ ಆಕಾರವನ್ನು ಕೊಡುತ್ತವೆ. ಇಂಥ ಗೂಡುಗಳಲ್ಲಿ, ಕಡ್ಡಿಗಳ ನಡುವೆ ಮೊಟ್ಟೆಗಳು ಸುರಕ್ಷಿತವಾಗಿರಲು ಸಾಕಷ್ಟು ತಗ್ಗಾದ ಸ್ಥಳವಿರುತ್ತದೆ. ಕೆಲವು ಸಣ್ಣ ಪುಟ್ಟ ಹಕ್ಕಿಗಳು ಸಣ್ಣ ಕಡ್ಡಿಗಳು, ಗಿಡದ ಬೇರುಗಳು, ಹುಲ್ಲು ಮುಂತಾದ ನಯವಾದ ವಸ್ತುಗಳನ್ನು ಗೂಡು ಕಟ್ಟಲು ಉಪಯೋಗಿಸುತ್ತವೆ. ಹೀಗೆ ಹುಲ್ಲುಗಳಿಂದ ಕಟ್ಟಿದ ಗೂಡುಗಳನ್ನು ಗುಬ್ಬಚ್ಚಿ ಮುಂತಾದ ಹಕ್ಕಿಗಳಲ್ಲಿ ಕಾಣಬಹುದು. ಕೆಲವು ಪಕ್ಷಿಗಳು ಈ ವಸ್ತುಗಳನ್ನು ಕುಶಲವಾಗಿ ನೇಯ್ದು ಬಟ್ಟಲಿನಂತಹ ಗೂಡುಗಳನ್ನು ಮರದ ಮೇಲೋ ಗಿಡಗಳ ಪೊದರಿನಲ್ಲಿಯೋ ಕಟ್ಟುತ್ತವೆ. ಅಲ್ಲದೆ ಗೂಡುಗಳ ಒಳಗೆ ಮೃದುವಾದ ನಾರು, ಕೂದಲು, ಹತ್ತಿ, ಉಣ್ಣೆ ಮುಂತಾದ ವಸ್ತುಗಳಿಂದೊಡಗೂಡಿದ ಮೆತ್ತೆಗಳನ್ನು ರಚಿಸುತ್ತವೆ.



ವಾಬ್ಲರ್ ಹಕ್ಕಿಯ ಗೂಡು

ಹಾಡುವ ಥ್ರಶ್ (ಸಾಂಗ್ ಥ್ರಶ್) ಹಕ್ಕಿ ತನ್ನ ಗೂಡಿನ ಒಳಭಾಗವನ್ನು ಜೇಡಿಯ ಮಣ್ಣಿನಿಂದ ಮೆತ್ತಿ ಗಟ್ಟಿಯಾದ ಮಣ್ಣಿನ ಬಟ್ಟಲಿನಂತಿರುವ ಗೂಡನ್ನು ಕಟ್ಟುತ್ತದೆ.

ಇದಕ್ಕಿಂತಲೂ ಹೆಚ್ಚು ಕುಶಲತೆಯನ್ನು ತೋರಿಸುವ ಹಕ್ಕಿಗಳು, ಗೂಡಿಗೆ ಮೇಲ್ಛಾವಣಿಯನ್ನು ಕಟ್ಟಿ, ಒಂದು ಪಕ್ಕಕ್ಕೆ ಸಣ್ಣದೊಂದು ಬಾಗಿಲನ್ನು ರಚಿಸುತ್ತವೆ.

ಈ ರೀತಿಯ ಕುಶಲತೆಯನ್ನು ಉದ್ದನೆಯ ಬಾಲದ ಟಿಟ್ ಹಕ್ಕಿಯ ಗುಂಡನೆಯ ಗೂಡಿನಲ್ಲಿ ನೋಡಬಹುದು. ಈ ಗೂಡಿನ ಒಳಭಾಗದಲ್ಲಿ ಹಕ್ಕಿ ಆಯ್ದು ತಂದ ಪುಕ್ಕಗಳ ಮೆತ್ತೆ ಇರುತ್ತದೆ.

ಗುಬ್ಬಚ್ಚಿ ಗೂಡು

ಇವೆಲ್ಲಕ್ಕಿಂತಲೂ ಹೆಚ್ಚು ಕುಶಲತೆಯನ್ನು ತೋರುವ ಹಾಗೂ ಸುಂದರವಾದ ಗೂಡುಗಳನ್ನು ಕಟ್ಟುವ ಹಕ್ಕಿಗಳೆಂದರೆ ಗೀಜಗನ ಜಾತಿಗೆ ಸೇರಿದ ಹಕ್ಕಿಗಳು. ಅವುಗಳ ಗೂಡಿನ ರಚನೆಯನ್ನನುಸರಿಸಿ ಅವನ್ನು ಗೀಜುಗ (ವೀವರ್ ಬರ್ಡ್) ಮತ್ತು ದರ್ಜಿ ಹಕ್ಕಿ (ಟೇಲರ್ ಬರ್ಡ್) ಎಂದು ಕರೆಯುತ್ತಾರೆ. ಗೂಡು ಕಟ್ಟುವುದರಲ್ಲಿ ಇವುಗಳ ಚಮತ್ಕಾರ ನಿಜವಾಗಿಯೂ ಪ್ರಶಂಸನೀಯವಾದುದು. ಇವು ಗೂಡು ಕಟ್ಟುವ ಸ್ಥಳವನ್ನು ಹುಡುಕುವುದರಲ್ಲೂ ನಿಜವಾದ ಜಾಣ್ಮೆಯನ್ನು ತೋರಿಸುತ್ತವೆ.

ದಟ್ಟವಾದ ಎಲೆಗಳುಳ್ಳ ಮರಗಳಲ್ಲಿ, ಗಿಡಗಳಲ್ಲಿ, ಪೊದೆಗಳಲ್ಲಿ, ಎಲೆಗಳನ್ನೇ ಹೊಲಿದು ಕಟ್ಟಿರುವ ದರ್ಜಿಹಕ್ಕಿಯ ಗೂಡನ್ನು ಸುತ್ತಲ ಸನ್ನಿವೇಶದಿಂದ ಪ್ರತ್ಯೇಕಿಸಿ ಪತ್ತೆಹಚ್ಚುವುದು ಬಹಳ ಕಷ್ಟ. ಎಲೆಗಳ ನಡುವೆ, ಅದರ ಗೂಡು ಸಹ ಒಂದು ಎಲೆಯಂತೆ ಕೊಂಬೆಯಿಂದ ತೂಗಾಡುತ್ತಿರುತ್ತದೆ. ಒಂದೇ ಒಂದು ಎಲೆಯಿಂದ ಗೂಡು ಕಟ್ಟಬಹುದು ಅಥವಾ ಎರಡು ಎಲೆಗಳನ್ನು ಸೇರಿಸಿ ಹೊಲಿದು ಕಟ್ಟಬಹುದು. ಜೇಡರ ಹುಳುಗಳ ಬಲೆಯಲ್ಲಿರುವ ದಾರಗಳನ್ನು ತಂದು, ದರ್ಜಿ ಹಕ್ಕಿ ತನ್ನ ಗೂಡನ್ನು ಎಲೆಗಳನ್ನು ಸೇರಿಸಿ, ದರ್ಜಿಯಂತೆ ಹೊಲಿದು ಕಟ್ಟುತ್ತದೆ. ಗೂಡಿನ ಒಳಗೆ ಹತ್ತಿ, ಉಣ್ಣೆ ಮುಂತಾದ ಮೆತ್ತನೆಯ ವಸ್ತುಗಳಿಂದ ಮೆತ್ತೆಗಳನ್ನು ಮಾಡಿ ಮೊಟ್ಟೆ ಗಳನ್ನಿಡುತ್ತವೆ.



ಗೀಜಗನ ಗೂಡು

ಗೀಜಗ ಹಕ್ಕಿ ಸಣ್ಣ ಸಣ್ಣ ನಾರಿನ ತುಂಡುಗಳನ್ನು ಶೇಖರಿಸಿ ತಂದು, ಅದನ್ನು ಗೂಡಿನಂತೆ ನೇಯುತ್ತದೆ. ಕೆರೆಕುಂಟೆಗಳ ದಡದಲ್ಲಿ ಬೆಳೆದಿರುವ ಮರಗಿಡಗಳ ರೆಂಬೆಗಳಿಂದ ಇಂಥ ಗೂಡುಗಳು ತೂಗುಬಿದ್ದಿರುವುದನ್ನು ಕಾಣ ಬಹುದು. ಈ ಎರಡು ಜಾತಿಯ ಹಕ್ಕಿಗಳೂ ಗೂಡನ್ನು ಕಟ್ಟುವಾಗ ನೋಡಲು ಬಹಳ ಮೋಜೆನಿಸುತ್ತದೆ. ಗೂಡಿನ ಒಳಗೊಂದು, ಹೊರ ಗೊಂದು ಹಕ್ಕಿ ಕುಳಿತು, ಕೊಕ್ಕಿನ ಸಹಾಯದಿಂದ, ದಾರ ಅಥವಾ ನಾರನ್ನು ಹೊರಗಿನ ಹಕ್ಕಿ ಹೊರಗಿನಿಂದ ಒಳಕ್ಕೂ ಒಳಗಿರುವ ಹಕ್ಕಿ ಹೊರಕ್ಕೂ ಗಂಟೆಗಟ್ಟಲೆ ಆಹಾರ ಸೇವನೆಯನ್ನು ಮರೆತು, ಹೊಲಿಯುವುದನ್ನೂ ನೇಯುವುದನ್ನೂ ನೋಡಲು ಬಲು ಸೊಗಸು. ಹೀಗೆ ನೇಯ್ದ ಗೂಡುಗಳಲ್ಲಿ, ಶತ್ರುಗಳನ್ನು ಮೋಸಪಡಿಸಲು, ಎಲ್ಲಿಗೋ ದಾರಿತೋರುವ ಸುಳ್ಳು ಬಾಗಿಲನ್ನೂ ಮಾಡುವುದುಂಟು. ಈ ರೀತಿಯ ಗೂಡುಗಳನ್ನು ಪೆಂಡ್ಯುಲೈನ್ ಟಿಟ್ ಎಂಬ ಹಕ್ಕಿಗಳಲ್ಲಿ ಕಾಣಬಹುದು. ಗೂಡನ್ನು ಕೇವಲ ಒಂದು ಸಂಸಾರದ ಎರಡು ಹಕ್ಕಿಗಳೇ ಅಲ್ಲದೆ, ಆ ಜಾತಿಯ ಇತರ ಹಲವಾರು ಹಕ್ಕಿಗಳೂ ಸೇರಿ ಕಟ್ಟಬಹುದು. ಆದರೆ ಇದು ಬಹಳ ಅಪರೂಪ.

ದರ್ಜಿ ಹಕ್ಕಿಯ ಗೂಡು

ಕೆಲವು ಹಕ್ಕಿಗಳು ಗೂಡು ಕಟ್ಟುವುದಿಲ್ಲ. ಬದಲಾಗಿ, ತಮ್ಮ ಮೊಟ್ಟೆಗಳನ್ನು ಬೇರೆ ಹಕ್ಕಿಗಳ ಗೂಡಿನಲ್ಲಿಟ್ಟು ಮರಿ ಮಾಡುತ್ತವೆ. ಇಲ್ಲಿ ಎರಡು ಬಗೆಯ ಹಕ್ಕಿಗಳ ಮೊಟ್ಟೆಗಳೂ ತಮ್ಮ ಗಾತ್ರ, ಆಕಾರ ಮತ್ತು ಬಣ್ಣದಲ್ಲಿ ಒಂದೇ ರೀತಿ ಇರುವುದರಿಂದ ಮೋಸಹೋಗುವ ಹಕ್ಕಿಗೆ ತನ್ನ ಮೂರ್ಖತ್ವ ತಿಳಿಯುವುದಿಲ್ಲ. ಕೋಗಿಲೆಗಳು ಹೀಗೆ ಕಾಗೆಯ ಗೂಡಿನಲ್ಲಿ ಮೊಟ್ಟೆಗಳನ್ನಿಡುತ್ತವೆ. ಕಾಗೆಯ ಮೊಟ್ಟೆಗೂ ಕೋಗಿಲೆಯ ಮೊಟ್ಟೆಗೂ ವ್ಯತ್ಯಾಸವೇ ಇರುವುದಿಲ್ಲ. ಮೊಟ್ಟೆಯೊಡೆದು ಮರಿ ಹೊರಬೀಳುವವರೆಗೂ ಕಾಗೆ ಅದನ್ನು ಪೋಷಿಸುತ್ತದೆ. ಮರಿ ಕೂಗಲು ತೊಡಗಿದಾಗಲೇ ಕಾಗೆಗೆ ತನ್ನ ತಪ್ಪು ತಿಳಿಯುವುದು. ಇಷ್ಟು ಹೊತ್ತಿಗಾಗಲೇ ಕೋಗಿಲೆಯ ಮರಿಗೆ ಹಾರುವ ಶಕ್ತಿ ಬಂದಿರುವುದರಿಂದ ಕಾಗೆಗೆ ಸಿಗದಂತೆ ಹಾರಿ ಹೋಗುತ್ತದೆ.



ಪೆಂಡ್ಯುಲೈನ್ ಟಿಟ್ ಹಕ್ಕಿಯ ಗೂಡು

ಗೂಡು ಕಟ್ಟುವ ಹಕ್ಕಿಗಳು ಗೂಡು ಕಟ್ಟುವುದರಲ್ಲಿ ತೋರಿಸುವ ಕುಶಲತೆಗೆ ಮೇರೆಯೇ ಇಲ್ಲ. ಕೆಲವು ಹಕ್ಕಿಗಳು ಗೂಡಿನ ಒಳಭಾಗದಲ್ಲಿ ರಾತ್ರಿಯ ಹೊತ್ತು ಬೆಳಕಿಗಾಗಿ ಮಿಣುಕು ಹುಳುಗಳನ್ನು ಹಿಡಿದು ತಂದು ಜೇಡಿಯ ಮಣ್ಣಿನ ಮಂಟಪ ಕಟ್ಟಿ ಅದಕ್ಕೆ ಅಂಟಿಸಿಕೊಂಡು ಆ ಮಿಣುಕು ಹುಳುವನ್ನೂ ಪೋಷಿಸುತ್ತವೆ ಎಂದು ಹೇಳುವುದುಂಟು.

ಗೂಡು ಕಟ್ಟುವುದರಲ್ಲಿ ಗಂಡು ಹಕ್ಕಿ ಯಾವ ಪಾತ್ರವನ್ನೂ ವಹಿಸದಿರಬಹುದು. ಇಲ್ಲವೆ ಅದರದೇ ಮುಖ್ಯ ಪಾತ್ರವಾಗಬಹುದು. ಕೆಲವು ಹಕ್ಕಿಗಳು ಒಂದು ವರ್ಷ ಉಪಯೋಗಿಸಿದ ಅಥವಾ ವಾಸಿಸಿದ ಗೂಡುಗಳಲ್ಲಿ ಮರು ವರ್ಷ ವಾಸಿಸದಿರಬಹುದು. ಆದರೂ ಕೆಲವು ಪಕ್ಷಿಗಳು, ಒಂದು ಸಾರಿ ಕಟ್ಟಿದ ಗೂಡುಗಳನ್ನು ಪ್ರತಿವರ್ಷವೂ ಸರಿಪಡಿಸಿಕೊಂಡು ಉಪಯೋಗಿಸುತ್ತವೆ. ಮೊಟ್ಟೆಯಿಂದ ಹೊರಬಿದ್ದ ಹೊಸ ಮರಿಗಳು ಕೂಡ, ದೊಡ್ಡವಾಗಿ ಮೊಟ್ಟೆ ಇಡುವ ಕಾಲ ಬಂದಾಗ, ತಾಯಿ ತಂದೆಗಳ ನೆರವು ಇಲ್ಲದೆ, ಕಲಿಯದೆ ತಮ್ಮ ಜಾತಿಗನುಗುಣವಾದ ಗೂಡನ್ನು ಕಟ್ಟುತ್ತವೆ. ಇದು ಪಕ್ಷಿಗಳಲ್ಲಿ ವಂಶಪಾರಂಪರ್ಯವಾಗಿ ಬಂದಿರುವ ಹುಟ್ಟುಗುಣ. (ಎಚ್.ಬಿ.ಡಿ.)

**ಗೂಢಚರ್ಯೆ :** ವೇಷ ಮರೆಸಿಕೊಂಡು ಶತ್ರು ಶಿಬಿರಗಳಿಗಾಗಲಿ, ಶತ್ರು ದೇಶಗಳಿಗಾಗಲಿ ಹೋಗಿ ಅಲ್ಲಿನ ರಕ್ಷಣಾ ವ್ಯವಸ್ಥೆಗಳು, ಚಲನವಲನಗಳು, ರಾಜಕೀಯ ರಹಸ್ಯಗಳು ಮುಂತಾದವನ್ನು ಗುಟ್ಟಿನಲ್ಲಿ ಪತ್ತೆ ಮಾಡುವ ಕಾರ್ಯ (ಸ್ಪೈಯಿಂಗ್), ಬೇಹುಗಾರಿಕೆ ಪರ್ಯಾಯ ಪದ. ಗೂಢಚರ್ಯೆ ವೃತ್ತಿ ಮಾಡುವುದಕ್ಕೂ ಗುಪ್ತಚಾರರನ್ನು ಉಪಯೋಗಿಸುವ ವ್ಯವಸ್ಥೆಗೂ ಫ್ರೆಂಚ್ ಭಾಷೆಯ ಎಸ್ಪಿಯೋನೇಜ್ ಎಂಬ ಹೆಸರು ಈಗ ರೂಢಿಯಲ್ಲಿದೆ. ಎಲ್ಲ ಗೂಢಚಾರರಲ್ಲೂ ಇರಬೇಕಾದ ದಿಟ್ಟತನ, ಧೈರ್ಯ, ಸಾಹಸಪ್ರವೃತ್ತಿ, ಅಸಾಮಾನ್ಯವಾದ ವ್ಯವಹಾರ ಜ್ಞಾನ, ದೀರ್ಘಕಾಲದವರೆಗೂ ತಾಳಿಕೊಂಡಿರಬಲ್ಲ ಸಹನಶಕ್ತಿ, ಸಮರ್ಥ ವರದಿಗಳನ್ನು ಗುಪ್ತವಾಗಿ ರವಾನಿಸಬಲ್ಲ ಕೌಶಲ, ನಿರ್ಧರಣ ಸಾಮರ್ಥ್ಯ ಇತ್ಯಾದಿ. ತಮ್ಮತನವನ್ನು ಸದಾ ಉಳಿಸಿಕೊಂಡು ಇತರರೊಡನೆ ಸಮರಸವಾಗಿ ಬೆರೆತು ಅವರಿಂದ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸುವ ವ್ಯವಹಾರಚತುರರಿರುವರು.

ಗೂಢಚರ್ಯೆಯನ್ನು ವಿಶಾಲವಾಗಿ ಎರಡು ವಿಭಾಗಗಳಾಗಿ ಮಾಡಿ ಅಭ್ಯಸಿಸುವುದುಂಟು: ರಾಜಕೀಯ ಬೇಹುಗಾರಿಕೆ, ಸೇನಾ ಬೇಹುಗಾರಿಕೆ, ದೇಶದ ರಾಜಕೀಯ ವಿಷಯಗಳಿಗೂ ವ್ಯಕ್ತಿಗಳಿಗೂ ಸಂಬಂಧಿಸಿದ ಮಾಹಿತಿಗಳು, ವಾಣಿಜ್ಯ, ಆರ್ಥಿಕ ವ್ಯವಹಾರಗಳು, ಸರ್ಕಾರದ ಇತರ ಚಟುವಟಿಕೆಗಳು, ಯಂತ್ರ ಸ್ಥಾವರಗಳಿಗೆ ಸಂಬಂಧಿಸಿದ ವಿವರಗಳು ಇವೇ ಮುಂತಾದವನ್ನು ಸಂಗ್ರಹಿಸುವ ಬೇಹುಗಾರಿಕೆ ರಾಜಕೀಯ ಗೂಢಚರ್ಯೆಯ ಕಕ್ಷೆಯಲ್ಲಿ ಬರುತ್ತವೆ. ಪ್ರತಿಯೊಂದು ದೇಶದಲ್ಲೂ ಇಂಥ ವ್ಯವಸ್ಥೆ ಸರ್ಕಾರದ ಅಧೀನದಲ್ಲಿಯೇ ಇರುವುದು ಸಾಮಾನ್ಯ. ಅಲ್ಲದೆ ಖಾಸಗಿ ವ್ಯವಸ್ಥೆಗಳೂ ಆಯಾ ಹಿತಾಸಕ್ತಿಗಳ ಬೆಂಬಲಕ್ಕಾಗಿ ಇರುವುದು ಉಂಟು. ಯುದ್ಧ ಹಾಗೂ ಶಾಂತಿ ಕಾಲಗಳಲ್ಲಿ ನೇರವಾಗಿ ಯುದ್ಧ ಸಂಬಂಧ ವಿಷಯಗಳ ಮಾಹಿತಿ ಪಡೆಯುವುದು ಸೇನಾ ಗೂಢಚರ್ಯೆಯ ಪ್ರಧಾನೋದ್ದೇಶ.

ನಾನಾ ಸ್ವಭಾವಗಳ ವ್ಯಕ್ತಿಗಳು ನಾನಾ ಉದ್ದೇಶಗಳಿಂದ ಗೂಢಚರ್ಯೆವೃತ್ತಿಗೆ ಸೇರುತ್ತಾರೆ. ಅಪಾಯಗಳನ್ನು ಎದುರಿಸಬೇಕೆಂಬ ಇಚ್ಛೆ. ಸಾಹಸಗಳನ್ನು ಸಾಧಿಸುವ ಪ್ರವೃತ್ತಿಯುಳ್ಳವರು; ತಮ್ಮ ದೇಶದ ವಿರುದ್ಧ ಅತೃಪ್ತಿ, ಕೋಪವುಳ್ಳವರು; ಪಾತಕಗಳ ಚರಿತ್ರೆಯುಳ್ಳವರು; ರಾಷ್ಟ್ರೀಯ ಭಾವನೆ, ರಾಜನಿಷ್ಠೆಗಳಿಲ್ಲದೆ ಹೆಚ್ಚು ಹಣ ಬರುವ ಕಡೆ ಸೇರಿಕೊಳ್ಳುವ ಗೀಳಿರುವವರು; ದುಡ್ಡನ್ನು ಶೀಘ್ರವಾಗಿ ಗಳಿಸಲು ಯಾವುದಕ್ಕೂ ಹೇಸದೆ, ಏನುಬೇಕಾದರೂ ಮಾಡಲು ಸಿದ್ಧರಾಗಿರುವವರು ಮುಂತಾದವರಿರುತ್ತಾರೆ. ಸೇನಾ ಇಲಾಖೆಯಲ್ಲಿ ಶಿಕ್ಷಣ ಪಡೆದವರು ತಾವಾಗಿಯೇ ಮುಂದೆ ಬರುತ್ತಾರೆ. ಕೆಲವರು ಇಮ್ಮಡಿ ಬೇಹುಕಾರರಾಗಿ (ಡಬ್ಬಲ್ ಸ್ಪೈಸ್) ಮಿತ್ರ ಮತ್ತು ಶತ್ರು ಎರಡು ಪಕ್ಷಗಳಲ್ಲೂ ಕೆಲಸಮಾಡುತ್ತಾರೆ. ಕಾರ್ಲ್ ಷೂಲ್ ಮೇಯ್ಸ್ಟರ್ ಎಂಬ ಚರಿತ್ರೆಯ ಅತ್ಯಂತ ಪ್ರಖ್ಯಾತ ಇಮ್ಮಡಿ ಬೇಹುಕಾರ ಫ್ರಾನ್ಸಿನ ಚಕ್ರವರ್ತಿ ಮೊದಲನೆಯ ನೆಪೋಲಿಯನ್ ಮತ್ತು ಫ್ರಾನ್ಸಿನ ಶತ್ರು ಆಸ್ಟ್ರಿಯದ ಹ್ಯಾಪ್ಸ್‌ಬರ್ಗ್ ಇಬ್ಬರಿಂದಲೂ ಸಂಬಳ ಪಡೆಯುತ್ತಿದ್ದ. ಕೆಲವರು ದೇಶಾಭಿಮಾನದಿಂದ ತಮ್ಮ ದೇಶದವರಿಗೆ ಸಹಾಯ ಮಾಡಬೇಕೆಂಬ ಘನವಾದ ಉದ್ದೇಶದಿಂದ ಗೂಡಚರ್ಯೆಗೆ ಸೇರಿ ಶತ್ರುಗಳಿಗೆ ಬಲಿಯಾಗುವುದುಂಟು. ಬ್ರಿಟಿಷ್ ನರ್ಸ್ ಈಡಿತ್ ಕೇವಲ್ ಎಂಬಾಕೆ ತನ್ನ ದೇಶದವರು ಶತ್ರುಗಳಿಂದ ಪಾರಾಗುವಂತೆ ಸಹಾಯ ಮಾಡಿದಳು. ಇದಕ್ಕಾಗಿ ಜರ್ಮನರು ಅವಳನ್ನು ಗುಂಡಿಕ್ಕಿ ಕೊಂದರು. ಲೂಯಿ ಬೆಟ್ಟಿಗ್‌ನಿಯರ್ ಎಂಬ ಫ್ರೆಂಚ್ ದೇಶಭಕ್ತಳಿಗೂ ಅದೇ ಗತಿಯಾಯಿತು. ಅಮೆರಿಕನ್ ಕ್ರಾಂತಿಯಲ್ಲಿ ಧರ್ಮನಿಷ್ಠನೂ ದೇಶಭಕ್ತನೂ ಆಗಿದ್ದ ನಾಥನ್ ಹೇಲ್ ಎಂಬ ಅಮೆರಿಕನನ್ನು ಬ್ರಿಟಿಷರು ಹಿಡಿದು ಗಲ್ಲಿಗೇರಿಸಿದರು. ಕೆಲವು ಕೃಪಣರು ದುಡ್ಡಿನಾಸೆಗೆ ಶತ್ರುಪಕ್ಷದ ಗೂಢಚಾರರಾಗಿ ವರ್ತಿಸಿ ತಮ್ಮ ದೇಶಕ್ಕೆ ದ್ರೋಹ ಮಾಡಿದ್ದೂ ಉಂಟು. ನಾರ್ವೆಯಲ್ಲಿ ಉನ್ನತ ಸೇನಾ ಹುದ್ದೆಯಲ್ಲಿದ್ದ ಕ್ವಿಸ್ಲಿಂಗ್ ಎಂಬಾತ ತನ್ನ ದೇಶಕ್ಕೆ ವಿಶ್ವಾಸಘಾತಕನಾಗಿ ಜರ್ಮನರಿಗೆ ರಹಸ್ಯಗಳನ್ನು ತಿಳಿಸಿದ್ದರಿಂದ ಅವನಿಗೆ ಮರಣದಂಡನೆಯಾಯಿತು. ಇಂಥ ದ್ರೋಹಿಗಳನ್ನು ಇಂದು ಇಂಗ್ಲಿಷಿನಲ್ಲಿ ಕ್ವಿಸ್ಲಿಂಗ್ ಎಂದೇ ಕರೆಯುವುದುಂಟು. ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಯ ಅಡ್ಮಿರಲ್ ವಿಲ್‌ಹೆಲ್ಮ್ ಕ್ಯಾನರಿಸ್ ಎಂಬಾತ ಬ್ರಿಟಿಷರೊಡನೆ ಸೇರಿಕೊಂಡು ಹಿಟ್ಲರನ್ನು ಕೊಲ್ಲಲು ನಡೆಸಿದ ಒಳಸಂಚಿಗಾಗಿ ಗಲ್ಲಿಗೇರಿಸಲ್ಪಟ್ಟ. ಇಂಗ್ಲೆಂಡಿನಲ್ಲಿ ಅತಿಗೋಪ್ಯ ಪರಮಾಣು ಶೋಧನೆಗಾಗಿ ನೇಮಿಸಲ್ಪಟ್ಟ ಕ್ಲಾಸ್‌ಫುಚ್ಸ್ ಮತ್ತು ಆಲನ್ ಮೇ ಎಂಬುವರು 1945ರಲ್ಲಿ ರಹಸ್ಯಗಳನ್ನು ರಷ್ಯನರಿಗೆ ತಿಳಿಸಿದರು. ಅಮೆರಿಕದ ಜೂಲಿಯನ್ ಮತ್ತು ಎಥೆಲ್ ರೋಜೆನ್‌ಬರ್ಗ್ ಎಂಬುವರು ಪರಮಾಣು ರಹಸ್ಯಗಳನ್ನು 1951ರಲ್ಲಿ ರಷ್ಯದ ಸರ್ಕಾರಕ್ಕೆ ತಿಳಿಸಿದ್ದಕ್ಕಾಗಿ ವಧಿಸಲ್ಪಟ್ಟರು. ರಷ್ಯದ ಏಜೆಂಟ್ ವಾಲ್ಟಿಮಿರ್ ಪೆಟ್ರೋವ್ ಮತ್ತು ಆತನ ಹೆಂಡತಿ ಆಸ್ಟ್ರೇಲಿಯಾದಲ್ಲಿ ರಷ್ಯನ್ ರಾಯಭಾರಿ ಇಲಾಖೆಯಲ್ಲಿದ್ದವರು ರಷ್ಯವನ್ನು ತ್ಯಜಿಸಿ ಆಸ್ಟ್ರೇಲಿಯ ಸರ್ಕಾರದ ಆಶ್ರಯವನ್ನು ಪಡೆದರು. ಬ್ರಿಟನ್ನಿನ ರಸಲ್ ಪಿಲ್ಟೀ ಮತ್ತು ಇನ್ನಿಬ್ಬರು ರಷ್ಯದ ಏಜೆಂಟುಗಳಾಗಿ ಗುಪ್ತ ಕೆಲಸ ಮಾಡಿದರೆಂದು ಹಿಡಿಯಲ್ಪಟ್ಟಾಗ ಅವರು ತಪ್ಪಿಸಿಕೊಂಡು ರಷ್ಯಕ್ಕೆ ಪಲಾಯನ ಮಾಡಿದರು.

ಪ್ರಪಂಚಾದ್ಯಂತ ಗೂಢಚಾರರಿಗಾಗಿ ಪ್ರತಿವರ್ಷವೂ ಕೋಟ್ಯಂತರ ರೂಪಾಯಿಗಳು ಖರ್ಚಾಗುತ್ತವೆ. ಕೆಲವು ಸಂದರ್ಭಗಳಲ್ಲಿ ಅವರಿಗಾಗಿ ಗುಪ್ತನಿಧಿಯನ್ನೂ ಶೇಖರಿಸಲಾಗುತ್ತದೆ. ಗೂಢಚರ್ಯೆಯಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಟ್ಟಳೆಗಳಿವೆ. ಒಂದು ರಾಷ್ಟ್ರದಲ್ಲಿ ಶತ್ರು ದೇಶದ ಗೂಢಚಾರರು ನಡೆಸುವ ಪ್ರಯತ್ನಗಳನ್ನೂ ಏರ್ಪಾಡುಗಳನ್ನೂ ಮುರಿದುಹಾಕಲು ಆ ರಾಷ್ಟ್ರದ ಗೂಢಚಾರರು ಪ್ರತಿಕ್ರಿಯೆ ಕ್ರಮಗಳನ್ನು ಆಚರಿಸುತ್ತಾರೆ. ಈ ಪ್ರತಿವಿಧಾನದ ಗೂಢಚಾರರು ಶತ್ರು ಗೂಢಚಾರರನ್ನು ಅವರ ಸಂಧಾನಗಳನ್ನು ಗುಟ್ಟಿನಲ್ಲಿ ಶೋಧಿಸುತ್ತಾ ಅವನ್ನು ಪ್ರತಿಕೂಲ ಕ್ರಮಗಳಿಂದ ನಿರ್ಮೂಲ ಮಾಡುತ್ತಾರೆ. ಈ ವ್ಯವಸ್ಥೆಗೆ ಪ್ರತಿಗೂಢಚರ್ಯೆ (ಕೌಂಟರ್-ಸ್ಪೈಯಿಂಗ್) ಎಂದು ಹೆಸರು. ಒಂದನೆಯ ಮಹಾಯುದ್ಧದ ಆರಂಭದಲ್ಲಿ ಬ್ರಿಟಿಷ್ ಗೂಢಚಾರರು ಇಂಗ್ಲೆಂಡಿನಲ್ಲಿದ್ದ ಎಲ್ಲ ಶತ್ರು ಏಜೆಂಟರನ್ನು ಹಿಡಿದು ಬಂಧಿಸಿದರು. ಜರ್ಮನರು ಇಂಗ್ಲೆಂಡಿನಲ್ಲಿ ಹೂಡಿದ್ದ ಗುಪ್ತ ಚಳವಳಿಗಳಿಗೆ ನಾಯಕನಾಗಿದ್ದ ಆರ್ನ್ಸ್ ಎಂಬ ಹಜಾಮನನ್ನು ಸೆರೆ ಹಿಡಿದ ಬಳಿಕ ಆ ಉಪದ್ರವ ಅಡಗಿತು. ಅಮೆರಿಕದಲ್ಲಿ ವಿದೇಶಿ ಬೇಹುಕಾರರ 33 ತಂಡಗಳು ಕಂಡು ಹಿಡಿಯಲ್ಪಟ್ಟವು.

ಗೂಢಚರ್ಯೆ ಪ್ರಪಂಚದ ಅತ್ಯಂತ ಪುರಾತನ ಕಸಬುಗಳಲ್ಲೊಂದು. ಅದು ಬಲು ಹಿಂದಿನಿಂದಲೂ ಯುದ್ಧತಂತ್ರದ ಒಂದು ಅಂಗವಾಗಿದೆ. ಪ್ರಾಚೀನ ಈಜಿಪ್ಷರು ಗೂಢಚರ್ಯೆಯ ಇಲಾಖೆಯನ್ನೇ ಸ್ಥಾಪಿಸಿದ್ದರು. ಅವರು ಗೂಢಚಾರರನ್ನು ಹಿಟ್ಟಿನ ಚೀಲಗಳಲ್ಲಿ ಬಚ್ಚಿಟ್ಟು ಅವನ್ನು ತಾವು ಹಿಡಿದುಕೊಳ್ಳಬೇಕೆಂದಿದ್ದ ಹಡಗುಗಳಲ್ಲಿ ಇಡುತ್ತಿದ್ದರು. ಅಲೆಗ್ಸಾಂಡರ್ ಮಹಾಶಯ ತನ್ನ ಕೈಕೆಳಗಿನ ಅಧಿಕಾರಿಗಳಲ್ಲಿ ನಂಬಿಕಸ್ಥರಾರೆಂಬುದನ್ನು ಒಂದು ತಂತ್ರದಿಂದ ಪತ್ತೆ ಮಾಡುತ್ತಿದ್ದ. ಪರ್ಷಿಯಕ್ಕೆ ದಂಡಯಾತ್ರೆ ಹೋದಾಗ ಅಧಿಕಾರಿಗಳ ಸಂದೇಶಗಳನ್ನು ಊರಿಗೆ ಒಯ್ಯಲು ವಿಶಿಷ್ಟದೂತನನ್ನು ಕಳಿಸುವೆನೆಂದೂ ಎಲ್ಲರೂ ಸಂದೇಶಗಳನ್ನು ದೂತನಿಗೆ ಕೊಡಬಹುದೆಂದೂ ತಿಳಿಸಿ ಎಲ್ಲರೂ ಕಾಗದಗಳನ್ನು ಹರಿಕಾರನಿಗೆ ಕೊಟ್ಟ ಬಳಿಕ ಅಲೆಗ್ಸಾಂಡರ್ ಅವನ್ನು ಗುಟ್ಟಾಗಿ ಓದಿಕೊಂಡು ಯಾರಾರು ಯಾರಾರು ರಾಜದ್ರೋಹಿಗಳೆಂಬುದನ್ನು ಅರಿಯುತ್ತಿದ್ದ. ಗ್ರೀಕರು ಬೇಹುಕಾರರ ತಂತ್ರದಿಂದ ಶತ್ರುಗಳ ರಕ್ಷಣಾಕ್ಷೇತ್ರವನ್ನು ಭೇದಿಸಿ ಟ್ರೋಜನ್ ಕುದುರೆಯನ್ನು ಹಿಡಿದರು. ಪರ್ಷಿಯದಲ್ಲಿ ನಿರ್ಬಂಧದಲ್ಲಿದ್ದ ಹಿಸಿಯಾಸ್ ಎಂಬಾತ ಗ್ರೀಕರಿಗೆ ಸುದ್ದಿ ಕಳಿಸಲು ಒಬ್ಬ ಗುಲಾಮನ ತಲೆಕೂದಲನ್ನು ಬೋಳಿಸಿ ಚರ್ಮದ ಮೇಲೆ ಬರೆದು, ಕೂದಲು ಬೆಳೆದನಂತರ ಅವನನ್ನು ಗ್ರೀಕರ ಬಳಿಗೆ ಕಳಿಸಿದ; ಗ್ರೀಕರು ಅವನ ಕೂದಲನ್ನು ಬೋಳಿಸಿ ಸುದ್ದಿಯನ್ನು ಓದಿಕೊಂಡರು. ಭಾರತದಲ್ಲಿ ಎಲ್ಲ ರಾಜ್ಯಗಳಲ್ಲೂ ಗೂಢಚಾರರ ವ್ಯವಸ್ಥೆ ಪ್ರಬಲವಾಗಿತ್ತು; ಅದು ಚಾಣಕ್ಯನ ಮುಖ್ಯ ತಂತ್ರ. ಕೆನಾನ್ ಪ್ರಾಂತದ ಸೈನಿಕ ರಹಸ್ಯಗಳನ್ನು ಪತ್ತೆ ಮಾಡಲು ಮೋಸೆಸ್ 12 ಗೂಢಚಾರರನ್ನು ಕಳಿಸಿದನೆಂದು ಬೈಬಲಿನಲ್ಲಿ ಉಲ್ಲೇಖವಿದೆ. ಸೇನಾಪತಿ ಸಿಪಿಯೋ ಆಫ್ರಿಕಾನಸ್ ಪ್ರ.ಶ.ಪೂ. 200ರಲ್ಲಿ ಹ್ಯಾನಿಬಾಲ್‌ನನ್ನು ಫ್ಯೂನಿಕ್ ಯುದ್ಧದಲ್ಲಿ ಸೋಲಿಸಿದ್ದು ಅವನ ಬೇಹುಕಾರರು ಆಫ್ರಿಕಾದಲ್ಲಿ ಹೊಗೆಯ ಸಂಕೇತಗಳಿಂದ ಶತ್ರುವಿನ ಚಲನವಲನಗಳನ್ನು ತಿಳಿಸಿದ್ದರಿಂದ ಗೂಢಚಾರರ ಸಹಕಾರವಿಲ್ಲದೆ ಸಿಪಿಯೋ ಯುದ್ಧಪರಂಪರೆಯನ್ನು ಗೆಲ್ಲಲಾಗುತ್ತಿರಲಿಲ್ಲ. 17ನೆಯ ಶತಮಾನದಲ್ಲಿ ಬ್ರಿಟಿಷ್ ನೌಕಾಧಿಕಾರಿ ಸ್ಯಾಮ್ಯುಎಲ್ ಪೆಪಿಸ್ ಎಂಬಾತ ನಿದ್ರೆ ಮಾಡುತ್ತಿದ್ದ ಒಬ್ಬ ಡಚ್

ರಾಯಭಾರಿಯ ಜೇಬಿನಿಂದ ಬೀಗದ ಕೈಯನ್ನು ಕದ್ದುಕೊಂಡು, ಅವನ ಬೀರುವಿನ ಬೀಗವನ್ನು ತೆರೆದು, ಡಚ್‌ರಾಜ್ಯದ ಬಹು ರಹಸ್ಯದ ಕಾಗದ ಪತ್ರಗಳನ್ನು ತೆಗೆದು ತನ್ನ ರಾಜ ಎರಡನೆಯ ಚಾರಲ್ಸ್‌ಗೆ ಕೊಟ್ಟ.

ಮಧ್ಯಯುಗದಲ್ಲಿ ಚರ್ಚಿನ ಅಧಿಕಾರಿಗಳು ಗುಪ್ತ ಏಜೆಂಟರು ಯುರೋಪಿನಾದ್ಯಂತ ಇದ್ದರು. 14ನೆಯ ಶತಮಾನದಲ್ಲಿ ಮೂರನೆಯ ಎಡ್ವರ್ಡ್ ರಾಜ ಪೋಪನ ಆಸ್ಥಾನದ ರಹಸ್ಯಗಳನ್ನು ತಿಳಿಸಲು ಕೌಂಟ್ ನಿಕೋಲಿನೋ ಡೆಲ್‌ಫಿಸ್ಕೋ ಎಂಬ ಏಜೆಂಟರನ್ನು ನೇಮಿಸಿದ್ದ. ಸ್ವರಾಷ್ಟ್ರಕಲಹ, ಕ್ರಾಂತಿ, ಮತಸಂಬಂಧ ಉಪದ್ರವಗಳಲ್ಲಿ ಗುಪ್ತ ಏಜೆಂಟರ ಪಾತ್ರ ಹಿರಿದಾದದ್ದು. ಇಂಗ್ಲೆಂಡಿನ ಮೊದಲನೆಯ ಎಲಿಜಬೆತ್ ರಾಣಿಯ ಆಳ್ವಿಕೆಯಲ್ಲಿ ಬರ್ಲಿ ಮತ್ತು ವಾಲ್ಸಿಂಗ್ ಹಾಮ್‌ರು ಬಹು ಚಾತುರ್ಯದಿಂದ ಗೂಢಚಾರರನ್ನು ಉಪಯೋಗಿಸಿದರು. ಫ್ರಾನ್ಸಿನಲ್ಲಿ 13 ಮತ್ತು 15ನೆಯ ಲೂಯಿಗಳು ಗೂಢಚಾರರಿಂದ ಅಪಾರ ಪ್ರಯೋಜನವನ್ನು ಪಡೆದರು. ಗೂಢಚರ್ಯೆ 17ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಕ್ರಾಮ್‌ವೆಲ್‌ನಿಂದಲೂ ಫ್ರಾನ್ಸಿನಲ್ಲಿ ಕಾರ್ಡಿನಲ್ ರಿಷಿಲುನಿಂದಲೂ ವ್ಯವಸ್ಥಿತ ಪದ್ಧತಿಯಾಯಿತು. ರಿಷಿಲೂ ಅದನ್ನು ಪೂರ್ಣಗೊಳಿಸಿದ. ವೆನಿಸ್ ಪ್ರಜಾಧಿಪತ್ಯದ ಸ್ಬಿರ್ರಿ ಎಂಬ ಗುಪ್ತಸಂಸ್ಥೆಯೂ ರಷ್ಯದ ಒಖಾನಾ ಎಂಬ ಗುಪ್ತ ಪೊಲೀಸ್ ಸಿಬ್ಬಂದಿಯೂ ಫ್ರಾನ್ಸಿನ ಕ್ರಾಂತಿಯ ಕಾಲದ ಗುಪ್ತ ಪೊಲೀಸರೂ ರಷ್ಯದ ಝಾರ್ ಚಕ್ರವರ್ತಿಗಳ ಆಡಳಿತದಲ್ಲಿದ್ದ ಗುಪ್ತ ಏಜೆಂಟರೂ ಜರ್ಮನಿಯ ನಾಜಿಗಳ ಗೆಸ್ಟಾಪೋ ಎಂಬ ಗುಪ್ತ ಸುದ್ದಿಗಾರರೂ ಎಲ್ಲ ದರ್ಜೆಗಳ ಜನರೊಡನೆ ಬೆರೆತು ಅವರ ಮರ್ಮ ಒಳಸಂಚುಗಳನ್ನು ಅರಿತು ವರದಿ ಮಾಡುತ್ತಿದ್ದರು.

18ನೆಯ ಶತಮಾನದಲ್ಲಿ ಪ್ರಷ್ಯದ ಫ್ರೆಡರಿಕ್ ಮಹಾಶಯ ಬೇಹುಕಾರರ ತಂಡಗಳಿಂದ ನೆರವು ಪಡೆದ. ನೆಪೋಲಿಯನ್ ಬೇಹುಕಾರರನ್ನು ಬಹಳ ಉಪಯೋಗಿಸಿದ. ಅವನ ಯುದ್ಧಗಳಲ್ಲಿ ಗೂಢಚರ್ಯೆ ಕ್ರಮ ಬಹು ಸಮರ್ಥವಾಗಿತ್ತು. ಪೊಲೀಸ್ ಮಂತ್ರಿಯಾಗಿದ್ದ ಫೌಚೆಯ ಗೂಢಚಾರರು ಜಾಕೊಬಿನ್ನರು, ರಾಯಲಿಸ್ಟರು ಮುಂತಾದ ಅನೇಕ ಪಂಗಡದವರ ಒಳಸಂಚುಗಳನ್ನು ಪತ್ತೆ ಮಾಡಿದರು. ವಾಟರ್ಲೂ ಯುದ್ಧಕ್ಕೆ ಮುಂಚೆ ಡ್ಯೂಕ್ ಆಫ್ ವೆಲ್ಲಿಂಗ್ಟನ್ ಫ್ರಾನ್ಸಿನಲ್ಲಿದ್ದ ತನ್ನ ಗುಪ್ತ ಏಜಂಟರುಗಳಿಂದ ನೆಪೋಲಿಯನ್ನನ ಯೋಜನೆಯ ವಿವರಗಳನ್ನು ತಿಳಿದುಕೊಂಡಿದ್ದ. ರಷ್ಯ, ಆಸ್ಟ್ರಿಯ ಮತ್ತು ಪ್ರಷ್ಯ ರಾಷ್ಟ್ರಗಳು ಒಟ್ಟಿಗೆ ಪವಿತ್ರಮೈತ್ರಿ ಎಂಬ ಒಪ್ಪಂದವನ್ನು ಮಾಡಿಕೊಂಡ ಬಳಿಕ ಆ ಸಂಸ್ಥೆಯ ಗೂಢಚಾರರು, ಸುದ್ದಿಗಾರರು, ಗುಪ್ತ ಏಜೆಂಟರು ಯುರೋಪಿನಾದ್ಯಂತ ತಂಡೋಪತಂಡವಾಗಿ ಹರಡಿಕೊಂಡರು.

19ನೆಯ ಶತಮಾನದಲ್ಲಿ ಪ್ರಷ್ಯದ ಬಿಸ್‌ಮಾರ್ಕ್‌ನ ಬೇಹುಕಾರರು ಬಲೆಗಳಂತೆ ಹರಡಿಕೊಂಡಿದ್ದರು. ಆ ಗೂಢಚಾರರ ಇಲಾಖೆಯ ನಾಯಕನಾಗಿದ್ದ ವಿಲಿಯಮ್ ಸ್ಟೈಬರ್ ಎಂಬಾತ ಜರ್ಮನರ ಗೂಢಚರ್ಯೆಯನ್ನು ಬಹು ಚೆನ್ನಾಗಿ ವ್ಯವಸ್ಥೆ ಪಡಿಸಿದ್ದ. ಅವನು ವೇಷಪಲ್ಲಟ ಮಾಡಿಕೊಂಡು ನಾನಾ ಕಪಟರೂಪಗಳಲ್ಲಿ ಬೊಹೀಮಿಯಕ್ಕೆ ಹೋಗಿ ತನ್ನ ಗೂಢಚಾರರ ನೆರವಿನಿಂದ ಪ್ರಷ್ಯದ ಸೇನೆ 1866ರಲ್ಲಿ ಬೊಹೀಮಿಯ ಕದನದಲ್ಲಿ ಗೆಲ್ಲುವಂತೆ ಮಾಡಿದ. 1870ರಲ್ಲಿ ನಡೆದ ಫ್ರೆಂಚ್–ಪ್ರಷ್ಯನ್ ಯುದ್ಧಕ್ಕೆ ಸಿದ್ಧವಾಗಲು ಅವನು ಗೂಢಚರ್ಯೆ ತಯಾರಿಕೆಯನ್ನು ಬಹು ಪರಿಷ್ಕೃತವಾಗಿ ಮಾಡಿಕೊಂಡು ಫ್ರಾನ್ಸಿಗೆ 30,000 ಮಂದಿ ಗೂಢಚಾರರನ್ನು ಕಳುಹಿಸಿದ್ದ. ಈ ಪ್ರಚಂಡ ಗೂಢತಂತ್ರದಿಂದ ಪ್ರಷ್ಯಕ್ಕೆ ಗೆಲುವಾಯಿತು.

ಅಮೆರಿಕದ ಕ್ರಾಂತಿಯಲ್ಲಿ ಪ್ರಖ್ಯಾತ ಗೂಢಚಾರರಿದ್ದರು. ಬ್ರಿಟಿಷರ ಬೇಹುಕಾರ ಮೇಜರ್ ಜಾನ್ ಅಂಡ್ರೆಯನ್ನು ಅಮೆರಿಕನ್ನರು ಹಿಡಿದು ಗಲ್ಲಿಗೇರಿಸಿದರು. ಅಮೆರಿಕದ ಸ್ವರಾಷ್ಟ್ರಕಲಹದಲ್ಲಿ ಸ್ತ್ರೀಬೇಹುಕಾರರು ಎರಡು ಪಕ್ಷಗಳಲ್ಲೂ ಇದ್ದರು. ರೋಸ್ ಗ್ರೀನ್‌ಹೌ ಮತ್ತು ಬೆಲ್ಲೆ ಬಾಯ್ ಎಂಬ ಮಹಿಳಾ ಗೂಢಚಾರರು ಅಮೂಲ್ಯ ಸಂಗತಿಗಳನ್ನು ಶೇಖರಿಸಿ ರಾಷ್ಟ್ರಮಂಡಲಿಗೆ ಕಳಿಸುತ್ತಿದ್ದರು. ಇವು ಮಂಡಲಿಗೆ ವಿಜಯವನ್ನು ತಂದುವು. ಪಾಲಿನ್ ಕಷ್‌ಮನ್ ಎಂಬ ನಟಿ ಮತ್ತು ಎಮ್ಮಾ ಎಡ್ಮಂಡ್ಸ್ ಎಂಬ ಮಹಿಳೆ ಯೂನಿಯನ್ ಕಡೆ ಗೂಢಚಾರರಾಗಿದ್ದರು. ಎಲಿಜಬೆತ್ ಲ್ಯೂ ಎಂಬ ಯುವತಿ ಸಂಬಳವನ್ನು ತೆಗೆದುಕೊಳ್ಳದೆ ತನ್ನ ಸ್ವಂತ ಖರ್ಚಿನಿಂದಲೇ ಗುಪ್ತ ಏಜೆಂಟಳಾಗಿದ್ದಳು. ಮಂಡಲಿಯ ಬೇಹುಕಾರ ಕ್ರಮ ಎಷ್ಟು ಸಮರ್ಥವಾಗಿತ್ತೆಂದರೆ ಅಧ್ಯಕ್ಷ ಏಬ್ರಹಾಮ್ ಲಿಂಕನ್ನನ ಆಲೋಚನಾಸಭೆಯ ವೃತ್ತಾಂತಗಳೂ ಇತರ ರಹಸ್ಯಗಳೂ 49 ಗಂಟೆಗಳೊಳಗೆ ಮಂಡಲಿಯ ಮುಖಂಡರಿಗೆ ತಿಳಿದುಬರುತ್ತಿತ್ತು. ಬೆಲ್ಲೆ ಬಾಯ್ ಎಂಬ ಯುವತಿ ಬಂದೂಕು ಹಾರುತ್ತಿದ್ದಾಗಲೂ ಮುನ್ನುಗ್ಗಿ ಜನರಲ್ ಜಾಕ್ಸನ್‌ಗೆ ರಹಸ್ಯಸುದ್ದಿಗಳನ್ನು ತಿಳಿಸಿದಳು. ಇದರಿಂದ ಮಂಡಲಿಗೆ ಗೆಲುವಾಯಿತು. ಜಪಾನಿಯರು 1904–05ರಲ್ಲಿ ಮಂಚೂರಿಯವನ್ನು ಧಾಳಿಮಾಡುವುದಕ್ಕೆ ಮೊದಲು ರಷ್ಯದ ಚಲನವಲನಗಳನ್ನು ತಮ್ಮ ಗೂಢಚಾರರಿಂದ ಚೆನ್ನಾಗಿ ಅರಿತಿದ್ದರು.

ಮೊದಲನೆಯ ಮಹಾಯುದ್ಧಕ್ಕೆ ತಯಾರಾಗಲು ಜರ್ಮನ್ನರು ನಾನಾ ದೇಶಗಳಲ್ಲಿದ್ದ ತಮ್ಮ ಗೂಢಚಾರರಿಂದ ರಹಸ್ಯ ಸುದ್ದಿಗಳನ್ನು ತರಿಸಿದ್ದರು. ಅಮೆರಿಕ ತನ್ನ ಮಿತ್ರ ರಾಷ್ಟ್ರಗಳಿಗೆ ನೀಡುತ್ತಿದ್ದ ನೆರವನ್ನು ಮುರಿಯಲು ಜರ್ಮನಿ ಕೇಪಿಟಾನ್ ರಿಂಟೆಲ್ನ್ ಎಂಬ ಗುಪ್ತಚಾರರನ್ನು 1915ರಲ್ಲಿ ಅಮೆರಿಕಕ್ಕೆ ಕಳಿಸಿತು. ಆ ಕಾಲದಲ್ಲಿ ಫ್ರಾನ್ಸಿನಲ್ಲಿದ್ದ ರೈತರು, ಚಾಕರರು, ಹಜಾಮರು, ವ್ಯಾಪಾರ ಪ್ರವಾಸಿಗಳು, ಉಪಾಧ್ಯಾಯರುಗಳಲ್ಲಿ ಅನೇಕರು ಜರ್ಮನರಾಗಿದ್ದರು. ಅವರು ತಾವು ಜರ್ಮನರೆಂದು ತಿಳಿಸದೆ ಇತರ ಜನಾಂಗದವರೆಂದು ಹೇಳಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ಜರ್ಮನಿಯ ಗೂಢಚಾರರಾಗಿ ವರ್ತಿಸಿದರು. ಜರ್ಮನಿಯ ನೌಕೆಯಲ್ಲಿ ಹಿಂದೆ ಕ್ಯಾಪ್ಟನ್ ಆಗಿದ್ದ ಆಲ್‌ಫ್ರೆಡ್ ವೆಹ್ರಿಂಗ್ ಎಂಬಾತ ಆಲ್ಬರ್ಟ್ ಓಟೆಲ್ ಎಂಬ ಮಿಥ್ಯಾನಾಮದಲ್ಲಿ ಜರ್ಮನಿಯ ಏಜೆಂಟಾಗಿ ಸ್ಕಾಟ್ಲೆಂಡಿನಲ್ಲಿ ಬಹಳ ವರ್ಷ ನೆಲೆಸಿ 1938ರಲ್ಲಿ ಜರ್ಮನಿಗೆ ಬ್ರಿಟಿಷ್ ನೌಕೆಯ ರಹಸ್ಯಗಳನ್ನು ಹ್ರಸ್ವತರಂಗ ಪ್ರೇಷಕದಲ್ಲಿ (ಷಾರ್ಟ್ ವೇವ್ ಟ್ರಾನ್ಸ್ ಮೀಟರ್) ಕಳಿಸಿದ್ದರಿಂದ ಜರ್ಮನರು ಬ್ರಿಟಿಷ್ ಯುದ್ಧ ಹಡಗು ರಾಯಲ್ ಓಕನ್ನು ಮುಳುಗಿಸಲು ಸಾಧ್ಯವಾಯಿತು.

ಬ್ರಿಟಿಷರ ಗುಪ್ತ ಏಜೆಂಟುಗಳು ಜರ್ಮನಿಯಲ್ಲೂ ಜರ್ಮನಿ ವಶಪಡಿಸಿಕೊಂಡ ದೇಶಗಳಲ್ಲೂ ನಡೆಯುತ್ತಿದ್ದ ಸಂಗತಿಗಳನ್ನು ಬ್ರಿಟನ್ನಿಗೆ ವರದಿ ಮಾಡುತ್ತಿದ್ದರು. ತರಬೇಕಾದ ಏಜೆಂಟುಗಳನ್ನು ಅಮೆರಿಕನ್ನರು ಪ್ಯಾರಾಚೂಟ್‌ಗಳಿಂದ ಫ್ರಾನ್ಸಿನಲ್ಲಿ ಇಳಿಸಿದರು. ಅವರು ಜರ್ಮನರ ಐದು ಡಿವಿಜûನ್‌ಗಳು ಕೆಲಸ ಮಾಡದಂತೆ ತಂತ್ರ ನಡೆಸಿದರು. ರಷ್ಯದ ಗೂಢಚಾರ ರಿಚರ್ಡ್ ಸೋರ್ಜ್ ಎಂಬಾತ ಜಪಾನಿನಲ್ಲಿ ನಿಂತು ತಾನು ಜರ್ಮನ್ ಪಕ್ಷದ ಸುದ್ದಿಗಾರನೆಂದು ನಟಿಸಿ ಜರ್ಮನರ ರಹಸ್ಯಗಳನ್ನು ರಷ್ಯಕ್ಕೆ ತಿಳಿಸುತ್ತಿದ್ದ. ಜರ್ಮನರ 170 ಡಿವಿಜûನ್‌ಗಳು ಸೋವಿಯೆತ್ ಸರಹದ್ದಿನಲ್ಲಿದ್ದವೆಂದೂ ಅವು ಐದು ವಾರಗಳಲ್ಲಿ ಮಾಸ್ಕೋ ಕಡೆಯಲ್ಲಿ ಧಾಳಿಮಾಡುವುದೆಂದೂ ರಷ್ಯಕ್ಕೆ 1941ರಲ್ಲಿ ತಿಳಿಸಿದ. ಜಪಾನರು ಅವನನ್ನು ಹಿಡಿದು ವಧಿಸಿದರು.

ಒಂದನೆಯ ಮಹಾಯುದ್ಧದ ಕಾಲದಲ್ಲಿ ಗರ್‌ಟ್ರೂಡ್ ಮಾರ್ಗರೇಟ್ ಜೆಲ್ಲ್ ಎಂಬ ಬಹು ಸುಂದರ ಡಚ್ ನರ್ತಕಿ ಜರ್ಮನಿಯ ಬೇಹುಕಾರಳಾಗಿ ಮಾತಾಹಾರಿ ಎಂಬ ಹೆಸರಿನಲ್ಲಿ ಪ್ಯಾರಿಸಿನಲ್ಲಿ ನೆಲೆಸಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ರಹಸ್ಯಗಳನ್ನು ಜರ್ಮನಿಗೆ ನೀಡುತ್ತಿದ್ದಳು. ಠಕ್ಕು, ಬೆಡಗು, ಬಿನ್ನಾಣಗಳಿಂದ ಅವಳು ಅನೇಕ ಉನ್ನತ ಫ್ರೆಂಚ್ ಸೇನಾಧಿಕಾರಿಗಳನ್ನು ಮರಳುಮಾಡಿ ತನ್ನ ಬಲೆಯಲ್ಲಿ ಸಿಕ್ಕಿಸಿ, ಅಮಲೇರಿಸುವ ಮಾದಕಗಳಿಂದ ಮೈಮರೆಯುವಂತೆ ಮಾಡಿ, ಅವರಿಂದ ಸೇನಾ ರಹಸ್ಯಗಳನ್ನು ಸೆಳೆಯುತ್ತಿದ್ದಳು. ಅವಳು ತಿಳಿಸಿದ ಒಂದು ಸುದ್ದಿ 75,000 ಮಂದಿ ಫ್ರೆಂಚ್ ಸೈನಿಕರ ಕೊಲೆಯಾಗುವಂತೆ ಮಾಡಿತು. 1917ರಲ್ಲಿ ಫ್ರೆಂಚ್ ಅಧಿಕಾರಿಗಳು ಅವಳನ್ನು ಗುಂಡಿಕ್ಕಿ ಕೊಂದರು.

ಅಮೆರಿಕ, ಗ್ರೇಟ್ ಬ್ರಿಟನ್ ಮತ್ತು ಕೆನಡಗಳಲ್ಲಿ ಪರಮಾಣು ವಿಜ್ಞಾನದ ರಹಸ್ಯಗಳನ್ನು ಚೌರ್ಯ ಮಾಡಲು ರಷ್ಯನ್ ಗೂಢಚಾರರ ಅನೇಕ ತಂಡಗಳಿದ್ದವು. ಅಮೆರಿಕದಲ್ಲಿ ರಷ್ಯದ ಗೂಢಚಾರಿಯಾಗಿ ವರ್ತಿಸುತ್ತಿದ್ದ ಕರ್ನಲ್ ರುಡಾಲ್ಫ್ ಐವನೋವಿಚ್ ಏಬೆಲ್‌ಗೆ 1957ರಲ್ಲಿ 30 ವರ್ಷ ಕಾರಾಗೃಹ ಶಿಕ್ಷೆಯಾಯಿತು. ಇಂಗ್ಲೆಂಡಿನಲ್ಲಿ 1953 ರಿಂದಲೂ ರಷ್ಯದ ಏಜೆಂಟಾಗಿದ್ದ ಜಾರ್ಜ್ ಬೇಕ್‌ಗೆ 42 ವರ್ಷಗಳ ಕಾರಾಗೃಹ ಶಿಕ್ಷೆಯಾಯಿತು. ಇಟಲಿಯ ಕೈಗಾರಿಕಾಮಂಡಲಿಯೊಂದು ಅಮೆರಿಕದ ಒಂದು ಮಳಿಗೆಯಲ್ಲಿ ತನ್ನ ಕೆಲವು ರಸಾಯನಶಾಸ್ತ್ರಜ್ಞರನ್ನು ಕೆಲಸಕ್ಕೆ ಸೇರಿಸಿ ಅವರ ಮೂಲಕ ಅರಿಯೋಮೈಸಿನ್ ಎಂಬ ಔಷಧಿ ತಯಾರಿಯ ಸೂತ್ರವನ್ನು ಕಳವು ಮಾಡಿ, ಅದನ್ನು ಯುರೋಪಿನ ಅಂಗಡಿಗಳಲ್ಲಿ ಮಾರಿ ಯಥೇಚ್ಛ ಹಣವನ್ನು ಸಂಪಾದಿಸಿತು. ರಷ್ಯನ್ನರು ಮಾಸ್ಕೋ ಪಟ್ಟಣದ ಅಮೆರಿಕನ್ ರಾಯಭಾರಿ ಕಚೇರಿಯಲ್ಲಿ ಒಂದು ಗುಪ್ತ ಮೈಕ್ರೊಫೋನನ್ನು ಬಚ್ಚಿಟ್ಟು ಅನೇಕ ವರ್ಷ ಕಾಲ ಅಮೆರಿಕನ್ನರ ಸಂದೇಶಗಳನ್ನು ಮರೆಯಲ್ಲಿ ಕೇಳುತ್ತಿದ್ದರು.

ಎರಡನೆಯ ಮಹಾಯುದ್ಧ ಕಾಲದಲ್ಲಿ ಅನೇಕ ದೇಶಗಳ ಗೂಢಚಾರರು ವಿಶಿಷ್ಟ ಶಿಕ್ಷಣ ಕೇಂದ್ರಗಳಲ್ಲಿ ತರಬೇತಿ ಪಡೆದರು. ರೇಡಿಯೋ ಪ್ರೇಷಕಗಳನ್ನು ರಚಿಸುವುದು; ಆಕಾಶವಿಮಾನ, ಹಡಗುಗಳನ್ನು ವರ್ಗೀಕರಿಸಿ ಸರಿಯಾಗಿ ವರ್ಣಿಸುವುದು; ಫಿಲ್ಮಿನ ಮೇಲೆ ಬಹು ಸಣ್ಣ ಅಕ್ಷರಗಳಲ್ಲಿ ಬರೆದ ಸಂದೇಶಗಳಿರುವ ಸೂಕ್ಷ್ಮಗುರುತುಗಳನ್ನು (ಮೈಕ್ರೊಡಾಟ್ಸ್) ಉಪಯೋಗಿಸುವ ಕ್ರಮ; ಗುಪ್ತ ಲಿಪಿ, ಗುಪ್ತ ಬರವಣಿಗೆ, ಅದೃಶ್ಯ ಶಾಯಿಯ ಉಪಯೋಗ; ವಿದೇಶೀ ಭಾಷೆ, ಪದ್ಧತಿ, ಚರಿತ್ರೆಗಳಿಗೆ ಅನುಸಾರವಾಗಿ ವರ್ತಿಸುವುದು; ಹೊಸಬರೊಡನೆ ಗೆಳೆತನ ಬೆಳೆಸುವುದು; ಕಪಟ ವೇಷಗಳನ್ನು ಧರಿಸುವುದು; ರಾಸಾಯನಿಕಗಳಿಂದ ದ್ರಾವಣ ಮಾಡುವುದು; ಗುಪ್ತ ಸಂಕೇತಗಳು ಮುಂತಾದವನ್ನು ಕಲಿತರು. ಬೇಹುಕಾರರು ಸಮಾಚಾರಗಳನ್ನು ಸಂಗ್ರಹಿಸಲು ನಾನಾವಿಧಗಳನ್ನು ಅನುಸರಿಸುತ್ತಾರೆ–ಕಾಗದಪತ್ರಗಳು, ನಕ್ಷೆ, ಮ್ಯಾಪ್, ಏಕಸ್ವ

ಮುಂತಾದವನ್ನು ಕದಿಯುವುದು; ಫೋಟೊ ತೆಗೆಯುವುದು; ಲಂಚ ಕೊಡುವುದು; ಸುಲಭವಾಗಿ ಬಚ್ಚಿಟ್ಟು ಕೈಯಲ್ಲಿ ಒಯ್ಯುವಂಥ ನಿಸ್ತಂತು ಯಂತ್ರಗಳನ್ನು (ವೈರ್‌ಲೆಸ್ ಸೆಟ್ಸ್) ಉಪಯೋಗಿಸುವುದು; ಎಕ್ಸ್‌ಕಿರಣ ಸಲಕರಣೆ, ಮೈಕ್ರೋಫೋನುಗಳಿಂದ ಗೋಡೆಯಾಚೆ ನಡೆಯುವ ಮಾತುಗಳನ್ನು ಹೊಂಚಿ ಕೇಳುವುದು; ವಾಯು ತರಂಗಗಳಲ್ಲಿನ ಗುಪ್ತ ಸಂದೇಶಗಳನ್ನು ಹಿಡಿಯುವುದು ನಿಸ್ತಂತುವಿನಿಂದ ಕದ್ದು ಕೇಳುವುದು ಇತ್ಯಾದಿ. ನೀರಿನೊಳಗೆ ಹುದುಗಿಕೊಂಡು ಮೇಲಿರುವ ಹಡಗುಗಳಲ್ಲಾಗುವ ಸಂಗತಿಗಳನ್ನು ಕೇಳಲೂ ಶತ್ರುವಿನ ಹೊಸ ನಮೂನೆಯ ಹಡಗುಗಳನ್ನು ಅನ್ವೇಷಿಸಲೂ ಸಾಧ್ಯವಾಗುವಂತೆ ನೂತನ ಸಲಕರಣೆಗಳಾಗಿವೆ. ಉಪಗ್ರಹಗಳನ್ನು ಅಂತರಿಕ್ಷಕ್ಕೆ ಹಾರಿಸಿ ಅವು ಭೂಮಿಯನ್ನು ಸುತ್ತುತ್ತಿರುವಾಗ ಇತರ ದೇಶಗಳ ಭೂಸ್ಥಿತಿ, ಸೇನಾರಚನೆಗಳನ್ನು ಚಿತ್ರಿಸಿ, ಆ ಚಿತ್ರಗಳನ್ನು ಭೂಮಿಗೆ ಕಳಿಸುವ ವಿಧಗಳೂ ಬಂದಿವೆ. ಬ್ರಿಟನ್ನಿನ ಸ್ಕಾಟ್ಲೆಂಡ್‌ಯಾರ್ಡ್, ಫ್ರಾನ್ಸಿನ ಡುಕ್ಸೆಮಿ ಬ್ಯುರೋ ಮತ್ತು ರಷ್ಯದ ಕೆ.ವಿ.ಡಿ. ಸಂಸ್ಥೆಗಳಲ್ಲಿ ಗೂಢಚರ್ಯೆಯ ಇಲಾಖೆಗಳೇ ಇವೆ. ಚೀನದ ಗೂಢಚಾರರಂತೂ ಜಗತ್ತಿನಾದ್ಯಂತ ಹರಡಿಕೊಂಡಿದ್ದಾರೆ. (ಎಂ.ಜಿ.ಕೆ.ಎಂ.)

**ಗೂಢ ಸೇವಾ ವ್ಯವಸ್ಥೆ :** ಖೋಟಾ ನೋಟು ಅಥವಾ ನಾಣ್ಯ ತಯಾರಿಕೆಗಳ ಪತ್ತೆ, ಪ್ರತಿರೋಧ, ಸರ್ಕಾರದ ಉನ್ನತಾಧಿಕಾರಿಗಳ ಸುರಕ್ಷೆ, ಕಾನೂನು ಉಲ್ಲಂಘನೆ ಮತ್ತು ಭ್ರಷ್ಟಾಚಾರ ಮುಂತಾದವುಗಳ ತನಿಖೆ– ಈ ಕಾರ್ಯಗಳಿಗಾಗಿ ರಚಿತವಾದ ವಿಶೇಷದಳ, ಸೇವಾವ್ಯವಸ್ಥೆ (ಸೀಕ್ರೆಟ್ ಸರ್ವಿಸ್). ಸಾರ್ವಜನಿಕರ ವಿತ್ತ ಹಾಗೂ ಜೀವಗಳನ್ನು ರಕ್ಷಿಸುವುದು ಸರ್ಕಾರದ ಪ್ರಮುಖ ಕರ್ತವ್ಯ. ಇದರ ಅಂಗವಾಗಿ ಕಾನೂನು ಮತ್ತು ಶಾಂತಿಪಾಲನೆಯ ಕರ್ತವ್ಯವನ್ನು ನಿರ್ವಹಿಸಲು ಸರ್ಕಾರ ವ್ಯವಸ್ಥೆ ಹುಟ್ಟಿದಾಗಿನಿಂದಲೂ ಒಂದಲ್ಲ ಒಂದು ರೀತಿಯ ಪಡೆ ನಿರ್ಮಿತವಾಗಿದೆ. ಪ್ರತಿಯೊಂದು ದೇಶದಲ್ಲೂ ಆಂತರಿಕ ರಕ್ಷಣೆಗಾಗಿ ಮತ್ತು ಕಾನೂನು ಭಂಗವಾಗದಂತೆ ನೋಡಿಕೊಳ್ಳಲು, ಕಾನೂನು ಭಂಗ ಮಾಡಿದವರನ್ನು ಪತ್ತೆ ಹಚ್ಚುವ ಕಾರ್ಯವನ್ನು ನಿರ್ವಹಿಸಲು ಪೊಲೀಸ್ ಪಡೆಗಳು ರಚಿತವಾಗಿವೆ. ಇವು ಕೆಲವು ವೇಳೆಗಳಲ್ಲಿ ಯಾರಿಗೂ ತಿಳಿಯದಂತೆ ತಮ್ಮ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಅಪರಾಧ ಶೋಧನೆ ಮಾಡಲು ಮತ್ತು ಅಪರಾಧಿ ವ್ಯಕ್ತಿಗಳ ಮೇಲೆ ಗಮನ ಇಡಲು ಇವು ಗುಪ್ತರೀತಿಯಲ್ಲಿ ಕೆಲಸ ಮಾಡುವುದು ಅನಿವಾರ್ಯ. ಒಂದು ದೇಶದ ಇಡೀ ಪೊಲೀಸ್ ಪಡೆ ಗುಪ್ತವಾಗಿರಲು ಸಾಧ್ಯವಿಲ್ಲವಾದ್ದರಿಂದ ಇಂಥ ಕಾರ್ಯಾಚರಣೆಗಾಗಿಯೇ ವಿಶೇಷ ಪಡೆಗಳನ್ನು ನಿರ್ಮಿಸಲಾಗುತ್ತದೆ. ಇವು ಗೂಢ ಸೇನಾದಳ, ಗುಪ್ತ ಪೊಲೀಸ್ ಪಡೆ ಅಥವಾ ಗೂಢ ಸೇವಾವ್ಯವಸ್ಥೆಗಳು.

ಈ ವ್ಯವಸ್ಥೆಗಳು ಎಲ್ಲ ಸಮಾಜಗಳಲ್ಲೂ, ರಾಜ್ಯಗಳಲ್ಲೂ ಎಲ್ಲ ಬಗೆಯ ಸರ್ಕಾರಗಳಲ್ಲೂ ಅವಶ್ಯವೆನಿಸುತ್ತವೆ. ಪ್ರಜಾಪ್ರಭುತ್ವದಲ್ಲಿ ಇಂಥ ಗೂಢ ಕಾರ್ಯಾಚರಣೆ ನ್ಯಾಯಸಮ್ಮತವೇ? ಎಂಬ ಪ್ರಶ್ನೆ ಏಳುತ್ತದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಗುಪ್ತ ಕಾರ್ಯಾಚರಣೆಗೆ ಎಡೆ ಇರುವುದಿಲ್ಲ. ಅಪರಾಧಿಗೂ ಬಹಿರಂಗ ವಿಚಾರಣೆಯ ಕಾನೂನಿನನ್ವಯ ವಿಚಾರಣೆಯ ಮೂಲ ಹಕ್ಕು ಇದೆ. ಹೀಗಿರುವಲ್ಲಿ ಗುಪ್ತ ತನಿಖೆಯೇ ಮುಂತಾದವು ಪ್ರಜಾಪ್ರಭುತ್ವದಲ್ಲಿ ನಾಗರಿಕನ ಹಕ್ಕಿನ ವಿಪರ್ಯಾಸವಾಗುವುದೆಂದು ಹಲವರು ವಾದಿಸುತ್ತಾರೆ. ಆದರೆ ಸರ್ವಾಧಿಕಾರಿಗಳು ಮಾತ್ರವೇ ಅಲ್ಲದೆ ಪ್ರಜಾಪ್ರಭುತ್ವ ಸರ್ಕಾರಗಳೂ ಗೂಢದಳಗಳ, ಸೇವಾವ್ಯವಸ್ಥೆಯ ಸಹಾಯ ಪಡೆಯಲೇಬೇಕಾಗುತ್ತದೆ. ಆದ್ದರಿಂದಲೇ ಇಂದು ಅಮೆರಿಕ, ಇಂಗ್ಲೆಂಡ್, ಭಾರತ ಮುಂತಾದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ ಇಂತಹ ವ್ಯವಸ್ಥೆಗಳನ್ನು ಕಾಣಬಹುದು. ಅವನ್ನು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯಲಾಗಿದೆಯಾದರೂ ಸಾಮಾನ್ಯವಾಗಿ ಅವುಗಳ ಕರ್ತವ್ಯಗಳು ಎಲ್ಲ ಕಡೆಗೂ ಒಂದೇ ಆಗಿವೆ.

ಗೂಢ ಸೇವಾವ್ಯವಸ್ಥೆಗಳು ವಿಶೇಷ ಪಡೆಗಳೆನಿಸಿಕೊಳ್ಳುವುದರಿಂದ ಅವಕ್ಕೆ ವಿಶೇಷ ಅಧಿಕಾರಗಳನ್ನು ಕೊಡುವುದು ಸಹಜ. ದೇಶದ ಸಾದಾ ಪೊಲೀಸ್ ಪಡೆಗಿಂತ ಗೂಢದಳಗಳಿಗೆ ವಿಶೇಷ ಅಧಿಕಾರಗಳಿವೆ. ತನಿಖೆ ಮಾಡುವುದು, ಅಪರಾಧಿಗಳನ್ನು ಪತ್ತೆ ಹಚ್ಚುವುದು, ಅಪರಾಧಿ ಎಂಬ ಅನುಮಾನದ ಮೇಲೆ ಯಾವುದಾದರೂ ವ್ಯಕ್ತಿಯ ಬಗ್ಗೆ ತನಿಖೆ ಮಾಡಿ ಅವನ ಅಪರಾಧವನ್ನು ನಿರ್ಣಯಿಸುವುದು ಮುಂತಾದವು ಅವುಗಳ ಕಾರ್ಯಗಳು. ಈ ಕಾರ್ಯನಿರ್ವಹಣೆಯಲ್ಲಿ ಅವು ಸರ್ಕಾರದ ಕಾರ್ಯಾಂಗಕ್ಕೆ ಜವಾಬ್ದಾರವಾಗಿರುತ್ತವೆ. ಇತ್ತೀಚೆಗೆ ಗೂಢದಳದವರ ಸೇವೆಯನ್ನು ದೇಶದ ಗಣ್ಯವ್ಯಕ್ತಿಗಳ ಅತ್ಯುಚ್ಚ ಸ್ಥಾನದಲ್ಲಿರುವ ವ್ಯಕ್ತಿಗಳ ಹಾಗೂ ಅವರ ಪರಿವಾರದವರ ರಕ್ಷಣೆಯಲ್ಲೂ ಬಳಸಲಾಗುತ್ತಿದೆ. ರಾಷ್ಟ್ರಾಧ್ಯಕ್ಷರ, ಪ್ರಧಾನ ಮಂತ್ರಿಯ ಮತ್ತು ಅನ್ಯ ದೇಶಗಳ ಗಣ್ಯವ್ಯಕ್ತಿಗಳ ರಕ್ಷಣೆಯ ಹೊಣೆ ಗೂಢದಳದ್ದಾಗಿದೆ. ಗೂಢದಳದವರು ಇಂಥ ಗಣ್ಯ ವ್ಯಕ್ತಿಗಳ ಪರಿವಾರದವರಂತೆಯೇ ಸಾದಾ ಉಡುಪಿನಲ್ಲಿದ್ದು ಯಾರಿಗೂ ತಿಳಿಯದಂತೆ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿರುತ್ತಾರೆ. ಇವರ ಹೊಣೆ ಗುರುತರವಾದ್ದು. ಗೂಢದಳದವರನ್ನು ವಿಶೇಷರೀತಿಯ ಅಪರಾಧಗಳ ಶೋಧನೆಯಲ್ಲೂ ಉಪಯೋಗಿಸಲಾಗುವುದು. ಬ್ಯಾಂಕ್ ದರೋಡೆಗಳು, ಗಣ್ಯವ್ಯಕ್ತಿಗಳ ಕೊಲೆ, ಖೋಟಾನೋಟು ಹಾಗೂ ನಾಣ್ಯಗಳ ತಯಾರಿಕೆ, ವಂಚನೆ ಮುಂತಾದ ಪ್ರಕರಣಗಳಲ್ಲಿ ಪತ್ತೆಯ ಕಾರ್ಯವನ್ನು ಈ ಸೇವೆ ನಿರ್ವಹಿಸುತ್ತದೆ. ಇಂಗ್ಲೆಂಡಿನಲ್ಲಿ ಸ್ಕಾಟ್ಲೆಂಡ್ ಯಾರ್ಡ್, ಅಮೆರಿಕದಲ್ಲಿ ರಹಸ್ಯ ಪಡೆ, ಭಾರತದಲ್ಲಿ ಕೇಂದ್ರ ತನಿಖಾ ಮಂಡಲಿ ಮುಂತಾದವು ಇಂಥ ಕಾರ್ಯ ನಿರ್ವಹಿಸುತ್ತವೆ. ಗೂಢದಳದ ಕಾರ್ಯವ್ಯಾಪ್ತಿ ಕೇವಲ ಪತ್ತೆ ಹಚ್ಚುವುದೇ ಆಗಿರದೆ ಕೊಲೆ, ದರೋಡೆ ಮುಂತಾದ ಅಪರಾಧಗಳು ಜರುಗುವುದನ್ನು ತಪ್ಪಿಸುವುದೂ ಆಗಿದೆ. ಈ ದಿಶೆಯಲ್ಲಿ ಅವರು ಸಂಶಯಗ್ರಸ್ತ ವ್ಯಕ್ತಿಗಳ ಚಲನವಲನಗಳ ಮೇಲೆ ಯಾವಾಗಲೂ ಕಣ್ಣಿರಿಸಿರುತ್ತಾರೆ. ಗಣ್ಯವ್ಯಕ್ತಿಗಳು ಪ್ರವಾಸದಲ್ಲಿ ತೊಡಗಿದಾಗ, ಅವರು ಸಾರ್ವಜನಿಕ ಸಭೆಗಳೇ ಮುಂತಾದವುಗಳಲ್ಲಿ ಭಾಗವಹಿಸುವಾಗ, ಅವರಿಗಿಂತ ಮುನ್ನವೇ ಗೂಢಸೇನಾ ದಳದವರು ಯಾರಿಗೂ ತಿಳಿಯದಂತೆ ಕಾರ್ಯಾಚರಣೆಯಲ್ಲಿ ತೊಡಗಿರುತ್ತಾರೆ. ಉದಾಹರಣೆಗೆ ಇಂದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಗೂಢಾಸೇನಾ ಪಡೆಗೆ ಮೂರು ಪ್ರಮುಖ ಕರ್ತವ್ಯಗಳನ್ನು ವಹಿಸಿಕೊಡಲಾಗಿದೆ: ಮೊದಲನೆಯದಾಗಿ ಅಮೆರಿಕದ ಅಧ್ಯಕ್ಷರ, ಅವರ ಕುಟುಂಬ ವರ್ಗದವರ ನಿಯೋಜಿತ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ರಕ್ಷಣೆ; ಎರಡನೆಯದಾಗಿ, ಅಮೆರಿಕದ ನೋಟುಗಳು, ನಾಣ್ಯಗಳು ಮತ್ತು ಇತರ ಮುಖ್ಯ ದಸ್ತೈವಜುಗಳನ್ನು ಕುರಿತ ಕಾನೂನು ಉಲ್ಲಂಘಿಸುವವರನ್ನು ಪತ್ತೆಹಚ್ಚಿ ದಸ್ತಗಿರಿ ಮಾಡುವುದು. ಮೂರನೆಯದಾಗಿ, ಅಮೆರಿಕದ ಪ್ರಮುಖ ಹಣಕಾಸು ವ್ಯವಹಾರ ಸಂಸ್ಥೆಗಳ ಕಾನೂನುಗಳ ಉಲ್ಲಂಘನೆ ಮಾಡುವವರನ್ನು ಪತ್ತೆಹಚ್ಚಿ ದಸ್ತಗಿರಿ ಮಾಡುವುದು. ಈ ಕಾರ್ಯವ್ಯಾಪ್ತಿಯನ್ನು ಪರಿಶೀಲಿಸಿದಾಗ ಗೂಢಸೇನಾ ದಳದ ಪ್ರಾಮುಖ್ಯ ಮತ್ತು ಆವಶ್ಯಕತೆ ಪ್ರಜಾಪ್ರಭುತ್ವದಲ್ಲಿಯೂ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಗೂಢ ಸೇನಾದಳಗಳು ಎಷ್ಟೇ ಅವಶ್ಯವೆನಿಸಿದರೂ ಅವುಗಳ ಅಪಾಯಕಾರಿ ಪರಿಣಾಮಗಳನ್ನು ಕಡೆಗಣಿಸಲು ಬರುವುದಿಲ್ಲ. ಸದುದ್ದೇಶದಿಂದ ಸ್ಥಾಪಿತವಾಗುವ ಇಂಥ ಗುಪ್ತ ಪಡೆಗಳು ತಮ್ಮನ್ನು ನಿರ್ಮಿಸಿದ ಸರ್ಕಾರದ ಅಧಿಕಾರವನ್ನೇ ನಿರ್ಲಕ್ಷಿಸಿ ಪ್ರಭುತ್ವಕ್ಕೆ ಮಾರಕವಾಗಬಹುದು. ಇಂಥ ಪ್ರಸಂಗಗಳು ಅನೇಕ. ಉದಾಹರಣೆಗೆ, ಜರ್ಮನಿಯಲ್ಲಿ ಹೆನ್ರಿಚ್ ಹಿಮ್ಲರನ ನಾಯಕತ್ವದಲ್ಲಿ ರಚಿತವಾಗಿದ್ದ ನಾಜಿ಼ ಗುಪ್ತ ಪೊಲೀಸ್ ಪಡೆ (1933–36) ಜರ್ಮನ್ ಸರ್ಕಾರದ ಎಲ್ಲ ಶಾಖೆಗಳಲ್ಲೂ ಕೈವಾಡ ಹೊಂದಿ, ಹಿಟ್ಲರನಿಗಿಂತ ಹಿಮ್ಲರನೇ ಜರ್ಮನಿಯ ನಿಜವಾದ ಯಜಮಾನನಾಗಿದ್ದ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜರುಗಿದ ಅನೇಕ ಅನ್ಯಾಯ ಅತ್ಯಾಚಾರಗಳಿಗೆ ಈ ಗುಪ್ತ ಪೊಲೀಸ್ ಪಡೆ (ಗೆಸ್ಟಪೊ) ಕಾರಣ. ರಷ್ಯದ 1917ರ ಕ್ರಾಂತಿಯ ಅನಂತರ ಆ ದೇಶದಲ್ಲೂ ಗೂಢ ಸೇನಾದಳವನ್ನು (ಚೇಕಾ) ರಚಿಸಲಾಯಿತು. ದೇಶದ ವಿದ್ರೋಹಕಾರಿ ಚಟುವಟಿಕೆಗಳನ್ನು ಪತ್ತೆಹಚ್ಚುವುದು, ಸೆರೆಮನೆಗಳ ಮತ್ತು ಅಪರಾಧಿಗಳ ಶ್ರಮ ಶಿಬಿರಗಳ ಉಸ್ತುವಾರಿ, ರಾಜಕೀಯ ಅಪರಾಧಿಗಳ ಸುಧಾರಣೆ ಮುಂತಾದವು ಈ ಪಡೆಯ ಪ್ರಮುಖ ಕರ್ತವ್ಯಗಳು. ಲಾವ್ರೆಂತಿ ಬೆರಿಯ ಈ ಪಡೆಯ ಮುಖ್ಯಸ್ಥನಾಗಿದ್ದ. 1953ರಲ್ಲಿ ಆತನ ಪತನದ ಅನಂತರ ಈ ಗುಪ್ತ ಪಡೆಯನ್ನು ಪುನಃ ಸುಧಾರಿಸಲಾಯಿತು. ಅದು ಇಂದು ರಾಷ್ಟ್ರದ ಭದ್ರತಾ ಸಮಿತಿಯ ಉಸ್ತುವಾರಿಯಲ್ಲಿದೆ. ಕೆ.ಜಿ.ಬಿ. ಎಂದು ಇದನ್ನು ಕರೆಯಲಾಗಿದೆ. ಇಟಲಿಯಲ್ಲೂ ಮುಸೋಲಿನಿ ಗುಪ್ತ ಪಡೆಯ ಸಹಾಯ ದಿಂದಲೇ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದ. ನಿರಂಕುಶಾಡಳಿತವಿರುವೆಡೆಯಲ್ಲೆಲ್ಲ ಗುಪ್ತದಳಗಳನ್ನು ಸರ್ವಾಧಿಕಾರಿಯ ಸ್ಥಾನಭದ್ರತೆಗಾಗಿ ಉಪಯೋಗಿಸಲಾಗಿದೆ. ಪ್ರಜಾಪ್ರಭುತ್ವಗಳಲ್ಲೂ ಗುಪ್ತ ಪೊಲೀಸ್ ವ್ಯವಸ್ಥೆ ಅವಶ್ಯವೆನಿಸಿದರೂ ಅದನ್ನು ಸರಿಯಾದ ನಿಯಂತ್ರಣದಲ್ಲಿಡಬೇಕು. ಇಲ್ಲವಾದರೆ ಅವು ಪ್ರಜಾಪ್ರಭುತ್ವಕ್ಕೆ ಗಂಡಾಂತರವನ್ನೊಡ್ಡುವ ಸಂಭವವಿರುತ್ತದೆ. ಈ ವ್ಯವಸ್ಥೆ ರಾಜಕೀಯ ಚಟುವಟಿಕೆಗಳಲ್ಲಿ ತೊಡಗದಂತೆ ನೋಡಿಕೊಳ್ಳುವುದು ಬಹಳ ಅವಶ್ಯ. (ಎ.ಎಂ.ಆರ್.)

**ಗೂಢೋಕ್ತಿ :** ಇದೊಂದು ಅರ್ಥಾಲಂಕಾರ. ಒಬ್ಬನನ್ನು ಕುರಿತು ಹೇಳಬೇಕಾದ ಮಾತನ್ನು ಇನ್ನೊಬ್ಬನಿಗೆ ಹೇಳುವ ಕ್ರಮವುಳ್ಳದ್ದು. ಉದಾ – ಎಲೈ ಎತ್ತೆ ! ಪರರ ಗದ್ದೆಯಿಂದ ತೆರಳು. ಆ ಗದ್ದೆಯ ಪಾಲಕ ಬರುತ್ತಿದ್ದಾನೆ (ಗೂಢೋಕ್ತಿರನ್ಯೋದ್ದೇಶ್ಯಂ ಚೇದ್ಯದನ್ಯಮಂ ಪ್ರತಿ ಕಥ್ಯತೇ । ವೃಷಾಪೇಹಿ ಪರ ಕ್ಷೇತ್ರಾದಾಯಾತಿ ಕ್ಷೇತ್ರರಕ್ಷಕಃ– ಕುವಲಯಾನಂದಃ).

ಯಾವುದಾದರೊಂದು ಸಂದರ್ಭದಲ್ಲಿ ಎದುರಿಗಿರುವ ಒಬ್ಬನಿಗೆ ಮರೆಮಾಚುವಂತೆ, ಮತ್ತೊಬ್ಬನಿಗೆ ವಿಷಯ ತಿಳಿಯುವಂತೆ ಹೇಳಬೇಕಾದರೆ, ಆ ಮತ್ತೊಬ್ಬನಿಗೆ ಅದನ್ನು ನೇರವಾಗಿ ಹೇಳದೆ, ಅಪ್ರಕೃತವಾಗಿರುವ ಇನ್ನೊಬ್ಬನನ್ನುದ್ದೇಶಿಸಿ ಆಡಿದ ಚಮತ್ಕಾರದ

ಮಾತು ಇದು. ಮೇಲ್ಕಂಡ ಉದಾಹರಣೆಯಲ್ಲಿರುವ ವಿಷಯ ವಾಸ್ತವವಾಗಿ ಪರಸ್ತ್ರೀಕಾಮುಕನೊಬ್ಬನಿಗೆ– ಪರಸ್ತ್ರೀಯಿಂದ ದೂರವಿರು, ಅವಳ ಪತಿ ಬರುತ್ತಿದ್ದಾನೆ ಎಂಬುದಾಗಿ ಅನ್ವಯಿಸತಕ್ಕದ್ದು. ಆದರೆ ಕಾಮುಕನನ್ನುದ್ದೇಶಿಸಿ ನೇರವಾಗಿ ಹಾಗೆ ಹೇಳದೆ ಆಗಮಿಸುತ್ತಿರುವ ಪತಿಯಿಂದ ಅದನ್ನು ಮರೆಮಾಚಲು ಅಪ್ರಕೃತವಾಗಿರುವ ಎತ್ತನ್ನು ಕುರಿತು ಎತ್ತೆ, ತೆರಳು– ಮುಂತಾದ ಮಾತುಗಳಲ್ಲಿ ವಿಷಯ ಸೂಚಿತವಾಗಿದೆ. ಆ ಕಾಮುಕ ಮಾತ್ರ ಅದನ್ನು ಗ್ರಹಿಸಬಲ್ಲ. ಹೀಗೆ ವಾಸ್ತವವಾಗಿ ಕಾಮುಕನಿಗೆ ಹೇಳಲ್ಪಡಬೇಕಾದ ವಿಷಯ– ಪರಸ್ತ್ರೀಯಿಂದ ದೂರವಿರು ಇತ್ಯಾದಿ– ಅಪ್ರಕೃತವಾಗಿರುವ ಎತ್ತನ್ನು ಕುರಿತು ಬೇರೆ ಮಾತುಗಳಲ್ಲಿ ಹೇಳಲ್ಪಟ್ಟು ಪತಿಗೆ ಗೋಪ್ಯವೇ ಆಗಿ ಗೂಢೋಕ್ತಿ ಎನಿಸಿಕೊಂಡಿದೆ.

ಈ ಅಲಂಕಾರದಲ್ಲಿ ಶ್ಲೇಷದ ಭಂಗಿ ಇದೆ. ಇದರಲ್ಲಿ ಅಪ್ರಕೃತಕ್ಕೆ ಪ್ರಕೃತದೊಡನೆ ಅನ್ವಯವಿಲ್ಲದಿರುವುದರಿಂದ ಇದು ಶ್ಲೇಷಾಲಂಕಾರದಿಂದಲೂ ಕಾರ್ಯ ಕಾರಣಾದಿ ವ್ಯಂಗ್ಯತ್ವಗಳಿಲ್ಲದಿರುವುದರಿಂದ ಅಪ್ರಸ್ತುತ ಪ್ರಶಂಸಾಲಂಕಾರದಿಂದಲೂ ಬೇರೆಯಾಗಿದೆ.

(ಬಿ.ಕೆ.ಎಸ್.)

**ಗೂನು ತಿಮಿಂಗಲ :** ಮೆಗಾಪ್ಟರ ಜಾತಿಗೆ ಸೇರಿದ ಒಂದು ವಿಚಿತ್ರ ಬಗೆಯ ತಿಮಿಂಗಿಲ (ಹಂಪ್ ಬ್ಯಾಕ್ ವೇಲ್). ಸಿಟೇಸಿಯ ಗಣದ ಮಿಸ್ಟಿಸೆಟಿ ಉಪಗಣಕ್ಕೆ ಸೇರಿದೆ. ಈ ತಿಮಿಂಗಿಲದ ಬೆನ್ನಿನ ಮೇಲೆ ಸಣ್ಣದಾದ ಮತ್ತು ವಕ್ರವಾಗಿರುವ ಒಂಟಿ ಈಜುರೆಕ್ಕೆ ಇರುವುದರಿಂದಲೂ ಇದು ನೀರಿನಿಂದ ಹೊರಬರುವಾಗ ಗೂನಿನಂತೆ ಬಾಗಿರುವ ಹಾಗೆ ಕಾಣುವುದರಿಂದಲೂ ಇದಕ್ಕೆ ಗೂನು ತಿಮಿಂಗಿಲ ಎಂದು ಹೆಸರು ಬಂದಿದೆ. ಈ ತಿಮಿಂಗಿಲದಲ್ಲಿ ಭ್ರೂಣಾವಸ್ಥೆಯಲ್ಲಿ ಮಾತ್ರ ಸಣ್ಣ ಹಲ್ಲುಗಳು ಇದ್ದು ತಿಮಿಂಗಿಲ ಬೆಳೆದ ಹಾಗೆಲ್ಲ ಹಲ್ಲುಗಳು ಬಿದ್ದುಹೋಗಿ ಬಾಯಲ್ಲಿ ಬೇಲೀನ್ ಅಥವಾ



ತಿಮಿಂಗಿಲ ಮೂಳೆ ಬೆಳೆಯುತ್ತದೆ. ಬಾಯಂಗುಳದಿಂದ ತೂಗಾಡುವ ಇದು ಇಬ್ಭಾಗವಾಗಿದ್ದು ಇದರ ಎರಡು ಭಾಗಗಳು ಬಾಯಿಯ ಇಕ್ಕೆಡೆಗಳಲ್ಲಿ ಹೊಂದಾಣಿಕೆಯಾಗಿವೆ. ಬೇಲೀನ್ ಜರಡಿಯಂತಿರುವುದರಿಂದ ಸಣ್ಣ ಪ್ರಾಣಿಗಳನ್ನು ಆಹಾರವಾಗಿ ಹಿಡಿಯಲು ಅನುಕೂಲವಾಗಿದೆ. ಗೂನು ತಿಮಿಂಗಿಲ ದೈತ್ಯಾಕಾರದ್ದು ; ಸುಮಾರು 15ಮೀ ಉದ್ದಕ್ಕೆ ಬೆಳೆಯುತ್ತದೆ. ತೂಕ ಸುಮಾರು 4,000 ಕೆ.ಜಿ. ಗೂನು ತಿಮಿಂಗಿಲ ತನ್ನ ಆಕಾರದಲ್ಲೂ ನಡತೆಯಲ್ಲೂ ಮಿಕ್ಕ ತಿಮಿಂಗಿಲಗಳಿಗಿಂತ ಭಿನ್ನವಾಗಿದೆ. ಇದರ ಮುಂಗಾಲುಗಳು ಹುಟ್ಟುಗಳ ಹಾಗಿವೆ. ಹುಟ್ಟುಗಳ ಅಂಚುಗಳು ಒರಟಾಗಿವೆ. ಇತರ ದಂತರಹಿತ ತಿಮಿಂಗಿಲಗಳಂತೆಯೇ ಇದರಲ್ಲೂ ಹೆಬ್ಬೆಟ್ಟಿಲ್ಲ. ಆದರೆ 2ನೆಯ ಮತ್ತು 3ನೆಯ ಬೆರಳುಗಳಲ್ಲಿ, ಕೆಲವುವೇಳೆ 4ನೆಯ ಬೆರಳಿನಲ್ಲಿ ಹೆಚ್ಚು ಸಂಖ್ಯೆಯ ಮಣಿಕಟ್ಟುಗಳು ಇರುವುದರಿಂದ ಗೂನು ತಿಮಿಂಗಿಲದ ಮುಂಗಾಲುಗಳು ಉದ್ದವಾಗಿವೆ. ಸಾಮಾನ್ಯವಾಗಿ ತಿಮಿಂಗಿಲಗಳಲ್ಲಿ ಹಿಂಗಾಲುಗಳಿಲ್ಲ. ಆದರೆ ಗೂನು ತಿಮಿಂಗಿಲ ತನ್ನ ಭ್ರೂಣಾವಸ್ಥೆಯಲ್ಲಿ ಹಿಂಗಾಲುಗಳ ಕುರುಹುಗಳನ್ನು ಪ್ರದರ್ಶಿಸುತ್ತದೆ. ತಿಮಿಂಗಿಲ ಬೆಳೆದಂತೆಲ್ಲ ಇವು ಅದೃಶ್ಯವಾಗುತ್ತವೆ. 1919 ರಲ್ಲಿ ಅಮೆರಿಕದ ವಾಂಕುವರ್ ಬಳಿ ಸಿಕ್ಕಿದ ಒಂದು ಪ್ರೌಢ ಗೂನುತಿಮಿಂಗಿಲದಲ್ಲಿ ಮಾತ್ರ, ಗುದದ ಇಕ್ಕೆಡೆಗಳಲ್ಲಿ ಸುಮಾರು 1.3 ಮೀ ಉದ್ದದ, ಮೊನಚು ತುದಿಯ, ಕೊಳವೆಯಾಕಾರದ ಅಂಗಗಳಿದ್ದವು. ಇವುಗಳಲ್ಲಿ ಮೃದ್ವಸ್ಥಿಯ ಒಂದು ಫೀಮರ್ ಮತ್ತು ಮೂಳೆಯಿಂದಾದ ಒಂದು ಮೆಟಟಾರ್ಸಸ್ ಇದ್ದವು. ಇವನ್ನೆ ಹಿಂಗಾಲುಗಳೆಂದು ಭಾವಿಸಲಾಗಿದೆ.

ಗೂನು ತಿಮಿಂಗಿಲ ಬಾರ್ನಕಲ್ ಮುಂತಾದ ಕೆಲವು ಪರಾವಲಂಬಿಗಳಿಗೆ ಆಶ್ರಯದಾತ ಪ್ರಾಣಿಯಾಗಿದೆ. ಇವು ಇದರ ದೇಹದ ಹೊರ ಮೈಮೇಲೆ ಅಂಟಿಕೊಂಡಿರುತ್ತವೆ.

ಗೂನು ತಿಮಿಂಗಿಲಕ್ಕೆ ನಿರ್ದಿಷ್ಟವಾದ ಸಂತಾನೋತ್ಪತ್ತಿಯ ಕಾಲ ಇಲ್ಲ. ಗರ್ಭಾವಸ್ಥೆಯ ಅವಧಿ 11–12 ತಿಂಗಳು. ಆಗತಾನೇ ಹುಟ್ಟಿದ ಮರಿಯೂ ದೈತ್ಯಾಕಾರದ್ದೇ. ಇದರ ಉದ್ದ 5 ಮೀ ತೂಕ 1 ಟನ್. ತಾಯಿ ಮರಿಯನ್ನು ಬಹಳ ಪ್ರೀತಿಯಿಂದ ಸಾಕುತ್ತದೆ; ಅರೆಕ್ಷಣವೂ ಬಿಟ್ಟಗಲದು. ಶತ್ರುವಿನ ಕೈಗೆ ಸಿಕ್ಕಿಬಿದ್ದ ಪ್ರಸಂಗಗಳಲ್ಲೂ ಮರಿಯಿಂದ ಬೇರೆಯಾಗದೆ ಅದನ್ನು ರಕ್ಷಿಸಲು ಪ್ರಯತ್ನಿಸುತ್ತದೆ.

ಗೂನು ತಿಮಿಂಗಿಲಗಳು ಎಲ್ಲ ಸಾಗರಗಳಲ್ಲೂ ಕಂಡುಬರುತ್ತವೆ. ಒಂದು ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಇವು ತಮ್ಮ ಸ್ನೇಹ ಸ್ವಭಾವ ಮತ್ತು ವಿನೋದಪರತೆಗಳಿಂದಾಗಿ ಬೇಟೆಗಾರರಿಗೆ ಸುಲಭವಾಗಿ ಆಹುತಿಯಾಗುವುದರಿಂದ ಇವುಗಳ ಸಂಖ್ಯೆ ಇಳಿದಿದೆ. ಆದರೆ ಈಗ ಕಾನೂನುರೀತ್ಯ ಇವುಗಳನ್ನು ಸಂರಕ್ಷಿಸಲಾಗಿದೆ. (ಎನ್.ಪಿ.ಎ.)

**ಗೂಬೆ :** ಸ್ಟ್ರಿಜಿಫಾರ್ಮೀಸ್ ಗಣದ ಟೈಟಾನಿಡೀ ಮತ್ತು ಸ್ಟ್ರಿಜಿಡೀ ಕುಟುಂಬಗಳಿಗೆ ಸೇರಿದ ಸುಮಾರು 133 ಪ್ರಭೇದಗಳ ಹಕ್ಕಿಗಳಿಗಿರುವ ಸಾಮಾನ್ಯ ಹೆಸರು (ಔಲ್). ಎಲ್ಲ ಪ್ರಭೇದಗಳಿಗೂ ಸಮಾನವೆನಿಸುವ ಕೆಲವು ವಿಚಿತ್ರ ಲಕ್ಷಣಗಳಿವೆ. ಇವುಗಳಲ್ಲಿ ಮುಖ್ಯವಾದವು – ತಟ್ಟೆಯಂತೆ ಅಗಲವಾಗಿರುವ ಮುಖ, ಮುಖದ ಮುಂಭಾಗದಲ್ಲಿರುವ ದೊಡ್ಡ ಕಣ್ಣುಗಳು, ದಪ್ಪತಲೆ, ಮೋಟು ಕತ್ತು, ಮೃದುವಾದ ತುಪ್ಪಳದಂಥ ರೆಕ್ಕೆಪುಕ್ಕಗಳು.

ಬಾರ್ನ್ ಗೂಬೆ

ಗೂಬೆಗಳು ತಮ್ಮ ಕೊಕ್ಕೆಯಂಥ ಕೊಕ್ಕು ಮತ್ತು ಬಲವಾದ ಕಾಲುಗಳಿಂದ ಜೀವಂತ ಆಹಾರ ಪ್ರಾಣಿಗಳನ್ನು ಬೇಟೆಯಾಡಿ ತಿಂದು ಜೀವಿಸುತ್ತವೆ. ಇದರಿಂದಾಗಿ ಇವು ಹದ್ದು, ಗಿಡುಗಗಳಂತೆಯೇ ಹಿಂಸ್ರ ಪಕ್ಷಿಗಳು ಅನ್ನಿಸಿಕೊಂಡಿವೆ. ಈ ಕಾರಣದಿಂದಲೇ ಹಿಂದೆ ಇವನ್ನು ಹದ್ದು ಮತ್ತು ಗಿಡುಗಗಳ ಗುಂಪಿಗೆ ಸೇರಿಸಲಾಗಿತ್ತು. ಆದರೆ ಈ ಲಕ್ಷಣ ಹದ್ದು ಮತ್ತು ಗೂಬೆಗಳ ಸಮಾಂತರ ವಿಕಾಸವನ್ನು ತೋರಿಸುವುದೇ ಹೊರತು ಇವುಗಳ ಸಂಬಂಧವನ್ನಲ್ಲ. ಗೂಬೆಗಳ ಅಂಗರಚನೆ ಮತ್ತು ಸ್ವಭಾವಗಳಿಗೂ ಹದ್ದುಗಳ ಗುಣ ಲಕ್ಷಣಗಳಿಗೂ ಅನೇಕ ವ್ಯತ್ಯಾಸಗಳಿವೆ. ಹದ್ದುಗಳು ಹಗಲಿನಲ್ಲಿ ಬೇಟೆಯಾಡುವುವಾದರೆ ಗೂಬೆಗಳ ಚಟುವಟಿಕೆ ರಾತ್ರಿಯಲ್ಲಿ ಮಾತ್ರ. ಇದಕ್ಕೆ ಕಾರಣ ಗೂಬೆಗಳ ಪ್ರಮುಖ ಆಹಾರವಾದ ಇಲಿ, ಹೆಗ್ಗಣಗಳು ನಿಶಾಚರಿಗಳು. ಇವು ರಾತ್ರಿ ಬೇಟೆಯಾಡುವುದುರಿಂದ ಗೂಬೆಗಳಿಗೆ ಬೆಳಗಿನ ಸಮಯ ಕಣ್ಣು ಕಾಣುವುದಿಲ್ಲ ಎಂಬ ತಪ್ಪು ಕಲ್ಪನೆ ಜನರಲ್ಲಿ ಮನೆ ಮಾಡಿದೆ. ವಾಸ್ತವದಲ್ಲಿ ಗೂಬೆಗಳಿಗೆ ಕಣ್ಣು, ಕಿವಿ ಬಹಳ ಚುರುಕಾಗಿರುತ್ತವೆ.

ಅಂಟಾರ್ಕ್‌ಟಿಕ ಮತ್ತು ಪ್ರಮುಖ ಖಂಡಗಳಿಂದ ಬಲುದೂರವಿರುವ ಕೆಲವು ದ್ವೀಪಗಳನ್ನು ಬಿಟ್ಟು ಪ್ರಪಂಚದ ಎಲ್ಲ ಪ್ರದೇಶಗಳಲ್ಲೂ ಗೂಬೆಗಳು ಕಂಡುಬರುತ್ತವೆ. ಇವಕ್ಕೆ ಹೆಚ್ಚು ಕಡಿಮೆ ಎಲ್ಲ ಬಗೆಯ ಪರಿಸರಗಳಿಗೂ – ಮರುಭೂಮಿಯ ಬಂಜರು ವಾತಾವರಣದಿಂದ ಹಿಡಿದು ಉತ್ತರ ಮೇರು ಪ್ರದೇಶದ ತಂಡ್ರಾ ಪ್ರದೇಶ ಹಾಗೂ ಉಷ್ಣವಲಯದ ಮಳೆಕಾಡುಗಳ ತೇವಪೂರಿತ ವಾತಾವರಣದ ವರೆಗೂ – ಹೊಂದಿಕೊಂಡು ಜೀವಿಸುವ ಸಾಮರ್ಥ್ಯವಿದೆ. ಮೇಲೆ ಹೇಳಿದಂತೆ ಗೂಬೆಗಳು ಟೈಟಾನಿಡೀ ಮತ್ತು ಸ್ಟ್ರಿಜಿಡೀ ಕುಟುಂಬಗಳಿಗೆ ಸೇರಿವೆ. ಮೊದಲನೆಯ ಕುಟುಂಬಕ್ಕೆ ಕಣಜದ ಗೂಬೆಯ ವಿವಿಧ ಪ್ರಭೇದಗಳೂ (ಬಾರ್ನ್ ಔಲ್) ಎರಡನೆಯ ಕುಟುಂಬಕ್ಕೆ ಪ್ರರೂಪೀ ಗೂಬೆಗಳ (ಟಿಪಿಕಲ್ ಔಲ್ಸ್) ಸುಮಾರು 122 ಪ್ರಭೇದಗಳೂ ಸೇರಿವೆ.

ಸ್ಟ್ರಿಜಿಡೀ ಕುಟುಂಬಕ್ಕೆ ಸೇರಿದ ಗೂಬೆಗಳು ಪ್ರರೂಪೀ (ಟಿಪಿಕಲ್) ಬಗೆಯವು ಎನಿಸಿಕೊಂಡಿವೆ. ಇವುಗಳಲ್ಲಿ ಹೆಚ್ಚು ಕಡಿಮೆ ಎಲ್ಲ ಪ್ರಭೇದಗಳೂ ನಿಶಾಚರಿಗಳು. ಈ ಲಕ್ಷಣಕ್ಕೆ ಅಪವಾದವಾಗಿ ಉತ್ತರಮೇರು ಪ್ರದೇಶಗಳಲ್ಲಿ ಕಂಡುಬರುವ ಮಂಜಿನ ಗೂಬೆ *(ನಿಕ್ಟಿಯ ಸ್ಕ್ಯಾಂಡಿಯಾಕ್)* ಮಾತ್ರ ಹಗಲಿನಲ್ಲಿ ಬೇಟೆಯಾಡಬಲ್ಲದು. ಇದು ವಾಸಿಸುವ ನೆಲೆಯಲ್ಲಿ ವರ್ಷದಲ್ಲಿ ಆರು ತಿಂಗಳು ಕಾಲ ಸೂರ್ಯ ಮುಳುಗದೇ ಇರುವುದೇ ಇದರ ಈ ಗುಣಕ್ಕೆ ಕಾರಣವಿರಬಹುದು. ಉಳಿದೆಲ್ಲ ಗೂಬೆಗಳಲ್ಲಿ ಅವುಗಳ ನಿಶಾಚರ ಜೀವನಕ್ಕೆ ಅನುಕೂಲವಾಗುವಂತೆ ಅತ್ಯಂತ ಚುರುಕಾದ ದೃಷ್ಟಿಶಕ್ತಿ ಮತ್ತು ಶಬ್ದ ಗ್ರಹಣಶಕ್ತಿಗಳಿವೆ. ಗೂಬೆಗಳ ಕಣ್ಣುಗಳಂತೂ ಬಲುದೊಡ್ಡಗಾತ್ರದವು. ಹೊರಗೆ ಸಾಕಷ್ಟು ದೊಡ್ಡದಾಗಿ ಕಾಣುವ ಇವು ನಿಜವಾಗಿ ಇನ್ನೂ ದೊಡ್ಡಗಾತ್ರದವು. 60 ಸೆಂಮೀ ಉದ್ದವಿರುವ ಮಂಜಿನ ಗೂಬೆಯ ಕಣ್ಣುಗುಡ್ಡೆಯ ಗಾತ್ರ ಸರಿಸುಮಾರು ಮನುಷ್ಯನ ಕಣ್ಣುಗುಡ್ಡೆಯ ಗಾತ್ರದಷ್ಟಿರುತ್ತದೆ. ಗೂಬೆಗಳ ಕಿವಿಯೂ ಬಲು ಚುರುಕು.

ಹಲವಾರು ಪ್ರಭೇದಗಳು ಎರೆಪ್ರಾಣಿಗಳ ಓಡಾಟದ ಸದ್ದಿನ ಮೇಲೆಯೇ ಅವನ್ನು ಪತ್ತೆಹಚ್ಚಿ ಅವುಗಳ ಮೇಲೆರಗಿ ಹಿಡಿಯುತ್ತವೆ. ಹೀಗೆ ಶಬ್ದವನ್ನು ಗ್ರಹಿಸಲು ಅನುಕೂಲವಾಗಲೆಂದೇ ಗೂಬೆಗಳ ಮುಖ ಅಗಲವಾದ ತಟ್ಟೆಯಂತಿರೆಯೆಂದು ನಂಬಲಾಗಿದೆ. ಗೂಬೆಗಳ ಕಿವಿ ದೊಡ್ಡಗಾತ್ರದವು; ಇವನ್ನು ಚರ್ಮದ ಮಡಿಕೆಯೊಂದು ಭಾಗಶಃ ಮುಚ್ಚಿರುತ್ತದೆ. ಗೂಬೆಗಳ ಇನ್ನೊಂದು ಮುಖ್ಯ ಲಕ್ಷಣ ನಿಶ್ಯಬ್ದ ಹಾರಾಟ. ಇವು ಹಾರುವಾಗ, ಎರೆಪ್ರಾಣಿಯ ಮೇಲೆ ಎರಗುವಾಗ ಸ್ವಲ್ಪವೂ ಸದ್ದು ಮಾಡುವುದಿಲ್ಲ. ಇವುಗಳ ರೆಕ್ಕೆಗಳಲ್ಲಿನ ಮತ್ತು ದೇಹದ ಇತರ ಭಾಗಗಳಲ್ಲಿನ ಗರಿಗಳ ಬುಡದಲ್ಲಿ ಸದ್ದನ್ನು ಅಡಗಿಸುವಂಥ ಮೃದುವಾದ ತುಪ್ಪುಳಿನ ರೀತಿಯ ತಂತುಗಳಿರುವುದೇ ಇದಕ್ಕೆ ಕಾರಣ.


**ಕುಬ್ಜ ಗೂಬೆ**

ಪ್ರರೂಪೀ ಗೂಬೆಗಳ ಹಲವಾರು ಪ್ರಭೇದಗಳ ತಲೆಯ ಮೇಲೆ ಕೊಂಬುಗಳಂತೆ ಕಾಣುವ ಕರಿಗಳ ಎರಡು ಗುಚ್ಛಗಳಿವೆ. ಉದಾ : ಕೊಂಬಿನ ಗೂಬೆ (ಯುರೇಷಿಯನ್ ಔಲ್). ಗೂಬೆಗಳ ಕತ್ತು ಮೋಟಾಗಿರುವಂತೆ ಕಂಡರೂ ವಾಸ್ತವವಾಗಿ ಉದ್ದವಾಗಿಯೇ ಇದೆ. ಕತ್ತಿನ ಸುತ್ತ ಉದ್ದವಾದ ಮತ್ತು ಸಡಿಲವಾಗಿ ಜೋಡಣೆಗೊಂಡ ಪುಕ್ಕಗಳಿರುವು ದರಿಂದ ಕತ್ತು ಮೋಟಾಗಿರುವಂತೆ ಕಾಣುತ್ತದೆ. ಅಲ್ಲದೆ ಕತ್ತು ಯಾವ ಕಡೆಗೆ ಬೇಕಾದರೂ ಸುಲಭವಾಗಿ (ಸುಮಾರು $270^0$) ಬಾಗಬಲ್ಲದು. ಗೂಬೆಗಳ ಕಣ್ಣುಗಳು ಮನುಷ್ಯರಲ್ಲಿರು ವಂತೆ ಮುಖದ ಮುಂಭಾಗದಲ್ಲಿರುವುದರಿಂದಲೂ ಕಣ್ಣುಗುಡ್ಡೆಗಳು ಅವುಗಳ ಗುಣಿಗಳಲ್ಲಿ ಆಚೀಚೆ ಹೆಚ್ಚು ಚಲಿಸಲಾರವಾದ್ದ ರಿಂದಲೂ ಗೂಬೆಗಳು ತಮ್ಮ ಅಕ್ಕಪಕ್ಕಗಳಲ್ಲಿ ಅಥವಾ ಹಿಂಭಾಗ ದೆಡೆ ನೋಡಬೇಕಾದರೆ ಈ ತೆರನ ಬಳುಕುವ ಕತ್ತು ಬಹಳ ಅನುಕೂಲ. ಗೂಬೆಗಳ ಆಹಾರ ಸೇವನೆಯ ಕ್ರಮವೂ ವಿಚಿತ್ರವೇ. ಇವು ತಮ್ಮ ಆಹಾರವನ್ನು ಹದ್ದು, ಗಿಡುಗಗಳಂತೆ ಕಿತ್ತು ತಿನ್ನದೆ, ಇಡಿಯಾಗಿ ನುಂಗಿಬಿಡುತ್ತವೆ. ಇಲಿ, ಹೆಗ್ಗಣ, ಹಾವು, ಹಕ್ಕಿಗಳು ಇವುಗಳ ಮುಖ್ಯ ಆಹಾರ. ಇವುಗಳ ಜಠರರಸ ಅತ್ಯಂತ ತೀಕ್ಷ್ಣ ರೀತಿಯದಾಗಿದ್ದು ಆಹಾರದ ಬಹುಪಾಲನ್ನು ಜೀರ್ಣಿಸಿಬಿಡುತ್ತದೆ. ಜೀರ್ಣವಾಗದೆ ಉಳಿಯುವ ಮೂಳೆ, ತುಪ್ಪುಳು, ಗರಿ ಮುಂತಾದ ವಸ್ತುಗಳನ್ನು ಸಣ್ಣ ಗುಳಿಗೆಗಳ ರೂಪದಲ್ಲಿ ಬಾಯಿಂದ ಉಗುಳಿಬಿಡುತ್ತವೆ. ಈ ಪರಿಪಾಠವನ್ನು ಗಳುಮುಳುಕ ಮತ್ತಿತರ ಹಕ್ಕಿಗಳಲ್ಲೂ ಕಂಡುಬರುತ್ತದೆ. ಜೀರ್ಣವಾಗದ ಎಲುಬು ಮತ್ತಿತರ ವಸ್ತುಗಳು ಸೇರಿ ಗುಳಿಗೆಗಳಾಗಲು ಸಹಾಯಕವಾಗುವಂತೆ ಗಳುಮುಳುಕ ತನ್ನದೇ ಪುಕ್ಕವನ್ನು ಕಿತ್ತು ನುಂಗುತ್ತದೆ. ಸಾಮಾನ್ಯವಾಗಿ ಗೂಬೆಗಳು ತಾವು ಬೇಟೆಯಾಡಿದ ಆಹಾರವನ್ನು ಹಿಡಿದ ಸ್ಥಳದಲ್ಲಿಯೇ ತಿನ್ನದೆ ತಮ್ಮ ಮೆಚ್ಚಿನ ಸ್ಥಳಗಳಿಗೆ ತಂದು ತಿನ್ನುತ್ತವೆ. ಇಂಥ ಜಾಗಗಳ ನೆಲದ ಮೇಲೆ ನೂರಾರು ವಿಸರ್ಜಿತ ಆಹಾರದ ಗುಳಿಗೆಗಳನ್ನು ಕಾಣಬಹುದು. ಇಂಥ ಗುಳಿಗೆಗಳನ್ನು ಬಿಡಿಸಿ ನೋಡಿದರೆ ಗೂಬೆಗಳ ಆಹಾರಪ್ರಾಣಿಗಳು ಯಾವುವು ಎಂಬುದನ್ನು ಪತ್ತೆಹಚ್ಚಬಹುದು. ಅನೇಕ ಸಲ ಈ ಶೋಧನೆಗಳು ಮಾನವನಿಗೆ ಗೊತ್ತಿರದಿದ್ದ ಹಲವಾರು ಜಾತಿಯ ಪ್ರಾಣಿಗಳ ಇರವನ್ನು ಬೆಳಕಿಗೆ ತಂದಿವೆ. ಗೂಬೆಗಳ ಕೂಗು ಬಲು ಭಯಾನಕ. ಒಮ್ಮೊಮ್ಮೆ ದೀರ್ಘವಾಗಿ ಗೂಕ್ ಗೂಕ್ ಎಂದೊ ಹ್ರಸ್ವವಾಗಿ ಲೊಚಗುಟ್ಟುವಂತೆಯೊ ಗೊರಕೆ ಹೊಡೆಯುವಂತೆಯೊ ಬುಸುಗುಟ್ಟು ವಂತೆಯೊ ಹಲವಾರು ಬಗೆಗಳಲ್ಲಿ ವಿಚಿತ್ರವಾಗಿ ಸದ್ದುಮಾಡುತ್ತವೆ.

**ಪಟ್ಟೆಪಟ್ಟೆ ಗೂಬೆ**

ಗೂಬೆಗಳು ಮರದ ಪೊಟರೆ, ಪ್ರಪಾತಗಳಲ್ಲಿನ ಸಂದುಗಳು, ನೆಲದ ಮೇಲಿನ ಗುಳಿಗಳು ಮುಂತಾದ ಸ್ವಾಭಾವಿಕ ನೆಲೆಗಳನ್ನು ಗೂಡುಗಳನ್ನಾಗಿ ಮಾಡಿಕೊಳ್ಳುತ್ತವೆ. ಕೆಲವು ಸಲ ಗಿಡುಗ ಇಲ್ಲವೆ ಕಾಗೆಗಳಿಂದ ತೊರೆಯಲ್ಪಟ್ಟ ಗೂಡುಗಳನ್ನೂ ಬಳಸುವುದುಂಟು. ಸಾಮಾನ್ಯವಾಗಿ ಇಂಥ ನೆಲೆಗಳನ್ನು ಅವು ಹೇಗಿರುತ್ತವೋ ಹಾಗೆಯೇ ಉಪಯೋಗಿಸುತ್ತವೆ; ಎಲ್ಲ ಬಗೆಯ ಗೂಬೆಗಳೂ ಗುಂಡನೆಯ ಮತ್ತು ಅಚ್ಚ ಬಿಳಿಯ ಬಣ್ಣದ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳ ಸಂಖ್ಯೆ ಸಾಮಾನ್ಯವಾಗಿ ಒಂದು ಸಲಕ್ಕೆ 1–7 ಅಥವಾ ಹೆಚ್ಚು. ಕಾವು ಕೊಡುವುದನ್ನು, ಮರಿಗಳ ಪಾಲನೆಯನ್ನು ಗಂಡು ಮತ್ತು ಹೆಣ್ಣುಗಳೆರಡೂ ನಿರ್ವಹಿಸುತ್ತವೆ. ಉತ್ತರಮೇರು ಪ್ರದೇಶದ ಮಂಜಿನ ಗೂಬೆಗಳಲ್ಲಿ ಮಾತ್ರ ಕಾವುಕೊಡುವ ಕೆಲಸ ಹೆಣ್ಣಿನದು. ಹೀಗೆ ಕಾವುಕೂತ ಹೆಣ್ಣಿಗೆ ಗಂಡುಗೂಬೆ ಆಹಾರವನ್ನೊದಗಿಸುತ್ತದೆ.

ಕಣಜದ ಗೂಬೆ ಬಲು ಸಾಮಾನ್ಯವಾಗಿ ಕಾಣಬರುವ ಗೂಬೆ. ಮೇರು ಪ್ರದೇಶಗಳು, ನ್ಯೂಜಿಲೆಂಡ್, ಹವಾಯ್, ಮಲಯ ಪರ್ಯಾಯ ದ್ವೀಪಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳಲ್ಲೂ ಈ ಗೂಬೆ ಇದೆ. ಇದರ ಮುಖ ಗುಂಡಿಗೆಯಾಕಾರದ ತಟ್ಟೆಯಂತಿದ್ದು ಸೆಡೆತಿರುವ ಗರಿಗಳ ಅಂಚಿನಿಂದ ಕೂಡಿದೆ. ಮುಖದ ಬಣ್ಣ ಬಿಳಿ. ಇದರಿಂದಾಗಿ ಈ ಗೂಬೆಯ ಮುಖ ಹೆಚ್ಚು ಕಡಿಮೆ ಕೋತಿಯ ಮುಖವನ್ನೆ ಹೋಲುತ್ತದೆ. ಆದ್ದರಿಂದ ಈ ಗೂಬೆಗೆ ಕೋತಿಮುಖದ ಗೂಬೆ ಎಂಬ ಹೆಸರೂ ಇದೆ. ಉದ್ದನೆಯ ಕಾಲುಗಳು, ಪಾದದವರೆಗೂ ಇರುವ ಗರಿಗಳು, ಮೋಟುಬಾಲ, ನಡುಬೆರಳಿನ ಮೇಲೆ ಏಣುಗಳುಳ್ಳ ಹಣಿಗೆಯಂಥ ರಚನೆ ಇರುವುದು – ಇವು ಕಣಜದ ಗೂಬೆಯ ಇತರ ಪ್ರಮುಖ ಲಕ್ಷಣಗಳು. ಈ ಗೂಬೆ 35–45 ಸೆಂಮೀ ಉದ್ದ ಇರುತ್ತದೆ ; ಹೆಣ್ಣು ಗೂಬೆ ಗಂಡಿಗಿಂತ ದೊಡ್ಡದು. ದೇಹದ ಬಣ್ಣ ಬಂಗಾರ ಮತ್ತು ಬೂದಿಗಳ ಮಿಶ್ರಣ. ಅಲ್ಲದೆ ಕಪ್ಪು ಮತ್ತು ಬಿಳಿಯ ಮಚ್ಚೆಗಳಿವೆ. ಸ್ವಾಭಾವಿಕವಾಗಿ ಮರದ ಪೊಟರೆಗಳನ್ನೂ ಪ್ರಪಾತಗಳ ಸಂದಿಗಳನ್ನೂ ಗೂಡುಗಳನ್ನಾಗಿ ಮಾಡಿಕೊಳ್ಳುವುದಾದರೂ ಕೆಲವೊಮ್ಮೆ ಹದ್ದು, ಗಿಡುಗ ಮುಂತಾದವುಗಳ ಗೂಡನ್ನು ಬಳಸುವುದುಂಟು. ಹಳೆಯ ಮನೆ, ಚರ್ಚುಗಳ ಗೋಪುರಗಳು, ಕಣಜಗಳಲ್ಲಿನ ಚಾವಣಿ ಮುಂತಾದ ಸ್ಥಳಗಳಲ್ಲೂ ಗೂಡು ಕಟ್ಟುವುದುಂಟು. ಪಾಳುಬಿದ್ದ ಕಟ್ಟಡಗಳಂತೂ ಇದಕ್ಕೆ ಬಲು ಅಚ್ಚುಮೆಚ್ಚಿನ ಸ್ಥಳ. ಇಂಥ ಸ್ಥಳಗಳಲ್ಲಿ ಗೂಡು ನಿರ್ಮಿಸಿಕೊಂಡು ಕರ್ಕಶವಾಗಿ ದೀರ್ಘವಾಗಿ ಕಿರಿಚುತ್ತಲೊ, ಲೊಚಗುಟ್ಟುವಂತೆ ಇಲ್ಲವೆ ಗೊರಕೆಯಂತೆ ಕೇಳಿಸುವ ಸದ್ದುಮಾಡುತ್ತಲೊ ಇರುವುದರಿಂದ ತಾನಿರುವ ನೆಲೆಯ ಭೀಕರತೆಯನ್ನು ಹೆಚ್ಚಿಸುತ್ತದೆ. ವರ್ಷ ವರ್ಷವೂ ಒಂದೇ ಸ್ಥಳವನ್ನು ತನ್ನ ನೆಲೆಯಾಗಿ ಉಪಯೋಗಿಸುವುದು ಗೂಬೆಯ ಇನ್ನೊಂದು ವಿಚಿತ್ರ ಲಕ್ಷಣ.

**ಹದ್ದಿನಂತಿರುವ ಗೂಬೆ**

ಕಣಜದ ಗೂಬೆ ಅಪ್ಪಟ ನಿಶಾಚಾರಿ. ಹಗಲಿನಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ. ಮುಚ್ಚಂಜೆಯ ವೇಳೆ ಬೇಟೆಗೆಂದು ಹೊರಬರುತ್ತದೆ. ಹುಲ್ಲು ಮತ್ತು ಕುಳ್ಳುಪೊದೆಗಳಿಂದ ಕೂಡಿದ ಬಯಲು ಪ್ರದೇಶ ಇದರ ಅಚ್ಚು ಮೆಚ್ಚಿನ ಬೇಟೆಯ ಪ್ರದೇಶ. ಇಲಿಗಳೇ ಇದರ ಪ್ರಮುಖ ಆಹಾರ. ಇದರಿಂದಾಗಿ ರೈತನ ಸ್ನೇಹಿತ ಎನಿಸಿಕೊಂಡಿದೆ. ಕಣಜದ ಗೂಬೆಗೆ ಇತರ ಗೂಬೆಗಳಂತೆಯೆ ಅತ್ಯಂತ ಚುರುಕಾದ ದೃಷ್ಟಿಯಿರುವು ದಾದರೂ ಬೇಟೆಯಾಡಲು ಕಿವಿಗಳನ್ನೆ ಹೆಚ್ಚು ಅವಲಂಬಿಸಿದೆ.

ಕಣಜದ ಗೂಬೆಯ *(ಟೈಟೋಆಲ್ಬ)* ಸಂತಾನೋತ್ಪತ್ತಿಯ ಕಾಲ ನಿರ್ದಿಷ್ಟವಾಗಿ ಗೊತ್ತಿಲ್ಲ. 4–7 ಗುಂಡನೆಯ ಮತ್ತು ಬಿಳಿಯ ಬಣ್ಣದ ಮೊಟ್ಟೆಗಳನ್ನಿಡುತ್ತದೆ. ಗಂಡು, ಹೆಣ್ಣುಗಳೆರಡೂ ಕಾವು ಕೊಟ್ಟು ಮರಿಮಾಡುತ್ತವೆ. ಕಣಜದ ಗೂಬೆಯ ಆಯಸ್ಸು 15 ವರ್ಷಗಳು. ಈ ಜಾತಿಯ ಇನ್ನೂ ಎರಡು ಪ್ರಭೇದದ ಕಣಜಗೂಬೆಗಳು ಭಾರತದಲ್ಲಿ ಕಂಡುಬರುತ್ತದೆ. ಅವೆಂದರೆ ಗರಿಕೆ ಗೂಬೆ (ಗ್ರಾಸ್ ಔಲ್–*ಟೈಟೊ ಕ್ಯಾಪೆನ್ಸಿಸ್*) ಮತ್ತು ಪೂರ್ವದ ಕಣಜ ಗೂಬೆ (ಓರಿಯಂಟಲ್ ಬೇ ಔಲ್ – *ಫೊಡಿಲಸ್ ಬಾಡಿಯಸ್*)

ಗೂಬೆಗಳಲ್ಲಿ ಹಲವಾರು ಬಗೆಗಳಿವೆ ಎಂದು ಮೊದಲೇ ಹೇಳಲಾಗಿದೆ. ಇವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಸಂಕ್ಷೇಪವಾಗಿ ವಿವರಿಸಲಾಗಿದೆ. 1 ಕೊಂಬಿನ ಗೂಬೆ *(ಯುರೇಷಿಯಸ್ ಈಗಲ್‌ಔಲ್)* : *ಬ್ಯೂಬೊ* ಎಂಬ ವೈಜ್ಞಾನಿಕ ಹೆಸರಿನ ಗೂಬೆ ಇದು ; ಸುಮಾರು 11 ಪ್ರಭೇದಗಳನ್ನೊಳಗೊಂಡಿದೆ. ಪ್ರಪಂಚಾದ್ಯಂತ ಇದರ ವ್ಯಾಪ್ತಿ ಇದೆ. ಭಾರತದಲ್ಲಿ *ಬ್ಯೂಬೊ ಬ್ಯೂಬೊ* ಎಂಬ ಪ್ರಭೇದವಿದೆ. ಹದ್ದಿನಷ್ಟು ದೊಡ್ಡದಿರುವ ಇದರ ಬಣ್ಣ ಕಂದು. ತಲೆಯ ಮೇಲೆ ಎರಡು ಕೊಂಬುಗಳಿವೆ. ಕಣ್ಣುಗಳು ಹಳದಿ ಬಣ್ಣದವು. ಬೆಟ್ಟಗಳಲ್ಲಿನ ಕಲ್ಲುಬಂಡೆಗಳ ಪೊಟರೆಗಳಲ್ಲಿ ವಾಸಿಸುತ್ತದೆ. ಕೆಲವು ಸಲ ಬೃಹದ್ಗಾತ್ರದ ಮರಗಳಲ್ಲಿರುವುದುಂಟು. ಸಣ್ಣ ಸಸ್ತನಿಗಳು, ಹಕ್ಕಿಗಳು, ಇಲಿಗಳು, ಓತಿಕೇತ, ಏಡಿ, ಕೆಲವು ಬಗೆಯ ಕೀಟಗಳು ಇದರ ಪ್ರಧಾನ ಆಹಾರ.

2 ಮಂಜಿನಗೂಬೆ (ಸ್ನೋಯಿ ಔಲ್) : ಇದು ಉತ್ತರ ಮೇರು ಪ್ರದೇಶದ ಗೂಬೆ. ಉತ್ತರ ಸ್ಕಾಂಡಿನೇವಿಯ, ರಷ್ಯದ ಉತ್ತರಭಾಗ, ಅಲಾಸ್ಕ, ಗ್ರೀನ್‌ಲೆಂಡಿನ ಉತ್ತರಭಾಗಗಳಲ್ಲಿ ವಾಸಿಸುತ್ತದೆ. ವಿಪರೀತ ಚಳಿಯಿದ್ದಾಗ ಆಹಾರದ ಕೊರತೆಯುಂಟಾಗುವುದರಿಂದ ದಕ್ಷಿಣಕ್ಕೆ–ಬ್ರಿಟಿಷ್ ದ್ವೀಪಗಳು, ಮಧ್ಯ ರಷ್ಯ, ಜಪಾನ್, ಅಮೆರಿಕ ಸಂಯುಕ್ತ ಸಂಸ್ಥಾನಗಳ ಮಧ್ಯಭಾಗ, ಜರ್ಮನಿಗಳಿಗೆ–ವಲಸೆ ಬರುತ್ತದೆ. ಲೆಮಿಂಗ್ ಎಂಬ ಪ್ರಾಣಿ, ಅರ್ಕ್‌ಟಿಕ್ ಮೊಲ ಮತ್ತು ಬಾತುಕೋಳಿಗಳು ಇದರ ಮುಖ್ಯ ಆಹಾರ.

3. ಮೀನು ತಿನ್ನುವ ಗೂಬೆ (ಬ್ರೌನ್ ಫಿಶ್ ಔಲ್) : ಭಾರತದಲ್ಲೆಲ್ಲ ಇದು ಕಂಡುಬರುತ್ತದೆ. ಇದರ ವೈಜ್ಞಾನಿಕ ಹೆಸರು *ಕೆಟುಪ ಜೈಲೊನೆನ್ಸಿಸ್*. ಕೊಂಬಿನ ಗೂಬೆಯ ಗಾತ್ರದಷ್ಟಿದೆ. ಅದರಂತೆಯೇ ಇದರ ದೇಹದ ಬಣ್ಣವೂ ಕಂದು. ನೀರ ಬಳಿ ಬೆಳೆಯುವ ದೊಡ್ಡ ಗಾತ್ರದ ಮರಗಳಲ್ಲಿ ಇದರ ವಾಸ. ಮೀನು, ಕಪ್ಪೆ, ಏಡಿ, ಹಕ್ಕಿಗಳು ಮುಂತಾದವನ್ನು ತಿನ್ನುತ್ತದೆ.

4. ಕುಬ್ಜಗೂಬೆ (ಪಿಗ್ಮಿ ಔಲ್) : 15–20 ಸೆಂಮೀ ಉದ್ದದ ಸಣ್ಣ ಗೂಬೆ ಇದು. ಉತ್ತರ ಮತ್ತು ದಕ್ಷಿಣ ಅಮೆರಿಕ, ಆಫ್ರಿಕ ಮತ್ತು ಯುರೋಪ್‌ಗಳಲ್ಲಿ ಕಾಣ ದೊರೆಯುತ್ತದೆ. ಕೀಟಗಳು, ಸಣ್ಣಪುಟ್ಟ ಹಕ್ಕಿಗಳು, ಉರಗಗಳು ಇದರ ಮುಖ್ಯ ಆಹಾರ. ಚುರುಕಾಗಿ ಹಾರಬಲ್ಲ ಇದು ಹಾರುತ್ತಿರುವ ಹಕ್ಕಿಗಳನ್ನು ಹಿಡಿಯಬಲ್ಲುದು.

ಮೇಲೆ ಹೇಳಿದ ಗೂಬೆಗಳಲ್ಲದೆ ಭಾರತದಲ್ಲಿ *ಅಥೀನೆ ಬ್ರಾಮ* ಮತ್ತು *ಗ್ಲಾಸಿಡಿಯಂ ರೇಡಿಯೇಟಂ* ಎಂಬ ಶಾಸ್ತ್ರೀಯ ಹೆಸರಿನ ಕಿರುಗೂಬೆಗಳೂ (ಔಲೆಟ್ಸ್) ಕಂಡುಬರುತ್ತವೆ. ಇವಕ್ಕೆ ಹಾಲಹಕ್ಕಿಗಳೆಂಬ ಸಾಮಾನ್ಯ ಹೆಸರಿದೆ. (ಜಿ.ಎಂ.ಬಿ.)

ಗೂಬೆಗಳ ಕುರಿತಾಗಿ ಹಲವು ಮೂಢನಂಬಿಕೆಗಳಿವೆ. ಭಾರತದ ಕೆಲವು ಭಾಗಗಳಲ್ಲಿ ಇವನ್ನು ಅಪಶಕುನ ಎಂದು ಭಾವಿಸಿದರೆ, ಮತ್ತೆ ಕೆಲವೆಡೆ ಇದು ಶುಭವೆಂದು ಪರಿಗಣಿಸಲಾಗಿದೆ. ಕೆಲವು ರಾಷ್ಟ್ರಗಳಲ್ಲಿ ಗೂಬೆ ಸಂಕೇತವಾಗಿದೆ.

ವೈಜ್ಞಾನಿಕವಾಗಿ ಮೂಷಿಕ ಹಾಗೂ ಸರೀಸೃಪಗಳ ಸಂಖ್ಯೆಯನ್ನು ಒಂದು ಅಂಕೆಯಲ್ಲಿಡುವ ಪರಿಸರ ವ್ಯವಸ್ಥೆಯ ಒಂದು ಸೂಕ್ಷ್ಮ ಕೊಂಡಿ, ಗೂಬೆ. *

**ಗೂರಲು :** ಎದೆಹಿಡಿದಂತಾಗಿ ಉಸಿರಾಟಕ್ಕೆ ಬಲು ಕಷ್ಟವಾಗುವ, ಹಲವು ವೇಳೆ ಕೆಮ್ಮಲು ಕಫ ಗೊರೋ ಗೊರೋ ಎಂಬ ಶಬ್ದಸಹಿತ ಉಸಿರು ಸಾಗುವ, ಶ್ವಾಸನಾಳದ ಹಠಾತ್ ಸಂಕುಚನದಿಂದ ತಲೆದೋರುವ ಒಂದು ಬೇನೆ ಆಸ್ತಮಾ. ಉಬ್ಬಸ, ಶ್ವಾಸಕಾಸ, ದಮ್ಮು ಪರ್ಯಾಯ ಪದಗಳು. ಈ ಬೇನೆ ಹಠಾತ್ತನೆ ಬಡಿದು ಸ್ವಲ್ಪ ಹೊತ್ತು ಕಾಡಿ, ಅನಂತರ ಹಠಾತ್ತನೆ ಸಮಾಧಾನ ಸ್ಥಿತಿಗೆ ಇಳಿಯುತ್ತದೆ. ಯಾವ ವಯಸ್ಸಿನಲ್ಲೂ ಗೂರಲು ಕಾಣಬಹುದು. ಎಳೆಯ ಮಕ್ಕಳಲ್ಲಿ ಪಕ್ಕದ ಸೆಳೆತ, ಮಧ್ಯವಯಸ್ಕರಲ್ಲಿ ಉಬ್ಬಸ, ಮುದುಕರಲ್ಲಿ ಗೂರಲು ಇವೆಲ್ಲವೂ ಆಸ್ತಮಾ ರೂಪಗಳು. ಇದು ಹೆಂಗಸರಿಗಿಂತ ಗಂಡಸರಲ್ಲಿ ಎರಡರಷ್ಟು ಪಾಲು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಆನುವಂಶಿಕವಾಗಿ ಕೆಲವು ಮನೆತನಗಳಲ್ಲಿ ಕಂಡುಬಂದರೂ ಆಸ್ತಮಾ ಬೇನೆಯ ಪ್ರವೃತ್ತಿ ಆನುವಂಶಿಕವೇ ಹೊರತು ಆಸ್ತಮದಲ್ಲ ಎಂಬುದು ಈಗ ಸಿದ್ಧಾಂತವಾಗಿದೆ. ಫುಪ್ಪುಸಗಳ ಇತರ ಕಾಯಿಲೆಗಳಿದ್ದಾಗ (ಉದಾಹರಣೆಗೆ ಬ್ರಾಂಕಿ ಎಸ್ಟೇಸಿಸ್, ಕ್ಷಯ ಇತ್ಯಾದಿ) ಅಂಥವರಲ್ಲಿ ಆಸ್ತಮಾ ಸಂಭವಿಸುವುದು ಹೆಚ್ಚು. ಹವಾಗುಣ ಮತ್ತು ಪರಿಸರದ ಪ್ರಭಾವದಿಂದ ಉಬ್ಬಸ ಕಾಣಿಸಿಕೊಳ್ಳುತ್ತದೆ ಎಂಬುದು ನಿರ್ವಿವಾದ. ಆದರೆ ಥಂಡಿ ಹವಾ ಇರುವಲ್ಲಿ ಕೆಲವರಿಗೆ ಆಸ್ತಮಾ ಬರುತ್ತದೆ. ಮೂಗಿನಲ್ಲಿ ಬೆಳೆಯುವ ದುರ್ಮಾಂಸ, ಮೂಗಿನ ಸೈನಸುಗಳಲ್ಲಿ ಕೀವು ತುಂಬುವಿಕೆ, ಗಂಟಲಿನಲ್ಲಿ ಅಡಿನಾಯ್ಡ್ಸ್ ಇವೆಲ್ಲವೂ ಆಸ್ತ್ಮಕ್ಕೆ ಪ್ರಚೋದಕಗಳಾಗಬಹುದು. ಆಸ್ತ್ಮ ಬೇನೆಯಿಂದ ನರಳುವಿಕೆ ಹೆಚ್ಚಾಗುತ್ತದೆ. ಆದರೆ ಈ ಬೇನೆ ಮಾರಕವಾಗುವುದು ಅತಿ ವಿರಳ.

ಉಸಿರನ್ನು ಮೂಗಿನ ಮೂಲಕ ಎಳೆದುಕೊಂಡಾಗ, ಮೂಗಿನಲ್ಲಿರುವ ಒಳಪೊರೆ ಒಳಹೋದ ವಾಯುವನ್ನು ಮೂರು ಮುಖ್ಯ ವಿಧಗಳಲ್ಲಿ ಹದಗೊಳಿಸುತ್ತದೆ. ಒಂದು, ಇರಬಹುದಾದ ದೂಳು ಮೊದಲಾದವನ್ನು ವಂದರಿ ಆಡಿದಂತೆ ತಡೆಹಿಡಿಯುತ್ತದೆ. ಎರಡು, ಅಗತ್ಯವಾದ ತೇವವನ್ನು ಕೂಡಿಸುತ್ತದೆ. ಮೂರು, ಉಷ್ಣತೆಯನ್ನು ದೇಹಕ್ಕೆ ತಕ್ಕಂತೆ ಹದಗೊಳಿಸುತ್ತದೆ. ಈ ರೀತಿ ಅಣಿಮಾಡಲ್ಪಟ್ಟ ವಾಯು ಪುಪ್ಪುಸಗಳೊಳಕ್ಕೆ ಸೆಳೆಯಲ್ಪಡುತ್ತದೆ. ಅಲ್ಲಿನ ಅತಿಪುಟ್ಟ ನಾಳಗಳಲ್ಲಿ (ಬ್ರಾಂಕಿಯೋಲುಗಳು) ವಾಯು ಸಾಗಿದ ಬಳಿಕ, ಬೆಲೂನಿನಂತೆ ತೆಳುಪೊರೆಯನ್ನು ಹೊಂದಿದ ಶ್ವಾಸಗೂಡುಗಳನ್ನು (ಆಲ್ವಿಯೋಲೈ) ಸೇರುತ್ತದೆ. ಶ್ವಾಸಗೂಡುಗಳು ತೆಳು ಪೊರೆಯ ಹೊರಮೈಯ್ಯಲ್ಲಿ ರಕ್ತದ ಸಣ್ಣ ಸಣ್ಣ ನಾಳಗಳು ಇರುತ್ತವೆ. ರಕ್ತ ಆಕ್ಸಿಜನ್ನನು ಶ್ವಾಸಗೂಡುಗಳಿಂದ ಹೀರುತ್ತದೆ. ರಕ್ತದಲ್ಲಿರುವ ಕಾರ್ಬನ್ ಡೈ ಆಕ್ಸೈಡ್ ಶ್ವಾಸದಗೂಡುಗಳಿಗೆ ಪಸರಿಸುತ್ತದೆ. ಈ ಕಾರ್ಯ ಸಫಲವಾಗಬೇಕಾದರೆ ಶ್ವಾಸದ ಕಿರುನಾಳಗಳ ದ್ವಾರ ಸಾಕಷ್ಟು ತೆರೆದಿರಬೇಕು. ಕಿರುನಾಳಗಳ ಸುತ್ತಲೂ ಉಂಗುರದಂತಿರುವ ಮಾಂಸದ ಎಳೆಗಳಿರುತ್ತವೆ. ಇವು ಬಿಗಿದಾಗ ಶ್ವಾಸನಾಳಗಳ ದ್ವಾರ ಕಿರಿದಾಗುತ್ತದೆ. ಸಡಿಲಗೊಂಡಾಗ ದ್ವಾರ ಹಿರಿದಾಗುತ್ತದೆ. ಈ ರೀತಿಯಲ್ಲಿ ಶ್ವಾಸದ ಕಿರುನಾಳಗಳು ಅಗತ್ಯವಿದ್ದಷ್ಟು ಮಾತ್ರ ತೆರೆದಿರುತ್ತವೆ. ಹಾಗಾದಾಗ ಒಳ ಹೋಗುವ ವಾಯುವಿನ ಉಷ್ಣತೆ ಹದವಾಗಿರತ್ತದೆ. ಮತ್ತು ತೇವ ಅಗತ್ಯವಿದ್ದಷ್ಟು ಇರುತ್ತದೆ. ವಾಯುವನ್ನು ಹದಗೊಳಿಸುವ ವ್ಯವಸ್ಥೆ ಇದು. ಸ್ವಯಂಚಾಲಿತ ನರಗಳ ಮೂಲಕ, ವ್ಯಕ್ತಿಯ ಮನಸ್ಸಿನ ಇಚ್ಛಾ ಹತೋಟಿಗೆ ಸಂಪೂರ್ಣ ಹೊರತಾಗಿ ಹದಗೊಳಿಸುವಂತಿದೆ ಈ ಏರ್ಪಾಡು. ಇದು ಆಸ್ತಮಾ ಬೇನೆಯಲ್ಲಿ ಅಸ್ತವ್ಯಸ್ತವಾಗುತ್ತದೆ. ಸ್ವಯಂಚಾಲಿತನರಗಳು ಹಿಸ್ಟಮಿನ್ ಮತ್ತು ಲ್ಯುಕೊಟ್ರೈಯಿನ್ ಮತ್ತಿತರ ಸೈಟೊಕಿನ್ ವಸ್ತುಗಳಿಂದ ಕೆರಳಿಸಲ್ಪಡುತ್ತವೆ. ಆಗ ಶ್ವಾಸದ ಪುಟ್ಟನಾಳಗಳ ಸುತ್ತಲೂ ಇರುವ ದುಂಡು ಮಾಂಸದೆಳೆಗಳು ಸಂಕುಚಿತವಾಗುತ್ತವೆ. ಶ್ವಾಸನಾಳಗಳ ದ್ವಾರ ಕಿರಿದಾಗಿ ಶ್ವಾಸಗೂಡುಗಳಲ್ಲಿ ಇರುವ ವಾಯುವಿಗೆ ಹೊರಬರಲು ಕಷ್ಟವಾಗುತ್ತದೆ. ಈ ರೋಗ ವಿಂದು ಉರಿಯೂತ (ಇನ್ಫ್ಲಮೇಟರಿ) ರೋಗವೆಂದು ಪರಿಗಣಿಸಲ್ಪಟ್ಟಿದೆ. ಉಸಿರುನಾಳದ ಒಳಪದರು ಉಬ್ಬಿ ವಾಯುಮಾರ್ಗವನ್ನು ಕಿರಿದುಗೊಳ್ಳಿಸುತ್ತದೆ. ಹೀಗಾಗಿ ವ್ಯಕ್ತಿ ಶ್ರಮಪಟ್ಟುಕೊಂಡು, ಎದೆಯ ಗೂಡಿನ ಮಾಂಸಗಳೆಲ್ಲವನ್ನೂ ಬಳಸಿಕೊಂಡು ಉಸಿರಾಡಬೇಕಾಗುತ್ತದೆ. ಜೊತೆಗೆ ಗೂಡುಗಳಲ್ಲಿ ವಾಯುವಿನ ಒತ್ತಡ ಹೆಚ್ಚಾಗುತ್ತದೆ. ಆ ಕಾರಣದಿಂದ ಗೂಡಿನ ಪೊರೆಯಿಂದ ಹನಿಹನಿಯಾಗಿ ಕಫ ಸ್ರವಿಸುತ್ತದೆ. ಗಾಳಿಯ ತೇವ ಹೆಚ್ಚಾಗುತ್ತದೆ. ಉಷ್ಣತೆಯೂ ಕಡಿಮೆಯಾಗುತ್ತದೆ. ಉಬ್ಬಸದಿಂದ ನರಳುತ್ತಿರುವವರು ಎದೆಯಗೂಡಿನ ಎಲ್ಲ ಮಾಂಸಖಂಡಗಳನ್ನೂ ಬಳಸಬೇಕಾಗುವುದರಿಂದ ಗೂನುಬೆನ್ನು ಮಾಡಿಕೊಂಡು ತೋಳುಗಳನ್ನು ಮುಂದಕ್ಕೆ ಚಾಚಿಕೊಂಡು ಕೂರುವುದು ಸಾಮಾನ್ಯ.

ಹಿಸ್ಟಮಿನ್ ಲ್ಯುಕೊಟ್ರೈಯಿನ್ ಹಾಗೂ ಇತರ ಸೈಟೊಕಿನ್ ವಸ್ತುಗಳು ನರಗಳನ್ನು ಕೆರಳಿಸುತ್ತದೆ. ಅದು ಹೆಚ್ಚು ಉತ್ಪತ್ತಿಯಾದರೆ ನರಗಳು ಅತಿಯಾಗಿ ಕೆರಳಿಸಲ್ಪಡುತ್ತವೆ. ಆಗ ಆಸ್ತ್ಮ ಪರಿಸ್ಥಿತಿ ಉಂಟಾಗುತ್ತದೆ. ದೇಹದಲ್ಲಿ ಒಗ್ಗದಿಕೆಯ ಪರಿಸ್ಥಿತಿ ಉಂಟಾದಾಗ ಕೋಶಗಳಲ್ಲಿ ಸೈಟೊಕಿನ್‌ಗಳು ಹೆಚ್ಚಾಗಿ ಉತ್ಪತ್ತಿಯಾಗುತ್ತದೆ. ಒಗ್ಗದಿಕೆಯ ಪರಿಸ್ಥಿತಿ ಹಲವಾರು ಕಾರಣಗಳಿಂದ ಉಂಟಾಗಬಹುದು. ದೂಳು, ಹೊಗೆ, ಘಾಟು ಇತ್ಯಾದಿಗಳು ಮೂಗಿನ ಒಳಪೊರೆಗೆ ತಾಕಿದರೆ, ಕೆಲವು ಸ್ಥಿತಿಗಳಲ್ಲಿ ಅವು ಒಗ್ಗದಿಕಗಳಾಗಿ (ಅಲರ್ಜನ್ಸ್) ಒಗ್ಗದಿಕೆಯ ಪರಿಸ್ಥಿತಿಯನ್ನು ಉಂಟುಮಾಡುತ್ತವೆ. ಅನಂತರ ಅಂಥವರಿಗೆ ದೂಳು, ಹೊಗೆ ಘಾಟುಗಳು ಪುನಃ ತಾಕಿದರೆ ಆಸ್ತ್ಮ ಪರಿಣಮಿಸುತ್ತದೆ. ಮೂಗಿನಲ್ಲಿನ ಒಳಪೊರೆ ಫುಪ್ಪುಸಗಳಿಗೆ ದಿಡ್ಡಿ ಬಾಗಿಲು ಇದ್ದಂತೆ. ಆದ್ದರಿಂದ ದೇಹಕ್ಕೆ ಅಪಾಯಕಾರಿಯಾದ ವಸ್ತುಗಳು ವಾಯುವಿನ ಮೂಲಕ ಮೂಗನ್ನು ಪ್ರವೇಶಿಸಿದಾಗ ಒಳಪೊರೆ ಕೆರಳುತ್ತದೆ. ಮೇಲಿಂದ ಮೇಲೆ ಸೀನು ಬಂದು ಅಪಾಯಕಾರಿಯಾದ ವಸ್ತುಕಣಗಳನ್ನು ಒಳಪೊರೆ ಈ ರೀತಿ ಹೊರಹಾಕುತ್ತದೆ.

ಭಾರತದಲ್ಲಿ ಉಸಿರಿನಿಂದ ಒಳಹೋಗುವ ಒಗ್ಗದಿಕಗಳಲ್ಲಿ ಮುಖ್ಯವಾದವನ್ನು ಇಲ್ಲಿ ಹೆಸರಿಸಿದೆ. ಅಭ್ಯಂಜನಕ್ಕೆ ಬಳಸಲ್ಪಡುವ ಸೀಗೆಕಾಯಿಪುಡಿಯ ಘಾಟು, ಅಡುಗೆಯ ಪದಾರ್ಥಗಳಾದ ಸಾರಿನಪುಡಿ, ಚಟ್ನಿಪುಡಿ, ಒಗ್ಗರಣೆಯ ವಸ್ತುಗಳು, ಮನೆಯನ್ನು ಗುಡಿಸುವಾಗ ಏಳುವ ದೂಳು ; ಗ್ರಾಮಗಳಲ್ಲಿನ ಹಗೇವು, ಅಟ್ಟ ಇಂಥವುಗಳಲ್ಲಿರುವ ಬೂಷ್ಟುಮಿಶ್ರಿತ ದೂಳು, ಸಾಂಬ್ರಾಣಿ ಹೊಗೆ, ಬಾಳಕ ಸಂಡಿಗೆ, ಮೀನು ಮೊದಲಾದವನ್ನು ಕರಿಯುವಾಗ ಬರುವ ಘಾಟು, ಅಸಂಖ್ಯಾತ ವಿಧವಿಧ ಮಸಾಲೆಪುಡಿಗಳ ಘಾಟು ಇತ್ಯಾದಿ.

ಆಹಾರದ ಅಪಥ್ಯ ಹಾಗೂ ವೈಯಕ್ತಿಕವಾದ ಒಗ್ಗದಿಕಗಳು : ಹೊತ್ತಾದ ಮೇಲೆ ಹೊಟ್ಟೆ ಬಿರಿವಷ್ಟು ತಿಂದರೆ ಆ ರಾತ್ರಿ ಆಸ್ತ್ಮ ಬರಬಹುದು. ಅದರಲ್ಲೂ ಸುಲಭವಾಗಿ ಜೀರ್ಣವಾಗದಂಥ ಉದ್ದಿನ ಪದಾರ್ಥಗಳು, ಕರಿದ ಖಾದ್ಯಗಳು, ಜಿಡ್ಡು ಹೆಚ್ಚಾದ ಭಕ್ಷ್ಯಗಳು, ಬಿರಿಯಾನಿ ಪಲಾವುಗಳು, ಕರಿದ ಅಥವಾ ಹುರಿದ ಬೀಜಗಳು ಮುಂತಾದವು ಆಸ್ತ್ಮಕಾರಿಗಳು. ಕೆಲವು ಪದಾರ್ಥಗಳನ್ನು ಬಲು ಸ್ವಲ್ಪ ಮೊತ್ತದಲ್ಲಿ ಸೇವಿಸಿದರೂ ಕೆಲವರಿಗೆ ಆಸ್ತ್ಮ ಬರುತ್ತದೆ. ಇದು ವೈಯಕ್ತಿಕ ಪ್ರತಿಕ್ರಿಯೆ, ಈರುಳ್ಳಿ ಕೆಲವರಿಗೆ ಆಸ್ತ್ಮ

ಉಂಟುಮಾಡಿದರೆ ಏಡಿಯಿಂದ ತಯಾರಿಸಿದ ಪದಾರ್ಥ ಮತ್ತೆ ಕೆಲವರಿಗೆ ಆಸ್ತ್ಮ ತರಬಹುದು. ನಿರ್ನಾಳ ಗ್ರಂಥಿಗಳ ಅವ್ಯವಸ್ಥಿತ ಉಲ್ಬಣದಿಂದಾಗಿ ಆಸ್ತ್ಮ ಬರಬಹುದು. ಕೆಲವು ಮಹಿಳೆಯರಲ್ಲಿ ಋತುಕಾಲಕ್ಕೆ ಸುಮಾರು ಎರಡು ಮೂರು ದಿವಸಗಳ ಮೊದಲು ಆಸ್ತ್ಮ ಕಾಣಿಸಿಕೊಳ್ಳಬಹುದು. ಪ್ರೊಜೆಸ್ಟಿರಾನ್ ಮತ್ತು ಅಂಡಾಶಯದ ಅಂತಃಸ್ರಾವಗಳನ್ನು ಆ ಕಾಲದಲ್ಲಿ ಕ್ರಮವರಿತು ಉಪಯೋಗಿಸುವುದರಿಂದ ಆಸ್ತ್ಮವನ್ನು ಅಂಥವರಲ್ಲಿ ತಡೆಗಟ್ಟಬಹುದು. ಚರ್ಮವನ್ನು ಕೆರಳಿಸುವ ಕೆಲವು ಪದಾರ್ಥಗಳು ಆಸ್ತ್ಮವನ್ನು ಉಂಟುಮಾಡಬಹುದು. ಆದರೆ ಬಹುತೇಕ ಆಸ್ತ್ಮ ಉಂಟಾದಾಗ ಚರ್ಮದ ಕೆರಳುವಿಕೆಯಾದ ಪಿತ್ತದ ಗಂದೆ ಅಥವಾ ಇಸುಬು ಇರುವುದಿಲ್ಲ. ಪಿತ್ತದ ಗಂದೆ ಅಥವಾ ಇಸುಬು ಉಲ್ಬಣಗೊಂಡಾಗ ಆಸ್ತ್ಮ ಇರುವುದಿಲ್ಲ. ದೇಹ ಬಹಳ ಬಳಲಿದಾಗ, ಮನಸ್ಸಿನಲ್ಲಿ ಭಾವೋದ್ರೇಕ ಅತಿಯಾದಾಗ ಹಾಗೂ ಮಾನಸಿಕ ಆಘಾತವಾದಾಗ ಆಸ್ತ್ಮ ಉಂಟಾಗುವುದುಂಟು. ಒಗ್ಗದಿಕೆಗಳಿಂದ ಆಸ್ತ್ಮ ಸಂಭವಿಸಿದೆ ಎಂದು ಖಚಿತವಾಗಿ ತಿಳಿದರೂ ಮಾನಸಿಕ ಕಾರಣಗಳನ್ನು ನಿರ್ಲಕ್ಷಿಸಬಾರದು. ರೋಜಾಹೂವಿನ ಪರಾಗದಿಂದ ಆಸ್ತ್ಮ ಬರುತ್ತಿದ್ದ ಕೆಲವರು ಕಾಗದದ ರೋಜಾ ಹೂವನ್ನು ಮೂಸಿದಾಗಲೂ ಇತರ ಕಾರಣಗಳಿಂದಲೂ ಆಸ್ತ್ಮ ಬರಬಹುದು. ಸ್ವಯಂಚಾಲಿತ ನರಗಳ ಅವ್ಯವಸ್ಥಿತ ಉದ್ರೇಕದಿಂದ ಹೀಗಾಗುವುದುಂಟು. ಮಾನಸಿಕ ಕಾರಣಗಳಿಂದ ಉಂಟಾಗುವ ಆಸ್ತ್ಮ ಈ ಗುಂಪಿಗೆ ಸೇರಿದುದು.

ಸ್ವಲ್ಪಕಾಲ ಮಾತ್ರ ಆಸ್ತ್ಮ ಇದ್ದು ಅನಂತರ ಎಂದಿನ ಸಮಾಧಾನ ಸ್ಥಿತಿ ಬಂದರೆ ಆಗ ಶ್ವಾಸನಾಳಗಳ ಮೇಲಾಗಲಿ, ಶ್ವಾಸಗೂಡುಗಳ ಮೇಲಾಗಲಿ ಕೆಟ್ಟ ಪರಿಣಾಮ ಉಂಟಾಗುವುದಿಲ್ಲ. ಆದರೆ ಆಸ್ತ್ಮ ಹೆಚ್ಚುಕಾಲವಿದ್ದು, ಅತಿಯಾಗಿ ಕಾಡಿದರೆ, ಎಂಫೈಸೀಮ ಎಂಬ ಸ್ಥಿತಿ ಉಂಟಾಗಬಹುದು. ಶ್ವಾಸಗೂಡುಗಳು ಸಂಕುಚಿಸುವ ಸಾಮರ್ಥ್ಯವನ್ನು ಕಳೆದುಕೊಂಡು ಹಿರಿದಾಗಿ ಉಳಿಯುತ್ತವೆ. ಈ ಸ್ಥಿತಿಗೆ ಇಳಿದ ಮೇಲೆ ಪುನಃ ಮೊದಲಿದ್ದ ಆರೋಗ್ಯಸ್ಥಿತಿಗೆ ಬರಲು ಸಾಧ್ಯವಾಗದು.

ಗುಂಡಿಗೆ ಬೇನೆಯಿಂದಾಗುವ ಉಬ್ಬಸ : ಯಾವುದೇ ಕಾರಣದಿಂದಾಗಲಿ ಗುಂಡಿಗೆ ದುರ್ಬಲಗೊಂಡರೆ ರಕ್ತಪ್ರವಾಹದ ಮೊತ್ತ ಕಡಿಮೆಯಾಗುತ್ತದೆ. ಘುಪ್ಪುಸಗಳಲ್ಲಿ ಆಗ ರಕ್ತ ಹೆಚ್ಚಾಗುತ್ತದೆ. ರಕ್ತದ ಒತ್ತಡವೂ ಹೆಚ್ಚು ಆಗುತ್ತದೆ. ಶ್ವಾಸಗೂಡುಗಳ ಹೊರಪೊರೆಯಲ್ಲಿಂದ ರಕ್ತದ ದ್ರವಭಾಗ ಗೂಡುಗಳಿಗೆ ಹನಿಹನಿಯಾಗಿ ಸ್ರವಿಸುತ್ತದೆ. ಶ್ವಾಸಗೂಡುಗಳಲ್ಲಿ ದ್ರವ ಹೆಚ್ಚಾದಾಗ ಶ್ವಾಸಕಾರ್ಯಕ್ಕೆ ಅಡಚಣೆಯಾಗುತ್ತದೆ. ಹೆಚ್ಚು ಹೆಚ್ಚಾಗಿ ಆಗ ಉಸಿರಾಡಬೇಕಾಗುತ್ತದೆ. ಹಾಗೆ ಮೇಲೆ ಮೇಲೆ ಉಸಿರಾಡಿದಾಗ ಮಾತ್ರ ದೇಹಕ್ಕೆ ಅಗತ್ಯವಾದ ಆಕ್ಸಿಜನ್ ದೊರಕಲು ಸಾಧ್ಯ. ಇದೂ ಉಬ್ಬಸದಂತೆಯೇ ಕಂಡರೂ ಅದು ಆಸ್ತ್ಮವಲ್ಲ. ಆದರೆ ಇದಕ್ಕೆ ಕಾರಣ ಹೃದಯದ ನಿಶ್ಶಕ್ತಿ. ಈ ತೆರನಾದ ಉಬ್ಬಸಕ್ಕೆ ಹೃದಯದ ಚಿಕಿತ್ಸೆ ಅಗತ್ಯ.

ಮೂತ್ರಕೋಶಗಳ ಬೇನೆಯಿಂದುಂಟಾಗುವ ಉಬ್ಬಸ : ಮೂತ್ರಕೋಶಗಳಲ್ಲಿ ರೋಗ ಉಂಟಾದರೆ ರಕ್ತದಿಂದ ಅನಪೇಕ್ಷಿತ ಅಪಾಯಕಾರಿ ವಸ್ತುಗಳನ್ನು ಶೋಧಿಸಿ ಹೊರ ತೆಗೆಯುವ ಮೂತ್ರಪಿಂಡಗಳ ಕಾರ್ಯಕ್ಕೆ ಧಕ್ಕೆ ಉಂಟಾಗುತ್ತದೆ. ರಕ್ತದ ಒತ್ತಡವನ್ನು ಹೆಚ್ಚಿಸುವುದರಿಂದ ಈ ಶೋಧನಕಾರ್ಯವನ್ನು ಮುಂದುವರಿಸಬಹುದು. ಆದರೆ ರಕ್ತದ ಒತ್ತಡ ಹೆಚ್ಚಾದರೆ ಹೃದಯಕ್ಕೆ ತ್ರಾಸ ಆಗುತ್ತದೆ. ಆಗಲೂ ಉಬ್ಬಸ ಚಿಹ್ನೆಗಳು ಕಾಣಿಸುತ್ತವೆ. ಈ ತೆರನಾದ ಉಬ್ಬಸಕ್ಕೆ ಮೂತ್ರಕೋಶಗಳ ಚಿಕಿತ್ಸೆ ಅಗತ್ಯ.

ಚಿಕಿತ್ಸೆ : ಒಗ್ಗದಿಕೆಯ ಪ್ರತಿಕ್ರಿಯೆಯಿಂದ ಉಂಟಾದ ಆಸ್ತ್ಮರೋಗಿಗಳು ಯಾವ ಒಗ್ಗದಿಕಗಳಿಂದ ಆಸ್ತ್ಮ ಉಂಟಾಗುತ್ತದೆ ಎಂಬುದನ್ನು ಗಮನಿಸಿ ಅಂಥವನ್ನು ವರ್ಜಿಸಬೇಕು. ವರ್ಜಿಸಲು ಸಾಧ್ಯವಿರದಿದ್ದರೆ ಅವುಗಳ ವಿರುದ್ಧ ಪ್ರತಿರೋಧನ ಚಿಕಿತ್ಸೆ ಕೆಲವೊಂದು ನಿರ್ದಿಷ್ಟ ಸನ್ನಿವೇಶಗಳಲ್ಲಿ ಉಪಯುಕ್ತ. ಆಸ್ತ್ಮ ಕಾಣಿಸಿಕೊಂಡ ಬಳಿಕ ಬೀಟಾ ಅಡ್ರಿನೋಸೆಪ್ಟರ್ ಪ್ರಭಾವ ಹೆಚ್ಚಿಸುವ ಔಷಧಿಗಳನ್ನು ಬಳಸಬೇಕು. ಶ್ವಾಸದ ಪುಟ್ಟ ನಾಳಗಳನ್ನು ಈ ಔಷಧಿ ಹಿಗ್ಗಿಸುತ್ತದೆ. ಹಾಗಾಗಿ ಉಸಿರು ಆಡಲು ಹೆಚ್ಚು ಸರಾಗವಾಗುತ್ತದೆ. ಥಿಯೊಫಿಲಿನ್ ತರಹವೇ ಕಾರ್ಯವನ್ನು ಮಾಡುವ ಕೆಳಮಟ್ಟದ ಔಷಧಿ. ಈ ಆಸ್ತ್ಮದಲ್ಲಿ ದ್ರವ ಉಸಿರಹಾದಿ ಉರಿಯೂತದಿಂದ ಉಬ್ಬಿರುತ್ತದೆ. ಇದನ್ನು ನಿವಾರಿಸಲು ಕಾರ್ಟಿಕೊಸ್ಟೀರಾಯಿಡ್ ಔಷಧಿ ಸಹಾಯ ಮಾಡುತ್ತದೆ. ಆಸ್ತ್ಮ ಪರಿಸ್ಥಿತಿಯಲ್ಲಿ ಸರಾಗವಾಗಿ ಉಸಿರಾಡಲಾಗದೆ ಆ ದೇಹಕ್ಕೆ ಅಗತ್ಯವಾದ ಆಕ್ಸಿಜನ್ ಸಾಕಷ್ಟು ಮೊತ್ತದಲ್ಲಿ ದೊರೆಯುವುದಿಲ್ಲ. ಆಕ್ಸಿಜನ್ನನು ತೀವ್ರತೆರನಾದ ಆಸ್ತ್ಮ ರೋಗಿಗೆ ಒದಗಿಸಿದರೆ ಉಬ್ಬಸದ ಕಷ್ಟ ಕಡಿಮೆಯಾಗುತ್ತದೆ. ಘುಪ್ಪುಸಗಳಿಗೆ ಸೂಕ್ತವಾದ ವ್ಯಾಯಾಮ ದೊರೆಯುವಂತೆ ಉಸಿರಾಟದ ವ್ಯಾಯಾಮವನ್ನು ಅಭ್ಯಾಸಮಾಡಿದರೆ ಪ್ರಯೋಜನವುಂಟು. ಉಸಿರನ್ನು ಆದಷ್ಟು ದೀರ್ಘವಾಗಿ ಎಳೆದುಕೊಳ್ಳುವುದು ಅಷ್ಟೇ ಕಾಲ ಅದನ್ನು ಹಿಡಿದಿಡುವುದು, ಬಳಿಕ ಅದಕ್ಕಿಂತಲೂ ಹೆಚ್ಚುಕಾಲ ಉಸಿರನ್ನು ಹೊರಬಿಡುವುದು – ಇದೇ ಶ್ವಾಸ ವ್ಯಾಯಾಮದ ಮುಖ್ಯ ಅಂಶ. ಹೆಚ್ಚುಕಾಲ ಉಸಿರನ್ನು ಬಿಡುವುದರಿಂದ ಶ್ವಾಸಗೂಡುಗಳಲ್ಲಿ ಉಳಿಯಬಹುದಾದ ಕಶ್ಮಲಗಾಳಿಯ ಮೊತ್ತ ಗಮನೀಯವಾಗಿ ಕಡಿಮೆಯಾಗುತ್ತದೆ. ಹಾಗಾಗಿ ಉಸಿರೆಳೆದುಕೊಳ್ಳುವಾಗ ಹೆಚ್ಚು ನಿರ್ಮಲ ವಾಯುವನ್ನು ತೆಗೆದುಕೊಳ್ಳಬಹುದು. ಅಲ್ಲದೆ ಈ ವ್ಯಾಯಾಮದಿಂದ ಶ್ವಾಸನಾಳಗಳ ಸಂಕುಚನ ಶಕ್ತಿಯೂ ಹೆಚ್ಚುತ್ತದೆ.

ಒತ್ತಡದಲ್ಲಿರುವ ಆಕ್ಸಿಜನ್ನನ್ನು ಬಳಸುವುದರಿಂದ ಅಥವಾ ದೀರ್ಘವಾಗಿ ಉಸಿರಾಡಿ ಹೆಚ್ಚು ಆಕ್ಸಿಜನ್ನನ್ನು ಶ್ವಾಸಗೂಡುಗಳಿಗೆ ಸೇವಿಸುವುದರಿಂದ ಅಲ್ಲಿರಬಹುದಾದ ಕಫದಂಥ ದ್ರವ ಕರಗಿ ಹೆಚ್ಚು ನೀರಾಗಿ ಸುಲಭವಾಗಿ ಹೊರಬರಲು ಸಾಧ್ಯವಾಗುತ್ತದೆ. ಒಂದು ಸ್ಥಳದ ಹವದಿಂದ (ಹವ ಅಂದರೆ ವಾತಾವರಣದ ಉಷ್ಣತೆ, ಸಾಂದ್ರತೆ, ದ್ರವಯುಕ್ತತೆ ಮಾತ್ರ ಎನ್ನುವ ಅರ್ಥದಲ್ಲಿ ಈ ಪದವನ್ನು ಉಪಯೋಗಿಸಿದೆ) ಆಸ್ತ್ಮ ಬರುತ್ತದೆ ಎಂದು ಖಚಿತವಾದರೆ ಆ ಹವಾ ಬದಲಾಯಿಸುವುದು ಒಳ್ಳೆಯದು. ಆದರೆ ಹವಾ ಬದಲಾವಣೆಯಿಂದ ಆಸ್ತ್ಮವನ್ನು ತಡೆಯಬಹುದು ಎಂಬ ಸಾಮಾನ್ಯರ ಅಭಿಪ್ರಾಯ ಬಹುಪಾಲು ಉತ್ಪ್ರೇಕ್ಷೆಯಿಂದ ಕೂಡಿದುದು. ಆಸ್ತ್ಮ ಬಂದಿತಲ್ಲ ಎಂಬ ಭಯಪೂರಿತ ಆತಂಕ ಆಸ್ತ್ಮವನ್ನು ಉಲ್ಬಣಗೊಳಿಸುತ್ತದೆ. ಈ ತೆರನ ಭಯಪೂರಿತ ಆತಂಕವನ್ನು ಶಮನ ಮಾಡಲು ಮಾನಸಿಕ ಚಿಕಿತ್ಸೆಯನ್ನು ಮಾಡಬೇಕು.

ಆಸ್ತ್ಮ ಘೋರವಾದ, ವಾಸಿ ಮಾಡಲಾಗದ ಕಾಯಿಲೆ ಎಂದು ಜನರಲ್ಲಿ ಒಂದು ಮೂಢನಂಬಿಕೆ ಉಂಟು. ಈ ಬೇನೆಯಿಂದ ಆಯುಃಪ್ರಮಾಣಕ್ಕೆ ತೊಂದರೆ ಇಲ್ಲ. ಮುಂಜಾಗ್ರತೆಯ ಕ್ರಮಗಳನ್ನು ಕೈಗೊಂಡು, ಅಲ್ಪ ಸ್ವಲ್ಪ ಚಿಕಿತ್ಸೆಯನ್ನು ಅಗತ್ಯವಾದಾಗ ಮಾಡಿಕೊಂಡರೆ ಆಸ್ತ್ಮ ರೋಗಿಗಳು ಕೂಡ ಎಲ್ಲರಂತೆಯೇ ಬಾಳಿ ಬದುಕಬಹುದು.

(ಎಂ.ಎಚ್‌ಡಿ.ಎಸ್.)

**ಗೂರ್ಖ ಯುದ್ಧ :** ಬ್ರಿಟಿಷ್ ಭಾರತ ಸರ್ಕಾರಕ್ಕೂ ಗೂರ್ಖರಿಗೂ ನಡುವೆ 1814 ರಿಂದ 1816 ರವರೆಗೆ ನಡೆದ ಯುದ್ಧ. 1426ರಲ್ಲಿ ನೇಪಾಲದ ರಾಜನಾದ ಯಕ್ಷಮಲ್ಲ ಸುಮಾರು 50 ವರ್ಷಗಳ ಕಾಲ ಆಳಿ ತನ್ನ ಸಾವಿಗೆ ಮುಂಚೆ ರಾಜ್ಯವನ್ನು ತನ್ನ ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ಹಂಚಿಕೊಟ್ಟ. ಇದರಿಂದ ನೇಪಾಲ ಕಾಠಮಂಡು ಮತ್ತು ಬಾತ್‌ಗಾನ್ ಎಂಬ ಎರಡು ಸಣ್ಣ ಪ್ರತಿಸ್ಪರ್ಧಿ ಸಂಸ್ಥಾನಗಳಾಗಿ ಒಡೆಯಿತು. 1708ರಲ್ಲಿ ಹಿಮಾಲಯ ಪರ್ವತ ಪ್ರದೇಶದಲ್ಲಿದ್ದ ಒಂದು ಬಣವಾಗಿದ್ದ ಗೂರ್ಖರು ಈ ಎರಡು ರಾಜ್ಯಗಳ ಒಳಜಗಳವನ್ನು ಉಪಯೋಗಿಸಿಕೊಂಡು ನೇಪಾಲವನ್ನು ಆಕ್ರಮಿಸಿದರು. ಅವರು ಕ್ರಮೇಣ ನೇಪಾಲವನ್ನು ಸೈನಿಕ ಶಕ್ತಿಯುಳ್ಳ ಒಂದು ಪ್ರಬಲ ರಾಜ್ಯವನ್ನಾಗಿ ಮಾಡಿ ರಾಜ್ಯ ವಿಸ್ತರಣೆಗೆ ಹೊರಟರು. ಉತ್ತರ ದಿಕ್ಕಿನಲ್ಲಿ ಚೀನೀ ಸಾಮ್ರಾಜ್ಯವಿದ್ದುದರಿಂದ ಆ ದಿಕ್ಕಿನಲ್ಲಿ ವಿಸ್ತರಣೆಗೆ ಅವಕಾಶವಾಗಲಿಲ್ಲ. ಆದರೆ ದಕ್ಷಿಣದ ಕಡೆಗೆ ತಿರುಗಿ, 19ನೆಯ ಶತಮಾನದ ಪ್ರಾರಂಭದಲ್ಲಿ ಪೂರ್ವಕ್ಕೆ ತಿಸ್ತಾ ಮತ್ತು ಪಶ್ಚಿಮಕ್ಕೆ ಸಟ್ಲೆಜ್‌ವರೆಗೂ ಆಕ್ರಮಿಸಿಕೊಂಡರು. 1801ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಈಗಿನ ಉತ್ತರ ಪ್ರದೇಶದ ಗೊರಖ್‌ಪುರ ಜಿಲ್ಲೆಯನ್ನು ಆಕ್ರಮಿಸಿತು. ಇದರಿಂದ ನೇಪಾಲ ಮತ್ತು ಬ್ರಿಟಿಷ್ ಭಾರತ ನೆರೆ ದೇಶಗಳಾದವು. ಗೂರ್ಖರು ಪದೇ ಪದೇ ಆಕ್ರಮಣ ನಡೆಸಲು ಪ್ರಾರಂಭಿಸಿದರು. ನೇಪಾಲ ಮತ್ತು ಗೋರಖ್‌ಪುರಗಳ ನಡುವಣ ಗಡಿಯನ್ನು ಗುರುತಿಸಿರಲಿಲ್ಲ. 1805ರ ಅಕ್ಟೋಬರಿನಲ್ಲಿ ಭಾರತದ ಗವರ್ನರ್–ಜನರಲ್ ಜಾರ್ಜ್ ಬಾರ್ಲೊ ಗೂರ್ಖರಿಗೆ ಎಚ್ಚರಿಕೆ ನೀಡಿದ. ಲಾರ್ಡ್ ಮಿಂಟೊ ಗವರ್ನರ್–ಜನರಲ್ ಆಗಿದ್ದಾಗ ಗೂರ್ಖರು ಬುತ್ವಾಲ್ ಮತ್ತು ಶಿಯೋಜ್‌ಗಳನ್ನು ಆಕ್ರಮಿಸಿದರು. ಆದರೆ ಇಂಗ್ಲಿಷರು ಬಹಿರಂಗ ಘರ್ಷಣೆ ಇಲ್ಲದೆ ಪುನಃ ಅವುಗಳನ್ನು ವಶಪಡಿಸಿಕೊಂಡರು.

1814ರ ಮೇಯಲ್ಲಿ ಗೂರ್ಖರು ಬುತ್ವಾಲಿನಲ್ಲಿ ಮೂರು ಪೋಲಿಸ್ ಠಾಣೆಗಳ ಮೇಲೆ ಆಕ್ರಮಣ ನಡೆಸಿದರು. ಅಕ್ಟೋಬರ್ 1814ರಲ್ಲಿ ಭಾರತದ ಗವರ್ನರ್ ಜನರಲ್ ಲಾರ್ಡ್ ಹೇಸ್ಟಿಂಗ್ಸ್ ಯುದ್ಧ ಘೋಷಿಸಿದ. ಗೂರ್ಖರ ವಿರುದ್ಧ ನಾಲ್ಕು ಸ್ಥಳಗಳಲ್ಲಿ ಇಂಗ್ಲಿಷರ ಕಾರ್ಯಾಚರಣೆ ಪ್ರಾರಂಭವಾಯಿತು. ಗೂರ್ಖರು ಉತ್ತಮ ಸೈನಿಕರಾಗಿದ್ದರು. ಬ್ರಿಟಿಷ್ ಸೈನಿಕರಿಗೆ ಪರ್ವತ ಪ್ರದೇಶದ ಜ್ಞಾನ ಅಷ್ಟಾಗಿ ಇರಲಿಲ್ಲ. ಮೇಜರ್ ಜನರಲ್ ಮಾರ್ಲೆ ಮತ್ತು ಜಾನ್ ಸಲ್ಲಿವನ್ ವುಡ್ಡರ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಹಿಮ್ಮೆಟ್ಟಬೇಕಾಯಿತು. ಕಲಂಗ ಎಂಬ ಪರ್ವತ ಕೋಟೆಯ ಮುತ್ತಿಗೆಯಲ್ಲಿ ಜನರಲ್ ಜಿಲೆಸ್ಪಿ ಮರಣ ಹೊಂದಿದ. ಜೈತಕ್ ಎಂಬಲ್ಲಿ ಜನರಲ್ ಮಾರ್ಟಿಂಡೇಲ್ ಸೋತ. ಆದರೆ ಬ್ರಿಟಿಷ್ ಸೇನೆ 1815ರ ಏಪ್ರಿಲಿನಲ್ಲಿ ಆಲ್ಮೋರವನ್ನು ಆಕ್ರಮಿಸಿತು. 1815ರ ಮೇ ತಿಂಗಳಲ್ಲಿ ಜನರಲ್ ಆಕ್ಟರ್ ಲೋನಿ ಗೂರ್ಖರ ನಾಯಕ ಅಮರ್‌ಸಿಂಗ್

ಥಾಪನನ್ನು ಸೋಲಿಸಿ ಮಲಾನ್ ಕೋಟೆಯನ್ನು ವಶಪಡಿಸಿಕೊಂಡ. 1815ರ ನವೆಂಬರ್ 28ರಂದು ಗೂರ್ಖರು ಸಗೌಲಿ ಒಪ್ಪಂದಕ್ಕೆ ಸಹಿ ಹಾಕಿದರು. ಆದರೆ ನೇಪಾಲ ಸರ್ಕಾರ ಈ ಒಪ್ಪಂದಕ್ಕೆ ಅಂಗೀಕಾರ ನೀಡದಿರಲು ಪುನಃ ಯುದ್ಧ ಕಾರ್ಯಾಚಾರಣೆ ಪ್ರಾರಂಭವಾಯಿತು. ಅಕ್ಟರ್‌ಲೋನಿ 1816ರ ಫೆಬ್ರುವರಿ 28ರಂದು ಮುಕ್ವನ್‌ಪುರ ಕದನದಲ್ಲಿ ಗೂರ್ಖರನ್ನು ಸೋಲಿಸಿ, ನೇಪಾಲದ ರಾಜಧಾನಿಯ ಸಮೀಪಕ್ಕೆ ಬಂದ. ನೇಪಾಲ ಸರ್ಕಾರ ಒಪ್ಪಂದವನ್ನು ಮಾರ್ಚ್ ತಿಂಗಳಲ್ಲಿ ಅಧಿಕೃತವಾಗಿ ಅಂಗೀಕರಿಸಿತು. ಈ ಒಪ್ಪಂದದ ಪ್ರಕಾರ ನೇಪಾಲ ತನ್ನ ದಕ್ಷಿಣಗಡಿಯ ತಗ್ಗು ಪ್ರದೇಶಗಳ ಹಕ್ಕನ್ನು ಬಿಟ್ಟುಕೊಟ್ಟಿತು. ಇಂಗ್ಲೀಷರಿಗೆ ನೇಪಾಲದ ಪಶ್ಚಿಮದಲ್ಲಿ ಗರ್‌ವಾಲ್ ಮತ್ತು ಕುಮನ್ ಜಿಲ್ಲೆಗಳನ್ನು ಕೊಟ್ಟಿತು. ಗೂರ್ಖರು ಸಿಕ್ಕಿಮ್‌ನಿಂದ ವಾಪಸಾದರು : ನೇಪಾಲದ ರಾಜಧಾನಿ ಕಾಠಮಂಡುವಿನಲ್ಲಿ ಒಬ್ಬ ಬ್ರಿಟಿಷ್ ರೆಸಿಡೆಂಟ್ ಇರಲು ಅವರು ಒಪ್ಪಿದರು. ಅನಂತರ ಗೂರ್ಖರು ಒಪ್ಪಂದದ ಪ್ರಕಾರ ನಡೆದುಕೊಂಡರಲ್ಲದೆ ಅವರಲ್ಲಿ ಅನೇಕರು ಬ್ರಿಟಿಷ್ ಭಾರತ ಸೇನೆಯನ್ನು ಸೇರಿ ನಿಷ್ಠೆಯಿಂದ ಸೇವೆ ಸಲ್ಲಿಸಿದರು. (ಎ.ವಿ.ವಿ.)

**ಗೂರ್ಖರು** : ಗೂರ್ಖರು ಎಂಬ ಪದವನ್ನು ನೇಪಾಲದ ರಾಜಮನೆತನಕ್ಕೆ ನಿರ್ದಿಷ್ಟಾರ್ಥದಲ್ಲೂ ನೇಪಾಲದ ನಿವಾಸಿಗಳಿಗೆ ವ್ಯಾಪಕಾರ್ಥದಲ್ಲೂ, ಬಳಸಲಾಗುತ್ತಿದೆ. ಅಲ್ಲಿಯ ರಾಜಮನೆತನದವರು ಭಾರತದ ಚಿತ್ತೂರಿನ ರಜಪೂತ ದೊರೆಯ ವಂಶಕ್ಕೆ ಸೇರಿದವರೆಂದು ನಂಬಲಾಗಿದೆ. 1303ರಲ್ಲಿ ಅಲ್ಲಾವುದ್ದೀನ ಈ ಕೋಟೆಯನ್ನು ಭೇದಿಸಿದಾಗ ಈ ದೊರೆ ತಾಯ್ನಾಡನ್ನು ತೊರೆದು ಉತ್ತರಕ್ಕೆ ಓಡಿ ಹೋದ. ಗೂರ್ಖ ಎಂಬ ಸಣ್ಣ ರಾಜ್ಯ ಇದ್ದದ್ದು ಸಪ್ತ ಗಂಡಕಿ ಪ್ರದೇಶದಲ್ಲಿ. ನೇಪಾಲದಲ್ಲಿ ಗೂರ್ಖ ಎಂಬ ಜಿಲ್ಲೆಯಿದೆ. ಅದರ ಮುಖ್ಯಸ್ಥಳದ ಹೆಸರೂ ಗೂರ್ಖ. ಈ ಹೆಸರು ಗೋರಖನಾಥ ಎಂಬ ಗುರುವಿನ ನಾಮಪ್ರತೀಕವಾಗಿ ಬಂದಿದ್ದೆಂದು ತಿಳಿದುಬರುತ್ತದೆ. ಗೂರ್ಖರು ಈ ಗುರುವನ್ನು ತಮ್ಮ ಕುಲದ ಗುರುವೆಂದು ಭಾವಿಸಿದ್ದಾರೆ. ಇಲ್ಲಿ ಪ್ರಸಿದ್ಧ ಭವಾನಿ ದೇವಾಲಯವಿದೆ. ಈ ಪ್ರದೇಶವನ್ನು 1559ರಲ್ಲಿ ಆಕ್ರಮಿಸಿಕೊಂಡು ಆಳಲು ತೊಡಗಿದ ದೊರೆಯ ವಂಶದವರು ತಮ್ಮ ಪ್ರಜೆಗಳನ್ನು ಗೂರ್ಖಾಲಿ ಎಂದು ಕರೆದರು. ಕ್ರಮೇಣ ಇಡೀ ನೇಪಾಲ ಈ ರಾಜರ ಅಧೀನಕ್ಕೆ ಬಂತು.

1768ರ ಹೊತ್ತಿಗೆ ಗೂರ್ಖರು ಸುತ್ತಮುತ್ತಲ ಸ್ಥಳೀಯ ಗುಡ್ಡಗಾಡು ಜನರನ್ನು ಸೋಲಿಸಿ ಇಡೀ ನೇಪಾಲವನ್ನೇ ಒಂದು ಆಡಳಿತದ ಅಡಿಗೆ ತಂದರು. 1790ರಲ್ಲಿ ಗೂರ್ಖರು ಟಿಬೆಟ್ಟಿನ ಮೇಲೆ ಆಕ್ರಮಣ ಮಾಡಿದರು. ಆದರೆ 1791ರ ಚೀನೀ ಧಾಳಿಯಿಂದಾಗಿ ಇವರೊಂದಿಗೆ ಒಂದು ಒಪ್ಪಂದಕ್ಕೆ ಬರಬೇಕಾಯಿತು. ಬ್ರಿಟಿಷರು 1814ರಲ್ಲಿ ಗೂರ್ಖರೊಂದಿಗೆ ಯುದ್ಧ ಮಾಡಿದರು. 1816ರ ಒಪ್ಪಂದದಂತೆ ಕಾಠಮಂಡುವಿನಲ್ಲಿ ಬ್ರಿಟಿಷ್ ಪ್ರತಿನಿಧಿ ಇರುವುದಕ್ಕೆ ಗೂರ್ಖರು ಒಪ್ಪಿಕೊಂಡರು. ಆಗಿನಿಂದ ಭಾರತದಲ್ಲಿ ಬ್ರಿಟಿಷರ ಸೈನ್ಯದಲ್ಲಿ ಗೂರ್ಖರು ಸೇರಲು ಪ್ರಾರಂಭವಾಯಿತು. ಇವರು ಒಳ್ಳೆಯ ಯೋಧರೆಂದು ಪ್ರಖ್ಯಾತರಾಗಿದ್ದಾರೆ. ಭಾರತದಲ್ಲಿ 1857ರಲ್ಲಿ ನಡೆದ ಬಂಡಾಯವನ್ನು ಅಡಗಿಸಲು ಇವರು ನೆರವಾದರು. 1900ರಲ್ಲಿ ನಡೆದ ಚೀನೀ ದಂಡಯಾತ್ರೆಯಲ್ಲಿ ಪಾಲ್ಗೊಂಡರು. ಒಂದನೆಯ ಮಹಾಯುದ್ಧದಲ್ಲಿ 10,000 ಜನ ಗೂರ್ಖ ಸೈನಿಕರು ಭಾರತದ ಸೈನ್ಯದಲ್ಲಿ ಸೇವೆ ಸಲ್ಲಿಸಿದರು. ಎರಡನೆಯ ಮಹಾಯುದ್ಧದಲ್ಲಿ ವಿಶ್ವದ ಅನೇಕ ಭಾಗಗಳಲ್ಲಿ ಇವರು ಹೋರಾಡಿದರು. 1947ರ ಅನಂತರ ಬ್ರಿಟಿಷ್ ಭಾರತದ ಸೈನ್ಯದಲ್ಲಿದ್ದ ಗೂರ್ಖರ ಹತ್ತು ತುಕಡಿಗಳಲ್ಲಿ ನಾಲ್ಕು ತುಕಡಿಗಳು ಬ್ರಿಟಿಷ್ ಸೈನ್ಯಕ್ಕೂ ಉಳಿದ ಆರು ತುಕಡಿಗಳು ಭಾರತ ಸೈನ್ಯಕ್ಕೂ ಸೇರಿದುವು. ಸ್ವತಂತ್ರ ಭಾರತದ ಸೈನ್ಯದಲ್ಲಿ ಇವರ ಸೇವೆ ಅಮೂಲ್ಯವಾದದ್ದು.

ಗೂರ್ಖರೆಲ್ಲ ಭಾರತೀಯ ಮೂಲದವರಲ್ಲ. ಭಾರತದ ರಜಪೂತ ವಂಶದವರು ಅಲ್ಲಿ ನೆಲೆಸಿದ ಅನಂತರ ಅಲ್ಲಿಯ ಮೂಲನಿವಾಸಿಗಳೊಂದಿಗೆ ಬೆರೆತರು. ಗೂರ್ಖರು ಆರ್ಯ–ಮಂಗೋಲ್ ಜನಾಂಗದ ಲಕ್ಷಣಗಳನ್ನು ಪಡೆದಿದ್ದಾರೆ. ಇವರ ಕುಳ್ಳಾದ ಪುಷ್ಟ ದೇಹ, ಚಪ್ಪಟೆಯಾದ ಮುಖ, ಪೀತವರ್ಣ – ಇವು ಮಂಗೋಲ್ ಲಕ್ಷಣಗಳು. ಗೂರ್ಖರು ಪ್ರಧಾನವಾಗಿ ಹಿಂದೂಧರ್ಮಕ್ಕೆ ಸೇರಿದವರಾದರೂ ಇವರಲ್ಲಿ ಬೌದ್ಧರೂ ಸಾಕಷ್ಟಿದ್ದಾರೆ. ಹಿಂದೂಗಳಾದವರಲ್ಲಿ ವರ್ಣಾಶ್ರಮ ಪದ್ಧತಿಯಿದೆ. ಚಂಡಿ, ದೇವಿ, ದುರ್ಗಿ ಪೂಜೆಗಳು ಅಲ್ಲಿ ಹೆಚ್ಚು ಜನಪ್ರಿಯ. ಇವರು ಹಿಂದೂಗಳ ದಸರೆಯನ್ನೂ ಇತರ ಮುಖ್ಯ ಹಬ್ಬಗಳನ್ನೂ ಆಚರಿಸುತ್ತಾರೆ.

ಇವರ ಸಾಮಾಜಿಕ ಪದ್ಧತಿ ಬಹುತೇಕ ಭಾರತೀಯರ ಪದ್ಧತಿಯನ್ನೇ ಹೋಲುತ್ತದೆಯಾದರೂ ಇವರಲ್ಲಿ ಕೆಲವೊಂದು ವೈಶಿಷ್ಟ್ಯಗಳಿವೆ. ಮಗು ಹುಟ್ಟಿದಾಗ ಹನ್ನೊಂದು ದಿನಗಳ ಕಾಲ ಇವರು ಸಮಾರಂಭವನ್ನಾಚರಿಸುತ್ತಾರೆ. ಅಷ್ಟು ದಿನಗಳ ಕಾಲ ಮಗುವಿನ ತಂದೆ ತನ್ನ ಹತ್ತಿರದ ಸಂಬಂಧಿಗಳನ್ನು ಬಿಟ್ಟು ಇತರರೊಂದಿಗೆ ಊಟ ಮಾಡಕೂಡದು. ಹನ್ನೊಂದನೆಯ ದಿನ ವೈದಿಕರಿಂದ ಇವನು ಪರಿಶುದ್ಧ ನಾಗುತ್ತಾನೆ. ವಿಧವೆ ಮದುವೆ ಮಾಡಿಕೊಳ್ಳುವಂತಿಲ್ಲ. ಆದರೆ ಪರ ಪುರುಷನ ಕುಟುಂಬದೊಡನೆ ಸೇರಿಕೊಂಡರೆ ಅದನ್ನು ಕೀಳೆಂದು ಪರಿಗಣಿಸುವುದಿಲ್ಲ. ದಂಪತಿಗಳು ಪರಸ್ಪರ ಸಮ್ಮತಿಸಿದರೆ ವಿವಾಹ ವಿಚ್ಛೇದ ಪಡೆಯಬಹುದು. ಅನಂತರ ಇವರು ನ್ಯಾಯಬದ್ಧವಾಗಿ ವಿವಾಹ ಮಾಡಿಕೊಳ್ಳಲೂಬಹುದು. ಇವರಲ್ಲಿ ಬ್ರಾಹ್ಮಣರನ್ನು ಬಿಟ್ಟರೆ ಉಳಿದೆಲ್ಲರೂ ಮಾಂಸ ತಿನ್ನುತ್ತಾರೆ.

ಗೂರ್ಖರು ಬೇಟೆ ಮತ್ತು ಆಟಗಳಲ್ಲಿ ನಿಷ್ಣಾತರು. ಜೂಜಾಡುವುದು ಒಂದು ಪ್ರಧಾನ ಹವ್ಯಾಸ. ಇವರಲ್ಲಿ ಪ್ರತಿಯೊಬ್ಬರೂ ಕುರ್ಕಿ ಎಂಬ ಡೊಂಕಾದ ಚಾಕನ್ನು ಇಟ್ಟುಕೊಂಡಿರುತ್ತಾರೆ. ಇದು ಸುಮಾರು 50 ಸೆಂ.ಮೀ ಉದ್ದವಾಗಿರುತ್ತದೆ. ಇವರು ಧೈರ್ಯ ಸಾಹಸ ಪ್ರಾಮಾಣಿಕತೆಗಳಿಗೆ ಹೆಸರಾಗಿದ್ದಾರೆ. ಸ್ವತಂತ್ರ ಮನೋವೃತ್ತಿ, ಸ್ವಾವಲಂಬಿ ಪ್ರವೃತ್ತಿ, ಆತ್ಮ ಗೌರವ – ಇವು ಇವರಿಗೆ ರಕ್ತಗತವಾಗಿ ಬಂದಿರುವ ಗುಣಗಳು. ನೇಪಾಲದಲ್ಲಿ ಮೂರು ಮುಖ್ಯ ಭಾಷಾ ಕುಟುಂಬಗಳಿಗೆ ಸೇರಿದ ಸುಮಾರು 20 ಭಾಷೆಗಳಿವೆ. ಅವುಗಳಲ್ಲಿ ನೇಪಾಲ (ಗೂರ್ಖಾಲಿ) ಮುಖ್ಯ ಭಾಷೆ. ಇದರ ಮೇಲೆ ಹೆಚ್ಚಾಗಿ ಸಂಸ್ಕೃತದ ಪ್ರಭಾವವಿದೆ. (ಡಿ.ಎಸ್.ಜೆ.)

**ಗೂರ್ಜರ ವಂಶ** : ಸು. 6ನೆಯ ಶತಮಾನದಲ್ಲಿ ಗುಪ್ತ ಸಾಮ್ರಾಜ್ಯ ಅಸ್ತಂಗತವಾದ ಸಮಯದಲ್ಲಿ ಜೋಧಪುರದ ಸುತ್ತಲಿನ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದ ಒಂದು ಸಣ್ಣ ರಾಜ್ಯದ ಅರಸರ ವಂಶ. ಈಗಿನ ರಾಜಸ್ತಾನದ ಬಹುಭಾಗ ಹಿಂದೆ ಗೂರ್ಜರಾತ್ರ ಅಥವಾ ಗುಜರಾತವೆಂದೇ ಕರೆಯಲ್ಪಡುತ್ತಿತ್ತು. ಗೂರ್ಜರರು ನೆಲಸಿದ ಸ್ಥಳವಾದ ಕಾರಣ ಇದಕ್ಕೆ ಗೂರ್ಜರಾತ್ರವೆಂದು ಹೆಸರಾಯಿತು. ಗೂರ್ಜರರಿಗೆ ಸಂಬಂಧಿಸಿದುದೆಂಬಂತೆ ಪಂಜಾಬಿನಲ್ಲಿ ಗುಜ್ರಾನ್‌ವಾಲ, ಗುಜರಾತ್, ಗುಜರ್‌ಖಾನ್ ಎಂಬ ಹೆಸರಿನ ಸ್ಥಳಗಳಿವೆ. ಅಲ್ಲಿಯ ಸಹಾರನ್‌ಪುರ ಜಿಲ್ಲೆಗೆ ಹಿಂದೆ ಗುಜರಾತ ಎಂದೇ ಹೆಸರಿತ್ತು. ಗೂರ್ಜರರು ಹಿಮಾಲಯದ ಪಶ್ಚಿಮ ಪ್ರದೇಶ, ಪಂಜಾಬು, ಉತ್ತರ ಪ್ರದೇಶ, ಪಶ್ಚಿಮ ರಾಜಪುಟಾಣ ಮತ್ತು ಸಿಂಧೂ ನದಿಯ ಆಚೆಗಿರುವ ಗುಡ್ಡಗಾಡುಗಳಲ್ಲೆಲ್ಲ ತಮ್ಮ ನೆಲೆಗಳನ್ನು ಏರ್ಪಡಿಸಿಕೊಂಡಿದ್ದರು. (ಬಿ.ಎಸ್.ಕೆ.)

ಗೂರ್ಜರರು ಯಾರು? ಎಂಬ ಬಗ್ಗೆ ಅನೇಕ ಊಹೆಗಳೂ ವಾದಗಳೂ ಇವೆ. ಹೂಣರೊಡನೆ ಭಾರತಕ್ಕೆ ವಲಸೆ ಬಂದ ಒಂದು ಪರಕೀಯ ಜನಾಂಗದವರಿವರೆಂದೂ ಇವರು ಹಾಗೆ ಬಂದಾಗ ಬೀಡು ಬಿಟ್ಟಿದ್ದ ಸ್ಥಳಗಳಿಗೆ ಇವರ ಹೆಸರೇ ಬಂತೆಂದೂ ಕೆಲವು ಇತಿಹಾಸಕಾರರ ಅಭಿಪ್ರಾಯ. ಗೂರ್ಜರ ಎಂಬುದು ಒಂದು ಪ್ರದೇಶದ ಹೆಸರಾಗಿದ್ದು, ಅಲ್ಲಿಯ ಜನರು ಗೂರ್ಜರರೆನಿಸಿಕೊಂಡರೆಂದೂ ಇನ್ನೊಂದು ವಾದವಿದೆ. ಆದರೆ ಈ ವಾದ ಅಷ್ಟೇನೂ ಸಮರ್ಪಕವಲ್ಲ. ಗೂರ್ಜರ ಎಂಬುದು ಮೂಲತಃ ಒಂದು ಜನಾಂಗದ ಹೆಸರೆಂಬ ವಾದವನ್ನು ಅಲ್ಲಗಳೆಯುವಂತಿಲ್ಲವಾದರೂ ಅವರು ಪರಕೀಯ ರೆಂದೂ ಹೂಣರೊಡನೆ ವಲಸೆ ಬಂದವರೆಂದೂ ಹೇಳಲು ಖಚಿತವಾದ ಆಧಾರಗಳಿಲ್ಲ.

ಗೂರ್ಜರ ಪ್ರತೀಹಾರರು : 6ನೆಯ ಶತಮಾನದಲ್ಲಿ ಮೊದಲು ಸ್ಥಾಪಿತವಾದ ಗೂರ್ಜರ ರಾಜ್ಯದ ಮೂಲಪುರುಷ ಹರಿಚಂದ್ರ. ವೇದವಿದ್ಯಾಪಾರಂಗತನಾಗಿದ್ದ ಈ ಬ್ರಾಹ್ಮಣನಿಗೆ ಇಬ್ಬರು ಪತ್ನಿಯರಿದ್ದರು. ಬ್ರಾಹ್ಮಣ ಪತ್ನಿಯಲ್ಲಿ ಜನಿಸಿದ ಮಕ್ಕಳು ಪ್ರತೀಹಾರ ಬ್ರಾಹ್ಮಣರೆನಿಸಿಕೊಂಡರು. ಕ್ಷತ್ರಿಯ ಕುಲದ ಪತ್ನಿಯ ಹೆಸರು ಭದ್ರಾ. ಶಾಸ್ತ್ರಪಾರಂಗತನಾಗಿದ್ದ ಹರಿಚಂದ್ರ ಮಾಲವದ ಯಶೋಧರ್ಮನ ರಾಜ್ಯ ಅಳಿದ ಬಳಿಕ ಉಂಟಾದ ರಾಜಕೀಯ ಅವ್ಯವಸ್ಥೆಯನ್ನು ನಿವಾರಿಸಲು ಶಸ್ತ್ರವನ್ನು ಹಿಡಿದು ರಾಜ್ಯವೊಂದನ್ನು ಕಟ್ಟಿದ. ಈತನ ರಾಣಿಯಾದ ಭದ್ರಾದೇವಿಗೆ ಭೋಗಭಟ, ಕಕ್ಕಲ, ರಜ್ಜಿಲ ಮತ್ತು ದದ್ದ ಎಂಬ ನಾಲ್ವರು ಮಕ್ಕಳಾದರು. ಅವರು ಮಾಂಡವ್ಯಪುರವನ್ನು ಗೆದ್ದು, ಅಲ್ಲಿ ಪ್ರಬಲವಾದ ಕೋಟೆಯನ್ನು ಕಟ್ಟಿದರು. ಇವರಲ್ಲಿ ಹಿರಿಯರಾದ ಇಬ್ಬರನ್ನು ಕುರಿತು ಹೆಚ್ಚಿನದೇನೂ ತಿಳಿಯದು. ಮೂರನೆಯವನಾದ ರಜ್ಜಿಲನ ಅನಂತರ ಕ್ರಮವಾಗಿ ಅವನ ಮಗ ನರಭಟ ಮತ್ತು ಮೊಮ್ಮಗ ನಾಗಭಟ ಆಳಿದರು. ಹರಿಚಂದ್ರನಿಂದ ಆರಂಭಿಸಿ ಇವರೆಲ್ಲ 550 ರಿಂದ 640ರ ವರೆಗೂ ಆಳಿದರು.

ನಾಗಭಟನ ಮಗನ ಹೆಸರು ತಾತ. ಗೂರ್ಜರದ ಅರಸ ಬೌದ್ಧಮತಾವಲಂಬಿ ಯಾಗಿದ್ದು, ಜ್ಞಾನಿಯೂ ಶೂರನೂ ಆಗಿದ್ದನೆಂದು ಯುವಾನ್ ಚಾಂಗ್ ಬರೆದಿದ್ದಾನೆ. ಈ ಅರಸ ನಾಗಭಟನ ಮಗನಾದ ತಾತನಾಗಿರಬಹುದೆಂದು ಹಲವರು ಊಹಿಸಿದ್ದಾರೆ. ಇವನ ರಾಜಧಾನಿ ಪಿಲೊಮೊಲೊ ಎಂದು ಹೇಳಿದೆ. ಇದು ಭಿಲ್ಲಮಾಲ (ಈಗಿನ ಭಿನ್‌ಮಾಲ) ಆಗಿರಬಹುದು. ತಾತನ ಬಳಿಕ ನಾಲ್ವರು ಅರಸರು ಆಳಿದರು. ಇವರಲ್ಲಿ ಕಡೆಯವನು ಶೀಲುಕ. ಈತನ ಕಾಲದಲ್ಲಿ ಅರಬರು ಗುಜರಾತನ್ನು ಮುತ್ತಿ ಉಜ್ಜಯಿನಿಯವರೆಗೂ ಬಂದು ಜೋಧಪುರದ ಗೂರ್ಜರರ ರಾಜ್ಯವನ್ನು ಆಕ್ರಮಿಸಿದರು.

ಆದರೆ ಆ ವೇಳೆಗೆ ಆವಂತಿಯಲ್ಲಿ ಆಳುತಿದ್ದ ಗೂರ್ಜರರ ಇನ್ನೊಂದು ಮನೆತನದ ನಾಗಭಟ ಅರಬ್ಬರ ವಿರುದ್ಧ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದ.

ಈ ಕುಲದ ಭಿನ್ನ ಭಿನ್ನ ಶಾಖೆಗಳಿಗೆ ಸೇರಿದ ಸಣ್ಣ ಅರಸು ಮನೆತನಗಳು 6–7ನೆಯ ಶತಮಾನಗಳ ಬಳಿಕ ತಲೆ ಎತ್ತಿದುವು. ಅವುಗಳಲ್ಲಿ ಭರುಕಚ್ಛದ ಗೂರ್ಜರರದೊಂದು ಶಾಖೆ. ಇವರನ್ನು ನಾಂದೀಪುರಿಯ ಗೂರ್ಜರರೆಂದೂ ಕರೆಯಲಾಗಿದೆಯಾದರೂ ಅದು ಸಮಂಜಸವಲ್ಲವೆಂದು ಇತ್ತೀಚೆಗೆ ಸಂಶೋಧಕರೊಬ್ಬರು ಹೇಳಿದ್ದಾರೆ. ಇವರು ಸ್ವತಂತ್ರವಾಗಿ ಆಳದೆ ಕೇವಲ ಮಾಂಡಲಿಕರಾಗಿದ್ದರಾದರೂ ಇವರ ಸಾರ್ವಭೌಮ ಯಾರು ಎಂಬುದು ಖಚಿತಗೊಂಡಿಲ್ಲ. ಈ ಮನೆತನದ ಮೊದಲ ಅರಸ ದದ್ದ. ಈತ



ಮಹಾದೇವ ದೇವಾಲಯ, ಬಜೌರ

ಹರಿಚಂದ್ರನ ಕೊನೆಯ ಮಗನಾದ ದದ್ದನೇ ಇರಬಹುದು. ಸು. 580–605 ರ ವರೆಗೆ ಆಳಿದ ಈತನ ಅನಂತರ ಕ್ರಮವಾಗಿ ಜಯಭಟ (ಶ್ರೀವೀತರಾಗ, 605–629), ಇಮ್ಮಡಿ ದದ್ದ (ಪ್ರಶಾಂತರಾಗ, 629–654), ಇಮ್ಮಡಿ ಜಯಭಟ (654–679), ಮುಮ್ಮಡಿ ದದ್ದ (ಬಾಹುಸಹಾಯ, 679–704) ಇವರು ಆಳಿದರು. ಅನಂತರ ಪಟ್ಟಕ್ಕೆ ಬಂದವನು ಮುಮ್ಮಡಿ ಜಯಭಟ (705–735). ಈತನ ಕಾಲದಲ್ಲಿ ಖಲೀಫನ ಸೇನಾನಿಯಾದ ಜುನೈದ ತನ್ನ ದಂಡಿನೊಡನೆ ಭರುಕಚ್ಛವನ್ನು ಮುತ್ತಿದ. ಇದು ಈ ಗೂರ್ಜರರಿಗೆ ತೀವ್ರವಾದ ಪೆಟ್ಟಾಗಿ ಇವರು ಕಣ್ಮರೆಯಾದರು.

ಇವರಲ್ಲದೆ ಮೇವಾರದ ಗುಹಿಲಪುತ್ರರು, ಅಣಹಿಲಪಾಟಕದ (ಈಗಿನ ಪಾಠಣ್) ಚಾಪೋತ್ಕಟರು ಸಹ ಇದೇ ಕುಲಕ್ಕೆ ಸೇರಿದವರು.

ಆವಂತಿಯ ಗೂರ್ಜರ ಪ್ರತೀಹಾರರು : ನಾಗಭಟ : ಈತನ ಆಳ್ವಿಕೆಯ ಕಾಲ ನಿರ್ದಿಷ್ಟವಾಗಿ ತಿಳಿಯದು. 8ನೆಯ ಶತಮಾನದ ಮಧ್ಯದಲ್ಲಿ ಈತನ ಮನೆತನ ಖ್ಯಾತಿ ಪಡೆಯಿತು. ನಾಗಭಟನ ಪೂರ್ವಿಕರ ವಿಷಯವಾಗಿಯೂ ನಮಗೇನೂ ತಿಳಿಯದು. ಗೂರ್ಜರ ಅರಸನನ್ನು ರಾಷ್ಟ್ರಕೂಟರ ದಂತಿದುರ್ಗ ಸೋಲಿಸಿ ತಾನು ಹಿರಣ್ಯಗರ್ಭದಾನವನ್ನು ಮಾಡುವ ಸಮಯದಲ್ಲಿ ಈತನನ್ನು ಪ್ರತೀಹಾರ ಎಂದರೆ ದ್ವಾರಪಾಲಕನಾಗಿ ನೇಮಿಸಿದನೆಂದು ಶಾಸನಗಳಲ್ಲಿ ಹೇಳಿದೆ. ಈತ ಲಾಟ (ದಕ್ಷಿಣ ಗುಜರಾತ್) ಮತ್ತು ಸಿಂಧ್ ಪ್ರದೇಶಗಳನ್ನು ಆಕ್ರಮಿಸಿದನಂತೆ. ದಂತಿದುರ್ಗ 755 ರವರೆಗೆ ಆಳಿದನೆಂದು ನಮಗೆ ತಿಳಿದಿದೆ. ಪ್ರತೀಹಾರ ನಾಗಭಟ ತನ್ನ ಸಾರ್ವಭೌಮನೆಂದು 756ರಲ್ಲಿ ಭರುಕಚ್ಛದ ಅರಸ ಹೇಳಿಕೊಂಡಿರುವ ವಿಷಯ ನಮಗೆ ಇತರ ಮೂಲಗಳಿಂದ ತಿಳಿದಿದೆ. ಆದಕಾರಣ ನಾಗಭಟ 756–758ರ ನಡುವೆ ದಂತಿದುರ್ಗನಿಂದ ಸೋಲಿಸಲ್ಪಟ್ಟಿರಬೇಕು. ಅಂದರೆ ಈತ ಸುಮಾರು 730 ರಿಂದ 752ರ ವರೆಗೆ ಆಳಿದನೆಂದು ಊಹಿಸಬಹುದು.

ವತ್ಸರಾಜ : ವತ್ಸರಾಜನು ಈ ವಂಶದ ನಾಲ್ಕನೆಯ ಅರಸ. ದಂತಿದುರ್ಗನ ವಿಜಯ ಅಲ್ಪಕಾಲದ್ದಾಗಿತ್ತು. ಆತ ಸ್ವದೇಶಕ್ಕೆ ಮರಳಿದೊಡನೆ ಪ್ರತೀಹಾರರು ಪುನಃ ಸ್ವತಂತ್ರರಾದರು. ನಾಗಭಟನ ಅನಂತರ ಆತನ ಸೋದರನ ಮಕ್ಕಳಾದ ಕಕ್ಕುಕ ಮತ್ತು ದೇವರಾಜರು ಕೆಲಕಾಲ ಆಳಿದರು. ಬಳಿಕ ಪಟ್ಟಕ್ಕೆ ಬಂದ ದೇವರಾಜನ ಮಗನಾದ ವತ್ಸರಾಜ ಪ್ರತೀಹಾರ ರಾಜ್ಯವನ್ನು ಬಲಪಡಿಸಿದ. 778ರಲ್ಲಿ ರಚಿತವಾದ್ದೆಂದು ಹೇಳಲಾದ ಕುವಲಯಮಾಲಾ ಎಂಬ ಜೈನ ಗ್ರಂಥದ ಕರ್ತೃ ಅದನ್ನು ಜಾವಾಲಿಪುರದಲ್ಲಿ (ಜಾಲೋರ) ರಣಹಸ್ತಿನ್ ವತ್ಸರಾಜ ಆಳುತ್ತಿದ್ದಾಗ ರಚಿಸಿದ್ದಾಗಿ ಹೇಳಿಕೊಂಡಿದ್ದಾನೆ. ಈ ವತ್ಸರಾಜ ಪ್ರತೀಹಾರ ವತ್ಸರಾಜನೆಂದು ಸಾಮಾನ್ಯವಾಗಿ ಒಪ್ಪಲಾಗಿದೆ. ಈತ 778ರಲ್ಲೇ ಪಟ್ಟಕ್ಕೆ ಬಂದ. ಮಾಳವ ಮತ್ತು ಪೂರ್ವ ರಾಜಪುಟಾಣಗಳನ್ನೊಳಗೊಂಡ ಇವನ ರಾಜ್ಯ ಕ್ರಮೇಣ ವಿಸ್ತಾರವಾಯಿತು. ಉತ್ತರ ಭಾರತದ ಹಲವು ಪ್ರದೇಶಗಳು ಈತನ ಆಳ್ವಿಕೆಗೊಳಪಟ್ಟುವು. ಪೂರ್ವಾಭಿಮುಖವಾಗಿ ರಾಜ್ಯವನ್ನು ವಿಸ್ತರಿಸುತ್ತಿದ್ದ ಈತ ಸಹಜವಾಗಿಯೇ ಬಂಗಾಲದ ಪಾಲ ವಂಶದ ಧರ್ಮಪಾಲನನ್ನು ರಣರಂಗದಲ್ಲಿ ಎದುರಿಸಬೇಕಾಯಿತು. ಪಶ್ಚಿಮಾಭಿಮುಖವಾಗಿ ನುಗ್ಗುತ್ತಿದ್ದ ಧರ್ಮಪಾಲ ವತ್ಸರಾಜನಿಂದ ಸೋತ. ಆದರೆ ಅಷ್ಟರಲ್ಲೇ ರಾಷ್ಟ್ರಕೂಟ ಧ್ರುವ ಉತ್ತರಕ್ಕೆ ದಂಡೆತ್ತಿ ಬಂದ. ಇದು ತ್ರಿಕೋಣ ಸ್ಪರ್ಧೆಯಾಗಿ ಮಾರ್ಪಟ್ಟಿತು.

ಈ ವೇಳೆಗೆ ಕನೌಜ್ ಉತ್ತರಭಾರತದ ರಾಜಕೀಯದಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಹರ್ಷನ ಕಾಲದಲ್ಲಿ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಈ ನಗರವನ್ನು ಕೈವಶ ಮಾಡಿಕೊಳ್ಳುವುದು ಅಂದಿನ ಅರಸರಿಗೆ ಹೆಮ್ಮೆಯ ವಿಷಯವೆನಿಸಿತ್ತು. ಕನೌಜಿನಲ್ಲಿ 8ನೆಯ ಶತಮಾನದ ಉತ್ತರಾರ್ಧದಲ್ಲಿ ಆಯುಧ ಎಂದು ಅಂತ್ಯವಾಗುವ ಹೆಸರಿನ ಅರಸರು ಆಳುತ್ತಿದ್ದರು. 783ರಲ್ಲಿ ಇಂದ್ರಾಯುಧ ಇಲ್ಲಿಯ ಅರಸನಾಗಿದ್ದ. ಬಹುಶಃ ಈತನ ಸೋದರಸಂಬಂಧಿಯಾಗಿದ್ದ ಚಕ್ರಾಯುಧ ಇವನ ಪ್ರತಿಸ್ಪರ್ಧಿಯಾಗಿದ್ದ. ಇವರಿಬ್ಬರ ನಡುವಣ ವಿರಸದ ಪ್ರಯೋಜನವನ್ನು ಪಡೆದು ವತ್ಸರಾಜ ಇಂದ್ರಾಯುಧನನ್ನು ಸೋಲಿಸಿದ. ಆದರೂ ಆತನನ್ನು ತನ್ನ ಮಾಂಡಲಿಕನಾಗಿ ಕನೌಜಿನ ಸಿಂಹಾಸನದ ಮೇಲೆ ಕುಳ್ಳಿರಿಸಿದ. ಇಷ್ಟರಲ್ಲಿ ಧರ್ಮಪಾಲ ವತ್ಸರಾಜನ ಮೇಲೇರಿ ಬಂದ. ವತ್ಸರಾಜ ಅವನನ್ನು ಸೋಲಿಸಿದ. ಇವನಿಗೆ ಶಾಕಂಭರಿಯ ಚಾಹಮಾನ ವಂಶದ ದುರ್ಲಭರಾಜ ಸಹಾಯಕನಾಗಿ ನಿಂತು ಬಂಗಾಲದವರೆಗಿನ ಪ್ರದೇಶವನ್ನು ಆಕ್ರಮಿಸಿದನೆಂದು ಸಾಹಿತ್ಯದ ಆಧಾರಗಳಿಂದ ತಿಳಿದಿದೆ. ಆದರೆ ಆತ ಈ ವಿಜಯವನ್ನು ದೃಢಪಡಿಸಿಕೊಳ್ಳುವುದರೊಳಗಾಗಿಯೇ ರಾಷ್ಟ್ರಕೂಟ ಧ್ರುವ ಉತ್ತರಕ್ಕೆ ದಂಡೆತ್ತಿ ಬಂದು, ವತ್ಸರಾಜನನ್ನು ಸಂಪೂರ್ಣವಾಗಿ ಸೋಲಿಸಿದ. ತಾನು ಆಕ್ರಮಿಸಿದ್ದ ಪ್ರದೇಶಗಳನ್ನೆಲ್ಲ ಬಿಟ್ಟುಕೊಟ್ಟು ತನ್ನ ಮೂಲಸ್ಥಾನವನ್ನು ಉಳಿಸಿಕೊಳ್ಳಲು ವತ್ಸರಾಜ ಬಹಳ ಶ್ರಮಪಟ್ಟ. ಈ ಸಮಯದಲ್ಲಿ ಧರ್ಮಪಾಲ ಸಹ ಸೋಲನ್ನನುಭವಿಸಿದನಾದರೂ, ಅವನಿಗೆ ಹೆಚ್ಚಿನ ಹಾನಿಯುಂಟಾಗಲಿಲ್ಲ. ಅಲ್ಲದೆ, ಧ್ರುವ ಹಿಂದಿರುಗಿದ ಕೂಡಲೇ ಧರ್ಮಪಾಲ ವತ್ಸರಾಜನನ್ನು ಸೋಲಿಸಿ ತನ್ನ ಪ್ರತಿನಿಧಿ ಚಕ್ರಾಯುಧನನ್ನು ಕನೌಜಿನ ಸಿಂಹಾಸನದ ಮೇಲೆ ಕುಳ್ಳಿರಿಸಿದನು.

ಇಮ್ಮಡಿ ನಾಗಭಟ : ಧ್ರುವನಿಂದ ಸೋತ ಅನಂತರ ವತ್ಸರಾಜನ ಗತಿ ಏನಾಯಿತೆಂಬುದು ತಿಳಿಯದು. ರಾಜಪುಟಾಣದ ಕೆಲವು ಭಾಗಗಳನ್ನು ಮಾತ್ರ ಉಳಿಸಿಕೊಳ್ಳಲು ಶಕ್ತನಾದ ಈತ ಕೆಲವು ವರ್ಷಗಳವರೆಗೆ ಆಳಿರಬೇಕು. ಆದರೆ ಅವನ ಮಗನಾದ ಇಮ್ಮಡಿ ನಾಗಭಟ ಪುನಃ ತನ್ನ ರಾಜ್ಯವನ್ನು ಅಭಿವೃದ್ಧಿಗೊಳಿಸಿದ. ಈತನ ಮೊಮ್ಮಗನಾದ ಭೋಜನ ಗ್ವಾಲಿಯರ್ ಶಾಸನದಲ್ಲಿ ಈತ ಚಕ್ರಾಯುಧನನ್ನೂ ವಂಗಾಧಿಪತಿಯನ್ನೂ ಸೋಲಿಸಿದನೆಂದೂ ಆಂಧ್ರ, ಸೈಂಧವ, ವಿದರ್ಭ ಮತ್ತು ಕಳಿಂಗ ದೇಶಗಳ ಅರಸರು ಈತನಿಗೆ ಶರಣಾದರೆಂದೂ ಹೇಳಿದೆ. ಇವನ ಸಾಮಂತ ಅರಸರ ಶಾಸನಗಳಲ್ಲಿಯ ಹೇಳಿಕೆಗಳು ಈ ಸಂಗತಿಗಳನ್ನು ಬಹಳಮಟ್ಟಿಗೆ ದೃಢಪಡಿಸುತ್ತವೆ.

ಆನರ್ತ, ಮಾಳವ, ಕಿರಾತ, ತುರುಷ್ಕ, ವತ್ಸ ಮತ್ತು ಮತ್ಸ್ಯಾಧಿಪತಿಗಳಿಗೆ ಸೇರಿದ ಗಿರಿದುರ್ಗಗಳನ್ನು ಈತ ಕಸಿದುಕೊಂಡನೆಂದು ಹೇಳಲಾಗಿದೆ. ಬಹುಶಃ ಇವು ನಾಗಭಟನ ಆಳ್ವಿಕೆಯ ಮೊದಲ ವರ್ಷಗಳ ಸಾಧನೆಗಳಾಗಿರಬಹುದು. ಅನಂತರ ಈತ ಕನೌಜಿನ ಮೇಲೆ ಧಾಳಿಯಿಟ್ಟ. ಚಕ್ರಾಯುಧನನ್ನು ಸೋಲಿಸಿ ಕನೌಜನ್ನು ಸ್ವಾಧೀನಪಡಿಸಿಕೊಂಡ. ಅಂದಿನಿಂದ ಕನೌಜ್ ಪ್ರತೀಹಾರರ ರಾಜಧಾನಿಯಾಯಿತು. ಇದು ಧರ್ಮಪಾಲನೊಡನೆ ಯುದ್ಧಕ್ಕೆ ನಾಂದಿಯಾಯಿತು. ಈ ಸಲ ನಾಗಭಟನಿಗೆ ವಿಜಯ ದೊರಕಿತು.

ಆದರೆ ನಾಗಭಟನ ಅದೃಷ್ಟವೂ ಸರಿಯಾಗಿರಲಿಲ್ಲ. ಹಿಂದಿನ ತ್ರಿಕೋಣ ಸ್ಪರ್ಧೆಯಲ್ಲಿ ಭಾಗಿಗಳಾಗಿದ್ದ ರಾಷ್ಟ್ರಕೂಟರು ಪುನಃ ಉತ್ತರಭಾರತದ ರಾಜಕೀಯದಲ್ಲಿ ತಲೆಹಾಕಿದರು. ಪ್ರತೀಹಾರರನ್ನರಂತೂ ಅವರು ಆಜನ್ಮಶತ್ರುಗಳಂತೆಯೆ ಕಂಡರು. ಮುಮ್ಮಡಿ ಗೋವಿಂದ

ಪಟ್ಟಕ್ಕೆ ಬಂದಾಗ ಸು. 794–95ರಲ್ಲಿ ಒಂದು ಬಾರಿ ನಾಗಭಟ ರಾಷ್ಟ್ರಕೂಟರನ್ನು ಕೆಣಕಿದ. ದಕ್ಷಿಣದಲ್ಲಿಯ ತಲಕಾಡಿನ ಗಂಗರೊಡನೆ ಕಾದುತ್ತಿದ್ದ ಗೋವಿಂದನ ಪ್ರತಿನಿಧಿಗಳಾಗಿದ್ದ ಗುಜರಾತದ ರಾಷ್ಟ್ರಕೂಟ ಇಂದ್ರ ಮತ್ತು ಅವನ ಮಗ ಕರ್ಕರು ನಾಗಭಟನನ್ನೆದುರಿಸಿದರು. ಇದರಲ್ಲಿ ಯಾರು ವಿಜಯಿಗಳಾದರೆಂದು ಹೇಳುವುದು ಕಷ್ಟ. ಆದರೆ ರಾಷ್ಟ್ರಕೂಟರು ಪ್ರತೀಹಾರರನ್ನು ತಡೆಯುವುದರಲ್ಲಿ ಯಶಸ್ವಿಗಳಾದರೆನ್ನುವುದು ಸ್ಪಷ್ಟ.

ಪರಿಸ್ಥಿತಿ ಅನುಕೂಲಕರವಾದ ಕೂಡಲೆ, ಸು. 809–10ರಲ್ಲಿ ರಾಷ್ಟ್ರಕೂಟ ಗೋವಿಂದ ಉತ್ತರಕ್ಕೆ ಧಾಳಿಯಿಟ್ಟ. ಧರ್ಮಪಾಲ ಹಾಗೂ ಚಕ್ರಾಯುಧರು ತಾವಾಗಿಯೇ ಇವನಿಗೆ ಶರಣಾದರು. ಬಹುಶಃ ಇವರಿಬ್ಬರೂ ಗೋವಿಂದನನ್ನು ನಾಗಭಟನ ವಿರುದ್ಧ ಕದನಕ್ಕೆ ಆಹ್ವಾನಿಸಿದಂತೆ ತೋರುತ್ತದೆ. ಈ ಸಲ ನಾಗಭಟ ಸೋತ. ಸಾಮ್ರಾಜ್ಯ ಸ್ಥಾಪಕನಾಗ ಬೇಕೆಂಬ ಅವನ ಕನಸು ಛಿದ್ರವಾಯಿತು. ಆದರೆ ಯಥಾಪ್ರಕಾರ ಗೋವಿಂದ ರಾಜ್ಯಕ್ಕೆ ಹಿಂದಿರುಗಲೇಬೇಕಾಯಿತು. ಇದರ ಪ್ರಯೋಜನವನ್ನು ಪಡೆದು ಧರ್ಮಪಾಲ ಹಾಗೂ ಅವನ ಮಗ ದೇವಪಾಲರು ಪುನಃ ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡರು. ಸ್ವಲ್ಪ ಕಾಲದವರೆಗೆ ಪ್ರತೀಹಾರರ ಪ್ರತಿಷ್ಠೆ ಕುಂದಿತು. ಆದರೆ ಕನೌಜ್, ಕಾಲಂಜರ ಕೋಟೆ, ಗ್ವಾಲಿಯರ್‌ಗಳನ್ನೊಳಗೊಂಡ ಪ್ರದೇಶಗಳೆಲ್ಲ ನಾಗಭಟನ ವಶದಲ್ಲೇ ಉಳಿದವು.

ಮಿಹಿರ ಭೋಜ : ನಾಗಭಟ 833 ರವರೆಗೆ ಆಳಿದನೆಂದು ಊಹಿಸಲಾಗಿದೆ. ಇವನ ಮಗನಾದ ರಾಮಭದ್ರ ಕೇವಲ 3 ವರ್ಷಗಳ ಕಾಲ ಆಳಿದ. ಈತನ ಕಾಲದಲ್ಲಿ ರಾಜ್ಯ ಶತ್ರುಗಳ ಧಾಳಿಗೆ ಈಡಾಗಿ ದುಸ್ಥಿತಿಗೆ ಬಂತು. ಬಂಗಾಲದ ದೇವಪಾಲ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದ್ದೂ ಅವನಿಗೆ ಸಮಾನವಾದ ಶಕ್ತಿ ಇವನಲ್ಲಿಲ್ಲದ್ದೂ ಇದಕ್ಕೆ ಕಾರಣಗಳು.

ರಾಮಭದ್ರನ ಮಗ ಭೋಜ. ಭಗವತೀ ಭಕ್ತನಾದ ಈತನಿಗೆ ಪ್ರಭಾಸ, ಆದಿ ವರಾಹ ಮತ್ತು ಮಿಹಿರ ಎಂಬ ಹೆಸರುಗಳು ಇದ್ದುವು. ಇವನು 836ರಲ್ಲಿ ಪಟ್ಟಕ್ಕೆ ಬಂದು 885ರವರೆಗೆ ಆಳಿದ. ಈತನ ಆಳ್ವಿಕೆಯ ಮೊದಲ ಭಾಗದಲ್ಲಿ ವಿಜಯದ ಸುಖವನ್ನೂ ಸೋಲಿನ ಕಹಿಯನ್ನೂ ಉಂಡ. ಇವನ ಯೋಜನೆಗಳು ಮಿಶ್ರಫಲವನ್ನು ನೀಡಿದುವು. ರಾಮಭದ್ರನ ಸಡಿಲವಾದ ಆಳ್ವಿಕೆಯಿಂದಾಗಿ ಜೋಧಪುರದ ಪ್ರತೀಹಾರರು ಸ್ವತಂತ್ರರಾದರು. ಹಿಂದೆ ಇಮ್ಮಡಿ ನಾಗಭಟನಿಗೆ ಈ ಮನೆತನದ ಕಕ್ಕ ನೆರವಾಗಿದ್ದನಾದರೂ ಈಗ ಸ್ವತಂತ್ರವಾಗಿ ಆಳತೊಡಗಿದ್ದ. 837ರ ಜೋಧಪುರದ ಶಾಸನದಲ್ಲಿ ಈತನ ಪತ್ನಿಯನ್ನು ಮಹಾರಾಜ್ಞಿಎಂದು ಕರೆಯಲಾಗಿದೆ. ಇವನ ಮಗನಾದ ಬಾಊಕ ಸಹ ಸ್ವತಂತ್ರನಾಗಿ ಸ್ವಲ್ಪಕಾಲ ಆಳಿದಂತೆ ತೋರುತ್ತದೆ. ಆದರೆ 843ರ ವೇಳೆಗೆ ಗೂರ್ಜರಾತ್ರದ ಮೇಲೆ ಭೋಜ ತನ್ನ ಅಧಿಕಾರವನ್ನು ಸ್ಥಾಪಿಸಿದ. ಇದು ಅವನ ಮುಖ್ಯ ಸಾಧನೆಗಳಲ್ಲಿ ಒಂದು.

ಮುಂದೆ ಅನುವಂಶಿಕ ಶತ್ರುಗಳೆನಿಸಿದ್ದ ರಾಷ್ಟ್ರಕೂಟರ ವಿರುದ್ಧ 860ಕ್ಕೆ ಮೊದಲು ಇವನು ದಂಡೆತ್ತಿಹೋದಾಗ ಗುಜರಾತ್ ರಾಷ್ಟ್ರಕೂಟರ ಧ್ರುವನಿಗೆ ಸೋತ. ಇದಕ್ಕೂ ಮೊದಲು ಪಾಲರ ದೇವಪಾಲನೂ ಇವನನ್ನು ಕದನದಲ್ಲಿ ಸೋಲಿಸಿದ್ದ. ಇದರಂತೆಯೇ ಕಳುಚುರಿ ಮನೆತನದ ಕೊಕ್ಕಲನಿಂದಲೂ ಇವನು ಸೋಲನ್ನನುಭವಿಸಿದ. ಜೋಧಪುರದ ಪ್ರತೀಹಾರರೂ ಪುನಃ ಗೂರ್ಜರಾತ್ರದ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರೆಂದು 861ನೆಯ ವರ್ಷದ ಆ ಮನೆತನದ ಕಕ್ಕುಕನ ಎರಡು ಶಾಸನಗಳಿಂದ ವ್ಯಕ್ತವಾಗುತ್ತದೆ.

ತನ್ನ ಆಳ್ವಿಕೆಯ ದ್ವಿತೀಯ ಭಾಗದಲ್ಲಿ ಭೋಜನಿಗೆ ಕ್ರಮೇಣ ವಿಜಯಲಕ್ಷ್ಮಿ ಒಲಿದಳು. ಪಾಲರ ದೇವಪಾಲನ ಮರಣ ಇವನ ಹಾದಿಯನ್ನು ಸುಗಮಗೊಳಿಸಿತು. ದೇವಪಾಲನ ಅನಂತರ ಆಳಿದ ಇಬ್ಬರು ಅರಸರು ಅವನಷ್ಟು ಬಲಯುತವಾಗಿರಲಿಲ್ಲ. ಕರ್ನಾಟಕದಲ್ಲಿಯ ರಾಷ್ಟ್ರಕೂಟ ಅಮೋಘವರ್ಷ ಶಾಂತಿಪ್ರಿಯನಾಗಿದ್ದರೂ, ವೆಂಗಿಯನ್ನು ಜಯಿಸಿದ ಬಳಿಕ ಪಾಲರ ವಿರುದ್ಧ ದಂಡೆತ್ತಿಹೋದದ್ದು ಭೋಜನಿಗೆ ಮತ್ತಷ್ಟು ಸಹಾಯಕವಾಯಿತು. ಅವರ ದುಸ್ಥಿತಿಯನ್ನು ಲಕ್ಷಿಸಿ ಬಂಗಾಲದ ಮೇಲೆ ದಂಡೆತ್ತಿ ಹೋಗಿ ನಾರಾಯಣ ಪಾಲನನ್ನು ಸೋಲಿಸಿ, ಅವನ ರಾಜ್ಯಕ್ಕೆ ಸೇರಿದ್ದ, ಪಶ್ಚಿಮ ಭಾಗದ, ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡ.

ಗುಜರಾತಿನ ರಾಷ್ಟ್ರಕೂಟ ಧ್ರುವನ ಕೈಯಲ್ಲಿ ಸೋಲನ್ನು ಅನುಭವಿಸಿದ್ದರೂ ಅವನ ಅನಂತರ ಬಂದ ಇಮ್ಮಡಿ ಕೃಷ್ಣನ ಕಾಲದಲ್ಲಿ ಪುನಃ ಅವರ ವಿರುದ್ಧ ದಂಡೆತ್ತಿ, ಹೋಗಿ ನರ್ಮದಾ ನದೀತೀರದಲ್ಲಿ ನಡೆದ ಕದನದಲ್ಲಿ ಅವರನ್ನು ಸೋಲಿಸಿ, ಮಾಳವ ಹಾಗೂ ಗುಜರಾತಿನ ಖೇಟಕವನ್ನು (ಈಗಿನ ಖೈರಾ ಜಿಲ್ಲೆ) ವಶಪಡಿಸಿಕೊಂಡ. ಇವೆರಡೂ ಬಹಳ ಕಾಲ ಇವನ ಅಧೀನದಲ್ಲಿ ಉಳಿಯದಿದ್ದರೂ ಕಾಠಿಯಾವಾಡದ ಪ್ರದೇಶ ಮಾತ್ರ ಸಂಪೂರ್ಣವಾಗಿ ಸ್ವಾಧೀನವಾಯಿತು. ಪಶ್ಚಿಮದ ಕಡೆ ಪಂಜಾಬಿನವರೆಗೂ ಪೂರ್ವದಲ್ಲಿ ಅವಧದವರೆಗೂ ಹಬ್ಬಿದ ಇವನ ರಾಜ್ಯ ಉತ್ತರ ಭಾರತದಲ್ಲಿ ಆಗ ಪ್ರಬಲವೂ ವಿಸ್ತಾರವೂ ಆದ ಸಾಮ್ರಾಜ್ಯವೆನಿಸಿಕೊಂಡಿತು. ಕನೌಜ್ ಈ ರಾಜ್ಯದ ರಾಜಧಾನಿಯಾಗಿ ಮೆರೆಯಿತು. ಈ ರಾಜ್ಯ ಸಮೃದ್ಧಿಯಿಂದೊಡಗೂಡಿತ್ತೆಂದು ಸುಲೈಮಾನನೆಂಬ ಅರಬ್ ಲೇಖಕ ತನ್ನ ವರದಿಯಲ್ಲಿ ವರ್ಣಿಸಿ, ಇದರ ಅರಸ ಮಹಮ್ಮದೀಯರ ಪ್ರಬಲ ವಿರೋಧಿಯೆಂದು ತಿಳಿಸಿದ್ದಾನೆ. ಭೋಜ ರಾಜ್ಯವನ್ನು ಪರಕೀಯರ ಧಾಳಿಯಿಂದ ರಕ್ಷಿಸಿದನೆಂಬುದನ್ನು ಇದು ಸೂಚಿಸುತ್ತದೆ.

ಅನಂತರದ ಅರಸರು; 885 ರಲ್ಲಿ ಭೋಜನ ಮಗನಾದ ಮಹೇಂದ್ರಪಾಲ ರಾಜ್ಯಭಾರ ಮಾಡತೊಡಗಿದ. ಈತನಿಗೆ ನಿರ್ಭಯರಾಜ, ಮಹೇಂದ್ರಾಯುಧ ಎಂಬ ಹೆಸರುಗಳೂ ಇದ್ದುವು. ಪಿತ್ರಾರ್ಜಿತವಾದ ರಾಜ್ಯವನ್ನು ಕಾಪಾಡಿದ್ದಲ್ಲದೆ ಈತ ಅದನ್ನು ವಿಸ್ತರಿಸಿದ. ಮಗಧ ಹಾಗೂ ಉತ್ತರ ಬಂಗಾಲದ ಹಲವು ಭಾಗಗಳು ಇವನ ವಶವಾದುವು. ಈತನ ಸಮಕಾಲೀನನಾದ ರಾಜಶೇಖರ ಪ್ರಸಿದ್ಧನಾದ ನಾಟಕಕರ್ತೃವೂ ಕಾವ್ಯ ಶಾಸ್ತ್ರಜ್ಞನೂ ಆಗಿದ್ದ. ಬಾಲರಾಮಾಯಣ, ಬಾಲಭಾರತ, ವಿದ್ಧಶಾಲಭಂಜಿಕಾ, ಕರ್ಪೂರ ಮಂಜರೀ ಇವು ಇವನು ರಚಿಸಿದ ನಾಟಕಗಳು. ಭುವನಕೋಶವೆಂಬುದು ಭೂಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಈ ಗ್ರಂಥಗಳು ಅಂದಿನ ರಾಜಕೀಯ ಪರಿಸ್ಥಿತಿಗಳನ್ನು ತಿಳಿಯಲು ಸಹಾಯಕವಾಗದಿದ್ದರೂ, ಆ ಕಾಲದ ಸಾಮಾಜಿಕ, ಪರಿಸ್ಥಿತಿಗಳ ಮೇಲೆ ಬೆಳಕು ಬೀರುತ್ತವೆ; ಕನೌಜ್ ನಗರದ ಅಂದಿನ ವೈಭವವನ್ನು ಸಾರುತ್ತವೆ.

ಕಾವ್ಯ ಮೀಮಾಂಸೆಯನ್ನು ರಚಿಸಿದ ರಾಜಶೇಖರನ ಪತ್ನಿ ಅವಂತಿಸುಂದರಿ ಚಾಹಮಾನ ಕುಲಕ್ಕೆ ಸೇರಿದವಳು. ಕವಿ ನಿರ್ಭಯ ಅಥವಾ ಮಹೇಂದ್ರಪಾಲನ ಗುರುವಾಗಿದ್ದನೆಂದು ಹೇಳಿದೆ. ಈತ ಪ್ರತೀಹಾರ ಮಹೇಂದ್ರಪಾಲನೆಂದು ಗುರುತಿಸಲಾಗಿದೆ. ಬಾಲಭಾರತ ಆತನ ಮಗನಾದ ಮಹೀಪಾಲನಿಗಾಗಿ ರಚಿತವಾಯಿತು.

ಮಹೇಂದ್ರಪಾಲನಿಗೆ ಕನಿಷ್ಠ ಇಬ್ಬರಾದರೂ ಪತ್ನಿಯರಿದ್ದರು. ಹಿರಿಯಳ ಮಗ ಇಮ್ಮಡಿ ಭೋಜ. ಕಿರಿಯಳ ಮಗ ವಿನಾಯಕಪಾಲ. ಈತನಿಗೆ ಮಹೀಪಾಲನೆಂಬ ಇನ್ನೊಂದು ಹೆಸರೂ ಇತ್ತೆಂದು ಹಲವರು ಸೂಚಿಸಿದ್ದಾರೆ. ಇವರಿಬ್ಬರೂ ಭಿನ್ನರೆಂಬ ವಾದವೂ ಉಂಟು. ಮಹೇಂದ್ರಪಾಲನ ಬಳಿಕ ಸೋದರರಲ್ಲಿ ಅಧಿಕಾರಕ್ಕಾಗಿ ಜಗಳಗಳಾದುವು. 912ರಲ್ಲಿ ಮೊದಲನೆಯ ಮಹೀಪಾಲ ಸಿಂಹಾಸನವನ್ನೇರಿದ. ಈತ ಮುರಲ, ಮೇಕಲ, ಕಳಿಂಗ, ಕೇರಳ, ಕುಂತಲ ಮುಂತಾದವರನ್ನು ಸೋಲಿಸಿದನೆಂದು ರಾಜಶೇಖರ ಹೇಳಿದ್ದಾನೆ. ಇದು ಉತ್ಪ್ರೇಕ್ಷೆಯಾಗಿದ್ದಿರಬಹುದಾದರೂ ಈತ ತನಗೆ ಸ್ವಾಧೀನವಾದ ರಾಜ್ಯವನ್ನು ರಕ್ಷಿಸಿ, ಅದನ್ನು ಸ್ವಲ್ಪ ಮಟ್ಟಿಗಾದರೂ ವಿಸ್ತರಿಸಿರಬಹುದು. ಆದರೆ ಈತನ ಕಾಲದಲ್ಲೇ ರಾಷ್ಟ್ರಕೂಟರು ಪುನಃ ದಂಡೆತ್ತಿ ಬಂದು ಪ್ರತೀಹಾರ ಸಾಮ್ರಾಜ್ಯದ ಅಳಿವಿಗೆ ಕಾರಣರಾದರು. ರಾಷ್ಟ್ರಕೂಟ ಇಮ್ಮಡಿ ಕೃಷ್ಣ ಹಾಗೂ ಮುಮ್ಮಡಿ ಇಂದ್ರರು ಉತ್ತರದಲ್ಲಿಯ ರಾಜ್ಯಗಳ ಮೇಲೆ ಏರಿ ಹೋದರು. ಇಂದ್ರ 916–17ರಲ್ಲಿ ಮಾಳವದೇಶದ ಮೂಲಕ ಹಾಯ್ದು ಯಮುನಾ ನದಿಯನ್ನು ದಾಟಿ ಕನೌಜನ್ನು ಮುತ್ತಿ ಆ ನಗರವನ್ನು ಧ್ವಂಸ ಮಾಡಿದನೆಂದು ಶಾಸನವೊಂದರಲ್ಲಿ ಹೇಳಿದೆ. ಕನ್ನಡ ಕವಿಯಾದ ಪಂಪನೂ ತನ್ನ ಭಾರತದಲ್ಲಿ ಇದನ್ನು ಹೇಳಿದ್ದಾನೆ. ತನ್ನ ಸ್ವಾಮಿಯಾದ ರಾಷ್ಟ್ರಕೂಟರ ಸಾಮಂತನಾದ ಚಾಳುಕ್ಯ ನರಸಿಂಹ ಗೂರ್ಜರ ಮಹೀಪಾಲನನ್ನು ಸೋಲಿಸಿ ಗಂಗೆಯವರೆಗೂ ಅಟ್ಟಿಸಿಕೊಂಡು ಹೋದನೆಂದು ಹೇಳಿದ್ದಾನೆ.

ಇಷ್ಟಾದರೂ ಮಹೀಪಾಲ ಧೃತಿಗೆಡಲಿಲ್ಲ. ರಾಷ್ಟ್ರಕೂಟರು ಸ್ವದೇಶಕ್ಕೆ ಮರಳಿದ ಕೂಡಲೇ ಚೇತರಿಸಿಕೊಂಡು ತಾನು ಕಳೆದುಕೊಂಡಿದ್ದ ಪ್ರದೇಶದಲ್ಲಿಯ ಅನೇಕ ಭಾಗಗಳನ್ನು ಮರಳಿ ಪಡೆದ. 931ರ ವೇಳೆಗೆ ಅವನ ರಾಜ್ಯ ಪಶ್ಚಿಮದಲ್ಲಿ ಸೌರಾಷ್ಟ್ರ, ಪೂರ್ವದಲ್ಲಿ ವಾರಾಣಸಿ ಮತ್ತು ದಕ್ಷಿಣದಲ್ಲಿ ಚಂದೇರಿಯವರೆಗೂ ಹಬ್ಬಿತ್ತು. ಮಾಳವವೂ ಈ ರಾಜ್ಯದ ಭಾಗವಾಗಿತ್ತು. ಆದರೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಇನ್ನೊಮ್ಮೆ ಪ್ರತೀಹಾರನನ್ನು ಸೋಲಿಸಿದಂತೆ ಕಾಣುತ್ತದೆ. ಅಲ್ಲದೆ ಅದುವರೆಗೆ ಸಾಮಂತರಾಗಿದ್ದ ಚಂದೇಲ, ಚೇದಿ (ಅಥವಾ ಕಳಚುರಿ) ಮತ್ತು ಪರಮಾರರು 940ರ ವೇಳೆಗೆ ಸ್ವತಂತ್ರರಾದರು. ಇದು ಪ್ರತೀಹಾರ ರಾಜ್ಯಕ್ಕೆ ಬಲವಾದ ಪೆಟ್ಟಾಗಿ ಆ ರಾಜ್ಯದ ಅಳಿವಿಗೆ ಕಾರಣವಾಯಿತು. (ಜಿ.ಬಿ.ಆರ್)

ಮಹೀಪಾಲನ ಬಳಿಕ ಎರಡನೆಯ ಮಹೀಪಾಲ, ಎರಡನೆಯ ವತ್ಸರಾಜ ಮತ್ತು ವಿಜಯಪಾಲ ರಾಜ್ಯವಾಳಿದರೂ ಇವರ ಸರಿಯಾದ ಕಾಲ ನಮಗೆ ತಿಳಿದಿಲ್ಲ. ಅನಂತರ ರಾಜ್ಯಪಾಲನೆಂಬುವವನು ಗೂರ್ಜರ ರಾಜನಾದನು: ಇವನು 960 ಮತ್ತು 1018ರ ಮಧ್ಯದಲ್ಲಿ ಕನೌಜ್‌ನ ಸಿಂಹಾಸನವನ್ನೇರಿದನು. 1091ರ ಜನವರಿಯಲ್ಲಿ ಘಸ್ನಿ ಮಹಮ್ಮದ್‌ನು ಕನೌಜ್‌ನ ಮೇಲೆ ಧಾಳಿ ಮಾಡಿದನು. ಆಗ ರಾಜ್ಯಪಾಲನು ಯುದ್ಧ ಮಾಡದೆ ಶರಣಾಗತನಾದನು. ಮಹಮ್ಮದನು ಅಪಾರ ಧನ ಸಂಪತ್ತನ್ನು ಸೂರೆಗೊಂಡನು. ಅನಂತರ ಮಹಮ್ಮದ್‌ನ ವಿರುದ್ಧ ಹೋರಾಡದೆ ಶರಣಾದ ರಾಜ್ಯಪಾಲನ ವಿರುದ್ಧ ಕಾಲಿಂಜರ್‌ನ ರಾಜ ವಿದ್ಯಾಧರ ಮತ್ತಿತರ ರಜಪೂತರು ಒಗ್ಗೂಡಿ ಅವನ ಮೇಲೆ ಧಾಳಿಮಾಡಿ ಕೊಂದರು. ಈ ರೀತಿ ಗೂರ್ಜರ ಸಾಮ್ರಾಜ್ಯ ದುರಂತವಾದ ಅಂತ್ಯವನ್ನು ಕಂಡಿತು. (ಎನ್.ಎಲ್.)

**ಗೂರ್ನಿಯ :** ಪೂರ್ವ ಮೆಡಿಟರೇನಿಯನ್ ಸಮುದ್ರದಲ್ಲಿರುವ ಕ್ರೀಟ್ ದ್ವೀಪದ ಪೂರ್ವ ಭಾಗದಲ್ಲಿಯ ಮೆರಬೆಲ್ಲೊ ಖಾರಿ ಪ್ರದೇಶದಲ್ಲಿರುವ ಒಂದು ಉನ್ನತ ಸ್ಥಳ ಮತ್ತು ಸಾಧಾರಣ ಬಂದರು. ಕಂಚಿನ ಯುಗದ ಮಿನೋವನ್ ಸಂಸ್ಕೃತಿಯ ಕೊನೆಯ ಹಂತದ (ಪ್ರ.ಶ.ಪೂ. 1400–1100) ಅವಶೇಷಗಳು 1901–04ರಲ್ಲಿ ಇಲ್ಲಿ ಶೋಧಿಸಲ್ಪಟ್ಟವು. ಈ ದ್ವೀಪದ ನಾಸಸ್ ಎಂಬಲ್ಲಿ ಆರ್ಥರ್ ಜಾನ್ ಎವಾನ್ಸ್ 1899ರಲ್ಲಿ ನಡೆಸತೊಡಗಿದ ಉತ್ಖನನಗಳಿಂದ ಈ ಸಂಸ್ಕೃತಿ ಮೊದಲು ಬೆಳಕಿಗೆ ಬಂತು.

ಗೂರ್ನಿಯದಲ್ಲಿ ಎತ್ತರದಲ್ಲಿ ಮುಂಚಾಚಿದ ಕಲ್ಲುಬಂಡೆಯ ಕೆಳಗೆ ಮಿನೋವನ್ ಸಂಸ್ಕೃತಿಯ ಆದಿ (ಪ್ರ.ಶ. ಪೂ. 2500–2000) ಮತ್ತು ಮಧ್ಯ ಹಂತದ ಶ್ಮಶಾನವೂ ಸುತ್ತಣ ಪ್ರದೇಶದಲ್ಲಿ ಇತರ ಅವಶೇಷಗಳೂ ಇವೆ. ಒಂದು ದಿಣ್ಣೆಯ ಮೇಲೆ ಪ್ರ.ಶ.ಪೂ. ಸು. 1750–1550ರ ಕಾಲದ ಚದರ ಕಲ್ಲುಗಳಿಂದ ಕಟ್ಟಿದ ಅರಮನೆಯಿತ್ತು. ಇದರ ವಾಸ್ತು ನಾಸಸ್‌ನಲ್ಲಿಯ ಅರಮನೆಯನ್ನು ಹೋಲುವಂಥದು. ಇದು ಹಾಳು ಬಿದ್ದ ಮೇಲೆ ಇದರ ಸುತ್ತಲಿನ ಪ್ರದೇಶ ಒಂದು ಕೈಗಾರಿಕಾ ನಗರವಾಗಿ (ಪ್ರ.ಶ.ಪೂ. 1500–1450) ಬೆಳೆಯಿತು. ಇಲ್ಲಿ ಸಣ್ಣ ಕಲ್ಲುಗಳಿಂದ ಕಟ್ಟಿದ ಎರಡು ಅಂತಸ್ತುಗಳ ಮನೆಗಳಿದ್ದವು. ನಗರದ ಮಧ್ಯದ ಎತ್ತರ ಪ್ರದೇಶದಿಂದ ಲಂಬಕೋಣದಲ್ಲಿ ಛೇದಿಸಿದ ಬೀದಿಗಳು, ಒಳಗೂ ಹೊರಗೂ ಹೋಗಿ ಬರಲು ಅನುಕೂಲವಾಗುವ ಹಾಗೆ, ನಗರದ ಕೊನೆಯವರೆಗೂ ಬೆಳಕಿನ ಕಿರಣಗಳಂತೆ ಹಬ್ಬಿದ್ದುವು. ಒಂದು ಮನೆಯಲ್ಲಿ ಎಣ್ಣೆ ಕಡಾಯಿಯೂ ಇನ್ನೊಂದರಲ್ಲಿ ಬಡಗಿಯ ಉಪಕರಣಗಳೂ ಮತ್ತೊಂದರಲ್ಲಿ ಕುಂಬಾರರ ಚಕ್ರವೂ ದೊರಕಿವೆ. ಸಣ್ಣ ಗುಡಿಯಲ್ಲಿ ಮನೆದೇವತೆಯಾದ ಹೆಣ್ಣುದೇವರ, ಪಾರಿವಾಳಗಳ ಮಣ್ಣಿನ ಮೂರ್ತಿಗಳು, ಹಾವಿನಾಕಾರದ ಕೊಳವೆ, ವೇದಿಕೆ, ಕುಂಡ ಮುಂತಾದ ಪೂಜಾಸಾಮಗ್ರಿಗಳಿದ್ದುವು. ಅಷ್ಟಪಾದಿ ಮುಂತಾದ ಜಲಚರ ಪ್ರಾಣಿಗಳ ವರ್ಣಚಿತ್ರಗಳಿಂದ ಅಲಂಕರಿಸಲ್ಪಟ್ಟ ಮೃತ್‌ಪಾತ್ರೆಗಳು ಗಮನಾರ್ಹ. ಪ್ರ.ಶ.ಪೂ. ಸು. 1400ರಲ್ಲಿ ಭೂಕಂಪದಿಂದ ಸಂಭವಿಸಿದ ಬೆಂಕಿಯಿಂದ ಈ ನಗರ ಸುಟ್ಟುಹೋಯಿತು.

ಜಲಚರ ಪ್ರಾಣಿ ಚಿತ್ರಗಳನ್ನು ಮೃತ್‌ಪಾತ್ರೆಯ ಮೇಲೆ ಬಿಡಿಸುವ ಕಲಾಪದ್ಧತಿ ಇಲ್ಲಿಯೇ ಪ್ರಾರಂಭವಾಯಿತೆಂದು ತೋರುತ್ತದೆ. (ಎ.ಎಸ್.)

**ಗೂವನ್ :** ಕೋಳಿಯನ್ನು ಹೆಚ್ಚು ಕಡಿಮೆ ಹೋಲುವ ಒಂದು ಹಕ್ಕಿ. ಗ್ಯಾಲಿಫಾರ್ಮೀಸ್ ಗಣಕ್ಕೂ ಕ್ರ್ಯಾಸಿಡೀ ಕುಟುಂಬಕ್ಕೂ ಸೇರಿದೆ. ಇದು ಮಧ್ಯ ಹಾಗೂ ಉತ್ತರ ಅಮೆರಿಕದ ಕೆಲವು ಪ್ರದೇಶಗಳಲ್ಲಿ ವಿರಳವಾಗಿಯೂ ದಕ್ಷಿಣ ಅಮೆರಿಕದಲ್ಲಿ ಹೇರಳವಾಗಿಯೂ ಕಂಡುಬರುತ್ತದೆ.



ಇದು ಸುಮಾರು $^{3}/_{4}$ ಮೀ ಉದ್ದಕ್ಕೆ ಬೆಳೆಯುವ ಮಧ್ಯಮಗಾತ್ರದ ಹಕ್ಕಿ. ದೇಹದ ಬಣ್ಣ ಕಂದು ಇಲ್ಲವೆ ಆಲಿವ್ ಹಸುರು. ಕತ್ತು ಮತ್ತು ತಲೆಗಳ ಮೇಲೆ ಗರಿಗಳೇ ಇಲ್ಲ. ಆದರೆ ನೆತ್ತಿಯ ಮೇಲೆ ಮಾತ್ರ ಬಿಳಿಯ ಬಣ್ಣದ ಪುಕ್ಕಗಳ ಕಿರೀಟವಿದೆ. ಕತ್ತಿನ ಮುಂಭಾಗದಲ್ಲಿ ಜೋಲಾಡುವ ಮಾಂಸದ ಪಟಲವೊಂದಿದೆ. ಕೊಕ್ಕು ಚಿಕ್ಕದು; ದೃಢವಾಗಿದೆ. ಕಾಲುಗಳು ಬಲವಾಗಿದ್ದು ಭೂಮಿಯ ಮೇಲೆ ಓಡಾಡುವುದಕ್ಕೂ ಕ್ರಿಮಿ, ಕೀಟ ಮತ್ತು ಧಾನ್ಯಕ್ಕಾಗಿ ನೆಲವನ್ನು ಕೆರೆಯುವುದಕ್ಕೂ ನೆರವಾಗುತ್ತದೆ. ಕಾಲಿನಲ್ಲಿ ಐದು ಬೆರಳುಗಳಿವೆ. ಇವುಗಳಲ್ಲಿ ಒಂದು ಹಿಮ್ಮುಖವಾಗಿ ಬೆಳೆದಿರುವುದು ಈ ಕೋಳಿಗಳಲ್ಲಿನ ಮುಖ್ಯ ಲಕ್ಷಣಗಳಲ್ಲೊಂದು. ವನ್ಯವೃಕ್ಷಗಳ ತುದಿಗಳಲ್ಲೇ ಇದರ ವಾಸ. ಸದ್ದುಗದ್ದಲ ಮಾಡದೆ ಮರದಿಂದ ಮರಕ್ಕೆ ಸಾಗುತ್ತ ಹಣ್ಣುಹಂಪಲನ್ನು ತಿಂದು ಬದುಕುತ್ತದೆ. ಇವು ದೊಡ್ಡ ಗುಂಪುಗಳಲ್ಲಿರುವುದು ಸಾಮಾನ್ಯವಾದರೂ ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಮತ್ತು ಹೆಣ್ಣು ಹಕ್ಕಿಗಳು ಗುಂಪಿನಿಂದ ಬೇರೆಯಾಗಿ ಜೋಡಿಗಳಲ್ಲಿ ವಾಸಿಸತೊಡಗುತ್ತವೆ. ಗೂವನ್ ಹಕ್ಕಿಗಳಲ್ಲಿ ಅನೇಕ ಬಗೆಗಳಿವೆ. ಇವುಗಳಲ್ಲಿ *ಪೆನೆಲೊಪೆ, ಅಬೂರಿಯ, ಕ್ಯಾಮೀಪೆಟಿಸ್* ಮತ್ತು *ಓರಿಯೋಫ್ಯಾಸಿಸ್* ಎಂಬವು ಮುಖ್ಯವಾದವು. (ಎಸ್.ಎಚ್.ಒ.)

**ಗೂಳಿ :** ದನಗಳಲ್ಲಿ ಬೀಜದ ಹೋರಿಗೆ ಈ ಹೆಸರುಂಟು (ಬುಲ್). ಬೀಜ ಒಡೆದದ್ದು ಎತ್ತು ಅನ್ನಿಸಿಕೊಳ್ಳುತ್ತದೆ. ವ್ಯವಹಾರದಲ್ಲಿ ತಳಿ ಉತ್ಪನ್ನಕ್ಕೆಂದೇ ಸಾಕಿರುವ ಹೋರಿಯನ್ನು ಅದೇ ಹೆಸರಿನಿಂದಲೂ ಗೂಳಿ ಎಂಬ ಹೆಸರಿನಿಂದಲೂ ನಿರ್ದೇಶಿಸುತ್ತಾರೆ. ಈ ಪದ ಸಾಮಾನ್ಯವಾಗಿ ಆರ್ಟಿಯೊಡ್ಯಾಕ್ಟಿಲ ಉಪಗಣದ ಬೋವಿಡೀ ಕುಟುಂಬಕ್ಕೆ ಸೇರಿದ ದನದ (ಬಾಸ್) ಜಾತಿಯ ಪ್ರಾಣಿಗಳ ಗಂಡುಗಳಿಗೆ ಅನ್ವಯಿಸುತ್ತದಾದರೂ ಆನೆ ಮತ್ತು ತಿಮಿಂಗಿಲಗಳ ಗಂಡುಗಳಿಗೂ ಇದೇ ಹೆಸರಿದೆ.

ಸಾಮಾನ್ಯವಾಗಿ ಗೂಳಿಯ ಎತ್ತರ 1.5 ಮೀ. ತೂಕ 200–500 ಕಿಗ್ರಾಂ. ಮೈ ಮೇಲೆ ಸಣ್ಣಗಿನ ಹಾಗೂ ನಯವಾದ ಕೂದಲೂ ಬಾಲದ ತುದಿಯಲ್ಲಿ ಕೂದಲಿನ ಕುಚ್ಚೂ ಇವೆ. ದನಗಳಲ್ಲಿ ಹಿಳಲು ಇರುವ ಮತ್ತು ಇಲ್ಲದಿರುವ, ಎಂಬ ಎರಡು ವಿಧಗಳನ್ನು ಗುರುತಿಸಬಹುದು. ಭಾರತ ಮತ್ತು ಇನ್ನು ಕೆಲವು ದೇಶಗಳಲ್ಲಿ ಹಿಳಲು ಜಾತಿಯ ದನಗಳು ಕಾಣಬರುತ್ತವೆ. ಇಂಥವುಗಳಲ್ಲಿ ಗೂಳಿಯ ಹಿಳಲು, ಎತ್ತು ಮತ್ತು ಹಸುಗಳ ಹಿಳಲಿಗಿಂತ ಪುಷ್ಟವಾಗಿಯೂ ಎತ್ತರವಾಗಿಯೂ ಇದ್ದು ಶೋಭಾಯಮಾನವಾಗಿರುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಫ್ರೀಸಿಯನ್ಸ್, ಐರ್‌ಷೈರ್, ಶಾರ್ಟ್‌ಹಾರ್ನ್, ಜರ್ಸಿ, ಬ್ರೌನ್ ಸ್ವಿಸ್ ಮತ್ತು ಗಯರನ್‌ಸೆ ತಳಿಗಳಿವೆ. ಮಾಂಸಕ್ಕೋಸ್ಕರ ಬೆಳೆಸುವ ತಳಿಗಳಲ್ಲಿ ಅದರ ಒಟ್ಟು ಲಕ್ಷಣಗಳು ಮುಖ್ಯ. ಆಬರ್ಡೀನ್ ಮತ್ತು ಶಾರ್ಟ್‌ಹಾರ್ನ್ ತಳಿಗಳು ಮಾಂಸಕ್ಕಾಗಿ ಸಾಕುವ ತಳಿಗಳಲ್ಲಿ ಹೆಸರಾದವು. ತಳಿ ಪ್ರಯೋಗಗಳಿಂದ ಒಳ್ಳೆಯ ರಾಸುಗಳನ್ನು ಬೆಳೆಸಲು ಸಾಧ್ಯವಾಗಿದೆ. ಭಾರತದಲ್ಲೂ ಕೆಲವು ಪಶುಸಂಗೋಪನ ಕೇಂದ್ರಗಳಲ್ಲಿ ಪಾಶ್ಚಾತ್ಯ ಮತ್ತು ಸ್ಥಳೀಯ ತಳಿಗಳ ಸಂಕರಗಳಿಂದ ಹೆಚ್ಚು ಹಾಲು ಕೊಡುವ ತಳಿಗಳನ್ನು ಪಡೆದಿದ್ದಾರೆ.

ಭಾರತದಲ್ಲಿ ಸುಮಾರು 26 ತಳಿಗಳಿವೆ. ಇವನ್ನು ಹಾಲು ಉತ್ಪಾದಕ, ಬೇಸಾಯದ ಮತ್ತು ಸಾಮಾನ್ಯ ಬಳಕೆಯ ತಳಿಗಳೆಂದು 3 ವಿಧಗಳಾಗಿ ವಿಂಗಡಿಸಬಹುದು.

1. ಹಾಲು ಉತ್ಪಾದಕ ಹಸುಗಳನ್ನು ಪಡೆಯಲು ಬಳಸುವ ತಳಿಗಳು ; ಈ ಗುಂಪಿನಲ್ಲಿ ಗಿರ್, ಸಾಹಿವಾಲ್, ಕೆಂಪು ಸಿಂಧಿ ಮತ್ತು ದೇವೊನಿ ತಳಿಗಳು ಉತ್ಕೃಷ್ಟವಾದುವು. ಗಿರ್ ತಳಿ ದಕ್ಷಿಣ ಕಾಠಿಯಾವಾಡಿನ ಗಿರ್ ಪ್ರದೇಶ, ದಕ್ಷಿಣ ರಾಜಸ್ಥಾನ, ವಡೋದರ ಪ್ರದೇಶಗಳಲ್ಲಿ ಕಾಣಬರುತ್ತದೆ. ಸಾಹಿವಾಲ್ ತಳಿ ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿದೆ. ಕೆಂಪು ಸಿಂಧಿ ತಳಿ ಅಸ್ಸಾಂ, ಒರಿಸ್ಸ, ಕೇರಳ ಮತ್ತು ತಮಿಳುನಾಡು ಪ್ರಾಂತ್ಯದ ಕೆಲವು ಸ್ಥಳಗಳಲ್ಲಿದೆ. ದೇವೊನಿ ತಳಿ ಆಂಧ್ರ ಪ್ರದೇಶದ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಕಾಣಬರುತ್ತದೆ. ಇದು ಗಾತ್ರದಲ್ಲಿ ಗಿರ್ ರಾಸನ್ನು ಹೋಲುತ್ತದೆ.

2. ಬೇಸಾಯದ ತಳಿಗಳು : ಇವುಗಳಲ್ಲಿ ಮೋಟು ಕೊಂಬಿನವು, ಲೈರ್ ರೀತಿ ಕೊಂಬಿನವು, ಮೈಸೂರು ಮಾದರಿಯವು ಮತ್ತು ಚಿಕ್ಕ ಗಾತ್ರದ ಕೆಂಪು ಬಿಳಿ ಮಚ್ಚೆಗಳಿರುವ ಮೋಟು ಅಥವಾ ಲೈರ್ ರೀತಿ ಕೊಂಬಿನವು ಎಂಬ 4 ವಿಧಗಳುಂಟು. (a) ಮೋಟು ಕೋಡಿನ ಗುಂಪಿನ ನಾಗೋರಿ ಬಚೌರ್ ತಳಿ ದರ್ಭಾಂಗದ ಬಚೌರ್ ಪರಗಣ, ಭಾಗಲ್‌ಪುರ್ ಮತ್ತು ರಾಜಸ್ಥಾನದ ಕೆಲವು ಪ್ರದೇಶಗಳಲ್ಲೂ ಬಿಹಾರಿನ ಚಂಪಾರಣ್ಯ ಪ್ರದೇಶಗಳಲ್ಲೂ ಇವೆ. (b) ಲೈರ್ ರೀತಿ ಕೊಂಬಿನ ತಳಿಯಲ್ಲಿ ಹೆಸರು ಪಡೆದ ಕೆಂಕಾಥ ಅಥವಾ ಕೆನ್ವಾರಿ ರಾಸುಗಳು ಉತ್ತರ ಪ್ರದೇಶದ ಬಂಡ ಜಿಲ್ಲೆಯ ಕೆನ್ ನದಿ ಪ್ರದೇಶದಲ್ಲಿ ಮತ್ತು ಮಧ್ಯ ಪ್ರದೇಶದ ಕೆಲವು ಭಾಗಗಳಲ್ಲಿ, ಮಾಳ್ವಿ ತಳಿ ರಾಸುಗಳು ಮಧ್ಯ ಪ್ರದೇಶದ ಮಾಳ್ವ ಮತ್ತು ಹೈದರಾಬಾದ್‌ನಲ್ಲಿ ಮತ್ತು ಖೇರಿಘರ್ ತಳಿ ರಾಸುಗಳು ಲಖಿಂಪೂರ್ ಮತ್ತು ಖೇರಿ ಜಿಲ್ಲೆಗಳಲ್ಲೂ (ಉತ್ತರ ಪ್ರದೇಶ)

ವಿಶೇಷವಾಗಿವೆ. (c) ಮೈಸೂರು ಮಾದರಿ ತಳಿಯಲ್ಲಿ 5 ಮುಖ್ಯ ಬಗೆಯ ರಾಸುಗಳಿವೆ. ಅಮೃತಮಹಲ್ ತಳಿ ಭಾರತದಲ್ಲೆಲ್ಲ ಬಹಳ ಉತ್ತಮವಾದ ಬೇಸಾಯದ ರಾಸು. ಇದು ಚುರುಕಾದ ಮುಂಗೋಪಿ ರಾಸುವಾದರೂ ಕಷ್ಟಸಹಿಷ್ಣುತೆಗೆ ಹೆಸರಾಗಿದೆ. ಇದರ ತಲೆ ಮತ್ತು ಕೊಂಬುಗಳ ಆಕಾರವೇ ಒಂದು ವೈಶಿಷ್ಟ್ಯ. ಇವುಗಳ ಗೂಳಿಗಳಲ್ಲಿ ದೇಹದ ಪ್ರಮಾಣಕ್ಕೆ ಹೊಂದುವ ಪುಷ್ಟವಾದ ಗಾತ್ರದ ಹಿಳಲು ಇದೆ. ಇದು ಸ್ವಲ್ಪ ಮಟ್ಟಿಗೆ ಹಳ್ಳಿಕಾರ್, ಖಿಲಾರಿ ಮತ್ತು ಕಂಗಾಯಂ ತಳಿಗಳನ್ನು ಹೋಲುತ್ತದೆ. ಹಳ್ಳಿಕಾರ್ ತಳಿ ತುಮಕೂರು, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾಣಬರುತ್ತದೆ. ಖಿಲಾರಿ ತಳಿ ಸೊಲ್ಲಾಪುರ ಮತ್ತು ಸತಾರ ಜಿಲ್ಲೆಗಳಲ್ಲಿದೆ. ಬರಗೂರು ತಳಿ ಕೊಯಮತ್ತೂರು ಜಿಲ್ಲೆಯ ಭವಾನಿ ತಾಲ್ಲೂಕಿನಲ್ಲಿದೆ. ಇದು ಹಳ್ಳಿಕಾರ್ ರಾಸುಗಳನ್ನು ಹೋಲುತ್ತದೆ. ಕಂಗಾಯಂ ತಳಿ ಸಹ ಕೊಯಮತ್ತೂರು ಜಿಲ್ಲೆಯಲ್ಲಿ ಕಾಣಬರುತ್ತದೆ. (d) ಚಿಕ್ಕ ಗಾತ್ರದ ಕೆಂಪು ಬಿಳುಪು ಮಚ್ಚೆಗಳಿರುವ ಮೋಟು ಅಥವಾ ಲೈರ್ ರೀತಿಯ ಕೊಂಬಿರುವ ಗುಂಪಿನ ಪೊನ್ವಾರ್ ತಳಿ ಉತ್ತರ ಪ್ರದೇಶದ ಕೆಲವು ಕಡೆಗಳಲ್ಲಿದೆ. ಸಿರಿ ತಳಿ ಡಾರ್ಜಿಲಿಂಗ್ ಗುಡ್ಡ ಪ್ರದೇಶಗಳಲ್ಲಿ ಕಾಣಬರುತ್ತದೆ. ಚಳಿ ಮತ್ತು ಮಳೆಗಳಿಂದ ರಕ್ಷಣೆ ಪಡೆಯಲು ಇವುಗಳಿಗೆ ದಪ್ಪವಾದ ಕೂದಲಿನ ಹೊದಿಕೆ ಇದೆ.

3. ಸಾಮಾನ್ಯವಾಗಿ ಬಳಕೆಯ ತಳಿಗಳನ್ನು ಮೋಟು ಕೊಂಬಿನವು ಮತ್ತು ಲೈರ್ ರೀತಿಯ ಕೊಂಬಿನವು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. ಮೋಟು ಕೊಂಬಿನ ಗುಂಪಿನಲ್ಲಿ 8 ತಳಿಗಳಿವೆ. ನಿಮಾರಿ ತಳಿ ನಿಮಾರಿ ಮತ್ತು ಇಂದೂರು ಜಿಲ್ಲೆಯ ನಿವಾಸಿ. ಡಂಗಿ ತಳಿ ಅಹಮದ್‌ನಗರ, ಖಾಂದೇಶ್ ಜಿಲ್ಲೆ (ಮಹಾರಾಷ್ಟ್ರ) ಮತ್ತು ಡಂಗ್ಸ್ ಮುಂತಾದೆಡೆಗಳಲ್ಲಿದೆ. ಹರಿಯಾಣ ತಳಿ ಹರಿಯಾಣದಲ್ಲೂ ಮೇವತಿ ತಳಿ ಮಥುರಾ ಜಿಲ್ಲೆಯಲ್ಲೂ (ಉತ್ತರ ಪ್ರದೇಶ) ರಾತ್ ತಳಿ ಅಲ್‌ವಾರ್‌ನಲ್ಲೂ ಓಂಗೋಲ್ ತಳಿ ನೆಲ್ಲೂರು ಮತ್ತು ಗುಂಟೂರು ಪ್ರದೇಶಗಳಲ್ಲೂ ಗೊವಲಾವೊ ತಳಿ ಮಧ್ಯ ಪ್ರದೇಶ ಮತ್ತು ನಾಗಪುರಗಳಲ್ಲೂ ಕೃಷ್ಣಾ ಕಣಿವೆ ತಳಿ ಕೃಷ್ಣಾನದಿ ಪ್ರದೇಶದಲ್ಲೂ ಕಾಣಬರುತ್ತವೆ. ಲೈರ್ ರೀತಿ ಕೋಡಿನ ರಾಸುಗಳಲ್ಲಿ ತಾರ್‌ಪಾರ್ಕರ್ (ತಾರಿ) ತಳಿ ಜೋಧಪುರ, ಜೈಸಲ್ಮೇರ್ ಮತ್ತು ಕರ್ನಾಲ್‌ಗಳಲ್ಲಿ ವಾಸಿಸುತ್ತದೆ. ಕಂಕರೆಜ್ ತಳಿ ಕಚ್ಛ್ ಮತ್ತು ಸರಸ್ವತಿ ನದಿ ಪ್ರದೇಶಗಳಲ್ಲಿದೆ (**ನೋಡಿ–ದನಗಳು**). (ಎನ್.ವಿ.ಎ.)

**ಗೂಳಿಕಾಳಗ :** ಮಾನವ ತನ್ನ ಪ್ರಾಣವನ್ನೇ ಪಣವಾಗಿ ಒಡ್ಡಿ ಹೋರಾಡುವ ಹಲವಾರು ರೋಮಾಂಚಕಾರಿ ಕ್ರೀಡೆಗಳಲ್ಲಿ ಒಂದು. ಇದನ್ನು ಕ್ರೀಡೆ ಎಂದು ಕರೆಯದೆ ಪ್ರೇಕ್ಷಣ (ಸ್ಪೆಕ್ಟಕಲ್) ಎಂದಿದ್ದಾರೆ. ಈ ಪ್ರೇಕ್ಷಣ ಗೂಳಿ ಮತ್ತು ಮಾನವನ ಮಧ್ಯೆ ನಡೆಯುತ್ತದೆ. ಇದನ್ನು ಪ್ರಪಂಚದ ಕೆಲವೇ ರಾಷ್ಟ್ರಗಳಲ್ಲಿ ಮಾತ್ರ ಕಾಣಬಹುದಾಗಿದೆ. ಇದರ ತವರು ಸ್ಪೇನ್ ದೇಶ. ಪ್ರಾಚೀನ ಕ್ರೀಟ್, ತೆಸಲೇ ಹಾಗೂ ರೋಂ ಚಕ್ರಾಧಿಪತ್ಯಗಳಲ್ಲೂ ಕೊರಿಯ, ಚೀನ, ಈಜಿಪ್ಟ್‌ಗಳಲ್ಲೂ ಪ್ರ.ಶ.ಪೂ.ದಿಂದಲೂ ಇದು ರೂಢಿಯಲ್ಲಿತ್ತೆಂದು ಚಾರಿತ್ರಿಕ ದಾಖಲೆಗಳಿಂದ ತಿಳಿದುಬರುತ್ತದೆ. ವ್ಯಾವಸಾಯಿಕ ಅಭಿವೃದ್ಧಿಗಾಗಿ ನಡೆಯುತ್ತಿದ್ದ ಹಲವು ಪ್ರಕೃತಿ ಪೂಜೆಗಳಲ್ಲಿ ಇದೂ ಒಂದಾಗಿರಬಹುದೆಂದು ಭಾವಿಸಬಹುದಾಗಿದೆ. ತಮ್ಮ ತಮ್ಮ ಮನೆಗಳಲ್ಲಿ ಸಾಕಿದ್ದ ಹೋರಿಗಳಿಂದಲೇ ಹಿಂದೆ ಈ ಕಾಳಗಗಳನ್ನು ನಡೆಸುತ್ತಿದ್ದರು.

ಈ ಕಾಳಗದ ಚರಿತ್ರೆ ಪ್ರಸಕ್ತ ಶಕ ಪೂರ್ವಕ್ಕೂ ಹಿಂದಕ್ಕೆ ಹೋಗುತ್ತದೆ. ಸೆಲ್ಟಿ ಬೇರಿಯನ್ ಜನಾಂಗ ಪ್ಯೂನಿಕ್ ಯುದ್ಧಗಳಿಗಿಂತ ಮುಂಚೆಯೇ ತಮ್ಮ ಪ್ರದೇಶದ ಕಾಡುಗಳಲ್ಲಿ ವಾಸಿಸುತ್ತಿದ್ದ ದನಗಳ ಕ್ರೂರ ಸ್ವಭಾವವನ್ನು ಕಂಡುಕೊಂಡು, ಅವನ್ನು ಹಿಡಿದು, ಸಾಕಿ, ಯುದ್ಧಗಳಲ್ಲಿ ಉಪಯೋಗಿಸಿಕೊಳ್ಳುತ್ತಿದ್ದರು, ಪ್ರ.ಶ.ಪೂ. 228ರ ಇಲಿಚಿಯ ಕಾಳಗದಲ್ಲಿ ಈ ದನಗಳು ನಿರ್ಣಾಯಕ ಪಾತ್ರ ವಹಿಸಿದ್ದುವು. ಸ್ಪೇನಿನ ಆಂಡಲೂಸಿಯ ಪ್ರದೇಶದ ಖ್ಯಾತಿಕಾದ ವೀರರು ಈ ಗೂಳಿಗಳೊಂದಿಗೆ ಹೋರಾಡಿ ಅವನ್ನು ಕೊಲ್ಲುತ್ತಿದ್ದುದು ಅಂದಿನ ಅತಿ ರೋಮಾಂಚಕ ಸುದ್ದಿಯಾಗಿತ್ತು. ಗೂಳಿಗಳ ಕೊಂಬಿನ ಇರಿತದಿಂದ ರಕ್ಷಿಸಿಕೊಳ್ಳಲು ಐಬೀರಿಯಾದ ಜನ ಚರ್ಮದ ಕವುದಿಗಳನ್ನು ಧರಿಸುತ್ತಿದ್ದರು. 411–711ರ ಮುನ್ನೂರು ವರ್ಷ ಅವಧಿಯ ವಿಸಿಗೋತ್ ಜನಾಂಗದ ಆಳ್ವಿಕೆಯಲ್ಲಿ ಗೂಳಿಕಾಳಗ ಮತ್ತಷ್ಟು ಅಭಿವೃದ್ಧಿಯಾಗಿ ಹಲವು ಬದಲಾವಣೆಗಳನ್ನು ಹೊಂದಿತು. ಲುಸಿಟಾನೋಸ್ (ಪೋರ್ಚುಗೀಸ್) ಜನಾಂಗದವರು ಈ ಕ್ರೀಡೆಯನ್ನು ದತ್ತಕವಾಗಿಸಿಕೊಂಡು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಆಫ್ರಿಕದ ಮುಸ್ಲಿಮರು 711ರಲ್ಲಿ ಆಂಡಲೂಸಿಯ ಪ್ರದೇಶವನ್ನು ಗೆದ್ದು, ಅಲ್ಲಿನ ಆಕರ್ಷಕ ಗೂಳಿಕಾಳಗಕ್ಕೆ ತಮ್ಮ ಸಂಸ್ಕೃತಿಯ ಸೊಗಸನ್ನು ಹೊಂದಿಸಿ ಅಭಿವೃದ್ಧಿಗೆ ತಂದರು. ಇವರು ಪ್ರಸಿದ್ಧ ಸವಾರರಾಗಿದ್ದುದರಿಂದ ಗೂಳಿಕಾಳಗದಲ್ಲೂ ಕಾಳಗಪಟುಗಳು ಕುದುರೆಯ ಮೇಲೆ ಕುಳಿತು ಭರ್ಜಿ ಹಿಡಿದು ಹೋರಾಟ ನಡೆಸುತ್ತಿದ್ದರು. ಇವರ ಸೇವಕರು ನೆಲದ ಮೇಲೆ ನಿಂತು ಉಳಿದ ಗೌಣಕಾರ್ಯ ನಿರ್ವಹಣೆ ಮಾಡುತ್ತಿದ್ದರು. ಜೀರ್ಣವಾಗಿದ್ದ ಗ್ರೀಕ್ ಪ್ರೇಕ್ಷಕಾಂಗಣಗಳನ್ನು ಜೀರ್ಣೋದ್ಧಾರ ಮಾಡಿ ಅವುಗಳ ಸೊಗಸನ್ನವರು ಹೆಚ್ಚಿಸಿದರು. ಮೂರಿಷ್ ದಳವಾಯಿಗಳ ಹಾಗೂ ಐಬೀರಿಯನ್ ಶ್ರೀಮಂತರ ನಡುವೆ ಸ್ಪರ್ಧಾತ್ಮಕ ಕಾಳಗಗಳು ವಿಶೇಷವಾಗಿ ನಡೆಯುತ್ತಿದ್ದುವು. ಈ ಪ್ರೇಕ್ಷಣಗಳು ದೊಡ್ಡ ದೊಡ್ಡ ನಗರಗಳನ್ನು ಬಿಟ್ಟು ಉಳಿದೆಡೆ ಪೇಟೆ ಬೀದಿಯ ಚೌಕಗಳಲ್ಲಿ ಇಲ್ಲವೆ ಊರ ಹೊರಬಯಲಿನಲ್ಲಿ ನಡೆಯುತ್ತಿದ್ದುವು.

ಅಖಾಡ ಪ್ರವೇಶದ ಮುನ್ನಿನ ಕಾಳಗ ಪಟುಗಳ ಮೆರವಣಿಗೆ

ಸ್ಪೇನಿನ ಪ್ರಖ್ಯಾತ 'ಎಲ್ ಸಿಡ್ ಕ್ಯಾಂಪೆಡೋರ್' ಡಾನ್ ರೊಡ್ರಿಗೊ ಡಿಯಾಜ್ ಡಿ ಬಿವಾರ್ (1043–99) ಪ್ರೇಕ್ಷಕಾಂಗಣದ ನಡುವೆಯೇ ಭಲ್ಲೆಯಿಂದ ಗೂಳಿಯನ್ನು ಕೊಂದ ಪ್ರಪ್ರಥಮ ಕಾಳಗ ಪಟು. ಹದಿನೈದನೆಯ ಶತಮಾನದಲ್ಲಿ ಮುಸ್ಲಿಮರ ಆಳ್ವಿಕೆ ಕೊನೆಗೊಂಡು ಆಸ್ಟ್ರಿಯನರ ಆಳ್ವಿಕೆ ಆರಂಭವಾದಾಗಲೂ ಗೂಳಿಕಾಳಗ ಶ್ರೀಮಂತವರ್ಗದ ಹೆಮ್ಮೆಯ ವ್ಯಸನವೆನಿಸಿಕೊಂಡಿತ್ತು. ನಾಲ್ಕನೆಯ ಫಿಲಿಪ್ ದೊರೆಯ ಕಾಲದಲ್ಲಿ ಉದ್ದನೆಯ ಭರ್ಜಿಗೆ ಬದಲಾಗಿ ಚಿಕ್ಕ ಭಲ್ಲೆ, ಸವಾರರ ಕಾಲಿಗೆ ರಕ್ಷಾಕವಚ–ಇವನ್ನು ಉಪಯೋಗಿಸುವ ಪದ್ಧತಿ ರೂಢಿಗೆ ಬಂತು. ರಾಜ್ಯ ರಾಜ್ಯಗಳ ನಡುವೆ ಸ್ಪರ್ಧಾ ಕಾಳಗಗಳು ಹೆಚ್ಚಿದಂತೆ ಅಪರಿಚಿತ ಗೂಳಿಗಳೆದುರಾಗಿ ಶ್ರೀಮಂತ ಸವಾರ ವರ್ಗ ಹೋರಾಟ ನಡೆಸುವುದು ಸ್ವಲ್ಪ ಕಷ್ಟವಾಯಿತು. ನೆಲದ ಮೇಲೆ ನಿಂತು ಹೋರಾಟ ನಡೆಸಿ ಗೂಳಿಗಳ ಶಕ್ತಿಗುಂದಿಸುತ್ತಿದ್ದ ಸೇವಕರೇ ದಿನ ದಿನಕ್ಕೂ ಹೆಚ್ಚು ಅನುಭವವನ್ನೂ ಕೀರ್ತಿಯನ್ನೂ ಪಡೆಯಲಾರಂಭಿಸಿದರು. ಇದು ತಮ್ಮ ಘನತೆಗೆ ಕುಂದೆಂದು ಭಾವಿಸಿದ ಶ್ರೀಮಂತ ಜನ ಸೇವಕರಿಂದ ಆರಂಭದ ಅಲ್ಪ ಕಾರ್ಯ ಮಾಡಿಸಿ ಅವರಿಗೆ ಕುದುರೆ ಕೊಟ್ಟು ತಾವು ನೆಲದ ಮೇಲೆ ನಿಂತು ಹೋರಾಡಲಾರಂಭಿಸಿದರು.

ಈಟಿಯಂಥ ಕೋಲನ್ನು ಗೂಳಿಯ ಬೆನ್ನಲ್ಲಿ ನೆಡುತ್ತಿರುವುದು

ಉತ್ತಮ ತಳಿಯ ಗೂಳಿ ಸಾಕಣೆ 1700ರಿಂದ ಲಾಭದಾಯಕ ಉದ್ಯಮವಾಯಿತು. ಸ್ಪೇನ್, ಫ್ರಾನ್ಸ್, ಪೋರ್ಚುಗಲ್, ಇಟಲಿ ರಾಜಮನೆತನಗಳವರೂ ಸ್ಪೇನಿನ ಕೆಥೊಲಿಕ್ ಚರ್ಚಿನವರೂ ಉತ್ತಮ ಗೂಳಿಗಳನ್ನು ಸಾಕಿ ಮಾರಾಟ ಮಾಡುತ್ತಿದ್ದುದರ ಜೊತೆಗೆ, ಪ್ರೇಕ್ಷಣ ಸಮಾರಂಭಗಳಲ್ಲಿ ತಮ್ಮ ತಮ್ಮ ಗೂಳಿಗಳನ್ನೂ ಅಖಾಡಕ್ಕೆ ಇಳಿಸುತ್ತಿದ್ದರು. ಸಾಮಾನ್ಯವಾಗಿ ಹಾಲು ಹಯನು ಇರುವ ತಳಿಗಳನ್ನು ಕಾಳಗಕ್ಕೆ ಬಳಸುತ್ತಿರಲಿಲ್ಲ. ಏನಿದ್ದರೂ ವನ್ಯ ತಳಿಗಳನ್ನು ಮಾತ್ರ ಬಳಸುವುದು ವಾಡಿಕೆಯಾಗಿತ್ತು. ಪೌರುಷಹೀನ ಗೂಳಿಗಳ ಮೇಲೆ ಮ್ಯಾಸ್ಟಿಫ್ ನಾಯಿಗಳನ್ನು ಬಿಟ್ಟು ಅವನ್ನು ಕೆರಳಿಸುತ್ತಿದ್ದರು. ಚಿಕ್ಕ ಬಾಣಗಳ (ಬ್ಯಾಂಡರಿಲ್ಲ) ಬಳಕೆಯೂ ಈ ಕಾಲದಲ್ಲಿ ಆರಂಭವಾಯಿತು. ಅಪಾಯ

ಅಧಿಕವಾದಂತೆ ಶ್ರೀಮಂತ ಜನ ಹಿಮ್ಮೆಟ್ಟಿದರು. ಇವರ ಸಹಾಯಕ ಜನ ಪ್ರಮುಖ ಕಾರ್ಯಗಳನ್ನು ನಿರ್ವಹಿಸ ತೊಡಗಿದರು. ಇದನ್ನು ತಮ್ಮ ಕಸಬಾಗಿಸಿಕೊಂಡರು. ಕಾಳಗದಲ್ಲಿ ಪ್ರಾವೀಣ್ಯ ಪಡೆದಂತೆ ಗೂಳಿಯನ್ನು ಕೊಲ್ಲಲು ಭರ್ಜಿಗೆ ಬದಲಾಗಿ ಕತ್ತಿಗಳನ್ನು (ಎಸ್ಟೋಕ್) ಬಳಸಲಾರಂಭಿಸಿದರು.

ಆಂಡಲೂಸಿಯ ಪ್ರದೇಶದ ರೊಂಡಾದ ಫ್ರಾನ್ಸಿಸ್ಕೊ ರೊಮೇರೊ (1700) ಮೊಟ್ಟಮೊದಲ ವೃತ್ತಿಕಾಳಗಪಟು. ಪ್ರಪ್ರಥಮ ಬಾರಿಗೆ ನೆಲದ ಮೇಲೆ ನಿಂತು ಈತ ಗೂಳಿಯೊಂದಿಗೆ ಹೋರಾಟ ನಡೆಸಿದ. ಈತನೇ ಇಂದಿಗೂ ಬಳಕೆಯಲ್ಲಿರುವ ಕತ್ತಿ ಮತ್ತು ಬೆದರು ಬಟ್ಟೆಗಳನ್ನು (ಮುಲೆಟ) ಬಳಕೆಗೆ ತಂದವ. ಫ್ರಾನ್ಸಿಸ್ಕೊ ಜೊಸೆ ಡಿ ಗೋಯಾ ವೈ ಲೂಸಿಯೆನ್‌ಟಿಸ್ (1746–1828) ಮತ್ತೊಬ್ಬ ಕೀರ್ತಿಶಾಲಿ ಕಾಳಗ ಪಟು. ಕಾಳಗ ಪಟುಗಳ ತಂಡ ಇಂದಿಗೂ ಧರಿಸುವ ಬಣ್ಣ ಬಣ್ಣದ ಆಕರ್ಷಕ ಉಡುಗೆಗಳನ್ನು ರೂಪಿಸಿ, ರೂಢಿಗೆ ತಂದವನು ಇವನೇ.

ಕಾಳಗದ ಅಪಾಯಕಾರಿ ಸನ್ನಿವೇಶ – ಗೂಳಿಯನ್ನು ರೇಗಿಸುತ್ತಿರುವುದು

ಗೂಳಿಕಾಳಗ ನಡೆಯುವ ಪ್ರೇಕ್ಷಕಾಂಗಣವನ್ನು ವೃತ್ತಾಕಾರವಾಗಿ ನಾಲ್ಕು ಅಡಿ ಎತ್ತರದ ಹಲಗೆಗಳಿಂದ ನಿರ್ಮಿಸುತ್ತಾರೆ. ಇದರ ಹೆಸರು ಪ್ಲಾಝಾ ಡಿ ಟೋರಸ್ ಎಂದು. ನಾಲ್ಕುನೂರಕ್ಕೂ ಹೆಚ್ಚು ಪ್ರೇಕ್ಷಕಾಂಗಣಗಳು ಸ್ಪೇನ್ ಒಂದರಲ್ಲೇ ಇವೆ. ಮ್ಯಾಡ್ರಿಡ್ ಮತ್ತು ಬಾರ್ಸಿಲೋನ ನಗರಗಳ ಪ್ರೇಕ್ಷಕಾಂಗಣಗಳನ್ನು 28,000 ಜನ ಕುಳಿತು ನೋಡುವಂತೆ ನಿರ್ಮಿಸಿದ್ದಾರೆ. ಮೆಕ್ಸಿಕೊ ನಗರದಲ್ಲಿ 1945–46ರಲ್ಲಿ ಉದ್ಘಾಟನೆಗೊಂಡ ಪ್ರೇಕ್ಷಕಾಂಗಣ 50 ಸಾವಿರ ಜನ ಕುಳಿತು ನೋಡುವಷ್ಟು ಬೃಹತ್ತಾಗಿದೆ.

ಕಾಳಗದ ಗೂಳಿಗಳ ಅಭಿವೃದ್ಧಿಗಾಗಿಯೇ ಪ್ರತ್ಯೇಕ ತಳಿ ಸಾಕಣೆ ಕೇಂದ್ರಗಳಿವೆ. ಪ್ರಖ್ಯಾತ ವಂಶದ ತಳಿಗಳನ್ನು ಆಯ್ಕೆ ಮಾಡಿ ತರಬೇತಿ ನೀಡುತ್ತಾರೆ. ಮಿ ಉರ ಮತ್ತು ಸೆವಿಲ್ಲ್ ತಳಿಗಳು ಬಹು ಪ್ರಸಿದ್ಧ. ತಳಿಗಳನ್ನು ಸಾಕುತ್ತಿದ್ದ ದನಗಾವಲುಗಳಲ್ಲೇ ಚಿಕ್ಕ ಚಿಕ್ಕ ಅಖಾಡಗಳನ್ನು ನಿರ್ಮಿಸಿಕೊಂಡು ಅಲ್ಲಿ ಪ್ರಸಿದ್ಧ ಹಾಗೂ ಶಿಕ್ಷಣ ಪಡೆಯುವ ಕಾಳಗ ಪಟುಗಳು ಪ್ರತಿವಾರವೂ ಗೂಳಿಗಳೊಂದಿಗೆ ಹೋರಾಟ ನಡೆಸುತ್ತಾರೆ. ಇಲ್ಲಿನ ಕಡಸುಗಳು ಅಪಾಯಕಾರಿಯಲ್ಲವಾದರೂ ಹಲವು ಪ್ರಸಿದ್ಧ ಕಾಳಗಪಟುಗಳು ತೀವ್ರತರವಾದ ಗಾಯಗಳನ್ನು ಮಾಡಿಕೊಂಡಿರುವುದೂ ಉಂಟು. ಮೂರು ವರ್ಷಗಳ ದೀರ್ಘ, ಕಠಿಣ ತರಬೇತಿಯ ಅನಂತರ ಗೂಳಿಗಳನ್ನು ವಾರ್ಷಿಕ ಸಮಾರಂಭಗಳ ಅಖಾಡದಲ್ಲಿ ಬಿಡುತ್ತಾರೆ. ಹೀಗೆ ಅಖಾಡಕ್ಕೆ ಬಿಡುವ ಗೂಳಿಯ ಕನಿಷ್ಠ ತೂಕ 542 ಕೆಜಿ ಅಥವಾ 1194 ಪೌಂಡುಗಳಿರಬೇಕು. 4 ರಿಂದ 5 ವರ್ಷ ವಯಸ್ಸಾಗಿರಬೇಕಲ್ಲದೆ ದಷ್ಟಪುಷ್ಟ ಮೈಕಟ್ಟನ್ನು ಪಡೆದು ಹರಿತವಾದ ಕೊಂಬುಗಳುಳ್ಳದ್ದೂ ಆಗಿರಬೇಕು.

ಅಖಾಡದ ಪರಿಶುದ್ಧತೆ ಮತ್ತು ಗೂಳಿಗಳ ಅಸಾಧಾರಣ ಜ್ಞಾಪಕ ಶಕ್ತಿಯ ಕಾರಣದಿಂದಾಗಿ ಒಮ್ಮೆ ಅಖಾಡಕ್ಕೆ ಬಿಟ್ಟ ಗೂಳಿಯನ್ನು ಮತ್ತೆ ಬಿಡುವುದಿಲ್ಲ. ಗೂಳಿಗಳನ್ನು ಬಣ್ಣಗುರುಡಾಗಿಸಿರುತ್ತಾರೆ. ಕೆಂಪು, ಹಳದಿ ಬಣ್ಣಗಳನ್ನು ಕಂಡಾಗ ಮಾತ್ರ ಅವು ಮೇಲೆರಗುತ್ತವೆ. ಆದ್ದರಿಂದಲೇ ಕಾಳಗಪಟು ಧರಿಸುವ ಉಡುಪನ್ನೂ ಕೈಯಲ್ಲಿ ಹಿಡಿಯುವ ಬೆದರು ಬಟ್ಟೆಯನ್ನೂ ಕೆಂಪು, ಹಳದಿ ಬಣ್ಣದ ಬಟ್ಟೆಗಳಿಂದ ತಯಾರಿಸುತ್ತಾರೆ.

ವೃತ್ತಿಕಾಳಗಪಟುಗಳನ್ನು ಟೊರೆರಸ್ ಎಂದು ಕರೆಯುತ್ತಾರೆ. ಈ ಕಾಳಗ ಪಟುಗಳ ತಂಡ ಮೆಟಾಡೊರ್ (ಪ್ರಧಾನ ಕಾಳಗಪಟು), ಬ್ಯಾಂಡೆರಿಲ್ಲೊರಿಸ್ (ಬಾಣ ಪಾಣಿಗಳು), ಪಿಕಾಡೊರ್ಸ್ (ಅಶ್ವಾರೂಢರು)– ಇವರಿಂದ ಕೂಡಿರುತ್ತದೆ. ಒಬ್ಬೊಬ್ಬ ಪ್ರಧಾನ ಕಾಳಗಪಟುವಿಗೂ ಇಬ್ಬರು ಅಥವಾ ಮೂರು ಜನ ಬಾಣಪಾಣಿಗಳೂ ಇಬ್ಬರು ಮೂವರು ಅಶ್ವಾರೂಢರೂ ಸಹಾಯಕರಾಗಿ ಇರುತ್ತಾರೆ. ದೀರ್ಘಕಾಲದ ಶಿಕ್ಷಣ ಹಾಗೂ ಪ್ರಯೋಗ, ಪರೀಕ್ಷೆಗಳ ಅನಂತರ ಸಹಾಯಕ ಕಾಳಗಪಟು ಪ್ರಧಾನ ಕಾಳಗಪಟುವಾಗುತ್ತಾನೆ. ಪ್ರಧಾನ ಕಾಳಗ ಪಟು, ಒಪ್ಪೊತ್ತಿನ ಕಾಳಗಕ್ಕೆ ಸಂಭಾವನೆ ಪಡೆಯುತ್ತಾನೆ. ಈತನೇ ತನಗೆ ಸಂದಾಯವಾದ ಹಣದಲ್ಲಿ ತಂಡದ ಉಳಿದ ಸದಸ್ಯರಿಗೂ ಭಾಗ ಕೊಡುತ್ತಾನೆ.

ಸ್ಪೇನಿನಲ್ಲಿ ವಾರ್ಷಿಕ ಗೂಳಿಕಾಳಗಗಳು ಮಾರ್ಚ್ ಮೊದಲ ದಿನದಂದು ಆರಂಭವಾಗಿ ನವೆಂಬರ್ ಮಧ್ಯಭಾಗದ ವರೆಗೂ ನಡೆಯುತ್ತವೆ. ಭಾನುವಾರಗಳ ಅಪರಾಹ್ನ ಮತ್ತು ಹಬ್ಬದ ರಜಾ ದಿನಗಳಲ್ಲಿ ಇವನ್ನು ನಡೆಸುತ್ತಾರೆ. ಒಂದೊಂದು ಪ್ರೇಕ್ಷಣದಲ್ಲೂ ಮೂವರು ಬೇರೆ ಬೇರೆ ಪ್ರಧಾನ ಕಾಳಗಪಟುಗಳು ಆರು ಗೂಳಿಗಳನ್ನು ಕೊಲ್ಲುತ್ತಾರೆ. ಇಂಥ ಒಂದು ವಾರ್ಷಿಕ ಕಾಳಗಮಾಲೆಯಲ್ಲಿ ಒಂದು ಸಾವಿರ ಗೂಳಿಗಳೂ ಐದು ಸಾವಿರ ಕುದುರೆಗಳೂ ಸಾಮಾನ್ಯವಾಗಿ ಕೊಲೆಯಾಗುತ್ತವೆ.

ಸಮಾರಂಭ ಆಕರ್ಷಕ ಮೆರವಣಿಗೆಯೊಂದಿಗೆ ಆರಂಭವಾಗುತ್ತದೆ. ದರ್ಜೆಗೆ ತಕ್ಕಂತೆ ಬಣ್ಣ ಬಣ್ಣದ ಝರಿ, ಕಿಂಕಾಪಿನ ಬಟ್ಟೆಗಳನ್ನು ಧರಿಸಿದ ಕಾಳಗ ಪಟುಗಳ ತಂಡ ಪ್ರೇಕ್ಷಕಾಂಗಣವನ್ನು ಪ್ರವೇಶಿಸಿ, ಪ್ರದಕ್ಷಿಣೆ ಬಂದು, ತಮ್ಮ ತಮ್ಮ ಸ್ಥಾನಗಳಲ್ಲಿ ನಿಲ್ಲುತ್ತಾರೆ. ಸಮಾರಂಭಕ್ಕೆ ಕೆಲವು ಗಂಟೆಗಳ ಮುಂಚೆ ಗೂಳಿಗಳನ್ನು ಬೋನಿನಲ್ಲಿ ಸಾಗಿಸಿಕೊಂಡು ಬಂದು ಪ್ರೇಕ್ಷಕಾಂಗಣದ ಕತ್ತಲು ಗೂಡಿನಲ್ಲಿ ಕೂಡಿರುತ್ತಾರೆ. ಅಂದಿನ ಸಮಾರಂಭದ ಮುಖ್ಯ ಅತಿಥಿ ಗೂಳಿಗೂಡಿನ ಕೀಲಿಕೈಯನ್ನು ಅಶ್ವಾರೂಢರತ್ತ ಎಸೆಯುತ್ತಾನೆ. ಗೂಡಿನ ಬೀಗ ತೆಗೆದು ಗೂಳಿಯನ್ನು ಹೊರಗೆ ಬಿಡುತ್ತಾರೆ. ಗೂಡಿನ ಬಾಗಿಲ ಮೇಲೆ ಕುಳಿತಿರುವ ಸೇವಕನೊಬ್ಬ ಆ ಗೂಳಿ ಬೆಳೆದು ಬಂದ ತಳಿಕೇಂದ್ರದ ಸಾಂಕೇತಿಕ ಬಣ್ಣದ ಬಟ್ಟೆ ಸುತ್ತಿದ ಬಾಣವೊಂದನ್ನು ಗೂಳಿಯ ಭುಜಕ್ಕೆ ಅದು ಹೊರಬರುತ್ತಿರುವಂತೆ ಚುಚ್ಚುತ್ತಾನೆ.

ಬೆದರು ಬಟ್ಟೆ ಹಿಡಿದ ಬಾಣಪಾಣಿಗಳು ಗೂಳಿಯೊಂದಿಗೆ ಆರಂಭದ ಹೋರಾಟ ಪ್ರಾರಂಭಿಸುತ್ತಾರೆ. ಬೆದರು ಬಟ್ಟೆಯನ್ನು ಕಂಡು ಅವರತ್ತ ನುಗ್ಗುವ ಗೂಳಿಯ ಗುರಿಯಿಂದ ತಪ್ಪಿಸಿಕೊಂಡು ಅದನ್ನು ಅತ್ತಿತ್ತ ಓಡಾಡಿಸುತ್ತಾರೆ. ಈ ಆಟ ನಡೆಯುತ್ತಿರುವಂತೆ ಗೂಳಿಯನ್ನು ಕೊಲ್ಲುವ ಪ್ರಧಾನ ಕಾಳಗಪಟು ದೂರ ನಿಂತು, ಗೂಳಿಯ ಆಕ್ರಮಣ ಕ್ರಮ, ಕೊಂಬುಗಳನ್ನು ಉಪಯೋಗಿಸುವ ರೀತಿ ಮತ್ತು ಅದರ ಶಕ್ತಿ ಸಾಮರ್ಥ್ಯಗಳನ್ನು ಗಮನಿಸುತ್ತಿರುತ್ತಾನೆ. ಸ್ವಲ್ಪ ಕಾಲಾನಂತರ ಬೆದರು ಬಟ್ಟೆ ಹಿಡಿದು ತಾನೇ ಗೂಳಿಗೆ ಎದುರಾಗುತ್ತಾನೆ. ತನ್ನ ದೀರ್ಘಕಾಲದ ಅನುಭವದ ಕಾರಣದಿಂದ ಈತ ಗೂಳಿಯನ್ನು ಅತಿ ಸಮೀಪಕ್ಕೆ ಬಿಟ್ಟುಕೊಂಡು ಆಟವಾಡಿಸುತ್ತಾನೆ. ಇವನ ಈ ಕ್ರೀಡೆ ಅತ್ಯಂತ ರೋಮಾಂಚಕಾರಿಯೂ ಅಪಾಯಕಾರಿಯೂ ಆಗಿರುವುದರಿಂದ ಪ್ರೇಕ್ಷಕರು ಹೆಚ್ಚು ಸಂತೋಷಪಡುತ್ತಾರೆ.

ಕಾಳಗದ ಒಂದು ರೋಮಾಂಚಕ ದೃಶ್ಯ

ಆರಂಭದ ಈ ಸೆಣಸಾಟ ಮುಕ್ತಾಯವಾದಂತೆ ಗೂಳಿಯನ್ನು ಕೊಲ್ಲುವ ಪ್ರಮುಖ ಕ್ರಿಯೆ ಆರಂಭವಾಗುತ್ತದೆ. ಕಹಳೆಯ ಧ್ವನಿಯೊಂದಿಗೆ ಮೊದಲ ಘಟ್ಟ ಆರಂಭವಾಗುತ್ತದೆ. ಧ್ವನಿಯೊಂದಿಗೆ ಭರ್ಜಿ ಹಿಡಿದ ಅಶ್ವಾರೂಢರು ಪ್ರವೇಶಿಸಿ ಗೂಳಿಗೆ ಎದುರಾಗುತ್ತಾರೆ. ಸಾಮಾನ್ಯವಾಗಿ ವಯಸ್ಸಾದ ಕುದುರೆಯನ್ನೇ ಅಶ್ವಾರೂಢರು ಕಾಳಗಕ್ಕೆ ತರುತ್ತಾರೆ. ಕುದುರೆಯ ಹೊಟ್ಟೆಯ ಭಾಗವನ್ನು ಒತ್ತಾಗಿ ತುಂಬಿದ ಚರ್ಮದ ಚೀಲಗಳನ್ನು ಕಟ್ಟಿ ರಕ್ಷಿಸಿರುತ್ತಾರೆ. ಕುದುರೆಯ ಕಣ್ಣುಗಳನ್ನೂ ಕಟ್ಟಿರುತ್ತಾರೆ. ಕುದುರೆಯನ್ನು ಕಾಣುತ್ತಿದ್ದಂತೆ ಗೂಳಿ ಅದರತ್ತ ನುಗ್ಗುತ್ತದೆ. ಆಯವನ್ನು ನೋಡಿ ಸವಾರ ತನ್ನ ಭರ್ಜಿಯಿಂದ ಗೂಳಿಯ ಭುಜವನ್ನು ಇರಿಯುತ್ತಾನೆ. ಇರಿತ ಆಳವಾಗಿರಕೂಡದು. ಅಶ್ವಾರೂಢರೂ

ಮುಂದೆ ಬಾಣಪಾಣಿಗಳೂ ಗೂಳಿಯ ಭುಜಕ್ಕೆ ಭರ್ಜಿ ಚುಚ್ಚುವುದೂ ಬಾಣಗಳನ್ನು ಚುಚ್ಚುವುದು ಕಾಳಗಪಟು ಗೂಳಿಯನ್ನು ಕೊಲ್ಲಲು ಸಹಾಯಕವಾಗುವಂತಿರಬೇಕಷ್ಟೆ.

ಎರಡನೆಯ ಬಾರಿ ಕಹಳೆ ಧ್ವನಿಗೈಯುತ್ತದೆ. ಆಗ ಬೆದರು ಬಟ್ಟೆಯನ್ನು ಬಿಟ್ಟು ಎರಡು ಕೈಗಳಲ್ಲೂ ಬಾಣಗಳನ್ನು ಹಿಡಿದ ಬಾಣಪಾಣಿಗಳು ಅಖಾಡವನ್ನು ಪ್ರವೇಶಿಸುತ್ತಾರೆ. 20–30 ಅಡಿ ದೂರ ನಿಂತು ಅರಚಿ ಬೊಬ್ಬೆ ಹಾಕಿ ಗೂಳಿಯನ್ನು ತಮ್ಮತ್ತ ಸೆಳೆಯುತ್ತಾರೆ. ಗೂಳಿಯ ಆಕ್ರಮಣದಿಂದ ತಪ್ಪಿಸಿಕೊಂಡು ಗೂಳಿಯ ಭುಜಕ್ಕೆ 7–8 ಬಾಣಗಳನ್ನು ಚುಚ್ಚುತ್ತಾರೆ. ಚುಚ್ಚಿದ ಬಾಣಗಳ ನೋವಿನಿಂದ ಗೂಳಿ ತಲೆ ತಗ್ಗಿಸಿಯೇ ಆಕ್ರಮಣ ಮಾಡಬೇಕಾಗುತ್ತದೆ. ಮುಂದೆ ಪ್ರಧಾನ ಕಾಳಗಪಟುವಿಗೆ ಕತ್ತಿಯಿಂದ ಇರಿಯಲು ಇದು ಸಹಾಯಕವಾಗುತ್ತದೆ.

ಗೂಳಿಯ ಬಲಿ ಸಮಯ ಬಂದಿತೆಂಬ ಸೂಚನೆಯಾಗಿ ಮೂರನೆಯ ಬಾರಿಗೆ ಕಹಳೆ ಧ್ವನಿಗೈಯುತ್ತದೆ. ಅಶ್ವಾರೂಢರೂ ಬಾಣಪಾಣಿಗಳೂ ಹಿಂದೆ ಸರಿಯುತ್ತಾರೆ. ಪ್ರಧಾನ ಕಾಳಗಪಟು ಬಲಗೈಯಲ್ಲಿ ಕತ್ತಿಯನ್ನೂ ಎಡಗೈಯಲ್ಲಿ ಬೆದರು ಬಟ್ಟೆಯನ್ನೂ ಹಿಡಿದು ಅಖಾಡ ಪ್ರವೇಶಿಸಿ ಗೂಳಿಗೆ ಎದುರಾಗುತ್ತಾನೆ. ಬೆದರು ಬಟ್ಟೆ ತೋರಿಸಿ ಗೂಳಿಯನ್ನು ಕೆರಳಿಸುತ್ತಾನೆ. ಏಕಾಂಗಿಯಾದ ಈ ಕಾಳಗಪಟು ನಿಶ್ಚಲವಾಗಿ ಒಂದೆಡೆ ನಿಂತು, ಅಗತ್ಯ ಬಿದ್ದಾಗ ಅತ್ತಿತ್ತ ಒಂದೊಂದು ಹೆಜ್ಜೆ ನಡೆಯುತ್ತ ಹೋರಾಟ ನಡೆಸುತ್ತಾನೆ. ಅತಿ ಕಠಿಣವಾದ ಹೋರಾಟದ ವರಸೆ ತೋರಿಸುತ್ತಾನೆ. ಗೂಳಿಯ ಕೊಂಬುಗಳು ಈತ ನಸು ಬಾಗಿದರೂ ಇವನ ದೇಹವನ್ನು ತಗುಲುವಷ್ಟು ಸಮೀಪದಲ್ಲಿರುತ್ತವೆ. ಉಸಿರು ಬಿಗಿ ಹಿಡಿದು ಹೋರಾಟಗಾರನ ಆಟವನ್ನು ಪ್ರೇಕ್ಷಕರು ನೋಡುತ್ತಿರುತ್ತಾರೆ. ಪ್ರಾಣವನ್ನು ಒತ್ತೆಇಟ್ಟು ನಡೆಸುವ ಈ ಹೋರಾಟ ನಿಜವಾಗಿಯೂ ರೋಮಾಂಚಕಾರಿ ಯಾದುದು. ಹಲವು ವಿವಿಧ ಕ್ರೀಡಾ ಕೌಶಲವನ್ನೂ ತನ್ನ ಚಾಕಚಕ್ಯತೆಯನ್ನೂ ಕಾಳಗಪಟು ಪ್ರದರ್ಶಿಸಿ, ಗೂಳಿಯ ಮೇಲೆ ತನ್ನ ಸಂಪೂರ್ಣ ಯಜಮಾನಿಕೆ ಸ್ಥಾಪಿಸುತ್ತಾನೆ. ಕಾಳಗಪಟು ಕೊಲ್ಲುವ ಒಂದೊಂದು ಗೂಳಿಯನ್ನೂ ತನಗೆ ಬೇಕಾದವರಿಗೆ ಅರ್ಪಿಸುವ ವಾಡಿಕೆ ಉಂಟು. ಅಧ್ಯಕ್ಷ ಪೀಠದಡಿ ನಿಂತು ಕಾಳಗ ಪಟು ಗೂಳಿಯನ್ನು ಅರ್ಪಿಸಲು ಅಧ್ಯಕ್ಷನ ಒಪ್ಪಿಗೆ ಪಡೆದು ಅಂತಿಮಕ್ರಿಯೆಗೆ ಸಿದ್ಧನಾಗುತ್ತಾನೆ. ಯಾವ ಕಾಳಗಪಟುವೇ ಆಗಲಿ ಗೂಳಿಯನ್ನು ಎದುರಿನಲ್ಲೇ ಕೊಲ್ಲಬೇಕು. ಕ್ರಮ ತಪ್ಪಿದರೆ ಅಪಾರ ದಂಡತೆತ್ತು ಸೆರೆವಾಸವನ್ನೂ ಅನುಭವಿಸಬೇಕಾಗುತ್ತದೆ. ಕೊಲ್ಲಲು ಸಿದ್ಧನಾಗಿ ಕಾಳಗಪಟು ತನ್ನ ಎಡಗೈಯ ಬೆದರು ಬಟ್ಟೆಯಿಂದ ಗೂಳಿಯನ್ನು ತನಗೆ ಅನುಕೂಲವಾದ ಆಯಕಟ್ಟಿಗೆ ತಂದುಕೊಳ್ಳುತ್ತಾನೆ. ತಲೆ ತಗ್ಗಿಸಿ ತನ್ನತ್ತ ನುಗ್ಗಿ ಬರುವ ಗೂಳಿಯಿಂದ ತಪ್ಪಿಸಿಕೊಂಡು ಮಿಂಚಿನ ವೇಗದಲ್ಲಿ ಕತ್ತಿಯಿಂದ ಅದರ ಭುಜಕ್ಕೆ ಆಳವಾಗಿ ಇರಿಯುತ್ತಾನೆ. ಇರಿತ ಸಕ್ರಮವಾಗಿದ್ದರೆ ಗೂಳಿ ತಕ್ಷಣ ಮರಣವನ್ನಪ್ಪುತ್ತದೆ.

ಪ್ರೇಕ್ಷಕ ವರ್ಗ ಆನಂದಾತಿರೇಕದಿಂದ ಚಪ್ಪಾಳೆ ಹಾಕುತ್ತಾರೆ. ಪ್ರೇಕ್ಷಕಾಂಗಣದ ಸುತ್ತಲೂ ಹೋಗಿ ಕಾಳಗಪಟು ವಂದನೆ ಸ್ವೀಕರಿಸುತ್ತಾನೆ. ಅನಂತರ ಗೂಳಿಗೆ ಇರಿದಿದ್ದ ಕತ್ತಿಯನ್ನು ಹೊರ ಸೆಳೆದು ಮೊದಲೇ ಅರ್ಪಿಸಿದ್ದ ವ್ಯಕ್ತಿಗೆ ಅದನ್ನು ತಲುಪಿಸುತ್ತಾನೆ. ಅದನ್ನು ಸ್ವೀಕರಿಸಿದ ವ್ಯಕ್ತಿ ಹಣ ಅಥವಾ ಬಹುಮಾನದೊಂದಿಗೆ ಅದನ್ನು ಮತ್ತೆ ಕಾಳಗಪಟುವಿಗೇ ಹಿಂದಿರುಗಿಸುತ್ತಾನೆ. ಕಾಳಗಪಟುವಿನ ಹೋರಾಟ ಉತ್ತಮವಾಗಿದ್ದರೆ, ಒಂದು ಕಿವಿಯನ್ನೂ ಅಮೋಘವಾಗಿದ್ದುದಾದರೆ, ಎರಡು ಕಿವಿಗಳನ್ನೂ ಅತ್ಯಮೋಘವೂ ರೋಮಾಂಚಕಾರಿಯೂ ಆಗಿದ್ದುದಾದರೆ ಎರಡು ಕಿವಿಗಳ ಜೊತೆಗೆ ಗೂಳಿಯ ಬಾಲವನ್ನೂ ಮೆಚ್ಚಿಕೆಯಾಗಿ ಕತ್ತರಿಸಿಕೊಡುತ್ತಾರೆ. ಹೇಸರು ಕತ್ತೆಗಳ ಸಹಾಯದಿಂದ ಗೂಳಿಯ ದೇಹವನ್ನು ಅಖಾಡದಿಂದ ಹೊರಗೊಯ್ಯುತ್ತಾರೆ. ರಕ್ತ ಬಿದ್ದ ಕಡೆಗೆ ಮರದ ಹೊಟ್ಟು ಹಾಕಿ, ಅಖಾಡವನ್ನು ಚೊಕ್ಕಟಗೊಳಿಸಿ, ಮುಂದಿನ ಕಾಳಗಕ್ಕೆ ಅಣಿ ಮಾಡುತ್ತಾರೆ.

ಪ್ರೇಕ್ಷಣದ ಪ್ರತಿಕ್ಷಣವೂ ಕಾಳಗಪಟು ಬದುಕು–ಸಾವುಗಳ ನಡುವೆ ಸೆಣಸಾಡುತ್ತಾನೆ. ಎಷ್ಟೇ ಅನುಭವಿ ಕಾಳಗಪಟುವಾದರೂ ವಾರ್ಷಿಕ ಕಾಳಗ ಮಾಲೆಯಲ್ಲಿ ಒಮ್ಮೆಯಾದರೂ ಪ್ರಾಣಘಾತುಕ ಇರಿತವನ್ನು ಅನುಭವಿಸಬೇಕಾಗುತ್ತದೆ. ಪಟು ಸಾಮಾನ್ಯವಾಗಿ ಎಂಟು ಅಥವಾ ಹತ್ತು ವರ್ಷಗಳು ಈ ಜೀವನ ನಡೆಸಿ, ಅಪಾರ ಹಣ ಸಂಪಾದಿಸಿ, ಕಾಳಗದಿಂದ ನಿವೃತ್ತನಾಗಿ, ಉತ್ತಮ ತಳಿ ಬೆಳೆಸುವುದರಲ್ಲಿ ಹಾಗೂ ಚಿಕ್ಕವರಿಗೆ ಶಿಕ್ಷಣ ಕೊಡುವುದರಲ್ಲಿ ನಿರತನಾಗಿ, ಶಾಂತ ಜೀವನ ನಡೆಸುತ್ತಾನೆ. ಹಿಂದೆ ಗೂಳಿಯನ್ನು ಕತ್ತಿಯಿಂದ ಇರಿದು ಕೊಲ್ಲುವುದೇ ಪ್ರಮುಖ ಕ್ರಿಯೆಯಾಗಿತ್ತು. ಆದರೆ ಇಂದಿನ ಪ್ರೇಕ್ಷಕ, ಅಖಾಡದಲ್ಲಿ ಕಾಳಗಪಟುವಿನ ಸಾವನ್ನಾಗಲೀ ಅತಿ ಸಲೀಸಾಗಿ ಯಾವ ತೊಂದರೆಯೂ ಇಲ್ಲದೆ ಗೂಳಿಯನ್ನು ಕೊಲ್ಲುವುದನ್ನಾಗಲೀ ನೋಡಬಯಸುವುದಿಲ್ಲ. ಗೂಳಿಯ ಭಯಾನಕ ಆಕ್ರಮಣದಿಂದ ಕಾಳಗಪಟು ತಪ್ಪಿಸಿಕೊಳ್ಳುವ ಕೌಶಲ, ಚಾಕಚಕ್ಯತೆ ಹಾಗೂ ಅವನ ಸ್ಥೈರ್ಯಗಳನ್ನು ನೋಡಬಯಸುತ್ತಾನೆ. ಕಾಳಗಕ್ಕೆ ಈ ಹೊಸತನವನ್ನು ತಂದುಕೊಟ್ಟವ ಆಂಡಲೂಸಿಯದ ಬೆಲ್‌ಮಾಂಟ್ (1914). ಈತನ ಸ್ನೇಹಿತ ಹಾಗೂ ಪ್ರತಿಸ್ಪರ್ಧಿ ಜೊಸೆ ಗೋಮೆಜ಼್ ಹಿಂದು ಮುಂದಿನ ಕಾಳಗ ಪಟುಗಳೆಲ್ಲೆಲ್ಲ ಪ್ರಥಮನೆಂದು ಪರಿಗಣಿತನಾಗಿದ್ದಾನೆ. 1920ರಲ್ಲಿ ಪ್ರೇಕ್ಷಕರನ್ನು ಹೆಚ್ಚು ಹೆಚ್ಚು ತಣಿಸಲು ಹೋಗಿ ಅಖಾಡದಲ್ಲೇ ಈತ ಅಸುನೀಗಿದ. 1700ರಿಂದ ಸುಮಾರು 125 ಜನ ಪ್ರಧಾನ ಕಾಳಗಪಟುಗಳಲ್ಲಿ 42 ಜನ ಅಖಾಡದಲ್ಲೆ ಸಾವನ್ನಪ್ಪಿದ್ದಾರೆ. ಅಶ್ವಾರೂಢರ, ಬಾಣಪಾಣಿಗಳ ಸಾವಿನ ಸಂಖ್ಯೆ ಇದಕ್ಕಿಂತಲೂ ಅಧಿಕ.

ಲಾಗರ್ತಿಜೊ ಎಂದು ಪ್ರಸಿದ್ಧನಾದ ರಾಫಿಯಲ್ ಮೋಲಿನಾ (1841–1900) ಫ್ರಾಸ್ ಕ್ಯೂಲಿಯೋ ಎಂದು ಹೆಸರಾದ ಸಾಲ್ವೆಡೊರ್ (1842–1898), ಜೊಸೆಲಿಟೊ ಎಂದು ಸುಪರಿಚಿತನಾದ ಜೊಸೆಗೋಮೆಜ಼್ ಓರ್ಟಿಗೊ (1895–1920)ಮ ರಾಫಿಯಲ್ ಓರ್ಟಿಗೋ ಗೋಮೆಜ಼್ (1916–1940), ಮಾನೊಲಿಟ (1917–1947) ಮತ್ತು ಜು ಅನ್ ಬೆಲ್‌ಮಾಂಟ್ (1892), ಇವರ ಜೊತೆಗೆ ಮೆಕ್ಸಿಕೊದ ರೊಡ್‌ಲ್ಫೋ ಗೊವಾನ, ಆರ್ಮಿಲಿಟ ಹಾಗೂ ಕಾರ್ಲೋಸ್ ಅರೂಜ಼ ಇವರು ಸುಪ್ರಖ್ಯಾತ ಗೂಳಿ ಕಾಳಗಪಟುಗಳು.

ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಗೂಳಿಕಾಳಗ ಹಿಂದೆಂದಿಗಿಂತಲೂ ಹೆಚ್ಚಿನ ಜನರನ್ನು ಆಕರ್ಷಿಸುತ್ತಿದೆ. ಆಂಟೋನಿಯೊ ಒರ್ಡೊನೇಜ಼ ಹಾಗೂ ಲೂಯಿಸ್ ಮಿನುಯೆಲ್ ಡೊಮಿನ್ ಗುಯಿನ್ ಇವರ ಸ್ಪರ್ಧಾತ್ಮಕ ಗೂಳಿಕಾಳಗಗಳು 1959 ರಲ್ಲಿ ನಡೆದು, ಹೊಸ ದಾಖಲೆಯನ್ನೇ ಸೃಷ್ಟಿಸಿದುವು.

ಸ್ಪೇನ್ ಇಂದಿಗೂ ಈ ಪ್ರೇಕ್ಷಣದ ತವರು. ಮೆಕ್ಸಿಕೊ, ಕೊಲಂಬಿಯ ಹಾಗೂ ವೆನಿಜ಼ುವೆಲಗಳಲ್ಲಿಯೂ ತನ್ನದೇ ಆದ ರೀತಿಯಲ್ಲಿ ಪೋರ್ಚುಗಲ್‌ನಲ್ಲಿಯೂ ಇದು ಅತ್ಯಂತ ಆಕರ್ಷಕ ಪ್ರೇಕ್ಷಣವಾಗಿ ಉಳಿದಿದೆ. ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ಮನುಷ್ಯ ಗೂಳಿಯೊಂದಿಗೆ ಸೆಣಸಾಡಿದ ಕೆಲವು ಸಂದರ್ಭಗಳ ವರ್ಣನೆ ಜನಪದ ಸಾಹಿತ್ಯದಲ್ಲಿ ಬರುತ್ತದೆ. ಕುವೆಂಪುರವರ ರಾಮಾಯಣ ದರ್ಶನಂನಲ್ಲಿ ಕುಂಭಕರ್ಣ ಗೂಳಿಯೊಂದಿಗೆ ನಡೆಸುವ ಹೋರಾಟದ ವರ್ಣನೆಯಿದೆ. ತಮಿಳುನಾಡಿನ ಜಲ್ಲಿಕಟ್ಟು ಕ್ರೀಡೆ ಗೂಳಿಕಾಳಗದ ಒಂದು ಸ್ವರೂಪವಾಗಿದೆ. (ಜಿ.ಎಸ್.ಪಿ.ಎಂ.)

**ಗೂಳಿ ನೊಣ :** ಡಿಪ್ಟರ ಗಣದ ಈಸ್ಟ್ರಿಡೀ ಕುಟುಂಬಕ್ಕೆ ಸೇರಿದ ಒಂದು ಕೀಟ (ಆರ್ಕ್ಸ್‌ಬಾಟ್ ಫ್ಲೈ). ಹೈಪೋಡರ್ಮ ಇದರ ಶಾಸ್ತ್ರೀಯ ಹೆಸರು. ಜೇನು ನೊಣವನ್ನು ಹೋಲುತ್ತದೆ. ದಪ್ಪವಾದ ಹಾಗೂ ರೋಮಮಯವಾದ ದೇಹ, ಚಿಕ್ಕ ಗ್ರಾಹಕಾಂಗ (ಆಂಟಿನೀ), ಕ್ಷೀಣಿಸಿರುವ ವದನಾಂಗಗಳು, ನೀಳವಾದ ಅಂಡ ನಿಕ್ಷೇಪಕ – ಇವು ಪ್ರೌಢ ನೊಣದ ಮುಖ್ಯ ಲಕ್ಷಣಗಳು. ಪ್ರೌಢ ಗೂಳಿ ನೊಣಗಳು ಸ್ವತಂತ್ರ ಜೀವನ ಸಾಗಿಸಬಲ್ಲವು. ಆದರೆ ಡಿಂಭಗಳು (ಇವಕ್ಕೆ ಗ್ರಬ್ ಎಂದು ಹೆಸರು) ಮಾತ್ರ ದನಕರುಗಳ ಮೇಲೆ ಪರಾವಲಂಬಿಗಳಾಗಿರುತ್ತವೆ. ಗೂಳಿನೊಣಗಳಲ್ಲಿ ಹಲವಾರು ಪ್ರಭೇದಗಳಿವೆ. ಮುಖ್ಯವಾದವು ಯುರೋಪಿನಲ್ಲಿ ಕಂಡುಬರುವ ಬೋವಿಸ್ ಪ್ರಭೇದ ಮತ್ತು ಅಮೆರಿಕದಲ್ಲಿನ ಲೈನಿಯೇಟಂ ಪ್ರಭೇದ. ಕೊನೆಯದು ಭಾರತದಲ್ಲೂ ಕಂಡುಬರುತ್ತದೆ.

ಪ್ರೌಢ ನೊಣಗಳ ಚಟುವಟಿಕೆ ಮೇ–ಆಗಸ್ಟ್ ತಿಂಗಳುಗಳಲ್ಲಿ ಹೆಚ್ಚು. ಹೆಣ್ಣುನೊಣ ದನಕರುಗಳ ಕಾಲುಗಳ ಮೇಲಿರುವ ಮತ್ತು ಗೊರಸುಗಳ ಬಳಿಯಿರುವ ಕೂದಲಿನ ಮೇಲೆ ಸಾಲುಸಾಲಾಗಿ ಮೊಟ್ಟೆಗಳನ್ನಿಡುತ್ತದೆ. ಒಂದೊಂದು ಕೂದಲಿನ ಮೇಲೂ 1–10 ಮೊಟ್ಟೆಗಳು ಇರುತ್ತವೆ. ಮೊಟ್ಟೆಗಳ ಆಕಾರ ಚುಟ್ಟದಂತೆ. ಒಂದೊಂದೂ ತನ್ನ ತುದಿಯಲ್ಲಿನ ಉಪಾಂಗಗಳ ಸಹಾಯ ದಿಂದ ಕೂದಲಿಗೆ ಅಂಟಿರುತ್ತದೆ. ಕೆಲದಿನ ಗಳಾದ ಮೇಲೆ ಮೊಟ್ಟೆಯಿಂದ ಹೊರ ಬಂದ ಡಿಂಭಗಳು ಪೋಷಕ ಜೀವಿಯ ಚರ್ಮ ವನ್ನು ಕೊರೆದು ದೇಹವನ್ನು ಹೊಕ್ಕು, ಹಲವು ತಿಂಗಳ ಕಾಲ ದೇಹದಾದ್ಯಂತ ಓಡಾಡಿ, ಕೊನೆಗೆ ಗಂಟಲಿನ ಒಳಗೋಡೆಗೆ ಅಂಟಿಕೊಳ್ಳುತ್ತವೆ. ಚಳಿಗಾಲದವರೆಗೆ ಅಲ್ಲಿದ್ದು ಅನಂತರ ಬೆನ್ನಿನ ತಳಭಾಗದಲ್ಲಿ ಬಂದು ನೆಲೆಗೊಂಡು ತಮ್ಮ ಬೆಳೆವಣಿಗೆ ಯನ್ನು ಮುಂದುವರಿ ಸುತ್ತವೆ (ಇವುಗಳ ಕ್ರಿಯಾಚಟುವಟಿಕೆ ಗಳಿಂದಾಗಿ ಇವು ಇರುವ ಸ್ಥಳಗಳು ಊದಿಕೊಂಡಂತೆ ಕಾಣುತ್ತವೆ). ಪೋಷಕಜೀವಿಯ ಲಸಿಕೆ (ಸೀರಂ) ಮತ್ತು ಕೀವನ್ನು ಸೇವಿಸಿ ಬೆಳೆಯುತ್ತವೆ. ಬೆಳೆವಣಿಗೆ ಪೂರ್ಣಗೊಂಡ ಮೇಲೆ ಉರುಳೆಯಾಕಾರ ವನ್ನು ತಳೆಯುವ ಇವು ಸು. 25ಮಿಮೀ ಉದ್ದವಿರುತ್ತವೆ. ಕೊನೆಗೆ ಪೋಷಕ ಜೀವಿಯ ದೇಹದಿಂದ ಹೊರಬಂದು, ನೆಲಕ್ಕುದು ರುತ್ತವೆ. ಭೂಮಿಗೆ ಬಿದ್ದ ಅನತಿಕಾಲದಲ್ಲಿಯೇ ಕೋಶಾವಸ್ಥೆಯನ್ನು ಸೇರುತ್ತವೆ. ಕೋಶಾವಸ್ಥೆಯ ಅವಧಿ



ಹೈಪೋಡರ್ಮ್ ಲೈನಿಯೇಟಂ

5–6 ವಾರಗಳು ಮಾತ್ರ. ಈ ಅವಧಿಯಲ್ಲಿ ರೂಪಾಂತರಗೊಂಡು ಎರಡು ರೆಕ್ಕೆಯುಳ್ಳ ಪ್ರೌಢ ನೊಣಗಳಾಗುತ್ತವೆ.

ಗೂಳಿ ನೊಣಗಳ ಡಿಂಭಗಳು ದನಗಳ ಚರ್ಮವನ್ನು ಕೊರೆಯುವುದರಿಂದ ರೋಗಪೀಡಿತ ದನಗಳ ಚರ್ಮ ಅಪ್ರಯೋಜಕವಾಗುತ್ತದೆ. ಅಲ್ಲದೆ ದನಗಳ ಮಾಂಸವೂ ಕೆಟ್ಟುಹೋಗುತ್ತದೆ. ಹಸುಗಳಲ್ಲಿ ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಇವೆಲ್ಲ ಕಾರಣಗಳಿಂದಾಗಿ ಗೂಳಿ ನೊಣಗಳು ದನಗಳ ಪಿಡುಗು ಎನಿಸಿಕೊಂಡಿವೆ. ಇವನ್ನು ನಾಶ ಪಡಿಸಲು ಕೋಶಾವಸ್ಥೆಯಲ್ಲಿರುವಾಗಲೀ ಇವುಗಳ ಡಿಂಭಗಳನ್ನು ಹಿಡಿದು ಕೊಲ್ಲುವುದೊಂದೇ ಮಾರ್ಗ. (ಬಿ.ಎನ್.ಬಿ.)

**ಗೂಳೂರು :** ಒಂದು ಚಾರಿತ್ರಿಕ ಸ್ಥಳ. ತುಮಕೂರು ನಗರಕ್ಕೆ ದಕ್ಷಿಣದಲ್ಲಿ 7ಕಿಮೀ ದೂರದಲ್ಲಿದೆ. ಇದಕ್ಕೆ ಸಂಸ್ಕೃತದಲ್ಲಿ ನಂದಿಪುರವೆಂಬ ಹೆಸರಿದೆ. ಇಲ್ಲಿ ಶೂನ್ಯಸಂಪಾದನೆ ಮತ್ತು ಅನಾದಿ ವೀರಶೈವಸಂಗ್ರಹವನ್ನು ಬರೆದ ಸಿದ್ಧವೀರಣಾಚಾರ್ಯ ಹಾಗೂ ಸಂಪಾದನೆ ಪರ್ವತೇಶ್ವರ, ವಿರಕ್ತ ತೋಂಟದಾರ್ಯ ಮೊದಲಾದ ಕವಿಗಳು ಆಗಿ ಹೋಗಿದ್ದಾರೆ. ಎಡೆಯೂರಿನ ಸಿದ್ಧಲಿಂಗೇಶ್ವರರು ಇಲ್ಲಿ ಕೆಲಕಾಲ ಇದ್ದರೆಂದು ಹೇಳಲಾಗುತ್ತದೆ.

ಗೂಳೂರು ಗಣಪತಿ

ಪ್ರತಿವರ್ಷವೂ ಮಣ್ಣಿನಿಂದ ನಿರ್ಮಿಸಿ ಕೆರೆಯಲ್ಲಿ ವಿಸರ್ಜಿಸಲಾಗುವ ಬೃಹದ್ ಗಣಪತಿ ವಿಗ್ರಹದಿಂದಾಗಿ ಈ ಸ್ಥಳ ಈಗ ಪ್ರಸಿದ್ಧಿ ಪಡೆದಿದೆ. ಈ ಗಣಪತಿಯ ಹೆಸರಿನಲ್ಲಿ ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ಎತ್ತರದಲ್ಲಿ 2.5ಮೀ (8 ಅಡಿ) ಮೀರಿದ ಈ ಗಣಪತಿಯ ಸುಂದರ ವಿಗ್ರಹವನ್ನು ರಚಿಸಲು ಸುಮಾರು ಎರಡು ತಿಂಗಳು ಹಿಡಿಯುತ್ತದೆ. ಗಣಪತಿ ಹಬ್ಬದ ದಿನದಿಂದಲೇ ಬೃಹದ್ ಗಣಪತಿಯ ರಚನೆ ಆರಂಭವಾಗುತ್ತದೆ. ವಿಗ್ರಹದ ಪೂರ್ಣ ರಚನೆಯಾದ ಮೇಲೆ ಒಂದು ತಿಂಗಳ ಕಾಲ ಸತತವಾಗಿ ಅದಕ್ಕೆ ಪೂಜಾವಿಶೇಷಗಳು ನಡೆಯುತ್ತವೆ. ಈ ಸಮಯದಲ್ಲಿ ಭಕ್ತಾದಿಗಳು ದೂರದಿಂದ ಬಂದು ದರ್ಶನ ಪಡೆದು ಹೋಗುತ್ತಾರೆ.

ಈ ಊರಿನ ಪಶ್ಚಿಮಕ್ಕೆ 1 ಕಿಮೀ ದೂರದಲ್ಲಿ ಪ್ರಸಿದ್ಧ ಕೈದಾಳ ಕ್ಷೇತ್ರವಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲೂಕಿನಲ್ಲಿ ಇದೇ ಹೆಸರಿನ ಒಂದು ಊರಿದೆ. ಇಲ್ಲಿ ಪ್ರಸಿದ್ಧವಾದ ವೀರಶೈವ ಮಠವೊಂದಿದೆ. (ಬಿ.ಎಸ್.)

**ಗೃಹ :** ಮಾನವ ತಾತ್ಕಾಲಿಕವಾಗಿ ಇಲ್ಲವೇ ಶಾಶ್ವತವಾಗಿ ವಾಸಿಸಲು ಬಳಸುವ ನೈಸರ್ಗಿಕವಾದ ತಾಣ ಅಥವಾ ತಾನೇ ರಚಿಸಿದ ಆಸರೆ. ಮಾನವ ನಾಗರಿಕತೆಯ ವಿಕಾಸದೊಂದಿಗೆ ಗೃಹದ ವಿಕಾಸ ನಿಕಟವಾಗಿ ಹೆಣೆದುಕೊಂಡಿದೆ. ಮರದ ಪೊಟರೆ, ಕಲ್ಲುಬಂಡೆಗಳ ಸಂದು, ಗುಹೆಗಳಿಂದ ತೊಡಗಿ ಆಧುನಿಕ ಗಗನಚುಂಬಿ ಗೃಹಗಳ ವರೆಗಿನ ಇದರ ಬೆಳವಣಿಗೆ ಮಾನವ ಸಮಾಜದ ವಿಕಾಸದ ಒಂದು ಮುಖ. ತನಗಾಗಿ ತನ್ನವರಿಗಾಗಿ ವಾಸಸ್ಥಳವೊಂದನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದುದೇ ಸು.11000 ವರ್ಷಗಳ ಹಿಂದೆ, ಪ್ರ.ಶ.ಪೂ. ಸು. 9000 ಸುಮಾರಿಗೆ ಎನ್ನಬಹುದು. ಅದಕ್ಕೂ ಹಿಂದೆ ಆತ ತನ್ನ ಸುತ್ತಲಿನ ಪ್ರಾಕೃತಿಕ ಸನ್ನಿವೇಶಗಳನ್ನು ಅವಲಂಬಿಸಿದ್ದ. ಆಹಾರಕ್ಕಾಗಿ ಹಣ್ಣುಹಂಪಲುಗಳನ್ನು–ಅವು ಬೆಳೆದಷ್ಟು ಕಾಲ, ಪ್ರಾಯಶಃ ವರ್ಷದಲ್ಲಿ ಒಂದೆರಡು ತಿಂಗಳು–ತಿನ್ನುತ್ತಿದ್ದ. ಉಳಿದ ವೇಳೆಯಲ್ಲಿ ಸುತ್ತಲಿನ ಪ್ರಾಣಿಗಳೇ ಇವನ ಆಹಾರ. ಸ್ವಂತ ಜೀವಕ್ಕೆ ಅವುಗಳಿಂದ ಅಪಾಯ ಒದಗದಂತೆ ರಕ್ಷಣೆ ಪಡೆಯಲು ಮಾನವ ಮರದ ಪೊಟರೆಗಳಲ್ಲೋ ಬಂಡೆಗಳ ಸಂದುಗಳಲ್ಲೋ ರಾತ್ರಿಗಳನ್ನು ಕಳೆಯುತ್ತಿದ್ದ. ಸ್ವಾಭಾವಿಕವಾಗಿ ಗುಹೆಗಳೂ ಇವನ ತಂಗುದಾಣಗಳಾದುವು. ಆಹಾರಕ್ಕಾಗಿ

ಭೀಂಬೇಟ್ಕದ ಮುಂಚಾಚಿದ ದೊಡ್ಡ ಬಂಡೆಯ ಆಸರೆ

ಅಲೆಮಾರಿಜೀವನವನ್ನು ಅವಲಂಬಿಸಿದ ಇವನಿಗೆ ಶಾಶ್ವತವಾದ ನೆಲೆಯ ಆವಶ್ಯಕತೆಯಿರಲಿಲ್ಲ. ಕ್ರಮೇಣ ಇವನ ಜೀವನಕ್ರಮದಲ್ಲಿ ಸುಧಾರಣೆಗಳಾದುವು. ಆಹಾರವನ್ನು ಹುಡುಕುವ ಶ್ರಮಕ್ಕೆ ಬದಲಾಗಿ ಆಹಾರವನ್ನು ತಾನೇ ಬೆಳೆಯುವ ವಿಧಾನವನ್ನು ಅರಿತುಕೊಂಡ. ಈ ಘಟನೆ ಮಾನವನ ಇತಿಹಾಸದಲ್ಲಿ ಅತಿ ಪ್ರಮುಖವಾದದ್ದು. ಅಂದಿನಿಂದ ಇವನು ಅಲೆಮಾರಿಜೀವನವನ್ನು ಮುಕ್ತಾಯಗೊಳಿಸಿ ಒಂದು ಕಡೆ ಸ್ಥಿರವಾಗಿ ನೆಲೆಸುವುದನ್ನು ಕಲಿತ. ತನ್ನೊಡನಿದ್ದ ಜನರೊಡನೆ ಗುಂಪುಗೂಡಿ ವಾಸಿಸಲಾರಂಭಿಸಿದ್ದು ಈ ಅವಧಿಯಲ್ಲಿ. ಕ್ರಮೇಣ ತಾನು, ತನ್ನದು ಎಂಬ ಮನೋಭಾವ ಬೆಳೆದು ಕುಟುಂಬ ಪದ್ಧತಿ ಆರಂಭವಾಯಿತು. ಕುಟುಂಬದವರೆಲ್ಲ ಒಂದು ಕಡೆ ಇರಬೇಕೆನಿಸಿದ್ದಾಗಲೇ ಏಕಾಂತತೆಯ ಆವಶ್ಯಕತೆಯೂ ಉಂಟಾಯಿತು. ಅದಕ್ಕಾಗಿ ಮನೆಯ ರಚನೆ ತಲೆದೋರಿತು. ಈ ಮನೆಗಳು ಕೇವಲ ಪ್ರಾರಂಭಿಕ ಸ್ಥಿತಿಯ ಗುಡಿಸಲುಗಳು ಮಾತ್ರ.

ಅತಿಪ್ರಾಚೀನವೆನಬಹುದಾದ ಗುಡಿಸಲುಗಳು ಅಸ್ಸೀರಿಯದ ಉಬೈದನ್ ಗ್ರಾಮಗಳಲ್ಲಿ ದೊರೆತಿವೆ (ಪ್ರ.ಶ.ಪೂ. 3000). ಇವುಗಳ ರಚನೆ ಜೊಂಡಿನಿಂದ. ಇವನ್ನು ಮಣ್ಣುಮೆತ್ತಿ ನಿಲ್ಲಿಸುತ್ತಿದ್ದರೆಂದು ತೋರುತ್ತದೆ. ಸುಮರನ ಎರಿದು ಎಂಬಲ್ಲಿ ಬೇರೆ ಭಾಗಗಳುಳ್ಳ ಇಂಥ ಜೊಂಡಿನ ಗುಡಿಸಲಿನ ಅವಶೇಷ ದೊರೆತಿದೆ. ಆದರೆ ಇದು ಮಣ್ಣಿನ ಗೋಡೆಗಳಿಂದ ಮಾಡಿದ ಮನೆಯೊಂದಕ್ಕೆ ಸೇರಿದಂತಿದೆ. ಪಶ್ಚಿಮ ಇರಾನಿನ ಸಿಂರಾಲ್ಕ್‌ನ ಉತ್ಖನನದಲ್ಲಿ ಕೆಳಗಿನ ಪದರಗಳಲ್ಲಿ ವಾಸಸ್ಥಾನದ ಕುರುಹುಗಳೇನೂ ಕಾಣದಿದ್ದರೂ ಜೊಂಡಿನ ಗುಡಿಸಲುಗಳ ಉಪಯೋಗ ಅಲ್ಲಿನ ಜನರಿಗೆ ತಿಳಿದಿತ್ತೆಂದು ಊಹಿಸಲಾಗಿದೆ. ಆದರೆ ಗಟ್ಟಿಸಿದ ಮಣ್ಣಿನ ಗೋಡೆಗಳಿಂದ ಕಟ್ಟಿದ ಮನೆಗಳ ಅವಶೇಷಗಳು ಸು. 4 ಮೀ ಮೇಲಿನ ಪದರದಲ್ಲಿ ಕಂಡುಬಂದಿವೆ. ಗೋಡೆಹಾಕುವ ಸ್ಥಳದಲ್ಲಿ ಗರಸುಬೆರೆಸಿದ ಮಣ್ಣು ಅಥವಾ ಜೇಡಿಯನ್ನು ಹಲಗೆಗಳ ಮಧ್ಯೆ ಚೆನ್ನಾಗಿ ಗಟ್ಟಿಸಿ ಅದು ಗಡಸಾದ ಮೇಲೆ ಹಲಗೆಗಳನ್ನು ತೆಗೆದು ಬಿಡುವುದರ ಮೂಲಕ ಇಂಥ ಜೋಡಿಗೋಡೆಗಳನ್ನು ಕಟ್ಟುತ್ತಿದ್ದಿರಬೇಕು.



ಎಲ್ ಆಮ್ರ ಎಂಬಲ್ಲಿನ ಮನೆಯೊಂದರ ಮಾದರಿ




ಕೆಲವು ಆದಿವಾಸಿ ಜನಾಂಗಗಳ ವಾಸಗೃಹಗಳು: 1. ಕೆನಡದಲ್ಲಿರುವ ಎಸ್ಕಿಮೋಗಳ ಇಗ್ಲೂ; 2. ಅಮೆರಿಕದ ಮೈದಾನವಾಸಿ ಇಂಡಿಯನರ ಟಿಪಿ; 3. ವೆನಿಜ್ವೇಲದವರ ಗುಡಿಸಲು; 4. ಪೆರಿಸ್ಸೀಗಳ ಗುಡಿಸಲು, ಮಾಟೂ ಗ್ರೋಸೂ (ಬ್ರಜಿಲ್); 5. ಗಾರೆಯಿಂದ ಮಾಡಿದ ಮನೆ, ದಕ್ಷಿಣ ಟ್ಯುನೀಸಿಯ; 6. ಉಗಾಂಡದ ಪ್ರರೂಪಿ ಗುಡಿಸಲು; 7. ನ್ಯೂಗಿನಿಯ ಗುಡಿಸಲು; 8. ಜ಼ೂಲುಗಳ ಜೇನುಗೂಡಿನಾಕಾರದ ಗುಡಿಸಲು




ವಿವಿಧ ಮಾದರಿಯ ಗೃಹಗಳು: 1. ಅಸ್ಸೀರಿಯನ್ನರ ಮನೆ; 2. ಈಜಿಪ್ಷಿಯನ್ನರ ಮನೆ; 3. ಇಂಗ್ಲೆಂಡಿನ ಒಂದು ಮನೆ, 1670; 4. ಹದಿನಾರನೆಯ ಶತಮಾನದ ಪಲ್ಲೇಡಿಯನ್ ವಿಲ್ಲಾ; 5. ರೊಮನ್ನರ ಇನ್ಸುಲ, ಆಸ್ಟಿಯ; 6. ಬ್ರಸಲ್ಸ್‌ನಲ್ಲಿರುವ ಒಂದು ಮನೆ, 1893; 7. ಸ್ಟ್ರಾಟ್‌ಫರ್ಡ್–ಆನ್–ಎವಾನ್‌ನಲ್ಲಿನ ಒಂದು ಮನೆ, 15ನೆಯ ಶತಮಾನ; 8. ಇಟಾಲಿಯನ್ನರ ಡೋಮಾಸ್; 9. ಹೌಸ್ ಆಫ್ ದಿ ವಾಚ್‌ಮೇಕರ್ಸ್, ಆಮ್ಸ್ಟರ್ ಡ್ಯಾಂ, 1706; 10. ಹದಿನಾಲ್ಕನೆಯ ಶತಮಾನದ ಫ್ರೆಂಚರ ಮನೆ; 11. ಎಟ್ರುಸ್ಕನ್ನರ ಮನೆ; 12. ಗಂಟ್‌ನಲ್ಲಿರುವ ಒಂದು ಬೆಲ್ಜಿಯನ್ ಮನೆ, 1751; 13. ಒಂದು ಆಧುನಿಕ ಗೃಹ, 1901, ಆಲೇಖ್ಯಕಾರ–ಫ್ರಾಂಕ್‌ಲಾಯ್ಡ್ ರೈಟ್.

ಮನೆ ಎಂಬ ಇಂದಿನ ಅರ್ಥದ ನೆಲೆಗಳನ್ನು ನಾವು ಮೊದಲು ಕಾಣುವುದು ಈಜಿಪ್ಟಿನಲ್ಲಿ. ನೈಲ್ ನದಿಯ ರೊಸೆಟ್ಟಾ ಶಾಖೆಯ ಬಳಿ ಮೆರಿಂದೆ ಎಂಬಲ್ಲಿ (ಪ್ರ.ಶ.ಪೂ. 4000–3000) ಮೊತ್ತಮೊದಲು ನೆಲೆನಿಂತ ಜನರು ನಿರ್ಬಲವಾದ ಗೂಡುಗಳನ್ನು ಕಟ್ಟಿ ಕೊಂಡರು. ಇವು ಹೊನಲಿನ ಸೆಳೆತಕ್ಕೆ ಸಿಕ್ಕು ಮರಳಿನಲ್ಲಿ ಹುಗಿದುಹೋಗುತ್ತಿದ್ದುವು. ಆದರೆ ಕ್ರಮೇಣ ಹೆಚ್ಚು ಬಲಶಾಲಿಯಾದ ಆಸರೆ ಗಳನ್ನು ಇವರು ಕಟ್ಟಲು ಶಕ್ತರಾದರು. ಹೊನಲಿಗೆ ಅಡ್ಡವಾಗಿ ಜೊಂಡಿನ ಚಾಪೆ ಗಳನ್ನು ಅಂಡಾಕಾರವಾಗಿ ಅಥವಾ ಲಾಳಾಕಾರವಾಗಿ, ನೆಲದೊಳಗೆ ಹುಗಿದ ಕಂಬ ಗಳಿಗೆ, ಜೋತುಬಿಟ್ಟರು. ಕೆಲಕಾಲದ ಬಳಿಕ ಇಂಥ ಆಸರೆಗಳಿಗೆ ಚಾಪೆಗಳ ಬದಲಾಗಿ ಮಣ್ಣಿನ ಗೋಡೆಗಳನ್ನು ಉಪಯೋಗಿಸತೊಡಗಿದರು. ಈ ಗೋಡೆಗಳನ್ನು ದಪ್ಪವಾದ ಕೆಲವು 1.5 ಮೀಟರ್ ದಪ್ಪ ಮಣ್ಣಿನ ಮುದ್ದೆಗಳಿಂದ ಮಾಡಲಾಗಿತ್ತು. ಇಂಥ ಮನೆಗಳಾದರೂ ಒತ್ತೊತ್ತಾಗಿರದೆ ದೂರದೂರವಾಗಿದ್ದುವು: ಆದರೆ ಕ್ರಮಬದ್ಧವಾದ ಸಾಲಿನಲ್ಲಿ ಇದ್ದುವು.

ಎಲ್‌ಅಮ್ರದಲ್ಲಿ (ಪ್ರ.ಶ.ಪೂ.3000) ಮನೆಯೊಂದರ ಮಣ್ಣಿನಮಾದರಿ ದೊರೆತಿದೆ. ಇದು ಅಂದಿನ ಮನೆಗಳಿರುತ್ತಿದ್ದ ಬಗೆಯನ್ನು ಸೂಚಿಸುತ್ತದೆ. ಅವು ಆಯತಾಕಾರದ ಮನೆಗಳು. ಉದ್ದವಾದ ಭಾಗದಲ್ಲಿ ಮನೆಯೊಳಗೆ ಹೋಗಲು ಪ್ರವೇಶವಿದ್ದು ಅಲ್ಲಿ ಮಣ್ಣಿನ ಚೌಕಟ್ಟಿನ ದ್ವಾರವಿತ್ತು. ಇಂಥ ಮನೆಗಳು ಸುಮಾರು 7.5 – 5.5 ಚದರ ಮೀಟರುಗಳಷ್ಟು ವಿಶಾಲವಾಗಿದ್ದುವು.

ಮೆಸಪೊಟೇಮಿಯದ ಖಲತ್ ಜರ್ಮೊ ಎಂಬಲ್ಲಿ ಆಹಾರವನ್ನು ಬೆಳೆಸಲು ಕಲಿಯಲಾರಂಭಿಸಿದ ಜನ ಸಣ್ಣ ಮನೆಗಳನ್ನು ಕಟ್ಟಿರುವುದು ಉತ್ಖನನದಿಂದ ಬೆಳಕಿಗೆ ಬಂದಿದೆ. ಅಲ್ಲಿನ ರೈತರು ಗಟ್ಟಿಸಿದ ಜೇಡಿಮಣ್ಣಿನ ಗೋಡೆಗಳುಳ್ಳ ಸರಳವಾದ ಮನೆಗಳನ್ನು ಕಟ್ಟುತ್ತಿದ್ದರು. ಮನೆಗೆ ಜೊಂಡಿನ ನೆಲಗಟ್ಟು ಇತ್ತು. ಟೈಗ್ರಿಸ್ ನದಿಯ ಪಶ್ಚಿಮಕ್ಕಿರುವ ಹಸ್ಸುನ ಎಂಬಲ್ಲಿ ನವಶಿಲಾಯುಗದ ಜನರು ವಾಸಿಸಿದ್ದುದಕ್ಕೆ ಕುರುಹುಗಳು ದೊರೆತಿವೆ. ಅತಿ ಕೆಳಗಿನ ಪದರಗಳಲ್ಲಿ ಮನೆಗಳ ಅವಶೇಷಗಳು ಇಲ್ಲವಾದರೂ ಮೇಲಿನ ಪದರಗಳಲ್ಲಿ ಇವು ಸ್ಪಷ್ಟವಾಗಿವೆ. ಅತಿಪ್ರಾಚೀನ ಗ್ರಾಮದಲ್ಲಿ ವಕ್ರವಾದ ಗೋಡೆಗಳ ಅವಶೇಷಗಳಿವೆ. ಇದರ ಬಳಿಕ ಈ ಮನೆಗಳು ಹೆಚ್ಚು ಸಜ್ಜುಗೊಂಡಿವೆ. ಹಲವಾರು ಕೊಠಡಿಗಳಿಂದಕೂಡಿದ ಇವುಗಳಿಗೆ ಆಯತಾಕಾರವಿತ್ತು. ಮನೆಯ ಆವರಣದೊಳಗೆ ಒಂದು ಅಂಗಳವೂ ಇತ್ತು. ಮನೆಗಳಿಗೆ ಕಲ್ಲಿನ ಕುಳಿಯ ಸುತ್ತಲೂ ತಿರುಗುವ ತಿರುಗು ಗೂಟಗಳುಳ್ಳ ಮರದ ಬಾಗಿಲುಗಳಿದ್ದುವು. ಅಂಗಳದಲ್ಲಿ ಆಹಾರಬೇಯಿಸಲು ಮಣ್ಣಿನ ಗುಂಡಾದ ಒಲೆಗಳಿದ್ದವು. ಇವು ಕೆಲವೊಮ್ಮೆ ಕೊಠಡಿಗಳೊಳಗೆ ಇದ್ದುದೂ ಕಂಡುಬಂದಿದೆ. ಇವೆಲ್ಲ ಪ್ರ.ಶ.ಪೂ. ಸುಮಾರು 3000 ವರ್ಷಗಳಿಗೂ ಹಿಂದೆ ಪ್ರಚಲಿತವಿದ್ದ ನಾಗರಿಕತೆಗಳು.

ಸುಮೇರಿಯದ ಮೊದಲ ಅರಸು ಮನೆತನಗಳ ಕಾಲದಲ್ಲಿ (ಪ್ರ.ಶ.ಪೂ. ಸುಮಾರು 2000). ಆ ಜನರು ಒಂದು ಮಹಡಿಯನ್ನುಳ್ಳ ಇಟ್ಟಿಗೆಯ ಮನೆಗಳಲ್ಲಿ ವಾಸಿಸುತ್ತಿದ್ದರು. ಖಫಜೆ ಎಂಬಲ್ಲಿ ಒಂದುಕಡೆ 10–6.5 ಚದರ ಮೀಟರಿನಷ್ಟು ಕಿರಿದಾದ ಸ್ಥಳಗಳಲ್ಲಿ ಐದು ಕೊಠಡಿಗಳ ಮನೆಯೂ 30–20 ಚದರ ಮೀಟರಿನ ಸುತ್ತಳತೆಯ ವಿಶಾಲಪ್ರದೇಶದಲ್ಲಿ ಹತ್ತು ಕೊಠಡಿಗಳುಳ್ಳ ದೊಡ್ಡಮನೆಯೂ ಇವೆ. ಈ ದೊಡ್ಡ ಮನೆಯ ಕೆಲವು ಬಾಗಿಲುಗಳ ಮೇಲೆ ಕಮಾನಿನ ನೆತ್ತಿಗಲ್ಲುಗಳು ಇವೆ. ಆದರೆ ಇವು ಕೇವಲ 1.5 ಮೀ. ಎತ್ತರವಾಗಿದ್ದುವು. ಕೊಠಡಿಗಳಿಗೆ ಬೆಳಕು ಸಣ್ಣ ಕಿಟಕಿಗಳಿಂದ ಬರುತ್ತಿತ್ತು. ಈ ಮನೆಗಳಲ್ಲಿ ಪ್ರತ್ಯೇಕವಾದ ಅಡುಗೆಯ ಕೊಠಡಿಗಳು ಕೂಡ ಇದ್ದುವು. ಮನೆಗಳು ಅಡಕವಾದ ವಠಾರಗಳಲ್ಲಿ ವಿಂಗಡಿಸಲ್ಪಟ್ಟು ಇವುಗಳ ನಡುವೆ ಬೀದಿಗಳೂ ಗಲ್ಲಿಗಳೂ ಹಾದುಹೋಗಿದ್ದುವು.

ಭಾರತದಲ್ಲಿ ಗೃಹ: ಭಾರತದಲ್ಲಿ ಕೂಡ ಆದಿ ಶಿಲಾಯುಗದಲ್ಲಿ ಮಾನವ ಆಹಾರವನ್ನು ಬೇಟೆಯಾಡಿ ಅಥವಾ ಸಂಚಯಿಸಿ ಜೀವಿಸುತ್ತಿದ್ದ. ಒಂದುಕಡೆ ನೆಲೆಯಾಗಿ ನಿಲ್ಲಲು ಈ ಸ್ಥಿತಿ ಅನುಕೂಲವಾಗಿರಲಿಲ್ಲ. ಹಲವಾರು ಶತಮಾನಗಳು ಕಳೆದ ಬಳಿಕ ಮನುಷ್ಯ ದವಸಧಾನ್ಯಗಳನ್ನು ಬೆಳೆಸಲು ಕಲಿತ. ಆಗ ಸಾಮಾಜಿಕ ಜೀವನ ಆರಂಭಗೊಂಡು ಆತ ತನ್ನ ಸಂಸಾರದೊಡನೆ ಸುರಕ್ಷಿತ ಸ್ಥಳಗಳಲ್ಲಿ ನೆಲಸುವುದು ಅವಶ್ಯಕವಾಯಿತು. ಇದಕ್ಕಾಗಿ ಮೊದಲು ಇವನು ನೈಸರ್ಗಿಕ ತಾಣಗಳನ್ನು ಅರಸಿದ. ಮಧ್ಯಭಾರತದ ಬಾಘೈಖೋರ್‌ನಲ್ಲಿರುವ ಮುಂಚಾಚಿದ ಬಂಡೆ ಇಂಥ ಒಂದು ಆಸರೆ. ಕ್ರಮೇಣ ಗುಡಿಸಲುಗಳ ರಚನೆ ಪ್ರಾರಂಭವಾಯಿತು.

ಈವರೆಗೆ ತಿಳಿದಂತೆ ಭಾರತದಲ್ಲಿ ಅತಿ ಪ್ರಾಚೀನ ಗೃಹಾವಶೇಷಗಳು ಲಭ್ಯವಾಗಿರುವುದು ಗಂಗಾನದಿ ಬಯಲಿನಲ್ಲಿರುವ ಸೂಕ್ಷ್ಮ ಶಿಲಾಯುಗದ ನೆಲೆಗಳಲ್ಲಿ (ಪ್ರ.ಶ.ಪೂ. 8000–5000). ಸರಾಯ್ ನಹರ್‌ರಾಯ್, ದಮ್‌ದಮ್ (ಉತ್ತರ ಪ್ರದೇಶ) ಮುಂತಾದ ನೆಲೆಗಳಲ್ಲಿ ಮಣ್ಣಿನ ನೆಲಗಟ್ಟುಗಳು ತೋರಿಬಂದಿವೆ. ಇವು ಆಯತ ಅಥವಾ ವೃತ್ತಾಕಾರದ ತಡಿಕೆ ಮನೆಗಳಾಗಿದ್ದುವು. ರಾಜಸ್ತಾನದಲ್ಲಿನ ಬಾಗೋರ್‌ನಲ್ಲಿಯೂ (ಪ್ರ.ಶ.ಪೂ. 5000) ಇದೇ ಬಗೆಯ ಅವಶೇಷಗಳು ಪ್ರಾಪ್ತವಾಗಿವೆ. ಹರಪ್ಪ ಮೊಹೆಂಜೊದಾರೊಗಳಲ್ಲಿ ಮತ್ತು ಅದೇ ಸಂಸ್ಕೃತಿಗೆ ಸೇರಿದ ಕಾಲಿಬಂಗನ್, ಲೋಥಾಲ್ ಮತ್ತಿತರ ನೆಲೆಗಳಲ್ಲಿ ನಾವು ಕಾಣುವುದು ಹೆಚ್ಚು ನಾಗರಿಕ ಜನರ ವಸತಿಗಳು (ಪ್ರ.ಶ.ಪೂ. 3000–2000) ಈ ವೇಳೆಗೆ ಅಲ್ಲಿನ ಜನರು ನಗರವಾಸಿಗಳಾಗಿದ್ದರು. ಜನಸಂಖ್ಯೆ ಹೆಚ್ಚಿ, ವ್ಯವಸ್ಥಿತ ಆಡಳಿತವೊಂದು ಮನೆಗಳನ್ನು ಕಟ್ಟುವುದರಲ್ಲಿಯೂ ಒಂದು ಯೋಜನೆಯನ್ನು ಅನುಸರಿಸಿದಂತೆ ಕಂಡುಬರುತ್ತದೆ.

ನಗರವನ್ನು ರಕ್ಷಿಸಲು ಭದ್ರವಾದ ಮತ್ತು ಎತ್ತರವಾದ ಕೋಟೆಯ ಪ್ರಾಕಾರವಿತ್ತು. ನಗರದಲ್ಲಿ ಅಚ್ಚುಕಟ್ಟಾದ ಕೇರಿಗಳನ್ನೂ ವಸತಿಗಳನ್ನೂ ಏರ್ಪಡಿಸಿದ್ದರು. ಮುಖ್ಯಬೀದಿಗಳು ಉದ್ದಕ್ಕೆ ಪೂರ್ವ ಪಶ್ಚಿಮ, ದಕ್ಷಿಣೋತ್ತರವಾಗಿ ಸರಳರೇಖೆಯಲ್ಲಿ ಹಬ್ಬಿದ್ದುವು. ಒಂದೊಂದು ಬೀದಿಗೂ ಒಂದೊಂದು ಸಾರ್ವಜನಿಕ ಬಾವಿ ಇತ್ತು. ಬಾವಿಯ ಸುತ್ತಲೂ ನೀರು ನಿಲ್ಲದೆ ಹರಿದುಹೋಗುವಂತೆ ಇಳಿಜಾರಾದ ನೆಲಗಟ್ಟು ಮಾಡಲಾಗಿತ್ತು. ಈ ಬೀದಿಯ ಪಕ್ಕಕ್ಕೆ ಓರಣವಾದ ಮನೆಗಳ ಸಾಲುಗಳಿದ್ದುವು. ಮನೆಮನೆಗೂ ಸಾಮಾನ್ಯವಾಗಿ ಒಂದು ಅಂಗಳ, ಮೂರು ನಾಲ್ಕು ಕೋಣೆಗಳು, ಒಂದು ಬಾವಿ, ಬಚ್ಚಲುಮನೆ ಮತ್ತು ಚರಂಡಿಯ ಸೌಕರ್ಯ ಇದ್ದುವು. ಸಾಮಾನ್ಯವಾಗಿ ಸಣ್ಣಮನೆಯ ವಿಸ್ತೀರ್ಣ 24x11 ಚ.ಮೀ. ಸಿರಿವಂತರ ಕೆಲವು ಮನೆಗಳಲ್ಲಿ ಎರಡು ಅಂತಸ್ತುಗಳೂ ಹಲವು ಕೋಣೆಗಳೂ ಇದ್ದುವು. ಮೇಲಿನ ಅಂತಸ್ತಿನಲ್ಲೂ ಸ್ನಾನದ ಕೋಣೆಗಳಿದ್ದು ಅಲ್ಲಿಂದ ನೀರು ಕೆಳಗೆ ಹರಿದುಹೋಗಲು ಮಣ್ಣಿನ ಕೊಳವೆಗಳನ್ನು ಜೋಡಿಸಲಾಗಿತ್ತು. ಕಟ್ಟಡಗಳು ಮುಂದಕ್ಕೆ ಚಾಚಿಬಂದು ಬೀದಿ ಗಳನ್ನು ಆಕ್ರಮಿಸುವಂತೆ ಇರಲಿಲ್ಲ. ಮನೆಗಳು ಸರಳವೂ ಪ್ರಯೋಜನಾತ್ಮಕವೂ ಆಗಿದ್ದುವು. ಇವುಗಳ ಹೊರ ಭಾಗ ಬೋಳು ಬೋಳಾಗಿತ್ತು. ಈ ಮನೆಗಳಿಗೆ ಬಾಗಿಲು ಮುಖ್ಯ ರಸ್ತೆಯಿಂದಿರಲಿಲ್ಲ, ಪಕ್ಕದ ಓಣಿಯಿಂದ ಇದ್ದುವು. ಹೊರಭಾಗದಲ್ಲಿ ಕಿಟಕಿಗಳು ಇರಲಿಲ್ಲ. ಕೊಠಡಿಗಳ ಮಾಳಿಗೆಗಳ ಮೇಲೆ ಜಾಲಂದರದ ಕಿಟಕಿಗಳಿದ್ದುವು. ಇವುಗಳ ಮೂಲಕವೂ ಮನೆಗೆ ಸಾಕಷ್ಟು ಗಾಳಿ, ಬೆಳಕು ದೊರೆಯುತ್ತಿದ್ದುವು. ಮನೆಗೆ ದೃಢವಾದ ನೆಲಗಟ್ಟು ಇದ್ದು ಕೊಳಚೆನೀರು ನೆಲದಲ್ಲಿ ಜಿನುಗದಂತೆ ಮಡಕೆಯ ತುಂಡುಗಳಿಂದ ಬೆಸೆಯಲಾಗಿತ್ತು. ಮನೆಯ ಚರಂಡಿಗಳು ಬೀದಿಯ ಚರಂಡಿಗಳಿಗೆ ಕೂಡುತ್ತಿದ್ದುವು. ಇಂಥ ಹಲವು ಬೀದಿಯ ಚರಂಡಿಗಳ ನೀರು ಮಹಾಚರಂಡಿಯಲ್ಲಿ ಪ್ರವೇಶಿಸಿ ನದಿಗೆ ಸೇರುತ್ತಿತ್ತು.

ಸಾರ್ವಜನಿಕ ಬಾವಿಗಳಂತೆ ಅಲ್ಲಲ್ಲಿ ಸಾರ್ವಜನಿಕ ಸ್ನಾನಗೃಹಗಳು ಕೂಡ ಇದ್ದುವು. ಮುಖ್ಯವಾಗಿ 54.9 ಮೀ ಉದ್ದ ಮತ್ತು 32.9 ಮೀ ಅಗಲವಿರುವ ಒಂದು ವಿಶಾಲವಾದ ಸ್ನಾನಗೃಹ ಮೊಹೆಂಜೊದಾರೊದಲ್ಲಿ ಕಂಡುಬಂದಿದೆ. ಇದರ ನಡುವೆ 11.9 x 7 ಚ.ಮೀ.ಗಳ ಮತ್ತು 2.4 ಮೀ ಆಳದ ಸ್ನಾನದ ಕೊಳವಿತ್ತು. ಅದಕ್ಕೆ ಸುತ್ತಲೂ ಪಡಸಾಲೆಗಳು, ಬರಹೋಗಲು ಸಾಲುಮೆಟ್ಟಲುಗಳು, ಆರು ಬಾಗಿಲುಗಳು ಇದ್ದುವು. ಸುತ್ತಲಿನ ಕೋಣೆಗಳಲ್ಲೂ ಹಲವಕ್ಕೆ ಕೊಳವೆಗಳ ಮೂಲಕ ಹವೆ ಬರುವಂತೆ ಮಾಡಿದ ಆವಿಸ್ನಾನದ ಅನುಕೂಲತೆ ಮಾಡಲಾಗಿತ್ತು. ಹರಪ್ಪದಲ್ಲಿ ಒಂದೇ ಅಳತೆಯಲ್ಲಿ ಕಟ್ಟಲಾದ ನೀಳಚೌಕದ ಏಳುಮನೆಗಳು, ಎರಡು ವಠಾರಗಳು ಗೋಚರವಾಗಿವೆ. ಒಂದೊಂದು ಮನೆಯಲ್ಲೂ ಎರಡು ಕೊಠಡಿಗಳು ಮತ್ತು ಒಂದು ಅಂಗಳ ಇವೆ. ಇವು ಕೆಲಸಗಾರರಿಗಾಗಿ ಕಟ್ಟಿದ ವಾಸಗೃಹಗಳಾಗಿರಬಹುದು. ಈ ನಾಗರಿಕತೆ ಪ್ರ.ಶ.ಪೂ. ಸುಮಾರು 2700 ವರ್ಷಗಳ ಹಿಂದೆ ಉಚ್ಛ್ರಯಿಸಲು ಪ್ರಾರಂಭವಾಗಿ ಸಾವಿರ ವರ್ಷಗಳ ಕಾಲ ಉತ್ಕರ್ಷಸ್ಥಿತಿಯಲ್ಲಿದ್ದು ಪ್ರ.ಶ.ಪೂ. 1500ರ ವೇಳೆಗೆ ಅವನತಿ ಹೊಂದಿತೆಂದು ಊಹಿಸಲಾಗಿದೆ. ಈ ನಾಗರಿಕತೆಗೂ ಬಲೂಚಿಸ್ತಾನದಲ್ಲಿ ಕಂಡು ಬಂದ ಹರಪ್ಪಪೂರ್ವ ಸಂಸ್ಕೃತಿಗೂ ಸಂಬಂಧವಿಲ್ಲದಂಥ ನವಶಿಲಾಯುಗದ ವಸತಿಗಳನ್ನು ಕೆಲವು ಇಲ್ಲಿ ನಿರೂಪಿಸಬಹುದು. ಕಾಶ್ಮೀರದ ಬೂರ್ಜಹೋಮ್‌ನಲ್ಲಿ ಜನರು ಆಳವಾಗಿ ಅಗೆದ ಗುಂಡಿಗಳಲ್ಲಿ ವಾಸಿಸುತ್ತಿದ್ದರೆಂಬುದು ಈಗ ತಿಳಿದಿದೆ. ಮೇಲುಭಾಗದಲ್ಲಿ ಕಿರಿದಾಗಿದ್ದು ಒಳಹೋದಂತೆಲ್ಲ ವಿಶಾಲವಾಗುವಂತೆ ಅವನ್ನು ತೋಡಲಾಗಿದೆ. ಕೆಲವೊಮ್ಮೆ ಈ ಗುಂಡಿಗಳಲ್ಲಿ ಇಳಿಯಲು ಒಂದು ಮೀಟರಿನ ಆಳದ ವರೆಗೂ ಅಲ್ಲಲ್ಲಿ ಮೆಟ್ಟಲುಗಳಿದ್ದುವು. ಅನಂತರ ಏಣಿಯ ಮೂಲಕ ಇಳಿಯುತ್ತಿದ್ದಿರಬಹುದು. ಗುಂಡಿಯ ಸುತ್ತಲಿನ ಗೋಡೆಯನ್ನೂ ನೆಲವನ್ನೂ ಮಣ್ಣಿನಿಂದ ಗಿಲಾವು ಮಾಡಲಾಗಿದೆ. ಗುಂಡಿಯ ಹೊರ ಎಲ್ಲೆಯ ಸುತ್ತಲೂ ಅಲ್ಲಲ್ಲಿ ಕಂಬಗಳನ್ನು ನೆಡಲು ಸಣ್ಣ ರಂಧ್ರಗಳನ್ನು ಮಾಡಿರುವುದನ್ನು ಗಮನಿಸಿದರೆ ಇದಕ್ಕೆ ಶಂಕುವಿನ ಆಕಾರದ ಮೇಲ್ಚಾವಣಿ ಇದ್ದಿರಬಹುದೆನಿಸುತ್ತದೆ. ಇಂಥ ಗುಂಡಿಗಳ ತಳದಲ್ಲಿ ಮತ್ತು ಗುಂಡಿಗಳ ಪಕ್ಕದಲ್ಲಿ ಬೂದಿಯ ಅವಶೇಷಗಳು ದೊರೆತಿದ್ದು ಅಲ್ಲಿ ಒಲೆಗಳನ್ನು ಹೂಡಿರಬಹುದಾದ ಕುರುಹುಗಳೂ ಇವೆ. ಅತಿದೊಡ್ಡ ಗುಂಡಿಯ ಗೃಹದ ಆಳ 3.96 ಮೀ ವ್ಯಾಸ 4.57 ಮೀ ಇದರ ಮುಖ ಮಾತ್ರ 2.74 ಮೀ ಈ ಗೃಹಗಳು ಆ ಪ್ರದೇಶದ ವಾತಾವರಣವನ್ನು ಅನುಸರಿಸಿ ಜನರಿಗೆ

ಚಳಿಯಿಂದ ರಕ್ಷಣೆಯನ್ನು ಕೊಡಲು ಯೋಗ್ಯವಾಗಿದ್ದಿರಬೇಕು. ಆದರೆ ನವಶಿಲಾಯುಗಕ್ಕೆ ಸೇರಿದ ದಖನ್ ಪ್ರದೇಶದ ಜನ ವಾಸಿಸಲು ಆರಿಸಿದ್ದು ಎತ್ತರದ ಗುಡ್ಡಗಳು. ಅವರ ಆವಶ್ಯಕತೆಗಳನ್ನು ಪೂರೈಸಲು ಬೇಕಾದ ಸೌಲಭ್ಯಗಳನ್ನು ಇವು ಪಡೆದಿದ್ದುವು. ಬೇಸಾಯಕ್ಕೆ ಅಗತ್ಯವಾದ ಅತಿವಿಸ್ತಾರವಾಗಿಲ್ಲದ ಸಣ್ಣ ಪರಿಮಾಣದ ಭೂಮಿ, ಪಶುಪಾಲನೆಗೆ ತಕ್ಕ ಅನುಕೂಲತೆ, ಹೆಚ್ಚು ಮಳೆಯಿಲ್ಲದ ತಮಗೆ ಸಾಕಷ್ಟು ನೀರಿನ ಪೂರೈಕೆ ಆಗುವಂಥ ಭೂಸನ್ನಿವೇಶ–ಇವು ಈ ಜನ ತಮ್ಮ ವಸತಿಗೆ ಸ್ಥಳವನ್ನು ಆಯ್ದುಕೊಳ್ಳುವ ಮುನ್ನ ಗಮನಿಸುತ್ತಿದ್ದ ಅಂಶಗಳು. ಕರ್ನಾಟಕಕ್ಕೇ ಸೀಮಿತವಾದಂತೆ ಇದುವರೆಗೆ ದೊರೆತಿರುವ ಇಂಥ ನೆಲೆಗಳಲ್ಲಿ ಗುಡ್ಡಗಳ ಮೇಲಿನವೇ ಸಂಖ್ಯೆಯಲ್ಲಿ ಹೆಚ್ಚಾಗಿವೆ. ಆದರೆ ಕೆಲವು ನೆಲೆಗಳು ನದೀತೀರದಲ್ಲಿ ಸಿಕ್ಕಿವೆ. ಫಲವತ್ತಾದ ಭೂಮಿ ಹಾಗೂ ಜಲಸೌಕರ್ಯ ಮತ್ತು ಸುಲಭವಾಗಿ ದೊರೆಯುವ ಮೀನು ಮುಂತಾದ ಆಹಾರ ಸಾಮಗ್ರಿಗಳು ಇದಕ್ಕೆ ಕಾರಣ. ಹಲವಾರು ನೆಲೆಗಳಲ್ಲಿ ಗುಡಿಸಲಿನ ಅವಶೇಷಗಳು ಕಾಣಸಿಕ್ಕಿವೆ. ಭೂಮಿಯನ್ನು ಅಗೆದ ಬಳಿಕವೇ ಇಂಥ ಕಟ್ಟಡದ ಅವಶೇಷಗಳು ಕಂಡಿವೆ. ಬ್ರಹ್ಮಗಿರಿಯಲ್ಲಿ ಕಂಡುಬಂದಿರುವ ಕಂಬಗಳನ್ನು ನಿಲ್ಲಿಸಲು ಮಾಡಿದ ನೆಲದಲ್ಲಿನ ಗುಳಿಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಮನೆಗಳನ್ನು ಮರದ ಕಂಬ ಮತ್ತು ಸೊಪ್ಪಿನ ತಡಿಕೆ ಗೋಡೆಗಳಿಂದ ಕಟ್ಟಿ ಸುತ್ತಲೂ ಒರಟಾದ ಕಲ್ಲುಗಳನ್ನು ಜೋಡಿಸುತ್ತಿದ್ದರೆಂದು ತಿಳಿದುಬರುತ್ತದೆ. ಒಂದು ಕಡೆ ಇಂಥ ಗುಳಿಗಳು ಒಂದು ನೀಳವಾದ ಸಾಲಿನಲ್ಲಿ ಕಂಡುಬಂದುವು. ಬಹುಶಃ ಇದು ಕೆಲವು ಮನೆಗಳು ಆಯತಾಕಾರದಲ್ಲಿದ್ದುವೆಂಬುದನ್ನು ಸೂಚಿಸುತ್ತದೆ. ಮಸ್ಕಿಯಲ್ಲಿ ತೋರಿಬಂದ ದಮ್ಮಸ್ಸು ಮಾಡಿದ ಮಣ್ಣಿನ ನೆಲಗಟ್ಟು ಹಾಗೂ ಗುಳಿಗಳು ಅಲ್ಲಿನ ಮನೆಗಳನ್ನು ಸಹ ಮರದ ಕಂಬಗಳ ಸಹಾಯದಿಂದ ಕಟ್ಟಿದ್ದರೆಂಬುದನ್ನು ಸೂಚಿಸುತ್ತವೆ. ತೆಕ್ಕಲಕೋಟದಲ್ಲಿ ಮನೆಗಳ ನೆಲಗಟ್ಟಿಗೆ ಕಲ್ಲಿನ ಚೂರುಗಳನ್ನು ತುಂಬಿಸಿ ಮಣ್ಣಿನ ಹೊದಿಕೆಯಿಂದ ನೆಲವನ್ನು ದಮ್ಮಸ್ಸು ಮಾಡಿದುದು ಕಂಡುಬಂದಿದೆ. 6.09 ಮೀ ವ್ಯಾಸದ ಈ ಮನೆ ಆಕಾರದಲ್ಲಿ ದುಂಡಾಗಿತ್ತು. ಸಂಗನಕಲ್ಲಿನಲ್ಲಿನ ಉತ್ಖನನದಲ್ಲಿ ಬೊಂಬು–ಬಿದಿರಿನ ಪಡಿಯಚ್ಚನ್ನೊಳಗೊಂಡ ಮಣ್ಣಿನ ಭಾಗಗಳು ದೊರೆತಿವೆ. ಸೀಳಿದ ಬೊಂಬಿನ ಜಾಳಿಗೆಗಳನ್ನು 1.2–1.8 ಮೀ ಎತ್ತರದ ಗೋಡೆಗಳ ಮೇಲೆ ನಿಲ್ಲಿಸಿ ಆ ಜಾಳಿಗೆಗಳಿಗೆ ಮಣ್ಣನ್ನು ಮೆತ್ತುತ್ತಿದ್ದರೆಂದು ಇದರಿಂದ ಸ್ಪಷ್ಟವಾಗುತ್ತದೆ. ಮೇಲ್ಛಾವಣಿ ವೃತ್ತಾಕಾರದಲ್ಲಿತ್ತು. ಈ ನೆಲೆಗಳ ಕಾಲ ಪ್ರ.ಶ.ಪೂ. ಸುಮಾರು 1700 – 1500 ವರ್ಷ ಗಳೆಂದು ನಿರ್ಣಯಿಸಲಾಗಿದೆ. ಇದು ಪೂರ್ವಭಾವೀ ಇತಿಹಾಸಕಾಲದ ಗೃಹದ ಕತೆ.

ಆರ್ಯರ ಕಾಲದ ಭಾರತದಲ್ಲಿ ನಾವು ಕಾಣುವುದು ಗ್ರಾಮ್ಯಜೀವನವನ್ನು. ಆರ್ಯರನ್ನು ಕುರಿತು ನಮಗೆ ತಿಳಿದಿರುವುದೆಲ್ಲ ಅವರು ರಚಿಸಿದ ವೇದ ಮತ್ತು ತತ್ಸಂಬಂಧವಾದ ಇತರ ಸಾಹಿತ್ಯಗಳಿಂದ ಮಾತ್ರವೆ. ಋಗ್ವೇದದಲ್ಲಿ (ಪ್ರ.ಶ.ಪೂ. 1500–1000) ಪುರ ಎಂಬ ಪದದ ಪ್ರಯೋಗವಿದ್ದರೂ ಅದಕ್ಕೆ ಆ ಕಾಲದಲ್ಲಿ ನಗರವೆಂಬ ಅರ್ಥವಿದ್ದಂತೆ ತೋರುವುದಿಲ್ಲ. ಆ ಪದ ಗ್ರಾಮದ ಹೊರಗೆ ಕಟ್ಟಲಾದ ಮಣ್ಣಿನ ಕೋಟೆಯ ಗೋಡೆಗೆ ಅನ್ವಯಿಸುವಂತೆ ಕಾಣುತ್ತದೆ. ಅಂದು ಗ್ರಾಮಗಳಲ್ಲಿ ಮನೆಗಳನ್ನು ಮರದಿಂದ ಕಟ್ಟುತ್ತಿದ್ದರು. ತೊಲೆಗಳಿಗೆ ಬಿದಿರನ್ನು ಉಪಯೋಗಿಸುತ್ತಿದ್ದರು. ಸಂಹಿತೆಗಳ ಕಾಲದಲ್ಲಿ (ಪ್ರ.ಶ.ಪೂ. 1000–700) ಹರ್ಮ್ಯವೆಂಬುದು ಹಲವಾರು ಕೊಠಡಿಗಳುಳ್ಳ ದೊಡ್ಡಮನೆಯನ್ನು ಸೂಚಿಸುವುದಕ್ಕಾಗಿ ಉಪಯೋಗವಾದ ಪದ. ವೇಶ್ಮ ಎಂಬುದು ಸಾಮಾನ್ಯ ಜನರ ಉಪಯೋಗಕ್ಕಾಗಿ ಕಟ್ಟಿದ ಸಣ್ಣಮನೆ. ಹರ್ಮ್ಯದಲ್ಲಿ ಮನುಷ್ಯರ ವಾಸಕ್ಕೆ ಕೋಣೆಗಳಲ್ಲದೆ, ಮನೆಯೊಡೆಯನಿಗೆ ಸೇರಿದ ದನಕರುಗಳ, ಪ್ರಾಣಿಗಳ ವಾಸಕ್ಕೆ ಯೋಗ್ಯವಾದ ದೊಡ್ಡಿಗಳೂ ಇರುತ್ತಿದ್ದುವು. ಆಗಲೂ ಮನೆಗಳನ್ನು ಮರದಿಂದಲೇ ಕಟ್ಟುತ್ತಿದ್ದರು. ನಾಲ್ಕು ಕಂಬಗಳನ್ನು ನಿಲ್ಲಿಸಿ ಒಂದು ಕೋನದಲ್ಲಿ ಅವುಗಳ ತೊಲೆಗಳನ್ನು ಬಿಗಿದು ಬಿದಿರಿನ ಅಡ್ಡಪಟ್ಟಿಗಳಿಗೆ ಸೇರಿದಂತೆ ಒಂದು ಮೇಲ್ಛಾವಣಿಯನ್ನು ಎಬ್ಬಿಸುತ್ತಿದ್ದರು. ಹುಲ್ಲಿನ ಮೆದೆಗಳನ್ನು ಬಿದಿರು ಸೀಳುಗಳೊಡನೆ ಸೇರಿಸಿ ಗೋಡೆಗಳನ್ನು ಕಟ್ಟುತ್ತಿದ್ದರು. ತೈತ್ತಿರೀಯ ಅರಣ್ಯಕದಲ್ಲಿ ಧನಧಾನೀ ಎಂಬ ಪದ ಉಲ್ಲೇಖವಾಗಿದೆ. ಇದು ಉಗ್ರಾಣಕ್ಕೆ ಕೊಟ್ಟ ಹೆಸರಾಗಿರಬಹುದು. ಅಥರ್ವವೇದದಲ್ಲಿ ಹೇಳಲಾದ ಪತ್ನೀಸದನ (ಸ್ತ್ರೀಯರ ವಾಸಗೃಹ) ಎಂಬುದು ಸ್ತ್ರೀಯರಿಗಾಗಿಯೇ ಪ್ರತ್ಯೇಕವಾದ ವಾಸಸ್ಥಾನವಿದ್ದಿತೆಂಬುದನ್ನು ಸೂಚಿಸುತ್ತದೆ.

ಬೌದ್ಧರ ಸಾಹಿತ್ಯ ಗ್ರಂಥಗಳಾದ ಚುಲ್ಲವಗ್ಗ, ಮಹಾವಗ್ಗ ಮುಂತಾದವುಗಳಲ್ಲಿ ಆ ಕಾಲದ (ಪ್ರ.ಶ.ಪೂ. 6ನೆಯ ಶತಮಾನ ಮತ್ತು ತರುವಾಯ) ನಿವಾಸಿಗಳಿಗೆ ಸಂಬಂಧಿಸಿದ ಹೇಳಿಕೆಗಳಿವೆ. ಇವುಗಳಿಂದ ಆಗಲೂ ಗೃಹಗಳಲ್ಲಿ ಸಾಮಾನ್ಯವಾಗಿ ಹಲವಾರು ಕೋಣೆಗಳು ಇದ್ದು ಒಂದೊಂದನ್ನೂ ಒಂದೊಂದು ಪ್ರತ್ಯೇಕ ಕೆಲಸಕ್ಕಾಗಿ, ಮಲಗುವ ಕೋಣೆ, ಪೂಜಾಗೃಹ, ಉಗ್ರಾಣ, ಪಡಸಾಲೆ, ಊಟದ ಕೋಣೆ ಇತ್ಯಾದಿ, ಉಪಯೋಗಿಸುತ್ತಿದ್ದರೆಂಬ ಅಂಶ ಗೊತ್ತಾಗುತ್ತದೆ. ಅಲ್ಲದೆ 2–3 ಉಪ್ಪರಿಗೆಗಳುಳ್ಳ ಗೃಹಗಳನ್ನೂ ಅಂದು ಕಟ್ಟುತ್ತಿದ್ದರು. ಆದರೆ ಅವುಗಳಿಗಾಗಿ ಮರವನ್ನಷ್ಟೇ ಉಪಯೋಗಿಸಿದ್ದ ಕಾರಣ ಅವುಗಳ ಅವಶೇಷಗಳಾವುವೂ ಕಂಡುಬಂದಿಲ್ಲ. ಆದರೆ ಬಾರ್‌ಹುತ್, ಸಾಂಚಿ, ಅಮರಾವತಿ, ಮಥುರ ಮುಂತಾದ ಸ್ಥಳಗಳಲ್ಲಿ ಸ್ತೂಪಗಳಲ್ಲಿನ ಉಬ್ಬುಚಿತ್ರಗಳಲ್ಲಿ ಆ ಕಾಲದ ಕಟ್ಟಡಗಳ ಮಾದರಿಗಳನ್ನು ಕಾಣಬಹುದು. ಬಂಡಿಯ ಕಮಾನಿನ ಚಾವಣಿಗಳು ಕಟ್ಟಡಗಳ ಮೇಲೆ ಚಿತ್ರಿತವಾಗಿವೆ. ಕಮಾನಿನ ಎರಡು ತುದಿಗಳಲ್ಲೂ ತ್ರಿಕೋನಾಕಾರಗಳಿದ್ದು ಮಧ್ಯದಲ್ಲಿ ಚೂಪಾದ ಕಳಶ ಮೇಲಕ್ಕೆ ಎದ್ದಿದೆ. ಇದು ಅಂಗಳದ ಮುಂದಿನ ದ್ವಾರವಾಗಿರಬಹುದು. ಕೆಲವು ಕಡೆಗಳಲ್ಲಿ ಚಿತ್ರಾಲಂಕರಣವಿರುವ ಕಂಬಗಳ ಮೇಲೆ ನಿಲ್ಲಿಸಲ್ಪಟ್ಟ ತೋರಣಗಳು ಇಂಥ ದ್ವಾರಗಳಾಗಿದ್ದುವು. ಉಪ್ಪರಿಗೆಗಳಲ್ಲಿ ಕಟಾಂಜನವಿರುವ ಆಲಿಂದಗಳಿದ್ದುವು.

ಗೃಹರಚನೆಯಲ್ಲಿ ಇಷ್ಟೆಲ್ಲ ಪ್ರಗತಿ ಆಗಿದ್ದರೂ ಭಾರತದಲ್ಲಿ ಸಾರ್ವಜನಿಕ ಕಟ್ಟಡಗಳು ಮತ್ತು ದೇವಾಲಯಗಳನ್ನು ಹೊರತುಪಡಿಸಿ ವಾಸಗೃಹ ಮುಂತಾದ ಇತರ ಕಟ್ಟಡಗಳಿಗೆ ಮರಮುಟ್ಟುಗಳೇ ಮೊದಲಾದ ನಾಶವಾಗುವಂಥ ಸಾಮಗ್ರಿಗಳನ್ನು ಬಳಸಿದುದರ ಪರಿಣಾಮವಾಗಿ ಅವುಗಳ ಅವಶೇಷಗಳು ಇಂದು ಉಳಿದಿಲ್ಲ. ಸಾಹಿತ್ಯದಲ್ಲಿಯೂ ಪರದೇಶ ಯಾತ್ರಿಕರ ಬರೆವಣಿಗೆಗಳಲ್ಲಿಯೂ ರಾಜಧಾನಿಗಳ ಮತ್ತು ಇತರ ಪಟ್ಟಣಗಳ ವಿವರಣೆಗಳು ಕಂಡುಬರುತ್ತವೆ. ಆದರೆ ಅವುಗಳಿಂದ ಆ ಕಾಲದ ವಾಸಸ್ಥಾನಗಳ ಮತ್ತು ಅರಮನೆಗಳ ಸ್ಪಷ್ಟಚಿತ್ರ ಮೂಡುವುದು ಕಠಿಣ. ಕೆಲವು ಇತಿಹಾಸಪ್ರಸಿದ್ಧ ನಗರಗಳು ಪುರಾತತ್ತ್ವಶೋಧಕನ ಗುದ್ದಲಿಗೆ ದೊರೆತಿವೆ. ಪಾಟಲೀಪುತ್ರ, ಹಸ್ತಿನಾಪುರ, ತಕ್ಷಶಿಲ ಮುಂತಾದವು ಇವುಗಳಲ್ಲಿ ಕೆಲವು. ಆದರೆ ಇಲ್ಲಿಯೂ ಕೇವಲ ಅವಶೇಷಗಳು ಉಳಿದಿದ್ದು ಅಂದಿನ ನಗರಯೋಜನೆ, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಕುರಿತು ಮಾತ್ರ ಹೆಚ್ಚಿಗೆ ತಿಳಿಯಬಹುದಾಗಿದೆ. ಗೃಹವಾಸ್ತುವಿಗೆ ಸಂಬಂಧಿಸಿದ ಹಲವಾರು ವೈಜ್ಞಾನಿಕಮಟ್ಟದ ಗ್ರಂಥಗಳು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಇವೆ. ಸಮರಾಂಗಣಸೂತ್ರಧಾರ, ಅಪರಾಜಿತಪೃಚ್ಛಾ, ಶಿಲ್ಪರತ್ನ, ಮಾನಸಾರ, ವಿಶ್ವಕರ್ಮ ವಾಸ್ತುಶಾಸ್ತ್ರ, ಮಯಮತ–ಇವು ಅಂಥ ಕೆಲವು ಗ್ರಂಥಗಳು. ಇವುಗಳಲ್ಲಿ ಗೃಹನಿರ್ಮಾಣಕ್ಕೆ ಮತ್ತು ಗೃಹವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಅನೇಕ ವಿವರಗಳನ್ನು ನೋಡಬಹುದು. ಸಮರಾಂಗಣಸೂತ್ರಧಾರ ಸು. 11–12ನೆಯ ಶತಮಾನಗಳಲ್ಲಿ ರಚಿತವಾದ ಗ್ರಂಥ. ಇದರಲ್ಲಿ ಕಟ್ಟಡಗಳನ್ನು ಶಾಲಾ, ರಾಜವೇಶ್ಮ, ಪ್ರಾಸಾದ, ಸಭಾ ಮತ್ತು ವಾಜಿಗಜಗೋ ಶಾಲಾ ಎಂದು ವಿಭಾಗಮಾಡಲಾಗಿದೆ. ಇವುಗಳಲ್ಲಿ ಶಾಲಾ ಎಂಬುದು ಸಮಾಜದ ಸಾಮಾನ್ಯ ತರಗತಿಯ ಪ್ರಜೆ ವಾಸಿಸುತ್ತಿದ್ದ ಮನೆ. ಇದನ್ನು ಮರದಿಂದಲೇ ಕಟ್ಟಲಾಗುತ್ತಿತ್ತೆಂದು ಹೇಳಿದೆ. ಎಂದರೆ 11–12ನೆಯ ಶತಮಾನಗಳಲ್ಲಿಯೂ ಗೃಹಗಳಿಗಾಗಿ ಬಳಸುತ್ತಿದ್ದ ವಸ್ತುವಿನಲ್ಲಿ ಬದಲಾವಣೆಯಾಗಿರಲಿಲ್ಲ. ಹಾಗೆಂದೇ ಕರ್ನಾಟಕದಲ್ಲಿಯೂ ಸುಪ್ರಸಿದ್ಧ ರಾಜಧಾನಿಗಳಾಗಿದ್ದ ಬಾದಾಮಿ, ಮಳಖೇಡ, ಕಲ್ಯಾಣ, ಬೇಲೂರು, ಹಳೇಬೀಡು, ಹಂಪೆ ಮುಂತಾದ ಪಟ್ಟಣಗಳು ಇಂದು ಹಾಳುಬಿದ್ದ ಕೊಂಪೆಗಳಾಗಿವೆ.

17–18ನೆಯ ಶತಮಾನದ ತರುವಾಯವೇ ಭಾರತದಲ್ಲಿ ಸಾರ್ವಜನಿಕ ಕಟ್ಟಡಗಳು, ಕಚೇರಿಗಳು ಮತ್ತು ಮನೆಗಳಿಗೆ ಕಲ್ಲು, ಕಬ್ಬಿಣ ಮುಂತಾದ ಹೆಚ್ಚು ಶಾಶ್ವತವಾದ ವಸ್ತುಗಳನ್ನು ಉಪಯೋಗಿಸತೊಡಗಿದರೆನ್ನಬಹುದು. (ಜಿ.ಬಿ.ಆರ್.)

**ಮನೆಯ ಯೋಜನೆ :** ವರ್ತಮಾನ ಕಾಲದಲ್ಲಿ ಮನೆಯ ಪರಿಕಲ್ಪನೆ ಉಪಯುಕ್ತತೆ, ಸೌಂದರ್ಯ ಹಾಗೂ ಭದ್ರತೆ ಎಂಬ ಮೂರು ಮುಖ್ಯ ಗುಣಗಳಿಂದ ರೂಪಿತವಾಗಿದೆ. ಅದೇ ವೇಳೆ ನಿವೇಶನ, ಸಾಮಗ್ರಿಗಳು ಹಾಗೂ ಆರ್ಥಿಕತೆ ಎಂಬ ಮೂರು ಮುಖ್ಯ ಪರಿಕರಗಳಿಂದ ಮನೆಯ ರಚನೆ ಪ್ರಭಾವಿತವಾಗಿದೆ. ಇವೆರಡರ ಯುಕ್ತ ಮೇಳವೇ ಆಧುನಿಕ ಮನೆ ಎನ್ನಬಹುದು. ಗುಡ್ಡಗಾಡುಗಳಲ್ಲಿ ದೂರ ದೂರಕ್ಕೆ ಹರಡಿ ಹೋಗಿರುವ ಒಂಟಿ ಬೀಡುಗಳು, ಹಳ್ಳಿಗಳಲ್ಲೂ ಪೇಟೆ ಪಟ್ಟಣಗಳಲ್ಲೂ ಹಿಂಡುಹಿಂಡಾಗಿ ಮೈ ತಳೆದಿರುವ ಮನೆಗಳು, ನಗರಗಳಲ್ಲಿನ ಒಂದು ಅಥವಾ ಎರಡು ಕೋಣೆಗಳಿರುವ ಒಂಟಿ ಮನೆಗಳ ಸಾಲುಗಳು, ಇಂಥ ಅನೇಕ ಮನೆಗಳನ್ನೇ ಒಳಗೊಂಡಿರುವ ಹಲವಾರು ಉಪ್ಪರಿಗೆಗಳ ವಠಾರಗಳು (ಫ್ಲ್ಯಾಟ್ಸ್), ಶ್ರೀಮಂತರ ಭವ್ಯಸೌಧಗಳು, ಅರಮನೆಗಳು–ಇವೇ ಮುಂತಾದವು ಮನೆಯ ಭಿನ್ನ ಪ್ರರೂಪಗಳು.

ನಿವೇಶನ : ಒಂದು ಆವರಣದ ಇಲ್ಲವೇ ಕಕ್ಕಟ್ಟು ಗೋಡೆಯ ಒಳಗಿರುವ ಮತ್ತು ಕಾನೂನು ರೀತ್ಯ ಒಬ್ಬನ ಯಾಜಮಾನ್ಯಕ್ಕೆ ಒಳಗಾಗಿರುವ ಪ್ರದೇಶ. ಇದರ ಮೇಲೆ ಮನೆಯನ್ನು ಕಟ್ಟುತ್ತಾರೆ. ಆದ್ದರಿಂದ ಮನೆಕಟ್ಟುವ ಮೊದಲು ಇಡಬೇಕಾದ ಹೆಜ್ಜೆ ಎಂದರೆ ನಿವೇಶನದ ಆಯ್ಕೆ. ಒಬ್ಬ ವ್ಯಕ್ತಿ ಒಂದು ನಿವೇಶನವನ್ನು ಆಯುವ ಮೊದಲು ಈ ಕೆಳಗಿನ ಅಂಶಗಳನ್ನು ಪ್ರಧಾನವಾಗಿ ಗಮನಿಸಲಾಗುತ್ತದೆ. ಉದ್ಯೋಗ ಸ್ಥಳದ ಸಾಮೀಪ್ಯ: ನೀರು, ಬೆಳಕು, ಮಾರುಕಟ್ಟೆ, ಸಾರಿಗೆ, ಶಾಲೆ, ವೈದ್ಯ ಇವೇ

ಮುಂತಾದ ಸೌಕರ್ಯಗಳು: ಮತ್ತು ಪರಿಸರ. ಇವೆಲ್ಲವೂ ಆರ್ಥಿಕವಾಗಿ ವ್ಯಕ್ತಿಯ ಪರಿಮಿತಿಯೊಳಗೆ ಒದಗಿ ಬಂದರೆ ಅಂಥ ನಿವೇಶನ ಅವನಿಗೆ ಒಪ್ಪಿಗೆ ಆಗುತ್ತದೆ.

ಸಾಮಗ್ರಿಗಳು: ಮೊದಲ ಕಾಲದಲ್ಲಿ ಮನೆಕಟ್ಟಲು ಬಳಸುತ್ತಿದ್ದ ಸಾಮಗ್ರಿಗಳು ಕಲ್ಲು, ಮಣ್ಣು, ಮರಳು, ಇಟ್ಟಿಗೆ, ಜೇಡಿ, ಸುಣ್ಣ, ಮರ, ಬಿದಿರು, ಸೋಗೆ, ಹುಲ್ಲು, ಹಂಚು ಇತ್ಯಾದಿ. ಆದರೆ ಇಂದಿನ ಮನೆಗಳಿಗೆ ಬೇಕಾಗುವ ಮುಖ್ಯ ಸಾಮಗ್ರಿಗಳೆಂದರೆ ಕಲ್ಲು, ಇಟ್ಟಿಗೆ, ಮರಳು, ಸಿಮೆಂಟ್, ಕಬ್ಬಿಣ, ಸುಣ್ಣ ಇತ್ಯಾದಿ. ಇವುಗಳ ಬಳಕೆಯಿಂದ ಮನೆಯನ್ನು ಭದ್ರವಾಗಿಯೂ ಶೀಘ್ರವಾಗಿಯೂ ನಾಜೂಕಾಗಿಯೂ ಕಟ್ಟಬಹುದು. ಈ ಸಾಮಗ್ರಿಗಳು ಭೂರಿಗಾತ್ರದಲ್ಲಿ ತಯಾರಾಗಿ ಸಾಕಷ್ಟು ಮೊತ್ತದಲ್ಲಿ ದೊರೆಯುತ್ತವೆ ಕೂಡ. ಹೀಗಾಗಿ ಮನೆಗಳ ಆಲೇಖ್ಯ ಹಾಗೂ ರಚನೆಗಳಲ್ಲಿ ಒಂದು ಆಂದೋಳನವೇ ಉಂಟಾಯಿತು. ಪ್ರಸಕ್ತ ಶತಮಾನದ ಅವಧಿಯಲ್ಲಿ ಕಟ್ಟಲಾದ ಭಿನ್ನಪ್ರರೂಪಗಳ ಮನೆಗಳನ್ನು ಹೋಲಿಸಿ ನೋಡಿದಾಗ ಆಧುನಿಕ ಮನೆಯೊಂದು ತನ್ನ ಪೂರ್ವಜನಿಂದ ಹೇಗೆ ಪೂರ್ಣವಾಗಿ ಭಿನ್ನವಾಗಿದೆ ಎಂಬುದನ್ನು ಗಮನಿಸಬಹುದು. ಮಣ್ಣಿನ ಗೋಡೆಗಳು, ಗಾರೆ ಇಲ್ಲವೇ ಜೇಡಿಸಾರಣೆಗಳು, ಕರಿಮೆತ್ತಿದ ನೆಲ, ಹುಲ್ಲು ಮಡಲು ಇಲ್ಲವೇ ಹಂಚು ಹೊದೆಸಿದ ಮಾಡು ಇವೆ ಮುಂತಾದವು ಇಂದು ಅಚ್ಚುಕಟ್ಟಾದ ತಾರ್ಸಿ ಮಾಡಿನ ಸಿಮೆಂಟ್ ಕಾಂಕ್ರೀಟ್ ಮನೆಗಳಿಗೆ ಎಡೆಮಾಡಿಕೊಟ್ಟಿವೆ. ಮರಮುಟ್ಟುಗಳು ವ್ಯಾಪಕವಾಗಿ ಬಳಕೆ ಆಗುತ್ತಿದ್ದ ಮೊದಲಿನ ಮನೆಗಳು ಈಗ ಅಪರೂಪ. ಕಟ್ಟಡದ ಸಾಮಗ್ರಿಗಳ ಬಳಕೆಯಲ್ಲೂ ಕಟ್ಟಡದ ಒಟ್ಟು ವಿನ್ಯಾಸದಲ್ಲೂ ಅಂದಿನ ಭವ್ಯಗೃಹಗಳಲ್ಲಿ ತೋರಿಬರುವ ಭೂರಿ ವೈಪುಲ್ಯ–ಇದು ಸಾಮಗ್ರಿಗಳ ಮತ್ತು ಸ್ಥಳಾವಕಾಶದ ಅಪವ್ಯಯ ಎನ್ನಿಸುವ ಮಟ್ಟದ್ದು–ಇಂದು ಮಾಯವಾಗಿದೆ. ಆದರೆ ಅದೇ ರೀತಿ ಅಂದಿನ ಬಡವರ ಗುಹೆಗಳಂಥ ಗೂಡುಗಳೂ ಬಿಡಾರಗಳೂ ಇಂದು ಒಂದು ನಿರ್ದಿಷ್ಟ ರೂಪ ಮತ್ತು ಉಪಯುಕ್ತತೆ ಇರುವ ಮನೆಗಳಾಗಿವೆ. ದೇಶದ ಆರ್ಥಿಕ ಹವೆ ಬದಲಾದಂತೆ ಇವೆಲ್ಲ ಸಹಜವಾಗಿ ಒಡಮೂಡಿದ ವಿಕಾಸಗಳು. ಇಂದಿನ ಮನೆಗಳಲ್ಲಿ ಮರದ ಉಪಯೋಗ ಬಲು ಕಡಿಮೆ. ಬಾಗಿಲು ಕಿಟಕಿಗಳಲ್ಲಿ ಕೂಡ ಸಾಧ್ಯವಾದರೆ ಮರದ ಉಪಯೋಗವನ್ನು ಕಡಿಮೆ ಮಾಡುತ್ತಿರುವುದು ಇಂದಿನ ಪ್ರವೃತ್ತಿ. ಕಲ್ಲು, ಮಣ್ಣು, ಮರಳು ಮತ್ತು ಇಟ್ಟಿಗೆ ಸಾಮಾನ್ಯವಾಗಿ ಸ್ಥಳೀಯವಾಗಿ ಸರಿಸುಮಾರು ಅನಿರ್ಬಂಧಿತವಾಗಿ ದೊರೆಯುವ ವಸ್ತುಗಳು. ಆದರೆ ಸಿಮೆಂಟ್ ಮತ್ತು ಕಬ್ಬಿಣ ಹೀಗಲ್ಲ. ಅವು ವಿವಿಧ ಕಾರ್ಖಾನೆಗಳಲ್ಲಿ ತಯಾರಾಗಿ ದೇಶದ ಬೇರೆ ಬೇರೆ ಕಡೆಗಳಿಗೆ ಪೂರೈಕೆ ಆಗಬೇಕಾದ ಸಾಮಗ್ರಿಗಳು. ಮನೆ, ರಸ್ತೆ, ಸಾರ್ವಜನಿಕ ಕಟ್ಟಡಗಳು, ಕಟ್ಟೆ, ಕಾಲುವೆಗಳು ಇವೇ ಮುಂತಾದ ಕಾಮಗಾರಿಗಳು ದೇಶಾದ್ಯಂತ ರಭಸದಿಂದ ಸಾಗುತ್ತಿರುವಾಗ ಸಿಮೆಂಟ್ ಮತ್ತು ಕಬ್ಬಿಣದ ಪೂರೈಕೆಯಲ್ಲಿ ಕೊರತೆ ಮತ್ತು ಅಸಮರ್ಪಕತೆ ಪದೇ ಪದೇ ಕಾಣಿಸಿಕೊಂಡು ಮನೆ ಕಟ್ಟಲು ಅಡ್ಡಿಯಾಗುತ್ತಿರುವುದು ಸಾಮಾನ್ಯ ಎಲ್ಲರ ಅನುಭವ. ಹೀಗಾಗಿ ಆಯಾ ಸ್ಥಳಗಳಲ್ಲೇ ಸುಲಭವಾಗಿಯೂ ಆರ್ಥಿಕವಾಗಿಯೂ ದೊರೆಯುವ ಮಣ್ಣು, ಕಲ್ಲು, ಇಟ್ಟಿಗೆ, ಮರಳು ಸುಣ್ಣ ಮುಂತಾದವನ್ನೇ ಪ್ರಧಾನವಾಗಿ ಅವಲಂಬಿಸಿ ಸುಭದ್ರ ಮನೆಗಳನ್ನು ಏಕೆ ರಚಿಸಬಾರದು ಎಂಬ ದಿಶೆಯಲ್ಲಿ ಗೃಹರಚನಕಾರರ ಚಿಂತನೆ ಹರಿಯುತ್ತಿದೆ. ಮನೆಗೆ ಸಂಬಂಧಿಸಿದ ಗೋಡೆ ಮಾಡು ಮುಂತಾದವನ್ನು ಮೊದಲೇ ಒಂದು ಆಲೇಖ್ಯಾನುಸಾರ ತಯಾರಿಸಿಕೊಂಡು ನಿವೇಶನದ ಮೇಲೆ ಕಟ್ಟುವ ಪೂರ್ವರಚಿತ (ಪ್ರೀಫ್ಯಾಬ್ರಿಕೇಟೆಡ್) ಮನೆಗಳು, ಆಧಾರಸ್ತಂಭಗಳನ್ನು ಅಡ್ಡ ತೊಲೆ ರಿಕಾಪು ದ್ವಾರಬಂಧ ಮುಂತಾದವನ್ನು ನಿಲ್ಲಿಸಿ ಮನೆಯ ಕಂಕಾಲವನ್ನು ರಚಿಸಿ ಬಳಿಕ ಗೋಡೆಗಳನ್ನು ಲಘುವಾಗಿ ಕಟ್ಟಿ ಮಾಡಿದ ಮನೆಗಳು ಇವೇ ಮುಂತಾದವು ಇಂದಿನ ನೂತನ ವಿಧಾನಗಳು.

ಉಪಯುಕ್ತತೆ : ವ್ಯಕ್ತಿ ಮತ್ತು ಆತನ ಕುಟುಂಬಕ್ಕೆ ತಕ್ಕಷ್ಟು ಮಟ್ಟಿನ ಏಕಾಂತವನ್ನು ಒದಗಿಸುವ ನೆಲೆಯೇ ಮನೆ. ಹಜಾರ, ನಡುಮನೆ, ಕೋಣೆಗಳು, ಅಡುಗೆಮನೆ, ಶೌಚಗೃಹಗಳು, ಗೆರಾಜ್, ಕೊಟ್ಟಿಗೆ ಇವೆಲ್ಲವೂ ನಿವೇಶನದ ವಿನ್ಯಾಸವನ್ನೂ ಯಜಮಾನನ ಆವಶ್ಯಕತೆಯನ್ನೂ ಅವಲಂಬಿಸಿ ಮನೆ ಆಲೇಖ್ಯದಲ್ಲಿ ಅಡಕವಾಗಿ ಅಳವಡಿಕೆ ಗೊಂಡಿರಬೇಕು. ವಾಯುಸಂಚಾರ ಸಲೀಸಾಗಿರುವಂತೆ, ಎಲ್ಲ ಕೊಠಡಿಗಳಿಗೂ ಬೆಳಕು ಸರಿಯಾಗಿ ಬೀಳುವಂತೆ ಮತ್ತು ಮನೆಯೊಳಗೆ ಪರಸ್ಪರ ಸಂಪರ್ಕ ಸುಲಭವಾಗಿರುವಂತೆ ಕಿಟಕಿ ಬಾಗಿಲುಗಳನ್ನು ನಿಲ್ಲಿಸಬೇಕು. ಮಿತವ್ಯಯ ಸಾಧಿಸುವ ಉದ್ದೇಶದಿಂದ ಒಳಮುಚ್ಚಿಗೆಯ ಎತ್ತರವನ್ನು ಕಡಿಮೆ ಮಾಡುವ ಪ್ರವೃತ್ತಿ ಕೆಲವು ಕಡೆ ಕಂಡುಬರುತ್ತಿದೆ. ತೀರ ಚಳಿಯೂರುಗಳಲ್ಲಿ ಪ್ರಾಯಶಃ ಇದು ಸರಿ ಎನ್ನಿಸಬಹುದು. ಆದರೆ ಉಷ್ಣವಲಯದಲ್ಲಿ ಇರುವ, ಹೆಚ್ಚಾಗಿ ಸೆಕೆಗೇ ಪ್ರಸಿದ್ಧವಾಗಿರುವ ಊರುಗಳಲ್ಲಿ ಒಳಮುಚ್ಚಿಗೆಯನ್ನು ಬಲು ಕೆಳಗಿರುವಂತೆ ಕಟ್ಟಿದರೆ ಕೊಠಡಿಯೊಳಗಿನ ವಾಯು ಗಾತ್ರ ಅಷ್ಟು ಕಡಿಮೆಯಾಗಿ ಸೆಕೆ ಅಸಹನೀಯವಾಗುತ್ತದೆ. ಮನೆಯೊಳಗೆ ವಾಸಕ್ಕೆ ಆದಷ್ಟು ಹೆಚ್ಚು ಸ್ಥಳವೂ ನಡಿಗೆಗೆ ಆದಷ್ಟು ಕಡಿಮೆ ಸ್ಥಳವೂ ಒದಗುವಂತೆ ಮನೆಯ ಆಲೇಖ್ಯವನ್ನು ರಚಿಸುವುದೊಂದು ಕೌಶಲ. ಗೋಡೆಗಳಿಗೆ ಗೂಡುಗಳನ್ನು ಜೋಡಿಸುವಾಗ, ವಿಶಾಲವಾದ ನಡುಮನೆಯನ್ನು ವಿಭಾಗಿಸಬೇಕೆಂದು ಉದ್ದೇಶಿಸಿ ಮರದ ತಡಿಕೆಗಳನ್ನು ಅಳವಡಿಸುವಾಗ, ಮೇಜುಗಳನ್ನೂ ಆಸನಗಳನ್ನೂ ಹೊಂದಿಸುವಾಗ ಉಪಯುಕ್ತತೆಯನ್ನೂ ಸೌಂದರ್ಯಪ್ರಜ್ಞೆಯನ್ನೂ ಉಳಿಸಿಕೊಂಡಿರುವುದು ಸಾಧ್ಯ. ಉದಾಹರಣೆಗೆ, ಒಂದು ಗೂಡಿನ ಬಾಗಿಲನ್ನು ತೆರೆದು ಅದನ್ನು ಮೇಜಿನಂತೆ ಉಪಯೋಗಿಸಬಹುದು. ಮಡಿಕೆ ಮಡಿಕೆಯಾಗಿರುವ ತಡಿಕೆಯನ್ನು ನಡುಕೋಣೆಯ ವಿಭಾಗೀಕರಣಕ್ಕೆ ಬಳಸಿದರೆ ಅದರ ಉಪಯೋಗ ಬೇಡವಾದಾಗ ಇದನ್ನು ಮಡಿಸಿ ಅಡಕವಾಗಿ ಒಂದು ಮೂಲೆಯಲ್ಲಿ ಪೇರಿಡಬಹುದು. ಸಾರಾಂಶವಿಷ್ಟೆ. ಒಂದು ಆಧುನಿಕ ಮನೆಯ ಒಂದೊಂದು ಬಿಡಿರಚನೆಯೂ ಉಪಯುಕ್ತತೆಯನ್ನು ಅವಲಂಬಿಸಿ ಇರುತ್ತದೆ.

ಸೌಂದರ್ಯ : ಮನೆ ಯಜಮಾನನ ಕಲಾದೃಷ್ಟಿಯ ಪ್ರಕಟಿತರೂಪ ಮನೆ ಆಗಿರಬೇಕು. ಉಪಯುಕ್ತತೆಯೊಂದಿಗೆ ಸೌಂದರ್ಯವನ್ನು ಸಮರಸವಾಗಿ ಹೊಂದಿಸಿ ಸಾಕಷ್ಟು ಮಿತವ್ಯಯದಿಂದಲೇ ಮನೆಯನ್ನು ಕಟ್ಟುವುದು ಸಾಧ್ಯ. ಆದರೆ ಇಲ್ಲೆಲ್ಲ ಅನೇಕ ವೇಳೆ ಮನೆಯ ಯಜಮಾನನಿಗೆ ಉಪಯುಕ್ತತೆಯನ್ನು ಕುರಿತಾಗಲೀ ಸೌಂದರ್ಯವನ್ನು ಕುರಿತಾಗಲೀ ಸ್ಪಷ್ಟಭಾವನೆ ಇರುವುದಿಲ್ಲ. ನೋಡಿದ ಹತ್ತು ಮನೆಗಳಲ್ಲಿ ಅವನು ಹತ್ತು ಗುಣಗಳ ಜೊತೆಗೆ ಹತ್ತು ದೋಷಗಳನ್ನು ಕಂಡಿರುತ್ತಾನೆ. ಈ ದೋಷಗಳನ್ನು ಕಳೆದು ಗುಣಗಳನ್ನು ಸುಸಂಗತವಾಗಿ ಮೇಳೈಸಿ ತನ್ನ ದೃಷ್ಟಿಗೆ ಅನುಸಾರವಾದ ಮನೆ ಹೇಗಿರಬೇಕು ಎಂಬ ಖಚಿತ ನಿರ್ದೇಶನ ನೀಡುವಲ್ಲಿ ಆತ ಸೋಲುತ್ತಾನೆ. ಇಂಥ ಪರಿಸ್ಥಿತಿಗಳಲ್ಲಿ ತಜ್ಞ ವಾಸ್ತುಶಿಲ್ಪಿಯ ಹಾಗೂ ಎಂಜಿನಿಯರನ ಮರೆ ಹೋಗುವುದೇ ಸರ್ವ ಶ್ರೇಯಸ್ಕರ. ಮೇಲುನೋಟಕ್ಕೆ ಇದು ದುಬಾರಿಯ ದಾರಿ ಅನ್ನಿಸಬಹುದು. ಆದರೆ ಮನೆ ಕಟ್ಟಿ ಮುಗಿಯುವ ವೇಳೆಗೆ ದಕ್ಷ ವಾಸ್ತುಶಿಲ್ಪಿಯ ಆಲೇಖ್ಯದಿಂದ ಸಾಧಿತವಾಗುವ ಮಿತವ್ಯಯ, ಉಪಯುಕ್ತತೆ ಹಾಗೂ ಸೌಂದರ್ಯ ವರ್ಧನೆ ಈ ನಿರ್ಧಾರ ಎಷ್ಟು ಸಮರ್ಪಕ ಎಂಬುದನ್ನು ಸಮರ್ಥಿಸದಿರವು. ಒಂದು ಉಪಯುಕ್ತ ಮನೆ ಸೌಂದರ್ಯಪೂರಿತವಾಗಿಯೂ ಇರಬಲ್ಲದು. ಮತ್ತು ವಿಲೋಮವಾಗಿ, ಒಂದು ಸುಂದರ ಮನೆ ಉಪಯುಕ್ತವಾಗಿಯೂ ಇರಬಲ್ಲುದು ಎಂಬುದನ್ನು ಮನೆ ಮಾಲೀಕರು ಮನಗಾಣಬೇಕು. ಮನೆಯ ಸುತ್ತಲೂ ಇರುವ ಜಾಗದಲ್ಲಿ ಹೂ ಮತ್ತು ತರಕಾರಿ ತೋಟಗಳನ್ನು ಬೆಳೆಸುವುದರಿಂದ ಮನೆಯ ಒಟ್ಟಂದ ವೃದ್ಧಿ ಆಗುತ್ತದೆ; ಅಲ್ಲದೆ ಈ ಹವ್ಯಾಸ ಆರ್ಥಿಕವಾಗಿ ಸ್ವಯಂಪೂರ್ಣವಾಗಿಯೂ ಇರುತ್ತದೆ. ಕುಂಡಸಸ್ಯಗಳು, ಪೆಟ್ಟಿಗೆ ತರಕಾರಿಗಳು ಮುಂತಾದವು ಲಭ್ಯಜಾಗವನ್ನು ಯಜಮಾನನ ಅಭಿರುಚಿಯನ್ನು ಅವಲಂಬಿಸಿ ಬೆಳೆಸಬಹುದಾದ ಉಪಯುಕ್ತ ಪರಿಕರಗಳು.

ಭದ್ರತೆ : ಪರಿಸರದ ಭೌತಸನ್ನಿವೇಶದ ಜೊತೆಗೆ ಯಜಮಾನನ ವಿಶಿಷ್ಟವೃತ್ತಿ ಇಲ್ಲವೇ ಅಂತಸ್ತು ಸಹ ಭದ್ರತೆಯ ಮೇಲೆ ಪ್ರಭಾವಿಗಳು. ಜವುಗು ಪ್ರದೇಶಗಳು, ಮಳೆಗಾಲದಲ್ಲಿ ನೆರೆನೀರು ಮಗಚುವ ಸಂಭಾವ್ಯತೆಯ ನಿವೇಶನಗಳು, ಭೂಕಂಪ ಪೀಡಿತ ಪ್ರದೇಶಗಳು, ನೆಲ ನಡುಗಿಸುವ ರೈಲು ಮುಂತಾದ ಭಾರೀ ವಾಹನ ಮಾರ್ಗಗಳ ಸಮೀಪದ ಜಾಗಗಳು, ನೆಲದ ವಿನ್ಯಾಸ (ಏರಿಳಿತಗಳು, ಕಮರಿಗಳು ಇತ್ಯಾದಿ), ಮಳೆಗಾಲ ಬಿಸಿಲು ತೀವ್ರವಾಗಿರುವ ನಗರಗಳು ಇವೇ ಮುಂತಾದವು ಪರಿಸರದ ಭೌತಸನ್ನಿವೇಶಗಳನ್ನು ರಚಿಸುತ್ತವೆ. ಇಂಥಲ್ಲಿ ಮನೆಯ ಪಾಯ ಗೋಡೆಗಳ ಗಾತ್ರ, ಕಕ್ಕಟ್ಟುಗಳ ಭದ್ರತೆ ಮುಂತಾದವನ್ನು ಯೋಗ್ಯವಾಗಿ ನಿರ್ಧರಿಸಬೇಕಾಗುತ್ತದೆ.

ಗೃಹನಿರ್ಮಾಣ ಸಂಸ್ಥೆಗಳು : ಮನೆಗಳನ್ನೋ ಹಲವಾರು ಉಪ್ಪರಿಗೆಗಳ ವಠಾರಗಳನ್ನೋ ಸಾಮೂಹಿಕವಾಗಿ ಒಂದು ನಿರ್ದಿಷ್ಟ ಆಲೇಖ್ಯಾನುಸಾರ ಕೇಂದ್ರೀಯ ಮೇಲ್ವಿಚಾರಣೆಯಲ್ಲಿ ಕಟ್ಟಿಸಿ ಬೇರೆ ಬೇರೆ ಆರ್ಥಿಕವರ್ಗಗಳ ವ್ಯಕ್ತಿಗಳಿಗೆ ಅವನ್ನು ಮಾರಲು ಏರ್ಪಾಡುಗೊಂಡ ಸಂಸ್ಥೆಗಳಿವು. ಇವುಗಳಲ್ಲಿ ಸಹಕಾರ ಸಂಘಗಳಿವೆ, ಖಾಸಗಿ ಸಂಘಗಳಿವೆ, ಅಲ್ಲದೆ ಸರ್ಕಾರದ ವತಿಯಿಂದ ಸ್ಥಾಪಿಸಲ್ಪಟ್ಟ ನಗರಾಭಿವೃದ್ಧಿ ಮಂಡಳಿಗಳು (ಟ್ರಸ್ಟ್ ಬೋರ್ಡ್) ಸಹ ಇವೆ. ಇಂಥವುಗಳ ಜೊತೆಗೆ ಗೃಹನಿರ್ಮಾಣ ಮಾಡಲು ಬಯಸುವ ಮಾಲೀಕರಿಗೆ ಸಾಲವನ್ನು ಒದಗಿಸುವ ಈ ಸಂಸ್ಥೆಗಳನ್ನು ಹೆಸರಿಸಬಹುದು. ಇಲ್ಲೆಲ್ಲ ಉದ್ದೇಶವೆಂದರೆ ಜನರಿಗೆ ಮಿತಬೆಲೆಯಲ್ಲಿ ಯೋಗ್ಯ ಮನೆಗಳನ್ನು ಒದಗಿಸುವುದು; ಮತ್ತು ಅದರೊಂದಿಗೆ ನಗರದ ವಿಸ್ತರಣೆಯನ್ನು ಕ್ರಮಬದ್ಧವಾಗಿ ಮಾಡುವುದು. ಸಾಮಾನ್ಯವಾಗಿ ಹಳ್ಳಿ ಪಟ್ಟಣಗಳಿಂದ ತೊಡಗಿ ಮಹಾನಗರಗಳ ವರೆಗೂ ಈ ರೀತಿ ತಯಾರಾದ ಗೃಹಸಮುದಾಯಗಳನ್ನು ಭಾರತದಲ್ಲಿ ನೋಡಬಹುದು. ಚಂಡೀಗಢದಲ್ಲಿ ಆಧುನಿಕ ನಗರವೊಂದನ್ನೇ ಕೇಂದ್ರೀಯವಾಗಿ ಕಲ್ಪಿಸಿಕೊಂಡು ಆಲೇಖ್ಯವನ್ನು ತಯಾರಿಸಿ ರಚಿಸಲಾಗಿದೆ.

ಮನೆಯ ಪರಿಕಲ್ಪನೆ ಮತ್ತು ರಚನೆ ನಿರಂತರ ವಿಮರ್ಶೆ, ಪ್ರಯೋಗ ಮತ್ತು ಬದಲಾವಣೆಗಳಿಗೆ ಒಳಗಾಗಿರುವ ಅಂಶಗಳು. (ಕೆ.ಸಿ.ಜಿ.)

# ಗೃಹ ಕೈಗಾರಿಕೆಗಳು

**ಗೃಹ ಕೈಗಾರಿಕೆಗಳು :** ಮನೆಯನ್ನೇ ಕೈಗಾರಿಕಾ ಸ್ಥಳವಾಗಿ ಮಾಡಿಕೊಂಡು ಮನೆಯವರೆಲ್ಲ ಕೂಡಿ ತಮ್ಮ ಬಿಡುವಿನ ಸಮಯದಲ್ಲಿ ಉತ್ಪಾದಿಸುವ ಸಾಮಾನ್ಯ ಬಳಕೆಯ ವಸ್ತುಗಳ ಉದ್ಯಮ. ಕರ್ನಾಟಕ ಗೃಹಕೈಗಾರಿಕೆಗಳು ಹಿಂದಿನಿಂದಲೂ ಪ್ರಸಿದ್ಧ. ಅವುಗಳಲ್ಲಿ ಕುಂಬಾರಿಕೆ, ನೇಯ್ಗೆ, ಬಿದಿರು ಮತ್ತು ಬೆತ್ತದ ಸಾಮಾನುಗಳ ತಯಾರಿಕೆ, ಚಾಪೆ ಹೆಣಿಗೆ, ಚರ್ಮ ವಸ್ತುಗಳ ತಯಾರಿಕೆ, ನೂಲಿಗೆ ಬಣ್ಣ ಕಟ್ಟುವುದು, ಬಟ್ಟೆ ತಯಾರಿಕೆ, ಪುಸ್ತಕಗಳನ್ನು ಹೊಲಿಯು ವುದು, ಬೀಜಗಳಿಂದ ಎಣ್ಣೆ ತೆಗೆಯುವುದು, ಚಿನ್ನಬೆಳ್ಳಿ ಮತ್ತು ಇತರ ಆಭರಣಗಳ, ಸಂಗೀತ ವಾದ್ಯಗಳ, ವ್ಯವಸಾಯೋಪಕರಣಗಳ, ಜಮಖಾನದ, ಮಣ್ಣಿನ ಪ್ರತಿಮೆಗಳ ಮತ್ತು ತಾಮ್ರಕಂಚು ಹಿತ್ತಾಳೆ ಸಾಮಾನುಗಳ ತಯಾರಿಕೆ, ಆಟದ ಸಾಮಾನು, ಅಲಂಕಾರ ವಸ್ತು, ರಬ್ಬರ್ ವಸ್ತುಗಳ ಮತ್ತು ಅಚ್ಚುಗಳ ತಯಾರಿಕೆ, ರಟ್ಟುಕಟ್ಟುವುದು, ಕಸೂತಿ ವಸ್ತುಗಳ ಉತ್ಪಾದನೆ ಮುಂತಾದ ಹಲವಾರು ಕೈಗಾರಿಕೆಗಳಿವೆ. ಅವುಗಳ ಉತ್ಪಾದನೆಗಳೊಂದಿಗೆ ಸಹಕರಿಸುವ ನೂರಾರು ಉಪಕೈಗಾರಿಕೆಗಳೂ ಉಂಟು. ಉದಾಹರಣೆಗೆ ಚರ್ಮೋದ್ಯೋಗಕ್ಕೆ ಬೇಕಾದ ಸುಣ್ಣ, ನೂಲಿಗೆ ಬೇಕಾಗುವ ಬಣ್ಣ ಇತ್ಯಾದಿ. ಇವು ಅಲ್ಪ ಪ್ರಮಾಣದಲ್ಲಾದರೂ ತಯಾರಾಗಬಹುದು, ಇಲ್ಲವೆ ಭಾರಿ ಉದ್ಯಮವೇ ಆಗಿರಬಹುದು. ಗೃಹ ಕೈಗಾರಿಕಾ ವಸ್ತುಗಳ ಉತ್ಪಾದನೆಯ ಜೊತೆಯಲ್ಲಿ ಇತರ ಉಪವಸ್ತುಗಳೂ ನಮಗೆ ದೊರಕುತ್ತವೆ. ಉದಾಹರಣೆಗೆ ಎಣ್ಣೆ ಉತ್ಪಾದನೆಯ ಜೊತೆಯಲ್ಲಿ ಹಿಂಡಿ, ಅಕ್ಕಿ ಕುಟ್ಟುವುದರಿಂದ ತೌಡು ಇತ್ಯಾದಿಗಳನ್ನು ಹೆಸರಿಸಬಹುದು. ಗೃಹಕೈಗಾರಿಕೆಗಳು ಇತರ ಸಹವಸ್ತುಗಳನ್ನು ಉತ್ಪಾದಿಸುವುದಲ್ಲದೆ ಹಿರಿಯ ಕೈಗಾರಿಕೋದ್ಯಮಕ್ಕೆ ಕಚ್ಚಾಮಾಲನ್ನೂ ಉಪಯುಕ್ತ ವಸ್ತುಗಳನ್ನೂ ತಯಾರಿಸಿ ರಾಜ್ಯದ ಕೈಗಾರಿಕೋದ್ಯಮದ ಬೆಳವಣಿಗೆಗೆ ಸಹಕಾರಿಯಾಗಿದೆ.



ಗುಂಚಿಯ ಕೆತ್ತನೆ

ಈ ಎಲ್ಲ ಉದ್ಯಮಗಳಿಗೆ ಬೇಕಾಗುವ ಪ್ರಾಕೃತಿಕ ಕಚ್ಚಾವಸ್ತುಗಳು ಕರ್ನಾಟಕದಲ್ಲಿ ಹೇರಳವಾಗಿವೆ. ಮರದ, ಬಿದಿರಿನ ಮತ್ತು ನಾರಿನ ಉದ್ಯಮಕ್ಕೆ ಕರ್ನಾಟಕದ ಕಾಡುಗಳಲ್ಲಿ ಉತ್ತಮ ಮರಗಳು, ಬಿದಿರು, ನಾರಿನ ಕತ್ತಾಳೆ ಇವು ದೊರೆಯುತ್ತವೆ. ಕಬ್ಬಿಣಕ್ಕೂ ಕೊರತೆ ಇಲ್ಲ. ಕುಂಬಾರಿಕೆಗೆ ಬೇಕಾಗುವ ಜೇಡಿ ಮತ್ತು ಇತರ ಮಣ್ಣುಗಳು ರಾಜ್ಯದ ಅನೇಕ ಕಡೆ ಹೇರಳವಾಗಿ ದೊರೆಯುವುದು. ಜೇನುಸಾಕಣೆಗೆ ವಿಶಾಲವಾದ ಕಾಡುಗಳೂ ಉದ್ಯಾನವನಗಳೂ ಇವೆ.

**ಲೋಹ ಕಲಾಕೃತಿ :** ಪಶುಸಂಪತ್ತು ಸಮೃದ್ಧಿಯಾಗಿದ್ದು ಚರ್ಮೋದ್ಯೋಗಕ್ಕೆ ಅನುಕೂಲವಾಗಿದೆ. ನಾನಾ ತರಹದ ಎಣ್ಣೆಬೀಜಗಳು, ಉದಾಹರಣೆಗೆ ಹೊಂಗೆ, ಬೇವು, ಹರಳು, ನೆಲಗಡಲೆ, ಎಳ್ಳು, ಹುಚ್ಚೆಳ್ಳು ಇತ್ಯಾದಿಗಳು ಬೆಳೆಯುವುದರಿಂದ

ಲೋಹ ಕಲಾಕೃತಿ

ತೈಲೋದ್ಯಮಕ್ಕೆ ಅನುಕೂಲವಿದೆ. ಬತ್ತ ರಾಜ್ಯದ ಒಂದು ಮುಖ್ಯ ಬೆಳೆಯಾಗಿದ್ದು ಕೊಟ್ಟಣದ ಅಕ್ಕಿ ಉದ್ಯಮ ನಡೆದುಕೊಂಡು ಹೋಗುತ್ತಿದೆ. ಕಬ್ಬು ರಾಜ್ಯದ ಇನ್ನೊಂದು ಪ್ರಮುಖ ಬೆಳೆಯಾಗಿದ್ದು, ಬೆಲ್ಲ ಮತ್ತು ಖಂಡಸಾರಿ ಉದ್ಯಮಕ್ಕೂ ಸಿಪ್ಪೆ ಕಾಗದ ತಯಾರಿಕೆಗೂ ಬರುತ್ತದೆ. ಅಖಾದ್ಯ ತೈಲಗಳ ಉತ್ಪತ್ತಿಯೂ ಸಾಕಷ್ಟು ಇದ್ದು ಈ ತೈಲಗಳನ್ನು ಸಾಬೂನು ತಯಾರಿಕೆಗೆ ಉಪಯೋಗಿಸುತ್ತಾರೆ. ಕಂಬಳಿ ತಯಾರಿಕೆಗೆ ಸಾಕಷ್ಟು ಉಣ್ಣೆಯ ಪೂರೈಕೆ ಇದೆ. ಕತ್ತಾಳೆ ಮುಂತಾದವುಗಳಿಂದ ನಾರಿನ ಉತ್ಪತ್ತಿಯಾಗುತ್ತದೆ.

**ಬಣ್ಣದ ಆಟಿಕೆಗಳು:** ಅಂದಿನ ಮೈಸೂರು ಸರ್ಕಾರ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಗೃಹಕೈಗಾರಿಕೆಗಳನ್ನು ಉಳಿಸಿ ಬೆಳೆಸುವ ದೃಷ್ಟಿಯಿಂದ 1916ರಲ್ಲಿ ಗೃಹಕೈಗಾರಿಕಾ ಸಂಸ್ಥೆಯನ್ನು ಸ್ಥಾಪಿಸಿತು. ಈ ಯೋಜನೆ ನಿಧಾನಗತಿಯಲ್ಲಿ ಸಾಗಿದ್ದು 1939ರಲ್ಲಿ ಒಂದು ವ್ಯಾಪಕ ಯೋಜನೆ ಸಿದ್ಧಪಡಿಸಿ ಜಾರಿಗೊಳಿಸಲಾಯಿತು. ಇದರಂತೆ ಮಾದರಿ ಮಡಕೆಕುಡಿಕೆಗಳ ತಯಾರಿಕೆ, ಗುಂಡಿ ಮತ್ತು ಚರ್ಮ ವಸ್ತುಗಳ ತಯಾರಿಕೆ ಇವೇ ಮೊದಲಾಗಿ 17 ಬಗೆಯ ಗೃಹಕೈಗಾರಿಕೆಗಳು ಸ್ಥಾಪನೆಯಾದವು. ಜೊತೆಗೆ ರಾಜ್ಯದ ಕೆಲವು ಭಾಗಗಳಲ್ಲಿ ತರಬೇತಿ ಕೇಂದ್ರಗಳು ಸ್ಥಾಪಿತವಾದವು. ಮುಂದೆ ಕೈಗಾರಿಕೋದ್ಯಮದ ಬೆಳವಣಿಗೆಗೆ ಮತ್ತು ನಿರುದ್ಯೋಗ ನಿವಾರಣೆಗೆ ಗೃಹಕೈಗಾರಿಕೆಗಳ ಅಭಿವೃದ್ಧಿ ಅಗತ್ಯವೆಂಬುದನ್ನು ಮನಗಂಡು ಸರ್ಕಾರ ಕೆಲವು ಮಂಡಳಿಗಳನ್ನು ಸ್ಥಾಪಿಸಿತು.

ಬಣ್ಣದ ಆಟಿಕೆಗಳು

ಅವುಗಳಲ್ಲಿ ಮುಖ್ಯವಾದವು ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಆಯೋಗ, ಅಖಿಲ ಭಾರತ ಕೈಮಗ್ಗದ ಮಂಡಳಿ, ಅಖಿಲ ಭಾರತ ಕುಶಲ ಕೈಗಾರಿಕೆಗಳ ಮಂಡಳಿ, ಅಖಿಲ ಭಾರತ ತೆಂಗಿನ ನಾರಿನ ಕೈಗಾರಿಕಾಭಿವೃದ್ಧಿ ಮಂಡಳಿ ಮತ್ತು ಕೇಂದ್ರ ರೇಷ್ಮೆ ಮಂಡಳಿ ಇತ್ಯಾದಿ. ಇವೆಲ್ಲವೂ ರಾಜ್ಯ ಮಟ್ಟದಲ್ಲಿ ತಮ್ಮ ಮಂಡಳಿಗಳನ್ನು ಹೊಂದಿದ್ದು ಸಂಬಂಧಿಸಿದ ಕೈಗಾರಿಕಾಭಿವೃದ್ಧಿಗೆ ಶ್ರಮಿಸುತ್ತಿವೆ. ಈ ಮಂಡಳಿಗಳ ಮೂಲಕ ಸರ್ಕಾರ ಗೃಹಕೈಗಾರಿಕೆಗಳಿಗೆ ಆರ್ಥಿಕ ನೆರವನ್ನು ಸಾಲ ಮತ್ತು ಸಹಾಯಧನದ ಜೊತೆಗೆ

ಬಣ್ಣದ ಬುಟ್ಟಿಗಳು

ತಾಂತ್ರಿಕ ಸಹಾಯ ಮತ್ತು ತರಬೇತಿಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಗೃಹಕೈಗಾರಿಕೆಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತಿದೆ.

ಪ್ರಾಚೀನ ಕಾಲದಿಂದ ಗೃಹಕೈಗಾರಿಕೆಗಳು ದೇಶದ ಆರ್ಥಿಕ ಚಟುವಟಿಕೆಯ ಮುಖ್ಯ ಅಂಗವಾಗಿದ್ದುವು. ಆದರೆ ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತದ ಇತರ ಕಡೆಗಳಂತೆಯೇ ಕರ್ನಾಟಕ ರಾಜ್ಯದ ಗೃಹಕೈಗಾರಿಕೆಗಳು ಸರಿಯಾದ ಪ್ರೋತ್ಸಾಹ

ದೊರಕದೆ ಥಳುಕಿನ ಇಂಗ್ಲಿಷ್ ವಸ್ತುಗಳೊಡನೆ ಸ್ಪರ್ಧಿಸಲಾರದೆ ಹಿಂದೆ ಬೀಳಬೇಕಾಯಿತು. ಸ್ವಾತಂತ್ರ್ಯಾನಂತರ ಗೃಹಕೈಗಾರಿಕೆಗಳು ಚೇತರಿಸಿಕೊಂಡವು. ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗಿಗಳಾಗಿರುವ ಮತ್ತು ಸಾಕಷ್ಟು ಉದ್ಯೋಗ ಇಲ್ಲದಿರುವ ಜನರಿಗೆ ನೆರವಾಗುವ ಉದ್ದೇಶದ ಯೋಜನೆಯಂತೆ 1950ರಲ್ಲಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಯೋಜನೆಯನ್ನು ಜಾರಿಗೊಳಿಸಿ ಅದರ ಉತ್ತಮ ಫಲಿತಾಂಶಗಳಿಂದ ಮುಂದೆ ಇಡೀ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾಯಿತು. ಈ ಯೋಜನೆಯನ್ವಯ ಅಸ್ತಿತ್ವದಲ್ಲಿದ್ದ ಕೈಗಾರಿಕೆಗಳನ್ನು ವಿಸ್ತರಿಸಲು ಹಾಗೂ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಮೂಹಿಕ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು 1952ರಲ್ಲಿ ರಚಿಸಲಾಯಿತು. ಗ್ರಾಮಾಂತರ ಕೈಗಾರಿಕಾ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಇವು ಗ್ರಾಮಾಂತರ ಪ್ರದೇಶಗಳ ಕಸಬುದಾರರಿಗೆ ಮತ್ತು ಉದ್ಯಮಗಳಿಗೆ ಬಲು ಪ್ರಯೋಜನಕಾರಿಯಾದವು. ಅನಂತರ ಈ ಕಾರ್ಯಕ್ರಮಗಳನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ವಿಲೀನಗೊಳಿಸಲಾಯಿತು.

ಎರಡನೆಯ ಯೋಜನೆಯಲ್ಲಿ ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಿಸಲಾಯಿತು. ಏಕೆಂದರೆ ಗ್ರಾಮಾಂತರ ಗೃಹಕೈಗಾರಿಕೆಗಳು ಬೆಳೆದು ಸಣ್ಣ ಕೈಗಾರಿಕೆಗಳ ಮಟ್ಟಕ್ಕೆ ಬರುವುದರಿಂದ ಅವುಗಳ ಅಭಿವೃದ್ಧಿಗೆ ಮೈಸೂರು, ಬೆಂಗಳೂರು, ಹುಬ್ಬಳ್ಳಿ, ರಾಮನಗರ, ಹರಿಹರ, ಬೆಳಗಾಂವಿ, ಮಂಗಳೂರು, ಗುಲ್ಬರ್ಗಗಳಲ್ಲಿ ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಾಣ ಮಾಡಲಾಯಿತು. 1959ರಲ್ಲಿ ಮೈಸೂರು ಸಣ್ಣ ಕೈಗಾರಿಕೆ ಮತ್ತು ಕರಕುಶಲ ಕಸಬುಗಳ ಮಂಡಳಿಯನ್ನು ರಚಿಸಲಾಯಿತು. ಬಲೆನೇಯ್ಗೆ, ಗಂಧದ ಕೆತ್ತನೆ, ದಂತದ ಕೆತ್ತನೆ, ಲೋಹಸಾಮಗ್ರಿ, ಮರದ ಆಟದ ಬೊಂಬೆ ತಯಾರಿಕೆ ಮುಂತಾದ ನಾನಾ ಕಸಬುಗಳು ಉಳಿದು ಕೈಗಾರಿಕೆಗಳು ಅಭಿವೃದ್ಧಿ ಹೊಂದಲು ಸರ್ಕಾರ ಹಲವಾರು ಉತ್ತೇಜನಗಳನ್ನು ಕೈಗೊಂಡಿತು. ಅವುಗಳೆಂದರೆ ಸಾಧ್ಯಾಸಾಧ್ಯತೆಯ ವರದಿ ಸಿದ್ಧಪಡಿಸಲು ಸಹಾಯ, ತೆರಿಗೆ ವಿನಾಯಿತಿ, ವ್ಯಾಪಾರ ತೆರಿಗೆ ರಿಯಾಯಿತಿ, ಆಕ್ಟ್ರಾಯ್ ರಿಯಾಯಿತಿ ಮತ್ತು ಉತ್ಪನ್ನಗಳನ್ನು ಸರ್ಕಾರ ಖರೀದಿ ಮಾಡುವುದು, ಕೈಗಾರಿಕಾ ಶಿಕ್ಷಣ ಕೇಂದ್ರಗಳನ್ನು ತೆರೆದು ಉಚಿತ ಶಿಕ್ಷಣ ಕೊಟ್ಟು ಗೃಹಕೈಗಾರಿಕೆಗಳಿಗೆ ತರಬೇತಿ ಪಡೆದ ಕುಶಲಕರ್ಮಿಗಳನ್ನು ಒದಗಿಸುವುದು ಇದರಲ್ಲಿ ಸೇರಿದೆ.

ಕೈಯಿಂದ ಹೊಲಿದ ಪಾದರಕ್ಷೆಗಳು

ಖಾದಿ ಗ್ರಾಮೋದ್ಯೋಗ ಮಂಡಳಿ ಗೃಹಕೈಗಾರಿಕೆಗಳ ತರಬೇತಿ ಶಿಬಿರಗಳನ್ನೂ ನಡೆಸುವುದಲ್ಲದೆ ಕೆಲವು ಕಡೆ ತರಬೇತಿ ಕೇಂದ್ರಗಳನ್ನೂ ತೆರೆದಿದೆ.

**ಬಣ್ಣದ ಬುಟ್ಟಿಗಳು** : ಕರ್ನಾಟಕದಲ್ಲಿ ಕೈಗಾರಿಕೀಕರಣ ನಡೆದಂತೆ ಗೃಹಕೈಗಾರಿಕೆಗಳ ಸ್ವರೂಪ ಬದಲಾಯಿತು ಮತ್ತು ವಿಸ್ತರಿಸಿತು. ಈ ಬೆಳವಣಿಗೆಯಿಂದ ಕೆಲವು ಗೃಹಕೈಗಾರಿಕೆಗಳು ಅಭಿವೃದ್ಧಿ ಹೊಂದಿದವು. ಅವುಗಳೆಂದರೆ ಊಟದ ಎಲೆ ಹಾಗೂ ದೊನ್ನೆ ತಯಾರಿಕೆ, ಬಳಪಕಲ್ಲಿನಿಂದ ಸಾಮಾನುಗಳನ್ನು ತಯಾರಿಸುವುದು, ಹುಲ್ಲಿನಿಂದ ಹಲಗೆ, ಹಾಸುಗಳು ಹಾಗೂ ಪ್ಯಾಕಿಂಗ್ ಪದಾರ್ಥಗಳನ್ನು ತಯಾರಿಸುವುದು, ಹಿತ್ತಾಳೆ ತಾಮ್ರ ಮುಂತಾದವುಗಳಿಂದ ಗೃಹೋಪಯೋಗಿ ಪದಾರ್ಥಗಳ ತಯಾರಿಕೆ, ಜಾನುವಾರು ಮತ್ತು ಕೋಳಿ ಆಹಾರ ತಯಾರಿಕೆ, ಬ್ರೆಡ್ ತಯಾರಿಕೆ, ರುಬ್ಬಿದ ಕಾಗದದಿಂದ ಸಾಮಾನುಗಳ ತಯಾರಿಕೆ, ಮಸಾಲೆಪುಡಿ, ಉಪ್ಪಿನಕಾಯಿ, ಹಪ್ಪಳ, ಖಾರದಪುಡಿ ವಿವಿಧ ತಿನಿಸುಗಳು ಮುಂತಾದವುಗಳ ತಯಾರಿಕೆ, ಹಲ್ಲಿನ ಪುಡಿ, ತಿಲಕ, ನಕ್ಕಿ, ಸುಗಂಧ ದ್ರವ್ಯಗಳ ತಯಾರಿಕೆ, ಮೇಣದ ಮತ್ತು ಗೋಂದಿನ ಉದ್ಯಮ, ಸೀಸದಕಡ್ಡಿ, ಸ್ಲೇಟುಗಳ ತಯಾರಿಕೆ ಸೀರೆಗಳಿಗೆ ಫಾಲ್ಸ್ ಹಾಕುವುದು, ಎಂಬ್ರಾಯಿಡರಿ ಮಾಡುವುದು ಸಿದ್ಧ ಉಡುಪುಗಳ ತಯಾರಿಕೆ, ಸ್ಕ್ರೀನ್ ಪ್ರಿಂಟಿಂಗ್ ಮುಂತಾದವುಗಳೆಲ್ಲ ಗೃಹಕೈಗಾರಿಕೆಗಳಾಗಿ ಬೆಳೆದಿವೆ. ಇಷ್ಟಾದರೂ ರಾಜ್ಯದ ಗೃಹಕೈಗಾರಿಕೆಗಳು ಅಪೇಕ್ಷಿತ ರೀತಿಯಲ್ಲಿ ಪ್ರಗತಿ ಸಾಧಿಸುತ್ತಿಲ್ಲವೆಂಬ ಮಾತಿದೆ. ಅದಕ್ಕೆ ಮುಖ್ಯ ಕಾರಣಗಳೆಂದರೆ ಬಂಡವಾಳದ ಅಭಾವ, ಕಚ್ಚಾಸಾಮಗ್ರಿಯ ಕೊರತೆ, ಉತ್ಪಾದಿಸಿದ ವಸ್ತುಗಳನ್ನು ಲಾಭದಾಯಕವಾಗಿ ಮಾರಾಟಮಾಡಲು ಆಗದಿರುವುದು, ಇತರ ಆಧುನಿಕ ತಯಾರಿಕಾ ಉದ್ಯಮಗಳೊಡನೆ ಸ್ಪರ್ಧಿಸಲು ಸಾಧ್ಯವಾಗದಿರುವುದು ಮುಂತಾದವು. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಲ್ಲಿನ ವೈಫಲ್ಯವೂ ಹಿನ್ನಡೆಗೆ ಕಾರಣವಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಎಣ್ಣೆಬೀಜಗಳ ಸಂಗ್ರಹ ತೃಪ್ತಿದಾಯಕವಾಗಿಲ್ಲ. ಜೊತೆಗೆ ತಯಾರಿಕಾಘಟ್ಟದಲ್ಲಿ ಉತ್ಪತ್ತಿಯಾಗುವ ಇತರ ವಸ್ತುಗಳನ್ನು ದುರುಪಯೋಗಪಡಿಸಿಕೊಳ್ಳುವುದು, ಬೆಲ್ಲ ತಯಾರಿಕೆಯ ಸಮಯದಲ್ಲಿ ಕಬ್ಬಿನ ರಸ ತೆಗೆದ ಅನಂತರ ಅದರ ಸಿಪ್ಪೆಯನ್ನು ಒಲೆಗೆ ಉರುವಲಾಗಿ ಉಪಯೋಗಿಸಿ ಕಾಗದ ತಯಾರಿಕೆಗೆ ಬೇಕಾದ ಉತ್ಕೃಷ್ಟ ವಸ್ತುವನ್ನು ಹಾಳು ಮಾಡುವುದು, ಕೆಲವೊಂದು ದಂಟುಗಳನ್ನು ವ್ಯರ್ಥವಾಗಿ ಹೊರಗೆ ಹಾಕುವುದು (ಹೊಗೆಸೊಪ್ಪಿನ ದಂಟು) ಇತ್ಯಾದಿ.

**ಕೈಯಿಂದ ಹೊಲಿದ ಪಾದರಕ್ಷೆಗಳು** : ಆದಾಗ್ಯೂ ಕರ್ನಾಟಕ ರಾಜ್ಯ ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಅಗ್ರಪಂಕ್ತಿಯಲ್ಲಿದೆ. ಹಿತ್ತಾಳೆ ಕುಸರಿಕೆಲಸ, ಬೀಟೆ ಮತ್ತು ಗಂಧದ ಮರ ಕುಸರಿ ಕೆಲಸ, ಕೊಂಬುಗಳ ಕೆತ್ತನೆ, ದಂತ ಕೆತ್ತನೆಗಳಲ್ಲಿ ಮುಂಚೂಣಿಯಲ್ಲಿದೆ. ಕರಕುಶಲ ವಸ್ತುಗಳ ಅಭಿವೃದ್ಧಿನಿಗಮ ಈ ನಿಟ್ಟಿನಲ್ಲಿ ಪ್ರೋತ್ಸಾಹ ನೀಡುತ್ತಿದೆ. ರಾಜ್ಯದಲ್ಲಿ ಈಗ 2,45,826 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿವೆ. ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದು 1.4 ಲಕ್ಷ ಕುಶಲಕರ್ಮಿಗಳು ಇದರ ಪ್ರಯೋಜನ ಪಡೆದಿದ್ದಾರೆ. ಪಾರಂಪರಿಕ ಕುಶಲ ಕಲೆಗಳನ್ನು ಪುನಶ್ಚೇತನಗೊಳಿಸಲು 1991 ಅಕ್ಟೋಬರ್ 2ರಂದು ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ 'ವಿಶ್ವ' ಯೋಜನೆ ಪ್ರಾರಂಭಿಸಲಾಯಿತು. ಕಚ್ಚಾವಸ್ತುಗಳ ಅಭಾವ ನೀಗುವುದು, ಸೂಕ್ತ ಮಾರುಕಟ್ಟೆ ಒದಗಿಸುವುದು, ಯುವಕರಿಗೆ ಕರಕುಶಲ ಉದ್ಯಮದಲ್ಲಿ ತರಬೇತಿ ನೀಡುವುದು ಈ ಯೋಜನೆಯ ಗುರಿ. ಬೃಹತ್ ಉದ್ಯಮಗಳು ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಈ ಕ್ಷೇತ್ರ ಈಗ ದೊಡ್ಡ ಸವಾಲುಗಳನ್ನು ಎದುರಿಸುತ್ತಿದೆ. (ಡಿ.ಜಿ.)

**ಗೃಹ ಮತ್ತು ಗೃಹಾಲಂಕರಣ** : ಕರ್ನಾಟಕದಲ್ಲಿ ಗೃಹಗಳನ್ನು ರಚಿಸುವ ಪದ್ಧತಿ ಆರಂಭವಾದುದು ಸು. 4500 ವರ್ಷಗಳ ಪೂರ್ವದಲ್ಲಿ, ನವಶಿಲಾಯುಗ ಕಾಲದಲ್ಲಿ. ಆ ಹಿಂದಿನ ಕಾಲಘಟ್ಟದಲ್ಲಿ ಬೇಟೆಗಾರ ಜನಾಂಗಗಳು ಮಾತ್ರ ಈ ನಾಡಿನಲ್ಲಿ ಇದ್ದರಾಗಿ, ವಲಸೆಗಾರರಾದ ಅವರು ಮನೆಗಳನ್ನು ಕಟ್ಟಿಕೊಂಡು ಒಂದೆಡೆ ನಿಲ್ಲುವ ಅವಕಾಶ ಇದ್ದಿರುವುದು ಕಡಿಮೆ. ನವಶಿಲಾಯುಗದ ಕಾಲದಲ್ಲಾದರೋ ವ್ಯವಸಾಯ ಬಳಕೆಗೆ ಬಂದುದರಿಂದ ಮನೆಗಳನ್ನು ಕಟ್ಟಿ ನೆಲೆಸುವುದು ಆವಶ್ಯಕವಾಯಿತು. ಆದರೆ ಆ ಕಾಲದಲ್ಲಿದ್ದ ಮನೆಗಳು ಯಾವ ರೀತಿಯವು ಎಂಬ ಬಗ್ಗೆ ಸಾಕಷ್ಟು ಮಾಹಿತಿಗಳು ದೊರಕುವುದಿಲ್ಲ. ಧಾರವಾಡ ಜಿಲ್ಲೆಯ ಹಳ್ಳೂರು, ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಮತ್ತು ಸಂಗನಕಲ್ಲು, ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಪಿಕ್ಲಿಹಾಳು, ಮೈಸೂರು ಜಿಲ್ಲೆಯ ಹೆಮ್ಮಿಗೆ ಮೊದಲಾದೆಡೆಗಳಲ್ಲಿ ನಡೆದಿರುವ ಉತ್ಖನನಗಳಿಂದ



ಬೋವಿ ಜನರ ವೃತ್ತಾಕಾರದ ಗುಡಿಸಲುಗಳು, ತೆಕ್ಕಲಕೋಟೆ

ಕೆಲವು ಸೂಚನೆಗಳು ದೊರಕುತ್ತವೆ. ಈ ಎಲ್ಲ ಸ್ಥಳಗಳಲ್ಲೂ ಕಂಬಗಳಿಗಾಗಿ ಮಾಡಿದ ಗುಳಿಗಳು ಕಂಡುಬಂದಿರುವುದರಿಂದ ಆ ಕಾಲದಲ್ಲಿ ಮರದ ಕಂಬಗಳನ್ನು ನೆಟ್ಟು ಎತ್ತಿದ ಗುಡಿಸಲುಗಳ ರಚನೆ ಸಾಮಾನ್ಯವಾಗಿತ್ತು ಎಂದು ಹೇಳಬಹುದು. ಸಂಗನಕಲ್ಲಿನ ಉತ್ಖನನದಲ್ಲಿ ಬಿದಿರಿನ ಪಡಿಯಚ್ಚನ್ನೊಳಗೊಂಡ ಮಣ್ಣಿನ ಭಾಗಗಳು ದೊರೆತಿವೆ. ಸೀಳಿದ ಬೊಂಬಿನ ಜಾಳಿಗೆಗಳನ್ನು ನಾಲ್ಕರಿಂದ ಆರು ಅಡಿಗಳಷ್ಟು ಎತ್ತರದ ಗೋಡೆಗಳ ಮೇಲೆ ನಿಲ್ಲಿಸಿ ಆ ಜಾಳಿಗೆಗಳಿಗೆ ಮಣ್ಣನ್ನು ಮೆತ್ತಲಾಗಿತ್ತು. ಅಲ್ಲಿ ದೊರೆತಿರುವ ಅತಿದೊಡ್ಡ

ಗುಡಿಸಲು 18' (5ಮೀ) ವ್ಯಾಸವುಳ್ಳದ್ದು. ತೆಕ್ಕಲಕೋಟೆಯಲ್ಲಿ ತಗ್ಗುದಿಣ್ಣೆಗಳನ್ನು ಕಲ್ಲುಮಣ್ಣಿನಿಂದ ಮಟ್ಟಸಮಾಡಿ 10'–12' (3–4ಮೀ) ವ್ಯಾಸದ ವೃತ್ತಾಕಾರದ ತಳವಿನ್ಯಾಸವುಳ್ಳ ಏಕಕೋಣೆಯ ಗುಡಿಸಲುಗಳನ್ನು ನಿರ್ಮಿಸುತ್ತಿದ್ದರೆಂಬುದು ತಿಳಿದುಬಂದಿದೆ. ಅಲ್ಲಿನ ಗೋಡೆಗಳು ಬರಿಯ ಬಿದಿರುದಬ್ಬೆ ಅಥವಾ ಕಡ್ಡಿ ಸೊಪ್ಪುಗಳಿಂದ ಮಾಡಿದ ತಡಿಕೆಗಳೋ ಇಲ್ಲವೆ ಅವುಗಳ ಮೇಲೆ ಮಣ್ಣು ಮೆತ್ತಿದ ತಡಿಕೆ ಗೋಡೆಗಳೋ ಆಗಿರುತ್ತಿದ್ದುವು. ಗೋಡೆಯ ಸುತ್ತ ದಪ್ಪ ಕಲ್ಲುಗುಂಡುಗಳನ್ನು ಜೋಡಿಸಿ ಹೊರಗಿನ ನೀರು ಒಳ ಬರದಂತೆ ಮಾಡಿರುವ ವ್ಯವಸ್ಥೆಯೂ ಕಂಡುಬಂದಿದೆ. ಸುಮಾರು ಇದೇ ವೈಶಿಷ್ಟ್ಯಗಳುಳ್ಳ ಗುಡಿಸಲುಗಳನ್ನು ಇತ್ತೀಚಿನ ಬೋವಿ ಜನಾಂಗದವರು ಆ ಪ್ರದೇಶದಲ್ಲಿ ರಚಿಸುತ್ತಾರಾಗಿ, ಅವು ಆ ಕಾಲದಿಂದಲೂ ಉಳಿದುಬಂದಿರುವ ಮಾದರಿಗಳಾಗಿರಬಹುದೆಂಬ ಊಹೆಯ ಮೇಲೆ ನವಶಿಲಾಯುಗದ ಕಾಲದ ಗುಡಿಸಲುಗಳಲ್ಲೂ ಬೋವಿ ಗುಡಿಸಲುಗಳಂತೆ ಚೂಪು ತುದಿಯ ಅರ್ಧಶಂಖು ವಿನಾಕಾರದ ಹುಲ್ಲು ಸೊಪ್ಪಿನ ಚಾವಣಿಯನ್ನು ನಿರ್ಮಿಸಲಾಗುತ್ತಿರಬೇಕೆಂದು ಊಹಿಸಲಾಗಿದೆ. ಹಳ್ಳೂರಿನಲ್ಲಿಯೂ ವೃತ್ತಾಕಾರದ ಗುಡಿಸಲಿನ ಅವಶೇಷಗಳು ದೊರತಿವೆ. ಸುಮಾರು 10' (3ಮೀ) ವ್ಯಾಸದ ಈ ಗುಡಿಸಲಿನ ಮಧ್ಯಭಾಗದಲ್ಲಿ ಎರಡು ಗುಳಿಗಳಿದ್ದವು. ಬಹುಶಃ ವೃತ್ತಾಕಾರದ ಮೇಲ್ಛಾವಣಿಯನ್ನು ಈ ಗುಳಿಗಳಲ್ಲಿ ನೆಟ್ಟಿದ್ದ ಕಂಬಗಳ ಮೇಲೆ ಹೊದಿಸಲಾಗಿತ್ತೆಂದು ತೋರುತ್ತದೆ. ಹೆಮ್ಮಿಗೆಯಲ್ಲಿ ನಡೆದ ಉತ್ಖನನದಿಂದ ಸುಮಾರು ಆಯಾಕಾರದ ತಳವಿನ್ಯಾಸದ ಪುಟದ ಗೋಡೆಗಳಿದ್ದ ಏಕ ಕೋಣೆಯ ಮನೆಗಳನ್ನು ಕಟ್ಟುವ ರೂಢಿಯೂ ಇದ್ದಿರಬೇಕೆಂದು ತಿಳಿದುಬರುತ್ತದೆ.

ನವಶಿಲಾಯುಗದ ಅನಂತರ ಪ್ರ.ಶ.ಪೂ. 1ನೆಯ ಸಹಸ್ರಮಾನದಲ್ಲಿ ಬಂದ ಕಬ್ಬಿಣಯುಗದಲ್ಲಿ ಇದ್ದ ಮನೆಗಳ ಸ್ವರೂಪ ತಿಳಿದಿಲ್ಲ. ಕೆಲವು ನೆಲೆಗಳಲ್ಲಿ ಕಂಬದ ಗುಳಿಗಳು ಮಾತ್ರ ಕಂಡುಬಂದಿವೆ. ಈ ಕಾಲದ ಸಮಾಧಿಗಳಲ್ಲಿ ಕಲ್ಲಿನ ತುಂಡುಗಳನ್ನು ಬಳಸಿ ಗೋಡೆಗಳನ್ನು ಕಟ್ಟುವ, ಕಲ್ಲುಚಪ್ಪಡಿಗಳನ್ನು ಉಜ್ಜಿ ನಯಮಾಡುವ ತಂತ್ರ ಇದ್ದುದಕ್ಕೆ ಮಾಹಿತಿಗಳು ದೊರಕುತ್ತವೆ. ಆದರೆ ಕಲ್ಲನ್ನು ಮನೆಗಳ ನಿರ್ಮಾಣಕ್ಕೆ ಉಪಯೋಗಿಸುತ್ತಿದ್ದ ಬಗ್ಗೆ ಇದುವರೆಗೆ ಯಾವ ಕುರುಹೂ ಬೆಳಕಿಗೆ ಬಂದಿಲ್ಲ. (ಜಿ.ಆರ್.ಬಿ.)

ಕರ್ನಾಟಕದಲ್ಲಿ ಮನೆಗಳನ್ನು ಕಟ್ಟಲು ಇಟ್ಟಿಗೆಯನ್ನು ಬಳಸಲು ಆರಂಭವಾದುದು ಪ್ರಸಕ್ತಶಕಾರಂಭದ ಆಸುಪಾಸಿನಲ್ಲಿ. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಉತ್ಖನನದಲ್ಲಿ ಆ ಕಾಲದ ಸ್ತರಗಳಲ್ಲಿ ಇಟ್ಟಿಗೆಯ ತುಂಡುಗಳು ದೊರೆತಿವೆ. ಕರ್ನಾಟಕದ ಎಲ್ಲೆಯಿಂದ ಅನತಿದೂರದಲ್ಲಿರುವ ಕೊಲ್ಲಾಪುರದ ಬ್ರಹ್ಮಪುರಿ ಪ್ರದೇಶದಲ್ಲಿ ಮತ್ತು ಬೆಳಗಾಂವಿ ಸಮೀಪದ ವಡಗಾಂವ ಮಾಧವಪುರದಲ್ಲಿ ನಡೆದ ಉತ್ಖನನಗಳಿಂದ ಪ್ರ.ಶ. 1–2ನೆಯ ಶತಮಾನದಲ್ಲಿ ಕಟ್ಟಿರಬಹುದಾದ ಇಟ್ಟಿಗೆಯ ಮನೆಗಳ ಅವಶೇಷಗಳು ದೊರಕಿವೆ. ಈ ಕಾಲದಲ್ಲಿ ಹೆಚ್ಚಿನ ಅಡಿಪಾಯವೇನೂ ಇಲ್ಲದೆ ಗೋಡೆಗಳನ್ನು ಕಟ್ಟಲಾಗುತ್ತಿತ್ತು. ಬಂಧಕ ಸಾಮಗ್ರಿಯಾಗಿ ಮಣ್ಣು ಬಳಕೆಯಾಗುತ್ತಿತ್ತು. ಮನೆಗಳಲ್ಲಿ ಆಯಾಕಾರದ ಎರಡು ಅಥವಾ ಮೂರು ಕೋಣೆಗಳು, ನಡುಮನೆ ಇರುತ್ತಿದ್ದುವು. ಮನೆಯ ಒಟ್ಟು ತಳವಿನ್ಯಾಸ ಸಹ ಆಯಾ ಮನೆಗಳ ಮೇಲೆ ಮರದ ಇಳಿಹಂದರವನ್ನು ಮಾಡಿ ಚಪ್ಪಟೆಯ ಮಣ್ಣು ಹೆಂಚುಗಳನ್ನು ಒಂದರಮೇಲೊಂದು ಕೂಡುವಂತೆ ಜೋಡಿಸಿ, ಅವನ್ನು ಬಹುಶಃ ತಂತಿ ಅಥವಾ ಹಗ್ಗದಿಂದ ಬಂಧಿಸಿ ಚಾವಣಿಗಳನ್ನು ನಿರ್ಮಿಸುವ ಪದ್ಧತಿ ರೂಢಿಗೆ ಬಂದಿತು. ಈ ಕಾಲದಲ್ಲಿ ಬಳಕೆಯಲ್ಲಿದ್ದ ಗೃಹಾಲಂಕರಣದ ವಿಷಯ ಅಸ್ಪಷ್ಟ.

ಪ್ರಸಕ್ತಶಕಾರಂಭದಿಂದ 18–19ನೆಯ ಶತಮಾನದ ವರೆಗೆ ಕರ್ನಾಟಕದಲ್ಲಿದ್ದ ಮನೆಗಳ ಸ್ವರೂಪವನ್ನು ತಿಳಿಯಲು ಸಾಕಷ್ಟು ವಾಸ್ತು ಆಧಾರಗಳಿಲ್ಲ. ಹಳೇಬೀಡಿನಲ್ಲಿ ನಡೆದ ಉತ್ಖನನದಿಂದ ಇಟ್ಟಿಗೆ ಮತ್ತು ಕಲ್ಲನ್ನು ಉಪಯೋಗಿಸಿ ಕಟ್ಟಿದ ಹೊಯ್ಸಳ ಕಾಲದ ಕೆಲವು ಗೋಡೆಗಳ ಅವಶೇಷಗಳು ಕಂಡುಬಂದಿದ್ದುವು. ಅಲ್ಲದೆ ಚಪ್ಪಟೆ ಹೆಂಚು ಸಹ ಉಪಯೋಗದಲ್ಲಿದ್ದಂತೆ ಕಂಡುಬಂದಿತು. ಬೃಹತ್ತಾದ ಕಲ್ಲು ಮತ್ತು ಇಟ್ಟಿಗೆಯ ಕಟ್ಟಡಗಳು ಮತ್ತು ಸುಣ್ಣಗಾರೆ ಇಸ್ಲಾಮಿ ಅರಸರ ಆಳಿಕೆಯಲ್ಲಿ ಸು. 14–15ನೆಯ ಶತಮಾನದಾರಭ್ಯ ರೂಢಿಗೆ ಬಂದು ಅಂದಿನಿಂದ ಕರ್ನಾಟಕದ ಎಲ್ಲೆಡೆಯೂ ಪ್ರಚಾರಗೊಂಡಿತು. ಗುಲ್ಬರ್ಗ, ಬಿಜಾಪುರ, ಹಂಪೆ, ಬೀದರ್ ಮುಂತಾದ ಸ್ಥಳಗಳಲ್ಲಿ ವಿಶಾಲವಾದ ಕೊಠಡಿಗಳು, ದೊಡ್ಡ ಅಂಗಳಗಳು, ಬುರುಜು, ಚಾವಣಿಗಳು ಇವುಗಳನ್ನು ಒಳಗೊಂಡಿದ್ದ ಬಹುಮಟ್ಟಿಗೆ ಆಯಾಕಾರದ ತಳವಿನ್ಯಾಸವುಳ್ಳ ದೊಡ್ಡ ಅರಮನೆ ಮತ್ತು ಶ್ರೀಮಂತರ ಮನೆಗಳ ಅವಶೇಷಗಳು ಉಳಿದುಬಂದಿವೆ. ಇವೆಲ್ಲ ಕಲ್ಲು ಮತ್ತು ಸುಣ್ಣಗಾರೆಯಲ್ಲಿ ಕಟ್ಟಿದವು. 14–16ನೆಯ ಶತಮಾನಗಳ ಅವಧಿಗೆ ಸೇರಿದವು. ಗೋಡೆಗಳಿಗೆ ಗಾರೆಯನ್ನು ಬಳಿಯುವುದು ರೂಢಿಯಲ್ಲಿತ್ತು. ಬೀದರ್, ಬಿಜಾಪುರ ಈ ಸ್ಥಳಗಳಲ್ಲಿ ನಯವಾದ ಬಣ್ಣಬಣ್ಣದ ಗಾಜಿನ ಲೇಪದ ಮೆರುಗು ಬಿಲ್ಲೆಗಳಿಂದ ಅಲಂಕರಿಸಲಾಗಿರುವ ಕಟ್ಟಡಗಳು ಇವೆ. ಜೊತೆಗೆ ಭಿತ್ತಿಯ ಮೇಲೆ ವರ್ಣಚಿತ್ರಗಳೂ ಇದ್ದಿರಬಹುದು. (ಐ.)

ಪ್ರಾಚೀನ ಕರ್ನಾಟಕದ ಗೃಹ ಮತ್ತು ಗೃಹಾಲಂಕರಣಕ್ಕೆ ಸಂಬಂಧಿಸಿದ ವಿಷಯಗಳು ಕೆಲವಾರು ಪ್ರಾಚೀನ ಕಾವ್ಯಗಳಲ್ಲೂ ಕಂಡುಬರುತ್ತವೆ. ಇವುಗಳಲ್ಲಿ ಹೆಚ್ಚಿನವು ಅರಮನೆ ಮತ್ತು ಶ್ರೀಮಂತರ ಮನೆಗಳಿಗೆ ಸಂಬಂಧಿಸಿದವು. ಅಲ್ಲದೆ ಹಲವೆಡೆ ವರ್ಣನೆಗಳು ಇರುವ ಸ್ಥಿತಿಗಿಂತಲೂ ಕವಿಕಲ್ಪನೆಗಳಾಗಿರುವ ಸಾಧ್ಯತೆಯೂ ಇದೆ. ಉದಾಹರಣೆಗೆ, ಕೆಲವು ಕಾವ್ಯಗಳಲ್ಲಿ ದೊರೆಯುವ ವಜ್ರ, ಪಚ್ಚೆ, ಮಾಣಿಕ್ಯದ ಪುಡಿಗಳಿಂದ ರಂಗವಲ್ಲಿ ಹಾಕುತ್ತಿದ್ದರೆಂಬ ವರ್ಣನೆ ಉತ್ಪ್ರೇಕ್ಷೆಯಾಗದಿರದು. ದೇಪರಾಜನ ಸೊಬಗಿನ ಸೋನೆಯಲ್ಲಿ ಬರುವ ಚದುರದೇಶದ ಸಸಿವೊಳಲೆಂಬ ಪಟ್ಟಣದ ವರ್ಣನೆ ಹೀಗಿದೆ: ಅಲ್ಲಿನ ರಾಜಬೀದಿ ಮುತ್ತಿನ ರಂಗವಲ್ಲಿಯಿಂದಲೂ ಹೊನ್ನಿನ ತೋರಣದಿಂದಲೂ ಶೋಭಾಯಮಾನ ವಾಗಿತ್ತು. ಆ ಪೊಳಲ ಬೀದಿ ಬೀದಿಗಳಲ್ಲಿಯೂ ರನ್ನದ ಉಪ್ಪರಿಗೆಗಳು, ರೇಷ್ಮೆಯ ಬಾವುಟಗಳು, ಚಿನ್ನದ ನವಿಲ ಉಯ್ಯಾಲೆಗಳು, ಕನ್ನಡಿ ಬಿಗಿದ ತೋರಣಗಳು ಕಂಗೊಳಿಸುತ್ತಿದ್ದುವು. ಶೃಂಗಾರ ಪೇಟೆ, ಸೂಳೆಗೇರಿ, ಮಾತುಳನ ಅರಮನೆಯ ಹೆಬ್ಬಾಗಿಲು ತನಗೆ ಸರಿಸಾಟಿ ಮತ್ತೊಂದಿಲ್ಲವೆಂಬಂತೆ ಮೆರೆಯುತ್ತಿದ್ದುವು. ಬಣ್ಣಬಣ್ಣದ ಉಪ್ಪರಿಗೆ ಮನೆಗಳು, ಮಣಿಮಯವಾದ ಬಾಗಿಲುಗಳು, ಗಜಶಾಲೆ, ಹಯಶಾಲೆಗಳು ಅಂದಿನ ವೈಶಿಷ್ಟ್ಯಗಳಾಗಿದ್ದುವು. ಅಲ್ಲಿ ಗೋಡೆಯನ್ನು ಕೊರೆದು ಹಲವು ಹಕ್ಕಿಗಳ ಗೂಡುಗಳೂ ಬಾಗಿಲುಸಹಿತವಾದ ಹಲವಾರು ಪಂಜರಗಳೂ ಸವಡಿದಂತದ ಬಳೆಗಳೂ ಹೊಸ ಮಾಣಿಕ್ಯದ ಪಾದಪೀಠಗಳಲ್ಲಿ ಸೇರಿಸಿದ್ದ ಇಂದ್ರನೀಲದ ಪುತ್ರಿಕೆ, ಮುತ್ತಿನ ಮೈದೊಡವು,

ಉತ್ತರ ಕನ್ನಡ ಜಿಲ್ಲೆಯ ಐನಕೈ ಸೋಗೆಮನೆ

ಹೊನ್ನರನ್ನದ ಬಟ್ಟಲುಗಳು, ಲತಾವನಗಳು, ರನ್ನದ ಜಗಲಿಗಳು, ತಳಿರುಯ್ಯಾಲೆಗಳು, ರನ್ನದಿಂದ ಕಂಡರಿಸಿದ ದಾರಿಗಳು, ಮುತ್ತಿನ ಗೊಂಡೆಯಗಳು, ಚಿತ್ರದ ಮೇಲ್ಕಟ್ಟು, ಮಕರಂದ ಮಾಲೆಗಳಿಂದ ಅಲಂಕೃತವಾಗಿತ್ತು. ಕೆಲವು ಕಾವ್ಯಗಳಲ್ಲಿ ಹಬ್ಬಹರಿದಿನಗಳಲ್ಲಿ ಮನೆಗಳನ್ನು ಕಸ್ತೂರಿ ಕುಂಕುಮ ಪನ್ನೀರುಗಳ ಸಾರಣೆ, ಕಾರಣೆ, ಬಳೆಗಳಿಂದ ಅಲಂಕರಿಸುತ್ತಿದ್ದರು. ಪಚ್ಚೆಯಹಾರದ ಮಕರಂದ ತೋರಣಗಳನ್ನು ಕಟ್ಟುತ್ತಿದ್ದರು. ಸುಗಂಧದ್ರವ್ಯಗಳ ಪರಿಮಳಭಾರದಿಂದ ಬಿರುಗಾಳಿಯೂ ಕುಸಿದುಹೋಗುತ್ತಿತ್ತು ಎಂಬ ವರ್ಣನೆಗಳಿವೆ. ಗೋವಿಂದವೈದ್ಯನ ಪ್ರಕಾರ ಕಂಠೀರವ ನರಸರಾಜನ ಅರಮನೆಗೆ ಎಷ್ಟೋ ನೆಲೆಯುಪ್ಪರಿಗೆಗಳಿದ್ದುವಂತೆ. ಅವುಗಳಲ್ಲಿಯೂ ಜಯಸಿರಿ, ಭಾಗ್ಯಸಿರಿ, ಶಾರದಲಕ್ಷ್ಮಿ ಧೈರ್ಯಲಕ್ಷ್ಮಿಯರ ಮುಖಾಬ್ಜದಂತೆ ಅವು ಮೆರೆಯುತ್ತಿದ್ದುವಂತೆ. ಈ ಧವಳದುಪ್ಪರಿಗೆಗಳ ಅಂತರಾಂತರದ ಭಿತ್ತಿಯಲಿ...... ಮೋಹರಸವ ಸೂಸುತ ಚೆಲ್ವಾಂತ ಪುತ್ಥಳಿಗಳು ಶೋಭಿಸುತ್ತಿದ್ದುವಂತೆ. ಅಲ್ಲದೆ ಈ ಪುತ್ಥಳಿಗಳು ಭಾರತ ರಾಮಾಯಣ ಭಾಗವತ ಕಥಾಸಂದರ್ಭಗಳನ್ನು ಪ್ರದರ್ಶಿಸುವಂತಿದ್ದುವಲ್ಲದೆ ಶೃಂಗಾರರಸಪೂರಿತವಾದ ಕಾವ್ಯನಾಟಕದಲ್ಲಿಯ ಕಥೆಯ ಸೂಚಕಗಳಾಗಿದ್ದ ಸುರಧೀರನ ಬಲದಂತೆ, ಅರಸಂಚೆ, ಸೋಗೆನವಿಲು, ಬಣ್ಣದ ಕೋಗಿಲೆ, ಗಿಳಿ, ಚಕ್ರವಾಕ ಮುಂತಾದ ಪಕ್ಷಿಗಳ ಗೊಂಬೆಗಳು ಅಲ್ಲಿ ಶೋಭಿಸುತ್ತಿದ್ದುವಂತೆ. ಹರ್ಮ್ಯಗಳಲ್ಲಿ ಆನೆ, ವರಾಹ, ಕಾಡುಕೋಣ, ಹೆಬ್ಬುಲಿ, ಸಿಂಹ, ಹರಿಣ, ಭೇರುಂಡ ಮುಂತಾದ ಬಗೆಬಗೆಯ ಪ್ರತಿಮೆಗಳು ಸುಶೋಭಿಸುತ್ತಿದ್ದುವಂತೆ. ಅರಮನೆಯೊಳಗೆ ಪ್ರವೇಶದೊಡನೆ ಮೊದಲನೆಯದಾಗಿ ಚಿನ್ನದ ತಗಡುಗಳಲ್ಲಿ ಹುದುಗಿ ನಿಂತಿದ್ದಂತೆ ಕಾಣುವ ಕಂಬಗಳು ಮತ್ತು ಪಟ್ಟೋಳಿಯ (ರೇಷ್ಮೆಬಟ್ಟೆ) ಸರಗೊಂಡೆಯದ ಲೋವೆಯಿಂದ ಅಲಂಕರಿಸಲ್ಪಟ್ಟ ಹಿರಿಯ ಹಜಾರ, ಅಲ್ಲಿಂದ ಮುಂದೆ ಸುರಪನ ಆಸ್ಥಾನಮಂಟಪದ ಪರಿವಿಡಿಯನ್ನೇ ಸೋಲಿಸಿಬಿಡುವಷ್ಟು ಅಂದದ ಚಿತ್ರಶಾಲೆ ಲಕ್ಷ್ಮಿವಿಲಾಸ, ಅದರ ಮುಂದೆ ಒಂದೆಡೆ ದುರ್ಗಾಮಂಟಪ, ಮತ್ತೊಂದೆಡೆ ಗಿರಿಜಾಕಲ್ಯಾಣದ ಕಥೆಯ ಚಾರುತರದ ಚೆಲ್ವಚಿತ್ತರಗಳಂತೆ ಅರಗಿಳಿ

ನವಿಲು ಕೋಗಿಲೆ ಕೊಂಚೆ ಕೊರ್ಳರ್ವಕ್ಕಿ ಮೊದಲಾದ ಹಕ್ಕಿಗಳ ಪ್ರಣಯಜೀವನವನ್ನೂ ಸುರನಾರಿಯರ ವಿಲಾಸಗಳನ್ನೂ ರೂಪಿಸಿರುವ ಪುತ್ಥಳಿಗಳಿರುವ ಶಾರದಾಮಂಟಪ, ಅದರ ಬಳಿಯಲ್ಲಿಯೇ ಇಂದಿರಾಮಂದಿರ, ಮುಂದೆ ಬಂಗಾರ ಚೌಕಿ, ಮತ್ತೂ ಮುಂದೆ ಮದನವಿಲಾಸ ಇದ್ದುವಂತೆ. ಅರಮನೆಗಳಲ್ಲಿ ಮಣಿಮಯಭವನಗಳೂ ನವರತ್ನದ ತೊಟ್ಟಿಗಳೂ ನಾಟಕಶಾಲೆಗಳೂ ಭೋಜನಶಾಲೆ ಒಳಬೊಕ್ಕಸ ಪೂರ್ಣಭಂಡಾರ ಪೊನ್ನನಿಳಯ ಉಗ್ರಾಣಪಾಕಗಳ ಗೃಹ, ಆಯುಧಶಾಲೆಗಳೂ ಇದ್ದುವಲ್ಲದೆ ಬಿಳಿ ಮತ್ತು ಕೆನ್ನೀರ ಮತ್ತು ಕಟ್ಟಾಣಿತೋರಣದ ಮುತ್ತು ಮೊದಲಾದ ಜಾತಿ ಮುತ್ತುಗಳು, ಸಣ್ಣ ಪವಳ ಕೈಕಟ್ಟಿನ ಪವಳ ಬಣ್ಣಸರದ ಪವಳ ಇವುಗಳಂಥ ಪವಳದ ಪಸರಗಳಿಂದ ಕಣ್ಣು ಕೋರೈಸುವಂತೆ ಗೃಹಾಲಂಕಾರ ಮಾಡುತ್ತಿದ್ದರೆಂದು ಕನ್ನಡ ಕಾವ್ಯಗಳಿಂದ ತಿಳಿಯುತ್ತದೆ. ಕತ್ತುರಿ, ಸೇವಂತಿಗೆ, ದುಂಡುಮಲ್ಲಿಗೆ, ಜಾಜಿ, ಸಂಪಿಗೆ ಮೊದಲಾದ ಹೂಗಳಿಂದ ಮನೆಗಳನ್ನು ಅಲಂಕರಿಸುತ್ತಿದ್ದರಂತೆ. ಸೂಳೆಗೇರಿಯ ಸಾಲುಭವನದ ಮಳಿಗೆಗಳೊಳಗೆ ಗಿಳಿಯ ಪಂಜರ, ಪಾರಿವಾಳಗಳ ಪೊಂಗೂಡು, ಕಳಕಂಠಕೇಕಿಯ ದೇಹಿ ಇವುಗಳೆಲ್ಲ ರಾರಾಜಿಸುತ್ತಿದ್ದುವಂತೆ.

ಕನಕದಾಸರು ತಾವು ಕಂಡ ವಿಜಯನಗರದ ವರ್ಣನೆಯಲ್ಲಿ ಹೊಂದಗಡಿನ ಹೊದಕೆಯ ಮನೆ ಬಹಳ, ನೇರ (ಎಂದರೆ ತುಂಬ ಅಚ್ಚುಕಟ್ಟಾದುವುಗಳು) ಮನೆಗಳಿಗೆ ಅಂದವಡೆದ ಪಟ್ಟಸಾಲೆಗಳು, ಮುಂದೆಸೆಯಲಿ ತುಳಸಿಯ ಮಂಟಪ ಎಂದು ಬ್ರಾಹ್ಮಣರ ಕೇರಿಯ ಮನೆಗಳನ್ನು ವರ್ಣಿಸಿದ್ದಾರೆ. ಅರಮನೆ ಸುಂದರವಾಗಿತ್ತು. ಮುಗಿಲನ್ನು ಮುಟ್ಟುವ ಕೋಟೆ ಹೆಬ್ಬಾಗಿಲನ್ನು ಒಳಗೊಂಡಿತ್ತು. ಮುತ್ತಿನ ಚಾವಡಿಯನ್ನು ಮಕರತೋರಣ, ಮಣಿನಿಕರ ಹಿಂಗುಬ್ಬ ಇವುಗಳಿಂದ ಅಲಂಕರಿಸಲಾಗಿತ್ತು. ಜಂತದ ಚಾವಡಿಯಲ್ಲಿ ರಾಜ ಕುಳಿತಿರುವನು ಎಂದು ಅರಮನೆಯನ್ನು ವರ್ಣಿಸಿದ್ದಾರೆ. ಡೊಮಿಂಗೊ ಪೆಯಿಸ್ ಎಂಬುವನು ಈ ಅರಮನೆಯ ದಿವಾನಖಾನೆಯಾದ ಈ ಜಂತದ ಚಾವಡಿಯಲ್ಲಿನ ಕಂಬಗಳು ಮಾತ್ರ ಕಲ್ಲಿನದಾಗಿದ್ದು, ಗೋಡೆಕಂಬ ಜಂತಿ ಹಲಗೆ ಮೊದಲಾದ ಎಲ್ಲವನ್ನೂ ದಂತದಿಂದಲೇ ನಿರ್ಮಿಸಿರುವುದಾಗಿಯೂ ಹೇಳಿದ್ದಾನೆ. ಅಲ್ಲದೆ ಅದರ ತೊಲೆ, ನಾಗವಂದಿಗೆಗಳ ಮೇಲೆ ಗುಲಾಬಿಯ ಹೂಗಳನ್ನೂ ಕಮಲಗಳನ್ನೂ ಕೊರೆಯಲಾಗಿದ್ದು, ಅವುಗಳೂ ಜಂತದಿಂದಲೇ ನಿರ್ಮಿತವಾಗಿದ್ದು ಬಹುಸುಂದರವೂ ಅಮೂಲ್ಯವೂ ಆಗಿದ್ದ ಇಂಥ ಅಲಂಕರಣ ಮತ್ತೆಲ್ಲಿಯೂ ನೋಡಲಿಕ್ಕೆ ದೊರೆಯಲಾರದೆಂದು ಹೇಳುತ್ತಾನೆ.

ಹಿಂದೆ ಅವಿಭಕ್ತ ಕುಟುಂಬ ಪದ್ಧತಿ ರೂಢಿಯಲ್ಲಿದ್ದುದರಿಂದ ದೊಡ್ಡ ದೊಡ್ಡ ಮನೆಗಳು ಸಾಮಾನ್ಯವಾಗಿ ಇದ್ದಿರಬಹುದು. ಈಗಲೂ ಉತ್ತರ ಕರ್ನಾಟಕದ ಕೆಲವೆಡೆ ಉಳಿದುಬಂದಿರುವ ವಾಡೆಗಳಲ್ಲಿ ಪ್ರಾಚೀನ ಮಾದರಿಯ ಶ್ರೀಮಂತರ ಮನೆಗಳ ಸ್ವರೂಪವನ್ನು ಗುರುತಿಸಬಹುದು. ಅವುಗಳಲ್ಲಿ ವಿಶಾಲ ಪಡಸಾಲೆ, ಅಡುಗೆಮನೆ, ದೇವರಮನೆ, ಉಗ್ರಾಣ, ತೊಟ್ಟಿಮನೆಗಳಿರುತ್ತಿದ್ದುವು. ಊಟದ ಮನೆ ವಿಶಾಲವಾಗಿರುತ್ತಿತ್ತು. ಮಾಡು ಹೆಂಚಿನದು. ಕೊಟ್ಟಿಗೆಗಳು ಪ್ರತ್ಯೇಕವಾಗಿರುತ್ತಿದ್ದುವು.

ಇಂದು ಉಳಿದಿರುವ ಹೆಚ್ಚಿನ ವಾಡೆಗಳು 19ನೆಯ ಶತಮಾನದವು. ಸಹಜವಾಗಿ ಇಲ್ಲಿನ ಗೃಹಾಲಂಕರಣ ಆ ಕಾಲಕ್ಕೆ ಒಗ್ಗುವಂಥದ್ದು. ಮನೆಗಳಲ್ಲಿ ಬಾಗಿಲುವಾಡ, ಕಂಬ, ಲೋವೆ ಮುಂತಾದ ಮರದ ಭಾಗಗಳೆಲ್ಲ ಸುಂದರವಾದ ಕೆತ್ತನೆಗಳಿಂದ ಕೂಡಿರುತ್ತವೆ. ಮುಖ್ಯದ್ವಾರದ ಇಕ್ಕೆಲಗಳ ತೋಳುಗಳಲ್ಲೂ ಮೇಲುಗಡೆ ಜಿಗಿಯುತ್ತಿರುವ ಕುದುರೆ ಮುಂತಾದ ಮರದ ಬೊಂಬೆಗಳನ್ನು ಅಳವಡಿಸಲಾಗಿರುತ್ತದೆ. ಪಡಸಾಲೆಯಲ್ಲಿ ಸಾಮಾನ್ಯವಾಗಿ ಆಗಂತುಕರಿಗಾಗಿ ಒಂದು ಮಂಚ ಇಡುವುದು ಅಥವಾ ಜಮಖಾನ ಹಾಸಿ ಹುಲ್ಲಿನ ಅಥವಾ ಹತ್ತಿಯ ದಿಂಬುಗಳನ್ನಿಡುವುದು ರೂಢಿ. ಬಾಗಿಲಿಗೆ ಮಣಿಮಯವಾದ ತೋರಣ ಇರುತ್ತದೆ. ಗೋಡೆಗಳಲ್ಲಿ ರವಿವರ್ಮನ ಚಿತ್ರಪಟಗಳು ಮತ್ತೆ ಕೆಲವು ಮನೆಗಳಲ್ಲಿ ಕಾಡುಕೋಣ, ಜಿಂಕೆ, ಹುಲಿ, ಆನೆ ಇವುಗಳ ಕೊಂಬು ಹಾಗೂ ಚರ್ಮ ಇವುಗಳಿಂದ ಅಲಂಕರಿಸುವ ರೂಢಿ ಕಾಣಬಹುದು. ಸಗಣಿಯಿಂದ ಸಾರಿಸಿದ ನೆಲ, ನೆಲದ ಅಂಚಿನ ಗೋಡೆಗೆ ತಾಗಿದಂತೆ ಸುಣ್ಣ ಹಾಗೂ ಕೆಂಪುಮಣ್ಣಿನ ದಪ್ಪ ದಪ್ಪ ಗೆರೆಯ ಕಾರಣೆ (ಕರೆ), ಗೋಡೆಗಳಿಗೆ ದಪ್ಪ ಬಣ್ಣ ಇವು ಇಲ್ಲಿ ಸಾಮಾನ್ಯ. (ಎಂ.ಜಿ.ಬಿ.)

ಪ್ರಾಚೀನ ಕರ್ನಾಟಕದಲ್ಲಿ ಜನಸಾಮಾನ್ಯರ ಮನೆಗಳು ಯಾವ ರೀತಿಯಲ್ಲಿ ಇದ್ದುವು ಎಂಬುದನ್ನು ತಿಳಿಯಲು ಯಾವ ರೀತಿಯ ಆಧಾರಗಳೂ ದೊರಕುವುದಿಲ್ಲ. ಆದರೆ ಜನಪದ ಸಂಪ್ರದಾಯ ಹಿಂದಿನಿಂದಲೂ ಇದ್ದು ಈಗಲೂ ಹೆಚ್ಚು ಬದಲಾವಣೆ ಇಲ್ಲದೆ ಉಳಿದುಬಂದಿದೆಯಾಗಿ, ಈಗಿನ (ಇತ್ತೀಚಿನ ಬೆಳವಣಿಗೆಗಳ ವಿನಾ) ಗ್ರಾಮೀಣ ಗೃಹಗಳ ಸ್ವರೂಪವೇ ಅಂದಿನಿಂದಲೂ ಪ್ರಚಲಿತವಾಗಿರಬೇಕೆಂದು ತಿಳಿಯಬಹುದು. ಗ್ರಾಮೀಣ ಗೃಹಗಳು ಬಹು ಸರಳಕೃತಿಗಳು. ಇವು ಸಾಮಾನ್ಯವಾಗಿ ಚಿಕ್ಕವೂ ವೈವಿಧ್ಯರಹಿತವೂ ಆಗಿರುತ್ತವೆ. ಇವುಗಳಲ್ಲಿ ಅಲಂಕರಣವೂ ಕನಿಷ್ಠ.

ಜನಪದ ಗೃಹಗಳ ಒಂದು ವೈಶಿಷ್ಟ್ಯವೆಂದರೆ ಇವುಗಳ ರಚನೆಯಲ್ಲಿ ಕಂಡುಬರುವ ಪರಿಸರದ ಗಾಢಪ್ರಭಾವ. ಇದನ್ನು ಗೃಹ ರಚನೆಗೆ ಉಪಯೋಗಿಸುವ ವಸ್ತುಗಳಲ್ಲೂ ಮತ್ತು ರಚನೆಯ ಆಕಾರದಲ್ಲೂ ಕಾಣಬಹುದು. ಗೃಹಗಳ ರಚನೆಗೆ ಆಯಾ ಸ್ಥಳದಲ್ಲಿ ಸಿಕ್ಕುವ ತುಟ್ಟಿಯಲ್ಲದ ವಸ್ತುಗಳನ್ನಷ್ಟೇ ಆರಿಸಿಕೊಂಡಿರುವುದಲ್ಲದೆ, ಆಯಾ ಪ್ರದೇಶದ ಹವಾಗುಣಕ್ಕನುಗುಣವಾಗಿ ಸ್ವರೂಪವೂ ಇರುತ್ತದೆ. ಈ ದೃಷ್ಟಿಯಿಂದ ಜನಪದ ಗೃಹಗಳಲ್ಲಿ ಸ್ವಲ್ಪಮಟ್ಟಿಗೆ ಪ್ರಾದೇಶಿಕ ಭಿನ್ನತೆ ಕಂಡುಬರುತ್ತದೆ.

ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಹೆಚ್ಚು ಮಳೆ ಬೀಳುವುದರಿಂದ ಇಲ್ಲಿಯ ಜನಪದ ನಿವಾಸಗಳಲ್ಲಿ ಗೋಡೆಗಳು ಕುಳ್ಳಾಗಿ ಇದ್ದು ಚಾವಣಿ ಹೆಚ್ಚು ಇಳಿಜಾರಾಗಿ ಅದರ ಸೂರು ಗೋಡೆಗಿಂತ ತುಂಬ ಮುಂಚಾಚಿರುವಂತೆ ಕಟ್ಟಲಾಗಿರುತ್ತದೆ. ಮಳೆಯ ಇರುಚಲು ಗೋಡೆಗಳ ಮೇಲೆ ಬೀಳಬಾರದೆಂಬುದೇ ಇದರ ಉದ್ದಿಶ್ಯ. ಗೋಡೆಗಳು ಸಾಮಾನ್ಯವಾಗಿ ಮಣ್ಣು ಅಥವಾ ಜಂಬಿಟ್ಟಿಗೆಯವು. ಚಾವಣಿಗಳು (ಈಗ ಮಂಗಳೂರು ಹೆಂಚು ಬಳಕೆಯಲ್ಲಿದೆ) ವಿಶೇಷತಃ ಬಿದಿರು ಅಥವಾ ಮರದಜಂತಿ ಹಂದರದ ಮೇಲೆ ಹುಲ್ಲು, ಗರಿಗಳನ್ನು ಮುಚ್ಚಿಮಾಡಿದವು. ಇಲ್ಲಿಯ ಮನೆಗಳಲ್ಲಿ ಇದ್ದಿಲು ಮುಂತಾದ ಸಾಮಗ್ರಿಗಳನ್ನು ಬೆರಸಿ ಅರೆದು ಮಾಡಿದ ನಯಗಾರೆಯನ್ನು ನೆಲ ಮತ್ತು ಗೋಡೆಯ ಕೆಳಮಟ್ಟಗಳಿಗೆ ಹಚ್ಚುವ ರೂಢಿ ಇದೆ. ಕೆಂಪು ಕಾರಣೆಯ ಸರಳ ಅಲಂಕರಣವೂ ಉಂಟು. ಮನೆಗಳ ಮುಂದೆ ಹೆಬ್ಬಾಗಿಲ ಇಕ್ಕೆಲದಲ್ಲಿ ಜಗಲಿ, ಒಳಗೆ ಹಜಾರ ಮತ್ತು ವಿವಿಧ ಗೃಹಉದ್ದೇಶಗಳಿಗಾಗಿ ಬಳಸಲು ಬೇರೆ ಬೇರೆ ಕೋಣೆಗಳಿರುತ್ತವೆ. ಬಹು ಸರಳವಾದ ಗುಡಿಸಲುಗಳು ಆಕಾರದಲ್ಲಿ ಸುಮಾರು ಇದೇ ರೀತಿಯಿದ್ದರೂ ಒಳ ಆವರಣದಲ್ಲಿ ಹೆಚ್ಚು ವಿಂಗಡಣೆಗಳಿರುವುದಿಲ್ಲ.

ಉತ್ತರ ಕರ್ನಾಟಕದ ಬಯಲು ಪ್ರದೇಶ ಹಾಗೂ ದಕ್ಷಿಣ ಕರ್ನಾಟಕದ ಮಳೆ ಕಡಿಮೆ ಇರುವ ಚಿತ್ರದುರ್ಗ, ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳು ಮತ್ತು ಅವುಗಳ ಸುತ್ತಲ ಪ್ರದೇಶಗಳಲ್ಲಿ ಆಯಾಕಾರದ ಮಾಳಿಗೆ ಮನೆಗಳು ವಿಶೇಷ. ಇವುಗಳ ಗೋಡೆಗಳು ಹೆಚ್ಚು ಮಟ್ಟಿಗೆ ಮಣ್ಣಿನವು. ಕಲ್ಲು ವಿಶೇಷವಾಗಿ ದೊರಕುವ ಕೆಲವೆಡೆಗಳಲ್ಲಿ ಕಲ್ಲುಚೂರುಗಳನ್ನು ಜೋಡಿಸಿ ಮಾಡಿದ ಗೋಡೆಗಳೂ ಇರುತ್ತವೆ. ಹೆಬ್ಬಾಗಿಲು ಕಿರಿದು ಮತ್ತು ಕುಳ್ಳು. ಒಳಭಾಗದಲ್ಲಿ ಆವಶ್ಯಕತೆಗೆ ತಕ್ಕಂತೆ ಕೋಣೆಗಳೂ ಹಜಾರವೂ ಇರುತ್ತವೆ. ಗೋಡೆಗಳ ಮೇಲೆ ತೊಲೆ ಮತ್ತು ಅಡ್ಡಜಂತಿಗಳನ್ನು ಇಟ್ಟು ಹಂದರ ಮಾಡಿ, ಮೇಲೆ ಕಡ್ಡಿ ಸೊಪ್ಪುಗಳನ್ನು ಜೋಡಿಸಿ, ಅದರ ಮೇಲೆ ಮಣ್ಣನ್ನು ದಪ್ಪಗೆ ಹರವಿ ಮಾಡಿದ ಚಾವಣಿ ಇರುತ್ತದೆ. ಗೋಡೆಗಳು ಇರುಚಲಿನಿಂದ ನೆನೆಯದಂತೆ, ಅವುಗಳ ಮೇಲಂಚಿನಲ್ಲಿ ಮುಂಚಾಚುವ ಲೋವೆ ಕಲ್ಲುಗಳನ್ನೋ ಭೂತಾಳೆ ಪಟ್ಟಿಗಳನ್ನೋ ಜೋಡಿಸಿರುತ್ತಾರೆ. ಮೇಲೆ ಹರವಿದ ಮಣ್ಣು ಮಳೆಯಿಂದ ಕೊಚ್ಚಿಹೋಗದಂತಿರಲೂ ಬಿದ್ದ ನೀರು ಕಟ್ಟಡಕ್ಕೆ ಅಪಾಯವಾಗದಂತೆ ಒಂದೆಡೆಯಿಂದ ಹರಿದುಹೋಗಲೂ ಸುತ್ತಂಚಿನಲ್ಲಿ ಮಣ್ಣುದಿಂಡನ್ನೂ ಅಲ್ಲಲ್ಲಿ ಮಣ್ಣಿನ ದೋಣಿಗಳನ್ನೂ ಒದಗಿಸಿರುತ್ತಾರೆ. ಈ ಕಟ್ಟಡಗಳಿಗೆ ಕಿಟಕಿಗಳಿರುವುದಿಲ್ಲವಾದರೂ ಇದಕ್ಕೆ ಅಪವಾದಗಳೂ ಇಲ್ಲದಿಲ್ಲ. ಮನೆಗಳಿಗೆ ಮಣ್ಣುಗಾರೆ, ಸುಣ್ಣ, ಕಾರಣೆಯ ಪರಿಷ್ಕರಣವಿರುತ್ತದೆ. ಕೋಲಾರ, ಬೆಂಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಗ್ರಾನೈಟ್ ಚಪ್ಪಡಿಗಳು ಬಹುವಾಗಿ ದೊರಕುವುದರಿಂದ ಇಲ್ಲಿಯ ಮಾಳಿಗೆ ಮನೆಗಳಲ್ಲಿ ಮಣ್ಣಿನ ಬದಲು ಈ ಕಲ್ಲಿನ ಉಪಯೋಗವೇ ಹೆಚ್ಚು. ಮೊದಲು ಕಲ್ಲಿನ ಕಂಬಗಳನ್ನು ನೆಟ್ಟು, ಅದೇ ಕಲ್ಲಿನ ತೊಲೆಗಳನ್ನು ಜೋಡಿಸಿ, ಮೇಲೆ ಚಪ್ಪಡಿಗಳನ್ನು ಹಾಸುವ ಪದ್ಧತಿ ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಮಳೆ ಕಡಿಮೆ ಬೀಳುವ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾಳಿಗೆ ಮನೆಗಳಲ್ಲದೆ ವೃತ್ತಾಕಾರದ ತಳವಿನ್ಯಾಸವಿರುವ ಗುಡಿಸಲುಗಳೂ ಇವೆ. ಇವು ವಿಶೇಷವಾಗಿ ಒಂದೇ ಕೋಣೆಯವು. ಗೋಡೆ ಮಣ್ಣಿನದು. ಮೇಲೆ ಬಿದಿರಿನ ಅಥವಾ ಕಡ್ಡಿಗಳ ಹಂದರದ ಮೇಲೆ ಹುಲ್ಲು ಮುಚ್ಚಿದ ಶಂಕುತಲೆಯಾಕಾರದ ಚಾವಣಿ ಇರುತ್ತದೆ.

ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿನ ಜನಪದ ನಿವಾಸಗಳು ಸಾಮಾನ್ಯವಾಗಿ ಆಯಾಕಾರದ ಮಣ್ಣುಗೋಡೆಯ ಮನೆಗಳು. ಇವುಗಳಲ್ಲೂ ಮುಂದೆ ಬಾಗಿಲಿನ ಇಕ್ಕೆಲಗಳಲ್ಲಿ ಜಗಲಿ, ಒಳಗೆ ಹಜಾರ ಮತ್ತು ಅನೇಕ ಕೋಣೆಗಳಿರುತ್ತವೆ. ದೊಡ್ಡ ಮನೆಗಳಲ್ಲಿ ಪುಟದ ಗೋಡೆ (ಅಂದರೆ ಕಲಸಿದ ಮಣ್ಣಿನ ದಪ್ಪ ಉಂಡೆಗಳನ್ನು ಒಂದರ ಮೇಲೊಂದು ಪೇರಿಸಿ ಎತ್ತಿದ ಗೋಡೆ) ಸಾಮಾನ್ಯ. ಬಹು ಎತ್ತರವಾದ ಗೋಡೆಗಳ ಆವಶ್ಯಕತೆ ಇದ್ದಾಗ ಅಥವಾ ಚಿಕ್ಕ ಮನೆಗಳನ್ನು ಕಟ್ಟುವಾಗ ತಡಿಕೆಗೋಡೆಯನ್ನು ಅಂದರೆ, ಬಿದಿರಿನ ಕಂಬಗಳಿಗೆ ಬಿಗಿದ ಬಿದಿರು ದಬ್ಬೆಗಳ ಹಂದರದ ಮೇಲೆ ಕಲಸಿದ ಮಣ್ಣನ್ನು ಮೆತ್ತಿ ಮಾಡಿದ ತೆಳುಗೋಡೆಯನ್ನು ಅಳವಡಿಸುವುದುಂಟು. ಮನೆಗಳ ಚಾವಣಿ ಸಾಮಾನ್ಯವಾಗಿ ಇಪ್ಪಾರು, ಪಕ್ಕದ ಗೋಡೆಗಳ ಎತ್ತರದ ಭಾಗದಲ್ಲಿ ಒಂದು ಬೆಮ್ಮರವನ್ನು ಇಟ್ಟು, ಹಾರು ಎರಡೂ ಕಡೆ ಇಳಿಜಾರಾಗಿರುವಂತೆ

ಮಾಡಲಾಗಿರುತ್ತದೆ. ಈ ಹಾರುಗಳು ಬೊಂಬು, ಗಳುಗಳಿಂದ ಆದ ಹಂದರಗಳು, ತೆಂಗಿನ ಗರಿಯಿಂದ ಹೆಣೆದ ಮಟ್ಟಾಳೆಯನ್ನು ಅಥವಾ ಮಣ್ಣಿನ ಅರೆಕೊಳವೆ ಆಕೃತಿಯ ನಾಡಹೆಂಚುಗಳನ್ನು ಮೇಲೆ ಮುಚ್ಚಲು ಉಪಯೋಗಿಸಲಾಗುತ್ತದೆ. ಕೆಲವೆಡೆ ಸೋಗೆ ಮತ್ತು ಹುಲ್ಲನ್ನೂ ಬಳಸುವುದುಂಟು. ಮಣ್ಣಿನ ತಡಿಕೆ ಅಥವಾ ಪುಟದ ಗೋಡೆಗಳನ್ನು ಆಯಾಕಾರದಲ್ಲಿ ಕಟ್ಟಿ ಒಂದು ಗೋಡೆಯನ್ನು ಎತ್ತರಕ್ಕೆ ಮಾಡಿ ಅದಕ್ಕೆ ಸಮಕೋನದಲ್ಲಿರುವ ಗೋಡೆಗಳನ್ನು ಇಳಿಜಾರಾಗಿರುವಂತೆ ರೂಪಿಸಿ ಇದರ ಮೇಲಿನ ಚಾವಣಿ ಒಂದೇ ಕಡೆಗೆ ಇಳಿಜಾರಾಗಿರುವಂತೆ ಮಾಡಿದ ಒಪ್ಪಾರು ಕಟ್ಟಡಗಳೂ ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಇಂಥ ಕಟ್ಟಡಗಳನ್ನು ದನ, ಎಮ್ಮೆಗಳನ್ನು ಕಟ್ಟಲು ಕೊಟ್ಟಿಗೆಯಾಗಿ ಉಪಯೋಗಿಸುವುದೇ ಹೆಚ್ಚು. ಒಂದು ವಿಶಿಷ್ಟ ರೀತಿಯ, ವಿಶೇಷವಾಗಿ ಸ್ವಲ್ಪ ಸ್ಥಿತಿವಂತರಿಗೇ ಸೇರಿದ ತೊಟ್ಟಿಮನೆಗಳು ಕರ್ನಾಟಕದ ಹಲವೆಡೆಗಳಲ್ಲಿವೆ. ಇವು ರಚನಾವಿಧಾನದಲ್ಲಿ ಇತರವಂತೆಯೇ ಇದ್ದರೂ ವಿನ್ಯಾಸ ಮಾತ್ರ ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ಇವುಗಳಲ್ಲಿ ಆಯ ಅಥವಾ ಚೌಕತಳ ವಿನ್ಯಾಸವಿದ್ದು ಮಧ್ಯೆ ಒಂದು ತೆರೆದ (ಮುಚ್ಚು ಇಲ್ಲದ) ತೊಟ್ಟಿ ಇರುತ್ತದೆ. ತೊಟ್ಟಿಯ ಸುತ್ತಲೂ ಪಡಸಾಲೆ, ಅದರ ಸುತ್ತಲೂ ಕೋಣೆಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ. ಮುಂದೆ ಮುಂಬಾಗಿಲಿನ ಇಕ್ಕೆಲಗಳಲ್ಲಿ ಜಗಲಿಗಳಿರುತ್ತವೆ. ಈ ತೊಟ್ಟಿ ಮನೆಗಳು ವಿಶಾಲವಾಗಿದ್ದು, ಒಂದು, ಎರಡು ಅಥವಾ ಮೂರು, ಆರು, ಎಂಟು, ಹದಿನಾರು ಅಂಕಣಗಳ ತೊಟ್ಟಿಮನೆಗಳು ಇತ್ಯಾದಿಯಾಗಿ ವಿವಿಧ ಪರಿಮಾಣಗಳಲ್ಲಿರುತ್ತವೆ. (ಎಸ್.ಎನ್.)

ಹಸುರು ಗಿಡಗಳ ಮೂಲಕ ಕಂಗೊಳಿಸುತ್ತಿರುವ ಒಳ ಗೃಹಾಲಂಕರಣ

ಜನಪದ ಗೃಹಾಲಂಕರಣ ಬಹು ಸರಳ. ಸುಣ್ಣ ಬಳಿಯುವುದು ಸಾಮಾನ್ಯವಾಗಿ ಎಲ್ಲೆಡೆಯೂ ಕಂಡುಬರುತ್ತದೆ. ವರ್ಷಕ್ಕೊಮ್ಮೆ ಅಥವಾ ಹಬ್ಬಹರಿದಿನಗಳಲ್ಲಿ ನೀರಿನಲ್ಲಿ ಸುಣ್ಣವನ್ನು ಗಟ್ಟಿಯಾಗಿ ಕಲೆಸಿ, ಸಣ್ಣಕುಂಚದಿಂದ ತೊಟ್ಟಿಯ ಅಂಚು, ಗೋಡೆಯ ಕೆಳಭಾಗ ಕಂಬದ ಕೆಳಗೆ ನೆಲವನ್ನು ಬಿಟ್ಟು ಒಂದಂಗುಲ ಎತ್ತರಕ್ಕೆ ಒಂದೆರಡು ಇಂಚು ಅಗಲದ ಪಟ್ಟಿಗಳನ್ನೆಳೆಯುವ ರೂಢಿ ಅಲ್ಲಲ್ಲಿ ಕಂಡುಬರುತ್ತದೆ. ಹಳ್ಳಿಗಳಲ್ಲಿ ಇದಕ್ಕೆ ಕಿರುಸುಣ್ಣ ಎಂದು ಹೇಳುತ್ತಾರೆ. ಚಂದ್ರದಿಂದ ರಂಗೋಲಿ ಬಿಡುವುದು ಹಳ್ಳಿಗರ ಗೃಹಾಲಂಕರಣದ ಮತ್ತೊಂದು ವಿಧಾನ. ಚಂದ್ರವನ್ನು ನೀರಿನಲ್ಲಿ ಕರಗಿಸಿ, ತೊಟ್ಟಿ ಮನೆಗಳಲ್ಲಿ ಈಚಲುಗರಿಯ ಸೋಗೆಗಳಿಂದ ಮಾಡಿದ ಕುಂಚದ ಮೂಲಕ ಅಚ್ಚುಕಟ್ಟಾಗಿ ಎರಡೆರಡು ಎಳೆಗಳನ್ನು ಎಳೆಯುತ್ತಾರೆ. ಗ್ರಾಮಾಂತರ ಜನ ಇದನ್ನು ಕಾರ್ಲಿ (ಕರೆ) ಬಿಡುವುದು ಎನ್ನುತ್ತಾರೆ. ಕೆಮ್ಮಣ್ಣಿನಿಂದ ಹೊಸ್ತಿಲು ಸಾರಿಸುವುದು ಗೃಹಾಲಂಕರಣದ ಮತ್ತೊಂದು ವಿಧಾನ. ಧೂಳಿನಂತಿರುವ ಕೆಮ್ಮಣ್ಣನ್ನು ನೀರಿನಲ್ಲಿ ಗಟ್ಟಿಯಾಗಿ ಕಲಸಿ ಮನೆಯ ಹೊಸ್ತಿಲು ಮತ್ತು ಬಾಗಿಲಿನ ಚೌಕಟ್ಟಿನ ತಳಭಾಗಗಳಿಗೆ ಆರು ಅಂಗುಲ ಎತ್ತರಕ್ಕೆ, ಸಾರಿಸುತ್ತಾರೆ. ನೆಲಕ್ಕೆ ಸಗಣಿ ಸಾರಿಸುವುದು ಹೆಚ್ಚು. ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಮಣ್ಣಿನ ನೆಲಕ್ಕೆ ಒಂದಂಗುಲ ಎತ್ತರಕ್ಕೆ ಮರಳು ಹಾಗೂ ಮಣ್ಣು ತುಂಬಿ, ಅದರ ಮೇಲೆ ಗೇರುಬೀಜದ ಎಣ್ಣೆಯನ್ನು ಬಳಿದು ಸಾರಣೆ ಮಾಡುತ್ತಾರೆ. ಅನಂತರ ಸಾಕಷ್ಟು ತೆಂಗಿನ ಹೂವನ್ನು ತೆಗೆದು, ತೆಂಗಿನ ಸಿಪ್ಪೆಯ ಸಹಾಯದಿಂದ ನೆಲವನ್ನು ಉಜ್ಜಿದರೆ, ನೆಲವು ಕರ್‍ರಗಿನ ಸಿಮೆಂಟಿನಂತೆ ಮಿರುಗುತ್ತದೆ. ಇದು ಗುಡಿಸಿಲುಗಳ ಅಂದವನ್ನು ಹೆಚ್ಚಿಸುತ್ತದೆ.



ಮಂಗಳೂರಿನ ವೃತ್ತಾಕಾರದ ವಿಶಿಷ್ಟ ಆಧುನಿಕ ಮಹಡಿಮನೆ

ಕೆಲವೆಡೆ ಗೊಂಬೆಗಳಿಂದ ಮನೆಗಳನ್ನು ಸಿಂಗರಿಸುವ ರೂಢಿ ಇದೆ. ಮಣ್ಣಿನಿಂದ ಮಾಡಿ ಬಣ್ಣ ಹಚ್ಚಿದ ಗಿಳಿ, ಆನೆ, ಬಸವ, ಹುಲಿ, ಜಿಂಕೆ ಮುಂತಾದ ಗೊಂಬೆಗಳನ್ನು ನಡುವೆ ಕೃಷ್ಣ, ಅಕ್ಕಪಕ್ಕದಲ್ಲಿ ಮರದ ಗಿಳಿಗಳು, ಹಾಗೆಯೇ ಬಸವ, ಹುಲಿಮುಖ, ಆನೆಮುಖ, ಜಿಂಕೆಮುಖ ಹೀಗೆ ಸಾಲಾಗಿ ಗೋಡೆಗಳಿಗೆ ನೇತುಹಾಕಿ ಗೃಹವನ್ನು ಅಲಂಕರಿಸುತ್ತಾರೆ. ಕೆಲವು ಮನೆಗಳಲ್ಲಿ ಮರದಿಂದ ಮಾಡಿದ ಕುದುರೆಮುಖವನ್ನು ಗೋಡೆಗೆ ಅಂಟಿಸಿ ಅದರ ಅಕ್ಕಪಕ್ಕಗಳಲ್ಲಿ ಗಿಳಿಗಳನ್ನು ಅಂಟಿಸುವುದುಂಟು. ಜಿಂಕೆಕೊಂಬನ್ನು ನಯಗೊಳಿಸಿ ಒಳ್ಳೆಯ ಮರದ ಹಲಗೆಯಲ್ಲಿ ಪ್ರಾಣಿಮುಖದ ಆಕಾರ ಬರುವಂತೆ ರೂಪಿಸಿ ಅದರಲ್ಲಿ ಕೊಂಬನ್ನು ಸೇರಿಸಿ ಗೋಡೆಗೆ ತೂಗುಹಾಕುವುದುಂಟು. ಮೂರು ಗಿಳಿಗಳನ್ನೊಳಗೊಂಡ ನಿಲುವನ್ನು ಗೋಡೆಗೆ ತೂಗುಹಾಕುವುದೂ ಉಂಟು. ಬೇಟೆಯ ಹವ್ಯಾಸವುಳ್ಳವರ ಮನೆಗಳಲ್ಲಿ ಹುಲಿ, ಸಿಂಹಗಳ ಚರ್ಮವನ್ನೂ ಕಾಡುಕೋಣದ ಕೊಂಬು, ಆನೆಯ ದಂತ ಇವುಗಳನ್ನೂ ಗೋಡೆಗೆ ಅಲಂಕಾರವಾಗಿ ತೂಗುಹಾಕುವುದುಂಟು. ಬತ್ತದ ಗೊನೆಗಳು ಚೆನ್ನಾಗಿ ಮಾಗಿದಾಗ, ತೆನೆಗಳನ್ನು ಕತ್ತರಿಸಿ, ಅವುಗಳನ್ನು ಒಂದೇ ಸಮನಾಗಿ ಜೋಡಿಸಿ, ಹೆಣೆದು ಗಂಟೆಯಾಕಾರದ ಗುಚ್ಚವನ್ನು ತಯಾರಿಸಿ ದೇವರ ಕೋಣೆಯಲ್ಲಿ ದೇವರ ಪಟದ ಆ ಕಡೆ ಈ ಕಡೆಗಳಲ್ಲಿ ತೂಗಿಸುವುದುಂಟು. ಬತ್ತದ

ತೆನೆಗಳನ್ನು ಕೆಳಗೆ ತೂಗುಬಿಟ್ಟು, ಒಂದಕ್ಕೊಂದು ಹೆಣೆದು ಬತ್ತದ ತೋರಣವನ್ನು ಮಾಡಿ ಬಾಗಿಲಿಗೆ ಕಟ್ಟುವುದೂ ಉಂಟು. ಹಳ್ಳಿಗಳಲ್ಲಿ ಇದನ್ನು ಬಾಗಿಲು ಬತ್ತ ಎನ್ನುತ್ತಾರೆ.

ಸ್ವಲ್ಪ ಅನುಕೂಲವಂತರ ಮನೆಗಳಲ್ಲಿ ಬಳೆಗಳ ಚೂರು ಹಾಗೂ ಸಣ್ಣ ದೊಡ್ಡ ಮಣಿಗಳಿಂದ ಬಾಗಿಲುತೋರಣವನ್ನು ಮಾಡಿ ಬಾಗಿಲಿಗೆ ಕಟ್ಟಿ ಅದರ ಸರಪಳಿಗಳನ್ನು ಚಿತ್ರಪಟಗಳ ಮೇಲೆ ತೂಗುಬಿಡುವುದುಂಟು. ಬಣ್ಣಬಣ್ಣದ ಸಣ್ಣ ಮಣಿಗಳಿಂದ ಮಾಡಿದ ಸರಸ್ವತಿ, ಲಕ್ಷ್ಮಿ, ಕಾಮಧೇನು, ಪಟ್ಟದ ಆನೆ, ಪಟ್ಟದ ಕುದುರೆ ಮುಂತಾದ ರಚನೆಗಳನ್ನೊಳಗೊಂಡಂತೆ ವಿವಿಧ ನಮೂನೆಯ ಚಿತ್ತಾಕರ್ಷಕ ತಟ್ಟೆಗಳನ್ನು ಗೋಡೆಗಳಲ್ಲಿ ಅಲಂಕಾರಕ್ಕಾಗಿ ತೂಗುಹಾಕುವುದು, ಕಸೂತಿ ಹಾಕಿದ ಕೊಕ್ಕೆ ಸೂಜಿಯಿಂದ ಹೆಣೆದ ಪರದೆಗಳನ್ನು ಬಾಗಿಲುಗಳಿಗೆ ಇಳಿಬಿಡುವುದು, ಮುಖ್ಯ ಹಜಾರಗಳಲ್ಲಿ ಕೆತ್ತನೆ ಕೆಲಸಗಳಿಂದ ಅಲಂಕರಿಸಿದ ಅತ್ಯುತ್ತಮ ಮರದಿಂದ ಮಾಡಿದ ಆಕರ್ಷಕ ಚಿತ್ರಗಳನ್ನು ಬಿಡಿಸಿದ ಚೌಕದ ಹಲಗೆಯನ್ನು ಮಾಡಿಗೆ ಮೊಳೆಗಳಿಂದ ಕೂರಿಸುವುದು, ಕುಸುರಿ ಕೆಲಸದ ಕಂಬಗಳಿಗೆ ಬೆಳ್ಳಿಯ ಹೂಗಳನ್ನು ಅಂಟಿಸುವುದು, ಹಿತ್ತಾಳೆಯ ರೇಕುಗಳನ್ನು ಬಿಚ್ಚಿ ಎಳೆಯುವುದು ಮುಂತಾದವನ್ನು ಕಾಣಬಹುದು. (ಎಂ.ಜಿ.ಬಿ.)

ಕರ್ನಾಟಕಕ್ಕೆ ಐರೋಪ್ಯ ಸಂಪರ್ಕ ಒದಗಿಬಂದ ಕಾಲದಿಂದ ಇಲ್ಲಿನ ಗೃಹ ನಿರ್ಮಾಣದ ತಂತ್ರ ಮತ್ತು ಸ್ವರೂಪದಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡುವು. ಟಿಪ್ಪುಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಕಟ್ಟಿದ ಅವನ ಅರಮನೆ, ಬೆಂಗಳೂರಿನ ಅರಮನೆ ಮುಂತಾದೆಡೆಗಳಲ್ಲಿನ ಐರೋಪ್ಯ ರೀತಿಯ ಪಾವಟಿಗೆ, ಟೆರೇಸ್ ಚಾವಣಿ ಇವುಗಳು ಬಹುಶಃ ಫ್ರೆಂಚ್ ತಂತ್ರಜ್ಞರ ಮೂಲಕ ಬಳಕೆಗೆ ಬಂದಿತ್ತು. ಆದರೆ ಐರೋಪ್ಯ ಗೃಹನಿರ್ಮಾಣತಂತ್ರದ ಪ್ರಭಾವ ದಿನೇ ದಿನೇ ವರ್ಧಿಸಲಾರಂಭವಾದುದು 19ನೆಯ ಶತಮಾನದ ಆದಿಭಾಗದಿಂದ. ಶ್ರೀರಂಗಪಟ್ಟಣ, ಬೆಂಗಳೂರು, ಮೈಸೂರು, ಮಂಗಳೂರು, ಬಳ್ಳಾರಿ, ಬೆಳಗಾಂವಿ ಪಟ್ಟಣಗಳಲ್ಲಿ ಎಲ್ಲಾ ರೀತಿಯ ದೊಡ್ಡ ಗೃಹಗಳು ಹೆಚ್ಚುಮಟ್ಟಿಗೆ ಐರೋಪ್ಯ ಅಧಿಕಾರಿಗಳಿಗೆ ನಿರ್ಮಿತವಾದುವು. ಮೈಸೂರು, ಬೆಂಗಳೂರು ಮೊದಲಾದೆಡೆಗಳಲ್ಲಿ ಈ ರೀತಿಯ ಮನೆಗಳನ್ನು ಕಟ್ಟುವುದು ಉನ್ನತಸ್ಥಾನದ ಒಂದು ಚಿಹ್ನೆಯಾಗಿ ಅನೇಕ ಸ್ಥಳೀಯ ಶ್ರೀಮಂತರೂ ಆ ವಿಧಾನಗಳನ್ನು ಅನುಕರಿಸಲಾರಂಭಿಸಿದರು. ಹಿಂದಿನ ಕಾಲದಲ್ಲಿ ಮನೆಗಳ ಮುಂದೆ ಜಗಲಿಗಳಿದ್ದು ಅವು ಬೀದಿಯೆಡೆಗೆ ತೆರೆದುಕೊಂಡಂತಿದ್ದ ಕಟ್ಟಡಗಳು ಬಹುಸಾಮಾನ್ಯವಾಗಿದ್ದರೆ, ಈಗ ದೊಡ್ಡ ಸುತ್ತುಗೋಡೆ ಇರುವ ಆವರಣದ ಮಧ್ಯದಲ್ಲಿ ಮನೆಯನ್ನು ನಿರ್ಮಿಸಿ ಸುತ್ತಲೂ ತೋಟ ಬೆಳೆಸುವ ಅಥವಾ ಮನೆಯ ಮುಂದೆ ಸ್ವಲ್ಪ ಜಾಗವನ್ನು ಬಿಟ್ಟು ಕಾಂಪೌಂಡ್ ಕಟ್ಟಿ, ಮನೆ ರಸ್ತೆಯಿಂದ ಸ್ವಲ್ಪ ಹಿಂದೆ ಇರುವಂತೆ ಕಟ್ಟುವ ಸಂಪ್ರದಾಯ ವಿಶೇಷವಾಗಿ ಬೆಳೆಯಿತು. ಗೃಹರಚನೆಯಲ್ಲಿ ವರಾಂಡ, ದೊಡ್ಡ ಹಜಾರ, ಅಡುಗೆಕೋಣೆ, ಓದುವ ಕೋಣೆ, ಮಲಗುವ ಕೋಣೆ ಹೀಗೆ ಪ್ರತ್ಯೇಕ ಉದ್ದೇಶಗಳಿಗಾಗಿ ಪ್ರತ್ಯೇಕ ಕೋಣೆಗಳನ್ನು ದೊಡ್ಡದಾಗಿ ಅಳವಡಿಸುವ ರೂಢಿ ಬಂತು. ತೊಟ್ಟಿ ಮನೆಗಳಿಗೆ ಬದಲಾಗಿ ಪೂರ್ಣ ಮುಚ್ಚಿದ ಮಾಳಿಗೆಯ ಮನೆಗಳನ್ನು ಕಟ್ಟುವುದೂ ಜಂತಿಗಳನ್ನು ಗೋಡೆಗಳ ಮೇಲೆ ಅಡ್ಡಡ್ಡವಾಗಿ ಹಾಸಿ ಮೇಲೆ ಇಟ್ಟಿಗೆ ಚದರಗಳನ್ನು ಒತ್ತಾಗಿ ಜೋಡಿಸಿ ಮಾಡಿದ ಮಟ್ಟಚಾವಣಿಯನ್ನು (ಮದ್ರಾಸ್ ಟೆರೇಸ್) ಹಾಕುವುದೂ ರೂಢಿಗೆ ಬಂದುವು. ಕೆಲವೆಡೆ ಎರಡು ಮೂರು ಅಂತಸ್ತಿನ ಮನೆಗಳೂ ರಚಿತವಾದುವು. ಮನೆಗಳ ಮುಂಭಾಗದಲ್ಲಿ ಐರೋಪ್ಯ ರೀತಿಯ ಡೋರಿಕ್, ಕಾರಿಂಥಿಯನ್ ಮೊದಲಾದ ಕಂಬಗಳನ್ನು ಅಳವಡಿಸಿರುವುದೂ ಅಲ್ಲಲ್ಲಿ ಕಂಡುಬರುತ್ತದೆ. 19ನೆಯ ಶತಮಾನದ ಗೃಹನಿರ್ಮಾಣದಲ್ಲಿ ಕಂಡುಬಂದ ಇನ್ನೊಂದು ಮುಖ್ಯ ಬದಲಾವಣೆ ಮಂಗಳೂರು ಹೆಂಚಿನ ಅಳವಡಿಕೆ. ಬಾಸೆಲ್ ಮಿಶನ್‌ರವರಿಂದ 1865ರಲ್ಲಿ ಮಂಗಳೂರಿನಲ್ಲಿ ಮೊದಲ ಮಂಗಳೂರು ಹೆಂಚು ಕಾರ್ಖಾನೆ ಪ್ರಾರಂಭವಾಯಿತು. ಇದಕ್ಕೆ ಸ್ವಲ್ಪ ಮುಂಚೆಯೇ ಪ್ಲೆಬಿಟ್ ಎಂಬ ಆಂಗ್ಲರು ಮಂಗಳೂರು ಹೆಂಚನ್ನು ತಯಾರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದರು. ಮಂಗಳೂರಿನ ಹಲವು ಕಾರ್ಖಾನೆಗಳು ಹೆಂಚು ತಯಾರಿಕೆಯನ್ನು ತಯಾರಿಸಲಾರಂಭಿಸಿದ ಕಾಲದಿಂದ ಕರ್ನಾಟಕದ ಎಲ್ಲೆಡೆಯೂ ಇದು ಬಳಕೆಗೆ ಬಂತು. ಅನಂತರ ಬೆಂಗಳೂರು ಮೊದಲಾದ ಇತರೆಡೆಗಳಲ್ಲೂ ಇಂಥ ಕಾರ್ಖಾನೆಗಳು ಸ್ಥಾಪಿತವಾದವು.

20ನೆಯ ಶತಮಾನದಲ್ಲಿ ಕಬ್ಬಿಣ, ಸಿಮೆಂಟ್, ಮೊಸಾಯಿಕ್, ಟೈಲ್ಸ್, ಗ್ರಾನೈಟ್, ಮಾರ್ಬಲ್ ಮೊದಲಾದ ಹೊಸ ರಚನಾ ಸಾಮಗ್ರಿಗಳು ಬಳಕೆಗೆ ಬಂದುದರಿಂದ ಮನೆಗಳ ರಚನಾ ತಂತ್ರವೂ ಸ್ವರೂಪವೂ ಅಗಾಧವಾಗಿ ಬದಲಾವಣೆಯಾಗಿದೆ. ಐರೋಪ್ಯ ನಾಗರಿಕತೆಯ ಪ್ರಭಾವವೂ ಈ ಕಾಲದಲ್ಲಿ ಹೆಚ್ಚಾದುದರಿಂದ ಜನರ ಜೀವನ ವಿಧಾನವೂ ಬದಲಾಗುತ್ತ ಬಂದು ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಮನೆಗಳ ನಿರ್ಮಾಣ ಮಾಡುವುದು ಇಂದಿನ ಪ್ರವೃತ್ತಿ. ಮನೆಗಳನ್ನು ಕಟ್ಟುವುದೇ ಒಂದು ಉದ್ಯಮವಾಗಿ ವಿನ್ಯಾಸಕಾರರು, ಕಟ್ಟುವವರು ಇವರ ಒಂದು ತಾಂತ್ರಿಕವರ್ಗ ಬೆಳೆದಿದೆ. ಮನೆಗಳ ನವೀನತೆ ವೈವಿಧ್ಯಗಳ ಎಡೆಗೆ ಗಮನ ಹೆಚ್ಚಾಗಿದೆ. ಇದರ ಜೊತೆಯಲ್ಲೇ ದೊಡ್ಡ ಪಟ್ಟಣಗಳ ಬೆಳವಣಿಗೆ, ಜನಸಂಖ್ಯೆಯ ಹೆಚ್ಚಳ ಇತ್ಯಾದಿ ಕಾರಣಗಳಿಂದ ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಫ್ಲಾಟ್ ರೀತಿಯ ಮನೆಗಳನ್ನು ರಚಿಸುವುದು, ದೊಡ್ಡ ಮನೆಗಳನ್ನು ವಿಂಗಡಿಸಿ ವಠಾರಗಳನ್ನು ಮಾಡುವುದು, ಹಿಮ್ಮನೆಗಳನ್ನು ಜೋಡಿಸುವುದು ಇವೂ ಹೆಚ್ಚಾಗಿವೆ. ಈ ಬದಲಾವಣೆಗಳು ದೊಡ್ಡ ಪಟ್ಟಣ ನಗರಗಳಲ್ಲಿ ಹೆಚ್ಚು, ಗ್ರಾಮಾಂತರ ಪ್ರದೇಶಗಳಲ್ಲಿ ಹಳೆಯ ಜನಪದ ಸಂಪ್ರದಾಯ ಇನ್ನೂ ಸಾಕಷ್ಟು ಉಳಿದಿದೆ. (ಐ.)

ಆಧುನಿಕ ಗೃಹಾಲಂಕರಣ ಸಂಪ್ರದಾಯದಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಈಗ ಗೃಹಾಲಂಕರಣ ವಿದ್ಯೆ (ಇಂಟೀರಿಯರ್ ಡೆಕೊರೇಷನ್) ಶಾಸ್ತ್ರರೂಪವಾಗಿ ಬೆಳೆದಿದೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಡಿಪ್ಲೊಮಾ ಮತ್ತು ಪದವಿ ಶಿಕ್ಷಣಗಳ ಪಠ್ಯವಿಷಯವೂ ಆಗಿದೆ. ಮನೆಯನ್ನು ಶುಚಿಯಾಗಿಡುವುದು, ಪುಷ್ಪಗಳ ಜೋಡಣೆ (ಹೂವಿನ ಕುಂಡ), ಮನೆಯ ಅಲಂಕರಣ ಮುಂತಾದುವುಗಳನ್ನು ಗೃಹವಿಜ್ಞಾನ ಶಿಕ್ಷಣದಲ್ಲಿ ಕಲಿಸುತ್ತಾರೆ. ಇಂದಿನ ಜನ ಅನೇಕ ಮಹಾನಗರಗಳನ್ನು ಕಂಡಿರುತ್ತಾರೆ. ಅಲ್ಲಿನ ಗೃಹಾಲಂಕರಣ ವಿಧಾನಗಳಲ್ಲಿ ಅತ್ಯುತ್ತಮವಾದುದನ್ನು ಆಯ್ದುಕೊಂಡು ತಮ್ಮ ಗೃಹಗಳ ಅಲಂಕರಣಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಸರಳತೆ ಹಾಗೂ ಶುಭ್ರತೆಗೆ ಈಗ ಆದ್ಯತೆ. ಶ್ರೀಮಂತರಾದವರು ಬೆಲೆಬಾಳುವ ಪೀಠೋಪಕರಣಗಳು ಮತ್ತು ನೂತನ ಅಲಂಕರಣ ವಿಧಾನಗಳಿಂದ ಗೃಹವನ್ನು ಅಲಂಕರಿಸುತ್ತಾರೆ. ಮಧ್ಯಮವರ್ಗದವರು, ಬಡವರು ತಮ್ಮ ಮನೆಗಳನ್ನು ತಮ್ಮದೇ ಆದ ರೀತಿಯಲ್ಲಿ ಸರಳವಾಗಿ ಅಲಂಕರಿಸುತ್ತಾರೆ. ಮಧ್ಯಮವರ್ಗದ ಮನೆಗಳಲ್ಲಿ ವರಾಂಡದಲ್ಲಿ ಕೆಲವಾರು ಕುರ್ಚಿಗಳನ್ನೂ ನಡುವೆ ಒಂದು ಚಿಕ್ಕ ಟೀಪಾಯಿ ಅಥವಾ ಮೇಜನ್ನೂ ಇಡುತ್ತಾರೆ. ಮೇಜಿನ ಮೇಲೆ ಕಸೂತಿ ಕೆಲಸ ಮಾಡಿದ ಅಥವಾ ಬಣ್ಣಬಣ್ಣದ ಬಟ್ಟೆಯನ್ನು (ಟೇಬಲ್ ಕ್ಲಾತ್) ಹಾಸುತ್ತಾರೆ. ಗೋಡೆಗೆ ಸ್ವಾಗತ ಬಯಸುವಂಥ ಚಿತ್ರಪಟವನ್ನು ತೂಗುಹಾಕುತ್ತಾರೆ. ಮನೆಯ ಪಡಸಾಲೆಯಲ್ಲಿ ಸುತ್ತಲೂ ನಾಲ್ಕು ಬೆತ್ತದ ಕುರ್ಚಿಗಳಲ್ಲಿ ಮೆತ್ತಗಿನ ದಿಂಬುಗಳನ್ನೂ ಇಟ್ಟು ನಡುವೆ ಒಂದು ಟೀಪಾಯಿಯನ್ನಿಡುತ್ತಾರೆ. ಗೋಡೆಯಲ್ಲಿ ಕೊರೆದು ಮಾಡಿದ ಕಪಾಟಿನಲ್ಲಿ ಕೆಲವಾರು ಸುಂದರ ಗೊಂಬೆಗಳನ್ನೂ ಅಲಂಕರಣ ವಸ್ತುಗಳನ್ನೂ ಓರಣವಾಗಿಡುತ್ತಾರೆ. ಒಂದು ಮೂಲೆಯಲ್ಲಿ ರೇಡಿಯೊ ಸ್ಟ್ಯಾಂಡು, ಈಗ ಟಿವಿ ಸ್ಟ್ಯಾಂಡು, ಅದರ ಕೆಳಗಡೆ ಪುಸ್ತಕಗಳನ್ನಿಡುವ ಅಲೆಮಾರಿನಲ್ಲಿ ಒಪ್ಪವಾಗಿ ಪುಸ್ತಕಗಳನ್ನು ಜೋಡಿಸಿಡುತ್ತಾರೆ. ಅದರ ಮೇಲ್ಭಾಗದಲ್ಲಿ ಹಾಗೂ ಎರಡು ಗೋಡೆಗಳು ಸೇರುವೆಡೆಯಲ್ಲಿ ಗೊಂಬೆಗಳನ್ನಿಡುವ ಪೀಠವನ್ನಿರಿಸುತ್ತಾರೆ. ಅದರ ಮೇಲ್ಭಾಗದಲ್ಲೊಂದು ಹೂದಾನಿಯನ್ನಿರಿಸುತ್ತಾರೆ. ಅಷ್ಟೇ ಸುಂದರವಾದ ಪ್ರಕೃತಿಸೌಂದರ್ಯದ ಫೋಟೋ ಕ್ಯಾಲೆಂಡರ್‌ಗಳನ್ನೂ ತೂಗುಹಾಕುವುದುಂಟು. ಮತ್ತೆ ಕೆಲವರು ಮಧ್ಯದ ಗೋಡೆಯ ಹತ್ತಿರ ಮಂಚವೊಂದನ್ನು ಹಾಕಿ, ಅದರ ಮೇಲೆ ಮೆತ್ತಗಿನ ಹಾಸು ಹಾಸುತ್ತಾರೆ. ಮಂಚದ ಒಂದು ತುದಿಯಲ್ಲಿ ಒಂದು ಕಪಾಟನ್ನು ಇನ್ನೊಂದು ಪಕ್ಕದಲ್ಲಿ ಮತ್ತೊಂದು ಕಪಾಟನ್ನಿಟ್ಟು, ಒಂದರಲ್ಲಿ ಕಲಾಪೂರ್ಣ ವಸ್ತುಗಳನ್ನೂ ಮತ್ತೊಂದರಲ್ಲಿ ಪುಸ್ತಕಗಳನ್ನೂ ಇಡುತ್ತಾರೆ. ಇತ್ತೀಚೆಗೆ ಸೋಫಾಸೆಟ್ ಈ ಜಾಗವನ್ನು ಆಕ್ರಮಿಸಿದೆ. ದೇವರ ಮನೆ ಇದ್ದರೆ ಅದನ್ನು ಸುಂದರವಾಗಿ ಅಲಂಕರಿಸುತ್ತಾರೆ. ಇದರಲ್ಲಿ ಒಂದು ಜಗಲಿ, ಅದರ ಮೇಲೆ ಸುಂದರವಾದ ಮಂಟಪ, ಅದರಲ್ಲಿ ಆರಾಧ್ಯ ದೇವರು, ಮಂಟಪದ ಎರಡು ಬದಿಯಲ್ಲಿ ಸದಾ ಉರಿಯುತ್ತಿರುವ ನಂದಾದೀಪಗಳು, ಸುತ್ತ ರಂಗವಲ್ಲಿ– ಈ ವ್ಯವಸ್ಥೆ ಸಾಮಾನ್ಯ. ಸುಂದರವಾದ ಬಣ್ಣ ಬಣ್ಣದ ಪುಷ್ಪಗಳಿಂದ ಹೂವಿನ ಹಾರಗಳಿಂದ ದೇವರನ್ನು ಶೃಂಗರಿಸುತ್ತಾರೆ. ಊಟದ ಮನೆಯನ್ನು ಈಗ ಹೆಚ್ಚು ಹೆಚ್ಚು ಅಲಂಕಾರಿಕವಾಗಿ ಇಡುತ್ತಾರೆ. ಮಧ್ಯದಲ್ಲಿ ಊಟದ ಮೇಜು ಕುರ್ಚಿಗಳನ್ನಿಟ್ಟು, ಅದರ ಮೇಲೆ ಅಲಂಕಾರದ ದೃಷ್ಟಿಯಿಂದ ಸುಂದರವಾದ ಬೊಂಬೆಯನ್ನಿಡುತ್ತಾರೆ. ಎರಡೂ ಗೋಡೆಗಳು ಸೇರುವ



ಮಲಗುವ ಕೋಣೆ

ಕಡೆಗಳಲ್ಲಿ ಒಂದು ನಿಲುವನ್ನಿಟ್ಟು ಅದರ ಮೇಲೂ ಗೊಂಬೆಗಳನ್ನಿಡುತ್ತಾರೆ. ಗೋಡೆಯಲ್ಲಿ ಸುಂದರವಾದ ಪ್ರಕೃತಿ ಸೌಂದರ್ಯವನ್ನೋ ಪುಷ್ಪಸೌಂದರ್ಯವನ್ನೋ ಬೀರುವ ಚಿತ್ರಪಟವನ್ನೂ ತೂಗುಹಾಕುತ್ತಾರೆ. ಮಲಗುವ ಕೋಣೆಗಳನ್ನು ಆಕರ್ಷಕವಾದ ರೀತಿಯಲ್ಲಿ ಅಲಂಕರಿಸುತ್ತಾರೆ. ಕಣ್ಣಿಗೆ ತಂಪನ್ನೀಯಬಲ್ಲ ತಿಳಿನೀಲಿ, ಕೆನೆ ಬಣ್ಣವನ್ನು ಗೋಡೆಗೆ ಬಳಿಯುತ್ತಾರೆ. ಸುಂದರವಾದ ಪರದೆಗಳನ್ನು ಇಳಿಬಿಡುತ್ತಾರೆ. ಗೋಡೆಗೆ ಸುಂದರವಾದ ಕೆತ್ತನೆ ಕೆಲಸದ, ಕುಸುರಿಕೆಲಸದ ವಾಲ್ ಪ್ಲೇಟನ್ನು ತೂಗಿಸುತ್ತಾರೆ. ಉತ್ತಮವಾದ ಮರದ ಮಂಚದ ಮೇಲೆ ಮೆತ್ತನೆಯ ಹಾಸಿಗೆ, ನೆಲಕ್ಕೆ ರತ್ನಗಂಬಳಿ, ಬಾಗಿಲಿನಲ್ಲಿ ಕಾಲೊರಸು, ಚಾಪೆ, ಮಂಚಕ್ಕೆ ಒಂದು ಸೊಳ್ಳೆಪರದೆ, ಮಕ್ಕಳ ತೊಟ್ಟಿಲಿದ್ದರೆ ಅದಕ್ಕೂ ಸೊಳ್ಳೆಪರದೆಯನ್ನು ತೂಗುಬಿಟ್ಟು ಅದರ ಮೇಲಿನ ತಟ್ಟೆಗಳಿಗೆ ಪಕ್ಷಿಗಳ ಬಟ್ಟೆಯ ಗೊಂಬೆಯನ್ನು ಗಿಲಿಗಿಲಿ ಶಬ್ದಮಾಡುವ ಆಟಿಕೆಗಳನ್ನು ತೂಗಿಸುತ್ತಾರೆ. ಕೆಲವೊಂದು ಭಾವಚಿತ್ರಗಳು, ಪಕ್ಕದಲ್ಲೊಂದು ಸ್ಟ್ಯಾಂಡು, ಅದರ ಮೇಲೆ ಟಿ.ವಿ., ರೇಡಿಯೋ, ಮಂಚದ ತಲೆಯ ಭಾಗದಲ್ಲಿ ಸ್ಟೂಲಿನ ಮೇಲೆ ಗೋಡೆಬಣ್ಣದ ಟೇಬಲ್ ಲ್ಯಾಂಪ್, ಇನ್ನೊಂದು ಪಕ್ಕದಲ್ಲಿ ಕನ್ನಡಿಯುಳ್ಳ ಬೀರು, ಪ್ರಸಾಧನಸಾಮಗ್ರಿಗಳು ಇತ್ಯಾದಿಯಾಗಿ ಸಜ್ಜುಗೊಳಿಸುವುದು ಸಾಮಾನ್ಯ.

ಇಂದಿಗೂ ಹೆಚ್ಚಿನ ಮನೆಗಳಲ್ಲಿ ರಂಗವಲ್ಲಿ ಗೃಹಾಲಂಕಾರ ಸಾಧನಗಳಲ್ಲಿ ಬಹುಮುಖ್ಯ. ದೇವರಮನೆಯಲ್ಲಿ, ಮುಂಬಾಗಿಲ ಹೊಸ್ತಿಲಿನಲ್ಲಿ, ಮನೆಯ ಪ್ರವೇಶ ದ್ವಾರದಲ್ಲಿ ರಂಗವಲ್ಲಿ ಹಾಕುವುದಕ್ಕೆ ಧಾರ್ಮಿಕ ಹಿನ್ನೆಲೆಯಿದ್ದರೂ ಅದು ಮನೆಗೊಂದು ಅಲಂಕಾರವನ್ನೂ ಶೋಭೆಯನ್ನೂ ನೀಡುತ್ತದೆ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಎಲ್ಲ ಮನೆಗಳಲ್ಲೂ ಮುಂಜಾನೆ ಗುಡಿಸಿ ಸಾರಿಸಿ, ಅಕ್ಕಿಹಿಟ್ಟು ಸುಣ್ಣಕಲ್ಲಿನ ಪುಡಿ ಇವುಗಳಿಂದ ರಂಗವಲ್ಲಿಯನ್ನು ಹಾಕಿ ಅಲಂಕರಿಸುತ್ತಾರೆ. ಹಬ್ಬಹರಿದಿನಗಳಲ್ಲಿ ಬಣ್ಣಬಣ್ಣದ ಪುಡಿಗಳಿಂದ ರಂಗವಲ್ಲಿಯನ್ನು ಹಾಕುತ್ತಾರೆ. ಮನೆಯಂಗಳ ಹಾಗೂ ದೇವರ ಕೋಣೆಯಲ್ಲಿ ನಿತ್ಯವೂ ರಂಗವಲ್ಲಿ ಹಾಕುವುದಾದರೆ, ಅತಿಥಿಗಳು ಆಗಮಿಸಿದಾಗ ಊಟದ ಮನೆಯನ್ನೂ ಪಡಸಾಲೆಯನ್ನೂ ನೂರಾರು ಬಗೆಯ ನಾನಾ ರಂಗಿನ ಪುಡಿಗಳ ರಂಗವಲ್ಲಿಯಿಂದ ಅಲಂಕರಿಸುತ್ತಿದ್ದುದುಂಟು. ನಗರ ಪ್ರದೇಶಗಳಲ್ಲಿನ ಮನೆಗಳ ಮುಂಭಾಗ ಸಿಮೆಂಟಿನದಾಗಿರುವುದರಿಂದ ನೀರು ಹಾಕಿ ತೊಳೆದರೆ ಸಾಕಾಗುತ್ತದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮಣ್ಣಿನ ನೆಲವಾದುದರಿಂದ ಅದನ್ನು ಗುಡಿಸಿ, ಪ್ರತಿನಿತ್ಯವೂ ಸಗಣಿಯಿಂದ ಸಾರಿಸಿ ಬಿಳಿಯ ಬಣ್ಣದ ರಂಗವಲ್ಲಿಯನ್ನು ಹಾಕುತ್ತಾರೆ. ಕೆಂಪುನೆಲ, ಹಸುರು ಸಾರಣೆ ಇವುಗಳ ಹಿನ್ನೆಲೆಯಲ್ಲಿ ಬಿಳಿಬಣ್ಣದ ರಂಗವಲ್ಲಿ ಬಹು ಸುಂದರವಾಗಿ ಕಾಣುತ್ತದೆ. ಅದರಲ್ಲೂ ಮನೆಯಂಗಳದಲ್ಲಿ ರಂಗವಲ್ಲಿ ಹಾಕಿ, ಅದರ ನಡುವೆ ಸ್ವಲ್ಪ ಸಗಣಿಯನ್ನಿಟ್ಟು, ಅದರ ಮೇಲೆ ಕುಂಬಳದ ಪುಷ್ಪಗಳನ್ನಿಟ್ಟರೆ ಅನಿಷ್ಟ ಪರಿಹಾರವಾಗುತ್ತದೆ ಎಂಬ ನಂಬಿಕೆಯಿಂದ ಕೆಲವರು ಹೀಗೆ ಅಲಂಕರಿಸುವುದುಂಟು. ಇದು ಮತ್ತಷ್ಟು ಸುಂದರವಾಗಿರುತ್ತದೆ. ಮತ್ತೆ ಕೆಲವರು ಆಯಾ ವಾರಗಳಿಗನುಗುಣವಾಗಿ ಸೋಮವಾರ ಶಿವಪೀಠ, ಮಂಗಳವಾರ ಕಾಲಪೀಠ, ಬುಧವಾರ ಸ್ವಸ್ತಿಕೆ ಹೀಗೆ ಹಾಕುತ್ತಾರೆ. ಇದು ವೈವಿಧ್ಯಮಯವಾಗಿರುತ್ತದೆ. ಪಂಚಮಿ, ನವರಾತ್ರಿ, ಸೀಗೆ ಹುಣ್ಣಿಮೆ, ದೀಪಾವಳಿ, ಯುಗಾದಿ ಮುಂತಾದ ವರ್ಷದ ಹಬ್ಬಗಳಲ್ಲಿಯಂತೂ ಮಹಿಳೆಯರು ಬಹು ಸುಂದರವಾದ ರಂಗವಲ್ಲಿಗಳನ್ನಿಟ್ಟು ಮನೆಯನ್ನು ಅಲಂಕರಿಸುತ್ತಾರೆ. ನಾಗಪಂಚಮಿಯಂದು ದುಂಡಗಿನ ಅಥವಾ ಚೌಕಾಕಾರದಲ್ಲಿ ಜೋಡುನಾಗಗಳ ರಂಗವಲ್ಲಿಯನ್ನೆಳೆದರೆ, ಸೀಗೆ ಹುಣ್ಣಿಮೆಯಂದು ಮನೆಯಲ್ಲಿರುವ ಬುಟ್ಟಿಗಳನ್ನು ಕೆಂಪುಮಣ್ಣಿನಿಂದ ಅಥವಾ ಸಗಣಿಯಿಂದ ಸಾರಿಸಿ, ಅದರ ಸುತ್ತಲೂ ಚುಕ್ಕಿಗಳನ್ನಿಟ್ಟು ಸುಣ್ಣದಿಂದ ರಂಗವಲ್ಲಿ ತೆಗೆಯುತ್ತಾರೆ. ದೀಪಾವಳಿಯಂದು ಮನೆಯ ಮುಂದೆ ರಂಗವಲ್ಲಿಗಳ ಪೈಪೋಟಿಯೇ ನಡೆಯುತ್ತದೆಯೇನೋ ಎಂಬಂತೆ ಬಣ್ಣ ಬಣ್ಣದ ರಂಗವಲ್ಲಿಗಳನ್ನು ಹಾಕುತ್ತಾರೆ. ಲಕ್ಷ್ಮೀ ಪೂಜೆಯಂದು ಲಕ್ಷ್ಮಿಗೆ ಪ್ರಿಯವಾದ ಕಮಲದ ರಂಗವನ್ನೂ ಸುಣ್ಣದಿಂದ ಕೋಟೆಯನ್ನೂ ಬಿಡಿಸುವುದುಂಟು. ಚೈತ್ರಮಾಸದ ಗೌರಿಯ ಮುಂದೆಯೂ ಹೀಗೆ ರಂಗವಲ್ಲಿ ಹಾಕುತ್ತಾರೆ. ಈಗೀಗ ನಗರದ ಮಹಿಳೆಯರು ಬಿಳಿ ಪೇಯಿಂಟಿನಿಂದ ಮನೆಯ ವರಾಂಡ, ಪಡಸಾಲೆ ಇವುಗಳ ಸುತ್ತಲೂ ಗೋಡೆಯ ಉದ್ದಕ್ಕೆ ಎಲೆಬಳ್ಳಿಗಳ ರಂಗವಲ್ಲಿಯನ್ನು ಹಾಕುವುದುಂಟು.

ಸ್ವಲ್ಪ ಅನುಕೂಲವಂತರು ಜಲಸಸ್ಯಗಳನ್ನೂ ಜಲಚರಗಳನ್ನೂ ಇಡುವುದಕ್ಕಾಗಿ ಮಾಡಿದ ಅಕ್ವೇರಿಯಂ ಎಂಬ ಮೀನು ತೊಟ್ಟಿ ಅಥವಾ ಕೊಳವನ್ನು ಮನೆಯ ವರಾಂಡದಲ್ಲಿರಿಸಿ ಅದು ಕಾಣುವಂತೆ ಬಣ್ಣಬಣ್ಣದ ದೀಪಗಳಿಂದ ಅಲಂಕರಿಸುತ್ತಾರೆ. ಸುಂದರವಾದ ಗಿಳಿ ಅಥವಾ ಪಕ್ಷಿ ಪಂಜರವನ್ನು ವರಾಂಡದಲ್ಲಿ ತೂಗುಹಾಕುವುದೂ ವಾಡಿಕೆಯಾಗಿದೆ. ವಿವಿಧ ಬಗೆಯ ಸಾಕುನಾಯಿಗಳು ಮನೆಗೆ ಶೋಭೆಯೆಂದು ಸಾಕುವವರೂ ಇದ್ದಾರೆ. ನಗರ ಪ್ರದೇಶಗಳಲ್ಲಿ ಈ ಹವ್ಯಾಸ ಹೆಚ್ಚು.

ಚಿತ್ರಪಟಗಳನ್ನೂ ಗೃಹಾಲಂಕರಣದ ಸಾಧನಗಳನ್ನಾಗಿ ಉಪಯೋಗಿಸುತ್ತಾರೆ. ಕೌಟುಂಬಿಕ ಚಿತ್ರಗಳನ್ನು ಪಡಸಾಲೆಯಲ್ಲೂ ಪ್ರಕೃತಿಸೌಂದರ್ಯದ ಚಿತ್ರಪಟಗಳನ್ನು ವರಾಂಡದಲ್ಲೂ ತೂಗುಹಾಕುತ್ತಾರೆ. ಮನೆಮಕ್ಕಳ ಫೋಟೋಗಳನ್ನು ಫ್ರೇಮಿನೊಳಗಿಟ್ಟು ಮೇಜಿನ ಮೇಲಾಗಲಿ, ಬೀರುವಿನ ಮೇಲಾಗಲಿ ಇಡುವುದುಂಟು. ಫಲಪುಷ್ಪಗಳ, ನೈಸರ್ಗಿಕ ಸೌಂದರ್ಯದ ವಾಲ್ ಪ್ಲೇಟ್‌ಗಳನ್ನು ತೂಗಿಸುತ್ತಾರೆ. ಹಾಗೆಯೇ ಬೆಲೆಬಾಳುವ ಪೀಠೋಪಕರಣಗಳನ್ನು ಆಧುನಿಕ ರೀತಿಯಲ್ಲಿ ಅಲಂಕರಿಸಿ, ಮನೆಯಲ್ಲಿರುವ ಕನ್ನಡಿ, ಚಿತ್ರಪಟಗಳು, ಹೂದಾನಿಗಳು, ಗೊಂಬೆಗಳು ಮೊದಲಾದುವನ್ನು ವ್ಯವಸ್ಥಿತವಾಗಿರಿಸಿ ಮನೆಯನ್ನು ಅಲಂಕರಿಸುವುದುಂಟು. ಶ್ರೀಮಂತರು ಮತ್ತು ವಿಲಾಸಿಗಳು ನಡುಮನೆಯಲ್ಲಿ ಚಾವಣಿಯ ಮಧ್ಯಕ್ಕೆ ಜಗಮಗಿಸುವ 'ಶಾಂಡಲೇರ್' ದೀಪ ಗುಚ್ಛವನ್ನು ಅಳವಡಿಸುವುದೂ ಉಂಟು.

ಅತ್ಯಾಧುನಿಕ ಪ್ರವೃತ್ತಿಯವರು ಕಿಟಕಿ ಬಾಗಿಲುಗಳಿಗೆ ಸುಂದರವಾದ ಪರದೆಗಳನ್ನು ಹಾಕುವುದರಲ್ಲಿಯೂ ತಮ್ಮ ಅಭಿರುಚಿಯನ್ನು ವ್ಯಕ್ತಪಡಿಸುತ್ತಾರೆ. ಪ್ರಶಾಂತ ವಾತಾವರಣದ ಅಪೇಕ್ಷೆಯುಳ್ಳವರು ತಿಳಿಬಣ್ಣಗಳ ಪರದೆಗಳನ್ನು ಉಪಯೋಗಿಸಿದರೆ, ಉತ್ಸಾಹಮಯವಾದ ವಾತಾವರಣವನ್ನು ಬಯಸುವವರು ದಟ್ಟವಾದ ಬಣ್ಣಗಳನ್ನು ಉಪಯೋಗಿಸುವರು. ಮತ್ತೆ ಕೆಲವರು ಗೋಡೆಯ ಬಣ್ಣಗಳಿಗೆ ಹೊಂದಿಕೆಯಾಗಬಲ್ಲ ಪರದೆಗಳನ್ನು ಬಳಸುತ್ತಾರೆ. ಕೆಲಮಟ್ಟಿಗೆ ದಟ್ಟ, ಕೆಲಮಟ್ಟಿಗೆ ತಿಳಿ, ಕೆಲಮಟ್ಟಿಗೆ ಪ್ರಕಾಶಹೀನ, ಕೆಲಮಟ್ಟಿಗೆ ಪ್ರಕಾಶಮಾನ ಎಂಬ ಉಕ್ತಿಗನುಗುಣವಾಗಿ ಗೋಡೆಯ ಬಣ್ಣಗಳಿಗೆ ಹೊಂದಿಕೆಯಾಗುವಂತೆ ಕಿಟಕಿ ಮೇಜುಗಳ ಹೊದಿಕೆ, ಬಾಗಿಲು ಕಿಟಕಿ ಪರದೆಗಳನ್ನು ಆರಿಸಿರುತ್ತಾರೆ. ಬಾಗಿಲುಗಳಿಗೆ ಇಳಿಬಿಟ್ಟ ಪರದೆಗಳನ್ನು ಎರಡು ಭಾಗಗಳಾಗಿ ಕತ್ತರಿಸಿ ಹೊಲಿದು ನಿರಿಗೆ ತೆಗೆದು, ಅರ್ಧಅರ್ಧ ಭಾಗವನ್ನು ಪ್ಲಾಸ್ಟಿಕ್ ಮಣಿಗಳಿಂದ ಮತ್ತು ರಿಬ್ಬನ್‌ಗಳಿಂದ ಕಟ್ಟುವುದೂ ಉಂಟು. ಸೋಫಾದ ಮೇಲೆ ಇರಿಸುವ ಒರಗುದಿಂಬಿಗೆ ಸುತ್ತಲೂ ನಿರಿಗೆ ಕಟ್ಟಿ ಹೊಲಿದ ಚೀಲವನ್ನು ಹಾಕಿ ನಡುವೆ ಸುಂದರವಾದ ಕಸೂತಿ ಕೆಲಸವನ್ನು ಮಾಡುತ್ತಾರೆ.

ಅಲಂಕೃತಗೋಡೆ

ಗೃಹಾಲಂಕಾರದಲ್ಲಿ ಹೂಗಳ ಪಾತ್ರ ಬಹಳ ಹಿರಿದು. ಅರಳಿದ ಹೂಗಳನ್ನು ಹಸುರೆಲೆಗಳನ್ನು ಹೂದಾನಿಗಳಲ್ಲಿಟ್ಟು (ಫ್ಲವರ್ ವಾಸ್) ಅಲಂಕರಿಸಿ ಮೇಜಿನ ಮೇಲಿಡುವುದು ಹೆಚ್ಚಾಗಿ ಬಳಕೆಗೆ ಬರುತ್ತಿದೆ. ಹೂಗಳನ್ನು ಒಂದೆಡೆಯಲ್ಲಿ, ತರಕಾರಿಗಳನ್ನು ಒಂದೆಡೆಯಲ್ಲಿ ಜೋಡಿಸುವುದು, ಹೂದಾನಿಗಳಲ್ಲಿ ಅಚ್ಚುಕಟ್ಟಾಗಿ ಹೂಗಳನ್ನು ಜೋಡಿಸುವುದು ಒಂದು ಕಲೆಯೇ ಆಗಿದೆ. ಜಪಾನೀಯ ಹೂವಿನ ಅಲಂಕಾರದ ಪ್ರಭಾವ ಅಲ್ಲಲ್ಲಿ ಕಾಣುತ್ತದೆ. ಇಕೆಬಾನಾ ಕಲೆ ಪ್ರಚಾರಗೊಂಡಿದೆ.

ಮನೆಯ ಸೊಬಗು ಹೆಚ್ಚಿಸಲು ಮನೆ ಮುಂದೆ ಸುಂದರವಾದ ಕೈ ತೋಟ ಮಾಡುವುದು, ಅಲಂಕಾರಿಕ ಸಸ್ಯಗಳು ಮತ್ತು ಹೂವಿನ ಗಿಡಗಳನ್ನು ಕುಂಡಗಳಲ್ಲಿ ಜೋಡಿಸುವುದು, ಅಲಂಕಾರಿಕ ಕುಂಡಗಳಲ್ಲಿ ಇಳಿಬೀಳುವ ಸಸ್ಯಗಳನ್ನು ಇಟ್ಟು ಮನೆಯ ಮುಂದೆ ಚಾವಣಿಗೆ ತೂಗುಹಾಕುವುದು ರೂಢಿಯಲ್ಲಿದೆ. (ಎಂ.ಜಿ.ಬಿ.)

ಮಾನವನ ಆವಶ್ಯಕತೆಗಳಲ್ಲಿ ಮನೆಗೆ ಹೆಚ್ಚಿನ ಸ್ಥಾನವಿದೆ. ಕುಟುಂಬವತ್ಸಲರಾದ ಭಾರತೀಯರಿಗಂತೂ ಮನೆಯೇ ಕೇಂದ್ರಬಿಂದು. ಬಡವ ಬಲ್ಲಿದರೆಲ್ಲರೂ ತಮ್ಮ ತಮ್ಮ ಮನೆಯನ್ನು ಬಹಳ ಪ್ರೀತಿಸುತ್ತಾರೆ. ದೊಡ್ಡ ದೊಡ್ಡ ನಗರಗಳಲ್ಲಿ ಜನಸಂಖ್ಯೆ ವಿಪರೀತವಾಗಿ ಹೆಚ್ಚಿ ಗಲ್ಲಿ ಗಲ್ಲಿಗಳಲ್ಲಿ ವಠಾರಜೀವನ ಪ್ರಾರಂಭವಾದ ಮೇಲೆ ವೈಯಕ್ತಿಕವಾಗಿ ಮನೆಗಳ ಅಚ್ಚುಕಟ್ಟು ಮಾಯವಾಗುತ್ತಿದೆಯಾದರೂ ಹಳ್ಳಿಗಳಲ್ಲಿ ಇಂದಿಗೂ ಜನ ತಮ್ಮ ಬಡ ಜೋಪಡಿಗಳನ್ನೇ ಅಂದವಾಗಿ ಇಟ್ಟುಕೊಂಡಿರುತ್ತಾರೆ.

ಸುಣ್ಣ–ಬಣ್ಣ, ಸಾರಣೆ–ಕಾರಣೆ, ರಂಗವಲ್ಲಿ, ಹಸುರು ತೋರಣ, ಮಂಚ ಚಾಪೆ, ಮಣೆ, ತೂಗುಮಣೆ, ದೀಪ–ಧೂಪ–ಇವು ಸಾಮಾನ್ಯವಾಗಿ ಹಿಂದಿನಿಂದ ನಡೆದು ಬಂದಿರುವ ಗೃಹಾಲಂಕರಣ ಸಾಧನಗಳು.

ಹಿಂದಿನ ಕಾಲದ ಮನೆಗಳಲ್ಲಿ ಒಟ್ಟುಕುಟುಂಬದವರು ವಾಸಿಸಲು ಯೋಗ್ಯವಾಗು ವಂಥ ದೊಡ್ಡ ದೊಡ್ಡ ಪಡಸಾಲೆ, ದೇವರಮನೆ, ಅಡುಗೆಮನೆಗಳಿರುತ್ತಿದ್ದವು. ಅವರ ಆವಶ್ಯಕತೆಗೆ ಅಷ್ಟು ಸಾಕಾಗುತ್ತಿದ್ದವು. ಒಕ್ಕಲತನ, ವ್ಯಾಪಾರ ಅವರ ಮುಖ್ಯ ಉದ್ಯೋಗವಾದುದರಿಂದ ಮನೆಯ ಬಹುಭಾಗ ದನದ ಕೊಟ್ಟಿಗೆ ಮತ್ತು ಉಗ್ರಾಣಗಳಾಗಿರುತ್ತಿದ್ದುವು. ಪಡಸಾಲೆಯಲ್ಲಿ ಒಂದು ಮಂಚ ಇರುತ್ತಿತ್ತು. ಅದರ ಮೇಲೆ ಸುಂದರವಾದ ಜಮಖಾನೆ ಹಾಸಿ ದಿಂಬುಗಳನ್ನಿಡುತ್ತಿದ್ದರು. ಪಡಸಾಲೆಯ ಗೋಡೆಯ ಮೇಲ್ಭಾಗವೆಲ್ಲ ಬಹುಪಾಲು ರವಿವರ್ಮನ, ಮಿಕ್ಕಂತೆ ಸ್ಥಳೀಯ ಕಲೆಗಾರರ ಚಿತ್ರಪಟಗಳಿಂದ ಅಲಂಕೃತವಾಗಿರುತ್ತಿತ್ತು. ಇದ್ದವರು ಕಾಡುಕೋಣ ಇಲ್ಲವೆ ಜಿಂಕೆಯ ಕೊಂಬುಗಳನ್ನೊ, ಹುಲಿಯ ಮುಖವನ್ನೊ, ಅಲಂಕಾರಕ್ಕಾಗಿ ಗೋಡೆಗೆ ತಗಲಿಸುತ್ತಿದ್ದರು. ನೆಲವನ್ನು ಸೆಗಣಿಯಿಂದ ಸಾರಿಸುತ್ತಿದ್ದರು. ನೆಲದ ಅಂಚಿಗೆ ಗೋಡೆಗೆ ಹೊಂದಿದಂತೆ ಸುಣ್ಣ ಹಾಗೂ ಕೆಮ್ಮಣ್ಣಿನ ಪಟ್ಟಿಗಳನ್ನು ಎಳೆಯುತ್ತಿದ್ದರು. ಗೋಡೆಗೆ ದಟ್ಟವಾಗಿ ಬಣ್ಣ ಹಚ್ಚುತ್ತಿದ್ದರು. ಇಲ್ಲವೆ ಸುಣ್ಣ, ಹಳದಿ ಮಟ್ಟಿ, ಹುರಿಮಂಜುಗಳಿಂದ ಇಡೀ ಗೋಡೆಯನ್ನು ಸಾರಿಸುತ್ತಿದ್ದರು. ಹಳದಿ, ಕೆಂಪು ಬಣ್ಣದ ಗೋಡೆ, ಸೆಗಣಿಯಿಂದ ಸಾರಿಸಿದ ಹಸುರು ನೆಲ, ಅಂಚಿನ ಸುಣ್ಣ ಇತ್ಯಾದಿಗಳಿಂದ ಮನೆಗಳು ರಂಗುರಂಗಾಗಿ ಕಾಣುತ್ತಿದ್ದವು. ಬೆಳಗ್ಗೆ ಎದ್ದೊಡನೆ ಮನೆಯಂಗಳವನ್ನು ಸಾರಿಸಿ ರಂಗವಲ್ಲಿ ಹಾಕಿ, ಹೊಸ್ತಿಲನ್ನು ಪೂಜಿಸಿ ಮನೆಗೆಲಸ ಪ್ರಾರಂಭಿಸುವುದು ಗೃಹಿಣಿಯ ನಿತ್ಯ ನಿಯಮವಾಗಿತ್ತು.

ಇಂದು ನಾಗರಿಕ ಆವಶ್ಯಕತೆಗಳಿಗನುಸರಿಸಿ ಹುಸಿ (ವೆರಾಂಡ), ಪಡಸಾಲೆ (ಡ್ರಾಯಿಂಗ್‌ರೂಮ್), ಓದುವಕೋಣೆ, ಮಲಗುವ ಕೋಣೆ, ದೇವರಮನೆ, ಅಡುಗೆ ಮನೆ, ಊಟದಮನೆ, ದಾಸ್ತಾನು ಕೋಣೆ ಸ್ನಾನದಮನೆ, ಗರಾಜ್ – ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಮನೆಗಳು ಅವರವರ ಆರ್ಥಿಕ ಪರಿಸ್ಥಿತಿಗೆ, ಅವರವರ ಮನದೊಲವಿಗೆ ತಕ್ಕಂತೆ ನಿರ್ಮಾಣಗೊಳ್ಳುತ್ತವೆ. ಇತ್ತೀಚೆಗೆ ಪೌರಸ್ತ್ಯ ಹಾಗೂ ಪಾಶ್ಚಾತ್ಯ ಪದ್ಧತಿಗಳ ಸಮ್ಮಿಳನ ಭಾರತೀಯ ಗೃಹಾಲಂಕರಣಗಳಲ್ಲಿ ಹಾಸುಹೊಕ್ಕಾಗಿ ಕಂಡುಬರುತ್ತಿದೆ. ಮನೆಯ ಅಲಂಕಾರಕ್ಕೆ ಸಿರಿತನ ಬಡತನಗಳಿಗಿಂತ ಕಲಾವಿಲಾಸಿ ದೃಷ್ಟಿ ಮುಖ್ಯವಾಗುತ್ತಿದೆ.

ಪಡಸಾಲೆಯ ಅಲಂಕಾರಕ್ಕೆ ಭಾರತೀಯರು ಹೆಚ್ಚು ಗಮನ ಕೊಡುತ್ತಾರೆ. ಅಪ್ಪಟ ಭಾರತೀಯ ಪದ್ಧತಿಯಲ್ಲಿ ಪಡಸಾಲೆ ಅಲಂಕೃತವಾಗಬೇಕು ಎನ್ನುವವರು, ಅದರ ಮಧ್ಯದ ಗೋಡೆಯ ಬಳಿ ಒಂದು ಮಂಚವನ್ನೋ ದಿವಾನವನ್ನೋ ಹಾಕುವರು. ಅದರ ಮೇಲೆ ಮೆತ್ತನೆಯ ಹಾಸಿಗೆ ಹಾಸಿ ಸುಂದರವಾದ ಹೆಣಿಗೆಯ ಇಲ್ಲವೆ ಅಚ್ಚಿನ ಬಣ್ಣಬಣ್ಣದ ಹೊದಿಕೆಯನ್ನು ಹಾಸಲಾಗುವುದು. ರಾಜಸ್ತಾನ ಹಾಗೂ ಮಧ್ಯಭಾರತದಲ್ಲಿ ಮಂಚಗಳನ್ನು ಕಲಾಪೂರ್ಣವಾಗಿ ಮಾಡುತ್ತಾರೆ. ಹಾಸಿಗೆ ಹಾಸಿದ ಮಂಚದ ಎರಡೂ ಬದಿಗೆ ಉದ್ದವಾದ ಲೋಡುಗಳನ್ನಿಡುವರು. ಬೆನ್ನಿಗೆ ಆಸರೆಯಾಗಲು ಬಣ್ಣಬಣ್ಣದ ದಿಂಬುಗಳನ್ನಿಡುವರು. ಮಂಚದ ಮುಂಭಾಗದಲ್ಲಿ ಭಾರತೀಯರ ಕಲಾಕೌಶಲದಿಂದ ಕಂಗೊಳಿಸುವ ಜಮಖಾನೆ, ರತ್ನಗಂಬಳಿ ಮೊದಲಾದವುಗಳಲ್ಲಿ ಒಂದನ್ನು ಹಾಸುವರು. ಮಂಚದ ಒಂದು ಬದಿಗೆ ಕಲಾಪೂರ್ಣ ವಸ್ತುಗಳ ಕಪಾಟು, ಇನ್ನೊಂದು ಬದಿಗೆ ಪುಸ್ತಕಗಳ ಕಪಾಟುಗಳನ್ನಿಡುವರು. ಮನೆಯ ಹಿರಿಯರು, ಮಕ್ಕಳು ಸದಾ ಆನಂದದಿಂದ ಪಡಸಾಲೆಯಲ್ಲಿಯೇ ಹೆಚ್ಚಿನ ವೇಳೆ ಕಳೆಯುವರು.

ಅಡುಗೆಮನೆಯಲ್ಲಿ ಸಾರಿಸಿದ ನೆಲದ ಮೇಲೆ ಬಣ್ಣಬಣ್ಣದ ಮಣೆಗಳನ್ನು ಹಾಕಿ ಹಸುರು ಕುಡಿಬಾಳೆಯನ್ನಿಟ್ಟು ಅದರ ಸುತ್ತಲೂ ಕಲಾಪೂರ್ಣವಾದ ರಂಗವಲ್ಲಿಯನ್ನಿಕ್ಕಿ, ಹಬ್ಬಹರಿದಿನಗಳಲ್ಲಿ, ಅತಿಥಿ ಅಭ್ಯಾಗತರು ಬಂದಾಗ ಉಣಬಡಿಸುವುದು ಭಾರತೀಯ ಗೃಹಿಣಿಗೆ ಸಂತಸದ ಸುಗ್ಗಿ. ಈಗ ಈ ಸ್ಥಾನವನ್ನು ಡೈನಿಂಗ್ ಟೇಬಲ್ ಆಕ್ರಮಿಸಿದೆ.

ದೇವರಮನೆಯಲ್ಲಿ ಜಗಲಿಯ ಮೇಲೆ ಮಂಟಪವನ್ನಿಟ್ಟು ಅದರಲ್ಲಿ ಆರಾಧ್ಯ ದೇವತೆಯ ಮೂರ್ತಿಯನ್ನಿರಿಸುವರು. ಮಂಟಪದ ಎರಡೂ ಬದಿಗೆ ಅಂದಚೆಂದದ ನಂದಾದೀವಿಗೆಗಳು; ಸುತ್ತಲೂ ರಂಗವಲ್ಲಿ, ಗಂಟೆಜಾಗಟೆ, ಪಂಚಾರತಿ, ಬಗೆಬಗೆಯ ದೀಪಸ್ತಂಭಗಳು, ಬಣ್ಣ ಬಣ್ಣದ ಹೂಗಳಿಂದ ದೇವರಮನೆ ಕಲಾಪೂರ್ಣವಾಗಿ ಕಂಗೊಳಿಸುವುದು.

ಇಂದಿನ ಗೃಹಿಣಿ ಹಳೆಯ ಪದ್ಧತಿ ಹೊಸಪದ್ಧತಿಗಳಲ್ಲಿಯ ಒಳ್ಳೆಯದನ್ನು, ಕಲಾಪೂರ್ಣವಾದುದನ್ನು ಆಯ್ದುಕೊಂಡು ಗೃಹಾಲಂಕಾರ ಮಾಡುವುದು ವಾಡಿಕೆಯಾಗಿದೆ. ಕಸದಲ್ಲಿಯೂ ರಸವನ್ನು ತೆಗೆಯಬಲ್ಲ ಕುಶಲ ಕಲೆಗಾರ್ತಿಯಾದ ಗೃಹಿಣಿಯು ಮನೆಯನ್ನು ಸೊಬಗಿನ ಬೀಡನ್ನಾಗಿ ಮಾಡುವಳು. ಇತ್ತೀಚೆಗೆ ಬಣ್ಣಗಳ ಭಾವಗಳನ್ನರಿತು ಬೇರೆ ಬೇರೆ ಕೋಣೆಗೆ ಬೇರೆ ಬೇರೆ ಬಣ್ಣಗಳನ್ನು ಹಚ್ಚುತ್ತಾರೆ. ಪಡಸಾಲೆಗೆ ಕೆನೆಬಣ್ಣವಾದರೆ ಊಟದ ಮನೆಗೆ ತಿಳಿಗುಲಾಬಿ, ಮಲಗುವ ಕೋಣೆಗೆ ತಿಳಿಹಳದಿ, ಅಡುಗೆಯ ಮನೆಗೆ ತಿಳಿಹಸುರು ಇಲ್ಲವೆ ತಿಳಿನೀಲಿ ಬಣ್ಣಗಳನ್ನು ಹಚ್ಚುವುದರಲ್ಲಿಯೂ ಗೃಹಾಲಂಕರಣ ಕಲೆ ಅಡಗಿದೆ. ಮನೆಯ ಆಕರ್ಷಣೆಗೆ ಬಣ್ಣವೇ ಆಧಾರ. ಕೋಣೆ ಸಣ್ಣದಿದ್ದರೂ ತಿಳಿಬಣ್ಣ ಹಚ್ಚಿದರೆ ನೋಡಲಿಕ್ಕೆ ವಿಶಾಲವಾಗಿ ಕಾಣುವುದು. ಬಣ್ಣಗಳ ಪರಿಣಾಮ ವಾತಾವರಣದ ಮೇಲೆ ಆಗುತ್ತದೆ. ದಟ್ಟ ಬಣ್ಣಗಳು ಉತ್ಸಾಹದಾಯಕವಾಗಿ ವರ್ಣರಂಜಿತವಾಗಿ ಕಾಣಿಸುತ್ತವೆ. ತಿಳಿ ಬಣ್ಣಗಳು ಶಾಂತಿದಾಯಕವಾಗಿ, ಉಲ್ಲಾಸದಾಯಕವಾಗಿ ತೋರುತ್ತವೆ. ನೆಲಕ್ಕೆ ಸಿಮೆಂಟ್ ಕಾಂಕ್ರೀಟ್ ಇಲ್ಲವೆ ಮೊಸಾಯಿಕ್ ಮಾಡಿಸುವುದು, ಈಗ ಗ್ರಾನೈಟ್, ಅಮೃತಶಿಲೆ, ವೆಟ್ರಿಫೈಡ್ ಟೈಲ್ ಹಾಕಿಸುವುದು ರೂಢಿಯಾಗಿದೆ. ಮೇಲ್ಚಾವಣಿಗೆ ಬಿಳಿ ಇಲ್ಲವೆ ತಿಳಿಬಣ್ಣಗಳನ್ನು ಉಪಯೋಗಿಸುವರು.

ಹುಸಿಯಲ್ಲಿ ಕೆಲವು ಕುರ್ಚಿಗಳನ್ನಿಡುವರು. ಪಕ್ಕದ ಟೀಪಾಯಿಯ ಮೇಲೆ ಓದುವ ಪತ್ರಿಕೆಗಳನ್ನು ಜೋಡಿಸಿಡುವರು. ಪಡಸಾಲೆಯಲ್ಲಿ ಸೋಫಾಸೆಟ್, ದಿವಾನ, ರೇಡಿಯೊ, ಟಿವಿ, ಅಲಂಕಾರದ ಕಲಾಕುಶಲ ವಸ್ತುಗಳ ಕಪಾಟು, ಪುಸ್ತಕಗಳ ಕಪಾಟು ಇವನ್ನು ಕಾಣಬಹುದು. ಹಿಂದಿನಂತೆ ಹತ್ತಾರು ಚಿತ್ರಗಳನ್ನು ಸದಾ ಕಾಲವೂ ತೂಗುಹಾಕುವ ಬದಲು ಒಂದೆರಡು ನಿಸರ್ಗ ಸೌಂದರ್ಯದ ವರ್ಣಚಿತ್ರಗಳನ್ನು ಗೋಡೆಗೆ ಹಾಕಿದ್ದು ಮಾಸಕ್ಕೊ ಪಕ್ಷಕ್ಕೊ ಒಮ್ಮೆ ಅವನ್ನು ಬದಲಿಸುವರು. ನೆಲಕ್ಕೆ ಚಾಪೆ ಇಲ್ಲವೆ ರತ್ನಗಂಬಳಿ ಹಾಸುವರು. ಹೂದಾನಿಗಳಲ್ಲಿ ಜಪಾನಿ ಪದ್ಧತಿಯಂತೆ ಹೂಗಳನ್ನಲಂಕರಿಸಿ ಪಡಸಾಲೆಯ ನಡುವಿನಲ್ಲೋ ಮೂಲೆಯೊಂದರಲ್ಲೋ ಇಡುವುದು ಗೃಹಾಲಂಕರಣದ ಮುಖ್ಯ ಅಂಗವಾಗಿದೆ. ಹೂಗಳಲ್ಲಿ ಮನವನ್ನರಳಿಸುವ ಶಕ್ತಿ ಇದೆ. ಅವುಗಳ ಬಣ್ಣ ಪಡಸಾಲೆಯ ಒಟ್ಟಂದದ ಬಣ್ಣಕ್ಕೆ ಹೊಂದಿಕೆಯಾಗುವಂತಿದ್ದರೆ ಬಹು ಚೆನ್ನು.

ಆಧುನಿಕ ಗೃಹಾಲಂಕಾರ ಕಲೆಯಲ್ಲಿ ಬಾಗಿಲು, ಕಿಟಕಿಗಳಿಗೆ ಪರದೆಯನ್ನು ಹಾಕುವುದು ಮುಖ್ಯವಾಗಿದೆ. ಕಿಟಕಿಗಳ ಮೂಲಕ ಚೆನ್ನಾಗಿ ಗಾಳಿ, ಬೆಳಕು ಬರುವಂತೆ ಅಲ್ಲಿನ ಪರದೆಗಳು ತೆಳ್ಳಗಿರಬೇಕು. ತಿಳಿಬಣ್ಣದವಾಗಿರಬೇಕು. ಬಾಗಿಲು ಪರದೆಗಳು ದಪ್ಪಬಟ್ಟೆಯವಿರಬೇಕು. ದಟ್ಟಬಣ್ಣದವಿರಬೇಕು. ಗೋಡೆಯ ಬಣ್ಣಕ್ಕೆ ಹೊಂದಿಕೆಯಾಗುವಂತಿರಬೇಕು. ವರ್ಣಗಳ ಸಾಮರಸ್ಯದಂತೆ ಅನೇಕ ವೇಳೆ ವರ್ಣಭಿನ್ನತೆಯೂ ಕಣ್ಣಿಗೆ ಹಿತವಾಗಬಲ್ಲದು. ಕುರ್ಚಿ, ದಿವಾನಗಳ ಹಾಗೂ ದಿಂಬುಗಳ ಹೊದಿಕೆಗಳು ಒಂದೇ ಬಣ್ಣದವಿರಬೇಕು. ಅವುಗಳ ಮೇಲೆ ಕಲಾಪೂರ್ಣವಾದ ಕಸೂತಿಕೆಲಸ, ಇಲ್ಲವೆ ಬಣ್ಣದ ಚಿತ್ರಗಳು ಇದ್ದರೆ ಒಳ್ಳೆಯದು.

ಊಟದ ಮನೆಯಲ್ಲಿ ಕುರ್ಚಿ, ಮೇಜು, ಕೈ ತೊಳೆಯಲು ಸಿಂಕ್, ಊಟ ಹಾಗೂ ಚಹಗಳಿಗೆ ಬೇಕಾಗುವ ಪಿಂಗಾಣಿಯ ಪಾತ್ರೆಗಳನ್ನಿಡುವ ಕಪಾಟು–ಇವು ಇರಬೇಕು. ಊಟದ ಮನೆಯ ಗೋಡೆಗಳಿಗೆ ಹಣ್ಣು ಹಂಪಲದ, ಸೃಷ್ಟಿ ಸೊಬಗಿನ ವರ್ಣಚಿತ್ರಗಳನ್ನು ಹಾಕುವುದು ವಾಡಿಕೆ. ಬಣ್ಣಬಣ್ಣದ ಹೂಗಳಿಂದಲಂಕೃತವಾದ ಹೂದಾನಿ ಮತ್ತು ಹಣ್ಣಿನ ತಟ್ಟೆಗಳು ಊಟದ ಮನೆಗೆ ಅಲಂಕಾರವಾಗುತ್ತವೆ.

ಆಧುನಿಕ ಅಡುಗೆಮನೆಗಳು ಬಹಳ ಅಚ್ಚುಕಟ್ಟಾಗಿರುತ್ತವೆ. ಗ್ಯಾಸ್ ಇಲ್ಲವೆ ವಿದ್ಯುತ್ ಒಲೆಗಳ ಮೇಲೆ ಅಡುಗೆ ಮಾಡುವುದರಿಂದ ಹೊಗೆ ಮನೆ ಅಲ್ಲಿ ಪ್ರವೇಶಿಸುವಂತಿಲ್ಲ. ಆಹಾರಧಾನ್ಯಗಳನ್ನು, ಅಡುಗೆ ಪದಾರ್ಥಗಳನ್ನು ಹಿತ್ತಾಳೆ, ಸ್ಟೀಲು, ಅಲ್ಯುಮಿನಿಯಮ್ ಇಲ್ಲವೆ ಪ್ಲಾಸ್ಟಿಕ್ ಡಬ್ಬಗಳಲ್ಲಿ ಹಾಕಿ ಒಪ್ಪವಾಗಿ ಓರಣವಾಗಿ ಇಡುವುದರಿಂದ ಅಡುಗೆಮನೆಯ ಶೋಭೆ ಹೆಚ್ಚುತ್ತದೆ. ಉಪ್ಪಿನಕಾಯಿ, ಮೊರಬ್ಬಗಳನ್ನು ಗಾಜಿನ ಭರಣಿಗಳಲ್ಲಿ (ಜಾಡಿ) ಹಾಕಿ ಸಾಲುಸಾಲಾಗಿ ಇಡುವರು. ಅಡುಗೆಮನೆಯಲ್ಲಿ ತರಕಾರಿಗಳನ್ನೇ ಹೂದಾನಿಗಳಲ್ಲಿ ಅಲಂಕರಿಸಿ ಇಡಬಹುದಾಗಿದೆ.

ಮಲಗುವ ಕೋಣೆಯ ಗೋಡೆಗಳಿಗೆ ಕಣ್ಣಿಗೆ ತಂಪನ್ನೀಯಬಲ್ಲ ತಿಳಿಬಣ್ಣವನ್ನು ಉಪಯೋಗಿಸುತ್ತಾರೆ. ಬಾಗಿಲು, ಕಿಟಕಿಗಳಿಗೆ ಕಲಾಪೂರ್ಣವಾದ ಅಂದಚೆಂದದ ಪರದೆಗಳನ್ನಿಳಿಬಿಡುತ್ತಾರೆ. ಮಂಚಕ್ಕೆ ಸೊಳ್ಳೆಪರದೆ, ನೆಲಕ್ಕೆ ಚಾಪೆ, ಬಾಗಿಲಿಗೆ ಕಾಲೊರಸಿ ಹಾಕುತ್ತಾರೆ. ಮಲಗುವ ಕೋಣೆಯಲ್ಲಿ ವೈಯಕ್ತಿಕ ಭಾವಚಿತ್ರಗಳನ್ನು ಹಾಕಬಹುದು. ಹೂದಾನಿಗಳಲ್ಲಿ ಹೊಸ ಹೂಗಳಿದ್ದರೆ ದುಡಿದು ದಣಿದು ಬಂದ ದೇಹಕ್ಕೆ ಶಾಂತಿಯೂ ಮನಸ್ಸಿಗೆ ಆನಂದವೂ ಸಿಗುತ್ತವೆ.

ಮನೆಯ ಒಳಗಿನ ಅಲಂಕರಣದಂತೆ ಮನೆಯ ಹೊರಗಿನ ಅಲಂಕರಣವೂ ಮುಖ್ಯ ವಿಷಯವಾಗಿದೆ. ಮನೆಯ ಹೊರಬಾಗಿಲಿನ ಅಕ್ಕಪಕ್ಕಗಳಲ್ಲಿ ಬಣ್ಣ ಬಣ್ಣದ ಕ್ರೋಟನ್ ಮತ್ತು ಹೂಗಳ ಗಿಡಗಳಿರಬೇಕು. ಬಾಗಿಲ ಮೇಲೆ ಏರಿದಂತೆ ಮಲ್ಲಿಗೆಯೋ

ಜಾಜಿಯೋ ಬೋಗನ್‌ವಿಲವೋ ಹಬ್ಬಿದ್ದರೆ ಸೊಗಸು ಇನ್ನೂ ಹೆಚ್ಚುತ್ತದೆ. ಮನೆಗೆ ನೇರ ಎದುರಿಗೊ ಒಂದು ಪಕ್ಕದಲ್ಲೊ ಸಣ್ಣ ಹೂತೋಟ ಒಂದಿದ್ದು ಅದರ ನಡುವೆ ನಾಲ್ಕು ತೋಟದ ಕುರ್ಚಿಗಳನ್ನು ಹಾಕಿದ್ದರೆ ಅಲ್ಲಿ ಕೂಡಲು ದೇಹಕ್ಕೂ ಮನಸ್ಸಿಗೂ ಬಹಳ ಹಿತ. ಕುಂಡಗಳಿದ್ದರೆ ಜಾಗದ ಮಿತವ್ಯಯವಾಗುತ್ತದಲ್ಲದೆ ಅವುಗಳ ವಿನ್ಯಾಸದಲ್ಲೂ ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ.

ದೇಹಾಲಂಕರಣದಂತೆ ಗೃಹಾಲಂಕರಣವೂ ಎಂದೂ ಔಚಿತ್ಯದ ಎಲ್ಲೆಯನ್ನು ಮೀರಬಾರದು. ರಬ್ಬಾರುಬ್ಬಿಯಾದ ಬಣ್ಣಗಳು, ಅತ್ಯಲಂಕರಣದ ಆಣೆಕಟ್ಟುಗಳು, ಪರದೆಗಳು ಇದ್ದಲ್ಲಿ ಇಡೀ ಮನೆ ರಸಿಕರ ಮನಸ್ಸಿಗೆ ಜುಗುಪ್ಸೆಯನ್ನು ತರಬಲ್ಲದು. ಆದ್ದರಿಂದ ಮಿತಾಲಂಕರಣವೇ ನಿಜವಾಗಿ ಸರಿಯಾದ ಅಲಂಕರಣ.

ಮಿಕ್ಕ ವಿಷಯಗಳಲ್ಲಿ ಹೇಗೋ ಹಾಗೆ ಗೃಹಾಲಂಕರಣ ವಿಚಾರದಲ್ಲೂ ಆಗಲೇ ಒಂದು ಸಂಪ್ರದಾಯ ಏರ್ಪಟ್ಟು ಬಿಟ್ಟಿದೆ. ಇದರಿಂದಾಗಿ ಅನೇಕ ಮನೆಗಳ ಆಂತರಿಕ ವಿನ್ಯಾಸ ಏಕರೀತಿಯದಾಗಿ ತೋರುತ್ತದೆ. ಇತ್ತೀಚೆಗೆ ಇದನ್ನು ಮುರಿದು ಹೊಸ ಬಗೆಯಲ್ಲಿ ಹೊಸ ಅಭಿರುಚಿಗಳನ್ನು ವ್ಯಕ್ತಪಡಿಸುವಂತೆ ಮನೆಗಳನ್ನು ಅಲಂಕರಿಸುವುದರ ಕಡೆ ಗಮನ ಕೊಡಲಾಗುತ್ತಿದೆ. ಇಂಟೀರಿಯರ್ ಡೆಕೊರೇಷನ್ ಒಂದು ಫ್ಯಾಷನ್ ಆಗಿಯೂ ಸಾಮಾಜಿಕ ಜೀವನದಲ್ಲಿ ಸ್ಥಿರಗೊಂಡಿದೆ. ದುಡ್ಡುಕೊಟ್ಟರೆ ನಿಮ್ಮ ಮನಕ್ಕೆ ಒಪ್ಪುವ ಅಲಂಕರ ಮಾಡುವ ನೂರಾರು ಕಂಪನಿಗಳು, ಒಳಾಲಂಕರಣ ಪರಿಣತರು ನೂರಾರು ಸಂಖ್ಯೆಯಲ್ಲಿ ದೊರೆಯುತ್ತಾರೆ.

ಅಲಂಕರಣಕ್ಕೂ ಶುಚಿತ್ವಕ್ಕೂ ಹತ್ತಿರದ ಸಂಬಂಧವಿದೆ. ಒಂದು ದೃಷ್ಟಿಯಿಂದ, ಅಲಂಕರಣಗಳು ಇಲ್ಲದಿದ್ದರೂ ತೀರ ಶುಚಿಯಾಗಿರುವ ಮನೆ ಸುಂದರವಾಗಿಯೇ ಕಾಣುತ್ತದೆ. ದಿನಕ್ಕೆ ಎರಡು ಬಾರಿ ದೂಳು ಹೊಡೆದು, ವಾರ ಎರಡು ವಾರಗಳಿಗೊಮ್ಮೆ ಪರೀಕ್ಷಿಸಿ ಗೃಹಾಲಂಕರಣಗಳನ್ನು ಸಂರಕ್ಷಿಸಬೇಕಾಗುತ್ತದೆ.

ಗೃಹಾಲಂಕರಣ ವಿದ್ಯೆ ಈಗ ಒಂದು ಶಾಸ್ತ್ರವಾಗಿ ಬೆಳೆದಿದೆ. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಈ ವಿಷಯದಲ್ಲಿ ಡಿಪ್ಲೊಮ ಮತ್ತು ಪದವಿಗಳನ್ನು ನೀಡಲಾಗುತ್ತಿದೆ.

(ಎಸ್.ಎಚ್.ಎಂ.)

**ಗೃಹನಿರ್ಮಾಣ ಸಹಕಾರ ಸಂಘ :** ಪರಸ್ಪರ ಸಹಾಯದ ಮೂಲಕ ಸ್ವಸಹಾಯ – ಎಂಬ ತತ್ತ್ವದ ತಳಹದಿಯ ಮೇಲೆ ರಚಿತವಾದ ಸಹಕಾರ ವ್ಯವಸ್ಥೆಯ ಚೌಕಟ್ಟಿನೊಳಗೆ ಜನಕ್ಕೆ ವಸತಿಸೌಲಭ್ಯವನ್ನೊದಗಿಸುವ ಉದ್ದೇಶದಿಂದ ಸ್ಥಾಪಿತವಾದ ಸಂಘ (ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ). ಅಲ್ಪ ವರಮಾನವಿರುವವರು ಸಹಕಾರಿ ಗೃಹನಿರ್ಮಾಣ ಯೋಜನೆಯ ಅಡಿಯಲ್ಲಿ ಸಂಘಟಿತರಾಗಿ, ತಮಗೆ ಬೇಕಾದ ನಿವೇಶನಗಳನ್ನೋ ಮನೆಗಳನ್ನೋ ಪಡೆಯುತ್ತಾರೆ. ಸಹಕಾರ ಸಂಘದ ಮೂಲಕ ಸಂಘಟಿತರಾದ ಅವರು ಸಂಘದ ಮೂಲಕ ಸದಸ್ಯರಿಗಾಗಿ ಮನೆಗಳನ್ನು ಕಟ್ಟಬಹುದು, ಸದಸ್ಯರಿಗೆ ಸಾಲ ಕೊಡಬಹುದು, ನಿವೇಶನಕ್ಕಾಗಿ ಹಣ ಒದಗಿಸಬಹುದು. ವೈಯಕ್ತಿಕವಾಗಿ ಸಾಧಿಸಲು ಕಷ್ಟವಾದ ಒಳಚರಂಡಿ, ಉಪರಸ್ತೆ, ಉದ್ಯಾನ ಇತ್ಯಾದಿಗಳನ್ನು ಸಂಘದ ಮೂಲಕ ಸದಸ್ಯರು ತಮ್ಮ ವಸತಿ ಸ್ಥಳದಲ್ಲಿ ಸಾಧಿಸಬಹುದು. ಆರ್ಥಿಕವಾಗಿ ಅಶಕ್ತರಾದವರಿಗೆ, ಈ ಶಕ್ತಿ ನೀಡಬಲ್ಲ ಸಾಧನ ಸಹಕಾರ.

ಜೊತೆಗೂಡುವುದರಿಂದ ಜನರಲ್ಲಿ ಪರಸ್ಪರ ಸ್ನೇಹ, ವಿಶ್ವಾಸ ಬೆಳೆದು, ಸಹಕಾರ ಮನೋಭಾವ ಮೂಡುತ್ತದೆ; ತಮ್ಮ ಸಂಸ್ಥೆಯ ಹೊಣೆಗಾರಿಕೆ ನಿರ್ವಹಿಸಿ, ತಮಗೆ ಅಗತ್ಯವಾದ ವಸತಿ ಮುಂತಾದ ಸೌಲಭ್ಯಗಳನ್ನು ಪಡೆಯುವ ಆತ್ಮವಿಶ್ವಾಸ ಉದಿಸುತ್ತದೆ. ಸಹಕಾರಿ ಗೃಹನಿರ್ಮಾಣ ಸಂಸ್ಥೆಗಳು ಸ್ವೈಚ್ಛಿಕ ಸಂಸ್ಥೆಗಳಾದ್ದರಿಂದ, ಸಮಾನ ಅಧಿಕಾರವುಳ್ಳ ಸದಸ್ಯರ ಆಡಳಿತಕ್ಕೆ ಒಳಪಟ್ಟಿರುವುದರಿಂದ ಹೆಚ್ಚು ಪರಿಣಾಮಕಾರಿಯೂ ವಸತಿ ಸಮಸ್ಯೆಗಳನ್ನು ಬಗೆಹರಿಸಬಲ್ಲವು. ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳ ಸಾಧನೆಯ ಪರಿಮಿತಿಯಿಂದಾಗಿ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಗೃಹನಿರ್ಮಾಣ ಕಾರ್ಪೊರೇಷನ್‌ಗಳು ಸ್ಥಾಪಿತವಾಗಿ, ವಸತಿ ಸಮಸ್ಯೆಯನ್ನು ನಿವಾರಿಸುವಲ್ಲಿ ಗಣನೀಯ ಸೇವೆ ಸಲ್ಲಿಸಿವೆ. ಲಾಭದ ಉದ್ದೇಶ ಇಲ್ಲದೆ ಕನಿಷ್ಠವೆಚ್ಚದಲ್ಲಿ ಅತ್ಯಲ್ಪ ಆಡಳಿತ ಖರ್ಚಿನಿಂದ ಕಾರ್ಯಸಾಧಿಸುವ ಸಹಕಾರಿ ಗೃಹನಿರ್ಮಾಣ ಸಂಘಗಳು ಬೃಹತ್ ಗಾತ್ರದಲ್ಲಿ ನಿವೇಶನಗಳಿಗಾಗಿ ಭೂಮಿಯನ್ನು ಕೊಳ್ಳುವುದರ ಜೊತೆಗೆ ಮರಮುಟ್ಟು ಮತ್ತಿತರ ಸಾಮಗ್ರಿಗಳನ್ನು ಒಟ್ಟೊಟ್ಟಿಗೆ ಕಡಿಮೆ ವೆಚ್ಚದಲ್ಲಿ ಪಡೆಯಬಲ್ಲುವು.

ಖಾಸಗಿ ಸಂಸ್ಥೆಗಳು ಅಲ್ಪ ಅಥವಾ ಮಧ್ಯಮ ಆದಾಯದವರಿಗಾಗಿ ಸೂಕ್ತ ವಸತಿಗಳನ್ನು ಒದಗಿಸಲು ಅಸಮರ್ಥವಾಗಿರುವಾಗ, ಸಹಕಾರ ಸಂಘ ಈ ನಿಟ್ಟಿನಲ್ಲಿ ಸಫಲತೆಗಳಿಸಬೇಕೆಂದು ನಿರೀಕ್ಷಿಸುವುದು ಸಹಜ. ಆರ್ಥಿಕ ಯೋಜನೆಯಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಸಾಧಿಸಿ ಜನತೆಯಲ್ಲಿ ಅರಿವು ಮೂಡಿಸಿ ನೆರವು ನೀಡಬಲ್ಲ ಸೂಕ್ತ ಸಾಧನ ಕೂಡ ಇದಾಗಿದೆ.

ಕೆಲವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಹಕಾರಿ ಗೃಹನಿರ್ಮಾಣ ಚಳವಳಿ ಅದ್ಭುತ ಪ್ರಗತಿ ಸಾಧಿಸಿದೆ. ಮುಖ್ಯವಾಗಿ ಇಂಗ್ಲಿಷ್ ಮಾತನಾಡುವ ರಾಷ್ಟ್ರಗಳಲ್ಲಿ ಮತ್ತು ಬಲ್ಗೇರಿಯ, ಜರ್ಮನಿ, ಸ್ವಿಟ್ಜರ್ಲೆಂಡ್‌ಗಳಲ್ಲಿ ಗೃಹನಿರ್ಮಾಣ ಸಹಕಾರ ಸಂಘಗಳ ಸಾಧನೆಗಳು ಮಹತ್ತ್ವದ್ದಾಗಿವೆ. ಬ್ರಿಟನಿನಲ್ಲಿ ಗೃಹನಿರ್ಮಾಣ ಸಂಘಗಳು ಸಾಲ ನೀಡುವುದರ ಜೊತೆಗೆ ಕಟ್ಟಡ ರಚನೆಗೆ ಅಗತ್ಯವಾದ ಸಾಮಗ್ರಿಗಳನ್ನು ಸಂಗ್ರಹಿಸಿ ಹಂಚುತ್ತವೆ. ತಜ್ಞ ವಾಸ್ತುಶಿಲ್ಪಿಗಳ ನೆರವನ್ನು ಒದಗಿಸುತ್ತವೆ.



ನಗರಾಭಿವೃದ್ಧಿ ಮಂಡಲಿ ನಿರ್ಮಿಸಿದ ನವೀನ ಮಾದರಿ ಮನೆಗಳ ಸಾಲು

**ಭಾರತ :** ಭಾರತದಲ್ಲಿ 1915 ರಿಂದ ಈ ಚಳವಳಿ ಕ್ರಮವಾಗಿ ಬೆಳೆದಿದೆ. ರಾಜ್ಯ ಸರ್ಕಾರಗಳು ಸುಲಭ ಬಡ್ಡಿದರದಲ್ಲಿ ಸಾಲ ನೀಡಿ, ನಿವೇಶನಗಳನ್ನು ಒದಗಿಸಿ ಕಟ್ಟಡ ಸಾಮಗ್ರಿಗಳನ್ನು ಪೂರೈಸಿ ನೆರವಾಗುತ್ತಿವೆ.

ಇಂದು ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಒರಿಸ್ಸ, ತಮಿಳುನಾಡು, ಆಂಧ್ರಪ್ರದೇಶ, ರಾಜಸ್ಥಾನ, ಮತ್ತು ಪಶ್ಚಿಮ ಬಂಗಾಳದಲ್ಲಿ ರಾಜ್ಯಮಟ್ಟದ ಗೃಹ ನಿರ್ಮಾಣ ಸಂಘಗಳು ಕೆಲಸ ಮಾಡುತ್ತಿವೆ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಸಹಕಾರಿ ಗೃಹ ಹಣಕಾಸು ಸಂಸ್ಥೆಗಳು ಹಲವು ಮಹಡಿಗಳ ಮನೆ ಕಟ್ಟಿಸಲು ಗೃಹ ನಿರ್ಮಾಣ ಸಂಘಗಳಿಗೆ ಹಣ ಒದಗಿಸುತ್ತವೆ. ತಮಿಳುನಾಡಿನಲ್ಲಿ ಗೃಹಅಡಮಾನ ಸಂಘಗಳು ಪ್ರಾಥಮಿಕ ಗೃಹಅಡಮಾನ ಸಂಘಗಳ ಸದಸ್ಯರಿಗೆ ಹೊಸ ಮನೆಗಳನ್ನು ಕಟ್ಟಲು ಅಥವಾ ಹಳೆಯವನ್ನು ರಿಪೇರಿ ಮಾಡಲು ಹಣ ಒದಗಿಸುತ್ತಿವೆ. ಕರ್ನಾಟಕದಲ್ಲಿ ಗೃಹನಿರ್ಮಾಣ ಕಾರ್ಪೊರೇಷನ್ ತನ್ನ ಸದಸ್ಯ ಗೃಹನಿರ್ಮಾಣ ಸಂಘಗಳಿಗೆ ಅಥವಾ ಅದರ ಸದಸ್ಯರಿಗೆ ಗೃಹನಿರ್ಮಾಣಕ್ಕಾಗಿ ಹಣ ಕೊಡುತ್ತದೆ. ಇದ್ದ ಮನೆಯ ಬಡಾವಣೆ ಅಥವಾ ರಿಪೇರಿಗಾಗಿಯೂ ಪ್ರಾಥಮಿಕ ಸಂಘಗಳ ಸದಸ್ಯರಿಗೆ ಸಾಲ ಒದಗಿಸಲಾಗುತ್ತದೆ. ಅಲ್ಲದೆ ನಿವೇಶನಗಳನ್ನು ಅಥವಾ ಭೂಮಿಯನ್ನು ಕೊಳ್ಳಲು ಈ ಸಂಘಗಳಿಗೆ ಅಲ್ಪಾವಧಿ ಸಾಲವನ್ನು ಕಾರ್ಪೊರೇಷನ್ ಒದಗಿಸುತ್ತದೆ.

ಕೈಗಾರಿಕೆಯ ಅಭಿವೃದ್ಧಿ, ಜನಸಂಖ್ಯೆಯ ಹೆಚ್ಚಳ ಹಾಗೂ ನಗರಗಳ ಬೆಳೆವಣಿಗೆಯೊಂದಿಗೆ ವಸತಿಗಳ ಬೇಡಿಕೆಯೂ ತೀವ್ರ ಹೆಚ್ಚಿ, ಅದರ ಪೂರೈಕೆ ಅತ್ಯಂತ ಜಟಿಲವೆನಿಸುವುದು ಸಹಜ. ಖಾಸಗಿ ಕ್ಷೇತ್ರದಲ್ಲಿ ಲಾಭೋದ್ದೇಶದಿಂದ ವಸತಿಗಳನ್ನು ನಿರ್ಮಿಸಬಹುದಾದರೂ, ಅವು ಅಸ್ತವ್ಯಸ್ತವಾಗಿದ್ದು, ಒಂದೆಡೆ ಭವ್ಯ ಸೌಧಗಳಿಗೂ ಇನ್ನೊಂದೆಡೆ ಕೊಳಚೆಪ್ರದೇಶಗಳಿಗೂ ಎಡೆ ಮಾಡಿಕೊಡಬಹುದು. ಸಹಕಾರ ಸಂಘಟನೆ ಮಾತ್ರವೇ ವ್ಯವಸ್ಥಿತವಾಗಿ ಈ ಸಮಸ್ಯೆಯನ್ನು ಬಗೆಹರಿಸಬಲ್ಲುದು.

ಭಾರತದಲ್ಲಿ ಪ್ರಥಮ ಗೃಹನಿರ್ಮಾಣ ಸಹಕಾರ ಸಂಘ ಮದ್ರಾಸ್ ಪ್ರಾಂತದಲ್ಲಿ 1913–14ರಲ್ಲಿ ಸ್ಥಾಪಿತವಾಯಿತು. ಮುಂಬಯಿ ಆ ಬಳಿಕ ಹೆಜ್ಜೆಯಿಟ್ಟು ಪ್ರಖ್ಯಾತವಾದ ಸಾರಸ್ವತ ಸಹಕಾರ ವಸತಿ ಸಂಘವನ್ನು 1915ರಲ್ಲಿ ಸ್ಥಾಪಿಸಿತು. ಮುಂದೆ ಇತರ ರಾಜ್ಯಗಳೂ ಈ ದಿಸೆಯಲ್ಲಿ ಮುನ್ನಡೆದುವು.

ಆದರೂ ಈ ಕ್ಷೇತ್ರದಲ್ಲಿ ಸಹಕಾರ ಚಳವಳಿ ಸಾಧಿಸಿರುವ ಪ್ರಗತಿ 1954–55ರ ವರೆಗೂ ಗಣನೀಯವಾಗಿರಲಿಲ್ಲ. ಇಡೀ ದೇಶದಲ್ಲಿ ಈ ಅವಧಿಯಲ್ಲಿ ಈ ಕ್ಷೇತ್ರದಲ್ಲಿ ನಿರ್ಮಿತವಾದ ವಸತಿಗಳು ಪಟ್ಟಣಗಳಲ್ಲಿ ಸುಮಾರು 24.327 ಹಾಗೂ ಗ್ರಾಮ ಪ್ರದೇಶದಲ್ಲಿ 2.345. ಮುಂದಿನ ಐದು ವರ್ಷಗಳಲ್ಲಿ ಸಾಧಿಸಲಾದ ಪ್ರಗತಿ ಹೀಗಿದೆ:

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ವಸತಿ ನಿರ್ಮಾಣಕ್ಕಾಗಿ ರೂ. 38.5 ಕೋಟಿ ಒದಗಿಸಲಾಯಿತು. ಇದು ಎರಡನೆಯ ಯೋಜನೆಯಲ್ಲಿ ರೂ. 84 ಕೋಟಿಗೂ ಮೂರನೆಯ ಯೋಜನೆಯಲ್ಲಿ ರೂ. 122 ಕೋಟಿಗೂ ಏರಿತು. ನಾಲ್ಕನೆಯ ಯೋಜನೆಯಲ್ಲಿ ರೂ. 96.70 ಕೋಟಿ ಅಂದಾಜು ಮಾಡಲಾಗಿದೆ.

ಹಿಂದಿನ ಮೈಸೂರು ರಾಜ್ಯದಲ್ಲಿ ಗೃಹನಿರ್ಮಾಣವನ್ನು ತ್ವರಿತಗೊಳಿಸಲು 1950ರಲ್ಲಿ ಮೈಸೂರು ರಾಜ್ಯ ಸಹಕಾರಿ ಗೃಹನಿರ್ಮಾಣ ಕಾರ್ಪೊರೇಷನನ್ನು ಸ್ಥಾಪಿಸಲಾಯಿತು. ಅದು ಇತರ ವಸತಿ ನಿರ್ಮಾಣ ಸಹಕಾರ ಸಂಘಗಳಿಗೆ ಹಣ ಒದಗಿಸುವ

ಕೇಂದ್ರಸಂಸ್ಥೆಯಾಗಿದೆ. ಈ ಸಂಸ್ಥೆಗೆ ಸರ್ಕಾರದಿಂದ ಹಣ ದೊರೆಯುತ್ತದೆ. ಸರ್ಕಾರ ಅಲ್ಪ ವರಮಾನ ಮತ್ತು ಮಧ್ಯಮ ವರಮಾನದವರ ವಸತಿ ಯೋಜನೆಯನ್ನು ಆರಂಭಿಸಿದಾಗ ಸಹಕಾರ ಕ್ಷೇತ್ರಗಳಲ್ಲಿ ಈ ಕಾರ್ಯ ನಿರ್ವಹಿಸುವ ಹೊಣೆಯನ್ನು ಈ ಕಾರ್ಪೊರೇಷನ್‌ಗೆ ವಹಿಸಿಕೊಡಲಾಯಿತು.

ಇವಲ್ಲದೆ ರಾಜ್ಯದಲ್ಲಿ ಹರಿಜನ–ಗಿರಿಜನ ವಸತಿ ನಿರ್ಮಾಣ ಕಾರ್ಪೊರೇಷನ್ ಕೂಡ ಇದೆ. ಅದು ಹರಿಜನ–ಗಿರಿಜನ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಹಣ ಒದಗಿಸುತ್ತದೆ.

ಕಳೆದೆರಡು ದಶಕಗಳಿಂದ ಹಲವಾರು ಸರ್ಕಾರಿ ಸಂಸ್ಥೆಗಳು, ಬ್ಯಾಂಕುಗಳು, ವಿಶ್ವವಿದ್ಯಾನಿಲಯಗಳು ತಮ್ಮ ಉದ್ಯೋಗಿಗಳಿಗೆ ಗೃಹಾವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ತಮ್ಮದೇ ಆದ ಗೃಹ ನಿರ್ಮಾಣ ಸಂಘಗಳನ್ನು ಸ್ಥಾಪಿಸಿಕೊಂಡು ಬಡಾವಣೆಗಳನ್ನು ನಿರ್ಮಿಸುತ್ತಿವೆ. ಅಲ್ಲದೆ ಖಾಸಗಿ ಗೃಹನಿರ್ಮಾಣ ಸಂಸ್ಥೆಗಳೂ ಇಂದು ಭಾರತಾದ್ಯಂತ ವ್ಯಾಪಿಸಿದ್ದು ಬಡಾವಣೆಗಳ ನಿರ್ಮಾಣದಲ್ಲಿ ನಿರತವಾಗಿವೆ. (ಪಿ.ಎಸ್.ಬಿ.)

**ಗೃಹಪದ್ಧತಿ :** ಇಂಗ್ಲೆಂಡಿನ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿ ಚಟುವಟಿಕೆಗಳಿಗಾಗಿ ಇರುವ ಒಂದು ಸಾಮಾಜಿಕ ವ್ಯವಸ್ಥೆ (ದಿ ಹೌಸ್ ಸಿಸ್ಟಮ್). ಇದನ್ನು ಯುವಜನರ ಆವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆ ನಿರ್ದಿಷ್ಟವಾಗಿ ಅಳವಡಿಸಲಾಗಿದೆ. ಇದರ ಉಪಯುಕ್ತತೆಯನ್ನರಿತು ಇದನ್ನು ಇತರ ವಸತಿ ಪ್ರೌಢಶಾಲೆಗಳಲ್ಲೂ ಸಾಮಾನ್ಯ ಪ್ರೌಢಶಾಲೆಗಳಲ್ಲೂ ಅಳವಡಿಸಿಕೊಳ್ಳಲಾಗಿದೆ.

ಪಬ್ಲಿಕ್ ಶಾಲೆಯ ಪ್ರತಿ ವಿದ್ಯಾರ್ಥಿಯೂ ಎರಡು ಗುಂಪುಗಳ ಸದಸ್ಯನಾಗಿರುತ್ತಾನೆ. ಪಾಠಪ್ರವಚನಗಳು ನಡೆಯುವಾಗ ಆತ ತನ್ನ ತರಗತಿಗೆ ಸೇರಿರುತ್ತಾನೆ. ಪಾಠಪ್ರವಚನಗಳ ಅನಂತರ ಆತ ತನ್ನ ಗೃಹಕ್ಕೆ ಸೇರಿರುತ್ತಾನೆ. ಇಲ್ಲಿ ಗೃಹವೆಂದರೆ ವಿದ್ಯಾರ್ಥಿಯ ಸ್ವಂತ ಮನೆಯಲ್ಲ; ಶಾಲೆಯಲ್ಲಿ ಆತನ ಊಟೋಪಚಾರ, ಕ್ರೀಡೆ, ವ್ಯಾಸಂಗಾದಿಗಳಿಗಾಗಿ ಗೊತ್ತುಪಡಿಸಿದ ಜಾಗ, ಅಷ್ಟೆ. ಇಂಥ ಗೃಹದಲ್ಲಿ ಸಾಮಾನ್ಯವಾಗಿ ಐವತ್ತು ವಿದ್ಯಾರ್ಥಿಗಳಿರುತ್ತಾರೆ. ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಒಂದು ಶಾಲೆಯಲ್ಲಿ ಐದೋ ಹತ್ತೋ ಹನ್ನೆರಡೋ ಗೃಹಗಳಿರಬಹುದು. ಪ್ರತಿಗೃಹದ ಮೇಲ್ವಿಚಾರಣೆಯನ್ನು ಒಬ್ಬ ಉಪಾಧ್ಯಾಯ ನೋಡಿಕೊಳ್ಳುತ್ತಾನೆ. ವಿದ್ಯಾರ್ಥಿ ಶಾಲೆಯ ಹೊರಗೆ ಹೇಗೆ ಕ್ರಮಬದ್ಧವಾದ ಜೀವನವನ್ನು ನಡೆಸಬೇಕೆಂಬ ವಿಷಯದಲ್ಲಿ ಈ ಗೃಹವ್ಯವಸ್ಥೆ ಮಾರ್ಗದರ್ಶನ ನೀಡುತ್ತದೆ. ಗೃಹಾಧಿಪತಿ ತನ್ನ ಕಿರಿಯ ಸ್ನೇಹಿತರಲ್ಲಿ ವೈಯಕ್ತಿಕವಾಗಿ ಆಸಕ್ತಿಯುಳ್ಳವನಾಗಿದ್ದು ಅವರಲ್ಲಿರುವ ಅತಿ ತೀವ್ರತರವಾದ ಸಾಂಘಿಕ ಶಕ್ತಿಗಳನ್ನು ಹೊರಹೊಮ್ಮಿಸಿ ಅವರ ಅನೇಕ ಸಾಮಾಜಿಕ ಚಟುವಟಿಕೆಗಳಿಗೆ ಬಹಿರ್ದ್ವಾರಗಳನ್ನು ಸೃಷ್ಟಿಸಿ ತನ್ಮೂಲಕ ಅವರನ್ನು ಒಂದು ಸ್ಥಿಮಿತಕ್ಕೆ ತರಲು ಪ್ರಯತ್ನಿಸುತ್ತಾನೆ. ಪ್ರತಿ ಗೃಹದಲ್ಲೂ ಸದಸ್ಯರ ಅನುಕೂಲಕ್ಕಾಗಿ ಆಟೋಟಗಳು, ವ್ಯಾಯಾಮ, ಸಂಗೀತ ಮತ್ತು ಚರ್ಚಾಕೂಟಗಳೇ ಆದಿಯಾಗಿ ಎಲ್ಲ ತರಹದ ಸಾಮಾಜಿಕ ಚಟುವಟಿಕೆಗಳಿಗೂ ಅವಕಾಶವಿದೆ. ಗೃಹಪದ್ಧತಿಯ ಮಾನಸಿಕ ಮೌಲ್ಯವನ್ನು ಕಂಡುಕೊಂಡು ಅಭಿವೃದ್ಧಿಪಡಿಸಿದವರಲ್ಲಿ ಥಾಮಸ್ ಆರ್ನಲ್ಡ್ ಮತ್ತು ಅವನ ಸಮಕಾಲೀನರು ಮುಖ್ಯರು.

ಗೃಹ ಗೃಹಗಳ ನಡುವೆ ಕಾಲಕಾಲಕ್ಕೆ ಸ್ಪರ್ಧೆಗಳು ಏರ್ಪಡುವುದರಿಂದ ವಿದ್ಯಾರ್ಥಿಗಳ ಪ್ರತಿಭೆಗೆ ಕೈಚಳಕಕ್ಕೆ ವ್ಯಾಸಂಗಕ್ಕೆ ಸದವಕಾಶ ಒದಗಿದಂತಾಗುತ್ತದೆ. ಅತಿ ಚತುರರೆನಿಸಿದ ವಿದ್ಯಾರ್ಥಿಗಳನ್ನೆಲ್ಲ ಒಂದೇ ಗೃಹಕ್ಕೆ ಸೇರಿಸುವ ಬದಲು ಅವರನ್ನು ಎಲ್ಲ ಗೃಹಗಳಿಗೂ ಸಮಾನವಾಗಿ ಹಂಚುತ್ತಾರಾಗಿ ಈ ವ್ಯವಸ್ಥೆ ಇನ್ನೂ ಚೆನ್ನಾಗಿ ಕೆಲಸ ಮಾಡಲು ಅವಕಾಶ ದೊರೆತಿದೆ.

ತನ್ನ ಒಟ್ಟಾರೆ ಕೀರ್ತಿಗೆ ಗಮನ ಕೊಡುವ ರೀತಿಯಲ್ಲಿ ಪ್ರತಿಯೊಂದು ಗೃಹವೂ ತನ್ನದೇ ಆದ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತದೆ. ಪಬ್ಲಿಕ್ ಶಾಲೆಗಳಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಪ್ರಾಮುಖ್ಯವಿದೆಯಾಗಿ ಗೃಹಗಳು ತಮ್ಮ ತಮ್ಮಲ್ಲೇ ಸ್ಪರ್ಧಿಸುವಂತೆ ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತದೆ. ನ್ಯಾಯನಿಷ್ಠೆ, ಒಳ್ಳೆಯ ನಡತೆ, ತನ್ನ ಗುಂಪಿನ ಅಭಿಮಾನ ಮುಂತಾದ ಉತ್ತಮ ಗುಣಗಳನ್ನು ವಿದ್ಯಾರ್ಥಿ ವೃದ್ಧಿಸಿಕೊಳ್ಳಲು ಇಲ್ಲಿ ಅವಕಾಶವಿದೆ. (ಕೆ.ಬಿ.)

**ಗೃಹರಕ್ಷಕ ದಳ :** ದೇಶದ ಆಂತರಿಕ ಭದ್ರತೆಯನ್ನು ರಕ್ಷಿಸಲು ನೆರವಾಗುವ ನಾಗರಿಕರ ಸುಸಂಘಟಿತ ಸ್ವಯಂಸೇವಕ ದಳ (ಹೋಂ ಗಾರ್ಡ್ಸ್). ರಾಜಕೀಯ, ಕೋಮುವಾರು ಮತ್ತು ಭಾಷಾವಾರು ಪಂಗಡಗಳಿಂದ ದೂರವಿದ್ದು, ತಮ್ಮ ನಿತ್ಯದ ಉದ್ಯೋಗ ಮತ್ತು ದಿನಚರಿಯ ಜೊತೆಗೆ ದೇಶಸೇವೆಗೆ ಕೊಂಚ ಕಾಲವನ್ನು ಮೀಸಲಿಡುವ ರಾಷ್ಟ್ರಕರ ಸೇವಾದಳವಿದು. ನಾಡಿನ ಶಾಂತಿಪಾಲನೆ ಇದರ ಮುಖ್ಯ ಕರ್ತವ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸೂಚನೆಯಂತೆ ಹೊಣೆ ಯಾದ ಕರ್ತವ್ಯವನ್ನು ಮತ್ತೊಬ್ಬರಿಗೆ ಹೊರೆ ಆಗದಂತೆ ನೆರವೇರಿಸುತ್ತದೆ. ಮಹಿಳೆಯರೂ ಗೃಹರಕ್ಷಕದಳದಲ್ಲಿ ಉತ್ತಮ ಸೇವೆ ಸಲ್ಲಿಸಬಹುದೆಂದು ಮನಗಂಡು ಮಹಿಳಾ ಗೃಹರಕ್ಷಕ ದಳವನ್ನು ಸಹ ಜಾರಿಗೆ ತರಲಾಗಿದೆ. ಇಂದು ಭಾರತಾದ್ಯಂತ ಎಲ್ಲ ರಾಜ್ಯ ಗಳಲ್ಲೂ ಗೃಹರಕ್ಷಕ ದಳಗಳಿವೆ. 1946ರ ಡಿಸೆಂಬರಿನಲ್ಲಿ ಗೃಹರಕ್ಷಕ ದಳದ ಬೀಜಾಂಕುರವಾಯಿತೆನ್ನಬಹುದು. ಮುಂಬಯಿ ಪ್ರಾಂತ ಕೋಮುಗಲಭೆಗಳಿಂದ ತತ್ತರಿಸುತ್ತಿದ್ದಾಗ ಕೆಲವು ಮಂದಿ ಸಮಾಜಸೇವಕರೂ ನಾಗರಿಕ ಪ್ರಜ್ಞೆಯುಳ್ಳ ಯುವಕರೂ ನಾಡಿನ ಶಾಂತಿಪಾಲನೆಗೆ, ಜನರ ಮಾನ, ಪ್ರಾಣ ಮತ್ತು ಆಸ್ತಿರಕ್ಷಣೆಗೆ ಮುಂದೆ ಬಂದರು. ಮುಂಬಯಿ ಸರ್ಕಾರ ಇಂಥ ಒಂದು ಸ್ವಯಂಸೇವಕ ದಳದ ಅಗತ್ಯತೆಯನ್ನು ಮನಗಂಡು ಮುಂಬಯಿ ಗೃಹರಕ್ಷಕ ದಳದ ಕಾಯಿದೆಯನ್ನು ಜಾರಿಗೆ ತಂದು (1947) ಗೃಹರಕ್ಷಕ ದಳವನ್ನು ಶಾಸನಬದ್ಧ ದಳವನ್ನಾಗಿ ಪರಿವರ್ತಿಸಿತು. ಇತರ ರಾಜ್ಯಸರ್ಕಾರಗಳು ಕ್ರಮೇಣ ಆ ಮಾರ್ಗವನ್ನು ಅನುಸರಿಸಿದುವು. ಮೊದಲು ಪೊಲೀಸರ ಜೊತೆ ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಇದರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿತ್ತು. ಬರಬರುತ್ತ ಗೃಹರಕ್ಷದಳದ ಸೇವೆಯನ್ನು ರಾಷ್ಟ್ರದ ಎಲ್ಲ ರೀತಿಯ ಪರಿಸ್ಥಿತಿಗಳಲ್ಲೂ ಪೋಲಿಸರ ಮತ್ತು ರಾಷ್ಟ್ರ ರಕ್ಷಣಾ ಪಡೆಗಳ ಜೊತೆ ಉಪಯೋಗಿಸಿಕೊಳ್ಳಲಾಗುತ್ತಿದೆ.

ಲಾಂಛನ

ಗೃಹರಕ್ಷಕ ದಳ ಕೇಂದ್ರಸರ್ಕಾರದ ಗೃಹ ಮಂತ್ರಾಲಯ ವಿಭಾಗಕ್ಕೆ ಸೇರಿದೆ. ನಾಗರಿಕ ರಕ್ಷಣಾ ಪ್ರಧಾನ ಕಾರ್ಯನಿರ್ವಹಣ ಅಧಿಕಾರಿಗಳು (ಡೈರೆಕ್ಟರ್–ಜನರಲ್, ಸಿವಿಲ್ ಡಿಫೆನ್ಸ್) ಕೇಂದ್ರದಿಂದ ಇಡೀ ರಾಷ್ಟ್ರದ ಗೃಹರಕ್ಷಕ ದಳವನ್ನು ನಿಯಂತ್ರಿಸುತ್ತಾರೆ. ಪ್ರತಿ ರಾಜ್ಯದ ರಾಜಧಾನಿಯಲ್ಲಿ ರಾಜ್ಯ ಗೃಹರಕ್ಷಕ ದಳದ ಕೇಂದ್ರ ಕಚೇರಿ ಇದ್ದು ಒಬ್ಬ ಐ.ಪಿ.ಎಸ್. ಗ್ರೇಡಿನ ಕಮಾಂಡೆಂಟ್ ಜನರಲ್ ಅದರ ಮುಖ್ಯಸ್ಥರಾಗಿರುತ್ತಾರೆ. ಇವರು ಇಡೀ ರಾಜ್ಯದ ಗೃಹರಕ್ಷಕ ದಳದ ತರಬೇತಿ, ಆಡಳಿತ ಮುಂತಾದ ಕಾರ್ಯವನ್ನು ನಿರ್ವಹಿಸುತ್ತಾರೆ. ರಾಜ್ಯಗಳ ಪ್ರಮುಖ ಜಿಲ್ಲೆಗಳಲ್ಲಿ ಜಿಲ್ಲಾ ಕಮಾಂಡೆಂಟರವರು ಇದ್ದು, ಡೆಪ್ಯುಟಿ ಕಮಾಂಡೆಂಟ್, ಅಡ್ಜ್ಯುಟೆಂಟ್ ಸ್ಟಾಫ್ ಆಫೀಸರ್ಸ್ ಇವರುಗಳ ನೆರವಿನಿಂದ ಜಿಲ್ಲಾ ಗೃಹರಕ್ಷಕ ದಳದ ತರಬೇತಿ, ನಿಯಂತ್ರಣ ಮತ್ತು ಆಡಳಿತವನ್ನು ನೋಡಿಕೊಳ್ಳುತ್ತಾರೆ. ಇವರಲ್ಲದೆ ಡಿವಿಷನಲ್ ಕಂಪನಿ ಮತ್ತು ಪ್ಲಟೂನ್ ಕಮಾಂಡರ್ಸ್, ಸಾರ್ಜಂಟ್ ಮೇಜರ್, ಪ್ಲಟೂನ್ ಸಾರ್ಜಂಟ್ಸ್ ಮತ್ತು ಸೆಕ್ಷನ್ ಲೀಡರ್ಸ್ ಎಂಬ ಕಿರಿಯ ಗೃಹರಕ್ಷಕ ಅಧಿಕಾರಿಗಳು ಸಹ ಇರುತ್ತಾರೆ. ಇವರೆಲ್ಲರೂ ಗೃಹರಕ್ಷಕ ದಳಕ್ಕೆ ಸೇರಿ ತರಬೇತು ಪಡೆದು ಮುಂದೆ ಆಯ್ಕೆಯಾಗಿ ಬಂದವರು. ಇವರಿಗೆ ಗೊತ್ತಾದ ಸರ್ಕಾರಿ ಸಂಬಳವಿಲ್ಲ. ನಿಗದಿಯಾದ ಇತರ ಭತ್ಯಗಳು ಮಾತ್ರ ದೊರೆಯುತ್ತವೆ. ಸೇನಾದಳಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದಂಥವರಿಗೂ ಮಧ್ಯದಲ್ಲೇ ಸೇನೆಯಿಂದ ನಿವೃತ್ತಗೊಂಡ ಸೈನಿಕರಿಗೂ ಗೃಹರಕ್ಷಕ ದಳದಲ್ಲಿ ವಿಶೇಷ ಸ್ಥಾನಮಾನ ಕೊಡಲಾಗುವುದು.

ಅರ್ಹತೆಗಳು : ಆಯಾ ಜಿಲ್ಲಾವಾಸಿಗಳಾದ ಭಾರತೀಯ ನಾಗರಿಕರು ಈ ದಳವನ್ನು ಸೇರಬಹುದು. ಅಂಥವರ ವಯಸ್ಸು 20–50ರ ಅಂತರದಲ್ಲಿರಬೇಕು. ಯಾವ ರೀತಿಯಿಂದಲೂ ನ್ಯಾಯಾಲಯದಿಂದ ಅವರು ಶಿಕ್ಷೆಗೆ ಒಳಗಾಗಿರಬಾರದು. ಸಮಾಜಕಂಟಕ ವ್ಯಕ್ತಿಗಳಾಗಿರಬಾರದು. ಅಂಟು ರೋಗ–ರುಜಿನಗಳೂ ಅಂಗ ನ್ಯೂನತೆಯೂ ಇರಬಾರದು. ನಿರ್ದಿಷ್ಟ ದೇಹದ ಅಳತೆಯಿಂದ ಕೂಡಿ ದೃಢಕಾಯ ರಾಗಿರಬೇಕು. ಓದು ಬರೆಹ ತಿಳಿದಿರಬೇಕು. ಒಮ್ಮೆ ಸೇರಿದ ಬಳಿಕ ಆ ವ್ಯಕ್ತಿಗೆ ವಯಸ್ಸು 55 ತುಂಬುವ ವರೆಗೂ ಆತನ ಸೇವೆಯನ್ನು ಬಳಸಿಕೊಳ್ಳಲಾಗುವುದು. ಮತ್ತು ಮುಂದುವರಿಸಬೇಕಾದರೆ ವ್ಯಕ್ತಿಯ ಘನತೆ, ದೇಹ ದೃಢತೆ, ಆತನ ಸೇವೆ ಮುಂತಾದವನ್ನು ಪರಿಗಣಿಸಲಾಗುವುದು. ಸರ್ಕಾರ ವಿಧಿಸಿರುವ ನಿಯಮಾನುಸಾರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇಂಥವರಿಗೆ ಸಮವಸ್ತ್ರ, ಭುಜಕೀರ್ತಿ ಮುಂತಾದವುಗಳನ್ನು ಉಚಿತವಾಗಿ ಒದಗಿಸಿ ಯುಕ್ತ ಶಿಕ್ಷಣವನ್ನು ನೀಡಿ ತರಬೇತು ಮಾಡುತ್ತಾರೆ. ಭಾರತಾದ್ಯಂತ ಸಮವಸ್ತ್ರ ಒಂದೇ ರೀತಿ ಇರುವುದರಿಂದ ಹಾಗೂ ಒಂದೇ ರೀತಿಯ ಶಿಕ್ಷಣ ನೀಡುವುದರಿಂದ ಗೃಹರಕ್ಷಕ ದಳ ನಿಜಕ್ಕೂ ಇತರ ರಾಷ್ಟ್ರೀಯ ಬಲಗಳಾದ ರಕ್ಷಣಾಬಲಗಳು ಮತ್ತು ಪ್ರಾದೇಶಿಕ ಸೇನೆಗಳಂತೆ ಅಖಿಲ ಭಾರತೀಯವಾಗಿ ಇರುವುದು.

ತರಬೇತಿ : ಎಲ್ಲ ಗೃಹರಕ್ಷಕ ಸದಸ್ಯರಿಗೆ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ತರಬೇತು ನೀಡಲಾಗುವುದು. ವಾರಕ್ಕೆ 3 ರಿಂದ 4 ದಿವಸಗಳು ಬೆಳಗ್ಗೆ ನಿಯಮಿತ ಪೆರೇಡ್ ಇರುತ್ತದೆ. ದೈಹಿಕ ಆರೋಗ್ಯ, ದೃಢತೆ ಮತ್ತು ಶ್ರಮದಾಯಕ ಕೆಲಸಕ್ಕೆ ಸಹಾಯಕವಾಗುವ ರೀತಿ ಈ ಶಿಕ್ಷಣ ಉಂಟು. ಇದರ ಜೊತೆಗೆ ಕೆಲವು ವಿಶಿಷ್ಟವಾದ ಉಪಯುಕ್ತ ವಿಷಯಗಳಲ್ಲಿ ಎಂದರೆ ಪ್ರಥಮ ಚಿಕಿತ್ಸೆ, ಅಗ್ನಿಶಮನ ಮತ್ತು ರಕ್ಷಣೆ, ಲಾಠಿ, ಬಂದೂಕು ಇವನ್ನು ಉಪಯೋಗಿಸುವ ವಿಧಾನ ಮುಂತಾದವನ್ನು ಪರಿಣತರಿಂದ ಹೇಳಿಕೊಡಲಾಗುವುದು. ಶಸ್ತ್ರಸಹಿತ ಕವಾಯತಿ, ಜನರ ಗುಂಪಿನ ಹತೋಟಿ ಮತ್ತು ಹದ್ದುಮೀರಿದ ಗುಂಪನ್ನು ಶಾಂತಿರಕ್ಷಣೆಗಾಗಿ ಚದುರಿಸುವುದು ಮುಂತಾದವನ್ನು

ರಕ್ಷಣಾ ವಿಧಾನ

ಸಹ ಕಲಿಸುತ್ತಾರೆ. ಜಿಲ್ಲಾಮಟ್ಟದ ಈ ತರಬೇತಿಗಳಲ್ಲಿ ಉತ್ತೀರ್ಣರಾದ ಕೆಲವರನ್ನು ರಾಜ್ಯಮಟ್ಟದ ತರಬೇತಿಗಾಗಿ ಆಯ್ಕೆ ಮಾಡಿ ರಾಜ್ಯ ಗೃಹರಕ್ಷಕ ದಳದ ತರಬೇತಿ ಕೇಂದ್ರಕ್ಕೆ ಕಳಿಸಲಾಗುವುದು. ಅಲ್ಲಿ ಅವರಿಗೆ ನೀಡುವ ಶಿಕ್ಷಣ ವಿಷಯಗಳೆಂದರೆ ಅಗ್ನಿಶಮನ, ಪ್ರಥಮ ಚಿಕಿತ್ಸೆ, ಶಸ್ತ್ರದ ಉಪಯೋಗ ಇತ್ಯಾದಿ. ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿದವರ ಸೇವೆಯನ್ನು ಆಯಾ ಜಿಲ್ಲಾ ಗೃಹರಕ್ಷಕ ದಳ ತರಬೇತಿ ಕೇಂದ್ರಗಳು ಉಪಯೋಗಿಸಿಕೊಳ್ಳುವುವು. ಇಂಥವರಿಗೆ ಮುಂದೆ ವಾರ್ಷಿಕ ಬೇಸಗೆ ತರಬೇತಿ ಶಿಬಿರಗಳನ್ನು ಕೂಡ ನಡೆಸುವುದುಂಟು. ಒಬ್ಬ ನುರಿತ ಗೃಹರಕ್ಷಕ ಮೊದಲಾಗಿ ಒಬ್ಬ ಆದರ್ಶ ಪ್ರಜೆ; ಎರಡನೆಯದಾಗಿ ಆತ ಇತರರನ್ನು ಸರಿದಾರಿಗೆ ಎಳೆದು ತರಲು ಶಿಕ್ಷಣವನ್ನು ಪಡೆದಿರುವ ತಂತ್ರಜ್ಞ. ಇಂಥವರ ದಳ ರಾಷ್ಟ್ರದ ಆಂತರಿಕ ರಕ್ಷಣಾ ಸೇವೆಯಲ್ಲಿ ವಹಿಸುವ ಪಾತ್ರ ಮಹತ್ತ್ವವಾದದ್ದು. ಸಾಮಾನ್ಯವಾಗಿ ಈ ದೇಶಸೇವೆ ಒಪ್ಪೊತ್ತಿನದಾದರೂ–ಎಂದರೆ ಗೃಹರಕ್ಷಕರು ಬೇರೆ ಬೇರೆ ಸ್ವಂತ ಉದ್ಯೋಗಗಳಲ್ಲಿ ರುವವರು ನಿಯಮಿತ ವೇಳೆಯಲ್ಲಿ ಗೃಹರಕ್ಷಕ ದಳದ ಶಿಕ್ಷಣಕ್ಕೆ, ಸೇವೆಗೆ ಬರುವವರು–ಗಂಡಾಂತರ ಪರಿಸ್ಥಿತಿಗಳಲ್ಲಿ ಪೂರ್ಣಾವಧಿ ಸೇವೆ ಸಲ್ಲಿಸಲು ಸಹ ಗೃಹರಕ್ಷಕರು ಬದ್ಧರು.

ಕೇಂದ್ರ ಮತ್ತು ರಾಜ್ಯಗಳ ಮಹತ್ವಪೂರ್ಣ ದಿನಗಳ ಪೆರೇಡುಗಳಲ್ಲಿ ಗೃಹರಕ್ಷಕ ದಳ ಭಾಗವಹಿಸುತ್ತದೆ. ಪೋಲಿಸ್ ಸೈನಿಕರ ಜೊತೆಗೂಡಿ ಪ್ರವಾಹಗಳ ಹಾವಳಿಗೆ ಸಿಕ್ಕಿದ ಜನರ ಪ್ರಾಣ ಆಸ್ತಿ ಇವುಗಳ ರಕ್ಷಣಾ ಕಾರ್ಯದಲ್ಲಿ ನೆರವಾಗುತ್ತದೆ. ರಾಜ್ಯ ಮತ್ತು ಕೇಂದ್ರ ಚುನಾವಣೆಗಳಲ್ಲಿ ಇದು ಸೇವೆ ಸಲ್ಲಿಸುತ್ತದೆ. ರಸ್ತೆಯಲ್ಲಿ ಜನ ಹಾಗೂ ವಾಹನ ನಿಯಂತ್ರಣ ಮಾಡಲಿಕ್ಕೂ ಗಲಭೆ ದೊಂಬಿ ಮುಂತಾದವನ್ನು ಹತ್ತಿಕ್ಕಿ ಶಾಂತಿಪಾಲಿಸಲಿಕ್ಕೂ ಇದರ ಉಪಯೋಗ ಉಂಟು. ಗೃಹರಕ್ಷಕ ದಳದ ಸೇವೆಯನ್ನು ಇಂದು ಪೋಲಿಸರ ಬದಲಾಗಿ ಅಲ್ಲದೇ ಅವರ ಸಂಖ್ಯೆ ಸಾಲದೆ ಬಂದಾಗ ಕೂಡ ಉಪಯೋಗಿಸಿಕೊಳ್ಳುವುದಿದೆ. (ಬಿ.ಎಸ್.ಎಚ್.)

**ಗೃಹವಿಜ್ಞಾನ :** ಕೌಟುಂಬಿಕ ಜೀವನಕ್ಕೆ ಸಂಬಂಧಪಟ್ಟಂತೆ ಗೃಹಿಣಿಯಾದವಳು ಗೃಹವನ್ನು ಯಾವ ರೀತಿ ಓರಣವಾಗಿಟ್ಟುಕೊಳ್ಳಬೇಕೆಂಬುದನ್ನು ಕುರಿತು ಇರುವ ವಿಜ್ಞಾನ (ಹೋಮ್ ಸೈನ್ಸ್). ಈ ವಿಜ್ಞಾನವನ್ನೀಗ ವೈಜ್ಞಾನಿಕವಾಗಿ ಪರಿಶೀಲಿಸಿ, ಕ್ರಮ ಬದ್ಧಗೊಳಿಸಿ ಶಾಲಾ ಕಾಲೇಜುಗಳಲ್ಲಿ ಮಹಿಳೆಯರಿಗೆ ಕಲಿಸಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ, ಕುಟುಂಬದ ಸದಸ್ಯರು ಸೇವಿಸುವ ಆಹಾರ ಯಾವ ಬಗೆಯದ್ದಾಗಿರಬೇಕು, ಯಾವ ಆಹಾರ ಎಷ್ಟು ಪರಿಮಾಣದಲ್ಲಿರಬೇಕು, ಸೇವಿಸುವ ಆಹಾರ ಪುಷ್ಟಿಕರವಾದದ್ದೇ ಅಲ್ಲವೆ ಮುಂತಾದ ವಿಚಾರಗಳನ್ನೊಳಗೊಂಡ ಪಾಕಶಾಸ್ತ್ರಕ್ಕೆ ಹೆಚ್ಚಿನ ಮಹತ್ವವಿದ್ದರೂ ಕುಟುಂಬ ಸದಸ್ಯರ ಇತರ ಅಗತ್ಯಗಳಾದ ಉಡುಪು, ಆಯವ್ಯಯ ಮೊದಲಾದ ವಿಷಯಗಳಿಗೂ ಗಮನ ನೀಡಲಾಗುವುದು. ಮನೆಯಲ್ಲಿ ಬೆಳೆಯುವ ಮಕ್ಕಳ ಬೌದ್ಧಿಕ ಮತ್ತು ಮಾನಸಿಕ ಬೆಳೆವಣಿಗೆಗೆ ಗೃಹವಿಜ್ಞಾನದ ಅನ್ವಯ ಬಹುಮಟ್ಟಿಗೆ ಸಹಕಾರಿ ಯಾಗುತ್ತದೆ. ಮಕ್ಕಳ ಪಾಲನೆ, ಪೋಷಣೆಗಳಿಗೆ ಗೃಹವಿಜ್ಞಾನದಲ್ಲಿ ಹೆಚ್ಚಿನ ಪ್ರಾಶಸ್ತ್ಯವಿದೆ.

ಅಮೆರಿಕದಲ್ಲಿ : 18ನೆಯ ಶತಮಾನದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳ ಬಾಸ್ಟನ್ ಪಬ್ಲಿಕ್ ಶಾಲೆಯಲ್ಲಿ ಗೃಹವಿಜ್ಞಾನ ತರಗತಿಗಳನ್ನು ತೆರೆದು ಗೃಹವನ್ನು ಓರಣವಾಗಿಟ್ಟು ಕೊಳ್ಳುವುದರ ಬಗ್ಗೆ ಮಾಹಿತಿ ನೀಡಲಾಗುತ್ತಿತ್ತು. 1798ರ ವೇಳೆಗೆ ಶಾಲೆಯ ಉಪಾಧ್ಯಾಯಿನಿ ಯರು ಎರಡು ಮತ್ತು ಮೂರನೆಯ ತರಗತಿಯ ಹೆಣ್ಣುಮಕ್ಕಳಿಗೆ ಹೊಲಿಗೆ ಮತ್ತು ಕಸೂತಿಯನ್ನು ಕಲಿಸಲಾರಂಭಿಸಿದರು. 85 ವರ್ಷಗಳ ಅನಂತರ ಶಾಲೆಯ ಒಂದು ಭಾಗವನ್ನು ಪಾಕಶಾಲೆಯನ್ನಾಗಿ ಪರಿವರ್ತಿಸಿ ಪಾಕಶಾಸ್ತ್ರದ ವಿಷಯಗಳನ್ನು ಬೋಧಿಸ ತೊಡಗಿದರು. ಈ ಶಿಕ್ಷಣ ತೃಪ್ತಿಕರವಾಗಿ ಕಂಡುಬಂದದ್ದರಿಂದ ಶಾಲೆಯಲ್ಲಿ ಪಾಕಶಾಸ್ತ್ರಾಧ್ಯಯನಕ್ಕೆ ಒಂದು ಸ್ಥಿರವ್ಯವಸ್ಥೆಯೇ ಏರ್ಪಾಡಾಯಿತಲ್ಲದೆ ಮುಂದೆ ಪಾಕಶಾಸ್ತ್ರ ಗೃಹವಿಜ್ಞಾನದ ಒಂದು ಮುಖ್ಯ ವಿಷಯವಾಗಲು ಅವಕಾಶವಾಯಿತು.

1869ನೆಯ ಇಸವಿಯಲ್ಲಿ ಅಯೋವ ಸ್ಟೇಟ್ ಕಾಲೇಜಿನ ವಿದ್ಯಾರ್ಥಿನಿಲಯದ ಮೇಲ್ವಿಚಾರಿಕೆಯೊಬ್ಬಳು ಮೌಂಟ್ ಹೋಲ್‌ಯೋಕ್ ಪ್ಲಾನ್ ಎಂಬ ಯೋಜನೆಯನ್ನು ಜಾರಿಗೆ ತಂದಳು. ಇದರ ಪ್ರಕಾರ ಆ ಕಾಲೇಜಿನಲ್ಲಿ ಓದುತ್ತಿರುವ ಎಲ್ಲ ಹೆಣ್ಣುಮಕ್ಕಳೂ ದಿನಕ್ಕೆ ಎರಡು ಗಂಟೆಯ ಕಾಲ ಅಡುಗೆ ಮಾಡುವುದು, ಊಟ ಬಡಿಸುವುದು, ಪಾತ್ರೆ ತೊಳೆಯುವುದು ಮುಂತಾದ ಗೃಹಕೆಲಸಗಳನ್ನು ಒಬ್ಬ ಉಪಾಧ್ಯಾಯಿನಿಯ ಮೇಲ್ವಿಚಾರಣೆಯಲ್ಲಿ ಮಾಡಬೇಕಾಗಿತ್ತು. ಇದು ಕಾರ್ಯಗತವಾದ ಮೂರು ವರ್ಷಗಳಲ್ಲಿ ಅಂದರೆ, 1872 ರಲ್ಲಿ ಶಾಲಾ ಪಠ್ಯಕ್ರಮದಲ್ಲಿ ಗೃಹವಿಜ್ಞಾನವನ್ನು ಒಂದು ವಿಷಯವನ್ನಾಗಿ ಸೇರಿಸಲಾಯಿತು. ಜೂನಿಯರ್ ಕಾಲೇಜಿನ ವಿದ್ಯಾರ್ಥಿನಿಯರಿಗೆ ಗೃಹಾಡಳಿತ, ಗೃಹನಿರ್ವಹಣೆ, ಗೃಹದ ಆರ್ಥಿಕತೆ ಮುಂತಾದ ವಿಷಯಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಐದು ವರ್ಷಗಳ ಅನಂತರ ಅಡುಗೆಯ ವಿಷಯದಲ್ಲಿ ತರಬೇತಿ ಶಿಕ್ಷಣವನ್ನೂ ಜಾರಿಗೆ ತರಲಾಯಿತು. ಪಾಕಶಾಸ್ತ್ರದಲ್ಲಿ ನೀಡುತ್ತಿದ್ದ ಶಿಕ್ಷಣ ವಿದ್ಯಾರ್ಥಿನಿಯರನ್ನಲ್ಲದೆ ಇತರರನ್ನೂ ತನ್ನ ಕಡೆ ಸೆಳೆಯಿತು. ಅಂತೆಯೇ ವಿದ್ಯಾರ್ಥಿನಿಯರಿಗಾಗಿ ಮೀಸಲಾದ ಈ ಶಾಲೆಯಲ್ಲಿ ಬೇರೆಯವರಿಗೂ ಶಿಕ್ಷಣ ನೀಡಲು ಒಂದು ಯೋಜನೆ ತಯಾರಾಯಿತು. ಹೊಲಿಗೆ ಮತ್ತು ಬಟ್ಟೆ ಚಲುವೆ ಮಾಡುವ ವಿಷಯಗಳ ಬಗ್ಗೆ ಜನಗಳ ಆಸಕ್ತಿ ಅಷ್ಟಾಗಿ ಇರಲಿಲ್ಲವಾದ ಕಾರಣ ಬಹುಬೇಗ ಆ ವಿಷಯಗಳ ಮೇಲಿನ ಬೋಧನೆ ರದ್ದಾಯಿತು.

ಹೊಲಿಗೆ ತರಗತಿಯನ್ನು ನಡೆಸುತ್ತಿದ್ದ ಕ್ಯಾನ್ಸಸ್‌ನ ಕೃಷಿ ಕಾಲೇಜು ಗೃಹವಿಜ್ಞಾನವನ್ನೂ ಬೋಧಿಸಲು ಪ್ರಾರಂಭಮಾಡಿತು (1873). ಆಹಾರದ ಪ್ರಾಮುಖ್ಯ ಮತ್ತು ಅಡುಗೆಯ ಶಾಸ್ತ್ರೀಯ ಕ್ರಮವಿಧಿಗಳ ಬಗ್ಗೆ ಅಲ್ಲಿ ಆಗಾಗ ಪರಿಣತರಿಂದ ಉಪನ್ಯಾಸಗಳನ್ನು ನಡೆಸಲಾ ಗುತ್ತಿತ್ತು. ಅಡುಗೆಗೆ ಸಂಬಂಧಿಸಿದಂತೆ ಪ್ರಾಯೋಗಿಕ ಶಿಕ್ಷಣ ಪ್ರಾರಂಭವಾದ್ದು 1877ರಲ್ಲಿ.

ಇಲಿನಾಯ್ ವಿಶ್ವವಿದ್ಯಾಲಯ 1874ರಲ್ಲಿ ಒಂದು ಗೃಹವಿಜ್ಞಾನ ಮತ್ತು ಕಲಾಶಾಲೆಯನ್ನು ತೆರೆಯಿತು. ತಾಯಿಯಾಗಿ ಗೃಹಿಣಿ ನಿರ್ವಹಿಸಬೇಕಾದ ಕರ್ತವ್ಯ ಮತ್ತು ಗೃಹನಿರ್ವಹಣೆಗಳ ಬಗೆಗೆ ಆ ಶಾಲೆಯಲ್ಲಿ ಕಲಿಸಲಾಗುತ್ತಿತ್ತಲ್ಲದೆ ರಸಾಯನ ವಿಜ್ಞಾನ, ಜೀವವಿಜ್ಞಾನ, ಮಾನವವಿಜ್ಞಾನ, ಭೌತವಿಜ್ಞಾನ, ಕಲೆ, ಭಾಷಾವಿಜ್ಞಾನ, ಮನಃವಿಜ್ಞಾನ, ಶರೀರವಿಜ್ಞಾನ ಮುಂತಾದ ವಿಷಯಗಳ ಬೋಧನೆಯೂ ನಡೆಯುತ್ತಿತ್ತು. ಇವುಗಳ ಜೊತೆಗೆ ಗೃಹಶಿಲ್ಪಶಾಸ್ತ್ರ, ಗೃಹನೈರ್ಮಲ್ಯ, ಆಹಾರವಸ್ತುಗಳ ಆಯ್ಕೆ ಮತ್ತು ಆಹಾರವನ್ನು ತಯಾರುಮಾಡುವ ವಿಧಾನಗಳು, ರೋಗಿಗೆ ಬೇಕಾದ ಆಹಾರ ತಯಾರಿಕೆ, ಆಹಾರದ ಯುಕ್ತ ಉಪಯೋಗ ಮುಂತಾದ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಯಿತು (1900). ಅದೇ ವರ್ಷ ಹೋಮ್ ಎಕನಾಮಿಕ್ಸ್ ಕ್ಲಬ್ ಎಂಬ ಸಂಘ ರೂಪಿತಗೊಂಡಿತಲ್ಲದೆ ಒಂದು ಪ್ರಾಯೋಗಿಕ ವಸತಿಗೃಹವೂ ಪ್ರಾರಂಭವಾಯಿತು.

ವಿಶ್ವವಿದ್ಯಾಲಯದ ಮಟ್ಟದಲ್ಲಿ ಗೃಹವಿಜ್ಞಾನವನ್ನು ಅಧ್ಯಯನ ವಿಷಯವನ್ನಾಗಿ ಮಾಡಿದ ತರುಣದಲ್ಲಿಯೇ ಜೂಲಿಯೆಟ್ ಕಾರ್ಸನ್ ಎಂಬ ಮಹಿಳೆಯು ಮಹಿಳಾ ಉಚಿತ ತರಬೇತಿ ಯೋಜನೆಯ ಅಂಗವಾಗಿ, ವಯಸ್ಕರಿಗೆ ನ್ಯೂಯಾರ್ಕ್ ನಗರದಲ್ಲಿ ಪಾಕಶಾಸ್ತ್ರದಲ್ಲಿ ತರಬೇತಿ ಕೊಡಲು ಪ್ರಾರಂಭಿಸಿದಳು (1874). ಅನಂತರ ನ್ಯೂಯಾರ್ಕ್ ಕುಕಿಂಗ್ ಸ್ಕೂಲ್ ಎಂಬ ಪ್ರಾಯೋಗಿಕ ಅಡುಗೆಶಾಲೆಯನ್ನು ತನ್ನ ಮನೆಯಲ್ಲಿಯೇ ತೆರೆದಳು. ಉದ್ಯೋಗಸ್ಥ ತಂದೆತಾಯಿಯರಿಗೆ ಮತ್ತು ನೆಮ್ಮದಿಯಿಂದ ಜೀವನ ನಡೆಸಬಲ್ಲವರ ಮಕ್ಕಳಿಗೆ ಶಿಕ್ಷಣ, ಹೆಂಗಸರು ಮತ್ತು ಗಂಡಸರು ಪ್ರಧಾನ ಅಡುಗೆಯವರಾಗಿ ದೊಡ್ಡ ಭೋಜನಶಾಲೆಗಳಲ್ಲಿ ಮತ್ತು ಉಪಾಹಾರಗೃಹಗಳಲ್ಲಿ ಉದ್ಯೋಗ ದೊರಕಿಸಿಕೊಳ್ಳಲು ಬೇಕಾದ ತರಬೇತಿ – ಇವಕ್ಕೆ ಆ ಶಾಲೆಯಲ್ಲಿ ಅವಕಾಶವಿತ್ತಲ್ಲದೆ ಪಾಕಶಾಸ್ತ್ರದ ಮೂಲ ಶಿಕ್ಷಣವನ್ನು ತಾವು ಕಲಿತು ಇತರರಿಗೆ ಕಲಿಸಿಕೊಡಲು ಆಸಕ್ತಿ ಇರುವಂಥವರಿಗೂ ಪ್ರವೇಶದ ಅವಕಾಶವಿತ್ತು.

ಅಡುಗೆಯಲ್ಲಿ ಉಪಯೋಗಿಸಲಾಗುವ ತರಕಾರಿಗಳನ್ನು ಸಾಧ್ಯವಾದಮಟ್ಟಿಗೂ ಮನೆಯ ಹಿತ್ತಲಲ್ಲೇ ಬೆಳೆಸಿ, ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದರೊಂದಿಗೆ ಆರೋಗ್ಯ ದೃಷ್ಟಿಯಿಂದ ಮನೆ ಸುತ್ತಮುತ್ತಲ ವಾತಾವರಣವನ್ನು ಹಿತವಾಗಿಸುವಂಥ ಕೈತೋಟದ (ಕಿಚನ್ ಗಾರ್ಡನ್) ಅಗತ್ಯವನ್ನು ಐಮಿಲಿ ಹನ್‌ಬೆಂಗ್‌ಟನ್ ಎಂಬುವಳು ತೋರಿಸಿದಳು. ಅವಳ ಪ್ರಯತ್ನದಿಂದ ಕಿಚನ್ ಗಾರ್ಡನ್ ಅಸೋಸಿಯೇಷನ್ ಆಫ್ ನ್ಯೂಯಾರ್ಕ್, ಅನಂತರ ಇಂಡಸ್ಟ್ರಿಯಲ್ ಅಸೋಸಿಯೇಷನ್ – ಈ ಸಂಘಗಳು ಸ್ಥಾಪನೆಯಾದುವು. ಟೀಚರ್ಸ್ ಕಾಲೇಜ್ ಆಫ್ ಕೊಲಂಬಿಯದ ಮೇಲೆ ಕಿಚನ್ ಗಾರ್ಡನ್ ಚಳವಳಿಯಿಂದಾದ ಪರಿಣಾಮ ಅಪಾರ. ನ್ಯೂ ಇಂಗ್ಲೆಂಡ್ ಕಿಚನ್ ಸಂಸ್ಥೆಯಲ್ಲಿ ತಯಾರಾದ ಆಹಾರ ಪದಾರ್ಥಗಳು ಬಾಸ್ಟನ್ ಪಬ್ಲಿಕ್ ಶಾಲೆಯ ಮಕ್ಕಳಿಗೆ ದೊರಕುವಂತಾದದ್ದು ಈ ಚಳವಳಿಯ ಪ್ರಭಾವದಿಂದಲೇ.

ಹದಿನೆಂಟನೆಯ ಶತಮಾನದ ಕೊನೆಯ ದಶಕ ಮತ್ತು ಹತ್ತೊಂಬತ್ತನೆಯ ಪ್ರಾರಂಭದಲ್ಲಿ ಅಮೆರಿಕದ ಜನಜೀವನದಲ್ಲಿ ಅನೇಕ ಹೊಸ ಮಾರ್ಪಾಡುಗಳುಂಟಾದುವು. ಸ್ತ್ರೀಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಮಹಿಳೆಯರು ಪ್ರತ್ಯೇಕ ಮಹಿಳಾಸಂಘಗಳನ್ನು ರಚಿಸಿಕೊಂಡು ಸಮಾಜದಲ್ಲಿ ತಮ್ಮ ಸ್ಥಾನಮಾನಗಳನ್ನು ಕುರಿತಂತೆ ಹೋರಾಟ ನಡೆಸಿದರು. ಆಗ ಪ್ರಾರಂಭಗೊಂಡ ಸಂಘಗಳಲ್ಲಿ ಗೃಹಾಡಳಿತ, ಗೃಹಾಲಂಕರಣ ಮುಂತಾದ ವಿಷಯಗಳನ್ನು ಕುರಿತು ವಿಚಾರವಿನಿಮಯಗಳು ನಡೆದವು. ಅದರಿಂದಾಗಿ ಗೃಹವಿಜ್ಞಾನ ವಿಷಯದಲ್ಲಿ ಆಸಕ್ತಿ ಇರುವಂಥ ಹನ್ನೊಂದು ಮಂದಿ, ನ್ಯೂಯಾರ್ಕ್ ಸ್ಟೇಟ್ ಲೇಕ್ ಪ್ಲಾಸಿಡ್ ಕ್ಲಬ್ ಎಂಬ ಸಂಘದಲ್ಲಿ ಗೃಹವಿಜ್ಞಾನ ಸಮ್ಮೇಳನವೊಂದನ್ನು ನಡೆಸಲು ತೀರ್ಮಾನಿಸಿದರು. ಸಮ್ಮೇಳನದಲ್ಲಿ ಆಧುನಿಕ ಸಮಾಜದಲ್ಲಿ ಗೃಹವಿಜ್ಞಾನದ ಪಾತ್ರವನ್ನು ಕುರಿತಂತೆ ಅನೇಕ ಉಪಯುಕ್ತ ಸಲಹೆಗಳು ಬಂದವು. ಲೇಕ್ ಪ್ಲಾಸಿಡ್ ಗೃಹವಿಜ್ಞಾನ ಸಮ್ಮೇಳನದ ಫಲವಾಗಿ ಗೃಹವಿಜ್ಞಾನದ ಕ್ರಮಬದ್ಧ ಅಧ್ಯಯನ ಪ್ರಾರಂಭವಾಯಿತು. ಸಮ್ಮೇಳನದ ಪ್ರಥಮ ಅಧ್ಯಕ್ಷೆಯಾಗಿದ್ದ ಎಲೆನ್ ರಿಚರ್ಡ್ಸ್ ಎಂಬುವಳು ಸೂಚಿಸಿದ ಹೋಂ ಎಕನಾಮಿಕ್ಸ್ ಎಂಬ ಶಬ್ದ ಸರ್ವಜನಪ್ರಿಯವಾಗಿ ಮನೆಯ ಸದಸ್ಯರ ಕ್ಷೇಮಾಭ್ಯುದಯಕ್ಕೆ ಮತ್ತು ಗೃಹಾಡಳಿತಕ್ಕೆ ಸಂಬಂಧಿಸಿದ ಗೃಹವಿಜ್ಞಾನದ ಅಭ್ಯಾಸಕ್ಕೆ ಪೋಷಕವಾಯಿತು. 1903ರಲ್ಲಿ ಸೂಚಿತವಾದ ಹೋಂ ಎಕನಾಮಿಕ್ಸ್ ಎಂಬ ವಿಷಯವನ್ನು ಅಮೆರಿಕದ ಸಂಯುಕ್ತ ಸಂಸ್ಥಾನದ ಎಲ್ಲ ಮುಖ್ಯ ವಿಶ್ವವಿದ್ಯಾಲಯಗಳಲ್ಲೂ ಸ್ನಾತಕೋತ್ತರ ತರಗತಿಗಳಲ್ಲೂ ಈಗ ಬೋಧಿಸಲಾಗುತ್ತಿದೆ.

ಮೆಲ್ವಿಲ್ ಡ್ಯೂಯಿ ದಂಪತಿಗಳು ಅಮೆರಿಕದ ಪುಸ್ತಕ ಭಂಡಾರಗಳಲ್ಲಿ ಕೆಲಸಮಾಡಿ ಗಳಿಸಿದ್ದ ಅನುಭವಗಳನ್ನು ಲೇಕ್ ಪ್ಲಾಸಿಡ್ ಗೃಹವಿಜ್ಞಾನ ಸಮ್ಮೇಳನದಲ್ಲಿ ತಿಳಿಸಿದ್ದರು. ಅವರು ಗೃಹಅರ್ಥಶಾಸ್ತ್ರದ ನಾನಾ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಸಂಗ್ರಹಿಸಿ ಅವನ್ನು ವರ್ಗೀಕರಣ ಮಾಡುವ ವಿಧಾನವೊಂದನ್ನು ಬೆಳೆಸಿದರು. 1850 ರಿಂದ ಇಂಗ್ಲಿಷ್‌ನಲ್ಲಿ ಸಿದ್ಧವಾದ 1500 ಪುಸ್ತಕಗಳ ಪಟ್ಟಿಯೊಂದನ್ನು ಶ್ರೀಮತಿ ಡ್ಯೂಯಿ ತಯಾರಿಸಿದಳು. ಶಿಶುಸಂರಕ್ಷಣೆ, ಅಡುಗೆ ಮಾಡುವ ವಿಧಾನ, ನೀತಿಶಾಸ್ತ್ರ, ಸಮಾಜಮರ್ಯಾದೆ, ಬೇಸಾಯ, ತೋಟಗಾರಿಕೆ, ಆಹಾರ, ಗೃಹಕೈಗಾರಿಕೆ, ಗೃಹಜೀವನ, ಕುಟುಂಬ ಕಲೆ, ಗೃಹಕಾರ್ಯನಿರ್ವಹಣೆ, ಆರೋಗ್ಯವಿಜ್ಞಾನ, ಶರೀರವಿಜ್ಞಾನ, ಭೌತವಿಜ್ಞಾನ, ರಾಸಾಯನವಿಜ್ಞಾನ, ಶುಚಿತ್ವ, ಆಶ್ರಯ ಮತ್ತು ಸಮಾಜಶಾಸ್ತ್ರ – ಹೀಗೆ ಆ ಪುಸ್ತಕಗಳ ವರ್ಗೀಕರಣ ಸಾಗಿತ್ತು. ಇವೇ ಮುಂದೆ ಗೃಹವಿಜ್ಞಾನಕ್ಕೆ ಸಂಬಂಧಿಸಿದ ಅಭ್ಯಾಸ ವಿಷಯಗಳಾದವು.

ಸಾರ್ವಜನಿಕ ವಿದ್ಯಾಶಾಲೆಗಳಲ್ಲಿ ಗೃಹ ಅರ್ಥಶಾಸ್ತ್ರದ ಅವಶ್ಯಕತೆ, ಅದರ ಗುರಿ ಮತ್ತು ವ್ಯಾಪ್ತಿಗಳನ್ನು ಕುರಿತಂತೆ ಮತ್ತು ಶಾಲೆಗಳಲ್ಲಿ ಅದನ್ನು ಬೋಧಿಸುವ ವಿಧಾನ, ತಗಲುವ ವೆಚ್ಚಗಳ ವಿಷಯವಾಗಿ ಲೇಕ್ ಪ್ಲಾಸಿಡ್ ಸಮ್ಮೇಳನದಲ್ಲಿ ದೀರ್ಘಚರ್ಚೆ ನಡೆಯಿತು. ಯಾವ ತರಗತಿಗಳಿಗೆ ಗೃಹ ಅರ್ಥಶಾಸ್ತ್ರದ ವಿಷಯದ ಬೋಧನೆ ಅಗತ್ಯ ಎಂಬುದರ ಬಗ್ಗೆಯೂ ಚರ್ಚೆ ನಡೆಯಿತು. ಈ ವಿಷಯವನ್ನು ಬೋಧಿಸುವುದರಲ್ಲಿ ಪ್ರೌಢಶಾಲೆಗಳಲ್ಲಿ ಇರುವ ಅನುಕೂಲಗಳನ್ನು ಪರಾಮರ್ಶಿಸಲಾಯಿತು. ಲೇಕ್ ಪ್ಲಾಸಿಡ್ ಸಮ್ಮೇಳನ ಮಾಡಿದ ಕೆಲವು ಶಿಫಾರಸ್ಸುಗಳು ಹೀಗಿವೆ : 1. ವಿದ್ಯಾರ್ಥಿಗಳಲ್ಲಿ ಪರೀಕ್ಷಿಸುವ ಮನೋಭಾವ ಬೆಳೆಸುವುದು ಗೃಹಅರ್ಥಶಾಸ್ತ್ರದ ವಿಷಯಗಳನ್ನು ಬೋಧಿಸುವುದರ ಗುರಿ. 2. ಕಾಲೇಜುಗಳಲ್ಲಿ ಗೃಹಅರ್ಥಶಾಸ್ತ್ರದ ವಿದ್ಯಾಭ್ಯಾಸ ಕ್ರಮದಲ್ಲಿ ಆಹಾರ ತಯಾರಿಕೆ, ಬಟ್ಟೆ ಹೊಲಿಯುವಿಕೆ ಮತ್ತು ನೇಯ್ಗೆ ಮುಂತಾದ ವಿಷಯದಲ್ಲಿ ಪ್ರಾಯೋಗಿಕ ಶಿಕ್ಷಣ ಕೊಡುವುದು. 3. ಕಾಲೇಜಿನ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಗೃಹ ಅರ್ಥಶಾಸ್ತ್ರದ ಸಾಮಾನ್ಯ ಶಿಕ್ಷಣ ಕೊಡುವುದು. 4. ಯಾವ ಕಾಲೇಜಿನಲ್ಲಿ ಗೃಹಅರ್ಥಶಾಸ್ತ್ರಕ್ಕೆ ಪ್ರತ್ಯೇಕ ಶಾಖೆಗಳಿಲ್ಲವೋ ಆ ಶಾಲೆಗಳಲ್ಲಿ ಗೃಹ ಮತ್ತು ಗೃಹಜೀವನಕ್ಕೆ ಸಂಬಂಧಪಟ್ಟ ವಿಷಯಗಳನ್ನು ರಸಾಯನವಿಜ್ಞಾನ, ಅರ್ಥಶಾಸ್ತ್ರ, ಸಮಾಜವಿಜ್ಞಾನ ಮತ್ತು ಕಲೆ ಈ ಶಾಖೆಗಳ ಮೂಲಕ ಬೋಧಿಸಲು ಅನುಕೂಲ ಮಾಡಿಕೊಡುವುದು.

ಲೇಕ್ ಪ್ಲಾಸಿಡ್ ಸಮ್ಮೇಳನ ಶಿಫಾರಸ್ಸುಗಳನ್ನು ಅಂಗೀಕರಿಸಿ ಕೆಲವು ಶಾಲೆಗಳು ಮತ್ತು ಕಾಲೇಜುಗಳು ಗೃಹ ವಿಜ್ಞಾನಕ್ಕೆ ಸಂಬಂಧಿಸಿದಂತೆ ಗೃಹ ಅರ್ಥಶಾಸ್ತ್ರದಲ್ಲಿ ಶಿಕ್ಷಣವನ್ನು ಕೊಟ್ಟವು. ತರಬೇತಿ ತರಗತಿಗಳ ಅವಧಿ ಒಂದರಿಂದ ನಾಲ್ಕು ವರ್ಷಗಳವರೆಗೂ ಬೋಧನೆಯ ಶಿಕ್ಷಣದ ಅವಧಿ ಹತ್ತು ವಾರಗಳಿಂದ ಎರಡು ವರ್ಷಗಳವರೆಗೂ ಇತ್ತು.

ವಯಸ್ಕರಿಗೂ ಗೃಹ ಅರ್ಥಶಾಸ್ತ್ರದ ಪರಿಚಯವನ್ನು ಮಾಡಿಕೊಡಬೇಕೆಂಬುದು ಲೇಕ್ ಪ್ಲಾಸಿಡ್ ಸಮ್ಮೇಳನದ ಉದ್ದೇಶವಾಗಿತ್ತು. ಅದರಂತೆ ಸಂಚಾರಿ ಗ್ರಂಥಾಲಯಗಳಿಂದ ನ್ಯೂಯಾರ್ಕ್ ರಾಜ್ಯದ ಮನೆಗಳಿಗೆ ಪುಸ್ತಕಗಳು ಎರವಲಾಗಿ ಬರಹತ್ತಿದವು. ಬಾಸ್ಟನ್ ಶಾಲೆಯಲ್ಲಿ ಗೃಹ ಅರ್ಥಶಾಸ್ತ್ರವನ್ನು ಮಕ್ಕಳಿಗೆ ಬೋಧಿಸಲಾಯಿತಲ್ಲದೆ ಒಂದು ಸಂಘವೂ ಸ್ಥಾಪನೆಯಾಯಿತು. ಆ ಸಂಘ ಸಣ್ಣ ವಯಸ್ಸಿನ ಮಕ್ಕಳಿಗೆ ಸೂಕ್ಷ್ಮಪ್ರಮಾಣದ ಉಪಕರಣಗಳಿಂದ ಸಾಮಾನ್ಯ ಆಹಾರವನ್ನು ತಯಾರಿಸುವುದು, ಊಟ ಬಡಿಸುವ ಉಪಕರಣಗಳನ್ನು ಅಚ್ಚುಕಟ್ಟಾಗಿ ಇಡುವುದು, ಊಟ ಬಡಿಸುವುದು, ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುವುದು, ಕೆಲಸದ ಅನಂತರ ಉಪಕರಣಗಳನ್ನು ಶುಚಿಮಾಡುವುದು, ಗೃಹ ಕಾರ್ಯನಿರ್ವಹಣೆ, ಗೃಹವನ್ನು ಪೀಠೋಪಕರಣಗಳಿಂದ ಸಜ್ಜುಗೊಳಿಸುವುದು, ಅಲಂಕರಿಸುವುದು – ಮುಂತಾದವನ್ನು ಹೇಳಿಕೊಡುವ ಆವಶ್ಯಕತೆಯನ್ನು ಎತ್ತಿ ತೋರಿಸಿತು. ಅಲ್ಲದೆ ಮಕ್ಕಳು ಶುಚಿಯಾಗಿರಲು ಬೇಕಾದ ಎಲ್ಲ ಕ್ರಮಗಳ ಬಗ್ಗೆಯೂ ಅರಿವು ಕೊಡುವ ಕಿಂಡರ್‌ಗಾರ್ಟನ್ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತಂದಿತು.

ಮನೆಯ ಒಳಾಂಗಣ ಮತ್ತು ಹೊರಾಂಗಣವನ್ನು ಚೊಕ್ಕಟವಾಗಿಟ್ಟುಕೊಳ್ಳುವುದರ ಬಗ್ಗೆ ಅನುಸರಿಸಬೇಕಾದ ವಿಧಾನಗಳು, ಒಗೆದ ಬಟ್ಟೆಗಳನ್ನು ಜೋಪಾನವಾಗಿಡುವುದು ಮುಂತಾದ ವಿಷಯಗಳ ಮೇಲೆ ಆಗಾಗ ಪ್ರದರ್ಶನಗಳು ಏರ್ಪಾಡಾಗುತ್ತಿದ್ದುವು.

ಹೀಗೆ ಅಲ್ಪ ಪರಿಮಾಣದಲ್ಲಿ ರೂಪುಗೊಂಡ ಗೃಹವಿಜ್ಞಾನ ಕ್ರಮೇಣ ಹೆಚ್ಚು ವ್ಯಾಪಕವಾಗಿ ಬೆಳೆದು ಬಹು ವಿಷಯ ಪರಿಪ್ಲುತವೂ ಶಾಸ್ತ್ರೀಯವೂ ಆಗಿ ಮಾರ್ಪಟ್ಟಿತು.

ಭಾರತದಲ್ಲಿ : ಕುಟುಂಬದಲ್ಲಿರುವ ಹೆಣ್ಣುಮಕ್ಕಳು ತಾವು ಯಾವ ರೀತಿಯಲ್ಲಿ ಮನೆಯನ್ನು ಶುಭ್ರವಾಗಿಟ್ಟುಕೊಂಡು, ಚಿಕ್ಕಮಕ್ಕಳ ವಿದ್ಯಾಭ್ಯಾಸ, ಅವರ ಆಹಾರ ಮುಂತಾದ ವಿಚಾರಗಳಿಗೆ ಗಮನ ಕೊಡಬೇಕು ಎಂಬುದರ ಬಗ್ಗೆ ಅರಿವು ಕೊಡುವಂಥ ಮಹಿಳಾ ಸಮಾಜಗಳು ಈಗ ಭಾರತದಲ್ಲಿ ಹೇರಳವಾಗಿವೆ. ಹೊಲಿಗೆ, ಕಸೂತಿ, ಪಾಕಶಾಸ್ತ್ರ, ಗೃಹಾಲಂಕರಣ, ಮಕ್ಕಳ ಪೋಷಣೆ ಮುಂತಾದ ವಿಷಯಗಳಲ್ಲಿ ಇವು ತರಬೇತಿ ನೀಡುತ್ತವೆ. ಈಚೆಗೆ ಗೃಹವಿಜ್ಞಾನ ಬೋಧನೆ ಭಾರತದ ಶಾಲಾ ಕಾಲೇಜುಗಳ ಪಠ್ಯಕ್ರಮದಲ್ಲಿ ಸೇರಿಹೋಗಿ, ಈ ವಿಷಯದಲ್ಲಿ ಪ್ರೌಢ, ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳು ನಡೆಯುತ್ತಿವೆ.

ಭಾರತದಲ್ಲಿ ನೀಡಲಾಗುತ್ತಿರುವ ಗೃಹವಿಜ್ಞಾನದ ಶಿಕ್ಷಣದಲ್ಲಿ ಆಹಾರ ಮತ್ತು ಪುಷ್ಟಿ, ಬಟ್ಟೆ ಮತ್ತು ಉಡುಪು, ಮನೆಗೆಲಸದ ನಿರ್ವಹಣೆ, ಕುಟುಂಬದ ಸದಸ್ಯರ ಆರೋಗ್ಯ, ಚಿಕ್ಕಮಕ್ಕಳ ಬೆಳವಣಿಗೆ ಮತ್ತು ಮಾನವಸಂಬಂಧ ವಿಷಯಗಳು ಮುಖ್ಯವಾಗಿ ಸೇರಿವೆ. ಇವುಗಳ ಸೂಕ್ಷ್ಮ ಪರಿಚಯವನ್ನು ಇಲ್ಲಿ ಕೊಟ್ಟಿದೆ.

ಆಹಾರ ಮತ್ತು ಪುಷ್ಟಿ : ರಾಷ್ಟ್ರೀಯ ಆಹಾರ ಸಮಸ್ಯೆ, ಆಹಾರ ಸಮಸ್ಯೆಯಿಂದ ರಾಷ್ಟ್ರದ ಮೇಲೆ ಆಗುವ ಪರಿಣಾಮಗಳು, ಆಹಾರ ವಿಷಯವಾಗಿ ವಿಜ್ಞಾನದಿಂದ ಕಂಡುಹಿಡಿಯಲ್ಪಟ್ಟ ವಾಸ್ತವಾಂಶ, ದೇಹದ ಬೆಳವಣಿಗೆಗೆ ಮತ್ತು ದೇಹದ ಭಾಗಗಳ ಕಾರ್ಯಚಟುವಟಿಕೆಗೆ ಬೇಕಾದ ಪೌಷ್ಟಿಕ ಆಹಾರ, ಬೆಳವಣಿಗೆಯ ನಾನಾ ಹಂತಗಳಲ್ಲಿ ದೇಹಕ್ಕೆ ಬೇಕಾಗುವ ಆಹಾರ, ಪೌಷ್ಟಿಕ ಆಹಾರದ ಕೊರತೆಯಿಂದುಂಟಾಗುವ ರೋಗಗಳು ಮತ್ತು ಅವನ್ನು ತಡೆಗಟ್ಟುವ ರೀತಿ, ಸರಿಯಾದ ತಯಾರಿಕೆಯಿಂದ ಆಹಾರದಲ್ಲಿರುವ ಆಹಾರಾಂಶಗಳ ಗುಣ, ರುಚಿ ಮತ್ತು ಸುವಾಸನೆಗಳನ್ನು ಕಾಪಾಡುವುದು, ಕಡಿಮೆ ವೆಚ್ಚದಲ್ಲಿ ಒಳ್ಳೆಯ ಆಹಾರ ಪದಾರ್ಥಗಳನ್ನು ಕೊಳ್ಳುವುದು, ಆಹಾರ ಕೆಡದಂತೆ ರಕ್ಷಿಸುವುದು, ಹಿತಮಿತವಾದ ಆಹಾರ ಸೇವನೆ – ಮುಂತಾದ ವಿಷಯಗಳ ಅಧ್ಯಯನಕ್ಕೆ ಈ ವಿಭಾಗದಲ್ಲಿ ಅವಕಾಶವಿದೆ.

ಬಟ್ಟೆ ಮತ್ತು ಉಡುಪು : ಉಡುಪಿನ ತಯಾರಿಕೆ ಮತ್ತು ಬಟ್ಟೆಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುವ ವಿಧಾನ, ಉಡುಪುಗಳಿಗೆ ತಗಲುವ ವೆಚ್ಚ, ಬಟ್ಟೆಗಳ ಮೇಲೆ ವಿವಿಧ ರಸಾಯನಿಕ ವಸ್ತುಗಳು ಹೇಗೆ ವರ್ತಿಸುತ್ತವೆಂಬ ವಿಷಯ, ವಿವಿಧ ನೆಯ್ಗೆಗಳು, ಬಟ್ಟೆಯ ಗುಣ, ಗಾಢತೆ, ಕುಗ್ಗುವಿಕೆ, ಬಾಳಿಕೆ, ರೇಷ್ಮೆ, ವುಲ್ಲನ್,

ಹತ್ತಿ, ಲಿನನ್ ಮುಂತಾದವುಗಳಿಂದ ತಯಾರಾದ ಉಡುಪಿನ ಸ್ವಭಾವ, ಕೃತಕ ಬಟ್ಟೆಗಳಾದ ರೆಯಾನ್, ನೈಲಾನ್ ಮುಂತಾದವುಗಳ ಸ್ವಭಾವ – ಇವನ್ನು ಕುರಿತ ಅಧ್ಯಯನಕ್ಕೆ ಇಲ್ಲಿ ಅವಕಾಶವಿದೆ. ಬಟ್ಟೆಯನ್ನು ಕೊಳ್ಳುವಾಗ ಮತ್ತು ಉಡುಪುಗಳನ್ನು ತಯಾರು ಮಾಡುವಾಗ ಸಂಸಾರದ ಸಂಪಾದನೆ, ತೊಡುವವರ ವಯಸ್ಸು, ಕೆಲಸ ಮತ್ತು ಸಮಯಕ್ಕೆ ತಕ್ಕ ಕೊಡುಗೆ, ವಿವಿಧ ಬಣ್ಣಗಳು, ಚಿತ್ರಗಳು, ಉಡುಪುಗಳನ್ನು ಸ್ವತಃ ತಯಾರಿಸುವುದರಲ್ಲಿ ಇರುವ ಅನುಕೂಲಗಳು, ಉಡುಪಿನಿಂದ ರಾಷ್ಟ್ರೀಯ ಗುಣಗಳನ್ನು ಎತ್ತಿತೋರುವ ಚಾರಿತ್ರಿಕ ಹಿನ್ನೆಲೆ, ಬಟ್ಟೆಗಳನ್ನು ಮಡಿ ಮಾಡುವ ವಿಧಾನ, ಹರಿದಿರುವ ಉಡುಪುಗಳನ್ನು ರಿಪೇರಿ ಮಾಡುವ ರೀತಿ, ಉಡುಪುಗಳನ್ನು ಜೋಪಾನ ಮಾಡುವ ಬಗೆ – ಮುಂತಾದವುಗಳ ಶಾಸ್ತ್ರೀಯ ಅಭ್ಯಾಸ ಇಲ್ಲಿ ಸಾಗುತ್ತದೆ.

ಗೃಹ ಮತ್ತು ಗೃಹಾಡಳಿತ : ಗೃಹಸ್ಥನಾದವನ ಅಗತ್ಯಗಳೇನು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಅನುಗುಣವಾದ ರೀತಿಯಲ್ಲಿ ಗೃಹವನ್ನು ಅಣಿಗೊಳಿಸಿ ಅವನ ಬೌದ್ಧಿಕ ಹಾಗೂ ಮಾನಸಿಕ ಶಾಂತಿಯನ್ನು ಕಾಪಾಡಿಕೊಂಡು ಬರಲು ಪೋಷಕವಾಗುವಂಥ ಗೃಹಕೃತ್ಯಗಳನ್ನು ಹೇಗೆ ನಡೆಸಬೇಕು ಎಂಬ ವಿಚಾರದಲ್ಲಿ ಶಿಕ್ಷಣವೀಯಲಾಗುತ್ತದೆ. ಮನೆಯೊಡೆಯನ ಸಂಪಾದನೆ, ಜೀವನ ನಿರ್ವಹಣೆಯ ಖರ್ಚು – ಇವೆರಡನ್ನೂ ಸರಿದೂಗಿಸುವ ಜಾಣ್ಮೆ, ಸಂಪಾದಿಸುವ ಹಣದಲ್ಲಿ ಮಕ್ಕಳ ಭವಿಷ್ಯಕ್ಕೆ ಹಣವನ್ನು ಕೂಡಿಟ್ಟು ಚೊಕ್ಕ ಸಂಸಾರ ನಡೆಸುವ ರೀತಿ, ಗೃಹಕೃತ್ಯದ ಕೆಲಸಗಳನ್ನು ಸುಗಮ ಮಾಡಿಕೊಳ್ಳುವಿಕೆ, ಆಧುನಿಕ ಗೃಹೋಪಕರಣಗಳ ಬಳಕೆ – ಈ ವಿಚಾರಗಳು ಇಲ್ಲಿ ಬರುತ್ತವೆ.

ಆರೋಗ್ಯ : ಕುಟುಂಬದ ಸದಸ್ಯರ ಆರೋಗ್ಯವನ್ನು ಕಾಪಾಡಿಕೊಂಡು ಬರುವ ವಿಚಾರದಲ್ಲಿ ಗೃಹನೈರ್ಮಲ್ಯ, ದೇಹಾರೋಗ್ಯ, ರೋಗಬರದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು, ದೊರೆಯುವ ಉಚಿತ ವೈದ್ಯಕೀಯ ಸೇವೆಯನ್ನು ಹಿಂಜರಿಯದೆ ಪಡೆದುಕೊಳ್ಳುವುದು – ಮುಂತಾದವನ್ನು ಇಲ್ಲಿ ತಿಳಿಸಿಕೊಡಲಾಗುತ್ತದೆ.

ಚಿಕ್ಕ ಮಕ್ಕಳ ಬೆಳವಣಿಗೆ : ಮಕ್ಕಳ ದೈಹಿಕ ಹಾಗೂ ಏಳಿಗೆಗೆ ಯಾವ ಅಂಶಗಳು ಪೋಷಕವಾಗುತ್ತವೆ ಎಂಬುದನ್ನು ಇಲ್ಲಿ ಹೇಳಿಕೊಡಲಾಗುತ್ತದೆ. ಬೆಳೆವ ಮಕ್ಕಳಲ್ಲಿ ಮೂಡುವ ವಿಚಿತ್ರ ಸಂದೇಹಗಳು, ಅವಕ್ಕೆ ಒದಗಿಸಬೇಕಾದ ಪರಿಹಾರಗಳು ಇವೆಲ್ಲದರ ಬಗ್ಗೆಯೂ ವಿವರ ನೀಡಲಾಗುತ್ತದೆ. ಸಣ್ಣ ಮಕ್ಕಳ ಅಗತ್ಯಗಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಅವರಲ್ಲಿ ಆಗುವ ಬದಲಾವಣೆಗಳು, ಆಹಾರ, ಉಡುಗೆತೊಡಿಗೆಗಳು, ವಿದ್ಯಾಭ್ಯಾಸ, ಆರೋಗ್ಯ, ಆಟಪಾಟಗಳು – ಈ ವಿಷಯವಾಗಿ ತಿಳಿದುಕೊಳ್ಳಲು ಇಲ್ಲಿ ಅನುಕೂಲವಿದೆ.

ಮಾನವ ಸಂಬಂಧ : ಮನುಷ್ಯ ಸಂಘಜೀವಿಯಾದ ಕಾರಣ ತನ್ನ ಕಷ್ಟಸುಖಗಳನ್ನು ತನ್ನ ಮಿತ್ರರೊಡನೆ ಹೇಳಿಕೊಂಡು ಮನಸ್ಸಿನ ದುಗುಡವನ್ನು ಲಘು ಮಾಡಿಕೊಳ್ಳ ಬಯಸುತ್ತಾನೆ. ಆದ್ದರಿಂದ ಪರಿಸ್ಥಿತಿಗೆ ತಕ್ಕಂತೆ ಅವನಲ್ಲಿ ಆಗುವ ಮನೋವೃತ್ತೀಯ ಬದಲಾವಣೆಗಳನ್ನು ಗಮನಿಸಿ, ಅವಕ್ಕೆ ಸೂಕ್ತ ಅಗತ್ಯತೆಗಳನ್ನು ಒದಗಿಸಿ ಅವನ ಚಿತ್ತ ಧೃತಿಗೆಡದಂತೆ ನೋಡಿಕೊಳ್ಳುವುದು ಗೃಹಿಣಿಯ ಕರ್ತವ್ಯವಾಗುತ್ತದೆ. ನಾಲ್ಕು ಜನ ಯಾವ ರೀತಿ ಸಮಾಜದಲ್ಲಿ ಬಾಳ್ವೆ ನಡೆಸುತ್ತಿದ್ದಾರೆ ಎಂಬುದನ್ನು ಮನಗಂಡು, ಸಮಾಜದ ಕಟ್ಟುಪಾಡುಗಳಿಗೆ ಒಳಗಾಗಿ, ಕುಟುಂಬವನ್ನು ಯಾವ ರೀತಿ ಸಾಗಿಸಬೇಕು ಎಂಬುದನ್ನು ಈ ವಿಭಾಗದಲ್ಲಿ ತಿಳಿಸಲಾಗುತ್ತದೆ. ಮಾನವ–ಮಾನವ ಸಂಬಂಧದ ತಾತ್ತ್ವಿಕ ನಿರೂಪಣೆಯನ್ನು ಇಲ್ಲಿ ವಿಶದಪಡಿಸಲಾಗುತ್ತದೆ. ಜೀವನಸಾಮರಸ್ಯ ಮತ್ತು ಏಕತೆಯ ಬಗ್ಗೆಯೂ ಅರಿವು ಮೂಡಿಸಲಾಗುತ್ತದೆ.

ಭಾರತದಲ್ಲಿ ಇತ್ತೀಚೆಗೆ ಬಾಲವಾಡಿಗಳಲ್ಲೂ ಶಿಶುವಿಹಾರಗಳಲ್ಲೂ ಕಿಂಡರ್ ಗಾರ್ಟನ್ ಶಾಲೆಗಳಲ್ಲೂ ಗೃಹವಿಜ್ಞಾನವನ್ನು ಮಕ್ಕಳಿಗೆ ಕಲಿಸಲಾಗುತ್ತಿದೆ. ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲೂ ಗೃಹವಿಜ್ಞಾನಕ್ಕೆ ಸಂಬಂಧಪಟ್ಟಂತೆ ಪಾಠ ಪ್ರವಚನಗಳು ನಡೆಯುತ್ತಿವೆ. ಗೃಹವಿಜ್ಞಾನವನ್ನು ಪ್ರತ್ಯೇಕ ಬೋಧನ ವಿಷಯವನ್ನಾಗಿ ಮಾಡಿದ ಕೀರ್ತಿ ಹಿಂದಿನ ಮದರಾಸು ರಾಜ್ಯಕ್ಕೆ ಸಲ್ಲುತ್ತದೆ. ಭಾರತ ಸರ್ಕಾರ 1956ರಲ್ಲಿ ಮೂರು ವರ್ಷಗಳ ಪಠ್ಯಕ್ರಮವನ್ನು ತಯಾರಿಸಿ ಅದರಲ್ಲಿ ಶಿಕ್ಷಣವನ್ನೀಯಲು ಮಾಡಿದ ಆದೇಶದಿಂದಾಗಿ ಬಹುತೇಕ ರಾಜ್ಯದ ಶಿಕ್ಷಣ ಇಲಾಖೆಗಳ ವತಿಯಲ್ಲಿ ಗೃಹವಿಜ್ಞಾನದ ಶಾಲೆಗಳನ್ನೂ ಕಾಲೇಜುಗಳನ್ನೂ ಈಗ ತೆರೆಯಲಾಗಿದೆ. ಗೃಹವಿಜ್ಞಾನದ ಜೊತೆಗೆ ಕಲೆ, ಸಮಾಜಶಾಸ್ತ್ರ ಮುಂತಾದ ಸಾಮಾನ್ಯ ವಿಷಯಗಳನ್ನೂ ಬೋಧಿಸಲಾಗುತ್ತದೆ. ಇಂಥದೊಂದು ಸಂಸ್ಥೆ ಕೊಯಮತ್ತೂರಿನ ಅವಿನಾಶ ಲಿಂಗಮ್ ಹೋಮ್ ಸೈನ್ಸ್ ಕಾಲೇಜು.

ಗೃಹವಿಜ್ಞಾನ ವಿಷಯದ ವ್ಯಾಸಂಗಕ್ರಮ ಆಯಾ ಕಾಲೇಜು ಮತ್ತು ವಿಶ್ವ ವಿದ್ಯಾಲಯದ ಇಚ್ಛೆಗೆ ತಕ್ಕಂತೆ ರೂಪುಗೊಂಡಿದೆ. ಕ್ರಮ ಬೇರೆಯಾದರೂ ಮುಖ್ಯವಾಗಿ ಮೂರು ವಿಭಾಗಗಳನ್ನು ಗಮನಿಸಬಹುದು: 1. ವಿಜ್ಞಾನ ವಿಷಯಗಳು, 2. ಲಲಿತ ವಿದ್ಯೆಗಳು, 3. ಕುಶಲಕಲೆಗಳು.

ಭಾರತದಲ್ಲಿ ಸದ್ಯಕ್ಕೆ ಉಪಾಧ್ಯಾಯ ತರಬೇತಿ ಕಾಲೇಜುಗಳಲ್ಲಿ, ಸ್ನಾತಕೋತ್ತರ ಮಟ್ಟದಲ್ಲಿ ಉಪಾಧ್ಯಾಯರ ಶಿಕ್ಷಣವನ್ನು ಕೊಡುವುದರ ಜೊತೆಗೆ ಗೃಹವಿಜ್ಞಾನದಲ್ಲಿ ಶಿಕ್ಷಣ ಕೊಟ್ಟು ಆ ವಿಭಾಗದಲ್ಲಿ ಪದವಿ ಪರೀಕ್ಷೆಯನ್ನು ಕಟ್ಟಲು ಅವಕಾಶ ಕಲ್ಪಿಸಲಾಗಿದೆ. ಇಂಥ ಶಿಕ್ಷಣವನ್ನು ಪಡೆದ ಉಪಾಧ್ಯಾಯರು ಪ್ರೌಢ ಶಾಲೆಗಳಲ್ಲಿ ಗೃಹವಿಜ್ಞಾನ ಪಾಠ ನಡೆಸಲು ಅರ್ಹರಾಗುತ್ತಾರೆ.

ಕೇವಲ ಪಟ್ಟಣ ಮತ್ತು ನಗರಗಳಲ್ಲಿ ಮಾತ್ರವಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲೂ ಗೃಹ ವಿಜ್ಞಾನ ಶಿಕ್ಷಣ ದೊರೆಯಲು ಭಾರತ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಭಾರತ ಮುಖ್ಯವಾಗಿ ಬೇಸಾಯಾಧರಿತ ದೇಶವಾದ್ದರಿಂದ ನಾಡಿನಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ವತಿಯಲ್ಲಿ ಗೃಹವಿಜ್ಞಾನ ತರಬೇತಿ ಕೇಂದ್ರಗಳು ಸ್ಥಾಪನೆಗೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಭಾರತದ ಬಹುಪಾಲು ವಿಶ್ವವಿದ್ಯಾನಿಲಯಗಳಲ್ಲಿ ಗೃಹವಿಜ್ಞಾನ ಅಧ್ಯಯನ ವಿಭಾಗಗಳನ್ನು ತೆರೆಯಲಾಗಿದೆ. ಗೃಹವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನ, ಬೋಧನೆ, ಸಂಶೋಧನೆಗಳು ನಡೆಯುತ್ತಿವೆ. ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಪದವಿಗಳನ್ನು ನೀಡಲಾಗುತ್ತಿದೆ.

ಭಾರತದ ಗೃಹವಿಜ್ಞಾನ ಮಂಡಲಿ : 1951ರ ಆಗಸ್ಟ್ ತಿಂಗಳಲ್ಲಿ ಗೃಹವಿಜ್ಞಾನ ಉಪಾಧ್ಯಾಯಿನಿಯರ ಸಮ್ಮೇಳನವೊಂದನ್ನು ಬರೋಡ ವಿಶ್ವವಿದ್ಯಾಲಯ ನಡೆಸಿತು. ಶ್ರೀಮತಿ ಫ್ಲೆಮ್ಮೀ ಕಿಚಲ್ ಮತ್ತು ಶ್ರೀಮತಿ ಮೆಹತಾ (ಆಗಿನ ಬರೋಡ ವಿಶ್ವವಿದ್ಯಾಲಯದ ಕುಲಪತಿಗಳು) ಇಬ್ಬರೂ ಮುತುವರ್ಜಿ ವಹಿಸಿ ಅಖಿಲ ಭಾರತ ವ್ಯಾಪ್ತಿಯ ಗೃಹವಿಜ್ಞಾನ ಮಂಡಲಿಯ ಸ್ಥಾಪನೆಗೆ ಅಸ್ತಿಭಾರ ಹಾಕಿದರು.

ಮೊದಲನೆಯ ಅಖಿಲಭಾರತ ಗೃಹವಿಜ್ಞಾನ ಸಮ್ಮೇಳನ 1952ರ ಸೆಪ್ಟೆಂಬರ್ ತಿಂಗಳಿನಲ್ಲಿ ಮದ್ರಾಸಿನಲ್ಲಿ ನಡೆಯಿತು. ನೂರ ಐವತ್ತು ವಿದ್ಯಾರ್ಥಿನಿಯರು, ಉಪಾಧ್ಯಾಯಿನಿಯರು, ವಿಸ್ತರಣಾ ಕೆಲಸಗಾರರು, ಗೃಹವಿಜ್ಞಾನದಲ್ಲಿ ಆಸಕ್ತಿ ಇರುವ ಇತರ ಕೆಲವರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಗೃಹವಿಜ್ಞಾನ ವಿಷಯವನ್ನು ಮುಂದುವರಿಸಲು ಮತ್ತು ವಿಕಾಸಗೊಳಿಸಲು ಅನುಕೂಲವಾಗುವಂಥ ಕೆಲವು ಸೂತ್ರಗಳನ್ನು ಇಲ್ಲಿ ರಚಿಸಲಾಯಿತು.

1954ರ ಸೆಪ್ಟೆಂಬರ್ ತಿಂಗಳಿನಲ್ಲಿ ದೆಹಲಿಯ ಲೇಡಿ ಇರ್ವಿನ್ ಕಾಲೇಜಿನಲ್ಲಿ ಎರಡನೆಯ ಸಮ್ಮೇಳನ ನಡೆಯಿತು. ಈ ಸಮ್ಮೇಳನದ ಹೊತ್ತಿಗೆ ಅಖಿಲಭಾರತ ಗೃಹವಿಜ್ಞಾನ ಸಂಸ್ಥೆ ನೋಂದಣಿಯಾದ ಸಂಸ್ಥೆಯಾಗಿ ರೂಪುಗೊಂಡಿದ್ದೆ ಅಲ್ಲದೆ ಅಂತಾರಾಷ್ಟ್ರೀಯ ಗೃಹವಿಜ್ಞಾನ ಸಂಯುಕ್ತ ಸಂಘದ ಅಂಗ ಸಂಸ್ಥೆಯಾಗಿ ದಾಖಲಾಗಿತ್ತು.

ಅಲಹಬಾದಿನಲ್ಲಿ ಸೇರಿದ (1956) ಮೂರನೆಯ ಸಮ್ಮೇಳನದಲ್ಲಿ ಮೊದಲನೆಯ ನಿರ್ಣಯವಾಗಿ ಪ್ರಯೋಗಶಾಲೆಗಳ ವಿನ್ಯಾಸ ಹಾಗೂ ಪಠ್ಯಕ್ರಮದ ಸಿದ್ಧತೆಗಳ ಬಗ್ಗೆ ಸಲಹೆ ನೀಡಲು ವಿವಿಧ ರಾಜ್ಯಗಳಿಗೆ ಸೇರಿದ ಹತ್ತು ಜನ ಗೃಹವಿಜ್ಞಾನ ಪರಿಣತರ ಒಂದು ಸಮಿತಿಯನ್ನು ರಚಿಸಲಾಯಿತು.

ಇದೇ ಸಮಯದಲ್ಲಿ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಜೊತೆಗೆ ಭಾರತ ಗೃಹವಿಜ್ಞಾನ ಮಂಡಲಿಯ ಸಂಬಂಧ ಇನ್ನೂ ಹೆಚ್ಚಿತು. ಇದರಿಂದಾಗಿ ಟೆನಿಸಿ ವಿಶ್ವವಿದ್ಯಾಲಯ ಆರು ಜನ ಗೃಹವಿಜ್ಞಾನ ಪರಿಣತರನ್ನು ಭಾರತದ ಆರು ಕಾಲೇಜುಗಳಿಗೆ ಕಳುಹಿಸಿತಲ್ಲದೆ ಸಹಸ್ರರೂಪಾಯಿ ಬೆಲೆಬಾಳುವ ಪುಸ್ತಕಗಳು, ಪ್ರಾಯೋಗಿಕ ಶಾಲಾಸಾಮಗ್ರಿಗಳು ಮುಂತಾದವನ್ನು ಉಚಿತವಾಗಿ ಕೊಟ್ಟಿತು. ಈ ಆರು ಕಾಲೇಜುಗಳಿಂದ ಹಲವು ಉಪಾಧ್ಯಾಯಿನಿಯರು ತಮ್ಮ ತಮ್ಮ ಐಚ್ಛಿಕ ವಿಷಯಗಳಲ್ಲಿ ಹೆಚ್ಚಿನ ತರಬೇತಿ ಪಡೆಯಲು ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಹೋದರು.

ಫೋರ್ಡ್ ಫೌಂಡೇಷನ್ನಿನ ಕೊಡುಗೆ : ಫೋರ್ಡ್ ಪ್ರತಿಷ್ಠಾನದ ಸಹಾಯ ದೊರೆಯಿತಾಗಿ ಭಾರತದಲ್ಲಿ ಸ್ನಾತಕೋತ್ತರ ಪದವಿಯ ಶಿಕ್ಷಣ ಕೊಡಲು ಮತ್ತು ಸಂಶೋಧನೆಯಲ್ಲಿ ಮಾರ್ಗದರ್ಶನ ನೀಡಲು ಬರೋಡ ವಿಶ್ವವಿದ್ಯಾಲಯವನ್ನು ಆರಿಸಿಕೊಳ್ಳಲಾಯಿತು. ಅಯೋವ ಸ್ಟೇಟ್ ಕಾಲೇಜಿನಿಂದ ಪ್ರಾಧ್ಯಾಪಕರುಗಳನ್ನು ಇಲ್ಲಿಗೆ ಬರಮಾಡಿಕೊಳ್ಳುವುದಲ್ಲದೇ ಭಾರತದ ವಿವಿಧ ವಿಶ್ವವಿದ್ಯಾಲಯಗಳಿಂದ ಪದವಿ ಪಡೆದ ವಿದ್ಯಾರ್ಥಿನಿಯರಿಗೆ ಸ್ನಾತಕೋತ್ತರ ತರಗತಿಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ವಿದ್ಯಾರ್ಥಿವೇತನವನ್ನೂ ಮತ್ತು ಸಂಶೋಧನ ಸಹಾಯಧನವನ್ನೂ ಕೊಡಬೇಕೆಂದು ನಿರ್ಣಯಿಸಲಾಯಿತು.

ಮೊದಲಿಗೆ ಕರ್ನಾಟಕಕ್ಕೆ ಸೇರಿದ ಆರು ಕಾಲೇಜುಗಳಲ್ಲಿ ಪ್ರಿ–ಯೂನಿವರ್ಸಿಟಿ, ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಗೃಹವಿಜ್ಞಾನವನ್ನು ಬೋಧಿಸಲಾಗುತಿತ್ತು. ಈಗ ಅನೇಕ ಕಾಲೇಜುಗಳಲ್ಲಿ ಗೃಹವಿಜ್ಞಾನವನ್ನು ಬೋಧಿಸಲಾಗುತ್ತಿದೆ.

1970ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೃಹವಿಜ್ಞಾನದಲ್ಲಿ (ಆಹಾರ ಮತ್ತು ಪೌಷ್ಠಿಕತೆ) ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಿತು. (ಐ.ಕೆ.)

**ಗೃಹಾಲೇಖ್ಯ :** ಮಾನವನ ಜೀವನದ ವ್ಯವಹಾರಗಳಿಗೆ ಬೇಕಾಗುವ ಅನೇಕ ವಿಧವಾದ ಗೃಹಗಳ ರಚನಕ್ರಮ (ಹೌಸ್ ಡಿಸೈನ್). ವೈವಿಧ್ಯಯುತವಾದ ಈಗಿನ ವ್ಯವಹಾರಗಳಿಗೋಸ್ಕರ ಬಳಸಲಾಗುತ್ತಿರುವ ಗೃಹಗಳನ್ನು ವಿಶಾಲವಾಗಿ ವಾಸಗೃಹಗಳು, ಸಾರ್ವಜನಿಕ ಗೃಹಗಳು, ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಗೃಹಗಳು ಮತ್ತು ವಿಶೇಷ ರೀತಿಯ ಗೃಹಗಳು ಎಂಬುದಾಗಿ ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ವಸತಿಗೃಹಗಳು ಜನರ ವಾಸಕ್ಕೋಸ್ಕರ ನಿರ್ಮಿತವಾದವು. ಖಾಸಗಿ ವಾಸದ ಮನೆಗಳು, ಊಟ ವಸತಿಗೃಹಗಳು, ಸರ್ಕಾರಿ ಬಿಡದಿಗಳು ಮುಂತಾದವೆಲ್ಲವೂ ವಾಸಗೃಹಗಳ ಪಂಗಡಕ್ಕೆ ಸೇರುವುವು. ಕೋರ್ಟು ಕಚೇರಿಗಳು, ವಿದ್ಯಾಲಯಗಳು, ಸಾರಿಗೆ ನಿಲ್ದಾಣಗಳು, ಸಾರ್ವಜನಿಕ ಪುಸ್ತಕ ಭಂಡಾರಗಳು, ಆಸ್ಪತ್ರೆಗಳು, ಮನರಂಜನಗೃಹಗಳು, ಉಪಾಹಾರ ಮಂದಿರಗಳು, ಕ್ರೀಡಾಗೃಹಗಳು ಮುಂತಾದ ಅನೇಕ ರೀತಿಯ ಲೋಕೋಪಯೋಗಿ ಗೃಹಗಳು ಎರಡನೆಯ ಬಗೆಯವು. ಕಾರ್ಖಾನೆಗಳು, ವಾಣಿಜ್ಯ ಸರಕುಗಳ ಉತ್ಪತ್ತಿ ಕಾರ್ಯಾಗಾರಗಳು, ವ್ಯಾಪಾರೋದ್ಯಮ ಸೌಧಗಳು ಮುಂತಾದವು ಮೂರನೆಯ ಪಂಗಡಕ್ಕೆ ಸೇರುವುವು. ನಾಲ್ಕನೆಯವು ದೇವಗೃಹಗಳು, ಅರಮನೆಗಳು, ಮತೀಯ ಸೌಧಗಳು, ಸ್ಮಾರಕ ಗೃಹಗಳು ಇತ್ಯಾದಿ. ಈ ಎಲ್ಲ ರೀತಿಯ ಗೃಹಗಳನ್ನು ಆಲೇಖ್ಯದ ದೃಷ್ಟಿಯಿಂದ ಏಳು ಭಾಗಗಳಾಗಿ ವಿಂಗಡಿಸಬಹುದು : 1. ನಿವೇಶನ 2. ಪಾಯ, 3. ನಕಾಶೆ 4. ಮೇಲ್ಕಟ್ಟಡ, 5. ಛಾವಣಿ 6. ದ್ವಾರಗಳು, 7. ವಾಸ್ತುಶಿಲ್ಪ. ಈ ಲೇಖನದಲ್ಲಿ ವಾಸಗೃಹದ ಆಲೇಖ್ಯದ ವಿಶ್ಲೇಷಣೆ ಮಾತ್ರ ಕೊಟ್ಟಿದೆ. ಉಳಿದ ಗೃಹಪ್ರರೂಪಗಳ ವಿವರಗಳಿಗೆ **ನೋಡಿ-ಕಟ್ಟಡ.**

**1. ನಿವೇಶನ :** ವಾಸಗೃಹಗಳ ನಿವೇಶನ ಜನ ಮತ್ತು ವಾಹನಗಳ ಸಂದಣಿಯಿಂದ ದೂರವಾಗಿದ್ದು ದೂಳು, ಅತಿಶಬ್ದ ಮತ್ತು ಇತರ ವಿಧವಾದ ಗಲಭೆಗಳಿಗೆ ಅವಕಾಶವಿಲ್ಲದೆ ಇರುವ ಸ್ಥಳದಲ್ಲಿ ಇರಬೇಕು. ಅದು ಎತ್ತರವಾದ ಪ್ರದೇಶದಲ್ಲಿದ್ದು ಯಥೇಚ್ಛವಾದ ಗಾಳಿಬೆಳಕು




ಗೃಹವೊಂದರ ತಳವಿನ್ಯಾಸ: 1. ಮುಂಬಾಗಿಲು, 2. ಹಜಾರ, 3. ಕೋಣೆ, 4. ನಡುಮನೆ, 5. ಒಳಶೌಚಗೃಹ, 6. ಕೋಣೆ, 7. ಮೊಗಸಾಲೆ, 8. ಅಡುಗೆಮನೆ, 9. ಉಗ್ರಾಣ, 10. ಬಚ್ಚಲು, 11. ಕಕ್ಕಸು, 12. ಹಿಂಬಾಗಿಲು

ಗಳಿಗೆ ಪೂರ್ಣ ಅವಕಾಶವಿದ್ದರೆ ಉತ್ತಮ. ಕಾಡು, ಜೌಗು ಮತ್ತು ಗಣಿ ಪ್ರದೇಶಗಳಿಂದ ದೂರವಾಗಿರಬೇಕು. ಈ ನಿವೇಶನದಿಂದ ಮಳೆಯ ನೀರು, ಬಚ್ಚಲ ನೀರು ಮತ್ತು ಒಳಚರಂಡಿ ನೀರು ನಿರುಪಾಧಿಕವಾಗಿ ಹರಿಯುವುದಕ್ಕೆ ಅನುಕೂಲತೆ ಇರಬೇಕು. ಅತಿವೃಷ್ಟಿ, ಬಿರುಗಾಳಿ, ಪ್ರವಾಹ ಮುಂತಾದ ಅತಿರೇಕಗಳಿಂದ ಈ ನಿವೇಶನ ಪೀಡಿತವಾಗಿರಬಾರದು. ಅಲ್ಲದೆ ಗೃಹದ ಸುತ್ತಲಿರುವ ನೆಲ ಗಿಡಮರಗಳ ಬೆಳವಣಿಗೆಗೆ ಯೋಗ್ಯವಾಗಿರಬೇಕು.

**2. ಅಡಿಪಾಯ :** ಸಾಧಾರಣವಾದ ವಸತಿಗೃಹಗಳ ಅಡಿಪಾಯದ ವಿನ್ಯಾಸ ಸಾಮಾನ್ಯವಾದ ಮಣ್ಣಿನಲ್ಲಿ ಅಷ್ಟೇನೂ ಕ್ಲಿಷ್ಟಕರವಾಗಿರುವುದಿಲ್ಲ. ಇಂಥ ಗೃಹಗಳಿಗೆ ಕಲ್ಲು ಅಥವಾ ಕಾಂಕ್ರೀಟ್ ಬಳಸಿ ಆಳವಿಲ್ಲದ ಹರಡು ಅಡಿಪಾಯ ಉಪಯೋಗಿಸಬಹುದು. ಭರ್ತಿ ಹಾಕಿದ ಮಣ್ಣು ಅಥವಾ ಬಲಹೀನವಾದ ಮಣ್ಣು ಸಿಕ್ಕಿದ ಎಡೆಗಳಲ್ಲಿ ಮ್ಯಾಟ್ ಅಥವಾ ರ್‍ಯಾಫ್ಟ್ ಎಂಬ ತೆಪ್ಪದ ಅಡಿಪಾಯವನ್ನು ಬಳಸಬೇಕಾಗುತ್ತದೆ. ಸಾಮಾನ್ಯವಾಗಿ 5 ಅಥವಾ 7 ವರಸೆಗಳಲ್ಲಿ ಕಲ್ಲುಕಟ್ಟಿ ಅಡಿಪಾಯ ಹಾಕಲಾಗುವುದು.

**3. ನಕಾಶೆ :** ವಾಸಿಸುವ ಜನಗಳ ಸಂಖ್ಯೆ, ದರ್ಜೆ, ಬೇಕಾಗುವ ಅನುಕೂಲತೆ ಮುಂತಾದವನ್ನು ವಸತಿಗೃಹಗಳ ನಕಾಶೆ ಅನುಸರಿಸುತ್ತದೆ. ಅತಿ ದೊಡ್ಡ ಕೊಠಡಿಗಳು, ಮೊಗಸಾಲೆಗಳು ಮುಂತಾದವು ಬೇಕಾಗುವುದಿಲ್ಲ. ಸಂಸಾರಕ್ಕೆ ಅವಶ್ಯಕವಾದ ಮಲಗುವ ಕೋಣೆಗಳು, ಅಡುಗೆಮನೆ, ಶೌಚಗೃಹ, ಹಜಾರ ಇವು ವಾಸಗೃಹಗಳ ನಕಾಶೆಯಲ್ಲಿ ಸಾಮಾನ್ಯವಾಗಿ ಇರಬೇಕಾದ ಅಂಶಗಳು.



ತಳವಿನ್ಯಾಸಾಧಾರಿತ ಗೃಹದ ಮುಂಭಾಗ

**4. ಮೇಲ್ಕಟ್ಟಡ :** ವಾಸಗೃಹಗಳ ಮೇಲ್ಕಟ್ಟಡ ಸಾಮಾನ್ಯವಾಗಿ ಒಂದು ಅಥವಾ ಎರಡು ಅಂತಸ್ತುಗಳಿಗಿಂತ ಹೆಚ್ಚಾಗಿರುವುದಿಲ್ಲ. ಈಗ ಭಾರಿ ನಗರ ಪ್ರದೇಶಗಳಲ್ಲಿ ಅನೇಕ ಅಂಕಣಗಳುಳ್ಳ ಮತ್ತು ಪ್ರತಿ ಅಂತಸ್ತಿನಲ್ಲಿಯೂ ಸಂಸಾರಕ್ಕೆ ಯೋಗ್ಯವಾದ ಅನೇಕ ಉಪಗೃಹಗಳಿರುವ ಬೃಹತ್ ವಾಸಗೃಹಗಳು ರಚಿತವಾಗುತ್ತಿವೆ (ಫ್ಲ್ಯಾಟ್ಸ್). ಸಾಮಾನ್ಯ ಗೃಹಗಳಿಗೆ ಇಟ್ಟಿಗೆಯನ್ನು ಬಳಸುವುದು ವಾಡಿಕೆ. ಆದರೆ ಈ ವಠಾರಗಳಿಗೆ ಉಕ್ಕು ಪ್ರಬಲಿತ ಕಾಂಕ್ರೀಟುಗಳಿಂದ ಆದ ಕಂಬಗಳು ಮತ್ತು ಅಡ್ಡ ತೊಲೆಗಳನ್ನುಳ್ಳ ಹಂದರವನ್ನು ನಿರ್ಮಿಸಿ ತೆಳುವಾದ ಗೋಡೆಗಳನ್ನು ನಿರ್ಮಿಸುತ್ತಾರೆ. ಅಡ್ಡಗೋಡೆಗಳಿಗೆ ಮಣ್ಣು, ಕಲ್ಲು ಅಥವಾ ಮರವನ್ನು ಉಪಯೋಗಿಸುವ ವಿಧಾನ ಕ್ಷಯಿಸಿ ಈಗ ಕೇವಲ ಹಳ್ಳಿಗಳಲ್ಲಿ ಮಾತ್ರ ಇವು ಕಂಡುಬರುತ್ತವೆ.

**5. ಮೇಲ್ಛಾವಣಿ :** ವಾಸಗೃಹಗಳ ಛಾವಣಿಯ ರೀತಿ ಆಯಾ ಕಟ್ಟಡಗಳಲ್ಲಿನ ಅಂತಸ್ತುಗಳ ಸಂಖ್ಯೆ, ಪ್ರದೇಶದ ಹವೆ, ಕಟ್ಟಡದ ಉಪಯೋಗ ಮತ್ತು ಅದು ಇರುವ ಭೂವಲಯ ಇವನ್ನು ಅವಲಂಬಿಸಿರುತ್ತದೆ. ಛಾವಣಿಗಳೆಲ್ಲವೂ ಬಹು ಸಾಮಾನ್ಯವಾಗಿ

ತಳವಿನ್ಯಾಸ ಮತ್ತು ಆಲೇಖ್ಯವನ್ನನುಸರಿಸಿ ನಿರ್ಮಿಸಿದ ಒಂದು ಗೃಹ

ಚಪ್ಪಟೆಯಾಗಿರುತ್ತವೆ. ಮಳೆ ಅಧಿಕವಾಗಿ ಬೀಳುವ ಅಥವಾ ಮಂಜು ಬೀಳುವ ಪ್ರದೇಶಗಳಲ್ಲಿ ಇಳಿಜಾರು ಛಾವಣಿಗಳನ್ನು ಉಪಯೋಗಿಸಿ ನೀರು ಅಥವಾ ಮಂಜು ಸುಲಭವಾಗಿಯೂ ಜಾಗ್ರತೆಯಾಗಿಯೂ ಹರಿದುಹೋಗುವಂತೆ ಏರ್ಪಡಿಸಬೇಕಾಗುತ್ತದೆ. ಅನೇಕ ಅಂತಸ್ತುಗಳಿರುವ ವಾಸಗೃಹದ ಅತ್ಯಂತ ಮೇಲ್ಮಟ್ಟದ ಛಾವಣಿಯನ್ನು ಸದರಿ ಕಟ್ಟಡದ ಜನರ ದೈನಂದಿನ ಉಪಯೋಗ, ಅಂದರೆ ಬಟ್ಟೆ ಒಣಗಿಸುವುದು, ಕ್ರೀಡೆ ಅಥವಾ ಪಾರ್ಕು ಮುಂತಾದ ಸೌಲಭ್ಯಗಳಿಗೆ ಅನುಕೂಲವಾಗುವಂತೆ ರಚಿಸಬೇಕಾಗುತ್ತದೆ.

**6. ದ್ವಾರಗಳು :** ವಾಸಗೃಹಗಳ ದ್ವಾರಗಳು ಗಾಳಿ ಬೆಳಕು ಮತ್ತು ಜನರು ಸಾಮಾನ್ಯವಾಗಿ ಬಳಸುವ ಗೃಹಾಲಂಕರಣ ವಸ್ತುಗಳ ಪ್ರವೇಶಕ್ಕೆ ಅಡ್ಡಿಯಿಲ್ಲದಷ್ಟು ವಿಶಾಲವಾಗಿದ್ದು, ಕಳ್ಳಕಾಕರ ಪ್ರಯತ್ನಗಳನ್ನು ಎದುರಿಸಿ ನಿಲ್ಲುವಷ್ಟು ಬಲಯುತವಾಗಿರ ಬೇಕಾಗುತ್ತದೆ. ಬಿರುಗಾಳಿ, ಮಳೆ, ಹಿಮ ಮುಂತಾದವುಗಳ ಉಪದ್ರವವಿರುವೆಡೆಗಳಲ್ಲಿ ದ್ವಾರಗಳ ಗಾತ್ರ, ನೆಲ ಮತ್ತು ಸಾಮಗ್ರಿಗಳು ಈ ಉಪದ್ರವಗಳ ಬಾಧಕವಿಲ್ಲದಂತೆ ಇರಬೇಕು. ಗೃಹಗಳ ಸಂಯೋಜನೆ ಮತ್ತು ಅಂದದ ದೃಷ್ಟಿಯಿಂದ ದ್ವಾರಗಳ ಗಾತ್ರ, ಸಂಖ್ಯೆ ಮತ್ತು ಆಕಾರಗಳು ಯೋಗ್ಯವಾಗಿ ಇರಬೇಕು.

**7. ವಾಸ್ತುಶಿಲ್ಪ :** ವಾಸಗೃಹಗಳ ವಾಸ್ತುಶಿಲ್ಪ ನಿರ್ದಿಷ್ಟವಾಗಿರುವುದಿಲ್ಲ. ಹಿಂದೆ ಖಾಸಗಿ ಗೃಹಗಳು, ಮಾಲೀಕರ ದರ್ಜೆ ಮತ್ತು ಅಭೀಷ್ಟಗಳಿಗೆ ತಕ್ಕಂತೆ ಬಲು ಹೆಚ್ಚಿನ ಅಲಂಕಾರ, ಕೆತ್ತನೆ ಕೆಲಸಗಳು, ಬಣ್ಣಗಳಿಂದ ಕೂಡಿರುತ್ತಿದ್ದುವು. ಈಚೆಗೆ ವಾಸ್ತುಶಿಲ್ಪದ ರೀತಿಯೇ ಬದಲಾವಣೆಯಾಗಿ ಸರಳವಾದ ಸಂಯೋಜನೆ, ರೇಖಾಲಂಕಾರ ಮತ್ತು ವರ್ಣವಿನ್ಯಾಸಗಳಿಗೆ ಹೆಚ್ಚು ಗಮನ ಕೊಡಲಾಗುತ್ತಿದೆ. (ಕೆ.ಎಸ್.ಕೆ.)

**ಗೃಹವಾಸ್ತು (ಹಸ್ತಪ್ರತಿಗಳಲ್ಲಿ) :** ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಾಸ್ತುಶಾಸ್ತ್ರದ ಹಸ್ತಪ್ರತಿಗಳು ಕಂಡುಬಂದಿದ್ದು ಕನ್ನಡದಲ್ಲಿ ಅದೊಂದು ಪ್ರತ್ಯೇಕ ಶಾಸ್ತ್ರವಾಗಿ ಬೆಳೆದು ಬಂದಿರುವುದಕ್ಕೆ ಸಾಕ್ಷಿಯಾಗಿದೆ. ಚಾವುಂಡರಾಯನ (ಪ್ರಶ.ಸು. 1150) 'ಲೋಕೋಪಕಾರ' ಎಂಬ ಗ್ರಂಥದ ಹಸ್ತಪ್ರತಿಗಳಲ್ಲಿ ವಾಸ್ತುಶಾಸ್ತ್ರಕ್ಕೂ ಸ್ಥಾನ ಕಲ್ಪಿಸಲಾಗಿದೆ. ಇದರಲ್ಲಿ ನಿವೇಶನದ ಆಯ್ಕೆ, ಮನೆಯ ಉದ್ದಗಲಗಳು, ನಕ್ಷತ್ರಗಳ ಪ್ರಭಾವ, ಉಪಯೋಗಿಸಬಾರದಂತಹ ಮರಮುಟ್ಟುಗಳು ಮುಂತಾದ ವಿಚಾರಗಳನ್ನು ಹೇಳಲಾಗಿದೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕುಮಾರವಾಸ್ತು ಸಟೀಕು, ಗೃಹವಾಸ್ತು ಪುಸ್ತಕ, ಜಲವಾಸ್ತು, ಜಲಶಿಲ್ಪ, ಧನವಾಸ್ತುನಿರ್ಣಯ, ವಾಸ್ತುಪ್ರಕರಣ ಟೀಕು, ವಾಸ್ತುಶಾಸ್ತ್ರ, ವಾಸ್ತುಶಾಸ್ತ್ರ ಸಟೀಕು, ವಾಸ್ತುಪ್ರಕರಣ ಟೀಕು ಎಂಬ ಶೀರ್ಷಿಕೆಯ ಹಸ್ತಪ್ರತಿಗಳಿವೆ. ವಾಸ್ತುಶಾಸ್ತ್ರ ಪ್ರಕಾರದಂತೆ ನಿರ್ಮಿಸಿದ ಮನೆಗಳಿಂದ ವಾಸಿಸುವವರಿಗೆ ಸುಖ ಸಂತೋಷಗಳು ಉಂಟಾಗುತ್ತವೆ ಎಂಬ ಆಶಯವನ್ನು ಈ ಹಸ್ತಪ್ರತಿಗಳು ವ್ಯಕ್ತಪಡಿಸುತ್ತವೆ.

ಕನ್ನಡದಲ್ಲಿ ಸನತ್ಕುಮಾರ ವಾಸ್ತುಶಾಸ್ತ್ರ ಹಸ್ತಪ್ರತಿಗಳು ಜನಪ್ರಿಯವಾಗಿವೆ. ಇದರಲ್ಲಿ ಗೃಹನಿರ್ಮಾಣ ಮಾಡುವಾಗ ವಾಸ್ತುಪುರುಷನ ಯಾವ ಭಾಗದಲ್ಲಿ ಕಂಬ ನಿಲ್ಲಿಸ ಬೇಕೆಂಬುದನ್ನು ವಿವರಿಸಲಾಗಿದೆ. ಈ ರೀತಿ ಮಾನವ ದೇಹದ ಸದ್ಬಳಕೆಯಾಗಬೇಕೆಂಬು ದನ್ನು ಸೂಚಿಸಲಾಗಿದೆ.

ಆಯ ನೋಡಿ ಮನೆ ಕಟ್ಟಬೇಕೆಂಬುದು ಸನತ್ಕುಮಾರ ವಾಸ್ತುಶಾಸ್ತ್ರ ಹಸ್ತಪ್ರತಿಗಳ ಅಭಿಮತ. ಈ ಪ್ರಕಾರ ಆಯದ ಮಾಪನ ಹೀಗಿದೆ – ಮನೆಯ ಒಡೆಯನ ಹಸ್ತಪ್ರಮಾಣದಲ್ಲಿ ಎಷ್ಟು ಅಗಲ ಎಷ್ಟು ಉದ್ದ ಬರುತ್ತದೆಯೋ ಆ ಪ್ರಮಾಣದಲ್ಲಿ ಅಳತೆ ತೆಗೆದುಕೊಂಡು ಗುಣಿಸಿದಾಗ ಬರುವ ಲಬ್ಧವೇ 'ಪಾದ'. ಈ ಪಾದವನ್ನು 8ರಿಂದ ಗುಣಿಸಿ 12ರಿಂದ ಭಾಗಿಸಿದರೆ ಉಳಿಯುವ ಶೇಷವೇ ಆಯ.

ಮನೆಗೆ ಮರ ಕಡಿಯಬೇಕಾದರೆ ಮೊದಲು ಮರಕ್ಕೆ ಹಾಲು ಜೇನುತುಪ್ಪ ಎರೆದು ಸಕಲ ದೇವತೆಗಳನ್ನು ನೆನೆದು ಮರದ ಕ್ಷಮೆ ಕೇಳಬೇಕು, ಮರ ಕತ್ತರಿಸಲು ಬಳಸುವ ಕೊಡಲಿ ಮತ್ತು ಬಾಚಿಗೆ ನೀರು ಜೇನುತುಪ್ಪ ಲೇಪಿಸಬೇಕು, ಇದರಿಂದ ಮರ ಹದನಾಗಿ ಕತ್ತರಿಸಲು ಬರುತ್ತದೆ ಹಾಗೂ ಮರ ಹುಳಿಯುವುದಿಲ್ಲ ಎಂದು ಸನತ್ಕುಮಾರ ವಾಸ್ತುಶಾಸ್ತ್ರದಲ್ಲಿ ವರ್ಣಿಸಿದೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ 'ವಾಸ್ತುಶಾಸ್ತ್ರದ ಪುಸ್ತಕ' ಎಂಬ ಹಸ್ತಪ್ರತಿಯಲ್ಲಿ ಸೂರ್ಯ ಯಾವ ರಾಶಿಯಲ್ಲಿದ್ದಾಗ ಮನೆ ಕಟ್ಟಬೇಕು, ಯಾವ ನಕ್ಷತ್ರದವರು ಯಾವ ಯಾವ ಮರಗಳನ್ನು ಕತ್ತರಿಸಬಾರದು, ಕತ್ತರಿಸಿದ ಮರ ಬೀಳುವ ಭಂಗಿ, ಹೇಗೆ ಬಿದ್ದರೆ ಅಂಥ ಮರದ ತುಂಡನ್ನು ಮನೆಗೆ ಬಳಸಬಾರದು ಎಂದು ಮರಮುಟ್ಟುಗಳ ಬಗೆಗೆ ವಿಚಾರ ಮಾಡಿದೆ. ದೇವಸ್ಥಾನ, ಕೆರೆಯ ತಡಿ, ಬಾವಿಯ ತಡಿ, ಸುಡುಗಾಡಿನಲ್ಲಿರುವ ಮರವನ್ನು ಕಡಿಯಬಾರದು. ಹಾಳು ಮನೆಯ ಮರ ಮತ್ತು ಒಬ್ಬರು ಕಡಿದುಬಿಟ್ಟ ಮರ ಬಳಸಬಾರದು ಎಂದೂ ಸೂಚಿಸಲಾಗಿದೆ. ಮರದ ಬಣ್ಣ ನೋಡಿ ಆ ಮರದಲ್ಲಿ ವಾಸಿಸಿದ್ದ ಪ್ರಾಣಿಗಳ ಹೆಸರು ಹೇಳುವ ನೈಪುಣ್ಯತೆ ಈ ಶಾಸ್ತ್ರಕಾರರಲ್ಲಿ ಕಂಡುಬರುತ್ತದೆ. ಮರ ಕೃಷ್ಣವರ್ಣ ಇದ್ದರೆ ಹಾವು, ವಿವರ್ಣವಾಗಿದ್ದರೆ ಚೇಳು ಮತ್ತು ಕಪ್ಪೆ, ಗೂಢವರ್ಣವಾಗಿದ್ದರೆ ಕಲ್ಲು ಇದ್ದುದನ್ನು ಭಾವಿಸಬಲ್ಲರು. ಇಂಥ ಮರಗಳು ಮನೆಗೆ ಯೋಗ್ಯವಲ್ಲ ಎಂಬ ಅಂಶ ಉಕ್ತವಾಗಿದೆ.

ಮನೆಯ ನಿವೇಶನ ಆಯ್ಕೆ ಮಾಡುವಾಗ ಹಾಲುಮರ ಇದ್ದ ಕಡೆ, ದೇವಾಲಯದ ಸಮೀಪ, ನೆರಳು ಬರುವ ಜಾಗ, ಜವುಳು ನೆಲ, ನೀರು ಹರಿವ ಸ್ಥಳ, ಶ್ಮಶಾನ, ಊರ ಹೆಬ್ಬಾಗಿಲು, ದನದ ಹಟ್ಟಿ, ಮರಳುನೆಲ, ಕೆಸರು ಹುಟ್ಟುವ ಎಡೆಗಳಲ್ಲಿ ಮನೆ ನಿರ್ಮಿಸಬಾರದೆಂಬುದು ಹೇಳಿದೆ. (ವೈ.ಸಿ.ಬಿ.)

**ಗೃಹ್ಯಸೂತ್ರಗಳು :** ಗೃಹ್ಯ ಮತ್ತು ವೇದೋಕ್ತ ಕರ್ಮಗಳನ್ನು ತಿಳಿಸುವ ಶಾಸ್ತ್ರಗ್ರಂಥಗಳು. ಇವು ಭಾರತೀಯ ಸಾಮಾಜಿಕ ಜೀವನರಚನೆಗೆ ತಳಹದಿಯಾಗಿವೆ. ಇವುಗಳ ಕಾಲವನ್ನು ನಿರ್ಣಯಿಸುವುದು ದುಸ್ಸಾಧ್ಯವಾಗಿದ್ದರೂ ಇವು ಸಂಹಿತೆ, ಬ್ರಾಹ್ಮಣ ಮತ್ತು ಶ್ರೌತಸೂತ್ರಗಳಿಗಿಂತ ಈಚಿನವೆಂದು ನಿರ್ಧರಿಸಲಾಗಿದೆ. ಇವುಗಳಿಗೆ ವೇದಗಳೇ ಆಧಾರವಾಗಿವೆ ಎನ್ನಬಹುದು. ಋಗ್ವೇದ ಕಾಲವನ್ನು ಪ್ರ.ಶ.ಪೂ. 2500 ಎಂದು ಇಟ್ಟುಕೊಂಡರೆ ಗೃಹ್ಯಸೂತ್ರಗಳ ಕಾಲವನ್ನು ಪ್ರ.ಶ.ಪೂ. ಸುಮಾರು 2000 ಎಂದು ನಿರ್ಣಯಿಸಬಹುದಾದರೂ ಎಲ್ಲ ಗೃಹ್ಯಸೂತ್ರಗಳೂ ಸಮಕಾಲೀನವಾದುವುಗಳೆಂದು ಭಾವಿಸಲಾಗುವುದಿಲ್ಲ.

ಇವುಗಳಲ್ಲಿ ಮುಖ್ಯವಾದುವು ಈ ರೀತಿ ಇವೆ : ಸಾಂಖ್ಯಾಯನ, ಆಶ್ವಲಾಯನ, ಸಾಂಖ್ಯಾನ್ಯ, ಕೌಶೀತಕಿ–ಇವು ಋಗ್ವೇದಕ್ಕೆ ಸೇರಿದುವು. ಗೋಭಿಲ, ಖಾದೀರ, ಜೈಮಿನಿ–ಇವು ಸಾಮವೇದಕ್ಕೆ ಸೇರಿದುವು. ಆಪಸ್ತಂಬ, ಹಿರಣ್ಯಕೇಶಿ, ಭಾರದ್ವಾಜ, ಬೌಧಾಯನ, ಮಾನವ, ಕಾಥಕ, ವೈಖಾನಸ–ಇವು ಕೃಷ್ಣ ಯಜುರ್ವೇದಕ್ಕೆ ಸೇರಿದುವು. ಕಾತ್ಯಾಯನ ಗೃಹ್ಯಸೂತ್ರ ಶುಕ್ಲ ಯಜುರ್ವೇದಕ್ಕೂ ಕೌಶಿಕ ಗೃಹ್ಯಸೂತ್ರ ಅಥರ್ವ ವೇದಕ್ಕೂ ಸೇರಿವೆ.

ಗೃಹ್ಯಸೂತ್ರಗಳಲ್ಲಿ ಸಾಮಾಜಿಕ ಪ್ರಗತಿಗೆ ಸಂಬಂಧಿಸಿರುವ ವಿಷಯಗಳ ಸವಿಸ್ತಾರ ನಿರೂಪಣೆ ಇದೆ. ಚತುರ್ವರ್ಣಗಳು, ವಿವಾಹ, ಸ್ತ್ರೀಯರ ಸ್ಥಾನಮಾನಗಳು, ಕುಟುಂಬ ನಿರ್ವಹಣೆ, ಕೃಷಿ, ವಾಣಿಜ್ಯ, ವೃತ್ತಿಗಳು, ಕಲೆ ಮತ್ತು ಕೈಕೆಲಸ, ವ್ಯಾಸಂಗ, ವಾಸ್ತುಶಿಲ್ಪ, ದಿನಚರಿ ಮತ್ತು ಕ್ರೀಡೆಗಳು ಹಾಗೂ ನೈತಿಕ ಪದ್ಧತಿಗಳು, ಸಂಪ್ರದಾಯಗಳು, ಪಿತೃಗಳಿಗೆ ಮಾಡುವ ಉತ್ತರಕ್ರಿಯೆಗಳು–ಈ ಎಲ್ಲವನ್ನೂ ಈ ಸೂತ್ರಗಳಲ್ಲಿ ವಿಶದವಾಗಿ ನಿಯಮಿಸಲಾಗಿದೆ. ರಾಜನೀತಿಯನ್ನೂ ನಿಬಂಧಿಸಲಾಗಿದೆ. ಇಷ್ಟಲ್ಲದೆ ಈ ಸೂತ್ರಗಳು ಖಗೋಳಶಾಸ್ತ್ರ, ಜ್ಯೋತಿಶ್ಶಾಸ್ತ್ರಗಳ ಮತ್ತು ಆರೋಗ್ಯಶಾಸ್ತ್ರದ ನಿಯಮ ನಿಬಂಧನೆಗಳನ್ನೂ ಒಳಗೊಂಡಿವೆ. ಅದರಿಂದಾಗಿ ಪ್ರಾಚೀನ ಹಿಂದೂ ಸಮಾಜದ ಚಿತ್ರವನ್ನು ಇವು ಸ್ಪಷ್ಟವಾಗಿ ರೂಪಿಸುತ್ತವೆ.

ವರ್ಣಗಳು: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ವರ್ಣಗಳು ನಾಲ್ಕು. ಇವು ಭಿನ್ನಭಿನ್ನವಾದ ಸಾಮಾಜಿಕ ಜೀವನವನ್ನು ಸೂಚಿಸುವಂಥವು. ಒಂದೊಂದು ವರ್ಣಕ್ಕೂ ಪ್ರತ್ಯೇಕ ನಿಬಂಧನೆಗಳುಂಟು. ಚೂಡಾಕರ್ಮ, ಉಪನಯನ, ವಿವಾಹ ಮುಂತಾದ ಸಂಸ್ಕಾರಗಳಿಗೆ ವರ್ಣಭೇದದ ಪ್ರಕಾರ ಬೇರೆ ಬೇರೆ ವಯಸ್ಸುಗಳನ್ನು, ಕಾಲಕ್ರಮಗಳನ್ನು ನಿಬಂಧಿಸಲಾಗಿದೆ. ಆ ಸಂಸ್ಕಾರ ಕಾಲಗಳಲ್ಲಿ ಧರಿಸಬೇಕಾದ ಉಡಿಗೆತೊಡಿಗೆಗಳು ಉಚ್ಚರಿಸುವ ಮಂತ್ರಗಳು ಬೇರೆಬೇರೆಯಾಗಿವೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನು ದ್ವಿಜರೆಂದೂ ಶೂದ್ರವರ್ಣದವರನ್ನು ಉಪನಯನವಿಲ್ಲದವರೆಂದೂ ಹೇಳಲಾಗಿದೆ. ಇಲ್ಲಿ ಸಂಕರವಾದ ವರ್ಣಗಳ ನಿರೂಪಣೆಯೂ ಇದೆ. ಗೃಹ್ಯಸೂತ್ರಗಳಲ್ಲಿ ವರ್ಣಗಳನ್ನು ಮೇಲುಕೀಳೆಂದಾಗಲೀ, ಅಸ್ಪೃಶ್ಯರೆಂದು ಕೆಲವರನ್ನು ಸಮಾಜ ಬಹಿಷ್ಕರಿಸಬೇಕೆಂದಾಗಲೀ ಹೇಳಿಲ್ಲ.

ವಿವಾಹ ಪದ್ಧತಿ: ಧರ್ಮಸೂತ್ರಗಳಲ್ಲಿಯೂ ಮನು ಮತ್ತು ಯಾಜ್ಞವಲ್ಕ್ಯ ಸ್ಮೃತಿಗಳಲ್ಲಿಯೂ ನಿರೂಪಿಸಲಾಗಿರುವ ಎಂಟು ವಿವಾಹ ಪದ್ಧತಿಗಳನ್ನು ಆಶ್ವಲಾಯನ ಗೃಹ್ಯಸೂತ್ರ ನಿರೂಪಿಸುತ್ತದೆ. ಬ್ರಾಹ್ಮ, ದೈವ, ಪ್ರಾಜಾಪತ್ಯ, ಆರ್ಷ, ಅಸುರ, ಗಾಂಧರ್ವ, ಪೈಶಾಚ, ರಾಕ್ಷಸ ಎಂಬ ಎಂಟು ಬಗೆಯ ವಿವಾಹ ಪದ್ಧತಿಗಳಲ್ಲಿ ಮೊದಲನೆಯ ನಾಲ್ಕು ಪದ್ಧತಿಗಳನ್ನು ಸಮಾಜ ಪುರಸ್ಕರಿಸುತ್ತಿತ್ತು. ಇವು ಆರ್ಯರ ಸಾಮಾಜಿಕ ಪ್ರಗತಿಯನ್ನು ಸೂಚಿಸುತ್ತವೆ. ಉಳಿದ ನಾಲ್ಕು ಪದ್ಧತಿಗಳು ಆರ್ಯರಲ್ಲದವರಲ್ಲಿ ಆಚರಣೆಯಲ್ಲಿದ್ದ ಪದ್ಧತಿಗಳು. ಕ್ರಮೇಣ ಆರ್ಯರು ರಾಕ್ಷಸ ಮತ್ತು ಗಾಂಧರ್ವ ಪದ್ಧತಿಗಳನ್ನು ಕ್ಷತ್ರಿಯರಿಗೆ ಮಾತ್ರ ಸಮ್ಮತವೆಂದು ಅನುಮೋದಿಸಿದರು. ಸಮಾಜ ಸಮ್ಮತವಾದ ವಿವಾಹ ಪದ್ಧತಿಗಳಲ್ಲಿ ವಧೂವರರನ್ನು ಹಿರಿಯರು ಪರೀಕ್ಷಿಸುವ ಅಂಗ ಮೊದಲನೆಯದು. ವಧುವಿಗೆ ಕೆಲವು ಲಕ್ಷಣಗಳಿರಬೇಕೆಂದು ನಿಬಂಧಿಸಲಾಗಿದೆ. ಅಂತೆಯೇ ವರನಿಗೂ ಕೆಲವು ಯೋಗ್ಯಲಕ್ಷಣಗಳಿರ ಬೇಕು. ಇವು ಮುಖ್ಯವಾಗಿ ದೃಢಕಾಯ, ಯೌವನ, ಬೌದ್ಧಿಕ ವಿಕಾಸ ಮತ್ತು ಮಂಗಳ ಸೂಚಕ ಚಿಹ್ನೆಗಳು. ಎಲ್ಲಕ್ಕೂ ಶ್ರೇಷ್ಠವಾದುದು ಸೌಶೀಲ್ಯ. ಕೆಲವು ಗೃಹ್ಯಸೂತ್ರಗಳಲ್ಲಿ ಬಾಲ್ಯವಿವಾಹ ಪದ್ಧತಿಗೆ ಪ್ರಾಶಸ್ತ್ಯ ಕೊಡಲಾಗಿದೆ. ಆದರೆ ಗರ್ಭಾದಾನ ಸಂಸ್ಕಾರವನ್ನು ವಿವಾಹದ ಕೊನೆಯ ಅಂಗವಾಗಿ ಸೇರಿಸಿರುವುದರಿಂದ ಕನ್ಯೆಗೆ ಸುಮಾರು ಹದಿಮೂರಕ್ಕೆ ಮೀರಿದ ವಯಸ್ಸನ್ನು ನಿಬಂಧಿಸಲಾಗಿತ್ತೆಂದು ಹೇಳಬಹುದು. ಪಾರಸ್ಕರ ಗೃಹ್ಯಸೂತ್ರ ಬ್ರಾಹ್ಮಣನಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳ ಕನ್ಯೆಯರನ್ನು ವಿವಾಹವಾಗುವ ಅರ್ಹತೆಯನ್ನು ಕೊಟ್ಟಿದೆ. ಅಂತೆಯೇ ಕ್ಷತ್ರಿಯ ತನ್ನ ಮತ್ತು ವೈಶ್ಯವರ್ಣಗಳ ಇಬ್ಬರನ್ನೂ ವೈಶ್ಯ ತನ್ನ ಮತ್ತು ಶೂದ್ರವರ್ಣಗಳ ಇಬ್ಬರನ್ನೂ ವಿವಾಹವಾಗಲು ಅನುಮತಿ ಇದೆ. ಆದರೆ ಏಕಪತ್ನೀವ್ರತಸ್ಥನಿಗೆ ಹೆಚ್ಚು ಗೌರವವಿತ್ತು. ಆರ್ಷ ವಿವಾಹ ಪದ್ಧತಿಯಲ್ಲಿ ಕನ್ಯಾಶುಲ್ಕದ ಸೂಚನೆಯೂ ಬ್ರಾಹ್ಮ, ದೈವ, ಪ್ರಾಜಾಪತ್ಯ ಪದ್ಧತಿಗಳಲ್ಲಿ ವರದಕ್ಷಿಣೆಯ ಸೂಚನೆಯೂ

ಇದೆ. ವಿವಾಹ ಕೇವಲ ದೈಹಿಕ ಸಂಬಂಧ ಮಾತ್ರವೇ ಆಗಿರದೆ, ಶಾಶ್ವತವಾದ ಧಾರ್ಮಿಕ ಸಂಬಂಧವೆಂಬುದನ್ನು ಕನ್ಯಾದಾನ, ಪಾಣಿಗ್ರಹಣ, ಸಪ್ತಪದಿ ಎಂಬ ವಿವಾಹ ಸಂಸ್ಕಾರಗಳ ಕಾಲದಲ್ಲಿ ವಧೂವರರು ಉಚ್ಚರಿಸುವ ಮಂತ್ರಗಳು ಸ್ಪಷ್ಟಪಡಿಸುತ್ತವೆ. ಸತ್ಪುತ್ರರನ್ನು ಪಡೆದು ಕುಲಗೌರವವನ್ನು ವೃದ್ಧಿಸುವುದೇ ವಿವಾಹದ ಮುಖ್ಯಧ್ಯೇಯವೆಂದು ಗೃಹ್ಯಸೂತ್ರಗಳು ಹೇಳಿವೆ. ಸ್ತ್ರೀಯರಿಗೆ ಉನ್ನತವಾದ ಸ್ಥಾನಮಾನಗಳನ್ನು ಕೊಡಲಾಗಿದ್ದರೂ ಪುತ್ರನನ್ನು ಪಡೆಯಬೇಕೆಂಬುದೇ ವಿವಾಹ, ಪುಂಸವನ, ಸೀಮಂತ ಕಾಲಗಳಲ್ಲಿ ಉಚ್ಚರಿಸಲಾಗುವ ಮಂತ್ರಗಳ ಉದ್ದೇಶವಾಗಿದೆ. ಆರ್ಯಸಮಾಜ ಕೃಷಿಪ್ರಧಾನವಾಗಿದ್ದುದರಿಂದ ಗಂಡು ಸಂತತಿಗೆ ಪ್ರಾಧಾನ್ಯವಿತ್ತು.

ಕೌಟುಂಬಿಕ ಜೀವನ: ಗೃಹಸ್ಥಾಶ್ರಮ ಸಾಮಾಜಿಕ ಜೀವನದಲ್ಲಿ ಅತ್ಯಂತ ಮಹತ್ತ್ವದ ಸ್ಥಾನವನ್ನು ಪಡೆದಿತ್ತು. ಗೃಹ್ಯಸೂತ್ರಗಳಲ್ಲಿ ಇದರ ಪ್ರಾಮುಖ್ಯವನ್ನು ವಿವರಿಸಲಾಗಿದೆ. ಗೃಹಸ್ಥ ದೇವಋಣ, ಪಿತೃಋಣಗಳನ್ನು ತೀರಿಸುವುದಲ್ಲದೆ ಮನುಷ್ಯ ಋಣವನ್ನು ನಾನಾ ರೀತಿಯಲ್ಲಿ ಸಲ್ಲಿಸಬೇಕು. ಅತಿಥಿಗಳನ್ನು ದೇವರಂತೆ ಕಾಣಬೇಕು. ಅವನ ಕುಟುಂಬ ಸತ್ಪುತ್ರರಿಂದಲೂ ಗೋಧಾನ್ಯಗಳಿಂದಲೂ ಸಮೃದ್ಧವಾಗಿದ್ದು, ಸ್ತ್ರೀಯರು ಗೃಹದೇವತೆಗಳಂತೆ ಅಲ್ಲಿ ಶೋಭಿಸುತ್ತಿರಬೇಕು. ಅವನು ಸಾಮಾಜಿಕ ಉನ್ನತಿಗೆ ಯಾವ ದೋಷವೂ ಬಾರದಂತೆ ಯಥೋಚಿತವಾಗಿ ನಡೆದುಕೊಳ್ಳಬೇಕು ಮತ್ತು ಸೇವಾನಿರತನಾಗಿರಬೇಕು. ಗೃಹ್ಯಸೂತ್ರಗಳ ನಿಬಂಧನೆಗಳು ಅವಿಭಕ್ತ ಕುಟುಂಬಕ್ಕೆ ಅನ್ವಯಿಸುವಂಥವು.

ಗೃಹ್ಯಸೂತ್ರಗಳು ಗೃಹನಿರ್ಮಾಣಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿವೆ. ಮುಖ್ಯ ದ್ವಾರ ಪೂರ್ವಾಭಿಮುಖ ಅಥವಾ ಉತ್ತರಾಭಿಮುಖವಾಗಿ ಇರಬೇಕು. ಪಶ್ಚಿಮಾಭಿಮುಖವಾಗಿರಕೂಡದು. ಭೂಮಿ ಸಮನಾಗಿರಬೇಕು. ಭದ್ರವಾಗಿರಬೇಕು. ಹೊರಗೆ ಸಂಚರಿಸುವವರಿಗೆ ಗೃಹಸ್ಥ ಮಾಡುವ ಹೋಮಾದಿಕಾರ್ಯಗಳಾಗಲೀ ಅವನ ಆಹಾರ ಸೇವನೆಯಾಗಲೀ ಕಾಣುವಂತಿರಬಾರದು. ಗೃಹಪ್ರವೇಶಕಾಲದಲ್ಲಿ ಮಾಡಬೇಕಾದ ವಾಸ್ತುಶಮನ ಎಂಬ ಹೋಮವನ್ನು ವಿವರವಾಗಿ ಹೇಳಲಾಗಿದೆ. ಗೃಹಸ್ಥನ ನೆಲೆಯಾದ ಗೃಹವನ್ನು ಅತ್ಯಂತ ಪ್ರೀತಿಯಿಂದ ಕಾಪಾಡಬೇಕೆಂದು ಗೃಹ್ಯಸೂತ್ರಗಳು ನಿಬಂಧಿಸಿವೆ.

ಶಿಕ್ಷಣ ಕ್ರಮ : ಗುರುಕುಲವಾಸದಲ್ಲಿ ವಿದ್ಯಾರ್ಜನೆ ಮಾಡಿ ನೈತಿಕಜೀವನವನ್ನು ನಡೆಸಿಕೊಂಡು ಹೋಗುವುದೇ ಬ್ರಹ್ಮಚರ್ಯಾಶ್ರಮದ ಮುಖ್ಯ ಧ್ಯೇಯವಾಗಿತ್ತು. ಇದರಲ್ಲಿ ಮಾನವನ ಶ್ರೇಯಸ್ಸಿಗೆ ಭದ್ರವಾದ ಅಡಿಪಾಯವನ್ನು ಹಾಕಲಾಗಿದೆ. ಗುರುಶಿಷ್ಯರ ಸಂಬಂಧ ನಿಕಟವಾಗಿರಬೇಕೆಂದು ಗುರುಕುಲವಾಸದ ಉದ್ದೇಶ. ಗುರುಕುಲವಾಸ ಉಪನಯನ ಸಂಸ್ಕಾರದ ಅನಂತರ ಪ್ರಾರಂಭವಾಗುತ್ತದೆ. ಉಪನಯನ ಸಂಸ್ಕಾರದ ಮಹತ್ತ್ವವನ್ನು ಈ ಸೂತ್ರಗಳು ವಿಶದಪಡಿಸಿವೆ. ವ್ಯಾಸಂಗದ ಅವಧಿಯನ್ನು ಹನ್ನೆರಡರಿಂದ ನಲವತ್ತೆಂಟು ವರ್ಷಗಳವರೆಗೆಂದು ನಿಯಮಿಸಲಾಗಿದೆ. ಅಂದರೆ ವೇದಾಧ್ಯಯನಕ್ಕೆ ದೀರ್ಘಕಾಲದ ಅವಧಿ ಆವಶ್ಯಕವಾಗಿತ್ತು. ಅಧ್ಯಯನದೊಂದಿಗೆ ಉಪವಾಸಾದಿ ವ್ರತಗಳನ್ನು ನಿಬಂಧಿಸಲಾಗಿದ್ದಿತು. ದೊಡ್ಡ ದೊಡ್ಡ ಸಭೆಗಳಲ್ಲಿ ಚರ್ಚಾಕೂಟಗಳನ್ನು ಏರ್ಪಡಿಸುವ ಪದ್ಧತಿಯೂ ಇತ್ತು. ಸ್ನಾತಕವಾಗಿ ಮನೆಗೆ ಹಿಂದಿರುಗಿದ ಮೇಲೆ ಗೃಹಸ್ಥಾಶ್ರಮಕ್ಕೆ ಪ್ರವೇಶ. ಸ್ನಾತಕನಾದ ಅನಂತರವೂ ಅವನು ವೇದಾಧ್ಯಯನ ಮತ್ತು ನೈತಿಕ ನಿಯಮಗಳನ್ನು ತ್ಯಜಿಸಕೂಡದೆಂದು ವಿಧಿಸಲಾಗಿದೆ.

ಶಿಕ್ಷಣದಲ್ಲಿ ವ್ಯಾಯಾಮ ಮತ್ತು ಅಂಗಸಾಧನೆಗೂ ಅವಕಾಶವನ್ನು ಕಲ್ಪಿಸಲಾಗಿದೆ. ಪ್ರಾಣಾಯಾಮವನ್ನು ಸಂಧ್ಯಾಕ್ರಮದಲ್ಲಿ ಸೇರಿಸಲಾಗಿದೆ.

ಗೃಹ್ಯಸೂತ್ರಗಳಲ್ಲಿ ಸಂಗೀತ ನಾಟ್ಯ ಮತ್ತು ಕ್ರೀಡೆಗಳು-ಇಂಥ ಮನರಂಜನ ಕಾರ್ಯಕ್ರಮಗಳ ನಿರೂಪಣೆಯೂ ಇದೆ.

ಇವುಗಳಲ್ಲಿ ಕಾಣುವ ಜೀವನದೃಷ್ಟಿ ಆಶಾದಾಯಕವಾದುದು, ಸುಭದ್ರವಾದುದು. ಆದರೆ ಹಿಂದೂ ಧರ್ಮಕ್ಕನುಸಾರವಾಗಿ ಮಾನವನ ಜೀವನ ಮುಖ್ಯವಾಗಿ ಆಧ್ಯಾತ್ಮಿಕ ರೀತಿಯದು. ಅವನ ಕರ್ಮಗಳು ಕೇವಲ ಲೌಕಿಕ ಹಿತಕ್ಕೋಸ್ಕರ ಮಾಡುವಂಥವಾಗಿರದೆ ಪ್ರೇಯಸ್ಸಿಗಿಂತಲೂ ಶ್ರೇಯಸ್ಸಿಗೆ ಹೆಚ್ಚು ಗಮನ ಕೊಡುವಂಥವುಗಳಾಗಿವೆ. ಪ್ರತಿಯೊಂದು ಕ್ರಿಯೆಯನ್ನು ಒಂದು ಆರಾಧನೆಯಂತೆ ಭಾವಿಸಲಾಗಿದೆ. ಮಂತ್ರಗಳ ಸಹಿತವೇ ಅವನು ನಿತ್ಯಕರ್ಮಗಳನ್ನು ಆಚರಿಸಬೇಕು. ಮಂತ್ರಬಲದಿಂದ ಶತ್ರುಗಳನ್ನು ಕೂಡ ಗೆಲ್ಲಬಹುದೆಂದು ಗೃಹ್ಯಸೂತ್ರಗಳು ಹೇಳಿವೆ. ಜೀವನದ ಹೋರಾಟದಲ್ಲಿ ಜಯಿಸಿ ಧನಕನಕ ವಸ್ತುಗಳನ್ನು ಸಮೃದ್ಧವಾಗಿ ಪಡೆದು ಸುಖಶಾಂತಿಗಳಿಂದ ಬಾಳಬೇಕೆಂದು ಪ್ರಾರ್ಥಿಸುವ ಮಂತ್ರಗಳಿವೆ. ಗೋಸಂಪತ್ತಿಗಾಗಿ ಪ್ರಾರ್ಥಿಸುವ ಮಂತ್ರಗಳೂ ಇವೆ.

ಧರ್ಮ, ಅರ್ಥ, ಕಾಮ ಎಂಬ ಪುರುಷಾರ್ಥಗಳು ಅಂತಿಮವಾಗಿ ಮೋಕ್ಷವೆಂಬ ಪರಮಗತಿಗೆ ಸಾಧನಗಳೇ ಹೊರತು ಅವುಗಳಿಗಾಗಿಯೇ ಅವು ಅಪೇಕ್ಷಿತವಲ್ಲ ಎಂದು ಗೃಹ್ಯಸೂತ್ರಗಳ ಎಲ್ಲ ನಿಬಂಧನೆಗಳ ಒಟ್ಟು ಸಾರಾಂಶವಾಗಿದೆ. **ನೋಡಿ-ಆಪಸ್ತಂಬ, ಆಶ್ವಲಾಯನ, ಗಾರ್ಹಸ್ಥ್ಯ.** (ಎಸ್.ಎಸ್.ಆರ್.)

**ಗೆಂಟ್ಸ್, ಫ್ರೀಡ್ರಿಕ್ :** 1764-1832. ಜರ್ಮನ್ ರಾಜಕೀಯ ಪತ್ರಿಕೋದ್ಯಮಿ; ನೆಪೋಲಿಯನನ ಮತ್ತು ಫ್ರೆಂಚ್ ಕ್ರಾಂತಿ ತತ್ತ್ವಗಳ ವಿರುದ್ಧ ಬರೆದ ಲೇಖನಗಳಿಂದಾಗಿಯೂ ಆಸ್ಟ್ರಿಯದ ರಾಜಕಾರಣಿ ಮೆಟರ್ನಿಕನ ಆಪ್ತಸಲಹೆಗಾರನೆಂದಾಗಿಯೂ ಪ್ರಸಿದ್ಧನಾಗಿದ್ದವ. ಜನನ 1764ರ ಮೇ 2ರಂದು, ಬ್ರೆಸ್ಲೌದಲ್ಲಿ. 1779ರಲ್ಲಿ ಇವನ ತಂದೆ ಪ್ರಷ್ಯದ ಟಂಕಸಾಲೆಯ ಮಹಾನಿರ್ದೇಶಕನಾಗಿ ನೇಮಕವಾದ್ದರಿಂದ ತಂದೆತಾಯಿಯರೊಂದಿಗೆ ಗೆಂಟ್ಸನೂ ಬರ್ಲಿನಿಗೆ ಹೋದ. ಶಾಲೆಯಲ್ಲಿ ಅಭ್ಯಾಸ ಮುಗಿಸಿದ

ಮೇಲೆ ಕೋನಿಗ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ನ್ಯಾಯಶಾಸ್ತ್ರ ಅಭ್ಯಸಿಸಿದ. ಅಲ್ಲಿ ಇವನು ಇಮಾನ್ಯುಯೆಲ್ ಕ್ಯಾಂಟನಿಂದ ಪ್ರಭಾವಿತನಾದ. 1785ರಲ್ಲಿ ಇವನು ಬರ್ಲಿನ್‌ನಲ್ಲಿ ಪ್ರಷ್ಯನ್ ಸರ್ಕಾರದ ಸೇವೆಗೆ ಸೇರಿ 1793ರ ವೇಳೆಗೆ ಯುದ್ಧದ ಇಲಾಖೆಯಲ್ಲಿ ಸಲಹೆಗಾರನಾದ.

ಫ್ರೆಂಚ್ ಕ್ರಾಂತಿಯನ್ನು ಸಮರ್ಥಿಸಿ ಗ್ರಂಥ ಬರೆದವರಲ್ಲಿ ಗೆಂಟ್ಸನೂ ಒಬ್ಬ. ಆದರೆ ಕ್ರಮೇಣ ಇವನ ನಿಲುವು ಬದಲಾಯಿತು. ಕ್ಯಾಂಟನ ನ್ಯಾಯ ಸಿದ್ಧಾಂತಗಳು, ಇಂಗ್ಲಿಷ್ ನ್ಯಾಯಶಾಸ್ತ್ರ- ಇವು ಇವನ ಮನಸ್ಸನ್ನು ಪರಿವರ್ತಿಸಿದುವು. ಬರ್ಕನ ರಿಫ್ಲೆಕ್ಷನ್ಸ್ ಆನ್ ದಿ ರೆವಲ್ಯೂಷನ್ ಇನ್ ಫ್ರಾನ್ಸ್ (1793) ಎಂಬ ಕೃತಿಯನ್ನು ಇವನು ಅನುವಾದಿಸಿ ವ್ಯಾಖ್ಯಾನದೊಂದಿಗೆ ಪ್ರಕಟಿಸಿದ. ಇದರಿಂದ ಯುರೋಪಿನಲ್ಲಿ ಇವನ ಹೆಸರು ಪ್ರಸಿದ್ಧವಾಯಿತಲ್ಲದೆ ಇವನ ಜೀವನಗತಿ ಮಾರ್ಪಟ್ಟಿತು. ತದನಂತರ ಇವನು ರಾಜಕೀಯ ವಿಚಾರಗಳ ಬಗ್ಗೆಯೇ ಬರೆಯಲು ತೀರ್ಮಾನಿಸಿದ. ಕ್ರಾಂತಿಕಾರಿ ಸಿದ್ಧಾಂತಗಳ ವಿರುದ್ಧ ಹೋರಾಟ ಮುಂದುವರಿಸಿದ. ಕ್ರಮೇಣ ತನ್ನದೇ ಆದ, ಅತಿ ಸಂಪ್ರದಾಯಬದ್ಧವಾದ ರಾಷ್ಟ್ರ ಪರಿಕಲ್ಪನೆಯೊಂದನ್ನು ಸೂತ್ರೀಕರಿಸಿದ (1798-99). ಪ್ರಜಾಸಾರ್ವಭೌಮತ್ವ, ಮಾನವ ಹಕ್ಕುಗಳು, ರಾಜಕೀಯ ಸಮತೆ, ಸ್ವಾತಂತ್ರ್ಯ ಮುಂತಾದ ಪರಿಕಲ್ಪನೆಗಳನ್ನು ವಿರೋಧಿಸಿದ.

1794-97ರ ನಡುವೆ ಗೆಂಟ್ಸ್ ಅನೇಕ ಕ್ರಾಂತಿವಿರೋಧಿ ಕೃತಿಗಳನ್ನು ಭಾಷಾಂತರಿಸಿ ವ್ಯಾಖ್ಯಾನಗಳೊಂದಿಗೆ ಪ್ರಕಟಿಸಿದ. ಈತ ಆರಂಭಿಸಿದ ನೊಯೆಡಾಯಿಷೆ ಮೋನಾಟ್‌ಶ್ರಿಫ್ಟ್ ಎಂಬ ಪತ್ರಿಕೆ ಒಂದು ವರ್ಷದಲ್ಲಿ ಕೊನೆಗೊಂಡಿತು.

1799-1800ರ ರಲ್ಲಿ ಪ್ರಷ್ಯನ್ ಸರ್ಕಾರದ ಧನಸಹಾಯದಿಂದ ಎರಡು ವರ್ಷಕಾಲ ಪ್ರಕಟವಾದ ಹಿಸ್ಟೋರಿಶೆಸ್ ಜರ್ನಲ್‌ನ ಸಂಚಿಕೆಗಳಲ್ಲಿ ಗೆಂಟ್ಸ್ ಜರ್ಮನ್ ರಾಜಕೀಯ ಕುರಿತು ಬರೆದು ರಾಜಕೀಯ ಪತ್ರಿಕೋದ್ಯಮವನ್ನು ಪರಾಕಾಷ್ಠೆಗೆ ಒಯ್ದ.

ಕ್ರಾಂತಿಯ ಪ್ರೇರಣೆಗಳು, ಅದರ ವಿವಿಧ ಹಂತಗಳು, ಕ್ಷಿಪ್ರಾಕ್ರಮಣ ಮತ್ತು ಅದರ ಪರ್ಯವಸಾನ, ಅದರ ಸಾಮಾಜಿಕ ಮುಖಗಳು-ಇವನ್ನೆಲ್ಲ ವಿಶ್ಲೇಷಿಸುವುದರೊಂದಿಗೆ ಕ್ರಾಂತಿಯನ್ನು ಇವನು ಬಲವಾಗಿ ವಿರೋಧಿಸಿದ. ಕ್ರಾಂತಿವಾದಿ ಫ್ರಾನ್ಸಿನ ವಿರುದ್ಧವಾಗಿ ಯುದ್ಧ ಮಾಡುವುದು ಕೂಡ ಸರಿಯೆಂದು ಇವನು ವಾದಿಸಿದ. ಇವನ ಈ ನಿಲುವಿನಿಂದಾಗಿ ಅನೇಕ ವಾದವಿವಾದಗಳುಂಟಾದುವು. ಪ್ರಷ್ಯದ ತಟಸ್ಥ ನಿಲುವನ್ನು ಇವನು ಟೀಕಿಸಿದ. ಪ್ರಷ್ಯ-ಆಸ್ಟ್ರಿಯಗಳು ಪರಸ್ಪರವಾಗಿ ವಿರೋಧಿಸುವ ಬದಲು ಒಂದಾಗಿ ಫ್ರಾನ್ಸನ್ನೆದುರಿಸಬೇಕೆಂಬುದು ಇವನ ವಾದವಾಗಿತ್ತು. ಇಂಗ್ಲೆಂಡು ಯುರೋಪಿನ ಸ್ವಾತಂತ್ರ್ಯರಕ್ಷಕ ದೇಶವೆಂದು ಹೊಗಳಿದ. ಇವನ ಈ ಎಲ್ಲ ಭಾವನೆಗಳಿಂದಾಗಿ ಪ್ರಷ್ಯದಲ್ಲಿ ಇವನಿಗಿದ್ದ ಪ್ರಭಾವಯುತ ಸ್ಥಾನ ನಷ್ಟವಾಯಿತು. ತಾನಾಗಿ ಆರಿಸಿಕೊಂಡ ರಾಜಕೀಯ ಪತ್ರಿಕೋದ್ಯಮವನ್ನು ಇವನು ಬಿಡಲು ಸಿದ್ಧನಿರಲಿಲ್ಲ. ಆದುದರಿಂದ ಜೀವನದಲ್ಲಿ ಇವನು ಬಿಕ್ಕಟ್ಟನ್ನೆದುರಿಸಬೇಕಾಯಿತು. ವೈಮಾರಿನಲ್ಲಿ ನೆಲೆಸಲು ಈತ ಮಾಡಿದ ಯತ್ನ ವಿಫಲವಾಯಿತು. ಆಸ್ಟ್ರಿಯದಿಂದ ಇವನಿಗೆ ಒಂದು ಔಪಚಾರಿಕ ಸ್ಥಾನ ಲಭ್ಯವಾಯಿತು. ಇದರಿಂದ ಇವನಿಗೆ ಸಾಮಾಜಿಕ ಮರ್ಯಾದೆಯೂ ಆರ್ಥಿಕ ಭದ್ರತೆಯೂ ಲಭ್ಯವಾಯಿತು. ರಾಜಕೀಯ ಲೇಖಕನಾಗಿ ಸ್ವತಂತ್ರನಾಗಿ ಮುಂದುವರಿಯುವುದು ಸಾಧ್ಯವಾಯಿತು.

ಲಂಡನಿಗೊಮ್ಮೆ ಗೆಂಟ್ಸ್ ಭೇಟಿ ನೀಡಿದಾಗ (1802) ಅಲ್ಲಿ ಇವನಿಗೆ ಭವ್ಯ ಸ್ವಾಗತ ದೊರಕಿತು. ಇಂಗ್ಲೆಂಡು ಈತನಿಗೆ ಆರ್ಥಿಕ ನೆರವು ನೀಡಿತು. ವಿಯೆನ್ನಾದಲ್ಲಿ ಇವನು ತನ್ನ ಕೆಲಸ ಮುಂದುವರಿಸಿದ.

ಆಸ್ಟ್ರಿಯದ ವಿದೇಶಾಂಗ ನೀತಿಯನ್ನು ಪರಿವರ್ತಿಸಬೇಕೆಂಬ ಈತನ ಪ್ರಯತ್ನ ಯಶಸ್ವಿಯಾಗಲಿಲ್ಲ. ನೆಪೋಲಿಯನ್ ವಿರುದ್ಧವಾದ ಚಳವಳಿಯನ್ನು ಇವನು ಮುಂದುವರಿಸಿದ. ತನ್ನ ಕಾಲದ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಅನೇಕ ಲೇಖನಗಳನ್ನು ಬರೆದ. 1805ರಲ್ಲಿ ಆಸ್ಟ್ರಿಯಕ್ಕೆ ಸೋಲಾದಾಗ ಗೆಂಟ್ಸ್ ಬೊಹಿಮಿಯಕ್ಕೂ ಅಲ್ಲಿಂದ ಡ್ರೆಸ್ಡೆನ್‌ಗೂ ಹೋದ. 1806ರಲ್ಲಿ ಪ್ರಷ್ಯ ಕುಸಿಯಿತು. ಗೆಂಟ್ಸ್ ಡ್ರೆಸ್ಡೆನನ್ನೂ ಬಿಟ್ಟು ಪ್ರಾಗಿಗೋ ಟೆಪ್ಲಿಟ್ಸ್‌ಗೋ ಹೋದ. ನೆಪೋಲಿಯನನ ವಿರುದ್ಧವಾಗಿ ಅಭಿಪ್ರಾಯವನ್ನು ಸಂಘಟಿಸಲು ಯತ್ನಿಸಿದ. ಜರ್ಮನಿಯ ಮತ್ತು ಯುರೋಪಿನ ಪುನರ್‌ರಚನೆಯ ಬಗ್ಗೆ ಚಿಂತೆ ಹರಿಸಿದ. ಸ್ವಲ್ಪ ಕಾಲಾನಂತರ ಇವನು ವಿಯೆನ್ನಕ್ಕೆ ಹಿಂದಿರುಗಿದ. ಆಸ್ಟ್ರಿಯವನ್ನು ಮುಂದಿಟ್ಟುಕೊಂಡು ಜರ್ಮನಿಯನ್ನು ನೆಪೋಲಿಯನನ ವಿರುದ್ಧ ಎತ್ತಿ ನಿಲ್ಲಿಸುವ ಕ್ರಮಕ್ಕೆ ಗೆಂಟ್ಸ್ ನೆರವು ನೀಡಿದ. 1809ರಲ್ಲಿ ಆಸ್ಟ್ರಿಯದ ವಿಮೋಚನಾ ಹೋರಾಟ ವಿಫಲಗೊಂಡಿತು. ಗೆಂಟ್ಸ್ ನಿರಾಶೆಯಿಂದ ಇಂಗ್ಲೆಂಡಿಗೆ ಹೋಗಲು ಯತ್ನಿಸಿದ. ಅದೂ ಸಾಧ್ಯವಾಗಲಿಲ್ಲ.

ಕೊನೆಗೆ ನೆಪೋಲಿಯನನ ಪತನವಾಯಿತು. ಆದರೆ ಗೆಂಟ್ಸನಿಗೆ ಅಷ್ಟರಿಂದಲೇ ಸಮಾಧಾನವಾಗಲಿಲ್ಲ. ಯುರೋಪಿನಲ್ಲಿ ರಾಜಕೀಯ ಸುವ್ಯವಸ್ಥೆ ಏರ್ಪಡಬೇಕೆಂಬುದು ಇವನ ಇಚ್ಛೆಯಾಗಿತ್ತು. ಫ್ರಾನ್ಸನ್ನು ಎರಡನೆಯ ದರ್ಜೆಯ ರಾಷ್ಟ್ರವನ್ನಾಗಿ ಪರಿವರ್ತಿಸುವುದು ಇವನಿಗೆ ಒಪ್ಪಿಗೆಯಿರಲಿಲ್ಲ. ಇದರಿಂದ ಜರ್ಮನಿಗೆ ಇವನ ಮೇಲೆ ಕೋಪ ಬಂತು. ಗೆಂಟ್ಸ್ ಸಮಯಸಾಧಕನೆಂದು ಅದು ಇವನ ಹೆಸರಿಗೆ ಕಳಂಕ ಹಚ್ಚತೊಡಗಿತು. ಆದರೂ ವಿಯೆನ್ನ, ಆಕೆನ್, ಟ್ರಾಪೌ, ಲೇಬಾಕ್ ಮತ್ತು ವೆರೋನ ಕಾಂಗ್ರೆಸ್‌ಗಳ ಕಾರ್ಯದರ್ಶಿಯಾಗಿದ್ದ ಮೆಟರ್ನಿಕನ ಅನುಗ್ರಹದಿಂದಾಗಿ ಮತ್ತು ತನ್ನ ಸ್ವಂತ ವ್ಯಕ್ತಿತ್ವದಿಂದಾಗಿ ಗೆಂಟ್ಸ್ ಪ್ರಭಾವಶಾಲಿಯಾಗಿಯೇ ಉಳಿದ.

1815ರ ಅನಂತರದ ರಾಷ್ಟ್ರೀಯ ಮತ್ತು ಉದಾರವಾದಿ ಚಳವಳಿಗಳಿಗೆ ಇವನ ವಿರೋಧವಿತ್ತು. ಆದ್ದರಿಂದ ಇವನು ರಾಜಕೀಯ ಪ್ರತಿಗಾಮಿಯೆಂಬ ಆಪಾದನೆಗೆ ಗುರಿಯಾದ. ಅಖಿಲ ಯುರೋಪ್ ಒಕ್ಕೂಟಕ್ಕೆ ಇವು ವಿರೋಧಿಯೆಂಬುದು ಇವನ ಭಾವನೆ. ಜರ್ಮನಿಯ ಆರಂಭದ ಉದಾರವಾದಿ ಧೋರಣೆಯನ್ನು ಇವನು ಕ್ರಾಂತಿಕಾರಿ ಯೆಂದು ಭಾವಿಸಿದ್ದ. ಸೈನಿಕ ಪ್ರವೇಶನಗಳನ್ನು ಇವನು ವಿರೋಧಿಸಿದ. ಮೆಟರ್ನಿಕನ ನೆರವೂ ಇವನಿಗೆ ತಪ್ಪಿ ಹೋಯಿತು. 1832ರಲ್ಲಿ ಗೆಂಟ್ಸ್ ನಿಧನನಾದ. ಇವನ ಮರಣಾನಂತರವೂ ರಾಷ್ಟ್ರೀಯವಾದಿಗಳು ಮತ್ತು ಉದಾರವಾದಿಗಳು ಇವನನ್ನು ಟೀಕಿಸುವುದನ್ನು ನಿಲ್ಲಿಸಲಿಲ್ಲ. (ಎಚ್.ಎಂ.ಎನ್.ಆರ್.)

**ಗೆಂಡೆ ಮೀನು :** ಸೈಪ್ರಿನಿಫಾರ್ಮೀಸ್ ಗಣದ ಸೈಪ್ರಿನಿಡೀ ಕುಟುಂಬಕ್ಕೆ ಸೇರಿದ ಅನೇಕ ಜಾತಿಯ ಮೀನುಗಳಿಗೆ ಅನ್ವಯವಾಗುವ ಹೆಸರು. ಕಾರ್ಪ್ ಎಂಬುದು ಆಂಗ್ಲ ಭಾಷೆಯಲ್ಲಿ ಕರೆಯುವ ಸಾಮಾನ್ಯ ಹೆಸರು. ಗೆಂಡೆ ಮೀನುಗಳು ಸಿಹಿನೀರಿನಲ್ಲಿ ವಾಸ ಮಾಡುವಂಥವು. ಭಾರತದಲ್ಲಿ ಸ್ಥಳೀಯವಾಗಿ ದೊರಕುವ ಕೆಲವು ಪಂಟಿಯಸ್



ಅಥವಾ ಬಾರ್ಬಸ್ ಪ್ರಭೇದಗಳು, ಗಂಗಾನದಿ ಮೂಲದ ದೊಡ್ಡ ಗೆಂಡೆಗಳಾದ ಕಾಟ್ಲಾ, ರೋಹು, ಮೃಗಾಲ ಮೀನುಗಳು, ಅಲ್ಲದೆ ವಿದೇಶಿ ಮೂಲದ ಸಾಮಾನ್ಯ ಗೆಂಡೆ (ಸೈಪ್ರಿನಸ್ ಕಾರ್ಪಿಯೊ), ಬೆಳ್ಳಿಗೆಂಡೆ (ಹೈಪಾಫ್ತಾಲ್ಮಿಕ್ತಿಸ್ ಮಾಲಿಟ್ರಿಕ್ಸ್) ಮತ್ತು ಹುಲ್ಲು ಗೆಂಡೆ (ಟೀನೊಫಾರೊಂಗೊಡಾನ್ ಇಡೆಲ) ಮೀನುಗಳು ಹಾಗೂ ಕೃಷ್ಣಾ, ಗೋದಾವರಿ, ಕಾವೇರಿ ಮತ್ತಿತರ ನದಿ, ಜಲಾಶಯಗಳಲ್ಲಿ ಕಂಡುಬರುವ ಲೇಬಿಯೋ ಫಿಂಬ್ರಿಯೇಟಸ್, ಲೇಬಿಯೋ ಕೊಂಟಿಯಸ್, ಸಿರ್ಹೈನಸ್ ಸಿರ್ಹೋಸಾ ಮುಂತಾದ ಮೀನುಗಳಿಗೆ ಸಾಮಾನ್ಯವಾಗಿ ಕರೆಯುವ ಹೆಸರು ಗೆಂಡೆ ಮೀನುಗಳು. ಆದರೆ ಇವುಗಳನ್ನು ಅವುಗಳದೇ ಆದ ವಿಶಿಷ್ಟ ಹೆಸರುಗಳಿಂದಲೂ ಕರೆಯುವುದುಂಟು. ಭಾರತದ ದೊಡ್ಡ ಗೆಂಡೆಗಳನ್ನು ಮತ್ತು ವಿದೇಶಿ ಗೆಂಡೆಗಳನ್ನು ಹೊರತುಪಡಿಸಿ ಉಳಿದವು ಸಣ್ಣ ಹಾಗೂ ಮಧ್ಯಮ ಗಾತ್ರದವು. ಆದ್ದರಿಂದ ಇವುಗಳನ್ನು ಮೈನರ್ ಕಾರ್ಪ್ ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಗೆಂಡೆ ಮೀನುಗಳ ಬಣ್ಣ ಬಿಳಿ ಅಥವಾ ಬೂದು. ಕೆಲವಕ್ಕೆ ಸಣ್ಣ ಮೀಸೆಗಳಿವೆ (ಬಾರ್ಬಲ್ಸ್), ಇನ್ನು ಕೆಲವಕ್ಕೆ ಇಲ್ಲ. ಸಾಮಾನ್ಯವಾಗಿ ಹೊಟ್ಟೆ ಗುಂಡಗಿರುತ್ತದೆ. ಕಿವಿರು ಸೀಳುಗಳು ಅಗಲವಾಗಿರುತ್ತವೆ. ಪಾರ್ಶ್ವರೇಖೆ ಪೂರ್ಣವಾಗಿರುತ್ತದೆ.

ಗೆಂಡೆ ಮೀನುಗಳು ಸಸ್ಯಾಹಾರಿಗಳು. ನೀರಿನಲ್ಲಿ ಜೀವಿಸುವ ಪ್ಲವಕಗಳು, ಕೊಳೆಯುತ್ತಿರುವ ಸಸ್ಯ ಸಂಬಂಧೀ ವಸ್ತುಗಳೇ ಪ್ರಧಾನ ಆಹಾರ. ಇವಕ್ಕೆ ದವಡೆ ಹಲ್ಲಿಲ್ಲ. ಹುಲ್ಲು ಗೆಂಡೆ ಮೀನಿಗೆ ಗಂಟಲಿನಲ್ಲಿ ಹಲ್ಲುಗಳಿರುತ್ತವೆ. ಇದರಿಂದ ಅದು ಮೃದು ಜಲಸಸ್ಯಗಳನ್ನು ತಿನ್ನುತ್ತದೆ. ಕೆರೆ ಕುಂಟೆಗಳಲ್ಲಿ ಜಲಸಸ್ಯಗಳ ಜೈವಿಕ ನಿಯಂತ್ರಣಕ್ಕೆ ಇದು ಸೂಕ್ತ ಮೀನು. ಬಹುತೇಕ ಗೆಂಡೆ ಮೀನುಗಳು ತಿನ್ನಲು ಯೋಗ್ಯವಾದಂಥವು. ಒಳನಾಡು ಮೀನುಗಾರಿಕೆಯಲ್ಲಿ ಇವುಗಳ ಪಾತ್ರ ಹಿರಿದು. ಪ್ರಪಂಚಾದ್ಯಂತ 2003 ರಲ್ಲಿ ಸೈಪ್ರಿನಿಡೀ ಕುಟುಂಬಕ್ಕೆ ಸೇರಿದ ಸುಮಾರು 17.85 ದಶಲಕ್ಷಟನ್ ಮೀನುಗಳ ಉತ್ಪಾದನೆಯಾಗಿದೆಯೆಂದರೆ ಮೀನುಗಾರಿಕೆಯಲ್ಲಿ ಇದರ ಪ್ರಾಮುಖ್ಯ ಅರಿವಾಗುತ್ತದೆ. ದೊಡ್ಡಗೆಂಡೆ ಮೀನುಗಳು (ಕಾಟ್ಲಾ, ರೋಹು, ಮೃಗಾಲ) ಮತ್ತು ವಿದೇಶಿ ಗೆಂಡೆ ಮೀನು (ಸಾಮಾನ್ಯ ಗೆಂಡೆ, ಬೆಳ್ಳಿ ಗೆಂಡೆ, ಹುಲ್ಲುಗೆಂಡೆ) ಗಳನ್ನು ಒಂದೇ ಕೊಳದಲ್ಲಿ ಮಿಶ್ರ ಕೃಷಿ ಮಾಡಲು ಸಾಧ್ಯವಾದ್ದರಿಂದ ಹಾಗೂ ಈ ಮೀನುಗಳು ಶೀಘ್ರವಾಗಿ ಅಂದರೆ ವರ್ಷಕ್ಕೆ 1–2 ಕೆಜಿ ವರೆಗೆ ಬೆಳೆಯುವುದರಿಂದ ಮೀನುಕೃಷಿಗೆ ನೆಚ್ಚಿನ ತಳಿಗಳಾಗಿವೆ.

ವಿದೇಶಿ ಗೆಂಡೆಗಳು ಮೂಲತಃ ಚೀನ ಮತ್ತು ಮಧ್ಯ ಏಷ್ಯದ ಸಿಹಿನೀರಿನಲ್ಲಿ ಇದ್ದಂತಹವು. ಕಾಲಕ್ರಮೇಣ ಇವನ್ನು ಸಾಕಾಣೆಗಾಗಿ ಇತರ ದೇಶಗಳಿಗೂ ಕೊಂಡೊಯ್ಯ ಲಾಯಿತು. ಇವುಗಳಲ್ಲಿ ಸಾಮಾನ್ಯಗೆಂಡೆ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಕಾಣಸಿಗುತ್ತದೆ. ಇದು ಉಷ್ಣ ಪ್ರದೇಶಗಳಷ್ಟೆ ಅಲ್ಲದೆ ಸಮಶೀತೋಷ್ಣ ಮತ್ತು ಶೀತ ವಲಯಗಳಲ್ಲೂ ಹೊಂದಿಕೊಂಡು ಬದುಕಬಲ್ಲದ್ದಾಗಿದೆ. ಇದೇ ಮೀನಿನ ಅನೇಕ ತಳಿಗಳಿವೆ. ಉದಾ: ಮಿರರ್ ಕಾರ್ಪ್ (ಕನ್ನಡಿ ಮೀನು), ಸ್ಕೇಲ್ ಕಾರ್ಪ್, ಲೆದರ್ ಕಾರ್ಪ್.

ಗೆಂಡೆ ಮೀನುಗಳು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ದೊಡ್ಡ ಗೆಂಡೆಗಳು ಮೇ–ಆಗಸ್ಟ್ ತಿಂಗಳುಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಸಾಮಾನ್ಯ ಗೆಂಡೆ ವರ್ಷವೆಲ್ಲ ಮೊಟ್ಟೆಯಿಡುತ್ತದಾದರೂ ಜುಲೈ–ಆಗಸ್ಟ್ ಮತ್ತು ಫೆಬ್ರವರಿ–ಮಾರ್ಚಿ ಅವಧಿಯಲ್ಲಿ ಸಂತಾನೋತ್ಪತ್ತಿ ಅಧಿಕ. (ಬಿ.ಎಚ್.ಎಂ.; ಬಿ.ಎನ್.)

**ಗೆಕ್ಕೊ (ಹಲ್ಲಿ) :** ಸ್ಕ್ವಾಮೇಟ ಗಣದ ಗೆಕ್ಕೊನಿಡೆ ಕುಟುಂಬಕ್ಕೆ ಸೇರಿದ ಕೆಲವು ಸರೀಸೃಪಗಳಿಗಿರುವ ಸಾಮಾನ್ಯ ಹೆಸರು. ಉಷ್ಣವಲಯದಲ್ಲೆಲ್ಲಾ ಹರಡಿದೆ. ಭಾರತ, ದಕ್ಷಿಣ ಯುರೋಪ್, ಏಷ್ಯ, ಆಫ್ರಿಕ ಮತ್ತು ಅಮೆರಿಕಗಳಲ್ಲಿ 140ಕ್ಕೂ ಹೆಚ್ಚು ಪ್ರಭೇದಗಳು ಕಂಡುಬರುತ್ತವೆ. ಗೆಕೊ ಗೆಕೊ, ಫೆಲ್ಸುಮೊ ವಿನ್ಸೋನಿ, ಥಿಕಾಡ್ಯಾಕ್ಟೈಲಸ್ ರ್‍ಯಾಪಿಕಾಡಸ್, ಟರಂಟೊಲ ಮ್ಯಾನ್ರಿಟಾನಿಕ ಇವುಗಳಲ್ಲಿ ಕೆಲವು. ಅತಿ ಸಣ್ಣದಾದ ಹಲ್ಲಿಯ ಉದ್ದ 4 ಸೆಂಮೀ. ಟೋಕೆ ಹಲ್ಲಿ ಉಳಿದೆಲ್ಲವುದಕ್ಕಿಂತ ದೊಡ್ಡದು. ಸುಮಾರು 35 ಸೆಂಮೀ ಉದ್ದವಿದೆ.

ಮನೆಯ ಗೋಡೆ ಮೇಲೆಲ್ಲಾ ಹರಿದಾಡುವ ಸಾಮಾನ್ಯ ಹಲ್ಲಿಯ ವೈಜ್ಞಾನಿಕ ನಾಮ ಹೆಮಿಡ್ಯಾಕ್ಟೈಲಸ್ ಟರ್ಸಿಯಸ್. ಉದ್ದ ಸು. 10–12 ಸೆಂಮೀ. ತಲೆ ಗಿಡ್ಡ, ಮೂತಿ ಕೊಂಚ ಚೂಪು, ಬೆರಳುಗಳಲ್ಲಿ ನಖಗಳಿವೆ. ಅಷ್ಟೇ ಅಲ್ಲದೆ ಗೋಡೆಯ ಮೇಲೆ ಹರಿದಾಡಲು ಸಹಕರಿಸುವ ಅಂಟುತಟ್ಟೆಗಳೂ (ಅಡೆಸಿವ್ ಡಿಸ್ಕ್) ಇವೆ. ದೇಹದ ಮೇಲ್ಭಾಗ ಹಳದಿ ಮಿಶ್ರಿತ ಕಂದು. ಉದರ ಭಾಗ ಮಾಸಲು ಬಣ್ಣದ್ದು. ದೇಹ ಹುರುಪೆಗಳಿಂದ ಆವೃತವಾಗಿದೆ. ಬಾಲದ ಬುಡ ಕೊಂಚ ಉಬ್ಬಿಕೊಂಡಿದೆ. ಕಣ್ಣುಗಳು ಚಲಿಸುವ ರೆಪ್ಪೆಗಳಿಂದ ರಕ್ಷಿಸಲ್ಪಟ್ಟಿವೆ. ಕಶೇರುಕಮಣಿಗಳು ಆಂಫಿಸೀಲಸ್ ರೀತಿಯವು. ಇದು ಮಾಂಸಾಹಾರಿ. ಹುಳುಹುಪ್ಪಟೆಗಳು, ಕೀಟಗಳು, ಜೇಡಗಳು ಇತ್ಯಾದಿ ಇದರ ಆಹಾರ ಪ್ರಾಣಿಗಳು. ಶತ್ರುಗಳೆದುರಾದಾಗ ತನ್ನ ಬಾಲವನ್ನು ಕಡಿದುಕೊಳ್ಳುತ್ತದೆ (ಸ್ವಾಂಗೋಚ್ಛೇದನ–ಆಟೋಟೋಮಿ). ಶತ್ರುವಿನ ಗಮನವನ್ನು ತನ್ನಿಂದ ದೂರ ಸೆಳೆಯಲು ಈ ಪ್ರವೃತ್ತಿಯಿರಬೇಕು.

ಪೋಟೋ ಫ್ರೇಮಿನ ಹಿಂದೆಯೋ ಸಂಧಿಗಳಲ್ಲೋ ಸುಮಾರು 0.5–1 ಸೆಂಮೀ ವ್ಯಾಸದ ದುಂಡಾದ ಬಿಳಿಯ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯೊಡೆದು ಮರಿ ಹೊರಬರಲು ತಿಂಗಳುಗಳೇ ಬೇಕು. (ಎಸ್.ಕೆ.ಎಚ್.)

**ಗೆಜ಼ೆಟಿಯರ್ :** ಸ್ಥಳಗಳ, ಪ್ರದೇಶಗಳ, ದೇಶಗಳ ಹೆಸರುಗಳನ್ನೂ ಅವನ್ನು ಕುರಿತ ವಿವರಗಳನ್ನೂ ಒಳಗೊಂಡ ಕೋಶ (ಗೆಜ಼ೆಟಿಯರ್). ಗೆಜೆಟುಗಳಲ್ಲಿ ಅಥವಾ ವೃತ್ತಪತ್ರಿಕೆಗಳಲ್ಲಿ ಬರೆಯುವವನನ್ನು ಗೆಜ಼ೆಟಿಯರ್ ಎಂದು ಕರೆಯುವ ಪರಿಪಾಟಿ 18ನೆಯ ಶತಮಾನದಲ್ಲಿ ಇತ್ತು. ವೃತ್ತಪತ್ರಿಕೆಯನ್ನೂ ಈ ಹೆಸರಿನಿಂದ ಕರೆಯುತ್ತಿದ್ದದ್ದುಂಟು. ಸ್ಥಳಗಳ, ಪ್ರದೇಶಗಳ, ದೇಶಗಳ ವಿವರಣೆ, ಇತಿಹಾಸ, ಅಂಕಿ-ಅಂಶ ಮುಂತಾದವನ್ನು ಸುದೀರ್ಘವಾಗಿ ಒಳಗೊಂಡ ಕೋಶಸದೃಶ ಗ್ರಂಥಗಳನ್ನು ಭೌಗೋಳಿಕ ನಿಘಂಟು ಎಂದು ಕರೆಯುವುದುಂಟಾದರೂ ಮೇಲೆ ಹೇಳಿದ ಹೆಸರು ಹೆಚ್ಚು ವಾಡಿಕೆಯಲ್ಲಿದೆ. ವರ್ಣಾನುಕ್ರಮದಲ್ಲಿ ನದಿ, ಪರ್ವತ, ಗ್ರಾಮ, ನಗರ ಮುಂತಾದವುಗಳ ಬಗ್ಗೆ ಮಾಹಿತಿ ನೀಡುವ ಕೋಶವೆಂಬ ಈ ಶಬ್ದದ ಅರ್ಥ ಕ್ರಮೇಣ ವಿಸ್ತೃತವಾಗಿ, ಯಾವುದಾದರೊಂದು ದೇಶದ, ಪ್ರದೇಶದ, ವಿಭಾಗದ ರಾಜಕೀಯ, ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಔದ್ಯೋಗಿಕ ವಿಷಯಗಳ ಸಮಗ್ರ ವಿವರಗಳನ್ನು ತಿಳಿಸುವ ಗ್ರಂಥವೆಂದು ಇದು ಪ್ರಸಿದ್ಧಿ ಹೊಂದಿತು. ಯಾವುದಾದರೊಂದು ಪ್ರದೇಶದ ಭೌಗೋಳಿಕ ಸೂಚಿ ಎಂಬ ಅರ್ಥದಲ್ಲಿ ಈ ಶಬ್ದವನ್ನು 1704ರಲ್ಲಿ ಲಾರೆನ್ಸ್ ಎಕಾರ್ಡ್ ಎಂಬುವನು ಬಳಸಿದ. 6ನೆಯ ಶತಮಾನದ ಆರಂಭದಲ್ಲಿ ಬೈಜ಼ಾಂಟಿಯಮ್‌ನ ಸ್ಟೀವನ್ ಎಂಬಾತ ಈ ಬಗೆಯ ಕೃತಿಯನ್ನು ರಚಿಸಿದ್ದ. ಆದರೆ ದುರದೃಷ್ಟದಿಂದ ಈ ಗ್ರಂಥದ ಕೆಲವು ತುಣುಕುಗಳು ಮಾತ್ರ ದೊರೆತಿವೆ. ಈಗಿನ ಗೆಜ಼ೆಟಿಯರುಗಳಿಗೆ ಹೋಲಿಸಬಹುದಾದ ಒಂದು ಕೃತಿ ಹೊರಬಂದದ್ದು 16ನೆಯ ಶತಮಾನದಲ್ಲಿ. ಇದು ಚಾರ್ಲ್ಸ್ ಸ್ಟೀವೆನ್ಸನಿಂದ ರಚಿತವಾಗಿ ಜಿನೀವದಿಂದ ಪ್ರಕಟವಾದ ಡಿಕ್ಷನೇರಿಯಮ್ ಹಿಸ್ಟಾರಿಕೊ-ಜಿಯಾಗ್ರಫಿಕಮ್ (1565). ಇದರ ತರುವಾಯ ಫೆರೈನ ಲೆಕ್ಸಿಕನ್ ಜಿಯಾಗ್ರಾಫಿಕಮ್ (1627), ಬಾದ್ರಾದನ ಜಿಯಾಗ್ರಫಿಯಾ ಆರ್ಡಿನೆ ಲಿಟರೇರಮ್ ಡಿಸ್‌ಪೊಸಿಟಾ (1682), ಲೇ ಮಾರ್ಟಿನೈರನ ಡಿಕ್ಷನೇರ್ ಜಿಯಾಗ್ರಫಿಕ್ ಹಿಸ್ಟಾರಿಕ್ ಎಟ್ ಕ್ರಿಟಿಕ್ (1726) ಮತ್ತು ಇವುಗಳ ಆಧಾರದ ಮೇಲೆ ರಚಿತವಾದ ಇತರ ಹಲವು ವಿಷಯ ಕೋಶಗಳು ಪ್ರಕಟಗೊಂಡವು. ಜರ್ಮನ್ ಭೂಗೋಳಶಾಸ್ತ್ರಜ್ಞ ಜಿ.ಎಚ್. ಹ್ಯಾಸೆಲನ ಜಿಯಾಗ್ರಫಿಶ್ಚ್-ಸ್ಟ್ಯಾಟಿಸ್ಟಿಕ್ ಹ್ಯಾಂಡ್‌ವೊರ್ಟರ್‌ಬಕ್ (1817) ಸಂಶೋಧನಾತ್ಮಕವಾದ, ಮುಂದಿನ ಗೆಜ಼ೆಟಿಯರುಗಳಿಗೆ ಮಾದರಿಯಾದ ಕೃತಿ. ಕೆಲವು ಮುಖ್ಯವಾದ ಇಂಗ್ಲಿಷ್ ಮತ್ತು ಅಮೆರಿಕನ್ ಗೆಜ಼ೆಟಿಯರುಗಳೆಂದರೆ ಕ್ರಟ್‌ವೆಲನ ಯೂನಿವರ್ಸಲ್ ಗೆಜ಼ೆಟಿಯರ್ಸ್ (1808), ದಿ ಎಡಿನ್‌ಬರ್ಗ್ ಗೆಜ಼ೆಟಿಯರ್ (1817-22), ಮ್ಯಾಕ್ ಕುಲಕ್‌ನ ಜಿಯಾಗ್ರಫಿಕಲ್ ಡಿಕ್ಷನರಿ (1851), ಬ್ಲಾಕಿಯ ಇಂಪೀರಿಯಲ್ ಗೆಜ಼ೆಟಿಯರ್ (1850), ಲಿಪಿನ್‌ಕಾಟ್‌ನ ಪ್ರೊನೌನ್ಸಿಂಗ್ ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ (1855, 1911 ಮತ್ತು 1922), ಮೆರಿಯಮ್ - ವೆಬ್‌ಸ್ಟರ್‌ನ ಜಿಯಾಗ್ರಫಿಕಲ್ ಡಿಕ್ಷನರಿ (1949). ಡಿಕ್ಷನೇರ್ ಜಿಯಾಗ್ರಾಫಿಕ್ ಯೂನಿವರ್ಸಲ್ (ಫ್ರೆಂಚ್), ರಿಟರ್‌ನ ಜಿಯಾಗ್ರಫಿಶ್ಚ್ ಸ್ಟ್ಯಾಟಿಸ್ಟಿಕ್ (ಜರ್ಮನ್), ಗ್ಯಾರೊಲೋನ ಡಿಜಿಯೊನರಿಯೋ ಜಿಯಾಗ್ರಫಿಕೋ ಯೂನಿವರ್ಸಲೆ (ಇಟಲಿ, 1898) ಮತ್ತು ಹಂಟರನ ಗೆಜ಼ೆಟಿಯರ್ ಆಫ್ ಇಂಡಿಯ- ಇವು ಕೆಲವು ಗಮನಾರ್ಹ ಗೆಜ಼ೆಟಿಯರುಗಳು. ಜಾನ್‌ಸ್ಟನ್‌ನ ಡಿಕ್ಷನರಿ ಆಫ್ ಜಿಯಾಗ್ರಫಿ (1850), ವಿವಿನ್ ದ ಸೇಂಟ್ ಮಾರ್ಟಿನ್‌ನ ನೋವೆ ಡಿಕ್ಷನೈರೆ ಡೆ ಜಿಯಾಗ್ರಫಿಯೆ (1879-1900), ಲಾಂಗ್‌ಮನ್ಸ್ ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ (1895), ಕೆಂಡೆಯ ಜಿಯಾಗ್ರಾಫಿಶ್ಚ್ ವೊರ್ಟರ್‌ಬಕ್ (1921), ಎವಾಲ್ಡ್ ಎಚ್. ಎ. ಬಾನ್ಸೆಯ ಲೆಕ್ಸಿಕನ್ ಡರ್ ಜಿಯಾಗ್ರಫಿಯೆ (1923), ರೇನಾಲ್ಡ್‌ನ ಕಾಂಪ್ರೆಹೆನ್ಸಿವ್ ಅಟ್ಲಾಸ್ ಮತ್ತು ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ (1925) ಮುಂತಾದವು ಇತರ ಕೆಲವು ಪ್ರಸಿದ್ಧ ಗೆಜ಼ೆಟಿಯರುಗಳು. ಇವುಗಳಲ್ಲಿ ಅನೇಕ ಗೆಜ಼ೆಟಿಯರುಗಳು ಹೊಸ ಆವೃತ್ತಿಗಳನ್ನು ಕಂಡಿವೆ. ಲಾಂಗ್‌ಮನ್ಸ್‌ನ ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ ಎಂಬ ಕೃತಿಯನ್ನು ಲಂಡನಿನ ಟೈಮ್ಸ್ ಪತ್ರಿಕೆ ಪಡೆದು ದಿ ಟೈಮ್ಸ್ ಗೆಜ಼ೆಟಿಯರ್ ಎಂದು ಪುನಃ ಪ್ರಕಟಿಸಿತು. ಇಟಲಿಯ ನ್ಯೂಮನ್, ರಷ್ಯದ ಸಮ್ಯೊನಾವ್ ಮತ್ತು ಭಾರತದಲ್ಲಿ ಹಂಟರ್ ಪ್ರಖ್ಯಾತ ಗೆಜ಼ೆಟಿಯರ್ ಲೇಖಕರಾಗಿದ್ದರು. ಎಡ್ವರ್ಡ್ ಥಾರ್ನ್‌ಟನ್ನನ ಗೆಜ಼ೆಟಿಯರ್ (1844) ಮತ್ತು ವಾಲ್ಟರ್ ಹ್ಯಾಮಿಲ್ಟನನ ಈಸ್ಟ್ ಇಂಡಿಯ ಗೆಜ಼ೆಟಿಯರ್ (1895) ಅವರ ಪ್ರಯತ್ನಗಳಿಂದ ಪ್ರಕಟವಾದುವು.

**ಭಾರತದಲ್ಲಿ :** ಒಂದು ದೃಷ್ಟಿಯಿಂದ ಗೆಜ಼ೆಟಿಯರಿನಂಥ ಸಾಹಿತ್ಯದ ರಚನೆ ಪ್ರಾದೇಶಿಕ ವರ್ಣನೆಗಳನ್ನೊಳಗೊಂಡ ಅನೇಕ ಪುರಾಣಗಳ ಕಾಲದಿಂದಲೇ ಪ್ರಾರಂಭವಾಯಿತೆನ್ನಬಹುದು. ಒಂದು ದೇಶದ ಭೌಗೋಳಿಕ ಲಕ್ಷಣಗಳು, ಅಲ್ಲಿಯ ಜನರ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಜೀವನ ಇವನ್ನು ಕುರಿತು ಪ್ರವಾಸಿಗಳು ನೀಡುವ ವೃತ್ತಾಂತಗಳು ಸಾಹಿತ್ಯದ ಒಂದು ಬಗೆಯೆಂದು ಸಾಕಷ್ಟು ಪ್ರಾಚೀನ ಕಾಲದಲ್ಲಿ ಪರಿಚಿತವಾಗಿವೆ. ಇವನ್ನು ಕೂಡ ಕೆಲವೊಮ್ಮೆ ಗೆಜ಼ೆಟಿಯರ್ ವರ್ಗಕ್ಕೆ ಸೇರಿಸಲಾಗಿದೆ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಸ್ಕೈಲಾಕ್ಸ್, ಇನ್ನೂರು ವರ್ಷಗಳ ಅನಂತರ ಮೆಗಾಸ್ತನೀಸ್-ಇವರು ಭಾರತದ ಬಗ್ಗೆ ವೃತ್ತಾಂತಗಳನ್ನು ವರದಿಮಾಡಿದರು. ಕೌಟಿಲ್ಯನ ಅರ್ಥಶಾಸ್ತ್ರ ಮೌರ್ಯಕಾಲೀನ ಭಾರತದ ಬಗ್ಗೆ ಭೌಗೋಳಿಕ ಮತ್ತಿತರ ವಿಷಯಗಳ ಅಂಕಿ-ಅಂಶ ಸಹಿತವಾದ ಅಮೂಲ್ಯ ವಿವರಗಳನ್ನೊದಗಿಸುತ್ತದೆ. ಆಲ್ಬೆರೂನಿಯ ಇಂಡಿಕಾ ಸೂಕ್ಷ್ಮ ಅವಲೋಕನ ಮತ್ತು ವೈಜ್ಞಾನಿಕ ವಿಶ್ಲೇಷಣೆಗಳಿಗೆ ಉದಾಹರಿಸಬಹುದಾದ ಕೃತಿ. ಅಬುಲ್ ಫಜ಼ಲನ ಐನೇ ಅಕ್ಬರಿ ವ್ಯವಸ್ಥಿತ ಸಂಶೋಧನೆ ಹಾಗೂ ಅಸಾಧಾರಣ ಪ್ರಯತ್ನಗಳ ಫಲ; ಅಕ್ಬರನ ರಾಜ್ಯ ಪದ್ಧತಿ, ಆಗಿನ ಕಾಲದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ, ಸೈನ್ಯ ಪರಿವೀಕ್ಷಣೆ ಮುಂತಾದ ವಿವರಗಳನ್ನು ನೀಡುವ ಗ್ರಂಥ. ಮೊಗಲ್ ಹಾಗೂ ಮರಾಠಾ ರಾಜ್ಯಗಳಲ್ಲಿ ಅಲ್ಲಲ್ಲಿಯ ಮುಖ್ಯ ಸ್ಥಳಗಳಲ್ಲಿ ಅಖ್‌ಬಾರನ್‌ವೀಸ್ ಎಂಬ ಅಧಿಕಾರಿಗಳನ್ನು ನೇಮಿಸಲಾಗಿತ್ತು. ಅವರು ತಮ್ಮ ಮೇಲಧಿಕಾರಿಗಳಿಗೆ ಆಗಾಗ್ಗೆ ವಿಶೇಷ ವಿವರಣೆಗಳನ್ನುಳ್ಳ ಪತ್ರಿಕೆಗಳನ್ನು ಕಳುಹಿಸುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳಿಗೆ ತಮ್ಮ ಆಡಳಿತದಲ್ಲಿದ್ದ ಪ್ರದೇಶಗಳ ಪರಿಚಯ ಮಾಡಿಕೊಡಲು ಗೆಜ಼ೆಟಿಯರ್ ರಚನೆ ಆವಶ್ಯಕವಾಯಿತು. ಭೂಗೋಳ, ಇತಿಹಾಸ, ನಿಸರ್ಗಸಂಪತ್ತು, ಉದ್ಯೋಗ, ವ್ಯಾಪಾರ, ಪಶುಪಕ್ಷಿ, ಅರಣ್ಯ, ನದೀನಾಲೆಗಳು, ಜನ, ಜಾತಿ, ಸಮೂಹ, ರೀತಿ ನೀತಿಗಳು, ಧರ್ಮ ಮತ್ತು ಧರ್ಮಭೇದಗಳು, ಸಾಂಸ್ಕೃತಿಕ ಜೀವನ, ಭಾಷಾವಿವರ, ಸಾಹಿತ್ಯ ಇತ್ಯಾದಿಗಳ ಪರಿಚಯ ಮಾಡಿಕೊಡುವ ಉದ್ದೇಶದಿಂದ ಗೆಜ಼ೆಟಿಯರ್ ರಚನೆ ಆರಂಭವಾಯಿತು. ಈಸ್ಟ್ ಇಂಡಿಯ ಕಂಪನಿಯ ಕಾಲದಲ್ಲೆ 1843ರಲ್ಲಿ ಮುಂಬಯಿ ಇಲಾಖೆಯಲ್ಲಿ ಅಲ್ಲಿಯ ಜಿಲ್ಲೆಗಳ ಬಗ್ಗೆ ಅಂಕಿ-ಅಂಶ ಸಹಿತವಾದ ವಿವರಗಳನ್ನು ಕೊಡುವ ಕೆಲಸ ಆರಂಭವಾಯಿತು. 1857ರಲ್ಲಿ ರಿಚರ್ಡ್ ಟೆಂಪಲ್ ಎಂಬಾತ ಮಧ್ಯ ಭಾರತದ ಜಿಲ್ಲಾ ಗೆಜ಼ೆಟಿಯರುಗಳನ್ನು ರಚಿಸುವ ಕಾರ್ಯವನ್ನು ಕೈಗೊಂಡ. ಮುಂಬಯಿಯ ಜಿಲ್ಲಾ ಗೆಜ಼ೆಟಿಯರ್ ನಿರ್ಮಾಣ 1874ರಲ್ಲಿ ಆರಂಭವಾಗಿ 1884ರಲ್ಲಿ ಪೂರ್ಣಗೊಂಡಿತು. ಮುಂದೆ 27 ವರ್ಷ ಇವುಗಳ ಮುದ್ರಣಕಾರ್ಯ ನಡೆಯಿತು. 1869ರಲ್ಲಿ ವಿಲಿಯಮ್ ಹಂಟರ್ ಇಂಪೀರಿಯಲ್ ಗೆಜ಼ೆಟಿಯರ್ ಆಫ್ ಇಂಡಿಯವನ್ನು ತಯಾರಿಸುವ ಬೃಹತ್ ಯೋಜನೆಯೊಂದನ್ನು ಸರ್ಕಾರಕ್ಕೆ ಸಲ್ಲಿಸಿದ. ಈ ಯೋಜನೆಗೆ 1871ರಲ್ಲಿ ಮಾನ್ಯತೆ ದೊರೆಯಿತು. 1881ರಲ್ಲಿ ಇದರ ಒಂಬತ್ತು ಸಂಪುಟಗಳು ಪ್ರಕಟವಾದುವು. ಇದರ ಪರಿಷ್ಕೃತ ಆವೃತ್ತಿ 14 ಸಂಪುಟಗಳಲ್ಲಿ 1885-87ರಲ್ಲಿ ಹೊರಬಂತು. ಇವುಗಳಲ್ಲಿ ದಿ ಇಂಡಿಯನ್ ಎಂಪೈರ್ ಎಂಬ ಸಂಪುಟವೂ ಸೇರಿದೆ. ಇಂಪೀರಿಯಲ್ ಗೆಜ಼ೆಟಿಯರನ್ನು ಭಾರತೀಯ ಜೀವನ ಮತ್ತು ಸಂಸ್ಕೃತಿಗಳ ಎಲ್ಲ ಅಂಶಗಳನ್ನೊಳಗೊಂಡ ವ್ಯಾಪಕ ಅಧ್ಯಯನಕ್ಕೆ ಅರ್ಹವಾದ, ಅಧಿಕೃತವಾದ ಗೆಜ಼ೆಟಿಯರ್ ಎಂದು ಪರಿಗಣಿಸಲಾಯಿತು. ಲಾರ್ಡ್ ಕರ್ಜನ್ ಇಂಪೀರಿಯಲ್ ಗೆಜ಼ೆಟಿಯರ್‌ಗಳ ಪುನರ್ ಮುದ್ರಣಕ್ಕೆ ಆಜ್ಞೆ ನೀಡಿದ. ಹೊಸ ವಿಷಯಗಳನ್ನು ಸೇರಿಸಿ 1904-1909ರಲ್ಲಿ 26 ಸಂಪುಟಗಳಲ್ಲಿ ಇವನ್ನು ಪ್ರಕಟಿಸಲಾಯಿತು. ಮೊದಲ 4 ಸಂಪುಟಗಳು ಹಂಟರನ ಇಂಡಿಯನ್ ಎಂಪೈರ್‌ನ ಪರಿಷ್ಕೃತ ಪಾಠ. ಮುಂದಿನ 20 ಸಂಪುಟಗಳು ಅಕಾರಾದಿಯಲ್ಲಿವೆ. ಕೊನೆಯ ಎರಡು ಸಂಪುಟಗಳು ಸೂಚಿ ಹಾಗೂ ಭೂಪಟಗಳನ್ನೊಳಗೊಂಡಿವೆ. ಸ್ವಾತಂತ್ರ್ಯಾನಂತರ ಇಂಪೀರಿಯಲ್ ಗೆಜ಼ೆಟಿಯರಿನ ಎರಡನೆಯ ಆವೃತ್ತಿಯ ಪುನರ್ಮುದ್ರಣ ಹೊರಬಿದ್ದಿದೆ. ಇದನ್ನು ಪುನರ್‌ಮುದ್ರಣವೆನ್ನುವುದಕ್ಕಿಂತ ಸರ್ವವಿಧದಲ್ಲೂ ಪರಿಷ್ಕೃತವಾದ ಹೊಸ ಆವೃತ್ತಿಯೆಂದೇ ಪರಿಗಣಿಸಬಹುದಾಗಿದೆ. ದಿ ಇಂಡಿಯನ್ ಎಂಪೈರ್ ಎಂಬ ಹಿಂದಿನ ಒಂದು ಸಂಪುಟ ಈಗ ವಿವರಣಾತ್ಮಕ, ಐತಿಹಾಸಿಕ, ಆರ್ಥಿಕ, ಆಡಳಿತ ಸಂಬಂಧಿ ಎಂದು ನಾಲ್ಕು ಸಂಪುಟಗಳಾಗಿ ಬೆಳೆದಿದೆ.

1867ರಲ್ಲಿ ಭಾರತದ ಸ್ಟೇಟ್ ಸೆಕ್ರೆಟರಿಯ ಆಜ್ಞೆಯ ಪ್ರಕಾರ ಎಲ್ಲ ಪ್ರಾಂತ್ಯಗಳ ಗೆಜ಼ೆಟಿಯರುಗಳನ್ನು ಸಿದ್ಧಪಡಿಸುವ ಸೂಚನೆ ಬಂದದ್ದರಿಂದ 1874ರಲ್ಲಿ ಜೇಮ್ಸ್ ಕ್ಯಾಂಪ್‌ಬೆಲನ ನೇತೃತ್ವದಲ್ಲಿ ಈ ಕಾರ್ಯ ಆರಂಭವಾಗಿ 1884ರ ವರೆಗೆ ನಡೆಯಿತು. 1877-1904ರ ನಡುವೆ ಬಾಂಬೆ ಗೆಜ಼ೆಟಿಯರಿನ 33 ಸಂಪುಟಗಳು ಪ್ರಕಾಶಗೊಂಡುವು. ಇವುಗಳಲ್ಲಿ 18 ಜಿಲ್ಲೆಗಳ ಜೊತೆಗೆ ಬರೋಡ, ಕೊಲ್ಲಾಪುರ ಮುಂತಾದ ಸಂಸ್ಥಾನಗಳೂ ಸಮಾವೇಶವಾಗಿವೆ. ಇದಕ್ಕೂ ಮೊದಲು, ಕೊಲ್ಲಾಪುರದಲ್ಲಿ ರಾಜಪ್ರತಿನಿಧಿಯಾಗಿದ್ದ ಮೇಜರ್ ಗ್ರಹಾಮ್ ಕೊಲ್ಲಾಪುರ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಎಂಬ ಗೆಜ಼ೆಟಿಯರನ್ನು ಸಿದ್ಧಪಡಿಸಿ ಪ್ರಕಟಿಸಿದ (1843-44). ಬಹಳ ಸೊಗಸಾಗಿರುವ, ಇತರ ಗೆಜ಼ೆಟಿಯರುಗಳಿಗೆ ಮಾದರಿಯಾಗಿರುವ ಇದು ರಾಜಕಾರ್ಯನಿರ್ವಾಹಕರಿಗೆ ಬೇಕಾದ ಮಾಹಿತಿಗಳನ್ನೊದಗಿಸುತ್ತದೆ. ಬಾಂಬೆ ಗೆಜ಼ೆಟಿಯರ್ ಮಾದರಿಯನ್ನನುಸರಿಸಿ ಬೆಂಗಾಲ್ ಗೆಜ಼ೆಟಿಯರ್

ಮತ್ತು ಇಂಪೀರಿಯಲ್ ಗೆಜೆಟಿಯರ್‌ಗಳು ಸಿದ್ಧವಾದುವು. ಹಾಗೆಯೇ ಮದ್ರಾಸ್ ಗೆಜೆಟಿಯರ್ ಹಾಗೂ ಮೈಸೂರ್ ಗೆಜೆಟಿಯರ್‌ಗಳು ಪ್ರಕಟವಾದುವು.

ಏಕೀಕರಣದ ತರುವಾಯ ಕರ್ನಾಟಕದ ವ್ಯಾಪ್ತಿಗೆ ಹಲವಾರು ರಾಜ್ಯಗಳಿಂದ ಭೂ ಪ್ರದೇಶಗಳು ವಿಲೀನಗೊಂಡವು. ಆ ವೇಳೆಗಾಗಲೇ ಆಯಾ ಪ್ರದೇಶಗಳಲ್ಲಿ ಗೆಜೆಟಿಯರ್‌ಗಳು ಪ್ರಕಟಗೊಂಡಿದ್ದವು. 1870ರಲ್ಲಿ ಕೊಡಗು ಪ್ರಾಂತ್ಯದ ಗೆಜೆಟಿಯರನ್ನು ರೆವರೆಂಡ್ ಜಿ. ರಿಚರ್ ಅವರೂ; 1883–84ರಲ್ಲಿ ಬಿಜಾಪುರ, ಧಾರವಾಡ, ಬೆಳಗಾವಿ ಹಾಗೂ ಕೆನರ (ಉತ್ತರ ಕನ್ನಡ) ಗೆಜೆಟಿಯರ್‌ಗಳನ್ನು ಜೇಮ್ಸ್ ಎಂ. ಕ್ಯಾಂಪ್‌ಬೆಲ್ ಅವರೂ; ದಕ್ಷಿಣ ಕನ್ನಡ ಜಿಲ್ಲೆಯ ಮ್ಯಾನ್ಯುಯಲ್‌ನ ಮೊದಲ ಸಂಪುಟವನ್ನು 1894ರಲ್ಲಿ ಜಾನ್ ಸ್ಟರ್ಕ್ ಹಾಗೂ ಎರಡನೆಯ ಸಂಪುಟವನ್ನು 1895ರಲ್ಲಿ ಹೆರಾಲ್ಡ್ ಎ. ಸ್ಟುವರ್ಟ್ ಅವರೂ; ಬಳ್ಳಾರಿ ಜಿಲ್ಲೆಯ ಮ್ಯಾನ್ಯುಯಲ್ ಅನ್ನು 1872ರಲ್ಲಿ ಜಾನ್ ಕೆಲ್‌ಸೆಲ್ ಹಾಗೂ ಅದರ ಪರಿಷ್ಕೃತ ಆವೃತ್ತಿಯನ್ನು 1904ರಲ್ಲಿ ವಿಲಿಯಂ ಫ್ರಾನ್ಸಿಸ್ ಅವರೂ ಪ್ರಕಟಿಸಿದರು. ಅಲ್ಲದೆ ಈ ಎಲ್ಲ ಗೆಜೆಟಿಯರ್‌ಗಳಿಗೂ ಬೇರೆ ಬೇರೆ ಸಂದರ್ಭಗಳಲ್ಲಿ ಪುರವಣಿಗಳನ್ನು ಹೊರತರಲಾಯಿತು. ಕಳೆದ ಶತಮಾನದ ಆದಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಬೀದರ್, ಗುಲ್ಬರ್ಗ ಹಾಗೂ ರಾಯಚೂರು ಗೆಜೆಟಿಯರ್‌ಗಳು ಪ್ರಕಟವಾದಂತೆ ತಿಳಿದುಬರುತ್ತದೆ. ಆದರೆ ಅವುಗಳ ಪುರವಣಿಗಳು ಸ್ವಾತಂತ್ರ್ಯಾನಂತರ ಪ್ರಕಟವಾಗಿದ್ದು ಲಭ್ಯವಿವೆ. ಹಿಂದೆ ಕ್ಯಾಂಪ್‌ಬೆಲ್ ಪ್ರಕಟಿಸಿದ್ದ ಮುಂಬಯಿ ಕರ್ನಾಟಕ ಪ್ರಾಂತ್ಯದ ನಾಲ್ಕು ಗೆಜೆಟಿಯರ್‌ಗಳನ್ನು 1893ರಲ್ಲಿ ವೆಂಕಟರಂಗೋಕಟ್ಟಿಯವರು ಕನ್ನಡಕ್ಕೆ ಸಂಕ್ಷಿಪ್ತಾನುವಾದ ಮಾಡಿ ಒಂದು ಸಂಪುಟದಲ್ಲಿ ಪ್ರಕಟಿಸಿದರು.

ಮೈಸೂರಿನ ಗೆಜೆಟಿಯರನ್ನು ಸಿದ್ಧಪಡಿಸಬೇಕೆಂಬ ವಿಚಾರ ಬಂದಿದ್ದು 1867ರಲ್ಲಿ. ಆದರೆ, ಕಾರಣಾಂತರದಿಂದ ಮೈಸೂರು ಮತ್ತು ಕೋಲಾರ ಜಿಲ್ಲೆಗಳಿಗೆ ಸಂಬಂಧಿಸಿದ ಎರಡು ಸಂಪುಟಗಳು ಮಾತ್ರ ಹೊರಬಂದವು. ಈ ಸಂಪುಟಗಳನ್ನು ಕ್ರಮವಾಗಿ ಎಚ್.ವೆಲ್ಲೆಸ್ಲಿ ಹಾಗೂ ಬಿ. ಕೃಷ್ಣಯ್ಯಂಗಾರ್ ಸಂಪಾದಿಸಿದ್ದರು. ಅಂದಿನ ವಿದ್ಯಾಧಿಕಾರಿಗಳಾಗಿದ್ದ ಬಿ.ಎಲ್. ರೈಸ್ ಅವರಿಗೆ ಗೆಜೆಟಿಯರ್ ತಯಾರಿಸುವ ಕಾರ್ಯವಹಿಸಲಾಗಿ ಅದರಂತೆ 1876–77ರಲ್ಲಿ ಮೂರು ಸಂಪುಟಗಳಲ್ಲಿ ಮೈಸೂರು ಹಾಗೂ ಕೊಡಗು ರಾಜ್ಯ ಗೆಜೆಟಿಯರ್‌ಗಳನ್ನು ಇವರು ಹೊರತಂದರು. ಮೈಸೂರು ಸಂಸ್ಥಾನವನ್ನು ಕುರಿತಾದ 2 ಸಂಪುಟಗಳಲ್ಲಿ ಮೊದಲನೆಯದು ಸಂಸ್ಥಾನದ ಬಗ್ಗೆಯೂ ಎರಡನೆಯದು ಅಂದಿನ ಎಂಟು ಜಿಲ್ಲೆಗಳ ಬಗ್ಗೆಯೂ ಮಾಹಿತಿ ನೀಡುತ್ತವೆ. 1897ರಲ್ಲಿ ರೈಸರೇ ಈ ಎರಡು ಗೆಜೆಟಿಯರ್ ಸಂಪುಟಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಈ ಆವೃತ್ತಿ ಸಮಕಾಲೀನ ಐತಿಹಾಸಿಕ ಸಂಶೋಧನೆಗಳನ್ನು ಸಹ ಒಳಗೊಂಡಿತ್ತು. 1877ರಲ್ಲಿ ಹಂಟರ್‌ನ ಸಂಪಾದಕತ್ವದಲ್ಲಿ ಭಾರತಕ್ಕೆ ಸಂಬಂಧಿಸಿದಂತೆ ಇಂಪೀರಿಯಲ್ ಗೆಜೆಟಿಯರಿನ ಸಂಪುಟಗಳು ಹೊರಬಂದವು. ಅವುಗಳಲ್ಲಿ ಅಂದಿನ ಮೈಸೂರು ಹಾಗೂ ಕೊಡಗು ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ರೈಸ್ ಅವರೇ ಪೂರೈಸಿಕೊಟ್ಟಿದ್ದು ಅನಂತರ 1909ರ ಸುಮಾರಿನಲ್ಲಿ ಅವುಗಳನ್ನು ಸಂಗ್ರಹಿಸಿ ಪ್ರೊವಿಂಡೆಯಲ್ ಗೆಜೆಟಿಯರ್ ಮಾಲಿಕೆಯಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದರು.

1911ರ ಜನಗಣತಿಯ ಸಂಬಂಧದಲ್ಲಿ ಮೈಸೂರ್ ಗೆಜೆಟಿಯರಿನ ಹೊಸ ಆವೃತ್ತಿಯನ್ನು ಸಿದ್ಧಪಡಿಸಬೇಕೆಂದು ಅಂದಿನ ಮೈಸೂರು ಸರ್ಕಾರ ನಿರ್ಣಯಿಸಿ, 1914ರಲ್ಲಿ ಈ ಕಾರ್ಯವನ್ನು ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿದ್ದ ಆರ್. ನರಸಿಂಹಾಚಾರ್ಯರಿಗೆ ವಹಿಸಿತು. ಅವರ ಅನಂತರ ವಿ.ಆರ್. ತ್ಯಾಗರಾಜಅಯ್ಯರ್ ಈ ಕಾರ್ಯವನ್ನು ವಹಿಸಿಕೊಂಡರು. 1924ರಲ್ಲಿ ಸಿ. ಹಯವದನ ರಾಯರನ್ನು ಇದರ ಸಂಪಾದಕರನ್ನಾಗಿ ನೇಮಿಸಲಾಯಿತು. ಮೈಸೂರ್ ಗೆಜೆಟಿಯರಿನ ಹೊಸ ಆವೃತ್ತಿ ಏಳು ಸಂಪುಟಗಳಲ್ಲಿ 1926–27ರಲ್ಲಿ ಹೊರಬಂತು. ಹಿಂದಿನ ಮೊದಲ ಸಂಪುಟ ಈಗ ವಿವರಣಾತ್ಮಕ, ಐತಿಹಾಸಿಕ, ಆರ್ಥಿಕ, ಆಡಳಿತ ಎಂದು ನಾಲ್ಕು ಸಂಪುಟಗಳಾಗಿ ಬೆಳೆಯಿತು. ಎರಡು ಸಂಪುಟಗಳು ಮೈಸೂರು ಸಂಸ್ಥಾನದ ಅಂದಿನ ಜಿಲ್ಲೆಗಳಿಗೆ ಸಂಬಂಧಿಸಿದ್ದು.

ಸ್ವಾತಂತ್ರ್ಯಾನಂತರ ಅನೇಕ ಸಂಸ್ಥಾನಗಳ ವಿಲೀನೀಕರಣ, ರಾಜ್ಯ ಪುನರ್ವಿಂಗಡಣೆ ಇತ್ಯಾದಿಗಳಿಂದಾಗಿ ಹೊಸ ಗೆಜೆಟಿಯರುಗಳ ರಚನೆಯ ಆವಶ್ಯಕತೆಯುಂಟಾಯಿತು. ಇದಕ್ಕಾಗಿ ಕೇಂದ್ರ ಸರ್ಕಾರ ಭಾರತೀಯ ಗೆಜೆಟಿಯರ್‌ಗಳ ಇಲಾಖೆಯೊಂದನ್ನು ಆಯೋಜಿಸಿತು. ಎಲ್ಲ ರಾಜ್ಯಗಳು ಪ್ರತ್ಯೇಕವಾಗಿ ಇಲ್ಲವೆ ರಾಜ್ಯ ಪುರಾತತ್ತ್ವ, ರಾಜ್ಯ ಪತ್ರಾಗಾರ ಅಥವಾ ರಾಜ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗಳಲ್ಲಿ ಆಯಾ ರಾಜ್ಯದ ಜಿಲ್ಲಾವಾರು ಗೆಜೆಟಿಯರ್‌ಗಳನ್ನು ಸಿದ್ಧಪಡಿಸಲು ವಿಭಾಗವೊಂದನ್ನು ತೆರೆಯಲಾಯಿತು. ರಾಜ್ಯಪ್ರತಿನಿಧಿಗಳ ಗೋಷ್ಠಿಯೊಂದನ್ನು 1955ರಲ್ಲಿ ಕರೆಯಲಾಯಿತು. ಮುಂಬಯಿ ರಾಜ್ಯದಲ್ಲಿ ಆ ಮೊದಲೇ (1949) ಈ ಕಾರ್ಯ ಆರಂಭವಾಗಿತ್ತು. ಬ್ರಿಟಿಷರ ಕಾಲದ ಗೆಜೆಟಿಯರುಗಳು ಅವರ ಅಧಿಕಾರಿಗಳಿಗೆ ಉಪಯುಕ್ತವಾಗುವಂತೆ ರಚಿತವಾಗಿದ್ದುವು. ಆದರೆ ಹೊಸ ಗೆಜೆಟಿಯರುಗಳ ತಯಾರಕರು ಯಾವುದೇ ಬಗೆಯ ಪೂರ್ವಗ್ರಹಪೀಡಿತರಾಗದೆ ವಸ್ತುನಿಷ್ಠವಾಗಿ ವಿಷಯಗಳನ್ನು ನಿರೂಪಿಸುವ, ವಾದಗ್ರಸ್ತ ವಿಷಯಗಳ ಚರ್ಚೆಗೆ ಇಳಿಯದೆ ಅವಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ವಾಚಕರಿಗೆ ಒದಗಿಸುವ ನಿಯಮವನ್ನು ಪಾಲಿಸಿಕೊಂಡು ಬಂದರು. ಅಂದಿನ ಮತ್ತು ಈಗಿನ ಆವಶ್ಯಕತೆಗಳನ್ನು ಲಕ್ಷಿಸಿ ಹೊಸ ಹೊಸ ವಿಷಯಗಳನ್ನು ಸೇರಿಸುವ ನಿಯಮಾವಳಿಯನ್ನು ಹಾಕಿಕೊಳ್ಳಲಾಯಿತು. ಜಿಲ್ಲಾ ಗೆಜೆಟಿಯರುಗಳಲ್ಲಿ ಆಯಾ ಜಿಲ್ಲೆಗಳ ವಾಸ್ತವಿಕ ಚಿತ್ರ ಮೂಡಿಬರುವಂತೆ, ಅವನ್ನು ರೂಪಿಸಲು ನಿಶ್ಚಯಿಸಲಾಯಿತು. ವಿವಿಧ ರಾಜ್ಯಗಳಲ್ಲಿ ರೂಢಿಯಲ್ಲಿರುವ ವಿಷಯಗಳು ಪರಸ್ಪರ ಪರಿಚಯವಾಗುವಂತೆ, ಅವುಗಳ ಬಗ್ಗೆ ಇರುವ ತಪ್ಪು ತಿಳಿವಳಿಕೆಗಳು ದೂರವಾಗುವಂತೆ ರಾಷ್ಟ್ರೀಯ ಏಕತಾಭಾವ ಜನತೆಯಲ್ಲಿ ಮೂಡಿ ಬರುವಂತೆ ಭಾರತೀಯ ಗೆಜೆಟಿಯರುಗಳನ್ನು ರಚಿಸಬೇಕೆಂಬ ಸೂಚನೆಗಳನ್ನು ಸ್ವೀಕರಿಸಲಾಯಿತು ಹಾಗೂ ಅಧ್ಯಾಯಗಳ ರಚನೆಯಲ್ಲಿ ಎಲ್ಲ ರಾಜ್ಯಗಳು ಏಕರೂಪತೆ ಕಾಯ್ದುಕೊಳ್ಳುವಂತೆ ಸೂಚಿಸಲಾಯಿತು.

ಜಿಲ್ಲಾ ಗೆಜೆಟಿಯರುಗಳ ರಚನೆಯಲ್ಲಿ ಹತ್ತೊಂಬತ್ತು ಅಧ್ಯಾಯಗಳನ್ನು ಕೊಡಲು ನಿಶ್ಚಯಿಸಲಾಯಿತು. ಅವುಗಳ ವಿವರ ಹೀಗಿದೆ : 1 ಸಾಮಾನ್ಯ ಭೂವಿವರಣೆಗೆ ನದಿಗಳು, ನೀರಾವರಿ, ಖನಿಜ, ಪಶುಪಕ್ಷಿ, ವನಸ್ಪತಿ ಮತ್ತು ವಾಯುಗುಣ, 2. ಇತಿಹಾಸ, 3. ಜನ, ಜೀವನ, ಭಾಷೆಗಳು, ಇತ್ಯಾದಿ 4. ಕೃಷಿ ಮತ್ತು ನೀರಾವರಿ, ಅರಣ್ಯ ಇತ್ಯಾದಿ 5.ಕೈಗಾರಿಕೆಗಳು, 6. ಬ್ಯಾಂಕಿಂಗ್, ವಾಣಿಜ್ಯ, 7. ಸಾರಿಗೆ, ಸಂಪರ್ಕ, 8. ಇತರ ಉದ್ಯೋಗಗಳು, 9. ಆರ್ಥಿಕ ಪ್ರವೃತ್ತಿಗಳು, 10. ಸಾಮಾನ್ಯ ಆಡಳಿತ, 11. ಕಂದಾಯ ಆಡಳಿತ, 12. ಕಾನೂನು ಮತ್ತು ಶಿಸ್ತು, ನ್ಯಾಯಪಾಲನೆ, 13. ಇತರ ಇಲಾಖೆಗಳು, 14. ಸ್ಥಳೀಯ ಆಡಳಿತ, 15. ಶಿಕ್ಷಣ ಮತ್ತು ಸಂಸ್ಕೃತಿ, 16. ವೈದ್ಯ, ಸಾರ್ವಜನಿಕ ಆರೋಗ್ಯ, 17. ಸಾರ್ವಜನಿಕ ಸೌಲಭ್ಯಗಳು, 18. ಸಾರ್ವಜನಿಕ ಮತ್ತು ಸ್ವಯಂಸೇವಕ ಸಾಮಾಜಿಕ ಸಂಸ್ಥೆಗಳು, ಇತ್ಯಾದಿ, 19. ಐತಿಹಾಸಿಕ ಹಾಗೂ ಪ್ರೇಕ್ಷಣೀಯ ಸ್ಥಳಗಳು, ವ್ಯಾಪಾರ ಕೇಂದ್ರಗಳು, ಇತ್ಯಾದಿ. ಹೀಗೆ ಜಿಲ್ಲಾ ಗೆಜೆಟಿಯರುಗಳು ಪ್ರತಿಯೊಂದು ಜಿಲ್ಲೆಯೊಳಗಿರುವ ಹಳ್ಳಿ ಮತ್ತು ಊರುಗಳ ಐತಿಹಾಸಿಕ ಹಿನ್ನೆಲೆ ಹಾಗೂ ಸಮಕಾಲೀನ ವಿವರಗಳನ್ನು ನೀಡುತ್ತವೆ.

ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಗೆಜೆಟಿಯರ್ ಇಲಾಖೆ ಆರಂಭಗೊಂಡಿದ್ದು ಇತ್ತೀಚೆಗೆ ತಾಲ್ಲೂಕು ಗೆಜೆಟಿಯರ್‌ಗಳನ್ನು ಪ್ರಕಟಿಸಲು ಕ್ರಮಕೈಗೊಂಡಿದ್ದು ಮೊದಲಿಗೆ ಮೈಸೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಕುರಿತು ಗೆಜೆಟಿಯರ್‌ಗಳನ್ನು ಹೊರತರಲಾಗಿದೆ. ಪ್ರಸ್ತುತ ಇದು ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯದ ಒಂದು ವಿಭಾಗವಾಗಿ ಕಾರ್ಯ ನಿರ್ವಹಿಸುತ್ತಿದೆ. 1958ರಲ್ಲಿ ಇಲಾಖೆ ಆರಂಭವಾಗುವ ವೇಳೆಗೆ ಧಾರವಾಡ ಜಿಲ್ಲಾ ಗೆಜೆಟಿಯರನ್ನು ಮಹಾರಾಷ್ಟ್ರ ಸರ್ಕಾರವೇ ಪ್ರಕಟಿಸಿತ್ತು. ಅನಂತರ 1990ರ ವೇಳೆಗೆ ರಾಜ್ಯದ ಅಂದಿನ ಇಪ್ಪತ್ತೊಂದು ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಆಂಗ್ಲ ಭಾಷೆಯಲ್ಲಿ ಗೆಜೆಟಿಯರ್ ಸಂಪುಟಗಳನ್ನು ಹೊರತರಲಾಯಿತು. ಅಲ್ಲದೆ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ 1982–83ರಲ್ಲಿ ಎರಡು ಭಾಗಗಳಲ್ಲಿ ಆಂಗ್ಲ ಭಾಷೆಯಲ್ಲಿಯೂ, ಅದರ ಕನ್ನಡಾನುವಾದವನ್ನು ಮೂರು ಸಂಪುಟಗಳಲ್ಲಿ 1984–86ರ ಅಭಿವೃದ್ಧಿಯಲ್ಲಿಯೂ ಪ್ರಕಟಿಸಲಾಯಿತು. 1994ರಲ್ಲಿ ಆಂಗ್ಲ ಭಾಷೆಯಲ್ಲಿ ಹಾಗೂ 1996ರಲ್ಲಿ ಕನ್ನಡದಲ್ಲಿ ರಾಜ್ಯ ಗೆಜೆಟಿಯರ್‌ಗಳ ಪುರವಣಿಗಳನ್ನು ಮುದ್ರಿಸಲಾಯಿತು. ಈ ಮೊದಲೇ ಕೇಂದ್ರ ಗೆಜೆಟಿಯರ್ ಇಲಾಖೆ ಸ್ಥಗಿತಗೊಂಡಿದ್ದು ರಾಜ್ಯಸರ್ಕಾರವೇ ಕನ್ನಡ ಭಾಷೆಯಲ್ಲಿ ಪರಿಷ್ಕೃತ ಗೆಜೆಟಿಯರ್‌ಗಳನ್ನು ಹೊರತರಲು ಉದ್ದೇಶಿಸಿತು. ಅದರಂತೆ ಕೊಡಗು, ಧಾರವಾಡ, ಗುಲ್ಬರ್ಗ, ಬಿಜಾಪುರ, ಮಂಡ್ಯ ಹಾಗೂ ಕೋಲಾರ ಜಿಲ್ಲಾ ಗೆಜೆಟಿಯರ್‌ಗಳನ್ನು 1992–2005ರ ಅವಧಿಯಲ್ಲಿ ಹೊರತರಲಾಯಿತು. ಇವುಗಳ ಆಂಗ್ಲ ಆವೃತ್ತಿಯನ್ನು ಹೊರತರುವ ಯೋಜನೆ ಕಾರ್ಯರೂಪದಲ್ಲಿದ್ದು, 1993–2004ರ ಅವಧಿಯಲ್ಲಿ ಕೊಡಗು, ಧಾರವಾಡ ಹಾಗೂ ಗುಲ್ಬರ್ಗ ಜಿಲ್ಲೆಯ ಅನುವಾದಿತ ಆವೃತ್ತಿ ಪ್ರಕಟವಾಗಿದೆ. ಪರಿಷ್ಕೃತ ಗೆಜೆಟಿಯರುಗಳಲ್ಲಿ ಕೆಲವು ಅಧ್ಯಾಯಗಳನ್ನು ಪುನರ್‌ರೂಪಿಸಲಾಗಿದೆ.

ಈ ಮಧ್ಯೆ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತರಿಗೆ ಉಪಯೋಗವಾಗುವಂತೆ ರಾಜ್ಯ ಗೆಜೆಟಿಯರ್‌ಗಳ ರೂಪದಲ್ಲಿಯೇ ಕರ್ನಾಟಕ ಕೈಪಿಡಿಗಳನ್ನು ಪ್ರಕಟಿಸಲಾಗಿದೆ. 1996ರಲ್ಲಿ ಹ್ಯಾಂಡ್ ಬುಕ್ ಆಫ್ ಕರ್ನಾಟಕ ಎಂಬ ಆಂಗ್ಲ ಆವೃತ್ತಿ ಹೊರಬಂದಿದ್ದು 2001 ಹಾಗೂ 2005ರಲ್ಲಿ ಇದನ್ನು ಆಯಾ ವರ್ಷಗಳ ವರೆಗಿನ ಮಾಹಿತಿಯೊಂದಿಗೆ ಎರಡು ಬಾರಿ ಪುನರ್‌ಮುದ್ರಿಸಲಾಯಿತು. 1996ರಲ್ಲಿಯೇ ಕರ್ನಾಟಕ ಕೈಪಿಡಿಯ ಕನ್ನಡ ಅವತರಣಿಕೆಯಲ್ಲಿ ಪ್ರಕಟಿಸಲಾಯಿತು.

ಗೆಜೆಟಿಯರ್ ಇಲಾಖೆಯ ಇನ್ನೊಂದು ಯೋಜನೆಯೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಕಟಗೊಂಡು ಈಗ ಅಲಭ್ಯವಾಗಿರುವ ಗೆಜೆಟಿಯರ್‌ಗಳ ಪುನರ್‌ಮುದ್ರಣ ಕಾರ್ಯ. ಇದರಡಿಯಲ್ಲಿ ಕ್ಯಾಂಪ್‌ಬೆಲ್‌ರವರ ಬಿಜಾಪುರ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಗೆಜೆಟಿಯರ್‌ಗಳು, ಸ್ಟರ್ರಕ್ ಹಾಗೂ ಸ್ಟುವರ್ಟ್ ಅವರ ದಕ್ಷಿಣ ಕನ್ನಡ ಜಿಲ್ಲಾ ಮ್ಯಾನ್ಯುಯಲ್‌ಗಳು, ಕೆಲ್‌ಸೆಲ್ ಹಾಗೂ ಫ್ರಾನ್ಸಿಸ್ ಅವರ ಬಳ್ಳಾರಿ ಜಿಲ್ಲಾ ಗೆಜೆಟಿಯರ್‌ಗಳು ಹಾಗೂ ಬಿ. ಎಲ್. ರೈಸ್ ಅವರ ಮೈಸೂರು ಹಾಗೂ ಕೊಡಗಿಗೆ ಸಂಬಂಧಿಸಿದ ಮೂರು ಸಂಪುಟಗಳ ಗೆಜೆಟಿಯರ್‌ಗಳು ಪುನರ್‌ಮುದ್ರಣಗೊಂಡಿವೆ.

ಗೆಜೆಟಿಯರ್ ಇಲಾಖೆಯ ಇನ್ನೊಂದು ಮಹತ್ತ್ವದ ಕಾರ್ಯವೆಂದರೆ ಪ್ರಕಟವಾದ ಎಲ್ಲ ಗೆಜೆಟಿಯರ್‌ಗಳನ್ನು ಸಿ.ಡಿ. ಅವತರಣಿಕೆಯಲ್ಲಿ ರೂಪುಗೊಳಿಸಿ ವೆಬ್‌ಸೈಟ್‌ನಲ್ಲಿ ಅಳವಡಿಸಿ, ಆಸಕ್ತರಿಗೆ ಉಚಿತವಾಗಿ ಪಡೆಯಲು (ಡೌನ್‌ಲೋಡ್ ಹಾಗೂ ಮುದ್ರಣ ಸೌಲಭ್ಯ) ಅವಕಾಶ ಕಲ್ಪಿಸಿರುವುದು. 2003ರಲ್ಲಿ ಇಂಪೀರಿಯಲ್ ಗೆಜೆಟಿಯರ್ ಸೇರಿದಂತೆ ಸುಮಾರು ಎಂಬತ್ತು ಗೆಜೆಟಿಯರ್‌ಗಳನ್ನು ಒಂಬತ್ತು ಸಿ.ಡಿ. ಗಳಲ್ಲಿ ಅಡಕಗೊಳಿಸಿ ಹೊರತರಲಾಯಿತು. 2005ರಲ್ಲಿ ಮತ್ತೆ ಸಿ.ಡಿ.ಗಳ ಪುನರ್ ಆವೃತ್ತಿಯನ್ನು ಹೊರತರಲಾಯಿತು. ಕಿಯೋಸ್ಕ್ ಸ್ಪರ್ಷ ಪರದೆಯಲ್ಲಿಯೂ ಸಿ.ಡಿ. ಗಳನ್ನು ಅಳವಡಿಸಿದ್ದು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ಧಾರವಾಡ ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗದಲ್ಲಿ ಕಿಯೋಸ್ಕ್ ಯಂತ್ರೋಪಕರಣಗಳನ್ನು ಇರಿಸಲಾಗಿದೆ. 2001ರಲ್ಲಿ ಕರ್ನಾಟಕ ರಾಜ್ಯ ಗೆಜೆಟಿಯರ್ ಇಲಾಖೆಯ ವತಿಯಿಂದ ಅಖಿಲ ಭಾರತ ಮಟ್ಟದಲ್ಲಿ ಎಲ್ಲ ರಾಜ್ಯಗಳ ಗೆಜೆಟಿಯರ್ ಮುಖ್ಯ ಸಂಪಾದಕರುಗಳನ್ನು ಆಹ್ವಾನಿಸಿ ಸಮ್ಮೇಳನವೊಂದನ್ನು ಆಯೋಜಿಸಲಾಗಿತ್ತು. (ಎಚ್.ಎಂ.ಎನ್.ಆರ್., ಬಿ.ವಿ.ಪಿವೈ.)

**ಗೆಜೆಟ್ಟು :** ಪ್ರಚಲಿತ ಸಂಗತಿಗಳ ಗೋಷ್ವಾರೆಯನ್ನೊಳಗೊಂಡ ಸುದ್ದಿ ಹಾಳೆಗಳನ್ನು ಅಥವಾ ವೃತ್ತಪತ್ರಿಕೆಗಳನ್ನು ಗಜೆಟ್ ಎಂದು ಕರೆಯುತ್ತಿದ್ದರು. ಇವು ಆಧುನಿಕ ವೃತ್ತಪತ್ರಿಕೆಗಳ ಪೂರ್ವಜ ರೂಪಗಳೆನ್ನಬಹುದು. ಈ ಶಬ್ದಕ್ಕೆ ಮೂಲ ಗಾಝಾ (ವೃತ್ತ ಭಂಡಾರ) ಎಂಬ ಗ್ರೀಕ್ ಪದ. ಇಂಗ್ಲಿಷಿಗೆ ಗಜೆಟ್ ಎಂಬ ಶಬ್ದ ಫ್ರೆಂಚ್‌ನಿಂದ ಬಂತು; ಅದಕ್ಕೆ ಇಟಾಲಿಯನ್ ಭಾಷೆಯ ಗಜೆಟಾ ಮೂಲ. ಫ್ರೆಂಚ್ ಭಾಷೆಯಲ್ಲಿ ಗಜೆಟಾ ಎಂಬ ಹೆಸರನ್ನೇ ಈಗಲೂ ಬಳಸಲಾಗುತ್ತಿದೆ. ವೆನಿಸ್‌ನಲ್ಲಿ ಗಜೆಟಾ ಒಂದು ಚಿಕ್ಕ ನಾಣ್ಯದ ಹೆಸರಾಗಿತ್ತು. 1566ರಲ್ಲಿ ವೆನಿಸ್ ಸರ್ಕಾರ ಪ್ರಕಟಿಸಿ, ಈ ಮೊತ್ತಕ್ಕೆ ಮಾರುತ್ತಿದ್ದ ಸೂಚೀಪತ್ರಕ್ಕೆ ಇದೇ ಹೆಸರು ಬಂತು. 16ನೆಯ ಶತಮಾನದ ನಡುಗಾಲದಲ್ಲಿ ವೆನಿಸಿನಲ್ಲಿ ಪ್ರಕಟವಾಗಲಾರಂಭಿಸಿದ ಲೋಕಾಭಿರಾಮದ ಸುದ್ದಿ ಹಾಳೆಗಳಿಗೆ ಈ ಹೆಸರಿತ್ತು. ಇದೇ ಬಗೆಯ ಪತ್ರಗಳು ಫ್ರಾನ್ಸ್ ಇಂಗ್ಲೆಂಡುಗಳಲ್ಲೂ ತಲೆದೋರಿದುವು. ಒಂದನೆಯ ಎಲಿಜಬೆತಳ ಸಿಂಹಾಸನಾರೋಹಣವಾದ ಮೇಲೆ ಇಂಥ ಸುದ್ದಿಹಾಳೆಗಳು ಹೆಚ್ಚಿದುವು. ಹರಟೆ, ಸುದ್ದಿ ತುಣುಕು, ಅನಧಿಕೃತ ವೃತ್ತಾಂತ ನಿರೂಪಣೆ, ದೇಶವಿದೇಶ ಪರ್ಯಟನೆ, ಕೊಲೆಯೇ ಮುಂತಾದ ಘಟನೆಗಳು, ವದಂತಿಗಳು, ಜಾಹೀರಾತುಗಳು ಮುಂತಾದವನ್ನೊಳಗೊಂಡ ಆಕರ್ಷಕ ಪತ್ರಗಳು ಹೊರ ಬೀಳಲಾರಂಭಿಸಿದುವು. 17ನೆಯ ಶತಮಾನದಿಂದೀಚೆಗೆ ಗಜೆಟ್ ಎಂಬ ಶಬ್ದ ಅಧಿಕೃತ ಸರ್ಕಾರಿ ಪ್ರಕಟಣೆಗಳಿಗೆ ಅಧಿಕಾಧಿಕವಾಗಿ ಅನ್ವಯವಾಗತೊಡಗಿತು. ಆಕ್ಸ್‌ಫರ್ಡ್ ಗಜೆಟ್, ಲಂಡನ್ ಗಜೆಟ್, ಡಬ್ಲಿನ್ ಗಜೆಟ್ ಉದಾಹರಣೆಗಳು. ಸರ್ಕಾರಿ ವಿಷಯಗಳನ್ನು, ನೇಮಕ ವಿವರಗಳನ್ನು, ಅಧಿಕೃತ ಪರಿನಿಯತ ಪತ್ರಗಳನ್ನು ಒಳಗೊಂಡ ಪತ್ರಿಕೆ ಎಂಬುದು ಸಾಮಾನ್ಯವಾಗಿ ಇದರ ಈಗಿನ ಅರ್ಥ. ಆದರೆ ವೃತ್ತಪತ್ರಿಕೆಗಳ ಹೆಸರುಗಳ ಕೊನೆಯಲ್ಲೂ ಕ್ವಚಿತ್ತಾಗಿ ಈ ಶಬ್ದವನ್ನು ಬಳಸುವುದುಂಟು. ದಿ ಪಾಲ್ ಮಾಲ್ ಗಜೆಟ್, ದಿ ಸೇಂಟ್ ಜೇಮ್ಸ್ ಗಜೆಟ್, ದಿ ವೆಸ್ಟ್‌ಮಿನ್‌ಸ್ಟರ್ ಗಜೆಟ್ ಮುಂತಾದವು 20ನೆಯ ಶತಮಾನದ ಆದಿಭಾಗದಲ್ಲಿ ಲಂಡನಿನಿಂದ ಪ್ರಕಟವಾದ ವೃತ್ತಪತ್ರಿಕೆಗಳು. ಬ್ರಿಟನ್‌ನಲ್ಲಿ ಈಗಲೂ ಪ್ರಕಟವಾಗುತ್ತಿರುವ ಹಲವು ವೃತ್ತಪತ್ರಿಕೆಗಳ ಹೆಸರುಗಳಲ್ಲಿ ಗಜೆಟ್ ಎಂಬ ಶಬ್ದ ಉಳಿದುಬಂದಿದೆ. ಅಮೆರಿಕದ ದಿ ಪೆನ್‌ಸಿಲ್ವೇನಿಯ ಗಜೆಟ್ ಎಂಬ ಪತ್ರಿಕೆ ಅತ್ಯಂತ ಪ್ರಭಾವಶಾಲಿಯಾಗಿತ್ತು. ಗಜೆಟ್ ಎಂಬ ಉತ್ತರಪದವನ್ನೊಳಗೊಂಡ ಹಲವು ವೃತ್ತಪತ್ರಿಕೆಗಳು ಅಮೆರಿಕದಲ್ಲಿ ಪ್ರಕಟವಾಗುತ್ತಿದ್ದುವು. ಸಂಯುಕ್ತ ಸಂಸ್ಥಾನಗಳ ಗಜೆಟ್ ಮತ್ತು ದಿ ನ್ಯಾಷನಲ್ ಗಜೆಟ್ ಇನ್ನೆರಡು ಉದಾಹರಣೆಗಳು. 18ನೆಯ ಶತಮಾನದ ಉತ್ತರಾರ್ಧದಲ್ಲಿ ಆರಂಭವಾದ ಬೆಂಗಾಲ್ ಗಜೆಟ್, ಇಂಡಿಯ ಗಜೆಟ್ ಇವು ಭಾರತದ ಆದಿಪತ್ರಿಕೆಗಳು. ಭಾರತದಲ್ಲಿ ಸ್ಥಾಪಿತವಾದ ಬ್ರಿಟಿಷ್ ಆಳ್ವಿಕೆಯಲ್ಲಿ ಸರ್ಕಾರಗಳ ಅಧಿಪತ್ರಗಳಾಗಿ ಗೆಜೆಟ್ಟುಗಳು ಪ್ರಕಟವಾಗತೊಡಗಿದುವು. ಈಗ ಎಲ್ಲ ರಾಜ್ಯ ಸರ್ಕಾರಗಳೂ ಗೆಜೆಟ್ಟುಗಳನ್ನು ಪ್ರಕಟಿಸುತ್ತಿವೆ. ಮೈಸೂರು ಸರ್ಕಾರದ ಗೆಜೆಟ್ಟು "ದಿ ಮೈಸೂರ್ ಗಜೆಟ್ "(ನಂತರ ದಿ ಕರ್ನಾಟಕ ಗೆಜೆಟ್ – ಕನ್ನಡದಲ್ಲಿ 'ಕರ್ನಾಟಕ ರಾಜ್ಯಪತ್ರ') ಎಂಬ ಹೆಸರಿನಲ್ಲಿ ಸು. 1866 ರಿಂದ ಪ್ರಕಟವಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಗೆಜೆಟ್ 1965ರ ಫೆಬ್ರುವರಿ 15 ರಿಂದ, ಕನ್ನಡದ ಗೆಜೆಟ್ 1968ರ ನವೆಂಬರ್ 1 ರಿಂದ ಪ್ರಕಟವಾಗುತ್ತಿವೆ.

(ಎಚ್.ಎಂ.ಎನ್.ಆರ್.)

**ಗೆಜೆಲ್ :** ಉತ್ತರ ಹಾಗೂ ಪೂರ್ವ ಆಫ್ರಿಕ, ಅರೇಬಿಯ, ಇಸ್ರೇಲ್, ಸಿರಿಯ, ಮಧ್ಯ ಏಷ್ಯ, ಭಾರತದ ಮೈದಾನ ಪ್ರದೇಶಗಳಲ್ಲೆಲ್ಲ ಕಾಣಬರುವ ಒಂದು ಚೆಲುವಾದ ಜಿಂಕೆ. ಆರ್ಟಿಯೊಡಕ್ಟಿಲ ಗಣದ ಬೋವಿಡೀ ಕುಟುಂಬಕ್ಕೆ ಸೇರಿದೆ. ಗಜೆಲ ಎಂಬುದು ಇದರ ವೈಜ್ಞಾನಿಕ ಹೆಸರು. ಇದರಲ್ಲಿ ಸುಮಾರು 12 ಪ್ರಭೇದಗಳಿವೆ. ಗೆಜೆಲಿನ ವಾಸ ಸಾಧಾರಣವಾಗಿ ಮರಗಳಿಲ್ಲದ ಬಯಲು ಪ್ರದೇಶಗಳಲ್ಲಿ. ಬಿರುಬಿಸಿಲಿನಲ್ಲಿ ಬೇಯುವ ಮರುಭೂಮಿಗಳು ಇದರ ಅಚ್ಚುಮೆಚ್ಚಿನ ನೆಲೆಗಳು.

ಗೆಜೆಲುಗಳು ಮಧ್ಯಮಗಾತ್ರದ ಚಿಗರಿಗಳು. ವಿವಿಧ ಪ್ರಭೇದಗಳ ಉದ್ದ 1–1.2 ಮೀ. ಭುಜದ ಬಳಿಯ ಎತ್ತರ 51–89 ಸೆಂಮೀ. ತೂಕ 14–75 ಕಿಗ್ರಾಂವರೆಗೆ ವ್ಯತ್ಯಾಸವಾಗುತ್ತದೆ. ಇವಕ್ಕೆ 12–14 ಸೆಂಮೀ ಉದ್ದದ ಬಾಲವಿದೆ. ದೇಹದ ಬಣ್ಣ ಗಾಢ ಕಂದಿನಿಂದ ಬೂದಿ, ಬಿಳಿಯವರೆಗೆ ವೈವಿಧ್ಯಪೂರ್ಣವಾಗಿದೆ. ಹೊಟ್ಟೆಯ ಭಾಗ ತಿಳಿಬಣ್ಣದ್ದು. ಕೆಲವು ಪ್ರಭೇದಗಳಲ್ಲಿ ಬೆನ್ನು ಮತ್ತು ಹೊಟ್ಟೆಯ ಭಾಗಗಳ ಬಣ್ಣಗಳು ಮಿಳಿತವಾಗುವಲ್ಲಿ ಗಾಢವರ್ಣದ ಒಂದು ಪಟ್ಟೆಯಿರುವುದುಂಟು. ಬಾಲದ ಬುಡ ಮತ್ತು ತೊಡೆಗಳ ಹಿಂಭಾಗಗಳು ಬೆಳ್ಳಗಿರುತ್ತವೆ. ಬಹುಪಾಲು ಪ್ರಭೇದಗಳಲ್ಲಿ ಗಂಡು ಮತ್ತು ಹೆಣ್ಣುಗಳೆರಡರಲ್ಲೂ ಒಂದೊಂದು ಜೊತೆ ಕೊಂಬುಗಳಿರುತ್ತವೆ. ಸಬ್‌ಗಟುರೋಸ ಎಂಬ ಪ್ರಭೇದದಲ್ಲಿ ಕೊಂಬುಗಳು ಗಂಡಿನಲ್ಲಿ ಮಾತ್ರ ಇರುತ್ತವೆ. ಕೊಂಬುಗಳ ಆಕಾರ ಲೈರ್ ವಾದ್ಯದಂತೆ: ಸರಾಸರಿ ಉದ್ದ 25–35 ಸೆಂಮೀ. ಕೆಲವು ಸಲ ಕೊಂಬುಗಳು ತಲೆಯ ಆಚೀಚೆ ಹರಡಿರುವುದು ಇಲ್ಲವೆ ಹಿಂದಕ್ಕೆ ಬಾಗಿರುವುದು ಉಂಟು. ಕೊಂಬುಗಳು ಹೇಗೇ ಇರಲಿ, ಇವುಗಳ ತುದಿ ಮಾತ್ರ ಮೇಲಕ್ಕೆ ಬಾಗಿರುತ್ತದೆ.

ಗೆಜೆಲುಗಳು ಸಾಮಾನ್ಯವಾಗಿ ಗುಂಪುಗಳಲ್ಲಿ ವಾಸಿಸುತ್ತವೆ. ಒಂದೊಂದು ಗುಂಪಿನಲ್ಲಿ 5–10 ಪ್ರಾಣಿಗಳಿರುತ್ತವೆ. ಕೆಲವು ಸಲ ನೂರಾರು ಪ್ರಾಣಿಗಳಿರುವುದೂ ಉಂಟು. ಗಿಡಮರಗಳ ಎಳೆಚಿಗುರು, ಹುಲ್ಲಿನ ಎಸಳುಗಳು ಇವುಗಳ ಮುಖ್ಯ ಆಹಾರ. ಗೆಜೆಲುಗಳು ತಮ್ಮ ಓಟದ ಸಾಮರ್ಥ್ಯಕ್ಕೆ ಹೆಸರಾಗಿವೆ. ಬಹುಶಃ ಬೇಟೆಯ ಚಿರತೆ, ಗ್ರೇ ಹೌಂಡ್ ನಾಯಿ ಮತ್ತು ವಿಶೇಷ ಶಿಕ್ಷಣ ಕೊಟ್ಟು ಬೆಳೆಸಿದ ಗಿಡುಗಗಳನ್ನು ಬಿಟ್ಟರೆ ಗೆಜೆಲುಗಳೇ ಅತ್ಯಂತ ವೇಗವಾಗಿ ಓಡಬಲ್ಲ ಪ್ರಾಣಿಗಳು. ಪೂರ್ವ ಆಫ್ರಿಕದ ಥಾಮ್ಸನ್ಸ್ ಗೆಜೆಲ್ ಎಂಬುದು ಗಂಟೆಗೆ 65 ಕಿಮೀ ವೇಗದಲ್ಲಿ ಓಡಬಲ್ಲದು.

ಇವುಗಳ ಸಂತಾನೋತ್ಪತ್ತಿಯ ಕಾಲ ಏಪ್ರಿಲ್–ಜೂನ್‌ಗಳ ಅವಧಿ. ಹುಟ್ಟಿದ ಒಂದು ವಾರದಲ್ಲೆ ಮರಿಗಳಿಗೆ ಸಾಕಷ್ಟು ಬಲ ಬಂದು ಅವು ಸ್ವತಂತ್ರ ಜೀವನ ನಡೆಸತೊಡಗುತ್ತವೆ. ಗೆಜೆಲುಗಳ ಆಯಸ್ಸು ಸುಮಾರು 10–12 ವರ್ಷಗಳು.

ಅರೇಬಿಯ ಮತ್ತು ಏಷ್ಯದ ಕೆಲವು ಭಾಗಗಳಲ್ಲಿ ಗೆಜೆಲುಗಳನ್ನು ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ಬೇಟೆಯಲ್ಲಿ ನಾಯಿ ಮತ್ತು ಗಿಡುಗಗಳನ್ನು ಬಳಸಲಾಗುತ್ತದೆ. ಕೆಲವು ಪ್ರಭೇದಗಳ ಮಾಂಸ ಮಾತ್ರ ಬಲುರುಚಿ. *

**ಗೆಟಿಸ್‌ಬರ್ಗ್ ಕದನ :** ಅಮೆರಿಕನ್ ಅಂತರ್ಯುದ್ಧದಲ್ಲಿ ನಿರ್ಧಾರಕ ಘಟ್ಟವೆಂದು ಪರಿಗಣಿತವಾಗಿರುವ, ಅತ್ಯಧಿಕ ಜೀವಹಾನಿಯನ್ನು ದಾಖಲಿಸಿದ ಒಂದು ಕದನ (1863). ಅಮೆರಿಕ ಸಂಯುಕ್ತಸಂಸ್ಥಾನದ ದಕ್ಷಿಣ ಪೆನ್ಸಿಲ್ವೇನಿಯದಲ್ಲಿರುವ ಗೆಟಿಸ್‌ಬರ್ಗಿನಲ್ಲಿ, ಉತ್ತರದ ರಾಜ್ಯಗಳ (ಒಕ್ಕೂಟ) ಮತ್ತು ಪ್ರತ್ಯೇಕಗೊಂಡಿದ್ದ ದಕ್ಷಿಣದ ರಾಜ್ಯಗಳ (ಪ್ರಸಂಧಿ) ನಡುವೆ ಈ ಕದನ 1863ರ ಜುಲೈ 1–3 ರವರೆಗೆ ನಡೆಯಿತು. ಇದೇ ವರ್ಷ ಮೇ ತಿಂಗಳಲ್ಲಿ ವರ್ಜೀನಿಯದ ಚಾನ್ಸೆಲರ್ಸ್‌ವಿಲ್‌ನಲ್ಲಿ ಒಕ್ಕೂಟ ಪಡೆಗಳಿಗೂ ಪ್ರಸಂಧಿ ಪಡೆಗಳಿಗೂ ನಡೆದ ಕದನದಲ್ಲಿ ಯಶಸ್ಸು ಕಂಡ ಪ್ರಸಂಧಿ ಸೇನೆಯ ಅಧಿಪತಿ

ಜನರಲ್ ಲೀ ಮತ್ತೊಮ್ಮೆ ಆಕ್ರಮಣವೆಸಗುವ ಉದ್ದೇಶದಿಂದ ತನ್ನ ಸೈನ್ಯವನ್ನು ಸಾಂದ್ರೀಕರಿಸುತ್ತಿದ್ದ. ಲಾಂಗ್‍ಸ್ಟ್ರೀಟ್, ಎವೆಲ್ ಮತ್ತು ಹಿಲ್‍ಗಳ ನಾಯಕತ್ವದಲ್ಲಿದ್ದ ಪಡೆಗಳನ್ನು ಜೂನ್ ತಿಂಗಳಲ್ಲಿ ಮುನ್ನುಗ್ಗಿಸಿದ. ಒಕ್ಕೂಟ ಪಡೆಗಳ ಅಧಿಪತಿ ಜೋಸೆಫ್ ಹೂಕರ್ ಇವರನ್ನು ಅನುಸರಿಸಿ ಸಾಗಿದ. ಲೀಯ ಸೈನ್ಯಕ್ಕೂ ವಾಷಿಂಗ್ಟನ್ನಿಗೂ ನಡುವೆ ತನ್ನ ಸೈನ್ಯ ಇರುವಂತೆ ಹೂಕರ್ ಎಚ್ಚರ ವಹಿಸಿದ. ಜೂನ್ 27ರಂದು ಅಧ್ಯಕ್ಷ ಲಿಂಕನ್ ಹೂಕರನನ್ನು ತೆಗೆದು ಅವನ ಸ್ಥಾನದಲ್ಲಿ ಜಾರ್ಜ್ ಜಿ. ಮೀಡನನ್ನು ಅಧಿಪತಿಯಾಗಿ ನೇಮಿಸಿದ. ಲೀಯ ಕಡೆಯ ಅಶ್ವಪಡೆ ಬೇರೆ ಆಕ್ರಮಣಕಾರ್ಯ ವೊಂದರಲ್ಲಿ ನಿರತವಾಗಿದ್ದುದರಿಂದ ಸಮಯಕ್ಕೆ ಸರಿಯಾಗಿ ಬರಲಿಲ್ಲ. ಆದ್ದರಿಂದ ತನ್ನ ಶತ್ರುಗಳ ಸ್ಥಾನವನ್ನು ಲೀಗೆ ಅರಿಯಲಾಗಲಿಲ್ಲ. ಇವನ ಪಡೆಗಳು ಗೆಟಿಸ್‍ಬರ್ಗ್ ಬಳಿಗೆ ಧಾವಿಸಿದವು. ಪ್ರಸಂಧಿ ಪಡೆಗಳೂ ಒಕ್ಕೂಟ ಪಡೆಗಳೂ ಗೆಟಿಸ್‍ಬರ್ಗಿನ ಹೊರಗೆ ಜುಲೈ 1ರಂದು ಪರಸ್ಪರ ಎದುರಾಗಿ ಯುದ್ಧಕ್ಕಿಳಿದವು. ಅಧಿಕ ಸಂಖ್ಯೆಯಲ್ಲಿದ್ದ ಲೀ ಪಡೆಯನ್ನು ತಡೆಗಟ್ಟುವ ಯತ್ನದಲ್ಲಿ ಒಕ್ಕೂಟ ಪಡೆಯ ನಾಯಕ ಜನರಲ್ ರೇನಾಲ್ಡ್ಸ್ ಸಾವಿಗೆ ಈಡಾದ. ಜುಲೈ 2 ರ ಮಧ್ಯಾಹ್ನ ಮತ್ತೆ ಕದನ ಮುಂದುವರೆಯಿತು. ಲೀಯ ಪಡೆಗಳು ಒಕ್ಕೂಟ ಪಡೆಗಳನ್ನು ರೌಂಡ್ ಟಾಪ್ ಮತ್ತು ಲಿಟ್ಲ್‍ರೌಂಡ್ ಟಾಪ್ ಎಂಬ ಎರಡು ಗುಡ್ಡಗಳ ಮೇಲಿಂದ ಕದಲಿಸಲು ಯತ್ನಿಸಿದವು: ಒಕ್ಕೂಟ ಪಡೆಗಳಿಂದ ಕಲ್ಪ್ಸ್ ಹಿಲ್ ಎಂಬ ಗುಡ್ಡವನ್ನು ವಶಕ್ಕೆ ತೆಗೆದುಕೊಂಡವು. ಆದರೆ ಮರುದಿನ ವಿಜಯದ ಕೈ ಬದಲಾಯಿಸಿತು. ಒಕ್ಕೂಟ ಪಡೆಗಳು ಕಲ್ಪ್ಸ್ ಹಿಲ್ಲನ್ನು ಮತ್ತೆ ತಮ್ಮ ವಶಕ್ಕೆ ತೆಗೆದುಕೊಂಡವು. ಅಂದು ಮಧ್ಯಾಹ್ನ ಲೀಯ ಸೇನೆ ಒಕ್ಕೂಟ ಸೇನೆಯ ಮೇಲೆ ಮದ್ದುಗುಂಡುಗಳ ಮಳೆಗರೆಯಿತು. ಒಕ್ಕೂಟ ಸೇನೆ ಇದಕ್ಕೆ ಸಮನಾಗಿ ಹೋರಾಡಿತು. ಲೀಯ ಮದ್ದುದಾಸ್ತಾನು ಮುಗಿದುಹೋದ್ದರಿಂದ ಅಶ್ವಪಡೆಗೆ ಮುನ್ನುಗ್ಗಲು ಆಜ್ಞಾಪಿಸಬೇಕಾಯಿತು. ಜನರಲ್ ಪಿಕೆಟ್ ತನ್ನ 15,000 ಯೋಧರೊಂದಿಗೆ ಫಿರಂಗಿ ಗುಂಡುಗಳ ಸುರಿಮಳೆಯ ನಡುವೆಯೇ ನುಗ್ಗಿದ. ಆದರೆ ಅವನಿಗೆ ಸಾಕಷ್ಟು ಬೆಂಬಲ ಇಲ್ಲದ್ದರಿಂದ ಹಿಂದೆ ಸರಿಯಬೇಕಾಯಿತು. ಪ್ರಸಂಧಿ ಸೇನೆ ಜರ್ಝರಿತವಾಗಿ ಹಿಂದಕ್ಕೆ ಸರಿದು, ಮತ್ತೆ ಮುನ್ನುಗ್ಗಲು ಸಮಯ ಕಾಯುತ್ತಿತ್ತು. ಆದರೆ ಅದು ಸಾಧ್ಯವಾಗಲೇ ಇಲ್ಲ. ಮರುದಿನ ಎರಡೂ ಕಡೆಯ ಸೈನ್ಯಗಳು ಇದಿರುಬದಿರಾಗಿ ನಿಂತೇ ಇದ್ದುವು. ಕದನ ಮುಂದುವರಿಯಲಿಲ್ಲ. ಜುಲೈ 5 ರಂದು ಲೀ ಸೈನ್ಯ ಹಿಂದಕ್ಕೆ ಪೊಟೊಮ್ಯಾಕ್ ಕಡೆಗೆ ಸರಿಯಲಾರಂಭಿಸಿತು. ಲೀಯ ಸೈನ್ಯದ ದುರ್ಬಲ ಸ್ಥಿತಿಯ ಉಪಯೋಗ ಪಡೆದುಕೊಂಡು ಅದರ ಮೇಲೆ ಮೀಡ್‍ನ ಪಡೆಗಳೇ ಆಕ್ರಮಣ ನಡೆಸಬೇಕಾಗಿತ್ತೆಂದೂ ಅವನು ಹಾಗೆ ಮಾಡದೆ ಹೋದದ್ದು ತಪ್ಪೆಂದೂ ಮೀಡ್ ಟೀಕೆಗೆ ಒಳಗಾದ. ಗೆಟಿಸ್‍ಬರ್ಗಿನ ಮೂರು ದಿನಗಳ ಕದನದಲ್ಲಿ ಪ್ರಸಂಧಿ ಪಕ್ಷದ ಕಡೆ 28,000 ಸೈನಿಕರೂ ಒಕ್ಕೂಟ ಪಕ್ಷದ ಕಡೆ 23,000 ಸೈನಿಕರೂ ಸತ್ತರು. ಪ್ರಸಂಧಿ ಪಕ್ಷದವರಿಗೆ ಗೆಟಿಸ್‍ಬರ್ಗ್‍ನ ಕದನದಲ್ಲಿ ಸೋಲಾದ ದಿನವೇ ಅವರಿಗೆ ಮಿಸಿಸಿಪಿ ನದಿಯ ದಂಡೆಯ ಮೇಲೆ ವಿಕ್ಸ್‍ಬರ್ಗ್‍ನಲ್ಲಿ ನಡೆದ ಕದನದಲ್ಲೂ ಸೋಲುಂಟಾಯಿತು. ಪ್ರಸಂಧಿಯ ಅಂತ್ಯ ಆಗ ಆರಂಭವಾಯಿತೆನ್ನಬಹುದು. (ಆರ್.ಜಿ.ಎಸ್.)

ಆ ಕದನದಲ್ಲಿ ಸತ್ತ ಸೈನಿಕರ ರಾಷ್ಟ್ರೀಯ ಸ್ಮಾರಕವಾಗಿ ಗೆಟಿಸ್‍ಬರ್ಗ್ ರಣರಂಗವನ್ನು ರಾಷ್ಟ್ರಕ್ಕೆ ಅರ್ಪಿಸುವ ಸಮಾರಂಭದಲ್ಲಿ (1863 ನವೆಂಬರ್ 19) ಭಾಗವಹಿಸಿದ ಅಬ್ರಹಾಂ ಲಿಂಕನ್ ಮಾಡಿದ ಪುಟ್ಟ ಭಾಷಣ (ಗೆಟಿಸ್‍ಬರ್ಗ್ ಅಡ್ರೆಸ್) ಅತ್ಯುತ್ತಮ ಸಾಹಿತ್ಯವೆಂದೂ ಪ್ರಜಾಪ್ರಭುತ್ವದ ಶ್ರೇಷ್ಠತೆಯ ಅತ್ಯಂತ ಸಮರ್ಥ ಪ್ರತಿಪಾದನೆಯೆಂದೂ ಪ್ರಸಿದ್ಧವಾಗಿದೆ. ಅಮೆರಿಕದ ಪ್ರಖ್ಯಾತ ವಾಗ್ಮಿಯಾಗಿದ್ದ ಎಡ್ವರ್ಡ್ ಎವರೆಟ್ಟನ ಎರಡು ಗಂಟೆಗಳ ಭಾಷಣದ ಅನಂತರ ಮಾಡಿದ ಆ ಭಾಷಣ ಆಗ ಶ್ರೋತೃಗಳ ಗಮನ ಸೆಳೆಯಲಿಲ್ಲ. ಲಿಂಕನನಿಗೂ ಸಮಾಧಾನವೆನಿಸಿರಲಿಲ್ಲ. ಆದರೆ ಅಚ್ಚಾದಾಗ ಅದರ ಪ್ರಭಾವ ಎಷ್ಟೆಂಬುದು ಎಲ್ಲರಿಗೂ ಗೊತ್ತಾಯಿತು. ಎವರೆಟ್ಟನೂ ಅದನ್ನು ಹೊಗಳಿದ. ಲಿಂಕನ್ ಭಾಷಣಮಾಡಿದ ಸ್ಥಳದಲ್ಲಿ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ. *

**ಗೆಟ್ರೂಡ್ ಬೆಲ್ :** 1868–1926. ಬ್ರಿಟಿಷ್ ಪುರಾತತ್ತ್ವಜ್ಞೆ, ಅನ್ವೇಷಕಿ, ಲೇಖಕಿ ಮತ್ತು ಅಧಿಕಾರಿ. ಇವಳ ಪೂರ್ಣ ಹೆಸರು ಗೆಟ್ರೂಡ್ ಮಾರ್ಗರೇಟ್ ಲೊಥಿಯನ್ ಬೆಲ್. ಇಂಗ್ಲೆಂಡಿನ ಪಟ್ಟಣ ಡೂರ್‍ಹ್ಯಾಂನ ವಾಷಿಂಗ್‍ಟನ್ ಹಾಲ್‍ನಲ್ಲಿ 1868ರ ಜುಲೈ 14ರಂದು ಜನಿಸಿದಳು. ಸರ್ ಹ್ಯೂಗ್‍ಬೆಲ್ ಮತ್ತು ಮೇರಿಶೀಲ್ಡ್‍ಬೆಲ್ ದಂಪತಿಗಳ ಮಗಳು. ಇವಳು 3 ವರ್ಷದವಳಾಗಿದ್ದಾಗ ತಾಯಿ ನಿಧನವಾದಳು.

ಇವಳು ಲಂಡನ್ನಿನ ಕ್ವೀನ್ಸ್ ಕಾಲೇಜಿನಲ್ಲಿ ಪ್ರಥಮ ವಿದ್ಯಾಭ್ಯಾಸವನ್ನು, ನಂತರ ಆಕ್ಸ್‍ಫರ್ಡ್ ವಿಶ್ವವಿದ್ಯಾಲಯದ ಲೇಡಿ ಮಾರ್ಗರೇಟ್ ಹಾಲ್‍ನಲ್ಲಿ ಮಾಡಿದಳು. ಇವಳಿಗೆ ಆಗ 17 ವರ್ಷ. ಆಧುನಿಕ ಇತಿಹಾಸದಲ್ಲಿ ಪರಿಣಿತಳಾಗಿ 2 ವರ್ಷದಲ್ಲಿಯೇ ಆನರ್ಸ್ ಪದವಿ ಪಡೆದಳು. ಇವಳು ವಿದ್ಯಾಭ್ಯಾಸ ಮಾಡುವಾಗ ಪ್ರವಾಸ ಮತ್ತು ಪರ್ವತಾರೋಹಣ ದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಳು. ಮರುಭೂಮಿಯಲ್ಲಿ ಪ್ರವಾಸ ಮಾಡುವುದರಲ್ಲಿಯೂ ಮತ್ತು ಪುರಾತತ್ತ್ವದಲ್ಲಿಯೂ ಆಸಕ್ತಿ ಮತ್ತು ಉತ್ಸಾಹವನ್ನು ಹೊಂದಿದ್ದಳು. 1905ರಲ್ಲಿ ಈಗ ಟರ್ಕಿಯಲ್ಲಿರುವ ಪ್ರಾಚೀನ ನೆಲೆ ಇಫೇಸಸ್ ಡೇವಿಡ್ ಜಾರ್ಜ್‍ಹೂಗರ್ಥ್ ಎಂಬ ಬ್ರಿಟಿಷ್ ಪುರಾತತ್ತ್ವಜ್ಞ ನಡೆಸುತ್ತಿದ್ದ ಉತ್ಖನನದಲ್ಲಿ ಭಾಗವಹಿಸಿದ್ದಳು. ಇವಳು ಅರೇಬಿಕ್, ಪರ್ಷಿಯನ್, ಟರ್ಕಿಷ್, ಫ್ರೆಂಚ್, ಜರ್ಮನಿ ಮತ್ತು ಇಟಲಿ ಭಾಷೆಗಳನ್ನು ತಿಳಿದು ನಿರರ್ಗಳವಾಗಿ ಮಾತನಾಡುತ್ತಿದ್ದಳು. ಇದರಿಂದ ಪ್ರವಾಸ ಮಾಡುವಾಗ ಕಷ್ಟವಾಗಲಿಲ್ಲ. ಅಲ್ಲಿ ಸ್ಥಳೀಯರೊಡನೆ ಬೆರೆಯಲು ಸಹಾಯವಾಯಿತು.

1907ರಲ್ಲಿ ಮಾರ್ಚ್ ತಿಂಗಳಿನಲ್ಲಿ ಆಟೋಮನ್ ಸಾಮ್ರಾಜ್ಯಕ್ಕೆ ಪ್ರಯಾಣ ಮಾಡಿ ಅಲ್ಲಿ ಅನಟೋಲಿಯದ ಬಿರ್‍ಬಿಂಕಿಲಿಸೆನಲ್ಲಿರುವ ಸ್ಮಾರಕ ನೆಲೆಗಳನ್ನು ಉತ್ಖನನ ಮಾಡುತ್ತಿದ್ದ ಬೈಬಲ್‍ನ ಹೊಸ ಒಡಂಬಡಿಕೆಯ ವಿದ್ವಾಂಸ ಮತ್ತು ಪುರಾತತ್ತ್ವಜ್ಞ ಸರ್ ವಿಲಿಯಂ, ಎಂ. ರಾಮ್ಸ್ಯೆ ಜೊತೆಯಲ್ಲಿ ಉತ್ಖನನ ನಡೆಸಿದಳು. ಉತ್ಖನನದ ಕಾಲಾನುಕ್ರಮಣಿಕೆಯನ್ನು 'ದಿ ತೌಸಂಡ್ ಅಂಡ್ ದಿ ಒನ್ ಚರ್ಚಸ್' ಎಂದು ಪ್ರಕಟಿಸಿದಳು. ಈ ಸ್ಮಾರಕಗಳಲ್ಲಿ ಅನೇಕವು ಈಗ ಉಳಿದಿಲ್ಲ. 1909ರ ಜನವರಿಯಲ್ಲಿ ಮೆಸಪೊಟೇಮಿಯ ಕ್ಕೆ ಪ್ರಯಾಣ ಬೆಳೆಸಿ ಅಲ್ಲಿ ಹಿಟೈಟರ ನಗರ ಕರ್‍ಕೆಮಿಷ್‍ನಲ್ಲಿ ಉಖೈದ್ ಅವಶೇಷಗಳ ನಕ್ಷೆಯನ್ನು ರಚಿಸಿ ವಿವರಣೆಯನ್ನು ದಾಖಲಿಸಿದಳು. ಕರ್‍ಕೆಮಿಷ್‍ನಲ್ಲಿ ಇಬ್ಬರು ಪುರಾತತ್ತ್ವಜ್ಞರಾದ ಟಿ.ಇ. ಲಾರೆನ್ಸ್ ಮತ್ತು ಡೇವಿಡ್ ಜಾರ್ಜ್ ಹ್ಯೂಗರ್ಥ್ ನಡೆಸುತ್ತಿದ್ದ ಉತ್ಖನನದಲ್ಲಿ ಭಾಗವಹಿಸಿದ್ದಳು.

1914ರಲ್ಲಿ ಮೊದಲ ಮಹಾಯುದ್ಧ ಪ್ರಾರಂಭವಾದಾಗ ರೆಡ್‍ಕ್ರಾಸ್‍ನಲ್ಲಿ ಸ್ವಯಂಸೇವಕಿಯಾಗಿ ಫ್ರಾನ್ಸ್‍ನಲ್ಲಿ ಸೇವೆ ಸಲ್ಲಿಸಿದಳು. ಇವಳು ಅವಿವಾಹಿತಳು. ಆದರೆ ಬ್ರಿಟಿಷ್ ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿವಾಹಿತ ಮೇಜರ್ ಚಾರ್ಲ್ಸ್ ಡೌಗಟಿಯೊಡನೆ ಸಂಬಂಧವಿತ್ತು. ಅವನು 1915ರಲ್ಲಿ ಗ್ಯಾಲಿಪೋಲಿಯ ಕದನದಲ್ಲಿ ನಿಧನವಾದ. ಅನಂತರ ಇವಳು ಸಂಪೂರ್ಣವಾಗಿ ತನ್ನ ಕೆಲಸದಲ್ಲಿ ಮಗ್ನಳಾದಳು. ಇವಳನ್ನು 1915ರ ನವೆಂಬರ್‍ನಲ್ಲಿ ಆಗ ತಾನೆ ಕೈರೋನಲ್ಲಿ ಪ್ರಾರಂಭವಾಗುತ್ತಿದ್ದ ಅರಬ್ ಬ್ಯೂರೋನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಜನರಲ್ ಗಿಲ್‍ಬರ್ಟ್ ಕ್ಲೈಟನ್‍ಗೆ ಸಹಾಯ ಮಾಡಲು ಕಳುಹಿಸಿದರು. ಅವನು ಇವಳನ್ನು 1916ರ ಮಾರ್ಚ್ 3ರಂದು ಬಾಸ್ರ ನಗರಕ್ಕೆ ಕಳುಹಿಸಿದ. ಆ ಸಮಯದಲ್ಲಿ ಇವಳ ಭಾಷಾಜ್ಞಾನ ಬೇಹುಗಾರಿಕೆ ಕೆಲಸಕ್ಕೆ ಸಹಕಾರಿಯಾಯಿತು. ಅಲ್ಲಿ ಬಾಗ್ದಾದ್ ಕಡೆಗೆ ಸಾಗುವ ಸೈನ್ಯ ಸುರಕ್ಷಿತವಾಗಿ ತಲುಪಲು ಸಹಾಯ ಮಾಡಬೇಕಾಗಿತ್ತು. ಇವಳು ಆ ಪ್ರದೇಶದ ನಕ್ಷೆಯನ್ನು ರಚಿಸಿ ಸೈನ್ಯ ಸುರಕ್ಷತೆಯಿಂದ ತಲುಪಲು ಸಹಾಯ ಮಾಡಿದಳು. ಬ್ರಿಟಿಷ್ ಸೈನ್ಯದಲ್ಲಿ ಇವಳೊಬ್ಬಳೇ ಮಹಿಳಾಧಿಕಾರಿ.

ಒಂದನೆಯ ಮಹಾಯುದ್ಧಾನಂತರ ಇರಾಕ್‍ನಲ್ಲಿ ಹಸ್‍ಮೇಟ್ ರಾಜ್ಯ ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸಿದಳು. 1918ರಲ್ಲಿ ಬಾಗ್ದಾದ್‍ನಲ್ಲಿ ಇರಾಕ್ ಆರ್ಕಿಯಲಾಜಿಕಲ್ ಮ್ಯೂಸಿಯಂ ಸ್ಥಾಪಿಸಲು ಇರಾಕ್ ದೊರೆ ಫೈಸಲ್ ಸಹಾಯ ಮಾಡಿದ. ಆ ಮ್ಯೂಸಿಯಂಗೆ ತಾನು ಸಂಗ್ರಹಿಸಿದ್ದ ಮತ್ತು ಲಿಯೊನಾರ್ಡ್ ವೂಲಿ, ಉರ್ ಮತ್ತು ಇತರ ಮುಖ್ಯ ನೆಲೆಗಳಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ನೀಡಿದಳು. ಬಾಗ್ದಾದ್‍ನಲ್ಲಿ ಬ್ರಿಟಿಷ್ ಸ್ಕೂಲ್ ಆಫ್ ಆರ್ಕಿಯಾಲಜಿಯನ್ನು ಸ್ಥಾಪಿಸಿದಳು. ಇರಾಕ್ ನೂತನ ಸರ್ಕಾರ ಇವಳನ್ನು ಡೈರೆಕ್ಟರ್ ಆಫ್ ಆಂಟಿಕ್ವಿಟಿಸ್ ಆಗಿ ನೇಮಿಸಿತು.

ಒಂದನೆಯ ಮಹಾಯುದ್ಧದ ಅನಂತರ ರಾಜಕೀಯದಿಂದ ದೂರ ಸರಿದು ಪುರಾತತ್ತ್ವದ ಕಾರ್ಯದಲ್ಲಿ ಮಗ್ನಳಾದಳು. ಬ್ರಿಟಿಷ್ ಮತ್ತು ಅರಬ್ ಸೈನ್ಯದವರ ಸಹವಾಸದಿಂದ ಅತಿಯಾದ ಧೂಮಪಾನ ಮತ್ತು ಮದ್ಯಪಾನದಿಂದ ಶ್ವಾಸಕೋಶದ ನಾಳದ ಊತದಿಂದ ನರಳುತ್ತಿದ್ದಳು. ಇವಳು ತನ್ನ ಭವಿಷ್ಯದ ಮತ್ತು ಕ್ಷೀಣಿಸುತ್ತಿರುವ ದೇಹಸ್ಥಿತಿಯಿಂದ ಆತಂಕಕ್ಕೆ ಒಳಗಾದಳು. ಇವಳ ತಮ್ಮ ಟೈಫಾಯಿಡ್ ರೋಗದಿಂದ

ನಿಧನವಾದ ಸುದ್ದಿ ತಿಳಿದು ಮನಸ್ಸಿನ ಖಿನ್ನತೆಯಿಂದ 1926 ಜುಲೈ 12ರಂದು ಅಧಿಕವಾಗಿ ನಿದ್ರೆ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಳು. ಇವಳು ನಡೆಸಿದ ಪುರಾತತ್ತ್ವ ಸರ್ವೇಕ್ಷಣೆ ಸಾಕಷ್ಟು ವೈಜ್ಞಾನಿಕ ಮಹತ್ತ್ವ ಉಳ್ಳವಾಗಿವೆ. ಇವಳ ಮೆಸಪೊಟೇಮಿಯದ ಸರ್ವೇಕ್ಷಣೆ ವರದಿಗಳು ಆಧುನಿಕ ಪುರಾತತ್ತ್ವ ಸಂಶೋಧನೆಗೆ ರಕ್ಷಣೆಯ ಭದ್ರ ಬುನಾದಿ ಹಾಕಿದೆ. (ಎನ್.ಎಲ್.)

**ಗೆಡ್ಡೆ :** ಕಾಂಡದ ಒಂದು ಬಗೆಯ ಮಾರ್ಪಾಟು: ನೆಲದೊಳಗೇ ಹುದುಗಿ ಬೆಳೆಯುತ್ತದೆ. ಆಹಾರ ಸಂಗ್ರಹಣೆ ಇದರ ಮುಖ್ಯಕಾರ್ಯ. ಇದರಿಂದಾಗಿ ಇದು ಸಾಮಾನ್ಯವಾಗಿ ದಪ್ಪವಾಗಿಯೂ ರಸಭರಿತವಾಗಿಯೂ ಇರುತ್ತದೆ. ಸಸ್ಯಗಳ ಸಂತಾನಾಭಿವೃದ್ಧಿಯಲ್ಲೂ ಇದು ಪಾಲುಗೊಳ್ಳುತ್ತದೆ. ಗೆಡ್ಡೆಯ ಬಾಹ್ಯ ರೂಪ ಕಾಂಡದ ರಚನೆಗಿಂತ ಎಷ್ಟು ಭಿನ್ನವಾಗಿರುತ್ತದೆಂದರೆ ಇದನ್ನು ಕಾಂಡ ಎಂದು ಹೇಳಲು ಇದರ ಒಳರಚನೆಯನ್ನು ಪರೀಕ್ಷಿಸ ಬೇಕಾಗುತ್ತದೆ. ಗೆಡ್ಡೆಯಲ್ಲಿ ಹಲವಾರು ರೂಪಗಳಿವೆ. ಇವುಗಳಲ್ಲಿ ಮುಖ್ಯವಾದವು ಪ್ರಕಂದ (ರೈಜೋ಼ಮ್), ಟ್ಯೂಬರ್, ಬಲ್ಬ್ ಮತ್ತು ಕಂದುಗಳು (ಕಾರ್ಮ್).



ಆಲೂಗೆಡ್ಡೆ

ಪ್ರಕಂದ : ನೆಲದ ಒಳಗಡೆ ಭೂಮಿಗೆ ಸಮಾಂತರವಾಗಿ ಬೆಳೆ ಯುವ ಗೆಡ್ಡೆಯಿದು. ಇದರ ಮೇಲೆ ಗೆಣ್ಣು ಮತ್ತು ಅಂತರ್ಗೆಣ್ಣುಗಳಿವೆ. ಗೆಣ್ಣುಗಳ ಸುತ್ತ ಸಣ್ಣ ಸಣ್ಣ ಹುರುಪೆ ರೂಪದ ಎಲೆಗಳಿವೆ. ಎಲೆಗಳ ಕಂಕುಳುಗಳಲ್ಲಿ ಕಂಡುಬರುವ ಕಂಕುಳು ಮೊಗ್ಗುಗಳು ಬೆಳೆದು ಹೊಸ ಕಾಂಡವನ್ನು ಉತ್ಪತ್ತಿ ಮಾಡಬಹುದು. ಉದಾಹರಣೆ: ಅರಿಸಿನ, ಶುಂಠಿ ಇತ್ಯಾದಿ.

ಶುಂಠಿ

ಟ್ಯೂಬರ್ : ಇದು ಕೂಡ ಭೂಮಿಗೆ ಸಮಾಂತರವಾಗಿ ನೆಲದ ಒಳಗೆ ಬೆಳೆಯುವ ಗೆಡ್ಡೆ. ಆಲೂಗೆಡ್ಡೆ ಉತ್ತಮ ಉದಾಹರಣೆ. ಆಲೂಗೆಡ್ಡೆ ಗಿಡ ಬೆಳೆಯುತ್ತಿರುವಾಗ ಗಿಡದ ತಳಭಾಗದ ಕಾಂಡದ ಕೆಲವು ಕವಲುಗಳು ತುದಿಯಲ್ಲಿ ಸ್ವಲ್ಪ ಉಬ್ಬಿರುತ್ತವೆ. ಇವೇ ಮುಂದೆ ಟ್ಯೂಬರುಗಳಾಗುತ್ತವೆ. ಗೆಡ್ಡೆಯ ಮೇಲ್ಭಾಗದಲ್ಲಿ ಹಲವಾರು ಕಂಕುಳು ಮೊಗ್ಗುಗಳಿರುತ್ತವೆ. ಇವಕ್ಕೆ ಕಣ್ಣುಗಳು ಎನ್ನುತ್ತಾರೆ. ಇವು ಗೆಡ್ಡೆಯ ಮೇಲೆ ವರ್ತುಲಾಕಾರವಾಗಿ ಜೋಡಣೆಗೊಂಡಿದ್ದು, ಸಹಜ ಕಾಂಡದ ಮೇಲಿನ ಎಲೆಗಳ ಜೋಡಣೆಯನ್ನು ಹೋಲುತ್ತವೆ. ಪ್ರತಿಯೊಂದು ಕಣ್ಣಿನಲ್ಲೂ ಸಣ್ಣ ಸಣ್ಣ ಎಲೆಗಳು ಮತ್ತು ಅವುಗಳ ಹತ್ತಿರ ಪಾರ್ಶ್ವಮೊಗ್ಗುಗಳು ಇರುತ್ತವೆ. ಆಲೂಗೆಡ್ಡೆಯನ್ನು ನೆಡುವಾಗ ಕೊನೆಯ ಪಕ್ಷ ಒಂದೊಂದು ಕಣ್ಣಿರುವ ಚೂರುಗಳಾಗಿ ಕತ್ತರಿಸಿ ನೆಡುತ್ತಾರೆ. ಈ ಚೂರುಗಳಿಂದ ಒಂದು ಅಥವಾ ಹೆಚ್ಚು ಕಾಂಡಗಳು ಹೊರಡುತ್ತವೆ. ಪೂರ್ತಿಯಾಗಿ ಒಂದು ಗೆಡ್ಡೆಯನ್ನೇ ನೆಟ್ಟಾಗ ತುದಿಮೊಗ್ಗಿನಿಂದ ಮಾತ್ರ ಕಾಂಡ ಹೊರಡುತ್ತದೆ.

ಆಲೂಗೆಡ್ಡೆಯ ಒಳರಚನೆಯಲ್ಲಿ ಮೆಡ್ಯುಲ, ಪ್ರೋಕೇಂಬಿಯಮ್ ಮತ್ತು ಕಾರ್ಟೆಕ್ಸ್ ಎಂಬ ಮೂರು ಭಾಗಗಳನ್ನು ಗುರುತಿಸಬಹುದು. ಎಳೆಯ ಆಲೂಗೆಡ್ಡೆಯಲ್ಲಿ ಕಾಂಡದ ಒಳರಚನೆಯಿದ್ದರೂ ಇದು ಬಲಿಯುತ್ತ ಹೋದಂತೆ ಎಂಡೋಡರ್ಮಿಸ್ ಪದರ ಕಾಣಿಸದಾಗುತ್ತದೆ. ಗೆಡ್ಡೆಯ ಎಪಿಡರ್ಮಿಸಿನ ಆಯುಷ್ಯವೂ ಬಹಳ ಕಡಿಮೆ. ಗೆಡ್ಡೆ ದೊಡ್ಡದಾದಂತೆಲ್ಲ ಎಪಿಡರ್ಮಿಸಿನ ಕೋಶಗಳು ಕೆಳಭಾಗದಲ್ಲಿ ಫೆಲೋಜನ್ ಎಂಬ ಪದರವನ್ನು ಉತ್ಪತ್ತಿ ಮಾಡುತ್ತವೆ. ಫೆಲೋಜನ್ ಪದರದಿಂದ 10–15 ಕೋಶಗಳಷ್ಟು ದಪ್ಪದಾದ ಪೆರಿಡರ್ಮ್ ಅಂಗಾಂಶ ಹುಟ್ಟುತ್ತದೆ. ಹೀಗೆ ಫೆಲೋಜನ್ ಪದರ ಗೆಡ್ಡೆಯ ಆಯುಷ್ಯ ಪೂರ್ತಿ ಬದುಕಿದ್ದು, ಗೆಡ್ಡೆ ಬೆಳೆದಂತೆಲ್ಲ ಹೊರಗಡೆ ಹರಿದು ಹೋಗುವ ಕೋಶಗಳ ಬದಲಿಗೆ ಹೊಸ ಪೆರಿಡರ್ಮ್ ಕೋಶಗಳನ್ನು ಉತ್ಪತ್ತಿಮಾಡಿ ಗೆಡ್ಡೆ ಬೆಳೆಯಲು ಸಹಾಯಕವಾಗುತ್ತದೆ.

ಬಲ್ಬ್ : ರಸಭರಿತ ಎಲೆಗಳಿಂದ ಆವೃತವಾಗಿರುವ ಒಂದು ಕುಳ್ಳುಕಾಂಡ. ಇದು ಕಾಂಡದ ಮೇಲಿರುವ ಎಲೆಗಳಂತೆ ರಸಭರಿತ ಎಲೆಗಳಲ್ಲಿ ಕೂಡ ಕಂಕುಳು ಮೊಗ್ಗುಗಳು ಇರುತ್ತವೆ. ಈ ಬಗೆಯ ಗೆಡ್ಡೆ ಏಕದಳ ಸಸ್ಯಗಳಲ್ಲಿ ಮಾತ್ರ ಕಾಣಬರುತ್ತದೆ. ಉದಾಹರಣೆ: ಈರುಳ್ಳಿ, ಬೆಳ್ಳುಳ್ಳಿ, ಲಿಲಿ, ಟ್ಯೂಲಿಪ್ ಮುಂತಾದವು.

ಸುವರ್ಣ ಗೆಡ್ಡೆ

ಈರುಳ್ಳಿ ಗೆಡ್ಡೆಯ ಒಳರಚನೆಯನ್ನು ಗಮನಿಸಿದರೆ ಕಾಂಡ ಬಲು ಚಿಕ್ಕದಾಗಿದ್ದು ಅದರ ಸುತ್ತ ಎಲೆಗಳು ವರ್ತುಲಾಕಾರವಾಗಿ ಜೋಡಣೆಗೊಂಡಿರುವುದನ್ನು ಕಾಣಬಹುದು. ಕಾಂಡದ ಕೆಳಭಾಗದಲ್ಲಿ ಕೆಲವು ಆಗಂತುಕ ಬೇರುಗಳು ಇವೆ. ಗೆಡ್ಡೆ ಬಲಿತಂತೆಲ್ಲ ಹೊರಗಿನ ಎಲೆಗಳು ಒಣಗಿ ಒಳಗಿನ ರಸಭರಿತ ಎಲೆಗಳನ್ನು ಸಂರಕ್ಷಿಸುತ್ತವೆ.

ಕಂದು : ಇದು ಪ್ರಕಂದವನ್ನು ಹೋಲುವ ಗೆಡ್ಡೆ. ಪ್ರಕಂದ ಸಮಾಂತರವಾಗಿ ಬೆಳೆದರೆ ಇದು ಮೇಲ್ಮುಖವಾಗಿ ಬೆಳೆಯುತ್ತದೆ. ಇದರ ಒಳ ರಚನೆಯನ್ನು ಪರೀಕ್ಷಿಸಿದರೆ ಕಾರ್ಟಿಕಲ್ ಪದರದಲ್ಲಿ ನಾಳಕೂರ್ಚಗಳು ಹರಡಿರುವುದನ್ನು ಗಮನಿಸಬಹುದು. ಆಗಂತುಕ ಬೇರುಗಳು ಕಂದಿನ ತಳಭಾಗದಲ್ಲಿರುತ್ತವೆ. ಹೊರಗಡೆ ಪೊರೆಯಂತಿರುವ ಎಲೆಗಳಿವೆ. ಎಲೆಗಳು ಕಂದಿನ ಮೇಲೆ ವರ್ತುಲಾಕಾರವಾಗಿ ಜೋಡಣೆಗೊಂಡಿರುತ್ತವೆ. ಬಲ್ಬಿಗೂ ಕಂದಿಗೂ ಒಂದು ಮುಖ್ಯ ವ್ಯತ್ಯಾಸವೆಂದರೆ, ಕಂದುಗಳಲ್ಲಿ ಕಾಂಡದ ಭಾಗ ಹೆಚ್ಚು, ಎಲೆಗಳ ಸಂಖ್ಯೆ ಕಡಿಮೆ ಮತ್ತು ಅಂತರ್ಗೆಣ್ಣುಗಳ ಉದ್ದ ಹೆಚ್ಚು, ಆರ್ಕಿಡೇಸೀ ಕುಟುಂಬದ ಸಸ್ಯಗಳಲ್ಲಿ ಕಂದನ್ನು ಕಾಣಬಹುದು.



ಈರುಳ್ಳಿಯ ಉದ್ದ ಸೀಳಿಕೆ.

ಎಲ್ಲ ರೀತಿಯ ಗೆಡ್ಡೆಗಳೂ ಆಹಾರವನ್ನು ಶೇಖರಿಸುವುದರಿಂದ ಇವನ್ನು ಆಹಾರವಾಗಿ ಉಪಯೋಗಿಸುವರು. ಉದಾ: ಆಲೂಗಡ್ಡೆ. ಕಾಯಜ ಪ್ರಜನನದ (ವೆಜಿಟೇಟಿವ್ ರಿಪ್ರೊಡಕ್ಷನ್) ಮುಖ್ಯ ಸಾಧನಗಳಾಗಿಯೂ ಇವನ್ನು ಬಳಸಬಹುದು. (ಎಸ್.ಆರ್.ಜಿ.)

**ಗೆಡ್ಡೆಕೋಸು :** ವಿಶೇಷವಾಗಿ ಬಳಕೆಯಲ್ಲಿರುವ ಒಂದು ಜನಪ್ರಿಯ ತರಕಾರಿ ಸಸ್ಯ. ನವಿಲು ಕೋಸು ಪರ್ಯಾಯ ನಾಮ. ಬ್ರ್ಯಾಸಿಕೇಸೀ ಕುಟುಂಬಕ್ಕೆ ಸೇರಿದೆ. ಇದರ ಇಂಗ್ಲಿಷ್ ಹೆಸರು ನೋಲ್‌ಕೋಲ್; ವೈಜ್ಞಾನಿಕ ಹೆಸರು ಬ್ರ್ಯಾಸಿಕ ಓಲರೇಸಿಯ ವೆರೈಟಿ ಗಾಂಗೈಲಾಯಿಡಿಸ್ ಅಥವಾ ಬ್ರ್ಯಾಸಿಕ ಕಾಲರೇಪ. ಇದರಲ್ಲಿ ಸುಮಾರು ನೂರೈವತ್ತು ಬಗೆಗಳಿವೆ. ಇವುಗಳಲ್ಲಿ ಕೆಲವು ಬಗೆಗಳು ಏಕವಾರ್ಷಿಕಗಳಾದರೆ ಇನ್ನು ಕೆಲವು ದ್ವೈವಾರ್ಷಿಕಗಳು. ಕೆಲವನ್ನು ಎಣ್ಣೆಬೀಜಗಳಿಗಾಗಿಯೂ ಇನ್ನು ಕೆಲವನ್ನು ಕಾಯಿಪಲ್ಯಗಳಿಗಾಗಿಯೂ ಬೆಳೆಸುತ್ತಾರೆ. ಬ್ರ್ಯಾಸಿಕ ಓಲರೇಸಿಯ ಎಂಬ ಪ್ರಭೇದದಲ್ಲಿಯೇ ಹಲವಾರು ಬಗೆಗಳಿವೆ. ಉದಾಹರಣೆಗೆ ಎಲೆಕೋಸು ಮತ್ತು ಹೂಕೋಸು ಮುಂತಾದವು. ಇವು ತಮ್ಮ ಕಾಂಡ ಎಲೆ ಮತ್ತು ಹೂಗೊಂಚಲುಗಳ ಗುಣಲಕ್ಷಣಗಳಲ್ಲಿ ವ್ಯತ್ಯಾಸವನ್ನು ತೋರಿಸುತ್ತವೆ.

ಗೆಡ್ಡೆಕೋಸು ಪ್ರಧಾನವಾಗಿ ಉತ್ತರ ಸಮಶೀತೋಷ್ಣವಲಯದ ಬೆಳೆ. ಉತ್ತರ ಯುರೋಪಿನ ಕರಾವಳಿ ಪ್ರದೇಶಗಳು ಇದರ ತೌರು ಎಂದು ಅಭಿಪ್ರಾಯ ಪಡಲಾಗಿದೆ. ಆದರೆ ಚಳಿಗಾಲದ ಬೆಳೆಯಾಗಿ ಉಷ್ಣವಲಯದಲ್ಲೂ ಬೆಳೆಸಬಹುದು. ಭಾರತದಲ್ಲಿ

ಇದನ್ನು ಮುಂಬಯಿ, ಬರೋಡ, ಅಸ್ಸಾಂ, ಉತ್ತರ ಪ್ರದೇಶ ಮತ್ತು ಪಂಜಾಬುಗಳಲ್ಲಿ ಅಧಿಕವಾಗಿ ಬೆಳೆಸುತ್ತಾರೆ.

ಗೆಡ್ಡೆಕೋಸಿನ ಕೃಷಿಗೆ ತಂಪಾದ ಹಾಗೂ ತೇವಾಂಶವಿರುವ ಹವೆ ಅಗತ್ಯ. ಆದ್ದರಿಂದ ಭಾರತದಲ್ಲಿ ಇದನ್ನು ಚಳಿಗಾಲದ ಬೆಳೆಯನ್ನಾಗಿ ಬೆಳೆಸುವುದೇ ಹೆಚ್ಚು. ಅದರಲ್ಲೂ ಉತ್ತರ ಭಾರತದಲ್ಲಿ ಇದರ ಕೃಷಿ ಬಹಳವಾಗಿದೆ. ಬೆಟ್ಟಪ್ರದೇಶಗಳಲ್ಲಿ ಇದನ್ನು ವಸಂತ ಋತುವಿನಲ್ಲಿ ಅಥವಾ ಬೇಸಗೆ ಕಾಲದ ಆರಂಭದಲ್ಲಿ ಬೆಳೆಸಲಾಗುತ್ತದೆ. ಕೆಲವು ಕಡೆಗಳಲ್ಲಿ ವರ್ಷಕ್ಕೆ ಎರಡು ಬೆಳೆಗಳನ್ನೂ ತೆಗೆಯುವುದುಂಟು. ಮಣ್ಣಿನ ಲಕ್ಷಣದಲ್ಲಿ ಸ್ವಲ್ಪ ಬದಲಾವಣೆಯಾದರೂ ಇದು ಹೊಂದಿಕೊಂಡು ಬೆಳೆಯಬಲ್ಲುದು. ಮರಳು ಮಿಶ್ರಿತ ಜೇಡಿಮಣ್ಣಿದ್ದಲ್ಲಿ ಬೇಗನೆ ಬೆಳೆ ತೆಗೆಯಬಹುದಾದರೂ ಮೆಕ್ಕಲು ಮಣ್ಣು ಒಳ್ಳೆಯ ಫಸಲನ್ನು

ಕೊಡುತ್ತದೆ. ಆಮ್ಲೀಯ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯಲಾರದು. ಮಣ್ಣಿನಲ್ಲಿ ಇತರ ಸಾವಯವ ವಸ್ತುಗಳು ಬೆರೆತಿದ್ದರೆ ಉತ್ತಮ. ಆಗಾಗ್ಗೆ ಮಣ್ಣನ್ನು ಸಡಿಲಿಸಿ ಕಳೆ ಕೀಳುವುದು ಒಳ್ಳೆಯದು. ಗೆಡ್ಡೆಕೋಸಿನ ಬೆಳೆಗೆ ಅಧಿಕ ಗೊಬ್ಬರದ ಪೂರೈಕೆಯೂ ಅಗತ್ಯ. ಹಾಕಿದ ಗೊಬ್ಬರ ಮಣ್ಣಿನಲ್ಲಿ ಸರಿಯಾಗಿ ಬೆರೆಯುವಂತೆ ಮೂರು ನಾಲ್ಕು ಸಲವಾದರೂ ಚೆನ್ನಾಗಿ ಉಳಬೇಕು. ಅಮೋನಿಯಂ ಸಲ್ಫೇಟ್, ಸೂಪರ್ ಫಾಸ್ಫೇಟ್ ಮತ್ತು ಹಸಿರು ಗೊಬ್ಬರಗಳನ್ನು ಮಿಶ್ರ ಮಾಡಿ ಅಥವಾ ಬೇರೆ ಬೇರೆಯಾಗಿ ಉಪಯೋಗಿಸ ಬಹುದು. ಬೀಜ ಬಿತ್ತುವ ಪಾತಿಯಲ್ಲಿನ ಮಣ್ಣಿನ ಹೊರಪದರ ಗಡುಸಾಗಿರದೆ ಪುಡಿಯಾಗು ವಂತಿರಬೇಕು. ಬೀಜ ಬಿತ್ತುವ ಸ್ಥಳ ಅಶುಚಿಯಾಗಿದ್ದಲ್ಲಿ ಫಾರ್ಮಾಲ್ಡಿಹೈಡ್ ದ್ರಾವಣವನ್ನು ಅಥವಾ ಬಿಸಿನೀರನ್ನು ಚಿಮುಕಿಸಬೇಕು. ಗೆಡ್ಡೆಕೋಸಿಗೆ ನೀರಿನ ಸರಬರಾಜು ಯಥೇಚ್ಛವಾಗಿರಬೇಕು.

ಗೆಡ್ಡೆಕೋಸಿನ ಬೀಜಗಳನ್ನು ಬಯಲು ಪ್ರದೇಶಗಳಲ್ಲಿ ಆಗಸ್ಟ್‌ನಿಂದ ಅಕ್ಟೋಬರ್‌ವರೆಗೂ ಗುಡ್ಡ ಪ್ರದೇಶಗಳಲ್ಲಿ ಫೆಬ್ರವರಿಯಿಂದ ಮೇ ವರೆಗೂ ಬಿತ್ತುತ್ತಾರೆ. ಒಂದು ಹೆಕ್ಟೇರಿಗೆ 1–1.5 ಕೆಜಿ ಬೀಜ ಬೇಕಾಗುತ್ತದೆ. ಬೀಜಗಳನ್ನು ಸಾಲಾಗಿ ನೆಡಬೇಕು. ಸಾಂದ್ರವಾಗಿ ಬಿತ್ತಬಾರದು. ಒಂದು ಗಿಡ ಇನ್ನೊಂದು ಗಿಡದಿಂದ ಇಪ್ಪತ್ತು ಸೆಂಮೀ ಅಂತರದಲ್ಲಿರಬೇಕು. ಬೀಜ ಬಿತ್ತಿದ ಸುಮಾರು 40–60 ದಿವಸಗಳೊಳಗೆ ಬೆಳೆ ಕೊಯ್ಲಿಗೆ ಬರುತ್ತದೆ. ಗೆಡ್ಡೆಕೋಸಿಗೆ ಸಾರಜನಕದ ಆವಶ್ಯಕತೆ ಹೆಚ್ಚಾಗಿರುವುದರಿಂದ ದ್ವಿದಳಧಾನ್ಯಗಳನ್ನು ಬೆಳೆಸಿದ ಅನಂತರ ಬೀಜ ಬಿತ್ತುವುದು ಉತ್ತಮ.

ಈ ಸಸ್ಯದಲ್ಲಿ ರೂಪಾಂತರ ಹೊಂದಿರುವ ಕಾಂಡವೇ ಆಹಾರಕ್ಕಾಗಿ ಉಪಯೋಗಿಸಲ್ಪಡುವ ಭಾಗ. ಕಾಂಡ ಸರಿಯಾದ ಗಾತ್ರಕ್ಕೆ ಬೆಳೆದ ಅನಂತರ ಇದನ್ನು ಕೀಳಬಹುದು. ಆದರೆ ದೀರ್ಘಕಾಲ ಹಾಗೆಯೇ ಬಿಟ್ಟರೆ ಗೆಡ್ಡೆ ಬಲಿತು ಗಟ್ಟಿಯಾಗಿ ನಾರು ನಾರಾಗುತ್ತದೆ. ಗೆಡ್ಡೆಕೋಸಿನ ವಾರ್ಷಿಕ ಇಳುವರಿ ಹೆಕ್ಟೇರಿಗೆ 20–25 ಟನ್‌ಗಳು. ಗೆಡ್ಡೆಕೋಸನ್ನು $0^0$ ಸೆಂ. ಉಷ್ಣತೆಯಲ್ಲಿ ಮತ್ತು ಶೇ.90–95 ತೇವಾಂಶವಿರುವಲ್ಲಿ ಶೇಖರಿಸಿಡಬಹುದು.

ಗೆಡ್ಡೆಕೋಸಿನಲ್ಲಿ ಕಾಂಡ ಮಾರ್ಪಾಡಾಗಿ ಗೆಡ್ಡೆಯಂಥ ರಚನೆಯಾಗುತ್ತದೆ. ಎಲೆಗಳು ಕಾಂಡದ ಮೇಲ್ಭಾಗದಲ್ಲಿ ಗುಂಪುಕೂಡಿರುತ್ತವೆ. ಇವು ಸರಳ ಮಾದರಿಯವು. ಹೂಗಳು ದ್ವಿಲಿಂಗಿಗಳು ಹಾಗೂ ಹಳದಿಬಣ್ಣದವು. ಗೊನೆಯಾಕಾರದ ಹೂಗೊಂಚಲುಗಳಲ್ಲಿ ಜೋಡಣೆಗೊಂಡಿವೆ. ಪುಷ್ಪಪತ್ರ ಮತ್ತು ಪುಷ್ಪದಳಗಳ ಸಂಖ್ಯೆ ನಾಲ್ಕು, ಕೇಸರಗಳು ಆರು. ಇವುಗಳಲ್ಲಿ ಎರಡು ಚಿಕ್ಕವಾಗಿಯೂ ನಾಲ್ಕು ದೊಡ್ಡವಾಗಿಯೂ ಇವೆ. ಅಂಡಾಶಯದಲ್ಲಿ ಎರಡು ಕಾರ್ಪೆಲುಗಳಿರುತ್ತವೆ. ಶಲಾಕೆ ಚಿಕ್ಕದು. ಶಲಾಕಾಗ್ರ ಗುಂಡಗಿದೆ. ಕಾಯಿಗಳು ಕ್ಯಾಪ್ಸೂಲ್ ಮಾದರಿಯವು. ಹೂಗಳಲ್ಲಿ ಸಾಮಾನ್ಯವಾಗಿ ಅನ್ಯ ಪರಾಗಸ್ಪರ್ಶ ನಡೆಯುತ್ತದೆ. ಅಲ್ಲದೆ ಇದೇ ಜಾತಿಯ ಬೇರೆ ಸಸ್ಯಗಳೊಡನೆ ಪರಕೀಯ ಪರಾಗಸ್ಪರ್ಶವೂ ನಡೆಯಬಹುದು. ಪರಾಗಕೋಶ ಮತ್ತು ಅಂಡಾಶಯಗಳು ಬೇರೆ ಬೇರೆ ಕಾಲಗಳಲ್ಲಿ ಪಕ್ವವಾಗುವುದರಿಂದ ಸ್ವಕೀಯ ಪರಾಗಸ್ಪರ್ಶ ಅಸಾಧ್ಯ. ಪರಾಗಸ್ಪರ್ಶ ಕ್ರಿಯೆ ಸಹಜವಾಗಿ ನಡೆದರೂ ಬೀಜಗಳ ಉತ್ಪತ್ತಿ ಬಲು ಕಡಿಮೆ. ಭಾರತದಲ್ಲಿ ಬೆಟ್ಟ ಪ್ರದೇಶಗಳಲ್ಲಿನ ಗೆಡ್ಡೆಕೋಸುಗಳು ಮಾತ್ರ ಬೀಜವನ್ನು ಉತ್ಪಾದಿಸುತ್ತವೆ.

ಗೆಡ್ಡೆಕೋಸಿನಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಒಂದು ನಸುಹಸಿರು ಬಣ್ಣದ್ದು. ಇದು ಗುಂಡಾಗಿಯೂ ನುಣುಪಾಗಿಯೂ ಇರುವ ಮಧ್ಯಮ ಗಾತ್ರದ ಕೋಸು. ಇದರ ವಾಣಿಜ್ಯನಾಮ ವೈಟ್ ವಿಯನ. ಇನ್ನೊಂದು ನೇರಳೆ ವರ್ಣದ್ದು. ಇದರ ಹೆಸರು ಪರ್ಪಲ್ ವಿಯನ. ಇದನ್ನು ತರಕಾರಿಯಂತೆ ಉಪಯೋಗಿಸುವುದಲ್ಲದೆ ಉಪ್ಪಿನಕಾಯಿ ಹಾಕುವುದಕ್ಕೂ ಬಳಸುತ್ತಾರೆ. ಗೆಡ್ಡೆಕೋಸಿನಲ್ಲಿ ಶೇ.92.7 ತೇವಾಂಶ ಶೇ.1.1 ನೈಟ್ರೋಜನ್, ಶೇ.0.2 ಕೊಬ್ಬು, ಶೇ.3.8 ಕಾರ್ಬೋಹೈಡ್ರೇಟ್, ಶೇ.0.7 ಲವಣ ಪದಾರ್ಥ, ಶೇ.1.5 ನಾರು; ಲವಣ ಪದಾರ್ಥಗಳಲ್ಲಿ ಮುಖ್ಯವಾದವು ಕ್ಯಾಲ್ಸಿಯಂ, ಮೆಗ್ನೀಸಿಯಂ, ಫಾಸ್ಫರಸ್, ಕಬ್ಬಿಣ, ತಾಮ್ರ, ಗಂಧಕ. ಗಂಧಕದ ಅಂಶ ವಿಶೇಷವಾಗಿರುವುದರಿಂದ ಗೆಡ್ಡೆಕೋಸಿಗೆ ಒಂದು ವಿಧದ ತೀಕ್ಷ್ಣ ವಾಸನೆಯಿದೆ.

ಗೆಡ್ಡೆಕೋಸು ಹಲವು ರೀತಿಯ ವ್ಯಾಧಿಗಳಿಗೆ ಮತ್ತು ಹಾನಿಕರ ಕೀಟಗಳಿಗೆ ಬಲಿಯಾಗುತ್ತದೆ. ರೋಗಗಳಲ್ಲಿ ಮುಖ್ಯವಾದವು–1 ಡ್ಯಾಂಪಿಂಗ್ ಆಫ್; ಎಳೆಯ ಸಸ್ಯಗಳಲ್ಲಿ ಇದು ಬಲು ಸಾಮಾನ್ಯವಾದ ರೋಗ. ಇದನ್ನು ತಡೆಗಟ್ಟಲು ಫಾರ್ಮಾಲ್ಡಿಹೈಡ್ ಅಥವಾ ಇನ್ನಿತರ ಶಿಲೀಂಧ್ರನಾಶಕ ವಸ್ತುಗಳನ್ನು ಬೀಜ ಬಿತ್ತುವ ಜಾಗದಲ್ಲಿ ಚಿಮುಕಿಸಬೇಕು ಮತ್ತು ಬೀಜಗಳನ್ನು ಸಾಕಷ್ಟು ಅಂತರದಲ್ಲಿ ನೆಡಬೇಕು.

2 ಬ್ಲಾಕ್ ರಾಟ್ ; ಕ್ಸ್ಯಾಂತೊಮೊನಾಸ್ ಕಂಪೆಸ್ಟ್ರಿಸ್ ಎಂಬ ಬ್ಯಾಕ್ಟೀರಿಯ ಈ ರೋಗಕ್ಕೆ ಮೂಲ ಕಾರಣ. ಇದರಿಂದ ಎಲೆಗಳು ಹಳದಿಬಣ್ಣಕ್ಕೆ ತಿರುಗುವುದಲ್ಲದೆ ನರಗಳು ಕಪ್ಪಾಗುತ್ತವೆ. ಚಿಕ್ಕ ಚಿಕ್ಕ ಸಸಿಗಳಿಗೆ ಈ ರೋಗ ಬಂದರೆ ಅವು ಸತ್ತುಹೋಗುತ್ತವೆ. ಬೆಟ್ಟ ಪ್ರದೇಶಗಳಲ್ಲಿ ಈ ರೋಗ ಬಹು ಸಾಮಾನ್ಯ. ಇದು ಬೀಜಗಳ ಮೂಲಕ ಹರಡುವುದರಿಂದ ಇಂಥ ಬೀಜಗಳನ್ನು ಬಿತ್ತುವ ಮೊದಲು $50^0$ ಸೆಂ. ಉಷ್ಣತೆಯ ನೀರಿನಲ್ಲಿ 25–30 ಮಿನಿಟುಗಳ ತನಕ ಮುಳುಗಿಸಬೇಕು. ಬೆಳೆಗಳ ಪರ್ಯಾಯವೂ ಈ ರೋಗವನ್ನು ಹತೋಟಿಗೆ ತರುವ ಇನ್ನೊಂದು ಉಪಾಯ.

3. ಕ್ಲಬ್‌ರೂಟ್ : ಈ ರೋಗ ಆಮ್ಲೀಯ ಮಣ್ಣಿನಲ್ಲಿ ಬೆಳೆಯುವ ಸಸ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಪ್ಲಾಸ್ಮೊಡಿಯೋಫೊರ ಬ್ರ್ಯಾಸಿಕೆ ಎಂಬ ಶಿಲೀಂಧ್ರ ಕಾರಣ. ಇದು ಮಣ್ಣಿನಲ್ಲಿ ವಾಸವಾಗಿದ್ದು ಬೇರನ್ನು ಆಕ್ರಮಿಸಿಕೊಳ್ಳುತ್ತದೆ. ಬೇರಿನಿಂದ ಒಳಹೊಕ್ಕ ಮೇಲೆ ನೀರಿನ ಸಾಗಣೆಗೆ ಅಡ್ಡಿಯನ್ನು ಉಂಟುಮಾಡುವುದರಿಂದ ಸಸ್ಯದ ಬೆಳವಣಿಗೆಯನ್ನು ಕುಂಠಿಸುತ್ತದೆ. ತತ್ಪರಿಣಾಮವಾಗಿ ಎಲೆಗಳು ಬಾಡಿಹೋಗುತ್ತವೆ. ಬೆಳೆಯ ಪರ್ಯಾಯ ಕಾಲವನ್ನು ಹೆಚ್ಚಿಸುವುದರಿಂದ ಮತ್ತು ಮಣ್ಣನ್ನು ಕ್ಷಾರೀಯ ಸ್ಥಿತಿಗೆ ತರುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

4. ಬ್ಲ್ಯಾಕ್ ಲೆಗ್ : ಫೋಮ ಲಿಂಗಮ್ ಎಂಬ ಶಿಲೀಂಧ್ರದಿಂದ ಈ ರೋಗ ಬರುತ್ತದೆ. ರೋಗ ಅಂಟಿದಾಗ ಕಾಂಡದ ತಳಭಾಗ ಮತ್ತು ಬೇರುಗಳು ಸತ್ತುಹೋಗುವುದರಿಂದ ಗಿಡ ಬಾಡಿ ಬಿದ್ದುಹೋಗುತ್ತದೆ. ಎಳೆಯ ಸಸಿಗಳು ಇದಕ್ಕೆ ಬಹುಬೇಗನೆ ತುತ್ತಾಗುತ್ತವೆ. ಇದನ್ನು ಹತೋಟಿಗೆ ತರುವ ಮುಖ್ಯ ವಿಧಾನಗಳೆಂದರೆ ಬೆಳೆಗಳ ಪರ್ಯಾಯ ಕಾಲವನ್ನು ಹೆಚ್ಚಿಸುವುದು ಮತ್ತು ಬೀಜಗಳನ್ನು ಬಿತ್ತುವ ಮೊದಲು ಅವನ್ನು ಸುಮಾರು $122^0$· ಸೆಂ. ಉಷ್ಣತೆಯಿರುವ ನೀರಿನಲ್ಲಿ 25 ಮಿನಿಟುಗಳ ಕಾಲ ಮುಳುಗಿಸಿಟ್ಟಿದ್ದು ಅನಂತರ ಒಣಗಿಸುವುದು.

5. ಹಳದಿರೋಗ : ಫ್ಯೂಸೇರಿಯಂ ಕೊಂಗ್ಲುಟಿನೆನ್ಸ್ ಎಂಬ ಶಿಲೀಂಧ್ರ ಈ ರೋಗವನ್ನು ಉಂಟುಮಾಡುತ್ತದೆ. ಇದು ಸಸ್ಯ ದೇಹದಲ್ಲಿ ನೀರು ಮತ್ತು ಆಹಾರ ಸಾಗಣೆಗೆ ತೊಂದರೆಯನ್ನು ಉಂಟುಮಾಡುವುದರಿಂದ ಗಿಡದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಇಡೀ ಗಿಡ ಹಳದಿಬಣ್ಣಕ್ಕೆ ತಿರುಗಿ ಎಲೆಗಳು ಉದುರಲು ಪ್ರಾರಂಭವಾಗುವುದು ಈ ಜಾಡ್ಯದ ಮುಖ್ಯ ಚಿಹ್ನೆ. ರೋಗವನ್ನು ತಡೆಗಟ್ಟಲು ಬೀಜ ನೆಡುವ ಪಾತಿಗಳನ್ನು ಚೊಕ್ಕಟವಾಗಿರಿಸಬೇಕು. ನಿರೋಧ ಶಕ್ತಿಯುಳ್ಳ ಬಗೆಗಳನ್ನು ಮಾತ್ರ ಬೆಳೆಯುವುದು ರೋಗ ನಿವಾರಣೆಯ ಉತ್ತಮ ವಿಧಾನ.

ಹಾನಿಕಾರಕ ಕೀಟಗಳಲ್ಲಿ ಮುಖ್ಯವಾದವು ಇವು: ಹೈಲೆಮಿಯ ಬ್ರ್ಯಾಸಿಕೆ ಎಂಬ ಕೀಟ ಮೊದಲು ಎಳೆಯ ಬೇರುಗಳನ್ನು ಆಕ್ರಮಿಸಿಕೊಂಡು ಅನಂತರ ಪ್ರಮುಖ ಬೇರಿನೊಳಕ್ಕೆ ಹಾಗೂ ಕಾಂಡದೊಳಕ್ಕೆ ಕೊರೆದುಕೊಂಡು ಹೋಗುತ್ತದೆ. ತತ್ಫಲವಾಗಿ ಗಿಡ ಹಳದಿಬಣ್ಣಕ್ಕೆ ತಿರುಗಿ ಬಾಡುತ್ತ ಬರುತ್ತದೆ. ರಸಕರ್ಪೂರದ (ಕ್ಯಾಲೊಮೆಲ್)

ದ್ರಾವಣ, ಪಾದರಸದ ಕ್ಲೋರೈಡ್, ಆಲ್ಡ್ರಿನ್ ಮೊದಲಾದ ರಾಸಾಯನಿಕ ವಸ್ತುಗಳನ್ನು ಸಿಂಪಡಿಸುವುದರಿಂದ ಈ ಕೀಟಗಳನ್ನು ನಾಶಪಡಿಸಬಹುದು.

ಏಸಿಯ ರೇಪ ಎಂಬ ಕೀಟ ಗೆಡ್ಡೆಕೋಸಿನ ಎಲೆಗಳನ್ನು ತಿಂದು ಜೀವಿಸುತ್ತದೆ. ಡಿ ಡಿ ಟಿ ಮತ್ತು ಎಂಡ್ರೆಕ್ಸ್ ಎಂಬ ಕೀಟನಾಶಕ ವಸ್ತುಗಳನ್ನು ಚಿಮುಕಿಸುವುದರಿಂದ ಈ ಕೀಟವನ್ನು ನಾಶಪಡಿಸಬಹುದು.

ಏಫಿಡ ಬ್ರಾಸಿಕೆ ಎಂಬ ಕೀಟ ಇನ್ನೊಂದು ಮುಖ್ಯ ಪಿಡುಗು. ಎಲೆಗಳು ಸುರುಟಿಕೊಂಡು ಬೆಳವಣಿಗೆ ಕುಂಠಿತವಾಗುವುದು ಈ ರೋಗದ ಮುಖ್ಯ ಲಕ್ಷಣ. ಫಾಲಿಡಾಲನ್ನು ಚಿಮುಕಿಸುವುದರಿಂದ ಇದನ್ನು ನಿವಾರಿಸಬಹುದು.

ಮುರ್ಗನ್ಶಿಯ ಹಿಸ್ಟ್ರಿಯಾನಿಕ ಎಂಬ ಇನ್ನೊಂದು ಕೀಟ ಗೆಡ್ಡೆಕೋಸಿಗೆ ತಗಲುತ್ತದೆ. ಇದರ ನಿವಾರಣೆ ಪ್ರಯಾಸದ ಕೆಲಸ. ಸಸಿಗಳು ಎಳೆಯವಾಗಿದ್ದಾಗಲೇ ಡಿ.ಡಿ.ಟಿ.ಯನ್ನು ಸಿಂಪಡಿಸುವುದರ ಮೂಲಕ ಕೀಟವನ್ನು ನಾಶಪಡಿಸಬಹುದು. ಆದರೆ ಗಿಡ ಬಲಿಯುತ್ತ ಬಂದಂತೆ ಈ ಕ್ರಮವನ್ನು ಅನುಸರಿಸುವುದು ಯೋಗ್ಯವಲ್ಲ. (ಎಸ್.ಡಿ.ಕೆ.)

**ಗೆಣಸಿನ ಕುಟುಂಬ :** ಸಿಂಪೆಟಲೀ ಗುಂಪಿಗೆ ಸೇರಿದ ಒಂದು ಕುಟುಂಬ (ಕನ್‌ವಾಲ್‌ವ್ಯಲೇಸೀ). ಇದರಲ್ಲಿ ಸುಮಾರು 50 ಜಾತಿಗಳಿವೆ. ಸುಮಾರು 21 ಜಾತಿಗಳು ದಕ್ಷಿಣ ಭಾರತದ ವನ್ಯ ಪ್ರದೇಶಗಳಲ್ಲಿ ಬೆಳೆಯುತ್ತವೆ. ಇವುಗಳಲ್ಲಿ ಕೆಲವನ್ನು ಉದ್ಯಾನಗಳಲ್ಲಿ ಬೆಳೆಸುವುದುಂಟು. ಇವು ಸಾಮಾನ್ಯವಾಗಿ ಏಕವಾರ್ಷಿಕ ಇಲ್ಲವೆ ಬಹುವಾರ್ಷಿಕ ಸಸ್ಯಗಳು. ಈ ಕುಟುಂಬದ ಸಸ್ಯಗಳಲ್ಲಿ ಕಾಂಡ ಬಹಳ ದುರ್ಬಲವಾಗಿರುವುದರಿಂದ ಅವೆಲ್ಲ ಬಹುಮಟ್ಟಿಗೆ ಹಂಬುಗಳಾಗಿ ಅಥವಾ ಅಡರುಬಳ್ಳಿಗಳಾಗಿ ಬೆಳೆಯುತ್ತವೆ. ಒಮ್ಮೊಮ್ಮೆ ಮೂಲಿಕೆಗಳಾಗಿ ಬೆಳೆಯುವುದುಂಟು. ಕೆಲವು ವಿಜ್ಞಾನಿಗಳ ಅಭಿಪ್ರಾಯದಲ್ಲಿ ಅಡರುಬಳ್ಳಿಯಂತೆ ಬೆಳೆಯುವ ಸಸ್ಯಗಳು ಬಹುಮುಂದುವರಿದವು. ಕೆಲವು ಸಸ್ಯಗಳು ಬದನಿಕೆಗಳಾಗಿರುತ್ತವೆ. ಉದಾಹರಣೆಗೆ ಕಸ್‌ಕ್ಯುಟ ಎಂಬ ಸಸ್ಯ ತನ್ನ ಕಾಂಡದಿಂದ ಆಶ್ರಯದಾತ ಸಸ್ಯವನ್ನು ಬಳಸಿಕೊಂಡಿದ್ದು, ಹೀರುಬೇರುಗಳ ಸಹಾಯದಿಂದ ಆಶ್ರಯದಾತ ಸಸ್ಯದ ಕಾಂಡವನ್ನು ಪ್ರವೇಶಿಸಿ, ನಾಳಕೂರ್ಚಗಳೊಂದಿಗೆ ನೇರವಾದ ಸಂಪರ್ಕವನ್ನು ಇಟ್ಟುಕೊಂಡು ಸ್ವಂತ ಬೆಳವಣಿಗೆಗೆ ಬೇಕಾದ ಎಲ್ಲ ಪೋಷಕಾಂಶಗಳನ್ನೂ ಪಡೆಯುತ್ತದೆ. ಗೆಣಸಿನ ಕುಟುಂಬದ ಸಸ್ಯಗಳ ಎಲೆಗಳು ಸರಳರೀತಿಯವು: ಪರ್ಯಾಯವಾಗಿ ಜೋಡಣೆಗೊಂಡಿವೆ. ಹೂಗಳು ಹೆಚ್ಚಾಗಿ ಒಂಟಿಯಾಗಿದ್ದು ಅರೀಯ ಸಮಾಂಗತೆಯನ್ನು ಪ್ರದರ್ಶಿಸುತ್ತವೆ. ಇವು ವರ್ಣರಂಜಿತವಾಗಿವೆ. ಕೇಸರಗಳು ದಳಾರೂಹ ಮಾದರಿಯವು. ಅಂಡಾಶಯದ ಹೊರತು ಹೂವಿನ ಮಿಕ್ಕೆಲ್ಲ ಭಾಗಗಳು ಪಂಚಕಗಳಲ್ಲಿ (ಪೆಂಟಮೀರಸ್) ಇರುತ್ತವೆ. ಕಾಂಡದಲ್ಲಿ ಹಾಲ್ನೊರೆಯಿದೆ (ಲೇಟೆಕ್ಸ್). ನಾಳಕೂರ್ಚಗಳಲ್ಲಿ ಒಂದೊಂದರಲ್ಲೂ ಎರಡೂ ಕಡೆ ಆಹಾರವಾಹಕ ಅಂಗಾಂಶಗಳಿವೆ. ಇದರಿಂದಾಗಿ ಇವನ್ನು ಬೈಕೊಲ್ಯಾಟರಲ್ ಬಂಡಲ್ಸ್ ಎನ್ನಲಾಗುತ್ತದೆ.

ಕನ್‌ವಾಲ್‌ವ್ಯಲಸ್ ಮತ್ತು ಐಪೋಮಿಯ ಎಂಬೆರಡು ಜಾತಿಗಳು ಈ ಕುಟುಂಬದಲ್ಲಿ ಅತ್ಯಂತ ದೊಡ್ಡವಾದವು. ಇವು ಮೂನ್ನೂರಕ್ಕೂ ಹೆಚ್ಚು ಪ್ರಭೇದಗಳನ್ನೊಳಗೊಂಡಿವೆ. ಇವುಗಳಲ್ಲಿ ಕಾಂಡಕ ವಿವಿಧ ರೂಪಾಂತರಗಳನ್ನು ಗಮನಿಸಬಹುದು. ಕೆಲವು ನೆಟ್ಟಗೆ ನಿಲ್ಲುವಂಥವಾದರೆ ಮತ್ತೆ ಕೆಲವು ಭೂಮಿಗೆ ಕಚ್ಚಿಕೊಂಡು ಬೆಳೆಯುವಂಥವು. ಇನ್ನು ಕೆಲವು ಕುಂಠಿತಗೊಂಡ ಶಾಕಗಳು. ಕೆಲವು ಏಕವಾರ್ಷಿಕಗಳಾಗಿದ್ದರೆ ಇನ್ನು ಕೆಲವು ಬಹುವಾರ್ಷಿಕ ಸಸ್ಯಗಳಾಗಿವೆ. ಕೆಲವು ಸಸ್ಯಗಳಲ್ಲಿ ಗುಪ್ತ ಕಾಂಡಗಳಿರುತ್ತವೆ. ಮರಳುಗಾಡಿನ ವಾತಾವರಣದಲ್ಲಿ ಬೆಳೆಯುವ ಸಸ್ಯಗಳಲ್ಲಿ ಗುಪ್ತಕಾಂಡ ಇರುವುದು ಒಂದು ಅನುಕೂಲ. ಕನ್‌ವಾಲ್‌ವ್ಯಲಸ್ ಸ್ಕಾಮೋನಿಯ ಪ್ರಭೇದದಲ್ಲಿ ಗುಪ್ತಕಾಂಡ ದಪ್ಪವಾಗಿದ್ದು ಆಹಾರ ಶೇಖರಣಾಂಗವಾಗಿರುತ್ತದೆ. ಐಪೋಮಿಯ ಬಟಾಟಸ್ (ಗೆಣಸು) ಮತ್ತಿತರ ಪ್ರಭೇದಗಳಲ್ಲಿ ತಾಯಿ ಬೇರಿನ ಅಕ್ಕಪಕ್ಕದಲ್ಲಿರುವ ಬೇರುಗಳು ರಸಭರಿತವಾಗಿದ್ದು ಆಹಾರವನ್ನು ಶೇಖರಿಸಿಕೊಂಡು ಉಬ್ಬಿಕೊಂಡಿರುತ್ತವೆ. ಅರೇಬಿಯ ಮತ್ತು ಪೂರ್ವ ಮೆಡಿಟರೇನಿಯನ್ ಪ್ರದೇಶದ ಕೆಲವು ಭಾಗಗಳಲ್ಲಿ ಕನ್‌ವಾಲ್‌ವ್ಯಲಸ್ ಜಾತಿಯ ಸಸ್ಯಗಳು ಮುಳ್ಳುಮಯ ಪೊದರುಗಳಾಗಿ ಬೆಳೆಯುತ್ತವೆ. ಐಪೋಮಿಯ ಪ್ರೆಸ್‌ಕ್ಯಾಪ್ರೀ ಎಂಬುದು ಸಮುದ್ರ ತೀರದಲ್ಲಿರುವ ಮರಳಿನಲ್ಲಿ ಇಲ್ಲವೆ ನದೀತೀರದಲ್ಲಿ ಬೆಳೆಯುತ್ತದೆ. ಈ ಸಸ್ಯ ಮರಳುಗುಡ್ಡೆ ಹಾರಿ ಹೋಗದಂತೆ ತಡೆಯುತ್ತದೆ. ಭಾರತದ ಎಲ್ಲೆಡೆಯೂ ಎವಾಲ್‌ವ್ಯಲಸ್ ಆಲ್ಸಿನಾಯ್‌ಡಿಸ್ (ವಿಷ್ಣುಕ್ರಾಂತಿ) ಎಂಬ ಪ್ರಭೇದ ಕುಂಠಿತವಾದ ಶಾಕಸಸ್ಯವಾಗಿ ಬಯಲುಗಳಲ್ಲಿ ಬೆಳೆಯುತ್ತದೆ. ಹಿಲ್‌ಡೆಬ್ರಾಂಡಿಯ ಎಂಬ ಸಸ್ಯ ಮರುಭೂಮಿಯ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಂಡಿದೆ. ಇದರ ಕವಲುಗಳು ಪುಟ್ಟವಾಗಿದ್ದರೂ ಗಟ್ಟಿಯಾಗಿರುತ್ತವೆ. ಅವುಗಳ ತುದಿ ಮುಳ್ಳಾಗಿದ್ದು ಸಸ್ಯಕ್ಕೆ ಸ್ವರಕ್ಷಣೆಯ ಸಾಧನವೆನಿಸಿವೆ.

ಐಪೋಮಿಯ ಕ್ವಾಮೋಕ್ಲಿಟ್ ಪೆನ್ನೇಟ ಎಂಬ ಅಡರು ಬಳ್ಳಿಯನ್ನು ಮನೆಗಳಲ್ಲಿ ಅಂದಕ್ಕಾಗಿ ಬೆಳೆಸುತ್ತಾರೆ. ಕ್ರಿಸ್‌ಮಸ್ ಬಳ್ಳಿ ಎಂದೂ ಇದಕ್ಕೆ ಹೆಸರುಂಟು. ಇದು ಕರ್ನಾಟಕದ ಬಾಬಾಬುಡನ್‌ಗಿರಿಯಲ್ಲೂ ನೀಲಗಿರಿಯ ಕಾಡುಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದು ಚೆಲುವಾದ ಕೆಂಪುಬಣ್ಣದ ಹೂಗಳನ್ನು ಬಿಡುತ್ತದೆ. ಪೊರಾನ ಮಲಬಾರಿಕ ಎಂಬ ಅಡರು ಬಳ್ಳಿಯಲ್ಲಿ ಪುಷ್ಪಪತ್ರಗಳು ಕೊನೆಯವರೆಗೂ ಸ್ಥಿರವಾಗಿದ್ದು, ದಳಗಳು ಕ್ರಮೇಣ ಉದುರಿ ಹೋದರೂ ಒಣಗಿದ ಹೂವಿನಂತೆ ಕಾಣುತ್ತದೆ. ಒಣಗಿದ ಹೂಗಳನ್ನು ಅಂದಕ್ಕಾಗಿ ಮನೆಗಳಲ್ಲಿ ಹೂದಾನಿಗಳಲ್ಲಿಡುತ್ತಾರೆ.

ಕಾಲೋನಿಕ್ಟಿಯಾನ್ ಎಂಬ ಅಡರುಬಳ್ಳಿ ಕರ್ನಾಟಕದ ಕಾಡಿನಲ್ಲಿ ಕಾಣಬರುತ್ತದೆ. ಬಿಳಿಯ ಬಣ್ಣದ ಮತ್ತು ಮಧುರವಾದ ಪರಿಮಳವನ್ನು ಪಡೆದಿರುವ ಇದರ ಹೂಗಳು ರಾತ್ರಿಯಲ್ಲಿ ಅರಳುವುದರಿಂದ ಹಾಗೂ ಚಂದ್ರನ ಬೆಳಕಿರುವಾಗ ಅಧಿಕವಾಗಿ ಹೂಗಳನ್ನು ಬಿಡುತ್ತದೆ ಎಂಬ ಪ್ರತೀತಿ ಇರುವುದರಿಂದ ಇದನ್ನು ಚಂದ್ರಕಾಂತಿ ಅಥವಾ ಚಂದ್ರಪುಷ್ಪ (ಮೂನ್ ಫ್ಲವರ್) ಎಂದು ಹೇಳುತ್ತಾರೆ. ಇದರ ಬೀಜಗಳು ಹಳದಿಯಾಗಿರುತ್ತವೆ. ಇದರಲ್ಲಿ ಕೆಲವು ಪ್ರಭೇದಗಳನ್ನು ಉದ್ಯಾನಗಳಲ್ಲಿ ಅಂದಕ್ಕಾಗಿ ಬೆಳೆಸುವುದುಂಟು.

(ಎ.ಎನ್.ಎಸ್.)

**ಗೆಣಸು :** ಪ್ರಪಂಚದ ಉಷ್ಣ ಮತ್ತು ಉಪೋಷ್ಣವಲಯಗಳಲ್ಲಿನ ದೇಶಗಳಲ್ಲೆಲ್ಲ ಬಹುಪ್ರಾಚೀನ ಕಾಲದಿಂದಲೂ ಬೇಸಾಯದಲ್ಲಿರುವ ಒಂದು ಮುಖ್ಯ ಹಾಗೂ ಸುಪ್ರಸಿದ್ಧ ಆಹಾರಸಸ್ಯ (ಸ್ವೀಟ್ ಪೊಟೇಟೊ). ಕನ್‌ವಾಲ್‌ವ್ಯಲೇಸೀ ಕುಟುಂಬಕ್ಕೆ ಸೇರಿದೆ. ಐಪೋಮಿಯ ಬಟಾಟಸ್ ಇದರ ಶಾಸ್ತ್ರೀಯ ಹೆಸರು. ಇದರ ತವರು ಅಮೆರಿಕದ ಉಷ್ಣವಲಯ. ಅಲ್ಲಿ ಇದಕ್ಕೆ ಕಮೋಟೆ ಅಥವಾ ಕುಮರ ಎಂಬ ಸ್ಥಳೀಯ ಹೆಸರುಗಳಿವೆ. ಹಿಂದೆ ಕಾಡುಗಿಡವಾಗಿ ಬೆಳೆಯುತ್ತಿದ್ದ ಗೆಣಸು ಇಂದು ಕೃಷಿ ಬೆಳೆಯಾಗಿ ಮಾತ್ರ ಕಂಡುಬರುತ್ತದೆ. ಆಫ್ರಿಕ, ಚೀನ, ಜಪಾನ್, ದಕ್ಷಿಣ ಅಮೆರಿಕ, ಉತ್ತರ ಅಮೆರಿಕದ ದಕ್ಷಿಣ ರಾಜ್ಯಗಳು. ಆಗ್ನೇಯ ಏಷ್ಯ, ಭಾರತ, ವೆಸ್ಟ್ ಇಂಡೀಸ್ ಮುಂತಾದೆಡೆಗಳಲ್ಲೆಲ್ಲ ಇದರ ಬೇಸಾಯ ಮಾಡಲಾಗುತ್ತಿದೆ.




**ಬಳ್ಳಿಯ ವಿವಿಧ ಭಾಗಗಳು: 1. ರೆಂಬೆ, 2a, 2b, 2c ವಿವಿಧ ಆಕಾರದ ಎಲೆಗಳು, 3. ಹೂ, 4. ಹೂವಿನ ಉದ್ದಸೀಳಿಕೆ, 5. ಟ್ಯೂಬರ್ (ಗೆಣಸು)**

ಗೆಣಸು ನೆಲದಮೇಲೆ ಹರಡಿಕೊಂಡು ಬೆಳೆಯುವ ಒಂದು ಬಳ್ಳಿ. ಸ್ವಭಾವತಃ ಇದು ಬಹುವಾರ್ಷಿಕ ಸಸ್ಯವಾದರೂ ಬೇಸಾಯ ಕ್ರಮದಲ್ಲಿ ಏಕವಾರ್ಷಿಕವೆಂಬಂತೆ ನೋಡಿಕೊಳ್ಳಲಾಗುತ್ತದೆ. ಗೆಣಸಿನ ಕಾಂಡ ತೆಳುವಾಗಿಯೂ ದುರ್ಬಲವಾಗಿಯೂ ಉಂಟು. ಗೆಣಸಿನ ಬೇರು ಸಮೂಹ ತೊಡಕು ಬೇರಿನ ರೀತಿಯದು. ಗಿಡದ ಬುಡ ಭಾಗದಿಂದ ಮಾತ್ರವಲ್ಲದೆ ಗೆಣ್ಣುಗಳಿಂದಲೂ ಆಗಂತಕ ಬೇರುಗಳು ಹುಟ್ಟುತ್ತವೆ. ಕೆಲವು ಆಗಂತುಕ ಬೇರುಗಳು ದ್ವಿತೀಯಕ ಬೆಳವಣಿಗೆಗೆ ಒಳಗಾಗಿ ದಪ್ಪನೆಯ ಮತ್ತು ವಿವಿಧ ಆಕಾರಗಳ ಗೆಡ್ಡೆಗಳಾಗಿ ರೂಪುಗೊಳ್ಳುತ್ತವೆ. ಇವೇ ಗೆಣಸಿನ ಗೆಡ್ಡೆಗಳು. ಇವು ಸಾಮಾನ್ಯವಾಗಿ ನೆಲದ ಮೇಲ್ಪದರದಲ್ಲಿ ಮಾತ್ರ ಮೂಡುತ್ತವೆ. ಸಾಧಾರಣವಾಗಿ

ಒಂದು ಗಿಡದಲ್ಲಿ 10–15 ಗೆಡ್ಡೆಗಳು ಹುಟ್ಟುತ್ತವೆ. ಎಲೆಗಳು ಸರಳ ರೀತಿಯವು; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ತಮ್ಮ ಆಕಾರದಲ್ಲಿ ಭಿನ್ನತೆಯನ್ನು ಪ್ರದರ್ಶಿಸುತ್ತವೆ. ಒಂದೇ ಗಿಡದಲ್ಲಿ ಎಳೆಯ ಎಲೆಗಳು ಒಂದು ಆಕಾರದವಾದರೆ ಬಲಿತ ಎಲೆಗಳು ಬೇರೊಂದು ಆಕಾರವಾಗಿರುವುದನ್ನು ಗಮನಿಸಬಹುದು. ಎಲೆಯಂಚು ಅಖಂಡವಾಗಿರಬಹುದು ಇಲ್ಲವೆ ಹಲವಾರು ರೀತಿಗಳಲ್ಲಿ ಛಿದ್ರವಾಗಿರಬಹುದು. ಎಲೆಗಳಿಗೆ ವೃಂತಪರ್ಣಗಳಿಲ್ಲ. ಹೂಗಳು ಒಂಟೊಂಟಿಯಾಗಿ ಇಲ್ಲವೆ ಮಧ್ಯಾರಂಭಿ ಮಾದರಿ ಗೊಂಚಲುಗಳಲ್ಲಿ ಎಲೆಗಳ ಕಂಕುಳುಗಳಲ್ಲಿ ಸಮಾವೇಶಗೊಂಡಿವೆ. ಹೂಗಳ ಆಕಾರ ಕೊಳವೆಯಂತೆ ಇಲ್ಲವೆ ಆಲಿಕೆಯಂತೆ: ಬಣ್ಣ ಬಿಳಿ ಇಲ್ಲವೆ ನೇರಳೆ. ಪ್ರತಿ ಹೂವಿನಲ್ಲಿ 5 ಪತ್ರಗಳಿಂದ ಕೂಡಿದ ಪುಷ್ಪಪಾತ್ರೆ, 5 ದಳಗಳು, 5ಕೇಸರಗಳು ಮತ್ತು2 ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶ್ಯ ಇವೆ. ಫಲ ಸಂಪುಟ ಮಾದರಿಯದು; 2–4 ಕರಿಯ ಬಣ್ಣದ ಗಟ್ಟಿ ಬೀಜಗಳನ್ನೊಳಗೊಂಡಿದೆ. ಗೆಣಸು $35^0$ ಉತ್ತರ ಅಕ್ಷಾಂಶದಿಂದ ಮೇಲಿನ ಭೌಗೋಳಿಕ ಪ್ರದೇಶಗಳಲ್ಲಿ ಹೂ ಬಿಡುವುದು ಅತಿವಿರಳ. $30^0$ ಉತ್ತರ ಅಕ್ಷಾಂಶದಿಂದ ಮೇಲಿನ ಪ್ರದೇಶಗಳಲ್ಲಂತೂ ಬೀಜಗಳೇ ರೂಪುಗೊಳ್ಳುವುದಿಲ್ಲ. ಅಲ್ಲದೆ ಗೆಣಸು ಹೂ ಬಿಡಲು ದಿನವೊಂದಕ್ಕೆ 11 ಗಂಟೆಗಳಿಗಿಂತ ಹೆಚ್ಚಿನ ಅವಧಿಯ ಬೆಳಕು ಬೀಳಬಾರದು. ಈ ಅವಧಿಗಿಂತ ಹೆಚ್ಚಿನ ಕಾಲ ಬೆಳಕು ಬಿದ್ದರೆ ಹೂ ಬಿಡುವುದೇ ಇಲ್ಲ. ಇದರಿಂದಾಗಿ ಗೆಣಸನ್ನು ಹ್ರಸ್ವ ಪ್ರಕಾಶಾವಧಿಯ ಸಸ್ಯ (ಶಾರ್ಟ್–ಡೇ ಪ್ಲಾಂಟ್) ಎನ್ನಲಾಗುತ್ತದೆ. ಉಷ್ಣ ಪ್ರದೇಶಗಳಲ್ಲಿ ಬೀಜಗಳು ಸಹಜವಾಗಿ ಉತ್ಪತ್ತಿಯಾಗುತ್ತವೆ. ಬೀಜಗಳಿಗೆ ಬಲುಗಡುಸಾದ ಹೊದಿಕೆಯಿರುವುದರಿಂದ ಇವು ಮೊಳೆಯುವುದು ಬಹಳ ನಿಧಾನ. ಕೆಲವೊಮ್ಮೆ ಒಂದು ವರ್ಷದ ವರೆಗೂ ಬೀಜಗಳು ಮೊಳೆಯದೇ ಇರುತ್ತವೆ. ಬೀಜದ ಹೊದಿಕೆಯನ್ನು ಕೊಂಚ ಕತ್ತರಿಸಿ ತೆಗೆದರೆ ಮಾತ್ರ ಮೊಳೆಯುವಿಕೆಯನ್ನು ತ್ವರಿತಗೊಳಿಸಬಹುದು.

***ಗೆಣಸಿನ ಬಗೆಗಳು:*** ಗೆಣಸಿನಲ್ಲಿ ನೂರಾರು ಬಗೆಗಳಿವೆ. ಅಮೆರಿಕದಲ್ಲಿ ಗೆಡ್ಡೆಯ ಗಡಸುತನದ ಆಧಾರದ ಮೇಲೆ ಮೃದು ಮತ್ತು ಗಟ್ಟಿ ಎಂದು ಎರಡು ಮುಖ್ಯ ಪಂಗಡಗಳಾಗಿ ವಿಭಾಗಿಸಲಾಗಿದೆ. ಗೆಣಸಿನ ಬಳ್ಳಿಯ ಬೆಳೆವಣಿಗೆಯ ಕ್ರಮವನ್ನು ಅನುಸರಿಸಿ ವಿಭಾಗಿಸುವುದೂ ಇದೆ. ಆದರೆ ಗೆಡ್ಡೆಗಳ ಬಣ್ಣದ ಆಧಾರದ ಮೇಲೆ ಹಲವಾರು ಬಗೆಗಳಾಗಿ ವಿಂಗಡಿಸುವುದೇ ವಾಡಿಕೆಯಲ್ಲಿರುವ ಕ್ರಮ. ಗೆಡ್ಡೆಗಳ ಬಣ್ಣ ಬಿಳಿಯಿಂದ ಹಿಡಿದು ಹೊಂಬಣ್ಣ, ಕಿತ್ತಳೆ, ಕೆಂಪುಮಿಶ್ರಿತ ಊದಾ ಬಣ್ಣದ ವರೆಗೂ ವ್ಯತ್ಯಾಸವಾಗುತ್ತದೆ. ಭಾರತದಲ್ಲಿ ಕೃಷಿಯಲ್ಲಿರುವ ಕೆಲವು ಮುಖ್ಯ ಬಗೆಗಳು ಈ ರೀತಿ ಇವೆ– **1. ಪೂಸಾ ಸಫೇದ್:** ಮೂಲತಃ ತೈವಾನಿನಿಂದ ಪಡೆಯಲಾದ ಬಗೆಯಿದು. ಬಿಳಿಯ ಬಣ್ಣದ ಗೆಡ್ಡೆಗಳನ್ನು ಉತ್ಪಾದಿಸುತ್ತದೆ. ಅಧಿಕ ಇಳುವರಿಗೂ ಗೆಡ್ಡೆಗಳ ಉತ್ಕೃಷ್ಟತೆಗೂ ಹೆಸರಾಗಿದೆ. 2. ಪೂಸಾ ಲಾಲ್: ಜಪಾನಿನಿಂದ ತಂದ ಗೆಣಸಿನಿಂದ ಅಡ್ಡತಳಿಯೆಬ್ಬಿಸಿ ಪಡೆದ ಬಗೆಯಿದು. ಇದರ ಗೆಡ್ಡೆಗಳ ಬಣ್ಣ ಕೆಂಪು. ಬಹಳಕಾಲ ಕೆಡದಂತೆ ಸಂಗ್ರಹಿಸಿಡಬಹುದು. 3 ಪೂಸಾ ಸುನೇರಿ: ಇದು ನಸುಕಿತ್ತಳೆ ಬಣ್ಣದ ಗೆಡ್ಡೆಗಳನ್ನು ಬಿಡುತ್ತದೆ. ಗೆಡ್ಡೆಗಳಲ್ಲಿ ಅಧಿಕ ಪರಿಮಾಣದಲ್ಲಿ ಕ್ಯಾರೊಟೀನ್ ಇದೆ. ಈ ಮೂರು ಮುಖ್ಯ ಬಗೆಗಳಲ್ಲದೆ ಭಾರತದ ವಿವಿಧ ರಾಜ್ಯಗಳಲ್ಲಿ ಇನ್ನೂ ಹಲವು ರೀತಿಯ ಗೆಣಸುಗಳಿವೆ. ಬಿಹಾರದಲ್ಲಿ V3, V9, SP ಲಲ್ಕಾಗಳೂ ಕರ್ನಾಟಕದಲ್ಲಿ V12 ಹೊಸೂರು ಕೆಂಪು ಮತ್ತು ಹೊಸೂರು ಹಸುರುಗಳೂ ಪಂಜಾಬಿನಲ್ಲಿ V2, V6, VS ಗಳೂ ಕೊಯಮತ್ತೂರಿನಲ್ಲಿ ಭದ್ರಕಾಳಿ, ವೆಲ್ಮನ್, V12 V6 ಗಳೂ, ಪಶ್ಚಿಮ ಬಂಗಾಳದಲ್ಲಿ ರೇಂಜರ್ ಮುಂತಾದವೂ ಮುಖ್ಯವೆನಿಸಿವೆ. ಪ್ರಪಂಚದ ಬೇರೆ ದೇಶಗಳಲ್ಲಿ ಬೇಸಾಯದಲ್ಲಿರುವ ಗೆಣಸಿನ ಬಗೆಗಳು ಇವು–ಹವಾಯ್: HS 107, ಅಮೆರಿಕ ಸಂಯುಕ್ತಸಂಸ್ಥಾನ: ರೆಡ್ ನ್ಯಾನ್ಸಿ, ಆರ್ಲಿಸ್, ನೆಮಗೋಲ್ಡ್ , ಆಲ್‌ಗೋಲ್ಡ್, ಗೋಲ್ಡ್‌ರಷ್ ಮತ್ತು ಸೆಂಟನಿಯಲ್, ವೆಸ್ಟ್‌ಇಂಡೀಸ್: ಬ್ಲ್ಯಾಕ್ ರಾಕ್ ಮತ್ತು ರೆಡ್ ನಟ್. (ಬಿ.ಪಿ.)

**ಗೆಣಸಿನ ಬೇಸಾಯ:** ಇದು ಪ್ರಮುಖವಾಗಿ ಉಷ್ಣವಲಯದ ಬೆಳೆ. ಇದನ್ನು $40^0$ ಉತ್ತರ ಅಕ್ಷಾಂಶದಿಂದ ಹಿಡಿದು $32^0$ ದಕ್ಷಿಣ ಅಕ್ಷಾಂಶದ ವರೆಗಿನ ಪ್ರದೇಶಗಳಲ್ಲಿ ಬೆಳೆಸಲಾಗುತ್ತಿದೆ. $70^0$ ಫ್ಯಾ. ಸರಾಸರಿ ಉಷ್ಣತೆ, 30"–50" ವಾರ್ಷಿಕ ಮಳೆ ಮತ್ತು ಯಥೇಚ್ಛ ಬಿಸಿಲು ಇರುವ ಪ್ರದೇಶಗಳಲ್ಲಿ ಇದರ ಬೆಳೆವಣಿಗೆ ಉತ್ಕೃಷ್ಟವಾಗಿರುತ್ತದೆ. ವಿಪರೀತ ಮಳೆಯನ್ನಾಗಲಿ, ಅತಿ ಶುಷ್ಕತೆಯನ್ನಾಗಲಿ ಸಹಿಸದು. ಹಾಗೆಯೇ ಕಡುಚಳಿ ಇದ್ದರೆ ಬಲುಬೇಗ ಹಾಳಾಗುವುದರಿಂದ ಇದರ ಬೆಳೆವಣಿಗೆಯವಧಿಯಲ್ಲಿ ಕೊನೆಯಪಕ್ಷ 4–6 ತಿಂಗಳು ಕಾಲ ಚಳಿಯಿರಬಾರದು. ಗೆಣಸು ಹಲವಾರು ಬಗೆಯ ಮಣ್ಣುಗಳಲ್ಲಿ ಬೆಳೆಯಬಲ್ಲುದಾದರೂ ಮರಳುಮಿಶ್ರಿತ ಗೋಡು ಇದಕ್ಕೆ ಅತ್ಯುತ್ತಮ. ಭೂಮಿ ಸಾಕಷ್ಟು ಬೆಚ್ಚಗೂ ($20^0$–$30^0$ ಸೆಂ.ಮಿ.) ಸಡಿಲವಾಗಿಯೂ ಸರಾಗವಾಗಿ ನೀರು ಬಸಿದು ಹೋಗುವಂತೆಯೂ ಇರಬೇಕು. ಗೆಣಸಿನ ಬೆಳೆಗೆ ಗೊಬ್ಬರದ ಪೂರೈಕೆಯೂ ಸಾಕಷ್ಟಿರಬೇಕು. ಹೆಕ್ಟೇರಿಗೆ 25 ಟನ್ ಕೊಟ್ಟಿಗೆ ಗೊಬ್ಬರ, 60 ಕೆಜಿ. ನೈಟ್ರೊಜನ್, 60 ಕೆಜಿ ರಂಜಕ ಮತ್ತು 120 ಕೆಜಿ ಪೊಟ್ಯಾಷ್‌ಗಳನ್ನು ಹಾಕಿದರೆ ಒಳ್ಳೆಯದು. ಗೊಬ್ಬರದ ಪರಿಮಾಣ ವಿಪರೀತವಾದರೂ ಒಳ್ಳೆಯದಲ್ಲ. ಇದರಿಂದ ಬಳ್ಳಿಗಳಲ್ಲಿ ಗೆಡ್ಡೆಗಿಂತ ಎಲೆ, ಕಾಂಡಗಳ ಬೆಳೆವಣಿಗೆಯೇ ಹೆಚ್ಚಾಗಿಬಿಡುತ್ತದೆ.

ಗೆಣಸನ್ನು ಗೆಡ್ಡೆಗಳಿಂದ ಹೊರಡುವ ಮೊಳಕೆಯಿಂದಾಗಲೀ, ಕಾಂಡತುಂಡುಗಳಿಂದಾಗಲೀ, ವೃದ್ಧಿಸಲಾಗುತ್ತದೆ. ಭಾರತವನ್ನೂ ಒಳಗೊಂಡಂತೆ ಉಷ್ಣವಲಯದ ಹಲವಾರು ದೇಶಗಳಲ್ಲಿ ಎರಡನೆಯ ವಿಧಾನ ರೂಢಿಯಲ್ಲಿದೆ. ಇಳುವರಿ ಉತ್ತಮವಾಗಿರಬೇಕಾದರೆ ಮೊಳಕೆಗಳಿಂದ ವೃದ್ಧಿಸುವುದೇ ಸೂಕ್ತ. ಒಳ್ಳೆಯ ಗುಣಲಕ್ಷಣಗಳಿರುವ ತಳಿಯ ಗೆಡ್ಡೆಗಳನ್ನು ಆಯ್ದುಕೊಂಡು ಚೆನ್ನಾಗಿ ಹದಗೊಳಿಸಿದ ಒಟ್ಲುಪಾತಿಗಳಲ್ಲಿ 30 ಸೆಂಮೀ ಅಂತರಕ್ಕೊಂದರಂತೆ 45 ಸೆಂಮೀ ಅಂತರದ ಸಾಲುಗಳಲ್ಲಿ ನೆಡಲಾಗುತ್ತದೆ. ಇವುಗಳಿಂದ ದೊರೆತ ಮೊಳಕೆಗಳನ್ನು ಮುಂದಿನ ಬೆಳೆವಣಿಗೆಗಾಗಿ ಬೇರೆಪಾತಿಗಳಿಗೆ ವರ್ಗಾಯಿಸಲಾಗುತ್ತದೆ. ಇಲ್ಲಿ ಇವು ಚೆನ್ನಾಗಿ, ಉದ್ದವಾಗಿ ಬೆಳೆದ ಮೇಲೆ, ನಾಲ್ಕು ಗೆಣ್ಣುಗಳನ್ನು ಒಳಗೊಂಡಿರುವ ತುಂಡುಗಳನ್ನಾಗಿ ಕತ್ತರಿಸಿ ಕೃಷಿಭೂಮಿಯಲ್ಲಿ ನೆಡಲಾಗುತ್ತದೆ. ಬಳ್ಳಿಯ ತುದಿಯ ಕಡೆಗಿರುವ ತುಂಡುಗಳೇ ಉತ್ತಮ. ಏಕೆಂದರೆ ಇವು ಹೆಚ್ಚು ಸಂಖ್ಯೆಯಲ್ಲಿ ಗೆಡ್ಡೆಗಳನ್ನು ಉತ್ಪಾದಿಸುತ್ತವೆ. ತುಂಡುಗಳನ್ನು ನೆಟ್ಟಮೇಲೆ ಆಗಿಂದಾಗ್ಗೆ ಮಣ್ಣನ್ನು 1.5–2 ಅಡಿ ಎತ್ತರಕ್ಕೆ ಏರಿಸುತ್ತಿರಬೇಕು. ಇದರಿಂದ ಗೆಡ್ಡೆಗಳು ಸುಲಭವಾಗಿ ಮಣ್ಣಿನೊಳಕ್ಕೆ ಇಳಿದು ರೂಪುಗೊಳ್ಳುತ್ತವೆ. ಗೆಡ್ಡೆಗಳನ್ನು ನೆಡುವ ಕಾಲ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ಉತ್ತರ ಭಾರತದಲ್ಲಿ ಈ ಕಾಲ ಜೂನ್–ಜುಲೈಗಳಾದರೆ ಮಧ್ಯಪ್ರದೇಶ ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಅಕ್ಟೋಬರ್–ನವೆಂಬರ್ ಮತ್ತು ನೀಲಗಿರಿ ಮುಂತಾದೆಡೆ ಏಪ್ರಿಲ್–ಮೇ. ಕಾಂಡತುಂಡುಗಳನ್ನು ನೆಟ್ಟ 10 ದಿವಸಗಳೊಳಗೆ ಗಿಡಗಳು ಬೇರುಬಿಟ್ಟು 3 ವಾರಗಳೊಳಗಾಗಿ ಹುಲುಸಾಗಿ ಬೆಳೆಯತೊಡಗುತ್ತವೆ. ಬಳ್ಳಿಗಳು ಚೆನ್ನಾಗಿ ಬೆಳೆದು ನೆಲದ ಮೇಲೆಲ್ಲ ಹರಡುವವರೆಗೂ ಕಳೆ ಕೀಳುತ್ತಿರಬೇಕು. ಆಗಿಂದಾಗ್ಗೆ ನೀರು ಹಾಯಿಸುತ್ತಿರಬೇಕು. ಗೆಡ್ಡೆಗಳನ್ನು ನೆಟ್ಟ 4–5 ತಿಂಗಳ ಅನಂತರ ಗೆಣಸು ಕೊಯ್ಲಿಗೆ ಬರುತ್ತದೆ. ಎಲೆಗಳು ಹಳದಿಬಣ್ಣಕ್ಕೆ ತಿರುಗುವುದು ಗೆಡ್ಡೆಗಳು ಬಲಿತಿರುವುದನ್ನು ಸೂಚಿಸುತ್ತದೆ. ಗೆಡ್ಡೆಗಳನ್ನು ಮೊಗೆಗುದ್ದಲಿಗಳಿಂದ ಅಗೆದು, ತೆಗೆದು ಶುಚಿಗೊಳಿಸಿ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ. ಉಷ್ಣವಲಯ ದೇಶಗಳಲ್ಲಿ ಇವನ್ನು ಹಾಗೆಯೇ ಸಂಗ್ರಹಿಸಿಡಬಹುದು. ಸಮಶೀತೋಷ್ಣವಲಯ ಪ್ರದೇಶಗಳಲ್ಲಿ ಸಂಗ್ರಹಿಸಿಡುವ ಮುನ್ನ ಗೆಡ್ಡೆಗಳನ್ನು ಸಂಸ್ಕರಿಸಲಾಗುತ್ತದೆ. ಕೆಲವು ಸಲ ಬಿಸಿಲಿನಲ್ಲಿ 10 ದಿವಸಗಳ ಕಾಲ ಒಣಗಿಸಬೇಕಾಗುತ್ತದೆ. ಅನಂತರ ಮರದ ಹೊಟ್ಟು, ಮರಳು, ಒಣಹುಲ್ಲು ಮುಂತಾದವುಗಳನ್ನು ಬಳಸಿ ಗೆಣಸನ್ನು ಸಂಗ್ರಹಿಸಿಡಲಾಗುತ್ತದೆ.

ಗೆಣಸಿನ ಇಳುವರಿ ಅದರ ತಳಿ ಮತ್ತು ಬೆಳೆಸುವ ಪ್ರದೇಶಗಳನ್ನವಲಂಬಿಸಿ ವ್ಯತ್ಯಾಸವಾಗುತ್ತದೆ. ಮಳೆಯ ಆಸರೆಯಲ್ಲಿ ಬೇಸಾಯ ಮಾಡಿದ ಗೆಣಸಿಗಿಂತ ನೀರಾವರಿ ಮಾಡಿ ಬೆಳೆಸಿದ ಗೆಣಸಿನ ಇಳುವರಿ ಹೆಚ್ಚು.

ಗೆಣಸಿಗೆ ಹಲವಾರು ರೀತಿಯ ಶಿಲೀಂಧ್ರ ರೋಗಗಳೂ ಕೀಟ ಪಿಡುಗುಗಳೂ ಬರುತ್ತವೆ. ಶಿಲೀಂಧ್ರ ರೋಗಗಳಲ್ಲಿ ಮುಖ್ಯವಾದವು ಕಾಂಡದ ಕೊಳೆಯುವಿಕೆ–ಇದು ಫ್ಯೂಸೇರಿಯಮ್ ಆಕ್ಸಿಸ್ಪೋರಮ್ ಎಂಬುದರಿಂದ ಉಂಟಾಗುತ್ತದೆ. ಕಪ್ಪುಕೊಳೆ ರೋಗ_ಇದು ಸೆರಟೋಸಿಸ್ಟಿಸ್ ಫಿಂಬ್ರಿಯೇಟ ಎಂಬ ಶಿಲೀಂಧ್ರದಿಂದ ಉಂಟಾಗುತ್ತದೆ. ಈ ರೋಗಗಳು ಭಾರತದಲ್ಲಿ ಅಷ್ಟು ಮುಖ್ಯವಲ್ಲದಿದ್ದರೂ ಉಳಿದ ದೇಶಗಳಲ್ಲಿ ಗಣನೀಯ ನಷ್ಟವನ್ನು ಉಂಟುಮಾಡುತ್ತವೆ. ಇವಲ್ಲದೆ ಆಫ್ರಿಕ, ವೆಸ್ಟ್‌ಇಂಡೀಸ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ವೈರಸಿನಿಂದ ಉಂಟಾಗುವ ಶಬಲ ರೋಗವೂ ರೈಜೋಪಸಿನಿಂದ ಉಂಟಾಗುವ ಕೊಳೆರೋಗವೂ ಮುಖ್ಯವೆನಿಸಿವೆ. ಕೀಟಪಿಡುಗುಗಳಲ್ಲಿ ಮುಖ್ಯವಾದವು ಸೈಲ್ಯಾಸ್ ಫಾರ್ಮಿಕೇರಿಯಸ್ ಎಂಬ ಸೊಂಡಿಲುಕೀಟ (ಸ್ವೀಟ್ ಪೊಟೇಟೊ ವೀವಿಲ್) ಮತ್ತು ಮೆಗಾಸ್ಟಿಸ್ ಗ್ರಾಂಡೇಲಿಸ್ ಎಂಬ ಪತಂಗದ ಕಂಬಳಿ ಹುಳುಗಳು. ಡಿಡಿಟಿ, ಲೆಡ್ ಆರ್ಸಿನೇಟ್ ಅಥವಾ ಬಿಎಚ್‌ಸಿ ಇವುಗಳ ಬಳಕೆಯಿಂದ ಇವನ್ನು ನಿಯಂತ್ರಿಸಬಹುದು.

ಗೆಣಸಿನ ಉಪಯೋಗಗಳು: ಗೆಣಸು ಪುಷ್ಟಿದಾಯಕ ಆಹಾರಗಳಲ್ಲೊಂದು. ಇದನ್ನು ಬೇಯಿಸಿ ಇಲ್ಲವೆ ಸುಟ್ಟು ತಿನ್ನುವುದಲ್ಲದೆ ಇದರಿಂದ ರೊಟ್ಟಿಗಳನ್ನು ತಯಾರಿಸುತ್ತಾರೆ. ಗೆಣಸಿನ ರಾಸಾಯನಿಕ ಸಂಯೋಜನೆ ಈ ರೀತಿ ಇದೆ. ತೇವಾಂಶ

ಶೇ.68.5, ಕಾರ್ಬೋಹೈಡ್ರೇಟ್ ಶೇ.28.2, ಕೊಬ್ಬು ಶೇ.0.3, ಪ್ರೋಟೀನು ಶೇ.1.2, ಲೋಹಾಂಶ ಶೇ.1.0, ನಾರಿನ ಅಂಶ ಶೇ.0.8, ಅಲ್ಲದೆ ಪ್ರತಿ 100 ಗ್ರಾಂ. ಗೆಣಸಿನಲ್ಲಿ 50 ಮಿಗ್ರಾಂ ರಂಜಕ, 9 ಮಿಗ್ರಾಂ ಸೋಡಿಯಂ, 20 ಮಿಗ್ರಾಂ ಕ್ಯಾಲ್ಸಿಯಂ, 2.8 ಮಿಗ್ರಾಂ ಕಬ್ಬಿಣ, 393 ಮಿಗ್ರಾಂ ಪೊಟ್ಯಾಸಿಯಂ, 24 ಮಿಗ್ರಾಂ ಸಿ ವಿಟಮಿನ್, ಹಾಗೂ ಲಘು ಪ್ರಮಾಣದಲ್ಲಿ ಬಿ ಹಾಗೂ ಎ ವಿಟಮಿನ್‌ಗಳು ಇವೆ. ಕಾರ್ಬೋಹೈಡ್ರೇಟ್ ಅಂಶದಲ್ಲಿ ಶೇ.16 ಪಿಷ್ಟವೂ ಶೇ.4 ಸಕ್ಕರೆಯೂ ಇರುವುದರಿಂದ ಗೆಣಸಿನಿಂದ ಆಲ್ಕೊಹಾಲನ್ನೂ ಪಡೆಯಬಹುದಾಗಿದೆ. ಅಲ್ಲದೆ ಗೆಣಸಿನಿಂದ ಒಂದು ರೀತಿಯ ರಸಪಾಕವನ್ನೂ ತಯಾರಿಸುತ್ತಾರೆ. ಈಗ ಗೆಣಸಿನಿಂದ ಚಿಪ್ಸ್ ಅನ್ನು ತಯಾರಿಸಲಾಗುತ್ತಿದೆ. ಗೆಣಸಿನ ಎಳೆಚಿಗುರನ್ನು ಆಫ್ರಿಕ, ಇಂಡೋನೇಷ್ಯ ಮತ್ತು ಫಿಲಿಪೀನ್ಸ್‌ಗಳಲ್ಲಿ ಹಸುರು ತರಕಾರಿಯಾಗಿ ಬಳಸುವುದಿದೆ. ಗೆಡ್ಡೆಗಳನ್ನು ಪಡೆದ ಮೇಲೆ ಉಳಿಯುವ ಎಲೆ, ಕಾಂಡ ಇತ್ಯಾದಿಗಳನ್ನು ದನಕರುಗಳಿಗೆ ಮೇವಾಗಿ ಉಪಯೋಗಿಸಬಹುದು. ಚೇಳುಕಡಿತದ ಉರಿಯನ್ನು ಕಡಿಮೆ ಮಾಡಲು ಎಲೆಗಳ ಬೆಚ್ಚಾರವನ್ನು ಉಪಯೋಗಿಸುವ ಕ್ರಮ ಕೆಲವೆಡೆ ಇದೆ. (ಬಿ.ಪಿ.)

**ಗೆದ್ದಲು :** ಪುರಾತನ ಕಾಲದಿಂದಲೂ ಗೆದ್ದಲು ಮಾನವನು ಬೆಳೆಯುವ ಆಹಾರ ಬೆಳೆಗಳು ಮತ್ತು ವಸ್ತು ಸಾಮಗ್ರಿಗಳನ್ನು ತಿಂದು ನಷ್ಟ ಮಾಡುತ್ತಿವೆ. ಗೆದ್ದಲನ್ನು ಸಂಸ್ಕೃತದಲ್ಲಿ "ಕಾಷ್ಠ ಹರಿಕ" ವೆಂದು ಕರೆಯುತ್ತಾರೆ. ಅಂದರೆ ಒಣಮರ ಅಥವಾ ಕಟ್ಟಿಗೆ ತಿನ್ನುವ ಹುಳುಗಳು ಎಂದರ್ಥ. ವಾಲ್ಮೀಕಿ ಮಹರ್ಷಿ ತಪಸ್ಸಿನಲ್ಲಿದ್ದಾಗ ಅವರ ಮೈಮೇಲೆ ಗೆದ್ದಲು ಹುತ್ತ ಕಟ್ಟಿದ್ದುದರಿಂದ ಅವರಿಗೆ ವಾಲ್ಮೀಕಿ ಎಂದು ಹೆಸರು ಬಂದಿತೆಂಬುದು ಸರ್ವವಿದಿತ.

ಪೂರ್ವಜ ಗೆದ್ದಲುಗಳು ಸುಮಾರು 200 ದಶಲಕ್ಷ ವರ್ಷಗಳ ಹಿಂದೆಯೇ ಉದ್ಭವಿಸಿದುವು. ಆದರೆ 17ನೆಯ ಶತಮಾನದಿಂದ ಇತ್ತೀಚೆಗೆ ಗೆದ್ದಲುಗಳು ಪ್ರಕೃತಿಯಲ್ಲಿ ಪ್ರಧಾನವಾಗಿ ಕಾಣಿಸಿಕೊಂಡಿವೆ.

ಗೆದ್ದಲು ಸಂಘಜೀವಿಗಳು. ಆಂಗ್ಲ ಭಾಷೆಯಲ್ಲಿ ಟರ್ಮೈಟ್ಸ್ ಎಂದು ಕರೆಯುತ್ತಾರೆ. ಇದರ ಮತ್ತೊಂದು ಸಾಮಾನ್ಯ ಹೆಸರು "ವೈಟ್ ಆಂಟ್ಸ್". ಅಂದರೆ ಬಿಳಿ ಇರುವೆಗಳು. ಆದರೆ ಈ ಹೆಸರು ಗೆದ್ದಲುಗಳಿಗೆ ಅನ್ವಯಿಸುವುದಿಲ್ಲ. ಕಾರಣ ಇವು ಮಾಸಲು ಬಿಳುಪಿನಿಂದ ಹಳದಿ ಕಂದು ಬಣ್ಣದ ವರೆಗಿರುತ್ತವೆ ಮತ್ತು ಇರುವೆ ಗುಂಪಿಗೆ ಸೇರುವುದಿಲ್ಲ. ಗೂಡಿನಲ್ಲಿ ಬೆಳೆಯುತ್ತಿರುವ ಗೆದ್ದಲಿನ ಮರಿಗಳು ಮತ್ತು ಅಪ್ಸರೆಗಳು ಮಾತ್ರ ಬಿಳುಪಾಗಿರುತ್ತವೆ. ಕೀಟಗಳ ಸಾಮಾನ್ಯ ವಿಕಾಸದಲ್ಲಿ ಗೆದ್ದಲುಗಳ ಸ್ಥಾನ ಇರುವೆಗಳಿಗಿಂತ ಪೂರ್ವದ್ದು, ತಮ್ಮ ಜೀವನದ ಬೆಳವಣಿಗೆ ಹಂತಗಳಲ್ಲಿ ಅಪೂರ್ಣ ರೂಪಾಂತರವುಳ್ಳ ಆದಿಕಾಲದ "ಐಸಾಪ್ಟೆರಾ" (ಸಮಪಕ್ಷೀಯ) ಗಣಕ್ಕೆ ಸೇರಿವೆ. ಗೆದ್ದಲಿನ ಹತ್ತಿರದ ಸಂಬಂಧಿ ಜಿರಲೆಗಳು.

ಸಾಮಾನ್ಯವಾಗಿ ಗೆದ್ದಲಿಗೆ ಒಣಮರಗಳೆಂದರೆ ಅಚ್ಚುಮೆಚ್ಚು, ಅದರಿಂದ ಒಣಮರ, ಗಿಡ, ಬಳ್ಳಿ, ಒಣೆಲೆ, ಹುಲ್ಲು ಮುಂತಾದ ಆಹಾರದ ಮೇಲೆ ಮಣ್ಣಿನ ಪೊರೆಯಿಂದ ಮುಚ್ಚಿ ಹೆಚ್ಚಿನ ಸಂಖ್ಯೆಯಲ್ಲಿ ಮುತ್ತಿ ತಿನ್ನುವುದರಿಂದ ಎಲ್ಲಕ್ಕೂ ಗೆದ್ದಲು ಹಿಡಿದಿದೆ ಎನ್ನುವ ವಾಡಿಕೆ.

ಗೆದ್ದಲು ಜಿರಲೆಗಳಂತೆ ನಿಶಾಜೀವಿಗಳು. ಏಕೆಂದರೆ ಇವು ಸೂರ್ಯನ ಜಳವನ್ನು ತಡೆಯುವುದಿಲ್ಲ. ಮಳೆ ನೀರು ಇವುಗಳ ಮೇಲೆ ಬೀಳದಂತೆ ಗೂಡುಗಳಲ್ಲಿದ್ದು ರಕ್ಷಣೆ ಪಡೆಯುತ್ತವೆ. ಉಸಿರಾಟದಿಂದ ಹೊರ ಹೊಮ್ಮುವ ಗಾಳಿ ಇಂಗಾಲದ ಡೈ ಆಕ್ಸೈಡ್‌ನಿಂದ ಕೂಡಿರುತ್ತದೆ. ಇದರಿಂದಾಗಿ ಶರೀರ ಸೂಕ್ಷ್ಮವಾಗಿದ್ದು ಬಿಸಿಲಿಗೆ ಬಿಟ್ಟಾಗ ಬದುಕಲಾರವು. ಆದುದರಿಂದ ತಾವು ಓಡಾಡುವಲ್ಲಿ ಮಣ್ಣಿನ ಪೊರೆಯನ್ನು ಕಟ್ಟಿಕೊಂಡು ರಕ್ಷಣೆ ಪಡೆಯುತ್ತವೆ.

ಗೆದ್ದಲು ಉಷ್ಣ ಮತ್ತು ಸಮಶೀತೋಷ್ಣ ವಲಯದಲ್ಲಿ ಜೀವಿಸುವ ಕೀಟಗಳು. ಗೆದ್ದಲಿನ ಅನೇಕ ಪ್ರಭೇದಗಳು ಉಷ್ಣವಲಯದ ಮಳೆ ಆಶ್ರಿತ ಅರಣ್ಯಪ್ರದೇಶಗಳಲ್ಲಿ ವ್ಯಾಪಿಸಿವೆ. ಆಫ್ರಿಕಖಂಡದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಲಿನ ಪ್ರಭೇಧಗಳನ್ನು ಗುರ್ತಿಸಿದ್ದಾರೆ. ಇದೇ ಬಗೆಯ ವಿಸ್ತಾರವನ್ನು ದಕ್ಷಿಣ ಅಮೆರಿಕದ ಅಮೆಜ಼ಾನ್ ನದಿ ತೀರಪ್ರದೇಶದ ಕಾಡುಗಳಲ್ಲಿ ಕಾಣಬಹುದಾಗಿದೆ. ಆಸ್ಟ್ರೇಲಿಯ ಮತ್ತು ಏಷ್ಯಾಖಂಡಗಳಲ್ಲಿಯೂ ಹೆಚ್ಚಿನ ಪ್ರಭೇಧಗಳನ್ನು ಗುರುತಿಸಲಾಗಿದೆ. ಆಫ್ರಿಕ ಮತ್ತು ಏಷ್ಯದ ಉಷ್ಣವಲಯಗಳಲ್ಲಿ ಹುತ್ತಗಳನ್ನು ಕಟ್ಟುವ ಮತ್ತು ಶಿಲೀಂದ್ರವನ್ನು ಬೆಳೆಸುವ ಗೆದ್ದಲಿನ ಪ್ರಭೇಧಗಳಿವೆ.

ಈವರೆಗೆ 2,600ಕ್ಕೂ ಹೆಚ್ಚು ಗೆದ್ದಲಿನ ಪ್ರಭೇಧಗಳನ್ನು ಗುರುತಿಸಲಾಗಿದ್ದು, ಇವುಗಳನ್ನು 6 ಕುಟುಂಬಗಳಾಗಿ ವಿಂಗಡಿಸಲಾಗಿದೆ. 1. ಮ್ಯಾಸ್ಟೊಟರ್ಮೈಟಿಡಿ, 2. ಕ್ಯಾಲೊಟರ್ಮೈಟಿಡಿ, 3. ಟರ್ಮೊಪ್ಸಿಡಿ, 4. ಹೊಡೊಟರ್ಮೈಟಿಡಿ 5. ರೈನೊಟರ್ಮೈಟಿಡಿ 6. ಟರ್ಮೈಟಿಡಿ. ಗೆದ್ದಲಿನ ಸಾಮಾನ್ಯವಿಕಾಸದಲ್ಲಿ ಮೊದಲ ಐದು ಕುಟುಂಬಗಳನ್ನು ಆದಿಕಾಲದ, ಕೆಳದರ್ಜೆಯ ಸಣ್ಣ ಸಣ್ಣ ಗೂಡುಗಳಲ್ಲಿ ವಾಸಿಸುವ ಗೆದ್ದಲು ಕುಟುಂಬಗಳೆಂದು ಪರಿಗಣಿಸಲಾಗಿದೆ. ಇವುಗಳು ತಿಂದ ಸೆಲ್ಯೂಲೋಸ್ ಆಹಾರವನ್ನು ಜೀರ್ಣಿಸಲು ಸಹಜೀವಿಗಳಾದ ಟ್ರೈಕೊಮೊನಾಡ್, ಆಕ್ಸಿಮೊನಾಡ್, ಹೈಪರ್‌ಮ್ಯಾಸ್ಟಿಗೊ ಟ್ರೈಕೊನಿಂಫ್ ಜಾತಿಯ 'ಪ್ರೋಟೊಜೋವ' ಗುಂಪಿನ ಕಶಾಂಗ ಏಕಾಣು ಜೀವಿಗಳು ಸಾಮಾನ್ಯವಾಗಿ ಕರುಳಿನಲ್ಲಿ ನೆಲೆಸಿರುತ್ತವೆ.

ಟರ್ಮೈಟಿಡಿ ಕುಟುಂಬಗಳ ಪ್ರಭೇಧಗಳು ಮೇಲ್ದರ್ಜೆಯ ಗೆದ್ದಲುಗಳಾಗಿದ್ದು ಎಲ್ಲಾ ಬಗೆಯ ಗಿಡ ಮರ ಸಾವಯವ ವಸ್ತುಗಳನ್ನು ತಿಂದು ಜೀವಿಸಿ ಬದುಕುವ ವೈವಿಧ್ಯತೆಯನ್ನು ಪಡೆದಿವೆ. ಗೂಡುಗಳನ್ನು ಭೂಮಿಯೊಳಗೆ ಮತ್ತು ಮರಗಳಲ್ಲಿ ಅನೇಕ ವಿನ್ಯಾಸಗಳಲ್ಲಿ ಕಟ್ಟುತ್ತವೆ. ಇವುಗಳು ತಿಂದ ಆಹಾರವನ್ನು ಜೀರ್ಣಿಸಲು ಸಹಜೀವಿಗಳಾಗಿ ಬ್ಯಾಕ್ಟೀರಿಯ ಶಿಲೀಂದ್ರ ಮತ್ತು ಸ್ಪೈರೋಕೀಟ್ಸ್ ಸೂಕ್ಷ್ಮಾಣುಗಳನ್ನು ಅವಲಂಬಿಸಿರುತ್ತವೆ.




**ಗೆದ್ದಲಿನ ವಿವಿಧ ಬಗೆಗಳು: 1. ರೆಕ್ಕೆಯಿಲ್ಲದ ಫಲವಂತಿ ಬಗೆ, 2. ಸೈನಿಕ ಗೆದ್ದಲು, 3. ಕೆಲಸಗಾರ ಗೆದ್ದಲು, 4. ರೆಕ್ಕೆಯುಳ್ಳ ಫಲವಂತಿ ಬಗೆ, 5. ರೆಕ್ಕೆ ಕಳಚಿಕೊಂಡ ಫಲವಂತೆ ಬಗೆ**

ಗೆದ್ದಲುಗಳ ಆಹಾರ ಸೇವನೆಯಲ್ಲಿ ಎರಡು ವಿಧಗಳಿವೆ. 1. ಕೆಲಸಗಾರ ಗೆದ್ದಲೇ ಗಿಡಮರಗಳ ತೊಗಟೆಯನ್ನು ಕೆರೆದು ತಂದು ಸ್ವತಃ ತಿನ್ನುವುದೇ ಅಲ್ಲದೇ ಗೂಡಿನಲ್ಲಿರುವ ಇತರೇ ಕೆಲಸಗಾರ ಗೆದ್ದಲಿಗೆ ಒದಗಿಸುತ್ತವೆ. 2. ಮರಿಹುಳು, ಅಪ್ಸರೆಗಳು, ಸೈನಿಕಗೆದ್ದಲು ಮತ್ತು ಸಂತಾನೋತ್ಪಾದಕರುಗಳಿಗೆ ಆಹಾರವನ್ನು ಸ್ವತಃ ದೊರಕಿಸಿಕೊಂಡು ತಿನ್ನುವ ಚೈತನ್ಯವಿರುವುದಿಲ್ಲ. ಆದ್ದರಿಂದ ಕೆಲಸಗಾರ ಗೆದ್ದಲು ತಾನು ತಿಂದ ಆಹಾರವನ್ನು ಜಠರದಲ್ಲಿ ಅರೆದು ನಂತರ ದ್ರವರೂಪದಲ್ಲಿ ಇವುಗಳಿಗೆ ಒದಗಿಸುತ್ತವೆ. ಇದರಿಂದಾಗಿ ಕಶಾಣು ಏಕಾಣು ಜೀವಿಗಳು ಗೆದ್ದಲಿನ ಅನ್ನನಾಳವನ್ನು ಸೇರಿ ಸೆಲ್ಯೂಲೋಸ್ ಆಹಾರವನ್ನು ಜೀರ್ಣಿಸಲು ನೆರವಾಗುತ್ತವೆ.

ಗೆದ್ದಲಿನ ಸಾಮಾಜಿಕ ಜೀವನ ವೈಶಿಷ್ಟ್ಯ ಪೂರ್ಣವಾದುದು. ಗೂಡುಗಳ ವಿನ್ಯಾಸ, ರೆಕ್ಕೆಹುಳುಗಳ ಹಾರಾಟ, ವಸಾಹತುಗಳ ಸ್ಥಾಪನೆ, ಸಂಘಜೀವನ, ಕೆಲಸದ ಹಂಚಿಕೆ, ಆಹಾರ ಶೇಖರಣೆ, ಜೀರ್ಣಕ್ರಿಯೆಗಾಗಿ ಸಹಜೀವಿಗಳ ಅವಲಂಬನೆ, ಶಿಲೀಂದ್ರ ತೋಟಗಳನ್ನು ಬೆಳೆಸುವಿಕೆ, ಸಹಕಾರ ಬಾಳ್ವೆ ಮತ್ತು ಶಿಸ್ತು ಮುಂತಾದ ಅಂಶಗಳನ್ನು ಸಾಮಾಜಿಕ ಕೀಟಗಳಲ್ಲಿ ಗೆದ್ದಲಿನ ವಸಾಹತುವಿನಲ್ಲಿ ಮಾತ್ರ ಸ್ಪಷ್ಟವಾಗಿ ಕಾಣಬಹುದು.

ಗೆದ್ದಲು ಸಂಘ ಜೀವಿ. ತನ್ನದೇ ಆದ ವಸಾಹತುವಿನಲ್ಲಿ ಮಾನವ ಸಮಾಜಕ್ಕಿಂತಲೂ ಅತ್ಯಂತ ಸುವ್ಯವಸ್ಥಿತವಾದ ಕುಟುಂಬ ಜೀವನ ನಡೆಸುವ ಕೀಟ. ಗಟ್ಟಿಮಣ್ಣಿನಿಂದ ನಿರ್ಮಿಸಿರುವ ಗೂಡುಗಳೇ ಇವುಗಳ ವಾಸಸ್ಥಾನ. ಗೆದ್ದಲಿನ ಗೂಡು ಅಭೇದ್ಯ ಕೋಟೆ.

ಗೆದ್ದಲಿನ ವಸಾಹತುವಿನಲ್ಲಿ ಪ್ರಧಾನವಾಗಿ ಎರಡು ಬಗೆಯ ಗೆದ್ದಲಿನ ಜಾತಿಗಳಿರುತ್ತವೆ. ರೆಕ್ಕೆಗಳಿರುವ ಸಂತಾನೋತ್ಪಾದಕರು (ಗಂಡು ಮತ್ತು ಹೆಣ್ಣು ಸಮಸಂಖ್ಯೆಯಲ್ಲಿ) ಮತ್ತು ರೆಕ್ಕೆಗಳಿಲ್ಲದ ಬರಡು ಗೆದ್ದಲುಗಳು (ಕೆಲಸಗಾರ ಮತ್ತು

ಸೈನಿಕರು). ಒಟ್ಟಾರೆ ಗೆದ್ದಲಿನ ವಸಾಹತುವಿನಲ್ಲಿ ರಾಜ, ರಾಣಿ, ಕೆಲಸಗಾರ ಮತ್ತು ಸೈನಿಕರೆಂದು ನಾಲ್ಕು ಪ್ರಕಾರಗಳನ್ನು ಸ್ಪಷ್ಟವಾಗಿ ನೋಡಬಹುದು. ಇವು ಭಿನ್ನ ಭಿನ್ನ ಕೆಲಸಗಳನ್ನು ನಿರ್ವಹಿಸುತ್ತವೆ. ಕಾರ್ಯಸ್ವರೂಪಕ್ಕನುಗುಣವಾಗಿ ಅವುಗಳ ಶರೀರ ರಚನೆಗೊಂಡಿದೆ. ಗೆದ್ದಲಿನ ವಸಾಹತುವಿನಲ್ಲಿ ಸಾಮಾನ್ಯವಾಗಿ ಒಂದೇ ರಾಜ ಮತ್ತು ರಾಣಿಗಳಿದ್ದು ಕೆಲಸಗಾರರು ಶೇ. 80 ರಷ್ಟು ಸಂಖ್ಯೆ ಇರುತ್ತವೆ. ವಸಾಹತುವಿನ ರಕ್ಷಣೆಗೆ ಬೇಕಾಗುವಷ್ಟು ಸುಮಾರು ಶೇ. 12–15ರಷ್ಟು ಸಂಖ್ಯೆ ಮಾತ್ರವಿರುತ್ತವೆ. ಪ್ರತಿಯೊಂದು ಗೆದ್ದಲೂ ವಸಾಹತುವಿನಲ್ಲಿ ತನ್ನ ಜವಾಬ್ದಾರಿಯನ್ನು ಅರಿತು ಶಿಸ್ತಿನಿಂದ ತನ್ನ ಕೆಲಸವನ್ನು ನಿರ್ವಹಿಸುತ್ತದೆ.

ಸಂತಾನೋತ್ಪಾದಕ ರೆಕ್ಕೆಯುಳ್ಳ ಗೆದ್ದಲುಗಳಲ್ಲಿ ಪ್ರಬಲವಾದ 2 ಸಂಯುಕ್ತ ಕಣ್ಣುಗಳಿಂದ ಕೂಡಿ ಎರಡು ಜೊತೆ ಸರಳ ಕಣ್ಣುಗಳಿರುತ್ತವೆ. ಮಾಸಲು ಹಳದಿಯಿಂದ ಕಂದು ಬಣ್ಣವಿರುತ್ತವೆ. ಎರಡು ಜೊತೆ ಸಾಮಾನ್ಯ ನರಗಳುಳ್ಳ ಶರೀರದಿಂದ ಬೇಗ ಕಳಚುವಂತಹ ಪಾರದರ್ಶಕ ರೆಕ್ಕೆಗಳಿವೆ. ಸಂತಾನೋತ್ಪಾದಕರು ರೆಕ್ಕೆಹುಳುಗಳಾಗಿ ವರ್ಷಕ್ಕೊಂದಾವರ್ತಿ ಮಳೆಗಾಲದ ಮುಸ್ಸಂಜೆಯಲ್ಲಿ ಗೂಡುಗಳಿಂದ ಹಿಂಡು ಹಿಂಡಾಗಿ ಹೊರಬಂದು ಬೆಳಕಿನಲ್ಲಿ ಹಾರಾಡಿ ಗಂಡು ಮತ್ತು ಹೆಣ್ಣು ಜೊತೆಗೂಡಿ ನಂತರ ರೆಕ್ಕೆಗಳನ್ನು ಕಳಚಿ ಸೂಕ್ತ ಸ್ಥಳವನ್ನು ಗುರ್ತಿಸಿ ಭೂಮಿಯಲ್ಲಿ ಸಣ್ಣಗೂಡನ್ನು ಕಟ್ಟಲು ಪ್ರಾರಂಭಿಸುತ್ತವೆ. ರೆಕ್ಕೆಹುಳುಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳಕಿನಲ್ಲಿ ಹಾರಾಡುವುದರಿಂದ ಇವುಗಳನ್ನು "ರೆಕ್ಕೆಹುಳು" ಅಥವ "ಈಚಲುಗಳು" ಎಂದು ಕರೆಯುವ ವಾಡಿಕೆ. ಇವುಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾರಾಡುವುದರಿಂದ ಅನೇಕ ಶತ್ರುಪ್ರಾಣಿಗಳಾದ ಕಪ್ಪೆ, ಓತಿಕ್ಯಾತ, ಪಕ್ಷಿಗಳು, ಕೀಟಗಳು ಆಕರ್ಷಿತವಾಗಿ ರೆಕ್ಕೆಹುಳುಗಳು ಹಾರಾಡಿ ಕೆಳಗೆ ಬಿದ್ದ ತಕ್ಷಣ ಹಿಡಿದು ತಿನ್ನುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ರೆಕ್ಕೆಹುಳುಗಳು ಅನೇಕ ಪ್ರಾಣಿಗಳಿಗೆ ಪ್ರಿಯವಾದ ಆಹಾರವಾಗುತ್ತವೆ.

ಗಂಡು ಹೆಣ್ಣುಗಳು ಜೊತೆಗೂಡಿ ಸಣ್ಣ ಗೂಡನ್ನು ತೋಡಿ ನಂತರ ಗಂಡು ಹೆಣ್ಣಿನೊಡನೆ ಸಂಭೋಗ ನಡೆಸಿದ ಕೆಲವು ದಿನಗಳಲ್ಲಿ ಮೊಟ್ಟೆ ಇಡಲು ಪ್ರಾರಂಭಿಸುತ್ತವೆ. ರಾಣಿ ಮೊದಮೊದಲು ಕೇವಲ 20–25 ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳಿಂದ ಮೊದಲ ಕುಟುಂಬದ ಬೆಳವಣಿಗೆಗಾಗಿ ಬರಡು ಗೆದ್ದಲು ಮಾತ್ರ ಹುಟ್ಟುತ್ತವೆ. ನಂತರ ರಾಣಿ ಗರ್ಭ ಧರಿಸಿ, ಅಂಡಾಶಯ ಬೆಳೆದು ಹೊಟ್ಟೆ ಅಸಂಖ್ಯಾತ ಮೊಟ್ಟೆಗಳಿಂದ ತುಂಬಿ ಜೀವಮಾನವೆಲ್ಲ ಮೊಟ್ಟೆ ಇಡುವುದೇ ಇದರ ಕೆಲಸವಾಗಿ ಗೆದ್ದಲನ್ನು ಉತ್ಪಾದಿಸುವ ಯಂತ್ರವಾಗುತ್ತದೆ. ರಾಣಿಗೆದ್ದಲು ಸುಮಾರು 9–10 ಸೆಂ.ಮೀ. ಉದ್ದವಿರುತ್ತದೆ. ಚಲಿಸಲಾಗುವುದಿಲ್ಲ. ಒಂದು ದಿವಸಕ್ಕೆ ಸುಮಾರು 15,000–20,000 ಮೊಟ್ಟೆಗಳನ್ನಿಡುತ್ತದೆ. ರಾಣಿಗೆದ್ದಲನ್ನು "ತಾಯಿ ಈಚಲು" ಅಥವಾ "ತುಪ್ಪದ ಹುಳು" ಎಂದು ಕರೆಯುತ್ತಾರೆ.

ರಾಜನಲ್ಲಿ ಜನನೇಂದ್ರಿಯ ಅಭಿವೃದ್ಧಿಯಾಗಿರುವುದರಿಂದ ರಾಣಿಯ ಸುತ್ತ ಓಡಾಡಿಕೊಂಡು, ರಾಣಿಯನ್ನು ಕ್ಷಣ ಮಾತ್ರವೂ ಬಿಟ್ಟಿರಲಾರ. ಆಗಾಗ ರಾಣಿಯೊಡನೆ ಸಂಭೋಗ ನಡೆಸಿ ಗರ್ಭವತಿ ಮಾಡುತ್ತಿರುತ್ತದೆ. ರಾಜನ ಗಾತ್ರದಲ್ಲಿ ಯಾವ ಬದಲಾವಣೆಯಾಗುವುದಿಲ್ಲ. ರಾಜ ಮತ್ತು ರಾಣಿ ಗಟ್ಟಿ ಜೋಡಣೆಯಿಂದ ನಿರ್ಮಿತವಾಗಿರುವ ವಿಶೇಷ ಕೊಠಡಿಯೇ ಅರಮನೆಯಾಗಿ ವಸಾಹತುವಿನ ಬೆಳವಣಿಗೆಗಾಗಿ ರಾಣಿಯು ಸ್ರವಿಸುವ ಮೋಹಕ ದ್ರವದ ಮೂಲಕ ಎಲ್ಲಾ ಜಾತಿಯ ಕಾರ್ಯಚಟುವಟಿಕೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದರ ಜೊತೆಗೆ ವಸಾಹತುವಿನಲ್ಲಿ ಬೆಳೆಯುವ ಮರಿಗಳು ನಂತರ ವಿವಿಧ ಜಾತಿಗಳಾಗಿ ವಿಂಗಡಿಸಲು ಸಹಾಯವಾಗುತ್ತದೆ. ಭಾರತದಲ್ಲಿರುವ ಹುತ್ತ ಕಟ್ಟುವ ಒಡೊಂಟೊ ಟರ್ಮಿಸ್ ಗೆದ್ದಲಿನ ಜಾತಿಗಳು ಸುಮಾರು 25 ರಿಂದ 30 ವರ್ಷಗಳು ಬದುಕಿರುತ್ತವೆಂದು ತಿಳಿದುಬಂದಿದೆ.

ಕೆಲಸಗಾರ ಗೆದ್ದಲು ಸಣ್ಣ 3 – 5 ಮಿ.ಮೀ. ಉದ್ದ, 2 – 3 ಮಿ.ಮೀ. ಅಗಲ, ಮಾಸಲು ಬಣ್ಣ ಕಂದು ಬಣ್ಣದ ತಲೆ ಸಂಯುಕ್ತ ಕಣ್ಣುಗಳಲ್ಲಿ, ಕುಡಿಮೀಸೆ ಮಣಿಯಂತೆ, ಸಸ್ಯಗಳನ್ನು ಕಚ್ಚಲು ಬಾಯಿ ಭಾಗಗಳು ಮಾರ್ಪಾಟಾಗಿವೆ. ಇವು ಬಂಜೆಗಳು, ವೃಷಣ ಮತ್ತು ಅಂಡಾಶಯಗಳಿರುವುದಿಲ್ಲ. ವಸಾಹತುವಿನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ. ಇವುಗಳಿಗೆ ಕೆಲಸದೊಂದೇ ಚಿಂತೆ.

ಸೈನಿಕಗೆದ್ದಲು ಗಾತ್ರದಲ್ಲಿ ಕೆಲಸಗಾರರಿಗೆ ಹೋಲಿಕೆ ಇದ್ದರೂ ತಲೆ ದಪ್ಪ, ಬಲಿಷ್ಠ ದವಡೆ ಹಲ್ಲುಗಳು ದೊಡ್ಡದಾಗಿ ಮೊನಚಾಗಿವೆ. ಬಂಜೆಗಳು, ವೃಷಣ ಮತ್ತು ಅಂಡಾಶಯಗಳಿರುವುದಿಲ್ಲ. ವಸಾಹತುವಿಗೆ ಯಾವುದಾದರೂ ಶತ್ರು ಪ್ರಾಣಿಗಳು ಪ್ರವೇಶಿಸಿದರೆ ತಕ್ಷಣ ಕುಡಿಮೀಸೆ ಮತ್ತು ತಲೆಯನ್ನು ಮೇಲಕ್ಕೆತ್ತಿ ಭಯಾನಕ ಭಂಗಿಯನ್ನು ತಾಳಿ ಗೂಡಿನೊಳಗೆ ಬರುವಂತಹ ಶತ್ರುಗಳನ್ನು ತಮ್ಮ ದವಡೆ ಹಲ್ಲುಗಳಿಂದ ಕಚ್ಚಿ ಹಿಡಿಯುತ್ತವೆ.

ನಾಸುಟಿ ಟರ್ಮೈಟಿಸಿ ಉಪಕುಟುಂಬದ ಗೆದ್ದಲಿನ ಪ್ರಭೇಧಗಳಲ್ಲಿ ಸೈನಿಕರಲ್ಲಿ ಕವಡೆ ಹಲ್ಲುಗಳಿಗೆ ಬದಲು ತಲೆಯ ತುದಿ ಮುಂದಕ್ಕೆ ಚಾಚಿರುವ ಕೊಳವೆಯಂತಹ ಮೂತಿಯಿಂದ ಒಂದು ಬಗೆಯ ತೀಕ್ಷ್ಣವಾದ ದ್ರವವನ್ನು ಹೊರಸೂಸಿ ಶತ್ರುಗಳನ್ನು ಹಿಮ್ಮೆಟ್ಟಿಸುತ್ತವೆ.

ಸೈನಿಕ ಗೆದ್ದಲಿಗೆ ತಮ್ಮ ವಸಾಹತುವಿನ ಕಾವಲಿನದೊಂದೇ ಚಿಂತೆ.

ಕೆಲಸಗಾರ ಗೆದ್ದಲು ಅತ್ಯಂತ ಶಿಸ್ತು ಮತ್ತು ಜವಾಬ್ದಾರಿಯಿಂದ ವಸಾಹತುವಿನ ಏಳಿಗೆಗಾಗಿ ದುಡಿಯುತ್ತವೆ. ಇವು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅನೇಕ ಕೆಲಸಗಳನ್ನು ಮೊಟ್ಟೆ ಮರಿಗಳನ್ನು ವಿಶೇಷವಾದ ಗೂಡುಗಳಲ್ಲಿಟ್ಟು ಸಾಕುವುದು ರಾಜ, ರಾಣಿ ಮತ್ತು ಮರಿಗಳಿಗೆ ಆಹಾರವನ್ನು ತಿನ್ನಿಸುವುದು. ಗೂಡುಗಳ ನಿರ್ಮಾಣ, ರಿಪೇರಿ ಮತ್ತು ಸ್ವಚ್ಛತೆ ಗೂಡುಗಳಲ್ಲಿ ಸಹಜೀವಿ ಶಿಲೀಂದ್ರ ತೋಟಗಳನ್ನು ಬೆಳೆಸುವುದು. ಗೂಡಿನಿಂದ ಸುರಂಗಗಳನ್ನು ತೋಡಿ ಆಹಾರವನ್ನು ಗುರ್ತಿಸಿ ನಂತರ ಸಾಗಿಸುವುದು. ಸಾಮಾನ್ಯವಾಗಿ ಆಹಾರವನ್ನು ಸತತವಾಗಿ ಸಾಗಿಸುವ ಸಲುವಾಗಿ ತೆಳುವಾದ ಮಣ್ಣಿನ ಪೊರೆಯನ್ನು ಆಹಾರದ ಮೇಲೆ ಕಟ್ಟಿ ನಂತರ ಸಾಗಿಸುತ್ತವೆ. ಮಳೆಗಾಲ ಕಳೆದ ನಂತರ ಮರಗಳ ಮೇಲೆ, ಹುಲ್ಲಿನ ಮೇಲೆ, ಗಿಡಗಳಲ್ಲಿ, ತರಗೆಲೆ, ಸಗಣಿ ಮುಂತಾದ ಸಾವಯವ ವಸ್ತುಗಳ ಮೇಲೆ ಗೆದ್ದಲಿನಿಂದ ಕೂಡಿರುವ ಮಣ್ಣಿನ ಪೊರೆಯನ್ನು ನೋಡಬಹುದು.

ಗೆದ್ದಲು–ಹುತ್ತ

ಗೂಡುಗಳನ್ನು ಕಟ್ಟುವಾಗ, ರಿಪೇರಿ ಮಾಡುವಾಗ ಆಹಾರವನ್ನು ಹುಡುಕಿ ಸಾಗಿಸುವಾಗ, ರೆಕ್ಕೆಹುಳು ಗೂಡಿನಿಂದ ಹೊರಗೆ ಬರುವಾಗ ಒಂದು ನಿರ್ದಿಷ್ಟ ಅಂತರದ ದೂರದಲ್ಲಿ ಸೈನಿಕರಂತೆ ಕಾವಲಿದ್ದು ಗೆದ್ದಲನ್ನು ಶತ್ರುಗಳಿಂದ ರಕ್ಷಿಸುತ್ತವೆ. ಗೂಡಿನ ಪ್ರತಿಭಾಗದಲ್ಲಿ ನಿಂತು ಪಹರೆ ತಿರುಗುತ್ತಾ ಶತ್ರುಗಳು ಗೂಡಿನೊಳಗೆ ನುಗ್ಗದಂತೆ ತಡೆಯುತ್ತವೆ.

ಅನೇಕ ವೈವಿಧ್ಯತೆಯನ್ನೊಳಗೊಂಡಿರುವ ಟರ್ಮೈಟಿಡಿ ಕುಟುಂಬದ ಮ್ಯಾಕ್ರೊಟರ್ಮೈಟಿನಿ ಮತ್ತು ನಾಸುಟಿ ಟರ್ಮೈಟಿನಿ ಉಪಕುಟುಂಬದ ಪ್ರಭೇದಗಳು ಅನೇಕ ವಿಶೇಷ ಬಗೆಯಲ್ಲಿ ತಮ್ಮದೇ ಆದ ವಿನ್ಯಾಸದಲ್ಲಿ ಗೂಡುಗಳನ್ನು ಕಟ್ಟುತ್ತವೆ. ಸಾಮಾನ್ಯವಾಗಿ ಅರಣ್ಯಪ್ರದೇಶಗಳಲ್ಲಿ ಬೃಹದಾಕಾರವಾಗಿ ಹುತ್ತಗಳನ್ನು ನಿರ್ಮಿಸುತ್ತವೆ. ಆಫ್ರಿಕಾ, ಆಸ್ಟ್ರೇಲಿಯ, ಉತ್ತರ ಅಮೆರಿಕಾ, ಭಾರತ ಪ್ರಾಂತ್ಯಗಳಲ್ಲಿ ಪ್ರವಾಸಿಗಳನ್ನು ವಿಶೇಷವಾಗಿ ಆಕರ್ಷಿಸುವಂತಹ ಹುತ್ತಗಳನ್ನು ಕಟ್ಟುತ್ತವೆ. ಗೂಡುಗಳ ಒಳಗೆ ಮತ್ತು ಹೊರಗೆ ಅತ್ಯುನ್ನತ ಮಟ್ಟದಲ್ಲಿ ಶಿಲ್ಪಕಲೆಯನ್ನು ಅಳವಡಿಸಿ ಹುತ್ತಗಳನ್ನು ನಿರ್ಮಿಸುತ್ತವೆ.

ಮ್ಯಾಕ್ರೊಟರ್ಮೈಟಿನಿ ಉಪಕುಟುಂಬದಲ್ಲಿರುವ ಒಡೊಂಟೊಟರ್ಮಿಸ ಮಿಕ್ರೊಟರ್ಮಿಸ ಮತ್ತು ಮ್ಯಾಕ್ರೊಟರ್ಮಿಸ ಜಾತಿಯ ಗೆದ್ದಲಿನ ಪ್ರಭೇಧಗಳು ಗೂಡುಗಳಲ್ಲಿ ಶಿಲೀಂದ್ರ ತೋಟಗಳನ್ನು ಸಹಜೀವಿಗಳಾಗಿ ಬೆಳೆಸುತ್ತವೆ. ಗೆದ್ದಲಿನ

ಹಿಕ್ಕೆಗಳನ್ನು ಗೂಡುಗಳಲ್ಲಿ ಸಂಗ್ರಹಿಸಿ ಅವುಗಳ ಮೇಲೆ ಶಿಲೀಂಧ್ರ ತಂತುಜಾಲವನ್ನು ಬೆಳೆಸಿ ತಮ್ಮ ಲಾಲಾರಸದಿಂದ ಸ್ಪಂಜಿನಂತಹ ಮೆತ್ತನೆಯ ಶಿಲೀಂಧ್ರ ತೋಟಗಳನ್ನು ನಿರ್ಮಿಸುತ್ತವೆ. ಇವುಗಳನ್ನೇ "ಗುಗ್ಗೆ"ಗಳೆಂದು ಕರೆಯುವ ವಾಡಿಕೆ. ಶಿಲೀಂಧ್ರ ತೋಟಗಳ ಮೇಲೆ ಬಿಳುಪಾದ ಶಿಲೀಂಧ್ರ ಬಿಜಾಣು ಸೂಕ್ಷ್ಮಜೀವಿಗಳು ಬೆಳೆಯುತ್ತವೆ. ಇದನ್ನು ಗೆದ್ದಲು ಆಹಾರವಾಗಿ ಉಪಯೋಗಿಸುತ್ತದೆ.

ಈ ಸಹಜೀವಿ ಶಿಲೀಂದ್ರತೋಟಗಳಿಂದ ಗೆದ್ದಲು ಅನೇಕ ಅನುಕೂಲಗಳನ್ನು ಪಡೆಯುತ್ತದೆ.

1. ವಸಾಹತುವಿನ ಗೆದ್ದಲಿನ ಬೆಳೆವಣಿಗೆಗೆ ಬೇಕಾದ ಜೀವಸತ್ವಗಳು ಮತ್ತು ಪೋಷಕಾಂಶಗಳು ಶಿಲೀಂದ್ರ ತೋಟಗಳಲ್ಲಿರುವುದರಿಂದ ಮರಿಗಳ ಆಹಾರವಾಗಿ ಉಪಯೋಗಿಸುತ್ತವೆ.

2. ಮೊಟ್ಟೆಗಳ ಕಾವಿಗೆ ಹಾಗೂ ಮರಿಗಳನ್ನು ಶಿಲೀಂದ್ರ ತೋಟದ ಸಣ್ಣ ಸಣ್ಣ ಗುಣಗಳಲ್ಲಿಟ್ಟು ಸಾಕಲು ಸಹಾಯಕವಾಗಿವೆ.

3. ಶಿಲೀಂದ್ರ ತೋಟಗಳು ಸ್ಪಂಜಿನಂತಿರುವುದರಿಮದ ಗೂಡಿನಲ್ಲಿ ತೇವಾಂಶವನ್ನು ಹಿಡಿದಿಟ್ಟುಗೊಂಡಿದ್ದು ಹೆಚ್ಚಿನ ಸಂಖ್ಯೆಯ ಉಸಿರಾಟದಿಂದಾಗಿ ಇಂಗಾಲದ ಡೈ ಆಕ್ಸೈಡ್ ನಿರ್ಮಾಣಗೊಂಡು ವಸಾಹತುವಿಗೆ ಬೇಕಾಗಿರುವ ಒಂದು ನಿರ್ದಿಷ್ಟ ಉಷ್ಣಾಂಶ ಮತ್ತು ಶೈತ್ಯಾಂಶದ ಹವಾನಿಯಂತ್ರಣದ ವ್ಯವಸ್ಥೆಯಾಗುತ್ತದೆ.

ಕೆಲವು ಶಿಲೀಂದ್ರಗಳನ್ನು ಬೆಳೆಸದೇ ಇರುವ ಹುತ್ತಗಳನ್ನು ನಿರ್ಮಾಣ ಮಾಡುವ ಗೆದ್ದಲುಗಳು ಆಹಾರದ ಚೂರುಗಳನ್ನೇ ಗೂಡುಗಳಲ್ಲಿಟ್ಟು ಅನೇಕ ಅನುಕೂಲಗಳನ್ನು ಪಡೆಯುತ್ತವೆ. ನಾಸುಟಿಟರ್ಮೈಟಿನಿ ಉಪಕುಟುಂಬಕ್ಕೆ ಸೇರಿರುವ ಗೆದ್ದಲಿನ ಪ್ರಭೇದಗಳೂ ಸಹ ಭೂಮಿಯೊಳಗೆ ಮತ್ತು ಮರಗಳ ಮೇಲೆ ವಿಶೇಷವಾದ ಗೂಡುಗಳನ್ನು ಕಟ್ಟುತ್ತವೆ. ಆಫ್ರಿಕಾದಲ್ಲಿ ಟ್ರೈನರ್ವಿ ಟರ್ಮಿಸ ಜಾತಿಯ ಪ್ರಭೇದಗಳು ಸಣ್ಣ ಸಣ್ಣ ಹುತ್ತಗಳನ್ನು ನಿರ್ಮಿಸಿ ಗೂಡುಗಳಲ್ಲಿ ಹುಲ್ಲನ್ನು ಶೇಖರಿಸಿ ವಸಾಹತುವಿಗೆ ಬೇಕಾಗಿರುವ ಎಲ್ಲಾ ಅನುಕೂಲತೆಗಳನ್ನು ಪಡೆಯುತ್ತದೆ. ಭಾರತದಲ್ಲಿರುವ ನಾಸುಟಿಟರ್ಮಿಸ ಜಾತಿಯ ಪ್ರಭೇದಗಳು ತಮ್ಮ ಹಿಕ್ಕೆಗಳನ್ನು ಸಂಗ್ರಹಿಸಿ ಲಾಲಾರಸವನ್ನು ಬೆರೆಸಿ ಎಲ್ಲಾ ಗೆದ್ದಲುಗಳಿಗೆ ಸ್ಥಳಾವಕಾಶವನ್ನು ಒದಗಿಸುವಂತಹ ಗೋಳಾಕಾರದ ಸಾಮಾನ್ಯ ಗಾತ್ರದ ಗೂಡುಗಳನ್ನು ಕಾಡುಮರಗಳ ಮೇಲೆ ಕಟ್ಟಿ ಕೊಳವೆಯಂತಹ ಸುರಂಗಮಾರ್ಗಗಳನ್ನು ಮಾಡಿ ಆಹಾರವನ್ನು ಸತತವಾಗಿ ಗೂಡಿಗೆ ಸಾಗಿಸುತ್ತವೆ.

ವಿಶ್ವದಲ್ಲಿ ವಿಸ್ತಾರವಾಗಿರುವ ಅನೇಕ ಗೆದ್ದಲಿನ ಜಾತಿಗಳಲ್ಲಿ ಭಾರತದ ಒಡೊಂಟೊ ಟರ್ಮಿಸ್, ಆಫ್ರಿಕಾದ ಮ್ಯಾಕ್ರೊಟರ್ಮಿಸ್, ಟ್ರೈನರ್ವಿಟರ್ಮಿಸ್, ಕ್ಯೂಬಿಟರ್ಮಿಸ್ ಮತ್ತು ಏಪಿಕೊಟರ್ಮಿಸ್, ಆಸ್ಟ್ರೇಲಿಯಾದ ಏಮಿಟರ್ಮಿಸ್ ನಾಸುಟಿ ಟರ್ಮಿಸ್ ಮತ್ತು ಕೋಪ್ಟೊ ಟರ್ಮಿಸ್ ಮತ್ತು ದಕ್ಷಿಣ ಅಮೆರಿಕಾದ ಅನೊಪ್ಲೊಟರ್ಮಿಸ್ ಮತ್ತು ಸೈನಟರ್ಮಿಸ್ ಮುಖ್ಯವಾದವು.

ಗೆದ್ದಲಿನ ಹಾನಿಯಿಂದ ಪ್ರತಿವರ್ಷ ಭಾರತದಲ್ಲಿ 280 ದಶಲಕ್ಷ ರೂಪಾಯಿಗಳು ನಷ್ಟವಾಗುತ್ತದೆಂದು ಹಿಂದಿನ ಶತಮಾನ ಆದಿಭಾಗದಲ್ಲಿಯೇ ಅಂದಾಜುಮಾಡಲಾಗಿತ್ತು. ಈ ಅಂದಾಜಿನ ನಷ್ಟದ 10 ಪಟ್ಟಾದರೂ ಇಂದು ಭಾರತದಲ್ಲಿ ನಷ್ಟವಾಗುತ್ತದೆಂದು ತಿಳಿಯಬಹುದು. ಇತರೇ ರಾಷ್ಟ್ರಗಳಿಂದಲೂ ಸಾವಿರಾರು ದಶಲಕ್ಷ ರೂಪಾಯಿಗಳ ನಷ್ಟವಾಗುತ್ತದೆಂದು ತಿಳಿಸಿದ್ದಾರೆ. ಭಾರತದಲ್ಲಿ ಗುರ್ತಿಸಿರುವ ಒಟ್ಟು 300 ಗೆದ್ದಲಿನ ಪ್ರಭೇಧಗಳಲ್ಲಿ 50 ಪ್ರಭೇಧಗಳನ್ನು ಬೆಳೆಗಳಲ್ಲಿ ಕಟ್ಟಡಗಳಲ್ಲಿ ನಷ್ಟಪಡಿಸುವ ಪೀಡೆಗಳೆಂದು ಗುರ್ತಿಸಿದ್ದಾರೆ.

ಸತತ ನೀರಾವರಿ ಬೆಳೆಗಳಲ್ಲಿ ಗೆದ್ದಲಿನ ಹಾವಳಿ ಇರುವುದಿಲ್ಲ. ಆದರೆ ಒಣಬೇಸಾಯದಲ್ಲಿ ಬೆಳೆಯುವ ಎಲ್ಲಾ ಬೆಳೆಗಳಲ್ಲಿ ಸಸಿಗಳಿಂದ ಬೆಳೆಯುವ ಎಲ್ಲಾ ಹಂತಗಳಲ್ಲಿ ಗೆದ್ದಲಿನ ಹಾವಳಿ ಇರುತ್ತದೆ. ಆಳವಾದ ಕಪ್ಪುಮಣ್ಣಿನಲ್ಲಿ ಗೆದ್ದಲಿನ ಹಾವಳಿ ಇರುವುದಿಲ್ಲ. ಕೆಂಪು, ಮರಳು ಮಿಶ್ರಿತ ಗೋಡು, ಜೆಂಬಿಟ್ಟಿಗೆ ಮಣ್ಣುಗಳಲ್ಲಿ ಗೆದ್ದಲಿನ ಹಾವಳಿ ಅಧಿಕವೆಂದು ಸಂಶೋಧನೆಯಿಂದ ತಿಳಿಯಲ್ಪಟ್ಟಿದೆ.

ಧಾನ್ಯ ಬೆಳೆಗಳಲ್ಲಿ ಗೋದಿ, ಬತ್ತ, ಮುಸುಕಿನ ಜೋಳ, ಬಾರ್ಲಿ, ಸಜ್ಜೆ ನವಣೆ ಮುಂತಾದುವು, ಎಲ್ಲಾ ಬಗೆಯ ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು, ತರಕಾರಿ, ಹಣ್ಣಿನ ಬೆಳೆಗಳು ಇವುಗಳಲ್ಲದೆ ಅನೇಕ ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ, ತೆಂಗು, ಅಡಿಕೆ, ರಬ್ಬರ್, ಟೀ, ಕಾಫಿ, ಕೊಕೊ, ಏಲಕ್ಕಿ ಮುಂತಾದುವು. ಎಲ್ಲಾ ಬಗೆಯ ಅರಣ್ಯ ಮರಗಳು, ಹುಲ್ಲಿನ ಜಾತಿಯ ಬೆಳೆಗಳು ಉಗ್ರಾಣದಲ್ಲಿ ಶೇಖರಿಸಿರುವ ಮರಮುಟ್ಟು, ಪುಸ್ತಕ, ಬಟ್ಟೆ, ಕಟ್ಟಡಗಳಲ್ಲಿನ ಮರದ ಸಾಮಾನುಗಳು, ಅಡ್ಡೆ ತರಾಯಿ, ಬಾಗಿಲು, ಕಿಟಕಿ, ಪೀಠೋಪಕರಣಗಳು, ಸಾವಯವ ಗೊಬ್ಬರ, ಸಗಣಿ, ತರಗೆಲೆ, ಬೇರಿನ ಕೊಳೆ, ಒಣಹುಲ್ಲು, ಗರಿ ಮುಂತಾದುವು ಗೆದ್ದಲಿನ ಹಾವಳಿಗೆ ತುತ್ತಾಗುತ್ತವೆ. (ಜಿ.ಪಿ.ಸಿ.)

**ಗೆರಾರ್ಡ್, ಕ್ರಿಮೊನಾದ :** ಸು. 1114–87. ಇಟಲಿಯ ಲೊಂಬಾರ್ಡಿಯಲ್ಲಿ ಹುಟ್ಟಿ, ಅರಬ್ಬೀ ಮತ್ತು ಗ್ರೀಕ್ ಗ್ರಂಥಗಳನ್ನು ಲ್ಯಾಟಿನಿಗೆ ತಂದ ಅನುವಾದಕ. ಟಾಲೆಮಿಯ ಅಲ್ಮಾಜೆಸ್ಟ್ ಗ್ರಂಥವನ್ನು ಓದಲೋಸ್ಕರ ಅರಬ್ಬೀ ನುಡಿ ಕಲಿಯಲೆಂದು ಟೋಲಿಡೋಗೆ ಹೋಗಿ ಅಲ್ಲೇ ನೆಲೆಸಿದ. ಸುಮಾರು 92 ಗ್ರಂಥಗಳನ್ನು ಈತ ಅನುವಾದಿಸಿರುವನೆಂದು ಹೇಳಿಕೆ. ಇವನು ಕೇವಲ ಅನುವಾದಕ ತಂಡದ ನಾಯಕನಾಗಿದ್ದ ಎನ್ನುವ ಶಂಕೆ ಸಹ ಉಂಟು. ಈ ಅನುವಾದಗಳಲ್ಲಿ 21 ವೈದ್ಯಶಾಸ್ತ್ರದವು. ಇವನು 1175ರಲ್ಲಿ ಬರೆದು ಮುಗಿಸಿದ ಅಲ್ಮಾಜೆಸ್ಟ್‌ನ ಅನುವಾದ 1515ರಲ್ಲಿ ಅಚ್ಚಾಗಿ ಗ್ರೀಕ್ ಮೂಲದ ಅನುವಾದಕ್ಕಿಂತ ಹೆಚ್ಚು ಜನಪ್ರಿಯವಾಯಿತು. ಟಾಲೆಮಿಯದೇ ಅಲ್ಲದೆ ಅರಿಸ್ಟಾಟಲ್, ಯೂಕ್ಲಿಡ್, ಗೇಲೆನರ ಅರಬ್ಬೀ ಅನುವಾದಗಳನ್ನೂ ಈತ ಲ್ಯಾಟಿನಿಗೆ ತಂದ. ಇವನು ಅನುವಾದಿಸಿದ ಮೂಲ ಅರಬ್ಬೀ ಗ್ರಂಥಗಳಲ್ಲಿ ಅವಿಸೆನ್ನನ ವೈದ್ಯಗ್ರಂಥಗಳು, ಗಣಿತ, ಖಗೋಳಶಾಸ್ತ್ರ, ಜ್ಯೋತಿಷಶಾಸ್ತ್ರ ರಸತಂತ್ರದ ಗ್ರಂಥಗಳೂ ಇದ್ದುವು. (ಡಿ.ಎಸ್.ಎಸ್.)

**ಗೆರಾರ್ಡ್ ಡೊಮಾಕ್ :** 1895–1964. ಜರ್ಮನಿಯ ಜೀವರಸಾಯನ ಮತ್ತು ಸೂಕ್ಷ್ಮವಿಜ್ಞಾನಿ. ಈಗ ಪೋಲೆಂಡಿನಲ್ಲಿರುವ ಬ್ರಾಂಡೆನ್ ಬರ್ಗಿನ ಲ್ಯಾಗೋನಲ್ಲಿ 1895ರ ಅಕ್ಟೋಬರ್ 30ರಂದು ಜನಿಸಿದ. ಸಲ್ಫೊನಮೈಡ್ ಔಷಧಗಳ ಪೈಕಿ ಮೊದಲನೆಯದಾದ ಪ್ರೋಂಟೋಸಿಲ್ಲಿನ ಸೂಕ್ಷ್ಮಜೀವಿ ವಿರುದ್ಧ (ಆ್ಯಂಟಿ ಬ್ಯಾಕ್ಟೀರಿಯಲ್) ಗುಣಗಳನ್ನು ಶೋಧಿಸಿದ್ದಕ್ಕಾಗಿ 1936ರಲ್ಲಿ ಈತನಿಗೆ ವೈದ್ಯ ಹಾಗೂ ಶರೀರಕ್ರಿಯಾವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಕ ಲಭಿಸಿತು. ಆದರೆ ಹಿಟ್ಲರ್ ಪ್ರಭಾವದಲ್ಲಿದ್ದ ಜರ್ಮನಿಯ ಈ ಪೌರನಿಗೆ ಅದನ್ನು ಸ್ವೀಕರಿಸಲು ಅನುಮತಿ ದೊರೆಯಲಿಲ್ಲ. ಹಿಟ್ಲರನ ಮರಣಾನಂತರ, 1947ರಲ್ಲಿ, ಡೊಮಾಖ್ ಸ್ವೀಡನ್ನಿಗೆ ತೆರಳಿ ನೊಬಲ್ ಪಾರಿತೋಷಕ ಪಡೆದ. ಆದರೆ, ಬಹುಮಾನದ ಹಣ ಮಾತ್ರ ದೊರೆಯಲಿಲ್ಲ.



ಡೊಮಾಕ್‌ನ ವಿದ್ಯಾರಂಭದ ವೇಳೆ ಒಂದನೆಯ ಮಹಾಯುದ್ಧ ನಡೆಯುತ್ತಿದ್ದುದರಿಂದ ಈತನ ಅಧ್ಯಯನಕ್ಕೆ ತೊಂದರೆ ಉಂಟಾಯಿತು. ಸಮರಾನಂತರ ವಿದ್ಯಾಭ್ಯಾಸವನ್ನು ಮುಂದುವರಿಸಿ ಆಮೇಲೆ 1921ರಲ್ಲಿ ವೈದ್ಯಶಾಸ್ತ್ರದಲ್ಲಿ ತರಬೇತಿ ಹೊಂದಿ ಪದವಿ ಪಡೆದ. 1924ರಲ್ಲಿ ಇವನು ಗ್ರೀಫ್ಸ್ ವಾಲ್ಡ್ ವಿಶ್ವವಿದ್ಯಾಲಯದಲ್ಲಿ ಕೆಲಸಕ್ಕೆ ಸೇರಿದ. ಕೆಲವು ವರ್ಷಗಳ ಬಳಿಕ ಮುನ್ಸ್ಟರ್‌ನ ರೋಗವಿಜ್ಞಾನ ಸಂಸ್ಥೆಯಲ್ಲಿ ಹುದ್ದೆ ಸಿಕ್ಕಿತು. ಈ ಸಂಸ್ಥೆಯಲ್ಲಿಯೇ 1928ರಲ್ಲಿ ಸಾಮಾನ್ಯ ರೋಗವಿಜ್ಞಾನಶಾಸ್ತ್ರದ (ಜನರಲ್ ಪ್ಯಾಥಾಲಜಿ) ಮತ್ತು ರೋಗಶಾಸ್ತ್ರೀಯ ಅಂಗರಚನಾ ವಿಜ್ಞಾನದ (ಪ್ಯಾಥಲಾಜಿಕಲ್ ಅನಾಟಮಿ) ಪ್ರಾಧ್ಯಾಪಕನಾಗಿ ನೇಮಕಗೊಂಡ. ಉಪ್ಪೆರ್ಟಾಲ್–ಎಲ್ಬರ್‌ಫೆಲ್ಡ್‌ನಲ್ಲಿನ ಬೇಯರ್ ಕಂಪನಿಯ ಬಣ್ಣದ ಕೈಗಾರಿಕೆಯ ಪ್ರಯೋಗ ಶಾಲೆಯಲ್ಲಿ ಸಂಶೋಧನೆಯ ನಿರ್ದೇಶಕ ನಾಗಿರಲು ಆಹ್ವಾನ ಬಂದಾಗ (1927) ಒಪ್ಪಿಕೊಂಡ. ಇಲ್ಲಿ ಡೊಮಾಕನು ಸಹೋದ್ಯೋಗಿ ಗಳಾದ ಫ್ರಿಟ್ಜ್ ಮಿಶ್ಚ್ ಮತ್ತು ಜೋಸೆಫ್ ಕ್ಲಾರರ್ ಎಂಬವರ ಜೊತೆಯಲ್ಲಿ ಹೊಸ ಬಣ್ಣಗಳ ತಯಾರಿಕೆಗೆ ಕ್ರಮ ಬದ್ಧವಾಗಿ ಸಂಶೋಧನೆ ಮಾಡಿ ಹಲವಾರು ನೂತನ ಅಜೋಸಂಯುಕ್ತಗಳನ್ನು ಸಂಶ್ಲೇಷಿಸಿದ. ಇವುಗಳ ವೈದ್ಯಕೀಯ ಗುಣಗಳನ್ನು ಕೂಡ ಪರಿಶೀಲಿಸಲಾಯಿತು. ಈ ಅನ್ವೇಷಣೆಯಲ್ಲಿದ್ದಾಗಲೇ ಪ್ರೋಂಟೋಸಿಲ್ ರೆಡ್ ಎನ್ನುವ ಬಣ್ಣವೊಂದು (ಸಲ್ಫೊನೊಮೈಡ್ ಗುಂಪಿಗೆ ಸೇರಿದ್ದು) ಇಲಿಗಳಲ್ಲಿರುವ ಸೋಂಕುಗಳ ಮೇಲೆ ನಿರ್ದಿಷ್ಟವಾದ ಪರಿಣಾಮವನ್ನು ಉಂಟುಮಾಡುತ್ತದೆಂದು ಆತ ಕಂಡುಹಿಡಿದ. ಆಮೇಲೆ ಇದನ್ನು ವೈದ್ಯಕೀಯ ವೃತ್ತಿಯಲ್ಲಿಯೂ ಬಳಸಲಾಯಿತು. ಅದೇ ವೇಳೆ ಸ್ವತಃ ಡೊಮಾಕನ ಮಗಳು ಚುಚ್ಚುಮದ್ದಿನ ಪರಣಾಮವಾಗಿ ತೀವ್ರ ಸ್ಟ್ರೆಪ್ಟೋಕಾಕಸ್ ಸೋಂಕಿನಿಂದ ನರಳುತ್ತಿದ್ದಳು. ಡೊಮಾಕ್ ಈ ಹೊಸ ಔಷಧಿಯನ್ನು ಆಕೆಯ ಮೇಲೆ ಪ್ರಯೋಗಿಸಿ ಅವಳನ್ನು ಗುಣಮುಖ ಮಾಡಿದ. ಔಷಧಿಯ ಈ ವಿನೂತನ ಗುಣವನ್ನು ಅವನು 1932ರಲ್ಲಿ ಪ್ರಕಟಿಸಿದ. ಅಂದಿನಿಂದಲೇ ವೈದ್ಯಶಾಸ್ತ್ರದಲ್ಲಿ ರಸಚಿಕಿತ್ಸಕ (ಕೆಮೊತೆರಪ್ಯಾಟಿಕ್) ವಸ್ತುಗಳ ಬಳಕೆಯ ಯುಗ ಆರಂಭವಾಯಿತೆನ್ನಬಹುದು.

ಡೊಮಾಕ್ ತೀವ್ರಸೋಂಕುಗಳ ಚಿಕಿತ್ಸೆ ಮಾಡುವುದಷ್ಟೇ ಅಲ್ಲದೆ ಕ್ಷಯರೋಗ ನಿವಾರಣೆಯ ಮೇಲೂ ಸಂಶೋಧನೆ ನಡೆಸಿದ. 1947ರಿಂದ ಮುಂದಕ್ಕೆ ಅವನು ಕೆಲವು ವರ್ಷ ಏಡಿಗಂತಿ ರೋಗದ ಸಂಶೋಧನೆಗೆ ಸಂಬಂಧಪಟ್ಟ ಒಂದು ವಿಜ್ಞಾನಪತ್ರಿಕೆಯ ಸಂಪಾದಕನೂ ಆಗಿದ್ದ. ಈತ 1964ರ ಏಪ್ರಿಲ್ 24ರಂದು ವುರ್ಟಿಂಗ್‍ಫ಼-ಬ್ಯಾಡೆನ್ನಿನ ಬರ್ಬರ್ಗ್‍ನಲ್ಲಿ ನಿಧನನಾದ. (ಡಿ.ಎಸ್.ಎಂ.)

**ಗೆರಿಲ್ಲಾ ಕಾಳಗ : ನೋಡಿ–ಕಿರುಕುಳ ಕಾಳಗ**

**ಗೆರ್ಹಾರ್ಟ್, ಪಾಲ್ :** 1607–76. ಸ್ತೋತ್ರಗೀತೆಗಳ (ಹಿಮ್ಸ್) ರಚನೆಯಲ್ಲಿ ಹೆಸರಾದ ಜರ್ಮನ್ ಕವಿಗಳಲ್ಲಿ ಒಬ್ಬ ಪ್ರಮುಖ.

ಗ್ರಾಫೆನ್‍ಹೈನಿಚೆನ್ ಎಂಬಲ್ಲಿ ಹುಟ್ಟಿ ವಿಟ್ಟೆನ್‍ಬರ್ಗ್‍ನಲ್ಲಿ ವಿದ್ಯಾಭ್ಯಾಸ ಮಾಡಿದ ಈತ ಸ್ವಲ್ಪಕಾಲ ಬರ್ಲಿನ್‍ನಲ್ಲಿ ಮೊದಲಿಗೆ ಶಿಕ್ಷಕನಾಗಿದ್ದು ಅನಂತರ ಚರ್ಚಿನ ಅಧಿಕಾರಿಯಾದ. ಅದು ಮಹಾ ಧರ್ಮಾಧಿಕಾರಿಯ (ಪೋಪ್) ನಿರಂಕುಶಾಧಿಕಾರದ ವಿರುದ್ಧ ಪ್ರತಿಭಟನೆ ತೀವ್ರವಾಗಿದ್ದ ಕಾಲ. ಮಾರ್ಟಿನ್ ಲೂಥರ್‌ನಿಂದ ಆ ಕ್ರಾಂತಿ ಅತ್ಯಂತ ಪ್ರಖರವಾಗಿ ಎಲ್ಲೆಡೆಯೂ ಹಬ್ಬುತ್ತಿತ್ತು. ಗೆರ್ಹಾರ್ಟ್ ಕಟ್ಟಾ ಲೂಥರ್ ಅನುಯಾಯಿ. ಅದರಿಂದಾಗಿ ಈತನ ಅಧಿಕಾರಕ್ಕೆ ಸ್ವಲ್ಪ ಕಾಲ ಚ್ಯುತಿ ಬಂತು. ಆದರೆ ಕೆಲಕಾಲದ ಮೇಲೆ ಮತ್ತೆ ಈತ ಆರ್ಚ್‍ಡೀಕನ್ ಆದ.

ಈತನ ಗೀತೆಗಳು ಮೊದಲು ಅಖಂಡವಾಗಿ ಪ್ರಕಾಶಿತವಾದದ್ದು ಬರ್ಲಿನ್‍ನಲ್ಲಿ ಸಂಗೀತ ನಿರ್ದೇಶಕನಾಗಿದ್ದ ಇಬೆಲಿಂಗ್ ಎಂಬುವನಿಂದ. ಗೆರ್ಹಾರ್ಟ್‍ನ ಆಧ್ಯಾತ್ಮಿಕ ಹಾಡುಗಳು ಎಂಬ ಹೆಸರಿನಲ್ಲಿ ಕೆಲ್ಲಿ ಎಂಬಾತ 1867ರಲ್ಲಿ ಇಂಗ್ಲಿಷಿಗೆ ಇವನ್ನು ಅನುವಾದಿಸಿ ಪ್ರಕಟಿಸಿದ್ದಾನೆ. ಈತನ ಸಮಕಾಲೀನರಾಗಿದ್ದ ಜೊಹಾನ್ ಫ್ರ್ಯಾಂಕ್, ಜೊಹಾನ್ ಶೆಫ್ಲರ್ ಮುಂತಾದವರೆಲ್ಲರಿಗಿಂತ ಈತನಿಗೆ ಹೆಚ್ಚಿನ ಗೌರವ ಕೊಟ್ಟು ಲೂಥರನ್ ಕವಿಗಳಲ್ಲಿ ಚಕ್ರವರ್ತಿ– ಎಂದು ವಿಮರ್ಶಕರು ಈತನನ್ನು ಹೊಗಳಿದ್ದಾರೆ. 'ಹೋಗು ನನ್ನ ಹೃದಯವೇ, ಹರ್ಷವನ್ನರಸು', 'ನೀನು ನನ್ನವನು, ಹೌದು, ಮತ್ತೂ ನನ್ನವನೇ', 'ವನಗಳೆಲ್ಲ ಈಗ ನಿದ್ರಾವೃತ' –ಮುಂತಾದ ಕೆಲವು ಗೀತೆಗಳು ನಿಸರ್ಗಪ್ರೇಮ, ಮೃದು ಮಧುರ ಹೃದಯಸ್ಪರ್ಶಿ ಭಾವನೆ, ಭಾಷೆಯ ಇನಿದನಿಗಳಿಗೆ ಪ್ರಸಿದ್ಧವಾಗಿವೆ. (ಆರ್.ಎಸ್.ಎಜಿ.)

**ಗೆಲಿಲಿಯೊ ಗೆಲೀಲಿ :** 1564–1642. ಇಟಾಲಿಯನ್ ಭೌತ ಮತ್ತು ಖಗೋಳ ವಿಜ್ಞಾನಿ. ಇಟಾಲಿಯನ್ನರ ಪದ್ಧತಿಯಂತೆ ಗೆಲಿಲಿಯೊ ಎಂಬ ಮೊದಲ ಹೆಸರಿನಿಂದಲೇ ಪರಿಚಿತನಾಗಿದ್ದಾನೆ. ರೆನೆಸಾನ್ಸ್ ಕಾಲದಲ್ಲಿ ಉಂಟಾದ ವಿಜ್ಞಾನ ಪುನರುಜ್ಜೀವನದ ಆದ್ಯ ಪ್ರವರ್ತಕರಲ್ಲೊಬ್ಬ, ಆಧುನಿಕ ವಿಜ್ಞಾನದ ಆಧಾರಸ್ತಂಭಗಳಲ್ಲೊಂದು ಎನಿಸಿರುವ ಪ್ರಯೋಗಮಾರ್ಗವನ್ನು ಅನುಷ್ಠಾನಕ್ಕೆ ತಂದವನೆಂದೂ ಯಂತ್ರಶಾಸ್ತ್ರದ (ಮೆಕ್ಯಾನಿಕ್ಸ್) ಮೂಲಪುರುಷನೆಂದೂ ಪ್ರಸಿದ್ಧಿ ಪಡೆದಿದ್ದಾನೆ. ಖಗೋಳೀಯ ಸಂಶೋಧನೆಗೆ ದೂರದರ್ಶಕವನ್ನು ಮೊತ್ತಮೊದಲ ಬಾರಿಗೆ ಬಳಸಿ ವಿವಿಧ ಆಕಾಶ ಕಾಯಗಳ ಬಗ್ಗೆ ಅನೇಕಾನೇಕ ಸ್ವಾರಸ್ಯಕರ ವಿಷಯಗಳನ್ನು ಸಂಗ್ರಹಿಸಿ ಕೋಪರ್ನಿಕಸ್ ಸಿದ್ಧಾಂತಕ್ಕೆ ಬೆಂಬಲ ನೀಡಿದ; ಮತ್ತು ಅದರಿಂದ ಅಪಾರ ಕಷ್ಟನಷ್ಟಗಳನ್ನು ಅನುಭವಿಸಿದ.



ಗೆಲಿಲಿಯೊ ಹುಟ್ಟಿದ್ದು ಪೀಸಾ ನಗರದಲ್ಲಿ, 1564 ರ ಫೆಬ್ರುವರಿ 15ರಂದು. ತಂದೆ ವಿನ್ಸೆನ್ಸಿಯೊ ಗೆಲೀಲಿ ಉಣ್ಣೆ ವ್ಯಾಪಾರಿ ಮತ್ತು ಹೆಸರುವಾಸಿಯಾದ ಸಂಗೀತಗಾರ. ಆತನ ಅಭಿಲಾಷೆಯಂತೆ ಗೆಲಿಲಿಯೊ ವೈದ್ಯಶಾಸ್ತ್ರ ಕಲಿಯಲೆಂದು ಪೀಸಾ ವಿಶ್ವವಿದ್ಯಾಲಯ ಸೇರಿದ. ಆದರೆ ಆಕಸ್ಮಿಕವಾಗಿ ಕೇಳಿದ ಒಂದು ಉಪನ್ಯಾಸದಿಂದ ಪ್ರಭಾವಿತನಾಗಿ ಗಣಿತಶಾಸ್ತ್ರದಲ್ಲಿ ಆಸಕ್ತನಾದ. ಕ್ರಮೇಣ ಗಣಿತದ ಗೀಳು ಹೆಚ್ಚಾಗಿ ವಿಶ್ವವಿದ್ಯಾಲಯವನ್ನು ಬಿಟ್ಟು ಮನೆಗೆ ಬಂದ. ಅವನ ಮುಂದಿನ ವಿದ್ಯಾಭ್ಯಾಸ ನಡೆದದ್ದು ಮನೆಯಲ್ಲಿಯೇ. ಬಹುಬೇಗ ಅಪಾರ ಪಾಂಡಿತ್ಯವನ್ನು ಸಂಪಾದಿಸಿ ಪೀಸಾ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕನಾದ. ಸಾವಿರಾರು ವರ್ಷಗಳಿಂದ ಮಾನ್ಯತೆ ಪಡೆದಿದ್ದ ಅರಿಸ್ಟಾಟಲನ ಅನೇಕ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ಅಲ್ಲಗಳೆದು ಸಹ ಪ್ರಾಧ್ಯಾಪಕರ ದ್ವೇಷ ಕಟ್ಟಿಕೊಂಡ. ಅವರ ಕಿರುಕುಳವನ್ನು ತಾಳಲಾರದೆ ಎರಡೇ ವರ್ಷಗಳಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಫ್ಲಾರೆನ್ಸ್ ನಗರಕ್ಕೆ ಓಡಿಹೋದ. 1592ರಲ್ಲಿ ಪಡೂವ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ, ಅಲ್ಲಿ ಹದಿನೆಂಟು ವರ್ಷ ಕಳೆದು, 1610 ರಲ್ಲಿ ಟಸ್ಕನಿ ಡ್ಯೂಕರ ಆಸ್ಥಾನ ವಿದ್ವಾಂಸನಾಗಿ ಸೇರಿಕೊಂಡ. ಈತ ಇತಿಹಾಸ ಪ್ರಸಿದ್ಧನಾಗಲು ಕಾರಣವಾದ ಈತನ ಮಹತ್ತ್ವಪೂರಿತ ಸಂಶೋಧನೆಗಳಲ್ಲಿ ಬಹುಪಾಲು ನಡೆದದ್ದು ಪಡೂವ ವಿಶ್ವವಿದ್ಯಾಲಯದಲ್ಲಿದ್ದ ಅವಧಿಯಲ್ಲೇ. ಯುರೋಪಿನ ಎಲ್ಲ ಭಾಗಗಳಿಗೂ ಈತನ ಕೀರ್ತಿ ಹಬ್ಬಿ ಎಲ್ಲ ದೇಶಗಳಿಂದಲೂ ವಿದ್ಯಾರ್ಥಿಗಳು ಅಲ್ಲಿಗೆ ಬರತೊಡಗಿದರು. ಜೊತೆಗೆ ಈತನ ಸಂಪ್ರದಾಯವಿರೋಧಿ ಬೋಧನೆಗಳ ಪರಿಣಾಮವಾಗಿ ಇವನ ವೈರಿಗಳ ಸಂಖ್ಯೆಯೂ ಬೆಳೆಯಿತು. ಇವನ ಬೋಧನೆಗಳು ಧರ್ಮಬಾಹಿರವಾದವೆಂದು ಪೋಪ್ ಐದನೆಯ ಪಯಸ್‍ರವರ ಮನ ಒಪ್ಪಿಸುವುದರಲ್ಲಿ ಈತನ ಶತ್ರುಗಳು ಯಶಸ್ವಿಯಾದರು. 1615 ರಲ್ಲಿ ಇವನನ್ನು ವಿಚಾರಣೆಗೆ ಗುರಿಪಡಿಸಿ ಇವನ ಬಾಯಿ ಮುಚ್ಚಿಸಿದರು.

1623 ರಲ್ಲಿ ಗೆಲಿಲಿಯೊನ ಸ್ನೇಹಿತ ಬಾರ್ಬೆರಿನಿ ಎಂಬಾತ ಎಂಟನೆಯ ಅರ್ಬನ್ ಎಂಬ ಹೆಸರಿನಿಂದ ಪೋಪ್ ಪದವಿಗೇರಿದ. ತನಗೆ ಸತ್ಯವೆಂದು ತೋರಿದ್ದನ್ನು ಬಹಿರಂಗವಾಗಿ ಸಾರಲು ಇನ್ನು ಮುಂದೆ ಯಾವ ಅಡ್ಡಿಯೂ ಇರಲಾರದೆಂದು ಭಾವಿಸಿದ ಗೆಲಿಲಿಯೊ 'ಎರಡು ಪ್ರಮುಖ ಸಿದ್ಧಾಂತಗಳನ್ನು ಕುರಿತ ಸಂವಾದ' ಎಂಬ ಒಂದು ಗ್ರಂಥವನ್ನು ಪ್ರಕಟಿಸಿದ (1632). ಟಾಲೆಮಿ ಸಿದ್ಧಾಂತದ ಪರವಾಗಿ ವಾದಿಸುವ ಒಬ್ಬ, ಕೋಪರ್ನಿಕಸ್ ಸಿದ್ಧಾಂತದ ಪರ ವಾದಿಸುವ ಒಬ್ಬ ಮತ್ತು ಇನ್ನೊಬ್ಬ ಸಾಮಾನ್ಯ ಮನುಷ್ಯ– ಈ ಮೂವರ ಮಧ್ಯೆ ನಡೆಯುವ ಸಂಭಾಷಣೆಯ ರೂಪದಲ್ಲಿದ್ದ ಆ ಗ್ರಂಥದಲ್ಲಿ ಕೋಪರ್ನಿಕಸ್ ವಾದಿಯನ್ನು ಪ್ರತಿಭಾವಂತನಂತೆಯೂ ಟಾಲೆಮಿ ವಾದಿಯನ್ನು ಬೆಪ್ಪನಂತೆಯೂ ಚಿತ್ರಿಸಲಾಗಿತ್ತು. ಟಾಲೆಮಿ ವಾದಿಯ ಚಿತ್ರವನ್ನು ರಚಿಸುವಾಗ ಗೆಲಿಲಿಯೊ ಪೋಪ್‍ರವರನ್ನೇ ಮನಸ್ಸಿನಲ್ಲಿಟ್ಟುಕೊಂಡು ಅವರನ್ನು ಗೇಲಿ ಮಾಡಿದ್ದಾನೆಂದು ಈತನ ವೈರಿಗಳು ಅಪಪ್ರಚಾರ ಮಾಡಲಾರಂಭಿಸಿದರು. 1633 ರಲ್ಲಿ ಈತ ಪುನಃ ವಿಚಾರಣೆಗೆ ಗುರಿಯಾದ. ಗೆಲಿಲಿಯೊ ತಪ್ಪಿತಸ್ಥನೆಂದು ನ್ಯಾಯಾಧೀಶ ಮಂಡಲಿ ತೀರ್ಮಾನವಿತ್ತಿತು. ಕೇವಲ ಮೂವತ್ತೆಂಟು ವರ್ಷಗಳ ಹಿಂದೆ ಅದೇ ಅಪರಾಧಕ್ಕೆ ಬ್ರೂನೊ **(ನೋಡಿ)** ಎಂಬಾತನನ್ನು ಜೀವಸಹಿತ ಸುಡಲಾಗಿತ್ತು. ಆದರೆ ಗೆಲಿಲಿಯೊಗೆ ಮರಣದಂಡನೆ ವಿಧಿಸಲಿಲ್ಲ. ಇವನ ವಯಸ್ಸನ್ನು ಗಮನಿಸಿ ಕಡಿಮೆ ಶಿಕ್ಷೆ ಕೊಟ್ಟರು. ಆ ಕಾಲದ ಪದ್ಧತಿಯಂತೆ ಗೋಣಿಪಟ್ಟಿಯನ್ನುಟ್ಟು ಮೈಗೆ ಬೂದಿ ಬಳಿದುಕೊಂಡು ಮೊಣಕಾಲೂರಿ ಕುಳಿತು 'ನಾನು ಅಪರಾಧಿ, ನಾನು ಬೋಧಿಸಿದುದೆಲ್ಲ ಸುಳ್ಳು, ಭೂಮಿ ಚಲಿಸುತ್ತಿಲ್ಲ ; ಸ್ಥಿರವಾಗಿ ನಿಂತಿದೆ' ಎಂದು ಬಹಿರಂಗವಾಗಿ ಸಾರಬೇಕಾಯಿತು. ಮೇಲಕ್ಕೇಳುವಾಗ ತಗ್ಗಿಸಿದ ದನಿಯಲ್ಲಿ 'ನಾನು ಏನೇ ಹೇಳಿರಲಿ ಅದು ಚಲಿಸಿಯೇ ಚಲಿಸುತ್ತದೆ' ಎಂದು ಹೇಳಿದನೆಂದು ಕಥೆ.

ಅಲ್ಲಿಂದ ಮುಂದೆ ಇವನು ಬಂಧನದಲ್ಲಿರಬೇಕಾಗಿ ಬಂತು. ಕೆಲವು ದಿವಸ ರೋಮ್‍ನಲ್ಲಿದ್ದ ಟಸ್ಕನಿ ಡ್ಯೂಕರ ಮನೆಯಲ್ಲಿಯೂ ಅನಂತರ ಆರ್ಸೆಟ್ರಿ ಎಂಬ ಹಳ್ಳಿಯಲ್ಲಿದ್ದ ತನ್ನದೇ ಮನೆಯಲ್ಲಿಯೂ ಗೃಹಬಂಧನದಲ್ಲಿದ್ದು 1642 ಜನವರಿ 8 ರಂದು ನಿಧನ ಹೊಂದಿದ. ತನ್ನ ಜೀವನದ ಕೊನೆಯ ನಾಲ್ಕು ವರ್ಷ ಸಂಪೂರ್ಣ ಕುರುಡನಾಗಿ ದಿನಗಳನ್ನು ಕಳೆದ.

ಗೆಲಿಲಿಯೊ ತನ್ನ ಮೊತ್ತಮೊದಲ ಪ್ರಮುಖ ಆವಿಷ್ಕಾರವನ್ನು ಮಾಡಿದ್ದು 1581 ರಲ್ಲಿ. ಆಗ ಇವನಿಗಿನ್ನೂ ಹದಿನೇಳು ವರ್ಷ: ಪೀಸಾ ವಿಶ್ವವಿದ್ಯಾಲಯದಲ್ಲಿ ವೈದ್ಯಶಾಸ್ತ್ರದ ವಿದ್ಯಾರ್ಥಿ. ಪೀಸಾ ನಗರದ ಕತೀಡ್ರಲ್‍ನಲ್ಲಿ ಪ್ರಾರ್ಥನಾ ಸಭೆಯೊಂದರಲ್ಲಿ ಭಾಗವಹಿಸುತ್ತಿದ್ದಾಗ ಛಾವಣಿಯಿಂದ ನೇತಾಡುತ್ತಿದ್ದ ತೂಗುದೀಪವನ್ನು ನೋಡುತ್ತಿದ್ದ. ತೂಗಾಟದ ವಿಸ್ತಾರ ಎಷ್ಟೇ ಇರಲಿ, ದೀಪ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಲು ಹಿಡಿಸುತ್ತಿದ್ದ ಕಾಲ ಸ್ಥಿರ ಎಂಬುದನ್ನು ಇವನು ಗಮನಿಸಿದ. ಗಡಿಯಾರ ಅಥವಾ ಇನ್ನಾವುದೇ ನಿಷ್ಕೃಷ್ಟ ಕಾಲಮಾಪಕಗಳು ಆಗ ಇರಲಿಲ್ಲವಾದ್ದರಿಂದ ಕಾಲವನ್ನು ಅಳೆಯಲು ಇವನು ತನ್ನ ನಾಡಿಯ ಬಡಿತವನ್ನೇ ಬಳಸಿಕೊಂಡ. ಮನೆಗೆ ಹಿಂತಿರುಗಿದ ತರುವಾಯ ಒಂದು ಸರಳ ಲೋಲಕವನ್ನು ತಯಾರಿಸಿಕೊಂಡು ಅದರ ಉದ್ದವನ್ನು ಅವಲಂಬಿಸಿ ಆಂದೋಲನ ಕಾಲ ಹೇಗೆ ವ್ಯತ್ಯಾಸವಾಗುವುದೆಂಬುದನ್ನು ನಿರ್ಧರಿಸಿದ.

ಉಷ್ಣತೆಯನ್ನು ಅಳೆಯಲು ಪ್ರಯತ್ನಿಸಿದ ಗೆಲಿಲಿಯೊ 1593 ರಲ್ಲಿ ಒಂದು ಉಷ್ಣತಾಮಾಪಕವನ್ನು ನಿರ್ಮಿಸಿದ. ಇವನು ನಿರ್ಮಿಸಿದ್ದು ಅನಿಲ ಉಷ್ಣತಾಮಾಪಕ; ಅನಿಲದ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳ ಆಧಾರದ ಮೇಲೆ ಅದರ ಉಷ್ಣತೆಯನ್ನು ಅಳೆಯುವುದು ಇದರಿಂದ ಸಾಧ್ಯವಾಯಿತು.

ಮೇಲಿನಿಂದ ಬೀಳುವ ಕಾಯಗಳು ಹೇಗೆ ವರ್ತಿಸುವುವೆಂಬುದನ್ನು ಗೆಲಿಲಿಯೊ ಅಧ್ಯಯನ ಮಾಡತೊಡಗಿದ. ಬೇರೆಬೇರೆ ತೂಕವಿರುವ ಎರಡು ಕಾಯಗಳನ್ನು ಮೇಲಿನಿಂದ ಬಿಟ್ಟರೆ ಹೆಚ್ಚು ತೂಕವಿರುವ ವಸ್ತು ಹೆಚ್ಚು ವೇಗದಿಂದ ಚಲಿಸಿ

ಇನ್ನೊಂದಕ್ಕಿಂತ ಮುಂಚಿತವಾಗಿ ಬೀಳುವುದೆಂದು ಅರಿಸ್ಟಾಟಲ್ ಬೋಧಿಸಿದ್ದ. ಅವನು ಮಡಿದು 1800 ವರ್ಷಗಳಾಗಿದ್ದರೂ ಅವನ ಅಭಿಪ್ರಾಯ ಸರಿಯೇ ತಪ್ಪೇ ಎಂಬುದನ್ನು ಪ್ರಶ್ನಿಸುವ ಗೊಡವೆಗೆ ಯಾರೂ ಹೋಗಿರಲಿಲ್ಲ. ಎಲ್ಲರೂ ಅದು ನಿಜವೆಂದೇ ಭಾವಿಸಿದ್ದರು. ವಾಯು ಒಡ್ಡುವ ಅಡಚಣೆಯ ಕಾರಣ ಹಗುರವಾದ ಕಾಯಗಳ ವೇಗ ಕುಗ್ಗುವುದರಿಂದ ಈ ತಪ್ಪು ತೀರ್ಮಾನಕ್ಕೆ ದಾರಿಯಾಗಿದೆ ಎಂದು ಗೆಲಿಲಿಯೊ ಅಭಿಪ್ರಾಯಪಟ್ಟ. ನಿರ್ವಾತ ಪ್ರದೇಶದಲ್ಲಿ ಎಲ್ಲ ಕಾಯಗಳೂ ಒಂದೇ ವೇಗದಿಂದ ಭೂಮಿಗೆ ಬೀಳುವುದೆಂದು ಇವನು ವಿದ್ಯಾರ್ಥಿಗಳಿಗೆ ಬೋಧಿಸಿದ. ಅಷ್ಟೇ ಅಲ್ಲ, ವಾಯು ಒಡ್ಡುವ ಅಡಚಣೆಗೆ ಮಣಿಯದಷ್ಟು ತೂಕವಿರುವ ಎರಡು ಕಾಯಗಳನ್ನು ತೆಗೆದುಕೊಂಡದ್ದೇ ಆದರೆ, ಅವೆರಡರ ತೂಕಗಳಲ್ಲಿ ವ್ಯತ್ಯಾಸವಿದ್ದರೂ ಅವು ಒಂದೇ ವೇಗದಿಂದ ಭೂಮಿಗೆ ಬೀಳುವುವೆಂದು ಹೇಳಿದ. ಒಂದಕ್ಕಿಂತ ಇನ್ನೊಂದು ಹತ್ತರಷ್ಟು ಭಾರವಿರುವಂಥ ಎರಡು ಫಿರಂಗಿ ಗುಂಡುಗಳನ್ನು ಪೀಸಾದಲ್ಲಿರುವ ವಾಲುಗೋಪುರದ ಮೇಲಿನಿಂದ ಕೆಳಕ್ಕೆ ಬಿಟ್ಟು ತನ್ನ ಅಭಿಪ್ರಾಯವನ್ನು ಸಮರ್ಥಿಸಿದನೆಂದು ದಂತಕಥೆ.

ಕಾಯ ನೇರವಾಗಿ ಭೂಮಿಗೆ ಬೀಳುತ್ತಿರುವಾಗ ಅದರ ವೇಗ ಬಹಳವಾಗಿರುತ್ತದೆ. ಹೀಗಾಗಿ ಅದರ ಚಲನೆಯನ್ನು ವಿವರವಾಗಿ ಅಧ್ಯಯನ ಮಾಡಲು ನಿಷ್ಕೃಷ್ಟ ಕಾಲಮಾಪಕಗಳು ಬೇಕಾಗುತ್ತವೆ. ಅವು ಆಗ ಲಭ್ಯವಾಗಿರಲಿಲ್ಲವಾದ್ದರಿಂದ ಕಾಯದ ವೇಗವನ್ನು ತಗ್ಗಿಸುವುದಕ್ಕಾಗಿ ಗೆಲಿಲಿಯೊ ಇಳಿಜಾರು ಹಲಗೆಗಳನ್ನು ಬಳಸಿಕೊಂಡ. ಹಲಗೆಯನ್ನು ಕ್ಷಿತಿಜೀಯ ರೇಖೆಗೆ ಸ್ವಲ್ಪ ಮಾತ್ರ ಓರೆಯಾಗಿರುವಂತೆ ನಿಲ್ಲಿಸಿ, ಅದರ ಮೇಲೆ ಉರುಳುವ ಗುಂಡಿನ ವೇಗವನ್ನು ಸಾಕಷ್ಟು ಕಡಿಮೆ ಮಾಡುವುದು ಸಾಧ್ಯವಾಯಿತು. ಈ ವಿಧಾನವನ್ನು ಬಳಸಿಕೊಂಡು ಸಂಶೋಧನೆಗಳನ್ನು ಮುಂದುವರಿಸಿದ. ಭೂಮಿಯ ಗುರುತ್ವಬಲಕ್ಕೆ ಸತತವಾಗಿ ಒಳಗಾಗಿರುವ ಕಾಯದ ವೇಗ ಕ್ಲುಪ್ತ ದರದಲ್ಲಿ ಏರುವುದೆಂದೂ ಅದು ಚಲಿಸುವ ದೂರ ಕಾಲದ ವರ್ಗದ ಅನುಪಾತದಲ್ಲಿರುವುದೆಂದೂ ಒಂದು ಕಾಯದ ಮೇಲೆ ಪ್ರಯುಕ್ತವಾಗುತ್ತಿರುವ ಬಲವನ್ನು ನಿಲ್ಲಿಸಿಬಿಟ್ಟರೆ ಅಲ್ಲಿಂದ ಮುಂದೆ ಕಾಯ ಒಂದೇ ನೇರದಲ್ಲಿ ಸಮವೇಗದಿಂದ ಚಲಿಸುವುದೆಂದೂ ಇವನು ತೋರಿಸಿದ. ಕಾಯ ತನ್ನ ಚಲನೆಯಲ್ಲಿ ಮುಂದುವರಿಯುತ್ತಿರಲು ಬಲವನ್ನು ಸತತವಾಗಿ ಪ್ರಯುಕ್ತಿಸುತ್ತಿರುವುದು ಅಗತ್ಯವೆಂದು ಅದುವರೆಗೆ ಜನ ನಂಬಿದ್ದರು. ಅದು ತಪ್ಪು ಭಾವನೆ ಎಂಬುದನ್ನು ಗೆಲಿಲಿಯೊ ತೋರಿಸಿದಂತಾಯಿತು.

ಒಂದು ಕಾಯ ಏಕಕಾಲದಲ್ಲಿ ಎರಡು ಬೇರೆಬೇರೆ ಬಲಗಳಿಗೆ ಗುರಿಯಾದಾಗ, ಇಲ್ಲವೇ ಸಮವೇಗದಲ್ಲಿ ಚಲಿಸುತ್ತಿರುವ ಕಾಯದ ಮೇಲೆ ಬೇರೊಂದು ದಿಕ್ಕಿನಲ್ಲಿ ಬಲಪ್ರಯುಕ್ತವಾದಾಗ ಆ ಕಾಯ ಹೇಗೆ ವರ್ತಿಸುವುದೆಂಬುದನ್ನೂ ಗೆಲಿಲಿಯೊ ಪರಿಶೀಲಿಸಿದ. ಈ ಎಲ್ಲ ಅಧ್ಯಯನಗಳಿಗೂ ಇವನು ಗಣಿತವನ್ನು ಬಳಸಿದ. ಹೀಗಾಗಿ ಈತನನ್ನು ಗತಿವಿಜ್ಞಾನದ ಮೂಲಪುರುಷನೆಂದು ಪರಿಗಣಿಸಲಾಗಿದೆ.

ಪಡೂವದಲ್ಲಿದ್ದಾಗ ಗೆಲಿಲಿಯೊ ವಿಖ್ಯಾತ ಖಗೋಳವಿಜ್ಞಾನಿ ಕೆಪ್ಲರ್‌ನೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದ. ಅದರ ಫಲವಾಗಿ ಈತನಿಗೆ ಕೊಪರ್ನಿಕಸ್ ಸಿದ್ಧಾಂತದಲ್ಲಿ ನಂಬಿಕೆ ಹುಟ್ಟಿತು. ಆದರೆ ಕೆಲವು ಕಾಲ ತನ್ನ ಅಭಿಪ್ರಾಯಗಳನ್ನು ಬಹಿರಂಗಪಡಿಸಲಿಲ್ಲ. ಆದರೆ 1609 ರಲ್ಲಿ ಒಂದು ಸುದ್ದಿ ಬಂದಿತು: ದೂರದಲ್ಲಿರುವ ವಸ್ತುಗಳು ಹತ್ತಿರದಲ್ಲಿ ಕಾಣಿಸುವಂತೆ ಒಂದು ಉಪಕರಣವನ್ನು ಹಾಲೆಂಡಿನಲ್ಲಿ ಯಾರೋ ಒಬ್ಬರು ತಯಾರಿಸಿದ್ದಾರೆಂಬುದೇ ಆ ಸುದ್ದಿ. ಆರು ತಿಂಗಳು ಕಳೆಯುವುದರೊಳಗೆ ಗೆಲಿಲಿಯೊ ತನ್ನದೇ ದೂರದರ್ಶಕವನ್ನು ತಯಾರಿಸಿಕೊಂಡ. ಕಾಲಕ್ರಮದಲ್ಲಿ ತನ್ನ ಉಪಕರಣವನ್ನು ಉತ್ತಮಪಡಿಸುತ್ತ ಮುಂದುವರಿದು ಹೆಚ್ಚುಹೆಚ್ಚು ಪ್ರಬಲವಾದ ಹಲವಾರು ದೂರದರ್ಶಕಗಳನ್ನು ತಯಾರಿಸಿದ. ಖಗೋಳೀಯ ವೀಕ್ಷಣೆಗಳಿಗೆ ಅದು ಒಳ್ಳೆಯ ಸಾಧನವಾಯಿತು.

ದೂರದರ್ಶಕದ ಸಹಾಯದಿಂದ ಗೆಲಿಲಿಯೊ ಆಕಾಶಕಾಯಗಳನ್ನು ಪರೀಕ್ಷಿಸಿ ಅನೇಕಾನೇಕ ಸ್ವಾರಸ್ಯಕರ ವಿಷಯಗಳನ್ನು ಪತ್ತೆಮಾಡಿದ. ಗುರುಗ್ರಹಕ್ಕೆ ಉಪಗ್ರಹಗಳಿರುವುದನ್ನೂ ಶುಕ್ರಗ್ರಹ ಚಂದ್ರಬಿಂಬದಂತೆ ನಿಶ್ಚಿತ ಅವಧಿಯಲ್ಲಿ ವೃದ್ಧಿಕ್ಷಯಗಳಿಗೆ ಒಳಗಾಗುವುದನ್ನೂ ಚಂದ್ರನ ಮೇಲ್ಮೈಯಲ್ಲಿ ಭೂಮಿಯ ಮೇಲಿರುವಂತೆ ಪರ್ವತ ಕಂದರಗಳಿರುವುದನ್ನೂ ಇವನು ಕಂಡುಹಿಡಿದು ಪ್ರಕಟಿಸಿದ. ಬರಿಯ ಕಣ್ಣಿಗೆ ಬಿಳಿಯ ಪಟ್ಟಿಯಂತೆ ಕಾಣಿಸುವ ಆಕಾಶಗಂಗೆ (ಮಿಲ್ಕಿ ವೇ) ನಿಜಕ್ಕೂ ಒತ್ತಾಗಿ ಸೇರಿಕೊಂಡಿರುವ ನಕ್ಷತ್ರಸಮೂಹವೆಂಬುದನ್ನು ತೋರಿಸಿಕೊಟ್ಟ. ತೇಜಸ್ಸಿನಿಂದ ಕಣ್ಣುಕೋರೈಸುವ ಸೂರ್ಯಬಿಂಬದ ಮೇಲೆ ಕಪ್ಪು ಕಲೆಗಳಿರುವುದನ್ನೂ ಅವು ಕಾಲಕಾಲಕ್ಕೆ ತಮ್ಮ ಸ್ಥಾನಗಳನ್ನು ಬದಲಾಯಿಸುವುದನ್ನೂ ಗುರುತಿಸಿ ಸೂರ್ಯಗೋಳ ತನ್ನ ಅಕ್ಷದ ಸುತ್ತ ಆವರ್ತಿಸುತ್ತಿರುವುದೆಂಬುದನ್ನು ಪತ್ತೆಮಾಡಿದ. ಈ ಎಲ್ಲ ಆವಿಷ್ಕಾರಗಳೂ ಕೊಪರ್ನಿಕಸ್‌ನ ಸಿದ್ಧಾಂತವನ್ನು ಪುಷ್ಟೀಕರಿಸಿದುವು. (ಜಿ.ಆರ್.ಎಲ್.;ಬಿ.ವಿ.ಎಸ್.)

**ಗೆಲ್ಡ್‌ನರ್, ಕಾರ್ಲ್ ಫ್ರೀಡ್ರಿಕ್** : 1852–1929. ಜರ್ಮನ್ ಭಾಷಾತಜ್ಞ, ಋಗ್ವೇದವನ್ನು ಜರ್ಮನ್ ಭಾಷೆಗೆ ಅನುವಾದ ಮಾಡಿ ಅದರ ಸರಳ ಅರ್ಥವಿವರಣೆಗೆ ಹೆಸರಾದ ವಿದ್ವಾಂಸ. ಜರ್ಮನಿಯ ಮಾರ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕನಾಗಿದ್ದ. ಈತ ಪ್ರಸಿದ್ಧ ತತ್ತ್ವಜ್ಞಾನಿ ರೊತನ ಶಿಷ್ಯ. ಅಮೆರಿಕನ್ ಓರಿಯಂಟಲ್ ಸೊಸೈಟಿ, ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಸ್ ಮುಂತಾದ ಸಂಸ್ಥೆಗಳ ಸದಸ್ಯನಾಗಿ ಕೆಲಸ ಮಾಡಿದ. 1875ರಲ್ಲಿ ಅಡಾಲ್ಫ್ ಕೇಗಿಯ ಜೊತೆಗೂಡಿ ಋಗ್ವೇದದ 70 ಸೂಕ್ತಗಳನ್ನು ಭಾಷಾಂತರಿಸಿ ಪ್ರಕಟಿಸಿದ. ಅನಂತರ ಋಗ್ವೇದವನ್ನು ಸಂಪೂರ್ಣವಾಗಿ ಜರ್ಮನ್ ಭಾಷೆಗೆ ಅನುವಾದ ಮಾಡುವ ಕಾರ್ಯವನ್ನು ಕೈಗೊಂಡು, ಟಿಪ್ಪಣಿ ಸಹಿತ ಮೂರು ಭಾಗಗಳಲ್ಲಿ ಪ್ರಕಟಿಸಿದ. ರಿಚರ್ಡ್ ಪಿಶೆಲ್‌ನ ಸಹಾಯದಿಂದ ಪ್ರಕಟಿಸಿದ ವೇದಿಕ್ ಸ್ಟಡೀಸ್ ಎಂಬ ಗ್ರಂಥದಲ್ಲಿ ವೇದ ವಾಙ್ಮಯವನ್ನು ಕುರಿತ ಅನೇಕ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ ಪಾರ್ಸಿ ಜನಾಂಗದ ಧರ್ಮಗ್ರಂಥವಾದ ಅವೆಸ್ತವನ್ನು ಈತ ಪೂರ್ಣವಾಗಿ ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದಾನೆ (1889–1901). (ಬಿ.ಆರ್.ಎಂ.)

**ಗೆಸ್ಟಾಫ್ ಫ್ರೈಟಾಕ್** : 1816–95. ಜರ್ಮನ್ ಕಾದಂಬರಿಕಾರ, ನಾಟಕಕಾರ ಮತ್ತು ವಿಮರ್ಶಕ, ಹುಟ್ಟಿದ್ದು ಸೈಲೀಶಿಯದ ಕ್ರೆಟ್ಸ್‌ಬರ್ಗ್‌ನಲ್ಲಿ ಈತ ಬ್ರೆಸ್ಲಾವ್ ಮತ್ತು ಬರ್ಲಿನ್ ಶಾಲೆ, ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಭಾಷಾಶಾಸ್ತ್ರದಲ್ಲಿ ವಿಶೇಷ ಅಧ್ಯಯನ ನಡೆಸಿ ಮಹಾಪ್ರಬಂಧ ಬರೆದು ಪದವೀಧರನಾದ. 1848ರಿಂದ 1861ರವರೆಗೆ ಮತ್ತು 1867–70ರ ವರೆಗೆ ಲೀಪಾಜಿಗ್ನಲ್ಲಿ ಗ್ರೆಂಟ್ಸ್‌ಬೊಟನ್ ವಾರಪತ್ರಿಕೆಯ ಸಹ ಸಂಪಾದಕನಾಗಿ ದುಡಿದ. 1841ರಲ್ಲಿ ಆರಂಭವಾದ ಈ ಪತ್ರಿಕೆ ಜರ್ಮನಿ ಮತ್ತು



ಆಸ್ಟ್ರಿಯಾಗಳ ಉದಾರವಾದದ ಮುಖವಾಣಿ ಆಯಿತು. ಜರ್ಮನ್ ಉದಾರವಾದಿ ಪಕ್ಷದ ಮತ್ತು ಮಧ್ಯಮವರ್ಗದ ನಾಯಕನಾಗಿದ್ದ ಈತ ಜರ್ಮನ್ ಭಾಷೆಯ ಮತ್ತು ಸಾಹಿತ್ಯದ ಖಾಸಗಿ ಶಿಕ್ಷಕನಾಗಿ ಬ್ರೆಸ್ಲಾವ್‌ನಲ್ಲಿ ನೆಲಸಿದ. 1879ರಲ್ಲಿ ವೀಸ್ ಬೇಡೆನ್ಗೆ ಹೋಗಿ ವಾಸಿಸತೊಡಗಿದ.

ಡೈ ಬ್ರಾಂಟ್ ಫಾಟ (1844), ಡೈಜರ್ನಲಿಸ್ಟೆನ್ (1854) ಎಂಬ ಎರಡು ಹರ್ಷನಾಟಕಗಳನ್ನು ಬರೆದ. ಜರ್ನಲಿಸ್ಟೆನ್ (ದಿ ಜರ್ನಲಿಸ್ಟ್) 19ನೆಯ ಶತಕದ ಶ್ರೇಷ್ಠ ಪ್ರಹಸನಗಳಲ್ಲಿ ಒಂದು ಎಂದು ಪರಿಗಣಿಸಲಾಯಿತು. ಸ್ವಾನುಭವವೇ ಇದರ ವಸ್ತು. 1855ರಲ್ಲಿ ಜರ್ಮನಿಯ ವರ್ತಕ ಜೀವನವನ್ನು ಚಿತ್ರಿಸುವ ಜೋಲ್ ಊಂಟ್ ಹಾಬಿನ್ ಎಂಬ ವಸ್ತುನಿಷ್ಠಪ್ರಧಾನ ಕಾದಂಬರಿಯನ್ನು ಪ್ರಕಟಿಸಿ ವಿಶ್ವವಿಖ್ಯಾತನಾದ. ಎಲ್ಲ ಐರೋಪ್ಯ ಭಾಷೆಗಳಿಗೂ ಅದು ಅನುವಾದವಾಗಿದೆ. ಸಾಮಾಜಿಕ, ರಾಜಕೀಯ ಕ್ಷೋಭೆಯ ಹಿನ್ನೆಲೆಯಲ್ಲಿ ಜರ್ಮನಿಯ ವ್ಯಾಪಾರಸ್ಥರ ಜೀವನದ ತದ್ವತ್ ಚಿತ್ರ ಇಲ್ಲಿದೆ. ಜೊತೆಗೆ ಡಿಕನ್ಸ್‌ನನ್ನು ನೆನಪಿಗೆ ತರುವ ಲವಲವಿಕೆಯ ಹಾಸ್ಯಸಿಂಚನ. ಈ ಹಲವಾರು ಗುಣಗಳಿಂದ ಇದು ಆ ಕಾಲದ ಶ್ರೇಷ್ಠ ಕಾದಂಬರಿ ಎನಿಸಿತು.

ಗ್ರೆಂಟ್ಸ್ ಬೋಟೆನ್ ಪತ್ರಿಕೆಯಲ್ಲಿ ಪ್ರಷ್ಯದ ಅಧಿನಾಯಕತ್ವದ ಪರವಾಗಿ ವಾದಿಸಿದ. ಇದರಿಂದ ಗೋಥಾದ ಡ್ಯೂಕ್ ಸ್ಯಾಕ್ಸ್ ಕೋಬಗನ ಸ್ನೇಹ ಲಭಿಸಿತು. ಗೋಥಾದ ಪಕ್ಕದ ಎಸ್ಟೇಟನ್ನೇ ಕೊಂಡು ಅಲ್ಲಿ ನೆಲೆಸಿದ. 1870ರ ಯುದ್ಧ ಮತ್ತು ಚಳವಳಿಗಳಲ್ಲಿ ಭಾಗವಹಿಸಿದ. 1864ರಲ್ಲಿ ಡೀ ಫರ್ಲೋರೇನ್ ಹ್ಯಾಂಡ್ ಷ್ರಿಫ್ಟ್ ಎಂಬ ಕಾದಂಬರಿ ರಚಿಸಿದ. ಈ ಕೃತಿಯಲ್ಲಿ ಲೀಪಾಜಿಗ್ನ ಸಮಾಜವನ್ನೂ ಜರ್ಮನ್ ವಿಶ್ವವಿದ್ಯಾಲಯದ ಜೀವನವನ್ನೂ ಚಿತ್ರಿಸಿದ. ಡೈ ಆನೆನ್ ಎಂಬ ಆರು ಐತಿಹಾಸಿಕ ಕಾದಂಬರಿಗಳ ಸರಣಿ ಈತನ ಮತ್ತೊಂದು ಕೊಡುಗೆ. 4ನೆಯ ಶತಮಾನದ ಜರ್ಮನ್ ಇತಿಹಾಸದ ಆರಂಭಕಾಲದಿಂದ 19ನೆಯ ಶತಮಾನದ ವರೆಗಿನ ಜರ್ಮನ್ ಕುಟುಂಬವೊಂದರ ರಮ್ಯ ಕಥಾನಕ. ಜರ್ಮನಿಯ ಐತಿಹಾಸಿಕ ಸಂಗತಿಗಳು, ಕಾಲಕಾಲದ ಸಾಮಾಜಿಕ ಜೀವನ ಎಲ್ಲ ತೆರೆದುಕೊಳ್ಳುತ್ತ ಸ್ವಾರಸ್ಯವಾಗಿ ಕಥೆ ಓದಿಸಿಕೊಳ್ಳುತ್ತದೆ. ಉದ್ದಕ್ಕೂ ರಾಷ್ಟ್ರಾಭಿಮಾನ ದೇಶಭಕ್ತಿ ತುಂಬಿ ತುಳುಕುತ್ತವೆ.

ಬಿಲ್ಡರ್ ಔಸ್ ಡೆರ್ ಡಾಯಿಟ್ಷೆನ್ ಫರ್ಗಾಂಗೆನ್‌ಹೈಟ್ (1872) ಜನಪ್ರಿಯತೆಯನ್ನು ಗಳಿಸಿದ ಜರ್ಮನ್ ಇತಿಹಾಸ ಗ್ರಂಥ. ಗ್ರೀನ್ ಸಂಕ್ಷಿಪ್ತ ಇಂಗ್ಲಿಷ್ ಇತಿಹಾಸ ಎಂಬ ಗ್ರಂಥದಷ್ಟೇ ಶ್ರೇಷ್ಠ ಮತ್ತು ಮಹೋನ್ನತ ಕೃತಿ. ಇದರದು ಮಾದರಿ ಶೈಲಿ. 1887ರಲ್ಲಿ ಕಾಲಮ್ಯಾಥಿ ಎಂಬ ಕಾವ್ಯನಾಮದಲ್ಲಿ ಎರಿನ್ನೆರುಂಗೆನ್ ಔಸ್ ಮೇನಿಮ್ ಲೀಬೆನ್ ಎಂಬ ಶಿರೋನಾಮೆಯಲ್ಲಿ ಆತ್ಮಕತೆ ಬರೆದ.

ಈತ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯತತ್ತ್ವಗಳ ಸಮನ್ವಯವನ್ನು ಸಾಧಿಸಿದ. ಸಮಕಾಲೀನರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ. ಈತನ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳಲ್ಲಿ ಡಿಕನ್ಸ್ ಮತ್ತು ಸ್ಕಾಟ್‌ರ ಪ್ರಭಾವವಿರುವುದನ್ನು ಗುರುತಿಸಬಹುದು.

ಓಡರ್ ಕುಂಟ್ಸ್ 'ಫಾನ್ ಡೆರ್ ರೊಸೆನ್ (1884) ಎಂಬುದು ಈತನ ಯಶಸ್ವಿ ಪ್ರಹಸನ.

ಗೆಸಾಮ್ಮೆಲೆ ಔಫ್ ಸೆಟ್ಸ್‌ಗ್ರೆಂಟ್ಸ್ ಬೊಟನ್ (1888), ಡೆರ್ ಕ್ರೋನ್ ಪ್ರಿನ್ಸ್ ಊಚಿಟ್ ಡೀ ಡಾಯಿಟ್ಷ ಕೈಸೆರ್ ಕ್ರೋನ್, ಎರಿನ್ನೆರೊಂಗ್ಸ್ ಬ್ಲಾಟೆರ್ (1889) – ಇವು ಈತನ ಇತರ ಕೃತಿಗಳು. (ಕೆ.ವಿ.ಿ.)

**ಗೆಸ್ಟಾಲ್ಟ್ ಮನೋವಿಜ್ಞಾನ :** ಜರ್ಮನಿಯಲ್ಲಿ ಹುಟ್ಟಿ ಬೆಳೆದ ಒಂದು ಮನೋವೈಜ್ಞಾನಿಕ ಪಂಥ. ಜರ್ಮನ್ ಭಾಷೆಯ ಗೆಸ್ಟಾಲ್ಟ್ ಶಬ್ದಕ್ಕೆ ಸಮಾನಾರ್ಥಕ ಇಂಗ್ಲಿಷ್ ಪದ ಇಲ್ಲವೆನ್ನಲಾಗಿದೆ. ಹಾಗಾದರೂ ಈ ಶಬ್ದ ರೂಪ (ಫಾರಂ), ಆಕಾರ (ಷೇಪ್), ಸಂಘಟನೆ (ಆರ್ಗನೈಜೇಷನ್) ಮತ್ತು ವಿನ್ಯಾಸ (ಕಾನ್‌ಫಿಗರೇಷನ್)– ಇವುಗಳಲ್ಲಿ ಅಡಕವಾಗಿರುವ ಅರ್ಥವನ್ನು ಸೂಚಿಸುತ್ತದೆ ಎನ್ನಬಹುದು.

ಗೆಸ್ಟಾಲ್ಟ್ ಮನೋವಿಜ್ಞಾನದ ಹಿನ್ನೆಲೆ ಹೀಗಿದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಸುಮಾರಿಗೆ ಮನೋವಿಜ್ಞಾನದ ಮೊದಲ ಪ್ರಯೋಗಶಾಲೆ ಜರ್ಮನಿಯಲ್ಲಿ ಸ್ಥಾಪಿತವಾಯಿತು. ಅದರ ಸ್ಥಾಪಕ ವೂಂಟ್ ಸ್ವರೂಪಾತ್ಮಕವಾದ (ಸ್ಟ್ರಕ್ಚರಲಿಸಂ) ಎಂದು ಕರೆಯಲಾಗುವ ಮನೋವೈಜ್ಞಾನಿಕ ಪಂಥವೊಂದನ್ನು ಬೆಳೆಸಿದ. ವೂಂಟ್ ಮತ್ತು ಇವನ ಅನುಯಾಯಿಗಳು ಅನುಭವವನ್ನು ತುಂಡು ತುಂಡಾಗಿರಿಸಿ, ಘಟಕಾಂಶಗಳಾಗಿ ವಿಭಜಿಸಿ, ವಿಶ್ಲೇಷಣೆ ನಡೆಸುವಲ್ಲಿ ನಿರತರಾಗಿದ್ದರು. ಸ್ವರೂಪಾತ್ಮಕ ವಾದಕ್ಕೆ ಹಲವು ಮೂಲಗಳಿಂದ, ಪ್ರಮುಖವಾಗಿ ಅಮೆರಿಕದ ವರ್ತನವಾದಿಗಳಿಂದ ವಿರೋಧ ತೋರಿಬಂತು. ಗೆಸ್ಟಾಲ್ಟ್ ಮನೋವಿಜ್ಞಾನ ಮೊದಲಿಗೆ ಅಮೆರಿಕದ ವರ್ತನವಾದಕ್ಕೆ ಸಮಕಾಲಿಕವಾಗಿ ವೂಂಟನ ಸ್ವರೂಪಾತ್ಮಕ ವಾದಕ್ಕೆ ಪ್ರತಿಯಾಗಿ ಪ್ರಾರಂಭವಾದರೂ ಅನಂತರ ವರ್ತನವಾದವನ್ನು ಸಹ ಧಿಕ್ಕರಿಸಿತು. ಗೆಸ್ಟಾಲ್ಟ್ ಮನೋವಿಜ್ಞಾನಿಗಳು ಮೂಲತಃ ವಿಶ್ಲೇಷಣೆಯ ವಿರೋಧಿಗಳು. ಅನುಭವವನ್ನು ಸಂವೇದನೆಯ ಘಟಕಾಂಶಗಳಾಗಿ ವಿಶ್ಲೇಷಿಸುವ ವೂಂಟ್ ಮತ್ತು ಇವನ ಅನುಯಾಯಿಗಳ ವಿಧಾನವನ್ನು ಅವರು ಇಟ್ಟಿಗೆ ಮತ್ತು ಗಾರೆಯ ಮನೋವಿಜ್ಞಾನ ಎಂದು ಟೀಕಿಸಿದರು. ಇಲ್ಲಿ ಸಂವೇದನೆಯ ಘಟಕಾಂಶಗಳೇ ಇಟ್ಟಿಗೆಗಳು: ಅವನ್ನು ಒಂದಾಗಿ ಹಿಡಿದಿಡುವ ಗಾರೆಯೆಂದರೆ ಸಾಹಚರ್ಯ ಪ್ರಕ್ರಿಯೆ.

ಗೆಸ್ಟಾಲ್ಟ್ ನಿಯಮ: ಗೆಸ್ಟಾಲ್ಟ್ ವಾದಿಗಳ ಪ್ರಕಾರ ಅನುಭವಗಳನ್ನು ಘಟಕಾಂಶಗಳಾಗಿ ವಿಶ್ಲೇಷಿಸುವ ವಿಧಾನ ಅನುಭವದ ವಾಸ್ತವಿಕತೆಗೆ ಅಪಚಾರವನ್ನೆಸಗುತ್ತದೆ. ವಿಶ್ಲೇಷಣೆ ಎಷ್ಟೇ ಆಮೂಲಾಗ್ರವಾಗಿರಲಿ, ಅದು ಸಮಗ್ರದ (ಪೂರ್ಣ) ಅರಿವನ್ನು ಒದಗಿಸಿಕೊಡಲು ಅಸಮರ್ಥವಾಗುತ್ತದೆ. ಪೂರ್ಣದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಅದನ್ನು ಸಮಗ್ರವಾಗಿಯೇ ಪರಿಗಣಿಸಬೇಕು. ಪೂರ್ಣ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತದೆ. ಯಾವುದೇ ಭಾಗದ ಸ್ಥಾನ, ಪಾತ್ರ ಅಥವಾ ಕ್ರಿಯೆ ಪೂರ್ಣದ ಸ್ವರೂಪವನ್ನೇ ಅವಲಂಬಿಸುತ್ತದೆ. ಭಾಗಗಳನ್ನು ಬಿಡಿಬಿಡಿಯಾಗಿ ವಿಶ್ಲೇಷಿಸುವ ಮೂಲಕ ಪೂರ್ಣದ ಸ್ವರೂಪವನ್ನು ಗುರುತಿಸುವುದು ಅಸಾಧ್ಯ. ಸಾರಾಂಶರೂಪದಲ್ಲಿ ಹೇಳಬೇಕೆಂದರೆ ಪೂರ್ಣದ ಲಕ್ಷಣಗಳು ಅದರ ಯಾವುದೇ ಭಾಗದಲ್ಲಿ ಅಡಕವಾಗಿರುವುದಿಲ್ಲ: ಆದರೆ ಭಾಗಗಳು ಪೂರ್ಣದಲ್ಲಿ ಸಂಯೋಜಿತವಾದಾಗ ಪೂರ್ಣದ ಲಕ್ಷಣಗಳು ಹೊರಹೊಮ್ಮುತ್ತವೆ. ಪೂರ್ಣ ಅದರ ಭಾಗಗಳ ಮೊತ್ತಕ್ಕಿಂತ ಮಿಗಿಲಾಗಿರುತ್ತದೆ. ಹೀಗೆನ್ನುವುದು ಗೆಸ್ಟಾಲ್ಟ್ ನಿಯಮದ ತಿರುಳು. ಎಂದರೆ ಗೆಸ್ಟಾಲ್ಟ್ ಮನೋವಿಜ್ಞಾನ ಸಮಗ್ರತೆ ಅಥವಾ ಪೂರ್ಣತೆಗೆ (ಹೋಲ್ಸ್) ಸಂಬಂಧಿಸಿದ್ದಾಗಿದೆ.



**ಚಿತ್ರ 1**

ಭಾಗಗಳು ತಾವು ಪೂರ್ಣದಲ್ಲಿ ಪಡೆದುಕೊಂಡಿರುವ ಸ್ಥಾನ, ಪಾತ್ರ ಅಥವಾ ಕ್ರಿಯೆಗಳಿಂದ ಬೇರೆಯಾಗಿರುವ ತಮ್ಮದೇ ಆದ ಸ್ವಂತಿಕೆಯನ್ನು (ಐಡೆಂಟಿಟಿ) ಹೊಂದಿಲ್ಲ. ಎಂದರೆ ಅವು ತಮ್ಮ ಸ್ವರೂಪವನ್ನು ಪೂರ್ಣದಿಂದಲೇ ಪಡೆದುಕೊಳ್ಳುತ್ತವೆ. ಈ ಅಂಶವನ್ನು ವಿಶದಗೊಳಿಸಲು ಒಂದು ಸರಳವಾದ ನಿದರ್ಶನವನ್ನು ಕೊಡಬಹುದು. ಚಿತ್ರ 1 ರಲ್ಲಿ ಪ್ರತಿಯೊಂದು ಚೌಕವೂ ಒಂದೊಂದು ವೃತ್ತವನ್ನು ಒಳಗೊಂಡಿದೆ. ಆ ವೃತ್ತಗಳು ವಾಸ್ತವವಾಗಿ ಒಂದೇ ಬಗೆಯ ಬೂದುಬಣ್ಣವನ್ನು ಹೊಂದಿವೆ. ಆದರೂ ಬಲಗಡೆಯ ವೃತ್ತದ ಬೂದುಬಣ್ಣ ಹೆಚ್ಚು ಮಸುಕಾಗಿ ತೋರಿಬರುತ್ತದೆ. ಅದಕ್ಕೆ ಕಾರಣ ಅಂಶಗಳ ಮೇಲೆ ಪೂರ್ಣ ಬೀರುವ ಪ್ರಭಾವವೇ ಆಗಿದೆ.

ಪೂರ್ವಭಾವೀ ಪ್ರಭಾವಗಳು : ಕ್ರಿಶ್ಚನ್ ಎರ್ನ್‌ಫೆಲ್ಸ್ ಎಂಬಾತ ಗೆಸ್ಟಾಲ್ಟ್ ಭಾವವನ್ನು 1890ರ ಸುಮಾರಿಗೆ ಪರಿಚಯ ಮಾಡಿಕೊಟ್ಟ. ಯಾವುದೇ ಒಂದು ರಾಗವನ್ನು ಬೇರೆ ಬೇರೆ ಸ್ವರಗಳಿಂದ ನುಡಿಸಬಹುದು ಮತ್ತು ಏಕಪ್ರಕಾರವಾದ ಸ್ವರಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸಿ ಬೇರೆ ಬೇರೆ ರಾಗಗಳನ್ನು ಪಡೆಯಬಹುದು.

ಅಂತೆಯೇ ಏಕಪ್ರಕಾರವಾಗಿರುವ ತುಂಡುಗಳನ್ನು ಬಗೆಬಗೆಯಾಗಿ ಜೋಡಿಸಿ ವಿವಿಧ ರಚನೆಗಳನ್ನು ಸೃಷ್ಟಿಸಬಹುದು. ಸ್ವರಗಳು ಮತ್ತು ತುಂಡುಗಳು ಪ್ರತ್ಯಕ್ಷಾನುಭವದಲ್ಲಿ ದತ್ತವಾಗಿರುವ ಅಂಶಗಳು. ಆದರೆ ಆಕಾರ ಮತ್ತು ರಚನೆಗಳು ಗ್ರಾಹಕನ ಮನಸ್ಸಿನಲ್ಲಿ ರೂಪಗೊಂಡು ಹೊರಹೊಮ್ಮುತ್ತವೆ. ಇದು ಎರ್ನ್‌ಫೆಲ್ಸ್‌ನ ನಂಬುಗೆಯಾಗಿತ್ತು. ಈ ಬಗೆಯ ತೀರ್ಮಾನಕ್ಕೆ ಬರಲು ಇವನು ಕ್ಯಾಂಟ್‌ನಿಂದ ಪ್ರಭಾವಿತನಾಗಿದ್ದಿರಬೇಕು. ಕ್ಯಾಂಟ್ ವಾದದ ಧಾಟಿ ಹೆಚ್ಚು ಕಡಿಮೆ ಹೀಗಿದೆ: ನಾವು ವಸ್ತುಗಳ ಪ್ರತ್ಯಕ್ಷಾನುಭವ ಪಡೆದಾಗ ನಮ್ಮ ಮನಃಸ್ಥಿತಿಗಳೂ ಸಂವೇದನೆಯ ಘಟಕಾಂಶಗಳಿಂದ ರಚಿತವಾಗಿರುವಂತೆ ಕಾಣಬರುತ್ತದೆ. ಹಾಗಾದರೂ ಈ ಘಟಕಾಂಶಗಳು ಅರ್ಥವತ್ತಾಗಿ ಸಂಘಟಿತವಾಗಿವೆ. ಗ್ರಹಿಕೆಯ ಕಾರ್ಯಗತಿಯಲ್ಲಿ ಮನಸ್ಸು ಒಂದು ಏಕಾತ್ಮಕ (ಯೂನಿಟರಿ) ಅನುಭವವನ್ನು ರೂಪಿಸುತ್ತದೆ: ಅರ್ಥವತ್ತಾದ ಸನ್ನಿವೇಶದಲ್ಲಿ ವಸ್ತುವನ್ನು ಕಾಣುತ್ತದೆ. ಪ್ರತ್ಯಕ್ಷಾನುಭವ ಮನಸ್ಸಿನ ಮೇಲೆ ನಾಟುವ ಸಂವೇದನಾ ಘಟಕಾಂಶಗಳ ಸಂಯೋಜನೆ ಅಥವಾ ನಿಷ್ಕ್ರಿಯ ಮುದ್ರೆಯಾಗಿರದೆ, ಈ ಘಟಕಾಂಶಗಳನ್ನು ಏಕಾತ್ಮಕವಾದ ಹಾಗೂ ಸುಸಂಗತವಾದ ಅನುಭವಗಳನ್ನಾಗಿ ಮಾರ್ಪಡಿಸುವ ಪರಿಣಾಮಕಾರಿ ಸಂಘಟನೆಯಾಗಿದೆ. ಮನಸ್ಸು ಗ್ರಹಿಕೆಯ ಮೂಲವಸ್ತುವಿಗೆ ರೂಪವನ್ನೂ ವ್ಯವಸ್ಥೆಯನ್ನೂ ಕೊಡುತ್ತದೆ.

ಗೆಸ್ಟಾಲ್ಟ್ ಮನೋವಿಜ್ಞಾನದ ಆರಂಭ ಮತ್ತು ಫೈ ವಿದ್ಯಮಾನ (ಫಿನಾಮೆನನ್) : ಚಲನೆಯ ಪ್ರತ್ಯಕ್ಷಾನುಭವವನ್ನು ಕುರಿತು ಮ್ಯಾಕ್ಸ್‌ವರ್ದ್ಮೀರನ ಪ್ರಾಯೋಗಿಕ ಅಧ್ಯಯನಗಳು (1912) ಗೆಸ್ಟಾಲ್ಟ್ ಮನೋವಿಜ್ಞಾನದ ಪ್ರಾರಂಭವನ್ನು ಗುರುತಿಸುತ್ತವೆ. ಈ ಪ್ರಯೋಗಗಳಲ್ಲಿ ಕರ್ಟ್, ಕಾಫ್ಕಾ ಮತ್ತು ವುಲ್ಫ್‌ಗ್ಯಾಂಗ್ ಕೋಯ್ಲರರು ವರ್ದ್ಮೀರನಿಗೆ ಸಹಾಯಕರಾಗಿದ್ದರು. ವಾಸ್ತವವಾಗಿ ಗೆಸ್ಟಾಲ್ಟ್ ಮನೋವಿಜ್ಞಾನದ ಆರಂಭ ಮತ್ತು ಬೆಳವಣಿಗೆ ಈ ಮೂರು ಹೆಸರುಗಳೊಂದಿಗೆ ಅನ್ಯೋನ್ಯವಾಗಿ ಹೊಂದಿಕೊಂಡುಬಿಟ್ಟಿದೆ.

ಚಲನೆಯ ಪ್ರತ್ಯಕ್ಷಾನುಭವವನ್ನು ಕುರಿತ ಈ ಪ್ರಯೋಗದಲ್ಲಿ ಎರಡು ಸೀಳುಗಂಡಿಗಳನ್ನು (ಸ್ಲಿಟ್ಸ್) ಬಳಸುತ್ತಾರೆ. ಒಂದು ಸೀಳುಗಂಡಿ ಲಂಬವಾಗಿಯೂ ಇನ್ನೊಂದು ಅದರಿಂದ 20 ಅಥವಾ 30 ಡಿಗ್ರಿಗಳಷ್ಟು ವಾಲಿಕೊಂಡಿರುವಂತೆಯೂ ಇರುತ್ತವೆ. ಬೆಳಕನ್ನು ಮೊದಲು ಒಂದು ಕಂಡಿಯ ಮೂಲಕ, ಅನಂತರ ಇನ್ನೊಂದು ಕಂಡಿಯ ಮೂಲಕ ಹರಿಯಬಿಟ್ಟರೆ, ಮತ್ತು ಈ ಎರಡು ಪ್ರಸಾರಗಳ ನಡುವಣ ಕಾಲಾವಧಿ ಸಾಕಷ್ಟು ದೀರ್ಘವಾಗಿದ್ದರೆ, ಅನುಕ್ರಮವಾಗಿ ಒಂದರ ಮೇಲೊಂದರಂತೆ ಎರಡು ಬೆಳಕನ್ನೂ ಕಾಣಬಹುದು. ಬದಲಾಗಿ ಎರಡು ಪ್ರಸಾರಗಳ ನಡುವಣ ಕಾಲಾವಧಿ ಅತ್ಯಲ್ಪವಾದಾಗ ಎರಡು ಬೆಳಕನ್ನೂ ಅವಿಚ್ಛಿನ್ನವಾಗಿ ಕಾಣಬಹುದು. ಆದರೆ ಎರಡು ಪ್ರಸಾರಗಳ ನಡುವಿನ ಕಾಲದ ಅಂತರ ಸುಮಾರು 60 ಮಿಲಿ ಸೆಕೆಂಡುಗಳಾಗಿದ್ದರೆ ಒಂದೇ ಬೆಳಕು ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ ಚಲಿಸುವ ಅನುಭವ ಉಂಟಾಗುತ್ತದೆ. ಈ ಪ್ರಯೋಗದಿಂದ ಖಚಿತವಾಗಿ ತಿಳಿದುಬರುವ ಅಂಶ ಇಷ್ಟು. ಒಂದಕ್ಕೊಂದು ಸಮೀಪದಲ್ಲಿರುವ ಎರಡು ಪ್ರತ್ಯೇಕವಾದ ಮತ್ತು ಸ್ಥಾಯಿಯಾಗಿರುವ ಸಾಲುಗಳನ್ನು ಒಂದಾದ ಮೇಲೊಂದರಂತೆ ಬೇಗಬೇಗನೆ ಪ್ರದರ್ಶಿಸಿದರೆ ಒಂದೇ ಸಾಲು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಚಲಿಸುತ್ತಿರುವಂತೆ ಗ್ರಾಹಕ ಅವನ್ನು ಗ್ರಹಿಸುತ್ತಾನೆ. ಈ ತೋರಿಕೆಯ ಚಲನೆಯನ್ನು ಫೈ ವಿದ್ಯಮಾನ ಎಂದು ವರ್ದ್ಮೀರ್ ಹೆಸರಿಸಿದ್ದಾನೆ.

ವರ್ದ್ಮೀರನ ಪ್ರಕಾರ ಚಲನೆಯ ಪ್ರತ್ಯಕ್ಷಾನುಭವಕ್ಕೆ ಕಾರಣವಾಗಿರುವ ಅಂಶ ಗೆಸ್ಟಾಲ್ಟ್, ಬೇರೆ ಬೇರೆ ಘಟಕಾಂಶಗಳು ಒಂದುಗೂಡಿ ಪೂರ್ಣದಲ್ಲಿ ಅವತರಿಸುವಿಕೆ. ಫೈ ವಿದ್ಯಮಾನ ಎಂದು ಕರೆಯಲಾಗುವ ಈ ಘಟನೆಯನ್ನು ಬೇರೆ ಬೇರೆ ಪ್ರಚೋದನೆಗಳ ಮೊತ್ತದಿಂದ ಪಡೆಯಲಾಗದು. ಸ್ವರೂಪಾತ್ಮಕವಾದಿಗಳಿಗೆ ಈ ಘಟನೆಯನ್ನು ವಿವರಿಸುವುದು ಸುಲಭ

ಸಾಧ್ಯವಲ್ಲ. ಏಕೆಂದರೆ ಒಂದು ಸ್ಥಾಯಿಯಾಗಿರುವ ಪ್ರಚೋದನೆಯನ್ನು ಇನ್ನೊಂದು ಸ್ಥಾಯಿಯಾಗಿರುವ ಪ್ರಚೋದನೆಗೆ ಸೇರಿಸಿ, ಅವುಗಳ ಸಂಕಲನದಿಂದ ಚಲನೆಯ ಅನುಭವವನ್ನು ಪಡೆಯಲಾಗದು.

ಗೆಸ್ಟಾಲ್ಟ್ ಮನೋವಿಜ್ಞಾನದ ಮೂಲಾಧಾರ ವರ್ದಿಮೀರನ ಪ್ರಯೋಗ ಮತ್ತು ಅದಕ್ಕೆ ಈತ ಕೊಟ್ಟ ವಿವರಣೆ. ಪೈ ವಿದ್ಯಮಾನ ಒಂದು ವಾಸ್ತವ ಘಟನೆ: ಅದನ್ನು ಘಟಕಾಂಶಗಳಾಗಿ ವಿಭಜಿಸುವುದು ಅಸಾಧ್ಯ. ಹಾಗೊಮ್ಮೆ ವಿಶ್ಲೇಷಿಸಹೊರಟರೆ ಘಟನೆ ತನ್ನ ವಾಸ್ತವಾಂಶಗಳನ್ನು ಕಳೆದುಕೊಳ್ಳುತ್ತದೆ. ಎಂದರೆ ನಾವು ಏನನ್ನು ಗ್ರಹಿಸುತ್ತೇವೆಯೋ ಅದನ್ನು ನಿರ್ಧರಿಸುವಲ್ಲಿ ಆದ್ಯಂತ ಸನ್ನಿವೇಶಗಳೇ ಪರಿಗಣನೆಗೆ ಬರುತ್ತವೆ. ಈ ವಿಚಾರ ಗೆಸ್ಟಾಲ್ಟ್ ವಾದಿಗಳು ಪ್ರತಿಪಾದಿಸಿದ ಸಮಗ್ರ ಅಥವಾ ಪೂರ್ಣದ ಮಹತ್ತ್ವವನ್ನು ಸ್ಥಿರೀಕರಿಸುತ್ತದೆ.

ಹೊರನೋಟಕ್ಕೆ ಗೆಸ್ಟಾಲ್ಟ್ ಮನೋವಿಜ್ಞಾನದ ಮೂಲತತ್ತ್ವ ಸರಳವಾಗಿ ತೋರಿಬಂದರೂ ಅದು ಮನೋವೈಜ್ಞಾನಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ರಚನೆಗಳು ಪ್ರತ್ಯೇಕಾನುಭವದ ಮೂಲಾಂಶಗಳು ಎನ್ನುವ ವರ್ದಿಮೀರನ ಅಭಿಪ್ರಾಯ ಅಂಗೀಕೃತ ಅಭಿಪ್ರಾಯಗಳಿಗೆ ವಿರೋಧವಾಗಿತ್ತು. ಶಾಸ್ತ್ರೀಯ ಸಂಪ್ರದಾಯದ ಪ್ರಕಾರ ರಚನೆಗಳು ಘಟಕಾಂಶಗಳಾಗಿ ವಿಭಜಿಸಿ ವಿಶ್ಲೇಷಿಸಬಹುದಾದ ವಸ್ತುಗಳಾಗಿದ್ದವು. ಅನುಭವದ ಮೂಲಾಂಶಗಳು ಈ ಘಟಕಾಂಶಗಳೇ ಹೊರತು ರಚನೆಗಳಲ್ಲ ಎನ್ನುವುದು ವೂಂಟ್ ಮತ್ತು ಇವನ ಅನುಯಾಯಿಗಳ ವಾದವಾಗಿತ್ತು.

ಪ್ರತ್ಯಕ್ಷಾನುಭವ : ಚಲನೆಯ ಪ್ರತ್ಯಕ್ಷಾನುಭವದ ಮೇಲೆ ಪ್ರಯೋಗಗಳನ್ನು ನಡೆಸಿದ ಅನಂತರದಲ್ಲಿ ಗೆಸ್ಟಾಲ್ಟ್ ಮನೋವಿಜ್ಞಾನಿಗಳು ತಮ್ಮ ಪ್ರತಿಪಾದನೆಗಳನ್ನು ಸಮರ್ಥಿಸಲು ಇನ್ನಷ್ಟು ಪ್ರತ್ಯಕಾನುಭವ ಸಂಗತಿಗಳನ್ನೇ ಆಯ್ದುಕೊಂಡರು. ಪ್ರತ್ಯಕ್ಷಾನುಭವಗಳಲ್ಲಿನ ಸ್ಥಿರತೆ (ಕಾನ್ಸ್‌ಟೆನ್ಸಿ) ಗೆಸ್ಟಾಲ್ಟರ ಪ್ರತಿಪಾದನೆಗಳಿಗೆ ಯಥೇಷ್ಟ ಸಮರ್ಥನೆಯನ್ನು ಒದಗಿಸಿಕೊಡುತ್ತದೆ. ನಿದರ್ಶನಕ್ಕೆ ಗುಂಡಗಿರುವ ತಟ್ಟೆಯೊಂದನ್ನು ಅಕ್ಷಿಪಟದ ಮೇಲೆ ಅದರ ಪ್ರತಿಬಿಂಬ ಅಂಡವೃತ್ತಾಕೃತಿಯನ್ನು ಪಡೆಯುವ ರೀತಿಯಲ್ಲಿ ಹಿಡಿಯೋಣ. ಆಗಲೂ ನಾವು ತಟ್ಟೆಯನ್ನು ಗುಂಡಗಿರುವಂತೆಯೇ ಕಾಣುತ್ತೇವೆ. ಎಂದಮೇಲೆ ಸಂವೇದನಾಂಶಗಳು ಬದಲಾವಣೆ ಹೊಂದಿದರೂ ತಟ್ಟೆಯ ಪ್ರತ್ಯಕ್ಷಾನುಭವ ಬದಲಾಗದೆಯೇ ಉಳಿಯುತ್ತದೆ. ಗಾತ್ರ ಮತ್ತು ಪ್ರಕಾಶಮಾನತೆಯಲ್ಲಿಯೂ ಇದೇ ಬಗೆಯ ಸ್ಥಿರತೆಗಳು ತೋರಿಬರುತ್ತವೆ. ಆದ್ದರಿಂದ ಸಂವೇದನಾಂಶಗಳು ಬದಲಾದರೂ ಪ್ರತ್ಯಕ್ಷಾನುಭವ ಬದಲಾಗದೆಯೇ ಉಳಿಯುತ್ತದೆ. ವಾಸ್ತವವಾಗಿ ಪ್ರತ್ಯಕ್ಷಾನುಭವಕ್ಕೂ ಅದಕ್ಕೆ ಎಡೆ ಮಾಡಿಕೊಡುವ ಸಂವೇದನಾ ಪ್ರಚೋದನೆಗಳ ಸ್ವರೂಪಕ್ಕೂ ವ್ಯತ್ಯಾಸ ಇರುತ್ತದೆ. ಇದರಿಂದ ತಿಳಿದುಬರುವ ವಿಚಾರವೆಂದರೆ ಪ್ರತ್ಯಾಕ್ಷಾನುಭವ ಸಂವೇದನಾಂಗಗಳ ಕೇವಲ ಸಂಗ್ರಹಣೆ ಇಲ್ಲವೆ ಅಂಶಗಳ ಮೊತ್ತ ಮಾತ್ರವೇ ಆಗಿರುವುದಿಲ್ಲ.

ಸಂಘಟನೆಯ ನಿಯಮಗಳು : ವರ್ದಿಮೀರ್ ಪ್ರತಿಪಾದಿಸುವ ಪ್ರತ್ಯಕ್ಷಾನುಭವ ಸಂಘಟನೆಯ ನಿಯಮಗಳನ್ನು ರೂಪಿಸಿ ಗೆಸ್ಟಾಲ್ಟ್ ಮನೋವಿಜ್ಞಾನಿಗಳು ತುಂಬ ಜನಪ್ರಿಯರಾಗಿದ್ದಾರೆ. ಒಬ್ಬ ತೋರಿಕೆಯ ಚಲನೆಯನ್ನು ಯಾವ ಒಂದು ಏಕೀಕೃತ (ಯೂನಿಫೈಡ್) ರೀತಿಯಲ್ಲಿ ಗ್ರಹಿಸುತ್ತಾನೆಯೋ ಅಂತೆಯೇ ಇತರ ವಸ್ತುಗಳನ್ನೂ ಏಕೀಕೃತ ಸಮಗ್ರಗಳನ್ನಾಗಿಯೇ ಗ್ರಹಿಸುತ್ತಾನೆ ಎನ್ನುವುದು ವರ್ದಿಮೀರನ ನಿಲುವು.

ಪ್ರತ್ಯಕ್ಷಾನುಭವ ಸಂಘಟನೆಯ ನಿಯಮಗಳಲ್ಲೆಲ್ಲ ಅತ್ಯಂತ ಮೂಲಭೂತವಾದದ್ದು ಆಕೃತಿ (ಫಿಗರ್) ಮತ್ತು ಹಿನ್ನೆಲೆ (ಗ್ರೌಂಡ್) ಭಾವನೆ. ಪ್ರತಿ ಪ್ರತ್ಯಕ್ಷಾನುಭವವೂ ಹಿನ್ನೆಲೆಯಿಂದ ಎದ್ದು ಕಾಣುವ ಆಕೃತಿಯಾಗಿ ವ್ಯವಸ್ಥಿತವಾಗಿರುತ್ತದೆ. ಆಕೃತಿ ಅವಧಾನದ ಕೇಂದ್ರ. ಅದು ಸ್ಪಷ್ಟವಾಗಿ ಗುರುತಿಸಬಹುದಾದ ಎಲ್ಲೆಕಟ್ಟು, ಗಾಢತೆ ಮತ್ತು ದೃಢತೆಗಳನ್ನು ಪಡೆದುಕೊಂಡು ಸಮಗ್ರವಾಗಿ ತೋರಿಬರುತ್ತದೆ. ವಿಸ್ತರದ ಉಳಿದ ಅಂಶಗಳು ಹಿನ್ನೆಲೆಯಾಗಿರುತ್ತವೆ. ಅವು ಸ್ಪಷ್ಟವಾಗಿರುವುದಿಲ್ಲವಲ್ಲದೆ ಅವಧಾನದ ಅಂಚಿನಲ್ಲಿರುತ್ತವೆ. ಸಾಮಾನ್ಯವಾಗಿ ಹಿನ್ನೆಲೆ ವಸ್ತುವಿಗಿಂತ ಇನ್ನೂ ದೂರದಲ್ಲಿ ಕಾಣಿಸಿಕೊಳ್ಳುತ್ತವೆ; ಹಿನ್ನೆಲೆಯೇ ಒಂದು ವಸ್ತುವಾಗಿ ಗ್ರಹಿಸಲ್ಪಡುವುದಿಲ್ಲ. ಒಂದು ಅನುಭವದಲ್ಲಿ ಯಾವುದು ಆಕೃತಿ ಯಾವುದು ಹಿನ್ನೆಲೆ ಎನ್ನುವ ವಿಚಾರ ಚಾಕ್ಷುಷ ವಿಸ್ತರದಲ್ಲಿನ ಎಲ್ಲೆಕಟ್ಟುಗಳು, ರಚನೆ ಮತ್ತು ಛಾಯೆಗಳನ್ನು ಅವಲಂಬಿಸಿರುತ್ತದೆ.

ಗೆಸ್ಟಾಲ್ಟ್ ಮನೋವಿಜ್ಞಾನಿಗಳ ಪ್ರಕಾರ ಆಕೃತಿ–ಹಿನ್ನೆಲೆ ವ್ಯವಸ್ಥೆ ಸ್ವಾಭಾವಿಕವಾಗಿ ಹಾಗೂ ಅಪ್ರಯತ್ನಪೂರ್ವಕವಾಗಿ ತೋರಿಬರುವ ಸಂಘಟನೆ. ಅದು ಕಲಿಕೆಯಿಂದ ನಿರ್ಧರಿಸಲ್ಪಡದೆ, ಮನುಷ್ಯನ ಪ್ರತ್ಯಕ್ಷಾನುಭವಕ್ಕೆ ಸಂಬಂಧಿಸಿದ ಅಂಗವ್ಯೂಹದ ಪರಿಣಾಮವಾಗಿದೆ.

ಪ್ರತ್ಯಾಕ್ಷಾನುಭವವನ್ನು ನಿರ್ಧರಿಸುವಲ್ಲಿ ಆಕೃತಿ ಹಿನ್ನೆಲೆ ನಿಯಮಕ್ಕಿಂತ ಕಡಿಮೆ ಮೂಲಭೂತವಾದ, ಆದರೆ ಅಷ್ಟೇ ಪ್ರಬಲವಾದ ಸಂಘಟನಾಂಶಗಳೆಂದರೆ ಪ್ರಚೋದನೆಯ ಲಕ್ಷಣಗಳು. ಅವು ಹೀಗಿವೆ.

1. ಸಾಮೀಪ್ಯ : ಕಾಲ ಅಥವಾ ಸ್ಥಳದಲ್ಲಿ ಒಂದಕ್ಕೊಂದು ಹತ್ತಿರವಾಗಿರುವ ಭಾಗಗಳು ಒಟ್ಟಾಗಿ ಗ್ರಹಿಸಲ್ಪಡುತ್ತದೆ. ಪಕ್ಕದ ಚಿತ್ರದಲ್ಲಿ ab, cd, ef- ಈ ಮೂರು ಜೋಡಿ ಸಾಲುಗಳನ್ನು ಕಾಣುತ್ತೇವೆಯೇ ಹೊರತು bc, de ಈ ಬಗೆಯ ಜೋಡಿಗಳನ್ನಲ್ಲ.

2. ಸಾದೃಶ್ಯ : ಒಂದಕ್ಕೊಂದು ಸಾಮ್ಯವನ್ನು ಹೊಂದಿರುವ ಭಾಗಗಳು ಒಂದಾಗಿ ಗ್ರಹಿಸಲ್ಪಡುತ್ತವೆ. 3ನೆಯ ಚಿತ್ರದಲ್ಲಿ ಮೇಲಿನಿಂದ ಕೆಳಕ್ಕೆ ಏರ್ಪಡುವ ಕೇವಲ O ಗಳಿಂದಲೇ ಅಥವಾ ಕೇವಲ X ಗಳಿಂದಲೇ ರಚಿಸಲ್ಪಟ್ಟ ಕಂಬ ಸಾಲುಗಳನ್ನು ಕಾಣುತ್ತೇವೆಯೇ ಹೊರತು XO ಕೂಡಿದ ಅಡ್ಡಸಾಲುಗಳನ್ನಲ್ಲ.




ಚಿತ್ರ 2

3. ಪೂರ್ಣ : ಅಪೂರ್ಣ ಚಿತ್ರಗಳನ್ನು ಪೂರ್ಣಗೊಳಿಸುವ, ತೆರಪುಗಳನ್ನು ಭರ್ತಿ ಮಾಡುವ, ಒಂದು ಪ್ರವೃತ್ತಿ ಪ್ರತ್ಯಕ್ಷಾನುಭವದಲ್ಲಿ ಕಾಣಬರುತ್ತದೆ. ಮುಂದಿನ ಚಿತ್ರಗಳು ಅಪೂರ್ಣವಾಗಿದ್ದರೂ ಅವು ಚೌಕಾಕೃತಿಗಳಾಗಿ ತೋರಿಬರುತ್ತವೆ.

4 ಸಾತತ್ಯ : ಒಂದು ಸತತ ಸರಣಿಯ ಭಾಗವಾಗಿರುವ ಪ್ರಚೋದನಾಂಶಗಳು ಒಟ್ಟಾಗಿ ಗ್ರಹಿಸಲ್ಪಡುತ್ತವೆ. 5 ನೆಯ ಚಿತ್ರದಲ್ಲಿ ಒಂದು ನೇರವಾಗಿರುವ ರೇಖೆಯನ್ನೂ ಮತ್ತೊಂದು ಬಾಗಿರುವ ರೇಖೆಯನ್ನೂ ಕಾಣಬಹುದು. ಕೇವಲ ಸಾದೃಶ್ಯ ಮತ್ತು ಸಾಮೀಪ್ಯ ನಿಯಮಗಳೇ ಕೆಲಸ ಮಾಡುವುದಾದರೆ, ಒಂದೊಂದರಲ್ಲೂ ಬಾಗಿರುವ ಮತ್ತು ನೇರವಾದ ಭಾಗಗಳನ್ನೊಳಗೊಂಡ ಎರಡು ರೇಖೆಗಳನ್ನು ಕಾಣಬೇಕಾಗಿತ್ತು. ಆದರೆ ಹಾಗೆ ಕಾಣಿಸಿಕೊಳ್ಳದೆ ಒಂದು ನೇರವಾದ ಹಾಗೂ ಮತ್ತೊಂದು ಬಾಗಿರುವ ರೇಖೆ ಕಾಣಿಸಿಕೊಳ್ಳುವುದು ಸಾತತ್ಯ ನಿಯಮದ ಅಗತ್ಯವನ್ನು ಸೂಚಿಸುತ್ತದೆ.



ಚಿತ್ರ 3

ಮೇಲೆ ಹೇಳಿರುವ ಸಂಘಟನಾಂಶಗಳು ಉನ್ನತ ಮಾನಸಿಕ ಪ್ರಕ್ರಿಯೆಗಳನ್ನಾಗಲೀ ವ್ಯಕ್ತಿಯ ಪೂರ್ವಾನುಭವಗಳನ್ನಾಗಲೀ ಅವಲಂಬಿಸುವುದಿಲ್ಲ. ವಾಸ್ತವವಾಗಿ ಅವು ಪ್ರಚೋದನೆಗಳಲ್ಲಿಯೇ ಅಡಕವಾಗಿವೆ. ಹೀಗೆ ಪ್ರಚೋದನೆಗಳಲ್ಲಿಯೇ ಅಡಕವಾಗಿರುವ ಸಂಘಟನಾಂಶಗಳನ್ನು ಗೆಸ್ಟಾಲ್ಟ್‌ವಾದಿಗಳು ಮಹತ್ತ್ವಪೂರ್ಣ ಎಂದು ಪರಿಗಣಿಸಿದ್ದರೂ ಪೂರ್ವ ಪರಿಚಯ, ವಿನ್ಯಾಸ ಈ ಮೊದಲಾದ ಜೀವಿ ಸಂಬಂಧಿ ಅಂಶಗಳೂ ಪ್ರತ್ಯಕ್ಷಾನುಭವವನ್ನು ಪ್ರಭಾವಿತಗೊಳಿಸುತ್ತದೆ ಎಂದು ಗುರುತಿಸಿದ್ದಾರೆ.

ಹೀಗಿದ್ದರೂ ಗೆಸ್ಟಾಲ್ಟ್‌ವಾದಿಗಳು ಕಲಿಕೆಗಿಂತ ಹೆಚ್ಚಿನ ಪ್ರಾಧಾನ್ಯವನ್ನು ಪ್ರಚೋದನೆಗಳಲ್ಲಿ ಅಡಕವಾಗಿರುವ ಸಂಘಟನಾಂಶಗಳಿಗೇ ಕೊಟ್ಟಿದ್ದಾರೆ.



ಚಿತ್ರ 4

ಕಲಿಕೆ ಮತ್ತು ಅಂತರ್‌ದೃಷ್ಟಿ : ಗೆಸ್ಟಾಲ್ಟ್ ವಾದಿಗಳ ಮೊದಲ ಒಲವು ಪ್ರತ್ಯಕ್ಷಾನುಭವದ ಕಡೆಗೆ. ಇದರಲ್ಲಿ ಕಲಿಕೆಯ ಪಾತ್ರ ಮಿತವಾದದ್ದು ಎಂದ ಮಾತ್ರಕ್ಕೆ ಅವರು ಕಲಿಕೆಯ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎಂದರ್ಥವಲ್ಲ. ಗೆಸ್ಟಾಲ್ಟ್ ಕಲಿಕೆಯ ಸಿದ್ಧಾಂತ ಕೋಯ್ಲರನ ಹೆಸರಿನೊಂದಿಗೂ ಅಂತರ್‌ದೃಷ್ಟಿ ಎಂಬ ಪದದೊಂದಿಗೂ ಕೂಡಿಹೋಗಿದೆ.

ಗೆಸ್ಟಾಲ್ಟ್ ಮನೋವಿಜ್ಞಾನಿಗಳು ಪ್ರತ್ಯಕ್ಷಾನುಭವದ ಬಗ್ಗೆ ತಳೆದ ನಿಲುವಿನ

ಧಾಟಿಯಲ್ಲಿಯೇ ಕೋಯ್ಲರ್ ತಾನು ಪ್ರಾಣಿಗಳ ಮೇಲೆ ನಡೆಸಿದ ಕಲಿಕೆಯ ಪ್ರಯೋಗಗಳ ಫಲಿತಾಂಶಗಳನ್ನೂ ವ್ಯಾಖ್ಯಾನ ಮಾಡುತ್ತಾನೆ. ಕಲಿಕೆಯ ಸಮಗ್ರ ಸನ್ನಿವೇಶ ಮತ್ತು ಆ ಸನ್ನಿವೇಶದಲ್ಲಿನ ವಿವಿಧ ಪ್ರಚೋದನೆಗಳ ನಡುವಣ ಸಂಬಂಧ–ಇವು ಮುಖ್ಯವಾಗಿ ಕೋಯ್ಲರನ ವ್ಯಾಖ್ಯಾನದಲ್ಲಿ ಪರಿಗಣನೆಗೆ ಬರುತ್ತವೆ. ಕೋಯ್ಲರನ ಅಧ್ಯಯನಗಳಲ್ಲಿ ಚಿಂಪಾಂಜಿಗಳನ್ನು ಪಂಜರದಲ್ಲಿರಿಸಿ, ಪಂಜರದಿಂದ ಸ್ವಲ್ಪ ದೂರದಲ್ಲಿ ಒಂದು ಬಾಳೆಹಣ್ಣನ್ನು ಇರಿಸಲಾಗಿತ್ತು. ಹಣ್ಣನ್ನು ಪಡೆಯುವುದಕ್ಕೆ ಅವು ತಂತಿ, ಕೋಲು, ಮತ್ತು ಪೆಟ್ಟಿಗೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದುವು. ಕೋಯ್ಲರನ ಚಿಂಪಾಂಜಿಗಳು, ಥಾರ್ನ್‌ಡೈಕ್ ಸೂಚಿಸಿದಂತೆ, ಪ್ರಯತ್ನ ಮಾಡುತ್ತ ತಪ್ಪಿದ್ದಾಗ ತಿದ್ದಿಕೊಳ್ಳುತ್ತ ಹೋಗುವ ಮಾರ್ಗ (ಟ್ರಯಲ್ ಅಂಡ್ ಎರರ್ ಮೆಥಡ್) ಹಿಡಿಯಲಿಲ್ಲ; ಅಥವಾ ಪ್ಯಾವ್ಲವ್ ಸೂಚಿಸಿದಂತೆ ಅನುಬಂಧನಕ್ಕೂ (ಕಂಡಿಷನಿಂಗ್) ಒಳಗಾಗಲಿಲ್ಲ. ಅವು ಹೊಸ ಸನ್ನಿವೇಶವನ್ನು ಮನದಟ್ಟು ಮಾಡಿಕೊಂಡು, ಸಮಗ್ರ ಸನ್ನಿವೇಶವನ್ನೇ ಒಟ್ಟಾಗಿ ಗ್ರಹಿಸಿದವು; ತಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದುವು.


ಚಿತ್ರ 5

ಕೋಯ್ಲರ್ ಒಂದು ಪ್ರಯೋಗದಲ್ಲಿ ಪಂಜರದಿಂದ ಅನತಿ ದೂರದಲ್ಲಿ ಬಾಳೆಹಣ್ಣನ್ನು ಇರಿಸಿದ. ಬಾಳೆಹಣ್ಣಿಗೆ ಎದುರಾಗಿ ಒಂದು ಕೋಲನ್ನು ಪಂಜರದ ಸರಳಿನ ಹತ್ತಿರ ಇರಿಸಿದಾಗ, ಚಿಂಪಾಂಜಿ ಹಣ್ಣು ಮತ್ತು ಕೋಲನ್ನು ಒಂದೇ ಸನ್ನಿವೇಶದ ಅಂಗಗಳಾಗಿ ಗ್ರಹಿಸಿ, ಕೋಲಿನ ಸಹಾಯದಿಂದ ಹಣ್ಣನ್ನು ತನ್ನ ಸಮೀಪಕ್ಕೆ ಎಳೆದುಕೊಳ್ಳುತ್ತಿತ್ತು. ಆದರೆ ಕೋಲನ್ನು ಪಂಜರದ ಇನ್ನೊಂದು ಭಾಗಕ್ಕೆ ಇಟ್ಟಾಗ, ಅವೆರಡೂ ಒಂದೇ ಸನ್ನಿವೇಶದ ಭಾಗಗಳೆಂದೂ ಗ್ರಹಿಸುವುದು ಚಿಂಪಾಂಜಿಗೆ ಕಷ್ಟವಾಯಿತು. ಇಂಥ ಸಂದರ್ಭಗಳಲ್ಲಿ ಸಮಸ್ಯೆಯ ಪರಿಹಾರಕ್ಕೆ ಪ್ರತ್ಯಕ್ಷಾನುಭವದ ಪುನರ್ ವ್ಯವಸ್ಥೆ ಅಗತ್ಯವಾಗುತ್ತದೆ.

ಕೋಯ್ಲರನ ಇನ್ನೊಂದು ಪ್ರಯೋಗದಲ್ಲಿ ಹೆಚ್ಚು ಕಡಿಮೆ ಮೇಲಿನ ವ್ಯವಸ್ಥೆಯನ್ನೇ ಬಳಸಿಕೊಳ್ಳಲಾಯಿತು. ಆದರೆ ಈ ಪ್ರಯೋಗದಲ್ಲಿ ಬಾಳೆಹಣ್ಣು ಯಾವುದೇ ಕೋಲಿಗೆ ನಿಲುಕದಷ್ಟು ದೂರದಲ್ಲಿತ್ತು. ಇನ್ನೊಂದು ವ್ಯತ್ಯಾಸವೆಂದರೆ ಈ ಬಾರಿ ಎರಡು ಕೋಲುಗಳಿದ್ದವು. ಒಂದು ಕೋಲಿನ ತುದಿಯಲ್ಲಿ ರಂಧ್ರವಿತ್ತು. ಮತ್ತೊಂದು ಕೋಲಿನ ತುದಿ ಚೂಪಾಗಿತ್ತು. ಅವೆರಡನ್ನೂ ಕೂಡಿಸಿ ಹಣ್ಣನ್ನು ಪಡೆಯುವುದು ಸಾಧ್ಯವಿತ್ತು. ಕೋಯ್ಲರನ ಅತಿ ಚುರುಕಾದ ಸುಲ್ತಾನ್ ಎಂಬ ಚಿಂಪಾಂಜಿ ಹಣ್ಣನ್ನು ಪಡೆಯಲು ಸುಮಾರು ಒಂದು ಗಂಟೆಯ ಕಾಲ ಯತ್ನಿಸಿತು. ಮೊದಲಿಗೆ ಒಂದು ಕೋಲಿನಿಂದ ಬಾಳೆಹಣ್ಣನ್ನು ಪಡೆಯಲು ಪ್ರಯತ್ನಿಸಿ, ಅನಂತರ ಒಂದು ಕೋಲನ್ನು ಎಷ್ಟು ದೂರ ತಳ್ಳಬಹುದೋ ಅಷ್ಟು ದೂರ ತಳ್ಳಿ, ಇನ್ನೊಂದು ಕೋಲಿನ ಸಹಾಯದಿಂದ ಮೊದಲ ಕೋಲನ್ನು ಬಾಳೆಹಣ್ಣಿಗೆ ತಾಕುವಷ್ಟರ ವರೆಗೆ ತಳ್ಳಿತು. ಅನಂತರ ಎರಡು ಕೋಲುಗಳನ್ನೂ ಇಟ್ಟುಕೊಂಡು ಆಟವಾಡಲಾರಂಭಿಸಿತು. ಹೀಗೆ ಆಡುತ್ತಿದ್ದಾಗ ಅಕಸ್ಮಾತ್ತಾಗಿ ಚೂಪಾದ ಕೋಲಿನ ತುದಿಯನ್ನು ಇನ್ನೊಂದು ಕೋಲಿನ ರಂಧ್ರದಲ್ಲಿ ಸೇರಿಸಿತು. ಆಗ ಕೋಲು ಸಾಕಷ್ಟು ಉದ್ದವಾಗಿ ತೋರಿತೋ ಇಲ್ಲವೋ ತತ್‌ಕ್ಷಣವೇ ಓಡಿಹೋಗಿ ಹಣ್ಣನ್ನು ಪಡೆಯಲು ಪ್ರಯತ್ನಿಸಿತು. ಎರಡು ಕೋಲುಗಳನ್ನು ಸಾಕಷ್ಟು ಭದ್ರವಾಗಿ ಜೋಡಿಸದ ಕಾರಣ ಅವು ಬೇರೆ ಬೇರೆಯಾದವು. ಕೂಡಲೇ ಅವೆರಡನ್ನೂ ಪುನಃ ಭದ್ರವಾಗಿ ಜೋಡಿಸಿ, ಉದ್ದನೆಯ ಕೋಲಿನ ಸಹಾಯದಿಂದ ಬಾಳೆಹಣ್ಣನ್ನು ಪಡೆದುಕೊಂಡಿತು. ಹಿಂದಿನ ಅನುಭವವೇ ಇಲ್ಲದೆ ಹೀಗೆ ಸಂಬಂಧವನ್ನು ಕಂಡುಕೊಂಡದ್ದು ಅಂತರ್‌ದೃಷ್ಟಿಯ ಕುರುಹು ಎನ್ನುವುದಾಗಿ ಕೋಯ್ಲರ್ ಪರಿಗಣಿಸುತ್ತಾನೆ.

ಕೋಯ್ಲರನ ಈ ಪ್ರಯೋಗಗಳು ಗೆಸ್ಟಾಲ್ಟ್‌ವಾದಿಗಳು ಪ್ರತಿಪಾದಿಸಿರುವ ವರ್ತನೆಯ ಬೃಹತ್ ಕಲ್ಪನೆಗೆ ಬೆಂಬಲ ನೀಡುತ್ತವೆಯಲ್ಲದೆ ಕಲಿಕೆ ನಿಜವಾಗಿ ಪರಿಸರದ ಪುನರ್‌ರಚನೆ ಇಲ್ಲವೆ ಪುನರ್ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ ಎನ್ನುವ ಗೆಸ್ಟಾಲ್ಟ್ ಕಲ್ಪನೆಯನ್ನು ಸಹ ಸ್ಥಿರೀಕರಿಸುತ್ತವೆ.

ರಾಬರ್ಟ್ ಯರ್ಕಿಸ್ ಎಂಬಾತ ಗೆಸ್ಟಾಲ್ಟ್‌ವಾದಿಗಳ ಅಂತರ್‌ದೃಷ್ಟಿಯಲ್ಲಿ ಅಡಕವಾಗಿರುವ ಸಾಮಾನ್ಯ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಿದ್ದಾನೆ.

1. ಸಮಸ್ಯಾತ್ಮಕ ಸನ್ನಿವೇಶದ ಸಮೀಕ್ಷಣೆ, ತನಿಖೆ ಅಥವಾ ಕೂಲಂಕಷ ಪರೀಕ್ಷೆ.

2. ಅನಿಶ್ಚಯತೆ, ಕಾರ್ಯನಿಲುಗಡೆ, ಏಕಾಗ್ರತೆಯಿಂದ ಕೂಡಿರುವ ಅವಧಾನ ಮನೋಭಾವ.

3. ಹೆಚ್ಚು ಕಡಿಮೆ ಸರಿ ಎಂದು ತೋರಿಬರುವ ಅನುಕ್ರಿಯೆಯನ್ನು ಪ್ರಯತ್ನಿಸುವುದು.

4. ಮೊದಲು ಅನುಕ್ರಿಯೆ ಸರಿಯಾಗಿಲ್ಲವೆಂದು ತೋರಿ ಬಂದರೆ ಅದನ್ನು ಕೈಬಿಟ್ಟು ಬೇರೊಂದು ಅನುಕ್ರಿಯೆಯನ್ನು ಪ್ರಯತ್ನಿಸುವುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಒಂದು ಮಾರ್ಗದಿಂದ ಇನ್ನೊಂದಕ್ಕೆ ಪರಿವರ್ತನೆ ಶೀಘ್ರವಾದ ಮತ್ತು ಹಠಾತ್ತಾದ ರೀತಿಯಲ್ಲಿ ನಡೆದು ಹೋಗುವುದು.

5. ಗುರಿ ಅಥವಾ ಉದ್ದೇಶದತ್ತ ಸತತವಾದ ಅವಧಾನ ಮತ್ತು ಅದರಿಂದಾದ ಅಭಿಪ್ರೇರಣೆ.

6. ಯಾವುದೋ ಒಂದು ಸಂದಿಗ್ಧ ಗಳಿಗೆಯಲ್ಲಿ ಜೀವಿ ಅಗತ್ಯವಾದ ಹೊಂದಾಣಿಕೆಯ ಕ್ರಿಯೆಯನ್ನು ಹಠಾತ್ತನೆ ನಿರ್ವಹಿಸುವುದು.

7. ಒಮ್ಮೆ ನಿರ್ವಹಿಸಿದ ಅನಂತರದಲ್ಲಿ ಹೊಂದಾಣಿಕೆಯ ಅನುಕ್ರಿಯೆಯ ಪುನರಾವರ್ತನೆ.

8. ಸಮಸ್ಯಾತ್ಮಕ ಸನ್ನಿವೇಶಕ್ಕೆ ಅಗತ್ಯವಾದ ಅಂಶಗಳನ್ನು ಗುರುತಿಸಿ ಅವುಗಳಿಗೆ ಅವಧಾನವೀಯುವ ಸಾಮರ್ಥ್ಯ ಮತ್ತು ಅನವಶ್ಯಕ ಅಂಶಗಳನ್ನು ಕಡೆಗಣಿಸುವಿಕೆ.

ಫಲದಾಯಕ ಚಿಂತನೆ (ಪ್ರೊಡಕ್ಟಿವ್ ಥಿಂಕಿಂಗ್) : ವರ್ದಿಮೀರನ ಪ್ರೊಡಕ್ಟಿವ್ ಥಿಂಕಿಂಗ್ ಎಂಬ ಕೃತಿ ಸಮಸ್ಯಾ ಪರಿಹಾರದ ಪರಿಣಾಮಕಾರಿ ವಿಧಾನಗಳನ್ನು ಸೂಚಿಸುತ್ತದೆ. ಗೆಸ್ಟಾಲ್ಟ್ ಕಲಿಕೆಯ ತತ್ತ್ವಗಳನ್ನು ವರ್ದಿಮೀರ್ ಮಾನವನ ಸೃಜನಾತ್ಮಕ ಆಲೋಚನೆಗೆ ಅನ್ವಯಿಸಿದ್ದಾನೆ. ಅವನ ಪ್ರಕಾರ ಆಲೋಚನೆ ಪೂರ್ಣಗಳನ್ನೊಳಗೊಂಡಿರಬೇಕು. ಯಾರೇ ಆಗಲಿ ಸನ್ನಿವೇಶದ ಸಮಗ್ರ ನೋಟವನ್ನು ಗಣನೆಗೆ ತೆಗೆದುಕೊಳ್ಳಬೇಕು. ಸನ್ನಿವೇಶದ ವಿವರಗಳಲ್ಲಿ ಹಾದಿಯನ್ನು ಕಳೆದುಕೊಳ್ಳಬಾರದು. ತಪ್ಪುಗಳು ಅನಿವಾರ್ಯವೇ; ಆದರೆ ಕನಿಷ್ಠ ಪಕ್ಷ ಅವು ಮೆಚ್ಚಬಹುದಾದ ತಪ್ಪುಗಳಾಗಿರಬೇಕು. ಹಾಗೆ ಮಾಡುವ ತಪ್ಪುಗಳು ಸಫಲತೆಯ ಸಾಧ್ಯತೆಯನ್ನಾದರೂ ಹೊಂದಿರಬೇಕು. ಅವು ಸನ್ನಿವೇಶದ ಸ್ವರೂಪವನ್ನು ತಿಳಿಯದೆ ಮಾಡಿದ ಕುರುಡು ತಪ್ಪುಗಳಾಗಿರಬಾರದು. ಕಲಿಯುವವ ಹೇಗೆ ಸನ್ನಿವೇಶದ ಸಮಗ್ರ ಚಿತ್ರವನ್ನು ಪರಿಗಣಿಸಬೇಕೋ ಹಾಗೆಯೇ ಕಲಿಸುವವ ಕೂಡ ಸನ್ನಿವೇಶದ ಸಮಗ್ರ ಚಿತ್ರವನ್ನು ಕಲಿಯುವವನ ಮುಂದಿಡಬೇಕು. ಕಲಿಯುವವ ಸಹ ತಾನು ಮುಟ್ಟಬೇಕಾದ ಗುರಿ ಮತ್ತು ಅದನ್ನು ಸಾಧಿಸಲು ಬೇಕಾದ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಇರಬೇಕು.

ಗೆಸ್ಟಾಲ್ಟ್ ಮನೋವಿಜ್ಞಾನದ ಅನಂತರದ ಬೆಳವಣಿಗೆಯಲ್ಲಿ ಗೆಸ್ಟಾಲ್ಟ್‌ವಾದವನ್ನು ಕರ್ಟ್‌ಲೆವಿನ್ ಎಂಬಾತ ವ್ಯಕ್ತಿತ್ವ ಮತ್ತು ಸಾಮಾಜಿಕ ಮನೋವಿಜ್ಞಾನದ ಅಧ್ಯಯನಗಳಿಗೆ ಅನ್ವಯಿಸಿದ್ದಾನೆ. ಸಮಾಜ ಮನೋವಿಜ್ಞಾನದ ಬೆಳವಣಿಗೆಯ ಮೇಲೆ ಕರ್ಟ್‌ಲೆವಿನ್ನನ ಪ್ರಭಾವ, ಹಾಗಾಗಿ ಗೆಸ್ಟಾಲ್ಟ್‌ವಾದದ ಪ್ರಭಾವ, ದೊಡ್ಡ ಪರಿಣಾಮವನ್ನು ಬೀರಿದೆ.

ಒಟ್ಟಿನಲ್ಲಿ ಮನೋವಿಜ್ಞಾನದ ಮೇಲೆ ಗೆಸ್ಟಾಲ್ಟ್ ಚಳವಳಿ ಅಳಿಸಲಾಗದ ಮುದ್ರೆಯನ್ನು ಒತ್ತಿದೆ. ಗೆಸ್ಟಾಲ್ಟ್ ದೃಷ್ಟಿ ವಿಶೇಷವಾಗಿ ಪ್ರತ್ಯಕ್ಷಾನುಭವ ಮತ್ತು ಸ್ವಲ್ಪಮಟ್ಟಿಗೆ ಕಲಿಕೆಯ ಕ್ಷೇತ್ರಗಳ ಮೇಲೂ ಪ್ರಭಾವ ಬೀರಿದೆ. ಹಾಗಾದರೂ ಗೆಸ್ಟಾಲ್ಟ್ ನಿಲುವು ಅಸ್ಪಷ್ಟ ಎಂಬುದಾಗಿ ಹಲವು ವಿಮರ್ಶಕರು ವಾದಿಸಿದ್ದಾರೆ. ಗೆಸ್ಟಾಲ್ಟರ ಮೂಲಭಾವನೆಗಳು ಮತ್ತು ಪಾರಿಭಾಷಿಕ ಪದಗಳು (ಉದಾ: ಸಂಘಟನೆ ಇತ್ಯಾದಿ) ವೈಜ್ಞಾನಿಕವಾಗಿ ಅರ್ಥವತ್ತಾದ ರೀತಿಯಲ್ಲಿ ನಿರೂಪಿತವಾಗಿಲ್ಲ ಎಂದು ಅವರು ಆಕ್ಷೇಪಿಸಿದ್ದಾರೆ. ಗೆಸ್ಟಾಲ್ಟ್ ಮನೋವಿಜ್ಞಾನ ಸಾಕಷ್ಟು ಪ್ರಾಯೋಗಿಕ ಸಂಶೋಧನೆಯ ಬೆಂಬಲವಿಲ್ಲದ ಸೈದ್ಧಾಂತಿಕ ಪ್ರತಿಪಾದನೆಯನ್ನು ಒಳಗೊಂಡಿದೆ ಎಂದು ಇನ್ನು ಕೆಲವರು ವಿಮರ್ಶಕರು ಆಪಾದಿಸಿದ್ದಾರೆ. ಅಷ್ಟೇ ಅಲ್ಲದೆ ವರ್ತನಾವಾದಿಗಳ ಪ್ರಯೋಗಗಳಿಗೆ ಹೋಲಿಸಿದಾಗ ಗೆಸ್ಟಾಲ್ಟರ ಪ್ರಯೋಗಗಳು ಗುಣಮಟ್ಟದಲ್ಲಿ ಕಡಿಮೆಯಾಗಿವೆ ಎಂದೂ ಹೇಳಬಹುದು. (ಎಚ್.ಎಸ್.ಐ.)

**ಗೇ, ಜಾನ್ :** 1685–1732. ಕವಿ ಮತ್ತು ನಾಟಕಕಾರ. ಇಂಗ್ಲೆಂಡಿನ ಡೆವನ್‌ನಲ್ಲಿ ಹುಟ್ಟಿದ ಈತ ಚಿಕ್ಕಂದಿನಲ್ಲೇ ಅನಾಥನಾದ. ಲಂಡನಿನ ರೇಷ್ಮೆ ವ್ಯಾಪಾರಿಯ ಬಳಿ ಕೆಲಸಕ್ಕೆ ಸೇರಿದ. ಆದರೆ ಈತನಿಗೆ ಆ ಕೆಲಸದಲ್ಲಿ ಅಭಿರುಚಿಯಿಲ್ಲವೆಂಬುದನ್ನು ಕಂಡುಕೊಂಡ ಯಜಮಾನ ಇವನನ್ನು ಕೆಲಸದಿಂದ ತೆಗೆದುಹಾಕಿದ. 1708ರ ಹೊತ್ತಿಗೆ ವೈನ್ ಎಂಬ ಪದ್ಯವನ್ನು ಬರೆದು ಜಾನ್ ಪ್ರಸಿದ್ಧನಾದನಲ್ಲದೆ 1713ರಲ್ಲಿ ಗ್ರಾಮ ಜೀವನವನ್ನು ಕುರಿತ ರೂರಲ್ ಸ್ಪೋರ್ಟ್ಸ್ ಎಂಬ ಪದ್ಯಸಂಕಲನವನ್ನು ಹೊರತಂದ. 1714ರಲ್ಲಿ ಷಪರ್ಡ್ಸ್ ವೀಕ್ ಎಂಬ ವೀರಕಾವ್ಯವನ್ನೂ 1716ರಲ್ಲಿ ಟ್ರೀವಿಯ ಎಂಬ ಅಣಕು ವೀರಕಾವ್ಯವನ್ನೂ ರಚಿಸಿದ. 1727 ಮತ್ತು 1728ರಲ್ಲಿ ಅಚ್ಚಾದ ಫೇಬಲ್ಸ್ ಈತನಿಗೆ ಶಾಶ್ವತವಾದ ಪ್ರಸಿದ್ಧಿಯನ್ನು ದೊರಕಿಸಿಕೊಟ್ಟವು. ಆ ವೇಳೆಗೆ ಈತ ಸಾಹಿತ್ಯಕೂಟಗಳಲ್ಲಿ ಸೇರತೊಡಗಿ ಪೋಪ್ ಮತ್ತು ಸ್ವಿಫ್ಟರ ಸ್ನೇಹಿತನಾದ. ಈತನ ದಿ

ಬೆಗ್ಗರ್ಸ್ ಆಪೆರ (1728) ಎಂಬ ಕೃತಿಗೆ ವಸ್ತುವನ್ನು ಸೂಚಿಸಿದವ ಜೋನಾಥನ್ ಸ್ವಿಫ್ಟ್‌ನೇ. ಈ ಕೃತಿಯಲ್ಲಿ ಇಟಾಲಿಯನ್ ಆಪೆರದ ಮಾರ್ಮಿಕ ವಿಡಂಬನೆಯಿದೆ. ಇಂದಿಗೂ ಜಾನನ ಪ್ರಸಿದ್ಧಿ ನಿಂತಿರುವುದು ಈ ನಾಟಕದಿಂದಲೇ. ಇದರ ಹಾಡುಗಳು ಅತ್ಯಂತ ಜನಪ್ರಿಯವಾದುವು. ನಾಟಕದ ಉತ್ತರ ಭಾಗವಾದ ಪಾಲಿ 1729ರಲ್ಲಿ ಹೊರಬಂತು. ರಾಜಾಸ್ಥಾನವನ್ನು ಟೀಕಿಸುತ್ತದೆಂಬ ಕಾರಣದಿಂದ ಈ ನಾಟಕವನ್ನು ಚೇಂಬರ್ಲಿನ್ ನಿಷೇಧಿಸಿದನಾದರೂ ನಾಟಕದ ಪ್ರತಿಗಳೇನೋ ಚೆನ್ನಾಗಿ ಖರ್ಚಾದವು.


ಲಂಡನಿನ ನ್ಯಾಷನಲ್ ಪೋರ್ಟ್ರೇಟ್ ಗ್ಯಾಲರಿಯಲ್ಲಿರುವ ಜಾನ್ ಗೇ ಚಿತ್ರಕೃತಿ. ಕಲಾವಿದ ಜೆ. ನೀಲರ್

ಕಥನ ಕವನಗಳನ್ನು ಬಳಸಿಕೊಂಡಿರುವ ದಿ ಬೆಗ್ಗರ್ಸ್ ಆಪೆರ ನಾಟಕ, ಕರ್ತೃವಿನ ಉದ್ದೇಶ, ವಾಕ್ಚಾತುರ್ಯ ಮತ್ತು ವಿಡಂಬನೆಯ ಮೂಲಕ ಇಲ್ಲಿ ಕಲೆಯಾಗಿ ಸಫಲಗೊಂಡಿದೆ. ಸಂಭಾಷಣೆಗಳು ಅನೀತಿಯನ್ನು ಪ್ರತಿಪಾದಿಸುವಂತಿದ್ದರೂ ಪ್ರೇಕ್ಷಕರು ಅದರ ವಿರೋಧ ಭಾವವನ್ನೇ ಗ್ರಹಿಸುತ್ತಾರೆ. ಇದು ಮುಖ್ಯವಾಗಿ ರಾಜಕೀಯ ವಿಡಂಬನೆ. 18ನೆಯ ಶತಮಾನದ ವಿಡಂಬನ ಸಾಹಿತ್ಯದಂತಿದ್ದರೂ ಇಂದಿಗೂ ಇದು ನವನವೀನವಾಗಿದೆ. ಇದರ ವಸ್ತು ಅಂದಿನ ಪ್ರಧಾನಮಂತ್ರಿಯಾಗಿದ್ದ ರಾಬರ್ಟ್ ವಾಲ್‌ಪೋಲನ ಆಡಳಿತದ ಟೀಕೆ. ಈ ನಾಟಕವನ್ನು ರಾಬರ್ಟ್ ವಾಲ್‌ಪೋಲನೂ ಅವನ ಅನುಯಾಯಿಗಳೂ ಸ್ವತಃ ವೀಕ್ಷಿಸಿ ತಮ್ಮ ಆಡಳಿತದ ಕೊಳೆಯನ್ನು ರಂಗದ ಮೇಲೆ ತೊಳೆಯುತ್ತಿರುವುದನ್ನು ಕಂಡು ಚಪ್ಪಾಳೆ ತಟ್ಟಿದರಂತೆ. ಈ ನಾಟಕ ಪ್ರದರ್ಶನದಿಂದ ಮಂತ್ರಿಮಂಡಲ ಉರುಳಿ ಹೋಗದಿದ್ದರೂ ಮಹತ್ತ್ವಪೂರ್ಣ ಪರಿಣಾಮಗಳಾದವು. ಮುಖ್ಯವಾಗಿ ಜೈಲು ಸುಧಾರಣೆಗಳು ಜಾರಿಗೆ ಬಂದದ್ದು ಈ ನಾಟಕದಿಂದ. ಬ್ರಿಟಿಷ್ ಪೌರ ಮತ್ತು ರಾಜಕೀಯ ಆಡಳಿತದಲ್ಲಿ ಅನೇಕ ಸುಧಾರಣೆಗಳಿಗೂ ಈ ನಾಟಕ ಕಾರಣವಾಯಿತಲ್ಲದೆ ಅವರ ಸಾರ್ವಜನಿಕ ಜೀವನದಲ್ಲಿ ಸಹನೆ ಮತ್ತು ಪ್ರಾಮಾಣಿಕತೆಯನ್ನು ಹೆಚ್ಚಿಸಿತು. ಜನಜೀವನಕ್ಕೆ ಇದು ಕನ್ನಡಿ ಹಿಡಿಯಿತು. ಒಬ್ಬ ಕಳ್ಳನಿಂದ ಇನ್ನೊಬ್ಬ ಕಳ್ಳನನ್ನು ಹಿಡಿಯುವುದು ಪ್ರಾಚೀನ ನೀತಿ. ಅದನ್ನು ಗೇ ಬಹಳ ಚೆನ್ನಾಗಿ ಕಥನಕವನಗಳ ಮೂಲಕ ಈ ನಾಟಕದಲ್ಲಿ ತೋರಿಸಿದ್ದಾನೆ. ಮೊದಲನೆಯ ಹಾಡು ಮತ್ತು ಕೊನೆಯ ಹಾಡು ನಾಂದಿ ಮತ್ತು ಭರತ ವಾಕ್ಯಗಳಂತಿವೆ.

ಆಂಗ್ಲ ಸಾಹಿತ್ಯ ಚರಿತ್ರೆಯಲ್ಲಿ ಈತನ ಕೃತಿಯನ್ನು ಚರ್ಚಿಸುವಾಗ ಈತನನ್ನು ಸಂಪ್ರದಾಯಶೀಲ ಸಾಹಿತಿಗಳ ಪಂಕ್ತಿಗೆ ಸೇರಿಸಲಾಗಿದೆ. ಈತ ತನ್ನ ಸಮಕಾಲೀನನಾದ ಮ್ಯಾಥ್ಯೂ ಪ್ರಯರ್‌ಗಿಂತ (1664–1721) ಹೆಚ್ಚು ಸ್ಫೂರ್ತಿಯುಳ್ಳ ಲೇಖಕ. ಅಲ್ಲದೆ ಈತನ ಲಘು ಪದ್ಯಗಳೂ ಕಳಪೆಯವೇನಲ್ಲ.

ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಕವಿಯ ಸಮಾಧಿ ಇದೆ. (ಎಚ್.ಎಚ್.ಎ.)

**ಗೇಟ್ಸ್, ಬಿಲ್ :** 1955–. ಮೈಕ್ರೊಸಾಫ್ಟ್ ಕಾರ್ಪೋರೇಶನ್‌ನ ಸ್ಥಾಪಕ ಹಾಗೂ ಅಧ್ಯಕ್ಷ. 1975ರಿಂದ 2000 ದವರೆಗೆ ಮೈಕ್ರೊಸಾಫ್ಟ್‌ನ ಮುಖ್ಯ ಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸಿದ್ದಾರೆ. ಮೈಕ್ರೊಸಾಫ್ಟ್ ಒಂದು ವ್ಯಕ್ತಿಗತ ಕಂಪ್ಯೂಟರ್ ಕಾರ್ಯನಿರ್ವಹಣೆಯ ಸಾಫ್ಟ್‌ವೇರ್‌ನ ಪ್ರಕಾಶನ ಹಾಗೂ ಅಭಿವೃದ್ಧಿಪಡಿಸುವ ಕಂಪನಿಯಾಗಿದೆ.

ವಿಲಿಯಂ ಹೆನ್ರಿಗೇಟ್ಸ್ 1955ರ ಅಕ್ಟೋಬರ್ 28 ರಂದು ಸಿಯಾಟಲ್‌ನಲ್ಲಿ ಜನಿಸಿದರು. ತಮ್ಮ 19ನೆಯ ವಯಸ್ಸಿನಲ್ಲಿ ಸಾಫ್ಟ್‌ವೇರ್ ಕಂಪನಿಯನ್ನು ಸ್ಥಾಪಿಸಿದರು. 1975ರಲ್ಲಿ ಬಿಲ್ ಹಾಗೂ ಇವರ ಸಹಪಾಠಿ ಅಲೆನ್ ಇಬ್ಬರೂ ಸೇರಿ ಅದೇ ತಾನೇ ಮಾರುಕಟ್ಟೆಯನ್ನು ಪ್ರವೇಶಿಸಿದ್ದ ವ್ಯಕ್ತಿಗತ ಕಂಪ್ಯೂಟರ್‌ಗೆ ಪ್ರೋಗ್ರಾಂಗಳನ್ನು ವಿನ್ಯಾಸಗೊಳಿಸುವ ಕೆಲಸ ಪ್ರಾರಂಭಿಸಿದರು. ಇಬ್ಬರೂ ಸೇರಿ ಮೈಕ್ರೊಸಾಫ್ಟ್ ಕಂಪನಿಯನ್ನು ಸ್ಥಾಪಿಸಿದರು. 1980ರಲ್ಲಿ ಐಬಿಎಂ (ಇಂಟರ್‌ನ್ಯಾಷನಲ್ ಬಿಸಿನೆಸ್ ಮೆಷಿನ್ಸ್ ಕಾರ್ಪೋರೇಷನ್) ಸಂಸ್ಥೆ ತನ್ನ ಮೊದಲ ವ್ಯಕ್ತಿಗತ ಕಂಪ್ಯೂಟರ್‌ನ ಕಾರ್ಯಾಚರಣ ವ್ಯವಸ್ಥೆಯ ಆಪರೇಟಿಂಗ್ ಸಿಸ್ಟಮ್ ಅಭಿವೃದ್ಧಿಗಾಗಿ ಮೈಕ್ರೊಸಾಫ್ಟ್ ಕಂಪನಿಯನ್ನು ಆಯ್ಕೆ ಮಾಡಿತು. ಆಪರೇಟಿಂಗ್ ಸಿಸ್ಟಮ್ ಎನ್ನುವುದು ಕಂಪ್ಯೂಟರ್ ಬಳಕೆಯನ್ನು ಮಾಡುವ ಸೂಚನೆಗಳನ್ನು ಹೊಂದಿರುತ್ತದೆ. ಐಬಿಎಂಗಾಗಿ ಬಿಲ್‌ಗೇಟ್ಸ್ ಮೈಕ್ರೊಸಾಫ್ಟ್ ಡಿಸ್ಕ್ ಆಪರೇಟಿಂಗ್ ಸಿಸ್ಟಮ್ ಯೋಜನೆಯನ್ನು ರೂಪಿಸಿದರು. ಗೇಟ್ಸ್ ಅವರ ಮಾರ್ಗದರ್ಶನದಲ್ಲಿ ಮೈಕ್ರೊಸಾಫ್ಟ್ ಕಂಪನಿಯು ಅಭಿವೃದ್ಧಿಯಾಗುತ್ತಿದೆ. 1980ರಲ್ಲಿ ಈ ಕಂಪನಿ ವಿಂಡೋಸ್ ಎನ್ನುವ ಪಿಸಿ ಪರ್ಸನಲ್ ಕಂಪ್ಯೂಟರ್ ಪ್ರೋಗ್ರಾಂನ ಸರಣಿಯನ್ನು ಪರಿಚಯಿಸಿತು. 'ವಿಂಡೋಸ್'ನ ಮೂಲಕ ವ್ಯಕ್ತಿಯು ಕಂಪ್ಯೂಟರ್ ಸ್ಕ್ರೀನ್‌ನಲ್ಲಿ (ಒಟ್ಟಿಗೆ) ಒಮ್ಮೆಲೆ ವಿವಿಧ ರೀತಿಯ ಕಾರ್ಯಗಳನ್ನು ಮಾಡಬಹುದಲ್ಲದೆ ಪರದೆಯ ಮೇಲಿರುವ ಸೂಚನಾಚಿಹ್ನೆಗಳನ್ನು ಉಪಯೋಗಿಸಿ ಕಮ್ಯಾಂಡ್ ಮಾಡಬಹುದು.

**ಗೇಟ್ಸ್ ಫೌಂಡೇಶನ್ :** ಪ್ರಪಂಚದ ದೊಡ್ಡ ಚಾರಿಟಬಲ್ (ದತ್ತಿಸಂಸ್ಥೆ) ಫೌಂಡೇಶನ್ ಆಗಿದೆ. 1999ರಲ್ಲಿ ಬಿಲ್‌ಗೇಟ್ಸ್ ಹಾಗೂ ಇವರ ಪತ್ನಿಯಿಂದ ಸ್ಥಾಪಿತವಾಯಿತು. ಪ್ರಪಂಚಾದ್ಯಂತ ಆರೋಗ್ಯ ಮತ್ತು ಶಿಕ್ಷಣ ನೀಡುವ ಬಗ್ಗೆ ಗಮನ ಹರಿಸುತ್ತಿದೆ. ಹಿಂದುಳಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನರ ಆರೋಗ್ಯ ಸುಧಾರಣೆಯತ್ತ ಕಾರ್ಯಕ್ರಮಗಳನ್ನು ನಿಯೋಜಿಸುತ್ತಿದೆ. ಮಕ್ಕಳನ್ನು ರೋಗಗಳಿಂದ ಮುಕ್ತಗೊಳಿಸಲು ಲಸಿಕೆಗಳನ್ನು ಸರಬರಾಜು ಮಾಡುತ್ತದೆ. ಅಲ್ಲದೆ ಅಲ್ಪಸಂಖ್ಯಾತ ಮಕ್ಕಳಿಗೆ ವಿದ್ಯಾರ್ಥಿ ವೇತನದ ವ್ಯವಸ್ಥೆಯನ್ನೂ ಮಾಡುತ್ತಿದ್ದು ವಿಕಲಾಂಗ ಚೇತನರಿಗೆ ಬಳಸಲು ಅನುಕೂಲ ವಾಗುವಂತೆ ತಾಂತ್ರಿಕ ಕೌಶಲ್ಯದ ಅಭಿವೃದ್ಧಿಯನ್ನು ಕೈಗೊಂಡಿದೆ. ಕೆಳ ಆರ್ಥಿಕ ವರ್ಗಗಳ ಸಾರ್ವಜನಿಕ ಗ್ರಂಥಾಲಯಗಳಿಗೆ ಕಂಪ್ಯೂಟರ್ ಹಾಗೂ ಅಂತರ್ಜಾಲ ಬಳಕೆಯನ್ನು ಒದಗಿಸುತ್ತದೆ. ಇದರ ಕೇಂದ್ರ ಕಚೇರಿ ಸಿಯಾಟಲ್‌ನಲ್ಲಿದೆ.

(ಪಿ.ಸಿ.ಎಸ್.)

**ಗೇಣಿ, ಗೇಣಿ ಸಿದ್ಧಾಂತ :** ಭೂಮಿಯ ಉಪಯೋಗಕ್ಕಾಗಿ, ವಿಶೇಷತಃ ಕೃಷಿ ಭೂಮಿಯ ಉಪಯೋಗಕ್ಕಾಗಿ, ಅದರ ಒಡೆಯನಿಗೆ ಸಲ್ಲುವ ಪ್ರತಿಫಲ (ರೆಂಟ್). ಭೂಮಿಯ ಮತ್ತು ನಿಸರ್ಗದ ಇತರ ನಿರುಪಾಧಿಕ ಕೊಡುಗೆಗಳ ಒಡೆತನದಿಂದ ಪಡೆದ ವರಮಾನ– ಎಂಬುದು ಆಲ್ಫ್ರೆ ಮಾರ್ಷಲ್ ನೀಡಿರುವ ವ್ಯಾಖ್ಯೆ. ಬಳಕೆಗಾಗಿ ಭೂಮಿಯನ್ನು ಗುತ್ತಿಗೆಗೆ ಕೊಟ್ಟಿದ್ದಕ್ಕಾಗಿ ಭೂಮಾಲೀಕ ಪಡೆದ ಪರಿಹಾರವೇ ಗೇಣಿ, ಎಂಬುದು ನ್ಯಾಯಶಾಸ್ತ್ರದ ವ್ಯಾಖ್ಯೆ.

18ನೆಯ ಶತಮಾನದ ನಡುಗಾಲದಲ್ಲಿದ್ದ ಫ್ರೆಂಚ್ ಪ್ರಕೃತಿಪ್ರಾಧಾನ್ಯವಾದಿಗಳು (ಫಿಸಿಯೊಕ್ರಾಟ್ಸ್) ಭೂಮಿ ಮತ್ತು ಅದರ ವಿಚಿತ್ರ ಶಕ್ತಿಗಳನ್ನು ಕುರಿತು ವಿಚಾರ ನಡೆಸಿದ್ದರು. ಆದರೆ ಭೂಮಿಯಿಂದ ಬಂದ ವರಮಾನವನ್ನು ಅವರು ಗೇಣಿಯೆಂದು ಕರೆಯಲಿಲ್ಲ, ನಿವ್ವಳ ಉತ್ಪನ್ನವೆಂದು ಕರೆದರು. ದುಡಿಮೆಯ ವೆಚ್ಚಕ್ಕಿಂತ ಅಧಿಕವಾದ ಪ್ರತಿಫಲವನ್ನು ನೀಡುವ ಶಕ್ತಿ ಭೂಮಿಗೆ ಮಾತ್ರ ಇದೆಯೆಂಬುದು ಅವರ ಭಾವನೆಯಾಗಿತ್ತು.

ಅನಂತರ ಬಂದ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಆಡಂ ಸ್ಮಿತ್‌ನ ದೃಷ್ಟಿ ಬೇರೆಯಾಗಿತ್ತು. ಭೂಮಿಯ ಶಕ್ತಿಗಿಂತಲೂ ಶ್ರಮವಿಭಜನೆಯೇ ರಾಷ್ಟ್ರಗಳ ಸಂಪತ್ತಿಗೆ ಆಧಾರವೆಂದು ಆತ ಹೇಳಿದ. ದುಡಿಮೆಗೆ ಪ್ರತಿಫಲವಾದ ಕೂಲಿ, ಬಂಡವಾಳಕ್ಕೆ ಪ್ರತಿಫಲವಾದ ಲಾಭ, ಭೂಮಿಗೆ ಪ್ರತಿಫಲವಾದ ಗೇಣಿ– ಇವು ಮೂರೂ ಅಂಶಗಳು ಪದಾರ್ಥಗಳ ಬೆಲೆಯಲ್ಲಿ ಸೇರಿವೆಯೆಂದು ಆತ ಪ್ರಥಮತಃ ವಿಶ್ಲೇಷಿಸಿದ. ಕೂಲಿ, ಲಾಭ ಮತ್ತು ಗೇಣಿಗಳ ಸಹಜ ದರವೊಂದು ಇದೆಯೆಂಬುದು ಆತನ ಭಾವನೆಯಾಗಿತ್ತು. ಭೂಮಿ ಇರುವಂಥ ಸ್ಥಳದ ನೆರೆಹೊರೆ ಅಥವಾ ಅಲ್ಲಿಯ ಸಮಾಜದ ಸಾಮಾನ್ಯ ಪರಿಸ್ಥಿತಿಗಳಿಂದಲೂ ಭೂಮಿಯ ಸಹಜವಾದ ಅಥವಾ ಅಭಿವೃದ್ಧಿ ಪಡಿಸಿದ ಫಲವತ್ತತೆಯಿಂದಲೂ ಅದರ ಸಾಮಾನ್ಯ ಅಥವಾ ಸರಾಸರಿ ಗೇಣಿಯ ದರ ನಿಶ್ಚಿತವಾಗುತ್ತದೆಯೆಂದು ಅವನು ಹೇಳಿದ್ದಾನೆ. ಆತನ ಪ್ರಕಾರ ನೆಲದ ಉತ್ಪನ್ನ ಎರಡು ಬಗೆ: 1.

ನೆಲದೊಡೆಯನಿಗೆ ಯಾವಾಗಲೂ ಗೇಣಿಯನ್ನು ದೊರಕಿಸಿಕೊಡುವಂಥ ಉತ್ಪನ್ನ (ಉದಾ: ಆಹಾರ) 2. ಕೆಲವು ಬಾರಿ ಗೇಣಿ ದೊರಕಿಸಿಕೊಡುವ, ಮತ್ತೆ ಕೆಲವು ಬಾರಿ ದೊರಕಿಸಿಕೊಡದೆ ಇರುವ ಉತ್ಪನ್ನ (ಉದಾ: ತುಪ್ಪಳ, ಉಣ್ಣೆ, ಕಲ್ಲು, ಕಲ್ಲಿದ್ದಲು, ಮರ ಮುಂತಾದವು). ಎರಡನೆಯ ಬಗೆಯನ್ನು ಕುರಿತು ವಿವೇಚನೆ ನಡೆಸುವಾಗ ಆಡಂ ಸ್ಮಿತ್ ಸೀಮಾಂತ ತತ್ತ್ವದ ದೃಗ್ಗೋಚರ ಮಾಡಿಸಿದನಾದರೂ ಗೇಣಿಯನ್ನು ಕುರಿತು ಅವನ ವಿವೇಚನೆ ಅಸ್ಪಷ್ಟವಾಗಿದೆ.

**ರಿಕಾರ್ಡೋನ ಗೇಣಿ ಸಿದ್ಧಾಂತ :** 19ನೆಯ ಶತಮಾನದ ಆದಿ ಭಾಗದಲ್ಲಿ ಡೇವಿಡ್ ರಿಕಾರ್ಡೋ ಗೇಣಿಯನ್ನು ಕುರಿತ ಸಿದ್ಧಾಂತವೊಂದನ್ನು ಮಂಡಿಸಿದ. ಇದೊಂದು ಅಭಿಜಾತ ಸಿದ್ಧಾಂತ. ಆತನ ಅಭಿಪ್ರಾಯದಲ್ಲಿ ಗೇಣಿಗೆ ಮೂಲವಾದ್ದು ಪ್ರಕೃತಿಯ ಕೃಪಣತನವೇ ವಿನಾ ಔದಾರ್ಯವಲ್ಲ. ಉತ್ತಮ ದರ್ಜೆಯ ಜಮೀನಿನ ಅಭಾವವೇ ಗೇಣಿಗೆ ಕಾರಣ. ಕೀಳು ದರ್ಜೆಯ ಜಮೀನಿಗೆ ಬೇಸಾಯವನ್ನು ವಿಸ್ತರಿಸಿದಾಗ, ಉತ್ತಮ ಜಮೀನಿನಲ್ಲಿ ದೊರೆಯುವ ಆಧಿಕ್ಯವನ್ನು ಭೂಮಾಲೀಕರು ಗೇಣಿ ಎಂದು ತೆಗೆದುಕೊಳ್ಳುತ್ತಾರೆ. ಭೂಮಾಲೀಕರು ಪಡೆಯುವ, ಸಂಪಾದಿಸದ ವರಮಾನವೇ ಗೇಣಿ. ಗೇಣಿ ಎಂದರೆ ಭೂಮಿಯ ಮೂಲ ಹಾಗೂ ಅವಿನಾಶಿ ಶಕ್ತಿಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಭೂಮಾಲೀಕನಿಗೆ ಕೊಡುವ ಭೂಮಿಯ ಉತ್ಪನ್ನದ ಭಾಗ ಎಂದು ರಿಕಾರ್ಡೋ ನಿರೂಪಿಸಿದ್ದಾನೆ.



ನಕ್ಷೆ 1



ನಕ್ಷೆ 2

ಭೂಮಿಯ ಗುಣ ಮತ್ತು ಸ್ಥಾನಿಕ ಸೌಕರ್ಯ ಎಲ್ಲೆಡೆಯೂ ಏಕರೀತಿ ಇರುವುದಿಲ್ಲ. ಅವು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಹೊಂದುತ್ತವೆ. ಒಂದು ಪ್ರದೇಶದಲ್ಲಿ ಜನ ನೆಲಸುವಾಗ ಮೊದಲು ಉತ್ಕೃಷ್ಟ ಜಮೀನನ್ನು ಬೇಸಾಯ ಮಾಡುತ್ತಾರೆ. ಕಾಲಕ್ರಮದಲ್ಲಿ ಜನಸಂಖ್ಯೆ ಹೆಚ್ಚಿ, ಆಹಾರ ಪದಾರ್ಥಗಳಿಗೆ ಬೇಡಿಕೆ ಹೆಚ್ಚಿದಾಗ, ಕಡಿಮೆ ದರ್ಜೆಯ ಜಮೀನುಗಳನ್ನೂ ಬೇಸಾಯ ಮಾಡಬೇಕಾಗುತ್ತದೆ. ಆದರೆ ಮೇಲುದರ್ಜೆಯ ಜಮೀನುಗಳಿಗೆ ಹಾಕುವಷ್ಟೇ ಪ್ರಮಾಣದಲ್ಲಿ ಬಂಡವಾಳ ಮತ್ತಿತರ ಉತ್ಪಾದನಾಂಗಗಳನ್ನು ಕಡಿಮೆ ದರ್ಜೆಯ ಜಮೀನುಗಳಿಗೂ ಹಾಕಿದಾಗ, ಇಳಿಮುಖ ಪ್ರತಿಫಲ ನಿಯಮ ಅನ್ವಯವಾಗುತ್ತದೆ. ಅಂದರೆ ಕೆಳದರ್ಜೆಯ ಭೂಮಿಯ ಉತ್ಪಾದನ ವೆಚ್ಚ ಅಧಿಕವಾಗುತ್ತದೆ. ಆ ವೆಚ್ಚಕ್ಕಿಂತ ಧಾನ್ಯದ ಬೆಲೆ ಕಡಿಮೆಯಿಲ್ಲದಿದ್ದರೆ ಮಾತ್ರ ಆ ಕೀಳು ಭೂಮಿಯನ್ನು ಬೇಸಾಯ ಮಾಡಬಹುದು. ಆದರೆ ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಮೇಲು ಕೀಳು ಜಮೀನುಗಳೆರಡರ ಉತ್ಪನ್ನಕ್ಕೂ ಬೆಲೆ ಒಂದೇ ದರದಲ್ಲಿರುತ್ತದೆ. ಆದ್ದರಿಂದ ಕಡಿಮೆ ವೆಚ್ಚ ತಗಲುವ ಮೇಲ್ದರ್ಜೆಯ ಭೂಮಿಯಲ್ಲಿ ಉತ್ಪನ್ನದ ಆಧಿಕ್ಯ ಕಂಡುಬರುತ್ತದೆ. ಈ ಆಧಿಕ್ಯಕ್ಕೆ ಕಾರಣ ಮೇಲ್ದರ್ಜೆಯ ಹಾಗೂ ಕೆಳದರ್ಜೆಯ ಜಮೀನುಗಳ ಸ್ವಾಭಾವಿಕ ಗುಣಗಳ ವ್ಯತ್ಯಾಸವೇ ವಿನಾ ಬೇರೇನೂ ಅಲ್ಲ. ಇದು ಭಿನ್ನಕ ಆಧಿಕ್ಯ (ಡಿಫರೆನ್ಷಿಯಲ್ ಸರ್ಪ್ಲಸ್). ಇದನ್ನು ಭೂಮಾಲೀಕ ಗೇಣಿ ಎಂದು ತೆಗೆದುಕೊಳ್ಳುತ್ತಾನೆ. ಧಾನ್ಯದ ಬೆಲೆ ಸೀಮಾಂತ ಭೂಮಿಯ ಉತ್ಪಾದನ ವೆಚ್ಚಕ್ಕೆ ಸಮನಾಗಿರುತ್ತದೆಯಾದ್ದರಿಂದ ಆ ಭೂಮಿಯಿಂದ ಅಧಿಕೋತ್ಪನ್ನ ದೊರಕುವುದಿಲ್ಲ. ಅದು ಗೇಣಿರಹಿತ ಭೂಮಿ.

ಧಾನ್ಯದ ಬೆಲೆ ನಿರ್ಧಾರವಾಗುವುದು ಸೀಮಾಂತ ಭೂಮಿ ಅಥವಾ ಗೇಣಿ ರಹಿತ ಭೂಮಿಯ ಉತ್ಪಾದನ ವೆಚ್ಚದ ಆಧಾರದ ಮೇಲಾದ್ದರಿಂದ ರಿಕಾರ್ಡೋನ ಅಭಿಪ್ರಾಯದಲ್ಲಿ ಬೆಲೆಯಿಂದ ಗೇಣಿ ನಿರ್ಧರಿಸಲ್ಪಡುವುದೇ ವಿನಾ ಬೆಲೆಯನ್ನು ಗೇಣಿ ನಿರ್ಧರಿಸುವುದಿಲ್ಲ. ಗೇಣಿ ಕೊಡಬೇಕಾಗಿ ಬಂದುದೇ ಧಾನ್ಯದ ಬೆಲೆ ಏರಿಕೆಗೆ ಕಾರಣವೆಂದು ಹೇಳುವುದು ಸರಿಯಲ್ಲ. ಧಾನ್ಯದ ಬೆಲೆ ಏರಿದಷ್ಟೂ ಸೀಮಾಂತ ಭೂಮಿಗೆ ಮೇಲ್ಪಟ್ಟ ಜಮೀನುಗಳ ಪ್ರತಿಫಲದ ಆಧಿಕ್ಯವೂ ಏರುತ್ತದೆ. ಗೇಣಿಯೂ ಹೆಚ್ಚುತ್ತದೆ.

ಮೇಲೆ ವಿವರಿಸಿದ, ರಿಕಾರ್ಡೋ ನೀಡಿರುವ ಗೇಣಿ ಸಿದ್ಧಾಂತ ವಿಸ್ತೃತ (ವ್ಯಾಪಕ) ವ್ಯವಸಾಯ ಪದ್ಧತಿ, ಸಾಂದ್ರ ವ್ಯವಸಾಯ ಪದ್ಧತಿ ಎರಡಕ್ಕೂ ಅನ್ವಯವಾಗುತ್ತದೆ. ವ್ಯಾಪಕ ಕೃಷಿ ಪದ್ಧತಿಯಲ್ಲಿ ಭೂಮಿಯ ಪರಿಮಾಣವನ್ನು ಹೆಚ್ಚಿಸುತ್ತ, ಉಳಿದ ಉತ್ಪಾದನಾಂಗಗಳ ಪರಿಮಾಣವನ್ನು ಒಂದೇ ಮಟ್ಟದಲ್ಲಿಡಲಾಗುವುದು. ಸಾಂದ್ರ ವ್ಯವಸಾಯ ಪದ್ಧತಿಯಲ್ಲಿ ಭೂಮಿಯ ಪರಿಮಾಣವನ್ನು ಹೆಚ್ಚಿಸಲು ಸಾಧ್ಯವಿಲ್ಲದ್ದರಿಂದ, ಇತರ ಉತ್ಪಾದನಾಂಗಗಳ ಪರಿಮಾಣವನ್ನು ಹೆಚ್ಚು ಮಾಡಲಾಗುವುದು. ಈ ಎರಡು ಬೇಸಾಯ ಪದ್ಧತಿಗಳಲ್ಲೂ ಇಳಿಮುಖ ಸೀಮಾಂತ ಪ್ರತಿಫಲ ಪ್ರವೃತ್ತಿ ತಲೆದೋರುತ್ತದೆ.

ವ್ಯಾಪಕ ವ್ಯವಸಾಯ ಪದ್ಧತಿಯನ್ನು ಸೂಚಿಸುವ ನಕ್ಷೆ 1 ರಲ್ಲಿ ಒಂದು ಗೊತ್ತಾದ ಪರಿಮಾಣದ ಬಂಡವಾಳ ಮತ್ತಿತರ ಉತ್ಪಾದನಾಂಗಗಳನ್ನು ಪ್ರಥಮ ದರ್ಜೆಯ ಜಮೀನಿಗೆ ಹಾಕಿದಾಗ 10 ಕ್ವಿಂಟಲ್, ದ್ವಿತೀಯ ದರ್ಜೆಯ ಜಮೀನಿಗೆ ಹಾಕಿದಾಗ 8 ಕ್ವಿಂಟಲ್, ತೃತೀಯ ದರ್ಜೆಯ ಜಮೀನಿಗೆ ಹಾಕಿದಾಗ 5 ಕ್ವಿಂಟಲ್ ಮತ್ತು ಚತುರ್ಥ ದರ್ಜೆಯ ಜಮೀನಿಗೆ ಹಾಕಿದಾಗ 3 ಕ್ವಿಂಟಲ್ ಬತ್ತ ಬರುತ್ತದೆ. ಇಲ್ಲಿ ಬತ್ತದ ಏಕಮಾನದ ಬೆಲೆ ನಾಲ್ಕನೆಯ ದರ್ಜೆಯ ಜಮೀನಿನ ಏಕಮಾನ ಉತ್ಪಾದನ ವೆಚ್ಚಕ್ಕೆ ಸಮನಾಗಿರುತ್ತದೆ. ಏಕೆಂದರೆ ನಾಲ್ಕನೆಯ ದರ್ಜೆಯ ಜಮೀನು ಸೀಮಾಂತ ಅಥವಾ ಗೇಣಿ ರಹಿತ ಭೂಮಿ. ಇದಕ್ಕೆ ಮೇಲ್ಪಟ್ಟದ ಮೂರು ಜಮೀನುಗಳಿಂದ ಭೂಮಾಲೀಕರಿಗೆ ಸಿಗುವ ಗೇಣಿ ಅನುಕ್ರಮವಾಗಿ 2, 5, 7, ಕ್ವಿಂಟಲ್ ಬತ್ತದ ಬೆಲೆ.

ಹಾಗೆಯೇ ಸಾಂದ್ರ ವ್ಯವಸಾಯ ಪದ್ಧತಿಯನ್ನು ಸೂಚಿಸುವ ನಕ್ಷೆ 2 ರಲ್ಲಿ, ಒಂದು ಗೊತ್ತಾದ ಗಾತ್ರದ ಭೂಮಿಗೇ ಹೆಚ್ಚು ಹೆಚ್ಚು ಪರಿಮಾಣಗಳಲ್ಲಿ ಶ್ರಮ ಮತ್ತು ಬಂಡವಾಳಗಳನ್ನು ಹಾಕಿದಾಗ ಮೊದಲನೆಯದರಿಂದ 10 ಕ್ವಿಂಟಲ್, ಎರಡನೆಯದರಿಂದ 8 ಕ್ವಿಂಟಲ್, ಮೂರನೆಯದರಿಂದ 5 ಕ್ವಿಂಟಲ್ ಮತ್ತು ನಾಲ್ಕನೆಯದರಿಂದ 3 ಕ್ವಿಂಟಲ್ ಬತ್ತ ಬರುತ್ತದೆ. ಇಲ್ಲಿಯೂ ನಾಲ್ಕನೆಯ ಪರಿಮಾಣದಿಂದ ಬರುವ ಬತ್ತದ ಉತ್ಪಾದನಾಂಗಗಳ (ಫ್ಯಾಕ್ಟರ್ಸ್ ಆಫ್ ಪ್ರೊಡಕ್ಷನ್) ವೆಚ್ಚ 3 ಕ್ವಿಂಟಲ್ ಬತ್ತದ ಬೆಲೆಗೆ ಸಮ. ಆದ್ದರಿಂದ ನಾಲ್ಕನೆಯ ಪರಿಮಾಣದ ಶ್ರಮ ಮತ್ತು ಬಂಡವಾಳದಿಂದ ಗೇಣಿ ಸಿಕ್ಕುವುದಿಲ್ಲ. ಇನ್ನುಳಿದ (ಹೆಚ್ಚಿನ ಮಟ್ಟಗಳ) ಪರಿಮಾಣಗಳಿಂದ ಅನುಕ್ರಮವಾಗಿ 2, 5, 7 ಕ್ವಿಂಟಲ್ ಬತ್ತ ಗೇಣಿಯಾಗಿ ಸಿಕ್ಕುತ್ತದೆ.

ರಿಕಾರ್ಡೋನ ಅಭಿಪ್ರಾಯದಲ್ಲಿ ಭೂಮಿಗೂ ಇತರ ಉತ್ಪಾದನಾಂಗಗಳಿಗೂ ವ್ಯತ್ಯಾಸವಿದೆ. ಭೂಮಿ ಪ್ರಕೃತಿಯ ಪ್ರಸಾದ; ಆದರೆ ಇತರ ಉತ್ಪಾದನಾಂಗಗಳು ಮನುಷ್ಯಕೃತ. ಭೂಮಿಯ ಪರಿಮಾಣವನ್ನು ಹೆಚ್ಚಿಸಲು ಸಾಧ್ಯವಿಲ್ಲ; ಆದರೆ ಇತರ ಉತ್ಪಾದನಾಂಗಗಳ ಪರಿಮಾಣಗಳನ್ನು ಅಧಿಕ ಪ್ರತಿಫಲ ನೀಡಿ ಹೆಚ್ಚಿಸಬಹುದು. ಆದ್ದರಿಂದ ಭೂಮಿಯ ಪ್ರತಿಫಲವಾದ ಗೇಣಿ ಧಾನ್ಯದ ಬೆಲೆಗೆ ಸೇರುವುದಿಲ್ಲ. ಆದರೆ ಶ್ರಮ, ಬಂಡವಾಳ ಮತ್ತು ಸಂಘಟನೆಗೆ ಪ್ರತಿಫಲವೆನಿಸುವ ವೇತನ, ಬಡ್ಡಿ ಮತ್ತು ಲಾಭ ಇವು ಬೆಲೆಗೆ ಸೇರುತ್ತವೆ.

ರಿಕಾರ್ಡೋನ ಗೇಣಿ ಸಿದ್ಧಾಂತವನ್ನು ಕುರಿತ ಟೀಕೆಗಳಿವು :

1. ರಿಕಾರ್ಡೋ ಊಹಿಸಿದಂತೆ ಭೂಮಿಯಲ್ಲಿ ಮೂಲ ಮತ್ತು ಅವಿನಾಶಿ ಶಕ್ತಿಗಳಿವೆಯೆನ್ನುವುದು ಸರಿಯಲ್ಲ. ಏಕೆಂದರೆ ದೀರ್ಘಕಾಲದ ಬೇಸಾಯದ ಫಲವಾಗಿ ಭೂಮಿ ತನ್ನ ನೈಜ ಸಾರವನ್ನು ಕಳೆದುಕೊಂಡಿದೆ. ಗೊಬ್ಬರ ಮುಂತಾದವನ್ನು ಹಾಕಿ ಮನುಷ್ಯ ಅದನ್ನು ಕೃಷಿಗೆ ಯೋಗ್ಯವಾಗಿಟ್ಟುಕೊಂಡಿದ್ದಾನೆ.

2. ರಿಕಾರ್ಡೋ ಹೇಳಿರುವ ಕ್ರಮದಲ್ಲಿಯೇ ಬೇಸಾಯಕ್ಕೆ ಭೂಮಿಯನ್ನು ಆಕ್ರಮಿಸಿಕೊಳ್ಳಲಾಗುವು ದೆಂಬುದಕ್ಕೆ ಚಾರಿತ್ರಿಕ ನಿದರ್ಶನವಿಲ್ಲ. ಅನೇಕ ಕಡೆ ಫಲವತ್ತಾದ ಭೂಮಿಗೂ ಮುಂಚೆಯೇ ಕಳಪೆ ಜಮೀನನ್ನು ಬೇಸಾಯ ಮಾಡಲಾಗಿದೆ.

3. ಭೂಮಿಗೆ ಮಾತ್ರ ಗೇಣಿ ದೊರೆಯುವುದೆಂಬುದನ್ನು ಜೋನ್ ರಾಬಿನ್ಸನ್ ಮುಂತಾದ ಅರ್ಥಶಾಸ್ತ್ರಜ್ಞರು ಟೀಕಿಸಿದ್ದಾರೆ. ಭೂಮಿಗೆ ಗೇಣಿ ದೊರಕಲು ಕಾರಣ ಶ್ರೇಷ್ಠ ದರ್ಜೆಯ ಜಮೀನಿನ ಅಭಾವ. ಅಲ್ಪಾವಧಿಯಲ್ಲಿ ಈ ಮಾತು ಇತರ ಉತ್ಪಾದನಾಂಗಗಳಿಗೂ ಅನ್ವಯಿಸುತ್ತದೆಯೆಂಬುದು ಆಲ್‌ಫ್ರೆಡ್ ಮಾರ್ಷಲ್ ಮೊದಲ್ಗೊಂಡು ಹಲವರ ಅಭಿಪ್ರಾಯ. ಆದರೆ ಭೂಮಿಯ ಪ್ರತ್ಯೇಕತೆಯನ್ನು ತೋರಿಸುವುದಕ್ಕಾಗಿ ಅದರಿಂದ ಪ್ರಾಪ್ತವಾಗುವ ಆಧಿಕ್ಯವನ್ನು ಗೇಣಿ ಎಂದು ಕರೆದು, ಇತರ ಉತ್ಪಾದನಾಂಗಗಳ ಆಧಿಕ್ಯವನ್ನು ಅರೆ–ಗೇಣಿ (ಕ್ವಾಸೈ–ರೆಂಟ್) ಎಂದು ಆತ ಕರೆದಿದ್ದಾನೆ.

4. ಶ್ರೇಷ್ಠ ದರ್ಜೆಯ ಭೂಮಿಯ ಅಭಾವದಿಂದ ಗೇಣಿ ದೊರಕುವುದೆಂದು ರಿಕಾರ್ಡೋ ಭಾವಿಸಿದ್ದ. ಆದರೆ ಒಂದು ವೇಳೆ ಎಲ್ಲ ಭೂಮಿಯೂ ಶ್ರೇಷ್ಠ ದರ್ಜೆಯದೇ ಆಗಿದ್ದರೂ ಗೇಣಿ ಇರುತ್ತದೆ. ಏಕೆಂದರೆ ಇಳಿಮುಖ ಪ್ರತಿಫಲ ಪ್ರವೃತ್ತಿ ಕಂಡುಬರುವುದು ಅನಿವಾರ್ಯ.

5. ಗೇಣಿ ಬೆಲೆಗೆ ಸೇರುವುದಿಲ್ಲ ಎಂಬ ಅಭಿಪ್ರಾಯವನ್ನು ಮಿಲ್ ಮುಂತಾದವರು ಟೀಕಿಸಿದ್ದಾರೆ. ಒಟ್ಟಿನಲ್ಲಿ ಭೂಮಿಯ ಪರಿಮಾಣವನ್ನು ಹೆಚ್ಚಿಸಲು ಸಾಧ್ಯವಾಗದಿದ್ದರೂ ಯಾವುದೇ ನಿರ್ದಿಷ್ಟ ಉದ್ದೇಶಕ್ಕೆ ಬೇಕಾಗುವ ಭೂಮಿಯ ಪರಿಮಾಣವನ್ನು ಹೆಚ್ಚಿಸಬಹುದು. ಕಡಿಮೆ ಪ್ರತಿಫಲ ನೀಡುವ ಉದ್ದೇಶದಿಂದ ಹೆಚ್ಚಿನ ಪ್ರತಿಫಲ ನೀಡುವ ಉದ್ದೇಶಕ್ಕೆ ಭೂಮಿಯನ್ನು ವರ್ಗಾಯಿಸುವುದರಿಂದ ಇದು ಸಾಧ್ಯ. ಆಗ ವರ್ಗಾವಣೆಯ ವೆಚ್ಚ ಬೆಲೆಯಲ್ಲಿ ಸೇರುತ್ತದೆ.

6. ರಿಕಾರ್ಡೋ ಸಿದ್ಧಾಂತ ಪರಿಪೂರ್ಣ ಸ್ಪರ್ಧೆಯ ಆಧಾರದ ಮೇಲೆ ರೂಪಿತವಾಗಿದೆ. ಆದರೆ ವಾಸ್ತವ ಪ್ರಪಂಚದಲ್ಲಿ ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿ ಇರುವುದಿಲ್ಲ.

ಈ ಕಾರಣಗಳಿಂದ ರಿಕಾರ್ಡೋ ಗೇಣಿ ಸಿದ್ಧಾಂತವನ್ನು ಟೀಕಿಸಿದರೂ, ಅದು ಅನೇಕ ರೀತಿಗಳಲ್ಲಿ ಉಪಯುಕ್ತವಾಗಿದೆ. ಜನಸಂಖ್ಯೆಯ ಒತ್ತಡ ಹೆಚ್ಚಿ ಆಹಾರಕ್ಕೆ ಬೇಡಿಕೆ ಹೆಚ್ಚಿದಂತೆಲ್ಲ ಕಡಿಮೆ ದರ್ಜೆಯ ಜಮೀನುಗಳನ್ನೂ ಬೇಸಾಯಕ್ಕೆ ತರಬೇಕಾಗುವುದೆಂಬ ಅಂಶವನ್ನು ಅದು ಒತ್ತಿ ಹೇಳುತ್ತದೆ. ಭೂಮಾಲೀಕ ವರ್ಗಕ್ಕೂ ಸಮಾಜದ ಇತರ ವರ್ಗಗಳಿಗೂ ಘರ್ಷಣೆಗೆ ಕಾರಣವೇನೆಂಬುದನ್ನು ಇದು ತಿಳಿಸುತ್ತದೆ. ಗೇಣಿ ಶ್ರಮರಹಿತ ವರಮಾನವೆಂದು ರಿಕಾರ್ಡೋ ಪ್ರತಿಪಾದಿಸಿದ ಮೇಲೆ ಅದನ್ನು ತೆರಿಗೆಯ ರೂಪದಲ್ಲಿ ಸರ್ಕಾರ ಕಸಿದುಕೊಳ್ಳಬೇಕೆಂದು ಮಿಲ್ ಒತ್ತಾಯಪಡಿಸಿದ. ಗೇಣಿಯನ್ನು ರದ್ದುಗೊಳಿಸಿದರೆ ಜನಸಾಮಾನ್ಯರ ದಾರಿದ್ರ್ಯ ನಿವಾರಣೆಯಾಗುವುದೆಂದು ಹೆನ್ರಿ ಜಾರ್ಜ್ ಭಾವಿಸಿದ. ಒಟ್ಟಿನಲ್ಲಿ ರಿಕಾರ್ಡೋ ಗೇಣಿ ಸಿದ್ಧಾಂತ ಸಮಾಜವಾದಿಗಳ ಅಭಿಪ್ರಾಯವನ್ನು ಪುಷ್ಟಿಗೊಳಿಸಲು ಸಹಾಯಕವಾಯಿತು.

**ಆಧುನಿಕ ಸಿದ್ಧಾಂತ :** ರಿಕಾರ್ಡೋ ಸಿದ್ಧಾಂತಕ್ಕನುಸಾರ ಗೇಣಿ ನಿಸರ್ಗದತ್ತವಾದ ಭೂಮಿಯ ವೈಶಿಷ್ಟ್ಯ. ಮೇಲುದರ್ಜೆಯ ಹಾಗೂ ಕೆಳದರ್ಜೆಯ ಭೂಮಿಗಳ ಉತ್ಪಾದನ ಸಾಮರ್ಥ್ಯಗಳ ವ್ಯತ್ಯಾಸವೇ ಗೇಣಿಗೆ ಕಾರಣ. ಆದ್ದರಿಂದ ಗೇಣಿ ಸಿದ್ಧಾಂತ ಭೂಮಿಗೆ ಮಾತ್ರ ಅನ್ವಯಿಸುತ್ತದೆ.

ಆದರೆ ಆಧುನಿಕ ಅರ್ಥಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಗೇಣಿ ಸಿದ್ಧಾಂತವನ್ನು ಭೂಮಿಗೆ ಮಾತ್ರವೇ ಅನ್ವಯಿಸಬೇಕಾಗಿಲ್ಲ. ಅದು ಎಲ್ಲ ಉತ್ಪಾದನಾಂಗಗಳಿಗೂ ಅನ್ವಯಿಸುತ್ತದೆ. ಭೂಮಿಯಂತೆಯೇ ಶ್ರಮ, ಬಂಡವಾಳ, ಸಂಘಟನೆ ಇವುಗಳ ಉತ್ಪಾದನ ಸಾಮರ್ಥ್ಯಗಳ ವ್ಯತ್ಯಾಸದಿಂದಲೂ ಗೇಣಿ ತಲೆದೋರುವುದೆನ್ನಬಹುದು. ದಕ್ಷ ಕಾರ್ಮಿಕರು ಮತ್ತು ಸಂಘಟಕರಿಂದ ಬರುವ ಅಧಿಕ ಪ್ರತಿಫಲವನ್ನು ಸಾಮರ್ಥ್ಯ ಗೇಣಿ ಎನ್ನಬಹುದು. ಹಾಗೆಯೇ ಬಂಡವಾಳಕ್ಕೆ ದೊರಕುವ ಸದವಕಾಶದಿಂದಾಗಿ ಬರುವ ಅಧಿಕ ಪ್ರತಿಫಲವನ್ನು ಸದವಕಾಶ ಗೇಣಿ ಅಥವಾ ಅವಸರ ಗೇಣಿ ಎನ್ನಬಹುದು. ಈ ದೃಷ್ಟಿಯಲ್ಲಿ ಗೇಣಿಗೂ ವೇತನಕ್ಕೂ ಯಾವ ವ್ಯತ್ಯಾಸವೂ ಇಲ್ಲವೆಂದು ವಿಕ್‌ಸ್ಟೀಡ್ ಹೇಳಿದ್ದಾನೆ. ವಾಕರ್ ಎಂಬ ಅಮೆರಿಕನ್ ಅರ್ಥಶಾಸ್ತ್ರಜ್ಞ ಲಾಭದ ಗೇಣಿ ಸಿದ್ಧಾಂತ ಎಂಬ ಪ್ರತ್ಯೇಕ ಸಿದ್ಧಾಂತವನ್ನೇ ಪ್ರತಿಪಾದಿಸಿದ್ದಾನೆ. ಇದರಿಂದ ವ್ಯಕ್ತವಾಗುವ ಅಂಶವೆಂದರೆ, ಗೇಣಿಯನ್ನು ಎಲ್ಲ ಉತ್ಪಾದನಾಂಗಗಳಲ್ಲೂ ಕಾಣಬಹುದು. ಮಾರ್ಷಲ್ ಹೇಳಿದಂತೆ ಗೇಣಿ ವಿಶಾಲತರ ಜಾತಿಯೊಂದರ (ಜೀನಸ್) ಪ್ರಮುಖ ಪ್ರಭೇದ (ಸ್ಪೀಷೀಸ್). ಆದ್ದರಿಂದ ಗೇಣಿ ಸಿದ್ಧಾಂತವನ್ನು ಭೂಮಿಗೆ ಮಾತ್ರವೇ ಅನ್ವಯಿಸದೆ ಎಲ್ಲ ಉತ್ಪಾದನಾಂಗಗಳಿಗೂ ಅನ್ವಯಿಸುವ ಒಂದು ಸಾಮಾನ್ಯ ಸಿದ್ಧಾಂತವಾಗಿ ರೂಪಿಸಬೇಕು. ಇದೇ ಆಧುನಿಕ ಗೇಣಿ ಸಿದ್ಧಾಂತದ ಉದ್ದೇಶ.

ಜಾನ್ ರಾಬಿನ್ಸನ್ ಪ್ರಕಾರ ಆಧುನಿಕ ಗೇಣಿ ಸಿದ್ಧಾಂತದ ಮುಖ್ಯಾಂಶಗಳು ಇವು: ಗೇಣಿಗೆ ಮೂಲ ಕಾರಣ ಉತ್ಪಾದನಾಂಗದ ಅಭಾವ; ಅಂದರೆ ಅದರ ಬೇಡಿಕೆಗೆ ತಕ್ಕ ಪ್ರಮಾಣದಲ್ಲಿ ಪೂರೈಕೆಯಿಲ್ಲದಿರುವುದು. ಇದು ಭೂಮಿಗೆ ಹೇಗೆ ಅನ್ವಯಿಸುವುದೋ ಹಾಗೆಯೇ ಇತರ ಉತ್ಪಾದನಾಂಗಗಳಿಗೂ ಅನ್ವಯಿಸುತ್ತದೆ. ನಿಸರ್ಗದತ್ತವಾದ ಭೂಮಿಯ ಪರಿಮಾಣವನ್ನು ಹೇಗೆ ಹೆಚ್ಚಿಸಲಾಗುವುದಿಲ್ಲವೋ ಹಾಗೆಯೇ ಮಾನವಕೃತವಾದ ಇತರ ಉತ್ಪಾದನಾಂಗಗಳ ಪರಿಮಾಣವನ್ನೂ ಅಲ್ಪಾವಧಿಯಲ್ಲಿ ಹೆಚ್ಚಿಸಲಾಗುವುದಿಲ್ಲ.

ಹೀಗಿರುವಾಗ ಅಲ್ಪಾವಧಿಯಲ್ಲಿ ಯಾವುದಾದರೂ ಉತ್ಪಾದನಾಂಗವನ್ನು ಹೆಚ್ಚು ಹೆಚ್ಚು ಪರಿಮಾಣಗಳಲ್ಲಿ ಉಪಯೋಗಿಸಿದರೆ, ಅದರ ಸೀಮಾಂತ ಏಕಮಾನದ ವರಮಾನ ಅದರ ಉತ್ಪನ್ನಕ್ಕೆ ಸಮನಾಗಿರುತ್ತದೆ. ಅದಕ್ಕೆ ಮೇಲ್ಮಟ್ಟದ ಏಕಮಾನಗಳಿಗೆ ಹೆಚ್ಚಿನ ವರಮಾನ ದೊರೆಯುತ್ತದೆ. ಆ ಹೆಚ್ಚುವರಿಯನ್ನು ಗೇಣಿ ಎನ್ನಬಹುದು.

ಈ ದೃಷ್ಟಿಯಲ್ಲಿ ಎಲ್ಲ ಉತ್ಪಾದನಾಂಗಗಳ ಪರಿಸ್ಥಿತಿಯೂ ಸ್ಥೂಲವಾಗಿ ಒಂದೇ. ವ್ಯತ್ಯಾಸವಿಷ್ಟೆ: ಭೂಮಿಯ ಪರಿಮಾಣ ಖಾಯಂ ಆಗಿ ನಿಶ್ಚಿತವಾಗಿರುತ್ತದೆ. ಇತರ ಉತ್ಪಾದನಾಂಗಗಳ ಪರಿಮಾಣ ತಾತ್ಕಾಲಿಕವಾಗಿ ನಿಶ್ಚಿತವಾಗಿರುತ್ತದೆ. ಸಾಕಷ್ಟು ಸಮಯ ದೊರೆತರೆ ಇವುಗಳ ಪರಿಮಾಣವನ್ನು ಹೆಚ್ಚಿಸಬಹುದು.

ಹೀಗೆ ಉತ್ಪಾದನಾಂಗಗಳಿಗೆ ಅಲ್ಪಾವಧಿಯಲ್ಲಿ ಅಭಾವವಿರುವಾಗ ಅವುಗಳಿಗೆ ಪರ್ಯಾಯ ಬೇಡಿಕೆಗಳಿರುತ್ತವೆ. ಆಗ ಅವು ಅಧಿಕ ವರಮಾನವನ್ನರಸುತ್ತ ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ವರ್ಗಾವಣೆ ಹೊಂದಲು ಪ್ರಯತ್ನಿಸುತ್ತವೆ. ಈ ಪರಿಸ್ಥಿತಿಯಲ್ಲಿ ಯಾವುದೇ ಉತ್ಪಾದನಾಂಗವನ್ನು ಒಂದು ಉದ್ಯಮದಲ್ಲಿ ಉಳಿಸಿಕೊಳ್ಳಲು ಅದಕ್ಕೆ ಸಲ್ಲಬೇಕಾದ ಬೆಲೆಯೇ ವರ್ಗಾವಣೆ ಸಂಪಾದನೆ (ಟ್ರಾನ್ಸ್‌ಫರ್ ಅರ್ನಿಂಗ್ಸ್). ಎಂದರೆ ಒಂದು ಉತ್ಪಾದನಾಂಗ ತನಗಿರುವ ಪರ್ಯಾಯ ಉದ್ಯೋಗಾವಕಾಶಗಳಲ್ಲಿ ಅತ್ಯಂತ ಫಲದಾಯಕ ಉದ್ಯೋಗದಿಂದ ಪಡೆಯುವ ಸಂಪಾದನೆ. ಈ ವರ್ಗಾವಣೆ ಸಂಪಾದನೆಯನ್ನು ಮೀರಿ ಬರುವ ವರಮಾನ, ಗೇಣಿ. ಉದಾಹರಣೆಗೆ ಒಬ್ಬ ಕಾರ್ಮಿಕನಿಗೆ ಒಂದು ಗಿರಣಿಯಲ್ಲಿ ದಿನಕ್ಕೆ 20 ರೂ. ವೇತನವಿದ್ದು, ಒಂದು ಅಂಗಡಿಯಲ್ಲಿ 12 ರೂ. ವೇತನ ದೊರೆಯುವುದಾದರೆ, ಆಗ ಗಿರಣಿಯ ದೃಷ್ಟಿಯಿಂದ ಅವನ ವರ್ಗಾವಣೆ ಸಂಪಾದನೆ 12 ರೂ. ಆತ ಗಿರಣಿಯ ಕೆಲಸ ಬಿಡದಂತೆ ತಡೆಯಲು ಅಷ್ಟನ್ನಾದರೂ ಕೊಡಲೇಬೇಕು. ಅದಕ್ಕೆ ಹೆಚ್ಚಾಗಿ ಕೊಡುವ 8 ರೂ. ಗೇಣಿ ಎನಿಸಿಕೊಳ್ಳುತ್ತದೆ.

ಆಲ್‌ಫ್ರೆಡ್ ಮಾರ್ಷಲ್ ಗೇಣಿ ಎಂಬ ಪದವನ್ನು ಭೂಮಿಯ ಹೆಚ್ಚಳದ ವರಮಾನಕ್ಕೇ ಮೀಸಲಿಟ್ಟು, ಇತರ ಉತ್ಪಾದನಾಂಗಗಳಿಗೆ ಅಲ್ಪಾವಧಿಯಲ್ಲಿ ದೊರೆಯುವ ಆಧಿಕ್ಯವನ್ನು ಅರೆ-ಗೇಣಿ ಅಥವಾ ಒಂದು ಬಗೆಯ ಗೇಣಿ ಎನ್ನುತ್ತಾನೆ. ಏಕೆಂದರೆ, ಗೇಣಿ ದೀರ್ಘಾವಧಿಯಲ್ಲಿಯೂ ಇರುತ್ತದೆ; ಆದರೆ ಅರೆ-ಗೇಣಿ ಅಲ್ಪಾವಧಿಯಲ್ಲಿ ಮಾತ್ರ ಇರುತ್ತದೆ; ದೀರ್ಘಾವಧಿಯಲ್ಲಿ ಅದು ಅದೃಶ್ಯವಾಗುತ್ತದೆ.

ಅರೆ-ಗೇಣಿ ತಲೆದೋರಲು ಕಾರಣವೇನೆಂದರೆ, ಅಲ್ಪಾವಧಿಯಲ್ಲಿ ಆ ಉತ್ಪಾದನಾಂಗದ ಪರಿಮಾಣವನ್ನು ಬೇಡಿಕೆಗೆ ಅನುಗುಣವಾಗಿ ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಆಗ ಆ ಉತ್ಪಾದನಾಂಗದ ಕೆಳದರ್ಜೆಯ ಏಕಮಾನಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಎಂದರೆ ಮೇಲ್ದರ್ಜೆಯ ಏಕಮಾನಗಳಿಗೆ ಹೆಚ್ಚಿನ ವರಮಾನ ಬರುತ್ತದೆ. ಆ ಆಧಿಕ್ಯವೆ ಗೇಣಿ. ಆದರೆ ಇದು ತಾತ್ಕಾಲಿಕ. ಏಕೆಂದರೆ, ಕಾಲಕ್ರಮದಲ್ಲಿ ಉತ್ತಮ ದರ್ಜೆಯ ಏಕಮಾನಗಳ ಸರಬರಾಯಿ ಹೆಚ್ಚಿದಂತೆ ಈ ಹೆಚ್ಚಳ ಕಡಿಮೆಯಾಗುತ್ತದೆ. ಉದಾಹರಣೆಗೆ, ಮೀನಿಗೆ ಇದ್ದಕ್ಕಿದ್ದಂತೆಯೇ ಅಧಿಕ ಬೇಡಿಕೆ ತಲೆದೋರಿದರೆ, ಮೀನಿನ ಬಲೆಗಳಿಗೆ ಬೇಡಿಕೆ ಹೆಚ್ಚುತ್ತದೆ. ಆದರೆ ಕೂಡಲೇ ಬಲೆಗಳ ಸರಬರಾಯಿಯನ್ನು ಹೆಚ್ಚಿಸಲಾಗುವುದಿಲ್ಲ. ಆದ್ದರಿಂದ ಹಳೆಯ ಬಲೆಗಳನ್ನು ಹೊರತರಲಾಗುತ್ತದೆ. ಆಗ ಉತ್ತಮ ಬಲೆಗಳಿಗೆ ಹಳೆಯ ಬಲೆಗಳಿಗಿಂತ ಹೆಚ್ಚಿನ ಬೆಲೆ ಬರುತ್ತದೆ. ಈ ಆಧಿಕ್ಯವೇ ಗೇಣಿ ಇದ್ದಂತೆ. ಆದರೆ ಇದು ತಾತ್ಕಾಲಿಕ ಮಾತ್ರ. ಏಕೆಂದರೆ, ಕಾಲಕ್ರಮದಲ್ಲಿ ಹೊಸ ಬಲೆಗಳು ತಯಾರಾಗಿ ಬರುತ್ತವೆ. ಬಲೆಗಳು ಪಡೆಯುತ್ತಿದ್ದ ಗೇಣಿ ಹೋಗುತ್ತದೆ.

ಅಲ್ಪಾವಧಿಯಲ್ಲಿ ಗೇಣಿ ಮತ್ತು ಅರೆ-ಗೇಣಿ ಎರಡೂ ಒಂದೇ. ಆದರೆ ದೀರ್ಘಾವಧಿಯಲ್ಲಿ ಅವು ಭಿನ್ನವಾದಂಥವು. ಈ ವ್ಯತ್ಯಾಸವನ್ನು ಮಾರ್ಷಲ್ ಉಲ್ಕಾ ಶಿಲೆಗಳ ಉದಾಹರಣೆಯ ಮೂಲಕ ತೋರಿಸಿದ್ದಾನೆ: ಒಂದೆಡೆ ಉಲ್ಕಾವೃಷ್ಟಿಯ ಫಲವಾಗಿ ಸಾವಿರಾರು ಉಲ್ಕಾ ಶಿಲೆಗಳು ಬಿದ್ದು ಚದುರಿದವೆನ್ನೋಣ. ಒಂದನ್ನೂ ಬಿಡದೆ ಅವನ್ನು ಆರಿಸಿಕೊಳ್ಳಲಾಯಿತೆಂದೂ ಭಾವಿಸೋಣ. ಅವು ಕೈಗಾರಿಕೆಗಳಿಗೆ ಉಪಯುಕ್ತವೆಂದು ಕಂಡುಬಂದರೆ ಅವನ್ನು ಆರಿಸಿಟ್ಟುಕೊಂಡಿರುವವರು ಅಧಿಕ ಹಣ ಪಡೆಯುತ್ತಾರೆ. ಆದರೆ ಅಧಿಕ ಬೆಲೆ ಕೊಟ್ಟರೂ ಅವುಗಳ ಪರಿಮಾಣವನ್ನು ಹೆಚ್ಚಿಸಲಾಗುವುದಿಲ್ಲ. ಹೀಗೆ ಅಭಾವವಿರುವಾಗ ಅವುಗಳಿಗೆ ಕೊಡುವ ಬೆಲೆ ಗೇಣಿ ಎನಿಸಿಕೊಳ್ಳುತ್ತದೆ. ಒಂದು ವೇಳೆ ಅವು ಸುಲಭವಾಗಿ ದೊರಕುವಂತಾದರೆ ಅವುಗಳಿಗೆ ಗೇಣಿಯೇ ಇರುವುದಿಲ್ಲ. ಹಾಗಲ್ಲದೆ ಅವುಗಳ ಅಭಾವ ತಾತ್ಕಾಲಿಕವಾಗಿದ್ದು, ದೀರ್ಘಾವಧಿಯಲ್ಲಿ ಅವುಗಳ ಪರಿಮಾಣವನ್ನು ಹೆಚ್ಚಿಸಬಹುದಾದರೆ ಅವುಗಳಿಗೆ ಅಲ್ಪಾವಧಿಯಲ್ಲಿ ದೊರೆಯುವ ಬೆಲೆ ಅರೆ-ಗೇಣಿ ಎನಿಸಿಕೊಳ್ಳುತ್ತದೆ. (ಕೆ.ಎನ್.ಎಂ.)

**ಗೇಬಲ್, (ವಿಲಿಯಂ) ಕ್ಲಾರ್ಕ್ :** 1901-60. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಸಿನಿಮಾ ಪ್ರಪಂಚದಲ್ಲಿ ಮೆರೆದು ನಟಸಾರ್ವಭೌಮನೆಂದೆನಿಸಿಕೊಂಡ ಖ್ಯಾತ ನಟ. ಒಂಟೇರಿಯೋ ರಾಜ್ಯದ ಕ್ಯಾಡಿಜ್‌ನಲ್ಲಿ ಜನಿಸಿದ. ಈತನ ತಂದೆ ವಿಲಿಯಂ ಎಚ್. ಗೇಬಲ್ ಒಬ್ಬ ಎಣ್ಣೆಬಾವಿ ಕೆಲಸಗಾರನಾಗಿದ್ದ. ಗೇಬಲ್ ಚಿಕ್ಕವನಿದ್ದಾಗ ಸಣ್ಣಪುಟ್ಟ ಕೆಲಸಗಳನ್ನು ಮಾಡಿದ್ದನಷ್ಟೆ. ಅನಂತರ ಎಡ್ ಲಿಲ್ಲೀ ಷೇರು ಕಂಪನಿಯಲ್ಲಿ ಕೆಲ ಕಾಲ ಕೆಲಸದಲ್ಲಿದ್ದ. ಆಗಾಗ್ಗೆ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಈತ ವಹಿಸುತ್ತಿದ್ದ. 1924ಕ್ಕೆ ಮೊದಲು ಕೆಲವು

ಮೂಕ ಚಲನಚಿತ್ರಗಳಲ್ಲಿ ಪಾತ್ರ ವಹಿಸಲು ಆರಂಭಿಸಿ ಕ್ರಮೇಣ ಸುಧಾರಿತ ಚಲನಚಿತ್ರಗಳಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದ. 1928ರಲ್ಲಿ ಮ್ಯಾಕಿನಲ್ ಎಂಬ ಚಿತ್ರದಲ್ಲಿ ಈತನಿಗೆ ಒಂದು ಮುಖ್ಯ ಪಾತ್ರವನ್ನು ಕೊಡಲಾಯಿತು. ಈತನ ಮೊದಲ ಪತ್ನಿ (ಮದುವೆಯಾದದ್ದು 1924ರಲ್ಲಿ) ಜೋಸಫೀನ್ ಡಿಲ್ಲಾನ್ ಎಂಬುವಳು ಆ ಪ್ರಮುಖ ಪಾತ್ರ ವಹಿಸಲು ಈತನಿಗೆ ಬಹುವಾಗಿ ನೆರವಾದಳು. ಅನಂತರ ಹಾಲಿವುಡ್ಡಿಗೆ ಬಂದು ಅಲ್ಲಿ ಹೆಚ್ಚು ಕಡಿಮೆ ಎಲ್ಲ ಪ್ರಮುಖ ಚಿತ್ರಗಳಲ್ಲೂ ಪಾತ್ರ ವಹಿಸತೊಡಗಿದ. 1931ರಲ್ಲಿ ತೆರೆಕಂಡ ಕ್ಲ್ಯಾರೆನ್ಸ್ ಬ್ರೌನ್ ತಯಾರಿಸಿದ ಎ ಫ್ರೀ ಸೋಲ್ ಎಂಬ ಚಿತ್ರದಲ್ಲಿ ಈತನ ದರೋಡೆಕಾರನ ಪಾತ್ರ ಜನರ ಮೆಚ್ಚುಗೆ ಗಳಿಸಿತು. ಖ್ಯಾತ ಚಲನಚಿತ್ರ ನಿರ್ಮಾಪಕ ಸಂಸ್ಥೆ ಎನಿಸಿದ ಮೆಟ್ರೋ–ಗೋಲ್ಡ್‌ವಿನ್–ಮೇಯರ್ ಸ್ಟುಡಿಯೋದಲ್ಲಿ 1931–1954 ರವರೆಗೆ ಇದ್ದು ಅಲ್ಲಿ ತಯಾರಾಗುತ್ತಿದ್ದ ಬಹುತೇಕ ಚಿತ್ರಗಳಲ್ಲಿ ಪಾತ್ರ ವಹಿಸಿದ. ಈತನನ್ನು ಅಲ್ಲಿನ ಸಿನಿಪ್ರೇಮಿಗಳು ತಮ್ಮ ಆರಾಧ್ಯದೈವವೆಂದೇ ಪರಿಗಣಿಸಿದ್ದರು. ಈತನ ಪಾತ್ರಗಳಲ್ಲಿ ಪೌರುಷ, ಹಠವಾರಿತನ, ಗಂಡುಗಲಿತನಗಳು ಕಂಡುಬರುತ್ತಿದ್ದು ಜನ ಈತನನ್ನು ಒರಟು ಸ್ವಭಾವದವನೆಂದು ಕರೆದರೂ ಗೇಬಲ್ ತನ್ನಲ್ಲಿದ್ದ ಆ ಆಕರ್ಷಣೀಯ ದೇಹ ಸೌಂದರ್ಯವನ್ನು ಎಂದೂ ಕಳೆದುಕೊಳ್ಳಲಿಲ್ಲ. ತನ್ನ ಮೂರನೆಯ ಪತ್ನಿ ಕ್ಯಾರಲ್ ಲಂಬಾರ್ಡ್ ತೀರಿಕೊಂಡ ಅನಂತರ ಅಮೆರಿಕ ಸಂಯುಕ್ತಸಂಸ್ಥಾನದ ವಾಯುಪಡೆಗೆ ಸೇರಿದ. ಆಗ ಎರಡನೆಯ ಮಹಾಯುದ್ಧದ ಸಮಯ. ಬಾಂಬು ಎಸೆತದ ವಿಮಾನ ಕಾರ್ಯಾಚರಣೆಗಳಲ್ಲಿ ಅತ್ಯದ್ಭುತ ಕೌಶಲವನ್ನು ಪ್ರದರ್ಶಿಸಿದ್ದರಿಂತ ಈತನಿಗೆ ವಾಯುಸೇನಾ ಪದಕವನ್ನೀಯಲಾಯಿತಲ್ಲದೆ ಈತನನ್ನು ಮೇಜರ್ ದರ್ಜೆಗೂ ಏರಿಸಲಾಯಿತು. ಈತನ ಐದನೆಯ ಪತ್ನಿ ಕೇ ವಿಲಿಯಂಸ್ ಸ್ಪ್ರೆಕ್ಲ್ಸ್ ತನ್ನ ಪತಿಯ ಮರಣದ ನಾಲ್ಕು ತಿಂಗಳಿನ ಅನಂತರ ಒಂದು ಗಂಡು ಮಗುವಿಗೆ ಜನ್ಮವಿತ್ತಳು.

ಜನಪ್ರಿಯ ಸಿನಿಮಾತಾರೆಯರಾದ ಗ್ರೀಟ ಗಾರ್ಬೋ, ಜೋನ್ ಕ್ರಾಫರ್ಡ್, ನಾರ್ಮ ಷಿಯರರ್, ಮರ್ನ ಲಾಯ್ ಮುಂತಾದವರೊಡನೆ ಗೇಬಲ್ ಪಾತ್ರವಹಿಸಿದ್ದಾನೆ. ಇವುಗಳೆಲ್ಲ ಜೀನ್ ಹಾರ್ಲೋಳೊಡನೆ ಈತ ನಟಿಸಿದ ಪಾತ್ರ ಜನಪ್ರಶಂಸೆಗಳಿಸಿತು. ಇವರೀರ್ವರೂ ಒಟ್ಟುಗೂಡಿ ಆರು ಚಿತ್ರಗಳಲ್ಲಿ ಪಾತ್ರವಹಿಸಿದರು. ಫ್ರಾಂಕ್ ಕಾಪ್ರಾ ತಯಾರಿಸಿದ ಇಟ್ ಹ್ಯಾಪನ್ಡ್ ಒನ್ ನೈಟ್ ಎಂಬ ಚಲನಚಿತ್ರದಲ್ಲಿನ ಈತನ ಪಾತ್ರಕ್ಕೆ ಅಕೆಡೆಮಿ ಪ್ರಶಸ್ತಿ ದೊರೆತಿದೆ (1934).

ಫ್ರಾಂಕ್ ಲಾಯ್ಡ್‌ನ ಮ್ಯೂಟಿನಿ ಆನ್ ದಿ ಬೌಂಟಿ (1935), ವಿಲಿಯಂ ಎಸ್. ವ್ಯಾನ್‌ಡೈಕ್‌ನ ಸ್ಯಾನ್ ಫ್ರಾನ್ಸಿಸ್ಕೋ (1936), ಜಾನ್ ಎಂ. ಸ್ಟಾಹ್ಲ್‌ನ ಪಾರ್ನೆಲ್ (1937); ಟೆಸ್ಟ್ ಪೈಲಟ್ (1938) ಮತ್ತು ವಿಕ್ಟರ್ ಫ್ಲೆಮಿಂಗನ ಗಾನ್ ವಿತ್ ದಿ ವಿಂಡ್ (1939) – ಮುಂತಾದವು ಈತನಿಗೆ ಹೆಸರು ತಂದ ಚಲನಚಿತ್ರಗಳು. ಆರ್ಥರ್ ಮಿಲ್ಲರನ ದಿ ಮಿಸ್‌ಫಿಟ್ಸ್ (1960) ಈತನ ಕಡೆಯ ಚಿತ್ರ. ಈತ ಹಾಲಿವುಡ್ಡಿನಲ್ಲಿ ಹೃದಯಾಘಾತದಿಂದ ನಿಧನನಾದ.

*

**ಗೇಬ್ರಿಯಲ್ ಫ್ಯಾಲ್ಲೋಪಿಯಸ್ :** 1523–62. ಹದಿನಾರನೆಯ ಶತಮಾನದಲ್ಲಿ ಇಟಲಿಯಲ್ಲಿದ್ದ ಅತ್ಯಂತ ಪ್ರಮುಖ ಅಂಗರಚನಾ ವಿಜ್ಞಾನಿಗಳ ಪೈಕಿ ಒಬ್ಬ. ತನ್ನ ಕಾಲದಲ್ಲಿ ಅತ್ಯಂತ ಮೇಧಾವಿ ಪ್ರಾಣಿ ವಿಜ್ಞಾನಿ ಎನಿಸಿಕೊಂಡಿದ್ದ ಕುವಿಯರನ, (1779–1882), ಅಭಿಪ್ರಾಯದಂತೆ ಫ್ಯಾಲ್ಲೋಪಿಯಸ್, ಯೂಸ್ಟೇಕಿಯಸ್ ಮತ್ತು, ವೆಸೇಲಿಯಸ್ ಇವರು ಮೂವರೂ ಹದಿನಾರನೆಯ ಶತಮಾನದಲ್ಲಿ ಅಂಗರಚನಾ ವಿಜ್ಞಾನಕ್ಕೆ ಅಧಿಕೃತದಾತರೆಂದು ನಿರ್ವಿವಾದವಾಗಿ ಪರಿಗಣಿಸಲ್ಪಡತಕ್ಕವರು. ಫ್ಯಾಲ್ಲೋಪಿಯಸ್ 1523ರಲ್ಲಿ ಮೊಡೆನ ಎಂಬಲ್ಲಿ ಜನಿಸಿದ. ಅಲ್ಲೆ ವಿದ್ಯಾಭ್ಯಾಸಮುಗಿಸಿ ಅಲ್ಲಿಯ ಮುಖ್ಯ ಆರಾಧನಾ ಮಂದಿರದ ಮಂಡಲಿಯ ಸದಸ್ಯನಾದ. ಆಸ್ತಿಕತೆಯ ಕಟ್ಟುನಿಟ್ಟುಗಳಿಗಿಂತ ಬಂಧವಿಮುಕ್ತ ಲೌಕಿಕದ ಬಗ್ಗೆ ಆದರ ಉಳ್ಳವನಾದ್ದರಿಂದ ಆ ಸ್ಥಾನದಿಂದ ಬಿಡುಗಡೆ ಹೊಂದಿ ಫೆರ್ರಾರ ಎಂಬಲ್ಲಿ ವೈದ್ಯಕೀಯ ವ್ಯಾಸಂಗ ಮಾಡಿದ. ಕೆಲಕಾಲ ಅಲ್ಲಿಯೇ ಅಂಗರಚನಾ ವಿಜ್ಞಾನಾಧ್ಯಾಪಕನಾಗಿದ್ದು ಮುಂದೆ 1548ರಲ್ಲಿ ಪೀಸಾ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ. ಮೂರು ವರ್ಷಗಳ ಬಳಿಕ ಪಾಡುವಾ ವಿಶ್ವವಿದ್ಯಾಲಯದಲ್ಲಿ ಅಂಗರಚನಾ ವಿಜ್ಞಾನ ಪ್ರಾಧ್ಯಾಪಕನಾಗಿ ಕೆಲಸ ಮಾಡಲು ತೆರಳಿದ. ಅಲ್ಲಿ ಇವನ ಗುರುವೂ ಅನಂತರ ಸ್ನೇಹಿತನೂ ಆಗಿದ್ದ ವೆಸೇಲಿಯಸ್, ಪ್ರಾಣಿ ಹಾಗೂ ಮಾನವಶವಗಳನ್ನು ಕೊಯ್ದು ಪ್ರತ್ಯಕ್ಷವಾಗಿ ಅಂಗರಚನೆಯನ್ನು ವ್ಯಾಸಂಗಿಸುವ ವಿಧಾನವನ್ನು ಆ ಹಿಂದೆಯೇ ಸ್ಥಾಪಿಸಿದ್ದ. ಅದರಂತೆ ಆತ (ವೆಸೇಲಿಯಸ್) ಗಳಿಸಿದ್ದ ಜ್ಞಾನವನ್ನು ಗ್ರಂಥೀಕರಿಸಿದ್ದಕ್ಕಾಗಿ, ಗ್ಯಾಲೆನ್ನನ ಗ್ರಂಥಗಳ ಕುರುಡುಪಾಠ ಹೇಳುತ್ತ ಅಂಗರಚನಾ ವಿಜ್ಞಾನ ಬೋಧಿಸುತ್ತಿದ್ದ ಇತರ ವಿಜ್ಞಾನಿಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸಿ ವೆಸೇಲಿಯಸ್ ಪಾಡುವಾವನ್ನು ಬಿಟ್ಟು ಹೊರಟು ಹೋಗುವಂತೆ ಮಾಡಿದ್ದರು. ಇದಾದ ಸುಮಾರು ಐದಾರು ವರ್ಷಗಳ ತರುವಾಯ ವೆಸೇಲಿಯಸ್ಸನ ಗಾದಿ ಏರಿದ ಫ್ಯಾಲ್ಲೋಪಿಯಸ್ ಮೊದಲಿನವನ ವ್ಯಾಸಂಗಕ್ರಮವನ್ನೇ ಮುಂದುವರಿಸಿ ಪ್ರಸಿದ್ಧಿ ಪಡೆದ. ಗ್ಯಾಲೆನ್ನನ ಗ್ರಂಥಗಳ ಕುರುಡುಪಾಠ ಮಾಡುವವರ ಅವಹೇಳನಗೈಯುವುದರಲ್ಲಿ ಫ್ಯಾಲ್ಲೋಪಿಯಸ್ ವೆಸೇಲಿಯಸ್ಸಿಗಿಂತ ಏನೂ ಕಡಿಮೆ ಇರಲಿಲ್ಲ. ಪ್ರಮುಖವಾಗಿ ಕಿವಿ ಮತ್ತು ಪ್ರಜನನಾಂಗಗಳಿಗೆ ಸಂಬಂಧಪಟ್ಟಂತೆ ಮೂಲವ್ಯಾಸಂಗಗಳನ್ನು ಮುಂದುವರಿಸುತ್ತ ಫ್ಯಾಲ್ಲೋಪಿಯಸ್ ಹನ್ನೊಂದು ವರ್ಷ ಪಾಡುವಾದಲ್ಲಿದ್ದು 1562 ಅಕ್ಟೋಬರ್ 9ರಂದು ಅಲ್ಲೆ ನಿಧನನಾದ.

ಕಿವಿಯೊಳಗಿರುವ ಕಾರ್ಡಟಿಂಪನಿ ನರ ಹಾಗೂ ಅರ್ಧವೃತ್ತನಾಳಗಳು (ಸೆಮಿಸರ್ಕ್ಯುಲರ್ ಕೆನಾಲ್ಸ್), ಟ್ರೈಜೆಮಿನಲ್, ಆಡಿಟರಿ ಮತ್ತು ಗ್ಲಾಸೋಫೆರಿನ್‌ಜಿಯಲ್ ನರಗಳು, ತಲೆಬುರುಡೆ ತಳದ ಸ್ಫೀನಾಯ್ಡ್ ಮೂಳೆಯ ಒಳಗಿರುವ ಡೊಗರು ಗರ್ಭಕೋಶನಾಳಗಳು, ಉದರದ ಒಳಗೆ ತೆರೆದುಕೊಳ್ಳುವ ದ್ವಾರಗಳು—ಇವುಗಳ ಇರುವಿಕೆಯನ್ನು ಫ್ಯಾಲ್ಲೋಪಿಯಸ್ ಸ್ಥಾಪಿಸಿದ. ಅಲ್ಲದೆ ಗರ್ಭಕೋಶನಾಳಗಳು (ಓವೇರಿಯನ್ ಟ್ಯೂಬ್ಸ್), ಯೋನಿ (ವೆಜೈನ), ಭಗಲಿಂಗ (ಕ್ಲೈಟೊರಿಸ್) ಜರಾಯು (ಪ್ಲಾಸೆಂಟ), ಒಳಕಿವಿಯ ಶಂಖಾಕಾರದ ಶ್ರವಣಭಾಗ (ಕಾಲ್ಲಿಯ) ಮುಂತಾದ ಅನೇಕ ದೇಹಭಾಗಗಳಿಗೆ ವೈಜ್ಞಾನಿಕ ಹೆಸರುಗಳನ್ನು ಕೊಟ್ಟ. ಭ್ರೂಣದ ಧಮನಿಗಳು ಮತ್ತು ಮೂಳೆಗಳ ವಿನ್ಯಾಸವನ್ನು ಮೊತ್ತಮೊದಲಿಗೆ ವಿವರಿಸಿದ್ದು ಫ್ಯಾಲ್ಲೋಪಿಯಸ್ಸೇ. ಅಂಗರಚನಾವಿಜ್ಞಾನಕ್ಕೆ ಇವನ ಈ ಕೊಡುಗೆಗಳಿಗಾಗಿ ಗರ್ಭಕೋಶ ನಾಳಗಳಿಗೆ ಫ್ಯಾಲ್ಲೋಪಿಯನ್ ಟ್ಯೂಬ್ಸ್ ಎಂದು ಹೆಸರಿಟ್ಟು ಮುಂದಿನ ಪೀಳಿಗೆಯವರು ಇವನನ್ನು ಗೌರವಿಸಿದ್ದಾರೆ. ಫ್ಯಾಲ್ಲೋಪಿಯಸ್ ಬರೀ ಅಂಗರಚನಾವಿಜ್ಞಾನಿ ಮಾತ್ರವಲ್ಲ. ಪಾಡುವಾದಲ್ಲಿ ಅವನು ಸಸ್ಯವಿಜ್ಞಾನಿಯೂ ಆಗಿದ್ದು ಆ ವಿಜ್ಞಾನಕ್ಕೆ ಸಂಬಂಧಪಟ್ಟ ಉದ್ಯಾನವನ್ನು ಉತ್ತಮ ಮಟ್ಟದಲ್ಲಿ ವೈಜ್ಞಾನಿಕವಾಗಿ ನಿರ್ಮಾಣ ಮಾಡಿಯೂ ಪ್ರಸಿದ್ಧಿ ಪಡೆದ. ಇವನು ರಚಿಸಿದ ಅಬ್ಸರ್ವೇಷನ್ಸ್ ಅನಟಾಮಿಕೆ ಎಂಬ ಗ್ರಂಥ ಒಂದೇ ಇವನ ಜೀವಮಾನದ ಕಾಲದಲ್ಲಿ (1561) ಪ್ರಕಟಿಸಲ್ಪಟ್ಟು ಇವನಿಗೆ ಬಹು ಗೌರವವನ್ನೂ (ವೆಸೇಲಿಯಸ್‌ನಿಂದಲೂ) ಪ್ರಸಿದ್ಧಿಯನ್ನೂ ಗಳಿಸಿಕೊಟ್ಟಿತ್ತು. ಇವನ ಮರಣಾನಂತರ 1564ರಲ್ಲಿ ಪ್ರಚಾರಿತವಾದ ಡಿ ಮಾರ್ಬೋ ಗ್ಯಾಲ್ಲಿಕೊ ಎಂಬ ಗ್ರಂಥದಲ್ಲೂ ಇವನ ಲೇಖನ ಇದೆ. ಇದು ಮುಂದೆ ಪರಂಗಿ ರೋಗದ ವ್ಯಾಸಂಗಕ್ಕೆ ದಾರಿ ಮಾಡಿಕೊಟ್ಟಂತೆ ಕಾಣುತ್ತದೆ. 1584ರಲ್ಲಿ ಫ್ಯಾಲ್ಲೋಪಿಯಸ್ಸನ ಶಿಷ್ಯರು ಅವನ ಬರಹಗಳೆಂದು ಮೂರು ಸಂಪುಟಗಳನ್ನು ಪ್ರಕಟಿಸಿದರು. ಆದರೆ ಇವುಗಳಲ್ಲಿ ಎಷ್ಟು ಅಂಶ ನಿಜವಾಗಿ ಫ್ಯಾಲ್ಲೋಪಿಯಸ್ಸನದೇ ಎನ್ನುವುದು ಅನುಮಾನ. (ಎಸ್.ಆರ್.ಆರ್.)

**ಗೇಮೋವ್, ಜಾರ್ಜ್ :** 1904–68. ರಷ್ಯದಲ್ಲಿ ಹುಟ್ಟಿ ಬೆಳೆದು ಅನಂತರದ ವರ್ಷಗಳಲ್ಲಿ ಅಮೆರಿಕದಲ್ಲಿ ನೆಲೆಸಿದ ಭೌತವಿಜ್ಞಾನಿ. ಜನಪ್ರಿಯ ವಿಜ್ಞಾನಲೇಖಕನಾಗಿ ಅಸಾಧಾರಣ ಖ್ಯಾತಿಯನ್ನು ಗಳಿಸಿದ್ದೇ ಕಾರಣವಿರಬಹುದು. ಇವನ ಪುಸ್ತಕಗಳನ್ನು ಓದಿ ಮೆಚ್ಚಿಕೊಂಡಿರುವ ಸಾಮಾನ್ಯ ಓದುಗರನೇಕರಿಗೆ ಗೇಮೋವ್ ವೈಜ್ಞಾನಿಕ ವೃತ್ತಗಳಲ್ಲಿಯೂ ಮಾನ್ಯತೆ ಪಡೆದಿದ್ದ ದೊಡ್ಡ ವಿಜ್ಞಾನಿಯಾಗಿದ್ದ ಎಂಬ ವಿಷಯವೇ ಗೊತ್ತಿಲ್ಲ. ಈತ ಭೌತಶಾಸ್ತ್ರದಲ್ಲಿ ಮತ್ತು ಖಗೋಳ ವಿಜ್ಞಾನದಲ್ಲಿ ಗಣನೀಯ ಸಂಶೋಧನೆ ನಡೆಸಿರುವನಲ್ಲದೆ ಅಣುಜೀವವಿಜ್ಞಾನದಲ್ಲಿಯೂ ಆಸಕ್ತಿ ತಳೆದು ಆ ಕ್ಷೇತ್ರಕ್ಕೆ ಕೂಡ ಗಮನಾರ್ಹ ಕೊಡುಗೆ ನೀಡಿದ್ದಾನೆ.

ಗೇಮೋವ್ ಯುಕ್ರೇನಿನಲ್ಲಿ ಕಪ್ಪು ಸಮುದ್ರದ ತೀರದಲ್ಲಿರುವ ಒಡೆಸ್ಸ ನಗರದಲ್ಲಿ 1904 ರ ಮಾರ್ಚ್ 4 ರಂದು ಜನಿಸಿದ. ಪ್ರಾಂತೀಯ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಗಿಸಿದ ಬಳಿಕ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿ ಪದವೀಧರನಾದ. ಪದವಿ ಪಡೆದ ತರುಣದಲ್ಲಿ ಒಂದು ಸಲ ಜರ್ಮನಿಯ ಗಾಟಿಂಗೆನ್ನಿನಲ್ಲಿ ಒಂದು ಬೇಸಿಗೆ ಅಧ್ಯಯನ ಶಿಬಿರದಲ್ಲಿ ಭಾಗವಹಿಸಿದ. ಪರಮಾಣು ರಚನೆಗೆ ಕ್ವಾಂಟಮ್ ಸಿದ್ಧಾಂತವನ್ನು ಅನ್ವಯಿಸುವುದರಲ್ಲಿ ಮ್ಯಾಕ್ಸ್ ಬಾರ್ನ್ ತಂಡದವರು

ಅಲ್ಲಿ ಸಾಧಿಸಿದ್ದ ಪ್ರಗತಿಯಿಂದ ಪ್ರಭಾವಿತನಾಗಿ ಪರಮಾಣು ಬೀಜದ ಅಧ್ಯಯನಕ್ಕೂ ಕ್ವಾಂಟಮ್ ಸಿದ್ಧಾಂತವನ್ನು ಅನ್ವಯಿಸುವ ಪ್ರಯತ್ನ ನಡೆಸಿ, ನೈಸರ್ಗಿಕ ವಿಕಿರಣ ಪಟುತ್ವವನ್ನೂ (ನ್ಯಾಚುರಲ್ ರೇಡಿಯೊ ಆ್ಯಕ್ಟಿವಿಟಿ) ಲಾರ್ಡ್ ರುದರ್ಫರ್ಡ್ ಸಾಧಿಸಿದ್ದ ಧಾತುಪರಿವರ್ತನೆಗಳನ್ನೂ (ಟ್ರಾನ್ಸ್‌ಮ್ಯುಟೇಷನ್ ಆಫ್ ಎಲಿಮೆಂಟ್ಸ್) ಸಮಂಜಸವಾಗಿ ವಿವರಿಸುವುದರಲ್ಲಿ ಜಯಶೀಲನಾದ. ಈ ಸಂಶೋಧನೆಗಳ ಆಧಾರದ ಮೇಲೆ ಈತ 1928 ರಲ್ಲಿ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದ ಪಿ.ಎಚ್‌ಡಿ. ಪದವಿಯನ್ನು ಪಡೆದ. 1928–29ರಲ್ಲಿ ಕೋಪನ್‌ಹೇಗನ್ನಿನ ಇನ್ಸ್‌ಟಿಟ್ಯೂಟ್ ಆಫ್ ಥಿಯೊರಿಟಿಕಲ್ ಫಿಸಿಕ್ಸ್‌ನಲ್ಲಿ ನೀಲ್ಸ್ ಬೋರನ ಜೊತೆಗೆ ಅದೇ ಸಂಶೋಧನೆಗಳನ್ನು ಮುಂದುವರಿಸಿದ. ಅದೇ ಸಮಯದಲ್ಲಿ, ಸೂರ್ಯನ ಅಂತರಾಳದಲ್ಲಿ ನಡೆಯುವ ಉಷ್ಣಬೈಜಿಕ ಕ್ರಿಯೆಗಳನ್ನು (ಥರ್ಮೊನ್ಯೂಕ್ಲಿಯರ್ ರಿಯಾಕ್ಷನ್ಸ್) ಕುರಿತ ಸಂಶೋಧನೆಯಲ್ಲಿ ಆಟ್ಕಿನ್ಸನ್ ಮತ್ತು ಹೌಟರ್‌ಮಾನ್ಸ್‌ರವರೊಂದಿಗೆ ಸಹಕರಿಸಿದ. ಅಲ್ಲಿಂದ ಒಂದು ವರ್ಷ ಕೇಂಬ್ರಿಜಿನಲ್ಲಿ ಲಾರ್ಡ್ ರುದರ್ಫರ್ಡ್‌ನೊಡನೆಯೂ ಪುನಃ ಒಂದು ವರ್ಷ ಕೋಪನ್‌ಹೇಗನ್ನಿನಲ್ಲಿ ನೀಲ್ಸ್ ಬೋರ್‌ನೊಡನೆಯೂ ಕಳೆದು 1931 ರಲ್ಲಿ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕನಾದ. 1933ರಲ್ಲಿ ಬ್ರಸೆಲ್ಸ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಾಲ್ವೆ ಕಾಂಗ್ರೆಸಿನಲ್ಲಿ ಭಾಗವಹಿಸಲು ಅಲ್ಲಿಗೆ ಹೋಗಿದ್ದಾಗ ಅಮೆರಿಕದ ಮಿಚಿಗನ್ ವಿಶ್ವವಿದ್ಯಾಲಯದವರು ಗೇಮೋವ್‌ನನ್ನು ಉಪನ್ಯಾಸಕ್ಕಾಗಿ ತಮ್ಮಲ್ಲಿಗೆ ಆಹ್ವಾನಿಸಿದರು. ಆ ಪ್ರಕಾರ ಅಮೆರಿಕಕ್ಕೆ ತೆರಳಿದ ಗೇಮೋವ್ ಪುನಃ ತಾಯ್ನಾಡಿಗೆ ಹಿಂತಿರುಗಲೇ ಇಲ್ಲ: ಜಾರ್ಜ್ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕತ್ವವನ್ನು ಸ್ವೀಕರಿಸಿ ಅಮೆರಿಕದಲ್ಲಿಯೇ ನೆಲೆಸಿದ. 1956ರ ವರೆಗೂ ಅದೇ ವಿಶ್ವವಿದ್ಯಾಲಯದಲ್ಲಿದ್ದು ಅನಂತರ ಕಾಲೊರಾಡೋ ವಿಶ್ವವಿದ್ಯಾಲಯಕ್ಕೆ ತೆರಳಿದ.



ಪರಮಾಣು ಬೀಜದಲ್ಲಿರುವ ಪ್ರೋಟಾನ್ ಮತ್ತು ನ್ಯೂಟ್ರಾನುಗಳ ನಡುವೆ ಸ್ಥಿರ ವಿದ್ಯುದಾಕರ್ಷಣೆ (ಎಲೆಕ್ಟ್ರೊಸ್ಟ್ಯಾಟಿಕ್ ಅಟ್ರ್ಯಾಕ್ಷನ್) ಇಲ್ಲವಾದರೂ ಅವು ಒಂದಕ್ಕೊಂದು ಬಿಗಿಯಾಗಿ ಅಂಟಿಕೊಂಡಿರುವುದಕ್ಕೆ ಕಾರಣವಾದ ಯಾವುದೋ ಪ್ರಬಲವಾದ ಬಲಗಳಿವೆಯಷ್ಟೆ? ಈ ಬಲಗಳಿಗೂ ದ್ರವದಲ್ಲಿ ಅಣುಗಳು ಒಂದಕ್ಕೊಂದು ಅಂಟಿಕೊಂಡಿರುವುದಕ್ಕೆ ಕಾರಣವಾದ ಸಾಂಸಕ್ತಿಕ ಬಲಗಳಿಗೂ (ಕೊಹಿಸಿವ್ ಫೋರ್ಸಸ್) ಸಾಮ್ಯವಿರಬಹುದೆಂದು 1930 ರಲ್ಲಿ ಗೇಮೋವ್ ಸೂಚಿಸಿದ. ಅದರ ಪ್ರಕಾರ ಪರಮಾಣು ಬೀಜವನ್ನು ದ್ರವದ ಒಂದು ಹನಿ ಎಂದು ಚಿತ್ರಿಸಿಕೊಳ್ಳಬಹುದು. ಗೇಮೋವ್ ಮುಂದಿಟ್ಟ ಈ ಭಾವನೆಗಳಿಂದ ಪರಮಾಣು ಬೀಜದ ವರ್ತನೆಯನ್ನು ಅರ್ಥಮಾಡಿಕೊಳ್ಳಲು, ಅದರಲ್ಲೂ ಬೀಜ ವಿದಳನವನ್ನು (ನ್ಯೂಕ್ಲಿಯರ್ ಫಿಷನ್) ವಿವರಿಸಲು ಬಹಳ ಅನುಕೂಲವಾಯಿತು. ಈ ಸಿದ್ಧಾಂತವನ್ನು ಬೋರ್‌ನ ಸಹಕಾರದಿಂದ ಈತ ಮಂಡಿಸಿದ್ದು ಕೋಪನ್‌ಹೇಗನ್‌ನಲ್ಲಿದ್ದಾಗ. ಅದೇ ಸಮಯದಲ್ಲಿ ಗೇಮೋವ್ ಆಟ್ಕಿನ್ಸನ್ ಮತ್ತು ಹೌಟರ್‌ಮಾನ್ಸ್‌ರವರೊಂದಿಗೆ ಸಂಶೋಧನೆ ನಡೆಸಿ ನಕ್ಷತ್ರಗಳ ಒಳಗಡೆ ಸಂಭವಿಸುವ ಉಷ್ಣಬೈಜಿಕ ಕ್ರಿಯೆಗಳು ನಡೆಯುವ ದರವನ್ನು ಲೆಕ್ಕಹಾಕಲು ತನ್ನ ದ್ರವದ ಹನಿ ಮಾದರಿಯನ್ನು ಅನ್ವಯಿಸಿದ. ಇವನು ರೂಪಿಸಿದ ಸೂತ್ರವನ್ನು ಹೈಡ್ರೊಜನ್ ಬಾಂಬ್ ತಯಾರಿಕೆಯಲ್ಲಿ ಬಳಸಲಾಗುತ್ತದೆ.

ವಾಷಿಂಗ್‌ಟನ್ನಿನಲ್ಲಿದ್ದಾಗ ಗೇಮೋವ್ ಕೆಂಪು ದೈತ್ಯ ನಕ್ಷತ್ರಗಳ (ರೆಡ್ ಜಯಂಟ್ ಸ್ಟಾರ್ಸ್) ಒಳರಚನೆಯ ಬಗ್ಗೆ ಸಂಶೋಧನೆಯನ್ನು ಕೈಗೊಂಡ. ಈ ನಕ್ಷತ್ರಗಳ ಪ್ರಮುಖ ಇಂಧನವೆಂದು ನಂಬಲಾಗಿರುವ ಹೈಡ್ರೊಜನ್ ಮುಗಿಯುತ್ತ ಬಂದಂತೆ ನಕ್ಷತ್ರದ ಉಷ್ಣತೆ ಹೆಚ್ಚಾಗುವುದೆಂದು ಅವನು ತೋರಿಸಿದ. ನಕ್ಷತ್ರದ ವಯಸ್ಸೂ ಹೆಚ್ಚಾಗುತ್ತ ಹೋದಂತೆ ಅದು ತಣ್ಣಗಾಗುವುದೆಂದು ಅದುವರೆಗೆ ಭಾವಿಸಲಾಗಿದ್ದುದು ತಪ್ಪೆಂಬುದು ಇದರಿಂದ ವ್ಯಕ್ತವಾಯಿತು. ನಕ್ಷತ್ರದ ಉಷ್ಣತೆ ಹೀಗೆ ಅಧಿಕವಾಗುತ್ತ ಹೋಗಿ ಒಂದು ಹಂತದಲ್ಲಿ ನಕ್ಷತ್ರದೊಳಗಿನ ಬೈಜಿಕಕ್ರಿಯೆಗಳ ಫಲವಾಗಿ ಅಪಾರ ಸಂಖ್ಯೆಯ ನ್ಯೂಟ್ರಿನೊಗಳು ಉತ್ಪತ್ತಿಯಾಗುವುದೆಂದೂ ಅವು ನಕ್ಷತ್ರದ ದೇಹದ ಮೂಲಕ ಸರಾಗವಾಗಿ ಹಾದು ಹೊರಗೆ ಬಂದುಬಿಡುವುದರಿಂದ ನಕ್ಷತ್ರದ ಉಷ್ಣತೆ ಅಲ್ಲಿಂದ ಮುಂದೆ ವೇಗವಾಗಿ ಬಿದ್ದುಹೋಗುವುದೆಂದೂ ಅವನು ತೋರಿಸಿದ. ಗೇಮೋವ್ ಮತ್ತು ಷೋನ್‌ಬರ್ಗ್ ಜೊತೆಗೂಡಿ ರೂಪಿಸಿದ ಈ ಸಿದ್ಧಾಂತ ಉರ್ಕ ಪ್ರಕ್ರಿಯೆ (ಉರ್ಕ ಪ್ರೋಸೆಸ್) ಎಂದು ಪ್ರಸಿದ್ಧವಾಗಿದೆ.

ವಿಶ್ವದ ಉಗಮದ ಬಗ್ಗೆ ಲೆಮೇತರ್ ಪ್ರತಿಪಾದಿಸಿರುವ ಮಹಾಸ್ಫೋಟ ಸಿದ್ಧಾಂತದ (ಬಿಗ್ ಬ್ಯಾಂಗ್ ಥಿಯರಿ) ಪ್ರಮುಖ ಬೆಂಬಲಿಗರಲ್ಲಿ ಗೇಮೋವ್ ಕೂಡ ಒಬ್ಬ. ಲೆಮೇತರನ ಕಲ್ಪನೆಯ ವಿಶ್ವಾಂಡ (ಕಾಸ್ಮಿಕ್ ಎಗ್) ಸ್ಫೋಟಗೊಂಡ ತರುವಾಯ ಅನತಿ ಕಾಲದಲ್ಲಿಯೇ ರಾಸಾಯನಿಕ ಧಾತುಗಳೆಲ್ಲವೂ ಹೇಗೆ ರೂಪುಗೊಳ್ಳುವುವೆಂಬ ಬಗ್ಗೆ ಗೇಮೋವ್ ತನ್ನದೇ ಆದ ಒಂದು ಸಿದ್ಧಾಂತವನ್ನು ಮಂಡಿಸಿದ್ದಾನೆ. ಮಹಾಸ್ಫೋಟ ಸಿದ್ಧಾಂತಕ್ಕೆ ವಿರುದ್ಧವಾದ ಸ್ಥಿಮಿತ ಸ್ಥಿತಿ ಸಿದ್ಧಾಂತ (ಸ್ಟೆಡಿ ಸ್ಟೇಟ್ ಥಿಯರಿ) ಅಥವಾ ಅವಿರತ ಸೃಷ್ಟಿ ಸಿದ್ಧಾಂತದ (ಕಂಟಿನ್ಯುಯಸ್ ಕ್ರಿಯೇಷನ್ ಥಿಯರಿ) ಪ್ರಮುಖ ಬೆಂಬಲಿಗನಾದ ಫ್ರೆಡ್ ಹಾಯ್ಲ್‌ನಿಗೂ ಮಿಗಿಲಾದ ಪರಿಣಾಮಕಾರೀ ಜನಪ್ರಿಯ ಲೇಖಕ ಗೇಮೋವ್. ತನ್ನ ಪುಸ್ತಕಗಳ ಮತ್ತು ಲೇಖನಗಳ ಮೂಲಕ ಗೇಮೋವ್ ಲೆಮೇತರ್‌ನ ಸಿದ್ಧಾಂತಕ್ಕೆ ಅಪಾರವಾದ ಪ್ರಚಾರ ನೀಡಿದ್ದಾನೆ.

1954 ರಲ್ಲಿ ಗೇಮೋವ್ ಜೀವವಿಜ್ಞಾನದಲ್ಲಿ ಆಸಕ್ತನಾಗಿ ಪ್ರೋಟೀನುಗಳ ಸಂಶ್ಲೇಷಣೆಗೆ ನ್ಯೂಕ್ಲೆಯಿಕ್ ಆಮ್ಲ ಒಂದು ವಿಧವಾದ ಸಂಕೇತ ಭಾಷೆಯಾಗಿ ವರ್ತಿಸುವುದೆಂಬ ಸೂಚನೆಯನ್ನು ಮುಂದಿಟ್ಟ. ಅಲ್ಲದೆ ಪ್ರತಿಯೊಂದು ಅಮೈನೋ ಆಮ್ಲಕ್ಕೂ ಒಂದೊಂದು ನ್ಯೂಕ್ಲಿಯೊಟೈಡ್ ತ್ರಿವಳಿ ಸಂಕೇತವಾಗಿರುವುದೆಂದು ಮೊಟ್ಟಮೊದಲು ಸೂಚಿಸಿದವನೂ ಈತನೇ. ಈ ಸಿದ್ಧಾಂತಕ್ಕೆ 1961 ರಿಂದ ಈಚೆಗೆ ಹೇರಳವಾದ ಪುರಾವೆ ದೊರೆತಿದೆ.

ಗೇಮೋವ್ ಖ್ಯಾತ ಜನಪ್ರಿಯ ವಿಜ್ಞಾನ ಲೇಖಕ. ಈತ ಹುಟ್ಟಿದ್ದು ಬೆಳೆದದ್ದು ರಷ್ಯದಲ್ಲಿ; ವಿದ್ಯಾಭ್ಯಾಸ ಪಡೆದದ್ದು ರಷ್ಯನ್ ಭಾಷೆಯ ಮೂಲಕ. ಬಹುಶಃ ಈತನಿಗೆ 25 ವರ್ಷ ತುಂಬುವವರೆಗೂ ಇಂಗ್ಲಿಷ್ ಭಾಷೆಯೊಡನೆ ಹೆಚ್ಚಿನ ಸಂಪರ್ಕವಿರಲಿಲ್ಲ. ಆದರೂ ಇಂಗ್ಲಿಷ್ ಲೇಖನ ಕಲೆಯಲ್ಲಿ ಸಿದ್ಧಹಸ್ತನೆನಿಸಿಕೊಂಡ. ನಾಲ್ಕಾರು ಪ್ರೌಢವಿಜ್ಞಾನ ಗ್ರಂಥಗಳನ್ನಲ್ಲದೆ ಹತ್ತಿಪ್ಪತ್ತು ಜನಪ್ರಿಯ ವೈಜ್ಞಾನಿಕ ಪುಸ್ತಕಗಳನ್ನು ಬರೆದಿದ್ದಾನೆ. ಟಾಂಪ್‌ಕಿನ್ಸ್ ಇನ್ ವಂಡರ್ ಲ್ಯಾಂಡ್, ಟಾಂಪ್‌ಕಿನ್ಸ್ ಎಕ್ಸ್‌ಪ್ಲೋರ್ಸ್ ದಿ ಆಟಮ್ ಮುಂತಾದ ಈತನ ಟಾಂಪ್‌ಕಿನ್ಸ್ ಶ್ರೇಣಿಯ ಪುಸ್ತಕಗಳು ಮೊದಲು ಹೊರಬಂದಾಗ ಇಂಗ್ಲಿಷ್ ಓದುಗರ ಮೇಲೆ ಅವು ಬೀರಿದ ಪ್ರಭಾವ ಅದ್ಭುತವಾದುದಾಗಿತ್ತು. ಪರಿಣಾಮವಾಗಿ ಗೇಮೋವ್ ಎಂಬ ಹೆಸರು ಜನಪ್ರಿಯ ವಿಜ್ಞಾನ ಲೇಖಕ ಎಂಬುದಕ್ಕೆ ಒಂದು ಪರ್ಯಾಯ ಪದವಾಗಿ ಬಿಟ್ಟಿದೆ.

ಡೆನ್ಮಾರ್ಕಿನ ರಾಯಲ್ ಅಕಾಡೆಮಿ ಆಫ್ ಸೈನ್ಸಸ್ ಗೇಮೋವ್‌ನನ್ನು 1950 ರಲ್ಲಿ ಸಂಸ್ಥೆಯ ಸದಸ್ಯನನ್ನಾಗಿ ಸ್ವೀಕರಿಸಿ ಗೌರವಿಸಿತು. 1953 ರಲ್ಲಿ ಈತ ಅಮೆರಿಕದ ರಾಷ್ಟ್ರೀಯ ಸೈನ್ಸ್ ಅಕಾಡೆಮಿಯ ಸದಸ್ಯನಾಗಿ ಚುನಾಯಿತನಾದ. 1965ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಚರ್ಚಿಲ್ ಕಾಲೇಜಿನ ವಿದೇಶೀ ಫೆಲೋ ಆಗಿ ಚುನಾಯಿತನಾದ. ಯುನೆಸ್ಕೊ ಸಂಸ್ಥೆಯವರು ಪ್ರತಿ ವರ್ಷ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕಾಗಿ ನೀಡುವ ಕಳಿಂಗ ಬಹುಮಾನ 1956ರಲ್ಲಿ ಗೇಮೋವ್‌ಗೆ ದೊರೆಯಿತು. ಒರಿಸ್ಸ ರಾಜ್ಯದ ಒಂದು ಶ್ರೀಮಂತ ಮನೆತನದವರು ನಿರ್ಮಿಸಿರುವ ದತ್ತಿಯಿಂದ ಕೊಡಲಾಗುವ ಈ ಬಹುಮಾನದ ನಿಯಮದ ಪ್ರಕಾರ ಬಹುಮಾನಿತರು ಭಾರತಕ್ಕೆ ಬಂದು ಭಾರತದ ರಾಷ್ಟ್ರಪತಿಯವರಿಂದ ಈ ಬಹುಮಾನವನ್ನು ಸ್ವೀಕರಿಸಬೇಕು. ಅದರಂತೆ ಗೇಮೋವ್ 1956ರಲ್ಲಿ ಭಾರತಕ್ಕೆ ಬಂದು ಭಾರತದ ವಿವಿಧ ನಗರಗಳಿಗೆ ಭೇಟಿ ಕೊಟ್ಟು ಉಪನ್ಯಾಸಗಳನ್ನು ನೀಡಿದ್ದ.

1968ರ ಆಗಸ್ಟ್ 19ರಂದು ಕಾಲೊರಾಡೋನಲ್ಲಿರುವ ಬೌಲ್ಡರ್ ನಗರದಲ್ಲಿ ಈತ ನಿಧನನಾದ. (ಜಿ.ಆರ್.ಎಲ್.)

**ಗೇಯರೂಪಕ** : **ನೋಡಿ–ಗೀತರೂಪಕ**

**ಗೇಯಲ್** : ಸ್ತನಿವರ್ಗ, ಆರ್ಟಿಯೊಡ್ಯಾಕ್ಟಿಲ ಗಣ, ಬೋವಿಡೀ ಕುಟುಂಬಕ್ಕೆ ಸೇರಿದ ಒಂದು ಪ್ರಾಣಿ. ಬೈಬಾಸ್ ಫ್ರಾಂಟ್ಯಾಲಿಸ್ ಇದರ ಶಾಸ್ತ್ರೀಯ ನಾಮ. ಭಾರತ ಮತ್ತು ಆಗ್ನೇಯ ಏಷ್ಯದಲ್ಲಿ ಕಾಣಬರುವ ಕಾಡುಕೋಣದ (ಗೌರ್) ಸಾಕುತಳಿ ಇದು ಎಂದು ಅನೇಕ ಪ್ರಾಣಿ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಆದರೆ ಕಾಡುಕೋಣಕ್ಕೂ ಗೇಯಲಿಗೂ ಹಲವಾರು ವ್ಯತ್ಯಾಸಗಳಿವೆ. ಕಾಡುಕೋಣಕ್ಕೆ ಹೋಲಿಸಿದರೆ ಗೇಯಲ್ ಚಿಕ್ಕಗಾತ್ರದ್ದು, ಇದರ ಎತ್ತರ 1.3 ಮೀ (5'), ಉದ್ದ 3 ಮೀ (9') ತೂಕ ಸುಮಾರು 540 ಕಿಗ್ರಾಂ. ದೇಹದ ಬಣ್ಣ ಕಪ್ಪುಮಿಶ್ರಿತ ಕಂದು. ಕೆಲವು

ಸಲ ನೀಲಿ ಛಾಯೆಯಿರುವುದುಂಟು. ಮಂಡಿಯ ಕೆಳಗಿನ ಭಾಗ ಮತ್ತು ಬಾಲದ ತುದಿಗಳು ಮಾತ್ರ ಬೆಳ್ಳಗಿವೆ. ಕೊಂಬುಗಳು ಮೋಟು. ತಲೆಯ ಆಚೀಚೆ ಅಗಲವಾಗಿ ಹರಡಿವೆ. ವ್ಯವಸಾಯಕ್ಕಾಗಲಿ, ಗಾಡಿಗೆ ಕಟ್ಟುವುದಕ್ಕಾಗಲಿ, ಹೈನಿಗಾಗಲಿ ಗೇಯಲ್



ಉಪಯುಕ್ತವಿಲ್ಲ. ಆದರೆ ಇದರ ಮಾಂಸ ಬಹಳ ರುಚಿಯಾದುದು. ಇದಕ್ಕಾಗಿಯೇ ಅಸ್ಸಾಂ, ಟೆನಸ್ಸಿರಂ ಮತ್ತು ಉತ್ತರ ಮಯನ್ಮಾರ್‌ನಲ್ಲಿ ಇದನ್ನು ಸಾಕುತ್ತಾರೆ. (ಎಚ್.ಬಿ.ಡಿ.)

**ಗೇಯಸ್ :** ರೋಮಿನ ಪ್ರಖ್ಯಾತ ನ್ಯಾಯ ತತ್ತ್ವವೇತ್ತ (ಜೂರಿಸ್ಟ್). ಈತ 2ನೆಯ ಶತಮಾನದಲ್ಲಿ ಬದುಕಿದ್ದನೆಂಬುದಷ್ಟೇ ತಿಳಿದಿದೆ. ಇವನು ರೋಂ ನ್ಯಾಯಶಾಸ್ತ್ರ ಚರಿತ್ರೆಯ ಸುವರ್ಣಯುಗದ ಆದಿಕಾಲದಲ್ಲಿದ್ದ. ಕೆಲವು ವಿದ್ವಾಂಸರು ಗೇಯಸ್ ಗ್ರೀಕನೆಂದು ಅಭಿಪ್ರಾಯಪಟ್ಟರೂ ಅದಕ್ಕೆ ಯಾವ ನಿರ್ದಿಷ್ಟ ಆಧಾರಗಳೂ ಇಲ್ಲ. ರೋಮಿನ ಪೌರನಾಗಿದ್ದು, ಲ್ಯಾಟಿನ್ ಭಾಷೆಯಲ್ಲಿ ಪರಿಣತನಾಗಿ, ಅದರಲ್ಲಿ ಅನೇಕ ಪುಸ್ತಕಗಳನ್ನು ಬರೆದಿರುವುದರಿಂದ ರೋಮಿನವನೆಂದು ಇತರ ವಿದ್ವಾಂಸರ ಅಭಿಪ್ರಾಯ.

ಸಮಕಾಲೀನ ಗ್ರಂಥಗಳಲ್ಲಾಗಲೀ ಆಗಿನ ಕಾಲದ ಚಕ್ರವರ್ತಿಗಳಿಂದ ವಿಶೇಷ ಪುರಸ್ಕೃತಿ ಹೊಂದಿದ ನ್ಯಾಯಶಾಸ್ತ್ರಜ್ಞರ ಮಾಲಿಕೆಯಲ್ಲಾಗಲೀ ಇವನ ಹೆಸರು ಕಂಡು ಬರದಿರುವುದರಿಂದ ಇವನು ತನ್ನ ಜೀವಿತಕಾಲದಲ್ಲಿ ವಿಶೇಷ ಪ್ರಸಿದ್ಧಿ ಹೊಂದಿರಲಿಲ್ಲ ವೆಂದು ಊಹಿಸಬಹುದು. 350ರ ಅನಂತರ ಗೇಯಸನ ಪುಸ್ತಕಗಳು ವಿದ್ವಜ್ಜನ ಪ್ರಿಯವಾಗಿ ಇವನ ಹೆಸರು ಖ್ಯಾತಿ ಪಡೆಯಿತು. ಯಾವುದೇ ವ್ಯವಹರಣೆಯಲ್ಲಿ ತೀರ್ಪು ನೀಡಬೇಕಾದಾಗ ನ್ಯಾಯಾಲಯದ ಅಧಿಕಾರಿಗಳು ಪರಿಗಣಿಸಬೇಕಾದ ಐವರು ನ್ಯಾಯತತ್ತ್ವವೇತ್ತರಲ್ಲಿ ಗೇಯಸನೂ ಒಬ್ಬನೆಂದು 3ನೆಯ ವ್ಯಾಲೆಂಟಿಯನ್ ಚಕ್ರವರ್ತಿ ಇವನನ್ನು ಹೆಸರಿಸಿದ. ಈ ಐವರ ಕೃತಿಗಳು ರೋಮನ್ ನ್ಯಾಯದ ಅತ್ಯಂತ ಮುಖ್ಯ ಆಕರಗಳಾಗಿ ಪರಿಣಮಿಸಿದುವು.

ಈತ ಬರೆದ ಅನೇಕ ಗ್ರಂಥಗಳಲ್ಲಿ ಈತನ ನ್ಯಾಯಸೂತ್ರಗಳು (ಇನ್ಸ್ಟಿಟ್ಯೂಟ್ಸ್) ಮುಖ್ಯ. ಈ ಗ್ರಂಥ ಸುಮಾರು 350 ವರ್ಷಗಳ ಕಾಲ ರೋಮಿನ ನ್ಯಾಯಶಾಸ್ತ್ರಾಭ್ಯಾಸಿಗಳ ಕೈಪಿಡಿಯಾಗಿತ್ತೆಂದು ಪೋಸ್ಟೆ ಎಂಬ ವಿದ್ವಾಂಸ ಹೇಳುತ್ತಾನೆ. ಸುಪ್ರಸಿದ್ಧವಾದ ಜಸ್ಟಿನಿಯನನ ನ್ಯಾಯಸೂತ್ರಗಳು ರೂಪಿತವಾದ್ದು ಗೇಯಸನ ಗ್ರಂಥದ ಆಧಾರದ ಮೇಲೆ. ಆ ಮಾದರಿಯಲ್ಲಿ ಗೇಯಸ್ ನ್ಯಾಯಶಾಸ್ತ್ರಾಧ್ಯಾಪಕನಾಗಿದ್ದನೆಂದೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೇ ಈ ಗ್ರಂಥವನ್ನು ಬರೆದನೆಂದೂ ನಂಬಲಾಗಿದೆ. ನ್ಯಾಯಸೂತ್ರಗಳನ್ನು ಕುರಿತು ಗೇಯಸ್ ಬರೆದಿರುವ ಗ್ರಂಥ ನಾಲ್ಕು ಭಾಗಗಳಾಗಿ ವಿಂಗಡವಾಗಿದೆ : 1. ವ್ಯಕ್ತಿಗಳು, ಕಾನೂನಿನ ದೃಷ್ಟಿಯಲ್ಲಿ ಅವರ ಭಿನ್ನ ಸ್ಥಾನಮಾನಗಳು; 2. ವಸ್ತುಗಳು ಮತ್ತು ಅವುಗಳನ್ನು ಪಡೆದುಕೊಳ್ಳುವ ವಿಧಾನಗಳು, ಉಯಿಲಿಗೆ ಸಂಬಂಧಿಸಿದ ಕಾನೂನು; 3. ಉಯಿಲು ಮಾಡದೆ ಮರಣಿಸಿದವನ ಉತ್ತರಾಧಿಕಾರ ಮತ್ತು ಹೊಣೆಗಳು; 4. ವ್ಯವಹರಣಕ್ರಮ ಮತ್ತು ಅದರ ನಾನಾ ರೂಪಗಳು. ಎಲ್ಲ ನ್ಯಾಯವೂ ವ್ಯಕ್ತಿಗಳಿಗೆ, ಸ್ವತ್ತಿಗೆ ಅಥವಾ ವ್ಯವಹರಣ ಕ್ರಮಕ್ಕೆ ಸಂಬಂಧಿಸಿದ್ದೆಂಬ ಆಧಾರದ ಮೇಲೆ ಅವನು ವಿವೇಚನೆಯನ್ನು ವರ್ಗೀಕರಿಸಿದ. ಈ ವರ್ಗೀಕರಣ ವಿಧಾನವನ್ನು ಜಸ್ಟಿನಿಯನನ ನ್ಯಾಯಸೂತ್ರಗಳಲ್ಲೂ ಅನುಸರಿಸಲಾಗಿದೆ. ಆದರೆ ಈ ವರ್ಗೀಕರಣದ ಭಿನ್ನಭಿನ್ನ ಭಾಗಗಳ ನಿಶ್ಚಿತವಾದ ಅರ್ಥ ಹಾಗೂ ಪರಿಮಿತಿಯ ಬಗೆಗೆ ತೀವ್ರ ವಿವಾದವಿದೆ. ಪ್ರಪ್ರಥಮವಾಗಿ ಈ ವರ್ಗೀಕರಣ ಮಾಡಿದವನು ಗೇಯಸ್ ಅಲ್ಲವೆಂದು ಅನೇಕ ಪಂಡಿತರು ಅಭಿಪ್ರಾಯಪಡುತ್ತಾರೆ. ಈ ವರ್ಗೀಕರಣ ಪರಂಪರಾಗತವಾಗಿದ್ದರೂ ಇದರ ಆಧಾರದ ಮೇಲೆ ಸುವ್ಯವಸ್ಥಿತವಾದ ವಿಷಯ ನಿರೂಪಣೆ ಮಾಡಿದವರಲ್ಲಿ ಗೇಯಸನೇ ಮೊದಲಿಗ; ಮಾರ್ಗದರ್ಶಕ.

ರೋಂ ಗಣರಾಜ್ಯ ಕಾಲದ ಮತ್ತು ಚಕ್ರಾಧಿಪತ್ಯದ ಮೊದಲನೆಯ ಎರಡು ಶತಮಾನಗಳಲ್ಲಿ ರೂಢಿಯಲ್ಲಿದ್ದ ನ್ಯಾಯಪದ್ಧತಿಯನ್ನು ಕುರಿತ ವಿಷಯಗಳಿಗೆ ಗೇಯಸನ ಈ ಕೃತಿಯೇ ಆಧಾರ. ಜಸ್ಟಿನಿಯನನ ನಿಬಂಧ (ಡೈಜೆಸ್ಟ್) ರೋಮನ್ ನ್ಯಾಯಶಾಸ್ತ್ರದ ಇತಿಹಾಸ ದೃಷ್ಟಿಯಿಂದ ಅಸಮರ್ಪಕವಾಗಿದ್ದು ಅನೇಕ ವಿಷಯಗಳಲ್ಲಿ ಊಹಾಪೋಹ ಗಳಿಗೆ ಮತ್ತು ವಿವಾದಗಳಿಗೆ ಅವಕಾಶ ನೀಡಿತ್ತು. 1816ರಲ್ಲಿ ಗೇಯಸನ ನ್ಯಾಯಸೂತ್ರಗಳ ಪ್ರತಿ ದೊರಕಿದಾಗ ಈ ಸಂದೇಹಗಳು ಪರಿಹಾರವಾದುವು. (ಬಿ.ವಿ.ಎ.)

**ಗೇರಿಕೆ, ಆಟ್ಟೋ ಫಾನ್ :** 1602–86. ಜರ್ಮನಿಯ ಭೌತವಿಜ್ಞಾನಿ. 1602ನೆಯ ನವೆಂಬರ್ 20ರಂದು ಪ್ರಷ್ಯನ್ ಸ್ಯಾಕ್ಸನಿಯ ಮ್ಯಾಗ್ಡೆಬರ್ಗ್ ಎಂಬಲ್ಲಿ ಜನನ. ಜರ್ಮನಿಯ ಲೇಡನ್‌ನಲ್ಲಿ ನ್ಯಾಯ ಹಾಗೂ ಗಣಿತಶಾಸ್ತ್ರಗಳ ಅಭ್ಯಾಸ.

ಮ್ಯಾಗ್ಡೆಬರ್ಗ್ ಅರ್ಧಗೋಳಗಳು

ಎರ್‌ಫರ್ಟ್ ಎಂಬಲ್ಲಿ ಮುಖ್ಯ ಎಂಜಿನಿಯರ್ ಆಗಿ ನೇಮಕ (1626). ಮ್ಯಾಗ್ಡೆಬರ್ಗ್‌ನ ಉಪಮೇಯರ್ ಆಗಿ (1627) ಬಳಿಕ ಅದೇ ನಗರದ ಮೇಯರ್ ಆಗಿ (1646) ಆಯ್ಕೆ. ಮುಂದೆ ಬ್ರಾಂಡನ್‌ಬರ್ಗ್‌ನ ಮ್ಯಾಜಿಸ್ಟ್ರೇಟ್ ಆಗಿ ಕೂಡ ನೇಮಕಗೊಂಡ. ತನ್ನ ವಿರಾಮ ಕಾಲವನ್ನು ವೈಜ್ಞಾನಿಕ ಸಂಶೋಧನೆಯಲ್ಲಿ ಅದರಲ್ಲೂ ವಾಯುಶಾಸ್ತ್ರ ಅಭ್ಯಾಸ ಮತ್ತು ಸಂಶೋಧನೆಯಲ್ಲಿ ಕಳೆಯುತ್ತಿದ್ದ. ಗೆಲಿಲಿಯೊ, ಪಾಸ್ಕಲ್ ಮತ್ತು ಟಾರಿಸೆಲ್ಲಿ ಇವರ ಸಂಶೋಧನೆಗಳಿಂದ ಪ್ರಭಾವಿತನಾಗಿ ನಿರ್ವಾತ ಉಂಟುಮಾಡುವ ವಿಧಾನಗಳನ್ನು ಕುರಿತು ಪ್ರಯೋಗಗಳನ್ನು ಮಾಡಿದ. ಈ ದಿಶೆಯಲ್ಲಿ ಗೇರಿಕೆ ಅನೇಕ ವಿಫಲತೆಗಳನ್ನು ಅನುಭವಿಸಿದ. ತರುವಾಯ ವಾಯುರೇಚಕವನ್ನು ರಚಿಸುವುದರಲ್ಲಿ ಯಶಸ್ವಿಯಾದ (1650). ಇದರ ಜೊತೆಗೆ ಸುತ್ತುತ್ತಿರುವ ಗಂಧಕದ ಚಂಡಿನ ವಿದ್ಯುದೀಕರಣದ ಮೇಲೆ ಆಧಾರಗೊಂಡಿರುವ ಒಂದು ವಿದ್ಯುದ್ಯಂತ್ರವನ್ನು ಕೂಡ ರಚಿಸಿದ. ಧೂಮಕೇತುಗಳು ಕಾಣಿಸಿಕೊಳ್ಳುವ ಅವಧಿಕಾಲವನ್ನು ಗಣಿಸಿದ. ಗೇರಿಕೆ ಬರೆದ ಎಕ್ಸ್‌ಪೆರಿಮೆಂಟ ನೋವ ಮ್ಯಾಗ್ಡೆಬರ್ಗಿಕ ಡೀ ವ್ಯಾಕ್ಯು ಓ ಸ್ಪೇಶಿಯೋ ಎಂಬ ಪುಸ್ತಕ ಬಹು ಪ್ರಸಿದ್ಧವಾದದ್ದು. ಅದರಲ್ಲಿ ಮ್ಯಾಗ್ಡೆಬರ್ಗ್ ಪ್ರಯೋಗ ಎಂಬ ಒಂದು ಚಿತ್ರವಿದೆ. ಒಳಗೆ ನಿರ್ವಾತಗೊಳಿಸಿರುವ ಮತ್ತು ಪರಸ್ಪರ ಅಂಟಿಕೊಂಡಿರುವ ಟೊಳ್ಳಾದ ಎರಡು ಅರ್ಧಗೋಳಗಳನ್ನು ಕುದುರೆಗಳ ಎರಡು ಗುಂಪು ವಿರುದ್ಧ ದಿಕ್ಕಿನಲ್ಲಿ ಎಳೆದರೂ ಆ ಅರ್ಧಗೋಳಗಳನ್ನು ಬೇರ್ಪಡಿಸ ಲಾಗದು ಎಂಬುದನ್ನು ತೋರಿಸುವುದೇ ಆ ಚಿತ್ರ.

1686ರ ಮೇ11 ರಂದು ಗೇರಿಕೆ ಮೃತನಾದ. (ಪಿ.ವಿ.)

**ಗೇರಿ ಶಿಕ್ಷಣಪದ್ಧತಿ :** ಅಮೆರಿಕದ ಸಂಯುಕ್ತ ಸಂಸ್ಥಾನಗಳ ಇಂಡಿಯಾನದ ಗೇರಿ ಎಂಬಲ್ಲಿನ ಶಾಲೆಯೊಂದರಲ್ಲಿ ಶಾಲಾ ಮುಖ್ಯಾಧಿಕಾರಿಯಾಗಿದ್ದ ವಿಲಿಯಂ ಎ. ವರ್ಟ್ ಎಂಬಾತ 1908ರಲ್ಲಿ ಮೊಟ್ಟಮೊದಲು ಆಚರಣೆಗೆ ತಂದ ಒಂದು ಶಿಕ್ಷಣಪದ್ಧತಿ. ಶಾಲೆಯ ಮಕ್ಕಳಿಗೆ ಬೌದ್ಧಿಕ ಶಿಕ್ಷಣದ ಜೊತೆಗೆ ದೈಹಿಕ, ಕಲಾತ್ಮಕ ಮತ್ತು ವೈಜ್ಞಾನಿಕ ಶಿಕ್ಷಣವನ್ನೂ ನೀಡಬೇಕೆಂದು ವರ್ಟ್ ಭಾವಿಸಿದ. ಅದಕ್ಕಾಗಿ ತನ್ನ ಶಾಲೆಗೆ ಆಟದ ಮೈದಾನ, ಈಜುಕೊಳ, ತೋಟ, ವಿಜ್ಞಾನ ಪ್ರಯೋಗಾಲಯ, ಯಂತ್ರಕಾರ್ಯಾಗಾರ, ಗಾನ ಮತ್ತು ನೃತ್ಯಮಂದಿರ–ಇವನ್ನೆಲ್ಲ ನಿರ್ಮಿಸಿಕೊಂಡ. ಆಟ, ಪ್ರಯೋಗಾಲಯ ಮತ್ತು ಕಾರ್ಯಾಗಾರದ ಕೆಲಸ, ಸಾಮಾಜಿಕ ಮತ್ತು ಕ್ರಿಯಾತ್ಮಕ ಕಾರ್ಯ, ಸಾಂಪ್ರದಾಯಿಕ ವಿಷಯಗಳ ವ್ಯಾಸಂಗ–ಇವನ್ನು ಶಾಲೆಯ ಕಾರ್ಯಕ್ರಮಗಳಲ್ಲಿ ಸೇರಿಸಿದ್ದ. ಮಕ್ಕಳ ಕಾಲವನ್ನು ಫಲದಾಯಕವಾಗಿ ಬಳಸಿಕೊಳ್ಳುವುದಕ್ಕೂ ವಿರಾಮದಲ್ಲಿ ಹೊರಗೆ ಅವರು ವ್ಯರ್ಥ ಕಾಲಹರಣ ಮಾಡುವುದನ್ನು ತಪ್ಪಿಸುವುದಕ್ಕೂ ವ್ಯಾಸಂಗದ ಅನಂತರ ಆಟವನ್ನೂ ಆಟದ ಅನಂತರ ವ್ಯಾಸಂಗವನ್ನೂ ಪರ್ಯಾಯವಾಗಿ ವೇಳಾಪಟ್ಟಿಯಲ್ಲಿ ಸೇರಿಸಿದ. ಇದಕ್ಕನುಕೂಲಿಸುವಂತೆ ಇಡೀ ಶಾಲೆಯ ವಿದ್ಯಾರ್ಥಿಗಳನ್ನು ಎರಡು ಪಂಗಡಗಳಾಗಿ (ಪ್ಲಟೂನ್) ವಿಂಗಡಿಸಿದ–ತರಗತಿಯ ಪಂಗಡ ಮತ್ತು ಆಟ ಇಲ್ಲವೆ ಕೆಲಸದ ಪಂಗಡ ಎಂದು. ಮೊದಲ ಪಂಗಡ ತರಗತಿಯ ವ್ಯಾಸಂಗದಲ್ಲಿದ್ದರೆ ಎರಡನೆಯ ಪಂಗಡ ಆಟದ ಮೈದಾನದಲ್ಲೋ ಇತರ ಕಾರ್ಯಾಲಯದಲ್ಲೋ ಇರುವಂತೆ ವೇಳಾಪಟ್ಟಿಯನ್ನು ರಚಿಸಿದ. ಇದರಿಂದ ಇಡೀ ಶಾಲೆಯ ಸೌಲಭ್ಯವನ್ನು ದಿನದ ಎಲ್ಲ ವೇಳೆಯಲ್ಲೂ ಬಳಸಿಕೊಳ್ಳುವ ಅವಕಾಶವಾಗಿ, ಅಲ್ಲಿನ ಶಿಕ್ಷಣಾಧಿಕಾರಿಗಳು ಕಟ್ಟಡದ ನಿರ್ಮಾಣಕ್ಕೆ ಸಾಮಾನ್ಯಶಾಲೆಗೆ ಬೇಕಾಗುತ್ತಿದ್ದ ಹಣದಲ್ಲಿ ಅರ್ಧವನ್ನು ಮಾತ್ರ

ವ್ಯಯಮಾಡಬೇಕಾಗುತ್ತಿತ್ತು. ಅಲ್ಲಿ ವಿದ್ಯಾರ್ಥಿಗಳು ಇತರರಿಗಿಂತ ಹೆಚ್ಚುಕಾಲ ಶಾಲೆಯಲ್ಲಿದ್ದು ಕಡಿಮೆ ವೆಚ್ಚದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಲಿಕೆಯನ್ನು ಸಾಧಿಸುತ್ತಿದ್ದರು.

ಗೇರಿ ಶಾಲೆಯಲ್ಲಿ ಕಿಂಡರ್‌ಗಾರ್ಟನ್ನಿನಿಂದ ಪ್ರೌಢಶಾಲೆಯವರೆಗಿನ ತರಗತಿಗಳಿರುತ್ತಿದ್ದು, ಹಿರಿಯರನ್ನು ನೋಡಿ ಕಿರಿಯರು ಕಲಿಯುವುದಕ್ಕೂ ಕಿರಿಯರ ಬಗ್ಗೆ ಹಿರಿಯರು ತಮ್ಮ ಹೊಣೆಯನ್ನು ನಿರ್ವಹಿಸುವುದನ್ನು ರೂಢಿಸಿಕೊಳ್ಳುವುದಕ್ಕೂ ಅವಕಾಶವಿತ್ತು. ವಿದ್ಯಾರ್ಥಿಗಳು ಕಲಿಯುವ ವಿಷಯಗಳನ್ನೂ ಮಾಡುವ ಕೆಲಸಗಳನ್ನೂ ಸಮಾಜ ಜೀವನದೊಡನೆ ಸಂಬಂಧಿಸಿಕೊಳ್ಳಲಾಗುತ್ತಿತ್ತು. ರಸಾಯನಶಾಸ್ತ್ರದಲ್ಲಿ ಬರುವ ನೀರು ಸರಬರಾಜು ಪಾಠವನ್ನು ಆ ಊರಿನ ಪೌರಸಭೆಯ ನೀರಿನ ಇಲಾಖೆಯ ಎಂಜಿನಿಯರೂ ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದ ಪಾಠವನ್ನು ಅಲ್ಲಿನ ಆರೋಗ್ಯಾಧಿಕಾರಿಯೂ ಬೋಧಿಸುವ ವ್ಯವಸ್ಥೆಯಿತ್ತು. ಹೀಗೆಯೆ ಇತರ ಪಾಠಗಳಲ್ಲಿ ಕೂಡ. ಕಾರ್ಯಾಗಾರಗಳಲ್ಲಿ ಶಾಲೆಗೆ ಬೇಕಾಗುವ ವಸ್ತುಗಳನ್ನು ಮಾಡಿಸುತ್ತಿದ್ದರು. ಗೃಹವಿಜ್ಞಾನದ ತರಗತಿಯಲ್ಲಿ ಮಧ್ಯಾಹ್ನದ ಉಪಾಹಾರ ತಯಾರಿಸಿ ಬಡಿಸುತ್ತಿದ್ದರು. ಯಂತ್ರಕಾರ್ಯಾಗಾರ, ಉಪನ್ಯಾಸ ಮಂದಿರ, ಆಟದ ಮೈದಾನ-ಇತ್ಯಾದಿಗಳಲ್ಲಿರುವಾಗ ಮಕ್ಕಳು ಊರಿನ ಹಿರಿಯರ ಸಂಪರ್ಕವನ್ನೂ ಪಡೆಯಬಹುದಾಗಿದ್ದು ಅವರ ಸಾಮಾಜಿಕ ಜೀವನ ವೃದ್ಧಿಯಾಗಲು ಅವಕಾಶವಾಗುತ್ತಿತ್ತು. ದಿನಾಚರಣೆ, ಚರ್ಚೆ, ನಾಟಕಾಭಿನಯ, ನೃತ್ಯ-ಇವುಗಳಿಗೆ ಸಿದ್ಧತೆ ಪಡೆಯುವಾಗ ಅವರ ಕಲಾಜೀವನ ವರ್ಧಿಸುತ್ತಿತ್ತು.

ಒಟ್ಟಿನಲ್ಲಿ ಈ ಶಿಕ್ಷಣಪದ್ಧತಿ ಸಾಂಪ್ರದಾಯಿಕ ಶಿಕ್ಷಣವೀಯುವುದರ ಜೊತೆಗೆ ವಿದ್ಯಾರ್ಥಿಗಳ ಪೂರ್ಣ ಬೆಳವಣಿಗೆಗೂ ಅವಕಾಶವೀಯುತ್ತಿತ್ತು; ವಿದ್ಯಾರ್ಥಿಗಳಿಗೆ ಅಲ್ಲಿನ ಜೀವನ ಅರ್ಥಪೂರ್ಣವಾಗಿರುತ್ತಿತ್ತು. ಈ ಪದ್ಧತಿ ಮೂಲರೂಪದಲ್ಲಿ ಈಗ ಅಷ್ಟಾಗಿ ಪ್ರಚಾರದಲ್ಲಿಲ್ಲದಿದ್ದರೂ ಅದರ ಉತ್ತಮಾಂಶಗಳು ಕ್ರಮಕ್ರಮವಾಗಿ ಶಿಕ್ಷಣವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿವೆ. ವಿದ್ಯಾರ್ಥಿಸಂಖ್ಯೆ ಅಧಿಕವಾಗಿರುವ ಭಾರತದಂಥ ದೇಶಗಳಲ್ಲಿ ಸ್ಥಳಾವಕಾಶ ದೊರಕಿಸಿಕೊಳ್ಳಲು ಇರುವ ಕಟ್ಟಡಾದಿ ಅಲ್ಪ ಸೌಲಭ್ಯಗಳನ್ನು ಸರದಿಯ ಪ್ರಕಾರ ಬಳಸಿಕೊಳ್ಳಲು ಈ ಪದ್ಧತಿ ಬೆಳಕು ನೀಡಬಲ್ಲುದು.

ಇದನ್ನು ಪ್ಲಟೂನ್ ಶಾಲೆ, ಕೆಲಸ-ವ್ಯಾಸಂಗ-ಆಟದ ಶಾಲೆ, ಪರ್ಯಾಯ ಯೋಜನೆಯ ಪಾಠಶಾಲೆ ಇತ್ಯಾದಿ ಹೆಸರುಗಳಿಂದಲೂ ಕರೆಯುವುದುಂಟು. (ಕೆ.ಬಿ.)

**ಗೇರುಸೊಪ್ಪೆ :** ಗೇರುಸೊಪ್ಪೆ ಜಲಪಾತಕ್ಕೂ ಹೊನ್ನಾವರಕ್ಕೂ ನಡುವೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವ ಒಂದು ಹಳ್ಳಿ. ಶರಾವತಿಯ ಎಡದಂಡೆಯ ಮೇಲೆ, ತೆಂಗಿನ ತೋಪುಗಳ ಮಧ್ಯೆ, ಜಲಪಾತದಿಂದ 29 ಕಿಮೀ ದೂರದಲ್ಲೂ ಹೊನ್ನಾವರದಿಂದ 28 ಕಿಮೀ ದೂರದಲ್ಲೂ ಇದೆ. ಈ ಸುತ್ತಿನಲ್ಲಿ ಗೇರು ಬೀಜದ ಗಿಡಗಳು ಹೇರಳವಾಗಿರುವುದರಿಂದ ಇದಕ್ಕೆ ಗೇರುಸೊಪ್ಪೆ ಎಂಬ ಹೆಸರು ಬಂದಿರಬೇಕೆಂದು ಹೇಳಲಾಗಿದೆ. ಹೊನ್ನಾವರ ಸರೋವರದ ದಕ್ಷಿಣ ಹಾಗೂ ಉತ್ತರ ಭಾಗಗಳನ್ನು ಒಳಗೊಂಡ ಒಂದು ಜಿಲ್ಲೆ ಗೇರುಸೊಪ್ಪೆ- ಎಂದು 1801ರಲ್ಲಿ ಇಲ್ಲಿ ಪ್ರವಾಸ ಮಾಡಿದ ಹ್ಯಾಮಿಲ್ಟನ್ ಬುಚನಾನ್ ಹೇಳುತ್ತಾನೆ. ಇದೇ ಹೆಸರನ್ನು ಹೊತ್ತ ನಗರ ಸರೋವರದ ದಕ್ಷಿಣ ತುದಿಯಲ್ಲಿತ್ತು; ಈಗ ಅದು ಪಾಳು ಬಿದ್ದಿದೆಯೆಂದೂ ಈ ಗೇರುಸೊಪ್ಪೆ ನಗರ ಮತ್ತು ಕರಾವಳಿಯ ಮೇಲುನಾಡಿನ ಗೇರುಸೊಪ್ಪೆ ಕೋಟೆ ಬೇರೆ ಬೇರೆ ಎಂಬುದನ್ನು ಗಮನಿಸಬೇಕು ಎಂದೂ ಆತ ತಿಳಿಸುತ್ತಾನೆ. ಇಕ್ಕೇರಿಯ ನಾಯಕರ ಕಾಲದಲ್ಲಿ ಘಟ್ಟದ ಕೆಳಗಿನ ಸೀಮೆ ಭಟ್ಕಳ, ಶಿರಾಳ, ಚಂದಾವಾರ, ಗೇರುಸೊಪ್ಪೆ ಮತ್ತು ಮಿರ್ಜಿ ಜಿಲ್ಲೆಗಳೆಂದು ವಿಭಾಗಿಸಲ್ಪಟ್ಟು ಪ್ರತಿಯೊಂದು ಜಿಲ್ಲೆಯೂ ಕರಾವಳಿಯಿಂದ ಹಿಡಿದು ಅರಬ್ಬಿ ಸಮುದ್ರದವರೆಗೆ ವ್ಯಾಪಿಸಿತ್ತು. (ವಿ.ಜಿ.ಕೆ.)

ಸುಮಾರು ನಾನೂರು ವರ್ಷಗಳ ಹಿಂದೆ ಈ ಹಳ್ಳಿ ಗೇರುಸೊಪ್ಪೆ ರಾಜ್ಯದ ಭವ್ಯ ರಾಜಧಾನಿಯಾಗಿತ್ತು. ಅದನ್ನು ನಗಿರೆ, ಭಿಲ್ಲಾಕೀಪುರ ಮತ್ತು ಕ್ಷೇಮಪುರ ಎಂದೂ ಕರೆಯುತ್ತಿದ್ದರು. ಗೇರುಸೊಪ್ಪೆ ರಾಜ್ಯವನ್ನು ನಗಿರಾ ರಾಜ್ಯ ಎಂದು ಕರೆಯುತ್ತಿದ್ದರು. ಶರಾವತಿಯ ಒಂದು ದಂಡೆಯಲ್ಲಿರುವ ಗ್ರಾಮವನ್ನು ಗೇರುಸೊಪ್ಪೆ ಎಂದು ಕರೆದರೆ ಆ ಬದಿಯ ಹಳ್ಳಿಯನ್ನು ನಗಿರೆ ಬಸ್ತಿಕೇರಿ ಎಂದು ಕರೆಯುತ್ತಿದ್ದರು. ಅಲ್ಲಿ ಜೈನರ ಬಸದಿಗಳು ಇರುವುದರಿಂದಲೇ ಅದು ಆ ಹೆಸರನ್ನು ಪಡೆಯಿತು.

ನಗಿರೆ ಬಸ್ತಿಕೇರಿ ನಾನೂರು ವರ್ಷಗಳ ಹಿಂದೆ ವೈಭವದಿಂದ ಮೆರೆದ ಪಟ್ಟಣವಾಗಿತ್ತು. ಅಲ್ಲಿಯ ರಾಜರು ಕಟ್ಟಿಸಿದ ಜೈನಬಸದಿಗಳು, ದೇವಾಲಯಗಳನ್ನು ಇಂದೂ ನೋಡಬಹುದು. ಇತಿಹಾಸದಲ್ಲಿ ಖ್ಯಾತಿ ಪಡೆದ ಸಾಳುವ ಮನೆತನಕ್ಕೆ ಸೇರಿದ ಎರಡು ಪ್ರಮುಖ ಶಾಖೆಗಳು ಹಾಡುವಳ್ಳಿ ಅಥವಾ ಸಂಗೀತಪುರ ಮತ್ತು ಗೇರುಸೊಪ್ಪೆಗಳಿಂದ ಆಳುತ್ತಿದ್ದುವು. ಅವು ಅಕ್ಕಪಕ್ಕದ ರಾಜ್ಯಗಳಾದರೂ ಅಲ್ಲಿಯ ರಾಜರು ಸಂಬಂಧಿಕರಾದರೂ ಅವರು ಆಗಾಗ್ಗೆ ಯುದ್ಧದಲ್ಲಿ ತೊಡಗುತ್ತಿದ್ದರು.

ಕರ್ನಾಟಕದ ಇತರ ಪಾಳೆಯಗಾರರಂತೆ ಗೇರುಸೊಪ್ಪೆಯ ಅರಸರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಅವರ ರಕ್ಷಣೆಯಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಉತ್ತರ ಕನ್ನಡ ದಕ್ಷಿಣ ಕನ್ನಡ ಜಿಲ್ಲೆಗಳ ಸ್ವಲ್ಪ ಭಾಗಗಳನ್ನು ಒಳಗೊಂಡ ಗೇರುಸೊಪ್ಪೆ ರಾಜ್ಯದ ಅರಸರು ಸಾಳುವ ವಂಶಕ್ಕೆ ಸೇರಿದವರು. ಅಲ್ಲಿಯ ರಾಜರ ಇತಿಹಾಸ 1398ರಿಂದ ಈಚೆಗೆ ಸಿಗುತ್ತದೆ. ರಾಜ ಹಯಿವರಸನೆಂಬುವನು 1398ರಲ್ಲಿ ಗೇರುಸೊಪ್ಪೆ ರಾಜ್ಯವನ್ನಾಳುತ್ತಿದ್ದುದು ಕಂಡುಬರುತ್ತದೆ.

ಜೈನಧರ್ಮವನ್ನು ಅವಲಂಬಿಸಿದ ಈ ರಾಜರ ಪೈಕಿ ಪ್ರಮುಖರಾದವರು ಭೈರವದೇವ, ಇಮ್ಮಡಿ ಭೈರವದೇವ, ದೇವರಾಯ (ಸಾಳ್ವದೇವ) ಮತ್ತು ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿ.

ಭೈರವದೇವ (1438-62) ಪರಮ ಧಾರ್ಮಿಕನೂ ಉದಾರಿಯೂ ಆದ ದೊರೆ. ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿ, ಗೇರುಸೊಪ್ಪೆ, ಹೊನ್ನಾವರ, ಚಂದ್ರಗುತ್ತಿಗಳ ಬಸದಿಗಳಿಗೆ ಅಪಾರ ದಾನ ಮಾಡಿದ. ಮೂಡುಬಿದಿರೆಯ ಬಸದಿಯಲ್ಲಿಯ ಸಾವಿರ ಕಂಬದ ಭೈರಾದೇವಿ ಮಂಟಪ ರೂಪಿತವಾದ್ದು ಬಹುಶಃ ಈತನ ಕಾಲದಲ್ಲೇ. ಈತನ ರಾಣಿ ನಾಗಲೆ ಆ ಬಸದಿಯ ಮಾನಸ್ತಂಭವನ್ನು ಮಾಡಿಸಿದಳು. ವಿಜಯನಗರದ ಸಾಮಂತ ರಾಜನಾದರೂ ಅದರ ವಿರುದ್ಧ ಬಂಡಾಯವನ್ನು ಹೂಡಿದ. ಸುಮಾರು 30 ವರ್ಷಗಳ ಕಾಲ ರಾಜ್ಯವಾಳಿದ ಭೈರವದೇವನ ಕಾಲದಲ್ಲಿ ಸಾಹಿತ್ಯ ಧರ್ಮಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತು. ಇವನ ಅನಂತರ ಗೇರುಸೊಪ್ಪೆಯ ಸಿಂಹಾಸನಕ್ಕಾಗಿ ಅಂತಃಕಲಹ ಉಂಟಾಗಿ ರಾಜ್ಯ ಒಡೆದು ಇಬ್ಭಾಗವಾಯಿತು.

ಗೇರುಸೊಪ್ಪೆಯ ಮತ್ತೊಬ್ಬ ಪ್ರಮುಖರಾಜ ದೇವರಾಯ. ಈತ 1481ರಲ್ಲಿ ಗೋವೆಯಲ್ಲಿದ್ದ ಆದಿಲಷಹನ ಸೇನಾನಿಯನ್ನು ಯುದ್ಧದಲ್ಲಿ ಸೋಲಿಸಿ, ಕರಾವಳಿಯಲ್ಲಿ ಸುಲ್ತಾನ ಮುಂದುವರಿಯದಂತೆ ಮಾಡಿದ. ಮಹಾರಾಜಾಧಿರಾಜ ಮತ್ತು ಪರಮೇಶ್ವರ ಎಂಬ ಬಿರುದುಗಳನ್ನು ಪಡೆದ ದೇವರಾಯ 1492ರಲ್ಲಿ ವಿಜಯನಗರದ ಸಾಮ್ರಾಟ ವಿರೂಪಾಕ್ಷರಾಯನ ಸೇನೆಯ ವಿರುದ್ಧ ಯುದ್ಧಮಾಡಿದ. ಆದರೆ ಯುದ್ಧದಲ್ಲಿ ಜಯಶೀಲನಾಗದೆ, ಅವನೊಡನೆ ಒಪ್ಪಂದ ಮಾಡಿಕೊಂಡ. ಅವನ ಅನಂತರ ಪಟ್ಟಕ್ಕೆ ಬಂದ ಇಮ್ಮಡಿ ದೇವರಾಯ (1515-50) ಪೋರ್ಚುಗೀಸರ ಮೇಲೆ ಯುದ್ಧಮಾಡಿದ. ಮಡಗೋವೆಯ ಬಳಿ ನಡೆದ ಭೀಕರ ಯುದ್ಧದಲ್ಲಿ ಗೇರುಸೊಪ್ಪೆಯ ಸೈನಿಕರು ಧೈರ್ಯದಿಂದ ಹೋರಾಡಿದರಾದರೂ ಕೊನೆಯಲ್ಲಿ ಸೋಲಬೇಕಾಯಿತು.

1540 ರಿಂದ 1570 ರವರೆಗೆ ಸಂಗೀತಪುರದಲ್ಲಿ ಆಳುತ್ತಿದ್ದ ಚೆನ್ನಭೈರಾದೇವಿಯನ್ನು ಗೇರುಸೊಪ್ಪೆಯ ರಾಣಿ ಎಂದು ವರ್ಣಿಸಲಾಗಿದೆ. ಆದ್ದರಿಂದ ಇಮ್ಮಡಿ ದೇವರಸನ ಅನಂತರ ಗೇರುಸೊಪ್ಪೆ ಸಂಗೀತಪುರದ ರಾಣಿಯ ವಶಕ್ಕೆ ಬಂದಿರಬೇಕು.

ಇವಳ ಆಳ್ವಿಕೆಯ ಕಾಲದಲ್ಲಿ ಗೇರುಸೊಪ್ಪೆಯ ಖ್ಯಾತಿ ಹೊರದೇಶಗಳಿಗೆ ಹರಡಿತು. ಎರಡು ರಾಜ್ಯಗಳ ರಾಣಿಯಾಗಿ ಪೋರ್ಚುಗೀಸರ ವಿರುದ್ಧ, ಕೆಳದಿಯ ನಾಯಕರ ವಿರುದ್ಧ ಯುದ್ಧಮಾಡಿದ ವಿಷಯ ಹಲವಾರು ಮೂಲಗಳಿಂದ ತಿಳಿದುಬರುತ್ತದೆ. ಕರಿಮೆಣಸಿನ ರಾಣಿಯೆಂದು ಪೋರ್ಚುಗೀಸರಿಗೆ ಪರಿಚಿತಳಾದ ಚೆನ್ನಭೈರಾದೇವಿ ಮಲೆನಾಡಿನಲ್ಲಿ ಬೆಳೆಯುತ್ತಿದ್ದ ಮೆಣಸನ್ನು ಕೊಳ್ಳುವ ಬಗ್ಗೆ ಪೋರ್ಚುಗೀಸರೊಡನೆ ಒಪ್ಪಂದ ಮಾಡಿಕೊಂಡಿದ್ದಳು. ಅಲ್ಲದೆ ಪೋರ್ಚುಗೀಸರ, ಕೆಳದಿಯ ನಾಯಕರ ವಿರೋಧಿಯಾಗಿದ್ದ ಆದಿಲ್‌ಷಹನ ಸ್ನೇಹ ಹೊಂದಿದ್ದಳು.

ಗೇರುಸೊಪ್ಪೆಯ ಮೇಲೆ ಕಣ್ಣಿಟ್ಟ ಇಕ್ಕೇರಿಯ ಹಿರಿಯ ವೆಂಕಟಪ್ಪನಾಯಕ ಆ ರಾಜ್ಯದ ಮೇಲೆ ದಂಡೆತ್ತಿಹೋಗಿ, ರಾಣಿ ಚೆನ್ನಭೈರಾದೇವಿಯನ್ನು ಯುದ್ಧದಲ್ಲಿ ಸೋಲಿಸಿ ಗೇರುಸೊಪ್ಪೆಯನ್ನು ಸಂಪೂರ್ಣವಾಗಿ ಧ್ವಂಸಮಾಡಿದ. ಈ ವಿಜಯದ ಪರಿಣಾಮವಾಗಿ ಹೊನ್ನಾವರ, ಬಾರ್ಕಲೂರು, ಭಟ್ಕಳ ಬಂದರುಗಳು ಕೆಳದಿ ಸಂಸ್ಥಾನಕ್ಕೆ ಸೇರಿಹೋದುವು. ರಾಣಿ ಮಾಡುತ್ತಿದ್ದ ಮೆಣಸಿನ ವ್ಯಾಪಾರವೆಲ್ಲ ವೆಂಕಟಪ್ಪನ ಅಧೀನವಾಯಿತು. ಗೇರುಸೊಪ್ಪೆ ಕೆಳದಿ ರಾಜ್ಯದಲ್ಲಿ ಐಕ್ಯವಾಯಿತು.

ಸುಮಾರು 200 ವರ್ಷಗಳ ಕಾಲ ವೈಭವದಿಂದ ಮೆರೆದ ಗೇರುಸೊಪ್ಪೆಯ ರಾಜರು ಸಾಹಿತ್ಯ, ಧರ್ಮ ಮತ್ತು ಕಲೆಗೆ ವಿಶೇಷವಾದ ಪ್ರೋತ್ಸಾಹ ನೀಡಿದ್ದಕ್ಕೆ ಸಾಕ್ಷಿಯಾಗಿ ಬಸದಿ, ದೇವಾಲಯಗಳು ಅಲ್ಲಿ ಕಂಡುಬರುತ್ತವೆ. ಗೇರುಸೊಪ್ಪೆಯಲ್ಲಿರುವ ಸುಂದರ ಚತುರ್ಮುಖ ಬಸದಿ ಅಲ್ಲಿಯ ರಾಜರ ಕೊಡುಗೆ. ರಾಣಿ ಭೈರಾದೇವಿ ಈ ಬಸದಿಯನ್ನು ಕಟ್ಟಿಸಿದಳು. ನಾಲ್ಕು ಬಾಗಿಲುಗಳಿದ್ದು, ಗರ್ಭಗುಡಿ ಮಧ್ಯದಲ್ಲಿದ್ದು, ನಾಲ್ವರು ತೀರ್ಥಂಕರರನ್ನು ಪಡೆದಿರುವ ಇಂಥ ಬಸದಿ ಅಪರೂಪ. ಇದಲ್ಲದೆ, ಅಲ್ಲಿಯ ಜ್ವಾಲಾಮಾಲಿನಿ ದೇವಾಲಯ, ನೇಮಿನಾಥ ಬಸದಿ, ಅನೇಕ ವೀರಗಲ್ಲುಗಳು ಮತ್ತು ಶಾಸನಗಳು ಅಲ್ಲಿಯ ರಾಜರುಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತವೆ. (ಕೆ.ಟಿ.ಆರ್.)

**ಗೇರುಸೊಪ್ಪೆ ಜಲಪಾತ :** ಶರಾವತೀ ನದಿಯ ಜಲಪಾತ. ಜೋಗ್ (ಜಲಪಾತ) ಎಂದೂ ಪ್ರಸಿದ್ಧ. ಕರ್ನಾಟಕದಲ್ಲಿ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗಡಿಯಲ್ಲಿ ಉ.ಅ. $14^0$ $14^1$ ಮತ್ತು ಪೂ.ರೇ. $74^0$ $50^1$ ಮೇಲಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥದಲ್ಲಿ ಹುಟ್ಟುವ ಶರಾವತೀ ನದಿ ಫತ್ತೇಪೇಟ್ ಬಳಿ ವಾಯವ್ಯಕ್ಕೆ ತಿರುಗಿ, ಹರಿದ್ರಾವತಿ ಮತ್ತು ಎಣ್ಣೆಹೊಳೆಗಳನ್ನು ಕೂಡಿಕೊಂಡು ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳ ಗಡಿಯ ಬಳಿ ಪಶ್ಚಿಮಕ್ಕೆ ತಿರುಗಿ, ಗೇರುಸೊಪ್ಪೆ ಪ್ರಪಾತದಲ್ಲಿ ಧುಮುಕುತ್ತದೆ. ಅನಂತರ ನದಿ 29 ಕಿಮೀ ದೂರದಲ್ಲಿರುವ ಗೇರುಸೊಪ್ಪೆ ಗ್ರಾಮದತ್ತ ಸಾಗಿ ಮುಂದೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಈ ಜಲಪಾತ ಶಿವಮೊಗ್ಗದಿಂದ 100 ಕಿಮೀ ಹಾಗೂ ಹೊನ್ನಾವರದಿಂದ 58 ಕಿಮೀ ದೂರದಲ್ಲಿದೆ.

ಸೌಂದರ್ಯ ತುಂಬಿದ ಔನ್ನತ್ಯದಲ್ಲಿ ಗೇರುಸೊಪ್ಪೆಯನ್ನು ಮೀರಿಸುವ ಜಲಪಾತ ಜಗತ್ತಿನಲ್ಲೆಲ್ಲೂ ಇಲ್ಲ. ಆಲ್ಪ್ಸ್ ಪರ್ವತದಲ್ಲಿರುವ ಸೆರೊಸೊಲಿ (2400 ಅಡಿ 732ಮೀ), ಎವಾನ್ಸನ್ (1200 ಅಡಿ 366ಮೀ) ಮತ್ತು ಆರ್ವೆ (1100 ಅಡಿ 335ಮೀ) ಜಲಪಾತಗಳು. ಜೋಗ್ ಜಲಪಾತಕ್ಕಿಂತ (829 ಅಡಿ 252.6ಮೀ) ಎತ್ತರವಾಗಿವೆ ಯಾದರೂ ಅವುಗಳಲ್ಲಿ ಜೋಗದಷ್ಟು ನೀರಿಲ್ಲ. ನಯಾಗರ ಜಲಪಾತದ ನೀರಿನ ಮೊತ್ತ ಜೋಗದ್ದಕ್ಕಿಂತ ಅಧಿಕ. ಆದರೆ ಆ ಜಲಪಾತ (164 ಅಡಿ 50ಮೀ) ಗೇರುಸೊಪ್ಪೆಯಷ್ಟು ಎತ್ತರವಿಲ್ಲ. ಶರಾವತೀ ನದಿ ಹರಿದು ಧುಮುಕುವ ಕಮರಿಯ ಬಂಡೆ 250 ಗಜಗಳಷ್ಟು (228.6ಮೀ) ಉದ್ದವಾಗಿದೆ. ನಾಲ್ಕು ಪ್ರತ್ಯೇಕ ಬಿರುಕುಗಳಿಂದ ನದಿ ರಭಸದಿಂದ ಇಳಿದು ಕಮರಿಗೆ ಬೀಳುತ್ತದೆ. ಅದು ಧುಮುಕುವ ಶೀವಿ ಮನಮೋಹಕವಾದ್ದು. ಜಲಪಾತದ ನಾಲ್ಕು ಕವಲುಗಳ ಪೈಕಿ ರಾಜಾ ಸು. 829 ಅಡಿ (252.6ಮೀ) ಆಳಕ್ಕೆ ಧುಮುಕುತ್ತದೆ. ಈ



ಕವಲು ಸಿರಸಿಯ ಸೋದೆ ರಾಜನ ಹೆಸರನ್ನು ತಾಳಿ ರಾಜಾ ಎನಿಸಿಕೊಂಡಿದೆ. ಸೋದೆ ರಾಜ ಈ ಕವಲಿರುವ ಕಡೆಯಲ್ಲಿ ಕಟ್ಟಿಸಲು ಉದ್ದೇಶಿಸಿದ್ದ ಮಂಟಪದ ತಳಪಾಯದ ಗುರುತುಗಳನ್ನು ಈಗಲೂ ಕಾಣಬಹುದು. ರಾಜಾ ಜಲಪಾತ ಬೀಳುತ್ತಿರುವಂತೆಯೇ, ಸ್ವಲ್ಪ ಕೆಳಗೆ, ಬಂಡೆಯ ಬಿರುಕಿನಿಂದ ಹರಿದು ಬೀಳುವ ರೋರರ್ ಜಲಪಾತವನ್ನು ಅಪ್ಪಿಕೊಂಡು, ಅದರೊಂದಿಗೆ ಕಮರಿಗೆ ಬೀಳುತ್ತದೆ. ಮೂರನೆಯ ಜಲಪಾತ ರಾಕೆಟ್ ಬಂಡೆಯ ಮೇಲಿಂದ ಹಲವು ಧಾರೆಗಳಲ್ಲಿ ಚಿಮ್ಮಿ ತಳಕ್ಕೆ ಕುಪ್ಪಳಿಸುತ್ತದೆ. ನಾಲ್ಕನೆಯ ಜಲಪಾತ ರಾಣಿ (ಲೇಡಿಬ್ಲಾಂಚೆ) ತಾನು ಬೀಳುವ ರಭಸದಿಂದೇಳುವ ನೊರೆಯಿಂದ ತುಂಬಿ ಸೊಗಸುಗಾತಿಯಂತೆ ಪ್ರಪಾತಕ್ಕೆ ಇಳಿಯುತ್ತದೆ.

ಮಳೆಗಾಲದ ಅನಂತರದ ತಿಂಗಳುಗಳಲ್ಲಿ ನದಿಯ ಪ್ರವಾಹ ಸರಿಯಾದ ಗಾತ್ರದಲ್ಲಿರುವುದರಿಂದ ಜಲಪಾತ ನೋಡಲು ರಮ್ಯವಾಗಿರುತ್ತದೆ. ಮಳೆಗಾಲದಲ್ಲಿ ಹೆಚ್ಚು ನೀರು ರಭಸದಿಂದ ಬೀಳುವ ಕಾರಣ ನೀರಿನಿಂದ ಏಳುವ ಧೂಮ ಪ್ರಪಾತವನ್ನು ಆವರಿಸಿರುತ್ತದೆ. ಆಗ ನೀರಿನ ಭೋರ್ಗರೆತದ ಶಬ್ದ ಹೃದಯವನ್ನು ಕಂಪಿಸುವಂತಿರುತ್ತದೆ. ಜಲಪಾತದ ಪೂರ್ಣದೃಶ್ಯವನ್ನು ಶಿವಮೊಗ್ಗ ಗಡಿ ಭಾಗದಿಂದ ಕಾಣಬಹುದು. ಜಲಪಾತದ ಕಡಿದಾದ ಬಂಡೆಯ ಅಂಚುಗಳಲ್ಲಿರುವ ಪೊಟರೆಗಳಲ್ಲಿ ಕಾಡು ಪಾರಿವಾಳಗಳು ಮನೆಮಾಡಿಕೊಂಡು ಪ್ರಪಾತದ ಬಳಿ ಗುಂಪು ಗುಂಪಾಗಿ ಹಾರುತ್ತಿರುತ್ತವೆ. ಸೂರ್ಯಕಿರಣಗಳಿಂದ ಜಲಪಾತ ದಿನದ ವಿವಿಧ ಕಾಲಗಳಲ್ಲಿ ವೈವಿಧ್ಯ ತಾಳುತ್ತದೆ. ನಿತ್ಯ ಹಸುರಿನ ಹೆಮ್ಮರಗಾಡಿನ ನಡುವೆ ಧುಮುಕುವ ಶರಾವತಿಯ ಸದ್ದನ್ನು ಕೇಳಿ ಬ್ರಿಟಿಷ್ ಸೈನಿಕರು ಟಿಪ್ಪುಸುಲ್ತಾನನ ಸೈನ್ಯದ ಆರ್ಭಟವೆಂದು ತಿಳಿದು ಮೋಸ ಹೋಗಿದ್ದರೆಂದು ಪ್ರತೀತಿಯಿದೆ. ಆದರೆ ಈಗ ಪ್ರವಾಹದ ಪರಿಮಾಣ ಇಳಿದಿರುವುದರಿಂದ ಅಂಥ ಗರ್ಜನೆ ಕೇಳಿಸದು. ಆದರೂ ಅದರ ಏಕತಾನದ ನಾದ ಹತ್ತಿರ ನಿಂತು ನೋಡುವವರ ಕಿವಿಗಳಿಗೆ ಘನಗರ್ಜನೆಯಂತೆ ಕೇಳಿಸುತ್ತದೆ. ಅದರ ಮೇಘನಾದದ ಗಾಂಭೀರ್ಯ ನಿಸರ್ಗ ಸಂಗೀತದ ಒಂದು ನಿರುಪಮ ಮಾದರಿ. ಮೌನವನ್ನು ಸೀಳುವ ಆ ನಿತ್ಯನಾದವನ್ನು ಆಲಿಸುತ್ತ ನಿಂತವರಿಗೆ ಒಮ್ಮೆ ನಾದಸಮಾಧಿಯನ್ನುಂಟುಮಾಡಬಹುದು. ಜೊತೆಗೆ ಬಿಸಿಲು ಹರಿದಂತೆ ಜಲಧಾರೆಗಳ ಮೇಲೆ ಹರಿದು ನಿಂತಿರುವ ಕಾಮನಬಿಲ್ಲುಗಳು ನಿತ್ಯನವ್ಯವಾಗಿ ಕಾಣಿಸುವುವು; ಬೆಳದಿಂಗಳು ತುಂಬಿದ್ದಾಗ ರಾತ್ರಿಯ ವೇಳೆಯೂ ಕಾಮನಬಿಲ್ಲು ಕಾಣಿಸುವುದುಂಟು. ಈ ಜೀವಂತ ಪ್ರವಾಹದ ಸೌಮ್ಯ–ಭೀಕರತೆಗಳ ವರ್ಣನೆ ಮಾತಿಗೆ ನಿಲುಕುವುದಿಲ್ಲ.

ಗೇರುಸೊಪ್ಪೆ ಜಲಪಾತವನ್ನು ಅಳೆದು ಮಾಹಿತಿಯನ್ನು ಸಂಗ್ರಹಿಸಲು ಮಾರ್ಚ್ 1856ರಲ್ಲಿ ಬಂದ ಇಬ್ಬರು ಬ್ರಿಟಿಷ್ ನೌಕಾಧಿಕಾರಿಗಳು ಜಲಪಾತದ ಬಗ್ಗೆ ಗಮನಾರ್ಹ ವರದಿಯನ್ನು ಒಪ್ಪಿಸಿದ್ದಾರೆ. ಪ್ರಪಾತದ ಆಳ 829' ಎಂದು ಇವರು ಖಚಿತಪಡಿಸಿದರು. ಪ್ರಪಾತದ ತಳದಲ್ಲಿ ನದಿ ಕೊರೆದಿರುವ ಮಡುವಿನ ಆಳ 132' (40ಮೀ). ನದಿಯ ಅಡ್ಡಗಲ ಉತ್ತರ ಕನ್ನಡ ಮತ್ತು ಶಿವಮೊಗ್ಗ ದಂಡೆಗಳ ಮೇಲಿರುವ ಬಂಗಲೆಗಳ ನಡುವೆ 710 ಗಜ (649ಮೀ).

1869ರ ಜನವರಿಯಲ್ಲಿ ಜಲಪಾತವನ್ನು ಕಂಡ ಶ್ರೀಮತಿ ಲೂಯಿ ಬ್ರೌನಿಂಗ್ ತಿಳಿಸುವಂತೆ ಆಗ ಶಿವಮೊಗ್ಗ ಜಿಲ್ಲೆಯ ಅಂಚಿನ ಕಡೆ ಜಲಪಾತದ ಸಮೀಪದಲ್ಲಿ ಡೇರೆಯನ್ನು ಹಾಕಲು ಸಹ ಸಾಧ್ಯವಿಲ್ಲದಂತೆ ಒತ್ತಾದ ಕಾಡು ಬೆಳೆದಿತ್ತು. ಈಗ ಅಲ್ಲಿ, ಶರಾವತಿ ಧುಮುಕುವ ಪ್ರಪಾತದ ಎದುರಿಗೆ, ನದಿ ಭೋರ್ಗರೆದು ಸಾಗುವ ಸುಂದರವಾದ ಸ್ಥಳದಲ್ಲಿ, ಪ್ರವಾಸಿ ಬಂಗಲೆ, ಹೋಟೆಲು, ಸರ್ಕಾರಿಭವನ ಮತ್ತು ಸಣ್ಣ ಅಂಚೆ ಕಚೇರಿ ಇವೆ. ಅಕ್ಟೋಬರಿನಿಂದ ಫೆಬ್ರವರಿಯ ವರೆಗೆ ಸಹಸ್ರಾರು ಪ್ರವಾಸಿಗರು ಜಗತ್‌ಪ್ರಸಿದ್ಧವಾದ ಈ ಮನೋಹರ ಸ್ಥಳಕ್ಕೆ ಭೇಟಿ ನೀಡುತ್ತಾರೆ.

ಜಲಪಾತದ ಬಳಿ ಜೋಗ್ ಎಂಬ ಕಿರುಗ್ರಾಮ 1948ರಲ್ಲಿ ಪ್ರಾರಂಭವಾದ ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆಯ ಚಟುವಟಿಕೆಗಳಿಂದ ದೊಡ್ಡದಾಗಿ ಬೆಳೆದುಕೊಂಡಿದೆ. (ವಿ.ಜಿ.ಕೆ.;ಬಿ.ಎಚ್.ಎಸ್.)

**ಗೇರ್‌ವಿನಸ್, ಜಾರ್ಜ್ ಗಾಟ್‌ಫ್ರೀಡ್ :** 1805–71. ಜರ್ಮನಿಯ ಇತಿಹಾಸಕಾರ ಮತ್ತು ಷೇಕ್ಸ್‌ಪಿಯರ್ ನಾಟಕಗಳ ವಿಮರ್ಶಕ. 1835ರಲ್ಲಿ ಗಾಟಿಂಗೆನ್‌ನಲ್ಲಿ ಇತಿಹಾಸದ ಪ್ರಾಧ್ಯಾಪಕನಾಗಿ ನೇಮಕಗೊಂಡ. ಹ್ಯಾನೊವರಿನ ಅರಸ ರಾಜ್ಯಾಂಗವನ್ನು ಗಣಿಸದೆ ನಿರಂಕುಶನಾಗಿ ನಡೆದನೆಂದು ಆರು ಮಂದಿ ಪ್ರಾಧ್ಯಾಪಕರೊಡನೆ ಈತನೂ ಪ್ರತಿಭಟಿಸಿದನಾಗಿ ಕೆಲಸವನ್ನು ಕಳೆದುಕೊಂಡ (1837). ಅಲ್ಲಿಂದ ಏಳು ವರ್ಷಗಳ ಕಾಲ ಹಲವು ದೇಶಗಳಲ್ಲಿ ಪ್ರವಾಸ ಮಾಡಿ, 1844ರಲ್ಲಿ ಹೈಡಲ್‌ಬರ್ಗ್‌ನಲ್ಲಿ ಇತಿಹಾಸದ ಪ್ರಾಧ್ಯಾಪಕನಾದ. ಕ್ರೈಸ್ತಮತದ ಎಲ್ಲ ಪಂಥಗಳವರೂ ಒಂದುಗೂಡುವ ಕನಸನ್ನು ಕಂಡಿದ್ದ ಈತ 1845ರಲ್ಲಿ ಜರ್ಮನಿಯ ಕೆಥೊಲಿಕರಿಗೆ ಬೆಂಬಲ ನೀಡಿದ. ಈತನೂ ಇತರೆ ಕೆಲವು ವಿದ್ವಾಂಸರೂ ಸೇರಿ ಒಂದು ನಿಯತಕಾಲಿಕವನ್ನು ನಡೆಸುತ್ತಿದ್ದರು. ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಹನೆ, ವಿಶಾಲಮನೋಭಾವಗಳನ್ನು ಬೆಳೆಸುವುದು ಈ ಪತ್ರಿಕೆಯ ಉದ್ದೇಶವಾಗಿತ್ತು.

1835 ರಿಂದ 1842 ರವರೆಗಿನ ಅವಧಿಯಲ್ಲಿ ಗೇರ್‌ವಿನಸ್ ಜರ್ಮನಿಯ ಸಾಹಿತ್ಯ ಚರಿತ್ರೆಯನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿದ. ಇದು ಜರ್ಮನಿಯ ಮೊದಲನೆಯ ಗಮನಾರ್ಹ ಸಾಹಿತ್ಯ ಚರಿತ್ರೆ ಎನಿಸಿತು; ಈತನ ವಿಶೇಷ ವಿದ್ವತ್ತು ಇದರಲ್ಲಿ ಪ್ರಕಟವಾಯಿತು. 1849 ರಿಂದ 1852ರ ಅವಧಿಯಲ್ಲಿ ಈತನ ಮುಖ್ಯ ಕೃತಿ– ಷೇಕ್ಸ್‌ಪಿಯರ್– ನಾಲ್ಕು ಸಂಪುಟಗಳಲ್ಲಿ ಜರ್ಮನ್ ಭಾಷೆಯಲ್ಲಿ ಹೊರಬಿತ್ತು (1863ರಲ್ಲಿ ಷೇಕ್ಸ್‌ಪಿಯರ್ ಕಾಮೆಂಟರೀಸ್ ಎಂಬ ಹೆಸರಿನಲ್ಲಿ ಇದರ ಇಂಗ್ಲಿಷ್ ಅನುವಾದ ಪ್ರಕಟವಾಯಿತು). 1868ರಲ್ಲಿ ಈತ ಪ್ರಸಿದ್ಧ ಗಾಯಕ ಹ್ಯಾಂಡಲ್ ಮತ್ತು ಪ್ರಸಿದ್ಧ ನಾಟಕಕಾರ ಷೇಕ್ಸ್‌ಪಿಯರ್ ಇವರನ್ನು ಹೋಲಿಸಿ ಅಧ್ಯಯನ ನಡೆಸಿದ. ಷೇಕ್ಸ್‌ಪಿಯರ್ ಬಳಸಿದ ಪದ್ಯಮಾಧ್ಯಮದ ಆಧಾರದ ಮೇಲೆ ಈತ ಆತನ ನಾಟಕಗಳನ್ನು ಮೂರು ಗುಂಪುಗಳನ್ನಾಗಿ ವಿಭಾಗಿಸಿದ. ಷೇಕ್ಸ್‌ಪಿಯರ್‌ನ ಎಲ್ಲ ಕೃತಿಗಳನ್ನೂ ಅಭ್ಯಾಸ ಮಾಡಿ ಆತನ ನಾಟಕಕಲೆಯ ವಿಕಸನವನ್ನು ಗುರುತಿಸುವುದರ ಅಗತ್ಯವನ್ನು ಮೊದಲು ಸ್ಪಷ್ಟಪಡಿಸಿದ ವಿಮರ್ಶಕ ಈತ. (ಎಲ್.ಎಸ್.ಎಸ್.)

**ಗೇಲಾರ್ಡಿಯ :** ಆಸ್ಟರೇಸೀ (ಕಂಪಾಸಿಟೀ) ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಬಲು ಸುಂದರವಾದ ಹೂ ಬಿಡುವ ಈ ಸಸ್ಯವನ್ನು ಕುಂಡಸಸ್ಯ, ಅಂಚುಸಸ್ಯ, ಮಡಿಸಸ್ಯವಾಗಿ ಬಳಸುತ್ತಾರೆ. ಹೂಗಳಿಗೆ ಉದ್ದವಾದ ತೊಟ್ಟು ಇರುವುದರಿಂದ ಹೂದಾನಿಗಳಲ್ಲಿಟ್ಟು ಗೃಹಾಲಂಕರಣಗಳಲ್ಲಿ ಬಳಸುವುದೂ ಉಂಟು. ಗೇಲಾರ್ಡಿಯದ

ಮೂಲಸ್ಥಾನ ಅಮೆರಿಕ. ಇದರಲ್ಲಿ ಸುಮಾರು 20 ಪ್ರಭೇದಗಳು ಇವೆ. ಇವುಗಳಲ್ಲಿ ಆಂಬ್ಲಿಯೋಡಾನ್, ಪಲ್ಚೆಲ ಮತ್ತು ಅರಿಸ್ಟೇಟ ಎಂಬವು ಅತಿಮುಖ್ಯವಾದುವು. ಇವುಗಳಲ್ಲಿ ಕೆಲವು ಏಕವಾರ್ಷಿಕ ಮೂಲಿಕೆಗಳಾದರೆ ಇನ್ನು ಕೆಲವು ಬಹುವಾರ್ಷಿಕಗಳು. ಗೇಲಾರ್ಡಿಯದ ಎಲೆಗಳಿಗೆ ಒರಟು ಮೈಯೂ ದಂತಿತ ಅಂಚೂ ಉಂಟು. ಇವುಗಳ ಜೋಡಣೆ ಪರ್ಯಾಯ ಮಾದರಿಯದು. ಹೂಗಳು ಬಲುಸೊಗಸಾದ ಮತ್ತು

**ಗೇಲಾರ್ಡಿಯ ಪಲ್ಚೆಲ: ಪಿಕ್ಟ ತಳಿ, (ಎಡಗಡೆ), ಲೊರೆಂಜಿಯಾನ ತಳಿ (ಬಲಗಡೆ)**

ಆಕರ್ಷಕವಾದ ಚೆಂಡು ಮಂಜರಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಇವುಗಳ ಬಣ್ಣ ಕಿತ್ತಳೆ, ಕಡುಗೆಂಪು, ಊದಾ, ಹಳದಿ ಮುಂತಾಗಿ ವೈವಿಧ್ಯಮಯ. ಅಲ್ಲದೆ ಹೂಗೊಂಚಲಿನ ಕದಿರುಪುಷ್ಪಕಗಳು ಒಂದು ಬಣ್ಣದವಾದರೆ ಬಿಂಬಪುಷ್ಪಕಗಳು ಇನ್ನೊಂದು ಬಣ್ಣದವಾಗಿದ್ದು ಹೂವಿನ ಚೆಲುವನ್ನು ಹೆಚ್ಚಿಸುತ್ತವೆ. ಹೂಗಳು ಬಹುಕಾಲ ಬಾಡದೆ ಇರುತ್ತವಾದ್ದರಿಂದ ಗೇಲಾರ್ಡಿಯ ಬಲು ಜನಪ್ರಿಯವಾಗಿದೆ.

ಗೇಲಾರ್ಡಿಯ ಗಿಡಗಳನ್ನು ವರ್ಷದ ಯಾವ ಕಾಲದಲ್ಲಾದರೂ ಬೆಳೆಸಬಹುದು. ಇವನ್ನು ಬೀಜಗಳ ಮೂಲಕ ವೃದ್ಧಿಸುವುದೇ ರೂಢಿಯಲ್ಲಿರುವ ಕ್ರಮ. ಬಹುವಾರ್ಷಿಕ ಬಗೆಗಳನ್ನು ಬೇರಿನ ತುಂಡುಗಳಿಂದಲೂ ವೃದ್ಧಿಸಬಹುದು. ಮೊದಲು ಒಟ್ಲು ಪಾತಿಯಲ್ಲಿ ಬೀಜ ಬಿತ್ತಿ, ಸಸಿಗಳನ್ನು ಬೆಳೆಸಿ, ಒಂದು ತಿಂಗಳ ಅನಂತರ ಸಸಿಗಳನ್ನು ಅಪೇಕ್ಷಿತ ಸ್ಥಳಗಳಲ್ಲಿ ನಾಟಿ ಮಾಡಬೇಕು. ಆಗಿಂದಾಗ್ಗೆ ಸೂಕ್ತ ಪರಿಮಾಣಗಳಲ್ಲಿ ಕೊಟ್ಟಿಗೆ ಗೊಬ್ಬರ, ಎಲೆಗೊಬ್ಬರ, ಅಮೋನಿಯಂ ಸಲ್ಫೇಟುಗಳನ್ನು ಹಾಕುತ್ತ ಆರೈಕೆ ಮಾಡಬೇಕು. ನಾಟಿ ಮಾಡಿದ 3–4 ತಿಂಗಳ ಬಳಿಕ ಗಿಡಗಳು ಹೂಬಿಡತೊಡಗುತ್ತವೆ. (ಬಿ.ಎ.ಪಿ.)

**ಗೇಲೆನ್** : ಸು. 129–200. ಗ್ರೀಸ್ ಮತ್ತು ರೋಮಿನ ವೈದ್ಯ ಹಾಗೂ ಲೇಖಕ. ಏಷ್ಯಮೈನರಿನ ಮೈಸಿಯ ದೇಶದ ರಾಜಧಾನಿಯಾಗಿದ್ದ ಪರ್ಗಮಮ್ ಎಂಬ ಸ್ಥಳದಲ್ಲಿ ಗ್ರೀಕ್ ದಂಪತಿಗಳ ಮಗನಾಗಿ ಜನಿಸಿದ. ಹದಿನೈದನೆಯ ವಯಸ್ಸಿನಲ್ಲಿ ತತ್ತ್ವಶಾಸ್ತ್ರ ವ್ಯಾಸಂಗವನ್ನೂ 18ನೆಯ ವಯಸ್ಸಿನಲ್ಲಿ ವೈದ್ಯ ವ್ಯಾಸಂಗವನ್ನೂ ಪ್ರಾರಂಭಿಸಿ ವೃತ್ತಿಯಲ್ಲಿ ಇವೆರಡನ್ನೂ ಮಿಶ್ರ ಮಾಡಿಯೇ ವ್ಯವಹರಿಸುತ್ತಿದ್ದ. ಈತ 146 ರಲ್ಲಿ ಗ್ರೀಸಿಗೆ ವೈದ್ಯವಿದ್ಯೆ ಕಲಿಯಲು ತೆರಳಿದ. ಅಲ್ಲಿಂದ ಪೆಲಾಪ್ಸ್ ಎಂಬ ಪ್ರಸಿದ್ಧ ವೈದ್ಯನ ಕೈಕೆಳಗೆ ವ್ಯಾಸಂಗ ಮಾಡಲು ಸ್ಮರ್ನಕ್ಕೆ ಹೋದ (148). ಮುಂದೆ ಫಿನಿಷಿಯ, ಪ್ಯಾಲಸ್ಟೀನ್, ಕೋರಿಂಥ್, ಕ್ರೀಟ್, ಸೈಪ್ರಸ್ ಮುಂತಾದ ಸ್ಥಳಗಳಲ್ಲೆಲ್ಲ ಅಲೆಯುತ್ತ ವೈದ್ಯಕೀಯ ವ್ಯಾಸಂಗವನ್ನು ಮುಂದುವರಿಸಿ ಕೊನೆಗೆ ಈಜಿಪ್ಟಿನ ಅಲೆಗ್ಸಾಂಡ್ರಿಯ ನಗರಕ್ಕೆ ಬಂದ. ಪರ್ಗಮಮಿಗೆ ಹಿಂತಿರುಗಿ (157) ಅಲ್ಲೇ ನೆಲಸಿ ಖಡ್ಗಮಲ್ಲರ (ಗ್ಲೇಡಿಯೇಟರ್) ಶಾಲೆಯಲ್ಲಿ ಶಸ್ತ್ರವೈದ್ಯನಾಗಿ ಸೇರಿಕೊಂಡ. ಅಲ್ಲಿ ಗಾಯಗೊಂಡ ಖಡ್ಗಮಲ್ಲರಿಗೆ ಶಸ್ತ್ರಚಿಕಿತ್ಸೆ ಮಾಡುತ್ತ ತನ್ನ ಶಸ್ತ್ರಚಿಕಿತ್ಸಾ ಪಾರಂಗತಿಯನ್ನು ಸಂಪೂರ್ಣ ಮಾಡಿಕೊಂಡ. ಆ ಸಮಯದಲ್ಲಿ ರೋಮನ್ ಚಕ್ರಾಧಿಪತ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದುದರಿಂದ ಸುಮಾರು 161–162 ರಲ್ಲಿ ರೋಮಿಗೆ ತೆರಳಿ ಅಲ್ಲಿ ಜನಪ್ರಿಯನಾಗಿ ಕೊನೆಗೆ ಚಕ್ರವರ್ತಿ ಮಾರ್ಕಸ್ ಅರೇಲಿಯಸನ ಆಸ್ಥಾನವೈದ್ಯನಾಗಿ ನೇಮಕಗೊಂಡ. ಬಳಿಕ 167 ರಲ್ಲಿ ತನ್ನ ಜನ್ಮಸ್ಥಳಕ್ಕೆ ಹಿಂತಿರುಗಿದ. ಆದರೆ ಅದೇ ಸುಮಾರಿಗೆ (169) ಈತನಿಗೆ ಯುದ್ಧರಂಗದಲ್ಲಿ ತನ್ನನ್ನು ಹಿಂಬಾಲಿಸಲು ಮಾರ್ಕಸ್ ಅರೇಲಿಯಸನಿಂದ ಕರೆಬಂದಿತು. ಗೇಲೆನ್ ರೋಮಿಗೆ ಹಿಂತಿರುಗಿ ಭಾವೀ ಚಕ್ರವರ್ತಿ ಕಾಮೊಡಸಿನ ಆರೋಗ್ಯವನ್ನು ನೋಡಿಕೊಳ್ಳಲು ತಾನು ರೋಮಿನಲ್ಲಿ ಇರಬೇಕಾಗುತ್ತದೆಂಬ ನೆಪವೊಡ್ಡಿ ಯುದ್ಧರಂಗಕ್ಕೆ ಹೋಗುವುದನ್ನು ತಪ್ಪಿಸಿಕೊಂಡ. ಆಮೇಲೆ ಕೊನೆಯವರೆಗೂ

ರೋಮಿನಲ್ಲೇ ನೆಲೆಸಿದ್ದು ಸುಮಾರು 200 ರಲ್ಲಿ ಬಹುಶಃ ಸಿಸಿಲಿಯಲ್ಲಿ ನಿಧನನಾದ.

ಗೇಲೆನ್ ತನ್ನ ಪಾಠಪ್ರವಚನಗಳಿಗೂ ಲೇಖನಗಳಿಗೂ ಪ್ರಸಿದ್ಧನಾಗಿದ್ದ. ಮುಖ್ಯವಾಗಿ ವೈದ್ಯಶಾಸ್ತ್ರ ಮತ್ತು ತತ್ತ್ವವಿಷಯಗಳ ಮೇಲೆ ಈತ ಸುಮಾರು 300 ಗ್ರಂಥಗಳನ್ನು ರಚಿಸಿದ್ದಾನೆಂದು ಪ್ರತೀತಿ. ಈ ವೈದ್ಯಗ್ರಂಥಗಳಲ್ಲಿ ಅರ್ಧದಷ್ಟು ಮಾತ್ರ ಉಪಲಬ್ಧವಾಗಿವೆ. ತತ್ತ್ವಜ್ಞಾನ ವಿಷಯ ಗ್ರಂಥಗಳು ಬಹುಪಾಲು ಕಳೆದುಹೋಗಿವೆ. ಸಿಕ್ಕಿರುವ ಗ್ರಂಥಗಳಲ್ಲಿ 98 ಅವನೇ ನಿಶ್ಚಯವಾಗಿ ಬರೆದವೆಂದೂ 19 ಬಹುಶಃ ಅವನು ಬರೆದಿರಬಹುದೆಂದೂ 45 ಅವನ ರಚನೆಗಳೇ ಅಲ್ಲವೆಂದೂ ತಿಳಿದುಬಂದಿದೆ. 191 ರಲ್ಲಿ ರೋಮಿನಲ್ಲಿ ಸಂಭವಿಸಿದ ಅಗ್ನಿದುರಂತದಲ್ಲಿ ಅವನ ಅನೇಕ ಗ್ರಂಥಗಳು ಸುಟ್ಟುಹೋದವು. ಆದರೂ ಗೇಲೆನ್ ಧೃತಿಗೆಡದೆ ತನ್ನ ಕೊನೆಯ ಕಾಲದವರೆಗೂ ಪಾಠಪ್ರವಚನಗಳನ್ನೂ ಪ್ರಯೋಗಗಳನ್ನೂ ನಡೆಸುತ್ತಲೇ ಇದ್ದ.

ಗೇಲೆನನ್ನು ಪ್ರಯೋಗಾತ್ಮಕ ಶರೀರ ವಿಜ್ಞಾನದ ಸ್ಥಾಪಕನೆಂದು ಗಣಿಸಬಹುದು. ಹಿಪಾಕ್ರಟೀಸನ ತರುವಾಯದ ಗತಕಾಲದ ವೈದ್ಯರಲ್ಲೆಲ್ಲ ಈತನೇ ಅತ್ಯಂತ ಪ್ರಸಿದ್ಧನಾದವ. ಮಾನವ ದೇಹದ ಅಂಗಛೇದನವನ್ನು ಇವನು ಮಾಡದಿದ್ದರೂ ಬೇರೆ ಪ್ರಾಣಿಗಳ ದೇಹಗಳನ್ನು ಸ್ಥಿರಪ್ರಯತ್ನ ಮತ್ತು ಚತುರತೆಯಿಂದ ಛೇದನ ಮಾಡಿ ತಿಳಿದ ವಿಷಯಗಳನ್ನು ಕರಾರುವಾಕ್ಕಾದ ಮತ್ತು ಸ್ಪಷ್ಟವಾದ ವಾಕ್ಸರಣಿಯಿಂದ ವಿವರಿಸುತ್ತ ತನ್ನ ಕಾಲದಲ್ಲಿ ಪ್ರಚಲಿತವಿದ್ದ ವೈದ್ಯಜ್ಞಾನವನ್ನೆಲ್ಲ ಕ್ರೋಡೀಕರಿಸಿ ಭದ್ರವಾದ ತಳಹದಿಯ ಮೇಲೆ ಗ್ರಂಥಗಳನ್ನು ರಚಿಸಿದ. ಸುಮಾರು 16ನೆಯ ಶತಮಾನದವರೆಗೂ ಈತನ ವಿಚಾರಗಳು ಚರ್ಚೆಗೆ ಒಳಪಡಿಸಲಾಗದ ಅಧಿಕಾರವಾಣಿಯಾಗಿದ್ದವು. ಈತನನ್ನು ವೈದ್ಯರಾಜನೆಂದೂ, ವೈದ್ಯಕೀಯದ ಸರ್ವಾಧಿಕಾರಿಯೆಂದೂ ವರ್ಣಿಸಿದ್ದಾರೆ. ಆದರೆ ರೋಮ್ ಚಕ್ರಾಧಿಪತ್ಯ ನಾಶವಾದ ಮೇಲೆ ಪಶ್ಚಿಮ ಯುರೋಪಿನಲ್ಲಿ ಗೇಲೆನ್ ಪ್ರಸಾರಮಾಡಿದ್ದ ಜ್ಞಾನ ಇಲ್ಲವಾಯಿತು. ಪೂರ್ವಕ್ಕೆ ಪ್ರಸರಿಸಿದ್ದ ಜ್ಞಾನ ಮಾತ್ರ ಲ್ಯಾಟಿನ್ ಮತ್ತು ಅರಬ್ಬಿ ಭಾಷೆಗಳಿಗೆ ಪರಿವರ್ತಿತವಾಗಿ ಜೀವಂತವಾಗಿತ್ತು. ಗೇಲೆನನ ಗ್ರಂಥಗಳು ಪಶ್ಚಿಮ ಯುರೋಪಿನ ಪುನರುಜ್ಜೀವನಕಾಲದ ಸುಮಾರಿಗೆ (15–16ನೆಯ ಶತಮಾನ) ಥಾಮಸ್ ಲಿನೇಕರ್, ಗಿಂಟರ್ ಫಾನ್ ಅಂಡರ್‌ನಾಕ್ ಮುಂತಾದವರ ವ್ಯಾಸಂಗ ಭಾಷ್ಯಗಳಿಂದ ಪುನರ್ಜನ್ಮ ಪಡೆದು ಅಧಿಕಾರಯುತ ಸ್ಥಾನವನ್ನು ಪಡೆದವು. ಗೇಲೆನನ ವಿಚಾರಗಳನ್ನು ಪ್ರಶ್ನಿಸುವ ಧೈರ್ಯ ಆ ಕಾಲದ ಯಾವ ವೈದ್ಯನಿಗೂ ಇರಲಿಲ್ಲ. ಆದರೆ ಇದರಿಂದ ವೈದ್ಯವಿದ್ಯೆಯ ಪ್ರಗತಿ ಬಹಳವಾಗಿ ಕುಂಠಿತವಾಯಿತು.

ಅಂಗರಚನಾಶಾಸ್ತ್ರ ಮತ್ತು ಶರೀರ ವಿಜ್ಞಾನಕ್ಕೆ ಸಂಬಂಧಿಸಿದಂತೆ ಗೇಲೆನ್ ತಿಳಿಸಿಕೊಟ್ಟ ವಿಚಾರಗಳು ವಿಶೇಷವಾಗಿ ಗಮನಾರ್ಹವಾಗಿವೆ. ಅಭಿದಮನಿಗಳಲ್ಲಿ (ಅರ್ಟರೀಸ್) ವಾಯು ಇರುವುದೆಂದು ಸುಮಾರು 400 ವರ್ಷಗಳಿಂದಲೂ ಅಲೆಗ್ಸಾಂಡ್ರಿಯ ಪಂಥದವರು ಸಾರುತ್ತಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಗೇಲೆನ್ ಅವುಗಳಲ್ಲಿ ರಕ್ತವೇ ಇರುತ್ತದೆಂಬುದನ್ನು ತೋರಿಸಿಕೊಟ್ಟ. ಮಿದುಳು, ನರಗಳು, ಮಿದುಳುಬಳ್ಳಿ, ನಾಡಿ ಮುಂತಾದವುಗಳ ವಿಷಯವಾಗಿ ಗೇಲೆನ್ ಬಹು ತಿಳಿವಳಿಕೆಯನ್ನುಂಟುಮಾಡಿದ. ಮಿದುಳುಬಳ್ಳಿಯನ್ನು ಬೇರೆ ಬೇರೆ ಸ್ಥಳಗಳಲ್ಲಿ ಛಿದ್ರಿಸಿ, ಅದರಿಂದ ಸಂವೇದನೆ ಮತ್ತು ಕ್ರಿಯಾಶೀಲತ್ವದಲ್ಲಿ ಆಗುವ ಬದಲಾವಣೆಗಳನ್ನೂ ಸಂಯಮರಹಿತ ಮೂತ್ರವಿಸರ್ಜನೆಯನ್ನೂ ವಿವರವಾಗಿ ಪರಿಶೀಲಿಸಿದ. ಮಿದುಳುಬಳ್ಳಿಯನ್ನು ಫ್ರೆನಿಕ್ ನರಗಳ ಉಗಮದಿಂದ ಮೇಲ್ಪಟ್ಟದಲ್ಲಿ ಛಿದ್ರಿಸಿದಾಗ ಸಾವು ಸಂಭವಿಸುವುದು ಏಕೆ ಎನ್ನುವುದನ್ನು ಯಥಾವತ್ತಾಗಿ ವಿವರಿಸಿದ. ಆದರೆ ಮಿದುಳುಬಳ್ಳಿಯನ್ನು ಎಡಬಲಭಾಗವಾಗಿ ಸೀಳಿದರೆ ಚಲನೆ ನಾಶವಾಗುವುದಿಲ್ಲವೆಂಬ ಅಂಶವನ್ನೂ ಸ್ಪಷ್ಟಪಡಿಸಿದ. ಗಂಟಲಿಗೆ ಒದಗುವ ನರವನ್ನು ಕಂಡುಹಿಡಿದು ಅದನ್ನು ಬಿಗಿಯಾಗಿ ದಾರದಿಂದ ಕಟ್ಟಿಬಿಟ್ಟರೆ ಪ್ರಾಣಿಗಳು

ಕೂಗುವುದನ್ನು ಇಷ್ಟಬಂದಾಗ ತಡೆಹಿಡಿಯಬಹುದು ಎಂದು ತೋರಿಸಿಕೊಟ್ಟ. ಗುಂಡಿಗೆಯ ರಚನೆಯನ್ನೂ ಕ್ರಿಯೆಯನ್ನೂ ಚೆನ್ನಾಗಿ ತಿಳಿದಿದ್ದರೂ ಅದು ಮಾಂಸದ ಕೋಶವಿರಬಹುದೆಂದು ಮಾತ್ರ ನಂಬಲಿಲ್ಲ.

ಗೇಲೆನ್ ಎಂದರೆ ಸಮಾಧಾನವಾಗಿರುವ ಎಂಬ ಅರ್ಥ ಬರುತ್ತದೆ. ಆದರೆ ಈತ ಇದಕ್ಕೆ ವ್ಯತಿರಿಕ್ತವಾಗಿ ಸೊಕ್ಕಿದ ಮತ್ತು ಉದ್ಧಟವಾದ ಮನೋವೃತ್ತಿಯನ್ನು ಹುಟ್ಟುಗುಣವಾಗಿ ಪಡೆದಿದ್ದ. ತನಗೆ ನಿಸರ್ಗದ ಅರ್ಥಪೂರ್ಣತೆ ನಿಚ್ಚಳವಾಗಿ ತಿಳಿದಿದೆಯೆಂದೂ ದೇವರ ಸೃಷ್ಟಿ ಏಕೆ ಆ ರೀತಿಯಲ್ಲೇ ಇದೆ ಎನ್ನುವುದು ತನಗೆ ಅರ್ಥವಾಗಿದೆ ಎಂದೂ ತನಗೆ ಗೊತ್ತಾಗದೇ ಇರುವುದು ಯಾವುದೂ ಇಲ್ಲವೆಂದೂ ಹೇಳಹೊರಟದ್ದು ಈತನ ತಪ್ಪು. ಇದರಿಂದಾಗಿ ತನ್ನ ನಿಜವಾದ ಮಹತ್ತ್ವಕ್ಕೆ ಕುಂದು ತಂದುಕೊಂಡ. (ಎಸ್.ಆರ್.ಆರ್.)

**ಗೇ-ಲ್ಯೂಸ್ಯಾಕ್, ಜೋಸೆಫ್ ಲೂಯಿ :** 1778-1850. ಫ್ರಾನ್ಸ್ ದೇಶದ ರಸಾಯನ ವಿಜ್ಞಾನಿ. ಅನಿಲಗಳ ಗುಣಗಳನ್ನು ಅನ್ವೇಷಿಸುವುದರಲ್ಲಿ ಇವನು ಮಹತ್ತ್ವದ ಪಾತ್ರವನ್ನು ವಹಿಸಿ ಗೇ-ಲ್ಯೂಸ್ಯಾಕ್ ನಿಯಮವನ್ನು ಆವಿಷ್ಕರಿಸಿದ (1809). ನಿರ್ದಿಷ್ಟ ಒತ್ತಡ ಮತ್ತು ಉಷ್ಣತೆಗಳಲ್ಲಿ ಅನಿಲಗಳು ಒಂದರೊಡನೊಂದು ಸಂಯೋಗಿಸುವಾಗ ನಿರ್ದಿಷ್ಟ ಸರಳಾನುಪಾತಗಳಲ್ಲಿ ಸಂಯೋಗಿಸುವುವು; ಮತ್ತು ಫಲಿಸುವ ಹೊಸ ಅನಿಲದ/ ಅನಿಲಗಳ ಗಾತ್ರ ಈ ಕ್ರಿಯೆಯಲ್ಲಿ ಭಾಗವಹಿಸಿದ ಅನಿಲಗಳ ಗಾತ್ರಗಳಿಗೆ ಸರಳಾನುಪಾತದಲ್ಲಿರುತ್ತದೆ ಎಂಬುದೇ ಈ ನಿಯಮದ ನಿರೂಪಣೆ. ಉದಾಹರಣೆಗೆ ಹೈಡ್ರೊಜನಿನ ಎರಡು ಅಂಶಗಳು ಆಕ್ಸಿಜನಿನ ಒಂದು ಅಂಶದೊಡನೆ ಸೇರಿ ನೀರು ($H_2O$) ದೊರೆಯುತ್ತದೆ. ಹೈಡ್ರೊಜನಿನ ಒಂದು ಅಂಶ ಕ್ಲೋರಿನಿನ ಒಂದು ಅಂಶದೊಡನೆ ಸೇರಿ ಹೈಡ್ರೊಜನ್ ಕ್ಲೋರೈಡ್ ($HCl$) ಆಗುತ್ತದೆ; ಹೈಡ್ರೊಜನಿನ ಮೂರು ಅಂಶಗಳು ನೈಟ್ರೊಜನಿನ ಒಂದು ಅಂಶದೊಡನೆ ಸೇರಿ ಅಮೋನಿಯ ($NH_3$) ಲಭಿಸುತ್ತದೆ; ಇತ್ಯಾದಿ. ಸಂಯೋಗಿಸುವ ಘನಗಾತ್ರಗಳನ್ನು ಕುರಿತ ಈ ನಿಯಮವನ್ನು ಆವಿಷ್ಕರಿಸುವಲ್ಲಿ ಸುವಿಖ್ಯಾತ ನೈಸರ್ಗಿಕ ವಿಜ್ಞಾನಿ ಹಂಬೋಲ್ಟ್‌ನಿಂದ (ನೋಡಿ- ಹಂಬೋಲ್ಟ್, ಫ್ರೀಡರಿಶ್ ವಿಲ್‌ಹೆಲ್ಮ್ ಹೈನ್ರಿಕ್ ಅಲೆಕ್ಸಾಂಡರ್) ಗೇ-ಲ್ಯೂಸ್ಯಾಕನಿಗೆ ದೊರೆತ ಸಹಕಾರ ಅಮೂಲ್ಯ. ಅದೇ ವರ್ಷ (1809) ಹಂಬೋಲ್ಟನೊಡಗೂಡಿ ನೀರನ್ನು ವಿದ್ಯುದ್ವಿಶ್ಲೇಷಿಸಿ ಅದು ಹೈಡ್ರೊಜನ್ ಮತ್ತು ಆಕ್ಸಿಜನುಗಳ ಸಂಯೋಗದಿಂದ ಆದುದೆಂದು ಗೇ-ಲ್ಯೂಸ್ಯಾಕ್ ಖಚಿತಪಡಿಸಿದ. ಈತ ಪೊಟ್ಯಾಸಿಯಮ್ ಕಾರ್ಬೊನೇಟ್ ಲವಣದಿಂದ ಪೊಟ್ಯಾಸಿಯಮ್ ಧಾತುವನ್ನು ತಯಾರಿಸಿದ್ದು 1808ರಲ್ಲಿ. ಬಳಿಕ ಹೈಡ್ರೊಸಯನಿಕ್ ಆಮ್ಲದಲ್ಲಿ ಆಕ್ಸಿಜನ್ ಇಲ್ಲವೆಂದು ಸಿದ್ಧಪಡಿಸಿ ಆಮ್ಲಗಳಲ್ಲಿ ಆವಶ್ಯಕ ಧಾತು ಆಕ್ಸಿಜನ್ ಅಲ್ಲ, ಹೈಡ್ರೊಜನ್ ಎಂಬ ಸಿದ್ಧಾಂತಕ್ಕೆ ಪುಷ್ಟಿ ನೀಡಿದ. ಹುದುಗುವಿಕೆಯ ವಿಧಾನಗಳಲ್ಲೂ ಆರ್ಗ್ಯಾನಿಕ್ ಸಂಯುಕ್ತಗಳ ಪರೀಕ್ಷೆ, ವಿಶ್ಲೇಷಣ ವಿಧಾನಗಳ ಬಗ್ಗೆಯೂ ಸಂಶೋಧನೆಯನ್ನು 1810-15ರ ಅವಧಿಯಲ್ಲಿ ನಡೆಸಿದ. ಮೊದಲ ಬಾರಿಗೆ ಸಯನೋಜನ್ ಮತ್ತು ಬೋರಾನುಗಳನ್ನು ತಯಾರಿಸಿದ ಕೀರ್ತಿ ಸಹ ಈತನದು. ಔದ್ಯಮಿಕ ರಂಗದಲ್ಲಿಯೂ ಈತನ ಸಂಶೋಧನೆಗಳು ಗಣನೀಯವಾದುವು. ಅನೇಕ ಉದ್ಯಮಗಳಿಗೆ ಇವನು ಸಲಹೆಗಾರ ನಾಗಿದ್ದ. ಸಲ್ಫ್ಯೂರಿಕ್ ಮತ್ತು ಆಕ್ಸ್ಯಾಲಿಕ್ ಆಮ್ಲಗಳ ತಯಾರಿಕಾ ವಿಧಾನಗಳನ್ನು ಉತ್ತಮಗೊಳಿಸಿದ. ಚಲುವೆ (ಬ್ಲೀಚಿಂಗ್) ಪುಡಿಯಲ್ಲಿ ಕ್ಲೋರಿನ್ ಅಂಶವನ್ನೂ ಪೊಟಾಷಿನಲ್ಲಿ ಪೊಟ್ಯಾಸಿಯಮ್ ಅಂಶವನ್ನೂ ತಿಳಿಯುವ ವಿಧಾನಗಳನ್ನು ಕಂಡುಹಿಡಿದ. ಖನಿಜಗಳಲ್ಲಿ ಬೆಳ್ಳಿಯ ಅಂಶವನ್ನು ತಿಳಿಯುವುದಕ್ಕೆ ವಿಧಾನವೊಂದನ್ನು ಯೋಜಿಸಿದ. ಸಂಶೋಧಕನಾಗಿ ಈತ ಸೇವೆ ಸಲ್ಲಿಸಿದ ಸುಮಾರು 50 ವರ್ಷಗಳಲ್ಲಿ ಹಂಬೋಲ್ಟ್, ಥೆನಾರ್ಡ್, ಲೀಬಿಗ್ ಮತ್ತು ವಾಲ್ಟರ್ ಅವರೊಡನೆ ಕೂಡಿ ಪ್ರಕಟಿಸಿದ ಬರೆಹಗಳಲ್ಲದೆ ಸ್ವತಂತ್ರವಾಗಿ 148 ಸಂಶೋಧನ ಪ್ರಬಂಧಗಳನ್ನು ಕೂಡ ಪ್ರಕಟಿಸಿದ್ದಾನೆ.

ಫ್ರಾನ್ಸಿನ ಸೇಂಟ್ ಲಿಯೊನಾರ್ಡ್ ಎಂಬಲ್ಲಿ 1778ರ ಡಿಸೆಂಬರ್ 6ರಂದು ಗೇ-ಲ್ಯೂಸ್ಯಾಕ್ ಜನಿಸಿದ. ಮೂಲ ವಿದ್ಯಾಭ್ಯಾಸದ ಬಳಿಕ ಹಲವು ಕಾಲ ರಸಾಯನ ಶಾಸ್ತ್ರಜ್ಞ ಕ್ಲಾಡ್ ಬರ್ತೋಲೆಟನ ಸಹಾಯಕನಾಗಿ ಕೆಲಸ ಮಾಡಿದ. 1802ರಲ್ಲಿ ತನ್ನ ಊರಿನ ಪಾಲಿಟೆಕ್ನಿಕ್ ಶಾಲೆಯಲ್ಲಿ ನಿದರ್ಶಕೋಪಾಧ್ಯಾಯನಾಗಿ ನೇಮಕಗೊಂಡು 1809ರಲ್ಲಿ ಅಲ್ಲಿಯೇ ರಸಾಯನ ವಿಜ್ಞಾನ ಪ್ರಾಧ್ಯಾಪಕನಾದ. 1808ರಿಂದ 1832ರ ವರೆಗೆ ಸಾರ್ಬೋನಿನಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ. 1832ರಲ್ಲಿ ಸಾರ್ಬೋನ್ ಬಿಟ್ಟು ಯಾರ್ಡಿನ್ ಡೆಪ್ಲಾಂಟೆಸಿನಲ್ಲಿ ರಸಾಯನವಿಜ್ಞಾನ ಪ್ರಾಧ್ಯಾಪಕನಾದ. 1806ರಲ್ಲಿ ಇವನಿಗೆ ಅಕಡೆಮಿಷಿಯನ್ ಗೌರವವೂ ಹಾಯ್ಪೆವಿಯನ್ನೆಯಲ್ಲಿನ ಛೇಂಬರ್ ಆಫ್ ಡೆಪ್ಯುಟೀಸಿನಲ್ಲಿ ಸದಸ್ಯತ್ವವೂ ದೊರೆತವು. 1839ರಲ್ಲಿ ಛೇಂಬರ್ ಆಫ್ ಪೀರ್ಸಿನಲ್ಲಿ ಸದಸ್ಯತ್ವ ದೊರೆಯಿತು. ಈತನ ಮೊದಲ ಸಂಶೋಧನೆಗಳು ಅನಿಲಗಳ ಗುಣಗಳು ಮತ್ತು ವಾತಾವರಣವನ್ನು ಕುರಿತವು. ವಾಯುಮಂಡಲದಲ್ಲಿನ ಕಾಂತತ್ವದ ಬಗ್ಗೆ ಅಭ್ಯಾಸಕ್ಕೆ 1804ರಲ್ಲಿ ತೊಡಗಿದ. ಬೆಲೂನುಗಳ ನೆರವಿನಿಂದ ಸುಮಾರು 6096ಮೀ ಎತ್ತರದ ವರೆಗೂ ಏರಿ ಅಲ್ಲಿನ ಉಷ್ಣತೆ, ಆರ್ದ್ರತೆ ಮತ್ತು ಅಲ್ಲಿರುವ ಅನಿಲಗಳು ಹಾಗೂ ಅವುಗಳ ಪ್ರಮಾಣಗಳ ಬಗ್ಗೆ ಸಂಶೋಧನೆ ನಡೆಸಿದ. ಈತ 1850 ಮೇ 9ರಂದು ಪ್ಯಾರಿಸಿನಲ್ಲಿ ನಿಧನನಾದ. (ಕೆ.ಟಿ.ಎಸ್.)

**ಗೇವಿಯಾಲಿಸ್ :** ಕ್ರಾಕೊಡಿಲಿಯ ಗಣದ ಗೇವಿಯಾಲಿಡೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಮೊಸಳೆ. ಗೇವಿಯಾಲಿಸ್ ಗ್ಯಾಂಜೆಟಿಕಸ್ ಇದರ ವೈಜ್ಞಾನಿಕ ನಾಮ. ಭಾರತ, ಬರ್ಮ ಮತ್ತು ಮಲೇಷ್ಯಯಗಳ ನದಿಗಳಲ್ಲಿ ವಾಸಿಸುತ್ತದೆ. ಭಾರತದ ಗಂಗಾನದಿಯಲ್ಲಿ ಇದನ್ನು ಕಾಣಬಹುದು. ತೆಳುವಾದ ಮತ್ತು ಉದ್ದವಾದ ದೇಹವುಳ್ಳ ಪ್ರಾಣಿಯಿದು. ದೇಹದ ಉದ್ದ 5-6 ಮೀ (15-20'). ಮೂತಿಯೂ ಕಿರಿದಾಗಿ ಉದ್ದವಾಗಿದೆ. ಗಂಡು ಗೇವಿಯಲಿನ ಮೂತಿಯ ತುದಿಯಲ್ಲಿ ಒಂದು ರೀತಿಯ ಸಣ್ಣ ಕುಡಿಕೆಯಂಥ ಗುಬುಟು ಇದೆ. ಆದ್ದರಿಂದ ಇದನ್ನು ಹಿಂದಿ ಭಾಷೆಯಲ್ಲಿ ಗಡಿಯಲ್ (ಗಡಿ-ಗಡಿಗೆ) ಎಂದು ಕರೆಯಲಾಗುತ್ತದೆ. ಎರಡು ದವಡೆಗಳಲ್ಲೂ ಹೆಚ್ಚುಕಡಿಮೆ ಸಮಗಾತ್ರದ ಹಲ್ಲುಗಳಿವೆ. ಕಾಲುಗಳಲ್ಲಿನ ಬೆರಳುಗಳೆಲ್ಲವೂ ಪೊರೆ ಯೊಂದರಿಂದ ಕೂಡಿಕೊಂಡಿದ್ದು ಈಜಲು ಸಹಾಯಕವಾಗಿರುವ ಜಾಲಪಾದಗಳಾಗಿವೆ. ಮೂಗಿನ ಹೊಳ್ಳೆಗಳು ಮೃದುವಾಗಿದ್ದು ಬೇಕೆಂದಾಗ ಊದಿಕೊಳ್ಳಬಲ್ಲವು. ಮೀನುಗಳೇ ಗೇವಿಯಲಿನ ಪ್ರಧಾನ ಆಹಾರ. (ಎಂ.ಡಿ.ಪಿ.)

**ಗೇಷ :** ಗೀತನೃತ್ಯಗಳಲ್ಲಿ, ಮಾತುಕತೆಯಲ್ಲಿ ಪರಿಣಿತಳಾಗಿದ್ದು ಮನೋರಂಜನೆಯ ನ್ನೊದಗಿಸುವುದಕ್ಕಾಗಿಯೇ ಮೀಸಲಾದ ಜಪಾನೀ ಮಹಿಳೆ. ಶ್ರೀಮಂತ ಜನಕ್ಕೆ, ಬಳಲಿದ ವ್ಯಾಪಾರೋದ್ಯಮಿಗಳಿಗೆ ಸಂತೋಷವನ್ನು ಕೊಡುವುದೇ ಇಂಥ ಮಹಿಳೆಯರ ಕೆಲಸ. ಮಿಂಚುವ ದಟ್ಟ ಕೇಶರಾಶಿಗಳಿಂದ, ಆಶ್ಚರ್ಯಕರವಾಗಿ ಸಿದ್ಧಗೊಳಿಸಿ ಥಳಕುಬೆಳಕಿನ ಕಿಂಕಾಪು ಉಡುಪುಗಳಿಂದ, ಒನಪು ಒಯ್ಯಾರಗಳಿಂದ ಜನಮನವನ್ನು ಆಕರ್ಷಿಸುವ ಗೇಷ ರಮಣಿಯರಿಂದ ಜಪಾನಿನ ಪ್ರಮುಖ ಪಟ್ಟಣಗಳ ಜೀವನ ಆಕರ್ಷಕವಾಗಿ ರೂಪಿಸಲ್ಪಟ್ಟಿದೆ. ಹೊಳಪಿನ ಕಾಂತಿಯುತ ದೇಹಕ್ಕೆ ಆಕರ್ಷಕ ಉಡುಪನ್ನು ಧರಿಸಿದ ಇವರು ಪದ್ಯಗಳನ್ನು ಹಾಡುವುದು, ರಸಿಕೋಕ್ತಿಯೊಂದಿಗೆ ಸಂಭಾಷಿಸುವುದು, ನರ್ತಿಸುವುದು ಅಲ್ಲದೇ ಸ್ಯಾಮಿಸೆನ್ ವಾದ್ಯದಲ್ಲಿ ಜಪಾನೀ ಸಂಗೀತದ ಮಾಧುರ್ಯವನ್ನು ಹೊಮ್ಮಿಸುವುದು ಮುಂತಾದ ಕಲಾವಿಲಾಸಗಳಲ್ಲಿ ನಿಪುಣರು. ಸಂತೋಷ ಕೂಟಗಳಲ್ಲಿ ಸೇರುವ ರಸಿಕರ ಮನತಣಿಸಲು ಇವರನ್ನು ಕರೆಸಲಾಗುತ್ತದೆ. ಸಾಂಪ್ರದಾಯಿಕ ಶಿಷ್ಟಾಚಾರಗಳ ಒಡತಿಯರಾದ ಇವರು ಸಾಮಾನ್ಯವಾಗಿ ತಮ್ಮ ವೃತ್ತಿಯಲ್ಲಿ ಅಗ್ರಗಣ್ಯರು. ಅಲ್ಲದೆ ತಮ್ಮ ಆಶ್ರಯದಾತರಲ್ಲಿ ನಿಷ್ಠೆಯಿಂದ ನಡೆದು ವಿಶ್ವಾಸಕ್ಕೆ ಪಾತ್ರರಾಗುವಂಥವರು. ರಾಜಕಾರಣಿಗಳ ಅಥವಾ ಔದ್ಯಮಿಕ ವ್ಯಕ್ತಿಗಳ ಮಹತ್ತ್ವದ ಸಭೆ, ಪರಿಷತ್ತುಗಳು ಹಿಂದಿನಿಂದಲೂ ನಡೆಯುವುದು ಪ್ರಮುಖ ಗೇಷ ಮಂದಿರಗಳಲ್ಲಿಯೇ. ಆದರೂ ಗೇಷೆಯರ ಕಿವಿಯ ಮೇಲೆ ಅನಿವಾರ್ಯವಾಗಿ ಬಿದ್ದ ವಿಷಯಗಳು ಹೊರಬರುವುದು ತೀರ ಅಪರೂಪ. ಅಷ್ಟರಮಟ್ಟಿಗೆ ಅವರದು ನಿಯತ್ತಿನ ನಡತೆ.

ಗೇಷ ಮಹಿಳೆ

ಜಪಾನಿನಲ್ಲಿ ಹಿಂದೊಂದು ಕಾಲದಲ್ಲಿ ಗ್ರಾಮೀಣ ಕುವರಿಯರನ್ನು ಅಪಹರಿಸಿ ತರಬೇತುಗೊಳಿಸಿ ರಾಜಗೃಹಗಳಿಗೆ ರವಾನಿಸುತ್ತಿದ್ದರು. ಹೀಗೆ ರವಾನಿಸಲ್ಪಟ್ಟ ಹುಡುಗಿಯರು ಹಗಲಿನಲ್ಲಿ ಊಟದ ಪರಿಚಾರಿಕೆಯರಾದರೆ, ರಾತ್ರಿಯಲ್ಲಿ ನೃತ್ಯ ವಾದ್ಯಗಳೊಂದಿಗೆ ವಿನೋದವನ್ನೊದಗಿಸುತ್ತಿದ್ದರು. ಇದೇ ಪದ್ಧತಿ ಮುಂದುವರಿದು, ಕಾಲಾಂತರದಲ್ಲಿ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿ, ಗೇಷ ವ್ಯವಸ್ಥೆಯಾಗಿ ಮಾರ್ಪಟ್ಟಿತು.

ಉದಯೋನ್ಮುಖ ಗೇಷೆಯರು ಬಹು ತೀವ್ರವಾಗಿ ತಮ್ಮ ಜೀವನಕ್ರಮದಲ್ಲಿ ಮೇಲೇರುತ್ತಾರೆ. ಪ್ರಾರಂಭದಿಂದ 16–18 ನೆಯ ವರ್ಷದ ವರೆಗೆ ಹಾಡು, ನೃತ್ಯ, ಸಂಗೀತ, ಸಾಂಪ್ರದಾಯಿಕ ಶಿಷ್ಟಾಚಾರದ ನಡೆವಳಿಕೆ, ಬರೆವಣಿಗೆ, ಜೊತೆಗೆ ಹೂದಾನಿಗಳ ಹೊಂದಾಣಿಕೆ, ಚಹಕೂಟಗಳ ವ್ಯವಸ್ಥೆ ಮುಂತಾದ ವಿಷಯಗಳಲ್ಲೆಲ್ಲ ಇವರಿಗೆ ತರಬೇತಿ ಕೊಡಲಾಗುವುದು. ತಮ್ಮ ವೃತ್ತಿಯಲ್ಲಿ ಪರಿಣಿತರಾದಂತೆ ಇವರು ಹೆಚ್ಚೆಚ್ಚು ಕರ್ತವ್ಯದಕ್ಷರಾಗುವರು. ಪ್ರೌಢವಯಸ್ಕರಾದಂತೆ ಪ್ರಮುಖ ಗೇಷ ಮಂದಿರಗಳಲ್ಲಿ ಇವರು ಸಂಚಾಲಕಿಯರಾಗಬಹುದು ಇಲ್ಲವೆ ಮದುವೆಯಾಗಿ ಗೃಹಕೃತ್ಯದಲ್ಲಿ ತೊಡಗಬಹುದು. ಗೇಷೆಯರೆಲ್ಲ ವಾರಾಂಗನೆಯರಲ್ಲ. ಆದರೆ ಯಾವ ರೀತಿಯ ನಿರ್ಬಂಧವೂ ಇಲ್ಲದೆ ಶ್ರೀಮಂತರ ಪ್ರೀತಿಗೆ ಪಾತ್ರರಾಗಿ ಅವನ ಆಶ್ರಯದಲ್ಲಿದ್ದು

ಓಡೂರಿ ನೃತ್ಯದಲ್ಲಿ ಗೇಷ ಯುವತಿಯರು. ವಸಂತದ ಆಗಮನವನ್ನು ಸ್ವಾಗತಿಸುವ ಈ ನೃತ್ಯ ಜಪಾನಿನಲ್ಲಿ ಹೆಚ್ಚು ಜನಪ್ರಿಯವಾಗಿದೆ.

ಬಿಡುವವರೇ ಹೆಚ್ಚು. ಗೇಷೆಯರು ಜಪಾನಿನ ಪ್ರಧಾನಿಗಳನ್ನು ವಿವಾಹವಾದ ಉದಾಹರಣೆಗಳು ಉಂಟು. ಗೇಷೆಯರ ಸಾಮಾಜಿಕ ಪ್ರತಿಷ್ಠೆ ಕಾಲದೇಶಗಳಿಗೆ ತಕ್ಕಂತಿರುತ್ತದೆ. ಈಗ ಇವರನ್ನು 5 ರಿಂದ 10 ವರ್ಷಗಳ ಅವಧಿಯ ಮೇರೆಗೆ ಗೇಷ ಗೃಹಗಳಲ್ಲಿ ನಿಯಮಿಸಲಾಗುತ್ತಿದೆ. ಅದಕ್ಕಾಗಿ ನಿರ್ದಿಷ್ಟಪಡಿಸಿದ ಹಣ ಗೇಷೆಯರ ತಂದೆತಾಯಿಗಳಿಗೆ ಇಲ್ಲವೆ ವಾರಸುದಾರರಿಗೆ ಸೇರುತ್ತದೆ. ಸೌಂದರ್ಯಕ್ಕೆ ತಕ್ಕಂತೆ ಸಂಭಾವನೆ. ಗೇಷೆಯರ ಬಹುಪಾಲು ಆದಾಯವೆಲ್ಲ ಅವರ ಸೌಂದರ್ಯ ಹಾಗೂ ಕಲಾಸಾಧನೆಗಾಗಿ ಹಣವ್ಯಯಮಾಡಿದ ಒಡತಿಯರಿಗೆ ಸಲ್ಲುವುದು.

ಟೋಕಿಯೊ, ಕಿಯೋಟೊ, ಒಕಾಸಾದಂಥ ನಗರಗಳಲ್ಲಿ ಗೇಷ ಮಹಿಳೆಯರು ನಿರ್ದಿಷ್ಟ ಸಂಖ್ಯೆಯಲ್ಲಿದ್ದಾರಾದರೂ ಸಾಧಾರಣವಾಗಿ ಎಲ್ಲ ಕಡೆಗಳಲ್ಲಿಯೂ ಅವರನ್ನು ಕಾಣಬಹುದು. ಗೇಷ ಶಿಕ್ಷಣವೀಯುವ ಪ್ರಮುಖ ಶಾಲೆಯೊಂದು ಜಪಾನಿನ ಟೋಕಿಯೋದ ಗಿಯಾನ್ ಅಮ್ಯೂಸ್‌ಮೆಂಟ್ ಕ್ವಾರ್ಟರ್ಸ್ ಎಂಬಲ್ಲಿದೆ. ಟೋಕಿಯೋದ ಮುಖ್ಯ ಸ್ಥಳಗಳಲ್ಲಿ ಗೇಷಾಗೃಹಗಳು ಒಂದೇ ಕಡೆಗೆ ಗುಂಪುಗುಂಪಾಗಿ ನೆಲೆಗೊಂಡಿವೆ.

ಇತ್ತೀಚಿನ ದಿನಗಳಲ್ಲಿ ಬದಲಾಗುತ್ತ ನಡೆದಿರುವ ಜಪಾನಿನ ಜೀವನಕ್ಕೆ ಅನುಗುಣವಾಗಿ ಗೇಷೆಯರು ಕಣ್ಮರೆಯಾಗುತ್ತ ನಡೆದಿದ್ದಾರೆ. ಆದ್ದರಿಂದ ಜಪಾನಿನ ನವಪೀಳಿಗೆಗೆ ಗೇಷ ಮನೋರಂಜನ ಕೂಟಗಳು ಕೇವಲ ಸಾಂಪ್ರದಾಯಿಕವೆನಿಸಿವೆ. ಮಹಾಯುದ್ಧಕ್ಕೆ ಪೂರ್ವದಲ್ಲಂತೂ ಗೇಷೆಯರ ಒಡನಾಟವೆಂದರೆ ಪ್ರತಿಷ್ಠೆಯ ಸಂಕೇತವೆಂದು ಪರಿಗಣಿತವಾಗಿತ್ತು. ಪ್ರಚಲಿತ ಪಾಶ್ಚಾತ್ಯ ನೃತ್ಯ ಮತ್ತು ಮನೋರಂಜನ ವಿಧಾನಗಳಿಂದಾಗಿ ಗೇಷೆಯರ ಅದೃಷ್ಟ ಮಂಕಾಗುತ್ತಿದೆ. ಇಂಥ ನವ ವಿಧಾನಗಳೊಂದಿಗೆ ಸ್ಪರ್ಧಿಗಿಳಿಯಲು ಅನೇಕ ಗೇಷ ಸ್ತ್ರೀಯರು ಪಾಶ್ಚಾತ್ಯ ಶೈಲಿಯ ನೃತ್ಯಗಳನ್ನು ಕೈಕೊಳ್ಳುತ್ತಿದ್ದಾರೆ. ಆದರೂ ಭದ್ರ ಬುನಾದಿಯ ಮೇಲೆ ನಿಂತ ಜಪಾನಿನ ಇತರ ಹಳೆಯ ಮೌಲ್ಯಗಳಂತೆ, ಗೇಷ ಪದ್ಧತಿಯೂ ಬಹುಕಾಲ ಜಪಾನಿನ ಜನಜೀವನದಲ್ಲಿ ಉಳಿದುಕೊಳ್ಳಬಹುದಾಗಿದೆ. ಕೆಲವು ಪ್ರಸಿದ್ಧ ಗೇಷ ಮಹಿಳೆಯರ ಆತ್ಮಕಥೆಗಳು ಕಳೆದೆರಡು ದಶಕಗಳಲ್ಲಿ ಪ್ರಕಟಗೊಂಡಿದ್ದು, ಈ ಪೈಕಿ ಮೆಮೊಯರ್ಸ್ ಆಫ್ ಎ ಗೇಷ (1997) ಹಾಗೂ ಗೇಷ ಆಫ್ ಗಿಯಾನ್ (2002) ಇವನ್ನು ಹೆಸರಿಸಬಹುದು. (ಎ.ಬಿ.ಎಚ್.)

**ಗೈಗರ್, ಹ್ಯಾನ್ಸ್ :** 1882–1945. ಜರ್ಮನ್ ಭೌತವಿಜ್ಞಾನಿ. ಸಶಕ್ತ ಉಪಪರಮಾಣ್ವಕ ಕಣಗಳನ್ನು ಪತ್ತೆಹಚ್ಚುವಲ್ಲಿ ಬಳಸುವ ಗೈಗರ್ ಗುಣಕದ ಉಪಜ್ಞೆಕಾರ (1913) (**ನೋಡಿ: ಗುಣಕ, ಗೈಗರ್–ಮುಲ್ಲರ್**). ಒಂದನೆಯ ಮಹಾಯುದ್ಧದ ಹಿಂದಿನ ವರ್ಷಗಳಲ್ಲಿ ಲಾರ್ಡ್ ರುದರ್ಫರ್ಡನ (1871–1937) ಸಮರ್ಥ ಸಹಾಯಕನಾಗಿ ಸೇವೆ ಸಲ್ಲಿಸಿದ ಮತ್ತು ಆ ಅವಧಿಯಲ್ಲಿ ಗೈಗರ್ ಗುಣಕವನ್ನು ನಿರ್ಮಿಸಿ ಪ್ರಸಿದ್ಧಿಗೆ ಬಂದ. ಯುದ್ಧಾರಂಭವಾದ (1914) ಬಳಿಕ ಸ್ವದೇಶವಾದ ಜರ್ಮನಿಗೆ ಮರಳಿ ಫಿರಂಗಿದಳದಲ್ಲಿ ಕೆಲಸ ಮಾಡಿದ. 1925ರಲ್ಲಿ ಕೀಲ್ ವಿಶ್ವವಿದ್ಯಾಲಯದಲ್ಲೂ 1929ರಲ್ಲಿ ಟ್ಯೂಬಿಂಜನ್ ವಿಶ್ವವಿದ್ಯಾಲಯದಲ್ಲೂ ಪ್ರಾಧ್ಯಾಪಕನಾಗಿ ನೇಮಕ ಪಡೆದ. ಪ್ರಖ್ಯಾತ ಆಂಗ್ಲ ವಿಜ್ಞಾನಿ ಜೇಮ್ಸ್ ಚಾಡ್‌ವಿಕ್ ಗೈಗರನ ಶಿಷ್ಯರಲ್ಲೊಬ್ಬ. 1882ರ ಸೆಪ್ಟೆಂಬರ್ 30ರಂದು ಜನನ, 1945 ಸೆಪ್ಟೆಂಬರ್ 24 ರಂದು ಮರಣ. (ಜಿ.ಎಸ್.)

**ಗೈಟ್ಟೊನ್ ದಾರ್‌ಟ್ಸೊ :** 1235–94. ಇಟಾಲಿಯನ್ ಕವಿ. ಹುಟ್ಟಿದ್ದು ಟಸ್ಕನಿಯಲ್ಲಿ. ಇಟಲಿಯ ಪ್ರೇಮಕಾವ್ಯದಲ್ಲಿ ಪ್ರಣಯದ ಬಗ್ಗೆ ಒಂದು ರೀತಿಯ ಗಂಭೀರತೆ, ಅಭಿವ್ಯಕ್ತಿಯಲ್ಲಿ ಖಚಿತತೆ ಮತ್ತು ಪ್ರಾಮಾಣಿಕತೆ–ಇವುಗಳ ಹೊಸತನ ಕಾಣಿಸಿಕೊಳ್ಳುವ ಮೊದಲು ಟಸ್ಕನ್ ಶಿಷ್ಟಾಚಾರ ಕವಿತಾ ಪರಂಪರೆಯನ್ನು ಈತ ಸ್ಥಾಪಿಸಿದ. 1265ರಲ್ಲಿ ಮಿಲಿಟಸ್ ಮೇರಿ ವರ್ಜಿನಳ ಸೈನಿಕ ಮತ್ತು ಧಾರ್ಮಿಕ ಕಟ್ಟಳೆಗಳಿಗೆ ಸೇರಿರುವ ವರೆಗಿನ ಅವಧಿಯಲ್ಲಿ ಈತ ಬಹುಪಾಲು ಪ್ರೇಮಗೀತೆಗಳನ್ನೂ ಸಾನೆಟ್ಟುಗಳನ್ನೂ ಬರೆದ; ಅನಂತರದ ಕಾಲದಲ್ಲಿ ಕ್ಲಿಷ್ಟ ನೈತಿಕ ಗೀತೆಗಳ ರಚನೆಯಲ್ಲಿ ತೊಡಗಿದ. ಈತನ 41 ಕಾಗದಗಳು ಇಟಾಲಿಯನ್ ಪತ್ರಸಾಹಿತ್ಯದಲ್ಲಿಯೇ ಅತ್ಯಂತ ಹಳೆಯವು. ಈತನನ್ನು ಸ್ತುತಿ ಗೀತೆಗಳು ಎಂಬ ಪದ್ಯಜಾತಿಯ (ಲಾಡ್) ಜನಕನೆನ್ನಲಾಗಿದೆ. ದಾಂಟೆ ಮಹಾಕವಿ ಈತನನ್ನು ಪ್ರಬಲವಾಗಿ ಖಂಡಿಸಿದ್ದಾನೆ. ಫ್ರಾನ್ಸಿಸ್ಕೊ ಡ ಸ್ಯಾಂಕ್ಟಿಸ್ ಈತನ ಸೂಕ್ಷ್ಮ ತರ್ಕ ವೈಖರಿಯನ್ನು ಮೆಚ್ಚಿದ್ದನಾದರೂ ಈತ ಕವಿಯೇ ಅಲ್ಲವೆಂದು ಹೇಳಿದ್ದಾನೆ. (ಕೆ.ಎಸ್.ಬಿಎಚ್.)

**ಗೈಡುಗಳು ಮತ್ತು ಗೈಡು ಪದ್ಧತಿ :** ಬಾಯ್‌ಸ್ಕೌಟುಗಳು ಮತ್ತು ಸ್ಕೌಟು ಪದ್ಧತಿಗಳ ಮಾದರಿಯಲ್ಲೆ ಬಾಲಕಿಯರಿಗಾಗಿ ಏರ್ಪಟ್ಟ ವ್ಯವಸ್ಥೆಯನ್ನು ಗೈಡುಪದ್ಧತಿ ಎಂದೂ ಅದರ ಸದಸ್ಯರನ್ನು ಗೈಡುಗಳು ಎಂದೂ ಕರೆಯಲಾಗಿದೆ.

ಸ್ಕೌಟು ಪದ್ಧತಿಯ ಜನಕನೂ ಸ್ಥಾಪನಾಚಾರ್ಯನೂ ಆದ ಲಾರ್ಡ್ ಬೇಡನ್ ಪೋವೆಲನನ್ನು ಯಾರೋ ಒಮ್ಮೆ ಗೈಡು ಪದ್ಧತಿ ನಿನ್ನ ಆಲೋಚನೆಗೆ ಬಂದದ್ದು ಹೇಗೆ ಎಂದು ಪ್ರಶ್ನಿಸಿದಾಗ ಆತ ಹೀಗೆ ಉತ್ತರ ಕೊಟ್ಟನಂತೆ: "ನಿಜವಾಗಿ ಗೈಡುಗಳ ಆಲೋಚನೆ ನನಗೆ ಇರಲೇ ಇಲ್ಲ. ಬಾಲಕಿಯರು ತಾವೇ ಅದನ್ನು ಪ್ರಾರಂಭಿಸಿದರು. 1909ರಲ್ಲಿ ಕ್ರಿಸ್ಟಲ್ ಪ್ಯಾಲೆಸ್ ಆವರಣದಲ್ಲಿ ನಾನು ಕೂಡಿಸಿದ ಸ್ಕೌಟುಗಳ ಪ್ರಪ್ರಥಮ ಮೇಳಕ್ಕೆ ಬಾಲಕಿಯರು ಆಹ್ವಾನ ಕೋರದೆ ಬಂದರು. ತಾವೂ ಸ್ಕೌಟುಗಳೆಂದೂ ಸ್ಕೌಟುಗಳೊಂದಿಗೆ ನಡೆಯುವುದೇ ತಮ್ಮ ಇಚ್ಛೆಯೆಂದೂ ಹಠತೊಟ್ಟರು. ನಾನೂ ಹಠ ತೊಟ್ಟೆ. 'ನೀವು ಸ್ಕೌಟು ಬಾಲಕಿಯರಾದರೂ ನಿಮ್ಮ ಆಟಪಾಟ ಪ್ರತ್ಯೇಕವಾಗಿ ಇರತಕ್ಕದ್ದು' ಎಂದು. ಪ್ರತ್ಯೇಕ ವ್ಯವಸ್ಥೆಯ ಜವಾಬ್ದಾರಿಯನ್ನು ನನ್ನ ಸಹೋದರಿ ಅಗ್ನಿಸ್ ಬೇಡನ್ ಪೋವೆಲಳಿಗೆ ವಹಿಸಿಕೊಟ್ಟೆ. ಆಕೆ 1910ರಲ್ಲಿ 'ಬಾಲಕಿಯರಿಂದ ಚಕ್ರಾಧಿಪತ್ಯಕ್ಕೆ ಸಹಾಯ ಹೇಗೆ' ಎಂಬ ಚಿಕ್ಕ ಹೊತ್ತಗೆಯನ್ನು ಪ್ರಕಟಿಸಿದಳು. ಕೂಡಲೆ ಸ್ಕೌಟು ಪದ್ಧತಿಯಂಥ ಅನೇಕ ಬಾಲಿಕಾ ಸಮೂಹಗಳು ಕೆಲಸಮಾಡತೊಡಗಿದುವು. ಸ್ಕೌಟು ಬಾಲಕಿ ಎಂದಿದ್ದುದನ್ನು ನನ್ನ ಪತ್ನಿ ಬದಲಾಯಿಸಿ ಗೈಡು ಬಾಲಕಿ ಎಂಬ ಪದವನ್ನು ಜಾರಿಗೆ ತಂದಳು. ಅದೇ ಅತಿಶಯವಾಗಿ ಪ್ರಪಂಚದಲ್ಲೆಲ್ಲ ಬಳಕೆಗೆ ಬಂದಿದ್ದರೂ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲೂ ಇತರ ಕೆಲವು ಕಡೆಗಳಲ್ಲೂ ಸ್ಕೌಟು ಬಾಲಕಿ ಎಂಬ ಹೆಸರೇ ಉಳಿದು ಬಂದಿದೆ."

ಹಳೆಯ ಸಂಪ್ರದಾಯವಾದಿಗಳು ತೀವ್ರವಾಗಿ ಪ್ರತಿಭಟಿಸಿದರೂ ಈ ಹೊಸ ಪದ್ಧತಿ ಬೇಗ ಬೇಗ ಬೆಳೆಯುತ್ತಲೇ ಹೋಯಿತು. 1915ರಲ್ಲಿ ಬ್ರಿಟಿಷ್ ಸರ್ಕಾರ ಇದಕ್ಕೆ ಸಂಘ ಸ್ಥಾಪನಾಧಿಕಾರವನ್ನು ಕೊಟ್ಟಿತು: 1923ರಲ್ಲಿ ಪ್ರಭುಸನ್ನದನ್ನೂ ಗಳಿಸಿಕೊಂಡು ಇದು ಅಧಿಕೃತವಾಗಿ ಗರ್ಲ್ ಗೈಡಿಂಗ್ ಸಂಸ್ಥೆಯಾಯಿತು.

ಗೈಡುಪದ್ಧತಿ ಭಾರತಕ್ಕೆ 1911ರಲ್ಲೇ ಬಂದಿತೆಂದು ಗೊತ್ತಾಗಿದೆ. ಜಬಲ್‌ಪುರದಲ್ಲಿ ಮೊದಲ ಗೈಡುದಳ ಪ್ರಾರಂಭವಾಯಿತು. ಆಮೇಲೆ ಕಲ್ಕತ್ತ, ಮದ್ರಾಸು, ಮುಂಬಯಿಗಳಲ್ಲೂ ಗೈಡುಗಳು ತಲೆಯೆತ್ತಿದರು. ಕ್ರಮೇಣ ಗೈಡುಪದ್ಧತಿಯ ಕಿರಿಯ ಹಿರಿಯ ಶಾಖೆಗಳಾದ ಬ್ರೌನೀ ಬಳಗ (ಇದು ಆಮೇಲೆ ಬ್ಲೂಬರ್ಡ್ ಫ್ಲಾಕ್–ನೀಲ ಹಕ್ಕಿ ಬಳಗ–ಎಂಬ ನಾಮಾಂತರ ಹೊಂದಿತು) ಮತ್ತು ರೇಂಜರ್ ವೃಂದಗಳೂ ಹುಟ್ಟಿಬಂದುವು. 1915ರಲ್ಲಿ ಭಾರತಕ್ಕೂ ಒಂದು ಕೇಂದ್ರ ಕಚೇರಿ ಬಂತು. ಆದರೆ ಲಂಡನಿನ ಮುಖ್ಯ ಕಚೇರಿಯ ಮೇಲುಸ್ತುವಾರಿ ಕುಗ್ಗದೇ ಇತ್ತು. ಭಾರತ ಎನ್ನುವಾಗ ಐರೋಪ್ಯ ಇಲ್ಲವೆ ಆಂಗ್ಲೊ– ಇಂಡಿಯನ್ ಮತ್ತು ದೇಶೀಯ (ನೇಟಿವ್) ಎಂಬ ಅತಾರ್ಕಿಕ ವ್ಯತ್ಯಾಸ ಇದ್ದದ್ದನ್ನು ಮರೆಯಲಾಗದು. ಗೈಡು ದಳಕ್ಕೆ ಸೇರಬಹುದಾದ ಬಾಲಕಿಯರೆಲ್ಲ ಐರೋಪ್ಯರಾಗಿರಬೇಕಾಗಿತ್ತು: ದೇಶೀಯ ಬಾಲಕಿಯರಿಗೆ ಅದರಲ್ಲಿ ಸುತರಾಂ ಪ್ರವೇಶವಿರಲಿಲ್ಲ.




**1–5 ಗೈಡಿನ ಸಮವಸ್ತ್ರ ಪ್ರಕಾರಗಳು, 6 ಮತ್ತು 9 ಜಾಣಬಿಲ್ಲೆಗಳು, 7 ಭಾರತದ ಸ್ಕೌಟುಗೈಡು ಧ್ವಜ, 8 ಪ್ರಪಂಚದ ಗೈಡು ಧ್ವಜ, 10 ಗೈಡು ವಂದನೆ, 11 ಭಾರತದ ಸ್ಕೌಟು–ಗೈಡು ಲಾಂಛನ, 12 ಒಂದನೆಯ ದರ್ಜೆ ಗೈಡು ಚಿಹ್ನೆ, 13 ಬುಲ್‌ಬುಲ್ ವಂದನೆ**

ಆನಿ ಬೆಸೆಂಟ್ (1847–1933) ಭಾರತದ ಸ್ಕೌಟು ಸಂಘವನ್ನು ಸ್ಥಾಪಿಸಿ (1916) ದೇಶೀಯ ಬಾಲಕರಿಗೂ ಆ ಪದ್ಧತಿಯ ಪ್ರಯೋಜನ ದೊರಕುವಂತೆ ವ್ಯವಸ್ಥೆ ಮಾಡಿದಳು. ಅಲ್ಲದೆ ಚಿಕ್ಕ ಹುಡುಗಿಯರೂ ಆ ಸಂಘಕ್ಕೆ ಸೇರಿಕೊಳ್ಳಲು ಅವಕಾಶವಾಗುವಂತೆ ಗೈಡು ಸೋದರಿ ಎಂಬ ಶಾಖೆಯನ್ನು ತೆರೆದಳು. ಅವಳು ಉಪಯೋಗಿಸಿಕೊಂಡ ಸಮವಸ್ತ್ರ, ಕೊರಳು ಚೌಕ, ಸಂಘ ಬಿಲ್ಲೆಗಳ ವಿಚಾರದಲ್ಲಿ ತಮಗೆ ಮಾತ್ರ ಸರ್ವಸ್ವಾಮ್ಯ ಇರುವುದೆಂದು ಬ್ರಿಟನಿನ ಅಧಿಕಾರವರ್ಗ ಆಕ್ಷೇಪಣೆ ಎತ್ತಿದಾಗ ಆನಿ ಬೆಸೆಂಟ್ ಸ್ಕೌಟು ನಿಯಮದ ನಾಲ್ಕನೆಯ ಅಂಶದತ್ತ ಅವರ ಗಮನ ಸೆಳೆದು ಅವರ ಬಾಯಿ ಮುಚ್ಚಿಸಿದಳಂತೆ.

ಈ ಮಧ್ಯೆ ಲಖನೌದಲ್ಲಿ ಓಲೆಕಾರ ಬಾಲಕಿ (ಗರ್ಲ್ ಮೆಸೆಂಜರ್) ಎಂಬ ವ್ಯವಸ್ಥೆ ಏರ್ಪಟ್ಟು (1910) ಐರೋಪ್ಯ, ದೇಶೀಯ ಎಂಬ ಭೇದವನ್ನೆಣಿಸದೆ ಅದು ಗೈಡು ಪದ್ಧತಿಯ ರೀತಿಯಲ್ಲೇ ನಡೆಯುತ್ತ ಬಂತು. ಮದನ ಮೋಹನ ಮಾಳವೀಯ ಮತ್ತು ಕುನ್‍ಜ್ರು, ಅವರ ಆಶ್ರಯದಲ್ಲಿ 'ಸೇವಾ ಸಮಿತಿ ಸ್ಕೌಟುಗಳು' ಉದ್ಭವವಾಯಿತು (1917). ಅದರಲ್ಲಿ ಗೈಡುಗಳಿಗೂ ಪ್ರವೇಶ ಸಿಕ್ಕಿತು.

ಬೇಡನ್ ಪೋವೆಲ್ ದಂಪತಿಗಳು ಭಾರತಕ್ಕೆ ಆಗಮಿಸಿ (1921) ಇಲ್ಲಿನ ಹಲವಾರು ಸ್ಕೌಟು ಮತ್ತು ಗೈಡು ಸಂಘಗಳಿಗೆ ಭೇಟಿಕೊಟ್ಟು ಅವೆಲ್ಲವನ್ನು ಒಟ್ಟಿಗೆ ಸೇರಿಸಿ ಏಕೆ ಸಂಸ್ಥೆಯಾಗಿ ಮಾಡಲು ಪ್ರಯತ್ನಿಸಿದರು. ಓಲೆಕಾರ ಬಾಲಕಿ ಮತ್ತು ಗೈಡು ಸೋದರಿ ಸಂಘಗಳು ಭಾರತದ ಗೈಡು ಸಂಘದೊಳಗೆ ವಿಲೀನಗೊಳ್ಳಲು ಒಪ್ಪಿದುವು; ಸ್ಕೌಟು–ಗೈಡು ಪ್ರತಿಜ್ಞೆಯಲ್ಲಿ ಕಡ್ಡಾಯವಾಗಿದ್ದ, ಭಾರತದ ಸಾರ್ವಭೌಮನಿಗೆ ತನ್ನ ಶ್ರದ್ಧಾಭಕ್ತಿಯನ್ನು ಅರ್ಪಿಸಬೇಕೆಂಬ–ಸೂತ್ರವನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದ ಸೇವಾ ಸಮಿತಿ ಮಾತ್ರ ಈ ವಿಲೀನಕ್ಕೆ ಒಪ್ಪದೆ ಪ್ರತ್ಯೇಕವಾಗಿ ನಿಂತಿತು. ಈ ಸೂತ್ರ ಹಲವು ಕಡೆಗಳಲ್ಲಿ ಬಾಲಕಬಾಲಕಿ ತರುಣತರುಣಿಯರಿಗೆ ನುಂಗಲಾರದ ತುತ್ತಾಗಿತ್ತು. ಗೈಡುಗಳೂ ಸ್ಕೌಟುಗಳೂ ಈ ಸೂತ್ರವನ್ನು ವಿರೋಧಿಸಿ ಎಷ್ಟೊ ಕಡೆ ಮುಷ್ಕರ ಹೂಡಿದ್ದುಂಟು.

ಕ್ರಮೇಣ ಜಗತ್ತಿನ ನಾನಾ ದೇಶಗಳಲ್ಲಿ ಗೈಡು ಪದ್ಧತಿ ಹಬ್ಬಿ ಪುಷ್ಟಿಗೊಂಡಿತು. ಮೊದಲನೆಯ ಪ್ರಪಂಚ ಶಿಬಿರ (ವರ್ಲ್ಡ್ ಕ್ಯಾಂಪ್) ಫಾಕ್ಸ್‌ಲೀಸ್ ಎಂಬಲ್ಲಿ ಜರುಗಿತು (1924). ಒಂದು ವಾರದ ಪರ್ಯಂತ ನಡೆದ ಈ ಶಿಬಿರದಲ್ಲಿ ಸಾವಿರ ಮಂದಿ ಗೈಡುಗಳು ಪಾಲ್ಗೊಂಡು ಅನುಭವ ವಿನಿಮಯ ಮಾಡಿಕೊಂಡರು. 1929ರಲ್ಲಿ ಪ್ರಪಂಚ ಸಮ್ಮೇಳನ, ಪ್ರಪಂಚ ಕಾರ್ಯಸಮಿತಿ, ಪ್ರಪಂಚ ಕಾರ್ಯಶಾಲೆ ಮೊದಲಾದ ವಿಭಾಗಗಳು ಹುಟ್ಟಿಕೊಂಡವು. 1930ರಲ್ಲಿ ಲೇಡಿ ಬೇಡನ್ ಪೋವೆಲ್ ಅವರನ್ನು ಪ್ರಪಂಚದ ಗೈಡು ಮುಖ್ಯೆಯಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು. ಅಮೆರಿಕದ ಸ್ಟ್ರೊ ಎಂಬ ಮಹಿಳೆ ನೀಡಿದ ದ್ರವ್ಯಸಹಾಯದಿಂದ ಸ್ವಿಟ್ಜರ್ಲೆಂಡಿನಲ್ಲಿ ಗೈಡುಗಳಿಗಾಗಿ ಒಂದು ದಾರುಕುಟಿ (ಷಾಲೇ) ನಿರ್ಮಾಣಗೊಂಡಿತು (1922).

1937ರಲ್ಲಿ ಬೇಡನ್ ಪೋವೆಲ್ ದಂಪತಿಗಳು ಪುನಃ ಭಾರತಕ್ಕೆ ಭೇಟಿಯಿತ್ತರು. ದೇಶದಲ್ಲಿದ್ದ ಮೂರು ಪ್ರಮುಖ ಸ್ಕೌಟು ಸಂಘಗಳನ್ನು ಒಕ್ಕೂಟಗೊಳಿಸುವುದು ಅವರ ಉದ್ದೇಶವಾಗಿತ್ತು. ಆಗ ಅದು ಕಾರ್ಯಗತವಾಗಲಿಲ್ಲ. ಸೇವಾ ಸಮಿತಿ ಮತ್ತು ರಾಷ್ಟ್ರೀಯ ಸ್ಕೌಟು ಸಂಘಗಳು ಒಂದಾಗಿ (1938) ಹಿಂದೂಸ್ತಾನ್ ಸ್ಕೌಟ್ ಸಂಘ ಏರ್ಪಟ್ಟಿತು. ಎರಡನೆಯ ಮಹಾಯುದ್ಧ ಮುಗಿದು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬರುವ ಆಶಾಭಾವ ಮೂಡಿದಾಗ ಭಾರತದ ವೈಸರಾಯ್ ಅವರ ಪತ್ನಿ ಲೇಡಿ ಮೌಂಟ್‌ಬ್ಯಾಟನಳ ಅಭಿಲಾಷೆಯಂತೆ ಆಗಿನ ವಿದ್ಯಾಸಚಿವ ಆಜ಼ಾದ್ ಒಂದು ಜಂಟಿ ಸಭೆಯನ್ನು 1947ನೆಯ ಮೇ 9ರಂದು ಕರೆದರು. ಪಕ್ವಾಸ ಅವರ ಅಧ್ಯಕ್ಷತೆಯಲ್ಲಿ ಒಂದು ಕ್ರಿಯಾಸಮಿತಿ ರಚಿತವಾಯಿತು. ಅದರ ಸಂಧಾನದ ಫಲವಾಗಿ ಇಂಡಿಯ ಸ್ಕೌಟು, ಹಿಂದೂಸ್ತಾನ್ ಸ್ಕೌಟು ಸಂಘಗಳು 1950ನೆಯ ನವೆಂಬರ್ 7ರಂದು ಒಂದಾದುವು. ಇಂಡಿಯ ಗೈಡು ಸಂಘ ಕೆಲವು ಸಂದೇಹ ಪರಿಹಾರಕ್ಕೋಸ್ಕರ ತನ್ನ ಸೇರ್ಪಡೆಯನ್ನು ಮುಂದಕ್ಕೆ ತಳ್ಳಿತು. ಸ್ಕೌಟು ಮುಖಂಡರಿಂದ ಭರವಸೆ ಸಿಕ್ಕಿದ ಅನಂತರ 1951ರ ಆಗಸ್ಟ್ 5ರಂದು ಅದೂ ಸೇರಿಕೊಂಡಿತಾಗಿ, ಭಾರತ ಸ್ಕೌಟುಗಳು ಮತ್ತು ಗೈಡುಗಳು ಎಂಬ ಒಂದೇ ಸಂಘ ರೂಪುಗೊಂಡಿತು. ಈ ಬಗೆಯ ವ್ಯವಸ್ಥೆ ಭಾರತವಲ್ಲದೆ ಇನ್ನೆರಡು ದೇಶಗಳಲ್ಲಿ ಮಾತ್ರ ಇದೆ. ಆದ್ದರಿಂದ ಪ್ರಪಂಚ ಕಾರ್ಯಶಾಲೆ ತನ್ನೊಂದು ಅಂಗವಾಗಿ ಭಾರತ ಸ್ಕೌಟು ಗೈಡು ಸಂಘವನ್ನು ಸ್ವೀಕರಿಸಲು ಮೊದಲಿಗೆ ತಡಮಾಡಿತಾದರೂ 1953ರಲ್ಲಿ ಅದನ್ನು ಸ್ವೀಕರಿಸಿತು.

ಜಗತ್ತಿನ ನಾಲ್ಕು ಸ್ಥಳಗಳಲ್ಲಿ ಮಾತ್ರ ಗೈಡುಗಳ ದಾರುಕುಟಿ ಅಥವಾ ವಿಹಾರ ಕೇಂದ್ರಗಳಿವೆ: ಸ್ವಿಟ್ಜರ್ಲೆಂಡಿನ 'ನಮ್ಮ ಕುಟೀರ', ಲಂಡನಿನ 'ಓಲೇವ್ ನಿವಾಸ' ಮೆಕ್ಸಿಕೊದ 'ನಮ್ಮ ಮರ ಜೋಪಡಿ', ಪುಣೆ ಬಳಿಯ 'ಸಂಗಮ್'–ಇವೇ ಆ ನಾಲ್ಕು ಕೇಂದ್ರಗಳು. ಸುಮಾರು 12.8 ಲಕ್ಷ (2005) ಗೈಡುಗಳುಳ್ಳ ಭಾರತದ ಸಂಘ ಸಂಖ್ಯಾಬಲದಲ್ಲಿ ಪ್ರಪಂಚದಲ್ಲಿ ಮೂರನೆಯ ಸ್ಥಾನಗಳಿಸಿದೆ.

**ಹೆಸರು, ಧ್ಯೇಯ, ಸಂಘ ನೀತಿ, ಶಿಕ್ಷಣ ರೀತಿ :** ಗೈಡ್ ಶಬ್ದಕ್ಕೆ ಇದ್ದದ್ದು ಎರಡು ಮುಖ್ಯಾರ್ಥ. ಭಾರತದ ವಾಯವ್ಯ ಗಡಿಯಲ್ಲಿ ಸೈನ್ಯದ ಮುಂಭಾಗದಲ್ಲಿಯೇ ಇರುತ್ತ ಉಪಯುಕ್ತ ಸುದ್ದಿಸಂಗತಿಯನ್ನು ಪತ್ತೆಹಚ್ಚುವ ಮುಂಚೂಣಿ ಯೋಧ, ಅಪಾಯಕ್ಕೂ ಕಷ್ಟಕ್ಕೂ ಜಗ್ಗದ ಧೀರಜೀವಿ ಮತ್ತು ಯುರೋಪಿನ ಆಲ್ಪ್ಸ್ ಪರ್ವತದ ಕಡಿದು ಎತ್ತರಗಳನ್ನು ಏರಬಯಸುವ ಧೈರ್ಯಶಾಲಿಗಳಿಗೆ ದಾರಿ ತೋರುಗ, ಬಹಳ ಶಕ್ತ, ಸಾಹಸಗಾರ–ಎಂಬುವು. ಬಾಲಕಿಯನ್ನು ಗೈಡು ಎನ್ನುವಾಗ ಅದರ ತಾತ್ಪರ್ಯ ಬೇರೆಯಾಗುತ್ತದೆ. ಶೀಲ ಕರುಣೆ ಧರ್ಮಶ್ರದ್ಧೆ ಇತ್ಯಾದಿ ಗುಣಗಳಲ್ಲಿ ಹೆಂಗಸು ಗಂಡಸಿಗೆ ಮೇಲ್ಪಂಕ್ತಿಯೂ ಮಾರ್ಗದರ್ಶಿಯೂ ಆಗುತ್ತಾಳೆಂದು ಕವಿ ಜಾನ್ ರಸ್ಕಿನ್ ಗೈಡ್ ಎಂಬ ಪದಕ್ಕೆ ಅರ್ಥಮಾಡಿದ್ದ. ಹೆಸರಿನಲ್ಲೇ ಆ ಆದರ್ಶ ಅಡಗಿರಬೇಕೆಂದು ಗೈಡ್ ಪದ್ಧತಿಯ ಆಕಾಂಕ್ಷೆ.

ಗಂಡಾಗಲಿ ಹೆಣ್ಣಾಗಲಿ ನಾಡಿನ ಸತ್ಪ್ರಜೆಯಾಗಿ ಬಾಳಬೇಕು ಎಂಬುದು ಲೋಕ ನೀತಿ. ಅದು ಸಿದ್ಧಿಯಾಗುವುದಕ್ಕೆ ತಕ್ಕ ಶಿಕ್ಷಣ ಮನೆಯಲ್ಲೂ ವಿದ್ಯಾಶಾಲೆಯಲ್ಲೂ ಮಕ್ಕಳಿಗೂ ಕಿರಿಯರಿಗೂ ದೊರಕುವುದೇನೋ ನಿಜ. ಆದರೆ ಅಷ್ಟೇ ಸಾಲದು. ಆ ಕೊರೆಯನ್ನು ತುಂಬಿಕೊಡುವ ಪೂರಕ ತರಬೇತಿ ಒದಗಿಸುವುದೇ ಗೈಡುಪದ್ಧತಿಯ ಉದ್ದೇಶ. ಸ್ನೇಹವಿಲ್ಲದ ಬದುಕು ಬೆಂಗಾಡಿನ ಬದುಕು. ಬಾಲಕಿಯರಿಗೆ ಉತ್ತಮ ಗೆಳತಿಯರು ಗೈಡುದಳದಲ್ಲಿ ಅನಾಯಾಸವಾಗಿ ಸಿಗುತ್ತಾರೆ. ವಿರಾಮಕಾಲದ ಸದುಪಯೋಗ ಯಾವಾಗಲೂ ಒಂದು ಸಮಸ್ಯೆಯೆ; ಗೈಡು ಪದ್ಧತಿ ಒಳ್ಳೆಯ ಹವ್ಯಾಸವಾದ್ದರಿಂದ ಅದನ್ನು ಸುಲಭವಾಗಿಯೂ ಸಂತಸಪ್ರದವಾಗಿಯೂ ಬಿಡಿಸಿಬಿಡುತ್ತದೆ. ಇದು ಜಗದ್ವ್ಯಾಪಿಯಾಗಿ ವರ್ಧಿಸುತ್ತಿರುವ ಸಂಘವೂ ಹೌದು. ಅದರ ಸದಸ್ಯತ್ವಕ್ಕೆ ದೇಶದೇಶದ ಗೈಡುಗಳ ಸೌಹಾರ್ದವೂ ಸೋದರಿತನವೂ ತಾನಾಗಿ ಲಭಿಸುತ್ತದೆ. ಜನಾಂಗ, ಬಣ್ಣ, ಭಾಷೆ ಮುಂತಾದ ಸಂಕುಚಿತತ್ತ್ವವನ್ನು ಬದಿಗೊತ್ತಿದ ಸಹಜಮಾನವತೆಯ ನಿಜಾನುಭವಕ್ಕೆ ಗೈಡುಪದ್ಧತಿ ಒಂದು ದಾರಿ. ಗುಣಶೀಲ, ಪರೋಪಕಾರ ಎಂಬೆರಡು ಮಾತುಗಳಲ್ಲಿ ಮನುಷ್ಯಜೀವನದ ಸಾರ–ಸತ್ವ ವರ್ಣಿತವಾಗುತ್ತದೆ. ಇವೆರಡನ್ನೂ ತನ್ನ ವಯಸ್ಸಿಗೆ ತಕ್ಕಂತೆ ಗೈಡು ರೂಢಿಸಿಕೊಳ್ಳ ಬೇಕೆಂಬುದೇ ಈ ಪದ್ಧತಿಯ ಸ್ಪಷ್ಟ ಗುರಿ.

ವಿಶಾಲಭಾವನೆ, ಮೈತ್ರಿ, ನೇರತನ, ನಿರಾಡಂಬರ ಸೌಜನ್ಯಾಸಕ್ತಿಗಳ ತಳಹದಿಯ ಮೇಲೆ ಗೈಡುಪದ್ಧತಿಯ ಸಂಘನೀತಿಯನ್ನು ರೂಪಿಸಲಾಗಿದೆ. ಸಮವಸ್ತ್ರ, ಗುಂಪು ಕವಾಯಿತು, ದಳಶಿಸ್ತು, ಇತ್ಯಾದಿ ಗೈಡುಗಳಿಗೆ ಇವೆಯಾದರೂ ಗೈಡುಪದ್ಧತಿ ಯುದ್ಧದ ಕಡೆಗೆ ಎಂದೂ ಮನಸ್ಸನ್ನು ತಿರುಗಗೊಡುವುದಿಲ್ಲ; ಅದರ ಪಡೆಗಳೆಲ್ಲ ಶಾಂತಿಪಡೆ. ಯಾವೊಂದು ಮತಧರ್ಮಕ್ಕೂ ಅದು ಆಳಲ್ಲವಾದರೂ ಯಾವೊಂದು ಮತಧರ್ಮವನ್ನೂ ಅದು ವಿರೋಧಿಸುವುದಿಲ್ಲ, ಎಂದರೆ ಅದು ಧರ್ಮಬಾಹಿರವಲ್ಲ. ಸರ್ವಮತಗಳೂ ಸಕಲಪ್ರವಾದಿಗಳೂ ಸಮಾನವಾಗಿ ಸಾರುವ ಅನ್ಯೋನ್ಯ ಪ್ರೀತಿ, ಅನುಕಂಪೆ, ದಯೆ, ಸತ್ಯನಿಷ್ಠೆ, ಪರಿಶುದ್ಧತೆ, ದೈವಭಕ್ತಿ ಮೊದಲಾದವನ್ನು ಒತ್ತಿ ಹೇಳುತ್ತ ಅನುಷ್ಠಾನಕ್ಕೆ ತರುವಂತೆ ಪ್ರಚೋದಿಸುತ್ತ ವಿಶೇಷ ಬಗೆಯ ಧಾರ್ಮಿಕ ಸೊಬಗನ್ನು ಅದು ತಳೆದಿದೆ. ಸತ್ತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯತೆ, ಸಮಾಜ ಸುಧಾರಣೆಗಳಿಗೆ ಸೇರಿದ ಯಾವೊಂದು ಪಕ್ಷವೂ ಅದು ತನ್ನದೆಂದು ಹೇಳುವಂತಿಲ್ಲ. ಕಿರಿಯರ ವಿದ್ಯಾಭ್ಯಾಸಕ್ಕೆ ಅದು ಮೀಸಲಾಗಿದೆಯೆಂದು ವಿವರಿಸಬಹುದು; ಅದೊಂದು ನೂತನ ಶೈಕ್ಷಣಿಕ ಪ್ರಯೋಗ. ಚಿಕ್ಕವರಿಗಾಗಿ ಇರುವ ಇತರ ಯಾವ ಸಂಸ್ಥೆಯನ್ನೂ ಗೈಡುಪದ್ಧತಿ ನಿಷೇಧಿಸುವುದಿಲ್ಲ, ಅಣಕಿಸುವುದಿಲ್ಲ; ಎಲ್ಲ ಸಂಸ್ಥೆಗಳ ಬಗ್ಗೆಯೂ ಅದಕ್ಕೆ ಪ್ರಾಮಾಣಿಕ ಸಹಾನುಭೂತಿ. ಹಣದ ವಿಚಾರವಾಗಿ ಹೇಳುವುದಾದರೆ ಸ್ವಾವಲಂಬನಕ್ಕೇ ಪ್ರಾಧಾನ್ಯ.

ಗೈಡುಪದ್ಧತಿಯ ಕಟ್ಟುಪಾಡು ಬಾಲಕಿಯರ ವಯಸ್ಸಿಗೂ ದೇಹದಾರ್ಢ್ಯಕ್ಕೂ ಮನಸ್ಸಿನ ಬೆಳೆವಣಿಗೆಗೂ ಅನುರೂಪವಾಗಿ ಹೊಂದಿಕೊಂಡು ಮೂರು ಹಂತಗಳ ಕ್ರಮದಲ್ಲಿದೆ. 7–10 ವಯಸ್ಸಿನ ಮಕ್ಕಳನ್ನು ಬುಲ್‌ಬುಲ್ ಬಳಗದವರೆಂದೂ (ಇತರ ದೇಶಗಳಲ್ಲಿ ಬ್ರೌನಿ, ಬ್ಲೂ ಬರ್ಡ್, ಕಬ್ ಗೈಡ್ ಇತ್ಯಾದಿ ಅಂಕಿತಗಳಿವೆ) 10–17 ವಯಸ್ಸಿನ ಮಕ್ಕಳನ್ನು ಗೈಡು ದಳವೆಂತಲೂ ಆಮೇಲೆ 21 ವಯಸ್ಸಿನ ವರೆಗೆ ರೇಂಜರ್ ವೃಂದದವರೆಂದೂ ಕರೆಯುವ ವಾಡಿಕೆಯಿದೆ. ವಿನೋದವರ್ತನೆಯೆಲ್ಲ ಆಯಾ ವಯೋಮಿತಿಗೆ ಸ್ವಾಭಾವಿಕವಾಗುವಂತೆ ನಿಯಮಿತವಾಗಿರುವುದರಿಂದ ಈ ಬಳಗಗಳಲ್ಲಿ ಏನೇನೂ ಕೃತಕತೆಯಿಲ್ಲ, ಬಲಾತ್ಕಾರವಿಲ್ಲ, ಅಹಿತವಿಲ್ಲ. ಮೊದಲು ಬುಲ್‌ಬುಲ್ಲಾಗಿದ್ದು ಆಮೇಲೆ ಗೈಡ್ ಆಗಿ ಕೊನೆಗೆ ರೇಂಜರ್ ಆಗುವುದು ಸಹಜ ಸರಣಿ. ಆದರೂ

ಬುಲ್‌ಬುಲ್ಲಾಗದೆ ಗೈಡಾಗಬಯಸುವವರಿಗೂ ಗೈಡಾಗದೆ ರೇಂಜರ್ ಆಗಬಯಸುವವರಿಗೂ ಗೈಡುಪದ್ಧತಿಯಲ್ಲಿ ಆಸ್ಪದವುಂಟು. ಅದು ಬಾಲಕಿಯ ಸ್ವಂತ ಇರಾದೆಗೆ ಸೇರಿದ್ದಾದ್ದರಿಂದ ಅಂಥ ಅವಕಾಶ ಇರುವುದು ಕ್ಷೇಮ.

ಗೈಡುಪದ್ಧತಿಯಲ್ಲಿ ಅನುಸರಿಸುವ ಶಿಕ್ಷಣರೀತಿಯೂ ವಿಶಿಷ್ಟಬಗೆಯದು. ಸ್ವಯಂ ಶಿಕ್ಷಣ ಮತ್ತು ಕ್ರೀಡಾಮನೋಭಾವ–ಈ ಎರಡೂ ಅದರ ಚಾಲಕ ತತ್ತ್ವ. ಗೈಡು ಪದ್ಧತಿ ಒಂದು ಗುಂಪು ಆಟದಂತೆ; ಅದರ ಎಲ್ಲ ಕಾರ್ಯಕ್ರಮವೂ ನಲವಿನಿಂದ ಕೂಡಿ ಸೊಗಸಾಗಿರುತ್ತದೆ. ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತ ಗೈಡುಗಳು ತಾವು ತಾವೇ ಪಾಠ ಕಲಿಯುತ್ತಾರೆ, ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾರೆ. ಇಂಥ ಆಧುನಿಕ ವಿಧಾನದಿಂದ ಅವರಿಗೆ ಸಿದ್ಧಿಸುವ ವಿದ್ಯಾಭ್ಯಾಸದಲ್ಲಿ ಆರೋಗ್ಯ–ಶಾರೀರಿಕ ಬೆಳವಣಿಗೆ, ದೃಢತೆ, ತಡೆದುಕೊಳ್ಳುವ ಶಕ್ತಿ, ನೈರ್ಮಲ್ಯ, ನಿರೋಗ; ಹಸ್ತಕೌಶಲ–ಕೈಗೆಲಸಗಳ ಮೂಲಕ, ಸಮಯಕ್ಕೆ ಸಲ್ಲುವ ಸಾಮಾನುಗಳ ತಯಾರಿಕೆಯ ಮೂಲಕ ಕುದುರುವ ನೈಪುಣ್ಯ; ಒಳ್ಳೆಯ ನಡೆನುಡಿ– ಕರ್ತವ್ಯಪರತೆ, ಸಂಯಮ, ಸ್ವಾವಲಂಬನ, ಗುರಿಸಾಧನೆ, ಹೆಚ್ಚು ವಿನಯ, ಔದಾರ್ಯ ಮೊದಲಾದ ಸದ್ಗುಣಗಳ ಪೋಷಣೆಯಿಂದ ಉಂಟಾಗುವ ಸೌಶೀಲ್ಯ; ಸೇವೆ–ಗೈಡು ತಾನೇ ದಕ್ಷಳಾಗಿರುವುದರಿಂದ ಅದಕ್ಕರಿಗೆ ಸಹಾಯಮಾಡುವ ಆಕಾಂಕ್ಷೆ–ಈ ನಾಲ್ಕೂ ಅವಳಲ್ಲಿ ತಾನಾಗಿ ವಿಕಾಸಗೊಳ್ಳುತ್ತವೆ.

**ಗೈಡು ಪದ್ಧತಿಯ ವಿಭಾಗಗಳು :** (ಅ) ಬುಲ್‌ಬುಲ್ ವಿಭಾಗ; 12–24ರ ಸಂಖ್ಯೆಯ ವರೆಗೆ ಬುಲ್‌ಬುಲ್‌ಗಳು ಕೂಡಿದರೆ ಅದು ಒಂದು ಬಳಗ (ಫ್ಲಾಕ್) ಆಗುತ್ತದೆ. ಬಳಗಕ್ಕೆ 19 ವರ್ಷಕ್ಕೆ ಕಡಿಮೆಯಿಲ್ಲದ ಒಬ್ಬಳು ಮುಂದಾಳು (ಫ್ಲಾಕ್ ಲೀಡರ್) ಮತ್ತು 17 ವರ್ಷಕ್ಕೆ ಕಡಿಮೆಯಿಲ್ಲದ ಒಬ್ಬಳು ಸಹಾಯಕಿ (ಅಸಿಸ್ಟೆಂಟ್ ಫ್ಲಾಕ್ ಲೀಡರ್) ಇರುತ್ತಾರೆ. ಬುಲ್‌ಬುಲ್‌ಗಳು ಆರು ಆರಾಗಿ ವಿಂಗಡಗೊಂಡು ಪೆಟ್ರೋಲುಗಳಾಗುತ್ತವೆ; ಹಸಿರು ನೀಲಿ ಕೆಂಪು ಇತ್ಯಾದಿ ಬಣ್ಣ ಪೆಟ್ರೋಲಿನ ನಾಮಧೇಯ. ಪ್ರತಿ ಪೆಟ್ರೋಲಿನಲ್ಲೂ ಸಿಕ್ಸರ್ ಎಂಬ ಮೊದಲಗಿತ್ತಿ, ಸೆಕೆಂಡ್ ಎಂಬ ಎರಡನೆಯವಳು ಇದ್ದು ಅವರು ತಮ್ಮ ಪೆಟ್ರೋಲಿಗೆ ಜವಾಬ್ದಾರರಾಗಿರುತ್ತಾರೆ. ಮುಂದಾಳು, ಸಹಾಯಕಿ, ಎಲ್ಲ ಬುಲ್‌ಬುಲ್‌ಗಳೂ ಸೇರಿದ ಬಳಗದ ಸಭೆ ಏರ್ಪಡುತ್ತದೆ.

ಬಳಗಕ್ಕೆ ಸೇರಿದ, ಚಿಕ್ಕ ಹುಡುಗಿ ಈ ಪಟ್ಟಿಯಲ್ಲಿ ನಮೂದಿಸಿರುವಷ್ಟನ್ನೂ ಕಲಿತು ಕೋಮಲವಾದ (ಟೆಂಡರ್‌ಫುಟ್) ದೀಕ್ಷೆಗೆ ಅನುವಾಗುತ್ತಾಳೆ. ಬುಲ್‌ಬುಲ್ ಭಾಷೆ, ನಿಯಮ, ಆದರ್ಶ ವಚನ, ವಂದನೆ; ಎರಡು ಗೀತಕೃತಿಗಳು; ದಿನಚರಿ ಉಪಕಾರ; ರಾಷ್ಟ್ರಗೀತೆ; ನಾಲ್ಕು ಬಳಗಗೋಷ್ಠಿಯಲ್ಲಿ ಹಾಜರಾತಿ.

ಭಾಷೆ : ಇದು ನನ್ನ ಪ್ರತಿಜ್ಞೆ; ನನ್ನ ಕೈಲಾದಮಟ್ಟಿಗೂ 1 ದೇವರಲ್ಲೂ ಸ್ವದೇಶದಲ್ಲೂ ಶ್ರದ್ಧಾಭಕ್ತಿ ಇಟ್ಟುಕೊಂಡು, ಬುಲ್‌ಬುಲ್ ನಿಯಮದಂತೆ ನಡೆದುಕೊಳ್ಳುತ್ತೇನೆ; ಮತ್ತು 2 ಪ್ರತಿದಿನವೂ ಒಂದಾದರೂ ಉಪಕಾರಮಾಡುತ್ತೇನೆ (ಜೈನ, ಬೌದ್ಧ ಇತ್ಯಾದಿ ಮತಗಳ ಬಾಲಕಿಯರು ದೇವರು ಎಂಬ ಪದದ ಬದಲು ಧರ್ಮ ಎಂಬ ಪದವನ್ನು ಬಳಸಬಹುದು).

ನಿಯಮ : 1 ಬುಲ್‌ಬುಲ್ ಹಿರಿಯರು ಹೇಳಿದ್ದನ್ನು ಕೇಳುತ್ತಾಳೆ. 2 ಬುಲ್‌ಬುಲ್ ಶುಚಿವಂತೆ ಮತ್ತು ವಿನಯಶೀಲೆ.

ಆದರ್ಶವಚನ; ಕೈಲಾದಷ್ಟನ್ನೂ ಮಾಡು.

ವಂದನೆ : ಬಲಗೈಯನ್ನು ಮಡಿಸಿ ಮೇಲಕ್ಕೆತ್ತಿ ಸೂಚನೆಬೆರಳು ನಡುಬೆರಳು ಎರಡನ್ನೂ ಅಗಲ ಬಿಡಿಸಿಕೊಂಡು ಬಲಗಡೆ ತಲೆಯನ್ನು ಮುಟ್ಟಿಸುವುದು.

ಕೋಮಲಪಾದದ ಮುಂದಣ ಮಜಲಿಗೆ ಒಂಬತ್ತು ಲಘುಪರೀಕ್ಷೆಗಳಲ್ಲಿ (ಟೆಸ್ಟ್) ಹುಡುಗಿ ಉತ್ತೀರ್ಣಳಾಗಬೇಕು; ಆಗ ಅವಳಿಗೆ ಮೊದಲನೆಯ ಚುಕ್ಕಿ (ಫಸ್ಟ್ ಸ್ಟಾರ್) ದೊರೆಯುತ್ತದೆ. ರಾಷ್ಟ್ರಬಾವುಟ; ಗೈಡು ಬಾವುಟಗಳ ಪರಿಚಯ; ಸಮಗಂಟನ್ನೂ ಮೂಲೆಗಂಟನ್ನೂ ಹಾಕುವುದು; ಯಾವುದಾದರೂ ಒಂದು ನಿಸರ್ಗ ವಸ್ತುವಿನ ವರ್ಣನೆ; ಗಡಿಯಾರ ನೋಡಿ ಘಂಟೆ ಹೇಳುವುದು; ಎರಡು ಬಟ್ಟೆಗುಂಡಿ ಹೊಲಿಯುವುದು; ಏನಾದರೂ ಒಂದು ಪದಾರ್ಥದ ತಯಾರಿಕೆ; ಉಗುರು ಕತ್ತರಿಸಿಕೊಳ್ಳುವುದು, ಮೂಗಿನಲ್ಲೇ ಉಸಿರಾಡುವುದು ಏತಕ್ಕೆ ಎಂಬುದನ್ನು ತಿಳಿಯುವುದು; ಚೆಂಡನ್ನು ಎಸೆದು ತಿರುಗಿ ತನಗೆ ಬಂದ ಚೆಂಡನ್ನು ಬುತ್ತಿಹಿಡಿಯುವುದು; ಇಬ್ಬರಿಗೆ ಊಟ ಬಡಿಸುವುದು.

ಅನಂತರ ಎರಡನೆಯ ಚುಕ್ಕಿ (ಸೆಕೆಂಡ್ ಸ್ಟಾರ್); ಇದನ್ನು ಗಳಿಸುವುದಕ್ಕೆ 16 ಲಘು ಪರೀಕ್ಷೆಗಳನ್ನು ದಾಟಬೇಕು. ಜಗತ್ತಿನ ಗೈಡು ಬಾವುಟದ ಪರಿಚಯ; ಬಾವುಟಗಳ ಮೂಲಕ ವರ್ತಮಾನ ಅಥವಾ ವೀಕ್ಷಕಿ ಬಿಲ್ಲೆಗೊ ತೋಟಗಾತಿ ಬಿಲ್ಲೆಗೊ ಅಗತ್ಯವಾದ ಪರಿಜ್ಞಾನ; ದಿಕ್ಸೂಚಿಯ ತಿಳಿವಳಿಕೆ; ಬೀಜ ಅಥವಾ ರೆಂಬೆ ಹುಟ್ಟಿ ಹಾಕಿ ಗಿಡ ಬೆಳೆಸುವುದು; ಕೊಟ್ಟಿಗೆ ಗಂಟನ್ನೂ ಕುಣಿಕೆ ಗಂಟನ್ನೂ ಹಾಕುವುದು; ಗೈಡು ಪದ್ಧತಿ ಬೆಳೆದು ಬಂದ ವಿಷಯದ ಜ್ಞಾನ; ಒಲೆ ಹೊತ್ತಿಸುವುದು; ಟೀ ಅಥವಾ ಕಾಫಿ ತಯಾರಿಕೆ, ಅಥವಾ ಮೊಸರು ಕಡೆಯುವುದು; ಲಾಂದ್ರ ಹೊತ್ತಿಸುವಿಕೆ; ಸಣ್ಣದೊಂದು ಉಡುಪನ್ನು ಹೊಲಿಯುವುದು; ಅಥವಾ ಹೆಣೆಯುವುದು; ಶಿರದ ಮೇಲೆ ಪುಸ್ತಕಗಳನ್ನೊ ಇತರ ವಸ್ತುವನ್ನೊ ಇರಿಸಿಕೊಂಡು ಅದು ಬೀಳದಂತೆ ನಡೆಯುವುದು; 30ಬಾರಿ ಹಗ್ಗ ಕುಪ್ಪಳಿಕೆ ಮಾಡುವುದು; ಹತ್ತಿರ ಆಸ್ಪತ್ರೆ ಅಥವಾ ವೈದ್ಯ, ಅಂಚೆಕಚೇರಿ, ಪೋಲಿಸು ಠಾಣೆಗಳು ಎಲ್ಲಿವೆಯೆಂಬುದರ ಮಾಹಿತಿ; ಹನ್ನೆರಡು ಪದಗಳ ವಾಕ್ಯವನ್ನು ಸುದ್ದಿಯಾಗಿ ಕೊಂಡೊಯ್ಯುವುದು; ಉಟ್ಟ ಬಟ್ಟೆಗೆ ಬೆಂಕಿ ತಗಲಿದರೆ ಏನು ಮಾಡಬೇಕೆಂಬುದರ ಮಾಹಿತಿ; ಗಾಯಗೊಂಡ ಬೆರಳಿಗೊ ಮೊಣಕಾಲಿಗೊ ಬ್ಯಾಂಡೇಜು ಕಟ್ಟುವುದು. ಅಲ್ಲದೆ ಬುಲ್‌ಬುಲ್ ಬಳಗಕ್ಕೆ ಸೇರಿ 9 ತಿಂಗಳು ಕಳೆದಿರತಕ್ಕದ್ದು.

ಬುಲ್‌ಬುಲ್ ಆಮೇಲೆ ಬಲ್ಲಿಕೆ ಬಿಲ್ಲೆಗಳಲ್ಲಿ (ಪೊಫಿಶಿಯನ್ಸಿ ಬ್ಯಾಡ್ಜ್) ಆದಷ್ಟನ್ನು ಪಡೆಯಲು ಪ್ರಯತ್ನಿಸುತ್ತಾಳೆ. ಅಂಥವು 15 ಇವೆ. ಅವುಗಳಲ್ಲಿ ಮನೆಯ ಒಪ್ಪ ಓರಣ, ವೀಕ್ಷಕಿ, ಈಜುಗಾತಿ, ವ್ಯಾಯಾಮ ಪಟು, ಆಟ ಪಟು ಮುಂತಾದ ಕೆಲವನ್ನು ಆರ್ಜಿಸಿಕೊಂಡ ಬಾಲಕಿಗೆ ಹಾರುವ ಬುಲ್‌ಬುಲ್ (ಫ್ಲಯಿಂಗ್ ಬುಲ್‌ಬುಲ್) ಎಂಬ ಗೌರವಪದಕ ದೊರೆಯುತ್ತದೆ.

(ಆ) ಗೈಡು ವಿಭಾಗ: 12 ರಿಂದ 32ರ ಸಂಖ್ಯೆಯ ವರೆಗೆ ಗೈಡುಗಳಿದ್ದರೆ ಅದು ದಳ (ಗೈಡು ಕಂಪನಿ) ಎನಿಸುತ್ತದೆ. ದಳದಲ್ಲಿ ಗೈಡು ಕ್ಯಾಪ್ಟನ್ ಎಂಬ ಮುಂದಾಳೂ ಅವಳ ಸಹಾಯಕಿಯೂ ಇರುವರು. ಪೆಟ್ರೋಲಿಗೆ ಎಂಟು ಗೈಡುಗಳು; ಮೊದಲಗಿತ್ತಿಯೂ ಎರಡನೆಯವಳೂ ಪೆಟ್ರೋಲಿಗೆ ಹೊಣೆಗಾರರು. ದಳದ ಬಲು ಮುಖ್ಯವಾದ ಅಂಗ ಅದರ ಶೀಲಮಂಡಲಿ (ಕೋರ್ಟ್ ಆಫ್ ಆನರ್). ಅದರಲ್ಲಿ ಮುಂದಾಳು, ಸಹಾಯಕಿ, ಮೊದಲಗಿತ್ತಿ, ಎಲ್ಲರೂ ಸದಸ್ಯರಾಗಿರುತ್ತಾರೆ; ದಳದ ಕಾರ್ಯಾವಳಿ, ಯೋಗಕ್ಷೇಮ, ಒಳ್ಳೆಯ ಹೆಸರು ಮುಂತಾದ ವಿಚಾರವಷ್ಟೂ ಶೀಲಮಂಡಲಿಯ ಹೊಣೆಗಾರಿಕೆಯಾಗಿರುತ್ತದೆ.

ದಳಕ್ಕೆ ಪ್ರವೇಶ ಪಡೆದ ಬಾಲಕಿಗೆ ಉತ್ಕಾಂಕ್ಷಿ (ಆಸ್ಪಿರಂಟ್) ಎಂದು ಹೆಸರು. ಬಾಲಕಿ ಕೋಮಲಪಾದ ದೀಕ್ಷೆಗೆ ಅನುವಾಗಬೇಕಾದರೆ ಗೈಡು ಭಾಷೆ, ಗೈಡು ನಿಯಮ, ಆದರ್ಶ ವಚನ, ಗೈಡು ವಂದನೆ ಉಪಕಾರ, ಜಾಡು ಹಿಡಿಯುವ ಕುರುಹುಗಳು, ಸೀಟಿಯ ಸಂಜ್ಞೆ ಕೈಸಂಜ್ಞೆಗಳು, ಹುರಿ ಸುತ್ತುವಿಕೆ ಮತ್ತು ಏಳರಲ್ಲಿ ನಾಲ್ಕು ಗಂಟುಗಳು, ಸಮಗಂಟು, ಮೂಲೆಗಂಟು, ಕೊಟ್ಟಿಗೆ ಗಂಟು, ಕುಣಿಕೆ ಗಂಟು, ಬೆಸ್ತ ಗಂಟು, ಕುರಿಗಂಟು, ಎರಡು ಅರೆಗಂಟು ಒಂದು ಸುತ್ತು, ರಾಷ್ಟ್ರಬಾವುಟ, ಭಾರತದ ಸ್ಕೌಟು–ಗೈಡು ಬಾವುಟ, ಜಗತ್ತಿನ ಗೈಡು ಬಾವುಟಗಳ ಪರಿಚಯ, ರಾಷ್ಟ್ರಗೀತೆ, ದಳಗೋಷ್ಠಿಗಳಲ್ಲಿ ಒಂದು ತಿಂಗಳು ಹಾಜರಾತಿ–ಇವೆಲ್ಲ ಅಗತ್ಯ. ಇವುಗಳ ವಿವರ ಹೀಗಿದೆ.

ಭಾಷೆ : ಇದರ ವಿಚಾರ ಹಿಂದೆ ಬಂದಿದೆ.

ನಿಯಮ : 1. ಗೈಡು ನಂಬಿಕೆಗೆ ಯೋಗ್ಯ. (ಮನಸ್ಸಿನಲ್ಲಿರುವುದನ್ನು ಆಡುತ್ತಾಳೆ, ಆಡಿದಂತೆ ಮಾಡುತ್ತಾಳೆ.) 2. ಗೈಡು ಶ್ರದ್ಧಾಭಕ್ತಿಯುಳ್ಳವಳು. (ದೇವರು ದೇಶ ಕುಟುಂಬ ಗೆಳತಿಯರು ತನಗಿಂತ ಮೇಲಣವರು ತನ್ನ ಕೈಕೆಳಗಿನವರು–ಎಲ್ಲರಿಗೂ ತನ್ನ ಹೊಣೆಯನ್ನು ಪಾಲಿಸುತ್ತಾಳೆ). 3. ಗೈಡು ತನ್ನ ಕರ್ತವ್ಯವನ್ನು ಬಲ್ಲಳು (ದೇವರಲ್ಲಿ ಭಕ್ತಿ, ದೇಶಕ್ಕೆ ಸೇವೆ, ಇತರರಿಗೆ ನೆರವಾಗುವುದು–ಇವು ತನ್ನ ಕಾರ್ಯಶೀಲವೆಂದು ಅವಳಿಗೆ ಗೊತ್ತು). 4. ಗೈಡು ಸರ್ವರಿಗೂ ಸ್ನೇಹಿತೆ; ಇತರ ಎಲ್ಲ ಗೈಡುಗಳಿಗೂ ಸೋದರಿ. 5. ಗೈಡು ವಿನಯಶೀಲೆ. (ಮುಖ್ಯವಾಗಿ ವೃದ್ಧರು ದುರ್ಬಲರು ಎಂದರೆ ಅವಳ ಆದರಣೆ ಯುಕ್ತವಾಗಿಯೇ ಹೆಚ್ಚು). 6. ಗೈಡು ಪ್ರಾಣಿಗಳನ್ನು ಕುರಿತು ದಯಾನ್ವಿತೆ. 7. ಗೈಡು ಶಿಸ್ತಿನಾಕೆ, ಆಜ್ಞೆಗೆ ವಿಧೇಯಳು. 8. ಗೈಡು ಧೈರ್ಯಶಾಲಿ, ಕಷ್ಟಬಂದಾಗ ಆಕೆ ಧೈರ್ಯಗೆಡಳು. 9. ಗೈಡು ಮಿತವ್ಯಯಿ (ಕಾಲ, ಹಣ, ಸೌಕರ್ಯ, ಸ್ವಶಕ್ತಿ ಮುಂತಾದುವನ್ನು ಪೋಲುಮಾಡದೆ ಸಮಂಜಸವಾಗಿ ಬಳಸಿಕೊಳ್ಳುತ್ತಾಳೆ). 10. ಗೈಡು ಕಾಯೇನವಾಚಾ ಮನಸಾ ಪರಿಶುದ್ಧೆ.

ಆದರ್ಶವಚನ : ಸಿದ್ಧಳಾಗಿರು (ಬೀ ಪ್ರಿಪೇರ್ಡ್).

ಗೈಡು ವಂದನೆ : ಬಲಗೈಯಿನ ತರ್ಜನಿ ಮಧ್ಯಮ ಅನಾಮಿಕ ಬೆರಳುಗಳನ್ನು ಒಟ್ಟುಗೂಡಿಸಿ ಮಿಕ್ಕೆರಡರ ವರ್ತುಳದಿಂದ ಬಂಧಿಸಿ ಕೈಯೆತ್ತಿ ತಲೆಯ ಬಲಗಡೆ ಮುಟ್ಟಬೇಕು.

ಕೋಮಲಪಾದ ಮಜಲನ್ನು ದಾಟಿದ ಬಾಲಕಿ ಗೈಡು ದೀಕ್ಷೆ ಪಡೆದು, ಎರಡನೆಯ ದರ್ಜೆ ಲಘುಪರೀಕ್ಷೆಗಳಿಗೆ ತರಬೇತಿ ಹೊಂದುತ್ತಾಳೆ. ಆ ಪರೀಕ್ಷೆಗಳು ನಾಲ್ಕು ವಿಧದವು: (ಅ) ಬುದ್ಧಿಶಕ್ತಿ : ಗೈಡು ಭಾಷೆ ಮತ್ತು ನಿಯಮಗಳ ಹೆಚ್ಚು ತಿಳಿವಳಿಕೆ, ಬಾಳಿನಲ್ಲಿ ಅವುಗಳ ಅನ್ವಯ; ಮಾರ್ಸ್ ಅಥವಾ ಸೆಮಾಫೋರ್ ಬಾವುಟ ಸಂಕೇತದ ಮೂಲಕ ವರ್ತಮಾನ ಕಳಿಸುವುದು, ಸ್ವೀಕರಿಸುವುದು; ಅಥವಾ ಎರಡರಿಂದ ಐದರ ಒಳಗಿನ

ಮಗುವನ್ನು ನೋಡಿಕೊಳ್ಳುವುದು ಹೇಗೆ ಎಂಬುದರ ಅರಿವು; ಅಥವಾ ಮೂರು ಬಗೆ ಹೂ, ಮೂರು ಬಗೆ ತರಕಾರಿ ಬೆಳೆಯುವುದು; ಕಾಡಿಗೆ ಸಂಬಂಧಿಸಿದ ಕುರುಹುಗಳಿಂದಲೊ ಚೂರು ಕಾಗದ ಕಲ್ಲುಗಳು ಮುಂತಾದವುಗಳಿಂದಲೊ ಜಾಡು ಹಾಕುವುದು, ಹಾಕಿದ ಜಾಡನ್ನು ಗುರುತಿಸುವುದು; ಆರು ಸಾಮಾನ್ಯ ಮರಗಳ ಹೆಸರು, ಲಕ್ಷಣ, ಉಪಯೋಗಗಳ ಅರಿವು. (ಆ) ಕರಕೌಶಲ : ಇವುಗಳಲ್ಲಿ ಏಳು ಗಂಟುಗಳ ಪರಿಚಯ; ಸಮ, ಮೂಲೆ, ಕೊಟ್ಟಿಗೆ, ಕುಣಿಕೆ, ಬೆಸ್ತ, ಕುರಿ, ಸುತ್ತು ಮತ್ತು ಎರಡು ಅರೆಗಂಟು, ನಾಟಾ ಅರೆ ಗಂಟು, ಚೌಕ ಬಿಗಿತ; ಎರಡಕ್ಕೆ ಹೆಚ್ಚಾಗಿ ಬೆಂಕಿಕಡ್ಡಿ ಉಪಯೋಗಿಸದೆ ಒಲೆ ಹೊತ್ತಿಸಿ, ಮನೆಯೊಳಗಲ್ಲದೆ ಹೊರಗಡೆ ಎರಡು ಸಾಮಾನ್ಯ ಊಟತಿಂಡಿ ಮಾಡುವುದು, ಉರಿ ನಂದಿಸಿ, ಅಡುಗೆ ಜಾಗ ಅಡುಗೆ ಪಾತ್ರೆಗಳನ್ನು ಚೊಕ್ಕಟಗೊಳಿಸುವುದು; ಬೆಂಕಿ ತಾಕದಂತೆಯೂ ಹರಡದಂತೆಯೂ ಇರಲು ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕ್ರಮ; ಉಡುಪೊಂದಕ್ಕೆ ಬಣ್ಣ ಹಾಕುವುದು, ಬಣ್ಣಹಾಕಿದ ಉಡುಪಿನ ಜೋಪಾನ. (ಇ) ಆರೋಗ್ಯ : ನಡೆಯುವಾಗ ಕುಳಿತಿರುವಾಗ ನಿಂತಿರುವಾಗ ಯಾವ ಬಗೆಯ ದೇಹ ಭಂಗಿ ಸರಿ ಎಂಬುದರ ತಿಳಿವಳಿಕೆ ಮತ್ತು ಅಭ್ಯಾಸ (ಇದನ್ನು ದಳದ ಶೀಲಮಂಡಲಿ ಮೆಚ್ಚಬೇಕು); ಸ್ಕೌಟು ಹೆಜ್ಜೆಯಲ್ಲಿ 12 ನಿಮಿಷಕ್ಕೆ 1.5 ಕಿಮೀ ಹೋಗತಕ್ಕದ್ದು; ಅರ್ಧ ಸೇರಿನಷ್ಟು ಕಾಳನ್ನು ಬೀಸುವಕಲ್ಲಿನಲ್ಲಿ ಹಿಟ್ಟು ಮಾಡುವುದು, ಅಥವಾ 100 ಹಗ್ಗ ಕುಪ್ಪಳಿಕೆ. ನಿರ್ಬಲರಾದ ಗೈಡುಗಳಿಗೆ ಸ್ಕೌಟು ಹೆಜ್ಜೆ ಮತ್ತು ಕುಪ್ಪಳಿಕೆಯಿಂದ ರಿಯಾಯಿತಿ ಉಂಟು; ಉಡುಪು ಊಟತಿಂಡಿ ಗಾಳಿ ಬೆಳಕು ಅಂಗ ವ್ಯಾಯಾಮಗಳ ವಿಚಾರದಲ್ಲಿ ಯುಕ್ತಕ್ರಮಗಳ ಪರಿಜ್ಞಾನ; ಸಾಧಾರಣ ಡ್ರಿಲ್ ಸಂಜ್ಞೆಗಳ ತಿಳಿವಳಿಕೆ. (ಈ) ಸೇವೆ : ಪ್ರಥಮ ಚಿಕಿತ್ಸೆಗೆ ಸಂಬಂಧಪಟ್ಟಂತೆ (i) ಚೂರಿಗಾಯ, ಸುಟ್ಟಗಾಯ, ಉಸಿರುಕಟ್ಟುವಿಕೆ, ಬವಳಿ, ರಕ್ತಸೋರಿಕೆಗಳಿಗೆ ಚಿಕಿತ್ಸೆ ಮತ್ತು ಕಟ್ಟು ಬಿಗಿತ, (ii) ದೊಡ್ಡ ಕೈತೂಗು, (iii) ಉಳುಕಿದ ಹಿಮ್ಮಡಿಗೆ ಕಟ್ಟು, (೪) ಕಣ್ಣುರಿ, ಕಜ್ಜಿ, ಪಾದರಕ್ಷೆಯ ಕಚ್ಚುಗಳ ಚಿಕಿತ್ಸೆ–ಇವನ್ನು ಅಭ್ಯಾಸ ಮಾಡುವುದು; ದಳಕ್ಕೆ ಬೇಕಾಗುವ ಸಂಜ್ಞಾ ಬಾವುಟವನ್ನೋ ಹೆಗಲು ಸಂಚಿಯನ್ನೋ ಮತ್ತಾವ ಪದಾರ್ಥವನ್ನೋ ತಯಾರಿಸುವುದು; ಭಾರತಕ್ಕೆ ಸೇವೆ ಸಲ್ಲಿಸಿದ ನಾಲ್ಕು ಸುಪ್ರಸಿದ್ಧ ಭಾರತೀಯರ ಜೀವನಕಥೆಯ ಪರಿಚಯ.

ಎರಡನೆಯ ದರ್ಜೆಯನ್ನು ಮುಟ್ಟಿದ ಗೈಡಿಗೆ ಎರಡು ರೀತಿಯ ಮುಂದುವರಿಕೆ ಸಾಧ್ಯ : ಜಾಣಬಿಲ್ಲೆಗಳ ಗಳಿಕೆ ಮತ್ತು ಮೊದಲನೆಯ ದರ್ಜೆ.

ಜಾಣ ಬಿಲ್ಲೆಗಳು: ಕಲಾವಿದೆ, ಪುಸ್ತಕಪ್ರೇಮಿ, ದುಭಾಷಿ, ಪ್ರಕೃತಿಪ್ರೇಮಿ, ತೋಟಗಾತಿ, ದರ್ಜಿ, ಜೇನುಸಾಕಣೆ, ನರ್ತಕಿ, ಈಜುಗಾತಿ. ಆಂಬ್ಯುಲೆನ್ಸ್, ರೋಗದಾದಿ, ಮುಂತಾದ 67 ಬಿಲ್ಲೆಗಳಿವೆ; ತನ್ನ ಕೈಲಾದಷ್ಟಕ್ಕೆ ಗೈಡು ಅರ್ಹತೆ ಹೊಂದತಕ್ಕದ್ದು.

ಮೊದಲನೆಯ ದರ್ಜೆ : (ಅ) ಪೀಠಿಕೆ : ಎರಡನೆಯ ದರ್ಜೆ ಗೈಡಾಗಿ ಸ್ವಲ್ಪ ಕಾಲ ಕಳೆದಿರಬೇಕು; ದಳದ ಇತರ ಗೈಡುಗಳಿಗೆ ಅವಳನ್ನು ಕುರಿತು ಪ್ರೀತಿಯೂ ಗೌರವವೂ ಉಂಟಾಗುವಂತೆ ಅವಳು ನಡೆದುಕೊಳ್ಳತಕ್ಕದ್ದು; ಗೈಡು ಪದ್ಧತಿಯ ಮೂಲ ಉದ್ದೇಶ ಇತಿಹಾಸಗಳ ಸಾಕಷ್ಟು ಅರಿವು, ಭಾರತದ ಗೈಡುಪದ್ಧತಿಯ ಚರಿತ್ರೆಯ ಮುಖ್ಯಾಂಶಗಳ ಅರಿವು. (ಆ) ಬುದ್ಧಿಶಕ್ತಿ; ಈ ಐದರಲ್ಲಿ ಮೂರರ ಅಂದಾಜು ಮಾಡುವ ಜಾಣತನ; ಎತ್ತರ, ತೂಕ, ದೂರ, ಸಂಖ್ಯೆ, ಕಾಲ (ಅಂದಾಜಿಗೂ ವಾಸ್ತವತೆಗೂ ಅಂತರ ಶೇಕಡ 25ನ್ನು ಮೀರಿರಬಾರದು); ದಿಕ್ಸೂಚಿಯನ್ನು ಉಪಯೋಗಿಸುವ ವಿಧಾನವನ್ನು ಅರಿತುಕೊಂಡು, 16 ದಿಕ್ಕುಗಳನ್ನು ಇಂಗ್ಲಿಷಿನಲ್ಲೂ ತಾಯ್ನುಡಿಯಲ್ಲೂ ಹೇಳುವುದು, ಹಾಗೂ ನಕ್ಷತ್ರ ಸೂರ್ಯ ಚಂದ್ರರ ಮೂಲಕ ದಿಕ್ಕುಗಳನ್ನು ಗುರುತಿಸುವುದು; ದಳ ಗೋಷ್ಠಿಗೆ ಕ್ಲುಪ್ತ ಸಮಯದಲ್ಲಿ ಹಾಜರಿ, ಆದಾಯ ವೆಚ್ಚದ ಲೆಕ್ಕ ಇಡುವ ತಿಳಿವಳಿಕೆ; ಒಬ್ಬ ಹೊಸ ಉಮೇದುವಾರಳನ್ನು ಕೋಮಲಪಾದ ಬ್ಯಾಡ್ಜಿಗೆ ಅರ್ಹಳಾಗುವಂತೆ ಕಲಿಕೆ ನೀಡುವುದು. ಮನಿ ಆರ್ಡರ್, ರಿಜಿಸ್ಟ್ರೇಷನ್, ಇನ್ಸೂರೆನ್ಸ್ ಪಾರ್ಸೆಲು, ಟೆಲಿಗ್ರಾಮ್ ಕಳುಹಿಸುವ ಸ್ವೀಕರಿಸುವ ಕ್ರಮಗಳ ಪರಿಚಯ, ರಸೀತಿ ಬರೆದುಕೊಡುವುದರ ಪರಿಚಯ; ಸುಳಿವು ಕೊಡದೆ ಬೆನ್ನಟ್ಟುವ ಉಪಾಯ ಮರೆ ಕಂಡು ಕೊಳ್ಳುವ ಜಾಣ್ಮೆ. (ಇ) ಕರಕೌಶಲ: ಅಡುಗೆ, ಸೂಜಿಕೆಲಸ, ಮಗುವಿನ ದಾದಿ–ಈ ಮೂರು ಜಾಣಬಿಲ್ಲೆಗಳ ಗಳಿಕೆ; ಸೀಮೆಸುಣ್ಣ, ಎಲೆ, ಹೂಗಳಿಂದ ಕೊಠಡಿಯನ್ನೋ ಅಂಗಳವನ್ನೋ ಸಿಂಗರಿಸುವುದು. (ಈ) ಆರೋಗ್ಯ : ಅರ್ಧ ಗಂಟೆಯಲ್ಲಿ 3 ಕಿಮೀ ದೂರ ನಡೆಯುವುದು; ಕೋಮಲಪಾದ ಗೈಡೊಬ್ಬಳಿಗೆ ಆರೋಗ್ಯಸೂತ್ರಗಳನ್ನು ಸ್ಫುಟವಾಗಿ ಮನಮುಟ್ಟುವಂತೆ ಬೋಧಿಸಬಲ್ಲ ಚಾತುರ್ಯ; 45 ಮೀ.ನಷ್ಟು ದೂರ ಈಜುವುದು ಅಥವಾ ವ್ಯಾಯಾಮಪಟು ಅಥವಾ ಗೃಹಕೃತ್ಯ ಜಾಣಬಿಲ್ಲೆಯನ್ನು ಆರ್ಜಿಸುವುದು. (ಉ) ಸೇವೆ : ಆಂಬ್ಯುಲೆನ್ಸ್ ಅಥವಾ ರೋಗದಾದಿ ಜಾಣಬಿಲ್ಲೆಯ ಗಳಿಕೆ; ಮನೆಯ ಅಥವಾ ಗೈಡು ಕಚೇರಿಯ ಸುತ್ತ 1 ಕಿಮೀ ಸರಹದ್ದಿನಲ್ಲಿರುವ ರಸ್ತೆ, ವಸತಿ, ಜನರ ಖಚಿತ ಪರಿಚಯ, ಪರಸ್ಥಳದವರಿಗೆ ಹತ್ತಿರದ ವೈದ್ಯ, ಪೊಲೀಸು ಠಾಣೆ, ರೈಲ್ವೆಸ್ಟೇಷನ್ನು, ಬಸ್ಸು ನಿಲ್ದಾಣ, ಪೆಟ್ರೋಲು ಮಳಿಗೆ, ಅಂಚೆ ಕಚೇರಿ ಮೊದಲಾದುವನ್ನು ತೋರಿಸಿಕೊಡುವ ಅರಿವು; ಭೂಪಟದ ಪರಿಚಯ ಮತ್ತು ಉಪಯೋಗಕ್ಕೆ ಬರುವ ಮ್ಯಾಪು (ನಕ್ಷೆ) ತಯಾರಿಕೆ, ಅಥವಾ ಜಮಾ ಖರ್ಚಿನ ಲೆಕ್ಕವನ್ನು ಎರಡು ತಿಂಗಳು ಬರೆದು, ಮನೆಯಲ್ಲಿ ಒಂದು ವಾರಕ್ಕೆ ಸಮವಾಗುವ ತಿಂಡಿಊಟಗಳ ತಪಶೀಲು, ಅಂಗಡಿ ಸಾಮಾನಿನ ಪಟ್ಟಿ, ಖರೀದಿಗಳ ಅಂದಾಜು ಮಾಡುವಿಕೆ; ಇಬ್ಬರು ಎರಡನೆಯ ದರ್ಜೆ ಗೈಡುಗಳೊಂದಿಗೆ ಮ್ಯಾಪನ್ನು ಅನುಸರಿಸಿ ನಡೆದು ಸುಮಾರು 4.5 ಗಂಟೆಯ ಅರ್ಧದಿವಸವನ್ನು ಊರಿನ ಹೊರಗೆ ಬೀಡು ಬಿಡಬೇಕು, ತಮ್ಮದೇ ಊಟ ಉಪಚಾರ ಅಗತ್ಯ; ಆಕಸ್ಮಿಕ ದಿಗಿಲು, ಉಸಿರುಕಟ್ಟುವಿಕೆ, ಬೆಂಕಿ ಉಪದ್ರವ, ಬಿಸಿಲು ಹೊಡೆತ, ಹಾವು ಕುಟುಕು, ವಿದ್ಯುದಾಘಾತ ಮುಂತಾದ ಆಕಸ್ಮಿಕಗಳು ಉಂಟಾದ ಸಂದರ್ಭಕ್ಕೆ ತಕ್ಕ ಚಿಕಿತ್ಸಾಕ್ರಮದ ಅರಿವು; ಇನ್‌ಫ್ಲುಯೆಂಜ, ಕ್ಷಯ, ಕಾಲರ, ಪ್ಲೇಗು, ಸಿಡುಬು, ಟೈಫಾಯಿಡ್, ಆಮಶಂಕೆ, ಮಲೇರಿಯ, ದಡಾರ ಮುಂತಾದ ಕಾಯಿಲೆಗಳ ವಿಚಾರದಲ್ಲಿ ಆವಶ್ಯಕವಾದ ಮುನ್ನೆಚ್ಚರಿಕೆಯ ಪರಿಜ್ಞಾನ; ಋತುವ್ಯತ್ಯಾಸದಿಂದಾಗಿ ಸಾಮಗ್ರಿಗಳು ಕೆಡದಂತೆ ಜೋಪಾನಿಸುವ ಜಾಣ್ಮೆ. ಮೊದಲನೆಯ ದರ್ಜೆಯ ಗೈಡು ಇನ್ನು ಕೆಲವು ಕೌಶಲಗಳನ್ನು ಗಳಿಸಿ ರಾಷ್ಟ್ರಾಧ್ಯಕ್ಷರ ಗೈಡ್ (ಪ್ರೆಸಿಡೆಂಟ್ಸ್ ಗೈಡ್) ಮಟ್ಟಕ್ಕೆ ಏರಬಹುದು. ಇದಕ್ಕೆ ಪ್ರಾಯ 15ಕ್ಕೆ ಕಡಮೆ ಇರಕೂಡದು ಎಂಬ ವಿಧಿಯಿದೆ. 14 ವರ್ಷ ತುಂಬಿದ ಮೇಲೆ ಸೀನಿಯರ್ ಗೈಡು ಎಂಬ ದಳದ ಉಪಶಾಖೆಗೆ ಸದಸ್ಯಳಾಗಬಹುದು. ಆದರೆ ಎಲ್ಲ ಕಡೆಯೂ ಈ ಉಪಶಾಖೆಯ ಸೌಲಭ್ಯವಿಲ್ಲ.

ರೇಂಜರ್ ವಿಭಾಗ : ರೇಂಜರ್ ವೃಂದದಲ್ಲಿ 4ರಿಂದ 24ರ ಸಂಖ್ಯೆಯ ವರೆಗೆ 16, 17 ವಯಸ್ಸು ತುಂಬಿದ ಹೆಣ್ಣುಮಕ್ಕಳಿಗೆ ಅವಕಾಶ ಉಂಟು. ವೃಂದಕ್ಕೆ ಮುಂದಾಳೂ (ರೇಂಜರ್ ಲೀಡರ್) ಸಹಾಯಕಿಯೂ ಇರುತ್ತಾರೆ. ವೃಂದಗಳು ಪೆಟ್ರೋಲುಗಳಾಗಿಯೋ ಒಟ್ಟಾಗಿಯೋ ಕೆಲಸಮಾಡಬಹುದು. 4ರಿಂದ 6 ರೇಂಜರುಗಳು ಇರುವ ಒಂದು ಪೆಟ್ರೋಲಿಗೆ ಮೊದಲಗಿತ್ತಿ (ರೇಂಜರ್‌ಮೇಟ್) ಹೊಣೆಗಾತಿಯಾಗಿರುತ್ತಾಳೆ. ವೃಂದದ ಆಶಯ, ಕಾರ್ಯಾವಳಿ, ಒಳಗೋಷ್ಠಿ, ಹೊರಪಯಣ, ಸೇವಾಯೋಜನೆ, ಎಲ್ಲವನ್ನೂ ನಿರ್ಧರಿಸಿ ಆಚರಣೆಗೆ ತರುವ ಹೊಣೆ ಶೀಲಮಂಡಲಿಯದು. ವೃಂದದಲ್ಲಿ ಬಳಗ, ದಳಗಳಿಗಿಂತ ಶೀಲ ಮಂಡಲಿಯದೇ ಹೆಚ್ಚಿನ ಆಡಳಿತ, ಅಧಿಕಾರ.

ವೃಂದಕ್ಕೆ ಸೇರಿದ ಉತ್ಸಾಂಕ್ಷಿ ಈ ಲಘುಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ರೇಂಜರ್ ದೀಕ್ಷೆಗೆ ಅನುವಾಗುತ್ತಾಳೆ. ಗೈಡು ವಿಭಾಗದ ಕೋಮಲಪಾದ ಬ್ಯಾಡ್ಜಿಗೆ ಬೇಕಾದ ಜ್ಞಾನದ ಸ್ವಾಮ್ಯ; ಪ್ರಪಂಚದ ಗೈಡಿಂಗ್ ಸ್ಕೌಟಿಂಗುಗಳ ಅರಿವು; ಯುವಕ ಯುವತಿಯರಿಗಾಗಿ ಏರ್ಪಾಡಾಗಿರುವ ಇನ್ನೆರಡು ಬೇರೆ ಸಂಘಗಳ ಪರಿಚಯ; ಭಾರತದ ಗೈಡು ಪದ್ಧತಿಯ ಮೇಲಣ ಗ್ರಂಥಗಳ ವ್ಯಾಸಂಗ; ಅಂಚೆ ಟೆಲಿಫೋನು ರೈಲ್ವೆ ಮುಂತಾದವುಗಳ ಖಚಿತ ಮಾಹಿತಿ; ದಿಕ್ಸೂಚಿ ಮತ್ತು ದಿಕ್ಕುಗಳ ಅರಿವು; ಮ್ಯಾಪನ್ನು ಓದುವುದು, ರಚಿಸುವುದು; ಐದು ಮೈಲಿ ಕಾಲ್ನಡೆ (ಹೈಕ್) ಮಾಡಿ ವರದಿ ಒಪ್ಪಿಸುವುದು; ಸರಳ ಅಡುಗೆ ತಯಾರಿಸಿ ಬಡಿಸುವುದು; ಆರೋಗ್ಯ ಸೂತ್ರಗಳ ಜ್ಞಾನ ಅಥವಾ ಮಗುವಿನ ಆರೈಕೆ; ಭಾಷೆ ನಿಯಮ, ಒಳ ತಾತ್ಪರ್ಯದ ಅರಿವು, ವಾಕ್ಯರಚನೆ ಒಂದೇ ಆದರೂ ಅರ್ಥಗ್ರಹಿಕೆಯಲ್ಲಿ ರೇಂಜರ್ ದೃಷ್ಟಿಗೆ ಹೆಚ್ಚು ವೈಶಾಲ್ಯ.

ಆಮೇಲೆ ರೇಂಜರ್ ತಾರೆ (ರೇಂಜರ್ ಸ್ಟಾರ್) ದರ್ಜೆಗೆ ಏರಲು ಪ್ರಯತ್ನಿಸಬೇಕು. ಗೈಡುಗಳ ಜಾಣಬಿಲ್ಲೆ 10ರಲ್ಲಿ 6ನ್ನು ಗಳಿಸಿಕೊಳ್ಳತಕ್ಕದ್ದು: ಅಡುಗೆ, ದಾದಿ, ಪೌರತನ, ಶಿಬಿರಪಟು, ಗೃಹಕೃತ್ಯ, ಜಗತ್ತಿನ ನಾಗರಿಕ, ಊರಿನ ನೈರ್ಮಲ್ಯ, ರಕ್ಷಕಿ (ರೆಸ್ಕ್ಯೂಯರ್), ಸಂಕೇತ ಸುದ್ದಿಗಾತಿ, ದುಭಾಷಿ; ತನ್ನ ಸರಹದ್ದಿನ ರಸ್ತೆ, ವಸತಿ, ಜನಗಳ ಅರಿವು; ಒಂದು ರಾತ್ರಿ ಕಾಲ್ನಡೆ (ಓವರ್‌ನೈಟ್ ಹೈಕ್), ವಯಸ್ಕರ ಶಿಕ್ಷಣ, ಆಸ್ಪತ್ರೆ ಸೇವೆ, ಶ್ರಮದಾನ, ಮಕ್ಕಳ ಯೋಗಕ್ಷೇಮ ಮುಂತಾದುವಲ್ಲಿ ಒಂದನ್ನು ಆರಿಸಿಕೊಂಡು ಒಂದು ತಿಂಗಳು ದುಡಿಮೆ.

ಅನಂತರ ಒಬ್ಬಳು ಗೈಡಿಗೆ ಮೊದಲನೆಯ ದರ್ಜೆ ಗೈಡಾಗಲು ಕಲಿಸಿಕೊಟ್ಟು, ಮತ್ತೆ 6 ಜಾಣಬಿಲ್ಲೆ ಪಡೆದು, ಒಂದು ವಾರ ಗುಡಾರದಲ್ಲಿ ಶಿಬಿರವಾಸ ಕೈಗೊಂಡು, ಗೈಡು ಪದ್ಧತಿಯಲ್ಲಿ ಉತ್ತಮ ದರ್ಜೆಯದಾದ ಭಾರತ ರೇಂಜರ್ ಎನ್ನಿಸಿಕೊಳ್ಳಬಹುದು.

**ಸಮವಸ್ತ್ರ, ಲಾಂಛನ, ಸಿಲ್ಪಿ, ಇತ್ಯಾದಿ :** ಗೈಡಿನ ಸಮವಸ್ತ್ರ ಎಂದರೆ ದಪ್ಪಬಟ್ಟೆಯ ನೀಲಿ ಲಂಗ (ಓವರ್‌ಆಲ್ ಅಥವಾ ಫ್ರಾಕ್) ಅಥವಾ ನೀಲಿ ಸೀರೆ ಮತ್ತು ಬಿಳಿಯ ಕುಪ್ಪಸ–ಇವು ಸೇರಿರುತ್ತವೆ. ಲಂಗವಾದರೆ ಅದು ಮೊಳಕಾಲಿನಿಂದ ಸ್ವಲ್ಪ ಕೆಳಕ್ಕೆ ಇಳಿದಿದ್ದು, ಅರೆತೋಳುಗಳನ್ನು ಹೊಂದಿ ನಾಲ್ಕು ಮುಚ್ಚಳ ಜೇಬುಗಳನ್ನೂ (ಪ್ಯಾಚ್ ಪ್ಯಾಕೆಟ್ಸ್) ಹೆಗಲುಪಟ್ಟಿಗಳನ್ನೂ (ಎಪಾಲೆಟ್ಸ್) ಉಳ್ಳದ್ದಾಗಿರಬೇಕು. ಕುಪ್ಪಸಕ್ಕೂ ಎರಡು ಮುಚ್ಚಳ ಜೇಬು ಹೆಗಲುಪಟ್ಟಿಗಳು ಇರಬೇಕು. ತೋಳಿನ ಅಂಚು 1.5" ಎತ್ತಿ

ಮಡಿಸಿರಬೇಕು. ಕುಪ್ಪಸ ಸೊಂಟದಿಂದ ನಾಲ್ಕು ಅಂಗುಲ ಕೆಳಕ್ಕೆ ಬರುವಷ್ಟು ಉದ್ದವಿರತಕ್ಕದ್ದು. ಸೀರೆಗೆ ಅಂಚು ಬೇಕಾಗಿಲ್ಲ; ಅಂಚು ಅಪೇಕ್ಷಿತವಾದರೆ ಅದು ಕಾಲಂಗುಲದ ಅಗಲದ ಬಿಳಿಯ ಬಣ್ಣದ್ದಾಗಿರಬೇಕು. ಮುಮ್ಮೂಲೆಯ ಕೊರಳುವಸ್ತ್ರದ (ಸ್ಕಾರ್ಫ್) ಎರಡು ತುದಿಗಳೂ ಸೊಂಟದ ವರೆಗೂ ಇಳಿದಿರಬೇಕು. ಕೊರಳುವಸ್ತ್ರದ ಬಣ್ಣ ಗುಂಪು ಗುಂಪಿಗೆ ಬೇರೆಯದಾಗಿರುತ್ತದೆ. ಯಾವ ಬಳಗ, ದಳ, ವೃಂದ ಎಂಬುದನ್ನು ಸುಲಭವಾಗಿ ಗುರ್ತಿಸುವುದಕ್ಕೆ ಬಣ್ಣದ ಭೇದ ಅಗತ್ಯ. ಕೊರಳುವಸ್ತ್ರದ ಎರಡು ಭಾಗಗಳನ್ನು ಕೂಡಿಸಿ ಹಿಡಿಯುವುದಕ್ಕೆ ಅಗಲ ಉಂಗುರದಂಥ ವಾಗಲ್ ಎಂಬ ಸಾಧನ ಉಪಯುಕ್ತ. ಸೊಂಟಪಟ್ಟಿ (ಬೆಲ್ಟ್), ಒಂಟೆಬಣ್ಣದ ಕಾಲುಚೀಲ (ಸಾಕ್ಸ್), ಕಂದು ಬಣ್ಣದ ಪಾದರಕ್ಷೆ–ಇವು ಭಾರತದಲ್ಲಿ ಗುಂಪುಗಳ ಇಚ್ಛೆಗೆ ಬಿಟ್ಟದ್ದಾಗಿವೆ; ಇವನ್ನು ಬಯಸಿದ್ದಾದರೆ ಒಂದು ಗುಂಪಿಗೆಲ್ಲ ಒಂದೇ ಮಾದರಿಯ ಬಣ್ಣ ಇರತಕ್ಕದ್ದು. ಇವುಗಳ ಜೊತೆಗೆ ಗೈಡು ದರ್ಜೆಯ ಭುಜಪಟ್ಟಿ, ಲಾಂಛನ, ಸಿಳ್ಳಿ ಸಿಳ್ಳಿಹುರಿ–ಇವೂ ಇರುವುದುಂಟು.

ಗೈಡುಪದ್ಧತಿಯ ಒಂದು ವೈಶಿಷ್ಟ್ಯವೇನೆಂದರೆ, ಬುಲ್‌ಬುಲ್‌ನಿಂದ ಹಿಡಿದು ಲೇಡಿ ಬೇಡನ್ ಪೋವೆಲಳ ವರೆಗೆ ಸಕಲ ಗೈಡು ಗೈಡರ್ (ಗೈಡರ್ ಎಂಬುದು ಎಲ್ಲ ಮುಂದಾಳುಗಳಿಗೂ ಅನ್ವಯಿಸುವ ಏಕನಾಮ) ಕಮಿಷನರುಗಳಿಗೂ ಸಮವಸ್ತ್ರದಲ್ಲಿ ಯಾವ ಭೇದವೂ ಕಾಣದು; ಒಂದೆರಡು ಲಾಂಛನ ಮಾತ್ರ ವ್ಯತ್ಯಾಸಗಳಿರುತ್ತವೆ.

**ಆಡಳಿತ ವ್ಯವಸ್ಥೆ :** ಗೈಡುಪದ್ಧತಿಯಲ್ಲಿ ಆಡಳಿತಾಧಿಕಾರ ಸೂಕ್ತರೀತಿಯಲ್ಲಿ ಹಂಚಿಕೆಯಾಗಿದೆಯಾಗಿ ಕ್ರಮಬದ್ಧ ಪ್ರಜಾಪ್ರಭುತ್ವ ಅದರ ಲಕ್ಷಣವೆನ್ನಬಹುದು. ಆಜ್ಞೆಮಾಡುವವರಾಗಲೀ ದಂಡನೆಗೆ ಗುರಿಯಾಗುವವರಾಗಲೀ ಇಲ್ಲಿಲ್ಲ. ಆವಶ್ಯಕವಾಗಿ ಇರಲೇಬೇಕಾದ ಹಲವಾರು ನಿಯಮಗಳು ಗೈಡಿಂಗ್ ಎಂಬ ಆಟ–ಶಿಕ್ಷಣದ ಅಭ್ಯಾಸಕ್ಕೆ ಒದಗುವ ದಾರಿ ಕಂಬಗಳೇ ಹೊರತು ಅವು ಶಾಸನಗಳಲ್ಲ, ಕಾನೂನುಗಳಲ್ಲ, ಕಬ್ಬಿಣ ಕಟ್ಟುಗಳಲ್ಲ. ಆದ್ದರಿಂದ ಗೈಡು ಪದ್ಧತಿಯ ಮುಖ್ಯ ಆಧಾರವೆಂದರೆ ಬಳಗ, ದಳ, ವೃಂದಗಳು. ಹಲವಾರು ಅಂಥ ಗುಂಪುಗಳು ಒಟ್ಟು ಸೇರಿ ಒಂದು ಸ್ಥಳೀಯ ಸಂಸ್ಥೆ ಏರ್ಪಡುತ್ತದೆ. ಹಲವು ಸ್ಥಳೀಯ ಸಂಸ್ಥೆಗಳಿಂದ ಒಂದು ಜಿಲ್ಲಾ ಸಂಸ್ಥೆಯಾಗುತ್ತದೆ. ಹಲವು ಜಿಲ್ಲಾ ಸಂಸ್ಥೆಗಳಿಂದ ಒಂದು ವಿಭಾಗ ಅಥವಾ ಕೌಂಟೀ ಸಂಸ್ಥೆ (ಡಿವಿಷನಲ್ ಅಥವಾ ಕೌಂಟೀ ಅಸೋಸಿಯೇಷನ್) ಆಗುತ್ತದೆ. ಇಂಥ ಕೌಂಟೀ ಸಂಸ್ಥೆಗಳು ಸೇರಿ ರಾಜ್ಯಸಂಸ್ಥೆ ಏರ್ಪಾಡು. ರಾಜ್ಯಸಂಸ್ಥೆಗಳು ಕೂಡಿ ರಾಷ್ಟ್ರಸಂಸ್ಥೆ ರೂಪುಗೊಳ್ಳುತ್ತದೆ. ಅದಕ್ಕೆ ಇದು ಆಶ್ರಯ, ಇದಕ್ಕೆ ಅದು ಆಶ್ರಯ, ಇದೇ ರಚನಾತತ್ತ್ವ; ಯಾವುದು ಯಾವುದನ್ನೂ ಯಜಮಾನ–ಸೇವಕ ಸಂಬಂಧದಲ್ಲಿ ಅವಲಂಬಿಸಿಕೊಂಡಿಲ್ಲ. ಎಲ್ಲ ಮಟ್ಟಗಳಲ್ಲಿಯೂ ಮಂತ್ರಾಲೋಚನ ಸಭೆ ಮತ್ತು ಕಾರ್ಯಸಮಿತಿಗಳು ಚುನಾಯಿತಗೊಂಡಿರುತ್ತವೆ. ಇನ್ನೊಂದು ಕಡೆ, ಕಮಿಷನರುಗಳು ನೇಮಿತರಾಗಿ ಸಮರ್ಪಕ ರೀತಿಯಲ್ಲಿ ಗೈಡುಗಳ ವ್ಯಾಸಂಗ, ವ್ಯಾಯಾಮ, ವಿನೋದಬ್ಯಾಡ್ಜು ಗಳಿಕೆ, ಪರೋಪಕಾರ–ಮೊದಲಾದವುಗಳ ಮೇಲುಸ್ತುವಾರಿ ನಡೆಸುತ್ತಾರೆ.

ಗೈಡರುಗಳಿಗೆ ಶಿಕ್ಷಣ ಕೊಡುವುದಕ್ಕಾಗಿ ಒಂದೆರಡು ವಾರಗಳ ಶಿಬಿರ ಆಗಾಗ ಜರುಗುತ್ತದೆ. ಸರಿಸುಮಾರಾಗಿ ಒಂದೇ ಮಾದರಿಯ ಶಿಕ್ಷಣಕ್ರಮ ಪ್ರಪಂಚದಲ್ಲೆಲ್ಲ ಅಂಗೀಕೃತವಾಗಿದೆ; ದೇಶೀಯ ಸ್ಥಳೀಯ ವ್ಯತ್ಯಾಸಗಳು ಬಹಳ ಕಡಿಮೆ. ಗೈಡು ಪದ್ಧತಿ ಜಗತ್ತಿಗೆಲ್ಲ ಒಂದೇ ಆಗಿದೆ. (ಎಸ್‌ವಿ.ಆರ್.)

**ಗೈಬೆಲ್, ಎಮಾನ್ಯುಯೆಲ್ ಫಾನ್ :** 1815–84. ಜರ್ಮನ್ ಕವಿ. ಲೂಬೆಕ್‌ನಲ್ಲಿ ಹುಟ್ಟಿದ. ಬಾನ್ ವಿಶ್ವವಿದ್ಯಾಲಯದಲ್ಲಿ ವೇದಾಂತವನ್ನು ಓದಿದ. ಅನಂತರ ಗ್ರೀಸ್ ದೇಶವನ್ನು ಸುತ್ತಿಬಂದು ಪರ್ಷಿಯದ ದೊರೆ ಫ್ರೀಡ್ರಿಕ್ ವಿಲಿಯಂನಿಂದ ಗೌರವವೇತನ ಪಡೆದ. ಲೂಯಿಸ್ ದೊರೆಯ ಕರೆಯ ಮೇರೆಗೆ ಮ್ಯೂನಿಕ್‌ನಲ್ಲಿ ಜರ್ಮನ್ ಸಾಹಿತ್ಯದ ಪ್ರಾಧ್ಯಾಪಕನಾದ (1852). ಮೊದಲಿಗೆ ಕ್ರಾಂತಿಕಾರಕ ಕವಿಗಳಲ್ಲಿ ಒಬ್ಬನೆನಿಸಿದ್ದ ಈತ ಅನಂತರ ಸಂಪ್ರದಾಯಬದ್ಧ ಕವಿಯಾದ. 1848–1870 ರವರೆಗೆ ಈತ ಜರ್ಮನ್ ಕವಿಗಳನ್ನು ಪ್ರತಿನಿಧಿಸಿದ. ಈತನ ಭಾವಗೀತೆಗಳು ಭಾವಾತಿರೇಕವುಳ್ಳವಾಗಿದ್ದರೂ ರಚನೆ ಮತ್ತು ಶೈಲಿಯ ದೃಷ್ಟಿಯಿಂದ ಶಕ್ತಿಯುತ ಕವನಗಳೆನಿಸಿವೆ. ಪೋಯೆಮ್ಸ್ (1840), ನ್ಯೂ ಪೋಯೆಮ್ಸ್ (1857)–ಇವು ಈತನ ಕವನ ಸಂಕಲನಗಳು. ಈ ಎರಡರಲ್ಲಿನ ಆಯ್ದ ಕವನಗಳ ಇಂಗ್ಲಿಷ್ ಭಾಷಾಂತರ 1864ರಲ್ಲಿ ಅಚ್ಚಾಗಿದೆ. ಬ್ರೂನ್‌ಹಿಲ್ಡ್ (1854–ಇಂಗ್ಲಿಷ್ ಭಾಷಾಂತರ 1879) ಮತ್ತು ಸಫೊನಿಸ್ಬ (1869)–ಇವು ಈತನ ನಾಟಕಗಳು. ಎರಡನೆಯದು ಷಿಲರ್ ಬಹುಮಾನ ಪಡೆಯಿತು. *

**ಗೈಲ್ಸ್ ಲಿಟ್ಟನ್ ಸ್ಟ್ರೇಚಿ :** 1880–1932. ಗೈಲ್ಸ್ ಲಿಟ್ಟನ್ ಸ್ಟ್ರೇಚಿ ಇಂಗ್ಲೆಂಡಿನ ಲೇಖಕ ಮತ್ತು ವಿಮರ್ಶಕ. ಈತ 1880ರ ಮಾರ್ಚ್ 1ರಂದು ಲಂಡನ್‌ನಲ್ಲಿ ಜನಿಸಿದ. ತಂದೆ ಲೆಫ್ಟನೆಂಟ್ ಜನರಲ್ ಸರ್ ರಿಚರ್ಡ್ ಸ್ಟ್ರೇಚಿ ಶ್ರೇಷ್ಠ ಯೋಧ ಮತ್ತು ಸಾರ್ವಜನಿಕ ಆಡಳಿತಗಾರ. ರಿಚರ್ಡ್ ಸ್ಟ್ರೇಚಿ 30 ವರ್ಷಗಳಿಗೂ ಹೆಚ್ಚು ಕಾಲ ಭಾರತದಲ್ಲಿ ಸೇವೆ ಸಲ್ಲಿಸಿದ. ತಾಯಿ ಲೇಡಿ ಸ್ಟ್ರೇಚಿ ಭಾಷೆಗಳು ಮತ್ತು ಸಾಹಿತ್ಯದಲ್ಲಿ ಆಸಕ್ತಿವುಳ್ಳವಳಾಗಿದ್ದಳು. ಭಾರತದ ವೈಸರಾಯ್ ಆಗಿದ್ದ ಅರ್ಲ್ ಆಫ್ ಲಿಟ್ಟನ್, ರಿಚರ್ಡ್‌ನ ಸ್ನೇಹಿತ, ಅವನ ಹೆಸರನ್ನೆ ತನ್ನ 5ನೆಯ ಮಗನಿಗೆ ಲಿಟ್ಟನ್ ಎಂದು ಇಟ್ಟ. 1887ರಿಂದಲೇ ಲಿಟ್ಟನ್ ಫ್ರೆಂಚ್ ಭಾಷೆಯನ್ನು ಅಧ್ಯಯನ ಮಾಡಲು ಪ್ರಾರಂಭಿಸಿದ. ಈತ ಸಂಸ್ಕೃತಿಯನ್ನು ಬಹಳವಾಗಿ ಮೆಚ್ಚಿದ್ದ. ಈತ ಕೇಂಬ್ರಿಜ್ ಮತ್ತು ಲಿವರ್‌ಪೂಲ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದ. ಈತ ಎಡಿನ್ ಬರೋ ರಿವ್ಯೂ, ನೇಷನ್ ಅಥೇನುಯೆಮ್, ಸ್ಪೆಕ್ಟೇಟರ್ ಮುಂತಾದ ನಿಯತಕಾಲಿಕೆಗಳಿಗೆ ಲೇಖನಗಳನ್ನು ಬರೆಯಲು ಪ್ರಾರಂಭಿಸಿದ. 'ಬ್ಲೂಮ್ಸ್‌ಬರಿ ಗುಂಪಿ'ನ ಪ್ರಮುಖ ಸದಸ್ಯನಾಗಿದ್ದ.

ಲಿಟ್ಟನ್ ಸ್ಟ್ರೇಚಿ ಜೀವನ ಚರಿತ್ರೆಗಳ ರಚನೆಯಲ್ಲಿ ನಾಯಕನ ಉದಾತ್ತ ಗುಣಗಳನ್ನು ಹಾಡಿ ಹೊಗಳುವ, ನಿಧನರಾದವರ ನೆನಪಿಗಾಗಿ ಸಂಪುಟಗಳನ್ನು ಪ್ರಕಟ ಮಾಡುವ ಸಂಪ್ರದಾಯಗಳನ್ನು ತಳ್ಳಿಹಾಕಿದ. ವ್ಯಂಗ, ಕಟಕಿ, ಹರಿತವಾದ ಶೈಲಿ ಇವು ಇವನ ಬರೆವಣಿಗೆಯ ವೈಶಿಷ್ಟ್ಯ. ಮನುಷ್ಯ ಸ್ವಭಾವದ ಜಟಿಲತೆ, ವೈಚಿತ್ರ್ಯಗಳಲ್ಲಿ ಈತನಿಗೆ ಆಸಕ್ತಿ. ನಿರ್ಲಿಪ್ತತೆ, ವಿವೇಚನೆ, ಕೃತ್ರಿಮವಿಲ್ಲದ ಮಾನವ ಬಾಂಧವ್ಯ ಇವುಗಳನ್ನು ಹೆಚ್ಚಾಗಿ ಮೆಚ್ಚುತ್ತಾನೆ. ಈತ ರಚಿಸಿದ ಜೀವನಚರಿತ್ರೆಗಳು ಕಾದಂಬರಿಗಳಂತೆ ಓದುಗರನ್ನು ಆಕರ್ಷಿಸುತ್ತವೆ. ಅನೇಕರು ಇವನನ್ನು 'ಜೀವನ ಚರಿತ್ರೆಗಳ ಕಾದಂಬರಿಕಾರ' ಎಂದೇ ಗುರುತಿಸುವರು. ಈತ ತನ್ನ 51ನೆಯ ವಯಸ್ಸಿನಲ್ಲಿ (1932) ಹೊಟ್ಟೆಯ ಕ್ಯಾನ್ಸರ್‌ನಿಂದ ನಿಧನನಾದ.

ಈತನ ಲೈಫ್ ಅಂಡ್ ಲೆಟರ್ಸ್, ಲ್ಯಾಂಡ್ ಮಾರ್ಕ್ ಇನ್ ಫ್ರೆಂಚ್ ಲಿಟರೇಚರ್ (1912), ಎಮಿನೆಂಟ್ ವಿಕ್ಟೋರಿಯನ್ಸ್ (1918), ಕ್ವೀನ್ ವಿಕ್ಟೋರಿಯ (1921) ಎಂಬ ಕೃತಿಗಳು ಇವನಿಗೆ ಅಪಾರ ಯಶಸ್ಸನ್ನು ತಂದುಕೊಟ್ಟವು. ಜೀವನಚರಿತ್ರೆಯ ವಿಧಾನದಲ್ಲಿಯೇ ಹೊಸ ಮೈಲಿಗಲ್ಲನ್ನು ಸ್ಥಾಪಿಸಿದ ಬರಹಗಳೆಂದು ಇವು ಪ್ರಸಿದ್ಧವಾಗಿವೆ. ಬುಕ್ಸ್ ಅಂಡ್ ಕ್ಯಾರೆಕ್ಟರ್ಸ್ (1922), ಪೋಪ್ (1925), ಎಲಿಜಬೆತ್ ಅಂಡ್ ಎಸೆಕ್ಸ್ (1928), ಕ್ಯಾರೆಕ್ಟರ್ಸ್ ಅಂಡ್ ಕಾಮೆಂಟರೀಸ್ (1933) ಇವು ಈತನ ಮುಖ್ಯ ಕೃತಿಗಳು. ಇವನ ನಿಧನದ ಅನಂತರ 'ಕ್ಯಾರೆಕ್ಟರ್ ಅಂಡ್ ಕಾಮೆಂಟರೀಸ್' ಕೃತಿ ಪ್ರಕಟವಾಯಿತು. ಈತ ಬರೆದ ಹಾಲ್‌ರಾಮ್ಡ್‌ರ ಜೀವನಚರಿತ್ರೆ ಎರಡು ಸಂಪುಟಗಳಲ್ಲಿ 1967–68ರಲ್ಲಿ ಪ್ರಕಟಗೊಂಡಿದೆ. (ಎಲ್.ಎಸ್.ಎಸ್.)

**ಗೊಂಗೊರಾ ಇ ಆರ್ಗೋಟಾ, ಲೂಯಿಸ್ ಡೆ :** 1561–1627. ಸುವರ್ಣಯುಗವನ್ನು ಪ್ರತಿನಿಧಿಸುವ ಪ್ರಸಿದ್ಧ ಕವಿಗಳಲ್ಲಿ ಕೊನೆಯ ಸ್ಪ್ಯಾನಿಷ್ ಕವಿ. ಕಾರ್ಡೊಬದ ಶ್ರೀಮಂತ ಮನೆತನವೊಂದರಲ್ಲಿ 1561ರ ಜುಲೈ 11ರಂದು ಜನಿಸಿದ. ತಂದೆ ಫ್ರಾನ್ಸಿಸ್ಕೊ ಡಿ ಆರ್ಗೋಟಾ ನಗರದ ಮೇಯರ್ ಆಗಿದ್ದ. ಅಲ್ಲದೆ ಇವನ



ಪುಸ್ತಕ ಭಂಡಾರ ಇಡೀ ಊರಿಗೇ ಪ್ರಸಿದ್ಧವಾದುದಾಗಿತ್ತು.

ಗೊಂಗೊರಾ ಸಾಲಮಾಂಕ ವಿಶ್ವವಿದ್ಯಾಲಯದಲ್ಲಿ ಕಾನೂನು ಶಾಸ್ತ್ರ ಕುರಿತು ಉನ್ನತ ವ್ಯಾಸಂಗ ಮಾಡಿದ. ಆದರೂ ಒಲವು ಕಾವ್ಯದ ಕಡೆಗೇ ಇತ್ತು. ಈತ ತನ್ನ 24ನೆಯ ವಯಸ್ಸಿನಲ್ಲಿಯೇ ಶ್ರೇಷ್ಠ ಕವಿಯೆನಿಸಿಕೊಂಡ. ಸುವಿಖ್ಯಾತ ಸಾಹಿತಿ ಸರ್ವಾಂಟಿಸ್ ತನ್ನ ಗ್ಯಾಲಟೀಯ ಎಂಬ ಕೃತಿಯಲ್ಲಿ ಈತನ ಭಾವಗೀತೆಗಳ ಶ್ರೇಷ್ಠತೆಯನ್ನು ಪ್ರಶಂಸಿಸಿದ್ದಾನೆ.

ಶ್ರೇಷ್ಠವಾದ ಕವಿತೆಗಳನ್ನು ಎಷ್ಟು ಬರೆದರೂ ಅದರಿಂದ ಜೀವನ ಸಾಗದೆಂದು ಕಂಡುಕೊಂಡ ಕವಿ ಚರ್ಚಿನಲ್ಲಿ ಪಾದ್ರಿಯಾದ. 3ನೆಯ ಫಿಲಿಪ್ ದೊರೆಯ ಆಸ್ಥಾನದಲ್ಲಿ ಸಾಕಷ್ಟು ವರ್ಚಸ್ಸೂ ಪ್ರಭಾವವೂ ಇದ್ದ ಕೆಲವರ ಬೆಂಬಲ ದೊರಕಿ ಕಾಲಕ್ರಮದಲ್ಲಿ ರಾಜಾನುಗ್ರಹವನ್ನು ಪಡೆದು ಅರಮನೆಯ ಚಾಪ್ಲಿನ್ ಆದ. ಹಾಗಾಗಿ ಜೀವಮಾನದ ಬಹು ಭಾಗವನ್ನು ಮ್ಯಾಡ್ರಿಡ್ ನಗರದಲ್ಲೇ ಕಳೆದ. ಈತನ ಅಭಿಮಾನಿಗಳಾಗಿದ್ದವರು ಕೆಲವರು ಮುಂದೆ ಆಸ್ಥಾನದಲ್ಲಿ ತಮಗಿದ್ದ ಪ್ರತಿಷ್ಠೆಯನ್ನು ಕಳೆದುಕೊಂಡರು. ಕೆಲವರು ಮರಣ ಹೊಂದಿದರು. ಇನ್ನು ಕೆಲವರು ಹತರಾದರು. ರಾಜಾನುಗ್ರಹ ತಪ್ಪಿತು. ಕವಿಗೆ ಚಾಪ್ಲಿನ್ ಪದವಿಗಿಂತ ಹೆಚ್ಚಿನ ಸ್ಥಾನ ದೊರೆಯದೇ ಹೋಯಿತು.

ಇಷ್ಟಾದರೂ ಗೊಂಗೊರಾನ ಕಾವ್ಯ ರಚನೆ ಮಾತ್ರ ತಡೆಯಿಲ್ಲದೆ ಸಾಗಿತ್ತು. ವಿವಿಧ ಬಗೆಯ ಕಿರುಗವನಗಳನ್ನು ಬರೆದು ಜನಪ್ರಿಯನಾದ. ಈತನ ಚಿತ್ತಾಕರ್ಷಕವಾದ ಇಟಾಲಿಯನ್ ಸಾನೆಟ್ಟುಗಳು, ಓಡ್ ಮುಂತಾದ ಲಲಿತ ಭಾವಗೀತೆಗಳು, ವಿಡಂಬನಾತ್ಮಕ ಹಾಡುಗಳು, ಗಿಟಾರ್ ವಾದನಕ್ಕೆಂದೇ ವಿಶೇಷವಾಗಿ ರಚಿತವಾದ ಹಾಡುಗಳು ಭಾವದ ಸೊಗಸು, ಸುಂದರವಾದ ಶೈಲಿ, ಮಧುರವಾದ ಭಾಷೆಗಳೆಲ್ಲ ಮೇಳವಿಸಿದ್ದರಿಂದ ಅಮೂಲ್ಯವಾದ ಭಾವಗೀತೆಗಳಾಗಿವೆ.

1600ರ ಅನಂತರ ಈತನ ಕಾವ್ಯದ ವಸ್ತು, ಭಾಷೆ, ಶೈಲಿ ಸಂಪೂರ್ಣವಾಗಿ ಬೇರೆಯೇ ಆದವು. ಮೊದಲಿನ ಸರಳವಾದ ಪ್ರೇಮಗೀತೆಗಳಿಗೆ ಬದಲಾಗಿ ಶ್ರೀಮಂತರ ಪ್ರಶಸ್ತಿ ಪದ್ಯಗಳು, ದೀರ್ಘಕಾವ್ಯಗಳು ಹೊರಬಂದವು. ವಿಂಡಬನೆ ಇನ್ನೂ ಹರಿತವಾಯಿತು. ರೂಢಿಯಲ್ಲಿದ್ದ ಕಾವ್ಯದ ಹಾಗೂ ಭಾಷೆಯ ನಿಯಮಗಳನ್ನು ಉಲ್ಲಂಘಿಸಿದನೆಂಬ ಆಕ್ಷೇಪಣೆಯೂ ಈತನ ಮೇಲೆ ಬಂತು. ಕವಿ ಇದೊಂದನ್ನೂ ಲೆಕ್ಕಿಸದೆ ಹೊಸದೊಂದು ಕಾವ್ಯಮಾರ್ಗವನ್ನೇ ನಿರ್ಮಾಣಮಾಡಿದ.

ಇಂಗ್ಲೆಂಡಿನ ಯೂಫ್ಯೂಯಿಸಂ ಇಟಲಿಯ ಷಿಯಾಬ್ರೆಸೆರಿಂ ಶೈಲಿಯನ್ನೇ ಹೋಲುವ ಈ ನೂತನ ಕಾವ್ಯಪದ್ಧತಿಯನ್ನು ಕಲ್ಟೆರಾನಿಸ್ಮೊ ಅಥವಾ ಸ್ಟೈಲೊಕಲ್ಟೊ ಎಂದು ಕರೆದರು. ಅತಿಯಾದ ಶಬ್ದಾಡಂಬರ, ಲ್ಯಾಟಿನ್ ಭೂಯಿಷ್ಠವಾದ ಭಾಷೆ, ಮಾತು ಮಾತಿಗೆ ಪೌರಾಣಿಕ ಪೂರ್ವವೃತ್ತಾಂತಗಳ ಸೂಚನೆ, ಅಸ್ಪಷ್ಟತೆ ಮುಂತಾದ ಲಕ್ಷಣಗಳಿಂದ ಕೂಡಿದ ಈ ಕಾವ್ಯಮಾರ್ಗ ಕೃತಕವೂ ಬುದ್ಧಿಚಮತ್ಕಾರ ಪ್ರದರ್ಶಕವೂ ಆಗಿತ್ತು. ರಸ–ಭಾವಗಳಿಗಿರುವ ಪ್ರಾಶಸ್ತ್ಯ ಮಾಯವಾಗಿ ಕೇವಲ ರಚನಾ ಕೌಶಲಕ್ಕೇ ಇಲ್ಲಿ ಮನ್ನಣೆ. ಈ ಕಾವ್ಯರೀತಿಯ ಸುಳುಹು 16ನೆಯ ಶತಮಾನದ ಕೆಲವು ಕಾವ್ಯಗಳಲ್ಲಿ ಅಲ್ಲಲ್ಲಿ ಕಂಡುಬಂದರೂ ಗೊಂಗೊರಾ ಕವಿಯ ಪ್ರತಿಭೆಯ ಮೂಸೆಯಲ್ಲಿ ಇದು ಹೊಚ್ಚ ಹೊಸದೆಂಬಂತೆ, ಈತನ ವಿಶಿಷ್ಟ ಸೃಷ್ಟಿಯೆಂಬಂತೆ ಕಂಗೊಳಿಸಿ ಗೊಂಗೊರಿಸಮ್ ಎಂದೇ ಹೆಸರಾಯಿತು. ಗೊಂಗೊರಾನ ಎಲ್ ಪಾಲಿಫಿಮೊ, ಲಾಸ್ ಸೋಲೆಡಾಡಿಸ್ ಎಂಬ ಮಹಾಕೃತಿಗಳು ಈ ಕಾವ್ಯ ಶೈಲಿಯ ಅತ್ಯುತ್ಕೃಷ್ಟ ಮಾದರಿಗಳಾಗಿವೆ. ಹಲವಾರು ಕಿರಿಯ ಕವಿಗಳು ಈ ಶೈಲಿಯ ಪ್ರಭಾವದಿಂದಾಕರ್ಷಿತರಾದುದು ಮಾತ್ರವಲ್ಲ 17ನೆಯ ಶತಮಾನದ ಸ್ಪ್ಯಾನಿಷ್ ಕಾವ್ಯದ ಮೇಲೆಲ್ಲ ಇದರ ಪ್ರಭಾವ ಬಿದ್ದಿತು. ಈ ಶೈಲಿಯನ್ನು ಕಟುವಾಗಿ ಖಂಡಿಸಿದ ವಿಮರ್ಶಕರೂ ಇದ್ದರು. ಹೀಗೆ ಈ ಕಾವ್ಯಪದ್ಧತಿ ತೀವ್ರವೂ ಕೋಲಾಹಲಕರವೂ ಆದ ವಿವಾದವನ್ನೇ ಎಬ್ಬಿಸಿತು. 18ನೆಯ ಶತಮಾನದಲ್ಲಿಯಾದರೊ ಈ ಶೈಲಿಯ ಕಾವ್ಯಕ್ಕೆ ಮನ್ನಣೆಯೇ ಇಲ್ಲವಾಯಿತು. ಸುಮಾರು 2 ಶತಮಾನಗಳ ಕಾಲ ಗೊಂಗೊರಾನ ಕಾವ್ಯಗಳು ಅವಜ್ಞೆಯ ಕಂದರದಲ್ಲಿ ಬಿದ್ದುಹೋದವು. 1927ರಲ್ಲಿ ಡಮಾಸೊ ಅಲೆನ್ಸೊ ಎಂಬ ಸಾಹಿತ್ಯ ವಿದ್ವಾಂಸ ಸೋಲೆಡಾಡಿಸ್ ಕೃತಿಯನ್ನು ಸಂಪಾದಿಸಿ ಅದಕ್ಕೊಂದು ದೀರ್ಘವಾದ ವಿಮರ್ಶಾತ್ಮಕ ಮುನ್ನುಡಿ ಬರೆದು, ಅನುಬಂಧದಲ್ಲಿ ಕಾವ್ಯದ ತಾತ್ಪರ್ಯವನ್ನು ಸರಳವಾದ ಗದ್ಯದಲ್ಲಿ ಕೊಟ್ಟು ಪ್ರಕಟಿಸಿದ ಅನಂತರ ಗೊಂಗೊರಾನ ಹಿರಿಮೆ ಪುನಃ ಪ್ರತಿಷ್ಠಾಪಿತವಾಯಿತು. ಗೊಂಗೊರಾ ಸ್ಪೇನಿನ ಹಿರಿಯ ಕವಿಗಳ ಸಾಲಿಗೆ ಸೇರತಕ್ಕವ. ಈತನ ಕಾವ್ಯ ಕ್ಲಿಷ್ಟವಾಗಿರಬಹುದೇ ವಿನಾ ಎಲ್ಲಿಯೂ ನೀರಸವಾಗಿಲ್ಲ. ಈತನ ಶೈಲಿ ಶುದ್ಧವಾದುದು.

ಪಾಲಿಫಿಮೊ, ಸೋಲೆಡಾಡಿಸ್ ಕಾವ್ಯಗಳಲ್ಲಿ ಮಹಾಕಾವ್ಯದ ಅಂಶಗಳೂ ಕುರಿಗಾಹಿ ಕಾವ್ಯ (ಪ್ಯಾಸ್ಟೊರಲ್ ಪೊಯಟ್ರಿ) ಸಂಕೇತಗಳೂ ಸೇರಿವೆ. ನಿರ್ದಿಷ್ಟವಾದ ವಸ್ತುವಾಗಲೀ ಭಾವದ ಅಂಶವಾಗಲೀ ಇಲ್ಲದಿದ್ದರೂ ಕವಿಯ ಅದ್ಭುತವಾದ ವರ್ಣನಾಚಾತುರ್ಯ ದಿಂದಾಗಿ ಪಾತ್ರ, ಸನ್ನಿವೇಶ, ನಿಸರ್ಗ ಜೀವದುಂಬಿ ನಿಲ್ಲುತ್ತವೆ. ಕಾವ್ಯದ ಉದ್ದಕ್ಕೂ ಇಂಪಾದ ಸಂಗೀತದ ಲಯ ಕಾಣುತ್ತದೆ.

ಸೋಲೆಡಾಡಿಸ್ ಕಾವ್ಯದಲ್ಲಿ ತೆರೆಯುವ ಅಚ್ಚನಾಗರಿಕ ಲೋಕ, ಪಾಲಿಫಿಮೊ ಕಾವ್ಯದಲ್ಲಿ ಬರುವ ನಶ್ವರವಾದರೂ ತೀವ್ರ ಸಂವೇದನೆಯಿಂದ ಪುಷ್ಟಿಗೊಳ್ಳುವ ಐಹಿಕ ಸುಖದ ವರ್ಣನೆ ಸ್ಪೇನಿನ ಸಾಹಿತ್ಯಕ್ಕೆ ಕವಿಯ ಅಪೂರ್ವವಾದ ಕಾಣಿಕೆಗಳಾಗಿವೆ.

ಪ್ರಯೋಗ ಸಾಧ್ಯವಲ್ಲದ ಮೂರು ನಾಟಕಗಳು, ಪಿರಮೊ ಇ ಥಿಸ್ಬಿ ಎಂಬ ಕೃತಿ, ಅಮೂಲ್ಯವಾದ ಪತ್ರಗಳ ಒಂದು ಸಂಕಲನ–ಇವು ಈತನ ಇತರ ಕೃತಿಗಳು. ಈತನ ಕಾವ್ಯವನ್ನು ಕುರಿತು ಬೆಳೆದಿರುವ ವಿಮರ್ಶೆ ಹಾಗೂ ವಿವಿಧ ವ್ಯಾಖ್ಯಾನ ಸಾಹಿತ್ಯ–ಗ್ರಂಥಗಳು ಅಲಕ್ಷಿಸಲಾಗದಷ್ಟು ಸತ್ತ್ವಯುತವಾಗಿವೆ.

1626ರಲ್ಲಿ ಪಾರ್ಶ್ವವಾಯುಪೀಡಿತನಾಗಿ ಮ್ಯಾಡ್ರಿಡ್‌ನಿಂದ ಕಾರ್ಡೊಬಕ್ಕೆ ಹಿಂತಿರುಗಿದ ಕವಿ ಒಂದು ವರ್ಷ ಕಾಲ ನರಳಿ ಮರಣ ಹೊಂದಿದ. (ಕೆ.ಬಿ.ಪಿ.)

**ಗೊಂಡಲ್ :** ಭಾರತದ ಒಂದು ಮಾಜಿ ದೇಶೀಯ ಸಂಸ್ಥಾನ; ಅದರ ರಾಜಧಾನಿಯಾಗಿದ್ದ ಪಟ್ಟಣ. ಈಗ ಗುಜರಾತ್ ರಾಜ್ಯದ ರಾಜಕೋಟೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಸಂಸ್ಥಾನದ ವಿಸ್ತೀರ್ಣ 1,024 ಚ.ಮೈ. 1941ರ ಗಣತಿಯ ಪ್ರಕಾರ ಅದರ ಜನಸಂಖ್ಯೆ 2,44,514 ಇತ್ತು. ಇಲ್ಲಿ ಗೊಂಡಲ್ ಮತ್ತು ಪಾನೇಲೀ ಎಂಬ ಎರಡು ಸರೋವರಗಳಿವೆ. ಹತ್ತಿ ಮತ್ತು ಉಣ್ಣೆ ಜವಳಿ, ಜರಿ, ಪಾತ್ರೆ, ಮರದ ಆಟಿಗೆ, ದಂತದ ಬಳೆ ಮುಂತಾದ ಪದಾರ್ಥಗಳು ತಯಾರಾಗುತ್ತವೆ. ಎಣ್ಣೆಯ, ಹಿಟ್ಟಿನ ಮತ್ತು ಹತ್ತಿಯ ನೂಲಿನ ಗಿರಣಿಗಳೂ ಮುದ್ರಣಾಲಯಗಳೂ ಬೆಂಕಿಪೆಟ್ಟಿಗೆಯ ಮತ್ತು ಚರ್ಮದ ಕಾರ್ಖಾನೆಗಳೂ ಇವೆ. ಹಿಂದೆ ಸಂಸ್ಥಾನದಲ್ಲಿ 172 ಪ್ರಾಥಮಿಕ ಶಾಲೆಗಳು, 2 ಪ್ರೌಢಶಾಲೆಗಳು, ಒಂದು ಕಾಲೇಜು ಇದ್ದವು. ಪ್ರಾಥಮಿಕ ಹಾಗೂ ಉಚ್ಚಶಿಕ್ಷಣಗಳು ಉಚಿತವಾಗಿದ್ದವು. ಕಡ್ಡಾಯ ಶಿಕ್ಷಣ, ಸ್ತ್ರೀ ಶಿಕ್ಷಣ ಜಾರಿಯಲ್ಲಿದ್ದವು. ಆಗಿನ ಸಂಸ್ಥಾನದ ವಾರ್ಷಿಕ ಹುಟ್ಟುವಳಿ 60 ಲಕ್ಷ ರೂ. ಅದು ಬ್ರಿಟಿಷರಿಗೆ ವರ್ಷಕ್ಕೆ 1,10,721 ರೂ. ಕಪ್ಪ ಕೊಡಬೇಕಾಗಿತ್ತು. ಗೊಂಡಲ್ ಸಂಸ್ಥಾನವನ್ನಾಳುತ್ತಿದ್ದ ರಾಜ ರಜಪೂತವಂಶಸ್ಥ. ಆತನ ಮೂಲ ಪುರುಷ 17ನೆಯ ಶತಮಾನದ ಕುಂಭೋಜಿ. 1807ರಲ್ಲಿ ಬ್ರಿಟಿಷರೊಂದಿಗೆ ಆಗಿನ ರಾಜ ಸಂಧಿ ಮಾಡಿಕೊಂಡಿದ್ದ.

ಗೊಂಡಲ್ ಪಟ್ಟಣ ಗೊಂಡಲೀ ನದಿಯ ಪಶ್ಚಿಮ ದಡದಲ್ಲಿ ಉ.ಅ. $21^0$, 58' ಮತ್ತು ಪೂ.ರೇ. $70^0$, 48' ಮೇಲೆ ಇದೆ. ಜನಸಂಖ್ಯೆ 95,991 (2001). ಇದರ ನಾಲ್ಕು ಮೂಲೆಗಳಲ್ಲಿ ಬುರುಜುಗಳನ್ನೂ ಸುತ್ತ ಕೋಟೆಗೋಡೆಯ ಅವಶೇಷಗಳನ್ನೂ ಕಾಣಬಹುದು. ಇಲ್ಲಿರುವ ನೌಲಾಖಾ ಅರಮನೆ 17ನೆಯ ಶತಮಾನದ್ದಾಗಿದ್ದು ಇದರ ವಾಸ್ತುಶಿಲ್ಪ ಬಹು ಸುಂದರವಾಗಿದೆ. (ಎನ್.ಆರ್.ಜಿ.)

**ಗೊಂದಲಿಗರು :** ಅಂಬಾಭವಾನಿಯ ಹೆಸರಿನಲ್ಲಿ ಗೊಂದಲ ಹಾಕುವ ಜನರನ್ನು ಈ ಹೆಸರಿನಿಂದ ಕರೆಯುತ್ತಾರೆ. ಗೋಂಧಳಿ, ಗೊಂದಲಿ ಎಂಬುವು ಗೊಂದಲ ಎಂಬ ಪದಕ್ಕೆ ಇರುವ ಇತರ ರೂಪಗಳು. ಈ ಜನ ಮಹಾರಾಷ್ಟ್ರದವರು. ಜಮದಗ್ನಿ ಮತ್ತು ಆತನ ಪತ್ನಿ ರೇಣುಕ ಈ ಪಂಗಡದವರ ಸ್ಥಾಪಕರೆಂದು ಪ್ರತೀತಿ. ಇವರು ಶಿವಾಜಿಯ ಗೂಢಚಾರರಾಗಿ, ಭಿಕ್ಷುಕರಂತೆ ವೇಷಧಾರಿಗಳಾಗಿ ಮುಸಲ್ಮಾನರ ರಾಜ್ಯವಾಗಿದ್ದ ಬಿಜಾಪುರಕ್ಕೆ ಬಂದರು. ಅಲ್ಲಿನ ಪರಿಸ್ಥಿತಿಯಿಂದಾಗಿ ಇವರು ತಮ್ಮ ವೇಷವನ್ನೇ ಜೀವನಾಧಾರವನ್ನಾಗಿ ಮಾಡಿಕೊಳ್ಳಬೇಕಾಯಿತು.

ಗೊಂದಲಿಗರ ಮೇಳ

ಅಂಬಾಭವಾನಿ (ತುಳುಜಾಭವಾನಿ) ಇವರ ಕುಲದೇವತೆ. ಮಹಾರಾಷ್ಟ್ರದ ತುಳಜಾಪುರ ಈ ದೇವತೆಯ ಮೂಲಸ್ಥಾನ.

ಗೊಂದಲಿಗರಲ್ಲಿ ಎರಡು ಗೋತ್ರಗಳಿವೆ : ಸ್ವಗೋತ್ರ ಮತ್ತು ಭಿನ್ನಗೋತ್ರ. ಸ್ವಗೋತ್ರದ ಗುಂಪು ಬ್ರಾಹ್ಮಣ, ಧಾನಗಾರ, ಮರಾಠಾ, ಕಂಭಾರ, ಕದಮ್‌ರಾಮ್, ರೇಣುಕ್‌ರಾಮ್, ಮಾಲಿ, ಅಕರ್ಮಾಸೆ – ಎಂಬ ಎಂಟು ಗುಂಪುಗಳಾಗಿವೆ. ಭಿನ್ನ ಗೋತ್ರ ಪವಾರ್, ಗಾಯಕವಾಡ ಮೊದಲಾಗಿ ಹನ್ನೆರಡು ರೀತಿಯಾಗಿ ಒಡೆದಿದೆ.

ಗಂಡುಮಕ್ಕಳ ಉಡುಗೆತೊಡುಗೆ ಸಾಮಾನ್ಯವಾದುದು. ಅಂಗಿ ಇಲ್ಲವೆ ಜುಬ್ಬ, ಕಚ್ಚೆಪಂಚೆ ಇಲ್ಲವೆ ಪೈಜಾಮ, ತಲೆಗೆ ಸುಮಾರು ಹನ್ನೆರಡು ಅಡಿಗಳಿಗೂ ಹೆಚ್ಚಿನ ನೀಳವಾದ ಬಟ್ಟೆರುಮಾಲು (ಮುಂಡಾಸು) ಇಲ್ಲವೆ ಟೋಪಿ, ಕೈಬೆರಳಲ್ಲಿ ಉಂಗುರ, ಕೊರಳಿನಲ್ಲಿ ಚಿನ್ನದಸರ ಇರುವುದುಂಟು. ಹೆಣ್ಣುಮಕ್ಕಳು ಸಾದಾ ಸೀರೆ ರವಿಕೆ ತೊಡುತ್ತಾರೆ. ಹೆಂಗಸರು ಕಚ್ಚೆ ಹಾಕುವುದು ರೂಢಿ. ಇವರ ಆಭರಣಗಳು ಬಹಳ ವಿಶಿಷ್ಟವಾದವು. ತಲೆಗಂಟಿನ ಜಾಗದಲ್ಲಿ ಗಜರ; ಮೂಗಿನಲ್ಲಿ ನತ್ತು; ಕಿವಿಯ ಮೇಲೆ ಬುಗುಡಿ; ಕೆಳಗೆ ಹೂ; ಕೊರಳಿನಲ್ಲಿ ಗುಂಡಿನ ಸರ, ಚಪ್ಪಲ ಹಾರ, ಬೋದುಮಾಳ, ತಾಂಡಳೀಪೂರ್, ಪುತ್ಥಳೀಸರ, ತಾಳಿ ಸಾಮಾನು, ಕೋಯಿ, ವಜ್ರಟಿಕ್ಕಿ; ಗೆಜ್ಜೆಟಿಕ್ಕಿ; ತೋಳಿಗೆ ತೋಳುಬಂದಿ, ಪಾಟ್ಲಿ, ಬಿಲ್ವರ್, ಬಳೆ; ಸೊಂಟಕ್ಕೆ ಡಾಬು; ಕಾಲಿಗೆ ತೋಡೆ, ಪೈಜಾಮ್, ಕಾಲುಂಗುರ, ಕಾಲುಮಚ್ಚಿ ಗೇಂಡು.

ಗೊಂದಲಿಗರಲ್ಲಿ ಮಹಾಶಕ್ತಿದೇವತೆಯೊಂದುಂಟು. ಸಟವೈ ಎಂದು ಅದರ ಹೆಸರು. ಮಗುವಿನ ಹಣೆಯ ಮೇಲೆ ಒಳ್ಳೆಯದನ್ನು ಬರೆಯಲಿ ಎಂದು ಆ ದೈವವನ್ನು ಪೂಜಿಸುತ್ತಾರೆ. ಮಗು ಜನನವಾದ ಐದು ದಿನಕ್ಕೆ ಆಚರಿಸುವ ಪೂಜೆಗಳನ್ನು ಐದ್ವೀಶಿ ಎನ್ನುತ್ತಾರೆ. ಮಗು ಹುಟ್ಟಿದ ಹನ್ನೆರಡನೆಯ ದಿನ ತೊಟ್ಟಿಲಿಗೆ ಹಾಕುವುದು, ಹೆಸರಿಡುವುದು, ಜೋಗುಳ ಹಾಡುವುದು ರೂಢಿಯಲ್ಲಿದೆ.

ಲಗ್ನವಾದ ಹೆಣ್ಣು ಮೈನೆರೆದಾಗ ಅವಳ ಪತಿಗೆ ಬಣ್ಣ ಎರಚುವುದು (ರಂಗು ಹಲ್ದಾತ್) ಉಂಟು. ಮಕರ (ಮೈನೆರೆದ ಹೆಣ್ಣನ್ನು ಕೂಡಿಸುವ ಪ್ರತ್ಯೇಕವಾದ ಗುಡಿಸಲು) ಬಿಟ್ಟು ಹೆಣ್ಣು ಹೊರಗೆ ಬರುವತನಕ ಗಂಡಿನ ಮೈಮೇಲೆ ಬಣ್ಣ ಇರಬೇಕಾಗುತ್ತದೆ. ಬಟ್ಟೆ ಬದಲಾಯಿಸಿದರೆ ಮತ್ತೆ ರಂಗು ಹಾಕುತ್ತಾರೆ.

ಗೊಂದಲಿಗರಲ್ಲಿ ಮೊದಮೊದಲು ತೊಟ್ಟಿಲುವಿವಾಹ, ಬಾಲ್ಯವಿವಾಹ ಇದ್ದುವು. ಈಗ ವಧುವಿಗೆ ಏಳೆಂಟು ವರ್ಷಗಳಾದ ಮೇಲೆ ಲಗ್ನ ಮಾಡುವುದು ಬಳಕೆಯಲ್ಲಿದೆ.

ಇವರಲ್ಲಿ ಲಗ್ನವಾಗುವಾಗ ವೀಳ್ಯದ ಶಾಸ್ತ್ರ ಇಟ್ಟುಕೊಳ್ಳುತ್ತಾರೆ. ಲಗ್ನದ ದಿನವನ್ನು ಗೊತ್ತುಮಾಡುತ್ತಾರೆ. ಮೂರು ದಿನಗಳ ಲಗ್ನ ಇವರಲ್ಲಿ ಉಂಟು. ಮೊದಲ ದಿನ ಹಸುರು ಚಪ್ಪರದಲ್ಲಿ ನೆರೆದಿರುವವರಿಗೆ ಕುಂಕುಮದಿಂದ ಹೆಬ್ಬೆಟ್ಟು ಗಾತ್ರದ ನಾಮ ಬಳಿಯುತ್ತಾರೆ. ಅಕ್ಕಿಯೊಂದಿಗೆ ಜೋಳ ಬೆರೆಸಿದ ಅಕ್ಷತೆಯನ್ನು ಎಲ್ಲರ ಕೈಗೂ ಹಂಚುತ್ತಾರೆ. ಅವರಲ್ಲಿ ಒಬ್ಬ ಮಂತ್ರ ಹೇಳುತ್ತ ತಾಳಿ ಕಟ್ಟಿಸುತ್ತಾನೆ. ಎರಡನೆಯ ದಿನ ಸೋಲಿಗೆ ನೀರಿನ ಸ್ನಾನದ ಕಾರ್ಯಕ್ರಮ ಇರುತ್ತದೆ. ಸ್ನಾನ ಆದಮೇಲೆ ಮೈ ಒರೆಸಿಕೊಳ್ಳುವ ಮುಂಚೆಯೇ ಚಂಡಾಡುವ ಶಾಸ್ತ್ರ ಮಾಡುತ್ತಾರೆ. ಆ ಚಂಡುಗಳು ಬೇವಿನ ಸೊಪ್ಪಿನಿಂದ ಆದವು. ಉಳಿದ ಶಾಸ್ತ್ರಗಳು ಮಾಮೂಲಿನಂತೆ.

ಗೊಂದಲಿಗರಲ್ಲಿ ಏನಾದರೂ ಜಗಳವಾದರೆ ಫಿರ್ಯಾದಿ ಓಣಿಯ ಜನಕ್ಕೆ ತಿಳಿಸುತ್ತಾನೆ. ಆಗ ಪಂಚರು ಸೇರಿ ನ್ಯಾಯಕ್ಕೆ ಕೂರುತ್ತಾರೆ. ಏನಿದ್ದರೂ ಆ ಜಗಲಿಯಲ್ಲಿ, ಅವರ ಮುಂದೇ ಇತ್ಯರ್ಥವಾಗಬೇಕು. ಕೋರ್ಟಿಗೆ ಹೋಗುವ ಸಂದರ್ಭಗಳು ಅಪರೂಪ. ತಪ್ಪಿತಸ್ಥನಿಗೆ ದಂಡ ವಿಧಿಸಲಾಗುತ್ತದೆ. ದಂಡ ಕೊಡದವರಿಗೆ ಇವರ ಸಮಾಜದಲ್ಲಿ ಯಾವ ಸ್ಥಾನವೂ ಇರುವುದಿಲ್ಲ.

ಗೊಂದಲಿಗರಲ್ಲಿ ಲಗ್ನವಾದವರು ಮಾತ್ರ ಹೆಣ ಹೊರುವ, ಸಂಸ್ಕಾರ ಮಾಡುವ ಹಕ್ಕು ಪಡೆದಿರುತ್ತಾರೆ. ಲಗ್ನವಾದವರು ಸತ್ತರೆ ಎಷ್ಟೇ ಚಿಕ್ಕ ಪ್ರಾಯದವರಿದ್ದರೂ ಸುಡುತ್ತಾರೆ. ಲಗ್ನವಾಗದೆ ಸತ್ತ ಹೆಣವನ್ನು ಎಕ್ಕದ ಗಿಡದೊಂದಿಗೆ ಲಗ್ನಮಾಡುತ್ತಾರೆ. ಇನ್ನೂ ಲಗ್ನವಾಗದ, ಹನ್ನೆರಡು ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಸತ್ತರೆ ಅಂಥವರನ್ನು ಹುಗಿಯುತ್ತಾರೆ. ಮಕ್ಕಳು ಸತ್ತರೆ ಮೊರವನ್ನು ಉಪಯೋಗಿಸದೆ ಕೈಗಳಿಂದಲೇ ಅವನ್ನು ಒಯ್ದು ಶ್ಮಶಾನದಲ್ಲಲ್ಲದೆ ಬೇರೆ ಜಾಗದಲ್ಲಿ ಹೂಳುತ್ತಾರೆ.

ಎಲ್ಲ ಹಬ್ಬಗಳನ್ನು ಇವರು ಆಚರಿಸುತ್ತಾರೆ. ಮೊಹರಂ ಮತ್ತು ಹೋಳಿ ಹಬ್ಬಗಳೂ ಇವರಲ್ಲಿ ಉಂಟು. ಈ ಎರಡು ಹಬ್ಬಗಳಲ್ಲಿ ಕಟ್ಟುವ ವೇಷಕ್ಕೆ ಸೋಂಗು ತೆಗೆಯುವುದು ಎಂದು ಕರೆಯುತ್ತಾರೆ. ಹಣ ಸಂಪಾದನೆಯೇ ಇಲ್ಲಿ ಮುಖ್ಯವಾದುದು. ದೀಪಾವಳಿಯಲ್ಲಿ ಲಕ್ಷ್ಮೀಪೂಜೆ ಮಾಡುತ್ತಾರೆ. ಆಷಾಢದ ಕೊನೆಯಲ್ಲಿ ಇಲ್ಲವೆ ಶ್ರಾವಣದ ಮೊದಲಲ್ಲಿ ನಡೆಯುವ ದುರ್ಗವ್ವನ ಹಬ್ಬ ಇವರಿಗೆ ಮುಖ್ಯವಾದುದು.

ಗೊಂದಲ ಹಾಕುವುದು ಸಾಮಾನ್ಯವಾಗಿ ಅಂಬಾಭವಾನಿಯ ಮುಂದೆ. ದೇವಿಯ ಗುಡಿಯ ಮುಂದೆ ಅದು ನಡೆಯುತ್ತದೆ. ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅಂಬಾಭವಾನಿಯ ಒಕ್ಕಲವರು ತಮ್ಮ ಮನೆಗಳಲ್ಲಿ ಗೊಂದಲ ಹಾಕಿಸುವ ಪದ್ಧತಿ ಉಂಟು. ಗೊಂದಲ ಪ್ರಾರಂಭವಾಗುತ್ತಿದ್ದಂತೆ ನೆಲದ ಮೇಲಿದ್ದ ಸಂಬಾಳ (ಜೋಡಿ ತಬಲಗಳು) ಹೆಗಲೇರುತ್ತದೆ. ಚೌಡಿಕೆ ಶ್ರುತಿಗೊಳ್ಳುತ್ತದೆ. ಪತ್ತ ಕೈ ಸೇರುತ್ತದೆ. ಮುಂಡಾಸು ಕಚ್ಚೆಗಳು ಬಿಗಿಗೊಳ್ಳುತ್ತವೆ. ಮೊದಲು ಬರುವ ಸ್ವರವೇ ಚೌಡಿಕೆಯದು. ಈ ಮೇಳದಲ್ಲಿ ಮೂರು ಜನ ಇರುತ್ತಾರೆ. ಪತ್ತ ಹಾಕುವವನೇ ಕಥೆಗಾರ. ಗಣಪತಿ ಸ್ತೋತ್ರದಿಂದ ಗೊಂದಲ ಪ್ರಾರಂಭವಾಗುತ್ತದೆ. ಅನಂತರ ದೇವೀಸ್ತೋತ್ರ. ಕನ್ನಡ ಮತ್ತು ಮರಾಠಿ ಭಾಷೆಗಳೆರಡರಲ್ಲೂ ಈ ಸ್ತೋತ್ರವನ್ನು ನಾನಾಗತ್ತಿನಲ್ಲಿ ಹೇಳುತ್ತಾರಾದರೂ ಮರಾಠಿ ಬಳಕೆಯೇ ಹೆಚ್ಚು. ಗೊಂದಲದ ಲಾವಣಿಗಳು ವೀರರಸ ಪ್ರಧಾನವಾದವು. ಅನೇಕ ದೇಶಭಕ್ತರ ಕಥೆಗಳು ಅವುಗಳಲ್ಲಿ ಬರುತ್ತವೆ. ಈ ಭಕ್ತರು ಮೈಮರೆತು ಕುಣಿಯುವ ನೃತ್ಯ ರೋಮಾಂಚಕಾರಿಯಾದುದು. ತಮ್ಮ ವಾದ್ಯಗಳಿಂದ ಹೊರಹೊಮ್ಮುವ ಸ್ವರದ ರೂಪದಲ್ಲಿ ತಮ್ಮ ಆರಾಧ್ಯದೈವ ಪ್ರತ್ಯಕ್ಷಗೊಂಡಿತು ಎಂದವರು ನಂಬುತ್ತಾರೆ. ಮೇಳ ಬೆಳಕು ಹರಿಯುವ ತನಕ ನಡೆಯುತ್ತದೆ. ಆದಕಾರಣ ಕಥೆಯ ವಿಸ್ತಾರಕ್ಕೆ ಸಮವಾಗಿ ಅಲ್ಲಿ ಸ್ತೋತ್ರಗಳ, ಮನೋರಂಜನೆಗಾಗಿ ಹಾಡುವ ಲಾವಣಿಗಳ ಸಂಖ್ಯೆಯನ್ನು ಅಳವಡಿಸಲಾಗುತ್ತದೆ.

ಗೊಂದಲಿಗರಿಗೆ ನಾಗರಿಕ ಸಂಪರ್ಕ ಉಂಟಾಗುವ ಮುನ್ನ ಅವರು ಗೊಂದಲಕ್ಕೆಂದು ಬಳಸುತ್ತಿದ್ದ ವೇಷಭೂಷಣಗಳು ಹೀಗೆ ಇದ್ದವು; ಐವತ್ತು ಅರವತ್ತು ಅಡಿ ಉದ್ದದ ಬಟ್ಟೆಯ ಮುಂಡಾಸು, ಕಾಲತನಕ ಇರುವ ಉದ್ದನೆಯ ಅಂಗಿ, ಎದೆಯ ಮೇಲೆ ಕತ್ತರಿ ಆಕಾರದ ಕವಡೆಪಟ್ಟಿಗಳು, ಕವಡೆಪಟ್ಟಿಗಳ ನಡುವೆ ದೇವೀವಿಗ್ರಹ, ನಡುವಿಗೆ ಕವಡೆಪಟ್ಟಿ, ಕಾಲಿಗೆ ಗೆಜ್ಜೆ. ಈಗಲೂ ವಿಶೇಷ ಸಂದರ್ಭಗಳಲ್ಲಿ ಈ ವೇಷದಲ್ಲೇ ಗೊಂದಲ ಹಾಕುತ್ತಾರೆ. ಈಗ ಸಾಮಾನ್ಯವಾಗಿ ದೈನಂದಿನ ವೇಷದಲ್ಲೇ ಗೊಂದಲ ನಡೆದುಹೋಗುತ್ತದೆ.

ಬಹುಪಾಲು ಗೊಂದಲಿಗರು ಈಗ ಬಿಜಾಪುರ, ಬೆಳಗಾವಿ, ಧಾರವಾಡ, ಶಿವಮೊಗ್ಗ, ಗುಲ್ಬರ್ಗ, ಬಿದರೆ, ಬಳ್ಳಾರಿ, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. (ಪಿ.ಆರ್.ಟಿ.)

**ಗೊಂಬೆಗಳು :** ಆಟಿಕೆಗಳಲ್ಲಿ ಬಹು ಮುಖ್ಯವಾದ ಒಂದು ವಿಭಾಗ. ಗೊಂಬೆಗಳಲ್ಲಿ ಮನುಷ್ಯರ ಆಕೃತಿಗಳಂತೆ ಮೃಗಪಕ್ಷಿ, ಗಿಡಮರಗಳ ಆಕೃತಿಗಳನ್ನೂ ಕಾಣಬಹುದು. ಜನಪದ ಸಾಹಿತ್ಯ ಮತ್ತು ವಸ್ತುಗಳ ಸಂಗ್ರಹಕಾರ್ಯ ನಡೆದಂತೆಲ್ಲ ಅತಿ ಹಿಂದಿನ ಕಾಲದ ಆಟಿಕೆಗಳನ್ನು ಉತ್ಖನನ ಮಾಡಿ ವಸ್ತುಸಂಗ್ರಹಾಲಯಗಳಲ್ಲಿ ಕೂಡಿಡುತ್ತ ಬಂದಿದ್ದಾರೆ.




**ಮೊಹೆಂಜೊದಾರೋದಲ್ಲಿ ದೊರೆತ ಮಕ್ಕಳ ಆಟದ ಗೊಂಬೆಗಳು: 1. ಮರದ ಕೊಂಬೆಯನ್ನೇರುತ್ತಿರುವ ಅಳಿಲು, 2. ಗಿಣಿ, 3. ಗಾಲಿಗಳಿದ್ದ ಪಾರಿವಾಳ, 4. ಗಾಲಿಗಳಿದ್ದ ಪಕ್ಷಿ, 5. ಕೋಳಿ, 6. ಕೀಲುಗಳಿದ್ದ ಬೊಂಬೆ, 7. ತಾಯಿಮಗು, 8. ನಾಯಿಮರಿ, 9. ಟಗರು**

ಗೊಂಬೆಗಳ ತಯಾರಿಕೆ ಭಾರತದ ಒಂದು ಪ್ರಾಚೀನ ಕೈಗಾರಿಕೆ ಎಂಬುದನ್ನು ಐತಿಹಾಸಿಕ ಸಂಶೋಧನೆಗಳು ತೋರಿಸಿಕೊಟ್ಟಿವೆ. ನಾಗರಿಕತೆಯ ಉಗಮವಾದಾಗಿನಿಂದಲೂ ಕುತೂಹಲಕಾರಿಯಾದ ಅನೇಕ ಗೊಂಬೆಗಳನ್ನು ಕಾಣಬಹುದಾಗಿದೆ. ತನ್ನ ಉದರ ಪೋಷಣೆಗೆ ಆದಿಮಾನವ ಬೇಟೆಯನ್ನು ಅವಲಂಬಿಸಬೇಕಾಯಿತಷ್ಟೆ. ಇದಕ್ಕಾಗಿ ಕೋಲುಗಳು, ಬಿಲ್ಲುಗಳು, ಅನೇಕ ಕಲ್ಲಿನ ಉಪಕರಣಗಳು ಮುಂತಾದವನ್ನು ಬಳಸುತ್ತಿದ್ದ. ತನ್ನ ಬಳಕೆಯ ವಸ್ತುಗಳ ಆಕೃತಿಯಲ್ಲೇ ತನ್ನ ಮಕ್ಕಳಿಗೆ ಆಟದ ವಸ್ತುಗಳನ್ನು ಆತ ಮಾಡಿಕೊಟ್ಟ. ಕಾಲಕ್ರಮಿಸಿದಂತೆ ಅವನ ಜೀವನದಲ್ಲಿ ಪರಿವರ್ತನೆಯಾಗುತ್ತ ಬಂದು ವ್ಯವಸ್ಥಿತವಾದ ಒಂದು ಬದುಕಿನ ಹಾದಿಯನ್ನು ಆತ ಕಂಡುಕೊಂಡಾಗ, ಮಡಕೆ, ಕುಡಿಕೆ ಮುಂತಾದ ಪದಾರ್ಥಗಳನ್ನೂ ಬಟ್ಟೆಬರೆಗಳನ್ನೂ ಲೋಹದ ವಸ್ತುಗಳನ್ನೂ ಬಳಸಲು ಅರಿತಾಗ, ಮಕ್ಕಳ ಆಟದ ಗೊಂಬೆಗಳಿಗೂ ಅದೇ ಆಕೃತಿಗಳು ದೊರೆತವು. ಪೂರ್ವ ಭಾವಿ ಇತಿಹಾಸ ಯುಗಕ್ಕೆ ಸೇರಿದ ಹರಪ್ಪ, ಮೊಹೆಂಜೊದಾರೋಗಳಲ್ಲಿ ದೊರೆತಿರುವ ಆಟದ ಸಾಮಾನುಗಳಲ್ಲಿ ಗೊಂಬೆಗಳಿಗೆ ಒಂದು ವಿಶಿಷ್ಟ ಪ್ರಾಮುಖ್ಯವಿದೆ.

ಅಲ್ಲಿನ ಗೊಂಬೆಗಳಲ್ಲಿ, ಹಾಸಿಗೆಯಲ್ಲಿ ಮಲಗಿಕೊಂಡ ಮಗುವೊಂದನ್ನು ಆರೈಕೆ ಮಾಡುತ್ತಿರುವ ಸ್ತ್ರೀಮೂರ್ತಿಯೊಂದು ತುಂಬ ಕುತೂಹಲಜನಕವಾಗಿದೆ. ಆ ಗೊಂಬೆಗೆ ಒಂದು ವಿಧವಾದ ಒಳಲಂಗವನ್ನು ತೊಡಿಸಿ ಒಂದು ವಿಚಿತ್ರವಾದ ಟೋಪಿಯನ್ನು

ಹಾಕಲಾಗಿದೆ. ಆಟದ ಗೊಂಬೆಗಳ ಸಮೂಹದಲ್ಲಿ ಪ್ರಾಣಿಗಳೂ ಇವೆ. ತಲೆಯನ್ನು ಅತ್ತಿಂದಿತ್ತ ಅಲ್ಲಾಡಿಸಬಲ್ಲ ಗೂಳಿಗಳು ದೊರೆತಿವೆ. ಹೀಗೆ ಅಲ್ಲಾಡಬಲ್ಲ ಅನೇಕ ಬಿಡಿ ತಲೆಗಳು ದೊರೆತಿವೆ. ಅನೇಕ ಪಕ್ಷಿರಥಗಳೂ ಮಣ್ಣಿನ ಟಗರುಗಳೂ ಸಿಕ್ಕಿವೆ. ಟಗರಿನ ಗೊಂಬೆಯ ಮೈಮೇಲಿನ ಉಣ್ಣೆಯನ್ನು ಸೂಚಿಸಲು ಕೆಂಪುವರ್ಣದ ಗೆರೆಗಳನ್ನು ಎಳೆಯಲಾಗಿದೆ. ಅದಕ್ಕೆ ದಾರ ಕಟ್ಟಿ ಎಳೆದಾಡುವ ಸಲುವಾಗಿ ಕತ್ತಿನಲ್ಲಿ ಒಂದು ಸಣ್ಣ ರಂಧ್ರವನ್ನು ಮಾಡಲಾಗಿದೆ. ಇವುಗಳ ಜೊತೆಗೆ ಸುಟ್ಟ ಜೇಡಿಮಣ್ಣಿನ ಗುಳಿಗೆಗಳಿರುವ ಮಣ್ಣಿನ ಗಿಲಿಕೆಗಳೂ ಕೋಳಿ ಹಾಗೂ ಪಾರಿವಾಳಗಳ ಆಕಾರದಲ್ಲಿರುವ ಪೀಪಿಗಳೂ ಮಣ್ಣಿನ ಚಕ್ರಗಳೂ ಶಂಖಗಳೂ ದೊರೆತಿವೆ. ಸುಟ್ಟಮಣ್ಣಿನ ಚಿಕ್ಕ ಆಟದ ಬಂಡಿಗಳು ಚನ್ಹುದಾರೋದಲ್ಲಿ ದೊರೆತವು. ಹರಪ್ಪದಲ್ಲಿ ಮುಟ್ಟ ತಾಮ್ರದ ಬಂಡಿ ಸಿಕ್ಕಿದೆ. ಅದಕ್ಕೆ ಒಂದು ಛತ್ರಿಯನ್ನು ಅಳವಡಿಸಲಾಗಿದೆ. ಆದರೆ ಬಂಡಿಯ ಚಕ್ರಗಳು ದೊರೆತಿಲ್ಲ. ಕೇವಲ ಎರಡು ಅಂಗುಲ ಎತ್ತರದ ಈ ಬಂಡಿಯ ಹಿಂದಿನ ಭಾಗಗಳು ತೆರೆದಂತಿದ್ದು ಎಡಬಲ ಪಕ್ಕಗಳು ಮುಚ್ಚಿವೆ. ಮುಂದೆ ಸಾರಥಿಯೂ ಇದ್ದಾನೆ.

ಗೃಹಾಲಂಕರಣದ ಒಂದು ಅಂಗವಾಗಿ, ಕಪಾಟಿನಲ್ಲಿ ಜೋಡಿಸಿರುವ ಗೊಂಬೆಗಳು

ಈ ಎಲ್ಲವುಗಳಲ್ಲಿಯೂ ಉನ್ನತ ಮಟ್ಟದ ಕಲೆಗಾರಿಕೆಯನ್ನು ಕಾಣಬಹುದು. ಗೊಂಬೆ ಮತ್ತು ಚೆಂಡುಗಳನ್ನು ಜೇಡಿಮಣ್ಣು ಮತ್ತು ಕಲ್ಲುಗಳಲ್ಲಿ ಮಾಡುತ್ತಿದ್ದರೆಂದು ಊಹಿಸಬಹುದು. ಮೊಹೆಂಜೊದಾರೋದಲ್ಲಿ ಜೀವಸದೃಶವಾಗಿರುವ ಕೆಲವು ಹುಂಜಗಳು ದೊರೆತಿವೆ. ಅಲ್ಲಿನ ಗೂಳಿಗಳೂ ಕೋಣಗಳೂ ಕಾಳಗಕ್ಕೆ ಸಿದ್ಧವಾದ ರೀತಿಯಲ್ಲಿ ನಿರ್ಮಿತವಾಗಿವೆ. ಒಂದು ಕಡೆ ಒಂದು ಕೋಣ ಅನೇಕ ಜನರನ್ನು ತಿವಿದು ಬೀಳಿಸಿರುವ ದೃಶ್ಯವೂ ದೊರೆಯುತ್ತದೆ.

ಹೀಗೆ ನಿರ್ದಿಷ್ಟವಾದ ಕೆಲವು ಕಾಲದಲ್ಲಿ ವಸ್ತು, ಕಲ್ಪನೆ ಮತ್ತು ಕಲೆಗಾರಿಕೆಗಳಲ್ಲಿ ಏಕಸೂತ್ರತೆ ಇರುವ ಗೊಂಬೆಗಳನ್ನು ಕಾಣಬಹುದು. ಈ ವಿಪುಲ ವಸ್ತುಗಳು ಭಾರತೀಯ ಸಂಸ್ಕೃತಿಯ ಒಂದು ನಿಧಿ ಎಂದೇ ಹೇಳಬೇಕು. ಪಟಣದ ಕುಮ್ರಹಾರ್, ಬುಲಂದಿಬಾಗಿನ ಕದಮ್‌ಖಾನ್, ಬಿಹಾರದ ಮುಜಾಪಾವರ್, ಅಲಹಾಬಾದಿನ ಕೌಶಾಂಬಿ, ಶರಣ್ ಜಿಲ್ಲೆಯ ಬೆಲ್ಸಾ, ಕೊಲ್ಹಾಪುರ ಭಾಗದ ಬ್ರಹ್ಮಪುರಿ, ಕರ್ನಾಟಕದ ಬ್ರಹ್ಮಗಿರಿ–ಇಲ್ಲೆಲ್ಲ ಮಕ್ಕಳ ಆಟದ ವಿವಿಧ ರೀತಿಯ ಪ್ರಾಣಿಗಳು, ಹಕ್ಕಿಗಳು, ಗಾಡಿಗಳು, ವರ್ಣರಂಜಿತ ಕುಡಿಕೆಗಳು, ಗೋಲಿಗಳು ಮುಂತಾದವು ದೊರೆತಿವೆ. ಈ ವಸ್ತುಗಳಲ್ಲಿ ಆಯಾ ಪ್ರದೇಶದ ಒಂದೊಂದು ವೈಲಕ್ಷಣ್ಯವನ್ನು ಕಾಣಬಹುದು. ಕೆಲವು ಕಡೆಗಳಲ್ಲಿನ ಗೊಂಬೆಗಳಲ್ಲಿ ಅಷ್ಟು ನಯ, ನಾಜೂಕು ಇಲ್ಲದಿರುವ ನಿದರ್ಶನಗಳೂ ಉಂಟು.

ಗೊಂಬೆಗಳ ತಯಾರಿಕೆಯಲ್ಲಿ ವಿವಿಧ ಮಾಧ್ಯಮಗಳನ್ನು ಕಾಣಬಹುದು. ಎಷ್ಟೋ ವೇಳೆ ಜೇಡಿಮಣ್ಣನ್ನು ಒಣ ಹುಲ್ಲಿನೊಡನೆ ಬೆರಸುತ್ತಿದ್ದರು. ಮೊದಲು ಸುಣ್ಣವನ್ನು ಲೇಪಿಸಿ, ಅನಂತರ ಕೆಮ್ಮಣ್ಣನ್ನು ಬಳಿದ ಗೊಂಬೆಗಳೂ ಇವೆ. ಕೆಲವು ಕಂದು ಹಾಗೂ ಕಪ್ಪು ಜೇಡಿಮಣ್ಣಿನಿಂದ ತಯಾರಾದವು. ಒಡವ ತನ್ನ ಶಿಲ್ಪಸಿದ್ಧಿಯನ್ನು ಮೆರೆಯಬಲ್ಲ ಏಕೈಕ ಸಾಧನವಾದ ಜೇಡಿಮಣ್ಣಿನಲ್ಲಿ ಹೆಚ್ಚು ಗೊಂಬೆಗಳು ನಿರ್ಮಿತವಾಗಿವೆ. ಗಾಜು, ಕಲ್ಲು, ಕಂಚು, ತಾಮ್ರ ಮತ್ತು ಮರಗಳನ್ನು ಬಳಸಿರುವ ನಿದರ್ಶನಗಳೂ ಉಂಟು.

ಪಾಟ್ನ ವಸ್ತುಸಂಗ್ರಹಾಲಯದಲ್ಲಿ ಈ ಬಗೆಯ ಅನೇಕ ಮಾದರಿಗಳನ್ನು ಕಾಣಬಹುದು. ವಸ್ತು, ರೀತಿ, ಶೈಲಿಗಳೊಂದೊಂದರಲ್ಲೂ ವೈಶಿಷ್ಟ್ಯದಿಂದ ಕೂಡಿದ ಅನೇಕ ಅಪೂರ್ವ ಗೊಂಬೆಗಳನ್ನು ಅಲ್ಲಿ ಸಂಗ್ರಹಿಸಲಾಗಿದೆ. ಶುಂಗ, ಕುಶಾನ ಮತ್ತು ಸಾತವಾಹನರ ಕಾಲಕ್ಕೆ ಸೇರಿದ ವಸ್ತುಗಳೂ ಅಲ್ಲುಂಟು. ದಖನ್ ಪ್ರದೇಶದ ಬ್ರಹ್ಮಪುರಿಯ ಕಂಚಿನ ಗಾಡಿಗಳನ್ನೂ ನರ್ಮದಾತೀರದ ಮಹೇಶ್ವರ ಮುಂತಾದ ಮಧ್ಯಪ್ರದೇಶಕ್ಕೆ ಸೇರಿದ ನೆಲೆಗಳ ಕೆಲವು ಪ್ರಾಣಿಗಳ ಗೊಂಬೆಗಳನ್ನೂ ಅಲ್ಲಿ ನೋಡಬಹುದು.

ಮೆದು ಕಲೆಯಲ್ಲಿ ಕಲಾವಿದರು ಶೀಘ್ರ ಕರಕೌಶಲ ಮತ್ತು ವ್ಯಕ್ತಿತ್ವ ಪ್ರದರ್ಶನಕ್ಕೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಅಲಂಕಾರ ವಿಷಯಗಳಲ್ಲಿ ರೇಖೆಯ ಸೌಂದರ್ಯ ಮತ್ತು ಆಕೃತಿಗಳಲ್ಲಿ ಆಭರಣದ ಬೆಡಗುಗಳನ್ನು ತರಲು ಯತ್ನಿಸಬೇಕಾಗುತ್ತದೆ. ಶುಂಗಕಾಲದ ವಸ್ತುಗಳಲ್ಲಿ ನಾಲ್ಕು ಹೋರಿಗಳನ್ನು ಕಟ್ಟಿದ ಮಣ್ಣಿನ ರಥ, ಗಂಭೀರವಾದ ಕುದುರೆ, ಮೊಂಡುಬುದ್ಧಿಯ ಟಗರು ಮುಂತಾದವುಗಳಲ್ಲಿ ಮಣ್ಣಿನ ಕೈಕೆಲಸದ ಅತ್ಯಂತ ಶ್ರೇಷ್ಠಮಟ್ಟದ ಕಲೆಗಾರಿಕೆಯನ್ನು ಕಾಣುತ್ತೇವೆ. ಕುಶಾನರ ಕಾಲದ ಗೊಂಬೆಗಳಲ್ಲಿ ಸರಳ ರೇಖಾ ವಿನ್ಯಾಸವಿದ್ದರೂ ಅಪಾರ ಆಭರಣಗಳ ಅಲಂಕಾರವು ಇಲ್ಲದಿಲ್ಲ.

ದಕ್ಷಿಣ ಸಾತವಾಹನರ ಕಾಲದ ಕಂಚಿನ ಗೊಂಬೆಗಳಿಗೆ ಒಂದು ಅಪೂರ್ವ ಸ್ಥಾನವಿದೆ. ಮಣ್ಣಿನ ಗೊಂಬೆಗಳಿಗಿಂತ ತೀರ ಭಿನ್ನವಾದ ಇವು ಲೋಹ ಪ್ರಾಮುಖ್ಯವನ್ನು ಹೊಂದಿದ ಒಂದು ಉನ್ನತ ನಾಗರಿಕತೆಯ ಸಂಕೇತಗಳಾಗಿವೆ. ಕಂಚಿನ ಒಂದು ಆನೆಯ ಬೆನ್ನಿನ ಮೇಲೆ ಒಂದು ಇಡೀ ಸಂಸಾರವನ್ನೇ ಬಿಡಿಸಲಾಗಿದೆ. ಹುಲಿ ತನ್ನ ಪಂಜವನ್ನು ಮೇಲೆತ್ತಿ ಅಪ್ಪಳಿಸಲು ಅನುವಾದಂತೆ ಕಡೆಯಲಾಗಿದೆ.

ಆಟದ ಗೊಂಬೆಗಳು

ಹೀಗೆ ಭಾರತದ ಸಂಸ್ಕೃತಿಯಲ್ಲಿ ಗೊಂಬೆಗಳಿಗೆ ಒಂದು ಪ್ರಮುಖ ಸ್ಥಾನವಿತ್ತು. ಪ್ರಾಚೀನ ಕಾಲದಲ್ಲಿಯೇ ಭಾರತೀಯರು ಒಂದು ಉನ್ನತ ಸಂಸ್ಕೃತಿಯನ್ನು ಬೆಳೆಸಿಕೊಂಡು ಕಲಾಪೂರ್ಣವಾದ ಜೀವನವನ್ನು ನಡೆಸಿದರೆಂಬುದಕ್ಕೆ ಇವು ಉತ್ತಮ ನಿದರ್ಶನಗಳಾಗಿದೆ. ಆಧುನಿಕ ಕಾಲದಲ್ಲಿ ಊಹಿಸಲೂ ಆಗದಂಥ ಅದ್ಭುತ ಕಲೆಗಾರಿಕೆ ಆಗಿನ ಗೊಂಬೆಗಳಲ್ಲಿ ಕಾಣಬರುತ್ತದೆ.

ಇನ್ನು ಜನಪದ ಕಲೆಗಳನ್ನು ತೆಗೆದುಕೊಂಡರೆ ಅಲ್ಲಿ ವಿಶಿಷ್ಟವಾದ ಗೊಂಬೆಗಳನ್ನು ಗಮನಿಸಬಹುದಾಗಿದೆ. ತೊಗಲು ಬೊಂಬೆಗಳು, ಸೂತ್ರದ ಗೊಂಬೆಗಳು, ಕೀಲುಗೊಂಬೆಗಳು –ಇವು ಮುಖ್ಯವಾದವು. ಕಿಳ್ಳೇಕ್ಯಾತರ ತೊಗಲಗೊಂಬೆಗಳ ಆಟ ಅತಿ ಪ್ರಾಚೀನ ಕಾಲದಿಂದ ಬೆಳೆದುಬಂದ ಕಲೆ. ಈ ಕಲೆ ಭಾರತದ ಒಳಗೂ ಹೊರಗೂ ಪ್ರಚಾರದಲ್ಲಿದೆ. ಇದು ಮಹಾರಾಷ್ಟ್ರದಲ್ಲಿ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ಅಲ್ಲಿಂದ ಇದು ಕರ್ನಾಟಕ, ಆಂಧ್ರದ ರಾಯಲಸೀಮೆ ಮತ್ತು ತಮಿಳುನಾಡುಗಳಿಗೆ ಪಸರಿಸಿತು.

ಈ ಗೊಂಬೆಗಳ ರಚನೆ ವಿಶಿಷ್ಟವಾದುದು. ಹುಲ್ಲೆಯ ಕರು ಇಲ್ಲವೆ ಎಳೆಯ ಆಡುಗಳ ಹದಮಾಡಿದ ಚರ್ಮದಿಂದ ಇವನ್ನು ಮಾಡುತ್ತಾರೆ. ಅನಂತರ ತೊಗಲಿನ ಮೇಲೆ ರೇಖೆಗಳಿಂದ ಚಿತ್ರ ಬಿಡಿಸುತ್ತಾರೆ. ಅಲ್ಲಲ್ಲಿ ಕತ್ತರಿಸಿ ಚಿತ್ರಗಳ ಆಕಾರ ಬಿಡಿಸುತ್ತಾರೆ. ಅನಂತರ ಗಿಡಮೂಲಿಕೆಗಳಿಂದ ತೆಗೆದ ಬಣ್ಣಗಳನ್ನು ಲೇಪಿಸಿ ನೆರಳಿನಲ್ಲಿ ಒಣಗಿಸುತ್ತಾರೆ. ರಾತ್ರಿಯ ದೀಪದ ಬೆಳಕು ಬಿದ್ದಕೂಡಲೇ ಅವುಗಳ ಕಾಂತಿ ಎದ್ದು ತೋರುತ್ತದೆ. ಗೊಂಬೆಗಳು ನೇರವಾಗಿ ನಿಲ್ಲಲು ಅವುಗಳಿಗೆ ಬಿದಿರಿನ ಕಡ್ಡಿಯನ್ನು ಜೋಡಿಸಿರುತ್ತಾರೆ. ಇವನ್ನು ಗೊಂಬೆರಾಮರು ಪೂಜಾವಸ್ತುಗಳೆಂದೇ ತಿಳಿದು ಪೂಜಿಸುತ್ತಾರೆ. 3'–4' ಉದ್ದದ ತೊಗಲ ಗೊಂಬೆಗಳು ಚಿಕ್ಕ ಆಟದಲ್ಲೂ '5–6' ಉದ್ದದ ಗೊಂಬೆಗಳು ದೊಡ್ಡ

ಆಟದಲ್ಲೂ ಬಳಕೆಯಲ್ಲಿವೆ. ಅನೇಕ ವೇಳೆ ಬೊಂಬೆಯ ತಲೆ, ಎದೆ, ಕೈ ಕಾಲುಗಳು ಬೇರೆಬೇರೆಯಾಗಿದ್ದು ಅವನ್ನು ದಾರಗಳಿಂದ ಜೋಡಿಸಲಾಗಿರುತ್ತದೆ. ಕೈ, ಕಾಲು, ದೇಹ, ತಲೆ ಸರಿದಾಡುವ ಅವುಗಳಿಗೆ ಬಿದಿರಿನ ಅಥವಾ ಈಚಲ ಕಡ್ಡಿಗಳನ್ನು ಜೋಡಿಸಿರುತ್ತಾರೆ.

ಸೂತ್ರದ ಗೊಂಬೆ (ಪುತಲಿ ಗೊಂಬೆ) ಆಟವೂ ಬಹಳ ಹಿಂದಿನಿಂದಲೂ ಬೆಳೆದು ಬಂದ ಒಂದು ಅಪೂರ್ವ ಜನಪದ ಕಲೆ. ಈ ಆಟ ಚಕ್ಕಳ ಗೊಂಬೆಯಾಟದಿಂದ ಕೆಲವು ರೀತಿಯಲ್ಲಿ ಬೇರೆಯಾಗಿದೆ. ಈ ಗೊಂಬೆಗಳು ಮರದಲ್ಲಿ ತಯಾರಾದುವು. ಉದ್ದ 2'–3' ಕೈ, ಕಾಲು, ಮೂಗು, ಕಣ್ಣು, ತಲೆ, ಎದೆ ಎಲ್ಲವನ್ನೂ ನಯವಾಗಿ ಮಾಟವಾಗಿ ಕಡೆದಿರುತ್ತಾರೆ. ಆಯಾ ಗೊಂಬೆಗೆ ತಕ್ಕಂತೆ ಬಣ್ಣಗಳನ್ನು ಲೇಪಿಸಿರುತ್ತಾರೆ. ಪಾತ್ರಕ್ಕೆ ತಕ್ಕಂತೆ ಉಡುಪು, ಒಡವೆ, ಸರ, ಸೊಂಟಕ್ಕೆ ವಡ್ಯಾಣ, ಪಾದಕ್ಕೆ ನೂಪುರ, ಕಾಲುಂಗುರ, ತಲೆಗೆ ಜಡೆಬಿಲ್ಲೆ, ಕೆನ್ನೆಸರ ಮುಂತಾದುವನ್ನು ಬೇರೆಬೇರೆಯಾಗಿ ತೊಡಿಸಿರುತ್ತಾರೆ. ಗೊಂಬೆಯ ಎಲ್ಲ ಭಾಗಗಳೂ ಸುಲಭವಾಗಿ ಚಲಿಸುವಂತಿರುತ್ತವೆ.

ಕೀಲು ಗೊಂಬೆಗಳು

ಆಟ ಆಡಿಸುವವರು ನೂಲು ಅಥವಾ ಸಲಾಕಗಳಿಂದ ಗೊಂಬೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡಿರುತ್ತಾರೆ. ಆಟದಲ್ಲಿವರು ತಮ್ಮ ಎಲ್ಲ ಕೈಚಳಕವನ್ನು ಆ ಗೊಂಬೆಗಳ ಮೇಲೆ ಪ್ರಯೋಗ ಮಾಡುತ್ತಾರೆ. ತಮ್ಮ ಕಲಾವಂತಿಕೆಯನ್ನು ಮೆರೆಯುತ್ತಾರೆ. ಪ್ರಪಂಚದ ಎಲ್ಲೆಡೆಯೂ ಈ ಸೂತ್ರದ ಬೊಂಬೆ ಆಟ ಇದ್ದಂತೆ ತೋರುತ್ತದೆ. ಗ್ರೀಕರು ಈ ಆಟಗಳಿಂದ ಮನೋರಂಜನೆ ಪಡೆಯುತ್ತಿದ್ದರು. ಚೀನ, ಇಂಗ್ಲೆಂಡ್‌ಗಳಲ್ಲೂ ಈ ಕಲೆ ಇತ್ತೆಂದು ಹೇಳಲಾಗಿದೆ. ಫ್ರಾನ್ಸ್‌ನಲ್ಲಿ ಈಗಲೂ ಈ ಆಟಗಳನ್ನು ನಡೆಸಲಾಗುತ್ತಿದೆ. ಅಮೆರಿಕ, ಲ್ಯಾಟಿನ್ ಅಮೆರಿಕ ಭಾಗಗಳಲ್ಲಿ ಇಟಲಿ ಜನ ಆಗಾಗ ಹೋಗಿ ಈ ಆಟ ಪ್ರದರ್ಶಿಸಿ ಬರುವುದುಂಟು. ಭಾರತದಲ್ಲಿ ಈ ಆಟಕ್ಕೆ ಹಿಂದಿದ್ದ ಪುರಸ್ಕಾರ ಈಗ ದೊರಕದ ಕಾರಣ ಈ ಒಂದು ಕಲೆ ಅಳಿಸಿ ಹೋಗುವ ಭಯ ಉಂಟಾಗಿದೆ.

ಗೌರಿಗೊಂಬೆಗಳೂ ದಸರೆ ಗೊಂಬೆಗಳೂ ಭಾರತದಲ್ಲಿ ಈಗಲೂ ಅನೇಕ ನಗರಗಳ, ಪಟ್ಟಣಗಳ, ಗ್ರಾಮಗಳ ಮನೆಮನೆಗಳಲ್ಲಿ ಉಳಿದು ಬಂದಿವೆ. ಹಬ್ಬಗಳಲ್ಲಿ ಅವನ್ನು ಓರಣವಾಗಿ ಕೂರಿಸಿ ಪೂಜಿಸುವುದು ಮುಂದುವರಿದಿದೆ. ಈ ಗೊಂಬೆಗಳನ್ನು ಮರದ ಹೊಟ್ಟಿನಲ್ಲಿ ಇಲ್ಲವೆ ಜೇಡಿಮಣ್ಣಿನಲ್ಲಿ ಮಾಡಿರುತ್ತಾರೆ. ಚಂದನದ ಗೊಂಬೆಗಳೂ ಉಂಟು. ಈ ಗೊಂಬೆಗಳಿಗೆ ಬಟ್ಟೆ, ಆಭರಣಗಳನ್ನು ತೊಡಿಸಿ ಅಲಂಕರಿಸಿ ಪ್ರದರ್ಶಿಸುತ್ತಾರೆ. ದಸರೆಯ ಗೊಂಬೆಯ ಪ್ರದರ್ಶನ ಮನೆಯವರಿಗೊಂದು ಕಲಾ ಪ್ರದರ್ಶನಾವಕಾಶವನ್ನು ಒದಗಿಸುತ್ತದೆ. ಜೊತೆಗೆ ಗೊಂಬೆಯ ಎದುರು ಹೆಣ್ಣುಮಕ್ಕಳು ಕೋಲಾಟವಾಡುವ ಸಂಪ್ರದಾಯ ಹಿಂದಿನಿಂದ ನಡೆದು ಬಂದಿದೆ.

ಗ್ರಾಮದಿಂದ ಗ್ರಾಮಕ್ಕೆ ಸಾಗುವ ಮಾರಮ್ಮ, ಉಡುಗೋಲಜ್ಜಿಗಳ ಮರದ ವಿಗ್ರಹಗಳನ್ನು ಇಂದಿಗೂ ನೋಡಬಹುದಾಗಿದೆ. ಒಂದು ಊರಿನ ಗಡಿಯಿಂದ ಮತ್ತೊಂದು ಊರಿನ ಗಡಿಗೆ ಮಾರಮ್ಮನ ವಿಗ್ರಹವನ್ನು ಆಯಾ ಊರಿನ ಜನ ಸಾಗಿಸಿಕೊಂಡು ಹೋಗುತ್ತಾರೆ. ಹೀಗೆ ನೂರಾರು ಮೈಲಿಗಳ ಆಚೆ ಪ್ರಯಾಣ ಬೆಳೆಸಿ ಕೊನೆಗೆ ಸಮುದ್ರದಲ್ಲೊ ಕೆರೆಯಲ್ಲೊ ಅದನ್ನು ವಿಸರ್ಜನೆ ಮಾಡುತ್ತಾರೆ. ಊರಿಗೆ ಬರುವಂಥ ಪ್ಲೇಗು, ಕಾಲರ ಮುಂತಾದ ರೋಗರುಜಿನಗಳು ಸಾಮೂಹಿಕವಾಗಿ ಈ ದೇವತೆಯ ಮೂಲಕವಾಗಿ ಸಾಗಿ ಹೋಗಲಿ ಎಂಬರ್ಥದಲ್ಲಿ ಈ ದೈವವನ್ನು ರಚಿಸಿ, ಪೂಜಿಸಿ, ಸಾಗಿಸುವ ಜನಪದ ನಂಬಿಕೆ ನಮ್ಮಲ್ಲಿ ಬಹಳ ಹಿಂದಿನಿಂದಲೂ ಬೆಳೆದುಬಂದಿದೆ.

ಗ್ರಾಮಗಳ ದೇವಾಲಯಗಳಲ್ಲಿ ತಲೆಭೂತ ಕೈಭೂತ ಸೋಮ ಮುಂತಾದ ದೈವದ ಮೂರ್ತಿಗಳನ್ನು ಕಾಣಬಹುದಾಗಿದೆ. ಆಯಾ ಗ್ರಾಮಗಳಲ್ಲಿ ಇರುವ ಕುಶಲಕರ್ಮಿಗಳು ಇವನ್ನು ಬಹಳ ಕಲಾತ್ಮಕವಾಗಿ ರಚಿಸಿಕೊಡುತ್ತಾರೆ. ಸಿರಿಯಾಳ ಷಷ್ಠಿ, ಗೋಕುಲಾಷ್ಟಮಿ, ಗಣಪತಿ ಮಹೋತ್ಸವ ಮೊದಲಾದ ಹಬ್ಬಗಳಲ್ಲಿ ಮನೆಯವರೇ ಎರೆಯ ಮಣ್ಣಿನಿಂದ ಆಯಾ ವಿಗ್ರಹಗಳನ್ನು ಮಾಡುವ ಹವ್ಯಾಸ ಇನ್ನೂ ಅನೇಕ ಕಡೆ ಉಳಿದು ಬಂದಿದೆ. ರಥೋತ್ಸವ ಮತ್ತು ಜಾತ್ರೆಗಳ ಸಮಯದಲ್ಲಿ ಹಳ್ಳಿಯ ಕಸಬುದಾರರು ಬೊಂಬೆಗಳನ್ನು ಮಾಡಿ ಬಣ್ಣ ಕಟ್ಟಿ ಮಾರಾಟಕ್ಕೆ ಇಡುವುದನ್ನು ಇಲ್ಲಿ ನೆನೆಯಬಹುದು. ಬಹುಮಟ್ಟಿಗೆ ಹಳ್ಳಿಯ ಮಕ್ಕಳಿಗೆ ಇಲ್ಲಿ ಸಿಗುವ ರಾಟೆ, ಕಿಸಗಾಲು ಗೊಂಬೆ, ಅಂಬೆಗಾಲು ಕೃಷ್ಣ, ಪೀಪಿ, ಕುದುರೆ, ಗಿಣಿ, ಗುಬ್ಬಿ, ರಾಜ, ರಾಣಿ–ಈ ವಸ್ತುಗಳೇ ಬಹು ಪ್ರಿಯವಾದ ಆಟದ ಸಾಮಾನುಗಳು.

ಸೂತ್ರದ ಗೊಂಬೆ

ಬಿದಿರ ಬೊಂಬಿನಿಂದ, ಅರಗಿನಿಂದ, ಬಟ್ಟೆಗಳಿಂದ, ಕಪ್ಪೆಚಿಪ್ಪಿನಿಂದ ನಾನಾ ನಮೂನೆಯ ಗೊಂಬೆಗಳನ್ನು ರಚಿಸಲಾಗುತ್ತಿದೆ. ಭಾರತದ ಸರ್ಕಾರ ಈ ಗೊಂಬೆಗಳಿಗೆ ಬಹಳ ಪ್ರೋತ್ಸಾಹ ನೀಡಿ ಈ ಕಲೆಯ ಉಳಿವಿಗೆ ನೆರವಾಗಿದೆ.

ವಿಜ್ಞಾನ ಬೆಳೆದಂತೆಲ್ಲ ಕೈಕೆಲಸ ಹಿಂದಾಗಿ ಯಂತ್ರಗಳು ಪ್ರಾಮುಖ್ಯಕ್ಕೆ ಬರುತ್ತಿದೆ. ಅದರ ಪರಿಣಾಮವಾಗಿ ಪ್ಲಾಸ್ಟಿಕ್, ರಬ್ಬರ್ ಮೊದಲಾದವನ್ನು ಬಳಸಿಕೊಂಡು ಯಂತ್ರ ದಿಂದ ತಯಾರಿಸಿದ ಬಹು ಮುದ್ದಾದ ಗೊಂಬೆಗಳು ಈಗ ಜನಪ್ರಿಯವಾಗಿವೆ. (ಪಿ.ಆರ್.ಟಿ.)

**ಗೊಡೀಷಿಯ :** ಉದ್ಯಾನಗಳಲ್ಲಿ ಅಂದಕ್ಕಾಗಿ ಬೆಳೆಸಲಾಗುವ ಒಂದು ಏಕವಾರ್ಷಿಕ ಸಸ್ಯಜಾತಿ. ಆನಗ್ರೇಸೀ ಕುಟುಂಬಕ್ಕೆ ಸೇರಿದೆ. ಸ್ವಿಟ್ಜರ್ಲೆಂಡಿನ ಪ್ರಸಿದ್ಧ ಸಸ್ಯಶಾಸ್ತ್ರಜ್ಞ ಸಿ.ಎಚ್.ಗೊಡೆಟ್ ಎಂಬವನ ಗೌರವಾರ್ಥವಾಗಿ ಗಿಡಕ್ಕೆ ಈ ಹೆಸರನ್ನು ಇಡಲಾಗಿದೆ.

ಗೊಡೀಷಿಯ ಗ್ರ್ಯಾಂಡಿಪ್ಲೋರ ಪ್ರಭೇದ

ಗೊಡೀಷಿಯು ಸುಮಾರು 15 ಪ್ರಭೇದಗಳನ್ನೊಳಗೊಂಡಿದೆ. ಎಲ್ಲವೂ ಅಮೆರಿಕದ ಪಶ್ಚಿಮ ಪ್ರದೇಶಗಳ ಮೂಲ ನಿವಾಸಿಗಳು. ಇವುಗಳಲ್ಲಿ ಕೆಲವು $^{3}/_{4}$–1 ಮೀ ಎತ್ತರಕ್ಕೆ ಬೆಳೆಯುವ ಪೊದೆಸಸ್ಯಗಳು, ಇನ್ನು ಕೆಲವು $^{1}/_{4}$ ಮೀ ಎತ್ತರದ ಮೂಲಿಕೆಗಳು. ಪೊದೆ ಬಗೆಯುವನ್ನು ಅಂಚು ಇಲ್ಲವೆ ಕಲ್ಲೇರಿ ಸಸ್ಯಗಳನ್ನಾಗಿಯೂ ಮೂಲಿಕೆ ಬಗೆಯವನ್ನು ಕುಂಡ ಸಸ್ಯಗಳನ್ನಾಗಿಯೂ ಬೆಳೆಸಲಾಗುತ್ತದೆ. ವಿವಿಧ ಬಗೆಗಳು ಚೆಲುವಾದ ಮತ್ತು ಬಿಳಿ, ಗುಲಾಬಿ, ಕಡುಗೆಂಪು, ಕೆನ್ನೀಲಿ ಮುಂತಾದ ವರ್ಣ ವೈವಿಧ್ಯವನ್ನು ತೋರುವ ಹೂಗಳನ್ನು ಬಿಡುತ್ತವೆ. ಕೆಲವಲ್ಲಿ ದಳಗಳ ಮೇಲೆ ಬಣ್ಣಬಣ್ಣದ ಮಚ್ಚೆಗಳಿರುವುದುಂಟು. ಬಹು ಪಾಲು ಬಗೆಗಳಲ್ಲಿ ಹೂಗಳು ಒಂಟಿಸುತ್ತಿನ ದಳ ಉಳ್ಳವು. ಅಡ್ಡ ತಳಿಯೆಬ್ಬಿಕೆಯ ಪ್ರಯೋಗಗಳ ಮೂಲಕ ಹಲವಾರು ಸುತ್ತಿನ ದಳಗಳುಳ್ಳ

ತಳಿಗಳನ್ನು ಪಡೆದು ವೃದ್ಧಿಸಲಾಗಿದೆ. ಹೂಗಳು ರೇಸೀಮ್ ಇಲ್ಲವೇ ಸ್ಪೈಕ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ.

ಗೊಡೀಷಿಯದ ಪ್ರಭೇದಗಳು ಬೆಟ್ಟಸೀಮೆ ಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ. ಶೀತ ಹವಾಗುಣ ಇವುಗಳ ಬೆಳವಣಿಗೆಗೆ ಉತ್ತಮವಾದ್ದು. ಮೈದಾನ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಇವನ್ನು ಬೆಳೆಸುವುದು ಒಳ್ಳೆಯದು. ಇವನ್ನು ಬೀಜಗಳ ಮೂಲಕ ವೃದ್ಧಿಸಬಹುದು. ಉದ್ಯಾನಗಾರಿಕೆ ಯಲ್ಲಿ ಹೆಚ್ಚು ಪ್ರಸಿದ್ಧವಾದವು–ಗೊ. ಅಮೀನ, ಗೊ. ಬಾಟೀ, ಗೊ. ಗ್ರ್ಯಾಂಡಿಫ್ಲೋರ ಪ್ರಭೇದಗಳು. (ಕೆ.;ಬಿ.ಎ.ಸಿ.)

**ಗೊಡ್ಡು ಈಚಲು :** ಜಿಮ್ನೋಸ್ಪರ್ಮೀ (ನಗ್ನಬೀಜೀ) ವರ್ಗ, ಸೈಕಡೇಲೀಸ್ ಗಣ, ಸೈಕಡೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯಜಾತಿ. ಮಂಡೀಚಲು ಇದರ ಪರ್ಯಾಯ ನಾಮ. ಸೈಕ್ಯಾಸ್ ವೈಜ್ಞಾನಿಕ ಹೆಸರು. ಪ್ರಪಂಚದ ಉಷ್ಣ ಹಾಗೂ ಉಪೋಷ್ಣವಲಯಗಳಲ್ಲಿ ಹಬ್ಬಿರುವ ಸುಮಾರು 20 ಪ್ರಭೇದಗಳನ್ನು ಇದು ಒಳಗೊಂಡಿದೆ. ಭಾರತದಲ್ಲಿ ಸರ್ಸಿನ್ಯಾಲಿಸ್, ರೆವಲ್ಯೂಟ, ರಂಫಿಯೈ, ಪೆಕ್ಟಿನೇಟ ಮತ್ತು ಬೆಡೋಮಿಯೈ ಎಂಬ 5 ಪ್ರಭೇದಗಳು ಕಾಣ ದೊರೆಯುತ್ತವೆ. ಇವುಗಳ ಪೈಕಿ ರೆವಲ್ಯೂಟ ಮತ್ತು ರಂಫಿಯೈಗಳನ್ನು ಉದ್ಯಾನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸಲಾಗಿದೆ. ಇವು ಕ್ರಮವಾಗಿ ಜಪಾನ್ ಮತ್ತು ಮಲಕ್ಕಗಳ ಮೂಲವಾಸಿಗಳು. ಉಳಿದ ಪ್ರಭೇದಗಳು ಭಾರತದಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆ.

ಗೊಡ್ಡು ಈಚಲು: ಈಚಲು ಗರಿಯಂಥ ಎಲೆಗಳನ್ನೂ ಮಧ್ಯದಲ್ಲಿ ಗಂಡು ಶಂಕುವನ್ನೂ ಗಮನಿಸಬಹುದು.

ಗೊಡ್ಡು ಈಚಲು ಹೊರನೋಟಕ್ಕೆ ಹೆಚ್ಚು ಕಡಿಮೆ ಈಚಲು ಮರದಂತೆಯೇ ಕಾಣುತ್ತದೆ. ಇದರ ಎತ್ತರ ಸಾಮಾನ್ಯವಾಗಿ 2ಮೀ ಗಳಿಗೆ ಮೀರದು. ಆದರೂ ಅಪರೂಪಕ್ಕೆ 6 ಮೀ ಎತ್ತರಕ್ಕೂ ಬೆಳೆಯುವುದುಂಟು. ಈಚಲು, ತೆಂಗು ಮುಂತಾದವುಗಳಂತೆ ಇದರಲ್ಲೂ ಕವಲೊಡೆಯದ ಮುಖ್ಯ ಕಾಂಡವೊಂದಿದ್ದು ಅದರ ತುದಿಯಲ್ಲಿ ಎಲೆಗಳ ಕಿರೀಟವೊಂದಿದೆ. ಕಾಂಡ ಅಪೂರ್ವವಾಗಿ ಕವಲೊಡೆಯುವುದುಂಟು. ಎಲೆಗಳು ಸಂಯುಕ್ತ ಮಾದರಿಯವು; ಹೆಚ್ಚುಕಡಿಮೆ ಈಚಲು ಗರಿಗಳಂತೆ ಕಾಣುತ್ತವೆ. ಅವುಗಳಂತೆಯೆ ಆಗಾಗ್ಗೆ ಬಿದ್ದುಹೋಗುವ ಇವುಗಳ ಬುಡಭಾಗ ಮಾತ್ರ ಕಾಂಡದ ಮೇಲೆ ಬಹಳ ಕಾಲ ಉಳಿದಿರುತ್ತದೆ. ಗೊಡ್ಡು ಈಚಲಿನ ಕೆಲವು ಬೇರುಗಳು ಭೂಮಿಯಿಂದ ಮೇಲಕ್ಕೆ ಕವಲೊಡೆದು ಬೆಳೆದು ಅಗಲಿಸಿದ ಕೈ ಬೆರಳುಗಳಂತೆ ಕಾಣುತ್ತವೆ. ಇವಕ್ಕೆ ಕಾರಲಾಯಿಡ್ ಬೇರುಗಳೆಂದು ಹೆಸರು.

ಗೊಡ್ಡು ಈಚಲು ಭಿನ್ನಲಿಂಗಿ. ಗಂಡು ಮತ್ತು ಹೆಣ್ಣು ಲಿಂಗಾಂಗಗಳು ಶಂಕು (ಕೋನ್) ಇಲ್ಲವೆ ಸ್ಟ್ರೊಬೈಲಸ್ ಎಂದು ಕರೆಯಲಾಗುವ ರಚನೆಗಳಲ್ಲಿ ಸ್ಥಿತವಾಗಿವೆ. ಗಂಡು ಶಂಕು ಸುಮಾರು 1/3 ಮೀ ಉದ್ದವಿದ್ದು ಅನೇಕ ಸೂಕ್ಷ್ಮಬೀಜಾಣುಪತ್ರಗಳನ್ನು (ಮೈಕ್ರೋಸ್ಪೋರೋಫಿಲ್ಸ್) ಒಳಗೊಂಡಿದೆ. ಶಂಕುವಿನ ಕೇಂದ್ರ ಅಕ್ಷದ ಮೇಲೆ ಒತ್ತಾಗಿ ಜೋಡಣೆಗೊಂಡಿರುವ ಮತ್ತು ಕ್ಷೀಣಿಸಿದ ಪತ್ರಗಳಂತಿರುವ ಇವುಗಳಲ್ಲಿ ಒಂದೊಂದರಲ್ಲೂ ಕಿರಿದಾದ ಬುಡಭಾಗ ಮತ್ತು ಅಗಲವಾದ ಮುಂಭಾಗಗಳನ್ನು ಗುರುತಿಸಬಹುದು. ಅಲ್ಲದೆ ಇವುಗಳ ತುದಿ ಮುಳ್ಳಿನಂತಾಗಿ ಮೇಲ್ಮುಖವಾಗಿ ಬಾಗಿದೆ. ಪ್ರತಿ ಬೀಜಾಣುಪತ್ರದ ಕೆಳಮೈ ಮೇಲೆ ಅಸಂಖ್ಯಾತ ಪರಾಗ ಚೀಲಗಳಿವೆ. ಇವುಗಳಲ್ಲಿ ಪರಾಗ ಉತ್ಪತ್ತಿಯಾಗುತ್ತದೆ. ಹೆಣ್ಣು ಶಂಕುವಿನಲ್ಲಿಯೂ ಅನೇಕ ಬೀಜಾಣು ಪತ್ರಗಳಿವೆ. ಇವು ಗಾತ್ರದಲ್ಲಿ ಸೂಕ್ಷ್ಮಬೀಜಾಣು ಪತ್ರಗಳಿಗಿಂತ ದೊಡ್ಡವು. ಇವುಗಳ ಸಂಖ್ಯೆಯೂ ಕಡಿಮೆ. ಅಲ್ಲದೆ ಇವು ಅಳ್ಳಕವಾಗಿ ಜೋಡಣೆಗೊಂಡಿವೆ. ಇದಕ್ಕೆ ಸ್ಥೂಲಬೀಜಾಣು ಪತ್ರಗಳೆಂದು (ಮೆಗಸ್ಪೋರೋಫಿಲ್ಸ್) ಹೆಸರು. ಒಂದೊಂದು ಪತ್ರದ ಎರಡು ಅಂಚುಗಳಲ್ಲೂ 2–3 ಜೊತೆ ಅಂಡಕಗಳು (ಓವ್ಯೂಲ್ಸ್) ಇವೆ. ಮುಂದೆ ಪರಾಗಸ್ಪರ್ಶ ಕ್ರಿಯೆ ಮತ್ತು ನಿಷೇಚನಗಳು ಪೂರ್ಣಗೊಂಡ ಮೇಲೆ ಅಂಡಕಗಳು ಬೀಜಗಳಾಗಿ ಬೆಳೆಯುತ್ತವೆ. ಗೊಡ್ಡು ಈಚಲಿನ ಬೀಜಗಳು ಯಾವ ಬಗೆಯ ಹೊದಿಕೆಯಿಂದಲೂ ಆವೃತವಾಗಿಲ್ಲ. ಇದರಿಂದಲೇ ಇದೊಂದು ನಗ್ನಬೀಜೀಸಸ್ಯ ಅನ್ನಿಸಿಕೊಂಡಿದೆ.

ಗೊಡ್ಡು ಈಚಲು ಹಲವಾರು ಬಗೆಗಳಲ್ಲಿ ಉಪಯುಕ್ತವೆನಿಸಿದೆ. ಇದರ ಎಲೆಗಳು ಬಹುಕಾಲ ಹಸಿರಾಗಿ ಉಳಿಯುವುದರಿಂದ ಅಲಂಕಾರಕ್ಕಾಗಿ ಬಳಸುವುದುಂಟು. ಸರ್ಸಿನ್ಯಾಲಿಸ್ ಮತ್ತು ರೆವಲ್ಯೂಟ ಪ್ರಭೇದಗಳ ಕಾಂಡದ ತಿರುಳಿನಿಂದ ಪಿಷ್ಟವನ್ನು ತೆಗೆದು ಸಬ್ಬಕ್ಕಿಯನ್ನು (ಸೇಗೊ) ತಯಾರುಮಾಡುತ್ತಾರೆ. ಗೊಡ್ಡು ಈಚಲಿನ ಎಳೆಯ ಚಿಗುರೆಲೆ ಮತ್ತು ಮೊಗ್ಗುಗಳನ್ನು ಕೆಲವು ಕಡೆ ತರಕಾರಿಯಂತೆ ಬಳಸುವುದೂ ಉಂಟು. ಜಪಾನಿನಲ್ಲಿ ಇದರ ಕಾಂಡ ಮತ್ತು ಬೀಜಗಳ ಸಾರದಿಂದ ವಿಶಿಷ್ಟ ಬಗೆಯ ಮದ್ಯವೊಂದನ್ನು ತಯಾರಿಸುವುದುಂಟು. ಭಾರತದಲ್ಲಿ ಕೆಲವು ತಳಿಗಳ ಗಂಡು ಶಂಕುವಿನ ಹುರುಪೆಗಳನ್ನು ಉತ್ತೇಜಕ ಮತ್ತು ಕಾಮೋತ್ತೇಜಕವಾಗಿಯೂ ಮೂತ್ರಪಿಂಡ ಸಂಬಂಧಿ ನೋವುಗಳ ನಿವಾರಕವಾಗಿಯೂ ಉಪಯೋಗಿಸುತ್ತಾರೆ. ಇಂಡೋನೇಷ್ಯದಲ್ಲಿ ಕಾಂಡ ಮತ್ತು ಎಲೆಗಳಿಂದ ಪೊರಕೆ, ಬುಟ್ಟಿ ಮುಂತಾದವನ್ನು ತಯಾರಿಸುತ್ತಾರೆ. ಗುಡಿಸಲುಗಳಿಗೆ ಹೊದಿಸುವ ಗರಿಗಳನ್ನು ಮಾಡಲು ಬಳಸುವುದಲ್ಲದೆ ಎಲೆಗಳಿಂದ ನಾರನ್ನು ತೆಗೆದು ಬಟ್ಟೆ, ಹಗ್ಗ, ಹುರಿ ಇತ್ಯಾದಿಗಳ ತಯಾರಿಕೆಗೆ ಉಪಯೋಗಿಸುತ್ತಾರೆ. (ಎಂ.ಎಸ್.ಎಸ್.ಆರ್.)

**ಗೊಡ್ಡುಗೇರು ಮರ :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಒಂದು ಪರ್ಣಪಾತಿವೃಕ್ಷ. ಸೆಮಿಕಾರ್ಪಸ್ ಅನಕಾರ್ಡಿಯಮ್ ವೈಜ್ಞಾನಿಕ ಹೆಸರು. ಭಾರತಾದ್ಯಂತ ಸ್ವಾಭಾವಿಕವಾಗಿ ಬೆಳೆಯುತ್ತದೆ.

ಗೊಡ್ಡುಗೇರುಮರ ಸುಮಾರು 6 ಮೀ ಎತ್ತರಕ್ಕೆ ಬೆಳೆಯುವ ಮಧ್ಯಮ ಗಾತ್ರದ ಮರ. ಇದರ ಎಲೆಗಳು ಸರಳ ಮಾದರಿಯವು; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಎಲೆಗಳ ಮೇಲ್ಮೈ ಮೃದುವಾದ ತುಪ್ಪಳಿಂದ ಕೂಡಿದೆ. ಹೂಗಳು ಚಿಕ್ಕವು; ಸಂಕೀರ್ಣ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಇವು ಏಕಲಿಂಗಿಗಳಾಗಿರಬಹುದು. ಇಲ್ಲವೆ ದ್ವಿಲಿಂಗಿಗಳಾಗಿರಬಹುದು. ಗಂಡು ಹೂಗಳು ಹೆಣ್ಣು ಮತ್ತು ದ್ವಿಲಿಂಗಿ ಹೂಗಳಿಗಿಂತ ಚಿಕ್ಕವು. ಗಂಡು ಹೂಗಳಲ್ಲಿ ಅನೇಕ ಕೇಸರಗಳೂ ಒಂದು ಗೊಡ್ಡು ಅಂಡಾಶಯವೂ ಇವೆ. ಪುಷ್ಪಪತ್ರ ಮತ್ತು ಪುಷ್ಪದಳಗಳ ಸಂಖ್ಯೆ ಐದು. ದ್ವಿಲಿಂಗಿ ಹಾಗೂ ಹೆಣ್ಣು ಹೂಗಳಲ್ಲಿ ಉಚ್ಚಸ್ಥಾನದ ಅಂಡಾಶಯವಿದೆ. ಇದರಲ್ಲಿನ ಕಾರ್ಪೆಲಿನ ಸಂಖ್ಯೆ ಮೂರು. ಆದರೆ ಒಂದು ಕಾರ್ಪೆಲು ಮಾತ್ರ ಪೂರ್ಣ ಬೆಳವಣಿಗೆಯನ್ನು ತೋರುತ್ತದೆ. ಅಂಡಾಶಯದ ಕೆಳಭಾಗದಲ್ಲಿ ತಟ್ಟೆಯಂಥ ರಚನೆಯೊಂದು ಇದೆ. ಶಲಾಕೆ ಮೂರು ಭಾಗಗಳಾಗಿ ಕವಲೊಡೆದಿದೆ. ಕಾಯಿ ಅಷ್ಟಿಫಲ ಮಾದರಿಯದು. ತೀಕ್ಷ್ಣ ಉತ್ತೇಜನಕಾರಿ. ಬಣ್ಣ ಕಪ್ಪು, ಹೊರಸಿಪ್ಪೆ ಬಹಳ ದಪ್ಪ. ಇದರಲ್ಲಿ ರಾಳದಿಂದ (ರೆಸಿನ್) ತುಂಬಿರುವ ಅನೇಕ ಕುಳಿಗಳಿವೆ. ಇದರ ತಿರುಳಿನಲ್ಲಿ ಸಿಹಿಯಾದ ಒಂದು ರೀತಿಯ ಎಣ್ಣೆಯಿದೆ. ಸಿಪ್ಪೆಯ ರಸದಲ್ಲಿ ಅನಕಾರ್ಡಿಕ್ ಎಂಬ ಆಮ್ಲವಿದೆ. ಈಥರಿನಲ್ಲಿ ಸುಲಭವಾಗಿ ಕರಗುವ ಇದು ಗಾಳಿಗೆ ತೆರೆದಿಟ್ಟರೆ ಬೇಗ ಕಪ್ಪುಬಣ್ಣಕ್ಕೆ ತಿರುಗುತ್ತದೆ.

ಗೊಡ್ಡುಗೇರು ಮರದ ಹೆಚ್ಚು ಉಪಯುಕ್ತ ಭಾಗವೆಂದರೆ ಅದರ ಕಾಯಿಗಳು. ಬಟ್ಟೆಗಳಿಗೆ ಗುರುತು ಮಾಡಲು ಅಗಸರು ಇವನ್ನು ಉಪಯೋಗಿಸುತ್ತಾರೆ. ಕಾಯಿಯ ತಿರುಳು ಉತ್ತಮ ಶಕ್ತಿವರ್ಧಕ ಹಾಗೂ ಒಳ್ಳೆಯ ಜೀರ್ಣಕಾರಿ. ಇದನ್ನು ಜಂತುನಾಶಕ ಔಷಧಿಗಳಲ್ಲಿ ಬಳಸುತ್ತಾರೆ. ಫಲದ ಕಷಾಯವನ್ನು ಬೆಣ್ಣೆಯ ಜೊತೆ ಸೇವಿಸಿದರೆ ಅಜೀರ್ಣ, ಮೂಲವ್ಯಾಧಿ ಮೊದಲಾದ ರೋಗಗಳು ವಾಸಿಯಾಗುತ್ತವೆ. ತಿರುಳು ಶಾಮಕ ಔಷಧಿಯೂ ಹೌದು. ಸೆಳವು ರೋಗವನ್ನು ತಡೆಯುವ, ದೇಹದಲ್ಲಿ ಪೋಷಣ ವ್ಯಾಪಾರಗಳನ್ನು ಬದಲಾಯಿಸಿ ಅವನ್ನು ಆರೋಗ್ಯ ಸ್ಥಿತಿಗೆ ತರುವ ಸಾಮರ್ಥ್ಯವೂ

ಇದಕ್ಕಿದೆ. ನರಗಳ ದೌರ್ಬಲ್ಯಕ್ಕೆ ಇದು ಒಳ್ಳೆಯ ಮದ್ದು. ಕಾಯಿಯ ಹೊರಸಿಪ್ಪೆಯಿಂದ ತೆಗೆದ ರಸವನ್ನು ಅಲ್ಪ ಪ್ರಮಾಣದಲ್ಲಿ ಕುಷ್ಠ ರೋಗಿಗಳಿಗೆ ಕೊಡುವ ಕ್ರಮವೂ ಇದೆ. ಪಾರ್ಶ್ವವಾಯು, ಮೂರ್ಛೆರೋಗ ಮತ್ತು ಹಲವು ವಿಧದ ಚರ್ಮರೋಗಗಳಿಗೂ ಇದು ದಿವ್ಯೌಷಧ. ರಸವನ್ನು ಅತ್ಯಲ್ಪ ಪ್ರಮಾಣದಲ್ಲಿ ತುಪ್ಪ ಅಥವಾ ಜೇನುತುಪ್ಪದೊಡನೆ ಬೆರೆಸಿ ತೆಗೆದುಕೊಂಡರೆ ಹುಣ್ಣು, ಸಂಧಿವಾತ, ಉಬ್ಬಸ ಮೊದಲಾದವು ಬೇಗನೆ ಗುಣಮುಖವಾಗುತ್ತದೆ. ನ್ಯೂಮೋನಿಯ ಜ್ವರದಲ್ಲೂ ಇದನ್ನು ಬಳಸುವುದುಂಟು.

ಕಾಯಿಯ ಹೊರಸಿಪ್ಪೆಯಿಂದ ಪಡೆಯಲಾಗುವ ಎಣ್ಣೆ ಪ್ರಬಲವಾದ ಪೂತಿನಾಶಕ. ಇದನ್ನು ಉಳುಕಿಗೂ ಎಲುಬು ಹಾಗೂ ಕೀಲುಗಳ ನೋವಿಗೂ ಬಳಸುತ್ತಾರೆ. ಚಳಿಗಾಲದಲ್ಲಿ ಇದನ್ನು ಸತತವಾಗಿ ತೆಗೆದುಕೊಳ್ಳುವುದರಿಂದ ನೆಗಡಿ, ಕೆಮ್ಮು ಮತ್ತು ಗೂರಲು ರೋಗಗಳು ನಿವಾರಣೆಯಾಗುತ್ತವೆ. ರಕ್ತ ಹೀನತೆ ಮತ್ತು ಬ್ರಾಂಕೈಟಿಸುಗಳಿಗೂ ಇದು ಪರಿಣಾಮಕಾರಿ. (ಎಸ್.ಡಿ.ಕೆ.)

**ಗೊಡ್ಡೆ :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಒಂದು ಉಪಯುಕ್ತ ಕಾಡುಮರ. ಊದಿಮರ, ಉಡೀಮರ, ಸಿಂಟೆಮರ ಪರ್ಯಾಯನಾಮಗಳು. ಇಂಗ್ಲಿಷಿನಲ್ಲಿ ಇಂಡಿಯನ್ ಆಷ್ ಟ್ರೀ ಎಂದು ಕರೆಯಲಾಗುತ್ತದೆ. ಲ್ಯಾನಿಯ ಕೋರೊಮ್ಯಾಂಡಲಿಕ ಇದರ ವೈಜ್ಞಾನಿಕ ಹೆಸರು. ಭಾರತಾದ್ಯಂತ ಇದರ ವ್ಯಾಪ್ತಿ ಇದೆ. ಇದು ಅಂಡಮಾನ್ ದ್ವೀಪಗಳಲ್ಲೂ ಕಾಣದೊರೆಯುತ್ತದೆ. ಹಿಮಾಲಯದಲ್ಲಿ 1500 ಮೀ ಎತ್ತರದ ವರೆಗಿನ ಪ್ರದೇಶಗಳ ಸಾಲವೃಕ್ಷಗಳ ಕಾಡುಗಳಲ್ಲೂ ದೇಶದ ಉಳಿದೆಡೆ ಶುಷ್ಕ ಹವೆಯಿರುವ ಮೈದಾನ ಇಲ್ಲವೆ ಬೆಟ್ಟಸೀಮೆಗಳ ಮಿಶ್ರಪರ್ಣಪಾತಿ ಕಾಡುಗಳಲ್ಲೂ ಇದನ್ನು ಕಾಣಬಹುದು. ಸುಮಾರು 15–24 ಮೀ ಎತ್ತರಕ್ಕೆ ಬೆಳೆಯುವ ಪರ್ಣಪಾತಿ ಮರವಿದು. ಇದರ ರೆಂಬೆಗಳು ದೃಢವಾಗಿದ್ದು ಚಪ್ಪರದಂತೆ ಅಗಲವಾಗಿ ಹರಡಿಕೊಂಡು ಬೆಳೆಯುತ್ತವೆ. ತೊಗಟೆ ನಯವಾಗಿದೆ; ಇದರ ಬಣ್ಣ ಬೂದು ಇಲ್ಲವೆ ಬಿಳಿ; ಇದು ಆಗಾಗ್ಗೆ ವೃತ್ತಾಕಾರದ ಹಾಳೆಗಳಂತೆ ಸುಲಿದು ಬೀಳುತ್ತದೆ. ಎಲೆಗಳು ಸಂಯುಕ್ತ ಮಾದರಿಯವು; ಸಾಮಾನ್ಯವಾಗಿ ರೆಂಬೆಗಳ ತುದಿಯಲ್ಲಿ ಗುಂಪು ಗುಂಪಾಗಿರುತ್ತವೆ. ಹೂಗಳು ಚಿಕ್ಕ ಗಾತ್ರದವು. ಹಳದಿ ಇಲ್ಲವೆ ನಸು ಊದಾ ಬಣ್ಣದವು; ಏಕಲಿಂಗಿಗಳು. ಗಂಡು ಹೂಗಳು ಸಂಯುಕ್ತ ರೇಸೀಮ್ ಗೊಂಚಲುಗಳಲ್ಲೂ ಹೆಣ್ಣು ಹೂಗಳು ಸರಳ ರೇಸೀಮ್ ಗೊಂಚಲುಗಳಲ್ಲೂ ಸಮಾವೇಶಗೊಂಡಿವೆ. ಫಲ ಅಷ್ಟಿ ಮಾದರಿಯದು. ಇದರ ಬಣ್ಣ ಕೆಂಪು. ಹಣ್ಣಿನೊಳಗೆ ಒಂದೇ ಬೀಜವಿದೆ.

ಗೊಡ್ಡೆ ಮರಳುಶಿಲೆ, ಸುಣ್ಣಕಲ್ಲು, ಜಂಬಿಟ್ಟಿಗೆ (ಲ್ಯಾಟರೈಟ್) ಮುಂತಾದ ಹಲವಾರು ವಿಧದ ಮಣ್ಣಿನಲ್ಲಿ ಬೆಳೆಯಬಲ್ಲುದಾದರೂ ನೀರು ಸರಾಗವಾಗಿ ಬಸಿದು ಹೋಗುವಂಥ ಮೆಕ್ಕಲು ಮಣ್ಣಿನಲ್ಲಿ ಮಾತ್ರ ಬಲು ಉತ್ಕೃಷ್ಟವಾಗಿ ಬೆಳೆಯುತ್ತದೆ. ಈ ಮರ ಹವೆಯ ಶುಷ್ಕತೆಯನ್ನು ಎದುರಿಸಬಲ್ಲುದು. ಆದರೆ ಕಡುಚಳಿಯನ್ನು ತಡೆಯಲಾರದು. ಮರವನ್ನು ಕಡಿದಾಗ ಉಳಿಯುವ ಮೋಟಿನಿಂದ ಬಲುಬೇಗ ಚಿಗುರೊಡೆಯುವುದರಿಂದ ಮತ್ತು ವಿಪುಲವಾಗಿ ಬೇರುಸಸಿಗಳು (ರೂಟ್ ಸಕರ್ಸ್) ಒಡೆಯುವುದರಿಂದ ಗೊಡ್ಡೆ ಒಳ್ಳೆಯ ಕಾಡುಮರ ಅನ್ನಿಸಿಕೊಂಡಿದೆ. ನಿಸರ್ಗದಲ್ಲಿ ಗೊಡ್ಡೆಯ ಸಂತಾನವೃದ್ಧಿ ಬೀಜಗಳಿಂದ ನಡೆಯುತ್ತದೆ. ಬೀಜಪ್ರಸಾರ ಹಕ್ಕಿಗಳ ಮೂಲಕ. ಕೃತಕವಾಗಿ ಗೊಡ್ಡೆಯನ್ನು ಬೀಜಗಳಿಂದಲೇ ಬೆಳೆಸಬಹುದಾದರೂ ಬೀಜಗಳ ಮೊಳೆಯುವ ಸಾಮರ್ಥ್ಯ ಬಹಳ ಕಡಿಮೆಯಾದ್ದರಿಂದ 1–2 ವರ್ಷ ವಯಸ್ಸಾದ ಕಾಂಡತುಂಡುಗಳಿಂದ ವೃದ್ಧಿಸುವುದೇ ವಾಡಿಕೆಯಲ್ಲಿರುವ ಕ್ರಮ. (ಟಿ.ಸಿ.)

ಗೊಡ್ಡೆಯಿಂದ ಸಾಕಷ್ಟು ಗಟ್ಟಿಯಾಗಿರುವ, ಒತ್ತಾದ ಕಣವಿನ್ಯಾಸ ಮತ್ತು ಸಮ ರಚನೆಯುಳ್ಳ ಹಾಗೂ ಹಗುರವಾದ ಚೌಬೀನೆಯನ್ನು ಪಡೆಯಬಹುದು. ಚೌಬೀನೆಗೆ ಜಿಂಗನ್ ಅಥವಾ ಒಡಿಯರ್ ಎಂಬ ವಾಣಿಜ್ಯ ನಾಮವಿದೆ. ಹೊಸದಾಗಿ ಕತ್ತರಿಸಿದಾಗ ಚೌಬೀನೆಯ ಚೇಗುಭಾಗ ನಸುಗೆಂಪಾಗಿದ್ದು ಕಾಲ ಕಳೆದಂತೆ ಕಂದುಮಿಶ್ರಿತ ಕೆಂಪುಬಣ್ಣವನ್ನು ತಳೆಯುತ್ತದೆ. ರಸಕಾಷ್ಠ ಮೊದಲಿಗೆ ಬಿಳಿ ಇಲ್ಲವೆ ನಸುಹಳದಿ ಬಣ್ಣಕ್ಕಿದ್ದು ಬರಬರುತ್ತ ಕಂದು ಮಿಶ್ರಿತ ಬೂದಿಬಣ್ಣಕ್ಕೆ ತಿರುಗುತ್ತದೆ. ಚೌಬೀನೆಯನ್ನು ಸಂಸ್ಕರಿಸುವುದು ಕೊಂಚ ಕಷ್ಟ. ಅಲ್ಲದೆ ಇದಕ್ಕೆ ಬಹಳ ಕಾಲ ಹಿಡಿಯುತ್ತದೆ. ಚೇಗು ಮತ್ತು ರಸಕಾಷ್ಠಗಳು ಏಕಕಾಲದಲ್ಲಿ ಒಣಗದೆ ಇರುವುದೂ ಒಣಗುವಾಗ ಇವುಗಳ ತುದಿಭಾಗಗಳು ಸೀಳುವುದೂ ರಸಕಾಷ್ಠ ಬಲುಬೇಗ ಕೀಟಗಳ ಹಾವಳಿಗೆ ತುತ್ತಾಗುವುದೂ ಸಂಸ್ಕರಣೆಯಲ್ಲಿನ ತೊಂದರೆಗೆ ಕಾರಣ. ಆದರೂ ಗರಗಸದಿಂದ ಸರಾಗವಾಗಿ ಕೊಯ್ಯಬಹುದಾದ್ದರಿಂದ ಮತ್ತು ಇದು ಮರಗೆಲಸಗಳಿಗೆ ಸುಲಭವಾಗಿ ಮಣಿಯುವುದರಿಂದ, ಚೌಬೀನೆಯನ್ನು ಮನೆ ಕಟ್ಟಡಗಳಿಗೆ, ಪೆಟ್ಟಿಗೆ, ಪೀಠೋಪಕರಣ, ಗಾಣದ ಸಾಮಾನುಗಳು, ಅಕ್ಕಿಕೊಟ್ಟಣ, ನೇಗಿಲು ನೊಗ, ಬ್ರಷ್ ಹಿಡಿ, ಮರದ ಹೂಜಿ, ಪೀಪಾಯಿ, ಆಸರೆಗಂಬ, ಮೋಚಿಯಚ್ಚು, ದೋಣಿ, ಬಾಚಣಿಗೆ ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದರಿಂದ ಪ್ಲೈವುಡ್, ಚಹಾ ಪೆಟ್ಟಿಗೆ, ಪೆನ್ಸಿಲ್ ಮತ್ತು ಸ್ಲೇಟುಗಳ ಚೌಕಟ್ಟು, ದಾರ, ಹುರಿ, ಮುಂತಾದವನ್ನು ಸುತ್ತಿಡುವ ಉರುಳೆಗಳು, ರೈಲ್ವೆ ಸ್ಲೀಪರುಗಳು ಮತ್ತು ಬೆಂಕಿಕಡ್ಡಿ ಮೊದಲಾದವನ್ನೂ ತಯಾರಿಸಬಹುದು. ಮೇಲೆ ಹೇಳಿದ ಕೆಲಸಗಳಿಗೆ ಬಾರದ ಕೆಳದರ್ಜೆಯ ಮರವನ್ನು ಸೌದೆಯಾಗಿ ಬಳಸಬಹುದು. ಗೊಡ್ಡೆಮರದಲ್ಲಿ ಸೂಕ್ತ ಪ್ರಮಾಣದಲ್ಲಿ ಸೆಲ್ಯುಲೋಸ್ ಶೇ. 53.37, ಲಿಗ್ನಿನ್ ಶೇ. 24.11, ಪೆಂಟೋಸಾನುಗಳು ಶೇ. 15.40 ಇರುವುದರಿಂದ ಇದನ್ನು ಬಿದಿರಿನೊಂದಿಗೆ ಮಿಶ್ರಿಸಿ ಕಾಗದ ತಯಾರಿಕೆಯಲ್ಲೂ ಬಳಸಬಹುದಾಗಿದೆ.

ಗೊಡ್ಡೆಮರದಿಂದ ಹಳದಿ ಬಣ್ಣದ ಗೋಂದು ದೊರೆಯುತ್ತದೆ. ಅರ್ಯಾಬಿಕ್ ಗೋಂದನ್ನು ಹೋಲುವ ಇದು ಅದರಂತೆಯೆ ನೀರಿನಲ್ಲಿ ಸುಲಭವಾಗಿ ಕರಗುತ್ತದೆ. ಆದರೆ ಗೊಡ್ಡೆಮರದ ಗೋಂದಿಗೆ ಸ್ನಿಗ್ಧತೆ ಕಡಿಮೆ. ಇದನ್ನು ಕ್ಯಾಲಿಕೊ ಮುದ್ರಣ, ಶಾಯಿ ಮತ್ತು ಕೆಳದರ್ಜೆಯ ಮೆರುಗೆಣ್ಣೆಗಳ ತಯಾರಿಕೆ. ಮೀನುಬಲೆಗಳ ರಕ್ಷಣೆ, ಮಿಠಾಯಿ ತಯಾರಿಕೆ ಮೊದಲಾದ ಕಾರ್ಯಗಳಿಗೆ ಬಳಸುತ್ತಾರೆ. ಅಲ್ಲದೆ ಗೋಂದನ್ನು ಆಲ್ಕೊಹಾಲಿನಿಂದ ಶುದ್ಧೀಕರಿಸಿ ಕಬ್ಬಿನ ರಸವನ್ನು ಸ್ವಚ್ಛಗೊಳಿಸಲು ಉಪಯೋಗಿಸುವುದುಂಟು. ಗೊಡ್ಡೆಮರದ ತೊಗಟೆಯಲ್ಲಿ ಫ್ಲೋಬ ಟ್ಯಾನಿನ್ ಎಂಬ ವಿಶೇಷ ವಸ್ತುವಿರುವುದರಿಂದ ತೊಗಟೆಯನ್ನು ಚರ್ಮ ಹದಗೊಳಿಸುವುದಕ್ಕೆ ಉಪಯೋಗಿಸುತ್ತಾರೆ. ತೊಗಟೆಯ ರಸವನ್ನು ಹತ್ತಿ ಮತ್ತು ಸಿಲ್ಕ್ ಬಟ್ಟೆಗಳಿಗೆ, ಕಂದಿನಿಂದ ಕಪ್ಪು ಬಣ್ಣದವರೆಗಿನ ಬಣ್ಣ ಕೊಡಲು ಬಳಸುತ್ತಾರೆ.

ಗೊಡ್ಡೆಮರಕ್ಕೆ ಔಷಧೀಯ ಗುಣಗಳೂ ಉಂಟು. ಇದರ ತೊಗಟೆಯ ಕಷಾಯವನ್ನು ತರಚುಗಾಯ, ವ್ರಣ, ಕಣ್ಣುಹುಣ್ಣು ಮೊದಲಾದವುಗಳಿಗೆ ಬಳಸುವುದುಂಟು. ಗೋಂದನ್ನು ಉಬ್ಬಸಕ್ಕೆ ಉಪಯೋಗಿಸುವುದಿದೆ. ಎಲೆಗಳನ್ನು ಕುದಿಸಿ ಉಳುಕು, ತರಚುಗಾಯ, ಬಾವು ಮುಂತಾದವುಗಳಿಗೆ ಬೆಚ್ಚಾರವಾಗಿ ಲೇಪಿಸುತ್ತಾರೆ. *

**ಗೊಡ್ಲೆ ಮೀನು :** ಸೈಲ್ಯೂರಿಫಾರ್ಮೀಸ್ ಗಣದ ಸೈಲ್ಯೂರಿಡೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಸಿಹಿನೀರು ಮೀನಿಗಿರುವ ಸಾಮಾನ್ಯ ಹೆಸರು. ಓಂಪಾಕ್ ಬೈಮ್ಯಾಕ್ಯುಲೇಟಸ್ ಇದರ ವೈಜ್ಞಾನಿಕ ನಾಮ. ಮೀಸೆ ಮೀನು (ಕ್ಯಾಟ್ ಫಿಶ್) ಗಳ ಹತ್ತಿರದ ಸಂಬಂಧಿ. ದೊಮ್ಮೆ ಮೀನು ಪರ್ಯಾಯ ನಾಮ. ಏಷ್ಯದ ಅಫ್ಘಾನಿಸ್ತಾನದಿಂದ ಹಿಡಿದು ಚೀನ, ಭಾರತ, ಥೈಲೆಂಡ್ ದೇಶಗಳಲ್ಲಿ ಕಂಡುಬರುತ್ತದೆ. ಇದು ಭಾರತಾದ್ಯಂತ ಕಾಣಬರುತ್ತದೆ. ಕರ್ನಾಟಕದ ಕಾವೇರಿ ನದಿಯಲ್ಲಿ, ಅನೇಕ ಕೆರೆಗಳಲ್ಲಿ ಕಂಡುಬರುತ್ತದೆ. ಗರಿಷ್ಠ 30 ಸೆಂಮೀ ವರೆಗೆ ಬೆಳೆಯುವ ಮಧ್ಯಮ ಗಾತ್ರದ ಮೀನು. ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾದ ದೇಹ, ಎರಡು ಜೊತೆ ಮೀಸೆಗಳು, ಇವುಗಳಲ್ಲಿ ಒಂದು ಜೊತೆ ಗುದದ್ವಾರದ ಈಜುರೆಕ್ಕೆಯವರೆಗೂ ಚಾಚುವಂತಿರುವುದು, ಎದೆಯ ಈಜುರೆಕ್ಕೆಯ ಮೇಲ್ಭಾಗದಲ್ಲಿರುವ ಕಪ್ಪು ಮಚ್ಚೆ, ಕಪ್ಪು ಬಣ್ಣದ ಪಟ್ಟೆಗಳು ಮತ್ತು ಕಪ್ಪು ಅಂಚುಳ್ಳ ಗುದದ ಈಜು ರೆಕ್ಕೆ, ಕವಲೊಡೆದ ಬಾಲದ ಈಜು ರೆಕ್ಕೆ, ಇವು ಬೆಳ್ಳಿ ಬಣ್ಣದ ಗೊಡ್ಲೆ ಮೀನಿನ ಪ್ರಮುಖ ಗುಣಲಕ್ಷಣಗಳು.

ಗೊಡ್ಲೆ ಮೀನಿನ ಆಹಾರ ಪ್ರಧಾನವಾಗಿ ನೀರಿನಲ್ಲಿರುವ ಚಿಗಟಗಳು, ಸಣ್ಣ ಮೃದ್ವಂಗಿಗಳು, ಕಠಿಣ ಚರ್ಮಿಗಳು, ಇತರೆ ಬಗೆಯ ಮೀನುಗಳು, ಇತ್ಯಾದಿ. ಇದರ ಸಂತಾನೋತ್ಪತ್ತಿಯ ಕಾಲ ಜೂನ್ ನಿಂದ ಆಗಸ್ಟ್ ವರೆಗೆ. ಇದು ಇತರೆ ಮೀನುಗಳಿಗೆ ಮಾರಕವಾದ್ದರಿಂದ ಈ ಮೀನು ಸಾಕಲು ಯೋಗ್ಯವಾಗಿಲ್ಲ. ಆದರೆ ಇದರ ಮಾಂಸ ರುಚಿಯಾಗಿರುವುದರಿಂದ ಇದಕ್ಕೆ ಹೆಚ್ಚು ಬೇಡಿಕೆ ಇದ್ದೇ ಇದೆ. ದಾವಣಿ ಬಲೆಗಳು, ಎಸೆ ಬಲೆಗಳ ಸಹಾಯದಿಂದ ಈ ಮೀನುಗಳನ್ನು ಹಿಡಿಯುತ್ತಾರೆ. (ಬಿ.ಎನ್.)

**ಗೊದಮೊಟ್ಟೆ :** ಮೊಟ್ಟೆಯಿಂದ ಹೊರ ಬಂದು, ಕೆಲ ಕಾಲ ನೀರಿನಲ್ಲಿ ವಾಸಿಸುವ ಮರಿ ಕಪ್ಪೆಗಳಿಗೆ ಗೊದ ಮೊಟ್ಟೆ ಎನ್ನುವರು. ಇವು ಬಾಲ ಹೊಂದಿದ್ದು, ಕಿವಿರುಗಳಿಂದ ಉಸಿರಾಡುತ್ತವೆ. ವಾತಾವರಣದಲ್ಲಿನ ಉಷ್ಣಾಂಶ ಕಪ್ಪೆಗಳು ಮೊಟ್ಟೆಯಿಡುವ ಕಾಲವನ್ನು ನಿರ್ಧರಿಸುತ್ತದೆ. ಕಪ್ಪೆಗಳು ನೀರಿನಲ್ಲಿ ಜೊಂಡಿನ ಮಧ್ಯೆ, ಕೊಚ್ಚೆಯ ಕಾಲುವೆಗಳಲ್ಲಿ ಮೊಟ್ಟೆಯಿಡುತ್ತವೆ. ಗಂಡು ಹೆಣ್ಣುಗಳ ಸಂಭೋಗ ನಡೆಸಿ, 3–4 ದಿನಗಳ ಅನಂತರ, ಹೆಣ್ಣು ಕಪ್ಪೆ ಮೊಟ್ಟೆಗಳನ್ನಿಡಲು ಪ್ರಾರಂಭಿಸುತ್ತದೆ. ಗರ್ಭಧರಿಸಿದ 8–10 ದಿನಗಳ ಅನಂತರ, ಮೊಟ್ಟೆಯಿಂದ ಮರಿ ಹೊರಬರುತ್ತದೆ. ಮರಿಗಳು ಪ್ರೌಢ ಕಪ್ಪೆಯಂತೆ ಇರುವುದಿಲ್ಲ. ಇವುಗಳಿಗೆ ಕಣ್ಣು, ಬಾಯಿ, ಕಿವಿರು, ಕಾಲುಗಳು ಇರುವುದಿಲ್ಲ. ತಲೆ ಕಳಗೆ ಅರ್ಧಚಂದ್ರಾಕಾರದ ಹೀರು ಬಟ್ಟಲಿರುತ್ತದೆ. ಇದರಿಂದ ಒಂದು ರೀತಿಯ ಅಂಟು ದ್ರವ ಉತ್ಪತ್ತಿಯಾಗುತ್ತದೆ. ಇದರ ನೆರವಿನಿಂದ ಕಪ್ಪೆ ಮರಿಗಳು ಜೊಂಡಿಗೆ ತಗುಲಿಕೊಂಡು ನೇತಾಡುತ್ತವೆ. ಬೆಳವಣಿಗೆಯಾದಂತೆ, ಬಾಯಿ, ಕಣ್ಣುಗಳು ಬೆಳೆಯುತ್ತವೆ.

ತಲೆಯ ಎರಡು ಕಡೆ ಕಿವಿರುಗಳು ಬೆಳೆಯುತ್ತವೆ. ಇವೇ ಶ್ವಾಸಾಂಗಗಳು ಬಾಯೊಳಗೆ ಕೊಂಬಿನಿಂದಾದ ಹಲವು ಸಾಲು ಹಲ್ಲುಗಳಿರುತ್ತವೆ. ಈ ಹಲ್ಲುಗಳ ಸಹಾಯದಿಂದ ಮರಿಗಳು ಮೃದುವಾದ ಸಸ್ಯ ಪದಾರ್ಥಗಳನ್ನು ತಿನ್ನುತ್ತವೆ. ದೇಹದೊಳಗೆ ಸುರುಳಿಯಾಕಾರದ ಕರುಳು ಬೆಳೆಯುತ್ತದೆ. ಬಾಲದ ಭಾಗವು ಬೆಳೆದಂತೆಲ್ಲ ಅರ್ಧಚಂದ್ರಾಕಾರದ ಹೀರು ಬಟ್ಟಲು ನಶಿಸಿ ಹೋಗುತ್ತದೆ. ಕ್ರಮೇಣ ಕಿವಿರುಗಳ ಮೇಲೆ ಚರ್ಮದ ಹೊದಿಕೆ ಬೆಳೆಯುತ್ತದೆ. ಬೆಳವಣಿಗೆಯು ಮುಂದುವರೆಯುತ್ತಾ, ಹೊರಕಿವಿರುಗಳು ನಶಿಸಿ, ಒಳ ಕಿವಿರುಗಳು ರೂಪುಗೊಳ್ಳುತ್ತವೆ. ಈ ಕಿವಿರುಗಳು ಹೊರ ಚರ್ಮದಿಂದ ರೂಪುಗೊಳ್ಳುತ್ತವೆ.

ಲಾರ್ವ ರೂಪ ಪರಿವರ್ತನೆ ಪ್ರಾರಂಭಿಸಿದಾಗ ಗೊದಮೊಟ್ಟೆ ಹಂತ ಮುಗಿಯುತ್ತದೆ. ರೂಪ ಪರಿವರ್ತನೆಯಾಗುವಾಗ, ಗೊದಮೊಟ್ಟೆ ರಚನೆಯಲ್ಲಿ ಕೆಲವು ಬದಲಾವಣೆಗಳಾ ಗುತ್ತವೆ. ಈ ಎಲ್ಲ ಬದಲಾವಣೆಗಳಿಗೆ ಥೈರಾಯ್ಡ್ ಗ್ರಂಥಿ ಸ್ರವಿಸುವ ಚೋದಕದಿಂದಾಗುವ ಕ್ರಿಯೆ ಕಾರಣ. ಗೊದಮೊಟ್ಟೆ ರೂಪ ಪರಿವರ್ತನೆಯ ಕೊನೆಯಲ್ಲಿ ಬಾಲ ನಶಿಸುತ್ತದೆ. ಇದಕ್ಕೆ ಲೈಸೋಸೋಮ್‌ನಲ್ಲಿ ಉತ್ಪತ್ತಿಯಾಗುವ ಹೈಡ್ರೋಲೈಟಿಕ್ ಕಿಣ್ವವೇ ಕಾರಣ. (ಎಸ್.ಆರ್.ಎಸ್.)

**ಗೊದ್ದ :** ಇನ್ಸೆಕ್ಟ ವರ್ಗದ ಫಾರ್ಮಿಸಿಡೀ ಕುಟುಂಬಕ್ಕೆ ಸೇರಿದ ಒಂದು ಕೀಟ. ಇರುವೆಗಳಿಗೆ ಹತ್ತಿರ ಸಂಬಂಧಿ. ಇದು ಸಾಮಾನ್ಯವಾಗಿ ಮರದ ತುಂಡು ಮತ್ತು ದಿಮ್ಮಿಗಳ ಪೊಟರೆಗಳಲ್ಲಿ ಗೂಡುಮಾಡಿಕೊಂಡು ದೊಡ್ಡ ಗುಂಪುಗಳಲ್ಲಿ ವಾಸಿಸುತ್ತದೆ. ಕೆಲವೊಮ್ಮೆ ಹಸಿ ಮರಗಳಲ್ಲಿ ಇರಬಹುದಾದ ಗಾಯಗಳ ಮೂಲಕ ಮರದೊಳಕ್ಕೆ ಪ್ರವೇಶಿಸಿ ವಾಸಮಾಡತೊಡಗುವುದುಂಟು. ಸತ್ತ ಇತರ ಕೀಟಗಳು ಮತ್ತು ಕೆಲವು ಗಿಡಗಳ ಎಲೆಗಳ ಮೇಲೆ ಗಿಡಹೇನುಗಳು ಸ್ರವಿಸುವ ಸಿಹಿಯಾದ ಅಂಟು ಪದಾರ್ಥ– ಇವೇ ಗೊದ್ದದ ಆಹಾರ. ಅನೇಕ ವೇಳೆ ಮನೆಗಳೊಳಕ್ಕೆ ಬಂದು ಸಕ್ಕರೆಗೂ ಮುತ್ತುವುದುಂಟು. ಗೊದ್ದಗಳ ಒಂದು ಹಿಂಡಿನಲ್ಲಿ ಸಾಮಾನ್ಯವಾಗಿ ಒಂದು ರಾಣಿ, ಹಲವಾರು ದೊಡ್ಡ ಹಾಗೂ ಚಿಕ್ಕ ಕೆಲಸಗಾರ ಗೊದ್ದಗಳು ಮತ್ತು ಅನಿಷೇಚನ ರೀತಿಯಲ್ಲಿ ಬೆಳೆದ ಗಂಡು ಗೊದ್ದಗಳು ಇರುತ್ತವೆ. ದೊಡ್ಡ ಗುಂಪುಗಳಲ್ಲಿ ನಿಯಮಿತ ಲೈಂಗಿಕ ಕಾರ್ಯ ನಿರ್ವಹಿಸುವ ಮತ್ತು ರೆಕ್ಕೆಯುಳ್ಳ ಗಂಡು ಹಾಗೂ ಹೆಣ್ಣು ಗೊದ್ದಗಳು ಕಾಣಸಿಗುತ್ತವೆ. ಆದರೆ ಇವು ಅನುಕೂಲ ಪರಿಸ್ಥಿತಿಯಲ್ಲಿ ಮಾತ್ರ ಕೊಂಚ ಕಾಲ ಹಾರಾಡುತ್ತಿದ್ದು ಕೊನೆಗೆ ಸಂಭೋಗ ಕ್ರಿಯೆಯಲ್ಲಿ ತೊಡಗುತ್ತವೆ. ಗರ್ಭ ಧರಿಸಿದ ಹೆಣ್ಣು ಗೊದ್ದ ಹೊಸ ಗೂಡು ಮಾಡಲು ಸೂಕ್ತವಾದ ಮರವನ್ನೇರಿ ಅದನ್ನು ಕೊರೆದು ಒಳಗೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಡುವ ಮುನ್ನ ಅದರ ರೆಕ್ಕೆಗಳು ಕಳಚಿಬೀಳುತ್ತವೆ. ಮೊಟ್ಟೆಗಳು ಒಡೆದು ಮರಿ ಹುಳುಗಳು ಹೊರಬರುತ್ತವೆ. ತಾಯಿ ಗೊದ್ದ ತನ್ನ ದೇಹದಿಂದ ಸ್ರವಿಸುವ ವಸ್ತುಗಳಿಂದ ಮರಿಹುಳುಗಳನ್ನು ಪೋಷಿಸುತ್ತದೆ. 2–3 ತಿಂಗಳುಗಳಲ್ಲಿ ಇವು ಕೆಲಸಗಾರ ಇರುವೆಗಳಾಗಿ ಬೆಳೆಯುತ್ತವೆ. ಭಾರತ ಮತ್ತು ಪಾಕಿಸ್ತಾನಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಗೊದ್ದ ಕ್ಯಾಂಪೊನೋಟಸ್ ಕಂಪ್ರೆಸಸ್ ಎಂಬುದು. ಅರಗಿನ ಕೀಟದ ಶತ್ರುಗಳನ್ನು ತಿಂದು ಹಾಕುವುದರಿಂದ ಇದು ಅರಗಿನ ಉತ್ಪಾದನೆಗೆ ಸಹಕಾರಿಯೆನ್ನಲಾಗಿದೆ. (ಕೆ.ಜಿ.ಎನ್.)

**ಗೊದ್ದನಮರ :** ಬರ್ಸರೇಸೀ ಕುಟುಂಬಕ್ಕೆ ಸೇರಿದ ಒಂದು ಕಾಡುಮರ. ಅರೆನೆಲ್ಲಿ, ಬೋಳಮಟೆ, ಹಾಲಉಲಿಗೆ ಇದರ ಪರ್ಯಾಯ ನಾಮಗಳು. ಗಾರುಗ ಪಿನೇಟ ವೈಜ್ಞಾನಿಕ ಹೆಸರು. ಭಾರತಾದ್ಯಂತ ಮಿಶ್ರಪರ್ಣಪಾತಿ ಕಾಡುಗಳಲ್ಲಿ ತೇಗ ಮತ್ತು ಸಾಲ ವೃಕ್ಷಗಳ ಜೊತೆಯಲ್ಲಿ ಕಂಡುಬರುತ್ತದೆ. ಆಗ್ನೇಯ ಏಷ್ಯ ಮತ್ತು ಪೆಸಿಫಿಕ್ ಸಾಗರದ ಕೆಲವು ದ್ವೀಪಗಳಲ್ಲೂ ಇದರ ವ್ಯಾಪ್ತಿಯಿದೆ. ಸುಮಾರು 15 ಮೀ ಎತ್ತರಕ್ಕೆ ಬೆಳೆಯುವ ಮರ ಇದು. ಮುಖ್ಯ ಕಾಂಡವೇ ಸುಮಾರು 8 ಮೀ ಇದ್ದು ನೇರವಾಗಿ ಉರುಳೆಯಂತೆ ಬೆಳೆಯುತ್ತದೆ. ಮರದ ತೊಗಟೆ ಬೂದಿಮಿಶ್ರಿತ ಕಂದುಬಣ್ಣದ್ದು. ಆಗಿಂದಾಗ್ಗೆ ತೊಗಟೆ ಹಾಳೆಗಳಂತೆ ಕಳಚಿ ಬೀಳುತ್ತದೆ. ಎಲೆಗಳು ಸಂಯುಕ್ತ ಮಾದರಿಯವು; ಕೆಲವು ವೇಳೆ ಎಲೆಗಳ ಮೇಲೆ ಕೆಂಪುಬಣ್ಣದ ಗಂಟುಗಳನ್ನು ಗಮನಿಸಬಹುದು. ಹೂಗಳು ಹಳದಿ ಅಥವಾ ಹಸಿರುಮಿಶ್ರಿತ ಬಿಳಿಬಣ್ಣದವು; ಏಕಲಿಂಗಿಗಳಾಗಿರಬಹುದು ಇಲ್ಲವೆ ದ್ವಿಲಿಂಗಿಗಳಾಗಿರಬಹುದು. ಒಂದೇ ಮರದಲ್ಲಿ ಎರಡು ಬಗೆಗಳೂ ಇವೆ. ಹಣ್ಣು ಅಷ್ಠಿಫಲ ಮಾದರಿಯದು; ಆಕಾರ ಗುಂಡಗೆ; ಬಣ್ಣ ಹಳದಿಮಿಶ್ರಿತ ಹಸುರು ಬಣ್ಣದಿಂದ ಕಪ್ಪು ಬಣ್ಣದವರೆಗೂ ವ್ಯತ್ಯಾಸವಾಗುತ್ತದೆ. ಹಣ್ಣಿನಲ್ಲಿ 3–4 ಬೀಜಗಳಿರುತ್ತವೆ.

ಗೊದ್ದನಮರಕ್ಕೆ ಹೆಚ್ಚು ಬಿಸಿಲು ಬೇಕು. ಇದು ಕಡುಚಳಿಯನ್ನಾಗಲೀ ಶುಷ್ಕತೆಯನ್ನಾಗಲೀ ಸಹಿಸುವುದಿಲ್ಲ. ಆದರೆ ಕಾಳ್ಗಿಚ್ಚಿಗೆ ಬೇಗನೆ ತುತ್ತಾಗುವುದಿಲ್ಲ. ಮರವನ್ನು ಕಡಿದು ಹಾಕಿದಾಗ ಉಳಿಯುವ ಮೋಟಿನಿಂದ ಬೇಗನೆ ಚಿಗುರುತ್ತದೆ. ಅಲ್ಲದೆ ಯಥೇಚ್ಛವಾಗಿ ಬೇರುಸಸಿಗಳನ್ನೂ ಉತ್ಪಾದಿಸುತ್ತದೆ. ಇದರ ಸ್ವಾಭಾವಿಕ ಪುನರುತ್ಪತ್ತಿ ಬೀಜಗಳ ಮೂಲಕ. ಪ್ರತಿವರ್ಷ ಮಳೆಗಾಲದ ವೇಳೆಗೆ ಇದರ ಹಣ್ಣುಗಳು ಮಾಗಿ ನೆಲಕ್ಕೆ ಬಿದ್ದು ಬಿರಿಯುತ್ತವೆ. ಒಳಗಿನ ಬೀಜಗಳು ಮರು ವರ್ಷದ ಮಳೆಗಾಲದಲ್ಲಿ ಮೊಳೆತು ಸಸಿಗಳಾಗುತ್ತವೆ. ಗೊದ್ದನಮರವನ್ನು ಕೃತಕವಾಗಿ ವೃದ್ಧಿಸಲು ಬೀಜಗಳನ್ನೇ ಬಳಸಬಹುದಾದರೂ ಬೀಜಗಳು ಮೊಳೆಯಲು ಒಂದು ವರ್ಷ ಬೇಕಾಗುತ್ತದಲ್ಲದೆ ಸಸಿಗಳ ಬೆಳವಣಿಗೆ ನಿಧಾನವಾದ್ದರಿಂದ ಕಾಂಡ ತುಂಡುಗಳನ್ನು ನೆಟ್ಟು ಬೆಳೆಸುವುದೇ ವಾಡಿಕೆಯಲ್ಲಿರುವ ಮತ್ತು ಸೂಕ್ತವಾದ ಕ್ರಮವಾಗಿದೆ. ಇಂಥ ಗಿಡಗಳು ಶೀಘ್ರಗತಿಯಲ್ಲಿ ಬೆಳೆಯುತ್ತವೆ.

ಗೊದ್ದನಮರದ ಚೌಬೀನೆಯ ರಸಕಾಷ್ಠ ಬಿಳಿಯಬಣ್ಣದ್ದು. ಚೇಗು ಕೆಂಪುಮಿಶ್ರಿತ ಕಂದು ಬಣ್ಣದ್ದು. ಚೇಗು ಗಟ್ಟಿಯಾಗಿದೆ. ಚೌಬೀನೆಯನ್ನು ಗಾಳಿಯ ಸಹಾಯದಿಂದ ಒಣಗಿಸಬಹುದಾದರೂ ರಸಕಾಷ್ಠ ಸುಲಭವಾಗಿ ಒಣಗದು. ಇದರಿಂದಾಗಿ ರಸಕಾಷ್ಠವನ್ನು ಸೂಕ್ತ ವಿಧಾನಗಳಿಂದ ಸಂಸ್ಕರಿಸಬೇಕು. ಚೌಬೀನೆಯನ್ನು ಸುಲಭವಾಗಿ ಗರಗಸದಿಂದ ಕೊಯ್ಯಬಹುದು. ಅಲ್ಲದೆ ಇದು ಮರಗೆಲಸಗಳಿಗೆ ಒಗ್ಗುತ್ತದೆ. ಚೇಗಿನಿಂದ ಪೀಠೋಪಕರಣಗಳನ್ನು ತಯಾರಿಸಬಹುದು. ಸಣ್ಣ ದೋಣಿ, ಮರದ ಹಲಗೆ, ಪೆಟ್ಟಿಗೆ, ಪೀಪಾಯಿ, ಪ್ಲೈವುಡ್, ಮನೆಕಟ್ಟಲು ಬೇಕಾಗುವ ಮರದ ವಸ್ತುಗಳು ಮುಂತಾದವನ್ನು ತಯಾರಿಸಲು ಚೌಬೀನೆಯನ್ನು ಉಪಯೋಗಿಸುತ್ತಾರೆ. ಕೆಳದರ್ಜೆಯ ಪೆನ್ಸಿಲುಗಳು ಹಾಗೂ ಬೆಂಕಿಪೊಟ್ಟಣದ ತಯಾರಿಕೆಗೆ ಸಹ ಬಳಸುವುದುಂಟು. ಇದರಿಂದ ಒಳ್ಳೆಯ ದರ್ಜೆಯ ಇದ್ದಲನ್ನೂ ಪಡೆಯಬಹುದು. ಗೊದ್ದನಮರದ ತಿರುಳನ್ನು ಗೊಡ್ಡೆಮರದ ತಿರುಳಿನೊಂದಿಗೆ ಸೇರಿಸಿ ಕಂದುಬಣ್ಣದ ಕಾಗದವನ್ನು ತಯಾರಿಸಲು ಬಳಸುತ್ತಾರೆ.

ಗೊದ್ದನಮರದ ಹಣ್ಣುಗಳನ್ನು ಹಸಿಯಾಗಿ, ಬೇಯಿಸಿ ಹಾಗೂ ಉಪ್ಪಿನಕಾಯಿ ರೂಪದಲ್ಲಿ ತಿನ್ನಬಹುದು. ಹುಳಿಯಾಗಿರುವ ಇವಕ್ಕೆ ತಂಪುಕಾರಕ ಹಾಗೂ ಜೀರ್ಣಕಾರಕ ಗುಣಗಳಿವೆ. ಎಲೆಯ ರಸವನ್ನು ಜೇನು ಹಾಗೂ ಇತರ ವಸ್ತುಗಳೊಡನೆ ಉಬ್ಬಸ ನಿವಾರಣೆಗೆ ಬಳಸುತ್ತಾರೆ. ಫಿಲಿಪೀನ್ಸಿನಲ್ಲಿ ಇದರ ಬೇರಿನ ಕಷಾಯವನ್ನು ಪುಪ್ಪುಸ ಸಂಬಂಧವಾದ ರೋಗಗಳ ಚಿಕಿತ್ಸೆಯಲ್ಲಿ ಬಳಸುವುದಿದೆ. ಇದರ ಎಲೆಗಳು ಹಾಗೂ ಎಳೆ ಚಿಗುರುಗಳು ದನಕರುಗಳಿಗೆ ಒಳ್ಳೆಯ ಮೇವು. ಮರದ ತೊಗಟೆ ಹಾಗೂ ಎಲೆಯ ಮೇಲಿನ ಗಂಟುಗಳನ್ನು ಚರ್ಮ ಹದ ಮಾಡಲು ಉಪಯೋಗಿಸುತ್ತಾರೆ. ಗೊದ್ದನಮರಕ್ಕೆ ಬೆಂಕಿಯನ್ನು ನಿರೋಧಿಸುವ ಸಾಮರ್ಥ್ಯವಿರುವುದರಿಂದ ಮತ್ತು ಈ ಮರ ಸುಲಭವಾಗಿ ಬೆಳೆಯುವುದರಿಂದ ಇದನ್ನು ಅರಣ್ಯ ವೃದ್ಧಿಗೆ ಉಪಯೋಗಿಸುತ್ತಾರೆ. (ಕೆ.ಜಿ.ಎ.)

**ಗೊಬ್ಬರ :** ಸಸ್ಯಕ್ಕೆ ಅವಶ್ಯವಿರುವ ಯಾವುದೋ ಒಂದು ಅಥವಾ ಅಧಿಕ ಪೋಷಕಗಳನ್ನು ಒದಗಿಸುವ ಉದ್ದೇಶದಿಂದ ಮತ್ತು ಅಗತ್ಯವಿದ್ದಲ್ಲಿ ಮಣ್ಣಿನ ಭೌತಗುಣವನ್ನು ಉತ್ತಮಗೊಳಿಸುವ ಸಲುವಾಗಿ ಉಪಯೋಗಿಸುವ ಪದಾರ್ಥ. ಸಸ್ಯದ ಉತ್ತಮ ಬೆಳವಣಿಗೆಗೆ ಹಲವಾರು ಮೂಲವಸ್ತುಗಳು ಅವಶ್ಯ. ಇವುಗಳ ಪೈಕಿ ಕೆಲವನ್ನು ಅದು ಮಣ್ಣಿನಿಂದಲೂ ಉಳಿದವನ್ನು ನೀರು ಮತ್ತು ವಾಯುವಿನಿಂದಲೂ ಪಡೆಯುತ್ತದೆ. ಈ ಮೂಲವಸ್ತುಗಳಿಗೆ ಸಸ್ಯಪೋಷಕಗಳು (ಪ್ಲಾಂಟ್ ನ್ಯೂಟ್ರಿಯೆಂಟ್ಸ್) ಎಂದು ಹೆಸರು. ಇವನ್ನು ಪ್ರಧಾನ ಸಸ್ಯಪೋಷಕಗಳು ಮತ್ತು ಗೌಣ ಸಸ್ಯಪೋಷಕಗಳು ಎಂಬುದಾಗಿ ವಿಭಾಗಿಸಬಹುದು. ಕಾರ್ಬನ್, ಹೈಡ್ರೊಜನ್, ಆಕ್ಸಿಜನ್, ನೈಟ್ರೊಜನ್, ಫಾಸ್ಫರಸ್, ಪೊಟ್ಯಾಸಿಯಮ್, ಸಲ್ಫರ್, ಕ್ಯಾಲ್ಸಿಯಮ್ ಮತ್ತು ಮೆಗ್ನೀಸಿಯಮ್ ಪ್ರಧಾನ ಸಸ್ಯಪೋಷಕಗಳು. ಕಬ್ಬಿಣ, ಮ್ಯಾಂಗನೀಸ್, ಬೊರಾನ್, ಸತು, ತಾಮ್ರ ಮತ್ತು ಮಾಲಿಬ್ಡಿನಮ್ ಗೌಣ ಸಸ್ಯಪೋಷಕಗಳು. ಪೋಷಕಗಳ ಪೈಕಿ ಹೆಚ್ಚಿನವು ಮಣ್ಣಿನಿಂದಲೇ ಸಸ್ಯಕ್ಕೆ ಒದಗುತ್ತವೆ. ಆದರೆ ಮಣ್ಣಿನಲ್ಲಿ ಇವು ಸಾಕಷ್ಟು ಪರಿಮಾಣದಲ್ಲಿ ಇಲ್ಲದಾಗ

ಅಥವಾ ಹಾಗಿರುವಾಗಲೂ ಸಸ್ಯ ಇವನ್ನು ಹೀರುವ ಸ್ಥಿತಿಯಲ್ಲಿ ಇಲ್ಲದಾಗ ಸಸ್ಯಾವಶ್ಯಕತೆಗಳನ್ನು ಪೂರೈಸಲು ಗೊಬ್ಬರವನ್ನು ಬಳಸಬೇಕಾಗುತ್ತದೆ.

ಗೊಬ್ಬರದಲ್ಲಿ ಎರಡು ಬಗೆ–ಸಾವಯವ (ಆರ್ಗ್ಯಾನಿಕ್) ಗೊಬ್ಬರ, ಕೃತಕ ಇಲ್ಲವೇ ನಿರವಯವ (ಇನಾರ್ಗ್ಯಾನಿಕ್) ಗೊಬ್ಬರ. ಇವುಗಳ ಮುಖ್ಯಲಕ್ಷಣ ವ್ಯತ್ಯಾಸಗಳನ್ನು ಮುಂದೆ ಪಟ್ಟಿ ಮಾಡಿದೆ.

| ಸಾವಯವ ಗೊಬ್ಬರ | ನಿರವಯವ ಗೊಬ್ಬರ |
|---|---|
| 1. ಮನುಷ್ಯ ಹಾಗೂ ಪ್ರಾಣಿಗಳು ವಿಸರ್ಜಿಸುವ ವಸ್ತುಗಳಿಂದಲೂ ಸಸ್ಯಗಳಿಂದಲೂ ತಯಾರಾಗುತ್ತದೆ. ಉದಾಹರಣೆ ಹಟ್ಟಿ ಗೊಬ್ಬರ, ಕಾಂಪೋಸ್ಟ್ ಗೊಬ್ಬರ. | 1. ಅಮೋನಿಯಮ್ ಸಲ್ಫೇಟ್, ಸೂಪರ್ ಫಾಸ್ಫೇಟ್, ಪೊಟ್ಯಾಸಿಯಮ್ ಕ್ಲೋರೈಡ್ ಇವೇ ಮುಂತಾದ ರಾಸಾಯನಿಕವಾಗಿ ರಚಿಸಲ್ಪಟ್ಟ ಕೃತಕ ಗೊಬ್ಬರಗಳು. |
| 2. ನೈಟ್ರೊಜನ್, ಫಾಸ್ಫರಸ್ ಮತ್ತು ಪೊಟಾಷುಗಳ ಪ್ರಮಾಣ ಕಡಿಮೆ, ಗೌಣ ಪೋಷಕಗಳೂ ಸ್ವಲ್ಪ ಇವೆ. | 2. ಪ್ರಧಾನ ಸಸ್ಯಪೋಷಕಗಳು ಅಧಿಕ ಪ್ರಮಾಣದಲ್ಲಿವೆ. ಗೌಣ ಪೋಷಕಗಳ ಇರವು ಬಲು ಕಡಿಮೆ. |
| 3. ರೈತ ತನ್ನ ಹಿಡುವಳಿಯಲ್ಲಿ ಸ್ವಪ್ರಯತ್ನದಿಂದ ತಯಾರಿಸಬಹುದು. | 3. ಸಾಮಾನ್ಯವಾಗಿ ದೊಡ್ಡ ಕಾರ್ಖಾನೆಗಳ ಉತ್ಪನ್ನವಿದು. |
| 4. ಇದರಲ್ಲಿ ಅಡಕವಾಗಿರುವ ಪೋಷಕಗಳನ್ನು ಸಸ್ಯ ನಿಧಾನವಾಗಿ ಹೀರುತ್ತದೆ. | 4. ಇದರಲ್ಲಿ ಅಡಕವಾಗಿರುವ ಪೋಷಕಗಳನ್ನು ಸಸ್ಯ ಶೀಘ್ರವಾಗಿ ಹೀರುತ್ತದೆ. |

ಸಾವಯವ ಗೊಬ್ಬರ ಮಣ್ಣಿನಲ್ಲಿ ಕಡಿಮೆಯಾದಾಗ ಮಣ್ಣು ನುಸುಳಾಗಿರುವ ಬದಲು ಬಿರುಸಾಗುತ್ತದೆ. ಅಂಥ ಮಣ್ಣಿನಲ್ಲಿ ಬೆಳೆಯುವ ಸಸ್ಯಕ್ಕೆ ಅನಾವೃಷ್ಟಿಯನ್ನು ಎದುರಿಸುವ ಸಾಮರ್ಥ್ಯವಿರುವುದಿಲ್ಲ.

ಸಾವಯವ ಗೊಬ್ಬರದ ಉಪಯೋಗ ಲಾಭದಾಯಕವೊ, ನಿರವಯವ ಗೊಬ್ಬರದ ಉಪಯೋಗ ಲಾಭದಾಯಕವೂ ಎನ್ನುವ ಸಂದೇಹ ತಜ್ಞರಿಗೆ ಸಹ ಮೂಡಿದೆ. ಇದನ್ನು ಪರಿಹರಿಸಲು ಇಂಗ್ಲೆಂಡಿನ ರೋಥಂಸ್ಟೆಡ್ ವ್ಯವಸಾಯ ಕೇಂದ್ರದಲ್ಲಿ ಒಂದು ಪ್ರಯೋಗವನ್ನು ಮಾಡಿ ನೋಡಿದ್ದಾರೆ. ಎರಡು ಸರ್ವಸಮ ಹಿಡುವಳಿಗಳನ್ನು ಆಯ್ದು ಒಂದಕ್ಕೆ ಸಾವಯವ ಗೊಬ್ಬರವನ್ನೂ ಇನ್ನೊಂದಕ್ಕೆ ನಿರವಯವ ಗೊಬ್ಬರವನ್ನೂ ನಿಗದಿಮಾಡಿದ ಗಾತ್ರದಲ್ಲಿ ಪೂರೈಕೆಮಾಡುತ್ತ ಗೋದಿಯನ್ನು ಬೆಳೆಸಿದರು. 150 ವರ್ಷಗಳ ಕಾಲ ಮಾಡಿದ ಪ್ರಯೋಗದಿಂದ ಲಭಿಸಿದ ಗೋದಿಯ ಫಸಲನ್ನು ಹೋಲಿಸಿ ನೋಡಿದಾಗ ನಿರವಯವ ಭೂಮಿಯಿಂದ ಸರಾಸರಿ ವಾರ್ಷಿಕ ಇಳುವರಿ ಎಕರೆಗೆ 36.3 ಬುಷಲುಗಳಾದರೆ ಸಾವಯವ ಭೂಮಿಯಿಂದ ಇದು 33.2 ಬುಷಲುಗಳಾದುವು. ಅಲ್ಲಿಗೆ ನಿರವಯವ ಗೊಬ್ಬರ ಗೋದಿಯ ಇಳುವರಿಯನ್ನು ಸುಮಾರು ಶೇ.10ರಷ್ಟು ಅಭಿವೃದ್ಧಿ ಪಡಿಸುವುದು ಎಂದಾಯಿತು. ಭಾರತ ಸರ್ಕಾರದ ವತಿಯಿಂದ ಪೂಸಾ ವ್ಯವಸಾಯ ಸಂಶೋಧನ ಕೇಂದ್ರದಲ್ಲಿ ಹಲವಾರು ವರ್ಷಗಳ ಕಾಲ ನಡೆಸಿದ ಇದೇ ತರಹದ ಪ್ರಯೋಗ ನಿರವಯವ ಹಾಗೂ ಸಾವಯವ ಭೂಮಿಗಳ ಇಳುವರಿಗಳಲ್ಲಿ ಯಾವ ವ್ಯತ್ಯಾಸವನ್ನೂ ತೋರಿಸಲಿಲ್ಲ. ನಿರವಯವ ಗೊಬ್ಬರದ ಬಳಕೆಯಿಂದ ಮಣ್ಣಿನ ಫಲವಂತಿಕೆ ಕೆಡುವುದಿಲ್ಲ ಎಂದು ಇಂಥದೇ ಇತರ ಪ್ರಯೋಗಗಳಿಂದ ವೇದ್ಯವಾಗಿದೆ. ತಮಿಳುನಾಡಿನಲ್ಲಿ ಮಾಡಿದ ಒಂದು ದೀರ್ಘಕಾಲೀನ ಪ್ರಯೋಗದಿಂದ ತಿಳಿದಿರುವ ಅಂಶವಿಷ್ಟು : 36 ವರ್ಷಗಳ ವರೆಗೆ ಹಟ್ಟಿಗೊಬ್ಬರ (ಅಂದರೆ ಸಾವಯವ ಗೊಬ್ಬರ) ಕೃತಕ ಗೊಬ್ಬರದಷ್ಟು (ಅಂದರೆ ನಿರವಯವ ಗೊಬ್ಬರ) ಉತ್ತಮ ಫಲ ನೀಡಲಿಲ್ಲ; 37ನೆಯ ವರ್ಷದಿಂದ ಮುಂದಕ್ಕೆ ಸಾವಯವ ಗೊಬ್ಬರವೇ ಉತ್ತಮವೆಂದು ಗೊತ್ತಾಯಿತು. ಪೂಸಾದಲ್ಲಿ ನಡೆಸುತ್ತಿರುವ ಖಾಯಂ ಪ್ರಯೋಗಗಳಲ್ಲಿಯೂ 22 ವರ್ಷಗಳ ವರೆಗೆ ನಿರವಯವ ಗೊಬ್ಬರ ಹೆಚ್ಚು ಪ್ರಯೋಜನಕಾರಿಯಾಗಿದ್ದು ಮುಂದಕ್ಕೆ ಸಾವಯವ ಗೊಬ್ಬರವೇ ಹೆಚ್ಚು ಪ್ರಯೋಜನಕಾರಿ ಎಂದು ತಿಳಿದುಬಂದಿದೆ. ಸಾವಯವ ಗೊಬ್ಬರ ಭೂಮಿಯ ಭೌತಗುಣದ ಮೇಲೆ ಉಂಟುಮಾಡುವ ಪರಿಣಾಮ ಮತ್ತು ಆ ಗೊಬ್ಬರದಲ್ಲಿರುವ ಗೌಣ ಪೋಷಕಗಳು ಇದರ ಕಾರಣವಾಗಿರಬೇಕು. ಆದ್ದರಿಂದ ನಿರವಯವ ಗೊಬ್ಬರವನ್ನು ಸೂಕ್ತ ಪರಿಮಾಣದಲ್ಲಿ ಯೋಗ್ಯ ಕ್ರಮವರಿತು ಪೂರೈಸುವುದರಿಂದ ಮಣ್ಣಿನ ಫಲವಂತಿಕೆಯನ್ನು ಕಾಪಾಡಿಕೊಂಡು ಅಧಿಕ ಇಳುವರಿಯನ್ನು ಪಡೆಯಬಹುದು. ಅಂದರೆ, ಸಾವಯವ ಹಾಗೂ ನಿರವಯವ ಗೊಬ್ಬರಗಳ ಯುಕ್ತ ಮಿಶ್ರಣ ಸರ್ವಶ್ರೇಷ್ಠ.

ನಿರವಯವ ಗೊಬ್ಬರ ಬೆಳೆಯ ಗುಣವನ್ನು ಕೆಡಿಸುತ್ತದೆ, ಫಸಲಿನ ರುಚಿಯಲ್ಲಿ ಕುಂದು ಉಂಟಾಗುತ್ತದೆ ಎಂಬ ದೂರು ಉಂಟು. ರುಚಿ ತೀರ ವ್ಯಕ್ತಿನಿಷ್ಠ ಗುಣವಾದ್ದರಿಂದ ಇದನ್ನು ಕುರಿತು ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ನಿರವಯವ ಗೊಬ್ಬರದ ಉಪಯೋಗದಿಂದ ಬೆಳೆಯ ಗುಣಮಟ್ಟ–ಅಂದರೆ ಪ್ರೋಟೀನುಗಳ ಹಾಗೂ ವಿಟಮಿನುಗಳ ಅಂಶ, ಇತ್ಯಾದಿ–ಏರಿದೆ ಎಂದು ರಾಸಾಯನಿಕ ವಿಶ್ಲೇಷಣೆಯಿಂದ ತಿಳಿದಿದೆ. ಶೇಂಗ ಮತ್ತು ಸಾಸುವೆಗಳ ಶೇಕಡ ತೈಲಾಂಶ ಹೆಚ್ಚಾದ ವರದಿಯೂ ಉಂಟು. ಹೊಗೆಸೊಪ್ಪಿನಲ್ಲಿ ಬೆಂಕಿಯನ್ನು ದೀರ್ಘಕಾಲ ತಡೆದು ಹಿಡಿದುಕೊಳ್ಳುವ ಗುಣ ವೃದ್ಧಿ ಆದದ್ದೂ ತಿಳಿದುಬಂದಿದೆ.

ಯಾವ ಮಣ್ಣಿಗೆ ಎಂಥ ಗೊಬ್ಬರವನ್ನು ಎಷ್ಟು ಪರಿಮಾಣದಲ್ಲಿ ಪೂರೈಸಬೇಕು ಎನ್ನುವ ಪ್ರಶ್ನೆಗೆ ಸಾರ್ವತ್ರಿಕ ಉತ್ತರ ಒಂದೇ–ಸರ್ಕಾರದ ವತಿಯಿಂದ ಅಲ್ಲಲ್ಲಿ ನಡೆಸಲಾಗುತ್ತಿರುವ ಸ್ಥಾಯೀ ಹಾಗೂ ಸಂಚಾರೀ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಿಗೆ ಮಣ್ಣಿನ ಪ್ರತಿಚಯವನ್ನು (ಸ್ಯಾಂಪಲ್) ಕಳಿಸಿ ವೈಜ್ಞಾನಿಕ ಪರೀಕ್ಷಣೆಗೆ ಅದನ್ನು ಒಳಪಡಿಸಿ ತಿಳಿದುಕೊಳ್ಳಬೇಕು. ಯಾವುದೇ ಗೊಬ್ಬರವನ್ನು ಹೊಲಕ್ಕೆ ಹಾಕಿ ಬೆಳೆ ತೆಗೆದ ಬಳಿಕ ಮಣ್ಣಿನಲ್ಲಿ ಉಳಿಯುವ ಗೊಬ್ಬರದ ಅಂಶ ಎಷ್ಟು ಎನ್ನುವುದೊಂದು ಕುತೂಹಲಕಾರಿ ಪ್ರಶ್ನೆ. ಇದರ ಉತ್ತರ ಗೊಬ್ಬರದ ಗುಣವನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಒಂದು ಸಲ ಗೊಬ್ಬರ ನೀಡಿ ನಾಲ್ಕು ಬೆಳೆಗಳನ್ನು ತೆಗೆದ ಬಳಿಕ ಮಣ್ಣಿನಲ್ಲಿ ಆ ಗೊಬ್ಬರದ ಅಂಶ ವಿಶೇಷವಾಗಿ ಏನೂ ಉಳಿದಿರುವುದಿಲ್ಲ ಎನ್ನಬಹುದು. ಅಮೋನಿಯಮ್ ಸಲ್ಫೇಟ್, ಯೂರಿಯ ಮುಂತಾದ ಸಾರಜನಕಯುತ ಕೃತಕ ಗೊಬ್ಬರಗಳನ್ನು ಮಣ್ಣಿಗೆ ಹಾಕಿ ಒಂದು ಬೆಳೆ ತೆಗೆದ ಬಳಿಕ ಅವುಗಳ ಅಂಶ ಮಣ್ಣಿನಲ್ಲಿ ಏನೂ ಉಳಿದಿರುವುದಿಲ್ಲ ಎಂದು ತಿಳಿದುಬಂದಿದೆ. ರಂಜಕ ಮತ್ತು ಪೊಟಾಷ್ ಗೊಬ್ಬರಗಳ ಸ್ವಲ್ಪಾಂಶ ಉಳಿದಿರುತ್ತದೆ. ಸಾವಯವ ಗೊಬ್ಬರದ ವಿಚಾರ ಹೀಗಲ್ಲ. ಒಂದು ಬೆಳೆ ತೆಗೆದ ಬಳಿಕ ಮೊದಲು ಪೂರೈಸಿದುದರ ಸುಮಾರು ಅರ್ಧಾಂಶವೂ ಎರಡು ಬೆಳೆ ತೆಗೆದ ಬಳಿಕ ಸುಮಾರು ಕಾಲು ಅಂಶವೂ ಉಳಿದಿರುತ್ತದೆ.

ಸಾವಯವ ಗೊಬ್ಬರವನ್ನು ಸಾಮಾನ್ಯವಾಗಿ ಹಟ್ಟಿಗೊಬ್ಬರ, ವಿವಿಧ ಸಾಕುಪ್ರಾಣಿ ಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಎಲೆ ಗೊಬ್ಬರ, ಹಿಂಡಿ ಗೊಬ್ಬರ, ಕಸಾಯಿಖಾನೆ ಗೊಬ್ಬರ, ಹ್ಯೂಮಸ್ ಗೊಬ್ಬರ ಮತ್ತು ಹಿತ್ತಲಗೊಬ್ಬರ ಎಂದು ವಿಭಾಗಿಸುವುದುಂಟು.

**ಹಟ್ಟಿ ಗೊಬ್ಬರ :** ಎಮ್ಮೆ, ದನ, ಕರು ಮುಂತಾದವುಗಳ ಸೆಗಣಿ, ಗಂಜಳದ ಜೊತೆಗೆ ಕೊಟ್ಟಿಗೆಯಲ್ಲಿ ಬಿದ್ದಿರುವ ಕಸಕಡ್ಡಿಗಳನ್ನೂ ಕೊಟ್ಟಿಗೆಗೆ ಹಾಸಿರುವ ಎಲೆ ಹುಲ್ಲು ಮುಂತಾದವನ್ನೂ ಸಂಗ್ರಹಿಸಿ ತಯಾರಿಸಿದ ಗೊಬ್ಬರವಿದು. ಸಾಮಾನ್ಯವಾಗಿ ಈ ಪದಾರ್ಥವನ್ನು ದಿನಕ್ಕೊಂದಾವರ್ತಿ ಇಲ್ಲವೇ ವಾರದಲ್ಲಿ ಎರಡು ಮೂರಾವರ್ತಿ ಕೊಟ್ಟಿಗೆಯಿಂದ ಬಾಚಿ ಹೊರಗೆ ತೆರೆಜಾಗದಲ್ಲಿ ರಾಶಿ ಹಾಕುತ್ತಾರೆ. ಇದರಿಂದ ಗಂಜಳ ಹರಿದು ಹಿಂಗಿ ನಾಶವಾಗುತ್ತದೆ. ಬಿಸಿಲು ಗಾಳಿ ಮಳೆ ಹೊಡೆತದಿಂದ ಗೊಬ್ಬರದಲ್ಲಿನ ಇತರ ಸಸ್ಯಪೋಷಕಾಂಶಗಳೂ ನಷ್ಟಗೊಂಡು ಉಳಿಯುವ ಗೊಬ್ಬರ ಬಹುಮಟ್ಟಿಗೆ ಸಾರಹೀನವಾಗುವುದು. ದೊಡ್ಡದಾಗಿ ಗುಂಡಿ ತೋಡಿ ಅದರ ಒಳಮೈಯನ್ನು ನುಣ್ಣಗೆ ಸಾರಣೆ ಮಾಡಿ ಅದರೊಳಗೆ ಹಟ್ಟಿಗೊಬ್ಬರ ಸಂಗ್ರಹಿಸುವುದು ಯೋಗ್ಯಕ್ರಮ. ಇಂಥ ಗೊಬ್ಬರದ ಮೇಲ್ಪದರವನ್ನು ಎಲೆ, ಹುಲ್ಲು, ಮಣ್ಣು ಮುಂತಾದವುಗಳಿಂದ ಮೆತ್ತಿ ಗೊಬ್ಬರ ನೇರವಾಗಿ ಗಾಳಿ ಬೆಳಕಿಗೆ ಈಡಾಗದಂತೆ ತಡೆಯಬೇಕು. ಗಂಜಳವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಇದೇ ಗುಂಡಿಗೆ ಸುರಿಯಬಹುದು. ಅವಶ್ಯವಿದ್ದಲ್ಲಿ ನೀರನ್ನು ಸುರಿಯಬಹುದು. ಸ್ವಲ್ಪ ತಿಂಗಳುಗಳ ಕಾಲದಲ್ಲಿ ಈ ಮಿಶ್ರಣ ಒಳಗೇ ಹಳಸಿ ಹದ ಬಂದು ಉತ್ತಮ ಗೊಬ್ಬರವಾಗುತ್ತದೆ. ಇಂಥ ಗೊಬ್ಬರದಲ್ಲಿ ಶೇ.1.25 ನೈಟ್ರೊಜನ್ ಇರುವುದು. ಜಾನುವಾರುಗಳ ಮೇವು ಮತ್ತು ಆಹಾರವನ್ನು ಹೊಂದಿಕೊಂಡು ಗೊಬ್ಬರದಲ್ಲಿರುವ ಪೋಷಕಗಳಲ್ಲಿ ವ್ಯತ್ಯಾಸವಾಗುತ್ತದೆ. ಹಿಂಡಿ, ಧಾನ್ಯ ಮತ್ತು ಶೇಂಗ ಹೊಟ್ಟು ತಿನ್ನುವ ಜಾನುವಾರುಗಳ ಗೊಬ್ಬರ ಕೇವಲ ಹಸುರು ಹುಲ್ಲು, ಬೈಹುಲ್ಲು ಇಲ್ಲವೇ ಮುಳಿ ಹುಲ್ಲು ತಿನ್ನುವ ಜಾನುವಾರುಗಳ ಗೊಬ್ಬರಕ್ಕಿಂತ ಉತ್ಕೃಷ್ಟವಾಗಿರುತ್ತದೆ. ಜಿಪ್ಸಮ್ ಅಂದರೆ ಕ್ಯಾಲ್ಸಿಯಮ್ ಸಲ್ಫೇಟನ್ನು ಗೊಬ್ಬರದೊಡನೆ ಬೆರೆಸಿ ಅದರಲ್ಲಿರುವ ನೈಟ್ರೊಜನ್ ನಷ್ಟವಾಗದಂತೆ ನೋಡಿಕೊಳ್ಳಬಹುದು. ಸೂಪರ್ ಫಾಸ್ಫೇಟನ್ನು ಮಿಶ್ರ ಮಾಡಿದರೆ ಹಟ್ಟಿಗೊಬ್ಬರ ಇನ್ನಷ್ಟು ಉತ್ತಮಗೊಳ್ಳುವುದು. ಚೆನ್ನಾಗಿ ಕೊಳೆತ ಹಟ್ಟಿಗೊಬ್ಬರವನ್ನು ಎಕರೆಗೆ ಸಾಮಾನ್ಯವಾಗಿ 5 ಗಾಡಿಯಂತೆ ಖುಷ್ಕಿ ಬೆಳೆಗೂ 10 ಗಾಡಿಯಂತೆ ನೀರಾವರಿ ಬೆಳೆಗೂ ಉಪಯೋಗಿಸಿದರೆ ಅನುಕೂಲತಮ ಫಲಿತಾಂಶ ದೊರೆಯುತ್ತದೆ. ಕಬ್ಬು, ಬಟಾಣಿ, ಶುಂಠಿ, ಅರಸಿನ, ತರಕಾರಿ, ಫಲವೃಕ್ಷ ಮುಂತಾದ ವಿಶಿಷ್ಟ ಕೃಷಿಯಲ್ಲಿ ಎಕರೆಗೆ 40–50 ಗಾಡಿಗಳಷ್ಟು ಗೊಬ್ಬರವನ್ನು ಉಪಯೋಗಿಸುತ್ತಾರೆ (ಒಂದು ಗಾಡಿ ಗೊಬ್ಬರ –30 ಘ. ಅ. ಅಥವಾ ಅರ್ಧ ಟನ್). ಹಟ್ಟಿಗೊಬ್ಬರದ ಒಂದು ವೈಶಿಷ್ಟ್ಯವೆಂದರೆ ಅದರಲ್ಲಿರುವ ನೈಟ್ರೊಜನಿನ ಶೇ.40 ರಷ್ಟು ಭಾಗ ಮಾತ್ರ ಮೊದಲಿನ ಬೆಳೆಗೆ ದೊರೆಯುತ್ತದೆ. ಉಳಿದ ಅಂಶ ಮುಂದಿನ ಬೆಳೆಗೆ ಉಳಿದಿರುತ್ತದೆ.

**ವಿವಿಧ ಸಾಕುಪ್ರಾಣಿ ಗೊಬ್ಬರ :** ಕುದುರೆ ಗೊಬ್ಬರ, ಕುರಿ ಗೊಬ್ಬರ, ಕೋಳಿ ಗೊಬ್ಬರ ಮುಂತಾದವು ಈ ವರ್ಗಕ್ಕೆ ಸೇರುತ್ತವೆ. ಇವೆಲ್ಲವೂ ಸಾರದ ದೃಷ್ಟಿಯಿಂದ ದನದ ಗೊಬ್ಬರಕ್ಕಿಂತ ಉತ್ತಮ. ಆದರೆ ವಿಪುಲವಾಗಿ ಲಭ್ಯವಿಲ್ಲ. ಕುದುರೆ ಗೊಬ್ಬರ

ವಿಪರೀತ ಉಷ್ಣಯುತವಾಗಿರುವುದರಿಂದ ಇದರ ಬಳಕೆಯಲ್ಲಿ ಎಚ್ಚರಿಕೆ ತೀರ ಅಗತ್ಯ. ಸಾಮಾನ್ಯವಾಗಿ ತರಕಾರಿ, ಹಣ್ಣು, ಹೂ ಬೇಸಾಯದಲ್ಲಿ ಸಾಕುಪ್ರಾಣಿ ಗೊಬ್ಬರವನ್ನು ಬಳಸುತ್ತಾರೆ.

**ಕಾಂಪೋಸ್ಟ್ ಗೊಬ್ಬರ :** ಕೃಷಿ ಭೂಮಿಯಿಂದ ದೊರೆಯುವ ಮತ್ತು ಜಾನುವಾರು ಕೊಟ್ಟಿಗೆಯಿಂದ ವಿಸರ್ಜಿತವಾಗುವ ಪದಾರ್ಥಗಳನ್ನು ಸಂಗ್ರಹಿಸಿ ತಯಾರಿಸುವ ಗೊಬ್ಬರವಿದು. ಸಾಮಾನ್ಯವಾಗಿ ಯಾವುದೇ ಹಿಡುವಳಿಯಲ್ಲಿ ದೊರೆಯುವ ಬೆಳೆಗಳ ಹುಲ್ಲು ದಂಟು ಸಿಪ್ಪೆ ಹೊಟ್ಟು ಇವುಗಳ ಜೊತೆಗೆ ಮರಗಿಡಗಳ ಎಲೆ ಮುಂತಾದವನ್ನು ಕೊಟ್ಟಿಗೆಯಲ್ಲಿ ನೆಲದ ಮೇಲೆ ಹಾಸುತ್ತಾರೆ. ಬೂದಿಯ ಒಂದು ಪದರವನ್ನು ಸಹ ತಳದಲ್ಲಿ ಹಾಸುವುದುಂಟು. ಈ ಹಾಸಿನ ಮೇಲೆ ಜಾನುವಾರು ನಿಂತು ಮಲಗಿ ಸೆಗಣಿ ಹಾಕಿ ಗಂಜಲ ಹೊಯ್ದು ಒಟ್ಟು ಒಂದು ಹದಕ್ಕೆ ಬರುತ್ತದೆ. ಇದನ್ನು ಸುಮಾರು 15' ಉದ್ದ 5' ಅಗಲ 3' ಆಳದ ಹೊಂಡಕ್ಕೆ ಅವಧಿಯುತವಾಗಿ ವರ್ಗಾಯಿಸಿ ಪ್ರತಿಸಲವೂ ಶೇಖರಣೆಯ ಮೇಲ್ಮೈಯ ಮೇಲೆ 5 ಕೆಜಿ ಸೆಗಣಿ, 150 ಗ್ರಾಂ ಬೂದಿ ಮತ್ತು 20 ಲೀಟರ್ ನೀರಿನ ಮಿಶ್ರಣವನ್ನು ಚಿಮುಕಿಸಬೇಕು. ಒಂದು ಪದರದ ದಪ್ಪ ಸುಮಾರು 1.5' ಆದ ಬಳಿಕ ಮೇಲ್ಮೈಯನ್ನು ಸೆಗಣಿ ಮಿಶ್ರಿತ ಮಣ್ಣಿನ ಲೇಪನದಿಂದ ಮುಚ್ಚಬೇಕು. ಈ ಕ್ರಿಯೆಯನ್ನು ಹೊಂಡ ಪೂರ್ತಿ ಆಗುವ ವರೆಗೂ ಮುಂದುವರಿಸಿ 5–6 ತಿಂಗಳುಗಳ ಪರ್ಯಂತ ಅದನ್ನು ಹಾಗೆಯೇ ಬಿಡಬೇಕು. ಆಗ ಕಾಂಪೋಸ್ಟ್ ಗೊಬ್ಬರ ಉಪಯೋಗಕ್ಕೆ ಸಿದ್ಧವಾಗಿರುತ್ತದೆ. ವಾಸ್ತವಿಕವಾಗಿ ಹಟ್ಟಿಗೊಬ್ಬರದ ಪರಿಷ್ಕೃತ ವಿಧಾನ ಮತ್ತು ರೂಪವೇ ಕಾಂಪೋಸ್ಟ್ ಗೊಬ್ಬರ. ಹೊಂಡದ ಉಪಯೋಗ ಸಾಧ್ಯವಾಗದ ಎಡೆಗಳಲ್ಲಿ ಮಟ್ಟಸ ನೆಲದ ಮೇಲೆಯೇ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಬಹುದು. ಆದರೆ ಇಲ್ಲಿ ಗೊಬ್ಬರದ ಸುತ್ತಲೂ ಮಣ್ಣಿನ ತೆಳು ಪದರದಿಂದ ಮುಚ್ಚುವುದು ಅಗತ್ಯ. ಅಲ್ಲದೇ ಪದೇ ಪದೇ ರಾಶಿಯನ್ನು ಅಡಿ ಮೇಲು ಕಲಸುತ್ತಿರಬೇಕು. ಕಾಂಪೋಸ್ಟ್ ಗೊಬ್ಬರ ಹಟ್ಟಿಗೊಬ್ಬರಕ್ಕಿಂತಲೂ ಸಾರಾಯುತವಾದದ್ದು. ಮಣ್ಣಿನ ಫಲವಂತಿಕೆಯನ್ನು ವೃದ್ಧಿಗೊಳಿಸುವುದರಲ್ಲೂ ಅಧಿಕ ಇಳುವರಿಯನ್ನು ಸಾಧಿಸುವುದರಲ್ಲೂ ಹೆಚ್ಚು ಪರಿಣಾಮಕಾರಿಯಾದದ್ದು.

**ಎಲೆಗೊಬ್ಬರ :** ಕೆಲವು ವಿಶಿಷ್ಟ ಜಾತಿಯ ಗಿಡಮರಗಳಿಂದ ಆಯ್ದು ಹಸುರು ಎಲೆಗಳ ಒಂದು ಪದರವನ್ನು ಗುಂಡಿಯಲ್ಲಿ ಹಾಸಿ ಅದರ ಮೇಲೆ ಕೆಮ್ಮಣ್ಣಿನ ಒಂದು ಪದರ, ಅದರ ಮೇಲೆ ಪುನಃ ಎಲೆ ಪದರ ಹೀಗೆಯೇ ಮುಂದುವರಿಸಿ ಗುಂಡಿಯನ್ನು ಭರ್ತಿ ಮಾಡಿ ಅದರ ಒಳಪಿಡಿಯನ್ನು ಕೊಳೆತು ಹದ ಬರಲು ಬಿಟ್ಟಾಗ ದೊರೆಯುವ ಗೊಬ್ಬರ. ಇದು ಸಹ ಹಟ್ಟಿಯ ಗೊಬ್ಬರ ಹಾಗೂ ಕಾಂಪೋಸ್ಟ್ ಗೊಬ್ಬರಗಳಂತೆ ಸುಲಭ ಮತ್ತು ಚಾರಿ. ಹಸಿರುಗೊಬ್ಬರವೆಂಬ ಹೆಸರಿನ ಇನ್ನೊಂದು ಬಗೆಯನ್ನು ಕೂಡ ಎಲೆಗೊಬ್ಬರದೊಂದಿಗೆ ಹೇಳಬಹುದು. ಗದ್ದೆಯಲ್ಲಿ ಕೆಲವು ವಿಶಿಷ್ಟವಾದ ಹಸುರು ಗಿಡಗಳನ್ನು ಬೆಳೆಸಿ ಅವು ಹುಲುಸಾಗಿರುವಾಗಲೇ ಅವನ್ನು ಉತ್ತು ಮಣ್ಣಿನೊಡನೆ ಮಿಶ್ರ ಮಾಡಿದಾಗ ದೊರೆಯುವ ಗೊಬ್ಬರವಿದು. ಮಣ್ಣಿನ ಫಲವಂತಿಕೆಯನ್ನು ಹೆಚ್ಚಿಸಿ ಮುಂದೆ ಗದ್ದೆಯಲ್ಲಿ ಬೆಳೆಸುವ ಪೈರಿಗೆ ಯೋಗ್ಯ ಸಸ್ಯಪೋಷಕಗಳು ಒದಗುವಂತೆ ಮಾಡುವುದೇ ಇಲ್ಲಿನ ಉದ್ದೇಶ. ಅವರೆ, ಅಲಸಂಡೆ ಮುಂತಾದ ಕಾಳು ಬಿಡುವ ಗಿಡಗಳು (ಲೆಗ್ಯೂಮಿನಿಸ್), ಅಪಸೆಣಬು (ಕ್ರಾಟೋಲೇರಿಯ ಜನ್ಸಿಯ), ಧೈಂಚ, ಅಗಸೆ, ಬೆಂಡು ಗಿಡ, ಆವರಿಕೆ ಗಿಡ (ಕ್ಯಾಶಿಯ ತೋರಾ), ಗೋಡಿಕಾಯಿ ಗಿಡ, ಕಾಡು ಬಟಾಣಿ ಮುಂತಾದವನ್ನು ಹಸುರು ಗೊಬ್ಬರಕ್ಕಾಗಿ ಬೆಳೆಸುವುದುಂಟು. ಕಾಡಿನಿಂದ ಕಡಿದು ತಂದ ಎಲೆ, ಎಳೆರೆಂಬೆ ಮುಂತಾದವನ್ನು ಗದ್ದೆಯಲ್ಲಿ ಹರಡಿ ಉತ್ತಮ ಹಸುರು ಗೊಬ್ಬರವನ್ನು ತಯಾರಿಸುವುದೂ ಇದೆ. ಹಸುರು ಗೊಬ್ಬರದಿಂದ ಉತ್ತಮ ಪ್ರಯೋಜನ ದೊರೆಯಬೇಕಾದರೆ ಉತ್ತು ಮಿಶ್ರ ಮಾಡಿದ ಹಸುರು ಪದಾರ್ಥ ಚೆನ್ನಾಗಿ ಕೊಳೆತು ಮಣ್ಣಿನೊಡನೆ ಎರಕಗೊಳ್ಳಬೇಕು. ಇಂಥ ಗೊಬ್ಬರದ ಉಪಯೋಗದಿಂದ ಇಳುವರಿಯನ್ನು ಶೇ.30–ಶೇ.50ರ ವರೆಗೆ ಉತ್ತಮಗೊಳಿಸಬಹುದು.

**ಹಿಂಡಿ ಗೊಬ್ಬರ :** ಶೇಂಗ, ಹರಳು, ಎಳ್ಳು, ಹುಚ್ಚೆಳ್ಳು, ಕೊಬ್ಬರಿ, ಹೊಂಗೆ, ಬೇವು ಮುಂತಾದವುಗಳಿಂದ ಎಣ್ಣೆಹಿಂಡಿದ ಬಳಿಕ ಉಳಿಯುವ ಚರಟನಿಂದ (ಇದೇ ಹಿಂಡಿ) ತಯಾರಿಸಿದ ಗೊಬ್ಬರ. ಇದನ್ನು ನೇರವಾಗಿ ಬಳಸುವುದು ವಿರಳ. ಒಣ ಹಿಂಡಿಯನ್ನು ಪುಡಿ ಮಾಡಿ ದೊಡ್ಡ ಬಾನಿಗಳಲ್ಲಿ ನೆನೆಹಾಕಿ ಒಂದೆರಡು ದಿವಸ ಕೊಳೆಸಿ ಈ ಮಿಶ್ರಣಕ್ಕೆ ಸಾಕಷ್ಟು ನೀರು ಸೇರಿಸಿ ತೆಳು ಮಾಡಿ ಯುಕ್ತ ಪರಿಣಾಮದಲ್ಲಿ ಗಿಡಗಳಿಗೆ ಹಾಕುವುದು ವಾಡಿಕೆ. ಇಂಥ ದ್ರವ ಗೊಬ್ಬರದ ಬಳಕೆ ಹಣ್ಣು, ಹೂ, ತರಕಾರಿ ಗಿಡಗಳ ಬೇಸಾಯದಲ್ಲಿ ಹೆಚ್ಚು.

**ಕಸಾಯಿಖಾನೆ ಗೊಬ್ಬರ :** ಕಸಾಯಿಖಾನೆಯಲ್ಲಿನ ವಿಸರ್ಜಿತ ವಸ್ತುವನ್ನು– ಪ್ರಾಣಿ ರಕ್ತ, ತೊಗಲಿನ ಅಂಶ, ಮಾಂಸದ ತುಣುಕುಗಳು, ಅಮೇಧ್ಯ, ಇತರ ಉಚ್ಛಿಷ್ಟಗಳು– ಸಂಗ್ರಹಿಸಿ ತಯಾರಿಸಿದ ಗೊಬ್ಬರ. ಇದರೊಂದಿಗೆ ಮೀನು ಗೊಬ್ಬರವನ್ನೂ ಹೆಸರಿಸಬಹುದು. ಈ ಗೊಬ್ಬರಗಳು ಸಸ್ಯಗಳಿಗೆ ಬಹಳ ಉಪಯುಕ್ತ. ಇವುಗಳಲ್ಲಿನ ಪೋಷಕಾಂಶಗಳನ್ನು ಅವು ಬೇಗನೆ ಹೀರಿಕೊಂಡು ಸಮೃದ್ಧವಾಗಿ ಬೆಳೆಯುತ್ತವೆ. ಆದರೆ ಇವು ದುಬಾರಿಯ ಗೊಬ್ಬರಗಳು.

**ಹ್ಯೂಮಸ್ ಗೊಬ್ಬರ :** ಗಿಡಮರಗಳ ಎಲೆ ರೆಂಬೆ ತೊಗಟೆ ಹೂ ಕಾಯಿ ಹಣ್ಣು ಮುಂತಾದವು ಕಾಡುಗಳಲ್ಲಿ ವಿಪುಲವಾಗಿ ಬಿದ್ದು ಸಂಗ್ರಹಗೊಂಡು ಕೊಳೆತು ಕಾಲಾಂತರದಲ್ಲಿ ತಯಾರಾಗುವ ಗೊಬ್ಬರ. ಕಾಡುಗಳಲ್ಲಿ ಮಣ್ಣಿನ ಮೇಲುಪದರವನ್ನು ಕೆತ್ತಿ ಹೆರೆಸಿ ತೆಗೆದಾಗ ದೊರೆಯುವ ಗೊಬ್ಬರವಿದು. ಸಸ್ಯಗಳಿಗೆ ಅತಿ ಪ್ರಯೋಜನಕಾರಿ. ಈ ಗೊಬ್ಬರ ಹಾಕಿ ಬೆಳೆಸಿದ ಸಸ್ಯಗಳಿಗೆ ರೋಗರುಜಿನ ತಗಲುವುದು ವಿರಳ.

**ಹಿತ್ತಲ ಗೊಬ್ಬರ :** ಮಲವನ್ನು ಬೂದಿಯೊಡನೆ ಮಿಶ್ರ ಮಾಡಿ ತಯಾರಿಸಿದ ಗೊಬ್ಬರ (ನೈಟ್ ಸಾಯಿಲ್). ಒಳಚರಂಡಿ ವ್ಯವಸ್ಥೆ ಇರುವ ನಗರಗಳಲ್ಲಿ ಮಲ ಮತ್ತು ಇತರ ವಿಸರ್ಜಿತ ವಸ್ತುವನ್ನು ಕೇಂದ್ರೀಯವಾಗಿ ಸಂಗ್ರಹಿಸಿ ಹಿತ್ತಲ ಗೊಬ್ಬರವನ್ನು ತಯಾರಿಸುತ್ತಾರೆ. ಇದಕ್ಕೆ ಸ್ಯೂಯೇಜ್ (ಚರಂಡಿ) ಗೊಬ್ಬರ ಎಂದು ಹೆಸರು.

**ಸಾವಯವ ಗೊಬ್ಬರದ ಮುಖ್ಯ ಪ್ರಯೋಜನಗಳು :** 1 ಮಣ್ಣಿನ ಬಿಗಿತನವನ್ನು ಕಾಪಾಡಿ ಮಳೆ ಗಾಳಿ ನೀರಿನ ಹೊಡೆತದಿಂದ ಆಗುವ ಸವಕಳಿಯನ್ನು ಕನಿಷ್ಠ ಪರಿಮಾಣದಲ್ಲಿ ಇಡುತ್ತದೆ. 2 ಸಸ್ಯಗಳ ಬೇರುಗಳು ಚೆನ್ನಾಗಿ ಹರಡಿ ಹಬ್ಬಿ ನೆಲದ ಸಾರವನ್ನು ಹೀರಲು ಅನುಕೂಲವಾದ ಪರಿಸರವನ್ನು ಸೃಷ್ಟಿಸುತ್ತದೆ. 3 ಮಣ್ಣಿನ ತೇವವನ್ನು ಕಾಪಾಡಿ ಸಸ್ಯಗಳಿಗೆ ತಂಪಾದ ಆಸರೆಯನ್ನು ಒದಗಿಸುತ್ತದೆ. 4 ಸಸ್ಯಗಳಿಗೂ ಮಣ್ಣಿನಲ್ಲಿರುವ ಅಸಂಖ್ಯಾತ ಸಸ್ಯಪೋಷಕ ಜೀವಿಗಳಿಗೂ ಪೋಷಣೆಯನ್ನು ನೀಡುತ್ತದೆ. 5 ನಿರವಯವ ಗೊಬ್ಬರದ ಬಳಕೆಯಿಂದ ಉತ್ತಮ ಫಲಿತಾಂಶ ದೊರೆಯುವಂತೆ ಮಾಡಲು ಯೋಗ್ಯ ಆಧಾರ ನೆಲೆ ಸಾವಯವ ಗೊಬ್ಬರ.

ಈಚಿನ ವರ್ಷಗಳಲ್ಲಿ ರಾಸಾಯನಿಕ (ನಿರವಯವ) ಗೊಬ್ಬರದ ನಿರಂತರ ಬಳಕೆ ಮಣ್ಣಿನ ಫಲವತ್ತತೆಗೂ ಮಾನವನ ಆರೋಗ್ಯಕ್ಕೂ ಮಾರಕವೆಂಬ ಅಂಶ ನಿಚ್ಚಳಗೊಳ್ಳುತ್ತಿದ್ದು ಸಾವಯವ ಗೊಬ್ಬರದ ಬಳಕೆಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆದಿವೆ. ಸಾವಯವ ಕೃಷಿಯ ಬಗೆಗಿನ ಅರಿವು ಕೃಷಿಕರಲ್ಲಿಯೂ ಜನಸಾಮಾನ್ಯರಲ್ಲಿಯೂ ಕ್ರಮೇಣ ವಿಸ್ತಾರಗೊಳ್ಳುತ್ತಿದೆ.

ಕೃತಕ ನಿರವಯವ ಗೊಬ್ಬರವನ್ನು ಕುರಿತ ಮಾಹಿತಿಗೆ–**ನೋಡಿ–ಕೃತಕ ಗೊಬ್ಬರಗಳು**

(ವಿ.ಆರ್.ಎಸ್.;ಎಸ್.ಐ.ಎಚ್.)

**ಗೊಬ್ಬರದ ಅನಿಲಸ್ಥಾವರ :** ಸೆಗಣಿ, ಮಲ, ಮೂತ್ರ, ಮೃತ ಪ್ರಾಣಿಗಳ ಮಾಂಸ, ಕೃಷಿಯಿಂದ ದೊರೆಯುವ ಅನುಪಯುಕ್ತ ವಸ್ತುಗಳು ಇವೇ ಮುಂತಾದವನ್ನು



ಗೊಬ್ಬರದ ಅನಿಲ ಸ್ಥಾವರ

ಉಪಯೋಗಿಸಿಕೊಂಡು ಅನಿಲೇಂಧನವನ್ನು ಉತ್ಪನ್ನ ಮಾಡುವ ಸಾಧನ (ಮೆನ್ಯೂರ್ ಗ್ಯಾಸ್ ಪ್ಲಾಂಟ್; ಗೋಬರ್ ಗ್ಯಾಸ್ ಪ್ಲಾಂಟ್). ಇದರಲ್ಲಿ ಉಪೋತ್ಪನ್ನವಾಗಿ ಉತ್ತಮ ದರ್ಜೆಯ ಗೊಬ್ಬರ ಲಭಿಸುತ್ತದೆ. ಈ ಸ್ಥಾವರದ (ಪ್ಲಾಂಟ್) ಹಿನ್ನೆಲೆಯ ತತ್ತ್ವವಿಷ್ಟು:

ಸೆಗಣಿ, ಗಂಜಲ, ಕೊಳೆಯಬಲ್ಲ ಇತರ ಪದಾರ್ಥಗಳ ಚಿಕ್ಕ ತುಣುಕುಗಳು ಇವೆಲ್ಲವನ್ನೂ ಮಡ್ಡಿಯಂಥ (ಸ್ಲರಿ), ತೀರ ಮಂದವೂ ಅಲ್ಲದ ತೀರ ತೆಳುವೂ ಅಲ್ಲದ (ಸಾಧಾರಣವಾಗಿ 1 ಟನ್ ಸೆಗಣಿಗೆ 1 ಟನ್ ನೀರು ಸೇರಿಸಿ), ಮಿಶ್ರಣ ಮಾಡಿ ದೊಡ್ಡದಾದ ಬಾವಿಯಲ್ಲಿ ಸಂಗ್ರಹಿಸಿದಾಗ ಅದು ಕೊಳೆಯತೊಡಗುತ್ತದೆ; ಈ ಪ್ರಕ್ರಿಯೆಯಲ್ಲಿ ಅದರಿಂದ ಮೀಥೇನ್ ಅನಿಲ ಹೊರಹೊಮ್ಮುತ್ತದೆ. ಇದೇ ಗೊಬ್ಬರದ ಅನಿಲ. ಇದನ್ನು ಸಮರ್ಪಕವಾಗಿ ಸಂಗ್ರಹಿಸಿ, ದಾಸ್ತಾನಿಸಿ, ಬೇಕಾದಾಗ ಅಡುಗೆಗೆ ಉರುವಲಾಗಿ ಉಪಯೋಗಿಸಿ ಕೊಳ್ಳಬಹುದು.

ಚಿತ್ರದಲ್ಲಿ ಈ ಸ್ಥಾವರದ ರೇಖಾಚಿತ್ರವನ್ನು ಕೊಟ್ಟಿದೆ. ಇದರ ಭಾಗಗಳ ವಿವರಗಳು ಹೀಗಿವೆ: A ಮಡ್ಡಿ ಮಿಶ್ರಣ ಮಾಡುವ ತೊಟ್ಟಿ. B ಇದರ ತಳದಲ್ಲಿರುವ ತೆರೆಕವಾಟ. ಇದರ ಮೂಲಕ ಸಾಗಿದ BC ಕೊಳವೆ D ಎಂಬಲ್ಲಿ ತೆರೆದಿರುವುದು. Eಯು 8' ವ್ಯಾಸ 16' ಆಳ ಇರುವ ಒಂದು ಸಿಮೆಂಟ್ ಕಾಂಕ್ರೀಟ್ ಬಾವಿ. ಇದರ ಹೆಸರು ಪಾಚಕ (ಡೈಜೆಸ್ಟರ್). FG ಮಟ್ಟದಲ್ಲಿ, ಪಾಚಕದೊಳಗೆ, ಸುತ್ತಲೂ 25 ಸೆಂಮೀ ಅಗಲದ ಒಂದು ಚಡಿ ಉಂಟು. H ಎನ್ನುವ ಭಾಗದ ಹೆಸರು ಅನಿಲಧಾರಕ (ಗ್ಯಾಸ್ ಟ್ಯಾಂಕ್). 7½ ವ್ಯಾಸ 4' ಎತ್ತರವಿರುವ ಲೋಹನಿರ್ಮಿತ (ಸಾಧಾರಣವಾಗಿ ಕಬ್ಬಿಣದ ಹಾಳೆ) ಪೀಪಾಯಿಯಿದು. ಇದರ ಮೇಲು ಭಾಗ ಪೂರ್ಣ ಮುಚ್ಚಿದೆ; ಕೆಳಭಾಗ ತೆರೆದಿದೆ. ಕವುಚಿ ಹಾಕಿದ ತಪ್ಪಲೆಯಂತಿರುವ ಈ ಪೀಪಾಯಿಯ ಶಿಖರದಲ್ಲಿ IJ ಎನ್ನುವ ಕೊಳವೆಯನ್ನು ಬೆಸುಗೆ ಹಾಕಿದೆ. ಅನಿಲಧಾರಕ (H) IJ ಕೊಳವೆಯ ನೇರ ಮೇಲೆ ಕೆಳಗೆ ಚಲಿಸಬಲ್ಲುದು; ಆದರೆ FG ಚಡಿಗಿಂತ ಕೆಳಗೆ ಸರಿಯಲಾರದು. KLM ಎಂಬುದು ಅನಿಲಧಾರಕದ ಮೇಲುಮೈಗೆ ಜೋಡಿಸಿದ ಅನಿಲ ಸಾಗಣೆ ಕೊಳವೆ. L ಎಂಬಲ್ಲಿರುವ ತಿರುಗಣಿಯನ್ನು ಸೂಕ್ತವಾಗಿ ತಿರುಗಿಸಿ ಧಾರಕದಲ್ಲಿ (H) ಸಂಗೃಹೀತವಾದ ಅನಿಲವನ್ನು ಉಪಯೋಗಕ್ಕೆ ಹಾಳತವಾಗಿ ಪಡೆಯಬಹುದು. M ನಿಂದ ಮುಂದಕ್ಕೆ ಬಳುಕು ನಳಿಗೆಯ (ಹೋಸ್ ಪೈಪ್) ಮೂಲಕ ಅನಿಲ ಸಾಗುತ್ತದೆ. ಪಾಚಕದ ನೆಲಮಟ್ಟದಲ್ಲಿ N ಎಂಬಲ್ಲಿರುವ ತೆರೆಕಾಲುವೆಯ ಮೂಲಕ ಪಾಚಕದೊಳಗಿನ ಮಡ್ಡಿ ಹೊರ ಹರಿಯಬಲ್ಲುದು. ಇದನ್ನು ಗೊಬ್ಬರ ಸಂಗ್ರಹಣ ತೊಟ್ಟಿ Oನಲ್ಲಿ ಸಂಗ್ರಹಿಸಿ ಅಲ್ಲಿಂದ ಬೇಕಾದಂತೆ ಒಯ್ಯುತ್ತಾರೆ.

**ಕ್ರಿಯಾ ವಿಧಾನ :** ಮಡ್ಡಿ ಮಿಶ್ರಣ ತೊಟ್ಟಿ Aಯಲ್ಲಿ ಸೆಗಣಿ ಮತ್ತು ಗಂಜಲದ ಮಡ್ಡಿಯನ್ನು (ಘನವಸ್ತು ಮತ್ತು ದ್ರವವಸ್ತು ಪ್ರಮಾಣ 1:1 ಇರುವಂತೆ) ತಯಾರಿಸಿ BCD ಕೊಳವೆಯ ಮೂಲಕ ಪಾಚಕದ ತಳಕ್ಕೆ ಹೊಯ್ಯಬೇಕು. ಪಾಚಕದಲ್ಲಿ ಮಡ್ಡಿಯ ಮಟ್ಟ ನೆಲಮಟ್ಟದವರೆಗೆ (N) ಬರುವವರೆಗೂ ಇದನ್ನು ಮುಂದುವರಿಸಬೇಕು. ಆಗ, FG ಚಡಿಯ ಮೇಲೆ ವಿರಮಿಸುತ್ತಿದ್ದ ಅನಿಲಧಾರಕ ನಿಧಾನವಾಗಿ ಮಡ್ಡಿಯಲ್ಲಿ ತೇಲಲು

ಗೊಬ್ಬರದ ಅನಿಲ ಸ್ಥಾವರದ ಒಂದು ನೋಟ

ತೊಡಗುತ್ತದೆ. ಪಾಚಕ ಭರ್ತಿ ಆದಾಗ ಮಡ್ಡಿಯಲ್ಲಿ ಮೀಥೇನ್ ಏಕಾಣು ಜೀವಿಗಳು ರಾಸಾಯನಿಕ ಕ್ರಿಯೆಯನ್ನು ಆರಂಭಿಸುತ್ತವೆ. ಆಗ ಮಡ್ಡಿ ಮಜ್ಜಿಗೆ ಇಲ್ಲವೇ ದೋಸೆ ಹಿಟ್ಟು ಹುಳಿ ಬರುವ ರೀತಿಯಲ್ಲಿ ಹುದುಗುತ್ತದೆ. ಇದರ ಪರಿಣಾಮವಾಗಿ ಮೀಥೇನ್ ಅನಿಲ ಉದ್ಭವಿಸಿ ಮಡ್ಡಿಯ ಮೇಲು ಮಟ್ಟದಿಂದ ಗುಳ್ಳೆಗುಳ್ಳೆಯಾಗಿ ಬಿಡುಗಡೆಗೊಂಡು ಧಾರಕದ ಒಳಗೆ ಸಂಗ್ರಹಗೊಳ್ಳುವುದು. ಧಾರಕದ ಒಳಗಿನ ಒತ್ತಡ ಕ್ರಮೇಣ ಹೆಚ್ಚಿ ಅದು ಮಡ್ಡಿಯ ಮೇಲುಮಟ್ಟವನ್ನು ಕೆಳಮುಖವಾಗಿ ಅಮುಕುವುದರಿಂದ ಧಾರಕ ಏರಲಾರಂಭಿಸುತ್ತದೆ. ಧಾರಕದೊಳಗಿನ ಒತ್ತಡ ಅವಧಿಕ ಸ್ಥಿತಿಗೆ ಬಂದಾಗ ಧಾರಕ ಮಡ್ಡಿಯ ಮೇಲುಮಟ್ಟದ ಮೇಲೆ ತೇಲುತ್ತಿರುವುದು. ಇದೇ ಧಾರಕ ತುಂಬಿಕೊಂಡಿದೆ ಎನ್ನುವುದರ ಸೂಚನೆ. ಮಡ್ಡಿಯಿಂದ ಮತ್ತೆಯೂ ಬಿಡುಗಡೆ ಆಗುವ ಅನಿಲಕ್ಕೆ ಧಾರಕದೊಳಗೆ ಪ್ರವೇಶಿಸಲು ಆಗುವುದಿಲ್ಲ; ಅದು ಧಾರಕಕ್ಕೂ ಪಾಚಕದ ಅಂಚಿಗೂ ನಡುವೆ ಸುತ್ತಲೂ ಇರುವ ಸುಮಾರು 3" ಅಗಲದ ತೆರಪಿನಲ್ಲಿ ಬಿಡುಗಡೆಗೊಂಡು ವಾಯುಮಂಡಲವನ್ನು ಸೇರುತ್ತದೆ. ಆದ್ದರಿಂದ ಅನಿಲದ ಅತಿ ಇಲ್ಲವೇ ತೀವ್ರ ಉತ್ಪಾದನೆಯಿಂದ ಧಾರಕ ಆಸ್ಫೋಟಿಸುವ ಭಯ ಕಿಂಚಿತ್ತೂ ಇಲ್ಲ. ಧಾರಕ ತುಂಬಿರುವಾಗ Lನಲ್ಲಿರುವ ತಿರುಗಣಿಯನ್ನು ಸೂಕ್ತವಾಗಿ ತಿರುಗಿಸಿದಾಗ ಅನಿಲ LM ದಿಶೆಯಲ್ಲಿ ಹರಿಯುತ್ತದೆ. ಮುಂದೆ ಅದನ್ನು ವಿಶಿಷ್ಟವಾದ ಅನಿಲ ಒಲೆಗಳ ನೆರವಿನಿಂದ ಉರುವಲಾಗಿ ಉರಿಸಿ ಅಡುಗೆ ಮುಂತಾದ ಕೆಲಸಗಳಿಗೆ ಉಪಯೋಗಿಸಬಹುದು; ಇಲ್ಲವೇ ಈ ಅನಿಲವನ್ನು ಉರುಳೆಗಳಲ್ಲಿ ಸಂಗ್ರಹಿಸಿ ಇಡಬಹುದು. ಧಾರಕದೊಳಗಿನ ಅನಿಲ ಕಡಿಮೆ ಆದಂತೆ ಒತ್ತಡ ತಗ್ಗಿ ಧಾರಕ ಇಳಿಯತೊಡಗುತ್ತದೆ. ಪಾಚಕದೊಳಗಿನ ಮಡ್ಡಿಯಿಂದ ಅನಿಲ ಬಿಡುಗಡೆಯಾಗುವಾಗ ಮಡ್ಡಿ ಹದ ಪಾಕವಾಗಿ ಉತ್ತಮ ಗೊಬ್ಬರವಾಗುವುದು. ಅಲ್ಲಿಂದ ಮುಂದಕ್ಕೆ ಅದು ಅನಿಲವನ್ನು ಉತ್ಪಾದಿಸಲಾರದು. ಪ್ರತಿ ದಿವಸವೂ ತೂಕವಾದ ಹೊಸ ಮಡ್ಡಿ ಪಾಚಕದ ತಳವನ್ನು (D) ಪ್ರವೇಶಿಸಿದಂತೆ ಉಪಯೋಗಿಸಲ್ಪಟ್ಟ ಹಗುರಾದ ಹಳೆ ಮಡ್ಡಿ ಮೇಲುಮಟ್ಟದಿಂದ (N) ಹೊರಕ್ಕೆ ತಳ್ಳಲ್ಪಡುತ್ತದೆ. ಇದು ಗೊಬ್ಬರ ಸಂಗ್ರಹಣ ತೊಟ್ಟಿಯಲ್ಲಿ (O) ಶೇಖರವಾಗುವುದು. ಇದನ್ನು ನೇರವಾಗಿ ಹೊತ್ತೋ ಕಾಲುವೆಗಳ ಮೂಲಕವೋ ವ್ಯವಸಾಯಕ್ಕೆ ಉಪಯೋಗಿಸಬಹುದು; ಒಣಗಿಸಿ ಒಣಗೊಬ್ಬರವಾಗಿ ಸಹ ಪರಿವರ್ತಿಸಬಹುದು.

**ಉಪಯೋಗಗಳು :** ಗೊಬ್ಬರದ ಅನಿಲಸ್ಥಾವರ ತೀರ ಮಿತವ್ಯಯದಿಂದ ದ್ವಿವಿಧ ಸೌಕರ್ಯಗಳನ್ನು ಒದಗಿಸುವ ಒಂದು ಯಂತ್ರವಿನ್ಯಾಸ. ಇದರ ರಚನೆ ಮತ್ತು ಉಪಯೋಗ ತೀರ ಸರಳ. ಇಂದಿಗೂ ನಮ್ಮ ಹಳ್ಳಿ ಪಟ್ಟಣಗಳಲ್ಲಿ ಸಾಮಾನ್ಯ ಜನತೆಗೆ ಉರುವಲಿನ ಮುಖ್ಯಾಕರಗಳಲ್ಲಿ ಸೆಗಣಿ ಒಂದು. ಇದನ್ನು ಉಮಿಯೊಡನೆ ಕಲಸಿ ತಟ್ಟಿ ತಯಾರಿಸಿದ ಬೆರಣಿ ಬಹುಜನರ ಉರುವಲು. ಈ ಕ್ರಮದಿಂದ ಗೊಬ್ಬರ ಅಷ್ಟು ಪರಿಣಾಮದಲ್ಲಿ ನಿರ್ನಾಮವಾದಂತೆಯೇ. ಅನಿಲಸ್ಥಾವರವಾದರೋ ಶಾಖೋತ್ಪನ್ನಕ್ಕೆ ಬೇಕಾಗುವ ಉರುವಲನ್ನು (ಅನಿಲ) ಪೂರೈಸುವುದರ ಜೊತೆಗೆ ಸಾಂಪ್ರದಾಯಿಕ ವಿಧಾನದ ಗುಂಡಿಗೊಬ್ಬರಕ್ಕಿಂತಲೂ ಉತ್ತಮ ದರ್ಜೆಯ ಹದ ಬಂದ ಗೊಬ್ಬರವನ್ನು ಸಹ ಒದಗಿಸುತ್ತದೆ. ಈ ಗೊಬ್ಬರದಲ್ಲಿನ ಸಾರಜನಕ ಒಳಪಿಡಿ ಶೇ.2. ಇದು ಸಾಂಪ್ರದಾಯಿಕ ಗೊಬ್ಬರದಲ್ಲಿರುವುದಕ್ಕಿಂತ ಎರಡು ಪಟ್ಟು ಜಾಸ್ತಿ ಎಂದು ಪರೀಕ್ಷೆಯಿಂದ ಗೊತ್ತಾಗಿದೆ. ಇದರ ಜೊತೆಗೆ ಫಾಸ್ಫೇಟ್ ಮತ್ತು ಪೊಟಾಷ್ ಸಹ ಇರುವುವು. ಸ್ಥಾವರದಲ್ಲಿ ಸೆಗಣಿ ಮುಂತಾದವನ್ನು ಬಳಸಿದಾಗ ಯಾವ ವಿಧವಾದ ದುರ್ವಾಸನೆಯೂ ಪಸರಿಸುವುದಿಲ್ಲ. ಅಲ್ಲದೇ ಇದರಲ್ಲಿ ಉತ್ಪಾದನೆಗೊಳ್ಳುವ ಅನಿಲ ಮಸಿ ಅಥವಾ ಸೌದೆ ಹೊಗೆಯಂತೆ ವಿಷಕಾರಿ ಅಲ್ಲ. ಇದು ಕ್ಷಿಪ್ರಾಸ್ಫೋಟಕ ಅನಿಲವಲ್ಲದಿರುವುದರಿಂದ ಇದನ್ನು ನಿರ್ಭಯವಾಗಿ ಬಳಸಬಹುದು.

ಒಂದು ಸಿಂಧೀ ಹಸು ಅಥವಾ ಎತ್ತು ದಿವಸವೊಂದಕ್ಕೆ ಸುಮಾರು 11 ಕಿಗ್ರಾಂಗಳಷ್ಟು ಸೆಗಣಿ ಹಾಕುವುದೆಂದೂ ಇದರಿಂದ 10 ಘ.ಅ. ಗಳಷ್ಟು ಅನಿಲವನ್ನು ಪಡೆಯಬಹುದೆಂದೂ ಗಣನೆಗಳಿಂದ ತಿಳಿದುಬಂದಿದೆ. ಐವರು ಸದಸ್ಯರಿರುವ ಒಂದು ಮಿತಕುಟುಂಬದ ದೈನಂದಿನ ಉಪಯೋಗಕ್ಕೆ ಮೂರು ಬಲವಾದ ಜಾನುವಾರುಗಳು ಇಲ್ಲವೇ ಐದು ಸಾಧಾರಣ ಗಾತ್ರದ ಜಾನುವಾರುಗಳು ಹಾಕುವ ಸೆಗಣಿಯಿಂದ ದೊರೆಯುವ ಅನಿಲ ಸಾಕೆಂದು ಪ್ರತ್ಯಕ್ಷ ಪ್ರಯೋಗಗಳಿಂದ ಸಿದ್ಧವಾಗಿದೆ. (ಎಚ್.ಜಿ.ಎಂ.)

**ಗೊಬ್ಬಳಿ: ನೋಡಿ-ಕರಿಜಾಲಿ**

**ಗೊಬೆಕ್ಲಿ ತೆಪೆ :** ತುರ್ಕಿ ದೇಶದ ಆಗ್ನೇಯ ಭಾಗದಲ್ಲಿ ಇತ್ತೀಚೆಗೆ ಶೋಧಿಸಲ್ಪಟ್ಟ ಪ್ರ.ಶ.ಪೂ.9,000-8,000 ಅವಧಿಯ ನವಶಿಲಾಯುಗದ ನೆಲೆ. ಇಲ್ಲಿ ಕ್ಲಾಸ್‌ಸ್ಮಿಡ್ ನೇತೃತ್ವದಲ್ಲಿ ಜರ್ಮನ್ ಆರ್ಕಿಯಲಾಜಿಕಲ್ ಇನ್‌ಸ್ಟಿಟ್ಯೂಟ್ ನಡೆಸಿದ ಉತ್ಖನನಗಳಲ್ಲಿ ಪ್ರ.ಶ.ಪೂ.ಸು.9000ದಲ್ಲಿ ಕೊನೆಗೊಂಡ ಮಣ್ಪಾತ್ರೆ ರಹಿತ ನವಶಿಲಾಯುಗ ಸಾಂಸ್ಕೃತಿಕ ಹಂತದಲ್ಲಿ ಪ್ರಾಯಶಃ ಪ್ರಪಂಚದಲ್ಲಿಯೇ (ಭಿನ್ನ ಸಂಸ್ಕೃತಿಯ ಮತ್ತು ರೀತಿಯ ಇಂಗ್ಲೆಂಡಿನ ಸ್ಟೋನ್ ಹೆಂಜ್ ಹೊರತುಪಡಿಸಿ) ಅತ್ಯಪೂರ್ವವಾದ ಒಂದು ಭವ್ಯ ಶಿಲಾಸ್ಮಾರಕ ಶೋಧವಾಗಿದೆ. ಸು.13 ಹೆ.ನಷ್ಟು ಸ್ಥಳದಲ್ಲಿ 9-30 ಮೀ ವ್ಯಾಸದ 7 ಏಕಕೇಂದ್ರ ವೃತ್ತಗಳ ಈ ಸ್ಮಾರಕದ ಪ್ರಮುಖ ಭಾಗ ಪ್ರ.ಶ.ಪೂ.ಸು.10,000 ವರ್ಷಗಳಷ್ಟು ಹಿಂದೆ ನಿರ್ಮಿಸಲ್ಪಟ್ಟಿದೆಯೆಂದು ತರ್ಕಿಸಲಾಗಿದೆ. ಇಂತಹ ಮೂರು ವೃತ್ತಗಳನ್ನು ಉತ್ಖನನ ಮಾಡಲಾಗಿದೆ. ಇವುಗಳಲ್ಲಿ ಸುಟ್ಟ ಸುಣ್ಣ ಮತ್ತು ಮಣ್ಣಿನ ಮಿಶ್ರಣದ ನೆಲವಿತ್ತು. ಇದರ ಮೇಲೆ 2.70 ಮೀ ಎತ್ತರದಲ್ಲಿ ಚಾವಣಿಯಿದ್ದಿತ್ತೆಂದು ಕಾಣುತ್ತದೆ. ವೃತ್ತಗಳಲ್ಲಿ ಲ್ಯಾಟಿನ್ ಲಿಪಿಯ 'ಟಿ' ಆಕಾರದ ಚಪ್ಪಟೆ ಕಂಬಗಳಿದ್ದು ಇವುಗಳ ಮೇಲೆ ಗೂಳಿ, ನರಿ, ಕೊಕ್ಕರೆ, ಸಿಂಹ, ಬಾತುಕೋಳಿ, ಕೊಂಡಿಚೇಳು, ಇರುವೆ, ಜೇಡ, ಹಾವು ಮೊದಲಾದ ಜೀವರಾಶಿಗಳ ಶಿಲ್ಪವಿರುವುದು ಅತಿ ಅಪರೂಪ. ಈ ಕಂಬಗಳನ್ನು ಆವರಿಸಿ ಸುತ್ತಲೂ ಸು.1.8 ಮೀ ಎತ್ತರದ ಕಲ್ಲಿನ ಗೋಡೆಯಿದೆ. ಉತ್ಖನನದಲ್ಲಿ ಮನುಷ್ಯನ ಮೂರ್ತಿ, ಕರಡಿ ಮತ್ತು

ಹದ್ದಿನ ತಲೆಯ ಶಿಲ್ಪಗಳು ಸಿಕ್ಕಿವೆ. ಇದನ್ನು ಎರಡು ಘಟ್ಟಗಳಲ್ಲಿ ಕಟ್ಟಲಾಗಿದ್ದು ಮೊದಲನೆಯ ಘಟ್ಟ ನವಶಿಲಾಯುಗ ಎ ಮತ್ತು ಕೊನೆಯ ಘಟ್ಟವನ್ನು ನವಶಿಲಾಯುಗ ಬಿ ಹಂತದಲ್ಲಿ ಪೂರೈಸಲಾಯಿತು. ಟಿ ಆಕಾರದ ಸ್ತಂಭಗಳು ಮತ್ತು ಪ್ರಾಣಿಶಿಲ್ಪಗಳು ಮೊದಲನೆಯ ಹಂತಕ್ಕೆ ಸೇರಿವೆ. ಸು.10–50 ಟನ್ ತೂಕದ ಕಂಬಗಳನ್ನು ಸು.0.5 ಕಿಮೀ ದೂರದ ಬೆಟ್ಟದ ಕಣಿವೆಯಲ್ಲಿ ಸಿದ್ಧಮಾಡಿ, ನಿಗದಿತ ಸ್ಥಳಕ್ಕೆ ಸಾಗಿಸಲಾಗಿದೆ. ಈ ಸ್ಮಾರಕದ ನಿರ್ಮಾಣ ಕಾರ್ಯದಲ್ಲಿ ಸು.500 ಜನರು ಕೆಲಸ ಮಾಡಿರಬೇಕೆಂದು ಅಂದಾಜು ಮಾಡಲಾಗಿದೆ.

ಈ ಬೃಹತ್ ಶಿಲಾಸ್ಮಾರಕದ ಹತ್ತಿರದ ಬೆಟ್ಟದ ಮೇಲೆ ಹಲವಾರು ಪ್ರಾಚೀನ ಸಮಾಧಿಗಳಿವೆ. ಇವು ಪ್ರಾಯಶಃ ಈ ಸ್ಮಾರಕದ ಮೊದಲನೆಯ ಘಟ್ಟದ ಕಾಲದ್ದಾಗಿರಬಹುದೆಂಬ ಅಭಿಪ್ರಾಯ. ಬೃಹತ್ ಶಿಲಾಸ್ಮಾರಕದ ಉತ್ಖನನದಲ್ಲಿ ಪ್ರಾಯಶಃ ಬಲಿಕೊಟ್ಟ ಜಿಂಕೆ, ಕರಡಿ, ಹೋತ, ಕುರಿ, ಎತ್ತು, ನಾನಾ ಜಾತಿಯ ಹದ್ದುಗಳು ಮೊದಲಾದ ಕಾಡುಪ್ರಾಣಿಪಕ್ಷಿಗಳ ಅಸ್ಥಿ ಅವಶೇಷಗಳು ದೊರೆತಿವೆ. ಇವೆಲ್ಲವನ್ನೂ ಗಮನಿಸಿ ಪ್ರಾಯಶಃ ಈ ಬೃಹತ್ ಶಿಲಾಸ್ಮಾರಕ ಹಿಂದಿನ ತಲೆಮಾರಿನ ಪಿತೃಗಳ ಆರಾಧನೆಗೆ ಸಂಬಂಧಿಸಿದೆಯೆಂದು ತರ್ಕಿಸಲಾಗಿದೆ. (ಎ.ಎಸ್.)

**ಗೊಮ್ಮಟೇಶ್ವರ :** ಆದಿತೀರ್ಥಂಕರ ವೃಷಭನಾಥನ (ಪುರದೇವ) ಕಿರಿಯ ಮಗ. ಭರತನ ತಮ್ಮ. ಬಾಹುಬಲಿ ಪರ್ಯಾಯನಾಮ. ಭುಜಬಲಿ, ಕುಕ್ಕುಟೇಶ್ವರ ಇತರ ಹೆಸರುಗಳು.

ಬಾಹುಬಲಿಯ ಬಗ್ಗೆ ಜೈನ ಪರಂಪರೆಯಲ್ಲಿ ಬರುವ ಕಥೆ ಈ ರೀತಿ ಇದೆ. ಆದಿತೀರ್ಥಂಕರ ಸಂಸಾರದ ಅಸಾರತೆಯನ್ನು ಕಂಡು ತಪಸ್ಸಿಗೆ ಹೊರಡುವ ಮುನ್ನ ಹಿರಿಯ ಮಗ ಭರತನಿಗೆ ರಾಜ್ಯಾಭಿಷೇಕ ಮಾಡಿ ಬಾಹುಬಲಿ ಮತ್ತು ಅವನ ತಮ್ಮಂದಿರಿಗೆ ಬೇರೆ ಬೇರೆ ರಾಜ್ಯಗಳನ್ನು ಕೊಟ್ಟ. ಬಾಹುಬಲಿಗೆ ಪೌದನಪುರದ ರಾಜ್ಯ ಪ್ರಾಪ್ತವಾಯಿತು. ಹೀಗಿರುವಲ್ಲಿ ಭರತ ತನ್ನ ಭಂಡಾರದಲ್ಲಿ ಉದಯಿಸಿದ ಚಕ್ರರತ್ನವನ್ನು ಮುಂದಿಟ್ಟುಕೊಂಡು ಸಮಸ್ತ ಭೂಮಂಡಲವನ್ನೂ ಗೆದ್ದು ಚಕ್ರವರ್ತಿಯಾಗಿ ಹಿಂದಿರುಗಿದಾಗ ಅವನ ತಮ್ಮಂದಿರೇ ಅವನಿಗೆ ಇನ್ನೂ ವಶವಾಗದುದನ್ನು ಕಂಡು ಅವರಿಗೆ ನಿರೂಪವನ್ನು ಕಳುಹಿಸಿದ. ಆದರೆ ಅವರೆಲ್ಲರೂ ಅವನಿಗೆ ವಶವಾಗದೆ ರಾಜ್ಯವನ್ನು ಬಿಟ್ಟು ತಪೋನಿರತರಾದರು. ಸ್ವಾಭಿಮಾನಿಯಾದ ಬಾಹುಬಲಿಯಾದರೋ ತಂದೆ ಕೊಟ್ಟ ರಾಜ್ಯದಲ್ಲಿ ತಾನಿರುವುದಾದ್ದರಿಂದ ಯುದ್ಧದಲ್ಲಿ ಸೋಲಿಸಿ ಬೇಕಾದರೆ ಭರತ ರಾಜ್ಯವನ್ನು ಪಡೆದುಕೊಳ್ಳಬಹುದೆಂದು ತಿಳಿಸಿದ. ಅಂತೆಯೇ ಇಬ್ಬರಿಗೂ ದ್ವಂದ್ವಯುದ್ಧ ನಡೆದು, ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧ ಈ ಮೂರರಲ್ಲಿಯೂ ಬಾಹುಬಲಿಯೇ ಗೆದ್ದ.

ಇದರಿಂದ ಕುಪಿತನಾದ ಭರತ ನ್ಯಾಯಾನ್ಯಾಯವನ್ನು ವಿವೇಚಿಸದೆ ಬಾಹುಬಲಿಯ ಮೇಲೆ ಚಕ್ರರತ್ನವನ್ನು ಪ್ರಯೋಗಿಸಿದ. ಆದರೆ ಬಾಹುಬಲಿಗೆ ಇದರಿಂದ ಏನೂ ಆಗಲಿಲ್ಲ. ಕೊನೆಗೆ ಭರತ ಸೋತ. ಬಾಹುಬಲಿ ಗೆದ್ದರೂ ತನ್ನ ಅಣ್ಣನನ್ನು ಸೋಲಿಸಿ ರಾಜ್ಯವನ್ನು ಆಕ್ರಮಿಸಿಕೊಳ್ಳುವುದಕ್ಕಿಂತ ಸಂಸಾರವನ್ನು ತ್ಯಜಿಸುವುದು ಲೇಸೆಂದು ಬಗೆದು ತಾನು ಆಗತಾನೇ ಗೆದ್ದಿದ್ದ ಚಕ್ರಾಧಿಪತ್ಯವನ್ನೂ ತನ್ನ ರಾಜ್ಯವನ್ನೂ ಭರತನಿಗೊಪ್ಪಿಸಿ ಘೋರವಾದ ತಪಸ್ಸಿನಲ್ಲಿ ನಿರತನಾದ. ಹೀಗೆ ನಿಶ್ಚಲನಾಗಿ ಪ್ರತಿಮಾಯೋಗದಿಂದ ಕಠಿಣ ತಪೋನಿರತನಾಗಿ ನಿಂತ ಬಾಹುಬಲಿಯ ಸುತ್ತಲೂ ಹುತ್ತ ಬೆಳೆದು ಬಳ್ಳಿಗಳು ಇವನ ದೇಹವನ್ನು ಆವರಿಸಿದುವು. ಕುಕ್ಕುಟ ಸರ್ಪಗಳು ಹರಿದಾಡಲಾರಂಭಿಸಿದವು. ತಾನು ಕೊಟ್ಟ ಭೂಮಿಯಲ್ಲಿಯೇ ತಪಸ್ಸಿಗೆ ನಿಲ್ಲಬೇಕಾಯಿತಲ್ಲ ಎನ್ನುವ ಒಂದು ಅಭಿಮಾನ ಅವನಲ್ಲಿ ಬಾಧಿಸುತ್ತಿದ್ದುದರಿಂದ ಇಷ್ಟು ಘೋರ ತಪಸ್ಸಿನಲ್ಲಿದ್ದರೂ ಬಾಹುಬಲಿಗೆ ಕೇವಲಜ್ಞಾನ ಲಭಿಸಲಿಲ್ಲ. ಅನಂತರ ಭರತನೇ ಅವನ ಕಾಲಿಗೆರಗಿ ಆ ಮನಃ ಕಷಾಯವನ್ನು ಬಿಡುವಂತೆ ಬೇಡಿಕೊಂಡಾಗ ಕೇವಲಜ್ಞಾನ ಉಂಟಾಯಿತು. ಕೇವಲಿಯಾದ ಈತನ ಪ್ರತಿಮೆಯನ್ನು ಭರತ ಪೌದನಪುರದಲ್ಲಿ ಪ್ರತಿಷ್ಠಾಪಿಸಿದ.

ಬಾಹುಬಲಿಯ ಕಲ್ಪನೆ ಕರ್ನಾಟಕದಲ್ಲಿ ಬಹು ಜನಪ್ರಿಯವಾಗಿದೆ. ಅನೇಕ ಜೈನಕವಿಗಳು ಈ ಕಥೆಯನ್ನೂ ಬಾಹುಬಲಿಯ ಹಿರಿಯ ಗುಣಗಳನ್ನೂ ತಮ್ಮ ಕೃತಿಗಳಲ್ಲಿ ಅಳವಡಿಸಿದ್ದಾರೆ. ಇವನ ಅತಿಶಯವಾದ ಗುಣಗಳನ್ನು ಕವಿ ಬೊಪ್ಪಣ ಪಂಡಿತ ಹೀಗೆ ವರ್ಣಿಸಿದ್ದಾನೆ:

ಅನುಪಮರೂಪನೇ ಸ್ಮರನುದಗ್ರನೆ ನಿರ್ಜಿತಚಕ್ರಿ ಮತ್ತುದಾ
ರನೆ ನೆಜೆಗೆಲ್ದುಮಿತ್ತನಖಿಳೋರ್ವಿಯನತ್ಯಭಿಮಾನಿಯೇ ತಪಃ
ಸ್ಥನುಮೆರಡಂಘ್ರಿಯಿತ್ತೆಳೆಯೊಳಿರ್ದಪುದೆಂಬನನೂನಬೋಧನೇ
ವಿನಿಹತಕರ್ಮಬಂಧನನೆ ಬಾಹುಬಲೀಶನಿದೇನುದಾತ್ತನೋ

ಬಾಹುಬಲಿಗಿರುವ ಗೊಮ್ಮಟೇಶ್ವರ ಎಂಬ ಪರ್ಯಾಯ ನಾಮವೂ ಕರ್ನಾಟಕದ ಕಾಣಿಕೆಯೆಂದೇ ಕಾಣುತ್ತದೆ. ಗೊಮ್ಮಟ ಎಂದರೆ ಸುಂದರ ಎಂದು ಅರ್ಥ. ಸುಂದರಕಾಯನಾಗಿದ್ದ ಬಾಹುಬಲಿಗೆ ಮನ್ಮಥ ಎಂಬ ಹೆಸರೂ ಇತ್ತು. ಮನ್ಮಥ ಎಂಬ ಪದದ ತದ್ಭವವೇ ಗೊಮ್ಮಟ ಎಂದು ಒಂದು ಅಭಿಪ್ರಾಯ. ಶ್ರವಣಬೆಳಗೊಳದ ಮೂರ್ತಿಯ ನಿರ್ಮಾಣದ ಕಾಲಕ್ಕಿಂತ ಮುಂಚೆ ಬಾಹುಬಲಿಗೆ ಎಲ್ಲಿಯೂ ಗೊಮ್ಮಟನೆಂಬ ಹೆಸರು ಕಾಣಿಸದೆಂದೂ ಶ್ರವಣಬೆಳಗೊಳದ ಮೂರ್ತಿಯ ನಿರ್ಮಾಣಕ್ಕೆ ಕಾರಣನಾದ ಚಾಮುಂಡರಾಯನಿಗೆ ಗೊಮ್ಮಟನೆಂಬ ಹೆಸರಿದ್ದು ಆತ ಪ್ರತಿಷ್ಠಾಪಿಸಿದ ಬಾಹುಬಲಿ ಮೂರ್ತಿಗೆ ಗೊಮ್ಮಟೇಶ್ವರನೆಂಬ ಹೆಸರು ಅನಂತರ ಬಂದಿದೆ ಎಂಬುದೂ ಇನ್ನೊಂದು ಅಭಿಪ್ರಾಯ. ಅದು ಹೇಗಿದ್ದರೂ ಬಾಹುಬಲಿಯ ಮೂರ್ತಿಗಳು ಎಲ್ಲಿದ್ದರೂ ಅವಕ್ಕೆಲ್ಲ ಈಗ ಗೊಮ್ಮಟೇಶ್ವರ ಎಂಬ ಹೆಸರೇ ಸಿದ್ಧವಾಗಿದೆ.

ಗೊಮ್ಮಟೇಶ್ವರನ ಮೂರ್ತಿಗಳನ್ನು ಸ್ಥಾಪಿಸುವುದರಲ್ಲಿ ಕರ್ನಾಟಕ ಹೆಚ್ಚು ಉತ್ಸುಕತೆಯನ್ನು ತೋರಿದೆ. ಉತ್ತರ ಭಾರತ, ಮತ್ತಿತರೆಡೆಗಳಲ್ಲಿ ಬಾಹುಬಲಿಯ ಮೂರ್ತಿ ಗವಿಗಳಲ್ಲೋ ಬಸದಿಗಳಲ್ಲೋ ಹಲವು ಶಿಲ್ಪಗಳ ಜೊತೆಯಲ್ಲಿ ಸಾಮಾನ್ಯ ರೀತಿಯಲ್ಲಿ ಅಲ್ಪಸಂಖ್ಯೆಯಲ್ಲಿ ಕಂಡುಬಂದರೆ ಕರ್ನಾಟಕದಲ್ಲಿ ಇದರ ನಿರೂಪಣೆ ಗಮನಾರ್ಹ ರೀತಿಯಲ್ಲಿ ಕಾಣುತ್ತದೆ. ಬೆಟ್ಟಗಳ ಮೇಲೆ ಎತ್ತರದ ಗೊಮ್ಮಟೇಶ್ವರ ವಿಗ್ರಹಗಳನ್ನು ಸ್ಥಾಪಿಸಿರುವುದಂತೂ ಕರ್ನಾಟಕದ ಒಂದು ವೈಶಿಷ್ಟ್ಯ.

ಬಾಹುಬಲಿ ಮೂರ್ತಿಯ ಪ್ರತಿಷ್ಠಾಪನೆಯ ಮೊದಲ ಉಲ್ಲೇಖ ಕದಂಬ ರವಿವರ್ಮನ ಗುಡ್ನಾಪುರ ಶಾಸನದಲ್ಲಿದೆ (ಸು.500). ಆ ಶಾಸನದಲ್ಲಿ ಗೊಮ್ಮಟೇಶ್ವರ ಎಂಬ ಹೆಸರಿಲ್ಲ. ಆದರೆ ಅದು ಮನ್ಮಥದೇವಾಲಯದ ಸ್ಥಾಪನೆಯನ್ನು ತಿಳಿಸಿ ಮುಂದೆ ಅದನ್ನೇ ಕಾಮಜಿನಾಲಯ ಎಂದು ಕರೆಯಲಾಗಿರುವುದರಿಂದ ಅದು ಗೊಮ್ಮಟನ ದೇವಾಲಯವಿರಬೇಕೆಂಬ ಸೂಚನೆಯಿದೆ.

ಭಾರತದಲ್ಲಿ ಇದುವರೆಗೆ ಗುರುತಿಸಲಾಗಿರುವ ಗೊಮ್ಮಟ ವಿಗ್ರಹಗಳಲ್ಲಿ ಅತಿ ಪ್ರಾಚೀನ ವಿಗ್ರಹ ಕಂಡುಬಂದಿರುವುದು ಕರ್ನಾಟಕದಲ್ಲಿಯೇ. ಈ ವಿಗ್ರಹ ಬಾದಾಮಿಯಲ್ಲಿದೆ. ಅಲ್ಲಿನ ಜೈನ ಗುಹೆಯಲ್ಲಿ ಗುಹೆಯ ಪಡಸಾಲೆಯಲ್ಲಿ ಎಡಗಡೆ ಉಬ್ಬುಶಿಲ್ಪವಾಗಿ ಕೆತ್ತಲಾಗಿದೆ. ಇದು ಬಾದಾಮಿಯ ಚಳುಕ್ಯರ ಕಾಲದ ಶಿಲ್ಪ. ನಿರ್ಮಾಣದ ಕಾಲ ಸು.7ನೆಯ ಶತಮಾನದ ಆದಿಭಾಗ. ಸು.7.5' ಎತ್ತರವಿರುವ ಕಾಯೋತ್ಸರ್ಗ ಭಂಗಿಯಲ್ಲಿರುವ ವಿಗ್ರಹದ ಪಾದದ ಬಳಿಯಲ್ಲಿ ಹಾವುಗಳು ಹರಿದಾಡುತ್ತಿರುವ ಹುತ್ತವನ್ನು ಬಿಡಿಸಲಾಗಿದೆ. ಮಾಧವೀಲತೆಗಳು ಕೈಕಾಲುಗಳನ್ನು ಸುತ್ತಿಕೊಂಡಿವೆ. ತಲೆಗೂದಲು ಭುಜದವರೆಗೂ ಇಳಿದಂತಿರುವುದು ಈ ಶಿಲ್ಪದ ಗಮನಾರ್ಹ ಅಂಶ. ಕಾಲಾನುಕ್ರಮದಲ್ಲಿ ಮುಂದಿನದು ಐಹೊಳೆಯ ಮೇಣಬಸದಿಯಲ್ಲಿದೆ. ಇದರ ಕಾಲ ಸು.7ನೆಯ ಶತಮಾನದ ಮಧ್ಯಭಾಗ. ಇದೂ ಕಾಯೋತ್ಸರ್ಗ ಭಂಗಿಯಲ್ಲಿದ್ದು ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟಿದೆ. ಕಾಲುಗಳ ಬಳಿಯಲ್ಲಿ ಸರ್ಪಗಳಿವೆ. ಮೂರ್ತಿಯ ಅಕ್ಕಪಕ್ಕದಲ್ಲಿ ಸರ್ವಾಂಲಕಾರಭೂಷಿತ ಸ್ತ್ರೀಯರಿಬ್ಬರು ಬಳ್ಳಿಗಳನ್ನು ಹಿಡಿದುಕೊಂಡಿದ್ದಾರೆ. ಇವರನ್ನು ಬಾಹುಬಲಿಯ ಸೋದರಿಯರೆಂದು ಊಹಿಸಲಾಗಿದೆ.

ಸು.9ನೆಯ ಶತಮಾನದಲ್ಲಿ ಬಹುಶಃ ಅಮೋಘವರ್ಷ ನೃಪತುಂಗನ ಆಳಿಕೆಯಲ್ಲಿ ಕೊರೆಯಿಸಲಾದ ಎಲ್ಲೋರದ ಎಲ್ಲ ಜೈನಗುಹೆಗಳಲ್ಲೂ ಗೊಮ್ಮಟೇಶ್ವರನ ವಿಗ್ರಹಗಳು ಕಂಡುಬರುತ್ತವೆ. ಇಲ್ಲಿನ ವಿಶೇಷವೆಂದರೆ ಒಂದು ಪಕ್ಕದಲ್ಲಿ ಗೊಮ್ಮಟಮೂರ್ತಿ ಇದ್ದರೆ ಮತ್ತೊಂದು ಪಕ್ಕದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯಿರುವುದು. ಈ ಸಂಪ್ರದಾಯವನ್ನು ಬಾದಾಮಿಯ ಜೈನಗುಹೆಯಲ್ಲೇ ಕಾಣಬಹುದು. ಚಿಕ್ಕ ಕೈಲಾಸವೆಂದು ಪ್ರಸಿದ್ಧವಾಗಿರುವ 30ನೆಯ ಗುಹೆಯಲ್ಲಿ ಎರಡು ಗೊಮ್ಮಟ ವಿಗ್ರಹಗಳಿವೆ. 31ನೆಯ ಗುಹೆಯ ಪಡಸಾಲೆಯ ಬಲಭಾಗದ ಗೋಡೆಯಲ್ಲೊಂದು ಗೊಮ್ಮಟೇಶ್ವರ ಮೂರ್ತಿಯನ್ನು ಬಿಡಿಸಲಾಗಿದೆ. ಇಲ್ಲಿ ಮೂರ್ತಿಯ ಬಲಗಡೆ ಆಕಾಶದಲ್ಲಿ ಗಂಧರ್ವನೊಬ್ಬ ಹಾರವನ್ನು ಹಿಡಿದಿದ್ದಾನೆ. ಎಡಗಡೆ ಆಕಾಶದಲ್ಲಿ ದಂಪತಿಗಳು ಮತ್ತು ಹಾರ ಹಿಡಿದಿರುವ ಗಂಧರ್ವರನ್ನು ಕೊರೆಯಲಾಗಿದೆ. ಮೂರ್ತಿಯ ಸಮೀಪದಲ್ಲಿ ಸ್ತ್ರೀಯರಿಬ್ಬರು ನಮಸ್ಕಾರ ಮುದ್ರೆಯಲ್ಲಿ ಕಾಣುತ್ತಾರೆ. ಇಂದ್ರಸಭೆಯೆಂದು ಪ್ರಖ್ಯಾತವಾಗಿರುವ 32ನೆಯ ಗುಹೆಯಲ್ಲಿ ಆರು ಗೊಮ್ಮಟಮೂರ್ತಿಗಳು ಇವೆ. ಎಲ್ಲೋರದಲ್ಲಿರುವ ಗೊಮ್ಮಟ ಮೂರ್ತಿಗಳಲ್ಲೆಲ್ಲಾ ಅತ್ಯಂತ ಸುಂದರವೂ ಗಮನಾರ್ಹವೂ ಆದ ಒಂದು ಮೂರ್ತಿ ಈ ಗುಹೆಯಲ್ಲಿದೆ. ಮೂರ್ತಿಯ ದೇಹ ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟಿದೆ. ಸುತ್ತಮುತ್ತ ಸಕಲಜೀವರಾಶಿಗಳು ಕಂಡುಬರುತ್ತವೆ. ಇವುಗಳಲ್ಲಿ ಜಿಂಕೆ ಸರ್ಪ ಇಲಿ ಚೇಳುಗಳೆ ಅಲ್ಲದೆ ನಾಯಿಯೊಂದನ್ನು ಸ್ಪಷ್ಟವಾಗಿ ಗುರುತಿಸಬಹುದು. ಬಲಭಾಗದಲ್ಲಿ ಪುರುಷನೊಬ್ಬನಿದ್ದಾನೆ. ಅಕ್ಕಪಕ್ಕದಲ್ಲಿ ಸ್ತ್ರೀಯರಿಬ್ಬರ ಪ್ರತಿಮೆಗಳನ್ನು ಕಾಣಬಹುದು. ಪುರುಷ ಪ್ರತಿಮೆ ಅಣ್ಣನಾದ ಭರತನೆಂದೂ ಸ್ತ್ರೀಯರ ಪ್ರತಿಮೆಗಳು ಸಹೋದರಿಯರಾದ ಬ್ರಾಹ್ಮೀ ಮತ್ತು ಸುಂದರಿಯರೆಂದೂ ಅರ್ಥೈಸಲಾಗಿದೆ. ಇದು ಮನಃಕಷಾಯವನ್ನು ಬಿಡು ಎಂದು ಬಾಹುಬಲಿಯನ್ನು ಪ್ರಾರ್ಥಿಸುವ ಸಂದರ್ಭವನ್ನು ಚೆನ್ನಾಗಿ ಹೋಲುತ್ತದೆ. 33ನೆಯ ಗುಹೆಯಲ್ಲಿ ಎರಡು, 34ನೆಯ ಗುಹೆಯಲ್ಲಿ ಒಂದು ಗೊಮ್ಮಟಮೂರ್ತಿಯಿವೆ. ಹೀಗೆ ಎಲ್ಲೋರದ ಗುಹೆಗಳಲ್ಲಿ ಸುಮಾರು ಹನ್ನೆರಡು ಗೊಮ್ಮಟಮೂರ್ತಿಗಳು ಕಂಡುಬರುತ್ತವೆ. ವಿಗ್ರಹಗಳನ್ನು ಶಿಲಾಭಿತ್ತಿಯಲ್ಲಿ ಕೊರೆದಿರುವುದರಿಂದ ಅದೇ ಭಿತ್ತಿಯಲ್ಲಿ ಆಕಾಶದಲ್ಲಿ ಗಂಧರ್ವರು ಹಾರವನ್ನು

ಹಿಡಿದಿರುವುದನ್ನು ತೋರಿಸಿರುವುದು, ಗುಂಗುರು ಗುಂಗುರಾದ ತಲೆಗೂದಲು ಕೆಲವು ವಿಗ್ರಹಗಳಲ್ಲಿ ಭುಜದವರೆಗೂ ಇನ್ನು ಕೆಲವು ಕಡೆ ಮುಂಭಾಗದಲ್ಲಿ ಭುಜದಿಂದ ಇಳಿದು ಕಂಕುಳ ಹತ್ತಿರದವರೆಗೂ ಇರುವಂತೆ ತೋರಿಸುವುದು, ಗೊಮ್ಮಟನ ಅಕ್ಕಪಕ್ಕದಲ್ಲಿ ಸ್ತ್ರೀಯರಿಬ್ಬರು ಮತ್ತು ಮುಂಭಾಗದಲ್ಲಿ ಪುರುಷ ಇರುವಂತೆ ಕೆತ್ತಿರುವುದು ಎಲ್ಲೋರದ ಗೊಮ್ಮಟ ವಿಗ್ರಹಗಳ ವೈಶಿಷ್ಟ್ಯಗಳು.

ಶ್ರವಣಬೆಳಗೊಳದ ಗೊಮ್ಮಟ ವಿಗ್ರಹ ಲೋಕಪ್ರಸಿದ್ಧವಾಗಿದೆ. ಇದು ಪ್ರಪಂಚದ ಶಿಲ್ಪಕಲೆಗೆ ಕರ್ನಾಟಕದ ಅನುಪಮ ಕಾಣಿಕೆ. ಪ್ರಾಚೀನ ಶಿಲ್ಪಗಳಲ್ಲಿ ಪ್ರಪಂಚದಲ್ಲೇ ಅತ್ಯಂತ



ಜಗತ್ಪ್ರಸಿದ್ಧ ಗೊಮ್ಮಟ ವಿಗ್ರಹ, ಶ್ರವಣಬೆಳಗೊಳ

ಎತ್ತರವಾದ ಏಕಶಿಲಾ ಪೂರ್ಣಶಿಲ್ಪ. ಬೆಟ್ಟದ ತುದಿಯಲ್ಲಿ ಎದ್ದುನಿಂತಿದ್ದ ಕೋಡುಗಲ್ಲಿನಿಂದ ಈ ವಿಗ್ರಹವನ್ನು ಕೆತ್ತಲಾಗಿರುವುದು ಈ ವಿಗ್ರಹದ ವಿಶೇಷ. ಈ ವಿಗ್ರಹದ ಎತ್ತರದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿದ್ದುವು. ಈಚೆಗೆ ಅಳತೆ ಮಾಡಿರುವ ಪ್ರಕಾರ ಇದರ ಪ್ರಮಾಣದ ವಿವರಗಳು ಹೀಗಿವೆ: ಒಟ್ಟು ಮೂರ್ತಿಯ ಎತ್ತರ 58', ಕಿವಿಯ ಕೆಳಭಾಗದವರೆಗಿನ ಎತ್ತರ 51', ಕಿವಿಯ ಕೆಳಭಾಗದಿಂದ ನೆತ್ತಿಯವರೆಗಿನ ಎತ್ತರ ಸು.6'6", ಪಾದದ ಉದ್ದ 8'3", ಕಾಲ ಹೆಬ್ಬೆರಳಿನ ಉದ್ದ 2'9", ತೊಡೆಯ ಉದ್ದ 10', ಕಿಬ್ಬೊಟ್ಟೆಯ ಅಡ್ಡಳತೆ 10', ಸೊಂಟದ ಅಡ್ಡಳತೆ 30', ಭುಜಗಳ ನಡುವೆ ಇರುವ ವಿಸ್ತಾರ 23½', ಕುತ್ತಿಗೆಯ ಕೆಳಭಾಗದಿಂದ ಕಿವಿಯವರೆಗೆ 2'7", ತೋರುಬೆರಳಿನ ಉದ್ದ 3'9", ನಡುಬೆರಳಿನ ಉದ್ದ 5', ಅನಾಮಿಕದ ಉದ್ದ 4'8", ಕಿರುಬೆರಳಿನ ಉದ್ದ 3'2". ಕಾಯೋತ್ಸರ್ಗಭಂಗಿಯಲ್ಲಿ ನಿಂತಿರುವ ಈ ಗೊಮ್ಮಟನ ಪ್ರತಿಮೆ ಬೃಹತ್ತಾಗಿರುವಷ್ಟೇ ಸುಂದರವೂ ಆಗಿದೆ. ಕೆಳಗೆ ತಾವರೆಯ ದಳಗಳನ್ನು ಕೆತ್ತಿದ್ದು ತಾವರೆಹೂವಿನ ಪೀಠದ ಮೇಲೆ ಮೂರ್ತಿ ನಿಂತಂತೆ ಕಾಣುತ್ತದೆ. ಪಾದಗಳ ಬಳಿ ಹುತ್ತ ಬೆಳೆದಂತೆ ಕೆತ್ತಲಾಗಿದೆ. ಹುತ್ತದ ಬಾಯಿಗಳಲ್ಲಿ ಸರ್ಪಗಳು ಓಡಾಡುತ್ತಿವೆ. ಬಳ್ಳಿಗಳು ಕಾಲನ್ನು ಸುತ್ತಿಕೊಂಡು ಹಬ್ಬಿ ಕೈಗಳಲ್ಲಿ ಬೆಳೆದು ಭುಜಗಳಲ್ಲಿ ಕೊನೆಗೊಂಡಿವೆ. ತಲೆಯಲ್ಲಿನ ಕೂದಲುಗಳು ಗುಂಗುರುಗುಂಗುರಾಗಿವೆ. ಆದರೆ ಇದು ಭುಜದವರೆಗೆ ಇಳಿದಿಲ್ಲ. ಹುತ್ತ ಹಬ್ಬಿ ಹಾವುಗಳು ಹರಿದಾಡಿದರೂ ಬಳ್ಳಿಗಳು ಬೆಳೆದು ತಬ್ಬಿಕೊಂಡರೂ ಅಚಲವಾದ ಮನಸ್ಸನ್ನೂ ತಪಸ್ಸಿನ ದೃಢತೆಯನ್ನೂ ಮೂರ್ತಿಯ ಮುಖಭಾವದಲ್ಲಿ ಮೂಡಿಸಲಾಗಿದೆ. ಅದರಲ್ಲಿಯೂ ಕಷ್ಟಕಾರ್ಪಣ್ಯಗಳಿಂದ ತುಂಬಿರುವ ಪ್ರಪಂಚದ ಕಡೆ ಮರುಕದಿಂದ ಕಿರುನಗೆ ಸೂಸುತ್ತಿರುವಂತೆ ತೋರುವ ಮುಖದ ಭಾವ ವರ್ಣನಾತೀತವಾದುದು. ತ್ಯಾಗವೈರಾಗ್ಯಗಳು ಹೊರಹೊಮ್ಮುತ್ತಿರುವ ಈ ಮೂರ್ತಿಯ ಗಾಂಭೀರ್ಯ ಆಕರ್ಷಣೀಯ, ಅನುಪಮ. ಈ ವಿಗ್ರಹದ ಔನ್ನತ್ಯ, ಸೌಂದರ್ಯ ಮತ್ತು ಅತಿಶಯಗಳನ್ನು ಕುರಿತು ಬೊಪ್ಪಣಕವಿ ಹೀಗೆ ಹೇಳಿದ್ದಾನೆ:

ಅತಿತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯಮೌನ್ನತ್ಯಮುಂ<br>
ನುತ ಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ<br>
ನುತ ಸೌಂದರ್ಯಮುಮಾರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ<br>
ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರಜಿನಶ್ರೀರೂಪಮಾತ್ಮೋಪಮಂ

ಗಂಗ ರಾಚಮಲ್ಲನ ಮಂತ್ರಿಯಾದ ಚಾವುಂಡರಾಯ ಈ ಮೂರ್ತಿಯ ನಿರ್ಮಾಪಕ. ಈ ಬಾಹುಬಲಿ ಮೂರ್ತಿಯ ಪಕ್ಕದಲ್ಲಿರುವ 10ನೆಯ ಶತಮಾನದ ಮೂರು ಶಾಸನಗಳು ಚಾವುಂಡರಾಯ ಮಾಡಿಸಿದ ಎಂದು ಸ್ಪಷ್ಟವಾಗಿ ತಿಳಿಸುತ್ತವೆ. 978ರಲ್ಲಿ ಚಾವುಂಡರಾಯನೇ ಬರೆದಿರುವ 'ಚಾವುಂಡರಾಯ ಪುರಾಣ'ದಲ್ಲಿ ತನ್ನ ಜೀವನ, ಸಾಹಸಕಾರ್ಯ, ಯುದ್ಧಕೌಶಲ ಇತ್ಯಾದಿ ಸ್ವಕೀಯ ವಿಚಾರಗಳನ್ನು ಹೇಳಿಕೊಂಡಿದ್ದರೂ ಅದರಲ್ಲಿ ಗೊಮ್ಮಟವಿಗ್ರಹ ನಿರ್ಮಾಣದ ಪ್ರಸ್ತಾಪವಿಲ್ಲದಿರುವುದರಿಂದ 978ಕ್ಕೆ ಮುಂಚೆ ಈ ವಿಗ್ರಹದ

ಕಾರ್ಕಳದ ಮೂರ್ತಿ

ನಿರ್ಮಾಣವಾಗಿಲ್ಲವೆಂದು ಹೇಳಬಹುದು. ಈಗಿರುವ ಆಧಾರಗಳ ಮೇಲೆ ಇದನ್ನು ಸು.983ರಲ್ಲಿ ಕೆತ್ತಿಸಿ ಮುಗಿಸಿರಬೇಕೆಂದು ತಿಳಿಯಲಾಗಿದೆ. ಚಾವುಂಡರಾಯನ ತಾಯಿ ಕಾಳಲದೇವಿ ಪೌದನಪುರದ ಬಾಹುಬಲಿಯನ್ನು ನೋಡಲು ಅಪೇಕ್ಷಿಸಿದಳು. ದೂರದ ದುರ್ಗಮ ಪೌದನಪುರಕ್ಕೆ ಹೋಗುವುದು ಕಷ್ಟವಾಗಿದ್ದುದರಿಂದ ತನ್ನ ತಾಯಿಯ ಇಚ್ಛೆಯನ್ನು

ಪೂರೈಸಲು ಚಾವುಂಡರಾಯ ಬೆಳ್ಗೊಳದಲ್ಲಿ ಇದನ್ನು ಮಾಡಿಸಿದನೆಂದು ಐತಿಹ್ಯವಿದೆ. ಪಂಚಬಾಣನೆಂಬ ಕವಿಯ ಪ್ರಕಾರ ಬಾಹುಬಲಿ ಶಿಲಾಮೂರ್ತಿಯಾಗಿ ಚಾವುಂಡರಾಯನಿಗೆ ಕಾಣಿಸಿದ. ಚಾವುಂಡರಾಯ 983ರಲ್ಲಿ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದ.

ಶ್ರವಣಬೆಳಗೊಳದ ಗೊಮ್ಮಟಮೂರ್ತಿ ಜನರ ಚಿತ್ತವನ್ನು ಆಕರ್ಷಿಸಿ ಮುಂದೆ ಇದೇ ರೀತಿಯ ಹಲವು ಕೃತಿಗಳು ನಿರ್ಮಾರ್ಣವಾಗುವುದಕ್ಕೆ ಸ್ಫೂರ್ತಿಯಾಯಿತು. ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಊರಿನ ಬಳಿಯಲ್ಲೇ ಇರುವ ಗೊಮ್ಮಟಮೂರ್ತಿ ಈ ರೀತಿಯದು. ಈ ಮೂರ್ತಿಯ ಎತ್ತರ 42'. ಭೈರವರಸನ ಮಗ ವೀರಪಾಂಡ್ಯ 1432ರಲ್ಲಿ ಇದನ್ನು ಮಾಡಿಸಿ ಪ್ರತಿಷ್ಠಾಪಿಸಿದ. ಇದರ ರಚನೆಯ ಕಥೆಯನ್ನು ಚದುರ ಚಂದ್ರಮನೆಂಬ ಕವಿ ಕಾರ್ಕಳದ ಗೊಮ್ಮಟೇಶ್ವರ ಚರಿತ್ರೆ (1646) ಎಂಬ ಸಾಂಗತ್ಯಕೃತಿಯಲ್ಲಿ ಹೇಳಿದ್ದಾನೆ. ಶ್ರೀಗುರು ಲಲಿತಕೀರ್ತಿ ಭಟ್ಟಾರಕರ ಆಶೀರ್ವಾದದೊಡನೆ ವಜ್ರಶಿಲೆಯ ಅನ್ವೇಷಣೆಯಿಂದ ಹಿಡಿದು ಮೂರ್ತಿಯನ್ನು ಬೆಟ್ಟದ ಮೇಲಕ್ಕೆ ಸಾಗಿಸಿದ್ದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾನೆ. ಮೂರ್ತಿಯ ಸ್ಥೂಲರೂಪ ಸಿದ್ಧವಾದ ಮೇಲೆ ಅದನ್ನು ಕಬ್ಬಿಣದ ದಪ್ಪ ಕೀಲುಗಳಿರುವ ಇಪ್ಪತ್ತು ಗಾಲಿಗಳಿಂದ ಬಂಡಿಯೊಂದನ್ನು ಮಾಡಿಸಿ ಹತ್ತು ಸಾವಿರ ಸನ್ನೆಗಳಿಂದ ಮೂರ್ತಿಯನ್ನು ಬಂಡಿಗೆ ಸಾಗಿಸಿ ಸಾವಿರಾರು ಜನ ಸೇರಿ ಎಳೆದರು. ಅದು ಒಂದು ಮಾರು ಮಾತ್ರ ಸಾಗಿತಂತೆ. ಮಾರನೆಯ ದಿನ ಸಾವಿರ ರಾಟೆಗಳನ್ನು ಮಾಡಿಸಿ ದೇವನ ಬಂಡಿ ಬೆಟ್ಟವೇರುವಂತೆ ಮದ್ದಾನೆಗಳಿಂದ ನೂಕಿಸಿದಾಗ ಆ ದಿನ ಅದು ಏಳೆಂಟು ಮಾರು ಸರಿಯಿತಂತೆ. ಹೀಗೆ ಒಂದು ತಿಂಗಳ ಪರ್ಯಂತ ಸಾಗಿಸಿದಮೇಲೆ ಆ ಮೂರ್ತಿ ಬೆಟ್ಟದ ತುದಿಯನ್ನು ತಲುಪಿತು. ಅಲ್ಲಿ ಎಪ್ಪತ್ತೆರಡು ಕಂಬಗಳ ಸೊಗಸಾದ ಚಪ್ಪರದ ಮೇಲೆ ಮೂರ್ತಿಯನ್ನು ಮಲಗಿಸಿ ಸೂಕ್ಷ್ಮ ಕೆಲಸವನ್ನು ಮಾಡಲಾಯಿತು. ಇದಕ್ಕೆ ಒಂದು ವರ್ಷ ಹಿಡಿಯಿತು. ಅನಂತರ ಆ ವಿಗ್ರಹದ ಪ್ರತಿಷ್ಠಾಪನೆಯಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ವೇಣೂರಿನಲ್ಲಿ ಮತ್ತೊಂದು ಗೊಮ್ಮಟ ಮೂರ್ತಿ ಇದೆ. ಇದರ ಎತ್ತರ 35'. 1604ರಲ್ಲಿ ತಿಮ್ಮಣ್ಣ ಅಜಿಲ ಎಂಬುವನು ಚಾವುಂಡರಾಯನಂತೆ ತಾನೂ ತನ್ನ ರಾಜ್ಯದಲ್ಲಿ ಗೊಮ್ಮಟನನ್ನು ಕೆತ್ತಿಸಿ ಕೀರ್ತಿವಂತನಾಗಬೇಕೆಂದು ಇದನ್ನು ಮಾಡಿಸಿದ. ಇದೇ ಸಮಯದಲ್ಲಿ ಕಾರ್ಕಳದಲ್ಲಿ ರಾಜ್ಯಭಾರಮಾಡುತ್ತಿದ್ದ ಇಮ್ಮಡಿ ಭೈರವರಾಯ ಕಾರ್ಕಳದಲ್ಲಿರುವಂತೆ ಬೇರೆಲ್ಲೂ ಗೊಮ್ಮಟ ಮೂರ್ತಿಗಳು ಪ್ರತಿಷ್ಠಾಪನೆಯಾಗಬಾರದೆಂದೂ ವೇಣೂರಿನಲ್ಲಿ ಸಿದ್ಧವಾದ ಮೂರ್ತಿಯನ್ನು ಕಾರ್ಕಳಕ್ಕೆ ಒಪ್ಪಿಸಬೇಕೆಂದೂ ಇಲ್ಲದಿದ್ದರೆ ಯುದ್ಧವನ್ನು ಎದುರಿಸಬೇಕೆಂದೂ ತಿಳಿಸಿದ್ದರಿಂದ ತಿಮ್ಮಣ್ಣ ಅಜಿಲನು ಪ್ರತಿಮೆಯನ್ನು ಮರಳಿನಲ್ಲಿ ಹೂತು ಯುದ್ಧಮಾಡಿ ವಿಜಯಿಯಾಗಿ ಅನಂತರವೇ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿಸಿದನಂತೆ.



ವೇಣೂರಿನ ಗೊಮ್ಮಟೇಶ್ವರ ಮೂರ್ತಿ

ಮೈಸೂರು ಜಿಲ್ಲೆಯಲ್ಲಿ ಮೈಸೂರಿಗೆ 25ಕಿಮೀ ವಾಯವ್ಯದಲ್ಲಿ ಕಾವೇರಿಯ ದಕ್ಷಿಣಕ್ಕೆ ಶ್ರವಣಗುಡ್ಡ ಎಂದು ತಿಳಿಯಲಾಗುತ್ತಿದ್ದ ಗೊಮ್ಮಟಗಿರಿ ಕ್ಷೇತ್ರದಲ್ಲಿ 5.5ಮೀ ಎತ್ತರದ ಗೊಮ್ಮಟಮೂರ್ತಿಯಿದೆ. ಇಲ್ಲಿ ಸು.30.48 ಮೀ ಎತ್ತರದ ಬಂಡೆಯೊಂದರ ಮೇಲೆ ಮೂರ್ತಿಯ ಸ್ಥಾಪನೆಯಾಗಿದೆ. ದೂರದಿಂದ ನೋಡಿದರೆ ಈ ಬೆಟ್ಟ ಒಂದು ದೊಡ್ಡ ರಥದಂತೆ ಕಾಣಿಸುತ್ತದೆ. ಈ ಬೆಟ್ಟದ ಮೇಲೆ ಗೊಮ್ಮಟಮೂರ್ತಿಯನ್ನು ಯಾರು ಯಾವಾಗ ಸ್ಥಾಪಿಸಿದರೆಂಬುದಕ್ಕೆ ಶಾಸನವಾಗಲೀ ದಾಖಲೆಯಾಗಲೀ ಇದುವರೆಗೆ ಸಿಕ್ಕಿಲ್ಲ. ಪೂರ್ವಾಭಿಮುಖವಾಗಿರುವ ಈ ಮೂರ್ತಿಯಲ್ಲಿ ಕೈಗಳು, ಸರ್ಪಗಳು ಬಿಚ್ಚಿದ ಹೆಡೆಯ ಮೇಲೆ ಸೋಕಿದಂತಿರುವುದು ಬೇರಾವ ಗೊಮ್ಮಟಮೂರ್ತಿಗಳಲ್ಲೂ ಇಲ್ಲದಿರುವುದು ವೈಶಿಷ್ಟ್ಯವಾಗಿದೆ. ಈ ಮೂರ್ತಿ ವಿಜಯನಗರ ಕಾಲದ ಅಂತ್ಯ ಭಾಗದ್ದೆಂದು ಅಂದಾಜಿಸಲಾಗಿದೆ.

ಕೃಷ್ಣರಾಜಸಾಗರ ಜಲಾಶಯದ ಉತ್ತರಕ್ಕೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಮಾವಿನಕೆರೆ ಗ್ರಾಮದ ಹತ್ತಿರದ ಬಸ್ತಿಹಳ್ಳಿಯಲ್ಲಿ 18' ಎತ್ತರದ ಒಂದು ಗೊಮ್ಮಟಮೂರ್ತಿಯಿದೆ. ಈ ಮೂರ್ತಿಗೆ ಗೂಡಿನಂಥ ಒಂದು ಗುಡಿಯನ್ನು ಕಟ್ಟಿದ್ದಾರೆ. ಇದರ ಸುತ್ತಮುತ್ತ ಗಂಗರ ಕಾಲಕ್ಕೆ ಸೇರುವ ಶಿಥಿಲವಾದ ಮೂರ್ತಿಗಳೂ ವಿಷ್ಣುವರ್ಧನನ ಕಾಲದ ಬಸದಿಯ ಅವಶೇಷವೂ ಕಂಡುಬರುತ್ತವೆ. ಈ ಗೊಮ್ಮಟಮೂರ್ತಿಯನ್ನು ವಿಷ್ಣುವರ್ಧನನ ಕಾಲದಲ್ಲಿ ಆತನ ದಂಡನಾಯಕ ಪುಣಿಸಮಯ್ಯ ಪ್ರತಿಷ್ಠಾಪಿಸಿದಂತೆ ತೋರುತ್ತದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬಸ್ತಿ ತಿಪ್ಪೂರಿನ ಬಳಿಯಿರುವ ದೊಡ್ಡ ಬೆಟ್ಟದ ಮೇಲೆ ಸು.10' ಎತ್ತರದ ಗೊಮ್ಮಟ ಪ್ರತಿಮೆಯೊಂದಿದೆ. ಇದು ಸಾಮಾನ್ಯ ರೀತಿಯ ಶಿಲ್ಪ. ಸ್ಥಾಪನೆಯ ಕಾಲ ತಿಳಿದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಒಂದು ಗೊಮ್ಮಟ ವಿಗ್ರಹವನ್ನು ಅಲ್ಲಿನ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಮಾಡಿಸಿ ಸ್ಥಾಪಿಸಿದ್ದಾರೆ. ಶಿಲ್ಪಿ ರಂಜಾಳ ಗೋಪಾಲ ಶೆಣೈ ಅವರು 1967ರಲ್ಲಿ ಇದರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ 1973ರಲ್ಲಿ ಮುಗಿಸಿದರು. ಶಿಲ್ಪರಚನೆಗೆ ಉಪಯೋಗಿಸಿರುವ ಈ ಶಿಲೆಯ ಒಟ್ಟು ಉದ್ದ 52'. ಇದರಲ್ಲಿ 6' ಭೂಮಿಗಿಳಿಯುವ ಬೇರು, 7' ವಿಗ್ರಹದ ಪೀಠ, ಮೂರ್ತಿ ಅಂಗುಷ್ಠದಿಂದ ನೆತ್ತಿಯವರೆಗೆ 39' ಎತ್ತರವಿದೆ. 170 ಟನ್ ತೂಕದ ಈ ಶಿಲಾಮೂರ್ತಿಯನ್ನು ಕಾರ್ಕಳದಲ್ಲಿ ಮಾಡಿಸಿ ಧರ್ಮಸ್ಥಳಕ್ಕೆ ಸಾಗಿಸಲಾಗಿದೆ. ಅಲ್ಲಿ ಬಾಹುಬಲಿ ವಿಹಾರದಲ್ಲಿ ಸ್ಥಾಪಿತವಾಗಿದೆ. ಧರ್ಮಸ್ಥಳದ ಈ ಗೊಮ್ಮಟಮೂರ್ತಿಯಲ್ಲಿ ಕೆಲವು ವಿಶೇಷಗಳು ಕಂಡುಬರುತ್ತವೆ. ಈ ಮೂರ್ತಿಯಲ್ಲಿ ತಲೆಗೂದಲು ಭುಜದವರೆಗೂ ಇಳಿಬಿದ್ದಿದೆ. ಎರಡು ಪಾದಗಳ ಮೇಲೆಯೂ ಹಾವಿನ ಮರಿಗಳು ಹತ್ತುತ್ತಿವೆ. ಮೂರ್ತಿಯ ಮೇಲೆ ಮಲ್ಲಿಗೆ ಬಳ್ಳಿಯ ಜೊತೆಯಲ್ಲಿ

ಗೊಮ್ಮಟ ವಿಗ್ರಹ, ಧರ್ಮಸ್ಥಳ

ಮಲ್ಲಿಗೆಯ ಹೂವನ್ನು ಬಿಡಿಸಲಾಗಿದೆ. ಮೂರ್ತಿಯ ಎಡಬಲಗಳಲ್ಲಿ ಕಾಲುಗಳ ಬಳಿಯಲ್ಲಿ ಸೇರುವ ಎರಡು ಪ್ರತ್ಯೇಕ ಶಿಲೆಗಳಲ್ಲಿ ಮಾವಿನಮರ, ಗಿಣಿ, ಮಂಗ, ಜೇನುಗೂಡು ಇತ್ಯಾದಿಗಳನ್ನು ಕೆತ್ತಲಾಗಿದೆ.

ಈ ಗೊಮ್ಮಟಮೂರ್ತಿಗಳು ಭಾರತೀಯ ಶಿಲ್ಪಕಲೆಗೆ ಕರ್ನಾಟಕದ ಮಹತ್ತ್ವಪೂರ್ಣ ಕೊಡುಗೆಯಾಗಿವೆ. (ಎಸ್.ಸಿ.;ಎಂ.ಎಚ್.)

**ಗೊಮ್ಮೆ, ಜಾರ್ಜ್ ಲಾರೆನ್ಸ್ :** 1853–1916. ಪ್ರಸಿದ್ಧ ಜಾನಪದ ವಿದ್ವಾಂಸ. 1853ರ ಡಿಸೆಂಬರ್ 17ರಂದು ಲಂಡನಿನಲ್ಲಿ ಜನಿಸಿದ. ಅಲ್ಲೇ ಈತನ ವಿದ್ಯಾಭ್ಯಾಸ ನಡೆಯಿತು. ಆಂಗ್ಲ ಪುರಾತತ್ತ್ವಶಾಸ್ತ್ರಜ್ಞನಾದ ಈತನಿಗೆ 1911ರಲ್ಲಿ ಸರ್ ಎಂಬ ಬಿರುದು ದೊರಕಿತು. ಹುಡುಗನಾಗಿದ್ದಾಗಲೇ ಮೆಟ್ರೊಪಾಲಿಟನ್ ಬೋರ್ಡ್ ಆಫ್ ವರ್ಕ್ಸ್‌ನಲ್ಲಿ ಕೆಲಸಕ್ಕೆ ಸೇರಿದ. 1891ರ ವೇಳೆಗೆ ಲಂಡನ್‌ನ ಕೌಂಟಿ ಕೌನ್ಸಿಲ್‌ನಲ್ಲಿ ಅಂಕಿಅಂಶಗಳ ಅಧಿಕಾರಿಯಾಗಿ ನೇಮಕಗೊಂಡ. 1900ರ ವೇಳೆಗೆ ಕೌನ್ಸಿಲ್‌ನ ಕಾರ್ಯದರ್ಶಿಯಾದ.

ಈತ ಬರೆದಿರುವ ದಿ ಮೇಕಿಂಗ್ ಆಫ್ ಲಂಡನ್ ಎನ್ನುವ ಪುಸ್ತಕ ಆ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಅಧಿಕೃತ ಕೃತಿಯಾಗಿದೆ. ಅಂದಿನ ಮತ್ತು ಅದಕ್ಕೆ ಹಿಂದಿನ ಲಂಡನಿನ ಚರಿತ್ರೆಯನ್ನು ತಿಳಿಯಲು ಇದು ತುಂಬ ಉಪಯುಕ್ತವೆನ್ನಲಾಗಿದೆ.

1878ರಲ್ಲಿ ಇಂಗ್ಲೆಂಡಿನಲ್ಲಿ ಡಬ್ಲ್ಯು.ಜೆ. ಥಾಮ್ಸ್ ಸ್ಥಾಪಿಸಿದ ಇಂಗ್ಲಿಷ್ ಫೋಕ್‌ಲೋರ್ ಸಂಸ್ಥೆಗೆ ಗೊಮ್ಮೆಯೂ ಒಬ್ಬ ಸದಸ್ಯನಾಗಿದ್ದ. ಅದರ ಕಾರ್ಯಕಲಾಪಗಳಲ್ಲಿ ಈತ ಸಕ್ರಿಯ ಪಾತ್ರ ವಹಿಸುತ್ತಿದ್ದನೆನ್ನಲಾಗಿದೆ. ಗೊಮ್ಮೆ ಜಾನಪದವನ್ನು ಕುರಿತು ಬರೆದ ಗ್ರಂಥಗಳಲ್ಲಿ ಹ್ಯಾಂಡ್ ಬುಕ್ ಆಫ್ ಫೋಕ್‌ಲೋರ್ ಮತ್ತು ಎತ್ನಾಲಜಿ ಅಂಡ್ ಫೋಕ್‌ಲೋರ್ ಎಂಬುವು ಮುಖ್ಯವಾದುವು. (ಡಿ.ಕೆ.ಆರ್.)

**ಗೊಯ್ಡಲ್, ಕುರ್ಟ್ :** 1906–78. ಆಸ್ಟ್ರಿಯನ್ ಅಮೆರಿಕನ್ ಗಣಿತ ವಿಜ್ಞಾನಿ. ಈಗ ಚೆಕೊಸ್ಲೋವಾಕಿಯದಲ್ಲಿರುವ ಬ್ರೂನೋ ನಗರದಲ್ಲಿ ಜನನ (ಏಪ್ರಿಲ್ 28, 1906). ವಿಯನ್ನಾ ವಿಶ್ವವಿದ್ಯಾಲಯದಲ್ಲಿ ಗಣಿತ ಮತ್ತು ಭೌತಶಾಸ್ತ್ರಗಳನ್ನು ವ್ಯಾಸಂಗಮಾಡಿ ಗಣಿತಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದು 1930ರಲ್ಲಿ ಅದೇ ವಿಶ್ವವಿದ್ಯಾಲಯದ ಗಣಿತವಿಭಾಗದಲ್ಲಿ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ. ಇಂದು ಗೊಯ್ಡಲ್ ಪ್ರಮೇಯವೆಂದು ಪ್ರಸಿದ್ಧವಾಗಿರುವ ಮೂಲಭೂತ ಗಣಿತ ವಿಷಯವನ್ನು ಈತ ಕೂಲಂಕಷವಾಗಿ ಪರಿಶೀಲಿಸಿ ಮಹತ್ತ್ವದ ತೀರ್ಮಾನವೊಂದನ್ನು 1931ರಲ್ಲಿ ಪಡೆದ. ಈ ಸಾಧನೆ ತತ್‌ಕ್ಷಣವೇ ಇವನಿಗೆ ವಿಶೇಷ ಕೀರ್ತಿ ತಂದಿತು; ಮಾತ್ರವಲ್ಲ ಇದರಿಂದ ಇವನಿಗೆ ಅಮೆರಿಕದ ಪ್ರಿನ್ಸ್‌ಟನ್ನಿನಲ್ಲಿರುವ ಪ್ರೌಢ ಅಧ್ಯಯನ ಸಂಸ್ಥೆಯೊಂದಿಗೆ ಬೌದ್ಧಿಕ ಸಂಪರ್ಕ ಬೆಳೆಸಲು ಅನುವಾಯಿತು. 1940ರಲ್ಲಿ ಗೊಯ್ಡಲ್ ಅಮೆರಿಕಕ್ಕೆ ತೆರಳಿ ಈ ಸಂಸ್ಥೆಯ ಸದಸ್ಯನಾಗಿ ಸೇರಿಕೊಂಡು ತನ್ನ ಸಂಶೋಧನೆಗಳನ್ನು ಮುಂದುವರಿಸತೊಡಗಿದ. 1948ರಲ್ಲಿ ಗೊಯ್ಡಲ್ ಅಮೆರಿಕ ದೇಶದ ಪೌರತ್ವವನ್ನು ಪಡೆದು ಅಲ್ಲಿಯೇ ಶಾಶ್ವತವಾಗಿ ನೆಲೆಸಿದ.

ಗಣಿತ ಮತ್ತು ತರ್ಕಶಾಸ್ತ್ರಗಳ ಆಧಾರದ ಸುಭದ್ರತೆಯ ಬಗ್ಗೆ ಮೂಲಭೂತವಾದ ಸಮಸ್ಯೆಗಳನ್ನು ತಂದೊಡ್ಡಿರುವ ಮಹಾ ಗಣಿತಜ್ಞರಲ್ಲಿ ಬರ್ಟ್ರೆಂಡ್ ರಸಲನ ಅನಂತರದ ಸ್ಥಾನ ಗೊಯ್ಡಲನದು. ಉತ್ತಮ ದರ್ಜೆಯ ಸಂಶೋಧನೆಗಳ ಫಲವಾಗಿ ಈತನಿಗೆ ಅನೇಕ ರೀತಿಯಲ್ಲಿ ಗೌರವ ಮತ್ತು ಪ್ರಶಸ್ತಿ ದೊರೆತಿವೆ. ಐನ್‌ಸ್ಟೈನ್ ಪ್ರಶಸ್ತಿ (1951), ಯೇಲ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯಗಳ ಗೌರವ ಡಿಗ್ರಿಗಳು (1951–52), ಅಮೆರಿಕದ ನ್ಯಾಷನಲ್ ಸೈನ್ಸ್ ಅಕಾಡೆಮಿ ಮತ್ತು ಫಿಲಸಾಫಿಕಲ್ ಸೊಸೈಟಿಗಳ ಸದಸ್ಯತ್ವ ಇತ್ಯಾದಿ.

ಆದ್ಯುಕ್ತಿಗಳ (ಆ್ಯಕ್ಸಿಯಮ್ಸ್) ಆಧಾರದ ಮೇಲೆ ತರ್ಕಬದ್ಧವಾಗಿ ರಚಿತವಾದ ತಾರ್ಕಿಕ ಹಾಗೂ ಗಣಿತೀಯ ವ್ಯವಸ್ಥೆಯ ಸಾಂಗತ್ಯ (ಕನ್ಸಿಸ್ಟೆನ್ಸಿ) ಮತ್ತು ಸಂಪೂರ್ಣತೆಗಳಿಗೆ (ಕಂಪ್ಲೀಟ್‌ನೆಸ್) ಸಂಬಂಧಿಸಿದ ಗೊಯ್ಡಲನ ವಾದ ಮತ್ತು ತೀರ್ಮಾನಗಳು ಈತನ ಅತ್ಯಂತ ಮಹತ್ತ್ವಪೂರ್ಣ ಸಾಧನೆ.

ಪಿಯಾನೋ (1858–1932) 1889ರಲ್ಲಿ ಅಂಕಗಣಿತವನ್ನು ಆದ್ಯುಕ್ತೀಕರಿಸಿ ಯಶಸ್ವಿಯಾದಂದಿನಿಂದ ಗಣಿತದ ಎಲ್ಲ ಭಾಗಗಳನ್ನೂ ಆದ್ಯುಕ್ತೀಕರಿಸಿ ಆಯಾ ವಿಭಾಗಗಳಿಗೆ ಸಂಬಂಧಿಸಿದ ಉಕ್ತಿಗಳೆಲ್ಲ ಆದ್ಯುಕ್ತಿಗಳಿಂದ ತಾರ್ಕಿಕವಾಗಿ ಅನುಗತವಾಗುತ್ತವೆ ಎಂದು ಪ್ರದರ್ಶಿಸುವ ಸಂಪ್ರದಾಯ ಗಣಿತಜ್ಞರಲ್ಲಿ ಬೆಳೆದುದನ್ನು ಕಾಣಬಹುದು. ಹೀಗೆ ಆದ್ಯುಕ್ತೀಕರಿಸಿದ ಯಾವುದೇ ಗಣಿತ ಅಥವಾ ತಾರ್ಕಿಕ ವ್ಯವಸ್ಥೆಯಲ್ಲಿ ಕೆಲವು ಲಕ್ಷಣಗಳು ಅವಶ್ಯವಾಗಿ ಅಂತರ್ಗತವಾಗಿಯೇ ಇರುತ್ತವೆಂದು ಭಾವಿಸಲಾಗಿತ್ತು. ಇವುಗಳಲ್ಲಿ ಬಹುಮುಖ್ಯ ಲಕ್ಷಣಗಳೆಂದರೆ ವ್ಯವಸ್ಥೆಯ ಸಾಂಗತ್ಯ ಮತ್ತು ಸಂಪೂರ್ಣತೆ. ವ್ಯವಸ್ಥೆಗೂ ಸೇರಿದ ಹಾಗೂ ವ್ಯವಸ್ಥೆಯೊಳಗೇ ಸಾಧಿತವಾದ ಯಾವುದೇ ಎರಡು ಉಕ್ತಿಗಳು ಪರಸ್ಪರ ವಿರೋಧವಾಗಿರದಿದ್ದಲ್ಲಿ, ಅಂದರೆ ಅವು ಅಬಾಧಿತವಾಗಿದ್ದಲ್ಲಿ, ವ್ಯವಸ್ಥೆ ಸಂಗತ ಎನ್ನುತ್ತೇವೆ; ವ್ಯವಸ್ಥೆ ಸಂಗತವಾಗಿದ್ದಲ್ಲಿ ಅದರಿಂದ $p$ ಎಂಬ ಉಕ್ತಿ, ಮತ್ತು ಅದರ ನಿಷೇಧೋಕ್ತಿ $\sim p$ ಎರಡೂ ಅನುಗತವಾಗುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ವ್ಯವಸ್ಥೆಗೆ ಸಂಬಂಧಿಸಿದ $p$ ಮತ್ತು ಅದರ ನಿಷೇಧೋಕ್ತಿ $\sim p$ ಗಳಲ್ಲಿ ಒಂದನ್ನೂ ಸಾಧಿಸಲು ಸಾಧ್ಯವಾಗದಿರಬಹುದು. ಈ ಸಂದರ್ಭದಲ್ಲಿ ವ್ಯವಸ್ಥೆ ಅಪೂರ್ಣ ಎನ್ನುತ್ತೇವೆ. ಬದಲು $p$ ಯನ್ನಾಗಲೀ $\sim p$ ಯನ್ನಾಗಲೀ ಸಾಧಿಸಲು ಸಾಧ್ಯವಾದಲ್ಲಿ ವ್ಯವಸ್ಥೆ ಸಂಪೂರ್ಣ ಎನ್ನುತ್ತೇವೆ. ಸಾಂಗತ್ಯ ಮತ್ತು ಸಂಪೂರ್ಣತೆ ಎಂದರೇನು ಎಂಬುದನ್ನು ಹೀಗೆ ಸುಲಭವಾಗಿ ಪ್ರತಿಪಾದಿಸುವುದು ಸಾಧ್ಯವಾದರೂ ಯಾವುದಾದರೂ ಆದ್ಯುಕ್ತೀಕರಿಸಿದ ವ್ಯವಸ್ಥೆಯ ಸಾಂಗತ್ಯ ಮತ್ತು ಸಂಪೂರ್ಣತೆಗಳನ್ನು ಕಾರ್ಯತಃ ತರ್ಕಬದ್ಧವಾಗಿ ಪ್ರದರ್ಶಿಸಿ ತೋರಿಸುವುದು ಬಹು ಕಷ್ಟದ ಕೆಲಸ. ಈ ದಿಶೆಯಲ್ಲಿ ಮೊಟ್ಟಮೊದಲ ನಿರ್ದಿಷ್ಟ ಮಾರ್ಗವೊಂದನ್ನು ಸೂಚಿಸಿ ಅದನ್ನು ಕಾರ್ಯಗತಗೊಳಿಸಲು ಪ್ರಯತ್ನಿಸಿದ ಗಣಿತಜ್ಞನೆಂದರೆ ಜರ್ಮನಿಯ ಡೇವಿಡ್ ಹಿಲ್ಬರ್ಟ್ (1862–1943). ಈತನ ಪ್ರಕಾರ ಈ ಮಾರ್ಗದಲ್ಲಿ ಮೊದಲ ಹೆಜ್ಜೆಯೆಂದರೆ ಆದ್ಯುಕ್ತೀಕರಿಸಿದ ವ್ಯವಸ್ಥೆಯನ್ನು ಸಂಪೂರ್ಣವಾಗಿ ರೂಪೀಕರಿಸುವುದು (ಫಾರ್ಮಲೈಸೇಷನ್). ರೂಪೀಕರಿಸಿದ ವ್ಯವಸ್ಥೆಯಲ್ಲಿ ಬಳಸುವ ಮೂಲಪ್ರತೀಕಗಳಿಗಾಗಲೀ ಅಲ್ಲಿ ರೂಪಿಸುವ ಸೂತ್ರಗಳಿಗಾಗಲೀ ಯಾವ ಅರ್ಥವನ್ನೂ ಆರೋಪಿಸುವುದಿಲ್ಲ, ಅವು ಅರ್ಥಶೂನ್ಯ ಪ್ರತೀಕಗಳು (ಎಂಪ್ಟಿ ಸಿಂಬಲ್ಸ್) ಮತ್ತು ಸೂತ್ರಗಳು. ವ್ಯವಸ್ಥೆಯನ್ನು ಹೀಗೆ ರೂಪೀಕರಿಸಿದ ತರುವಾಯ ಅದು ಸಂಪೂರ್ಣವಾಗಿ ಒಂದು ವ್ಯವಸ್ಥಿತ ಪ್ರತೀಕ ರಚನೆಯಾಗಿ ಮಾರ್ಪಾಡಾಗುತ್ತದೆ. ಆದ್ಯುಕ್ತೀಕೃತ ವ್ಯವಸ್ಥೆಯ ಪ್ರತಿಯೊಂದು ಆದ್ಯುಕ್ತಿಗೂ ಪ್ರಮೇಯಕ್ಕೂ ವ್ಯವಸ್ಥೆಯಲ್ಲಿ ಉಪಯೋಗಿಸಿರುವ ತರ್ಕವಿಧಿಗೂ ಸರಿಹೊಂದುವ ಒಂದು ಪ್ರತೀಕ ಇಲ್ಲವೆ ಪ್ರತೀಕ ಸೂತ್ರ ಮಾತ್ರ ಈ ಪ್ರತೀಕ ರಚನೆಯಲ್ಲಿ ದೊರೆಯುತ್ತದೆ. ಈ ರೀತಿಯ ಪ್ರತೀಕ ರಚನೆಯಲ್ಲಿ ಬರುವ ಯಾವ ಉಕ್ತಿಯ ಬಗ್ಗೆಯೂ ನಾವು ಅದು ದಿಟ ಅಥವಾ ಸಟೆ ಎಂದು ಹೇಳುವುದಿಲ್ಲ, ವ್ಯವಸ್ಥೆ ನಿರ್ದಿಷ್ಟ ರಚನೆಯಿರುವ ಒಂದು ತರ್ಕಬದ್ಧ ಪ್ರತೀಕ ಸಮುದಾಯ ಅಷ್ಟೇ, ಎನ್ನುತ್ತೇವೆ.

ರೂಪೀಕರಿಸಿದ ವ್ಯವಸ್ಥೆಯ ರಚನಾಲಕ್ಷಣಗಳನ್ನೂ ಪ್ರತೀಕೋಕ್ತಿಗಳಿಗಿರುವ ಪರಸ್ಪರ ತಾರ್ಕಿಕ ಸಂಬಂಧಗಳನ್ನೂ ಪರಿಶೀಲಿಸಿ ವ್ಯವಸ್ಥೆಯಲ್ಲಿ ಯಾವ ರೀತಿಯಲ್ಲೂ ಉಕ್ತಿ ಮತ್ತು ಅದರ ನಿಷೇಧ ಎರಡೂ ಜನ್ಯವಾಗುವುದಿಲ್ಲ ಎಂದು ತೋರಿಸುವುದು ಸಾಧ್ಯ ಎಂದು ಹಿಲ್ಬರ್ಟ್ ನಿರೀಕ್ಷಿಸಿದ. ಈ ತೀರ್ಮಾನ ವ್ಯವಸ್ಥೆಯ ಒಳಗೆ ಅನುಗತವಾಗುವ ಉಕ್ತಿಯ ರೀತಿಯಲ್ಲಿ ಇರದೆ ಒಟ್ಟಾರೆ ವ್ಯವಸ್ಥೆಯ ಸಾಂಗತ್ಯ ಮತ್ತು ಸಂಪೂರ್ಣತೆಗಳಿಗೆ ಸಂಬಂಧಿಸಿರುವ ಕಾರಣ ಇಂಥ ಹೇಳಿಕೆಗಳನ್ನು ನಾವು ಚರ್ಚಿಸುತ್ತಿರುವ ಗಣಿತ ವಿಭಾಗಕ್ಕೆ ಅತೀತವಾದ ಅಂದರೆ ಹೊರತಾದ ಹೇಳಿಕೆ ಎಂದು ಹಿಲ್ಬರ್ಟ್ ಕರೆದ. ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ ವ್ಯವಸ್ಥೆಯ ಸಾಂಗತ್ಯ ಮತ್ತು ಸಂಪೂರ್ಣತೆಗಳನ್ನು ಸಾಧಿಸಿ ತೋರಿಸುವ ವಿಧಾನ ಕೂಡ ಚರ್ಚೆಯ ಗಣಿತ ಅಥವಾ ತಾರ್ಕಿಕ ವಿಭಾಗಕ್ಕೆ ಹೊರತಾದದ್ದು ಅನ್ನುವುದು. ಸಾಂಗತ್ಯ ಮತ್ತು ಸಂಪೂರ್ಣತೆಗಳನ್ನು ಸಾಧಿಸಿ ತೋರಿಸುವ ಯಾವುದೇ ವಿಧಾನವೂ ಸಾಂತ ಹಂತಗಳಿಂದ ಕೂಡಿರಬೇಕೇ ವಿನಾ ಅನಂತವಾಗಿರಬಾರದೆಂಬ ನಿಬಂಧನೆಯನ್ನು ಈ ಸಂದರ್ಭದಲ್ಲಿ ಹಿಲ್ಬರ್ಟ್ ಒತ್ತಿ ಹೇಳಿದ. ಈತನ ಅಧಿಗಣಿತೀಯ (ಮೆಟಮ್ಯಾಥ್‌ಮ್ಯಾಟಿಕಲ್) ಸಾಧನ ವಿಧಾನಗಳನ್ನು ಕಾರ್ಯಗತಗೊಳಿಸುವ ಮೊಟ್ಟಮೊದಲಿನ ಪ್ರಯತ್ನವೆಂದರೆ ಅವನು ರೂಪೀಕರಿಸಿದ್ದ ಪ್ರಾಥಮಿಕ ಅಂಕಗಣಿತ ವಿಭಾಗದ ಸಾಂಗತ್ಯವನ್ನು ಸಾಧಿಸಿ ಪ್ರದರ್ಶಿಸುವ ಪ್ರಯತ್ನ. ಈ ನಿಟ್ಟಿನಲ್ಲಿ ಗಣಿತಜ್ಞರ ಪ್ರಯತ್ನ ಮುಂದುವರಿಯುತ್ತಿದ್ದಂತೆ ಇವುಗಳ ಮೂಲಕ ಹಿಲ್ಬರ್ಟ್ ಗುರಿಯನ್ನು ಸಾಧಿಸುವುದು ಖಂಡಿತ ಸಾಧ್ಯವಿಲ್ಲವೆಂಬ ವಾದ ಮತ್ತು ತೀರ್ಮಾನವನ್ನು ಗೊಯ್ಡಲ್ 1931ರಲ್ಲಿ ಪ್ರಕಟಿಸಿದ.

ಗೊಯ್ಡಲ್ ಪ್ರಮೇಯದ ಮುಖ್ಯ ಸಾರಾಂಶ ಹೀಗಿದೆ: ಹಿಲ್ಬರ್ಟ್ ವಿಧಾನ ಇಲ್ಲವೆ ಅದಕ್ಕೆ ಸಮಾನವಾದ ಯಾವುದೇ ವಿಧಾನದಿಂದಾಗಲಿ ಒಂದು ತಾರ್ಕಿಕ ವ್ಯವಸ್ಥೆಯಲ್ಲಿ ಬಳಸಿರುವ ತರ್ಕವಿಧಿಗಳು, ಪ್ರತೀಕ ಸೂತ್ರಗಳು ಮತ್ತು ಅವನ್ನು ಪಡೆಯಲು ಉಪಯೋಗಿಸುವ ಸಂಯೋಗವಿಧಿಗಳು ಇವನ್ನೆ ಉಪಯೋಗಿಸಿಕೊಂಡು ಆ ವ್ಯವಸ್ಥೆಯ ಸಾಂಗತ್ಯವನ್ನು ಸಾಧಿಸಿ ತೋರಿಸುವುದು ಸಾಧ್ಯವಿಲ್ಲ. ಅಲ್ಲದೆ ಒಂದು ಪಕ್ಷ ವ್ಯವಸ್ಥೆ ಸಾಂಗತ್ಯವೆಂದು ಭಾವಿಸಿದಲ್ಲಿ ಅದು ಅಪೂರ್ಣ ಎಂದು ತೋರಿಸಬಹುದು; ಮತ್ತು ಈ ಅಪೂರ್ಣತೆಯನ್ನು ತೊಡೆದು ಹಾಕಿ ವ್ಯವಸ್ಥೆಯನ್ನು ಸಂಪೂರ್ಣಗೊಳಿಸುವುದು ಸಾಧ್ಯವೂ ಇಲ್ಲ ಎಂದು ಸಾಧಿಸಿ ತೋರಿಸಬಹುದು. ಏಕೆಂದರೆ ವ್ಯವಸ್ಥೆಯ ಆದ್ಯುಕ್ತಿಗಳೊಂದಿಗೆ ಅವಶ್ಯವಾದ ಇನ್ನೂ ಕೆಲವು ಆದ್ಯುಕ್ತಿಗಳನ್ನು ಸೇರಿಸಿ ಮೊದಲಿನ ಹಂತದ ಅಪೂರ್ಣತೆಯನ್ನು ತೊಡೆದು ಹಾಕಿದರೂ ವಿಸ್ತರಿತ ವ್ಯವಸ್ಥೆಯಲ್ಲಿ ಅಪೂರ್ಣತೆ ಪುನಃ ತಲೆದೋರುತ್ತದೆ. ಯಾವ ತಾರ್ಕಿಕ ಅಥವಾ ತರ್ಕಬದ್ಧವಾದ ಗಣಿತೀಯ ವ್ಯವಸ್ಥೆಯೇ ಆಗಲಿ ಅದು ಅಪೂರ್ಣವೇ ಅಲ್ಲದೇ ಅದನ್ನು ಸಂಪೂರ್ಣಗೊಳಿಸುವುದೂ ಸಾಧ್ಯವಿಲ್ಲ.

ತನ್ನ ಪ್ರಮೇಯವನ್ನು ಸಾಧಿಸಲು ಗೊಯ್ಡಲ್ ಉಪಯೋಗಿಸಿದ ವಾದಸರಣಿ ಬಹಳ ಪ್ರೌಢ ಹಾಗೂ ಕ್ಲಿಷ್ಟವಾದದ್ದು. ಈತನ ವಾದವಿಧಾನ ಮತ್ತು ಕ್ರಮಗಳನ್ನು ಬಹುಮಟ್ಟಿಗೆ ಸರಳೀಕರಿಸಿ ಅವನ್ನು ಹಿಲ್ಬರ್ಟ್ ರೂಪೀಕರಿಸಿದ್ದ ಪ್ರಾಥಮಿಕ ಅಂಕಗಣಿತಕ್ಕೆ ಒಂದು ರೀತಿಯಲ್ಲಿ ಅನ್ವಯಿಸಿ ಗೊಯ್ಡಲ್ ಪ್ರಮೇಯವನ್ನು ಹೇಗೆ ಪಡೆಯಬಹುದೆಂಬುದನ್ನು ಕೆಳಗೆ ವಿವರಿಸಿದೆ. ಮೊದಲನೆಯದಾಗಿ, ಗೊಯ್ಡಲ್ ವಿಧಾನವನ್ನು ಅನುಸರಿಸಿ, ಅಂಕಗಣಿತದಲ್ಲಿ ಬರುವ ಪ್ರಾರಂಭಿಕ ಪ್ರತೀಕಗಳಿಗೆ ಅನುಕ್ರಮವಾಗಿ ಸ್ವಾಭಾವಿಕ ಸಂಖ್ಯೆಗಳನ್ನು

(ನ್ಯಾಚುರಲ್ ನಂಬರ್ಸ್), ಉದಾಹರಣೆಗೆ 1 ರಿಂದ 10 ರವರೆಗಿರುವ ಸಂಖ್ಯೆಗಳನ್ನು ಆರೋಪಿಸುವುದು. ಎರಡನೆಯದಾಗಿ, ಈ ವಿಭಾಗದಲ್ಲಿ ಬಳಸುವ ಚರಗಳಿಗೆ ಸಂಖ್ಯೆಗಳ ಆರೋಪಣೆ. ಸಾಂಖ್ಯಿಕ ಚರಗಳಿಗೆ (ನ್ಯೂಮರಿಕಲ್ ವೇರಿಯೆಬಲ್ಸ್) 10ಕ್ಕೂ ಹೆಚ್ಚಿನ ಅವಿಭಾಜ್ಯ ಸಂಖ್ಯೆಗಳನ್ನೂ ವಾಕ್ಯಚರಗಳಿಗೆ (ಸೆಂಟೆನ್ಶಿಯಲ್ ವೇರಿಯೆಬಲ್ಸ್) ಈ ಅವಿಭಾಜ್ಯಗಳ ವರ್ಗಗಳನ್ನೂ ಆಖ್ಯಾತ ಚರಗಳಿಗೆ (ಪ್ರೆಡಿಕೇಟ್ ವೇರಿಯೆಬಲ್ಸ್) ಅದೇ ಅವಿಭಾಜ್ಯಗಳ ಘನಗಳನ್ನೂ ಆರೋಪಿಸುವುದು. ಈ ಆರೋಪಣ ಕ್ರಮದ ಆಧಾರದ ಮೇಲೆ ಅಂಕಗಣಿತದಲ್ಲಿ ಬರುವ ಆದ್ಯುಕ್ತಿ, ಪ್ರಮೇಯ, ಸೂತ್ರ ಇತ್ಯಾದಿಗಳೆಲ್ಲಕ್ಕೂ ಅವುಗಳಿಗೆ ಅನುಗುಣವಾದ ಒಂದು ಏಕೈಕ ಸಂಖ್ಯೆಯನ್ನು ಆರೋಪಿಸಬಹುದು. ಇಂಥ ಸಂಖ್ಯೆಗಳನ್ನು ಗೊಯ್ಡಲ್ ಸಂಖ್ಯೆಗಳು ಎಂದು ಕರೆಯಲಾಗಿದೆ. ಈ ಕ್ರಮವನ್ನೇ ಅನುಸರಿಸಿ ಪ್ರಮೇಯಗಳ ಸಾಧನೆಗಳಲ್ಲಿ ಬರುವ ವಿವಿಧ ಹಂತಗಳಿಗೂ ಈ ಹಂತಗಳಿಂದ ಕೂಡಿದ ಸಾಧನೆಗೂ ಗೊಯ್ಡಲ್ ಸಂಖ್ಯೆಯನ್ನು ಆರೋಪಿಸಬಹುದು.

ಸಂಪೂರ್ಣವಾಗಿ ಪ್ರತೀಕರೂಪದಲ್ಲಿ ರೂಪೀಕರಿಸಿದ ಪ್ರತಿಯೊಂದು ತಾರ್ಕಿಕ ಅಥವಾ ಗಣಿತೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಅದಕ್ಕೆ ಅತೀತವಾದ ಉಕ್ತಿಗಳು ಇರುವುದು ಸಾಧ್ಯ. ಉದಾಹರಣೆಗೆ '2+3=5' ಉಕ್ತಿ ಅಂಕಗಣಿತದ ಒಳ ಸೂತ್ರವಾದರೆ "2+3=5' –ಇದು ಅಂಕಗಣಿತದ ಸೂತ್ರ" ಎಂಬ ಉಕ್ತಿ ಅಂಕಗಣಿತಕ್ಕೆ ಅತೀತವಾದ ಉಕ್ತಿ. ಅಂಕಗಣಿತ ಅಥವಾ ಇದೇ ರೀತಿಯಲ್ಲಿ ರೂಪೀಕರಿಸಿದ ಯಾವುದೇ ವ್ಯವಸ್ಥೆಗೂ ಸಂಬಂಧಿಸಿದಂತೆ ಅನೇಕ ಅತೀತ ಉಕ್ತಿಗಳನ್ನು ರಚಿಸುವುದು ಸಾಧ್ಯ. ಇಂಥ ಪ್ರತಿಯೊಂದು ಅತೀತ ಹೇಳಿಕೆ $A$ಗೂ ಅದಕ್ಕೆ ಅನುಗುಣವಾದ ವ್ಯವಸ್ಥೆಯ ಒಳ ಉಕ್ತಿ $B$ ಒಂದನ್ನು ಗೊಯ್ಡಲ್ ಸಂಖ್ಯೆಗಳನ್ನೇ ಉಪಯೋಗಿಸಿಕೊಂಡು ರಚಿಸುವುದು ಸಾಧ್ಯ. ಹೀಗೆ ರಚಿಸಿದಾಗ $A$ ನಿಜವಾದಲ್ಲಿ ಮಾತ್ರ $B$ ಸಾಧನೀಯ ಮತ್ತು $A$ ನಿಜವಿಲ್ಲದಿದ್ದಲ್ಲಿ ಮಾತ್ರ $\sim B$ ಸಾಧನೀಯ ಎಂದು ಗೊಯ್ಡಲ್ ತೋರಿಸಿದ. ಇದೇ ರೀತಿ ಈತ ತನ್ನ ವಾದವನ್ನು ಮುಂದುವರಿಸಿ '$G$ ಎಂಬ ಸೂತ್ರವನ್ನು ಸಾಧಿಸಿ ಪ್ರದರ್ಶಿಸುವುದು ಸಾಧ್ಯವಿಲ್ಲ' (ಫಾರ್ಮ್ಯುಲ $G$ ಈಸ್ ನಾಟ್ ಡೆಮಾನ್‌ಸ್ಟ್ರೇಬಲ್) ಎಂಬ ಒಂದು ಅತೀತ ಉಕ್ತಿಯನ್ನು ಪಡೆದ. ಈ ಉಕ್ತಿಗೆ ಅನುಗುಣವಾದ ಕೇವಲ ರೂಪಾತ್ಮಕ ಉಕ್ತಿ $G$ ಯೇ ಆಗಿತ್ತು. ತೋರಿಕೆಗೆ ಮೇಲಿನ ಉಕ್ತಿ ವಿರೋಧಾಭಾಸದಿಂದ ಕೂಡಿರುವಂತೆ ಕಂಡರೂ ನಿಜಕ್ಕೂ ಇಲ್ಲಿ ಯಾವ ವಿಧವಾದ ವಿರೋಧಾಭಾಸವೂ ಇಲ್ಲವೆಂದು ಗೊಯ್ಡಲ್ ನಿರ್ದಷ್ಟವಾಗಿ ತೋರಿಸಿದ್ದಾನೆ. ತನ್ನ ವಾದವನ್ನು ಮುಂದುವರಿಸಿ ಗೊಯ್ಡಲ್ $G$ಯ ನಿಷೇಧ $\sim G$ ಸಾಧನೀಯವಿದ್ದರೆ ಮಾತ್ರ $G$ ಸಾಧನೀಯ ಎಂದು ತೋರಿಸಿದ. ಅಂದರೆ $G$ ಮತ್ತು $\sim G$ (ಒಂದು ಉಕ್ತಿ ಮತ್ತು ಅದರ ನಿಷೇಧೋಕ್ತಿ) ಇವುಗಳ ಪೈಕಿ ಒಂದನ್ನು ಸಾಧಿಸಲು ಶಕ್ಯವಾದಲ್ಲಿ ಎರಡೂ ಸಾಧನೀಯ ಎಂದಾಯಿತು. ಹೀಗಾದಲ್ಲಿ ನಮ್ಮ ತಾರ್ಕಿಕ ವ್ಯವಸ್ಥೆ ಸಂಗತವಲ್ಲ ಎನ್ನುವುದು ಸ್ಪಷ್ಟ. ಈ ತೀರ್ಮಾನಕ್ಕೆ ವಿರುದ್ಧವಾಗಿ ವ್ಯವಸ್ಥೆ ಒಂದು ಪಕ್ಷ ಸಂಗತ ಎಂದರೆ ಆಗ $G$ ಮತ್ತು ~G ಎರಡೂ ಸಾಧನೀಯವಲ್ಲವೆಂದಾಯಿತು. ಅಂದರೆ $G$ ಸಾಧನೀಯ ಅಲ್ಲ, ಅದರ ನಿಷೇಧವೂ ಸಾಧನೀಯವಲ್ಲ. ಅಂದರೆ G ಎಂಬ ಉಕ್ತಿ ಅನಿರ್ಧರಣೀಯ (ಅನ್‌ಡಿಸೈಡೆಬಲ್) ಎಂದಾಯಿತು.

$G$ ಉಕ್ತಿಯನ್ನು ಅಂಕಗಣಿತದ ಗೊಯ್ಡಲೀಕರಣ ವಿಧಾನವನ್ನು ಅನುಸರಿಸಿ ಪಡೆದಿರುವ ಕಾರಣ ಅದಕ್ಕೆ ಅಂಕಗಣಿತದಲ್ಲಿ ಒಂದು ಸ್ಥಾನ ಉಂಟು. ಆದರೆ ಅದನ್ನು ಅಂಕಗಣಿತದಲ್ಲಿಯೇ ತಾರ್ಕಿಕವಾಗಿ ಸಾಧಿಸಲು ಸಾಧ್ಯವಿಲ್ಲ. ಇದು ಸಾಧ್ಯವಿದ್ದ ಪಕ್ಷದಲ್ಲಿ $G$ ಅನಿರ್ಧರಣೀಯವಾಗುತ್ತಿರಲಿಲ್ಲ. ಅಂಕಗಣಿತದ ಆದ್ಯುಕ್ತಿ ಮತ್ತು ಪ್ರಮೇಯಗಳಿಂದ ಅದಕ್ಕೆ ಸಂಬಂಧಿಸಿದ ಉಕ್ತಿಯೊಂದನ್ನು ಸಾಧಿಸಲು ಸಾಧ್ಯವಿಲ್ಲದ ಕಾರಣ ಅಂಕಗಣಿತ ಅಪೂರ್ಣವೆಂದಾಯಿತು. ಈ ಅಪೂರ್ಣತೆಯನ್ನು ತೊಡೆದು ಹಾಕುವ ಸಲುವಾಗಿ ಇನ್ನೂ ಕೆಲವು ಆದ್ಯುಕ್ತಿಗಳನ್ನು ಸೇರಿಸಿ $G$ ಉಕ್ತಿಯನ್ನು ಸಾಧಿಸುವುದು ಸಾಧ್ಯ; ಆದರೆ ವಿಸ್ತರಿಸಿದ ವ್ಯವಸ್ಥೆಯಲ್ಲಿ $G$ ಮಾದರಿಯ ಮತ್ತೊಂದು ಉಕ್ತಿಯನ್ನು ಪಡೆದು ವಿಸ್ತರಿತ ವ್ಯವಸ್ಥೆ ಕೂಡ ಅಪೂರ್ಣ ಎಂದು ತೋರಿಸಬಹುದು. ಅಪೂರ್ಣತೆ ನಿವಾರಣಾ ಕ್ರಮವನ್ನು ಎಷ್ಟು ಮುಂದುವರಿಸಿದರೂ ಸಂಪೂರ್ಣತೆ ಲಕ್ಷಣವನ್ನು ಹೊಂದಿರುವ ವ್ಯವಸ್ಥೆಯನ್ನು ಪಡೆಯುವುದು ಸಾಧ್ಯವಿಲ್ಲವೆಂದಾಯಿತು.

ಈ ರೀತಿಯಲ್ಲಿ ಆದ್ಯುಕ್ತೀಕರಿಸಿದ ತಾರ್ಕಿಕ ಮತ್ತು ಗಣಿತೀಯ ವಿಭಾಗಗಳಿಗೆ ಸಂಬಂಧಿಸಿದಂತೆ ಗೊಯ್ಡಲ್ ಬಹಳ ಮಹತ್ತ್ವಪೂರ್ಣವಾದ ತೀರ್ಮಾನವೊಂದನ್ನು ಸಾಧಿಸಿ ತರ್ಕ ಮತ್ತು ಗಣಿತಶಾಸ್ತ್ರಗಳ ಆಧಾರಗಳ ಬಗ್ಗೆ ಹೆಚ್ಚು ಆಳ ಹಾಗೂ ಮೂಲಭೂತವಾದ ಚಿಂತನೆ ಆವಶ್ಯಕ ಎಂದು ಎತ್ತಿ ತೋರಿಸಿದ್ದಾನೆ.

ಈತನ ಮತ್ತೊಂದು ಮುಖ್ಯ ಸಾಧನೆಯೆಂದರೆ ಆಯ್ಕೆ ಆದ್ಯುಕ್ತಿ (ಆ್ಯಕ್ಸಿಯಂ ಆಫ್ ಚಾಯಿಸ್) ಮತ್ತು ಸಾಂತತ್ಯಕಕ್ಕೆ (ಕಂಟಿನ್ಯೂಯಂ) ಸಂಬಂಧಿಸಿದ ಕ್ಯಾಂಟರನ ಊಹೆ (ಹೈಪಾಥಿಸಿಸ್) ಇವೆರಡೂ ಗಣಸಿದ್ಧಾಂತದ ಇತರ ಆದ್ಯುಕ್ತಿಗಳೊಂದಿಗೆ ಸಂಗತ ಎಂದು ತೋರಿಸಿಕೊಟ್ಟದ್ದು. ಗಣಸಿದ್ಧಾಂತದಲ್ಲಿ ಆಯ್ಕೆ ಆದ್ಯುಕ್ತಿಗೆ ಒಂದು ಮಹತ್ತ್ವದ ಸ್ಥಾನ ಉಂಟು. ಈ ಆದ್ಯುಕ್ತಿಯನ್ನು ಸ್ವೀಕರಿಸದಿದ್ದಲ್ಲಿ ಗಣಸಿದ್ಧಾಂತದ ಅನೇಕ ಪ್ರಮೇಯಗಳನ್ನು ಸಾಧಿಸುವುದು ಸಾಧ್ಯವಾಗುವುದಿಲ್ಲ. ಪರಸ್ಪರ ಪ್ರತ್ಯೇಕವಾಗಿರುವ ಹಾಗೂ ಶೂನ್ಯಗಣಗಳಲ್ಲದ ಅನೇಕ ಗಣಗಳನ್ನು ತೆಗೆದುಕೊಂಡು ಪ್ರತಿಯೊಂದು ಗಣದಿಂದಲೂ ಒಂದು ಧಾತುವನ್ನು ಆರಿಸಿಕೊಂಡು ಹೊಸ ಗಣಗಳನ್ನು ರಚಿಸಬಹುದು. ಹೀಗೆ ಹೊಸ ಗಣಗಳನ್ನು ರಚಿಸುವ ಪ್ರಯತ್ನದಲ್ಲಿ ಕಡೆಯ ಪಕ್ಷ ಈ ರೀತಿಯ ಒಂದು ಗಣವನ್ನಾದರೂ ಪಡೆಯುವುದು ಸಾಧ್ಯ ಎಂಬುದೇ ಆಯ್ಕೆ ಆದ್ಯುಕ್ತಿಯ ಮುಖ್ಯ ಅಂಶ. ಸಾಂತ ಗಣಗಳನ್ನು ತೆಗೆದುಕೊಂಡಾಗ ಆಯ್ಕೆ ಆದ್ಯುಕ್ತಿಯ ಸಹಾಯವಿಲ್ಲದೆಯೇ ಮೇಲಿನ ರೀತಿಯ ಗಣಗಳನ್ನು ರಚಿಸಬಹುದು. ಆದರೆ ಅನಂತ ಗಣಗಳನ್ನು ತೆಗೆದುಕೊಂಡಾಗ ಈ ಆದ್ಯುಕ್ತಿಯನ್ನು ಉಪಯೋಗಿಸದೆ ಮೇಲಿನ ರೀತಿಯ ಹೊಸ ಗಣಗಳ ರಚನೆ ಸಾಧ್ಯವೇ ಇಲ್ಲ. ಆಯ್ಕೆ ಆದ್ಯುಕ್ತಿ ಗಣ ಸಿದ್ಧಾಂತದ ಇತರ ಆದ್ಯುಕ್ತಿಗಳೊಂದಿಗೆ ಸಂಗತವೇ ಅಲ್ಲವೆ ಎಂಬುದು ಒಂದು ಬಹುಮುಖ್ಯ ಪ್ರಶ್ನೆಯಾಗಿ ಅನೇಕ ವರ್ಷಗಳ ಕಾಲ ಗಣಿತಜ್ಞರಲ್ಲಿ ಈ ಬಗ್ಗೆ ವಿಪುಲ ಚರ್ಚೆಗೆ ಕಾರಣವಾಯಿತು. 1940ರಲ್ಲಿ ಈ ಪ್ರಶ್ನೆಗೆ ಸಂಬಂಧಿಸಿದಂತೆ ಗೊಯ್ಡಲ್ ಒಂದು ಮಹತ್ತ್ವಪೂರ್ಣವಾದ ತೀರ್ಮಾನವನ್ನು ಸಾಧಿಸಿ ಗಣಸಿದ್ಧಾಂತದ ಇತರ ಆದ್ಯುಕ್ತಿಗಳೆಲ್ಲವೂ ಪರಸ್ಪರ ಸಂಗತವಿದ್ದ ಪಕ್ಷದಲ್ಲಿ ಆಯ್ಕೆ ಆದ್ಯುಕ್ತಿ ಕೂಡ ಅವುಗಳೊಂದಿಗೆ ಸಂಗತ ಎಂದು ಖಚಿತವಾಗಿ ತೋರಿಸಿಕೊಟ್ಟ.

ಗಣಸಿದ್ಧಾಂತದ ಸ್ಥಾಪಕನಾದ ಕ್ಯಾಂಟರ್ ತನ್ನ ಸಿದ್ಧಾಂತದ ಆಧಾರದ ಮೇಲೆ ಕೆಲವು ಭಿನ್ನರೀತಿಯ ಅನಂತ ಗಣಗಳನ್ನು ಪರಿಶೀಲಿಸಿ ಸಾಂತ ಸಂಖ್ಯೆಗಳಿಗೆ ಅತೀತವಾದ ಹಲವಾರು ಅನಂತ ಸಂಖ್ಯೆಗಳಿರುವುದನ್ನು ಖಚಿತವಾಗಿ ತೋರಿಸಿದ. ಈ ರೀತಿಯ ಅನಂತ ಸಂಖ್ಯೆಗಳನ್ನು ಇನ್ನೂ ವಿವರವಾಗಿ ಪರಿಶೀಲಿಸಿದಾಗ ಕೆಲವು ಸ್ವಾರಸ್ಯಕರವಾದ ವಿಷಯಗಳು ಬೆಳಕಿಗೆ ಬಂದವು. ಸ್ವಾಭಾವಿಕ ಸಂಖ್ಯೆಗಳ ಗಣ, ನೈಜ (ರಿಯಲ್) ಸಂಖ್ಯೆಗಳ ಗಣ ಮತ್ತು ಯಾವುದಾದರೂ ನಿರ್ದಿಷ್ಟ ಸಂಖ್ಯಾಂತರದಲ್ಲಿ ನಿರ್ದೇಶಿತವಾಗಿರುವ ಎಲ್ಲ ನೈಜ ಉತ್ಪನ್ನಗಳ ಗಣ ಇವನ್ನು ಪರಿಶೀಲಿಸಿದಾಗ ಅವು ಪ್ರತಿಯೊಂದೂ ಸಾಂತವಾಗಿರದೆ ಅನಂತವಾಗಿರುವುದು ಮತ್ತು ಅವುಗಳ ಗಣನ ಸಂಖ್ಯೆ (ಕಾರ್ಡಿನಲ್ ನಂಬರ್) ಅನಂತವಾಗಿರುವುದು ಕಂಡುಬರುತ್ತದೆ. ಆದರೆ ಈ ಸಂದರ್ಭದಲ್ಲಿ ಉದ್ಭವಿಸುವ ಸಹಜ ಪ್ರಶ್ನೆಯೆಂದರೆ ಮೇಲಿನ ಗಣಗಳಿಗೆ ಸಂಬಂಧಿಸಿದ $a, c, f$ ಎಂಬ ಮೂರು ಅನಂತಗಳೂ ಒಂದೇ ಬೆಲೆಯುಳ್ಳವುಗಳೇ ಎನ್ನುವುದು. $a, c, f$ ಎಂಬ ಈ ಮೂರು ಅನಂತಗಳನ್ನು ಮೊಟ್ಟಮೊದಲಿಗೆ ಪತ್ತೆ ಹಚ್ಚಿದ ಕ್ಯಾಂಟರ್ ಇವು ಮೂರೂ ಬೇರೆ ಬೇರೆ ಬೆಲೆಯುಳ್ಳವು ಮತ್ತು $a<c<f$ ಎಂದು ಸಾಧಿಸಿದ.

ಇದಲ್ಲದೆ $2^a, 2^c, 2^f, 2^{2a}, 2^{2c}, 2^{2f}$,........ ಇತ್ಯಾದಿ ಸಂಖ್ಯೆಗಳು ಕೂಡ ಅನಂತಗಳು ಎಂದು ಸಾಧಿಸಿ ಈ ರೀತಿಯಲ್ಲಿ $a, c, f$ ಗಳ ಸಹಾಯದಿಂದ ಹೇಗೆ ಇನ್ನೂ ಅನೇಕ ಅನಂತ ಹಾಗೂ ಬೃಹದನಂತಗಳನ್ನು ಪಡೆಯಬಹುದು ಎಂಬುದನ್ನು ಕ್ಯಾಂಟರ್ ತೋರಿಸಿಕೊಟ್ಟ.

ಬೆಲೆಗಳಿಗೆ ಅನುಸಾರವಾಗಿ ಹೇಗೆ ಸಾಂತ ಸಂಖ್ಯೆಗಳನ್ನು ಅನುಕ್ರಮವಾಗಿ ಜೋಡಿಸಬಹುದೋ ಅದೇ ರೀತಿಯಲ್ಲಿ ಸಾಂತಾತೀತ (ಟ್ರಾನ್ಸ್‌ಫೈನೈಟ್) ಸಂಖ್ಯೆಗಳನ್ನು, ಅಂದರೆ ಅನಂತಗಳನ್ನು, ಅವುಗಳ ಗಣನ ಸಂಖ್ಯೆಗಳನ್ನು ಅನುಸರಿಸಿ ಅನುಕ್ರಮವಾಗಿ ಅಳವಡಿಸುವುದು ಸಾಧ್ಯ. ಹೀಗೆ ಅಳವಡಿಸಿದ ಅನುಕ್ರಮಿ ಅನಂತಗಳನ್ನು $N_0, N_1, N_2, N_3$,...... ಎಂದು ಸೂಚಿಸುವುದು ವಾಡಿಕೆ. ಈ ಶ್ರೇಣಿಯಲ್ಲಿ $N_0$ ಕನಿಷ್ಠ ಬೆಲೆಯ ಅನಂತ ಎಂಬುದನ್ನು ಗಮನಿಸಬೇಕು. ಅನಂತಗಳಿಗೆ ಸಂಬಂಧಿಸಿದಂತೆ ತನ್ನ ಪರಿಶೀಲನೆಯನ್ನು ಮುಂದುವರಿಸಿದ ಕ್ಯಾಂಟರ್ $a=N_0$ ಮತ್ತು $2^a= 2\,N_0= c$ ಎಂಬ ಎರಡು ಮುಖ್ಯ ತೀರ್ಮಾನಗಳನ್ನು ಪಡೆದನಲ್ಲದೆ $a$ ಮತ್ತು $c$ ಅನಂತಗಳ ನಡುವೆ ಇನ್ನಾವ ಅನಂತ ಸಂಖ್ಯೆಯೂ ಇರಲು ಸಾಧ್ಯವಿಲ್ಲ, ಅಂದರೆ $a$ ಆದ ಮೇಲೆ ಬರುವ ಮುಂದಿನ ಅನುಕ್ರಮ ಅನಂತ ಸಂಖ್ಯೆ $c$ ಯೇ ಇರಬೇಕೆಂದು ಅಭಿಪ್ರಾಯಪಟ್ಟ. ಈತನ ಈ ಅಭಿಪ್ರಾಯವನ್ನೇ ಸಾಮಾನ್ಯವಾಗಿ ಕ್ಯಾಂಟರನ ಸಾಂತತ್ಯಕ ಊಹೆ ಎನ್ನುವುದು. ಅನಂತಗಳ ಶ್ರೇಣಿಯಲ್ಲಿ $a=N_0$ ಆದಮೇಲೆ ಬರುವ ಅನುಕ್ರಮಿ ಅನಂತ ಸಂಖ್ಯೆ $N_1$ ಆದ್ದರಿಂದ ಕ್ಯಾಂಟರನ ಊಹೆಯನ್ನು $c=2\,N_0=N_1$ ಎಂಬ ರೀತಿಯಲ್ಲೂ ಪ್ರತಿಪಾದಿಸಬಹುದು. ಈ ಊಹೆ ಸಿಂಧು ಎಂಬ ನಂಬಿಕೆಯ ಮೇಲೆ ಗಣಿತಜ್ಞರು ಗಣಸಿದ್ಧಾಂತದ ಅನೇಕ ಪ್ರಮೇಯಗಳನ್ನು ಸಾಧಿಸಿದ್ದಾರೆ. ಕ್ಯಾಂಟರನ ಊಹೆಗೆ ಸಂಬಂಧಿಸಿದಂತೆ ಗೊಯ್ಡಲ್ ಒಂದು ಮುಖ್ಯ ತೀರ್ಮಾನವನ್ನು ಸಾಧಿಸಿದ್ದಾನೆ. ಗಣಸಿದ್ಧಾಂತದ ಆದ್ಯುಕ್ತಿಗಳೆಲ್ಲ ಪರಸ್ಪರ ಸಂಗತ ಎಂದು ಭಾವಿಸುವುದಾದರೆ ಕ್ಯಾಂಟರನ ಊಹೆ ಈ ಆದ್ಯುಕ್ತಿಗಳೊಂದಿಗೆ ಸಂಗತ ಎಂಬ ತೀರ್ಮಾನವನ್ನು ಗೊಯ್ಡಲ್ ತನ್ನ 1940ರ ಲೇಖನದಲ್ಲಿ ಬಹಳ ಖಚಿತವಾಗಿಯೂ ತರ್ಕಬದ್ಧವಾಗಿಯೂ ಸಾಧಿಸಿ

ತೋರಿಸಿದ್ದಾನೆ. ಇದಲ್ಲದೆ ಕ್ಯಾಂಟರನ ಊಹೆಯನ್ನು ವಿಸ್ತರಿಸಿ ಸಾರ್ವತ್ರೀಕರಿಸಿದಾಗ ಬರುವ $2^{N_n} = N_n + 1$ ಸಂಬಂಧ ಕೂಡ ಗಣಸಿದ್ಧಾಂತದ ಆದ್ಯುಕ್ತಿಗಳೊಂದಿಗೆ ಸಂಗತ ಎಂದು ಸಹ ಗೊಯ್ಡಲ್ ತನ್ನ ಲೇಖನದಲ್ಲಿ ಸಾಧಿಸಿ ತೋರಿಸಿದ್ದಾನೆ. ಕ್ಯಾಂಟರನ ಹೇಳಿಕೆಯನ್ನು ಇತ್ತೀಚಿನವರೆಗೂ ಸಾಧಿಸಲು ಸಾಧ್ಯವಾಗಿರಲಿಲ್ಲ. ಆದಕಾರಣ ಅದೊಂದು ಊಹೆಯಾಗಿಯೇ ಉಳಿದಿತ್ತು. ಆದರೆ 1963ರಲ್ಲಿ ಕೋಹೆನ್ ಎಂಬ ಗಣಿತಜ್ಞ $2^{N_0} = N_2$ ಸಂಬಂಧ ಕೂಡ ಗಣಸಿದ್ಧಾಂತದ ಆದ್ಯುಕ್ತಿಗಳೊಂದಿಗೆ ಸಂಗತ ಎಂದು ಸಾಧಿಸಿ ಕ್ಯಾಂಟರನ ಊಹೆ ಅನಿರ್ಧರಣೀಯ ಎಂದು ತೋರಿಸಿದ್ದಾನೆ.

ಗೊಯ್ಡಲನ ಬೌದ್ಧಿಕ ಸಾಧನೆಗಳು ಹೆಚ್ಚಾಗಿ ಗಣಿತ ಕ್ಷೇತ್ರಕ್ಕೆ ಸಂಬಂಧಿಸಿದವುಗಳಾದರೂ ಭೌತವಿಜ್ಞಾನದಲ್ಲಿ ಕೂಡ ಅವನು ಕೆಲವು ಪರಿಣಾಮಕಾರಿ ಸಂಶೋಧನೆಗಳನ್ನು ಮಾಡಿದ್ದಾನೆ. ಐನ್‌ಸ್ಟೈನನ ಸಾಪೇಕ್ಷತಾ ಸಿದ್ಧಾಂತದ ಕೆಲವು ಮುಖ್ಯ ಪ್ರಶ್ನೆಗಳಿಗೆ ತನ್ನದೇ ಆದ ಕೆಲವು ಪರಿಹಾರಗಳನ್ನು ಪ್ರತಿಪಾದಿಸಿದ್ದಾನೆ. ಇವುಗಳಲ್ಲಿ ಐನ್‌ಸ್ಟೈನನ ಗುರುತ್ವಕ್ಷೇತ್ರದ ಸಮೀಕರಣಗಳಿಗೆ ವಿಶ್ವವ್ಯಾಪ್ತಿಯಿರುವ ಹೊಸ ಪರಿಹಾರವೊಂದನ್ನು ಕಂಡುಹಿಡಿದಿರುವುದು ಮತ್ತು ಸಾಪೇಕ್ಷತಾ ಸಿದ್ಧಾಂತದ ಚೌಕಟ್ಟಿನಲ್ಲಿ ಆವರ್ತಿಸುವ ವಿಶ್ವಗಳ (ರೊಟೇಟಿಂಗ್ ಯೂನಿವರ್ಸ್) ವಿಷಯವನ್ನು ವಿಚಾರ ಮಾಡಿರುವುದು ಅವನ ಮುಖ್ಯ ಸಂಶೋಧನೆಗಳು. ಇದಲ್ಲದೆ ಗಣಿತ ತರ್ಕ, ಸಾಪೇಕ್ಷತಾ ಸಿದ್ಧಾಂತ ಮತ್ತು ವಿಜ್ಞಾನ ವಾದಗಳಿಗಿರುವ ಸಂಬಂಧ ಇತ್ಯಾದಿ ವಿಷಯಗಳ ಬಗ್ಗೆಯೂ ಗೊಯ್ಡಲ್ ಪ್ರೌಢ ಲೇಖನಗಳನ್ನು ಬರೆದಿದ್ದಾನೆ. ಈತ 1978ರ ಜನವರಿ 14 ರಂದು ಅಮೆರಿಕದ ನ್ಯೂಜರ್ಸಿಯಲ್ಲಿ ನಿಧನನಾದ.

(ಕೆ.ಎಸ್.ಆರ್.ಐ.)

**ಗೊರಟೆ :** ಅಕ್ಯಾಂತೇಸೀ ಕುಟುಂಬಕ್ಕೆ ಸೇರಿದ ಒಂದು ಪ್ರಸಿದ್ಧ ಸಸ್ಯಜಾತಿ. ವೈಜ್ಞಾನಿಕ ಹೆಸರು ಬಾರ್ಲೀರಿಯ. ಸ್ಫಟಿಕದ ಗಿಡ, ಮುಳ್ಳು ಗೋರಂಟಿ, ಮುಳ್ಳು ಮದರಂಗಿ, ಗುಬ್ಬಿಮುಳ್ಳುಗಿಡ ಮುಂತಾದವು ಪರ್ಯಾಯ ನಾಮಗಳು. ಇದು ಸುಮಾರು 180 ಪ್ರಭೇದಗಳನ್ನೊಳಗೊಂಡಿದೆ. ಪ್ರಪಂಚದ ಉಷ್ಣವಲಯ ದೇಶಗಳಲ್ಲೆಲ್ಲ ಇವು ಕಾಣಸಿಗುತ್ತವೆ. ಭಾರತದಲ್ಲಿ 30 ಪ್ರಭೇದಗಳಿವೆ. ಇವುಗಳಲ್ಲಿ ಕೆಲವು ವನ್ಯವಾಸಿಗಳಾದರೆ (ಉದಾಹರಣೆಗೆ ಬಕ್ಸಿಫೋಲಿಯ, ಕುರ್ಟಾಲಿಕ, ಲಾಂಜಿಫೋಲಿಯ, ಸ್ಟ್ರೈಗೋಸ ಪ್ರಭೇದಗಳು) ಇನ್ನು ಕೆಲವು ತಮ್ಮ ಚೆಲುವಾದ ಹೂಗಳಿಂದಾಗಿ ಅಲಂಕಾರ ಸಸ್ಯಗಳೆಂದು ಹೆಸರಾಗಿವೆ (ಉದಾಹರಣೆಗೆ ಕ್ರಿಸ್ಟೇಟ, ಗಿಬ್ಸೋನಿಯೈ, ಪ್ರಿಯೋನೈಟಿಸ್, ನಾಕ್ಟಿಫ್ಲೋರ ಮುಂತಾದ ಪ್ರಭೇದಗಳು).

ಎಲ್ಲ ಪ್ರಭೇದಗಳೂ ಸಾಮಾನ್ಯವಾಗಿ $^2/_3$ – 2 ಮೀ ಎತ್ತರಕ್ಕೆ ಬೆಳೆಯುವ ಪೊದೆ ಸಸ್ಯಗಳು. ಎಲೆಗಳು ಸರಳ; ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಕೆಲವು ಪ್ರಭೇದಗಳ ಎಲೆಗಳ ಕಂಕುಳಲ್ಲಿರುವ ವೃಂತಪತ್ರಗಳು ಮುಳ್ಳುಗಳಾಗಿ ಪರಿವರ್ತಿತವಾಗಿವೆ.

ಹೂಗಳು ಎಲೆಗಳ ಕಂಕುಳಲ್ಲಿ ಸಮಾವೇಶಗೊಂಡಿವೆ. ಹೂಗಳ ಬಣ್ಣ ವಿವಿಧ ಪ್ರಭೇದಗಳಲ್ಲಿ ವಿವಿಧ ರೀತಿ. ಉದಾಹರಣೆಗೆ ಕ್ರಿಸ್ಟೇಟ ಪ್ರಭೇದದ ಬೇರೆ ಬೇರೆ ತಳಿಗಳಲ್ಲಿ ಹೂಗಳ ಬಣ್ಣ ಊದಾಮಿಶ್ರಿತ ನೀಲಿ, ಬಿಳಿ, ನಸುಗೆಂಪು, ಗುಲಾಬಿ ಮುಂತಾಗಿಯೂ ಗಿಬ್ಸೋನಿಯೈ ಪ್ರಭೇದದಲ್ಲಿ ಕಡುನೀಲಿಯಾಗಿಯೂ ಪ್ರಿಯೋನೈಟಿಸ್ ಪ್ರಭೇದದಲ್ಲಿ ಕಿತ್ತಳೆ ಇಲ್ಲವೆ ಹಳದಿಯಾಗಿಯೂ ಇರುತ್ತದೆ. ಹೂಗಳು ಚಳಿಗಾಲದ ವೇಳೆಗೆ ಅರಳುತ್ತವೆ.

ಗೊರಟೆಯನ್ನು ಕಾಂಡತುಂಡುಗಳಿಂದ ಇಲ್ಲವೆ ಬೀಜಗಳಿಂದ ವೃದ್ಧಿಸಬಹುದು.

ಗೊರಟೆಗೆ ಔಷಧೀಯ ಗುಣಗಳೂ ಉಂಟು. ಇದರ ಎಲೆಗಳಿಗೆ ಕಹಿರುಚಿಯಿರುತ್ತದೆ. ಎಲೆಗಳ ರಸವನ್ನು ಸಕ್ಕರೆ ಮತ್ತು ಜೇನುತುಪ್ಪಗಳೊಂದಿಗೆ ಬೆರೆಸಿ ಕಫಹಾರಿಯಾಗಿ ಬಳಸುತ್ತಾರೆ. ಹುಣ್ಣು ಮತ್ತು ಬಾವುಗಳಿಗೆ ಇದರ ಬೇರಿನ ಸರಿಯನ್ನು ಹಚ್ಚುವುದುಂಟು.

(ಎಸ್‌ಐ.ಎಚ್.)

**ಗೊರವರು :** ವೃತ್ತಿಗಾಯಕರಲ್ಲಿ ಒಂದು ಸಂಪ್ರದಾಯದವರು. ಇವರು ಹಿರಿಯ ಮೈಲಾರ ಮತ್ತು ಇತರ ಕಡೆಗಳಲ್ಲಿರುವ ಮೈಲಾರ ಲಿಂಗನ ಕ್ಷೇತ್ರಗಳಿಗೆ ನಡೆದುಕೊಳ್ಳುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಇವರು ಹಾಡುತ್ತಿದ್ದ ಮೈಲಾರ ಲಿಂಗನ ಕಥೆ ಈಚೆಗೆ ಅಪರೂಪವಾಗುತ್ತಿದೆ.

ಗೊರವರನ್ನು ದಕ್ಷಿಣ ಕರ್ನಾಟಕದಲ್ಲಿ ಗೊರವ, ವಗ್ಗಯ್ಯ, ಗೊಗ್ಗಯ್ಯ, ಗಡಬಡ್ಡಯ್ಯ, ಕಡಬಡ್ಡ ಎಂದೂ ಉತ್ತರ ಕರ್ನಾಟಕದಲ್ಲಿ ವ್ಯಾಘ, ಗ್ವಾರಪ್ಪ ಎಂದೂ ಕರೆಯುವುದು ರೂಢಿ. ಗೊರವ ಶಬ್ದಕ್ಕೆ ಕಿಟ್ಟೆಲ್ ನಿಘಂಟಿನಲ್ಲಿ ಒಂದು ಬಗೆಯ ಶೈವ ಭಿಕ್ಷುಕರು ಎಂದು ಹೇಳಿದೆ. ಗುರು ಎಂಬುದೇ ಗೊರವ ಶಬ್ದದ ಮೂಲ ಎಂದೂ ಕೆಲವರ ಅಭಿಪ್ರಾಯ. ಗೊಗ್ಗ ಎಂದರೆ ಮೈಲಾರ ಲಿಂಗದ ಹಿಂಬಾಲಕರು ಎಂದು ಕಿಟ್ಟೆಲ್ ನಿಘಂಟಿನ ವಿವರಣೆ. ಮಕ್ಕಳನ್ನು ಹೆದರಿಸಲು ಗೊಗ್ಗ ಬಂದ, ಗೊಗ್ಗಯ್ಯ ಬಂದ–ಎಂದು ತಾಯಂದಿರು ಹೇಳುವ ವಾಡಿಕೆ ಇದೆ. ಗೊರವ ಶಬ್ದವೇ ಗೊಗ್ಗಯ್ಯ ಆಗಿರುವ ಸಂಭವವೂ ಇಲ್ಲದಿಲ್ಲ.

ಕನ್ನಡ ಸಾಹಿತ್ಯದಲ್ಲಿ 12ನೆಯ ಶತಮಾನಕ್ಕೂ ಹಿಂದೆಯೇ, ಗೊರವ ಶಬ್ದದ ಉಲ್ಲೇಖ ನಯಸೇನನ ಧರ್ಮಾಮೃತದಲ್ಲಿದೆ. ಇಲ್ಲಿ ಕವಿ ಪ್ರಾಸಂಗಿಕವಾಗಿ ಗೊರವರನ್ನು ವರ್ಣಿಸಿದ್ದಾನೆ.

ಗೊರವರು ಮೇಳ ನಡೆಸುವುದೂ ಉಂಟು. ರಾತ್ರಿಯೆಲ್ಲ ನಡೆಯುವ ಈ ಮೇಳದಲ್ಲಿ ಮೂರು ಜನ ಭಾಗವಹಿಸುತ್ತಾರೆ. ನಡುವೆ ಇರುವ ಕತೆಗಾರ ಡಮರುಗ ಆಡಿಸುತ್ತ ಕತೆಯನ್ನು ನಿರೂಪಿಸುತ್ತ ಹೋದರೆ ಉಳಿದ ಇಬ್ಬರು ಅದೇ ರೀತಿ ನುಡಿಸುತ್ತ ಹಿಮ್ಮೇಳದಲ್ಲಿದ್ದು ಹಾಡುತ್ತಾರೆ. ಈ ಸಂದರ್ಭದಲ್ಲಿ ಮೈಲಾರಲಿಂಗನ ಲೀಲೆಗಳನ್ನು ಪ್ರಮುಖವಾಗಿ ಹಾಡುವುದಾದರೂ ಮೈಸೂರು ಭಾಗದಲ್ಲಿ ಕೆಲವರು ಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳನ್ನು ಹಾಡುವುದುಂಟು. ಭಕ್ತರ ಮನೆಗಳಲ್ಲಿ ಹಿಂದೆ ಇಂಥ ಮೇಳಗಳು ನಡೆಯುತ್ತಿದ್ದುವು.

ದಕ್ಷಿಣ ಕರ್ನಾಟಕದ ಗೊರವರಿಗೂ ಉತ್ತರ ಕರ್ನಾಟಕದ ಗೊರವರಿಗೂ ಅವರ ವೇಷಭೂಷಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿವೆ. ದಕ್ಷಿಣದವರಲ್ಲಿ ಕಂಬಳಿಯ ನಿಲುವಂಗಿ, ಕೊರಳಲ್ಲಿ ಭಂಡಾರ ಇಡುವ ಹುಲಿಚರ್ಮದ ಚೀಲ, ಕವಡೆಸರ, ಹೆಗಲಲ್ಲಿ ಭಿಕ್ಷಾಪಾತ್ರೆ, ದೋಣಿ, ಕೈಯಲ್ಲಿ ಡಮರುಗ, ತ್ರಿಶೂಲ– ಇವು ಮುಖ್ಯವಾದವು. ತಲೆಯ ಮೇಲೆ ಬಿಳಿಯ ರುಮಾಲು ಇರುತ್ತದೆ. ಕೆಲವೊಮ್ಮೆ ಕರಡಿಯ ಕೂದಲ ಕುಲಾವಿ ಧರಿಸುವುದೂ ಉಂಟು. ಉತ್ತರದವರು ಮೇಲಿನ ವೇಷಭೂಷಣಗಳ ಜೊತೆಗೆ ಒಕ್ಕಳಗಂಟೆ, ರಟ್ಟೆಬಳೆ, ಕಾಲಗೆಜ್ಜೆ, ಹುಲಿ ಚರ್ಮ, ಕೊರಳ ಕವಡೆ ನಡುಪಟ್ಟಿ, ಎಲೆಸಂಚಿ ಮತ್ತು ಪಿಳ್ಳಂಗೋವಿ ಮೊದಲಾದುವನ್ನು ಬಳಸುತ್ತಾರೆ. ಕರಡಿ ಕೂದಲ ಟೋಪಿ, ಕರಿಯ ನಿಲುವಂಗಿ, ಅದರ ಮೇಲೆ ಕವಡೆ ಪಟ್ಟಿಗಳನ್ನು ಧರಿಸುವುದು ಸಾಮಾನ್ಯ.

ಗೊರವರಿಗೂ ದೀಕ್ಷೆ ಕೊಡುವ ಸಂಪ್ರದಾಯ ಉಂಟು. ಮನೆಯ ಹಿರಿಯ ಮಗ ಈ ದೀಕ್ಷೆಗೆ ಅರ್ಹ. ಹೆಚ್ಚಾಗಿ ಇವರು ಹಾಲುಮತದ ಕುರುಬರೇ ಆಗಿರುತ್ತಾರೆ. ಹರಿಜನರೂ ಇತರ ಮತದವರೂ ವಿರಳವಾಗಿ ಕಂಡುಬರುತ್ತಾರೆ. ಗುರುವಿನಿಂದ ದೀಕ್ಷೆ ಪಡೆಯುವಾಗ ಕಾಲಿಗೆ ಮಿಂಚು, ಕೈಗೆ ಕಂಕಣ, ಪಂಚಕಳಸ, ಕಂಬಳಿ ಗದ್ದುಗೆಗಳೊಡನೆ ತಮ್ಮ ದೇವರುಗಳ ಹೆಸರಿನಲ್ಲಿ ಪ್ರಮಾಣ ಮಾಡುತ್ತಾರೆ. 'ಒಂದು ದನ ಹೋಗಿ ಒಂದು ಹೊಲದಲ್ಲಿ ಮೇಯ್ತಾ ಇದ್ದರೆ ಮೇಯುತ್ತೆ ಎಂದು ಹೇಳುವುದಿಲ್ಲ; ಕರ ಹಾಲು ಕುಡಿಯುತ್ತಿದ್ದರೆ ಕುಡಿಯುತ್ತೆ ಎಂದು ಹೇಳುವುದಿಲ್ಲ ಕಾಲಿಗೆ ಎಕ್ಕಡ ಹಾಕುವುದಿಲ್ಲ, ಗಾಡಿ ಮೇಲೆ ಕೂರುವುದಿಲ್ಲ, ಸರ್ಪವನ್ನು ಹೊಡೆಯುವುದಿಲ್ಲ, ತಾಯಿ ತಂದೆ ದೂಷಣೆ ಮಾಡುವುದಿಲ್ಲ' – ಇದು ಅವರ ಪ್ರಮಾಣವಚನ.

ಮೈಲಾರ ಲಿಂಗನ ಕ್ಷೇತ್ರಗಳು ದಕ್ಷಿಣ ಭಾರತದಲ್ಲಿ ಅನೇಕ ಇವೆ. ಅದರಲ್ಲೂ ಕರ್ನಾಟಕದಲ್ಲಿ ಹೇರಳ. ಧಾರವಾಡ ಜಿಲ್ಲೆಯ ದೇವರಗುಡ್ಡ (ಹಿರಿಯ ಮೈಲಾರ), ದೇವಿ ಹೊಸೂರು, ಬೀದರ್ ಜಿಲ್ಲೆಯ ಮೈಲಾರಪುರ, ಬಳ್ಳಾರಿ ಜಿಲ್ಲೆಯ ಮಣ್ಣು ಮೈಲಾರ, ಬೆಳಗಾಂವಿ ಜಿಲ್ಲೆಯ ಕಾರಿಮನಿ, ಮಂಗಸೂಳಿ, ಶಿವಮೊಗ್ಗ ಜಿಲ್ಲೆಯ ಕುಬಟೂರು, ಮೈಸೂರು ಜಿಲ್ಲೆಯ ಮುಡುಕುತೊರೆ, ಬೆಂಗಳೂರು ಜಿಲ್ಲೆಯ ಹೆನ್ನಾಗರಗ್ರಾಮ, ಮಂಡ್ಯ ಜಿಲ್ಲೆಯ ಮೈಲಾರಪಟ್ಟಣ– ಮುಂತಾದ ಕಡೆ ಮೈಲಾರ ಲಿಂಗನ ಕ್ಷೇತ್ರಗಳನ್ನು ನೋಡಬಹುದಾಗಿದೆ. ಇವುಗಳಲ್ಲಿ ದೇವರಗುಡ್ಡ ಕ್ಷೇತ್ರವೇ ಮುಖ್ಯವಾದುದು.

ಮೈಲಾರ ಲಿಂಗನನ್ನು ಕುರಿತು ಅನೇಕ ಕಾವ್ಯಗಳಿವೆ. ಸ್ಥಳಪುರಾಣ ರೂಪದಲ್ಲಿ ಸಂಸ್ಕೃತ ಕಾವ್ಯವೊಂದು ದೊರೆತಿದೆ. ಜನಪದ ಕತೆಯೂ ಉಂಟು. ಈಗಿನ ಗೊರವ ಸಂಪ್ರದಾಯದ ಮೇಲೆ ಬೆಳಕು ಚೆಲ್ಲುವ ಬೇರೊಂದು ಕಥೆ ಕಂಠಸ್ಥ ಹಾಡಿನ ರೂಪದಲ್ಲಿದ್ದು ಈಗ ಕಣ್ಮರೆಯಾಗಿದೆ. ಮೈಲಾರಲಿಂಗ ಮತ್ತು ಕೋಮಲೆಯರ ಪ್ರಣಯ ಪ್ರಸಂಗಕ್ಕೆ ಸೇರಿದ ಜನಪದ ಕಥನಗೀತೆ ಚಿತ್ರದುರ್ಗ ತುಮಕೂರು ಶಿವಮೊಗ್ಗ ಜಿಲ್ಲೆಗಳಲ್ಲಿ ಲಭ್ಯವಾಗಿದೆ.

ಹಿರಿಯ ಮೈಲಾರದ ಸುತ್ತಿನಲ್ಲಿ ಮೈಲಾರಲಿಂಗನನ್ನು ಕುರಿತ ಧಾರ್ಮಿಕ ಕಾವ್ಯವೊಂದು ಈಗಲೂ ಪ್ರಚಲಿತವಾಗಿದೆ. ದೇವರ ಮಹಿಮೆಗಳು ಮತ್ತು ಪವಾಡಗಳ ಹಿನ್ನೆಲೆಯಲ್ಲಿ ಅಪೂರ್ವ ಕಲ್ಪನೆ, ನೈಜಚಿತ್ರಣ, ಆಯಾ ನೆಲದ ಭಾಷೆಯ ಅಪರೂಪದ ಶೈಲಿ, ವಿಶಿಷ್ಟ ಸಂಭಾಷಣೆ– ಇವುಗಳಿಂದಾಗಿ ಇದರ ಕಥೆಗಾರಿಕೆ ಬಹಳ ಸೊಗಸಾದುದು.

ಈ ಸಂಬಂಧದಲ್ಲಿರುವ ಜನಪದ ಕಥೆ ಅಪರೂಪವಾದುದು. ತುಪ್ಪದ ಮಾಳಮ್ಮ ಶ್ರೀಮಂತ ಹೆಣ್ಣುಮಗಳು. ತನ್ನ ಐದು ಜನ ಅಣ್ಣಂದಿರಾದ ಚಿಕ್ಕಸಿದ್ದ, ದೊಡ್ಡಸಿದ್ದ, ಬೀರಜ್ಜ, ಕರಿಯಾಲ, ಕೆಂದಾಲ ಎಂಬುವರಿಗೆ ಮಾಳಮ್ಮ ಬುತ್ತಿಯನ್ನು ಹೊತ್ತು ತರುತ್ತಿದ್ದಳು. ಏಳು ಹೆಡೆಯ ಸರ್ಪವನ್ನೇ ಅವಳು ತನ್ನ ಸಿಂಬಿಯನ್ನಾಗಿ ಮಾಡಿಕೊಂಡಿದ್ದಳು. ಆಗ ಮೈಲಾರಲಿಂಗ ಮಾಳಮ್ಮ ಬುತ್ತಿ ಹೊತ್ತು ಹೋಗುತ್ತಿದ್ದ ಕಡೆಗೆ ಬಂದು ಅವಳನ್ನು ತಡೆದು ನಿಲ್ಲಿಸಿ 'ಗಂಗೆ ಮಾಳಿಯೊಡನೆ ತನಗೊಂದು ಮದುವೆಯಾಗಿದೆ, ತನ್ನ ಲಿಂಗಕ್ಕೊಂದು ಮದುವೆಯಾಗಬೇಕು' – ಎಂದು ಹೇಳಿದ. ಅವನ ವೇಷ ಅಪ್ಪಟ ಗೊರವನಂತಿತ್ತು. ಈ ವಿಚಿತ್ರ ವೇಷದವನನ್ನು ನೋಡಿದ ಮಾಳಮ್ಮ ರಾಕ್ಷಸ ಬಂದನೆಂದು ಹೆದರಿದಳು. ಆಕೆಯ ಅಣ್ಣಂದಿರು ಹತ್ತಿರದಲ್ಲೇ ಕುರಿ ಕಾಯುತ್ತಿದ್ದರು. ತಂಗಿ ಕೂಗಿದ ಶಬ್ದ ಕೇಳಿದ ಚಿಕ್ಕಸಿದ್ದ ಏಳು ಯೋಜನ ಉದ್ದದ ಬೂರಗದ ಮರ ಹತ್ತಿ ನೋಡಿದ. ಆಕಾಶಕ್ಕೂ ಭೂಮಿಗೂ ಒಂದೇ ಆಗಿ ಮೈಲಾರಲಿಂಗ ನಿಂತಿದ್ದನ್ನು ಕಂಡ. ಯಾರೋ ರಾಕ್ಷಸನಿರಬೇಕೆಂದು ಹೆದರಿದ. ಆರು ಸಾವಿರ ಕುರಿ ಹಾಲು ಕರೆದು ತನ್ನ ಎರಡು ನಾಯಿಗಳಿಗೂ ಇಟ್ಟು ಆ ರಾಕ್ಷಸನನ್ನು ಸೀಳಿ ಬನ್ನಿ ಎಂದು ಹೇಳಿ ಛೂಬಿಟ್ಟ. ನಿಮ್ಮ ಅಣ್ಣನ ನಾಯಿಗಳು ನನ್ನನ್ನು ಏನೂ ಮಾಡಲಾರವು ಎಂದ ಗೊರವಯ್ಯ ಭಂಡಾರವನ್ನು ನಾಯಿಗಳ ಮುಖಕ್ಕೆ ಬಡಿದ. ವೈರವನ್ನು ಬಿಟ್ಟ ನಾಯಿಗಳು ಆತನನ್ನು ಮುದ್ದಾಡಲು ಪ್ರಾರಂಭಿಸಿದುವು. ಅನಂತರ ಗೊರವಯ್ಯ ಮಾಳಮ್ಮನ ರಟ್ಟೆ ಹಿಡಿಯಲು ಹೋದ. ತನ್ನ ಕೊರಳಿನ ಸರ್ಪ ಕಚ್ಚುತ್ತದೆ ಎಂದು ಮಾಳಮ್ಮ ಬೆದರಿಸಿದಳು. ಅದಕ್ಕೂ ಗೊರವಯ್ಯ ಭಂಡಾರ ಹಾಕಿದ. ಆಗ ಅವಳ ಕತ್ತು ಬಿಟ್ಟು ಗೊರವಯ್ಯನ ಕತ್ತಿಗೆ ಬಂದು ಸುತ್ತಿಕೊಂಡಿತು ಆ ಸರ್ಪ. ಅನಂತರ ಮಿಕ್ಕ ಅಣ್ಣಂದಿರು ಓಡಿಬಂದು ದೊಣ್ಣೆಗಳಿಂದ ಗೊರವಯ್ಯನಿಗೆ ಪೆಟ್ಟು ಹಾಕಿದರು. ಆದರೆ ಆ ಪೆಟ್ಟುಗಳು ಮಾಳಿಗೆ ತಗಲಿ ಅವಳ ಮೈಮೇಲೆ ಬಾಸುಂಡೆಗಳೆದ್ದುವು.

ತುಪ್ಪದ ಮಾಳಿಯನ್ನು ಲಗ್ನ ಆಗಲು ಬಂದುದಾಗಿ ಗೊರವಯ್ಯ ಹೇಳಿದಾಗ ಅಣ್ಣಂದಿರು 'ಆರು ಸಾವಿರ ಕುರಿ ಮೇಯಿಸಬೇಕು. ಮೂರು ಸಾವಿರ ಮರಿಗೆ ಹಾಲು ಕುಡಿಸಬೇಕು. ಮರಿಗೆ ಸೊಪ್ಪುಸದೆ ತರಬೇಕು. ಏಳು ಮೊಳದ ಜಾಡಿಯನ್ನು ಒಂದು ದಿನಕ್ಕೆ ತೆಗೀಬೇಕು. ಇಷ್ಟು ಮಾಡಿದರೆ ನಮ್ಮ ತಂಗಿ ಕೊಟ್ಟು ಲಗ್ನ ಮಾಡ್ತೀವಿ' ಎಂದರು. ಅದಕ್ಕೂ ಗೊರವಯ್ಯ ಒಪ್ಪಿಕೊಂಡ. ಮಾಯದಿ ಗಂಗೇಮಾಳಿಯನ್ನು ಕರೆಸಿದ. ಇಬ್ಬರೂ ಕೂಡಿ ಎಲ್ಲ ಕೆಲಸಗಳನ್ನೂ ಮುಗಿಸಿದರು. ಕಂಬಳಿ ನೇದು ಕೊಟ್ಟರು. ಇಷ್ಟಾದರೂ ಅಣ್ಣಂದಿರು ಮದುವೆಗೆ ಒಪ್ಪಲಿಲ್ಲ. ಕೊನೆಗೆ ತುಪ್ಪದ ಮಾಳಿಯನ್ನು ಕರೀನಾಯಿಯಾಗಿ ಮಾಡಿಕೊಂಡು ಗೊರವ ಹೊರಟುಬಿಟ್ಟ. ಅಣ್ಣಂದಿರು ಬೆನ್ನಟ್ಟಿ ಬಂದರು. ಆಗ ಗೊರವಯ್ಯ ಐದು ಜನರ ಕತ್ತುಗಳಿಗೂ ಮೂರು ಮೂರು ಕವಡೆ ಕಟ್ಟಿ ಐದು ಬಟ್ಟಲು ಐದು ಡಮರುಗ ಕೊಟ್ಟು ದೋಣಿ ಸೇವೆ ಮಾಡಿಸಿದ. ಮೂಲತಃ ಗೊರವರಿಗೆ ಮೈಲಾರಲಿಂಗನೇ ಗೊರವ ದೀಕ್ಷೆ ಕೊಟ್ಟನೆನ್ನುವ ವಿಚಾರ ಈ ಪ್ರಸಂಗದಲ್ಲಿ ವಿದಿತವಾಗುತ್ತದೆ. ಈ ಜನಪದ ಕಥೆ ನೃತ್ಯರೂಪದಲ್ಲಿ ಈಗಲೂ ಅಲ್ಲಲ್ಲಿ ಬಳಕೆಯಲ್ಲಿದೆ. (ಪಿ.ಆರ್.ಟಿ.)

ಗೊರವರು ಮಾಡುವ ಸಾಮೂಹಿಕ ನೃತ್ಯಕ್ಕೆ ಗೊರವರ ಕುಣಿತ ಎಂದು ಹೇಳುತ್ತಾರೆ. ಒಂದು ತಂಡದಲ್ಲಿ ಸುಮಾರು ಹತ್ತರಿಂದ ಹನ್ನೆರಡು ಮಂದಿ ಇರುತ್ತಾರೆ. ಕುಣಿತ ಆರಂಭಿಸುವ ಮೊದಲು ಹಿರಿಯ ಗೊರವ ಪಿಳ್ಳಂಗೋವಿ ಊದಿ ಡಮರುಗ ಬಾರಿಸುತ್ತಾನೆ. ಅನಂತರ ಡಮರುಗದ ಗತಿಗೆ ತಕ್ಕಂತೆ ಮುಂದೆಜ್ಜೆ ಹಿಂದೆಜ್ಜೆ ಹಾಕುತ್ತ ಕುಣಿಯತೊಡಗುತ್ತಾರೆ. ಟೊಪ್ಪಿಗೆಯನ್ನು ಮುಂದೆ ಚಾಚುತ್ತ, ವೃತ್ತಾಕಾರದಲ್ಲಿ ಸುತ್ತುತ್ತ ಕುಣಿತಕ್ಕೆ ವೈವಿಧ್ಯತೆ ತರುವುದುಂಟು. ಗೊರವರ ಕುಣಿತ ಸಾರ್ವಜನಿಕ ಪ್ರದರ್ಶನಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಭಕ್ತರು ನೂತನ ಗೃಹಪ್ರವೇಶದ ಸಂದರ್ಭದಲ್ಲಿ ಗೊರವರನ್ನು ಕರೆಸಿ ಕುಣಿತ ಮಾಡುತ್ತಾರೆ. ಇದಕ್ಕೆ 'ಮಾಣಿಸೇವೆ', ಒಗ್ಗಸೇವೆ ಎಂದು ಕರೆಯಲಾಗುವುದು. ಕರಿಯ ಕಂಬಳಿ ಸುತ್ತ ದೊನ್ನೆಯಲ್ಲಿಟ್ಟ ರಸಾಯನ ಮತ್ತು ಹಾಲನ್ನು ಕೈಯಲ್ಲಿ ಮುಟ್ಟದೇ ಹಾಗೆಯೇ ಸೇವಿಸುವುದು ಇಲ್ಲಿನ ವಿಶೇಷ.

ಗೊರವರಿಗೆ ಸಂಬಂಧಿಸಿದ ಅನೇಕ ವಸ್ತುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿ ಇಡಲಾಗಿದೆ. *

**ಗೊರವಿ :** ಇಕ್ಸೋರ ಆರ್ಬೋರಿಯ ಎಂಬ ವೈಜ್ಞಾನಿಕ ಹೆಸರಿನ ಒಂದು ನಿತ್ಯ ಹರಿದ್ವರ್ಣದ ಮತ್ತು ಸಣ್ಣ ಗಾತ್ರದ ಕಾಡುಮರ. ರೂಬಿಯೇಸೀ ಕುಟುಂಬಕ್ಕೆ ಸೇರಿದೆ. ಭಾರತಾದ್ಯಂತ ವ್ಯಾಪಿಸಿರುವ ಈ ಮರ ಪ್ರಮುಖವಾಗಿ ಗಂಗಾನದಿಯ ಬಯಲು, ಅಸ್ಸಾಂ, ಕೇರಳ, ಕರ್ನಾಟಕ ಮತ್ತು ನಿಕೋಬಾರ್‌ಗಳಲ್ಲಿ ಬೆಳೆಯುತ್ತದೆ. ನಸುಗೆಂಪು ಅಥವಾ ಬಿಳಿಯ ಬಣ್ಣದ ಪರಿಮಳಯುಕ್ತ ಹೂ ಬಿಡುವುದರಿಂದ ಇದನ್ನು ಉದ್ಯಾನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುವುದೂ ಉಂಟು.

ಗೊರವಿಯ ಎಲೆಗಳು ಸರಳರೀತಿಯವು; ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಇವಕ್ಕೆ ಹೊಳೆಯುವ ಹಾಗೂ ರೋಮರಹಿತ ಮೇಲುಮೈ, ದೀರ್ಘ ಅಂಡಾಕಾರ, ಪುಟ್ಟ ತೊಟ್ಟು ಮತ್ತು ಎರಡು ವೃಂತಪತ್ರಗಳು ಇವೆ. ಹೂಗಳು ಚಿಕ್ಕಗಾತ್ರದವು; ಕಾರಿಂಬ್ ಮಾದರಿಯ, ದೊಡ್ಡ ಗಾತ್ರದ, ಅಗ್ರಸ್ಥವಾದ ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಫಲಗಳು ಬೆರಿ ಮಾದರಿಯವು: ಕಪ್ಪಗೆ ಗುಂಡಗೆ ಇವೆ.

ಗೊರವಿಯ ಹೂ, ಹಣ್ಣು, ತೊಗಟೆ ಮತ್ತು ಬೇರುಗಳಿಗೆ ಔಷಧೀಯ ಪ್ರಾಮುಖ್ಯವುಂಟು. ಹೂಗಳನ್ನು ಹಾಲಿನೊಂದಿಗೆ ಸೇರಿಸಿ ಕುಟ್ಟಿ ನಾಯಿಕೆಮ್ಮಿಗೆ ಮದ್ದಾಗಿ ಬಳಸುತ್ತಾರೆ. ರಕ್ತಹೀನತೆ ಮತ್ತು ನಿಶ್ಶಕ್ತಿಗಳ ಚಿಕಿತ್ಸೆಗೆ ತೊಗಟೆಯ ಕಷಾಯ ಒಳ್ಳೆಯ ಔಷಧಿ ಎನ್ನಿಸಿದೆ. ಗೊರವಿಯ ಎಲೆಗಳು ದನಗಳಿಗೆ ಒಳ್ಳೆಯ ಮೇವು. ಗೊರವಿಯ ಚೌಬೀನೆ ನಯವಾಗಿಯೂ ಗಟ್ಟಿಯಾಗಿಯೂ ಭಾರವಾಗಿಯೂ ಇದೆ. ಇದರ ಬಣ್ಣ ಕಂದು. ಇದು ಒಳ್ಳೆಯ ಮೆರುಗು ತೆಗೆದುಕೊಳ್ಳುತ್ತದಲ್ಲದೆ ಕೆತ್ತನೆ ಕೆಲಸಗಳಿಗೆ ಸುಲಭವಾಗಿ ಒಗ್ಗುತ್ತದೆ. ಇದರಿಂದ ಪೀಠೋಪಕರಣಗಳನ್ನು ತಯಾರಿಸುವುದುಂಟು. (ಟಿ.ಸಿ.)

**ಗೊರಸಿಗಳು :** ಮ್ಯಾಮೇಲಿಯ ವರ್ಗದ ಅಂಗ್ಯುಲೇಟ ಅಧಿಗಣಕ್ಕೆ ಸೇರಿದ ಹಲವಾರು ಬಗೆಯ ಜರಾಯುಜ ಮತ್ತು ಸಸ್ಯಾಹಾರಿ ಸಸ್ತನಿಗಳು (ಅಂಗ್ಯುಲೇಟ್ಸ್). ಇವೆಲ್ಲವುಗಳಲ್ಲೂ ಕಾಲಿನಲ್ಲಿ ಗೊರಸು (**ನೋಡಿ**) ಇರುವುದರಿಂದ ಈ ಹೆಸರು ಬಂದಿದೆ. ತಮ್ಮ ರೂಪ, ರಚನೆ ಮತ್ತು ಸ್ವಭಾವಗಳಲ್ಲಿ ವೈವಿಧ್ಯವನ್ನು ಪ್ರದರ್ಶಿಸುವ ಇವನ್ನು ಬೇರೆ ಬೇರೆ ಗಣಗಳಲ್ಲಿ ಸೇರಿಸಲಾಗಿದೆ. ಕುದುರೆ, ಕತ್ತೆ, ದನ, ಕುರಿ, ಜಿಂಕೆ, ಆನೆ, ಖಡ್ಗಮೃಗ, ಹಂದಿ, ನೀರು ಕುದುರೆ, ಕೋಣಿ (ಹೈರ್ಯಾಕ್ಸ್), ಟಪಿರ್ ಮುಂತಾದವು ಗೊರಸಿಗಳ ಕೆಲವು ಉದಾಹರಣೆಗಳು. ಇವಲ್ಲದೆ ಇಯೋಸೀನ್, ಆಲಿಗೋಸೀನ್ ಮತ್ತು ಪ್ಲೀಸ್ಟೋಸೀನ್ ಕಾಲಗಳಲ್ಲಿ ಜೀವಂತವಾಗಿದ್ದು ಈಗ ಬರಿಯ ಪಳೆಯುಳಿಕೆಗಳ ರೂಪದಲ್ಲಿ ಮಾತ್ರ ಕಾಣದೊರೆಯುವ ಅನೇಕ ಪ್ರಭೇದಗಳೂ ಗೊರಸಿಗಳ ಗುಂಪಿನಲ್ಲಿವೆ.

ಗೊರಸಿಗಳ ಲಕ್ಷಣಗಳು: ಗೊರಸಿಗಳು ಪೇಲಿಯೋಸೀನ್ ಯುಗದಿಂದೀಚೆಗೆ ಮಾತ್ರ ಕಾಣದೊರೆಯುತ್ತವೆ. ಈ ಕಾಲಕ್ಕಿಂತ ಮುಂಚೆ ಜೀವಿಸಿದ್ದ ಪ್ರಾಣಿಗಳೆಲ್ಲವೂ ಕೀಟಾಹಾರಿಗಳಾಗಿದ್ದು ಸಣ್ಣ ಗಾತ್ರದವಾಗಿದ್ದವು. ಅನಂತರ ಇವುಗಳ ಆಹಾರ ಸೇವನೆಯ ಕ್ರಮದಲ್ಲಿ ಕೆಲವು ಮೂಲಭೂತ ಬದಲಾವಣೆಗಳು ಉಂಟಾಗಿ ಇವುಗಳಲ್ಲಿ ಬಹುಪಾಲು ಪ್ರಾಣಿಗಳು ಸಸ್ಯಾಹಾರದ ಸೇವನೆಗೆ ಮೊದಲಾದವು. ಬಹುಶಃ ಈ ಬದಲಾವಣೆಯಿಂದಾಗಿ ಪ್ರಾಣಿಗಳ ಗಾತ್ರ (ಕೆಲವು ಪ್ರಾಣಿಗಳನ್ನುಳಿದು ಉದಾ: ಕೋಣಿಗಳು) ಹೆಚ್ಚುತ್ತಾ ಬಂತು. ಹೀಗಾಗಿ ಗೊರಸಿಗಳೆಲ್ಲ ದೊಡ್ಡ ಗಾತ್ರದ ಪ್ರಾಣಿಗಳಾಗಿವೆ. ಇವುಗಳ ಚರ್ಮ ದಪ್ಪ ಮತ್ತು ಹಲವಾರು ಬಗೆಯ ಮಚ್ಚೆಗಳಿಂದ ಕೂಡಿದ್ದು ವರ್ಣಮಯವಾಗಿರುತ್ತದೆ. ಕೊಂಬು, ಕೋರೆ ಮುಂತಾದ ರಕ್ಷಣೆಯ ಸಾಧನಗಳಿದ್ದರೂ ಗೊರಸಿಗಳು ತಮ್ಮ ರಕ್ಷಣೆಗೆ ಈ ಸಾಧನಗಳಿಗಿಂತ ಹೆಚ್ಚಾಗಿ ವೇಗದ ನಡಿಗೆಯನ್ನು ಅವಲಂಬಿಸಿವೆ. ಚುರುಕಿನ ನಡಿಗೆಯ ಅಗತ್ಯದಿಂದಾಗಿ ಕಾಲುಗಳು ತುದಿಬೆರಳಿನ ಮೇಲೆ ನಿಲ್ಲುವಂತಾಗಿ ಅವುಗಳ ಉದ್ದವೂ ಹೆಚ್ಚಿದೆ. ಇದರಿಂದಾಗಿ ಕಾಲಿನ ಐದು ಬೆರಳುಗಳಲ್ಲಿ ಆಚೀಚಿನವು ಭೂಮಿಯನ್ನು ತಲುಪದೆ ಹೋಗುವುದರಿಂದ ಕ್ಷೀಣಗೊಂಡಿವೆ. ಕೊನೆಗೆ ಕಾಲುಗಳಲ್ಲಿ ಬರಿಯ ಒಂದು ಇಲ್ಲವೆ ಎರಡು ಮಧ್ಯದ ಬೆರಳು ಮಾತ್ರ ಉಳಿದಿವೆ. ಕಾಲಿನ ಚಲನೆಯ ರೀತಿಯೂ ಕೇವಲ ಹಿಂದಿನ ಮತ್ತು ಮುಂದಿನ ಚಲನೆಗೆ ಮಾತ್ರ ಸೀಮಿತವಾಗಿದೆ. ಕೀಲುಗಳು ರಾಟೆಯ ಮಾದರಿಯವು. ಅಲ್ನ ಮತ್ತು ಫಿಬ್ಯುಲ ಮೂಳೆಗಳು ಕ್ಷೀಣವಾಗುತ್ತ ಬಂದು ರೇಡಿಯಸ್

ಹಾಗೂ ಟಿಬಿಯಗಳೊಂದಿಗೆ ಕೂಡಿಕೊಂಡುಬಿಟ್ಟಿವೆ. ಮಧ್ಯದ ಬೆರಳಿನ ತುದಿಯ ಎಲುಬು ಅಗಲವಾಗಿದೆಯಲ್ಲದೆ ಇದರ ಕೊಂಡಿಯುಗುರು (ಕ್ಲಾ) ಮಾರ್ಪಾಟಾಗಿ ಎಲುಬಿನ ಸುತ್ತ ಗೊರಸಾಗಿ ಬೆಳೆದಿದೆ. ಕಾಲುಗಳು ಹೀಗೆ ಉದ್ದದಲ್ಲಿ ಹೆಚ್ಚಿದ್ದರೂ ಈ ಹೆಚ್ಚಳ ಕಾಲಿನ ಕೆಳಭಾಗದಲ್ಲಿ ಮಾತ್ರ ಕಂಡುಬರುತ್ತದೆ. ಹ್ಯೂಮರಸ್ ಮತ್ತು ಫೀಮರ್ ಮೂಳೆಗಳು ಮಾತ್ರ ಮೋಟಾಗಿಯೇ ಇವೆ. ಹಿಂಗಾಲುಗಳು ದೇಹದ ಮುನ್ನಡೆಗೆ ಸಹಾಯಕವಾದ ಸಾಧನಗಳಾಗಿಯೂ ಮುಂಗಾಲುಗಳು ದೇಹದ ಭಾರವನ್ನು ಹೊರುವ ಸಾಧನಗಳಾಗಿಯೂ ಇರುವುದರಿಂದ ಕಶೇರುಸ್ತಂಭ ಸೂಕ್ತವಾಗಿ ಮಾರ್ಪಟ್ಟಿದೆ. ಪಕ್ಕೆಲುಬುಗಳು ಹೇರಳವಾಗಿವೆ. ಇಲಿಯಂ ಮೂಳೆಗಳು ಅಗಲವಾಗಿ, ನೇರವಾಗಿ, ಮೇಲಕ್ಕೆದ್ದಿರುವಂತೆ ಇದ್ದು ಚಲನೆಗೆ ಅಗತ್ಯವಾದ ಸ್ನಾಯುಗಳಾದ ಗ್ಲೂಟೈಗಳು ಮತ್ತು ಹೊಟ್ಟೆಯ ಭಾರವನ್ನು ಹೊರುವ ಸ್ನಾಯುಗಳು ಇದಕ್ಕೆ ಅಂಟಿಕೊಂಡಿರಲು ಅನುಕೂಲವಾಗಿದೆ.

ಗೊರಸಿಗಳ ಕತ್ತು ಉದ್ದವಾಗಿರುತ್ತದೆ. ಪ್ರಾಣಿ ತನ್ನ ಸುತ್ತಮುತ್ತ ದೃಷ್ಟಿ ಹಾಯಿಸುವುದಕ್ಕೆ, ಆಹಾರವನ್ನು ಎಟುಕಿಸಿಕೊಳ್ಳಲು ತಲೆಯನ್ನು ಚಾಚುವುದಕ್ಕೆ ಇದರಿಂದ ಅನುಕೂಲ. ಸಾಮಾನ್ಯವಾಗಿ ಗೊರಸಿಗಳ ಶ್ರವಣಶಕ್ತಿ ಬಹು ಚುರುಕು. ಕಿವಿಗಳೂ ಬಲು ಉದ್ದವಾಗಿದ್ದು ಶಬ್ದ ಬರುವ ದಿಕ್ಕನ್ನು ಗ್ರಹಿಸಲು ಸಹಾಯಕವಾಗಿವೆ. ಘ್ರಾಣ ಶಕ್ತಿಯೂ ಚೆನ್ನಾಗಿದೆ. ಸಾಮಾನ್ಯವಾಗಿ ಗೊರಸಿಗಳು ಹುಲ್ಲು ಮೇಯುವಾಗ ಗಾಳಿಗೆದುರಾಗಿಯೇ ಸಾಗುತ್ತವೆ. ಮೂತಿ ಸದಾ ಒದ್ದೆಯಾಗಿದ್ದು ಅದರಲ್ಲಿರುವ ಗ್ರಾಹಕಾಂಗಗಳು ಗಾಳಿಗುಂಟ ಬರುವ ವಾಸನೆಯನ್ನು ಗ್ರಹಿಸಲು ಸಮರ್ಥವಾಗಿವೆ. ಅಂತೆಯೆ ನಾಲಗೆ ದೊಡ್ಡ ಗಾತ್ರದ್ದಾಗಿದ್ದು ಸೂಕ್ಷ್ಮವೇದಿಗಳಾದ ರಸನೇಂದ್ರಿಯಗಳನ್ನು ಪಡೆದಿದೆ. ಮಿದುಳೂ ದೊಡ್ಡ ಗಾತ್ರದ್ದು.

ಗೊರಸಿಗಳಲ್ಲಿ ಬಹುಪಾಲು ಬಗೆಯವು ಸಮಾಜಜೀವಿಗಳು. ಗುಂಪು ಗುಂಪಾಗಿರುವುದರಿಂದ ಒಂದು ಪ್ರಾಣಿಯ ಅನುಭವವನ್ನು ಗಮನಿಸಿ ಆ ಗುಂಪಿನ ಇತರ ಪ್ರಾಣಿಗಳು ಸುಲಭವಾಗಿ ಪಾಠ ಕಲಿಯುತ್ತವೆ. ಗೊರಸಿಗಳ ಇನ್ನೊಂದು ಮುಖ್ಯ ಲಕ್ಷಣ ವಾಸನಾಗ್ರಂಥಿಗಳು. ಇವುಗಳಲ್ಲಿ ಉತ್ಪತ್ತಿಯಾಗುವ ವಾಸನೆಯನ್ನು ಗೊರಸಿಗಳು ತಮ್ಮ ನಡೆಜಾಡುಗಳನ್ನು ಮತ್ತು ಅಧೀನ ಪ್ರಾಂತಗಳನ್ನು ಗುರುತಿಸುವುದಕ್ಕೂ ತಮ್ಮ ನಡುವೆ ಸಂಜ್ಞೆಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕೂ ಉಪಯೋಗಿಸಿಕೊಳ್ಳುತ್ತವೆ. ಗೊರಸಿಗಳ ಲೈಂಗಿಕವ್ಯವಸ್ಥೆ ಸಂಕೀರ್ಣವಾದುದು. ಇದು ದೃಷ್ಟಿ, ಶ್ರವಣ ಮತ್ತು ಘ್ರಾಣ ಸಂಬಂಧಿ ಸಂಜ್ಞೆಗಳ ವಿವರವಾದ ಬಳಕೆಯನ್ನು ಒಳಗೊಂಡಿದೆ. ಕೆಲವು ಸಾರಿ ಗಂಡುಗಳ ನಡುವೆ ಕಾದಾಟ ನಡೆಯುವ ಪರಿಪಾಠವೂ ಉಂಟು. ಗರ್ಭಾವಸ್ಥೆಯ ಅವಧಿ ದೀರ್ಘವಾದುದು. ಅಲ್ಲದೆ ಸಮರ್ಥವಾದ ಮಿದುಳುಳ್ಳ ಇತರ ದೊಡ್ಡ ಗಾತ್ರದ ಪ್ರಾಣಿಗಳಲ್ಲಿರುವಂತೆ ಹುಟ್ಟುವ ಮರಿಗಳ ಸಂಖ್ಯೆ ಕಡಿಮೆ. ಹೊಸದಾಗಿ ಹುಟ್ಟಿದ ಮರಿ ಚೆನ್ನಾಗಿ ಬೆಳೆದಿರುತ್ತದಲ್ಲದೆ ಬೇಗ ಹಿಂಡಿನೊಡನೆ ಸ್ವತಂತ್ರವಾಗಿ ಓಡಾಡುವ ಸಾಮರ್ಥ್ಯವನ್ನು ಪಡೆಯುತ್ತದೆ.

ಗೊರಸಿಗಳು ಆಹಾರವನ್ನು ಪಡೆಯುವ ಮತ್ತು ಅರಗಿಸಿಕೊಳ್ಳುವ ವಿಧಾನದಲ್ಲಿ ಬಹುಶಃ ಮೇಲೆ ಹೇಳಿದ ಲಕ್ಷಣಗಳೆಲ್ಲಕ್ಕಿಂತ ಹೆಚ್ಚು ಗಮನಾರ್ಹವಾದ ಮಾರ್ಪಾಡುಗಳನ್ನು ಕಾಣಬಹುದು. ಇವುಗಳ ಪೂರ್ವಜರಾದ ಕೀಟಭಕ್ಷಿಗಳಲ್ಲಿದ್ದ ದವಡೆಹಲ್ಲಿನ ತ್ರಿಕೋನಾಕಾರದ ವಿನ್ಯಾಸ ಇವುಗಳಲ್ಲಿ ಚಚ್ಚೌಕ ಮಾದರಿಯಾಗಿದೆ. ಹಲ್ಲುಗಳ ಕೋಡೂ ಕೆಲವು ಬದಲಾವಣೆಗಳಿಗೊಳಗಾಗಿ ಚೂಪು ಮೊನೆಯಂತಿರದೆ ಹಲವಾರು ಏಣುಗಳುಳ್ಳ ಲೋಫೋಡಾಂಟ್ ಮಾದರಿಯ ಮೇಲ್ಮೈಯಾಗಿ ರೂಪುಗೊಂಡಿವೆ. ಮಿಗಿಲಾಗಿ ಇಡೀ ಹಲ್ಲೇ ಸಿಮೆಂಟಿನಿಂದ (ಮೂಳೆ) ಆವೃತವಾಗುತ್ತದೆ. ಬೇಗ ಸವೆಯಬಹುದಾದ ಮೋಟು ಬಗೆಯ ದವಡೆ ಹಲ್ಲುಗಳ (ಬ್ರಾಕಿಡಾಂಟ್) ಬದಲಾಗಿ ಉದ್ದವಾದ ಹೈಪೋಸೋಡಾಂಟ್ ಬಗೆಯ ಹಲ್ಲುಗಳು ಕಾಣಿಸಿಕೊಳ್ಳುತ್ತವೆ. ಈ ಪ್ರಾಣಿಗಳಲ್ಲಿ ಆಹಾರವನ್ನು ಅರೆಯುವ ಆವಶ್ಯಕತೆ ಹೆಚ್ಚಾಗಿರುವುದರಿಂದ ಸಾಮಾನ್ಯವಾಗಿ ಇಡೀ ದಂತಶ್ರೇಣಿ ಹಾಗೆಯೇ ಬಹುಕಾಲ ಉಳಿಯುವುದಲ್ಲದೆ ದವಡೆಹಲ್ಲುಗಳೂ ಮುಂದವಡೆ ಹಲ್ಲುಗಳೂ ಆಹಾರವನ್ನು ಅರೆಯಲು ಅನುಕೂಲವಾಗುವಂತೆ ಚಪ್ಪಟೆಯಾಗಿವೆ. ಈ ಲಕ್ಷಣದಲ್ಲಿ ಗೊರಸಿಗಳು ಮಾಂಸಾಹಾರಿಗಳಾದ ಕಾರ್ನಿವೋರ ಗಣದ ಪ್ರಾಣಿಗಳಿಂದ ಭಿನ್ನವೆನಿಸಿವೆ. ಗೊರಸಿಗಳ ಬಾಚಿಹಲ್ಲುಗಳು ಹುಲ್ಲು, ಚಿಗುರು ಮುಂತಾದ ಸಸ್ಯಾಹಾರವನ್ನು ತುಂಡರಿಸಲು ಸಹಾಯಕವಾಗಿವೆ. ಕೆಲವೊಮ್ಮೆ

ಎಡಗಡೆ ಕುದುರೆಯ ಮುಂಗಾಲುಗಳ ಗೊರಸುಗಳನ್ನೂ, ಬಲಗಡೆ ಗೂಳಿಯ ಮುಂಗಾಲುಗಳ ಗೊರಸುಗಳನ್ನೂ ತೋರಿಸಿದೆ

(ಉದಾಹರಣೆಗೆ ಆರ್ಟಿಯೊಡ್ಯಾಕ್ಟಿಲ ಗಣದ ಗೊರಸಿಗಳು) ಮೇಲ್ದವಡೆಯಲ್ಲಿನ ಬಾಚಿಹಲ್ಲುಗಳ ಸಾಲು ಅಳಿದು ಹೋಗಿರುತ್ತವೆ. ಇಂಥವುಗಳಲ್ಲಿ ಕೆಳದವಡೆಯ ಬಾಚಿಹಲ್ಲುಗಳು ಮತ್ತು ಕೊಂಬಿನಂತೆ ಇರುವ ಮೇಲ್ತುಟಿಗಳೇ ಆಹಾರವನ್ನು ಕತ್ತರಿಸಲು ಸಹಾಯಕವಾಗಿವೆ. ಅನೇಕ ಸಲ ಕೋರೆಹಲ್ಲು ಕಾಣೆಯಾಗಿರುತ್ತದೆ. ಆಹಾರವನ್ನು ತುಂಡರಿಸುವ ಮತ್ತು ಅರೆಯುವ ಕಾರ್ಯ ತುಟಿ, ತಾಲು, ನಾಲಗೆ ಮತ್ತು ದವಡೆಗಳು ಹಾಗೂ ಅವುಗಳ ಸ್ನಾಯುಗಳ ಹಲವಾರು ಮಾರ್ಪಾಟುಗಳಿಗೆ ಕಾರಣವಾಗಿದೆ. ದವಡೆ ತಲೆಬುರುಡೆಯೊಂದಿಗೆ ಚಪ್ಪಟೆ ಫಲಕದ ರೀತಿ ಕೀಲಿಸಿಕೊಂಡಿರುವುದರಿಂದ ಕೆಳದವಡೆ ಆವರ್ತಚಲನೆಯನ್ನು ತೋರುತ್ತದೆ. ಗೊರಸಿಗಳ ತಲೆಬುರುಡೆಯಲ್ಲಿ ಹಣೆಯ ಏಣು ಇಲ್ಲದಿರುವುದರಿಂದ ಅದು ಚಪ್ಪಟೆಯಾಗಿದೆ.

ಜಿರಾಫೆ

ಒಂಟೆ

ಟಪಿರ್

ಖಡ್ಗಮೃಗ

ಗೊರಸಿಗಳು ಸೇವಿಸುವ ಆಹಾರದಲ್ಲಿನ ಸೆಲ್ಯುಲೋಸಿನ ಪಚನಕ್ರಿಯೆಯಲ್ಲಿ ಸಹಾಯ ಮಾಡುವ ಬ್ಯಾಕ್ಟೀರಿಯಗಳಿಗಾಗಿ ಗೊರಸಿಗಳ ಜೀರ್ಣಾಂಗವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಒಂದು ಪ್ರತ್ಯೇಕ ಕೋಣೆಯಿರುತ್ತದೆ. ಈ ಕೋಣೆ ಆರ್ಟಿಯೊಡ್ಯಾಕ್ಟಿಲ ಪ್ರಾಣಿಗಳಲ್ಲಿ ಜಠರದಲ್ಲಿದ್ದರೆ ಪೆರಿಸೋಡ್ಯಾಕ್ಟಿಲ ಪ್ರಾಣಿಗಳಲ್ಲಿ ಸೀಕಂ ಭಾಗದಲ್ಲಿದೆ.

ಹೀಗೆ ಮೇಲೆ ವಿವರಿಸಿದ ಲಕ್ಷಣಗಳು ಗೊರಸಿಗಳಿಗೆ ಮಾತ್ರ ವಿಶಿಷ್ಟವಾಗಿದ್ದು ಎಲ್ಲವೂ ಈ ಪ್ರಾಣಿಗಳ ಸಸ್ಯಾಹಾರ ಜೀವನಕ್ಕೆ ಪೂರಕವಾಗಿವೆ.

ವರ್ಗೀಕರಣ: ಗೊರಸಿಗಳ ಗುಂಪನ್ನು ಪ್ರೋಟೋಅಂಗ್ಯುಲೇಟ, ಪೀನಂಗ್ಯುಲೇಟ, ಮೀಸಾಕ್ಸೋನಿಯ ಮತ್ತು ಪ್ಯಾರಾಕ್ಸೋನಿಯ ಎಂಬ 4 ಅಧಿಗಣಗಳಾಗಿ ವಿಂಗಡಿಸಲಾಗಿದೆ: ಪ್ರೋಟೋಅಂಗ್ಯುಲೇಟದಲ್ಲಿ ಕಾಂಡಿಲಾರ್ತ್ರ, ನೋಟೋಅಂಗ್ಯುಲೇಟ, ಲಿಟಾಪ್ಟರ್ನ, ಆಸ್ಟ್ರಪೋತೀರಿಯ ಮತ್ತು ಟ್ಯೂಬ್ಯುಲಿಡೆಂಟೇಟ ಎಂಬ 5 ಗಣಗಳಿವೆ. ಪೀನಂಗ್ಯುಲೇಟ ಅಧಿಗಣ ಹೈರಕಾಯ್ಡಿಯ, ಪ್ರೊಬಾಸಿಡಿಯ, ಪ್ಯಾಂಟೊಡಾಂಟ, ಡೈನೋಸೆರೇಟ, ಪೈರೊತೀರಿಯ, ಎಂಬ್ರಿತಾಪೊಡ ಮತ್ತು ಸೈರೀನಿಯ ಎಂಬ 7 ಗಣಗಳನ್ನು ಒಳಗೊಂಡಿದೆ. ಪೆರಿಸೋಡ್ಯಾಕ್ಟಿಲ ಎಂಬ ಗಣ ಮೀಸಾಕ್ಸೋನಿಯ ಅಧಿಗಣಕ್ಕೂ ಆರ್ಟಿಯೊಡ್ಯಾಕ್ಟಿಲ ಎಂಬ ಗಣ ಪ್ಯಾರಾಕ್ಸೋನಿಯ ಅಧಿಗಣಕ್ಕೂ ಸೇರಿವೆ. (ಎಸ್.ಬಿ.ಎಂ.)

**ಗೊರಸು :** ಅಂಗುಲೇಟ ಗುಂಪಿನ ಸ್ತನಿಯ ಕಾಲ್ಬೆರಳುಗಳ ತುದಿಯನ್ನು ಆವರಿಸುವ ಇಲ್ಲವೆ ರಕ್ಷಿಸುವ ಕೊಂಬಿನ ಬಾಗಿದ ರಚನೆ (ಹೂಫ್). ಬೇರೆ ಪ್ರಾಣಿಗಳಲ್ಲಿ ಕಂಡುಬರುವ ಉಗುರು ಇಲ್ಲವೆ ನಖಗಳನ್ನು ಹೋಲುವ ರಚನೆಯಿದು.

ರಚನೆ : ಕುದುರೆಯ ಗೊರಸನ್ನು ಪ್ರರೂಪೀ ಉದಾಹರಣೆಯಾಗಿ ವಿವರಿಸಲಾಗಿದೆ. ಇದರಲ್ಲಿ ಗೊರಸಿನ ಗೋಡೆ (ಗೊರಸಿನ ಚಿಪ್ಪು–ವಾಲ್), ಅಂಗಾಲು (ಸೋಲ್), ಅಂಗಾಲಿನ ಮಧ್ಯೆ ಬೆಳೆಯುವ ಸ್ಥಿತಿಸ್ಥಾಪಕ ಗುಣವುಳ್ಳ ಕೊಂಬಿನ ಪದಾರ್ಥದಿಂದ ರಚಿತವಾದ ಕಪ್ಪೆಯಂಥ ಭಾಗ–ಗೊರಸುಗಪ್ಪೆ (ಫ್ರಾಗ್) ಎಂಬ ಮೂರು ಭಾಗಗಳಿವೆ.



ಕುದುರೆ ಗೊರಸು : 1. ಹಿಮ್ಮಡಿ, 2. ಗೊರಸುಗಪ್ಪೆ, 3. ಗೊರಸು ಗೋಡೆ, 4. ಅಂಗಾಲು, 5. ಮುಂಗೊರಸು

ಗೊರಸಿನ ಗೋಡೆ : ಪ್ರಾಣಿ ತನ್ನ ಪಾದವನ್ನು ನೆಲದಮೇಲೆ ಇಟ್ಟಾಗ ಹೊರಗೆ ಕಾಣುವ ಭಾಗ. ಇದು ಗೊರಸಿನ ಮುಂಭಾಗ ಹಾಗೂ ಪಾರ್ಶ್ವಗಳನ್ನು ಆವರಿಸಿದೆ. ಗೊರಸಿನ ಹಿಂಭಾಗದಲ್ಲಿ ಭೂಮಿಗೆ ತಗಲುವ ಭಾಗಗಳಲ್ಲಿ ಸಹ ಗೋಡೆಯನ್ನು ಕಾಣಬಹುದು. ಅಧ್ಯಯನದ ದೃಷ್ಟಿಯಿಂದ ಗೋಡೆಯನ್ನು ಮೂರು ಭಾಗವಾಗಿ ವಿಂಗಡಿಸಬಹುದು. 1. ಮುಂಗೊರಸು (ಟೋ), 2. ಮುಂಗೊರಸಿಗೂ ಹಿಮ್ಮಡಿಗೂ ನಡುವಣ ಭಾಗ (ಕ್ವಾರ್ಟರ್ಸ್), 3. ಹಿಮ್ಮಡಿ. ಗೊರಸಿನ ಹೊರಮೈ ಪಕ್ಕದಿಂದ ಪಕ್ಕಕ್ಕೆ ಉಬ್ಬಿದೆ. ಮೇಲ್ಮೈ ನಯವಾಗಿದೆ. ಗೊರಸಿನ ಮೇಲೆ ಕ್ರಮಬದ್ಧವಾಗಿ ಜೋಡಣೆಗೊಂಡಿರುವ ನಯವಾದ ಕೂಡುಗೆರೆಗಳು ಕಾಣಬರುತ್ತವೆ. ಇವು ಗೊರಸು ಚರ್ಮಕ್ಕೆ ಸೇರುವ ಭಾಗಕ್ಕೆ (ಗೊರಸಿನ ಸುಳಿ) ನೇರವಾಗಿರುತ್ತದೆ. ಗೊರಸಿನ ಒಳಭಾಗದಲ್ಲಿ ಒಂದು ಕುಳಿಯೂ ಅನೇಕ ಪೊರೆಗಳೂ ಇವೆ.

ಅಂಗಾಲು : ಇದು ಅರ್ಧಚಂದ್ರಾಕಾರವಾಗಿದೆ. ಇದರಲ್ಲಿ ಎರಡು ಮುಖಗಳೂ ಎರಡು ಅಂಚುಗಳೂ ಇವೆ. ಒಳಮುಖ ಹೊರ ಉಬ್ಬಿದೆ. ಇದರಲ್ಲಿ ನಳಿಕೆಯಾಕಾರದ ತೂತುಗಳಿವೆ. ಇವುಗಳಲ್ಲಿ ಅಂಗಾಲಿನ ಸಣ್ಣ ಸಣ್ಣ ಮೆದು ಗಂಟುಗಳನ್ನು ಕಾಣಬಹುದು. ಅಂಗಾಲಿನ ಹೊರಮುಖವೂ ಸಾಮಾನ್ಯವಾಗಿ ಬಾಗಿದ್ದು ಒಳಮುಖದ ವಿರುದ್ಧ ರೀತಿಯ ರಚನೆಯನ್ನು ಪ್ರದರ್ಶಿಸುತ್ತದೆ. ಹೊರ ಮುಖದ ಹಿಂದಿನ ಭಾಗ ಮುಂದಿನ ಭಾಗಕ್ಕಿಂತ ಬಹಳ ಗಡುಸಾಗಿದೆ.



ಚಿತ್ರದಲ್ಲಿ A ಕುದುರೆಯ ಕಾಲುಗಳನ್ನೂ B ಹಸುವಿನ ಕಾಲುಗಳನ್ನೂ ಸೂಚಿಸುತ್ತವೆ.
1. ಗೊರಸಿನ ಭಾಗ

ಗೊರಸುಗಪ್ಪೆ : ಇದು ಬೆಣೆಯಾಕಾರದಲ್ಲಿದೆ. ತುಂಡುಗಳು ಹಾಗೂ ಅಂಗಾಲಿನ ಮಧ್ಯೆ ಇರುವ ಕೋನವಲಯವನ್ನು ಆವರಿಸಿದೆ. ಗೊರಸು ಗಪ್ಪೆಯಲ್ಲಿ ನಾಲ್ಕು ಮುಖಗಳನ್ನೂ ಒಂದು ಬುಡವನ್ನೂ ಒಂದು ಶೃಂಗವನ್ನೂ ಕಾಣಬಹುದು.

ಗೊರಸಿನ ಸೂಕ್ಷ್ಮರಚನೆ: ಯಾವುದೇ ಚರ್ಮದಲ್ಲಿ ಕಾಣಬರುವ ಸ್ಟ್ರಾಟಮ್ ಜರ್ಮಿನೇಟಿವಮ್ ಎಂಬ ಮೃದುಪೊರೆ ಗೊರಸಿನಲ್ಲಿ ಸಹ ಇದೆ. ಪೊರೆಯ ಸುತ್ತ ಕೊಂಬಿನ ಆವರಣ ಉಂಟು. ಕೊಂಬಿನ ಕಣಗಳ ಸಂಖ್ಯೆ ವೃದ್ಧಿಯಾಗುವುದರ ಮೂಲಕ ಗೊರಸಿನ ಬೆಳೆವಣಿಗೆ ಮುಂದುವರಿಯುತ್ತದೆ. ಗೊರಸಿನ ಗೋಡೆಯಲ್ಲಿ ಮೂರು ಸೂಕ್ಷ್ಮ ಪದರಗಳಿವೆ : ಪೆರಿಯೋಪಲ್ ಮತ್ತು ಸ್ಟ್ರಾಟಂ ಟೆಕ್ಟೋರಿಯಂಗಳಿಂದ ಕೂಡಿದ ಹೊರಪದರ, ತುಂಬ ದಪ್ಪವಾದ ಮಧ್ಯ ಪದರ ಮತ್ತು ಸ್ಟ್ರಾಟಂ ಲ್ಯಾಮೆಲೇಟಂ ಎಂಬ ಒಳಪದರ. ಒಳಪದರದಲ್ಲಿ ಸ್ವಾಭಾವಿಕ ವರ್ಣದ್ರವ್ಯ ಇರುವುದಿಲ್ಲ. ಗೊರಸುಗಪ್ಪೆ ಸಾಮಾನ್ಯವಾಗಿ ನಯವಾದ ಕೊಂಬಿನಂಥ ಅಂಗಾಂಶದಿಂದ ಕೂಡಿದೆ. ಗೊರಸುಗೋಡೆ ಮತ್ತು ಅಂಗಾಲುಗಳಿಗೆ ಹೋಲಿಸಿದರೆ ಗೊರಸುಗಪ್ಪೆಗೆ ಹೆಚ್ಚಿನ ಸ್ಥಿತಿಸ್ಥಾಪಕಶಕ್ತಿ ಉಂಟು. ಗೊರಸಿನಲ್ಲಿ ರಕ್ತನಾಳಗಳಾಗಲಿ, ನರಗಳಾಗಲಿ ಇಲ್ಲ.

ಗೊರಸಿನ ರೋಗಗಳು : ಗೊರಸಿಗೆ ಬರುವ ರೋಗಗಳಲ್ಲಿ ಮುಖ್ಯವಾದವನ್ನು ಮುಂದೆ ವಿವರಿಸಲಾಗಿದೆ.

ಗೊರಸಿನ ಕೊಳೆತ : ಗೊರಸಿನ ಒಳಗಿನ ಅಂಗಾಂಶದ ಕೊಳೆತಕ್ಕೆ ಈ ಹೆಸರಿದೆ. ಇದು ಸ್ಫೀರೊಫೋರಸ್ ನೆಕ್ರೊಫೋರಸ್ ಎಂಬ ಬ್ಯಾಕ್ಟೀರಿಯದಿಂದ ಉಂಟಾಗುತ್ತದೆ. ಚರ್ಮದಲ್ಲಾಗುವ ಗಾಯಗಳ ಮೂಲಕ ಒಳಹೊಗುವ ಈ ಸೂಕ್ಷ್ಮಜೀವಿಗಳು ಕೀಲುಗಳನ್ನೂ ಸ್ನಾಯು ತಂತುಗಳ ಹೊರಪೊರೆಯನ್ನೂ ನಾಶಪಡಿಸುತ್ತವೆ. ಇದರಿಂದ ಕಾಲಿನ ಸ್ಥಿತಿ ಕೆಟ್ಟು ಗೊರಸಿಗೂ ಹರಡಿ ಅದು ಕೊಳೆಯತೊಡಗುತ್ತದೆ. ಕಾಲು ಊದಿಕೊಳ್ಳುವುದು. ಗೊರಸಿನ ಸುಳಿಯ ಸುತ್ತಲೂ ಇರುವ ಚರ್ಮ ಕೆಡುವುದು, ಗೊರಸಿನ ಅಂಗಾಂಶ ಬಾತುಕೊಳ್ಳುವುದು. ರಕ್ತದ ಒತ್ತಡ ಹೆಚ್ಚಿ ಮೈ ಬಿಸಿಯಾಗುವುದು ಮತ್ತು ಗೊರಸಿನ ಮಧ್ಯೆ ಕೀವು ಹಾಗೂ ಅಂಗಾಂಶದ್ರವ ಸ್ರವಿಸುವುದು– ಇವು ಈ ರೋಗದ ಪ್ರಮುಖ ಲಕ್ಷಣಗಳು. ರೋಗ ಪೀಡಿತ ಪ್ರಾಣಿ ತೀವ್ರರೂಪದ ಕುಂಟಿನಿಂದ ನರಳುತ್ತಿದ್ದು ನಡೆಯಲು ಅಶಕ್ತವಾಗುತ್ತದೆ. ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಮಲಿನ ವಾತಾವರಣದಲ್ಲಿ ಸದಾಕಾಲ ಇರುವ ಪ್ರಾಣಿಗಳಲ್ಲಿ ಗೊರಸಿನ ಕೊಳೆತ ವಿಶೇಷವಾಗಿರುವುದರಿಂದ ಅಂಥ ಸ್ಥಳಗಳಿಂದ ಪ್ರಾಣಿಯನ್ನು ದೂರವಿರಿಸಿ. ಗೊರಸನ್ನು ಕ್ರಿಮಿನಾಶಕಗಳಿಂದ (ಶೇ. 2.5 ಕಾಪರ್ ಸಲ್ಫೇಟ್) ತೊಳೆಯಬೇಕು.

ಕುರಿ ಮತ್ತು ಮೇಕೆಗಳ ಗೊರಸು ರೋಗಗಳು : ಕುರಿಗಳಲ್ಲಿ ಸಹ ಮೇಲೆ ಹೇಳಿದ ಬಗೆಯ ಗೊರಸಿನ ಕೊಳೆತವನ್ನು ಕಾಣಬಹುದು. ಇದರಿಂದ ಕೆಲವೊಮ್ಮೆ ಗೊರಸಿನ ಹೊದಿಕೆ ಕಾಲಿನಿಂದ ಬಿದ್ದುಹೋಗುತ್ತದೆ. ಫ್ಯೂಸಿಫಾರ್ಮಿಸ್ ನೋಡೋಸಸ್, ಸ್ಪೈರೊಕೀಟ ಪೆನಾರ್ಟ, ಸ್ಟ್ರಾಂಗಿಲಾಯ್ಡಿಸ್, ಬ್ಯೂನೋಸ್ಟೋಮಮ್ ಇತ್ಯಾದಿ ಕ್ರಿಮಿಗಳಿಂದ ಈ ರೋಗ ಉಂಟಾಗುತ್ತದೆ. ತೇವಪೂರಿತ ನೆಲದಲ್ಲಿ ವಾಸಿಸುವ ರೋಗಾಣುಗಳು ಗೊರಸಿನ ಮಧ್ಯೆ ಇಲ್ಲವೆ ಕಾಲಿನಲ್ಲಿ ಉಂಟಾಗುವ ಗಾಯಗಳ ಮೂಲಕ ಪ್ರಾಣಿದೇಹವನ್ನು ಪ್ರವೇಶಿಸುತ್ತವೆ. ರೊಪ್ಪಗಳನ್ನು ಶುಚಿಯಾಗಿಡುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ಕಾಲಿನ ಕುರು ಸಹ ಕುರಿಗಳಲ್ಲಿ ಕಂಡುಬರುವ ಬಲು ಸಾಮಾನ್ಯ ಬೇನೆ. ದನಗಳಲ್ಲಿ ಗೊರಸಿನ ಕೊಳೆತವನ್ನು ಉಂಟುಮಾಡುವ ಸ್ಫೀರೊಫೋರಸ್ ನೆಕ್ರೊಫೋರಸ್ ಸೂಕ್ಷ್ಮಜೀವಿಯೇ ಈ ರೋಗಕ್ಕೂ ಕಾರಣ. ರೋಗಪೀಡಿತ ಪ್ರಾಣಿಗಳ ಗೊರಸಿನ ಹೊರನೋಟದಲ್ಲಿ ಮೊದಲು ಯಾವ ಬದಲಾವಣೆಗಳೂ ಕಂಡುಬರುವುದಿಲ್ಲ. ಆದರೆ ಕಾಲು ಬಿಸಿಯಾಗಿರುತ್ತದೆ. ಕೊಂಚಕಾಲದ ಅನಂತರ ಕಾಲು ಊದಿಕೊಳ್ಳುತ್ತದೆ. ಆಗಾಗ್ಗೆ ಹಳದಿಬಣ್ಣದ ಕೀವು ಹೊರ ಸುರಿಯುತ್ತದೆ. ಕುರಿ ಕುಂಟತೊಡಗುತ್ತದೆ. ಸೀಳ್ಗೊರಸಿನ ಪ್ರಾಣಿಗಳಿಗೆ ಬರುವ ಇನ್ನೊಂದು ರೋಗ ಜರಸಲು ಬೇನೆ. ರೋಗಪೀಡಿತ ಪ್ರಾಣಿಗಳ ಗೊರಸಿನ ಸುತ್ತ ಉರಿಯೂತವುಂಟಾಗಿ ಆಗಾಗ್ಗೆ ಕೀವು ಸ್ರಾವವಾಗುತ್ತದೆ. ಕೀವಿನಿಂದ ಆಕರ್ಷಿತವಾಗುವ ನೊಣಗಳು ಗೊರಸನ್ನು ಮುತ್ತಿ ಅಲ್ಲಿ ಮೊಟ್ಟೆಯಿಡುತ್ತವೆ. ಮೊಟ್ಟೆಯಿಂದ ಹೊರ ಬರುವ ಮರಿಗಳು ಗೊರಸಿನ ಮಧ್ಯೆ ಸೇರಿಕೊಂಡು ಅದನ್ನು ಇನ್ನಷ್ಟು ಹಾಳು ಮಾಡುತ್ತವೆ. ಗೊರಸಿನ ಹೊರಪೊರೆ ಒಮ್ಮೊಮ್ಮೆ ಕಳಚಿ ಬೀಳುತ್ತದೆ.

ಕುದುರೆಗಳ ಗೊರಸು ರೋಗಗಳು: 1. ಗೊರಸಿನ ಪೊರೆಯುರಿಯೂತ: ಸಾಮಾನ್ಯವಾಗಿ ಕುದುರೆಯ ಮುಂಗಾಲುಗಳಿಗೆ ಮಾತ್ರ ಈ ರೋಗ ಬರುತ್ತದೆ. ಆದರೆ ಹಿಂಗಾಲುಗಳಿಗೂ ಹರಡಬಹುದು. ದೇಹದ ಉಷ್ಣತೆಯ ಹಾಗೂ ಉಸಿರಾಟದ ಹೆಚ್ಚಳ, ಬೆವರುವಿಕೆ, ಕಾಲನ್ನು ಸಾಮಾನ್ಯವಾಗಿ ಇಡುವುದಕ್ಕಿಂತ ಹೆಚ್ಚು ಹಿಗ್ಗಲಿಸಿ ಇಡುವುದು– ಇವೆಲ್ಲ ಈ ರೋಗದ ಪ್ರಥಮಲಕ್ಷಣಗಳು. ರೋಗ ಹೆಚ್ಚಿದಂತೆಲ್ಲ ಗೊರಸಿನ ಆಕಾರ ಬದಲಾಗುತ್ತದೆ. ಗೊರಸಿನ ಗೋಡೆಯ ಮುಂಭಾಗದಲ್ಲಿ ತಗ್ಗು ಉಂಟಾಗುತ್ತದೆ. ಹಿಮ್ಮಡಿಯ ಎತ್ತರ ಹೆಚ್ಚುತ್ತದೆ. ಗೊರಸಿನ ಹೊರ ಪೊರೆಯ ಮೇಲೆ ಸುಕ್ಕುಗಳು ಉಂಟಾಗುತ್ತವೆ. ಕಾರ್ಟಿಸೋನ್ ಮತ್ತು ಆಂಟಿ ಹಿಸ್ಟಮೈನುಗಳ ಬಳಕೆಯಿಂದ ಪೊರೆಯುರಿಯೂತವನ್ನು ತಡೆಗಟ್ಟಬಹುದು.

2. ಗೊರಸಿನ ಅಂಗಾಲಿನ ಹುಣ್ಣು: ಸ್ಫೀರೊಫೋರಸ್ ನೆಕ್ರೊಫೋರಸ್ ಜೀವಿಯಿಂದ ಉಂಟಾಗುವ ರೋಗ ಇದು. ಬರಿಯ ಅಂಗಾಲು ಮಾತ್ರವಲ್ಲದೆ ಗೊರಸುಗಪ್ಪೆಗೂ ಇದು ಹರಡಬಹುದು. ಗೊರಸಿನಿಂದ ಒಂದು ರೀತಿಯ ದುರ್ವಾಸನೆ ಹೊರಡುವುದು ಮತ್ತು ಕಪ್ಪುಬಣ್ಣದ ಕೀವು ಸುರಿಯುವುದು ಈ ರೋಗದ ಮುಖ್ಯ ಲಕ್ಷಣಗಳು. ತೇವಪೂರಿತವಾದ ಮತ್ತ ಮಲಮೂತ್ರಗಳಿಂದ ಗಲೀಜಾದ ಲಾಯಗಳಲ್ಲಿ ಈ ರೋಗ ಹೆಚ್ಚಾಗಿರುವುದರಿಂದ ಅಂಥ ಪ್ರದೇಶಗಳನ್ನು ಶುಚಿಯಾಗಿಡುವುದರಿಂದಲೂ ಗೊರಸನ್ನು ಕ್ರಿಮಿನಾಶಕಗಳಿಂದ ತೊಳೆಯುವುದರಿಂದಲೂ ರೋಗವನ್ನು ತಡೆಯಬಹುದು.

3. ಗೊರಸುತ್ತು: ಅತಿ ಹೆಚ್ಚು ಕೆಲಸಮಾಡುವ ಕುದುರೆಗಳಲ್ಲಿ ಈ ರೋಗ ಬಹಳ ಸಾಮಾನ್ಯವಾಗಿ ಕಂಡುಬರುತ್ತದೆ. ಇದರಿಂದ ಅಂಗಾಲು, ಗೊರಸುಗಪ್ಪೆಯನ್ನು ಆವರಿಸುವುದಲ್ಲದೆ ಗೊರಸಿನ ಅಂಗಾಂಶ ಹೆಚ್ಚು ಹೆಚ್ಚು ಬೆಳೆಯುತ್ತ ಹೋಗುತ್ತದೆ. ರೋಗಪೀಡಿತ ಕುದುರೆಗಳ ಬಳಿ ಸಾಮಾನ್ಯವಾಗಿ ಕೆಟ್ಟ ವಾಸನೆ ಇರುತ್ತದೆ. ದಿನಗಳೆದಂತೆ ಗೊರಸಿನ ಮುಚ್ಚಳ ಸಡಿಲವಾಗಿ ಕೋರಿಯಮ್ ಭಾಗ ಎದ್ದು ಕಾಣತೊಡಗುತ್ತದೆ. ಕೋರಿಯಮಿನ ಮೇಲ್ಮೈ ಮುಳ್ಳುಗಳಿಂದ ಕೂಡಿದಂತಿರುತ್ತದೆ. ಒತ್ತಡದ ಬ್ಯಾಂಡೇಜ್ ಕಟ್ಟುವುದರಿಂದ ಈ ರೋಗವನ್ನು ಹತೋಟಿಯಲ್ಲಿಡಬಹುದು. ಇವುಗಳಲ್ಲದೆ ಕುದುರೆಗಳಲ್ಲಿ ಆಣಿ, ಗೊರಸಿನ ಪಾರ್ಶ್ವದ ಮೃದ್ವಸ್ಥಿಯ ಉರಿಯೂತ ಮತ್ತು ಗೊರಸೀಳುಗಳು ಉಂಟಾಗಬಹುದು.

ಗೊರಸಿನ ದುರಸ್ತಿ: ಅನೇಕ ಸಾಕುಪ್ರಾಣಿಗಳಲ್ಲಿ ರೋಗಗಳಿಂದ ಆಕಸ್ಮಿಕವಾಗಿ ಬೀಳುವ ಏಟುಗಳಿಂದ, ಇಲ್ಲವೇ ಗೊರಸಿನಲ್ಲಿ ಸ್ವಾಭಾವಿಕವಾಗಿಯೇ ಕಾಣಬರುವ ಊನಗಳಿಂದ ಗೊರಸಿನ ಆಕಾರ ಕೆಟ್ಟು ಹೋಗಬಹುದು. ಆಗ ಪ್ರಾಣಿಗಳು ನಿಷ್ಪ್ರಯೋಜಕವಾಗುತ್ತವೆ. ಇಂಥ ಪ್ರಾಣಿಗಳ ಗೊರಸನ್ನು ಸರಿಪಡಿಸಿ ಮೊದಲಿನ ಸ್ಥಿತಿಗೆ ತರಬಹುದು ಮತ್ತು ವಿಕಾರಗಳನ್ನು ಸರಿಪಡಿಸಬಹುದು. ಹೀಗೆ ಗೊರಸನ್ನು ದುರಸ್ತು ಮಾಡಲು ಅಕ್ರಿಲಿಕ್ ಅಂಶವನ್ನುಳ್ಳ ಒಂದು ರೀತಿಯ ಪ್ಲಾಸ್ಟಿಕನ್ನು ಬಳಸುವ ರೂಢಿಯಿದೆ. ಇದು ಬಿಳಿಯ ಬಣ್ಣದ್ದೂ ಗಾಳಿಗೆ ಒಡ್ಡಿದಾಗ ಬೇಗ ಗಟ್ಟಿಯಾಗುವ ಗುಣವುಳ್ಳದ್ದೂ ಆಗಿದೆ. ಗಟ್ಟಿಯಾದಾಗ ಗೊರಸಿನ ಅಂಗಾಂಶದಂತೆಯೇ ಶಕ್ತಿಯುತವಾಗುತ್ತದೆ. ಗೊರಸು ಸೀಳುಗೊಂಡಿದ್ದರೆ ಈ ವಸ್ತುವಿನ ಪುಡಿಯನ್ನು ಹಾಕುವಾಗ ಅದರ ಪರಿಮಾಣ ಆಕಸ್ಮಿಕವಾಗಿ ಕೊಂಚ ಹೆಚ್ಚಾಗಬಹುದು. ಹೀಗೆ ಹೆಚ್ಚಾದ ಪ್ಲಾಸ್ಟಿಕನ್ನು ಅರದಿಂದ ಉಜ್ಜಿ ಇಲ್ಲವೆ ಚಾಕುವಿನಿಂದ ಕತ್ತರಿಸಿ ತೆಗೆದುಹಾಕಬಹುದು. (ಜಿ.ಆರ್.ಆರ್.ಎಸ್.)

**ಗೊರಿಲ :** ಮ್ಯಾಮೇಲಿಯ ವರ್ಗ ಹಾಗೂ ಪ್ರೈಮೇಟ್ ಗಣಗಳ ಪಾಂಗಿಡೀ ಕುಟುಂಬಕ್ಕೆ ಸೇರಿದ ಒಂದು ವನ್ಯವಾಸಿ ವಾನರ. ಇದರ ತವರು ಆಫ್ರಿಕದ ಉಷ್ಣವಲಯ. ಚಿಂಪ್ಯಾಂಜ಼ಿ ಮತ್ತು ಒರಾಂಗೂಟಾನ್‌ಗಳ ಸಂಬಂಧಿ. ಇದಕ್ಕೂ ಅವುಗಳಂತೆ ಬಾಲವಿಲ್ಲ. ಒರಾಂಗೂಟಾನ್‌ಗಿಂತ ಚಿಂಪ್ಯಾಂಜ಼ಿಯೊಂದಿಗೇ ಇದರ ಸಂಬಂಧ ಹೆಚ್ಚು. ಗೊರಿಲವೂ ಚಿಂಪ್ಯಾಂಜ಼ಿಯೂ ಒಂದೇ ಪೂರ್ವಜ ಕಪಿಯಿಂದ ಉದ್ಭವಿಸಿದವು ಎಂದು ಹೇಳಲಾಗಿದೆ. ಗೊರಿಲದಲ್ಲಿ ಒಂದೇ ಒಂದು ಪ್ರಭೇದ ಉಂಟು. ಈ ಪ್ರಭೇದದ ವೈಜ್ಞಾನಿಕ ನಾಮ ಗೊರಿಲ ಗೊರಿಲ. ಇದರಲ್ಲಿ ಎರಡು ಉಪಪ್ರಭೇದಗಳಿವೆ: 1. ಸಮತಟ್ಟಾದ ಕಾಡು ಪ್ರದೇಶಗಳಲ್ಲಿ ವಾಸಿಸುವ ಗೊರಿಲ ಗೊರಿಲ ಗೊರಿಲ (ಲೋಲ್ಯಾಂಡ್ ಗೊರಿಲ), 2 ಪರ್ವತ ಪ್ರದೇಶಗಳಲ್ಲಿ ವಾಸಿಸುವ ಗೊರಿಲ ಗೊರಿಲ ಬೆರಿಂಗೈ (ಮೌಂಟನ್ ಗೊರಿಲ). ಮೊದಲನೆಯ ಉಪಪ್ರಭೇದ ಆಫ್ರಿಕದ ಸಮಭಾಜಕವೃತ್ತ ಪ್ರದೇಶಗಳ ಪಶ್ಚಿಮ ಭಾಗದಲ್ಲೂ (ಗಿನಿ ಖಾರಿಯ ಪ್ರದೇಶದ ದಟ್ಟಕಾಡುಗಳಲ್ಲಿ) ಎರಡನೆಯ ಉಪಪ್ರಭೇದ ಮಧ್ಯ ಆಫ್ರಿಕದಲ್ಲಿರುವ ಎಡ್ವರ್ಡ್ ಮತ್ತು ಕೀವಿ ಸರೋವರಗಳ ನಡುವೆ ಇರುವ ವಿರುಂಗ ಅಗ್ನಿಪರ್ವತಗಳ 3500 ಮೀ (11550 ಅಡಿ) ಎತ್ತರದವರೆಗಿನ ಪ್ರದೇಶಗಳಲ್ಲೂ ಕಾಣದೊರೆಯುತ್ತವೆ.

ದೈಹಿಕ ಲಕ್ಷಣಗಳು: ಗೊರಿಲ ವಾನರಗಳಲ್ಲೆಲ್ಲ ಅತ್ಯಂತ ದೊಡ್ಡ ಪ್ರಾಣಿ. ಅಷ್ಟೇ ಅಲ್ಲ, ಇಂದು ಜೀವಿಸಿರುವ ಪ್ರೈಮೇಟುಗಳಲ್ಲೆ ಇದು ಅತ್ಯಂತ ಭಾರಿಯಾದುದು. ಪೂರ್ಣ ಬೆಳೆದ ಗಂಡು ಗೊರಿಲದ ಎತ್ತರ 1.25–1.75 ಮೀ (4–6 ಅಡಿ). ಮಂಡಿಯನ್ನು ನೆಟ್ಟಗೆ ಮಾಡಿದರೆ ಎತ್ತರ ಇನ್ನೂ ಹೆಚ್ಚಬಲ್ಲುದು (ಸು. 2.30 ಮೀ ವರೆಗೆ 7.5ಅಡಿ). ಗೊರಿಲದ ಕೈ ಹರವು 2.0–2.75 ಮೀ(6.6– 9 ಅಡಿ), ಎದೆಯ ಸುತ್ತಳತೆ 1.75 ಮೀ (5.75 ಅಡಿ). ದೇಹದ ತೂಕ ಗಂಡಿನಲ್ಲಿ 135–275 ಕಿಗ್ರಾಂ. ಹೆಣ್ಣಿನಲ್ಲಿ 70–140 ಕಿಗ್ರಾಂ. ಪ್ರಾಣಿಸಂಗ್ರಹಾಲಯಗಳಲ್ಲಿನ ಗೊರಿಲಗಳಲ್ಲಿ 350 ಕಿಗ್ರಾಂ. ವರೆಗೂ ಇರಬಹುದು. ಗೊರಿಲದ ಮೈಮೇಲೆ ಕಪ್ಪುಬಣ್ಣದ ಇಲ್ಲವೆ ಬೂದುಮಿಶ್ರಿತ ಕಪ್ಪುಬಣ್ಣದ ದಟ್ಟವಾದ ಕೂದಲುಗಳಿವೆ. ನೆತ್ತಿಯ ಮೇಲೆ ಕೆಂಪು ಬಣ್ಣದ ಕೂದಲುಗಳಿರುವುದುಂಟು. ಗಂಡು ಗೊರಿಲಗಳಿಗೆ ಸುಮಾರು 10 ವರ್ಷ ವಯಸ್ಸಾದಾಗ ಅವುಗಳ ಬೆನ್ನಮೇಲಿನ ಕೂದಲುಗಳು ಬಿಳಿಯ ಬಣ್ಣಕ್ಕೆ ತಿರುಗುತ್ತವೆ. ಮುಖ, ಮುಂಗೈ ಮತ್ತು ಪಾದಗಳ ಮೇಲೆ ಕೂದಲಿರುವುದಿಲ್ಲ. ಹೆಚ್ಚು ವಯಸ್ಸಾದ ಗಂಡುಗಳ ಎದೆಯೂ ರೋಮರಹಿತವಾಗಿರುತ್ತದೆ. ಗೊರಿಲಗಳ ಕಿವಿಗಳ ಆಲೆಗಳು ಬಲು ಚಿಕ್ಕವು. ಮೂಗಿನ ಹೊಳ್ಳೆಗಳ ಸುತ್ತ ಉಬ್ಬುಗಳಿವೆ. ಕಣ್ಣುಗಳು ಚಿಕ್ಕವು; ಚೆನ್ನಾಗಿ ಉಬ್ಬಿಕೊಂಡಿರುವ ಹಣೆಯ ಮೂಳೆಗಳ ಕೆಳಗೆ ಹುದುಗಿದಂತಿವೆ.



ಪ್ರೌಢ ಹಂತದ ಗೊರಿಲ

ಗೊರಿಲ ಸಸ್ಯಾಹಾರಿ. ಹಲವಾರು ಬಗೆಯ ಗಿಡಗಳ ಎಳೆಯ ಕಾಂಡ, ಎಲೆ, ಬಲಿತ ಕಾಂಡಗಳ ತಿರುಳು, ತೊಗಟೆ ಮುಂತಾದವೇ ಇದರ ಪ್ರಧಾನ ಆಹಾರ. ಹಣ್ಣು, ಬೀಜ ಇತ್ಯಾದಿಗಳನ್ನು ತಿನ್ನುವುದಿದೆಯಾದರೂ ಇವು ಗೊರಿಲಕ್ಕೆ ಅಷ್ಟಾಗಿ ಅಚ್ಚುಮೆಚ್ಚಿನ ಆಹಾರಗಳಲ್ಲ. ಪ್ರಾಣಿಸಂಗ್ರಹಾಲಯಗಳಲ್ಲಿ ಗೊರಿಲ ಮಾಂಸವನ್ನು ತಿನ್ನುತ್ತದೆ. ಗೊರಿಲದ ಇನ್ನೊಂದು ವಿಚಿತ್ರ ಲಕ್ಷಣವೆಂದರೆ ನೀರೇ ಕುಡಿಯದಿರುವುದು. (ಬಿ.ಆರ್.ಸಿ.ಆರ್)

ಗೊರಿಲ ಸಮಾಜಜೀವಿ : ಗೊರಿಲ 5–20 ಪ್ರಾಣಿಗಳನ್ನೊಳಗೊಂಡ ಸಣ್ಣ ಕುಟುಂಬ ಇಲ್ಲವೆ ಗುಂಪುಗಳಲ್ಲಿ ವಾಸಿಸುತ್ತವೆ. ಪ್ರತಿಯೊಂದು ಗುಂಪಿಗೆ ಬಿಳಿಯ ಬಣ್ಣದ ಬೆನ್ನಿನ (ಸಿಲ್ವರ್ ಬ್ಯಾಕ್) ಗಂಡು ಗೊರಿಲವೇ ನಾಯಕ. ನಾಯಕನಿಗೆ ಗುಂಪಿನ ಎಲ್ಲ ಗೊರಿಲಗಳೂ ಅತ್ಯಂತ ವಿಧೇಯವಾಗಿ ನಡೆದುಕೊಳ್ಳುತ್ತವೆ. ತನಗೆ ಯಾವ ಬಗೆಯ ವಿರೋಧವಿಲ್ಲದಿದ್ದರೂ ನಾಯಕ ಮಾತ್ರ ಎಂದೂ ತನ್ನ ದರ್ಪವನ್ನು ಒರಟಾಗಿ ತೋರ್ಪಡಿಸುವುದಾಗಲೀ ಅಧಿಕಾರವನ್ನು ಚಲಾಯಿಸುವುದಾಗಲೀ ಇಲ್ಲ. ಯಾವಾಗಲೂ ಶಾಂತವಾಗಿ, ತಾಳ್ಮೆಯಿಂದ ಇರುತ್ತದೆ. ಹೀಗಾಗಿ ಗುಂಪಿನ ಇತರ ಪ್ರಾಣಿಗಳಿಗೆ ಅದು ಬಲು ಅಚ್ಚುಮೆಚ್ಚಾಗಿರುತ್ತದೆ. ಮರಿಗಳಂತೂ ನಾಯಕನ ಮೇಲೆ ಹತ್ತುವುದು, ಅದರ ತೊಡೆಯ ಮೇಲೆ ಕುಳಿತು ಕೊಳ್ಳುವುದು ಮುಂತಾದವನ್ನೆಲ್ಲ ಮಾಡುತ್ತವೆ. ಇವೆಲ್ಲವನ್ನೂ ತಾಳ್ಮೆಯಿಂದ ಸಹಿಸುವ ಗಂಡು ಗಲಾಟೆ ವಿಪರೀತವಾದಾಗ ಮಾತ್ರ ಪ್ರತಿಕ್ರಿಯೆಯನ್ನು ತೋರುತ್ತದೆ. ಆಗಲೂ ಹೊಡೆಯುವುದಾಗಲೀ ಬಡಿಯುವುದಾಗಲೀ ಮಾಡದು; ಒಂದು ಸಲ ಮರಿಗಳನ್ನು ದುರುಗುಟ್ಟಿ ನೋಡುತ್ತದೆ ಅಷ್ಟೆ. ಮರಿಗಳ ಚೇಷ್ಟೆ ನಿಲ್ಲುತ್ತದೆ. ಗುಂಪಿನ ಮುಂದಾಳು ಇಷ್ಟು ಶಾಂತಸ್ವಭಾವದ್ದಾದರೂ ಗುಂಪಿಗೆ ಅಪಾಯವೊದಗಿದಾಗ, ಚಿರತೆ ಮುಂತಾದ ಶತ್ರುಗಳು ಮುತ್ತಿದಾಗ ರಕ್ಷಣೆಗೆ ಸಿದ್ಧವಾಗುತ್ತದೆ. ತನ್ನ ಎದೆಯನ್ನು ಬಲವಾಗಿ ಬಡಿದುಕೊಳ್ಳುತ್ತ, ಕೂಗುತ್ತ ಶತ್ರುಗಳನ್ನು ಹೆದರಿಸುತ್ತದೆ. ಒಂದೊಂದು ಗುಂಪಿನಲ್ಲಿ ಒಬ್ಬ ನಾಯಕ, ಕೆಲವು ಪ್ರೌಢ ವಯಸ್ಸಿನ ಗಂಡುಗಳು, ಹೆಣ್ಣುಗಳು ಮತ್ತು ಮರಿಗಳು ಇರುತ್ತವೆ. ಕೆಲವೊಮ್ಮೆ ಬರಿಯ ಮುಂದಾಳು, ಹೆಣ್ಣುಗಳು ಮತ್ತು ಮರಿಗಳು ಮಾತ್ರ ಇರಬಹುದು. ಗುಂಪಿನ ಪ್ರತಿಯೊಂದು ಗೊರಿಲಕ್ಕೂ ಅದರದೇ ಆದ ಸ್ಥಾನಮಾನ ಇರುತ್ತದೆ. ಯಾವ ಪ್ರಾಣಿಯೂ ತನ್ನ ಸ್ಥಾನವನ್ನು ಮೀರಿ ವರ್ತಿಸುವುದಿಲ್ಲ. ಪ್ರತಿಯೊಂದು ಗುಂಪಿಗೂ ಅದರದೇ ಆದ

ಅಧೀನ ಪ್ರಾಂತ್ಯವಿರುತ್ತದೆ. ಈ ಪ್ರಾಂತ್ಯದ ವಿಸ್ತೀರ್ಣ 25–40 ಚದರ ಕಿಮೀ ಇರುವುದುಂಟು. ಕೆಲವು ಸಲ ಒಂದೇ ಪ್ರದೇಶದಲ್ಲಿ ಹಲವಾರು ಗುಂಪುಗಳಿರಬಹುದು. ಹೀಗಿರುವಾಗ ಗುಂಪುಗಳು ಎದುರುಬದುರು ಬರಬಹುದು. ಹೀಗೆ ಭೇಟಿಯಾದಾಗ ಅವುಗಳ ನಡುವೆ

ಮರಿಗಳು

ಯಾವ ಬಗೆಯ ಘರ್ಷಣೆಯೂ ನಡೆಯುವುದಿಲ್ಲ. ಎರಡು ಗುಂಪುಗಳ ನಾಯಕ ಗೊರಿಲಗಳು ಮಾತ್ರ ಒಂದೇ ಸಮನೆ ಪರಸ್ಪರ ದೃಷ್ಟಿಸತೊಡಗುತ್ತವೆ. ನೆಲವನ್ನು ಕೈಗಳಿಂದ ಬಲವಾಗಿ ಹೊಡೆಯುವುದು, ಕಾಲುಗಳ ಮೇಲೆ ನಿಂತು ಮೈ, ಕೈಗಳನ್ನು ಚಾಚುವುದು, ಎದೆಯನ್ನು ಹಿಗ್ಗಿಸುವುದು – ಮೊದಲಾದವನ್ನೆಲ್ಲ ಮಾಡುತ್ತವೆ. ಆದರೆ ಕೈಕೈ ಮಿಲಾಯಿಸುವುದು ಮಾತ್ರ ಇಲ್ಲವೇ ಇಲ್ಲ. ಹೀಗೆ ಕೊಂಚ ಹೊತ್ತು ಮಾಡಿದ ಮೇಲೆ ಎರಡು ಗುಂಪುಗಳು ಬೇರೆ ಬೇರೆ ದಾರಿಯಲ್ಲಿ ಮುಂದೆ ಸಾಗುತ್ತವೆ. ಇದರಿಂದ ಗೊರಿಲಗಳು ಹೊರನೋಟಕ್ಕೆ ಎಷ್ಟು ಕ್ರೂರಿಗಳಾಗಿ ಕಾಣುತ್ತವೋ ಅಷ್ಟೇ ಶಾಂತ ಸ್ವಭಾವದವು ಎಂಬುದು ವ್ಯಕ್ತವಾಗುತ್ತದೆ. ಬೇರೆ ಪ್ರಾಣಿಗಳನ್ನೂ ಮನುಷ್ಯರನ್ನೂ ಕಂಡರೆ ಮರೆಯಾಗಿ ಹೋಗುವುದೇ ಗೊರಿಲಗಳ ಸಾಮಾನ್ಯ ಕ್ರಮ. ಆದರೆ ಇತರ ಪ್ರಾಣಿಗಳಾಗಲೀ ಮನುಷ್ಯರಾಗಲೀ ಆಕ್ರಮಣ ಮಾಡಿದಾಗ ಮಾತ್ರ ಇವು ಉಗ್ರವಾಗಿ ಹೋರಾಡಬಲ್ಲವು.

ಗೊರಿಲಗಳಿಗೆ ಬಿಸಿಲೆಂದರೆ ಬಹಳ ಅಚ್ಚುಮೆಚ್ಚು. ಬಿಸಿಲಿನಲ್ಲಿ ಅಂಗಾತ ಮಲಗಿ ಗಂಟೆಗಟ್ಟಲೆ ಕಾಲಕಳೆಯುತ್ತವೆ. ಮೋಡ ಕವಿದರೆ, ಕತ್ತಲಾದರೆ ಮಾತ್ರ ಎಲ್ಲವೂ ಒಂದೆಡೆ ಸೇರಿಕೊಂಡು ಮೌನವಾಗಿಬಿಡುತ್ತವೆ. ಬಹುಶಃ ಇವಕ್ಕೆ ಕತ್ತಲು ಕಂಡರೆ ಹೆದರಿಕೆಯಿರಬೇಕು. ಗೊರಿಲಗಳು ಸಾಮಾನ್ಯವಾಗಿ ಸಂಜೆಯ ವೇಳೆ ಸೂಕ್ತವಾದ ಮರವೊಂದನ್ನು ಆರಿಸಿಕೊಂಡು ಅದರ ಮೇಲೆ ಅಥವಾ ನೆಲದ ಮೇಲೆ ಸೊಪ್ಪುಸದೆ, ಹುಲ್ಲು ಮುಂತಾದವನ್ನು ಹಾಕಿ ಗೂಡನ್ನು ನಿರ್ಮಿಸಿಕೊಂಡು ಮಲಗುತ್ತವೆ. ರಾತ್ರಿಯೆಲ್ಲ ನಿದ್ದೆಯಲ್ಲಿ ಕಳೆದು ಬೆಳಗ್ಗೆ ಸೂರ್ಯ ಹುಟ್ಟಿದ ಒಂದು ಗಂಟೆಯ ಅನಂತರ ಎದ್ದು ಆಹಾರಸೇವನೆಯಲ್ಲಿ ತೊಡಗುತ್ತವೆ. 9–10 ಗಂಟೆಯ ಸುಮಾರಿಗೆ ತಿನ್ನುವುದನ್ನು ನಿಲ್ಲಿಸಿ ವಿಶ್ರಮಿಸುತ್ತವೆ. ಈ ಕಾಲದಲ್ಲಿ ನೆಲದ ಮೇಲೆ ಉರುಳಿಕೊಂಡು ಇಲ್ಲವೆ ಮರದ ಬೊಡ್ಡೆಗೆ ಒರಗಿಕೊಂಡು ಸಮಯ ಹರಣ ಮಾಡುತ್ತವೆ. ಮರಿಗಳು ಮಾತ್ರ ಆಟದಲ್ಲಿ ನಿರತವಾಗುತ್ತವೆ. ಕೆಲವು ಸಲ ಪರಸ್ಪರ ಮೈಯನ್ನು ಹೆಕ್ಕುವುದಿದೆಯಾದರೂ ಇದು ಅವಕ್ಕೆ ಅಷ್ಟಾಗಿ ಹಿಡಿಸುವುದಿಲ್ಲ. ಮಧ್ಯಾಹ್ನದಲ್ಲೂ ಕೊಂಚ ಹೊತ್ತು ತಿನ್ನುವುದರಲ್ಲಿ ತೊಡಗಿದ್ದು ಸಂಜೆಗೆ ಮಲಗುವ ಸಿದ್ಧತೆಯಲ್ಲಿ ನಿರತವಾಗುತ್ತವೆ. ಪ್ರತಿ ರಾತ್ರಿಗೂ ಒಂದೊಂದು ಹೊಸಗೂಡನ್ನು ನಿರ್ಮಿಸಿಕೊಂಡು ಮಲಗುವ ಕ್ರಮ ಇದೆ. ಗೊರಿಲಗಳ ದೃಷ್ಟಿ ಘ್ರಾಣ ಮತ್ತು ಶ್ರವಣಶಕ್ತಿಗಳು ಮಾನವನಲ್ಲಿರುವಷ್ಟೆ ಇವೆ. ಅವನಂತೆಯೆ ಆಕಳಿಸುವುದು, ಕೆಮ್ಮುವುದು, ಬಿಕ್ಕಳಿಸುವುದು ಮುಂತಾದವನ್ನೆಲ್ಲ ಮಾಡುತ್ತವೆ. ಇವಕ್ಕೆ ವಿಶಿಷ್ಟವಾದ ಭಾಷೆಯಿಲ್ಲವಾದರೂ ಗೊರಿಲಗಳು ಸುಮಾರು 25 ಬಗೆಯ ಶಬ್ದಗಳನ್ನು ಮಾಡಬಲ್ಲವು.

ಗೊರಿಲಗಳ ಆಯಸ್ಸು ಸ್ವಾಭಾವಿಕಸ್ಥಿತಿಯಲ್ಲಿ ಸು. 35–40 ವರ್ಷಗಳು. ಪ್ರಾಣಿಸಂಗ್ರಹಾಲಯಗಳಲ್ಲಿ 50 ವರ್ಷಕ್ಕೂ ಮೇಲ್ಪಟ್ಟು ಬದುಕಿರುವ ದಾಖಲೆಗಳುಂಟು. ಗೊರಿಲಗಳಿಗೆ ಖಚಿತವಾದ ಸಂತಾನೋತ್ಪತ್ತಿಯ ಕಾಲ ಇಲ್ಲ. ವರ್ಷದ ಯಾವ ಕಾಲದಲ್ಲಾದರೂ ಮರಿಗಳು ಹುಟ್ಟಬಹುದು. ಹೆಣ್ಣು ಗೊರಿಲ ಪ್ರತಿ 3.5 ಇಲ್ಲವೆ 4.5 ವರ್ಷಗಳಿಗೊಮ್ಮೆ ಮರಿಹಾಕುತ್ತದೆ. ಗರ್ಭಾವಸ್ಥೆಯ ಅವಧಿ 8.5 ತಿಂಗಳು. ಸಾಮಾನ್ಯವಾಗಿ ಒಂದು ಸಲಕ್ಕೆ ಒಂದೇ ಮರಿ ಹುಟ್ಟುತ್ತದೆ. ಮರಿಗಳು ಹುಟ್ಟಿದಾಗ ಬಹಳ ಅಸಹಾಯಕವಾಗಿರುವುವಾದರೂ ಬಲುಬೇಗ ಬೆಳೆದು ಸುಮಾರು 4–5 ತಿಂಗಳುಗಳಲ್ಲಿ ಆಹಾರವನ್ನು ತಾವೇ ಸ್ವತಃ ತಿನ್ನಲು ಸಮರ್ಥವಾಗುತ್ತವೆ. ಮರಿ ಚಿಕ್ಕದಿರುವಾಗ ತಾಯಿಯೇ ಅದನ್ನು ಹೊತ್ತುಕೊಂಡು ತಿರುಗಾಡುತ್ತದೆ. ಈ ಲಕ್ಷಣದಲ್ಲಿ ಗೊರಿಲಗಳು ಕೋತಿಗಳಿಂದ ಭಿನ್ನವೆನಿಸಿವೆ. ಹೆಣ್ಣು ಮರಿಗಳಿಗೆ 6–7 ವರ್ಷ ವಯಸ್ಸಾದಾಗಲೂ ಗಂಡುಮರಿಗಳಿಗೆ 9–10 ವರ್ಷ ವಯಸ್ಸಾದಾಗಲೂ ಲೈಂಗಿಕ ಪ್ರಬುದ್ಧತೆ ಬರುತ್ತದೆ. *

**ಗೊರೂರು ರಾಮಸ್ವಾಮಿ ಅಯ್ಯಂಗಾರ್ :** 1904–91. ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ ವಿಸ್ತಾರಗಳನ್ನೂ ವೈವಿಧ್ಯ ವೈಶಿಷ್ಟ್ಯಗಳನ್ನೂ ತಂದುಕೊಟ್ಟ ಗಣ್ಯಲೇಖಕರಲ್ಲೊಬ್ಬರು; ಸುಪ್ರಸಿದ್ಧ ಪ್ರಬಂಧಕಾರರು, ಗಾಂಧೀವಾದಿ.

ಗೊರೂರು ಎಂಬ ಸಂಕ್ಷಿಪ್ತ ನಾಮದಿಂದಲೇ ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತರು. ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಗೊರೂರು ಗ್ರಾಮದಲ್ಲಿ 1904 ಜುಲೈ 4ರಂದು ಜನಿಸಿದರು. ಇವರ ತಂದೆ ಶ್ರೀನಿವಾಸ ಅಯ್ಯಂಗಾರ್. ತಾಯಿ ಲಕ್ಷ್ಮಮ್ಮ. ಹನ್ನೆರಡು ಮಕ್ಕಳ ದೊಡ್ಡ ಸಂಸಾರದಲ್ಲಿ ಗೊರೂರರವರು ತಮ್ಮ ತಂದೆತಾಯಿಗಳಿಗಾದ ಗಂಡುಮಕ್ಕಳಲ್ಲಿ ಎರಡನೆಯವರು. ಅಜ್ಜಿಯವರಿಗೆ ತಂದೆ ಹೇಳುತ್ತಿದ್ದ ಮಹಾಭಾರತ ಪುರಾಣಗಳನ್ನು ಬಾಲ್ಯದಲ್ಲಿಯೇ ಕೇಳಿ ಅವುಗಳಿಂದ ಪ್ರಭಾವಿತರಾದರು. ತಮ್ಮ ಹಳ್ಳಿಯಲ್ಲಿಯೇ ಕನ್ನಡ ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಪ್ರೌಢ ವಿದ್ಯಾಭ್ಯಾಸ ಮಾಡಲು ಹಾಸನದ ಸರ್ಕಾರಿ ಹೈಸ್ಕೂಲನ್ನು ಸೇರಿದರು. ಹೈಸ್ಕೂಲಿನಲ್ಲಿ ಐದನೆಯ ಫಾರಂನಲ್ಲಿದ್ದಾಗ ಗಾಂಧೀಜಿಯವರ ಅಸಹಕಾರ ಚಳವಳಿಯಿಂದ ಆಕರ್ಷಿತರಾಗಿ, ಇಂಗ್ಲಿಷ್ ವಿದ್ಯೆಗೆ ಶರಣು ಹೊಡೆದು, ಗಾಂಧೀಜಿಯ ಆಶ್ರಮವನ್ನು ಸೇರಿ ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಯಾದರು. ಗಾಂಧೀಜಿಯವರ ನಿಕಟ ಸಂಪರ್ಕ ಪಡೆದು ದೇಶಸೇವೆ ಮಾಡಲು ತಕ್ಕ ಯೋಗ್ಯತೆಯನ್ನು ಗಳಿಸಿ, ಮದರಾಸಿನ ಲೋಕಮಿತ್ರ ಎಂಬ ಕನ್ನಡ ಪತ್ರಿಕೆಯ ಉಪಸಂಪಾದಕರಾಗಿ, ಆಂಧ್ರಪತ್ರಿಕೆ, ಭಾರತಿ ಪತ್ರಿಕೆಗಳಿಗೆ ಕನ್ನಡ ಸಮಾಚಾರ ಲೇಖಕರಾಗಿ ಕೆಲವು ಕಾಲ ಕೆಲಸಮಾಡಿ, ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿದರು. ಆ ಗುರುಕುಲ ಸಾಬರಮತಿ ಆಶ್ರಮದ ಮಾದರಿಯಲ್ಲಿ ನಡೆಯುತ್ತಿತ್ತು. ಹರಿಜನರನ್ನು ಮೇಲಕ್ಕೆತ್ತುವುದೇ ಅದರ ಮುಖ್ಯೋದ್ದೇಶವಾಗಿತ್ತು. ಈ ಕಾರ್ಯವನ್ನು ಇವರು ಇಲ್ಲಿ ಸಮರ್ಥವಾಗಿ ನಡೆಸಿದರು. ಅನಂತರ ಬೆಂಗಳೂರಿಗೆ ಬಂದು ಅಖಿಲಭಾರತ ಚರಕ ಸಂಘದ ಖಾದಿ ವಸ್ತ್ರಾಲಯವನ್ನು ನಡೆಸುವ ಹೊಣೆಯನ್ನು ಹೊತ್ತರು. ಈ ಶತಮಾನದ ಮೂರು ನಾಲ್ಕನೆಯ ದಶಕಗಳು ರಾಷ್ಟ್ರೀಯ ಚಳವಳಿಗೆ ಹೆಸರಾಗಿರುವಂತೆ, ಕನ್ನಡ ಸಾಹಿತ್ಯದ ನವೋದಯಕ್ಕೂ ಹೆಸರಾಗಿವೆ. ಬೆಂಗಳೂರಿನ ಆವರಣ ಇವರಿಗೆ ಅನೇಕ ಪ್ರಮುಖ ದೇಶಸೇವಕರನ್ನು ಪರಿಚಯ ಮಾಡಿಕೊಟ್ಟಂತೆ, ಸೀತಾತನಯ, ಜಿ.ಕೆ.ರಾಮಸ್ವಾಮಿಯೆಂಬ ಹೆಸರುಗಳಿಂದ ಬರೆಯುತ್ತಿದ್ದ ಇವರಿಗೆ ಆ ಕಾಲದ ಸುಪ್ರಸಿದ್ಧ ಸಾಹಿತಿಗಳ ಸಾನ್ನಿಧ್ಯವನ್ನೂ ಗ್ರಂಥರಚನೆಗೆ ಒಳ್ಳೆಯ ಪ್ರೋತ್ಸಾಹವನ್ನೂ ದೊರಕಿಸಿಕೊಟ್ಟಿತು. ಗೊರೂರವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟ ಹಳ್ಳಿಯ ಚಿತ್ರಗಳು (1930), ನಮ್ಮ ಊರಿನ ರಸಿಕರು (1932) ಈ ಕೃತಿಗಳು ಪ್ರಕಟವಾದದ್ದು ಈ ಕಾಲದಲ್ಲಿಯೇ. ಅಲ್ಲಿಂದ ಇವರ ವೈವಿಧ್ಯಮಯ ಸಾಹಿತ್ಯರಚನೆ ಅವ್ಯಾಹತವಾಗಿ ಸಾಗಿತು. 1933ರಲ್ಲಿ ಇವರು ತಮ್ಮ ಸ್ವಂತ ಗ್ರಾಮಕ್ಕೆ ಹಿಂದಿರುಗಿ, ಅಲ್ಲಿ ಮೈಸೂರು ಗ್ರಾಮ ಸೇವಾ ಸಂಘವನ್ನು ಸ್ಥಾಪಿಸಿ ಖಾದಿಪ್ರಚಾರ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು. 1942ರಲ್ಲಿ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ

ನಡೆದ ‘ಚಲೇಜಾವ್’ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ, ಮೈಸೂರಿನಲ್ಲಿ ಪ್ರಜಾಸರ್ಕಾರ ಸ್ಥಾಪನೆಗಾಗಿ ನಡೆದ ಚಳವಳಿಯಲ್ಲೂ ಭಾಗವಹಿಸಿದರು. ಈ ಚಳವಳಿಯಲ್ಲಿ ಭಾಗವಹಿಸಿದ್ದ ಇವರ ಹಿರಿಯ ಮಗ 17 ವರ್ಷದ ರಾಮಚಂದ್ರ ತುಮಕೂರಿನಲ್ಲಿ ಪೊಲೀಸಿನವರ ಗುಂಡಿಗೆ ಬಲಿಯಾದ. ಮೈಸೂರಿನಲ್ಲಿ ಪ್ರಜಾಸರ್ಕಾರ ಸ್ಥಾಪಿತವಾದಮೇಲೆ ಗೊರೂರರು ಸುಮಾರು ಹನ್ನೆರಡು ವರ್ಷಕಾಲ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ಸದಸ್ಯರೂ ಆಗಿದ್ದರು. ತಮ್ಮ ಈ ಅಧಿಕಾರದ ಅವಧಿಯಲ್ಲಿ ಮೈಸೂರು ಸರ್ಕಾರ ಸಾಧಿಸಿದ ಕರ್ನಾಟಕ ಏಕೀಕರಣಕ್ಕೆ ಬೆಂಬಲವನ್ನು ನೀಡಿದರಲ್ಲದೆ, ಕನ್ನಡದ ಸರ್ವತೋಮುಖವಾದ ಬೆಳೆವಣಿಗೆಗೂ ಶ್ರಮಿಸಿದರು. ತಮ್ಮ ಹಳ್ಳಿಯಲ್ಲಿದ್ದುಕೊಂಡೇ ಬಹುಕಾಲ ಸಾಹಿತ್ಯರಚನೆಯಲ್ಲಿ ತೊಡಗಿದರು.

ಇವರು ಅರ್ಧಶತಮಾನದ ಕಾಲ ಕನ್ನಡ ಸಾಹಿತ್ಯ ಸೇವೆ ನಡೆಸಿದರು. ಹೊಸಗನ್ನಡ ಸಾಹಿತ್ಯದಲ್ಲಿ ನಿರ್ಮಲವಾದ, ತಿಳಿಯಾದ ಹಾಸ್ಯವನ್ನು ಹರಿಯಬಿಟ್ಟವರೆಂಬ ಕೀರ್ತಿಗೆ ಇವರು ಭಾಜನರಾಗಿದ್ದಾರೆ. ಹೆಚ್ಚು ಕಡಿಮೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಇವರು ಕೃತಿಗಳನ್ನು ರಚಿಸಿದ್ದಾರೆ. ಪುಸ್ತಕ ರೂಪದಲ್ಲಿ ಪ್ರಕಟವಾಗದ ಇವರ ಕವನಗಳು ಪತ್ರಿಕೆಗಳಲ್ಲಿ ಅಭಿನಂದನ ಗ್ರಂಥಗಳಲ್ಲಿ ಚದುರಿಹೋಗಿರುವ ಬಿಡಿಲೇಖನಗಳನ್ನು ಬಿಟ್ಟರೆ, ಇವರು ರಚಿಸಿದ ಕೃತಿಗಳ ಸಂಖ್ಯೆ 47. ಇವರ ಸಾಹಿತ್ಯವನ್ನು ಕಥೆ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ ಮೊದಲಾದ ಪ್ರಕಾರಗಳನ್ನೊಳಗೊಂಡ ಶುದ್ಧಸಾಹಿತ್ಯ, ಅನುವಾದಸಾಹಿತ್ಯ, ಗಾಂಧೀಸಾಹಿತ್ಯವೆಂದು ಮೂರು ವಿಧವಾಗಿ ವಿಂಗಡಿಸಬಹುದು. ಇವರ ಮೊದಲನೆಯ ಪುಸ್ತಕ ‘ಭಾರತದ ಸ್ವಾತಂತ್ರ್ಯ’ ಪ್ರಕಟವಾಗಿದ್ದು 1930ರಲ್ಲಿ. ಇನ್ನೊಂದು ಮುಖ್ಯಕೃತಿ ಜನಪದ ಜೀವನ ಮತ್ತು ದರ್ಶನ (1974). ಇವರು ರಚಿಸಿರುವ ಹೇಮಾವತಿ (1948) ಎಂಬ ಕಾದಂಬರಿ ಹರಿಜನೋದ್ಧಾರ ಸಮಸ್ಯೆಗೆ ಸಂಬಂಧಿಸಿದ್ದು. ಯಾವುದೋ ಕ್ಷಣದಲ್ಲಿ ಜಾರಿಬಿದ್ದ ಹೆಣ್ಣು, ಎಚ್ಚೆತ್ತು ಉದ್ಧಾರವಾದ ಕಥೆ ಊರ್ವಶಿ ಕಾದಂಬರಿಯಲ್ಲಿದೆ. ತಿಳಿಯಾದ ಹಾಸ್ಯಲೇಖಕರೆಂದು ಇವರಿಗೆ ಕೀರ್ತಿ ತಂದ ಹಳ್ಳಿಯ ಚಿತ್ರಗಳು ಮತ್ತು ನಮ್ಮ ಊರಿನ ರಸಿಕರು ಎಂಬ ಪ್ರಬಂಧ ಗ್ರಂಥಗಳು ವೈದಿಕ ಮತ್ತು ಜನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಸರಳ ನಿಃಸ್ಪೃಹ ಸಂತೃಪ್ತ ಗ್ರಾಮಜೀವನವನ್ನು ಚಿತ್ರಿಸುತ್ತವೆ. ಮೆರವಣಿಗೆ ಇವರ ಪ್ರಬಂಧಗಳಲ್ಲೆಲ್ಲ ಅತಿ ದೊಡ್ಡ ಗ್ರಂಥ. ಇದರಲ್ಲಿ ಹಾರುವರಿಂದ ಹಿಡಿದು ಹರಿಜನರವರೆಗಿನ ಎಲ್ಲ ರೀತಿಯ ಜನರನ್ನೂ ವಿವಿಧ ರೀತಿನೀತಿಯ ಅಧಿಕಾರಿ ವರ್ಗವನ್ನೂ ಅವರ ಗುಣದೋಷಗಳೊಡನೆ ಸಹಾನುಭೂತಿಯ ಕಣ್ಣಿನಿಂದ ನೋಡಿದ್ದಾರೆ. ಇವರ ಮಿಕ್ಕ ಪ್ರಬಂಧಗಳಲ್ಲಿ ಗರುಡಗಂಬದ ದಾಸಯ್ಯ (1965), ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು (1967), ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು (1972), ಕಥೆಗಳು ಮತ್ತು ವಿನೋದ ಚಿತ್ರಗಳು, ಬೈಲುಹಳ್ಳಿಯ ಸರ್ವೆ–ಈ ಗ್ರಂಥಗಳನ್ನು ಹೆಸರಿಸಬಹುದು. ಗೊರೂರರ ಪ್ರಬಂಧಗಳು ಯಾವಾಗ ಸಣ್ಣಕಥೆಗಳಾಗುತ್ತವೆಯೆಂದು ಹೇಳುವುದು ಕಷ್ಟ. ಇವರ ಪ್ರಬಂಧಗಳಲ್ಲಿ ಕಥೆ ಹುದುಗಿರುತ್ತದೆ. ಕಥೆ ಪ್ರಬಂಧದ ಆಕಾರವನ್ನೂ ತಾಳಬಹುದು. ಇವರ ಸಣ್ಣಕಥೆಗಳಲ್ಲಿ ವೈಯಾರಿ, ಶಿವರಾತ್ರಿ, ಕಮ್ಮಾರ, ವೀರಭದ್ರಾಚಾರಿ, ಉಸುಬು, ಕನ್ಯಾಕುಮಾರಿ ಮತ್ತು ಇತರ ಕತೆಗಳು, ಗೋಪುರದ ಬಾಗಿಲು, ಬೆಸ್ತರ ಕರಿಯ, ಬೂತಯ್ಯನ ಮಗ ಅಯ್ಯು ಮುಖ್ಯವಾದುವು. ತಮಿಳಿನಿಂದ ಕನ್ನಡಕ್ಕೆ ತಂದಿರುವ ಕೊನಷ್ಟೈ ಕಥೆಗಳಲ್ಲಿ ತಿಳಿಯಾದ ಹಾಸ್ಯ ಮಿನುಗುತ್ತದೆ. ಘನವಾದ ಭಾವನೆ ಮತ್ತು ವಸ್ತುಗಳನ್ನೊಳಗೊಂಡ ಕೆ.ಎಂ.ಮುನ್ಷಿಯವರ ಭಗವಾನ್ ಕೌಟಿಲ್ಯ, ರಾಮಚಂದ್ರ ಠಾಕೂರರ ರಾಜ ನರ್ತಕಿ, ವಿ.ಎಸ್.ಖಾಂಡೇಕರ ಅವರ ಕ್ರೌಂಚವಧೆ, ಟಾಲ್‌ಸ್ಟಾಯ್ ಅವರ ಕಾಸಕ್ಸ್ – ಈ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಗೊರೂರರ ಗಾಂಧೀ ಸಾಹಿತ್ಯದ ಅನುವಾದಗಳಲ್ಲಿ ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ, ಪೂರ್ಣಸ್ವದೇಶಿ, ಭಾಷಣಗಳು ಮತ್ತು ಹೇಳಿಕೆಗಳು –ಇವುಗಳನ್ನು ಮುಖ್ಯವಾಗಿ ಹೆಸರಿಸಬಹುದು. ಮಹಾತ್ಮ ಗಾಂಧೀಯವರ ದಕ್ಷಿಣಯಾತ್ರೆ, ಭಾರತ ಭಾಗ್ಯವಿಧಾತ –ಇವು ಗಾಂಧೀಜಿಯವರನ್ನು ಕುರಿತು ಇವರು ಬರೆದ ಸ್ವತಂತ್ರ ಕೃತಿಗಳು. ನಮ್ಮ ನಾಡಿನ ಹಲವು ಉದ್ಗ್ರಂಥಗಳನ್ನು ಕುರಿತ ವಿಮರ್ಶೆಗಳ ಸಂಗ್ರಹ, ಸಾಹಿತ್ಯ ರಶ್ಮಿ (1963) ಮತ್ತು ಸಾಹಿತ್ಯದ ಸ್ವರೂಪ, ಹಳ್ಳಿಯ ಹಾಡುಗಳು (1938) ಸೊಗಸಾದ ಜನಪದ ಸಾಹಿತ್ಯದ ತ್ರಿಪದಿಗಳ ಸಂಗ್ರಹವಾದರೆ, ಹಳ್ಳಿಯ ಬಾಳು (1943) ಜನಪದ ಸಾಹಿತ್ಯದ ಮೇಲಿನ ಸೊಗಸಾದ ವ್ಯಾಖ್ಯಾನ. ನಮ್ಮ ಸಮಾಜದ ಜನರ ಲೋಪದೋಷಗಳನ್ನು ಸಹಾನುಭೂತಿಯಿಂದ ಕಂಡು, ಕನಿಕರಿಸಿ, ತೀಕ್ಷ್ಣ ವಿಡಂಬನದಿಂದ ಟೀಕಿಸಿ, ಎಲ್ಲಕ್ಕೂ ಮಿಗಿಲಾಗಿ ಯಾರಿಗೂ ನೋವಾಗದಂತೆ ಎಲ್ಲರೂ ನಲಿಯುವಂತೆ ತಮ್ಮ ಕೃತಿಗಳ ಮೇಲೆ ಹಾಸ್ಯದ ಪನ್ನೀರನ್ನು ಚಿಮುಕಿಸಿ ಬದುಕನ್ನು ಸಹ್ಯವನ್ನಾಗಿ ಮಾಡಿ, ಅದರ ವಿಷಯದಲ್ಲಿ ಗೌರವವನ್ನು ಮೂಡಿಸಿರುವ ಗೊರೂರರು ಕನ್ನಡ ವಾಚಕಕೋಟಿಯ ಹೃದಯವನ್ನು ಗೆದ್ದುಕೊಂಡಿದ್ದಾರೆ. ಇವರ ಕಥೆ–ಕಾದಂಬರಿಗಳನ್ನು ಆಧರಿಸಿ ಬೂತಯ್ಯನ ಮಗ ಅಯ್ಯು, ಹೇಮಾವತಿ ಮುಂತಾದ ಚಲನಚಿತ್ರಗಳು ನಿರ್ಮಾಣಗೊಂಡಿವೆ.



ಜನಸಾಮಾನ್ಯರಲ್ಲಿ ಬೆರೆತು, ಅವರಲ್ಲಿ ಒಬ್ಬರಾಗಿ ಸಾಹಿತ್ಯ ಹಾಗೂ ಸಮಾಜಸೇವೆ ಸಲ್ಲಿಸಿರುವ ಗೊರೂರರಿಗೆ ಹಲವು ಬಗೆಯ ಗೌರವಗಳು ಲಭಿಸಿವೆ. 1967ರಲ್ಲಿ ತರೀಕೆರೆಯಲ್ಲಿ ನಡೆದ ಮೊದಲನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. 1969ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಇವರನ್ನು ಗೌರವಿಸಿದೆ. 1971ರಲ್ಲಿ ಹಾಸನ ಜಿಲ್ಲಾ ಸಾಹಿತ್ಯಸಮ್ಮೇಳನ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಇವರ ಎಪ್ಪತ್ತನೆಯ ಹುಟ್ಟುಹಬ್ಬದಂದು (1973) ಇವರಿಗೆ ಗೊರೂರು ಗೌರವ ಗ್ರಂಥ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿ ಸನ್ಮಾನಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ (1974). ಅಮೆರಿಕದಲ್ಲಿ ಗೊರೂರು ಎಂಬ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ (1980). ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜರುಗಿದ 55ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವು ಇವರಿಗೆ ಸಂದಿದೆ (1988). ಇವರು 1991 ಸೆಪ್ಟೆಂಬರ್ 28ರಂದು ನಿಧನರಾದರು. (ಎಚ್.ಎಂ.ಎಸ್.)

**ಗೊಲ್ಲ :** ಏಷ್ಯದ ಮಧ್ಯಭಾಗದಲ್ಲಿ ಸಾಮ್ರಾಜ್ಯವನ್ನು ಕಟ್ಟಿ ಆಳಿದ ಬಿಳಿಯ ಹೂಣರ ವಂಶಕ್ಕೆ ಸಂಬಂಧಿಸಿದ ಒಬ್ಬ ರಾಜ. ಈತನನ್ನು ಇತಿಹಾಸಜ್ಞರು ಇನ್ನೂ ಖಚಿತವಾಗಿ ಗುರುತಿಸಿಲ್ಲ. ಈತನ ಉಲ್ಲೇಖವನ್ನು ಮೊದಲ ಬಾರಿಗೆ ಮಾಡಿದವನೆಂದರೆ ಕಾಸ್‌ಮಾಸ್ ಇಂಡಿಕೊಪ್ಲ್ಯುಸ್ಟಿಸ್ ಎಂಬ ಧಾರ್ಮಿಕ ಗುರು. ಹೂಣರ ದೇಶವನ್ನು ಫೀಸನ್ ನದಿ–ಎಂದರೆ ಸಿಂಧೂನದಿ–ಭಾರತ ದೇಶದಿಂದ ಬೇರ್ಪಡಿಸುತ್ತದೆ ಎಂದು ಹೇಳಿರುವ ಈತ, ಗೊಲ್ಲ ಭಾರತದ ಅರಸನಾಗಿ ಪ್ರಜೆಗಳನ್ನು ಹಿಂಸಿಸಿ ಅವರಿಂದ ಬಲವಂತವಾಗಿ ಕಪ್ಪಕಾಣಿಕೆಗಳನ್ನು ಪಡೆಯುತ್ತಾನೆಂದೂ ಯುದ್ಧಕ್ಕೆ ಹೊರಟಾಗ 2,000 ಆನೆಗಳನ್ನೂ ದೊಡ್ಡ ಅಶ್ವಪಡೆಯನ್ನೂ ಒಳಗೊಂಡ ಬೃಹತ್ಸೈನ್ಯವನ್ನು ಒಯ್ಯುತ್ತಾನೆಂದೂ ಹೇಳಿದ್ದಾನೆ. ಇಲ್ಲಿ ಉಕ್ತನಾದ ಗೊಲ್ಲನೇ (ಗೊಲ್ಲಸ್) 6ನೆಯ ಶತಮಾನದ ಮಧ್ಯಭಾಗದಲ್ಲಿ ಭಾರತದ ಮೇಲೆ ದಾಳಿ ಮಾಡಿದ ತೋರಮಾನನ ಪುತ್ರ ಮಿಹಿರಗುಲನೆಂದು ಕೆಲವರು ಭಾವಿಸಿದ್ದಾರೆ. ಮಿಹಿರಗುಲನ ಹೆಸರಿನಲ್ಲಿರುವ ಗುಲ ಎಂಬುದು ಗೊಲ್ಲ ಎಂಬ ಸ್ವರೂಪವನ್ನು ತಳೆಯಿತೆಂದು ಭಾವಿಸಲಾಗಿದೆ. ಮಿಹಿರಗುಲನ ಆಳಿಕೆಯ 15ನೆಯ ವರ್ಷದ ಶಾಸನವೊಂದು ಲಭ್ಯವಿದೆ. ಈ ವರ್ಷ ಸು. 530 ಎಂದು ಹೇಳಿದೆ. ಅನಂತರ ಮಾಲವದ ಯಶೋವರ್ಮನ್ ಮತ್ತು ಇತರರು ಇವನನ್ನು ಯುದ್ಧದಲ್ಲಿ ಸೋಲಿಸಿ ಇವನ ಬಲವನ್ನು ಮುರಿದರು. (ಎಸ್.ಎಸ್.ಜಿ.ಎ.)

**ಗೋಂಡರು :** ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಆದಿವಾಸಿ ಬುಡಕಟ್ಟಿಗೆ ಸೇರಿದ ಒಂದು ಜನಾಂಗ. ಇವರು ತಮ್ಮನ್ನು ಕೋಯಿತುರ್ ಎಂದು ಕರೆದುಕೊಳ್ಳುತ್ತಾರೆ. ಇವರು ಆಡುವ ಭಾಷೆ ಗೋಂಡಿ (**ನೋಡಿ**). ಗೋಂಡ ಶಬ್ದ ತೆಲುಗು ಭಾಷೆಯ ಕೊಂಡ ಎಂಬ ಶಬ್ದದಿಂದ ಬಂದದ್ದೆಂದು ಭಾಷಾವಿಜ್ಞಾನಿಗಳ ಅಭಿಪ್ರಾಯ. ಕೊಂಡ ಎಂದರೆ ತೆಲುಗಿನಲ್ಲಿ ಗುಡ್ಡ ಅಥವಾ ಪರ್ವತ ಎಂದು ಅರ್ಥ. ಕಾಲಕ್ರಮೇಣ ಕಕಾರ ಘೋಷಧ್ವನಿಯಾದ ಗಕಾರವಾಗಿ ಪರಿವರ್ತನೆಯಾಗಿ ಗೋಂಡ ಎಂದು ರೂಪಾಂತರ ಹೊಂದಿರಬೇಕು. ಹೇಮಚಂದ್ರನೇ ಮೊದಲಾದ ನಿಘಂಟುಕಾರರು ಗೋಂಡ ಶಬ್ದವನ್ನು ನೀಚಜಾತಿಸೂಚಕವೆಂದಿದ್ದಾರೆ. ಜನರಲ್ ಕನಿಂಗ್‌ಹ್ಯಾಮ್ ಈ ಮಾತು ಗೌಡ ಎಂಬ ಶಬ್ದದಿಂದ ಉತ್ಪನ್ನವಾದದ್ದು ಎಂದು ಅಭಿಪ್ರಾಯಪಟ್ಟಿದ್ದಾನೆ. 605ರಲ್ಲಿ ಹರ್ಷವರ್ಧನನ ಅಣ್ಣನಾದ ಕನೌಜದ ದೊರೆ ಮಾಲವ ದೇಶದ ಮೇಲೆ ದಾಳಿ ಮಾಡಿದಾಗ ಅವನಿಗೆ ಸಹಾಯ ಮಾಡಿದ ಗೌಡದೇಶದ ರಾಜರೇ ಗೋಂಡ ರಾಜರೆಂದು ಈತನ ಅಭಿಪ್ರಾಯ. ಈತ ಗೋಂಡ ಶಬ್ದದ ವ್ಯುತ್ಪತ್ತಿಯನ್ನು ವಿವರಿಸುತ್ತ ಅದು ಗೌರ ಎಂಬ ಶಬ್ದದಿಂದ ಹುಟ್ಟಿ ಗೋದ ಹಾಗೂ ಕೋದಗಳಾಗಿ ಪರಿವರ್ತನೆ ಹೊಂದಿ ಅನಂತರ ಗೋಂಡ ಆಯಿತೆಂದು ಹೇಳುತ್ತಾನೆ. ಈ ಅಭಿಪ್ರಾಯವನ್ನು ಒಪ್ಪದ ವಿ. ವಿ. ಸ್ಮಿತ್ ಗೌಡದೇಶ ಬಂಗಾಳಕ್ಕೆ ಅನ್ವಯಿಸುತ್ತದೆಯಲ್ಲದೆ ಮಧ್ಯಪ್ರದೇಶಕ್ಕಲ್ಲ ಎನ್ನುತ್ತಾನೆ.

ಅಭಿಪ್ರಾಯಗಳು ಏನೇ ಇರಲಿ, ಈ ಜನ ಮಧ್ಯಪ್ರದೇಶದ ವಿಂಧ್ಯ ಮತ್ತು ಸತ್ಪುರ ಪರ್ವತಗಳ ಮಧ್ಯದಲ್ಲಿಯೂ ನರ್ಮದಾ ನದಿಯ ಎರಡು ಕಡೆಗಳಲ್ಲೂ ನೆಲೆಸಿದ್ದಾರೆ. ಚತ್ತೀಸಗಡ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಒರಿಸ್ಸ ರಾಜ್ಯಗಳಲ್ಲಿಯೂ ಇವರನ್ನು

ಗೋಂಡ ಯುವತಿಯರು

ಕಾಣಬಹುದು. 2011ರ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ ಸುಮಾರು 1.4 ಕೋಟಿ. ಮಧ್ಯಭಾರತದ ಬುಡಕಟ್ಟು ಪಂಗಡಗಳಲ್ಲೇ ಬೃಹತ್ತಾದ ಪಂಗಡವಿದು. ಗೋಂಡರ ಇತಿಹಾಸದ ಬಗ್ಗೆ ಇರುವ ದಂತಕಥೆಗಳಲ್ಲಿ ಮೂರು ಹೀಗಿವೆ.

1 ಒಮ್ಮೆ ಪಾರ್ವತಿಯ ಇಚ್ಛೆಯಂತೆ ಪರಮೇಶ್ವರ ಕೆಲವು ಜನರನ್ನು ಸೃಷ್ಟಿಮಾಡಿ ಅವರನ್ನು ಗೋಂಡರು ಎಂದು ಕರೆದ. ಆದರೆ ಆ ಜನರ ಮಲಿನತೆ ಹಾಗೂ ದುರ್ಗಂಧವನ್ನು ಸಹಿಸಲಾರದ ಪರಮೇಶ್ವರ ಅವರನ್ನು ಧವಳಗಿರಿಯ ಒಂದು ಗವಿಯಲ್ಲಿ ಅಡಗಿಸಿಟ್ಟ. ಕೆಲಕಾಲಾನಂತರ ರಾಯಲಿಂಗ ಎಂಬ ಸಾಧು ಗವಿಯಲ್ಲಿದ್ದವರನ್ನೆಲ್ಲ ಹೊರತೆಗೆದು ಅವರಿಗೆ ಸ್ವಚ್ಛತೆಯನ್ನು ಬೋಧಿಸಿದ. ಅವರ ಸಂತಾನವೇ ಈಗಿನ ಗೋಂಡ ಜನ.

2 ಇನ್ನೊಂದು ಕಥೆಯ ಪ್ರಕಾರ ಸೃಷ್ಟಿಯ ಆದಿಯಲ್ಲಿ ಸಮುದ್ರ ಮಧ್ಯದಲ್ಲಿ ಸಿಂಗಮಾಲಿ ಎಂಬ ಎರಡು ಪಕ್ಷಿಗಳಿದ್ದವು. ಅವುಗಳಲ್ಲಿ ಒಂದು ಗಂಡು ಮತ್ತೊಂದು ಹೆಣ್ಣು. ಹೆಣ್ಣು ಪಕ್ಷಿ ಇಟ್ಟ ಎರಡು ತತ್ತಿಗಳಿಂದ ಒಬ್ಬ ಹುಡುಗ ಮತ್ತು ಹುಡುಗಿ ಜನಿಸಿದರು. ಹುಡುಗನ ಹೆಸರು ಆದಿರಾವಣ ಪರಿಯಲ್ ಹುಡುಗಿಯ ಹೆಸರು ಸುಕುಮಾದೇವೀ ವೀಲರ್. ಸಮುದ್ರದೇವತೆ ಇವರಿಬ್ಬರನ್ನು ತೀರಕ್ಕೆ ಹಾಕಿದಳು. ಇವರಿಬ್ಬರೂ ಸ್ನಾನ ಮಾಡುತ್ತಿದ್ದ ಬಳಿ ಮೊಕರಾ ಎಂಬ ಗಿಡಮೂಲಿಕೆ ಬೆಳೆದಿತ್ತು. ಆದಿರಾವಣ ಸುಕುಮಾದೇವಿಗೆ ಅದನ್ನು ತಿನ್ನಕೂಡದೆಂದು ತಿಳಿಸಿದ್ದ. ಆತ ಬೇಟೆಗೆ ಹೋಗಿದ್ದ ವೇಳೆ ಸುಕುಮಾದೇವಿ ಕುತೂಹಲಕ್ಕಾಗಿ ಆ ಮೂಲಿಕೆಯನ್ನು ತಿಂದಳು. ಇದರಿಂದ ಆಕೆ ಗರ್ಭಿಣಿಯಾದಳು. ವಿಷಯ ತಿಳಿದ ಆದಿರಾವಣ ಭವಿಷ್ಯವನ್ನು ಕೇಳಲಾಗಿ ಆಕೆಯ ಬಸಿರಿನಿಂದ ದೇವತೆಗಳ ಸೃಷ್ಟಿಯಾಗುವುದಿದೆಯೆಂದು ತಿಳಿದುಬಂತು. ಅನಂತರ ಆಕೆಯಲ್ಲಿ 100 ದೇವತೆಗಳು, 36 ಜಗತ್ ದೇವತೆಗಳು, 18 ಕೋಸ ದೇವತೆಗಳು, 14 ಗೋಂಡಿ ದೇವತೆಗಳು ಜನಿಸಿದರು. ಈ ಗೋಂಡಿ ದೇವತೆಗಳಿಂದ ಗೋಂಡರ ವಂಶ ಬೆಳೆಯಿತೆಂದು ಒಂದು ಕಥೆ. ಈ ವೃತ್ತಾಂತ ಬೈಬಲಿನ ಹಳೆಯ ಒಡಂಬಡಿಕೆಯ ಆಡಂ ಮತ್ತು ಈವ್‌ರ ಪ್ರಕರಣವನ್ನು ಹೋಲುತ್ತದೆ.

3 ಇನ್ನೊಂದು ಕಥೆಯ ಪ್ರಕಾರ ಸ್ವರ್ಗದಲ್ಲಿದ್ದ ರಾಯೀಲಿಂಗ ಎಂಬಾತ ಭೋಜ ಮತ್ತು ತಾಲಕೋ ಎಂಬ ರಾಜ ರಾಣಿಯರಲ್ಲಿ ಜನ್ಮ ತಾಳಿ ಗೋಂಡ ಜಾತಿಯ ಉತ್ಪತ್ತಿಗೆ ಕಾರಣನಾದನೆನ್ನಲಾಗಿದೆ.

ಗೋಂಡರು ಸಾಮಾನ್ಯ ಎತ್ತರದವರು. ಬಣ್ಣ ಸ್ವಲ್ಪ ಕಪ್ಪು. ಇವರು ಮೊದಲಿಗೆ ತುಂಬ ಕ್ರೂರಿಗಳು. 1565ರಲ್ಲಿ ಆಳಿದ ರಾಣಿ ದುರ್ಗಾವತಿ ಇವರ ಸಾಮ್ರಾಜ್ಞಿ. ಇಂದಿಗೂ ರಾಣಿ ದುರ್ಗಾವತಿಯನ್ನು ಈ ಜನ ಪೂಜಿಸುತ್ತಾರೆ. ಗೋಂಡರ ಉಪಜಾತಿಯಾದ ಬಸ್ತರಿನ ಮಾಡಿಯಾ ಎಂಬ ಆದಿವಾಸಿಗಳು ಘೋತುಲ ಎಂಬ ನಿದ್ರಾಶಾಲೆಯನ್ನು (ಡಾರ್ಮಿಟರಿ) ನಡೆಸುತ್ತಾರೆ. ಇಲ್ಲಿ ಅವಿವಾಹಿತ ಹುಡುಗ ಹುಡುಗಿಯರಿಗೆ ಎಲ್ಲ ವಿಧವಾದ ಶಿಕ್ಷಣವನ್ನೂ ಕೊಡಲಾಗುತ್ತದೆ. ಆದರೆ ಈಗ ಇದು ಕಡಿಮೆಯಾಗಿದೆ. ಇವರು ಹೆಚ್ಚಾಗಿ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಭೂಮಿತಾಯಿಗೆ ಕೋಳಿ ಮುಂತಾದವನ್ನು ಬಲಿ ಕೊಡುತ್ತಾರೆ. ಭೂತಪ್ರೇತಗಳಲ್ಲಿ ಇವರಿಗೆ ಅಗಾಧವಾದ ವಿಶ್ವಾಸ. ಮದ್ಯ ಸೇವನೆ ಇವರಲ್ಲಿ ಬಹು ಸಾಮಾನ್ಯ. ಇವರಲ್ಲಿ ಧುರ್ವಾ, ಮರ್ಕಾಮ, ಟೇಕಾಮ, ಪರತೇತಿ, ಇಡಪಾಚೀ ಮುಂತಾದ ಗೋತ್ರಗಳಿವೆ. ಸ್ವಗೋತ್ರ ವಿವಾಹ ನಿಷಿದ್ಧ. ಇವರಲ್ಲಿ ವೃತ್ತಿ–ಆಧರಿತ ಜಾತಿಗಳು ಹಲವಾರು ಇವೆ. ಉದಾ: ಅಗರಿಯ (ಕಮ್ಮಾರ), ಓಝು (ಕಣಿ ಹೇಳುವವರು), ಸೊಲಹ (ಬಡಗಿ), ಪರಧಾನ (ಪೂಜಾರಿ) ಇತ್ಯಾದಿ. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಇವರನ್ನು ಹಿಂದುಳಿದ ಜನಾಂಗವೆಂದು ಪರಿಗಣಿಸಿ ಎಲ್ಲ ರೀತಿಯ ಸೌಲಭ್ಯಗಳನ್ನೂ ನೀಡುತ್ತಿದೆ.

(ಕೆ.ಪಿ.ಎಎನ್.)

**ಗೋಂಡಾ :** ಉತ್ತರಪ್ರದೇಶದ ಒಂದು ಜಿಲ್ಲೆ. ವಿಸ್ತೀರ್ಣ 4425 ಚ.ಕಿಮೀ. ಜನಸಂಖ್ಯೆ 27,65,754 (2001). ಸರಯೂ ಮತ್ತು ಗಾಘ್ರಾ ನದಿಗಳು ಈ ಜಿಲ್ಲೆಯ ಮೂಲಕ ಹಾದುಹೋಗುತ್ತವೆ. ಈ ಪ್ರದೇಶ ಪ್ರಾಚೀನ ಕೋಸಲ ರಾಜ್ಯದ ಭಾಗವಾಗಿತ್ತೆಂದು ಪ್ರತೀತಿ. ದಶರಥ ರಾಜನ ಗೋಶಾಲೆ ಇಲ್ಲಿದ್ದು ಅದರಿಂದಲೇ ಈ ಪ್ರದೇಶಕ್ಕೆ ಗೋಂಡಾ ಎಂಬ ಹೆಸರು ಬಂದಿತೆಂಬ ಐತಿಹ್ಯವಿದೆ. 13ನೆಯ ಶತಮಾನದಲ್ಲಿ ಈ ಪ್ರದೇಶ ಮುಸಲ್ಮಾನರ ಆಳ್ವಿಕೆಗೆ ಒಳಪಟ್ಟಿತು. ಆಗ ಇದು ಅವಧ್ ಪ್ರಾಂತದ ಭಾಗವಾಗಿತ್ತು. 14–15ನೆಯ ಶತಮಾನದಲ್ಲಿ ಸ್ಥಳೀಯ ರಜಪೂತರು, ಅನಂತರ ಕಲ್ಹಣ ವಂಶದವರು ಇಲ್ಲಿ ಆಡಳಿತ ನಡೆಸಿದರು. 16ನೆಯ ಶತಮಾನದಲ್ಲಿ ಅರಸ ಅಕ್ಬರನು ಈ ಪ್ರಾಂತವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಫೆಬ್ರವರಿ 1856ರಲ್ಲಿ ಈಸ್ಟ್ ಇಂಡಿಯ ಕಂಪನಿ ಅವಧ್ ಪ್ರಾಂತವನ್ನು ತನ್ನ ಸ್ವಾಧೀನಕ್ಕೊಳಪಡಿಸಿ ಕೊಂಡಾಗ, ಗೋಂಡಾ ಒಂದು ಸ್ವತಂತ್ರ ಜಿಲ್ಲೆಯಾಯಿತಲ್ಲದೆ ಬ್ರಿಟಿಷರ ಅಧೀನಕ್ಕೆ ಒಳಪಟ್ಟಿತು. 1857ರ ಬಂಡಾಯದಲ್ಲಿ ಗೋಂಡಾ ರಾಜನೂ ತುಳಸೀಪುರದ ರಾಣಿಯೂ ಬ್ರಿಟಿಷರ ವಿರುದ್ಧ ನಡೆಸಿದ ಪಿತೂರಿ ನಿಷ್ಫಲವಾಯಿತು.

ಗೋಂಡಾ ನಗರ ಗಾಘ್ರಾ ನದಿಯ ದಂಡೆಯ ಮೇಲಿದೆ. ಇದನ್ನು ಅಕ್ಬರನ ಸಮಕಾಲೀನನಾದ ಮಾನ್‌ಸಿಂಗನು ಕಟ್ಟಿಸಿದನೆಂದು ಪ್ರತೀತಿ. ವ್ಯವಸಾಯ ಈ ಜಿಲ್ಲೆಯ ಮುಖ್ಯ ಕಸಬು.

*

**ಗೋಂಡಿ :** ಮಧ್ಯ ದ್ರಾವಿಡ ಭಾಷೆಗಳಲ್ಲಿ ಒಂದು. ಆದಿವಾಸಿಗಳ ಬುಡಕಟ್ಟಿಗೆ ಸೇರಿದ ಗೋಂಡ ಎಂಬ ಜನಾಂಗದ ಭಾಷೆಯಿದು (**ನೋಡಿ–ಗೋಂಡರು**). ಈ ಜನ




ವರ್ಣಮಾಲೆ ಮತ್ತು ಅಂಕಿಗಳು

ಮಧ್ಯಪ್ರದೇಶದ ವಿಂಧ್ಯ, ಸತ್ಪುರ ಪರ್ವತಗಳ ಮಧ್ಯದಲ್ಲಿಯೂ ನರ್ಮದಾ ನದಿಯ ಎರಡೂ ಕಡೆಗಳಲ್ಲೂ ಇದ್ದಾರೆ. ಅಲ್ಲದೆ ಆಂಧ್ರಪ್ರದೇಶ, ಮಹಾರಾಷ್ಟ್ರ, ಒರಿಸ್ಸ, ಚತ್ತೀಸಗಡ ರಾಜ್ಯಗಳಲ್ಲಿಯೂ ಇವರನ್ನು ಕಾಣಬಹುದು. ಗೋಂಡಿ ಭಾಷೆ ಉತ್ತರದಲ್ಲಿ ಪೂರ್ವೀ ಮತ್ತು ಪಶ್ಚಿಮೀ ಹಿಂದಿ ಹಾಗೂ ರಾಜಸ್ತಾನಿ ಭಾಷೆಗಳೊಡನೆ ಕಲೆಯುತ್ತದೆ. ದಕ್ಷಿಣದಲ್ಲಿ ತೆಲುಗು, ಪೂರ್ವದಲ್ಲಿ ಒರಿಯ, ಹಲಬೀ ಮತ್ತು ಚತ್ತೀಸಗಡಿಗಳೊಡನೆಯೂ ಪಶ್ಚಿಮದಲಿ ಮರಾಠಿಯೊಂದಿಗೂ ಬೆರೆಯುತ್ತದೆ.

ಗೋಂಡಿ ಭಾಷೆಗೆ ತನ್ನದೇ ಆದ ಲಿಪಿ ಇಲ್ಲ. ಇದರ ಸಾಹಿತ್ಯ ಕೇವಲ ಮೌಖಿಕವಾಗಿಯೇ ನಡೆದು ಬಂದಿದೆ. ಕೆಲವು ಕ್ರೈಸ್ತ ಪಾದ್ರಿಗಳು ರೋಮನ್ ಲಿಪಿಯಲ್ಲಿ ಈ ಭಾಷೆಯ ಸಾಹಿತ್ಯವನ್ನು ಬರೆದಿದ್ದಾರೆ. ಮಧ್ಯಪ್ರದೇಶದ ಬಾಲಾಘಾಟ್ ಜಿಲ್ಲೆಯ ಮುನಸೀ ಮಂಗಲಸಿಂಹ ಮಸರಾಮ ಎಂಬಾತ 1928ರಲ್ಲಿ ಗೋಂಡಿ ಭಾಷೆಗೆ ಒಂದು ಲಿಪಿಯನ್ನು ತಯಾರಿಸಿದನಾದರೂ ಅದು ಹೆಚ್ಚಾಗಿ ಪ್ರಚಲಿತವಾಗಲಿಲ್ಲ. ಆ ಲಿಪಿಯನ್ನು ಇಲ್ಲಿ ತೋರಿಸಿದೆ.

ಗೋಂಡಿಗೆ ಅನೇಕ ಉಪಭಾಷೆಗಳಿವೆ. ಅವುಗಳಲ್ಲಿ ಮುಖ್ಯವಾದವು ಇವು : 1 ಮಧ್ಯಪ್ರದೇಶದ ಮಂಡಲ್ ಜಿಲ್ಲೆಯ ಪಾರಸೀ ಗೋಂಡಿ; 2 ಬಾಲಾಘಾಟದ ಬಾಲಾಘಾಟ್ ಗೋಂಡಿ; 3 ಬೈತೂಲ ಜಿಲ್ಲೆಯ ಬೈತೂಲಗೋಂಡಿ; 4 ಬಸ್ತರ ಜಿಲ್ಲೆಯ ಅಬುಜಮಾಡಿಯಾ; 5 ಡಂಡಾಮಿಮಾಡಿಯಾ; 6 ಮುಡಿಯಾಭಾಷೆಗಳು; 7 ಆಂಧ್ರಪ್ರದೇಶದಲ್ಲಿ ಬಳಕೆಯಲ್ಲಿರುವ ಗೋಂಡಿ. ಮಧ್ಯಪ್ರದೇಶಗಳ ಗೋಂಡಿ ಹಿಂದಿ ಮತ್ತು ಮರಾಠಿ ಭಾಷೆಗಳಿಂದ ಬಹಳ ಪ್ರಭಾವಿತವಾಗಿದೆ.

ಮಧ್ಯಪ್ರದೇಶದ ಗೋಂಡಿ ಭಾಷೆಯ ಸ್ವರಗಳು:

| | ಅಗ್ರ | | ಮಧ್ಯ | | ಪಶ್ಚ | |
|---|---|---|---|---|---|---|
| ಉಚ್ಚಸ್ವರ | ಇ | ಈ | | | ಉ | ಊ |
| ಮಧ್ಯಸ್ವರ | ಎ | ಏ | | | ಒ | ಓ |
| ನಿಮ್ನಸ್ವರ | | | ಅ | ಆ | | |

ಶಬ್ದದ ಪ್ರಾರಂಭದಲ್ಲಿ ಎ ಏ ಮತ್ತು ಒ ಓ ಗಳು ಯೆ ಯೇ ಮತ್ತು ವೊ ವೋ ಗಳಂತೆ ಉಚ್ಚಾರವಾಗುತ್ತವೆ. ದ್ವಿತ್ವ ಮತ್ತು ಸಂಯುಕ್ತ ಅಕ್ಷರಗಳು ಮೇಲೆ ಕಾಣಿಸಿದ ಸ್ವರಗಳ ಮುಂದೆ (ಅ ಕಾರವನ್ನು ಬಿಟ್ಟು) ಬಂದಾಗ ಅವು ಸ್ವಲ್ಪ ನಿಮ್ನವಾಗಿ ಉಚ್ಚಾರವಾಗುತ್ತವೆ. ದ್ವಿತ್ವ ಮತ್ತು ಸಂಯುಕ್ತ ಅಕ್ಷರಗಳು ಆಕಾರದ ಮುಂದೆ ಬಂದಾಗ ಅವು ಸ್ವಲ್ಪ ಉಚ್ಚಸ್ಥಾನದ ಸ್ವರದಂತೆ (ᴐ) ಉಚ್ಚಾರವಾಗುತ್ತವೆ. ಶಬ್ದದ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳಲ್ಲಿ ಸ್ವರಗಳ ಬಳಕೆ ವ್ಯಂಜನಗಳಿಗಿಂತ ಹೆಚ್ಚಾಗಿದೆ. ಶಬ್ದಗಳು ಹೆಚ್ಚಾಗಿ ಸ್ವರದಲ್ಲಿಯೇ ಅಂತ್ಯವಾಗುತ್ತವೆ. ಸಂಧ್ಯಕ್ಷರಗಳೆನಿಸಿದ ಐ (au) ಮತ್ತು ಔ (ai)ಗಳನ್ನು ಆಯ್ ಮತ್ತು ಅವ್‍ಗಳೆಂದು ಪರಿಗಣಿಸಲಾಗಿದೆ.

ಮುಂದೆ ಕಾಣಿಸಿದಂತೆ ಗೋಂಡಿಯಲ್ಲಿ 20 ಸ್ಪರ್ಶ ವ್ಯಂಜನಗಳಿವೆ. ನಾಸಿಕ್ಯ ವ್ಯಂಜನಗಳಲ್ಲಿ ಮ್ ಹಾಗೂ ನ್ ಗಳು ಸ್ವತಂತ್ರ ವರ್ಣಗಳಾಗಿವೆ. ಮೂರ್ಧನ್ಯ ನಾಸಿಕ್ಯ ವ್ಯಂಜನ ಣ್ (n). ಸ್ವತಂತ್ರ ವರ್ಣದ ಸ್ಥಾನವನ್ನು ಪಡೆಯದೆ ಇರುವುದರಿಂದ ಅದನ್ನು ಕಂಸಗಳಲ್ಲಿ ಕೊಡಲಾಗಿದೆ. ಮೂರ್ಧನ್ಯ ನಾಸಿಕ್ಯ ವ್ಯಂಜನವನ್ನೂ ಕೂಡಿಸಿದರೆ ಈ ಭಾಷೆಯಲ್ಲಿ ಒಟ್ಟು 29 ವ್ಯಂಜನಗಳಾಗುತ್ತವೆ. ಮಹಾಪ್ರಾಣಗಳು ಏಕವರ್ಣಗಳೆಂದು ತಿಳಿಯಲಾಗಿದೆ. ಎಲ್ಲ ಮಹಾಪ್ರಾಣ ವ್ಯಂಜನಗಳೂ ಶಬ್ದದ ಮೊದಲನೆಯ ಮತ್ತು ಕಡೇ

**ವ್ಯಂಜನಗಳು**

| | | ಓಷ್ಠ್ಯ | | ದಂತ್ಯ | | | ಮೂರ್ಧನ್ಯ | | ತಾಲವ್ಯ | | ಮೃದು ತಾಲವ್ಯ | | ಸ್ವರಯಂತ್ರೀಯ |
|---|---|---|---|---|---|---|---|---|---|---|---|---|---|
| ಸ್ಪರ್ಶ | ಅಲ್ಪ ಪ್ರಾಣ | ಪ್ | ಬ್ | ತ್ | ದ್ | | ಟ್ | ಡ್ | ಚ್ | ಜ್ | ಕ್ | ಗ್ | |
| ಸ್ಪರ್ಶ | ಮಹಾ ಪ್ರಾಣ | ಫ್ | ಭ್ | ಥ್ | ಧ್ | | ಠ್ | ಢ್ | ಛ್ | ಝ | ಖ್ | ಘ್ | |
| ನಾಸಿಕ್ಯ | | | ಮ್ | | ನ್ | | (ಣ್) | | | | | | |
| ಪಾರ್ಶ್ವಿತ | | | | | | ಲ್ | | | | | | | |
| ಕಂಪಿತ | | | | | ರ್ | | | | | | | | |
| ಉತ್ಕ್ಷಿಪ್ತ | | | | | | | | ಡ | | | | | |
| ಸಂಘರ್ಷ | | | | | | | | | | | | | ಹ್ |
| ಅರ್ಧಸ್ವರ | | | ವ್ | | | | | | | ಯ್ | | | |

ಸ್ಥಾನಗಳಲ್ಲಿ ಎರಡನೆಯ ಸ್ಥಾನಕ್ಕಿಂತ ಕಡಿಮೆ ಬರುತ್ತವೆ. ಫ್ ಕಾರ ಶಬ್ದದ ಪ್ರಾರಂಭದಲ್ಲಿ ಬರುವುದಿಲ್ಲ. ಏಕಾಕ್ಷರಿ ಶಬ್ದಗಳು ಮತ್ತು ದ್ವ್ಯಕ್ಷರಿ ಶಬ್ದಗಳು ತ್ರ್ಯಕ್ಷರಿ ಮತ್ತು ಬಹ್ವಕ್ಷರಿ ಶಬ್ದಗಳಿಗಿಂತ ಅಧಿಕವಾಗಿವೆ. ಏಕವಚನದಿಂದ ಬಹುವಚನ ರೂಪಕ್ಕೆ ತರಲು ಕ್, ನ್ಗ್ ಮತ್ತು ಓಳ್ ವಚನ ಪ್ರತ್ಯಯಗಳು ಇವೆ. ಇವುಗಳಲ್ಲಿ ಕ್ ಮತ್ತು ನ್ಗ್ ಪ್ರತ್ಯಯಗಳು ನಪುಂಸಕ ಲಿಂಗದ ನಾಮಗಳಿಗೂ ಹಾಗೂ ಓಳ್ ಪ್ರತ್ಯಯ ಪುಲ್ಲಿಂಗ ನಾಮಗಳಿಗೂ ಬರುತ್ತವೆ. ಈ ಭಾಷೆಯಲ್ಲಿ ಭೂತಕಾಲ, ಆಸನ್ನ ಭೂತಕಾಲ, ಅಪೂರ್ಣ ಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್‍ಕಾಲಗಳು ಇವೆ.

ಮೂರು ವ್ಯಂಜನಗಳ ಸಂಯುಕ್ತ ಈ ಭಾಷೆಯಲ್ಲಿ ತೀರ ವಿರಳ. ಶಬ್ದ ಪ್ರಥಮ ಸ್ಥಾನದಲ್ಲಿ ಎರಡು ವ್ಯಂಜನಗಳ ಸಂಯುಕ್ತ ಬರುವುದಿಲ್ಲ. ಗೋಂಡಿ ಭಾಷೆಯಲ್ಲಿ ಸಂಹಿತೆ (ಜಂಕ್ಚರ್) ಸ್ವತಂತ್ರವರ್ಣವಾಗಿದೆ. (ಕೆ.ಪಿಎಎನ್.)

**ಗೋಂಡೋಫರಸ್ :** ಇಂಡೋಪಾರ್ಥಿಯನ್ ದೊರೆ. ಕಾಲ ಬಹುಶಃ ಪ್ರ.ಶ. 1ನೆಯ ಶತಮಾನ. ಅರಕೋಸಿಯ, ಕಾಬೂಲ್ ಮತ್ತು ಗಾಂಧಾರಗಳು ಇವನ ಆಳಿಕೆಗೆ ಒಳಪಟ್ಟಿದ್ದ ಭಾಗಗಳು. ಶಕ ಮತ್ತು ಪಹ್ಲವರ ಪ್ರಸಿದ್ಧ ದೊರೆಗಳಲ್ಲಿ ಮೂರನೆಯವ. ವಿಂದರ್ಫರ್ನ (ಕೀರ್ತಿಶಾಲಿ) ಎಂಬ ಪರ್ಷಿಯನ್ ಮೂಲದಿಂದ ಈತನ ಹೆಸರು ಬಂದಿದೆ; ನಾಣ್ಯಗಳ ಮೇಲೆ ಗ್ರೀಕ್ ಅಂಕನಗಳಲ್ಲಿ ಉಂಡೊಫೆರೊಸ್ ಅಥವಾ ಗೊಂಡೊಫರೊಸ್ ಮತ್ತು ಖರೋಷ್ಠಿಯಲ್ಲಿ ಗುಡಫಾರ ಅಥವಾ ಗಂದಫಾರ ಎಂಬ ರೂಪಗಳಲ್ಲಿ ಕಂಡುಬರುತ್ತದೆ. ಈತನ ನಾಣ್ಯಗಳು ಹೇರಳವಾಗಿ ದೊರೆತಿವೆಯಾದ್ದರಿಂದ ಈತನ ರಾಜ್ಯ ವಿಸ್ತಾರವಾಗಿದ್ದು, ಈತ ಹೆಚ್ಚು ಕಾಲ ರಾಜ್ಯವಾಳಿದನೆಂದು ವ್ಯಕ್ತವಾಗುತ್ತದೆ. ಈತನ ಬಗೆಗಿನ ಐತಿಹಾಸಿಕ ಆಧಾರಗಳು ವಿರಳ. ತಖ್ತ್– ಇ ಬಹಿ ಎಂಬಲ್ಲಿ ದೊರೆತ ಒಂದು ಶಾಸನ ಗೋಂಡೋಫರಸನ ಆಳ್ವಿಕೆಯ 26ನೆಯ ವರ್ಷದಲ್ಲಿ ಹಾಕಿಸಿದ್ದು. ಆದ್ದರಿಂದ ಈತ ಕಡೆಯ ಪಕ್ಷ 26 ವರ್ಷಗಳ ಕಾಲ ಆಳಿರಬೇಕು. ಅದರಲ್ಲಿ ಸೂಚಿಸಿರುವ 103ನೆಯ ವರ್ಷ ವಿಕ್ರಮ ಶಕೆಗೆ ಸಂಬಂಧಿಸಿದ್ದಾಗಿ ತೋರುವುದರಿಂದ ಅದರ ಕಾಲ ಪ್ರ.ಶ. 45 ಎಂದೂ ಗೋಂಡೋಫರಸ್ ಪ್ರ.ಶ. 19ರಲ್ಲಿ ಪಟ್ಟಕ್ಕೆ ಬಂದನೆಂದೂ ಹೇಳಬಹುದು.

ಆಕ್ಟ್ಸ್ ಆಫ್ ಸೇಂಟ್ ಥಾಮಸ್ ಎಂಬ ಧರ್ಮಗ್ರಂಥದಲ್ಲಿ ಗೋಂಡೋಫರಸ್ ಮತ್ತು ಅವನ ವಂಶದವರ ವಿಷಯ ತಿಳಿದುಬರುತ್ತದೆ. ಈ ಗ್ರಂಥದಲ್ಲಿ ಇವನ ಹೆಸರು ಗುದ್ನಫಾರ ಎಂದಿದೆ. ಗೋಂಡೋಫರಸನ ಆಸ್ಥಾನಕ್ಕೆ ಸೇಂಟ್ ಥಾಮಸ್ ಬಂದಿದ್ದ. ಅಲ್ಲಿ ರಾಜನ ಅರಮನೆಯನ್ನು ಕಟ್ಟಿಸುವ ಕೆಲಸ ವಹಿಸಿಕೊಂಡು, ತನಗೆ ಒಪ್ಪಿಸಿದ್ದ ಹಣವನ್ನೆಲ್ಲ ದಾನಧರ್ಮಗಳಿಗಾಗಿ ವಿತರಣೆ ಮಾಡಿ ರಾಜನಿಗೆ ಸ್ವರ್ಗದಲ್ಲೊಂದು ಅರಮನೆ ಕಟ್ಟಿಸುತ್ತಿರುವುದಾಗಿ ಹೇಳಿದ. ಕುಪಿತಗೊಂಡ ರಾಜ ಥಾಮಸನನ್ನೂ ಅವನನ್ನು ಭಾರತಕ್ಕೆ ಕರೆತಂದ ವರ್ತಕ ಅಬೇನ್ಸನನ್ನೂ ಸೆರೆಯಲ್ಲಿಡಿಸಿದ. ಈ ನಡುವೆ ದೊರೆಯ ಸೋದರ ಗ್ಯಾಡ್ ತೀರಿಕೊಳ್ಳಲು ಅಪ್ಸರೆಯರು ಅವನನ್ನು ಸ್ವರ್ಗಕ್ಕೆ ಕೊಂಡೊಯ್ದು ಅಲ್ಲಿ ಸೇಂಟ್ ಥಾಮಸ್ ತನ್ನ ಒಳ್ಳೆಯ ಕೃತ್ಯಗಳ ಫಲವಾಗಿ ನಿರ್ಮಿಸಿದ್ದ ಅರಮನೆಯನ್ನು ತೋರಿಸಿದರು. ಗ್ಯಾಡನಿಗೆ ಮತ್ತೆ ಜೀವ ಬಂತು. ಗ್ಯಾಡ್ ಮತ್ತು ಗೋಂಡೋಫರಸ್ ಇಬ್ಬರೂ ಕ್ರೈಸ್ತರಾಗಿ ಮತಾಂತರ ಹೊಂದಿದರು ಎಂದು ಈ ಗ್ರಂಥ ತಿಳಿಸುತ್ತದೆ. ಕ್ರಿಸ್ತನ ಜನನವಾದಾಗ ಅವನನ್ನು ಪೂಜಿಸಲು ಪೂರ್ವದೇಶದಿಂದ ಬಂದ ಮೂವರು ಸಂತರಲ್ಲಿ ಒಬ್ಬನಾದ ಗ್ಯಾಸ್ಪರನ ಹೆಸರಿಗೂ ಗೋಂಡೋಫರಸ್ ಎಂಬುದಕ್ಕೂ ಆರ್ಮೇನಿಯದ ಗಥಾಸ್ಪರ್ ಎಂಬ ರೂಪದ ಮೂಲಕ ಸಾಮ್ಯವನ್ನು ಕೆಲವು ವಿದ್ವಾಂಸರು ಕಲ್ಪಿಸಿದ್ದಾರೆ. ಇವನ ಸೋದರ ಗ್ಯಾಡ್ ನಾಣ್ಯಗಳಲ್ಲಿ ಬರುವ ಗುಡ ಆಗಿರಬೇಕು. ಗೋಂಡೋಫರಸನ ಆಸ್ಥಾನಕ್ಕೆ ಸೇಂಟ್ ಥಾಮಸ್ ಭೇಟಿ ಕೊಟ್ಟಿದ್ದನೆಂಬ ಅಂಶವನ್ನು ಇವಾಂಜೆಲಿಯಂ ತಾಂಡ್ರಿಸ್ ಒಬಿಟು ಮರಿಯ ಎಂಬ ಗ್ರಂಥವೂ ಸಮರ್ಥಿಸುತ್ತದೆಂಬುದು ವಿದ್ವಾಂಸರ ಅಭಿಪ್ರಾಯ.

ಅಶುದ್ಧ ಬೆಳ್ಳಿ ಮತ್ತು ತಾಮ್ರಗಳಿಂದ ಮಾಡಿದ ಇವನ ಅನೇಕ ನಾಣ್ಯಗಳು ದೊರೆತಿವೆ. ಈ ನಾಣ್ಯಗಳ ಮೇಲೆ ಜ್ಯೂಸ್, ಪಲ್ಲೆಸ್, ನೈಕ್, ಶಿವ ಇವರ ಮೂರ್ತಿಗಳಿವೆ. ತನ್ನ ಹೆಸರಿನಲ್ಲಿ ಮಾತ್ರವಲ್ಲದೆ ಗೋಂಡೋಫರಸ್ ತನ್ನ ಸೋದರ ಗುಡ ಮತ್ತು ಇತರರ ಹೆಸರುಗಳನ್ನು ಸೇರಿಸಿಯೂ ನಾಣ್ಯಗಳನ್ನು ಹಾಕಿಸಿದ್ದಾನೆ. (ಎಂ.ಎಚ್.)

**ಗೋಂಡ್ವಾನ :** ಮಧ್ಯಭಾರತದಲ್ಲಿ ದ್ರಾವಿಡ ಬುಡಕಟ್ಟಿನ ಗೋಂಡ ಜನಾಂಗ ನೆಲೆಸಿದ್ದ ನಾಡು. ತೆಲುಗಿನ ಕೊಂಡ (ಬೆಟ್ಟ) ಎಂಬ ಶಬ್ದದಿಂದ ಗೋಂಡ ಬಂದಿದೆಯೆಂದು ಹೇಳಲಾಗಿದೆ. ಗೋಂಡರು ವಾಸಿಸುತ್ತಿದ್ದ ಗುಡ್ಡಗಾಡು ಗೋಂಡ್ವಾನ (ಗೋಂಡರ ವನ) ಅಥವಾ ಗೊಂಡಾರಣ್ಯ ಎನಿಸಿಕೊಂಡಿತು. 14ನೆಯ ಶತಮಾನದಲ್ಲಿ ಗೋಂಡ್ವಾನ ದಟ್ಟವಾದ ಅರಣ್ಯವಾಗಿತ್ತು. ಉತ್ತರದಲ್ಲಿ ವಿಂಧ್ಯ ಪರ್ವತಗಳಿಂದ ದಕ್ಷಿಣದಲ್ಲಿ ಗೋದಾವರಿಯ ವರೆಗೂ ಪೂರ್ವದಲ್ಲಿ ಪೂರ್ವಘಟ್ಟಗಳವರೆಗೂ ವ್ಯಾಪಿಸಿದ್ದ ಪ್ರದೇಶವನ್ನು 14ನೆಯ ಶತಮಾನದ ಮುಸಲ್ಮಾನ ಚರಿತ್ರಕಾರರು ಗೋಂಡ್ವಾನ ಎಂದು ಕರೆದರು. ಅಕ್ಬರನ

ರಾಜ್ಯದ ಭೂಪಟದಲ್ಲಿ ಅದಕ್ಕೆ ವಿಶಿಷ್ಟ ಸ್ಥಾನವಿದೆ. ಅವನ ಆಸ್ಥಾನಿಕ ಅಬುಲ್ ಫಜಲನ ವರ್ಣನೆಯ ಪ್ರಕಾರ ಗೋಂಡ್ವಾನ ಅಥವಾ ಗರ್‍ಹಾ ಕಟಂಕಾ ಪ್ರದೇಶದ ಎಲ್ಲೆಕಟ್ಟು ಪೂರ್ವಕ್ಕೆ ಛೋಟಾನಾಗಪುರಕ್ಕೆ ಸೇರಿದ ರತ್ನಪುರಿ, ಪಶ್ಚಿಮಕ್ಕೆ ಮಾಳವ, ಉತ್ತರಕ್ಕೆ ಪನ್ನಾ, ದಕ್ಷಿಣಕ್ಕೆ ದಖನ್ ಪ್ರದೇಶ. ಅದರ ವಿಸ್ತೀರ್ಣ ನೈರುತ್ಯದಿಂದ ಈಶಾನ್ಯಕ್ಕೆ 608 ಕಿಮೀ. ಅದರ ಸರಾಸರಿ ಅಗಲ 480 ಕಿಮೀ. 2,97,848 ಚ.ಕಿಮೀ ಪ್ರದೇಶವನ್ನು ಅದು ಒಳಗೊಂಡಿತ್ತು. ಈಗ ಗೋಂಡ್ವಾನದ ಮೇಲ್ನಾಡು ಮತ್ತು ಅರಣ್ಯಗಳು ಇನ್ನೂ ಪರಿಶೋಧನೆಗೆ ಒಳಗಾಗದ ಬಲು ವಿಸ್ತಾರವಾದ ಪ್ರದೇಶವಾಗಿಯೇ ನಮ್ಮ ಭೂಪಟದಲ್ಲಿ ಮರಳ್ಗಾಡಿನ ಊಟೆಯಂತೆ ಅಗೋಚರವಾಗಿವೆ ಎಂದು 1853ರಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿಗೆ ಒಪ್ಪಿಸಿದ ವರದಿಯಲ್ಲಿ ಹೇಳಲಾಗಿದೆ. ಮಾಳವ, ರತ್ನಪುರಿ, ಜಬಲ್‍ಪುರದ ಬಳಿಯ ತ್ರಿಪುರ (ತೇವಾರ್), ಪಶ್ಚಿಮ ಬಂಗಾಳದ ಪೂರ್ವ ಅಂಚು, ವಾರಂಗಲ್, ಗೋದಾವರಿ ಮತ್ತು ನರ್ಮದಾ ಭಾಗ, ಪೂರ್ವ ಬೀರಾರಿನಲ್ಲಿ ವರ್ಧಾ ನದಿಯ ಬಲದಂಡೆಯ ಪ್ರದೇಶ ಹಾಗೂ ಸತ್ಪುರ ಪರ್ವತಶ್ರೇಣಿ– ಇವು ಗೋಂಡ್ವಾನಕ್ಕೆ ಸೇರಿದ್ದುವು.

**ಇತಿಹಾಸ :** ಮಾಳವದ ರಜಪೂತರು ಈ ಪ್ರದೇಶಕ್ಕೆ ನುಗ್ಗಿ ಇದನ್ನು ಆಕ್ರಮಿಸಿಕೊಂಡು, ಇಲ್ಲಿಯ ಜನರೊಂದಿಗೆ ವಿವಾಹ ಸಂಬಂಧ ಬೆಳೆಸಿದರು. ಹೀಗೆ ಸಂಕರಗೊಂಡ ಗೋಂಡರು ಗೋಂಡ ರಜಪೂತರೆಂಬ ಹೆಸರು ತಾಳಿ ಅಲ್ಲಲ್ಲಿ ರಾಜ್ಯಗಳನ್ನು ಸ್ಥಾಪಿಸಿಕೊಂಡರು. ಗೋಂಡರು ಸ್ಥಾಪಿಸಿಕೊಂಡ ರಾಜ್ಯಗಳಲ್ಲಿ ಪ್ರಮುಖವಾದವು ನಾಲ್ಕು. ಅವು ಮೊಗಲ್ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೆ ಹಿಂದೆ ಪ್ರಬಲವಾಗಿದ್ದುವು. ಅವುಗಳಲ್ಲಿ ಒಂದು ಗರ್‍ಹಾ. ಈ ರಾಜ್ಯದ ಅರಸರು ನರ್ಮದಾ ಕಣಿವೆಯಲ್ಲಿ ಆಳುತ್ತಿದ್ದರು. ಮಾಂಡ್ಲ ರಾಜ್ಯವನ್ನು ಸ್ಥಾಪಿಸಿದವನು ಯದುರಾಯ. ತನ್ನ ಮಾವ, ಗರ್‍ಹಾ ರಾಜ್ಯದ ಅರಸ ನಾಗದೇವನ ತರುವಾಯ ಇವನೇ ಗರ್‍ಹಾ ರಾಜನಾದ (358). ಇವನ ವಂಶಜರಲ್ಲಿ ಒಬ್ಬನಾದ ಗೋಪಾಲ 634ರಲ್ಲಿ ಮಾಂಡ್ಲ ರಾಜ್ಯವನ್ನು ಗೆದ್ದುಕೊಂಡ. ಸಂಗ್ರಾಮ 1480–1530ರಲ್ಲಿ ಗರ್‍ಹಾ ರಾಜ್ಯವನ್ನಾಳಿದ. 1563ರಲ್ಲಿ ಅಕ್ಬರನ ಸೈನ್ಯ ಅಸಫ್ ಖಾನನ ನಾಯಕತ್ವದಲ್ಲಿ ಗರ್‍ಹಾ ರಾಜ್ಯದ ಮೇಲೆ ದಾಳಿ ನಡೆಸಿದಾಗ ಅಲ್ಲಿಯ ಅರಸ ಬೀರ್ ನಾರಾಯಣ ಇನ್ನೂ ಹುಡುಗನಾಗಿದ್ದ. ಅವನ ತಾಯಿ ರಾಣಿ ದುರ್ಗಾವತಿ ಅಕ್ಬರನ ಸೈನ್ಯವನ್ನು ಎದುರಿಸಿ ಯುದ್ಧಮಾಡಿ ಮಡಿದಳು. 1742ರಲ್ಲಿ ಬಾಲಾಜಿ ಬಾಜಿರಾಯ ಆ ದೇಶದ ಮೇಲೆ ದಂಡೆತ್ತಿಹೋದ. ಗೋಂಡರ ಎರಡನೆಯ ರಾಜ್ಯದ ರಾಜಧಾನಿ ಸತ್ಪುರ ಪರ್ವತಶ್ರೇಣಿಗಳ ದೇವಘಡ (ದೇವಘರ್). ಈ ರಾಜ್ಯದ ಅರಸರಲ್ಲಿ ಒಬ್ಬನಾದ ಭಕ್ತ್ ಬಾಲಂದ್ ಔರಂಗಜೇಬನಿಂದ ಬಂಧಿತನಾದ. ಗೋಂಡರ ಮೂರನೆಯ ರಾಜ್ಯ ಬೈಟುಲ್ ಪ್ರದೇಶದಲ್ಲಿತ್ತು. ಖೆರ್ಲಾ ಅದರ ರಾಜಧಾನಿ. ಪ್ರಸಿದ್ಧ ದುರ್ಗಗಳಾದ ಗ್ವಾಲಿಘರ್ ಮತ್ತು ನರ್ನಲ ಈ ರಾಜ್ಯಕ್ಕೆ ಸೇರಿದ್ದುವು. ಇದರ ಅರಸ ನರಸಿಂಗರಾಜ ಮಾಳವದ ಅರಸ ಉಷಾಂಗ್ ಘೋರಿಯಿಂದ ಸೋತು ಮಡಿದ. ಖೆರ್ಲಾ ನಗರ ಮಾಳವದ ವಶವಾದ ಸ್ವಲ್ಪ ಕಾಲಾನಂತರ ದೇವಘಡದ ಅರಸರಿಗೆ ಸೇರಿಹೋಯಿತು. ಗೋಂಡರ ನಾಲ್ಕನೆಯ ರಾಜ್ಯದ ರಾಜಧಾನಿ ಚಾಂದ ವರ್ಧಾ ನದಿಯ ದಂಡೆಯ ಮೇಲೆ ಸ್ಥಾಪಿತವಾಗಿ ಪೂರ್ವ ಹಾಗೂ ಆಗ್ನೇಯಕ್ಕೆ ವ್ಯಾಪಿಸಿತ್ತು. ಔರಂಗಜೇಬನ ಕಾಲದಲ್ಲಿ ಖೆರ್ಲಾಕ್ಕೆ ಅನತಿದೂರದ ಸೋಲಿಘಡದಲ್ಲಿ ಗೋಂಡ ರಾಜರು ಆಳುತ್ತಿದ್ದರು. ಈ ರಾಜ್ಯ 1760–1775ರ ನಡುವೆ ಮರಾಠರ ವಶವಾಯಿತು.

ಈ ಪ್ರಮುಖ ಗೋಂಡ ರಾಜ್ಯಗಳಲ್ಲದೆ ಗೋಂಡ ರಜಪೂತ ಅರಸರು ವಾರಂಗಲ್ಲಿನಲ್ಲಿ ಆಳುತ್ತಿದ್ದರು. 1309ರಲ್ಲಿ ಮಲ್ಲಿಕ್– ಕಾಫುರ್ ವಾರಂಗಲ್ಲನ್ನು ಸೂರೆ ಮಾಡಿದ. 1323ರಲ್ಲಿ ಅದು ಘಿಯಾಸುದ್ದೀನನ ಮಗ ಜೌನಾಖಾನನ (ತುಘಲಕ್) ವಶವಾಯಿತು. ಅದರ ಅರಸ ಪ್ರತಾಪರುದ್ರ ಯುದ್ಧದಲ್ಲಿ ಮಡಿದ. 15ನೆಯ ಶತಮಾನದಲ್ಲಿ ಗುಲ್ಬರ್ಗದ ಅರಸ ಅಹಮದ್ ಷಾ ವಾಲಿ ವಾರಂಗಲ್ಲನ್ನು ವಶಮಾಡಿಕೊಂಡು ಅಲ್ಲಿಯ ಅರಸನನ್ನು ಗೋದಾವರಿಯ ಉತ್ತರಕ್ಕೆ ಅಟ್ಟಿದ್ದ.

1513ರಲ್ಲಿ ಗೋಂಡ ರಾಜರು ಒಗ್ಗೂಡಿ ಮಾಳವದ ಮೇದನಿರಾಯನ ಪರವಾಗಿ ನಿಂತು ಮಾಳವದ 2ನೆಯ ಮಹಮದನ ವಿರುದ್ಧ ಹೋರಾಡಿದರು. 16ನೆಯ ಶತಮಾನದ ಕೊನೆಯ ಹೊತ್ತಿಗೆ ಅಕ್ಬರ್ ಗೋಂಡ್ವಾನದ ಪಶ್ಚಿಮ ಭಾಗವನ್ನು ಪೂರ್ಣವಾಗಿ ಸ್ವಾಧೀನಪಡಿಸಿಕೊಂಡ. ಮರಾಠರು ಏಳಿಗೆಗೆ ಬಂದ ಕಾಲದಲ್ಲಿ ಗೋಂಡರ ಪ್ರಭುತ್ವಕ್ಕೆ ಪೆಟ್ಟು ತಾಕಿತು; 1738ರಲ್ಲಿ ರಘೂಜಿ ಭೋನ್ಸ್ಲಾ ದೇವಘಡದ ಉತ್ತರಾಧಿಕಾರದ ಬಗ್ಗೆ ಕೈ ಹಾಕಿ ಆ ರಾಜ್ಯದ ಹುಟ್ಟುವಳಿಯಲ್ಲಿ ಅರ್ಧ ಭಾಗವನ್ನು ವಶಪಡಿಸಿಕೊಂಡ. ಆದರೆ, 1743ರಲ್ಲಿ ಗೋಂಡರು ದಂಗೆಯೇಳಲು ರಘೂಜಿ ಭೋನ್ಸ್ಲಾ ಅದನ್ನು ಅಡಗಿಸಿ ದೇವಘಡ ಮತ್ತು ಚಾಂದ್ ರಾಜ್ಯಗಳನ್ನು ಗೆದ್ದುಕೊಂಡ. ಮರಾಠರು 1751–52ರಲ್ಲಿ ಗ್ವಾಲಿಘರ್, ನರ್ನಲ್ಲ ಮತ್ತು ಮಾಣಿಕ ದುರ್ಗಗಳನ್ನು ಗೆದ್ದುಕೊಂಡರು. ಹೀಗೆ 18ನೆಯ ಶತಮಾನದಲ್ಲಿ ಗೋಂಡ್ವಾನದ ಬಹುಭಾಗ ನಾಗಪುರದ ಭೋನ್ಸ್ಲಾ ಅರಸರಿಗೆ ಸೇರಿಹೋಗಿ ಕೆಲವು ಜಿಲ್ಲೆಗಳು ಹೈದರಾಬಾದಿನ ನಿಜಾಮನಿಗೆ ಸೇರಿದುವು. ಆ ತರುವಾಯ ಮರಾಠರು ಬಹು ಸಂಖ್ಯೆಯಲ್ಲಿ ಈ ಪ್ರದೇಶಗಳಲ್ಲಿ ನೆಲೆಸಿ ಗೋಂಡರನ್ನು ಪರ್ವತಗಳತ್ತ ಅಟ್ಟುತ್ತ ಬಂದರು. ಈಗ ಗೋಂಡರು ಹೆಚ್ಚಾಗಿ ಸತ್ಪುರ ಬೆಟ್ಟಗಳು, ಮಾಂಡ್ಲ ಪ್ರದೇಶದ ಅರಣ್ಯಭಾಗ, ಜಬಲ್‍ಪುರ, ಸಿಯೋನಿ, ಚಾಂದ್‍ವಾರ, ಬೈಟುಲ್, ಹೊಷಂಗಾಬಾದ್, ಅಸಿರ್‍ಘರ್ ಹಾಗೂ ಒರಿಸ್ಸದ ಭಾಗಗಳಲ್ಲಿ ನೆಲೆಸಿದ್ದಾರೆ. ಬೀರಾರಿನ ಗೋಂಡರು ಅಮ್‍ರೋಟಿ ಮೊದಲಾದ ಕಡೆ ಹರಡಿದ್ದಾರೆ. 1818 ಮತ್ತು 1853ರ ನಡುವೆ ಗೋಂಡ್ವಾನ ಬ್ರಿಟಿಷರ ಆಳಿಕೆಗೆ ಸೇರಿಹೋಗಿ, ಚತ್ತೀಸಗಡದ ಕೆಲವು ಸಂಸ್ಥಾನಗಳಲ್ಲಿ ಮಾತ್ರ 1947ರ ವರೆಗೆ ಸಣ್ಣಪುಟ್ಟ ಅರಸರ ಆಳ್ವಿಕೆ ಮುಂದುವರಿಯಿತು. ಭಾರತದ ರಾಜ್ಯಗಳ ಪುನರ್ವಿಂಗಡಣೆಯ ಕಾಲದಲ್ಲಿ ಗೋಂಡ್ವಾನ ವಿಭಜಿಸಲ್ಪಟ್ಟು ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಲ್ಲಿ ಸೇರಿತು. (ವಿ.ಜಿ.ಕೆ.)

**ಗೋಂಡ್ವಾನ ಖಂಡ :** ದಕ್ಷಿಣ ಅಮೆರಿಕ, ಆಫ್ರಿಕ, ಇಂಡಿಯ, ಆಸ್ಟ್ರೇಲಿಯ, ಅಂಟಾರ್ಕ್‍ಟಿಕ್ ಮೊದಲಾದ ಖಂಡಗಳೆಲ್ಲವೂ ದಕ್ಷಿಣಾರ್ಧಗೋಳದಲ್ಲಿ ಒಂದೇ ಭೂಭಾಗವಾಗಿ ಒಗ್ಗೂಡಿದ್ದುವೆಂದು ಭಾವಿಸಿಕೊಂಡು ಆ ಭೂಭಾಗಕ್ಕೆ ಕೊಟ್ಟ ಹೆಸರು. ಪೇಲಿಯೋಜೋಯಿಕ್ ಯುಗದ ಕೊನೆಯಲ್ಲಿ (225 ದಶಲಕ್ಷ ವರ್ಷ ಪ್ರಾಚೀನ)



ಚಿತ್ರ 1

ಗೋಂಡ್ವಾನ ಖಂಡ ಒಡೆಯಲು ತೊಡಗಿ ಭಿನ್ನ ಖಂಡಗಳು ರೂಪಗೊಂಡು ಕ್ರಮೇಣ ಅವು ದೂರ ದೂರ ಸರಿದು ಈಗಿರುವ ಸ್ಥಳದಲ್ಲಿ ನಿಂತಿವೆ ಎಂದು ಭೂವೈಜ್ಞಾನಿಕ ತತ್ತ್ವವೊಂದು ಪ್ರತಿಪಾದಿಸುತ್ತದೆ (**ನೋಡಿ– ಖಂಡಗಳ ಅಲೆತ**). ಈ ಖಂಡಗಳೆಲ್ಲವೂ ಹಿಂದೊಮ್ಮೆ ಒಟ್ಟುಗೂಡಿದ್ದುವು ಎನ್ನುವುದಕ್ಕೆ ಹಲವಾರು ಸಾಕ್ಷ್ಯಗಳಿವೆ. ಗೋಂಡ್ವಾನ ಖಂಡದ ಭಾಗಗಳಾದ ದಕ್ಷಿಣ ಇಂಡಿಯ, ದಕ್ಷಿಣ ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಆಸ್ಟ್ರೇಲಿಯ ಖಂಡಗಳ ಬಹುಭಾಗ ಹಿಮಗಡ್ಡೆಗಳಿಂದ ಮುಚ್ಚಿಹೋಗಿದ್ದ ಸೂಚನೆಗಳು




**ಚಿತ್ರ 2 ಗಣಕದ ಸಹಾಯದಿಂದ ನಿರೂಪಿಸಲಾದ ಗೋಂಡ್ವಾನ ಖಂಡಭಾಗಗಳ ಜೋಡಣೆ**

ಕಂಡುಬಂದಿವೆ. ಈಗಿರುವ ಸಾಪೇಕ್ಷ ವಿನ್ಯಾಸದಲ್ಲಿಯೇ ಹಿಂದೆಯೂ ಈ ಖಂಡಗಳು ಇದ್ದಿದ್ದರೆ ಈ ವಲಯದಲ್ಲಿ ಹಿಮ ದಟ್ಟವಾಗಿ ಕವಿಯುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಏಕೆಂದರೆ ಈ ಪ್ರದೇಶಗಳಲ್ಲಿನ ಬಹುಭಾಗ ಇಂದು ಉಷ್ಣವಲಯಕ್ಕೆ ಸೇರಿವೆ. ಇವೆಲ್ಲ ಖಂಡಗಳಲ್ಲಿಯೂ ಒಂದು ಕಾಲದಲ್ಲಿ ಅತಿ ಶೀತದ ವಾತಾವರಣ ಇದ್ದುದಕ್ಕೆ ಕುರುಹುಗಳು ಕಾಣಸಿಗುವುದರಿಂದ ಇವು ಹಿಂದೆ ಸಮಭಾಜಕ ವೃತ್ತದ ದಕ್ಷಿಣಕ್ಕಿದ್ದುವೆಂದೂ ದಕ್ಷಿಣ

ಮೇರುವಿನ ಬಳಿ ಒಂದುಗೂಡಿದ್ದುವೆಂದೂ ಊಹಿಸಲಾಗಿದೆ. ಜರ್ಮನ್ ಭೂವಿಜ್ಞಾನಿ ವೆಗ್‌ನರ್ ಎಂಬಾತ ಖಂಡಗಳ ಅಲೆತದ ಪರಿಕಲ್ಪನೆಯನ್ನು ಮಂಡಿಸಿದ. ಇದರ ಪ್ರಕಾರ ಭೂಖಂಡಗಳು ದಕ್ಷಿಣ ಮೇರುವಿನ ಬಳಿ ಒಂದುಗೂಡಿದ್ದುವೆಂದೂ ಕ್ರಮೇಣ ಈ ಕೂಟ ಒಡೆದು ಖಂಡಗಳು ದೂರ ದೂರ ಸರಿದುವೆಂದೂ ಇದೆ. ದಕ್ಷಿಣದಲ್ಲಿನ ಖಂಡಗಳೆಲ್ಲವೂ ಒಟ್ಟುಗೂಡಿ ಯಾವ ರೀತಿ ಗೋಂಡ್ವಾನ ಖಂಡವೆಂದು ಪರಿಗಣಿಸಲ್ಪಟ್ಟವೋ ಅದೇ ರೀತಿ ಉತ್ತರದ ಖಂಡಗಳನ್ನು ಲಾರೇಷಿಯ ಎಂಬ ಕೂಟದಲ್ಲಿ ಗುರುತಿಸಲಾಗಿದೆ. ಈ ಬೃಹತ್ ಖಂಡಗಳೆರಡರ ನಡುವೆ ಇದ್ದ ಸಾಗರಕ್ಕೆ ಟೆತಿಸ್ ಮಹಾಸಾಗರ ಎಂದು ಹೆಸರು. ದಕ್ಷಿಣ ಇಂಡಿಯ ಉತ್ತರದ ಕಡೆ ಜರುಗುತ್ತ ಹೋದಂತೆ ಟೆತಿಸ್ ಸಾಗರದಲ್ಲಿ ನಿಕ್ಷೇಪಗೊಂಡ ಶಿಲಾಸ್ತರಗಳು ಮಡಿಕೆ ಬಿದ್ದು ನೀರಿನಿಂದ ಮೇಲೆದ್ದು ಉನ್ನತವಾದ ಹಿಮಾಲಯ ಶ್ರೇಣಿಯಾಗಿ ನಿಂತವು. ದಕ್ಷಿಣ ಖಂಡಗಳು (ಗೋಂಡ್ವಾನ ಖಂಡದ ಭಾಗಗಳು) ಉತ್ತರದ ಕಡೆ ಧಾವಿಸಿದಾಗ ಶಿಲೆಗಳು ಮಡಿಕೆ ಬಿದ್ದು ಆಲ್ಪ್ಸ್ ಹಿಮಾಲಯ ಪರ್ವತ ಪಂಕ್ತಿಯಾಗಿ ನಿಂತವು.

ಬಹು ಪ್ರಾಚೀನವಾದ ಈ ಗೋಂಡ್ವಾನ ಖಂಡದ ಭಾಗಗಳನ್ನು ಈಗ ಇಂಡಿಯ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ದಕ್ಷಿಣ ಅಮೆರಿಕಗಳಲ್ಲಿ ಗುರುತಿಸಬಹುದು. ಈ ಎಲ್ಲ ಖಂಡಗಳಲ್ಲಿನ ಒಳನಾಡಿನ ಸರೋವರಗಳಲ್ಲಿ ನಿಕ್ಷೇಪಗೊಂಡಿರುವ ಶಿಲಾಪ್ರಸ್ತರಗಳಲ್ಲಿ ಸಸ್ಯಾವಶೇಷಗಳು ಕಾಣಸಿಗುತ್ತವೆ. ಇಲ್ಲಿ ಶಿಲೆಗಳೂ ಅವುಗಳಲ್ಲಿನ ಜೀವ್ಯವಶೇಷಗಳೂ ಸಮಸಮವಾದ ಹೋಲಿಕೆಯನ್ನು ತೋರಿಸುತ್ತವೆ. ಎಲ್ಲ ಕಡೆಗಳಲ್ಲಿಯೂ ಯುಗದ ಪ್ರಾರಂಭದಲ್ಲಿ ಹಿಮಗಡ್ಡೆಗಳಿಂದ ಆಚ್ಛಾದಿತವಾದ ಭೂಭಾಗದ ಚಿಹ್ನೆ ಕಾಣುತ್ತದೆ. ಶೀತವಾತಾವರಣ ಕ್ರಮೇಣವಾಗಿ ಕಡಿಮೆಯಾಗುತ್ತ ಉಷ್ಣ ಹೆಚ್ಚಿ ಉಷ್ಣವಲಯವಾಗಿ ಪರಿಣಮಿಸುವುದನ್ನು ಶಿಲೆಗಳಲ್ಲಿ ಗುರುತಿಸಬಹುದಾಗಿದೆ. ದೂರ ದೂರವಿರುವ ಖಂಡ ಭಾಗಗಳೆಲ್ಲದರಲ್ಲಿಯೂ ಈ ಕಾಲದ ಪೆಡಂಭೂತಗಳ (ಡೈನೊಸಾರ್) ಕುರುಹುಗಳು ತೋರುತ್ತವೆ. ಯುಗ ಕೊನೆಯಾಗುವ ಹೊತ್ತಿಗೆ ಬೃಹತ್‌ಖಂಡ ಛಿದ್ರ ಹೊಂದಿ ದೂರ ದೂರ ಸರಿದು ಹೋಗಿದ್ದುದೇ ಅಲ್ಲದೆ ಅತ್ಯಂತ ಅಗಾಧ ಮೊತ್ತದಲ್ಲಿ ಶಿಲಾರಸ ಉಕ್ಕಿಬಂದು ಖಂಡದ ಬಹುಭಾಗವನ್ನು ಆಕ್ರಮಿಸಿರುವುದೂ ಕಾಣುತ್ತದೆ. ಈಗ ಬೇರೆ ಬೇರೆಯಾಗಿ ತೋರುವ ಭೂಖಂಡದ ಭಾಗಗಳು ಹಿಂದೆ ಒಟ್ಟುಗೂಡಿ ಗೋಂಡ್ವಾನ ಖಂಡ ಎಂಬ ಬೃಹತ್ ಖಂಡವಾಗಿ ಕೂಡಿಕೊಂಡಿದ್ದುವೆನ್ನುವ ತತ್ತ್ವವನ್ನು ಎಲ್ಲರೂ ಒಪ್ಪುವರಾದರೂ ಈ ಖಂಡ ಯಾವ ರೀತಿ ಒಡೆಯಿತು, ಒಡೆದ ಮೇಲೆ ಹೇಗೆ ಜರುಗುತ್ತ ಹೋಗಿ ಈಗಿರುವಲ್ಲಿ ನಿಂತವು ಎನ್ನುವ ವಿಷಯವಾಗಿ ಕ್ಲುಪ್ತವಾದ ಸರ್ವಜನಸಮ್ಮತವಾದ ಅಭಿಪ್ರಾಯ ಇನ್ನೂ ರೂಪುಗೊಂಡಿಲ್ಲ. ಭೂವಿಜ್ಞಾನ ಅಧ್ಯಯನದಲ್ಲಿ ಇದು ಜೀವಂತ ಪ್ರಶ್ನೆಯಾಗಿ ಉಳಿದಿದೆ. (ಬಿ.ಪಿ.ಆರ್.)

**ಗೋಂಡ್ವಾನ ವ್ಯವಸ್ಥೆ :** ಮಧ್ಯಪ್ರದೇಶ, ಬಿಹಾರ, ಬಂಗಾಲ ಮತ್ತು ಒರಿಸ್ಸ ರಾಜ್ಯಗಳಲ್ಲಿ ಹರಡಿರುವ ಕಲ್ಲಿದ್ದಲಿನ ಸ್ತರಗಳನ್ನೊಳಗೊಂಡ ಶಿಲಾ ಸಮೂಹ. ಮಧ್ಯ ಪ್ರದೇಶದ ಗೋಂಡ ಜನಾಂಗದವರು ವಾಸಿಸುತ್ತಿದ್ದ ಕಡೆ ಈ ಶಿಲೆಗಳನ್ನು ಮೊದಲು ಗುರುತಿಸಿದ್ದರಿಂದ ಈ ಹೆಸರು ಬಂದಿದೆ. ಹೆಸರಿಟ್ಟವ ಮೆಡ್ಲಿ ಕಾಟ್ (1872). ಆದರೆ ಈ ಹೆಸರು ಪ್ರಕಾಶಕ್ಕೆ ಬಂದುದು 1876ರಲ್ಲಿ ಪ್ರಚುರವಾದ ಫೀಸ್ಟ್ ಮ್ಯಾಂಟಲನ ಬರೆಹದಲ್ಲಿ. ಗೋಂಡ್ವಾನ ಶಿಲೆಗಳನ್ನುಳ್ಳ ಭಾರತ ದಕ್ಷಿಣ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಅಂಟಾರ್ಕ್‌ಟಿಕ್ ಈ ಎಲ್ಲ ಭೂಖಂಡಗಳೂ ಹಿಂದೆ ಒಟ್ಟುಗೂಡಿದ್ದುವೆಂಬ ವಾದ ಉಂಟು. ಆದ್ದರಿಂದ ಆ ಬೃಹತ್ ಭೂಖಂಡಕ್ಕೆ ಗೋಂಡ್ವಾನ ಖಂಡ **(ನೋಡಿ– ಗೋಂಡ್ವಾನ–ಖಂಡ)** ಎಂಬ ಹೆಸರು ಬಂದಿದೆ. ಗೋಂಡ್ವಾನ ವ್ಯವಸ್ಥೆಗೆ ಸೇರಿದ ಶಿಲೆಗಳೆಲ್ಲವೂ ಒಳನಾಡಿನಲ್ಲಿ ನದಿ ಮತ್ತು ಸರೋವರ ತಳಗಳಲ್ಲಿ ರೂಪುಗೊಂಡಿವೆ. ಕಲ್ಲು ಮತ್ತು ಮಣ್ಣು ಶೇಖರವಾದಂತೆ ತಳ ಕುಸಿದುದರಿಂದ ಹೆಚ್ಚು ಶಿಲಾ ವಸ್ತು ಶೇಖರವಾಗಲು ಅನುಕೂಲವಾಯಿತು. ಸೀಳುಗಳ ನಡುವಿನ ಭಾಗ ಕುಸಿದುದರ ಫಲವಾಗಿ ಕಲ್ಲಿದ್ದಲಿನ ಪದರಗಳನ್ನೊಳಗೊಂಡ ಈ ವರ್ಗದ ಶಿಲೆಗಳು ಕ್ಷಯಿಸಿ ಹೋಗದೆ ಇದುವರೆಗೆ ಉಳಿದುಕೊಂಡು ಬಂದಿವೆ.

ಹರವು : ಗೋಂಡ್ವಾನ ವ್ಯವಸ್ಥೆಯ ಶಿಲೆಗಳು ಮುಖ್ಯವಾಗಿ ಮೂರು ವಲಯಗಳಲ್ಲಿ ಕಂಡುಬರುತ್ತವೆ. ಮೊದಲನೆಯದು ಪೂರ್ವ–ಪಶ್ಚಿಮವಾಗಿ ದಾಮೋದರ, ಸೋನೆ ಮತ್ತು ನರ್ಮದಾ ಕಣಿವೆ ಪ್ರದೇಶಗಳನ್ನು ಒಳಗೊಂಡಿವೆ. ಎರಡನೆಯದು ಗೋದಾವರಿ ಕಣಿವೆಯಿಂದ ಈಶಾನ್ಯ–ಆಗ್ನೇಯ ದಿಕ್ಕಿನಲ್ಲಿ ವ್ಯಾಪಿಸಿದೆ. ಮೂರನೆಯದಾದರೋ ಗೋದಾವರಿ ಕಣಿವೆ ಮತ್ತು ರಾಜಮಹಲ್ ಸೇರುವಿಕೆಯಿಂದ ಆಗಿದೆ. ಈ ಮೂರು ವಲಯಗಳಲ್ಲಿ ಅಲ್ಲದೆ ನೇಪಾಳ, ಭೂತಾನ, ಅಸ್ಸಾಂ, ಕಾಶ್ಮೀರ, ಬಲೂಚಿಸ್ತಾನದಲ್ಲಿ ಹಿಮಾಲಯ ಶ್ರೇಣಿಯ ಮುಂದಿನ ಭಾಗದಲ್ಲಿ ಗೋಂಡ್ವಾನ ವರ್ಗದ ಶಿಲೆಗಳು ಅಲ್ಲಲ್ಲಿ ಕಾಣುತ್ತವೆ. ದಕ್ಷಿಣ ಭಾರತದ ಪೂರ್ವ ತೀರದಲ್ಲಿಯೂ ಮೇಲುವರ್ಗದ ಗೋಂಡ್ವಾನ ಶಿಲೆಗಳು ಕಟಕ್, ಚೆನ್ನೈ, ಮತ್ತು ಕನ್ಯಾಕುಮಾರಿಯ ಬಳಿಯೂ ಕಾಣುತ್ತವೆ. ಗೋಂಡ್ವಾನ ವ್ಯವಸ್ಥೆ ಹರವಿನಲ್ಲಿ ಕಿರಿದಾಗಿ ಕಂಡರೂ ಸ್ತರಪಂಕ್ತಿ 6,067–9,100ಮೀ ವರೆಗೂ (20,000–30,000 ಅಡಿ) ಮಂದವಾಗಿದೆ. ಕಾಲಾವಧಿ ಕಾರ್ಬಾನಿಫೆರಸ್, ಟ್ರಯಾಸಿಕ್, ಜುರಾಸಿಕ್ ಮತ್ತು ಕ್ರಿಟೇಷಸ್ ಕಲ್ಪಗಳ ಪರ್ಯಂತ ವ್ಯಾಪಿಸಿದೆ. ಅದೇ ಕಾರಣವಾಗಿ ಗೋಂಡ್ವಾನ ವ್ಯವಸ್ಥೆಯನ್ನು ಪೇಲಿಯೊಝೋಯಿಕ್ (ಪ್ರಾಚೀನ ಜೀವಿಕಲ್ಪ), ಮೀಸೊಝೋಯಿಕುಗಳಂತೆ (ಮಧ್ಯ ಜೀವಿಕಲ್ಪ) ಮುಖ್ಯವಾದ ಶಿಲಾ ವ್ಯವಸ್ಥೆಯನ್ನಾಗಿ ಪರಿಗಣಿಸಲಾಗಿದೆ.

ವಿಭಜನೆ : ಗೋಂಡ್ವಾನ ವ್ಯವಸ್ಥೆಯನ್ನು ಎರಡು ಮುಖ್ಯ ವರ್ಗಗಳನ್ನಾಗಿ ವಿಭಜಿಸಲಾಗಿದೆ. ಕೆಳಗಿನ ವರ್ಗಗಳಲ್ಲಿ ಗ್ಲಾಸಾಪ್ಟರಿಸ್ ಎಂಬ ಸಸ್ಯಜಾತಿಯೂ ಮೇಲಿನ ವರ್ಗದಲ್ಲಿ ಟೈಲೊಫಿಲ್ಲಮ್ ಎಂಬ ರಾಜಮಹಲ್ ತರಹದ ಸಸ್ಯಜಾತಿಯೂ ಕಂಡುಬರುತ್ತವೆ. ಈ ಮೇಲು ಮತ್ತು ಕೆಳವರ್ಗದ ಗೋಂಡ್ವಾನ ಶಿಲೆಗಳನ್ನು ಮತ್ತೆ ಎರಡು ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಕೆಳವರ್ಗದಲ್ಲಿ ಸೇರಿರುವ ವಲಯಗಳು ಕೆಳಗಿನಿಂದ ಮೇಲಕ್ಕೆ: ತಾಲ್ಚೇರ್, ದಾಮೂದ ಮತ್ತು ಪಾಂಚೆಟ್ ವಲಯಗಳು; ಮೇಲುವರ್ಗದಲ್ಲಿ ಮಹದೇವ, ರಾಜಮಹಲ್ ಮತ್ತು ಜಬಲಪುರ ವಲಯಗಳು. ಈ ಪ್ರತಿಯೊಂದು ವಲಯದಲ್ಲಿಯೂ ಮತ್ತೆ ಬೇರೆ ಬೇರೆ ಸ್ತರಪಂಕ್ತಿಗಳನ್ನು ಗುರುತಿಸಲಾಗಿದೆ. ಈ ಮುಖ್ಯ ವಲಯಗಳನ್ನೂ ಪಂಕ್ತಿಗಳನ್ನೂ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದೆ.

| | | | | | |
|---|---|---|---|---|---|
| ಕ್ರಿಟೇಷಸ್ | ... | ಜಬಲಪುರ | ... | { | ಉಮಿಯ<br>ಜಬಲಪುರ |
| ಜುರಾಸಿಕ್ | ... | ... | ... | { | ಕೋಟ<br>ರಾಜಮಹಲ್ |
| ಟ್ರಯಾಸಿಕ್ | ... | ಮಹದೇವ | ... | { | ಮಲೇರಿ<br>ಪಚಮಾರ್ಹಿ |
| ಪರ್ಮಿಯನ್ | ... | ದಾಮೂದ | ... | { | ರಾಣಿಗಂಜ್<br>ಬಂಜೆಸ್ತರ<br>ಬರಕಾರ್<br>ಕಾರ್‌ಹಾರ್‌ಬಾರಿ |
| ಕಾರ್ಬಾನಿಫೆರಸ್ | ... | ತಾಲ್ಚೇರ್ | ... | { | ರಿಕ್ಸ<br>ತಾಲ್ಚೇರ್<br>ಗುಂಡುಸ್ತರ |

ತಾಲ್ಚೇರ್ ವಲಯ : ಇದು ಗೋಂಡ್ವಾನ ವ್ಯವಸ್ಥೆಯಲ್ಲಿ ಅತಿ ಕೆಳಗಿನದು. ಈ ಸ್ತರವನ್ನು ಒರಿಸ್ಸ ರಾಜ್ಯದ ತಾಲ್ಚೇರ್ ಬಳಿ ಮೊದಲಿಗೆ ಗುರುತಿಸಲಾಯಿತು. ಗುಂಡುಗಳ ರಾಶಿಯಿಂದ ಇದು ಮೊದಲಾಗುತ್ತದೆ. ಇದರ ಮೇಲೆ ಕ್ರಮವಾಗಿ 152–273ಮೀ (500–900 ಅಡಿ) ವರೆಗೂ ಮಂದದ ಮರಳುಗಲ್ಲು ಮತ್ತು ಜೇಡುಕಲ್ಲಿನ ಸ್ತರಗಳು ಕಾಣುತ್ತವೆ. ಗುಂಡು ಕಲ್ಲಿನ ರಾಶಿ 15–200ಮೀ (50–200 ಅಡಿ) ವರೆಗೂ ಮಂದವಾಗಿದೆ. ಹಿಮಗಲ್ಲಿನ ನೂಕು ನುಗ್ಗಲಿಗೆ ಒಳಪಟ್ಟು ನುಣುಪಾದಂಥ ನಾನಾತರಹದ ಗುಂಡು ಕಲ್ಲುಗಳು ಕಾಣುವುದರಿಂದ ಈ ವಲಯದ ಶಿಲೆಗಳು ಶೇಖರವಾಗುವ ಕಾಲದಲ್ಲಿ ದಕ್ಷಿಣ ಭಾರತದ ಬಹುಭಾಗ ಹಿಮಗಲ್ಲಿನಿಂದ ಆವೃತವಾಗಿತ್ತೆಂದು ಊಹಿಸಲು ಅವಕಾಶ ಉಂಟು. ಹಿಮ ಕರಗಿ ಹುಟ್ಟಿಕೊಂಡ ವಿಶಾಲ ಸರೋವರಗಳಲ್ಲಿ ದಾಮೂದ ಮತ್ತು ಈಚಿನ ಸ್ತರಗಳು ಶೇಖರವಾದುವು.

ದಾಮೂದ ವಲಯ : ದಾಮೋದರ ನದಿಯ ಕಣಿವೆಯಲ್ಲಿ ಈ ವರ್ಗದ ಶಿಲೆಗಳನ್ನು ಮೊದಲಿಗೆ ಗುರುತಿಸಿದುದರಿಂದ ಈ ಹೆಸರು ಬಂದಿದೆ. ದೇಶದ ಮುಖ್ಯ ಕಲ್ಲಿದ್ದಲಿನ ಪದರಗಳು ಅಡಗಿರುವುದು ಈ ವರ್ಗದ ಶಿಲೆಗಳಲ್ಲಿ. ಇವನ್ನು ನಾಲ್ಕು ಮುಖ್ಯ ಭಾಗಗಳಾಗಿ ವಿಂಗಡಿಸಿದೆ: ಕಾರ್‌ಹಾರ್‌ಬಾರಿ, ಬರಕಾರ್, ಬಂಜೆಸ್ತರ ಮತ್ತು ರಾಣಿಗಂಜ್. ಗೋಂಡ್ವಾನ ವ್ಯವಸ್ಥೆಯಲ್ಲಿ ವಿಶಾಲವಾಗಿ ಹರಡಿರುವ ಸ್ತರವರ್ಗವೆಂದರೆ ಇದೇ.

ಕಾರ್‌ಹಾರ್‌ಬಾರಿ ಸ್ತರ : ಈ ಸ್ತರಗಳು ತಾಲ್ಚೇರ್ ಸ್ತರಗಳ ಮೇಲೆ ತಂಗಿವೆ. ಗಿರಿಧಿ ಕಲ್ಲಿದ್ದಲ ಗಣಿಯ ಬಳಿ ಇವನ್ನು ಕಾಣಬಹುದು. ಕಲ್ಲಿದ್ದಲಿನ ಪದರಗಳಿರುವ ಮೇಲಿನ ಬರಕಾರ್ ಪಂಕ್ತಿಗೂ ಇವಕ್ಕೂ ನಡುವೆ ಮರಳುಗಲ್ಲಿನ ಪದರವಿದೆ. ಈ ಸ್ತರಗಳಲ್ಲಿ ಕೂಡ ಕೆಲವು ಕಲ್ಲಿದ್ದಲಿನ ಪದರಗಳಿವೆ. ಕರನಪುರ, ಹುತಾರ, ದವಲತ್‌ಗಂಜ್, ಉಮೇರಿಯ, ಮೊಹಪಾನಿ ಮತ್ತು ಷಹಪುರ ಕಲ್ಲಿದ್ದಲಿನ ಪದರಗಳು ಕಾರ್‌ಹಾರ್‌ಬಾರಿ ಸ್ತರ ಪಂಕ್ತಿಗೆ ಸೇರಿವೆ.

ಬರಕಾರ್ : ರಾಣಿಗಂಜ್ ಕಲ್ಲಿದ್ದಲಿನ ಪ್ರದೇಶವನ್ನು ಹಾದುಹೋಗುವ ಬರಕಾರ್ ನದಿಯ ಬಳಿ 759 ಮೀ ಗೂ ಮಂದದ ಈ ವರ್ಗದ ಶಿಲೆಗಳು ಕಾಣುತ್ತವೆ. ಝರಿಯಾ ಕಲ್ಲಿದ್ದಲ ಗಣಿ ಇರುವುದು ಈ ವರ್ಗದ ಶಿಲೆಗಳಲ್ಲಿ. ಇಲ್ಲಿ ಕಲ್ಲಿದ್ದಲಿನ ಸುಮಾರು 24 ಬೇರೆ ಬೇರೆ ಸ್ತರಗಳನ್ನು ಗುರುತಿಸಲಾಗಿದೆ. ಒಂದೊಂದು ಸ್ತರವೂ 1.21ಮೀ ಗಿಂತ ಹೆಚ್ಚು ಮಂದವಾಗಿದೆ. ಬರಕಾರ್ ಸ್ತರಗಳು ಭಾರತದಲ್ಲಿ ದೊರೆಯುವ ಎಲ್ಲ ಕಲ್ಲಿದ್ದಲಿಗೂ ಮುಖ್ಯ ಆಧಾರ. ಈ ಸ್ತರಗಳಲ್ಲಿನ ಮರಳುಗಲ್ಲುಗಳಲ್ಲಿ ಗತಕಾಲದ ಮರಗಳ ಬುಡಗಳು ಮತ್ತು ಕೆಳಗೆ ಬಿದ್ದ ದಿಮ್ಮಿಗಳು ಕಾಣುತ್ತವೆ. ಬೊಕಾರೊ ಬಳಿಯ ಕಾರ್ಗಲಿ ಕಲ್ಲಿದ್ದಲಿನ ಸ್ತರ 30 ಮೀ ಗೂ ಮಂದವಾಗಿದೆ. ಬರಕಾರ್ ಸ್ತರಗಳು ಒಳನಾಡ ಸರೋವರಗಳಲ್ಲಿ ನಿಕ್ಷೇಪಗೊಂಡಂತೆ ಕಾಣುತ್ತವೆ. ನದಿಗಳು ಕೊಚ್ಚಿತಂದ ಸಸ್ಯವರ್ಗ ಸರೋವರ ತಳದಲ್ಲಿ ಒಟ್ಟುಗೂಡಿ ಮೇಲೆ ಶೇಖರವಾದ ಮರಳುಗಲ್ಲುಗಳ ಒತ್ತಡದಿಂದ ಗಟ್ಟಿಗೊಂಡು ಕಲ್ಲಿದ್ದಲಿನ ಸ್ತರಗಳಾಗಿ ಮಾರ್ಪಟ್ಟಿದೆ.

ಬಂಜೆ ಸ್ತರಗಳು: ಬರಕಾರ್ ಸ್ತರಗಳ ಮೇಲೆ 607ಮೀ ಗೂ ಮಂದದ ಕಬ್ಬಿಣ ಸಂಬಂಧದ ಜೇಡುಕಲ್ಲು ಕಾಣುತ್ತದೆ. ಕಲ್ಲಿದ್ದಲಿನ ಸ್ತರಗಳಿರುವ ಕೆಳಗಿನ ಬರಕಾರ್ ವರ್ಗಕ್ಕೂ ಮೇಲಿನ ರಾಣಿಗಂಜ್ ವರ್ಗಕ್ಕೂ ನಡುವೆ ಕಲ್ಲಿದ್ದಲಿನ ಗುರುತೇ ಇಲ್ಲದಂಥ ಈ ಸ್ತರಗಳಿಗೆ ಬಂಜೆ ಸ್ತರಗಳು ಎಂದು ಹೆಸರು. ಕೆಲವು ಕಡೆ ಕಬ್ಬಿಣ ಹೆಚ್ಚಿರುವ ಈ ಜೇಡುಕಲ್ಲನ್ನು ಕಬ್ಬಿಣದ ಅದುರಾಗಿ ಉಪಯೋಗಿಸುತ್ತಾರೆ. ಈ ಜೇಡಿನಲ್ಲಿ ಸುಮಾರು ಶೇ. 35 ರಿಂದ ಶೇ. 40 ರಷ್ಟು ಕಬ್ಬಿಣದ ಅಂಶ ಇದೆ. ಈ ಸ್ತರಗಳನ್ನು ಝರಿಯಾ ಮತ್ತು ಕರನಪುರ ಕಲ್ಲಿದ್ದಲಿನ ಗಣಿ ಪ್ರದೇಶದಲ್ಲಿ ಗುರುತಿಸಬಹುದು.

ರಾಣಿಗಂಜ್ ಸ್ತರ : ಈ ಸ್ತರಗಳು ಚೆನ್ನಾಗಿ ತೋರುವುದು ರಾಣಿಗಂಜಿನ ಬಳಿ. ಇವು 910ಮೀ ಗೂ ಹೆಚ್ಚು ಮಂದವಾಗಿವೆ. ಮುಖ್ಯವಾಗಿ ನುಣ್ಣನೆಯ ಮರಳುಗಲ್ಲುಗಳು, ಜೇಡು ಮತ್ತು ಕಲ್ಲಿದ್ದಲಿನ ಸ್ತರಗಳು ಇಲ್ಲಿ ಕಾಣುತ್ತವೆ. ರಾಣಿಗಂಜ್ ಬಳಿ ಮಾತ್ರ ಮುಖ್ಯ ಕಲ್ಲಿದ್ದಲಿನ ಪದರಗಳು ಇವೆ.

ಪಾಂಚೆಟ್ ಸ್ತರ : ಇವು ರಾಣಿಗಂಜ್ ಸ್ತರಗಳ ಮೇಲೆ ಕಾಣುತ್ತವೆ. ಮುಖ್ಯವಾಗಿ ಮರಳುಗಲ್ಲು, ಜೇಡು ಶಿಲೆಗಳಿಂದ ಕೂಡಿದೆ. ಇದರಲ್ಲಿ ಕಲ್ಲಿದ್ದಲು ಕಾಣುವುದಿಲ್ಲ.

ಮೇಲು ಗೋಂಡ್ವಾನ ಪದರಗಳಲ್ಲಿ ಮುಖ್ಯವಾದವು ಮಹದೇವ ಮತ್ತು ಜಬಲಪುರ ಸ್ತರಗಳು. ಈ ಶಿಲೆಗಳಲ್ಲಿ ಸಿಗುವ ಸಸ್ಯಾವಶೇಷಗಳಿಗೂ ಕೆಳಗಿನ ದಾಮೂದ, ತಾಲ್ಚೇರ್ ವರ್ಗದಲ್ಲಿ ದೊರೆಯುವ ಸಸ್ಯಾವಶೇಷಗಳಿಗೂ ವ್ಯತ್ಯಾಸ ಉಂಟು. ಈ ಮೇಲು ಗೋಂಡ್ವಾನ ಪದರಗಳಲ್ಲಿ ಕಲ್ಲಿದ್ದಲಿನ ಸೂಚನೆ ಕಾಣುವುದಿಲ್ಲ. ಕೆಲವು ಕಡೆ ಕಂಡರೂ ಅವು ಸಣ್ಣವು, ಉಪಯೋಗಕ್ಕೆ ಬರತಕ್ಕಂಥವಲ್ಲ.

ಅಗ್ನಿ ಶಿಲೆಗಳು : ಗೋಂಡ್ವಾನ ಸ್ತರಗಳನ್ನು ಭೇದಿಸಿ ಕೆಲವು ಅಗ್ನಿ ಶಿಲೆಗಳು ಕಾಣುತ್ತವೆ. ಇವು ಕಲ್ಲಿದ್ದಲನ್ನು ಸುಟ್ಟು ಕರಿಕು (ಕೋಕ್) ಮಾಡಿಬಿಟ್ಟಿವೆ. ಇವನ್ನು ಸ್ಥಳೀಯರು ಯಾಮ ಎಂದು ಕರೆಯುತ್ತಾರೆ.

ಆರ್ಥಿಕ ಪ್ರಾಮುಖ್ಯ : ಗೋಂಡ್ವಾನ ವರ್ಗದ ಶಿಲೆಗಳು ಪ್ರಸಿದ್ಧಿಯಾಗಿರುವುದು ಅವುಗಳಲ್ಲಿರುವ ಕಲ್ಲಿದ್ದಲಿನ ಸ್ತರಗಳಿಂದ. ಭಾರತದಲ್ಲಿ ಪ್ರತಿ ವರ್ಷ 369.5 ಮಿಲಿಯನ್ ಟನ್ನುಗಳಷ್ಟು ಕಲ್ಲಿದ್ದಲು ಉತ್ಪತ್ತಿಯಾಗುತ್ತದೆ. ಈ ಕಲ್ಲಿದ್ದಲಲ್ಲಿ ಬಹುಭಾಗ ಗೋಂಡ್ವಾನ ವರ್ಗದ, ಅದರಲ್ಲೂ ಬರಕಾರ್ ಮತ್ತು ರಾಣಿಗಂಜ್ ವರ್ಗದ ಶಿಲೆಗಳಿಂದ ಬರುತ್ತದೆ. ಕಲ್ಲಿದ್ದಲಿನ ಬಹುಭಾಗದಲ್ಲಿ ಬೂದಿ ಅಂಶ ಹೆಚ್ಚು. ಆದ್ದರಿಂದಾಗಿ ಕಬ್ಬಿಣ ಕರಗಿಸುವುದಕ್ಕೆ ಅದು ಅಷ್ಟಾಗಿ ಉಪಯೋಗವಾಗುವುದಿಲ್ಲ. ಝರಿಯಾ, ಗಿರಿಧಿ ಮತ್ತು ಬೊಕಾರೊ ಬಳಿ ದೊರೆಯುವ ಕಲ್ಲಿದ್ದಲು ಉತ್ತಮ ದರ್ಜೆಯದು. ಕಬ್ಬಿಣ ಕರಗಿಸಲು ಉಪಯೋಗಕ್ಕೆ ಬರುವಂಥದು. ಮಿಕ್ಕಂತೆ ಕಲ್ಲಿದ್ದಲು ನೀರು ಕಾಯಿಸಿ ಹಬೆಯನ್ನು ಉತ್ಪಾದಿಸುವುದಕ್ಕೆ ಯೋಗ್ಯವಾದುದು. ಆವಿಯಿಂದ ನಡೆಯುವ ರೈಲು ಎಂಜಿನುಗಳಿಗೂ ವಿದ್ಯುತ್ತನ್ನು ಉತ್ಪಾದಿಸುವುದಕ್ಕೂ ಕಲ್ಲಿದ್ದಲು ವಿಶೇಷವಾಗಿ ಉಪಯೋಗವಾಗುತ್ತದೆ. (ಬಿ.ಪಿ.ಆರ್.)

**ಗೋಂದು :** ಗಿಡಗಳ ಕಾಂಡವನ್ನು ಅಥವಾ ಕಾಯಿಯ ಚರ್ಮವನ್ನು ಗಾಸಿಮಾಡಿದಾಗ ಸ್ರವಿಸಿ ಕೊಂಚ ಹೊತ್ತಿನೊಳಗಾಗಿ ಗಾಜಿನಂತಿರುವ ಗಂಟುಗಳಾಗಿ ರೂಪಾಂತರಿಸುವ ರಸವಿಶೇಷ. ಸೂಕ್ಷ್ಮಜೀವಿಗಳು ಗಾಸಿ ಭಾಗವನ್ನು ಆಕ್ರಮಿಸಿ ಗಿಡಕ್ಕೆ ಅಥವಾ ಕಾಯಿಗೆ ಅಪಾಯವಾಗದಂತೆ ಗೋಂದು ರಕ್ಷಣೆಯನ್ನು ಒದಗಿಸುತ್ತದೆ. ಗೋಂದಿನಲ್ಲಿ ವಿವಿಧ ಬಗೆಗಳಿವೆ. ಇವೆಲ್ಲವೂ ಸ್ವಭಾವತಃ ಕಲಿಲಗಳು. ರಾಸಾಯನಿಕ ದೃಷ್ಟಿಯಿಂದ ನೈಸರ್ಗಿಕ ಗೋಂದುಗಳು ಬಹು ಶರ್ಕರಗಳು. ಇದುವರೆಗೆ ಸುಮಾರು ನಲವತ್ತರಷ್ಟು ಗೋಂದಿನ ಬಗೆಗಳನ್ನು ವಿಶ್ಲೇಷಿಸಲಾಗಿದ್ದರೂ ಯಾವ ಒಂದು ಗೋಂದಿನ ವಿಶಿಷ್ಟ ರಚನೆಯೂ ಖಚಿತವಾಗಿ ಗೊತ್ತಾಗಿಲ್ಲ. ಎಲ್ಲ ಗೋಂದುಗಳಲ್ಲಿ ನಾನಾಬಗೆಯ ಸಕ್ಕರೆಗಳ ಅಂಶಗಳು ಪರಸ್ಪರ ಬದ್ಧವಾಗಿ ಬಹುಶಾಖಾರೂಪಿ ಅಣುಗಳನ್ನು ನಿರ್ಮಿಸುತ್ತವೆ.

ಔದ್ಯೋಗಿಕವಾಗಿ ಕೆಲವು ಗೋಂದುಗಳು ಪ್ರಮುಖವಾಗಿವೆ. ನಾನಾಕ್ಷೇತ್ರಗಳಲ್ಲಿ ಬಳಕೆಯಲ್ಲಿರುವ ಗೋಂದುಗಳಿಗೆ ಉದಾಹರಣೆಗಳು : 1. ಅಕೇಸಿಯ ಗೋಂದು ಅಥವಾ ಅರಾಬಿಕ್ ಗೋಂದು, 2. ಕೋಪಾಲ್ ವರ್ಗದ ಗೋಂದುಗಳು, 3. ಟ್ರಾಗಾಕಾಂತ್ ಗೋಂದು, 4. ಡಮಾರ್, 5. ಕೆನಡಾ ಬಾಲ್ಸಮ್.

1. ಅರಾಬಿಕ್ ಗೋಂದು : ಅಕೇಸಿಯ (ಗೊಬ್ಬಳಿ, ಜಾಲಿ) ಗಿಡಗಳಿಂದ ದೊರೆಯುವ ಅಂಟು. ಇದರ ಬಣ್ಣ ಬಿಳಿಯ ವರ್ಣದಿಂದ ಹಿಡಿದು ಹಳದಿಯವರೆಗೆ ಇದೆ. ಇದಕ್ಕೆ ವಾಸನೆ ಇಲ್ಲ. ಬಿಸಿ ಮತ್ತು ತಣ್ಣೀರುಗಳಲ್ಲಿ ವಿಲೀನವಾಗಿ ಮಂದವಾದ ದ್ರಾವಣವನ್ನು ಕೊಡುತ್ತದೆ. ಆಲ್ಕೊಹಾಲಿನಲ್ಲಿ ವಿಲೀನವಾಗುವುದಿಲ್ಲ. ಜಲೀಯ ದ್ರಾವಣ ಲಿಟ್ಮಸಿನೊಡನೆ ಆಮ್ಲೀಯ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ಅರಾಬಿಕ್ ಗೋಂದಿನಲ್ಲಿ D - ಗ್ಯಲಾಕ್ಟೋಸ್ ಮತ್ತು D - ಗ್ಲೂಕ್ಯುರೋನಿಕ್ ಆಮ್ಲಗಳಿವೆ. ವಾಸ್ತವವಾಗಿ ಇದು ಈ ಆಮ್ಲದ ಕ್ಯಾಲ್ಸಿಯಮ್, ಸೋಡಿಯಮ್ ಮತ್ತು ಪೊಟಾಸಿಯಮ್ ಲವಣ. ಅರಾಬಿಕ್ ಗೋಂದನ್ನು ಆಮ್ಲಕ್ಕೆ ಪರಿವರ್ತಿಸಿ ನೀರಿನಲ್ಲಿ ಕುದಿಸಿದಾಗ L - ಅರಾಬಿನೋಸ್, L - ರ್‍ಯಾಮ್ನೋಸ್ ಮತ್ತು 3–O- $\alpha$ -D ಗ್ಯಲಾಕ್ಟೋ ಪೈರನೋಸಿಲ್ ದೊರೆಯುತ್ತವೆ. ಈ ಗೋಂದಿನ ರಾಸಾಯನಿಕ ರಚನೆಯ ಸ್ಪಷ್ಟ ಚಿತ್ರವಿನ್ನೂ ದೊರೆತಿಲ್ಲವಾದರೂ ತಾತ್ಕಾಲಿಕವಾಗಿ ಇದಕ್ಕೆ ಈ ಬಗೆಯ ರಚನೆಯನ್ನು ಕೊಡಲಾಗಿದೆ.




[ಗ್ಯಲಾ=ಗ್ಯಲಾಕ್ಟೋಸ್, ಗ್ಲೂ= D - ಗ್ಲೂಕ್ಯುರೋನಿಕ್ ಆಮ್ಲ, ಅರಾ= ಅರಾಬಿನೋಸ್, ರ್‍ಯಾ=ರ್‍ಯಾಮ್ನೋಸ್. ಸಂಖ್ಯೆಗಳು ಬಂಧದಲ್ಲಿ ಒಳಗಾಗಿರುವ ಶರ್ಕರ ಸ್ಥಾನಗಳನ್ನು ಸೂಚಿಸುತ್ತವೆ]

ಅರಾಬಿಕ್ ಗೋಂದನ್ನು ಅಂಟುಪದಾರ್ಥವಾಗಿ ಬಳಸುವುದಲ್ಲದೆ ಔಷಧಿಗಳಲ್ಲಿ, ಶಾಯಿಗಳಲ್ಲಿ, ಬಟ್ಟೆಗಳ ಮೇಲೆ ಮುದ್ರಿಸುವುದರಲ್ಲಿ, ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ, ಆಹಾರ ವಸ್ತುಗಳಲ್ಲಿ ಮತ್ತು ಕಲಿಲಗಳನ್ನು ಸ್ಥಿರೀಕರಿಸುವುದರಲ್ಲಿ ಕೂಡ ಬಳಸುತ್ತಾರೆ. ದ್ರವಗಳನ್ನು ಮಂದಗೊಳಿಸುವ ಅಭಿಕಾರಕದಂತೆ ಇದರ ಉಪಯೋಗ ಹೆಚ್ಚು.

2 ಈಸ್ಟ್ ಇಂಡೀಸ್, ಫಿಲಿಪೀನ್ಸ್, ಆಸ್ಟ್ರೇಲಿಯ ಮತ್ತು ಆಫ್ರಿಕ ಪ್ರದೇಶಗಳ ಕೆಲವು ಗಿಡಗಳಿಂದ ಕೋಪಾಲ್ ವರ್ಗದ ಗೋಂದುಗಳು ದೊರೆಯುತ್ತವೆ. ಇವಲ್ಲಿ ಕೆಲವು ಬಗೆಯವನ್ನು ಆಧುನಿಕ ಮೂಲಗಳಿಂದ ಮತ್ತೆ ಇನ್ನು ಕೆಲವನ್ನು ಪ್ರಾಚೀನ ಫಾಸಿಲ್ ಮೂಲಗಳಿಂದ ಪಡೆಯಲಾಗುತ್ತಿದೆ. ಫಿಲಿಪೀನ್ಸ್, ಮನಿಲ ಮತ್ತು ಪೆಂಟಿಯಾನಕುಗಳು ಮೃದುವಾಗಿರುತ್ತವೆ. ಇವು ಆಧುನಿಕ ವರ್ಗದವು. ಕಾಂಗೋ ಮತ್ತು ಕೌರಿಗಳು ಪ್ರಾಚೀನ ವರ್ಗದವು. ಇವು ಗಟ್ಟಿಯಾಗಿರುತ್ತವೆ. ಮೃದು ಕೋಪಾಲುಗಳು ಆಲ್ಕೊಹಾಲ್, ಕ್ಲೋರೋಫಾರಮ್ ಮತ್ತು ಟರ್ಪಂಟೈನುಗಳಲ್ಲಿ ಭಾಗಶಃ ವಿಲೀನವಾಗುವುದಿಲ್ಲ. ಹೆಚ್ಚು

ಕಾಯಿಸಿದ ಬಳಿಕ ಇವು ಟರ್ಪಂಟೈನ್ ಮತ್ತು ಲಿನ್ ಬೀಜದ (ಲಿನ್ ಸೀಡ್) ಎಣ್ಣೆಯಲ್ಲಿ ವಿಲೀನವಾಗುತ್ತವೆ. ಕೋಪಾಲ್ ಗೋಂದುಗಳನ್ನು ವಾರ್ನಿಷ್ ಮತ್ತು ಮೆರುಗು ವಸ್ತುಗಳನ್ನು ತಯಾರಿಸಲು ಬಳಸುತ್ತಾರೆ.

3. ದಕ್ಷಿಣ ಯುರೋಪ್, ಗ್ರೀಸ್, ಟರ್ಕಿ ಮತ್ತು ಇರಾನ್ ದೇಶಗಳಲ್ಲಿ ಬೆಳೆಯುವ ಆಸ್ಟ್ರಾಗಾಲಸ್ ಘರ್ ಗಿಡಗಳಿಂದ ದೊರೆಯುವ ಗೋಂದುಗಳಿಗೆ ಟ್ರಗಾಕಾಂತ್ ಗೋಂದುಗಳೆಂದು ಹೆಸರು. ಇವು ಪಾರದರ್ಶಕ ಬಿಳಿಯ ಹಲಗೆಗಳಂತೆ ಅಥವಾ ಕುಂಡಲಿನಿ (ಹೆಲಿಕ್ಸ್) ಆಕಾರದಲ್ಲಿ ತಿರಿಚಿಕೊಂಡಿರುವ ಹಳದಿ ಬಣ್ಣದ ಹುಡಿಯಂತೆ ದೊರೆಯುತ್ತವೆ. ಪ್ರತ್ಯಾಮ್ಲೀಯ ದ್ರಾವಣಗಳಲ್ಲಿ ಮತ್ತು ಜಲೀಯ ಹೈಡ್ರೋಜನ್ ಪೆರಾಕ್ಸೈಡ್ ದ್ರಾವಣದಲ್ಲಿ ವಿಲೀನವಾಗುತ್ತವೆ. ನೀರಿನಲ್ಲಿ ಉಬ್ಬುತ್ತವೆ. ಆಲ್ಕೊಹಾಲಿನಲ್ಲಿ ವಿಲೀನವಾಗುವುದಿಲ್ಲ. ಇವುಗಳಲ್ಲಿ ಗ್ಯಲಾಕ್ಟೋಸ್, ಫ್ಯೂಕೋಸ್, ಕ್ಸೈಲೋಸ್, ಅರಾಬಿನೋಸ್ ಮತ್ತು ಗ್ಲೂಕ್ಯುರೋನಿಕ್ ಆಮ್ಲಗಳ ಅಂಶಗಳಿವೆ. ಟ್ರಗಾಕಾಂತ್ ಗೋಂದುಗಳನ್ನು ಔಷಧಿಗಳ ತಯಾರಿಕೆ, ಚರ್ಮದ ಹದಮಾಡುವಿಕೆ, ಅಂಟುಗಳ ತಯಾರಿಕೆ, ಕ್ಯಾಲಿಕೋ ಮುದ್ರಣ, ಆಹಾರ ರಕ್ಷಣೆ, ತಿಳಿದ್ರಾವಣಗಳನ್ನು ಮಂದಗೊಳಿಸುವ ಸುಗಂಧ ದ್ರವ್ಯಗಳ ತಯಾರಿಕೆ ಮತ್ತು ಬಣ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ.

4. ಈಸ್ಟ್ ಇಂಡೀಸ್ ಮತ್ತು ಮಲಯದೇಶಗಳಲ್ಲಿನ ಕೆಲ ಬಗೆಯ ಗಿಡಗಳಿಂದ ದೊರೆಯುವ ಗೋಂದುಗಳಿಗೆ ಡಮಾರ್ ಗೋಂದುಗಳೆಂದು ಹೆಸರು. ಇವನ್ನು ಸಿಂಗಪುರ, ಬಟೇವಿಯ, ಸಯಾಂ ಮತ್ತು ಈಸ್ಟ್ ಇಂಡೀಸ್ ಎಂದು ವರ್ಗೀಕರಿಸಲಾಗಿದೆ. ಕಡೆಯ ವರ್ಗದ ಗೋಂದುಗಳಲ್ಲಿ ಬಾಟು, ತಿಳಿ ಅಥವಾ ಕರಿ ಎಂಬ ಉಪವರ್ಗಗಳಿವೆ. ಡಮಾರ್ ಗೋಂದುಗಳ ಬಣ್ಣ ಬಿಳಿಯಿಂದ ಹಿಡಿದು ಹಳದಿಯವರೆಗೆ. ಇವೆಲ್ಲ ಆಲ್ಕೊಹಾಲ್, ಬೆಂಜೀನ್, ಟರ್ಪಂಟೈನ್ ಮತ್ತು ಎಣ್ಣೆಗಳಲ್ಲಿ ವಿಲೀನವಾಗುತ್ತವೆ. ಕೋಪಾಲ್ ಗೋಂದುಗಳಿಗಿಂತ ಇವುಗಳ ಆಮ್ಲೀಯತೆ ಕಡಿಮೆ. ಇತರ ಭೌತಗುಣಗಳಲ್ಲಿ ಈ ಗೋಂದುಗಳು ವೈವಿಧ್ಯವನ್ನು ತೋರುತ್ತವೆ. ಡಮಾರ್ ಗೋಂದುಗಳನ್ನು ಸ್ಪಿರಿಟ್ ವಾರ್ನಿಷುಗಳನ್ನು ತಯಾರಿಸಲು ಹಾಗೂ ಕಾಗದ ಮತ್ತು ಬಟ್ಟೆಗಳಿಗೆ ಬಿಗಿಯನ್ನು ಕೊಡಲು ಉಪಯೋಗಿಸುತ್ತಾರೆ.

5. ಕೆನಡಾ ಬಾಲ್ಸಮನ್ನು ಸಹ ಗೋಂದುಗಳ ಗುಂಪಿಗೆ ಸೇರಿಸಬಹುದು. ಕೆನಡ ಮತ್ತು ಅಮೆರಿಕದ ಉತ್ತರ ಪ್ರದೇಶಗಳಲ್ಲಿ ಬೆಳೆಯುವ ಏಬಿಸ್ ಬಾಲ್ಸಾಮಿಯ ಮತ್ತು ಬಾಲ್ಸಮ್‌ಫರ್ ಗಿಡಗಳಿಂದ ದೊರೆಯುವ ಈ ವಸ್ತು ನಸುಹಳದಿ ಅಥವಾ ಹಸಿರು-ಹಳದಿ ಬಣ್ಣವುಳ್ಳ ಪಾರದರ್ಶಕ ದ್ರವ. ಪೈನ್ ಮಾದರಿಯ ಹಿತವಾದ ಕಂಪನ್ನುಳ್ಳ ಈ ದ್ರವವನ್ನು ಗಾಳಿಗೆ ತೆರೆದಿಟ್ಟಾಗ ಗಟ್ಟಿಯಾಗಿ ಪಾರದರ್ಶಕವಾದ ವಾರ್ನಿಷ್ ಆಗಿ ಪರಿವರ್ತಿತವಾಗುತ್ತದೆ. ಇದು ಬೆಂಜೀನ್ ಮತ್ತು ಈಥರಿನಲ್ಲಿ ವಿಲೀನವಾಗುತ್ತದೆ. ಆದರೆ ನೀರಿನಲ್ಲಿ ವಿಲೀನವಾಗುವುದಿಲ್ಲ.

ಕೆನಡಾ ಬಾಲ್ಸಮಿನ ರಿಫ್ರೇಕ್ಷಣ ಸೂಚ್ಯಂಕ ಲೆನ್ಸುಗಳ ಸೂಚ್ಯಂಕದಷ್ಟೇ ಇರುವುದರಿಂದ ಇದನ್ನು ಭೂತಗನ್ನಡಿಗಳನ್ನು ಜಂಟಿಮಾಡಲು ಉಪಯೋಗಿಸುತ್ತಾರೆ. ಔಷಧಿಗಳ ತಯಾರಿಕೆಯಲ್ಲಿ ಮತ್ತು ಶ್ರೇಷ್ಠ ಮಟ್ಟದ ಮೆರಗು ವಸ್ತುಗಳನ್ನು ತಯಾರಿಸಲು ಇದನ್ನು ಬಳಸಲಾಗುತ್ತದೆ. (ಎಚ್.ಎಸ್.ಎಸ್.)

**ಗೋಕರ್ಣ** : ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನಲ್ಲಿ ಕುಮಟದಿಂದ ಉತ್ತರಕ್ಕೆ 16 ಕಿಮೀ ದೂರದಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ. ಕಾಶಿ, ರಾಮೇಶ್ವರಗಳಿಗೆ ಸಮಾನವೆಂದು ಪರಿಗಣಿತವಾಗಿದ್ದು ಈ ಮೂರು ಶಿವಕ್ಷೇತ್ರಗಳನ್ನು ತ್ರಿಸ್ಥಲಿ ಎಂದು ಕರೆಯುವುದುಂಟು. ಪೂರ್ವದಲ್ಲಿ ಸಿದ್ಧೇಶ್ವರ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಉತ್ತರದಲ್ಲಿ ಶಾಲ್ಮಲೀ (ಗಂಗಾವಳಿ) ಮತ್ತು ದಕ್ಷಿಣದಲ್ಲಿ ಅಘನಾಶಿನಿ ನದಿಗಳಿವೆ. ಉತ್ತರ, ದಕ್ಷಿಣ ಮತ್ತು ಪೂರ್ವದಲ್ಲಿ ಶತಶೃಂಗ ಪರ್ವತದ ಚಿಕ್ಕ ಗುಡ್ಡಗಳಿಂದ ಆವೃತವಾಗಿರುವ ಈ ಸ್ಥಳ ದೂರದಿಂದ ಗೋವಿನ ಕಿವಿಯಂತೆ (ಗೋಕರ್ಣ) ಕಂಡೀತು. ಕಡಲತೀರದಲ್ಲಿ ದಟ್ಟವಾಗಿ ಬೆಳೆದ ತೆಂಗಿನ ತೋಟಗಳೂ ಅಲ್ಲಲ್ಲಿ ಗದ್ದೆಗಳೂ ಅನೇಕ ತೀರ್ಥಗಳೂ ಗುಡಿಗೋಪುರಗಳೂ ಅಗ್ರಹಾರಗಳೂ ಇವೆ. ಇವೆಲ್ಲವುಗಳಿಂದ ಗೋಕರ್ಣ ಪ್ರೇಕ್ಷಣೀಯ ಸ್ಥಳವಾಗಿದೆ.

ಗೋಕರ್ಣ ಪೌರಾಣಿಕವಾಗಿಯೂ ಐತಿಹಾಸಿಕವಾಗಿಯೂ ಪ್ರಾಮುಖ್ಯ ಪಡೆದಿದೆ. ತ್ರೇತಾಯುಗದಿಂದಲೂ ಪ್ರಸಿದ್ಧವಾಗಿತ್ತೆಂದು ಹೇಳಲಾದರೂ ಪ್ರಮುಖ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿದ್ದು ಬಹುಶಃ ಪ್ರಸಕ್ತಶಕದ ಆರಂಭದಿಂದ. ಕದಂಬ ವಂಶದ ಮಯೂರಶರ್ಮ ಅಹಿಚ್ಛತ್ರದಿಂದ ಏಳು ಗೋತ್ರದ ಇಪ್ಪತ್ತನಾಲ್ಕು ಬ್ರಾಹ್ಮಣ ಕುಟುಂಬಗಳನ್ನು ತಂದು ಇಲ್ಲಿ ನೆಲೆಗೊಳಿಸಿದನೆಂದು ಪ್ರತೀತಿ. ಕದಂಬರ ಕಾಲದಿಂದ ವಿಜಯನಗರ ಅರಸರ ಆಳಿಕೆಯ ಅಂತ್ಯದ ವರೆಗೂ ಪ್ರಖ್ಯಾತವಾದ ಮಹಾಬಲೇಶ್ವರ ದೇವಾಲಯಕ್ಕೆ ನೀಡಿದ ದಾನ, ದತ್ತಿ ಮುಂತಾದವುಗಳ ವಿವರ ಶಾಸನಗಳಿಂದ ವೇದ್ಯವಾಗುತ್ತದೆ.

ಮಹಾಬಲೇಶ್ವರ ದೇವಾಲಯ ಇಲ್ಲಿಯ ಪ್ರಮುಖ ದೇವಸ್ಥಾನ. ಇದನ್ನು ಕಣಶಿಲೆಯಿಂದ ನಿರ್ಮಿಸಲಾಗಿದ್ದು ಗರ್ಭಗೃಹ, ನವರಂಗ ಮತ್ತು ಪ್ರತ್ಯೇಕವಾದ ನಂದಿಮಂಟಪ ಗಳನ್ನೊಳಗೊಂಡಿದೆ. ಈ ನಂದಿಮಂಟಪದ ಪಶ್ಚಿಮ ದ್ವಾರದ ಮೇಲಿರುವ ಶಿಲಾಶಾಸನದ ಪ್ರಕಾರ ಹಲಸುನಾಡು ವಿಶ್ವೇಶ್ವರಯ್ಯ ಶಾರ್ವರೀ ಸಂವತ್ಸರದ ಕಾರ್ತಿಕ ಶುದ್ಧ 1ರಲ್ಲಿ ಇದನ್ನು ಕಟ್ಟಿಸಿದ. ಆದರೆ ಮೂಲ ದೇವಾಲಯವನ್ನು ಯಾರು, ಯಾವಾಗ ಕಟ್ಟಿಸಿದರೆಂಬುದಕ್ಕೆ ನಿಶ್ಚಿತ ಪ್ರಮಾಣಗಳು ಕಂಡುಬರುವುದಿಲ್ಲ. ಇದು ದೇವಶಿಲ್ಪಿ ವಿಶ್ವಕರ್ಮ

ಮಹಾಬಲೇಶ್ವರ ದೇವಸ್ಥಾನ, ಗೋಕರ್ಣ

ನಿರ್ಮಿತ ದೇವಾಲಯವೆಂಬುದು ಪ್ರತೀತಿ. ಇದು ಬಹು ಪ್ರಾಚೀನ ಕಾಲದಿಂದಲೂ ಇಲ್ಲಿ ದೇವಾಲಯವಿದ್ದಿರಬೇಕೆಂಬುದನ್ನು ಸೂಚಿಸುತ್ತದೆ. ಪುರಾಣದಲ್ಲಿ ಉಕ್ತವಾಗಿರುವಂತೆ ತ್ರಿಲೋಕವೀರ ರಾವಣನನ್ನು ಶಿವ ಜಯಿಸಿದ್ದರಿಂದ ಅವನ ಆತ್ಮಲಿಂಗ ಮಹಾಬಲೇಶ್ವರ ಎಂಬ ಹೆಸರಿನಿಂದ ಪ್ರಖ್ಯಾತವಾಯಿತು.

ತ್ರೇತಾಯುಗದಲ್ಲಿ ರಾವಣ ಈಶ್ವರನನ್ನು ಕುರಿತು ತಪಸ್ಸುಮಾಡಿ ಅವನಿಂದ ಆತ್ಮಲಿಂಗವನ್ನು ಪಡೆದು ಮನೆಗೆ ಒಯ್ಯುತ್ತ ನಡುವೆ ಗೋಕರ್ಣದಲ್ಲಿ ಬ್ರಹ್ಮಚಾರಿ ರೂಪದ ಗಣಪತಿಯ ಕೈಯಲ್ಲಿ ಅದನ್ನು ಕೊಟ್ಟು ಸಂಧ್ಯಾವಂದನೆಗೆ ಹೋದನೆಂದೂ ಹೇಳಿದ ವಾಯಿದೆಯೊಳಗೆ ರಾವಣ ಹಿಂತಿರುಗದೇ ಇದ್ದಾಗ ಗಣಪತಿ ಅದನ್ನು ನೆಲದ ಮೇಲೆ ಇಟ್ಟನೆಂದೂ ಸ್ವಲ್ಪ ಕಾಲಾನಂತರ ಹಿಂತಿರುಗಿದ ರಾವಣ ಅದನ್ನು ಕೀಳಲು ವ್ಯರ್ಥಪ್ರಯತ್ನ ಮಾಡಿದಾಗ ಅದು ಆಕಳ ಕಿವಿಯ ಆಕಾರಕ್ಕೆ ತಿರುಗಿತೆಂದೂ ಪುರಾಣದ ಕಥೆ ಇದೆ. ಲಿಂಗ ಭೂತಲದಿಂದ ಸುಮಾರು ಎರಡು ಅಂಗುಲ ಎತ್ತರವಿದ್ದು ಶಿರೋಭಾಗ ತುಸು ಚಪ್ಪಟೆಯಾಗಿದೆ. ಗರ್ಭಗೃಹದ ಶಿಖರ 60' (18 ಮೀ) ಎತ್ತರವಿದ್ದು ಪಗೋಡದಂತಿದೆ. ತುದಿಯಲ್ಲಿ ಹಿತ್ತಾಳೆಯ ಕಲಶವಿದೆ. ಶಿಖರದ ಮೇಲೆ ದಶಾವತಾರ, ಅಷ್ಟದಿಕ್ಪಾಲಕರು, ನಾಗ ಮುಂತಾದ ಶಿಲ್ಪಗಳನ್ನು ಕೆತ್ತಲಾಗಿದೆ. ನವರಂಗದಲ್ಲಿ ಗಣಪತಿ, ಪಾರ್ವತಿ ಮುಂತಾದ ವಿಗ್ರಹಗಳಿವೆ. ಈ ದೇವಾಲಯದ ಹೊರಭಾಗದಲ್ಲಿ ಗೋವೆಯ ಅರಸರ ಕಾಲದಲ್ಲಿ ಜಂಬಿಟ್ಟಿಗೆ ಕಲ್ಲಿನಿಂದ ಕಟ್ಟಿದ ಚಂದ್ರಶಾಲೆಯಿದೆ. ಸಪ್ತಕೋಟೇಶ್ವರ, ಅಮೃತೇಶ್ವರ, ಸಪ್ತಸಾಗರೇಶ್ವರ, ಸಂಗಮೇಶ್ವರ, ಮಾಂಕೇಶ್ವರ ಮುಂತಾದ ಸುಮಾರು ಮೂವತ್ತು ಶಿವಲಿಂಗಗಳಿವೆ.

ಗೋಕರ್ಣದಲ್ಲಿ ಕೋಟಿತೀರ್ಥ, ಅಗಸ್ತ್ಯತೀರ್ಥ, ಸುಮಿತ್ರಾತೀರ್ಥ, ಮಾಲಿನಿ, ಸುಮಾಲಿನಿ, ಸೂರ್ಯ, ಚಂದ್ರ ಮುಂತಾದ ಸುಮಾರು ಮೂವತ್ತು ತೀರ್ಥಗಳಿವೆ. ಇವುಗಳಲ್ಲೆಲ್ಲ ಮಹಾಬಲೇಶ್ವರ ದೇವಾಲಯದ ಆಗ್ನೇಯಕ್ಕೆ ಇರುವ ಕೋಟಿತೀರ್ಥ ಅತ್ಯಂತ ದೊಡ್ಡದು ಹಾಗೂ ಪ್ರಸಿದ್ಧವಾದದ್ದು. ಶಿವರಾತ್ರಿಯಂದು ದೇಶದ ನಾನಾ

ಭಾಗಗಳಿಂದ ಬರುವ ಭಕ್ತರು ಈ ತೀರ್ಥದಲ್ಲಿ ಸ್ನಾನ ಮಾಡುತ್ತಾರೆ. ಈ ತೀರ್ಥದ ಆವರಣದೊಳಗೆ ಕಾಲಭೈರವೇಶ್ವರ, ಗರುಡ, ಅನಿರುದ್ಧ, ಅಗಸ್ತ್ಯೇಶ್ವರ, ವಸಿಷ್ಠೇಶ್ವರ ಮುಂತಾದ ಗುಡಿಗಳಿವೆ. ಅಲ್ಲದೆ ವೈಷ್ಣವ ಹಾಗೂ ಶಾಕ್ತಪಂಥೀಯ ದೇವತಾ ಮಂದಿರಗಳೂ ಇವೆ. ಇಂದೋರಿನ ರಾಣಿ ಅಹಲ್ಯಾಬಾಯಿ ಹೋಳ್ಕರ್ ಕಟ್ಟಿಸಿದಳೆಂದು ಹೇಳಲಾದ ಅಹಲ್ಯಬಾಯಿ ಗುಡಿ ಮತ್ತು ಛತ್ರ ಗಮನಾರ್ಹ. ಇದರ ಭಾವಣಿಯಲ್ಲಿರುವ ನಾಗಬಂಧ ವೈಶಿಷ್ಟ್ಯಪೂರ್ಣ. ಸು. 6–7ನೆಯ ಶತಮಾನದ್ದೆಂದು ನಂಬಲಾದ ಗಣಪತಿ ವಿಗ್ರಹ ಕರ್ನಾಟಕದ ಪ್ರಾಚೀನ ಗಣೇಶ ವಿಗ್ರಹಗಳಲ್ಲೊಂದಾಗಿದೆ.

ಕೋಟಿತೀರ್ಥ

ಭಾರತದ ಶೈವತೀರ್ಥಕ್ಷೇತ್ರಗಳಲ್ಲಿ ಒಂದಾದ ಗೋಕರ್ಣ ಪ್ರೇಕ್ಷಣೀಯ ಪ್ರವಾಸಿ ಕೇಂದ್ರವೂ ಹೌದು. ಪ್ರತಿವರ್ಷ ಫಾಲ್ಗುಣ ಶುದ್ಧ ಪಾಡ್ಯದಂದು ನಡೆಯುವ ರಥೋತ್ಸವ ಹಾಗೂ ಶಿವರಾತ್ರಿ ಜಾತ್ರೆ ಅತ್ಯಂತ ಪ್ರಸಿದ್ಧ.

ಕಾಲೇಜು, ಸಂಸ್ಕೃತ ಪಾಠಶಾಲೆ ಮುಂತಾದ ಶೈಕ್ಷಣಿಕ ಸಂಸ್ಥೆಗಳೂ ಇಲ್ಲಿವೆ. ಖ್ಯಾತ ವೇದ ವಿದ್ವಾಂಸರಾದ ಮಹರ್ಷಿ ದೇವರಾತ ಈ ಊರಿನಲ್ಲಿದ್ದರು. ಈ ಊರಿಗೆ ಭೂಮಾರ್ಗ ಮತ್ತು ಜಲಮಾರ್ಗಗಳೆರಡರಿಂದಲೂ ಹೋಗಬಹುದಾಗಿದೆ. ಗೋಕರ್ಣಕ್ಕೆ 3 ಕಿಮೀ ದೂರದ ತದಡಿ ಬಂದರಿಗೆ ಉಗಿಹಡಗಿನಿಂದ ಹೋಗಬಹುದು. ಅನಂತರ ದೋಣಿಯ ಮೂಲಕ ಪ್ರವಾಸ. ಕಾರವಾರ ತಲುಪಿ ಕರಾವಳಿ ಹಾದಿಯಲ್ಲೂ ಅಥವಾ ಹುಬ್ಬಳ್ಳಿಯಿಂದ ರಸ್ತೆ ಮಾರ್ಗವಾಗಿಯೂ ಗೋಕರ್ಣವನ್ನು ತಲುಪಬಹುದು. ಈ ಊರಿನ ಸಮೀಪದ ಓಂ ಬೀಚ್ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು. (ಎಚ್.ಆರ್.ಆರ್.ಬಿ.,ಎಸ್.ಕೆ.)

**ಗೋಕಾಕ :** ಕರ್ನಾಟಕದ ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು; ಆ ತಾಲ್ಲೂಕಿನ ಕೇಂದ್ರ. ತಾಲ್ಲೂಕಿನ ವಿಸ್ತೀರ್ಣ 1,543.78 ಚ.ಕಿಮೀ. ತಾಲ್ಲೂಕಿನಲ್ಲಿ 105 ಹಳ್ಳಿಗಳೂ 2 ಪಟ್ಟಣಗಳೂ ಇವೆ. ಅದರ ಜನಸಂಖ್ಯೆ 5,25,865 (2001). ತಾಲ್ಲೂಕಿನ ಪಶ್ಚಿಮ ಭಾಗ ಗುಡ್ಡಗಾಡು. ಉಳಿದ ಭಾಗ ಸಮತಟ್ಟಾಗಿದೆ. ಗೋಕಾಕದ ಪಟ್ಟಣದ ಬಳಿ ಇರುವ ನಾರಾಯಣಗುಡ್ಡ ಆ ತಾಲ್ಲೂಕಿನ ಅತ್ಯಂತ ಎತ್ತರದ ಸ್ಥಳ. ತಾಲ್ಲೂಕಿನಲ್ಲಿ ಹರಿಯುವ ನದಿಗಳು ಘಟಪ್ರಭಾ ಮತ್ತು ಮಾರ್ಕಂಡೇಯ. ಗೋಕಾಕದ್ದು ಉಷ್ಣ ವಾಯುಗುಣ. ವಾರ್ಷಿಕ ಮಳೆ ಸು. 25". ಹತ್ತಿ, ಜೋಳ ಇಲ್ಲಿಯ ಮುಖ್ಯ ಬೆಳೆಗಳು. ಬೇಳೆಕಾಳುಗಳೂ ಬೆಳೆಯುತ್ತವೆ. ಘಟಪ್ರಭಾ ನದಿಯ ಗೋಕಾಕ ಜಲಪಾತ ಗೋಕಾಕ ಪಟ್ಟಣದ ವಾಯವ್ಯಕ್ಕೆ ಸು. 6 ಕಿಮೀ ದೂರದಲ್ಲಿದೆ. ಇಲ್ಲಿ ಘಟಪ್ರಭಾ ನದಿ 51 ಮೀ ($170^1$) ಎತ್ತರದಿಂದ ಧುಮುಕುತ್ತದೆ. ಈ ಧಬಧಬೆಯ ಬಳಿ 1887ರಲ್ಲಿ ಒಂದು ಜವಳಿ ಗಿರಣಿ ಸ್ಥಾಪಿತವಾಯಿತು. ಇಲ್ಲಿ ಸಣ್ಣಗಾತ್ರದ ಒಂದು ವಿದ್ಯುದುತ್ಪಾದಕ ಕೇಂದ್ರವಿದೆ. ಇದಕ್ಕಾಗಿ ನಿರ್ಮಿಸಲಾದ ಜಲಾಶಯದಿಂದ ಸುತ್ತಣ ಪ್ರದೇಶಕ್ಕೆ ನೀರಾವರಿ ಸೌಲಭ್ಯವೂ ಒದಗಿದೆ. ಧಬಧಬೆಯ ಹತ್ತಿರ ಒಂದು ತೂಗುಸೇತುವೆಯುಂಟು. ಗೋಕಾಕದ ಬಳಿ ಇರುವ ಪಂಚಮಿ ಗುಡ್ಡದಲ್ಲಿ ಹಲವು ಬಗೆಯ ಶಿಲೆಗಳು ದೊರಕುತ್ತವೆ.

ಗೋಕಾಕ ಪಟ್ಟಣ ಉ. ಅ. $16^0$ $40^1$ ಮತ್ತು $74^0$ $49^1$ ಮೇಲಿದೆ; ದಕ್ಷಿಣ ರೈಲ್ವೆ ಮಾರ್ಗದ ಗೋಕಾಕ ರೋಡ್ ನಿಲ್ದಾಣದಿಂದ ಊರು 13 ಕಿಮೀ ದೂರದಲ್ಲಿದೆ. ಗೋಕಾಕದ ಬಣ್ಣದ ಆಟಿಕೆಗಳೂ ಕರದಂಟು ಎಂಬ ಖಾದ್ಯ ವಸ್ತುವೂ ಪ್ರಸಿದ್ಧವಾದವು. ಇವು ಹೊರ ದೇಶಗಳಿಗೂ – ಮುಖ್ಯವಾಗಿ ಅಮೆರಿಕಕ್ಕೆ – ನಿರ್ಯಾತವಾಗುತ್ತವೆ. ಆಟಿಕೆ ಕೈಗಾರಿಕೆ 150 ವರ್ಷಗಳಷ್ಟು ಹಳೆಯದು. ಚಿನಗಾರರು ನಿರ್ಮಿಸುವ ಗೌರಿಗಳು ತುಂಬ ಸುಂದರವಾಗಿವೆ. ಆದರೆ ಈಗ ಈ ಕಸಬುದಾರರ ಸಂಖ್ಯೆ ಕಡಿಮೆಯಾಗಿದೆ. ಅವರಿಗೆ ಉತ್ತೇಜನ ನೀಡಲು ಒಂದು ಸಹಕಾರ ಸಂಘವುಂಟು. ಬಟ್ಟೆ ನೇಯುವ ಮತ್ತು ಅದಕ್ಕೆ ಬಣ್ಣ ಹಾಕುವ ಕಸಬುಗಳು ಪ್ರವರ್ಧಮಾನ ಸ್ಥಿತಿಯಲ್ಲಿದ್ದುವು. ಆದರೆ ಕ್ರಮೇಣ ಇವು ನಶಿಸಿದುವು. ಸರ್ಕಾರ ಇವಕ್ಕೆ ಈಚೆಗೆ ಪ್ರೋತ್ಸಾಹ ನೀಡುತ್ತಿದೆ.

ಚಿದಂಬರೇಶ್ವರರ ಶಿಷ್ಯರಾದ ಜೋರೆಮಹಾರಾಜರು ಗೋಕಾಕದವರು; ಗಳಗ ನಾಥರು ತಮ್ಮ ಮಹಾಭಾರತದ ಆದಿಪರ್ವವನ್ನು ಇಲ್ಲಿಯ ವೆಂಕಟೇಶ್ವರ ಗುಡಿಯಲ್ಲಿ ಕುಳಿತು ಬರೆದರು. ಆದಿಶಂಕರಾಚಾರ್ಯರ ದೊಡ್ಡ ಗುಡಿ ಇಲ್ಲಿದೆ. ಅಖಿಲಭಾರತ ಖ್ಯಾತಿಯ ಚಿತ್ರಗಾರರಾದ ಸಾಂಬಪ್ಪ ಚಿತ್ರಗಾರ, ಶಂಕರಪ್ಪ ಚಿತ್ರಗಾರ ಗೋಕಾಕದವರು. ಅವರು ತಯಾರಿಸಿದ ಗಣಪತಿಗಳು ಅನೇಕ ರಾಜ್ಯಗಳಲ್ಲಿ ಪ್ರಸಿದ್ಧಿ ಪಡೆದಿವೆ.

ಗೋಕಾಕ ಪಟ್ಟಣದ ಜನಸಂಖ್ಯೆ 1,35,773 (2011). ಇಲ್ಲೊಂದು ಪುರಸಭೆ ಇದೆ. ಅದು ಬಹುಕಾಲದಿಂದ ನಡೆಸಿಕೊಂಡು ಬಂದ ಪ್ರೌಢಶಾಲೆಯಲ್ಲದೆ ಇಲ್ಲಿ ಇನ್ನೂ ಪ್ರೌಢಶಾಲೆಗಳೂ, ಕಾಲೇಜೂ ಇವೆ. ಇಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದು 1858 ರಷ್ಟು ಹಿಂದೆ ಸ್ಥಾಪಿತವಾದ್ದು. ಇನ್ನೆರಡು 1878ರಲ್ಲಿ ಪ್ರಾರಂಭವಾದುವು.

ಗೋಕಾಕ ಧಬಧಬೆ

ಗೋಕಾಕಕ್ಕೆ ಸಾಕಷ್ಟು ಹಳೆಯ ಇತಿಹಾಸವುಂಟು. 1047ರ ಒಂದು ಶಾಸನದಲ್ಲಿ ಈ ಸ್ಥಳದ ಉಲ್ಲೇಖವಿದೆ. ಅಲ್ಲಿ ಇದನ್ನು ಗೋಕಾಗೆ ಎಂದು ಹೆಸರಿಸಿದೆ. 1685ರಲ್ಲಿ ಇದು ಅಂದಿನ ಸ್ಥಳೀಯ ಸರ್ಕಾರದ ಕೇಂದ್ರವಾಗಿತ್ತು. 1717–1754ರಲ್ಲಿ ಸವಣೂರು ನವಾಬರ ಅಧೀನಕ್ಕೆ ಒಳಪಟ್ಟಿತ್ತು. ಆಗ ಇಲ್ಲಿ ಹಲವು ಮಸೀದಿಗಳ ನಿರ್ಮಾಣವಾಯಿತು. ಅನಂತರ ಮತ್ತೆ ಹಿಂದೂಗಳ ವಶಕ್ಕೆ ಬಂದ ಈ ಪಟ್ಟಣ 1836ರಲ್ಲಿ ಇಂಗ್ಲಿಷರ ವಶವಾಯಿತು. (ಎಸ್.ವಿ.ಪಿ.ವಿ.)

**ಗೋಕಾಕ, ವಿನಾಯಕ ಕೃಷ್ಣ :** 1909–92. ವಿನಾಯಕ ಎಂಬ ಕಾವ್ಯನಾಮದಿಂದ ಖ್ಯಾತರಾಗಿದ್ದು ಕನ್ನಡ ಸಾಂಸ್ಕೃತಿಕ ಕ್ಷೇತ್ರವನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿದ ಮೇಧಾವಿಗಳು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು. ಕನ್ನಡ ಸಾಹಿತ್ಯದಲ್ಲಿ ನವ್ಯತೆಗೆ ಭದ್ರ ಬುನಾದಿ ಹಾಕಿದವರು ಇವರು ಎನ್ನಲಾಗಿದೆ. ಕವಿ, ಕಾದಂಬರಿಕಾರ, ವಿಮರ್ಶಕ, ವಾಗ್ಮಿ, ಶಿಕ್ಷಣ ತಜ್ಞ ಎಂದಿವರನ್ನು ಜನತೆ ಗುರುತಿಸಿದೆ. ಇವರು ಹುಟ್ಟಿದ್ದು ಸವಣೂರಿನಲ್ಲಿ, 1909 ರ ಆಗಸ್ಟ್ 9 ರಂದು. ಇವರ ಬಾಲ್ಯದ ಶಿಕ್ಷಣ ಸವಣೂರಿನಲ್ಲೂ ಉಚ್ಚ ಶಿಕ್ಷಣ ಧಾರವಾಡದಲ್ಲೂ ಜರುಗಿದುವು. ಅನಂತರ ಇವರು ಉನ್ನತ ಶಿಕ್ಷಣಕ್ಕಾಗಿ ಆಕ್ಸ್‌ಫರ್ಡಿಗೆ (1936) ಹೋಗಿಬಂದರು. ಧಾರವಾಡದಲ್ಲಿ ಓದುವಾಗ ಬೇಂದ್ರೆ, ಮುಗಳಿ ಅಂಥವರ ಸಹವಾಸದಲ್ಲಿ ಕನ್ನಡ ಅಭಿವ್ಯಕ್ತಿ, ಸಾಮರ್ಥ್ಯಗಳತ್ತ ಇವರ ಮನಸ್ಸು ತಿರುಗಿತು. ಇಂಗ್ಲಿಷ್ ಸಾಹಿತ್ಯಕ ಶಬ್ದಗಳ ಶಕ್ತಿಯುತ ಸ್ಥಾಣು ಕನ್ನಡ ರೂಪಗಳನ್ನು ಹುಡುಕುವತ್ತ ತಮ್ಮ ಪ್ರತಿಭೆಯನ್ನು ಹರಿಸಿದರು. ಬೇಂದ್ರೆ ಮುಂದಾಳಾದ ಗೆಳೆಯರ ಗುಂಪು ಸಾಹಿತ್ಯ ಸಂಸ್ಥೆಯ ಸ–'ಫಲ'–ತೆಯ ದ್ಯೋತಕವೆಂದು ಪರಿಗಣಿಸಲ್ಪಟ್ಟರು. ಸ್ಥಳೀಯ ಬಿ.ಎ. ಮತ್ತು ಎಂ.ಎ.ಗಳಲ್ಲೂ ಆಕ್ಸ್‌ಫರ್ಡಿನ ಬಿ.ಎ.ಯಲ್ಲೂ ಪ್ರಥಮ ವರ್ಗ ಪಡೆದರು.

ತಮ್ಮ ತುಂಬುಜೀವನದಲ್ಲಿವರು ಬಹುಕಾಲ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳ ಅಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಅಧ್ಯಾಪಕ ವೃತ್ತಿಗೆ ಇವರು ಇಳಿದದ್ದು 1931ರಲ್ಲಿ. ಅನಂತರ 1940ರಲ್ಲಿ ಸಾಂಗ್ಲಿಯ ವಿಲಿಂಗ್‌ಡನ್ ಕಾಲೇಜಿನ ಮುಖ್ಯಸ್ಥರಾದರು. 1945ರಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. 1946ರಲ್ಲಿ ವೀಸನಗರ ಕಾಲೇಜಿನ ಮುಖ್ಯಸ್ಥರಾದರು. 1949ರಲ್ಲಿ ಕೊಲ್ಹಾಪುರದ ರಾಜಾರಾಂ ಕಾಲೇಜಿನ

ಮುಖ್ಯಸ್ಥರಾದರು. 1952ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ಮುಖ್ಯಸ್ಥರಾಗಿದ್ದು 1959ರಲ್ಲಿ ಹೈದರಾಬಾದಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಸಂಸ್ಥೆಯ ನಿರ್ದೇಶಕರಾದರು. ಇವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದದ್ದು 1966ರಲ್ಲಿ. ಅನಂತರ ಇವರು ಕೆಲಕಾಲ ಸಿಮ್ಲದ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ ಸಂಸ್ಥೆಯ ನಿರ್ದೇಶಕರಾಗಿದ್ದರು.

ಗೋಕಾಕರು ಇಂಗ್ಲೆಂಡಿಗೆ ಮೂರು ಬಾರಿ ಹೋಗಿ ಬಂದುದಲ್ಲದೆ ಜಪಾನಿಗೂ (1957) ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೂ (1958) ಬೆಲ್ಜಿಯಮಿಗೂ (1959) ಪೂರ್ವ ಆಫ್ರಿಕಕ್ಕೂ (1960) ಭೇಟಿ ಕೊಟ್ಟಿದ್ದರು.

ಕವಿಗಳೂ ವಿಮರ್ಶಕರೂ ಶಿಕ್ಷಣ ತಜ್ಞರೂ ಆದ ಗೋಕಾಕರನ್ನು ನಾಡು ಅನೇಕ ಬಗೆಯಲ್ಲಿ ಗೌರವಿಸಿದೆ. ರಾಯಚೂರು ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ (1934), ಮುಂಬೈ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ (1950) ಮತ್ತು ಬಳ್ಳಾರಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ (1958); ಪಿ. ಇ. ಎನ್. ಅಧಿವೇಶನ (1957) ಮತ್ತು ಅಂತರರಾಷ್ಟ್ರೀಯ ಕವಿಮೇಳಗಳ (1955) ಸದಸ್ಯತ್ವ; ದ್ಯಾವಾಪೃಥಿವಿ ಕೃತಿಗಾಗಿ ಭಾರತದ ಸಾಹಿತ್ಯ ಅಕಾಡೆಮಿಯ ಬಹುಮಾನ (1960); ಪದ್ಮಶ್ರೀ ಪ್ರಶಸ್ತಿ (1960); ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ (1967); ಇವರ ಜೀವಮಾನದ ಶಿಖರಪ್ರಾಯವಾದ ಕೃತಿಯಾಗಿ ಹೊರಹೊಮ್ಮಿದ ಮಹಾಕಾವ್ಯ 'ಭಾರತ ಸಿಂಧುರಶ್ಮಿ' (1982) ಕೃತಿಗೆ ಜ್ಞಾನಪೀಠ ಪ್ರಶಸ್ತಿ; ವಿನಾಯಕ ವಾಙ್ಮಯ ಪ್ರಶಸ್ತಿ ಗ್ರಂಥ ಸಮರ್ಪಣೆ (1969)– ಇತ್ಯಾದಿ ಗೌರವಗಳು ಇವರಿಗೆ ಸಂದಿವೆ.



ಕಲೋಪಾಸಕ (1934) ಇವರ ಪ್ರಥಮ ಕಾವ್ಯ. ಹೊಸಗನ್ನಡ ಕಾವ್ಯದ ಮಾನವೀಯತೆ, ಭಾವತೀಕ್ಷ್ಣತೆ ಹಾಗೂ ಪ್ರಯೋಗಶೀಲತೆಯ ಲಕ್ಷಣಗಳನ್ನು ಈ ಕೃತಿ ಸ್ಫುಟಗೊಳಿಸುವುದಲ್ಲದೆ ಕನ್ನಡತನವನ್ನೂ ಸ್ಥಾನಿಕತೆಯನ್ನೂ ಕಾಯ್ದುಕೊಂಡಿದೆ. ಸರಳ ರಗಳೆಯ ನೂತನ ಅಭಿವ್ಯಕ್ತಿ ಪಯಣ (1937) ಎಂಬ ಗ್ರಂಥ. ಭಾವಗೀತೆಯ ವಿಧವಿಧ ಛಂದೋವಿಲಾಸಗಳನ್ನು ಭಾವ ವೈವಿಧ್ಯಕ್ಕೆ ಪಟುವಾಗಿ ಅಳವಡಿಸಿದ ಶ್ರೇಷ್ಠ ಸಂಕಲನವಿದು. ಇಜ್ಜೋಡು (1934) ಲೋಕಾನುಭವದಿಂದ ತುಂಬಿದ ಮಾರ್ಗದರ್ಶಿ ಕಾದಂಬರಿಗಳಲ್ಲೊಂದು. ತ್ರಿವಿಕ್ರಮರ ಆಕಾಶಗಂಗೆ (1945) ತಡವಾಗಿ ಪ್ರಕಟವಾದರೂ ಇದೇ ಸಮಯದ ವರೆಗಿನ ಆತ್ಮಿಕ ಜೀವನವನ್ನು ನಿಗೂಢವಾಗಿ ಚಿತ್ರಿಸುವ ಹೊಸ ಬಗೆಯ ಚಂಪೂ ಕೃತಿ; ಮಹತ್ತ್ವದ್ದಾದರೂ ಸಹೃದಯರ ದುರ್ಲಕ್ಷ್ಯಕ್ಕೀಡಾಗಿದೆ. 1936ರಲ್ಲಿ ಹಡಗಿನಿಂದ ಆಕ್ಸ್‌ಫರ್ಡಿಗೆ ಹೊರಟಾಗ ಹಡಗಿನ ತೂಗಾಟ ಹೊಸ ಗದ್ಯ ಕಾವ್ಯದ ಸಮರ್ಥ ರೂಪಗಳನ್ನು ಗೋಕಾಕರಲ್ಲಿ ರೂಪಿಸಿತು. ಅದರ ಫಲವೇ ಸಮುದ್ರ ಗೀತೆಗಳು (1940). ಕನ್ನಡ ಕಾವ್ಯ ಪಡೆದ ವಿಸ್ತಾರಕ್ಕೆ ಇದೊಂದು ದೊಡ್ಡ ಕೊಡುಗೆ. ಸಮುದ್ರದಾಚೆಯಿಂದ (1938) ಪ್ರವಾಸ ಸಾಹಿತ್ಯದ ಸವಿಯನ್ನು ಕನ್ನಡಿಗರಿಗೆ ಉಣ್ಣಿಸಿದ ಕೃತಿ; ಪತ್ರರೂಪದಿಂದ ಪ್ರಕಟವಾಗಿ ಕಾಲಿಕ ಅಗತ್ಯಕ್ಕೆ ಸಾರ್ವಕಾಲಿಕ ರುಚಿ ಕೊಟ್ಟಿರುವ ಪುಸ್ತಕ. ಯುದ್ಧೋತ್ತರ ಸ್ವಾತಂತ್ರ್ಯಪೂರ್ವ ಕಷ್ಟಕಾಲದಲ್ಲಿ ಜಾಗತಿಕ ಪ್ರಗತಿಶೀಲತೆಯತ್ತ ಗೋಕಾಕರ ಮನಸ್ಸು ಹೊರಳಿತು. ಅಭ್ಯುದಯ ಎಂಬ ಇವರ ಕವನಸಂಕಲನವೂ (1946) ಸಾಹಿತ್ಯದಲ್ಲಿ ಪ್ರಗತಿ ಎಂಬ ಇವರ ವಿಮರ್ಶನ ಗ್ರಂಥವೂ (1944) ಪ್ರಗತಿಶೀಲತೆಯಲ್ಲೂ ಕನ್ನಡತನವನ್ನು ಅನುಮೋದಿಸುತ್ತವೆ. ಸ್ವಾತಂತ್ರ್ಯೋತ್ತರ ವಿಪರ್ಯಾಸ್ತಯುಗದ ಅಭಿವ್ಯಕ್ತಿಯಾಗಿ ಬಂದ ಹಿಗ್ಗು (1950) ಮತ್ತು ನವ್ಯಕವಿತೆಗಳು (1950) ಎಂಬ ಹೊತ್ತಗೆಗಳು ಬುದ್ಧಿಭಾವಗಳನ್ನು ಒಂದು ರಸವಾಗಿ ಎರಕ ಹೊಯ್ಯುವ ರಸಕೃತಿಗಳಾಗಿವೆ. ಹೊಸ ಛಂದೋಮಾರ್ಗಗಳ ತುಳಿತದಿಂದ ಹೊಸ ಭಾವಾಭಿವ್ಯಕ್ತಿಯನ್ನು ಸಾಧಿಸಿ ನವ್ಯಮಾರ್ಗವನ್ನು ಕನ್ನಡಕ್ಕೆ ಇಲ್ಲಿನ ಕವನಗಳು ನೀಡಿದವು. ನವ್ಯ ಕಾವ್ಯ ಇಲ್ಲಿಯೇ ಪ್ರಾರಂಭವಾಯಿತೆನ್ನಬಹುದು. ಅದು ಅನಂತರ ತಾಂತ್ರಿಕ ಹೊಸತನಕ್ಕೆ ಮಾರುಹೋದ ಸಂದರ್ಭದಲ್ಲಿ ಗೋಕಾಕರ ಸೃಜನಶೀಲತೆ ಚಿಂತನಪರವಾಯಿತು. ಬಾಳದೇಗುಲದಲ್ಲಿ (1955), ಉಗಮ (1955), ದ್ಯಾವಾಪೃಥಿವಿ (1957), ಕಾಶ್ಮೀರ (1962)– ಇವು ಚಿಂತನಪರತೆಯ ಲಾಲಿತ್ಯ, ವಿಸ್ತಾರ, ಸುವಹತೆಗಳಿಂದ ಕೂಡಿವೆ. ಈವರೆಗೆ ಹೊಸ ಹೊಸ ಪ್ರಯೋಗಗಳ ಕಲ್ಲುತಗ್ಗುಗಳ ನಡುವೆ ಭೋರೆಂದು ಹರಿಯುತ್ತಿದ್ದ ಗೋಕಾಕರ ಪ್ರತಿಭೆ ಇಂಥ ಸದ್ದಿಲ್ಲದ ವಿಸ್ತಾರದತ್ತ ಹೊರಳಿದುದು ಇವರ ಆಂತರಿಕ ಜೀವನದ ನೈಸರ್ಗಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಇಂಥ ಬೆಳವಣಿಗೆಯನ್ನು ನಾವು ಎಲಿಯಟ್ ಮತ್ತು ಆಡೆನ್‌ರಲ್ಲಿ ಕಾಣುತ್ತೇವೆ. ಆಕಾಶಗಂಗೆಯಲ್ಲಿ ಕಂಡ ಪ್ರಕಾರ ವಿಭಿನ್ನತೆಯ ದರ್ಶನ ಹಿಗ್ಗಿ ಬಾಳದೇಗುಲದಲ್ಲಿ ಎಂಬ ಕಾವ್ಯದಲ್ಲಿ ಜೀವನವನ್ನು ಗುರುತಿಸುವ ಪುರಾಣದರ್ಶನವಾಗಿದೆ (ಎಪಿಕ್ ವಿಷನ್). ವ್ಯಕ್ತಿವ್ಯಕ್ತಿಗಳ ಸ್ತೋತ್ರಾರ್ಹ ಗುಣಗಳನ್ನು ಅದು ಬಣ್ಣಿಸಿದರೂ ತನ್ನ ವಿಮರ್ಶಕಗುಣವನ್ನು ಬಿಡದೆ, ತನ್ನ ವ್ಯಕ್ತಿಗತ ಮನೋಧರ್ಮದ ಬೆಳವಣಿಗೆಯಲ್ಲಿ ಇವರನ್ನು ಪಾಲುಗಾರರನ್ನಾಗಿ ಮಾಡುತ್ತದೆ. ಊರ್ಣನಾಭದಲ್ಲಿ (1961) ಮತ್ತೆ ತಾಂತ್ರಿಕ ಪ್ರಯೋಗಶೀಲತೆ, ಇಂದಿಲ್ಲ ನಾಳೆ (1965) ಎಂಬ ಕೃತಿಯಲ್ಲಿ ಮತ್ತೆ ಚಂಪೂ ಪ್ರಯೋಗ, ತ್ರಿಶಂಕುವಿನ ಪ್ರಜ್ಞಾ ಪ್ರಭಾತ (1965) ಮತ್ತು ಪುಣ್ಯಭೂಮಿಗಳಲ್ಲಿ (1966) ಮತ್ತೆ ಬುದ್ಧಿಭಾವಗಳ ಎರಕ ಕಂಡುಬಂದಿವೆ. ಭಾವರಾಗ ಎಂಬ ಗ್ರಂಥ (1969) ಪಯಣವೆಂಬ ಸಂಗ್ರಹದ ಕೋಮಲ ಭಾವ ಪರತೆಯನ್ನು ಛಂದಸ್ಸಿನ ಶಾಸನಕ್ಕೆ ಸಮರ್ಥವಾಗಿ ಇಳಿಸಿದ ಕವಿಪ್ರತಿಭೆ ಇನ್ನೂ ಯಾವ ಹೊಸ ದಾರಿ ತುಳಿದೀತೆಂಬ ನೇಮಕಗಳನ್ನು ಕಾಣಿಸುವುದಿಲ್ಲ. ಗೋಕಾಕರೇ ಹುಟ್ಟಿಸಿದ ನವ್ಯಕಾವ್ಯದಿಂದ ಪ್ರಬುದ್ಧಗೊಂಡ ಹೊಸ ಪೀಳಿಗೆಯ ವಿಮರ್ಶಕರ ಕಣ್ಣಿಗೆ ಇವರ ಚಿಂತನಪರ ಕಾವ್ಯವೊಂದೇ ಕಂಡದ್ದು ವಿಪರ್ಯಾಸಕ್ಕೆ ಕಾರಣವಾಗಿದೆ. ಇಜ್ಜೋಡು ಕಾದಂಬರಿ ಬೆಳೆದು ಸಮರಸವೇ ಜೀವನ (1967) ಎಂಬ ಮಹಾಕಾದಂಬರಿಯಾಯಿತು. 1268 ಪುಟಗಳಷ್ಟು ದೊಡ್ಡದಾಗಿರುವ ಈ ಕಾದಂಬರಿ ತನ್ನ ವೈಶಾಲ್ಯಕ್ಕೆ ಕ್ಷೇತ್ರಬಾಹುಳ್ಯಕ್ಕೆ ಪಾತ್ರಬಾಹುಳ್ಯಕ್ಕೆ ಅಗತ್ಯವಾದ ಸಂವಿಧಾನ ಕೌಶಲವನ್ನೂ ಜೀವನಾನುಭವವನ್ನೂ ದರ್ಶನವನ್ನೂ ಪ್ರದರ್ಶಿಸುತ್ತದೆ. ಸ್ಥಾನಿಕತೆಯಿಂದ ಸಾರ್ವಭೌಮಿಕತೆಯತ್ತ ಈ ಕಾದಂಬರಿ ತಿರುಗಿರುವ ಅಂಶವನ್ನು ಮರೆಯಲಾಗದು.

ದ್ಯಾವಾಪೃಥಿವಿಯಲ್ಲಿ ಪರಸ್ಪರ ಪೂರಕವಾದ ನೀರದ ಮತ್ತು ಇಳಾಗೀತವೆಂಬ ಎರಡು ಭಾಗಗಳಿವೆ. ನೆಲದಲ್ಲಿ ನಿಂತು ಆಕಾಶವನ್ನು ಕಂಡ ಪರಿ ನೀರದದಲ್ಲಿ ಅಭಿವ್ಯಕ್ತವಾದರೆ ಆಕಾಶದಿಂದ ನೆಲದತ್ತ ಹಾಯಿಸಿದ ದೃಷ್ಟಿ ಇಳಾಗೀತದಲ್ಲಿ ಕಾಣುತ್ತದೆ. ನೀರದದಲ್ಲಿ ಮೋಡಕಾಮರೂಪಿಯಾಗಿ, ಮರ್ತ್ಯಜೀವನಕ್ಕೊಡ್ಡಿದ ಬಹುಬಗೆಯ ಪ್ರತಿಮೆಯಾಗಿ ನಾನಾರ್ಥ ವ್ಯಂಜಕವಾಗಿ ಕಾಣಿಸಿಕೊಳ್ಳುತ್ತದೆಯಲ್ಲದೆ ಒಮ್ಮೊಮ್ಮೆ ಒಂದೊಂದು ತತ್ತ್ವವನ್ನು ಪ್ರಕಟಿಸುತ್ತದೆ. ಇಳಾಗೀತದಲ್ಲಿ, ಕವಿ ಬೆಳಗಾವಿಯಿಂದ ದಿಲ್ಲಿಯ ವರೆಗೆ ವಿಮಾನಯಾನ ಮಾಡಿದಾಗ ಕಂಡ ದೃಶ್ಯಗಳು ವಿವಿಧ ಪ್ರತಿಮೆಗಳಾಗಿ ಬರುತ್ತವೆ. ಒಟ್ಟು ಕೃತಿಯ ಉದ್ದಕ್ಕೂ ಕವಿಯ ಕಲ್ಪನಾವಿಲಾಸ, ಚಿಂತನಪರತೆ, ಪುರಾಣಪರಿಜ್ಞಾನ, ಆಧ್ಯಾತ್ಮಿಕ ಶ್ರದ್ಧೆ, ವೈಜ್ಞಾನಿಕ ದೃಷ್ಟಿ– ಇವೆಲ್ಲ ವೇದ್ಯವಾಗುತ್ತವೆ.

ಗೋಕಾಕರ ವಿಮರ್ಶಾಶಾಸ್ತ್ರ ಕೇವಲ ಇಂಗ್ಲಿಷ್ ವಿಮರ್ಶೆಗೆ ಎಂದೂ ಮಾರುಹೋಗಿಲ್ಲ. ಕನ್ನಡ ನೆಲದಿಂದ ಅದು ಪುನಃಪುನಃ ಶಕ್ತಿ ಪಡೆದಿದೆಯಲ್ಲದೆ ಮಾರ್ಗದರ್ಶಿಯೂ ಆಗಿದೆ. ಕನ್ನಡದಲ್ಲಿ ಏನೂ ಇಲ್ಲದಾಗ– ಕವಿಕಾವ್ಯ ಮಹೋನ್ನತಿ (1945) ಎಂಬ ಇವರ ಕೃತಿ ಬಂತು. ರಸಕಾವ್ಯ ಪ್ರಗಲ್ಭಗೊಂಡಾಗ – ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು (1946) ಎಂಬ ಗ್ರಂಥ ಬಂತು. ನವ್ಯಕಾವ್ಯ ಬಲಿತು ತನ್ನನ್ನೆ ತಾನು ಅರಿಯಲು ಯತ್ನಿಸುತ್ತಿದ್ದಾಗ– ನವ್ಯತೆ ಮತ್ತು ಕಾವ್ಯಜೀವನ (1955) ಎಂಬ ಕೃತಿ ಬಂತು. ನವ್ಯತೆ ಮತ್ತು ಸಂಪ್ರದಾಯಗಳಲ್ಲಿ ಆತ್ಮಘಾತಕ ತಿಕ್ಕಾಟ ಬೆಳೆದಾಗ– ಸಮನ್ವಯ ಸೂತ್ರಗಳು ಎಂಬ ಕೃತಿ ಬಂತು. ಹೀಗೆ ಸಾಮಯಿಕ ಪ್ರಜ್ಞೆ ಗೋಕಾಕರ ವಿಮರ್ಶೆಯ ಗುಣವಾಗಿದೆ. ಇವರ ನಾಟಕಗಳು ಇದೇ ಯಶಸ್ಸನ್ನು ಪಡೆದಾವೆಂದು ಹೇಳಲಾಗದು. ಆದರೆ ಅವು ಪ್ರಯೋಗಶೀಲವಾಗಿವೆ. ಇವರ ಪ್ರತಿಭೆ ಮೊದಲಿನಿಂದ ಕೊನೆಯವರೆಗೆ ಕನ್ನಡತನದತ್ತ ಒಲಿದಿದೆ.

ಗೋಕಾಕರು ಇಂಗ್ಲಿಷಿನಲ್ಲೂ ಕೃತಿರಚನೆ ಮಾಡಿದ್ದಾರೆ; ದಿ ಸಾಂಗ್ ಆಫ್ ಲೈಫ್ ಅಂಡ್ ಅದರ್ ಪೋಯೆಮ್ಸ್ (1947), ದಿ ಪೊಯೆಟಿಕ್ ಅಪ್ರೋಚ್ ಟು ಲ್ಯಾಂಗ್ವೇಜ್ (1952), ಇಂಗ್ಲಿಷ್ ಇನ್ ಇಂಡಿಯ: ಇಟ್ಸ್ ಪ್ರೆಸೆಂಟ್ ಅಂಡ್ ಫ್ಯೂಚರ್ (1964), ಇನ್ ಲೈಫ್ಸ್ ಟೆಂಪಲ್ (1965). ಗೋಕಾಕರು ಇಂಗ್ಲಿಷಿನಲ್ಲಿ ಕಾವ್ಯವಿಮರ್ಶೆ ಮಾಡಿದ್ದಾರಲ್ಲದೆ ಸ್ವತಂತ್ರ ಭಾರತದಲ್ಲಿ ಇಂಗ್ಲಿಷ್ ನಿರ್ವಹಿಸಬೇಕಾದ ಕಾರ್ಯವನ್ನು ನಿಟ್ಟುಗೊಳಿಸುವಲ್ಲಿ ಶ್ರಮಿಸಿದ್ದಾರೆ. ಇವರು 1992ರ ಏಪ್ರಿಲ್ 28 ರಂದು ನಿಧನರಾದರು. (ಎಸ್.ಎಂ.ಪಿ.)

**ಗೋಕುಲ :** ಉತ್ತರ ಪ್ರದೇಶದ ಮಥುರ ಜಿಲ್ಲೆಯಲ್ಲಿರುವ ಒಂದು ಪವಿತ್ರ ಸ್ಥಳ; ವ್ರಜಮಂಡಲದಲ್ಲಿನ ಅನೇಕ ಕ್ಷೇತ್ರಗಳಲ್ಲೊಂದು. ಹುಟ್ಟಿದ ಕೂಡಲೇ ಶ್ರೀಕೃಷ್ಣನನ್ನು ಗೋಕುಲಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಈತ ತನ್ನ ದಿವ್ಯ ಬಾಲಲೀಲೆಗಳನ್ನು ಮೆರೆದನಾಗಿ ಅದರ ಮಹತ್ತ್ವ ಹೆಚ್ಚಿತು. ಗೋಕುಲ ಗೋಪಾಲಕರ ವಸತಿಸ್ಥಾನ. ನಂದಗೋಪ ಅವರ ಮುಖ್ಯಸ್ಥ. ಆತನ ಮನೆಯಲ್ಲಿಯೇ ಶ್ರೀಕೃಷ್ಣ ಬೆಳೆದು ದೊಡ್ಡವನಾದ; ಪೂತನಿವಧೆ, ಯಮಳಾರ್ಜುನ ಉದ್ಧಾರ ಮುಂತಾದ ಬಾಲಲೀಲೆಗಳನ್ನು ಇಲ್ಲಿಯೇ ಮೆರೆದ. ಭಾಗವತ ಪುರಾಣದ ದಶಮಸ್ಕಂಧದಲ್ಲಿ ಗೋಕುಲ, ಗೋಪ, ಗೋಪಿ ಮತ್ತು ಗೋಧನಗಳ ಬಗ್ಗೆ

ರಮ್ಯವರ್ಣನೆ ದೊರೆಯುತ್ತದೆ. ಇದನ್ನೇ ಆಧರಿಸಿಕೊಂಡು ಚೈತನ್ಯ, ಮೀರಾಬಾಯಿ, ಏಕನಾಥ, ಸೂರದಾಸ, ತುಳಸೀದಾಸ, ಪುರಂದರದಾಸ ರಂಥವರು ಗೋಕುಲದ ಮಹಿಮೆಯನ್ನು ತಮ್ಮ ಕೃತಿಗಳಲ್ಲಿ ಕೊಂಡಾಡಿದ್ದಾರೆ.

ವೈಷ್ಣವ ಸಂಪ್ರದಾಯದಲ್ಲಿ ಗೋಕುಲಕ್ಕೆ ಬಹುದೊಡ್ಡ ಸ್ಥಾನವಿದೆ. ಗೋಕುಲವನ್ನು ಒಂದು ಪ್ರಿಯಧಾಮವೆಂದು ವೈಷ್ಣವ ಸಂತರು ಕೀರ್ತಿಸಿದ್ದಾರೆ. ಮಥುರೆಯಿಂದ ಶ್ರೀಕೃಷ್ಣನನ್ನು ಕರೆದುಕೊಂಡು ಬಂದ ಅಕ್ರೂರ ಗೋಕುಲದ ಜನರಲ್ಲಿ ನೆಲೆಸಿದ್ದ ಭಕ್ತಿಪ್ರೇಮಗಳಿಂದ ವಿಹ್ವಲನಾಗಿ ಅದೇ ವಾತಾವರಣದಲ್ಲಿಯೇ ಇರಬಯಸಿದ. ಗೋಕುಲವನ್ನು ಕಂಡು ಮನಸೋತ ಉದ್ಧವ ಅಲ್ಲಿಯ ಔಷಧಿ ವನಸ್ಪತಿಗಳಲ್ಲಿ ತಾನೂ ಒಂದಾಗಲು ಬಯಸಿದ. ವಲ್ಲಭ ಸಂಪ್ರದಾಯದವರಿಗೆ ಗೋಕುಲ ಒಂದು ಪ್ರಮುಖ ಆರಾಧನಾಸ್ಥಳವಾಗಿದೆ. ಈ ಸಂಪ್ರದಾಯದ 24 ಕಟ್ಟೋಣಗಳು (ಮಠ) ಇಲ್ಲಿವೆ. ಔರಂಗಜೇಬನ ಕಾಲದಿಂದ ವಲ್ಲಭಸಂಪ್ರದಾಯದ ಸರ್ವಪೂಜ್ಯ ಠಾಕೂರ ಇಲ್ಲಿ ಇರುತ್ತಿದ್ದುದರಿಂದ ದೂರದೂರದ ಶ್ರೀಕೃಷ್ಣ ಭಕ್ತರು ಗೋಕುಲದ ಕಡೆಗೆ ಆಕರ್ಷಿತರಾಗುತ್ತಿದ್ದರು. ಗೋಕುಲದಲ್ಲಿ ನೋಡತಕ್ಕ ಸ್ಥಳಗಳು– ವಲ್ಲಭಾಚಾರ್ಯರ ಮಠ (ಸಭಾಗೃಹ), ಗೋಕುಲನಾಥನ ಮಠ. ಗೋವಿಂದಘಾಟ್, ವಲ್ಲಭಘಾಟ್, ಗೋಕುಲನಾಥ ದೇವಸ್ಥಾನ, ವ್ರಜರಾಜ ದೇವಸ್ಥಾನ ಇತ್ಯಾದಿ. ರಮಣರೇತೀ ಮತ್ತು ಬ್ರಹ್ಮಾಂಡತೀರ್ಥ ಇವು ಗೋಕುಲದಲ್ಲಿನ ಪವಿತ್ರತೀರ್ಥಗಳು. *

**ಗೋಕುಲಾಷ್ಟಮಿ :** ಶ್ರೀಕೃಷ್ಣನ ಜನ್ಮದಿನದಂದು ಹಿಂದೂಗಳು ಆಚರಿಸುವ ಒಂದು ದೊಡ್ಡ ಹಬ್ಬ. ಶ್ರೀಕೃಷ್ಣ ಜನ್ಮಾಷ್ಟಮಿ, ಶ್ರೀಕೃಷ್ಣ ಜಯಂತಿ ಎಂಬ ಹೆಸರುಗಳೂ ಇವೆ. ಕೆಲವರು ಇದನ್ನು ವ್ರತವಾಗಿ ಆಚರಿಸುತ್ತಾರೆ.

ಗೋಕುಲಾಷ್ಟಮಿ ಪೂಜೆಗೆ ಅಣಿಗೊಳಿಸಿದ ಮಂಟಪ

ದ್ವಾಪರ ಯುಗಾಂತ್ಯದಲ್ಲಿ ಭೂಭಾರವನ್ನು ಇಳಿಸಲು ಭಗವಂತ ಶ್ರೀಕೃಷ್ಣನಾಗಿ ಹುಟ್ಟಿದ ಕುರುಹಾಗಿ ಈ ಹಬ್ಬವನ್ನು ಮಾಡುತ್ತಾರೆ. ಶ್ರೀಕೃಷ್ಣ ಜನಿಸಿದ್ದು ಮಥುರಾ ನಗರದಲ್ಲಿ. ತಂದೆಯಾದ ವಸುದೇವ ಕೃಷ್ಣ ಹುಟ್ಟಿದಾಗ ಕಂಸನ ಕಾಕದೃಷ್ಟಿಯಿಂದ ಶಿಶುವನ್ನು ಹೇಗೆ ರಕ್ಷಿಸುವುದು ಎಂದು ಯೋಚಿಸತೊಡಗಿದ. ಆಗ ಶಿಶು ತಾನು ಭಗವಂತನ ಅವತಾರವೆಂಬುದನ್ನು ವಸುದೇವನಿಗೆ ಸ್ಪಷ್ಟಪಡಿಸಿ ತನ್ನನ್ನು ನಂದಗೋಕುಲದಲ್ಲಿಟ್ಟು, ನಂದಗೋಪನಿಗೆ ಅದೇ ಸಮಯದಲ್ಲಿ ಹುಟ್ಟಿದ್ದ ಹೆಣ್ಣು ಶಿಶುವನ್ನು ತನಗೆ ಪ್ರತಿಯಾಗಿ ಮಥುರಾಕ್ಕೆ ತರುವಂತೆ ತಿಳಿಸಿತು. ವಸುದೇವ ಅದರಂತೆಯೇ ಮಾಡಿದ. ವಾಸ್ತವವಾಗಿ ಮಥುರಾದಲ್ಲಿ ಶ್ರೀಕೃಷ್ಣ ಜನಿಸಿದ್ದರೂ ನಂದಗೋಕುಲದಲ್ಲಿ ಅಷ್ಟಮಿಯಂದು ಜನಿಸಿದಂತೆ ಭಾವಿಸುವುದರಿಂದ ಈ ಕೃಷ್ಣಜನ್ಮಾಷ್ಟಮಿಗೆ ಗೋಕುಲಾಷ್ಟಮಿ ಎಂಬ ಹೆಸರಿರುವುದು ಅನ್ವರ್ಥವಾಗಿದೆ.

ಪ್ರತಿವರ್ಷದಲ್ಲೂ ಶ್ರೀಕೃಷ್ಣನ ಜನ್ಮದಿನವನ್ನು ನಿಷ್ಕರ್ಷಿಸುವಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಜನ್ಮಮಾಸದ ಜನನ ತಿಥಿಯ ದಿವಸದಲ್ಲಿ ಕೆಲವರೂ ಜನ್ಮ ನಕ್ಷತ್ರದಲ್ಲಿ ಕೆಲವರೂ ಈ ಹಬ್ಬವನ್ನು ಆಚರಿಸುತ್ತಾರೆ. ಈ ಎರಡೂ ಒಂದೇ ದಿವಸದಲ್ಲಿ ಬಂದಾಗ ಯಾವ ವ್ಯತ್ಯಾಸವೂ ಇರುವುದಿಲ್ಲ. ಜನ್ಮಮಾಸದಲ್ಲೂ ಸೌರ–ಚಾಂದ್ರಮಾನ ಭೇದದಿಂದ ಜನ್ಮದಿನ ಬದಲಾಗುತ್ತದೆ.

ಕೃಷ್ಣ ಹುಟ್ಟಿದುದು ಸಿಂಹಶ್ರಾವಣಮಾಸದ ಬಹುಳ ಅಷ್ಟಮೀ ಬುಧವಾರ ರಾತ್ರಿ ರೋಹಿಣೀ ನಕ್ಷತ್ರದಲ್ಲಿ. ಚಾಂದ್ರಮಾನ ಪದ್ಧತಿಯನ್ನನುಸರಿಸುವವರು ಶ್ರಾವಣಮಾಸದ ಕೃಷ್ಣಪಕ್ಷ ಅಷ್ಟಮಿಯ ದಿವಸ ಇದನ್ನು ಆಚರಿಸುತ್ತಾರೆ. ಆಗ ಸಿಂಹಮಾಸವೂ ಸೇರಿದ್ದರೆ ಸೌರ–ಚಾಂದ್ರಮಾನಗಳೆರಡೂ ಕೂಡಿದಂತಾಗುತ್ತದೆ. ಈ ತಿಂಗಳಿನ ಕೃಷ್ಣಾಷ್ಟಮಿಯ ಅರ್ಧರಾತ್ರಿ ಕಾಲದಲ್ಲಿರುವ ದಿವಸವನ್ನು ಜನ್ಮಾಷ್ಟಮಿ ಎಂದು ಶಾಸ್ತ್ರಕಾರರು ಪರಿಗಣಿಸಿದ್ದಾರೆ. ಆ ದಿವಸ ಉದಯಾದಿ ಅಷ್ಟಮೀ ತಿಥಿ ಇದ್ದು ಕೃತ್ತಿಕಾನಕ್ಷತ್ರ ಇಲ್ಲದಿದ್ದಾಗ ಅದು ಶುದ್ಧ ತಿಥಿ ಆಗುತ್ತದೆ. ಆ ಶುದ್ಧ ತಿಥಿಯ ದಿವಸವೇ ಜನ್ಮಾಷ್ಟಮಿಯನ್ನು ಎಲ್ಲರೂ ಆಚರಿಸುತ್ತಾರೆ. ತಿಥಿ ಪ್ರಧಾನವಾದುದು, ಜನ್ಮಾಷ್ಟಮಿ.

ನಕ್ಷತ್ರವನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಂಡಿರುವವರು ಉದಯಾದಿ ಅಷ್ಟಮೀ ತಿಥಿ ಇರುವ ದಿವಸ ಉದಯಾದಿ ರೋಹಿಣೀನಕ್ಷತ್ರವೂ ಇದ್ದಲ್ಲಿ ಆ ದಿನದಲ್ಲೇ ಶ್ರೀಕೃಷ್ಣ ಜಯಂತಿಯನ್ನು ಆಚರಿಸುತ್ತಾರೆ. ಜನ್ಮಾಷ್ಟಮಿ, ಜಯಂತಿ, ವ್ರತಗಳು ಸಾಮಾನ್ಯವಾಗಿ ಭಿನ್ನವಾಗಿಯೇ ಬರುತ್ತವೆ. ಕೆಲವೊಮ್ಮೆ ಎರಡೂ ಒಂದಾಗಿ ಬರುವುದುಂಟು. ನಕ್ಷತ್ರ ಪ್ರಧಾನವಾದುದು ಜಯಂತಿ. ಇದಕ್ಕೆ ಸಪ್ತಮೀ ಅಥವಾ ಕೃತ್ತಿಕಾನಕ್ಷತ್ರದೊಂದಿಗೆ ಇರದ (ವೇಧೆ ಇರದ) ರೋಹಿಣೀ ನಕ್ಷತ್ರ ಮುಖ್ಯ. ಕೆಲವು ವೇಳೆ ವೇಧೆ ಇಲ್ಲದ ರೋಹಿಣೀ ನಕ್ಷತ್ರ ದೊರೆಯದಿದ್ದಾಗ ಅಷ್ಟಮೀ–ರೋಹಿಣಿಗಳನ್ನು ಬಿಟ್ಟು ನವಮೀ ಸಹಿತ ಮೃಗಶಿರಾದಲ್ಲೂ ಜಯಂತಿಯನ್ನು ಆಚರಿಸುತ್ತಾರೆ. ಬುಧವಾರದಲ್ಲಿ ಅಷ್ಟಮೀ ಎರಡೂ ಇದ್ದು ಕೃತ್ತಿಕಾ ಅಥವಾ ಸಪ್ತಮೀ ವೇಧೆ ಇದ್ದರೂ ಬುಧವಾರ ಯೋಗವಿಶೇಷದಿಂದ ಆ ದಿನದಂದೆ ಒಂದು ವರ್ಗದವರು ಹಬ್ಬವನ್ನು ಮಾಡುತ್ತಾರೆ. ಒಟ್ಟಿನಲ್ಲಿ ಜನ್ಮಾಷ್ಟಮಿ, ಶ್ರೀಕೃಷ್ಣ ಜಯಂತಿ ಎಂಬ ಎರಡು ಬಗೆಯೂ ಗೋಕುಲಾಷ್ಟಮಿಗಳೇ. ಆದರೆ ಎರಡೂ ಭಿನ್ನವ್ರತಗಳು.

ಶ್ರೀವೈಷ್ಣವ ಪಂಗಡದವರಲ್ಲಿ ಜಯಂತಿ ಎಂದು ಮಾಡುವ ಈ ಹಬ್ಬ ಉಳಿದೆಲ್ಲ ಹಬ್ಬಗಳಿಗಿಂತ ಅಗ್ರಸ್ಥಾನ ಪಡೆದಿದೆ. ದೈಹಿಕ ಶ್ರಮವನ್ನು ಗಮನಿಸದೆ ವಿವಿಧ ಭಕ್ಷ್ಯಗಳನ್ನು ತಯಾರಿಸಿ ಅಂದು ಶ್ರೀಕೃಷ್ಣನಿಗೆ ನೈವೇದ್ಯ ಮಾಡುವುದು ಮಾತ್ರವಲ್ಲದೆ ಅದನ್ನು ಇಷ್ಟಮಿತ್ರರೆಲ್ಲರಿಗೂ ಪ್ರಸಾದವಾಗಿ ಹಂಚುವ ರೂಢಿ ಇವರಲ್ಲಿದೆ. ಪ್ರಸಾದಕ್ಕಾಗಿಯೇ ಈ ಮನೆಗಳಿಗೆ ಜಯಂತಿಯಾದ ಮಾರನೆಯ ದಿವಸ ಓಲಗ ಊದಿಕೊಂಡು ಬರುವ ಪದ್ಧತಿ ಇಂದಿಗೂ ಇದೆ. ಚಕ್ಕುಲಿ, ಎರೆಯಪ್ಪ, ಸುಕ್ಕಿನ ಉಂಡೆ, ಕ್ಷೀರಾನ್ನ –ಇವನ್ನು ತಪ್ಪದೆ ಆ ದಿವಸ ಮಾಡಿ ನಿವೇದನ ಮಾಡುತ್ತಾರೆ.

ಗೋಕುಲಾಷ್ಟಮಿ ದಿನ ಹಗಲು ಉಪವಾಸವಿದ್ದು ಗೃಹವನ್ನು ಚೊಕ್ಕಟ ಮಾಡಿ ತಳಿರುತೋರಣಗಳಿಂದ ಅಲಂಕರಿಸಿ ದೇವರ ಸನ್ನಿಧಿಯಲ್ಲಿ ಎಲ್ಲ ವಿಧ ಫಲಗಳನ್ನೂ ಪಲಸ್ತಿಗೆಯಲ್ಲಿ ಕಟ್ಟುತ್ತಾರೆ. ರಾತ್ರಿ ಸ್ನಾನಾಹ್ನಿಕಗಳನ್ನು ಮುಗಿಸಿದ ಬಳಿಕ ಸಂಕಲ್ಪಪೂರ್ವಕ ಶ್ರೀಕೃಷ್ಣನಿಗೆ ವಿಧಿವತ್ತಾಗಿ ಅಭಿಷೇಕ ಮಾಡಿ ವಸ್ತ್ರಾಭರಣ ಚಂದನ ಪುಷ್ಪಗಳಿಂದಲಂಕರಿಸಿ ಧೂಪ ದೀಪಗಳನ್ನು ಸಮರ್ಪಣೆ ಮಾಡಿ ನಾಮಾವಳಿಯಿಂದ ತುಲಸಿ, ಪುಷ್ಪಗಳನ್ನು ಅರ್ಚನೆ ಮಾಡಿ ನೈವೇದ್ಯ ಮಾಡುತ್ತಾರೆ. ಅರ್ಧರಾತ್ರಿಯಲ್ಲಿ ಚಂದ್ರೋದಯ ಕಾಲಕ್ಕೆ ಸರಿಯಾಗಿ ಎಳನೀರನ್ನು ಶಂಖದಲ್ಲಿಟ್ಟುಕೊಂಡು 'ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ। ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ । ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ । ಗೃಹಾಣಾರ್ಘ್ಯಂ ಮಯಾದತ್ತಂ ದೇವಕೀ ಜನಿತ ಪ್ರಭೋ' ಎಂಬ ಮಂತ್ರದಿಂದ ದೇವಕೀಸಹಿತ ಶ್ರೀಕೃಷ್ಣನಿಗೆ ಅರ್ಘ್ಯಪ್ರದಾನ ಮಾಡುತ್ತಾರೆ. ಅನಂತರ ರೋಹಿಣೀಸಹಿತನಾದ ಚಂದ್ರನನ್ನು ಪೂಜಿಸಿ 'ಕ್ಷಿರೋದಾರ್ಣವಸಂಭೂತ ಅತ್ರಿಭೂತಸಮುದ್ಭವ । ರೋಹಿಣೀಶ ಗೃಹಾಣಾರ್ಘ್ಯಂ ರಮಾಭ್ರಾತರ್ಮನಃಪತೇ।' ಎಂಬ ಮಂತ್ರದಿಂದ ಅರ್ಘ್ಯ ಕೊಡುತ್ತಾರೆ. *

ವ್ರತ ಮಾಡುವವರು ಆ ರಾತ್ರಿ ಜಾಗರಣೆ ಇದ್ದು ಮಾರನೆಯ ದಿನ ನಿಯಮದಂತೆ ವ್ರತೋದ್ಯಾಪನ ಮಾಡುತ್ತಾರೆ. ಇದೊಂದು ವಿಧ. ಉತ್ತಮಾಂತ್ಯದಲ್ಲಿ ಪಾರಣೆ ಮಾಡುವುದು ಇನ್ನೊಂದು ವಿಧ. ಇದರಂತೆ ಕೆಲವರು ರಾತ್ರಿಯಲ್ಲೇ ಭೋಜನ ಮಾಡುತ್ತಾರೆ. ಮತ್ತೆ

ಕೆಲವರು ಮಾರನೆಯ ಬೆಳಗ್ಗೆ ಸ್ನಾನಾಹ್ನಿಕಗಳನ್ನು ಮುಗಿಸಿದ ಬಳಿಕ ಪಾರಣೆ ಮಾಡುತ್ತಾರೆ. ಅಂದು ನವನೀತ ಪ್ರಿಯನಾದ ಶ್ರೀಕೃಷ್ಣನಿಗೆ ನವನೀತವನ್ನು ತಪ್ಪದೆ ನಿವೇದಿಸುತ್ತಾರೆ. ಇದರಂತೆ ಗೋಪಾಲಕರಿಗೆ ಪ್ರಿಯವಾದ ಮತ್ತು ಸುಲಭವಾಗಿ ದೊರೆಯುವ ಕಾರೆ, ಕುಡುಗಲೆ ಮತ್ತು ನೇರಳೆ ಹಣ್ಣುಗಳನ್ನು ಗೋಪಾಲನಾದ ಶ್ರೀಕೃಷ್ಣನಿಗೆ ನಿವೇದನ ಮಾಡುವುದು ಇಂದಿಗೂ ನಡೆದು ಬಂದಿದೆ. ಹಬ್ಬವಾದ ಮಾರನೆಯ ದಿನ ಸಾಯಂಕಾಲ ಶ್ರೀಕೃಷ್ಣನಿಗೆ ತೊಟ್ಟಿಲು ಶಾಸ್ತ್ರವನ್ನೂ ಮಾಡುತ್ತಾರೆ. ದೇವಾಲಯದಲ್ಲಿ ಶ್ರೀಕೃಷ್ಣನ ಉತ್ಸವ ನಡೆದು ಪ್ರತಿನಿತ್ಯವೂ ಶ್ರೀಕೃಷ್ಣನ ಬಾಲಲೀಲೆಗಳನ್ನು ನಿರ್ದೇಶಿಸುವಂತೆ ಅಲಂಕಾರ ಮಾಡಿ ಉತ್ಸವ ಮಾಡುತ್ತಾರೆ. ಪೂತನೀಸಂಹಾರ. ಬಕಸಂಹಾರ, ಶಕಟಾಸುರ ಸಂಹಾರ, ಯಮಳಾರ್ಜುನೀಯ, ರಾಸಕ್ರೀಡೆ ಇವುಗಳ ಉತ್ಸವ ಹಿಂದೆ ಮೈಸೂರು ಅರಮನೆಯ ಮುಂದಿನ ವೀಧಿಗಳಲ್ಲಿ ನಡೆಯುತ್ತಿತ್ತು. ಈ ಉತ್ಸವದಲ್ಲಿ ಕೃಷ್ಣನ ಮುಂದೆ ಹಸುಗಳೂ ಇರುವುದರಿಂದ ಇದನ್ನು ಗೋವಿನ ಉತ್ಸವ ಎಂದೂ ಕರೆಯುತ್ತಾರೆ. (ಎಸ್.ಎನ್.ಕೆ.)

**ಗೋಖಲೆ, ಗೋಪಾಲ ಕೃಷ್ಣ :** 1866–1915. ಭಾರತ ಬ್ರಿಟಿಷರ ಅಧೀನದಲ್ಲಿದ್ದಾಗ ಸ್ವರಾಜ್ಯಸಾಧನೆಗಾಗಿ ನಿಷ್ಠೆಯಿಂದಲೂ ನಿಸ್ವಾರ್ಥ ಮನೋಭಾವ ದಿಂದಲೂ ವಿಧಾಯಕ ಮಾರ್ಗದಲ್ಲಿ ಶ್ರಮಿಸಿದ ಪ್ರಮುಖ ಪ್ರತಿಭಾವಂತ ದೇಶಭಕ್ತ. ಜನನ 1866ರ ಮೇ 9ರಂದು, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಚಿಪ್ಲೂನ್ ತಾಲ್ಲೂಕಿನ ಕೋತಳೂಕ ಗ್ರಾಮದಲ್ಲಿ. ತಂದೆ ಕೃಷ್ಣರಾಯರು ಚಿತ್ಪಾವನ ಬ್ರಾಹ್ಮಣರು. ಅವರೊಬ್ಬ ಸಣ್ಣ ನೌಕರರಾಗಿದ್ದರು. ತಮ್ಮ ಹತ್ತನೆಯ ವರ್ಷದವರೆಗೂ ಗೋಖಲೆಯವರು ಹಳ್ಳಿಯಲ್ಲೇ ವಿದ್ಯಾಭ್ಯಾಸ ಪಡೆದರು. ಹಳ್ಳಿಯ ಜೀವನ, ರೈತರ ದಾರಿದ್ರ್ಯ ಇವುಗಳ ಪರಿಚಯ ಆ ಕಾಲದಲ್ಲಿ ಇವರಿಗೆ ಚೆನ್ನಾಗಿ ಉಂಟಾಯಿತು. ಅನಂತರ ತಮ್ಮ ಅಣ್ಣನಾದ ಗೋವಿಂದ ರಾಯರೊಂದಿಗೆ ವಿದ್ಯಾಭ್ಯಾಸ ಮುಂದುವರಿಸಲು ಕೊಲ್ಹಾಪುರಕ್ಕೆ ಹೋದರು. ಮೂರು ವರ್ಷಗಳ ಅನಂತರ ತಂದೆ ತೀರಿಕೊಂಡರು. ಗೋವಿಂದರಾಯರು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿ ಒಂದು ಸಣ್ಣ ನೌಕರಿಗೆ ಸೇರಿ ಸಂಸಾರದ ನಿರ್ವಹಣೆಯ ಭಾರ ಹೊರ ಬೇಕಾಯಿತು. ಆದರೆ ತಮ್ಮನ ವಿದ್ಯಾಭ್ಯಾಸ ನಿಲ್ಲಬಾರದೆಂಬುದು ಅವರ ಇಚ್ಛೆ. ತಮ್ಮ ಅಲ್ಪ ಸಂಪಾದನೆಯಲ್ಲಿ ಅರ್ಧ ಭಾಗವನ್ನು ಅದಕ್ಕೆ ಮೀಸಲಾಗಿಟ್ಟರು. ಬಡ ವಿದ್ಯಾರ್ಥಿಗಳ ಕಷ್ಟಗಳೇನೆಂಬುದು ಗೋಖಲೆಯವರಿಗೆ ಚೆನ್ನಾಗಿ ಅರಿವಾಯಿತು. ಅಣ್ಣನ ತ್ಯಾಗವನ್ನೂ ಉಪಕಾರವನ್ನೂ ಇವರು ಎಂದೂ ಮರೆಯಲಿಲ್ಲ. 1881ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅನಂತರ ಕೊಲ್ಹಾಪುರದ ರಾಜಾರಾಂ ವಿದ್ಯಾಶಾಲೆಯಲ್ಲಿ ಎಫ್.ಎ. ಮುಗಿಸಿ, ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ 1884 ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ವೇಳೆಗೆ ಇವರಿಗೆ ತಿಂಗಳಿಗೆ 20 ರೂಪಾಯಿ ವಿದ್ಯಾರ್ಥಿವೇತನ ದೊರೆಯುತ್ತಿದ್ದದ್ದರಿಂದ ಇವರ ಅಣ್ಣನವರ ಹೊರೆ ಬಹಳಮಟ್ಟಿಗೆ ಹಗುರವಾಗಿತ್ತು.

ವಿದ್ಯಾಭ್ಯಾಸ ಮುಗಿದ ಮೇಲೆ ಗೋಖಲೆಯವರು ಹೆಚ್ಚಿನ ಧನಾರ್ಜನೆಯ ಸರ್ಕಾರಿ ಉದ್ಯೋಗವನ್ನು ಸೇರದೆ, ಡೆಕ್ಕನ್ ಎಜುಕೇಷನ್ ಸೊಸೈಟಿಯ ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪಕರಾದರು. ದಕ್ಷತೆಯಿಂದಲೂ ಮೇಧಾ ಮತ್ತು ಸ್ಮರಣ ಶಕ್ತಿಗಳಿಂದಲೂ ಸೌಜನ್ಯದಿಂದಲೂ ಶ್ರೇಷ್ಠ ಪ್ರಾಧ್ಯಾಪಕರೆಂಬ ಕೀರ್ತಿ ಸಂಪಾದಿಸಿದರು. ಕಾಲೇಜಿನಲ್ಲಿ ಇಂಗ್ಲಿಷ್, ಗಣಿತ, ಚರಿತ್ರೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ವಿಷಯಗಳನ್ನು ಬೋಧಿಸುತ್ತಿದ್ದರು.

1887 ರಲ್ಲಿ ಗೋಖಲೆಯವರಿಗೆ ಮಹಾದೇವ ಗೋವಿಂದ ರಾನಡೆಯವರ ಸಂಪರ್ಕವುಂಟಾಯಿತು. ಅವರು ಪುಣೆಯಲ್ಲಿ ನ್ಯಾಯಾಧೀಶರಾಗಿದ್ದರು. ತಮ್ಮ ಪಾಂಡಿತ್ಯ, ದೇಶಭಕ್ತಿ, ಸರಳ ಜೀವನ, ಆಧ್ಯಾತ್ಮಿಕ ಪ್ರವೃತ್ತಿಗಳಿಂದ ಅವರು ಮಹಾರಾಷ್ಟ್ರದಲ್ಲಿ ಮಾತ್ರವಲ್ಲದೆ ದೇಶದಲ್ಲೇ ಅತ್ಯಂತ ಪ್ರಭಾವಶಾಲಿಗಳಲ್ಲೊಬ್ಬರೆನಿಸಿದ್ದರು. ಸರ್ಕಾರದ ಉದ್ಯೋಗದಲ್ಲಿದ್ದಾಗ್ಯೂ ದೇಶಹಿತಕ್ಕಾಗಿ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿದವರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಪುಣೆಯಲ್ಲಿ ಇವರ ಸತ್ಪ್ರೇರಣೆಯಿಂದ ಸೇವೆ ಸಲ್ಲಿಸುತ್ತಿದ್ದ ಒಂದು ಸಂಘವಿತ್ತು. ಅದೇ ಸಾರ್ವಜನಿಕ ಸಭಾ. ಜನರ ಕುಂದುಕೊರತೆಗಳನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸಿ ಅವುಗಳ ಬಗ್ಗೆ ಸರ್ಕಾರಕ್ಕೆ ಮನವಿಗಳನ್ನೊಪ್ಪಿಸುವುದು ಈ ಸಭೆಯ ಕಾರ್ಯಭಾರಗಳಲ್ಲೊಂದು. ಈ ಸಭೆ ಒಂದು ಪತ್ರಿಕೆಯನ್ನೂ ನಡೆಸುತ್ತಿತ್ತು. ಗೋಖಲೆಯವರು ಈ ಸಭೆಯ ಕಾರ್ಯದರ್ಶಿ ಯಾಗಿಯೂ ಇದರ ತ್ರೈಮಾಸಿಕೆಯ ಸಂಪಾದಕರಾಗಿಯೂ ನಿಯಮಿತರಾದರು. ಸಂಘದ ಮನವಿಗಳನ್ನು ಸಿದ್ಧಪಡಿಸುವುದರಲ್ಲಿ ಪತ್ರಿಕೆಯ ಸಂಪಾದನ ಕಾರ್ಯದಲ್ಲಿ ರಾನಡೆಯವರು ಗೋಖಲೆಯವರಿಗೆ ಒಳ್ಳೆಯ ತರಬೇತನ್ನು ಕೊಟ್ಟರು. ಗೋಖಲೆಯವರ ಜೀವನದ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ ವ್ಯಕ್ತಿ ದಾದಾಭಾಯಿ ನವರೋಜಿ. ಅವರು 1890ರಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಲು ಇಂಗ್ಲೆಂಡಿನಿಂದ ಬಂದಿದ್ದರು. ಅವರು ಆ ಸಂದರ್ಭದಲ್ಲಿ ಪುಣೆಗೂ ಭೇಟಿ ಕೊಟ್ಟಾಗ ಅವರ ಸ್ವಾಗತ ಸಮಾರಂಭದಲ್ಲಿ ಮುಖ್ಯ ಪಾತ್ರ ವಹಿಸಿದ ಗೋಖಲೆಯವರು ಅವರನ್ನು ಪ್ರಥಮವಾಗಿ ಸಂದರ್ಶಿಸಿದರು. ಅವರಿಂದಲೂ ಗೋಖಲೆಯವರು ಸ್ಫೂರ್ತಿ ಪಡೆದರು.

ಭಾರತ ರಾಷ್ಟ್ರೀಯ ಕಾಂಗ್ರೆಸಿನೊಂದಿಗೆ ಗೋಖಲೆಯವರ ಸಂಪರ್ಕ 1880ರಲ್ಲಿ ಆರಂಭವಾಯಿತು. ತಮ್ಮ ವಾಕ್ಪಟುತ್ವದಿಂದಲೂ ವಿಷಯ ಪ್ರತಿಪಾದನ ಕೌಶಲದಿಂದಲೂ ಇವರು ಎಲ್ಲರ ಮೆಚ್ಚುಗೆ ಗಳಿಸಿದರು. ಮುಂಬಯಿ ಪ್ರಾಂತೀಯ ಸಮ್ಮೇಳನದ ಕಾರ್ಯದರ್ಶಿಯಾಗಿ 1893 ಮತ್ತು 1894ರಲ್ಲಿ ಸೇವೆ ಸಲ್ಲಿಸಿದರು. 1895ರಲ್ಲಿ ಪುಣೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು.

ಭಾರತದ ರಾಜ್ಯಾದಾಯದ ವ್ಯಯ ಹೇಗಾಗುತ್ತಿದೆಯೆಂಬುದನ್ನು ಪರಿಶೀಲಿಸಿ ಅದರಲ್ಲಿ ಸುಧಾರಣೆಗಳನ್ನು ಸೂಚಿಸಲು ಬ್ರಿಟಿಷ್ ಸರ್ಕಾರ 1896ರಲ್ಲಿ ಲಾರ್ಡ್ ವೆಲ್ಬಿಯ ನೇತೃತ್ವದಲ್ಲಿ ಒಂದು ಆಯೋಗವನ್ನು ಲಂಡನಿನಲ್ಲಿ ನೇಮಿಸಿತು. ಇದರ ಮುಂದೆ ಸಾಕ್ಷ್ಯ ನೀಡಲು ಭಾರತೀಯ ಮುಖಂಡರನ್ನೂ ಸಂಸ್ಥೆಗಳನ್ನೂ ಆಹ್ವಾನಿಸಿತು. ಗೋಖಲೆಯವರಿಗೂ ಆಹ್ವಾನ ಬಂದಿತ್ತು. ಇವರು ಇಂಗ್ಲೆಂಡಿಗೆ ತೆರಳಬೇಕೆಂದು ರಾನಡೆಯವರು ಸಲಹೆಯಿತ್ತರು. ಗೋಖಲೆಯವರು ಸಾಕ್ಷ್ಯಕ್ಕೆ ಬೇಕಾದ ಅಂಕಿಅಂಶಗಳನ್ನು ಸಂಗ್ರಹಿಸಿ, ಭಾರತದ ಹಣಕಾಸಿನ ಸ್ಥಿತಿಯನ್ನೂ ಅದರಲ್ಲಿ ಮಾಡಬೇಕಾದ ಸುಧಾರಣೆಗಳನ್ನೂ ಆಯೋಗಕ್ಕೆ ವಿವರಿಸಿ ಎಲ್ಲರ ಪ್ರಶಂಸೆಗೂ ಪಾತ್ರರಾದರು.

ಗೋಖಲೆಯವರು 1897ರಲ್ಲಿ ಇಂಗ್ಲೆಂಡಿನಲ್ಲಿದ್ದಾಗ ಪುಣೆಯಲ್ಲಿ ಪ್ಲೇಗ್ ಜಾಡ್ಯ ಕಾಣಿಸಿಕೊಂಡಿತು. ಜನರನ್ನು ಶಿಬಿರಗಳಿಗೆ ಸಾಗಿಸಿ, ಅವರಿಗೆ ಆಗ ತೀರ ಅಪರಿಚಿತವಾಗಿದ್ದ ಇನಾಕ್ಯುಲೇಷನ್ ಮಾಡಿಸುವ ಏರ್ಪಾಡು ಮಾಡಲಾಯಿತು. ಇದು ವಿಳಂಬವಿಲ್ಲದೆ ನಡೆಯಬೇಕಾಗಿದ್ದ ಕಾರ್ಯ. ಸರ್ಕಾರ ಈ ವ್ಯವಸ್ಥೆಯನ್ನೆಲ್ಲ ಸೈನ್ಯಕ್ಕೆ ಒಪ್ಪಿಸಿತು. ಇದರಿಂದ ಕೆಲವು ಅಚಾತುರ್ಯಗಳಾದುವು. ಜನರ ಆಚಾರ ವ್ಯವಹಾರಗಳನ್ನು ಅರಿಯದ ಕೆಲವು ಸೈನಿಕರು ದರ್ಪದಿಂದ ವರ್ತಿಸಿದರೆಂಬ ದೂರು ಕೇಳಿಸಿತು. ಅತ್ಯಾಚಾರಗಳೂ ಆದುವೆಂದು ಜನರಲ್ಲಿ ಹಾಹಾಕಾರವೆದ್ದಿತು. ಈ ತರುಣದಲ್ಲಿ ಒಬ್ಬ ಮಹಾರಾಷ್ಟ್ರ ಯುವಕ ಒಬ್ಬ ಸೈನ್ಯಾಧಿಕಾರಿಯನ್ನು ಗುಂಡಿಟ್ಟು ಕೊಂದ. ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಇದಕ್ಕೆಲ್ಲ ಟಿಳಕರೇ ಮುಂತಾದ ತೀವ್ರವಾದಿಗಳು ಕಾರಣರೆಂಬುದಾಗಿ ಸರ್ಕಾರ ಆಪಾದಿಸಿತು. ದೇಶೀಯ ಪತ್ರಿಕೆಗಳು ಅದರ ಆಗ್ರಹಕ್ಕೆ ಪಾತ್ರವಾದುವು. ಗೋಖಲೆಯವರಿಗೆ ಈ ವಿದ್ಯಮಾನಗಳು ತಿಳಿದು ಸೈನಿಕರ ವರ್ತನೆಯನ್ನೂ ಸರ್ಕಾರದ ಧೋರಣೆಯನ್ನೂ ಖಂಡಿಸಿ ಇಂಗ್ಲಿಷ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. ಇವರು ಭಾರತಕ್ಕೆ ಮರಳಿದ ಮೇಲೆ ತಮ್ಮ ಆಕ್ಷೇಪಣೆಗಳಿಗೆ ರುಜುವಾತು ಒದಗಿಸಬೇಕಾಗಿ ಬಂದಾಗ, ಇಂಗ್ಲೆಂಡಿನಲ್ಲಿದ್ದಾಗ ತಮಗೆ ಈ ಬಗ್ಗೆ ದೂರುಕೊಟ್ಟಿದ್ದ ಮಿತ್ರರು ಸಾಕ್ಷ್ಯ ನೀಡಲೊಲ್ಲದೆ ಹೋದರು. ತಾವು ಸತ್ಯವನ್ನರಿಯದೆ ವೃಥಾ ಅಧಿಕಾರಿಗಳ ಮೇಲೆ ಅಪವಾದ ಹೊರಿಸಿದುದಾಗಿ ಗೋಖಲೆಯವರಿಗೆ ವಿಷಾದವಾಯಿತು. ಇವರು ತಮ್ಮಿಂದಾದ ಪ್ರಮಾದದ ಬಗ್ಗೆ ಮೌನ ತಳೆದಿದ್ದರೂ ಆಗುತ್ತಿತ್ತು. ಆದರೆ ಸತ್ಯಪ್ರಿಯರಾದ ಇವರಿಗೆ ಅದು ಉಚಿತವೆನಿಸಲಿಲ್ಲ. ಇವರು ಬೇಷರತ್ತಾಗಿ ಸರ್ಕಾರಕ್ಕೆ ತಮ್ಮ ಪಶ್ಚಾತ್ತಾಪ ಸಲ್ಲಿಸಿ, ನೊಂದ ಅಧಿಕಾರಿಗಳ ಕ್ಷಮಾಪಣೆ ಕೇಳಿದರು. ಇವರ ಈ ವರ್ತನೆಯನ್ನು ಹಲವರು ಟೀಕಿಸಿದರು. ಇವರ ಸಹನೆಗೆ ಇದೊಂದು ಪರೀಕ್ಷೆಯಾಯಿತು. ಆದರೆ ತಮ್ಮ ಆತ್ಮಸಾಕ್ಷಿಗನುಸಾರವಾಗಿ ನಡೆದದ್ದಾಗಿ ಇವರಿಗೆ ಸಮಾಧಾನವಾಗಿತ್ತು.

1899ರಲ್ಲಿ ಮುಂಬಯಿ ವಿಧಾನಸಭೆಯಲ್ಲಿ ತೆರವಾದ ಸ್ಥಾನಕ್ಕೆ ಗೋಖಲೆಯವರನ್ನು ಕಳಿಸಬೇಕೆಂದು ಮಿತ್ರರು ನಿಶ್ಚಯಿಸಿದರು. ಆಗ ವಿಧಾನ ಸಭೆಗಳಲ್ಲಿ ಸರ್ಕಾರದ ಅಧಿಕಾರಿಗಳೂ ನಾಮಕರಣ ಸದಸ್ಯರೂ ಬಹುಸಂಖ್ಯೆಯಲ್ಲಿದ್ದರು. ಚುನಾವಣಾ ಕ್ಷೇತ್ರಗಳು ಸಂಕುಚಿತವಾಗಿದ್ದುವು. ಪೌರಸಭಾ ಸದಸ್ಯರ ಕ್ಷೇತ್ರದಿಂದ ಗೋಖಲೆಯವರು ಚುನಾಯಿತರಾದರು. ತಮ್ಮ ಅಧ್ಯಯನಶೀಲತೆಯಿಂದಲೂ ವಾದದ ರೀತಿಯಿಂದಲೂ ಇವರು ಜನತೆಯ ಪ್ರತಿನಿಧಿಗಳು ಹೇಗೆ ವಾದಿಸಬೇಕೆಂಬುದಕ್ಕೆ ಉತ್ತಮ ನಿದರ್ಶನ ನೀಡಿದರು. 1902 ರಲ್ಲಿ ಮುಂಬಯಿ ವಿಧಾನ ಮಂಡಲದಿಂದ ಒಬ್ಬ ಪ್ರತಿನಿಧಿಯನ್ನು ಕೇಂದ್ರ ವಿಧಾನಸಭೆಗೆ ಆರಿಸುವ ಅವಕಾಶವೊದಗಿದಾಗ ಗೋಖಲೆಯವರೇ ಆಯ್ಕೆಯಾದರು. ಕಲ್ಕತ್ತ ಭಾರತದ ಆಗಿನ ರಾಜಧಾನಿ. ಗೋಖಲೆಯವರು ಕೇಂದ್ರ ವಿಧಾನಸಭೆಗೆ ಪ್ರತಿಸಲವೂ

ಚುನಾಯಿತರಾಗಿ ತಮ್ಮ ಅಂತಿಮ ಕಾಲದವರೆಗೂ ಸದಸ್ಯರಾಗಿದ್ದು ಉತ್ತಮ ಸೇವೆ ಸಲ್ಲಿಸಿದರು. ಸಲಹೆಗಳೂ ಪ್ರಸಿದ್ಧವಾದುವು. ಅನೇಕ ವಿಧೇಯಕಗಳ ಬಗ್ಗೆ ಇವರು ಮಾಡಿದ ಭಾಷಣಗಳೂ ಜನರ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಲು ಅಂಕಿಅಂಶಗಳ ಆಧಾರದೊಂದಿಗೆ ಇವರು ಮಾಡುತ್ತಿದ್ದ ವಾದವೂ ಸರ್ಕಾರದ ಮೆಚ್ಚುಗೆ ಗಳಿಸಿದುವು. ಇವರು ವಿಶೇಷವಾಗಿ ಪ್ರಸ್ತಾವಿಸಿದ ವಿಷಯಗಳೆಂದರೆ ಉಪ್ಪಿನ ತೆರಿಗೆ, ಸೈನ್ಯ ಶಾಖೆಯ ವೆಚ್ಚ, ಜವಳಿ ಗಿರಣಿಗಳ ಮೇಲಣ ಸುಂಕ, ವಿದ್ಯಾಪ್ರಸಾರ, ಸರ್ಕಾರದ ಉನ್ನತ ಉದ್ಯೋಗಗಳಿಗೆ ಭಾರತೀಯರ ನೇಮಕ, ದಕ್ಷಿಣ ಆಫ್ರಿಕದಲ್ಲಿ ನೆಲೆಸಿದ್ದ ಭಾರತೀಯರ ಕಷ್ಟಗಳು ಮುಂತಾದವು.

ಈ ಸಭೆಗಳ ಕಲಾಪಗಳಿಗಾಗಿ ಇವರು ಬಹಳ ಕಾಲವನ್ನು ವಿನಿಯೋಗಿಸಬೇಕಾದ್ದರಿಂದ ಇವರು ತಮ್ಮ ಪ್ರಾಧ್ಯಾಪಕ ವೃತ್ತಿಯಿಂದ ಹದಿನೆಂಟು ವರ್ಷಗಳು ಸೇವೆ ಸಲ್ಲಿಸಿದ ಅನಂತರ ನಿವೃತ್ತರಾದರು. ಅಂದಿನಿಂದ ಪೂರ್ಣವಾಗಿ ಸಾರ್ವಜನಿಕ ಸೇವೆಗಾಗಿಯೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಈ ಬಗೆಯ ಸೇವೆಗೆ ಭಾರತದ ಸುಶಿಕ್ಷಿತರಾದ ನಿಸ್ವಾರ್ಥ ಸೇವಕರನ್ನು ಸಿದ್ಧಮಾಡಿ ಸಂಘಟಿಸಲು ಅಗತ್ಯವಿದೆಯೆಂದು ಇವರು ಬಗೆದು 1905ರಲ್ಲಿ ಭಾರತ ಸೇವಕ ಸಂಘವನ್ನು ಸ್ಥಾಪಿಸಿದರು. ಅದೇ ವರ್ಷ ಇವರು ಇಂಗ್ಲೆಂಡಿಗೆ ಪ್ರಯಾಣ ಮಾಡಿ ರಾಷ್ಟ್ರೀಯ ಕಾಂಗ್ರೆಸಿನ ಪರವಾಗಿ ಪ್ರಚಾರ ಕೈಗೊಂಡರು. ಆ ವರ್ಷದ ಕೊನೆಯ ವಾರದಲ್ಲಿ ಕಾಶಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಲಾರ್ಡ್ ಕರ್ಜನನ ಸರ್ವಾಧಿಕಾರಿ ಆಡಳಿತವನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿದರು.

ಕರ್ಜನ್ ಬಂಗಾಳವನ್ನು ಇಬ್ಭಾಗವಾಗಿ ಮಾಡಿಹೋಗಿದ್ದ. ದೇಶಾದ್ಯಂತ ಇದನ್ನು ಪ್ರತಿಭಟಿಸಿ ಒಂದು ದೊಡ್ಡ ಆಂದೋಲನ ನಡೆದಿತ್ತು. ಕೆಲವು ತೀವ್ರವಾದಿಗಳು ಬ್ರಿಟಿಷ್ ಸರ್ಕಾರವನ್ನು ಕೊನೆಗೊಳಿಸಲು ಸರ್ವಪ್ರಯತ್ನವನ್ನೂ ಮಾಡಬೇಕೆಂದು ಬಯಸಿ ಹಿಂಸೆಯನ್ನೆಸಗಲೂ ಹಿಂಜರಿಯಲಿಲ್ಲ. ಆದರೆ ದೇಶದ ಸುಭದ್ರತೆಯ ದೃಷ್ಟಿಯಿಂದ ಈ ಬಗೆಯ ನೇರ ಬಂಡಾಯದ ಚಟುವಟಿಕೆಗಳನ್ನು ನಡೆಸುವಾಗ ಅಶಿಕ್ಷಿತರೂ ಶಿಸ್ತನ್ನು ಪಾಲಿಸುವ ಅಭ್ಯಾಸವಿಲ್ಲದವರೂ ಉದ್ರೇಕಗೊಳ್ಳುವುದರಿಂದ ದೇಶಕ್ಕೆ ಹಿತವಾಗುವುದಿಲ್ಲವೆಂದು ಇವರು ದೃಢವಾಗಿ ನಂಬಿದ್ದರು. ವಿಧಾಯಕ ರೀತಿಯಲ್ಲೇ ಚಳವಳಿಗಳನ್ನೂ ಪ್ರಚಾರ ಕಾರ್ಯವನ್ನೂ ಕೈಗೊಳ್ಳಬೇಕೆಂಬುದು ಇವರ ಬಯಕೆಯಾಗಿತ್ತು. ಈ ಬಗೆಯ ನಿಲುವು ತಳೆದವರು ಮಂದಗಾಮಿಗಳೆಂಬ ದೂರಿಗೆ ಗುರಿಯಾದರು. ಹೀಗೆ ಕಾಂಗ್ರೆಸಿನಲ್ಲಿ ಎರಡು ಪಂಗಡಗಳು ಬೆಳೆದು 1907ರಲ್ಲಿ ಸೂರತಿನಲ್ಲಿ ಸೇರಿದ ಅಧಿವೇಶನ ಗೊಂದಲದಲ್ಲಿ ಪರ್ಯವಸಾನವಾಯಿತು. ತೀವ್ರವಾದಿಗಳು ಮಹಾಸಭೆಯನ್ನು ಬಿಟ್ಟರು. ಈ ಎರಡು ಪಂಗಡಗಳ ಮಧ್ಯೆ ರಾಜಿ ಮಾಡಿಸುವುದೇ ಗೋಖಲೆಯವರ ಅಂತಿಮ ಕಾಲದ ಹಂಬಲವಾಗಿತ್ತು.

ದೇಶಾದ್ಯಂತ ಪ್ರಾಥಮಿಕ ವಿದ್ಯಾಭ್ಯಾಸ ವ್ಯಾಪಿಸಿ ಜನಸಾಮಾನ್ಯರ ತಿಳಿವಳಿಕೆ ಮತ್ತು ದಕ್ಷತೆ ಹೆಚ್ಚುವುದರಿಂದಲೇ ದೇಶದ ಸರ್ವತೋಮುಖವಾದ ಅಭ್ಯುದಯವಾದೀತೆಂಬುದು ಗೋಖಲೆಯವರ ದೃಢ ನಂಬಿಕೆ. ಇದಕ್ಕಾಗಿ ಇವರು 1911ರಲ್ಲಿ ಕೇಂದ್ರ ವಿಧಾನ ಮಂಡಲದಲ್ಲಿ ವಿಧೇಯಕವೊಂದನ್ನು ಮಂಡಿಸಿದರು. ಸ್ಥಳೀಯ ಆಡಳಿತ ಪ್ರದೇಶಗಳಲ್ಲಿ ಕಡ್ಡಾಯವೂ ಉಚಿತವೂ ಆದ ಪ್ರಾಥಮಿಕ ವಿದ್ಯಾಭ್ಯಾಸವನ್ನೊದಗಿಸುವ ಅವಕಾಶ, ಇದರ ವೆಚ್ಚದಲ್ಲಿ ಮೂರನೆಯ ಎರಡು ಅಂಶವನ್ನು ಸರ್ಕಾರ ಒದಗಿಸಬೇಕೆಂಬ ನಿರ್ಬಂಧ– ಇವೇ ಮುಂತಾದ ಸಲಹೆಗಳು ಈ ವಿಧೇಯಕದಲ್ಲಿದ್ದುವು. ಆದರೆ ಆಗಿನ ಸರ್ಕಾರ ಇದಕ್ಕೆ ಮನ್ನಣೆ ಕೊಡಲಿಲ್ಲ.

ಗಾಂಧೀಜಿಯವರ ಅಪೇಕ್ಷೆಯ ಮೇರೆಗೆ ಗೋಖಲೆಯವರು 1912ರಲ್ಲಿ ದಕ್ಷಿಣ ಆಫ್ರಿಕಕ್ಕೆ ಭೇಟಿಕೊಟ್ಟರು. ಅಲ್ಲಿದ್ದ ಭಾರತೀಯರು ಅನುಭವಿಸುತ್ತಿದ್ದ ತೊಂದರೆಗಳನ್ನು ಪ್ರತ್ಯಕ್ಷವಾಗಿ ಕಂಡರು. ಅಲ್ಲಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಭಾರತೀಯರ ಕಷ್ಟಗಳ ಪರಿಹಾರಕ್ಕಾಗಿ ಬಹಳ ಪ್ರಯತ್ನ ಮಾಡಿದರು. ಗಾಂಧೀಜಿಯವರೊಂದಿಗೆ ಮೊದಲೇ ಇದ್ದ ಇವರ ಸಂಬಂಧ ಮತ್ತಷ್ಟು ಗಾಢವಾಯಿತು. ಗೋಖಲೆಯವರನ್ನು ಗಾಂಧಿಯವರು ತಮ್ಮ ರಾಜಕೀಯ ಗುರುವೆಂದು ಭಾವಿಸಿದರು.

ವಿದ್ಯಾವಂತ ಭಾರತೀಯರಿಗೆ ಆಡಳಿತದಲ್ಲಿ ಹೆಚ್ಚು ಅವಕಾಶವನ್ನು ಕಲ್ಪಿಸುವ ಪ್ರಶ್ನೆ ಪರಿಶೀಲಿಸಿ ವರದಿ ನೀಡಲು ಬ್ರಿಟಿಷ್ ಸರ್ಕಾರದಿಂದ ನೇಮಿತವಾದ ಇಸ್ಲಿಂಗ್‌ಟನ್ ಆಯೋಗದಲ್ಲಿ (**ನೋಡಿ– ಇಸ್ಲಿಂಗ್‌ಟನ್ ಆಯೋಗ**) ಗೋಖಲೆಯವರೂ ಒಬ್ಬ ಸದಸ್ಯರಾಗಿದ್ದರು. ದೇಶದ ಮುಖ್ಯ ಪಟ್ಟಣಗಳಲ್ಲಿ ಸಂಚರಿಸಿ ಸಾಕ್ಷ್ಯವನ್ನು ಸಂಗ್ರಹಿಸಿದ ಈ ಆಯೋಗದ ಕಾರ್ಯದಲ್ಲಿ ಗೋಖಲೆಯವರು ಮುಖ್ಯಪಾತ್ರ ವಹಿಸಿದರು. ಅದಕ್ಕಾಗಿ ಬಹಳ ದುಡಿದರು. ಆ ವೇಳೆಗೆ ಹದಗೆಟ್ಟಿದ್ದ ಇವರ ಆರೋಗ್ಯ ಮತ್ತಷ್ಟು ಕೆಟ್ಟಿತು. ಇವರು 1915ರ ಫೆಬ್ರುವರಿ 19ರಂದು ಪುಣೆಯಲ್ಲಿ ತೀರಿಕೊಂಡರು. (ಕೆ.ಎಸ್.ಜಿ.ಆರ್.)

ರಾಜಕಾರಣದಲ್ಲಿ ಉದಾರಮತವಾದಿಯಾಗಿದ್ದ ಗೋಖಲೆಯವರು ತಮ್ಮ ವಿಚಾರಪ್ರತಿಪಾದನೆಗಾಗಿ ಪತ್ರಿಕಾ ಮಾಧ್ಯಮವನ್ನು ಇವರ ಸಮಕಾಲೀನ ಧುರೀಣ ಲೋಕಮಾನ್ಯ ಟಿಳಕರಷ್ಟು ಪ್ರಭಾವಕಾರಿಯಾಗಿ ಬಳಸಲಿಲ್ಲ. ಆದರೂ ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳ ಮೇಲೆ ಅಸಾಧಾರಣ ಪ್ರಭುತ್ವ ಹೊಂದಿದ್ದ ಇವರು ಪ್ರಮುಖ ಪತ್ರಿಕೆಗಳಿಗೆ ಪ್ರೌಢ ವಿಚಾರಪೂರ್ಣ ಲೇಖನಗಳನ್ನು ಬರೆಯುವುದರೊಂದಿಗೆ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ಲೋಕಮಾನ್ಯ ಟಿಳಕರ ಇಂಗ್ಲಿಷ್ ಸಾಪ್ತಾಹಿಕ ಮರಾಠಾದಲ್ಲಿ 1886–87ರಲ್ಲಿ ಯುರೋಪಿನಲ್ಲಿಯ ಯುದ್ಧದ ವಿಷಯದಲ್ಲಿ ಇವರು ಬರೆದ ಲೇಖನಮಾಲೆ ತುಂಬ ಪ್ರಶಂಸೆ ಪಡೆಯಿತು. ಮರಾಠಾ, ಲೋಕಮಾನ್ಯರ ಮರಾಠಿ ಪತ್ರಿಕೆಯಾದ ಕೇಸರಿ, ಇವುಗಳ ಪ್ರಾರಂಭಿಕ ವರ್ಷಗಳಲ್ಲಿ ಅವಕ್ಕಾಗಿ ಸಾಕಷ್ಟು ದುಡಿದರು. ಮಹಾರಾಷ್ಟ್ರದ ಪ್ರಸಿದ್ಧ ಸಮಾಜಸುಧಾರಕ ಗೋಪಾಲ ಗಣೇಶ ಅಗರಕರರು ಸುಧಾರಕ ಪತ್ರಿಕೆಯನ್ನು ಪ್ರಾರಂಭಿಸಿದಾಗ (1888) ಅದರ ಇಂಗ್ಲಿಷ್ ವಿಭಾಗದ ಸಂಪಾದಕತ್ವವನ್ನು ಗೋಖಲೆಯವರಿಗೆ ವಹಿಸಿಕೊಟ್ಟರು. ಅದೇ ವರ್ಷ ಸಾರ್ವಜನಿಕ ಸಭೆಯ ಕಾರ್ಯದರ್ಶಿಯಾಗಿ ನಿಯುಕ್ತರಾದ ಇವರು ಅದರ ತ್ರೈಮಾಸಿಕದ ಸಂಪಾದಕರೂ ಆದರು. ಮುಂದೆ ಎಂಟು ವರ್ಷಗಳ ಕಾಲ ಇವರು ಅದನ್ನು ನಿರ್ವಹಿಸಿದರು. 1895ರಲ್ಲಿ ರಾಷ್ಟ್ರ ಸಭಾ ಸಮಾಚಾರ ಪತ್ರಿಕೆಯ ಸಂಪಾದಕರೂ ಆಗಿದ್ದರು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ತನ್ನ ನಿಲುಮೆಯನ್ನು ಬ್ರಿಟಿಷ್ ಜನತೆಗೆ ಪರಿಣಾಮಕಾರಿಯಾಗಿ ತಿಳಿಸುವ ಉದ್ದೇಶದಿಂದ 1905ರಲ್ಲಿ ಇಂಡಿಯ ಎಂಬ ನಿಯತಕಾಲಿಕೆಯನ್ನು ಇಂಗ್ಲೆಂಡಿನಲ್ಲಿ ಪ್ರಕಟಿಸುತ್ತಿತ್ತು. ಅದರಲ್ಲಿ ಆಗ ಕಾಂಗ್ರೆಸಿನ ಜೊತೆ ಕಾರ್ಯದರ್ಶಿಯಾಗಿದ್ದ ಗೋಖಲೆಯವರ ಪಾತ್ರ ಹಿರಿದಾಗಿತ್ತು.

ಭಾರತದ ಕೇಂದ್ರ ವಿಧಾನಮಂಡಲದ ಲೋಕನಿಯುಕ್ತ ಸದಸ್ಯರಾಗಿದ್ದಾಗ ಗೋಖಲೆಯವರು ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮಹತ್ತ್ವಪೂರ್ಣ ಕಾರ್ಯನಿರ್ವಹಿಸಿದರು. 1903ರಲ್ಲಿ ಎ. ಟಿ. ಅರುಂಡೇಲ್ ಅವರು 1889ರ ಗೋಪ್ಯ ಗೋಪನ ಕಾಯಿದೆಗೆ ತಿದ್ದುಪಡಿ ಮಂಡಿಸಿ ಅನೇಕ ನಾಗರಿಕ ವಿಷಯಗಳನ್ನು ಅದರಲ್ಲಿ ಸಮಾವೇಶಗೊಳಿಸಿದರು. ಯಾರಿಂದಲೊ ದೂರು ಬಂದಾಗಲೂ ಕ್ರಮ ಕೈಗೊಳ್ಳುವ ಅಧಿಕಾರವನ್ನು ಪೋಲಿಸರಿಗೆ ದೊರಕಿಸಿಕೊಡುತ್ತಿದ್ದ ಇದನ್ನು ಗೋಖಲೆಯವರು ಕಟುವಾಗಿ ವಿರೋಧಿಸುತ್ತ ಇದು ಪರಿಣಾಮತಃ ಪತ್ರಿಕಾ ಸ್ವಾತಂತ್ರ್ಯವನ್ನೇ ಹರಣ ಮಾಡುತ್ತದೆಂದರಲ್ಲದೆ, ವೃತ್ತಪತ್ರಿಕೆಗಳೂ ಒಂದು ಅರ್ಥದಲ್ಲಿ ಸರ್ಕಾರದಂತೆಯೇ ಲೋಕಹಿತದ ಹೊಣೆ ಹೊತ್ತ ವಿಶ್ವಸ್ತ ಎನ್ನಬಹುದೆಂದು ವಾದಿಸಿದರು. ಈ ದಬ್ಬಾಳಿಕೆಯ ಕಾಯಿದೆಯನ್ನು ಮನ್ನಿಸುವುದೆಂದರೆ ಪತ್ರಿಕೆಗಳ ಸ್ವಾತಂತ್ರ್ಯದ ಮೇಲೆ ಗದೆಯೆತ್ತಿದಂತೆ ಎಂದು ಇವರು ಎಚ್ಚರಿಸಿದರು. ಆದರೆ ವಿಧಾನ ಮಂಡಲದಲ್ಲಿ ಸರ್ಕಾರಕ್ಕೆ ಬಹುಮತವಿದ್ದುದರಿಂದ ತಿದ್ದುಪಡಿ ಸ್ವೀಕೃತವಾಯಿತು. ಮುಂದೆ 1910ರಲ್ಲಿ ಸರ್ಕಾರ ಪತ್ರಿಕಾ ವಿಧೇಯಕವನ್ನು ಮಂಡಿಸಿದಾಗ ಗೋಖಲೆಯವರು ಅದನ್ನು ಪ್ರತ್ಯಕ್ಷವಾಗಿ ವಿರೋಧಿಸಲಿಲ್ಲವಾದರೂ ತಮ್ಮ ವರ್ಚಸ್ಸನ್ನುಪಯೋಗಿಸಿ, ಮೂಲತಃ ಅದರಲ್ಲಿ ಅಡಕವಾಗಿದ್ದ ಕಠಿಣಕ್ರಮಗಳು ಹೆಚ್ಚು ಸೌಮ್ಯಗೊಳ್ಳುವಂತೆ ಮತ್ತು ಭಾರತೀಯರ ಒಡೆತನಕ್ಕೆ ಸೇರಿದ್ದ ಪತ್ರಿಕೆಗಳಿಗೆ ಮಾತ್ರ ಸೀಮಿತವಾಗಿದ್ದ ಅದರ ವ್ಯಾಪ್ತಿ ಬ್ರಿಟಿಷ್ ಒಡೆತನದಲ್ಲಿದ್ದವುಗಳನ್ನೊಳಗೊಂಡು ಎಲ್ಲ ಪತ್ರಿಕೆಗಳಿಗೂ ವಿಸ್ತರಿಸುವಂತೆ ಪ್ರಯತ್ನಿಸಿ ಯಶಸ್ವಿಯಾದರು. (ಎಂ.ಎನ್.ಎಂ.ವಿ.)

**ಗೋಖಲೆಯವರ ಶೈಕ್ಷಣಿಕ ಮಸೂದೆ :** 1912ರಲ್ಲಿ ಭಾರತದ ಕೇಂದ್ರಶಾಸನ ಸಭೆಯಲ್ಲಿ ಗೋಖಲೆಯವರು, ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಶಿಕ್ಷಣದ ತತ್ತ್ವವನ್ನು ಕ್ರಮಕ್ರಮವಾಗಿ ಆಚರಣೆಗೆ ತರಬೇಕೆಂದು ಸೂಚಿಸಿ ಮಂಡಿಸಿದ ಒಂದು ಮಸೂದೆ (ವಿಧೇಯಕ). ಅಂದಿನ ವೈಸರಾಯ್ ಆಗಿದ್ದ ಕರ್ಜನ್ 1905ರಿಂದ ಪ್ರಾಥಮಿಕ ಶಿಕ್ಷಣ ಸೌಲಭ್ಯವನ್ನು ಏಕಪ್ರಕಾರವಾಗಿ ವಿಸ್ತರಿಸುತ್ತ ಬಂದಿದ್ದರೂ ಶಿಕ್ಷಣದ ಆಡಳಿತಾಧಿಕಾರಿಗಳು ಆ ಮಟ್ಟದ ಶಿಕ್ಷಣವನ್ನು ವಿಸ್ತರಿಸುವುದರ ಬದಲು ಅದರ ಗುಣಮಟ್ಟವನ್ನು ಉತ್ತಮಪಡಿಸುವ ಕಡೆ ಗಮನ ಕೊಡಬೇಕೆಂದು ಒತ್ತಿ ಹೇಳಲಾರಂಭಿಸಿದ್ದರು. ಆದರೆ ರಾಷ್ಟ್ರದ ನಾಯಕರು ಈ ಪ್ರವೃತ್ತಿಯನ್ನು ವಿರೋಧಿಸಿ, ರಾಷ್ಟ್ರದಲ್ಲಿ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರಲು ಒತ್ತಾಯ ಹಾಕುತ್ತಿದ್ದರು. ಈ ನಡುವೆ, ಎಂದರೆ 1906ರಲ್ಲಿ ಬರೋಡದ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಕಡ್ಡಾಯ ಶಿಕ್ಷಣವನ್ನು ಶಾಸನಬದ್ಧವಾಗಿ ಆಚರಣೆಗೆ ತಂದುಬಿಟ್ಟರು. ಆದ್ದರಿಂದ ಬ್ರಿಟಿಷರ ನೇರ ಆಡಳಿತದಲ್ಲಿದ್ದ ಪ್ರಾಂತಗಳಲ್ಲಿ ಅದನ್ನು ಏಕೆ ಆಚರಣೆಗೆ ತರಬಾರದೆಂದು ಚಳವಳಿ ಆರಂಭವಾಯಿತು. ಈ ಚಳವಳಿಯ ಮುಖಂಡರಲ್ಲೊಬ್ಬರಾದ ಗೋಖಲೆಯವರು 1910ರಲ್ಲಿ ಕೇಂದ್ರಶಾಸನ ಸಭೆಯಲ್ಲಿ ದೇಶಾದ್ಯಂತ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರಲು ಆರಂಭಿಸಬೇಕೆಂದೂ ಆ ಬಗ್ಗೆ ಅಗತ್ಯ ಸಲಹೆ ನೀಡಲು ಅಧಿಕಾರಿಗಳನ್ನೂ ಇತರರನ್ನೂ ಒಳಗೊಂಡ ಆಯೋಗವೊಂದನ್ನು ರಚಿಸಬೇಕೆಂದೂ ಸೂಚಿಸಿ ಒಂದು ಠರಾವನ್ನು ಮಂಡಿಸಿದ್ದರು. ಆದರೆ ಆ ಸಮಸ್ಯೆಯನ್ನು ಎಚ್ಚರಿಕೆಯಿಂದ ಪರಿಶೀಲಿಸುವುದಾಗಿ ಸರ್ಕಾರ ನೀಡಿದ ಆಶ್ವಾಸನೆಯ ಮೇಲೆ ಅದನ್ನು ಹಿಂದೆಗೆದುಕೊಂಡಿದ್ದರು. ಮತ್ತೆ 1911ರಲ್ಲಿ ತಮ್ಮ ಆ ಅಭಿಪ್ರಾಯವನ್ನೊಳಗೊಂಡಂತೆ ಪ್ರಾಥಮಿಕ ಸೌಲಭ್ಯವನ್ನು ವಿಸ್ತರಿಸಲು ಇನ್ನೂ ಉತ್ತಮ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುವ ಮಸೂದೆಯೊಂದನ್ನು ಮಂಡಿಸಿದರು. ಅಂದಿಗಾಗಲೆ ಪ್ರಚಾರಕ್ಕೆ ಇಂಗ್ಲೆಂಡಿನ 1910ರ ಕಡ್ಡಾಯ ಶಿಕ್ಷಣದ ಶಾಸನವನ್ನು

ಆಧಾರ ಮಾಡಿಕೊಂಡು ತಮ್ಮ ಈ ಮಸೂದೆಯನ್ನು ಇವರು ರಚಿಸಿದ್ದರು. ಅದರ ಪ್ರತಿಯನ್ನು ಮೊದಲು ಸದಸ್ಯರ ಅಭಿಪ್ರಾಯಕ್ಕಾಗಿ ಹಂಚಲಾಯಿತು. ಅನಂತರ 1912ರ ಮಾರ್ಚ್ 17ರಂದು ಸಭೆಯಲ್ಲಿ ಅದು ಚರ್ಚೆಗೆ ಬಂತು. ಗೋಖಲೆಯವರು ಮಸೂದೆಯ ಆವಶ್ಯಕತೆಯನ್ನು ಕುರಿತು ಯುಕ್ತವಾಗಿ ವಾದಿಸಿದರು. ಅದನ್ನು ತಜ್ಞರ ಸಮಿತಿಗೆ ವರದಿಗಾಗಿ ಒಪ್ಪಿಸುವ ಬಗ್ಗೆ ಮತ ತೆಗೆದುಕೊಂಡಾಗ ಸಭೆಯಲ್ಲಿ ಅಧಿಕಾರಿ ಸದಸ್ಯರೇ ಹೆಚ್ಚಾಗಿದ್ದುದರಿಂದ ಅದಕ್ಕೆ ವಿರುದ್ಧವಾಗಿ ಹೆಚ್ಚು ಮತಗಳು ಬಂದು ಅದರ ಮುಂದಿನ ನಡಾವಳಿಕೆಗೆ ಅವಕಾಶವಾಗಲಿಲ್ಲ. ಆದರೂ ಗೋಖಲೆಯವರು ಉತ್ಸಾಹಗುಂದಲಿಲ್ಲ. ಮತ್ತೆ ಮತ್ತೆ ಅದಕ್ಕಾಗಿ ಶ್ರಮಿಸುವುದಾಗಿ ಪಣತೊಟ್ಟರು.

ಭಾರತದ ಶಿಕ್ಷಣದ ಇತಿಹಾಸದಲ್ಲಿ ಗೋಖಲೆಯವರ ಈ ಮಸೂದೆ ವಿಶಿಷ್ಟ ಸ್ಥಾನ ಪಡೆದಿದೆ. ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವಲ್ಲಿ ಅದೇ ಮೊದಲ ಯತ್ನವಾಯಿತು. ಅದು ಬಿದ್ದುಹೋದರೂ ಇವರ ಯತ್ನ ಪೂರ್ಣವಾಗಿ ವಿಫಲವಾಗಲಿಲ್ಲ. ಜನತೆಯ ಆಶೋತ್ತರವನ್ನು ಸರ್ಕಾರ ಅರಿತುಕೊಂಡಿತು; ಶಾಸನಬದ್ಧವಾಗಿ ಮುಂದುವರಿಯಲು ಅಂದು ಇದ್ದ ಅಡಚಣೆಗಳ ಕಡೆ ಬೆರಳು ತೋರಿದರೂ ಪ್ರಾಥಮಿಕ ಶಿಕ್ಷಣದ ವಿಸ್ತರಣಕ್ಕೆ ಇನ್ನೂ ಹೆಚ್ಚಿನ ಆಸಕ್ತಿ ವಹಿಸಿತು. ಪ್ರಾಂತೀಯ ಸರ್ಕಾರಗಳನ್ನು ಆ ಬಗ್ಗೆ ವಿಚಾರಿಸಲಾಯಿತು. ವಿಸ್ತರಿಸುತ್ತಿದ್ದ ಆ ಕ್ಷೇತ್ರದ ಆಡಳಿತಕ್ಕಾಗಿ ಕೇಂದ್ರ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಲಾಯಿತು. 1912ರಿಂದ 1917ರ ವರೆಗೆ ಆ ಕ್ಷೇತ್ರದಲ್ಲಿ ಸರ್ಕಾರ ತೋರಿದ ಆಸಕ್ತಿಗೆ ಆ ಮಸೂದೆ ನೀಡಿದ ಪ್ರಚೋದನೆಯೇ ಕಾರಣವೆಂದು ಹೇಳಬಹುದು. 1913ರ ಫೆಬ್ರುವರಿ 21ರಂದು ಹೊರಡಿಸಿದ ಸರ್ಕಾರದ ಶೈಕ್ಷಣಿಕ ನೀತಿಯ ನಿರೂಪಣೆಯಲ್ಲೂ ಆ ಮಟ್ಟದ ಶಿಕ್ಷಣ ಸೌಲಭ್ಯವನ್ನು ಹೆಚ್ಚಿಸುವ ಬಗ್ಗೆ ಅಗತ್ಯ ಆಶ್ವಾಸನೆಯನ್ನು ನೀಡಲಾಯಿತೆಂಬುದು ಮುಖ್ಯ ಸಂಗತಿ. *

**ಗೋಟ್ಯಾ, ತೌಫಿಲ್ :** 1811–72. ಫ್ರೆಂಚ್ ಕವಿ, ಕಾದಂಬರಿಕಾರ, ವಿಮರ್ಶಕ, ಪ್ರವಾಸ ಲೇಖಕ. ತಾರ್‌ಬೆಸ್ಸಿನಲ್ಲಿ ಹುಟ್ಟಿದ ಈತ ಚಿಕ್ಕಂದಿನಿಂದಲೂ ಚಿತ್ರಕಲೆಯಲ್ಲಿ ಹೆಚ್ಚು ಆಸಕ್ತಿ ತಾಳಿದ್ದ. ಚಿತ್ರಕಲೆಯನ್ನು ಆಳವಾಗಿ ಅಭ್ಯಸಿಸಿ ಪರಿಣತಿ ಪಡೆದರೂ ಸ್ವಲ್ಪಕಾಲದ ಅನಂತರ ಅದನ್ನು ಬಿಟ್ಟು ಲೇಖನವೃತ್ತಿಯನ್ನು ಅವಲಂಬಿಸಿದ. ಫ್ರಾನ್ಸಿನಲ್ಲಿ ರೊಮ್ಯಾಂಟಿಕ್ ಪಂಥ ಗರಿಗೆದರಿ ಹಾರುತ್ತಿದ್ದ ಕಾಲದಲ್ಲಿ ಈತ ಬಹುಬೇಗ ಅದರ ಪ್ರಭಾವಕ್ಕೆ ಒಳಗಾಗಿ ಹ್ಯೂಗೋ, ನೆರ್ವಲ್ ಮುಂತಾದವರ ಜೊತೆ ಸೇರಿದ. ಸ್ವತಃ ರೊಮ್ಯಾಂಟಿಕ್ ಪಂಥದ ಅನುಯಾಯಿಯಾದರೂ ಸಾಹಿತ್ಯದಲ್ಲಿ ರೂಪಕ್ಕೆ (ಫಾರಂ) ಹೆಚ್ಚು ಪ್ರಾಧಾನ್ಯವಿರಬೇಕು, ಕವಿ ತನ್ನ ಕೃತಿಯನ್ನು ತಿದ್ದಿ ಹಸನುಗೊಳಿಸಿ, ನುಣುಪಾಗಿಸಬೇಕು ಎಂದು ವಾದಿಸಿದ. ರೊಮ್ಯಾಂಟಿಕ್ ಮತ್ತು ಕ್ಲಾಸಿಕಲ್ ತತ್ತ್ವಗಳೆರಡನ್ನೂ ಸಮನ್ವಯಗೊಳಿಸ ಹೊರಟು ಹೊಸ ವಿಚಾರ ಪರಂಪರೆಯನ್ನೇ ಪ್ರತಿಪಾದಿಸಿದ. ಕಲೆಗಾಗಿ ಕಲೆ ಎಂಬ ಚಳವಳಿಯನ್ನು ಫ್ರಾನ್ಸಿನಲ್ಲಿ ಬಿತ್ತಿದವ ಈತನೇ. ತನ್ನ ಕೃತಿಗಳಿಂದಾಗಿ ಅನಂತರ ಬಂದ ಫಾರ್ಮಲಿಸ್ಟ್ ಪಂಥದವರಿಗೂ ಸ್ಫೂರ್ತಿ ನೀಡಿದ. ಗೋಟ್ಯಾ ಮೊದಲು ಬೆಳಕಿಗೆ ಬಂದದ್ದು ತನ್ನ ಎರಡು ಕವನ ಸಂಗ್ರಹಗಳ ಮೂಲಕ. ಈ ಸಂಗ್ರಹಗಳಲ್ಲಿ ಇಂಗ್ಲಿಷ್ ಕವಿ ಬೈರನನ ಪ್ರಚಂಡ ರೊಮ್ಯಾಂಟಿಕ್ ಕಾವ್ಯಶೈಲಿಯನ್ನು ಅನುಸರಿಸಿದ ಕವನಗಳಿವೆ. 1835ರಲ್ಲಿ ಬರೆದ ಮ್ಯಾಡಮ್ವಾಸಲ್ ಮೋಪಿನ್ ಎಂಬ ಕಾದಂಬರಿ ಈತನ ಹೆಸರು ಯುರೋಪಿನಲ್ಲಿ ಮನೆಮಾತಾಗುವಂತೆ ಮಾಡಿತು. ಇಂದಿಗೂ ಲಕ್ಷಾಂತರ ಜನ ಈ ಕಾದಂಬರಿಯನ್ನು ಓದುತ್ತಿದ್ದಾರೆ. ವಿಷಯಲಾಂಪಟ್ಯದ ವಿವರವಾದ ವಿಶ್ಲೇಷಣೆ ಇದೆ ಎಂಬುದೂ ಈ ಕಾದಂಬರಿಯ ಜನಪ್ರಿಯತೆಗೆ ಇರಬಹುದಾದ ಒಂದು ಕಾರಣ. ಈ ಗ್ರಂಥದ ಮುನ್ನುಡಿ ಕಲೆಗಾಗಿ ಕಲೆ ಎನ್ನುವ ಪಂಥದವರ ಘೋಷಣೆಯಂತಿದೆ. ಇದರಲ್ಲಿ ಗೋಟ್ಯಾ ಪತ್ರಿಕೋದ್ಯಮಿ ಲೇಖಕರ ಮೌಢ್ಯವನ್ನೂ ನಿಯೋಕ್ಲಾಸಿಕಲ್ ಕಲಾತತ್ತ್ವಗಳ ಜಡತ್ವವನ್ನೂ ಮಧ್ಯಮವರ್ಗದವರ ಹುಸಿ ನೀತಿ–ನೇಮಗಳ ಠಕ್ಕುಗಾರಿಕೆಯನ್ನೂ ನಿರ್ದಾಕ್ಷಿಣ್ಯವಾಗಿ ಹಂಗಿಸಿದ್ದಾನೆ. ಕಲೆಗಾರನ ಅನನ್ಯ ಸ್ವಾತಂತ್ರ್ಯವನ್ನು ಸಮರ್ಥಿಸುವ ಈ ಮುನ್ನುಡಿ ಸಾಹಿತ್ಯ ವಿಮರ್ಶೆಯಲ್ಲಿ ಒಂದು ಮಹತ್ತ್ವದ ಕೃತಿ ಎನ್ನುವುದುಂಟು. ಪತ್ರಿಕೋದ್ಯೋಗಿ ಲೇಖಕರನ್ನು ಖಂಡಿಸಿದ ಗೋಟ್ಯಾ ಸ್ವತಃ ಪತ್ರಿಕೋದ್ಯಮದ ವ್ಯವಸಾಯದಿಂದಲೆ ಬದುಕಬೇಕಾಗಿ ಬಂತು. ಸಂಪಾದಕನಾಗಿ ನಾಟಕ ಮತ್ತು ಕಲಾ ವಿಮರ್ಶಕನಾಗಿ, ಲಘು ಪ್ರವಾಸ ಕಥನಗಳನ್ನೂ ಸಾಮಯಿಕವಾದ ನೂರಾರು ಲೇಖನಗಳನ್ನೂ ಗೀಚಿ ಸಂಸಾರ ನಡೆಸಬೇಕಾಯಿತು. ಹೀಗೆ ಬಹು ಕಷ್ಟಕೋಟಲೆಗೆ ಸಿಕ್ಕಿದ ಈತನ ಜೀವನದಲ್ಲಿ ಚಾರ್ಲಟ್ ಗ್ರಿಸಿ ಎಂಬ ನಟಿಯನ್ನು ಪ್ರೀತಿಸುತ್ತಿದ್ದ ಕಾಲವೇ ಅತ್ಯಂತ ಸುಖಕರ ಗಳಿಗೆಗಳಾದುವು.

ಗೋಟ್ಯಾಗೆ ನಿಜವಾದ ಖ್ಯಾತಿ ದೊರಕಿದ್ದು ಈತ ಬರೆದ ಕಾವ್ಯದಿಂದ. ಈತನಿಗಿಂತ ಉನ್ನತ ಮಟ್ಟದ ಕವಿ ಎನಿಸಿಕೊಂಡ ಷಾರ್ಲ್ ಬೋಡ್‌ಲಾರ್ ಈತನನ್ನು ಬಹಳವಾಗಿ ಪ್ರಶಂಸಿಸಿ ತನ್ನ ಮಾರ್ಗದರ್ಶಕನೆಂದು ಗೌರವಿಸಿದ್ದಾನೆ. ಗೋಟ್ಯಾನ ಕವನಗಳು ಕಿಂಚಿತ್ತೂ ಊನವಿಲ್ಲದ ಮುತ್ತಿನಂಥ ಉತ್ಕೃಷ್ಟ ರಚನೆಗಳು. ಎನಾಮೆಲ್ಸ್ ಅಂಡ್ ಕೆಮಿಯೋಸ್ (1852) ಎನ್ನುವ ಕವನಗುಚ್ಛದಲ್ಲಿ ಈತನ ಮಹತ್ತ್ವಪೂರ್ಣ ಕವನಗಳೆಲ್ಲವೂ ಇವೆ. ಮ್ಯಾಡಮ್ವಾಸಲ್ ಮೋಪಿನ್ ಗ್ರಂಥದ ಮುನ್ನುಡಿಯಲ್ಲಿ ಘೋಷಿಸಿದ ಕಲಾತತ್ತ್ವಗಳನ್ನು ಗೋಟ್ಯಾ ತನ್ನ ಕವನಗಳಲ್ಲಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದ್ದಾನೆ. ಇಲ್ಲಿ ಭಾವಕ್ಕಾಗಲೀ ವಿಚಾರಗಳಿಗಾಗಲೀ ಎಡೆಯಿಲ್ಲ. ಎಚ್ಚರಿಕೆಯಿಂದ ಉಜ್ಜಿ ಉಜ್ಜಿ ಹೊಳಪಿಸಿದ ಮಾತಿನ ಚೂಪುಗಾರಿಕೆ, ವರ್ಣನೆಗಳ ಸಮೃದ್ಧಿ, ಅಭಿವ್ಯಕ್ತಿಯ ಕಲಾವಂತಿಕೆ–ಇವಕ್ಕೆ ಹೆಚ್ಚು ಪ್ರಾಧಾನ್ಯ. ಚಿತ್ರಕಲೆ, ಸಂಗೀತ, ಕಾವ್ಯಗಳೆಲ್ಲವನ್ನೂ ಕರಗತ ಮಾಡಿಕೊಂಡಿದ್ದರಿಂದ ಗೋಟ್ಯಾ ಅವೆಲ್ಲವನ್ನೂ ಇಲ್ಲಿ ಪರಿಣಾಮಕಾರಿಯಾಗಿ ಅಳವಡಿಸಿಕೊಂಡಿದ್ದಾನೆ. ಸಿಂಫನಿ ಇನ್ ವೈಟ್ ಮೇಜರ್ ಎಂಬುದು ಒಂದು ಅಪೂರ್ವ ಕವನ. ಆರ್ಟ್ ಎನ್ನುವ ಇನ್ನೊಂದು ಕವನದಲ್ಲಿ ತನ್ನ ಎಲ್ಲ ತತ್ತ್ವಗಳನ್ನೂ ಕವಿ ನವುರಾಗಿ ಅಡಗಿಸಿದ್ದಾನೆ. ಕೈಗೆ ಎಟುಕದೆ ನುಣುಚಿಕೊಂಡು ಹೋಗುವ ಪ್ರಕಾರಗಳನ್ನೂ ಹಿಡಿದು ಬಗ್ಗಿಸಲಾಗದ ಕಾವ್ಯ ಸಾಮಗ್ರಿಗಳನ್ನೂ ಪಳಗಿಸಿ ಅವುಗಳೊಂದಿಗೆ ಕಸರತ್ತು ಮಾಡುವುದರಲ್ಲೇ ಕವಿ ತನ್ನ ಸಾಮರ್ಥ್ಯವನ್ನು ಕಂಡುಕೊಳ್ಳುತ್ತಾನೆ ಎಂಬ ಟೀಕೆಗೆ ಪಕ್ಕಾಗಿರುವ ಈತ ಈ ಕವನದಲ್ಲಿ ಬಲು ಕ್ಲಿಷ್ಟಪದ್ಯರೂಪವೊಂದನ್ನು ಎಷ್ಟೊಂದು ಸುಲಲಿತವಾಗಿ ನಿರ್ವಹಿಸಿ ತನ್ನ ಸೂತ್ರಗಳನ್ನು ಉದಾಹರಿಸಿದ್ದಾನೆ ಎಂಬುದನ್ನು ನೋಡಬಹುದು.

ಕಲೆಗೆ, ಹೊರಗಿನ ಏನೊಂದು ಉಪಾಧಿಯೂ ಬೇಕಿಲ್ಲ–ಅದು ತನ್ನನ್ನು ತಾನೇ ಸಮರ್ಥಿಸಿಕೊಳ್ಳುವಂಥದು. ಮಾನವ ನಿರ್ಮಿತಿಗಳಲ್ಲಿ ಅದು ಬಹುಕಾಲ ಬೆಲೆಬಾಳುವಂಥದು ... ನಗರವೊಂದು ನಾಶವಾಗಿ ಹೋದ ಮೇಲೂ ಅದರ ನಡುವಣ ಶಿಲ್ಪಾಕೃತಿ ನಿಂತೇ ಇರುತ್ತದೆ... ದೇವಾಧಿದೇವತೆಗಳೆಲ್ಲ ಸತ್ತರೂ ಕಂಚಿನಾಕೃತಿಗಿಂತ ಕಾವ್ಯ ಹೆಚ್ಚು ಕಾಲ ಬದುಕಿರಬಲ್ಲುದು– ಗೋಟ್ಯಾನ ಈ ಮಾತುಗಳು ಈತ ಪ್ರಾರಂಭಿಸಿದ ಚಳವಳಿಯ ಬೀಜಮಂತ್ರ ಎಂಬುದಾಗಿ ವಿಮರ್ಶಕರ ಅಭಿಮತ. (ಎಚ್.ಕೆ.ಆರ್.)

**ಗೋಡಂಬಿ :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ (ಕ್ಯಾಷ್ಯೂ). ಗೇರು, ಕಾಜು, ಮುಂದಿರಿಪಪ್ಪು ಪರ್ಯಾಯನಾಮಗಳು. ಅನಕಾರ್ಡಿಯಮ್ ಆಕ್ಸಿಡೆಂಟೇಲ್ ಇದರ ವೈಜ್ಞಾನಿಕ ಹೆಸರು. ಗೋಡಂಬಿಯ ತವರು ದಕ್ಷಿಣ ಅಮೆರಿಕ ಮತ್ತು ವೆಸ್ಟ್ ಇಂಡೀಸ್. 16ನೆಯ ಶತಮಾನದಲ್ಲಿ ಪೋರ್ಚುಗೀಸರು ಬ್ರೆಜಿ಼ಲಿನಿಂದ ಗೋಡಂಬಿಯನ್ನು ಭಾರತಕ್ಕೂ ಆಫ್ರಿಕಕ್ಕೂ ತಂದರು. ಭಾರತದಲ್ಲಿ ಮೊಟ್ಟಮೊದಲು ಗೋವೆಯ ಕಡಲತೀರಗಳಲ್ಲಿ ಇದರ ಬೆಳೆ ಆರಂಭವಾಯಿತು. ಕಾಲಕ್ರಮೇಣ ಭಾರತದ ಸಮುದ್ರ ತೀರಪ್ರದೇಶಗಳಲ್ಲೆಲ್ಲ ಹರಡಿದ ಇದು ಮಲಯ ಮುಂತಾದ ದೇಶಗಳಿಗೂ ಕಾಲಿಟ್ಟಿತು. ಭಾರತದಲ್ಲಿ ಮಹಾರಾಷ್ಟ್ರ, ಕೇರಳ, ಕರ್ನಾಟಕ, ಗೋವ, ತಮಿಳುನಾಡು, ಆಂಧ್ರರಾಜ್ಯಗಳಲ್ಲಿ ಅಧಿಕ ಪ್ರಮಾಣಗಳಲ್ಲೂ ಒರಿಸ್ಸ ಮತ್ತು ಬಂಗಾಲಗಳಲ್ಲಿ ಅಲ್ಪ ಪ್ರಮಾಣದಲ್ಲೂ ಗೋಡಂಬಿಯ ಬೇಸಾಯ ಇದೆ. ಗೋಡಂಬಿ ಬೆಳೆಗೆ ಹೆಸರಾಗಿರುವ ಇನ್ನಿತರ ದೇಶಗಳು ಪೂರ್ವ ಆಫ್ರಿಕ, ಬ್ರೆಜಿ಼ಲ್ ಮತ್ತು ಪೋರ್ಚುಗಲ್.

ಗೋಡಂಬಿ ಹಣ್ಣು–ಎಲೆ

ಗೋಡಂಬಿ ಮರ ಮಧ್ಯಮ ಗಾತ್ರದ್ದು; 5–10 ಮೀ ಎತ್ತರಕ್ಕೆ ಬೆಳೆಯುತ್ತದೆ. ಅನೇಕ ಕವಲುಗಳಿಂದ ಕೂಡಿ ಹರಡಿಕೊಂಡು ಚೆಲುವಾಗಿ ಕಾಣುತ್ತದೆ. ಎಲೆಗಳು ಸರಳ, ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಇವುಗಳ ಉದ್ದ 6–20 ಸೆಂಮೀ, ಅಗಲ 4–15 ಸೆಂಮೀ. ತುದಿ ಗುಂಡಾಗಿರುತ್ತದೆ. ಕೆಲವೊಮ್ಮೆ ತುದಿಯಲ್ಲಿ ಕಚ್ಚು ಇರಬಹುದು; ಎಲೆಯ ಬುಡ ಕ್ರಮೇಣ ಕಿರಿದಾಗುತ್ತ ಬಂದು ತೊಟ್ಟಿನೊಡನೆ ಸೇರುತ್ತದೆ. ಎಲೆಯ ಆಕಾರ ದೀರ್ಘ ಅಂಡದಂತೆ. ಮೇಲ್ಮೈ ರೋಮರಹಿತವೂ ತುಸು ಹೊಳಪುಳ್ಳದ್ದೂ ಆಗಿ

ಚರ್ಮಿಲವಾಗಿರುತ್ತದೆ. ಎಲೆಯ ನಾಳವಿನ್ಯಾಸ ಪ್ರಮುಖವಾಗಿ ಕಾಣುವಂತಿದೆ. ಹೂಗಳು ಕೆಂಪು ಮತ್ತು ಪರಿಮಳಯುಕ್ತ; ಏಕಲಿಂಗಿ ಇಲ್ಲವೆ ದ್ವಿಲಿಂಗಿಗಳು. ಅವು ಪ್ಯಾನಿಕಲ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಎರಡು ಬಗೆಯ ಹೂಗಳೂ ಒಂದೇ ಗೊಂಚಲಿನಲ್ಲಿರುತ್ತವೆ. ಪ್ರತಿ ಹೂವಿನಲ್ಲಿ ಹಸುರು ಬಣ್ಣದ 5 ಪುಷ್ಪಪತ್ರಗಳು, 5 ದಳಗಳು, 10 ಕೇಸರುಗಳು, ಏಕಕಾರ್ಪೆಲಿನ ಉಚ್ಚಸ್ಥಾನದ ಅಂಡಾಶಯ (ಗಂಡು ಹೂ ಬಿಟ್ಟು) ಇವೆ. ಫಲ ನಟ್ ಮಾದರಿಯದು. ಮೂತ್ರಪಿಂಡದಾಕಾರದ ಇದು ಸುಮಾರು 3 ಸೆಂಮೀ ಉದ್ದವೂ 2.5 ಸೆಂಮೀ ಅಗಲವೂ ಇದೆ. ಇದರ ಬಣ್ಣ ಬೂದುಮಿಶ್ರಿತ ಕಂದು. ಇದರಲ್ಲಿ ಗಡುಸಾದ ಹೊರಾವರಣ ಮತ್ತು ಎರಡು ಬೀಜದಳಗಳು ಇವೆ. ರೂಢಿಯಲ್ಲಿ ಬೀಜ ಎಂದು ಕರೆಯುವುದು ಫಲವನ್ನೆ. ಯಾವುದನ್ನು ಗೇರು ಹಣ್ಣು ಎಂದು ಕರೆಯಲಾಗುತ್ತದೊ ಅದು ವಾಸ್ತವವಾಗಿ ಹಣ್ಣಲ್ಲ. ಬದಲಿಗೆ ಹೂವಿನ ತೊಟ್ಟು, ಪುಷ್ಪಪೀಠ ಮತ್ತು ಅಂಡಾಶಯವನ್ನು ಸುತ್ತುವರಿದಿರುವ ತಟ್ಟೆಯಂಥ ಭಾಗಗಳಿಂದ ಕೂಡಿದ ರಚನೆ. ಇದರ ಆಕಾರ ಪಿಯರ್ ಹಣ್ಣಿನಂತೆ, ಬಣ್ಣ ಕೆಂಪು ಇಲ್ಲವೆ ಹಳದಿ. ಇದಕ್ಕೆ ತೆಳುಸಿಪ್ಪೆಯೂ ಮಧುರವಾದ ರುಚಿಯೂ ಒಂದು ವಿಶಿಷ್ಟ ಬಗೆಯ ಕಟುವಾಸನೆಯೂ ಇವೆ.

ಬೀಜದ ಮೇಲಿನ ಸಿಪ್ಪೆಯನ್ನು ತೆಗೆಯುತ್ತಿರುವುದು

ಗೋಡಂಬಿ ಬೆಳೆಯ ಬೇಸಾಯ : ಕರ್ನಾಟಕದ ಹವಾಗುಣ ಗೇರಿನ ಬೇಸಾಯಕ್ಕೆ ಹಿತಕರವಾಗಿದ್ದು ಎಲ್ಲ ಜಿಲ್ಲೆಗಳಲ್ಲೂ ಇದರ ಬೇಸಾಯ ಮಾಡಬಹುದು. ಗೋಡಂಬಿ ಒರಟು ಬೆಳೆಯಾದ್ದರಿಂದ ಮಳೆ ಅಧಿಕವಾಗಿ ಹಾಗೂ ಬಹಳ ಕಡಿಮೆ ಬೀಳುವ ಪ್ರದೇಶಗಳಲ್ಲಿ ಬೆಳೆಯಬಹುದು. ಆದರೆ ಹೆಚ್ಚು ಮಳೆ ಬೀಳುವ ಬೆಟ್ಟದ ಇಳಿಜಾರುಗಳಲ್ಲಿ ಯಶಸ್ವಿಯಾಗಿದೆ. ಬೇಸಾಯ ಸಮುದ್ರ ಮಟ್ಟದಿಂದ ಹಿಡಿದು ಸುಮಾರು 800 ಮೀ ಎತ್ತರದವರೆವಿಗೆ ವ್ಯಾಪಿಸಿದೆ. ಗೋಡಂಬಿಯನ್ನು ಎಂಥ ಮಣ್ಣಿನಲ್ಲಾದರೂ ಬೇಸಾಯ ಮಾಡಬಹುದು. ಸಮುದ್ರ ತೀರಗಳ ಮರಳುಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ಆದರೂ ಜಂಬಿಟ್ಟಿಗೆ ಮಣ್ಣು (ಲ್ಯಾಟರೈಟ್) ಮತ್ತು ಕೆಂಪು ಜೇಡಿಮಣ್ಣು ಉತ್ತಮವಾದವು. ಕ್ಷಾರೀಯ ಹಾಗೂ ಆಮ್ಲೀಯ ಭೂಮಿಗಳಲ್ಲೂ ಗೋಡಂಬಿಯನ್ನು ಬೆಳೆಸಬಹುದು. ಇದರ ವೃದ್ಧಿ ಬೀಜ (ಲಿಂಗರೀತಿ) ಮತ್ತು ಲೇಯರುಗಳಿಂದ (ನಿರ್ಲಿಂಗರೀತಿ) ಸಾಧ್ಯ. ಗೋಡಂಬಿಯಲ್ಲಿ ಅನ್ಯ ಪರಾಗಸ್ಪರ್ಶದಿಂದ ನಿಷೇಚನವಾಗುವುದರಿಂದ ಅಧಿಕ ಇಳುವರಿ ಕೊಡುವ ಒಂದು ಮರ ತನ್ನ ಈ ಲಕ್ಷಣವನ್ನು ಉಳಿಸಿಕೊಂಡು ಹೋಗುವ ಸಾಧ್ಯತೆ ಕಡಿಮೆ. ಆದ್ದರಿಂದ ಲೇಯರುಗಳಿಂದ ವೃದ್ಧಿ ಮಾಡುವುದೇ ಉತ್ತಮವೆಂದು ಬಗೆಯಲಾಗಿದೆ.

ಬೀಜಗಳಿಂದ ವೃದ್ಧಿ: ಹೆಚ್ಚಿನ ಇಳುವರಿ ಕೊಡುವ ಹಾಗೂ ರುಚಿ ಮತ್ತು ಆಕರ್ಷಕವಾದ ಹಣ್ಣುಗಳನ್ನು ಬಿಡುವ ಗೋಡಂಬಿ ಮರದಿಂದ ಬೀಜಗಳನ್ನು ಆರಿಸಿ, ಒಣಗಿಸಿ, ಎತ್ತರದ ಪಾತಿಗಳಲ್ಲಿ ಬೀಜಗಳ ನಡುವೆ 20 ಸೆಂಮೀ ಅಂತರವಿರುವಂತೆ ನೆಡಬೇಕು. ಸಾಲುಗಳ ನಡುವಣ ಅಂತರವೂ 20 ಸೆಂಮೀ ಇರಬೇಕು. ನೇರವಾಗಿ ಭೂಮಿಯಲ್ಲೇ ಅಲ್ಲದೆ ಪಾಲಿತೀನ್ ಚೀಲ ಅಥವಾ ಕುಂಡಗಳಲ್ಲಿ ಕೂಡ ಬೀಜಗಳನ್ನು ನೆಡಬಹುದು. ದೂರ ಸ್ಥಳಗಳಿಗೆ ಸುಲಭವಾಗಿ ಸಾಗಿಸಲು ಸಾಧ್ಯವಾಗುವುದರಿಂದ ಪಾಲಿತೀನ್ ಚೀಲದಲ್ಲಿ ಸಸಿಗಳನ್ನು ಬೆಳೆಸುವುದು ಒಳ್ಳೆಯದು. ಬೀಜಗಳಿಗೆ ಕಾಲಕ್ಕೆ ಸರಿಯಾಗಿ ನೀರು ಹಾಕಿದಲ್ಲಿ ಸುಮಾರು 20 ದಿವಸಗಳ ಅನಂತರ ಮೊಳೆಯುತ್ತವೆ. ಸಸಿಗಳು ಎರಡು ತಿಂಗಳು ದೊಡ್ಡವಾದ ಮೇಲೆ ಭೂಮಿಯಲ್ಲಿ ನೆಡಲು ಯೋಗ್ಯವಾಗಿರುತ್ತವೆ.

ಲೇಯರಿಂಗ್ : ಈ ಕ್ರಮಕ್ಕೆ ಒಂದು ವರ್ಷ ವಯಸ್ಸಿನ ಮರದ ರೆಂಬೆ ಸೂಕ್ತವಾದ್ದು. ಈ ವಯಸ್ಸಿನ ರೆಂಬೆಯ ಬೆಳವಣಿಗೆ ಚುರುಕಾಗಿರುತ್ತದೆ. ಆರಿಸಿದ ರೆಂಬೆಯ ಒಂದು ಭಾಗದಲ್ಲಿ 2.5 ಸೆಂಮೀನಷ್ಟು ಮೇಲಿನ ತೊಗಟೆಯನ್ನು ತೆಗೆದು ಹಾಕಿ, ತೆಂಗಿನ ಗುಂಜು ಅಥವಾ ಸುತಲಿದಾರದಿಂದ ಸುತ್ತಬೇಕು. ಅನಂತರ ನಯವಾದ ಮಣ್ಣನ್ನು ಹಾಕಿ ಪ್ಲಾಸ್ಟಿಕ್ ಹಾಳೆಯಿಂದ ಕಟ್ಟಿ ನೀರಿನಿಂದ ಚೆನ್ನಾಗಿ ನೆನೆಸಬೇಕು. ಸುಮಾರು 40–45 ದಿವಸಗಳ ಬಳಿಕ ನೇರಳೆಬಣ್ಣದ ಬೇರುಗಳು ಹೊರಮೂಡುತ್ತವೆ. ಆಗ ಲೇಯರನ್ನು ತಾಯಿಮರದಿಂದ ಬೇರ್ಪಡಿಸಬೇಕು. ಲೇಯರ್ ಗಂಟಿನ ಕೆಳಗೆ V –ಆಕಾರದ ಕಚ್ಚುಮಾಡಿ ಕೊಂಬೆಯ 1/3 ಭಾಗವನ್ನು ಕತ್ತರಿಸಬೇಕು. ಒಂದು ವಾರ ಬಿಟ್ಟು ಕೊಂಬೆಯ ಕಚ್ಚನ್ನು ಇನ್ನೂ ಆಳ ಮಾಡಬೇಕು. 5 ದಿವಸಗಳ ತರುವಾಯ ತಾಯಿ ಮರದಿಂದ ಸಂಪೂರ್ಣವಾಗಿ ಬೇರ್ಪಡಿಸಬೇಕು. ಲೇಯರ್ ಮಾಡಲು ಅಕ್ಟೋಬರ್–ಏಪ್ರಿಲ್ ತಿಂಗಳ ನಡುವಣ ಕಾಲ ಸೂಕ್ತವಾದ್ದು.

ಕಸಿ ಕಟ್ಟುವಿಕೆ : ಕಡಿಮೆ ದರ್ಜೆಯ ಗೋಡಂಬಿಯ ಬೊಡ್ಡೆಗೆ ಉತ್ತಮ ಗುಣವುಳ್ಳ ಮರದ ರೆಂಬೆಯನ್ನು ಕಸಿ ಮಾಡಿ ಮರವಾಗಿ ಬೆಳೆಸುವುದರಿಂದ ಉತ್ತಮ ಇಳುವರಿ ಸಿಕ್ಕುವಂತೆ ಮಾಡಬಹುದು.

ಸಿಪ್ಪೆ ಸುಲಿದ ಬೀಜವನ್ನು ವಾಹಕ ತೊಟ್ಟಿಗಳ ಮೂಲಕ ಹುರಿಯೊಡಿಗೆ ಸಾಗಿಸುತ್ತಿರುವುದು

ಗೋಡಂಬಿ ಸಸಿಗಳನ್ನು ಸಾಮಾನ್ಯವಾಗಿ ಮುಂಗಾರು ಮಳೆಯ ಕಾಲದಲ್ಲಿ ನೆಡುತ್ತಾರೆ. ನೆಡುವುದಕ್ಕೆ ಮುಂಚೆ ಸುಮಾರು ಒಂದು ತಿಂಗಳು ಮುಂಚೆ, ಗುಂಡಿಯಿಂದ ಗುಂಡಿಗೆ 8–10 ಮೀ ಅಂತರವಿರುವಂತೆ, 1 ಘನಮೀಟರ್ ಅಳತೆಯ ಗುಂಡಿಗಳನ್ನು ತೆಗೆಯಬೇಕು. ಸಸಿಗಳನ್ನು ನೆಡುವುದಕ್ಕಿಂತ ಮುಂಚೆ ಗುಂಡಿಗಳನ್ನು ಬೂದಿ ಅಥವಾ ಸುಟ್ಟ ಮಣ್ಣು ಮತ್ತು ಮಣ್ಣುಗಳ ಮಿಶ್ರಣದಿಂದ ತುಂಬಬೇಕು. ಸಸಿಗಳು ಎಳೆಯವಾಗಿರುವಾಗ ಮಾತ್ರ ನೀರು ಹಾಯಿಸುವುದು ಅಗತ್ಯ. ಆಗಿಂದಾಗ್ಗೆ ಕೃತಕಗೊಬ್ಬರ, ಹಸುರೆಲೆ ಗೊಬ್ಬರ ಮುಂತಾದವನ್ನು ಹಾಕುತ್ತಿದ್ದರೆ ಬೆಳೆ ಹುಲುಸಾಗಿ ಬರುತ್ತದೆ.

ಮಧ್ಯವರ್ತಿ ಬೇಸಾಯ : ಗೋಡಂಬಿ ಮರಗಳ ಮಧ್ಯೆ ವರ್ಷಕ್ಕೆ ಒಂದು ಬಾರಿ ಉಳುಮೆ ಮಾಡುವುದು, ಮರಗಳ ಸುತ್ತಲೂ ನೆಲವನ್ನು ಅಗೆಯುವುದು, ರೋಗ, ಕೀಟ ಅಥವಾ ಬೇರೆ ಕಾರಣಗಳಿಂದ ಒಣಗಿ ಹೋಗಿರುವ ಭಾಗಗಳನ್ನು ತೆಗೆಯುವುದು ಮುಂತಾದವು ಮಧ್ಯವರ್ತಿ ಬೇಸಾಯದ ಕೆಲವು ಕ್ರಮಗಳು. ಗೋಡಂಬಿ ತೋಟಗಳಲ್ಲಿ ಬೇರೆ ಜಾತಿಯ ಬೆಳೆಗಳನ್ನು ಕೃಷಿ ಮಾಡಬಹುದು. ಆದರೆ ಮಿಶ್ರ ಬೆಳೆಗೆ ಮೊದಲು 3–4 ವರ್ಷಗಳು ಮಾತ್ರ ಸಾಧ್ಯತೆ ಉಂಟು. ರೂಢಿಯಲ್ಲಿರುವ ಮಿಶ್ರಬೆಳೆಗಳೆಂದರೆ

ಮೆಣಸಿನಕಾಯಿ, ಶುಂಠಿ, ಗೆಣಸು, ಆಲೂಗಡ್ಡೆ, ರಾಗಿ ಮತ್ತು ಕಡಲೆ. ಗೋಡಂಬಿ ಮರಗಳನ್ನು ಸವರುವುದು ಕೆಲವು ಕಡೆ ವಾಡಿಕೆಯಲ್ಲಿದೆಯಾದರೂ ಇಳುವರಿ ಕಡಿಮೆಯಾಗುತ್ತದೆಯಾಗಿ ಗೋಡಂಬಿ ಮರವನ್ನು ಸವರುವುದು ಒಳ್ಳೆಯದಲ್ಲ.

ಗೋಡಂಬಿ ಮರ ನೆಟ್ಟ ನಾಲ್ಕು ವರ್ಷಗಳ ಅನಂತರ ಫಲ ಕೊಡಲು ಪ್ರಾರಂಭಿಸುತ್ತದೆ. ಮರದ ಸರಾಸರಿ ಆಯಸ್ಸು ಸುಮಾರು 40 ವರ್ಷ, ನವಂಬರಿನಿಂದ ಫೆಬ್ರವರಿ ವರೆಗೆ 2–3 ಹಂತಗಳಲ್ಲಿ ಹೂ ಬಿಡುತ್ತದೆ. ಹೂಬಿಟ್ಟ ಎರಡು ತಿಂಗಳಿಗೆ ಹಣ್ಣು ಕುಯ್ಲಿಗೆ ಬರುತ್ತವೆ. ಸಾಮಾನ್ಯವಾಗಿ ಗೋಡಂಬಿ ವರ್ಷಕ್ಕೆ ಒಂದು ಸಲ ಫಲ ಕೊಡುತ್ತದೆ. ಅಪರೂಪವಾಗಿ ಎರಡು ಸಲ ಫಲ ಕೊಡುವುದುಂಟು. 2–3 ಹಂತಗಳಲ್ಲಿ ಗೋಡಂಬಿ ಹೂಗಳು ಅರಳುವುದರಿಂದ ಹಣ್ಣುಗಳು 2–3 ಹಂತಗಳಲ್ಲಿ ಮಾಗುತ್ತವೆ. ಆದ್ದರಿಂದ ಕುಯ್ಲಿನ ಕಾಲ ಸುಮಾರು 45 ರಿಂದ 70 ದಿವಸಗಳ ವರೆಗೆ ಹೋಗಬಹುದು. ಹಣ್ಣು ಚೆನ್ನಾಗಿ ಮಾಗಿದ ಮೇಲೆ ಕೊಯ್ಯಬೇಕು. ಮರದಿಂದ ಮರಕ್ಕೆ, ತೋಟದಿಂದ ತೋಟಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಇಳುವರಿಯ ಪರಿಮಾಣದಲ್ಲಿ ವ್ಯತ್ಯಾಸವುಂಟು. ಇಳುವರಿಯ ಪರಿಮಾಣ 10 ವರ್ಷ ವಯಸ್ಸಿನ ಮರಗಳಲ್ಲಿ ಅಧಿಕ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಗೋವ ಮುಂತಾದ ಕರಾವಳಿ ಪ್ರದೇಶಗಳಲ್ಲಿ ಒಂದೊಂದು ಮರದಿಂದ 10–15 ಕೆಜಿಯಷ್ಟು ಬೀಜಗಳು ಸಿಕ್ಕುತ್ತವೆ. ಉತ್ತರ ಭಾರತದಲ್ಲಿನ ಸರಾಸರಿ ಇಳುವರಿ ದಕ್ಷಿಣ ಭಾಗಕ್ಕಿಂತ ಹೆಚ್ಚು. ಚೆನ್ನಾಗಿ ಬೇಸಾಯ ಮಾಡಿದ ತೋಟಗಳಲ್ಲಿ ಮರಕ್ಕೆ 60 ಕೆಜಿಯಷ್ಟು ಬೀಜ ಪಡೆಯಬಹುದು.



ಗೋಡಂಬಿಯ ವಿಂಗಡಣೆ

ಗೋಡಂಬಿ ಮರಕ್ಕೆ ಭಿನ್ನಕೀಟಗಳಿಂದ ಬಾಧೆ ಉಂಟು. ಅಲ್ಲದೆ ಈ ಮರಕ್ಕೇ ಹತ್ತುವ ರೋಗಗಳೂ ಇವೆ. ಕೀಟಗಳು: 1) ಕಾಂಡ ಕೊರೆಯುವ ಹುಳು : ಇದು ಕಾಂಡವನ್ನು ಕೊರೆದು ರಂಧ್ರ ಮಾಡಿಕೊಂಡು ವಾಸಿಸುತ್ತದೆ. ರಂಧ್ರ ಕೊರೆದ ಭಾಗದಿಂದ ಮೇಲಿನ ಗಿಡದ ಭಾಗ ಒಣಗಿ ಹೋಗುತ್ತದೆ. ಕ್ರಿಯೊಸೋಟ್ ಎಣ್ಣೆಯಲ್ಲಿ ನೆನೆಸಿದ ಹತ್ತಿಯಿಂದ ಹುಳು ಕೊರೆದ ರಂಧ್ರವನ್ನು ಮುಚ್ಚಿ ಒಣಗಿರುವ ಕಾಂಡದ ಭಾಗವನ್ನು ಕತ್ತರಿಸಿ ಸುಡುವುದರಿಂದ ಈ ಹುಳುವನ್ನು ಹತೋಟಿಯಲ್ಲಿಡಬಹುದು. 2) ಎಲೆ ತಿನ್ನುವ ಕಂಬಳಿ ಹುಳು: ಇದು ಎಲೆ ಮತ್ತು ಹೂವುಗಳನ್ನು ತಿಂದು ನಾಶಪಡಿಸುತ್ತದೆ. ಶೇ. 50 ಗ್ಯಾಮಕ್ಸೇನ್ ದ್ರಾವಣವನ್ನು ಸಿಂಪಡಿಸುವುದರಿಂದ ಇದನ್ನು ನಿರ್ಮೂಲ ಮಾಡಬಹುದು. 3) ಥ್ರಿಪ್ಸ್: ಇವು ಎಳೆಯ ಕಾಂಡ, ಎಲೆ ಮತ್ತು ಹೂಗೊಂಚಲಿನಲ್ಲಿ ಇದ್ದು ರಸವನ್ನು ಹೀರಿ ಗಿಡ ಒಣಗುವಂತೆ ಮಾಡುತ್ತವೆ. 0.05 ಬಿಎಚ್‌ಸಿ ಅಥವಾ ಫಾಲಿಡಾಲ್ ಪುಡಿಯನ್ನು ಸಿಂಪಡಿಸಿ ಇವನ್ನು ನಿಯಂತ್ರಿಸಬಹುದು.

ರೋಗಗಳು: ಮುಖ್ಯವಾದದ್ದು ಡೈಬ್ಯಾಕ್ ಎಂಬ ರೋಗ. ಗೋಡಂಬಿ ಬೆಳೆಗೆ ಬಹಳ ನಷ್ಟವನ್ನುಂಟುಮಾಡುವ ಪ್ರಬಲ ರೋಗವಿದು. ಇದರಿಂದ ನರಳುವ ಮರಗಳನ್ನು ಕಡಿದು ಸುಡುವುದು ಲೇಸು. ಬೋರ್ಡೋ ದ್ರಾವಣವನ್ನು ಸಿಂಪಡಿಸಿ ಈ ರೋಗವನ್ನು ತಡೆಗಟ್ಟಬಹುದು.

ಗೋಡಂಬಿಯ ಉಪಯೋಗಗಳು : ಬೀಜವನ್ನು ಹಣ್ಣಿನಿಂದ ಬೇರ್ಪಡಿಸಿದ ಮೇಲೆ ಸೊನೆಹೋಗುವಂತೆ ಚೆನ್ನಾಗಿ ಒಣಗಿಸಿ, ಮೇಲಿನ ಸಿಪ್ಪೆಯನ್ನು ತೆಗೆದು ಹಾಕಿ ಬಳಸುತ್ತಾರೆ. ಗೋಡಂಬಿ ಬೀಜವನ್ನು ಒಂದು ಪೌಂಡು ತೂಕದಲ್ಲಿ ಇರುವ ಬೀಜದ ಸಂಖ್ಯೆಯ ಆಧಾರದ ಮೇಲೆ ಹಲವು ವರ್ಗಗಳಾಗಿ ವಿಂಗಡಿಸಲಾಗುತ್ತದೆ. ಪೌಂಡಿಗೆ 210,240,280,320,400 ಮತ್ತು 450–ಹೀಗೆ ಬೀಜಗಳ ಸಂಖ್ಯೆ ವ್ಯತ್ಯಾಸವಾಗುತ್ತದೆ. ಪೌಂಡಿಗೆ ಹೆಚ್ಚು ಬರುವ ಬೀಜಗಳಿಗೆ ಕಡಿಮೆ ಬೆಲೆಯೂ ಕಡಿಮೆ ಬರುವ ಬೀಜಗಳಿಗೆ ಹೆಚ್ಚು ಬೆಲೆಯೂ ಸಿಕ್ಕುತ್ತದೆ. ಅಂದರೆ ತೂಕವಾರು ಬೆಲೆ ನಿಷ್ಕರ್ಷೆ ಆಗುತ್ತದೆ. ಬೀಜವನ್ನು ಹಸಿಯಾಗಿ ಹಾಗೂ ಹುರಿದು ಬಳಸುವ ಪದ್ಧತಿ ಇದೆ. ಎಳೆಯ ಬೀಜವನ್ನು ಹಸಿಯಾಗಿರುವಾಗಲೇ ಪಲ್ಯಮಾಡಿ ತಿನ್ನುವುದುಂಟು. ಗೋಡಂಬಿ ಬೀಜ ಮಧುರವಾದ ವಾಸನೆ ಮತ್ತು ಹಿತಕರ ರುಚಿಯುಳ್ಳ ಪುಷ್ಟಿಕರವಾದ ಆಹಾರ. ಆದರೆ ಅತಿಯಾದ ಸೇವನೆಯಿಂದ ಪಿತ್ತವಿಕಾರಗಳು ಆಗುವುದುಂಟು. ಮಿಠಾಯಿ, ಬಿಸ್ಕತ್ತು ಮತ್ತು ಸಿಹಿತಿಂಡಿಗಳಲ್ಲಿ ಗೋಡಂಬಿಯ ಬಳಕೆ ಇದೆ. ಬೀಜವನ್ನು ಹುರಿದು ಅಥವಾ ಎಣ್ಣೆಯಲ್ಲಿ ಕರಿದು ಉಪ್ಪನ್ನೋ ಕಾರವನ್ನೋ ಸೇರಿಸಿ ತಿನ್ನುವುದುಂಟು. ಬೀಜದ ಸಿಪ್ಪೆಯಿಂದ ಒಂದು ಬಗೆಯ ಎಣ್ಣೆಯನ್ನು ತೆಗೆಯಲಾಗುತ್ತದೆ. ಇದು ಒಳ್ಳೆ ವಾಣಿಜ್ಯವಸ್ತು. ಇದಕ್ಕೆ ಜಲ ನಿರೋಧಕ ಸಾಮರ್ಥ್ಯ ಇರುವುದರಿಂದ ಇದನ್ನು ಮೀನಿನ ಬಲೆ ದೋಣಿ ಮತ್ತು ನೀರಿನಲ್ಲೆ ಇಡಬೇಕಾದಂಥ ಇತರ ಮರದ ವಸ್ತುಗಳಿಗೆ ಲೇಪಿಸಲು ಬಳಸುತ್ತಾರೆ. ಆಮ್ಲೀಯ ಮತ್ತು ಕ್ಷಾರೀಯ ವಸ್ತುಗಳು ಇದರ ಮೇಲೆ ವರ್ತಿಸುವುದಿಲ್ಲವಾದ್ದರಿಂದ ಗೋಡಂಬಿ ಎಣ್ಣೆಯನ್ನು ಬಣ್ಣ, ಮೆರುಗೆಣ್ಣೆ ಮುಂತಾದವುಗಳ ತಯಾರಿಯಲ್ಲಿ ಬಳಸಲಾಗುತ್ತದೆ. ಸೀಮಾಂತರ ಮಾರುಕಟ್ಟೆಗಳಲ್ಲಿ ಎಣ್ಣೆಗೆ ಉತ್ತಮ ಬೆಲೆಯಿದ್ದು ಭಾರತಕ್ಕೆ ವಿದೇಶಿ ವಿನಿಮಯವನ್ನು ಸಂಪಾದಿಸುವ ವಸ್ತುವಾಗಿದೆ. ಮಾಗಿದ ಗೋಡಂಬಿ ಹಣ್ಣನ್ನು ಹಿಂಡಿ ಪಡೆಯಲಾಗುವ ರಸದಿಂದ ಪಾನಕ ಮುಂತಾದವನ್ನು ಮಾಡಬಹುದು. ಅಲ್ಲದೆ ರಸವನ್ನು ಹುದುಗುವಿಕೆಗೆ ಒಳಪಡಿಸಿ ಹೆಂಡ, ಸಾರಾಯಿ ಮುಂತಾದವನ್ನು ಮಾಡುವ ಕ್ರಮ ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿದೆ. ಚೆನ್ನಾಗಿ ಮಾಗಿದ ಹಣ್ಣಿನ ರಸಕ್ಕೆ ಅದರ ಅರ್ಧದಷ್ಟು ಮೊತ್ತದ ಸಕ್ಕರೆ ಮತ್ತು ಸ್ವಲ್ಪ ಉಪ್ಪನ್ನು ಸೇರಿಸಿ, ಒಂದು ಗಂಟೆಯ ಕಾಲ ಕುದಿಸಿ, ರಸಪಾಕವನ್ನು (ಜಾಮ್) ತಯಾರಿಸಬಹುದು. ಗೋಡಂಬಿ ಮರಕ್ಕೆ ಇತರ ಉಪಯೋಗಗಳೂ ಇವೆ. ಹೂವಿನ ತೊಟ್ಟನ್ನು ಹಸಿಯಾಗಿ ಇಲ್ಲವೆ ಬೇಯಿಸಿ ತಿನ್ನುವ ರೂಢಿ ಇದೆ. ಎಳೆಯ ಎಲೆಗಳನ್ನು ಆಹಾರವಸ್ತುಗಳಿಗೆ ವಾಸನೆ ಕಟ್ಟಲು ಸ್ವಲ್ಪ ಪರಿಮಾಣದಲ್ಲಿ ಬಳಸುವುದುಂಟು. ಗೋಡಂಬಿಯ ಮೆತುಕಾಂಡ ಮತ್ತು ಎಲೆಗಳು ದನಗಳಿಗೆ ಒಳ್ಳೆಯ ಮೇವು. ಹಸುರೆಲೆ ಉತ್ತಮ ಗೊಬ್ಬರ. ಮರವನ್ನು ಉರುವಲಾಗಿ ಬಳಸಬಹುದು.

ಗೋಡಂಬಿಯ ಬೇಸಾಯ ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳ ಸಮುದ್ರತೀರ ಪ್ರದೇಶಗಳಲ್ಲಿ ಆವರಿಸಿದೆ. ಬೆಳೆಯ ವಿಸ್ತೀರ್ಣ ಹಾಗೂ ಉತ್ಪಾದನೆಗೆ ಕೇರಳ ಮತ್ತು ಕರ್ನಾಟಕಗಳು ಅನುಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ಪಡೆದಿವೆ.

ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲು ಗೋಡಂಬಿ ಪರಿಣಾಮಕಾರಿಯಾಗಿದೆ. ವಿದೇಶಿ ವಿನಿಮಯ ಗಳಿಕೆಯ ದೃಷ್ಟಿಯಿಂದ ಗೋಡಂಬಿಗೆ ಎರಡನೆಯ ಸ್ಥಾನ. ಇತ್ತೀಚಿನವರೆಗೆ ಗೋಡಂಬಿ ರಫ್ತಿನಲ್ಲಿ ಭಾರತ ಅಗ್ರಸ್ಥಾನದಲ್ಲಿತ್ತು. 2008 ರಿಂದೀಚೆಗೆ ವಿಯಟ್ನಾಂ ಈ ಸ್ಥಾನವನ್ನು ಆಕ್ರಮಿಸಿದೆ. (ಡಿ.ಎಂ.;ಎಂ.ಎಚ್.ಎಂ.;ಎ.ಕೆ.ಎಸ್.;ಎಸ್.ಐ.ಎಚ್.)

**ಗೋಡೆ :** ಒಂದು ಆವರಣದ ಸುತ್ತಲೂ, ಕೊಠಡಿಯ ಸುತ್ತಲೂ, ನಿವೇಶನದ ಸುತ್ತಲೂ, ನಿರ್ಮಿಸಿದ; ವಿಭಾಜಕವಾಗಿಯೂ ಒಂದು ಎಲ್ಲೆಯಾಗಿಯೂ ನಿರ್ಮಿಸಿದ; ಛಾವಣಿಯನ್ನೂ ಮಹಡಿಯ ನೆಲವನ್ನೂ ಅವುಗಳ ಮೇಲೆರಗುವ ಭಾರಗಳನ್ನು ಹೊರಲೂ ನಿರ್ಮಿಸಿದ; ಛಾವಣಿಯ, ಸೇತುವೆಯ ಅಂಚುಗಳಲ್ಲಿ ಸುರಕ್ಷತೆಗಾಗಿ ನಿರ್ಮಿಸಿದ; ಸೇತುವೆಗಳ ಗುದ್ದುಗಗಳ ಎರಡೂ ಪಕ್ಕಗಳಲ್ಲೂ ಮಣ್ಣಿನ ಏರಿಯನ್ನು ರಕ್ಷಿಸಲು ನಿರ್ಮಿಸಿದ; ನಿರ್ದಿಷ್ಟ ಉದ್ದದ ಲಂಬವಾದ ಕಟ್ಟಡಗಳು, ಗೋಡೆಗಳು. ಮಣ್ಣಿನ ಒತ್ತಡವನ್ನು ತಡೆಯುವವು ಆಸರೆ ಗೋಡೆಗಳು (**ನೋಡಿ**). ಗುದ್ದುಗದ ಪಕ್ಕದವು ಕಿಕ್ಕೆ ಗೋಡೆಗಳು. ಛಾವಣಿಯ, ಸೇತುವೆಯ ಅಂಚಿನಲ್ಲಿರುವುವು ಕೈಪಿಡಿ ಅಥವಾ ಪ್ಯಾರಾಪಟ್ ಗೋಡೆಗಳು. ಸಂದರ್ಭವನ್ನೂ

ಪರಿಸರದ ಅನುಕೂಲತೆಗಳನ್ನೂ ಅನುಸರಿಸಿ ಗೋಡೆಯ ರಚನೆ ಕಲ್ಲು, ಮಣ್ಣು, ಸಿಮೆಂಟ್‌ಕಾಂಕ್ರೀಟ್, ಕಬ್ಬಿಣ, ಮರ ಮುಂತಾದ ವಸ್ತುಗಳಿಂದ ಆಗಬಹುದು. ಗೋಡೆಯ ಗಾತ್ರದ ನಿರ್ಧಾರ ಒಂದು ಎಂಜಿನಿಯರಿಂಗ್ ಸಮಸ್ಯೆ. ಗೋಡೆಯ ಉದ್ದೇಶ, ಅದು ಭರಿಸಬೇಕಾದ ಹೊರೆ, ಪರಿಸರ ಹಾಗೂ ಲಭ್ಯವಸ್ತುಗಳು ಇವನ್ನು ಅವಲಂಬಿಸಿ ಈ ಸಮಸ್ಯೆಗೆ ಪರಿಹಾರವನ್ನು ಎಂಜಿನಿಯರುಗಳು ಒದಗಿಸುತ್ತಾರೆ (**ನೋಡಿ– ಕಟ್ಟಡ; ಗೃಹ; ಗೃಹಾಲೇಖ್ಯ**). (ಜಿ.ಟಿ.ಜಿ.;ಕೆ.ಎಸ್.ಕೆ.;ಎಂ.ಆರ್.ಎಸ್.ಐ.)

**ಗೋಡೈವ :** ಸು. 1040–1080. ಮರ್ಸಿಯದ ಅರ್ಲ್ ಹಾಗೂ ಕಾವೆಂಟ್ರಿಯ ಲಾರ್ಡ್ ಆದ ಲಿಯೋಫ್ರಿಕನ ಮಡದಿ. ಅನೇಕ ಧಾರ್ಮಿಕ ಸಂಘಸಂಸ್ಥೆಗಳಿಗೆ ಉದಾರ ಧನ ಸಹಾಯ ನೀಡಿದವಳು. ಈಕೆಯ ಬಗ್ಗೆ ಸ್ವಾರಸ್ಯವಾದ ಒಂದು ಕಥೆ ಇದೆ: ತೆರಿಗೆಗಳ ಹೊರೆಯನ್ನು ಹೊರಲಾರದೆ ಜನ ತಳಮಳಿಸುತ್ತಿರುವುದನ್ನು ಕಂಡು ಗೋಡೈವಳಿಗೆ ಸಹಿಸದ ಸಂಕಟವಾಯಿತು. ಕಂದಾಯವನ್ನು ಕಡಿಮೆ ಮಾಡುವಂತೆ ತನ್ನ ಗಂಡನನ್ನು ಕೇಳಿಕೊಂಡಳು. ಆತ ಒಂದು ಶರತ್ತು ಹಾಕಿದ. ಅದು ಕೇವಲ ಬಾಯಿಮಾತಿಗೆ ಹಾಕಿದ ಶರತ್ತೇ ವಿನಾ ಉದ್ದೇಶಪೂರ್ವಕವಾದುದಾಗಿರಲಿಲ್ಲ. ತನ್ನ ಪತಿಯ ಆದೇಶವನ್ನು ಗಂಭೀರವಾಗಿ ಪರಿಗಣಿಸಿದ ಗೋಡೈವ ನಿರ್ವಸ್ತ್ರಳಾಗಿ, ತನ್ನ ಉದ್ದನೆಯ ತಲೆಗೂದಲಿನಿಂದ ಮೈಯನ್ನು ಮುಚ್ಚಿಕೊಂಡು ಕುದುರೆಯ ಮೇಲೆ ಕುಳಿತು ಕಾವೆಂಟ್ರಿಯ ಬೀದಿಗಳಲ್ಲಿ ಹಾದುಹೋದಳು. ಇದನ್ನು ಗಮನಿಸಿದ ಕಾವೆಂಟ್ರಿಯ ಜನ ತಮ್ಮ ತಮ್ಮ ಮನೆಯ ಕಿಟಕಿ ಬಾಗಿಲುಗಳನ್ನು ಮುಚ್ಚಿ ಮನೆಯೊಳಗೇ ಇದ್ದುಬಿಟ್ಟರು. ಗೋಡೈವಳ ಈ ವರ್ತನೆಯ ಪರಿಣಾಮವಾಗಿ ಊರಿನ ಜನರ ಮೇಲೆ ವಿಧಿಸಿದ ತೆರಿಗೆ ಕಡಿಮೆಯಾಯಿತು. ಗೋಡೈವ ಬೀದಿಯ ಮೂಲಕ ಹಾಯುತ್ತಿದ್ದಾಗ ನಡೆಯುತ್ತಿದ್ದುದೇನು ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಕಿಟಕಿಯಿಂದ ಇಣಕಿ ನೋಡುತ್ತಿದ್ದ ಟಾಮ್ ಎಂಬ ಯುವಕನಿಗೆ ಅವನ ದೃಷ್ಟಿ ಹೋಯಿತೆಂತಲೋ ಇಲ್ಲವೇ ಆತ ಸಾವನ್ನಪ್ಪಿದನೆಂತಲೋ ಕಥೆಯಿರುವುದಾದರೂ ಈ ಬಗ್ಗೆ ಸಂಬಂಧಿಸಿದ ಉಲ್ಲೇಖ 17ನೆಯ ಶತಮಾನದ ಮೊದಲಿಗೆ ಎಲ್ಲಿಯೂ ಕಾಣಸಿಗದು. ಕೆಲವು ಇತಿಹಾಸಕಾರರು ಮತ್ತು ಮಾನವಶಾಸ್ತ್ರಜ್ಞರು ಈ ಕುದುರೆಸವಾರಿಯನ್ನು ಫಲಸಂವೃದ್ಧಿಗಾಗಿ ಕೈಗೊಳ್ಳುತ್ತಿದ್ದ ಕಟ್ಟಳೆಗಳಲ್ಲೊಂದು ಎಂದು ವ್ಯಾಖ್ಯಿಸಿದ್ದಾರೆ. *

**ಗೋಣಿತಟ್ಟು :** ಸೆಣಬಿನ ನಾರಿನಿಂದ ತಯಾರಿಸಲಾಗುವ ತಟ್ಟು (ಹೆಸಿಯನ್, ಬರ್ಲಾಪ್). ಗೋಣಿಯ ತಟ್ಟನ್ನು ಸಾದಾ ನೆಯ್ಗೆಯ (ಪ್ಲೇನ್ ವೀವ್) ವಿಧಾನದಿಂದ ಚದರ ಅಂಗುಲಕ್ಕೆ 8–12 ದಾರಗಳಿರುವಂತೆ ತಯಾರಿಸಲಾಗುತ್ತದೆ. ಕೆಲವೊಮ್ಮೆ ಅಂಗುಲಕ್ಕೆ 4ರಷ್ಟು ಕಡಿಮೆಯಾಗಿಯೂ 20ರಷ್ಟು ಹೆಚ್ಚಾಗಿಯೂ ದಾರಗಳಿರಬಹುದು. ತಟ್ಟಿನ ಒಟ್ಟು ಅಗಲ ಸಾಮಾನ್ಯವಾಗಿ 88 ಸೆಂಮೀ ಇರುತ್ತದೆ. ಇದು ಚದರಗಜವೊಂದಕ್ಕೆ 10.5 ಔನ್ಸ್ ತೂಗುತ್ತದೆ.

ಗೋಣಿತಟ್ಟನ್ನು ಅನೇಕ ತರಹ ಸಾಮಾನುಗಳ ಸಂವೇಷ್ಟನಕ್ಕೆ, ವಿವಿಧ ಬಗೆಯ ಸರಕುಗಳನ್ನು ತುಂಬುವ ಚೀಲಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ನೀರುಳ್ಳಿ ತುಂಬುವ ಜಾಳು ಚೀಲ, ಅಕ್ಕಿ ತುಂಬುವ ಉತ್ತಮ ಚೀಲ, ಸಕ್ಕರೆ, ರವೆ ತುಂಬುವ ಅಚ್ಚುಕಟ್ಟಾದ ಚೀಲ–ಹೀಗೆ ಚೀಲಗಳಲ್ಲಿ ವಿವಿಧ ಬಗೆಗಳಿವೆ. ಅಲ್ಲದೆ ತಟ್ಟಿಗೆ ಬಣ್ಣಹಾಕಿ ಕೋಟಿನ ಲೈನಿಂಗ್, ಸೋಫಾ ಲೈನಿಂಗ್, ಪಾದರಕ್ಷೆಗಳ ಒಳಭಾಗ ಮುಂತಾದವಕ್ಕೂ ಉಪಯೋಗಿಸಬಹುದು. ಕೆಲವು ರಾಸಾಯನಿಕಗಳನ್ನು ಬಳಸಿ ಗೋಣಿತಟ್ಟು ನೀರಿನಿಂದ ಕೊಳೆಯದಂತೆ ಮಾಡಿ ಅದರ ಉಪಯುಕ್ತತೆ ಹೆಚ್ಚುವಂತೆ ಮಾಡಲಾಗಿದೆ. ತಟ್ಟಿನ ಮೇಲೆ ಅಂದವಾದ ವಿನ್ಯಾಸಗಳನ್ನು ಮುದ್ರಿಸಿ ಅಲಂಕರಣ ವಸ್ತುವಾಗಿ ಬಳಸುವುದುಂಟು. ನೆಲಕ್ಕೆ ಹಾಸುವ ಲಿನೋಲಿಯಮ್ ಬಟ್ಟೆ ಸಹ ಗೋಣಿತಟ್ಟಿನಿಂದ ತಯಾರಾದುದು.

ಗೋಣಿತಟ್ಟು ಸಾಗಾಣಿಕೆಯ ಒರಟು ವಿಧಾನಗಳಿಗೆ ಜಗ್ಗದ ಪದಾರ್ಥ. ಅಲ್ಲದೆ ಬಹಳ ಅಗ್ಗ. ಇದರಿಂದಾಗಿ ಹಿಂದೆ ಇದಕ್ಕೆ ಬಹಳ ಬೇಡಿಕೆ ಇತ್ತು; ತಯಾರಿಕೆಯ ಪ್ರಮಾಣವೂ ಸಾಕಷ್ಟಿತ್ತು. ಆದರೆ ಇತ್ತೀಚೆಗೆ ಕೃತಕ ಎಳೆಗಳಿಂದ ತಯಾರಿಸಲಾಗುವ ಸಂವೇಷ್ಟನ ವಸ್ತುಗಳ ಬಳಕೆಯಿಂದ ಇದರ ತಯಾರಿಕೆ ಇಳಿಮುಖವಾಗಿದೆ (**ನೋಡಿ– ಸೆಣಬಿನ ಗಿಡ**). (ಎಸ್.ಎನ್.ಬಿ.)

**ಗೋಣಿಮರ :** ಮೊರೇಸೀ ಕುಟುಂಬಕ್ಕೆ ಸೇರಿದ ಒಂದು ದೊಡ್ಡ ಗಾತ್ರದ ಮರ. ಅಂಜೂರ, ಅರಳಿ, ಆಲ ಮುಂತಾದ ಮರಗಳ ಹತ್ತಿರ ಸಂಬಂಧಿ. ಶಾಸ್ತ್ರೀಯ ಹೆಸರು ಫೈಕಸ್ ಡ್ರೂಪೇಸಿಯ ಇಲ್ಲವೆ ಫೈಕಸ್ ಮೈಸೂರೆನ್ಸಿಸ್. ಕರ್ನಾಟಕದ ಮೂಲವಾಸಿಯಾದ ಇದು ಪಶ್ಚಿಮ ಘಟ್ಟಗಳ ದಟ್ಟ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಶ್ರೀಲಂಕ, ಬರ್ಮ ಮತ್ತು ಭಾರತದ ಖಾಸಿ ಬೆಟ್ಟಗಳಲ್ಲೂ ಇದನ್ನು ಕಾಣಬಹುದು. ಗೋಣಿ ಮರವನ್ನು ಅಲಂಕಾರಕ್ಕಾಗಿ ಉದ್ಯಾನವನಗಳಲ್ಲೂ ಸಾಲುಮರವಾಗಿ ರಸ್ತೆಯ ಅಂಚುಗಳಲ್ಲಿಯೂ ಬೆಳೆಸುವುದುಂಟು.

ಗೋಣಿಮರ ಸುಮಾರು 15–20 ಮೀ ಎತ್ತರಕ್ಕೆ ಬೆಳೆಯುವ ಮರ. ಕಾಂಡ ಬೂದುಬಣ್ಣದ್ದು. ಎಳೆಯ ಕಾಂಡವನ್ನು ಮುರಿದರೆ ಬಿಳಿ ಬಣ್ಣದ ಹಾಲ್ನೊರೆ ಒಸರುತ್ತದೆ. ಎಲೆಗಳು ಸರಳ ಮಾದರಿಯವು; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಆಕಾರ ಅಂಡದಂತೆ. ತುದಿ ಮೊನಚು. ಎಲೆಗಳ ಮೈ ಹೊಳಪಿನದು. ಎಲೆಗಳು ಎಳೆಯವಾಗಿರುವಾಗ ವೃಂತಪತ್ರ ರಕ್ಷಿತವಾಗಿರುತ್ತವೆ; ದೊಡ್ಡವಾದಂತೆ ವೃಂತಪತ್ರ ಬಿದ್ದುಹೋಗುತ್ತದೆ. ಹೂಗಳು ಬಲು ಚಿಕ್ಕವು. ಅರಳಿ, ಆಲ ಮುಂತಾದವುಗಳಲ್ಲಿರುವಂತೆ ಅವು ಗುಂಡನೆಯ ಹೂಗೊಂಚಲುಗಳ ಒಳಭಾಗದಲ್ಲಿ ಸಮಾವೇಶಗೊಂಡಿವೆ. ಹೂಗೊಂಚಲಿಗೆ ಹೈಪ್ಯಾಂತೋಡಿಯಮ್ ಎಂದು ಹೆಸರು. ಇದು ಹೊರನೋಟಕ್ಕೆ ಕಾಯಿಯಂತೆಯೇ ಕಾಣುತ್ತದೆ. ಎಳೆಯದಿರುವಾಗ ಇದರ ಬಣ್ಣ ಹಸಿರು, ಮಾಗಿದ

ಮೇಲೆ ಕಿತ್ತಳೆಬಣ್ಣಕ್ಕೆ ತಿರುಗುತ್ತದೆ. ಆಗ ಇದನ್ನು ಸೈಕೋನಸ್ ಎಂದು ಕರೆಯುತ್ತಾರೆ. ಹೂಗಳು ಏಕಲಿಂಗಿಗಳು. ಪ್ರತಿ ಹೂಗೊಂಚಲು ಸಣ್ಣ ದ್ವಾರವನ್ನು ಪಡೆದಿರುವ ಒಂದು ಪಾತ್ರೆಯಂತಿದೆ. ಒಳಗೆ ತಳಭಾಗದಲ್ಲಿ ಹೆಣ್ಣು ಹೂಗಳೂ ಮೇಲ್ಭಾಗದಲ್ಲಿ ಅಂದರೆ ದ್ವಾರದ ಕಡೆಗೆ ಕೆಲವು ಗಂಡು ಹೂಗಳೂ ಇವೆ. ಇವಕ್ಕೆ ಗಾಲ್ ಹೂಗಳೆಂದು ಹೆಸರು. ಪ್ರತಿ ಗಂಡು ಹೂವಿನಲ್ಲಿ ನಾಲ್ಕು ಪೆರಿಯಾಂತ್ ಹಾಲೆಗಳು ಮತ್ತು ಒಂದೇ ಕೇಸರ ಹಾಗೂ ಪ್ರತಿಯೊಂದು ಹೆಣ್ಣು ಹೂವಿನಲ್ಲಿ ನಾಲ್ಕು ಪೆರಿಯಾಂತ್ ಹಾಲೆಗಳು ಮತ್ತು ಉಚ್ಚ ಸ್ಥಾನದ ಒಂದು ಅಂಡಾಶಯ ಇವೆ. ಅಂಡಾಶಯದೊಳಗೆ ಒಂದು ಅಂಡಕ ಮಾತ್ರ ಇದೆ. ಗಾಲ್ ಹೂಗಳ ಅಂಡಾಶಯದಲ್ಲಿ ಅಂಡಕದ ಬದಲು ಒಂದು ಬಗೆಯ ಕೀಟದ ಕೋಶಾವಸ್ಥೆ ಇರುತ್ತದೆ. ಗೋಣಿ ಮರದಲ್ಲಿ ಪರಾಗಸ್ಪರ್ಶ ವಿಶಿಷ್ಟ ರೀತಿಯದ್ದಾಗಿದೆ. ಹೈಮಿನಾಪ್ಟರ ಗುಂಪಿಗೆ ಸೇರಿದ ಕೀಟವೊಂದು ಹೂಗೊಂಚಲಿನ ದ್ವಾರದ ಮೂಲಕ ಒಳಹೊಕ್ಕು ಗಾಲ್ ಹೂವಿನ ಅಂಡಾಶಯದ ಒಳಗೆ ಮೊಟ್ಟೆಯನ್ನಿಟ್ಟು ಹೂವಿನಿಂದ ಹೊರಬರಲಾರದೆ ಅಲ್ಲೇ ಸಾಯುತ್ತದೆ. ಮೊಟ್ಟೆಯಿಂದ ಹೊರಬರುವ ಮರಿ ಅಲ್ಲೇ ಕೋಶಾವಸ್ಥೆಯನ್ನು ಕಳೆದು ಕೀಟವಾಗಿ ಹೊರಬರುತ್ತದೆ. ಮೊಟ್ಟೆ ಇಡಲು ಹೋದ ಕೀಟ ಹೊರಗೆ ಬರಲಾಗದುದಕ್ಕೂ ಮೊಟ್ಟೆಯಿಂದ ಬೆಳೆದ ಕೀಟ ಸುಲಭವಾಗಿ ಹೊರಬರಲು ಸಾಧ್ಯವಾಗುವುದಕ್ಕೂ ಕಾರಣ ಇಷ್ಟೇ. ಹೂಗೊಂಚಲಿನ ಮುಖದಲ್ಲಿ ಒಳಮುಖವಾಗಿ ಬೆಳೆದಿರುವ ರೇಕುಗಳು ಪ್ರಾರಂಭದಲ್ಲಿ ಬಹು ಗಡಸಾಗಿರುತ್ತವೆ. ಇದರಿಂದಾಗಿ ಕೀಟ ಹೂವಿನಿಂದ ಹೊರಬರಲು ಆಗುವುದಿಲ್ಲ. ಹೂ ಮಾಗಿದಂತೆ ರೇಕುಗಳು ಮೃದುವಾಗಿ ಸುರುಟಿಕೊಳ್ಳುತ್ತವಾಗಿ ಬೆಳೆದ ಕೀಟ ಸುಲಭವಾಗಿ ಹೊರಬರುತ್ತದೆ; ಹೀಗೆ ಬರುತ್ತಿರುವಾಗ ಅದು ಗಂಡು ಹೂಗಳ ಮೇಲೆ ಚಲಿಸುವುದರಿಂದ ಪರಾಗ ಅದರ ಮೈಗೆ ಅಂಟಿಕೊಳ್ಳುತ್ತದೆ. ಇದು ಇನ್ನೊಂದು ಹೂಗೊಂಚಲಿನ ಒಳಗೆ ಮೊಟ್ಟೆಯಿಡಲು ಹೋದಾಗ ಅದರ ಮೈ ಮೇಲಿರುವ ಪರಾಗ ಹೆಣ್ಣು ಹೂವಿನ ಶಲಾಕಾಗ್ರದ ಮೇಲೆ ಬೀಳುತ್ತದೆ. ಹೀಗೆ ಪರಾಗಸ್ಪರ್ಶ ನಡೆಯುತ್ತದೆ. ಮಕ್ಕಳಿಗೆ ದಡಾರ ಬಂದಾಗ ಗೋಣಿಮರದ ಹಾಲ್ನೊರೆಯನ್ನು ಮೇಕೆ ಇಲ್ಲವೆ ಹಸುವಿನ ಹಾಲಿನೊಂದಿಗೆ ಸೇರಿಸಿ ಕೊಡುವುದಿದೆ. ಮರವನ್ನು ಸೌದೆಯಾಗೂ ಸೊಪ್ಪುಸದೆಯನ್ನು ಜಾನುವಾರುಗಳ ಮೇವಾಗೂ ಉಪಯೋಗಿಸುತ್ತಾರೆ. (ಕೆ.ಎನ್.ಜಿ.)

**ಗೋಣಿಸೊಪ್ಪು :** ಪೋರ್ಚುಲಕೇಸೀ ಕುಟುಂಬಕ್ಕೆ ಸೇರಿದ ಒಂದು ಕಳೆ ಸಸ್ಯ. ಪೋರ್ಚುಲಕ ಕ್ವಾಡ್ರಿಫಿಡ ಇದರ ವೈಜ್ಞಾನಿಕ ಹೆಸರು. ಭಾರತದಲ್ಲೆಲ್ಲ ಇದರ ವ್ಯಾಪ್ತಿಯಿದೆ. ಇದು ನೆಲದ ಮೇಲೆ ಹರಡಿಕೊಂಡು ಬೆಳೆಯುವ ಏಕವಾರ್ಷಿಕ ಮೂಲಿಕೆಗಿಡ. ಕಾಂಡ ಮತ್ತು ಎಲೆಗಳು ದಪ್ಪವಾಗಿ ರಸಭರಿತವಾಗಿ ಇರುತ್ತವೆ. ಎಲೆಗಳ ಆಕಾರ ದೀರ್ಘ ಅಂಡದಂತೆ;

ಉದ್ದ 3–6 ಮಿಮೀ. ಎಲೆಗಳಲ್ಲಿ ಒಂದು ಬಗೆಯ ಲೋಳೆಯೂ ಪೊಟ್ಯಾಸಿಯಮ್ ಆಕ್ಸಲೇಟೂ ಇರುತ್ತವೆ. ಇದರಿಂದಾಗಿ ಅವಕ್ಕೆ ಹುಳಿರುಚಿಯಿದೆ. ಹೂಗಳು ಹಳದಿ. ಒಂಟೊಂಟಿಯಾಗಿ ಕವಲುಗಳ ತುದಿಯಲ್ಲಿ ಹುಟ್ಟುತ್ತವೆ. ಕಾಯಿ ಸಂಪುಟ ಮಾದರಿಯದು.

ಗೋಣಿಸೊಪ್ಪು ಬಲು ಉಪದ್ರವಕಾರಿ ಕಳೆಗಿಡ. ಎಲ್ಲ ಕಳೆಸಸ್ಯಗಳಂತೆ ಇದರ ಪುನರುತ್ಪಾದನ ಸಾಮರ್ಥ್ಯವೂ ಬಹಳ ಹೆಚ್ಚು. ಗಿಡವನ್ನು ಕತ್ತರಿಸಿ ಹಾಕಿದರೂ ಅದರ ಸಣ್ಣ ತುಂಡುಗಳು ಬಲು ಬೇಗ ಬೇರೊಡೆದು ಹೊಸ ಗಿಡಗಳಾಗುತ್ತವೆ. ಬೀಜಗಳೂ ಬಹಳ ಬೇಗ ಮೊಳೆಯುತ್ತವೆ. ಇದರಿಂದಾಗಿ ಈ ಸಸ್ಯ ಯಾವ ಪ್ರದೇಶವನ್ನೇ ಆಗಲಿ ಬಹಳ ಬೇಗ ಆಕ್ರಮಿಸಿಕೊಂಡುಬಿಡುತ್ತದೆ. ಗಿಡವನ್ನು ಬೇರು ಸಮೇತ ಕಿತ್ತು ಸುಟ್ಟು ಬಿಡುವುದೇ ಇದರ ನಿಯಂತ್ರಣದ ಉತ್ತಮ ಮಾರ್ಗ.

ಗೋಣಿಸೊಪ್ಪನ್ನು ಕೆಲವೆಡೆ ಸೊಪ್ಪು ತರಕಾರಿಯಾಗಿ ಬಳಸುವುದಿದೆ. ಆದರೆ ಇವು ದೊಡ್ಡ ಗೋಣಿಸೊಪ್ಪಿನಷ್ಟು (**ನೋಡಿ**) ಒಳ್ಳೆಯದಲ್ಲ. ಹೆಚ್ಚು ತಿಂದರೆ ಜಡತೆ ಉಂಟಾಗುತ್ತದೆ. ಆದರಿದಕ್ಕೆ ಔಷಧೀಯ ಗುಣಗಳುಂಟು. ಅಸ್ತಮ, ಕೆಮ್ಮು, ಮೂತ್ರಸಂಬಂಧಿ ರೋಗ, ಬಾವು, ವ್ರಣಗಳು ಮುಂತಾದವುಗಳಿಗೆ ಇದನ್ನು ಬಳಸುವುದಿದೆ. ಮೊಳೆರೋಗ, ವಿಸರ್ಪಿ (ಎರಿಸಿಪೆಲಾಸ್) ಮತ್ತು ಉದರದ ಹಲವು ಬೇನೆಗಳಿಗೆ ಸೊಪ್ಪಿನ ಬೆಚ್ಚಾರ ಹಾಕುತ್ತಾರೆ. *

**ಗೋಣುಕುರು :** ಗಲಗ್ರಂಥಿಯ (ಟಾನ್ಸಿಲ್) ಹೊರವಲಯದಲ್ಲಿ ಆಗುವ ಹುಣ್ಣು (ಕ್ವಿನ್ಸಿ). ಇದು 12 ವರ್ಷಗಳಿಂದ ಹಿಡಿದು 35 ವರ್ಷಗಳವರೆಗಿನವರಲ್ಲಿ ಅದರಲ್ಲೂ ಗಂಡಸರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮಳೆ ಮತ್ತು ಚಳಿಗಾಲಗಳಲ್ಲಿ ಇದರ ಏರಿಕೆ ಹೆಚ್ಚು. ಈ ಕಾಯಿಲೆಯಿದ್ದ ರೋಗಿಗೆ ಬಾಯಿ ತೆರೆಯುವುದು ಕಷ್ಟ. ಏನನ್ನೂ ನುಂಗಲಾಗುವುದಿಲ್ಲ. ದೇಹದಲ್ಲಿ ಜ್ವರವೂ ನೋವೂ ಇರುತ್ತವೆ. ಹುಣ್ಣಿರುವ ಸ್ಥಳದಲ್ಲಿ ಗಂಟಲಿನ ಒಳಭಾಗವೂ ಕತ್ತಿನ ಹೊರಭಾಗವೂ ಊದಿಕೊಂಡಿರುತ್ತವೆ. ಕಿರುನಾಲಗೆ ಊದಿ ಅದರ ತುದಿ ಹುಣ್ಣಿನ ಕಡೆಗೆ ಬಾಗಿರುತ್ತದೆ. ಗಲಗ್ರಂಥಿಯ ಹೊರಮುಖದ ಪೊರೆಯಲ್ಲಿ ಕೀವುತುಂಬಿರುವುದು. ಯುಕ್ತ ವೇಳೆಯಲ್ಲಿ ಔಷಧಿ ಹಾಗೂ ಶಸ್ತ್ರಚಿಕಿತ್ಸೆಯಿಂದ ಇದನ್ನು ಗುಣಪಡಿಸಬಹುದಾದರೂ ಅವಜ್ಞೆ ಮಾಡಿದಲ್ಲಿ ಇದೊಂದು ಪ್ರಾಣಾಂತಿಕ ಬೇನೆಯಾಗಬಹುದು. (ಪಿ.ಎಸ್.ಎಸ್‌ಯು.)

**ಗೋತಮಿ ಬಲಸಿರಿ :** ಮಹಾರಾಷ್ಟ್ರ ರಾಜ್ಯದ ಅಹಮದ್‌ನಗರ ಜಿಲ್ಲೆಯ ನಾಸಿಕದ ಬೆಟ್ಟದಲ್ಲಿರುವ ಬೌದ್ಧ ಗುಹಾಶಾಸನ ಒಂದರಲ್ಲಿ ಉಲ್ಲೇಖಿತಳಾಗಿರುವ ಒಬ್ಬ ರಾಜಮಾತೆ. ಗೋತಮೀಪುತ್ರ ಸಾತಕರ್ಣಿಯ ತಾಯಿ. ಈ ಶಾಸನವನ್ನು ಸಾತವಾಹನ ರಾಜನಾದ ವಾಸಿಷ್ಠೀಪುತ್ರ ಪುಳುಮಾವಿಯ ರಾಜ್ಯಾಡಳಿತದ 19ನೆಯ ವರ್ಷದಲ್ಲಿ ಬರೆಯಲಾಯಿತು. ಅಸಿಕ, ಅಸಕ, ಮೂಲಕ, ಸುರಥ, ಕುಕುರ, ಅಪರಾನ್ತ, ಅನುಪ, ವಿದಭ, ಆಕರಾವನ್ತೀ ಮೊದಲಾದ ಪ್ರಾಂತಗಳಿಗೆ ಅಧಿಪತಿಯಾದ ಮತ್ತು ಶಕ, ಯವನ, ಪಹ್ಲವ, ಖಕರಾತರನ್ನು ಸೋಲಿಸಿ ಧ್ವಂಸ ಮಾಡಿ ಸಾತವಾಹನರ ಹಿರಿಮೆ ಗರಿಮೆಗಳನ್ನು ಪುನಃಸ್ಥಾಪಿಸಿದ ರಾಜ ರಾಣೋ ಸಿರಿಸಾತಕಣಿಯ ತಾಯಿಯೆಂದು ಗೋತಮಿಯನ್ನು ವರ್ಣಿಸಿದೆ. ಸತ್ಯ ಶೌಚ ಆಚಾರ ಸಹನೆ ತ್ಯಾಗ ಸಂಯಮ ಶೀಲಸಂಪನ್ನೆಯಾಗಿದ್ದು, ಸಂಪೂರ್ಣ ರಾಜರ್ಷಿ ಪತ್ನಿಯ ಹಾಗೆ ಇದ್ದಳೆಂದು ಆಕೆಯನ್ನು ವರ್ಣಿಸಿದೆಯಲ್ಲದೆ ಆಕೆಯ ಸಂತೋಷಕ್ಕಾಗಿಯೆ ಭದಾಯನಿ ಅಥವಾ ಭದಾಯಣೀಯ ಸಂಘದ ಬೌದ್ಧಭಿಕ್ಷುಗಳಿಗೆ ಪಿಶಾಜಿ ಪದಕ ಎಂಬ ಊರನ್ನು ದತ್ತಿ ಕೊಡಲಾಯಿತೆಂದು ಬರೆದಿದೆ. ಈ ಗೋತಮಿ ಬಲಸಿರಿಯ ಪ್ರೀತಿಗಾಗಿಯೇ ಶಿರಣ್ಹು ಬೆಟ್ಟದಲ್ಲಿ ಗುಹೆಯನ್ನು ಕೊರೆಯಿಸಿ, ಭದಾಯಣೀಯ ನಿಕಾಯ ಶಾಖೆಯ ಬೌದ್ಧ ಭಿಕ್ಷುಗಳಿಗೆ ಅದನ್ನು ವಿಶೇಷ ಆಸ್ತಿಯೆಂದು ದತ್ತಿಯಾಗಿ ಬಿಟ್ಟುದನ್ನೂ ಶಾಸನದಲ್ಲಿ ಬರೆದಿದೆ. ಈ ಶಾಸನವನ್ನು ಈಕೆಯೇ ಬರೆಯಿಸಿರಬೇಕೆಂದು ತಿಳಿಯಲಾಗಿದೆ. ಈಕೆಯ ಕಾಲ ಸು. 1–2 ನೆಯ ಶತಮಾನ. (ಎಸ್.ಎಸ್.ಜೆಎ.)

**ಗೋತ್ರ ಮತ್ತು ಪ್ರವರ :** ಋಗ್ವೇದದ ಕೆಲವು ಶ್ಲೋಕಗಳಲ್ಲಿ ಗೋತ್ರ ಎಂದರೆ ಗೋ ಸಮೂಹ ಎಂಬ ಅರ್ಥ ಬರುವಂತಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಅದು ಗುಂಪು ಎಂಬರ್ಥದಲ್ಲಿ ಬಳಕೆಯಾಗಿದೆ. ಕಾಲಕ್ರಮೇಣ ಅದು (ರಕ್ತ ಸಂಬಂಧವುಳ್ಳ) ವ್ಯಕ್ತಿಗಳ ಸಮೂಹ ಎಂಬರ್ಥವನ್ನು ಪಡೆಯಿತು. ಒಂದೊಂದು ಕುಟುಂಬವೂ ತನ್ನ ಮೂಲಪುರುಷ ಒಬ್ಬ ಋಷಿ ಎಂದು ಹೇಳಿಕೊಳ್ಳುತ್ತದೆ. ಅವನೇ ಆ ಕುಟುಂಬದ ಜನಕ. ಹೀಗೆ ಒಬ್ಬ ಪುರುಷನಿಂದ ಆರಂಭವಾಗಿ ಮುಂದೆ ನಿರಂತರವಾಗಿ ಬಂದ ಪುರುಷ ಸಂತಾನಕ್ಕೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳೂ ಒಂದು ಗೋತ್ರಕ್ಕೆ ಸೇರಿದವರು. ಇದೇ ಗೋತ್ರದ ವಿಷಯವಾಗಿರುವ ಸಾಮಾನ್ಯ ಭಾವನೆ. ಒಬ್ಬ ತಾನು ಜಮದಗ್ನಿ ಗೋತ್ರದವನು ಎಂದು ಹೇಳಿಕೊಂಡರೆ ಅವನ ಅಭಿಪ್ರಾಯವಿಷ್ಟೇ: ತನ್ನ ಹಿಂದಿನ ಪುರುಷಸಂತಾನಗಳ ಮೂಲಪುರುಷ ಜಮದಗ್ನಿ ಎಂಬ ಪ್ರಾಚೀನ ಮಹರ್ಷಿ.

ಗೋತ್ರ ಪದ್ಧತಿ ತನ್ನ ಉಪಶಾಖೆಗಳೊಡನೆ ಬ್ರಾಹ್ಮಣಗಳ ಮತ್ತು ಪ್ರಾಚೀನ ಉಪನಿಷತ್ತುಗಳ ಕಾಲಕ್ಕೆ ರೂಢಮೂಲವಾಗಿತ್ತು. ಉದಾಹರಣೆಗೆ ಬ್ರಾಹ್ಮಣಗಳಲ್ಲಿ ನಾವು ನೋಡುವಂತೆ ಅನೇಕ ವೈದಿಕ ಕುಟುಂಬಗಳು ತಮ್ಮ ನಿಜವಾಗಿರಬಹುದಾದ ಅಥವಾ ಕಾಲ್ಪನಿಕವಾಗಿರಬಹುದಾದ ಮೂಲಪುರುಷರಿಗನುಗುಣವಾಗಿ ಅನೇಕ ಗುಂಪುಗಳಾಗಿ ವ್ಯವಸ್ಥೆಗೊಂಡಿದ್ದುವು. ಅಂತೆಯೆ ತಾವು ಸೇರಿದ ಆಯಾ ಗುಂಪಿಗನುಗುಣವಾದ ಪೂಜಾ ವಿಧಾನಗಳನ್ನು ಅನುಸರಿಸುತ್ತಿದ್ದರು. ಭೃಗುಗಳು ಇಲ್ಲವೆ ಆಂಗೀರಸರು ತಮತಮಗೆ ನಿರ್ದಿಷ್ಟವಾದ ಮಂತ್ರಗಳೊಂದಿಗೆ ಹೋಮಾದಿಗಳನ್ನು ನಡೆಯಿಸಬೇಕೆಂದು ತೈತ್ತಿರೀಯ ಬ್ರಾಹ್ಮಣಗಳು ವಿಧಿಸುತ್ತವೆ. ಉಪನಿಷತ್ತುಗಳಲ್ಲಿ ಋಷಿಗಳು ಆತ್ಮವಿದ್ಯೆಯನ್ನುಪದೇಶಿಸುವಾಗ ತಮ್ಮ ಶಿಷ್ಯರನ್ನು ಅವರವರ ಗೋತ್ರ ಹೆಸರುಗಳ ಮೂಲಕ ಸಂಬೋಧಿಸುತ್ತಿದ್ದರು. ಎಂದರೆ ಮೇಲಿನ ಕೃತಿಗಳಲ್ಲಿ ಹೋಮ ಅಥವಾ ಅಧ್ಯಯನಗಳಿಗೆ ಸಂಬಂಧಿಸಿದ ಸನ್ನಿವೇಶಗಳಲ್ಲಿ ಗೋತ್ರಗಳ ಉಲ್ಲೇಖಗಳು ಬಂದಿವೆ. ಆದರೆ ಇವುಗಳಲ್ಲಿ ವಿವಾಹಕ್ಕೆ ಸಂಬಂಧಿಸಿದಂತೆ ಗೋತ್ರ ಅಥವಾ ಸಗೋತ್ರಗಳ ಉಲ್ಲೇಖ ಬಂದಿಲ್ಲವೆಂದೇ ಹೇಳಬಹುದು.

ಗೋತ್ರ ಮತ್ತು ಅದರ ಶಾಖೆಗಳು: ಆರಂಭದಲ್ಲಿ ಎಂಟು ಜನ ಮೂಲಪುರುಷರಿದ್ದ ರೆಂದೂ ಅವರಿಗೆ ಸಂಬಂಧಿಸಿದ ಎಂಟು ಗೋತ್ರಗಳು ಮಾತ್ರ ಇದ್ದುವೆಂದೂ ಹೇಳಲಾಗಿದೆ. ಈ ಎಂಟು ಜನ ಮೂಲಪುರುಷರು ಕುಲವೃದ್ಧರಾದ ಋಷಿಗಳಾದ್ದರಿಂದ ಇವರು ಬ್ರಹ್ಮನ ಎಂಟು ಜನ ಪುತ್ರರೆಂದು ಸಂಪ್ರದಾಯ ಹೇಳುತ್ತದೆ. ಇವರು ಮೊದಲು ಕಶ್ಯಪ, ವಸಿಷ್ಠ, ಅಗಸ್ತ್ಯ, ಭೃಗು, ಗೌತಮ, ಭಾರದ್ವಾಜ, ಅತ್ರಿ ಮತ್ತು ವಿಶ್ವಾಮಿತ್ರ ಎಂಬ ಎಂಟು ಗೋತ್ರಗಳನ್ನು ಸ್ಥಾಪಿಸಿದರು. ಇದೇ ಪ್ರಾತಿನಿಧಿಕವಾದ ಬ್ರಾಹ್ಮಣ ಗೋತ್ರಗಳು. ಕ್ಷತ್ರಿಯರಿಂದ ಸ್ಥಾಪಿತವಾದ ಇನ್ನೂ ಹತ್ತು ಗೋತ್ರಗಳಿವೆ. ಕಾಲಕಳೆದಂತೆ ಈ ಮೂಲಪುರುಷರಾದ ಋಷಿಗಳ ಸಂತತಿಯವರು ನೂರಾರು ಗೋತ್ರಗಳನ್ನು ಸ್ಥಾಪಿಸಿದರು. ಅನೇಕ ಕುಟುಂಬಗಳು ಇವುಗಳ ಹೆಸರುಗಳನ್ನು ಧರಿಸಿದುವು. ಬೇರೆ ಜಾತಿಗಳಲ್ಲೂ ಬ್ರಾಹ್ಮಣ ಗೋತ್ರಗಳನ್ನು ಕಾಣಬಹುದು. ಬ್ರಾಹ್ಮಣರಲ್ಲಿ ಗೋತ್ರ ಸಂತತಿಯ ಮೂಲಪುರುಷನನ್ನು ಸೂಚಿಸಿದರೆ ಬೇರೆ ಜಾತಿಗಳಲ್ಲಿ ಅದು ಅವರ ಸಂತತಿಯ ಒಬ್ಬ ವ್ಯಕ್ತಿಗೆ ಕುಲಪುರೋಹಿತನಾಗಿದ್ದ ಋಷಿಯನ್ನು ಸೂಚಿಸುತ್ತದೆ.

ವೀರಶೈವರಲ್ಲಿ ಗೋತ್ರದ ಬಳಕೆ ಕಂಡುಬರುತ್ತದೆ. ಅವರು ತಾವು ಪ್ರಾಚೀನ ಪುರುಷರೆನಿಸಿದ ಪಂಚಾಚಾರ್ಯ ವಂಶಜರೆಂದು ಹೇಳಿಕೊಳ್ಳುತ್ತಾರೆ. ಪಂಚಾಚಾರ್ಯರೇ ವೀರಶೈವ ಮತದ ಮೂಲಸ್ಥಾಪಕರು. ಆ ಪಂಚಾಚಾರ್ಯರ ಹೆಸರು, ಅವರು ಸ್ಥಾಪಿಸಿದ ಪೀಠ, ಗೋತ್ರ ಇತ್ಯಾದಿಗಳ ಹೆಸರು ಇಂತಿವೆ:

| ಆಚಾರ್ಯರ ಹೆಸರು | ಶಿವನ ಉತ್ಪತ್ತಿ ಸ್ಥಾನ | ಸ್ಥಾಪಿಸಿದ ಪೀಠ | ಗೋತ್ರ | ಸೂತ್ರ | ಪ್ರವರ |
|---|---|---|---|---|---|
| 1 ರೇವಣಾರಾಧ್ಯ | ಸದ್ಯೋಜಾತ | ರಂಭಾಪುರಿ | ವೀರ | ಪಡವಿಡಿ | ಏಕಾಕ್ಷರ |
| 2 ಮರುಳಾರಾಧ್ಯ | ವಾಮದೇವ | ಉಜ್ಜಯಿನಿ | ನಂದಿ | ವೃಷ್ಟಿ | ದ್ವ್ಯಕ್ಷರ |
| 3 ಏಕೋರಾಮಾಧ್ಯ | ಅಘೋರ | ಹಿಮವತ್ ಕೇದಾರ | ಭೃಂಗಿ | ಲಂಬನ | ತ್ರ್ಯಕ್ಷರ |
| 4 ಪಂಡಿತಾರಾಧ್ಯ | ತತ್ಪುರುಷ | ಶ್ರೀಶೈಲ | ವೃಷಭ | ಮುಕ್ತಗುಚ್ಛ | ಚತುರ್ಥಾಕ್ಷರ |
| 5 ವಿಶ್ವಾರಾಧ್ಯ | ಈಶಾನ್ | ಕಾಶಿ | ಸ್ಕಂದ | ಪಂಚವರ್ಣ | ಪಂಚಾಕ್ಷರ |

ವೀರಶೈವರಲ್ಲಿ ಗುರು ಅಥವಾ ಜಂಗಮ ಮತ್ತು ಭಕ್ತ ಎಂಬ ಬಗೆಗಳುಂಟು. ಎರಡು ಬಗೆಗಳಿಗೆ ಗೋತ್ರ ಸೂತ್ರಗಳು ಸಮಾನವಾದರೂ ಪರಸ್ಪರ ಹೆಣ್ಣು ಕೊಟ್ಟು ತರುವುದು ವಿಶೇಷ ಬಳಕೆಯಲ್ಲಿಲ್ಲ. ಈಗೀಗ ಎರಡು ಗುಂಪುಗಳಲ್ಲಿಯೂ ಸಂಪ್ರದಾಯ ಶರಣರು ಕಡಿಮೆಯಾಗುತ್ತಿದ್ದಾರೆ.

ಒಕ್ಕಲಿಗರಲ್ಲಿ ಗೋತ್ರ ಪ್ರವರಗಳ ಹೆಸರು ಕೇಳಿಬರುವುದಿಲ್ಲ. ಅವರಲ್ಲಿ ಹೆಣ್ಣು ಕೊಡುವ ವಿಚಾರದಲ್ಲಿ ಒಕ್ಕಲು ಮತ್ತು ಕುಲ ಎಂಬ ಪದಗಳು ರೂಢಿಯಲ್ಲಿರುವುದು ಕಂಡುಬರುತ್ತದೆ. ಒಂದೇ ಒಕ್ಕಲಿನವರು, ಉದಾಹರಣೆಗೆ ತ್ರಿಪುರ ಸುಂದರಿ ಒಕ್ಕಲಿನವರು ತಮ್ಮತಮ್ಮಲ್ಲಿಯೇ ವಿವಾಹ ಸಂಪರ್ಕ ಏರ್ಪಡಿಸಿಕೊಳ್ಳುವುದಿಲ್ಲ. ಕಾರಣ, ಅವರೆಲ್ಲರೂ ಸೋದರರೆನಿಸಿಕೊಳ್ಳುವುದೇ ಆಗಿದೆ.

ಗೋತ್ರದ ಪ್ರಾಮುಖ್ಯ: ಗೋತ್ರಕ್ಕೆ ಅನೇಕ ಮೂಲಭೂತ ವಿಷಯಗಳಲ್ಲಿ ಅಪಾರ ಪ್ರಾಮುಖ್ಯವಿದೆ. ಗೋತ್ರ ಹಿಂದೂಗಳ ಅಸಂಖ್ಯಾತ ಆಚಾರ ವ್ಯವಹಾರಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸಗೋತ್ರ ವಿವಾಹಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ. ವಿವಾಹದ ಲಾಜಹೋಮದಲ್ಲಿ ಎಲ್ಲರೂ ಎರಡು ಆಹುತಿಗಳನ್ನು ಕೊಡಬೇಕು. ಜಾಮದಗ್ನ್ಯರು

ಮಾತ್ರ ಮೂರು ಆಹುತಿಗಳನ್ನು ಕೊಡಬೇಕು. ಒಬ್ಬ ಹಿಂದೂ ಅಪುತ್ರಕನಾಗಿ ಮಡಿದರೆ ಅವನ ಗೋತ್ರಕ್ಕೆ ಸೇರಿದವರು ಅವನ ಆಸ್ತಿಗೆ ವಾರಸುದಾರರಾಗಬಹುದು. ಶ್ರಾದ್ಧಕ್ಕೆ ಆಹ್ವಾನಿತರಾಗಿ ಬಂದಿರುವವರು ಆಹ್ವಾನಿಸಿರುವವನ ಗೋತ್ರಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಸೇರಿರಬಾರದು. ಸ್ವಲ್ಪ ಕಾಲದ ಹಿಂದೆ ಮಡಿದ ವ್ಯಕ್ತಿಯ ಪ್ರೇತಕ್ಕೆ ತರ್ಪಣ ಕೊಡುವಾಗ ಅವನ ಹೆಸರನ್ನೂ ಅವನ ಗೋತ್ರದ ಹೆಸರನ್ನೂ ಕೂಡಿಸಿ ಉಚ್ಚರಿಸಬೇಕು. ಪಾಕಯಜ್ಞಗಳಲ್ಲಿ ಎಲ್ಲರೂ ಆಹುತಿಯನ್ನು ಹವಿಸ್ಸಿನ ಮಧ್ಯದಿಂದ ಮತ್ತು ಮುಂಭಾಗದ ಅರ್ಧದಿಂದ ಕತ್ತರಿಸಬೇಕು. ಜಾಮದಗ್ನ್ಯರು ಮಾತ್ರ ಮಧ್ಯಭಾಗದಿಂದ ಹಿಡಿದು ಮುಂಭಾಗ ಮತ್ತು ಹಿಂಭಾಗಗಳಲ್ಲಿ ಕತ್ತರಿಸಬೇಕು. ಚೌಲಕರ್ಮದಲ್ಲಿ ವಟುವಿನ ಕುಟುಂಬದ ಗೋತ್ರ ಮತ್ತು ಸಂಪ್ರದಾಯದ ಪ್ರಕಾರ ಅವನ ತಲೆಯ ಮೇಲೆ ಸ್ವಲ್ಪ ಕೂದಲನ್ನು ಉಳಿಸುತ್ತಾರೆ. ಪ್ರಾತಃಕಾಲ ಮತ್ತು ಸಂಧ್ಯಾಕಾಲದ ಪ್ರಾರ್ಥನೆಗಳಲ್ಲಿ ಪ್ರತಿಯೊಬ್ಬನೂ ತನ್ನ ಗೋತ್ರ ಪ್ರವರಗಳನ್ನು ಉಚ್ಚರಿಸಬೇಕು.

ಪ್ರವರದ ಅರ್ಥ: ಗೋತ್ರಕ್ಕೆ ಬಹು ನಿಕಟವಾಗಿ ಹೆಣೆದುಕೊಂಡಿರುವ ಮತ್ತೊಂದು ತತ್ತ್ವ ಪ್ರವರ. ಈ ಶಬ್ದ ಋಗ್ವೇದದಲ್ಲಿ ಬಳಕೆಯಾಗಿಲ್ಲ. ಆದರೆ ಅದಕ್ಕೆ ಸಮಾನಾರ್ಥಕವಾದ ಆರ್ಷೇಯ ಎಂಬುದು ಅಲ್ಲಿದೆ. ಪ್ರವರ ಎಂಬುದಕ್ಕೆ ವಾಚ್ಯಾರ್ಥ ಪ್ರಾರ್ಥನೆ ಎಂದು. ಯಜ್ಞ ಮಾಡುವವನ ಹವಿಸ್ಸನ್ನು ಹಿಂದೆ ಅಗ್ನಿಯನ್ನು ಆಹ್ವಾನಿಸಿದ್ದ ಋಷಿಗಳ ಹೆಸರುಗಳೊಡನೆ ದೇವತೆಗಳಿಗೆ ಕೊಂಡೊಯ್ಯುವಂತೆ ಅಗ್ನಿಯನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದುದರಿಂದ ಪ್ರವರ ಎಂಬ ಪದ ಯಜ್ಞ ಮಾಡುವವನ ಪೂರ್ವಜರಾದ ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಋಷಿಗಳನ್ನು ಸೂಚಿಸತೊಡಗಿತು.

ಪ್ರವರ ಗೃಹಸಂಬಂಧದ ಅನೇಕ ಆಚಾರ ವ್ಯವಹಾರಗಳೊಂದಿಗೆ ನಿಕಟ ಸಂಪರ್ಕ ಪಡೆದಿದೆ. ಅವುಗಳಲ್ಲಿ ವಿವಾಹ ಅತಿ ಮುಖ್ಯವಾದುದು. ಹೆಣ್ಣಿನ ತಂದೆಯ ಪ್ರವರವೂ ಗಂಡಿನ ತಂದೆಯ ಪ್ರವರವೂ ಒಂದೇ ಆಗಿರಬಾರದು. ಉಪನಯನದ ಸಂದರ್ಭದಲ್ಲಿ ಕಟ್ಟುವ ಕಟಿಸೂತ್ರದಲ್ಲಿ ವಟುವಿನ ಪ್ರವರದಲ್ಲಿರುವ ಋಷಿಗಳ ಸಂಖ್ಯೆಗೆ ಅನುಗುಣವಾಗಿ ಒಂದು, ಮೂರು ಅಥವಾ ಐದು ಎಳೆಗಳು ಇರಬೇಕು. ಚೌಲ ಸಮಯದಲ್ಲಿ ತಲೆಯ ಮೇಲೆ ಬಿಡುವ ಜುಟ್ಟು ಹುಡುಗನ ಕುಟುಂಬದ ಪ್ರವರಕ್ಕೆ ಸಂಬಂಧಿಸಿದ ಋಷಿಗಳ ಸಂಖ್ಯೆಯನ್ನು ಅನುಸರಿಸಿರುತ್ತದೆ.

ವಿವಾಹದ ವಿಧಿ ನಿಷೇಧಗಳಿಗೆ ಸಂಬಂಧಿಸಿದಂತೆ ಗೋತ್ರ ಮತ್ತು ಪ್ರವರಗಳನ್ನು ಬಳಸುತ್ತಾರೆ. ಒಂದೇ ಜಾತಿಯಲ್ಲಿ ಸಗೋತ್ರರು, ಸಪ್ರವರರು ಪರಸ್ಪರ ವಿವಾಹ ಮಾಡಿಕೊಳ್ಳುವಂತಿಲ್ಲ. ಒಬ್ಬ ಹುಡುಗಿ ಸಪ್ರವರಳಾಗಿರದಿದ್ದರೂ ಸಗೋತ್ರಳಾಗಿದ್ದರೆ ಸಾಕು ಅವಳನ್ನು ಮದುವೆ ಮಾಡಿಕೊಳ್ಳುವಂತಿಲ್ಲ. ಹಾಗೆಯೇ ಅವಳು ಸಗೋತ್ರಳಾಗಿರದಿದ್ದರೂ ಸಪ್ರವರಳಾಗಿದ್ದರೆ ಸಾಕು, ಅವಳನ್ನು ಮದುವೆ ಮಾಡಿಕೊಳ್ಳುವಂತಿಲ್ಲ. ಒಬ್ಬನಿಗೆ ತನ್ನ ಗೋತ್ರ ಪ್ರವರಗಳು ಗೊತ್ತಿರದಿದ್ದರೆ ಅವನು ತನ್ನ ಕುಲಪುರೋಹಿತನ ಗೋತ್ರಪ್ರವರಗಳನ್ನು ಅಂಗೀಕರಿಸಬೇಕು. ತನ್ನ ಕುಲಪುರೋಹಿತನ ಗೋತ್ರವನ್ನು ಬಳಸುತ್ತಿದ್ದರೂ ಅವನು ಆತನ ಮಗಳೊಬ್ಬಳನ್ನು ಬಿಟ್ಟು ಅದೇ ಗೋತ್ರಕ್ಕೆ ಸೇರಿದ ಇತರ ಹುಡುಗಿಯರನ್ನು ಬೇಕಾದರೆ ಮದುವೆ ಮಾಡಿಕೊಳ್ಳಬಹುದು.

ಸಗೋತ್ರರಾದ ಅಥವಾ ಸಪ್ರವರರಾದ ಗಂಡು ಹೆಣ್ಣುಗಳ ಮದುವೆ ಮದುವೆಯೇ ಅಲ್ಲ; ಅಂಥ ಮದುವೆ ನಡೆದರೂ ಆ ಸ್ತ್ರೀ ಆ ಪುರುಷನ ಪತ್ನಿಯಾಗಲಾರಳು. ಒಬ್ಬ ಪುರುಷ ಸಗೋತ್ರ ಸ್ತ್ರೀಯೊಡನೆ ಸಂಪರ್ಕ ಮಾಡಿದರೆ ಅವನು ಪಾಪವಿಮೋಚನೆಗಾಗಿ ಚಾಂದ್ರಾಯಣ ವ್ರತ ನಡೆಸಬೇಕೆಂದೂ ಅನಂತರ ಆ ಸ್ತ್ರೀಯನ್ನು ಕೈಬಿಡದೆ ಅವಳನ್ನು ತನ್ನ ತಾಯಿಯಂತೆಯೋ ತಂಗಿಯಂತೆಯೋ ನೋಡಿಕೊಳ್ಳಬೇಕೆಂದೂ ಬೌಧಾಯನ ವಿಧಿಸುತ್ತಾನೆ. ಅವರಿಗೆ ಒಂದು ಮಗು ಹುಟ್ಟಿದರೆ ಅದಕ್ಕೆ ಪಾಪ ಅಂಟುವುದಿಲ್ಲ; ಅದು ಕಶ್ಯಪ ಗೋತ್ರವನ್ನೇ ಅಂಗೀಕರಿಸಬೇಕು.

ಹಿಂದೂ ವಿವಾಹ ಕಾಯಿದೆ XXV, 1955 ರ ಪ್ರಕಾರ ವಿವಾಹ ಸಂಪರ್ಕಗಳು ವಿವಿಧ ಜಾತಿ ಮತ್ತು ಸಗೋತ್ರಗಳವರ ಮಧ್ಯೆ ಏರ್ಪಡಬಹುದು. ಈ ದೃಷ್ಟಿಯಲ್ಲಿ ಗೋತ್ರ ಮತ್ತು ಪ್ರವರಗಳ ಪ್ರಾಮುಖ್ಯ ಇಂದು ತಗ್ಗುತ್ತ ಬರುತ್ತಿದೆ. ಸಹಸ್ರಾರು ವರ್ಷಗಳ ಹಿಂದೆ ಸಾಮಾಜಿಕ ಸಂಪರ್ಕಗಳು, ವ್ಯವಹಾರಗಳು ಅಷ್ಟು ಸುಲಭವಾಗಿಲ್ಲದಿರುವಾಗ ಸಗೋತ್ರ, ಸಪ್ರವರ ವಿವಾಹಗಳನ್ನು ನಿಷೇಧಿಸುವುದು ಕಾಲೋಚಿತವಾಗಿತ್ತು. ಆದರೆ ಇಂದು ಆ ನಿಷೇಧ ಅನೇಕರಿಗೆ ಹಿಡಿಸದಿರಬಹುದು. ಅರ್ಥವಿಲ್ಲದ್ದೆನಿಸಬಹುದು. ಬಹಳ ಜನ ತಾವು ಯಾವ ಗೋತ್ರ ಪ್ರವರಗಳಿಗೆ ಸೇರಿದ್ದಾರೆಂಬುದನ್ನೂ ಮರೆತಿದ್ದಾರೆಂದರೆ ಅತಿಶಯೋಕ್ತಿಯೇನಲ್ಲ. (ಡಿ.ಎಚ್.ಎಂ.;ಜಿ.ಎಚ್.)

**ಗೋದಾನ :** ಗೋವನ್ನು ದಾನವಾಗಿ ಕೊಡುವ ಒಂದು ಕಟ್ಟಳೆ. ಇದು ವೇದಕಾಲದಿಂದ ಇಂದಿನವರೆಗೂ ನಡೆದು ಬಂದಿದೆ. ಗೋವು ಸಕಲ ದೇವತಾಮಯ ವೆಂದು ವೇದ ಪುರಾಣಾದಿಗಳು ಹೇಳುತ್ತವೆ. ಯಜ್ಞಾಂತ್ಯದಲ್ಲಿ ಋತ್ವಿಜರಿಗೆ ದಕ್ಷಿಣೆಯನ್ನು ಗೋದಾನ ರೂಪದಲ್ಲಿಯೇ ಕೊಡುವ ಪದ್ಧತಿಯಿತ್ತು. ಇಂತಿಂಥ ಋತ್ವಿಜರಿಗೆ ಇಷ್ಟಿಷ್ಟು ಕೊಡಬೇಕೆಂದು ಯಜ್ಞಕ್ರಮ ಹೇಳುತ್ತದೆ. ಕಠೋಪನಿಷತ್ತಿನಲ್ಲಿ ಬರುವಂತೆ ನಚಿಕೇತ ತನ್ನ ತಂದೆ ಯಜ್ಞಾನಂತರ ಋತ್ವಿಜರಿಗೆ ಅಯೋಗ್ಯ ಗೋವುಗಳನ್ನು ಕೊಡುವುದನ್ನು ನೋಡಿ ಶ್ರದ್ಧಾಯುಕ್ತನಾಗಿ ತನ್ನನ್ನು ಯಾರಿಗೆ ಕೊಡುವೆಯೆಂದು ಆತನನ್ನು ಪ್ರಶ್ನಿಸಿದನೆಂದೂ ಆಗ ಅವನು 'ಯಮನಿಗೆ' ಎಂದು ಸಿಟ್ಟಿನಿಂದ ಹೇಳಿದನೆಂದೂ ಅನಂತರ ನಚಿಕೇತ ಯಮನಿಂದ ಆಧ್ಯಾತ್ಮಿಕ ಉಪದೇಶ ಪಡೆದನೆಂದೂ ಇದೆ. ಬೃಹದಾರಣ್ಯಕೋಪನಿಷತ್ತಿನಲ್ಲಿರುವಂತೆ ಜನಕ ಬ್ರಹ್ಮಿಷ್ಠನಾದ ಯಾಜ್ಞವಲ್ಕ್ಯನಿಗೆ ವೇದಾಂತವಾದದಲ್ಲಿ ಜಯಿಸಿ ಪಡೆದ ಸಾವಿರಾರು ಗೋವುಗಳನ್ನು ಕೊಟ್ಟ. ಗ್ರಹಣ ಸಮಯದಲ್ಲಿಯೂ ಮರಣ ಸಮಯದಲ್ಲಿಯೂ ಗೋದಾನ ಮಾಡುವ ಕ್ರಮ ವಿಶೇಷ ರೂಢಿಯಲ್ಲಿದೆ. ವ್ರತಾಂತ್ಯದಲ್ಲಿಯೂ ಕ್ಷೇತ್ರದಲ್ಲಿಯೂ ಗೋದಾನ ಮಾಡುವ ಪದ್ಧತಿ ಹೆಚ್ಚಾಗಿ ಇದೆ. ಮರಣಾನಂತರ ಮೃತನ ಸದ್ಗತಿಗಾಗಿ ಗೋದಾನ ಮಾಡುವ ಪರಂಪರೆಯನ್ನು ಇಂದಿಗೂ ಕಾಣಬಹುದು. ಗೋದಾನ ಅತಿಶಯ ಪುಣ್ಯಪ್ರದವಾದ ದಾನವೆಂದು ಶಾಸ್ತ್ರಗಳು ಸಾರುತ್ತವೆ. ಗೋವುಗಳನ್ನು ಸಂತುಷ್ಟಿಗೊಳಿಸಿದರೆ, ಸಕಲ ಪಾಪ ಶಮನವಾಗುವುದೆಂದೂ ದಾನಕೊಟ್ಟರೆ, ಸ್ವರ್ಗ ಪ್ರಾಪ್ತಿಯಾಗುವುದೆಂದೂ ರಕ್ಷಿಸಿದರೆ ಧನಪ್ರಾಪ್ತಿಯಾಗುವುದೆಂದೂ ಗೋಧನಕ್ಕೆ ಸಮಾನವಾದ ಸಂಪತ್ತು ಇನ್ನೊಂದಿಲ್ಲವೆಂದೂ ಸ್ಕಾಂದಪುರಾಣದಲ್ಲಿ ಹೇಳಿದೆ. ಅಧಿಕ ಹಾಲನ್ನು ಕೊಡುವ ಒಳ್ಳೆಯ ನಡತೆಯ ಲಕ್ಷಣವಾದ ಗೋವನ್ನು ಕರುವಿನೊಂದಿಗೆ ದಾನ ಮಾಡಬೇಕೆಂದು ಸ್ಮೃತಿಕಾರ ದೇವಲ ಹೇಳುತ್ತಾನೆ.

ಬ್ರಹ್ಮಪುರಾಣದಲ್ಲಿ ತನ್ನ ಮೊಲೆಯ ಹಾಲನ್ನು ತಾನೇ ಕುಡಿಯುವ, ಹೆಚ್ಚು ಆಹಾರ ಸೇವಿಸುವ, ಬಾಲ್ಯಾವಸ್ಥೆಯಲ್ಲಿಯೇ ಗರ್ಭಧರಿಸಿದ ಗೋವನ್ನು ದಾನ ಮಾಡಬಾರದು ಎಂದಿದೆ. ಗೋದಾನ ಮಾಡಿದರೆ ಸ್ವರ್ಗ ಲಭಿಸುವುದೆಂದೂ ಹತ್ತು ಗೋದಾನ ಮಾಡಿದರೆ ಗೋಲೋಕ ಪ್ರಾಪ್ತಿಯೆಂದೂ ನೂರು ಗೋದಾನ ಮಾಡಿದರೆ ಬ್ರಹ್ಮಲೋಕ ಪ್ರಾಪ್ತಿಯೆಂದೂ ಸ್ಮೃತಿಕಾರ ವಿಷ್ಣು ಹೇಳಿದ್ದಾನೆ. ಹೋಮಕ್ಕಾಗಿ ಅಗ್ನಿಹೋತ್ರಿಗೆ ಗೋವನ್ನು ಅವನು ಕೇಳದೆಯೇ ಕೊಟ್ಟದ್ದಾದರೆ ಸಕಲ ಭೂಮಂಡಲವನ್ನೇ ದಾನ ಮಾಡಿದ ಪುಣ್ಯ ಲಭಿಸುತ್ತದೆ ಎಂದು ಜಾಬಾಲನ ಅಭಿಪ್ರಾಯ. ಅಪಾತ್ರನಿಗೆ ಗೋದಾನ ಮಾಡಿದರೆ ಕೊಟ್ಟವನು ನರಕಕ್ಕೆ ಹೋಗುತ್ತಾನೆಂದು ನಂದಿಪುರಾಣದಲ್ಲಿರುವುದು ಗಮನಾರ್ಹವಾಗಿದೆ. ಹೀನಾಂಗದ, ದುಷ್ಟಸ್ವಭಾವದ, ದುರ್ಬಲವಾದ, ಮುಪ್ಪಾದ, ವ್ಯಾಧಿಪೀಡಿತವಾದ, ಹಣ ಸಲ್ಲಿಸದೇ ಕೊಂಡುಕೊಂಡ, ಕೃಶವಾದ, ದುಷ್ಟ ಕರುವುಳ್ಳ, ಬಂಜೆಯಾದ, ಅಧಿಕಾಂಗದ ಗೋವುಗಳನ್ನು ದಾನ ಮಾಡಬಾರದೆಂದು ಶಾಸ್ತ್ರೋಕ್ತಿ. ಹಾಗೂ ಇಂತಿಂಥ ಬಣ್ಣದ ಗೋವನ್ನು ಇಂತಿಂತಹ ರೀತಿಯಲ್ಲಿ ದಾನ ಮಾಡಬೇಕೆಂದೂ ಅದರಿಂದ ಈ ರೀತಿಯ ಫಲಪ್ರಾಪ್ತಿಯಾಗುತ್ತದೆಂದೂ ಸ್ಮೃತಿಕಾರರು ಹೇಳಿರುವರು.

ಗೋದಾನದ ಕ್ರಮ: ಮೊದಲು ಗ್ರಾಸಕೊಟ್ಟು ಗೋವನ್ನು ತೃಪ್ತಿಪಡಿಸಬೇಕು. ಅನಂತರ ಗೋವಿನ ಕೊಂಬಿಗೆ ಸುವರ್ಣದಿಂದಲೂ ಗೊರಸಿಗೆ ಬೆಳ್ಳಿಯಿಂದಲೂ ಅಲಂಕರಿಸಿ ಅದಕ್ಕೆ ರೇಷ್ಮೆವಸ್ತ್ರವನ್ನು ಹೊದಿಸಬೇಕು. ಅನಂತರ ಗಂಧಾಕ್ಷತಪುಷ್ಪಾದಿಗಳಿಂದ ಚೆನ್ನಾಗಿ ಪೂಜಿಸಿ ಪೂರ್ವಾಭಿಮುಖವಾಗಿರುವ ಗೋವಿನ ಬಾಲವನ್ನೂ ಕರುವಿನ ಬಾಲವನ್ನೂ ತುಪ್ಪದ ಪಾತ್ರೆಯಲ್ಲಿಟ್ಟು ಉತ್ತರಾಭಿಮುಖನಾದ ಬ್ರಾಹ್ಮಣನಿಗೆ ಎಳ್ಳುದರ್ಭೆಗಳೊಂದಿಗೆ ನೀರುಬಿಟ್ಟು ದಾನ ಮಾಡಬೇಕು. ಆಗ 'ಯಜ್ಞ ಸಾಧನ ಭೂತಾಯ...' ಎಂಬ ಶ್ಲೋಕವನ್ನು ಉಚ್ಚರಿಸಬೇಕು. ಯಜ್ಞಕ್ಕೆ ಸಾಧನ ಭೂತವಾದ ಸಕಲ ಪಾಪಗಳನ್ನೂ ಪರಿಹಾರ ಮಾಡುವ ಈ ಗೋದಾನದಿಂದ ವಿಶ್ವರೂಪಧರನಾದ ಪರಮಾತ್ಮ ಪ್ರೀತನಾಗಲಿ ಎಂದು ಅದರರ್ಥ.

ಇನ್ನೊಂದು ಅರ್ಥದಲ್ಲಿ ಗೋದಾನವೆಂದರೆ ಗರ್ಭದಾನಾದಿ ಷೋಡಶ ಸಂಸ್ಕಾರಗಳಲ್ಲೊಂದು. ಮಲ್ಲಿನಾಥನ ಹೇಳಿಕೆಯಂತೆ ಇಲ್ಲಿ ಗೋ ಎಂದರೆ ಕೂದಲು, ಅದನ್ನು ಕತ್ತರಿಸುವುದೇ ದಾನ. ಈ ಸಂಸ್ಕಾರವನ್ನು ಬ್ರಾಹ್ಮಣನಿಗೆ 16ನೆಯ ವರ್ಷಕ್ಕೂ ಕ್ಷತ್ರಿಯನಿಗೆ 22ನೆಯ ವರ್ಷಕ್ಕೂ ವೈಶ್ಯನಿಗೆ 24 ವರ್ಷಕ್ಕೂ ಮಾಡಬೇಕೆಂದು ಮನುಧರ್ಮಶಾಸ್ತ್ರದಲ್ಲಿದೆ. ಕಾಳಿದಾಸನ ರಘುವಂಶ ಮಹಾಕಾವ್ಯದಲ್ಲಿ ರಘುವಿಗೆ ದಿಲೀಪ ಗೋದಾನ ವಿಧಿಯ ಅನಂತರ ವಿವಾಹ ವಿಧಿಯನ್ನು ನೆರವೇರಿಸಿದನೆಂದಿದೆ. ಈ ಸಂಸ್ಕಾರಕ್ರಮದಲ್ಲಿ ಹೋಮಾದಿಗಳ ಅನಂತರ ಒಂದು ಹಸುವಿಗೆ ಗ್ರಾಸಕೊಟ್ಟು ತೃಪ್ತಿಪಡಿಸಿ ಗುರುಗಳಿಗೆ ಅದನ್ನು ದಾನವಾಗಿ ಕೊಡಬೇಕೆಂದೂ ಇದೆ. ಇದು ವೇದವ್ರತಗಳಲ್ಲೊಂದು. (ಎನ್.ಆರ್.ಜಿ)

**ಗೋದಾವರಿ :** ಭಾರತದ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಬಂಗಾಲ ಕೊಲ್ಲಿಯನ್ನು ಸೇರುವ, ದಖನಿನ ಉತ್ತರ ಭಾಗದಲ್ಲಿ ಹರಿಯುವ ಒಂದು ದೊಡ್ಡ ನದಿ. ಭಾರತದಲ್ಲಿ ಗಂಗಾನದಿಯನ್ನು ಬಿಟ್ಟರೆ ಪಾವಿತ್ರ್ಯದಲ್ಲಾಗಲಿ, ಸೌಂದರ್ಯದಲ್ಲಾಗಲಿ, ಉಪಯುಕ್ತತೆಯಲ್ಲಾಗಲಿ, ಉದ್ದದಲ್ಲಾಗಲಿ ಇದನ್ನು ಮೀರಿಸುವ ನದಿ ಇನ್ನೊಂದಿಲ್ಲ. ಗೋದಾವರಿ ನದಿಯ ಉದ್ದ 1, 465 ಕಿಮೀ. ಇದರ ಜಲೋತ್ಸಾರಣ ನೆಲದ ವಿಸ್ತೀರ್ಣ ಸುಮಾರು 3,12,812 ಚ. ಕಿಮೀ. ಮಹಾರಾಷ್ಟ್ರದ ನಾಸಿಕ ಜಿಲ್ಲೆಯಲ್ಲಿ, ತ್ರ್ಯಂಬಕೇಶ್ವರದ

ಬಳಿಯ ಬ್ರಹ್ಮಗಿರಿಯಲ್ಲಿ, 1067 ಮೀ ಎತ್ತರದಲ್ಲಿ, ನದಿ ಉಗಮಿಸುತ್ತದೆ. ಪಶ್ಚಿಮದ ಅರಬ್ಬಿ ಸಮುದ್ರಕ್ಕೆ ಇಲ್ಲಿಂದ ಕೇವಲ 80 ಕಿಮೀ. ನದಿ ಉಗಮಿಸುವೆಡೆಯಲ್ಲಿ ಸರೋವರವೊಂದುಂಟು. ಗಿರಿಯ ತಳದಿಂದ 690 ಮೆಟ್ಟಿಲುಗಳನ್ನು ಹತ್ತಿ ಹೋದರೆ ಸಿಗುವ ಈ ಸರೋವರದೊಳಕ್ಕೆ ಬಂಡೆಗಳ ಕಿಂಡಿಯೊಳಗಿನಿಂದ ನೀರು ಒಸರುತ್ತದೆ.

ಉಗಮದಿಂದ ಸಂಗಮದವರೆಗೂ ನದಿ ಸಾಧಾರಣವಾಗಿ ಆಗ್ನೇಯಾಭಿಮುಖ ವಾಗಿಯೇ ಹರಿಯುತ್ತದೆ. ನಾಸಿಕವನ್ನು ದಾಟಿ, ಅಹಮದ್‌ನಗರ ಮತ್ತು ಔರಂಗಾಬಾದ್ ಜಿಲ್ಲೆಗಳ ನಡುವಣ ಗಡಿಯಾಗಿ ಪರಿಣಮಿಸುತ್ತದೆ. ನಾಸಿಕ್‌ವರೆಗೂ ಬಂಡೆಗಳ ನಡುವೆ ಕಿರಿದಾದ ಪಾತ್ರದಲ್ಲಿ ಜಿಗಿಯುವ ಗೋದಾವರಿ ನದಿ ಅಲ್ಲಿಂದ ಮುಂದಕ್ಕೆ ಮಣ್ಣಿನ ವಿಶಾಲವಾದ ಪಾತ್ರದಲ್ಲಿ ಕಡಿಮೆ ವೇಗದಲ್ಲಿ ಮುಂದುವರಿಯುತ್ತದೆ. ನದಿ ಸ್ವಲ್ಪ ದೂರ ಸಾಗಿದ ಮೇಲೆ ಬಲಗಡೆಯಿಂದ ಬಂದು ಇದನ್ನು ಸೇರುವ ಉಪನದಿ ಧಾರಣಾ. ಮುಂದೆ, 27 ಕಿ.ಮೀಗಳ ದೂರದಲ್ಲಿ ಎಡದಂಡೆಯಲ್ಲಿ ಸಂಗಮಿಸುವ ನದಿ ಕಾದಬಾ. ಅನಂತರ ಗೋದಾವರಿಯನ್ನು ಪ್ರವರ ಮತ್ತು ಮುಳಾ ನದಿಗಳು ಒಂದಾಗಿ ಸೇರುತ್ತವೆ.

ಪುರಾತನ ನಗರವಾದ ಪೈಠಣದ ಬಲಗಡೆಯಲ್ಲಿ ಹರಿದು ಸಾಗುವ ಗೋದಾವರಿ ನದಿ ಮಹಾರಾಷ್ಟ್ರದ ನಟ್ಟನಡುವಿನಲ್ಲಿ ಮುಂದುವರಿಯುತ್ತದೆ. ಪರ್‌ಬಾನಿ ಜಿಲ್ಲೆಯ ಬಳಿ ಪೂರ್ಣಾ ನದಿಯೂ ನಾಂದೇಡ್ ಜಿಲ್ಲೆಯಲ್ಲಿ ಕೊಂಡಲ್‌ವಾಡಿಯ ಬಳಿ ಮಂಜ್ರಾ



ಪೋಚಂಪಾಡ್ ಅಣೆಕಟ್ಟು

ನದಿಯೂ ಸೇರುತ್ತವೆ. ಮುಂದೆ ಆಂಧ್ರ ಪ್ರದೇಶವನ್ನು ಹೊಕ್ಕು ಬಹುತೇಕ ಪೂರ್ವಾಭಿಮುಖವಾಗಿ ಹರಿಯುವ ಗೋದಾವರಿ ನದಿಯನ್ನು ತೆಲಂಗಾಣ ಪ್ರದೇಶದ ಅದಿಲಾಬಾದ್ ಜಿಲ್ಲೆಯ ಚಿನ್ನೂರ್ ತಾಲ್ಲೂಕಿನಲ್ಲಿ ಕೂಡಿಕೊಳ್ಳುವ ಉಪನದಿ ಮಾಣೇರ್.

ಪೋಚಂಪಾಡ್ ಅಣೆಕಟ್ಟಿನ ದಕ್ಷಿಣ ಕಾಲುವೆ ಮೇಲೆ ಗಾಡಿ ಸೇತುವೆ

ಸಿರೋಂಚದ ಬಳಿಯಲ್ಲಿ ಎಡಗಡೆಯಿಂದ ಪ್ರಾಣಹಿತಾ ನದಿ ಹರಿದು ಬಂದು ಗೋದಾವರಿಯನ್ನು ಸೇರುತ್ತದೆ. ಅದು ಪೇನಗಂಗಾ, ವರ್ಧಾ ಮತ್ತು ವೈನಗಂಗಾ ನದಿಗಳನ್ನೂ ಕೂಡಿಸಿಕೊಂಡು ಮಹಾರಾಷ್ಟ್ರದಿಂದ ಹರಿದು ಬರುವ ನದಿ. ಈ ಬಳಿಯಲ್ಲಿ ನದಿ ಮತ್ತೆ ಮಹಾರಾಷ್ಟ್ರದ ಗಡಿಯನ್ನು ಮುಟ್ಟಿ ಇಲ್ಲಿಂದ ಮತ್ತೆ ಆಗ್ನೇಯ ದಿಕ್ಕಿಗೆ ಹರಿಯುತ್ತದೆ. ಮಹಾರಾಷ್ಟ್ರದ ಚಾಂದ ಮತ್ತು ಛತ್ತೀಸ್‌ಗಡದ ಬಸ್ತರ್ ಜಿಲ್ಲೆಗಳ ಗಡಿಗಳನ್ನು ಸೋಕಿ ಸ್ವಲ್ಪ ದೂರ ಮುಂದುವರಿಯುವ ಗೋದಾವರಿಯನ್ನು ಬಸ್ತರ್ ಜಿಲ್ಲೆಯಿಂದ ಇಂದ್ರಾವತಿಯೂ ಸ್ವಲ್ಪ ದೂರ ಕೆಳಗೆ ತಾಳ್ ನದಿಯೂ ಸೇರುತ್ತವೆ. ವಿದರ್ಭದ ನೆರೆಯಲ್ಲಿ ಹರಿಯುವ ಗೋದಾವರಿಯ ಪಾತ್ರ 2–3 ಕಿಮೀ. ಈ ತಾಣ ವಿಶಾಲವಾಗಿ, ಮರಳಿನಿಂದ ಕೂಡಿದೆ. ಒಂದೆರಡು ಎಡೆಗಳಲ್ಲಿ ಮಾತ್ರ ಬಂಡೆಗಳು ಅಡ್ಡಬಂದಿವೆ. ಇವನ್ನು ನಿವಾರಿಸಿ, ಹತ್ತಿ ಬೆಳೆಯುವ ವರ್ಧಾ ಮತ್ತು ನಾಗಪುರ ಜಿಲ್ಲೆಗಳಿಂದ ಸಮುದ್ರಕ್ಕೆ ಜಲದಾರಿ ಏರ್ಪಡಿಸಬೇಕೆಂದು 1854ರಲ್ಲಿ ಆಲೋಚಿಸಲಾಗಿತ್ತು. ಈ ಕಾರ್ಯಕ್ಕಾಗಿ ಸಾಕಷ್ಟು ವೆಚ್ಚವನ್ನೂ ಮಾಡಲಾಗಿತ್ತು. ಆದರೆ ಇದು ಸುಲಭ ಸಾಧ್ಯವಲ್ಲವೆಂದು ಕಂಡುಬಂದದ್ದರಿಂದ 1871 ರಲ್ಲಿ ಈ ಯೋಜನೆಯನ್ನು ತ್ಯಜಿಸಲಾಯಿತು.

ಸಿರೋಂಚದಿಂದ ಮುಂದುವರಿದು ಹರಿಯುವ ಗೋದಾವರಿಯನ್ನು ಸಂಗಮಿಸುವ ನದಿ ಶಬರಿ. ಅನಂತರ ಇದು ಗೋದಾವರಿ ಜಿಲ್ಲೆಯ ನಡುವೆ ಹರಿದು ಸಮುದ್ರದತ್ತ ಸಾಗುತ್ತದೆ. ಅದುವರೆಗೂ ಸಮತಲದ ಮೇಲೆ ವಿಶಾಲವಾದ ಪಾತ್ರದಲ್ಲಿ ನಿಧಾನವಾಗಿ ಹರಿಯುವ ನದಿ ಸ್ವಲ್ಪ ಮುಂದೆ ಪೂರ್ವಘಟ್ಟಗಳನ್ನು ಭೇದಿಸಿಕೊಂಡು ಮುಂದುವರಿಯುವುದರಿಂದ ನದಿಯ ಪಾತ್ರ ಕಿರಿದೂ ಪ್ರವಾಹ ಹೆಚ್ಚು ವೇಗವೂ ಆಗುತ್ತದೆ. ಕಡಿದಾದ ಎತ್ತರ ದಂಡೆಗಳು ಮತ್ತು ಅವುಗಳ ಮೇಲಿನ ದಟ್ಟಕಾಡುಗಳಿಂದ ಅಲ್ಲಿಯ ನದಿಪ್ರದೇಶಕ್ಕೆ ರುದ್ರರಮಣೀಯತೆ ಉಂಟಾಗಿದೆ. ಘಟ್ಟಗಳನ್ನು ದಾಟಿದ ಮೇಲೆ ನದಿಯ ಹರಿವು ಮತ್ತೆ ನಿಧಾನವೂ ಪಾತ್ರ ವಿಶಾಲವೂ ಆಗಿ ಪರಿಣಮಿಸುತ್ತವೆ. ನದಿಯಲ್ಲಿ ಉಂಟಾದ ಹಲವು ನಡುಗಡ್ಡೆಗಳು ಹೊಗೆಸೊಪ್ಪಿನ ಬೆಳೆಗೆ ಪ್ರಸಿದ್ಧವಾಗಿವೆ. ಪ್ರವಾಹ ಕಾಲದಲ್ಲಿ ನದಿ ದಡಮೀರಿ ಹರಿದು ಅನಾಹುತ ಮಾಡುವುದುಂಟು. ನದಿಯ ದಡಗಳಲ್ಲಿ ಎತ್ತರದ ಕಟ್ಟೆ ಕಟ್ಟಿ ಇದನ್ನು ತಡೆಗಟ್ಟಬೇಕಾಗುತ್ತದೆ.

ರಾಜಮಹೇಂದ್ರಿಯಿಂದ ಮುಂದೆ ನದಿ ಎರಡು ಕವಲುಗಳಾಗಿ ಒಡೆಯುತ್ತದೆ. ಈ ಎಡೆಯಲ್ಲಿ ನದಿಯ ಅಗಲ ಸು. 7 ಕಿಮೀ. ಪೂರ್ವದ ಕವಲು ಗೌತಮಿ ಗೋದಾವರಿ. ಪಶ್ಚಿಮದ್ದು ವಶಿಷ್ಠ ಗೋದಾವರಿ. ಈ ಕವಲುಗಳು ನದಿಯಿಂದಾದ ಮುಖಜಭೂಮಿಯನ್ನು ಹಾಯ್ದು ಸಮುದ್ರ ಸೇರುತ್ತವೆ. ಒಂದು ಕವಲು ಸ್ವಲ್ಪದೂರ ಮುನ್ನಡೆದ ಮೇಲೆ ಹೊರಡುವ ಒಂದು ಉಪಶಾಖೆಗೆ ವೈನತೇಯ ಎಂದು ಹೆಸರು. ಗೋದಾವರಿಯ ಕವಲುಗಳಿರುವ ಈ ಪ್ರದೇಶ ಅತ್ಯಂತ ಫಲವತ್ತಾದ್ದು. ನದಿ ಕವಲೊಡೆಯುವುದಕ್ಕೆ ಮುನ್ನ ಮುಖ್ಯ ಧವಳೇಶ್ವರದ ಬಳಿ, ಕಟ್ಟಿದ ಅಣೆಕಟ್ಟಿನಿಂದ ಈ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಧವಳೇಶ್ವರದ ಬಳಿ ಹರಿಯುವ ಪ್ರವಾಹ ಸುಮಾರು 10 ಲಕ್ಷ ಕ್ಯೂಸೆಕುಗಳಿಂದ 20 ಲಕ್ಷ ಕ್ಯೂಸೆಕುಗಳವರೆಗೆ ವ್ಯತ್ಯಾಸವಾಗುತ್ತದೆ. ಇಲ್ಲಿ ಹರಿದಿರುವ ಗರಿಷ್ಠ ಪ್ರವಾಹ 30,12,000 ಕ್ಯೂಸೆಕುಗಳು. ಮಳೆಗಾಲವಲ್ಲದಾಗ ನದಿಯ ನೀರಿನ ಪರಿಮಾಣ ತುಂಬ ಕಡಿಮೆಯಾಗುತ್ತದೆ. ಮೇ ತಿಂಗಳಲ್ಲಿ ಅದು 15,000 ಕ್ಯೂಸೆಕುಗಳಷ್ಟು ಕಡಿಮೆಯಿರಬಹುದು. ನದಿಯ ಗರಿಷ್ಠ ವಾರ್ಷಿಕ ಪ್ರವಾಹ ಸುಮಾರು 7,70,000,00,00,000 ಘನ ಅಡಿ. ಕನಿಷ್ಠ 43,800,00,00,000 ಘನ ಅಡಿ. ಗೋದಾವರಿಯಲ್ಲಿ ಹರಿಯುವ ವಾರ್ಷಿಕ ಸರಾಸರಿ ನೀರು ಅಮೆರಿಕದ ಕೊಲಂಬಿಯ ನದಿಯದಕ್ಕಿಂತ ಹೆಚ್ಚು, ಈಜಿಪ್ಟಿನ ನೈಲ್ ನದಿಯಕ್ಕಿಂತ ಅಧಿಕ. ಗೋದಾವರಿ ಜಿಲ್ಲೆಗಳಲ್ಲಿ ನದಿಯ ಮೇಲೆ ದೋಣಿಗಳು ಸಂಚರಿಸುತ್ತವೆ. ಕಾಲುವೆಗಳೂ ದೋಣಿಸಂಚಾರಕ್ಕೆ ಯೋಗ್ಯವಾಗಿವೆ. ಇವಕ್ಕೂ ಕೃಷ್ಣಾ ನದೀ ಮುಖಜಭೂಮಿಯ ಕಾಲುವೆಗಳಿಗೂ ಸಂಪರ್ಕ ಏರ್ಪಟ್ಟಿದೆ.

ಮಹಾರಾಷ್ಟ್ರದಲ್ಲಿ ಗೋದಾವರಿ ಮತ್ತು ಅದರ ಉಪನದಿಗಳನ್ನು ನೀರಾವರಿಗೆ ಹೆಚ್ಚು ಬಳಸಿಕೊಳ್ಳಲಾಗಿಲ್ಲ. ನಾಸಿಕದ ಬಳಿಯ ಗಂಗಾಪುರ ಕಟ್ಟೆ, ಇಗತಪುರಿಯ ಬಳಿ ಧಾರ್ಣಾ ನದೀ ಕಟ್ಟೆ ಪ್ರವರದ ಭಂಡಾರಧಾರ ಕಟ್ಟೆ ಇವು ಮುಖ್ಯವಾದವು. ಮಹಾರಾಷ್ಟ್ರದಲ್ಲೂ ಆಂಧ್ರಪ್ರದೇಶದಲ್ಲೂ ಗೋದಾವರಿ ನದೀಪ್ರದೇಶಕ್ಕೆ ದೀರ್ಘವಾದ ಇತಿಹಾಸವುಂಟು. ಫಲವತ್ತಾದ ಕಪ್ಪುಮಣ್ಣಿನ ಕಣಿವೆಯಿಂದ ಕೂಡಿದ ಗೋದಾವರಿ ಆ ಪ್ರದೇಶದ ಜೀವನಾಡಿಯೆನಿಸಿತ್ತು; ಅಲ್ಲಿಯ ನಾಗರಿಕತೆಯ ತೊಟ್ಟಿಲಾಗಿತ್ತು. ನಾಸಿಕ್ ಮತ್ತು ಪೈಠಣ ಪ್ರಾಚೀನ ರಾಜವಂಶಗಳ ರಾಜಧಾನಿ ಗಳಾಗಿದ್ದುವು. ಕರ್ನಾಟಕವನ್ನಾಳಿದ ಸಾತವಾಹನ ದೊರೆಗಳು ಪ್ರತಿಷ್ಠಾನ ದಿಂದ (ಈಗಿನ ಪೈಠಣ) ಆಳುತ್ತಿದ್ದರೆಂದು ತಿಳಿದು ಬರುತ್ತದೆ (1–2ನೆಯ ಶತಮಾನ). ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿತ್ತೆಂದು ಕವಿರಾಜಮಾರ್ಗಕಾರ (9ನೆಯ ಶತಮಾನ) ಹೇಳುತ್ತಾನೆ.

ಗೋದಾವರಿ ಅತ್ಯಂತ ಪವಿತ್ರ ವಾದ ನದಿಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ. ಒಂದು ಕಾಲದಲ್ಲಿ ಲೋಕದಲ್ಲೆಲ್ಲ ಕ್ಷಾಮ ವ್ಯಾಪಿಸಿದಾಗ ಋಷಿಗಳೆಲ್ಲರೂ ಕುಲಪತಿಯಾದ ಗೌತಮ ಋಷಿಯ ಆಶ್ರಮದಲ್ಲಿ ಆಶ್ರಯ ಪಡೆದು ನೆಮ್ಮದಿಯಿಂದಿದ್ದರು. ಗೌತಮನ ತಪಸ್ಸಿನ ಪ್ರಭಾವದಿಂದ ಆತನ ಭೂಮಿ ಗಳು ಫಲವತ್ತಾಗಿದ್ದವು. ಇದನ್ನು ನೋಡಿ ಸಹಿಸಲಾರದ ಕೆಲವು ಋಷಿಗಳು ಒಂದು ಕೃತ್ರಿಮ ಹಸುವನ್ನು ಸೃಷ್ಟಿಸಿ ಗೌತಮನ

ಭೂಮಿಯಲ್ಲಿ ಮೇಯಲು ಬಿಟ್ಟರು. ಗೌತಮ ಹಸುವನ್ನು (ಗೋವು) ಹೊಡೆ ಯಲು ಇಷ್ಟವಿಲ್ಲದೆ ಒಂದು ಬೊಗಸೆಯ ನೀರನ್ನು ಹಸುವಿನ ಮೇಲೆ ಚೆಲ್ಲಿದ. ಆ ಹಸು ಅಲ್ಲಿಯೇ ಸತ್ತಿತು. ಇದನ್ನು ನೋಡಿ ಋಷಿಗಳು ಗೌತಮನು ಗೋಹತ್ಯೆ ಮಾಡಿದನೆಂದೂ ಅವನ ಮನೆಯಲ್ಲಿ ಅನ್ನವನ್ನು ತಿನ್ನಬಾರದೆಂದೂ ನಿಂದಿಸಿದರು. ಆಗ ಗೌತಮ ಋಷಿಗಳನ್ನು

ಗೋದಾವರಿಯ ಪ್ರವಾಹಗಳಾದ ವಶಿಷ್ಠ, ವೈನತೇಯ ಮತ್ತು ಗೌತಮಿ ಇವುಗಳಿಂದ ನಿರ್ಮಿತವಾದ ಅಮಲಾಪುರ ದ್ವೀಪದಲ್ಲಿ ಭಾನುವಾರ ಸ್ನಾನ ಮಾಡುವುದು ಪುಣ್ಯಪ್ರದವೆಂದು ನಂಬಿಕೆ. ಇದಕ್ಕಾಗಿ ಯಾತ್ರಿಕರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಅಲ್ಲಿಯ ಶಿವದೇವಾಲಯದ ಲಿಂಗವನ್ನು ನರ್ಮದಾ ನದಿಯಿಂದ ಗರುಡ ತಂದನೆಂಬುದು ಪುರಾಣಪ್ರೋಕ್ತವಾದ ವಿಚಾರ.




ಬೇಡಿಕೊಂಡು ತಡೆದು, ಈಶ್ವರನನ್ನು ಪ್ರಾರ್ಥಿಸಿದ. ಆಗ ಈಶ್ವರನು ಕಾಣಿಸಿಕೊಂಡು ತನ್ನ ಜಟೆಯಿಂದ ಒಂದು ಹಿಡಿಯಷ್ಟು ಕೂದಲನ್ನು ಕಿತ್ತು, ಗೌತಮನಿಗೆ ಕೊಟ್ಟು ಅದರಲ್ಲಿರುವ ಗಂಗಾ ನೀರನ್ನು ಆ ಸತ್ತ ಗೋವಿನ ಮೇಲೆ ಹಿಂಡಲು ಹೇಳಿದ. ಗೌತಮ ಈಶ್ವರನ ಆಣತಿಯಂತೆ ಮಾಡಲಾಗಿ ಆ ಗೋವು ಬದುಕಿತು. ಗಂಗಾಜಲ ಪ್ರವಾಹ ರೂಪವಾಗಿ ಹರಿಯತೊಡಗಿತು. ಇದರಿಂದ ಈ ನದಿಗೆ ಗೌತಮಿಯೆಂದೂ, ಸತ್ತ ಗೋವು ಬದುಕಿ ನದಿ ರೂಪದಿಂದ ಹರಿಯ ತೊಡಗಿದುದರಿಂದ ಗೋದಾವರಿಯೆಂದೂ, ಭಗೀರಥ ಗಂಗೆಯನ್ನು ತರುವುದಕ್ಕೆ ಮುಂಚೆ ನಡೆದುದಾಗಿ ವೃದ್ಧ ಗಂಗೆಯೆಂದೂ ಹೆಸರು (ಮಹಾಭಾರತ ಆದಿಪರ್ವ). ಈಗಲೂ ಔದುಂಬರ ವೃಕ್ಷದ ಕೆಳಗೆ ಕುಂಡದಲ್ಲಿ ಮೂಲಗಂಗೆಯನ್ನು ನೋಡಬಹುದೆನ್ನಲಾಗಿದೆ. ಇದೇ ಮುಂದೆ ಗಿರಿಗರ್ಭವನ್ನು ಹೊಕ್ಕು ಬ್ರಹ್ಮಗಿರಿಯ ಪೂರ್ವಭಾಗದಲ್ಲಿ ಪ್ರಕಟವಾಯಿತೆಂಬುದು ನಂಬಿಕೆ. ಆ ಸ್ಥಳದಲ್ಲಿ ಗೋಮುಖವನ್ನೂ ಮೇಲ್ಭಾಗದಲ್ಲಿ ಗಂಗೆಯ ಚಿಕ್ಕ ದೇವಸ್ಥಾನವನ್ನೂ ಕಟ್ಟಲಾಗಿದೆ.

ಶ್ರೀರಾಮ ವನವಾಸದಲ್ಲಿದ್ದಾಗ ಗೋದಾವರಿಯ ಪಂಚವಟೀ ತೀರದಲ್ಲಿ ವಾಸವಾಗಿದ್ದ; ವಾಲ್ಮೀಕಿಗೆ ರಾಮಾಯಣ ಬರೆಯಲು ಸ್ಫೂರ್ತಿ ದೊರಕಿದ್ದು ಗೋದಾವರಿ ತೀರದಲ್ಲೇ. ಮಹಾಭಾರತದಲ್ಲಿ ಇದನ್ನು ಸಪ್ತಗೋದಾವರಿ ಎಂದು ಉಲ್ಲೇಖಿಸಲಾಗಿದೆ. ಇದರ ದಂಡೆಯ ಮೇಲೆ ದಶಾಶ್ವಮೇಧಿಕ, ಗೋವರ್ಧನ, ಸಾವಿತ್ರೀ, ವಿದರ್ಭ, ಮಾರ್ಕಂಡೇಯ, ಕಿಷ್ಕಿಂಧೆ ಮುಂತಾದ ತೀರ್ಥಗಳಿದ್ದುವೆಂದು ತಿಳಿದುಬರುತ್ತದೆ. ಬ್ರಹ್ಮಪುರಾಣದಲ್ಲಿ ಗೋದಾವರಿಯ 100 ತೀರ್ಥಗಳ ಉಲ್ಲೇಖವಿದೆಯೆನ್ನಲಾಗಿದೆ. ಅವುಗಳಲ್ಲಿ ತ್ರ್ಯಂಬಕ, ಕುಶಾವರ್ತ, ಜನಸ್ಥಾನ, ಗೋವರ್ಧನ, ಪ್ರವರಾಸಂಗಮ ಮತ್ತು ನಿವಾಸಪುರ ಇವು ವಿಶೇಷ ಪುಣ್ಯಪ್ರದಗಳೆಂದು ಪರಿಗಣಿತವಾಗಿವೆ.

ಗೋದಾವರಿ ನದೀತೀರದಲ್ಲಿ ಅನೇಕ ತೀರ್ಥಕ್ಷೇತ್ರಗಳಿವೆ. ಧವಳೇಶ್ವರಂ ಒಂದು ಪ್ರಸಿದ್ಧ ಕ್ಷೇತ್ರ. ಮಾಘಮಾಸದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಹತ್ತಿರದಲ್ಲೇ ಒಂದು ಬೆಟ್ಟವಿದೆ. ಅಲ್ಲಿ ನಾರದಮುನಿಗಳು ವಾಸವಾಗಿದ್ದರೆಂದು ಪ್ರತೀತಿ. ಕಲ್ಲಿನ ಮೇಲೆ ಶ್ರೀರಾಮ ಸೀತೆಯರ ಪಾವಲಿಯಾಕಾರದ ಒಂದು ಮುದ್ರೆಯುಂಟು. ರಾಜಮಹೇಂದ್ರಿಯಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಪುಷ್ಕರ ಎಂಬ ಸ್ನಾನ ಮಹೋತ್ಸವ ನಡೆಯುತ್ತದೆ. ಶ್ರೀರಾಮ ಭದ್ರಾಚಲದಲ್ಲಿ ಬಂದು ವಾಸವಾಗಿದ್ದದ್ದರಿಂದ ಆ ಸ್ಥಾನ ಪವಿತ್ರವೆಂದು ಪರಿಗಣಿತವಾಗಿದೆ. ಅಲ್ಲಿಂದ 52 ಕಿಮೀ ದೂರದಲ್ಲಿ ಶ್ರೀರಾಮನ ಪರ್ಣಕುಟಿ ಇತ್ತೆಂದೂ ಅಲ್ಲಿಂದಲೇ ರಾವಣ ಸೀತೆಯನ್ನು ಅಪಹರಣ ಮಾಡಿದನೆಂದೂ ಪ್ರತೀತಿಯುಂಟು.

ನಾಸಿಕ ಮತ್ತು ಪೈಠಣ ಮತ್ತೆರಡು ಪವಿತ್ರ ಕ್ಷೇತ್ರಗಳು. ಗೋದಾವರಿ ನದಿಗೆ ದಕ್ಷಿಣ ಗಂಗಾ ಎಂದು ಹೆಸರು ಬಂದಿರುವಂತೆ, ಅದರ ತೀರದಲ್ಲಿರುವ ಪವಿತ್ರ ಕ್ಷೇತ್ರಗಳು ದಕ್ಷಿಣ ಕಾಶಿಗಳೆಂದು ಹೆಸರಾಗಿವೆ. ಪವಿತ್ರ ಗೋದಾವರಿ ಸ್ಮರಣೆ ಮಾತ್ರದಿಂದಲೇ ಮನುಷ್ಯನ ಸರ್ವ ಪಾಪಗಳೂ ನಾಶವಾಗುತ್ತವೆಂಬುದು ಹಿಂದೂಗಳ ನಂಬಿಕೆ. ರಾಮ ಈ ತೀರದಲ್ಲೇ ಪಿತೃಶ್ರಾದ್ಧ ಮಾಡಿದನಂತೆ. ಬ್ರಹ್ಮಾಂಡ ಪುರಾಣ ಮತ್ತು ಸ್ಕಾಂದ ಪುರಾಣಗಳಲ್ಲಿ ಗೋದಾವರಿ ಮಹಿಮೆಯನ್ನು ವಿಶೇಷವಾಗಿ ವರ್ಣಿಸಲಾಗಿದೆ.

ಗೋದಾವರಿಯ ನೀರು ಆರೋಗ್ಯದಾಯಕವೆಂದು ಹಲವರ ನಂಬಿಕೆ. ಪಿತ್ತ ಮತ್ತು ರಕ್ತದ ವ್ಯಾಧಿಗಳು, ಕುಷ್ಠರೋಗ–ಇವು ಗೋದಾವರೀ ನೀರಿನಿಂದ ವಾಸಿಯಾಗುತ್ತವೆನ್ನಲಾಗಿದೆ. ಇದು ಪಥ್ಯಕರವಾದ್ದರಿಂದ ಹಸಿವು ಹೆಚ್ಚಿಸುತ್ತದೆಂದು ರಾಜನಿಘಂಟಿನಲ್ಲಿ ಹೇಳಿದೆ.

**ನೀರಾವರಿ ಮತ್ತು ವಿದ್ಯುತ್ ವ್ಯವಸ್ಥೆ :** ಗೋದಾವರಿ ನದೀ ಪ್ರದೇಶದಲ್ಲಿ ಪ್ರಕೃತದಲ್ಲಿ ನೀರಾವರಿ ಒದಗಿಸುತ್ತಿರುವ ಯೋಜನೆಗಳು ಇವು :

**ಮಹಾರಾಷ್ಟ್ರದಲ್ಲಿ ಗೋದಾವರಿ ಮತ್ತು ಇದರ ಉಪನದಿಗಳ ಜಲಾಶಯಗಳು**

| ಜಲಾಶಯದ ಹೆಸರು | ಪೂರ್ಣವಾದ ವರ್ಷ | ನದಿ | ಸ್ಥಳ | ಎತ್ತರ (ಮೀ) | ಉದ್ದ (ಮೀ) | ವಿಸ್ತೀರ್ಣ (ಚ.ಕಿಮೀ) |
|---|---|---|---|---|---|---|
| ವಾಕಿ | – | ಗೋದಾವರಿ | ಪಚೋರ | 51.87 | 869 | 2054 |
| ಜಯಕ್‌ವಾಡಿ | 1976 | ಗೋದಾವರಿ | ಪೈಠಣ್ | 41.3 | 10415 | 39800 |
| ಗಂಗಾಪುರ್ | 1965 | ಗೋದಾವರಿ | ನಾಸಿಕ್ | 36.59 | 3902 | 22860 |
| ಯೆಲ್‌ದರಿ | 1968 | ಪೂರ್ಣ | ಯೆಲ್‌ದರಿ | 51.2 | 4232 | 10540 |
| ಮೇಲಿನವಾರ್ಧಾ | 1993 | ವಾರ್ಧಾ | ಅಮರಾವತಿ | 46.2 | 5920 | 93122 |
| ಸಿದ್ಧೇಶ್ವರ್ | 1968 | ಪೂರ್ಣ | ಸಿದ್ಧೇಶ್ವರ್ | 38.26 | 63532 | 40580 |
| ಪೂರ್ಣನೋಪುರ್ | 1998 | ಪೂರ್ಣ | ಕನ್ನದ್ | 16.6 | 2725 | 3848 |
| ಪೂರ್ಣ | – | ಪೂರ್ಣ | ಅಮರಾವತಿ | 38 | 3120 | 5880 |
| ಪೆನ್‌ಟಕಲಿ | 2003 | ಪೇನಗಂಗಾ | ಮೆಹ್‌ಕರ್ | 27.5 | 990 | 12870 |
| ಮುಲ್‌ಷಿ | 1927 | ಮುಳಾ | ಮುಲಷಿ | 48.8 | 153338 | 3802 |
| ಮುಳಾ | 1972 | ಮುಳಾ | ರಾಹುರಿ | 48.17 | 2856 | 53600 |
| ಮಂಜರಾ | 1982 | ಮಂಜರಾ | ಕೈಜ್ ಮತ್ತು ಕಲಂಬ್ | 25 | 4203 | – |
| ಕೆಳಗಿನವಾರ್ಧಾ | – | ವಾರ್ಧಾ | ವಾರ್ಧಾ | 27.8 | 9464 | 54654 |
| ಈಸಪುರ್ | 1982 | ಪೇನಗಂಗಾ | ನಾಂದೇಡ್ | 57 | 41201 | – |
| ಗೋಸಿ | – | ವೈನಗಂಗಾ | ಭಂಡಾರ | 22.5 | 1135 | 22258 |
| ಗೋದಾವರಿ | – | ಧಾರಣ | ಇಗತ್‌ಪುರಿ | 34.75 | 1028 | 2565 |
| ಧಾರಣ | 1916 | ಧಾರಣ | ಇಗತ್‌ಪುರಿ | 28 | 1634 | 34750 |

ಆಂಧ್ರಪ್ರದೇಶದಲ್ಲಿ ಗೋದಾವರಿ ಮತ್ತು ಉಪನದಿಗಳಿಂದ ನೀರಾವರಿ ವ್ಯವಸ್ಥೆ :

1. ನಿಜಾಮಸಾಗರ : ಗೋದಾವರಿ ನದಿಯ ಉಪನದಿ ಮಂಜ್ರಾ (ಮಂಜರಾ) ನದಿಗೆ ಹೈದಾರಬಾದ್‌ಗೆ ವಾಯವ್ಯದಲ್ಲಿ 144 ಕಿಮೀ ದೂರದಲ್ಲಿ ಅಣೆಕಟ್ಟೆಯನ್ನು ಕಟ್ಟಿದ್ದಾರೆ. ಇದರ ನೀರಿನಿಂದ 1.1 ಲಕ್ಷ ಹೆ. ಜಮೀನು ಸಾಗುವಳಿಯಲ್ಲಿದೆ. ಈ ಅಣೆಕಟ್ಟೆಯು ಹೈದರಾಬಾದ್ ಮತ್ತು ಸಿಕಂದರಬಾದ್ ನಗರಗಳಿಗೆ ನೀರನ್ನು ಒದಗಿಸುತ್ತದೆ.

2. ಮನಾಯಿರ್ (ಕೆಳ) ಜಲಾಶಯ : ಕರೀಂನಗರ ಜಿಲ್ಲೆಯಲ್ಲಿದೆ. ಈ ನದಿ ಗೋದಾವರಿಯ ಉಪನದಿ. ಈ ಅಣೆಕಟ್ಟು ನಿರ್ಮಾಣವನ್ನು 1974ರಲ್ಲಿ ಪ್ರಾರಂಭಿಸಿ 1985ರಲ್ಲಿ ಪೂರ್ಣಗೊಳಿಸಲಾಯಿತು.

3. ರಾಮಗುಂಡಮ್ ಅಣೆಕಟ್ಟು : ಇದು ಕರೀಂನಗರದಲ್ಲಿದೆ. ಇದಕ್ಕೆ ಶ್ರೀರಾಮಸಾಗರ ಅಣೆಕಟ್ಟೆಯಿಂದ ಮತ್ತು ಪೋಚಂಪಾಡ್ ಜಲಾಶಯ ಕಾಲುವೆಯಿಂದ ನೀರು ಹರಿಯುತ್ತದೆ. ಇದರಿಂದ ಆಂಧ್ರಪ್ರದೇಶ, ಕರ್ನಾಟಕ, ಕೇರಳ, ಗೋವ, ತಮಿಳುನಾಡು ಮತ್ತು ಪುದುಚೇರಿ ರಾಜ್ಯಗಳು ಉಪಯೋಗ ಪಡೆಯುತ್ತವೆ.

4. ದುಮ್ಮಗುಡಮ್ ಅಣೆಕಟ್ಟು : ಇದು ವಿದ್ಯುದುತ್ಪಾದನೆಯ ಯೋಜನೆ. ಗೋದಾವರಿ ನದಿಗೆ ಖಮ್ಮಮ್ ಜಿಲ್ಲೆಯ ಭದ್ರಾಚಲಂ ಪ್ರದೇಶದ ಪಮುಲಪಲ್ಲಿ ಗ್ರಾಮದಲ್ಲಿ ನಿರ್ಮಾಣವಾಗಿದೆ.

5. ಶ್ರೀರಾಮಸಾಗರ ಜಲಾಶಯ : ಗೋದಾವರಿ ನದಿಗೆ ನಿರ್ಮಿಸಿರುವ ಜಲಾಶಯ. ಇದರಿಂದ 27 ಮೆವ್ಯಾ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. 18 ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿ ಒದಗುತ್ತದೆ.

**ಗೋದಾವರಿ ಅಣೆಕಟ್ಟು :** ಗೋದಾವರಿ ಜಿಲ್ಲೆಗಳ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನೊದಗಿಸುವ ಉದ್ದೇಶದಿಂದ ಬ್ರಿಟಿಷ್ ಆಡಳಿತದ ಕಾಲದಲ್ಲಿ ಕಟ್ಟಲಾದ ಅಣೆಕಟ್ಟು. ಈ ಪ್ರದೇಶದಲ್ಲಿ 1833ರಲ್ಲೂ ಮತ್ತೆ 1845ರಲ್ಲೂ ಘೋರ ಕ್ಷಾಮ ತಲೆದೋರಿ ಸರ್ಕಾರಕ್ಕೆ ನಷ್ಟವಾದ್ದರಿಂದ, ಕಾವೇರಿ ಮುಖಜಭೂಮಿಯಲ್ಲಿ ಸುಭಿಕ್ಷ ತಂದಿದ್ದ ಮೇಜರ್ ಕಾಟನನ ಸಲಹೆಯನ್ನು ಬ್ರಿಟಿಷ್ ಸರ್ಕಾರ ಕೇಳಿತು. ಈತ ಗೋದಾವರಿ ನದಿಗೆ ಅಡ್ಡಲಾಗಿ ಧವಳೇಶ್ವರ ಬಳಿ ಒಂದು ಅಣೆಕಟ್ಟನ್ನೂ ಗೋದಾವರಿ ನದಿಯ ಎರಡು ಮುಖ್ಯ ಕವಲುಗಳ ಆಚೀಚೆ ಬದಿಗಳಿಗೆ ಒಂದೊಂದು ಕಾಲುವೆಯನ್ನೂ ಸೂಚಿಸಿದ. ಕೂಡಲೆ ಈತನ ಮೇಲ್ವಿಚಾರಣೆಯಲ್ಲಿ ಕೆಲಸಗಳು ಪ್ರಾರಂಭವಾದುವು.

ಅಣೆಕಟ್ಟಿನ ಮೇಲೆ ಕೆಲವು ವರ್ಷಗಳ ಅನಂತರ ಮಳೆಗಾಲದಲ್ಲಿ ಹೆಚ್ಚು ನೀರನ್ನು ಕೂಡಿಸಲು 2' ಎತ್ತರದ ಬಾಗಿಲುಗಳನ್ನಿಟ್ಟರು. 1935ರಲ್ಲಿ 3' ಎತ್ತರದ ಬಾಗಿಲುಗಳು ಬಂದುವು. ಪ್ರವಾಹ ಬಂದಾಗ ಈ ಬಾಗಿಲುಗಳು ತಾವಾಗಿಯೇ ಬೀಳುತ್ತವೆ. ಆಮೇಲೆ ಅವನ್ನು ಎತ್ತಬೇಕು. 1987ರಲ್ಲಿ ಈ ಅಣೆಕಟ್ಟು ನದಿ ಪ್ರವಾಹಕ್ಕೆ ಸಿಲುಕಿ ಭಾಗಶಃ ಹಾಳಾಯಿತು. ಈಗ ಇಲ್ಲಿ ಹೊಸ ಅಣೆಕಟ್ಟನ್ನು ನಿರ್ಮಿಸಿ ಅದಕ್ಕೆ ಆರ್ಥರ್‌ಕಾಟನ್ ಎಂದು ಹೆಸರಿಡಲಾಗಿದೆ. ಈ ಅಣೆಕಟ್ಟಿನ ಮೇಲೆ ರಸ್ತೆಯನ್ನೂ ನಿರ್ಮಿಸಿದ್ದು ಅದು ಪೂರ್ವ ಹಾಗೂ ಪಶ್ಚಿಮ ಗೋದಾವರಿ ಜಿಲ್ಲೆಗಳನ್ನು ಕೂಡಿಸುತ್ತದೆ.

| ವಿವರ | ಧವಳೇಶ್ವರ ವಿಭಾಗ | ರ್‍ಯಾಲೀ ವಿಭಾಗ | ಮದ್ದೂರು ವಿಭಾಗ | ವ್ಯಾಸೇಶ್ವರ ವಿಭಾಗ |
|---|---|---|---|---|
| 1) ಅಣೆಕಟ್ಟಿನ ಉದ್ದ | 4,839' | 2,859' | 1,545' | 2,501' |
| 2) ಕವಾಟಗಳ ಸಂಖ್ಯೆ | 445 | 271 | 141 | 246 |
| 3) ಕವಾಟದ ಅಳತೆ | 10'X3' | 10'X3' | 10'X3' | 10'X3' |
| 4) ಅಡಿ ಬಚ್ಚಲುಗಳು | 10(20'X20') | $15\,(20\frac{1'}{2} \times 6\frac{1}{4})$ | ಇಲ್ಲ | $9\,(5\frac{5'}{8} \times 10\frac{3'}{4})$ $6\,(5\frac{1'}{2} \times 10\frac{3'}{4})$ |
| 5) ಪ್ರವಾಹ (ಕ್ಯೂಸೆಕ್ಸ್) | 20,800 | 7,400 | – | 12,200 |
| 6) ತೂಬಿನ ಬಾಗಿಲು | 15 | $15\,(6' \times 8\frac{1'}{2})$ | – | $6\left(17\frac{1'}{2} X10'\right) + 2(6X8)$ |
| 7) ಮಟ್ಟ ಬದಲಾವಣೆ ಕಟ್ಟೆಗಳು | $\frac{150'X21'}{2}$ | $\frac{105'X15'}{2}$ | – | $\frac{150'X20'}{2}$ |

ಕವಲುಗಳ ಪೂರ್ವದ ಮುಖಜಭೂಮಿಯ ವಿಸ್ತೀರ್ಣ 19,450 ಚ.ಮೈ. ಮಧ್ಯದ ಮುಖಜಭೂಮಿಯ ವಿಸ್ತೀರ್ಣ 400 ಚ. ಮೈ. ಪಶ್ಚಿಮದ ಮುಖಜಭೂಮಿ ಕೋಲೇರ್ ಸರೋವರದ ವರೆಗೂ 1,000 ಚ.ಮೈ ವಿಸ್ತಾರವಾಗಿ ಹರಡಿದೆ. ಮೊದಲನೆಯ ಎರಡು ಮುಖಜಭೂಮಿಗಳಲ್ಲಿ ನೀರಾವರಿ ಸಮಲ್ಕೋಟ ಮತ್ತು ಎಲೂರು ಶಾಖೆಗಳಿಗೂ ಗೋದಾವರಿಯ ಶಾಖೆಗಳಿಗೂ ನಡುವೆ ಹರಡಿದೆ. ನಡುವಣ ನೆಲದಲ್ಲಿ 8 ತಿಂಗಳಲ್ಲಿ ಕಟ್ಟಿ ಮುಗಿಸಿದ ಗುನ್ನಾವರಂ ಮೇಲುಗಾಲುವೆಯಿದೆ. ಈ ಪ್ರದೇಶವನ್ನು ಗೋದಾವರಿ ಜಿಲ್ಲೆಯ ತೋಟವೆನ್ನುತ್ತಾರೆ. ಪೊಲ್ಲಾವರಂ ದ್ವೀಪಕ್ಕೆ ನೀರಾವರಿಯನ್ನು ಒದಗಿಸಲು ಪೊಲ್ಲಾವರಂ ಮೇಲುಗಾಲುವೆಯನ್ನು ಕಟ್ಟಿದ್ದಾರೆ. ಪ್ರವಾಹಗಳಿಂದ ರಕ್ಷಣೆಗಾಗಿ ಶಾಖೆಗಳ ದಡಗಳಲ್ಲಿ ಎಲ್ಲ ಕಡೆಗಳಲ್ಲೂ ಏರಿಗಳನ್ನು ಕಟ್ಟಿದ್ದಾರೆ.

ಅಗಲವಾದ ನದಿಯಲ್ಲಿಯ ದ್ವೀಪಗಳನ್ನು ಒಟ್ಟುಗೂಡಿಸುವ ಅಣೆಕಟ್ಟು ನಾಲ್ಕು ವಿಭಾಗಗಳಲ್ಲಿವೆ.

ನಾಲೆಗಳು: 1. ಗೋದಾವರಿಯ ಪೂರ್ವ ಪ್ರದೇಶದ ಪ್ರಧಾನ ನಾಲೆಯ ಉದ್ದ ಎಡದಡದಲ್ಲಿ 7 ಕಿಮೀ. ಶಾಖಾನಾಲೆಗಳ ಉದ್ದ 250 ಕಿಮೀ. ಇದರಲ್ಲಿ ನೀರು ಎಲ್ಲ ಕಾಲಗಳಲ್ಲೂ ಹರಿಯುತ್ತದೆ. ನಾಲೆ ಗರಿಷ್ಠವಾಗಿ 48.75 ಕ್ಯೂಸೆಕುಗಳನ್ನು ಸಾಗಿಸುತ್ತದೆ.

2. ಮಧ್ಯದ ಮುಖಜ ಭೂಮಿಯ ಪ್ರಧಾನ ನಾಲೆಯ ಉದ್ದ 13 ಕಿಮೀ.; ಶಾಖಾನಾಲೆಗಳ ಉದ್ದ 188 ಕಿಮೀ. ಇಳಿಯುವ ಮಟ್ಟ ರೇಖೆಯ ಮೇಲೆ (ಫಾಲಿಂಗ್ ಕಾಂಟೂರ್) ಎಲ್ಲ ನಾಲೆಗಳೂ ಹೋಗುತ್ತವೆ. ಗರಿಷ್ಠವಾಗಿ ಇದು 3,400 ಕ್ಯೂಸೆಕುಗಳನ್ನು ಸಾಗಿಸುತ್ತದೆ.

3. ಪಶ್ಚಿಮದ ಮುಖಜಭೂಮಿಯಲ್ಲಿ ನದಿಯ ಬಲದಡದಲ್ಲಿ ಹೋಗುವ ಪ್ರಧಾನ ನಾಲೆಯ ಉದ್ದ 7 ಕಿಮೀ. ಶಾಖಾನಾಲೆಗಳ ಉದ್ದ 333 ಕಿಮೀ. ಗರಿಷ್ಠವಾಗಿ ಇದು 7,500 ಕ್ಯೂಸೆಕುಗಳನ್ನು ಸಾಗಿಸುತ್ತದೆ.

ಈ ಮೂರು ಪ್ರಧಾನ ನಾಲೆಗಳಲ್ಲೂ ಗರಿಷ್ಠವಾಗಿ ಒಟ್ಟು 15,855 ಕ್ಯೂಸೆಕುಗಳಷ್ಟು ನೀರು ಹರಿಯುತ್ತದೆ.

ಗೋದಾವರಿ ಅಣೆಕಟ್ಟಿನ ಯೋಜನೆ 1877 ರಿಂದ ನೀರಾವರಿ ಒದಗಿಸುತ್ತಿದೆ. ಆಗಾಗ ಬಡಾವಣೆಗಳೂ ಬದಲಾವಣೆಗಳೂ ಆಗಿವೆ.

ಈ ಮೂರು ಮುಖಜಭೂಮಿ ಪ್ರದೇಶಗಳ ನಾಲೆಗಳಲ್ಲಿ ವರ್ಷದಲ್ಲಿ 11 ತಿಂಗಳುಗಳ ಕಾಲ ಜಲಯಾನ ನಡೆಯುತ್ತದೆ. ಇವುಗಳ ಮೂಲಕ ಸಾಗುವ ದೋಣಿಗಳು ವರ್ಷಕ್ಕೆ 6 ಕೋಟಿ ರೂಪಾಯಿಗಳ ನಾಟವನ್ನೂ 50 ಕೋಟಿ ರೂಪಾಯಿಗಳ ಧಾನ್ಯವನ್ನೂ 10 ಲಕ್ಷ ಜನರನ್ನೂ ಸಾಗಿಸುತ್ತವೆ.

ಗೋದಾವರಿಯ ಮಧ್ಯದ ಮುಖಜಭೂಮಿಯಿಂದ ಈಚೆಗೆ ಅನ್ನಂಪಲ್ಲಿ ಮಟ್ಟ ಬದಲಾವಣೆಯ ಕಟ್ಟೆಯ (ಲಾಕ್) ಕೆಳಗೆ ಪೊಲ್ಲಾವರಂ ನಾಲೆ ಒಂದು ಮೇಲುಗಾಲುವೆಯ ಮೂಲಕ ವೃದ್ಧಗೌತಮಿಯನ್ನು ದಾಟಿ ಗೌತಮಿ ಗೋದಾವರಿಯ ಎರಡು ಶಾಖೆಗಳ ನಡುವೆ ಇರುವ ಪೊಲ್ಲಾವರಂ ದ್ವೀಪಕ್ಕೆ ನೀರಾವರಿಯನ್ನು ಒದಗಿಸುತ್ತದೆ. ಈ ನಾಲೆಯ ಕೆಳಗೆ ಪೂರ್ವ ಗೋದಾವರಿ ಜಿಲ್ಲೆಯ ಭೂಮಿಗೆ ನೀರು ದೊರೆಯುತ್ತದೆ. (ಎಚ್.ಸಿ.ಕೆ.)

**ಗೋದಾವರಿ, ಪೂರ್ವ ಮತ್ತು ಪಶ್ಚಿಮ :** ಆಂಧ್ರಪ್ರದೇಶದಲ್ಲಿ ಅಕ್ಕಪಕ್ಕದಲ್ಲಿರುವ ಎರಡು ಜಿಲ್ಲೆಗಳು. ಕೆಳಗೋದಾವರಿಯ ಆಚೀಚೆ ಸಮುದ್ರದ ಅಂಚಿನ ವರೆಗೂ ಹಬ್ಬಿರುವ ಈ ಜಿಲ್ಲೆಗಳು ಪರಸ್ಪರವಾಗಿ ಗೋದಾವರೀ ನದಿಯಿಂದ ಪ್ರತ್ಯೇಕಿಸಲ್ಪಟ್ಟು, ಗೋದಾವರಿಯ ಪೂರ್ವಕ್ಕಿರುವ ಭಾಗ ಪೂರ್ವ ಗೋದಾವರೀ ಜಿಲ್ಲೆಯೆಂದೂ ಪಶ್ಚಿಮಕ್ಕಿರುವ ಭಾಗ ಪಶ್ಚಿಮ ಗೋದಾವರೀ ಜಿಲ್ಲೆಯೆಂದೂ ಪ್ರಣೀತವಾಗಿವೆ. ಪೂರ್ವ ಗೋದಾವರಿಯ ವಿಸ್ತೀರ್ಣ 10,807 ಚ.ಕಿಮೀ. ಜನಸಂಖ್ಯೆ 5,151,549 (2011). ಪಶ್ಚಿಮ ಗೋದಾವರಿ ಜಿಲ್ಲೆ 7742 ಚ. ಕಿಮೀ ವಿಸ್ತಾರವಾಗಿದೆ; ಅದರ ಜನಸಂಖ್ಯೆ 39,34,782 (2011). ಪೂರ್ವ ಗೋದಾವರಿಯ ಆಡಳಿತ ಕೇಂದ್ರ ಕಾಕಿನಾಡ (3,12,255) ಗೋದಾವರೀ ನದಿಯ ಕವಲುಗಳಲ್ಲೊಂದರ ದಡದ ಮೇಲಿದೆ. ಹಿಂದೆ ರಾಜಮಹೇಂದ್ರಿ ಇದರ ಕೇಂದ್ರವಾಗಿತ್ತು. ಪಶ್ಚಿಮ ಗೋದಾವರಿಯ ಆಡಳಿತ ಕೇಂದ್ರ ಎಲೂರು (2,14,414).

ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳ ಪ್ರದೇಶದ ಸ್ವಾಭಾವಿಕ ಲಕ್ಷಣ ಒಂದೇ ಸಮನಾಗಿಲ್ಲ. ವಾಯವ್ಯ ಭಾಗ ಹೆಚ್ಚು ಫಲವತ್ತಾಗಿಲ್ಲ. ಅದು ಹಿಂದುಳಿದಿದೆ. ಗೋದಾವರಿಯ ಮುಖಜ ಭೂಮಿ ಪ್ರದೇಶ ತುಂಬ ಫಲವತ್ತಾಗಿದೆ. ದಕ್ಷಿಣ ಭಾರತದ ಬತ್ತದ ಕಣಜವೆಂದು ಇದು ಪ್ರಸಿದ್ಧವಾಗಿದೆ. ಈ ಎರಡೂ ಪ್ರದೇಶಗಳ ನಡುವಣ ಭಾಗ ಎತ್ತರವಾಗಿದೆ.

ಸಮುದ್ರದಿಂದ 64 ಕಿಮೀ ದೂರದಲ್ಲಿ ಧವಳೇಶ್ವರದ ಬಳಿ ಗೋದಾವರಿಗೆ ಅಣೆಕಟ್ಟನ್ನು ಕಟ್ಟಲಾಗಿದೆ. ಈ ಅಣೆಕಟ್ಟಿನಿಂದಾಗಿ ಗೋದಾವರೀ ಮುಖಜಭೂಮಿಯ ಪ್ರದೇಶದಲ್ಲಿ ವರ್ಷವಿಡೀ ಬತ್ತದ ಸಾಗುವಳಿ ಸಾಧ್ಯವಾಗಿದೆ. ಇಲ್ಲಿ ಬತ್ತವೇ ಮುಖ್ಯ ಬೆಳೆ. ಇತರ ಆಹಾರ ಧಾನ್ಯಗಳನ್ನೂ ಬೇಳೆ, ಎಣ್ಣೆ ಬೀಜ, ಹೊಗೆಸೊಪ್ಪು ಮತ್ತು ಕಬ್ಬನ್ನೂ ಬೆಳೆಯುತ್ತಾರೆ.

ಕಾಕಿನಾಡ ಒಂದು ಬಂದರು. ಆದರೆ ಗೋದಾವರೀ ನದಿ ಸರ್ವದಾ ಮಣ್ಣು ಹೊತ್ತು ತರುವುದರಿಂದ ಹಡಗುಗಳು ದಡದಿಂದ ಬಲು ದೂರದಲ್ಲೇ ನಿಲ್ಲಬೇಕಾಗುತ್ತದೆ. ಪೂರ್ವ ಗೋದಾವರಿಯಲ್ಲಿ ಕಬ್ಬು ಬೆಳೆಯುವ ಪ್ರದೇಶದ ನಡುವೆ ಇರುವ ಸಮಲ್ಕೋಟದಲ್ಲಿ ಸಕ್ಕರೆ ಉತ್ಪಾದನೆಯಾಗುತ್ತದೆ. ಪಶ್ಚಿಮ ಗೋದಾವರಿಯ ಎಲೂರಿನಲ್ಲಿ ಉಣ್ಣೆ ಜಮಖಾನೆಗಳು ತಯಾರಾಗುತ್ತವೆ. ಪೂರ್ವ ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲಿ ಉತ್ತಮ ಕೈಮಗ್ಗದ ಬಟ್ಟೆಗಳು ತಯಾರಾಗುತ್ತಿದ್ದುವು. ರಾಜಮಹೇಂದ್ರಿ (9,43,903) ಒಂದು ತೀರ್ಥಕ್ಷೇತ್ರ. ಹನ್ನೆರಡು ವರ್ಷಗಳಿಗೊಮ್ಮೆ 'ಪುಷ್ಕರಂ' ದಿನದಂದು ಗೋದಾವರಿಯ ನೀರಿನಲ್ಲಿ ಮೀಯಲು ನಾನಾ ಕಡೆಗಳಿಂದ ಹಿಂದೂ ಆಸ್ತಿಕರು ಇಲ್ಲಿಗೆ ಬರುತ್ತಾರೆ.

ಗೋದಾವರಿ ಜಿಲ್ಲೆ ಪ್ರದೇಶಗಳು ಒರಿಸ್ಸ ಮತ್ತು ವೆಂಗಿ ರಾಜರ ಆಳಿಕೆಗೆ ಒಳಪಟ್ಟಿದ್ದವು. ಸ್ಥಳೀಯ ಪಾಳೆಯಗಾರರು ಸ್ವತಂತ್ರರಾಗಲು ಆಗಿಂದಾಗ್ಗೆ ಪ್ರಯತ್ನಿಸುತ್ತಿದ್ದರು. 16ನೆಯ ಶತಮಾನದ ಆರಂಭದಲ್ಲಿ ಇಡೀ ಜಿಲ್ಲೆ ಮುಸ್ಲಿಂ ಆಕ್ರಮಣಕಾರರ ವಶವಾಯಿತು. ಕರ್ನಾಟಕ ಪ್ರದೇಶದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಗಳ ಬಡಿದಾಟಗಳ ಅಂತ್ಯದಲ್ಲಿ ಇದು ಬ್ರಿಟಿಷರಿಗೆ ಸೇರಿತು (1765). 15.5 ಚ.ಕಿಮೀ ವಿಸ್ತೀರ್ಣದ ಯಾನಾನ್ ಮಾತ್ರ ಫ್ರೆಂಚರ ವಶದಲ್ಲಿ ಉಳಿದಿತ್ತು. ಭಾರತ ಸ್ವತಂತ್ರವಾದ ಮೇಲೆ, 1954ರಲ್ಲಿ ಅದು ಭಾರತಕ್ಕೆ ವರ್ಗವಾಯಿತು. ಹಳೆಯ ಗೋದಾವರಿ ಮತ್ತು ಕೃಷ್ಣಾ ಜಿಲ್ಲೆಗಳಿಂದ ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳ ರಚನೆಯಾದ್ದು 1925ರಲ್ಲಿ. (ಆರ್.ಪಿ.ಎಸ್.)

**ಗೋದಿ :** ಮಾನವನ ಆಹಾರ ಧಾನ್ಯಗಳಲ್ಲಿ ಬಹಳ ಮುಖ್ಯವೆಂದು ಪರಿಗಣಿಸಲಾಗಿರುವ ಒಂದು ಜಾತಿಯ ಆಹಾರಸಸ್ಯ (ವೀಟ್). ಪ್ರಪಂಚಾದ್ಯಂತ ಇದರ ಬೇಸಾಯ ಉಂಟು. ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣವಲಯಗಳ ಹವೆಗೆ ಇದು ಒಗ್ಗಿಕೊಂಡು ಬೆಳೆಯುತ್ತದೆ. ಇದು ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳ ಮುಖ್ಯ ಬೆಳೆ. ಯುರೋಪ್, ದಕ್ಷಿಣ ಅಮೆರಿಕ, ರಷ್ಯ ಮತ್ತು ಭಾರತವೂ ಸೇರಿದಂತೆ ಏಷ್ಯದ ಹಲವಾರು ದೇಶಗಳಲ್ಲಿ ಇದರ ಬೇಸಾಯ ಗಣನೀಯ ಪರಿಮಾಣದಲ್ಲಿ ಉಂಟು. ಇದನ್ನು ಚಪಾತಿ, ಪೂರಿ, ಹೋಳಿಗೆ, ಪಾಯಸ, ಹಲ್ವ, ಬ್ರೆಡ್, ಕೇಕ್, ಮ್ಯಾಕರೋನಿ, ಸ್ಪಾಗೆಟ (ಸೇವಿಗೆ), ಪೇಸ್ಟ್ರಿ ಮುಂತಾದ ಹಲವಾರು ರೂಪದಲ್ಲಿ ಬಳಸುತ್ತಾರೆ. ಬಹುಪಾಲು ಜನಕ್ಕಿದು ನಿತ್ಯೋಪಯೋಗಿಯಾದ ಮುಖ್ಯ ಆಹಾರ ವಸ್ತು.

ಕೊಯ್ಲಿಗೆ ಸಿದ್ಧವಾದ ಗೋದಿಯ ಪೈರು

ಗೋದಿಯ ಸಸ್ಯ ವೃತ್ತಾಂತ: ಗೋದಿ ಪೋಯೇಸೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಹುಲ್ಲು. ಈ ಜಾತಿಯ ವೈಜ್ಞಾನಿಕ ಹೆಸರು ಟ್ರಿಟಿಕಮ್. ರಷ್ಯದ ಪ್ರಮುಖ ಸಸ್ಯಶಾಸ್ತ್ರಜ್ಞ ಮತ್ತು ತಳಿಶಾಸ್ತ್ರಜ್ಞ ನಿಕೋಲಾಯ್ ವ್ಯಾವಿಲೋವ್ ಎಂಬಾತನ ಪ್ರಕಾರ ಈ ಜಾತಿಯಲ್ಲಿ 14 ಪ್ರಭೇದಗಳಿವೆ. ಇತರ ಸಸ್ಯಶಾಸ್ತ್ರಜ್ಞರೂ ಈತನ ಅಭಿಪ್ರಾಯವನ್ನೇ ಬಲುಮಟ್ಟಿಗೆ ಸಮರ್ಥಿಸುತ್ತಾರೆ. ಇವನ್ನು ಇವುಗಳಲ್ಲಿನ ಕ್ರೋಮೋಸೋಮುಗಳ ಸಂಖ್ಯೆಯ ಆಧಾರದ ಮೇಲೆ ಮೂರು ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಬಹುದು: 1. ದ್ವಿಗುಣಿತ, 2. ಚತುರ್ಗುಣಿತ, 3. ಷಡ್ಗುಣಿತ. ಇವುಗಳಿಗೆ ಸೇರಿದ ಪ್ರಭೇದಗಳ ಜೀವಕೋಶಗಳಲ್ಲಿ ಅನುಕ್ರಮವಾಗಿ 14, 28 ಮತ್ತು 42 ಕ್ರೋಮೋಸೋಮುಗಳಿವೆ. ವಿಕಾಸದ ದೃಷ್ಟಿಯಿಂದ ಇವುಗಳಲ್ಲಿ ಹಿಂದುಳಿದಂಥವು ಮತ್ತು ಇತರ ಬಗೆಗಳಿಗೆ ಮೂಲವೆನಿಸುವಂಥವು ದ್ವಿಗುಣಿತ ಬಗೆಯವು. ಈ ಗುಂಪಿನಲ್ಲಿ ಟ್ರಿ. ಬಿಯೋಟಿಕಮ್ (ವೈಲ್ಡ್ ಐನ್‌ಕಾರ್ನ್) ಮತ್ತು ಟ್ರಿ. ಮಾನೋಕಾಕಮ್ (ಐನ್‌ಕಾರ್ನ್) ಎಂಬುವು ಮುಖ್ಯವಾದವು. ಎರಡನೆಯ ಬಗೆಯಾದ ಚತುರ್ಗುಣಿತ ಗುಂಪಿನವು ಮೊದಲ ಗುಂಪಿನ ಗೋದಿಗಳಿಂದ ಉದ್ಭವವಾದವು. ಇವುಗಳಲ್ಲಿ ಟ್ರಿ.ಡ್ಯೂರಮ್ (ಡ್ಯೂರಮ್ ವೀಟ್), ಟ್ರಿ. ಪರ್ಸಿಕಮ್ (ಪರ್ಷಿಯನ್ ವೀಟ್), ಟ್ರಿ. ಟರ್ಜಿಡಮ್ (ರಿವೆಟ್ ವೀಟ್) ಮತ್ತು ಟ್ರಿ.ಪೋಲೋನಿಕಮ್ (ಪೋಲಿಷ್ ವೀಟ್) ಎಂಬ ಪ್ರಭೇದಗಳು ಮುಖ್ಯವೆನಿಸಿವೆ. ಷಡ್ಗುಣಿತ ಪ್ರಭೇದಗಳು ಚತುರ್ಗುಣಿತ ಹಾಗೂ ದ್ವಿಗುಣಿತ ಬಗೆಗಳಿಂದ ಹುಟ್ಟಿದಂಥವು. ಈ ಗುಂಪಿನಲ್ಲಿ 7 ಪ್ರಭೇದಗಳಿವೆ. ಇಂದು ಕೃಷಿಯಲ್ಲಿರುವ ಗೋದಿ ಬಗೆಗಳೆಲ್ಲ ಬಹುಪಾಲು ಷಡ್ಗುಣಿತ ಗುಂಪಿಗೆ ಸೇರಿದವು. ಸ್ಪೆಲ್ಟ (ಸ್ಪೆಲ್ಟ ವೀಟ್), ಮಾಚ (ಮಾಚ ವೀಟ್), ಈಸ್ಟಿವಮ್ (ಕಾಮನ್ ವೀಟ್), ಸ್ಫೀರೋಕಾಕಮ್ ಮತ್ತು ಜುಂಕೋವ್ಯಾಸ್ಕಿ – ಇವೇ ಈ 7 ಪ್ರಭೇದಗಳು. ಇವುಗಳಲ್ಲೆಲ್ಲ ಅತ್ಯಂತ ಮುಖ್ಯವಾದ್ದು ಮತ್ತು ಹೆಚ್ಚು ವ್ಯಾಪಕವಾಗಿ ಕೃಷಿಯಲ್ಲಿರುವುದು ಈಸ್ಟಿವಮ್ ಪ್ರಭೇದ. ಇದಕ್ಕೆ ಬ್ರೆಡ್ ವೀಟ್ ಎಂಬ ಹೆಸರೂ ಇದೆ.

ಗೋದಿ ಗಿಡ ಭೂಮಟ್ಟದಿಂದಲೇ ಕವಲೊಡೆದು ಸುಮಾರು 40–190 ಸೆಂಮೀ ಎತ್ತರಕ್ಕೆ ಬೆಳೆಯುವ ಸಸ್ಯ. ಬೇರು ತೊಡಕುಬೇರುಸಮೂಹ ಮಾದರಿಯದು. ಕಾಂಡ ಹಲವಾರು ಗೆಣ್ಣು ಮತ್ತು ಅಂತರ ಗೆಣ್ಣುಗಳಾಗಿ ವಿಂಗಡವಾಗಿದೆ. ಅಂತರ ಗೆಣ್ಣುಗಳು ಸಾಮಾನ್ಯವಾಗಿ ಟೊಳ್ಳಾಗಿರುತ್ತವೆ. ಆದರೆ ಡ್ಯೂರಮ್ ಬಗೆಯಲ್ಲಿ ಇವು ಗಟ್ಟಿಯಾಗಿವೆ. ಕಾಂಡದ ಬಣ್ಣ ಹಳದಿ ಇಲ್ಲವೆ ಕೆನೆ. ಕೆಲವು ಬಗೆಗಳಲ್ಲಿ ಊದಾ ಬಣ್ಣದ ಕಾಂಡವಿರುವುದೂ ಉಂಟು. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿದ್ದು ಇತರ ಹುಲ್ಲುಗಳಲ್ಲಿರುವಂತೆ ಉದ್ದವಾದ ಎಸಳಿನಂತಿವೆ. ಇವುಗಳ ಮೇಲೆ ನವುರಾದ ರೋಮಗಳಿರಬಹುದು ಇಲ್ಲವೆ ಎಲೆಗಳು ರೋಮರಹಿತವಾಗಿರ ಬಹುದು. ಗಿಡ ಪ್ರಬುದ್ಧಾವಸ್ಥೆಗೆ ಬಂದಂತೆ ಅದರ ತುದಿಯಲ್ಲಿರುವ ಪತಾಕೆ ಎಲೆಯ (ಫ್ಲ್ಯಾಗ್ ಲೀಫ್) ಮಧ್ಯದಿಂದ ಹೂಗೊಂಚಲು (ತೆನೆ) ಹುಟ್ಟುತ್ತದೆ. ಹೂಗೊಂಚಲು ಸ್ಪೈಕ್ ಮಾದರಿಯದಾಗಿದ್ದು 20–100 ಹೂಗಳನ್ನು ಒಳಗೊಂಡಿದೆ. ಗೊಂಚಲಿನ ಮುಖ್ಯ ಅಕ್ಷದ ಮೇಲೆ ಜೋಡಿತವಾಗಿರುವ ಸ್ಪೈಕ್‌ಲೆಟ್ಟುಗಳೆಂಬ ಸಣ್ಣಸಣ್ಣ ಗುಂಪುಗಳಲ್ಲಿ ಹೂಗಳು ಸಮಾವೇಶಗೊಂಡಿವೆ. ಒಂದೊಂದು ಸ್ಪೈಕ್‌ಲೆಟ್ಟಿನಲ್ಲಿಯೂ 2–6 ಹೂಗಳಿರುತ್ತವೆ. ಸ್ಪೈಕ್‌ಲೆಟ್ಟಿನ ಸುತ್ತ ಅನೇಕ ಹೊದಿಕೆಗಳು (ಗ್ಲೂಮ್ಸ್, ಚಾಫ್, ಹಲ್ಸ್) ಇವೆ. ಕೆಲವು ಪ್ರಭೇದಗಳಲ್ಲಿ ಪ್ರತಿ ಸ್ಪೈಕ್‌ಲೆಟ್ಟಿನ ಒಂದು ಹೊದಿಕೆಯ ತುದಿ ಒಂದು ರೀತಿಯ ಊಬು

(ಆನ್) ಆಗಿ ಮಾರ್ಪಟ್ಟಿದೆ. ಇನ್ನು ಕೆಲವು ಪ್ರಭೇದಗಳಲ್ಲಿ ಊಬು ಇರುವುದೇ ಇಲ್ಲ. ಇದರ ಆಧಾರದ ಮೇಲೆ ಗೋಧಿಯ ವಿವಿಧ ಪ್ರಭೇದಗಳನ್ನು ಊಬುಸಹಿತ (ಆನ್ಡ್) ಮತ್ತು ಊಬುರಹಿತ (ಆನ್‌ಲೆಸ್) ಬಗೆಗಳು ಎಂದು ವಿಂಗಡಿಸುವುದುಂಟು. ಊಬು ಮೋಟಾಗಿರಬಹುದು ಇಲ್ಲವೆ ಹಲವಾರು ಇಂಚುಗಳಷ್ಟು ಉದ್ದವಾಗಿರಬಹುದು. ಹೊದಿಕೆಗಳ ಬಣ್ಣ ಬಿಳಿ ಅಥವಾ ಕೆಂಪುಮಿಶ್ರಿತ ಕಂದು. ಹೂವಿನ ರಚನೆ ಬಹಳ ಸರಳವಾದ್ದು. ಒಂದೊಂದರಲ್ಲೂ 3 ಕೇಸರಗಳು ಮತ್ತು ಉಚ್ಚಸ್ಥಾನದ ಅಂಡಾಶಯ ಇವೆ. ಶಲಾಕೆ ಗರಿಗಳಂಥ ಎರಡು ಕವಲುಗಳಾಗಿ ಸೀಳಿದೆ. ಅಂಡಾಶಯದ ಬುಡದಲ್ಲಿ ಪೊರೆಯಂಥ ಎರಡು ರಚನೆಗಳಿವೆ. ಇವಕ್ಕೆ ಲಾಡಿಕ್ಯೂಲ್ಸ್ ಎಂದು ಹೆಸರು. ಒಂದು ಸ್ಪೈಕ್‌ಲೆಟ್ಟಿನಲ್ಲಿ ಎಲ್ಲ ಹೂಗಳಲ್ಲಿ ಪರಾಗಸ್ಪರ್ಶ ಕ್ರಿಯೆ ನಡೆದರೂ ಎಲ್ಲವುಗಳಲ್ಲೂ ನಿಷೇಚನ ನಡೆಯುವುದಿಲ್ಲ. ಉದಾಹರಣೆಗೆ, ದ್ವಿಗುಣಿತ ಬಗೆಗಳಾದ ಐನ್‌ಕಾರ್ನ್ ಗೋದಿಗಳಲ್ಲಿ ಒಂದೇ ಒಂದು ಹೂ ಮಾತ್ರ ನಿಷೇಚನಕ್ಕೊಳಗಾಗಿ ಕಾಳಾಗುತ್ತದೆ. ಉಳಿದ ಬಗೆಯ ಗೋದಿಗಳಲ್ಲಿ 2–3 ಹೂಗಳು ಕಾಳುಗಳಾಗಿ ಬೆಳೆಯುತ್ತವೆ. *

ಗೋದಿಯ ವಿಕಾಸ ಮತ್ತು ತಳೀಕರಣ: ಮಾನವ ಕೃಷಿ ಮಾಡಿ ಬೆಳೆಸಿದ ಅತಿ ಪ್ರಾಚೀನ ಧಾನ್ಯಗಳಲ್ಲಿ ಗೋದಿಯೂ ಒಂದು. ಅಲೆಮಾರಿ ಜೀವನ ನಡೆಸಿ, ಕಾಡು ಪ್ರಾಣಿಗಳನ್ನು ಬೇಟೆಯಾಡಿ ಬದುಕನ್ನು ನಡೆಸುತ್ತಿದ್ದ ಮಾನವ ಆಕಸ್ಮಿಕವಾಗಿ ಕೆಲವು ಬಗೆಯ ಸಸ್ಯಗಳ ಬೀಜಗಳನ್ನು ಸಂಗ್ರಹಿಸಿ ಕೃಷಿ ಮಾಡಲಾರಂಭಿಸಿರಬೇಕು. ಮುಸುಕಿನ ಜೋಳ, ಬತ್ತ, ಗೋದಿ ಮೊದಲಾದ ಧಾನ್ಯ ಸಸ್ಯಗಳನ್ನು ಬೆಳೆಸಿದುದು, ಪಶುಗಳನ್ನು ಹಾಲು ಹೈನು ಮಾಂಸಗಳಿಗಾಗಿ ಸಾಕಿದುದು–ಇವು ಮಾನವನ ಅಲೆದಾಟದ ಜೀವನವನ್ನು ತಪ್ಪಿಸಿ ಅವನು ಒಂದೆಡೆ ನೆಲೆಸಿ ಸಾಮಾಜಿಕ ಜೀವನವನ್ನು ನಡೆಸಲು ತಳಹದಿಯಾದವು.

ಈಗ ಬೆಳೆಸುತ್ತಿರುವ ಸುಧಾರಿಸಿದ ಗೋದಿಯ ಬಗೆಗಳನ್ನು ಹಿಂದೊಮ್ಮೆ ಸ್ವೇಚ್ಛೆಯಿಂದ ವನ್ಯಸ್ಥಿತಿಯಲ್ಲಿ ಬೆಳೆದ ಗೋದಿಯ ಬಗೆಗಳೊಂದಿಗೆ ಹೋಲಿಸುವ ಅನೇಕ ಯತ್ನಗಳು ನಡೆದಿವೆ. ಈ ಬಗೆಯ ಅಧ್ಯಯನದಿಂದಾಗಿ ವನ್ಯಜಾತಿಯ ತಳಿಯಿಂದ ಸುಧಾರಿಸಿದ ಈಗಿನ ತಳಿ ಯಾವ ರೀತಿ ಬೆಳೆದು ಬಂದಿದೆ ಎಂಬುದರ ಒಂದು ಸ್ಪಷ್ಟವಾದ ಚಿತ್ರ ಮೂಡಲು ಆರಂಭಿಸಿದೆ. ಗೋದಿಯಲ್ಲಿ ಮೂರು ಮುಖ್ಯ ಗುಂಪುಗಳಿವೆಯೆಂದೂ ಇವುಗಳಲ್ಲಿ ಅತ್ಯಂತ ನಿಮ್ನ ರೀತಿಯವು ಮತ್ತು ಇತರ ಬಗೆಗಳಿಗೆ ಮೂಲವೆನಿಸುವಂಥವು ದ್ವಿಗುಣಿತ ಬಗೆಯವೆಂದೂ ಮೊದಲೇ ಹೇಳಲಾಗಿದೆ. ದ್ವಿಗುಣಿತ ಗುಂಪಿನ ಗೋದಿಗಳಿಂದ ಕ್ರೋಮೋಸೋಮುಗಳ ಹೆಚ್ಚಳ ಹಾಗೂ ಇತರ ಹುಲ್ಲುಗಳೊಂದಿಗೆ ತಳೀಕರಣ –ಇವು ನಡೆದು ಚತುರ್ಗುಣಿತ ಮತ್ತು ಷಡ್ಗುಣಿತ ಗುಂಪಿನ ಗೋದಿಗಳು ಹುಟ್ಟಿವೆ. ಈ ವಿಕಾಸಕ್ರಮದಲ್ಲಿ 3 ಹಂತಗಳನ್ನು ಗುರುತಿಸಬಹುದು.

ಮೊದಲ ಹಂತ: ಮೂಲವೆನಿಸಿದ ದ್ವಿಗುಣಿತ ಗೋದಿ ತಳಿಗಳಲ್ಲಿ ಟ್ರಿ. ಬಿಯೋಟಿಕಮ್ (ವೈಲ್ಡ್ ಐನ್‌ಕಾರ್ನ್) ಮತ್ತು ಟ್ರಿ. ಮಾನೋಕಾಕಮ್ (ಐನ್‌ಕಾರ್ನ್) ಎಂಬ ಎರಡು ಪ್ರಭೇದಗಳಿವೆ. ಐನ್‌ಕಾರ್ನ್ ಎಂದರೆ ಜರ್ಮನ್ ಭಾಷೆಯಲ್ಲಿ ಹೊಡೆ ಅಥವಾ ಹೂಗೊನೆಗಳಲ್ಲಿ ಒಂದೇ ಕಾಳುಳ್ಳದ್ದು ಎಂದು ಅರ್ಥ. ಸ್ಪೈಕ್ ಗೊಂಚಲುಗಳಲ್ಲಿ ಒಂದೊಂದೇ ಕಾಳಿರುವುದರಿಂದ ಇವಕ್ಕೆ ಆ ಹೆಸರು. ಇವೆರಡು ಬಗೆಯ ಗೋದಿಯ ಕಾಳುಗಳು ಪಶ್ಚಿಮ ಇರಾಕಿಗೆ ಸೇರಿದ ಜಾರ್ಮೊ ಎಂಬ ಹಳ್ಳಿಯ 6700 ವರ್ಷಗಳಷ್ಟು ಹಳೆಯ ನೆಲೆಯೊಂದರಲ್ಲಿ ಸೀದು ಕರಿಕಾಗಿರುವ ಸ್ಥಿತಿಯಲ್ಲಿ ದೊರಕಿವೆ. ಇದರಿಂದ ಇವೆರಡು ತಳಿಗಳು ಅಂದಿನಿಂದಲೂ ಅಸ್ತಿತ್ವದಲ್ಲಿದ್ದವು ಎಂದು ಗೊತ್ತಾಗುತ್ತದೆ. ಇವುಗಳಲ್ಲಿ ಮೊದಲನೆಯದು, ಹೆಸರೇ ಹೇಳುವಂತೆ ವನ್ಯಪ್ರಭೇದವಾಗಿದೆ. ಎರಡನೆಯದರ ಕೃಷಿ ಸ್ವಲ್ಪ ಪರಿಮಾಣದಲ್ಲಿದೆ. ಈ ಎರಡು ಬಗೆಯ ಗೋದಿಗಳಲ್ಲಿ ಪೆಡಸಾದ ನಡುಕಾಂಡ ಮತ್ತು ಕಾಳಿಗೆ ಬಿಗಿಯಾಗಿ ಅಂಟಿಕೊಳ್ಳುವ ಹೊದಿಕೆಗಳಿವೆ. ಅಲ್ಲದೆ ಎರಡು ಪ್ರಭೇದಗಳಲ್ಲೂ ಒಂದೇ ರೀತಿಯ ಕ್ರೋಮೋಸೋಮುಗಳಿವೆ. ಇವನ್ನು ಸುಲಭವಾಗಿ ಅಡ್ಡ ತಳಿಯೆಬ್ಬಿಸಿ ಫಲವಂತಿ ತಳಿಗಳನ್ನು ಪಡೆಯಬಹುದು. ಕಾಳಿನಗಾತ್ರ ಮತ್ತು ಕಾಂಡದ ಪೆಡಸು–ಇವುಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ ಇವೆರಡೂ ಒಂದನ್ನೊಂದು ಬಹುವಾಗಿ ಹೋಲುತ್ತವೆ. ಈ ಕಾರಣದಿಂದ ಎರಡನೆಯ ಬಗೆ ಮೊದಲನೆಯದರಿಂದ ಪಡೆಯಲಾದ ತಳಿಯೆಂದು ಹೇಳಬಹುದು.

ವನ್ಯಪ್ರಭೇದವಾದ ವೈಲ್ಡ್ ಐನ್‌ಕಾರ್ನ್ ರಷ್ಯದ ಜಾರ್ಜಿಯ, ಅರ್ಮೇನಿಯ, ಟರ್ಕಿ, ಕಾಕಸಸ್ ಪರ್ವತದ ಪೂರ್ವಭಾಗ ಮತ್ತು ಪಶ್ಚಿಮ ಇರಾನುಗಳಲ್ಲಿ ಇಂದಿಗೂ ಬೆಳೆಯುತ್ತದೆ. ಗ್ರೀಸ್ ಮತ್ತು ಬಲ್ಗೇರಿಯದ ಗುಡ್ಡ ಪ್ರದೇಶಗಳಲ್ಲೂ ಹುಲ್ಲಿನಂತೆ ಬೆಳೆಯುತ್ತದೆ. ಅಲ್ಲದೆ ಯೂಗೋಸ್ಲಾವಿಯದ ದ್ರಾಕ್ಷಿ ತೋಟಗಳಲ್ಲಿ ಕಳೆ ಗಿಡದಂತೆ ಬೆಳೆಯುತ್ತದೆ. ಎರಡನೆಯ ಪ್ರಭೇದವಾದ ಐನ್‌ಕಾರ್ನ್ ಪ್ರಪ್ರಥಮವಾಗಿ ಟರ್ಕಿಯ ಈಶಾನ್ಯ ಭಾಗದ ಗುಡ್ಡ ಪ್ರದೇಶಗಳಲ್ಲಿ ಮತ್ತು ಕಾಕಸಸಿನ ನೈರುತ್ಯ ಇಲ್ಲವೆ ಪೂರ್ವ ಇರಾಕಿನ ತೆಂಕಣ ಭಾಗಗಳಲ್ಲಿ ಅಭಿವೃದ್ಧಿಗೆ ಬಂದಿರಬೇಕು. ಸ್ವಿಟ್ಜರ್‌ಲೆಂಡಿನಲ್ಲಿನ ಸಾಗರ ಪ್ರದೇಶಗಳಲ್ಲಿನ ನವಶಿಲಾಯುಗದ ಅವಶೇಷಗಳಲ್ಲಿಯೂ ಯುರೋಪಿನ ಮಧ್ಯ ಮತ್ತು ಈಶಾನ್ಯ ಭಾಗಗಳಲ್ಲಿಯೂ ದೊರಕಿದ ಸೀದುಕರಿಕಾಗಿರುವ ಮಾನೋಕಾಕಮ್ ಬಗೆಯ ಕಾಳುಗಳೂ ಬ್ರಿಟನ್ ಮತ್ತು ಐರ್ಲೆಂಡಿನಲ್ಲಿ ನವಶಿಲಾಯುಗಕ್ಕೆ ಸೇರಿದ ಮಣ್ಣಿನ ಪಾತ್ರೆಗಳಲ್ಲಿ ದೊರಕಿದ ಐನ್‌ಕಾರ್ನ್ ಧಾನ್ಯದ ತೆನೆಗಳೂ ಇದರ ಪ್ರಾಚೀನತೆಯನ್ನು ತೋರಿಸುತ್ತವೆ. ಆದರೆ ಈ ಪ್ರಭೇದವನ್ನು ಮಾನವ ಎಂದಿನಿಂದ ಬಿತ್ತಿ ಬೆಳೆಸಲಾರಂಭಿಸಿದನೆಂಬುದನ್ನು ಖಚಿತವಾಗಿ ನಿರ್ಧರಿಸಲು ಸಾಧ್ಯವಾಗಿಲ್ಲ. ಆದರೆ ಒಂದು ವಿಷಯವಂತೂ ನಿಜ. ಅನೇಕ ಶತಮಾನಗಳಿಂದ ಅಸ್ತಿತ್ವದಲ್ಲಿದ್ದರೂ ಇವೆರಡು ಪ್ರಭೇದಗಳ ಮೂಲ ಗುಣಗಳಲ್ಲಿ ಬದಲಾವಣೆಯೇ ಆಗಿಲ್ಲ.

ಎರಡನೆಯ ಹಂತ: ಗೋದಿಯ ಬೆಳೆಯ ಅಭಿವೃದ್ಧಿಯಲ್ಲಿ ಚತುರ್ಗುಣಿತ ಗೋದಿಗಳ ಹುಟ್ಟು ಎರಡನೆಯ ಹಂತವನ್ನು ಪ್ರದರ್ಶಿಸುತ್ತದೆ. ದ್ವಿಗುಣಿತ ಗೋದಿ ಪ್ರಭೇದಗಳಿಗೂ ಇತರ ಹುಲ್ಲುಗಳಿಗೂ ಸ್ವಾಭಾವಿಕ ಪರಿಸ್ಥಿತಿಗಳಲ್ಲಿ ನಡೆದಿರಬಹುದಾದ ಅಡ್ಡ ತಳಿಯೆಬ್ಬಿಕೆ ಹಾಗೂ ಕ್ರೋಮೋಸೋಮು ದ್ವಿಗುಣಿತದಿಂದ ಇದು ಸಂಭವಿಸಿದೆ ಎಂದು ತಿಳಿಯಲಾಗಿದೆ. ಸರ್ಕಾರ್ ಮತ್ತು ಸ್ಟೆಬ್ಬಿನ್ಸ್ ಎಂಬ ಸಸ್ಯವಿಜ್ಞಾನಿಗಳ ಅಭಿಪ್ರಾಯದಂತೆ (1956) ಈಜಿಲಾಪ್ಸ್ ಸ್ಪೆಲ್ಟಾಯಿಡಿಸ್ ಎಂಬುದೇ ವನ್ಯಜಾತಿಯ ಹುಲ್ಲುಸಸ್ಯ. ಇವರ ಅಭಿಪ್ರಾಯಕ್ಕೆ ರೈಲಿ, ಉನ್‌ರಾವ್ ಮತ್ತು ಚಾಪ್‌ಮನ್ ಎಂಬುವರು ಬೆಂಬಲ ನೀಡಿದ್ದಾರೆ (1958). ಮ್ಯಾಕ್‌ಫಡೆನ್ ಮತ್ತು ಸಿಯರ್ಸ್ ಎಂಬುವರ ಪ್ರಕಾರ ವನ್ಯಜಾತಿಯ ಹುಲ್ಲು ಆಗ್ರೊಪೈರಾನ್ ಎಂಬ ಜಾತಿಯದು. ಚತುರ್ಗುಣಿತ ಪ್ರಭೇದಗಳಲ್ಲಿ ಟ್ರಿ. ಡೈಕಾಕಮ್ (ವೈಲ್ಡ್ ಎಮ್ಮರ್) ಎಂಬುದು ಅರ್ಮೇನಿಯದ ದಕ್ಷಿಣ ಭಾಗ, ಟರ್ಕಿಯ ಈಶಾನ್ಯ ಭಾಗ, ಇರಾನಿನ ಪಶ್ಚಿಮ ಪ್ರದೇಶ, ಸಿರಿಯ ಮತ್ತು ಪ್ಯಾಲಸ್ತೀನಿನ ಉತ್ತರ ಭಾಗಗಳಲ್ಲಿ ಬೆಳೆಯುತ್ತದೆ. ಇದನ್ನೇ ಬಹುವಾಗಿ ಹೋಲುವ ಎಮ್ಮರ್ ಎಂಬ ಇನ್ನೊಂದು ಬಗೆ ಬೇಸಾಯದಲ್ಲಿದೆ. ಈ ಎರಡು ಬಗೆಗಳಲ್ಲೂ ಪೆಡಸಾದ ನಡುಕಾಂಡ ಮತ್ತು ಗಡುಸಾದ ಹೊಟ್ಟು ಇವೆ. ಈಜಿಪ್ಟ್ ದೇಶದ ಐದನೆಯ ರಾಜಮನೆತನದವರು ಕಟ್ಟಿರುವ ಒಳಸಮಾಧಿಗಳಲ್ಲಿ ಎಮ್ಮರ್ ಗೋದಿಯ ಕದಿರು ಗೊಂಚಲುಗಳು ದೊರಕಿವೆ. ಅಲ್ಲದೆ ಬ್ರಿಟನ್ ಮತ್ತು ಐರ್ಲೆಂಡಿನಲ್ಲಿನ ನವಶಿಲಾಯುಗದ ನೆಲೆಗಳಲ್ಲಿ ದೊರಕಿರುವ ಗೋದಿ ಕಾಳುಗಳು ಇದನ್ನೇ ಹೋಲುತ್ತವೆ. ಇದರಿಂದ ಎಮ್ಮರ್ ಗೋದಿ ಚರಿತ್ರಪೂರ್ವ ಕಾಲದಿಂದ ಗ್ರೀಕ್ ಮತ್ತು ರೋಮನರಿಗೂ ಸಮೀಪ ಪ್ರಾಚ್ಯದ ನಿವಾಸಿಗಳಿಗೂ ಮುಖ್ಯವಾದ ಆಹಾರ ಧಾನ್ಯವಾಗಿತ್ತೆಂದು ತೋರುತ್ತದೆ.

ಉಳಿದ ಪೆಡಸುಕಾಂಡದ ಮತ್ತು ಸುಲಭವಾಗಿ ಒಕ್ಕಲು ಸಾಧ್ಯವಾದ ವಿವಿಧ ಗೋದಿಯ ಬೆಳೆಗಳ ಉತ್ಪಾದನೆ ಚತುರ್ಗುಣಿತ ಗೋದಿ ಪ್ರಭೇದಗಳಿಂದ ಆರಂಭವಾಯಿತೆಂದು ಹೇಳಲಾಗಿದೆ. ಇಂಥ ಗೋದಿಗಳಲ್ಲಿ ಡ್ಯೂರಮ್, ಟರ್ಜಿಡಮ್, ಕಾರ್ಥಲಿಕಮ್ ಮತ್ತು ಪೊಲೋನಿಕಮ್ ಎಂದು ನಾಲ್ಕು ಬಗೆಗಳಿವೆ. ಡ್ಯೂರಮ್ ಬಗೆಯನ್ನು ಬಿಟ್ಟರೆ ಉಳಿದವಕ್ಕೆ ವ್ಯಾಪಾರದ ಪ್ರಾಮುಖ್ಯವಿಲ್ಲ. ಈ ಬಗೆಗಳಲ್ಲಿ ಅತಿ ಪ್ರಾಚೀನವೆನಿಸಿದ ಡ್ಯೂರಮ್ ಪ್ರಭೇದವನ್ನು ಪ್ರ.ಶ.ಪೂ. ಮೊದಲನೆಯ ಶತಮಾನಕ್ಕಿಂತಲೂ ಹಿಂದಿನಿಂದ ಗ್ರೀಕರೂ ರೋಮನರೂ ಬೆಳೆಸುತ್ತಿದ್ದರು. ದಪ್ಪ ಸೇವಿಗೆ, ಮ್ಯಾಕರೋನಿ ಮತ್ತು ಚಿರೋಟಿ, ಮಂಡಿಗೆ ಮೊದಲಾದವನ್ನು ತಯಾರಿಸಲು ಅತ್ಯುತ್ತಮವೆನಿಸಿರುವ ಈ ಪ್ರಭೇದವನ್ನು ಇಂದಿಗೂ ಇಟಲಿ, ಸ್ಪೇನ್, ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿಯೂ ಭಾರತದ ಹಲವಾರು ಭಾಗಗಳಲ್ಲಿಯೂ ವಿಶೇಷವಾಗಿ ಬೆಳೆಸುತ್ತಿದ್ದಾರೆ. ಟ್ರಿ.ಟರ್ಜಿಡಮ್ (ರಿವೆಟ್ ವೀಟ್) ಎಂಬುದು ಬಹಳ ಎತ್ತರದ ಜಾತಿ ಮತ್ತು ಹವಾಗುಣ ಅನುಕೂಲವಾಗಿದ್ದರೆ ಹೆಚ್ಚಿನ ಇಳುವರಿ ಕೊಡುವಂಥದು. ಆದರೆ ಇದು ಡ್ಯೂರಮಿನಷ್ಟು ಹೆಚ್ಚು ಪ್ರಸಿದ್ಧಿಗೆ ಬಂದಿಲ್ಲ. ಇದರ ಹಿಟ್ಟು ಹಗುರಾಗಿರುವುದರಿಂದ ಮತ್ತು ಇದರ ಕಣಿಕ ಬನಿಯಿಲ್ಲದುದರಿಂದ ಸೇವಿಗೆ ಮುಂತಾದವನ್ನು ಮಾಡಲು ಉಪಯುಕ್ತವಿಲ್ಲ. ಚತುರ್ಗುಣಿತ ಪ್ರಭೇದಗಳಲ್ಲಿ ಟ್ರಿ. ಟ್ರೀಮೋಫೀವಿ ಎಂಬ ಇನ್ನೊಂದು ಬಗೆಯುಂಟು. ಇದನ್ನು ರಷ್ಯದ ಸಸ್ಯವಿಜ್ಞಾನಿಗಳು ಪ್ರಸಕ್ತ ಶತಮಾನದಲ್ಲಿ ಆವಿಷ್ಕರಿಸಿದರು. ಇದು ಪಶ್ಚಿಮ ಜಾರ್ಜಿಯದಲ್ಲಿ ಮಾತ್ರ ಬೆಳೆಯುತ್ತದೆ. ಇತರ ಬಗೆಗಳಿಗಿಂತ ಭಿನ್ನವಾಗಿರುವ ಇದರ ವೈಶಿಷ್ಟ್ಯವೆಂದರೆ ಸಾಮಾನ್ಯವಾಗಿ ಗೋದಿಯ ಬೆಳೆಗೆ ಬರಬಹುದಾದ ತುಕ್ಕು, ಕಾಡಿಗೆ ಮತ್ತು ಮಿಲ್‌ಡ್ಯೂ ರೋಗಗಳನ್ನು ತಡೆಗಟ್ಟುವ ಸಾಮರ್ಥ್ಯ. ಈ ಕಾರಣದಿಂದ ಇದರ ಕಡೆಗೆ ಸಸ್ಯತಳಿ ಉತ್ಪಾದಕರ ಗಮನ ಹರಿದಿದೆ. ಟೀಮೋಫೀವಿ ಮತ್ತು ಇತರ ಬಗೆಗಳ ನಡುವೆ ಅಡ್ಡತಳಿಯೆಬ್ಬಿಸಿ ಬ್ರೆಡ್ ತಯಾರಿಕೆಗೆ ಯೋಗ್ಯವೆನಿಸುವ ಗೋದಿ ತಳಿಗಳನ್ನು ಪಡೆಯಲು ಅನುಕೂಲವಾಗಿದೆ.

ಮೂರನೆಯ ಹಂತ : ಗೋದಿಯ ಅಭಿವೃದ್ಧಿಯಲ್ಲಿ ಮೂರನೆಯ ಹಂತವನ್ನು ಪ್ರತಿನಿಧಿಸುವ ಷಡ್ಗುಣಿತ ಗೋದಿಗಳಲ್ಲಿ ಏಳು ಬಗೆಗಳುಂಟು. ಇವೆಲ್ಲವೂ ಬೇಸಾಯದಲ್ಲಿರುವಂಥವು ಮಾತ್ರ, ವನ್ಯಬಗೆಗಳಲ್ಲ. ಇವು ಕೂಡ ಚತುರ್ಗುಣಿತ ಗೋದಿ ಮತ್ತು ವನ್ಯಜಾತಿಯ ಹುಲ್ಲು ಇವುಗಳ ನಡುವೆ ನಡೆದಿರಬಹುದಾದ ಅಡ್ಡತಳಿಯೆಬ್ಬಿಕೆ ಹಾಗೂ ಅನಂತರದ ಕ್ರೋಮೋಸೋಮು ದ್ವಿಗುಣತೆಯಿಂದ ಪಡೆದವಾಗಿವೆ. ಇದರಲ್ಲಿ ಪಾಲ್ಗೊಂಡ ವನ್ಯಜಾತಿಯ ಹುಲ್ಲು ಈಜಿಲಾಪ್ಸ್ ಎಂದು ಹೇಳಲಾಗಿದೆ. ಷಡ್ಗುಣಿತ

ಗೋದಿಗಳಲ್ಲಿ ಮೊದಲ ನಾಲ್ಕು ಬಗೆಗಳಾದ ಟ್ರಿ. ಸ್ಪೆಲ್ಟ, ಟ್ರಿ.ಮಾಚ, ಟ್ರಿ. ವ್ಯಾವಿಲೋವಿ ಮತ್ತು ಟ್ರಿ. ಜುಂಕೊವ್ಸ್ಯಾಕ್ಸಿಗಳು ಐನ್‌ಕಾರ್ನ್ ಮತ್ತು ಎಮ್ಮರ್ ಬಗೆಗಳನ್ನು ಹೋಲುತ್ತವೆ. ಇವುಗಳ ಕಾಳನ್ನು ಪೊರೆಯಿಂದ ಬಿಡಿಸುವುದು ಕಷ್ಟ ಆದರೆ ಉಳಿದ ಮೂರು ಬಗೆಗಳಾದ ಟ್ರಿ. ಈಸ್ಟಿವಮ್, ಟ್ರಿ. ಸ್ಫಿರೋಕಾಕಮ್ ಮತ್ತು ಟ್ರಿ. ಕಾಂಪ್ಯಾಕ್ಟಮುಗಳನ್ನು ಸುಲಭವಾಗಿ ಒಕ್ಕಬಹುದು. ಇವು ಬ್ರೆಡ್ ತಯಾರಿಕೆಗೆ ಉತ್ಕೃಷ್ಟವಾದವು. ಆದ್ದರಿಂದ ಪ್ರಪಂಚದಲ್ಲಿ ಬೆಳೆಯುವ ಗೋದಿಯ ಶೇ. 90 ಭಾಗ ಈ ಬಗೆಯದು. ಸ್ಪೆಲ್ಟ್ ಗೋದಿ ಒಂದು ಕಾಲಕ್ಕೆ ಮಧ್ಯಯುರೋಪಿನ ಪ್ರಮುಖ ಗೋದಿಯಾಗಿತ್ತು. ಅಮೆರಿಕದ ತಳಿಶಾಸ್ತ್ರಜ್ಞರಾದ ಮ್ಯಾಕ್‌ಫಡೆನ್ ಮತ್ತು ಸಿಯರ್ಸ್ ಹಾಗೂ ಜಪಾನಿನ ಸಸ್ಯಶಾಸ್ತ್ರಜ್ಞ ಕಿಹಾರ ಎಂಬುವರು ವೈಲ್ಡ್ ಎಮ್ಮರ್ ಮತ್ತು ವನ್ಯಜಾತಿಯ ಹುಲ್ಲುಸಸ್ಯವಾದ ಈಜಿಲಾಪ್ಸ್ ಸ್ಕ್ವಾರೋಸಗಳನ್ನು ಅಡ್ಡಹಾಯಿಸಿ ಸ್ಪೆಲ್ಟ್ ಗೋದಿಯನ್ನು ಕೃತಕವಾಗಿಯೂ ಪಡೆದರು. ಇದು ಸ್ವಾಭಾವಿಕ ಸ್ಪೆಲ್ಟ್ ಗೋದಿಯನ್ನು ಎಲ್ಲ ವಿಧದಲ್ಲೂ ಹೋಲುತ್ತಿದ್ದು ಅದರೊಂದಿಗೆ ಸಂಕರಗೊಳ್ಳಬಲ್ಲುದು. ಮೇಲೆ ಹೇಳಿದ ವಿಧಾನದಿಂದಲೇ ಬಹುಶಃ ಸ್ವಾಭಾವಿಕವಾಗಿ ಕಂಚಿನ ಯುಗದಲ್ಲಿ ವೈಲ್ಡ್ ಎಮ್ಮರ್ ಮತ್ತು ಈಜಿಲಾಪ್ಸ್ ಸ್ಕ್ವಾರೋಸಗಳ ನಡುವೆ ಸಂಕರ ನಡೆದಿರಬಹುದೆಂದು ಊಹಿಸಲಾಗಿದೆ.

ಈಸ್ಟಿವಮ್, ಸ್ಫಿರೋಕಾಕಮ್ ಮತ್ತು ಕಾಂಪ್ಯಾಕ್ಟಮ್ ಪ್ರಭೇದಗಳೇ ಇಂದು ಪ್ರಪಂಚಾದ್ಯಂತ ವಿಶೇಷವಾಗಿ ಕೃಷಿಯಲ್ಲಿರುವ ಪ್ರಭೇದಗಳೆಂದು ಮೇಲೆ ಹೇಳಲಾಗಿದೆ. ಇವು ಪರಸ್ಪರ ಬಲು ಹತ್ತಿರ ಸಂಬಂಧಿಗಳಾಗಿದ್ದು ಸುಲಭವಾಗಿ ಒಂದರೊಡನೊಂದು ಅಡ್ಡ ಹಾಯುತ್ತವೆ. ಬಹುಶಃ ಇವು ಮೂರೂ ಒಂದೇ ಮೂಲತಳಿಯಿಂದ ಉದ್ಭವವಾಗಿರಬಹುದು. ಸಾಮಾನ್ಯ ಗೋದಿ (ಈಸ್ಟಿವಮ್) ಈಶಾನ್ಯ ಟರ್ಕಿಯಲ್ಲಿ ಇಲ್ಲವೆ ರಷ್ಯದ ನೆರೆಯ ಪ್ರದೇಶಗಳಲ್ಲಿ, ಷಾಟ್ ವೀಟ್ (ಸ್ಫಿರೋಕಾಕಮ್) ಭಾರತದಲ್ಲಿ (ಇದರ ಕಾಳುಗಳನ್ನು ಮೊಹೆಂಜೋದಾರೋದಲ್ಲಿ ಪತ್ತೆ ಹಚ್ಚಲಾಗಿದೆ), ಕ್ಲಬ್ ವೀಟ್ (ಕಾಂಪ್ಯಾಕ್ಟಮ್) ಬಗೆಯದು ಹಂಗರಿಯ ಸುತ್ತಮುತ್ತಣ ಪ್ರದೇಶಗಳಲ್ಲಿ ಪ್ರಥಮ ಬಾರಿಗೆ ಕಾಣಿಸಿಕೊಂಡಿರಬಹುದೆಂದು ನಂಬಲಾಗಿದೆ. ಇವೆಲ್ಲವೂ ಐನ್‌ಕಾರ್ನ್ ಇಲ್ಲವೆ ಎಮ್ಮರ್ ಬಗೆಗಳಿಗಿಂತ ಇತ್ತೀಚಿನವಾದರೂ ಪ್ರಶ.ಪೂ. 2500 ರಷ್ಟು ಹಳೆಯವೆಂದು ಹೇಳಲಾಗಿದೆ. ಇವು ಇಳುವರಿಯ ಭೂರಿಗಾತ್ರಕ್ಕೂ ಒಕ್ಕುವಿಕೆಯ ಸೌಲಭ್ಯಕ್ಕೂ ಕಾಳುಗಳಲ್ಲಿನ ಗ್ಲೂಟೆನ್ ಎಂಬ ವಿಶೇಷ ರೀತಿಯ ಪ್ರೋಟೀನು ಅಂಶಕ್ಕೂ ಹೆಸರಾಗಿವೆ.

ತಳೀಕರಣ : ಸಸ್ಯವರ್ಗಗಳಲ್ಲಿನ ಲಿಂಗಭೇದ ಮತ್ತು ವಂಶಾನುಕ್ರಮದಿಂದ ಬರುವ ಗುಣಗಳ ಅರಿವಾಗುವ ಮುನ್ನ ರೈತರೂ ತಳಿಯ ಉತ್ಪಾದಕರೂ ಉತ್ತಮ ತಳಿಯನ್ನು ಅಭಿವೃದ್ಧಿಪಡಿಸಲು ಅನುಸರಿಸುತ್ತಿದ್ದ ಕ್ರಮವೆಂದರೆ ತಮ್ಮ ಸೂಕ್ಷ್ಮ ದೃಷ್ಟಿಯ ಸಹಾಯದಿಂದ ಗೋದಿಯ ಹೊಲದಲ್ಲಿ ಆಗಾಗ್ಗೆ ಕಂಡುಬರುತ್ತಿದ್ದ ಉತ್ತಮ ರೀತಿಯ ಸಸಿಗಳನ್ನು ಆರಿಸುತ್ತಿದ್ದುದು. ಉಳಿದವಕ್ಕಿಂತ ಹುಲುಸಾಗಿ ಬೆಳೆದ ಸಸ್ಯಗಳನ್ನು ಆರಿಸಿ, ಅವುಗಳ ಪೈಕಿ ಅತ್ಯುತ್ತಮವಾದುದನ್ನು ಬೇರ್ಪಡಿಸಿ ಅದರಿಂದ ಬರುವ ಉತ್ತಮ ಬೀಜಗಳನ್ನಾಯ್ದು ಅವನ್ನು ಬಿತ್ತಿ ಬೆಳೆಸಿ ಅವುಗಳಲ್ಲಿಯೂ ಅತ್ಯುತ್ತಮವಾದುವನ್ನೇ ಮತ್ತೆ ಮತ್ತೆ ಆರಿಸಿ ಬೆಳೆಸುತ್ತ ಬಂದಲ್ಲಿ ಅತಿ ಶ್ರೇಷ್ಠ ತಳಿಯನ್ನು ಉತ್ಪನ್ನ ಮಾಡಬಹುದು ಎಂಬ ನಂಬಿಕೆಯೇ ಅವರು ಈ ಕ್ರಮವನ್ನು ಅನುಸರಿಸಿದುದರ ಕಾರಣ. ಈ ವಿಧಾನವನ್ನು ಅನುಸರಿಸಿ ಇಂಗ್ಲೆಂಡಿನಲ್ಲಿನ ಹಾಲೆಟ್ ಎಂಬ ವಿಜ್ಞಾನಿ 1857 ನೆಯ ಇಸವಿಯಲ್ಲಿ ಮೊದಲು 47 ಕಾಳುಗಳನ್ನು ಮತ್ತು 4 $^3/_8$" ಉದ್ದದ ಗೋದಿಯ ತೆನೆಯುಳ್ಳ ಗೋದಿಯನ್ನು ಆರಿಸಿ 1861 ರ ವೇಳೆಗೆ 123 ಕಾಳುಗಳುಳ್ಳ 8 $^3/_4$" ಉದ್ದದ ತೆನೆಯ ಗೋದಿಯನ್ನು ಪಡೆದ. ಇದರಂತೆಯೇ ಈ ಆಯ್ಕೆಯ ಕ್ರಮದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಮಾಡಿ ಇತರ ತಳಿಶಾಸ್ತ್ರಜ್ಞರಾದ ಕಾಟಿಯರ್, ಪ್ಯಾಟ್ರಿಕ್ ಷಿರೆಫ್, ವಿಲ್‌ಮೊರಿನ್ಸ್, ನಿಲ್‌ಸನ್ ಮತ್ತು ಹೇಸ್ ಎಂಬುವರು ಸುಧಾರಿಸಿದ ಫೈಫ್ ಮೊದಲಾದ ಉತ್ತಮ ತಳಿಗಳನ್ನು ಬೆಳೆಸುವುದರಲ್ಲಿ ಜಯಗಳಿಸಿದರು. ಈ ಕ್ರಮವನ್ನು 1903ರಲ್ಲಿ ಜೊಹಾನ್‌ಸನ್ ಎಂಬ ಡೇನಿಷ್ ವಿಜ್ಞಾನಿ ವೈಜ್ಞಾನಿಕ ತಳಹದಿಗೆ ಒಳಪಡಿಸಿ ಶುದ್ಧ ತಳಿ (ಪ್ಯೂರ್ ಲೈನ್) ಆಯ್ಕೆ ಎಂದು ಕರೆದ. ಈ ವಿಧಾನದಿಂದ ಅಭಿವೃದ್ಧಿಪಡಿಸಿದ ತಳಿಗಳಲ್ಲಿ ಮುಖ್ಯವಾದವು ಇವು. 1 ಕಾನ್‌ರೆಡ್: ಗಡುಸಾದ ಕೆಂಪುಬಣ್ಣದ ಕಾಳುಗಳ ತಳಿ. ಚಳಿಗಾಲದ ಬಗೆ. ಅಮೆರಿಕದ ಕ್ಯಾನ್ಸಸ್, ನೆಬ್ರಾಸ್ಕ, ಕಾಲರಾಡೋ, ಓಕ್ಲಹಾಮ ಮತ್ತು ಟೆಕ್ಸಸ್‌ಗಳಲ್ಲಿ ಸುಮಾರು 5 ದಶಲಕ್ಷ ಎಕರೆ ಪ್ರದೇಶಗಳಲ್ಲಿ ಬೆಳೆಸಲಾಗುತ್ತಿತ್ತು. 2. ಬ್ಲಾಕ್ ಹಲ್: ಇದು ಕೂಡ ಕ್ಯಾನ್ಸಸಿನಲ್ಲಿ ಬೆಳಸಲಾಗುವ ತಳಿ. 1912ರಲ್ಲಿ ಆಯ್ಕೆಯಾದ ಇದನ್ನು 1917ರ ವೇಳೆಗೆ ದೊಡ್ಡ ಪರಿಮಾಣದಲ್ಲಿ ಬೆಳೆಸಲಾರಂಭಿಸಲಾಯಿತು. 1929ರ ವೇಳೆಗೆ ಸುಮಾರು 6 ದಶಲಕ್ಷ ಎಕರೆಗಳಲ್ಲಿ ಇದರ ಕೃಷಿ ಇತ್ತು.

ಮೇಲೆ ವಿವರಿಸಿದ ಶುದ್ಧ ತಳಿ ಆಯ್ಕೆಯ ಕ್ರಮದಲ್ಲಿ ಆಗಲೇ ಅಸ್ತಿತ್ವದಲ್ಲಿರುವ ಗೋದಿ ಬಗೆಯಲ್ಲಿನ ಉತ್ತಮ ದರ್ಜೆಯ ಗಿಡಗಳನ್ನು ಬೇರ್ಪಡಿಸಿ ಬೆಳೆಸಲು ಮಾತ್ರ ಸಾಧ್ಯವಾಗುತ್ತದೆ. ಆದರೆ ಹೊಸತಳಿಗಳ ಉತ್ಪಾದನೆ ಇಲ್ಲ. ಹೊಸ ತಳಿಗಳನ್ನು ಪಡೆಯಬೇಕೆಂದರೆ ಅಡ್ಡತಳಿಯೆಬ್ಬಿಕೆಯೊಂದೇ ಮಾರ್ಗ. ಅಪೇಕ್ಷಿತ ಗುಣಗಳುಳ್ಳ ಎರಡು ಬಗೆಗಳನ್ನು ಆರಿಸಿಕೊಂಡು (ಉದಾಹರಣೆಗೆ, ಒಂದು ಬಗೆಯ ಕಾಳುಗಳು ಬ್ರೆಡ್ ತಯಾರಿಕೆಗೆ ಪ್ರಸಿದ್ಧವಾಗಿರಬಹುದು, ಇನ್ನೊಂದು ಬಗೆಯದು ರೋಗನಿರೋಧಕ ಸಾಮರ್ಥ್ಯ ಪಡೆದಿರಬಹುದು), ಇವನ್ನು ಅಡ್ಡಹಾಯಿಸಿ, ಇವೆರಡರ ಗುಣಗಳನ್ನು ಉಳ್ಳ ಹೊಸತಳಿಗಳನ್ನು ಪಡೆಯಬಹುದು. ಆಸ್ಟ್ರೇಲಿಯದ ವಿಜ್ಞಾನಿ ವಿಲಿಯಂ ಫಾರರ್ ಎಂಬಾತ 19 ನೆಯ ಶತಮಾನದ ಅಂತ್ಯ ಭಾಗದಲ್ಲಿ ಈ ಕ್ರಮವನ್ನು ಅನುಸರಿಸಿ ಅತ್ಯುತ್ತಮವಾದ ಹೊಸ ತಳಿಗಳ ಉತ್ಪಾದನೆಯಲ್ಲಿ ಜಯಗಳಿಸಿದ. ತಳಿಯಲ್ಲಿ ಇಳಿದುಬರುವ ಗುಣವೈಶಿಷ್ಟ್ಯಗಳಿಗೆ ಅವುಗಳ ಉತ್ಪತ್ತಿಗೆ ಕಾರಣವಾದ ವಿವಿಧ ಬಗೆ ಸಸ್ಯಗಳನ್ನು ಅಡ್ಡ ಹಾಯಿಸುವುದರಿಂದ ಜನ್ಯತಳಿಯಲ್ಲಿನ ಗುಣಗಳು ಜನಕ ಸಸ್ಯಗಳಲ್ಲಿನ ಗುಣಗಳಿಗಿಂತ ಅತಿ ಹೆಚ್ಚಿನ ವ್ಯತ್ಯಾಸ ಹೊಂದಲು ಸಾಧ್ಯವೆಂಬುದನ್ನು ಈತ ತೋರಿಸಿಕೊಟ್ಟು ಬಲು ಬೇಗ ಫಲಕ್ಕೆ ಬರುವ, ಚೆಲ್ಲಾಪಿಲ್ಲಿಯಾಗಿ ಒಡೆಯದಿರುವ, ಅಲ್ಲದೆ ನೇರವಾದ, ಗಟ್ಟಿಯಾದ ಮತ್ತು ಸಣ್ಣ ಎಲೆಗಳುಳ್ಳ ಫೆಡರೇಷನ್ ಎಂಬ ಒಂದು ಬಗೆಯನ್ನು ಅಭಿವೃದ್ಧಿ ಪಡಿಸಿದ. ಈ ತತ್ತ್ವವನ್ನು ಉದಾಹರಿಸಿ ತೋರಿಸಲು ಫೆಡರೇಷನ್ ತಳಿಯ ಉತ್ಪತ್ತಿ ಕ್ರಮವನ್ನು ಈ ಕೆಳಗೆ ಸೂಚಿಸಿದೆ.

ಸುಧಾರಿಸಿದ ಫೈಫ್ X ಎಟಾವ  
↓  
ಯಾಂಡಿಲ್ಲ X ಪರ್ಪಲ್ ಸ್ಟ್ರಾ  
↓  
ಫೆಡರೇಷನ್

ಕೆನಡದ ವಿಜ್ಞಾನಿ ಸ್ಯಾಂಡರ್ಸ್ ಅಭಿವೃದ್ಧಿಪಡಿಸಿದ ಜಗತ್ಪ್ರಖ್ಯಾತವಾದ ಮಾರ್ಕ್ವಿಸ್ ಎಂಬ ತಳಿ ಈ ವಿಧಾನಕ್ಕೆ ಇನ್ನೊಂದು ಉತ್ತಮ ಉದಾಹರಣೆ. ಭಾರತದ ಮೂಲವಾಸಿಯಾದ ಕೆಂಪುಕಾಳಿನ ಕಲ್ಕತ್ತ ಬಗೆಯನ್ನು ಪೋಲೆಂಡಿನ ಕೆಂಪುಕಾಳಿನ ಫೈಫ್ ಎಂಬ ಬಗೆಯೊಂದಿಗೆ ಅಡ್ಡಹಾಯಿಸಿ ಇದನ್ನು ಪಡೆಯಲಾಯಿತು. 1913 ವೇಳೆಗೆ ಭೂರಿಗಾತ್ರದಲ್ಲಿ ಇದರ ಬೇಸಾಯ ಪ್ರಾರಂಭವಾಯಿತು. ಅಲ್ಲಿಂದ ಸುಮಾರು 20 ವರ್ಷಗಳ ಕಾಲ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಕೆನಡಗಳಲ್ಲಿ ಮಾರ್ಕ್ವಿಸ್ ತಳಿ ಬೇಸಾಯದಲ್ಲಿದ್ದು ಗೋದಿಗಳ ರಾಜನೆಂದು ಹೆಸರು ಪಡೆದಿತ್ತು. ಅಲ್ಲದೆ ಟೆನ್‌ಮಾರ್ಕ್, ಸರೆಸ್, ತ್ಯಾಚರ್, ನ್ಯೂತ್ಯಾಚ್ ಇತ್ಯಾದಿ ಉತ್ತಮ ಗೋದಿ ತಳಿಗಳನ್ನು ಪಡೆಯುವಲ್ಲಿ ಮಾರ್ಕ್ವಿಸ್ ತಳಿಯನ್ನು ಬಳಸಲಾಯಿತು.

ಈ ರೀತಿಯ ಅಡ್ಡತಳಿಯೆಬ್ಬಿಕೆ ಪ್ರಯೋಗಗಳ ಫಲವಾಗಿ ಪ್ರಪಂಚದ ವಿವಿಧ ದೇಶಗಳಲ್ಲಿ ಭಿನ್ನ ಬಗೆಯ ಗೋದಿ ತಳಿಗಳ ಆವಿಷ್ಕಾರವಾಯಿತು. ಗೋದಿ ಗಿಡದಲ್ಲಿ ಸ್ವಾಭಾವಿಕವಾಗಿ ಸ್ವಪರಾಗಸ್ಪರ್ಶಕ್ರಿಯೆ ಮಾತ್ರ ನಡೆಯುವುದರಿಂದ ಯಾವುದೇ ಒಂದು ಬಗೆಯ ಗೋದಿ ಬೆಳೆಯಲ್ಲಿ ಸಸ್ಯದ ವಿವಿಧ ಗುಣಲಕ್ಷಣಗಳು ಒಂದೇ ತೆರನಾಗಿದ್ದು, ಅಂಥ ಬೆಳೆ ಯಾವುದಾದರೂ ಒಂದು ರೋಗಕ್ಕೆ ಸುಲಭವಾಗಿ ಈಡಾಗುವಂತಿದ್ದರೆ, ಒಂದು ಪ್ರದೇಶದಲ್ಲಿ ಕೃಷಿಯಲ್ಲಿರುವ ಗೋದಿ ಬೆಳೆ ಆ ರೋಗದ ಹಬ್ಬುವಿಕೆಗೆ ಬಹಳ ಉತ್ತಮವಾದ ಮಾಧ್ಯಮವಾಗುತ್ತದೆ. ಇದರಿಂದ ಅದು ಅತ್ಯಂತ ಶೀಘ್ರಕಾಲದಲ್ಲಿ ರೋಗಕ್ಕೆ ತುತ್ತಾಗಿ ನಾಶವಾಗಬಹುದು. ಈ ಕಾರಣದಿಂದ ಗೋದಿ ತಳಿ ಉತ್ಪಾದಕರು ಗೋದಿಯ ಇಳುವರಿಯನ್ನು ಮಾತ್ರವಲ್ಲದೆ ಆಯಾ ತಳಿಯ ರೋಗನಿರೋಧ ಸಾಮರ್ಥ್ಯವನ್ನೂ ಗಮನದಲ್ಲಿಟ್ಟುಕೊಂಡು ಅಂಥ ಸಾಮರ್ಥ್ಯವುಳ್ಳ ತಳಿಗಳನ್ನು ಅಭಿವೃದ್ಧಿಪಡಿಸುತ್ತಾರೆ. ಅಮೆರಿಕ ಸಂಯುಕ್ತ ಸಂಸ್ಥಾನ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ, ರಷ್ಯ ಮುಂತಾದೆಡೆಗಳಲ್ಲಿ ಈ ದಿಸೆಯಲ್ಲಿ ಗಮನಾರ್ಹ ಕೆಲಸ ನಡೆದಿದೆ. ಭಾರತೀಯ ಕೃಷಿ ಸಂಶೋಧನ ಸಂಸ್ಥೆಯಲ್ಲಿಯೂ ಅನೇಕ ಬಗೆಯ ಪ್ರಯೋಗಗಳು ನಡೆಯುತ್ತಿವೆ. ಮೆಕ್ಸಿಕೊದಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ನಾರ್ಮನ್ ಇ. ಬೋರ್ಲಾಗ್ ನೇತೃತ್ವದಲ್ಲಿ ಅಮೆರಿಕ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮುಂತಾದ ದೇಶಗಳ ಸುಧಾರಿಸಿದ ಗೋದಿಗಳನ್ನು ಮೆಕ್ಸಿಕೊದಲ್ಲಿ ಮೊದಲಿನಿಂದ ಬೆಳೆಯುತ್ತಿದ್ದ ಗೋದಿ ಬಗೆಗಳೊಂದಿಗೆ ಅಡ್ಡಹಾಯಿಸಿ ರೋಗನಿರೋಧಕ ಸಾಮರ್ಥ್ಯವಿರುವ ಉತ್ತಮ ಬಗೆಯ ಗೋದಿ ತಳಿಗಳನ್ನು ಪಡೆಯಲಾಗಿದೆ. ಇದರ ಫಲವಾಗಿ ಮೆಕ್ಸಿಕೊದ ಗೋದಿ ಬೇಸಾಯದ ವಿಸ್ತೀರ್ಣ ಹಾಗೂ ಇಳುವರಿ ಅನೇಕ ಪಟ್ಟು ಹೆಚ್ಚಾಗಿದೆ. ಅಡ್ಡತಳಿಯೆಬ್ಬಿಕೆ ಬರಿಯ ಗೋದಿ ಪ್ರಭೇದಗಳಿಗೆ ಮೀಸಲಾಗಿಲ್ಲ. ಗೋದಿಯ ವಿವಿಧ ಪ್ರಭೇದಗಳನ್ನು ಬೇರೆ ಜಾತಿಯ ಧಾನ್ಯ ಸಸ್ಯಗಳೊಂದಿಗೆ ಅಡ್ಡಹಾಯಿಸಿ ಮೂರನೆಯ ಬಗೆಯ ಮತ್ತು ಗೋದಿ ಹಾಗೂ ಇತರ ಧಾನ್ಯ ಸಸ್ಯಗಳ ಗುಣಲಕ್ಷಣಗಳನ್ನುಳ್ಳ ಗಿಡಗಳನ್ನು ಪಡೆಯುವ ಪ್ರಯತ್ನಗಳೂ ನಡೆದಿವೆ. ಇಂಥ ಪ್ರಯೋಗಗಳ ಫಲವಾಗಿ ರಷ್ಯ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ರೈ ಹಾಗೂ ಗೋದಿಗಳ ಅಡ್ಡತಳಿಯೊಂದರ ಅಭಿವೃದ್ಧಿಯಾಗಿದೆ. ಗೋದಿಯೂ ಅಲ್ಲದ ರೈ ಗಿಡವೂ ಅಲ್ಲದ ಈ ಅಡ್ಡತಳಿ ಇವೆರಡರ ಕ್ರೋಮೋಸೋಮುಗಳನ್ನೂ ಪಡೆದಿದ್ದು ಗೋದಿಗಿಂತ ಹೆಚ್ಚಿನ ಚಳಿನಿರೋಧ ಸಾಮರ್ಥ್ಯವನ್ನು ತೋರುತ್ತದೆ. ಆದರೆ ಇದರ ಹಿಟ್ಟು ಬ್ರೆಡ್ ತಯಾರಿಕೆಗೆ

ಸಾಕಷ್ಟು ಉಪಯುಕ್ತವಾಗಿಲ್ಲವಾದ್ದರಿಂದ ಈ ಅಡ್ಡತಳಿ ಹೆಚ್ಚು ಜನಪ್ರಿಯವಾಗಿಲ್ಲ. ರಷ್ಯದಲ್ಲಿ ಗೋದಿಯನ್ನು ಒಂದುಬಗೆಯ ಬಹುವಾರ್ಷಿಕ ಹುಲ್ಲಿನೊಂದಿಗೆ ಅಡ್ಡಹಾಯಿಸಲಾಗಿದ್ದು ತತ್‍ಫಲವಾಗಿ ವಿಚಿತ್ರವಾದ ಮತ್ತು ಬಹುವಾರ್ಷಿಕ ಬಗೆಯ ಧಾನ್ಯ ಸಸ್ಯವೊಂದನ್ನು ಅಭಿವೃದ್ಧಿಪಡಿಸಲಾಗಿದೆ. ಹೆಚ್ಚು ಆರೈಕೆಯ ಅಗತ್ಯವಿಲ್ಲದೆ ಈ ಸಸ್ಯದಿಂದ ವರ್ಷವರ್ಷವೂ ಧಾನ್ಯವನ್ನು ಪಡೆಯಬಹುದೆಂದು ಹೇಳಲಾಗಿದೆ.

ಭಾರತದಲ್ಲಿ ತಳೀಕರಣ ಪ್ರಯೋಗಗಳು: ಗೋದಿ ಭಾರತದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಬೇಸಾಯದಲ್ಲಿತ್ತು. ಅಲ್ಲದೆ ಸ್ಫೀರೋಕಾಕಮ್ ಪ್ರಭೇದ ಬಹು ಹಿಂದೆಯೇ ಉತ್ತರ ಭಾರತ ಮತ್ತು ಆಫ್ಘಾನಿಸ್ತಾನಗಳಲ್ಲಿ ಉದ್ಭವಿಸಿತು ಎಂದೂ ಹೇಳಲಾಗಿದೆ. ಮೊಹೆಂಜೋದಾರೊ ನೆಲೆಯಲ್ಲಿ ಈ ಬಗೆಯ ಗೋದಿಯ ಕಾಳುಗಳು ಪತ್ತೆಯಾಗಿವೆ. ಇದರಿಂದ ಸಿಂಧೂ ನದಿಯ ಮೈದಾನ ಪ್ರದೇಶಗಳಲ್ಲಿ ಸುಮಾರು 5000 ವರ್ಷಗಳ ಹಿಂದೆಯೇ ಈ ಗೋದಿಯನ್ನು ಬೆಳೆಸುತ್ತಿದ್ದರು ಎಂಬುದು ವ್ಯಕ್ತವಾಗುತ್ತದೆ. ಹೆಚ್ಚಾಗಿ ಕೃಷಿಯಲ್ಲಿರುವ ಗೋದಿಯ ಬೆಳೆಗಳೆಂದರೆ ಡ್ಯೂರಮ್ ಮತ್ತು ಈಸ್ಟಿವಮ್. ಉಳಿದ ಬಗೆಗಳೂ ಅಲ್ಪಸ್ವಲ್ಪ ಪರಿಮಾಣದಲ್ಲಿ ಬೇಸಾಯದಲ್ಲಿವೆ. ಉತ್ತರ ಭಾರತದಲ್ಲಿ ಈಸ್ಟಿವಮ್ ಪ್ರಭೇದವೇ ಹೆಚ್ಚು. ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಲ್ಲಿ ಕೆಲವು ಭಾಗಗಳಲ್ಲಿ ಮಾತ್ರ ಡ್ಯೂರಮ್ ಬಗೆಯ ಗೋದಿಯನ್ನು ಬೆಳೆಸುತ್ತಿದ್ದಾರೆ. ಡೈಕಾಕಮ್ ಬಗೆಯನ್ನು ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದ ಕೆಲವು ಭಾಗಗಳಲ್ಲಿ ಮಾತ್ರ ಬೆಳೆಸುತ್ತಿದ್ದಾರೆ.

ಭಾರತದಲ್ಲಿ ಗೋದಿಯನ್ನು ಸುಧಾರಿಸುವ ಪ್ರಯತ್ನಗಳು ಬ್ರಿಟಿಷ್ ಕಾಲದಿಂದಲೂ ನಡೆಯುತ್ತ ಬಂದಿವೆ. ಆಲ್ಬರ್ಟ್ ಹಾವರ್ಡ್ ಎಂಬಾತ ಎ. ಆರ್. ಖಾನ್ ಎಂಬಾತನ ನೆರವಿನಿಂದ ಬಿಹಾರ್ ರಾಜ್ಯದಲ್ಲಿನ ಪೂಸಾ ಕೃಷಿ ಸಂಶೋಧನ ಕೇಂದ್ರದಲ್ಲಿ ಗೋದಿ ತಳಿಯ ಸಂಶೋಧನೆಗಳನ್ನು ಈ ಶತಮಾನದ ಮೊದಲ ದಶಕದಲ್ಲಿ ಆರಂಭಿಸಿದ. ಮೊದಲ ಹಂತಗಳಲ್ಲಿಯೇ ಭಾರತದ ಗೋದಿಗಳಲ್ಲಿ ಅತ್ಯುತ್ತಮವಾದ ಗುಣಗಳಿರುವುದು ಸಂಶೋಧನೆಯಿಂದ ತಿಳಿದುಬಂದಿತು. ಇಂಥ ಬಗೆಗಳನ್ನು ಬೇರೆಯವುಗಳಿಂದ ಬೇರ್ಪಡಿಸಿ ಆರಿಸಲಾಯಿತು. ಇವುಗಳಲ್ಲಿ ಅತಿ ಮುಖ್ಯವಾದವು: ಪೂಸಾ- 4 ಮತ್ತು ಪೂಸಾ- 12 (ಈಗ ಇವಕ್ಕೆ ಎನ್‍ಪಿ- 4 ಮತ್ತು ಎನ್‍ಪಿ -12 ಎಂಬ ಹೆಸರಿದೆ). ಇವು ಪ್ರಪಂಚದ ಅತ್ಯುತ್ತಮ ಗುಣದ ಗೋದಿಯ ಬಗೆಗಳನ್ನು ಹೋಲುವಂಥವು. ಅದರಲ್ಲಿಯೂ ಎನ್‍ಪಿ- 4 ಬಗೆ 1916 ರಿಂದ 1920 ರ ಮಧ್ಯೆ ನಡೆದ ನಾಲ್ಕು ಅಂತಾರಾಷ್ಟ್ರೀಯ ಧಾನ್ಯ ಪ್ರದರ್ಶನಗಳಲ್ಲಿ ಪ್ರಪ್ರಥಮ ಬಹುಮಾನವನ್ನು ಗಳಿಸಿದೆ. ಇದೇ ರೀತಿ ಉತ್ತರ ಪ್ರದೇಶದಲ್ಲಿ ಲೀಕ ಎಂಬ ವಿಜ್ಞಾನಿ ಕಾನ್ಪುರ-13 ಎಂಬ ಹೊಸತಳಿಯನ್ನು ಶೋಧಿಸಿದ. ಪಂಜಾಬಿನಲ್ಲಿ ಮಿಲ್ನೆ ಎಂಬಾತ ಟೈಪ್- 11; 8- ಎ ಮತ್ತು 9- ಡಿ ಎಂಬ ಜನಪ್ರಿಯವಾದ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದ. ಮಧ್ಯ ಪ್ರದೇಶದಲ್ಲಿ ಸರ್ ಜೆಫ್ರಿ ಇವಾನ್ಸ್ ಎಂಬಾತನ ಸಂಶೋಧನೆಯ ಫಲವಾಗಿ ಎ ಓ- 13, ಎ ಓ- 85, ಎ ಓ- 88 ಮತ್ತು ಎ ಓ- 90, ಎಂಬ ಸುಧಾರಿಸಿದ ತಳಿಗಳು ಉತ್ಪನ್ನವಾದುವು. ಮಹಾರಾಷ್ಟ್ರದಲ್ಲಿ ಡ್ಯೂರಮ್ ಮಾದರಿಗೆ ಸೇರಿದ ಮೋಟಿಯ ಮತ್ತು ಗುಲಾಬ್ ಎಂಬವು ಹೀಗೆ ಸುಧಾರಿಸಿ ಪಡೆಯಲಾದ ತಳಿಗಳಲ್ಲಿ ಮುಖ್ಯವಾದವು.

ತಳೀಕರಣ ಪ್ರಯೋಗಗಳ ಫಲವಾಗಿ ಅಭಿವೃದ್ಧಿಯಾದ ತಳಿಗಳಲ್ಲಿ ಎನ್‍ಪಿ- 52, ಎನ್‍ಪಿ- 80- 5, ಎನ್‍ಪಿ- 111, ಎನ್‍ಪಿ- 114, ಎನ್‍ಪಿ- 120, ಎನ್‍ಪಿ- 125 ಮತ್ತು ಎನ್‍ಪಿ- 165 ಮುಖ್ಯವಾದವು. ಇವೆಲ್ಲವೂ ಹೊಸ ತಳಿಗಳು; ಭಾರತೀಯ ಕೃಷಿ ಸಂಶೋಧನ ಸಂಸ್ಥೆಯಲ್ಲಿ ನಡೆದ ಪ್ರಯೋಗಗಳಿಂದ ರೂಪಿತವಾದವು. ಭಾರತದ ಇತರ ಸಂಶೋಧನ ಕೇಂದ್ರಗಳಲ್ಲಿಯೂ ಇದೇ ರೀತಿಯಾದ ಪ್ರಯತ್ನಗಳು ನಡೆದು ಅನೇಕ ಸುಧಾರಿಸಿದ ತಳಿಗಳ ಉತ್ಪತ್ತಿಗೆ ಕಾರಣವಾಯಿತು. ಉದಾಹರಣೆಗೆ ಪಂಜಾಬಿನಲ್ಲಿ ಸಿ-518 ಮತ್ತು ಸಿ-591 ತಳಿಗಳೂ ಮಧ್ಯ ಪ್ರದೇಶದಲ್ಲಿ ಎಓ- 68 ಮತ್ತು ಎ. 115 ತಳಿಗಳೂ ಮತ್ತು ಮುಂಬಯಿಯಲ್ಲಿ ಜಯ, ವಿಜಯ ಮತ್ತು ನಿಫಾಡ್ ತಳಿಗಳೂ ಬೆಳಕಿಗೆ ಬಂದುವು.

ಇದರಂತೆಯೇ ಭಾರತೀಯ ಕೃಷಿ ಸಂಶೋಧನ ಸಂಸ್ಥೆಯಲ್ಲಿ ರೋಗನಿರೋಧ ಸಾಮರ್ಥ್ಯವುಳ್ಳ ಗೋದಿ ತಳಿಗಳನ್ನು ಪಡೆಯುವ ಬಗ್ಗೆ ಸಂಶೋಧನ ಕಾರ್ಯ 1934 ರ ಅನಂತರ ಆರಂಭವಾಯಿತು. ಪ್ರಥಮ ಹಂತದಲ್ಲಿ ಕಂದುಬಣ್ಣದ ತುಕ್ಕು ರೋಗವನ್ನು ನಿರೋಧಿಸುವ ಎನ್‍ಪಿ- 783 ಮತ್ತು ಎನ್‍ಪಿ 784 ತಳಿಗಳನ್ನೂ ಹಳದಿ ತುಕ್ಕು ರೋಗವನ್ನು ಎದುರಿಸುವ ಎನ್‍ಪಿ-785 ಮತ್ತು ಎನ್‍ಪಿ- 786 ತಳಿಗಳನ್ನೂ ಅಲ್ಲದೆ ಕಪ್ಪು ತುಕ್ಕು ಬೇನೆಯನ್ನು ತಡೆಯುವ ಎನ್‍ಪಿ- 789, 790, 798 ಮತ್ತು 799 ತಳಿಗಳನ್ನೂ ಅಭಿವೃದ್ಧಿಪಡಿಸಲಾಯಿತು. ಎರಡನೆಯ ಹಂತದಲ್ಲಿ ಈ ಮೂರು ಬಗೆಯ ತುಕ್ಕು ರೋಗಗಳನ್ನು ಒಟ್ಟಿಗೆ ತಡೆಯುವ ತಳಿಗಳನ್ನು ಉತ್ಪನ್ನ ಮಾಡುವ ಕೆಲಸ ಆರಂಭವಾಗಿ ಇಂಥ ಕೆಲವು ತಳಿಗಳನ್ನು ಈಗಾಗಲೇ ಪಡೆಯಲಾಗಿದೆ. ಇವುಗಳ ಪೈಕಿ ಎನ್‍ಪಿ- 809 ಎಂಬುದನ್ನು ಹಿಮಾಚಲ ಪ್ರದೇಶದ ಗುಡ್ಡಭಾಗಗಳಲ್ಲಿ ಬೇಸಾಯ ಮಾಡಲಾಗಿದೆ.

ಇದೇ ರೀತಿ ಮಹಾರಾಷ್ಟ್ರ, ಮಧ್ಯಪ್ರದೇಶ, ಪಂಜಾಬುಗಳಲ್ಲಿ ರೋಗನಿರೋಧಕ ಸಾಮರ್ಥ್ಯವುಳ್ಳ ಗೋದಿತಳಿಗಳನ್ನು ಪಡೆಯಲಾಗಿದ್ದು ಇವುಗಳಲ್ಲಿ ಕೆನ್‍ಫಾಡ್, ಹೈಬ್ರಿಡ್ 65, ಸಿ-217 ಮತ್ತು ಸಿ-281 ಗಳು ಮುಖ್ಯವೆನಿಸಿವೆ. ಹಾಗೆಯೇ ಭಾರತೀಯ ಕೃಷಿ ಸಂಶೋಧನ ಸಂಸ್ಥೆಯ ಹಿಂದಿನ ಡೈರೆಕ್ಟರ್-ಜನರಲ್ ಸ್ವಾಮಿನಾಥನ್‍ರ ನೇತೃತ್ವದಲ್ಲಿ ಕಾಡಿಗೆ ರೋಗನಿರೋಧ ಸಾಮರ್ಥ್ಯವಿರುವ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಉದಾಹರಣೆಗೆ ನವಪೂಸಾ-700 ರ ವಿವಿಧ ತಳಿಗಳು. ಇಷ್ಟೇ ಅಲ್ಲದೆ ಸುಧಾರಿಸಿದ ತಳಿಗಳಲ್ಲಿನ ಪೌಷ್ಟಿಕಾಂಶಗಳ ಹೆಚ್ಚಳದ ಬಗ್ಗೆ, ಚಪಾತಿ ತಯಾರಿಸಲಿಕ್ಕೆ ಮಾತ್ರವಲ್ಲದೆ ಬ್ರೆಡ್ ತಯಾರಿಕೆಗೆ ಚೆನ್ನಾಗಿ ಒದಗುವ ಬಗ್ಗೆ ಗಮನಹರಿಸಲಾಗಿದೆ. ಭಾರತದ ವಿವಿಧ ಪ್ರದೇಶಗಳಲ್ಲಿರುವ ಹವೆ ಹಾಗೂ ಕೃಷಿ ವಿಧಾನಗಳಿಗೆ ಹೊಂದಿಕೊಳ್ಳುವಂಥ ತಳಿಗಳನ್ನು ಉತ್ಪಾದಿಸುವ ಪ್ರಯತ್ನಗಳೂ ನಡೆದಿವೆ. ನೀರಾವರಿ ಬೆಳೆಗೆ ತಕ್ಕಂಥ, ಒರಗದಿರುವ ಮತ್ತು ಲಾಭದಾಯಕ ಪರಿಮಾಣದಲ್ಲಿ ಇಳುವರಿ ಕೊಡುವಂತೆ ಗೊಬ್ಬರವನ್ನು ಬಳಸಿಕೊಳ್ಳುವ ಸಾಮರ್ಥ್ಯವುಳ್ಳ ಗೋದಿ ತಳಿಗಳ ಉತ್ಪಾದನೆಯೂ ನಡೆದಿದೆ. ಈಗಾಗಲೇ ಪೂಸಾದಲ್ಲಿ ಪಡೆಯಲಾದ ಹೊಸ ತಳಿಗಳು (ಎನ್‍ಪಿ-823, ಎನ್‍ಪಿ-824 ಮತ್ತು ಎನ್‍ಪಿ-876) ಮೇಲೆ ವಿವರಿಸಿದ ಗುಣಗಳನ್ನು ಬಹುಮಟ್ಟಿಗೆ ಗಳಿಸಿವೆಯಾದ್ದರಿಂದ ಇವನ್ನು ರೈತರಿಗೆ ಹಂಚಲಾಗಿದೆ. ಇದರಂತೆಯೇ ಪಂಜಾಬಿನಲ್ಲಿ ವೃದ್ಧಿಸಲಾದ ಸಿ-306 ತಳಿ ವಿವಿಧ ಹವೆಗಳಿಗೆ ಹೊಂದಿಕೊಂಡು ಹೆಚ್ಚು ಇಳುವರಿ ಕೊಡುವ ಸಾಮರ್ಥ್ಯ ಪಡೆದಿದೆ.

ಸಸ್ಯಗಳ ತಳೀಕರಣ ಕಾರ್ಯದಲ್ಲಿ ವ್ಯತ್ಯಯಗಳ (ಮ್ಯುಟೇಷನ್ಸ್) ಮಹತ್ತ್ವವನ್ನು ಮನಗಂಡ ಭಾರತೀಯ ಕೃಷಿ ಸಂಶೋಧನ ಸಂಸ್ಥೆಯಲ್ಲಿ ಈ ದೃಷ್ಟಿಯಿಂದಲೂ ಸಂಶೋಧನೆ ನಡೆಯುತ್ತಿದೆ. ಇದರ ಫಲವಾಗಿ ಕೆಂಬಣ್ಣದ ಕಾಳುಗಳುಳ್ಳ ಸೋನೋರ 64 ಮತ್ತು ಲೆರ್ಮ ರೋಜೊ ಮುಂತಾದವನ್ನು ನಸು ಹೊಂಬಣ್ಣದ ಕಾಳುಗಳುಳ್ಳ ಬಗೆಗಳಾಗಿ ಮಾರ್ಪಡಿಸಲಾಗಿದೆ. (ಎಂ.ಎಸ್.ಎಸ್.ಎನ್.)

ಕಂಬೈನ್ ಯಂತ್ರದಿಂದ ಗೋದಿ ಪೈರಿನ ಕಟಾವು

ಗೋದಿಯ ಬೇಸಾಯ: ಪ್ರಪಂಚದ ವಿವಿಧ ರೀತಿಯ ಮಣ್ಣುಗಳಲ್ಲಿ, ವಾತಾವರಣ ವಲಯಗಳಲ್ಲಿ ಗೋದಿಯ ಕೃಷಿ ಇದೆಯಾದರೂ 30°-60° ಅಕ್ಷಾಂಶಗಳ ಮಧ್ಯೆ ಇರುವ ಪ್ರದೇಶಗಳಲ್ಲಿ ಮತ್ತು ವರ್ಷಕ್ಕೆ 12"-35" ಮಳೆ ಬೀಳುವ ಪ್ರದೇಶಗಳಲ್ಲಿ ಇದರ ಬೇಸಾಯ ಹೆಚ್ಚು. ಮೇಲೆ ಹೇಳಿದ ಪ್ರದೇಶ ಪ್ರಪಂಚದ ಸಮಶೀತೋಷ್ಣವಲಯಗಳಲ್ಲಿನ ಹುಲ್ಲುಗಾವಲು ಪ್ರದೇಶಗಳನ್ನು ಪ್ರತಿನಿಧಿಸುತ್ತದೆ. ಇಂಥ ವಾತಾವರಣಕ್ಕೆ ಗೋದಿ ಚೆನ್ನಾಗಿ ಹೊಂದಿಕೊಂಡು ಬೆಳೆಯಬಲ್ಲದು. ಆದರೂ ಗೋದಿಯನ್ನು ವರ್ಷಕ್ಕೆ 12" ಗಳಿಗಿಂತ ಕಡಿಮೆ ಹಾಗೂ 70" ಗಳಿಗಿಂತ ಹೆಚ್ಚು ಮಳೆ ಬೀಳುವ ಸ್ಥಳಗಳಲ್ಲೂ ಸಮಭಾಜಕ ವೃತ್ತ ಪ್ರದೇಶದಿಂದ ಹಿಡಿದು ಉತ್ತರ ಮೇರುವೃತ್ತದ ವರೆಗಿನ ಪ್ರದೇಶಗಳಲ್ಲೂ ಸಮುದ್ರ ಮಟ್ಟದಿಂದ ಹಿಡಿದು 10,000' ಎತ್ತರದ ವರೆಗಿನ ಬೆಟ್ಟಸೀಮೆಗಳಲ್ಲೂ ಬೆಳೆಸಬಹುದು. ವೈವಿಧ್ಯಮಯ ವಾತಾವರಣಗಳಿಗೆ ಹೊಂದಿಕೊಂಡು ಬೆಳೆಯುವ ಸಾಮರ್ಥ್ಯ ಗೋದಿಗೆ ಇದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಗೋದಿಯನ್ನು ಖುಷ್ಕಿ ಇಲ್ಲವೆ ತರಿ ಬೆಳೆಯಾಗಿ ಬೇಸಾಯ ಮಾಡಬಹುದು. ಖುಷ್ಕಿ ಬೇಸಾಯಕ್ಕೆ ಎರೆಭೂಮಿ ಒಳ್ಳೆಯದು. ನೀರಾವರಿ ಬೇಸಾಯಕ್ಕೆ ಗೋಡು ಇಲ್ಲವೆ ಮೆಕ್ಕಲುಮಣ್ಣು ಉತ್ತಮ. ಮಣ್ಣಿನಲ್ಲಿ ನೀರು ಸರಾಗವಾಗಿ ಇಳಿದು ಹೋಗುವಂತಿರಬೇಕು.

ಬೇಸಾಯಕ್ರಮ: ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಗೋದಿಯ ಬೇಸಾಯ ಕ್ರಮ ವಿವಿಧ ರೀತಿಯದು. ಇದನ್ನು ಬೇರೆ ಧಾನ್ಯ ಬೆಳೆಗಳೊಂದಿಗೆ ಪರ್ಯಾಯ ಕ್ರಮದಲ್ಲಿ ಇಲ್ಲವೆ ಒಂದೇ ಜಮೀನಿನಲ್ಲಿ ಏಕಪ್ರಕಾರವಾಗಿ ಬೆಳೆಸಬಹುದು. ಸಾಮಾನ್ಯವಾಗಿ ಖುಷ್ಕಿ ಬೇಸಾಯದಲ್ಲಿ ಉದ್ದು, ಹೆಸರು, ಅಲಸಂದೆ, ಎಳ್ಳು, ಈರುಳ್ಳಿ ಮುಂತಾದವನ್ನು ವರ್ಷದ ಮೊದಲ ಬೆಳೆಯಾಗಿಯೂ ಅದೇ ಭೂಮಿಯಲ್ಲಿ ಗೋದಿಯನ್ನು ಎರಡನೆಯ ಬೆಳೆಯಾಗಿ ಬೆಳೆಸುವುದೂ ವಾಡಿಕೆ. ಕೆಲವು ಸಲ ವರ್ಷ ಬಿಟ್ಟು ವರ್ಷಕ್ಕೆ ಒಮ್ಮೆ ಗೋದಿಯನ್ನು ಬೆಳೆಸಿ ಮಧ್ಯದ ವರ್ಷಗಳಲ್ಲಿ ಬೇರೆ ಬಗೆಯ ಧಾನ್ಯಗಳನ್ನು ಬೆಳೆಸುವುದುಂಟು. ಅಮೆರಿಕ

ಮುಂತಾದೆಡೆ ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ಗೋದಿಯನ್ನು ಎರಡು, ಮೂರು, ಇಲ್ಲವೆ ನಾಲ್ಕು ವರ್ಷಕ್ಕೊಮ್ಮೆ ಬೆಳೆಸುವ ರೂಢಿಯುಂಟು. ಮಧ್ಯದ ವರ್ಷಗಳಲ್ಲಿ ಭೂಮಿಯನ್ನು ಪಾಳುಬಿಡುತ್ತಾರೆ. ಭೂಮಿಯಲ್ಲಿ ತೇವವನ್ನು ಹಿಡಿದಿಡುವುದಕ್ಕೆ ಇದು ಸಹಾಯಕ. ಅಮೆರಿಕದಲ್ಲಿ ಮುಸುಕಿನ ಜೋಳ, ಸೋಯಬೀನ್ಸ್, ಆಲ್ಫಾಲ್ಫ ಮುಂತಾದವನ್ನು ಗೋದಿಯೊಂದಿಗೆ ಪರ್ಯಾಯ ಬೆಳೆಯಾಗಿ ಬೆಳೆಸುತ್ತಾರೆ. ಭಾರತದಲ್ಲೂ ಮೊದಲನೆಯ ವರ್ಷ ಗೋದಿ, ಎರಡನೆಯ ವರ್ಷ ಕಡಲೆ ಇಲ್ಲವೆ ಕೊತ್ತಂಬರಿ, ಮೂರನೆಯ ವರ್ಷ ಜೋಳ ಇಲ್ಲವೆ ಸಜ್ಜೆ ಮುಂತಾದವನ್ನು ಬೆಳೆಸಿ ನಾಲ್ಕನೆಯ ವರ್ಷ ಮತ್ತೆ ಗೋದಿಯನ್ನು ಕೃಷಿ ಮಾಡಲಾಗುತ್ತದೆ. ಖುಷ್ಕಿ ಬೇಸಾಯ ಮಾಡುವಾಗ ಭೂಮಿಯನ್ನು ಉತ್ತು, ಭಾರವಾದ ಕಬ್ಬಿಣದ ಕುಂಟೆಯಿಂದ ಹದಗೊಳಿಸುತ್ತಾರೆ. ಅನಂತರ ಕಳೆ ಮತ್ತು ಬೇರು ಮುಂತಾದವನ್ನು ತೆಗೆದುಹಾಕಿ ಹಗುರವಾಗಿ ಕುಂಟೆಹೊಡೆಯುತ್ತಾರೆ. ಬಿತ್ತನೆ ಅಕ್ಟೋಬರ್ ತಿಂಗಳಲ್ಲಿ ನಡೆಯುತ್ತದೆ. ಕೂರಿಗೆ ಯಂತ್ರದ ಸಹಾಯದಿಂದ 10"–12" ಅಂತರದಲ್ಲಿ ಬಿತ್ತನೆ ಮಾಡಲಾಗುತ್ತದೆ. ಎಕರೆಗೆ ಸುಮಾರು 15 ಕಿಗ್ರಾಂ ಬೀಜ ಬೇಕಾಗುತ್ತದೆ. ಸುಮಾರು 4 ದಿವಸಗಳ ಅನಂತರ ಸಸಿಗಳು ಹುಟ್ಟುತ್ತವೆ. 10 ದಿವಸಗಳೊಳಗಾಗಿ ಮತ್ತು ಒಂದು ತಿಂಗಳು ತುಂಬುವ ಮುಂಚೆ ಒಮ್ಮೆ – ಹೀಗೆ ಎರಡು ಸಲ ಕಳೆಗುದ್ದಲಿಯಿಂದ ಅಗತೆ ಮಾಡಲಾಗುತ್ತದೆ. ಸುಮಾರು 3 ತಿಂಗಳ ಅನಂತರ ಪೈರು ಕೊಯ್ಲಿಗೆ ಬರುವುದು. ಪೈರನ್ನು ಕುಡುಗೋಲಿನಿಂದ ಕೊಯ್ದು ಇಲ್ಲವೆ ಗಿಡಗಳನ್ನು ಬೇರುಸಹಿತ ಕಿತ್ತು ಒಕ್ಕಣೆಗೆ ಒಳಪಡಿಸಲಾಗುತ್ತದೆ. ಉರುಳುಕಲ್ಲಿನ ಸಹಾಯದಿಂದ ಒಕ್ಕಣೆ ಮಾಡಿ ಕಾಳನ್ನು ಬೇರ್ಪಡಿಸಲಾಗುವುದು. ಅನಂತರ ಕೇರಿ ಕಾಳನ್ನು ಶುದ್ಧೀಕರಿಸಿ ಸಂಗ್ರಹಿಸಿಡಲಾಗುತ್ತದೆ.

ನೀರಾವರಿ ಬೇಸಾಯದಲ್ಲಿ ಬಿತ್ತನೆ ಅಕ್ಟೋಬರಿನಿಂದ ಜನವರಿ ವರೆಗಿನ ಅವಧಿಯಲ್ಲಿ ನಡೆಯುತ್ತದೆ. ಭೂಮಿಯ ಹಸನುಗೊಳಿಸುವಿಕೆ ಖುಷ್ಕಿ ಬೇಸಾಯದಲ್ಲಿದ್ದಂತೆಯೇ ಇದೆ. ಆದರೆ ಬಿತ್ತನೆಯ ಪರಿಮಾಣ ಇದರಲ್ಲಿ ಹೆಚ್ಚು: ಎಕರೆಗೆ ಸುಮಾರು 50 ಕಿಗ್ರಾಂ. ಬೀಜ ಬೇಕು. ಬಿತ್ತಿದ ಮೇಲೆ ಜಮೀನನ್ನು ನೀರು ಹಾಯಿಸಲು ಅನುಕೂಲವಾಗುವಂತೆ ಮಡಿಗಳನ್ನಾಗಿ ವಿಂಗಡಿಸಲಾಗುತ್ತದೆ. 10–15 ದಿವಸಗಳಿಗೊಮ್ಮೆ ನೀರು ಹಾಯಿಸಲಾಗುವುದು. ಮೊದಲ ಬಾರಿಗೆ ಕಳೆ ತೆಗೆದಾಗಲೂ ಅನಂತರವೂ ಯಥೇಚ್ಛವಾಗಿ ಗೊಬ್ಬರ ಹಾಕಲಾಗುತ್ತದೆ.

ಭಾರತ ಮುಂತಾದ ಮುಂದುವರಿಯುತ್ತಿರುವ ದೇಶಗಳಲ್ಲಿ ಗೋದಿ ಬೇಸಾಯ ಬಹುಮಟ್ಟಿಗೆ ಮಾನವಶ್ರಮದಿಂದ ನಡೆಯುತ್ತಿದೆಯಾದರೂ ಪಾಶ್ಚಾತ್ಯ ದೇಶಗಳಲ್ಲಿ ಉಳುವಿಕೆಯಿಂದ ಹಿಡಿದು ಕೊಯ್ಲಿನವರೆಗೂ ಯಂತ್ರಸಾಧನಗಳನ್ನೇ ಸಂಪೂರ್ಣವಾಗಿ ಬಳಸಲಾಗುತ್ತದೆ.

ಇಳುವರಿ: ಖುಷ್ಕಿ ಬೆಳೆಯಾಗಿ ಕೃಷಿ ಮಾಡಿದ ಗೋದಿಯ ಇಳುವರಿ ಎಕರೆಗೆ 250 ಕಿಗ್ರಾಂ ಯಿಂದ ಹಿಡಿದು 500 ಕಿಗ್ರಾಂಯ ವರೆಗೆ ವ್ಯತ್ಯಾಸವಾಗುತ್ತದೆ. ನೀರಾವರಿ ಮಾಡಿದ ಭೂಮಿಗಳಲ್ಲಿ ಇಳುವರಿ ದ್ವಿಗುಣಗೊಳ್ಳುತ್ತದೆ.

ಗೋದಿಯನ್ನು ಶುಚಿಯಾದ ತಂಪಾದ ಮತ್ತು ಒಣಗಿರುವ ಸ್ಥಳಗಳಲ್ಲಿ ಯಾವ ಅಪಾಯವೂ ಇಲ್ಲದೆ ಸಂಗ್ರಹಿಸಿಡಬಹುದು. ಆದರೆ ಇಂಥ ಸ್ಥಳಗಳ ಅಭಾವವಿರುವೆಡೆ ಗೋದಿ ಸಂಗ್ರಹಣೆ ಒಂದು ಮುಖ್ಯ ಸಮಸ್ಯೆ. ಉಷ್ಣತೆ ಹೆಚ್ಚಾಗಿರುವ ಸ್ಥಳಗಳಲ್ಲಿ ಕೀಟಗಳ

ಒಕ್ಕಣೆಗೆ ಮೊದಲು ಕೊಯ್ಲಿನ ಶೇಖರಣೆ

ಹಾವಳಿಯ ಸಂಭಾವ್ಯತೆ ಇದ್ದೇ ಇರುತ್ತದೆ. ಭಾರತ ಮುಂತಾದೆಡೆ ಹಗೇವು ಇತ್ಯಾದಿಗಳಲ್ಲಿ ಇಲ್ಲವೆ ಮಣ್ಣಿನ ಗುಡಾಣ ಅಥವಾ ಸೆಣಬು ಇಲ್ಲವೆ ಚಾಪೆಯಿಂದ ಹೆಣೆದು ಮಣ್ಣಿನಿಂದ ಮುಚ್ಚಲಾಗಿರುವ ದೊಡ್ಡ ದೊಡ್ಡ ವಾಡೆಗಳಲ್ಲಿ ಸಂಗ್ರಹಿಸಿಡಲಾಗುವುದು. ಕೆಲವು ಕಡೆ ಸಿಮೆಂಟಿನಿಂದ ನಿರ್ಮಿತವಾಗಿರುವ ಶೇಖರಣಾಲಯಗಳೂ ಉಂಟು. ಆದರೆ ಇಂಥಲ್ಲೆಲ್ಲ ಕೀಟಗಳ ಹಾವಳಿಯನ್ನು ಸಂಪೂರ್ಣವಾಗಿ ನಿವಾರಿಸಲಾಗುವುದಿಲ್ಲ. ಸಂಗೃಹೀತ ಗೋದಿಗೆ ಅಂಟುವ ಕೀಟಗಳಲ್ಲಿ ಕೋಲಿಯಾಪ್ಟರ ಗಣಕ್ಕೆ ಸೇರಿದ ಸೊಂಡಿಲು ಕೀಟಗಳು (ಸೈಟೋಫೈಲಸ್ ಗ್ರನೇರಿಯಸ್, ಒರೈಜೆ, ಎಂಬವು), ಕ್ರಿಪ್ಟೋಲೆಸ್ಟಿಸ್ ಫೆರುಜಿನಿಯಸ್ (ರಸ್ಟಿ ಗ್ರೇನ್ ಬೀಟಲ್), ಟ್ರೋಗೋಡರ್ಮ ಗ್ರನೇರಿಯಮ್ (ಖಪ್ರ ಬೀಟಲ್) , ರೈಜೋಪರ್ತ ಡಾಮಿನಿಕ (ಗ್ರೇನ್ ಬೋರರ್), ಲೆಪಿಡಾಪ್ಟರ ಗಣಕ್ಕೆ ಸೇರಿದ ಪ್ಲಾಡಿಯ ಇಂಟರ್ ಪಂಕ್ಟೆಲ (ಇಂಡಿಯನ್ ಮೀಲ್ ಮಾತ್) ಮುಖ್ಯವಾದವು. ಕೀಟನಾಶಕಗಳ ಬಳಕೆಯಿಂದ ಶೇಖರಣಾಗಾರವನ್ನು ಶುಚಿಯಾಗಿಡುವುದರಿಂದ ಇವನ್ನು ನಿವಾರಿಸಬಹುದು. ಕೀಟಗಳಲ್ಲದೆ ಸಂಗೃಹೀತ ಗೋದಿಗೆ ಹಲವಾರು ಬಗೆಯ ಬೂಷ್ಟುಗಳೂ ಅಂಟುವುದುಂಟು. ಅಮೆರಿಕ ಮುಂತಾದೆಡೆ ಗೋದಿಯನ್ನು ಸಂಗ್ರಹಿಸಿಡಲು ವಿಶೇಷ ರೀತಿಯ ಶೇಖರಣಾಗಾರಗಳನ್ನು ನಿರ್ಮಿಸಲಾಗುತ್ತದೆ. ಎಲಿವೇಟರ್ಸ್ ಎಂದು ಕರೆಯಲಾಗುವ ಇವುಗಳಲ್ಲಿ ಗೋದಿಯನ್ನು ಅಗಾಧ ಪರಿಮಾಣದಲ್ಲಿ ಸಂಗ್ರಹಿಸಿಡಬಹುದು.

ಗೋದಿಯ ರೋಗಗಳು : ಗೋದಿಗೆ ಹಲವಾರು ಬಗೆಯ ಬೂಷ್ಟು ರೋಗಗಳ ಕೀಟಪಿಡುಗುಗಳೂ ಅಂಟುತ್ತವೆ. ಇವುಗಳಿಂದ ಇಳುವರಿ ಹಾಗೂ ಉತ್ಪನ್ನದ ಗುಣಮಟ್ಟದಲ್ಲಿ ಗಣನೀಯ ಗಾತ್ರದಲ್ಲಿ ನಷ್ಟವುಂಟಾಗುತ್ತದೆ. ಬೂಷ್ಟು ರೋಗಗಳಲ್ಲಿ ಶಿಲೀಂಧ್ರಗಳಿಂದ ಉಂಟಾಗುವ ತುಕ್ಕು (ರಸ್ಟ್), ಕಾಡಿಗೆ (ಸ್ಮಟ್ ಮತ್ತು ಬಂಟ್), ಮಿಲ್‍ಡ್ಯೂ, ಬೇರಿನ ಕೊಳೆರೋಗ (ರೂಟ್ ರಾಟ್), ಮಚ್ಚೆರೋಗ (ಬ್ಲೈಟ್), ಬ್ಯಾಕ್ಟೀರಿಯಗಳಿಂದ ಉಂಟಾಗುವ ಬ್ಲ್ಯಾಕ್ ಚಾಫ್, ಬ್ಲ್ಯಾಕ್ ಟಿಪ್ ಮತ್ತು ವೈರಸುಗಳಿಂದ ಉಂಟಾಗುವ ಶಬಲ (ಮೊಸಾಯಿಕ್) ರೋಗಗಳು ಮುಖ್ಯವಾದವು.

ತುಕ್ಕುರೋಗ : ಪಕ್ಸೀನಿಯ ಎಂಬ ಶಿಲೀಂಧ್ರ ಜಾತಿಯ ವಿವಿಧ ಪ್ರಭೇದಗಳಿಂದ ಉಂಟಾಗುವ ರೋಗ ಇದು. ಇದರಲ್ಲಿ ಕಾಂಡ ತುಕ್ಕು ಇಲ್ಲವೆ ಕಪ್ಪು ತುಕ್ಕು (ಸ್ಟೆಮ್ ರಸ್ಟ್), ಎಲೆತುಕ್ಕು ಇಲ್ಲವೆ ಕಂದು ತುಕ್ಕು (ಲೀಫ್ ರಸ್ಟ್) ಮತ್ತು ಪಟ್ಟೆ ತುಕ್ಕು ಇಲ್ಲವೆ ಹಳದಿ ತುಕ್ಕು (ಸ್ಟ್ರೈಪ್ ಅಥವಾ ಯೆಲೋ ರಸ್ಟ್) ಎಂಬ ಮೂರು ಬಗೆಗಳಿವೆ.

ಕಾಂಡ ತುಕ್ಕು ರೋಗ : ಇದು ಪಕ್ಸೀನಿಯ ಗ್ರಾಮಿನಿಸ್ ಪ್ರಭೇದದ ಟ್ರಿಟಿಸೈ ಎಂಬ ಬಗೆಯಿಂದ ಬರುತ್ತದೆ. ಇದು ಗೋದಿಯ ರೋಗಗಳಲ್ಲೆಲ್ಲ ಅತ್ಯಂತ ಮುಖ್ಯವಾದುದು ಹಾಗೂ ಗೋದಿ ಇಳುವರಿಯ ನಷ್ಟದ ಬಹುಪಾಲಿಗೆ ಕಾರಣವಾದುದು. ಈ ರೋಗದ ಮುಖ್ಯಲಕ್ಷಣಗಳಿವು; ಮುಖ್ಯವಾಗಿ ಕಾಂಡ ಹಾಗೂ ಎಲೆ ಹೊದಿಕೆಗಳ ಮೇಲೆ ಮತ್ತು ಸ್ವಲ್ಪಮಟ್ಟಿಗೆ ಎಲೆಯ ಅಲಗು, ಹೂವಿನ ವೃಂತಪತ್ರಗಳ ಮೇಲೆ, ಕೆಂಗಂದು ಬಣ್ಣದ, ಅಂಡಾಕಾರದ, ದೂಳುಮಯವಾದ ವ್ರಣಗಳು ಉಂಟಾಗುತ್ತವೆ. ಗೋದಿಗಿಡ ಬಲಿಯುತ್ತ ಬಂದಂತೆ ಇವು ಕಪ್ಪುಬಣ್ಣವನ್ನು ತಳೆಯುತ್ತವೆ. ಗಿಡ ಬರಬರುತ್ತ ಕರ್ರಗಾಗಿ ಒರಟಾಗಿ ಒಣಗಿಹೋಗುತ್ತದೆ. ಕಾಳುಗಳು ಮುರುಟಿಕೊಂಡಿರುತ್ತವೆ. ವ್ರಣಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಅವುಗಳ ತುಂಬ ಕಂದುಬಣ್ಣದ ಬೀಜಾಣುಗಳು (ಯುರಿಡೋಸ್ಪೋರ್ಸ್) ಇರುವುದು ಕಂಡುಬರುತ್ತದೆ. ಶಿಲೀಂಧ್ರ ಉತ್ಪತ್ತಿಮಾಡುವ ಒಟ್ಟು 5 ಬಗೆಯ ಬೀಜಾಣುಗಳಲ್ಲಿ ಇವು ಒಂದು ರೀತಿಯವು. ಇವು ಆತಿಥೇಯ ಗಿಡದಿಂದ ಉದುರಿ ಗಾಳಿಯ ಮೂಲಕ ಹರಡಿ ಅನುಕೂಲ ವಾತಾವರಣದಲ್ಲಿ (ಹೆಚ್ಚಿನ ಆರ್ದ್ರತೆ ಮತ್ತು ಉಷ್ಣತೆ) ಬೇರೆ ಆರೋಗ್ಯವಂತ ಗೋದಿ ಗಿಡಗಳಿಗೆ ಅಂಟುತ್ತವೆ. ಅನೇಕ ಬಾರಿ ಈ ಬೀಜಾಣುಗಳ ಉತ್ಪತ್ತಿ ನಡೆಯುವುದರಿಂದ ರೋಗ ಬಲುಬೇಗ ಹಬ್ಬಿ ಸಾಂಕ್ರಾಮಿಕವಾಗುತ್ತದೆ. ಸಾಮಾನ್ಯವಾಗಿ ಬೇಸಗೆಯಲ್ಲಿ (ಮಳೆಗಾಲವೂ ಸೇರಿದಂತೆ) ಇವುಗಳ ಉತ್ಪತ್ತಿ ಮತ್ತು ಹಾವಳಿ ಹೆಚ್ಚು. ಚಳಿಗಾಲದ ವೇಳೆಗೆ ಬೇರೆ ಬಗೆಯ ಬೀಜಾಣುಗಳ ಉತ್ಪಾದನೆ ಆರಂಭವಾಗುತ್ತದೆ. ಇವಕ್ಕೆ ಟೆಲ್ಯೂಟೊಸ್ಪೋರ್ಸ್ ಎಂದು ಹೆಸರು. ಇವುಗಳ ಬಣ್ಣ ಕಪ್ಪು. ಅತ್ಯುಗ್ರ ಚಳಿಯನ್ನು ತಡೆಯುವ ಸಾಮರ್ಥ್ಯ ಇವಕ್ಕಿದೆ. ಇವು ಸಾಮಾನ್ಯವಾಗಿ ಕಟಾಯಿಸಿದ ಗೋದಿಹುಲ್ಲಿನ ಮೇಲೆಯೇ ಇದ್ದು ಚಳಿಗಾಲವನ್ನು ಕಳೆದು, ವಸಂತ ಋತುವಿನಲ್ಲಿ ಮೊಳೆತು ಮೂರನೆಯ ಬಗೆಯ (ಸ್ಪೊರಿಡಿಯ) ಬೀಜಾಣುಗಳನ್ನು ಉತ್ಪಾದಿಸುತ್ತವೆ; ಈ ಬಗೆಯ ಬೀಜಾಣುಗಳು ಗೋದಿಗಿಡಕ್ಕೆ ಅಂಟಲಾರವು. ಆದರೆ ಬಾರ್ಬೆರಿ ಎಂಬ ದ್ವಿದಳ ಸಸ್ಯವನ್ನು ಸೇರಿಕೊಂಡು ತಮ್ಮ ಜೀವನಚಕ್ರದ ಲೈಂಗಿಕ ಹಂತವನ್ನು ಕಳೆಯುತ್ತವೆ. ಇದರ ಫಲವಾಗಿ ಉತ್ಪತ್ತಿಯಾಗುವ ಬೀಜಾಣುಗಳು ಮತ್ತೆ ಗೋದಿ ಬೆಳೆಯನ್ನು ಹೊಕ್ಕು ರೋಗವನ್ನು ಆರಂಭಿಸುತ್ತವೆ.

ಎಲೆತುಕ್ಕುರೋಗ : ಪಕ್ಸೀನಿಯ ರಿಕಂಡಿಟ ಎಂಬ ಶಿಲೀಂಧ್ರದಿಂದ ಬರುವ ರೋಗ ಇದು. ಪ್ರಪಂಚಾದ್ಯಂತ ಇದರ ಹಾವಳಿ ಇದ್ದರೂ ಆರ್ದ್ರತೆ ಹೆಚ್ಚಾಗಿರುವೆಡೆ ಬಹಳ ಪ್ರಬಲವಾಗಿ ಸಾಂಕ್ರಾಮಿಕದ ರೂಪದಲ್ಲಿ ಹೊಮ್ಮುತ್ತದೆ. ಇದರ ವ್ಯಾಪ್ತಿ ಕಾಂಡ ತುಕ್ಕುರೋಗದ್ದಕ್ಕಿಂತ ಹೆಚ್ಚು. ವಾತಾವರಣದ ಆರ್ದ್ರತೆ ಮತ್ತು ಉಷ್ಣತೆ ಹೆಚ್ಚಾಗಿದ್ದು ಆಗಿಂದಾಗ್ಗೆ ಮಂಜು ಅಥವಾ ಮಳೆ ಬೀಳುತ್ತಿದ್ದರೆ ಈ ರೋಗದ ಹಾವಳಿ ಹೆಚ್ಚು. ಎಲೆಗಳ ಅಲಗಿನ ಮೇಲೆ ಮತ್ತು ಸ್ವಲ್ಪಮಟ್ಟಿಗೆ ಕಾಂಡ, ಪುಷ್ಪವೃಂತಪತ್ರ ಇವುಗಳ ಮೇಲೆ ಕಿತ್ತಳೆ ಮಿಶ್ರಿತ ಕಂದುಬಣ್ಣದ ದೂಳಿನಿಂದ ಕೂಡಿದ ಮತ್ತು ವೃತ್ತಾಕಾರದ ಇಲ್ಲವೆ ಅಂಡಾಕಾರದ

ವ್ರಣಗಳೇಳುತ್ತವೆ. ಗಿಡಗಳು ಪ್ರಬುದ್ಧಾವಸ್ಥೆಗೆ ಬಂದಂತೆ ವ್ರಣಗಳು ಕಪ್ಪುಬಣ್ಣಕ್ಕೆ ತಿರುಗುತ್ತವೆ. ರೋಗಕಾರಕ ಶಿಲೀಂಧ್ರದ ಜೀವನಚಕ್ರ ಕಾಂಡತುಕ್ಕುರೋಗದ ಶಿಲೀಂಧ್ರದಂತೆಯೇ ಇದೆ. ಆದರೆ ಇದರ ಲೈಂಗಿಕ ಹಂತ ಮಾತ್ರ ಥ್ಯಾಲಿಕ್ಟ್ರಮ್ ಎಂಬ ಗಿಡದಲ್ಲಿ ನಡೆಯುತ್ತದೆ.

ಹಳದಿ ತುಕ್ಕುರೋಗ : ಅಮೆರಿಕ, ಉತ್ತರ ಯುರೋಪು, ಉತ್ತರ ಏಷ್ಯ ಮುಂತಾದೆಡೆಗಳ ಉನ್ನತ ಪ್ರದೇಶಗಳಲ್ಲೂ ಭಾರತದಲ್ಲೂ ಆಫ್ರಿಕದಲ್ಲಿನ ಬೆಟ್ಟಸೀಮೆಗಳಲ್ಲೂ ಈ ರೋಗದ ಹಾವಳಿ ಹೆಚ್ಚು. ಈ ರೋಗ ಪಕ್ಸೀನಿಯ ಗ್ಲೂಮೇರಮ್ ಎಂಬ ಶಿಲೀಂಧ್ರದಿಂದ ಉಂಟಾಗುತ್ತದೆ. ರೋಗ ಅಂಟಿದ ಮೊದಲ ಹಂತಗಳಲ್ಲಿ ಎಲೆಗಳಲ್ಲಿನ ನಾಳಗಳ ಮಧ್ಯೆ ಹಲವಾರು ಸಾಲುಗಳಲ್ಲಿ ನಿಂಬೆಹಣ್ಣಿನ ಬಣ್ಣದ ಸಣ್ಣ ವ್ರಣಗಳೇಳುತ್ತವೆ. ಬರಬರುತ್ತ ಇವೆಲ್ಲವೂ ಒಂದುಗೂಡಿಕೊಂಡು ಹಳದಿ ಬಣ್ಣದ ಪಟ್ಟೆಗಳಾಗುತ್ತವೆ. ಇದರ ಜೀವನಚಕ್ರವೂ ಕಾಂಡತುಕ್ಕುರೋಗದ್ದರಂತೆಯೇ ಇದೆ. ಆದರೆ ಇದರ ಪರ್ಯಾಯ ಆತಿಥೇಯ ಸಸ್ಯ ದ್ವಿದಳಸಸ್ಯವಾಗಿರದೆ ಬೇರೊಂದು ರೀತಿಯ ಹುಲ್ಲು ಆಗಿದೆ.

ತುಕ್ಕುರೋಗಗಳನ್ನು ತಡೆಗಟ್ಟಲು ಕೆಲವು ಬಗೆಯ ರಾಸಾಯನಿಕಗಳನ್ನು ಬಳಸುವ ಕ್ರಮ ಕೆಲವೆಡೆಯಿದೆ. ಆದರೆ ಇದು ಹೆಚ್ಚು ಖರ್ಚಿನದು. ಅಲ್ಲದೆ ಈ ಕ್ರಮದಿಂದ ರೋಗವನ್ನು ಸಂಪೂರ್ಣವಾಗಿ ನಿರೋಧಿಸಲು ಸಾಧ್ಯವಿಲ್ಲ. ಇದರಿಂದ ರೋಗನಿರೋಧ ಸಾಮರ್ಥ್ಯವಿರುವ ಗೋದಿ ತಳಿಗಳನ್ನು ತಳೀಕರಣವಿಧಾನಗಳಿಂದ ಅಭಿವೃದ್ಧಿಪಡಿಸಿ ಬೆಳೆಸುವ ಕ್ರಮವೇ ಹೆಚ್ಚು ವಾಡಿಕೆಯಲ್ಲಿದೆ. ಹೀಗೆ ಪಡೆದ ತಳಿಗಳೆಲ್ಲ ಎಲ್ಲ ಬಗೆಯ ತುಕ್ಕುರೋಗಗಳನ್ನೂ ನಿರೋಧಿಸುವ ಸಾಮರ್ಥ್ಯವನ್ನು ಪಡೆಯದಿರಬಹುದು. ಅಲ್ಲದೆ ರೋಗಕಾರಕ ಶಿಲೀಂಧ್ರವೂ ಕಾಲಕಾಲಕ್ಕೆ ಸ್ವಾಭಾವಿಕ ತಳೀಕರಣಕ್ಕೊಳಗಾಗುತ್ತಿದ್ದು ವಿವಿಧ ಬಗೆಗಳಾಗಿ ರೂಪು ತಳೆಯುತ್ತಿರುತ್ತದೆಯಾಗಿ ಹೊಸ ಗೋದಿತಳಿಗಳು ಮತ್ತೆ ಮತ್ತೆ ರೋಗಕ್ಕೆ ಈಡಾಗುವ ಸಂಭಾವ್ಯತೆ ಇದ್ದೇ ಇದೆ. ಈ ಕಾರಣಗಳಿಂದ ಒಂದು ವರ್ಷ ಪಡೆಯಲಾದ ಮತ್ತು ಬಹುಪಾಲು ರೀತಿಯ ತುಕ್ಕುರೋಗಗಳಿಗೆ ನಿರೋಧ ಸಾಮರ್ಥ್ಯ ಪಡೆದಿರುವ ಗೋದಿ ತಳಿ ಕೆಲವಾರು ವರ್ಷಗಳಲ್ಲಿ ಹೊಸ ತಳಿಯ ತುಕ್ಕುರೋಗಕ್ಕೆ ತುತ್ತಾಗಬಹುದು. ಆದರೂ ಅಮೆರಿಕ, ಕೆನಡ, ಮೆಕ್ಸಿಕೊ, ಭಾರತ ಮುಂತಾದ ದೇಶಗಳಲ್ಲಿ ಈ ದಿಸೆಯಲ್ಲಿ ಅನೇಕ ಗಮನಾರ್ಹ ಹಾಗೂ ಯಶಸ್ವೀ ಪ್ರಯತ್ನಗಳು ನಡೆಯುತ್ತಿದ್ದು ಇವುಗಳ ಫಲವಾಗಿ ಅಮೆರಿಕದಲ್ಲಿ ಹೋಪ್, ಎಚ್-44, ಸೆರೆಸ್, ನ್ಯೂತ್ಯಾಚ್, ಆಸ್ಟಿನ್, ರೆಡ್‌ಕೋಟ್, ವೈಟ್ ಫೆಡರೇಷನ್, ರಮೋನ-50, ಲೆಮಿ-53, ಪೋಸೋ-48, ಲ್ಯಾಂಗ್‌ಡನ್, ಯೂಮ; ಕೆನಡದಲ್ಲಿ ಏಪೆಕ್ಸ್, ರಿನೌನ್, ರೀಜೆಂಟ್, ಸೆಲ್‌ಕರ್ಕ್; ಮೆಕ್ಸಿಕೊದಲ್ಲಿ ಚಾಪಿಂಗೋ-52, ಮೇಯೋ-52, ಮತ್ತು-52ಎ, ಮೆಕ್ಸಿ-53, ಯಕ್ವಾನ-53, ಕ್ಯಾಜೀಮೆ-53, ಗ್ಯಾಬೊ-53, ನರೀನೋ-58, ನಾಯ್ನಾರಿ-60, ಭಾರತದಲ್ಲಿ ಎನ್ ಪಿ-4, ಎನ್ ಪಿ -52, ಎನ್ ಪಿ-265, ಎನ್ ಪಿ 789, ಎನ್ ಪಿ 790, ಎನ್ ಪಿ-809, ಎನ್ ಪಿ-829, (ಇವುಗಳ ಜೊತೆಗೆ ಬಿಹಾರದಲ್ಲಿ ವೃದ್ಧಿಸಲಾದ ಬಿಆರ್-319, ಉತ್ತರ ಪ್ರದೇಶದ ಕಾನ್ಪುರ-13, ಮಧ್ಯ ಪ್ರದೇಶದಲ್ಲಿ ಎ-090 ಮತ್ತು ಎ115ಗಳೂ ಉಂಟು); ಚೀನದಲ್ಲಿ ತ್ಸಾವೊ-ಯಾಂಗ್, ಚಿನ್-ಟ-4197, ಯುಂಗ್ 1 ಮತ್ತು ನುಂಗ್ ಟ-6; ಜಪಾನಿನಲ್ಲಿ ನೋರಿನ್ -50, ನೋರಿನ್-69; ಅರ್ಜಂಟೀನದಲ್ಲಿ ಕ್ಲೈನ್ ಕೊಮೀಟ, ಕ್ಲೈನ್‌ಪೆಟಿಸೊ, ಓಲೀಟ ರಂಬೊ, ಪೆರ್ಗಮೀನೊ ಗ್ಯಾಬೊಟೊ ಮ್ಯಾಗ್, ಆಸ್ಟ್ರೇಲಿಯದಲ್ಲಿ ಫೆಡರೇಷನ್, ಫ್ಲಾರೆನ್ಸ್, ಫೆಸ್ಟಿವಲ್, ಯುರೇಕ, ಗ್ಯಾಬೊ, ಮೆಂಗಾವಿ, ವಾರಿಗೊ, ಗ್ಲೆನ್‌ವಾರಿ, ಡವೆರಿನ್, ಮೂರ, ಸ್ವಾಕೇಡ್ ಮುಂತಾದವು ರೋಗನಿರೋಧಕ ತಳಿಗಳಲ್ಲಿ ಮುಖ್ಯವೆನಿಸಿವೆ.

ಬಂಟ್ ಮತ್ತು ಕಾಡಿಗೆ ರೋಗಗಳು : ಟಿಲೀಷಿಯ ಕೇರಿಸ್, ಟಿ.ಫೀಟಿಡ, ಟಿ.ಇಂಡಿಕ, ಯೂರೋಸಿಸ್ಟಿಸ್ ಟ್ರಿಟಿಸೈ ಮತ್ತು ಯುಸ್ಟಿಲ್ಯಾಗೊ ಟ್ರಿಟಿಸೈ ಮುಂತಾದ ಶಿಲೀಂಧ್ರಗಳಿಂದ ಉಂಟಾಗುವ ರೋಗಗಳಿವು. ಮೊದಲ ಮೂರು ಬಗೆಗಳಿಂದ ಉಂಟಾಗುವ ರೋಗಗಳಿಗೆ ಬಂಟ್ ರೋಗಗಳೆಂಬ ಹೆಸರಿದೆ. ರೋಗಪೀಡಿತ ಗಿಡಗಳು ಗಾತ್ರದಲ್ಲಿ ಆರೋಗ್ಯವಂತ ಗಿಡಗಳಿಗಿಂತ ಕುಳ್ಳಾಗಿರುತ್ತವೆ. ಕಾಳುಗಳ ಬದಲಿಗೆ ಶಿಲೀಂಧ್ರದ ಕರಿಯ ಬೀಜಾಣುಗಳಿಂದ ತುಂಬಿರುವ ಹಸುರು ಮಿಶ್ರಿತ ನೀಲಿಬಣ್ಣದ ಸಣ್ಣಸಣ್ಣ ಉಂಡೆಗಳಿರುತ್ತವೆ. ಕಾಳುಗಳನ್ನು ಒಕ್ಕುವಾಗ ಈ ಉಂಡೆಗಳು ಒಡೆದು ಆರೋಗ್ಯವಂತ ಕಾಳುಗಳ ಮೈಗೆ ಅಂಟಿಕೊಳ್ಳುತ್ತವೆ. ಇಂಥ ಕಾಳುಗಳನ್ನು ಬಿತ್ತಿದಾಗ ಅವು ಮೊಳೆಯುವ ಕಾಲದಲ್ಲಿ ಬೀಜಾಣುಗಳೂ ಮೊಳೆತು ಎಳೆಯ ಸಸಿಗಳ ದೇಹವನ್ನು ಹೊಗುತ್ತವೆ. ಗೋದಿಯ ಸಸಿಗಳು ಬೆಳೆದಂತೆಲ್ಲ ಶಿಲೀಂಧ್ರವೂ ದೇಹದೊಳಗೆ ವ್ಯಾಪಿಸುತ್ತ ಬಂದು ಕೊನೆಗೆ ತೆನೆ ಹುಟ್ಟುವ ವೇಳೆಗೆ ಅಂಡಾಶಯಗಳನ್ನು ಸೇರಿ ಮತ್ತೆ ಬೀಜಾಣುಗಳನ್ನು ಉತ್ಪಾದಿಸುತ್ತದೆ. ಕಾಡಿಗೆ ರೋಗಗಳು ಯೂರೋಸಿಸ್ಟಿಸ್ ಮತ್ತು ಯುಸ್ಟಿಲ್ಯಾಗೋಗಳಿಂದ ಉಂಟಾಗುತ್ತವೆ. ಭಾರತ, ಆಸ್ಟ್ರೇಲಿಯ, ಚೀನ, ದಕ್ಷಿಣ ಆಫ್ರಿಕ ಮುಂತಾದೆಡೆಗಳಲ್ಲಿ ಇವುಗಳ ಹಾವಳಿ ಹೆಚ್ಚು. ಯೂರೋಸಿಸ್ಟಿಸ್ ಟ್ರಿಟಿಸೈನಿಂದ ಉಂಟಾಗುವ ರೋಗಕ್ಕೆ ಫ್ಲ್ಯಾಗ್ ಸ್ಮಟ್ ಎಂಬ ಹೆಸರಿದೆ. ಎಲೆಗಳ ಮೇಲೆ ಮುಖ್ಯವಾಗಿ ಗಿಡದ ತುದಿಯ ಎಲೆಯ (ಫ್ಲ್ಯಾಗ್ ಲೀಫ್) ಮೇಲೆ ಬೂದುಬಣ್ಣದ ಪಟ್ಟೆಗಳು ಕಾಣಿಸಿಕೊಳ್ಳುವುದೇ ಈ ರೋಗದ ಪ್ರಮುಖ ಲಕ್ಷಣ. ಪಟ್ಟೆಗಳನ್ನು ಬಿಡಿಸಿ ನೋಡಿದರೆ ಒಳಗೆ ಕಪ್ಪುಬಣ್ಣದ ಬೀಜಾಣುಗಳು ಗೋಚರಿಸುತ್ತವೆ. ಗಿಡಗಳು ಕುಳ್ಳುಗಾತ್ರದವಾಗುವುದು, ಎಲೆ, ಕಾಂಡ ಹಾಗೂ ತೆನೆಗಳು ತಿರುಚಿಕೊಳ್ಳುವುದು-ಇವು ರೋಗದ ಇತರ ಲಕ್ಷಣಗಳು. ತೆನೆಗಳಲ್ಲಿ ಕಾಳುಗಳೇ ಇರುವುದಿಲ್ಲ. ಯುಸ್ಟಿಲ್ಯಾಗೊ ಟ್ರಿಟಿಸೈನಿಂದ ಬರುವ ರೋಗಕ್ಕೆ ಲೂಸ್‌ಸ್ಮಟ್ ಎಂದು ಹೆಸರು. ಇದು ಕೂಡ ತೆನೆಯಲ್ಲಿ ಮಾತ್ರ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ತೆನೆಯಲ್ಲಿ ಕಾಳುಗಳ ಬದಲು ಕಂದುಬಣ್ಣದ ಬೀಜಾಣುಗಳಿಂದ ಕೂಡಿದ ಉಂಡೆಗಳಿರುತ್ತವೆ. ಉಂಡೆಗಳ ಸುತ್ತ ತೆಳುವಾದ ಪೊರೆಯ ಆವರಣವಿದ್ದು ಇದು ಕ್ರಮೇಣ ಬಿರಿದು ಬೀಜಾಣುಗಳನ್ನು ಹೊರಸೂಸುತ್ತದೆ. ಆಗ ಕಾಳುಗಳಿರುವ ಕಡೆಗಳಲ್ಲೆಲ್ಲ ಬರಿಯ ರೇಕಿಸ್ ಕಡ್ಡಿ ಮಾತ್ರ ಉಳಿಯುತ್ತದೆ. ಬೀಜಾಣುಗಳು ಗಾಳಿಯ ಮೂಲಕ ಪ್ರಸಾರವಾಗಿ ಬೇರೆ ಆರೋಗ್ಯವಂತ ಗೋದಿಗಿಡಗಳ ಹೂಗಳ ಮೇಲೆ ಬಿದ್ದು, ಮೊಳೆತು, ಶಿಲೀಂಧ್ರ ದೇಹವಾದ ಮೈಸೀಲಿಯಗಳಾಗಿ ಕವಲೊಡೆಯುತ್ತವೆ. ಕ್ರಮೇಣ ಕಾಳು ಬಲಿತು ಅದರ ಒಳಗಿನ ಭ್ರೂಣ ಸುಪ್ತಾವಸ್ಥೆಗೆ ಬಂದಂತೆ ಮೈಸೀಲಿಯ ಕೂಡ ಸುಪ್ತವಾಗುತ್ತದೆ. ಇಂಥ ಬೀಜಗಳನ್ನು ಬಿತ್ತಿದರೆ ಸಸಿ ಹುಟ್ಟುವಾಗ ಶಿಲೀಂಧ್ರವೂ ಕಾರ್ಯಶೀಲವಾಗಿ ಮತ್ತೆ ಬೀಜಾಣುಗಳನ್ನು ಉತ್ಪಾದಿಸುತ್ತದೆ.

ಬಂಟ್ ಮತ್ತು ಕಾಡಿಗೆ ರೋಗಗಳೆಲ್ಲವೂ ಬೀಜಗಳ ಮೂಲಕ ಹಬ್ಬುವುದರಿಂದ ಬೀಜಗಳನ್ನು ಫಾರ್ಮಲಿನ್, ಮೈಲುತುತ್ತ, ಪಾದರಸಯುಕ್ತ ರಾಸಾಯನಿಕಗಳು-ಮುಂತಾದವುಗಳಿಂದ ಸಂಸ್ಕರಿಸುವುದರಿಂದ ಇಲ್ಲವೆ ಬಿಸಿನೀರಿನಲ್ಲಿ (75° ಫ್ಯಾ. ಉಷ್ಣತೆಯಿರುವ) ಎರಡು ಗಂಟೆಗಳ ಕಾಲ ನೆನೆಯಿಟ್ಟು ಅನಂತರ 70° ಫ್ಯಾ. ಉಷ್ಣತೆಯಲ್ಲಿ 72 ಗಂಟೆಗಳ ಕಾಲ ಅಥವಾ 90° ಫ್ಯಾ. ಉಷ್ಣತೆಯಲ್ಲಿ 30 ಗಂಟೆಗಳ ಕಾಲ ವಾಯುಬಂಧಕಸ್ಥಿತಿಯಲ್ಲಿ ಪ್ಲಾಸ್ಟಿಕ್ ಚೀಲಗಳಲ್ಲಿ ಕಟ್ಟಿಟ್ಟು ಅನಂತರ ಮೊಳೆಯಿಸುವುದರಿಂದ ರೋಗದ ಹಾವಳಿಯನ್ನು ತಡೆಗಟ್ಟಬಹುದು. ರೋಗ ನಿರೋಧಕ ತಳಿಗಳನ್ನು ಅಭಿವೃದ್ಧಿಪಡಿಸಿ ಬೆಳೆಸುವುದರಿಂದಲೂ ಬೆಳೆಗಳ ಪರ್ಯಾಯಕ್ರಮದಿಂದಲೂ ಕಾಡಿಗೆ ರೋಗವನ್ನು ನಿಯಂತ್ರಿಸಬಹುದು.

ಮಿಲ್‌ಡ್ಯೂ: ಇದರಲ್ಲಿ ಎರಿಸೈಫೆ ಗ್ರಾಮಿನಿಸ್ ಮತ್ತು ಸ್ಕ್ಲೀರಾಸ್ಪೋರ ಮ್ಯಾಕ್ರೋಸ್ಪೊರ ಎಂಬ ಎರಡು ರೀತಿಯ ಶಿಲೀಂಧ್ರಗಳಿಂದ ಉಂಟಾಗುವ ಪೌಡರಿ ಮಿಲ್‌ಡ್ಯೂ ಮತ್ತು ಡೌನಿ ಮಿಲ್‌ಡ್ಯೂ ಎಂಬ ಎರಡು ಬಗೆಗಳುಂಟು. ಎಲೆ ಅಥವಾ ಕಾಂಡಗಳ ಮೇಲೆ ಬಿಳಿಯ ಇಲ್ಲವೆ ಬೂದಿ ಬಣ್ಣದ ಪುಡಿಯಿಂದ ಕೂಡಿದ ಗಾಯಗಳಾಗುತ್ತವೆ. ಪೀಡಿತಭಾಗಗಳು ಕಾಲಕ್ರಮೇಣ ಹಳದಿ ಅಥವಾ ಕಂದುಬಣ್ಣಕ್ಕೆ ತಿರುಗುತ್ತದೆ. ಗಿಡಗಳೆಲ್ಲ ಕುಂಠಿತವಾಗುತ್ತವೆ. ಎಲೆಗಳು ಬಾಡುತ್ತವೆ. ಡೌನಿ ಮಿಲ್‌ಡ್ಯೂ ರೋಗದಲ್ಲಿ ತೆನೆಯಿಂದ ಎಲೆಗಳಂಥ ರಚನೆಗಳು ಹೊರಚಾಚಿ ಬೆಳೆಯುವುದುಂಟು. ರೋಗಕಾರಕ ಶಿಲೀಂಧ್ರಗಳ ಬೀಜಾಣುಗಳು ಮಣ್ಣಿನಲ್ಲಿ ಇಲ್ಲವೆ ಕಟಾಯಿಸಿದ ಗೋದಿಗಿಡಗಳಲ್ಲಿ ಬಹುಕಾಲ ಬದುಕಿರಬಲ್ಲವು. ಗೋದಿ ಬಿತ್ತನೆಯ ಕಾಲದಲ್ಲಿ ಇವು ಕೂಡ ಕ್ರಿಯಾಶೀಲವಾಗಿ ಹೊಸದಾಗಿ ಹುಟ್ಟಿದ ಸಸಿಗಳನ್ನು ಆಕ್ರಮಿಸುತ್ತವೆ. ಮೋಡದಿಂದ ಕೂಡಿದ ತಂಪಾದ ಮತ್ತು ಆರ್ದ್ರತೆ ಹೆಚ್ಚಾಗಿರುವ ಪರಿಸ್ಥಿತಿ ರೋಗದ ಹಬ್ಬುವಿಕೆಗೆ ಬಹಳ ಸಹಾಯಕಾರಿ. ರೋಗ ನಿರೋಧಕ ಸಾಮರ್ಥ್ಯವಿರುವ ತಳಿಗಳನ್ನು ಬೆಳೆಸುವುದರಿಂದ, ಬೆಳೆಗಳ ಪರ್ಯಾಯ ಕ್ರಮದಿಂದ ಮತ್ತು ನೆಲವನ್ನು ಸೂಕ್ತವಿಧಾನಗಳಿಂದ ಹದಗೊಳಿಸಿ ಬಿತ್ತನೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

ಬೇರಿನ ಕೊಳೆರೋಗ : ಉತ್ತರ ಅಮೆರಿಕ, ಆಸ್ಟ್ರೇಲಿಯ, ದಕ್ಷಿಣ ಅಮೆರಿಕ, ಯುರೋಪು, ಆಫ್ರಿಕ ಮತ್ತು ಏಷ್ಯದ ವಿವಿಧ ಭಾಗಗಳಲ್ಲೆಲ್ಲ ಇದರ ವ್ಯಾಪ್ತಿಯಿದೆ. ಹೆಲ್ಮಿಂತೋಸ್ಪೋರಿಯಮ್ ಮತ್ತು ಫ್ಯೂಸೇರಿಯಮ್ ಎಂಬ ಶಿಲೀಂಧ್ರಗಳ ವಿವಿಧ ಪ್ರಭೇದಗಳಿಂದ ಉಂಟಾಗುತ್ತದೆ. ಗೋದಿಗಿಡಗಳ ಬೇರು ಭಾಗವೆಲ್ಲ ಶಿಲೀಂಧ್ರದ ಮೈಸೀಲಿಯದಿಂದ ಆಕ್ರಮಿತವಾಗಿ ಕೊಳೆತು ಹೋಗುತ್ತದೆ. ಮೊಳೆಯುವಿಕೆಯ ಹಂತದಿಂದ ಮೊದಲುಗೊಂಡು ಗಿಡದ ಯಾವ ವಯಸ್ಸಿನಲ್ಲಾದರೂ ಈ ರೋಗ ಬರಬಹುದು. ಬೀಜ ಮೊಳೆಯುವಾಗಲೇ ರೋಗ ಅಂಟಿದರೆ ಸಸಿಗಳು ನೆಲದಿಂದ ಮೇಲಕ್ಕೇ ಬರದೆ ಸತ್ತುಹೋಗುತ್ತವೆ. ಅನಂತರ ರೋಗ ಅಂಟಿದರೆ ಗಿಡದ ಬುಡಭಾಗ, ಎಲೆಗಳು, ಬೇರುಗಳು ಕಂದುಬಣ್ಣಕ್ಕೆ ತಿರುಗಿ ಕೊಳೆಯುತ್ತ ಹೋಗುತ್ತವೆ. ರೋಗನಿರೋಧಕ ತಳಿಗಳನ್ನು ಬೆಳೆಸುವುದರಿಂದಲೂ ಬೆಳೆಗಳ ಪರ್ಯಾಯ ಕ್ರಮವನ್ನು ಅನುಸರಿಸುವುದರಿಂದಲೂ ಬೇರಿನ ಕೊಳೆರೋಗವನ್ನು ನಿಯಂತ್ರಿಸಬಹುದು. ಪಾದರಸಯುಕ್ತ ರಾಸಾಯನಿಕಗಳನ್ನು ಬಳಸುವುದರಿಂದ ಕೂಡ ರೋಗವನ್ನು ತಡೆಯಬಹುದು.

ಬ್ಯಾಕ್ಟೀರಿಯಗಳಿಂದ ಉಂಟಾಗುವ ರೋಗಗಳು. 1 ಬ್ಲ್ಯಾಕ್‌ಚಾಫ್: ಕ್ಸಾಂತೋಮೊನಾಸ್ ಟ್ರಾನ್ಸ್‌ಲೂಸೆನ್ಸ್ ಎಂಬ ಬ್ಯಾಕ್ಟೀರಿಯದಿಂದ ಉಂಟಾಗುವ ಈ ರೋಗ ಗೋದಿಯ ಎಲೆ ಹಾಗೂ ಹೂವಿನ ಹೊರಹೊದಿಕೆಗಳನ್ನು ಆಕ್ರಮಿಸುತ್ತದೆ. ಈ ಭಾಗಗಳ ಮೇಲೆ ಕಡುಹಸಿರು ಬಣ್ಣದ ಮತ್ತು ನೀರಿನಿಂದ ನೆನೆದಿರುವಂಥ ಮಚ್ಚೆಗಳು ಮೂಡುತ್ತವೆ. ಕಾಲಕಳೆದಂತೆ ಇವು ಕಂದು ಇಲ್ಲವೆ ಕಪ್ಪುಬಣ್ಣವನ್ನು ತಳೆಯುತ್ತವೆ. ಮಳೆ

ಬೀಳುತ್ತಿದ್ದರೆ ಈ ರೋಗದ ಪ್ರಾಬಲ್ಯ ಹೆಚ್ಚು. ಮಚ್ಚೆಗಳ ಮೂಲಕ ಒಸರುವ ಬ್ಯಾಕ್ಟೀರಿಯ ಕೋಶಗಳು ಗಿಡದಿಂದ ಗಿಡಕ್ಕೆ ಮಳೆಹನಿಗಳ ಸಿಡಿಯುವಿಕೆಯಿಂದ, ಕೀಟಗಳ ಸಹಾಯದಿಂದ ಪ್ರಸಾರವಾಗುತ್ತವೆ. ರೋಗಪೀಡಿತ ಗಿಡಗಳು ಬಾಡಿ ಸತ್ತುಹೋಗುವುದರಿಂದ ಗೋದಿಯ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತದೆ. 2. ಬ್ಲ್ಯಾಕ್ ಚಿಪ್: ಇದು ಸೂಡೊಮೊನಾಸ್ ಅಟ್ರೊಫೇಸಿಯನ್ಸ್ ಎಂಬುದರಿಂದ ಉಂಟಾಗುತ್ತದೆ. ರೋಗನಿರೋಧಕ ತಳಿಗಳನ್ನು ಬೆಳೆಸುವುದರಿಂದ, ಪರ್ಯಾಯ ಬೇಸಾಯ ಕ್ರಮವನ್ನನುಸರಿಸುವುದರಿಂದ ಇವೆರಡು ಬಗೆಯ ರೋಗಗಳನ್ನು ನಿವಾರಿಸಬಹುದು.

ವೈರಸುಗಳಿಂದ ಉಂಟಾಗುವ ಶಬಲ ರೋಗಗಳಲ್ಲಿ ಅನೇಕ ಬಗೆಗಳಿವೆ. ಇವುಗಳಲ್ಲಿ ಬಿಳಿ ಶಬಲ, ಪಟ್ಟೆ ಶಬಲ, ಹಳದಿ ಕುಬ್ಜ ಮುಂತಾದವು ಮುಖ್ಯವಾದವು. ಈ ರೋಗದಿಂದ ನರಳುವ ಗಿಡಗಳು ಸಾಮಾನ್ಯವಾಗಿ ಕುಳ್ಳುಗಾತ್ರದವಾಗಿದ್ದು ವಿಪುಲವಾಗಿ ಕವಲೊಡೆದಿರಬಹುದು ಇಲ್ಲವೆ ಕವಲುಗಳನ್ನೇ ಪಡೆಯದಿರಬಹುದು. ಎಲೆಗಳ ಮೇಲೆ ಮಚ್ಚೆಗಳು, ಪಟ್ಟೆಗಳು, ರೇಖೆಗಳು ಇರುತ್ತವಲ್ಲದೆ ಎಲೆಗಳು ಬಿಳಿಚಿಕೊಂಡಿರುತ್ತವೆ. ತೆನೆಗಳು ಬಲು ಚಿಕ್ಕವಾಗಿರುತ್ತವೆ. ವೈರಸುಗಳು ಸಾಮಾನ್ಯವಾಗಿ ಕೀಟಗಳಿಂದ ಪ್ರಸಾರವಾಗುವುದರಿಂದ ಇಂಥ ಕೀಟಗಳನ್ನು ಪತ್ತೆಹಚ್ಚಿ ಅವನ್ನು ನಾಶಮಾಡುವುದೂ ರೋಗ ನಿರೋಧಕ ಸಾಮರ್ಥ್ಯವಿರುವ ಗೋದಿ ತಳಿಗಳನ್ನು ವೃದ್ಧಿಸುವುದೂ ಶಬಲ ರೋಗ ನಿಯಂತ್ರಣಕ್ಕೆ ಸೂಕ್ತಕ್ರಮಗಳು.

ಗೋದಿಯ ಉಪಯೋಗಗಳು: ಗೋದಿ ಅತ್ಯಂತ ಪುಷ್ಟಿಕರವಾದ ಆಹಾರ ದಿನಸುಗಳಲ್ಲಿ ಒಂದು ಎಂದು ಹೆಸರಾಗಿದ್ದು ಅನೇಕ ಭಕ್ಷ್ಯಗಳ ರೂಪದಲ್ಲಿ ಬಳಕೆಯಾಗುತ್ತಿದೆ. ಗೋದಿಯ ರಾಸಾಯನಿಕ ಸಂಯೋಜನೆ ಈ ರೀತಿ ಇದೆ: ಶೇ. 12.2ಕಚ್ಚಾ ಪ್ರೋಟೀನು, ಶೇ. 1.9 ಕೊಬ್ಬು, ಶೇ. 69.3 ಕಾರ್ಬೊಹೈಡ್ರೇಟು, ಶೇ. 1.9 ನಾರು, ಶೇ. 13.0 ತೇವಾಂಶ ಮತ್ತು ಶೇ. 1.7 ಬೂದಿ. ಇದಲ್ಲದೆ ಗೋದಿಯಲ್ಲಿ ಇ ವಿಟಮಿನ್, ತಯಾಮಿನ್, ರೈಬೊಫ್ಲೇವಿನ್ ಮತ್ತು ನಯಾಸಿನ್ ಮುಂತಾದ ಬಿ ವಿಟಮಿನ್ನುಗಳು, ಪೊಟ್ಯಾಸಿಯಮ್, ಫಾಸ್ಫರಸ್, ಗಂಧಕ, ಮೆಗ್ನೀಸಿಯಮ್, ಕ್ಯಾಲ್ಸಿಯಮ್, ಕಬ್ಬಿಣ, ಅಯೊಡೀನ್ ಮುಂತಾದ ಲೋಹಾಂಶಗಳು ಗಮನಾರ್ಹ ಮೊತ್ತದಲ್ಲಿ ಇವೆ. ಇವುಗಳಲ್ಲಿ ಕೆಲವು ವಸ್ತುಗಳು ಗೋದಿಯನ್ನು ಬೀಸುವಾಗ ನಷ್ಟವಾಗುವ ಸಂಭಾವ್ಯತೆ ಇರುವುದರಿಂದ ಪಾಶ್ಚಾತ್ಯ ದೇಶಗಳಲ್ಲಿ ಗೋದಿಯ ಹಿಟ್ಟಿಗೆ ಬಿ ವಿಟಮಿನ್ನುಗಳನ್ನೂ ಕೆಲವು ಲೋಹಾಂಶಗಳನ್ನೂ ಸೇರಿಸುವ ಕ್ರಮ ಇದೆ. ಕಚ್ಚಾ ಪ್ರೋಟೀನಿನ ಬಹುಪಾಲು ಕಾಳಿನೊಳಗಿರುವ ಭ್ರೂಣಾಹಾರದಲ್ಲಿ ಸ್ಥಿತವಾಗಿದೆ. ಇದರಲ್ಲಿ ಮುಕ್ಕಾಲು ಭಾಗ ಗ್ಲೂಟೆನ್ ಉತ್ಪತ್ತಿಗೆ ಕಾರಣವಾದ ಗ್ಲಿಯಾಡಿನ್ ಮತ್ತು ಗ್ಲೂಟೆನಿನ್ ಎಂಬವುಗಳಿಂದ ಕೂಡಿದೆ. ಗ್ಲೂಟೆನ್, ಗೋದಿಗೆ ಮಾತ್ರ ವಿಶಿಷ್ಟವಾದ ಪ್ರೋಟೀನ್ ಸಂಯುಕ್ತ. ಗೋದಿ ಹಿಟ್ಟನ್ನು ನೀರಿನಲ್ಲಿ ಕಲಸಿ ನಾದಿ ಕೊಂಚ ಹೊತ್ತು ಹಾಗೆಯೇ ಇಟ್ಟಾಗ ಅದು ಪಡೆಯುವ ಜಿಗಟುಗುಣಕ್ಕೆ (ಬನಿ) ಗ್ಲೂಟೆನ್ನೇ ಕಾರಣ. ಈ ಜಿಗಟು ಗುಣದಿಂದಾಗಿ ಚಪಾತಿ, ಸೇವಿಗೆ, ಬ್ರೆಡ್ ಮುಂತಾದವನ್ನು ತಯಾರಿಸಲು ಅನುಕೂಲ.

ಗೋದಿಯನ್ನು ಅದರ ಜಿಗಟು ಲಕ್ಷಣದ ಆಧಾರದ ಮೇಲೆ ಗಡಸು ಗೋದಿ (ಹಾರ್ಡ್ ವೀಟ್) ಮತ್ತು ಮೃದುಗೋದಿ (ಸಾಫ್ಟ್ ವೀಟ್) ಎಂಬ ಎರಡು ಬಗೆಗಳಾಗಿ ವಿಂಗಡಿಸಲಾಗುತ್ತದೆ. ಗಡಸು ಗೋದಿಯಲ್ಲಿ ಗ್ಲೂಟೆನ್ ಮೊತ್ತ ಹೆಚ್ಚಾಗಿರುವುದರಿಂದ ಬನಿಯೂ ಹೆಚ್ಚು. ಟ್ರಿ. ಈಸ್ಟಿವಮ್, ಟ್ರಿ. ಡ್ಯೂರಮ್ ಮುಂತಾದವು ಈ ಬಗೆಯವು. ಚಪಾತಿ, ಬ್ರೆಡ್, ಮ್ಯಾಕರೋನಿ, ಸೇವಿಗೆ ಮುಂತಾದವನ್ನು ತಯಾರಿಸಲು ಇವು ಸೂಕ್ತ ರೀತಿಯವು. ಮೃದುಗೋದಿ ಬಗೆಗಳನ್ನು ಕೇಕ್, ಬಿಸ್ಕತ್ತು, ಸೀರೊಟ್ಟಿ (ಕುಕಿ), ಕ್ರ್ಯಾಕರ್ ಎಂಬ ಹೆಸರಿನ ಮಿಠಾಯಿ ಮುಂತಾದವುಗಳ ತಯಾರಿಕೆಗೆ ಬಳಸಲಾಗುತ್ತದೆ. ಟ್ರಿ. ಕಾಂಪ್ಯಾಕ್ಟಮ್ ಮತ್ತು ಟ್ರಿ. ಈಸ್ಟಿವಮ್ ಪ್ರಭೇದದ ಕೆಲವು ತಳಿಗಳು ಮೃದುಗೋದಿಗೆ ಉತ್ತಮ ಉದಾಹರಣೆಗಳು.

ಗೋದಿಯನ್ನು ಮೇಲೆ ಹೇಳಿದ ಭಕ್ಷ್ಯಗಳ ರೂಪದಲ್ಲಲ್ಲದೆ ರವೆ, ಮೈದಾ ಮುಂತಾದ ಉತ್ಪನ್ನಗಳ ರೂಪದಲ್ಲೂ ಬಳಸುತ್ತಾರೆ. ಗೋದಿಯಿಂದ ಪಿಷ್ಟವನ್ನು ಹೊರತೆಗೆದು ಬಟ್ಟೆಗಳಿಗೆ ಹಾಕುವ ಗಂಜಿ ಮಾಡುವುದಕ್ಕೂ ಗ್ಲೂಕೋಸ್ ತಯಾರಿಕೆಗೂ ಬಳಸಲಾಗುತ್ತದೆ. ಗೋದಿಯಿಂದ ಗ್ಲೂಟೆನ್ನನ್ನೂ ತೆಗೆದು ಇದರಿಂದ ಗ್ಲುಟಾಮಿಕ್ ಆಮ್ಲ, ಮಾನೊಸೋಡಿಯಮ್ ಗ್ಲೂಟಮೇಟ್ ಮತ್ತು ಕೆಲವು ಬಗೆಯ ಅಮೈನೋ ಆಮ್ಲಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಮಾನವನ ಆಹಾರವಾಗಿ ಅಷ್ಟಾಗಿ ಉತ್ತಮವಲ್ಲದ ಗೋದಿಯನ್ನೂ ಗೋದಿಯನ್ನು ಹಿಟ್ಟು ಮಾಡುವಾಗ ಉತ್ಪತ್ತಿಯಾಗುವ ತೌಡನ್ನೂ ದನ, ಕುರಿ, ಹಂದಿ ಮತ್ತು ಕುದುರೆಗಳ ತಿನಿಸಾಗಿ ಉಪಯೋಗಿಸುವುದುಂಟು. ಆದರೆ ಈ ರೀತಿಯ ಬಳಕೆಯಲ್ಲಿ ಗೋದಿಯೊಂದನ್ನೆ ಬಳಸದೆ ಮುಸುಕಿನ ಜೋಳ, ಬಾರ್ಲಿ ಅಥವಾ ಓಟ್ಸ್‌ಗಳೊಂದಿಗೆ ಸೇರಿಸಿ ಒರಟಾದ ಹಿಟ್ಟಿನ ರೂಪದಲ್ಲಿ ಉಪಯೋಗಿಸಲಾಗುತ್ತದೆ. ಗೋದಿಯೊಂದನ್ನೇ ಉಪಯೋಗಿಸಿದರೆ ಹಿಟ್ಟನ್ನು ನೀರಿನಲ್ಲಿ ಕಲಸಿದಾಗ ಅದು ಒಂದು ರೀತಿಯ ಸರಿಯಂತಾಗುವುದರಿಂದ ಪ್ರಾಣಿಗಳು ಜೀರ್ಣಿಸಿಕೊಳ್ಳುವುದು ಕಷ್ಟವಾಗುತ್ತದೆ. ಆಹಾರ ವಸ್ತುವಾಗಿ ಮಾತ್ರವಲ್ಲದೆ ಗೋದಿಯನ್ನು ಆಲ್ಕೊಹಾಲ್, ಲೋಹಗಳ ಎರಕದ ಕೈಗಾರಿಕೆಯಲ್ಲಿ ಬಳಸುವ ಬಂಧಕ (ಬೈಂಡರ್ಸ್), ಪ್ಲೈವುಡ್ ಹಾಗೂ ಗೋಡೆ ಕಾಗದಗಳಿಗೆ ಬೇಕಾಗುವ ಗೋಂದು-ಮುಂತಾದವುಗಳ ತಯಾರಿಕೆಯಲ್ಲೂ ಬಳಸುವುದುಂಟು. ಗೋದಿ ಕಾಳಿನ ಹೊರಹೊದಿಕೆಗಳಿಂದ ಗಾಜು ಮತ್ತು ಲೋಹಗಳ ಮೈಯನ್ನು ಉಜ್ಜಿ ಹೊಳಪು ಬರುವಂತೆ ಮಾಡುವ ಘರ್ಷಕಗಳನ್ನು (ಅಬ್ರೇಸಿವ್ಸ್) ತಯಾರಿಸುವುದಿದೆ. ಈ ರೀತಿಯಲ್ಲಿ ಗೋದಿ ಬಳಕೆಯಾಗುವುದು ಅಲ್ಪ ಪರಿಮಾಣದಲ್ಲಿ ಮಾತ್ರ. ಗೋದಿ ಕಾಳುಗಳಲ್ಲದೆ ಗೋದಿ ಹುಲ್ಲಿಗೂ ಅನೇಕ ಮುಖ್ಯ ಉಪಯೋಗಗಳುಂಟು. ಇದರಿಂದ ಸೆಲ್ಯುಲೋಸ್, ಕಾಗದ, ಹಲಗೆ (ಸ್ಟ್ರಾಬೋರ್ಡ್) ಮುಂತಾದವನ್ನು ತಯಾರಿಸುವುದಲ್ಲದೆ, ಇದನ್ನು ಸಂವೇಷ್ಟನ (ಪ್ಯಾಕಿಂಗ್) ಸಾಮಗ್ರಿಯಾಗಿಯೂ ಗುಡಿಸಲುಗಳ ಚಾವಣಿ ಮುಚ್ಚುವುದಕ್ಕೂ ಹ್ಯಾಟುಗಳ ತಯಾರಿಕೆಯಲ್ಲೂ ಬಳಸುತ್ತಾರೆ. *

**ಗೋಪಚಂದ್ರ :** ಗುಪ್ತರ ಕಾಲದಲ್ಲಿ ಸಮತಟ ಎಂದು ಪ್ರಸಿದ್ಧವಾಗಿದ್ದ (ಈಗಿನ ಪಶ್ಚಿಮ ಬಂಗಾಳ) ಪ್ರದೇಶವನ್ನು ಗುಪ್ತರ ಅನಂತರ ಆಳಿದ ಅರಸರಲ್ಲಿ ಒಬ್ಬ. 6ನೆಯ ಶತಮಾನದಲ್ಲಿ ಬಂಗಾಲದಲ್ಲಿ ತಲೆಯೆತ್ತಿದ ಗೌಡ ಮತ್ತು ವಂಗ ಎಂಬ ಎರಡು ರಾಜ್ಯಗಳಲ್ಲಿ ವಂಗ ರಾಜ್ಯ ಬಂಗಾಲದ ದಕ್ಷಿಣ ಮತ್ತು ಪಶ್ಚಿಮ ಭಾಗಗಳನ್ನೊಳಗೊಂಡಿತ್ತು.

ಗುಪ್ತರ ವೈನ್ಯಗುಪ್ತ 507ರ ವರೆಗೂ ಆಳುತ್ತಿದ್ದನೆಂಬುದು ಆ ವರ್ಷದ ಅವನ ಗುಣೈಘರ್ ತಾಮ್ರಶಾಸನದಿಂದ ತಿಳಿದಿದೆ. ಈತನ ಸಾಮಂತನೂ ಅಧಿಕಾರಿಯೂ ಆಗಿ ಮಹಾಪ್ರತೀಹಾರ, ಪಂಚಾಧಿಕರಣೋಪರಿಕ ಮುಂತಾದ ಬಿರುದುಗಳನ್ನು ಪಡೆದಿದ್ದ ವಿಜಯಸೇನನೆಂಬವನೂ ಗೋಪಚಂದ್ರನ ಕಾಲಕ್ಕೆ ಸೇರಿದ, ಬರ್ದ್ವಾನ್ ಜಿಲ್ಲೆಯ ಮಲ್ಲಾಸರುಲ್‌ನಲ್ಲಿ ದೊರೆತ ತಾಮ್ರಶಾಸನದಲ್ಲಿ ಉಕ್ತನಾದ ವಿಜಯಸೇನನೂ ಒಬ್ಬನೇ ಎಂದು ಊಹಿಸಲಾಗಿದೆ. ವೈನ್ಯಗುಪ್ತನ ಅನಂತರ (507ರ ಅನಂತರ) ವಂಗದೇಶವನ್ನು ಗೋಪಚಂದ್ರ ಸ್ವತಂತ್ರವಾಗಿ ಆಳತೊಡಗಿದನೆಂದೂ ವಿಜಯಸೇನ ಮೊದಲು ಗುಪ್ತರ, ಅನಂತರ ಗೋಪಚಂದ್ರನ ಅಧೀನದಲ್ಲಿದ್ದ ಮಾಂಡಲಿಕನೆಂದೂ ಹೇಳಲಾಗಿದೆ.

ಗೋಪಚಂದ್ರನ ಆಳಿಕೆ ಮಧ್ಯ ಬಂಗಾಲದ ಫರೀದ್‌ಪುರ್ ಜಿಲ್ಲೆಯನ್ನೂ ನೈರುತ್ಯದಲ್ಲಿಯ ಬರ್ದ್ವಾನ್ ಜಿಲ್ಲೆಯನ್ನೂ ಒಳಗೊಂಡಿತ್ತು. ಫರೀದ್‌ಪುರದಲ್ಲಿ ಈತನ ಆಳಿಕೆಯ 18ನೆಯ ವರ್ಷದ ತಾಮ್ರಶಾಸನ ಲಭ್ಯವಾಗಿದೆ. ದಂಡಭುಕ್ತಿ ಪ್ರದೇಶ ಸಹ ಅವನ ರಾಜ್ಯದಲ್ಲಿ ಸೇರಿತ್ತೆಂಬ ಅಂಶ ಇತ್ತೀಚೆಗೆ ಒರಿಸ್ಸ ರಾಜ್ಯದ ಬಲಸೋರ್ ಜಿಲ್ಲೆಯ ಜಯರಾಮಪುರದಲ್ಲಿ ದೊರೆತ ಗೋಪಚಂದ್ರನ ಆಳಿಕೆಯ ಮೊದಲನೆಯ ವರ್ಷದ ಶಾಸನದಿಂದ ತಿಳಿದುಬಂದಿದೆ. ಆರ್ಯಮಂಜು ಶ್ರೀಮೂಲಕಲ್ಪದಲ್ಲಿ ನಮೂದಿಸಲಾದ, ಆ ಕಾಲದ ಪಶ್ಚಿಮದ ಅರಸನಾದ, ಗೋಪನೆಂಬವನು ಈ ಗೋಪಚಂದ್ರನೇ ಎಂದೂ ಹೇಳಲಾಗಿದೆ.

ಇವನ ಮನೆತನಕ್ಕೆ ಸೇರಿದವರು ಧರ್ಮಾದಿತ್ಯ ಮತ್ತು ಸಮಾಚಾರದೇವ. ಧರ್ಮಾದಿತ್ಯನ ತಾಮ್ರಶಾಸನಗಳೆರಡು ಕೂಡ ಫರೀದ್‌ಪುರದಲ್ಲೇ ದೊರೆತಿವೆ. ಅವುಗಳಲ್ಲಿ ಉಕ್ತವಾದ ಘೋಷಚಂದ್ರ, ಅನಾಚಾರ, ಶಿವಚಂದ್ರ ಇತ್ಯಾದಿಗಳು ಗೋಪಚಂದ್ರನ ಶಾಸನದಲ್ಲೂ ಕಂಡುಬಂದಿರುವುದರಿಂದ ಧರ್ಮಾದಿತ್ಯ ಹಾಗೂ ಗೋಪಚಂದ್ರರ ಈ ಶಾಸನಗಳ ನಡುವಣ ಕಾಲ ಬಹಳ ಹೆಚ್ಚಾಗಿರಲಾರದು. ಗೋಪಚಂದ್ರ ಸುಮಾರು 20 ವರ್ಷಗಳ ಕಾಲ ಆಳಿ, ಅನಂತರ ಧರ್ಮಾದಿತ್ಯ ಆಳತೊಡಗಿರಬಹುದು. ಸಮಾಚಾರ ದೇವ ಇವರಿಬ್ಬರ ಅನಂತರ ಆಳಿದ್ದಿರಬೇಕು. ಈತ 14 ವರ್ಷಗಳ ಕಾಲವಾದರೂ ಆಳಿರಬಹುದೆಂದು ಇವನ ನಾಣ್ಯಗಳಿಂದ ತಿಳಿಯುತ್ತದೆ. ಆದರೆ ಈ ಮೂವರ ಆಳಿಕೆಯ ಕಾಲಾನುಪೂರ್ವಿ ಅಥವಾ ಅವರ ನಡುವಣ ಸಂಬಂಧಗಳನ್ನು ಕುರಿತು ಭಿನ್ನಾಭಿಪ್ರಾಯಗಳಿವೆ. ಖಚಿತವಾಗಿ ಏನನ್ನೂ ಹೇಳಲು ಪ್ರಸ್ತುತ ದೊರಕಿರುವ ಆಧಾರಗಳಿಂದ ಸಾಧ್ಯವಿಲ್ಲ. (ಜ.ಬಿ.ಆರ್.)

**ಗೋಪಾಲ್, ಬಿ.ಆರ್. :** 1930–97. ಕನ್ನಡದ ಹೆಸರಾಂತ ಸಂಶೋಧಕರು ಹಾಗೂ ಶಾಸನತಜ್ಞರು. ಚಿಕ್ಕಬಳ್ಳಾಪುರದಲ್ಲಿ (ಈಗ ಜಿಲ್ಲಾಕೇಂದ್ರ) ಅಕ್ಟೋಬರ್ 1930ರಂದು ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇತಿಹಾಸ ಮತ್ತು ಪುರಾತತ್ತ್ವದಲ್ಲಿ ಸ್ನಾತಕೋತ್ತರ ಹಾಗೂ ಪಿಎಚ್.ಡಿ. ಪದವಿಗಳನ್ನು ಪಡೆದು, 1955ರಲ್ಲಿ ಉದಕಮಂಡಲದಲ್ಲಿದ್ದ ಭಾರತೀಯ ಪುರಾತತ್ತ್ವ ಇಲಾಖೆಯ ಶಾಸನ ವಿಭಾಗದಲ್ಲಿ ಸಹಾಯಕ ಶಾಸನತಜ್ಞರಾಗಿ ವೃತ್ತಿಜೀವನವನ್ನು ಆರಂಭಿಸಿದರು. ಅನಂತರ 1964–72ರ ವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಅನಂತರ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 1972–87ರ ವರೆಗೆ ದಕ್ಷಿಣ ಭಾರತೀಯ ಅಧ್ಯಯನ ವಿಭಾಗದಲ್ಲಿ ರೀಡರ್ ಆಗಿ ಕೆಲಸಮಾಡಿ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಪರಿಷ್ಕರಣೆಯ ಕಾರ್ಯದಲ್ಲಿ ಮುಖ್ಯಸ್ಥರಾಗಿ ಸೇವೆಸಲ್ಲಿಸಿದರು. 1987–90ರ ವರೆಗೆ ಆಂಧ್ರಪ್ರದೇಶದ ಅನಂತಪುರದ

ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕರಾಗಿದ್ದರು. 1997ರ ಜೂನ್ 16ರಂದು ಮೈಸೂರಿನಲ್ಲಿ ನಿಧನರಾಗುವವರೆಗೂ ಶಾಸನಶಾಸ್ತ್ರಕ್ಕಾಗಿಯೇ ತಮ್ಮ ಅಮೂಲ್ಯ ಕಾಲವನ್ನು ಮುಡುಪಿಟ್ಟಿದ್ದ ಇವರು ಇತಿಹಾಸ ಮತ್ತು ಪುರಾತತ್ತ್ವ ಮಾತ್ರವಲ್ಲದೆ, ಕನ್ನಡ ಸಾಹಿತ್ಯವನ್ನೂ ಚೆನ್ನಾಗಿ ಬಲ್ಲವರಾಗಿದ್ದರು. ಇಂಗ್ಲಿಷ್ ಭಾಷೆಯ ಮೇಲೂ ಇವರಿಗೆ ಪ್ರಭುತ್ವವಿತ್ತು. ತಮಿಳು ಮತ್ತು ತೆಲುಗು ಭಾಷೆಗಳ ಪರಿಚಯವೂ ಇವರಿಗೆ ಚೆನ್ನಾಗಿಯೇ ಇತ್ತು. ಶಾಸನ ಶೋಧ ಮತ್ತು ಸಂಪಾದನಾ ಕ್ಷೇತ್ರದಲ್ಲಿ ಮಹತ್ತ್ವದ ಸಾಧನೆ ಮಾಡಿದ್ದಾರೆ. ಇವರು ಶೋಧಿಸಿದ ಹಲವು ಶಾಸನಗಳು ಎಪಿಗ್ರಾಫಿಯ ಇಂಡಿಕ ಸಂಪುಟಗಳಲ್ಲಿ ಪ್ರಕಟವಾಗಿವೆ. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್‌ನ ಹಲವು ಸಂಪುಟಗಳ ಸಂಪಾದನಾ ಕಾರ್ಯದಲ್ಲೂ ಇವರ ಪಾತ್ರವಿತ್ತು. ಮೈಸೂರು ವಿಶ್ವವಿದ್ಯಾನಿಲಯದಿಂದ ಎಪಿಗ್ರಾಫಿಯ ಕರ್ನಾಟಿಕದ ಪರಿಷ್ಕೃತ 8 ಸಂಪುಟಗಳನ್ನು ಸಂಪಾದಿಸಿ, 9ನೆಯ ಸಂಪುಟದ ಮುನ್ನುಡಿಯನ್ನು ಹೊರತುಪಡಿಸಿ ಉಳಿದ ಕಾರ್ಯಗಳನ್ನು ಪೂರೈಸಿದ್ದರು. ಇವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್‌ನ 5 ಮತ್ತು 6ನೆಯ ಸಂಪುಟಗಳನ್ನು ಸಂಪಾದಿಸಿದ್ದಾರೆ. ಕರ್ನಾಟಕ ರಾಜ್ಯ ಪುರಾತತ್ತ್ವ ಇಲಾಖೆಯ ಮೂಲಕ ವಿಜಯನಗರ ಶಾಸನಗಳ ಸಾರಾಂಶಗಳ ನಾಲ್ಕು ಸಂಪುಟಗಳನ್ನ ಪ್ರಕಟಿಸಿದ್ದು, ಇನ್ನೂ ನಾಲ್ಕು ಸಂಪುಟಗಳು ಪ್ರಕಟಣೆಗೆ ಅಣಿಯಾಗಿವೆ.



ಇವರು ಎಂ. ಶೇಷಾದ್ರಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ 'ಕಲ್ಯಾಣಚಾಲುಕ್ಯರು ಮತ್ತು ಕಲಚುರಿಗಳು' ಎಂಬ ಮಹಾಪ್ರಬಂಧ ಇಂದಿಗೂ ಒಂದು ಬಹು ಉಪಯುಕ್ತ ಮಾದರಿ ಮಹಾಪ್ರಬಂಧವಾಗಿದೆ. ಧಾರವಾಡದಲ್ಲಿದ್ದಾಗ ಪಿ.ಬಿ. ದೇಸಾಯಿ, ಶ್ರೀನಿವಾಸ ರಿತ್ತಿ ಅವರೊಂದಿಗೆ ಹಿಸ್ಟರಿ ಆಫ್ ಕರ್ನಾಟಕ ಎಂಬ ಗ್ರಂಥವನ್ನು ಸಿದ್ಧಪಡಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ 'ಕರ್ನಾಟಕ ಇತಿಹಾಸ' ಕೃತಿಯನ್ನು ಪ್ರಕಟಿಸಿದ ಇವರು ಇದೇ ವಿಶ್ವವಿದ್ಯಾಲಯದಿಂದ 'ಕರ್ನಾಟಕದಲ್ಲಿ ರಾಮಾನುಜರು' ಎಂಬ ಕೃತಿಯನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸಿದರು. ಇವರ ನಿವೃತ್ತಿಯ ಅನಂತರ ಕರ್ನಾಟಕ ವಿಶ್ವವಿದ್ಯಾಲಯದಿಂದ 'ಇತಿಹಾಸ ಶಾಸ್ತ್ರ ಮತ್ತು ಸಿದ್ಧಾಂತ' ಕೃತಿ ಪ್ರಕಟಗೊಂಡಿತು. ಅನಂತಪುರದಲ್ಲಿದ್ದಾಗ ಎರಡು ಭಾಗಗಳಲ್ಲಿ ಆಂಧ್ರಪ್ರದೇಶದ ಇತಿಹಾಸವನ್ನು ಪ್ರಕಟಿಸಿದರು. ಕರ್ನಾಟಕದ ಕಲೆಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ವಾಸ್ತು ಎಂಬ ಕೃತಿಯನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರೇಗೆ ಲಭ್ಯವಿದ್ದ ಬನವಾಸಿ ಕದಂಬರ ಶಾಸನಗಳನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಪ್ರಕಟಿಸಿದರು. ಇತರರ ಜೊತೆಗೆ ಸೇರಿ ಸಂಯುಕ್ತವಾಗಿ ಶ್ರೀಕಂಠಿಕಾ, ಸೌತ್ ಇಂಡಿಯನ್ ಸ್ಟಡೀಸ್, ಎಪಿಗ್ರಫಿಕಲ್ ಸ್ಟಡೀಸ್, ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ ಅಂಡ್ ಕಲ್ಚರ್, ಎಂ. ಶೇಷಾದ್ರಿ ಅವರ ಲೇಖನಗಳ ಸಂಗ್ರಹ 'ಶೇಷಚಂದ್ರಿಕಾ', ತಮಿಳುನಾಡಿನ ಕನ್ನಡ ಶಾಸನಗಳು ಮೊದಲಾದ ಕೃತಿಗಳನ್ನೂ ಇವರು ಸಂಪಾದಿಸಿದ್ದಾರೆ. ಮಾನ್ಯಖೇಟದ ರಾಷ್ಟ್ರಕೂಟರನ್ನು ಕುರಿತ ವಿಚಾರ ಸಂಕಿರಣದ ಲೇಖನಗಳ ಸಂಪಾದನೆಯೂ ಸೇರಿದಂತೆ ನಲವತ್ತೆಂಟು ಪುಸ್ತಕಗಳು ಮತ್ತು 138ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿರುವ ಬಾ.ರಾ. ಗೋಪಾಲ್ ಅವರು ಬೋಧನೆ ಮತ್ತು ಸಂಶೋಧನೆಗಳಲ್ಲಿ ತಮ್ಮ ಕೆಲಸದ ಛಾಪನ್ನು ಉಳಿಸಿಹೋಗಿದ್ದಾರೆ. (ಜಿ.ಎಚ್.ಎಸ್.)

**ಗೋಪಾಲ :** ಬಂಗಾಲದಲ್ಲಿ ಆಳಿದ ಪಾಲವಂಶದ ಮೊದಲ ಅರಸ. ಪಾಲವಂಶ 8ನೆಯ ಶತಮಾನದ ಮಧ್ಯಭಾಗದಲ್ಲಿ ಅಸ್ತಿತ್ವಕ್ಕೆ ಬಂತು. ಯಶೋವರ್ಮ, ಕಾಶ್ಮೀರದ ಲಲಿತಾದಿತ್ಯ, ಶೈಲರು, ಭಗದತ್ತರು ಮುಂತಾದವರ ದಾಳಿಗಳಿಗೆ ತುತ್ತಾದ ವಂಗದೇಶದಲ್ಲಿ ಅಶಾಂತಿ, ಅರಾಜಕತೆ ಉಂಟಾಗಿದ್ದುವು. ಸಣ್ಣಪುಟ್ಟ ಮಾಂಡಲಿಕರು ತಲೆಯೆತ್ತಿ ಪರಸ್ಪರ ಜಗಳವಾಡತೊಡಗಿದ್ದರು. ಇಂಥ ಸಂದರ್ಭದಲ್ಲಿ ಪ್ರಜೆಗಳು ಈ ಗೊಂದಲಮಯ ಪರಿಸ್ಥಿತಿಗೆ ತಮ್ಮಲ್ಲಿಯ ಅನ್ಯೆಕ್ಯವೇ ಕಾರಣವೆಂಬುದನ್ನು ಮನಗಂಡರು. ಎಲ್ಲ ಸಾಮಂತರೂ ಮಾಂಡಲಿಕರೂ ನಾಯಕರೂ ತಮ್ಮತಮ್ಮ ಅಧಿಕಾರಗಳನ್ನು ಸ್ವಇಚ್ಛೆಯಿಂದಲೇ ಬಿಟ್ಟುಕೊಟ್ಟು, ಸರ್ವರಿಗೂ ಸಮ್ಮತನಾದ ನಾಯಕನೊಬ್ಬನನ್ನು ಆರಿಸಿದರು. ಅವನ ನೇತೃತ್ವದಲ್ಲಿ ಸಮರ್ಥವಾದ ರಾಜ್ಯವೊಂದಕ್ಕೆ ಅಸ್ತಿಭಾರ ಹಾಕಿದರು. ಇಂಥ ತೀರ್ಮಾನ ಭಾರತದ ಇತಿಹಾಸದಲ್ಲಿಯೇ ಅಪರೂಪವಾದದ್ದಾಗಿತ್ತು. ಇದೊಂದು ರಕ್ತರಹಿತ ಬದಲಾವಣೆ. ಇದರ ಫಲವಾಗಿ ಸರ್ವಸಮ್ಮತವಾಗಿ ಆರಿಸಿ ಬಂದ ನಾಯಕ ಗೋಪಾಲ.

ಸುಮಾರು 756 ರಿಂದ 783 ರವರೆಗೆ ಆಳಿದ ಗೋಪಾಲನ ತಂದೆ ವಪ್ಯಟ, ತಾತ ದಯಿತವಿಷ್ಣು. ಧರ್ಮಪಾಲನ ಖಾಲಿಂಪುರ ತಾಮ್ರಶಾಸನದಲ್ಲಿ ಇವರನ್ನು ಉಲ್ಲೇಖಿಸಲಾಗಿದೆ. ಇವರಿಬ್ಬರನ್ನು ಕುರಿತು ಖಚಿತವಾಗಿ ಏನೂ ತಿಳಿಯದು. ಟಿಬೆಟ್ ಬೌದ್ಧ ಗ್ರಂಥಕರ್ತನಾದ ತಾರಾನಾಥ ಗೋಪಾಲನನ್ನು ಕುರಿತಾದ ಒಂದು ಜಾನಪದ ಕತೆಯನ್ನು ಹೆಣೆದಿದ್ದಾನಾದರೂ ಅದು ಅಸಂಗತ. ಗೋಪಾಲನ ಪತ್ನಿ ದೇದ್ದ ದೇವಿ ಭದ್ರಾತ್ಮಜಳೆಂದು ಶಾಸನ ಹೇಳಿದೆ. ಭದ್ರ ಎಂಬುದು ಅರಸನ ಹೆಸರೇ, ಒಂದು ಪಂಗಡದ ಹೆಸರೇ ಅಥವಾ ಸಮತಟದಲ್ಲಿಯ (ಈಗಿನ ಪಶ್ಚಿಮ ಬಂಗಾಲ) ಒಂದು ವಂಶದ ಹೆಸರೇ ಎಂಬುದೂ ಇನ್ನೂ ನಿಶ್ಚಯವಾಗಿಲ್ಲ. ಮೂಲತಃ ಇವರು ಬಂಗಾಲದ ಯಾವ ಭಾಗಕ್ಕೆ ಸೇರಿದವರು ಎಂಬ ಪ್ರಶ್ನೆಯೂ ಕಗ್ಗಂಟಾಗಿದೆ. ಗೋಪಾಲ ಪುಂಡ್ರವರ್ಧನದಲ್ಲಿ ಜನಿಸಿದನೆಂಬ ತಾರಾನಾಥನ ಹೇಳಿಕೆಯನ್ನು ಗಮನಿಸಿದರೆ ವಂಗಾಲ-ಆಗ್ನೇಯ ವಂಗಾಲ -ಇವನ ಮೂಲಸ್ಥಾನವಾಗಿದ್ದಿರ ಬಹುದೆನಿಸುತ್ತದೆ. ಆದರೆ ಇದೂ ಸಂದೇಹಾಸ್ಪದವೇ.

ಏನೇ ಇದ್ದರೂ ಜನನಾಯಕನಾಗಿ ಆರಿಸಲ್ಪಟ್ಟ ಗೋಪಾಲ ತನ್ನ ಆಯ್ಕೆ ಉತ್ತಮವಾದ್ದೆಂಬುದನ್ನು ಸಮರ್ಥಿಸಿಕೊಂಡ. ಮತ್ಸ್ಯನ್ಯಾಯವನ್ನು ಕೊನೆಗಾಣಿಸುವ ಸಲುವಾಗಿ ಪ್ರಜೆಗಳಿಂದ ಈತ ಆರಿಸಲ್ಪಟ್ಟನೆಂದು ಶಾಸನದಲ್ಲಿ ಹೇಳಿದೆ. ತನ್ನ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದ ಬಳಿಕ ಈತ ರಾಜ್ಯವನ್ನು ಸಮುದ್ರಪರ್ಯಂತ ವಿಸ್ತರಿಸಿದ. ಅಂಗ ಮತ್ತು ಮಗಧ ರಾಜ್ಯಗಳೂ ಇವನ ಕೈಸೇರಿದುವು. ಮುಂದೆ ಪ್ರಬಲವಾದ ಪಾಲ ಸಾಮ್ರಾಜ್ಯಕ್ಕೆ ದೃಢವಾದ ತಳಪಾಯವನ್ನು ಈತ ಹಾಕಿದ. ದಕ್ಷವಾದ ಆಡಳಿತವನ್ನು ನೆಲೆಗೊಳಿಸಿದ.

ಬೌದ್ಧಧರ್ಮವನ್ನವಲಂಬಿಸಿದ ಈ ಅರಸ ಒದಂತಪುರಿಯ ಸಮೀಪದಲ್ಲಿ ನಲೇಂದ್ರ ದೇವಾಲಯವನ್ನು ಕಟ್ಟಿಸಿದನೆಂದು ತಾರಾನಾಥ ಹೇಳಿದ್ದಾನೆ. ನಾಲಂದ ವಿಹಾರವೂ ಈತ ಕಟ್ಟಿಸಿದ್ದೇ ಎಂದು ಹಲವರ ಹೇಳಿಕೆ. ಇವೆರಡೂ ಭಿನ್ನವಾದವುಗಳೆಂಬ ಅಭಿಪ್ರಾಯವನ್ನು ಎಲ್ಲರೂ ಒಪ್ಪಿಲ್ಲ. (ಜಿ.ಬಿ.ಆರ್.;ಜಿ.ಆರ್.ಆರ್.)

ಪಾಲವಂಶದ ದೊರೆಗಳಲ್ಲಿ ಇನ್ನಿಬ್ಬರು ಗೋಪಾಲರು ಇದ್ದರೆಂದು ತಿಳಿದುಬರುತ್ತದೆ. 2ನೆಯ ಗೋಪಾಲ ರಾಜ್ಯಪಾಲನ ಮಗ. ಈತ ಬಹುಶಃ 940-957 ರಲ್ಲಿ ಆಳಿದ. 3ನೆಯ ಗೋಪಾಲ ರಾಮಪಾಲನ ಮಗನಾದ ಕುಮಾರಪಾಲನ ಮಗ. ಈತ ಸ್ವಲ್ಪಕಾಲ ಆಳಿದ ಮೇಲೆ ಇವನ ರಾಜ್ಯವನ್ನು ಚಿಕ್ಕಪ್ಪ ಮದನಪಾಲ ಕಿತ್ತುಕೊಂಡನೆಂದು (ಸು.1145) ಹೇಳಲಾಗಿದೆ. *

**ಗೋಪಾಲಕೃಷ್ಣ ಅಡಿಗ, ಎಂ. :** 1918-92. ನವ್ಯಸಾಹಿತ್ಯದ ಶ್ರೇಷ್ಠ ಕವಿ ಹಾಗೂ ವಿಮರ್ಶಕರು. ಇಂದಿನ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ 1918ರ ಫೆಬ್ರವರಿ 18ರಂದು ಜನಿಸಿದರು. ಇವರು 1942ರಲ್ಲಿ ಮೈಸೂರಿನಲ್ಲಿ ಬಿ.ಎ. ಆನರ್ಸ್ ಮುಗಿಸಿ ಅದೇ ವರ್ಷ ಚಿತ್ರದುರ್ಗದ ಪ್ರೌಢಶಾಲೆಯೊಂದರಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿದ್ದ ಕಾಲಾವಧಿ ಕೇವಲ ಮೂರು ತಿಂಗಳು. ಅನಂತರ 1943ರಲ್ಲಿ ದಾವಣಗೆರೆ ಪ್ರೌಢಶಾಲೆಯಲ್ಲಿ ಮೂರು ತಿಂಗಳ ಕಾಲ ಕೆಲಸಮಾಡಿ ಅದೇ ವರ್ಷ ಬೆಂಗಳೂರಿನ ಮಲ್ಲೇಶ್ವರಂ ಪ್ರೌಢಶಾಲೆಯಲ್ಲಿ ಕೆಲಸಮಾಡಿ, ಕೆಲಸಕ್ಕೆ ರಾಜೀನಾಮೆ ನೀಡಿದರು. 1944ರಲ್ಲಿ ಬೆಂಗಳೂರು ಅಠಾರಾ ಕಚೇರಿಯ ಪಿಂಚಣಿ ಖಾತೆಯಲ್ಲಿ ನಾಲ್ಕು ತಿಂಗಳ ಕಾಲ ಗುಮಾಸ್ತರಾಗಿ ಕೆಲಸಮಾಡಿದರು. ಅನಂತರ ಗಾಂಧೀನಗರದ ಪ್ರೌಢ ಶಾಲೆಯಲ್ಲಿ ಸುಮಾರು ಒಂದೂವರೆ ವರ್ಷಗಳ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿದರು. 1946ರಲ್ಲಿ ತುಮಕೂರಿನ ಆರ್.ಎನ್. ಪ್ರೌಢ ಶಾಲೆಯಲ್ಲಿ ಒಂದು ವರ್ಷವಿದ್ದರು.1947ರಲ್ಲಿ ಮದುವೆ ಯಾದರು. ಇದೇ ವರ್ಷ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಎಂ.ಎ. ವಿದ್ಯಾರ್ಥಿಯಾಗಿ ವ್ಯಾಸಂಗಕ್ಕೆ ತೊಡಗಿದರಾದರೂಅದನ್ನು ಮುಗಿಸಲಿಲ್ಲ. ಅನಂತರ 1948-52ರ ವರೆಗೆ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. 1952ರಲ್ಲಿ



ಎಂ.ಎ. ಮುಗಿಸಿದರು. 1952–54ರ ವರೆಗೆ ಕುಮಟ ಕೆನರಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ದುಡಿದರು. ಅನಂತರ ಮೈಸೂರಿನ ಸೇಂಟ್ ಫಿಲೋಮಿನ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಕೆಲಸ ಮಾಡಿದರು (1954–64). 1964ರಲ್ಲಿ ಸಾಗರದ ಲಾಲ್‌ಬಹದ್ದೂರ್ ಕಾಲೇಜಿನ ಪ್ರಿನ್ಸಿಪಾಲರಾದರು. 1968ರಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿದರು. ಅನಂತರ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ಕೆಲವು ಕಾಲ ದುಡಿದರು. ನ್ಯಾಷನಲ್ ಬುಕ್ ಟ್ರಸ್ಟಿನ ನಿರ್ದೇಶಕರಾಗಿಯೂ ಇವರು ಸ್ವಲ್ಪಕಾಲ ಇದ್ದರು. 1971ರಲ್ಲಿ ಜನಸಂಘದ ಅಭ್ಯರ್ಥಿಯಾಗಿ ಲೋಕಸಭೆಗೆ ಸ್ಪರ್ಧಿಸಿ ಸೋತರು. 1974ರಲ್ಲಿ ಅಮೆರಿಕ ವಿಶ್ವವಿದ್ಯಾಲಯಗಳಿಗೆ ವಿಶೇಷ ಉಪನ್ಯಾಸ ಕೊಡಲು ಹೋಗಿಬಂದರು. ಕನ್ನಡ ವಿಮರ್ಶೆಗೆ ಹೊಸ ಆಯಾಮವನ್ನು ಜೋಡಿಸಿದ ಸಾಕ್ಷಿ ಎಂಬ ತ್ರೈಮಾಸ ಪತ್ರಿಕೆಯ ಸಂಪಾದಕರಾಗಿಯೂ ಕೆಲಸಮಾಡಿದರು. ಇವರು ಸಿಮ್ಲಾದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಲ್ಲಿ ರಿಸರ್ಚ್ ಫೆಲೋ ಆಗಿಯೂ ಕೆಲಸ ಮಾಡಿದರು (1975).

ಅಡಿಗರ ಕಾವ್ಯಪ್ರಜ್ಞೆ ಸದಾ ಅಂತರ್ಮುಖಿಯಾದದ್ದು. ಇದಕ್ಕೆ ಕಾರಣ ಇವರು ಬೆಳೆದುಬಂದ ಪರಿಸರ. ಮನೆಯಲ್ಲಿ ಇವರ ಹಿರಿಯರು ಸಂಸ್ಕೃತ ಪಂಡಿತರು. ಮೊಗೇರಿಯ ಸುತ್ತಲ ಪ್ರಕೃತಿಸೌಂದರ್ಯ, ಹತ್ತಿರದಲ್ಲೇ ಸಮುದ್ರ, ಚಂಡೆಮದ್ದಳೆಯ ಸದ್ದು ಇಂಥ ವಾತಾವರಣದಲ್ಲಿ ಬೆಳೆದ ಅಡಿಗರು ಆರಂಭದಲ್ಲಿ ಕಡೆಂಗೋಡ್ಲು ಶಂಕರಭಟ್ಟರ, ಅನಂತರ ಬೇಂದ್ರೆ ಯವರ ಪ್ರಭಾವದಲ್ಲಿ ಕಾವ್ಯರಚನೆಗೆ ತೊಡಗಿದರು. ಭಾವತರಂಗ (1946) ಅಡಿಗರ ಮೊದಲ ಕವನ ಸಂಕಲನ. ಇದರಲ್ಲಿ ಕವಿಯ ಮನಸ್ಸು ಸ್ವಯಂ ದೀಪಕತೆಗೆ ತುಡಿಯುತ್ತದೆ. ಹಳೆಯ ಕವಿಗಳ ಶೈಲಿಯಲ್ಲೇ ಬರೆಯಬೇಕಲ್ಲ ಎಂದು ಚಡಪಡಿಸುತ್ತದೆ. ತನ್ನತನವನ್ನು ಕಂಡುಕೊಳ್ಳಲು ಹಾತೊರೆಯುತ್ತದೆ. ಪ್ರೇಮ ಮತ್ತು ಗೆಳೆತನದಲ್ಲಿ ಅನುಭವಿಸಿದ ಸೋಲಿನಿಂದ ಚೇತರಿಸಿಕೊಳ್ಳುವುದಕ್ಕೆ, ಬಾಳಿನ ಬಿರುಗಾಳಿಯಲ್ಲಿ ಅಲ್ಲಾಡದೆ ನಿಲ್ಲಲಿಕ್ಕೆ, ಕಲ್ಲಾಗಹೊರಡುತ್ತದೆ. ಆಗಾಗ ಮೇಲ್ನಾಡಿನಾಶೆಯಿಂದ ಚಡಪಡಿಸುತ್ತದೆ. ಇಂಥ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ವಸ್ತು ಒಂದು ಎಳೆಯಾಗಿ ಸೇರಿಕೊಳ್ಳುತ್ತದೆ. ಇವರ ಕಟ್ಟುವೆವು ನಾವು (1948) ಎಂಬ ಎರಡನೆಯ ಸಂಗ್ರಹದಲ್ಲಿ ಕವಿಯ ಆಸಕ್ತಿಗಳು ಹಿಗ್ಗುತ್ತಿರುವುದನ್ನು ಕಾಣಬಹುದು. ಹಿಂದಿನ ಸಂಗ್ರಹದಲ್ಲಿ ನಾನು ಎನ್ನುವುದರ ಮೇಲಿದ್ದ ಒತ್ತು ಇಲ್ಲಿ ನಾವು ಎನ್ನುವುದರ ಮೇಲೆ ಬೀಳುವುದರಿಂದ, ಕವಿಯ ವ್ಯಕ್ತಿತ್ವ ಬೆಳೆಯುತ್ತಿರುವುದು ಸ್ಪಷ್ಟವಾಗುತ್ತದೆ. ಇದು ಸಮಾಜವಾದದ ಮೂಲಕ ನಗರದ ನಡುವಿನಡ್ಡಗೋಡೆಗಳನ್ನು ಕೆಡಹುವ, ಹೊಸ ಹುರುಪಿನ ಪ್ರಗತಿಶೀಲ ಕಾವ್ಯ. ಇಲ್ಲಿಯ ಸಾಮಾಜಿಕ ದನಿಯ ನಡುನಡುವೆ ಭಾವತರಂಗದ ಏಕಾಕಿತನದ ದನಿ ಮೋಹನಮುರಳಿಯಿಂದ ಮಾರ್ಪಟ್ಟು ಹೊಸ ಸಹಾನುಭೂತಿಯನ್ನು ಪಡೆಯುತ್ತದೆ.

ನಡೆದು ಬಂದ ದಾರಿಯ (1952) ಹೊತ್ತಿಗೆ ಬೇಂದ್ರೆ, ಕುವೆಂಪು, ಪು.ತಿ.ನ. ಮೊದಲಾದವರ ರಮ್ಯಮಾರ್ಗವನ್ನು ಬಿಟ್ಟು ಅಡಿಗರು, ಹೊಸ ರೀತಿಯಲ್ಲಿ ಈಗ ನವ್ಯಕಾವ್ಯ ಎಂದು ಹೆಸರಾಗಿರುವ ಕಾವ್ಯ ಬರೆಯಲು ಪ್ರಾರಂಭಿಸಿದರು. ಈ ಸಂಗ್ರಹದ ಮುನ್ನುಡಿಯಲ್ಲಿ ಬಹು ಪ್ರಸಿದ್ಧವಾದ ಮಣ್ಣಿನವಾಸನೆ ಎನ್ನುವ ಪಾರಿಭಾಷಿಕ ಶಬ್ದವಿದ್ದು ಇದನ್ನು ಅಡಿಗರು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೊದಲ ಬಾರಿಗೆ ಬಳಸಿದರು. ಕಾಲದಿಂದ ಕಾಲಕ್ಕೆ ಭಾಷೆ ಹೊಸದಾಗಿ ರೂಪುಗೊಳ್ಳದೆ ಉತ್ತಮ ಅಭಿವ್ಯಕ್ತಿ ಸಾಧ್ಯವಾಗುವುದಿಲ್ಲ; ಈ ಜಗತ್ತನ್ನು ಬಿಟ್ಟು ಕಾವ್ಯ ಬದುಕಲಿಕ್ಕೆ ಸಾಧ್ಯವಿಲ್ಲವಾದ್ದರಿಂದ ಕವಿಗಳು ವಾಸ್ತವದ ಕಡೆ ಗಮನ ಕೊಡಬೇಕೆಂದು ಈ ಸಂಗ್ರಹದ ಮುನ್ನುಡಿಯಲ್ಲಿ ನುಡಿದರು. ಇಲ್ಲಿಂದ ಮುಂದೆ ಬಂದ ನವ್ಯಕಾವ್ಯದಲ್ಲಿ ಅಡಿಗರು ಹೊಸ ಛಂದೋರೂಪಗಳನ್ನು, ಹೊಸದಾದ ಭಾಷೆಯನ್ನು ಉಪಯೋಗಿಸಿದರು. 1954ರಲ್ಲಿ ಪ್ರಕಟವಾದ ಚಂಡೆಮದ್ದಳೆಯಲ್ಲಿ ನವ್ಯಕಾವ್ಯದ ಪ್ರಾತಿನಿಧಿಕ ಕವನಗಳಿವೆ. ಹಿಮಗಿರಿಯ ಕಂದರ ಮತ್ತು ಗೊಂದಲಪುರ 249 ಮತ್ತು 411 ಸಾಲುಗಳ ದೀರ್ಘ ಕವನಗಳು. ಹೊಸ ಕಾವ್ಯಕ್ಕೆ ಹೇಳುವ ರೀತಿ ಮಾತ್ರ ಮುಖ್ಯವಾಗಿರದೆ ಹೇಳುವುದೂ ಬೇಕಾದಷ್ಟಿದೆ ಎಂಬುದಕ್ಕೆ ಈ ದೀರ್ಘ ಕವನಗಳು ಸಾಕ್ಷಿಯಾಗಿವೆ. ಹಿಮಗಿರಿಯ ಕಂದರ ಇಹಪರಗಳ ನಡುವೆ ತೊಳಲಾಡುವ ಮನುಷ್ಯನ ಚಿತ್ರವನ್ನು ನಗರದ ಪರಿಸರದ ಭಾಷೆಯಲ್ಲಿ ಸಶಕ್ತವಾಗಿ ಹಿಡಿದಿಡುತ್ತದೆ. ಗೊಂದಲಪುರದಲ್ಲಿ ಕಮ್ಯೂನಿಸ್ಟ್ ರಾಕ್ಷಸರು ಭಾರತವನ್ನೆಲ್ಲ ಆಕ್ರಮಿಸಿ ವೈಯಕ್ತಿಕತೆಯನ್ನು ನಾಶಮಾಡುವ ದುರಂತಚಿತ್ರಣವಿದೆ. ದೀಪಾವಳಿ ಎನ್ನುವ ಕವನ ಸಂತೋಷವನ್ನು ಅನುಭವಿಸದೆ, ಲವಲವಿಕೆಯನ್ನು ಕಳೆದುಕೊಂಡವನಿಗೆ ಆ ದಿನದ ಸುಖದ ಕ್ಷಣಗಳನ್ನು ಅನುಭವಿಸಬೇಕು, ಮಿಕ್ಕ ದಿನಗಳು ಕತ್ತಲೆ ಇದ್ದೇ ಇರುತ್ತದೆ ಎನ್ನುತ್ತದೆ. ಏನಾದರೂ ಮಾಡುತಿರು ತಮ್ಮ ಎಂಬ ಕವನದಲ್ಲಿ ಪ್ರಕೃತಿಯ ಅಪಾರ ಸಂಪತ್ತನ್ನು ವಿವೇಕಹೀನವಾಗಿ ನಾಶಮಾಡುವ ಮನುಷ್ಯ, ಭೂಮಿಭಾರವಾಗದಿರಲಿಕ್ಕೆ ಅವನು ಭೂಮಿಯನ್ನು ನಾಶಮಾಡುವುದೇ ಸರಿ ಎನ್ನುವ ವಿಡಂಬನೆಯಿದೆ.

1959ರಲ್ಲಿ ಪ್ರಕಟಗೊಂಡ ಭೂಮಿಗೀತದಲ್ಲಿ ಭೂಮಿಗೀತ, ಭೂತ ಮತ್ತ ಪ್ರಾರ್ಥನೆ ಎನ್ನುವ ಶ್ರೇಷ್ಠ ಕವನಗಳಿವೆ. ಭೂಮಿಗೀತ ಕವನದಲ್ಲಿ ಹಿಮಗಿರಿಯ ಕಂದರದ ನಾಯಕನಂತೆ, ಭೂಮಿ ಆಕಾಶಗಳ ವಿರುದ್ಧ ದಿಕ್ಕುಗಳ ಸೆಳೆತಕ್ಕೆ ಸಿಕ್ಕ ನಾಯಕನನ್ನು ಭೂಮಿತಾಯಿಯೇ ಕಟ್ಟಿಹಾಕುತ್ತಾಳೆ. ಅವಳ ಮಾದಕ ದನಿಗೆ ಮತ್ತು ವಿಚಿತ್ರ ಪ್ರೀತಿಗೆ ಮಾರುಹೋದ ನಾಯಕ ಅವಳಿಂದ ತಪ್ಪಿಸಿಕೊಳ್ಳಲಾರದೆ ಪರಿತಪಿಸುತ್ತಾನೆ. ಅವನಿಗೆ ಧ್ರುವನ ಹಾಗೆ ತಪ್ಪಿಸಿಕೊಳ್ಳುವ ದಾರಿ ಗೊತ್ತಿಲ್ಲ. ಹಿಮಗಿರಿಯ ಕಂದರದ ನಾಯಕ ಮುಖ್ಯವಾಗಿ ಗುಮಾಸ್ತನಾಗಿದ್ದರೆ ಇಲ್ಲಿಯ ನಾಯಕ ಕರ್ಣ, ತ್ರಿಶಂಕು, ಭೀಮ, ಧ್ರುವ ಮೊದಲಾದ ಪುರಾಣ ನಾಯಕರ ಅಂಶಸಂಭೂತನಾಗಿ, ಮನುಷ್ಯನ ಪ್ರತಿನಿಧಿಯಾಗಿ ದುರಂತನಾಯಕನಾಗುತ್ತಾನೆ. ಭೂಮಿ ಮಾಯಾಪ್ರಪಂಚ, ನಿಜವಾದ ಪ್ರಪಂಚ ಇನ್ನೆಲ್ಲೋ ಇದೆ ಎನ್ನುವ ನಂಬಿಕೆ ಭೂಮಿಗೀತದಲ್ಲಿದ್ದರೆ, ಭೂತದಲ್ಲಿ ಭೂಮಿಯೂ ನಿಜವಾದದ್ದು, ಇಲ್ಲಿಯೇ ನಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎನ್ನುವ ಧೋರಣೆಯಿದೆ. ಗೆರೆಗೆರೆಯಾದ ಚಿನ್ನದದಿರನ್ನು ಭೂಮಿಯಿಂದ ಅಗೆದು ತೆಗೆದು ಶೋಧಿಸಿ ಕಾಸಿ ಬಡಿದು ಇಷ್ಟದೇವತಾವಿಗ್ರಹಕ್ಕೊಗ್ಗಿಸುವ ಅಸಲು ಕಸಬಿನ ರೀತಿಯಲ್ಲಿ ಬದುಕಿರಬೇಕು ಎನ್ನುವ ಈ ಕವಿತೆ ಏಕಕಾಲದಲ್ಲಿ ಕಾವ್ಯಸೃಷ್ಟಿಯ ಗುಟ್ಟನ್ನೂ ಉತ್ತಮ ಕಾವ್ಯದ ಹಾಗೂ ಬದುಕಿನ ಆದರ್ಶವನ್ನೂ ಅದಕ್ಕೆ ಮಾದರಿಯನ್ನೂ ಒದಗಿಸುತ್ತದೆ. ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳ ಪರಸ್ಪರ ಸಂಬಂಧವನ್ನೂ ಚಿನ್ನದ ಪ್ರತಿಮೆ ಧ್ವನಿಸುತ್ತದೆ. ನೀರು, ಚಿನ್ನ, ಭ್ರೂಣ ಮತ್ತು ಭೂತಕಾಲದ ಪ್ರತಿಮೆಗಳು ಒಂದನ್ನೊಂದು ಸಮರ್ಥಿಸುತ್ತ, ಪರಸ್ಪರವಾಗಿ ಅಂತರಾರ್ಥಗಳನ್ನು ಪುಷ್ಟಿಗೊಳಿಸುತ್ತ ಈ ಕವನದ ಉತ್ತಮ ಶಿಲ್ಪಕ್ಕೆ ಕಾರಣವಾಗುತ್ತವೆ. ಪ್ರಾರ್ಥನೆ ಕವನ ದೈಹಿಕ, ಮಾನಸಿಕ, ಲೈಂಗಿಕ, ಆರೋಗ್ಯಕ್ಕೆ ಉತ್ತಮವಾದ ಸಾಮಾಜಿಕ ಕೊಡುಕೊಳ್ಳುವಿಕೆಗೆ ಮತ್ತು ಕಾವ್ಯಸೃಷ್ಟಿಗೆ ಮನುಷ್ಯಪ್ರಯತ್ನವೂ ಅದಕ್ಕೆ ಬೇಕೆಂದು ಹೇಳುತ್ತದೆ. ತನ್ನೆಲ್ಲ ಶಕ್ತಿಗಳನ್ನೂ ತೊಡಗಿಸುವಂಥ ದೈವಾನುಗ್ರಹವೂ ಪರಮಾತ್ಮನೊಬ್ಬನನ್ನು ಬಿಟ್ಟು ಇನ್ನು ಯಾರಿಗೂ ತಲೆಬಾಗದಂಥ ಕ್ರಿಯಾಶೀಲತೆಯನ್ನು ಕಾಪಾಡಿಕೊಳ್ಳುವುದೂ ಈ ಕವನದ ಮೂಲ ಆಶಯವಾಗಿದೆ.

ಭೂಮಿಗೀತ ಸಂಕಲನವಾದ ಮೇಲೆ ಬಂದ ವರ್ಧಮಾನದಲ್ಲಿ (1972) ಅಡಿಗರ ಅತ್ಯುತ್ತಮ ಕವನಗಳಲ್ಲಿ ಕೆಲವಾದ ಕೂಪಮಂಡೂಕ, ರಾಮನವಮಿಯ ದಿವಸ ಮತ್ತು ವರ್ಧಮಾನ ಸೇರಿವೆ. ಮೊದಲ ಎರಡು ಕವನಗಳು ಬದುಕಿನ ಸಾರ್ಥಕತೆಯನ್ನು ವಿಮರ್ಶಿಸುವ ಕವನಗಳು. ಕೂಪಮಂಡೂಕದ ನಾಯಕನಿಗೆ ಸೃಷ್ಟಿ ಶಕ್ತಿ ತನಗೆ ಕೈಕೊಟ್ಟಿದೆಯೆಂಬ ನೋವೂ ಇಲ್ಲಿಯವರೆಗೂ ತನ್ನ ಬದುಕು ಫಲಬಿಟ್ಟ ಬಾಳೆಯ ಹಾಗೆ ಕೃತಕೃತ್ಯವಾಗಿದೆಯೆಂಬ ಧನ್ಯಭಾವವೂ ಕಾಣಿಸುತ್ತದೆ. ಇನ್ನು ಮುಂದೆ ತಾನು ಮತ್ತೆ ಕ್ರಿಯಾಶೀಲತೆಯನ್ನು ಪಡೆದು ಬದುಕಬೇಕೆನ್ನುವ ತೀವ್ರವಾದ ಇಚ್ಛೆಯೊಂದಿಗೆ ತನಗೆ ಸಹಜವಾದ ಮಿತಿಯಲ್ಲಿ ಬದುಕಿನ ಸಮತೋಲನವನ್ನು ಕಾಯುವ ನಿರ್ಧಾರವೂ ಒಂದು ರೀತಿಯ ಸಮಾಧಾನವೂ ಕಂಡುಬರುತ್ತದೆ. ರಾಮನವಮಿಯ ದಿವಸದಲ್ಲಿ ರಾಮದೇವರು ಎನ್ನುವುದಕ್ಕಿಂತ ಪುರುಷೋತ್ತಮ ಎನ್ನುವುದರ ಮೇಲೆ ಹೆಚ್ಚು ಒತ್ತಿದೆ. ರಾಕ್ಷಸ ಮತ್ತು ದೇವತೆಗಳ ದ್ವಂದ್ವ ಅಳಿಸಿಹಾಕಲಸಾಧ್ಯವಾದದ್ದು ಎನ್ನುವ ಅರಿವಿನ ನೆಲೆಯಲ್ಲೇ ಸಂಕಲ್ಪಬಲದಿಂದ ಪುರುಷೋತ್ತಮನಾಗುವ ಸಾಧ್ಯತೆಯನ್ನೂ ಉತ್ತಮ ಕೃತಿಯನ್ನು ನಿರ್ಮಿಸುವ ಸಾಧ್ಯತೆಯನ್ನೂ ಈ ಕವಿತೆ ಮನದಟ್ಟು ಮಾಡುತ್ತದೆ. ವರ್ಧಮಾನ ಬದುಕನ್ನು ಹತ್ತಿರದಿಂದ ನೋಡುವ ಕವನ. ಇಂಥ ಕವನಗಳಿಗೆ ಸಹಜವಾದ ಘರ್ಷಣೆ, ತಳಮಳ ಮತ್ತು ಅದರಿಂದ ಬರುವ ಹೊಸ ತಿಳಿವಳಿಕೆ ಅಥವಾ ಕಂಡುಕೊಳ್ಳುವ ದಾರಿ ಈ ಕವನದಲ್ಲೂ ಇದೆ. ತಂದೆಯೊಬ್ಬ ಯೌವನಕ್ಕೆ ಕಾಲಿಡುತ್ತಿರುವ ಮಗನ ವೈಪರೀತ್ಯಗಳನ್ನು ಕಂಡು ತಲ್ಲಣಗೊಂಡು, ಮಗನ ಭಾಷೆ ಅರ್ಥವಾಗದ್ದಕ್ಕೆ ಚಡಪಡಿಸುತ್ತಾನೆ. ಆಮೇಲೆ ತನ್ನ ಮಗ ತನ್ನತನವನ್ನು ಕಂಡುಕೊಳ್ಳುವ ರೀತಿಯೇ ಅದೆಂದು ಸಮಾಧಾನಗೊಂಡು, ತನ್ನ ಮಗ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಿ ಎಂದು ಹಾರೈಸುತ್ತಾನೆ. ತನ್ನ ಮಗನ ಚಟುವಟಿಕೆಗಳು ಕಪಿಚೇಷ್ಟೆಯಾಗದೆ, ಹನುಮದ್ವಿಲಾಸಕ್ಕೆ ಸಮನಾಗಲಿ ಎಂದು ಇಚ್ಛಿಸುತ್ತಾನೆ. ಹೀಗೆ ಭಾವಗೀತೆಯ ಸತ್ತ್ವ, ಚಿಂತನಪರತೆ ಮತ್ತು ನಾಟಕೀಯ ಗುಣಗಳಿಂದ, ಮೂಲಭೂತ ಪ್ರತಿಮೆಗಳ ಮೂಲಕ ಬದುಕಿನ ನೆಲೆಗಳನ್ನು ಗುರುತಿಸುವುದು ಅಡಿಗರ ಕಾವ್ಯವೈಶಿಷ್ಟ್ಯವಾಗಿದೆ.

ಕಾವ್ಯದಲ್ಲಿ ವಾಸ್ತವವಾದವನ್ನು ತಂದ ಹಾಗೆ ಅಡಿಗರು ವಿಮರ್ಶೆಯಲ್ಲೂ ಕೃತಿನಿಷ್ಠ ವಿಶ್ಲೇಷಣೆಯನ್ನು ತಂದರು. ಮಣ್ಣಿನ ವಾಸನೆ (1967), ಕನ್ನಡದ ಅಭಿಮಾನ (1972), ವಿಚಾರಪಥ (1972), ನಮ್ಮ ಶಿಕ್ಷಣ ಕ್ಷೇತ್ರ (1972)– ಇವು ಇವರ ವೈಚಾರಿಕ ಲೇಖನಗಳ ಸಂಗ್ರಹಗಳು. ಇವರು ಆಕಾಶದೀಪ, ಅನಾಥೆ ಎಂಬ ಎರಡು ಕಾದಂಬರಿಗಳನ್ನು ಬರೆದಿದ್ದಾರೆ. ಹುಲ್ಲಿನ ದಳಗಳು, ಸುವರ್ಣಕೀಟ, ಭೂಗರ್ಭಯಾತ್ರೆ, ರೈತರ ಹುಡುಗಿ, ಜನತೆಯ ಶತ್ರು, ದೆವಹದ ಸುವರ್ಣ ಕೀಟ, ಮುಕ್ತಾಫಲ, ಇತಿಹಾಸ ಚಕ್ರ–ಇವು ಇವರ ಅನುವಾದ ಕೃತಿಗಳು. ಇದನ್ನು ಬಯಸಿರಲಿಲ್ಲ ಎಂಬುದು ಇವರ ಇನ್ನೊಂದು ಕವನ ಸಂಗ್ರಹ (1975). ಆಯ್ದ ಪ್ರಬಂಧಗಳು, ಕಾವ್ಯಜಗತ್ತು (1986) ಇವರ ಇತರ ಪ್ರಮುಖ ಕೃತಿಗಳು. ನೆನಪಿನ ಗಣಿಯಿಂದ ಎಂಬುದು ಇವರ ಆತ್ಮಕಥೆ. ಇವರಿಗೆ ಅನೇಕ ಗೌರವ ಮತ್ತು ಪ್ರಶಸ್ತಿಗಳು ಲಭ್ಯವಾಗಿವೆ. ವರ್ಧಮಾನ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1973–1974), ಕುಮಾರ್ ಆಶಾನ್ ಪ್ರಶಸ್ತಿ (1979), ಕಬೀರ್ ಸಮ್ಮಾನ ಪ್ರಶಸ್ತಿ (1985) ಲಭಿಸಿದೆ. ಧರ್ಮಸ್ಥಳದಲ್ಲಿ ಜರುಗಿದ 51ನೆಯ ಕನ್ನಡ

ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು (1979). ಇವರು 1992ರ ನವೆಂಬರ್ 14ರಂದು ನಿಧನಹೊಂದಿದರು. ಇವರ ಸುವರ್ಣ ಪುತ್ಥಳಿ ಕೃತಿಗೆ ಮರಣೋತ್ತರವಾಗಿ ಪ್ರತಿಷ್ಠಿತ ಪಂಪ ಪ್ರಶಸ್ತಿ ನೀಡಲಾಗಿದೆ (1993). (ಎಸ್‌ಯು.ಎನ್.)

**ಗೋಪಾಲಕೃಷ್ಣ ಭಾರತಿ :** 1811–96. ಪ್ರಸಿದ್ಧ ತಮಿಳು ಕವಿ, ವಾಗ್ಗೇಯಕಾರ. ಮುಡಿಗೊಂಡಾನ್ ಮತ್ತು ಆನತಾಂಡವಪುರಂ ಎಂಬ ಊರುಗಳಲ್ಲಿ ಬಾಲ್ಯದ ಬಹುದಿನಗಳನ್ನು ಕಳೆದುದರಿಂದ ಈತನಿಗೆ ಮುಡಿಗೊಂಡಾನ್ ಭಾರತಿ, ಆನತಾಂಡವಪುರಂ ಭಾರತಿ ಎಂಬ ಹೆಸರುಗಳೂ ಬಳಕೆಗೆ ಬಂದಿವೆ. ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ ನರಿಮಣಂ ಎಂಬ ಊರನಲ್ಲೀತ ಜನಿಸಿದ. ತಂದೆ ಬ್ರಾಹ್ಮಣಕುಲದ ರಾಮಸ್ವಾಮಿ ಭಾರತಿ. ಈ ಕುಟುಂಬ ಸಂಗೀತ ಪರಂಪರೆಯಲ್ಲಿ ಹೆಸರಾದುದು. ಆದ್ದರಿಂದ ಗೋಪಾಲಕೃಷ್ಣನಿಗೆ ಸಂಗೀತ ಜ್ಞಾನ ಬಾಲ್ಯದಿಂದಲೆ ದೊರೆಯಿತು. ಕರ್ನಾಟಕ ಸಂಗೀತದಲ್ಲಿ ಅಂದಿಗೆ ಪ್ರಸಿದ್ಧನಾಗಿದ್ದ ಕಣಂ ಕೃಷ್ಣಯ್ಯರ್ ಎಂಬಾತ ಈತನನ್ನು ಮೆಚ್ಚಿಕೊಂಡು ಈತನಿಗೆ ಕೀರ್ತನೆಯ ಸೂಕ್ಷ್ಮಾಂಶಗಳನ್ನು ಕಲಿಸಿಕೊಟ್ಟು ಹುರಿದುಂಬಿಸಿದ. ಅಲ್ಲದೆ ತಿರುವಡೈಮರುದೂರಿನ ಸಂಗೀತ ವಿದ್ವಾಂಸ ರಾಮದಾಸ್ ಎಂಬಾತ ಹಿಂದೂಸ್ಥಾನಿ ಗಾನಪದ್ಧತಿಯನ್ನು ಬೋಧಿಸಿದ. ಜೊತೆಗೆ ಭಾರತಿ ಬಾಲ್ಯದಿಂದಲೇ ತಮಿಳಿನಲ್ಲಿರುವ ಭಕ್ತಿ ಪ್ರಧಾನ ಗ್ರಂಥಗಳನ್ನೂ ಸಂಸ್ಕೃತ ಕಾವ್ಯ, ನಾಟಕ ಹಾಗೂ ಅದ್ವೈತಶಾಸ್ತ್ರಗಳನ್ನೂ ಅಭ್ಯಸಿಸಿದ. ಮಯೂರಂ ಗೋವಿಂದ ಶಿವನ್ ಎಂಬ ಅನುಭವಜ್ಞಾನಿಯನ್ನು ತನ್ನ ಗುರುವಾಗಿ ಸ್ವೀಕರಿಸಿ, ಅವನಿಂದ ತತ್ತ್ವಜ್ಞಾನವನ್ನೂ ಯೋಗಾಭ್ಯಾಸವನ್ನೂ ಪಡೆದ. ಆಧ್ಯಾತ್ಮಿಕ ಜೀವನ ನಡೆಸುವ ಉದ್ದೇಶದಿಂದ ನಿಷ್ಠಾವಂತ ಬ್ರಹ್ಮಚಾರಿಯಾಗಿಯೇ ಬಾಳಿದ.

ಶಿವಭಕ್ತಿಯೇ ಮೈಗೊಂಡಂತಿದ್ದ ಭಾರತಿ ಶಿವಕ್ಷೇತ್ರಗಳಲ್ಲಿ ಮಿಗಿಲಾದ ಚಿದಂಬರಂ ಕ್ಷೇತ್ರಕ್ಕೆ ಆಗಾಗ ಬಂದು ಭಕ್ತಿಗೀತಗಳನ್ನು ಹಾಡುತ್ತಿದ್ದ. ಶಿವನ ಮೇಲಿನ ಭಕ್ತಿ ಹಾಗೂ ಧ್ಯಾನಗಳಿಂದ, ತನ್ನ ಶೌಚನಿಷ್ಠೆಗಳಿಂದ ಇವನ ಸಂಗೀತಜ್ಞಾನ ದೈವಿಕ ಕಳೆಯಿಂದ ಕೂಡಿ ಶೋಭಿಸಿತು. ಕ್ರಮೇಣ ಭಾರತಿ ಸಂಗೀತಸಾಧನೆಯನ್ನು ನಾದೋಪಾಸನೆಯಾಗಿ ಕೈಕೊಂಡು ಶಿವಕೈಂಕರ್ಯಕ್ಕಾಗಿ ತನ್ನನ್ನೆ ತಾನು ಅರ್ಪಿಸಿಕೊಳ್ಳುವುದನ್ನೇ ತನ್ನ ಜೀವನದ ಗುರಿಯನ್ನಾಗಿ ಮಾಡಿಕೊಂಡ. ಶಿವನ ಪರವಾದ ಹಲವಾರು ಗೀತೆಗಳನ್ನು ಹಾಡಿದ. ಸಂಗೀತ ಕಥಾಕಾಲಕ್ಷೇಪ ರೂಪದಲ್ಲಿ ಹಲವು ಶಿವಕಥೆಗಳನ್ನು ಊರೂರುಗಳಲ್ಲಿ ನಡೆಸಿದ. ಆ ಕಾಲದ ಹಲವು ಸಂಗೀತ ವಿದ್ವಾಂಸರು ಇವನ ಕೀರ್ತನೆಗಳನ್ನು ಕೇಳಿ ಹೊಗಳಿದರು. ಜನಸಾಮಾನ್ಯರಿಗೂ ಇವನ ಶಿವಕಥೆಗಳು ಮೆಚ್ಚುಗೆಯಾದುವು.

ತಿರುವೈಯಾರಿನಲ್ಲಿದ್ದು, ರಾಮಕಥೆಯನ್ನು ಕೀರ್ತನೆಗಳಲ್ಲಿ ಹಾಡಿದ ಪ್ರಸಿದ್ಧ ಸಂಗೀತಜ್ಞಾನಿ ತ್ಯಾಗರಾಜರಿಗೆ ಈತ ಸಮಕಾಲೀನ. ಅವರಂತೆ ಇವನೂ ಶಿವನನ್ನು ಕುರಿತು ಅನೇಕ ಕೀರ್ತನೆಗಳನ್ನು ತಮಿಳಿನಲ್ಲಿ ರಚಿಸಿದ. ಪಲ್ಲವಿ, ಅನುಪಲ್ಲವಿ, ಚರಣ–ಹೀಗೆ ಪಾಂಕ್ತವಾಗಿ ಕಟ್ಟಿದ್ದ ಗೀತೆಗಳನ್ನು ಹಾಡಿ ಅನೇಕರಿಗೆ ಗಾನಸುಧೆಯನ್ನುಣಿಸಿ ತಣಿಸಿದ. ಸಭಾಪತಿಕ್ಕು ವೇರೆ ದೈವಂ ಸಮಾನಮಾಗುಮಾ (ಸಭಾಪತಿ ಚಿದಂಬರಂ ಕ್ಷೇತ್ರದ ದೇವರು, ನಟರಾಜ) ಎಂಬ ಈತನ ಸಾಹಿತ್ಯವನ್ನು ಕೇಳಿದ ತ್ಯಾಗರಾಜರು ಈತನನ್ನು ತುಂಬ ಹೊಗಳಿದರು. ತ್ಯಾಗರಾಜರ ಪಂಚರತ್ನಕೀರ್ತನೆಗಳಂತೆಯೇ ಭಾರತಿಯೂ ಹರಿಹರ ಶಿವಶಂಕರ ಕರುಣಾಕರ ಪರಮೇಶ್ವರ ಎಂಬುದನ್ನು ನಾಟಿ ರಾಗದಲ್ಲಿಯೂ ಆಡಿಯ ಪಾದಮೇ ಗತಿ ಎಂಬುದನ್ನು ವರಾಳಿ ರಾಗದಲ್ಲಿಯೂ ಶರಣಾಗತಿ ಎನ್ರು ನಂಬಿವಂದೇನ್ ಎಂಬುದನ್ನು ಗೌಳರಾಗದಲ್ಲಿಯೂ ಮರವಾಮಲ್ ಎಪ್ಪಡಿಯುಂ ನಿನ್ನೈ ಮನಮೇ ಎಂಬುದನ್ನು ಶ್ರೀರಾಗದಲ್ಲಿಯೂ ಹಾಡಿ ಹಲವರ ಮೆಚ್ಚಿಕೆಗೆ ಪಾತ್ರನಾದ. ಮತ್ತೂ ಹಲವು ಕೀರ್ತನೆಗಳನ್ನು ನಟನ ಸಭಾಪತಿಯ ಹೆಸರಿನಲ್ಲಿ ಹಾಡಿ ತಾನು ಭಕ್ತಿಪರವಶನಾದುದಲ್ಲದೆ ಅನೇಕರನ್ನು ಆ ಸ್ತರಕ್ಕೇರುವಂತೆ ಮಾಡಿದ. ಯೋಗದಲ್ಲಿ ಈತನಿಗಿದ್ದ ಆಳವಾದ ಅನುಭವವನ್ನು ಇವನ ಕೀರ್ತನೆಗಳಲ್ಲಿ ಅಲ್ಲಲ್ಲಿ ಕಾಣಬಹುದು ಎಂದು ಯು. ವಿ. ಸ್ವಾಮಿನಾಥ ಅಯ್ಯರರ ಅಭಿಪ್ರಾಯ. ನಾಗಪಟ್ಟಣದ ಶ್ರೇಷ್ಠ ವರ್ತಕನೂ ವಿದ್ವತ್ ಪಕ್ಷಪಾತಿಯೂ ಆದ ಕಂದಪ್ಪ ಚೆಟ್ಟಿಯಾರ್ ಎಂಬಾತ ಈತನ ಹಿರಿಮೆಯನ್ನು ಮನಗಂಡು ಹೆಚ್ಚಾದ ಪ್ರೋತ್ಸಾಹಕೊಟ್ಟನೆನ್ನಲಾಗಿದೆ. ಇಂಥ ಅಭಿಮಾನಶಾಲಿಯ ಅಭಿಲಾಷೆಯಂತೆ ಭಾರತಿ ನಂದನ್ ಚರಿತ್ತಿರಂ ಎಂಬ ಕೀರ್ತನೆಯನ್ನು ರಚಿಸಿ ಬಹಳ ವಿಜೃಂಭಣೆಯಿಂದ ಅದನ್ನು ನೃತ್ಯಗಾಯನಾದಿಗಳೊಡನೆ ರಂಗದಲ್ಲಿ ಪ್ರದರ್ಶಿಸಿದ. ಪಂಡಿತರಿಗೆ ಮಾತ್ರ ತಿಳಿಯುವಂತಿದ್ದ ಪೆರಿಯಪುರಾಣದಲ್ಲಿರುವ ತಿರುನಾಳೈಪ್ಪೋವಾರ್ ಪುರಾಣವನ್ನು ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಲಲಿತವಾದ ತಮಿಳಿನಲ್ಲಿ ಪಾಮರರಿಗೂ ತಿಳಿಯುವಂತೆ ನಂದನ್ ಚರಿತ್ತಿರಂ ಎಂಬುದಾಗಿ ರಚಿಸಿದ ಕೀರ್ತಿ ಭಾರತಿಯದು. ಇದರ ಜನಪ್ರಿಯತೆ ಹಲವು ಪಂಡಿತರಿಗೆ ಅಸೂಯೆಯನ್ನುಂಟು ಮಾಡಿತಂತೆ. ತಪ್ಪುಗಳು ತುಂಬಿರುವ ನಂದನ್ ಚರಿತ್ರೆಯನ್ನು ಯಾರೂ ಕೇಳಬಾರದೆಂದು ಅಂಥವರು ಪ್ರಚಾರ ಮಾಡಿದರಂತೆ. ಕವಿರಾಯರ್ ಎಂಬುವನೊಬ್ಬ ವ್ಯಾಕರಣ ನಿಯಮಬದ್ಧವಾಗಿ ತಿರುನಾವುಕ್ಕರಸರ್ ಚರಿತ್ತಿರಂ ಎಂಬ ಒಂದು ಗ್ರಂಥವನ್ನು ರಚಿಸಿ ಭಾರತಿಯ ಗ್ರಂಥಕ್ಕೆ ಸವಾಲೆಂಬಂತೆ ಪ್ರಕಟಪಡಿಸಿದನಾದರೂ ಪಂಡಿತರಾರೂ ಅದನ್ನು ಗಮನಿಸಲಿಲ್ಲವೆಂದೂ ಸಂಗೀತಗಾರರು ಯಾರೂ ಅದನ್ನು ಮೆಚ್ಚಲಿಲ್ಲವೆಂದೂ ಕಥೆ. ಭಾರತಿಯ ಸಮಕಾಲೀನ ಮೀನಾಕ್ಷಿಸುಂದರಂ ಪಿಳ್ಳೆ ಎಂಬ ಖ್ಯಾತಿವೆತ್ತ ಮಹಾವಿದ್ವಾಂಸ ನಂದನ್ ಚರಿತ್ತಿರಮ್‌ಗೆ ಮುನ್ನುಡಿ ಬರೆದಿದ್ದಾನೆ. ಭಾರತಿಯ ಹಾಡುಗಳಲ್ಲಿ ಒಂದಾದ ಚಿದಂಬರಂ ಕುಮ್ಮಿ ಎಂಬುದು ಹೆಂಗಸರು ಕುಮ್ಮಿ (ಕೋಲಾಟವಾಡುವಂತೆ ಕೈ ಚಪ್ಪಾಳೆ ಹೊಡೆದುಕೊಂಡು) ಆಡುವಾಗ ಹಾಡಲು ಅನುಕೂಲವಾಗುವಂತಿದೆಯಲ್ಲದೆ ಸರಳವಾಗಿ ದೊಡ್ಡ ತತ್ತ್ವವನ್ನು ಬೋಧಿಸುತ್ತದೆ.

ಭಾರತಿ ರಚಿಸಿದ ಇಯರ್‌ಪ್ಪೈ ನಾಯನಾರ್ ಚರಿತ್ತಿರಂ, ತಿರುನೀಲಕಂಟ ನಾಯನಾರ್ ಚರಿತ್ತಿರಂ, ಕಾರೈಕ್ಕಾಲಮ್ಮೈಯಾರ್ ಚರಿತ್ತಿರಂ ಮೊದಲಾದವು ನಂದನ್ ಚರಿತ್ತಿರಂನಷ್ಟು ಜನಪ್ರಿಯವಾಗಲಿಲ್ಲ.

ಭಾರತಿ ತನ್ನ ಜೀವನದಲ್ಲಿ ಶಿವಕೈಂಕರ್ಯದಿಂದ ಸಂಪಾದನೆಯಾದ ಮೂರು ಸಾವಿರ ರೂಪಾಯಿಗಳನ್ನು ಮಾಯೂರಂ ಶಿವದೇವಾಲಯಕ್ಕೆ ಬರುವ ಯಾತ್ರಿಕರಿಗೆ ಅನ್ನದಾನಮಾಡಲು ಅರ್ಪಿಸಿದನಂತೆ.

ಆಗಿನ ಕಾಲದಲ್ಲಿ ಮಹಾಸಂಗೀತವಿದ್ವಾಂಸನಾಗಿದ್ದ ಮಹಾವೈದ್ಯನಾಥ ಅಯ್ಯರ್ ಎಂಬಾತ ಭಾರತಿಯ ಬಳಿ ಬಂದು ಭಾರತಿಯ ಕೃತಿಗಳನ್ನು ಕಂಠಪಾಠ ಮಾಡಿಕೊಳ್ಳುತ್ತಿದ್ದನಂತೆ.

ಭಾರತಿಯ ಗೀತೆಗಳು ತಮಿಳುಸಂಗೀತದ ಬೆಳೆವಣಿಗೆಗೆ ಜೀವವಿತ್ತುವು; ಜನಮನವನ್ನು ರಂಜಿಸಿದುವು. ಧಾತುಸಂವತ್ಸರದಲ್ಲಿ ಒಮ್ಮೆ ಬಂದಿದ್ದ ಕ್ಷಾಮದಲ್ಲಿ ಜನರಿಗೆ ಬಹಳ ಉಪಕಾರಮಾಡಿದ ಮಯೂರಂ ವೇದನಾಯಕ ಪಿಳ್ಳೆಯನ್ನು ಕುರಿತು ನೀಯೇ ಪುರುಷಮೇರು ಎಂದಾರಂಭವಾಗುವ ಗೀತೆಯೊಂದನ್ನು ಭಾರತಿ ಹಾಡಿದ್ದಾನೆ. ಇದು ಹೊರತು, ಈತನ ಬೇರಾವ ಗೀತೆಗಳಲ್ಲಿಯೂ ನರಸ್ತುತಿಯಿಲ್ಲ. ಎಲ್ಲವೂ ಆಧ್ಯಾತ್ಮಿಕ ಗೀತೆಗಳೇ ಆಗಿವೆ. (ಎಸ್.ವಿ.ಎಲ್.)

**ಗೋಪಾಲಕೃಷ್ಣರಾವ್, ಕೆ. :** 1906–67. ಸಂಪ್ರದಾಯದ ಕಥೆಗಾರರಲ್ಲಿ ಪ್ರಸಿದ್ಧರು. ಜನ್ಮಸ್ಥಳ ಬೆಂಗಳೂರು. ಬೆಂಗಳೂರು ನ್ಯಾಷನಲ್ ಹೈಸ್ಕೂಲು ಮತ್ತು ಸೆಂಟ್ರಲ್ ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಪದವೀಧರರಾದರು. ಅಠಾರಾ ಕಚೇರಿಯಲ್ಲಿ ಗುಮಾಸ್ತರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಅನಂತರ ಕೆ.ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಆಪ್ತಕಾರ್ಯದರ್ಶಿಗಳಾಗಿ ಕೆಲಸಮಾಡಿದರು. ಚಿಕ್ಕಂದಿನಲ್ಲಿಯೇ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡಿದ್ದ ಇವರು ಆರಂಭದಲ್ಲಿ ಇಂಗ್ಲಿಷ್‌ನಲ್ಲಿ



ಕವನಗಳನ್ನು ಬರೆದರು. ಅನಂತರ ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾಗಿ ಕನ್ನಡದಲ್ಲಿ ಬರೆಯಲಾರಂಭಿಸಿದರು. ಸಣ್ಣಕಥೆಗಳ ಜೊತೆಗೆ ನಾಟಕ, ಪ್ರಬಂಧ ಮತ್ತು ಅನುವಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವರ ಆರು ಕಥಾಸಂಗ್ರಹಗಳು ಪ್ರಕಟವಾಗಿವೆ: ಉಡುಗೊರೆ, ಬಂಗಾರದ ಡಾಬು, ನಟಿ, ಸೋತುಗೆದ್ದವರು, ರಾಜಾಯಿ, ಆಯ್ದ ಹತ್ತು ಕಥೆಗಳು. ಕೆನ್ಸಿಂಗ್ಟನ್‌ಮತ್ತು ಹರಿದಾಸ ಸಾಹಿತ್ಯ ಎಂಬುವು ಇವರ ಎರಡು ಪ್ರಬಂಧ ಸಂಕಲನಗಳು. ಕುಮಾರಕೃಪ, ಗುರು ಗೀತೆ ಎಂಬುವು ಇವರ ಕವನಸಂಕಲನಗಳು. ಅಪರಾಧಿ, ಆಸೆ ನಿರಾಶೆ, ಕನ್ಯಾರ್ಥಿ, ಚಿರಸಮಸ್ಯೆ ಮತ್ತು ಪಾರ್ಕಿನ ಲಚುಮಿ ಇವು ಇವರ ಏಕಾಂಕ ನಾಟಕ ಸಂಗ್ರಹಗಳು. ಇಂಗ್ಲಿಷ್‌ನಲ್ಲಿ ಸಿಸ್ಟರ್ ಎಂಬ ಒಂದು ಏಕಾಂಕ ನಾಟಕವನ್ನು ಪ್ರಕಟಿಸಿದ್ದಾರೆ. ಇವರ ಹಲವು ಸಣ್ಣಕಥೆಗಳು ಇಂಗ್ಲಿಷ್‌ಗೆ ಭಾಷಾಂತರಗೊಂಡಿವೆ. ಇವರ ಸಾರ್ವಜನಿಕ ಸೇವೆಯೂ ಗಣ್ಯವಾದುದು. ವಿದ್ಯಾರ್ಥಿಯಾಗಿದ್ದಾಗಲೇ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರು. ಬೆಂಗಳೂರಿನಲ್ಲಿ ಸಾಹಿತಿಗಳ ಸಂಘ ಎಂಬ ಒಂದು ಸಂಘವನ್ನು ಸ್ಥಾಪಿಸಿ, ಸಾಹಿತ್ಯಕ ಚರ್ಚೆಗಳಿಗೆ ವೇದಿಕೆಯನ್ನು ಒದಗಿಸಿದರಲ್ಲದೆ ಅದರ ಆಶ್ರಯದಲ್ಲಿ ಸಣ್ಣಕಥೆಗಾರರ ಮೂರು ಸಮ್ಮೇಳನಗಳನ್ನು ನಡೆಸಿದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಇವರು ಐದು ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿದ್ದರು (1956–61). ಜೀವನ ಮಾಸಪತ್ರಿಕೆಗೆ ಕೆಲವು ವರ್ಷಗಳ ಕಾಲ ಸಂಪಾದಕರಾಗಿದ್ದರು. ಇವರು 1967ರ ಅಕ್ಟೋಬರ್ 8ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. (ಟಿ.ಎಸ್.ಎಸ್.)

**ಗೋಪಾಲಕೃಷ್ಣರಾಯರು, ಎಂ. :** 1904–. ಆಯುರ್ವೇದದ ಮಹಾನ್ ಚೇತನ ಮತ್ತು ವೈದ್ಯಸಾಹಿತಿ. ಇವರು 1904ರ ಅಕ್ಟೋಬರ್ ಒಂದರಂದು ದಕ್ಷಿಣಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಜಾರ್ ಗ್ರಾಮದಲ್ಲಿ ಜನಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ

ಭಾಗವಹಿಸಲು ಪ್ರಾಥಮಿಕ ಶಿಕ್ಷಣ ತ್ಯಜಿಸಿ ಅನಂತರ ರಾಷ್ಟ್ರೀಯ ಶಾಲೆ ಸೇರಿದರು. ಪಂಡಿತ ತಾರಾನಾಥರಿಂದ ಪ್ರಭಾವಿತರಾಗಿ ಆಯುರ್ವೇದ ಕಲಿಯಲು ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜು ಸೇರಿದರು. ತಾರಾನಾಥರನ್ನೇ ತಮ್ಮ ಗುರುಗಳೆಂದು ನಿರ್ಧರಿಸಿದರು. 1928ರಲ್ಲಿ ಆಯುರ್ವೇದ ಪದವಿ ಪಡೆದರು. 1930ರಲ್ಲಿ ಕಾಮದ ಗುಟ್ಟು ಎಂಬ ಪುಸ್ತಕ ಬರೆದು ಕಾಮದ ಕುರಿತು ಜನಸಾಮಾನ್ಯರಿಗೆ ತಿಳಿವಳಿಕೆ ನೀಡಿದರು. 1936–37ರಲ್ಲಿ ಕಲಿಯುಗ ಎಂಬ ಕಾಮ ವಿಜ್ಞಾನದ ಪತ್ರಿಕೆಯ ಸಂಪಾದಕರಾದರು. ಆಗಲೇ ಪ್ರೇಮಕಲಾ ಎಂಬ ಕಾಮ ಜೀವನದ ಬಗ್ಗೆ ಉತ್ತಮ ಮಾರ್ಗದರ್ಶನ ನೀಡುವ ಪುಸ್ತಕ ರಚಿಸಿದರು. ಅನಂತರ ಗರ್ಭ ನಿರೋಧ ಎಂಬ ಕುಟುಂಬ ಯೋಜನೆ ಕುರಿತಾದ ಪುಸ್ತಕ ಬರೆದರು. ಬಹುಶಃ ಕುಟುಂಬ ಯೋಜನೆ ಕುರಿತಾದ ಪುಸ್ತಕಗಳಲ್ಲಿ ಭಾರತದಲ್ಲಿಯೇ ಇದು ಮೊದಲನೆಯದು. ತಮ್ಮ ಹುಟ್ಟೂರಿನಲ್ಲಿ ಧರ್ಮಾರ್ಥ ಚಿಕಿತ್ಸಾಲಯವನ್ನು ನಡೆಸುತ್ತಿದ್ದರು. ಇವರು ಅಖಿಲ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲದ ಅಧ್ಯಕ್ಷರಾಗಿದ್ದರು. ಇದೇ ಸಮಯದಲ್ಲಿ ದೀರ್ಘಾಯು ಮಾಸಪತ್ರಿಕೆ ಆರಂಭಿಸಿದರು. 1956ರಿಂದ ಕಲಿಯುಗ ಮತ್ತು ದೀರ್ಘಾಯುಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. 25 ವರ್ಷಗಳ ಅನಂತರ ಪ್ರಕಾಶಕರ ಅವ್ಯವಸ್ಥೆಯಿಂದ ಕಲಿಯುಗ ನಿಂತುಹೋಯಿತು. ಬೆಂಗಳೂರಿನಲ್ಲಿ ಆಯುರ್ವೇದಿಕ್ ಕಾಲೇಜನ್ನು ಇವರು ಸ್ಥಾಪಿಸಿ (1961) ಕೆಲಸಮಯ ಅದರ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ಇದೇ ಈಗ ಆಯುರ್ವೇದ ಪ್ರತಿಷ್ಠಾನ ಎಂಬ ಹೆಸರಿನಲ್ಲಿ ಸೇವಾಶ್ರಮವಾಗಿ ಅವರ ಕುಟುಂಬದವರಿಂದ ನಡೆಸಲ್ಪಡುತ್ತಿದೆ. ಇವರು ಬರೆದ ಎರಡು ಪುಸ್ತಕಗಳು ಪಠ್ಯಪುಸ್ತಕವಾಗಿವೆ. 10 ಪುಸ್ತಕಗಳು ಪ್ರಕಟವಾಗಿದ್ದು ಇನ್ನೂ ಪ್ರಕಟವಾಗದೇ ಉಳಿದಿರುವ ಹಸ್ತಪ್ರತಿಗಳಿವೆ. ಕರ್ನಾಟಕ ಸರ್ಕಾರ 1990ರ ಸಾಲಿನ ಧನ್ವಂತರಿ ಸ್ವರ್ಣಪದಕದ ಪ್ರಶಸ್ತಿಯನ್ನು ಇವರಿಗೆ ಮರಣೋತ್ತರವಾಗಿ ನೀಡಿ ಗೌರವಿಸಿದೆ. (ವಿ.ಬಿ.)

**ಗೋಪಾಲಗೌಡ, ಶಾಂತವೇರಿ :** 1923–72. ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆಗಳನ್ನು ಹುಟ್ಟುಹಾಕಿದ ಪ್ರಸಿದ್ಧ ಸಮಾಜವಾದಿ ಧುರೀಣ, ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಯುವ ನಾಯಕ ಹಾಗೂ ಉಜ್ವಲ ವಾಗ್ಮಿ. ಇವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಆರಗ ಎಂಬ ಗ್ರಾಮದ ಬಡ ರೈತ ಕುಟುಂಬದಲ್ಲಿ ಹುಟ್ಟಿದರು. ಆ ಗ್ರಾಮದ ಶಾಂತವೇರಿ ಮನೆ ಎಂಬ ಸ್ಥಳದಲ್ಲಿ ಇವರ ಮನೆ ಇದ್ದುದರಿಂದ ಇವರ ಹೆಸರಿನೊಂದಿಗೆ ಶಾಂತವೇರಿ ಸೇರಿಕೊಂಡಿತು. ಬಹುಶಃ ಇವರ ಮನೆತನದ ಹಿರಿಯರು ಅಲ್ಲಿಂದ ಬಂದವರಿರಬೇಕು. ತಂದೆ ಕೊಲ್ಲೂರಯ್ಯಗೌಡರು ಅಂಚೆ ಇಲಾಖೆಯಲ್ಲಿ ಅಂಚೆ ಬಟವಾಡೆ ಮಾಡುವ ಪೇದೆಯಾಗಿದ್ದರು. ಬಡತನದ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಂಡು ಆರಗ, ತೀರ್ಥಹಳ್ಳಿ ಮತ್ತು ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ಮಾಡಿದರು. ಶಿವಮೊಗ್ಗದಲ್ಲಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿದ ಇವರು ವಿದ್ಯಾರ್ಥಿ ಕಾಂಗ್ರೆಸ್ಸಿನ ಮುಂಚೂಣಿಯಲ್ಲಿದ್ದರು. 1946ರಲ್ಲಿ ಶಿವಮೊಗ್ಗದಲ್ಲಿ ಸೇರಿದ್ದ ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನದ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೈಸೂರಿನ ಆಗಿನ ರಾಜಕೀಯ ಧುರೀಣರಲ್ಲಿ ಅನೇಕರು ಕರ್ನಾಟಕದ ಏಕೀಕರಣದ ಬಗ್ಗೆ ಅಡ್ಡ ಗೋಡೆಯ ಮೇಲಿನ ನಿಲುವು ತಾಳಿದಾಗ ಶಿವಮೊಗ್ಗದಲ್ಲಿ ಸಮಾವೇಶಗೊಂಡಿದ್ದ ವಿದ್ಯಾರ್ಥಿ ಸಮ್ಮೇಳನ ಕರ್ನಾಟಕದ ಏಕೀಕರಣವನ್ನು ಪ್ರತಿಪಾದಿಸಿತು. ಕನ್ನಡ ಮಾತನಾಡುವ ಜನರಿರುವ ಎಲ್ಲ ಪ್ರದೇಶಗಳನ್ನು ಒಳಗೊಂಡ ಕರ್ನಾಟಕ ರಾಜ್ಯ ರೂಪಿತವಾಗಬೇಕೆಂದೂ ಮೈಸೂರಿನ ಮಹಾರಾಜರ ಹುದ್ದೆ ರದ್ದಾಗಬೇಕೆಂದೂ ಆ ಸಮ್ಮೇಳನ ನಿರ್ಣಯ ಮಾಡಿತು. ಆಗಿನಿಂದಲೇ ಇವರು ಶಿವಮೊಗ್ಗದ ಇತರ ಯುವಕ ಮುಖಂಡರೊಡನೆ ಸೇರಿ ಕರ್ನಾಟಕದ ಏಕೀಕರಣಕ್ಕಾಗಿ ಸತತವಾಗಿ ಶ್ರಮಿಸಿದರು. ಶಿವಮೊಗ್ಗ ಜಿಲ್ಲೆಯ ಈ ಯುವಕ ತಂಡದವರೇ ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಸಂಘಟನೆಯಲ್ಲಿ (1948) ಪ್ರಮುಖ ಪಾತ್ರ ವಹಿಸಿದರು. ಶಾಂತವೇರಿ ಗೋಪಾಲಗೌಡರು ಈ ಗೆಳೆಯರ ಬಳಗಕ್ಕೆ ಮುಂದಾಳಾಗಿದ್ದರು.



ಸಮಾಜವಾದಿ ಪಕ್ಷ ಗೇಣಿದಾರರ ಹಿತರಕ್ಷಣೆಗಾಗಿ ಹೋರಾಟ ಮಾಡುವ ನಿರ್ಧಾರ ಕೈಗೊಂಡ ಮೇಲೆ ಶಿವಮೊಗ್ಗ ಜಿಲ್ಲೆಯ ಕಾಗೋಡಿನಲ್ಲಿ ನಡೆದ ಪ್ರಥಮ ಹೋರಾಟ (1951) ಬಹುದಿನಗಳ ಕಾಲ ಉಗ್ರವಾಗಿ ನಡೆಯಿತು. ಗೋಪಾಲಗೌಡರು ಸತ್ಯಾಗ್ರಹದ ನಾಯಕರುಗಳಲ್ಲೊಬ್ಬರಾಗಿದ್ದು ಗೇಣಿದಾರರ ಜ್ವಲಂತ ಸಮಸ್ಯೆ ಬಗ್ಗೆ ರಾಜ್ಯದ ಜನರ ಹಾಗೂ ಪ್ರಭುತ್ವದ ಗಮನವನ್ನು ಸೆಳೆದರು. ಸಮಾಜವಾದಿ ಧುರೀಣ ರಾಮಮನೋಹರ ಲೋಹಿಯಾ ಅವರು ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧಿಸಲ್ಪಟ್ಟಿದ್ದರು. ಇವರಿಗೆ ಲೋಹಿಯಾರವರ ನಿಕಟ ಪರಿಚಯವಾಯಿತು. ಲೋಹಿಯಾರವರ ವಿಚಾರ ದರ್ಶನವೂ ಇವರ ಮೇಲೆ ತುಂಬ ಪ್ರಭಾವ ಬೀರಿತು. ಇವರು ರಾಜ್ಯಮಟ್ಟದಲ್ಲಿ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದರು. ಅಖಿಲ ಭಾರತ ಸಮಾಜವಾದಿ ಪಕ್ಷದ ಲೋಹಿಯಾ ಪಂಗಡದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು. ಆ ಪಕ್ಷದ ಮುಖಪತ್ರಿಕೆ 'ಮ್ಯಾನ್‌ಕೈಂಡ್'ನ ಸಂಪಾದಕ ಮಂಡಳಿಯ ಸದಸ್ಯರೂ ಆಗಿದ್ದರು.

1952ರಲ್ಲಿ ನಡೆದ ಚುನಾವಣೆಯಲ್ಲಿ ಸಾಗರ – ಹೊಸನಗರ ಕ್ಷೇತ್ರದಿಂದ ಅಂದಿನ ಮೈಸೂರು ರಾಜ್ಯ ವಿಧಾನ ಸಭೆಗೆ ಚುನಾಯಿತರಾಗಿದ್ದರು. 1960ರಲ್ಲಿ ಗೋವ ವಿಮೋಚನ ಚಳವಳಿ ಯಲ್ಲಿ ಭಾಗವಹಿಸಿದರು. 1962 ಮತ್ತು 1967ರ ಚುನಾವಣೆಗಳಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ವಿಧಾನ ಸಭೆಗೆ ಚುನಾಯಿತರಾಗಿದ್ದರು. ವಿಧಾನ ಸಭೆಯಲ್ಲಿ ಇವರು ಮಾಡುತ್ತಿದ್ದ ಭಾಷಣಗಳು ಎಲ್ಲ ಪಕ್ಷಗಳ ಸದಸ್ಯರ ಮೆಚ್ಚುಗೆಗೂ ಪಾತ್ರವಾಗಿದ್ದವು. ವಿಧಾನ ಮಂಡಲದ ಕಾರ್ಯ ಕಲಾಪಗಳು ಕನ್ನಡದಲ್ಲೇ ಜರುಗಬೇಕೆಂದು ಇವರು ತೀವ್ರ ಆಗ್ರಹ ಮಾಡುತ್ತಿದ್ದರು. ಕರ್ನಾಟಕದಲ್ಲಿ ಶಿಕ್ಷಣ, ಆಡಳಿತ, ಶಾಸನ ಮತ್ತು ನ್ಯಾಯಾಂಗ ಈ ಎಲ್ಲ ಕ್ಷೇತ್ರಗಳಲ್ಲೂ ಕನ್ನಡವೇ ಮಾಧ್ಯಮವಾಗಬೇಕೆಂದು ಇವರು ತಮ್ಮ ಪಕ್ಷದ ಸದಸ್ಯರೊಂದಿಗೆ ತೀವ್ರ ಚಳವಳಿ ಮಾಡಿದರು.

ಸಮಾಜವಾದ, ಪ್ರಜಾತಂತ್ರ, ನಾಡು ನುಡಿ ಮತ್ತು ಮಾನವನ ಹೆಗ್ಗಳಿಕೆಗಾಗಿ ಅವಿಶ್ರಾಂತರಾಗಿ ದುಡಿದ ಗೌಡರು ತಮ್ಮ 50ನೆಯ ವಯಸ್ಸಿನಲ್ಲೇ (1972) ನಿಧನಹೊಂದಿದರು. ಪತ್ನಿ ಸೋನಕ್ಕ, ಪುತ್ರಿ ಇಳಾಗೀತ, ಪುತ್ರ ರಾಮಮನೋಹರ. ಬೆಂಗಳೂರಿನ ವಿಧಾನ ಸೌಧದ ಹತ್ತಿರದ ವೃತ್ತಕ್ಕೆ ಗೌಡರ ಹೆಸರಿಡಲಾಗಿದೆ. ಇವರನ್ನು ಕುರಿತು ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಡಿ.ಎಸ್.ಜಯಪ್ಪಗೌಡ ಮತ್ತು ಇತರರು ರಚಿಸಿರುವ ಶಾಂತವೇರಿ ಗೋಪಾಲಗೌಡ (1999), ಕಾಳೇಗೌಡ ನಾಗವಾರರು ಸಂಪಾದಿಸಿರುವ ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ (1997), ಎಚ್.ಸಿ.ವಿಷ್ಣುಮೂರ್ತಿಯವರ ಗೋಪಾಲಗೌಡರ ಡೈರಿ, ಪತ್ರಗಳು ಇತ್ಯಾದಿ (1982)– ಈ ಕೃತಿಗಳು ಪ್ರಕಟವಾಗಿವೆ. (ಬಿ.ಆರ್.ಪಿ.)

**ಗೋಪಾಲದಾಸ :** 1722–62. ಕನ್ನಡ ನಾಡಿನ ಹರಿದಾಸರಲ್ಲಿ ಅಗ್ರಗಣ್ಯ; ವಿಜಯ ದಾಸನ ಶಿಷ್ಯ. 'ಭಕ್ತಿಯಲ್ಲಿ ಭಾಗಣ್ಣ' ಎಂಬ ಸ್ತುತಿಗೆ ಪಾತ್ರನಾದವ. ಹರಿದಾಸರ ಪೀಳಿಗೆಯನ್ನು ನಿರೂಪಿಸುವಲ್ಲಿ ಪುರಂದರ ದಾಸ, ವಿಜಯದಾಸ, ಗೋಪಾಲದಾಸ ಮತ್ತು ಜಗನ್ನಾಥದಾಸರುಗಳನ್ನು ಒಟ್ಟಿಗೆ ದಾಸ ಚತುಷ್ಟಯರೆಂದು ನಿರ್ದೇಶಿಸುವ ಸಂಪ್ರದಾಯ ಉಂಟು. ಗೋಪಾಲದಾಸ ಹುಟ್ಟಿದ್ದು ಈಗಿನ ಆಂಧ್ರಪ್ರದೇಶಕ್ಕೆ ಸೇರಿದ ಗದ್ವಾಲಿಗೆ ಸಮೀಪದಲ್ಲಿರುವ ಮೊಸರುಕಲ್ಲು ಎಂಬಲ್ಲಿ. ಈತ ಹುಟ್ಟಿದ ಕೆಲವು ವರ್ಷಗಳಲ್ಲಿ ತಂದೆ ಕಾಲವಾದುದರಿಂದ ಈತನ ತಾಯಿ ವೆಂಕಮ್ಮ ತನ್ನ ನಾಲ್ವರು ಗಂಡು ಮಕ್ಕಳೊಂದಿಗೆ ದಿಕ್ಕಿಲ್ಲದೆ ಸಂಕಾಪುರಕ್ಕೆ ಬಂದು ಅಲ್ಲಿನ ಊರ ಹೊರಗಿದ್ದ ಮಾರುತಿ ದೇವಾಲಯದಲ್ಲಿ ಆಶ್ರಯ ಪಡೆದಳು. ಆಕೆಗೆ ಮಕ್ಕಳನ್ನು ಸಾಕುವುದು ತುಂಬ ಕಷ್ಟವಾಗಿತ್ತು. ಸ್ವಲ್ಪ ವಯಸ್ಸಿಗೆ ಬಂದು ವಿದ್ಯಾವಂತನಾದ ಗೋಪಾಲದಾಸ ತಾಯಿಯ ಬವಣೆಯನ್ನು ತಪ್ಪಿಸುವ ಉದ್ದೇಶದಿಂದ ಸಂಪಾದಿಸಲು ಮನಸ್ಸು ಮಾಡಿದ. ಗಾಯತ್ರೀ ಮಂತ್ರ ಧ್ಯಾನದಿಂದ ಅಪೂರ್ವ ಸಿದ್ಧಿಯನ್ನು ಪಡೆದು ಭವಿಷ್ಯ ಹೇಳುವುದರಲ್ಲಿ ನಿಷ್ಣಾತನಾದ. ದಿನದಿನಕ್ಕೆ ಈತನ ಬಗ್ಗೆ ಜನಾನುರಾಗ ಹೆಚ್ಚಿತು. ಇದಲ್ಲದೆ ಕವಿತೆ ರಚಿಸುವ ಸಾಮರ್ಥ್ಯವೂ ಈತನಿಗೆ ದೈವದತ್ತವಾಗಿ ಲಭಿಸಿತ್ತು. ಮಗನ ಈ ಏಳಿಗೆಯಿಂದ ವೆಂಕಮ್ಮನ ಕಷ್ಟಗಳು ಕ್ರಮಕ್ರಮವಾಗಿ ಕಡಿಮೆಯಾಯಿತಾಗಿ ಆಕೆ ಮಕ್ಕಳೊಂದಿಗೆ ಊರ ಹೊರಗಿನ ಮಾರುತಿ ದೇವಾಲಯದಿಂದ ಉತ್ತನೂರಿಗೆ ಬಂದು ನೆಲೆಸಿದಳು. ಅಲ್ಲಿನ ವೆಂಕಟೇಶ್ವರ ಗುಡಿಯೇ ಗೋಪಾಲದಾಸನ ಕಾರ್ಯಕ್ಷೇತ್ರವಾಯಿತು. ಹರಿದಾಸರಲ್ಲಿ ಪ್ರಸಿದ್ಧನಾಗಿದ್ದ ವಿಜಯದಾಸನ ಸಂದರ್ಶನ ಗೋಪಾಲದಾಸನಿಗೆ ಲಭ್ಯವಾದದ್ದು ಅಲ್ಲಿಯೇ. ಅವನಿಂದ ಗೋಪಾಲದಾಸ ಗೋಪಾಲವಿಠಲ ಎಂಬ ಅಂಕಿತವನ್ನು ಪಡೆದು, ಹರಿದಾಸ ದೀಕ್ಷೆಯನ್ನು ಕೈಕೊಂಡ. ಅಣ್ಣನ ಈ ದೀಕ್ಷೆಯನ್ನು ಕಂಡು ತಮ್ಮಂದಿರೂ ಆ ಕೈಂಕರ್ಯದಲ್ಲಿಯೇ ತೊಡಗಿ ಕೀರ್ತನೆಗಳನ್ನು ರಚಿಸಿ ಕೃತಾರ್ಥರಾದರು. ವಿಜಯದಾಸನ ಪರಮಾನುಗ್ರಹಕ್ಕೆ ಪಾತ್ರನಾಗಿದ್ದ ಗೋಪಾಲದಾಸ ವಿಖ್ಯಾತನಾದ ಮಾನ್ವಿಯ ಶ್ರೀನಿವಾಸಾಚಾರ್ಯನಿಗೆ (ಜಗನ್ನಾಥದಾಸ) ತನ್ನ ಆಯುಸ್ಸಿನ ಸ್ವಲ್ಪ ಅವಧಿಯನ್ನು ದಾನ ಮಾಡಿ, ಆತ ಹರಿದಾಸ ದೀಕ್ಷೆಯಲ್ಲಿ ನಿರತನಾಗುವಂತೆ ಮಾಡಿದ ಸಂಗತಿಯಂತೂ ಅಸದೃಶ್ಯವೂ ಆಶ್ಚರ್ಯಕರವೂ ಆದುದು. ಹೀಗೆಯೇ ಗೋಪಾಲದಾಸ

ತನ್ನ ತಮ್ಮಂದಿರೊಂದಿಗೆ ಕೂಡಿ ಆಶುಕವಿತೆಯಲ್ಲಿ ಜಯಪ್ರದನಾಗಿ ಉತ್ತರಾದಿ ಮಠದ ಶ್ರೀಗಳವರಾದ ಸತ್ಯಬೋಧತೀರ್ಥರ ಅನುಗ್ರಹವನ್ನು ಸಂಪಾದಿಸಿದ ಘಟನೆ ಉಲ್ಲೇಖನಾರ್ಹ ವಾದುದು. ಐಜಿ ವೆಂಕಟರಾಮಾಚಾರ್ಯ ಮತ್ತು ಹೆಳವನಕಟ್ಟೆ ಗಿರಿಯಮ್ಮ ಮೊದಲಾದವರು ಗೋಪಾಲದಾಸನ ಶಿಷ್ಯವರ್ಗಕ್ಕೆ ಸೇರಿದವರಲ್ಲಿ ಪ್ರಮುಖರು. ಗೋಪಾಲದಾಸ ಕೀರ್ತನಕಾರನಾಗಿದ್ದಂತೆಯೇ ಕುಶಲಿಯಾದ ಚಿತ್ರಕಾರನೂ ಆಗಿದ್ದ. ಆ ಕಲೆಯನ್ನು ತನ್ನ ಆಧ್ಯಾತ್ಮಿಕ ಗುರಿಯನ್ನು ಸಾಧಿಸಲು ಒಂದು ಸಾಧನವನ್ನಾಗಿ ಬಳಸಿಕೊಂಡ. ಈತನಿಂದ ರಚಿತವಾದ ಎಷ್ಟೋ ಚಿತ್ರಪಟಗಳನ್ನು ಭಕ್ತರು ಪೂಜಿಸಿ, ತಮ್ಮ ತಮ್ಮ ಇಷ್ಟಾರ್ಥವನ್ನು ಪಡೆದರೆಂದು ತಿಳಿದುಬರುತ್ತದೆ.

ಗೋಪಾಲದಾಸ ರಚಿಸಿರುವ ಧನ್ವಂತ್ರಿಸ್ತುತಿ, ಪಂಡರಾಪುರದ ಪಾಂಡುರಂಗ ದರ್ಶನವಿತ್ತ ಸಂದರ್ಭವನ್ನು ಕುರಿತ ಒಂದು ಸುಳಾದಿ, ಕರ್ತೃವಿನ ಅಂತರಂಗದ ಅಭೀಪ್ಸೆ ಮತ್ತು ಆಧ್ಯಾತ್ಮಿಕ ಪ್ರಗತಿಗಳನ್ನು ಚಿತ್ರಿಸುವ ಹಲವಾರು ರಚನೆಗಳು– ಹರಿದಾಸ ಸಾಹಿತ್ಯದಲ್ಲಿ ತುಂಬ ಮನ್ನಣೆ ಗಳಿಸಿವೆ. (ವಿ.ಜಿ.)

**ಗೋಪಾಲನಾಯಕ :** 1295–1315. ಅಲ್ಲಾವುದ್ದೀನ್ ಖಿಲ್ಜಿಯ ದರ್ಬಾರಿನಲ್ಲಿದ್ದ ಸುಪ್ರಸಿದ್ಧ ಗಾಯಕ ಮತ್ತು ಕವಿ. ಮೂಲತಃ ದೇವಗಿರಿಯವ. ಅಲ್ಲಾವುದ್ದೀನನ ಸೇನಾಪತಿ ಮಲಿಕ್ ಕಾಫೂರ್ ದಕ್ಷಿಣದ ದಂಡಯಾತ್ರೆ ಕೈಗೊಂಡ ಸಮಯದಲ್ಲಿ ಈತನ ಸಂಗೀತಕ್ಕೆ ಮನಸೋತು ದೆಹಲಿಗೆ ಮರಳುವಾಗ ಈತನನ್ನು ತನ್ನ ಜೊತೆ ಕರೆದುಕೊಂಡು ಹೋದನೆನ್ನಲಾಗಿದೆ.

ನಾಯಕ ಕದಂಬಕಮ್ ರಾಗದಲ್ಲಿನ ತಾಲವರ್ಣಗಳ ಮತ್ತು ಗ್ರಹಸ್ವರ ಪ್ರಬಂಧಮ್‌ಗಳ ಕರ್ತೃ. ದಾಕ್ಷಿಣಾತ್ಯ ಸಂಗೀತದಲ್ಲಿ ಮಹಾವಿದ್ವಾಂಸನೆಂದು ಈತನನ್ನು ಸಂಗೀತ ಶಾಸ್ತ್ರಜ್ಞನಾದ ವೆಂಕಟಮಖಿ ಹೊಗಳಿದ್ದಾನೆ. ಪರ್ಷಿಯನ್ ಸಂಗೀತಜ್ಞ ಅಮೀರ್ ಖುಸ್ರು ಈತನ ಸಂಗೀತ ನೈಪುಣ್ಯವನ್ನು ಕಂಡು ಬೆರಗಾದನಂತೆ. ಒಂದು ವಾರ ಪರ್ಯಂತ ಬಿಡದೆ ಗೋಪಾಲನಾಯಕನ ಹಿಂದೆ ಅವಿತುಕೊಂಡು ಸಂಗೀತವನ್ನು ಆಲಿಸಿದ ಖುಸ್ರು ಎಂಟನೆಯ ದಿನ ಹುಬೇಹೂಬ್ ಆತನಂತೆಯೇ ಹಾಡಿ ಎಲ್ಲರನ್ನೂ ದಿಗ್ಭ್ರಮೆಗೊಳಿಸಿದನೆಂದು ಪ್ರತೀತಿ. ಅನಂತರ ಅಮೀರ್ ಖುಸ್ರು ಮತ್ತು ಗೋಪಾಲನಾಯಕರಿಬ್ಬರೂ ಪರಮ ಮಿತ್ರರಾದರು. *

**ಗೋಪಾಲರಾವ್ ಹಿರಿಯಡಕ :** 1919–. ಕರ್ನಾಟಕದ ಕರಾವಳಿಯ ಯಕ್ಷಗಾನದ ಬಡಗುತಿಟ್ಟಿನ ಪ್ರಸಿದ್ಧ ಮದ್ದಲೆ ಕಲಾವಿದ ಹಾಗೂ ಯಕ್ಷಗಾನ ಗುರು. ಉಡುಪಿ ತಾಲ್ಲೂಕಿನ ಹಿರಿಯಡಕದಲ್ಲಿ 1919ರ ಡಿಸೆಂಬರ್ 15ರಂದು ಜನನ. ತಂದೆ ಶೇಷಗಿರಿರಾವ್, ತಾಯಿ ಲಕ್ಷ್ಮೀ. ಗೋಪಾಲರಾಯರು ಉಡುಪಿಯ ಅನಂತೇಶ್ವರ ದೇವಸ್ಥಾನದ ಜಗಲಿಯಲ್ಲಿದ್ದ ಪ್ರಾಥಮಿಕ ಶಾಲೆಯಲ್ಲಿ ಆರನೆಯ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದರು. ಇವರು ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ತಂದೆಯಿಂದ ಮದ್ದಳೆಯನ್ನು, ತಂದೆಯವರ ಗುರು ನಾಗಪ್ಪ ತಮ್ಮಿಯವರಿಂದ ಯಕ್ಷಗಾನ ಕುಣಿತವನ್ನು ಕಲಿತರು. ಇವರು ಹಿರಿಯಡಕದ ವೀರಭದ್ರ ದೇವಸ್ಥಾನದ ಮೇಳದಲ್ಲಿ ವೇಷಧಾರಿಯಾಗಿ ರಂಗಪ್ರವೇಶ ಮಾಡಿದ್ದು 1934ರಲ್ಲಿ. ಒತ್ತು ಮದ್ದಳೆಗಾರನಾಗಿ ಮೇಳದಲ್ಲಿ ಸೇವೆ (1936), ನಿಜಮದ್ದಳೆಗಾರನಾಗಿ ಅಮೃತೇಶ್ವರಿ ಮೇಳದಲ್ಲಿ ಸೇವೆ (1939), ಅನಂತರ 1968ರ ತನಕ ಬಡಗುತಿಟ್ಟಿನ ಭಾಗವತಿಕೆಯ ಸೀಮಾಪುರುಷ ಕುಂಜಾಲು ಶೇಷಗಿರಿ ತಿನಿಯವರ ಜತೆಯಲ್ಲಿ ಮದ್ದಳೆಗಾರನಾಗಿ ಮಂದರ್ತಿ ಮೇಳದಲ್ಲಿ ಸುದೀರ್ಘ ಸೇವೆ–ಇವು ಗೋಪಾಲರಾಯರ ಕಲಾಜೀವನದ ಮೈಲಿಗಲ್ಲುಗಳು.

1958ರಲ್ಲಿ ಶಿವರಾಮ ಕಾರಂತರು ಬ್ರಹ್ಮಾವರದಲ್ಲಿ ಆಯೋಜಿಸಿದ ಪ್ರಪ್ರಥಮ ಯಕ್ಷಗಾನ ಗೋಷ್ಠಿಯಲ್ಲಿ ಇವರು ಮದ್ದಳೆಗಾರನಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಕಾರಂತರು ಇವರ ಮದ್ದಳೆಯ ಮೋಡಿ, ಪ್ರತಿಭೆ, ಸೃಜನಶೀಲತೆಗಳನ್ನು ಗುರುತಿಸಿದರು. 1968ರಲ್ಲಿ ಕಾರಂತರು ಬ್ರಹ್ಮಾವರದಲ್ಲಿ ಒಂದು ವರ್ಷ ನಡೆಸಿದ ಯಕ್ಷಗಾನ ಕೇಂದ್ರದಲ್ಲಿ ಇವರು ಮುಖ್ಯ ಅಧ್ಯಾಪಕರಾಗಿದ್ದರು. ಕಾರಂತರ ನಿರ್ದೇಶನದಲ್ಲಿ ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಆರಂಭವಾದ ಯಕ್ಷಗಾನ ಕೇಂದ್ರದಲ್ಲಿ ಇವರು 1971ರಿಂದ 76ರ ತನಕ ಗುರುವಾಗಿ ಸೇವೆ ಸಲ್ಲಿಸಿದರು.

ಅಮೆರಿಕದ ಕ್ಯಾಲಿಫೋರ್ನಿಯಾದ ಹೇವಾರ್ಡ್ ವಿಶ್ವವಿದ್ಯಾನಿಲಯದಲ್ಲಿ ಮಾನವ ಶಾಸ್ತ್ರಜ್ಞ ಪೀಟರ್ ಜೆ. ಕ್ಲಾಸ್ 1968ರಲ್ಲಿ ಇಲ್ಲಿಗೆ ಬಂದು ಒಂದು ವರ್ಷ ಮದ್ದಳೆ ಕಲಿತರು. ಕಾರಂತರ ಮಾರ್ಗದರ್ಶನದಲ್ಲಿ ಯಕ್ಷಗಾನ ಕುರಿತು ಸಪ್ರಬಂಧ ಬರೆಯಲು ಬಂದ ಅವರಿಗೆ ಗೋಪಾಲರಾಯರು ಯಕ್ಷಗಾನ ಕಲಿಸಿದರು. 1977ರಲ್ಲಿ ಅಮೆರಿಕಕ್ಕೆ ಭೇಟಿ ನೀಡಿ ಹದಿನಾಲ್ಕು ಕಡೆ ಯಕ್ಷಗಾನ ಪ್ರಾತ್ಯಕ್ಷಿಕೆ ನೀಡಿದರು. 1979–80ರಲ್ಲಿ ಬಿ.ವಿ.ಆಚಾರ್ಯರ ನೇತೃತ್ವದಲ್ಲಿ ಎರಡನೆಯ ಬಾರಿ ವಿದೇಶ ಪ್ರವಾಸ ಮಾಡಿ ಗೋಪಾಲರಾಯರು ಅಮೆರಿಕದಲ್ಲಿ ಹದಿನಾಲ್ಕು, ಜರ್ಮನಿಯಲ್ಲಿ ನಾಲ್ಕು ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗವಹಿಸಿದರು. ಬಿ.ವಿ.ಕಾರಂತರ ನಿರ್ದೇಶನದಲ್ಲಿ ಕಲ್ಕತ್ತದಲ್ಲಿ (1982) ನಡೆದ ಕಲಾಗೋಷ್ಠಿಯಲ್ಲಿ ಗೋಪಾಲರಾಯರು ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ ನೀಡಿದರು.

1993–95ರವರೆಗೆ ಇವರು ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದರು. ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1972), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1997), ಕರ್ನಾಟಕ ಸರ್ಕಾರದ ಜಾನಪದಶ್ರೀ ಪ್ರಶಸ್ತಿ (1998), ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮಿಗಳು ನೀಡಿದ ರಾಮವಿಠಲ ಪ್ರಶಸ್ತಿ (2003), ಉಡುಪಿಯ ಯಕ್ಷಗಾನ ಕಲಾರಂಗದವರ ದಶಾವತಾರಿ ರಾಮಕೃಷ್ಣ ಹೆಬ್ಬಾರ, ಭಾಗವತ ವಾದಿರಾಜ ಹೆಬ್ಬಾರ ಪ್ರಶಸ್ತಿ (2004)– ಇವು ಇವರಿಗೆ ಸಂದ ಮುಖ್ಯ ಪ್ರಶಸ್ತಿಗಳು.

ಜಪಾನಿನಲ್ಲಿ ನಡೆದ ಏಷಿಯನ್ ಕಲ್ಚರಲ್ ಸೆಮಿನಾರ್‌ನ ಸಂದರ್ಭದಲ್ಲಿ ಪ್ರಕಟವಾದ ಡಾನ್ಸ್ ಆ್ಯಂಡ್ ಮ್ಯೂಸಿಕ್ ಇನ್ ಸೌತ್ ಇಂಡಿಯನ್ ಡ್ರಾಮ (1981) ಗ್ರಂಥದಲ್ಲಿ ಮದ್ದಳೆಯ ಲಯವಿನ್ಯಾಸವನ್ನು ಕುರಿತ ಇವರ ಲೇಖನ ಪ್ರಕಟವಾಗಿದೆ. ಇವರ ಆತ್ಮಕತೆ ಮದ್ದಳೆಯ ಮಾಯಾಲೋಕ (ನಿರೂಪಣೆ ಕೆ.ಎಂ. ರಾಘವ ನಂಬಿಯಾರ್) 1997ರಲ್ಲಿ ಪ್ರಕಟವಾಗಿದೆ. ಇದು ಇಪ್ಪತ್ತನೆಯ ಶತಮಾನದ ಇತಿಹಾಸಕ್ಕೆ ಸಂಬಂಧಪಟ್ಟ ಸಮೃದ್ಧ ವಿವರಗಳಿರುವ ಅಮೂಲ್ಯ ಸಾಂಸ್ಕೃತಿಕ ದಾಖಲೆಯಾಗಿದೆ. (ಎಂ.ಯು.)

**ಗೋಪಾಲಸ್ವಾಮಿ ಬೆಟ್ಟ :** ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆಯಿಂದ 15 ಕಿಮೀ ನೈರುತ್ಯಕ್ಕಿರುವ ಬೆಟ್ಟ, ಸುಂದರ ತಾಣ, ಐತಿಹಾಸಿಕ ಸ್ಥಳ. ಸಮುದ್ರಮಟ್ಟದಿಂದ 1446 ಮೀ ಎತ್ತರವಿದೆ.

ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ

ಶಿಖರವನ್ನೇರಲು 5 ಕಿಮೀ ಮಾರ್ಗ ಸವೆಸಬೇಕಾಗುತ್ತದೆ. ಬೆಟ್ಟದಲ್ಲಿ ಅನೇಕ ನೀರುಬುಗ್ಗೆಗಳಿದ್ದು ಜಲಾಂಶ ಅಧಿಕವಾಗಿದೆ. ಬೆಟ್ಟ ಸದಾ ಹಸಿರುಮಯವಾಗಿರುತ್ತದೆ. ವರ್ಷದ ಬಹುಕಾಲ ಮಂಜುಮೋಡಗಳಿಂದ ಮುಸುಕಿರುವುದರಿಂದ ಇದು ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂದೇ ಪ್ರಸಿದ್ಧವಾಗಿದೆ. ಹವಾಮಾನ ಚೆನ್ನಾಗಿರುವಾಗ ಮೈಸೂರು ಮತ್ತು ವೈನಾಡು ಪ್ರದೇಶಗಳ ಮನೋಹರ ದೃಶ್ಯವನ್ನು ಕಾಣಬಹುದು.

ಬೆಟ್ಟದ ಮೇಲುಭಾಗವನ್ನು ಸುತ್ತುವರಿದಿದ್ದ ಹಳೆಯ ಕೋಟೆ ಮತ್ತು ಕಂದಕದ ಅವಶೇಷಗಳನ್ನು ದೂರದಿಂದಲೇ ಗುರುತಿಸಬಹುದು. ಕೋಟೆಯ ಒಳಭಾಗದಲ್ಲಿ ಗೋಪಾಲಸ್ವಾಮಿ ದೇವಾಲಯವಿದೆ. ಇದು ಹೊಯ್ಸಳ 3ನೆಯ ಬಲ್ಲಾಳನ ಮಂತ್ರಿ ಮಾಧವ ದಣ್ಣಾಯಕನಿಂದ ನಿರ್ಮಾಣವಾದುದು (ಸು. 1300). ಇಲ್ಲಿ ವರ್ಷಕ್ಕೊಮ್ಮೆ ರಥೋತ್ಸವ ನಡೆಯುತ್ತದೆ.

ಪುರಾಣಗಳಲ್ಲಿ ಈ ಬೆಟ್ಟವನ್ನು ಕಮಲಾದ್ರಿ, ದಕ್ಷಿಣ ಗೋವರ್ಧನಗಿರಿ ಎಂದು ಕರೆಯಲಾಗಿದೆ. ಈ ಪ್ರದೇಶಕ್ಕೆ ಬೆಟ್ಟದಕೋಟೆ, ಮೂಡಣ ಕೋಟೆ ಎಂಬ ಹೆಸರುಗಳೂ ಇದ್ದುವು. ಇಲ್ಲಿಯ ಕೋಟೆಯನ್ನು ಕಟ್ಟಿದವನು ಸೋಮಣ್ಣ ದಣಾಯಕನೆಂದು ಒಂದು ಹೇಳಿಕೆ. ಪ್ರಾಯಶಃ ಇದೂ ಮಾಧವ ದಣ್ಣಾಯಕನ ಕಾಲದ್ದು. 15–17ನೆಯ ಶತಮಾನಗಳಲ್ಲಿ ಇದು ಕೋಟೆಸೀಮೆ ಎಂಬ ಪಾಳೆಯಪಟ್ಟಿನ ಮುಖ್ಯ ಸ್ಥಳವಾಗಿತ್ತು. ಆ ಸೀಮೆಯ ಅರಸುಗಳ ಅನುಕ್ರಮ ಹೀಗಿದೆ: ಇಮ್ಮಡಿ ರಾಜ ಒಡೆಯ – ನಂಜರಾಜ ಒಡೆಯ (1489) – ದೇವರಾಜ ಒಡೆಯ (1503) – ಗೋವಣ್ಣ ಒಡೆಯ (1504) – ದೇವೊಡೆಯ (1512) – ಸಿಂಗಪ್ಪ ಒಡೆಯ – ಚೆನ್ನರಾಯ ಒಡೆಯ (1517) – ಕೋಟೆ ಒಡೆಯ (1513) – ಮಾಧವ ನಾಯಕ (1530–48) – ದೊಡ್ಡ ಮಲ್ಲರಾಯ ಒಡೆಯ (1559) – ಲಿಂಗರಾಜ ಒಡೆಯ (1650–54) – ನಂಜರಾಜ ಒಡೆಯ (1569). (ಟಿ.ಎಸ್.)

**ಗೋಪಾಲಸ್ವಾಮಿ, ಎಂ.ವಿ. :** 1896–1957. ಪ್ರಸಿದ್ಧ ಭಾರತೀಯ ಮನಶಾಸ್ತ್ರಜ್ಞ ಮತ್ತು ಶಿಕ್ಷಣತಜ್ಞ. ಅಂದಿನ ಮದ್ರಾಸು ರಾಜ್ಯದಲ್ಲಿ 1896ರ ಡಿಸೆಂಬರ್ 31ರಂದು ಶ್ರೀಮಂತ ಮನೆತನದಲ್ಲಿ ಜನಿಸಿದರು. ತಂದೆ ಒಬ್ಬ ನ್ಯಾಯಾಧಿಕಾರಿ. ಸಣ್ಣ

ಹುಡುಗನಾಗಿದ್ದಾಗಿನಿಂದಲೂ ಗೋಪಾಲಸ್ವಾಮಿಯವರಿಗೆ ವ್ಯಾಸಂಗದಲ್ಲಿ ಹೇಗೋ ಹಾಗೆ ವ್ಯಾಯಾಮದಲ್ಲೂ ಕ್ರಿಕೆಟ್ ಮತ್ತು ಟೆನಿಸ್ ಆಟಗಳಲ್ಲೂ ಬಹಳ ಆಸಕ್ತಿ ಇತ್ತು. ಇವರ ಚಿಕ್ಕ ವಯಸ್ಸಿನಲ್ಲಿಯೇ ತಂದೆ ತೀರಿಹೋದದ್ದರಿಂದ ಇವರ ಪೋಷಣೆ, ಪಾಲನೆಗಳ ಹೊಣೆಯೆಲ್ಲ ತಾಯಿಯ ಮೇಲೇ ಬಿತ್ತು. ಹೈಸ್ಕೂಲು ವಿದ್ಯಾಭ್ಯಾಸದ ಅನಂತರ ಗೋಪಾಲಸ್ವಾಮಿಯವರು ಮದ್ರಾಸ್ ನಗರದ ಪಚ್ಚಯಪ್ಪ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ಅನಂತರ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿ ಬಿ.ಎ. ಪದವಿ ಪಡೆದರು. ಆಮೇಲೆ ಇಂಗ್ಲೆಂಡಿಗೆ ಹೋಗಿ ಲಂಡನ್ ವಿಶ್ವವಿದ್ಯಾಲಯದಲ್ಲಿ ಓದಿ ಬಿ.ಎಸ್‌ಸಿ. ಪದವಿ ಗಳಿಸಿದರು. ಮನಶ್ಶಾಸ್ತ್ರದಲ್ಲಿ ಹೆಚ್ಚು ಅಭಿರುಚಿ ಯುಂಟಾದ ಕಾರಣ ಅದೇ ವಿಶ್ವವಿದ್ಯಾಲಯದಲ್ಲಿ ಆ ವಿಷಯದ ಮೇಲೆ ತಮ್ಮ ವ್ಯಾಸಂಗವನ್ನು ಮುಂದುವರಿಸಿ ಅಲ್ಲಿನ ಮನಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಸಿ. ಸ್ಪಿಯರ್‌ಮನ್ ಎಂಬುವರ ನಿರ್ದೇಶನದಲ್ಲಿ ಡಾಕ್ಟರೇಟ್ ಪದವಿ ಪಡೆದರು.



ಭಾರತಕ್ಕೆ ಹಿಂತಿರುಗಿದ ಮೇಲೆ ಗೋಪಾಲಸ್ವಾಮಿಯವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮನಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ (1924) 20 ವರ್ಷ ಸೇವೆ ಸಲ್ಲಿಸಿ ಮುಂದೆ ಮೈಸೂರಿನ ಮಹಾರಾಜ ಕಾಲೇಜಿನ ಪ್ರಧಾನ ಆಡಳಿತಗಾರರಾದರು. ಇವರ ಆಸಕ್ತಿ ಮತ್ತು ಶ್ರದ್ಧೆಯ ಪರಿಣಾಮವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಯೋಗಿಕ ಮನಶಾಸ್ತ್ರ ಶಾಖೆ ಸ್ಥಾಪಿತವಾಯಿತು.

ತತ್ತ್ವಶಾಸ್ತ್ರದ ಒಂದು ಭಾಗವಾಗಿದ್ದ ಮನಶಾಸ್ತ್ರಕ್ಕೆ ಒಂದು ಪ್ರತ್ಯೇಕ ಸ್ಥಾನಮಾನವನ್ನು ದೊರಕಿಸಿಕೊಡಲು ಮತ್ತು ಮನಶಾಸ್ತ್ರಕ್ಕೆ ವೈಜ್ಞಾನಿಕ ವಿಧಾನಗಳನ್ನು ಅನ್ವಯಿಸಲು ಗೋಪಾಲಸ್ವಾಮಿಯವರು ಬಹಳ ಶ್ರಮಿಸಿದರು. ಇದಲ್ಲದೆ ಭಾರತದ ಪ್ರಾಚೀನ ಮನಶಾಸ್ತ್ರದ ಮೂಲತತ್ತ್ವಗಳ ಸಿಂಧುತ್ವವನ್ನು ಆಧುನಿಕ ಪ್ರಯೋಗ ಪರೀಕ್ಷಾ ಪದ್ಧತಿಗಳಿಂದ ಸ್ಥಿರೀಕರಿಸಿ ಆ ವಿಭಾಗದಲ್ಲೂ ಸಂಶೋಧನೆ ನಡೆಸಿದರು. ಪ್ರಾಣಿಗಳ ವರ್ತನೆ, ಅಪರಾಧ ಸಂಶೋಧನೆ, ಅತೀಂದ್ರಿಯ ಪ್ರತ್ಯಕ್ಷ, ಕಲಿಕೆಯ ರೀತಿಗಳು, ಅವಳಿಜವಳಿ ಮಕ್ಕಳ ಬುದ್ಧಿಶಕ್ತಿ, ಉಪಲಬ್ಧ ಗುಣಾರ್ಜನೆ, ಬಾಲಾಪರಾಧ, ಅನ್ಯತಶೋಧನೆ, ದರ್ಪಣ ಲೇಖನ, ಭಾವನಾರಚನೆ, ಕಾರ್ಯ ವಿಶ್ಲೇಷಣ, ಉತ್ಕಟಾಕಾಂಕ್ಷೆಯ ಮಟ್ಟ, ಕೈಚಳಕ, ಸಹಜ ಸಾಮರ್ಥ್ಯ ಪರೀಕ್ಷೆ, ಪ್ರತಿಕ್ರಿಯೆಯ ವೇಗ–ಮೊದಲಾದ ವಿಷಯಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಹಲವಾರು ಸಂಶೋಧನೆಗಳಿಗೆ ಯುಕ್ತ ಸಲಹೆ ನೀಡಿದರು. ಅಲ್ಲದೆ ಇಂಥ ಸಂಶೋಧನೆಗೆ ಬೇಕಾಗಬಹುದಾದ ಅನೇಕ ಉಪಕರಣಗಳನ್ನೂ ತಾವೇ ಸಿದ್ಧಪಡಿಸಿಕೊಂಡರೆಂಬ ವಿಷಯ ಗಮನಾರ್ಹವಾದುದು. ಇವರ ಸಂಶೋಧನ ಬರೆಹಗಳು ಇಂಗ್ಲೆಂಡಿನ ಮುಖ್ಯ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಅಲ್ಲದೆ ಗೋಪಾಲಸ್ವಾಮಿಯವರು ಆಲ್ ಇಂಡಿಯಾ ಸೈನ್ಸ್ ಕಾಂಗ್ರೆಸಿನ ಅನೇಕ ವಾರ್ಷಿಕ ಕೂಟಗಳಲ್ಲಿ ಭಾಗವಹಿಸಿ ತಮ್ಮ ಸಂಶೋಧನೆಗಳ ಬಗ್ಗೆ ವಿಚಾರಗಳನ್ನು ಮಂಡಿಸಿದರು.

ಮನಶಾಸ್ತ್ರದಲ್ಲಿ ಹೇಗೋ ಹಾಗೆ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲೂ ಅಪಾರ ಆಸಕ್ತಿಯಿತ್ತಾಗಿ ಗೋಪಾಲಸ್ವಾಮಿಯವರು ಮೈಸೂರಿನಲ್ಲಿ ಮೊದಲಬಾರಿಗೆ ಆದರ್ಶ ಶಿಶುವಿಹಾರವೊಂದು ಸ್ಥಾಪಿತವಾಗಲು ಸಹಕರಿಸಿದರು. 1952ರಲ್ಲಿ ಪ್ಯಾರಿಸ್ ನಗರದಲ್ಲಿ ನಡೆದ ಒಂದು ವಿಶ್ವಸಮ್ಮೇಳನದಲ್ಲಿ ಭಾಗವಹಿಸಿ ತಾವು ನಡೆಸಿದ ಶಿಶುಶಿಕ್ಷಣ ವಿಷಯದಲ್ಲಿನ ಪ್ರಯೋಗ ಪದ್ಧತಿಗಳನ್ನು ಕುರಿತು ಮಾತನಾಡಿ ಮೆಚ್ಚುಗೆ ಸಂಪಾದಿಸಿದರು.

ಗೋಪಾಲಸ್ವಾಮಿಯವರ ಸಲಹೆಗಳಿಂದಾಗಿ ರಾಜ್ಯದ ಪರೀಕ್ಷಾ ಪದ್ಧತಿಯಲ್ಲಿ ಹಲವಾರು ಮಾರ್ಪಾಟುಗಳಾದವು.

ಭಾರತದಲ್ಲಿ ಮೊಟ್ಟಮೊದಲಿಗೆ ಬಾನುಲಿ ಕೇಂದ್ರವೊಂದನ್ನು ಸ್ವಂತ ಖರ್ಚಿನಿಂದ ಸ್ಥಾಪಿಸಿದ (1935) ಕೀರ್ತಿ ಗೋಪಾಲಸ್ವಾಮಿಯವರದು. ಈ ಸಂಸ್ಥೆಯಿಂದ ಮೈಸೂರು ನಗರದ ಕೀರ್ತಿ ಹೆಚ್ಚಿತು. ಇಂದು ಪ್ರಚಲಿತವಾಗಿರುವ ಆಕಾಶವಾಣಿ ಎಂಬ ಹೆಸರನ್ನು ಕೊಟ್ಟವರೂ ಇವರೇ. ನಾಡಿನಲ್ಲಿ ವಿದ್ಯೆ, ಸಂಸ್ಕೃತಿ, ಕಲೆ, ಜ್ಞಾನ ಪ್ರಸಾರವಾಗಬೇಕೆಂಬ ಇವರ ಹಿರಿಯಾಸೆ ಆಕಾಶವಾಣಿಯಿಂದ ನೆರವೇರಿತು.

ಮೈಸೂರು ಮಹಾರಾಜ ಕಾಲೇಜಿನ ಮುಖ್ಯಸ್ಥ ಹುದ್ದೆಯಿಂದ ವಿಶ್ರಾಂತರಾದ ಮೇಲೆ (1952) ಮೈಸೂರು ಸರ್ಕಾರ ಇವರನ್ನು ಬೆಂಗಳೂರಿನ ಮೆಂಟಲ್ ಆಸ್ಪತ್ರೆಯಲ್ಲಿ 1938 ರಲ್ಲಿ ಸ್ಥಾಪಿತವಾಗಿದ್ದ ಮನೋರೋಗ ಚಿಕಿತ್ಸಾ ಮನಶಾಸ್ತ್ರ ಶಾಖೆಯೊಂದಿಗೆ ಒಂದು ಸಂಶೋಧನಾ ಶಾಖೆಯನ್ನೂ ಏರ್ಪಡಿಸಲು ಆಹ್ವಾನಿಸಿ ಆ ಶಾಖೆಯ ಮೊದಲ ನಿರ್ದೇಶಕರನ್ನಾಗಿ ನೇಮಿಸಿತು. ಈಗಿನ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಎಂಬ ಸಂಸ್ಥೆಗೆ ಗೋಪಾಲಸ್ವಾಮಿಯವರು ಸ್ಥಾಪಿಸಿದ ಶಾಖೆ ಅಡಿಗಲ್ಲಾಯಿತು. ಮನಶಾಸ್ತ್ರದ ವ್ಯಾಸಂಗ ವಿಶ್ಲೇಷಣೆಗಳು ಮಾನವನ ಮಾನಸಿಕ ಆರೋಗ್ಯಕ್ಕೆ, ಪ್ರಗತಿಗೆ ಸಾಧಕವಾಗಬೇಕು ಎಂಬ ಹಿರಿಯ ಉದ್ದೇಶವನ್ನು ಗೋಪಾಲಸ್ವಾಮಿಯವರು ತಮ್ಮ ಜೀವನದುದ್ದಕ್ಕೂ ಸಾಧಿಸಲು ಹೆಣಗಿದರು. ಈ ಸಾಧನೆ ಇವರಿಗೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿತು. (ಸಿ.ಕೆ.ವಿ.ಆರ್.)

**ಗೋಪೀಚಂದ, ರಾಜಾ :** ಬಂಗಾಲದ ರಾಜಾ ಮಾನಿಕಚಂದನ ಮಗ. ಬಂಗಾಲದಲ್ಲಿ 1095 ರವರೆಗೆ ಆಳಿದ ಪಾಲವಂಶದವ. ಇವನಿಗೆ ಗೋವಿಂದಚಂದ್ರನೆಂಬ ಇನ್ನೊಂದು ಹೆಸರೂ ಇತ್ತು. ತಿರುಮಲಯದಲ್ಲಿಯ ಶಿಲಾಲೇಖದ ಆಧಾರದಿಂದ ರಾಜೇಂದ್ರಚೋಳ ಮಾಣಿಕಚಂದ್ರನ ಮಗ ಗೋವಿಂದಚಂದ್ರನನ್ನು ಸೋಲಿಸಿದ್ದು ತಿಳಿದುಬರುತ್ತದೆ. ಬಂಗಾಲದಲ್ಲಿಯ ಗೋವಿಂದಚಂದ್ರೇರ ಗಾನ ಎಂಬ ಪುಸ್ತಕದಿಂದ ಗೋವಿಂದಚಂದ್ರ ಯಾವನೋ ಒಬ್ಬ ದಕ್ಷಿಣದ ರಾಜನೊಂದಿಗೆ ಯುದ್ಧ ಮಾಡಿದನೆಂಬ ವಿಷಯ ತಿಳಿದುಬರುತ್ತದೆ. ರಾಜೇಂದ್ರಚೋಳನ ಕಾಲ 1063–1112. ಇದರಿಂದ ಗೋಪೀಚಂದನ ಕಾಲ 11–12ನೆಯ ಶತಮಾನವೆಂದು ಊಹಿಸಬಹುದು. ಗೋಪೀಚಂದನ ತಾಯಿಯ ಹೆಸರು ಮಯನಾವತಿ (ಅಯನಾವತಿ). ಅವಳು ಯಾವುದೋ ಹಾಡೀಸಿದ್ಧನ ಶಿಷ್ಯೆಯಾಗಿದ್ದಳೆಂದು ಐತಿಹ್ಯವಿದೆ. ಈ ಹಾಡೀಸಿದ್ಧ ಜಾಲಂಧರನಾಥನೇ ಎಂದು ಬಂಗಾಲದಲ್ಲಿ ಪ್ರಸಿದ್ಧಿಯಿದೆ. ಸಿಂಧಪ್ರಾಂತದಲ್ಲಿ ಗೋಪೀಚಂದ ವೇರಪಟಾವ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನೆನ್ನಲಾಗಿದೆ. ಆ ವೇರಪಟಾವ ಸತ್ತಿದ್ದು 1209 ರಲ್ಲಿ. ಆದರೆ ಅವನೇ ಇವನು ಎಂದು ನಿಶ್ಚಯವಾಗಿ ಹೇಳಲು ಬರುವಂತಿಲ್ಲ. ಗೋಪೀಚಂದ ಬಂಗಾಲದ ರಾಜನಾಗಿದ್ದನೆಂಬುದರಲ್ಲೂ ಸಿದ್ಧ ಅಥವಾ ನಾಥ ಸಂಪ್ರದಾಯದವನಾಗಿದ್ದನೆಂಬುದರಲ್ಲೂ ಸಂಶಯವಿಲ್ಲ.

ಗೋಪೀಚಂದ ಹಾಗೂ ಮಯನಾವತಿಯರ ಬಗ್ಗೆ ಅನೇಕ ಕಥೆಗಳಿವೆ.

1. ಗೋಪೀಚಂದ ಬಂಗಾಲದ ರಾಜ. ಭರ್ತೃಹರಿಯ ಸೋದರಿ ಮೈನಾವತಿ ಇವನ ತಾಯಿ. ಗೋರಖ್‌ನಾಥ ಭರ್ತೃಹರಿಗೆ ದೀಕ್ಷೆ ಕೊಡುವಾಗ ಇವಳಿಗೂ ಕೊಟ್ಟಿದ್ದ. ಇವಳನ್ನು ಬಂಗಾಲದ ರಾಜನೊಬ್ಬನಿಗೆ ವಿವಾಹ ಮಾಡಿಕೊಟ್ಟಿದ್ದರು. ಇವಳಿಗೆ ಗೋಪೀಚಂದನೆಂಬ ಮಗನೂ ಚಂದ್ರಾವಲಿಯೆಂಬ ಮಗಳೂ ಇದ್ದರು. ಚಂದ್ರಾವಲಿಯ ಮದುವೆ ಸಿಂಹಳದ ರಾಜ ಉಗ್ರಸೇನನೊಂದಿಗೆ ಆಗಿತ್ತು. ತಂದೆಯ ಮರಣಾನಂತರ ಗೋಪೀಚಂದ ರಾಜನಾದಾಗ ತಾಯಿ ತನ್ನ ಮಗನ ಸುಂದರ ರೂಪವನ್ನು ನೋಡಿ ಅದು ವಿಷಯೋಪಭೋಗಕ್ಕೆ ಸಿಲುಕಿ ನಷ್ಟವಾಗುತ್ತದಲ್ಲ ಎಂದು ಚಿಂತಿಸಿ ಜಾಲಂಧರನಾಥನ ಶಿಷ್ಯನಾಗಿ ಯೋಗದೀಕ್ಷೆಯನ್ನು ಪಡೆದುಕೊಂಡು ಶಾಶ್ವತ ಸುಖಕ್ಕೆ ಭಾಜನನಾಗಬೇಕೆಂದು ಮಗನಿಗೆ ಬುದ್ಧಿ ಹೇಳಿದಳು. ಯೋಗಾಯೋಗದಿಂದ ಜಾಲಂಧರನಾಥ ಅಲ್ಲಿಗೆ ಬಂದ. ಗೋಪೀಚಂದ ಅವನಿಂದ ದೀಕ್ಷೆಯನ್ನು ಪಡೆದು ಕದಲೀವನಕ್ಕೆ ಹೋದ. ಕೆಲಕಾಲ ಕಳೆದ ಮೇಲೆ ತನ್ನ ಸೋದರಿ ಚಂದ್ರಾವಲಿಯನ್ನು ಆಕೆಯ ಆಗ್ರಹದ ಮೇರೆಗೆ ಯೋಗಿನಿಯನ್ನಾಗಿ ಮಾಡಿದ.

2. ದುರ್ಲಭಚಂದ್ರನ ಗೋಪೀಚಂದ್ರೇರ ಸಂಗೀತ ಎಂಬ ಗ್ರಂಥದ ಕಥಾಸಾರ ಹೀಗಿದೆ. ಜಾಲಂಧರಿಪಾದ ಅಥವಾ ಹಾಡಿಪಾ ಎಂಬಾತ ಶಿವಶಾಪದಿಂದ ಗೋಪೀಚಂದ ಹಾಗೂ ಸಿದ್ಧ ಸಂಪ್ರದಾಯದ ಅವನ ತಾಯಿ ಮಯನಾವತಿಯ ಆಳಾಗುತ್ತಾನೆ. ಮಯನಾವತಿ ಮಗನಿಗೆ ಹಾಡಿಯ ಶಿಷ್ಯನಾಗಿ ಮಹಾಜ್ಞಾನ ಪಡೆಯಲು ಉಪದೇಶಿಸುತ್ತಾಳೆ. ಆದರೆ ಆತ ನೀಚಜಾತಿಯ ಹಾಡಿಯಿಂದ ದೀಕ್ಷೆ ಪಡೆಯಲಿಚ್ಛಿಸುವುದಿಲ್ಲ. ಅಲ್ಲದೆ ತಾನು ಸಿದ್ಧಳಾಗಿದ್ದರೆ ತಂದೆಯನ್ನು ಏಕೆ ಬದುಕಿಸಿಕೊಳ್ಳಲಾಗಲಿಲ್ಲವೆಂದು ತಾಯಿಯನ್ನು ಪ್ರಶ್ನಿಸುತ್ತಾನೆ. ಆಗ ಅವಳು ತಾನು ಪತಿಯನ್ನು ಲೋಹ ಕಪಾಟದಲ್ಲಿಟ್ಟು ಯಮದೂತರು ಬಾರದಂತೆ ಕಾವಲಿದ್ದೆನೆಂದೂ ಒಂದು ಸಪ್ತಾಹಾನಂತರ ಪತಿಯ ಆಗ್ರಹದ ಮೇರೆಗೆ ಆಹಾರ ತರಲು ಹೋದಾಗ ಯಮದೂತರು ಅವನನ್ನು ಒಯ್ದರೆಂದೂ ಆಗ ತಾನು ಭ್ರಮರಿಯಾಗಿ ಯಮಪುರಿಗೆ ಹೋದೆನೆಂದೂ ಸುಡದಿರುವ ಮಣ್ಣನ್ನು ತರಲು ಯಮ ಹೇಳಿದನೆಂದೂ ಸಕಲ ಜೀವಿಗಳು ಬದುಕಿರುವ ಗಂಗಾನದಿಯ ಒಳಗಿನ ಮಣ್ಣನ್ನು ತರಲು ತಾನು ಒಡಂಬಡಲಿಲ್ಲವೆಂದೂ ತಿಳಿಸುತ್ತಾಳೆ. ಆಗ ಗೋಪೀಚಂದ ಪರೀಕ್ಷಿಸಲು ತಾಯಿಯನ್ನು ಅರಗಿನ ಮನೆಯಲ್ಲಿ ಹಾಕಿ ಬೆಂಕಿಯಿಟ್ಟನೆಂದೂ ಕೂದಲು ಕೊಂಕದೇ ಹೊರಬಂದ ಅವಳನ್ನು ನೋಡಿ ಆಕೆಯ ಸಿದ್ಧಿಯ ಬಗ್ಗೆ ಶ್ರದ್ಧೆ ಬಂದು ಹಾಡಿಯಿಂದ ದೀಕ್ಷೆಪಡೆಯಲು ಒಪ್ಪಿದನೆಂದೂ ಕಥೆ. ಹಾಡಿ ಅವನನ್ನು ಪರಿಪರಿಯ ಸಂಕಷ್ಟಗಳಿಗೆ ಗುರಿಮಾಡಿ ಅವನಿಗಿರುವ ದೀಕ್ಷೆಯ ಕಳಕಳಿಯನ್ನು ಮನದಟ್ಟು ಮಾಡಿಕೊಂಡು ಮಹಾಜ್ಞಾನವನ್ನು ಕೊಡುತ್ತಾನೆ. ಅನಂತರ ಗೋಪೀಚಂದ ತನ್ನ ರಾಣಿಯರಿಗೆ ತಾನು ಪಡೆದುಕೊಂಡ ಚಮತ್ಕಾರಗಳನ್ನು ತೋರಿಸಲು ಪ್ರಯತ್ನಿಸಲಾಗಿ ಗುರು ಶಿಷ್ಯನಿಂದ ಆ

ಶಕ್ತಿಯನ್ನು ಹಿಂತೆಗೆದುಕೊಂಡು ಬಿಡುತ್ತಾನೆ. ಆಗ ಪತಿಯ ಚಮತ್ಕಾರಗಳು ನಡೆಯದಾಗುತ್ತವೆ. ಆಗ ರಾಣಿಯರು ಗುರು ತಮ್ಮ ಪತಿಗೆ ಮೋಸ ಮಾಡಿದ್ದಾನೆಂದು ಹೇಳುತ್ತಾರೆ. ಅದನ್ನು ನಂಬಿದ ಪತಿ ಧ್ಯಾನಸ್ಥನಾದ ಗುರುವನ್ನು ಸಜೀವ ಸಮಾಧಿ ಮಾಡಿಸುತ್ತಾನೆ. ಹಾಡಿಪಾನ ಶಿಷ್ಯ ಕಾನಪಾ ಎಂಬಾತ ಗೋರಖ್‌ನಾಥನಿಂದ ವಿಷಯವನ್ನು ತಿಳಿದು ರಾಜನಿಗೆ ತನ್ನ ಪ್ರಭಾವ ತೋರಿಸಿ ಹಾಡಿಯನ್ನು ಭೂಮಿಯಿಂದ ಹೊರತೆಗೆಸುತ್ತಾನೆ. ಹಾಗೂ ಗುರುವಿನ ಕೋಪದ ಪರಿಣಾಮ ಗೋಪೀಚಂದನಿಗಾಗದಂತೆ ಮೊದಲು ಗುರುವಿನ ಕೋಪಾಗ್ನಿಗೆ ಮೂರು ಮೂರ್ತಿಗಳನ್ನು ಒಡ್ಡಿ ಅವು ಭಸ್ಮವಾಗುವಂತೆ ಮಾಡಿ ಉಪಾಯದಿಂದ ರಾಜನನ್ನು ಪಾರುಮಾಡುತ್ತಾನೆ. ರಾಜ ಗುರುವಿನ ಕ್ಷಮೆ ಬೇಡುತ್ತಾನೆ. ಅಲ್ಲದೆ ನಿಜವಾದ ಯೋಗಿಯಾಗಿ ದೇಶಾಂತರ ಹೊರಡುತ್ತಾನೆ. ದುಃಖಿಸುವ ರಾಣಿಯರನ್ನು ಯೋಗಶಕ್ತಿಯಿಂದ ಕಲ್ಲು ಮಾಡುತ್ತಾನೆ. ಮಗನ ಯೋಗ ಜೀವನವನ್ನು ಕಂಡು ತಾಯಿ ಸಂತೋಷಗೊಳ್ಳುತ್ತಾಳೆ.

ಗೋಪೀಚಂದನ ಬಗ್ಗೆ ಇನ್ನೂ ಅನೇಕ ಪವಾಡ ಕಥೆಗಳಿವೆ. ಮೋಹನಸಿಂಹ ಎಂಬ ವಿದ್ವಾಂಸರು ಪಂಜಾಬ ವಿಶ್ವವಿದ್ಯಾಲಯದಲ್ಲಿರುವ ಹಸ್ತಲಿಖಿತ ಪ್ರತಿಗಳ ಆಧಾರದಿಂದ ಉದಾಸ ಗೋಪೀಚಂದ, ಗಾಥಾ, ಗೋರಖಪದ ಎಂಬ ಪ್ರಕರಣವನ್ನು ಪ್ರಕಟಿಸಿದ್ದಾರೆ. ಇದು ಗೋಪೀಚಂದ ಹಾಗೂ ಮಯನಾವತಿಯರ ನಡುವಿನ ಸಂವಾದ ರೂಪದಲ್ಲಿದೆ. ಗೋಪೀಚಂದನೇ ಇದನ್ನು ಬರೆದನೆನ್ನಲು ಆಧಾರಗಳಿಲ್ಲವಾದರೂ ಈ ಗ್ರಂಥ ಗೋಪೀಚಂದನ ಮತವನ್ನು ತಿಳಿಯಲು ಸಹಾಯಕವಾಗಿದೆ. ಇದರಲ್ಲಿ ಗೋಪೀಚಂದನ ಗುರು ಗೋರಖ್‌ನಾಥನೆಂದಿದೆ.

ಯೋಗಿಸಂಪ್ರದಾಯಾವಿಷ್ಕೃತಿ ಎಂಬ ಗ್ರಂಥದಲ್ಲಿ ನವನಾರಾಯಣರು ನವನಾಥರ ರೂಪದಿಂದ ಅವತಾರ ಮಾಡಿದರೆಂದಿದೆ. ಇಲ್ಲಿನ ಪ್ರಕಾರ 9 ನೆಯ ನಾಥ ಗೋಪೀಚಂದ್ರ ದ್ರುಮಿಲನಾರಾಯಣನ ಅವತಾರ.

ಗೋರಕ್ಷ ಸಿದ್ಧಾಂತದ ಪ್ರಕಾರ ಶಾಕ್ತರ ಆಗಮದಲ್ಲಿ ಮೂರು ಪ್ರಕಾರಗಳಿವೆ: ಸಾತ್ತ್ವಿಕ ಅಧಿಕಾರಿಗಳಿಗೆ ತಂತ್ರ, ರಾಜಸ ಅಧಿಕಾರಿಗಳಿಗೆ ಯಾಮಲ, ತಾಮಸ ಅಧಿಕಾರಿಗಳಿಗೆ ಡಾಮರ. ತಾಂತ್ರಿಕರ ಸರ್ವಶ್ರೇಷ್ಠವಾದ ಕೌಲಾಚಾರವೇ ಅವಧೂತ ಮಾರ್ಗ. ತಾಂತ್ರಿಕರು ಹಾಗೂ ಅವಧೂತರಲ್ಲಿ ಭೇದಗಳುಂಟು. ತಾಂತ್ರಿಕರು ಮೊದಲು ಬಹಿರಂಗ ಉಪಾಸನೆ ಮಾಡುತ್ತಾರೆ. ಕೊನೆಗೆ ಕ್ರಮಶಃ ಸಿದ್ಧಿಯನ್ನು ಪಡೆಯುತ್ತ, ಕುಂಡಲಿನೀಶಕ್ತಿಯ ಉಪಾಸನೆಯನ್ನು ಮಾಡುತ್ತಾರೆ. ಇದೇ ಅವಧೂತಮಾರ್ಗದವರ ಉಪಾಸನಾಕ್ರಮ. ತಾಂತ್ರಿಕರ ಕೌಲಮಾರ್ಗದವರೂ ಕಾಪಾಲಿಕ ಮತದವರೂ ನಾಥಮತಾನುಯಾಯಿಗಳೇ. ಗೋಪೀಚಂದ ನಾಥಪಂಥಾನುಯಾಯಿಯಾಗಿ ಯೋಗದಿಂದ ಸಾಕ್ಷಾತ್ಕಾರ ಪಡೆದುಕೊಂಡ ಒಬ್ಬ ರಾಜವರೇಣ್ಯ.

ಈಗಿರುವ ಜಯಪುರದ ಪಾವನಾಥ ಶಾಖೆಯವರು ತಮ್ಮ ಪರಂಪರೆಯನ್ನು ಜಾಲಂಧರನಾಥ ಮತ್ತು ಗೋಪೀಚಂದರೊಡನೆ ಹೊಂದಿಸುತ್ತಾರೆ. ಸಿದ್ಧಾಂತ ವಾಕ್ಯವೆಂಬ ಗ್ರಂಥದ ಆಧಾರದಿಂದ ಮುದ್ರಾನಾದ, ತ್ರಿಶೂಲಧಾರಣ ಮಾಡುವ ನಾಥರೇ ಇವರ ಉಪಾಸಕರು. ಮತ್ತೊಂದು ಪರಂಪರಾನುಸಾರ, ವಾಮಮಾರ್ಗ ಸಂಪ್ರದಾಯ ಕಾನಿಪಾ ಪಂಥದೊಂದಿಗೆ ಸೇರುತ್ತದೆ. ಇದರಿಂದ, ಮೊದಲು ಕಾಪಾಲಿಕ ಪಂಥಕ್ಕೆ ಸ್ವಂತ ಅಸ್ತಿತ್ವವಿತ್ತೆಂದೂ ಅನಂತರ ಗೋರಖ್‌ಪಂಥದ ಅನುಯಾಯಿಗಳ ಗುಂಪಿನೊಡನೆ ಅದು ಸೇರ್ಪಡೆ ಹೊಂದಿತೆಂದೂ ಊಹಿಸಲು ಅವಕಾಶವಿದೆ. ಕಾಲಜ್ಞಾನನಿರ್ಣಯದಲ್ಲಿ ವಾಮಮಾರ್ಗದಲ್ಲಿನ ಮದ್ಯಮಾಂಸಾದಿಗಳಿಗೆ ಆಧ್ಯಾತ್ಮಿಕ ಅರ್ಥ ಕೊಡಲ್ಪಟ್ಟಿದೆ. ಜೀವಾತ್ಮವನ್ನು ಪರಮಾತ್ಮನಲ್ಲಿ ಲೀನ ಮಾಡುವುದೇ ಹಠಯೋಗಿಗಳ ಉದ್ದೇಶ. ಅದರಿಂದ ಬರುವ ಆನಂದ ಯೋಗಿಗಳ ನಿರ್ವಿಕಲ್ಪ ಬ್ರಹ್ಮಾನಂದದಿಂದ ಅಭಿನ್ನ ಎಂದು ಕೌಲತಾಂತ್ರಿಕರ ಅಭಿಪ್ರಾಯ. (ಎನ್.ಆರ್.ಜಿ.)

**ಗೋಪಿನಾಥರಾವ್, ಟಿ.ಎ. :** 1872–1919. ಶಾಸನತಜ್ಞ, ಮೂರ್ತಿಶಿಲ್ಪ ವಿಶಾರದ, ಪುರಾತತ್ತ್ವ ವಿದ್ವಾಂಸ. ತಮಿಳುನಾಡಿನ ತಿರುಚಿರಾಪಳ್ಳಿಯ ಸಮೀಪದ ಶ್ರೀರಂಗಂನಲ್ಲಿ ಜನಿಸಿದ ಇವರು ಮದ್ರಾಸಿನಲ್ಲಿ ಪ್ರೌಢವ್ಯಾಸಂಗ ಮಾಡಿ ಭೌತವಿಜ್ಞಾನ ಎಂ.ಎ. ಪದವೀಧರರಾದರು. 1903ರಲ್ಲಿ ಆಗ ಮದ್ರಾಸಿನಲ್ಲಿ ಪ್ರಾರಂಭವಾಗಿ ಕಾರ್ಯ ನಿರ್ವಹಿಸುತ್ತಿದ್ದ ಶಾಸನ ಮೇಲ್ವಿಚಾರಣಾಧಿಕಾರಿಗಳ ಕಚೇರಿಯಲ್ಲಿ (ಸೂಪರಿಂಟೆಂಡೆಂಟ್ ಫಾರ್ ಎಪಿಗ್ರಫಿ) ತಮಿಳು ಶಾಸನ ಸಹಾಯಕರಾಗಿ ಸೇರಿದರು. 1904ರಲ್ಲಿ ತಿರುವಾಂಕೂರಿನಲ್ಲಿ ಪುರಾತತ್ತ್ವ ಇಲಾಖೆ ಪುನರ್ವ್ಯವಸ್ಥೆಗೊಂಡಾಗ, ಆ ಇಲಾಖೆಯ ಮೇಲ್ವಿಚಾರಣಾಧಿಕಾರಿಯಾಗಿ ನೇಮಕವಾದರು.

ತಿರುವಾಂಕೂರಿನಲ್ಲಿ ಇವರು ವಿಶೇಷವಾದ ಕೆಲಸ ಮಾಡಿದರು. 1891ರಲ್ಲಿ ಪಿ. ಸುಂದರಂಪಿಳ್ಳೆಯವರಿಂದ ಪ್ರಾರಂಭಿಸಲ್ಪಟ್ಟಿದ್ದ ಪುರಾತತ್ತ್ವ ಇಲಾಖೆಗೆ ಇವರು ಹೊಸ ಜೀವವನ್ನಿತ್ತು ಅದಕ್ಕೆ ಒಂದು ರೂಪು ಕೊಟ್ಟರು. ತಮ್ಮ ಅಂತಿಮ ದಿನಗಳವರೆಗೂ ತಿರುವಾಂಕೂರು ರಾಜ್ಯದಲ್ಲೆಲ್ಲ ಸುತ್ತಿ ಪ್ರಾಚೀನ ದೇವಸ್ಥಾನಗಳ, ಸ್ಮಾರಕಗಳ ಭಾವಚಿತ್ರಗಳನ್ನೂ ಸಾವಿರಾರು ಶಾಸನಗಳನ್ನೂ ಗ್ರಂಥಗಳನ್ನೂ ಸಂಗ್ರಹಿಸಿದರು. ಆ ಭಾಗದ ಇತಿಹಾಸ ಸಂಸ್ಕೃತಿಗಳ ಮೇಲೆ ಹೊಸ ಬೆಳಕು ಚೆಲ್ಲುವಂಥ ಅನೇಕ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿ ಪ್ರಸಿದ್ಧರಾದರು.

ಹಿಂದೂ ಮೂರ್ತಿಶಿಲ್ಪಶಾಸ್ತ್ರದ ಮೂಲಾಂಶಗಳನ್ನು ಕುರಿತು ಇವರು ಬರೆದ ಎಲಿಮೆಂಟ್ಸ್ ಆಫ್ ಹಿಂದು ಐಕನಾಗ್ರಫಿ ಎಂಬ ಬೃಹದ್‌ಗ್ರಂಥ ಎರಡೆರಡು ಸಂಚಿಕೆಗಳ ಎರಡು ಭಾಗಗಳಲ್ಲಿ 1904 ಮತ್ತು 1916ರಲ್ಲಿ ಪ್ರಕಟವಾಯಿತು. ಇದರ ಮೊದಲನೆಯ ಭಾಗದ ಎರಡು ಸಂಚಿಕೆಗಳಲ್ಲಿ ವೈಷ್ಣವಮೂರ್ತಿ ಶಿಲ್ಪವನ್ನು ಕುರಿತೂ ಎರಡನೆಯ ಭಾಗದ ಎರಡು ಸಂಚಿಕೆಗಳಲ್ಲಿ ಶೈವಮೂರ್ತಿ ಶಿಲ್ಪವನ್ನು ಕುರಿತೂ ಆಧಾರಸಹಿತವಾದ ಸಮರ್ಥ ವಿವೇಚನೆಯಿದೆ. ಭಾರತೀಯ ಮೂರ್ತಿಶಿಲ್ಪಶಾಸ್ತ್ರದ ವಿದ್ಯಾರ್ಥಿಗಳಿಗೆ ಇದು ಇಂದಿಗೂ ಒಂದು ಪ್ರಮಾಣ ಗ್ರಂಥ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಐಕೊನೊಮೆಟ್ರಿಕ್ಸ್ ಎಂಬ ಮತ್ತೊಂದು ಗ್ರಂಥವನ್ನು ಇವರು ರಚಿಸಿದರು. 1917ರ ಡಿಸೆಂಬರಿನಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸುಬ್ರಹ್ಮಣ್ಯ ಅಯ್ಯರ್ ಉಪನ್ಯಾಸಮಾಲೆಯ ಅಂಗವಾಗಿ ಇವರು ನೀಡಿದ ಉಪನ್ಯಾಸಗಳ ಆಧಾರದ ಮೇಲೆ ಹಿಸ್ಟರಿ ಆಫ್ ದಿ ಶ್ರೀವೈಷ್ಣವಾಸ್ ಎಂಬ ಮತ್ತೊಂದು ಗ್ರಂಥವನ್ನು ರಚಿಸಿದರು.

ತಿರುವಾಂಕೂರು ರಾಜ್ಯದ ಶಾಸನ ಸಂಗ್ರಹಣೆ, ಅಧ್ಯಯನ, ಸಂಪಾದನೆ ಮತ್ತು ಅವುಗಳ ಪ್ರಕಟಣೆಯ ಕಾರ್ಯವನ್ನು ಚುರುಕುಗೊಳಿಸಿದ ಇವರು ಟ್ರಿವೇಂಡ್ರಂ ಆರ್ಕಿಯಲಾಜಿಕಲ್ ಸೀರೀಸ್ ಎಂಬ ಗ್ರಂಥಮಾಲೆಯನ್ನು ಪ್ರಾರಂಭಿಸಿ ಅದರ ಮೊದಲನೆಯ ಸಂಪುಟವನ್ನು ಸಂಪಾದಿಸಿ ಪ್ರಕಟಿಸಿದರು. ಅದರ ಎರಡನೆಯ ಸಂಪುಟ ಪ್ರಕಟವಾಗುವುದರೊಳಗಾಗಿ ಇವರು ತೀರಿಕೊಂಡರು (1919). ಎರಡನೆಯ ಸಂಪುಟ 1920ರಲ್ಲಿ ಪ್ರಕಟವಾಯಿತು. (ಸಿ.ಜಿ.ಪಿ.)

**ಗೋಪುರ :** ಮುಖ್ಯವಾಗಿ ಔನ್ನತ್ಯದ ದೃಷ್ಟಿಯಿಂದ ರಚಿಸಲಾದ, ಆದ್ದರಿಂದ ತನ್ನ ವ್ಯಾಸಕ್ಕಿಂತ ಎತ್ತರವಾದ, ಅಥವಾ ತನ್ನ ಸ್ಥಾನಮಹತ್ತ್ವದಿಂದಾಗಿ ಎತ್ತರವಾದ ಕಟ್ಟಡ. ಅದು ಒಂದು ಪ್ರತ್ಯೇಕ ಕಟ್ಟಡವಾಗಿರಬಹುದು; ಅಥವಾ ದೊಡ್ಡ ಕಟ್ಟಡವೊಂದಕ್ಕೆ ಸೇರಿದಂತಿರಬಹುದು; ಇಲ್ಲವೇ ಗೋಡೆಯ ಮೇಲಿಂದ ಚಾಚಿ ನಿಂತಂತೆ

ಶ್ರೀರಂಗಂ ದೇವಾಲಯ ಮತ್ತು ಗೋಪುರ

ನಿರ್ಮಿಸಿದ್ದಾಗಿರಬಹುದು. ಆಧುನಿಕ ಗೋಪುರಗಳು (ಉದಾ: ವೀಕ್ಷಣಾಗೋಪುರ) ಸಾಮಾನ್ಯವಾಗಿ ಕಠಿನ ಚೌಕಟ್ಟುಗಳಿಂದ ನಿರ್ಮಿಸಿದವಾಗಿರುತ್ತವೆ. ಊರಿನ ಸುತ್ತ ರಕ್ಷಣೆಗಾಗಿ ಕಟ್ಟಿದ ಕೋಟೆಗಳ ಎತ್ತರ ಹೆಬ್ಬಾಗಿಲುಗಳನ್ನು ಗೋಪುರ ಎನ್ನುತ್ತಿದ್ದುದುಂಟು. ಕಾಲಕ್ರಮದಲ್ಲಿ ದೇವಾಲಯಗಳನ್ನು ಸುತ್ತಿಕೊಂಡಿರುವ ಪ್ರಾಕಾರಗಳ ಮಹಾದ್ವಾರಗಳನ್ನೂ ಗೋಪುರ ಎಂದು ಕರೆದರೂ ಆ ಮಹಾದ್ವಾರದ ಮೇಲೆ ಹಲವು ಅಂತಸ್ತುಗಳಾಗಿ ಉನ್ನತವಾಗಿ ಕಟ್ಟಲಾದ ಕಟ್ಟಡವನ್ನು ಮುಖ್ಯವಾಗಿ ಗೋಪುರ ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ಆದರೂ ಮಹಾದ್ವಾರ ಮಾತ್ರವಲ್ಲದೆ ದೇವಾಲಯದ ಗರ್ಭಗುಡಿಯ ಮೇಲೆ ನಿರ್ಮಿತವಾಗಿರುವ ವಿಮಾನ ಅಥವಾ ಶಿಖರಗಳನ್ನೂ ಗೋಪುರಗಳೆಂದೇ ಕರೆಯುವ ರೂಢಿಯಿದೆ. ದೇವಸ್ಥಾನಗಳ ಉನ್ನತವಾದ ಭಾಗಗಳು ಮಾತ್ರವಲ್ಲದೆ ತಳವಿನ್ಯಾಸ ಕಿರಿದಾಗಿದ್ದು ಹಲವು ಅಂತಸ್ತುಗಳಾಗಿ ಮೇಲೆದ್ದ ಯಾವ ಕಟ್ಟಡವನ್ನಾದರೂ ಗೋಪುರವೆನ್ನುತ್ತಾರೆ.

ಊರಿನ ಹೆಬ್ಬಾಗಿಲು ರಕ್ಷಣೆಯ ದೃಷ್ಟಿಯಿಂದ ಉನ್ನತವಾದ ಬುರುಜುಗಳನ್ನು ಹೊಂದಿ ಸೈನಿಕ ಕಾರ್ಯಾಚರಣೆಗೆ ಅನುಕೂಲವಾಗುವಂತೆ ಸುತ್ತಣ ಕೋಟೆಯ ಗೋಡೆಗಿಂತ ಎತ್ತರವಾಗಿದ್ದುದರಿಂದ ಗೋಪುರ ಎನ್ನಿಸಿಕೊಂಡಿತು. ದೇವಾಲಯದ ರಕ್ಷಣೆಗಾಗಿ ಕಟ್ಟಿದ ಪ್ರಾಕಾರದ ಗೋಡೆಗಳ ನಡುವೆ ಇರುವ ಮಹಾದ್ವಾರಗಳ ಮೇಲಿನ ಉನ್ನತವಾದ ಕಟ್ಟಡಗಳು ಹೆಚ್ಚು ಆಲಂಕಾರಿಕವಾಗಿ ಬೆಳೆದುವು. ಕೋಟೆಗಳಿಗೆ ಅಲ್ಲಲ್ಲಿ ಎತ್ತರವಾದ ರಕ್ಷಣಾಗೋಪುರಗಳನ್ನೂ ವೀಕ್ಷಣಾಗೋಪುರಗಳನ್ನೂ ಕಟ್ಟುವುದು ಅತ್ಯಂತ ಪ್ರಾಚೀನ ಕಾಲದಿಂದಲೂ ನಡೆದುಬಂದ ಪದ್ಧತಿ. ಪ್ರ.ಶ.ಪೂ. 2000ಕ್ಕಿಂತ ಹಿಂದೆಯೇ ಕಟ್ಟಿದ ಪ್ರಸಿದ್ಧವಾದ ನಿನೆವ ಕೋಟೆಗೋಡೆಯ ಮೇಲೆ ಇಂಥ 1,500 ರಕ್ಷಣಾ ಗೋಪುರಗಳಿದ್ದುವು. 3.,200 ಕಿಮೀಗಳಿಗೂ ಹೆಚ್ಚು ಉದ್ದವಿರುವ ಚೀನದ ಬೃಹದ್ಗೋಡೆಯ ಹತ್ತಿರದಲ್ಲಿ ಉದ್ದಕ್ಕೂ ಅಲ್ಲಲ್ಲಿ ಎತ್ತರವಾದ ವೀಕ್ಷಣಾಗೋಪುರ ಗಳಿದ್ದುವು. ರೋಮನರ ಕೋಟೆಗೋಡೆಗಳ ಉದ್ದಕ್ಕೂ ಅಲ್ಲಲ್ಲಿ ಗೋಪುರಗಳಿದ್ದುವು. ಕೆಳಗಿರುವ ಶತ್ರುಗಳ ಮೇಲೆ ಅಲ್ಲಿಂದ ಕಾದ ಎಣ್ಣೆ ಮುಂತಾದವನ್ನು ಸುರಿಯಲೂ ಅಲ್ಲಿ ನಿಂತು ಯುದ್ಧ ಮಾಡಲೂ ಸೌಕರ್ಯಗಳಿರುತ್ತಿದ್ದುವು. ಭಾರತದಲ್ಲೂ ಊರುಗಳ ಹತ್ತಿರದ ಎತ್ತರವಾದ ದಿಣ್ಣೆಯ ಮೇಲೋ ಊರಿನ ನಡುವೆಯೋ ಶತ್ರುಗಳ ಸುಳಿವನ್ನು ಮುಂದಾಗಿ ಕಂಡುಕೊಳ್ಳುವುದಕ್ಕಾಗಿ ಗುಂಡಾಗಿ ಎತ್ತರವಾಗಿ ಕಟ್ಟಿದ್ದ ವೀಕ್ಷಣಾ ಗೋಪುರಗಳು ಅಲ್ಲಲ್ಲಿ ಕಾಣಸಿಗುತ್ತವೆ.

**ವಟಪತ್ರಶಾಯಿ ದೇವಾಲಯ, ಶ್ರೀವಿಲ್ಲಿಪುತ್ತೂರು**

ದೇವಾಲಯದ ಕಟ್ಟಡಗಳು ಮೊದಲು ಸಾಮಾನ್ಯವಾಗಿದ್ದುವು. ಅವಕ್ಕೆ ಪ್ರಾಕಾರ ಇರುತ್ತಿರಲಿಲ್ಲ. ಆದರೂ ಗರ್ಭಗುಡಿಯ ಮೇಲೆ ಒಂದು ಅಂತಸ್ತಿನ ಕಿರುಗೋಪುರ ಕಟ್ಟುವ ಪದ್ಧತಿ ಬಹು ಹಿಂದೆಯೇ ಆರಂಭವಾಗಿರಬೇಕು. ಗುಂಡಾಗಿ ಕಟ್ಟಿದ ಗುಡಿಸಿಲುಗಳ ನಡುವೆ ಎತ್ತರವಾದ ಕಂಬ, ಅದಕ್ಕೆ ಸೇರಿದಂತೆ ಸುತ್ತಲೂ ಇಳಿಜಾರಾಗಿ ಕಟ್ಟಿದ ಗಳುಗಳು, ಮೇಲೆ ಹುಲ್ಲಿನ ಹೊದಿಕೆ, ಮಧ್ಯದ ಕಂಬದ ತುದಿಗೆ ನೀರು ಇಳಿಯದಂತೆ ಬೋರಲು ಮುಚ್ಚಿರುವ ಮಡಕೆ – ಈ ಪದ್ಧತಿ ಚರಿತ್ರ ಪೂರ್ವಕಾಲದಿಂದ ನಡೆದುಕೊಂಡು ಬಂದದ್ದು. ಇದು ದೇವಾಲಯಗಳ ಕಟ್ಟಡಗಳಿಗೆ, ಅವುಗಳ ಗೋಪುರಗಳಿಗೆ ಮೂಲ ಸ್ಫೂರ್ತಿಯಾಗಿರಬೇಕೆಂದು ಕೆಲವರ ವಾದ. ಕಟ್ಟಡಗಳ ವಿನ್ಯಾಸ ಬದಲಾಗುತ್ತ ಹೋದರೂ ಗರ್ಭಗೃಹಗಳ ಮೇಲಿನ ಉನ್ನತವಾದ ಶಿಖರಗಳು ಬುಡದಲ್ಲಿ ಅಗಲವಾಗಿದ್ದು ಮೇಲೆ ಹೋಗುತ್ತ ಕಿರಿದಾಗಿ ತುದಿಯಲ್ಲಿ ಆಮಲಕ ಕಲಶಗಳನ್ನು ಹೊಂದಿರುವುದು ಈ ವಾದಕ್ಕೆ ಪುಷ್ಟಿ ಕೊಡುತ್ತದೆ. ಈ ವಿಮಾನಗಳು, ಶಿಖರಗಳು ಭಾರತದ ಉತ್ತರದಲ್ಲಿ, ದಕ್ಷಿಣದಲ್ಲಿ ಸ್ವತಂತ್ರವಾಗಿ ವೈವಿಧ್ಯಮಯವಾಗಿ ಬೆಳೆಯುತ್ತ ಬಂದು ನಾಗರ ದ್ರಾವಿಡ ಶೈಲಿಗಳ ಹೆಗ್ಗುರುತುಗಳಾಗಿವೆ. ಉತ್ತರೇಯ ಶಿಖರಗಳಲ್ಲಿ ಉದ್ದುದ್ದನೆಯ ಪಟ್ಟಿಕೆಗಳಿಗೆ ಪ್ರಾಮುಖ್ಯ ಇರುತ್ತದೆ. ಗೋಪುರಗಳು ನೇರವಾಗಿ ಮೇಲೆದ್ದು ತುದಿಯಲ್ಲಿ ಒಳಕ್ಕೆ ಬಾಗಿ ಆಮಲಕ ಮತ್ತು ಕಲಶಗಳಿಂದ ಕೂಡಿರುತ್ತವೆ. ದಕ್ಷಿಣದ ದ್ರಾವಿಡ ಶೈಲಿಯಲ್ಲಿ ಗರ್ಭಗುಡಿಯ ಮೇಲಿನ ಗೋಪುರದಲ್ಲಿ ಅಡ್ಡಪಟ್ಟಿಗೆ ಪ್ರಾಮುಖ್ಯ ಇರುತ್ತದೆ. ಅದು ಮೆಟ್ಟಿಲಾಗಿ ಮೇಲೇರುತ್ತದೆ, ಅಂತಸ್ತುಗಳಾಗಿ ವಿಭಾಗವಾಗಿರುತ್ತದೆ. ಈ ಎರಡು ಶೈಲಿಗಳ ಮಿಶ್ರಣವನ್ನು ಚಾಳುಕ್ಯ ಶೈಲಿಯಲ್ಲೂ ಅದರಿಂದ ಮುಂದೆ ಬೆಳೆದ ಹೊಯ್ಸಳ ಶೈಲಿಯಲ್ಲೂ ಕಾಣಬಹುದು.

ದಕ್ಷಿಣ ಭಾರತದಲ್ಲಿ ಪಲ್ಲವರ ಕಾಲದ ಕೊನೆಯ ದಿನಗಳಲ್ಲಿ ಒಂದಂತಸ್ತಿನ ಕಿರುಗೋಪುರವಾಗಿ ಆರಂಭವಾಗಿ, ಮುಂದೆ ಚೋಳರ ಕಾಲದಲ್ಲಿ ಬೃಹದಾಕಾರವಾಗಿ ಉನ್ನತವಾಗಿ ಬೆಳೆದ ವಿಮಾನದ ಗೋಪುರಗಳನ್ನು ತಂಜಾವೂರಿನ ಬೃಹದೀಶ್ವರ ದೇವಾಲಯದಂಥ ದೇವಾಲಯಗಳ ಮೇಲೆ ನೋಡಬಹುದು. ಆದರೆ ದೇವಾಲಯಗಳಿಗೆ

**ಚಾಮುಂಡೇಶ್ವರಿ ದೇವಸ್ಥಾನದ ಗೋಪುರ, ಮೈಸೂರು**

ರಕ್ಷಣೆಯ ದೃಷ್ಟಿಯಿಂದ ಪ್ರಾಕಾರಗಳನ್ನು ಕಟ್ಟಲಾರಂಭಿಸಿದ ಮೇಲೆ ಇವುಗಳ ಮಹಾದ್ವಾರಗಳ ಮೇಲಿನ ಗೋಪುರಗಳಿಗೆ ಪ್ರಾಮುಖ್ಯ ಹೆಚ್ಚುತ್ತ ಹೋಯಿತು. ಇದನ್ನು ಮುಖ್ಯವಾಗಿ ದ್ರಾವಿಡ ಶಿಲ್ಪರೀತಿಯಲ್ಲಿ ನೋಡಬಹುದು. ಮೊದಲು ಚಿಕ್ಕದಾಗಿದ್ದ ಗೋಪುರಗಳು ವಿಜಯನಗರದ ಕಾಲದಲ್ಲಿ ತಕ್ಕಷ್ಟು ಉನ್ನತವಾಗಿ ನಾಯಕರ ಕಾಲದಲ್ಲಿ 150 ಅಡಿಗೂ (50 ಮೀ) ಮೀರಿ ಅದ್ಭುತವಾಗಿ ಬೆಳೆದವು. ದೇವಾಲಯಗಳಿಗೆ ಹಲವು ಪ್ರಾಕಾರಗಳನ್ನು ಕಟ್ಟಿ ನಾಲ್ಕು ದಿಕ್ಕುಗಳಿಗೂ ದ್ವಾರಗೋಪುರಗಳನ್ನು ಹಲವು ಅಂತಸ್ತುಗಳಾಗಿ ಎತ್ತರಿಸಿರುವ ಪದ್ಧತಿಯನ್ನು ಮಧುರೆ, ಚಿದಂಬರ ಮೊದಲಾದ ಎಡೆಗಳಲ್ಲಿ ನೋಡಬಹುದು. ಪ್ರತಿ ರಾಜಮನೆತನವೂ ಹಿಂದಿನ ಮನೆತನ ಕಟ್ಟಿಸಿದ್ದಕ್ಕಿಂತ ಬೃಹತ್ತಾದ ಉನ್ನತವಾದ ಗೋಪುರಗಳನ್ನು ಕಟ್ಟಿಸಬೇಕೆಂಬ ಹುರುಡನ್ನು ಪ್ರದರ್ಶಿಸಿದ್ದರಿಂದ ಹೊರ ಪ್ರಾಕಾರಗಳ ಗೋಪುರಗಳು ಅತ್ಯಂತ ಎತ್ತರವಾದುವಾಗಿದ್ದು ಕ್ರಮವಾಗಿ ಒಳಪ್ರಾಕಾರಗಳ ಗೋಪುರಗಳ ಎತ್ತರ ಕಡಿಮೆಯಾಗುತ್ತ ಹೋದುವು. ಆಯತಾಕಾರವಾಗಿ ಮೂರು, ಐದು, ಏಳು, ಒಂಬತ್ತು ಅಥವಾ ಹನ್ನೊಂದು ಅಂತಸ್ತುಗಳಿದ್ದು, ಮೇಲೇರಿದಂತೆ ಕಿರಿದಾಗುವ ಈ ಗೋಪುರಗಳಲ್ಲಿ ಪ್ರತಿ ಅಂತಸ್ತಿಗೂ ಬಾಗಿಲುವಾಡಗಳೂ ಎರಡೂ ಕಡೆಗಳಲ್ಲೂ ದ್ವಾರಪಾಲಕರೂ ಇದ್ದು, ಗೋಡೆಗಳ ಮೇಲೆ ಅರೆಗಂಬಗಳು, ಅರೆಗೋಪುರಗಳು ಮತ್ತು ಹಲವು ಭಂಗಿಗಳಲ್ಲಿರುವ ಮೂರ್ತಿಗಳ ಅಲಂಕರಣಗಳು ತುಂಬಿರುತ್ತವೆ. ಎಲ್ಲ ಅಂತಸ್ತುಗಳೂ ಒಂದೇ ರೀತಿಯಲ್ಲಿದ್ದರೂ ಕೆಳಗಿನಿಂದ ಮೇಲೆ ಹೋಗಹೋಗುತ್ತ ಕಿರಿದಾಗುತ್ತವೆ. ತುತ್ತತುದಿಯಲ್ಲಿ ಪೀಪಾಯಿಯಾಕಾರದ ರಚನೆಯೂ ಅದರ ಮೇಲೆ ಐದರಿಂದ ಒಂಬತ್ತರ ವರೆಗೆ ಕಲಶಗಳೂ ಇರುತ್ತವೆ. ಮಹಾದ್ವಾರವನ್ನು ಕಲ್ಲಿನಿಂದ ಕಟ್ಟಿದ್ದು, ಮೇಲಿನ ಗೋಪುರವನ್ನು ಇಟ್ಟಿಗೆ ಗಾರೆಗಳಿಂದ ಕಟ್ಟಿರುತ್ತಾರೆ. ಪಕ್ಷಿತೀರ್ಥದಲ್ಲಿ

ಊರಿನ ನಡುವೆ ಸ್ವತಂತ್ರವಾಗಿ ನಿಂತಿರುವ ಗೋಪುರ, ಕಂಚಿಯ ಏಕಾಂಬರನಾಥನ ದೇವಾಲಯದ ಮುಂದಿನ ಗೋಪುರ, ಶ್ರೀರಂಗದ ರಂಗನಾಥ ದೇವಾಲಯದ ಮುಂದಿನ ಗೋಪುರ ಮುಂತಾದವು ಬೃಹದ್ಗೋಪುರಗಳ ಸಾಲಿನಲ್ಲಿ ಹೆಸರಿಸಬಹುದಾದಂಥವು.



ಕಿಲ್ಲಿ ಗೋಪುರ, ತಿರುವಣ್ಣಾಮಲೈ

ಕರ್ನಾಟಕದಲ್ಲಿ ಇಷ್ಟು ಉನ್ನತವಾದ ಗೋಪುರಗಳಿಲ್ಲದಿದ್ದರೂ ಹಂಪಿಯ ವಿರೂಪಾಕ್ಷ ದೇವಾಲಯದ ಮುಂದಿನ ಗೋಪುರ, ಬೇಲೂರಿನ ಚೆನ್ನಕೇಶವ ದೇವಾಲಯದ ಮುಂದಿರುವ ಗೋಪುರ, ಆಲಂಬಗಿರಿ, ಮಾಗಡಿ, ಶ್ರೀರಂಗಪಟ್ಟಣ, ನಂಜನಗೂಡು, ಚಾಮುಂಡಿ ಬೆಟ್ಟ ಮೊದಲಾದೆಡೆ ಇರುವ ಗೋಪುರಗಳು ತಕ್ಕಮಟ್ಟಿಗೆ ಎತ್ತರವಾಗಿವೆ.

ತೆಳುವಾಗಿ ಉನ್ನತವಾಗಿ ತುದಿಯಲ್ಲಿ ಚೂಪಾಗಿ ಎದ್ದಿರುವ ಗಾತಿಕ್ ಶೈಲಿಯ ಗೋಪುರಗಳನ್ನೂ ಚೌಕವಾಗಿ ನೇರವಾಗಿ ಮೇಲೆದ್ದಿರುವ ಪುನರುಜ್ಜೀವನ ಶೈಲಿಯ ಗೋಪುರಗಳನ್ನೂ ಯುರೋಪಿನ, ಇತರೆಡೆಯ ನೂರಾರು ಚರ್ಚುಗಳ ಮೇಲೆ ಕಾಣಬಹುದು. ಧರ್ಮಮಂದಿರಗಳಲ್ಲಿ ಮೇಲಲ್ಲದೆ ಇತರ ಉದ್ದೇಶಗಳಿಗಾಗಿ ಕಟ್ಟಿದ ಹಲವಾರು ರೀತಿಯ ಗೋಪುರಗಳಲ್ಲಿ ಪೀಸಾ ವಾಲುಗೋಪುರ ಪ್ರಸಿದ್ಧವಾದ್ದು. ಹೀಗೆಯೇ ದೂರದ ವರೆಗೂ ಕಾಣಿಸಬೇಕೆಂಬ ಉದ್ದೇಶದಿಂದ ಕಟ್ಟಿರುವ ವೆಸ್ಟ್ ಮಿನ್‌ಸ್ಟರ್ ಗೋಪುರದಂಥ ಗಡಿಯಾರ ಗೋಪುರ, ಉಕ್ಕಿನಿಂದಲೇ ನಿರ್ಮಿಸಲಾದ ಪ್ಯಾರಿಸಿನ ಉನ್ನತವಾದ ಐಫೆಲ್ ಗೋಪುರ ಇವು ಉಲ್ಲೇಖಾರ್ಹ. (ಎಂ.ಎಚ್.)

**ಗೋಫರ್ :** ರಾಡೆನ್ಷಿಯ ಗಣದ ಜಿಯೋಮೈಯಿಡೀ ಕುಟುಂಬಕ್ಕೆ ಸೇರಿದ ಜಿಯೋಮಿಸ್, ಥೋಮೋಮಿಸ್ ಮತ್ತು ಪ್ಯಾಪೊಜಿಯೋಮಿಸ್ ಎಂಬ ಮೂರು

ಅಮೆರಿಕದ ಪಶ್ಚಿಮ ಭಾಗದಲ್ಲಿನ ಗೋಫರ್

ಬೇರೆ ಬೇರೆ ಜಾತಿಯ ಸ್ತನಿಗಳಿದಾಗಿರುವ ಸಾಮಾನ್ಯ ಹೆಸರು. ಪಾಕೆಟ್ ಗೋಫರ್ ಪರ್ಯಾಯ ನಾಮ. ಮೇಲೆ ಹೇಳಿದ ಎಲ್ಲ ಜಾತಿಗಳೂ ಉತ್ತರ ಅಮೆರಿಕದ ಮೂಲನಿವಾಸಿಗಳು. ದಕ್ಷಿಣದಲ್ಲಿ ಗ್ವಾಟಿಮಾಲದಿಂದ ಹಿಡಿದು ಉತ್ತರದಲ್ಲಿ ಕೆನಡದ ವರೆಗೂ ಇವುಗಳ ವ್ಯಾಪ್ತಿ ಇದೆ. ಎಲ್ಲ ಬಗೆಯವೂ ನೆಲದಲ್ಲಿ ಬಿಲಗಳನ್ನು ಕೊರೆದುಕೊಂಡು ವಾಸಿಸುತ್ತವೆ. ಗೋಫರ್‌ಗಳು ಪುಟ್ಟ ಗಾತ್ರದ ಪ್ರಾಣಿಗಳು. ದೇಹದ ಉದ್ದ 9–30 ಸೆಂಮೀ. ಹೃಷ್ಟಪುಷ್ಟವಾದ ದೇಹ, ಚಿಕ್ಕ ಕಾಲುಗಳು, ಮೋಟು ಬಾಲ, ಬಾಚಿಯಂತೆ ಬಾಯಿಯಿಂದ ಹೊರಚಾಚಿರುವ ಮುಂದಿನ ಹಲ್ಲುಗಳು, ಬಲುಸಣ್ಣ ಕಣ್ಣು ಹಾಗೂ ಕಿವಿಗಳು, ಸಡಿಲವಾದ ಚರ್ಮ ಮತ್ತು ಬಲಯುತವಾದ ಉಗುರುಗಳು–ಇವು ಗೋಫರುಗಳ ಪ್ರಮುಖ ಲಕ್ಷಣಗಳು. ಇನ್ನೊಂದು ಸೋಜಿಗದ ಸಂಗತಿ ಎಂದರೆ ಇವಕ್ಕಿರುವ ದವಡೆ ಚೀಲಗಳು. ಬಾಯಿಯ ಆಚೀಚೆಗೆ ಇರುವ ಈ ಚೀಲಗಳು ಭುಜದವರೆಗೂ ವಿಸ್ತರಿಸಿವೆ. ಒಂದೊಂದಕ್ಕೂ ಒಂದು ದ್ವಾರ ಮತ್ತು ತುಪ್ಪಳಿನ ಒಳಪದರವಿದೆ. ಈ ಚೀಲಗಳಲ್ಲಿ ಗೋಫರ್‌ಗಳು ಆಹಾರವನ್ನು ತುಂಬಿಕೊಳ್ಳುತ್ತವೆ. ವಿಚಿತ್ರವೆಂದರೆ ಬೇಕೆಂದಾಗ ಈ ಪ್ರಾಣಿಗಳು ತಮ್ಮ ಈ ಚೀಲಗಳನ್ನು ಒಳಹೊರಗು ಮಾಡಿ ಶುಚಿ ಮಾಡಿಕೊಳ್ಳುವುದು. ಗೋಫರ್‌ಗಳ ಬಾಲ ಬಹಳ ಸುಟಿ. ಗೋಫರ್‌ಗಳು ತಮ್ಮ ಜೀವನದ ಬಹುಕಾಲವನ್ನು ನೆಲದೊಳಗಿನ ಬಿಲಗಳಲ್ಲಿ ಕಳೆಯುತ್ತವೆ. ಆಹಾರಾನ್ವೇಷಣೆಗಾಗಿ ಅಪೂರ್ವವಾಗಿ ಬಿಲದಿಂದ ಹೊರಬರುವುದುಂಟು. ನೆಲವನ್ನು ತೋಡುವಾಗ ಸಿಕ್ಕುವ ಗೆಡ್ಡೆಗೆಣಸುಗಳೇ ಇವುಗಳ ಪ್ರಧಾನ ಆಹಾರ. ಇವು ತೋಡುವ ಬಿಲಗಳಲ್ಲಿ ಎರಡು ಬಗೆಗಳಿವೆ. ಒಂದು ಬಗೆಯವು ಆಳವಿಲ್ಲದ, ಆದರೆ ವಿಸ್ತಾರವಾಗಿ ಹರಡಿರುವ ಬಿಲಗಳು– ಗೆಡ್ಡೆಗೆಣಸುಗಳಿಗಾಗಿ ಓಡಾಡುವಾಗ ನಿರ್ಮಿತವಾಗುವ ಬಿಲಗಳಿವು. ಎರಡನೆಯ ರೀತಿಯ ಬಿಲಗಳಲ್ಲಿ ಆಹಾರ ಸಂಗ್ರಹಣೆಗೆ, ಮರಿಗಳನ್ನು ಸುರಕ್ಷಿತವಾಗಿ ಇಡುವುದಕ್ಕೆ, ಮಲಮೂತ್ರ ವಿಸರ್ಜನೆಗೆ ಪ್ರತ್ಯೇಕವಾದ ಕೋಣೆಗಳಿರುತ್ತವೆ. ಬಿಲ ತೋಡಲು ಗೋಫರ್‌ಗಳು ತಮ್ಮ ನಖಗಳನ್ನು ಮತ್ತು ಬಾಚಿ ಹಲ್ಲುಗಳನ್ನು ಬಳಸುತ್ತವೆ. ಕೊಂಚ ಹೊತ್ತು ನೆಲವನ್ನು ಕೊರೆದ ಮೇಲೆ ಸಂಗ್ರಹವಾಗುವ ಮಣ್ಣನ್ನು ಎದೆ ಮತ್ತು ಮುಂಗಾಲುಗಳ ನಡುವೆ ಇರಿಸಿಕೊಂಡು ಹಿಮ್ಮುಖವಾಗಿ ಚಲಿಸಿ ಬಿಲದಿಂದ ಮೇಲಕ್ಕೆ ತಂದು ಹೊರ ಸುರಿಯುತ್ತವೆ. ಇಂಥ ಹಿಮ್ಮುಖ ಚಲನೆಗೆ ಸಂವೇದನಾಶೀಲವಾದ ಬಾಲ ಸಹಾಯಕವಾಗಿದೆ. ಗೋಫರ್‌ಗಳು ಮುಖ ಮುಂದಾಗಿ ಎಷ್ಟು ವೇಗ ಓಡಬಲ್ಲವೋ ಅಷ್ಟೇ ವೇಗವಾಗಿ ಹಿಮ್ಮುಖವಾಗಿಯೂ ಓಡಬಲ್ಲವು. ಸಾಮಾನ್ಯವಾಗಿ ಇವು ಒಂಟೊಂಟಿಯಾಗಿ ವಾಸಿಸುತ್ತವೆ. ಇವುಗಳಲ್ಲಿ ಶಿಶಿರಸ್ವಾಪತೆ ಇಲ್ಲವಾದರೂ ಚಳಿಗಾಲದಲ್ಲಿ ಇವುಗಳ ಚಟುವಟಿಕೆ ಮಂದವಾಗುತ್ತದೆ.

ವಸಂತಋತು ಇವುಗಳಿಗೆ ಸಂತಾನ ಕಾಲ. ಗರ್ಭಾವಸ್ಥೆಯ ಅವಧಿ 18–19 ದಿವಸಗಳು. ಒಂದು ಸೂಲಿಗೆ 3–10 ಮರಿಗಳು. ಹೊಸದಾಗಿ ಹುಟ್ಟಿದ ಮರಿಗಳ ಕಣ್ಣು ತೆರೆದೇ ಇರುವುದಿಲ್ಲ. ಕೂದಲು ಇರುವುದಿಲ್ಲ. ಸುಮಾರು 2 ತಿಂಗಳವರೆಗೆ ತಾಯಿಯ ಪಾಲನೆಯಲ್ಲಿದ್ದು 3 ತಿಂಗಳ ಅನಂತರ ಲೈಂಗಿಕ ಪ್ರಬುದ್ಧತೆ ಪಡೆದು ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. (ಎಚ್.ಬಿ.ಡಿ.)

**ಗೋಬಿ :** ಮಧ್ಯ ಏಷ್ಯದ ಮರುಭೂಮಿ ಮತ್ತು ಅರೆಮರುಭೂಮಿ ಪ್ರದೇಶ; ಮಂಗೋಲಿಯನ್ ಪ್ರಸ್ಥಭೂಮಿಯ ಬಹುಭಾಗವನ್ನೊಳಗೊಂಡಿದೆ. ಗೋಬಿ ಪ್ರಪಂಚದ ಅತ್ಯಂತ ದೊಡ್ಡ ಮರುಭೂಮಿಗಳಲ್ಲಿ 5ನೆಯ ಸ್ಥಾನದಲ್ಲಿದೆ; ಇದು ಏಷ್ಯದ ಅತಿದೊಡ್ಡ ಮರುಭೂಮಿಯಾಗಿದೆ (1,295,000 ಚ.ಕಿಮೀ). ದಕ್ಷಿಣದಲ್ಲಿ ನಾನ್‌ಷಾನ್ ಮತ್ತು ಹಳದಿ ನದಿಯ ಪ್ರದೇಶ, ಪಶ್ಚಿಮಕ್ಕೆ ಸಿಂಕಿಯಾಂಗಿನ ಎಲ್ಲೆ, ಉತ್ತರಕ್ಕೆ ಹ್ಯಾಂಗೇ ಪರ್ವತಶ್ರೇಣಿ ಮತ್ತು ಪೂರ್ವಕ್ಕೆ ದೊಡ್ಡದಾದ ಕಿಂಗನ್ ಪರ್ವತಸಾಲು–ಇವುಗಳ ನಡುವೆ, ಮಂಗೋಲಿಯನ್ ಗಣರಾಜ್ಯ, ಚೀನಕ್ಕೆ ಸೇರಿದ ಮಂಗೋಲಿಯನ್ ಸ್ವಯಮಾಡಳಿತ ಪ್ರಾಂತ, ಕಾನ್ಸು ಮತ್ತು ನಿಂಗ್ಸಿಯಾ ಪ್ರಾಂತಗಳಲ್ಲಿ ಇದು ಹರಡಿಕೊಂಡಿದೆ. ಓರ್ಡೋಸ್ ಪ್ರಸ್ಥಭೂಮಿಯ ಪಶ್ಚಿಮಕ್ಕಿರುವ ಅಲಷಾನ್ ಮರುಭೂಮಿಯೂ ಇದರ ಭಾಗವೇ. ಪಾಮಿರಿನ ಪೂರ್ವಕ್ಕಿರುವ ಇದರ ವಿಸ್ತೀರ್ಣ 480–960 ಕಿಮೀಗಳಷ್ಟು ಅಗಲ ಮತ್ತು 1600 ಕಿಮೀಗಳಷ್ಟು ಉದ್ದ. ಆದರೂ ಗೋಬಿಯ ವಿಸ್ತೀರ್ಣದ ವಿಷಯದಲ್ಲಿ ಒಂದೇ ಅಭಿಪ್ರಾಯವಿಲ್ಲ. ಚೀನೀ ತುರ್ಕಿಸ್ತಾನದಲ್ಲಿರುವ ತಾರಿಂ ಮತ್ತು ಝುಂಗಾರಿಯನ್ ಪಾತ್ರಗಳನ್ನು ಮತ್ತು ಓರ್ಡೋಸ್ ಮರುಭೂಮಿಯನ್ನು ಮಂಗೋಲಿಯನ್ ಗೋಬಿಯಿಂದ ಬೇರೆಯೆಂದೂ ಪರಿಗಣಿಸುತ್ತಾರೆ. ಮಂಗೋಲರಿಗೆ ಗೋಬಿಯೆಂದರೆ ತಾಲ್ ಎಂದು ಅವರು ಕರೆಯುವ, ಸಮತಟ್ಟಾದ, ಉಸುಕಿನಿಂದ ಕೂಡಿರುವ, ಅಲ್ಲಲ್ಲಿ ಹುಲ್ಲು ಬೆಳೆದಿರುವ ಪಾತ್ರಗಳು ಮಾತ್ರ. ಪಾಮಿರಿನ ಪೂರ್ವಕ್ಕೆ ಮತ್ತು ಟಿಬೆಟ್ ಪ್ರಸ್ಥಭೂಮಿಯ ಉತ್ತರಕ್ಕೆ ಇರುವ, ಮೇಲೆ ತಿಳಿಸಿರುವ ಪ್ರದೇಶಗಳಲ್ಲೆಲ್ಲ ಹರಡಿರುವ ಮರುಭೂಮಿ ಮತ್ತು ಅರೆಮರುಭೂಮಿಗಳು ಮಹಾಗೋಬಿ ಅಥವಾ ಗೋಬಿಮರುಭೂಮಿ ಎನಿಸಿಕೊಂಡಿವೆ.

ಈ ಮರುಭೂಮಿ ಪೂರ್ವದಲ್ಲಿ 900 ಮೀ ಪಶ್ಚಿಮ ಉತ್ತರಗಳಲ್ಲಿ 1500 ಮೀ ಎತ್ತರವಾಗಿರುವ ಪ್ರಸ್ಥಭೂಮಿಯಾಗಿದ್ದರೂ ಸುತ್ತಲೂ ಹಬ್ಬಿದ ಉನ್ನತ ಪರ್ವತಶ್ರೇಣಿಗಳ ನಡುವೆ ಇದು ತಟ್ಟೆಯಂತಿದೆ. ಈ ವಿಸ್ತಾರ ಪ್ರದೇಶದ ನಡುವೆ ಅಲ್ಲಲ್ಲಿ ವಾಯವ್ಯದಿಂದ ಆಗ್ನೇಯದ ಕಡೆಗೆ ಹಾದುಹೋಗುವ ಸವಕಲು ಗುಡ್ಡಸಾಲುಗಳೂ ಅಲ್ಲಲ್ಲಿ ಮರಳಿನ

ಅಥವಾ ಕಂಕರಿನ ತಗ್ಗಾದ ಸಣ್ಣಸಣ್ಣ ಪಾತ್ರಗಳೂ ಹರಡಿಕೊಂಡಿವೆ. ಕೆಲವೆಡೆ ಗೋಡುಭೂಮಿಯಿದ್ದು, ಮಂಗೋಲಿಯದ ನೆಮೆಟ್ ಬೇಸಿನ್‌ನಲ್ಲಿ ಅರ್ವಾಚೀನ ಸ್ತನಿಗಳ ಹಾಗೂ ಡೈನೊಸಾರ್ ಮೊಟ್ಟೆಗಳ ಪಳೆಯುಳಿಕೆಗಳು ವಿಪುಲವಾಗಿರುವುದನ್ನು ನೋಡಿದರೆ ಹಿಂದೊಮ್ಮೆ ಇಲ್ಲಿ ತೇವಾಂಶ ಹೆಚ್ಚಾಗಿತ್ತೆಂದು ಊಹಿಸಬಹುದಾಗಿದೆ. ಇಲ್ಲಿ ದೊರಕಿರುವ ಅವಶೇಷಗಳಿಂದ ಹಳೆಶಿಲಾಯುಗದಿಂದ ಲೋಹಯುಗದ ವರೆಗಿನ ಹಲವು ಪ್ರತ್ಯೇಕ ಸಂಸ್ಕೃತಿಗಳನ್ನು ಗುರುತಿಸಬಹುದು. ಚಾರಿತ್ರಿಕ ಕಾಲದಲ್ಲಿ ರೇಷ್ಮೆ ಮಾರ್ಗವೂ (ಸಿಲ್ಕ್‌ರೂಟ್) ಇತರ ಹಲವು ವ್ಯಾಪಾರ ಮಾರ್ಗಗಳೂ ಈ ಮರುಭೂಮಿಯ ಮುಖಾಂತರ ಸಾಗಿದ್ದುವೆಂಬುದು ಗಮನಾರ್ಹ. ಅನಂತರ ಇದು ಮಂಗೋಲ್ ಸಾಮ್ರಾಜ್ಯದ ಭಾಗವಾಯಿತು.

ಚೀನೀಯರು ಗೋಬಿಯನ್ನು ಷಾಮೊ (ಮರಳುಗಾಡು) ಎಂದು ಕರೆಯುತ್ತಾರೆ. ಆದರೆ ಇದು ತಪ್ಪು ಕಲ್ಪನೆಯನ್ನುಂಟುಮಾಡುತ್ತದೆ. ಏಕೆಂದರೆ ಗೋಬಿಯಲ್ಲಿ ಸ್ವಲ್ಪಭಾಗ ಮಾತ್ರ ಮರಳು ಅಥವಾ ಮರಳುದಿಣ್ಣೆಗಳಿಂದ ಕೂಡಿದ್ದು, ಬಹುಪಾಲು ಭಾಗದಲ್ಲಿ ಚಪ್ಪಟೆಯಾದ ಬಂಡೆಗಲ್ಲು ಹರಡಿಕೊಂಡಿದೆ. ಹಲವು ಕಿಲೋಮೀಟರ್‌ಗಳಷ್ಟು ದೂರ ಅದರ ಮೇಲೆ ವಾಹನಗಳನ್ನು ಸರಾಗವಾಗಿ ನಡೆಸಬಹುದು.

ಸಹಾರದಂತೆ ಗೋಬಿಯಲ್ಲಿ ಬರಿಯ ಒಣಹವೆಯಿಲ್ಲ. ಇಲ್ಲಿಯ ಹವೆ ಅತಿರೇಕದಿಂದ ಕೂಡಿದೆ. ತೀಕ್ಷ್ಣವಾದ ಸುಡುಬಿಸಿಲಿನಲ್ಲಿ ಕಾದ ಮರಳನ್ನು ತೂರಿ ಬಿರುಸಾಗಿ ಬೀಸುವ ಚಂಡಮಾರುತದಂತೆಯೇ ಚಳಿಗಾಲದ ಅತಿಶೈತ್ಯದಿಂದ ಕೂಡಿದ ಶೀತಮಾರುತವೂ ಸಾಮಾನ್ಯ. ಮರಳು ದಿಣ್ಣೆಗಳ ಮೇಲೆ ಒಮ್ಮೊಮ್ಮೆ ಹಿಮ ಶೇಖರಗೊಳ್ಳುವುದೂ ಉಂಟು. ವರ್ಷಕ್ಕೆ ಸರಾಸರಿ 19.5 ಸೆಂಮೀ ಮಳೆಯಾಗುತ್ತದೆ. ವರ್ಷದ ಸ್ವಲ್ಪಕಾಲ ಮಾತ್ರ ಗೋಚರಿಸುವ ಇಲ್ಲಿಯ ನದಿಗಳು ಹರಿಯುವುದೂ ಸ್ವಲ್ಪ ದೂರ ಮಾತ್ರವೇ. ಈ ನದಿಗಳ ನೀರು ಮರಳಿನಲ್ಲಿ ಇಂಗಿಹೋಗುತ್ತದೆ; ಇಲ್ಲವೆ ಅಲ್ಲಲ್ಲಿ ಸ್ವಲ್ಪ ತಗ್ಗಾಗಿರುವ, ಸಾಮಾನ್ಯವಾಗಿ ಒಣಗಿ ನಿಂತಿರುವ, ಉಪ್ಪುಸರೋವರಗಳನ್ನು ಸೇರುತ್ತದೆ. ಈ ಮರುಭೂಮಿಯಲ್ಲಿ ಮರಗಳಿಲ್ಲ. ಆದರೆ ಕೆಲವೆಡೆ ಕುರುಚಲು ಗಿಡಗಳನ್ನು ಕಾಣಬಹುದು. 2800 ಮೀ ಎತ್ತರದ ಆಲ್ಟಾ ಮತ್ತು ಅಂಥ ಇತರ ಪರ್ವತಗಳಲ್ಲಿ ಅರ್ಧಕ್ಕೂ ಹೆಚ್ಚು ಎತ್ತರದ ವರೆಗೂ ಸ್ಟೆಪ್ ಹುಲ್ಲೂ ಅಲ್ಲಿಂದ ಎತ್ತರಕ್ಕೆ ಪರ್ವತ ಹುಲ್ಲೂ ಬೆಳೆಯುತ್ತವೆ. ಗೆಜ್ಜೆಲ್, ಬ್ಯಾಕ್ಟ್ರಿಯ ಒಂಟೆ, ಕಾಡು ಕತ್ತೆ, ನರಿ, ಮೊಲ ಮೊದಲಾದ ಪ್ರಾಣಿಗಳು ಈ ಮರುಭೂಮಿಯಲ್ಲಿ ಕಾಣಸಿಗುತ್ತವೆ. ಹಿಮಚಿರತೆಗಳು, ಕರಡಿ, ತೋಳಗಳು ವಿರಳವಾಗಿ ಇಲ್ಲಿ ವಿಹರಿಸುತ್ತವೆ. ಕುರಿಮೇಕೆಗಳು ಇಲ್ಲಿಯ ಮುಖ್ಯ ಸಾಕುಪ್ರಾಣಿಗಳು. ದನಕರುಗಳನ್ನೂ ಸಾಕುತ್ತಾರೆ. ಕುದುರೆಗಳು ಶೇ.4 ಮಾತ್ರ. ಇವು ಹೆಚ್ಚಾಗಿರುವುದು ತೇವದ ವಾತಾವರಣವಿರುವ ಆಗ್ನೇಯ ಭಾಗದಲ್ಲಿ. ಮರುಭೂಮಿಯ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಮಾಡಲೂ ಸರಕು ಸಾಗಿಸಲೂ ಉಪಯೋಗಿಸುವ ಪ್ರಾಣಿ ಎರಡು ಡುಬ್ಬಗಳ ಒಂಟೆ.

ಇಲ್ಲಿಯ ಬಹುಭಾಗಗಳಲ್ಲಿ ಜನಸಾಂದ್ರತೆ ಅತ್ಯಂತ ವಿರಳ. ಓಯಸಿಸ್‌ಗಳಿರುವೆಡೆಗಳಲ್ಲಿ ಮಾತ್ರ ಜನ ನೆಲೆಸಿದ್ದಾರೆ. ಮಂಗೋಲರು, ಕಜ್ಜಕ್ ಮತ್ತು ಯುಗುರ್ ಜನಾಂಗದವರು ಇಲ್ಲಿ ಬಹುಕಾಲದಿಂದ ವಾಸಿಸುತ್ತಿದ್ದಾರೆ. ಹುಲ್ಲುಗಾವಲುಗಳಲ್ಲಿ ಈ ಅಲೆಮಾರಿ ಜನಾಂಗಗಳು ತಮ್ಮ ಕುರಿಮೇಕೆಗಳ ಮತ್ತು ಹಸುಗಳ ಮಂದೆಯ ಹಿಂದೆ ಸಕಲ ಸರಂಜಾಮುಗಳೊಂದಿಗೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾರೆ. ಇವರ ವಾಸ ಗುಡಾರಗಳಲ್ಲಿ. ಇವರು ಪ್ರಾಣಿಗಳನ್ನು ಸಾಕುವುದರ ಜೊತೆಗೆ ತೊಗಲಿನ ವ್ಯಾಪಾರವನ್ನೂ ಮಾಡುತ್ತಾರೆ. ಸ್ಟೆಪಿಗಳ ಅಂಚುಗಳಲ್ಲಿ ಚೀನೀಯರು ನೆಲೆಸಿದ್ದಾರೆ.

ಗೋಬಿಯ ಪೂರ್ವಭಾಗದಲ್ಲಿ ಪೆಟ್ರೋಲಿಯಂ ದೊರೆಯುತ್ತದೆ. ಚೀನ–ಮಂಗೋಲಿಯ ಗಡಿರೇಖೆಯ ಸಮೀಪ ತಾಮ್ರ ಹಾಗೂ ಚಿನ್ನದ ಗಣಿಗಳು ಶೋಧಗೊಂಡಿದ್ದು ಗಣಿಗಾರಿಕೆಯ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಗೋಬಿ ಮರುಭೂಮಿ ತ್ವರಿತಗತಿಯಲ್ಲಿ ವಿಸ್ತರಿಸುತ್ತಿದೆ. ಚೀನದ ವ್ಯಾಪ್ತಿಗೆ ಸೇರುವ ಮರುಭೂಮಿಯ ದಕ್ಷಿಣ ಭಾಗದಲ್ಲಿ ಈ ಪ್ರಕ್ರಿಯೆ (ಡೆಸರ್ಟಿಫಿಕೇಶನ್) ವ್ಯಾಪಕವಾಗಿದ್ದು ಇಲ್ಲಿ ಪ್ರತಿವರ್ಷ ಸು. 3600 ಚ.ಕಿಮೀ ಪ್ರದೇಶದಷ್ಟು ಹುಲ್ಲುಗಾವಲು ಬೆಂಗಾಡಾಗಿ ಮಾರ್ಪಡುತ್ತಿರುವುದು ಅಪಾಯಕಾರಿ ಸೂಚನೆಯಾಗಿದೆ. ಚೀನದಲ್ಲಿ ಮರಳು ಮಾರುತಗಳು ಸಾಮಾನ್ಯ. ಆದರೆ ಮರುಭೂಮಿಯ ವಿಸ್ತರಣಾ ಪ್ರಕ್ರಿಯೆಯಿಂದಾಗಿ ಕಳೆದೆರಡು ದಶಕಗಳಲ್ಲಿ ಮಾರುತಗಳು ಅಧಿಕವಾಗಿ ಬೀಸಲಾರಂಭಿಸಿವೆ. ಇದು ಚೀನದ ಕೃಷಿ ವ್ಯವಸ್ಥೆಗೆ ಮಾರಕವಾಗಿ ಪರಿಣಮಿಸಿದೆ. ಕಾಡಿನ ನಾಶ, ನೀರಿನ ಮೂಲಗಳ ಬತ್ತುವಿಕೆ ಹಾಗೂ ವ್ಯಾಪಕ ಪಶುಪಾಲನೆ (ಓವರ್ ಗ್ರೇಜಿಂಗ್) ಮರುಭೂಮಿಯ ವಿಸ್ತರಣೆಗೆ ಕಾರಣವೆನ್ನಲಾಗಿದೆ. ಈ ಪ್ರಕ್ರಿಯೆಯನ್ನು ಮೊಟಕುಗೊಳಿಸಲು ಚೀನಾ ಸರ್ಕಾರ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಮರುಭೂಮಿಯ ಅಂಚಿನುದ್ದಕ್ಕೂ ಕಾಡನ್ನು ಬೆಳೆಸಿ (ಗ್ರೀನ್ ವಾಲ್ ಆಫ್ ಚೈನ) ವಿಸ್ತರಣೆಯನ್ನು ತಡೆಗಟ್ಟುವುದು ಇತ್ತೀಚಿನ ಯೋಜನೆಗಳಲ್ಲೊಂದಾಗಿದೆ.

ಅಧಿಕ ಮಳೆಯಾಗುವ ಪೂರ್ವಭಾಗದಲ್ಲಿಯೂ (ಮಂಗೋಲಿಯ) ಪರಿಸರ ನಾಶ ಇತ್ತೀಚೆಗೆ ಹೆಚ್ಚುತ್ತಿದೆ. ಕುರಿಮೇಕೆ ಸಾಕಣೆಯಿಂದಾಗಿ ಹುಲ್ಲುಗಾವಲುಗಳು ಕ್ಷಯಿಸುತ್ತಿವೆ.

(ಎಂ.ಎಚ್.)

**ಗೋಬಿಂದ ಸಿಂಹ, ಗುರು :** 1660–1708. ಸಿಕ್ಖ್ ಪಂಥದ ಗುರು ಪಂಕ್ತಿಯಲ್ಲಿ ಹತ್ತನೆಯವನು; ಹಾಗೆಯೇ ಕಡೆಯ ಗುರು. ಸಿಕ್ಖ್ ಪಂಥದ ನಂಬಿಕೆಯಂತೆ, ಪಂಥದ ಸ್ಥಾಪಕನಾದ ಮೊದಲ ಗುರು ನಾನಕ್, ತನ್ನ ಅನಂತರ ಪಂಥದ ಗುರುವಾಗಿ ಇರಲು ಎರಡನೆಯ ಗುರು ಅಂಗದನನ್ನು ನೇಮಿಸುವಾಗ, ತಾನು ಅವನಲ್ಲಿ ತನ್ನ ಆತ್ಮವನ್ನಿರಿಸಿದ. ಹೀಗೆಯೇ ಈ ಗುರುತ್ವ ಗುರುವಿನಿಂದ ಗುರುವಿಗೆ ಸಾಗಿತು. ಗುರು ಗೋಬಿಂದ ಸಿಂಹ, ತಾನು ದೇಹವನ್ನು ಬಿಡುವ ಮುನ್ನ, ತನ್ನ ಅನಂತರ ಯಾವನೇ ಒಬ್ಬವ್ಯಕ್ತಿ ಗುರುವಾಗಿ ಇರುವುದಿಲ್ಲ, ಗುರುತ್ವ ಗುರುವಾಣಿಯಾದ ಆದಿಗ್ರಂಥದಲ್ಲಿರುತ್ತದೆ ಎಂದೂ ಮುಂದೆ ಪಂಥದ ಜನ ಈ ಪೂಜ್ಯಗ್ರಂಥವನ್ನು (ಗ್ರಂಥ್ ಸಾಹೆಬ್) ಗುರುವೆಂದು ಕಾಣಬೇಕು ಎಂದೂ ನಿಯಮಿಸಿದ. ಇದೇ ಗುರು ಆ ಮೊದಲೇ (1705) ಈ ಗ್ರಂಥಕ್ಕೆ ಒಂದು ನಿಷ್ಕೃಷ್ಟ ಆಕಾರವನ್ನು ಕೊಟ್ಟಿದ್ದ.

ಗುರು ಗೋಬಿಂದ ಸಿಂಹ ಪಂಥದ ಒಂಬತ್ತನೆಯ ಗುರುವಾದ ತೇಗ್ (ತೇಜ್) ಬಹದ್ದೂರನ ಕುಮಾರ. ಶಿಷ್ಯರ ಸಲುವಾಗಿ ದೇಶಾಟನ ಮಾಡುತ್ತ ತೇಗ್ ಬಹದ್ದೂರ್ ಬಿಹಾರದಲ್ಲಿನ ಪಾಟ್ನ ನಗರದಲ್ಲಿದ್ದ. ಈತ ಕಾರ್ಯಾಂತರಕ್ಕಾಗಿ ಕಾಮರೂಪಕ್ಕೆ ಹೋಗಿದ್ದಾಗ ಈ ಕುಮಾರ ಹುಟ್ಟಿದ. ತಾನು ಹೊರಡುವ ವೇಳೆ ಪ್ರಸವದ ನಿರೀಕ್ಷೆಯಲ್ಲಿದ್ದ ಪತ್ನಿಗೆ ತೇಗ್ ಬಹದ್ದೂರ್, ಹುಟ್ಟುವ ಮಗನಿಗೆ ಗೋವಿಂದರಾಯ್ ಎಂದು ಹೆಸರಿಡಲು

ಹೇಳಿ ಹೋದ. ಗೋವಿಂದ ತೇಜಸ್ವಿಯಾದ ಬಾಲಕ, ವ್ಯಾಯಾಮ ಪ್ರೇಮಿಯಾಗಿ ಬೆಳೆದ. ಔರಂಗಜೇಬ್ ಹಿಂದೂ ಗಳನ್ನು ಜಾತಿ ಕೆಡಿಸುತ್ತಿದ್ದಾನೆಂದು ಕಾಶ್ಮೀರದ ಬ್ರಾಹ್ಮಣರು ತೇಗ್ ಬಹದ್ದೂರನ ರಕ್ಷಣೆಯನ್ನು ಬೇಡಿ ಬಂದರು. ಗುರು ಈ ಸಂದರ್ಭದಲ್ಲಿ ಏನು ಮಾಡುವುದು ಎಂದು ಯೋಚಿಸುತ್ತ ಇದ್ದನಂತೆ. ಮಗ ಚಿಂತೆಯೇನು–ಎಂದು ಕೇಳಿದ. ತಂದೆ, ಕೆಲಸಕ್ಕೆ ಧೀರ, ಸತ್ಯವಂತ ಆದ ಸತ್ಪುರುಷಬೇಕು, ಎಂದನಂತೆ. ಕುಮಾರ ಗೋಬಿಂದ, ನಿಮ್ಮಂಥ ಧೀರ ಸತ್ಯವಂತ ಸತ್ಪುರುಷ ಬೇರೆ ಯಾರಪ್ಪ – ಎಂದನಂತೆ. ತೇಗ್ ಬಹದ್ದೂರ್ ಇದು ದೈವದವಾಣಿ ಎಂದು ನೆನೆದ; ದೆಹಲಿಗೆ ಹೋಗಿ ಔರಂಗಜೇಬನಿಗೆ ಅವನು ಮಾಡುತ್ತಿದ್ದ ಅಕೃತ್ಯಗಳನ್ನು ನಿಲ್ಲಿಸಬೇಕು ಎಂದು ಸೂಚಿಸಿದ. ಔರಂಗಜೇಬ್ ಅವನನ್ನು ಕೊಲ್ಲಿಸಿದ. ಹದಿನೈದು ವಯಸ್ಸಿನ ಬಾಲಕ ಗೋಬಿಂದ ಗುರುವಾಗಬೇಕಾಯಿತು. ಹಗೆಯೊಂದಿಗೆ ಹೋರದೆ ಬದುಕುವಂತಿಲ್ಲ ಎಂದು ನಿಶ್ಚಯಿಸಿಕೊಂಡ ಗುರು ಗೋಬಿಂದ ಸಿಂಹ ಸಿಕ್ಖ್ ಜನವನ್ನು ಒಂದು ಕ್ಷತ್ರಿಯ ಸಮುದಾಯವಾಗಿ ರೂಪಿಸಲು ನಿರ್ಣಯಿಸಿದ. ತನ್ನ ಶಿಷ್ಯರು ಖಾಲ್ಸಾ ಎಂಬ ಹೆಸರಿಂದ ಒಂದು ಯೋಧಸಮಾಜವಾಗಿ ಬಾಳಬೇಕು ಎಂದು 1669ರ ಯುಗಾದಿಯ ದಿನ ಆಜ್ಞೆ ಮಾಡಿ ಮೊದಲು ಹತ್ತು ಜನರಿಗೆ ಅಂದೇ ದೀಕ್ಷೆ ಕೊಟ್ಟ. ಖಾಲ್ಸಾ ಎಂದರೆ ಶುದ್ಧ. ಖಾಲ್ಸಾ ಮಂದಿ ಶುದ್ಧಜೀವನ ನಡೆಸಬೇಕು ಎಂದೂ ಸಿಕ್ಖ್ ಆದವನಿಗೆ ಕೇಶ, ಕಂಘ, ಕಚ್ಛ, ಕರ, ಕೃಪಾಣ ಎಂಬ ಪಂಚ ಕಕಾರರಕ್ಷಣ ಇರಬೇಕು ಎಂದೂ ನೇಮ ಹಾಕಿಕೊಟ್ಟ. ಶಿಷ್ಯರು ಸಿಂಹ ಎಂದು ಕರೆದುಕೊಳ್ಳಬೇಕು ಎಂದೂ ನಿಯಮಿಸಿದ. ಮೊದಲು ಐವರು ಶಿಷ್ಯರಿಂದ ತಾನೂ ದೀಕ್ಷೆ ತೆಗೆದುಕೊಂಡು ತಾನು ಅಂದಿನಿಂದ ಗೋಬಿಂದ ಸಿಂಹ ಆದ.

ಚಕ್ರವರ್ತಿ ಔರಂಗಜ಼ೇಬನಿಗೆ ಅವನ ಮತದ್ವೇಷವನ್ನು ಖಂಡಿಸಿ ಗೋಬಿಂದ ಒಂದು ಪತ್ರಬರೆದ. ಇದು ಜಫರ್ ನಾಮಾ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆಯುಷ್ಯವೆಲ್ಲ ಧರ್ಮರಕ್ಷಣೆಗಾಗಿ ಕಾದಿ ಗೋಬಿಂದ ಸಿಂಹ 1708ರಲ್ಲಿ ಇಹಲೋಕವನ್ನು ತೊರೆದ.

ತಖತ್ ಹರಿಮಂದಿರ್–ಗೋಬಿಂದ ಸಿಂಹ ಜನಿಸಿದ ಸ್ಥಳ

ಕಾದಾಟದಲ್ಲಿ ಇವನ ಮಕ್ಕಳಲ್ಲಿ ಇಬ್ಬರು ಯುದ್ಧದಲ್ಲಿ ಮಡಿದರು, ಇಬ್ಬರು ಹಗೆಯ ಕೈಗೆ ಸಿಕ್ಕಿ ಬಲಿಯಾದರು. ಇಷ್ಟಾದರೂ ಈ ಧರ್ಮಸಿಂಹ ಧೈರ್ಯಗೆಡಲಿಲ್ಲ; ಬಂದ ದುಃಖಕ್ಕೆ ತಲೆಕೊಟ್ಟು ಶಿಷ್ಯರಿಗೆ ಮೇಲ್ಪಂಕ್ತಿಯಾಗಿ ಬಾಳಿದ.

ಹಿಂದಿನ ಗುರುಗಳ ಕೃತಿಗಳನ್ನೆಲ್ಲ ಸಂಗ್ರಹಿಸಿ ಪರಿಷ್ಕರಿಸಿ ಅವಕ್ಕೆ ಒಂದು ಸ್ಥಿರವಾದ ರೂಪವನ್ನು ಕೊಟ್ಟದ್ದು ಗುರು ಗೋಬಿಂದ ಸಿಂಹ ಮಾಡಿದ ಮಹತ್ಕಾರ್ಯಗಳಲ್ಲಿ ಒಂದು. ಗೋಬಿಂದ ಸಿಂಹ ತಾನೂ ಕೃತಿಗಳನ್ನು ರಚಿಸಿದ. ಆದರೆ ಅದನ್ನು ಗ್ರಂಥ್ ಸಾಹೆಬ್‌ನಲ್ಲಿ ಸೇರಿಸಲಿಲ್ಲ. ಈತ ತೀರಿದ ಅನಂತರ ಶಿಷ್ಯನೊಬ್ಬ ಆ ಕೃತಿಗಳನ್ನು ಸಂಗ್ರಹಿಸಿದ. ಅದು ದಶಮಗ್ರಂಥ ಎಂದರೆ ಹತ್ತನೆಯ ಗುರುವಿನ ಗ್ರಂಥ ಎಂಬ ಹೆಸರಿನಿಂದ ಬಳಕೆಗೆ ಬಂತು. ಇದರಲ್ಲಿ ಗೋಬಿಂದ ಸಿಂಹನ ಸುಮಾರು 2000ದಷ್ಟು ಕೃತಿಗಳು ಇವೆ. ಗುರು ನಾನಕ್ ಆರಂಭಿಸಿದ ಪಂಥ ಕೆಲವು ಕಾಲದಲ್ಲಿ ಒಂದು ಪ್ರತ್ಯೇಕ ಪಂಥ ಎಂದಾಗಿ ಗುರುಗೋಬಿಂದಸಿಂಹನ ಕಾರ್ಯದಿಂದ ಒಂದು ನಿಷ್ಕೃಷ್ಟ ರೂಪವನ್ನು ತಳೆಯಿತು; ತನ್ನದೇ ಧರ್ಮಗ್ರಂಥವನ್ನು ಪಡೆಯಿತು; ಧರ್ಮರಕ್ಷಣೆಯ ದೀಕ್ಷೆಯನ್ನು ವಹಿಸಿಕೊಂಡಿತು; ಭರತವರ್ಷದ ಇತಿಹಾಸದಲ್ಲಿ ಒಂದು ವಿಶಿಷ್ಟ ಸೇವೆಯನ್ನು ಸಲ್ಲಿಸಲು ಕ್ಷಮವಾದ ಒಂದು ದಕ್ಷ ಧರ್ಮಸಂಘ ಆಯಿತು. (ಎಂ.ವಿ.ಐ.;ಜಿ.ಆರ್.ಆರ್.)

**ಗೋಬಿ ಮೀನು :** ಪರ್ಸಿಫಾರ್ಮೀಸ್ ಗಣದ ಗೋಬಿಯಿಡೀ ಕುಟುಂಬಕ್ಕೆ ಸೇರಿದ ಹಲವಾರು ಮೀನುಗಳಿಗೆ ಇರುವ ಸಾಮಾನ್ಯ ಹೆಸರು. ಈ ಕುಟುಂಬದಲ್ಲಿ ನೂರಾರು ಪ್ರಭೇದಗಳಿವೆ. ಇವು ಉಷ್ಣವಲಯದ ಕಡಲುಗಳು ಇಲ್ಲವೇ ಸರೋವರಗಳ ತಳದಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ಇವು ಚಿಕ್ಕ ಗಾತ್ರದವು. ಫಿಲಿಪೀನ್ಸ್‌ನಲ್ಲಿನ ಲುಜ಼ಾನ್ ಎಂಬಲ್ಲಿರುವ ಒಂದು ಸರೋವರದಲ್ಲಿ ಕಂಡುಬರುವ ಪಂಡಾಕ ಪಿಗ್ಮೀಯ ಎಂಬ ಗೋಬಿ ಮೀನು ಕೇವಲ 12 ಮಿಮೀ ಉದ್ದ ಇದ್ದು ಅತ್ಯಂತ ಚಿಕ್ಕ ಕಶೇರುಕ ಎನಿಸಿಕೊಂಡಿದೆ. ಉಳಿದವು ಸುಮಾರು 8 ರಿಂದ 30 ಸೆಂಮೀ ವರೆಗೆ ಬೆಳೆಯಬಲ್ಲವು.

ಭಾರತದಲ್ಲಿ ಸಾಮಾನ್ಯವಾಗಿ ಸಿಹಿನೀರು ಪ್ರದೇಶಗಳಲ್ಲಿ ಕಾಣಸಿಗುವ ಗೋಬಿ ಮೀನು ಎಂದರೆ ಗ್ಲಾಸೊಗೋಬಿಯಸ್ ಗ್ಯೆಯುರಿಸ್ (ಟ್ಯಾಂಕ್ ಗೋಬಿ). ಬಹುತೇಕ ಕೆರೆ, ಕೊಳಗಳು, ಅಳಿವೆಗಳು, ಹಿನ್ನೀರು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ಮೀನು. ಮರಳು, ಜಲ್ಲಿ, ಬಂಡೆಗಳಿಂದ ಕೂಡಿದ ಝರಿಗಳಲ್ಲೂ ಕಾಣಸಿಗುತ್ತವೆ. ಕೆಲವೊಮ್ಮೆ ಸಮುದ್ರಕ್ಕೂ ಪ್ರವೇಶಿಸುತ್ತವೆ. ಈ ಪ್ರಭೇದದ ಗಂಡು ಮೀನು ಕಂದುಬಣ್ಣವಿರುತ್ತದೆ, ಹೆಣ್ಣು ಹಳದಿ. ಹೆಣ್ಣಿನಲ್ಲಿ ಬೂದು ಮತ್ತು ಕಪ್ಪು ಚುಕ್ಕೆಗಳು ಇರುತ್ತವೆ. ಸುಮಾರು 30 ಸೆಂಮೀ ವರೆಗೆ ಬೆಳೆಯುತ್ತದೆ. ಗೋಬಿ ಮೀನುಗಳಿಗೆ ಚಪ್ಪಟೆಯಾದ ತಲೆ, ದುಂಡಾದ ಮೂತಿ, ತಲೆಯ ಮೇಲ್ಭಾಗಕ್ಕಿರುವ ದೊಡ್ಡ ಕಣ್ಣುಗಳು, ದಪ್ಪ ತುಟಿಗಳು, ಹಲವಾರು ಸಾಲುಗಳಲ್ಲಿರುವ ಸಣ್ಣ ಹಲ್ಲುಗಳು, ದುಂಡಾದ ಬಾಲದ ಈಜುರೆಕ್ಕೆಗಳಿವೆ. ಗುದದ ಈಜುರೆಕ್ಕೆಗಳು ದೇಹದ ಅಧೋಭಾಗದಲ್ಲಿ ಒಂದುಗೂಡಿ ಒಂದು ರೀತಿಯ ಹೀರು ಬಟ್ಟಲಾಗಿ ಪರಿವರ್ತನೆಯಾಗಿವೆ. ಇದರ ಸಹಾಯದಿಂದ ಗೋಬಿ ಬಂಡೆಗಳಿಗೆ, ಮರಳಿಗೆ ಅಂಟಿಕೊಂಡಿರುತ್ತದೆ. ಇವು ಸಣ್ಣ ಕೀಟಗಳು, ಇತರೆ ಸಣ್ಣ ಜಲಚರಗಳು ಹಾಗೂ ಮೀನುಗಳನ್ನು ತಿನ್ನುತ್ತವೆ.



ಫಿಲಿಪೀನ್ ಗೋಬಿ

ವಸಂತ ಋತುವಿನ ಪ್ರಾರಂಭದಲ್ಲಿ ಗೋಬಿಗಳು ಪ್ರಜನನ ಕ್ರಿಯೆಯಲ್ಲಿ ತೊಡಗುತ್ತವೆ. ಹೆಣ್ಣು ಮೊಟ್ಟೆಗಳನ್ನು ಇಟ್ಟ ಮೇಲೆ ಗಂಡು ಮೀನು ಕಾವಲಿರುತ್ತದೆ. ಇದು ಮೊಟ್ಟೆಗಳನ್ನು ತಿನ್ನಲು ಬರುವ ಇತರೆ ಮೀನುಗಳೊಡನೆ ಕಾದಾಡಿ ರಕ್ಷಣೆ ನೀಡುವುದಲ್ಲದೆ, ತನ್ನ ಭುಜದ ಈಜು ರೆಕ್ಕೆಗಳಿಂದ ಸುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿ ಬೆಳೆಯುವ ಮರಿಗಳಿಗೆ ಅನುಕೂಲ ವಾತಾವರಣವನ್ನು ಕಲ್ಪಿಸುತ್ತದೆ.

ವಾಣಿಜ್ಯವಾಗಿ ಅಷ್ಟು ಪ್ರಾಮುಖ್ಯವಲ್ಲದಿದ್ದರೂ ಈ ಮೀನು ತಿನ್ನಲು ಯೋಗ್ಯವಾಗಿವೆ. (ಜಿ.ಎಸ್.ಎಚ್.ಐ.)

**ಗೋಮತೀ ನದಿ :** ಭಾರತದ ಉತ್ತರಪ್ರದೇಶ ರಾಜ್ಯದಲ್ಲಿ ಹರಿಯುವ ಒಂದು ನದಿ, ಗಂಗಾನದಿಯ ಉಪನದಿಗಳಲ್ಲೊಂದು. ಪೀಲಿಭೀತ್‌ನಿಂದ ಪೂರ್ವಕ್ಕೆ 32 ಕಿಮೀ ದೂರದಲ್ಲಿರುವ ಗೋಮತ್ ತಾಲ್‌ನಲ್ಲಿ (ಉ.ಅ.$28^0$ 35′ ; ಪೂ.ರೇ.$80^0$ 75′) ಹುಟ್ಟಿ 19 ಕಿಮೀ ವರೆಗೆ ಝರಿಯಂತೆ ಹರಿಯುತ್ತದೆ. 56 ಕಿಮೀ ಹರಿದ ಅನಂತರ ಜೊಮ್‌ಕೈ ನದಿ ಇದನ್ನು ಸಂಗಮಿಸುತ್ತದೆ. ಅಲ್ಲಿಂದ ಮುಂದೆ ಶಾಶ್ವತವಾದ ಪ್ರವಾಹ ರೂಪದಲ್ಲಿ ಇದು ಹರಿಯತೊಡಗುತ್ತದೆ. ಸ್ವಲ್ಪ ದೂರದಲ್ಲಿ ಶಹಜಹಾನ್‌ಪುರ ದಿಂದ ಖೇರೀಗೆ ಹೋಗುವ ಮಾರ್ಗದಲ್ಲಿ ಗೋಮತಿಗೆ 63 ಮೀ ಉದ್ದದ ಸೇತುವೆ ನಿರ್ಮಾಣವಾಗಿದೆ. ಸೇತುವೆಯನ್ನು ದಾಟಿದ ಮೇಲೆ ಮಂದಗತಿಯಿಂದ ಹರಿಯುವ ಈ ನದಿಗೆ ಅನೇಕ ಉಪನದಿಗಳೂ ನಾಲೆಗಳೂ ಬಂದು ಸೇರುತ್ತವೆ. ಮುಹಮ್ಮದೀಯಿಂದ ಲಖನೌ ವರೆಗೆ ನದಿಯ ಪಾತ್ರದ ಅಗಲ 30–36 ಮೀ. ಇಲ್ಲಿ ನದಿಯ ದಡಗಳು ತಕ್ಕಮಟ್ಟಿಗೆ ಎತ್ತರವಾಗಿವೆ. ಸೀತಾಪುರ ಜಿಲ್ಲೆಯಲ್ಲಿ ಗೋಮತಿಯನ್ನು ಬಂದು ಸೇರುವ ನದಿಗಳು ಕಥ್‌ನಾ ಮತ್ತು ಸರಾಯಾನ. ಲಖನೌ ನಗರದಲ್ಲಿ ಇದಕ್ಕೆ ಅನೇಕ ಸೇತುವೆಗಳಿವೆ. ಲಖನೌದಿಂದ ಮುಂದೆ ಈ ನದಿ ಬಾರಾಬಂಕಿ, ಸುಲ್ತಾನ್‌ಪುರ ಮತ್ತು ಜೌನ್‌ಪುರ ಜಿಲ್ಲೆಗಳನ್ನು ದಾಟಿ ಮುಂದುವರೆಯುತ್ತದೆ. ಅಲ್ಲಿ ನದಿಯ ಮಾರ್ಗ ಅಂಕುಡೊಂಕು; ಪಾತ್ರದ ಅಗಲ 60–180 ಮೀ. ಜೌನ್‌ಪುರದಲ್ಲಿ 16ನೆಯ ಶತಮಾನದಲ್ಲಿ ಕಟ್ಟಿದ 196 ಮೀ ಉದ್ದದ ಶಾಹೀ ಎಂಬ ಕಲ್ಲುಸೇತುವೆ ತುಂಬ ಪ್ರಸಿದ್ಧವಾದುದು. ಮುಂದೆ ಗೋಮತಿಯನ್ನು ಸೇರುವ ನದಿ ಸಯೀ. ವಾರಾಣಸಿಯಿಂದ ಉತ್ತರಕ್ಕೆ 32 ಕಿಮೀ ದೂರದಲ್ಲಿ ಗೋಮತೀ ನದಿ ಘಾಜಿಪುರ ಜಿಲ್ಲೆಯ ಸೈದ್‌ಪುರ ಎಂಬ ಊರಿನ ಹತ್ತಿರ ಗಂಗಾನದಿಯನ್ನು ಸಂಗಮಿಸುತ್ತದೆ. ನದಿಯ ಒಟ್ಟು ಉದ್ದ ಸು. 940 ಕಿಮೀ.

ಗೋಮತೀ ನದಿ ಮತ್ತು ಅದರ ಉಪನದಿಗಳಿಂದ 30,437 ಚ.ಕಿಮೀ ಪ್ರದೇಶ ಫಲವತ್ತಾಗಿದೆ. ಅತಿವೃಷ್ಟಿಯಿಂದ ಆಗಾಗ್ಗೆ ನದಿಯಲ್ಲಿ ಅತಿಯಾದ ನೆರೆ ಬರುವುದುಂಟು. ಗೋಮತೀ ನದಿಯಲ್ಲಿ ಮುಹಮ್ಮದೀವರೆಗೆ ದೋಣಿ ಸಂಚಾರ ಸಾಧ್ಯ. ಲಖನೌ, ಸೀತಾಪುರ, ಬಾರಾಬಂಕಿ, ರಾಯ್‌ಬರೇಲಿ, ಸುಲ್ತಾನ್‌ಪುರ, ಜೌನ್‌ಪುರ ನಗರಗಳು ಗೋಮತೀ ನದಿಯ ದಂಡೆಯ ಮೇಲಿವೆ. (ಆರ್.ಪಿ.ಎಸ್.)

**ಗೋಮೇದಕ :** ಆದರ್ಶೀಕೃತ ರಾಸಾಯನಿಕ ಸೂತ್ರ $ZrSiO_4$ (ಜ಼ಿರ್ಕೋನಿಯಂ ಸಿಲಿಕೇಟ್) ಇರುವ ಒಂದು ಖನಿಜ (ಜ಼ಿರ್ಕಾನ್). ನವರತ್ನಗಳಲ್ಲಿ ಒಂದು. ಜ಼ಿರ್ಕೋನಿಯಮ್ ಧಾತುವಿನ ಬಲುಮುಖ್ಯ ಆಕರ. ಇದರ ರಾಸಾಯನಿಕ ಸಂಯೋಜನೆಯಲ್ಲಿ ಅಲ್ಪ ಮೊತ್ತದಲ್ಲಿ ಯುರೇನಿಯಮ್ ಪ್ರವೇಶಿಸಿದರೆ ಅದಕ್ಕೆ ಸಿರ್ಟೊಲೈಟ್ ಎಂದು ಹೆಸರಾಗುತ್ತದೆ.

ಗೋಮೇದಕ ಚತುಷ್ಕೋಣೀಯ (ಟೆಟ್ರಾಗೊನಲ್) ವರ್ಗದ ಹರಳುಗಳಾಗಿ ಚತುರ್ಮುಖ ಅಥವಾ ಅಷ್ಟಮುಖಗಳ ಪ್ರಿಸಮ್‌ಗಳಂತೆ ರೂಪುಗೊಳ್ಳುತ್ತದೆ. ಪ್ರಿಸಮ್‌ಗಳ ತುದಿಗಳು ಪಿರಮಿಡ್ಡುಗಳಂತೆ ಮೊನಚಾಗಿ ಮಾರ್ಪಡುತ್ತವೆ. ಅವಳಿಗಳಾಗಿ ಬೆಳೆಯುವ ಕೆಲವು ಹರಳುಗಳು ಬಗ್ಗಿದ ಮೊಣಕಾಲಿನ ರೂಪವನ್ನು ಪಡೆಯುತ್ತವೆ. ಸರ್ವ ಸಾಮಾನ್ಯವಾಗಿ ದೊರೆಯುವ ಗೋಮೇದಕ ಸ್ವಚ್ಛವಾಗಿರುವುದಿಲ್ಲ. ಅಚ್ಚ ಹೊಳಪನ್ನುಳ್ಳ ಅಚ್ಚಗೆಂಪು, ಕಿತ್ತಳೆ ಕೆಂಪು ಇಲ್ಲವೆ ಹಳದಿ ಬಣ್ಣಗಳಿಂದ ಕೂಡಿ ಪಾರದರ್ಶಕತೆಯುಳ್ಳ ಹೈಯಾಸಿಂತ್ ಎಂಬ ಅಪರೂಪದ ಗೋಮೇದಕಗಳು ಬೆಲೆಬಾಳುವ ರತ್ನಗಳು. ಕಾಯಿಸುವುದರಿಂದ ಗೋಮೇದಕದ ಬಣ್ಣ ಮಾಯವಾಗುತ್ತದೆ. ನಿರ್ಮಲವಾದ ಗೋಮೇದಕ ವಜ್ರಕ್ಕೆ ಸಮವಾದ ಹೊಳಪನ್ನು ಬೀರಿದರೆ ಅದಕ್ಕೆ ಮಟುರಾ ವಜ್ರವೆನ್ನುತ್ತಾರೆ. ಇದನ್ನು ಒಡೆದಾಗ ಶಂಖಾಕೃತಿಯ ಸೀಳುಗಳನ್ನು ಕಾಣಬಹುದು. ಇದರ ಕಠಿಣತೆ 7.5, ಸಾಪೇಕ್ಷ ಸಾಂದ್ರತೆ 4.7.

ರತ್ನ ಜಾತಿಗೆ ಸೇರಿದ ಗೋಮೇದಕಗಳು ಶ್ರೀಲಂಕ, ಇಂಡೊಚೀನ, ಆಸ್ಟ್ರೇಲಿಯ, ರಷ್ಯ, ಆಗ್ನೇಯ ಏಷ್ಯ, ಇಟಲಿ ಮೊದಲಾದ ದೇಶಗಳಲ್ಲಿ ದೊರೆಯುತ್ತವೆ. ಗೋಮೇದಕದ ಗಣಿಗಾರಿಕೆಯಲ್ಲಿ ಆಸ್ಟ್ರೇಲಿಯ ಮುಂಚೂಣಿಯಲ್ಲಿದೆ (37%). ಭಾರತದಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಒರಿಸ್ಸ ರಾಜ್ಯಗಳಲ್ಲಿನ ಸಮುದ್ರತೀರದಲ್ಲಿರುವ ಮರಳಿನಲ್ಲೂ ಇವು ಹೇರಳ. ಗೋಮೇದಕ ಸಾಮಾನ್ಯವಾಗಿ ಅಗ್ನಿಶಿಲೆಗಳಾದ ಗ್ರಾನೈಟ್, ಸೈನೈಟ್ ಮತ್ತು ಪೆಗ್ಮಟೈಟ್ ಶಿಲೆಗಳಲ್ಲಿ ಉಪಖನಿಜವಾಗಿ ಭೂಮಿಯ ನಾನಾ ಭಾಗಗಳಲ್ಲಿ ಉತ್ಪತ್ತಿಯಾಗಿರುತ್ತದೆ. ಆಂಧ್ರಪ್ರದೇಶದ ಖಮ್ಮಮ್ ಜಿಲ್ಲೆಯ ಸೈನೈಟ್ ಶಿಲೆಗಳಲ್ಲಿ ಅಸ್ಪಷ್ಟವಾದ ಹರಳುಗಳು ಸಾಕಷ್ಟು ಮೊತ್ತದಲ್ಲಿ ದೊರೆಯುತ್ತವೆ. (ಸಿ.ಎಸ್.ಎನ್.ಆರ್.)

**ಗೋಯಾ, ಇ ಲೂಸ್ಯಾನ್ ದಾ :** 1746–1828. ಸ್ಪೇನಿನ ವರ್ಣಚಿತ್ರ ಕಲಾವಿದ ಹಾಗೂ ಕೆತ್ತನೆ ಕಲೆಯಲ್ಲಿ ನಿಷ್ಣಾತನೆನಿಸಿದವ. ಸರಗೋಸ ಬಳಿಯ ಫ್ಯುನ್‌ಡೆ ಟೊಡೋಸ್‌ನಲ್ಲಿ 30 ಮಾರ್ಚ್ 1746ರಂದು ಜನಿಸಿದ. ಈತ ಚಿತ್ರಿಸಿರುವ ಬೃಹತ್ ಪ್ರಮಾಣದ ಚಿತ್ರಗಳು ಆ ಕಾಲದ ರಾಜಕೀಯ, ಸಾಮಾಜಿಕ ರಂಗಗಳಲ್ಲಿ ಉಂಟಾದ ಮಹತ್ತ್ವಪೂರ್ಣ ಬದಲಾವಣೆಗಳನ್ನು ರೂಪಿಸುತ್ತವೆಯಲ್ಲದೆ ಸಮಕಾಲೀನ ಜೀವನದ ನಾನಾ ಮುಖಗಳನ್ನು ಪ್ರತಿಮಿಸುತ್ತವೆ.

ಗೋಯಾ ಸರಗೋಸದಲ್ಲಿ ತನ್ನ ಚಿತ್ರ ಕಲೆಯನ್ನು ಆರಂಭಿಸಿದ. ಈತನ ಮೊದಲ ಗುರು ಜೋಸೆ ಲುಕ್ಸಾನ್. 1763ರಲ್ಲಿ ಮ್ಯಾಡ್ರಿಡ್‌ಗೆ ಹೋಗಿ ಅಲ್ಲಿ ಫ್ರಾನ್ಸಿಸ್ಕೊ ಬೇ ಎಂಬಾತನ ಬಳಿ ಶಿಷ್ಯವೃತ್ತಿ ಕೈಗೊಂಡ. ಅನಂತರ 1773ರಲ್ಲಿ ಆತನ ಸೋದರಿ ಜೋಸೆಫಳನ್ನು ವಿವಾಹವಾದ. ಅಲ್ಲಿಂದ ಮುಂದೆ ಇಟಲಿ, ರೋಮ್‌ಗಳಿಗೆ ಹೋದ. 1771ರಲ್ಲಿ ಸರಗೋಸದ ಕತೀಡ್ರಲಿನಲ್ಲಿ ಭಿತ್ತಿಚಿತ್ರಣವನ್ನು ಕೈಗೊಂಡ. ಇವು ಬರೋಖ್–ರೊಕೊಕೊ ಶೈಲಿಯಲ್ಲಿವೆ. ಮ್ಯಾಡ್ರಿಡ್‌ನಲ್ಲಿದ್ದ ಕಲಾವಿದ ಜಿ.ಬಿ.ಟೈಪೋಲೊನ ಕೃತಿಗಳ ಪ್ರಭಾವವನ್ನಿಲ್ಲಿ ಕಾಣಬಹುದು.

1780ರಲ್ಲಿ ಗೋಯಾ ಸಾನ್ ಫರ್ನಾಂಡೊ ಅಕಾಡೆಮಿಯ ಸದಸ್ಯನಾಗಿ ಅವಿರೋಧವಾಗಿ ಆಯ್ಕೆಗೊಂಡ. 1785ರಲ್ಲಿ ಅದೇ ಅಕಾಡೆಮಿಯ ಉಪನಿರ್ದೇಶಕನಾದ. ಮರುವರ್ಷ ಮೂರನೆಯ ಚಾರ್ಲ್ಸ್‌ನ ಆಸ್ಥಾನದಲ್ಲಿ ಚಿತ್ರಗಾರನಾಗಿ ನೇಮಕಗೊಂಡ. ಇದರಿಂದ ಹೆಚ್ಚಿನ ಕೀರ್ತಿಪ್ರತಿಷ್ಠೆಗಳು ಲಭಿಸಿದವು. 1788ರಲ್ಲಿ, ಎಂದರೆ ಫ್ರಾನ್ಸಿನ ಮಹಾಕ್ರಾಂತಿಗೆ ಕೆಲವು ತಿಂಗಳು ಮೊದಲೇ, ದೊರೆ ಮೂರನೆಯ ಚಾರ್ಲ್ಸ್ ತೀರಿಕೊಂಡ. 1795ರಲ್ಲಿ, ಹೊಸ ರಾಜನಾದ ನಾಲ್ಕನೆಯ ಚಾರ್ಲ್ಸ್‌ನ ಆಳಿಕೆಯಲ್ಲಿ, ಗೋಯಾ ಅಕಾಡೆಮಿಯ ನಿರ್ದೇಶಕನಾದ. ಎರಡು ವರ್ಷಗಳ ತರುವಾಯ ತನ್ನ ಅನಾರೋಗ್ಯದ ನಿಮಿತ್ತ ನಿರ್ದೇಶಕ ಪದವಿಗೆ ರಾಜೀನಾಮೆ ನೀಡಿದ.

1792ರಲ್ಲಿ ತೀವ್ರಸ್ವರೂಪದ ಕಾಯಿಲೆಗೆ ತುತ್ತಾದದ್ದರಿಂದ ಗೋಯಾನ ಶ್ರವಣ ಶಕ್ತಿ ತೀರ ಕುಂಠಿತವಾಯಿತು. ಆದರೂ ಈತನ ಕಲಾಪ್ರೌಢಿಮೆ ಮಾತ್ರ ಅತಿಶಯವಾಗಿ ಬೆಳೆಯಿತು. ಪ್ರತಿಭೆ ಮತ್ತು ವಿಮರ್ಶನ ಬುದ್ಧಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮೇಳೈಸಿದುವು. 1800ರ ಆರಂಭಿಕ ವರ್ಷದಲ್ಲಿ ಸ್ಪೇನ್ ದೇಶ ನೆಪೋಲಿಯನ್ ಯುದ್ಧಗಳಲ್ಲಿ ಭಾಗಿಯಾಗಿತ್ತು. ಆ ಕಾಲದಲ್ಲಿ ಸ್ಪೇನಿಗರು ಅನುಭವಿಸಿದ ಕಷ್ಟನಿಷ್ಠುರಗಳನ್ನು ತನ್ನ ಎರಡು ಮಹಾಚಿತ್ರಗಳಾದ ದಿ ಸೆಕೆಂಡ್ ಆಫ್ ಮೇ ಮತ್ತು ಷೂಟಿಂಗ್‌ಗಳಲ್ಲಿ ಗೋಯಾ ಅದ್ಭುತವಾಗಿ ಚಿತ್ರಿಸಿದ್ದಾನೆ. ಈ ಚಿತ್ರಗಳಲ್ಲಿ ಮಾನವನಿಂದ ಸಹಮಾನವನಿಗೆ ಆಗುತ್ತಿರುವ ಕ್ರೌರ್ಯಗಳ ಪ್ರಖರ ಚಿತ್ರಣವಿದೆ.

ಗೋಯಾನ ಇತರ ಕಲಾಕೃತಿಗಳಾದ ದಿ ಫ್ಯಾಮಿಲಿ ಆಫ್ ಚಾರ್ಲ್ಸ್ IV (1800) ಹಾಗೂ ಏಕೈಕ ನಗ್ನಚಿತ್ರ ಮಜಾ (ಸು. 1800–05) ಎಂಬವು ಉಲ್ಲೇಖನಾರ್ಹವಾದವು. ಸ್ಪೇನಿನ ಮೇಲೆ ಫ್ರೆಂಚರು ನಡೆಸಿದ ದುರಾಕ್ರಮಣವನ್ನೂ ಯುದ್ಧದ ಕರಾಳ ಸ್ವರೂಪವನ್ನೂ ದಿ ಕ್ಯಾಪ್ರೈಸಿಸ್ (1799) ಮತ್ತು ಡಿಸಾಸ್ಟರ್ಸ್ ಆಫ್ ವಾರ್‌ಗಳಲ್ಲಿ (1810–20) ಅತ್ಯಂತ ಮನೋಜ್ಞವಾಗಿ ಚಿತ್ರಿಸಲಾಗಿದೆ.

ಏಳನೆಯ ಫರ್ಡಿನೆಂಡನ ಆಳ್ವಿಕೆಯಲ್ಲಿ ಗೋಯಾಗೆ ಸ್ಪೇನಿನಲ್ಲಿ ಜೀವನ ನಡೆಸುವುದೇ ಅಸಹ್ಯಕರವಾಗಿ ತೋರಿತು. ಹಾಗಾಗಿ ಈತ ರಾಜನ ಅಪ್ಪಣೆ ಪಡೆದು ಪ್ಯಾರಿಸಿಗೆ ಹೋದ. ಅಲ್ಲಿ ಈತನಿಗೆ ಯುಕ್ತ ಮನ್ನಣೆ ದೊರಕಿತು. ಕೆಲಕಾಲ ಅಲ್ಲಿದ್ದು ಅನಂತರ ಬೋರ್ಡೋಗೆ ಹೋಗಿ ನೆಲಸಿದ. ಏಪ್ರಿಲ್ 16, 1828ರಂದು ಅಲ್ಲೇ ತೀರಿಕೊಂಡ. (ಎಚ್.ಎಸ್.ಎಚ್.)

**ಗೋಯೆಂಕಾ, ರಾಮನಾಥ :** 1902–91. ಭಾರತದ ಒಬ್ಬ ಪ್ರಮುಖ ಪತ್ರಿಕೋದ್ಯಮಿ, ಉದ್ಯಮಪತಿ. 1902ರ ಮೇ 11ರಂದು ಬಿಹಾರದ ದರ್ಬಂಗದಲ್ಲಿ ಜನನ. 1926 ರಲ್ಲಿ ಮದ್ರಾಸಿನಲ್ಲಿ ಇವರು ಸ್ವಂತ ಜವಳಿ ಗಿರಣಿ ಪ್ರಾರಂಭಿಸಿದರು. 1926–30ರಲ್ಲಿ ಮದ್ರಾಸ್ ವಿಧಾನಮಂಡಲದ ಸದಸ್ಯರಾಗಿದ್ದರು. 1927ರಲ್ಲಿ ವಿಧಾನಮಂಡಲದಲ್ಲಿ



ಇಂಡಿಪೆಂಡೆಂಟ್ ಪಾರ್ಟಿಯ ಕಾರ್ಯದರ್ಶಿಯಾದರು. 1971ರಲ್ಲಿ ಲೋಕಸಭೆಯ ಸದಸ್ಯರಾದರು. ಪತ್ರಿಕೋದ್ಯಮವನ್ನು ಒಂದು ಯಶಸ್ವಿ ಉದ್ದಿಮೆಯನ್ನಾಗಿ ಪರಿವರ್ತಿಸಿದ ಭಾರತೀಯರಲ್ಲಿ ಗೋಯೆಂಕಾ ಪ್ರಮುಖರು. ಸ್ವಾತಂತ್ರ್ಯೋತ್ತರದಲ್ಲಿ ಇವರ ಮತ್ತು ಇವರ ಕುಟುಂಬದವರ ಒಡೆತನಕ್ಕೆ ಸೇರಿದ ಪತ್ರಿಕೆಗಳು ಸಂಖ್ಯೆ ಹಾಗೂ ಪ್ರಸರಣದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿವೆ. ಆರು ಭಾಷೆಗಳಲ್ಲಿ ಎಂಟು ದಿನಪತ್ರಿಕೆಗಳೂ ಮೂರು ವಾರಪತ್ರಿಕೆಗಳೂ ಇವರ ನಿಯಂತ್ರಣಕ್ಕೆ ಒಳಪಟ್ಟಿವೆ. ಅಹಮದಾಬಾದ್, ದೆಹಲಿ, ಬೆಂಗಳೂರು, ಮದ್ರಾಸ್, ಮಧುರೈ, ಮುಂಬಯಿ ಮತ್ತು ವಿಜಯವಾಡಗಳಿಂದ ಏಕಕಾಲಕ್ಕೆ ಪ್ರಕಟವಾಗುವ ಇಂಡಿಯನ್ ಎಕ್ಸ್‌ಪ್ರೆಸ್ ಭಾರತದಲ್ಲಿ ಅತ್ಯಧಿಕ ಪ್ರಸಾರವುಳ್ಳ ಇಂಗ್ಲಿಷ್ ಪತ್ರಿಕೆ. ಫೈನಾನ್ಷಿಯಲ್ ಎಕ್ಸ್‌ಪ್ರೆಸ್ ವಾಣಿಜ್ಯೋದ್ಯಮಗಳಿಗೆ ಸಂಬಂಧಿಸಿದ ದಿನಪತ್ರಿಕೆ. ಇದು ಮುಂಬಯಿಯಿಂದ ಪ್ರಕಟವಾಗುತ್ತದೆ. ಸ್ಕ್ರೀನ್ ಚಲನ ಚಿತ್ರೋದ್ಯಮಕ್ಕೆ ಮೀಸಲಾದ ವಾರಪತ್ರಿಕೆ. ಸಂಡೇ ಸ್ಟ್ಯಾಂಡರ್ಡ್ ಒಂದು ವಾರಪತ್ರಿಕೆ. ಭಾನುವಾರದ ಇಂಡಿಯನ್ ಎಕ್ಸ್‌ಪ್ರೆಸ್ ಅನ್ನೂ ಇದು ಒಳಗೊಂಡಿರುತ್ತದೆ. ಕನ್ನಡ ಪ್ರಭ (ಕನ್ನಡ), ಆಂಧ್ರ ಪ್ರಭ (ತೆಲುಗು), ದಿನಮಣಿ (ತಮಿಳು), ಲೋಕಸತ್ತಾ (ಮರಾಠಿ), ಜನಸತ್ತಾ ಮತ್ತು ಲೋಕಸತ್ತಾ (ಗುಜರಾತಿ)–ಇವು ಭಾರತೀಯ ಭಾಷಾ ಪತ್ರಿಕೆಗಳು. ಆಂಧ್ರಪ್ರಭ ಎಂಬ ಹೆಸರಿನ ವಾರಪತ್ರಿಕೆಯೂ (ತೆಲುಗು) ಇದೆ.

ಭಾರತೀಯ ಪತ್ರಿಕಾ ಮಾಲೀಕರ ಸಂಘವಾದ ಇಂಡಿಯನ್ ಅಂಡ್ ಈಸ್ಟರ್ನ್ ನ್ಯೂಸ್‌ಪೇಪರ್ಸ್ ಸೊಸೈಟಿ ಆರಂಭವಾದಂದಿನಿಂದಲೂ ರಾಮನಾಥ ಗೋಯೆಂಕಾ ಅದರ ಪ್ರಮುಖ ಸದಸ್ಯರಲ್ಲೊಬ್ಬರಾಗಿದ್ದರು. 1957ರಲ್ಲಿ ಈ ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ವೃತ್ತಪತ್ರಿಕಾ ಕಾಗದ ಪೂರೈಕೆಯ ಸಂಬಂಧದಲ್ಲಿ 1946ರಲ್ಲಿ ಈ ಸಂಘ ಇಂಗ್ಲೆಂಡ್, ಯುರೋಪ್, ಕೆನಡ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಿಗೆ ಕಳಿಸಿದ್ದ ನಿಯೋಗದಲ್ಲಿ ಗೋಯೆಂಕಾ ಅವರೂ ಒಬ್ಬ ಸದಸ್ಯರಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೇಶದ ಪ್ರಮುಖ ವಾರ್ತಾ ಸಂಸ್ಥೆಯಾಗಿ ಸ್ಥಾಪನೆಯಾದ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಕ್ಕೆ ಸುದ್ದಿಯ ಪೂರೈಕೆಗಾಗಿ ರಾಯಿಟರ್ಸ್ ಸಂಸ್ಥೆಯೊಂದಿಗೆ ಮಾತುಕತೆ ನಡೆಸಿದ ಇಂಡಿಯನ್ ಅಂಡ್ ಈಸ್ಟರ್ನ್ ನ್ಯೂಸ್‌ಪೇಪರ್ಸ್ ಸೊಸೈಟಿಯ ನಿಯೋಗದಲ್ಲೂ ಇವರು ಸದಸ್ಯರಾಗಿದ್ದರು. ಸ್ವಲ್ಪ ಕಾಲ ಇವರು ಪ್ರೆಸ್ ಟ್ರಸ್ಟ್ ಆಫ್ ಇಂಡಿಯದ ನಿರ್ದೇಶಕರೂ ನಿರ್ದೇಶಕ ಮಂಡಲಿಯ ಅಧ್ಯಕ್ಷರೂ ಆಗಿದ್ದರು. ಭಾರತದ ಪತ್ರಿಕೋದ್ಯಮದಲ್ಲಿ ತಮ್ಮ ಛಾಪು ಮೂಡಿಸಿರುವ ಇವರು 1991ರ ಅಕ್ಟೋಬರ್ 5ರಂದು ನಿಧನ ಹೊಂದಿದರು.

ವಾರಿಯರ್ ಆಫ್ ದಿ ಫೋರ್ತ್ ಎಸ್ಟೇಟ್ (2005) ಎಂಬ ಶೀರ್ಷಿಕೆಯಡಿಯಲ್ಲಿ ಗೋಯೆಂಕಾರ ಜೀವನ ಚರಿತ್ರೆಯನ್ನು ಬಿ.ಜಿ.ವರ್ಗಿಸ್ ಪ್ರಕಟಿಸಿದ್ದಾರೆ. ಇವರ ಸೊಸೆ ಅನನ್ಯಾ ಗೋಯೆಂಕಾ ತಮ್ಮ ಮಾವನ ವೈಯಕ್ತಿಕ ಜೀವನದ ಚಿತ್ರಣವನ್ನು ರಾಮನಾಥ ಗೋಯೆಂಕಾ : ಎ ಲೈಫ್ ಇನ್ ಬ್ಲ್ಯಾಕ್ ಅಂಡ್ ವೈಟ್ (2005) ಎಂಬ ಪುಸ್ತಕ ರೂಪದಲ್ಲಿ ಸಾದರಪಡಿಸಿದ್ದಾರೆ.

ಗೋಯೆಂಕಾ ಅವರ ಜನ್ಮಶತಾಬ್ದಿಯ ಸ್ಮರಣೆಯಾಗಿ 2004ರಿಂದ ಪತ್ರಿಕೋದ್ಯಮ ಕ್ಷೇತ್ರಕ್ಕೆ ಉತ್ಕೃಷ್ಟ ಕೊಡುಗೆಯನ್ನು ನೀಡಿದ ಪತ್ರಿಕಾ ವರದಿಗಾರರಿಗೆ ರಾಮನಾಥ ಗೋಯೆಂಕಾ ಎಕ್ಸಲೆನ್ಸ್ ಇನ್ ಜರ್ನಲಿಸಂ ಅವಾರ್ಡ್ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

(ಎಂ.ಎನ್.ಎಂ.ಎ.)

**ಗೋರ್, ಕ್ಯಾಥರೀನ್ ಗ್ರೇಸ್, ಫ್ರಾನ್ಸಸ್ :** 1799–1861. ಆಂಗ್ಲ ಕಾದಂಬರಿಗಾರ್ತಿ. ಹುಟ್ಟಿದ್ದು ನಾಟಿಂಗ್‌ಹಂಷೈರಿನ ರೆಟ್‌ಫರ್ಡ್‌ನಲ್ಲಿ. ತಂದೆ ಮದ್ಯ ವ್ಯಾಪಾರಿ. ಗಂಡ ಕ್ಯಾಪ್ಟನ್ ಗೋರ್. ಈಕೆ ತನ್ನ ಬರವಣಿಗೆಯಿಂದಲೇ ಜೀವನವನ್ನು ಸಾಗಿಸಿದಳು. 1824 ರಿಂದ 1861 ರವರೆಗೆ ಈಕೆಯ 70 ಕೃತಿಗಳು ಹೊರಬಿದ್ದವು. ಅವುಗಳಲ್ಲಿ ಬಹುತೇಕ ಕಾದಂಬರಿಗಳು ಆಂಗ್ಲರ ಸೊಗಸು ಜೀವನವನ್ನು ಚಿತ್ರಿಸುತ್ತವೆ. ಮ್ಯಾನರ್ಸ್ ಆಫ್ ದಿ ಡೇ (1830), ಸೆಸಿಲ್ ಆರ್ ದಿ ಅಡ್ವೆಂಚರ್ಸ್ ಆಫ್ ಎ ಕಾಕ್ಸ್‌ಕೂರಾನ್ (1841), ದಿ ಬ್ಯಾಂಕರ್ಸ್ ವೈಫ್ (1843) ಈ ಕಾದಂಬರಿಗಳು ಹೆಸರಿಸತಕ್ಕವು. (ಎಚ್.ವಿ.ಎಸ್.)

**ಗೋರಂಟಿ :** ಲಿತ್ರೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ. ಮದರಂಗಿ ಪರ್ಯಾಯನಾಮ. ಇದರ ಶಾಸ್ತ್ರೀಯ ಹೆಸರು ಲಾಸೋನಿಯ ಇನರ್ಮಿಸ್. ಇಂಗ್ಲಿಷಿನಲ್ಲಿ ಇದನ್ನು ಹೆನ ಎಂದು ಕರೆಯಲಾಗುತ್ತದೆ. ಇದು ಉತ್ತರ ಆಫ್ರಿಕ ಹಾಗೂ ನೈರುತ್ಯ ಏಷ್ಯದ ಮೂಲವಾಸಿ. ಇದನ್ನು ಅಲಂಕಾರಕ್ಕಾಗಿಯೂ ಇದರಿಂದ ಪಡೆಯಲಾಗುವ ಬಣ್ಣಕ್ಕಾಗಿಯೂ ಬೆಳೆಸಲಾಗುತ್ತದೆ.

ಗೋರಂಟಿ ವಿಪುಲವಾಗಿ ಕವಲೊಡೆದು ಬೆಳೆಯುವ ಒಂದು ಪೊದೆಸಸ್ಯ. ಬೂದು ಕಂದು ಮಿಶ್ರಿತ ಬಣ್ಣದ ತೊಗಟೆ, ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿರುವ ಸರಳ, ಅಖಂಡ ಹಾಗೂ ಅಂಡಾಕಾರದ ಎಲೆಗಳು ಇದರ ಮುಖ್ಯ ಲಕ್ಷಣಗಳಲ್ಲಿ ಕೆಲವು. ಹೂಗಳು ಚಿಕ್ಕ ಗಾತ್ರದವು ಮತ್ತು ಬಿಳಿ ಇಲ್ಲವೆ ಗುಲಾಬಿ ಬಣ್ಣದವು; ಸಂಕೀರ್ಣ ಮಾದರಿಯ ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಇವಕ್ಕೆ ಸುವಾಸನೆಯಿದೆ. ಫಲ ಸಂಪುಟ ಮಾದರಿಯದು. ಹಣ್ಣಿನೊಳಗೆ ನಯವಾದ ಅಸಂಖ್ಯಾತ ಬೀಜಗಳಿವೆ.

ಗೋರಂಟಿ ಗಿಡವನ್ನು ಉಷ್ಣ ಹಾಗೂ ಸಮಶೀತೋಷ್ಣ ವಲಯಗಳ ಅನೇಕ ಪ್ರದೇಶಗಳಲ್ಲಿ ಬೆಳೆಸುತ್ತಾರೆ. ಭಾರತ, ಈಜಿಪ್ಟ್, ಪರ್ಷಿಯ, ಪಾಕಿಸ್ತಾನ, ಸೂಡಾನ್, ಮಡಗಾಸ್ಕರ್‌ಗಳಲ್ಲಿ ಇದರ ಎಲೆಗಳಿಂದ ದೊರೆಯುವ ಬಣ್ಣಕ್ಕಾಗಿ ಗೋರಂಟಿ ಗಿಡವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಭಾರತದಲ್ಲಿ ಬಣ್ಣಕ್ಕಾಗಿ ಬೆಳೆಸುವ ಪ್ರದೇಶಗಳಲ್ಲಿ ಮುಖ್ಯವಾದವು ಪಂಜಾಬ್, ಗುಜರಾತ್, ಮಧ್ಯಪ್ರದೇಶ ಮತ್ತು ರಾಜಸ್ತಾನಗಳು. ಅದರಲ್ಲೂ ಪಂಜಾಬಿನ ಫರೀದಾಬಾದ್ ಮತ್ತು ಗುಜರಾತಿನ ಬಾರ್ದೋಲಿ ಹಾಗೂ ಮಾಧಿಗಳು ಗೋರಂಟಿ ಉತ್ಪಾದನೆಯ ಮುಖ್ಯ ಕೇಂದ್ರಗಳಾಗಿವೆ.

ಗೋರಂಟಿ ಗಿಡ ಯಾವ ರೀತಿಯ ಮಣ್ಣಿನಲ್ಲಾದರೂ ಬೆಳೆಯಬಲ್ಲದು. ಆದರೆ ನೆಲ ಜವುಗಾಗಿರಬಾರದು. ಗೋರಂಟಿಯನ್ನು ಬೀಜಗಳಿಂದ ಅಥವಾ ಕಾಂಡತುಂಡುಗಳಿಂದ ವೃದ್ಧಿಸಬಹುದು. ಗೋರಂಟಿಯ ಎಲೆಗಳನ್ನು ವರ್ಷಕ್ಕೆ ಎರಡು ಸಲ (ಏಪ್ರಿಲ್–ಮೇ ಮತ್ತು ಅಕ್ಟೋಬರ್–ನವೆಂಬರ್) ಕಟಾಯಿಸುತ್ತಾರೆ. ಒಂದು ಎಕರೆಗೆ ಸುಮಾರು 350–750 ಕಿಗ್ರಾಂ ಒಣ ಎಲೆಗಳನ್ನು ಪಡೆಯಬಹುದು. ನೀರಾವರಿ ಭೂಮಿಯಲ್ಲಿ ಇಳುವರಿ 920 ಕಿಗ್ರಾಂನಷ್ಟು ಹೆಚ್ಚಾಗಿರಬಹುದು. ಗೋರಂಟಿಯ ಎಲೆಗಳನ್ನು ಬಹಳ ಹಿಂದಿನ ಕಾಲದಿಂದಲೂ ಭಾರತ ಮತ್ತು ಮಧ್ಯಪ್ರಾಚ್ಯಗಳಲ್ಲಿ ಅಂಗೈ, ಅಂಗಾಲು ಹಾಗೂ ಕೈ ಬೆರಳಿನ ಉಗುರುಗಳಿಗೆ ಬಣ್ಣ ಹಾಕಲು ಉಪಯೋಗಿಸುತ್ತಾರೆ. ತಲೆಗೂದಲು, ಗಡ್ಡ, ಹುಬ್ಬು, ಕುದುರೆಗಳ ಬಾಲ, ಅಯಾಲು, ಚರ್ಮ ಮುಂತಾದವುಗಳಿಗೆ ಬಣ್ಣ ಕೊಡುವುದಕ್ಕೆ ಸಹ ಇದನ್ನು ಬಳಸುವುದುಂಟು. ಹಿಂದಿನ ಕಾಲದಲ್ಲಿ ರೇಷ್ಮೆ ಹಾಗೂ ಉಣ್ಣೆ ಬಟ್ಟೆಗಳಿಗೆ ಬಣ್ಣ ಕೊಡಲು ಗೋರಂಟಿಯನ್ನು ಬಳಸುತ್ತಿದ್ದರು. ಗೋರಂಟಿ ಎಲೆಗಳಿಗೆ ಔಷಧೀಯ ಗುಣಗಳಿವೆ. ಕಷಾಯದ ರೂಪದಲ್ಲಿ ಇಲ್ಲವೆ ಸರಿಯ ರೂಪದಲ್ಲಿ ಇವನ್ನು ಹುಣ್ಣು, ತರಚು ಹಾಗೂ ಸುಟ್ಟಗಾಯಗಳು ಮತ್ತು ಕೆಲವು ಚರ್ಮರೋಗಗಳಿಗೆ ಬಳಸುತ್ತಾರೆ. ಕಷಾಯ ಗಂಟಲುನೋವಿಗೆ ಒಳ್ಳೆಯ ಮದ್ದು. ಗೋರಂಟಿಯ ಹೂವನ್ನು ಆವಿ ಅಸವೀಕರಣಕ್ಕೊಳಪಡಿಸಿ ಒಂದು ಬಗೆಯ ಪರಿಮಳಯುಕ್ತ ಚಂಚಲ ತೈಲವನ್ನು ಪಡೆಯಬಹುದು. ಇದಕ್ಕೆ ಮೆಹಂದಿ ಎಣ್ಣೆ ಎಂದು ಹೆಸರು. ಇದನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಗೋರಂಟಿಯ ಚೌಬೀನೆಯನ್ನು ಉಪಕರಣಗಳ ಹಿಡಿ, ಗೂಟ ಮುಂತಾದವುಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ಎಳೆಯ ಕಡ್ಡಿಗಳನ್ನು ಹಲ್ಲುಜ್ಜಲು ಇಂಡೋನೇಷ್ಯದಲ್ಲಿ ಬಳಸುತ್ತಾರೆ.

ಗೋರಂಟಿಯನ್ನು ವಾಣಿಜ್ಯ ದೃಷ್ಟಿಯಿಂದ ದೆಹಲಿ, ಗುಜರಾತ್ ಮತ್ತು ಮಾಲ್ವ ಎಂಬ ಮೂರು ಬಗೆಗಳಾಗಿ ವಿಂಗಡಿಸಲಾಗಿದೆ. ಇದರಲ್ಲಿ ದೆಹಲಿ ಗೋರಂಟಿ ಅತ್ಯುತ್ತಮವಾದ್ದು. (ಕೆ.ಜಿ.ಎ.)

**ಗೋರಖ್‌ನಾಥ :** ಭಾರತದ ಪ್ರಸಿದ್ಧ ಹಠಯೋಗಿಗಳಲ್ಲೊಬ್ಬ. ಕಾನ್‌ಫಟ ಎಂಬ ಪಂಥದ ಸ್ಥಾಪಕ. ಈತನ ಹೆಸರು ಸಂಸ್ಕೃತದ ಗೋರಕ್ಷನಾಥ ಎಂಬುದರ ಅಪಭ್ರಂಶವಾಗಿದೆ. ಈತನ ಕಾಲ ನಿಷ್ಕರ್ಷೆಯಾಗಿಲ್ಲ. ಏಳನೆಯ ಶತಮಾನದ ನೇಪಾಳಿ ರಾಜಮನೆತನಕ್ಕೆ ಸಂಬಂಧಪಟ್ಟವನೆಂದು ಒಂದು ಪ್ರತೀತಿ ಇದೆ. ಸು. 1120 ಎಂದು ಹೇಳುವವರೂ ಇದ್ದಾರೆ. ಈತ ಮತ್ಸ್ಯೇಂದ್ರನಾಥನ **(ನೋಡಿ)** ಶಿಷ್ಯನೆಂದು ಹೇಳಲಾಗಿದೆ. ಗುರುವಿಗೆ ಒಮ್ಮೆ ಉಂಟಾದ ಅತೀವ ಸ್ತ್ರೀವ್ಯಾಮೋಹವನ್ನು ಈತ ಹೋಗಲಾಡಿಸಿ ಅಧಃಪತನದಿಂದ ಆತನನ್ನು ಪಾರುಮಾಡಿದನಂತೆ. ತನ್ನ ಪಂಥದ ಶಿಷ್ಯರನ್ನು ಗುರುತು ಹಚ್ಚುವ ಸಲುವಾಗಿ ಅವರ ಕಿವಿಗಳನ್ನು ಸೀಳುವ ಪದ್ಧತಿಯನ್ನು ಈತ ಜಾರಿಗೆ ತಂದ. ಕಾನ್‌ಫಟ ಎಂದರೆ ಕಿವಿ ಸೀಳಿದ ಯೋಗಿಗಳು ಎಂದು ಅರ್ಥ. ಸೀಳಿದ ಕಿವಿಗಳಲ್ಲಿವರು ದೊಡ್ಡ ದೊಡ್ಡ ಕುಂಡಲಗಳನ್ನು ಧರಿಸುತ್ತಾರೆ. ಗೋರಖ್‌ನಾಥ ಸಂಸ್ಕೃತದಲ್ಲಿ ರಚಿಸಿರುವ ಹಠಯೋಗ ಮತ್ತು ಗೋರಕ್ಷಕ ಶತಕ ಎಂಬೆರಡು ಕೃತಿಗಳು ಉಪಲಬ್ಧವಿವೆ. ಹಠಯೋಗದಿಂದ ಪಡೆಯಬಹುದಾದ ದೇಹಶುದ್ಧಿಗೆ ಗೋರಖ್‌ನಾಥ ಹೆಚ್ಚು ಗಮನ ಕೊಟ್ಟಿದ್ದಾನೆ. ಆಸನ, ಶೋಧನ, ಪ್ರಾಣಾಯಾಮ, ಮುದ್ರಾ–ಇವುಗಳಿಂದ ಅನೇಕ ಸಿದ್ಧಿಗಳನ್ನು ಪಡೆದು ಕಡೆಗೆ ಸಮಾಧಿಯನ್ನು ಹೊಂದಬಹುದೆಂದು ಈತನ ಅಭಿಮತ. ಈತ ದೇವಾಂಶಸಂಭೂತನೆಂದು ಇವನ ಪಂಥದವರು ನಂಬುತ್ತಾರೆ. ನೇಪಾಳದಲ್ಲಂತೂ ಇವನನ್ನು ಸಂರಕ್ಷಕ ದೇವತೆಯೆಂದು ಆರಾಧಿಸುತ್ತಾರೆ. ಉತ್ತರಭಾರತದಲ್ಲಿ ಇವನ ಹೆಸರಿನಲ್ಲಿ ಅನೇಕ ದೇವಸ್ಥಾನಗಳಿವೆ. ಇವನ ಮುಖ್ಯ ಮಂದಿರ ಗೋರಖ್‌ನಾಥ ಎನ್ನುವ ಸ್ಥಳದಲ್ಲಿದೆ.

ವೀರಶೈವ ವಿಭೂತಿಗಳಾದ ಪ್ರಭುದೇವ, ರೇವಣಸಿದ್ಧ, ಸಿದ್ಧರಾಮರು, ಗೋರಖ್‌ನಾಥನನ್ನು ಜಯಸಿದಂತೆ ತತ್ಸಂಬಂಧವಾದ ಪುರಾಣಗಳಲ್ಲಿ ಉಲ್ಲೇಖವಿದೆ.

ಸತಾರ ಜಿಲ್ಲೆಯಲ್ಲಿ ಗೋರಖ್‌ನಾಥ ಹೆಸರಿನ ಒಂದು ವನವಿದೆ. ಅಲ್ಲಿನ ಆರು ಹುಣಸೆಮರಗಳನ್ನು ಬಹು ಪವಿತ್ರವೆಂದು ಪರಿಗಣಿಸಲಾಗಿದೆ.

ಸತ್ತಾಗ ಈ ಪಂಥದ ಯೋಗಿಗಳನ್ನು ಸುಡುವುದಿಲ್ಲ. ಪದ್ಮಾಸನದಲ್ಲಿ ಕೂಡಿಸಿ ಸಮಾಧಿ ಮಾಡುತ್ತಾರೆ.

ಈ ಪಂಥದವರಲ್ಲಿ ಅನೇಕ ವಾಮಾಚಾರಗಳು ಬಳಕೆಯಲ್ಲಿವೆ. (ಎಂ.ವೈ.)

**ಗೋರಖ್‌ಪುರ :** ಉತ್ತರ ಪ್ರದೇಶದ ಒಂದು ಆಡಳಿತ ವಿಭಾಗ, ಜಿಲ್ಲೆ ಮತ್ತು ಅದರ ಮುಖ್ಯ ಪಟ್ಟಣ. ಗೋರಖ್‌ಪುರ ವಿಭಾಗದಲ್ಲಿ ಗೋರಖ್‌ಪುರ, ದೇವರಿಯ, ಬಸ್ತಿ ಮತ್ತು ಅಜಮ್‌ಗಡ್ ಜಿಲ್ಲೆಗಳಿವೆ. ವಿಭಾಗದ ವಿಸ್ತೀರ್ಣ 24,895 ಚ.ಕಿಮೀ. ಜನಸಂಖ್ಯೆ 1,15,49,180 (2001).

ಜಿಲ್ಲೆ : ಗೋರಖ್‌ಪುರ ಜಿಲ್ಲೆಯ ವಿಸ್ತೀರ್ಣ 3,321 ಚ.ಕಿಮೀ. ಜನಸಂಖ್ಯೆ 44,36,275 (2011). ಉತ್ತರ ಪ್ರದೇಶದ ಈಶಾನ್ಯ ದಿಕ್ಕಿನಲ್ಲಿ ಹಿಮಾಲಯದ ದಕ್ಷಿಣದ

ತಪ್ಪಲಿನಲ್ಲಿರುವ ಈ ಜಿಲ್ಲೆ ಬಹುತೇಕ ಸಮಭೂಮಿ. ಅಲ್ಲಲ್ಲಿ ಕೆಲವು ಮರಳುಗುಡ್ಡೆಗಳಿವೆ. ರಾಪ್ತಿ, ಆಮೀ ಮತ್ತು ಘಾಘ್ರ ನದಿಗಳು ಇಲ್ಲಿ ಹರಿಯುತ್ತವೆ. ಉತ್ತರದಲ್ಲಿ ಅಲ್ಲಲ್ಲಿ ಕಾಡುಗಳುಂಟು. ಬೇಸಿಗೆಯಲ್ಲಿ ಹೆಚ್ಚು ಸೆಕೆಯಾಗುವುದಿಲ್ಲ. ವಾರ್ಷಿಕ ಮಳೆ 50". ನೆಲ ಫಲವತ್ತಾಗಿದೆ. ಆದರೆ ಪದೇ ಪದೇ ಸಂಭವಿಸುವ ಪ್ರವಾಹಗಳಿಂದಾಗಿ ಬೇಸಾಯಕ್ಕೆ ಅಡಚಣೆ ಒದಗುವುದುಂಟು. ಬತ್ತ, ಬಾರ್ಲಿ, ಗೋದಿ, ಕಬ್ಬು ಮುಖ್ಯ ಬೆಳೆಗಳು. ಜಿಲ್ಲೆಯಲ್ಲಿ ಹಲವು ಸಕ್ಕರೆ ಕಾರ್ಖಾನೆಗಳಿವೆ. ಬುದ್ಧ ಪರಿನಿರ್ವಾಣ ಹೊಂದಿದ ಸ್ಥಳವಾದ ಕಾಸಿಯಾ ಎಂಬುದು ಗೋರಖ್‌ಪುರ ನಗರದ ಪೂರ್ವಕ್ಕೆ 55 ಕಿಮೀ ದೂರದಲ್ಲಿದೆ.

ಗೋರಖ್‌ಪುರ ನಗರ ವಾರಾಣಸಿಗೆ ಉತ್ತರದಲ್ಲಿ 240 ಕಿಮೀ ದೂರದಲ್ಲಿದೆ. ಘಾಘ್ರಾದ ಉಪನದಿಗಳಲ್ಲಿ ಒಂದಾದ ರಾಪ್ತಿ ನದಿಯ ದಂಡೆಯ ಮೇಲಿದೆ. ಜನಸಂಖ್ಯೆ 6,92,519 (2011). ರಾಪ್ತಿ ನದಿಯ ಪಾತ್ರ ಬದಲಾದಂತೆ ನಗರ ಕೂಡ ಉತ್ತರದಿಂದ ದಕ್ಷಿಣಕ್ಕೆ ಸರಿಯುತ್ತ ಬಂತು. ನದಿಗಳ ದಂಡೆಗಳ ಮೇಲೆ ಪ್ರವಾಹವನ್ನು ತಡೆಯಲು ಕಟ್ಟೆಗಳನ್ನು ಕಟ್ಟಲಾಗಿದೆ. ಈ ನಗರವನ್ನು 1400ರಲ್ಲಿ ನಿರ್ಮಿಸಲಾಯಿತೆಂದು ಹೇಳಲಾಗಿದೆ. ಈ ನಗರಕ್ಕೆ ಗೊರಖ್‌ಪುರ ಎಂಬ ಹೆಸರು ಬರಲೂ ಇದು ಬೆಳೆಯಲೂ ಇಲ್ಲಿಯ ಗೋರಖ್‌ನಾಥ ದೇವಸ್ಥಾನ ಕಾರಣ. ಇದು ರಜಪೂತ ದೊರೆಗಳ ಒಂದು ಭದ್ರಸ್ಥಾನವಾಗಿತ್ತು. ಅನಂತರ ಇದು ಮೊಗಲರ ವಶಕ್ಕೆ ಬಂತು. ಇದು ಅವಧ್ ಸರ್ಕಾರದ ವಿಭಾಗ ಆಡಳಿತಕೇಂದ್ರವಾಯಿತು. ಉರ್ದು ಬಜಾರಿನ ಹತ್ತಿರ ಇರುವ ಜಾಮಿ ಮಸೀದಿಯನ್ನು ಕಟ್ಟಿಸಿದವನು ಔರಂಗಜೇಬ್. ಈ ನಡುವೆ ಸುಮಾರು ಏಳು ದಶಕಗಳ ಕಾಲ ಇದು ರಜಪೂತರ ವಶದಲ್ಲಿತ್ತು. ರಾಜ ವಸಂತಸಿಂಹನಿಂದ ನಿರ್ಮಿತವಾದ್ದು ವಸಂತ ಕಿಲ್ಲೆ. 1680ರಲ್ಲಿ ಈ ನಗರ ಔರಂಗಜೇಬನ ಅಧಿಕಾರಕ್ಕೆ ಒಳಪಟ್ಟಿತು. 1801ರಲ್ಲಿ ಇದು ಬ್ರಿಟಿಷರ ಅಧೀನಕ್ಕೆ ಬಂತು. ಅವರ ಆಡಳಿತಕಾಲದಲ್ಲಿ ಇಲ್ಲಿ ಸಿವಿಲ್ ಲೈನ್, ಪೋಲಿಸ್ ಲೈನ್, ರೈಲ್ವೆ ಕಾಲೊನಿಗಳು ನಿರ್ಮಿತವಾದುವು. ಬಗೆಬಗೆಯ ಜನ ಬಂದು ನೆಲೆಸಲು ಪ್ರಾರಂಭಿಸಿದರು. ಅಂದಿನಿಂದ ವ್ಯಾಪಾರೋದ್ಯೋಗಗಳಲ್ಲೂ ಈ ನಗರ ಉನ್ನತಿ ಸಾಧಿಸಿದೆ. ಇದಕ್ಕೆ 1885ರಲ್ಲಿ ರೈಲ್ವೆ ಸಂಪರ್ಕ ಏರ್ಪಟ್ಟಿತು. ಈಗ ಈ ನಗರ ಈಶಾನ್ಯ ರೈಲ್ವೆಯ ಮುಖ್ಯ ಕೇಂದ್ರ, ಜಂಕ್ಷನ್. ಇಲ್ಲಿ ಅಧಿಕಾರಿಗಳ ವಾಸಗೃಹಗಳು, ಕಾರ್ಯಾಲಯಗಳು, ಶಿಕ್ಷಣ ಕೇಂದ್ರಗಳು, ಆಸ್ಪತ್ರೆಗಳು, ಸೈನಿಕ ಕೇಂದ್ರ ಇವೆಲ್ಲ ಇವೆ. ಈಶಾನ್ಯ ರೈಲ್ವೆಯ ದೊಡ್ಡ ಕಾರ್ಯಾಗಾರವೂ ಇದೆ. ಗೋರಖ್‌ಪುರ ಕೈಮಗ್ಗದ ಬಟ್ಟೆ ತಯಾರಿಕೆಗೆ ತುಂಬ ಹೆಸರಾಗಿದೆ. ಕಬ್ಬಿಣ ಪದಾರ್ಥಗಳು, ಕಾಗದ, ಮುದ್ರಣ ಸಾಮಗ್ರಿ, ಖಾದ್ಯ ಪೇಯಗಳು, ತಂಬಾಕು ಮುಂತಾದ ಕೈಗಾರಿಕೆಗಳಿವೆ. ಗೋರಖ್‌ಪುರ ವಿಶ್ವವಿದ್ಯಾಲಯ (ದೀನ್ ದಯಾಳ್ ಉಪಾಧ್ಯಾಯ ವಿಶ್ವವಿದ್ಯಾಲಯ) ಕೇಂದ್ರ, ಗೋರಖ್‌ಪುರ ವಿಶ್ವವಿದ್ಯಾಲಯಕ್ಕೆ ಆಂಗಿಕ ಕಾಲೇಜುಗಳಿಲ್ಲ. (ಐ.ಎ.)

**ಗೋರಾ ಕುಂಬಾರ :** 1267–1312. ಮಹಾರಾಷ್ಟ್ರದ ಒಬ್ಬ ಪ್ರಸಿದ್ಧ ಸಂತ. ಆ ಕಾಲದ ಸಂತರಲ್ಲಿ ಈತ ಹಿರಿಯನಿದ್ದುದರಿಂದ ಇವನನ್ನು ಎಲ್ಲರೂ ಗೋರಾ ತಾತಾ ಎನ್ನುತ್ತಿದ್ದರು. ಈತನ ಹುಟ್ಟೂರು ತೇರಢೋಕೆ. ಇದು ಪಂಡರಾಪುರಕ್ಕೆ 128 ಕಿಮೀ ದೂರದಲ್ಲಿದೆ. ಇಲ್ಲಿಯೇ ಈ ಸಂತನ ಸಮಾಧಿಯೂ ಇದೆ. ಗೋರಾ ನಾಮದೇವನನ್ನು ಪರೀಕ್ಷಿಸಿ ಅವನನ್ನು ಹಸಿಗಡಿಗೆ ಎಂದನಂತೆ. ನಾಮದೇವ, ಜ್ಞಾನದೇವರ ತೀರ್ಥಯಾತ್ರೆಯ ಕಾಲಕ್ಕೆ ಈತನೂ ಅವರೊಟ್ಟಿಗೆ ಇದ್ದ. ಈತನ ಕೆಲವು ಅಭಂಗಗಳು ಅನುಭವಪೂರ್ಣವಾಗಿವೆ.

ದೇವನ ಆದಿರೂಪ ತನ್ನ ದೇಹದಲ್ಲಿ ಪ್ರವೇಶಿಸಿದಾಗ ಭೂತಬಾಧೆಯಾದಂತೆನಿಸಿ ತೆಂದು ಗೋರಾ ಹೇಳಿಕೊಂಡಿದ್ದಾನೆ. ಕರ್ಮದ ಹೆಸರಿನಿಂದಲೂ ಪಾಪ ಪುಣ್ಯಗಳ ಮಲದಿಂದಲೂ ಅಲಿಪ್ತನಾಗಿ ಈ ಭಕ್ತ ಜೀವನ್ಮುಕ್ತಿಯನ್ನು ಹೊಂದಿದ. ಅನುಭಾವದ ಸುಖ ಮೇರೆ ಮೀರಿದಾಗ ಮೌನ ಆವರಿಸುತ್ತದೆ. ಇಂಥ ಆಧ್ಯಾತ್ಮಿಕ ಮೌನದಿಂದ ಮಾತ್ರ ಅನುಭಾವದ ದಿವ್ಯಾನಂದವನ್ನು ಸವಿಯಲು ಬರುತ್ತದೆ ಎಂದು ಇವನ ಅಭಿಪ್ರಾಯ. ಮೂಕನಿಗೆ ತಾನುಂಡ ಸಕ್ಕರೆಯ ಸವಿಯನ್ನು ಬಣ್ಣಿಸಲು ಬರುವುದಿಲ್ಲ. ಹಾಗೆ ಅನುಭಾವದಿಂದ ಬರುವ ಆನಂದವನ್ನು ಬಣ್ಣಿಸಲು ಬಾರದು. ತಿಳಿದವರು ಅದನ್ನು ಜಗತ್ತಿಗೆ ಸಾರುತ್ತ ಹೋಗಬಾರದು. ಅನುಭಾವದ ರಹಸ್ಯವನ್ನರಿಯುವ ಯೋಗ್ಯತೆ ಎಲ್ಲರಲ್ಲಿಯೂ ಇರುವುದಿಲ್ಲ ಎಂದು ಇವನ ಅಭಿಪ್ರಾಯ. ಆಕಾಶವನ್ನು ದಿಟ್ಟಿಸಿದಾಗ ಸುಖ ಸುಖವನ್ನಪ್ಪಲು ಹೋದಂತೆ ಇವನಿಗೆ ಅನಿಸಿತಂತೆ. ಜಯ ಜಯ ಝುನತನ್ ಎಂಬ ಅನಾಹತ ಧ್ವನಿ ಕೇಳಿಸಿತಂತೆ. ಇವು ಗೋರಾ ಕುಂಬಾರನ ಅನುಭಾವದ ಮಾತುಗಳು.

ಗೋರಾ ಕುಂಬಾರನ ವಿಷಯದಲ್ಲೊಂದು ಪವಾಡದ ಕತೆ ಇದೆ. ಭಕ್ತಿಯ ಆವೇಶದಲ್ಲಿ ನರ್ತನಮಾಡುತ್ತಿದ್ದ ಗೋರಾ ಅರಿವಿಲ್ಲದೆ ತನ್ನ ಮಗುವನ್ನು ತುಳಿದುಬಿಟ್ಟ. ಮಗು ಸತ್ತಿತು. ಹೆಂಡತಿ ವಿಹ್ವಲೆಯಾಗಿ ಗಂಡನನ್ನು ದೂರಿದಳು. ಗಂಡ ಹೆಂಡತಿಯನ್ನು ಹೊಡೆಯಹೋದ. ಹೆಂಡತಿ ದೇವರ ಮೇಲೆ ಆಣೆ ಇಟ್ಟಳು. ಗಂಡ ಹಿಂದೆ ಸರಿದ. ಯಾವತ್ತಿಗೂ ಹೆಂಡತಿಯನ್ನು ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಮನೆತನದ ಅಭಿವೃದ್ಧಿಯಲ್ಲಿ ಆಸಕ್ತಳಾದ ಹೆಂಡತಿ ದೂರೋದ್ದೇಶದಿಂದ ತನ್ನ ತಂಗಿಯನ್ನೇ ಸವತಿಯನ್ನಾಗಿ ಮನೆಗೆ ತಂದಳು. ಗೋರಾ ಅವಳನ್ನೂ ಮುಟ್ಟಲಿಲ್ಲ. ಬೇಸರಗೊಂಡ ಸೋದರಿಯರು ಒಮ್ಮೆ ಮಲಗಿದ್ದ ಗಂಡನ ಕೈಗಳನ್ನು ಹಿಡಿದುಬಿಟ್ಟರು. ತನ್ನ ವ್ರತಕ್ಕೆ ಭಂಗಬಂದಿತೆಂದು ತಿಳಿದ ಗೋರಾ ತನ್ನ ಎರಡೂ ಮುಂಗೈಗಳನ್ನು ಕತ್ತರಿಸಿಕೊಂಡ. ಮುಂದೊಂದು ದಿನ ಪಂಡರಪುರದಲ್ಲಿ ಭಕ್ತರೆಲ್ಲ ತಾಳ ಹಾಕುತ್ತಿರಲಾಗಿ ಉತ್ಸಾಹಗೊಂಡ ಈತ ತನ್ನ ಮೋಟುಗೈಗಳಲ್ಲೆ ತಾಳಹಾಕಲು ಮೊದಲುಮಾಡಿದ. ಹೀಗೆ ಮಾಡುತ್ತಿರುವಾಗ ಇದ್ದಕ್ಕಿದ್ದಂತೆ ಈತನ ಮೋಟುಗೈಗಳು ಮೊದಲಿನಂತೆ ಬೆಳೆದುವು. ಸತ್ತ ಮಗು ಮತ್ತೆ ದಕ್ಕಿತು ಎಂಬ ಕತೆ ಇದೆ. (ಎಂ.ಎ.)

**ಗೋರಿಂಗ್, ಹರ್ಮನ್ ವಿಲ್ಹೆಲ್ಮ್ :** 1893–1946. ನಾಜ಼ಿ ಜರ್ಮನಿಯ ಒಬ್ಬ ರಾಜಕಾರಣಿ, ಸೈನಿಕ ಮತ್ತು ಆರ್ಥಿಕ ಮುಖಂಡ. 1893ರ ಜನವರಿ 12ರಂದು ಬವೇರಿಯದ ರೊಸೆನ್‌ಹೀಂನಲ್ಲಿ ಜನಿಸಿದ. ತಂದೆ ಒಬ್ಬ ವಸಾಹತು ಅಧಿಕಾರಿ. 1914ರಲ್ಲಿ ವಿಮಾನದಳದ ಅಧಿಕಾರಿಯಾಗಿ ಸೇರಿದ. 1918ರಲ್ಲಿ ನಡೆದ ಕಾರ್ಯಾಚರಣೆಯನ್ನು

ಯಶಸ್ವಿಯಾಗಿ ನಿರ್ವಹಿಸಿ ಮೊದಲನೆಯ ದರ್ಜೆಯ ಐರನ್ ಕ್ರಾಸ್ ಪಡೆದ. ಒಂದನೆಯ ಮಹಾಯುದ್ಧದ ಅನಂತರ ಸ್ವೀಡನಿನಲ್ಲಿ ಫಾಕರ್ ವಿಮಾನ ಕಾರ್ಖಾನೆಗಾಗಿಯೂ ಆಮೇಲೆಸ್ವೆನ್ಸ್ಕ ಲಫ್ಟ್ರಾಫಿಕ್‌ಗಾಗಿಯೂ ಕೆಲಸ ಮಾಡಿದ. 1923ರಲ್ಲಿ ರಿನ್ ಫಾನ್ ಕೆಂಟ್ಸವನ್ನು ವಿವಾಹವಾಗಿ ಮ್ಯೂನಿಕ್‌ನಲ್ಲಿ ವಾಸಿಸತೊಡಗಿದ. ಅಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಹಿಟ್ಲರನನ್ನು ಕಂಡು, ಅವನ ಜೊತೆಗೂಡಿದ. ಹಿಟ್ಲರ್ ಇವನನ್ನು ಕೂಡಲೆ ಒಬ್ಬ ಅಧಿಕಾರಿಯನ್ನಾಗಿ ನೇಮಿಸಿಕೊಂಡ. ನವೆಂಬರ್ 1923ರಲ್ಲಿ ಮ್ಯೂನಿಕ್‌ನಲ್ಲಿ ನಾಜ಼ಿಗಳು ಅಧಿಕಾರಕ್ಕೆ ಬರಲು ನಡೆಸಿದ ಗಲಭೆಯಲ್ಲಿ ಗಾಯಗೊಂಡು, ದಸ್ತಗಿರಿಯಾದ. ಆದರೆ ಆಸ್ಟ್ರಿಯಕ್ಕೆ ತಪ್ಪಿಸಿಕೊಂಡು ಹೋದ. 1927ರಲ್ಲಿ ಜರ್ಮನಿಗೆ ಹಿಂದಿರುಗಿ, ಹಿಟ್ಲರನೊಡನೆ ಸೇರಿದ. 1928ರಲ್ಲಿ ರೈಕ್‌ಸ್ಟಾಗ್‌ಗೆ ಹಿಟ್ಲರನ ಬೆಂಬಲದಿಂದ ಗೋರಿಂಗನ ಚುನಾವಣೆಯಾಯಿತು.

ಗೋರಿಂಗ್ ಕೈಗಾರಿಕೋದ್ಯಮಿಗಳ ಮತ್ತು ಶ್ರೀಮಂತರ ಸಖ್ಯ ಬೆಳಸಿ ಅವರನ್ನು ಹಿಟ್ಲರನ ಅನುಕೂಲಕ್ಕೆ ಬಳಸಿಕೊಂಡ. ನಾಜ಼ಿ ಪಕ್ಷ 1932 ರಲ್ಲಿ ನಡೆದ ಚುನಾವಣೆಯಲ್ಲಿ ಜಯಗಳಿಸಿದ ಮೇಲೆ ಗೋರಿಂಗನಿಗೆ ರೈಕ್‌ಸ್ಟಾಗ್‌ನ ಅಧ್ಯಕ್ಷ ಸ್ಥಾನ ಪ್ರಾಪ್ತವಾಯಿತು. ಹಿಟ್ಲರ್ ಅಧಿಕಾರಕ್ಕೆ ಬಂದಾಗ ಗೋರಿಂಗನನ್ನು ಖಾತಾರಹಿತ ಮಂತ್ರಿಯಾಗಿ ನೇಮಿಸಿದ. ಇವನು ವಾಯುದಳದ ಕಮಿಷನರ್, ಪ್ರಷ್ಯದ ಮುಖ್ಯಮಂತ್ರಿ ಮತ್ತು ಒಳಾಡಳಿತ ಮಂತ್ರಿಯಾಗಿ ಅಧಿಕಾರ ಚಲಾಯಿಸಿದ. ಈತನ ಅಧಿಕಾರದಲ್ಲಿ ಪ್ರಷ್ಯದ ಆಡಳಿತ ಮತ್ತು ಪೋಲೀಸ್ ದಳದಲ್ಲಿ ನಾಜ಼ಿಗಳು ತುಂಬಿಕೊಂಡರು. ಅನಂತರ ಗೋರಿಂಗನಿಗೆ ಜನರಲ್ ಹುದ್ದೆ ದೊರಕಿತು. ಹಿಟ್ಲರ್ ಈತನನ್ನು ರಾಯಭಾರಿಯಾಗಿ ಇಟಲಿ, ಪೂರ್ವ ಯುರೋಪ್‌ಗಳಿಗೆ ಕಳುಹಿಸಿದ. 1933ರ ಫೆಬ್ರುವರಿ 27ರಂದು ರೈಕ್‌ಸ್ಟಾಗ್ ಕಟ್ಟಡವನ್ನು ಸುಡಲು ನಡೆಸಿದ ಪಿತೂರಿಯಲ್ಲಿ ಇವನೂ ಸೇರಿದ್ದನೆಂದು ಮೊದಲು ನಂಬಲಾಗಿತ್ತು. 1935ರಲ್ಲಿ ಈತ ವಿಮಾನ ದಳದ ದಂಡನಾಯಕನಾದ.

ಹಿಟ್ಲರ್ 1936ರಲ್ಲಿ ಈತನನ್ನು ಜರ್ಮನಿಯ ನಾಲ್ಕು ವರ್ಷಗಳ ಆರ್ಥಿಕ ಯೋಜನೆಯ ಅಧಿಕಾರಿಯನ್ನಾಗಿ ನೇಮಿಸಿದ. ಗೋರಿಂಗ್ ಜರ್ಮನಿಯ ಆರ್ಥಿಕ ಸರ್ವಾಧಿಕಾರಿಯಾದ. ಎರಡನೆಯ ಮಹಾಯುದ್ಧ ಆರಂಭವಾದಾಗ ಗೋರಿಂಗ್ ಹಿಟ್ಲರನ ಉತ್ತರಾಧಿಕಾರಿಯಾಗಿ ನೇಮಕ ಹೊಂದಿದ. 1945ರ ಏಪ್ರಿಲ್‌ನಲ್ಲಿ ಹಿಟ್ಲರ್ ಜರ್ಮನಿಗೆ ಮಾರ್ಗದರ್ಶನ ನೀಡುವುದನ್ನು ಬಿಟ್ಟನೆಂದು ಗೋರಿಂಗ್ ಭಾವಿಸಿ ಆತನ ನಿಯೋಗಿಯಾಗಿ ಅಧಿಕಾರ ಚಲಾಯಿಸಲು ಮುಂದಾದ. ಆದರೆ ಹಿಟ್ಲರ್ ಇವನನ್ನು ಎಲ್ಲ ಅಧಿಕಾರಗಳಿಂದ ವಿಮೋಚನೆಗೊಳಿಸಿ ನಾಜ಼ಿ ಪಕ್ಷದಿಂದ ತೆಗೆದುಹಾಕಿದ. ಅಮೆರಿಕನ್ ಪಡೆಗಳು ಇವನನ್ನು ದಸ್ತಗಿರಿ ಮಾಡಿದುವು. ನ್ಯೂರೆಂಬರ್ಗಿನಲ್ಲಿ ಈತನ ವಿಚಾರಣೆ ನಡೆದು ಇವನಿಗೆ ಮರಣದಂಡನೆ ವಿಧಿಸಲಾಯಿತು. 1946ರ ಅಕ್ಟೋಬರ್ 15ರ ಸಂಜೆ, ಇವನನ್ನು ಫಾಸಿಗೆ ಗುರಿಪಡಿಸುವ ಮುನ್ನ, ಈತ ವಿಷ ತೆಗೆದುಕೊಂಡು ಪ್ರಾಣ ಬಿಟ್ಟ. (ಎ.ವಿ.ವಿ.;ಎ.ಎಂ.ಆರ್.)

**ಗೋರಿಕಾಯಿ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪಕುಟುಂಬಕ್ಕೆ ಸೇರಿದ ತರಕಾರಿ ಸಸ್ಯ. ಚವಳೀಕಾಯಿ ಪರ್ಯಾಯನಾಮ. ಸಯಮಾಪ್ಸಿಸ್ ಟೆಟ್ರಗೋನೊಲೋಬ ಇದರ ಶಾಸ್ತ್ರೀಯ ಹೆಸರು. ಇಂಗ್ಲಿಷಿನಲ್ಲಿ ಕ್ಲಸ್ಟರ್ ಬೀನ್ಸ್ ಎಂದು ಕರೆಯಲಾಗುತ್ತದೆ. ಗೋರಿಕಾಯಿ ಭಾರತದ ಮೂಲವಾಸಿ ಎಂದು ಹೇಳಲಾಗಿದೆ. ಕಾಡುಗಿಡವಾಗಿ ಇದು ಎಲ್ಲೂ ಬೆಳೆಯದು. ಭಾರತಾದ್ಯಂತ ಇದನ್ನು ಕಾಯಿಗಳಿಗಾಗಿ, ಬೀಜಕ್ಕಾಗಿ ಬೆಳೆಸಲಾಗುತ್ತಿದೆ.

ಗೋರಿಕಾಯಿ ಗಿಡದಲ್ಲಿ ಕುಳ್ಳು ಮತ್ತು ದೈತ್ಯ ಎಂಬ ಎರಡು ಬಗೆಗಳಿವೆ. ಎರಡೂ ನೆಟ್ಟಗೆ ಬೆಳೆಯುವ ಏಕವಾರ್ಷಿಕ ಸಸ್ಯಗಳು. ಕುಳ್ಳು ಬಗೆಯದು 60–90 ಸೆಂಮೀ ಎತ್ತರಕ್ಕೆ ಬೆಳೆದರೆ ದೈತ್ಯಬಗೆಯದು 2.5–3 ಮೀ ಎತ್ತರಕ್ಕೆ ಬೆಳೆಯುತ್ತದೆ. ಕಾಂಡ ಮತ್ತು ಎಲೆಗಳ ಮೇಲೆ ನಸು ಉದಾಬಣ್ಣದ ಕೂದಲುಗಳಿವೆ. ಗಿಡವನ್ನು ಮುಟ್ಟಿದರೆ ನವೆ ಉಂಟಾಗುವುದಕ್ಕೆ ಕಾರಣ ಈ ಕೂದಲುಗಳು. ಎಲೆಗಳು ಸಂಯುಕ್ತ ಬಗೆಯವು; ಇವು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ; ಪ್ರತಿ ಎಲೆಯಲ್ಲಿ 3 ಕಿರುಎಲೆಗಳಿವೆ. ಹೂಗಳು ಎಲೆಗಳ ಕಂಕುಳುಗಳಲ್ಲಿರುವ ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಕಾಯಿಗಳು ಪಾಡ್ ಮಾದರಿಯವು.

ಗಿಡವನ್ನು ಸಾಮಾನ್ಯವಾಗಿ ಎಲ್ಲ ಬಗೆಯ ಮಣ್ಣುಗಳಲ್ಲೂ ಬೆಳೆಸಬಹುದಾದರೂ ಚೆನ್ನಾಗಿ ನೀರು ಬಸಿದು ಹೋಗುವಂಥ ಮರಳು ಮಿಶ್ರಿತ ಗೋಡು ಮಣ್ಣು ಉತ್ತಮವಾದದ್ದು. ಜೂನ್–ಜುಲೈ ಇಲ್ಲವೆ ಜನವರಿ–ಫೆಬ್ರುವರಿ ತಿಂಗಳುಗಳು ಬೇಸಾಯಕ್ಕೆ ಸೂಕ್ತ. ಎಕರೆಗೆ 15–20 ಗಾಡಿ ಕೊಟ್ಟಿಗೆ ಗೊಬ್ಬರ, 125 ಕಿಗ್ರಾಂ ಅಮೋನಿಯಂ ಸಲ್ಫೇಟ್, 250 ಕಿಗ್ರಾಂ ಸೂಪರ್‌ಫಾಸ್ಫೇಟ್, 60 ಕಿಗ್ರಾಂ ಮ್ಯೂರಿಯೇಟ್ ಆಫ್ ಪೊಟ್ಯಾಷ್‌ಗಳನ್ನು ಹಾಕಿ, 5–7 ದಿವಸಗಳಿಗೊಮ್ಮೆ ನೀರನ್ನು ಹಾಯಿಸುತ್ತಿರಬೇಕು. ಬೀಜ ಬಿತ್ತಿದ 2.5 ತಿಂಗಳ ಅನಂತರ ಕಾಯಿಗಳು ಕೊಯ್ಲಿಗೆ ಸಿದ್ಧವಾಗುತ್ತವೆ. ಇಳುವರಿ ಎಕರೆಗೆ 2,500 ರಿಂದ 3,500 ಕಿಗ್ರಾಂಗಳಷ್ಟು ಇರುತ್ತದೆ.

ಗಿಡಕ್ಕೆ ತಗಲುವ ರೋಗಗಳಲ್ಲಿ ಬ್ಯಾಕ್ಟೀರಿಯಲ್ ಬ್ಲೈಟ್ ಎಂಬುದು ಬಹಳ ಮುಖ್ಯವಾದದ್ದು. ಮೊದಲು ಎಲೆಗಳ ಮೇಲೆ ಬಹಳ ಸಣ್ಣ, ಪಾರದರ್ಶಕ, ನೀರುಗೂಡಿದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಅನಂತರ ನಾಳದ ಒಳಗಿರುವ ಕಣ ಸಮೂಹ ಹಳದಿ ಬಣ್ಣಕ್ಕೆ ತಿರುಗಿ ಎಲೆ ಸತ್ತುಹೋಗುತ್ತದೆ. ಕ್ರಮೇಣ ರೋಗ ಮುಂದುವರಿದು ಕಾಂಡಕ್ಕೂ ಅಂಟುತ್ತದೆ. ಕೊನೆಗೆ ಪೂರ್ತಿ ಗಿಡವೇ ಸತ್ತುಹೋಗುತ್ತದೆ. ಈ ರೋಗ ಬೀಜ ಮತ್ತು ಮಣ್ಣಿನಿಂದ ಪ್ರಸಾರವಾಗುತ್ತದೆ. ರೋಗರಹಿತ ಬೀಜಗಳನ್ನು ಉಪಯೋಗಿಸುವುದು, ಸೀರಸಾನ್ ಅಥವಾ ಆಗ್ರಸಾನ್ ಎಂಬ ಔಷಧಿಗಳಿಂದ ಬೀಜಗಳನ್ನು ತೊಳೆಯುವುದು ಮತ್ತು ರೋಗ ನಿರೋಧಕ ಜಾತಿಗಳನ್ನೇ ಬಿತ್ತಲು ಉಪಯೋಗಿಸುವುದು–ಇವು ರೋಗನಿಯಂತ್ರಣದ ಕೆಲವು ಕ್ರಮಗಳು.

ಗೋರಿಕಾಯಿ ತರಕಾರಿ ಮಾತ್ರವಾಗಿ ಅಲ್ಲದೆ ಇನ್ನಿತರ ಕಾರಣಗಳಿಂದಾಗಿಯೂ ಉಪಯುಕ್ತವೆನಿಸಿದೆ. ಇದು ದನಗಳಿಗೆ ಮತ್ತು ಕುದುರೆಗಳಿಗೆ ಒಳ್ಳೆಯ ಮೇವು. ಬೀಜಗಳನ್ನು ಬೇಯಿಸಿ, ಕೊಂಚ ಸಾಸಿವೆ ಎಣ್ಣೆಯೊಂದಿಗೆ ಸೇರಿಸಿ ದನಗಳಿಗೆ ತಿನ್ನಿಸುವುದುಂಟು. ಅಲ್ಲದೆ ಬೀಜಗಳಿಂದ ಒಂದು ರೀತಿಯ ಗೋಂದನ್ನು ತಯಾರಿಸಿ ಕಾಗದ ಮತ್ತು ಬಟ್ಟೆ ಕೈಗಾರಿಕೆಗಳಲ್ಲಿ ಉತ್ಪನ್ನಗಳಿಗೆ ಬಲವನ್ನು ಕೊಡುವ ವಸ್ತುವಾಗಿ ಬಳಸುತ್ತಾರೆ. ಹದವಾಗಿ ಬೆಳೆದ ಕಾಯಿಗಳನ್ನು ಸುಗ್ಗಿಯಲ್ಲಿ ಕಿತ್ತು ಒಣಗಿಸಿಟ್ಟುಕೊಂಡು ಬೇಕಾದಾಗ ತರಕಾರಿಯಾಗಿ ಬಳಸುತ್ತಾರಲ್ಲದೆ ಕರಿದು ಬಾಳಕ ಮಾಡುವುದೂ ಉಂಟು. (ಬಿ.ಎ.ಸಿ.)

**ಗೋರ್ಗಸ್ ವಿಲಿಯಂ ಕ್ರಾಫರ್ಡ್ :** 1854–1920. ಅಮೆರಿಕ ಸಂಯುಕ್ತ ಸಂಸ್ಥಾನಗಳ ಸೈನ್ಯದಲ್ಲಿ ಶಸ್ತ್ರವೈದ್ಯ. ಪನಾಮ ಕಾಲುವೆಯ ಕೆಲಸಗಾರರು ಮಲೇರಿಯ ಮತ್ತು ಹಳದಿಜ್ವರಗಳಿಂದ ಪೀಡಿತರಾಗಿ ಆ ಕಾಲುವೆ ನಿರ್ಮಾಣಕಾರ್ಯ ಸ್ಥಗಿತವಾಗಿದ್ದಾಗ ಈ ರೋಗಗಳನ್ನು ಹರಡುವ ಸೊಳ್ಳೆಗಳ ನಿಯಂತ್ರಣದಿಂದ ನಿರ್ಮಾಣಕಾರ್ಯ ಮುಂದುವರಿಯುವಂತೆ ಮಾಡಿದವನೀತ.

ಗೋರ್ಗಸ್ 1854ರ ಅಕ್ಟೋಬರ್ 3ರಂದು ಅಲಬಾಮ ರಾಜ್ಯದ ಮೊಬೈಲ್ ಎಂಬಲ್ಲಿ ಜನಿಸಿದ. ದಕ್ಷಿಣ ವಿಶ್ವವಿದ್ಯಾಲಯ ಸೆವಾನಿ–ಟೆನಿಸಿಯಲ್ಲಿ ವ್ಯಾಸಂಗ ಮುಗಿಸಿ ನ್ಯೂಯಾರ್ಕಿನ ಬೆಲ್‌ವ್ಯೂ ಆಸ್ಪತ್ರೆ ಪ್ರೌಢ ವಿದ್ಯಾಶಾಲೆಯ ಎಂ.ಡಿ. ಪದವೀಧರನಾದ (1879). ಮರುವರ್ಷ ಅಮೆರಿಕ ಸಂಯುಕ್ತಸಂಸ್ಥಾನಗಳ ಸೈನ್ಯದ ವೈದ್ಯಕೀಯ ಪಡೆಗೆ ಸೇರಿ ಸ್ಪೇನ್ ಮತ್ತು ಅಮೆರಿಕ ನಡುವಣ ಯುದ್ಧದಲ್ಲಿ ಭಾಗವಹಿಸಿ ಮೇಜರ್ ಹುದ್ದೆಗೆ ಬಡ್ತಿ ಪಡೆದ. ಸ್ಯಾನ್‌ಟಿಯಾಗೋ ದಂಡಯಾತ್ರೆಯ ತರುವಾಯ ಈತನನ್ನು ಹವಾನದಲ್ಲಿ ಹಳದಿಜ್ವರ ಪೀಡಿತರಾದವರನ್ನು ನೋಡಿಕೊಳ್ಳಲು ಕಳುಹಿಸಿದರು. 1898ರಿಂದ 1902ರ ವರೆಗೆ ಹವಾನ ದಲ್ಲಿ ಬಾಹ್ಯ ಪರಿಸರ ನಿರ್ಮಲೀಕರಣ ಕಾರ್ಯ ಕ್ರಮದ ಅಧಿಕಾರಿಯಾಗಿದ್ದು ಸೊಳ್ಳೆಗಳು ಹಳದಿಜ್ವರವನ್ನು ಒಬ್ಬನಿಂದ ಇನ್ನೊಬ್ಬನಿಗೆ ಹರಡುವ ವಿಧಾನದ ವಿಚಾರವಾಗಿ ಅನೇಕ ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ನಡೆಸಿದ. ತತ್ಪರಿಣಾಮವಾಗಿ



ಹವಾನದಲ್ಲಿ ನೆಲೆಗೊಂಡಿದ್ದ ಹಳದಿಜ್ವರದ ಮೂಲೋಚ್ಚಾಟನೆ ಸಾಧ್ಯವಾಯಿತು. ಇದನ್ನು ಸರ್ಕಾರ ಮೆಚ್ಚಿ 1903ರಲ್ಲಿ ಗೋರ್ಗಸ್‌ನಿಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸೈನ್ಯದಲ್ಲಿ ಸಹಾಯಕ ಸರ್ಜನ್ ಜನರಲ್ ಆಗಿ ನೇಮಿಸಿ ಕರ್ನಲ್ ಪದವಿಗೆ ಬಡ್ತಿ ನೀಡಿತು. ಅನಂತರ ಈತ ಪನಾಮ ಕಾಲುವೆ ನಿರ್ಮಾಣಕ್ಷೇತ್ರದ ನಿರ್ಮಲೀಕರಣ ಮುಖ್ಯಾಧಿಕಾರಿಯಾಗಿ 1904ರಲ್ಲಿ ನೇಮಿಸಲ್ಪಟ್ಟ. ಕಾಲುವೆಯ ನಿರ್ಮಾಣಕ್ಕೆ ಮಲೇರಿಯ ಹಾಗೂ ಹಳದಿಜ್ವರ ಮುಖ್ಯ ಅಡಚಣೆಗಳಾಗಿದ್ದವು. ಅವನ್ನು ನಿರ್ಮೂಲನೆ ಮಾಡಿ, ಕಾಲುವೆ ಕೆಲಸ ಅವಿಚ್ಛಿನ್ನವಾಗಿ ಮುಂದುವರಿಯುವಂತೆ ಮಾಡಿದ್ದು ಗೋರ್ಗಸನ ಪರಮಸಿದ್ಧಿ. 1907ರಲ್ಲಿ ಈತ ಪನಾಮ ಭೂಸಂಧಿ ಕಾಲುವೆ ನಿಯೋಜಿತ ಮಂಡಲಿಯ ಸದಸ್ಯನಾಗಿ ನೇಮಕಗೊಂಡ. 1908ರಲ್ಲಿ ಮೊತ್ತಮೊದಲು ಕೂಡಿದ ಅಖಿಲ ಅಮೆರಿಕದ ವೈದ್ಯರ ಸಮ್ಮೇಳನದಲ್ಲಿ ಸಂಯುಕ್ತಸಂಸ್ಥಾನಗಳ ಪ್ರತಿನಿಧಿಯಾಗಿ ಭಾಗವಹಿಸಿದ. 1908–1909ರಲ್ಲಿ ಅಮೆರಿಕ ವೈದ್ಯರ ಸಂಘಕ್ಕೆ ಅಧ್ಯಕ್ಷನಾದ.

ದಕ್ಷಿಣ ಆಫ್ರಿಕದ ಚಿನ್ನದ ಗಣಿ ಪ್ರದೇಶಗಳಲ್ಲೊಂದಾದ ರ್‍ಯಾಂಡ್ ಎಂಬಲ್ಲಿ ಆಗಾಗ ತಲೆದೋರುತ್ತಿದ್ದ ಇನ್‌ಫ್ಲುಯೆನ್‌ಜ಼ಾ ಪಿಡುಗನ್ನು ಹತೋಟಿಗೆ ತರಲು ಸೂಕ್ತವಾದ ಸಲಹೆ ಕೊಡಬೇಕೆಂದು ಗೋರ್ಗಸನಿಗೆ ಕರೆಬಂತು (1913). ಗಣಿ ಕೂಲಿಗಾರರ ಪಾಳೆಯಗಳಲ್ಲಿ ತುಂಬಿ ತುಳುಕಾಡುತ್ತಿದ್ದ ಹೊಲಸುರಾಡಿಗಳೇ ಈ ಪಿಡುಗುಗಳಿಗೆ ಕಾರಣವೆಂಬುದನ್ನು ಈತ ಕಂಡುಕೊಂಡು ಪಿಡುಗಿನ ವಿರುದ್ಧ ಯಶಸ್ವೀ ಸಮರ ಹೂಡಿದ. 1914ರಲ್ಲಿ ಈತನಿಗೆ ಅಮೆರಿಕದ ಸರ್ಜನ್–ಜನರಲ್ ಪದವಿ ದೊರೆಯಿತು. ಮರುವರ್ಷ ಮೇಜರ್–ಜನರಲ್ ಆಗಿ 1918ರಲ್ಲಿ ಕೆಲಸದಿಂದ ನಿವೃತ್ತನಾದ. ತರುವಾಯ ರಾಕ್‌ಫೆಲರ್ ಸಂಸ್ಥೆಯ ಅಂತಾರಾಷ್ಟ್ರೀಯ ಆರೋಗ್ಯ ಸಮಿತಿಯ ಹಳದಿಜ್ವರ ವಿಚಾರ ಮಂಡಲಿಯ ಖಾಯಂ ನಿರ್ದೇಶಕನಾಗಿ ಸೇವೆ ಸಲ್ಲಿಸಿದ. ಮಧ್ಯ ಅಮೆರಿಕದ ಗ್ವಯಾಕ್ವಿಲ್, ಈಕ್ವಡಾರ್ ಮತ್ತು ಗ್ವಾಟಿಮಾಲಗಳಲ್ಲಿ ಹಳದಿಜ್ವರದ ವಿಚಾರವಾಗಿ ಸಂಶೋಧನೆ ನಡೆಸಿದ. 1919ರಲ್ಲಿ ಪೆರು ದೇಶದಲ್ಲಿ ನಿರ್ಮಲೀಕರಣ ಕಾರ್ಯಕ್ರಮವನ್ನು ನಡೆಸಿಕೊಡಲು ಒಪ್ಪಿಕೊಂಡ.

ಈತ 1920ರ ಜುಲೈ 3ರಂದು ಲಂಡನಿನಲ್ಲಿ ಗತಿಸಿದ. ಈತನ ಸ್ಮರಣಾರ್ಥವಾಗಿ ವಾಷಿಂಗ್‌ಟನ್ನಿನಲ್ಲಿ ಗೋರ್ಗಸ್ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಡಿಸಿನ್ ಇನ್ಕ್ ಎಂಬ ಸಂಸ್ಥೆಯನ್ನೂ ಪನಾಮದಲ್ಲಿ ಗೋರ್ಗಸ್ ಮೆಮೋರಿಯಲ್ ಲ್ಯಾಬೊರೇಟರಿ ಆಫ್ ಟ್ರಾಪಿಕಲ್ ರಿಸರ್ಚ್ ಎಂಬ ಸಂಸ್ಥೆಯನ್ನೂ ಸ್ಥಾಪಿಸಲಾಗಿದೆ.

ಸೊಳ್ಳೆಗಳ ಮೇಲೂ ಹಳದಿಜ್ವರದ ಮೇಲೂ ಕೆಲಸ ಮಾಡಿದ ಇನ್ನೊಬ್ಬನೆಂದರೆ ಗೋರ್ಗಸನ ಸಮಕಾಲೀನನಾದ ವಾಲ್ಟರ್ ರೀಡ್ (**ನೋಡಿ– ರೀಡ್, ವಾಲ್ಟರ್**).

(ಆರ್.ಎಸ್.ವಿ.)

**ಗೋರ್ಡನ್, ಆಡಮ್ ಲಿಂಡ್‌ಸೇ :** 1833–70. ಆಸ್ಟ್ರೇಲಿಯನ್ ಕವಿ. ಹುಟ್ಟಿನಿಂದ ಇಂಗ್ಲಿಷಿನವ. ವಿದ್ಯಾಭ್ಯಾಸವಾದುದೂ ಇಂಗ್ಲೆಂಡಿನಲ್ಲಿಯೇ. ನಿರ್ಲಕ್ಷ್ಯದ, ಬೇಜವಾಬ್ದಾರಿಯ ಯುವಕನೆಂಬ ಕಾರಣದಿಂದ ಆಸ್ಟ್ರೇಲಿಯಕ್ಕೆ ಕಳುಹಿಸಲ್ಪಟ್ಟು ಅಲ್ಲಿಯೇ ನೆಲೆಸಿದ. ಅಲ್ಲಿ ಕುದುರೆ ಸವಾರಿಯ ಪೋಲಿಸು ದಳದವನಾಗಿ ಕೆಲಸ ಮಾಡಲಾರಂಭಿಸಿದ. ಹಳ್ಳಿಗಾಡು ಕುದುರೆಜೂಜಿನಲ್ಲಿ ಸವಾರನಾಗಿ (ಸ್ಟೀಪಲ್‌ಚೇಸ್ ರೈಡರ್) ಕೆಲವು ವರ್ಷ ದುಡಿದ ಈತ ಅತ್ಯುತ್ತಮ ಸವಾರನೆಂದು ದಕ್ಷಿಣ ಆಸ್ಟ್ರೇಲಿಯದಲ್ಲೆಲ್ಲ ಖ್ಯಾತಿ ಪಡೆದ. ಇಪ್ಪತ್ತನಾಲ್ಕನೆಯ ವರ್ಷದಲ್ಲಿ ಅತ್ಯಲಂಕಾರಶೈಲಿಯಲ್ಲಿ ಭಾವಗೀತೆಗಳನ್ನು ಬರೆಯತೊಡಗಿದ. ಇಪ್ಪತ್ತೆಂಟನೆಯ ವರ್ಷದಲ್ಲಿ ತಾಯಿಯ ಆಸ್ತಿಗೆ ಉತ್ತರಾಧಿಕಾರಿಯಾಗಿ ಬಾಡಿಗೆ ಕುದುರೆಗಳ ಲಾಯವೊಂದನ್ನು ತೆರೆದ. ಮುವತ್ತನಾಲ್ಕನೆಯ ವರ್ಷದಲ್ಲಿ ಸೀ–ಸ್ಪ್ರೇ ಅಂಡ್ ಸ್ಮೋಕ್ ಡ್ರಿಫ್ಟ್ ಮತ್ತು ಆಶ್ಟರೋತ್ ಎಂಬ ಎರಡು ಕವನಸಂಕಲನಗಳನ್ನು ಪ್ರಕಟಿಸಿದ. ಮೂವತ್ತೇಳನೆಯ ವರ್ಷದಲ್ಲಿ ಬುಷ್ ಬ್ಯಾಲಡ್ಸ್ ಅಂಡ್ ಗ್ಯಾಲಪಿಂಗ್ ರೈಮ್ಸ್ ಎಂಬ ಮೂರನೆಯ ಕವನಸಂಕಲನವನ್ನು ಪ್ರಕಟಿಸಿದ. ಈ ಕೃತಿಗಳು ಈತನಿಗೆ ಹಣಕ್ಕಿಂತ ಹೆಚ್ಚಾಗಿ ಹೊಗಳಿಕೆಯನ್ನು ತಂದುವು. 1870ರಲ್ಲಿ ಕುದುರೆಸವಾರಿ ಮಾಡುವಾಗ ಬಿದ್ದು ಏಟು ತಿಂದ. ಸ್ಕಾಟ್ಲೆಂಡಿನಿಂದ ಬರಬೇಕಾದ ಒಂದು ಆಸ್ತಿ ಗಿಟ್ಟಲಿಲ್ಲ. ತಾನು ಕವಿಯಾಗಿಯೇ ಯಶಸ್ಸನ್ನು ಪಡೆಯುವುದು ಶಕ್ಯವಲ್ಲವೆಂಬ ಭಾವನೆ ಪ್ರಬಲವಾಯಿತು. ಈ ಎಲ್ಲ ಕಾರಣಗಳಿಂದ ಜೀವನದ ಬಗ್ಗೆ ತುಂಬ ಜುಗುಪ್ಸೆ ಪಟ್ಟುಕೊಂಡು ತನ್ನ ತಲೆಗೆ ತಾನೇ ಗುಂಡಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡ.

ಆಸ್ಟ್ರೇಲಿಯದ ಮೂಲ ನಿವಾಸಿಗಳ ನಿತ್ಯಜೀವನದ ವಿವಿಧ ನೋಟಗಳನ್ನು ಈತ ತನ್ನ ಕವಿತೆಗಳಲ್ಲಿ ಸೆರೆಹಿಡಿದಿದ್ದಾನೆ. ಆಸ್ಟ್ರೇಲಿಯನ್ ಜನತೆಗೆ ವಿಶಿಷ್ಟವಾದ ನುಡಿಗಟ್ಟನ್ನೇ ಬಳಸಿಕೊಂಡ ಕವಿಗಳಲ್ಲಿ ಈತ ಮೊದಲಿಗ. ಆದರೆ ಇವನ ಕವಿತೆಗಳಲ್ಲಿ ಅತ್ಯುತ್ತಮವಾದವು ಅವುಗಳ ವಸ್ತುಗಳಿಂದಾಗಿ, ಅವುಗಳ ಭಾವನೆಗಳಿಂದಾಗಿ ಆಸ್ಟ್ರೇಲಿಯನ್ ಆಗುವುದಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಆಗಿವೆ ಎಂದು ವಿಮರ್ಶಕರ ಅಭಿಪ್ರಾಯ. ಜೋರಾದ ಛಂದೋಗತಿ ಹಾಗೂ ಅಭಿವ್ಯಕ್ತವಾಗಿರುವ ಸರಳವಾದ ಮತ್ತು ಅನಾಡಂಬರದ ಜೀವನದರ್ಶನದಿಂದಾಗಿ ಇವು ಓದುಗರ ಮೆಚ್ಚುಗೆಯನ್ನು ಪಡೆದಿವೆ. ಇವನ ಕವಿತೆಗಳ ಹಲವಾರು ಸಾಲುಗಳು ಆಸ್ಟ್ರೇಲಿಯನ್ ಜನತೆಯ ನಿತ್ಯಜೀವನದ ಮಾತುಕತೆಯಲ್ಲಿ ಹಾಸುಹೊಕ್ಕಾಗಿ ಬಿಟ್ಟಿವೆಯಂತೆ.

(ಪಿ.ಎನ್.ಆರ್.)

**ಗೋರ್ಡನ್, ಚಾರ್ಲ್ಸ್ ಜಾರ್ಜ್ :** 1833–85. ಬ್ರಿಟಿಷ್ ಸೇನಾಧಿಕಾರಿ ಮತ್ತು ಸಮಾಜಸೇವಕ. ಬ್ರಿಟಿಷ್ ಸೈನ್ಯದ ಅಧಿಕಾರಿಯಾಗಿ ಕ್ರಿಮಿಯ, ತುರ್ಕಿ, ಅರ್ಮೇನಿಯ, ಚೀನ, ಭಾರತ, ಆಫ್ರಿಕ ಮುಂತಾದ ದೇಶಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ. 1859ರಲ್ಲಿ ಚೀನದ ಮೇಲೆ ದಂಡೆತ್ತಿಹೋದ ಸೈನ್ಯದ ನಾಯಕನಾಗಿ ಗಳಿಸಿದ ಜಯದಿಂದ ಈತ ಚೀನಿ ಗೋರ್ಡನ್ ಎಂದು ಕರೆಯಲ್ಪಟ್ಟ. ಆಫ್ರಿಕದಲ್ಲಿ ಈಜಿಪ್ಟಿನ ಖೆಡಿವ್ ಸರ್ಕಾರದ ಪರವಾಗಿ ಸಮಭಾಜಕೀಯ ಪ್ರಾಂತಗಳ ಗವರ್ನರಾಗಿದ್ದಾಗ ಗುಲಾಮರ ವ್ಯಾಪಾರ, ಲಂಚಗುಳಿತನ, ಬಡತನ ಮತ್ತು ಅನಾರೋಗ್ಯಗಳ ನಿರ್ಮೂಲನಕ್ಕಾಗಿ ಶ್ರಮಿಸಿದ. ದಕ್ಷಿಣ ಆಫ್ರಿಕದಲ್ಲಿ ಬಸೂಟೊ ಜನರ ದಂಗೆಯನ್ನು ಸೈನ್ಯವನ್ನು ಉಪಯೋಗಿಸದೆ ಹತ್ತಿಕ್ಕಿದ

ಯಶಸ್ಸು ಈತನದಾಯಿತು. ಸೂಡಾನಿನಲ್ಲಿ ಅಬ್ದುಲ್ಲಾ ಎಲ್ ಮಹ್ದಿ ಅಧಿಕಾರಕ್ಕೆ ಬಂದಾಗ ಅಲ್ಲಿದ್ದ ಐರೋಪ್ಯರನ್ನೂ ಈಜಿಪ್ಟಿನವರನ್ನೂ ಹೊರಗೆ ಸಾಗಿಸುವ ಹೊಣೆಯನ್ನು ಬ್ರಿಟಿಷ್ ಸರ್ಕಾರ ಗೋರ್ಡನನಿಗೆ ವಹಿಸಿತು. ಈ ಕಾರ್ಯದಲ್ಲಿ ನಿರತನಾಗಿದ್ದಾಗ ಖಾರ್ಟೂಮ್ ನಗರದ ಅರಮನೆಯ ಮೆಟ್ಟಲುಗಳ ಮೇಲೆ ಈತನನ್ನು ಇರಿದು ಕೊಲ್ಲಲಾಯಿತು. ಗೋರ್ಡನ್ ತನ್ನ ಜೀವನಪರ್ಯಂತ ಅನಾಥ ಬಾಲಕರ ಹಿತರಕ್ಷಣೆಗಾಗಿ ಶ್ರಮಿಸಿದ. ಆದ್ದರಿಂದ ಈತನ ಸ್ಮಾರಕವಾಗಿ ಅನಾಥ ಬಾಲಕರಿಗೆ ವೃತ್ತಿಶಿಕ್ಷಣ ಕೊಡಲು ವೋಕಿಂಗ್ ಎಂಬಲ್ಲಿ ಗೋರ್ಡನ್ ಬಾಯ್ಸ್‌ಸ್ಕೂಲ್ ಅನ್ನು ಸ್ಥಾಪಿಸಲಾಗಿದೆ. ಇಂಗ್ಲೆಂಡಿನಲ್ಲಿ ಅನೇಕ ಕಡೆ ಈತನ ಸ್ಮಾರಕಗಳಿವೆ.

(ಎ.ಎಂ.ಆರ್.)

**ಗೋರ್ಡಿಯೇಸಿಯ :** ಆಸ್ಕೆಲ್ಮಿಂಥೀಸ್ ವಿಭಾಗದ ಒಂದು ವರ್ಗ. ನೆಮ್ಯಾಟೋಮಾರ್ಫ ಪರ್ಯಾಯನಾಮ. ಕೂದಲಿನ ಎಳೆಯಂತೆ ಕಾಣುವ ವಿಶಿಷ್ಟ ರೀತಿಯ ಹುಳುಗಳನ್ನು ಒಳಗೊಂಡಿದೆ. ಈ ಹುಳುಗಳು 15–20 ಸೆಂಮೀ ಉದ್ದವಾಗಿಯೂ ತುಂಬ



ಜಲಸಸ್ಯವೊಂದನ್ನು ಸುತ್ತಿಕೊಂಡಿರುವ ಗೋರ್ಡಿಯಸ್ ಪ್ರಾಣಿ

ತೆಳುವಾಗಿಯೂ ಇರುವುದರಿಂದ ಇವಕ್ಕೆ ಕುದುರೆ ಕೂದಲು ಹುಳುಗಳೆಂಬ ರೂಢಿನಾಮವಿದೆ. ಈ ವರ್ಗದಲ್ಲಿ ಗೋರ್ಡಿಯಾಯ್ಡಿಯ ಮತ್ತು ನೆಕ್ಟೊನೆಮಟಾಯ್ಡಿಯ ಎಂಬ ಎರಡು ಗಣಗಳಿವೆ. ಮೊದಲಿನ ಗಣಕ್ಕೆ ಸೇರಿದ ಹುಳುಗಳು ಸಿಹಿನೀರಿನಲ್ಲೂ ಎರಡನೆಯ ಗಣಕ್ಕೆ ಸೇರಿದವು ಸಾಗರದ ಉಪ್ಪುನೀರಿನಲ್ಲೂ ವಾಸಿಸುತ್ತವೆ. ಎರಡು ಬಗೆಯ ಡಿಂಭಗಳು ಕೀಟಗಳ ಇಲ್ಲವೆ ಇತರ ರೀತಿಯ ಸಂಧಿಪದಿಗಳ ದೇಹದಲ್ಲಿ ಪರಾವಲಂಬಿಗಳಾಗಿ ಜೀವಿಸುತ್ತವೆ. ಪ್ರೌಢ ಜೀವಿಗಳು ಮಾತ್ರ ಸ್ವತಂತ್ರಜೀವನ ನಡೆಸುತ್ತವೆ.

ಮೇಲೆ ಹೇಳಿದಂತೆ ತೆಳುವಾದ ಹಾಗೂ ಕೂದಲಿನಂತೆ ಕಾಣುವ ಉದ್ದವಾದ ದೇಹ, ಹೊರಚರ್ಮವನ್ನು ಸಂಪೂರ್ಣವಾಗಿ ಆವರಿಸಿರುವ ಮತ್ತು ಹೊರಚರ್ಮದಿಂದಲೇ ಉತ್ಪತ್ತಿಯಾಗಿರುವ ದಪ್ಪವಾದ ಕ್ಯೂಟಿಕಲ್ ಪದರ, 3 ಇಲ್ಲವೆ 4 ಪ್ರತ್ಯೇಕ ನಾಳೆಗಳಾಗಿ ವಿಭಾಗವಾಗಿರುವ ದೇಹಾಂತರಾವಕಾಶ, ಡಿಂಭಗಳಲ್ಲಿ ಸಂಪೂರ್ಣವಾಗಿ ರೂಪುಗೊಂಡಿದ್ದು ಪ್ರೌಢ ಜೀವಿಗಳಲ್ಲಿ ಕ್ಷೀಣವಾಗಿರುವ ಜೀರ್ಣಾಂಗ, ಸರಳವಾದ ಕೊಳವೆಯಂತಿರುವ ಜಠರ, ರಕ್ತಪರಿಚಲನೆ, ಉಸಿರಾಟ ಮತ್ತು ವಿಸರ್ಜನೆಯ ಅಂಗಗಳು ಇಲ್ಲದಿರುವುದು, ಅನ್ನನಾಳದ ಸುತ್ತ ಉಂಗುರದಂತಿರುವ ನರಮಂಡಲ–ಇವು ಗೋರ್ಡಿಯೇಸಿಯ ವರ್ಗದ ಜೀವಿಗಳ ಮುಖ್ಯ ಲಕ್ಷಣಗಳು.

ಗೋರ್ಡಿಯೇಸಿಯಕ್ಕೆ ಸೇರಿದ ಜೀವಿಗಳು ಭಿನ್ನಲಿಂಗಿಗಳು. ಜನನಾಂಗಗಳು ದೇಹದುದ್ದಕ್ಕೂ ವ್ಯಾಪಿಸಿವೆ. ನೀರಿನಲ್ಲಿ ಬೆಳೆಯುವ ಜೊಂಡಿನ ಮೇಲೆ ಉದ್ದುದ್ದನೆಯ ಸರಪಳಿಗಳ ರೀತಿಯಲ್ಲಿ ಇವು ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಯೊಡೆದು ಹೊರಬರುವ ಡಿಂಭಗಳು ಯಾವುದಾದರೂ ಜಲವಾಸಿ ಕೀಟದ ದೇಹವನ್ನು ಸೇರಿ ತಮ್ಮ ಜೀವನದ ಪ್ರಥಮ ಹಂತವನ್ನು ಕಳೆಯುತ್ತವೆ. ಅನಂತರ ಜೀರುಂಡೆ, ಮಿಡತೆ ಇತ್ಯಾದಿ ಇನ್ನೊಂದು ಬಗೆಯ ಆತಿಥೇಯ ಕೀಟದ ದೇಹದೊಳಕ್ಕೆ ಸಾಗುತ್ತವೆ. ಇಲ್ಲಿ ತಮ್ಮ ಡಿಂಭಾವಸ್ಥೆಯನ್ನು ಪೂರ್ಣಗೊಳಿಸಿ ಪ್ರೌಢಾವಸ್ಥೆ ತಲಪಿ ಜಲಮಾಧ್ಯಮಕ್ಕೆ ಬರುತ್ತವೆ.

(ಪಿ.ಎ.ಆರ್.)

**ಗೋಲಿ :** ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಪಾಲ್ನಾಡ್ ತಾಲ್ಲೂಕಿನಲ್ಲಿರುವ, ಬೌದ್ಧಸ್ತೂಪದ ಅವಶೇಷಗಳುಳ್ಳ ಪ್ರಸಿದ್ಧ ಗ್ರಾಮ. ಕೃಷ್ಣಾನದಿಯ ಗೊಲ್ಲಾರು ಎಂಬ ನದಿಯ ದಡದ ಮೇಲಿದೆ. 1822ರಲ್ಲಿ ರಾಬರ್ಟ್ ಸಿವೆಲ್ ಇಲ್ಲಿದ್ದ ಬೌದ್ಧಸ್ತೂಪವನ್ನು

ಪತ್ತೆಹಚ್ಚಿದ. 1926ರಲ್ಲಿ ಪ್ರಸಿದ್ಧ ಚರಿತ್ರಕಾರ ಜಿ.ಜೆ. ಡೂಬ್ರೆ ಈ ಸ್ತೂಪವನ್ನು ಅಗೆಸಿ ಇದರಲ್ಲಿದ್ದ ಶಿಲ್ಪ ಫಲಕಗಳನ್ನೆಲ್ಲ ಮದ್ರಾಸ್ ಸರ್ಕಾರದ ವಸ್ತುಸಂಗ್ರಹಾಲಯಕ್ಕೆ ವರ್ಗಾಯಿಸಿದ. ಇಂದಿಗೂ ಇವು ಅಲ್ಲಿ ಪ್ರದರ್ಶಿತವಾಗಿವೆ. ಗೋಲಿಯ ಸ್ತೂಪ ಪೂರ್ತಿಯಾಗಿ ನಷ್ಟವಾಗಿದೆ. ಈಗ ಉಳಿದಿರುವುದು ಆ ಸ್ತೂಪವನ್ನಲಂಕರಿಸಿದ್ದ ಶಿಲ್ಪಗಳು ಮಾತ್ರ. ಇವು ಆಂಧ್ರದ ಆ ಕಾಲದ ಇತರ ಶಿಲ್ಪಗಳಂತೆ ಬಿಳಿಯ ಸುಣ್ಣಕಲ್ಲಿನಿಂದ ಮಾಡಿದವು. ಅಮರಾವತಿ ಶಿಲ್ಪಶೈಲಿಯ ಕೊನೆಯ, ಎಂದರೆ ನಾಲ್ಕನೆಯ, ಹಂತಕ್ಕೆ ಗೋಲಿಯ ಶಿಲ್ಪಗಳು ಸೇರುತ್ತವೆಂಬುದು ವಿದ್ವಾಂಸರ ಮತ. 3ನೆಯ ಶತಮಾನದ ಹೊತ್ತಿಗೆ ಈ ಶಿಲ್ಪಗಳು ನಿರ್ಮಾಣವಾಗಿದ್ದಿರಬೇಕೆಂದು ತಿಳಿದುಬರುತ್ತದೆ.

ಇಲ್ಲಿಯ ಶಿಲ್ಪ ಫಲಕಗಳಲ್ಲಿ ವೆಸ್ಸಂತರ ಜಾತಕ, ಷಡ್ದಂತಜಾತಕ, ನಳಗಿರಿ ಎಂಬ ಮದಿಸಿದ ಆನೆಯ ಸೊಕ್ಕನ್ನು ಬುದ್ಧ ಮುರಿದು ಸಾಧುವಾಗಿ ಮಾಡುತ್ತಿರುವ ದೃಶ್ಯ, ಯಶೋಧರೆಯನ್ನು ಸಂಧಿಸುತ್ತಿರುವುದು, ಸುಜಾತೆ ಬೋಧಿಸತ್ವನಿಗೆ ಆಹಾರ ಕೊಡುತ್ತಿರುವುದು, ಬುದ್ಧನ ಧರ್ಮಬೋಧೆ ಮುಂತಾದವು ಬಹು ಮುಖ್ಯವಾದವು. ಅಮರಾವತಿಯ ಶಿಲ್ಪಿಗಳೇ ಇವನ್ನೂ ಕೆತ್ತಿದರೋ ಎನ್ನುವ ಸಂದೇಹ ಬರುವಷ್ಟು ಮಟ್ಟಿಗೆ ಇವು ಅಲ್ಲಿಯ ಶಿಲ್ಪಗಳನ್ನು ಹೋಲುತ್ತವೆ. ಬೌದ್ಧಸ್ತೂಪವೊಂದಕ್ಕೆ ಸ್ತ್ರೀಯರು ನಮಸ್ಕರಿಸುತ್ತಿರುವ ಶಿಲ್ಪ ಬಹು ರಮ್ಯವಾಗಿದೆ. ಇಲ್ಲಿ ದೊರಕಿರುವ ಚೈತ್ಯಫಲಕದಲ್ಲಿ ಐದು ಆಯಕ ಸ್ತಂಭಗಳು ಮತ್ತು ಅಲಂಕಾರಗಳು ಕಾಣಬರುತ್ತವೆ. ಇದರ ಆಧಾರದ ಮೇಲೆ ಊಹಿಸುವುದಾದರೆ ಗೋಲಿಯ ಸ್ತೂಪವೂ ಆಯಕ ಸ್ತಂಭಗಳನ್ನೊಳಗೊಂಡು ಅಲಂಕಾರಯುತವಾಗಿದ್ದಿರಬೇಕೆಂದು ಹೇಳಬಹುದು. ಶಿಲ್ಪ ಫಲಕಗಳಲ್ಲಿ ವಿಶೇಷವಾಗಿ ಆಕರ್ಷಿಸುವುದೆಂದರೆ ಅವುಗಳಲ್ಲಿಯ ಪ್ರಾಣಿಗಳ ಚಿತ್ರಗಳು. ಹಸು, ಕುದುರೆ, ಆನೆ, ಮೊಲ, ಹಂಸ, ಎತ್ತು ಮುಂತಾದ ಪ್ರಾಣಿಗಳು ಚೆನ್ನಾಗಿ ಶಿಲ್ಪಿತವಾಗಿವೆ. (ಎ.ವಿ.ಎನ್.)

**ಗೋಲಿಹೇನು :** ಕ್ರಸ್ಟೇಸಿಯ ವರ್ಗದ ಐಸಾಪೊಡ ಗಣಕ್ಕೆ ಸೇರಿದ ಒಂದು ನೆಲವಾಸಿ ಪ್ರಾಣಿ. ಇದನ್ನು ಮುಟ್ಟಿದಾಗ ಗುಂಡಗೆ ಗೋಲಿಯಂತೆ ಸುತ್ತಿಕೊಳ್ಳುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಆರ್ಮಡಿಲಿಡಿಯಂ ವಲ್ಗೇರ್ ಇದರ ಶಾಸ್ತ್ರೀಯ ನಾಮ. ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಇದಕ್ಕೆ ವುಡ್ ಲೌಸ್, ಪಿಲ್‌ಬಗ್ ಎಂಬ ಹೆಸರುಗಳಿವೆ.



ಗೋಲಿಹೇನುಗಳು : ಎಡಗಡೆಯದು ಗಂಡು, ಬಲಗಡೆಯದು ಹೆಣ್ಣು

ಇದೇ ಗಣಕ್ಕೆ ಸೇರಿದ ಏಸೆಲಸ್ ಕಮ್ಯೂನಿಸ್, ಪಾರ್ಸೆಲಿಯೋ ಸ್ಕೇಬರ್, ಲಿಮ್ನೋರಿಯ ಲಿಗ್ನೋರಂ ಮುಂತಾದವುಗಳಿಗೂ ಗೋಲಿಹೇನು ಎಂಬ ಹೆಸರೇ ಇದೆ. ಕಪ್ಪುಬಣ್ಣದ ಮತ್ತು ಮೇಲಿನಿಂದ ಕೆಳಕ್ಕೆ ಚಪ್ಪಟೆಯಾಗಿರುವ ದೇಹ, ಮೋಟಾದ ಉದರ ಭಾಗ ಮತ್ತು ಆಂಟೆನೀಗಳು–ಇವು ಗೋಲಿಹೇನಿನ ಮುಖ್ಯ ಲಕ್ಷಣಗಳು. ಇದು ಮನೆಯಲ್ಲಿ ತೇವ ಹೆಚ್ಚಾಗಿರುವ ಸ್ಥಳಗಳಲ್ಲಿ, ಒಟ್ಲುಪಾತಿ ಮತ್ತು ಗಾಜಿನ ಮನೆಗಳಲ್ಲಿ ಬೆಳೆಸುವ ಸಸ್ಯಗಳ ಬಳಿ ವಾಸಿಸುತ್ತದೆ; ಬೇರುಗಳನ್ನು ಮತ್ತು ತುಂಬ ಎಳೆಯ ಸಸಿಗಳ ಕಾಂಡಗಳನ್ನು ತಿಂದು ಬದುಕುತ್ತದೆ. ಇದರಿಂದ ಕೆಲವೊಮ್ಮೆ ಪಿಡುಗಾಗುವುದುಂಟು.

5 ಭಾಗ ಸಕ್ಕರೆ 1 ಭಾಗ ಪ್ಯಾರಿಸ್ ಗ್ರೀನ್ ಇರುವ ಮಿಶ್ರಣವನ್ನು ಅಥವಾ ಶೇ. 2 ಕ್ಲೋರ್ಡೇನ್ ಪುಡಿಯನ್ನು ದೂಳಿಸುವುದರಿಂದ ಇಲ್ಲವೆ ಪ್ಯಾರಥಿಯಾನನ್ನು ಒಂದು ಗ್ಯಾಲನ್ ನೀರಿಗೆ ಒಂದು ಟೀ ಚಮಚದಷ್ಟು ಪ್ರಮಾಣದಲ್ಲಿ ಸೇರಿಸಿ ಸಿಂಪಡಿಸುವುದರಿಂದ ಗೋಲಿಹೇನನ್ನು ನಿಯಂತ್ರಿಸಬಹುದು. (ಪಿ.ಎಂ.)

**ಗೋಲ್ಕೊಂಡ :** ಹೈದರಾಬಾದ್ ನಗರದ ಪಶ್ಚಿಮಕ್ಕೆ 11 ಕಿಮೀ ದೂರದಲ್ಲಿರುವ ಐತಿಹಾಸಿಕ ಸ್ಥಳ. 1518–1687ರ ವರೆಗೆ ಇದು ಕುತುಬ್‌ಶಾಹಿ ಸುಲ್ತಾನರು ಕಟ್ಟಿ ಆಳಿದ ಗೋಲ್ಕೊಂಡ ರಾಜ್ಯದ ರಾಜಧಾನಿಯಾಗಿತ್ತು.

ಗೋದಾವರಿ ನದಿಯ ಕೆಳದಂಡೆಯ ಪ್ರದೇಶದಲ್ಲಿ ಬಂಗಾಳಕೊಲ್ಲಿಯ ವರೆಗೆ ವ್ಯಾಪಿಸಿದ್ದ ರಾಜ್ಯಕ್ಕೆ ಗೋಲ್ಕೊಂಡವೆಂಬ ಹೆಸರಿತ್ತು. ಕಾಕತೀಯರ ರಾಜ್ಯದ ಭಾಗವಾಗಿದ್ದ ಈ ಪ್ರದೇಶವನ್ನು ಅಲ್ಲಾವುದ್ದೀನ್ ಖಿಲ್ಜಿ 1310ರಲ್ಲಿ ಆಕ್ರಮಿಸಿಕೊಂಡಿದ್ದ. ಇದು 1424–25 ರವರೆಗೆ ಸ್ವತಂತ್ರ ಅಸ್ತಿತ್ವ ಹೊಂದಿದ್ದಾಗ ಬಹಮನಿಗಳ ವಶವಾಯಿತು. ಬಹಮನಿ ರಾಜ್ಯದ ಪೂರ್ವ ಪ್ರಾಂತಕ್ಕೆ ವಾರಂಗಲ್ ರಾಜಧಾನಿಯಾಗಿತ್ತು. ಈ ಪ್ರಾಂತದ ಅಧಿಕಾರಿಯಾಗಿದ್ದ ಕುಲಿ ಕುತುಬ್ ಷಾ 1512ರಲ್ಲಿ ಸ್ವತಂತ್ರ ಸುಲ್ತಾನನಾದ. ಗೋಲ್ಕೊಂಡ ಅವನ ರಾಜಧಾನಿಯಾಯಿತು. 1687ರಲ್ಲಿ ಈ ರಾಜ್ಯವನ್ನು ಔರಂಗಜೇಬ್ ಗೆದ್ದುಕೊಂಡ. ಗೋಲ್ಕೊಂಡ ಮೊಗಲ್ ಚಕ್ರಾಧಿಪತ್ಯದ ಭಾಗವಾಯಿತು. ಗೋಲ್ಕೊಂಡದ ಬಳಿ ಸಿಕ್ಕುತ್ತಿದ್ದ ವಜ್ರಗಳಿಂದಾಗಿ ಅದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ.

ಅರಸು ಮನೆತನದ ಗೋರಿಗಳನ್ನೊಳಗೊಂಡ ಮಸೀದಿಯ ಒಂದು ಮಿನಾರ್

ಗೋಲ್ಕೊಂಡ ಕೋಟೆ ದಕ್ಷಿಣ ಭಾರತದ ಸುಪ್ರಸಿದ್ಧವಾದ ಹಾಗೂ ಬೃಹತ್ತಾದ ಕೋಟೆಗಳಲ್ಲೊಂದು. 400 ಅಡಿ ಎತ್ತರದ ಗ್ರಾನೈಟ್ ಗುಡ್ಡದ ಮೇಲೆ ಕಟ್ಟಲಾದ, ಸು. 7 ಕಿಮೀ ಸುತ್ತಳತೆಯುಳ್ಳ ಮೂರು ಸುತ್ತಿನ ಈ ಅಭೇದ್ಯ ಕೋಟೆ 8 ದ್ವಾರಗಳಿಂದಲೂ 87 ಕೊತ್ತಳಗಳಿಂದಲೂ ಕೂಡಿದ ಅದ್ಭುತ ನಿರ್ಮಿತಿಯಾಗಿದೆ. ಹೊರಸುತ್ತಿನ ಕೋಟೆಗೋಡೆಯು ಪಟ್ಟಣವನ್ನು ಆವರಿಸಿದ್ದು ಈ ಗೋಡೆಯ ಸುತ್ತಲೂ ಕಂದಕವಿದೆ. ಆಳವಾದ ಕಂದಕದಂಚಿನಲ್ಲಿರುವ ವೃತ್ತ–ಅರೆವೃತ್ತಾಕಾರದ ಎಲ್ಲ ಕೊತ್ತಳಗಳ ಮೇಲೆ ಫಿರಂಗಿಗಳನ್ನು ನೆಲೆಗೊಳಿಸಿದ್ದು, ಅದು ಶತ್ರುಧಾಳಿಗೆ ಕಂಟಕಪ್ರಾಯವಾಗಿತ್ತು. ಮಧ್ಯದ ಸುತ್ತಿನಲ್ಲಿ ಅವಳಿಗೋಡೆಗಳಿದ್ದು ಇವು ಗುಡ್ಡದ

ಕುತುಬ್‌ಶಾಹಿ ಮನೆತನದವರ ಗೋರಿ

ಬುಡಭಾಗವನ್ನು ಸುತ್ತುವರೆದಿವೆ. ಒಳಗಿರುವ ರಾಜ ನಿವಾಸಕ್ಕೆ ಈ ಗೋಡೆಗಳು ಪ್ರಬಲ ರಕ್ಷಣೆಯನ್ನು ಒದಗಿಸಿದ್ದವು. ಒಳಸುತ್ತಿನ ಕೋಟೆಯನ್ನು ಗುಡ್ಡದ ಮೇಲ್ಭಾಗದಲ್ಲಿ, ನೈಸರ್ಗಿಕ ಬಂಡೆಗಳನ್ನು ಬಳಸಿಕೊಂಡು ಅವುಗಳ ರಚನಾಕಾರಗಳಿಗೆ ಅನುಗುಣವಾಗಿ, ಅಲ್ಲಲ್ಲಿ ಕಲ್ಗೋಡೆ ಗಳ ಆಸರೆಯೊಂದಿಗೆ ಕಟ್ಟಲಾಗಿದೆ. 1724ರಲ್ಲಿ ಪಟ್ಟಣದ ವಾಯವ್ಯ ಭಾಗದಲ್ಲಿ

ಹೊರಗೋಡೆಯನ್ನು ವಿಸ್ತರಿಸಿ ನಯಾ ಕಿಲಾವನ್ನು ರಚಿಸ ಲಾಯಿತು. ಗುಡ್ಡದ ಮಧ್ಯಭಾಗದಲ್ಲಿ ಕೆರೆಗಳು, ಮದ್ದಿನ ಮನೆಗಳು, ರಾಜಗೃಹ, ಸಭಾಮಂದಿರ, ಲಾಯ, ಮಸೀದಿ, ಉದ್ಯಾನವನ ಹಾಗೂ ಉಗ್ರಾಣಗಳಿವೆ. ಬುಡಭಾಗದಲ್ಲಿ ರಾಣಿ ನಿವಾಸಗಳೂ ಸೇವಕರ ವಾಸಗೃಹಗಳೂ ಇವೆ. ಕೋಟೆಗೆ ಸ್ವಲ್ಪ ದೂರದಲ್ಲಿ ಕುತುಬ್‌ಶಾಹಿ ದೊರೆಗಳ ಗೋರಿಗಳಿವೆ. ಫತೇಹ್, ಬಹಮನಿ, ಮೆಕ್ಕ, ಪಟನ್‌ಚೆರು, ಬಂಜಾರ, ಜಮಾಲಿ, ನಯಾಕಿಲಾ ಮತ್ತು ಮೋತಿ ಇವು ಎಂಟು ದ್ವಾರಗಳು. ಈ ದ್ವಾರಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಇಡಲಾಗಿದ್ದು ಒಂದು ದ್ವಾರದಲ್ಲಿ ನಿಂತು ಚಪ್ಪಾಳೆ ತಟ್ಟಿದರೆ ಅದರ ಶಬ್ದ ಪ್ರತಿಫಲನಗೊಂಡು ಮತ್ತೊಂದು ದ್ವಾರದ ವರೆಗೆ ತಲುಪುವುದು. ಹೀಗೆ ಸೂಚನೆಗಳನ್ನು ಹೊರದ್ವಾರದಿಂದ ಗುಡ್ಡದ ತುತ್ತತುದಿಯ ವರೆಗೆ ಇತರರಿಗೆ ಕೇಳದ ರೀತಿಯಲ್ಲಿ ವರ್ಗಾಯಿಸುವಂತೆ ಈ ಕೋಟೆಯನ್ನು ನಿರ್ಮಿಸಿರುವುದು ಆ ಕಾಲದ ತಂತ್ರಜ್ಞರ ವಾಸ್ತುಕೌಶಲ್ಯಕ್ಕೆ ಅನುಪಮ ಉದಾಹರಣೆಯಾಗಿದೆ. ಬ್ರಿಟಿಷ್ ಅಧಿಕಾರಿ ಸರ್ ಥಾಮಸ್ ಮನ್ರೋ ಈ ಕೋಟೆಯನ್ನು ವಜ್ರದ ಗಣಿ, ರತ್ನಗರ್ಭವೆಂದು ಕರೆದಿದ್ದಾನೆ.

ಗೋಲ್ಕೊಂಡ ಕೋಟೆ ಈಗ ಜನಪ್ರಿಯ ಪ್ರವಾಸೀ ತಾಣವಾಗಿದ್ದು ಇತ್ತೀಚೆಗೆ ಈ ಕೋಟೆಯಲ್ಲಿ ಬೆಳಕು ಹಾಗೂ ಶ್ರಾವ್ಯ ಪ್ರದರ್ಶನವನ್ನು (ಲೈಟ್ ಅಂಡ್ ಸೌಂಡ್) ಪ್ರವಾಸಿಗರಿಗಾಗಿ ಏರ್ಪಡಿಸಲಾಗಿದೆ. (ಜಿ.ಆರ್.ಆರ್.)

**ಗೋಲ್ಕೊಂಡ ವಜ್ರಗಳು :** ಗೋಲ್ಕೊಂಡದ ವಜ್ರಗಳು ಇತಿಹಾಸದಲ್ಲಿ ಪ್ರಸಿದ್ಧಿ ಪಡೆದಿವೆ. ಗೋಲ್ಕೊಂಡ ನಗರದ ಬಳಿಯಲ್ಲೇ ವಜ್ರಗಳ ಗಣಿಗಳು ಇಲ್ಲದಿದ್ದರೂ ಬಹುಶಃ ಇದು ವಜ್ರಗಳ ಮಾರುಕಟ್ಟೆಯಾಗಿದ್ದು, ಬೆಲೆಬಾಳುವ ಹಲವಾರು ವಜ್ರಗಳು ಇಲ್ಲಿಂದ ಹೊರಕ್ಕೆ ಹೋಗಿದ್ದಿರಬೇಕು. ಗೋಲ್ಕೊಂಡ ಸಂಸ್ಥಾನದಲ್ಲಿ, ಸುತ್ತಮುತ್ತಲ ಹಲವಾರು ಕಡೆಗಳಲ್ಲಿ ವಜ್ರದ ಗಣಿಗಳಿದ್ದುವು.

ಉತ್ತರದಲ್ಲಿ ಗೋದಾವರಿ ನದಿಯಿಂದ ದಕ್ಷಿಣದಲ್ಲಿ ಪೆನ್ನಾರ್ ನದಿಯವರೆಗೆ ಹಬ್ಬಿದ್ದ ಗೋಲ್ಕೊಂಡ ಸಂಸ್ಥಾನದ ದಕ್ಷಿಣ ಜಿಲ್ಲೆಗಳಲ್ಲೇ ಹೆಚ್ಚು ಗಣಿಗಳಿದ್ದವು. ಕೃಷ್ಣಾ ನದಿಯ ಉದ್ದಕ್ಕೂ ಹಲವಾರು ಕಡೆ ಚರಿತ್ರಾರ್ಹವಾದ ಅನೇಕ ವಜ್ರಗಳು ಸಿಕ್ಕಿದ್ದುವು. ಗೋಲ್ಕೊಂಡದ ವಜ್ರಗಣಿಗಳಲ್ಲಿ 60,000 ಜನರನ್ನು ಕೆಲಸಕ್ಕೆ ನೇಮಿಸಿದ್ದರೆಂದು ಭಾರತದಲ್ಲಿ ಸಂಚರಿಸಿದ ಫ್ರೆಂಚ್ ವ್ಯಾಪಾರಿ ಜೆ.ಬಿ.ಟ್ಯಾವರ್ನಿಯರ್ 1665ರಲ್ಲಿ ಬರೆದಿದ್ದಾನೆ.

ಗೋಲ್ಕೊಂಡ ಸಂಸ್ಥಾನದ ಗಣಿಗಳಿಂದ ಬಂದ ಪ್ರಖ್ಯಾತ ವಜ್ರಗಳು ಇವು :

1. ಜಗತ್ಪ್ರಸಿದ್ಧವಾದ ಕೋಹಿನೂರ್ ವಜ್ರ ಕೃಷ್ಣಾ ನದಿಯ ಪಕ್ಕದಲ್ಲಿದ್ದ ಕೊಲ್ಲೂರು ಗಣಿಗಳಿಂದ (ಗುಂಟೂರು ಜಿಲ್ಲೆ) ಬಂದದ್ದು. ಈ ವಜ್ರ 1739ರ ವರೆಗೂ ಮೊಗಲ್ ಚಕ್ರವರ್ತಿಗಳ ಬಳಿ ಇತ್ತು. ಅನಂತರ ಇದು ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಗೆ ಸೇರಿತು. ಆ ಕಂಪನಿ 1849ರಲ್ಲಿ ಇದನ್ನು ವಿಕ್ಟೋರಿಯ ರಾಣಿಗೆ ಒಪ್ಪಿಸಿತು. ಇದರ ತೂಕ ಆಗ ಸುಮಾರು 186 ಕ್ಯಾರಟ್. ಕಟ್ಟಿಡ ಚನ್ನಾಗಿಲ್ಲದಿದ್ದುದರಿಂದ 1852ರಲ್ಲಿ ಆಮ್‌ಸ್ಟರ್‌ಡ್ಯಾಮಿನಲ್ಲಿ ಇದಕ್ಕೆ ಮತ್ತೆ ಸಾಣೆ ಹಿಡಿಸಲಾಯಿತು. ಇದರ ತೂಕ 105.6 ಕ್ಯಾರಟ್‌ಗಳಿಗೆ ಇಳಿಯಿತು. ಈಗ ಇದು ಬ್ರಿಟಿಷ್ ರಾಜ ಮನೆತನದ ಹಕ್ಕಿನಲ್ಲಿದ್ದು ವಿಂಡ್ಸರ್ ಅರಮನೆಯಲ್ಲಿ ಇದನ್ನು ಇಡಲಾಗಿದೆ (**ನೋಡಿ–ಕೋಹಿನೂರ್**).

2. ಪಿಟ್ ಅಥವಾ ರೀಜೆಂಟ್ ಈಗ ಪ್ರಪಂಚದಲ್ಲಿರುವ ಶ್ರೇಷ್ಠ ವಜ್ರಗಳಲ್ಲೊಂದು. ಇದು 1701ರಲ್ಲಿ ಕೃಷ್ಣಾ ನದಿಯ ಉತ್ತರಭಾಗದಲ್ಲಿ ಗೋಲ್ಕೊಂಡಕ್ಕೆ 46 ಕಿಮೀ ದೂರದಲ್ಲಿ ಸಿಕ್ಕಿತು. ಅನಂತರ ಇದು ಜಾನ್‌ಚಂದ್ ಎಂಬ ವರ್ತಕನ ಕೈಸೇರಿತು. ಆಗ ಮದರಾಸಿನ ಗವರ್ನರ್ ಆಗಿದ್ದ ಥಾಮಸ್‌ಪಿಟ್ ಇದನ್ನು 3 ಲಕ್ಷ ರೂಪಾಯಿಗಳಿಗೆ ಕೊಂಡ. ಆಗ ಇದರ ತೂಕ 410 ಕ್ಯಾರಟ್. ಇದನ್ನು ಮತ್ತೆ ಸಾಣೆ ಹಿಡಿಸಿ ಮೆರಗು ಕೊಟ್ಟ ಅನಂತರ ಇದರ ತೂಕ 140.64 ಕ್ಯಾರಟುಗಳಿಗೆ ಇಳಿಯಿತು. 1717 ರಲ್ಲಿ ಫ್ರಾನ್ಸಿನ ರೀಜೆಂಟ್ ಆಗಿದ್ದ ಆರ್‌ಲೀನ್ಸ್‌ನ ಡ್ಯೂಕನಿಗೆ 20 ಲಕ್ಷ ರೂಪಾಯಿಗಳಿಗೆ ಪಿಟ್ ಇದನ್ನು ಮಾರಿದ. ಅನಂತರ ಈ ವಜ್ರಕ್ಕೆ ರೀಜೆಂಟ್ ಎಂಬ ಹೆಸರು ಬಂತು. 1722ರಲ್ಲಿ 15ನೆಯ ಲೂಯಿ ತನ್ನ ಕಿರೀಟಧಾರಣ ಮಹೋತ್ಸವದಲ್ಲಿ ಈ ವಜ್ರವನ್ನು ಧರಿಸಿದ್ದ. ಈಗ ಇದು ಫ್ರೆಂಚ್ ರಾಜರ ಅರಮನೆಯಲ್ಲಿದೆ.

3. ದಿ ಗ್ರೇಟ್ ಮೊಗಲ್ ವಜ್ರ ಭಾರತದಲ್ಲಿ ಸಿಕ್ಕಿರುವ ವಜ್ರಗಳಲ್ಲೆಲ್ಲ ಅತ್ಯಂತ ದೊಡ್ಡದು. ಕೊಲ್ಲೂರು ಗಣಿಗಳಲ್ಲಿ ಸುಮಾರು 1650ರಲ್ಲಿ ಈ ವಜ್ರ ಸಿಕ್ಕಿತು. 1655 ರಲ್ಲಿ ಶಹಜಹಾನ್ ಚಕ್ರವರ್ತಿಯ ಕೈಸೇರಿತು. ಆಗ ಇದರ ತೂಕ 787.5 ಕ್ಯಾರಟ್; ಸಾಣೆ ಹಿಡಿಸಿದ ಅನಂತರ ಇದು 280 ಕ್ಯಾರಟುಗಳಿಗೆ ಇಳಿಯಿತು. ಟ್ಯಾವರ್ನಿಯರ್ 1665ರಲ್ಲಿ ಇದನ್ನು ಔರಂಗಜೇಬನ ಅರಮನೆಯಲ್ಲಿ ನೋಡಿದ್ದುದಾಗಿ ಹೇಳಿದ್ದಾನೆ. ಅನಂತರ ಇದು ಎಲ್ಲಿಗೆ ಹೋಯಿತೆಂಬುದನ್ನು ತಿಳಿಯಲಾಗಿಲ್ಲ. ಇದನ್ನು ನಾದಿರ್ ಷಾ ಪರ್ಷಿಯಕ್ಕೆ ಕೊಂಡೊಯ್ದನೆಂದೂ ಈಗಲೂ ಅಲ್ಲೇ ಇರಬೇಕೆಂದೂ ಕೆಲವರ ಊಹೆ. ಈ ವಜ್ರವನ್ನು ಒಡೆದು ಕೋಹಿನೂರ್ ಮತ್ತು ಓರ್‌ಲಾಫ್ ಎಂಬ ಎರಡು ವಜ್ರಗಳನ್ನು ಪಡೆದರೆಂಬುದು ಇನ್ನು ಕೆಲವರ ಊಹೆ.

4. ನಿಜಾಂ ಎಂಬ ವಜ್ರವೂ ಗೋಲ್ಕೊಂಡ ಗಣಿಗಳಲ್ಲಿ ಸಿಕ್ಕಿದ್ದು. ಇದರ ಈಗಿನ ತೂಕ 277 ಕ್ಯಾರಟ್. ಇದು ಇನ್ನೂ ಹೆಚ್ಚಿತ್ತೆಂದು ಕೆಲವರ ಅಭಿಪ್ರಾಯ. ಈಗ ಈ ವಜ್ರ ಹೈದರಾಬಾದಿನ ನಿಜಾಂ ವಂಶದವರ ವಶದಲ್ಲಿದೆ. ಇದು ಇನ್ನೂ ದೊಡ್ಡದಾಗಿತ್ತೆಂದೂ 1857ರ ಬಂಡಾಯದ ಕಾಲದಲ್ಲಿ ಇದು ಸ್ವಲ್ಪ ಮುರಿಯಿತೆಂದೂ ಹೇಳುತ್ತಾರೆ.

5. ಯೂಜಿನೀ ಒಂದು ಸಣ್ಣ ವಜ್ರವಾದರೂ ಸೊಗಸಾದ್ದು. ಇದರ ತೂಕ 51 ಕ್ಯಾರಟ್. ಈಗ ಇದು ಬರೋಡದ ಗಾಯಕವಾಡರ ವಂಶಸ್ಥರ ಬಳಿ ಇದೆ. ಇದರ ಪೂರ್ವ ವೃತ್ತಾಂತ ಸರಿಯಾಗಿ ಗೊತ್ತಿಲ್ಲ. ವಜ್ರಕರೂರ್ ಪ್ರದೇಶದಲ್ಲಿ ಇದು ಒಬ್ಬ ರೈತನಿಗೆ ಸಿಕ್ಕಿತೆಂಬುದು ಒಂದು ಕಥೆ. ತನ್ನ ನೇಗಿಲನ್ನು ಸರಿಮಾಡಿದ ಕಮ್ಮಾರನಿಗೆ ಅವನು ಇದನ್ನು ಕೊಟ್ಟ. ಆತ ಮದರಾಸಿನಲ್ಲಿ ವರ್ತಕನೊಬ್ಬನಿಗೆ 6000 ರೂಪಾಯಿಗಳಿಗೆ ಮಾರಿದ. ಆ ವರ್ತಕನಿಂದ 3ನೆಯ ನೆಪೋಲಿಯನ್ ಕೊಂಡನೆಂದು ಪ್ರತೀತಿ. ಇದು ಮೊದಲು ರಷ್ಯದಲ್ಲಿ 2ನೆಯ ಕ್ಯಾಥರೀನ್ ಬಳಿ ಇತ್ತೆಂದು ಇನ್ನೊಂದು ಕಥೆಯಿದೆ. ಆಕೆ ತನ್ನ ಆಪ್ತನಾದ ಪೊಟೆಮ್‌ಕಿನನಿಗೆ ಇದನ್ನು ಕೊಟ್ಟಳು. ಕೊನೆಗೆ 3ನೆಯ ನೆಪೋಲಿಯನ್ ಇದನ್ನು ಕೊಂಡು ತನ್ನ ರಾಣಿಯಾದ ಯೂಜಿನೀಗೆ ಅರ್ಪಿಸಿದ. ಆದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ಕೊನೆಗೆ ಬರೋಡದ ಗಾಯಕವಾಡರು ಇದನ್ನು ಕೊಂಡರು.

6. ದಿ ಹೋಪ್ ಸೊಗಸಾದ ನೀಲಿಬಣ್ಣದ ಕಮಲ. ತೂಕ 112.25 ಕ್ಯಾರಟ್ ಇತ್ತು. ಬಣ್ಣದ ವಜ್ರಗಳಲ್ಲಿ ಇದೇ ದೊಡ್ಡದು. ಇದು ಕೊಲ್ಲೂರು ಗಣಿಗಳಲ್ಲಿ ಸಿಕ್ಕಿತು. 1642ರಲ್ಲಿ ಟ್ಯಾವರ್ನಿಯರ್ ಇದನ್ನು ಕೊಂಡು, 1668ರಲ್ಲಿ 14ನೆಯ ಲೂಯಿಗೆ ಮಾರಿದ. ಸಾಣೆ ಹಿಡಿಸಿದ ಅನಂತರ ಇದರ ತೂಕ $67^1/_8$ ಕ್ಯಾರಟಿಗೆ ಇಳಿಯಿತು. 1762ರಿಂದ 1830ರ ವರೆಗೆ ಇದು ಮಾಯವಾಗಿತ್ತು. ಲಂಡನಿನ ಥಾಮಸ್ ಹೋಪ್ ಎಂಬ ಸಾಹುಕಾರ 1830ರಲ್ಲಿ ಇದನ್ನು ಏಲೇಸನ್ ಎಂಬ ವರ್ತಕನಿಂದ 2,70,000 ರೂಪಾಯಿಗಳಿಗೆ ಕೊಂಡ. ಅಂದಿನಿಂದ ಈ ವಜ್ರಕ್ಕೆ ದಿ ಹೋಪ್ ಎಂದು ಹೆಸರು ಬಂತು. ಇದರ ತೂಕ 45.52 ಕ್ಯಾರಟ್ ಇದ್ದುದರಿಂದ ಲೂಯಿಯ ಬಳಿ ಇದ್ದದ್ದು ಈ ವಜ್ರವೋ ಬೇರೆಯೋ ಎಂಬ ಸಂದೇಹ ತಲೆದೋರಿತು. ಇದೇ ಬಣ್ಣದ ಎರಡು ವಜ್ರಗಳು ಸಿಕ್ಕಿವೆ. ಇವುಗಳಲ್ಲಿ ಒಂದು ಹೋಪ್ ವಜ್ರದ ಒಡೆದ ಭಾಗಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಈ ಮೂರರ ತೂಕ 67 ಕ್ಯಾರಟ್ ಆಗುವುದರಿಂದ ಯಾರೋ ದೊಡ್ಡ ನೀಲಿವಜ್ರವನ್ನು ತುಂಡು ಮಾಡಿರಬೇಕೆಂದು ಊಹಿಸಲಾಗಿದೆ. ಇದು ಹಲವಾರು ಬಾರಿ ಮಾರಾಟವಾಗಿ, ಹೋದ ಕಡೆಯಲ್ಲೆಲ್ಲ ದುರದೃಷ್ಟಕರವೆಂಬ ಹೆಸರು ಸಂಪಾದಿಸಿದ್ದರೂ ಇದರ ಮೇಲಿನ ವ್ಯಾಮೋಹ ಮಾತ್ರ ಕಡಿಮೆಯಾಗಿಲ್ಲ. ಈಗ ಇದು ವಾಷಿಂಗ್‌ಟನ್ನಿನ ಸ್ಮಿತ್‌ಸೋನಿಯನ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿದೆ.

ಇವಲ್ಲದೆ ಇನ್ನೂ ಹಲವು ಉತ್ತಮ ವಜ್ರಗಳು ಗೋಲ್ಕೊಂಡದ ಗಣಿಗಳಲ್ಲಿ ಸಿಕ್ಕಿದ್ದು, ಅವು ರಾಜರಲ್ಲಿ ಮತ್ತು ಶ್ರೀಮಂತರಲ್ಲಿ ಸೇರಿರಬಹುದು. (ಎಂ.ಎಸ್.ಎಂ.)

**ಗೋಲ್ಡ್‌ಸ್ಟೈನ್, ಯೂಜೆನ್ :** 1850–1930. ಜರ್ಮನಿಯ ಭೌತವಿಜ್ಞಾನಿ. ಮೊದಲು ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಕೆಲಸಮಾಡಿದ. ಹಲವು ವರ್ಷಗಳ ಬಳಿಕ ಆ ಹುದ್ದೆಯನ್ನು ತೊರೆದು ತನ್ನದೇ ಆದ ಒಂದು ಸಂಶೋಧನಾಲಯವನ್ನು ಸ್ಥಾಪಿಸಿ ಅಲ್ಲಿ ಅನಿಲಗಳ ಮೂಲಕವೂ ನಿರ್ವಾತದಲ್ಲಿಯೂ ಆಗುವ ವಿದ್ಯುದ್ವಿಸರ್ಜನೆಯ ಬಗ್ಗೆ ಅಧ್ಯಯನ ನಡೆಸಿದ. ನಿರ್ವಾತ ವಿಸರ್ಜನ ನಳಿಕೆಯಲ್ಲಿ ವಿದ್ಯುತ್ತನ್ನು ವಿಸರ್ಜಿಸಿದಾಗ ಋಣಧ್ರುವದ (ಕ್ಯಾಥೋಡ್) ಬಳಿ ಸಂದೀಪ್ತಿ (ಲ್ಯೂಮಿನಿಸೆನ್ಸ್) ಉಂಟಾಗುವುದನ್ನು ಗಮನಿಸಿದ. ಈ ಪರಿಣಾಮವನ್ನು ಎರಡು ದಶಕಗಳ ಹಿಂದೆಯೇ ಪ್ಲುಕರ್ ಎಂಬ ವಿಜ್ಞಾನಿ ಗಮನಿಸಿದ್ದನಾದರೂ (**ನೋಡಿ– ಪ್ಲುಕರ್, ಜೂಲಿಯಸ್**) ಇದನ್ನು ಋಣವಿದ್ಯುತ್ ಕಿರಣವೆಂದು (ಕ್ಯಾಥೋಡ್ ರೇ) ಹೆಸರಿಸಿದಾತ ಗೋಲ್ಡ್‌ಸ್ಟೈನ್ (1876). ವಿದ್ಯುದ್ವಿಸರ್ಜನ ನಳಿಕೆಯಲ್ಲಿನ ಸರಂಧ್ರಋಣಧ್ರುವಫಲಕದ ರಂಧ್ರಗಳ ಮೂಲಕ ಋಣವಿದ್ಯುತ್ ಕಿರಣಗಳ ವಿರುದ್ಧ ದಿಶೆಯಲ್ಲಿ ಚಲಿಸುವ ಕಿರಣಗಳನ್ನು 1886ರಲ್ಲಿ ಈತ ಗಮನಿಸಿ ಇವನ್ನು ಕೆನಾಲ್‌ಸ್ಟ್ರಾಹ್ಲನ್ (ಚ್ಯಾನಲ್ ರೇಸ್ ಅಥವಾ ಕೆನಾಲ್ ರೇಸ್) ಎಂದು ಹೆಸರಿಸಿದ. ಇದೇ ಕಿರಣಗಳ ಬಗ್ಗೆ ಜೆ.ಜೆ. ಥಾಮ್ಸನ್ ಅಧ್ಯಯನ ನಡೆಸಿ ಇವುಗಳಿಗೆ ಧನವಿದ್ಯುತ್ ಕಿರಣಗಳೆಂದು (ಪಾಸಿಟಿವ್ ರೇಸ್) ಹೆಸರಿಟ್ಟ. ಈ ಕಿರಣಗಳ ಅಧ್ಯಯನದಿಂದ ರುದರ್ಫರ್ಡ್ ಪ್ರೋಟಾನಿನ ಅಸ್ತಿತ್ವವನ್ನು ಪತ್ತೆಹಚ್ಚಿದ. (ಸಿ.ಟಿ.ಎಸ್.)

**ಗೋಲ್ಡನ್ ಬೋ, ದಿ :** ಇಂಗ್ಲೆಂಡಿನ ಸುಪ್ರಸಿದ್ಧ ಮಾನವವಿಜ್ಞಾನಿ ಸರ್ ಜೇಮ್ಸ್ ಜಾರ್ಜ್ ಫ್ರೇಜರ್‌ನಿಂದ (1854–1941) ಇಪ್ಪತ್ತನೆಯ ಶತಮಾನದ ಆರಂಭದಲ್ಲಿ (1890–1915) ರಚಿತವಾದ ಹನ್ನೆರಡು ಸಂಪುಟಗಳನ್ನುಳ್ಳ ಖ್ಯಾತ ಕೃತಿ (ಫ್ರೇಜರ್ 1936ರಲ್ಲಿ ರಚಿಸಿದ ಆಫ್ಟರ್‌ಮಾತ್ ಎಂಬ ಅನುಬಂಧವೂ ಸೇರಿದರೆ ಹದಿಮೂರು ಸಂಪುಟಗಳಾಗುತ್ತವೆ). ಇದು ಮಾನವವಿಜ್ಞಾನ, ಜಾನಪದ, ಪುರಾಣ, ವಿಜ್ಞಾನ, ಧರ್ಮ

ಇವೆಲ್ಲವನ್ನೂ ಒಳಗೊಂಡಿದ್ದು ಜನಪದ ಜೀವನವನ್ನು ಅರ್ಥವಿಸುವಲ್ಲಿ, ನಂಬಿಕೆಗಳನ್ನು ವಿಶ್ಲೇಷಿಸುವಲ್ಲಿ ಆಚಾರ್ಯ ಕೃತಿ ಎಂಬ ಗೌರವಕ್ಕೆ ಪಾತ್ರವಾಗಿದ್ದು, ಫ್ರೇಜ಼ರನಿಗೆ ವಿಶೇಷವಾದ ಗೌರವ ಹಾಗೂ ಕೀರ್ತಿಯನ್ನು ತಂದುಕೊಟ್ಟಿತು. ಮುಖ್ಯವಾಗಿ ಇದರಲ್ಲಿ ಕುಲದೇವತಾಪದ್ಧತಿಗಳು ವಿಧಿನಿಷೇಧಗಳು ಮೊದಲಾದ ವಿಷಯಗಳ ಆಳವಾದ ವಿಶ್ಲೇಷಣೆಯಿದೆ. ಇಟಲಿ ದೇಶದಲ್ಲಿ ನೆಮಿ ಎಂಬ ಸರೋವರ ದಂಡೆಯ ಮೇಲಿನ ತೋಪಿನಲ್ಲಿನ ಡಯಾನ ದೇವತೆಯ ಪೂಜಾರಿಯ ಸ್ಥಾನವನ್ನು ಗಳಿಸಬೇಕೆಂದು ಬಯಸುವ ವ್ಯಕ್ತಿ ಅಧಿಕಾರದಲ್ಲಿದ್ದ ಪೂಜಾರಿಯನ್ನು ಕೊಲ್ಲಬೇಕಾಗಿತ್ತು. ಕೊಲ್ಲುವ ಮೊದಲು ಅದೇ ತೋಪಿನಲ್ಲಿನ ಮರವೊಂದರ ಮೇಲೆ ಬೆಳೆದಿದ್ದ ಬಂದಳಿಕೆಯಂಥ ಕೊಂಬೆಯನ್ನು ಕತ್ತರಿಸಬೇಕಾಗಿತ್ತು. ಈ ಕೊಂಬೆ ವರ್ಜಿಲನ ಈನಿಯಡ್ ಮಹಾಕಾವ್ಯದಲ್ಲಿ ಬರುವ ಗೋಲ್ಡನ್ ಬೋ ಅಥವಾ ಚಿನ್ನದ ಕೊಂಬೆ ಐತಿಹ್ಯವನ್ನು ನೆನಪಿಗೆ ತರುವಂತಿತ್ತು. ಫ್ರೇಜ಼ರನಿಗೆ ಈ ವಿಲಕ್ಷಣ ಸಂಪ್ರದಾಯದ ರಹಸ್ಯವನ್ನು ಭೇದಿಸುವ ಕುತೂಹಲವುಂಟಾಯಿತು. ಈ ಉದ್ದೇಶದಿಂದ ಈತ ನಡೆಸಿದ ಹದಿನೈದು ವರ್ಷಗಳ ಸಂಶೋಧನೆಯ ಫಲವೇ ಈ ಮಹತ್ಕೃತಿ. ಈ ಕೃತಿಗೆ ಗೋಲ್ಡನ್ ಬೋ ಎಂಬ ಹೆಸರು ಬರಲು ಇದೇ ಕಾರಣ. ಮೊದಲು ಈ ಸಂಬಂಧವಾಗಿ ಒಂದು ಚಿಕ್ಕ ಪ್ರಬಂಧ ಬರೆಯಬೇಕೆಂಬ ಉದ್ದೇಶ ಹೊಂದಿದ್ದ ಫ್ರೇಜ಼ರ್ ಈ ವಿಷಯಕ್ಕೆ ಪೋಷಕವಾಗಿ ಬರುವ ಧರ್ಮ, ಮಾಟ, ಬಲಿ, ರಾಜತ್ವದ ಉಗಮ, ನಿಷಿದ್ಧಗಳು, ಬೆಂಕಿಯ ಹಬ್ಬಗಳು, ಫಲಶಕ್ತಿವಿಧಿಗಳು ಮತ್ತು ಆ ಸಂಬಂಧವಾದ ದೇವತೆಯ ವಿಷಯ–ಈ ಮೊದಲಾದ ಸಂಗತಿಗಳನ್ನು ಪ್ರಪಂಚದ ವಿವಿಧ ಭಾಗಗಳಿಂದ ಆರಿಸಿದ ಹೇರಳವಾದ ಉದಾಹರಣೆಗಳ ಸಮೇತ ನೋಡಬೇಕಾಗಿ ಬಂತು. ಹೀಗಾಗಿ ಒಂದು ಸಣ್ಣ ಪ್ರಬಂಧವಾಗಬೇಕಾಗಿದ್ದ ಕೃತಿ ಹದಿಮೂರು ಸಂಪುಟಗಳ ವಿಸ್ತಾರವಾದ, ವಿದ್ವತ್ಪೂರ್ಣ ಕೃತಿಯಾಗಿ ಪರಿಣಮಿಸಿತು.

ಇಂದು ಮಾನವವಿಜ್ಞಾನ, ಜಾನಪದ, ಪುರಾಣವಿಜ್ಞಾನ, ಧರ್ಮ–ಈ ಕ್ಷೇತ್ರಗಳಲ್ಲಿ ಹೆಚ್ಚು ವೈಜ್ಞಾನಿಕವಾದ ಸಂಶೋಧನೆ ನಡೆದಿದೆ. ಫ್ರೇಜ಼ರ್ ಪ್ರತಿಪಾದಿಸಿದ ಒಂದೊಂದು ವಿಷಯವೇ ಇಂದು ಒಂದೊಂದು ಸಂಶೋಧನೆಗಳ ಕ್ಷೇತ್ರವಾಗಿ ಪರಿಣಮಿಸಿದೆ. ಈ ಕ್ಷೇತ್ರಗಳಲ್ಲಿನ ಇಂದಿನ ವಿದ್ವಾಂಸರು ಫ್ರೇಜ಼ರನ ಕ್ರಮವನ್ನಾಗಲೀ ಸಿದ್ಧಾಂತಗಳನ್ನಾಗಲೀ ಒಪ್ಪುವುದಿಲ್ಲ. ಇವನದು ಹಳೆಯ ಕ್ರಮ ಎಂದೂ ಅವರಿಗೆ ಅನಿಸಬಹುದು. ಆದರೆ ಇಂದಿನ ಈ ಸಂಬಂಧವಾದ ಸಂಶೋಧನೆಗಳಿಗೆ ಭದ್ರವಾದ ಬುನಾದಿ ಹಾಕಿದ ಕೀರ್ತಿ ಫ್ರೇಜ಼ರನಿಗೆ ಸಲ್ಲುತ್ತದೆ. ಗೋಲ್ಡನ್ ಬೋ ಕೃತಿಗೆ ಐತಿಹಾಸಿಕ ಮೌಲ್ಯ ಉಂಟು ಎಂಬುದನ್ನು ಮರೆಯಬಾರದು. ಜನಪದ ಸಂಪ್ರದಾಯಗಳ ಮತ್ತು ನಂಬಿಕೆಗಳ ವಿಶ್ವಕೋಶ ಎಂಬ ದೃಷ್ಟಿಯಿಂದಲೂ ಈ ಕೃತಿಗೆ ಮಹತ್ತ್ವದ ಸ್ಥಾನವಿದೆ. ಮಾನವನ ಜ್ಞಾನದ ಪರಿಧಿಯನ್ನು ವಿಸ್ತರಿಸಿದ, ಅಜ್ಞಾತವಾಗಿದ್ದ ಜ್ಞಾನಕ್ಷೇತ್ರಗಳ ಮೇಲೆ ಬೆಳಕು ಚೆಲ್ಲಿ ಜನತೆಯ ಕಣ್ಣು ತೆರೆಯಿಸಿದ ಹಾಗೂ ಒಂದು ವಿಶಿಷ್ಟ ಸಾಂಸ್ಕೃತಿಕ ಪ್ರಪಂಚದ ಪರಿಚಯ ಮಾಡಿಕೊಟ್ಟ ಉತ್ಕೃಷ್ಟ ಕೃತಿ ಎಂಬ ಕಾರಣದಿಂದಲಂತೂ ಗೋಲ್ಡನ್ ಬೋಗೆ ಶಾಶ್ವತ ಮೌಲ್ಯವಿದೆ ಎಂದು ಹೇಳಬಹುದು. ಮಾನವಶಾಸ್ತ್ರ ಮತ್ತು ಜಾನಪದಗಳ ಮೇಲೆ ತನ್ನ ಪ್ರಭಾವವನ್ನು ಉಜ್ವಲವಾಗಿ ಬೀರಿದ ಈ ಕೃತಿ ಸಾಹಿತ್ಯಲೋಕದಲ್ಲಿ ಕಿಪ್ಲಿಂಗ್, ಟೆನಿಸನ್, ಎಲಿಯಟ್, ಎಜ್ರಾಪೌಂಡ್, ಲಾರೆನ್ಸ್ ಮೊದಲಾದ ಕವಿಗಳನ್ನು ತನ್ನತ್ತ ಆಕರ್ಷಿಸಿ ಅವರ ಕಾವ್ಯಸಂಪ್ರದಾಯಗಳ ಮೇಲೂ ತನ್ನ ಪ್ರಭಾವವನ್ನು ಹೊಮ್ಮಿಸಿದೆ.

ಗೋಲ್ಡನ್ ಬೋ ಬೃಹತ್ಕೃತಿಯನ್ನು ಇನ್ನಷ್ಟು ಜನಪ್ರಿಯವೂ ಬಾಲಪ್ರಿಯವೂ ಆಗುವಂತೆ ಮಾಡಿದ ಕೀರ್ತಿ ಫ್ರೇಜ಼ರನ ಹೆಂಡತಿಗೆ ಸೇರುತ್ತದೆ. ಮೂಲ ಗ್ರಂಥದಿಂದ ಸೊಗಸಾಗಿರುವ ಭಾಗಗಳನ್ನು ಆಯ್ದು ಬಹುಮಟ್ಟಿಗೆ ಮೂಲದ ಮಾತುಗಳನ್ನೇ ಉಳಿಸಿಕೊಂಡು ಸಂಗ್ರಹಿಸಿ ಲೀವ್ಸ್ ಫ್ರಮ್ ದಿ ಗೋಲ್ಡನ್ ಬೋ ಎಂಬ ಹೆಸರಿನಲ್ಲಿ ಈಕೆ ಒಂದು ಪುಸ್ತಕವನ್ನು ಪ್ರಕಟಿಸಿದ್ದಾಳೆ. ಅದರ ಮುನ್ನುಡಿಯಲ್ಲಿ ಈಕೆ ತನ್ನ ಉದ್ದೇಶ ಉಪದೇಶವಲ್ಲ, ರಂಜನೆಯನ್ನೊದಗಿಸುವುದು–ಎಂದು ಹೇಳಿಕೊಂಡಿದ್ದಾಳೆ.

ಗೋಲ್ಡನ್ ಬೋ ಗ್ರಂಥದ ಪರಿಷ್ಕರಣಕಾರ್ಯವೂ ನಡೆದಿದೆ. ತಿಯೋಡರ್ ಎಚ್. ಗ್ಯಾಸ್ಟರ್ ಎಂಬಾತ ದಿ ನ್ಯೂ ಗೋಲ್ಡನ್ ಬೋ (1959) ಎಂಬ ಪರಿಷ್ಕೃತ ಮುದ್ರಣವನ್ನು ಪ್ರಚುರಪಡಿಸಿದ್ದಾನೆ. ಇಲ್ಲಿ ಹೊಸ ಸಂಶೋಧನೆಯ ಹಿನ್ನೆಲೆಯಲ್ಲಿ ತೀರ ಹಳತು ಎಂದು ತೋರುವ ಭಾಗಗಳನ್ನು ಮೂಲ ಉದ್ದೇಶಕ್ಕೆ ಭಂಗ ತಾರದಂತೆ ಕಿತ್ತು ಹಾಕಲಾಗಿದೆ. ಜೊತೆಗೆ ಸಂಪಾದಕ ಫ್ರೇಜ಼ರನ ಒಂದೊಂದು ಅಭಿಪ್ರಾಯವನ್ನೂ ಹೊಸ ದೃಷ್ಟಿಯಿಂದ ಪರೀಕ್ಷಿಸಿ ಉಪಯುಕ್ತ ಟಿಪ್ಪಣಿಗಳನ್ನು ಬರೆಯಲಾಗಿದೆ.

ಜಾನ್ ಕ್ಯಾನಿಂಗ್ ಎಂಬಾತ ಸಂಪಾದಿಸಿದ (1966) ಹಂಡ್ರಡ್ ಗ್ರೇಟ್ ಬುಕ್ಸ್ ಎಂಬ ಸಂಕಲನದಲ್ಲಿ ಗೋಲ್ಡನ್ ಬೋ ಸೇರಿರುವುದು ಗಮನಾರ್ಹ ಸಂಗತಿ. (ಟಿ.ಎನ್.ಎಸ್.ಎನ್.)

**ಗೋಲ್ಡಿಂಗ್, ಲೂಯಿಸ್ :** 1895–1958. ಇಂಗ್ಲಿಷ್ ಕಾದಂಬರಿಕಾರ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಅಲ್ಲಿನ ಕ್ವೀನ್ಸ್ ಕಾಲೇಜು ಮಿಸಲೆನಿ ಎಂಬ ಪತ್ರಿಕೆಯ ಸಂಪಾದಕನೂ ಆಕ್ಸ್‌ಫರ್ಡ್ ಬುಕ್ಸ್ ಆಫ್ ವರ್ಸ್ ಎಂಬ ಕವಿತಾ ಸಂಕಲನ ಮಾಲೆಯ ಸಂಪಾದಕರುಗಳಲ್ಲೊಬ್ಬನೂ ಆದ. ವಿದ್ಯಾರ್ಥಿಯಾಗಿದ್ದಾಗಲೇ ಈತನ ಮೊದಲ ಎರಡು ಕವನಸಂಗ್ರಹಗಳು ಪ್ರಕಟವಾದವು. ಆದರೆ ನಿಜಕ್ಕೂ ಇವನ ಮೊದಲ ಕೃತಿ ಒಂದು ಕಾದಂಬರಿಯಾಗಿತ್ತಂತೆ; ತುಂಬ ಎಳೆಯ ವಯಸ್ಸಿನಲ್ಲಿಯೇ ಈತ ಬರೆದ ಈ ಕಾದಂಬರಿಯನ್ನು ಪ್ರಕಟಿಸಲೊಪ್ಪುವ ಪ್ರಕಾಶಕರೇ ದೊರೆಯಲಿಲ್ಲವಾಗಿ ಈತ ಬರೆಯುವ ಹವ್ಯಾಸವನ್ನೇ ಕೈಬಿಡಬೇಕೆಂದು ಯೋಚಿಸಿದ್ದನಂತೆ.

ಆಕ್ಸ್‌ಫರ್ಡಿನಿಂದ ಹೊರಬಂದ ಮೇಲೆ ಗೋಲ್ಡಿಂಗ್ ಒಂದನೆಯ ಮಹಾಯುದ್ಧದಲ್ಲಿ ಸೈನಿಕನಾಗಿ ಸೇರಿದ. ಯುದ್ಧಾನಂತರ ಹಲವಾರು ದೇಶಗಳಲ್ಲಿ ಪ್ರವಾಸ ಮಾಡಿದ. ತನ್ನ ಪ್ರವಾಸಾನುಭವಗಳನ್ನು ಕುರಿತು ಬರೆದ. ಇಪ್ಪತ್ತನೆಯ ಶತಮಾನದ ಪ್ರವಾಸ ಸಾಹಿತ್ಯ ನಿರ್ಮಾಪಕರಲ್ಲಿ ಅತ್ಯಂತ ಅನುಭವಿಗಳೆಂದೂ ತುಂಬ ಸ್ವಾರಸ್ಯವಾಗಿ ಬರೆಯುವವರೆಂದೂ ಖ್ಯಾತಿವೆತ್ತವರಲ್ಲಿ ಈತನೂ ಒಬ್ಬ.

ಯಹೂದ್ಯರ ಹಿತಕ್ಕಾಗಿ ಅತ್ಯುತ್ಸುಕನಾಗಿ ಹೋರಾಡುತ್ತಿದ್ದು ಅವರ ಸಮಸ್ಯೆಯನ್ನು ದಿ ಜ್ಯೂಯಿಷ್ ಪ್ರಾಬ್ಲೆಮ್ ಎಂಬ ಪುಸ್ತಕದಲ್ಲಿ ಈತ ಹೃದಯಂಗಮವಾಗಿ ನಿರೂಪಿಸಿದ್ದಾನೆ. ಪ್ರಪಂಚದ ಹಲವಾರು ದೇಶಗಳಲ್ಲಿ ಈ ಪುಸ್ತಕಕ್ಕೆ ಪ್ರಶಂಸೆ ದೊರೆತಿದೆ.

ಕಾದಂಬರಿಗಳು, ಸಣ್ಣಕಥೆಗಳು, ಕವಿತೆಗಳು, ಪದ್ಯನಾಟಕಗಳು, ಪ್ರವಾಸ ಸಾಹಿತ್ಯ, ವಿಚಾರಸಾಹಿತ್ಯ, ವಿಮರ್ಶೆ–ಹೀಗೆ ವಿವಿಧ ಬಗೆಯ ಸಾಹಿತ್ಯವನ್ನು ಗೋಲ್ಡಿಂಗ್ ನಿರ್ಮಾಣ ಮಾಡಿದ್ದಾನೆ. ರಂಗಭೂಮಿ, ರಜತಪರದೆ ಮತ್ತು ಬಾನುಲಿಗಳಿಗಾಗಿ ಬರೆಯುತ್ತಿದ್ದವರಲ್ಲಿ ಈತ ಬಹಳ ಯಶಸ್ವಿಯೆನ್ನಿಸಿಕೊಂಡ.

1932ರ ಮೊದಲೇ ಸುಮಾರು ಮೂವತ್ತು ಕಾದಂಬರಿಗಳನ್ನು ಈತ ಪ್ರಕಟಿಸಿಯಾಗಿತ್ತಾದರೂ ಇವನಿಗೆ ಮೊದಲಾಗಿ ಖ್ಯಾತಿಯನ್ನು ತಂದುದು 1932ರಲ್ಲಿ ಬೆಳಕುಕಂಡ ಮೆಗ್ನೋಲಿಯ ಸ್ಟ್ರೀಟ್ ಎಂಬ ಕಾದಂಬರಿ. ಒಂದು ಬೀದಿಯಲ್ಲಿ ಯಹೂದ್ಯ ನಿವಾಸಿಗಳಿರುವ, ಮತ್ತೊಂದು ಬೀದಿಯಲ್ಲಿ ಯಹೂದ್ಯೇತರ ನಿವಾಸಿಗಳಿರುವ ವಠಾರವೊಂದರ ಕಥೆಯಿದು. ಇವನ ಹಲವು ಕಾದಂಬರಿಗಳಲ್ಲಿ ಬರುವ ಡೂಮಿಂಗ್‌ಟನ್ ಎಂಬ ಪಾತ್ರ ಲೇಖಕನನ್ನೇ ಪ್ರತಿನಿಧಿಸುವುದೆಂದು ಓದುಗರ ಅಭಿಪ್ರಾಯ.

ಇವನ ಕೆಲವು ಕಾದಂಬರಿಗಳು ಇವು: ಫಾರ್ವರ್ಡ್ ಫ್ರಮ್ ಬ್ಯಾಬಿಲಾನ್ (1920), ಸೀ ಕೋಸ್ಟ್ ಆಫ್ ಬೊಹಿಮಿಯ (1923), ಡೇ ಆಫ್ ಅಟೋನ್‌ಮೆಂಟ್ (1925), ದಿ ಮಿರಕಲ್ ಬಾಯ್ (1927), ಸ್ಟೋರ್ ಆಫ್ ಲೇಡೀಸ್ (1927), ಗಿವ್ ಅಪ್ ಯುವರ್ ಲವರ್ಸ್ (1930), ಫೈವ್ ಸಿಲ್ವರ್ ಡಾಟರ್ಸ್ (1934), ಹನಿ ಫಾರ್ ದಿ ಘೋಸ್ಟ್ (1949), ದಿ ಡೇಂಜರಸ್ ಪ್ಲೇಸಸ್ (1951), ದಿ ಲವಿಂಗ್ ಬ್ರದರ್ಸ್ (1952).

ಇವನ ಕವನ ಸಂಕಲನಗಳು : ದಿ ಸಾರೋ ಆಫ್ ವಾರ್ (1919), ಷಪರ್ಡ್ಸ್ ಸಿಂಗಿಂಗ್ (1921), ಪ್ರಾಫೆಟ್–ಅಂಡ್ ಫೂಲ್ (1923).

ಇವನ ಪ್ರವಾಸ ಸಾಹಿತ್ಯ : ಸನ್‌ವರ್ಡ್ (1924), ಸಿಸಿಲಿಯನ್ ನೂನ್ (1925), ದೋಸ್ ಏನ್ಷಿಯಂಟ್ ಲ್ಯಾಂಡ್ಸ್ (1928), ಅಡ್ವೆಂಚರ್ಸ್ ಇನ್ ಲಿವಿಂಗ್ ಡೇಂಜರಸ್ಲಿ (1930).

ಇವನ ಇತರ ಕೆಲವು ಕೃತಿಗಳು : ಜೇಮ್ಸ್ ಜಾಯ್ಸ್ (1933), ದಿ ಬೇರ್‌ನಕಲ್ ಬ್ರೀಡ್ (1952). (ಪಿ.ಎನ್.ಆರ್.)

**ಗೋಲ್ಡಿಂಗ್, ವಿಲಿಯಮ್ :** 1911–93. ನೊಬೆಲ್ ಪ್ರಶಸ್ತಿ ಪುರಸ್ಕೃತ ಇಂಗ್ಲಿಷ್ ಕಾದಂಬರಿಕಾರ. ತಂದೆ ವಿಚಾರವಾದಿ; ತಾಯಿ ಮಹಿಳೆಯರ ಹಕ್ಕುಬಾಧ್ಯತೆಗಳಿಗಾಗಿ ಹೋರಾಟ ನಡೆಸಿದಾಕೆ. ಈತ 1911ರ ಸೆಪ್ಟೆಂಬರ್ 19ರಂದು ಜನಿಸಿದ. ಆಕ್ಸ್‌ಫರ್ಡಿನಲ್ಲಿ ವಿಜ್ಞಾನ ವಿಭಾಗದಲ್ಲಿ ಕಲಿಯುತ್ತಿದ್ದ ಈತ ಅದನ್ನು ತೊರೆದು ಸಾಹಿತ್ಯದ ಅಧ್ಯಯನಕ್ಕೆ ತೊಡಗಿದ. ಅನಂತರ ಶಾಲಾ ಉಪಾಧ್ಯಾಯನಾಗಿ ದುಡಿದ. ಎರಡನೆಯ ಮಹಾಯುದ್ಧದಲ್ಲಿ ಪಾಲ್ಗೊಂಡ.

ಎರಡನೆಯ ಮಹಾಯುದ್ಧ ಈತನಲ್ಲಿ ಲೋಕಸ್ವಭಾವದ ಅರಿವು ಮೂಡಿಸಿತು. ಒಂದು ದಿನ ಮಕ್ಕಳು ದೇವರೆಂಬುದು ನಿಜವೆ, ನಿಜಕ್ಕೂ ಅವರ ವರ್ತನೆ ಹೇಗೆ ಎಂಬ ಚಿಂತನೆಗೆ ತೊಡಗಿದ. ಇದರ ಫಲವಾಗಿ ಬಂದದ್ದು ನೊಬೆಲ್ ಪ್ರಶಸ್ತಿ ಪುರಸ್ಕೃತ ಕಾದಂಬರಿ ಲಾರ್ಡ್ ಆಫ್ ದಿ ಫ್ಲೈಸ್ (1954). ಇದು ಸಾಹಿತ್ಯ ವಿಮರ್ಶಕರ ಗಮನ ಸೆಳೆದಿರುವ ಆಧುನಿಕ ಮಹಾಕೃತಿ. ಇಲ್ಲಿಯದು ತಲ್ಲೀನಗೊಳಿಸುವ ಬೋಧಪ್ರದ ಕತೆ. ಒಳ್ಳೆಯ ಸುಧಾರಿತ ಮಕ್ಕಳ ಮುಗ್ಧತೆ, ಬೆಂಕಿಮಾಡುವಿಕೆ, ಬೇಟೆ, ಬುಡಕಟ್ಟು ನೃತ್ಯ, ಭೀತಿ, ಕೋಪ, ಕಾಮ – ಇಂಥ ಸಂಕೀರ್ಣ ಚಿತ್ರಣದ ಮೂಲಕ ಮಾನವೇತಿಹಾಸದ ಬೃಹತ್ ಪರಿಚ್ಛೇದವನ್ನೇ ಈತ ರೂಪಿಸಿದಹಾಗಿದೆ ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ನಿರ್ಜನ ದ್ವೀಪವೊಂದರಲ್ಲಿ ಸಿಕ್ಕಿಬಿದ್ದ ಹುಡುಗರ ಕ್ರೂರ ಹಾಗೂ ವಿನಾಶಕಾರೀ ಪ್ರವೃತ್ತಿಯ ಇಲ್ಲಿನ ನಿರೂಪಣೆಯಲ್ಲಿ ಹುಡುಗರು ಕೇವಲ ಪ್ರತೀಕವಾಗಿದ್ದಾರೆ. ಮಾನವ ಪತನದ ಚಿತ್ರಣ ಇಲ್ಲಿದೆ.

ದಿ ಇನ್‌ಹೆರಿಟರ್ಸ್ (1955) ಐವತ್ತು ಸಾವಿರ ವರ್ಷಗಳಿಗೂ ಹಿಂದೆ ಬದುಕಿದ್ದ ನಿಯಾಂಡರ್ತಾಲ್ ಮಾನವನ ಬದುಕು ಹಾಗೂ ನಿರ್ನಾಮದ ಕತೆ. ಪಿಂಚರ್ ಮಾರ್ಟಿನ್ (1956) ಮಾನವನ ಬದುಕಿನ ಅನಂತರದ ಸ್ಥಿತಿ ಕುರಿತದ್ದು. ದಿ ಸ್ಪೈರ್ (1964) ಮಧ್ಯಯುಗದ ಪೂಜಾರಿಯೊಬ್ಬನ ಹುಚ್ಚು ಕನಸನ್ನು ಕುರಿತದ್ದು. ರೈಟ್ಸ್ ಆಫ್ ಪ್ಯಾಸೇಜ್ (1980) ಸಲಿಂಗರತಿ ಕುರಿತದ್ದು. ದಿ ಪೇಪರ್‌ಮೆನ್ (1984) ವಿಮರ್ಶಕರನ್ನೂ ಪತ್ರಕರ್ತರನ್ನೂ ತರಾಟೆಗೆ ತೆಗೆದು ಕೊಳ್ಳುವಂಥದ್ದು. ಈ ಕಾದಂಬರಿಗಳು ಮಾನವ ಸ್ವಭಾವದ ವಿವಿಧ ಮುಖಗಳ ವಿಶ್ಲೇಷಣೆ ಮಾಡುತ್ತವೆ. ಈತನ ಎಲ್ಲ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಬರುವ ಸಮುದ್ರ ಚಿತ್ರಣ ಈತನ ಸಮುದ್ರ ಪ್ರೀತಿಗೆ ಸಂಕೇತವಾಗಿದೆ. ಈತ ನಾವಿಕನೂ ಆಗಿದ್ದ. ಮಾನವನ ಸುಪ್ತ ಮನಸ್ಸಿನ ಸಂಕೇತವಾಗಿ ಸಮುದ್ರ ಈತನ ಕೃತಿಗಳಲ್ಲಿ ಮಹತ್ತ್ವದ ಪಾತ್ರ ವಹಿಸಿದೆ.



ಈತ ಕವನಗಳನ್ನೂ ಬರೆದಿದ್ದಾನೆ. ದಿ ಬ್ರಾಸ್ ಬಟರ್‌ಫ್ಲೈ ಎಂಬ ನಾಟಕವನ್ನೂ ದಿ ಹಾಟ್ ಗೇಟ್ಸ್ ಎಂಬ ಪ್ರಬಂಧ ಸಂಕಲನವನ್ನೂ ಹೊರತಂದಿದ್ದಾನೆ. ರೈಟ್ಸ್ ಆಫ್ ಪ್ಯಾಸೇಜ್ ಪುಸ್ತಕಕ್ಕೆ ಬೂಕರ್ ಬಹುಮಾನ ದೊರೆತಿದೆ. ಲಾರ್ಡ್ ಆಫ್ ದಿ ಫ್ಲೈಸ್ ಕೃತಿಗೆ ನೊಬೆಲ್ ಪ್ರಶಸ್ತಿ ಸಂದಿದೆ (1983). ಈತ 1993ರ ಜೂನ್ 19ರಂದು ನಿಧನನಾದ.

(ಬಿ.ಎಸ್.ಪಿ.ಎಚ್.)

**ಗೋಲ್ಡ್‌ರಿಂಗ್, ಡಗ್ಲಸ್ :** 1887–1960. ಇಂಗ್ಲಿಷ್ ಕಾದಂಬರಿಕಾರ ಮತ್ತು ಪ್ರಬಂಧಕಾರ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮುಗಿದ ಬಳಿಕ 1907ರಲ್ಲಿ ಕಂಟ್ರಿ ಲೈಫ್ ಎಂಬ ಪತ್ರಿಕೆಯ ಸಂಪಾದಕಮಂಡಲಿಯನ್ನು ಸೇರಿದ. ಮಾರನೆಯ ವರ್ಷ, ಆಗ ತಾನೇ ಸ್ಥಾಪಿತವಾಗಿದ್ದ ಇಂಗ್ಲಿಷ್ ರಿವ್ಯೂ ಎಂಬ ಪತ್ರಿಕೆಯ ಉಪಸಂಪಾದಕನಾದ. ಅಲ್ಲಿ ಸಾಹಿತಿ ಫೋರ್ಡ್ ಮ್ಯಾಡಕ್ಸ್ ಫೋರ್ಡನ ಸ್ನೇಹಗಳಿಸಿದ. 1910ರಲ್ಲಿ ದಿ ಟ್ರ್ಯಾಂಪ್ ಎಂಬ ಸಚಿತ್ರ ಪತ್ರಿಕೆಯೊಂದನ್ನು ಸ್ಥಾಪಿಸಿ ಅದರ ಸಂಪಾದಕನಾದ. ಮುಂದೆ ಅದು ಉತ್ತಮ ಕವನಗಳನ್ನು ಬೆಳಕಿಗೆ ತರುವ ಪತ್ರಿಕೆಯೆಂದು ಪ್ರಸಿದ್ಧಿ ಪಡೆಯಿತು. 1917–20 ರವರೆಗೆ ಗೋಲ್ಡ್‌ರಿಂಗ್ ಇಂಗ್ಲೆಂಡ್ ಮತ್ತು ಐರ್ಲೆಂಡ್‌ಗಳೊಳಗಿನ ಸಂಬಂಧವನ್ನು ಸುಧಾರಿಸುವುದಕ್ಕಾಗಿ ದುಡಿದ. 1925ರಲ್ಲಿ ಗಾಟೆನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿ ನೇಮಕಗೊಂಡ. 1927ರಲ್ಲಿ ಈ ಉದ್ಯೋಗವನ್ನು ತೊರೆದು ಅಮೆರಿಕ ಪ್ರವಾಸ ಕೈಗೊಂಡ. ಅಲ್ಲಿಂದ ಯುರೋಪಿಗೆ ಮರಳಿ ಮೂರು ವರ್ಷ ಫ್ರಾನ್ಸ್ ದೇಶದಲ್ಲಿ ವಾಸಿಸಿದ. 1930ರ ಅನಂತರ ಇಂಗ್ಲೆಂಡಿನಲ್ಲಿ ನೆಲೆಸಿದ.

ಈತ ಮ್ಯಾಡಕ್ಸ್, ಥಾಮಸ್ ಲಾರೆನ್ಸ್, ಜೇಮ್ಸ್ ಎಲ್‌ರಾಯ್ ಫ್ಲೇಕರ್ ಇವರ ಜೀವನಚರಿತ್ರೆಗಳನ್ನು ಬರೆದಿದ್ದಾನೆ.

ದಿ ಪರ್ಮನೆಂಟ್ ಅಂಕಲ್ (1912), ದಿ ಫಾರ್ಚೂನ್ (1913), ನೋಬಡಿ ನೋಸ್ (1923), ದಿ ಕಕೂ (1926), ದಿ ಫಸಾಡ್ (1927), ಮಾರ್‌ಗಾಟ್ಸ್ ಪ್ರೋಗ್ರೆಸ್ (1929)–ಇವು ಈತನ ಕೆಲವು ಕಾದಂಬರಿಗಳು.

ಆಡ್ ಮ್ಯಾನ್ ಔಟ್ (1935), ಫೇಸಿಂಗ್ ದಿ ಆಡ್ಸ್ (1939), ಸೌತ್ ಲಾಜ್ (1943)– ಇವು ಈತನ ಆತ್ಮಚರಿತ್ರೆಗಳು.

ವೇಸ್ ಆಫ್ ಎಸ್ಕೇಪ್ (1912), ಡ್ರೀಮ್ ಸಿಟೀಸ್ (1913), ಎ ಸ್ಟ್ರೇಂಜರ್ ಇನ್ ಐರ್ಲೆಂಡ್ (1919), ದಿ ಫೈಟ್ ಫಾರ್ ಫ್ರೀಡಮ್ (1920), ನಾರ್ದರ್ನ್ ಲೈಟ್ಸ್ ಆಫ್ ಸದರ್ನ್ ಷೋರ್ಸ್ (1926)–ಇವು ಈತನ ಕೆಲವು ಕೃತಿಗಳು.

(ಪಿ.ಎನ್.ಆರ್.)

**ಗೋಲ್ಡ್‌ಸ್ಟಕರ್, ಥಿಯಡೋರ್ :** 1822–72. ಸಂಸ್ಕೃತ ಹಾಗೂ ಭಾರತೀಯ ನ್ಯಾಯಶಾಸ್ತ್ರ ವಿದ್ವಾಂಸ ಮತ್ತು ಘನವೆತ್ತ ವಿಮರ್ಶಕ. ಜರ್ಮನಿಯ ಕೋನಿಷ್‌ಬರ್ಗ್ ನಗರದ ಯಹೂದಿ ಮನೆತನವೊಂದರಲ್ಲಿ ಜನಿಸಿದ ಈತ ವ್ಯಾಕರಣ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ. ಮುಂದೆ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿ, ಅದೇ ನಗರದ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರ, ಇತಿಹಾಸ, ತತ್ತ್ವಶಾಸ್ತ್ರ ಮತ್ತು ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿ 1838ರಲ್ಲಿ ಪದವೀಧರನಾದ. ಅನಂತರ ಬಾನ್ ವಿಶ್ವವಿದ್ಯಾಲಯದಲ್ಲಿ ಅರಬ್ಬಿ, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಷಯಗಳನ್ನು ತೆಗೆದುಕೊಂಡು ಎ.ಡಬ್ಲ್ಯು. ಫಾನ್ ಶ್ಲೆಗಲ್ ಮತ್ತು ಲ್ಯಾಸೆನ್‌ರವರಂಥ ಪ್ರಸಿದ್ಧ ವಿದ್ವಾಂಸರುಗಳ ಮಾರ್ಗದರ್ಶನದಲ್ಲಿ ಕೇವಲ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಡಾಕ್ಟರೇಟ್ ಪದವಿಯನ್ನು (1840) ಪಡೆದ. 1842ರಿಂದ ಮೂರು ವರ್ಷಗಳ ಕಾಲ ಪ್ಯಾರಿಸಿನ ಪ್ರಸಿದ್ಧ ಸಂಸ್ಕೃತಜ್ಞ ಯೂಜಿನ್ ಬರ್ನೌಫ್‌ನಲ್ಲಿ ಸಂಸ್ಕೃತ ವ್ಯಾಕರಣ, ವೇದಾಂತ, ವೈದಿಕ ಸಾಹಿತ್ಯ ಮುಂತಾದ ವಿಷಯಗಳನ್ನು ಅಭ್ಯಸಿಸಿ ಪಾಂಡಿತ್ಯ ಸಂಪಾದಿಸಿದ. ಬರ್ನೌಫ್ ಸಂಪಾದಿಸುತ್ತಿದ್ದ ಬುದ್ಧಿಸಮ್ ಇನ್ ನೇಪಾಳ್ ಎಂಬ ಗ್ರಂಥಸಂಪಾದನೆಗೆ ಈತ ನೆರವಾದ.

ಈತ ತನ್ನ ಇಪ್ಪತ್ತನೆಯ ವಯಸ್ಸಿನಲ್ಲೇ ಪ್ರಬೋಧಚಂದ್ರೋದಯ (1841) ಎಂಬ ದರ್ಶನ ಪ್ರಧಾನ ಸಂಸ್ಕೃತ ನಾಟಕವನ್ನು ಭಾಷಾಂತರಿಸಿದ. ಪ್ಯಾರಿಸಿನಲ್ಲಿದ್ದಾಗಲೇ ಮಹಾಭಾರತದ ವಿಮರ್ಶಾತ್ಮಕ ಮುದ್ರಣವೊಂದನ್ನು ಸಿದ್ಧಪಡಿಸಿದ (1842–45). ತನ್ನ ತಾಯ್ನಾಡಿನಲ್ಲಿ ಅಲೆಗ್ಸಾಂಡರ್ ಫಾನ್ ಹಂಬಾಲ್ಟ್ ಮುಂತಾದ ವಿದ್ವಾಂಸರ ಮೆಚ್ಚುಗೆಗೆ ಪಾತ್ರನಾದ. ಈತ ಯಹೂದಿಯಾದುದರಿಂದ ಆಗಿನ ಪ್ರಷ್ಯ ಸರ್ಕಾರದ ವರ್ಣವಿದ್ವೇಷ ನೀತಿಯಿಂದಾಗಿ 1850ರಲ್ಲಿ ತಾಯ್ನಾಡು ಬಿಟ್ಟು ಹೊರಡಬೇಕಾಯಿತು.

ಆ ವೇಳೆಗೆ ಎಚ್.ಎಚ್. ವಿಲ್ಸನ್ ತಾನು ಪುನರ್ಮುದ್ರಣಕ್ಕೆ ಅನುಗೊಳಿಸುತ್ತಿದ್ದ ಸಂಸ್ಕೃತ–ಇಂಗ್ಲಿಷ್ ನಿಘಂಟನ್ನು ಸಿದ್ಧಪಡಿಸಲು ಈತನನ್ನು ಲಂಡನಿಗೆ ಆಹ್ವಾನಿಸಿದ. ಅಲ್ಲಿಂದ ಮುಂದೆ ಲಂಡನ್ ನಗರವೇ ಈತನ ಕಾರ್ಯಕ್ಷೇತ್ರವಾಯಿತು. 1852–72 ರವರೆಗೆ ಲಂಡನ್ ವಿಶ್ವವಿದ್ಯಾಲಯದಲ್ಲಿ ಗೌರವ ಸಂಸ್ಕೃತ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ. 1861ರಲ್ಲಿ ಮಾನವಕಲ್ಪ ಸೂತ್ರವನ್ನು ಸಂಪಾದಿಸಿ ಅದರ ಮುನ್ನುಡಿಯಲ್ಲಿ ಪಾಣಿನಿ ಮತ್ತು ಸಂಸ್ಕೃತದಲ್ಲಿ ಅವನ ಸ್ಥಾನ ಎಂಬ ವಿದ್ವಲ್ಲೇಖನವೊಂದನ್ನು ಬರೆದ. ಇದೇ ಸಮಯದಲ್ಲಿ ಇನ್‌ಸ್ಪೈರ್ಡ್ ರೈಟಿಂಗ್ಸ್ ಆಫ್ ಹಿಂದೂಯಿಸಮ್ ಅಂಡ್ ಹಿಂದೂ ಎಪಿಕ್ ಪೊಯೆಟ್ರಿ–ದಿ ಮಹಾಭಾರತ–ಎಂಬ ಗ್ರಂಥವನ್ನು ಪ್ರಕಾಶಪಡಿಸಿದ. 1865ರಲ್ಲಿ ಮಾಧವಾಚಾರ್ಯರ ಜೈಮಿನೀಯ ನ್ಯಾಯಮಾಲಾವಿಸ್ತರ ಎಂಬ ಗ್ರಂಥದ ವಿಮರ್ಶಾತ್ಮಕ ಮುದ್ರಣವನ್ನು ಹೊರತಂದ. ಪಾಣಿನಿಯ ಅಷ್ಟಾಧ್ಯಾಯೀ, ಪಾತಂಜಲ ಮಹಾಭಾಷ್ಯ, ಕೈಯಟನ ವೃತ್ತಿ ಮತ್ತು ಭಟ್ಟೋಜಿ ದೀಕ್ಷಿತನ ಕೌಮುದೀ ಗ್ರಂಥಗಳ ಹಸ್ತಪ್ರತಿಗಳನ್ನೆಲ್ಲ ಕ್ರೋಡೀಕರಿಸಿ ಈಸ್ಟ್ ಇಂಡಿಯ ಕೌನ್ಸಿಲಿನ ಅನುಮತಿ ಪಡೆದು ಅವುಗಳ ಕಲ್ಲಚ್ಚಿನ ಪ್ರತಿಗಳನ್ನು ಸಿದ್ಧಪಡಿಸಿದ. ಅಲ್ಲದೆ ನೈಟ್ಸ್ ವಿಶ್ವಕೋಶ, ಛೇಂಬರ್ಸ್ ವಿಶ್ವಕೋಶಗಳಿಗೆ ಸಂಸ್ಕೃತ ಮತ್ತು ಭಾರತೀಯ ಸಾಹಿತ್ಯ ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆದುಕೊಟ್ಟ.

ಆಗಿನ ಕಾಲಕ್ಕೆ ಲಂಡನಿನಲ್ಲಿ ಭಾರತೀಯ ನ್ಯಾಯಶಾಸ್ತ್ರದಲ್ಲಿ ಅಧಿಕೃತ ವಿಮರ್ಶಕನೆಂಬ ಖ್ಯಾತಿ ಗಳಿಸಿದ್ದ. ಚಕ್ರವರ್ತಿಯವರ ಪ್ರೀವಿ ಕೌನ್ಸಿಲಿನಲ್ಲಿ ಭಾರತೀಯ ನ್ಯಾಯದ ವಿಷಯಗಳನ್ನು ಅರ್ಥವಿಸುವುದರಲ್ಲಿ ತಲೆದೋರುತ್ತಿದ್ದ ಕ್ಲಿಷ್ಟತೆಗಳ ಪರಿಹಾರಕ್ಕೆ ಈತನ ಕೊಡುಗೆ ಮೆಚ್ಚುವಂತಹುದು. ಈತ ಭಾಷಾಶಾಸ್ತ್ರ ಸಂಘ, ರಾಯಲ್ ಏಷ್ಯಾಟಿಕ್ ಸೊಸೈಟಿಗಳಂಥ ವಿದ್ವತ್ ಸಂಘಗಳಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿದ್ದ. ಲಂಡನಿನಲ್ಲಿ ಈತನ ಮನೆ ಭಾರತೀಯ ಸಂಸ್ಕೃತಜ್ಞರಿಗೆ ಒಂದು ಯಾತ್ರಾಸ್ಥಳವಾಗಿತ್ತು.

(ಸಿ.ಜಿ.ಪಿ.)

**ಗೋಲ್ಡ್‌ಸ್ಮಿತ್, ಆಲಿವರ್ :** 1728–74. ಆಂಗ್ಲಕವಿ, ನಾಟಕಕಾರ, ಪ್ರಬಂಧಕಾರ, ಕಾದಂಬರಿಕಾರ. ಐರ್ಲೆಂಡಿನ ಲಾಂಗ್‌ಫರ್ಡಿನಲ್ಲಿ ಪ್ರಾಟೆಸ್ಟಂಟ್ ಕುಟುಂಬದಲ್ಲಿ ಜನಿಸಿದ. ತಂದೆ ಚಾರ್ಲ್ಸ್ ಗೋಲ್ಡ್‌ಸ್ಮಿತ್ ಕ್ರೈಸ್ತ ಪುರೋಹಿತ ಹಾಗೂ ಕೃಷಿಕ. ಮಕ್ಕಳಲ್ಲಿ ಆಲಿವರ್ ಐದನೆಯವ. ಈತನ ಪ್ರಾಥಮಿಕ ವಿದ್ಯಾಭ್ಯಾಸ ಎಲ್ಫಿನ್, ಅತ್ಲೋನ್ ಮತ್ತು ಎಜ್‌ವರ್ತ್‌ಟೌನುಗಳಲ್ಲಿ ನಡೆಯಿತು. ಎಂಟನೆಯ ವಯಸ್ಸಿನಲ್ಲಿ ಸಿಡುಬು ಅಂಟಿತಾಗಿ ದೇಹವೆಲ್ಲ ಕುರೂಪವಾಯಿತು. ಡಬ್ಲಿನಿನ ಟ್ರಿನಿಟಿ ಕಾಲೇಜು ಸೇರಿ ಬಡತನದಿಂದಾಗಿ ಪಡಚಾಕರಿಗಳನ್ನು ಮಾಡಿ ವ್ಯಾಸಂಗವನ್ನು ಮುಂದುವರಿಸಿದ. ವರ್ಗದಲ್ಲಿ ಕೊನೆಯವನಾಗಿ ತುಂಟತನದಲ್ಲಿ ಮೊದಲಿಗನಾಗಿ ವಿದ್ಯಾರ್ಥಿಜೀವನದ ಸದುಪಯೋಗ ಪಡೆಯಲಿಲ್ಲ. ಉಪಾಧ್ಯಾಯರೊಂದಿಗೆ ಜಗಳ ಮಾಡಿಕೊಂಡು ಕಾಲೇಜಿನಿಂದ ಪರಾರಿಯಾದ (1746). ಮತ್ತೆ ಹಿಂತಿರುಗಿ 1749ರಲ್ಲಿ ಬಿ.ಎ. ಪದವಿ ಗಳಿಸಿದ. ಅನಿವಾರ್ಯವಾಗಿ ವೃತ್ತಿಯನ್ನು ಹುಡುಕುವ ಪ್ರಸಂಗ ಬಂದಾಗ ವಿಚಿತ್ರವಾದ ಉಡುಗೆಗಳ ಹವ್ಯಾಸ, ದೆವ್ವದ ಕಥೆಗಳಲ್ಲಿ ಪ್ರಾವೀಣ್ಯ, ವೇಣುವಾದನದ ವ್ಯಾಮೋಹ ಗಳನ್ನು ಬೆಳೆಸಿಕೊಂಡಿದ್ದ ಗೋಲ್ಡ್‌ಸ್ಮಿತ್‌ನಿಗೆ ಅಪಾಯಕಾದಿತ್ತು. ಚರ್ಚು, ಶಾಲೆ, ನ್ಯಾಯಾಲಯಗಳಲ್ಲಿ ಜೀವನೋಪಾಯವನ್ನು ಕಾಣಲು ಯತ್ನಿಸಿ ವಿಫಲನಾದ. ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲು ಸೇರಿದನಾದರೂ (1752–54) ಹೆಚ್ಚಿನ ಜ್ಞಾನ ಗಳಿಸದೆ ಹಿಂತಿರುಗಿದ. ಅನಂತರ ಪ್ರವಾಸಪ್ರಿಯನಾದ ಈತ ವೇಣುವಾದನ ಕೌಶಲ ಮತ್ತು ವಾಗ್ಮಿತೆಗಳ ಸಂದಾಯದಿಂದಲೇ ಸಂಚಾರದ ವೆಚ್ಚವನ್ನು ಹೊಂದಿಸಿಕೊಳ್ಳುತ್ತ ಕಾಲ್ನಡಿಗೆಯಲ್ಲಿ



ಯುರೋಪಿನ ಬಹುಭಾಗದಲ್ಲಿ–ಅಂದರೆ ಫ್ರಾನ್ಸ್, ಜರ್ಮನಿ, ಸ್ವಿಟ್ಜರ್ಲೆಂಡ್ ಮತ್ತು ಇಟಲಿಗಳಲ್ಲಿ ಸುತ್ತಾಡಿದ. 1756ರಲ್ಲಿ ಸ್ವದೇಶಕ್ಕೆ ಹಿಂದಿರುಗಿದಾಗ ರಿಕ್ತಹಸ್ತನೂ ವೃತ್ತಿವಿಹೀನನೂ ಆದ ಇವನಿಗೆ ಮುಂದೇನು ಎನ್ನುವ ಸಮಸ್ಯೆ ಒದಗಿತು.

ಜೀವನದ ವಿವಿಧ ರಂಗಗಳಲ್ಲಿ ಸೋಲನ್ನು ಅಪ್ಪಿದ ಗೋಲ್ಡ್‌ಸ್ಮಿತ್ ಕೊನೆಗೆ ಸಾಹಿತ್ಯ ಕೃಷಿಯಿಂದ ಜೀವನ ನಡೆಸಲು ನಿರ್ಧರಿಸಿದ. ತನ್ನ ಮೂವತ್ತರ ಪ್ರಾಯದಲ್ಲಿ ಗುಡ್‌ಗೇಟ್ ಬೀದಿಯಲ್ಲಿ ಅಸ್ತವ್ಯಸ್ತ ವಾಸ್ತವ್ಯವನ್ನು ಹೊಂದಿದ್ದ ಈತ ಪತ್ರಿಕೆಗಳ ಆದೇಶದಂತೆ ಧಾರ್ಮಿಕ, ಐತಿಹಾಸಿಕ, ರಾಜಕೀಯ ಹಾಗೂ ಶಿಶುಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನೂ ಅನುವಾದಗಳನ್ನೂ ಒಂದೇ ಸಮನೆ ಬರೆಯತೊಡಗಿದ. 1757ರ ಸುಮಾರಿಗೆ ಈತನ ಲೇಖನಗಳು ಮಂತ್ಲಿರಿವ್ಯೂ ಎಂಬ ಪತ್ರಿಕೆಯಲ್ಲಿ ಪ್ರಕಟವಾಗತೊಡಗಿದವು. ಮಾರನೆಯ ವರ್ಷ ಭಾರತದಲ್ಲಿ ವೈದ್ಯವೃತ್ತಿಯೊಂದನ್ನು ಪಡೆಯಲು ಪ್ರಯತ್ನಿಸಿ ವಿಫಲನಾದ. 1759ರಲ್ಲಿ ಈತನ ಮೊದಲ ಸಾಹಿತ್ಯಕೃತಿ– ಎನ್ ಇನ್‌ಕ್ವಯರಿ ಇನ್ ಟು ದಿ ಸ್ಟೇಟ್ ಆಫ್ ಪೊಲಿಟಿಕಲ್ ಲರ್ನಿಂಗ್ ಇನ್ ಯುರೋಪ್ ಪ್ರಕಟವಾಯಿತು. ಅದೇ ವರ್ಷ ಈತನ ಪ್ರಬಂಧ ಸಂಕಲನ ದಿ ಬೀ ಎಂಬುದು ಬೆಳಕು ಕಂಡಿತು. 1761ರಲ್ಲಿ ಗೋಲ್ಡ್‌ಸ್ಮಿತ್‌ನಿಗೆ ಜಾನ್ಸನ್ನನ ಸ್ನೇಹವಾಯಿತಲ್ಲದೆ ಲಿಟರರಿ ಕ್ಲಬ್ಬಿನ ಸದಸ್ಯತ್ವವೂ ದೊರೆಯಿತು. ದಿ ಸಿಟಿಜನ್ ಆಫ್ ದಿ ವರ್ಲ್ಡ್ ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾದ ಪತ್ರಗಳ ಮಾಲೆ ದಿ ಪಬ್ಲಿಕ್ ಲೆಡ್ಜರ್ ಎಂಬ ಪತ್ರಿಕೆಯಲ್ಲಿ ಮೊದಲು ಪ್ರಕಟವಾದದ್ದು 1762ರಲ್ಲಿ. ಬಾಲ್ಯದಿಂದಲೇ ಕವಿತೆಗಳನ್ನು ಬರೆಯಲು ಯತ್ನಿಸಿದ್ದ ಗೋಲ್ಡ್‌ಸ್ಮಿತ್ ಆ ಕೆಲವು ವರ್ಷ ಪತ್ರಿಕೆಗಳಲ್ಲಿ ಕಾವ್ಯನಾಮದಿಂದ ಹಲವಾರು ಕವನಗಳನ್ನು ಪ್ರಕಟಿಸಿದ. ಈತನ ನೀಳ್ಗವನಗಳಲ್ಲಿ ಮುಖ್ಯವೆನಿಸಿರುವ ದಿ ಟ್ರ್ಯಾವಲರ್ ಎಂಬುದು ಪ್ರಸಿದ್ಧವಾದ್ದು 1764ರಲ್ಲಿ. ಕೂಡಲೆ ಜನಮನವನ್ನು ಸೆಳೆದ ಈ ಕವಿತೆ ಗೋಲ್ಡ್‌ಸ್ಮಿತನ ಜನಪ್ರಿಯತೆ ಹಾಗೂ ಯಶಸ್ಸಿಗೆ ನಾಂದಿಯಾಯಿತು. ಈ ಕವಿತೆಯ ಕಲ್ಪನೆ ಹಾಗೂ ರಚನಾಕ್ರಮ ತುಂಬ ಸರಳ ಹಾಗೂ ಉದಾತ್ತವಾಗಿದೆ. ಆಂಗ್ಲಪ್ರವಾಸಿಯೊಬ್ಬ ಆಲ್ಪ್ಸ್ ಪರ್ವತದ ಶಿಲೆಯೊಂದರ ಮೇಲೆ ಕುಳಿತು ಅದರ ತಳದಲ್ಲಿ ಕೂಡುತ್ತಿರುವ ಮೂರು ದೇಶಗಳ ಸಂಸ್ಕೃತಿಯನ್ನು ವೀಕ್ಷಿಸುತ್ತ ತನ್ನ ಪ್ರಯಾಣದ ಗುಂಟ ನೋಡಿದ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ವೈವಿಧ್ಯಗಳನ್ನು ಮೆಲುಕುಹಾಕುತ್ತ ಮಾನವನ ಸುಖ ಬಹಿಃಸ್ಥಿತವಲ್ಲ, ಅಂತಃಸ್ಥಿತ– ಎನ್ನುವ ನಿರ್ಧಾರಕ್ಕೆ ಬರುವುದನ್ನು ಚಿತ್ರಿಸುವುದು ಈ ಕಾವ್ಯದ ಮುಖ್ಯೋದ್ದೇಶ. ಇದರಲ್ಲಿ ಬರುವ ವರ್ಣನೆಗಳು ಸೊಗಸಾಗಿವೆಯಲ್ಲದೆ ಶೈಲಿ ಸರಳವಾಗಿದೆ.

ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಎನ್ನುವ ಪ್ರಸಿದ್ಧ ಕಾದಂಬರಿ 1766ರಲ್ಲಿ ಪ್ರಕಟವಾಯಿತು. ಸಂವಿಧಾನದಲ್ಲಿ ಶೈಥಿಲ್ಯವಿದ್ದು ಅಸಂಭಾವ್ಯ ಹಾಗೂ ಅಸಂಬದ್ಧ ಘಟನೆಗಳಿಂದ ಕೂಡಿದ್ದರೂ ಇದು ಪ್ರಕಟವಾದಂದಿನಿಂದ ಇಲ್ಲಿಯವರೆಗೆ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಗೋಲ್ಡ್‌ಸ್ಮಿತನ ಜೀವನದ ಹಲವಾರು ಘಟನೆ, ಅನುಭವಗಳನ್ನು ಚಿತ್ರಿಸುವ ಇದು ಒಂದು ಕೌಟುಂಬಿಕ ಕತೆ. ಹಳ್ಳಿಯ ಜೀವನದ ಮಾಧುರ್ಯ ಹಾಗೂ ರಸಮಯ ಸನ್ನಿವೇಶಗಳ ಚಿತ್ರದಿಂದ ಪರಿಪ್ಲುತವಾಗಿರುವ ಇದರ ಪೂರ್ವಾರ್ಧ ತುಂಬ ಆಕರ್ಷಣೀಯವಾಗಿದೆ. ಕನ್ನಡಕದ ವ್ಯಾಪಾರದಲ್ಲಿ ಮೋಸಗೊಂಡ ಮೋಸೆಸ್, ಏಕಪತ್ನಿತ್ವದ ಬಗೆಗೆ ವ್ಯಾಖ್ಯಾನ ಮಾಡುವ ಪ್ರಿಮ್‌ರೋಸ್, ಅರಿಸ್ಟಾಟಲನ ಸಹಾಯದಿಂದ ಸಂಬಂಧಿಕರ ನಡುವೆ ಸಂಬಂಧವಿದೆಯೆಂದು ತೋರಿಸುವ ಜಮೀನುದಾರ, ತನ್ನ ಪೋಕರಿ ಪ್ರಿಯನನ್ನು ಬದಲಾಯಿಸಲು ಹವಣಿಸುವ ಅಲಿವೀಯ, ದೊಡ್ಡಸ್ತಿಕೆಯನ್ನು ಅವಹೇಳನ ಮಾಡುವ ಮಹಿಳೆಯರು–ಇಂಥ ಪಾತ್ರಚಿತ್ರಣಗಳು ಈ ಕಾದಂಬರಿಯ ರಸದ ಮಡುವುಗಳಾಗಿವೆ. ಕೊನೆಕೊನೆಯಲ್ಲಿ ನಿಸ್ಸತ್ತ್ವವೆನಿಸಿದರೂ ಹಾಸ್ಯಮಯ ಶೈಲಿ, ಕುತೂಹಲಕಾರಿ ಘಟನೆಗಳ ಸಂಕಲನ ಹಾಗೂ ಸುಂದರವರ್ಣನೆಗಳಿಂದಾಗಿ ಈ ಕೃತಿ ಬಹು ಆಕರ್ಷಕವಾಗಿದೆ.

ದಿ ಗುಡ್ ನೇಚರ್ಡ್ ಮ್ಯಾನ್ ಎಂಬ ತನ್ನ ನಾಟಕದಲ್ಲಿ (1768) ಗೋಲ್ಡ್‌ಸ್ಮಿತ್ ಸ್ವಾಭಾವಿಕ ಹಾಸ್ಯವನ್ನು ರಂಗದ ಮೇಲೆ ತರಲು ಮಾಡಿದ ಮೊದಲ ಪ್ರಯತ್ನವನ್ನು ಕಾಣಬಹುದು. ತಾರತಮ್ಯವಿಲ್ಲದ ಅತಿ ಔದಾರ್ಯವನ್ನು ಗೇಲಿ ಮಾಡುವುದು ಈ ರೂಪಕದ ಉದ್ದೇಶ. ಅತಿಭಾವುಕತೆ ಹಾಗೂ ಅದರ ಖಂಡನೆ ಎರಡನ್ನೂ ಇದರಲ್ಲಿ ಕಾಣಬಹುದು. ಕಥಾನಾಯಕ ಹನಿವುಡ್‌ನ ಸುಸ್ವಭಾವ ಹಾಗೂ ಮುಗ್ಧತೆಯೇ ಅವನನ್ನು ನಗೆಪಾಟಲಿಗೆ ಈಡುಮಾಡಿ ಕೊನೆಗೆ ಹೇಗೆ ಅವನ ಕಣ್ಣು ತೆರೆಸುತ್ತದೆಂಬುದನ್ನು ಚಿತ್ರಿಸುವ ಈ ನಾಟಕ ಅಂದಿನ ಭಾವುಕತೆಯ ರಂಗಭೂಮಿಯಲ್ಲಿ ಹೊಸಗಾಳಿಯಂತೆ ಸುಳಿಯಿತು.

1770ರಲ್ಲಿ ಗೋಲ್ಡ್‌ಸ್ಮಿತನ ದಿ ಡೆಸರ್ಟೆಡ್ ವಿಲೇಜ್ ಎನ್ನುವ ಕವನ ಪ್ರಕಟವಾಯಿತು. ಪ್ರಯೋಗ ಹಾಗೂ ತಾಂತ್ರಿಕ ದೃಷ್ಟಿಯಿಂದ ಇದೊಂದು ಸಫಲಕಾವ್ಯ. ಮಾನವೀಯ ವ್ಯಕ್ತಿಚಿತ್ರಣ, ಗ್ರಾಮಜೀವನದ ಸೌಂದರ್ಯ ನಿರೂಪಣೆ, ಕವಿತೆಯುದ್ದಕ್ಕೂ ಹಾಸುಹೊಕ್ಕಾದ ಶೋಕರಸ–ಇವು ಈ ಕೃತಿಯ ಜೀವಾಳ. ಆದರೆ ಕಾವ್ಯದಲ್ಲಿ ಸಮಗ್ರ ಕಂಡುಬರುವ ನ್ಯೂನತೆಯೊಂದನ್ನು ವಿಮರ್ಶಕರು ಎತ್ತಿ ತೋರಿಸಿದ್ದಾರೆ. ತನ್ನ ವೈಭವದ ಕಾಲದಲ್ಲಿ ಆಂಗ್ಲ ಹಳ್ಳಿಯಂತೆ ತೋರುತ್ತಿದ್ದ ಇದು ತನ್ನ ವಿನಾಶ ಕಾಲದ ಚಿತ್ರಣದಲ್ಲಿ ಐರ್ಲೆಂಡಿನ ಹಳ್ಳಿಯಂತೆ ಇದೆ. ಹೀಗೆ ಎರಡು ಭಿನ್ನ ಸಂಸ್ಕೃತಿಗಳನ್ನು ಒಂದೆಡೆ ತೋರಿಸಿರುವುದರಿಂದ ಅನೌಚಿತ್ಯ ಉಂಟಾಗಿದೆ. 1773ರಲ್ಲಿ ಷಿ ಸ್ಟೂಪ್ಸ್ ಟು ಕಾನ್‌ಕರ್ ಎನ್ನುವ ಪ್ರಥಮ ನಾಟಕ ಪ್ರಕಟವಾಯಿತು. ಆಂಗ್ಲ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿದ ಇದು ಪ್ರಥಮ ಪ್ರದರ್ಶನದಿಂದಲೇ ಜನಪ್ರಿಯವಾಯಿತು. ಮಾವನ ಮನೆಯನ್ನೇ ಹೋಟೆಲೆಂದು ಭಾವಿಸಿದ ಭಾವೀ ಅಳಿಯ ಹಾಗೂ ಅವನ ಸ್ನೇಹಿತರ ರಾದ್ಧಾಂತವನ್ನು ಹಾಸ್ಯದ ನೇಯ್ಗೆಯಲ್ಲಿ ಹೆಣೆದ ಈ ನಾಟಕ ಅಸಂಭಾವ್ಯ ಘಟನೆ ಹಾಗೂ ಅವಾಸ್ತವಿಕತೆಯಿಂದ ತುಂಬಿದ್ದರೂ ರಂಗಭೂಮಿಯಲ್ಲಿ ಅದ್ಭುತ ಯಶಸ್ಸನ್ನು ಪಡೆಯಿತು. ತಿಳಿಯಾದ ಭಾಷೆಯಲ್ಲಿ ನಿರೂಪಿತವಾದ ಸಂಭಾಷಣೆ ಹಾಗೂ ಜೀವಂತ ಪಾತ್ರಚಿತ್ರಣ ಇವು ಇದರ ಎದ್ದು ಕಾಣುವ ಅಂಶಗಳು.

ಗೋಲ್ಡ್‌ಸ್ಮಿತ್ ಕಷ್ಟಕಾರ್ಪಣ್ಯಗಳಲ್ಲಿ ಜೀವನವನ್ನು ನೂಕಬೇಕಾಯಿತು. ಮೃದು ಮನಸ್ಸು, ದುಂದುಗಾರಿಕೆ ಮತ್ತು ಔದಾರ್ಯಗಳ ಮೂಲಕ ಕೊನೆಯವರೆಗೂ ಆರ್ಥಿಕ ಮುಗ್ಗಟ್ಟಿನಲ್ಲಿದ್ದು ಅಧಿಕ ಶ್ರಮದಿಂದ ಆರೋಗ್ಯವನ್ನು ಕೆಡಿಸಿಕೊಂಡು ಸಾವನ್ನಪ್ಪಿದನಾದರೂ ತನ್ನ ವಿಚಿತ್ರ ಕಲ್ಪನೆ, ಮೃದು ಮಾನವೀಯತೆ, ಕಣ್ಣನ್ನು ಅರಳಿಸುವ ಹಾಸ್ಯ, ಸುಂದರ ಶೈಲಿ–ಇವುಗಳಿಂದಾಗಿ ಗೋಲ್ಡ್‌ಸ್ಮಿತ್ ಚಿರಸ್ಮರಣೀಯನಾಗಿದ್ದಾನೆ. ಈತನ ಸುಹೃತ್‌ಪರಂಪರೆಯಲ್ಲಿ ಜಾನ್‌ಸನ್, ಬರ್ಕ್ ಮತ್ತು ಕಲಾವಿದ ರೇನಲ್ಡ್ಸ್ ಮೊದಲಾದವರು ಬರುತ್ತಾರೆ. ಅವರೆಲ್ಲ ಇವನನ್ನು ಕಂಡು ಗೇಲಿ ಮಾಡಿದರಾದರೂ ಎಲ್ಲರೂ ಮನಸಾರೆ ಮೆಚ್ಚಿದ್ದರು. ಆಂತರ್ಯದಲ್ಲಿ ಅಪಾರವಾಗಿ ಪ್ರೀತಿಸಿದರು. ಈತನ ಸಾವಿನ ಸುದ್ದಿ ಮುಟ್ಟಿದೊಡನೆ ಬರ್ಕ್ ಬಿಕ್ಕಿಬಿಕ್ಕಿ ಅತ್ತನಂತೆ. ರೇನಲ್ಡ್ಸ್ ಆ ದಿನವೆಲ್ಲ ತನ್ನ ಕುಂಚವನ್ನು ಎತ್ತಲಿಲ್ಲವಂತೆ. ಜಾನ್‌ಸನ್ 'ಈತ ಮುಟ್ಟಿದ್ದನ್ನೆಲ್ಲ ಚಿನ್ನವಾಗಿಸಿದ' ಎಂಬ ಅರ್ಥಬರುವ ಚರಮ ವಾಕ್ಯವೊಂದನ್ನು ಲ್ಯಾಟಿನಿನಲ್ಲಿ ಬರೆದನಂತೆ. ಬಡವರು, ರೋಗಗ್ರಸ್ತರು, ದೀನದಲಿತರು ಇವನ ಮನೆಯ ಮುಂದೆ ನೆರೆದು, ತನ್ನ ಬಡತನದಲ್ಲೂ ತಮ್ಮನ್ನು ಕೈಬಿಡದೆ ನಡೆಸಿದ ಅನ್ನದಾತ ಸತ್ತುದಕ್ಕಾಗಿ ಕಣ್ಣೀರಿಟ್ಟರಂತೆ. ಬಡತನವನ್ನು ನೀಗಿಸಿಕೊಳ್ಳಲೆಂದು ಗೋಲ್ಡ್‌ಸ್ಮಿತ್ ಬರೆದ ಎಲ್ಲ ಬರೆಹಗಳೂ ಶಾಶ್ವತ ಮೌಲ್ಯವನ್ನು ಪಡೆಯಲಿಲ್ಲವಾದರೂ ದಿ ಟ್ರ್ಯಾವಲರ್, ದಿ ಡೆಸರ್ಟೆಡ್ ವಿಲೇಜ್, ಷಿ ಸ್ಟೂಪ್ಸ್ ಟು ಕಾನ್‌ಕರ್, ಎಲ್ಲಕ್ಕಿಂತ ಮಿಗಿಲಾಗಿ ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಕಾದಂಬರಿ–ಇವು ಇಂಗ್ಲಿಷ್ ಸಾಹಿತ್ಯದಲ್ಲಿ ಅಮರವಾಗಿ ನಿಂತಿವೆ. (ಎನ್.ಎನ್.ಎಸ್.)

**ಗೋಲ್ಡ್‌ಸ್ಟೀನ್, ಕೆನ್ನೆತ್ :** 1927–95. ಅಮೆರಿಕದ ಜಾನಪದ ತಜ್ಞ, ಸಂಗ್ರಹಕಾರ ಮತ್ತು ಲೇಖಕ. ತಂದೆ ಇರ್ವಿಂಗ್ ಮಾರ್ಟಿನ್ ಗೋಲ್ಡ್‌ಸ್ಟೀನ್ ಕೆನ್ನೆತ್ ಇಂಗ್ಲೆಂಡ್ ದೇಶದವನು. ತಾಯಿ ಲಾತ್ವಿಯ ದೇಶದವಳು. ಈತ 1927ರಲ್ಲಿ ಅಮೆರಿಕದ ನ್ಯೂಯಾರ್ಕ್ ನಗರದ ಬ್ರೂಕ್‌ಲೈನ್‌ನಲ್ಲಿ ಜನಿಸಿದ. ಅಲ್ಲಿನ ಸಿಟಿ ಕಾಲೇಜಿನಿಂದ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಬಿಝಿನೆಸ್ ಅಡ್ಮಿನಿಸ್ಟ್ರೇಶನ್‌ನಲ್ಲಿ (ವ್ಯವಹಾರ ಕಾರ್ಯನಿರ್ವಹಣೆ) ಪಡೆದ. 1940ರ ದಶಕದಲ್ಲಿ ಸೈನ್ಯದಲ್ಲಿ ಸೇವೆ ಸಲ್ಲಿಸಿದ. 1949ರಲ್ಲಿ ರೊಚೆಲ್ಲೆ ಜೂಡಿತ್ ಕೊರ್ನ್‌ಳನ್ನು ವಿವಾಹವಾದ.

ಈತ 1950ರ ದಶಕದ ಪ್ರಾರಂಭಿಕ ವರ್ಷಗಳಲ್ಲಿ ಅಲ್ಪಾವಧಿಯ ಕ್ಷೇತ್ರಾಧ್ಯಯನವನ್ನು ಕುರಿತು ಅನೇಕ ಶಿಬಿರಗಳನ್ನು ನಡೆಸಿ ಯಶಸ್ವಿಯಾದ. ಇದರಿಂದ ಈತನಿಗೆ ಅಪಾರ ಮನ್ನಣೆ ಮತ್ತು ಅನುಭವ ಲಭಿಸಿತು. 1951ರಲ್ಲಿ ನ್ಯೂಯಾರ್ಕ್‌ನಲ್ಲಿ, 1952 ರಿಂದ 1957ರ ವರೆಗೆ ಉತ್ತರ ಕರೋಲಿನದಲ್ಲಿ, 1953ರಲ್ಲಿ ಮೆಸಾಚುಸೆಟ್ಸ್‌ನಲ್ಲಿ, 1959–60ರಲ್ಲಿ ಉತ್ತರ, ಈಶಾನ್ಯ ಸ್ಕಾಟ್ಲೆಂಡಿನಲ್ಲಿ ಪ್ರಸಿದ್ಧ ಧ್ವನಿಮುದ್ರಣ ಸಂಸ್ಥೆಗಳಿಗಾಗಿ ಜನಪದ ಸಂಗೀತವನ್ನು ನಿರ್ದೇಶಿಸಿದ. ಈತನ ಲಕ್ಷ್ಯ ಸ್ಕಾಟ್ಲೆಂಡ್, ಐರ್ಲೆಂಡ್, ಇಂಗ್ಲೆಂಡ್, ಆಸ್ಟ್ರೇಲಿಯ ಪ್ರದೇಶದ ಜಾನಪದದ ಕಡೆಗೆ ಇತ್ತು. ಈತನಿಗೆ ಕೆನಡಕ್ಕೆ ಸೇರಿದ ಪ್ರದೇಶಗಳಾದ ಲ್ಯಾಬ್ರಡಾರ್ ಮತ್ತು ನ್ಯೂಫೌಂಡ್ಲೆಂಡ್ ಮೇಲೆ ಅಧಿಕವಾದ ಆಸಕ್ತಿ.

1958ರಲ್ಲಿ ಈತ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಪದವಿ ಕಾಲೇಜಿಗೆ ಸೇರಿದ. ಅಲ್ಲಿ ಮಾನವ ವಿಜ್ಞಾನದಲ್ಲಿ ಆಸಕ್ತಿಯಿಂದ ಭಾಗವಹಿಸಿ ಜಾನಪದ ವಿದ್ವಾಂಸನಾದ. ಜಾನಪದವು ಮಾನವವಿಜ್ಞಾನ ವಿಭಾಗದಿಂದ ಬೇರ್ಪಟ್ಟು ಪ್ರತ್ಯೇಕ ವಿಭಾಗವಾಯಿತು. ಅಲ್ಲಿ ಪ್ರಪ್ರಥಮ ಸಂಶೋಧಕನಾಗಿ ಪಿಎಚ್.ಡಿ. ಪದವಿಯನ್ನು ಪಡೆದ. ಎ ಗೈಡ್ ಫಾರ್ ಫೀಲ್ಡ್ ವರ್ಕರ್ಸ್ ಇನ್ ಫೋಕ್‌ಲೋರ್ ಈತನ ಪಿಎಚ್.ಡಿ. ಮಹಾಪ್ರಬಂಧ. ಅನಂತರ ಅಲ್ಲಿಯೇ ಗುತ್ತಿಗೆ ಆಧಾರದ ಮೇಲೆ ಪ್ರಾಧ್ಯಾಪಕನಾಗಿ ನೇಮಕವಾದ; ಅಮೆರಿಕದ ಜಾನಪದ ವಿದ್ವಾಂಸರಲ್ಲಿ ಪ್ರಥಮಸ್ಥಾನ ಪಡೆದ. ಅಲ್ಲಿ ಬ್ರಿಟನ್, ಐರ್ಲೆಂಡ್ ಮತ್ತು ಅಮೆರಿಕದ ಜನಪದ ಗೀತೆ, ಲಾವಣಿ ಮತ್ತು ಜನಪದ ಕಥನಗಳನ್ನು ಬೋಧಿಸುತ್ತಿದ್ದ.

ಈತ ಅನೇಕ ಸಂಘ ಸಂಸ್ಥೆಗಳಲ್ಲಿ ಗೌರವಾನ್ವಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ. ನ್ಯೂಫೌಂಡ್ಲೆಂಡ್‌ನ ಮೆಮೋರಿಯಲ್ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಮುಖ್ಯಸ್ಥನಾಗಿ ಸೇವೆ ಸಲ್ಲಿಸಿದ. 1960ರಲ್ಲಿ ಪ್ರಕಾಶನ ಸಂಸ್ಥೆಯೊಂದನ್ನು ಪ್ರಾರಂಭಿಸಿ ಜಾನಪದ ವಿಷಯದ ಕೃತಿಗಳನ್ನು ಪ್ರಕಟಿಸಿದ್ದಾನೆ. ಈತ ಜಾನಪದ ಕುರಿತು ಕೃತಿಗಳನ್ನೂ 30 ಪಾಂಡಿತ್ಯಪೂರ್ಣ ಲೇಖನಗಳನ್ನೂ ಪ್ರಕಟಿಸಿದ್ದಾನೆ. ಈತ ತನ್ನ 68ನೆಯ ವಯಸ್ಸಿನಲ್ಲಿ 1995ರ ನವೆಂಬರ್ 11 ರಂದು ನಿಧನನಾದ. (ಕೆ.ಆರ್.)

**ಗೋಲ್ಪಾರಾ :** ಅಸ್ಸಾಂ ರಾಜ್ಯದ ಒಂದು ಜಿಲ್ಲೆ; ಅದೇ ಹೆಸರಿನ ಒಂದು ಪಟ್ಟಣ. ಬ್ರಹ್ಮಪುತ್ರಾ ನದಿಯ ಎಡಬಲ ದಂಡೆಗಳ ಮೇಲೆ ಹಬ್ಬಿದೆ. ವಿಸ್ತೀರ್ಣ 1.824 ಚ.ಕಿಮೀ. ಜನಸಂಖ್ಯೆ 10,80,959 (2011). ಈ ಪ್ರದೇಶದಲ್ಲಿ ಉಸುಕು ಭೂಮಿ ಇರುವುದರಿಂದ

ಅಸ್ಸಾಮಿನ ಉಳಿದ ಭಾಗಗಳಿಗಿಂತ ಇಲ್ಲಿ ಚಳಿ ಕಡಿಮೆ, ಸೆಕೆ ಹೆಚ್ಚು. ಪೂರ್ವದ್ವಾರ ಮತ್ತು ತರಾಯೀ ಭಾಗಗಳು ಮಲೇರಿಯಭೂಯಿಷ್ಠ. ಉಳಿದ ಕಡೆಗಳಲ್ಲಿ 80"–90" ಮಳೆಯಾಗುತ್ತದೆ. ರಾಜ್ಯದ ಉಳಿದ ಎಲ್ಲ ಭಾಗಗಳಿಗಿಂತ ಇಲ್ಲಿ ಭೂಕಂಪನಗಳ ಸಂಭವ ಹೆಚ್ಚು. ಈ ಭಯದಿಂದಾಗಿ ಇಲ್ಲಿ ಬಿದಿರಿನ ಬೊಂಬುಗಳಿಂದ ಕಟ್ಟಿದ ಮನೆಗಳೇ ಹೆಚ್ಚು. ಶೇ. 84 ರಷ್ಟು ಜನರ ಉದ್ಯೋಗ ಕೃಷಿ.

ಗೋಲ್ಪಾರಾ ಪಟ್ಟಣ ಹಿಂದೆ ಈಸ್ಟ್ ಇಂಡಿಯ ಕಂಪೆನಿಯ ಅಧಿಕಾರ ಕಕ್ಷೆಯಲ್ಲಿತ್ತು. ಇಲ್ಲಿ ನೆಲೆಯೂರಿದ ಇಂಗ್ಲಿಷರು ಬಂಗಾಲದ ಬಹುತೇಕ ವ್ಯಾಪಾರವನ್ನು ಬಲವಂತದಿಂದ ತಮ್ಮ ಕಡೆಗೆ ಸೆಳೆದುಕೊಂಡರು. 1878ರಲ್ಲಿ ಇಲ್ಲಿ ಪೌರ ಸಮಿತಿಯ ಸ್ಥಾಪನೆಯಾಯಿತು. ಇಲ್ಲಿ ಟೀ, ರಬ್ಬರ್, ಹತ್ತಿ, ಎಳ್ಳು, ಮರ, ಸೆಣಬು ಮುಂತಾದವುಗಳ ವ್ಯಾಪಾರ ಹೆಚ್ಚಾಗಿ ನಡೆಯುತ್ತದೆ. ಇಲ್ಲಿಯ ವರೆಗೆ ಸಣ್ಣ ಹಡಗುಗಳು ಬಂದುಹೋಗುತ್ತವೆ. 2006ರಲ್ಲಿ ಭಾರತ ಸರ್ಕಾರ ಈ ಜಿಲ್ಲೆಯನ್ನು ದೇಶದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲೊಂದೆಂದು ಪರಿಗಣಿಸಿ ಅನುದಾನ ನೀಡುತ್ತಿದೆ. (ಎಸ್.ಎನ್‌ವಿಆರ್‌ಇ.)

**ಗೋವ :** ಭಾರತದ ಅತಿ ಚಿಕ್ಕ ರಾಜ್ಯ. ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವ ಮತ್ತು ದಕ್ಷಿಣದಲ್ಲಿ ಕರ್ನಾಟಕ ರಾಜ್ಯಗಳೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರವೂ ಇದನ್ನು ಸುತ್ತುವರೆದಿವೆ. ಇದರ ವಿಸ್ತೀರ್ಣ 3,702. ಚ.ಕಿಮೀ. ಜನಸಂಖ್ಯೆ 14,57,723 (2011). ಆಡಳಿತ ಕೇಂದ್ರ ಪಣಜಿ.




ಗೋವ ಉತ್ತರದಲ್ಲಿ ತೇರೇಖೋಲ್ ನದಿಯಿಂದಾಗಿ ಮಹಾರಾಷ್ಟ್ರದಿಂದ ಪ್ರತ್ಯೇಕಿಸಲ್ಪಟ್ಟಿದೆ. ಸಹ್ಯಾದ್ರಿಯ ಸೆರಗಿನಲ್ಲಿರುವ ಗೋವದ ಪೂರ್ವಭಾಗ ಮಲೆನಾಡು. ಪೂರ್ವದಿಂದ ಪಶ್ಚಿಮಕ್ಕೆ ಹಲವಾರು ನದಿ ತೊರೆಗಳು ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ಮುಖ್ಯವಾದವು ಮಾಂಡವೀ, ಝುವಾರೀ (ಅಘನಾಶಿನೀ), ತೇರೇಖೋಲ್, ಚಪೋರ್ ಮತ್ತು ಬೆತುಲ್. ಇವುಗಳಿಂದ ಒಟ್ಟು ಸು. 270 ಕಿಮೀಗಳಷ್ಟು ಜಲಮಾರ್ಗಗಳೇರ್ಪಟ್ಟಿವೆ. ಮಾಂಡವೀ ಗೋವದ ಈಶಾನ್ಯ ಭಾಗದಲ್ಲಿರುವ ಪರ್ವತ ಭೀಮಗಡದಲ್ಲಿ ಹುಟ್ಟಿ ಅಗ್ವಾದ ಕಿಲ್ಲೆಯ ಹತ್ತಿರ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಝುವಾರೀ ನದಿ ಹೇಮಾಡ್ ಬಾರ್ಸೆ ಮತ್ತು ಅಷ್ಟಾಗ್ರಹಾರ ಎಂಬ ಭಾಗದಲ್ಲಿ ಹುಟ್ಟಿ ಮುರ್‌ಗಾಂವ್ ಕೊಲ್ಲಿಯಲ್ಲಿ ಸಮುದ್ರವನ್ನು ಸೇರುತ್ತದೆ. ತೇರೇಖೋಲ್ ಮೂರನೆಯ ದೊಡ್ಡ ನದಿ. ಮಣೇರಿಯ ಹತ್ತಿರ ಹುಟ್ಟಿ ತೇರೇಖೋಲ್ ಕಿಲ್ಲೆಯ ಹತ್ತಿರ ಸಮುದ್ರವನ್ನು ಸೇರುತ್ತದೆ. ಈ ನದಿಯ ದಡಗಳಲ್ಲಿ ತೆಂಗು ಅಡಿಕೆಗಳ ತೋಟಗಳನ್ನು ವಿಶೇಷವಾಗಿ ಕಾಣಬಹುದು.

ಸಹ್ಯಾದ್ರಿಯ ಕವಲುಗಳು ಗೋವದಲ್ಲಿವೆ. ಇವುಗಳಲ್ಲಿ ಪೂರ್ವಕ್ಕಿರುವ ಸೊಂಸೋಗಡ ಬೆಟ್ಟ ಪ್ರಸಿದ್ಧವಾಗಿದೆ. ಅದರ ಉತ್ತರಕ್ಕೆ ಸತ್ತರೀ ಮಹಾಲದಲ್ಲಿ ವಾಘೇರಿ ಬೆಟ್ಟವಿದೆ. ಇನ್ನೊಂದು ಬೆಟ್ಟ ಮೋರ್ಲೆಗಡ. ಸಮಪಾತಳಿಯ ಮೇಲೆ ಇರುವ ಚಂದ್ರನಾಥ ಬೆಟ್ಟ ಸೃಷ್ಟಿಸೌಂದರ್ಯ ವೀಕ್ಷಣೆಗೆ ಪ್ರಸಿದ್ಧವೆನಿಸಿದೆ.

ಗೋವದ ವಾಯುಗುಣ ತೇವೋಷ್ಣಮಯ. ಉಷ್ಣತೆಯಲ್ಲಿ ಹೆಚ್ಚು ವಾರ್ಷಿಕ ಅಂತರಗಳಿಲ್ಲ. 100 ಮೀಗಿಂತ ಹೆಚ್ಚು ಎತ್ತರವಿಲ್ಲದ ಪೂರ್ವಾರ್ಧ ಭಾಗದಲ್ಲಿ 90"–120" (2,800–3,500ಮಿಮೀ) ಮಳೆಯಾಗುತ್ತದೆ. ಉಷ್ಣತೆ 70° ಫ್ಯಾ. – 90° ಫ್ಯಾ. (22° ಸೆಂ–32° ಸೆಂ). ಹೆಚ್ಚು ಎತ್ತರದ ಪ್ರದೇಶವಾದ (ಗರಿಷ್ಠ ಎತ್ತರ 1,200 ಮೀ) ಪೂರ್ವಭಾಗದಲ್ಲಿ ಹೆಚ್ಚು ಮಳೆಯಾಗುತ್ತದೆ (ಗರಿಷ್ಠ 300"). ಇಲ್ಲಿ ಉಷ್ಣತೆಯ ಅಂತರವೂ ಅಧಿಕ.

ಗೋವದ ಶೇ.29 ಪ್ರದೇಶ ಅರಣ್ಯಾವೃತ. ವೈಜ್ಞಾನಿಕವಾಗಿ ಅರಣ್ಯವನ್ನು ರಕ್ಷಿಸುವ ಕಾರ್ಯ ಇತ್ತೀಚಿನ ವರೆಗೂ ನಡೆದಿರಲಿಲ್ಲ. 1963 ರಿಂದೀಚೆಗೆ ಈ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ. ನೀಲಗಿರಿ, ತೇಗ, ಗೋಡಂಬಿ, ರಬ್ಬರ್, ಬಿದಿರು, ಕ್ಯಾಸುವರೈನ, ಸವಾರ್, ಮಾವು–ಈ ಮರಗಳನ್ನು ಈಗ ಬೆಳೆಸಲಾಗುತ್ತಿದೆ.

ಗೋವದಲ್ಲಿ 1.4 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಸಾಗುವಳಿ ಮಾಡಲಾಗುತ್ತಿದೆ. ಬತ್ತ ಇಲ್ಲಿಯ ಮುಖ್ಯ ಬೆಳೆ. ಇತರ ಮುಖ್ಯ ಬೆಳೆಗಳು ಬೇಳೆ ಮತ್ತು ಇತರ ಧಾನ್ಯಗಳು, ಕಬ್ಬು, ತರಕಾರಿ, ತೆಂಗು, ಅಡಿಕೆ, ಗೋಡಂಬಿ ಮತ್ತು ಹಣ್ಣುಗಳು.

ಗೋವದ ಮುಖ್ಯ ನೀರಾವರಿ ಯೋಜನೆಗಳು ಇವು : 1 ಸಾಂಗೆ ತಾಲ್ಲೂಕಿನ ಸಾತಾಲಿ ಮತ್ತು ದೂದ್ ಸಾಗರ್. 2 ಬಾರ್ದೇಜ್ ತಾಲ್ಲೂಕಿನಲ್ಲಿ ಅಂಜುನಾ, ಮಹಾರಾಷ್ಟ್ರದೊಂದಿಗೆ ಕೂಡಿ ತಿಲಾರಿ ಯೋಜನೆಯನ್ನು ಹಮ್ಮಿಕೊಂಡಿದ್ದು ಇದರ ಅಂಗವಾಗಿ ತಿಲಾರಿ ಅಣೆಕಟ್ಟನ್ನು ನಿರ್ಮಿಸಲಾಗುತ್ತಿದೆ. 2013ರ ಹೊತ್ತಿಗೆ ಈ ಯೋಜನೆ ಪೂರ್ಣಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬರುವ ನಿರೀಕ್ಷೆಯಿದೆ. ವ್ಯವಸಾಯದ ಜೊತೆಗೆ ಮೀನುಗಾರಿಕೆಯೂ ಇಲ್ಲಿಯ ಜನರ ಒಂದು ಮುಖ್ಯ ಕಸಬು. ಇಲ್ಲಿ 250 ಕಿಮೀ ಉದ್ದದ ಕರಾವಳಿಯೂ ಸು 100 ಹೆಕ್ಟೇರುಗಳಷ್ಟು ವಿಸ್ತಾರವಾದ ಸಿಹಿನೀರಿನ ಸರೋವರಗಳೂ ಇವೆ. ಕಡಲತೀರದ ಮತ್ತು ಒಳನಾಡಿನ ಜಲದಲ್ಲಿ ಮತ್ಸ್ಯಸಂಪತ್ತು ಸಮೃದ್ಧವಾಗಿದೆ. ಬಂಗಡೆ, ಬೈಗೆ, ಕೊರ್ಸುಲ, ಅರ್ಕುಲೈ ಮುಖ್ಯವಾದವು. ಕರಾವಳಿಯಲ್ಲಿ ಮೀನು ಹಿಡಿಯುವ ದೋಣಿಗಳಿಗೆ ರಕ್ಷಣೆಯಾಗಿ ಹಲವಾರು ಕಡಲ ಚಾಚುಗಳೂ ಅಳಿವೆಗಳೂ ಇವೆ. ಮತ್ಸ್ಯೋದ್ಯಮ ರಾಜ್ಯದ ಆರ್ಥಿಕ ಸಂಪನ್ಮೂಲಗಳಲ್ಲೊಂದು.

ಗೋವದಲ್ಲಿ ಒಟ್ಟು 60 ಮೆವಾ. ಸ್ಥಾಪಿತ ಸಾಮರ್ಥ್ಯದ ಜಲವಿದ್ಯುತ್ ಮತ್ತು ಉಷ್ಣವಿದ್ಯುತ್ ಕೇಂದ್ರಗಳಿವೆ. ನೆರೆಯ ಕರ್ನಾಟಕ, ಮಹಾರಾಷ್ಟ್ರಗಳಿಂದ ಗೋವಕ್ಕೆ ವಿದ್ಯುತ್ ಸರಬರಾಜು ಆಗುತ್ತದೆ.

ಗೋವದಲ್ಲಿ ಖನಿಜಸಂಪತ್ತು ಧಾರಾಳವಾಗಿದೆ. ಕಬ್ಬಿಣದ ಅದಿರು, ಕೆಳಶ್ರೇಣಿಯ ಮ್ಯಾಂಗನೀಸ್ ಅದಿರು, ಬಾಕ್ಸೈಟ್ ಇವು ವಿಶೇಷವಾಗಿ ನಿರ್ಯಾತವಾಗುತ್ತವೆ. ಭಾರತದಿಂದ ರಫ್ತಾಗುವ ಕಬ್ಬಿಣ ಅದಿರಿನಲ್ಲಿ ಸುಮಾರು ಅರ್ಧಭಾಗ ಗೋವದಿಂದ ನಿರ್ಯಾತವಾಗುತ್ತದೆ. ಬಿಚೋಲಿ, ಕುದ್ನೇಮ್, ಪಾಲಿ, ಪೈಲ್‌ಗಾಂವ್ ಮತ್ತು ಸಿರಿಗಾಂವ್‌ಗಳಲ್ಲಿ ಕಬ್ಬಿಣ ಅದಿರನ್ನೂ ಸಾಂಗೆ

# ಗೋವ

ತಾಲ್ಲೂಕಿನಲ್ಲಿ ಮ್ಯಾಂಗನೀಸನ್ನೂ ಕೆಪೆ ತಾಲ್ಲೂಕಿನಲ್ಲಿ ಬಾಕ್ಸೈಟನ್ನೂ ತೆಗೆಯಲಾಗುತ್ತಿದೆ. ಕಬ್ಬಿಣ ಅದಿರಿನ ಕಬ್ಬಿಣ ಅಂಶ ಶೇ.57–ಶೇ.62. ಗೋವದಲ್ಲಿ ದೊರಕುವ ಮ್ಯಾಂಗನೀಸ್ ಅದಿರು ಪೈರೊಲುಸೈಟ್ ಮತ್ತು ಪ್ಸಿಲೊಮಿಲೇನ್. ಭಾರತದ ಇತರೆಡೆಗಳಲ್ಲಿ ದೊರಕುವ ಬಾಕ್ಸೈಟ್ ಅದಿರುಗಳಿಗಿಂತ ಗೋವದ್ದು ಭಿನ್ನವಾದ್ದು. ಇದೊಂದು ಟ್ರೈ ಹೈಡ್ರೇಟ್. ಇದರಲ್ಲಿ ನಾನಾ ದರ್ಜೆಗಳುಂಟು. ಮಧ್ಯಮ ದರ್ಜೆಯ ಅದಿರಿಗೆ ವಿದೇಶಗಳಲ್ಲಿ ಹೆಚ್ಚು ಬೇಡಿಕೆಯಿದೆ.

ಪೋರ್ಚುಗೀಸ್ ಆಡಳಿತದಿಂದ ಗೋವದ ವಿಮೋಚನೆಯಾಗುವವರೆಗೂ ಅದರ ಕೈಗಾರಿಕಾಭಿವೃದ್ಧಿಗೆ ಹೆಚ್ಚಿನ ಗಮನ ಸಂದಿರಲಿಲ್ಲ. ಅಕ್ಕಿ, ಹಿಟ್ಟು ಮತ್ತು ಎಣ್ಣೆ ಗಿರಣಿಗಳು, ಮರ ಕೊಯ್ಯುವ ಕಾರ್ಖಾನೆಗಳು, ಗೋಡಂಬಿ ಕಾರ್ಖಾನೆಗಳು ಮತ್ತು ಇಟ್ಟಿಗೆ ತಯಾರಿಕೆ–ಇವು ಅಲ್ಲಿದ್ದ ಕೆಲವು ಸಣ್ಣ ಉದ್ಯಮಗಳು. ದೋಣಿಯ ನಿರ್ಮಾಣ ಮತ್ತು ದುರಸ್ತಿ, ಮಾಂಸ, ಹಣ್ಣು ಮತ್ತು ಮೀನಿನ ರಕ್ಷಣೆ, ಕೈಮಗ್ಗ, ತೆಂಗಿನ ಎಣ್ಣೆ ತಯಾರಿಕೆ–ಇವು ಹಲವರಿಗೆ ಉದ್ಯೋಗ ದೊರಕಿಸಿಕೊಟ್ಟಿವೆ. ಮರಗೆಲಸ, ತೆಂಗಿನ ನಾರಿನ ವಸ್ತುಗಳ ತಯಾರಿಕೆ, ಬಿದಿರಿನ ಕೆಲಸ, ಪಾದರಕ್ಷೆ ತಯಾರಿಕೆ, ಕುಂಬಾರಿಕೆ, ಕುಶಲ ವಸ್ತುಗಳ ತಯಾರಿಕೆ–ಇವು ಹಿಂದಿನಿಂದ ಬಂದಿರುವ ಕೆಲವು ಮುಖ್ಯ ಉದ್ಯೋಗಗಳು.




ಗೋವದಲ್ಲಿ ರಸ್ತೆ ಮಾರ್ಗವಿದೆ. ರಾಷ್ಟ್ರೀಯ ಹೆದ್ದಾರಿ 224 ಕಿಮೀ, ರಾಜ್ಯ ಹೆದ್ದಾರಿ 232 ಕಿಮೀ, ಜಿಲ್ಲಾ ರಸ್ತೆಗಳು 815 ಕಿಮೀ ಇವೆ. ಇಂದು ಗೋವ ರೈಲು ಮಾರ್ಗ ಬಹಳಷ್ಟು ಸುಧಾರಿಸಿದ್ದು ಮುಂಬಯಿ, ಮಂಗಳೂರು, ತಿರುವನಂತಪುರಗಳಿಗೆ ಕೊಂಕಣ ರೈಲು ಸಂಪರ್ಕ ಕಲ್ಪಿಸಿದೆ. ಮುಂಬಯಿ, ದೆಹಲಿ, ಕೊಚ್ಚಿನ್, ಚೆನ್ನೈ, ಬೆಂಗಳೂರು ನಗರಗಳಿಗೆ ವಿಮಾನ ಸಂಪರ್ಕವಿದೆ.

ಗೋವದ ನದಿಗಳು ದೋಣಿಗಳ ಸಂಚಾರಕ್ಕೆ ಅನುಕೂಲವಾಗಿವೆ. ಮಾಂಡವೀ ಮತ್ತು ಝುವಾರೀ ನದಿಗಳು ಈ ದೃಷ್ಟಿಯಿಂದ ಉಪಯುಕ್ತ. ಕಬ್ಬಿಣ ಅದಿರನ್ನು ರಫ್ತು ಮಾಡುವ ಸಲುವಾಗಿ ಮಾರ್ಮಗೋವ ಬಂದರಿಗೆ ಸಾಗಿಸಲು ಇವು ಬಹು ಅನುಕೂಲವಾಗಿವೆ.

100 ಕಿಮೀ ಉದ್ದದ ಕರಾವಳಿಯಿರುವ ಗೋವದ ಮುಖ್ಯ ಬಂದರು ಮಾರ್ಮಗೋವ. ಮುಂಬಯಿ, ಕೊಚ್ಚಿಗಳ ನಡುವಣ ದೊಡ್ಡ ರೇವು ಇದು. ಗೋವದ ಆಯಾತ–ನಿರ್ಯಾತಗಳಲ್ಲಿ ಶೇ. 90ಕ್ಕಿಂತಲೂ ಹೆಚ್ಚು ಭಾಗ ಈ ಬಂದರಿನ ಮೂಲಕ ಸಾಗುತ್ತದೆ. ಸೆಪ್ಟೆಂಬರಿನಿಂದ ಮೇ ವರೆಗೆ ಮುಂಬಯಿಯಿಂದ ಮಾರ್ಮಗೋವಕ್ಕೆ ಪ್ರಯಾಣಿಕ ನೌಕೆಗಳು ಸಂಚರಿಸುತ್ತವೆ. ಚಪೋರ, ಪಣಜಿ, ಬೇತುಲ್, ತಲ್ಪೋರ ಇವು ಇತರ ಬಂದರುಗಳು.

ಗೋವದ ರಾಜಧಾನಿ ಪಣಜಿ. ಮಾಂಡವೀ ನದಿಯ ಎಡದಂಡೆಯ ಮೇಲೆ ಇರುವ ಪಣಜಿಯ ವಿಸ್ತೀರ್ಣ 36 ಚ.ಕಿಮೀ. ಜನಸಂಖ್ಯೆ 1,14,405 (2011). ಹಿಂದೆ ಇದು ಮೀನು ಹಿಡಿಯುವವರ ಹಳ್ಳಿಯಾಗಿತ್ತು. ಈಗ ಇದೊಂದು ಸುಂದರ ನಗರ. ಎಲ್ಲೆಲ್ಲೂ ಹಸುರು ತುಂಬಿದೆ. ಹಳೆಯ ಗೋವ ಬಹುಮಟ್ಟಿಗೆ ಪಾಳುಬಿದ್ದ ನಗರ. ಗತಕಾಲದ ಸ್ಮಾರಕಗಳಾಗಿ ಕೆಲವು ಕಟ್ಟಡಗಳು ಅಲ್ಲಿ ಉಳಿದಿವೆ. 1511ರಲ್ಲಿ ಕಟ್ಟಿ 1623ರಲ್ಲಿ ಜೀರ್ಣೋದ್ಧಾರವಾದ ಕ್ರೈಸ್ತ ಆರಾಧನ ಮಂದಿರ, ಸೇಂಟ್ ಫ್ರಾನ್ಸಿಸ್ ಕ್ರೈಸ್ತ ಸನ್ಯಾಸಿನಿಯರ ಮಠ, ಪ್ರಸಿದ್ಧವೂ ಸುಂದರವೂ ಆದ ಸೇಂಟ್ ಫ್ರಾನ್ಸಿಸನ ಬಾಮ್ ಜೀಸಸ್ ಎಂಬ ಸಮಾಧಿ ಭವನ, 17ನೆಯ ಶತಮಾನದ ಸೇಂಟ್ ಲೋನಿಕಾ ಕ್ರೈಸ್ತ ಸನ್ಯಾಸಿನಿಯರ ಮಠ, ಶಿಥಿಲಾವಸ್ಥೆಯಲ್ಲಿರುವ ಸೇಂಟ್ ಪಾಲ್ ಕಾಲೇಜು–ಇವು ಮುಖ್ಯವಾದವು. ಮಾರ್ಗೋವ ಎರಡನೆಯ ಮುಖ್ಯ ನಗರ. ಇದರ ಜನಸಂಖ್ಯೆ 1,06,528 (2011). ಇದು ದಕ್ಷಿಣ ಗೋವದ ಮುಖ್ಯ ವಾಣಿಜ್ಯ ಕೇಂದ್ರ. ಮಾಪುಕ 40,487 (2011) ಉತ್ತರ ಗೋವದಲ್ಲಿದೆ.

ಪ್ರಪಂಚದಲ್ಲೇ ಅತ್ಯಂತ ಸುಂದರವಾದ ಕೆಲವು ಬೀಚುಗಳು ಗೋವದಲ್ಲಿವೆ. ಕಲಾಂಗೂಟೆ, ಕೋಲ್ವ, ದೋನಾ ಪಾಲಾ, ಸಿರಿದಾವೂ, ವಾಗತೋರ, ಮಾಂದ್ರೇ ಮತ್ತು ಮೋರ್ಜಿ ಬೀಚುಗಳಿಗೆ ಪ್ರವಾಸಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಹಳೆಯ ಗೋವದಲ್ಲಿ ಕ್ರೈಸ್ತರು ಹೆಚ್ಚು; ಹೊಸ ಗೋವದಲ್ಲಿ (ನೊವ ಗೋವ) ಹಿಂದುಗಳು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಪೋರ್ಚುಗೀಸರ ಅಂತರ ವಿವಾಹಗಳಿಂದ ಸ್ವಲ್ಪಮಟ್ಟಿಗೆ ಸಂಮಿಶ್ರ ಜನಾಂಗದವರಿದ್ದಾರೆ. ಇಲ್ಲಿಯ ಜನರ ಮಾತೃಭಾಷೆ ಕೊಂಕಣಿ. ಸಾಮಾನ್ಯವಾಗಿ ಕ್ರಿಶ್ಚಿಯನರು ಪೋರ್ಚುಗೀಸ್ ಭಾಷೆಯನ್ನೂ ಹಿಂದುಗಳು ಕೊಂಕಣಿ ಭಾಷೆಯನ್ನೂ ಆಡುತ್ತಾರೆ. ಜನಸಾಂದ್ರತೆ ಹಾಗೂ ಪೋರ್ಚುಗೀಸರ ಮಿತಿಮೀರಿದ ತೆರಿಗೆಯಿಂದಾಗಿ ಜನರು ಅನೇಕ ಕಡೆಗಳಿಗೆ ವಲಸೆ ಹೋದರು. ಅನೇಕರು ಆಫ್ರಿಕದತ್ತ ಸಾಗಿ ಮೊಜಾಂಬಿಕ್ ಹಾಗೂ ನೇಟಾಲ್‌ಗಳಲ್ಲಿ ನೆಲೆಸಿದರು. ಮುಂಬಯಿಗೆ ತೆರಳಿದ ಗೋವನರೇ ಹೆಚ್ಚು.

ಗೋವ ರಾಜ್ಯವನ್ನು ಉತ್ತರ ಗೋವ (ವಿಸ್ತೀರ್ಣ 1736 ಚಕಿಮೀ. ದಕ್ಷಿಣ ಗೋವ (ವಿಸ್ತೀರ್ಣ 1,966 ಚ.ಕಿಮೀ) ಎಂದು ಎರಡು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಪಣಜಿ ಉತ್ತರ ಗೋವದ ಆಡಳಿತ ಕೇಂದ್ರ. ಮಾರ್ಗೋವ ದಕ್ಷಿಣ ಗೋವದ ಆಡಳಿತ ಕೇಂದ್ರ. ಗೋವಾ ಭೂದಾಖಲೆಯನ್ನು ಗಣಕೀಕೃತಗೊಳಿಸಿದ ಭಾರತದ ಪ್ರಥಮ ರಾಜ್ಯವಾಗಿದೆ.

ಗೋವದಲ್ಲಿ ಹಿಂದೂ ಕ್ರೈಸ್ತ ಧರ್ಮಗಳು ಪ್ರಚಾರದಲ್ಲಿವೆ. ಕದಂಬರ ಕಾಲದ ಸಪ್ತಕೋಟೀಶ್ವರ ದೇವಾಲಯ, ಸೇಂಟ್ ಫ್ರಾನ್ಸಿಸ್ ಜೇವಿಯರನ ಸಮಾಧಿಭವನ ಪ್ರಸಿದ್ಧವಾದವು. ಸಂತ ಜೇವಿಯರನ ಪಾರ್ಥಿವ ಶರೀರವನ್ನು ಭಕ್ತರಿಗೆ ಹತ್ತು ವರ್ಷಗಳಿಗೊಮ್ಮೆ ಪ್ರದರ್ಶಿಸುತ್ತಾರೆ. ಹಳೆಯ ಗೋವದಲ್ಲಿ ಲೆಂಟ್ ಉಪವಾಸ ದಿನಗಳಲ್ಲಿ ಸಂತರ ವಿಗ್ರಹಗಳನ್ನು ಮೆರವಣಿಗೆ ಮಾಡುತ್ತಾರೆ.

ಒಳನಾಡ ಒಂದು ರಸ್ತೆ

ಪೋರ್ಚುಗೀಸರು ಬಂದಮೇಲೆ ಗೋವದಲ್ಲಿ ಕ್ರೈಸ್ತಮತ ಪ್ರಚಾರವಾಯಿತು. ಡಾಮಿನಿಕ್ ಪಂಥದ ಕ್ರೈಸ್ತ ಸನ್ಯಾಸಿಗಳು ಗೋವಕ್ಕೆ ಬಂದದ್ದು 1510ರಲ್ಲಿ. 1517ರಲ್ಲಿ ಬಂದ ಫ್ರಾನ್ಸಿಸ್ಕನ್ ಪಾದ್ರಿಗಳು ಕ್ರೈಸ್ತಮತ ಪ್ರಚಾರವನ್ನು ಆರಂಭಿಸಿದರು. ಫ್ರಾನ್ಸಿಸ್ಕನ್ ಪಂಥದ ಸನ್ಯಾಸಿ ಜೊವಾನ್ ದ ಆಲ್ಬುಕರ್ಕ್ 1538ರಲ್ಲಿ ಗೋವದ ಪ್ರಥಮ ಬಿಷಪ್ ಆಗಿ ನೇಮಕವಾದ. 1542ರಲ್ಲಿ ಫ್ರಾನ್ಸಿಸ್ಕ್ ಜೇವಿಯರ್ ಸ್ಥಳೀಯ ಮತಪ್ರಚಾರಕರಿಗೆ ತರಬೇತು ನೀಡುವ ಸಾಂತಾಫಿ ಕಾಲೇಜಿನ ಮೇಲ್ವಿಚಾರಕನಾದ. ತರುವಾಯ ಈ ಕಾಲೇಜಿಗೆ ಸೇಂಟ್ ಪಾಲ್ ಕಾಲೇಜು ಎಂದು ಹೆಸರಾಯಿತು. 1557ರ ಫೆಬ್ರವರಿ 4 ಪೋಪ್ ಹೊರಡಿಸಿದ ಆಜ್ಞೆಯ ಪ್ರಕಾರ ಗೋವವೂ ಆರ್ಚ್‌ಬಿಷಪನ ಅಧಿಕಾರವ್ಯಾಪ್ತಿಯ ಕೇಂದ್ರವೂ ಪ್ರಾಚ್ಯ ಪ್ರಾಂತಗಳ ರೋಮನ್ ಕೆಥೊಲಿಕ್ ಪಾದ್ರಿಗಳ ಕೇಂದ್ರವೂ ಆಯಿತು. 20ನೆಯ ಶತಮಾನದಲ್ಲಿ ಪೋಪ್ ಹೊರಡಿಸಿದ ಅಧಿಕೃತ ನಿಯಮಗಳ ಪ್ರಕಾರ ಗೋವದ ಆರ್ಚ್‌ಬಿಷಪ್ ಅಧಿಕಾರ ಇಡೀ ಪೋರ್ಚುಗೀಸ್ ಭಾರತಕ್ಕೆ ಅನ್ವಯಿಸಿತು (1953).

(ವಿ.ಜಿ.ಕೆ.;ಐ.ಎ.)

**ಇತಿಹಾಸ:** ಗೋವದ ಇತಿಹಾಸ ಪ್ರಾಚೀನವಾದ್ದು. ಹಲವು ಪುರಾಣಗಳಲ್ಲೂ ಶಾಸನಗಳಲ್ಲೂ ಗೋವದ ಉಲ್ಲೇಖಗಳಿವೆ. ಪರಶುರಾಮ ಮಿಥಿಲೆಯಿಂದ ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ಇಲ್ಲಿ ನೆಲೆಗೊಳಿಸಿದನೆಂದು ಪ್ರತೀತಿಯಿದೆ. ಇತಿಹಾಸಕಾಲದಲ್ಲಿ ಗೋವ ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತು. ದಖನಿನಲ್ಲಿ ಸಾಮ್ರಾಜ್ಯ ಸ್ಥಾಪಿಸಿ ದೀರ್ಘಕಾಲ ರಾಜ್ಯವಾಳಿದ ಸಾತವಾಹನರು ತಮ್ಮ ಸಾರ್ವಭೌಮತ್ವವನ್ನು ಗೋವದ ಮೇಲೂ ಸ್ಥಾಪಿಸಿದ್ದರು.

ಪಣಜಿಯ ಒಂದು ಚರ್ಚು

ರೋಮನ್ ಸಾಮ್ರಾಜ್ಯಕ್ಕೂ ದಖನ್ ಪ್ರದೇಶಕ್ಕೂ ವ್ಯಾಪಾರ ಸಂಪರ್ಕವಿತ್ತು. ಗೋವ ಪಟ್ಟಣ ಮುಖ್ಯ ವ್ಯಾಪಾರ ಕೇಂದ್ರ ಹಾಗೂ ಪ್ರಮುಖ ಬಂದರು ಆಗಿತ್ತೆಂದು ತಿಳಿದುಬರುತ್ತದೆ. ಸಾತವಾಹನರ ಸಾಮ್ರಾಜ್ಯ ಅವನತಿ ಹೊಂದಿದ ಅನಂತರ ತಲೆಯೆತ್ತಿದ ಬನವಾಸಿ ಕದಂಬ ಮನೆತನ ಗೋವದ ಬಹುಭಾಗದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿತ್ತು. ಆರನೆಯ ಶತಮಾನದ ಕೊನೆಯಲ್ಲಿ ಬಾದಾಮಿ ಚಳುಕ್ಯ ಮನೆತನ ಪ್ರಬಲವಾಗಿ ಕದಂಬರನ್ನು ಸೋಲಿಸಿತು. ಒಂದನೆಯ ಕೀರ್ತಿವರ್ಮ ಕೊಂಕಣದ ಹಲವು ಪ್ರದೇಶಗಳ ಮೇಲೆ ಚಳುಕ್ಯರ ಅಧಿಕಾರವನ್ನು ಸ್ಥಾಪಿಸಿದ. ಇಮ್ಮಡಿ ಪುಲಕೇಶಿ ತನ್ನ ದಿಗ್ವಿಜಯ ಕಾಲದಲ್ಲಿ ಕೊಂಕಣ ಪ್ರದೇಶವನ್ನು ಪೂರ್ಣವಾಗಿ ಜಯಿಸಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಇವನು ಗೋವದ ಉತ್ತರ ಪ್ರದೇಶದಲ್ಲಿ ಆಳುತ್ತಿದ್ದ ಮೌರ್ಯ ಶಾಖೆಯ ರಾಜನನ್ನು ಸೋಲಿಸಿದ ಸಂಗತಿ ಐಹೊಳೆಯ ಶಾಸನದಿಂದ ತಿಳಿದುಬರುತ್ತದೆ. ಬಾದಾಮಿ ಚಳುಕ್ಯ ಸಾಮ್ರಾಜ್ಯ 757ರಲ್ಲಿ ಕೊನೆಗೊಂಡ ಅನಂತರ ಗೋವ ಪ್ರದೇಶ ರಾಷ್ಟ್ರಕೂಟ ಸಾಮ್ರಾಜ್ಯದ ಭಾಗವಾಯಿತು. ಚಳುಕ್ಯ ಮತ್ತು ರಾಷ್ಟ್ರಕೂಟ ಸಾಮ್ರಾಟರ ಕಾಲದಲ್ಲಿ ಅರೇಬಿಯ, ಪರ್ಷಿಯ ಮತ್ತು ದಖನ್‌ಗಳ ನಡುವೆ ವ್ಯಾಪಾರ ಸಂಪರ್ಕ ವಿಶೇಷವಾಗಿ ಅಭಿವೃದ್ಧಿ ಹೊಂದಿತ್ತು. ವಿದೇಶೀ ಹಡಗುಗಳು ಗೋವ ಬಂದರಿಗೆ ಬರುತ್ತಿದ್ದುವು. ಗೋವ ಪಟ್ಟಣ ಪಶ್ಚಿಮ ತೀರದ ಮುಖ್ಯ ವ್ಯಾಪಾರ ಕೇಂದ್ರಗಳಲ್ಲೊಂದಾಗಿತ್ತು.


ಗೋವದಲ್ಲಿ ತೆಂಗು ಸಮೃದ್ಧ

ರಾಷ್ಟ್ರಕೂಟರ ಕೊನೆಗಾಲದಲ್ಲಿ ಗೋವ ಪ್ರದೇಶದಲ್ಲಿ ಕದಂಬರು ರಾಜ್ಯ ಸ್ಥಾಪಿಸಿದರು. ಇವರಿಗೆ ಗೋವೆಯ ಕದಂಬರೆಂದೇ ಹೆಸರಾಗಿದೆ. ಗೋವದ ಕದಂಬ ಮನೆತನ ಕದಂಬ ಮನೆತನದ ಉಪಶಾಖೆಗಳಲ್ಲೊಂದಾಗಿತ್ತು. ಗೋವದ ಸಮೀಪದ ಚಂದ್ರಪುರ (ಇಂದಿನ ಚಂದೂರು) ಇವರ ರಾಜಧಾನಿಯಾಗಿತ್ತು. ಈ ಶಾಖೆಯ ಆರಂಭ ಕಾಲದ ಕಂಟಕಾಚಾರ್ಯ, ನಾಗವರ್ಮ, 1ನೆಯ ಗುಹಲದೇವ ಮೊದಲಾದವರು ಅಷ್ಟು ಪ್ರಬಲರಾಗಿರಲಿಲ್ಲ. ಒಂದನೆಯ ಷಷ್ಠದೇವ ಅಥವಾ ಚತುರ್ಭುಜನೆಂಬ ರಾಜ 970ರ ಸುಮಾರಿನಲ್ಲಿ ಪ್ರಬಲನಾಗಿದ್ದುದಲ್ಲದೆ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಕೊನೆಗಾಣಿಸುವಲ್ಲಿ ಕಲ್ಯಾಣಿ ಚಾಳುಕ್ಯ ತೈಲಪನಿಗೆ ಸಹಾಯ ಮಾಡಿದನೆಂದು ತಿಳಿದುಬಂದಿದೆ. 11ನೆಯ ಶತಮಾನದ ಪ್ರಾರಂಭದಲ್ಲಿ ಆಳುತ್ತಿದ್ದ 2ನೆಯ ಗುಹಲದೇವನ ಕಾಲದಲ್ಲಿ ಗೋವ ಪ್ರಸಿದ್ಧವಾದ ವಾಣಿಜ್ಯ ಕೇಂದ್ರವೂ ರೇವು ಪಟ್ಟಣವೂ ಆಗಿತ್ತೆಂದೂ ಆ ವೇಳೆಗೆ ಅರಬ್ ವರ್ತಕರು ಗೋವೆಯಲ್ಲಿ ನೆಲಸಿದ್ದರೆಂದೂ ತಿಳಿದುಬರುತ್ತದೆ. ಅನಂತರ ಆಳಿದ 2ನೆಯ ಷಷ್ಠದೇವ ಇಡೀ ಕೊಂಕಣ ಪ್ರದೇಶದ ಮೇಲೆ ತನ್ನ ಆಳಿಕೆ ಸ್ಥಾಪಿಸಿದ. ಇವನಿಗೆ ಚಟ್ಟಲ ಮತ್ತು ಚಟ್ಟಯ್ಯ ಎಂಬ ಹೆಸರುಗಳಿದ್ದುವು. ಚಾಳುಕ್ಯ ಜಯಸಿಂಹನ ಆಶ್ರಿತನಾಗಿದ್ದ ಇವನ ಆಳಿಕೆಯಲ್ಲಿ ಗೋವ ಪಟ್ಟಣ ವಾಣಿಜ್ಯ ಕೇಂದ್ರವಾಗಿ ವಿಶೇಷ ಪ್ರಸಿದ್ಧಿ ಪಡೆದಿತ್ತು. ಗೋವ ರೇವು ಪಟ್ಟಣ ಭವ್ಯ ಭವನಗಳಿಂದಲೂ ಇಬ್ಬದಿಯ ದೊಡ್ಡ ದೊಡ್ಡ ಮಳಿಗೆಗಳಿಂದ ಕೂಡಿದ ವಿಶಾಲ ಬೀದಿಗಳಿಂದಲೂ ಉದ್ಯಾನಗಳಿಂದಲೂ ಕಂಗೊಳಿಸುತ್ತಿತ್ತೆಂದು ಆ ಕಾಲದ ಶಾಸನಗಳಲ್ಲಿ ವರ್ಣಿಸಲಾಗಿದೆ.

ಷಷ್ಠದೇವನ ಅನಂತರ ಅವನ ಮಗನಾದ 1ನೆಯ ಜಯಕೇಶಿ ಗೋವದ ರಾಜನಾದ. ಗೋವ ರಾಜ್ಯ ಇವನ ಆಳಿಕೆಯ ಕಾಲದಲ್ಲಿ ಕಪಾರ್ಡಿಕ ದ್ವೀಪ, ಕೊಂಕಣ, ಹೈವೆ, ಹಲಸೀಗೆ ಮೊದಲಾದ ಪ್ರದೇಶಗಳನ್ನೊಳಗೊಂಡಿತ್ತು. ಪರಾಕ್ರಮಿಯೂ ದೂರದರ್ಶಿಯೂ ಆದ ಈತ ಕಲ್ಯಾಣಿ ಚಾಳುಕ್ಯ ವಿಕ್ರಮಾದಿತ್ಯನಿಗೆ ತನ್ನ ಒಬ್ಬ ಮಗಳನ್ನೂ ಅನಿಲ್‌ವಾಡದ ಚಾಳುಕ್ಯ ಕರ್ಣನಿಗೆ ತನ್ನ ಮತ್ತೊಬ್ಬ ಮಗಳನ್ನೂ ಕೊಟ್ಟು ವಿವಾಹ ಮಾಡಿ ಗೋವ ಕದಂಬ ಸಂತತಿಯ ಪ್ರಭಾವವನ್ನು ವಿಸ್ತರಿಸಿದ. ಈತ ಗೋವ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಅನೇಕ ಸಮಕಾಲೀನ ಶಾಸನಗಳಲ್ಲಿ ಅಂದಿನ ಗೋವ ನಗರದ ಸೌಂದರ್ಯವೂ ಐಶ್ವರ್ಯವೂ ವರ್ಣಿಸಲ್ಪಟ್ಟಿವೆ. ರಾಜಮಾರ್ಗಗಳಲ್ಲಿ ಪಂಡಿತರೂ ಶ್ರೀಮಂತರೂ ಧನಕನಕ ಐಶ್ವರ್ಯಾದಿಗಳೂ ಕಣ್ಮನಗಳಿಗೆ ಹಬ್ಬವನ್ನುಂಟು ಮಾಡುತ್ತ ನಗರ ಅಮರಪುರಿಯಂತೆ ಕಂಗೊಳಿಸುತ್ತದೆ ಎಂಬುದಾಗಿ ಹಲವು ಶಾಸನಗಳಲ್ಲಿ

ವರ್ಣಿಸಲಾಗಿದೆ. ಒಂದನೆಯ ಜಯಕೇಶಿಯ ಪ್ರಧಾನಮಂತ್ರಿಯಾಗಿದ್ದ, ಅರಬ್ ಮೂಲದ ಸದನ್ನೋ ಎಂಬವನು ಗೋವ ನಗರದ ಮತ್ತು ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷವಾಗಿ ಶ್ರಮಿಸಿದ. ಗೋವ ಬಂದರನ್ನು ಅಭಿವೃದ್ಧಿಪಡಿಸಿ ಸಾಗರೋತ್ತರ ವ್ಯಾಪಾರವನ್ನು ಪ್ರೋತ್ಸಾಹಿಸಿದ. ಗೋವದ ಜನರು ಐಶ್ವರ್ಯ ಮತ್ತು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದರು.

ಮಾರ್ಗೋವ ಬೀಚ್

1053ರಲ್ಲಿ ಈ ಮಂತ್ರಿ ಬಡಬಗ್ಗರ ಸಹಾಯಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ. ನಿರ್ಗತಿಕರಿಗೂ ಅಂಗವಿಕಲರಿಗೂ ಉಚಿತ ಊಟ ವಸತಿಯನ್ನು ಒದಗಿಸಿದ. ಈ ಸಂಸ್ಥೆಯ ವೆಚ್ಚಕ್ಕಾಗಿ ಹೊರಗಿನಿಂದ ಗೋವ ಬಂದರಿಗೆ ಬರುತ್ತಿದ್ದ ವ್ಯಾಪಾರಿ ಹಡಗುಗಳ ಮೇಲೆ ನಿಗದಿಯಾದ ಸುಂಕ ವಿಧಿಸಿದ. ಅಲ್ಲದೆ ಗೋವ ರಾಜ್ಯದಲ್ಲಿ ಸಂತಾನವಿಲ್ಲದೆ ಮರಣ ಹೊಂದಿದ ಶ್ರೀಮಂತರ ಆಸ್ತಿ ಈ ಸಂಸ್ಥೆಗೆ ಸೇರತಕ್ಕದ್ದೆಂದು ಕಾನೂನು ಜಾರಿಗೆ ಬಂತು. ಈ ಸಂಸ್ಥೆಯ ಆದಾಯ ಹೇರಳವಾಗಿತ್ತು. ಒಂದನೆಯ ಜಯಕೇಶಿಯ ಆಳಿಕೆಯಲ್ಲಿ ಗೋವ ರಾಜ್ಯ ಸರ್ವತೋಮುಖ ಅಭಿವೃದ್ಧಿ ಹೊಂದಿ ನೆಮ್ಮದಿಯ ಬೀಡಾಗಿತ್ತು. ಇವನ ಅನಂತರ 3ನೆಯ ಗುಹಿಲದೇವ ಮತ್ತು ವಿಜಯಾದಿತ್ಯ ಎಂಬುವರು ಅನುಕ್ರಮವಾಗಿ ಗೋವ ರಾಜ್ಯವನ್ನಾಳಿದರು.

ವಿಜಯಾದಿತ್ಯನ ಮರಣಾನಂತರ ಅವನ ಮಗನಾದ 2ನೆಯ ಜಯಕೇಶಿ ರಾಜನಾಗಿ 1104ರಿಂದ 1148ರ ವರೆಗೆ ಆಳಿದ. ಎರಡನೆಯ ಜಯಕೇಶಿಯ ಆಳಿಕೆಯಲ್ಲಿ ಗೋವ ರಾಜ್ಯ ಉನ್ನತಿಯ ಶಿಖರ ಮುಟ್ಟಿತು. ವಿವೇಕಿಯೂ ಪರಾಕ್ರಮಿಯೂ ಆದ ಜಯಕೇಶಿ



ಪಣಜಿಯ ಒಂದು ನೋಟ

ಕಲ್ಯಾಣಿ ಚಾಳುಕ್ಯರ ಅಧೀನತೆಯಿಂದ ಸ್ವತಂತ್ರನಾಗಲು ಹವಣಿಸಿ ಕೊಂಕಣ ಚಕ್ರವರ್ತಿ ಎಂಬ ಬಿರುದನ್ನು ಧರಿಸಿದ. ದೂರದರ್ಶಿಯಾದ ಚಾಳುಕ್ಯ ಸಾರ್ವಭೌಮ 6ನೆಯ ವಿಕ್ರಮಾದಿತ್ಯ ತನ್ನ ಮಗಳನ್ನು ಜಯಕೇಶಿಗೆ ಕೊಟ್ಟು ವಿವಾಹ ಮಾಡಿ ಗೋವ ಮತ್ತು ಕಲ್ಯಾಣಿ ಮನೆತನಗಳ ಮಧ್ಯೆ ಮಧುರ ಬಾಂಧವ್ಯವನ್ನು ಏರ್ಪಡಿಸಿದ. ವಿಕ್ರಮಾದಿತ್ಯನ ಮರಣಾನಂತರ ದೋರಸಮುದ್ರದ ಹೊಯ್ಸಳ ವಿಷ್ಣುವರ್ಧನ ಚಾಳುಕ್ಯ ಮಾಂಡಲಿಕರನ್ನು ಸೋಲಿಸಿ ಕೃಷ್ಣಾ ನದಿಯವರೆಗೂ ದಂಡೆತ್ತಿ ಹೋದ. ಅವನು ಜಯಕೇಶಿಯನ್ನು ಸೋಲಿಸಿ ಹಾನಗಲ್, ಹಲಸೀಗೆ ಮೊದಲಾದ ಪ್ರದೇಶಗಳನ್ನು ವಹಿಸಿಕೊಂಡ. ಆದರೆ 1142ರಲ್ಲಿ ವಿಷ್ಣುವರ್ಧನ ಮರಣ ಹೊಂದಿದ ಅನಂತರ ಜಯಕೇಶಿ ತಾನು ಕಳೆದುಕೊಂಡಿದ್ದ ಪ್ರದೇಶವನ್ನು ಪುನಃ ವಶಪಡಿಸಿಕೊಂಡ. ಜಯಕೇಶಿಯ ಆಳಿಕೆಯಲ್ಲಿ ಗೋವ ರಾಜ್ಯದಲ್ಲಿ ವ್ಯವಸ್ಥಿತ ಆಡಳಿತವಿದ್ದು ಜನರು ನೆಮ್ಮದಿಯಿಂದಿದ್ದರು. ಇವನ ಅನೇಕ ಶಾಸನಗಳಲ್ಲಿ ಆಡಳಿತ, ಸಾಮಾಜಿಕ ಜೀವನ ಮತ್ತು ಆರ್ಥಿಕ ಪುರೋಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಗಳು ದೊರೆಯುತ್ತವೆ. ಎರಡನೆಯ ಜಯಕೇಶಿಯ ಮರಣಾನಂತರ ಅವನ ಮಗ ಪೆರ್ಮಾಡಿದೇವ ರಾಜನಾದ. ಇವನಿಗೆ ಶಿವಚಿತ್ತ, ವಿಷ್ಣುಚಿತ್ತ ಎಂಬ ಹೆಸರುಗಳೂ ಇದ್ದುವು. ಇವನ ರಾಣಿಯಾದ ಕಮಲಾದೇವಿ ಗೋವದಲ್ಲಿ ಅನೇಕ ಅಗ್ರಹಾರಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದಳಲ್ಲದೆ ದೇಗಾಂವೆ ಎಂಬಲ್ಲಿ ಶ್ರೀ ಕಮಲನಾರಾಯಣ ಮತ್ತು ಶ್ರೀ ಮಹಾಲಕ್ಷ್ಮಿ ದೇವಾಲಯಗಳನ್ನು ಕಟ್ಟಿಸಿದಳು.

ಗೋವದ ಕದಂಬ ರಾಜರು 1156ರ ವರೆಗೂ ಕಲ್ಯಾಣಿ ಚಾಳುಕ್ಯರ ಸಾಮಂತರಾಗಿದ್ದರು. ಕಲ್ಯಾಣಿಯಲ್ಲಿ ರಾಜ್ಯ ವಿಪ್ಲವ ನಡೆದು ಕಳಚುರಿ ಬಿಜ್ಜಳ ಚಕ್ರವರ್ತಿಯಾದ ಅನಂತರ ಗೋವದ ರಾಜ ಸ್ವತಂತ್ರನಾದ. ಕಳಚುರಿಗಳ ಮತ್ತು ಹೊಯ್ಸಳರ ನಡುವೆ ಅನೇಕ ಯುದ್ಧಗಳು ನಡೆದು ಕಳಚುರಿಗಳ ಪ್ರಭಾವ ಕುಂದಿತು. ಹೊಯ್ಸಳ ವೀರಬಲ್ಲಾಳ 1182ರಲ್ಲಿ ಗೋವದ ರಾಜನನ್ನು ಸೋಲಿಸಿ ಕಪ್ಪಕಾಣಿಕೆ ಸ್ವೀಕರಿಸಿ ಆಶ್ರಿತ ರಾಜನನ್ನಾಗಿ ಮಾಡಿಕೊಂಡ. ಅನಂತರ ಸೇವುಣರಿಗೂ ಹೊಯ್ಸಳರಿಗೂ ದಖನಿನ ಸಾರ್ವಭೌಮತ್ವಕ್ಕಾಗಿ ಹೋರಾಟ ನಡೆಯಿತು. 1214ರ ಅನಂತರ ಗೋವದ ರಾಜನಾದ 3ನೆಯ ಜಯಕೇಶಿ ದೇವಗಿರಿಯ ಸಿಂಗಣನ ಆಶ್ರಿತ ರಾಜನಾದ. 1310ರಲ್ಲಿ ಮಲಿಕ್ ಕಾಫೂರನ ದಂಡಯಾತ್ರೆಯಿಂದ ದೇವಗಿರಿ ಸೇವುಣರ ಆಡಳಿತ ಕೊನೆಗೊಂಡಿತು. ಗೋವದ ರಾಜ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ. ಆದರೆ ಮಲಿಕ್ ಕಾಫೂರನು ಗೋವ ರಾಜ್ಯವನ್ನು ಸೂರೆಮಾಡಿ ರಾಜಧಾನಿಯನ್ನು ಆಕ್ರಮಿಸಿದ. ಅವನು ಹಿಂದಿರುಗಿದ ಅನಂತರ ಗೋವದ ರಾಜ ಚಂದ್ರಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಲುಪಕ್ರಮಿಸಿದ. 1350ರ ವೇಳೆಗೆ ಮಹಮದ್ ಬಿನ್ ತುಗಲಕನ ದಳಪತಿಯೊಬ್ಬ ಚಂದ್ರಪುರವನ್ನು ಮುತ್ತಿ ನಾಶಮಾಡಿದ. ಸಹಸ್ರಾರು ಮಂದಿ ಹಿಂದೂ ಸೈನಿಕರೂ ಗೋವದ ರಾಜಪರಿವಾರದವರೂ ಮರಣ ಹೊಂದಿದ್ದಾಗಿ ಇಬ್ನ್ ಬತೂತನ ಬರೆವಣಿಗೆಯಿಂದ ತಿಳಿದುಬರುತ್ತದೆ. ಸುಮಾರು 350 ವರ್ಷಗಳ ಗೋವ ಕದಂಬ ಮನೆತನ ಕೊನೆಗೊಂಡಿತು.

ದೋಣಿಯ ಮೂಲಕ ನದಿ ದಾಟುವುದು, ಗೋವದ ಒಂದು ಸಾಮಾನ್ಯ ದೃಶ್ಯ

ಗೋವ ರಾಜ್ಯ ಬಹುಕಾಲ ಮಹಮ್ಮದೀಯರ ಆಳಿಕೆಯಲ್ಲಿ ಉಳಿಯಲಿಲ್ಲ. ವಿಜಯನಗರದ ಹರಿಹರ ಮತ್ತು ಬುಕ್ಕರು ಗೋವ ಪ್ರಾಂತವನ್ನು ಮಹಮ್ಮದೀಯರ ಆಳಿಕೆಯಿಂದ ವಿಮೋಚನೆಗೊಳಿಸಿ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. 1470ರ ವರೆಗೂ ಗೋವ ವಿಜಯನಗರ ಸಾಮ್ರಾಜ್ಯದ ಭಾಗವಾಗಿತ್ತು. ಅನಂತರ ಬಿಜಾಪುರದ 2ನೆಯ ಮಹಮ್ಮದನ ಮಂತ್ರಿಯಾದ ಮಹಮದ್ ಗವಾನ ಗೋವವನ್ನು ಗೆದ್ದು ಬಿಜಾಪುರ ರಾಜ್ಯಕ್ಕೆ ಸೇರಿಸಿಕೊಂಡ. ಸ್ವಲ್ಪ ಕಾಲ ಆದಿಲ್‌ಷಾಹಿ ಆಡಳಿತ ಮುಂದುವರಿಯಿತು. ಅನಂತರ ಅದು ಪೋರ್ಚುಗೀಸರ ವಶವಾಯಿತು. ಆಲ್ಬರ್ಕರ್ಕ್ 1510ರಲ್ಲಿ ಗೋವವನ್ನು ಪೋರ್ಚುಗೀಸರ ವಸಾಹತಾಗಿ ಮಾರ್ಪಡಿಸಿದ. ಆದರೆ ಅದೇ ವರ್ಷ ಆಗಸ್ಟ್ 15ರ ಸಮಯಕ್ಕೆ ಬಿಜಾಪುರದ ಯೂಸುಫ್ ಆದಿಲ್‌ಷಹ ಅವನನ್ನು ಸೋಲಿಸಿದ. ಪುನಃ ಆಲ್ಬರ್ಕರ್ಕ್ ಸ್ವಲ್ಪ ಕಾಲದಲ್ಲೇ ಗೋವವನ್ನು ವಶಪಡಿಸಿಕೊಂಡು ಪೋರ್ಚುಗೀಸರ ಆಡಳಿತವನ್ನು ಸ್ಥಾಪಿಸಿದ. ಅಂದಿನಿಂದ ಗೋವ ಪೋರ್ಚುಗೀಸರ ವಸಾಹತಾಯಿತು. ಕ್ರಮೇಣ ದೀವ್ ಮತ್ತು ದಮನ್‌ಗಳ ಮೇಲೂ ಪೋರ್ಚುಗೀಸರು ಅಧಿಕಾರ ಸ್ಥಾಪಿಸಿದರು.

ಮರಾಠರು ಹಲವು ಸಾರಿ ಗೋವವನ್ನು ಮುತ್ತಿದರು. ಆದರೂ ಗೋವದ ಮೇಲೆ ಪೋರ್ಚುಗೀಸರ ಆಡಳಿತ 450 ವರ್ಷಗಳ ಕಾಲ ಮುಂದುವರಿಯಿತು. ಗೋವದಲ್ಲಿ ಕ್ರೈಸ್ತಮತ ವಿಶೇಷವಾಗಿ ಪ್ರಚಾರವಾಯಿತು. 17ನೆಯ ಶತಮಾನದಲ್ಲಿ ಗೋವವನ್ನು ಸಂದರ್ಶಿಸಿದ್ದ ಪಾಶ್ಚಾತ್ಯ ಪ್ರವಾಸಿಯೊಬ್ಬ ಗೋವ ಪಟ್ಟಣ ಕ್ರೈಸ್ತ ದೇವಾಲಯಗಳಿಂದಲೂ ಮಠಗಳಿಂದಲೂ ಸುಂದರವಾದ ಭವನಗಳಿಂದಲೂ ಐಶ್ವರ್ಯದಿಂದಲೂ ತುಂಬಿತುಳುಕುವ ನಗರಗಳಲ್ಲೊಂದಾಗಿದೆಯೆಂದು ಪ್ರಶಂಸಿಸಿದ್ದ.

ಪೋರ್ಚುಗೀಸರ ದಬ್ಬಾಳಿಕೆಯ ವಿರುದ್ಧವಾಗಿ ಅಲ್ಲಿಯ ಜನ ಸುಮಾರು 20 ಸಂದರ್ಭಗಳಲ್ಲಿ ದಂಗೆಯೆದ್ದಿದ್ದರು. ಆದರೆ ಪೋರ್ಚುಗೀಸ್ ಸರ್ಕಾರ ದಂಗೆಯನ್ನು ಉಗ್ರವಾಗಿ ಹತ್ತಿಕ್ಕಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಾರಂಭವಾದ ರಾಷ್ಟ್ರೀಯ ಚಳವಳಿ ಗೋವವನ್ನೂ ಕ್ರಮೇಣ ಪ್ರವೇಶಿಸಿತು. ಮಹಾತ್ಮ ಗಾಂಧಿ ಭಾರತ ರಾಷ್ಟ್ರೀಯ ಚಳವಳಿಯ ನಾಯಕತ್ವವನ್ನು ವಹಿಸಿದ ಕೂಡಲೇ ಗೋವದಲ್ಲೂ ಚಳವಳಿಗೆ ಕರೆಕೊಟ್ಟರು. 1928ರಲ್ಲಿ ಗೋವದಲ್ಲಿ ಸ್ವಾತಂತ್ರ್ಯ ಚಳವಳಿಗಾಗಿ ಸಮಿತಿಯೊಂದು ಸ್ಥಾಪಿತವಾಯಿತು. 1930ರಲ್ಲಿ ಗೋವ ಕಾಂಗ್ರೆಸ್ ಸಮಿತಿಯನ್ನು ಸ್ಥಾಪಿಸಲಾಯಿತು. ಪೋರ್ಚುಗೀಸ್ ಸರ್ಕಾರ ಗೋವದಲ್ಲಿ ಚಳವಳಿಗಳನ್ನು ಉಗ್ರವಾಗಿ ಹತ್ತಿಕ್ಕಿತು.

1947ರಲ್ಲಿ ಭಾರತ ಸ್ವತಂತ್ರವಾದ ಅನಂತರ ಭಾರತ ಸರ್ಕಾರ ಗೋವ ಪ್ರದೇಶದಿಂದ ಪೋರ್ಚುಗಲ್ ತನ್ನ ಆಡಳಿತವನ್ನು ತೆರವು ಮಾಡಬೇಕೆಂದು ಸೂಚಿಸಿತು. ಆದರೂ ಪೋರ್ಚುಗೀಸ್ ಸರ್ಕಾರ ಬಿಗಿಮುಷ್ಟಿಯ ವಸಾಹತು ನೀತಿಯನ್ನು ಮುಂದುವರಿಸಿತು. ದೆಹಲಿ ಮತ್ತು ಲಿಸ್ಬನ್‌ಗಳ ನಡುವೆ ಅನೇಕ ಸುತ್ತಿನ ಮಾತುಕತೆಗಳು ನಡೆದರೂ ಪ್ರಯೋಜನ ವಾಗಲಿಲ್ಲ. 1947ರಿಂದ 1954ರ ವರೆಗೆ ನಡೆದ ವಿಮೋಚನಾ ಹೋರಾಟದ ಮುಖಂಡ ರನ್ನು ಪೋರ್ಚುಗೀಸ್ ಸರ್ಕಾರ ವರ್ಣನಾತೀತ ಶಿಕ್ಷೆಗಳಿಗೆ ಗುರಿ ಮಾಡಿತು. ಪೋರ್ಚುಗಲ್ ಮತ್ತು ಭಾರತದ ಮಧ್ಯೆ ರಾಜತಾಂತ್ರಿಕ ಸಂಬಂಧ 1955ರಲ್ಲಿ ಕಡಿದುಬಿತ್ತು. ಅದೇ ವರ್ಷ ಗೋವ ವಿಮೋಚನೆಗಾಗಿ ಶಾಂತಿಯುತ ಚಳವಳಿ ಪ್ರಾರಂಭವಾಯಿತು. ಚಳವಳಿ 1961ರ ವರೆಗೂ ಸತತವಾಗಿ ಮುಂದುವರಿಯಿತು. ಪೋರ್ಚುಗಲ್ ಸರ್ಕಾರ ಅನೇಕ ಸತ್ಯಾಗ್ರಹಿಗಳನ್ನು ಗುಂಡಿಟ್ಟು ಕೊಂದಿತು. ಮುಖಂಡರನ್ನು ನಾನಾಬಗೆಯ ಚಿತ್ರಹಿಂಸೆಗಳಿಗೆ ಗುರಿಪಡಿಸಿತು. ಸರ್ಕಾರದ ಉಗ್ರನೀತಿ ಮತ್ತು ದಂಡನೆಗಳು ಮುಂದುವರಿದುವು. ಭಾರತ ಸರ್ಕಾರದ ಸಂಯಮವನ್ನು ಪೋರ್ಚುಗಲ್ಲಿನ ವಸಾಹತು ನೀತಿ ಅಲುಗಿಸಿತು. ಪೋರ್ಚುಗೀಸ್ ಸೈನಿಕರು ಗೋವದ ಗಡಿಯಲ್ಲಿ ಭಾರತದ ಹಳ್ಳಿಗಳನ್ನು ಲೂಟಿ ಮಾಡಲುಪಕ್ರಮಿಸಿದರು. ಕೊನೆಗೆ 1961ರ ಡಿಸೆಂಬರ್ 17–18ರ ಮಧ್ಯರಾತ್ರಿಯ ವೇಳೆಗೆ ಪೋರ್ಚುಗೀಸರ ಆಡಳಿತಕೇಂದ್ರವಾದ ಪಣಜಿಯನ್ನು ಭಾರತ ಸೈನ್ಯ ಸುತ್ತುಗಟ್ಟಿತು. ಅಲ್ಲಿದ್ದ ಪೋರ್ಚುಗೀಸ್ ದಳಗಳು ಭಾರತೀಯ ಸೈನ್ಯಕ್ಕೆ ಶರಣಾಗತವಾದುವು. ಕೇವಲ 36 ಗಂಟೆಗಳಲ್ಲಿ ಹೋರಾಟ ಕೊನೆಗೊಂಡಿತು. ಪೋರ್ಚುಗೀಸ್ ಆಳಿಕೆಯಿಂದ ಗೋವ ವಿಮೋಚನೆಗೊಂಡಿತು. ಡಿಸೆಂಬರ್ 20ರಂದು ಗೋವ ಭಾರತದಲ್ಲಿ ವಿಲೀನವಾಯಿತು. **(ಜಿ.ಆರ್.ಆರ್.)**

**ವಾಸ್ತುಶಿಲ್ಪ:** ಪಶ್ಚಿಮ ಕರಾವಳಿಯಲ್ಲಿದ್ದು ಭೌಗೋಳಿಕವಾಗಿಯೂ ಚಾರಿತ್ರಿಕವಾಗಿಯೂ ವಿಶಿಷ್ಟ ಸ್ಥಾನವನ್ನು ಪಡೆದಿರುವ ಗೋವದ ವಾಸ್ತುಶಿಲ್ಪ ದೇಶೀಯ ಮತ್ತು ವಿದೇಶೀಯ ಪ್ರಭಾವಗಳಿಗೆ ಒಳಗಾಗಿರುವುದು ಸ್ವಾಭಾವಿಕ. ಇಲ್ಲಿಯ ವಾಸ್ತುಶಿಲ್ಪ ಬೆಳವಣಿಗೆಯ ಕುರುಹುಗಳು ಅತಿ ಪ್ರಾಚೀನಕಾಲದಿಂದಲೂ ಕಂಡುಬರುತ್ತವೆ. ಆದರೆ 16ನೆಯ ಶತಮಾನದಲ್ಲಿ ಈ ಪ್ರಾಂತವನ್ನಾಕ್ರಮಿಸಿಕೊಂಡ ಪೋರ್ಚುಗೀಸರ ಕಾಲದಲ್ಲಿ ನಡೆದ ಕ್ರೈಸ್ತಮತ ಪ್ರಚಾರದ ಫಲವಾಗಿ ನೂರಾರು ದೇವಾಲಯಗಳು ನೆಲಸಮವಾದವು. ಈ ಸ್ಥಳಗಳಲ್ಲಿ ಚರ್ಚುಗಳು ನಿರ್ಮಿತವಾದವು. ಆದ್ದರಿಂದ ಗೋವದಲ್ಲಿ ಪುರಾತನ ವಾಸ್ತುಶಿಲ್ಪ ಮಾದರಿಗಳು ಕೆಲವೇ ಉಳಿದಿವೆ. ಅಲ್ಲಲ್ಲಿ ಮುರಿದುಬಿದ್ದಿರುವ ಮೂರ್ತಿಗಳು ಮತ್ತು ಇತರ ಶಿಲ್ಪಗಳಿಂದ ಮಾತ್ರ ಅವನ್ನು ತಿಳಿದುಕೊಳ್ಳಲು ಸಾಧ್ಯ. ಪೋರ್ಚುಗೀಸರಿಂದ ನಾಶಗೊಂಡ ಕೆಲವು ದೇವಾಲಯಗಳ ಮೂಲಮೂರ್ತಿಗಳನ್ನು ಬೇರೆಡೆಗೆ ಕೊಂಡೊಯ್ದು ಅವುಗಳಿಗಾಗಿ ಕಟ್ಟಿಸಿದ ದೇವಾಲಯಗಳು ಕೆಲವು ಗೋವದಲ್ಲಿ ಈಚೆಗೆ ಬೆಳೆದುಬಂದ ವಾಸ್ತು ಮಾದರಿಯನ್ನು ಸೂಚಿಸುತ್ತವೆ. ಮುಸ್ಲಿಂ ಶೈಲಿಯ ಕೆಲವು ಕಟ್ಟಡಗಳನ್ನು ಗೋವವನ್ನು ಗೆದ್ದ ಆದಿಲ್‌ಷಾಹಿ ಮನೆತನದವರು ಕಟ್ಟಿಸಿದರೂ ಪೋರ್ಚುಗೀಸರು ಹಲವು ಕಟ್ಟಡಗಳನ್ನು ನಾಶಮಾಡಿ ಮತ್ತೆ ಕೆಲವನ್ನು ಮಾರ್ಪಡಿಸಿ ಸಚಿವಾಲಯಗಳನ್ನಾಗಿ, ಕಚೇರಿಗಳನ್ನಾಗಿ ಮಾಡಿಕೊಂಡರು. ಪೋರ್ಚುಗೀಸರು ಕಟ್ಟಿಸಿದ ಕೆಲವು ಚರ್ಚುಗಳು ಮತ್ತು ಇತರ ಕಟ್ಟಡಗಳು ಸುಂದರವಾಗಿವೆ; ಗೋವದಲ್ಲಿ ಪ್ರೇಕ್ಷಣೀಯ ಸ್ಮಾರಕಗಳಾಗಿ ನಿಂತಿವೆ.

ಪ್ರಸಕ್ತಶಕದ ಆದಿಕಾಲದಲ್ಲೇ ಗೋವದಲ್ಲಿ ವಾಸ್ತುಶಿಲ್ಪ ಆರಂಭವಾದ್ದನ್ನು ಕಾಣಬಹುದು. ಹರವಳೆ ಎಂಬಲ್ಲಿ ಗುಡ್ಡವನ್ನು ಕೊರೆದು ನಿರ್ಮಿಸಿರುವ ಗುಹೆಗಳಿವೆ. ಇವುಗಳಲ್ಲಿ ದೊರೆತ ಬ್ರಾಹ್ಮಿಲಿಪಿಯ ಶಾಸನ 1ನೆಯ ಶತಮಾನಕ್ಕೆ ಸೇರಿದ್ದು. ಇದೇ ಗೋವದ ಅತ್ಯಂತ ಪ್ರಾಚೀನ ಶಾಸನ. ಕೋಲ್ವಲೆಯ ಬಳಿ ಬೌದ್ಧಮೂರ್ತಿಯೊಂದು ದೊರೆತಿದೆ. ಈ ಪ್ರಾಂತದಲ್ಲಿ ಬೌದ್ಧಶಿಲ್ಪ ಇದ್ದದ್ದಕ್ಕೆ ಕುರುಹಾಗಿ ಉಳಿದಿದೆ. ಚಂದ್ರವರ್ಮನೆಂಬ ರಾಜ ಶಿವಪುರದಲ್ಲಿಯ ಬೌದ್ಧ ಮಹಾವಿಹಾರವೊಂದಕ್ಕೆ ದತ್ತಿ ಬಿಟ್ಟುದಾಗಿ 5ನೆಯ ಶತಮಾನದ ಶಾಸನವೊಂದು ತಿಳಿಸುತ್ತದೆ. ರಾಷ್ಟ್ರಕೂಟರ ಸಾಮಂತರಾಗಿ ವಲಿಪುರದಿಂದ ಆಳುತ್ತಿದ್ದ ಶಿಲಹಾರರು ನೆತರ್ಲೆ ಎಂಬಲ್ಲಿ ಮಹಾಲಕ್ಷ್ಮಿಯ ದೇವಾಲಯವೊಂದನ್ನು ನಿರ್ಮಿಸಿದ್ದರು. ಕಲ್ಯಾಣಿ ಚಾಳುಕ್ಯರ ಸಾಮಂತರಾಗಿ ಮೊದಲು ಚಂದ್ರಪುರದಿಂದಲೂ ಅನಂತರ ಗೋವ

ಬಾಮ್ ಜೀಸಸ್ ಬೆಸಿಲಿಕ, ಹಳೆಯ ಗೋವ

ಪಟ್ಟಣ ಅಥವಾ ಗೋವಪುರಿಯಿಂದಲೂ ಆಳುತ್ತಿದ್ದ ಗೋವೆ ಕದಂಬರು ಅನೇಕ ದೇವಾಲಯಗಳನ್ನು ಕಟ್ಟಿಸಿದ್ದರು. ಸವಾಯ್‌ವೆರೆ ಎಂಬಲ್ಲಿ ಮೂರ್ತಿನಾರಾಯಣನ ದೇವಾಲಯ, ಗೋವಪುರಿಯಲ್ಲಿ ಸರಸ್ವತಿ ದೇವಾಲಯ, ದೇಗಾಂವೆಯಲ್ಲಿ ಕಮಲನಾರಾಯಣ ಮತ್ತು ಮಹಾಲಕ್ಷ್ಮಿ ದೇವಾಲಯಗಳು–ಇವೇ ಮೊದಲಾದವು ಇವರ ಕಾಲದಲ್ಲಿ ನಿರ್ಮಿತವಾದುವು. ಆದರೆ ಬೆಳಗಾಂವಿ ಜಿಲ್ಲೆಯ ದೇಗಾಂವೆಯಲ್ಲಿರುವ

ಮಂಗೇಶ ದೇವಾಲಯ

ಸುಂದರವಾದ ಕಮಲನಾರಾಯಣ ದೇವಾಲಯವನ್ನು ಬಿಟ್ಟರೆ ಬೇರೆ ದೇವಾಲಯಗಳು ಉಳಿದುಬಂದಿಲ್ಲ. ಸಪ್ತಕೋಟೀಶ್ವರ ಈ ರಾಜರ ಆರಾಧ್ಯದೇವತೆ. ಶ್ರೀಸಪ್ತಕೋಟಿಶಲಬ್ಧವರವೀರ ಎಂಬುದು ಇವರ ಬಿರುದುಗಳಲ್ಲೊಂದು. ದೀವರ್ ದ್ವೀಪದ ಬಳಿ ನಾರ್ವೆಯಲ್ಲಿ ಇವರು ಸಪ್ತಕೋಟೀಶ್ವರ ದೇವಾಲಯವನ್ನು ಕಟ್ಟಿಸಿದ್ದರು. ವಿಜಯನಗರದ ಮಾಧವ ಮಂತ್ರಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದ. ಪೋರ್ಚುಗೀಸರಿಂದ ಇದು ನಾಶವಾದ ಮೇಲೆ ಸಪ್ತಕೋಟೀಶ್ವರಲಿಂಗವನ್ನು ಬಿಳಿಚೊಂಡಲ್ಲಿಯ ನಾರ್ವೆಯಲ್ಲಿ ಪ್ರತಿಷ್ಠಾಪಿಸಿದ್ದರು. ಮುಂದೆ ಶಿವಾಜಿ ಈಗ ಇರುವ ದೇವಾಲಯವನ್ನು ನಿರ್ಮಿಸಲು ಕಾರಣನಾದ. ಕದಂಬ ಜಯಕೇಶಿಯ ಆಳಿಕೆಯಲ್ಲಿ ಮಂತ್ರಿಯಾಗಿದ್ದ ಛದಮ ಎಂಬ ಅರಬ್ ವ್ಯಾಪಾರಿ ಗೋವಪುರಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ್ದ.

ಯಾದವರ ಕಾಲದಲ್ಲಿ ಹೇಮಾಡ್‌ಪಂಥ್ ಶೈಲಿಯ ಹಲವು ದೇವಾಲಯಗಳನ್ನು ಗೋವದಲ್ಲಿಯೂ ಕಟ್ಟಿದ್ದಿರಬೇಕು. ಬಹುಶಃ ಈ ಕಾಲದಲ್ಲಿ ನಿರ್ಮಿತವಾಗಿದ್ದು ಇನ್ನೂ

ಉಳಿದುಬಂದಿರುವ ಪ್ರಾಚೀನ ದೇವಾಲಯವೆಂದರೆ ತಾಂಬಡಿ–ಸುರ್ಲ ಎಂಬಲ್ಲಿ ದಟ್ಟ ಕಾಡಿನ ನಡುವೆ ನಿಂತಿರುವ ಮಹದೇವ ದೇವಾಲಯ ಒಂದೇ. ಚಾಳುಕ್ಯಶೈಲಿಯಲ್ಲಿ ಸರಳವಾಗಿ ಕಟ್ಟಿರುವ ಈ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪ ಮತ್ತು ಭೋಗಮಂಟಪಗಳೂ ಎರಡು ಅಂತಸ್ತುಗಳ ಕಲ್ಲುಗೋಪುರವೂ ಇವೆ. ಇದನ್ನು ಬಿಟ್ಟರೆ ಕೇರಿ ಎಂಬಲ್ಲಿ ಬೇತಾಳ ದೇವಾಲಯದಲ್ಲಿರುವ ಗಜಲಕ್ಷ್ಮೀ, ಪರ್ಸೆಯಲ್ಲಿರುವ ಬ್ರಹ್ಮನ ಮೂರ್ತಿ, ಕೇರಿವರೆ ಕಾಡಿನಲ್ಲಿ ಬಿದ್ದಿರುವ ನಾರಾಯಣನ ವಿಗ್ರಹ, ಕುಡ್ನೆಯಲ್ಲಿರುವ ಸೂರ್ಯಬಿಂಬ, ಉಮಾಸಹಿತ ಶಿವ, ಸೇಂಟ್ ಫ್ರಾನ್ಸಿಸ್ ಕತೀಡ್ರಲಿನ ವಸ್ತುಸಂಗ್ರಹಾಲಯ ದಲ್ಲಿರುವ ಕೆಲವು ಮೂರ್ತಿಗಳು ಮುಂತಾದವು ಆ ಕಾಲದ ಶಿಲ್ಪದ ಮಾದರಿಗಳಾಗಿ ಉಳಿದುಬಂದಿವೆ.

ಪೋರ್ಚುಗೀಸರು ನಾಶಮಾಡಿದ ದೇವಾಲಯಗಳಿಂದ ಮೂರ್ತಿಗಳನ್ನು ಬೇರೆ ಕಡೆಗೆ ಸಾಗಿಸಿ ಕಟ್ಟಿರುವ 16 ನೆಯ ಶತಮಾನದಿಂದೀಚಿನ ಕಟ್ಟಡಗಳಲ್ಲಿ ಕುಶಸ್ಥಲಿಯಲ್ಲಿದ್ದು ಪ್ರಿಯೋಲಿಗೆ ವರ್ಗಾಯಿಸಿದ ಮಂಗೇಶದೇವಾಲಯ, ಕದಲಿವನದಿಂದ ಕವಲೆಗೆ ಬದಲಾಯಿಸಿದ ಶಾಂತದುರ್ಗ ದೇವಾಲಯ, ನಾರ್ವೆಯಲ್ಲಿರುವ ಸಪ್ತಕೋಟೀಶ್ವರ, ಮರ್ಡೋಲಿನ ಮಹಾಲಸ ದೇವಿಯ ಆಲಯ, ಕೊಲ್ವದಲ್ಲಿದ್ದು ಬಾಂದೋರಕ್ಕೆ ಬದಲಾಯಿಸಿದ ಮಹಾಲಕ್ಷ್ಮೀ ದೇವಾಲಯ, ಚಂದ್ರನಾಥ ಬೆಟ್ಟದ ಮೇಲಿರುವ ಚಂದ್ರನಾಥ ದೇವಾಲಯ– ಇವನ್ನು ಹೆಸರಿಸಬಹುದು. ಹಲವು ಶೈಲಿಗಳ ಸಂಮಿಶ್ರಣವನ್ನು ಈ ಕಟ್ಟಡಗಳಲ್ಲಿ ಕಾಣಬಹುದು. ಒಳಭಾಗದಲ್ಲಿ ಹಲವು ಕಂಬಗಳಿರುವ ಭೋಗಮಂಟಪ, ಜಗತಿಗಳು, ದೇವಾಲಯದ ಒಳಗೂ ಸುತ್ತಲೂ ಹಾಸುಗಲ್ಲುಗಳನ್ನು ಹಾಕಿಸುವುದು ಮುಂತಾದವುಗಳಲ್ಲಿ ವಿಜಯನಗರದ ಶೈಲಿಯ ಪ್ರಭಾವ ಕಂಡುಬಂದರೆ, ಹಲವು ದೇವಾಲಯಗಳ ಹೊರನೋಟದಲ್ಲಿ ಮುಸ್ಲಿಂ ಶೈಲಿಯ ಪ್ರಭಾವ ಎದ್ದುಕಾಣುತ್ತದೆ. ಈ ಕೆಲವು ದೇವಾಲಯಗಳನ್ನು ಅವುಗಳ ಮೇಲಿನ ಕಲಶಗಳಿಂದ ಮಾತ್ರ ದೇವಾಲಯಗಳೆಂದು ಗುರುತಿಸಬೇಕಾಗುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಗೋವದ ದೇವಾಲಯಗಳಲ್ಲಿ ಲ್ಯಾಟಿನ್ ಶೈಲಿಯ ಪ್ರಭಾವವನ್ನೂ ವಿಶೇಷವಾಗಿ ಕಾಣಬಹುದು. ದೇವಸ್ಥಾನಗಳ ಮುಂದೆ ಹಲವು ಅಂತಸ್ತುಗಳಲ್ಲಿ ನೇರವಾಗಿ ಮೇಲೆದ್ದಿರುವ ಭವ್ಯವಾದ ಗೋಪುರಗಳಿರುವುದು ಇಲ್ಲಿಯ ದೇವಾಲಯಗಳ ಒಂದು ವಿಶೇಷ. ಮರಾಠಾ ರಾಜನಾದ, ಸಾತಾರೆಯ ಸಾಹು ರಾಜ ಕಟ್ಟಿಸಿದ ಶಾಂತದುರ್ಗ ದೇವಾಲಯದ ಕಂಬಗಳು ಮತ್ತು ಒಳಭಾಗದ ಅಲಂಕರಣಗಳು ಸುಂದರವಾಗಿವೆ. 17 ನೆಯ ಶತಮಾನದ ಆದಿಭಾಗದಲ್ಲಿ ಮರ್ಡೋಲಿನಲ್ಲಿ ಕಟ್ಟಿರುವ ಮಹಾಲಸದೇವಿಯ ಆಲಯದಲ್ಲಿರುವ, ಮರದಲ್ಲಿ ಕೆತ್ತಿರುವ ಶಿಲ್ಪ ಅತ್ಯಂತ ಸುಂದರವಾಗಿದೆ.



ಕವಲೆಯ ಶಾಂತದುರ್ಗಾ ದೇವಾಲಯ

ಮುಸ್ಲಿಂ ಶೈಲಿಯ ಕಟ್ಟಡಗಳಲ್ಲಿ ಅತ್ಯಂತ ಭವ್ಯವಾಗಿದ್ದದ್ದು ಗೋವೆಯ ಆದಿಲ್‍ಷಹ ಕಟ್ಟಿಸಿದ ರಾಜವಾಡೆ. ಕೆಲವು ಮಾರ್ಪಾಟುಗಳನ್ನು ಹೊಂದಿ ಡಿ–ಪೆಲೇಶಿಯೊ–ಇದಾಲ್ಗಿಯೊ ಎಂಬ ಹೆಸರಿಂದ ಇಂದಿಗೂ ಅದು ಉಪಯೋಗದಲ್ಲಿದೆ. ಮಸೀದಿಗಳು ಕೆಲವು ಚರ್ಚುಗಳಾಗಿ ಮಾರ್ಪಟ್ಟಿವೆ. ಉಳಿದ ಕಟ್ಟಡಗಳು ನಾಶವಾಗಿವೆ.

ಸೆ ಪ್ರಿಮೇಶಿಯಲ್ ಡಿ ಗೋವಾ ಅಥವಾ ಸೆ ಕತೀಡ್ರಲ್ ಎಂಬುದು ಗೋವದ ಚರ್ಚುಗಳಲ್ಲಿ ಪುರಾತನವೂ ಭವ್ಯವೂ ಆದದ್ದು. ಆಲ್ಬುಕರ್ಕ್ ಹಳೆಯ ಗೋವೆಯನ್ನು ಗೆದ್ದಾಗ ಸೇಂಟ್ ಕ್ಯಾದರಿನ್ ನೆನಪಿಗಾಗಿ ಕಟ್ಟಲು ಆಲೋಚಿಸಿದ್ದ ಚರ್ಚು ಇದು. ಇದನ್ನು ಕಟ್ಟಿ ಪೂರೈಸಲು 75 ವರ್ಷಗಳಿಗೂ ಹೆಚ್ಚು ಕಾಲವಾಯಿತು. ಭವ್ಯತೆಯಲ್ಲಿ ಇದನ್ನು ಮೀರಿಸಿದ ಕಟ್ಟಡ ಗ್ರೇಟ್ ಬ್ರಿಟನಿನಲ್ಲಿ ಕೂಡ ಇಲ್ಲವೆನ್ನಲಾಗಿದೆ. ಹೊರಭಾಗ ಟಸ್ಕನ್ ಮತ್ತು ಡೋರಿಕ್ ಶೈಲಿಗಳಲ್ಲೂ ಒಳಭಾಗ ಕಾರಿಂತಿಯನ್ ಶೈಲಿಯಲ್ಲೂ ನಿರ್ಮಿತವಾಗಿರುವ ಈ ಕಟ್ಟಡ ಅದರ ಗಾತ್ರ ಮತ್ತು ಅಳತೆಗೆ ಹೆಸರಾದ್ದು. ಇದರ ಒಂದು ಭಾಗದ ಗೋಪುರ ಈಗ ಬಿದ್ದುಹೋಗಿದೆ. ಈ ಚರ್ಚಿನ ಒಳಭಾಗ ಅತ್ಯಂತ ರಮಣೀಯವಾಗಿದೆ. ಇಷ್ಟೇ ರಮಣೀಯವೂ ಭವ್ಯವೂ ಆಗಿರುವ ಸೇಂಟ್ ಕೆಸರನ್ ಚರ್ಚು ರೋಮಿನಲ್ಲಿರುವ ಸೇಂಟ್ ಪೀಟರನ ಬೆಸಿಲಿಕದಂತಿದೆ ; ಇದು ಕಾರಿಂತಿಯನ್ ಶೈಲಿಯಲ್ಲಿದೆ. ಹಳೆಯ ಗೋವದಲ್ಲಿರುವ ಬಾಮ್ ಜೀಸಸ್ ಚರ್ಚು ಅತ್ಯಂತ ಪ್ರಸಿದ್ಧವಾದ್ದು. ಇಲ್ಲೇ ಸೇಂಟ್ ಝೇವಿಯರನ ಸಮಾಧಿಯಿದೆ. ಇಲ್ಲಿಯ ಕಂಚಿನ ಕೆತ್ತನೆ ಆಕರ್ಷಕವಾದ್ದು. ಇದರ ಭಿತ್ತಿಯ ಮೇಲೆ ಝೇವಿಯರನ ಜೀವನಕ್ಕೆ ಸಂಬಂಧಿಸಿದ ಹಲವು ಚಿತ್ರಗಳಿವೆ. ಗೋವದಲ್ಲಿ ಗಾತಿಕ್ ಶೈಲಿಯಲ್ಲಿ ಕಟ್ಟಿರುವ ಅದ್ಭುತವಾದ ವಾಸ್ತು ಇದು. 1517 ರಲ್ಲಿ ಫ್ರಾನ್ಸಿಸ್ಕನರು ಕಟ್ಟಿಸಿದ ಸೇಂಟ್ ಫ್ರಾನ್ಸಿಸ್ ಕತೀಡ್ರಲ್ ಮೆನುಲಿನ್ ಶೈಲಿಯ ಉತ್ಕೃಷ್ಟ ಶಿಲ್ಪವನ್ನೊಳಗೊಂಡಿದೆ. ಹಿಂದೆ ಪೋರ್ಚುಗೀಸರು ಭಗ್ನಗೊಳಿಸಿದ್ದ ದೇವಾಲಯಗಳಿಂದ ತಂದಿಟ್ಟಿರುವ ಮೂರ್ತಿಗಳು ಇರುವುದು ಈ ಕಟ್ಟಡದಲ್ಲೇ. ಇದು ಒಂದು ವಸ್ತುಸಂಗ್ರಹಾಲಯವಾಗಿ ಮಾರ್ಪಟ್ಟಿದೆ. ಗೋವದಲ್ಲಿ ಅತ್ಯಂತ ಎತ್ತರವಾದ ಕಟ್ಟಡ ಸೇಂಟ್ ಮೋನಿಕ ಕಾನ್ವೆಂಟ್. ಮೂರು ಅಂತಸ್ತುಗಳಿರುವ ಇದರ ಗೋಡೆಗಳ ಮೇಲೆ ಬೈಬಲಿನ ಅನೇಕ ಪ್ರಸಂಗಗಳನ್ನು ಭಿನ್ನಭಿನ್ನ ವರ್ಣಗಳಲ್ಲಿ ಚಿತ್ರಿಸಲಾಗಿದೆ. ಗೋವ ವೆಲ್ಹಾದ ಗುಡ್ಡವೊಂದರ ಮೇಲೆ ಪಿಲಾಡ್ ಮೊನಾಸ್ಟರಿ ಇದೆ. ಇದರ ವಿಶಾಲವಾದ ಒಳ ಅಂಗಳದಲ್ಲಿ ಅತಿ ಸುಂದರವಾಗಿ ಕಂಡರಿಸಿರುವ ಕಂಬವೊಂದು ನಿಂತಿದೆ. 1541 ರಲ್ಲಿ ನಿರ್ಮಿಸಿದ ಉನ್ನತವಾದ ಸೇಂಟ್ ಪಾಲ್ಸ್ ಕಾಲೇಜಿನ ಒಂದು ಭಾಗ ಮಾತ್ರ ಬೀಳದೆ ನಿಂತಿದೆ.

ಗೋವದ ಮನೆಗಳಲ್ಲೂ ಲ್ಯಾಟಿನ್ ಶೈಲಿಯ ಪ್ರಭಾವವನ್ನು ಗುರುತಿಸಬಹುದು. ಆ ಪಟ್ಟಣವನ್ನು ನೋಡಿದರೆ ಲ್ಯಾಟಿನ್ ನಗರದಂತೆಯೇ ಕಾಣುತ್ತದೆ. (ಎಂ.ಎಚ್.)

**ಗೋವರ್ಧನ :** ಒಂದು ಪರ್ವತ. ಯಮುನಾ ನದೀತೀರದಲ್ಲಿ ಬೃಂದಾವನದ ಹತ್ತಿರವಿದೆ. ಒಮ್ಮೆ ನಂದಗೋಕುಲದ ಗೊಲ್ಲರು ಇಂದ್ರನಿಗಾಗಿ ಒಂದು ಯಾಗವನ್ನು ಏರ್ಪಡಿಸಬೇಕೆಂದು ಸಂಕಲ್ಪಿಸಿದ್ದರು. ಯಾಗದ ಬದಲು ಗೋವರ್ಧನ ಗಿರಿಯನ್ನೇ ಪೂಜಿಸಬೇಕೆಂದು ಶ್ರೀಕೃಷ್ಣ ಗೊಲ್ಲರಿಗೆ ಸೂಚಿಸಿದ. ಅವರು ಕೃಷ್ಣನ ಸೂಚನೆಯಂತೆ ಗಿರಿಯನ್ನು ಪೂಜಿಸಲು ಅಣಿಯಾದರು. ಆಗ ಇಂದ್ರ ಕ್ರುದ್ಧನಾಗಿ ಗೋಕುಲ ಮುಳುಗಿಹೋಗುವಂತೆ ಮಳೆ ಸುರಿಸಲಾರಂಭಿಸಿದ. ಆಗ ಕೃಷ್ಣ ತನ್ನ ಕಿರಿಬೆರಳಿನಿಂದ ಆ ಪರ್ವತವನ್ನು ಎತ್ತಿ ಕೊಡೆಯಂತೆ ಹಿಡಿದು ಅದರ ಕೆಳಗೆ ಗೊಲ್ಲರು ಮತ್ತು ಅವರ ದನಕರುಗಳು ರಕ್ಷಣೆ ಪಡೆವಂತೆ ಮಾಡಿದ. ಇದು ಕೃಷ್ಣ ಎಸಗಿದ ಪವಾಡಗಳಲ್ಲಿ ಒಂದು. ಇದರಿಂದಾಗಿ ಕೃಷ್ಣನನ್ನು ಗೋವರ್ಧನ ಗಿರಿಧಾರಿ, ಗಿರಿಧರ ಮುಂತಾಗಿ ಭಕ್ತರು ಸ್ತುತಿಸಿದ್ದಾರೆ. ಈ ವಿಚಾರವಾಗಿ ಹರಿವಂಶ, ವಿಷ್ಣು ಪುರಾಣ, ಭಾಗವತ ಮತ್ತು ಭಾರತಗಳಲ್ಲಿ ಪ್ರಸ್ತಾಪಿಸಲಾಗಿದೆ. (ಜಿ.ಎಚ್.)

**ಗೋವರ್, ಜಾನ್ :** ಸು. 1330–1408. ಐರೋಪ್ಯ ಮಧ್ಯಯುಗದ ನಾಲ್ಕು ಪ್ರಸಿದ್ಧ ಆಂಗ್ಲ ಕವಿಗಳಲ್ಲೊಬ್ಬ. ಉಳಿದವರು ಚಾಸರ್, ಲಿಡ್ಗೇಟ್ ಮತ್ತು ಲ್ಯಾಂಗ್ಲೆಂಡ್.

ಗೋವರನ ಜೀವನದ ಬಗ್ಗೆ ಖಚಿತವಾಗಿ ಗೊತ್ತಿರುವ ವಿವರಗಳು ಹೆಚ್ಚಿಲ್ಲ. ಈತ ಕೆಂಟ್ ಎಂಬಲ್ಲಿ ಹುಟ್ಟಿದ. ಹಳ್ಳಿಯ ವತನದಾರನೋ ವರ್ತಕನೋ ಆಗಿ ಬದುಕು ನಡೆಸಿದ್ದಿರಬೇಕೆಂಬುದು ಈಚಿನ ಅಭಿಪ್ರಾಯ. ಸಾಕಷ್ಟು ಅನುಕೂಲ ಸ್ಥಿತಿಯಲ್ಲಿಯೇ ಬಾಳಿದ್ದಿರಬೇಕು. ಧರ್ಮಸಂಸ್ಥೆಗಳಿಗೆ ಉದಾರವಾಗಿ ದಾನ ಮಾಡುತ್ತಿದ್ದ. ವಿರಾಗಿಯಾಗಬೇಕಿದ್ದ ಎಪ್ಪತ್ತರ ಮುಪ್ಪಿನಲ್ಲಿ ಅಗ್ನೆಸ್ ಗ್ರೌಂಡೋಲ್ಫ್ ಎಂಬುವಳನ್ನು ಮದುವೆಯಾದ. ಅನಂತರ ಮೂರು ವರ್ಷಗಳಲ್ಲಿಯೇ ಕುರುಡನಾಗಿ, ಅದಾದ ಏಳು ವರ್ಷಗಳಿಗೆ ಗತಿಸಿದ. ಮುಂಚೆಯೇ ಒಂದು ಮದುವೆಯಾಗಿದ್ದ, ಮುಪ್ಪಿನಲ್ಲಾದದ್ದು ಎರಡನೆಯ ಮದುವೆ ಎಂಬ ಊಹೆಯೂ ಇದೆ.

ಚಾಸರ್ ಮತ್ತು ಗೋವರ್ ತುಂಬ ಸ್ನೇಹದಿಂದಿದ್ದುದು ಕಂಡುಬರುತ್ತದೆ. ಚಾಸರ್ ಒಮ್ಮೆ ಪರದೇಶಕ್ಕೆ ಹೋಗಬೇಕಾದ ಸಂದರ್ಭದಲ್ಲಿ ಇವನನ್ನು ತನ್ನ ಆಸ್ತಿಗೆ ಅಧಿಕಾರಿಯನ್ನಾಗಿ ನಿಯಮಿಸಿದ್ದುಂಟು. ಚಾಸರ್ ತನ್ನ ಟ್ರಾಯಿಲಸ್ ಮತ್ತು ಕ್ರಿಸಿಡೆ ಎಂಬ ಕಥೆಯ ಮುಮ್ಮಾತಿನಲ್ಲಿ ಗೋವರ್‍ನನ್ನು ನೀತಿಶಾಲಿ ಗೋವರ್ ಎಂದು ಶ್ಲಾಘಿಸಿದ್ದಾನೆ. ವರ್ತಕನ ಕಥೆಯ ಮುದುಕ ಜನವರಿ ಗೋವರ್‍ನ ವ್ಯಂಗ್ಯ ಚಿತ್ರವೆಂತಲೂ ಕೊಂಚ ಕಾಲ ಇವರಿಬ್ಬರಿಗೂ ಮನಸ್ತಾಪ ಉಂಟಾಗಿದ್ದಿತೆಂಬುದಕ್ಕೆ ಇದೇ ಸಾಕ್ಷಿಯೆಂತಲೂ ಒಂದು ಹೇಳಿಕೆ ಇದೆ. ಇದು ಪಾಕ್ಷಿಕ ಕಲ್ಪನೆ. ಸಲಿಗೆಯ ವಿನೋದ ಒಂದುಂಟೆಂಬುದನ್ನು ನೆನಪಿನಲ್ಲಿಡಬೇಕು.

ನೀತಿಶಾಲಿ ಎಂಬ ಪದ ಗೋವರನ ಕೃತಿಗಳಿಗೂ ಸಲ್ಲುತ್ತದೆ. ಈತನ ಮುಖ್ಯ ಕೃತಿಗಳು ಮೂರು – ಲ್ಯಾಟಿನ್ ಭಾಷೆಯ ವಾಕ್ಸ್ ಕ್ಲೆಮ್ಯಾಂಟಿಸ್ (10,000 ಸಾಲು), ಫ್ರೆಂಚ್‍ನ ಸ್ಪೆಕ್ಯುಲಂ ಮೆಡಿಟ್ಯಾಂಟಿಸ್ (20,000 ಸಾಲು) ಮತ್ತು ಇಂಗ್ಲಿಷ್‍ನ ಕನ್‍ಫೆಸಿಯೋ ಅಮ್ಯಾಂಟಿಸ್ (34,000 ಸಾಲು). ಅನೇಕ ಶತಮಾನಗಳು ಅನುಪಲಬ್ಧವಾಗಿದ್ದ ಈತನ ಫ್ರೆಂಚ್ ಕೃತಿ 1895 ರಲ್ಲಿ ಕೇಂಬ್ರಿಜ್‍ನಲ್ಲಿ ಸಿಕ್ಕಿತು. ಮತಧರ್ಮದ ಭಾಷೆ, ನಾಗರಿಕ

ಆಡಳಿತ ಭಾಷೆ ಮತ್ತು ದೇಶೀಯ ಭಾಷೆ–ಮೂರರಲ್ಲೂ ಈತ ಕೃತಿರಚನೆ ಮಾಡಿರುವುದು ಗಮನಾರ್ಹ ಸಂಗತಿ. ಆಗ ದೇಶೀಯ ಭಾಷೆಯಾದ ಇಂಗ್ಲಿಷ್‌ಗೆ ಆದ್ಯ ಸ್ಥಾನವಿರಲಿಲ್ಲ. ಮೂರರಲ್ಲೂ ಈತ ನೀತಿಬೋಧಕ ಕಿರುಗವನಗಳನ್ನೂ ರಚಿಸಿದ್ದಾನೆ. ಲ್ಯಾಟಿನಿನ ರಚನೆಗಳು ಬಹಳಮಟ್ಟಿಗೆ, ಎರಡನೆಯ ರಿಚರ್ಡನ ಆಳಿಕೆಯ ಅಸಂತುಷ್ಟಿ, 1381ರ ರೈತ ಚಳವಳಿ ಮತ್ತು ಮುಂದೆ ಬರಲಿದೆಯೆಂದು ನಿರೀಕ್ಷಿಸಲಾಗಿದ್ದ, ನಾಲ್ಕನೆಯ ಹೆನ್ರಿಯ ಕಾಲದ, ಸುಖದಿನದ ವರ್ಣನೆಗಳಾಗಿವೆ. ಫ್ರೆಂಚ್‌ನಲ್ಲಿ ರೂಪುಗೊಂಡ ಕೃತಿ ವೈವಾಹಿಕ ಜೀವನದ ಹಿರಿಮೆಯನ್ನು ಹೊಗಳುವ ಗಂಭೀರ ರಚನೆಯಾಗಿದೆ.

ಜಾನ್ ಗೋವರ್, ವಾಕ್ಸ್ ಕ್ಲೆಮ್ಯಾಂಟಿಸ್ ಎಂಬ ಲ್ಯಾಟಿನ್ ಕಾವ್ಯದ ಹಸ್ತಪ್ರತಿಯೊಂದರಲ್ಲಿನ ಕಿರುಚಿತ್ರ, ಲಂಡನ್ನಿನ ಬ್ರಿಟಿಷ್ ಮ್ಯೂಸಿಯಮಿನಲ್ಲಿದೆ

ಇವನ ಕನ್‌ಫೆಸಿಯೊ ನಿಜಕ್ಕೂ ಬೃಹತ್ಕೃತಿ ಕೂಡ. ಇವನ ಪಾಲಿಗೆ ಮಹತ್ಕೃತಿ ಕೂಡ. ದೊರೆ ಎರಡನೆಯ ರಿಚರ್ಡನ ಅಪೇಕ್ಷೆಯಂತೆ ಇದನ್ನು ರಚಿಸಿದುದಾಗಿ ತಿಳಿಯಬರುತ್ತದೆ. ಕಾವ್ಯದ ಮುಮ್ಮಾತಿನಲ್ಲಿ, ಎಂದಿನಂತೆ ಕಾಲ ಕೆಟ್ಟಿತು, ಎಲ್ಲೆಲ್ಲೂ ಪಾಪ ತುಂಬಿತು, ಮುಂತಾಗಿ ಗೋಳಾಡಿ, ಸದ್ಯಕ್ಕಾದರೂ ಆ ವಿಷಯವನ್ನು ಬಿಟ್ಟು ಹೆಚ್ಚು ಆಹ್ಲಾದಕರವಾದ ಪ್ರೇಮದ ವಿಷಯಕ್ಕೆ ಬರೋಣವೆಂದು ಸಾರಿ ಕವಿ ಕಥೆಯನ್ನು ಪ್ರಾರಂಭಿಸುತ್ತಾನೆ. ಒಂದು ವಸಂತ ಪ್ರಾತಃಕಾಲದಲ್ಲಿ ಕವಿ ಯಾವುದೋ ವನಕ್ಕೆ ಹೋದಾಗ ಪ್ರೇಮದೇವತೆಗಳಾದ ಕ್ಯುಪಿಡ್ ಮತ್ತು ವೀನಸ್ ಎದುರಾದರಂತೆ. ಕ್ಯುಪಿಡ್ ಸುಮ್ಮನೆ ಹೊರಟು ಹೋಗಬೇಕೆಂದಿದ್ದರೂ ತನ್ನ ಆರಾಧಕನನ್ನು ಉಪೇಕ್ಷಿಸುವುದಕ್ಕೆ ಮನಸ್ಸಾಗದ ವೀನಸ್ ಇವನನ್ನು ಮಾತಾಡಿಸಿ ಆತ್ಮನಿವೇದನೆ ಮತ್ತು ಕ್ಷಮಾರ್ಜನೆಗೋಸ್ಕರ ಇವನನ್ನು ಜೀನಿಯಸ್ ಬಳಿಗೆ ಕಳಿಸಿದಳಂತೆ. ಆಗ ಜೀನಿಯಸ್ ಇವನಿಗೆ ಕೊಟ್ಟ ಉಪದೇಶದ ದೃಷ್ಟಾಂತ ಕಥೆಗಳೇ ಇದರ ತಿರುಳು. ಕೆಲವಕ್ಕೆ ಪ್ರಾಚೀನ ರೋಮನ್ ಕವಿ ಓವಿಡ್ ಆಧಾರ. ಉಳಿದವು ಆಗಿನ ಕಾಲದಲ್ಲಿ ಜನಜನಿತವಾಗಿದ್ದಂಥವು. ದಿ ಟೇಲ್ ಆಫ್ ಕಾನ್ಸ್ಟನ್ಸ್ ಮತ್ತು ದಿ ಟೇಲ್ ಆಫ್ ಫ್ಲಾರೆಂಟ್ ಚಾಸರನಲ್ಲಿ ಕ್ರಮಶಃ ದಿ ಟೇಲ್ ಆಫ್ ಸಮನರ್ (ನ್ಯಾಯಗಾರನ ಕಥೆ) ಮತ್ತು ದಿ ವೈಫ್ ಆಫ್ ಬಾತ್ಸ್ ಟೇಲ್ ಎಂದಾಗುತ್ತದೆ. ಆದರೆ ಇವನು ಕಥನ ಕಲೆಯಲ್ಲಿ ಚಾಸರನ ಸಮಕ್ಕೆ ಹಾಗಿರಲಿ ಹತ್ತಿರಕ್ಕೂ ಬರಲಾರ. ಇಲ್ಲಿನ ಟೈರ್ ನಗರದ ಅಪೋಲೋನಿಯಸ್ ಮುಂದೆ ಷೇಕ್ಸ್‌ಪಿಯರನ ಪೆರಿಕ್ಲೀಸ್‌ಗೆ ವಸ್ತುವನ್ನೊದಗಿಸಿತೆಂದು ಹೇಳಲಾಗಿದೆ.

ಗೋವರ್ ಬೃಹತ್ಸಾಹಿತಿ ಹೌದು; ಆದರೆ ಇಂದಿನ ರುಚಿಗೆ ಒಗ್ಗುವುದು ಕಷ್ಟ; ತೀರ ನೀರಸ, ಮಂದ, ಭಾರ. (ಆರ್.ಎನ್.ಎ.ಜಿ.)

**ಗೋವಿಂದ (ಒರಿಸ್ಸದ) :** ಒರಿಸ್ಸದಲ್ಲಿ ಆಳಿದ ಸೂರ್ಯವಂಶದ ಗಜಪತಿ ಅರಸನಾದ ಪ್ರತಾಪರುದ್ರದೇವನ ಸೇನಾಪತಿ. ಸು. 1540 ರಲ್ಲಿ ಅರಸ ಮರಣ ಹೊಂದಿದ ಬಳಿಕ ಆತನ ಇಬ್ಬರು ಮಕ್ಕಳಾದ ಕಲುವದೇವ ಮತ್ತು ಕಖರವದೇವರನ್ನು ಕೊಲ್ಲಿಸಿ ಗಜಪತಿ ರಾಜ್ಯವನ್ನು ಗೋವಿಂದ ಆಕ್ರಮಿಸಿದ. ಇದು ನಡೆದದ್ದು 1541ರ ಸೆಪ್ಟೆಂಬರ್ ಮತ್ತು 1542ರ ಸೆಪ್ಟೆಂಬರ್ ನಡುವೆ ಎಂಬುದು ಪುರಿಯ ಜಗನ್ನಾಥ ದೇವಾಲಯದಲ್ಲಿಯ ಶಾಸನವೊಂದರಿಂದ ತಿಳಿದುಬರುತ್ತದೆ.

ಬಂಗಾಳದಲ್ಲಿ ಸುಲ್ತಾನನಾದ ಅಲಾವುದೀನ್ ಹುಸೇನ್ ಷಹ ಆಳುತ್ತಿದ್ದಾಗ, ಸು. 1508–09 ರಲ್ಲಿ ಶಾಹ ಇಸ್ಮಾಯಿಲ್ ಘಾಜಿ ಒರಿಸ್ಸದ ಮೇಲೆ ದಂಡೆತ್ತಿ, ಪುರಿಯ ಜಗನ್ನಾಥ ಮತ್ತು ಇತರ ದೇವಾಲಯಗಳನ್ನು ಭಗ್ನಗೊಳಿಸಿ ಅಲ್ಲಿಯ ಸಂಪತ್ತನ್ನು ದೋಚಿದ. ಇದೇ ಸಮಯದಲ್ಲಿ ಪ್ರತಾಪರುದ್ರ ವಿಜಯನಗರದ ಕೃಷ್ಣದೇವರಾಯನ ವಿರುದ್ಧ ದಂಡೆತ್ತಿದ. ಆದರೆ ಈ ವಿಷಯವನ್ನರಿತ ಕೂಡಲೇ ರಾಜಧಾನಿಗೆ ಹಿಂದಿರುಗಿದ. ಹಿಮ್ಮೆಟ್ಟಿದ್ದ ಶತ್ರುಸೇನೆಯನ್ನು ಬೆನ್ನಟ್ಟಿ ಹೂಗ್ಲಿ ಜಿಲ್ಲೆಯ ಮಾಂದಾರನ್ ಕೋಟೆಯನ್ನು ಮುತ್ತಿದನಾದರೂ ಈತನ ಸೇನಾನಿಯಾದ ಗೋವಿಂದನ ಮೋಸಕ್ಕೆ ಸಿಲುಕಿ ಶಾಹನೊಡನೆ ಒಪ್ಪಂದ ಮಾಡಿಕೊಂಡು ಹಿಂದಿರುಗಬೇಕಾಯಿತು.

ಇದೇ ಗೋವಿಂದನೇ ಅನಂತರ ಪ್ರತಾಪರುದ್ರನ ಮಕ್ಕಳನ್ನು ಕೊಲೆಮಾಡಿ ತಾನೇ ಒರಿಸ್ಸದಲ್ಲಿ ಆಳತೊಡಗಿದ. ಈ ಹೆಚ್ಚಿನ ವಿವರಗಳು ನಮಗೆ ತಿಳಿದಿರುವುದು ಜಗನ್ನಾಥ ದೇವಾಲಯದ ವೃತ್ತಾಂತವೆನಿಸಿದ ಮಾದಲಾಪಾಂಜಿಯಿಂದ ಮಾತ್ರ. ಈತ ಸುಮಾರು 7 ವರ್ಷಗಳ ಕಾಲ ಆಳಿದ. ಈತನ ಬಳಿಕ ಈತನ ಮಗನೂ ಇವನ ಇಬ್ಬರು ಮಕ್ಕಳೂ ಅನುಕ್ರಮವಾಗಿ 1559 ರವರೆಗೆ ಆಳಿದರು. ಈತ ಭೋಯಿ ಮನೆತನಕ್ಕೆ ಸೇರಿದವನು.

(ಜಿ.ಬಿ.ಆರ್.)

**ಗೋವಿಂದ (ರಾಷ್ಟ್ರಕೂಟ) :** ಕರ್ನಾಟಕವನ್ನಾಳಿದ ರಾಷ್ಟ್ರಕೂಟ ಅರಸರಲ್ಲಿ ಗೋವಿಂದ ಎಂಬ ಹೆಸರಿನ ದೊರೆಗಳು ನಾಲ್ವರು. ಒಂದನೆಯ ಗೋವಿಂದನ ಆಳಿಕೆಯ ಕಾಲ ಮತ್ತು ಇತರ ವಿವರಗಳು ತಿಳಿದಿಲ್ಲ. ರಾಷ್ಟ್ರಕೂಟ ರಾಜವಂಶವನ್ನು ಸ್ಥಾಪಿಸಿದ ದಂತಿದುರ್ಗನ ಎಲ್ಲೋರ ಶಾಸನದಲ್ಲಿ ಅವನ ಪೂರ್ವಿಕರ ಹೆಸರುಗಳನ್ನು ಕೊಟ್ಟಿದೆ. ಅವರಲ್ಲಿ ಮೊದಲಿಗ ದಂತಿವರ್ಮ. ಅವನ ಮಗ 1ನೆಯ ಇಂದ್ರ. ಇಂದ್ರನ ಮಗ ಗೋವಿಂದರಾಜ. ಇವನೇ 1ನೆಯ ಗೋವಿಂದನೆಂದು ಪರಿಗಣಿಸಲಾಗಿದೆ. ಗೋವಿಂದನ ಮಗ, ಮೊಮ್ಮಗ, ಮರಿಮಗ ಅನುಕ್ರಮವಾಗಿ 1ನೆಯ ಕರ್ಕ, 2ನೆಯ ಇಂದ್ರ ಮತ್ತು ದಂತಿದುರ್ಗ. ಅನಂತರ ಆಳಿದ ಅರಸರಲ್ಲಿ ಗೋವಿಂದ ಎಂಬ ಹೆಸರಿನವರು ಮೂವರು. ಇವರು ಅನುಕ್ರಮವಾಗಿ 2ನೆಯ, 3ನೆಯ ಮತ್ತು 4ನೆಯ ಗೋವಿಂದ ಎನಿಸಿಕೊಂಡಿದ್ದಾರೆ. ಇವರನ್ನು ಕುರಿತ ಮುಖ್ಯ ಅಂಶಗಳನ್ನು ಮುಂದೆ ಕೊಡಲಾಗಿದೆ. *

**ಗೋವಿಂದ II:** ರಾಷ್ಟ್ರಕೂಟ ವಂಶದ ದೊರೆ (ಸು.774–80). ಒಂದನೆಯ ಕೃಷ್ಣರಾಜನ ಜ್ಯೇಷ್ಠ ಪುತ್ರ. ಈತನಿಗೆ ಪ್ರಭೂತವರ್ಷ, ವಿಕ್ರಮಾವಲೋಕ, ಪ್ರತಾಪಾವಲೋಕ ಎಂಬ ಬಿರುದುಗಳಿದ್ದುವು.

ಗೋವಿಂದ ತನ್ನ ತಂದೆ ಕೃಷ್ಣರಾಜನ ಕಾಲದಲ್ಲೇ ಗಂಗರು ಮತ್ತು ವೆಂಗಿ ಚಾಳುಕ್ಯರ ಮೇಲೆ ಹೋರಾಡಿ ವೀರಯೋಧನೆಂದು ಖ್ಯಾತಿ ಹೊಂದಿದ್ದ. ತಾನೇ ರಾಜನಾದ ಮೇಲೆ ಗೋವರ್ಧನ ಪ್ರಾಂತವನ್ನು (ನಾಸಿಕ ಜಿಲ್ಲೆ) ವಶಪಡಿಸಿಕೊಂಡನೆಂದೂ ಪಾರಿಜಾತ ರಾಜನನ್ನು ಸೋಲಿಸಿದನೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಹಿಂದೆ ರಾಷ್ಟ್ರಕೂಟ ರಾಜ್ಯದ ಒಳಗೆ ಇದ್ದ ಗೋವರ್ಧನ ಪ್ರಾಂತವನ್ನೇಕೆ ಇವನು ವಶಪಡಿಸಿಕೊಳ್ಳಬೇಕಾಯಿತು ಮತ್ತು ಪಾರಿಜಾತ ಯಾರು ಎಂಬುದು ತಿಳಿಯದು. ಗೋವಿಂದ ಚಕ್ರಾಧಿಪತ್ಯವನ್ನು ವಹಿಸಿಕೊಂಡ ಪ್ರಾರಂಭದಲ್ಲಿ ರಾಜ್ಯ ಸಂಘಟನಾಕಾರ್ಯದಲ್ಲಿ ಉತ್ಸಾಹ ತೋರಿಸಿದರೂ ಕ್ರಮೇಣ ರಾಜ್ಯ ಪರಿಪಾಲನೆಯಲ್ಲಿ ಅನಾಸಕ್ತನಾಗಿ, ಸುಖಲೋಲುಪನಾಗಿದ್ದ. ಅಷ್ಟೇ ಅಲ್ಲದೆ ಇವನ ಆಳಿಕೆಯ ಬಹುಕಾಲ ಪೂರ್ತ ಅಧಿಕಾರವನ್ನು ಭದ್ರಪಡಿಸಿಕೊಳ್ಳುವುದರಲ್ಲೇ ಕಳೆಯಿತು. ಅಧಿಕಾರ ಮದದಿಂದ ದುಷ್ಟಚಟಗಳಿಗೆ ಬಲಿಯಾದ ಗೋವಿಂದ ಪ್ರಜೆಗಳ ಹಾಗೂ ಸಾಮಂತರ ಕೋಪಕ್ಕೆ ಬೇಗನೆ ಗುರಿಯಾದ. ನಾಸಿಕ ಪ್ರಾಂತದಲ್ಲಿ ಇವನ ಅಧೀನನಾಗಿ ಆಳುತ್ತಿದ್ದ ಇವನ ತಮ್ಮ ಧ್ರುವ ಈ ಅವಕಾಶವನ್ನು ಉಪಯೋಗಿಸಿಕೊಂಡು ರಾಜ್ಯಾಡಳಿತದ ಸೂತ್ರವನ್ನು ಕಸಿದುಕೊಳ್ಳಲು ಹವಣಿಸಿದ. ಅಣ್ಣನನ್ನು ಧಿಕ್ಕರಿಸಿ ತನ್ನ ಹೆಸರಿನಲ್ಲಿಯೇ ಶಾಸನವನ್ನು ಹೊರಡಿಸಲು ಪ್ರಾರಂಭಿಸಿದ. ಇದನ್ನರಿತ ಗೋವಿಂದ ಧ್ರುವನನ್ನು ಅಧಿಕಾರ ಸ್ಥಾನದಿಂದ ತಳ್ಳಿ ತಾನೇ ಅಧಿಕಾರವನ್ನು ವಹಿಸಿಕೊಂಡ. ಧ್ರುವ ಅಣ್ಣನ ವಿರುದ್ಧ ದಂಗೆ ಎದ್ದ. ಗೋವಿಂದ ಕಂಚಿ, ಗಂಗವಾಡಿ, ವೆಂಗಿ, ಮಾಳವ ಮೊದಲಾದ ರಾಜರುಗಳ ನೆರವನ್ನು ಯಾಚಿಸಿ ಧ್ರುವನೊಡನೆ ಯುದ್ಧಕ್ಕೆ ಸಿದ್ಧನಾದ. ಆದರೆ ರಾಷ್ಟ್ರಕೂಟ ವೈರಿಗಳತ್ತ ಇವನು ನೆರವಿಗೆ ಕೈಚಾಚಿದ್ದರಿಂದ ಇವನ

ಮಂತ್ರಿ ಸಾಮಂತರೂ ಧ್ರುವನ ಪಕ್ಷ ವಹಿಸಿದರು. ವೆಂಗಿಯ ವಿಷ್ಣುವರ್ಧನ ಧ್ರುವನ ಮಾವನಾದುದರಿಂದ ಗೋವಿಂದನ ನೆರವಿಗೆ ಬರಲಿಲ್ಲ. ಉಳಿದ ರಾಜರ ಸಹಾಯ ಬರುವುದಕ್ಕೆ ಮೊದಲೇ ಧ್ರುವ ಗೋವಿಂದನನ್ನು ಸೋಲಿಸಿ ರಾಜ್ಯಾಧಿಕಾರವನ್ನು ಕಿತ್ತುಕೊಂಡು ರಾಷ್ಟ್ರಕೂಟ ಸಾಮ್ರಾಜ್ಯದ ಅಧಿಪತಿಯಾದ. ಗೋವಿಂದ 780ರಲ್ಲಿ ಯುದ್ಧರಂಗದಲ್ಲೇ ಅಸುನೀಗಿರಬೇಕೆಂದು ತೋರುವುದು. (ಎಸ್.)

**ಗೋವಿಂದ III:** ರಾಷ್ಟ್ರಕೂಟ ವಂಶದ ಪ್ರಖ್ಯಾತ ರಾಜ (ಸು.793–814). ಧ್ರುವನ ಮೂರನೆಯ ಮಗ. ಪ್ರಭೂತವರ್ಷ, ಜಗತ್ತುಂಗ, ಜನವಲ್ಲಭ, ಕೀರ್ತಿನಾರಾಯಣ, ಜಗತ್‌ರುದ್ರ, ತ್ರಿಭುವನಧವಳ ಎಂಬ ಬಿರುದುಗಳನ್ನು ಹೊಂದಿದ್ದ. ತನ್ನ ತಂದೆ ಧ್ರುವನ ಇಚ್ಛೆಯಂತೆ ಅವನ ಅನಂತರ ರಾಷ್ಟ್ರಕೂಟ ಸಿಂಹಾಸನವನ್ನೇರಿದ. ಇವನು ರಾಜನಾದ ಮೇಲೆ ಇವನ ಅಣ್ಣ ರಣಾವಲೋಕ ಸ್ತಂಭ ಸ್ವಲ್ಪಕಾಲ ತೆಪ್ಪಗಿದ್ದರೂ ತಮ್ಮನ ಏಳಿಗೆಯನ್ನು ಸಹಿಸಲಿಲ್ಲ. ತನ್ನನ್ನು ಬಿಟ್ಟು ತಮ್ಮನಿಗೆ ತಂದೆ ಪಟ್ಟಗಟ್ಟಿದುದರಿಂದ ಮೊಳೆತ ಅಸೂಯೆ ಹೆಮ್ಮರವಾಗಿ ಬೆಳೆಯತೊಡಗಿತು. ತಮ್ಮನಿಂದ ಅಧಿಕಾರವನ್ನು ಕಸಿದುಕೊಳ್ಳಲು ಕಂಚಿಯವರೆಗಿನ ಹನ್ನೆರಡು ಮಂದಿ ಸಾಮಂತರನ್ನು ಒಂದುಗೂಡಿಸಿ ಗೋವಿಂದನ ವಿರೋಧವಾಗಿ ಒಂದು ಮಹತ್ತರ ಕೂಟವನ್ನು ರಚಿಸಿದ. ಅವರಲ್ಲಿ ಕಂಚಿಯ ದಂತಿಗ, ನೊಳಂಬವಾಡಿಯ ಚಾರುಪೊನ್ನೇರ ಮತ್ತು ಬನವಾಸಿಯ ಕತ್ತಿಯರ ಮುಖ್ಯರು. ಅಲ್ಲದೆ ಗೋವಿಂದನ ಕೆಲವರು ಮಂತ್ರಿಗಳೂ ಸ್ತಂಭನ ಪರವಾಗಿದ್ದರು. 788ರಲ್ಲಿ ಗಂಗರಾಜ ಶ್ರೀಪುರುಷ ಮರಣಹೊಂದಿದಾಗ ಅವನ ಅನಂತರ ಪಟ್ಟಕ್ಕೆ ಬರಬೇಕಾಗಿದ್ದ ಶಿವಮಾರ ರಾಷ್ಟ್ರಕೂಟ ಕಾರಾಗೃಹದಲ್ಲಿ ಬಂದಿಯಾಗಿದ್ದ. ಗೋವಿಂದ ರಣಾವಲೋಕನನ್ನು ಸದೆಬಡಿಯುವುದಕ್ಕೆ ಅನುಕೂಲವಾಗಲೆಂದು ಶಿವಮಾರನನ್ನು ಬಿಡುಗಡೆಮಾಡಿ ಅವನ ರಾಜ್ಯಕ್ಕೆ ಕಳುಹಿಸಿಕೊಟ್ಟ. ಆದರೆ ಶಿವಮಾರ ರಣಾವಲೋಕ ಸ್ತಂಭನ ಪಕ್ಷಕ್ಕೆ ಸೇರಿಕೊಂಡ. ಗೋವಿಂದ ಸ್ತಂಭನ ದಂಗೆಯನ್ನಡಗಿಸಲು ನಿರತನಾದ. ಸ್ತಂಭನಿಗೆ ಮಿತ್ರರಾಜರಿಂದ ಸಹಾಯ ಬರುವುದಕ್ಕೆ ಮೊದಲೇ ಅವನನ್ನು ಸೆರೆಹಿಡಿದ. ಆದರೆ ಅವನ ತಪ್ಪನ್ನು ಕ್ಷಮಿಸಿ ಪುನಃ ಗಂಗವಾಡಿಯ ಮಾಂಡಲಿಕನನ್ನಾಗಿ ನೇಮಿಸಿದ. ಶಿವಮಾರನನ್ನು ಪುನಃ ಕಾರಾಗೃಹಕ್ಕೆ ತಳ್ಳಿದ. ಅನಂತರ ಗೋವಿಂದ ಕಂಚಿಯ ದಂತಿಗನ ಮೇಲೆ ದಂಡೆತ್ತಿಹೋಗಿ ಅವನನ್ನು ಸೋಲಿಸಿದ; ನೊಳಂಬವಾಡಿಯ ಚಾರುಪೊನ್ನೇರ ಶರಣಾಗತನಾದ. 796ರ ಹೊತ್ತಿಗೆ ಗೋವಿಂದ ಇವೆಲ್ಲ ದಿಗ್ವಿಜಯಗಳನ್ನು ನಿರ್ವಹಿಸಿ ದಕ್ಷಿಣಾಪಥದ ಏಕೈಕ ಪ್ರಭುವಾದ.

ಇತ್ತ ತನ್ನ ಅಧಿಕಾರ ನಿರ್ಬಾಧಿತವಾದ ಮೇಲೆ ಗೋವಿಂದ ತನ್ನ ದೃಷ್ಟಿಯನ್ನು ಉತ್ತರ ಭಾರತಕ್ಕೆ ಹರಿಸಿದ (ಸು.798–800). ಗೋವಿಂದನ ತಂದೆ ಧ್ರುವ ಉತ್ತರ ಭಾರತದ ದಂಡಯಾತ್ರೆಯಿಂದ ಹಿಂತಿರುಗಿ ಬಂದಮೇಲೆ ಬಂಗಾಲದ ಧರ್ಮಪಾಲ ಕನೂಜನ್ನು ಗೆದ್ದುಕೊಂಡು ಚಕ್ರಾಯುಧನನ್ನು ಕನೂಜಿನ ರಾಜನನ್ನಾಗಿ ಮಾಡಿ ತಾನು ಉಚ್ಛ್ರಾಯಸ್ಥಿತಿಗೆ ಏರಿದ್ದ. ಆದರೆ ಸ್ವಲ್ಪಕಾಲದಲ್ಲಿಯೇ ಗೂರ್ಜರ ಪ್ರತೀಹಾರ ರಾಜ ಇಮ್ಮಡಿ ನಾಗಭಟ ಪುನಃ ಕನೂಜನ್ನು ಗೆದ್ದುಕೊಂಡು ಚಕ್ರಾಯುಧನನ್ನು ಓಡಿಸಿದನಲ್ಲದೆ, ಆತನ ಸಹಾಯಕ್ಕೆ ಬಂದ ಧರ್ಮಪಾಲನನ್ನೂ ಹಿಮ್ಮೆಟ್ಟಿಸಿದ್ದ. ಈ ಸಮಯದಲ್ಲಿ ಗೋವಿಂದ ಕನೂಜಿನ ಮೇಲೆ ದಂಡೆತ್ತಿಹೋದ. ನಾಗಭಟನಿಗೂ ಮತ್ತು ಗೋವಿಂದನಿಗೂ ಪ್ರಾಯಶಃ ಝಾನ್ಸಿ, ಗ್ವಾಲಿಯರ್ ಪ್ರಾಂತಗಳ ನಡುವೆ ಯುದ್ಧವಾಯಿತು. ಚಕ್ರಾಯುಧ, ಧರ್ಮಪಾಲ ಇಬ್ಬರೂ ಗೋವಿಂದನಿಗೆ ಶರಣಾದರು. ಅನಂತರ ಗೋವಿಂದನ ಸೈನ್ಯ ಹಿಮಾಲಯದ ತಪ್ಪಲಿನವರೆಗೂ ದಂಡೆತ್ತಿ ಹೋಗಿ ನಾನಾ ರಾಜವಂಶಗಳ ರಾಜರನ್ನು ಸದೆಬಡಿದು, ಕರ್ನಾಟಕದ ಕೀರ್ತಿ ಪ್ರತಾಪಗಳನ್ನು ಹಿಮಾಲಯಪರ್ಯಂತ ಹರಡಿತು. ಗೋವಿಂದ ಕೈಗೊಂಡ ಉತ್ತರ ಭಾರತದ ದಂಡಯಾತ್ರೆ ಕೇವಲ ದಿಗ್ವಿಜಯ ರೂಪವಾಗಿತ್ತು. ಕೀರ್ತಿ ಮತ್ತು ಕೋಶವೃದ್ಧಿಯಾಯಿತೆ ವಿನಾ ರಾಜ್ಯವಿಸ್ತಾರವೇನೂ ಆದಂತೆ ತೋರುವುದಿಲ್ಲ. ಈ ಹಿಂದಿನಿಂದಲೂ ರಾಷ್ಟ್ರಕೂಟಾಧೀನದಲ್ಲಿದ್ದ ಮಾಳವ ಗುಜರಾತ್ ಪ್ರದೇಶಗಳನ್ನು ಭದ್ರಪಡಿಸಿಕೊಳ್ಳಲೋಸುಗ ಸಮರ್ಥ ಯೋಧನಾಗಿದ್ದ ತನ್ನ ತಮ್ಮ ಇಂದ್ರನಿಗೆ ಆ ಪ್ರಾಂತಗಳ ಅಧಿಕಾರವನ್ನು ವಹಿಸಿದ. ಈ ದಂಡಯಾತ್ರೆಯಿಂದ ಹಿಂದಿರುಗುತ್ತಿದ್ದಾಗ ಮಾಳವದೇಶದ ಶ್ರೀಭವನ ಎಂಬಲ್ಲಿ ತಂಗಿದ್ದ. ಆಗ ಮಗ ಅಮೋಘವರ್ಷ (ನೃಪತುಂಗ) ಜನಿಸಿದ.

ಗೋವಿಂದ ದೀರ್ಘಕಾಲ ರಾಜಧಾನಿಯಿಂದ ಹೊರಗೆ ಇದ್ದ ಅವಕಾಶವನ್ನು ಉಪಯೋಗಿಸಿಕೊಂಡು ದಕ್ಷಿಣದ ಪಲ್ಲವ, ಪಾಂಡ್ಯ, ಕೇರಳ, ಗಂಗರಾಜರು ಗೋವಿಂದನ ಪ್ರಭುತ್ವವನ್ನು ಮುರಿಯಲು ಸಿದ್ಧತೆ ಮಾಡತೊಡಗಿ ರಾಷ್ಟ್ರಕೂಟರ ಕೆಲವು ಪ್ರಾಂತಗಳನ್ನು ಆಕ್ರಮಿಸಿದರು. ಈ ವಾರ್ತೆಯನ್ನು ಕೇಳಿದೊಡನೆಯೇ ಈತ ತುಂಗಭದ್ರಾ ತಟಕ್ಕೆ ಧಾವಿಸಿ (ಸು.802) ಅಲ್ಲಿ ಬೀಡುಬಿಟ್ಟಿದ್ದ ದಕ್ಷಿಣ ರಾಜರ ಸೈನ್ಯಗಳನ್ನು ಪರಾಭವಗೊಳಿಸಿದ. ಅನೇಕ ಗಂಗಸೇನಾಧಿಕಾರಿಗಳನ್ನು ಮರುಕ ತೋರಿಸದೆ ಬಲಿ ತೆಗೆದುಕೊಂಡ. ಈ ವಿಜಯದ ಅನಂತರ ಪಲ್ಲವರ ರಾಜಧಾನಿಯಾದ ಕಂಚಿಯನ್ನು ಸೂರೆಮಾಡಿ ಸ್ವಾಧೀನಪಡಿಸಿಕೊಂಡ. ಅನಂತರ ಪಾಂಡ್ಯ, ಕೇರಳ ರಾಜರುಗಳನ್ನು ಸೋಲಿಸಿದ. ಗೋವಿಂದ ಕಂಚಿಯ ರಾಜ್ಯವನ್ನು ಜಯಿಸಿದನೆಂಬ ಸುದ್ದಿಯನ್ನು ಕೇಳಿದೊಡನೆಯೆ ಸಿಂಹಳದ ರಾಜ ತಾನಾಗಿಯೇ ವಿನಮ್ರನಾಗಿ ಬಂದು ಗೋವಿಂದನಿಗೆ ತನ್ನ ಹಾಗೂ ತನ್ನ ಅಮಾತ್ಯನ ಪ್ರತಿಮೆಗಳನ್ನು ಕಪ್ಪವಾಗಿ ಸಲ್ಲಿಸಿದ.

ನಾಲ್ವಡಿ ವಿಷ್ಣುವರ್ಧನ ಜೀವಿಸಿರುವವರೆಗೂ ಪೂರ್ವ ಚಾಳುಕ್ಯ ಮತ್ತು ರಾಷ್ಟ್ರಕೂಟರ ಸಂಬಂಧ ಸ್ನೇಹದಿಂದ ಕೂಡಿತ್ತು. ಅವನ ಅನಂತರ ಪಟ್ಟಕೆ ಬಂದ ಇಮ್ಮಡಿ ವಿಜಯಾದಿತ್ಯ ಸಾಮಂತನಾಗಿರಲು ಒಪ್ಪದೆ ಪ್ರತ್ಯಕ್ಷವಾಗಿ ಗೋವಿಂದನನ್ನು ವಿರೋಧಿಸತೊಡಗಿದ. ಈ ನಡುವೆ ವಿಜಯಾದಿತ್ಯನಿಗೂ ಅವನ ತಮ್ಮ ಭೀಮನಿಗೂ ಪಟ್ಟಕ್ಕಾಗಿ ಹೋರಾಟ ಪ್ರಾರಂಭವಾಯಿತು. ಭೀಮ ಗೋವಿಂದನ ಮೊರೆಹೊಕ್ಕ. ಗೋವಿಂದ ಸೇನಾಸಮೇತನಾಗಿ ವೆಂಗಿಗೆ ನಡೆದು ವಿಜಯಾದಿತ್ಯನನ್ನು ಸೋಲಿಸಿ ವೆಂಗಿ ರಾಜ್ಯವನ್ನು ಗಳಿಸಿಕೊಟ್ಟ.

ಸು.810ರಲ್ಲಿ ಗಂಗರಾಜ್ಯದ ಮಾಂಡಲಿಕನಾಗಿದ್ದ ರಣಾವಲೋಕಸ್ತಂಭ ಸತ್ತ. ಗೋವಿಂದ ತನ್ನ ತಮ್ಮ ಇಂದ್ರನ ಜ್ಯೇಷ್ಠ ಪುತ್ರನಾದ ದಂತಿವರ್ಮನನ್ನು ಗಂಗರಾಜ್ಯದ ಮಾಂಡಲಿಕನಾಗಿ ನೇಮಿಸಿದ. ಆದರೆ ದಂತಿವರ್ಮ ಅಕಾಲ ಮರಣಕ್ಕೆ ತುತ್ತಾದ್ದರಿಂದ ಕೊನೆಗೆ ಗೋವಿಂದ ಅದುವರೆಗೆ ಸೆರೆಯಲ್ಲಿದ್ದ ಶಿವಮಾರನನ್ನು ಬಿಡುಗಡೆಮಾಡಿ ಗಂಗರಾಜ್ಯವನ್ನು ಅವನಿಗೇ ಮರಳಿ ನೀಡಿದ.

ಭಾರತದ ಇತಿಹಾಸದ ಪುಟಗಳಲ್ಲಿ ಗಣ್ಯಸ್ಥಾನ ಪಡೆದಿರುವ ರಾಜರುಗಳಲ್ಲಿ ಗೋವಿಂದನೂ ಒಬ್ಬ. ಇವನ ರಾಜಕೀಯ ಪ್ರಭಾವ ಕನೂಜಿನಿಂದ ಕನ್ಯಾಕುಮಾರಿಯ ವರೆಗೂ ವ್ಯಾಪಿಸಿದ್ದಿತು. ಇವನ ಕೊನೆಗಾಲ ಶಾಂತಿ, ಸಮೃದ್ಧಿಯ ಕಾಲ. ಆ ದಿನಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಪ್ರಾಬಲ್ಯ, ಘನತೆ, ಗೌರವಗಳ ಉತ್ತುಂಗ ಶಿಖರವನ್ನು ಮುಟ್ಟಿತ್ತು.

ಸು.814ರಲ್ಲಿ ಇವನ ಅವಸಾನವಾಯಿತು. ಗಾಮುಂಡಬ್ಬೆ ಈತನ ಪತ್ನಿ. ಅಮೋಘವರ್ಷ ನೃಪತುಂಗ ಈತನ ಮಗ. (ಎಸ್.)

**ಗೋವಿಂದ IV:** ರಾಷ್ಟ್ರಕೂಟ ದೊರೆ (930–35). 3ನೆಯ ಇಂದ್ರನ ಕಿರಿಯ ಮಗ. ಪ್ರಭೂತವರ್ಷ, ಸುವರ್ಣವರ್ಷ, ನೃಪತುಂಗ, ನೃಪತಿತ್ರಿಣೇತ್ರ, ಸಾಹಸಾಂಕ, ರಟ್ಟಕಂದರ್ಪ ಎಂಬುವು ಇವನ ಬಿರುದುಗಳು. ನಾಲ್ವಡಿ ಗೋವಿಂದ ಅಣ್ಣನಾದ ಇಮ್ಮಡಿ ಅಮೋಘವರ್ಷನನ್ನು ಪ್ರಾಯಶಃ ಕೊಲ್ಲಿಸಿ ಪಟ್ಟಕ್ಕೆ ಬಂದ. ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಸಾಮ್ರಾಜ್ಯದ ಚಕ್ರವರ್ತಿಯಾದ. ಆದರೂ ಯೌವನಮದ ಮತ್ತು ರಾಜ್ಯಮದದಿಂದ ಜನಾನುರಾಗಿಯಾಗದೆ ತನ್ನನ್ನು ತಾನೇ ನಾಶಪಡಿಸಿಕೊಂಡ.

ರಾಷ್ಟ್ರಕೂಟರ ಬೆಂಬಲದಿಂದ ವೆಂಗಿ ಸಿಂಹಾಸನಾಧಿಕಾರಿಯಾಗಿದ್ದ ಇಮ್ಮಡಿ ಯುದ್ಧಮಲ್ಲನನ್ನು 934ರಲ್ಲಿ ಇಮ್ಮಡಿ ಭೀಮ ಓಡಿಸಿ ತಾನೇ ರಾಜನಾದ. ಆದರೂ ಈ ಸಮಯದಲ್ಲಿ ನಾಲ್ಕನೆಯ ಗೋವಿಂದ ವೆಂಗಿಯ ಮೇಲೆ ರಾಷ್ಟ್ರಕೂಟರ ಪ್ರಭಾವವನ್ನು ಉಳಿಸಿಕೊಳ್ಳುವ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ರಾಜ್ಯದ ಹೊರಗೆ ತನ್ನ ಪರಾಕ್ರಮವನ್ನು ತೋರಿಸಲು ಅಸಮರ್ಥನಾದ ಗೋವಿಂದ ವೆಂಗಿಯ ಸಿಂಹಾಸನದ ಹಕ್ಕುದಾರರಲ್ಲೊಬ್ಬ ನಾಗಿದ್ದ ಐದನೆಯ ವಿಜಯಾದಿತ್ಯನಿಗೆ ತನ್ನ ಚಾಳುಕ್ಯ ಸಾಮಂತ ಇಮ್ಮಡಿ ಅರಿಕೇಸರಿ ಆಶ್ರಯವನ್ನಿತ್ತನೆಂಬ ನೆಪದಲ್ಲಿ ಅರಿಕೇಸರಿಯನ್ನು ಕೆಣಕಿದ. ಅವನು ವಿಜಯಾದಿತ್ಯನನ್ನು ಒಪ್ಪಿಸಲು ನಿರಾಕರಿಸಿದ. ಇಮ್ಮಡಿ ಅರಿಕೇಸರಿ ಸಮರ್ಥ ವೀರನಾಗಿದ್ದುದೇನೋ ನಿಜ. ಆದರೆ ದೊಡ್ಡ ಸೈನ್ಯದಿಂದ ಕೂಡಿದ್ದ ಚಕ್ರವರ್ತಿಯನ್ನು ಒಬ್ಬ ಸಾಮಂತ ಎದುರಿಸುವುದು ಅಸಾಮಾನ್ಯ ಕೆಲಸವೆಂದು ಅವನು ತಿಳಿದಿದ್ದ. ಇದೇ ಸಮಯಕ್ಕೆ ಸರಿಯಾಗಿ ಗೋವಿಂದನ ಉಚ್ಚಾಟನೆಗೆ ಗೋವಿಂದನ ಅತ್ಯಾಚಾರ ಮತ್ತು ದುರಾಚಾರಗಳಿಂದ ಕೋಪಗೊಂಡಿದ್ದ ಸಾಮಂತರು ಒಟ್ಟಾಗಿ ಸೇರಿ ಮೂರನೆಯ ಅಮೋಘವರ್ಷನ ಬಳಿಗೆ ಓಡಿ ಗೋವಿಂದನ ದುರಾಡಳಿತದಿಂದ ವಿಮುಕ್ತಗೊಳಿಸುವಂತೆ ಬೇಡಿಕೊಂಡರು. ಒಳ್ಳೆಯ ನಡೆನುಡಿಗಳಿಗೂ ಸಂಸ್ಕೃತಿಗೂ ಮತ್ತು ಪ್ರಜಾವಾತ್ಸಲ್ಯಕ್ಕೂ ಹೆಸರಾಗಿದ್ದ ಅಮೋಘವರ್ಷ ಈ ಸಮಯದಲ್ಲಿ ತ್ರಿಪುರಿಯಲ್ಲಿದ್ದ. ಇಮ್ಮಡಿ ಅರಿಕೇಸರಿ ಗೋವಿಂದನ ಮೇಲೆ ಯುದ್ಧಕ್ಕೆ ಸಿದ್ಧನಾದಾಗ, ಅಮೋಘವರ್ಷನ ಪರವಾಗಿದ್ದ ಅವನ ಅಳಿಯ ಗಂಗ 2ನೆಯ ಬೂತುಗ ಮುಂತಾದ ಉಳಿದ ಸಾಮಂತರಾಜರು ಅರಿಕೇಸರಿಗೆ ತಮ್ಮ ಬೆಂಬಲವನ್ನು ನೀಡಿದರು. ಗೋವಿಂದ ಚೋಳ 1ನೆಯ ಪರಾಂತಕನಿಂದ ನೆರವನ್ನು ಬಯಸಿದರೂ ಸಕಾಲಕ್ಕೆ ಸಿಗಲಿಲ್ಲ. 935ರಲ್ಲಿ ಸಂಭವಿಸಿದ ಯುದ್ಧದಲ್ಲಿ ಅರಿಕೇಸರಿ ಗೋವಿಂದನನ್ನು ಸೋಲಿಸಿದ. ಗೋವಿಂದ ರಣರಂಗದಲ್ಲೇ ಪ್ರಾಣ ಕಳೆದುಕೊಂಡ. ಅನಂತರ ಮೂರನೆಯ ಅಮೋಘವರ್ಷ ಪಟ್ಟಕ್ಕೆ ಬಂದ. ಈ ವಿಚಾರ ಪಂಪನ ವಿಕ್ರಮಾರ್ಜುನವಿಜಯದಲ್ಲಿ ಸ್ಪಷ್ಟವಾಗಿ ವರ್ಣಿತವಾಗಿದೆ. (ಎಸ್.)

**ಗೋವಿಂದ ಕವಿ :** 16ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದ ಭಾಗವತ ಸಂಪ್ರದಾಯದ ಒಬ್ಬ ಕನ್ನಡ ಕವಿ. ಈತನನ್ನು ಗೋಪ ಕವಿ ಎಂದೂ ಕರೆಯುವುದಿದೆ. ತಾನು ಭೀಮರಥೀ ತೀರದ ಬುಯ್ಯರ ಗ್ರಾಮದ ಜ್ಯೋತಿ ಎಂಬ ಕರಣಿಕನ ಮಗನೆಂದೂ ಶ್ರೀಕೃಷ್ಣ ಮದನಗೋಪಾಲ ತನ್ನ ಆರಾಧ್ಯ ದೈವವೆಂದೂ ಹೇಳಿಕೊಂಡಿದ್ದಾನೆ. ಈತ ರಚಿಸಿದ ಕಾವ್ಯಗಳು ಚಿತ್ರಭಾರತ ಮತ್ತು ನಂದಿಮಹಾತ್ಮೆ. ಕಾವ್ಯಾರಂಭದಲ್ಲಿ ಕುಮಾರವ್ಯಾಸ, ಲಕ್ಷ್ಮೀಶರನ್ನು ಸ್ತುತಿಸಿದ್ದಾನೆ.

ಚಿತ್ರಭಾರತದ ಕಾವ್ಯವಸ್ತು ಮಹಾಭಾರತದ್ದೇ ಆಗಿದೆ. ಮೂವತ್ತು ಸಂಧಿಗಳಿಂದ ಕೂಡಿದ ಈ ಕೃತಿ ಭಕ್ತಿಪ್ರಧಾನವಾದುದು. ಕಾವ್ಯದ ಮೊದಲರ್ಧದಲ್ಲಿ ರಾಜಸೂಯಯಾಗ, ದ್ಯೂತಪ್ರಸಂಗ, ವನವಾಸಗಳ ಕಥಾನಿರೂಪಣೆಯಿದೆ. ಉಳಿದರ್ಧ ವತ್ಸಲಾಹರಣಕ್ಕೆ ಮೀಸಲಾಗಿದೆ. ಮರಾಠಿಭಾಷೆಯಲ್ಲಿ ಈ ಕಥೆ ಜನಪ್ರಿಯವಾಗಿರುವುದನ್ನು ಗಮನಿಸಿ ಕನ್ನಡದಲ್ಲಿ ತಾನು ರಚಿಸಿರುವುದಾಗಿ ಕವಿ ಹೇಳುತ್ತಾನೆ. ಸಾರಮಿದು ಹರಿಕಥಾಮೃತಂ ಎಂಬ ಮಾತು ಈತನ ಕುಮಾರವ್ಯಾಸ ಪರಂಪರೆಯನ್ನು ಎತ್ತಿ ತೋರಿಸುತ್ತದೆ. ಚಿತ್ರಕವಿತ್ವದ ಚಮತ್ಕಾರ ಇದರಲ್ಲಿ ವಿಶೇಷವಾಗಿ ಕಂಡುಬರುವುದರಿಂದ ಈ ಕೃತಿಗೆ ಚಿತ್ರಭಾರತವೆಂಬ ಹೆಸರು ಸೂಕ್ತವಾಗಿದೆ.

ನಂದಿಮಹಾತ್ಮೆ ಈತನ ಪರಿಪಕ್ವ ಕೃತಿ. ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿರುವ ಈ ಕೃತಿ 50 ಸಂಧಿಗಳಷ್ಟು ದೀರ್ಘವಾಗಿದೆ. ಇದರ ಕಥಾವಸ್ತುವನ್ನು ಸೂತಪುರಾಣದಿಂದ ಆಯ್ದುಕೊಳ್ಳಲಾಗಿದೆ. ಪಾರ್ವತಿಯನ್ನು ಒಡ್ಡೋಲಗಕ್ಕೆ ಕರೆತರುವಂತೆ ಶಿವನಿಂದ ನಂದಿಗೆ ಅಪ್ಪಣೆಯಾಗುತ್ತದೆ. ನಂದಿ ಇಂದುಧರನ ರೂಪದಿಂದ ಪಾರ್ವತಿಯನ್ನು ಕರೆತರಲು ಹೋಗುತ್ತಾನೆ. ನಂದಿಯನ್ನು ಪಾರ್ವತಿ ಪರಶಿವನೆಂದೇ ಬಗೆದು ಸನ್ಮಾನಿಸುತ್ತಾಳೆ. ಈ ಅಚಾತುರ್ಯಕ್ಕಾಗಿ ಪಶ್ಚಾತ್ತಾಪಗೊಂಡ ನಂದಿ ಪ್ರಾಯಶ್ಚಿತ್ತಕ್ಕಾಗಿ ತಪಸ್ಸು ಮಾಡಲು ತೀರ್ಮಾನಿಸುತ್ತಾನೆ. ತನ್ನ ತಪಸ್ಸಿಗೆ ತಕ್ಕ ಸ್ಥಳವಾವುದೆಂದು ಗಣನಾಥ ಕೂಷ್ಮಾಂಡನನ್ನು ಕೇಳಲು ಆತ ಶ್ರೀಶೈಲ, ಕೇದಾರ, ವಾರಾಣಸಿ, ಕಂಚಿ ಮೊದಲಾದ ಶೈವಕ್ಷೇತ್ರಗಳ ಮಹಿಮೆಯನ್ನು ನಿರೂಪಿಸುತ್ತಾನೆ.

ಈ ಕವಿ ತನ್ನ ಕಾವ್ಯದ ಬಗ್ಗೆ 'ಎಳೆ ನೀರೊಳೆಯ್ದೆ ತವರಾಜ ಬೆರೆದಂದದಿಂ', 'ಸುಳಿದ ರಸಗಂಧಿವಾಳೆಯೊಳು ಜೇನ್ದಳೆದಂತೆ', 'ಆನೆ ಹೋದುದೇ ಬೀದಿಯಲ್ಲವೆ ಜಗದೊಳು'– ಎಂದು ಹೇಳಿಕೊಂಡಿದ್ದರೂ ಆ ಮಾತುಗಳು ಕೇವಲ ಆತ್ಮಪ್ರಶಂಸೆಯಾಗಿ ಮಾತ್ರ ಉಳಿಯುತ್ತವೆ. ಕುಮಾರವ್ಯಾಸ ಲಕ್ಷ್ಮೀಶರ ಆದರ್ಶ ಈತನ ಕಾವ್ಯದಲ್ಲಿ ಕಂಡುಬಂದರೂ ಅವರ ಪ್ರತಿಭೆಯ ವೈಶಾಲ್ಯವಾಗಲೀ ಔನ್ನತ್ಯವಾಗಲೀ ಇಲ್ಲಿಲ್ಲ. (ಬಿ.ವಿ.ವಿ.ಬಿ.)

**ಗೋವಿಂದಚಂದ್ರ :** ಗಾಹದ್ವಾಲ ಮನೆತನದ ಒಬ್ಬ ಪ್ರಮುಖ ದೊರೆ. ಈತ 1114–54 ರವರೆಗೆ ಆಳಿದನೆಂದು ಹೇಳಬಹುದಾಗಿದೆ. ತನ್ನ ತಂದೆಯ ಕಾಲದಲ್ಲೇ ವಾರಾಣಸಿಯಲ್ಲಿ ಈತ ಯುವರಾಜನಾಗಿ ಆಳುತ್ತಿದ್ದ. ಮುಮ್ಮಡಿ ಅಲಾ–ಉದ್–ದೌಲ ಮಸೂದ್ ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದಾಗ ಕನೌಜಿನಲ್ಲಿ ಆಳುತ್ತಿದ್ದ ಗಾಹದ್ವಾಲ ರಾಜನಾದ ಮದನಚಂದ್ರನನ್ನು ಸೆರೆಹಿಡಿದನೆಂದು ಮಹಮ್ಮದೀಯರ ಗ್ರಂಥಗಳು ವರ್ಣಿಸುತ್ತವೆ. ಅನಂತರ ಆ ಸೈನ್ಯ ವಾರಾಣಸಿಯ ಕಡೆಗೆ ಹೊರಟಿತು. ಅಲ್ಲಿ ಆಳುತ್ತಿದ್ದ ಗಾಹದ್ವಾಲ ಯುವರಾಜ ಗೋವಿಂದಚಂದ್ರ ಮುಸ್ಲಿಂ ಸೈನ್ಯದ ವಿರುದ್ಧ ಹೋರಾಡಿ, ತನ್ನ ತಂದೆಯನ್ನು ಸೆರೆಯಿಂದ ಬಿಡಿಸಿ, ಮಹಮ್ಮದೀಯರ ಸೈನ್ಯವನ್ನು ಹೊಡೆದೋಡಿಸಿದ. ಗೋವಿಂದಚಂದ್ರ ಹರಿಯ ಅವತಾರವೆಂದೂ ವಾರಾಣಸಿಯನ್ನು ಮಹಮ್ಮದೀಯರ ದಾಳಿಯಿಂದ ರಕ್ಷಿಸಲು ಅವನು ಬಂದನೆಂದೂ ಗೋವಿಂದಚಂದ್ರನ ರಾಣಿ ಕುಮಾರದೇವಿಯ ಸಾರನಾಥ ಶಾಸನದಿಂದ ತಿಳಿದುಬರುತ್ತದೆ.

ಗೋವಿಂದಚಂದ್ರ ತ್ರಿಪುರಿಯ ಕಳಚುರಿಗಳನ್ನು ಸೋಲಿಸಿ ಅವರ ಅಧೀನದಲ್ಲಿದ್ದ ರಾಜ್ಯವನ್ನೆಲ್ಲ ತನ್ನ ವಶಪಡಿಸಿಕೊಂಡ. ಕಳಚುರಿ ರಾಜ ಯಶಃಕರ್ಣ ಶೈವಗುರುವಾದ ರುದ್ರಶಿವನಿಗೆ ನೀಡಿದ್ದ ದತ್ತಿಯನ್ನು ಗೋವಿಂದಚಂದ್ರ ಪುನಃ ಖಾಯಂಗೊಳಿಸಿದ. ಅಲ್ಲಿಯವರೆಗೆ ಕಳಚುರಿ ರಾಜಮನೆತನ ಉತ್ತರ ಭಾರತದ ಸಾರ್ವಭೌಮತ್ವವನ್ನು ಪಡೆದಿತ್ತು. ಆಗ ಈ ಅಧಿಕಾರ ಗೋವಿಂದಚಂದ್ರನಿಗೆ ವರ್ಗವಾಯಿತು. ಗೋವಿಂದಚಂದ್ರ ಅಶ್ವಪತಿ– ಗಜಪತಿ– ನರಪತಿ– ರಾಜತ್ರಯಾಧಿಪತಿ ಎಂಬ ಬಿರುದು ಧರಿಸಿದ. ಇದನ್ನು ಮೊತ್ತಮೊದಲಿಗೆ ಕಳಚುರಿ ರಾಜ ಲಕ್ಷ್ಮೀಕರ್ಣ ಹೊಂದಿದ್ದ. ವಿ. ವಿ. ಮಿರಾಶಿಯವರ ಪ್ರಕಾರ ಈ ಬಿರುದು ಗೂರ್ಜರ ಪ್ರತೀಹಾರ ಕಳಿಂಗ ಗಂಗ ಮತ್ತು ಬಂಗಾಲದ ಮೇಲೆ ಗೋವಿಂದಚಂದ್ರನ ಪರಮಾಧಿಕಾರವನ್ನು ಸಾರುತ್ತದೆ.

ಕಳಚುರಿಗಳೇ ಅಲ್ಲದೆ ಗೋವಿಂದಚಂದ್ರ ಇತರ ರಾಜ್ಯಗಳ ವಿರುದ್ಧವಾಗಿಯೂ ಅನೇಕ ಯುದ್ಧಗಳನ್ನು ಮಾಡಿದ. 1143 ರಲ್ಲಿ ಬಂಗಾಲದ ರಾಜನಾದ ಮದನಪಾಲನಿಂದ ಬಿಹಾರದ ಮಾಂಘೀರ್ ವರೆಗೆ ಎಲ್ಲ ಪ್ರಾಂತಗಳನ್ನೂ ಗೆದ್ದುಕೊಂಡ. ಆದರೆ ತನ್ನ ಕೊನೆಯ ದಿನಗಳಲ್ಲಿ ಮಾಂಘೀರನ್ನು ಪಾಲರಾಜನಿಗೆ ಬಿಟ್ಟುಕೊಡಬೇಕಾಯಿತು. ಗೋವಿಂದಚಂದ್ರ ಪೂರ್ವಮಾಳವವನ್ನೂ ಗೆದ್ದುಕೊಂಡನೆಂದು ತಿಳಿದುಬರುತ್ತದೆ. ಪ್ರಾಕೃತ – ಪೈಂಗಾಲಮ್ ಗ್ರಂಥ ಗೋವಿಂದಚಂದ್ರನ ಅನೇಕ ಯುದ್ಧಗಳನ್ನು ವಿವರಿಸುತ್ತದೆ. ಈತ ಕಳಿಂಗದ ರಾಜನಾದ ಅನಂತವರ್ಮನ ಮೇಲೂ ಮಿಥಿಲೆಯ ನಾನ್ಯದೇವನ ಮೇಲೂ ಯುದ್ಧ ಮಾಡಿದನೆಂದು ಈ ಗ್ರಂಥ ವಿವರಿಸುತ್ತದೆ. ಅಲ್ಲದೆ ಕಾಕತೀಯ, ಚಾಳುಕ್ಯ ಮತ್ತು ಚೌಳುಕ್ಯರ ಮೇಲೂ ಯುದ್ಧ ಮಾಡಿದನೆಂದು ತಿಳಿದುಬರುತ್ತದೆ.

ಗೋವಿಂದಚಂದ್ರ ಕಾಶ್ಮೀರದ ರಾಜನಾದ ಜಯಸಿಂಹನ ಆಸ್ಥಾನಕ್ಕೆ ರಾಯಭಾರಿಯನ್ನಾಗಿ ಸುಹಲನನ್ನು ಕಳುಹಿಸಿಕೊಟ್ಟ. ಚೋಳರ ರಾಜಧಾನಿಯಾಗಿದ್ದ ಗಂಗೈಕೊಂಡ ಚೋಳಪುರದಲ್ಲಿ ಸಿಕ್ಕಿರುವ ಒಂದು ಅಪೂರ್ಣ ಮತ್ತು ಅಪೂರ್ವ ಶಾಸನ ಚೋಳರಿಗೂ ಗಾಹದ್ವಾಲರಿಗೂ ಇದ್ದ ಸಂಬಂಧವನ್ನು ವಿವರಿಸುತ್ತದೆ. ಇದು ಸು. 1111ರ ಶಾಸನ. ಇದರಲ್ಲಿ ಗಾಹದ್ವಾಲ ವಂಶಾವಳಿ ಯಶೋವಿಗ್ರಹನಿಂದ ಹಿಡಿದು ಗೋವಿಂದಚಂದ್ರನವರೆಗೆ ತಿಳಿದುಬರುತ್ತದೆ. ಈ ಶಾಸನವನ್ನು ಚೋಳ ರಾಜನನ್ನು ವಿವಾಹವಾಗಿದ್ದ ಗಾಹದ್ವಾಲ ರಾಜಕುಮಾರಿ ಹೊರಡಿಸಿರಬಹುದೆಂದೂ ಯಾವುದೋ ಒಂದು ದತ್ತಿಯನ್ನು ಕೊಡುವ ಸಮಯದಲ್ಲಿ ತನ್ನ ಮನೆತನದ ವಂಶಾವಳಿಯನ್ನು ಕೆತ್ತಿಸಿರಬಹುದೆಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಗೋವಿಂದಚಂದ್ರ ಕಳಚುರಿ ನಾಣ್ಯಗಳ ಮಾದರಿಯ ಹೊಸ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳನ್ನು ಅಚ್ಚು ಹಾಕಿಸಿದ. ಈತ ಯುದ್ಧಕುಶಲಿ ಮತ್ತು ರಾಜ ತಂತ್ರನಿಪುಣ ಮಾತ್ರವೇ ಅಲ್ಲ ; ಸಾಹಿತ್ಯದಲ್ಲೂ ಅಭಿರುಚಿ ಹೊಂದಿದ್ದ. ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ ಗೋವಿಂದಚಂದ್ರನನ್ನು ವಿವಿಧ ವಿದ್ಯಾವಿಚಾರವಾಚಸ್ಪತಿ ಎಂದು ಶಾಸನಗಳಲ್ಲಿ ವರ್ಣಿಸಲಾಗಿದೆ. ಈತನ ಮಂತ್ರಿಯಾಗಿದ್ದ ಲಕ್ಷ್ಮೀಧರ, ಕೃತ್ಯಕಲ್ಪತರು ಎಂಬ ಗ್ರಂಥವನ್ನು ಗೋವಿಂದಚಂದ್ರನ ಆಜ್ಞೆಯ ಮೇರೆಗೆ ರಚಿಸಿದ. (ಎಸ್‌ಎಚ್‌ಐ.)

**ಗೋವಿಂದ ದೀಕ್ಷಿತ :** 1554–1626. ಪ್ರಸಿದ್ಧ ಸಂಗೀತಗಾರ ಮತ್ತು ಕವಿ. ಅಯ್ಯನ ಎಂಬ ಇನ್ನೊಂದು ಹೆಸರೂ ಉಂಟು. ತಂಜಾವೂರಿನ ಅಚ್ಯುತಯ್ಯ ಮತ್ತು ರಘುನಾಥನಾಯಕ ಅರಸರ ಕಾಲದಲ್ಲಿ ಪ್ರಧಾನಿಯಾಗಿದ್ದ. ಕಾವೇರಿ ತೀರದ ಪಟ್ಟೀಶ್ವರಮ್ ಈತನ ಮೂಲಸ್ಥಾನ. ಜಾತಿಯಿಂದ ಈತ ಕರ್ನಾಟಕ ಬ್ರಾಹ್ಮಣ. ಹೆಂಡತಿ ನಾಗಂಬಾ. ಈ ದಂಪತಿಗಳ ಶಿಲಾಪ್ರತಿಮೆಯನ್ನು ಪಟ್ಟೀಶ್ವರಮ್ ದೇವಸ್ಥಾನದಲ್ಲಿ ಈಗಲೂ ಕಾಣಬಹುದು.

ಗೋವಿಂದ ದೀಕ್ಷಿತನ ಹರಿವಂಶಸಾರಚರಿತ್ರಮ್ ಎಂಬ ಸಂಸ್ಕೃತ ಕೃತಿ ಮೂರು ಸಂಪುಟಗಳಲ್ಲಿದೆ. ಈತನ ಸನ್ಮಿತ್ರ ಅಪ್ಪಯ್ಯದೀಕ್ಷಿತ ಈ ಗ್ರಂಥಕ್ಕೆ ಟೀಕೆ ಬರೆದಿದ್ದಾನೆ. ಸಂಗೀತಸುಧಾನಿಧಿ ಈತನ ಪದ್ಯಗಳ ಸಂಕಲನ. ಇದಲ್ಲದೆ ಈತ ವೇದಾಂತ, ಧರ್ಮ, ಶಿಲ್ಪ, ಸಂಗೀತಶಾಸ್ತ್ರಗಳನ್ನು ಕುರಿತು ಅನೇಕ ಗ್ರಂಥಗಳನ್ನು ಬರೆದಿದ್ದಾನೆ.

ಇಪ್ಪತ್ತು ನಾಲ್ಕು ಪಟ್ಟಿಗಳುಳ್ಳ ಸುಪ್ರಸಿದ್ಧ ತಂಜಾವೂರು ವೀಣೆಯನ್ನು ತಯಾರಿಸಿದವನೀತ. ಚೂಡಾಮಣಿ ಈತನಿಗೆ ಅದ್ವೈತ ವಿದ್ಯೆ ನೀಡಿದ ಗುರು. ಧಾರ್ಮಿಕ ಮನೋಧರ್ಮದ ಪರೋಪಕಾರಿ ಬ್ರಾಹ್ಮಣನಾದ್ದರಿಂದ ಈತ ಅನೇಕ ಯಜ್ಞ ಮಾಡಿದನಲ್ಲದೆ ವಿಪುಲವಾಗಿ ದಾನಧರ್ಮ ಮಾಡಿದ. ಕೆರೆಕಟ್ಟೆ ಕಟ್ಟಿಸಿದ, ತಿರುವಾಯೂರಿನಲ್ಲಿ ಸಂಸ್ಕೃತ ವಿದ್ಯಾಲಯ ತೆರೆದ, ಕುಂಭಕೋಣದ ಮಹಾಮಖಂ ಕೆರೆ ದಂಡೆಯ ಸುತ್ತ ಹದಿನಾರು ಲಿಂಗಗಳನ್ನು ಸ್ಥಾಪಿಸಿದ. ಈತ ಕಟ್ಟಿಸಿದ ತಂಜಾವೂರಿನ ಏಕಾದಶೀ ಅಗ್ರಹಾರ ಈಗಲೂ ಪ್ರಸಿದ್ಧವಾಗಿದೆ. *

**ಗೋವಿಂದನಹಳ್ಳಿ :** ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿರುವ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ, ಕಿಕ್ಕೇರಿಯ ಈಶಾನ್ಯಕ್ಕೆ, ಅದರಿಂದ 6.5 ಕಿಮೀ ದೂರದಲ್ಲಿರುವ ಒಂದು ಹಳ್ಳಿ. ಇಲ್ಲಿರುವ ಹೊಯ್ಸಳ ಶೈಲಿಯ ಪಂಚಲಿಂಗ ದೇವಾಲಯದಿಂದಾಗಿ ಇದು ಪ್ರಸಿದ್ಧವಾಗಿದೆ. 42 ಮೀ ಉದ್ದ, 13.5 ಮೀ ಅಗಲ ಇರುವ ದೇವಾಲಯವಿದು. ಪೂರ್ವ ದಿಕ್ಕಿನಲ್ಲಿರುವ ಮುಖಮಂಟಪ ಮತ್ತು ನಂದಿಮಂಟಪವನ್ನೂ ಸೇರಿಸಿಕೊಂಡರೆ ಇದರ



ಪಂಚಲಿಂಗೇಶ್ವರ ದೇವಾಲಯ, ಗೋವಿಂದನಹಳ್ಳಿ

ಅಗಲ 19 ಮೀ. ಪೂರ್ವದಿಕ್ಕಿಗೆ ಮುಖ ಮಾಡಿರುವ ಈ ದೇವಾಲಯದಲ್ಲಿ ಕಲ್ಲಿನ ಗೋಪುರಗಳಿರುವ ಐದು ಒಳಗೋಡೆಗಳು ಸಾಲಾಗಿವೆ. ಪೂರ್ವದಲ್ಲಿ ದ್ವಾರಪಾಲಕರಿಂದ ಕೂಡಿದ ಎರಡು ದ್ವಾರಗಳುಂಟು. ಇವು ದಕ್ಷಿಣದ ಕಡೆಯಿಂದ 2 ಮತ್ತು 3ನೆಯ ಒಳ ಗುಡಿಗಳ ಎದುರಿಗೆ ಇವೆ. ಇವುಗಳ ಮುಂದೆ ಚಾವಣಿಯಿಂದ ಕೂಡಿದ ಮುಖಮಂಟಪವೂ

ಇದಕ್ಕೆ ಸೇರಿದಂತೆ ನಂದಿಮಂಟಪವೂ ಇವೆ. ಈ ಮಂಟಪಗಳಿಗೆ ಉತ್ತರದಲ್ಲೂ ದಕ್ಷಿಣದಲ್ಲೂ ದ್ವಾರಗಳುಂಟು. ಪ್ರತಿಯೊಂದು ಗುಡಿಗೂ ಸುಕನಾಸಿ ಮತ್ತು ಗರ್ಭಗೃಹ ಇವೆ. ಸುಕನಾಸಿಯ ಬಾಗಿಲುಗಳ ಕೆತ್ತನೆ ಬಹು ಸುಂದರವಾಗಿದೆ. ಬಾಗಿಲುವಾಡದ ಮೇಲೆ ಉಮಾಮಹೇಶ್ವರನ ಚಿತ್ರ ಕೆತ್ತಲಾಗಿದೆ. 36 ಮೀ ಉದ್ದ, 6 ಮೀ ಅಗಲ ಇರುವ, 18 ಅಂಕಣಗಳ, 17 ಕಂಬಗಳ, ಮೂರು ಸಾಲುಗಳಿಂದ ಕೂಡಿದ ಆಯಕಾರದ ವಿಶಾಲ ಅಂಗಳವೊಂದಿದೆ. ಇದರ ಮಧ್ಯೆ ಹೆಚ್ಚಿನ ಕಂಬವೊಂದಿದೆ. ಮುಂದೆ ಚಾಚಿರುವ ತೊಲೆಯೊಂದಕ್ಕೆ ಆಸರೆಯಾಗಿ ಇದನ್ನು ನಿಲ್ಲಿಸಲಾಗಿದೆ. ಈ ಅಂಗಳದ ಪೂರ್ವದ ಗೋಡೆ ಮತ್ತು ಅದಕ್ಕಂಟಿದಂತಿರುವ ಗೋಡೆಗಳಲ್ಲಿ ಹೊರಾಂಗಣದ ವರೆಗೆ ರಂಧ್ರಗಳನ್ನು ಕೊರೆಯಲಾಗಿದೆ.

ಒಳಗಿನ ಚಿಕ್ಕ ಗುಡಿಗಳ ಎರಡೂ ಪಕ್ಕಗಳಲ್ಲಿಯೂ ಸುಂದರವಾಗಿ ಕೆತ್ತಲಾಗಿರುವ ಗೂಡುಗಳಿದ್ದು ಒಂದರಲ್ಲಿ ಗಣಪತಿಯ ವಿಗ್ರಹವನ್ನೂ ಮತ್ತೊಂದರಲ್ಲಿ ಮಹಿಷಾಸುರಮರ್ದಿನಿಯ ವಿಗ್ರಹವನ್ನೂ ಇಡಲಾಗಿದೆ. ದಕ್ಷಿಣದ ಕಡೆಯಿಂದ ಐದನೆಯ ಗುಡಿಯ ಗೋಡೆಯ ಮೇಲಿನ ಗೂಡೊಂದರಲ್ಲಿದ್ದ ವಿಗ್ರಹ ಬದಲಾಗಿರುವುದಾಗಿ ತಿಳಿದುಬರುತ್ತದೆ. ಈಗ ಅದರ ಜಾಗದಲ್ಲಿ ಕುಳಿತ ಭಂಗಿಯ ಸರಸ್ವತಿಯ ವಿಗ್ರಹವನ್ನಿಡಲಾಗಿದೆ. ಅಲ್ಲಿದ್ದ ಮಹಿಷಾಸುರಮರ್ದಿನಿಯ ವಿಗ್ರಹವನ್ನು ಬೇರೆ ಕಡೆಗೆ ಸಾಗಿಸಲಾಗಿದೆಯೆಂದು ತಿಳಿದುಬರುತ್ತದೆ. ಇವಲ್ಲದೆ ಸುಬ್ರಹ್ಮಣ್ಯ, ಭೈರವ ಮುಂತಾದ ವಿಗ್ರಹಗಳು ಇಲ್ಲಿಯ ಗೂಡುಗಳಲ್ಲಿವೆ. ದಕ್ಷಿಣದ ಗೋಡೆಗೆ ಅಂಟಿದಂತಿರುವ ಒಂದು ಗೂಡಿನಲ್ಲಿ ವೀರಭದ್ರ ಮತ್ತು ಸಪ್ತಮಾತೃಕಾ ವಿಗ್ರಹಗಳಿವೆ. ಗುಡಿಗಳ ಮಧ್ಯದಲ್ಲಿ ಸರಸ್ವತಿ ಮತ್ತು ಸಪ್ತಮಾತೃಕೆಯರ ಎರಡು ಸುಂದರವಾದ ವಿಗ್ರಹಗಳೂ ಉಮಾಮಹೇಶ್ವರ ವಿಗ್ರಹವೂ ಇವೆ. ಎರಡು ಒಳಗುಡಿಗಳನ್ನುಳಿದು ಮಿಕ್ಕೆಲ್ಲ ಗುಡಿಗಳ ಮುಂದೆ ಮೂರನೆಯ ಅಂಕಣದಲ್ಲಿ ನಂದಿ ವಿಗ್ರಹಗಳಿವೆ. ಎರಡರಲ್ಲಿ ಮಾತ್ರ ಇವು ಗುಡಿಯ ಮುಂದಿನ ನಂದಿಮಂಟಪಗಳಲ್ಲಿವೆ. ಅಂಗಳದ ಮೇಲ್ಚಾವಣಿಯಲ್ಲಿ ತಾವರೆ ಮೊಗ್ಗುಗಳನ್ನೂ ಅರಳಿದ ತಾವರೆಗಳನ್ನೂ ಕೆತ್ತಲಾಗಿದೆ. ದೇವಾಲಯದ ಮುಖಮಂಟಪ ಮತ್ತು ನಂದಿಮಂಟಪಗಳ ಮೇಲ್ಚಾವಣಿಯಲ್ಲೂ ತಾವರೆಯ ಮೊಗ್ಗುಗಳನ್ನು ಕೊರೆಯಲಾಗಿದೆ. ಹೊರಗೋಡೆಯ ಮೇಲಿನ ಶಿಲ್ಪ ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯವನ್ನೇ ಹೋಲುತ್ತದೆ.

ಈ ದೇವಾಲಯದ ಅನೇಕ ವಿಗ್ರಹಗಳು ಒಡೆದುಹೋಗಿವೆ. ಗೋಡೆಯ ಮೇಲಿನ ಶಿಲ್ಪಗಳಿಗೆ ಸುಣ್ಣ ಬಳಿದು ಅವುಗಳ ಅಂದವೇ ಹಾಳಾಗಿದೆ. ಈ ಶಿಲ್ಪಗಳನ್ನು ಬಹು ಸುಂದರವಾಗಿ ಕೆತ್ತಲಾಗಿದೆಯಾದರೂ ಹಳೆಬೀಡು ಮತ್ತಿತರ ಹೊಯ್ಸಳ ದೇವಾಲಯಗಳಲ್ಲಿರುವಂತೆ ಸಾಲುಸಾಲಾಗಿ ಅವನ್ನು ಕಡೆದಿಲ್ಲ. ಆದರೆ ಕಿಕ್ಕೇರಿಯಲ್ಲಿರುವಂತೆ ಅಳತೆಗೆ ಸರಿಯಾಗಿ ಸ್ಥಳ ಬಿಟ್ಟು ಕೆತ್ತಲಾಗಿದೆ. ಪೂರ್ವದಿಕ್ಕಿನ ಹೊರಗೋಡೆಯ ದಕ್ಷಿಣದ ತುದಿಯಲ್ಲಿ ಒಂದು ಸುಂದರವಾದ ಗಣಪತಿಯ ವಿಗ್ರಹವಿದೆ. ಉತ್ತರದ ಕೊನೆಯಲ್ಲಿ ಅಂಥದೇ ಮಹಿಷಾಸುರಮರ್ದಿನಿಯ ಶಿಲ್ಪವಿದೆ. ಗಣಪತಿಗೂ ಮೊದಲನೆಯ ಮುಖಮಂಟಪಕ್ಕೂ ಮಧ್ಯೆ 12 ವಿಷ್ಣುವಿನ ಶಿಲ್ಪಗಳಿವೆ. ಇಲ್ಲಿರುವ ಪ್ರತಿಯೊಂದು ಶಿಲ್ಪದ ಕೆಳಗೂ ಆಯಾ ಶಿಲ್ಪದ ಹೆಸರು ಬರೆಯಲಾಗಿದೆ. ಪ್ರತಿ ಎರಡು ವಿಷ್ಣು ವಿಗ್ರಹಗಳ ಮಧ್ಯೆ ಕೈ ಮುಗಿದು ನಿಂತಿರುವ ಗರುಡ ಶಿಲ್ಪವುಂಟು. ಅದರ ಹಿಂದೆ ಅನೇಕ ಸ್ತ್ರೀ ಶಿಲ್ಪಗಳನ್ನು ಕೆತ್ತಲಾಗಿದೆ. ಮೊದಲನೆಯ ಮತ್ತು ಎರಡನೆಯ ಮುಖಮಂಟಪದ ಮಧ್ಯೆ ವಿಷ್ಣುವಿನ ಹತ್ತು ಅವತಾರಗಳನ್ನು ಕೆತ್ತಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಭಾಗದ ಗೋಡೆ ಮತ್ತು ಪಶ್ಚಿಮದ ಗೋಡೆಯ ಅನೇಕ ಭಾಗಗಳ ಕೆತ್ತನೆ ಪೂರ್ಣವಾಗದಿರುವುದು. ಮೊದಲನೆಯ ಗುಡಿಯ ದಕ್ಷಿಣ ಗೋಡೆಯೂ ಸೇರಿದಂತೆ, ದಕ್ಷಿಣ ಗೋಡೆಯ ಪೂರ್ವದ ಕೊನೆಯಿಂದ ಪರವಾಸುದೇವ, ಚತುರ್ಬಾಹುಗಳುಳ್ಳ ನಿಂತ ಭಂಗಿಯಲ್ಲಿರುವ ಸರಸ್ವತಿ, ಐರಾವತರೂಢರಾದ ಇಂದ್ರ ಮತ್ತು ಶಚಿ, ಲಕ್ಷ್ಮೀನಾರಾಯಣರನ್ನು ಹೊತ್ತ ಗರುಡ, ವಾಮನನಿಗೆ ದಾನ ಕೊಡುತ್ತಿರುವ ಬಲಿ ಮುಂತಾದ ಶಿಲ್ಪಗಳಿವೆ. ಅರ್ಜುನ ಮತ್ಸ್ಯಕ್ಕೆ ಗುರಿಯಿಡುತ್ತಿರುವ ಕೆತ್ತನೆ ಇಲ್ಲಿದೆ.

ಕೃಷ್ಣರಾಜಪೇಟೆ 63ನೆಯ ಶಾಸನ ಈ ದೇವಾಲಯದಲ್ಲಿದೆ. ಇದು ದೇವಾಲಯದ ನಿರ್ಮಾಣದ ಬಗ್ಗೆ ಯಾವ ಸುಳಿವನ್ನೂ ನೀಡುವುದಿಲ್ಲವಾದರೂ ಇದು ನಿರ್ಮಾಣವಾದ ಕಾಲವನ್ನು ಊಹಿಸಲು ಅನುವು ಮಾಡಿಕೊಡುತ್ತದೆ. ಇದರಲ್ಲಿ ಹೊಯ್ಸಳ ದೊರೆಯ ದಂಡನಾಯಕರಿಬ್ಬರು, 1237ರಲ್ಲಿ ಬ್ರಾಹ್ಮಣರಿಗೆ ದತ್ತಿ ಬಿಟ್ಟ ವಿಷಯ ಹೇಳಲಾಗಿದೆ. ಈ ದೇವಾಲಯದ ಮುಖಮಂಟಪಗಳಲ್ಲಿರುವ ಎರಡು ದ್ವಾರಪಾಲಕ ಶಿಲ್ಪಗಳ ಪೀಠಗಳ ಮೇಲೆ ಅವನ್ನು ಕೆತ್ತಿದವನು ಮಲ್ಲಿತಮ್ಮ ಎಂದು ಬರೆಯಲಾಗಿದೆ. 1249ರಲ್ಲಿ ನುಗ್ಗೇಹಳ್ಳಿಯಲ್ಲಿ ಮತ್ತು 1268ರಲ್ಲಿ ಸೋಮನಾಥಪುರದಲ್ಲಿ ದೇವಾಲಯಗಳ ನಿರ್ಮಾಣಕಾರ್ಯದಲ್ಲಿ ನಿರತನಾಗಿದ್ದವನೀತ. ಆದ್ದರಿಂದ ಈ ದೇವಾಲಯ 13ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಾಣವಾಗಿರಬೇಕು. ಮೇಲಿನ ಶಾಸನ ಸೋಮೇಶ್ವರನ ಆಳ್ವಿಕೆಯ ಕಾಲದ್ದು ಎಂಬುದರಲ್ಲಿ ಸಂದೇಹವಿಲ್ಲ. ಗೋವಿಂದನಹಳ್ಳಿಯ ಈ ದೇವಾಲಯ ಹೊಯ್ಸಳ ಕಲಾಮಾದರಿಯ ಒಂದು ಅತ್ಯಪೂರ್ವ ಕುರುಹಾಗಿ ಉಳಿದಿದೆ. ಇದರಂಥದೇ ಮತ್ತೊಂದು ದೇವಾಲಯ ಇದೇ ತಾಲ್ಲೂಕಿನ ಅಘಲಯದ ಮಲ್ಲೇಶ್ವರ ದೇವಾಲಯ ಎಂದು ತಿಳಿದುಬರುತ್ತದೆ. ಗೋವಿಂದನಹಳ್ಳಿಯಲ್ಲಿ ಪಂಚಲಿಂಗ ದೇವಾಲಯವಲ್ಲದೆ ಹೊಯ್ಸಳ ಶೈಲಿಯ ಇನ್ನೆರಡು ದೇವಾಲಯಗಳಿವೆ. ಒಂದು ಶಿವಾಲಯ, ಇನ್ನೊಂದು ಗೋಪಾಲಕೃಷ್ಣನದು. ಸರಿಯಾದ ರಕ್ಷಣೆಯಿಲ್ಲದೆ ಇವೆರಡೂ ಹಾಳಾಗಿವೆ. ಈ ಎಲ್ಲ ದೇವಾಲಯಗಳನ್ನೂ ಸಮೀಕ್ಷಿಸಿದಾಗ, ಗೋವಿಂದನಹಳ್ಳಿ ಒಂದು ಕಾಲಕ್ಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತೆನಿಸುತ್ತದೆ. (ಎಚ್.ಕೆ.ಆರ್.ಜಿ)

**ಗೋವಿಂದ ಪಂತ :** ಸು. 1710–61. ಮಹಾರಾಷ್ಟ್ರದ ಪೇಷ್ವೆ ರಾಜ್ಯದ ಒಬ್ಬ ಸರ್ದಾರ. ಈತನ ಮೂಲಸ್ಥಳ ರತ್ನಗಿರಿ ಜಿಲ್ಲೆಯ ನೇವರೆ. ಗೋವಿಂದ ಪಂತ ಆ ಊರಿನ ಕುಲಕರ್ಣಿ; ಜಾತಿಯಿಂದ ಕರ್ಹಾಡ ಬ್ರಾಹ್ಮಣ. ಈತನ ಪೂರ್ಣ ಹೆಸರು ಗೋವಿಂದ ಬಲ್ಲಾಳ ಖರೆ. ಪಂತನಿಗೆ ಸಂಸಾರದಲ್ಲಿ ವಿಪತ್ತುಗಳೂ ಜಾತಿಯ ಜನರಿಂದ ಕಿರುಕುಳಗಳೂ ಉಂಟಾಗಲು ಈತ ತನ್ನ ಊರನ್ನು ಬಿಟ್ಟು ಪುಣೆಗೆ ಹೋದ. ಅಲ್ಲಿ ಈತ ಪೇಷ್ವೆ ಬಾಜಿರಾಯನ ಮನೆಯಲ್ಲಿ ನೌಕರಿಯಲ್ಲಿದ್ದ. ಪಂತನ ಉತ್ತಮ ಗುಣಗಳಿಗೆ ಮೆಚ್ಚಿದ ಬಾಜಿರಾಯ ಅದೇ ತಾನೆ ತನ್ನ ರಾಜ್ಯಕ್ಕೆ ಸೇರಿದ ಬುಂದೇಲ್‌ಖಂಡ ಪ್ರಾಂತಕ್ಕೆ ಇವನನ್ನು ಕಾರಭಾರಿಯನ್ನಾಗಿ ನೇಮಿಸಿದ (1733). ಆಗ ಇವನಿಗೆ ಗೋವಿಂದ ಪಂತ ಬುಂದೇಲ್ ಎಂಬ ಹೆಸರು ಪ್ರಾಪ್ತವಾಯಿತು. ಈತ ತನ್ನ ಶೌರ್ಯ ಧೈರ್ಯಗಳಿಂದ, ಧೂರ್ತತೆಯಿಂದ ರಜಪೂತ ರಾಜರ ಮೇಲೆ ಮರಾಠರ ವರ್ಚಸ್ಸನ್ನು ಬೆಳೆಸಿದ. ಇದರಿಂದಾಗಿ ಈತ ಒಬ್ಬ ಪ್ರಬಲ ಹಾಗೂ ಪ್ರಮುಖ ಸರ್ದಾರನೆಂದೂ ಗಣಿಸಲ್ಪಟ್ಟ. ಕುರಇ ನವಾಬನಿಂದ ಈತ ಗೆದ್ದ ಪ್ರಾಂತದಲ್ಲಿ ಸಾಗರ ಎಂಬ ದೊಡ್ಡ ಕೆರೆಯಿತ್ತು. ಅದರ ಹತ್ತಿರದಲ್ಲಿ ಅದೇ ಹೆಸರಿನ ಒಂದು ನಗರವನ್ನು ಕಟ್ಟಿ ಅದನ್ನು ತನ್ನ ಆಡಳಿತಕೇಂದ್ರವನ್ನಾಗಿ ಮಾಡಿಕೊಂಡ (1736–37).

1751ರಲ್ಲಿ ನಡೆದ ಫರೂಕಾಬಾದ್ ಸಮರದಲ್ಲಿ ರೋಹಿಲರನ್ನು ಸೋಲಿಸಿ ದಿಲ್ಲಿಯ ಮೊಗಲ್ ಬಾದಶಹನ ಮೇಲೆ ತಮ್ಮ ಪ್ರತಿಷ್ಠೆಯನ್ನು ಪ್ರಕಟಿಸಿದ ಮರಾಠಾ ಸರದಾರರಲ್ಲಿ ಗೋವಿಂದ ಪಂತನೂ ಒಬ್ಬ. ಪಂತ ಬಕ್ರುಲ್ಲಾಖಾನ್‌ನನ್ನು ಸೋಲಿಸಿ ಸ್ಥಾನಭ್ರಷ್ಟನನ್ನಾಗಿ ಮಾಡಿ ಆತನ ಪ್ರಾಂತವನ್ನು ತನ್ನ ಸೀಮೆಗೆ ಸೇರಿಸಿದ. ಅನಂತರ ಅಂತರವೇದಿ ಪ್ರಾಂತವನ್ನು ಗೆದ್ದು ಇಟಾವಾ ಬಳಿಯಲ್ಲಿ ಘೋರ ಕದನ ನಡೆಸಿ 1756ರಲ್ಲಿ ಅಸ್ಗರ್ ಅಲಿ ಎಂಬ ಸರ್ದಾರನನ್ನು ಕೊಂದ (1756). 1760–61ರಲ್ಲಿ ನಡೆದ 3ನೆಯ ಪಾಣಿಪತ್ ಯುದ್ಧದಲ್ಲಿ ಈತ ಮಹಾನ್ ಶೌರ್ಯವನ್ನು ಪ್ರದರ್ಶಿಸಿದ. ಈತ ಅಹ್ಮದ್ ಷಾ ಅಬ್ದಾಲಿಯನ್ನು ಎದುರಿಸಿ ಅವನ ಸೈನ್ಯಕ್ಕೆ ಹೋಗುತ್ತಿದ್ದ ಸರಕುಗಳನ್ನು ದಾರಿಯಲ್ಲೇ ತಡೆಹಿಡಿದ. ಆದರೆ ಅಬ್ದಾಲಿ ಹೋಳ್ಕರನ ಬಾವುಟವೇ ಮುಂತಾದ ರಾಜ ಚಿಹ್ನೆಗಳನ್ನು ಬಳಸಿ ಬೇಟೆಯ ನಿಮಿತ್ತ ಹೊರಟಹಾಗೆ ಮಾಡಿ ಮೋಸದಿಂದ ಪಂತನನ್ನು ಕೊಂದ. ಈತನ ಸಾವಿನಿಂದ ಅಬ್ದಾಲಿಗೆ ಮುಂದಿನ ಯುದ್ಧ ಸುಗಮವಾಯಿತು. (ಎಸ್.ಎಸ್.ಜಿ.ಎ.)

**ಗೋವಿಂದ ಪಿಳ್ಳೆ, ಪಿ. :** 1849–97. ಮಲಯಾಳ ಭಾಷಾಚರಿತ್ರಂ ಎನ್ನುವ ಗ್ರಂಥದ ಕರ್ತೃ. ತಿರುವನಂತಪುರದ ಶ್ರೀಕಂಠೇಶ್ವರ ಪ್ರದೇಶದ ಪಪ್ಪುಪಿಳ್ಳೆ ಈತನ ತಂದೆ. 1873ರಲ್ಲಿ ಬಿ.ಎ. ಪದವಿ ಪಡೆದು ತಿರುವನಂತಪುರದ ಒಂದು ಪ್ರೌಢಶಾಲೆಗೆ ಮುಖ್ಯೋಪಾಧ್ಯಾಯನಾಗಿ ನೇಮಕಗೊಂಡ. ಒಂದು ವರ್ಷ ಕಳೆಯುವಷ್ಟರಲ್ಲಿ ಆಗಿನ ತಿರುವಾಂಕೂರು ಮಹಾರಾಜರಾಗಿದ್ದ ಆಯಿಲ್ಯ ತಿರುನಾಳರು ಈತನನ್ನು ತಮ್ಮ ಅರಮನೆಯ ಪ್ರಧಾನ ಕರಣಿಕನನ್ನಾಗಿ ನೇಮಿಸಿಕೊಂಡರು. ಹೀಗೆ ಅರಮನೆಯ ಪ್ರಧಾನಾಧಿಕಾರಿಯಾಗಿ ಪಿಳ್ಳೆ ಸ್ವಲ್ಪಕಾಲ ರಾಜರ ವಿಶೇಷ ಪ್ರೀತಿಗೆ ಪಾತ್ರನಾಗಿ ಸರ್ವಾಧಿಕಾರ್ಯಕ್ಕಾರ್ ಎಂದು ಸಾಕಷ್ಟು ಪ್ರಸಿದ್ಧನಾದ.

ಆಯಿಲ್ಯ ತಿರುನಾಳ್ ಮಹಾರಾಜರು ದಿವಂಗತರಾದ (1880) ಬಳಿಕ ರಾಜ ಗದ್ದುಗೆಯನ್ನೇರಿದ ವಿಶಾಖ ತಿರುನಾಳ್ ಅದುವರೆಗೆ ರಾಜಾಶ್ರಿತರಾಗಿದ್ದ ಅಧಿಕಾರಿಗಳನ್ನೆಲ್ಲ ಕೆಲಸದಿಂದ ತೆಗೆದುಹಾಕಿದರು. ಆ ಸಮೂಹದಲ್ಲಿ ಗೋವಿಂದ ಪಿಳ್ಳೆಯೂ ಒಬ್ಬ. ಆ ಘಟನೆಯ ಅನಂತರ ಪಿಳ್ಳೆಯ ಆಸಕ್ತಿ ಮಲಯಾಳಂ ಸಾಹಿತ್ಯ ರಚನೆಯ ಕಡೆಗೆ ತಿರುಗಿತು. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಮಲಯಾಳಂ ಭಾಷೆ ಮತ್ತು ಸಾಹಿತ್ಯಕ್ಕೆ ಒಂದು ಸಮಗ್ರ ಚರಿತ್ರೆಯನ್ನು ರಚಿಸಬೇಕೆಂದು ಯೋಚಿಸುತ್ತಿದ್ದ ಪಿಳ್ಳೆ ಆ ಯೋಜನೆಯ ಅಂಗವಾಗಿ 1881ರಲ್ಲಿ ಮಲಯಾಳ ಭಾಷಾಚರಿತ್ರಂ ಎನ್ನುವ 168 ಪುಟಗಳ ಮೊದಲ ಸಂಪುಟವನ್ನು ಸಿದ್ಧಮಾಡಿ ಪ್ರಕಟಿಸಿದ. 1889–90 ರ ಅವಧಿಯಲ್ಲಿ ಐನೂರು ಪುಟಗಳ ಮತ್ತೆರಡು ಸಂಪುಟಗಳು ಬೆಳಕು ಕಂಡವು. ಮಾಸಿಕಗಳು, ಸಾಪ್ತಾಹಿಕಗಳು, ಮುದ್ರಣಾಲಯಗಳು–ಮುಂತಾದವುಗಳ ಸೌಲಭ್ಯಗಳಿಲ್ಲದಿದ್ದ ಕಾಲದಲ್ಲಿ, ಮಲಯಾಳದ ಪ್ರಸಿದ್ಧ ಗ್ರಂಥಗಳು ಪ್ರಕಟಗೊಂಡಿರದಿದ್ದ ಕಾಲದಲ್ಲಿ ಓಲೆಯ ಗ್ರಂಥಗಳು, ಐತಿಹ್ಯಗಳು – ಮುಂತಾದವನ್ನು ಕಾಪಾಡಿಕೊಂಡು ಬಂದಿದ್ದ ಪ್ರಾಚೀನ ಗೃಹಗಳಿಗೆ ಅಲೆದು, ಹುಡುಕಿ, ಸಂಗ್ರಹಿಸಿ ಸಾಹಿತ್ಯ ಚರಿತ್ರೆಯೊಂದನ್ನು ಮೊದಲ ಬಾರಿಗೆ ರಚಿಸಿದ ಕೀರ್ತಿ ಗೋವಿಂದ ಪಿಳ್ಳೆಯದು.

ಅರಮನೆಯ ಅಧಿಕಾರವನ್ನು ಬಿಟ್ಟಮೇಲೆ ಪಿಳ್ಳೆ ತಿರುವನಂತಪುರದಲ್ಲಿ ವಕೀಲನಾದ. ಅದೇ ಸಂದರ್ಭದಲ್ಲಿ ಒಂದು ಇಂಗ್ಲಿಷ್ ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡಿದ್ದಲ್ಲದೆ ಅದುವರೆಗೆ ಬೆಳಕು ಕಾಣದೆ ಇದ್ದ ಭಾಷಾ ನೈಷಧ ಚಂಪು, ದಕ್ಷಯಾಗ ಕಿಳಿಪ್ಪಾಟ್ಟು – ಮುಂತಾದುವನ್ನು ಪ್ರಕಟಿಸಿ ಬೆಳಕಿಗೆ ತಂದ. ರೋಮನ್ ಚರಿತ್ರೆ ಮತ್ತು ಎ ಹ್ಯಾಂಡ್ ಬುಕ್ ಆಫ್ ಟ್ರ್ಯಾವಂಕೂರ್ ಎನ್ನುವ ಎರಡು ಸ್ವಂತ ಕೃತಿಗಳನ್ನು ರಚಿಸಿ ಪ್ರಕಟಿಸಿದ.

ಒಂದು ಇಂಗ್ಲಿಷ್–ಮಲಯಾಳಂ ನಿಘಂಟನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಪಿಳ್ಳೆ ಅದಕ್ಕಾಗಿ ಶ್ರಮಿಸಿದ್ದುಂಟು. ಆದರೆ ಅದು ಈತನ ಜೀವಮಾನದಲ್ಲಿ ಸಿದ್ಧಿಸಲಿಲ್ಲ. (ಬಿ.ಕೆ.ಟಿ.)

**ಗೋವಿಂದ ಪೈ :** 1883–1963. ಕನ್ನಡದ ಹೆಸರಾಂತ ವಿಮರ್ಶಕ, ಕವಿ. ರಾಷ್ಟ್ರಕವಿ ಪ್ರಶಸ್ತಿಗೆ ಭಾಜನರಾದವರು. ಅನೇಕ ವಿಧದಲ್ಲಿ ಕನ್ನಡ ನಾಡು ನುಡಿಗಳ ಏಳಿಗೆಗೆ, ಏಕೀಕರಣಕ್ಕೆ ಕೆಲಸ ಮಾಡಿದವರಲ್ಲಿ ಮುಖ್ಯರು. ಆಸ್ತಿ ಮನೆ ಎಲ್ಲ ಮಂಜೇಶ್ವರದಲ್ಲಿದ್ದು ಅಲ್ಲಿಯೇ ಇವರು ನೆಲೆ ನಿಂತರಾದರೂ ಇವರ ಹೆಸರಿನ ಮೊದಲಿಗೆ ಬರುವ ಎಂ. ಎಂಬುದು ಮಂಗಳೂರಿನ ಪ್ರತೀಕವೇ ಹೊರತು ಮಂಜೇಶ್ವರದ್ದಲ್ಲ. ಹುಟ್ಟಿದ್ದು ಮಂಗಳೂರಿನಲ್ಲಿ. ಬೆಳೆದದ್ದು ಕಡಲಕರೆಯ ನಾಡಾದ ಮಂಜೇಶ್ವರದಲ್ಲಿ. ಇವರು ಗೌಡ ಸಾರಸ್ವತ ಸಮಾಜದ ಮಂಗಳೂರಿನ ಬಾಪ್ಪೈ ಮನೆತನಕ್ಕೆ ಸೇರಿದವರು.



ಪೈ ಅವರ ಆರಂಭದ ವಿದ್ಯಾಭ್ಯಾಸ ಹುಟ್ಟೂರಾದ ಮಂಗಳೂರಿನಲ್ಲಿಯೇ ನಡೆಯಿತು. ಮಂಗಳೂರು ಆಗಿನ ಕಾಲಕ್ಕೆ ತುಂಬ ಎಚ್ಚೆತ್ತ ಪಟ್ಟಣವಾಗಿತ್ತು. ಬಾಸೆಲ್ ಮಿಷನಿನ ಪಾದ್ರಿಗಳೂ ಸೇರಿದಂತೆ ದಕ್ಷರೂ ಜಾಣರೂ ಆದ ಹಲವರ ದುಡಿಮೆಯ ಫಲವಾಗಿ ಮಂಗಳೂರು ಆಗ ವಿದ್ಯೆ, ಸಂಸ್ಕೃತಿಗಳ ಒಂದು ಹಿರಿಯ ಕೇಂದ್ರವಾಗಿತ್ತು. ಅಲ್ಲದೆ ಹೊಸಗನ್ನಡದ ಮಾಸಪತ್ರಿಕೆ ಸುವಾಸಿನಿ ಇಲ್ಲಿಂದಲೇ ಪ್ರಕಟವಾಗುತ್ತಿತ್ತು. ಬೋಳಾರ ವಿಠಲರಾಯರು, ಬೆನಗಲ್ ರಾಮರಾಯರು, ಪಂಜೆ ಮಂಗೇಶರಾಯರು ಮುಂತಾದ ಹಲವಾರು ಭಾಷಾ ಸೇವಕರು ಈ ಕೇಂದ್ರದಲ್ಲಿ ಇದ್ದುಕೊಂಡು ನಾಡು, ನುಡಿಗಳಿಗೆ ಸೇವೆ ಸಲ್ಲಿಸುತ್ತಿದ್ದರು.

ತರುಣ ಗೋವಿಂದ ಪೈಗಳು ಇಂಥ ಸುಸಂಸ್ಕೃತ ಆವರಣದಲ್ಲಿ ಬೆಳೆದರು. ಪಂಜೆ ಮಂಗೇಶರಾಯರಿಂದ ನೇರವಾಗಿ ಶಾಲೆಯಲ್ಲಿ ಪಾಠ ಕಲಿತರು. ಚುರುಕು ಬುದ್ಧಿಯ ಭಾವುಕ ಮನೋಧರ್ಮದ ತರುಣನ ಮೇಲೆ ಈ ಪವಿತ್ರ ವಾತಾವರಣದ ಪ್ರಭಾವ ಬಲವಾಗಿ ಬಿತ್ತು. ಅನಂತರ ಪೈ ಪ್ರೌಢ ವಿದ್ಯಾಭ್ಯಾಸಕ್ಕೆಂದು ಮದ್ರಾಸಿಗೆ ಹೋಗಿ ಜಾಣ ಎನಿಸಿಕೊಂಡರು. ತಂದೆಯ ತೀವ್ರ ಕಾಯಿಲೆಯಿಂದಾಗಿ, ಅನಂತರ ಹಠಾತ್ತನೆ ಒದಗಿದ ಅವರ ಮರಣದಿಂದಾಗಿ ಬಿ.ಎ. ಪದವಿಯನ್ನು ಪಡೆಯಲಾಗಲಿಲ್ಲ.

ಅಪ್ಪ ತೀರಿಕೊಂಡ ಮೇಲೆ ಸಂಸಾರದ ಹೊಣೆ ಹೊತ್ತು ಊರಿನಲ್ಲಿಯೇ ನಿಂತರು. ಆದರೆ ಇವರ ಸಾಂಸಾರಿಕ ಜೀವನವೂ ಅಂಥ ಸುಖಮಯವೇನೂ ಆಗಲಿಲ್ಲ. ದಾಂಪತ್ಯ ಜೀವನದ ಹರೆಯದಲ್ಲಿಯೇ ಪತ್ನಿಯನ್ನು ಕಳೆದುಕೊಂಡರು. ಮತ್ತೆ ಮದುವೆಯಾಗಲಿಲ್ಲ. ಮಕ್ಕಳಿಲ್ಲವೆಂದು ವ್ಯಥೆಪಡಲಿಲ್ಲ. ತಮ್ಮ ಕುಟುಂಬದಲ್ಲಿಯೇ ಬೆಳೆಯುತ್ತಿದ್ದ ತಮ್ಮನ ಮಕ್ಕಳಲ್ಲಿಯೇ ಆ ಅಕ್ಕರೆಯನ್ನು ತೋರಿಸುತ್ತ ಅವರನ್ನು ಬೆಳೆಸಿದರು. ಕಿರಿಯ ಸೋದರ ಸುಬ್ಬರಾಯ ಪೈಗಳು ಅಣ್ಣನಿಗೆ ನೆರವಾಗುತ್ತ ಮನೆಗೆ ಬಂದ ಅತಿಥಿಗಳ ಸತ್ಕಾರಾದಿ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು.

ಗೋವಿಂದ ಪೈಗಳು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯಾಚಾರ್ಯರುಗಳಲ್ಲಿ ಅಗ್ರಪಂಕ್ತಿಗೆ ಸೇರಿದವರು. ಪಾಂಡಿತ್ಯದಿಂದ, ಸಂಶೋಧನೆಯಿಂದ, ನಯ ವಿನಯಗಳಿಂದ, ಸರಳತೆಯಿಂದ ಜನತೆಯ ಸ್ನೇಹ ಗೌರವಗಳನ್ನಿವರು ಸಂಪಾದಿಸಿದರು. ತನು ಕನ್ನಡ, ಮನ ಕನ್ನಡ, ನುಡಿ ಕನ್ನಡ ಎಂದು ಹಾಡಿದ ರಾಷ್ಟ್ರಕವಿ ಗೋವಿಂದ ಪೈಗಳ ವ್ಯಕ್ತಿತ್ವ ಘನವಾದುದು.

ಗೋವಿಂದ ಪೈಗಳ ಮೊತ್ತಮೊದಲಿನ ಲೇಖನ 1900ರಲ್ಲಿ ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾಯಿತು. 1962ರಲ್ಲಿ ಪ್ರಕಟಗೊಂಡ ಮಂಜೇಶ್ವರ ದೇವಸ್ಥಾನದ ಮೇಲಿನ ಲೇಖನ ಇವರ ಕೊನೆಯ ಬರವಣಿಗೆಯಾಯಿತು. ಹೀಗೆ ಸುಮಾರು 62 ವರ್ಷಗಳ ವರೆಗೆ ಸತತವಾಗಿ ವಾಙ್ಮಯ ಸೇವೆಯಲ್ಲಿ ತೊಡಗಿದ್ದು ಕನ್ನಡ ಸಾಹಿತ್ಯವನ್ನಿವರು ಶ್ರೀಮಂತಗೊಳಿಸಿದರು. ಇವರು ಬರೆದದ್ದು ಗಾತ್ರದಲ್ಲಿ ಸ್ವಲ್ಪವೇ ಆದರೂ ಇವರ ಬರವಣಿಗೆ ಪ್ರೌಢವೂ ವಿದ್ವತ್ಪೂರ್ಣವೂ ಮೌಲಿಕವೂ ಆಗಿದೆ.




ಗೋವಿಂದ ಪೈಯವರ ಕೈಬರೆಹ

ಸಂಶೋಧನೆ, ಪ್ರಬಂಧ, ಕವಿತೆ ಮತ್ತು ನಾಟಕ – ಈ ಮೂರು ಮಾರ್ಗಗಳಲ್ಲಿ ಪೈಗಳ ಸಾಹಿತ್ಯವಾಹಿನಿ ಪ್ರವಹಿಸಿದೆ. ಸುವಾಸಿನಿ ಎಂಬಿವರ ಕವನ ಅದೇ ಹೆಸರಿನ ಪತ್ರಿಕೆಯಲ್ಲಿ ಪ್ರಕಟವಾಗಿ (1900) ಆ ಪತ್ರಿಕೆ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಿಟ್ಟಿಸಿತು. ಅನಂತರ ನವೀನ ಚಂದ್ರಸೇನರ ಬಂಗಾಳಿ ಕೃಷ್ಣಚರಿತೆಯ ಗದ್ಯಾನುವಾದ (1909) ; ಮತ್ತು ಸಿಗಾಲ ಸುತ್ತ ಎಂಬ ಬೌದ್ಧ ಸೂತ್ರಗಳ (1911) ಕನ್ನಡ ಅನುವಾದಗಳು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದುವು. ಇವರ ಕವನ ಸೃಷ್ಟಿಯೂ ಧರ್ಮ ಮತ್ತು ಚರಿತ್ರೆಗೆ ಸಂಬಂಧಿಸಿದ ವ್ಯಾಸಂಗವೂ ಒಟ್ಟೊಟ್ಟಿಗೆ ಸಾಗಿದವು. ಇದೇ ಕಾಲಕ್ಕೆ (1911), ಪ್ರಾಸವನ್ನು ಇಟ್ಟು, ಬಿಟ್ಟು ಪದ್ಯಗಳನ್ನು ರಚಿಸುವ ಹಲವು ಪ್ರಯೋಗಗಳನ್ನಿವರು ಕೈಕೊಂಡರು. ಆ ಮುಂದೆ, ಮಂಜೇಶ್ವರಕ್ಕೆ ಬರುತ್ತಿದ್ದ ಬುದ್ಧಿಜೀವಿಗಳೊಡನೆ ಪ್ರಾಕ್ತನ ವಿಷಯಗಳನ್ನು ಚರ್ಚಿಸುವುದರಲ್ಲಾಗಲಿ, ಕವಿಚರಿತ್ರಕಾರರೇ ಮೊದಲಾದವರೊಡನೆ ಪತ್ರವ್ಯವಹಾರದಲ್ಲಾಗಲಿ ತೊಡಗಿದ್ದರಾದರೂ ಸಂಶೋಧನಾತ್ಮಕ ಬರವಣಿಗೆಯಲ್ಲಿ ಇನ್ನೂ ತೊಡಗಿರಲಿಲ್ಲ. 1924ರ ಬೆಳಗಾಂವಿ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಇವರು ಒಬ್ಬ ಉದಯೋನ್ಮುಖ ಕವಿ ಎಂಬ ಹೆಸರನ್ನು ಮಾತ್ರ ಗಳಿಸಿದ್ದರು.

ಪೈಗಳ ಸಂಶೋಧನಾತ್ಮಕ ಬರವಣಿಗೆ ಪ್ರಾರಂಭವಾದದ್ದು 1924ರಲ್ಲಿ. ಮುಂದಣ ಒಂದೊಂದು ವರ್ಷಕ್ಕೆ ಸುಮಾರು ಏಳೆಂಟು ಸಂಶೋಧನ ವಿಷಯಗಳನ್ನು ಆರಿಸಿಕೊಂಡು ಬರೆಯುತ್ತ ಹೋದರು. ಭಾರತೀಯ ಇತಿಹಾಸಕಾರರಿಗೆ ಹೆಚ್ಚು ಹಿಡಿಸಬಹುದಾದ ಲೇಖನಗಳನ್ನು ಇಂಗ್ಲಿಷಿನಲ್ಲಿ ಬರೆದರು. ಅರಸುಮನೆತನಗಳ ವಂಶಾವಳಿ, ಕವಿಕಾವ್ಯಗಳ ಕಾಲನಿರ್ಣಯ, ಈ ಕೆಲಸದ ಮಧ್ಯೆ ಕವಿತಾ ರಚನೆ – ಈ ಪರಿಪಾಠ 1945 ರ ವರೆಗೆ ನಡೆಯಿತು. ಕವಿತೆ ಮತ್ತು ಸಂಶೋಧನೆ ಇವೆರಡರಲ್ಲಿ ನಿಶ್ಚಿತವಾದ ಯಾವ ಕ್ರಮವನ್ನೂ ತಾವು ಅನುಸರಿಸಿದವರಲ್ಲ ಎಂಬ ಮಾತನ್ನು ಪೈಯವರೇ ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ. ಗಿಳಿವಿಂಡು ಕವನಸಂಗ್ರಹ 1930 ರಲ್ಲಿ ಪ್ರಕಟವಾಯಿತು. ಪೈ ಅವರು ನಾಟಕ ಕ್ಷೇತ್ರದಲ್ಲಿ ವ್ಯವಸಾಯ ಮಾಡಲು ಮನಸ್ಸನ್ನು ತೊಡಗಿಸಿದ್ದು 1946 – 47 ರಲ್ಲಿ. ಹೀಗೆ 1927ರಿಂದ 1947ರ ವರೆಗಿನ 20 ವರ್ಷಗಳ ಅವಧಿ ಪೈಗಳ ಬರವಣಿಗೆಯ ಉಚ್ಛ್ರಾಯಕಾಲ ಎಂದು ಹೇಳಬಹುದು. ಅನಂತರವೂ ಬರವಣಿಗೆ ಮುಂದೆ ಸಾಗಿತಾದರೂ ಅದರ ಗತಿ ಮಂದವಾಯಿತು. 1953ರ ಹೊತ್ತಿಗೆ, ಎಂದರೆ ಪೈ ಅವರ 70ನೆಯ ವಯಸ್ಸಿನ ಸುಮಾರಿಗೆ ಲೇಖನ ವ್ಯವಸಾಯ ತೀರ ಕುಂಠಿತವಾಯಿತು. ಕೊನೆಯದಾದ ಮಂಜೇಶ್ವರ ದೇವಸ್ಥಾನ ಲೇಖನ ಬಹುಪ್ರಯಾಸದಿಂದಲೇ ಸಿದ್ಧವಾಯಿತಲ್ಲದೆ ಅದರ ಪ್ರಕಟಣೆಯೂ ಕವಿಯ ಮರಣಾನಂತರವೇ ಆಯಿತು.

ಪೈಗಳ ಸಂಶೋಧನ ಕ್ಷೇತ್ರ ಇತಿಹಾಸ, ಹಳಗನ್ನಡ ಕವಿಕಾವ್ಯ, ಹೊಸಗನ್ನಡ ಸಾಹಿತ್ಯ – ಇವಕ್ಕೆ ಸಂಬಂಧಿಸಿದೆ. ಇತಿಹಾಸಕ್ಕೆ ಸಂಬಂಧಿಸಿದ ಲೇಖನಗಳಲ್ಲಿ ತಮ್ಮ

ಪೂರ್ವಜರಾದ ಗೌಡ ಸಾರಸ್ವತರ ಮೂಲಕ್ಕೆ ಸಂಬಂಧಿಸಿದ ಸಂಶೋಧನೆ ಅತ್ಯಂತ ಮಹತ್ತ್ವಪೂರ್ಣವಾದುದು. ಹಲವು ಪುರಾಣಗಳನ್ನೂ ಶಾಸನಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಸಾರಸ್ವತರ ಉಲ್ಲೇಖ ಎಲ್ಲೆಲ್ಲಿ ಬಂದಿದೆ ಎಂಬುದನ್ನು ಗುರುತಿಸಿ ಫ್ಲ್ಯಾಷಸ್ ಫ್ರಮ್ ದಿ ಪಾಸ್ಟ್ ಎಂಬ ಲೇಖನವನ್ನು ಬರೆದರು. ಅದೇ ಮುಂದೆ ಮತ್ತಷ್ಟು ಘನೀಭೂತವಾಗಿ ನಮ್ಮ ಹಿರಿಯರನ್ನು ಕುರಿತು – ಎಂಬ ಲೇಖನದಲ್ಲಿ (ಜೀವೋತ್ತಮ, 1955) ನಿರ್ಣಯಾತ್ಮಕ ರೂಪ ತಾಳಿತು. ಸಾರಸ್ವತರು ಮೂಲತಃ ಪಂಜಾಬದ ಸರಸ್ವತೀ ನದೀತೀರದವರೆಂದು ಸಾಧಾರವಾಗಿ ಹೇಳಿದುದಲ್ಲದೆ, ಕೊಂಕಣಿ ಭಾಷೆಯ ಮೂಲದ ಬಗ್ಗೆಯೂ ಆಳವಾದ ಸಂಶೋಧನೆಯನ್ನು ನಡೆಸಿ ಅದು ಮರಾಠಿ ಜನ್ಯವಲ್ಲ, ಮಾಗಧೀ ಪ್ರಾಕೃತದಿಂದ ಜನಿಸಿದ ಭಾಷೆ ಎಂಬುದನ್ನು ಪೈಗಳು ಸ್ಥಾಪಿಸಿದ್ದಾರೆ. ಅಷ್ಟೇ ಅಲ್ಲದೆ ಮರಾಠಿಯೂ ಈಚಿನ ಕಾಲದ್ದಾದ ಮಹಾರಾಷ್ಟ್ರ ಪ್ರಾಕೃತದಿಂದ ಹುಟ್ಟಿದ್ದಾದುದರಿಂದ ಕೊಂಕಣಿ ಭಾಷೆ ಮರಾಠಿಗಿಂತಲೂ ಪ್ರಾಚೀನ ಎಂದೂ ಮಂಜೇಶ್ವರದ ಅನಂತೇಶ್ವರ ದೇವಾಲಯವೂ ಮೂಲತಃ ಸಾರಸ್ವತರ ದೇವಸ್ಥಾನವೇ ಎಂದೂ ಪೈಗಳ ಅನಿಸಿಕೆ.

ಇನ್ನೊಂದು ಪ್ರಮುಖ ಸಂಶೋಧನೆ ತುಳುನಾಡಿನ ಇತಿಹಾಸವನ್ನು ಕುರಿತದ್ದು. 1927ರಲ್ಲಿ ಮೊದಲು ರೂಪುಗೊಂಡು ಕೊನೆಗೆ 1947ರಲ್ಲಿ ತುಳುನಾಡು ಪೂರ್ವಸ್ಮೃತಿ ಎಂಬ ಹೆಸರಿನಲ್ಲಿ ಪ್ರಚುರಗೊಂಡ ಲೇಖನದಲ್ಲಿ 20 ವರ್ಷಗಳ ಸತತ ಸಂಶೋಧನೆಯ ಸಾರವಿದೆ. ಇದರಲ್ಲಿ ತುಳುನಾಡ ಹೆಸರಿನ ಉತ್ಪತ್ತಿ, ಪ್ರಾಚೀನತೆಗಳನ್ನು ಕುರಿತು ವಿಚಾರ ಮಾಡುತ್ತ 2ನೆಯ ಶತಮಾನದಿಂದ 15ನೆಯ ಶತಮಾನದ ವರೆಗೆ ಆಳಿದ ಆಳುಪರೆಂಬ ರಾಜಮನೆತನದ ಇತಿಹಾಸವನ್ನು ಹೇಳಿರುವುದಲ್ಲದೆ ಇವರಲ್ಲಿ ಪ್ರಮುಖನಾದ ಭೂತಾಳ ಪಾಂಡ್ಯ ಆಳುಪ ಮನೆತನದವನೇ ಎಂಬುದನ್ನು ನಿರ್ಧರಿಸಿದ್ದಾರೆ. ಅಲ್ಲಿನ ಧಾರ್ಮಿಕ ಇತಿಹಾಸವನ್ನು ವಿವರವಾಗಿ ತಿಳಿಸುತ್ತ ನಾಥ ಸಂಪ್ರದಾಯದ ಪ್ರಭಾವವನ್ನೂ ಅಲ್ಲಿನ ಶಿವಲಿಂಗಕ್ಕೆ ಮಂಜುನಾಥ ಎಂದು ಹೆಸರು ಬರಲು ಈ ಸಂಪ್ರದಾಯದ ಪ್ರಭಾವವೇ ಕಾರಣವೆಂಬುದನ್ನೂ ಹೇಳಿದ್ದಾರೆ. ತುಳುನಾಡಿನಲ್ಲಿ ಜನಿಸಿದ ಮಧ್ವಾಚಾರ್ಯ, ರತ್ನಾಕರವರ್ಣಿ, ಪಾರ್ತಿಸುಬ್ಬ, ಮುದ್ದಣ ಮೊದಲಾದ ವ್ಯಕ್ತಿಗಳ ವಿಷಯದಲ್ಲಿದ್ದ ಸಂದಿಗ್ಧತೆಗಳನ್ನು ಪರಿಹರಿಸಿದ್ದಾರೆ.

ಕರ್ನಾಟಕಕ್ಕೆ ಸಂಬಂಧಿಸಿದ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ನಡೆಸಿ ದಕ್ಷಿಣಕ್ಕೆ ಭದ್ರಬಾಹು ಮುನಿಯೊಂದಿಗೆ ಬಂದ ದೊರೆ ಚಂದ್ರಗುಪ್ತ ಮೌರ್ಯನಲ್ಲ, ಮಧ್ಯ ಭಾರತದ ಉಜ್ಜಯಿನಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಸಂಪ್ರತಿ ಚಂದ್ರಗುಪ್ತ ಎಂದು ನಿರ್ಣಯಿಸಿ ಆತ ಕರ್ನಾಟಕಕ್ಕೆ ಬಂದ ಕಾಲ ಪ್ರ.ಶ.ಪೂ. 300 ಅಲ್ಲ, ಪ್ರ.ಶ.ಪೂ. 250 ಎಂದೂ ಇವರೇ ಪ್ರಪ್ರಥಮವಾಗಿ ಕರ್ನಾಟಕಕ್ಕೆ ಕಾಲಿರಿಸಿದ ಜೈನರು ಎಂದೂ ಇವರು ದಿಗಂಬರ ಶಾಖೆಯವರೆಂದೂ ಪೈಗಳು ನಿರ್ಣಯಿಸಿದ್ದಾರೆ. ಅನಂತರ ಟಾಲೆಮಿಯ ಪುಸ್ತಕದಲ್ಲಿ ಬಂದಿರುವ ಕರ್ನಾಟಕದ ಊರುಗಳನ್ನು ಗುರುತಿಸಿದ್ದಾರೆ. ಕೆಲವು ಪ್ರಾಚೀನ ಕರ್ನಾಟಕದ ರಾಜಮನೆತನಗಳ, ಅದರಲ್ಲೂ ಸಾತವಾಹನ, ಪುನ್ನಾಟ, ಗಂಗ ಮತ್ತು ಕದಂಬರ ಇತಿಹಾಸವನ್ನು ಅಧಿಕೃತವಾಗಿ ಸಂಶೋಧಿಸಿ ಬರೆದಿದ್ದಾರೆ.

ಕರ್ನಾಟಕವಷ್ಟೇ ಅಲ್ಲದೆ ಭಾರತೀಯ ಇತಿಹಾಸಕ್ಕೂ ಸಂಬಂಧಿಸಿದಂತೆ ಸಂಶೋಧನೆ ನಡೆಸಿ, ಸೆಲ್ಯೂಕಸನನ್ನು ಸೋಲಿಸಿದ ಚಂದ್ರಗುಪ್ತ ಬಸಿಲೆಸ್ ಎಂಬ ಬಿರುದನ್ನು ಪಡೆದಿದ್ದಿರಬೇಕೆಂದೂ ಅದನ್ನು ವಿಶಾಖದತ್ತ ತನ್ನ ಮುದ್ರಾರಾಕ್ಷಸ ನಾಟಕದಲ್ಲಿ ವೃಷ (ಶೂದ್ರ) ಎಂದು ತಪ್ಪಾಗಿ ಗ್ರಹಿಸಿ ಅದನ್ನು ಚಾಣಕ್ಯನ ಬಾಯಲ್ಲಿ ಹೇಳಿಸಿರುವನೆಂದೂ ಹೇಳಿದ್ದಾರೆ. ಅಲ್ಲದೆ ಭಾರತ, ಗ್ರೀಕ್ ಸಂಬಂಧವನ್ನು ಬೇಸ್‌ನಗರ ಎಂಬಲ್ಲಿಯ ಗರುಡಗಂಬದ ಮೇಲಿದ್ದ ಪ್ರಾಕೃತ ಭಾಷೆಯ ಶಾಸನದಿಂದ (ಪ್ರ.ಶ.ಪೂ. 105) ನಿರ್ಧರಿಸಿದ್ದಾರೆ. ಇದರ ಜೊತೆಗೆ ಹೊರಗಿನಿಂದ ಭಾರತಕ್ಕೆ ಪ್ರಸಕ್ತ ಶಕೆಯ ಆರಂಭದಲ್ಲಿ ಬಂದು ಆಳಿದ ಮಾಬಸ್ ರಾಜನಿಂದ (ಪ್ರ.ಶ.ಪೂ. 105) ಆರಂಭವಾದ ಶಕರಾಜರ ಆಳಿಕೆಯ ಮತ್ತು ಅವರ ಯುದ್ಧಯಾತ್ರೆಗಳ ಕಾಲಗಳನ್ನು ನಿರ್ಧರಿಸಿದ್ದಾರೆ.

ಶಕರಾಜನನ್ನು ಸೋಲಿಸಿ 78ರಲ್ಲಿ ಸಾತವಾಹನ ಶಕಯುಗವನ್ನು ಸ್ಥಾಪಿಸಿದಂತೆ 136–137 ಗುಪ್ತ ವಲ್ಲಭೀ ಯುಗಗಳು ಒಂದೇ ಎಂದೂ ಅಲ್ಬೆರೂನಿ ಹೇಳಿದ ಕಾಲ ತಪ್ಪೆಂದೂ 272ರಂದು ಆರಂಭವಾದ ಗುಪ್ತಯುಗ 366ರಲ್ಲಿ ಲುಪ್ತವಾದ ಮೇಲೆಯೇ ವಲಭೀಯುಗ ಆರಂಭವಾಯಿತೆಂದೂ ಹೊಸ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಪ್ರಾಚೀನ ಭಾರತದಲ್ಲಿ ರಾಜ್ಯವಾಳಿದ ವಿಂಧ್ಯಪ್ರದೇಶದ ವಾಕಾಟಕರ (174–515) ಮತ್ತು ದಕ್ಷಿಣ ಪಲ್ಲವರ (87–900) ಚರಿತ್ರೆಯನ್ನು ಬರೆದಿದ್ದಾರೆ.

ಧಾರ್ಮಿಕ ವಿಷಯಗಳಲ್ಲಿನ ಸಂಶೋಧನೆಯಲ್ಲಿಯೂ ಪೈಗಳ ಶುದ್ಧ ಐತಿಹಾಸಿಕ ದೃಷ್ಟಿಯನ್ನು ಕಾಣಬಹುದು. ಆಯಾ ಮತಧರ್ಮಗಳ ಜಿಜ್ಞಾಸೆಗೆ ತೊಡಗದೆ ಜೈನ, ಬೌದ್ಧ, ವೀರಶೈವ–ಇವುಗಳಿಗೆ ಸಂಬಂಧಿಸಿದಂತೆ ಕೆಲವು ಐತಿಹಾಸಿಕ ಅಂಶಗಳನ್ನೂ ವ್ಯಕ್ತಿಗಳ ಜೀವನ ಕಾಲಗಳನ್ನೂ ಕುರಿತು ಇವರು ಪ್ರೌಢವಾಗಿ ವಿಚಾರ ನಡೆಸಿದ್ದಾರೆ. ಗೊಮ್ಮಟೇಶ್ವರ, ಪಾರ್ಶ್ವನಾಥ ತೀರ್ಥಂಕರ, ತೀರ್ಥಂಕರರಲ್ಲಿ ಕೊನೆಯವನಾದ ಮಹಾವೀರಸ್ವಾಮಿ ಇವರ ವಿಷಯದಲ್ಲಿ ಸಂಶೋಧನೆ ನಡೆಸಿ ಆ ಬಗ್ಗೆ ಅತ್ಯಂತ ನಿರ್ದಿಷ್ಟವಾಗಿ ಕಾಲ, ತಿಥಿಗಳನ್ನು ಕೊಟ್ಟಿದ್ದಾರೆ, ಬೌದ್ಧ ಧರ್ಮದ ವಿಷಯದಲ್ಲಿ ಬುದ್ಧನ ಚರಿತ್ರೆ ಮತ್ತು ಅವನ ಬದುಕಿನ ಕೆಲವು ಪ್ರಮುಖ ಘಟನೆಗಳ ಕಾಲನಿರ್ಣಯ ಮಾಡಿದ್ದಾರೆ. ವೀರಶೈವಧರ್ಮದಲ್ಲಿ ಬಸವೇಶ್ವರನ ಉಲ್ಲೇಖವಿರುವ ಹತ್ತಾರು ಶಾಸನಗಳನ್ನೂ ವಿಶೇಷವಾಗಿ ಅರ್ಜುನವಾಡ ಶಿಲಾಶಾಸನವನ್ನು ಕೂಲಂಕಷವಾದ ವಿವೇಚನೆಗೆ ಒಳಪಡಿಸಿ ಬಸವೇಶ್ವರನ ವಂಶಾವಳಿ ಹಾಗೂ ಅವನ ಜೀವನದ ಮಹತ್ತ್ವದ ಘಟನೆಗಳ ಕಾಲವನ್ನು ನಿರ್ಣಯಿಸಿದ್ದಾರೆ. ಜೊತೆಗೆ ದೇವರದಾಸಿಮಯ್ಯ ಹಾಗೂ ರೇವಣಸಿದ್ಧ, ಮರುಳಸಿದ್ಧ, ಏಕೋರಾಮಿತಂದೆ, ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕಾಲನಿರ್ಣಯ ಮಾಡಿದ್ದಾರೆ.

ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಕುರಿತು ಹೇಳುತ್ತ ಹಲ್ಮಿಡಿ ಶಾಸನದ ಕಾಲವನ್ನು ಪೈಗಳು ಬಹಳ ಹಿಂದಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕನ್ನಡ ಸಾಹಿತ್ಯದ ಆರಂಭವನ್ನು ಪ್ರಸಕ್ತ ಶಕೆಯ ಆರಂಭಕ್ಕೆ ಕೊಂಡೊಯ್ಯುತ್ತಾರೆ. ಕನ್ನಡದ ಪ್ರಾಚೀನತೆಯನ್ನು ಕುರಿತು ಹೇಳುವಾಗ ಗ್ರೀಕ್ ಪ್ರಹಸನದಲ್ಲಿರುವ ವಾಕ್ಯಗಳನ್ನು ಕನ್ನಡವೆಂದು ಗುರುತಿಸಿ ಚರ್ಚೆ ಮಾಡಿದ್ದಾರೆ. ಕನ್ನಡದಲ್ಲಿ ಪ್ರಮುಖರಾದ ಪಂಪ, ರನ್ನ, ನಾಗಚಂದ್ರ, ನಾಗವರ್ಮ(ರು), ದುರ್ಗಸಿಂಹ, ಬ್ರಹ್ಮಶಿವ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಶಿಶುಮಾಯಣ, ಸೋಮರಾಜ, ರತ್ನಾಕರವರ್ಣಿ, ಪಾರ್ತಿಸುಬ್ಬ ಮುದ್ದಣ ಮುಂತಾದ ಕವಿಗಳ ಜೀವನ, ಕಾಲ, ಸ್ಥಳ, ಕಾಲಾದಿ ವಿಷಯಗಳನ್ನು ಚರ್ಚಿಸಿದ್ದಾರೆ. ಕರ್ಣ ಮುಂತಾದ ಪಾತ್ರಗಳ ರಸವಿಮರ್ಶೆ ಮಾಡಿದ್ದಾರೆ. ಷಟ್ಪದಿ ಛಂದಸ್ಸನ್ನು ಕುರಿತು ಬರೆದಿದ್ದಾರೆ. ಹೊಸಗನ್ನಡ ಸಾಹಿತ್ಯದ ಪ್ರಕಾರಗಳಾದ ಸಣ್ಣಕತೆ, ಶಿಶು ಸಾಹಿತ್ಯ, ಕಾದಂಬರಿ, ಪ್ರಬಂಧಗಳ ಆದಿಗ್ರಂಥಗಳ ಹೆಸರನ್ನೂ ಕಾಲವನ್ನೂ ತಿಳಿಸಿದ್ದಾರೆ, ಕಿಟ್ಟೆಲ್, ಎಂ.ಎನ್. ಕಾಮತ್, ಪಂಜೆ, ಎನ್.ಎಸ್. ಕಿಲ್ಲೆ, ಬಿ.ಎಂ. ಶ್ರೀಕಂಠಯ್ಯ, ಎಂ.ಆರ್. ಶ್ರೀ. ಮುಂತಾದವರ ವ್ಯಕ್ತಿಚಿತ್ರಗಳನ್ನು ಕೊಡುತ್ತ ಈ ವ್ಯಕ್ತಿಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಕಾಣಿಕೆಯೇನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕೊನೆಗೆ ತಮ್ಮ ಆತ್ಮಕಥನವನ್ನೂ ಗುರುತಿಸಿದ್ದಾರೆ. ಇಷ್ಟೇ ಅಲ್ಲದೆ ಅನೇಕ ಪುಸ್ತಕಗಳಿಗೆ ಮುನ್ನುಡಿಗಳನ್ನು ಬರೆದಿದ್ದಾರಲ್ಲದೆ ಪುಸ್ತಕ ವಿಮರ್ಶೆಯನ್ನೂ ಮಾಡಿದ್ದಾರೆ.

ಗೋವಿಂದ ಪೈ ಅವರ ವಿದ್ವತ್ತು, ಬಹು ಭಾಷಾಜ್ಞಾನ ಅಗಾಧವಾದುದು, ಕೌತುಕವನ್ನುಂಟು ಮಾಡುವಂಥದು. ಕನ್ನಡ, ಕೊಂಕಣಿ, ತುಳು, ಇಂಗ್ಲಿಷ್, ಮರಾಠಿ, ಮಲಯಾಳಂ, ಸಂಸ್ಕೃತ, ಪ್ರಾಕೃತ, ಪಾಳಿ, ಅರ್ಧಮಾಗಧಿ, ಹಿಂದಿ, ಉರ್ದು, ತಮಿಳು, ತೆಲುಗು, ಒರಿಯ, ಬಂಗಾಳಿ, ಜಪಾನಿ, ಗ್ರೀಕ್, ಲ್ಯಾಟಿನ್, ಪರ್ಷಿಯನ್ ಮುಂತಾದ ಭಾಷೆಗಳಲ್ಲಿ ಪರಿಣತಿಯನ್ನು ಪಡೆದು ಆಯಾ ವಿಷಯಗಳನ್ನು ಆಯಾ ಭಾಷೆಗಳಲ್ಲಿಯೇ ಅಧ್ಯಯನ ಮಾಡಿ ಸಂಶೋಧನೆ ನಡೆಸಿದ್ದಾರೆ. ಇವರು ಮಂಡಿಸಿದ ನಿರ್ಣಯಗಳನ್ನೆಲ್ಲ ಒಪ್ಪುವುದು ಕಷ್ಟವಾದರೂ ಇವರ ವಿವೇಚನಾ ಸಾಮರ್ಥ್ಯ, ಹರಿತ ತರ್ಕಸರಣಿ, ಇತಿಹಾಸಪ್ರಜ್ಞೆ ವಸ್ತುನಿಷ್ಠೆ ಮುಂತಾದ ಗುಣಗಳನ್ನು ಇವರ ಸಂಶೋಧನೆಗಳಲ್ಲಿ ಕಾಣಬಹುದು.

ಪೈಗಳ ಸೃಷ್ಟ್ಯಾತ್ಮಕ ಸಾಹಿತ್ಯ ಅದ್ಭುತವಾಗಿದೆ. 1947ರ ಅನಂತರ ಇವರು ನಾಟಕ ರಚನೆಗೆ ಕೈಹಾಕಿ ಏಕಲವ್ಯನನ್ನು ಕುರಿತು ಹೆಬ್ಬೆರಳು ಎಂಬ ಪದ್ಯಾತ್ಮಕ ಏಕಾಂಕವನ್ನೂ 1942ರ ಚಳವಳಿಯನ್ನು ಆಧಾರವಾಗಿಟ್ಟುಕೊಂಡು ಚಿತ್ರಭಾನು ಎಂಬ ಗದ್ಯನಾಟಕವನ್ನೂ ಬರೆದಿದ್ದಾರೆ. ಇವುಗಳ ಜೊತೆಗೆ ಜಪಾನಿನ ಎಂಟು ನೋ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವುದಲ್ಲದೆ, ವಿಶಿಷ್ಟ ನಾಟಕ ಪ್ರಕಾರದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಇವರಿಂದ ರಚಿತವಾದ ಏಕೈಕ ಸಾಮಾಜಿಕ ಏಕಾಂಕ ನಾಟಕ ತಾಯಿ ಎಂಬುದು.

ಇವೆರಡು ಪ್ರಕಾರಗಳಿಗಿಂತ ಪೈ ಅವರ ಕಾವ್ಯಸೃಷ್ಟಿ ಉತ್ತಮವೆನ್ನಲಾಗಿದೆ. 1900ರಿಂದ ಕೊನೆಗಾಲದ ವರೆಗೆ ಇವರು ರಚಿಸಿದ ಸಣ್ಣದೊಡ್ಡ ಕವನಗಳ ಸಂಖ್ಯೆ 180. ಇವರ ಗಿಳಿವಿಂಡು ಕವನ ಸಂಕಲನದಲ್ಲಿ 45 ಭಾವಗೀತಗಳೂ ನಂದಾದೀಪದಲ್ಲಿ 37 ಕವನಗಳೂ ನಾಡಿನ ವಿವಿಧ ಪತ್ರಿಕೆಗಳಲ್ಲಿ 95 ಕವನಗಳೂ ಅಚ್ಚಾಗಿವೆ. ಇವರ ಕಾವ್ಯಸೃಷ್ಟಿಯಲ್ಲಿ ಯೇಸುವಿನ ಅಂತ್ಯವನ್ನು ಚಿತ್ರಿಸುವ ಗೊಲ್ಗೊಥಾ ಮತ್ತು ಬುದ್ಧನ ಕಡೆಯ ದಿನಗಳನ್ನು ಚಿತ್ರಿಸುವ ವೈಶಾಖಿ ಎಂಬ ಎರಡು ನೀಳ್ಗವನಗಳು ಮುಖ್ಯವಾದವು. ಭಕ್ತಿ, ಪ್ರೇಮಭಾವನೆ, ಜೀವನ ವಿವೇಕ, ಸ್ನೇಹ ಸೌಹಾರ್ದ, ಸ್ವಾತಂತ್ರ್ಯ ಪ್ರೇಮ–ಇವು ಇವರ ಕಾವ್ಯಸೃಷ್ಟಿಯ ಸ್ಫೂರ್ತಿಗಳಾಗಿವೆ. ಅಸಂದಿಗ್ಧ ಭಾಷೆ, ಅಚ್ಚಗನ್ನಡ ಪದಪ್ರಯೋಗ, ಹೊಸ ಪದಸೃಷ್ಟಿ, ಭಾಷೆಯಲ್ಲಿನ ಪ್ರಾದೇಶಿಕ ಬನಿ–ಇವುಗಳಿಂದಾಗಿ ಪೈಗಳ ಸಾಹಿತ್ಯ ಗಮನಾರ್ಹವಾಗಿದೆ.

ಹಿಂದಿನ ಮದ್ರಾಸು ಸರ್ಕಾರ ಪೈಗಳಿಗೆ ರಾಷ್ಟ್ರಕವಿ ಪ್ರಶಸ್ತಿಯನ್ನಿತ್ತು (1949) ಗೌರವಿಸಿತು. ಪೈಗಳು 1951ರಲ್ಲಿ ಮುಂಬಯಿಯಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪೈಗಳು ಉತ್ಕಟ ಕನ್ನಡಾಭಿಮಾನಿಗಳು. ತಾವು ಬೆಳೆದು ಬಾಳಿದ ಮಂಜೇಶ್ವರದ ನೆಲ ಕನ್ನಡನಾಡಿಗೆ ಸೇರಲಿಲ್ಲವಲ್ಲ ಎಂಬ ಕೊರಗು ಕನ್ನಡದ ಈ ನಿಷ್ಠಾವಂತ ಅಭಿಮಾನಿಯನ್ನು ಕೊನೆಯವರೆಗೂ ಬಾಧಿಸುತ್ತಿತ್ತು.

ಪೈಗಳ ಜೀವನ ಮತ್ತು ಸಾಹಿತ್ಯದ ವಿವರಗಳನ್ನು ತಿಳಿಯಲು ದೀವಿಗೆ (ಭಂಡಾರ್ಕರ್ಸ್ ಕಾಲೇಜು, ಕುಂದಾಪುರ), ಗೋವಿಂದ ಪೈ ವಾಙ್ಮಯ ದರ್ಶನ (ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ)– ಈ ಗ್ರಂಥಗಳು ನೆರವಾಗುತ್ತವೆ. (ಬಿ.ಎನ್.ಸಿ.)

**ಗೋವಿಂದರಾಜ :** ಕಾಲ 12ನೆಯ ಶತಮಾನ. ಮೂರನೆಯ ಪೃಥ್ವೀರಾಜ ಚೌಹಾಣನಿಂದ ದೆಹಲಿ ಪ್ರದೇಶದ ಆಡಳಿತಮುಖ್ಯನಾಗಿ ನೇಮಕವಾಗಿದ್ದವ. ಈತ ಸ್ವಾಮಿಭಕ್ತ, ಸ್ವಾತಂತ್ರ್ಯ ಪ್ರೇಮಿ, ಉಜ್ವಲ ರಾಷ್ಟ್ರಭಕ್ತ, ಅಸಾಧಾರಣ ಪರಾಕ್ರಮಿ. ಮಹಮ್ಮದ್ ಘೋರಿ ತನ್ನ ಮೊದಲನೆಯ ದಂಡಯಾತ್ರೆಯಲ್ಲಿ ಪಂಜಾಬ್ ಪ್ರದೇಶವನ್ನು ಗೆದ್ದು ಮುಲ್ತಾನ್ ನಗರದಲ್ಲಿ ತನ್ನ ಪ್ರತಿನಿಧಿಯಾಗಿ ಮಲ್ಲಿಕ್ ಜಿಯಾವುದ್ದೀನನನ್ನು ನೇಮಿಸಿದ್ದ. ಆ ಪ್ರದೇಶದಲ್ಲಿ ಹಿಂದೂಗಳಿಗಾಗುತ್ತಿದ್ದ ಕಿರುಕುಳವನ್ನು ಗಮನಿಸಿದ ಗೋವಿಂದರಾಜ ಪೃಥ್ವೀರಾಜನ ಬಳಿಗೆ ಹೋಗಿ ಮಹಮ್ಮದೀಯರ ಆಡಳಿತವನ್ನು ಕೊನೆಗಾಣಿಸಿ ಅಲ್ಲಿಯ ಜನ ನೆಮ್ಮದಿಯಿಂದ ಬಾಳುವಂತೆ ಏರ್ಪಾಡು ಮಾಡಬೇಕೆಂದು ವಿನಂತಿಸಿದ. ಪೃಥ್ವೀರಾಜನಿಗೂ ಮಹಮ್ಮದ್ ಘೋರಿಗೂ 1190–91ರಲ್ಲಿ ತರೈನ್ ಮೈದಾನದಲ್ಲಿ ಘೋರಯುದ್ಧ ಸಂಭವಿಸಿತು. ಗೋವಿಂದರಾಜ ಆನೆಯ ಮೇಲೆ ಕುಳಿತು ಹೋರಾಡುತ್ತ ನೇರವಾಗಿ ಸುಲ್ತಾನನನ್ನು ಎದುರಿಸಿದ. ದಿಗ್ಭ್ರಮೆಗೊಂಡ ಸುಲ್ತಾನ ಒಂದು ಭರ್ಜಿಯನ್ನು ತೆಗೆದುಕೊಂಡು ಗೋವಿಂದರಾಜನ ಮುಖಕ್ಕೆ ಎಸೆದ. ಗೋವಿಂದರಾಜನ ಎರಡು ಹಲ್ಲುಗಳು ಮುರಿದುಹೋದುವು. ಆದರೂ ಇವನು ಧೃತಿಗೆಡದೆ ಪ್ರತಿಯಾಗಿ ಪ್ರಯೋಗಿಸಿದ ಭರ್ಜಿಯಿಂದ ಸುಲ್ತಾನ ಅತೀವವಾಗಿ ಪೆಟ್ಟುತಿಂದು ಕುದುರೆಯ ಮೇಲಿಂದ ಬಿದ್ದು ತನ್ನ ಅಂಗರಕ್ಷಕನೊಬ್ಬನ ಸಹಾಯದಿಂದ ರಣರಂಗದಿಂದ ಪಲಾಯನ ಮಾಡಿದ. ಅವನ ಸೈನ್ಯ ಕಂಗೆಟ್ಟು ಓಡಿಹೋಯಿತು. ಗೋವಿಂದರಾಜನ ಧೈರ್ಯ ಪರಾಕ್ರಮಗಳಿಂದ ಪೃಥ್ವೀರಾಜ ಜಯಗಳಿಸಿದ. ಮರುವರ್ಷ ಮಹಮ್ಮದ್ ಘೋರಿಗೂ ಪೃಥ್ವೀರಾಜನಿಗೂ ಪುನಃ ತರೈನ್ ಮೈದಾನದಲ್ಲಿ ಘೋರಯುದ್ಧ ನಡೆಯಿತು. ಗೋವಿಂದರಾಜ ಸುಲ್ತಾನನ ಭಾರಿ ಸೈನ್ಯವನ್ನು ಎದುರಿಸಿ ಜೀವಭಯವನ್ನು ತೊರೆದು ವೀರಾವೇಶದಿಂದ ಹೋರಾಡಿ ರಣರಂಗದಲ್ಲಿ ಸಾವಿಗೆ ಈಡಾದ. ಇವನ ಮರಣದಿಂದ ಪೃಥ್ವೀರಾಜನ ಬಲ ಕುಗ್ಗಿತು. ಅಂತಿಮವಾಗಿ ಅವನು ಸೋತ. (ಜಿ.ಆರ್.ಆರ್.)

**ಗೋವಿಂದ ವೈದ್ಯ :** ಕಂಠೀರವ ನರಸರಾಜ ವಿಜಯವೆಂಬ ಕಾವ್ಯದ ಕರ್ತೃ. ಕಂಠೀರವ ನರಸರಾಜ ಒಡೆಯರ ಆಸ್ಥಾನಕವಿಯಾಗಿದ್ದ ಈತ 1648ರಲ್ಲಿ ಈ ಕೃತಿಯನ್ನು ರಚಿಸಿದ. ದಳವಾಯಿ ನಂಜರಾಜೇಂದ್ರ ತನ್ನಿಂದ ಕಾವ್ಯ ಬರೆಯಿಸಿದನೆಂದು ಕವಿ ಹೇಳಿಕೊಂಡಿದ್ದಾನೆ. ಕಂಠೀರವನರಸರಾಜ ವಿಜಯದ ಕಡೆಯಲ್ಲಿ ಬರುವ ಗದ್ಯಭಾಗದಲ್ಲಿ 'ರಂಗನಾಥಸ್ವಾಮಿಯ ಕೃಪೆಯಿಂದ ಶ್ರೀನಿವಾಸ ಪಂಡಿತರ ಮಗ ಗೋವಿಂದ ವೈದ್ಯನು ಕಂಠೀರವ ನರಸರಾಜ ವಿಜಯವನ್ನು ವಿರಚಿಸಿ, ಆಚಂದ್ರಾರ್ಕವಾಗಿ ಭೂಮಿಯೊಳಿರಲಿ ಎಂದು ಭಾರತಿನಂಜನ ಮುಖದಿಂದ ವಾಚಿಸಿ ರಾಜಾಸ್ಥಾನದಲ್ಲಿ ವಿಸ್ತಾರಪಡಿಸಿದನು' ಎಂದು ಉಕ್ತವಾಗಿದೆ. ಗೋವಿಂದ ವೈದ್ಯ ಬರೆದ ಕಾವ್ಯವನ್ನು ಭಾರತಿನಂಜನೆಂಬಾತ ವಾಚಿಸಿದನೆಂದು ಕೆಲವರೂ ಭಾರತಿನಂಜ ಎಂಬುದು ಗೋವಿಂದ ವೈದ್ಯನ ಮತ್ತೊಂದು ಹೆಸರೆಂದು ಕೆಲವರೂ ಊಹಿಸಿದ್ದಾರೆ.

ಕಂಠೀರವ ನರಸರಾಜ ವಿಜಯ 26 ಸಂಧಿಗಳನ್ನೂ 2,870 ಪದ್ಯಗಳನ್ನೂ ಒಳಗೊಂಡ ಸಾಂಗತ್ಯಕಾವ್ಯ. ಇದರಲ್ಲಿ ಕಥೆಯಿಲ್ಲ; ಕಂಠೀರವ ನರಸರಾಜ ಒಡೆಯರ ವಿಜಯಪರಂಪರೆಯ ಸವಿಸ್ತಾರ ವರ್ಣನೆಯಿದೆ. ಇದೊಂದು ಶುದ್ಧ ಐತಿಹಾಸಿಕ ಕಾವ್ಯವಾಗಿದ್ದು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ನಂಜುಂಡನ ಕುಮಾರರಾಮ ಸಾಂಗತ್ಯ ಗೋವಿಂದ ವೈದ್ಯನ ಮೇಲೆ ಪ್ರಭಾವ ಬೀರಿದ್ದರೂ ಕಂಠೀರವ ನರಸರಾಜ ವಿಜಯವೊಂದು ಅಪೂರ್ವವಾದ ವೀರಕಾವ್ಯವಾಗಿ ಪರಿಣಮಿಸಿದೆ. ಕರ್ನಾಟಕದ ಬಗ್ಗೆ ಗೋವಿಂದ ವೈದ್ಯನಿಗಿರುವ ಅಭಿಮಾನ ಇದರಲ್ಲಿ ಎದ್ದು ಕಾಣುತ್ತಿದೆ. ಕನ್ನಡಿಗರ ಶೌರ್ಯ ಸಾಹಸಗಳನ್ನು ಈತ ಉಜ್ವಲವಾಗಿ ಚಿತ್ರಿಸಿ ತನ್ನ ಕೃತಿಗೆ ರಾಷ್ಟ್ರೀಯ ಕಾವ್ಯದ ಮಹತ್ತ್ವವನ್ನು ತಂದುಕೊಂಡಿದ್ದಾನೆ.

ಕಂಠೀರವ ನರಸರಾಜ ಒಡೆಯರನ್ನು ಕಲಿಯುಗದ ನರಸಿಂಹಾವತಾರವೆಂದೂ ಮುಸಲ್ಮಾನರನ್ನು ದನುಜರೆಂದೂ ಕಲ್ಪಿಸಿಕೊಂಡಿರುವ ಕವಿ ಆ ದೊರೆಯ ವಂಶ, ಜೀವನ, ಸಾಧನೆಗಳನ್ನು ಸವಿವರವಾಗಿ ನಿರೂಪಿಸಿದ್ದಾನೆ. ರಣದುಲ್ಲಖಾನನ ದಾಳಿ ಹಾಗೂ ಕಂಠೀರವ ನರಸರಾಜ ಒಡೆಯರು ಅವನನ್ನು ಸೋಲಿಸಿದ್ದು ಸ್ವಾರಸ್ಯಪೂರ್ಣ ವಾಗಿ ಚಿತ್ರಿತವಾಗಿವೆ. ತನ್ನ ಕಾಲದ ಜನಜೀವನವನ್ನೂ ರಾಜಕೀಯವನ್ನೂ ಕವಿ ವಿಸ್ತಾರವಾಗಿ ಹಿಡಿದಿಟ್ಟಿರುವುದರಿಂದ ಈ ಕಾವ್ಯ ಚರಿತ್ರೆಗೆ ಪೂರಕವಾಗುತ್ತದೆ. ಅಂದಿನ ಯುದ್ಧ ತಂತ್ರಗಳು, ಆಯುಧಗಳು, ಉಡುಗೆ ತೊಡುಗೆಗಳು, ತಿಂಡಿತಿನಿಸುಗಳು ಮುಂತಾದುವನ್ನೆಲ್ಲ ಈ ಕೃತಿಯಲ್ಲಿ ನೋಡಬಹುದು; ಅಂದಿನ ಕಲೆ ಸಂಸ್ಕೃತಿಗಳನ್ನರಿಯಬಹುದು. ಸಮಕಾಲೀನ ಜೀವನದ ಲೌಕಿಕ, ಧಾರ್ಮಿಕ ಮುಖಗಳೆರಡೂ ಇಲ್ಲಿ ಬಿಂಬಿತವಾಗಿವೆ. ಆಗ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಒಂದು ಸಮಗ್ರ ಚಿತ್ರವನ್ನು ಕವಿ ಕೊಟ್ಟಿದ್ದಾನೆ. ಇದು ವೀರಕಾವ್ಯವಾದರೂ, ಮದನಮೋಹಿನೀ ಪ್ರಸಂಗವೊಂದನ್ನು ಅನಗತ್ಯವಾಗಿ ಸೇರಿಸಿ ಶೃಂಗಾರಕ್ಕೂ ಕವಿ ಅವಕಾಶ ಕಲ್ಪಿಸಿದ್ದಾನೆ.

ಚಾರಿತ್ರಿಕ ಕೃತಿಯಾಗಿ ಪ್ರಾಮುಖ್ಯ ಪಡೆದುಕೊಂಡಿರುವುದು ಮಾತ್ರವಲ್ಲದೆ ಕಾವ್ಯವಾಗಿಯೂ ಕಂಠೀರವ ನರಸರಾಜ ವಿಜಯ ತಕ್ಕಮಟ್ಟಿಗೆ ಗಮನಾರ್ಹವಾಗಿದೆ. ವಿದ್ವಾಂಸರೊಬ್ಬರು ಗೋವಿಂದ ವೈದ್ಯನನ್ನು ಚಾರಣ ಕವಿಯೆಂದೂ ಅವನ ಕೃತಿಯನ್ನು ಚಾರಣ ಕಾವ್ಯವೆಂದೂ ಕರೆದಿದ್ದಾರೆ. ನಂಜುಂಡನ ಕಾವ್ಯವನ್ನು ಬಿಟ್ಟರೆ ಇಂಥ ಕೃತಿ ಕನ್ನಡದಲ್ಲಿ ಮತ್ತೊಂದಿಲ್ಲ ಎನ್ನಬಹುದು. (ಸಿ.ಪಿ.ಕೆ.)

**ಗೋವಿಂದ ಸಖಾರಾಮ್ ಸರ್‌ದೇಸಾಯಿ :** 1865–1959. ಭಾರತೀಯ ಇತಿಹಾಸಕಾರ. ಮಹಾರಾಷ್ಟ್ರದ ರತ್ನಗಿರಿಯಲ್ಲಿ 1865ರ ಮೇ 17ರಂದು ಜನಿಸಿದರು. ಪುಣೆ ಹಾಗೂ ಮುಂಬಯಿಯಲ್ಲಿ ಪದವಿ ಶಿಕ್ಷಣ ಪಡೆದು 1889ರಲ್ಲಿ ಬರೋಡ ಸಂಸ್ಥಾನದಲ್ಲಿ ವೃತ್ತಿಜೀವನ ಆರಂಭಿಸಿದರು. ಜೊತೆಗೆ ಮಹಾರಾಜ 3ನೆಯ ಸಯಾಜಿರಾವ್

ಗಾಯಕವಾಡರ ಖಾಸಗಿ ಗುಮಾಸ್ತರೂ ಆಗಿದ್ದರು. ಅನಂತರ ರಾಜಮನೆತನದ ಮಕ್ಕಳಿಗೆ ಖಾಸಗಿ ಬೋಧಕರಾಗಿ ನೇಮಿಸಲ್ಪಟ್ಟರು. ಇತಿಹಾಸದಲ್ಲಿ ಇವರಿಗೆ ಆಸಕ್ತಿ ಬೆಳೆಯಲು ಕಾರಣ ಮಕ್ಕಳಿಗೆ ಇವರು ಹೇಳುತ್ತಿದ್ದ ಮನೆಪಾಠ. ಮುಂದೆ ಮಹಾರಾಜರ ಪ್ರೋತ್ಸಾಹದಿಂದ ಹಾಗೂ ರಾಜಗ್ರಂಥಾಲಯದಲ್ಲಿ ಲಭ್ಯವಿದ್ದ ನೂರಾರು ಚಾರಿತ್ರಿಕ ಪುಸ್ತಕಗಳ ನೆರವಿನಿಂದ ಮರಾಠಿಯಲ್ಲಿ ಹಲವು ಕೃತಿಗಳನ್ನು ರಚಿಸಿದರು. ಮರಾಠಿ ರಿಯಾಸತ್ (8 ಸಂಪುಟ), ಮುಸಲ್ಮಾನಿ ರಿಯಾಸತ್ (3 ಸಂಪುಟ) ಹಾಗೂ ಬ್ರಿಟಿಷ್ ರಿಯಾಸತ್ (2 ಸಂಪುಟ) ಸಂಪುಟಗಳಲ್ಲಿ ಭಾರತದ 1000 ವರ್ಷಗಳ ಇತಿಹಾಸವನ್ನು ನಿರೂಪಿಸಿರುವುದು ಇವರ ಸಾಧನೆ. 1925ರಲ್ಲಿ ನಿವೃತ್ತರಾದ ಅನಂತರ ಮುಂಬಯಿ ಸರ್ಕಾರದ ಕೋರಿಕೆಯ ಮೇರೆಗೆ ರಾಜ್ಯ ದಾಖಲೆಗಳನ್ನು ಸಂಪಾದಿಸುವ ಕಾರ್ಯ ಕೈಗೊಂಡರು. ಮೋಡಿ, ಮರಾಠಿ, ಇಂಗ್ಲಿಷ್, ಪಾರ್ಸಿ ಹಾಗೂ ಗುಜರಾತಿ ಭಾಷೆಗಳಲ್ಲಿರುವ ಸು. 34,972 ದಾಖಲೆಗಳನ್ನು ಸಂಗ್ರಹಿಸಿ ಈ ಪೈಕಿ 8,650 ದಾಖಲೆಗಳನ್ನು ಪೇಶ್ವ ದಫ್ತಾರ್ ಎಂಬ ಶೀರ್ಷಿಕೆಯಲ್ಲಿ 45 ಸಂಪುಟಗಳಲ್ಲಿ ಪ್ರಕಟಿಸಿದರು. ಮತ್ತಷ್ಟು ದಾಖಲೆಗಳನ್ನು ಸರ್ಕಾರ್‌ರೊಂದಿಗೆ ಪೂನಾ ರೆಸಿಡೆನ್ಸಿ ಕರೆಸ್ಪಾಂಡೆನ್ಸ್ ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದರು. 80ರ ಇಳಿವಯಸ್ಸಿನಲ್ಲಿ ಇವರು ಪ್ರಕಟಿಸಿದ ದಿ ನ್ಯೂ ಹಿಸ್ಟರಿ ಆಫ್ ಮರಾಠಾಸ್‌ನ 3 ಸಂಪುಟಗಳು ಮರಾಠ ಇತಿಹಾಸದ ಆಕರಗ್ರಂಥಗಳಾಗಿವೆ. ಇವರಿಗೆ ರಾವ್ ಬಹದ್ದೂರ್ (1937) ಹಾಗೂ ಇತಿಹಾಸ ಮಾರ್ತಾಂಡ್ (1946) ಎಂಬ ಬಿರುದುಗಳು ಪ್ರಾಪ್ತವಾಗಿದ್ದವು. ಪುಣೆ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿತ್ತು (1951). ಭಾರತ ಸರ್ಕಾರ 1957ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಸನ್ಮಾನಿಸಿತ್ತು. ಇವರು 1959ರ ನವೆಂಬರ್ 29ರಂದು ನಿಧನರಾದರು. (ವಿ.ಎಸ್.)

**ಗೋವಿನ ಹಾಡು :** ಕನ್ನಡ ನಾಡಿನ ಆಬಾಲವೃದ್ಧರಿಗೆಲ್ಲ ಪರಿಚಿತವೂ ಪ್ರಿಯವೂ ಆಗಿರುವ ಕಥನಕವನ. ಇದರಲ್ಲಿ ಒಟ್ಟು 137 ಪದ್ಯಗಳಿದ್ದು, ಅವುಗಳಲ್ಲಿ 114 ಮಾತ್ರ ಮೂಲವೆಂದೂ ಉಳಿದುವು ಪ್ರಕ್ಷಿಪ್ತವೆಂದೂ ವಿದ್ವಾಂಸರ ಮತ. ಈ ಹಾಡನ್ನು ರಚಿಸಿದ ಕವಿಯಾಗಲೀ ಅವನ ಕಾಲವಾಗಲೀ ತಿಳಿದಿಲ್ಲ. ಹಾಡಿನ ಅಂತ್ಯದಲ್ಲಿ ಮದ್ದೂರಿನ ನರಸಿಂಹ ದೇವರ ಹೆಸರಿರುವುದರಿಂದ, ಇದನ್ನು ಕಟ್ಟಿದ ಕವಿ ಆ ಊರಿನವನೋ ಅಥವಾ ಆ ದೇವರ ಒಕ್ಕಲಿನವನೋ ಆಗಿರಬೇಕೆಂದೂ ಸು. 1800 ಕ್ಕಿಂತ ಹಿಂದೆ ಇದು ಹುಟ್ಟಿರಲಾರದೆಂದೂ ಊಹಿಸಲಾಗಿದೆ. ಈ ಹಾಡಿನ ಛಂದಸ್ಸು ಗೋವಿನ ಹಾಡಿನ ಮಟ್ಟು ಎಂದೇ ಪ್ರಚುರವಾಗಿದೆ. ಇದು ನಾಲ್ಕು ಸಾಲಿನ ಪದ್ಯಗಳಿಂದ ಕೂಡಿದ್ದು ಪ್ರತಿ ಪದ್ಯವನ್ನೂ ಹಾಡಿನ ಲಯಕ್ಕೆ ಹೊಂದಿದಂತೆ ಬ್ರಹ್ಮ, ವಿಷ್ಣು ಮೊದಲಾಗಿ ಅಂಶಗಣಗಳಾಗಿ ವಿಭಾಗಿಸಬಹುದು. ಗೋವಿನ ಹಾಡಿನ ಭಾಷೆ ಒಟ್ಟಿನಲ್ಲಿ ಸರಳವಾಗಿದ್ದರೂ ಅದನ್ನು ಜಾನಪದವೆಂದು ಕರೆಯಲಾಗುವುದಿಲ್ಲ; ಇಡೀ ಗೀತೆ ಏಕ ಕವಿ ಕೃತವೇ ಹೊರತು ಶುದ್ಧ ಜನಪದ ರಚನೆಯಲ್ಲ. ಆದರೂ ಜನಪದ ಅದನ್ನು ಎತ್ತಿಕೊಂಡಿದೆ, ಎದೆಗೊತ್ತಿಕೊಂಡಿದೆ. ಇದಕ್ಕೆ ಕಾರಣ ಹಾಡಿನ ಸ್ವಾರಸ್ಯ.

ಗೋವಿನ ಹಾಡಿನ ಕಥಾಂಶ ಇಷ್ಟು: ಅರುಣಾದ್ರಿಯನ್ನು ಬಳಸಿದ ಏಳು ಗಿರಿಗಳ ನಡುವೆ ಒಂದು ಮಹಾರಣ್ಯ. ಅದರ ಮಧ್ಯೆ ಕಾಳಿಂಗನೆಂಬ ಗೊಲ್ಲನ ದೊಡ್ಡಿ. ಅಲ್ಲಿ ಪುಣ್ಯಕೋಟಿಯೆಂಬ ಒಂದು ಹಸು. ಒಮ್ಮೆ ಹಸುಗಳೆಲ್ಲ ಬೆಟ್ಟದ ಕಿಬ್ಬಿಯಲ್ಲಿ ಮೇದು ದೊಡ್ಡಿಗೆ ಮರಳುವಾಗ ಏಳು ದಿವಸ ಆಹಾರವಿಲ್ಲದೆ ಬಳಲಿದ್ದ ಅರ್ಬುತನೆಂಬ ಹುಲಿ ಗವಿಯಿಂದ ಹೊರಬಿದ್ದು ಗೋವುಗಳ ಮಂದೆಯ ಮೇಲೆರಗುತ್ತದೆ. ಹಸುಗಳೆಲ್ಲ ಚೆಲ್ಲಾಪಿಲ್ಲಿಯಾಗುತ್ತವೆ. ನಿರಾಶೆಗೊಂಡ ಹುಲಿಗೆ, ತನ್ನ ಕಂದನನ್ನು ನೆನೆಯುತ್ತ ಬರುತ್ತಿರುವ ಪುಣ್ಯಕೋಟಿ ಕಾಣಿಸುತ್ತದೆ. ಅದನ್ನು ಹುಲಿ ಅಡ್ಡಗಟ್ಟಿ ತಿನ್ನಬಯಸುತ್ತದೆ. ಪುಣ್ಯಕೋಟಿ ತನ್ನ ಕಂದನಿಗೆ ಹಾಲು ಕುಡಿಸಿ ಮತ್ತೆ ಹುಲಿಯ ಬಳಿಗೆ ಬಂದು, ತನ್ನನ್ನು ತಿಂದು ಹಸಿವನ್ನು ತೀರಿಸಿಕೊಳ್ಳುವಂತೆ ಹೇಳುತ್ತದೆ. ಹುಲಿ ಪುಣ್ಯಕೋಟಿಯ ಪ್ರಾಮಾಣಿಕತೆಗೆ ಮೆಚ್ಚಿ, ತನ್ನನ್ನು ಹಳಿದುಕೊಳ್ಳುತ್ತ ಆಕಾಶಕ್ಕೆ ನೆಗೆದು ಪ್ರಾಣ ಬಿಡುತ್ತದೆ. ಶಿವ ಅದಕ್ಕೆ ಮೋಕ್ಷ ಕರುಣಿಸುತ್ತಾನೆ. ಪುಣ್ಯಕೋಟಿ ಹರ್ಷದಿಂದ ದೊಡ್ಡಿಗೆ ಮರಳುತ್ತದೆ; ಅದರ ಕೋರಿಕೆಯಂತೆ ಗೊಲ್ಲಗೌಡ ಹಬ್ಬವನ್ನಾಚರಿಸಿ, ಪ್ರತಿವರ್ಷವೂ ಸಂಕ್ರಾಂತಿಯಂದು ಹಬ್ಬ ಮಾಡುವುದಾಗಿ ಮಾತು ಕೊಡುತ್ತಾನೆ.

ಹಾಡಿನಲ್ಲಿ ಬರುವ ಅರಣ್ಯದ ವರ್ಣನೆ, ಗೊಲ್ಲನ ವರ್ಣನೆ, ಅವನು ಹಸುಗಳನ್ನು ಹೆಸರಿಸಿ ಕರೆಯುವ ರೀತಿ, ಹುಲಿಯ ಆರ್ಭಟದ ಚಿತ್ರ, ಹಸುವಿಗೂ ಅದಕ್ಕೂ ನಡೆದ ಸಂಭಾಷಣೆ – ಇವೆಲ್ಲ ಚೆನ್ನಾಗಿವೆ. ಪುಣ್ಯಕೋಟಿಗೂ ಅದರ ಕರುವಿಗೂ ನಡೆಯುವ ಮಾತುಕಥೆಗಳಲ್ಲಿ ಕರುಣ ಮಡುಗಟ್ಟಿದೆ. ಪುಣ್ಯಕೋಟಿಯ ಸತ್ಯಸಂಧತೆಯ ಚಿತ್ರಣದಷ್ಟೇ ಹುಲಿಯ ಪರಿವರ್ತನೆಯ ಚಿತ್ರಣವೂ ಹೃದಯಸ್ಪರ್ಶಿಯಾಗಿದೆ. ಸತ್ಯವೇ ನಮ್ಮ ತಾಯಿತಂದೆ, ಸತ್ಯವೇ ನಮ್ಮ ಸರ್ವ ಬಳಗವು, ಸತ್ಯವಾಕ್ಯಕೆ ತಪ್ಪಿದಾರೆ ಅಚ್ಚುತಾ ಹರಿ ಮೆಚ್ಚನು– ಎಂಬುದೇ ಈ ಗೋವಿನ ಹಾಡಿನ ಸಂದೇಶ. ಇಲ್ಲಿ ಹಸು ಸತ್ಯ ಅಹಿಂಸೆಗಳಿಗೂ ಹುಲಿ ಹಿಂಸೆ ಕ್ರೌರ್ಯಗಳಿಗೂ ಸಂಕೇತವಾಗಿದೆ; ಹುಲಿಯ ಸಾವು ಹಿಂಸೆಯ ಸಾವು. ಸತ್ಯ ಅಹಿಂಸೆಗಳ ಪ್ರಚಂಡ ಶಕ್ತಿ ಹೇಗೆ ಹೃದಯ ಪರಿವರ್ತನೆಯನ್ನೆಸಗಬಲ್ಲುದೆಂಬುದನ್ನು ಈ ಗೀತೆ ತೋರಿಸುತ್ತದೆ. ಆದ್ದರಿಂದ, ಕಥೆಯ ಸವಿ ಮಾತ್ರವಲ್ಲ, ದರ್ಶನದ ಆಳವೂ ಇದರಲ್ಲಿದೆ.

ಈ ಗೋವಿನ ಕಥೆ ಪ್ರಾಚೀನವಾದುದೆಂದೂ ಸಂಸ್ಕೃತದ ಇತಿಹಾಸ ಸಮುಚ್ಚಯ ವೆಂಬ ಪುರಾಣಕಥಾಕೋಶದಲ್ಲಿ ಇದು ಬಹುಲೋಪಾಖ್ಯಾನವೆಂಬುದಾಗಿ ಕಂಡು ಬರುತ್ತದೆಂದೂ ಹೇಳಲಾಗಿದೆ. ಅಲ್ಲಿ ಹಸುವಿನ ಹೆಸರು ಬಹುಲಾ; ಹುಲಿಯ ಹೆಸರು ಕಾಮರೂಪಿ (ಅಸತ್‌ಶಕ್ತಿಗೆ ಉಚಿತವಾದ ಹೆಸರು). ಈ ಕಥೆಯನ್ನು ಮೊದಲು ಭೀಷ್ಮ ಯುಧಿಷ್ಠಿರನಿಗೆ ಹೇಳಿದನಂತೆ. ಕಥೆ ಹಳೆಯದಾದರೂ ಕನ್ನಡದಲ್ಲಿ ಅದರ ಕಲೆ ಹೊಸತಾಗಿದೆ. ಈ ಕಥೆಯ ರೂಪಾಂತರಗಳು ಕನ್ನಡ ನಾಡಿನ ಬೇರೆಬೇರೆ ಭಾಗಗಳಲ್ಲಿ ಪ್ರಚಲಿತವಾಗಿರುವಂತೆ ತೋರುತ್ತದೆ. ಉತ್ತರ ಕರ್ನಾಟಕದಲ್ಲಿ ಆಕಳ ಹಾಡು ಎಂಬ ಶುದ್ಧ ಜನಪದ ಕಥನಗೀತೆಯೊಂದು ಸಿಕ್ಕಿದೆ. ಅಲ್ಲಿ ಹಸುವಿನ ಹೆಸರು ಬವಲಿ (ಬಹುಲಾ ಎಂಬುದರ ಅಪಭ್ರಂಶ). ಆದರೆ ಆಕಳ ಹಾಡು ಸತ್ಯನಿಷ್ಠೆಗಿಂತ ಹೆಚ್ಚಾಗಿ ಮಾತೃವಾತ್ಸಲ್ಯವನ್ನು ಎತ್ತಿ ತೋರುವಂತೆ ಇದೆ. ಅದರ ಮುಕ್ತಾಯವೂ ಗೋವಿನ ಹಾಡಿನಲ್ಲಿರುವಷ್ಟು ಪರಿಣಾಮಕಾರಿಯಾಗಿಲ್ಲ.

ಭಾರತೀಯ ಸಂಸ್ಕೃತಿಯ ಒಂದು ಉಜ್ವಲವಾದ ಮುಖ ಕನ್ನಡ ಕವಿಯೊಬ್ಬನ ಕೈಯಲ್ಲಿ ರಸಸ್ಯಂದಿ ಕವಿತೆಯಾಗಿರುವುದಕ್ಕೆ – ನಿದರ್ಶನ ಈ ಗೋವಿನ ಹಾಡು.

(ಸಿ.ಪಿ.ಕೆ.)

**ಗೋ, ವಿನ್‌ಸೆಂಟ್ ವ್ಯಾನ್ (ವ್ಯಾನ್‌ಗೋ) :** 1853–90. ಖ್ಯಾತ ಡಚ್ ಚಿತ್ರ ಕಲಾವಿದ. ತಂದೆ ಹಾಲೆಂಡಿನ ಹಳ್ಳಿಯೊಂದರಲ್ಲಿ ಒಬ್ಬ ಪಾದ್ರಿಯಾಗಿದ್ದನಾಗಿ ಉತ್ತಮ ಧಾರ್ಮಿಕ ಮನೋಭಾವವುಳ್ಳ ತಂದೆತಾಯಿಗಳ ಪೋಷಣೆಯಲ್ಲಿ ಬೆಳೆದ. ದೊಡ್ಡವನಾದ ಮೇಲೆ ಕಲಾಕೃತಿಗಳ ಮಾರಾಟದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ್ದ ಗೌಪಲ್ ಅಂಡ್ ಕಂಪನಿ ಎಂಬ ಸಂಸ್ಥೆಯಲ್ಲಿ ಒಂದು ಸಣ್ಣ ಉದ್ಯೋಗ ಗಳಿಸಿಕೊಂಡ. ಆಗ ಇವನ ಪ್ರಾಯ 16. ಕಲಾಕೃತಿಗಳ ಮಾರಾಟದ ಸಂಬಂಧದಲ್ಲಿ ಇಂಗ್ಲೆಂಡಿಗೆ ಹೋದ (1873). ಅಲ್ಲಿ ಶಾಲಾ ಉಪಾಧ್ಯಾಯಿನಿಯೊಬ್ಬಳನ್ನು ಮೋಹಿಸಿದ. ಪ್ರೇಮ ವಿಫಲಗೊಂಡಾಗ ಜುಗುಪ್ಸೆಗೊಂಡು ಗೌಪಲ್ ಕಂಪನಿಯ ಹುದ್ದೆಗೆ ರಾಜೀನಾಮೆ ಕೊಟ್ಟ. ಅನಂತರ ಇಂಗ್ಲೆಂಡಿನ ರ್‍ಯಾಮ್ಸ್‌ಗೇಟ್ ಮತ್ತು ಐಲ್‌ವರ್ತ್ ಎಂಬಲ್ಲಿ ಶಾಲಾ ಉಪಾಧ್ಯಾಯನಾಗಿ ಕೆಲಸ ಮಾಡಿದ (1876). ಈ ವೃತ್ತಿಯಲ್ಲೂ ಉತ್ಸಾಹ ಕಂಡುಬರಲಿಲ್ಲವಾಗಿ ಅದನ್ನು ತೊರೆದು ಹಾಲೆಂಡಿಗೆ ಹಿಂತಿರುಗಿ ಆಮ್‌ಸ್ಟರ್‌ಡ್ಯಾಮ್‌ನ ಥಿಯಲಾಜಿಕಲ್ ಕಾಲೇಜಿನಲ್ಲಿ ಆಧ್ಯಾತ್ಮ ವಿಷಯವನ್ನು ಕುರಿತು ಅಧ್ಯಯನ ನಡೆಸಿದ. ಬೆಲ್ಜಿಯನ್ ಗಣಿಗಾರರಿಗೆ ಮತ ಪ್ರಚಾರ ಮಾಡುವ ಕೆಲಸವನ್ನು ಈತನಿಗೆ ವಹಿಸಲಾಯಿತು. ಆಧ್ಯಾತ್ಮಿಕ ವ್ಯಾಸಂಗ ಮತ್ತು ಮತಪ್ರಚಾರದ ವಿಷಯದಲ್ಲೂ ವ್ಯಾನ್‌ಗೋ ಜಯಶಾಲಿಯಾಗಲಿಲ್ಲ. ಗಣಿ ಕಾರ್ಮಿಕರ ಹಿತಚಿಂತನೆ ಮಾಡಹೋಗಿ ಗಣಿಮಾಲೀಕರ ಕೋಪಕ್ಕೆ ಪಾತ್ರನಾಗಿ 1879 ರಲ್ಲಿ ಕೆಲಸ ಕಳೆದುಕೊಂಡ. ಜೀವನ ದುಸ್ತರವಾಯಿತು. ಉದ್ದಕ್ಕೂ ಅಪಜಯದ ಸರಣಿಯನ್ನೇ ಕಂಡ ಈತನಿಗೆ ಆಧ್ಯಾತ್ಮಿಕ ಚಿಂತನೆಯಿಂದ ಯಾವ ದಾರಿಯೂ ಕಾಣದಾಯಿತು. ಅನೇಕ ತಿಂಗಳುಗಳ ಒಳತೋಟಿಯ ಅನಂತರ ಚಿತ್ರಕಲಾವಿದನಾಗಲು ನಿರ್ಧರಿಸಿದ (1880). ಚಿತ್ರಕಲೆಯಲ್ಲಿ ಮೊದಲಿಂದ ಬೆಳೆಸಿಕೊಂಡ ಆಸ್ಥೆ ಈಗ ಜೀವನೋಪಾಯವನ್ನು ಒದಗಿಸಿತು.

ವ್ಯಾನ್‌ಗೋ 1881 ರಲ್ಲಿ ಬ್ರಸಲ್ಸ್‌ಗೆ ತೆರಳಿದ. ಅಲ್ಲಿದ್ದ ಸಮಯದಲ್ಲಿ ನಾನಾ ರೀತಿಯ ಚಿತ್ರಕೃತಿಗಳನ್ನು ರಚಿಸಿದ. ಇವನ ತಮ್ಮ ಥೀಯೋ ಎಂಬುವನ ನೆರವು ದೊರೆಯಿತಾಗಿ ಚಿತ್ರಕಲೆಗೆ ಸಂಬಂಧಿಸಿದಂತೆ ಯಥಾದೃಷ್ಟಿ ರೂಪಣದಲ್ಲೂ (ಪರ್ಸ್‌ಪೆಕ್ಟಿವ್) ಅಂಗರಚನಾಶಾಸ್ತ್ರದಲ್ಲೂ (ಅನಾಟಮಿ) ಹೆಚ್ಚಿನ ಶಿಕ್ಷಣ ಪಡೆದುಕೊಂಡ. ಕೆಲಕಾಲ ಛಾಯಾ ಚಿತ್ರಕಲೆಯಲ್ಲಿಯೂ ವ್ಯಾಸಂಗ ಮಾಡಿದ. ಸೋದರ ಸಂಬಂಧಿಯೊಬ್ಬಳಲ್ಲಿ ವ್ಯಾಮೋಹಗೊಂಡು ವಿಫಲನಾದ. ಇದರಿಂದಾಗಿ ಮತ್ತೆ ಜುಗುಪ್ಸೆಗೊಂಡು ಬ್ರಸಲ್ಸನ್ನು ತೊರೆದು ದಿ ಹೇಗ್ ಪಟ್ಟಣಕ್ಕೆ ಬಂದು ನೆಲೆಸಿದ. ಅಲ್ಲಿ ಕ್ರಿಶ್ಚನ್ ಎಂಬ ವೇಶ್ಯೆಯ ಸಂಗ ಮಾಡಿ ಆಕೆಯನ್ನು ಮದುವೆಯಾಗಲು ಬಹು ವಿಧದಲ್ಲಿ ಪ್ರಯತ್ನಪಟ್ಟ. ಕೊನೆಗೊಮ್ಮೆ ಆಕೆಯ ಶೀಲದ ಬಗ್ಗೆ ಶಂಕೆಗೊಂಡು ಅವಳನ್ನು ತ್ಯಜಿಸಿದ. ಈತನ ಕಲಾಕೃತಿ ಸಾರೋ (1882) ಮತ್ತು ಸೀನ್ ಪೋಸಿಂಗ್‌ಗಳಲ್ಲಿ (1883) ಈಕೆಯ ಭಾವಭಂಗಿಗಳು ಕಾಣಸಿಗುತ್ತವೆ. ಅವ್ಯವಸ್ಥಿತ ಕಾಮುಕ ಜೀವನದಿಂದಾಗಿ ಈತನ ದೇಹಸ್ಥಿತಿ ಕ್ರಮೇಣ ಕ್ಷೀಣಿಸಿತು. ಔಷಧೋಪ ಚಾರಗಳು ನಡೆದು ಚೇತರಿಸಿಕೊಳ್ಳುವ ಸಮಯದಲ್ಲೇ ಮತ್ತೊಬ್ಬ ಮಹಿಳೆಯ ಪ್ರೇಮಪಾಶ ಈತನ ಕೊರಳಿಗೆ ಬಿತ್ತು. ಆದರೆ ಆಕೆಯನ್ನು ಈತ ಪರಿಗ್ರಹಿಸಲಿಲ್ಲ. ಇಷ್ಟಾದರೂ ಈತನ ಚಿತ್ರಕಲಾ ಹವ್ಯಾಸ ಅವ್ಯಾಹತವಾಗಿ ಮುಂದುವರಿದಿತ್ತು. ಕಡಲತೀರ ಪ್ರದೇಶದ ರಮ್ಯಚಿತ್ರಗಳನ್ನೂ ಬೆಸ್ತರಜೀವನವನ್ನೂ ನಿರೂಪಿಸುವ ಚಿತ್ರಗಳನ್ನು ತನ್ನದೇ ಆದ ಶೈಲಿಯಲ್ಲಿ ಮೂಡಿಸಿದ. ಮರೀನ್ ಡ್ರೈವ್ ಎಂಬಲ್ಲಿಗೆ ಹೋಗಿ ಅಲ್ಲಿಯ ರೈತಾಪಿ ಜನರ ಜೀವನವನ್ನು ಚಿತ್ರಿಸಿದ. ತನ್ನ ತಂದೆಯ ಸ್ಥಳ ನ್ಯೂನೆನ್‌ಗೆ ಹೋಗಿ ಅಲ್ಲಿನ ಬೇಟೆಯ ದೃಶ್ಯಗಳನ್ನೂ ರೈತರ ಬಡಜೀವನವನ್ನೂ ಕುರಿತಂಥ ಚಿತ್ರಗಳನ್ನು ರಚಿಸಿದ. ದಿ ಪೊಟೆಟೋ ಈಟರ್ಸ್ (1885) ಎಂಬ ಚಿತ್ರಣ ಈತನ ಮೇರುಕೃತಿ. ಈ ಚಿತ್ರದಲ್ಲಿ ಬಳಸಿರುವ ವರ್ಣಗಳು ಮತ್ತು ವಿನ್ಯಾಸಗಳನ್ನು ಕುರಿತು ತನ್ನ ತಮ್ಮನಿಗೆ ಬರೆದ ಪತ್ರದಲ್ಲಿ ವ್ಯಾನ್‌ಗೋ ತನ್ನ ಭಾವನೆಯೇನೆಂಬುದನ್ನು ವ್ಯಕ್ತಪಡಿಸಿದ್ದಾನೆ. ಚಿತ್ರದಲ್ಲಿ ರೂಪುಗೊಂಡಿರುವ ಅಲ್ಲಿನ ಬಂಧುಗಳ ಸರಳಸ್ವಭಾವ, ಅವರು ಆಲೂಗಡ್ಡೆಯನ್ನು ಭೂಮಿಯಿಂದ ಹೊರತೆಗೆದು ಸೇವಿಸುವ ರೀತಿ, ಅವರ ಕಾಯಕ– ಇವೆಲ್ಲವನ್ನೂ ಯಥಾರ್ಥವಾಗಿ ಮೂಡಿಸಿರುವುದರ ಬಗ್ಗೆ ಹೇಳಿಕೊಳ್ಳುತ್ತ ತನ್ನ ಪ್ರಯತ್ನ ಸಫಲವಾಗುತ್ತಿದೆ ಎಂಬುದಾಗಿ ಆ ಪತ್ರದಲ್ಲಿ ತಿಳಿಸಿದ್ದಾನೆ. ಇವನ ಮತ್ತೊಂದು ಹೆಸರಾಂತ ಕೃತಿ ಬೂಟ್ಸ್. 1880 ಮತ್ತು 1886ರ ನಡುವೆ ಈತ ಪ್ಯಾರಿಸಿಗೆ ತೆರಳಿದ. ಇವನ ತಮ್ಮ ಥೀಯೋ ಕೂಡ ಒಬ್ಬ ಕಲಾಸಕ್ತ. ಈತ ತನ್ನ ಅಣ್ಣನಿಗೆ ಚಿತ್ರಕಲಾಭ್ಯಾಸವನ್ನು ಪ್ಯಾರಿಸಿನಲ್ಲಿ ಮುಂದುವರಿಸಲು (1866–88) ನೆರವು ನೀಡಿದ. ಈ ಸಮಯದಲ್ಲಿ ಕಾರ್ಮನ್ ಎಂಬ ಚಿತ್ರ ಕಲಾವಿದನ ಮಾರ್ಗದರ್ಶನ ವ್ಯಾನ್‌ಗೋಗೆ ದೊರಕಿತು. ಅಲ್ಲಿದ್ದಾಗ ಗೋಗ್ಯಾನ್, ಟುಲೂಜ಼್– ಲೋಟ್ರೆಕ್ ಮುಂತಾದ ಫ್ರೆಂಚ್ ಚಿತ್ರಕಲಾವಿದರ ಸಂಪರ್ಕವೂ ಖ್ಯಾತ ಕಲಾವಸ್ತು ಸಂಗ್ರಾಹಕನಾದ ಟಾಂಗ್ಯೆ ಎಂಬ ಕಲಾಸಕ್ತನ ಪರಿಚಯವೂ ಈತನಿಗೆ ದೊರೆಯಿತು. ಪರಿಣಾಮ ವಿಧಾನದ (ಇಂಪ್ರೆಷನಿಸ್ಟಿಕ್) ಚಿತ್ರಕಾರರ ಕಲಾಕೃತಿಗಳು ಇವನ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವ ಬೀರಿದವು. ವಸ್ತು ಮತ್ತು ಶೈಲಿಗಳ ವಿಚಾರದಲ್ಲಿ ಈತ ಹೊಸ ಸಂಗತಿಗಳನ್ನು ಕಂಡುಕೊಂಡ. ಈತ ಚಿತ್ರಿಸಿರುವ ಭಾವಚಿತ್ರಗಳಲ್ಲಿ (1887 – 88) ಟಾಂಗ್ಯೆನ ಭಾವಚಿತ್ರವೂ ಒಂದು. ಹೊಸಹೊಸ ವಿಚಾರಗಳನ್ನು ಕುರಿತು ಆಲೋಚಿಸುವ ಸಲುವಾಗಿ ಲೋಟ್ರೆಕ್‌ನ ಆದೇಶದಂತೆ ಈತ ಪ್ಯಾರಿಸಿನಿಂದ ಆರ್‌ಲೆಗೆ ಬಂದ. ಅಲ್ಲಿನ ವಿಕಸಿತ ಪುಷ್ಪಭರಿತ ವೃಕ್ಷಗಳು, ನಗುಮುಖದ ತರುಣಿಯರು, ಇವೆಲ್ಲ ಇವನ ಚಿತ್ರಕಲಾ ಪ್ರಜ್ಞೆಗೆ ಹೆಚ್ಚಿನ ಪೋಷಕಾಂಶಗಳಾದವು. ಆ ಸ್ಥಳದಲ್ಲಿ ಇವನು ಚಿತ್ರಿಸಿದ ಕೃತಿಗಳಲ್ಲಿ ಸನ್‌ಫ್ಲವರ್ (1888), ದಿ ಚೇರ್ ಅಂಡ್ ದಿ ಪೈಪ್



ಒಂದು ಸ್ವಚಿತ್ರ

(1888) ಸೇರಿವೆ. ಇವನ ಆಗಿನ ರೇಖಾವಿನ್ಯಾಸದಲ್ಲಿ ನಿಶ್ಚಿತ ಜ್ಞಾನ ಮತ್ತು ದೃಢತೆಗಳಿದ್ದವು. ವರ್ಣ ಮಿಶ್ರಣದಲ್ಲಿ ನವೀನ ಕ್ರಮವನ್ನನುಸರಿಸಿದುದರಿಂದ ಚಿತ್ರಗಳಲ್ಲಿ ಸೊಬಗೂ ಸೊಗಡೂ ಎದ್ದು ಕಾಣುತ್ತಿದ್ದವು. ಬಿಸಿಲು, ಗಾಳಿಗಳನ್ನು ಲೆಕ್ಕಿಸದೆ ವ್ಯಾನ್‍ಗೋ ತನ್ನ ಚಿತ್ರ ಕಲಾಭ್ಯಾಸವನ್ನು ಮುಂದುವರಿಸಿದ. ಸುಮಾರು ಹದಿನೈದು ತಿಂಗಳ ಅವಧಿಯಲ್ಲಿ ಈತ ಇನ್ನೂರು ಚಿತ್ರಕೃತಿಗಳನ್ನು ತಯಾರಿಸಿದ. ತನ್ನ ಚಿತ್ರಕೃತಿಗಳನ್ನೂ ಅಲ್ಲಿನ ಚಿತ್ರ ಕಲಾವಂತರನ್ನೂ ಪರಿಚಯ ಮಾಡಿಕೊಡುವ ಸಲುವಾಗಿ ಗೋಗ್ಯಾನನ್ನು ಈತ ಅಲ್ಲಿಗೆ ಆಹ್ವಾನಿಸಿದ. ಆತ ಬಂದ ಕೆಲವೇ ದಿವಸಗಳಲ್ಲಿ ಇಬ್ಬರಲ್ಲೂ ವೈಮನಸ್ಯ ತಲೆದೋರಿತು. ಆಗ ನಡೆದಂಥ ಘಟನೆ ವಿಚಿತ್ರವಾದ್ದು. ಒಮ್ಮೆ ತರುಣಿಯೊಬ್ಬಳು ವ್ಯಾನ್‍ಗೋನನ್ನು ಚಹ ಅಂಗಡಿಯೊಂದರಲ್ಲಿ ಭೇಟಿ ಮಾಡಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದಳು. ತನಗೇನಾದರೂ ಬಹುಮಾನವನ್ನು ಕೊಡಲೇಬೇಕೆಂದು ಆಕೆ ಈತನನ್ನು ಆಗಾಗ ಒತ್ತಾಯ ಮಾಡುತ್ತಿದ್ದು, ಏನೂ ಇಲ್ಲದಿದ್ದರೆ ಕಿವಿಯನ್ನಾದರೂ ಕೊಡಬೇಕೆಂದು ಕುಚೋದ್ಯ ಮಾಡಿದಳು. ಕ್ರಿಸ್‍ಮಸ್ ಹಬ್ಬಕ್ಕೆ ಮುಂಚೆ ತನಗೆ ಬಂದ ಭಾಂಗಿಯೊಂದನ್ನು ಬಿಚ್ಚಿ ನೋಡಿದಾಗ ಅದರಲ್ಲಿ ವ್ಯಾನ್‍ಗೋನ ಕಿವಿ ಇದ್ದುದನ್ನು ಕಂಡು ಆಕೆ ಗಾಬರಿಗೊಂಡಳು. ಅತ್ತ ಕಿವಿ ಕತ್ತರಿಸಿಕೊಂಡ ವ್ಯಾನ್‍ಗೋನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯಿಂದ ಹಿಂದಿರುಗಿದ ಅನಂತರ ಈತ ತನ್ನ ಎರಡೂ ಬಗೆಯ ಸ್ವಚಿತ್ರಣವನ್ನು ರೂಪಿಸಿದ. ಕತ್ತರಿಸಿಹೋದ ಕಿವಿಯ ಜಾಗದಲ್ಲಿ ಕಟ್ಟುಕಟ್ಟಿ, ತಲೆಯ ಮೇಲೆ ಟೋಪಿ, ಬಾಯಲ್ಲಿ ಸಿಗರೇಟ್ ಇಟ್ಟಂತೆ ರೂಪಿಸಿರುವ ಚಿತ್ರ ಅವುಗಳಲ್ಲೊಂದು.



ಚರ್ಚೊಂದರ ಚಿತ್ರಣ : ವ್ಯಾನ್‍ಗೋ ಆತ್ಮಹತ್ಯೆಮಾಡಿಕೊಳ್ಳುವ ಮುನ್ನ ರಚಿತವಾದುದು (1890)

ಬುದ್ಧಿಭ್ರಮಣೆ ಮತ್ತು ಮನೋವಿಕಾರಗಳಿಂದ ನರಳುತ್ತಿದ್ದ ವ್ಯಾನ್‍ಗೋನನ್ನು ಇವನ ಇಷ್ಟದಂತೆ ಸೇಂಟ್ ರೆಮಿಯಲ್ಲಿನ ಮಾನಸಿಕರೋಗಿಗಳ ಆಸ್ಪತ್ರೆಗೆ ಸೇರಿಸಲಾಯಿತು (1889). ಅಲ್ಲಿದ್ದಾಗ ಈತ ರವೀನ್ (1889) ಎಂಬ ಚಿತ್ರಕೃತಿಯನ್ನು ಸೃಷ್ಟಿಸಿದ. ಅಲ್ಲಿ ಈತ ರೂಪಿಸಿದ ಚಿತ್ರಗಳು ಪರಿಣಾಮ ವಿಧಾನೋತ್ತರ (ಪೋಸ್ಟ್ ಇಂಪ್ರೆಷನಿಸ್ಟಿಕ್) ಚಿತ್ರಕಲಾ ಶೈಲಿಗೆ ಸೇರಿದವೆನ್ನಲಾಗಿದೆ. ಈ ಕೃತಿಗಳಲ್ಲಿ ಇವನದೇ ಆದ ಶೈಲಿಗಳು ಕಾಣಬರುತ್ತವೆ. 1890ರಲ್ಲಿ ರವೀನ್ ನಿಂದ ಈತ ಪ್ಯಾರಿಸಿಗೆ ಮರಳಿದ. ಅಲ್ಲಿ ಇವನಿಗೆ ಗೋಗ್ಯಾನನ ಮಿತ್ರನಾದ ವೈದ್ಯನೊಬ್ಬನ ಆಶ್ರಯ ಲಭಿಸಿತು. ಆ ವೈದ್ಯನ ಭಾವಚಿತ್ರವನ್ನೂ (ಡಾ. ಪಾಲ್ ಗ್ಯಾಚೆಟ್ – 1890) ಈತ ಬಿಡಿಸಿದ. ಆ ವರ್ಷ ಒರಿಯರ್ ಎಂಬಾತ ಈತನ ಕಲಾಕೃತಿಗಳನ್ನು ಕುರಿತ ಒಂದು ಲೇಖನವನ್ನು ಪ್ರಕಟಿಸಿದ. ಇದರಿಂದಾಗಿ ಈತನಿಗೆ ಪ್ರಚಾರ ಸಿಕ್ಕಿದಂತಾಯಿತು. ಮನೋವಿಕಲ್ಪದಿಂದಾಗಿ 1890 ರ ಜುಲೈ 27ರಂದು ತಾನೇ ಗುಂಡಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡ. ಪ್ರಾಣಹತ್ಯೆ ಮಾಡಿಕೊಂಡದ್ದು ತಾನೇ ರಚಿಸಿದ ಕೃತಿಯೊಂದರ (ಕಾರ್ನ್‍ಫೀಲ್ಡ್ಸ್ ವಿತ್ ಫ್ಲೈಟ್ ಆಫ್ ಬರ್ಡ್ಸ್) ಎದುರಿನಲ್ಲಿ. ಇವನ ಸಾವಿನ ವಾರ್ತೆಯನ್ನು ಕೇಳಿದ ಇವನ ತಮ್ಮ ಬಹಳ ದುಃಖಪಟ್ಟು ಅಣ್ಣ ಸತ್ತ ಆರು ತಿಂಗಳುಗಳಲ್ಲಿಯೇ ತಾನೂ ಅಸುನೀಗಿದ.

ನೂತನ ಚಿತ್ರಕಲಾ ಸಂಪ್ರದಾಯದಲ್ಲಿ ಪ್ರಸಿದ್ಧನಾದ ವ್ಯಾನ್‍ಗೋ ತನ್ನದೇ ಆದ ಸ್ವಂತಿಕೆಯನ್ನು ಪ್ರದರ್ಶಿಸಿದ. ಸಾಂಪ್ರದಾಯಿಕ ಪರಿಣಾಮ ವಿಧಾನದ ಚಿತ್ರಕಲಾವಿದರು ಬಳಸುವ ವರ್ಣಗಳನ್ನು, ರೂಪಿಸುವ ಕ್ರಮವನ್ನು ಇವನು ಸ್ವಾಗತಿಸಿದನಾದರೂ ಚಿತ್ರ ಬಿಡಿಸುವುದರಲ್ಲಿ ನವೀನ ವಿನ್ಯಾಸವನ್ನೂ ಕಲಾವಂತಿಕೆಯನ್ನೂ ಬಳಸಿದ. ಅಭಿವ್ಯಕ್ತಿವಾದದ ಪ್ರವರ್ತಕರಲ್ಲಿ ಈತ ಒಬ್ಬ ಎನ್ನಲಾಗಿದೆ. 20ನೆಯ ಶತಮಾನದ ಅನೇಕ ಚಿತ್ರ ಕಲಾವಿದರ ಮೇಲೆ ಈತ ಬೀರಿದ ಪ್ರಭಾವ ವಿಶೇಷ ರೀತಿಯದು. ಇವನ ಜೀವನವನ್ನು ಚಿತ್ರಿಸುವ ಹಲವಾರು ಸಂಪಾದಿತ, ಸಂಗ್ರಹಿತ ಗ್ರಂಥಗಳಲ್ಲಿ ಕಂಪ್ಲೀಟ್ ಲೆಟರ್ಸ್ (1958), ಪರ್ಸನಲ್ ರಿಕಲೆಕ್ಷನ್ಸ್ (ಅನು: 1913) ಎಂಬವೂ ಇವನ ಜೀವನವನ್ನಾಧರಿಸಿ ರಚಿತವಾದ ಕಾದಂಬರಿ ಲಸ್ಟ್ ಫಾರ್ ಲೈಫ್ ಎಂಬುದೂ ಮುಖ್ಯವಾದವು. (ಎ.ಎನ್.ಎಸ್‍ಯು.)

**ಗೋಷ್ಠಿಗಾನ :** ಹಲವರು ಒಟ್ಟುಗೂಡಿ ಒಮ್ಮೆಗೇ ಹಾಡಿ ನುಡಿಸುವುದಕ್ಕೆ ಈ ಹೆಸರಿದೆ. ಇಂಥ ಸಮುದಾಯದಲ್ಲಿ ಪ್ರತಿಯೊಬ್ಬರಿಗೂ ಪೂರ್ವ ನಿಶ್ಚಿತ ಧಾತು (ಗೇಯಾಂಶ) ಮತ್ತು ಮಾತುಗಳು ತಿಳಿದಿದ್ದು ಅವನ್ನು ನಿಯತಕಾಲದಲ್ಲಿ ಸ್ವತಂತ್ರವಾಗಿ ಹಾಡಿ ನುಡಿಸುತ್ತಾರೆ. ಪಾಶ್ಚಾತ್ಯರ ಆರ್ಕೆಸ್ಟ್ರ ಎಂಬ ಮಾತು ನಮ್ಮಲ್ಲಿ ಇದಕ್ಕೆ ಪರ್ಯಾಯವಾಗಿ ಇಂದು ಬಳಕೆಗೆ ಬಂದಿದೆ. ಕರ್ಣಾಟಕ ಸಂಗೀತ ಅಥವಾ ಹಿಂದೂಸ್ತಾನೀ ಸಂಗೀತಗಳಲ್ಲಿನ ಕಚೇರಿಗಳನ್ನು ಗೋಷ್ಠಿಗಾಯನವೆನ್ನಲಾಗದು. ಏಕೆಂದರೆ ಇವುಗಳಲ್ಲಿನ ಪ್ರಧಾನ ಗಾಯಕ ಅಥವಾ ವಾದಕ ಹಾಡಿ ನುಡಿಸುವುದನ್ನೇ ಪಕ್ಕವಾದ್ಯಗಳವರು ಅನುಸರಿಸಿ ಅನುಕರಿಸುತ್ತಾರೆ. ಸಂಗೀತದ ಧಾತುವಾದರೂ ಇಲ್ಲಿ ಪೂರ್ವನಿಶ್ಚಿತವಲ್ಲ. ಗಾಯಕ ವಾದಕರುಗಳ ಸ್ವತಂತ್ರ ಕಲ್ಪನಾಶಕ್ತಿಯೇ ಇದರ ಜೀವನಾಡಿ. ಅಲ್ಲದೆ ಗೋಷ್ಠಿಗಾನದ ಮೂಲತತ್ತ್ವವಾದ ಸಹಕಾಲಿಕ ಸ್ವತಂತ್ರ ಗಾನವಾದನಗಳು ಇಲ್ಲಿಲ್ಲ.

**ಇತಿಹಾಸ :** ಗೋಷ್ಠಿಗಾನ ಎಂಬುದು ಆಧುನಿಕ ಪ್ರಯೋಗಸಿದ್ಧಿಯನ್ನು ಪಡೆದಿದ್ದರೂ ಅಶುದ್ಧವೇ ಎನ್ನಬೇಕು. ಗೋಷ್ಠಿ ಮತ್ತು ಗಾನ ಎಂಬ ಶಬ್ದಗಳಿಂದ ಆದ ಶಬ್ದವಿದು. ಇವೆರಡು ಮಾತುಗಳಿಗೂ ಭಾರತೀಯ ಸಂಗೀತಶಾಸ್ತ್ರದಲ್ಲಿ ನಿರ್ದಿಷ್ಟವೂ ಸ್ವತಂತ್ರವೂ ಆದ ಬೇರೆ ಬೇರೆ ಅರ್ಥಗಳೇ ಇವೆ. ಗೋಷ್ಠಿ ಎಂಬುದು ಗಾಯನವಿಲ್ಲದೆ ವಾದ್ಯಗಳು ಮಾತ್ರ ಸೇರಿ ಉತ್ಪತ್ತಿಮಾಡಿದ ಸಂಗೀತಕ್ಕೆ ಶಾಸ್ತ್ರವಿಟ್ಟ ಪಾರಿಭಾಷಿಕ ಸಂಜ್ಞೆ. ಇದನ್ನೇ ಪಂಪಾದಿ ಕನ್ನಡ ಕವಿಗಳು ಪ್ರಾಚೀನ ಕಾಲದಿಂದಲೂ ಗೊಟ್ಟಿ ಎಂಬ ತದ್ಭವ ರೂಪದಲ್ಲಿ ಹೇಳುತ್ತ ಬಂದಿದ್ದಾರೆ. ಇದಕ್ಕೆ ಶುಷ್ಕವೆಂಬ ಮತ್ತೊಂದು ಹೆಸರೂ ಉಂಟು. ಗಾನವೆಂದರೆ ಹಾಡುವುದು ಎಂದು ಅರ್ಥ. ಹಾಡು ಬಾಜನೆಗಳೆರಡೂ ಸೇರಿದ ಕೂಟವನ್ನು ಬೃಂದವೆಂಬ ಹೆಸರಿನಿಂದ ಶಾಸ್ತ್ರ ವ್ಯವಹರಿಸುತ್ತದೆ. ಒಬ್ಬರೇ ಹಾಡುವುದಕ್ಕೆ ಏಕಲವೆಂದೂ ಇಬ್ಬರು ಕೂಡಿ ಹಾಡುವ ದ್ವಂದ್ವಗಾಯನಕ್ಕೆ ಯಮಳವೆಂದೂ ಮೂವರು ಅಥವಾ ಹೆಚ್ಚು ಮಂದಿ ಕೂಡಿ ಹಾಡುವುದಕ್ಕೆ ಬೃಂದವೆಂದೂ ಶಾಸ್ತ್ರೀಯ ಪರಿಭಾಷೆ. ಬೃಂದವನ್ನು ಕನಿಷ್ಠ, ಮಧ್ಯಮ, ಉತ್ತಮ ಮತ್ತು ಕೋಲಾಹಲವೆಂದು ನಾಲ್ಕು ಬಗೆಯಾಗಿ ಸಂಗೀತರತ್ನಾಕರದಲ್ಲಿ ಶಾರ್ಙ್ಗದೇವ ವಿಂಗಡಿಸುತ್ತಾನೆ. ಇವುಗಳಲ್ಲಿ ಉತ್ತಮ ಗಾಯಕ ವೃಂದದಲ್ಲಿ ನಾಲ್ವರು ಗಾಯನರೂ ಎಂಟು ಅನುಗಾಯನರೂ (ಇವರಿಗೆ ಸಮಗಾಯನರೆಂದು ಹೆಸರು: ಗಾಯನ=ಹಾಡುಗಾರ ಎಂದು ಶಾಸ್ತ್ರಾರ್ಥ) ನಾಲ್ವರು ಕೊಳಲು ನುಡಿಸುವವರೂ ನಾಲ್ವರು ಮಾರ್ದಂಗಿಕರೂ ಇರುತ್ತಿದ್ದರು. ಮಧ್ಯಮ ಗಾಯನ ಬೃಂದದಲ್ಲಿ ಇದರ ಅರ್ಧದಷ್ಟು ಸಂಖ್ಯೆಯ ಗಾಯನ, ಸಮಗಾಯನ ಮುಂತಾದವರೂ ಕನಿಷ್ಠ ಗಾಯನ ಬೃಂದದಲ್ಲಿ ಒಬ್ಬ ಮುಖ್ಯ ಗಾಯನನೂ ಮೂವರು ಗಾಯನಿಯರೂ (ಹಾಡುಗಾರ್ತಿ) ಇಬ್ಬರು ವಾಂಶಿಕರೂ (ಕೊಳಲುಗಾರ) ಇಬ್ಬರು ಮಾರ್ದಂಗಿಕರೂ ಇರುತ್ತಿದ್ದರು. ಹಾಗೆಯೇ ಉತ್ತಮ ಗಾಯನೀ ಬೃಂದದಲ್ಲಿ ಇಬ್ಬರು ಮುಖ್ಯ ಗಾಯನಿಯರೂ ಹತ್ತು ಸಮಗಾಯನಿಯರೂ ಇಬ್ಬರು ವಾಂಶಿಕರೂ ಇಬ್ಬರು ಮದ್ದಳೆಗಾರರೂ ಇರುತ್ತಿದ್ದರು. ಮಧ್ಯಮ ಗಾಯನೀ ಬೃಂದದಲ್ಲಿ ಒಬ್ಬ ಮುಖ್ಯ ಗಾಯನಿಯೂ ನಾಲ್ವರು ಸಮಗಾಯನಿಯರೂ ನಾಲ್ವರು ವಾಂಶಿಕರೂ ಒಬ್ಬ ಮಾರ್ದಲಿಕನೂ ಕನಿಷ್ಠ ಗಾಯನೀ ಬೃಂದದಲ್ಲಿ ಇದಕ್ಕಿಂತ ಕಡಿಮೆ ಸಂಖ್ಯೆಯವರೂ ಇರುತ್ತಿದ್ದರು. ಉತ್ತಮ ಬೃಂದದಲ್ಲಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಹಾಡುವವರು ನುಡಿಸುವವರು ಭಾಗವಹಿಸಿದರೆ ಅದನ್ನು ಕೋಲಾಹಲವೆಂದು ಕರೆಯುವರು. ಇದೆಲ್ಲವನ್ನೂ ರನ್ನ, ಅಭಿನವಪಂಪ, ಅಗ್ಗಳ, ಕಮಲಭವ ಮೊದಲಾದ ಕನ್ನಡ ಕವಿಗಳು ಹತ್ತನೆಯ ಶತಮಾನದಿಂದ ಹೇಳುತ್ತ ಬಂದಿರುವುದರಿಂದ, ಕನ್ನಡನಾಡಿನಲ್ಲಿ ಬೃಂದ ಸಂಗೀತ ಈ ವೇಳೆಗಾಗಲೇ ಪ್ರೌಢಾವಸ್ಥೆಯಲ್ಲಿ ಉತ್ಕರ್ಷವನ್ನು ಪಡೆದಿತ್ತೆಂದು ತಿಳಿಯಬಹುದು.

ವಾದ್ಯಗಳು ಮಾತ್ರವಿರುವ ಬೃಂದವಿಶೇಷಕ್ಕೆ ಕುತಪವೆಂದು ಸಂಜ್ಞೆ. ಶಾರ್ಙ್ಗದೇವ ಸಂಗೀತರತ್ನಾಕರದ ಪ್ರಕೀರ್ಣಕಾಧ್ಯಾಯದಲ್ಲಿ ಕುತಪವನ್ನು ತತ, ಅವನದ್ಧ ಮತ್ತು

ನಾಟ್ಯವೆಂದು ಮೂರು ಬಗೆಯಾಗಿ ವರ್ಣಿಸಿದ್ದಾನೆ. ತತಕುತಪದಲ್ಲಿ ಘೋಷವತೀ, ಚಿತ್ರಾ, ವಿಪಂಚೀ, ಪರಿವಾದಿನೀ, ವಲ್ಲಕೀ, ಕುಬ್ಜಿಕಾ, ಜ್ಯೇಷ್ಠಾ, ನಕುಲೋಷ್ಠೀ, ಕಿನ್ನರೀ, ಜಯಾ, ಕೂರ್ಮಿಕಾ, ಪಿನಾಕೀ, ಹಸ್ತಿಕಾ, ಶತತಂತ್ರೀ, ಔದುಂಬರೀ, ಷಟ್ಕರ್ಣ, ಪೌಣ, ರಾವಣಹಸ್ತಾ, ಸಾರಂಗೀ, ಆಲಾಪಿನೀ ಮೊದಲಾದ ತಂತೀವಾದ್ಯಗಳು ಇರುತ್ತಿದ್ದವು. ಇವನ್ನು ಉಗುರಿನಿಂದ ಮಿಡಿದು ಅಥವಾ ಕಮಾನಿನಿಂದ ಎಳೆದು ನುಡಿಸಲಾಗುತ್ತಿತ್ತು. ಇವುಗಳಲ್ಲಿ ಕೆಲವಕ್ಕೆ ಮೆಟ್ಟುಗಳೂ ಇರುತ್ತಿದ್ದವು. ಇವೇ ಅಲ್ಲದೆ ತತಕುತಪದಲ್ಲಿ ವಾಂಶಿಕಾ, ಪಾವಿಕಾ, ಪಾವಕಾ, ಕಹಳೆ, ಶಂಖ, ಮಾರಿ, ಕೊಂಬು ಮೊದಲಾದ ಸುಷಿರ (ಗಾಳಿ) ವಾದ್ಯಗಳೂ ಕಂಚಿನ ತಾಳದಂಥ ಗಟ್ಟಿ (ಘನ) ವಾದ್ಯಗಳೂ ಇರುತ್ತಿದ್ದವು. ಅವನದ್ಧ ಕುತಪದಲ್ಲಿ ಮೃದಂಗ, ಪಣವ, ದರ್ದುರ, ಢಕ್ಕಾ, ಮಂಡಿಢಕ್ಕಾ, ಕಕ್ಕುಲಿ, ಪಟಹ, ಕರಟ, ಢವಸ, ಘಡಸ, ಹುಡುಕ್ಕಾ, ಡಮರು, ರುಂಜಾ, ಕುಡುಕ್ಕಾ, ಕುಡುವಾ, ನಿಃಸಾಣ, ತ್ರಿವಲೀ, ಭೇರೀ, ತುಂಬಕೀ, ಬೊಂಬಡೀ ಮೊದಲಾದ ಚರ್ಮವಾದ್ಯಗಳೂ ಪಿಟ್ಟ, ಪವೆ, ಕಮ್ರಾ, ಝಲ್ಲರೀ, ಬಾಣ, ಸೆಲ್ಲುಕಾ, ಜಾಗಟೆ, ಕಂಚಿನತಾಲ, ಘಂಟೆ, ಕಿರಿಕಿಟ್ಟ ಮೊದಲಾದ ಘನವಾದ್ಯಗಳೂ ಭಾಗವಹಿಸುತ್ತಿದ್ದುವು.

ನಾಟ್ಯಕ್ಕೆ ಪ್ರಯೋಜಕವಾದ ವಾದ್ಯಸಮೂಹವನ್ನು ಶಾಸ್ತ್ರಪರಿಭಾಷೆಯಲ್ಲಿ ಸಂಪ್ರದಾಯವೆಂದೂ ಆಡುಮಾತಿನಲ್ಲಿ ಮೇಳ ಅಥವಾ ಹಿಮ್ಮೇಳವೆಂದೂ ಕರೆಯಲಾಗಿದೆ. ಇದರ ವಿವರಗಳನ್ನು ಸಂಗೀತರತ್ನಾಕರಾದಿ ಶಾಸ್ತ್ರಗ್ರಂಥಗಳು ಕೊಡುತ್ತವೆ. ಇದಲ್ಲದೆ ನಾಟ್ಯ ಕುತಪದಲ್ಲಿ ವರಾಟ, ಲಾಟ, ಕರ್ಣಾಟ, ಗೌಡ, ಗುರ್ಜರ, ಕೊಂಕಣ, ಮಹಾರಾಷ್ಟ್ರ, ಆಂಧ್ರ, ಹಮ್ಮೀರ, ಚೋಳ, ಮಲಯ, ಮಾಲವ, ಅಂಗ, ವಂಗ, ಕಲಿಂಗ ಇತ್ಯಾದಿ ದೇಶಗಳ ಅಭಿನಯ ಕೋವಿದರೂ ಅಂಗಹಾರ ಕರಣಾದಿಗಳ ಪ್ರಯೋಗತಜ್ಞರೂ ಲಾಸ್ಯ ತಾಂಡವ ವಿಶಾರದರೂ ಚಿತ್ರ ವಿಚಿತ್ರ ಸ್ಥಾನಕ (ನಿಲುವು) ಪ್ರೌಢಗಳೂ ವಿಷಮಪ್ರಯೋಗ, ನಿಷ್ಣಾತರೂ ಉತ್ತಮ ಮಧ್ಯಮ ಪಾತ್ರಗಳೂ ಇರುತ್ತಿದ್ದರು.

ಕುತಪಗಳು ಅನುಸರಿಸಬೇಕಾದ ಪ್ರಯೋಗತಂತ್ರವನ್ನು ಭರತಮುನಿ ನಾಟ್ಯಶಾಸ್ತ್ರದ ನಾಲ್ಕನೆಯ ಅಧ್ಯಾಯದಲ್ಲಿ ಪೂರ್ವರಂಗ ವಿಧಿವರ್ಣನ ಸಂದರ್ಭದಲ್ಲಿ ಕೊಡುತ್ತಾನೆ. ನಾಟ್ಯ ಸಂದರ್ಭದಲ್ಲಿ ಕರಣಗಳನ್ನು ಪ್ರಯೋಗಿಸುವಾಗ, ನೃತ್ಯ, ಹಸ್ತಾಭಿನಯ ಮತ್ತು ಗೀತಗಳನ್ನು ಒಟ್ಟಿಗೆ ಸಂಯೋಜಿಸುವಾಗ ವಿಲಂಬ ಲಯದಲ್ಲಿ ತತ್ತ್ವ ಎಂಬ ತಂತ್ರವನ್ನೂ ಮಧ್ಯಲಯದಲ್ಲಿ ಅನುಗತವನ್ನೂ ದ್ರುತಲಯದಲ್ಲಿ ಓಘವನ್ನೂ ಪ್ರಯೋಗಿಸಬೇಕು. ಬೃಂದಗಳಿಗೂ ಕುತಪಗಳಿಗೂ ಶಾರ್ಙ್ಗದೇವ ಹೇಳಿರುವ ಲಕ್ಷಣಗಳು ಸಾರ್ವಕಾಲಿಕಾನ್ವಯವನ್ನೂ ಸಮಗ್ರಸಮೀಚೀನ ಸೂಕ್ಷ್ಮದರ್ಶನವನ್ನೂ ಒಳಗೊಂಡು ಇಂದಿನ ವಾದ್ಯಮೇಳಗಳೂ ಬೃಂದಗಳೂ ಅನುಸಂಧಾನಮಾಡಿ ಅನುಷ್ಠಾನದಲ್ಲಿಟ್ಟುಕೊಳ್ಳಲು ಬಹುಯೋಗ್ಯವಾಗಿದೆ. ಮುಖ್ಯಾನುವೃತ್ತಿಯೆಂದರೆ ನಾಯಕನಾದ ಗಾಯನ ಅಥವಾ ವಾದಕನನ್ನು ನೆರಳಿನಂತೆ ಅನುಸರಿಸುವುದು; ಮುಖ್ಯರಸದ ಪೋಷಣೆಯಲ್ಲಿ ಸಾರ್ಥಕತೆಯನ್ನು ಸಾಧಿಸಲೆಳಸುವುದು. ಮಿಲನವೆಂದರೆ ಒಟ್ಟಿಗೆ ಕೂಡಿ ಹಾಡಿ ನುಡಿಸುವಾಗ ಭಿನ್ನತೆಯೇ ಗೋಚರಿಸದಂತೆ ಒಂದರಲ್ಲಿ ಇನ್ನೊಂದು ಸೇರಿಬಿಡುವುದು. ಕಾಲಲೀನಾನುವರ್ತನವೆಂದರೆ ತಾಳದ ಆವರ್ತ, ಪಾದಭಾಗ ಕ್ರಿಯೆ ಮುಂತಾದವುಗಳಲ್ಲಿ ಕರಗಿಹೋದಂತೆ ಒಂದಾಗುವುದು. ಮಿಥಸ್ತುಟಿತ ನಿರ್ವಾಹವೆಂದರೆ ಜೋಡಣೆಯಲ್ಲೂ ಮುನ್ನಡೆಯಲ್ಲೂ ಎಡೆಬಿಡದಂತೆ ಅಖಂಡ ವಾಗಿರುವುದು. ತ್ರಿಸ್ಥಾನವ್ಯಾಪ್ತಿಶಕ್ತಿಯೆಂದರೆ ಮಂದ್ರ ಮಧ್ಯತಾರಗಳೆಂಬ ಮೂರು ಸ್ಥಾನಗಳಲ್ಲಿಯೂ ಒಂದೇ ರೀತಿಯ ಘನತೆ, ಸ್ನಿಗ್ಧತೆ, ಸಾಂದ್ರತೆ, ಪ್ರಸನ್ನತೆ ಮೊದಲಾದ ಸ್ವರಗುಣಗಳನ್ನು ಪಡೆದಿರುವುದು. ಶಬ್ದಸಾದೃಶ್ಯವೆಂದರೆ ವಿವಿಧ ವಾದ್ಯಗಳೂ ಕಂಠಗಳೂ ಗೀತದಲ್ಲಿ ತೊಡಗಿರುವಾಗ, ಒಂದೇ ಬಗೆಯ ಶಬ್ದಗಳು ಒಂದೇ ಕಾಲದಲ್ಲಿ ಬರುವಂತೆ ಏರ್ಪಡಿಸುವುದು. ಇಲ್ಲದಿದ್ದರೆ ವಿವಿಧ ರೀತಿಯ ಶಬ್ದಗಳು ತಮ್ಮಷ್ಟಕ್ಕೆ ಮಾತ್ರ ರಂಜನಾಸ್ಪದಗಳಾಗಿದ್ದರೂ ಬೇರೆ ವಾದ್ಯಗಳ ಶಬ್ದಗಳೊಡನೆ ಬೆರೆತಾಗ ವಿರುದ್ಧ ಧರ್ಮದಿಂದ ಮುಖ್ಯರಸಾನುಭೂತಿಗಳು ಶ್ರವಣ ಲಾಲಿತ್ಯಕ್ಕೂ ಹಾನಿಯನ್ನುಂಟುಮಾಡುವುವು.

**ಪಾಶ್ಚಾತ್ಯ ಸಂಗೀತದಲ್ಲಿ ವಾದ್ಯಗೋಷ್ಠಿಗಳು :** ಹೀಗೆ ಗಾನಗೋಷ್ಠಿಗಳೂ ವಾದ್ಯಗೋಷ್ಠಿಗಳೂ ಬಹು ಪ್ರಾಚೀನಕಾಲದಿಂದಲೂ ಇದ್ದೇ ಇವೆ. ಸಾಮಗಾನದಲ್ಲಿ ಬರುವ ಗ್ರಾಮೇಗೇಯಗಾನಗಳೂ ಉತ್ಸವಾದಿಗಳಲ್ಲಿ ಮತ್ತು ಧಾರ್ಮಿಕ ಸಂದರ್ಭಗಳಲ್ಲಿ ಸಾಮೂಹಿಕ ಭಜನಪದ್ಧತಿಯೂ ಜನಪದ ಗಾನನೃತ್ಯಗಳಲ್ಲಿ ಗೋಷ್ಠಿಗಳೂ ಚಿರಪರಿಚಿತವೇ ಆಗಿವೆ. ಆದರೆ ಭಾರತದ ಶಾಸ್ತ್ರೀಯ ಸಂಗೀತದಲ್ಲಿರುವ ವಾದ್ಯಮೇಳಗಳನ್ನು ಆರ್ಕೆಸ್ಟ್ರ ಎಂಬ ಪಾಶ್ಚಾತ್ಯ ವಾದ್ಯಮೇಳದೊಡನೆ ಸಮೀಕರಿಸಲಾಗದು. ಏಕೆಂದರೆ ಉದ್ದೇಶ, ವ್ಯಾಪ್ತಿ, ತಂತ್ರ, ಸಾಧನೆ–ಇವುಗಳಲ್ಲೆಲ್ಲ ಈ ಎರಡರಲ್ಲಿ ಸಂಪೂರ್ಣ ವೈದೃಶ್ಯವೇ ಸಿದ್ಧವಾಗುತ್ತದೆ. ಪಾಶ್ಚಾತ್ಯ ಸಂಗೀತದಲ್ಲಿ ಸಹಕಾಲಿಕ ಅನೇಕ ಸ್ವರಶ್ರೇಣಿ ಅದರ ಮೂಲ ತತ್ತ್ವಗಳಲ್ಲಿ ಒಂದಾದಾಗ, ಅದರ ಪರಿಣಾಮವಾಗಿ ಸ್ವರಸ್ಥಾನಗಳು ಸಮ ದೂರದಲ್ಲಿರುವಂತೆ ಪಲ್ಲಟಿತವಾದಾಗ, ಏಕಾಧಾರ ಸ್ವರಪದ್ಧತಿ ಗೌಣವಾದಾಗ ಅದರ ಸ್ವರೂಪವೇ ಬದಲಾಯಿಸಿತು. ಸುಮಾರು ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಇಟಲಿಯಿಂದ ಯುರೋಪಿನಲ್ಲೆಲ್ಲ ಹರಡಿ ನಿಂತ ಆಪೆರ ಎಂಬ ಗೀತನಾಟಕ ಪ್ರಕಾರದಲ್ಲಿಯೂ ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಜರ್ಮನ್ ವಾಗ್ಗೇಯಕಾರರಿಂದ ಬಲಿತು ಬೆಳೆದ ಸಿಂಫೊನಿ ಎಂಬ ಗೇಯಪ್ರಕಾರದಲ್ಲಿಯೂ ಮುಖ್ಯವಾಗಿ ಆರ್ಕೆಸ್ಟ್ರ ರೂಪುಗೊಂಡು ಬಲಿಯಿತು. ಇದರಲ್ಲಿ ಪ್ರತಿಯೊಂದು ವಾದ್ಯಕ್ಕೂ ನಿರ್ದಿಷ್ಟ ಕಾರ್ಯವುಂಟು. ಅದಿಲ್ಲದೆ ಕೃತಿ ಪೂರ್ಣವಾಗುವುದಿಲ್ಲ. ಆದರೆ ಅಲ್ಲಿ ಯಾರೊಬ್ಬರಿಗೂ ಸ್ವಂತಕಲ್ಪನೆಯ ಸ್ವಾತಂತ್ರ್ಯ ಎಳ್ಳಷ್ಟೂ ಇಲ್ಲ. ಸ್ವರಗುಣ ವೈವಿಧ್ಯ, ಅನೇಕ ಸ್ವರಗಳು ಒಟ್ಟಿನಲ್ಲಿ ಒಂದೇ ಕ್ಷಣದಲ್ಲಿ ಉಂಟುಮಾಡುವ ಸಂವೇದನೆ ಮತ್ತು ಸೌಂದರ್ಯಾನುಭೂತಿ, ನಾದಲಯಗಳ ಏಕಕಾಲಿಕ ತಿರ್ಯಗ್ಗಮನ ಹಾಗೂ ಊರ್ಧ್ವಾಧೋಗಮನ, ಸೌಕರ್ಯಾನುಸಾರವಾಗಿ ಆಧಾರಸ್ವರದ ರೂಪಾಂತರ ಹಾಗೂ ತತ್ಫಲವಾದ ಮೂರ್ಛನಾಂತರ– ಇವೇ ಮುಂತಾದ ಹಲವು ಅಂಶಗಳು ಪಾಶ್ಚಾತ್ಯ ಸಂಗೀತದ ಆರ್ಕೆಸ್ಟ್ರದ ವೈಶಿಷ್ಟ್ಯಗಳು. ಇವುಗಳಲ್ಲಿ ಯಾವುದಿಲ್ಲದಿದ್ದರೂ ಅದರ ಸ್ವರೂಪಹಾನಿಯೇ ಆಗುತ್ತದೆ. ಭಾರತೀಯ ಸಂಗೀತದಲ್ಲಿ ಹಾಗಲ್ಲ.

ಆಧುನಿಕ ಆರ್ಕೆಸ್ಟ್ರಗಳು : ಸ್ವಾತಂತ್ರ್ಯಾನಂತರದ ಭಾರತದಲ್ಲಿ ನಡೆಯುತ್ತಿರುವ ಸಂಗೀತದ ಪುನರುಜ್ಜೀವನ ಪ್ರಯತ್ನಗಳಲ್ಲಿ ಗೋಷ್ಠಿಗಾನವೂ ಒಂದು. ಅಧಿಕೃತ ಕ್ಷೇತ್ರದಲ್ಲಿ ಅಖಿಲ ಭಾರತೀಯ ಆಕಾಶವಾಣಿ ಈ ದಿಕ್ಕಿನಲ್ಲಿ ಮಹತ್ತ್ವದ ಸೇವೆ ಸಲ್ಲಿಸುತ್ತಿದೆ. ಕಲ್ಪನೆ, ತಂತ್ರ, ಉಪಕರಣ, ದೃಷ್ಟಿ ಇತ್ಯಾದಿಗಳಲ್ಲಿ ಹೊಸತನ್ನು ಈ ದಿಕ್ಕಿನಲ್ಲಿ ಮೂಡಿಸ ಲಾಗುತ್ತಿದೆ. ಇದನ್ನು ಹಲವು ವಿಧಗಳಲ್ಲಿ ಉತ್ತಮಪಡಿಸಿ ಪಂಡಿತ ಪಾಮರರಿಬ್ಬರನ್ನೂ ರಂಜಿಸಬಲ್ಲ ಸಾಧನವನ್ನಾಗಿ ಮಾಡಿಕೊಳ್ಳಲವಕಾಶವಿದೆ. ಉದಾಹರಣೆಗೆ ತ್ರಿಸ್ಥಾಯಿ ಮಿತಿಯಲ್ಲಿ ಸ್ವರ ಸ್ಥಾನ ಪಲ್ಲಟವಿಲ್ಲದೆಯೇ ಬಹುಸ್ವರ ಶ್ರೇಣಿಯಲ್ಲಿ ಧಾತುವು ಗೀತದಲ್ಲಿ ಅನೇಕ ವೇಳೆ ಮುನ್ನಡೆಯಬಹುದು; ವೈಯಕ್ತಿಕ ಕಲ್ಪನೆಗೆ ಸ್ವಾತಂತ್ರ್ಯ ನೀಡಿ ಗೀತದ ನಿರ್ದಿಷ್ಟ ತಾಳಭಾಗಗಳಲ್ಲಿ ಅವಕಾಶವನ್ನು ಕಲ್ಪಿಸಿಕೊಡಬಹುದು. ಇಂಥ ಸಂದರ್ಭಗಳಲ್ಲಿ ಗಮಕ ಪ್ರಯುಕ್ತಿಗೆ ಅವಕಾಶವಿರುವುದರಿಂದ ಶಾಸ್ತ್ರೀಯ ಚೌಕಟ್ಟಿನಲ್ಲಿ ರಾಗಭಾವಗಳ ಗಾಂಭೀರ್ಯ, ಆಳಗಳನ್ನು ಸಾಧಿಸಬಹುದು; ವಾದ್ಯಗಳ ಸಂಖ್ಯೆ, ವೈವಿಧ್ಯಗಳನ್ನು ಹೆಚ್ಚಿಸಿ ಸ್ವರಗುಣದಲ್ಲಿ ವ್ಯಾಪ್ತಿ ವಿಸ್ತಾರವನ್ನೇ ಪಡೆಯಬಹುದು. ಶ್ರುತಿಭೇದ, ನಡೆ, ಲಯ, ಇವುಗಳ ಪ್ರತಿಭಾಯುಕ್ತ ಸಂಯೋಜನೆಯಿಂದ ಹೊಸ ಸೃಷ್ಟಿಯನ್ನೇ ಮಾಡಬಹುದು; ಸ್ವರಸಾಂದ್ರತೆ ಮತ್ತು ಲಾವಣ್ಯ (ಟೆಕ್ಸ್‌ಚರ್), ಸ್ವರಗತಿ (ಡೈನ್ಯಮಿಕ್ಸ್) ಮೊದಲಾದ ಕಲ್ಪನೆಗಳನ್ನು ಪರಿಷ್ಕರಿಸಿ ಅಳವಡಿಸಿಕೊಳ್ಳಬಹುದು.

ಅಂತೆಯೇ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆಗಳಲ್ಲಿಯೂ ಶಾಲಾ ಕಾಲೇಜುಗಳಲ್ಲಿಯೂ ಸಂಗೀತ ಸಂಘಗಳನ್ನು ಗ್ಲೀಕ್ಲಬ್‌ಗಳ ಮಾದರಿಯಲ್ಲಿ ಏರ್ಪಡಿಸಿಕೊಂಡು ನಡೆಸುವುದು ತುಂಬಾ ಅಪೇಕ್ಷಣೀಯವಾಗಿದೆ. ಹೀಗೆ ಮಾಡುವುದರಿಂದ ಪೂರ್ವನಿಯೋಜಿತ ಕಾರ್ಯಕ್ರಮದ ಮೂಲಕ ಸಾಮೂಹಿಕ ಸಂಗೀತವನ್ನು ದೇಶದಲ್ಲಿ ಬೆಳೆಸಿ ಅದನ್ನು ರಾಷ್ಟ್ರಪ್ರಜ್ಞೆಯ ಪ್ರಮುಖಾಭಿವ್ಯಕ್ತಿ ಸಾಧನವನ್ನಾಗಿಯೂ ಭಾವೈಕ್ಯ ಸಾಧನವನ್ನಾಗಿಯೂ ಸಂಸ್ಕೃತಿ ಪ್ರಸಾರ ಸಾಧನವನ್ನಾಗಿಯೂ ಮಾಡಲು ಸಾಧ್ಯವಿದೆ. ಕೇವಲ ಅಂಧಾನುಕರಣೆಯಿಂದ ವಿವಿಧ ಅಹಿತಶಬ್ದಗಳ ಅವ್ಯವಸ್ಥಿತ ಸಂಯೋಜನೆಯಿಂದ ಗದ್ದಲವನ್ನೇ ಪರಿಣಾಮವೆಂದು ಭ್ರಮಿಸಿ ಭಾರತೀಯ ಸಂಗೀತ, ಸಂಸ್ಕೃತಿಗಳ ಚಿರಂತನ ಮೌಲ್ಯಗಳಿಗೆ ಕುಠಾರಪ್ರಾಯವಾಗಿರುವ ಆಧುನಿಕ ಆರ್ಕೆಸ್ಟ್ರ ಪಾರ್ಟಿಗಳ ಹಾವಳಿಯನ್ನಡಗಿಸಲು ಇದರಿಂದ ಸಾಧ್ಯವಾಗುತ್ತದೆ. ಭಾರತದಲ್ಲಿ ಸಾಮೂಹಿಕ ಸಂಗೀತದ ಕನಸನ್ನು ಮೊದಲ ಬಾರಿಗೆ ಕಂಡು ಅದಕ್ಕೊಂದು ಸುವ್ಯವಸ್ಥಿತ ಶಾಸ್ತ್ರೀಯ ಬುನಾದಿಯನ್ನು ನಿರ್ಮಿಸಿದ ಕೀರ್ತಿ ಮೈಸೂರಿನ ವರಲಕ್ಷ್ಮೀ ಅಕಾಡೆಮಿಗೆ ಸಲ್ಲುತ್ತದೆ. ಈ ಸಂಸ್ಥೆ 1956ರಲ್ಲಿ ದೇಶದಲ್ಲೇ ಮೊದಲ ಬಾರಿಗೆ ನಡೆಸಿದ ಅಖಿಲ ಭಾರತೀಯ ಸಾಮೂಹಿಕ ಸಂಗೀತ ವಿಚಾರಗೋಷ್ಠಿ ಮೌಲಿಕವಾದ ಸಂಶೋಧನ ಫಲಿತಾಂಶಗಳನ್ನು ಹೊರಗೆಡಹಿದೆ. (ಆರ್.ಎಸ್.ಎನ್.)

**ಗೋಷ್ವಾರೆ ಸಿದ್ಧಾಂತ :** ಕೈಗಾರಿಕೋದ್ಯಮ, ವ್ಯಾಪಾರ ಸಂಸ್ಥೆ ಇವೇ ಮುಂತಾದ ವ್ಯವಸ್ಥೆಗಳಲ್ಲಿ ನಿವೇಶನಸಾಮಗ್ರಿಗಳ (ಎಂದರೆ ಆಯಾ ವ್ಯವಸ್ಥೆಗೆ ಹೊರಗಿನಿಂದ ಪಡೆದು ಒದಗಿಸುವ ಸಾಮಗ್ರಿಗಳು; ಉದಾಹರಣೆಗೆ, ಒಂದು ಕೈಗಾರಿಕೋದ್ಯಮದಲ್ಲಿ ಕಚ್ಚಾ ಸರಕುಗಳು ಮುಖ್ಯ ನಿವೇಶನ ಸಾಮಗ್ರಿಗಳು) ಯಾದಿಯ ಕ್ರಮಬದ್ಧ ತಯಾರಿಕೆ, ಅದರ ಅಧ್ಯಯನ ಮತ್ತು ಅದರಿಂದ ತೀರ್ಮಾನಗಳ ನಿಗಮನ (ಇನ್ವೆಂಟರಿ ಥಿಯರಿ). ಹೆಚ್ಚಿನ ವಿವರಗಳಿಗೆ **ನೋಡಿ–ತಪಶೀಲು ಸಿದ್ಧಾಂತ.**

*

**ಗೋಸಲ ಚನ್ನಬಸವೇಶ್ವರ :** 15ನೆಯ ಶತಮಾನದಲ್ಲಿ ಜೀವಿಸಿದ್ದ ಒಬ್ಬ ಶಿವಯೋಗಿ. ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಈತ ನಿರ್ವಯಲಾದ. ಈತನ ಗದ್ದಿಗೆಯ ಮೇಲೆ ದೇವಸ್ಥಾನವನ್ನು ಕಟ್ಟಿದ್ದಾರೆ. ಅದು ಗುಬ್ಬಿ ಚನ್ನಬಸವೇಶ್ವರ ಎಂಬ ಹೆಸರಿನ ಪ್ರಖ್ಯಾತ ದೇವಾಲಯವಾಗಿ ಸುತ್ತಮುತ್ತಲಿನ ಭಕ್ತರನ್ನು ಆಕರ್ಷಿಸಿದೆ. ಈತನ ಗುರು ಗೋಸಲ ಸಿದ್ಧೇಶ್ವರ. ಈತನ ಸಮಾಧಿ ತುಮಕೂರು ಜಿಲ್ಲೆಯ ಸಿದ್ಧರ ಬೆಟ್ಟದಲ್ಲಿದೆ. ಶಿಷ್ಯ ಎಡೆಯೂರು ಸಿದ್ಧಲಿಂಗ. ಈತನ ಸಮಾಧಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡೆಯೂರಿನಲ್ಲಿದೆ. ಗೋಸಲ ಚನ್ನಬಸವೇಶ್ವರ ಮಹಾ ತಪಸ್ವಿಯೆಂದೂ ಅನೇಕ ಪವಾಡಗಳನ್ನು ಮೆರೆದನೆಂದೂ ಸ್ಥಳಪುರಾಣದಿಂದ ತಿಳಿದುಬರುತ್ತದೆ. ಈತನ ಗುರು

ಪರಂಪರೆ ವಿಖ್ಯಾತವಾದುದು. ಈತ ಕ್ಷೇತ್ರಜ್ಞ ಸುಮನೋವಾದ ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ವೀರಶೈವ ಷಟ್ಸ್ಥಲ ಸಿದ್ಧಾಂತವನ್ನು ವಿವಿಧ ಷಟ್ಪದಿಯಲ್ಲಿ ನಿರೂಪಿಸಲಾಗಿದೆ. ನಿರಂಜನ ವಂಶ ರತ್ನಾಕರದಲ್ಲಿ ಈತನ ವಿಷಯವನ್ನು ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. (ಬಿ.ಎಸ್.)

**ಗೋಸಾನ್ :** ಖನಿಜ ಸಿರಗಳ ಮತ್ತು ಅದಿರು ನಿಕ್ಷೇಪಗಳ ಅಪಘಟನೆಗೊಂಡ (ಡೀಕಂಪೋಸ್ಡ್) ಮೇಲುಭಾಗಗಳಿಗೆ ಇರುವ ಹೆಸರು. ರಾಸಾಯನಿಕ ಶಿಥಿಲತೆಯಿಂದ ಕರಗದ ಖನಿಜ ನಿಕ್ಷೇಪಗಳು ಶೇಷ ನಿಕ್ಷೇಪಗಳಾಗಿ ಭೂಮಿಯ ಮೇಲುಭಾಗದಲ್ಲಿ ಉಳಿಯುತ್ತವೆ. ಲೋಹ ನಿಕ್ಷೇಪಗಳು ಸಾಮಾನ್ಯವಾಗಿ ನೆಲಮಟ್ಟದಲ್ಲಿ ರಂಧ್ರಾನ್ವಿತ ಕಾವಿ ಅದಿರನ್ನು (ಸೆಲ್ಯುಲರ್ ಲಿಮೊನೈಟ್) ಇಲ್ಲವೇ ಜಲಯೋಜಿತ (ಹೈಡ್ರೇಟೆಡ್) ಕಬ್ಬಿಣದ ಆಕ್ಸೈಡ್ ಮೇಲ್ಪದರವನ್ನು ಪಡೆದಿರುತ್ತವೆ. ಈ ಮೇಲ್ಪದರವೇ ಗೋಸಾನ್. ಇದರ ದಪ್ಪ (ಎಂದರೆ ಮಂದತ್ವ) ರಾಸಾಯನಿಕ ಕ್ರಿಯೆಯ ಪ್ರಮಾಣವನ್ನು ಅನುಸರಿಸಿ ಒಂದೆರಡು ಅಂಗುಲಗಳಿಂದ ಹತ್ತಿಪ್ಪತ್ತು ಅಂಗುಲಗಳ ವರೆಗೂ ಅಪರೂಪಕ್ಕೆ ಇನ್ನೂ ಹೆಚ್ಚಾಗಿ ಕೂಡ ಇರಬಹುದು. ಗೋಸಾನಿನ ಬಣ್ಣ, ರೂಪ, ರಚನೆ ಮುಂತಾದ ಲಕ್ಷಣಗಳ ಅಧ್ಯಯನದಿಂದ ಅದರ ತಳಭಾಗದಲ್ಲಿ ಯಾವ ಲೋಹ ನಿಕ್ಷೇಪವಿದೆ ಎಂಬುದನ್ನು ನಿರ್ಧರಿಸಬಹುದು. (ಟಿ.ಟಿ.)

**ಗೋಸಾಯಿ :** ಹಿಂದೂ ಸನ್ಯಾಸಿಗಳ ಒಂದು ಪಂಗಡ. ಇವರಿಗೆ ಗೋಸ್ವಾಮಿ, ಗೋಸಾಮಿ ಎಂಬ ನಾಮಾಂತರಗಳುಂಟು. 1901ರ ಜನಗಣತಿ ಪ್ರಕಾರ ಇವರ ಸಂಖ್ಯೆ ಭಾರತದಲ್ಲಿ ಎರಡು ಲಕ್ಷ ಇತ್ತು ; ಗೋಸಾಯಿಗಳು ಈಗಲೂ ಹೇರಳವಾಗಿದ್ದಾರೆ. ಇವರಲ್ಲಿ ಶೈವರೂ ಉಂಟು, ವೈಷ್ಣವರೂ ಉಂಟು. ಸಾಮಾನ್ಯವಾಗಿ ಶೈವರು ಶಂಕರಾಚಾರ್ಯರ ಅದ್ವೈತ ಸಂಪ್ರದಾಯದವರು. ಇವರಲ್ಲಿ ಹತ್ತು ಹೆಸರುಗಳು (ದಶನಾಮಿ) ರೂಢವಾಗಿವೆ. ಅವು ತೀರ್ಥ, ಆಶ್ರಮ, ವನ, ಅರಣ್ಯ, ಸರಸ್ವತಿ, ಭಾರತೀ, ಪುರೀ, ಗಿರಿ, ಪರ್ವತ, ಸಾಗರ. ಇವರು ದಂಡಧಾರಿಗಳಾದ್ದರಿಂದ ದಂಡಿಗಳೆಂದೂ ಕರೆಸಿಕೊಳ್ಳುವರು. ಮಠಧಾರಿಗಳಲ್ಲದೆ ಸಾಂಸಾರಿಕರೂ ಇವರಲ್ಲಿ ಕೆಲವರುಂಟು. ಕಾಶಿ, ಹರಿದ್ವಾರ ಮುಂತಾದ ಯಾತ್ರಾಸ್ಥಳಗಳಲ್ಲಿ ಇವರನ್ನು ಹೆಚ್ಚಾಗಿ ಕಾಣಬಹುದು. ವೈಷ್ಣವ ಸ್ವಾಮಿಗಳನ್ನು ಬಂಗಾಲ, ಅಸ್ಸಾಮ್‌ಗಳಲ್ಲಿ ಗೋಸಾಯಿಗಳೆನ್ನುವರು. ಇವರು ವಲ್ಲಭಾಚಾರ್ಯ, ಚೈತನ್ಯ ಮುಂತಾದವರ ಸಂಪ್ರದಾಯಗಳನ್ನು ಅನುಸರಿಸಿ ಶಿಷ್ಯರಿಗೆ ಬೋಧೆ ಮಾಡುವರು. ಸಾಮಾನ್ಯವಾಗಿ ಉದರನಿಮಿತ್ತವಾಗಿ ಕಾವಿ ಹಾಕಿಕೊಂಡು ತಿರುಗಾಡುವವರನ್ನೆಲ್ಲ ಗೋಸಾಯಿಯೆಂದು ಹಾಸ್ಯ ಮಾಡುವುದೂ ಇದೆ. (ಕೆ.ಕೆ.)

**ಗೋಳ :** ಅರ್ಧವೃತ್ತವನ್ನು ಅದರ ವ್ಯಾಸದ ಸುತ್ತ ಪರಿಭ್ರಮಿಸಿದಾಗ ದೊರೆಯುವ ಆಕೃತಿ (ಸ್ಫಿಯರ್). ಪರ್ಯಾಯವಾಗಿ ಅಂತಸ್ಥ ಸ್ಥಿರಬಿಂದುವೊಂದರಿಂದ ಸ್ಥಿರ ದೂರದಲ್ಲಿರುವ ಸಕಲ ಬಿಂದುಗಳೂ ನೆಲೆಸಿರುವ ಮೇಲ್ಮೈ. ಚಿತ್ರ (1)ರಲ್ಲಿ $O$ ಸ್ಥಿರ ಬಿಂದು. $OA = OB = OC = ... = OH = r$ (ಸ್ಥಿರಾಂಕ) ಆಗಿರುವಂತೆ, ಮೂರು ಆಯಾಮಗಳಲ್ಲಿ $A$ ಯಿಂದ $F$ ವರೆಗಿನ ಕೆಲವು ಪ್ರರೂಪೀ ಬಿಂದುಗಳನ್ನು ಗುರುತಿಸಿದೆ. ಇಂಥ ಸಮಸ್ತ ಬಿಂದುಗಳೂ ನೆಲೆಸಿ ರಚಿಸುವ ಅವಿಚ್ಛಿನ್ನ ಸಂವೃತಾಕೃತಿಯೇ ಗೋಳ. ಸ್ಥಿರ ಬಿಂದುವಿನ ($O$) ಹೆಸರು ಕೇಂದ್ರ ; ಸ್ಥಿರ ದೂರದ ($r$) ಹೆಸರು ತ್ರಿಜ್ಯ.




ಚಿತ್ರ 1

ಒಂದು ಗೋಳ ಘನವಾಗಿರಬಹುದು (ಸಾಲಿಡ್) ಇಲ್ಲವೇ ಟೊಳ್ಳಾಗಿರಬಹುದು (ಹಾಲೋ). ಘನಗೋಳವನ್ನು ಅಸಂಖ್ಯಾತ ಏಕಕೇಂದ್ರಿಯ ಟೊಳ್ಳು ಗೋಳಗಳ ಸಂಕಲನ ಎಂದು ಭಾವಿಸುವ ಸಾಧ್ಯತೆ ಉಂಟು. ಟೊಳ್ಳುಗೋಳದ ಮೇಲ್ಮೈಯನ್ನು ತೆಗೆದರೆ ಉಳಿಯುವುದು ಕೇಂದ್ರ ಬಿಂದು ಮಾತ್ರ. $r$ ತ್ರಿಜ್ಯವಿರುವ ಒಂದು ಗೋಳದ ಘನಗಾತ್ರ $\frac{4}{3}\pi r^3$. ಅದರ ಮೇಲ್ಮೈಯ ಸಲೆ $4pr^2$. ಅನ್ಯಥಾ ಹೇಳದಿದ್ದರೆ ಇನ್ನು ಮುಂದಕ್ಕೆ ಗೋಳವೆಂದಾಗ ಘನಗೋಳವೆಂದು ಭಾವಿಸಬೇಕು.




ಚಿತ್ರ 2

ಗೋಳದ ಸಮೀಕರಣ : ಕೇಂದ್ರವನ್ನು ($O$) ಮೂಲಬಿಂದುವಾಗಿಯೂ ಅದರ ಮೂಲಕ ಸಾಗುವ ಯಾವುದೇ ಮೂರು ಪರಸ್ಪರ ಲಂಬರೇಖೆಗಳನ್ನು ಅಕ್ಷಗಳಾಗಿಯೂ ಆಯಬೇಕು. ಗೋಳದ ಮೇಲ್ಮೈ ಮೇಲಿನ ಯಾವುದೇ ಚರಬಿಂದು $P$ ಯ ನಿರ್ದೇಶಕಗಳು $(x, y, z)$ ಆಗಿರಲಿ. $OP = r$ (ಸ್ಥಿರಾಂಕ, ತ್ರಿಜ್ಯ) ಆಗಿರುವುದರಿಂದ $P$ ಯ ಪಥದ ಸಮೀಕರಣ

$$x^2 + y^2 + z^2 = r^2$$

ಎಂದಾಗುವುದು. ಗೋಳದ ಮೇಲ್ಮೈ ಮೇಲಿನ ಪ್ರತಿಯೊಂದು ಬಿಂದುವೂ ಈ ಸಮೀಕರಣವನ್ನು ತೃಪ್ತಿಪಡಿಸುವುದರಿಂದ, ಬೇರೆ ಯಾವ ಬಿಂದುವೂ ಇದನ್ನು ತೃಪ್ತಿಪಡಿಸದಿರುವುದರಿಂದ, ಇದೇ ಗೋಳದ ಸಮೀಕರಣ. ಕೇಂದ್ರಬಿಂದು $C(g, f, h)$ ಆಗಿದ್ದರೆ ಆಗ ಈ ಗೋಳದ ಸಮೀಕರಣ

$$(x - g)^2 + (y - f)^2 + (z - h)^2 = r^2$$

$$x^2 + y^2 + z^2 - 2gx - 2fy - 2hz + g^2 + f^2 + h^2 - r^2 = 0$$

ಎಂದಾಗುವುದು. ಇದರ ಅಧ್ಯಯನದಿಂದ ತಿಳಿಯುವ ಸಂಗತಿಗಳಿಷ್ಟು : ಇದೊಂದು x, y, z ಚರಗಳಲ್ಲಿನ ದ್ವಿಘಾತೀಯ ಸಮೀಕರಣ ; ಇದರಲ್ಲಿ $xy, yz, zx$ ಪದಗಳ ಗುಣಾಂಶಗಳು ಶೂನ್ಯ ; ಮತ್ತು $x^2, y^2, z^2$ ಪದಗಳ ಗುಣಾಂಕಗಳು ಸಮವಾಗಿವೆ. ವಿಲೋಮವಾಗಿ, ಈ ಗುಣಗಳನ್ನು ಪಡೆದಿರುವ $x, y, z$ ಗಳಲ್ಲಿನ ಯಾವುದೇ ದ್ವಿಘಾತೀಯ ಸಮೀಕರಣ ಒಂದು ಗೋಳವನ್ನು ಸೂಚಿಸುತ್ತದೆ ಎಂದು ಸಾಧಿಸಬಹುದು.



ಚಿತ್ರ 3

ಸಮತಲ ಮತ್ತು ಗೋಳ : ಆಕಾಶದಲ್ಲಿರುವ ಒಂದು ಸಮತಲ ಹಾಗೂ ಒಂದು ಗೋಳವನ್ನು ಪರಿಶೀಲಿಸಿದರೆ ಈ ಕೆಳಗಿನ ಮೂರು ಸಾಧ್ಯತೆಗಳು ಇವೆ – ತಲ ಗೋಳವನ್ನು ಛೇದಿಸುತ್ತದೆ, ಇಲ್ಲವೆ ಸ್ಪರ್ಶಿಸುತ್ತದೆ, ಇಲ್ಲವೇ ಛೇದಿಸುವುದಿಲ್ಲ. ಮೊದಲಿನ ಸಂದರ್ಭದಲ್ಲಿ ತಲ ಮತ್ತು ಗೋಳಗಳ ಸಾಮಾನ್ಯ ವಕ್ರರೇಖೆ ಒಂದು ವೃತ್ತ; ಎರಡನೆಯ ಸಂದರ್ಭದಲ್ಲಿ ಈ ವೃತ್ತ ಬಿಂದು (ಸ್ಪರ್ಶಬಿಂದು) ಆಗುತ್ತದೆ ; ಮೂರನೆಯ ಸಂದರ್ಭದಲ್ಲಿ ಇದು ಕಾಲ್ಪನಿಕವಾಗಿದೆ ಎನ್ನುತ್ತೇವೆ.

$$S \equiv x^2 + y^2 + z^2 + 2gx + 2fy + 2hz + c = 0$$

ಗೋಳದ ಸಮೀಕರಣವು

$$P \equiv lx + my + nz + 1 = 0$$

ಸಮತಲದ ಸಮೀಕರಣವೂ ಆಗಿದ್ದರೆ ಇವುಗಳ ಸಾಮಾನ್ಯ ವಕ್ರರೇಖೆಯ (ವೃತ್ತದ) ಸಮೀಕರಣ ಇವೆರಡನ್ನೂ ಒಟ್ಟಿಗೆ ಪರಿಶೀಲಿಸುವುದರಿಂದ ದೊರೆಯುತ್ತದೆ:

$$S = 0$$
$$P = 0$$

ಗೋಳವನ್ನು ಸಮತಲ ಸ್ಪರ್ಶಿಸಿದಾಗ ಅದಕ್ಕೆ ಗೋಳದ ಸ್ಪರ್ಶಕ ಸಮತಲವೆಂದು ಹೆಸರು. ಗೋಳವನ್ನು ಸಮತಲ ಛೇದಿಸುವಾಗ ಲಭಿಸುವ ವೃತ್ತಗಳಲ್ಲಿ ಎರಡು ವರ್ಗದವು ಇವೆ. ಗೋಳಕೇಂದ್ರ ವೃತ್ತಕೇಂದ್ರವೂ ಆಗಿರುವಂಥ ವೃತ್ತಗಳು – ಇವು ಮಹಾವೃತ್ತಗಳು;



ಚಿತ್ರ 4

ವೃತ್ತಕೇಂದ್ರ ಗೋಳಕೇಂದ್ರದಿಂದ ಭಿನ್ನವಾಗಿರುವಂಥ ವೃತ್ತಗಳು – ಇವು ಅಲ್ಪ ವೃತ್ತಗಳು. ಒಂದು ಗೋಳದಲ್ಲಿ ದೊರೆಯುವ ಒಂದೊಂದು ವರ್ಗದ ವೃತ್ತಗಳ ಸಂಖ್ಯೆಯೂ ಅನಂತ. ಎಲ್ಲ ಮಹಾವೃತ್ತಗಳ ತ್ರಿಜ್ಯಗಳೂ ಗೋಳತ್ರಿಜ್ಯಕ್ಕೆ ಸಮ. ಎಲ್ಲ ಅಲ್ಪವೃತ್ತಗಳ ತ್ರಿಜ್ಯಗಳೂ ಗೋಳ ತ್ರಿಜ್ಯಕ್ಕಿಂತ ಕಡಿಮೆ.



ಚಿತ್ರ 5

ಸರಳರೇಖೆ ಮತ್ತು ಗೋಳ : ಒಂದು ಸರಳರೇಖೆ ಒಂದು ಗೋಳವನ್ನು ಎರಡು ಬಿಂದುಗಳಲ್ಲಿ ಛೇದಿಸಬಲ್ಲದು ; ಇಲ್ಲವೇ ಒಂದು ಬಿಂದುವಿನಲ್ಲಿ ಸ್ಪರ್ಶಿಸಬಲ್ಲದು; ಇಲ್ಲವೇ ಛೇದಿಸದಿರಬಲ್ಲದು. ಎರಡನೆಯ ಸಂದರ್ಭದಲ್ಲಿ ಆ ರೇಖೆಗೆ ಸ್ಪರ್ಶಕರೇಖೆ ಎಂದು ಹೆಸರು. ಗೋಳಕೇಂದ್ರದ ಮೂಲಕ ಸಾಗುವ ಎಲ್ಲ ಸರಳರೇಖೆಗಳೂ ಗೋಳದ ವ್ಯಾಸಗಳು. ರೂಢಿಯಲ್ಲಿ ವ್ಯಾಸವೆಂದರೆ ಗೋಳದ ಕೇಂದ್ರದ ಮೂಲಕ ಸಾಗಿ ಗೋಳದ ಮೇಲ್ಮೈಯಿಂದ ಸೀಮಿತವಾದ ಪರಿಮಿತ ರೇಖೆ ಎಂದು ಅರ್ಥ; ಇದರ ಉದ್ದ ತ್ರಿಜ್ಯದ ಎರಡರಷ್ಟು.




ಚಿತ್ರ 6

ಮಹಾವೃತ್ತ : ಯಾವುದೇ ಮಹಾವೃತ್ತ ಗೋಳವನ್ನು ಎರಡು ಸಮಭಾಗಗಳಾಗಿ ವಿಭಾಗಿಸುತ್ತದೆ (ಇವು ಅರ್ಧಗೋಳಗಳು). σ ಇಂಥ ಒಂದು ಮಹಾವೃತ್ತ. *O* ಇದರ ಕೇಂದ್ರ (ಗೋಳದ ಸಹ). *AOB* ವ್ಯಾಸ σ ದ ತಲಕ್ಕೆ ಲಂಬವಾಗಿ ಎಳೆದ ವ್ಯಾಸ. ಇದಕ್ಕೆ ಮಹಾವೃತ್ತದ ಅಕ್ಷ ಎಂದು ಹೆಸರು. ಆದ್ದರಿಂದ ಒಂದು ಮಹಾವೃತ್ತದ ತಲಕ್ಕೆ ಅದರ ಕೇಂದ್ರದ (ಗೋಳಕೇಂದ್ರದ) ಮೂಲಕ ಎಳೆದ ಸರಳರೇಖೆ ಆ ಮಹಾವೃತ್ತದ ಅಕ್ಷ ಎನಿಸಿಕೊಳ್ಳುವುದು. ಈ ಅಕ್ಷದ ಎರಡು ಕೊನೆಗಳಿಗೆ (*A*, *B*) ಮಹಾವೃತ್ತದ ಧ್ರುವಗಳೆಂದು ಹೆಸರು. *P* ಯು σ ದ ಮೇಲಿನ ಯಾವುದೇ ಬಿಂದು ಆಗಿದ್ದರೆ $\angle AOP = \angle BOP = 90^0$




ಚಿತ್ರ 7

ಎಂಬುದನ್ನು ಗಮನಿಸಬೇಕು. σ ಮಹಾವೃತ್ತಕ್ಕೆ ಸಮಾಂತರವಾಗಿರುವ ಎಲ್ಲ ಅಲ್ಪವೃತ್ತಗಳಿಗೂ *AB* ಯೇ ಅಕ್ಷ ಮತ್ತು *A*, *B* ಗಳೇ ಧ್ರುವಗಳು. ಇಂಥ ಒಂದು ಅಲ್ಪವೃತ್ತದ ಮೇಲೆ *Q* ಒಂದು ಬಿಂದುವಾಗಿದ್ದರೆ ಆಗ $\angle AOQ \neq 90^0$ ಎಂಬುದನ್ನು ಸಹ ಗಮನಿಸಬೇಕು. $\sigma_1, \sigma_2, \sigma_3$ , ಯಾವುದೇ ಮೂರು ಮಹಾವೃತ್ತಗಳಾಗಿರಲಿ (ಚಿತ್ರ 7 ರಲ್ಲಿ ಒಂದು ಪಾರ್ಶ್ವವನ್ನು ಮಾತ್ರ ತೋರಿಸಿದೆ.) ಇವು ಗೋಳದ ಮೇಲ್ಮೈ ಮೇಲೆ ABC ಎನ್ನುವ ಸಾಮಾನ್ಯ ಪ್ರದೇಶವನ್ನು ರೂಪಿಸುತ್ತವೆ (ಚಿತ್ರ 7ರಲ್ಲಿ ನೆರಳು ಮಾಡಿದೆ). ಇದಕ್ಕೆ ಈ ಮಹಾವೃತ್ತಗಳು ರಚಿಸುವ ಗೋಳತ್ರಿಭುಜ ಎಂದು ಹೆಸರು. ಇದರ ಹೆಚ್ಚಿನ ವಿವರಗಳಿಗೆ **ನೋಡಿ– ಗೋಳತ್ರಿಕೋಣಮಿತಿ.**

ಗೋಳಖಂಡ : *P* ಸಮತಲ *S* ಗೋಳವನ್ನು ಯಾದೃಚ್ಛಿಕವಾಗಿ ಛೇದಿಸಿದಾಗ $S_1$ ಮತ್ತು $S_2$ ಎನ್ನುವ ಎರಡು ಗೋಳಖಂಡಗಳು ಲಭಿಸುತ್ತವೆ. ಈ ಒಂದೊಂದು ಖಂಡವನ್ನೂ ಗೋಳೀಯ ಟೊಪ್ಪಿಗೆ (ಸ್ಫೆರಿಕಲ್ ಕ್ಯಾಪ್) ಎಂದು ಕರೆಯುವುದುಂಟು.




ಚಿತ್ರ 8

$S_1$ ಟೊಪ್ಪಿಗೆಯ ಪಾದವೃತ್ತದ (σ) ತ್ರಿಜ್ಯ *a* (= *CL*) ಮತ್ತು ಎತ್ತರ *h* (= *CA*) ಆಗಿದ್ದರೆ ಆಗ ಅದರ ಘನಗಾತ್ರ $\frac{\pi h}{6}(3a^2 + h^2)$. ಮೇಲ್ಮೈಸಲೆ $\pi(a^2 + h^2)$. $h = 2r$, $a = 0$ ಆದಾಗ ಟೊಪ್ಪಿಗೆ ಗೋಳವೇ ಆಗುತ್ತದೆ. ಆದ್ದರಿಂದ ಮೇಲಿನ ಫಲಿತಾಂಶಗಳಿಂದ ಗೋಳದ ಗಾತ್ರ $\frac{4}{3}\pi r^3$ ಮತ್ತು ಮೇಲ್ಮೈಸಲೆ $4pr^2$ ಎಂಬುದನ್ನು ನಿಗಮಿಸಬಹುದು. *h* ಅಂತರದಲ್ಲಿರುವ ಒಂದು ಜೊತೆ ಸಮಾಂತರ ($\sigma_1$, $\sigma_2$) ತಲಗಳು ಗೋಳವನ್ನು ಛೇದಿಸಲಿ. ಈಗ ದೊರೆಯುವ ಟೊಪ್ಪಿಗೆಗಳ ಪಾದವೃತ್ತಗಳ ತ್ರಿಜ್ಯಗಳು $r_1, r_2$ ಆಗಿರಲಿ. ಟೊಪ್ಪಿಗೆಗಳನ್ನು ತೆಗೆದ ಬಳಿಕ ಉಳಿಯುವ ಗೋಳಖಂಡದ (S') ಘನಗಾತ್ರ $\frac{\pi h}{6}(3r_1^2 + 3r_2^2 + h^2)$.

ಪಾದವೃತ್ತಗಳ ಸಲೆಗಳು $B_1 (= p\,r_1^2)$ ಮತ್ತು $B_2 (= p\,r_2^2)$ ಎಂಬುದಾಗಿಯೂ ಅವುಗಳ ನಡುವಿನ ಗೋಳಛೇದದ (σ ವೃತ್ತ) ಸಲೆ *M* ಎಂಬುದಾಗಿಯೂ ಭಾವಿಸಿದರೆ ಈ ಘನಗಾತ್ರದ ಬೆಲೆ $\frac{h}{6}(B_1 + 4M + B_2)$ ಆಗುತ್ತದೆ. ಇದಕ್ಕೆ ಪ್ರಿಸ್ಮಾಯಿಡಲ್ ಸೂತ್ರವೆಂದು ಹೆಸರು. $h = 2r$, ಎಂದರೆ *h* ಅಂತರ ಗೋಳದ ವ್ಯಾಸ ಆದಾಗ $r_1 = r_2 = 0$ ಆಗುತ್ತವೆ ಮತ್ತು




ಚಿತ್ರ 9

ಗೋಳಖಂಡ ಇಡೀ ಗೋಳವೇ ಆಗುತ್ತದೆ. ಆಗ ಮೇಲಿನ ಸೂತ್ರದಲ್ಲಿ $B_1 = B_2 = 0$ ಮತ್ತು $M = \pi r^2$ ಆಗುತ್ತವೆ; ಮತ್ತು ಸೂತ್ರದ ಬೆಲೆ ಗೋಳದ ಘನಗಾತ್ರವನ್ನು ಕೊಡುತ್ತದೆ. ಇದು ನಾವು ನಿರೀಕ್ಷಿಸುವಂತೆ, $\frac{2r}{6} \times 4\pi r2 = \frac{4}{3}\pi r3$ ಆಗುತ್ತದೆ **(ನೋಡಿ–ಗೋಳತ್ರಿಕೋಣಮಿತಿ).**

(ಬಿ.ಬಿ.ಬಿ.)

**ಗೋಳಕಲ್ಪ :** ದೀರ್ಘವೃತ್ತ ಅದರ ಯಾವುದೇ ಅಕ್ಷದ ಸುತ್ತ ಆವರ್ತಿಸಿದಾಗ ದೊರೆಯುವ ಘನಾಕೃತಿ (ಸ್ಫಿರಾಯಿಡ್). ದೀರ್ಘಾಕ್ಷ ಆವರ್ತನಾಕ್ಷವಾದಾಗ ದೀರ್ಘ ಗೋಳಕಲ್ಪವೂ (ಪ್ರೊಲೇಟ್ ಸ್ಫಿರಾಯಿಡ್) ಹ್ರಸ್ವಾಕ್ಷ ಆವರ್ತನಾಕ್ಷವಾದಾಗ ಹ್ರಸ್ವ ಗೋಳಕಲ್ಪವೂ (ಅಬ್ಲೇಟ್ ಸ್ಫಿರಾಯಿಡ್) ದೊರೆಯುತ್ತವೆ. x-1 ಸಮತಲದಲ್ಲಿ ಒಂದು ದೀರ್ಘವೃತ್ತದ ಸಮೀಕರಣ.

$$\frac{y^2}{a^2}+\frac{z^2}{b^2}=1, a>b$$

ಆಗಿದ್ದರೆ ಈ ದೀರ್ಘ ವೃತ್ತವನ್ನು y- ಅಕ್ಷದ ಸುತ್ತ ಆವರ್ತಿಸಿದಾಗ ದೊರೆಯುವ ದೀರ್ಘ ಗೋಳಕಲ್ಪದ ಸಮೀಕರಣ

$$\frac{x^2}{b^2}+\frac{y^2}{a^2}+\frac{z^2}{b^2}=1$$

ಮತ್ತು z ಅಕ್ಷದ ಸುತ್ತ ಆವರ್ತಿಸಿದಾಗ ದೊರೆಯುವ ಹ್ರಸ್ವಗೋಳಕಲ್ಪದ ಸಮೀಕರಣ

$$\frac{x^2}{a^2}+\frac{y^2}{a^2}+\frac{z^2}{b^2}=1$$



ಗೋಳಕಲ್ಪ : ಮೇಲಿನದು ದೀರ್ಘಗೋಳ ಕಲ್ಪ, ಕೆಳಗಿನದು ಹ್ರಸ್ವಗೋಳ ಕಲ್ಪ

ಇವುಗಳ ಘನಗಾತ್ರಗಳು ಅನುಕ್ರಮವಾಗಿ $(4/3)\,\pi ab^2, (4/3)\,\pi a^2 b$; ಮೇಲ್ಮೈ ಸಲೆಗಳು ಅನುಕ್ರಮವಾಗಿ

$$2\pi b^2 + 2\pi(ab/e)\sin^{-1} e.$$

$$2\pi a^2 + \pi\frac{b^2}{e}\log\,[(1+e)/(1-e)].$$

ಇಲ್ಲಿ e ದೀರ್ಘವೃತ್ತದ ಉತ್ಕೇಂದ್ರತೆ (ಎಕ್ಸೆಂಟ್ರಸಿಟಿ). $e=\sqrt{a^2-b^2/a}$

(ಬಿ.ಬಿ.ಬಿ.)

**ಗೋಳಗುಮ್ಮಟ :** ಬಿಜಾಪುರದಲ್ಲಿ ಆದಿಲ್‍ಷಾಹಿ ದೊರೆ ಮಹಮ್ಮದ್ (1627–56) ತನಗಾಗಿ ಕಟ್ಟಿಸಿಕೊಂಡ ಸ್ಮಾರಕ. ಜಗತ್ಪ್ರಸಿದ್ಧವಾದುದು. ಇದೊಂದು ಸರಳ ವಿನ್ಯಾಸದ ದೈತ್ಯಾಕಾರದ ಕಟ್ಟಡ. ಹೊರ ತಳ ಅಳತೆ 205 X 205', ಎತ್ತರ 198' 6". ಈ ಕಟ್ಟಡದಲ್ಲಿ ನಾಲ್ಕು ಗೋಡೆಗಳಿಂದ ಆವೃತವಾಗಿ ಮೇಲು ಗುಮ್ಮಟದಿಂದ ಆಚ್ಛಾದಿತವಾಗಿರುವ ಒಂದು ದೊಡ್ಡ ಹಜಾರ ಮಾತ್ರ ಇದೆ. 135' 5" ಚೌಕವಾಗಿದ್ದು, 18,337,67 ಚ. ಅ. ಪ್ರದೇಶವನ್ನು ಆಕ್ರಮಿಸಿರುವ ಈ ಹಜಾರ, ಕಂಬಗಳಿಲ್ಲದೆ ಆಚ್ಛಾದಿತವಾಗಿರುವ ಹಜಾರಗಳಲ್ಲಿ ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಹಜಾರದ ಸುತ್ತಲಿನ ನಾಲ್ಕು ಗೋಡೆಗಳು ಮೊದಲು ಮೂರು ಮೂರು ಕಮಾನುಗಳನ್ನೊಳಗೊಂಡಿದ್ದವು. ಅನಂತರದಲ್ಲಿ ಉತ್ತರದ ಗೋಡೆಯ ಮಧ್ಯದ್ದೊಂದನ್ನು ಬಿಟ್ಟು ಉಳಿದ ಕಮಾನುಗಳನ್ನು ಗೋಡೆಗಳಿಂದ ಮುಚ್ಚಲಾಗಿದ್ದು, ದಕ್ಷಿಣದ ಮಧ್ಯ ಕಮಾನಿನಲ್ಲಿ ಮಾತ್ರ ಒಂದು ಪ್ರವೇಶದ್ವಾರಕ್ಕೆ ಅವಕಾಶ ಮಾಡಲಾಗಿದೆ. ಒಳಭಾಗದಲ್ಲಿ ಈ ಗೋಡೆಗಳಿಗೆ ಒತ್ತಿದಂತೆಯೇ ಮೇಲೆದ್ದು, ಅಡ್ಡಡ್ಡವಾಗಿ ಪರಸ್ಪರ ಛೇದಿಸುವ ಎಂಟು ಕಮಾನುಗಳನ್ನು ಅಳವಡಿಸಲಾಗಿದೆ. ನೆಲದಿಂದ ಸುಮಾರು 109' ಎತ್ತರದಲ್ಲಿ ಇವುಗಳ ತಲೆಬಿಂದುಗಳಿಂದ ಒಂದು ಅಷ್ಟಕೋನ ನಿರ್ಮಾಣವಾಗಿದೆ. ಇವುಗಳ ಮೇಲೆ ದುಂಡು ಗುಮ್ಮಟವನ್ನು ಕೂರಿಸಲಾಗಿದೆ. ನೆಲ ಚೌಕವಾಗಿದ್ದರೂ ಮೇಲೆ, ದುಂಡುಗುಮ್ಮಟವನ್ನಿಡಲು ಪರಸ್ಪರ ಛೇದಿಸುವ ಕಮಾನುಗಳನ್ನು ನಿರ್ಮಿಸಿರುವ ತಂತ್ರ ವಾಸ್ತುರಚನಾ ರೀತಿಯಿಂದ ವಿಶಿಷ್ಟವಾದ್ದು. ಈ ಕಮಾನುಗಳ ಮೇಲೆ ಗುಮ್ಮಟದ ಬುಡದಲ್ಲಿ ಅದರ ದುಂಡು ಒಳಗೋಡೆಗೆ ಹೊಂದಿಕೊಂಡಂತೆ ವರ್ತುಲಾಕರದಲ್ಲಿ ಹಬ್ಬಿರುವ 11' ಅಗಲದ ಒಂದು ಚಾಚು ಗ್ಯಾಲರಿ ಇದೆ. ಈ ಗ್ಯಾಲರಿ ನೆಲದಿಂದ 109' 6" ಮೇಲಿದೆ. ಈ ಮಟ್ಟದಿಂದ ಗುಮ್ಮಟದ ತಲೆ 68' 6" ಎತ್ತರದಲ್ಲಿದೆ. ಎಂದರೆ ಹಜಾರದ ಒಳಗೆ ನೆಲದಿಂದ ಗುಮ್ಮಟದ ನೆತ್ತಿಯ ವರೆಗಿನ ಎತ್ತರ 178'. ಗುಮ್ಮಟದ ವ್ಯಾಸ 124' 5". ಏಷ್ಯ ಖಂಡದಲ್ಲೇ ಅತಿ ದೊಡ್ಡದಾದ, ವಿಶ್ವದಲ್ಲಿ ಎರಡನೆಯದಾದ, ಗುಮ್ಮಟವಿದು. ಗೋಡೆಗಳ ರಚನೆಯಲ್ಲಿ ಸಾಮಾನ್ಯ ಕಲ್ಲುತುಂಡುಗಳನ್ನು ಗಾರೆಯೊಡನೆ ಹುದುಗಿಸಿ, ಒಳ ಹೊರಮೈಗಳಲ್ಲಿ ಹಲವೆಡೆ ತೆಳು ಚಪ್ಪಡಿಗಳನ್ನು ಅಂಟಿಸಿ ಮೇಲೆ ಗಾರೆ ಬಳಿಯಲಾಗಿದೆ. ಮೇಲೆ ಹೋದಂತೆ ಸ್ವಲ್ಪ ಸ್ವಲ್ಪವಾಗಿ ಒಳ ಚಾಚುವ ಇಟ್ಟಿಗೆಯ ವರ್ತುಲಗಳನ್ನು ಒಂದರ ಮೇಲೊಂದರಂತೆ ಪೇರಿಸಿ ಗುಮ್ಮಟವನ್ನು ರಚಿಸಲಾಗಿದೆ. ಇಲ್ಲಿ ಉಪಯೋಗಿಸಿರುವ ಬಿಗಿ ಗಾರೆಯಿಂದಾಗಿ ಗುಮ್ಮಟ ಕಾಂಕ್ರೀಟಿನಲ್ಲಿ ಮಾಡಿದ ಬೋರಲಿಟ್ಟ ದೊಡ್ಡ ಬಟ್ಟಲಿನಂತೆ ಒಂದೇ ಘನವಾಗಿ ಭದ್ರವಾಗಿ ನಿಂತಿದೆ. ಗುಮ್ಮಟದ ಗೋಡೆಯ ದಪ್ಪ 10'; ಅದರ ಹೊರ ವ್ಯಾಸ 144'.



ಕಟ್ಟಡದ ಹೊರಗಿನ ನಾಲ್ಕು ಮೂಲೆಗಳಿಗೆ ಸೇರಿದಂತಿರುವ ಷಟ್ಕೋಣಾಕೃತಿಯ ಗೋಪುರಗಳ ಒಳಗಿರುವ ಮೆಟ್ಟಿಲುಗಳಿಂದ ಚಾವಣಿಯ ಮೇಲೇರಿ, ಗುಮ್ಮಟದಲ್ಲಿ ಕೊರೆದಿರುವ ಎಂಟು ಸಣ್ಣ ದ್ವಾರಗಳ ಮೂಲಕ ಒಳಗಿನ ಚಾಚು ಗ್ಯಾಲರಿಗೆ ಹೋಗಬಹುದು. ಇಲ್ಲಿ ವಿಶಾಲವಾದ ಆಚ್ಛಾದನ ಗುಮ್ಮಟದಿಂದ ಶಬ್ದತರಂಗಗಳು ಪ್ರತಿಧ್ವನಿಸಿ ವಿಶಿಷ್ಟ ಪರಿಣಾಮ ಉಂಟುಮಾಡುತ್ತವೆ. ಮಾತು, ಚಪ್ಪಾಳೆ ಅಥವಾ ಯಾವುದೇ ಶಬ್ದವನ್ನು ಇಲ್ಲಿ ಒಮ್ಮೆ ಹೊಮ್ಮಿಸಿದರೆ ಸುಮಾರು ಹತ್ತಕ್ಕೂ ಹೆಚ್ಚು ಸಲ ಅದು ಸ್ಪಷ್ಟವಾಗಿ ಪ್ರತಿಫಲಿಸುವುದಲ್ಲದೆ ಎಷ್ಟೇ ಸಣ್ಣ ಶಬ್ದವನ್ನು ಒಂದೆಡೆ ಉಂಟುಮಾಡಿದರೂ, ಈ ಗ್ಯಾಲರಿಯ ಯಾವುದೇ ಭಾಗದಲ್ಲಿರುವವರಿಗೂ ಅದೇ ಶಬ್ದ ಸ್ಪಷ್ಟವಾಗಿ ಗೋಡೆಯಿಂದ ಹೊರ ಬೀಳುವಂತೆ ಕೇಳುತ್ತದೆ. ಈ ಆಶ್ಚರ್ಯಕರ ವೈಶಿಷ್ಟ್ಯದಿಂದಾಗಿ ಇದು ಪಿಸುಗುಟ್ಟುವ ಗ್ಯಾಲರಿ ಎಂದು ಪ್ರಸಿದ್ಧವಾಗಿದೆ.

ಕಟ್ಟಡದ ಹೊರಮೈಯ ವಿನ್ಯಾಸ ಸುಂದರವಾಗಿ ರೂಪಿತವಾಗಿದೆ. ಕಮಾನುಗಳ ನ್ನೊಳಗೊಂಡ ಎತ್ತರದ ಗೋಡೆಗಳ ಮೇಲೆ ಚಾವಣಿಯ ಮಟ್ಟದಲ್ಲಿ ಚಾಚು ಕಪೋತವಿದೆ. ಅದರ ಅಡಿಯಲ್ಲಿ ತೂಗಾಡುವ ಬಾಳೆಮೋತೆಗಳಿಂದ ಅಲಂಕೃತವಾಗಿರುವ ಗಂಧವಾರಣಗಳುಂಟು. ಎತ್ತರದಲ್ಲಿ ಕಟ್ಟಡದ ಸುತ್ತ ಹಬ್ಬಿರುವ ಈ ಅಲಂಕರಣ, ಗೋಡೆಗಳ ಬರಿಮೈ ವೈಶಾಲ್ಯವನ್ನು ಖಂಡಿಸಿ ಅಲಂಕೃತ ಕಂಠಹಾರದಂತೆ ಸುಂದರವಾಗಿ ಜೋಡಣೆಗೊಂಡಿದೆ. ಅದರ ಮೇಲೆ ಸಣ್ಣ ಕಮಾನುಗಳ ಸಾಲೂ, ಅದಕ್ಕೂ ಮೇಲೆ ಚೂಪು ಪಟ್ಟೆಗಂಬಗಳ ಸಾಲೂ ಇವೆ. ಕಟ್ಟಡದ ನಾಲ್ಕೂ ಮೂಲೆಗಳಿಗೆ ಹೊಂದಿಕೊಂಡಂತಿರುವ ಷಡ್ಭುಜ ಗೋಪುರಗಳನ್ನು ಏಳು ಅಂತಸ್ತುಗಳಲ್ಲಿ ಎತ್ತಲಾಗಿದೆ. ಒಂದೊಂದು ಮುಖದಲ್ಲೂ ಚೂಪು ತುದಿಯ ಕಮಾನಿನ ಕಿಟಕಿಗಳನ್ನಿಡಲಾಗಿದೆ. ಈ ಗೋಪುರದ ಮೇಲ್ಭಾಗದಲ್ಲಿ ಚಿಕ್ಕ ಗುಮ್ಮಟಗಳಿವೆ. ಇವು ಚಾವಣಿಯ ಮಟ್ಟಕ್ಕಿಂತಲೂ ಮೇಲಿವೆ. ವಿಶಾಲ ಚಾವಣಿಯ ಮೇಲೆ ಮಧ್ಯದಲ್ಲಿರುವ ಬೃಹತ್ ಗುಮ್ಮಟ ಅರೆಗೋಳಾಕಾರದ್ದು. ಇದರ ತಳ ಕೂಡ ಮೀನಾರುಗಳ ಮೇಲಿರುವ ಚಿಕ್ಕ ಗುಮ್ಮಟಗಳಂತೆ ಪದ್ಮದಳಗಳಿಂದ ಸುತ್ತುವರಿಯಲ್ಪಟ್ಟಿದೆ. ಅಲ್ಲದೆ ಗೋಡೆಗಳ ಮೇಲೆಲ್ಲ ಗಾರೆಯಲ್ಲಿ ಅನೇಕ ಬಗೆಯ ವಿನ್ಯಾಸಗಳ ಅಲಂಕಾರವಿದೆ. ಈ ವಾಸ್ತು ಮತ್ತು ಅಲಂಕರಣ ಪರಸ್ಪರ ಪೂರಕವಾಗಿ, ಗೋಳಗುಮ್ಮಟವನ್ನು ಮೋಹಕ ಕೃತಿಯನ್ನಾಗಿ ಮಾಡಿವೆ. ಈ ಕಟ್ಟಡವನ್ನು ಹತ್ತಿರದಿಂದ ನೋಡುವವರಿಗೆ, ಇದರ ದೈತ್ಯಾಕಾರದ ಎದುರು ತಮ್ಮ ವಾಮನತ್ವದ ಅನುಭವವಷ್ಟೇ ಆದರೂ ದೂರದಿಂದ ನೋಡಿದಲ್ಲಿ ಈ ಸೌಂದರ್ಯದ ಸ್ವರೂಪ ಸ್ಪಷ್ಟವಾಗುತ್ತದೆ.

ಗೋಳಗುಮ್ಮಟದ ಒಳಹಜಾರದ ಮಧ್ಯೆ ದೊಡ್ಡ ಚೌಕ ಕಟ್ಟೆಯ ಮೇಲೆ ಮುಹಮ್ಮದನ ಮತ್ತು ಅವನ ಸಮೀಪ ಸಂಬಂಧಿಗಳ ಕೃತಕ ಗೋರಿಗಳಿವೆ. ನಿಜವಾದ ಗೋರಿಗಳು ಇದರ ಕೆಳಗೆ ನೆಲಮಾಳಿಗೆಯಲ್ಲಿವೆ. ಮುಹಮ್ಮದ ತನ್ನ ಆಳಿಕೆಯ ಉತ್ತರಾರ್ಧದಲ್ಲಿ ಈ ಕಟ್ಟಡವನ್ನು ಕಟ್ಟಲಾರಂಭಿಸಿ, ತನ್ನ ಕೊನೆಗಾಲದವರೆಗೂ ಮುಂದುವರಿಸಿದ. ಆದರೆ ಆ ಹೊತ್ತಿಗೂ ಕಟ್ಟಡದ ಗಾರೆಯ ಅಲಂಕರಣ ಮುಗಿದಿರಲಿಲ್ಲವಾಗಿ ಆ ಭಾಗಗಳು ಇಂದೂ ಅಪೂರ್ಣವಾಗಿಯೇ ಉಳಿದಿವೆ. ಮುಹಮ್ಮದ್ ತನ್ನ ಗೋರಿಗಾಗಿ ಬಹಳ ಆಸ್ಥೆ ವಹಿಸಿದ್ದನೆಂದೂ, ತನ್ನ ದೇಹವನ್ನು ಪವಿತ್ರ ಸ್ಥಳದಲ್ಲಿ ಹುಗಿಯಬೇಕೆಂಬ ಉದ್ದಿಶ್ಯದಿಂದ

ಇರಾಕಿನಲ್ಲಿ ಹುಸೇನನ ಸಮಾಧಿ ಇರುವ ಕರ್ಬಲಾದಿಂದ ಮಣ್ಣನ್ನು ತರಿಸಿಕೊಂಡಿದ್ದನೆಂದೂ ತಿಳಿದುಬಂದಿದೆ. ತನ್ನ ಸಮಾಧಿಗಾಗಿ ಈ ದೊರೆ ತಳೆದಿದ್ದ ಅಸೀಮ ಆಸಕ್ತಿಯಿಂದಾಗಿ ಜಗತ್ತಿನ ಉತ್ತಮ ವಾಸ್ತುರಚನೆಯೊಂದು ಮೈತಳೆಯಿತು.

ವಿನ್ಯಾಸದಲ್ಲಿ ಗೋಳಗುಮ್ಮಟ ಬಹಳ ಸರಳವಾಗಿದ್ದರೂ ಇದರ ಬೃಹದಾಕಾರ, ವಿವಿಧ ಭಾಗಗಳ ಹಿತಪ್ರಮಾಣ, ಮಿತ ಅಲಂಕರಣ ಮತ್ತು ಚತುರ ರಚನಾ ತಂತ್ರ – ಇವುಗಳಿಂದಾಗಿ ಆದಿಲ್‌ಷಾಹಿ ವಾಸ್ತುಶಿಲ್ಪದ ಉಚ್ಚತಮ ಸಾಹಸದ ಸಾಧನೆಯೆಂದು ಇದು ಪರಿಗಣಿತವಾಗಿದೆ. (ಎಸ್.ಎನ್.)

**ಗೋಳತ್ರಿಕೋಣಮಿತಿ :** ಗೋಳತ್ರಿಭುಜದ ಗುಣಗಳನ್ನು ಅಭ್ಯಸಿಸುವ ತ್ರಿಕೋಣ ಮಿತಿಭಾಗ (ಸ್ಫೆರಿಕಲ್ ಟ್ರಿಗನೋಮೆಟ್ರಿ). ಖಗೋಳವಿಜ್ಞಾನದ ಅಧ್ಯಯನದಲ್ಲಿ ಮೂಲಭೂತ ಪ್ರಾಮುಖ್ಯವಿರುವ ಶಾಸ್ತ್ರವಿದು. ಇದರ ಅನ್ವಯ ಸರ್ವೇಕ್ಷಣೆ (ಸರ್ವೇಯಿಂಗ್), ನೌಕಾಯಾನ (ನ್ಯಾವಿಗೇಷನ್), ಗಣಿತ ಮುಂತಾದ ಶಾಸ್ತ್ರಗಳಲ್ಲಿ ಉಂಟು.

ಗೋಳತ್ರಿಭುಜ : ಒಂದು ಗೋಳಕೇಂದ್ರದ ಮೂಲಕ ಸಾಗುವ ಯಾವುದೇ ಮೂರು ಸಮತಲಗಳು ಆ ಗೋಳವನ್ನು ಮೂರು ಮಹಾವೃತ್ತಗಳಲ್ಲಿ ಛೇದಿಸುತ್ತವೆ. ಇವುಗಳ ಕಂಸಗಳು ಗೋಳದ ಮೇಲ್ಮೈ ಮೇಲೆ ಸಂವೃತಿಸುವ ಯಾವುದೇ ಪ್ರದೇಶಕ್ಕೆ ಗೋಳತ್ರಿಭುಜವೆಂದು ಹೆಸರು. ಅಂದರೆ, ಒಂದು ಗೋಳತ್ರಿಭುಜದ ಭುಜಗಳು ಮಹಾವೃತ್ತಗಳ ಕಂಸಗಳು. ಇಂಥ ಒಂದು ತ್ರಿಭುಜ ಮೂರು ಆಯಾಮಗಳ ಆಕಾಶದಲ್ಲಿ ನೆಲೆಸಿದೆ ಎಂಬುದನ್ನು ಗಮನಿಸಬೇಕು. ಇದರ ಆರು ಧಾತುಗಳು, ಸಮತಲ ತ್ರಿಭುಜದಂತೆಯೇ ಮೂರು ಭುಜಗಳು ಹಾಗೂ ಮೂರು ಕೋನಗಳು. ಆದರೆ ಈ ಧಾತುಗಳನ್ನು ಅಳೆಯುವ ರೀತಿ ಮಾತ್ರ ಬೇರೆ.




ಚಿತ್ರ 1

ಚಿತ್ರ 1(a) ಯಲ್ಲಿ ಏಕಮಾನ (1) ತ್ರಿಜ್ಯವಿರುವ ಒಂದು ಗೋಳವನ್ನು ಪರಿಶೀಲಿಸಿದೆ. $O$ ಬಿಂದು ಇದರ ಕೇಂದ್ರ. $\sigma_1$ ಒಂದು ಮಹಾವೃತ್ತ. $A, B$ ಇದರ ಮೇಲಿನ ಎರಡು ಬಿಂದುಗಳು. $BC$ ಕಂಸ $O$ನಲ್ಲಿ ರಚಿಸುವ ಕೋನ $\alpha$ ಆಗಿರಲಿ. ಚಿತ್ರ 1 ($b$) ಯಲ್ಲಿ $\sigma_1,\sigma_2,\sigma_3$, ಎಂಬ ಮೂರು ಮಹಾವೃತ್ತಗಳು ಗೋಳದ ಮೇಲ್ಮೈ ಮೇಲೆ ಸಂವೃತಿಸುವ ಗೋಳತ್ರಿಭುಜ $ABC$ಯನ್ನು ನೆರಳು ಮಾಡಿ ತೋರಿಸಿದೆ. ಈಗ $\angle BOC=\alpha$, $\angle COA=\beta$, $\angle AOB=\gamma$ ಆಗಿದ್ದರೆ ಆಗ $BC (=a), CA(=b), AB(=c)$ ಕಂಸಗಳ (ಅಂದರೆ ಗೋಳತ್ರಿಭುಜ ABCಯ ಭುಜಗಳ) ಮಾಪನಗಳು ಅನುಕ್ರಮವಾಗಿ $\alpha$, $\beta$, $\gamma$ ಎಂದು ವ್ಯಾಖ್ಯಿಸುತ್ತೇವೆ. ಆದ್ದರಿಂದ $a=\alpha$, $b=\beta$, $c=\gamma$ ಎಂಬುದು ಸ್ಪಷ್ಟ.

$\sigma_2$ ನೆಲೆಸಿರುವ ಸಮತಲ ಮತ್ತು $\sigma_3$ ನೆಲೆಸಿರುವ ಸಮತಲ ಇವುಗಳ ನಡುವಿನ ದ್ವಿತಲ ಕೋನವನ್ನು (ಎಂದರೆ $A$ ಬಿಂದುವಿನಲ್ಲಿ ಆಯಾ ಸಮತಲಗಳಲ್ಲಿ $CA$ ಮತ್ತು $BA$ ಕಂಸಗಳಿಗೆ ಎಳೆದ ಸ್ಪರ್ಶಕಗಳ ನಡುವಿನ ಕೋನ) ಶೃಂಗ $A$ಯಲ್ಲಿನ ಕೋನದ ಮಾಪನ ಎನ್ನುತ್ತೇವೆ. ಇದನ್ನು $A$ ಪ್ರತೀಕದಿಂದ ಸೂಚಿಸುತ್ತೇವೆ. ಇದೇ ರೀತಿ $\sigma_3, \sigma_1$ ಸಮತಲಗಳ ನಡುವಿನ ದ್ವಿತಲ ಕೋನ $B$ ಮತ್ತು $\sigma_1$ $\sigma_2$ ಸಮತಲಗಳ ನಡುವಿನ ದ್ವಿತಲ ಕೋನ $C$. ಹೀಗೆ ಗೋಳತ್ರಿಭುಜ $ABC$ಯ ಆರು ಧಾತುಗಳು $a,b,c$ ಮತ್ತು $A,B,C$ ಇವೆಲ್ಲವೂ ಕೋನಗಳೇ ಎಂಬುದನ್ನು ಗಮನಿಸಬೇಕು.

ಒಂದು ಗೋಳತ್ರಿಭುಜದಲ್ಲಿ ಯಾವುದೇ ಭುಜದ ಉದ್ದ ಅರ್ಧವೃತ್ತಕ್ಕಿಂತ ಕಡಿಮೆ ಎಂದು ಭಾವಿಸುತ್ತೇವೆ. ಆದ್ದರಿಂದ ತ್ರಿಭುಜದ ಯಾವುದೇ ಕೋನ ಎರಡು ಲಂಬಕೋನಗಳಿಗಿಂತ ಕಡಿಮೆ ಎಂಬುದು ಸಿದ್ಧಿಸುತ್ತದೆ. ಸಾರ್ವತ್ರಿಕತೆಗೆ ಇದರಿಂದ ಏನೂ ಬಾಧಕವಿಲ್ಲ.

ಒಂದು ಮಹಾವೃತ್ತಕ್ಕೆ ಅದರ ಕೇಂದ್ರದ ಮೂಲಕ ಎಳೆದ ಲಂಬವು ಗೋಳವನ್ನು ಸಂಧಿಸುವ ಎರಡು ಬಿಂದುಗಳು ಆ ಮಹಾವೃತ್ತದ ಧ್ರುವಗಳು. ಇವನ್ನು ಜೋಡಿಸುವ ರೇಖೆಗೆ (ಇದು ಗೋಳದ ಒಂದು ವ್ಯಾಸ) ಮಹಾವೃತ್ತದ ಅಕ್ಷವೆಂದು ಹೆಸರು. ಗೋಳತ್ರಿಭುಜ $ABC$ ಯನ್ನು ಸಂವೃತಿಸುವ $\sigma_1, \sigma_2, \sigma_3$ ಎಂಬ ಮೂರು ಮಹಾವೃತ್ತಗಳ (ಅಂದರೆ $BC,CA,AB$ ಕಂಸಗಳ) ಧ್ರುವಗಳು ಅನುಕ್ರಮವಾಗಿ $A', A''; B', B''; C', C''$ ಆಗಿರಲಿ, ಇವುಗಳ ಪೈಕಿ $A,B,C$ ಶೃಂಗಗಳ ಸಮೀಪ ಇರುವ ಧ್ರುವಗಳು $A' \cdot B' \cdot C'$ ಎಂದು ಭಾವಿಸೋಣ. ಈ ಮೂರು ಬಿಂದುಗಳು ರಚಿಸುವ ಗೋಳತ್ರಿಭುಜಕ್ಕೆ $\Delta ABC$ಯ ಧ್ರುವೀಯ ತ್ರಿಭುಜ (ಪೋಲಾರ್ ಟ್ರೈಆಂಗಲ್) ಎಂದು ಹೆಸರು. $\Delta A'B'C'$ ಯ ಧ್ರುವೀಯ ತ್ರಿಭುಜ $\Delta ABC$ ಆಗುತ್ತದೆ ಎಂದು ತೋರಿಸಬಹುದು. ಇವೆರಡು ಪರಸ್ಪರ ಧ್ರುವೀಯ ತ್ರಿಭುಜಗಳ ನಡುವೆ ಈ ಕೆಳಗಿನ ಸಂಬಂಧಗಳಿವೆ.

$$A' = \pi - a, \quad a' = \pi - A$$
$$B' = \pi - b, \quad b' = \pi - B$$
$$C' = \pi - c, \quad c' = \pi - C$$

ಬಹು ಮುಖ್ಯ ಗುಣಗಳಿವು. ಒಂದು ತ್ರಿಭುಜದ ಭುಜಗಳನ್ನೂ ಕೋನಗಳನ್ನೂ ಸಂಯೋಜಿಸುವ ಯಾವುದೇ ಸೂತ್ರದಲ್ಲಿ ಭುಜ ಹಾಗೂ ಕೋನಗಳ ಬದಲು ಅವುಗಳ ಸರಳಪೂರಕಗಳನ್ನು ಉಪಯೋಗಿಸಿ ಹೊಸತೊಂದು ಸೂತ್ರವನ್ನು ಪಡೆಯಬಹುದು.

ಗೋಳತ್ರಿಭುಜದ ಕೆಲವು ಮುಖ್ಯ ಗುಣಗಳನ್ನು ಇಲ್ಲಿ ತಿಳಿಸಿದೆ:

1. ಎರಡು ಭುಜಗಳ ಮೊತ್ತ ಮೂರನೆಯ ಭುಜಕ್ಕಿಂತ ಅಧಿಕ ($a + b>c$, ಇತ್ಯಾದಿ).

2. ಮೂರೂ ಭುಜಗಳ ಮೊತ್ತ ಮಹಾವೃತ್ತದ ಪರಿಧಿಗಿಂತ ಕಡಿಮೆ ($a+b+c<2\pi$).

3. ಮೂರು ಕೋನಗಳ ಮೊತ್ತ ಎರಡು ಲಂಬಕೋನಗಳಿಗಿಂತ ಅಧಿಕ, ಆದರೆ ಆರು ಲಂಬಕೋನಗಳಿಗಿಂತ ಕಡಿಮೆ ($\pi<A+B+C<3\pi$.), ಮಹಾವೃತ್ತದ ಪರಿಧಿಗಿಂತ ಕಡಿಮೆ.

4. ಸಮದ್ವಿಭುಜ ತ್ರಿಭುಜದ ಪಾದಕೋನಗಳು (ಬೇಸ್ ಆಂಗಲ್ಸ್) ಸಮ; ಮತ್ತು ವಿಲೋಮವಾಗಿ ಕೂಡ.

5. $\Delta ABC$ ಯಲ್ಲಿ $B > C$ ಆಗಿದ್ದರೆ $b > c$ ಮತ್ತು ವಿಲೋಮವಾಗಿ ಕೂಡ.

ಗೋಳತ್ರಿಕೋಣಮಿತಿಯ ಸೂತ್ರಗಳು. 1 ಕೊಸೈನುಗಳ ನಿಯಮ: $a,b,c$ ಒಂದು ಗೋಳತ್ರಿಭುಜದ ಭುಜಗಳೂ $A,B,C$ ಈ ಭುಜಗಳ ಅನುಕ್ರಮ ಅಭಿಮುಖ ಕೋನಗಳೂ ಆಗಿದ್ದರೆ ಆಗ

$$\cos a=\cos b \cos c+\sin b \sin c \cos A$$
$$\cos b=\cos c \cos a+ \sin c \sin a \cos B$$
$$\cos c=\cos a \cos b+ \sin a \sin b \cos C$$



ಚಿತ್ರ 2

ಚಿತ್ರ (2) ರಲ್ಲಿ $b$ ಮತ್ತು $c$ ಗಳು ಲಘುಕೋನಗಳೆಂದೂ ($<\frac{\pi}{2}$) $ABC$ ಗೋಳ ತ್ರಿಭುಜ ಏಕಮಾನ ತ್ರಿಜ್ಯವಿರುವ ಗೋಳದ ಅಂಗವೆಂದೂ ಭಾವಿಸಲಾಗಿದೆ. $AB$ ಕಂಸಗಳಿಗೆ $A$ಯಲ್ಲಿ ಎಳೆದ ಸ್ಪರ್ಶಕಗಳು $OB$ ಮತ್ತು $OC$ಗಳನ್ನು ಅನುಕ್ರಮವಾಗಿ $B'$ ಮತ್ತು $C'$ ಬಿಂದುಗಳಲ್ಲಿ ಛೇದಿಸಲಿ. ಆಗ $OB'C'$ ಮತ್ತು $AB'C'$ ಗಳಿಂದ (ಇವು ಸಮತಲ ತ್ರಿಭುಜಗಳು)

$$B'C'^2 = OC'^2 + OB'^2 - 2.OC'.OB'.\cos a$$
$$= AC'^2 + AB'^2 - 2.AC', AB'.\cos A$$

ದೊರೆಯುತ್ತವೆ. ಅಲ್ಲದೆ ಲಂಬಕೋನ ತ್ರಿಭುಜಗಳಾದ OAC' ಮತ್ತು OAB' ಗಳಿಂದ

$$OC' = \sec b, \ OB'. \sec c,$$
$$AC' = \tan b, \quad AB' = \tan c$$

$$\therefore \sec^2 b + \sec^2 c - 2\sec b \sec c \cos a$$
$$= \tan^2 b + \tan^2 c - 2\tan b \tan c \cos A$$

ಇದನ್ನು ಸರಳೀಕರಿಸಿದರೆ $\cos a = \cos b \cos c + \sin b \sin c \cos A$ ದೊರೆಯುತ್ತದೆ. ಇದೇ ರೀತಿ ಉಳಿದ ಎರಡು ರೂಪಗಳನ್ನು ಕೂಡ ಪಡೆಯಬಹುದು. ಈ ಸಾಧನೆಯಲ್ಲಿ $b$ ಮತ್ತು $c$ ಗಳನ್ನು ಲಘುಕೋನಗಳೆಂದು ಆಯ್ದಿರುವುದು ಕೇವಲ ಸೌಕರ್ಯಕ್ಕಾಗಿ. ಮೇಲಿನ ಸೂತ್ರ ಸಾರ್ವತ್ರಿಕವಾಗಿ ಸತ್ಯವೆಂದು ಸಾಧಿಸುವುದು ಸಾಧ್ಯವಿದೆ.

ಗೋಳತ್ರಿಭುಜ $ABC$ಯ ಧ್ರುವೀಯ ತ್ರಿಭುಜ $A'B'C'$ ಆಗಿದ್ದರೆ ಆಗ ಮೇಲಿನ ಸೂತ್ರಗಳು ಈ ಕೆಳಗಿನ ರೂಪ ಪಡೆಯುತ್ತವೆ :

$$\cos(\pi - A') = \cos(\pi - B')\cos(\pi - C') + \sin(\pi - B') \times \sin(\pi - C')\cos(\pi - a')$$

$$\therefore \cos A' = -\cos B' \cos C' + \sin B' \sin C' \cos a'$$

ಆದ್ದರಿಂದ ಸಾರ್ವತ್ರಿಕವಾಗಿ $\Delta ABC$ಯಲ್ಲಿ

$$\cos A = -\cos B \cos C + \sin B \sin C \cos a$$
$$\cos B = -\cos C \cos A + \sin C \sin A \cos b$$
$$\cos C = -\cos A \cos B + \sin A \sin B \cos c$$

ಎಂಬ ಸೂತ್ರಗಳು ಸಹ ದೊರೆಯುತ್ತವೆ.

2 ಸೈನುಗಳ ನಿಯಮ : ನಿರೂಪಣೆ ಹೀಗಿದೆ–

$$\frac{\sin A}{\sin a} = \frac{\sin B}{\sin b} = \frac{\sin C}{\sin c}$$

ಚಿತ್ರ (3)ರಲ್ಲಿ $CD$ಯನ್ನು $OAB$ ಸಮತಲಕ್ಕೆ, $DP$ಯನ್ನು $OA$ಗೆ ಮತ್ತು $DQ$ವನ್ನು $OB$ಗೆ ಲಂಬವಾಗಿ ಎಳೆದಿದೆ. $C, P$ ; $C, Q$ ಗಳನ್ನು ಜೋಡಿಸಬೇಕು. ಆಗ $OPC$, $PDC$, $OQC$, $QDC$ ತ್ರಿಭುಜಗಳು ಲಂಬಕೋನ ತ್ರಿಭುಜಗಳು. ಚಿತ್ರ (3)ರಿಂದ ಈ ಕೆಳಗಿನ ಫಲಿತಾಂಶಗಳು ಸಿದ್ಧಿಸುತ್ತವೆ : $QC = \sin a$



ಚಿತ್ರ 3

$$\frac{DC}{QC} = \sin B$$

$\therefore DC = \sin a \sin B$ ಇದೇ ಪ್ರಕಾರ $DC = \sin b \sin A$

$$\therefore \sin a \sin B = \sin b \sin A$$

$\therefore \dfrac{\sin A}{\sin a} = \dfrac{\sin B}{\sin b}$ ಇದೇ ಪ್ರಕಾರ ಇವನ್ನು $\dfrac{\sin C}{\sin c}$ ಗೆ ಕೂಡ ಸಮವೆಂದು ತೋರಿಸಬಹುದು.



ಚಿತ್ರ 4

ನಿಗಮನಗಳು : ಮೇಲೆ ಸಾಧಿಸಿರುವ ಸೂತ್ರಗಳಿಂದ ಕೆಲವು ಮುಖ್ಯ ನಿಗಮನಗಳನ್ನು ಪಡೆಯಬಹುದು.

1 ಚಿತ್ರ (4)ರಲ್ಲಿ $a, b, B, C$ ಧಾತುಗಳು ತಿಳಿದಿವೆ. ಅವನ್ನು ಸಂಬಂಧಿಸಲು $\cos a \cos C = \sin a \cot b - \sin C \cot B$ ಎಂಬ ಸೂತ್ರ ಉಂಟು. ಇದರ ಸಾಧನೆಯನ್ನು ಇಲ್ಲಿ ಕೊಟ್ಟಿದೆ.

$$\cos b = \cos a \cos x + \sin a \sin x \cos B$$
$$\cos x = \cos a \cos b + \sin a \sin b \cos C$$
$$\frac{\sin x}{\sin C} = \frac{\sin b}{\sin B}$$

ಎಂಬ ಮೂರು ಗೊತ್ತಿರುವ ಸೂತ್ರಗಳಲ್ಲಿ $\sin x$ ಮತ್ತು $\cos x$ ಗಳನ್ನು ವಿಸರ್ಜಿಸಿ ಸರಳೀಕರಿಸಿ ಪದಗಳನ್ನು ವ್ಯವಸ್ಥಿತಗೊಳಿಸಿದರೆ ಮೇಲಿನ ಸೂತ್ರ ಬರುತ್ತದೆ. ಇದನ್ನು ನೆನಪಿನಲ್ಲಿಡುವ ಸೂತ್ರ ಹೀಗಿದೆ :

cos (ಒಳ ಭುಜ) × cos (ಒಳ ಕೋನ)=sin (ಒಳ ಭುಜ) × cot (ಬೇರೆ ಭುಜ)-sin (ಒಳ ಕೋನ) × cot (ಬೇರೆ ಕೋನ)

2 ಗೋಳತ್ರಿಕೋಣಮಿತಿಯ ಅರ್ಧಕೋನ ಸೂತ್ರಗಳು ಹೀಗಿವೆ :

$$\tan\frac{A}{2} = \frac{r}{\sin(s-a)}, \sin\frac{A}{2} = \sqrt{\frac{\sin(s-b)\sin(s-c)}{\sin b \sin c}}$$
$$\tan\frac{B}{2} = \frac{r}{\sin(s-b)}, \cos\frac{A}{2} = \sqrt{\frac{\sin s \sin(s-a)}{\sin b \sin c}}$$
$$\tan\frac{C}{2} = \frac{r}{\sin(s-c)}, \tan\frac{A}{2} = \sqrt{\frac{\sin(s-b)\sin(s-c)}{\sin s \sin(s-a)}}$$

$$\sin A = \frac{2}{\sin b \sin c}\left[\sin s \sin(s-a)\sin(s-b)\sin(s-c)\right]^{\frac{1}{2}}$$

ಇಲ್ಲಿ $s = \frac{1}{2}(a+b+c)$ ಮತ್ತು

$$r = \left[\sin(s-a)\sin(s-b)\sin(s-c)/\sin s\right]^{\frac{1}{2}}$$

ಈ ಸೂತ್ರಗಳನ್ನು ಸಮತಲ ತ್ರಿಕೋಣಮಿತಿಯಲ್ಲಿ ಅನುರೂಪ ಸೂತ್ರಗಳನ್ನು ಪಡೆಯಲು ಬಳಸುವ ವಿಧಾನದಿಂದ ಪಡೆಯಬಹುದು. ಇದೇ ಪ್ರಕಾರ

$S = \frac{1}{2}(A+B+C)$ ಮತ್ತು

$$R = \left[\cos(S-A)\cos(S-B)\cos(S-C)/(-\cos S)\right]^{\frac{1}{2}}$$

ಆಗಿರುವಾಗ

$$\cot\frac{a}{2} = \frac{R}{S-A}$$
$$\cot\frac{b}{2} = \frac{R}{S-B}$$
$$\cot\frac{c}{2} = \frac{R}{S-C}$$

ಸಮತಲ ತ್ರಿಕೋಣಮಿತಿಯಲ್ಲಿನ ಅನುರೂಪ ಸೂತ್ರಗಳೊಡನೆ ಮೇಲಿನ ಸೂತ್ರಗಳ ಸಾದೃಶ್ಯ ಗಮನಾರ್ಹವಾಗಿದೆ.

ಗೋಳತ್ರಿಭುಜದ ಬಿಡಿಸುವಿಕೆ : ಒಂದು ಗೋಳತ್ರಿಭುಜದ ಮೂರು ಧಾತುಗಳು ದತ್ತವಾಗಿರುವ ಕೆಳಗಿನ ಸಂದರ್ಭಗಳಲ್ಲಿ ಆ ತ್ರಿಭುಜವನ್ನು ಮೇಲೆ ನಿರೂಪಿಸಿರುವ ವಿವಿಧ ಸೂತ್ರಗಳ ಬಳಕೆಯಿಂದ ಬಿಡಿಸಬಹುದು. 1 ಮೂರು ಭುಜಗಳು ದತ್ತ, 2 ಎರಡು ಭುಜಗಳೂ ಅವುಗಳ ನಡುವಿನ ಕೋನವೂ ದತ್ತ, 3 ಮೂರು ಕೋನಗಳು ದತ್ತ, 4 ಎರಡು ಕೋನಗಳೂ ಅವನ್ನು ಜೋಡಿಸುವ ಭುಜವೂ ದತ್ತ, 5 ಎರಡು ಭುಜಗಳೂ ಒಂದು ಅಭಿಮುಖ ಕೋನವೂ ದತ್ತ, 6 ಎರಡು ಕೋನಗಳೂ ಅವುಗಳ ಪೈಕಿ ಒಂದರ ಅಭಿಮುಖ ಬಾಹುವೂ ದತ್ತ.

1. $a, b, c$ ದತ್ತವಾದಾಗ

$\cos a = \cos b \cos c + \sin b \sin c \cos A$ ಸೂತ್ರ $A$ಯನ್ನು ಕೊಡುತ್ತದೆ. ಇದೇ ರೀತಿ $B, C$ಗಳನ್ನು ಪಡೆಯಬಹುದು.

2. $a, b, c$ ದತ್ತವಾದಾಗ

$\cos c = \cos a \cos b + \sin a \sin b \cos C$ ಸೂತ್ರ $c$ ಯನ್ನು ಕೊಡುತ್ತದೆ. ಬಳಿಕ (1)ರ ಅನುಸಾರ $A,B$ ಗಳನ್ನು ಪಡೆಯಬಹುದು.

3. $A,B,C$ ದತ್ತವಾದಾಗ (ಧ್ರುವೀಯ ತ್ರಿಭುಜ)

$\cos A = -\cos B \cos C + \sin B \sin C \cos a$ ಸೂತ್ರ a ಯನ್ನು ಕೊಡುತ್ತದೆ. ಇದೇರೀತಿ b,c ಗಳನ್ನು ಪಡೆಯಬಹುದು.

4. $B,C,a$ ದತ್ತವಾದಾಗ

$\cos A = -\cos B \cos C + \sin B + \sin C \cos a$ ಸೂತ್ರ $A$ಯನ್ನು ಕೊಡುತ್ತದೆ. ಬಳಿಕ

$$\frac{\sin a}{\sin A} = \frac{\sin b}{\sin B} = \frac{\sin c}{\sin C}$$

ಸೂತ್ರಗಳಿಂದ $b,c$ ಗಳನ್ನು ಪಡೆಯಬಹುದು.

5. $b,c,B$ ದತ್ತವಾದಾಗ

$$\frac{\sin b}{\sin B} = \frac{\sin c}{\sin C}$$

ಸೂತ್ರ $C$ ಕೊಡುತ್ತದೆ. ಬಳಿಕ

$\cos b = \cos c \cos a + \sin c \sin a \cos B$ ಸೂತ್ರದಿಂದ $a$ ಯನ್ನೂ

$$\frac{\sin a}{\sin A} = \frac{\sin b}{\sin B}$$

ಸೂತ್ರದಿಂದ $A$ಯನ್ನೂ ಪಡೆಯಬಹುದು.

6. $b,B,C$ ದತ್ತವಾದಾಗ

$$\frac{\sin b}{\sin B} = \frac{\sin c}{\sin C}$$

ಸೂತ್ರ $c$ ಯನ್ನು ಕೊಡುತ್ತದೆ. ಬಳಿಕ ಈ ಹಿಂದಿನಂತೆ $a$ ಮತ್ತು $A$ಗಳನ್ನು ಪಡೆಯಬಹುದು.

ನೇಪಿಯರನ ಸೂತ್ರವಿಧಿಗಳು : ಗೋಳತ್ರಿಭುಜದಲ್ಲಿನ ಒಂದು ಕೋನ ಲಂಬಕೋನವಾದಾಗ ಮೇಲಿನ ಸೂತ್ರಗಳು ಸರಳರೂಪವನ್ನು ತಳೆಯುತ್ತವೆ.

$\Delta ABC$ ಯಲ್ಲಿ C= $\frac{\pi}{2}$ ಎಂದು ಭಾವಿಸೋಣ. ಆಗ

$$\cos C = \cos a \cos b, \quad \sin a = \sin A \sin C.$$

$$\tan a = \cos B \tan C, \tan a = \tan A \sin b$$

ಇತ್ಯಾದಿ ಸುಲಭ ಸೂತ್ರಗಳು ಲಭ್ಯವಾಗುತ್ತವೆ. ಇವೆಲ್ಲವನ್ನೂ ಸುಲಭವಾಗಿ ನೆನಪಿನಲ್ಲಿಟ್ಟುಕೊಂಡು ಬರೆಯಲು ಎರಡು ಸೂತ್ರವಿಧಿಗಳು (ರೂಲ್ಸ್) ಇವೆ. ಅವನ್ನು ಅವುಗಳ ಆವಿಷ್ಕರ್ತೃ ನೇಪಿಯರನ ಹೆಸರಿನಿಂದ ಕರೆಯಲಾಗಿದೆ. $\Delta ABC$ ಯಲ್ಲಿ $C = \frac{\pi}{2}$. ಇದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಕೋನವನ್ನು ರಚಿಸುವ $a,b$




ಚಿತ್ರ 5

ಭುಜಗಳನ್ನು ಹಾಗೆಯೇ ಇಡುತ್ತೇವೆ. ಉಳಿದ ಧಾತುಗಳ ($B,c,A$) ಲಂಬಪೂರಕ ಗಳನ್ನು (ಕಾಂಪ್ಲಿಮೆಂಟ್ಸ್) ಗಣಿಸುತ್ತೇವೆ. (ಅವು $\frac{\pi}{2}$-B. $\frac{\pi}{2}$-c, $\frac{\pi}{2}$-A). ಈ ಐದು ಧಾತುಗಳನ್ನು, ಒಂದು ವೃತ್ತವನ್ನು ಐದು ಖಂಡಗಳಾಗಿ ವಿಭಾಗಿಸಿ ಒಂದೊಂದು ಖಂಡದೊಳಗೆ ಒಂದೊಂದರಂತೆ, ಅವು ತ್ರಿಭುಜದಲ್ಲಿ ಬರುವ ಕ್ರಮದಲ್ಲಿ, ಬರೆಯುತ್ತೇವೆ. (ಚಿತ್ರ 5). ನೇಪಿಯರನ ಸೂತ್ರವಿಧಿಗಳ ನಿರೂಪಣೆ ಹೀಗಿದೆ :

ನಡುವಣ ಧಾತುವಿನ ಸೈನ್=ಪಾರ್ಶ್ವ ಧಾತುಗಳ ಟ್ಯಾಂಜೆಂಟುಗಳ ಗುಣಲಬ್ಧ

ನಡುವಣ ಧಾತುವಿನ ಸೈನ್= ಅಭಿಮುಖ ಧಾತುಗಳ ಕೊಸೈನುಗಳ ಗುಣಲಬ್ಧ

ಉದಾಹರಣೆಗೆ $\frac{\pi}{2}$-$C$ ನಡುವಣ ಧಾತುವಾಗಿರಲಿ. ಆಗ $\frac{\pi}{2}$-$A$, $\frac{\pi}{2}$-$B$ ಧಾತುಗಳು ಪಾರ್ಶ್ವಧಾತುಗಳೂ, $a,b$ ಧಾತುಗಳು ಅಭಿಮುಖ ಧಾತುಗಳೂ ಆಗುತ್ತವೆ. ನೇಪಿಯರನ ಸೂತ್ರವಿಧಿಗಳ ಪ್ರಕಾರ $\sin\left(\frac{\pi}{2} - C\right) = \tan\left(\frac{\pi}{2} - A\right)\tan\left(\frac{\pi}{2} - B\right)$

ಮತ್ತು $\sin\left(\frac{\pi}{2} - C\right) = \cos a \cos b$

$$\therefore \cos C = \cot A \cot B$$

$$= \cos a \cos b$$

ಒಂದು ಲಂಬಕೋನ ಗೋಳತ್ರಿಭುಜದಲ್ಲಿ ಯಾವುದೇ ಎರಡು ಧಾತುಗಳು ದತ್ತವಾಗಿರುವಾಗ ಆ ತ್ರಿಭುಜವನ್ನು ಬಿಡಿಸಬಹುದು.




ಚಿತ್ರ 6

ಗೋಳತ್ರಿಭುಜದ ಇತರ ಗುಣಗಳು : $ABC$ ಗೋಳತ್ರಿಭುಜ ದಲ್ಲಿ $AD$ ಮಹಾವೃತ್ತವನ್ನು $BC$ ಗೆ ಲಂಬವಾಗಿ ಎಳೆದಿದೆ (ಚಿತ್ರ 6). ಇದೇ ರೀತಿ $BE,CF$ ಗಳನ್ನು ಅನುಕ್ರಮವಾಗಿ $CA, AB$ ಗಳಿಗೆ ಲಂಬಗಳಾಗಿ ಎಳೆದಿದೆ. ಇವು ಸಂಪಾತಿಸುತ್ತವೆ (ಕನ್‌ಕರೆಂಟ್).

1 ಈಗ $\sin a \sin AD = \sin b \sin BE = \sin c \sin CF = 2n$

$\sin A \sin AD = \sin b \sin BE = \sin c \sin CF = 2N$

ಇಲ್ಲಿ $n = [\sin s \sin (s-a) \sin (s-b) \sin (s-c)]^{1/2}$

$N = [-\cos S \cos (S-A) \cos (S-B) \cos (S-C)]^{1/2}$

$2s = a+b+c, \ 2S = A+B+C$

ಆದ್ದರಿಂದ $\dfrac{\sin a}{\sin A} = \dfrac{\sin b}{\sin B} = \dfrac{\sin c}{\sin C} = \dfrac{n}{N}$

2. $ABC$ ಗೋಳತ್ರಿಭುಜದಲ್ಲಿ ಶೃಂಗಗಳ ಮೂಲಕ ಎಳೆದ ಯಾವುದೇ ಮೂರು ಮಹಾವೃತ್ತಗಳು $AD, BE, CF$ ಸಂಪಾತಿಸಿದರೆ ಆಗ




ಚಿತ್ರ 7

$$\frac{\sin BD \sin CE \sin AF}{\sin DC \sin EA \sin FB} = +1$$

ಮತ್ತು ವಿಲೋಮವಾಗಿ ಕೂಡ. ಇದನ್ನು ಉಪಯೋಗಿಸಿ ಅಥವಾ ಸ್ವತಂತ್ರವಾಗಿ ಈ ಕೆಳಗಿನ ಪ್ರಮೇಯಗಳನ್ನು ಸಾಧಿಸಬಹುದು:

*(a)* ಗೋಳತ್ರಿಭುಜದ ಮೂರು ಲಂಬಗಳು ಸಂಪಾತಿಸುತ್ತವೆ.

*(b)* ಗೋಳತ್ರಿಭುಜದ ಕೋನಗಳನ್ನು ಅರ್ಧಿಸುವ ಮಹಾವೃತ್ತಗಳು ಸಂಪಾತಿಸುತ್ತವೆ.

*(c)* ಶೃಂಗಗಳನ್ನು ಆಯಾ ಅಭಿಮುಖ ಬಾಹುವಿನ ಮಧ್ಯ ಬಿಂದುವಿಗೆ ಸೇರಿಸುವ ಮಹಾವೃತ್ತಗಳು ಸಂಪಾತಿಸುತ್ತವೆ.

3. ಗೋಳತ್ರಿಭುಜ *ABC* ಯ ಭುಜಗಳನ್ನು ಲಂಬವಾಗಿ ಅರ್ಧಿಸುವ ಮಹಾವೃತ್ತಗಳು *S* ಬಿಂದುವಿನಲ್ಲಿ ಸಂಪಾತಿಸುತ್ತವೆ (ಚಿತ್ರ 7). ಆಗ $SA = SB = SC$. ಆದ್ದರಿಂದ *S* ಬಿಂದು ಧ್ರುವವಾಗಿಯೂ $SA = SB = SC = R$ ತ್ರಿಜ್ಯವಾಗಿಯೂ ಇರುವ ಅಲ್ಪ ವೃತ್ತವನ್ನೆಳೆದರೆ ಅದು $\Delta\ ABC$ ಪರಿವೃತ್ತ (ಸರ್ಕಮ್ ಸರ್ಕಲ್) ಆಗುತ್ತದೆ. $\Delta\ ABC$ ಕೋನಾರ್ಧಕಗಳು ಕೂಡ ಸಂಪಾತಿಸುವುವಷ್ಟೆ. ಸಂಪಾತಬಿಂದು *I* ನಿಂದ *IL, IM, IN* ಕಂಸಗಳನ್ನು ಭುಜಗಳಿಗೆ ಲಂಬವಾಗಿ ಎಳೆದರೆ $IL=IM=IN$ ಆಗುತ್ತವೆ. ಇವುಗಳ ಬೆಲೆ *r* ಆಗಿರಲಿ. *I* ಧ್ರುವವಾಗಿ *r* ತ್ರಿಜ್ಯವಾಗಿ ಇರುವ ಲಘುವೃತ್ತ ತ್ರಿಭುಜದ ಮೂರು ಭುಜಗಳನ್ನೂ ಸ್ಪರ್ಶಿಸುತ್ತದೆ. ಇದು $\Delta\ ABC$ ಯ ಒಳವೃತ್ತ. ಹೀಗೆಯೇ *BC* ಭುಜವನ್ನು ಒಳಗಡೆಯೂ *AB, AC* ಭುಜಗಳನ್ನು ಹೊರಗಡೆಯೂ ಸ್ಪರ್ಶಿಸುವ ಲಘುವೃತ್ತವನ್ನು ಕೂಡ ಎಳೆಯಬಹುದು (ಚಿತ್ರ 8). ಇದು ತ್ರಿಭುಜದ ಒಂದು ಹೊರವೃತ್ತ. ಇದೇ ತೆರನ ಇನ್ನೂ ಎರಡು ಹೊರವೃತ್ತಗಳಿವೆ.




**ಚಿತ್ರ 8**

*AB, AC* ಭುಜಗಳನ್ನು ಮುಂದುವರಿಸಿದಾಗ ಅವು *A* ಗೆ ವ್ಯಾಸಾಭಿಮುಖವಾದ *A'* ಬಿಂದುವಿನಲ್ಲಿ ಸಂಧಿಸುತ್ತವೆ. *ABA'* ಮತ್ತು *ACA'* ಮಹಾವೃತ್ತಗಳು ಗೋಳದ ಮೇಲೆ ಒಂದು ಇಂದುಕವನ್ನು (ಲ್ಯೂನ್) ರಚಿಸುತ್ತವೆ. *ABC* ಮತ್ತು *A'BC* ತ್ರಿಭುಜಗಳಿಗೆ ಸಹೇಂದುಕ (ಕೋಲ್ಯೂನಾರ್) ತ್ರಿಭುಜಗಳೆಂದು ಹೆಸರು. $\Delta\ A'BC$ ಯ ಒಳವೃತ್ತ $\Delta\ A'BC$ ಗೆ ಹೊರವೃತ್ತವಾಗುತ್ತದೆ.

4 ಇತರ ಕೆಲವು ಪ್ರಮೇಯಗಳನ್ನು ಇಲ್ಲಿ ನಿರೂಪಿಸಿದೆ.

(*a*) ಒಂದು ಮಹಾವೃತ್ತದ ಮೇಲೆ *X, Y, Z* ಮೂರು ಬಿಂದುಗಳಾಗಿ ಗೋಳದ ಮೇಲೆ *P* ಬೇರೊಂದು ಬಿಂದುವಾಗಿದ್ದರೆ ಆಗ

$$\cos PX \sin YZ + \cos PY \sin ZX + \cos PZ \sin XY = 0$$

ಇಲ್ಲಿ *YZ, ZX, XY* ಗಳನ್ನು ಸೂಕ್ತ ಧನ ಅಥವಾ ಋಣ ಚಿಹ್ನೆಗಳೊಂದಿಗೆ ಉಪಯೋಗಿಸಬೇಕು. ಉದಾಹರಣೆಗೆ $ZY=-YZ$.




**ಚಿತ್ರ 9**

*(b) ABC* ತ್ರಿಭುಜದ ಭುಜಗಳನ್ನು ಒಂದು ಮಹಾವೃತ್ತ *L, M, N* ಬಿಂದುಗಳಲ್ಲಿ ಸಂಧಿಸಿದರೆ $\dfrac{\sin BL \sin CM \sin AN}{\sin LC \sin MA \sin NB} = -1$ (ಇದು ಮೆನೆಲಾಸನ ಪ್ರಮೇಯವನ್ನು ಹೋಲುತ್ತದೆ.)

*(c) ABCD* ಗೋಳೀಯ ಚತುರ್ಭುಜದ ಶೃಂಗಗಳು ಒಂದು ಲಘುವೃತ್ತದ ಮೇಲಿದ್ದರೆ ಆಗ $A + C = B + D$.

*(d) A, B* ಕೇಂದ್ರಗಳಾಗಿ ಇರುವ ಎರಡು ಲಘುವೃತ್ತಗಳಿಗೆ ಗೋಳದ ಮೇಲಣ ಒಂದು ಬಿಂದು *P* ಯಿಂದ ಎಳೆದ ಸ್ಪರ್ಶವೃತ್ತಗಳು ಸಮವಾಗಿದ್ದರೆ *P* ಬಿಂದುವಿನ ಪಥ *AB* ವೃತ್ತಕ್ಕೆ ಲಂಬವಾಗಿರುವ ಮಹಾವೃತ್ತ (ಚಿತ್ರ 10). ಇದಕ್ಕೆ ಲಘುವೃತ್ತಗಳ ಮೂಲಾಕ್ಷವೃತ್ತವೆಂದು (ರ್‍ಯಾಡಿಕಲ್ ಸರ್ಕಲ್) ಹೆಸರು. ದತ್ತ ಲಘುವೃತ್ತಗಳು ಎರಡು ಬಿಂದುಗಳಲ್ಲಿ ಸಂಧಿಸಿದರೆ ಈ ಬಿಂದುಗಳನ್ನು ಸೇರಿಸತಕ್ಕ ಮಹಾವೃತ್ತವೇ ಮೂಲಾಕ್ಷವೃತ್ತ. ಮೂಲಾಕ್ಷವೃತ್ತದ ಹಾಗೂ ಸಹಮೂಲಾಕ್ಷ (ಕೋಆಕ್ಸಿಯಲ್) ವೃತ್ತ ಸಮುದಾಯದ ಗುಣಗಳನ್ನು ಸಮತಳಗಣಿತದ ವಿಧಾನಗಳನ್ನನುಸರಿಸಿ ಅನೇಕವಾಗಿ ಪಡೆಯಬಹುದು.




**ಚಿತ್ರ 10**

(*e*) ಸಮತಳ ತ್ರಿಭುಜದಲ್ಲಿ ಒಳವೃತ್ತವನ್ನೂ ಹೊರವೃತ್ತಗಳನ್ನೂ ಸ್ಪರ್ಶಿಸತಕ್ಕ ಒಂದು ವೃತ್ತವಿದೆ. ಇದಕ್ಕೆ ನವಬಿಂದು ವೃತ್ತ ಎಂದು ಹೆಸರು. ಇದೇ ರೀತಿಯಲ್ಲಿ ಒಂದು ಗೋಳತ್ರಿಭುಜದಲ್ಲಿ ಒಳವೃತ್ತವನ್ನೂ ಹೊರವೃತ್ತಗಳನ್ನೂ ಸ್ಪರ್ಶಿಸತಕ್ಕ ಒಂದು ಲಘುವೃತ್ತವಿರುತ್ತದೆ. ಇದಕ್ಕೆ ಹಾರ್ಟನ ವೃತ್ತ ಎಂದು ಹೆಸರು. ಹಾರ್ಟನ ವೃತ್ತದ ತ್ರಿಜ್ಯ ρ ಮತ್ತು ಪರಿವೃತ್ತದ ತ್ರಿಜ್ಯ *R* ಆಗಿದ್ದರೆ ಆಗ, $\tan \rho = ½\ \dfrac{1}{2} \tan R$.

(*f*) ಗೋಲತ್ರಿಭುಜದ ಲಂಬಕೇಂದ್ರ *0*, ಮಧ್ಯರೇಖೆಗಳ (ಮೀಡಿಯನ್ಸ್) ಸಂಪಾತಕೇಂದ್ರ *G*, ಹಾರ್ಟನ ವೃತ್ತದ ಕೇಂದ್ರ *H*, ಆಗಿದ್ದರೆ ಆಗ *O, H, G* ಬಿಂದುಗಳು ಒಂದು ಮಹಾವೃತ್ತದ ಮೇಲಿರುವವು.

5. ಗೋಳೀಯ ಹೆಚ್ಚಳ: *ABC* ಗೋಳತ್ರಿಭುಜದ ಕೋನಗಳ ಮೊತ್ತ π ಗಿಂತ ಅಧಿಕವೆಂದು ಗಮನಿಸಿದ್ದೇವೆ. $A + B + C = \pi$ ಪರಿಮಾಣಕ್ಕೆ ತ್ರಿಭುಜದ ಗೋಳೀಯ ಹೆಚ್ಚಳ (ಸ್ಫೆರಿಕಲ್ ಎಕ್ಸೆಸ್) ಎಂದು ಹೆಸರು. ಗೋಳದ ತ್ರಿಜ್ಯ *R* ಆಗಿದ್ದರೆ ಆಗ *ABC* ತ್ರಿಭುಜದ ಸಲೆ $(A + B + c - \pi) R^2$ . ಇದಕ್ಕೆ ಗಿರಾರ್ಡನ ಪ್ರಮೇಯ ಎಂದು ಹೆಸರು. ಇದನ್ನು ವಿಸ್ತರಿಸುವುದರಿಂದ *n* ಭುಜಗಳಿರುವ ಗೋಳೀಯ ಬಹುಭುಜದ ಸಲೆ $[\Sigma-(n-2)\pi]\ R^2$ ಎಂದು ದೊರೆಯುತ್ತದೆ. ಇಲ್ಲಿ Σ ಬಹುಭುಜದ ಕೋನಗಳ ಮೊತ್ತ. $\Delta\ ABC$ ಯ ಗೋಳೀಯ ಹೆಚ್ಚಳವನ್ನು *E* ಎಂದು ಕರೆದರೆ *E* ಯನ್ನು ಕುರಿತ ಕೆಲವು ಉಕ್ತಿಗಳು ಮುಖ್ಯವಾಗಿವೆ.

$$\sin \frac{1}{2} E = \frac{[\sin s \sin (s-a) \sin (s-b) \sin (s-c)]^{\frac{1}{2}}}{2 \cos \frac{a}{2} \cos \frac{b}{2} \cos \frac{c}{2}}$$

ಇದಕ್ಕೆ ಕಿರ್ನ್ಯೋಲಿಯ ಪ್ರಮೇಯವೆಂದು ಹೆಸರು.

$$\tan \frac{1}{4} E = [\tan \frac{1}{2} s \tan \frac{1}{2}(s-a) \tan \frac{1}{2}(s-b) \tan \frac{1}{2}(s-c)]^{\frac{1}{2}}$$

ಇದಕ್ಕೆ ಲ್ಹಿಲಿಯರನ ಪ್ರಮೇಯ ಎಂದು ಹೆಸರು. ಆದ್ದರಿಂದ ತ್ರಿಭುಜದ ಭುಜಗಳು ದತ್ತವಾಗಿದ್ದರೆ ಗೋಳೀಯ ಹೆಚ್ಚಳ ನಿರ್ಧರಿಸಲ್ಪಡುತ್ತದೆ.

$$L = [\cot \frac{1}{2} s \tan \frac{1}{2}(s-a) \tan \frac{1}{2}(s-b) \tan \frac{1}{2}(s-c)]^{\frac{1}{2}}$$

ಆಗಿದ್ದರೆ ಆಗ ಮೇಲಣ ಉಕ್ತಿಯನ್ನು $\tan \frac{1}{4} E = L / \cot \frac{s}{2}$ ಎಂದು ಬರೆಯಬಹುದು.

ಹೀಗೆಯೇ $\tan \frac{1}{4}(2A - E) = L / \tan \frac{1}{2}(s - a)$ ಇತ್ಯಾದಿ.

ಆದ್ದರಿಂದ

$$L = [\tan \frac{1}{4} E \tan \frac{1}{4}(2A - E) \tan \frac{1}{4}(2B - E) \tan \frac{1}{4}(2C - E)]^{\frac{1}{2}}$$

(ಸಿ.ಎನ್.ಎಸ್)

**ಗೌಜಲು ಮರ :** ಲೆಸಿಥಿಡೇಸೀ ಕುಟುಂಬಕ್ಕೆ ಸೇರಿದ ಒಂದು ಕಾಡುಮರ. ಕವುಲುಮರ, ದದ್ದಾಲ, ಹೆಣ್ಣುಮತ್ತಿ ಪರ್ಯಾಯನಾಮಗಳು. ಕ್ಯಾರಿಯ ಆರ್ಬೋರಿಯ ಇದರ ಶಾಸ್ತ್ರೀಯ ಹೆಸರು. ಇದು ಭಾರತದ ಮೂಲನಿವಾಸಿ. ಭಾರತಾದ್ಯಂತ ಮತ್ತು ಮಲಯ, ಇಂಡೋಚೀನ ಮುಂತಾದೆಡೆಗಳಲ್ಲೆಲ್ಲ ಇದು ಹರಡಿದೆ. ಸಮುದ್ರಮಟ್ಟದಿಂದ ಹಿಡಿದು 1500 ಮೀ ಎತ್ತರದ ಬೆಟ್ಟ ಪ್ರದೇಶಗಳವರೆಗೂ ಇದರ ವ್ಯಾಪ್ತಿ ಉಂಟು. 10–20 ಮೀ ಎತ್ತರಕ್ಕೆ ಬೆಳೆಯುವ ಮರವಿದು. ಇದರ ಚೌಬೀನೆ ಗಡುಸಾಗಿಯೂ ಭಾರವಾಗಿಯೂ ಬಲವಾಗಿಯೂ ಉಂಟು. ಬಹುಕಾಲ ನೀರಿನ ಸಂಪರ್ಕವಿದ್ದರೂ ಕೆಡದು. ಆದರೆ ಬೇಗ ಸೀಳುವುದರಿಂದ ಮತ್ತು ಬಾಗುವುದರಿಂದ ಅಷ್ಟಾಗಿ ಉಪಯೋಗದಲ್ಲಿಲ್ಲ. ಇದನ್ನು ಗರಗಸದಿಂದ ಕೊಯ್ಯುವುದೂ ಕಷ್ಟ. ಆದರೂ ಸೂಕ್ತರೀತಿಯಲ್ಲಿ ಸಂಸ್ಕರಿಸುವುದರಿಂದ ಇದನ್ನು ಕೃಷಿ ಉಪಕರಣಗಳು, ಹಲಗೆಗಳು, ರೈಲ್ವೆ ಸ್ಲೀಪರುಗಳು, ಬಂದೂಕದ ಹಿಡಿಗಳು, ತೊಲೆಗಳು ಮುಂತಾದವುಗಳ ತಯಾರಿಕೆಯಲ್ಲಿ ಬಳಸಬಹುದು. ತೊಗಟೆಯಿಂದ ಒರಟಾದ ಹಗ್ಗ ಮತ್ತು ಕಂದುಬಣ್ಣದ ಕಾಗದ ಮುಂತಾದವನ್ನು ತಯಾರಿಸುವುದಿದೆ. ತೊಗಟೆಗೆ ಔಷಧೀಯ ಗುಣಗಳೂ ಉಂಟು. ಇದನ್ನು ಕೆಮ್ಮು, ಶೀತ, ಜ್ವರ, ಸಿಡುಬು ಮುಂತಾದ ಬೇನೆಗಳಲ್ಲಿ ಶಾಮಕ ಔಷಧಿಯಾಗಿ ಬಳಸುತ್ತಾರೆ. ಹಣ್ಣಿನ ಕಷಾಯವನ್ನು ಪಚನಕ್ರಿಯೆಯನ್ನು ಹೆಚ್ಚಿಸುವುದಕ್ಕೂ ಎಲೆಗಳನ್ನು ವ್ರಣಗಳ ನಿವಾರಣೆಗೂ ಬಳಸುವುದಿದೆ. (ಎಂ.ಎಚ್.ಎಂ.)

**ಗೌಜಲು ಹಕ್ಕಿ :** ಗ್ಯಾಲಿಫಾರ್ಮೀಸ್ ಗಣದ ಟೆಟ್ರವೋನಿಡೀ ಕುಟುಂಬಕ್ಕೆ ಸೇರಿದ ಫ್ರಾಂಕೋಲೈನಸ್ ಎಂಬ ಜಾತಿಯ ವನ್ಯಪಕ್ಷಿ (ಪಾರ್ಟ್‌ರಿಜ್). ಇದರಲ್ಲಿ 3 ಮುಖ್ಯ ಬಗೆಗಳಿವೆ; ಫ್ರಾ. ಫ್ರಾಂಕೋಲೈನಸ್ (ಬ್ಲ್ಯಾಕ್ ಪಾರ್ಟ್‌ರಿಜ್), ಫ್ರಾ. ಪಿಕ್ಟಸ್ (ಪೇಂಟೆಡ್ ಪಾರ್ಟ್‌ರಿಜ್) ಮತ್ತು ಫ್ರಾ. ಪಾಂಡಿಸೆರಿಯೇನಸ್ (ಗ್ರೇ ಪಾರ್ಟ್‌ರಿಜ್). ಮೊದಲನೆಯದು ಉತ್ತರಭಾರತ ಮತ್ತು ಅಸ್ಸಾಮ್‌ಗಳಲ್ಲೂ ಎರಡನೆಯದು ದಕ್ಷಿಣ ಭಾರತದಲ್ಲೂ ಮೂರನೆಯದು ಅಸ್ಸಾಂ ಬಿಟ್ಟು ಭಾರತಾದ್ಯಂತವೂ ಕಾಣದೊರೆಯುತ್ತವೆ. ಎಲ್ಲ ಬಗೆಗಳೂ ಹುಲ್ಲುಗಾವಲುಗಳಲ್ಲಿ, ಕುರುಚಲು ಕಾಡುಗಳಲ್ಲಿ, ಕೆಲವೊಮ್ಮೆ ಹಳ್ಳಿಗಳ ಸನಿಹದಲ್ಲಿ ಕಬ್ಬು ಮತ್ತು ಧಾನ್ಯ ಬೆಳೆಗಳ ಕೃಷಿಭೂಮಿಗಳ ಬಳಿ ವಾಸಿಸುತ್ತವೆ.



ಗೌಜಲು ಹಕ್ಕಿಗಳು ಮುಖ್ಯವಾಗಿ ಭೂವಾಸಿಗಳು. ಕಾಳು, ವಿವಿಧ ರೀತಿಯ ಬೀಜಗಳು, ಗೆದ್ದಲು, ಜೀರುಂಡೆಯ ಡಿಂಭಗಳು ಇವುಗಳ ಪ್ರಧಾನ ಆಹಾರ. ಗುಂಡನೆಯ ಮತ್ತು ಹೃಷ್ಟಪುಷ್ಟವಾದ ದೇಹ, ಮೋಟು ಬಾಲ, ಕಾಳುಕಡ್ಡಿ ತಿನ್ನಲು ಸಹಾಯಕವಾದ ಕೋಳಿ ಕೊಕ್ಕಿನಂಥ ಕೊಕ್ಕು, ಬಲವಾದ ಕಾಲುಗಳು, ಮೋಟು ಕತ್ತು–ಇವು ಗೌಜಲು ಹಕ್ಕಿಗಳ ಪ್ರಧಾನ ಲಕ್ಷಣಗಳು. ದೇಹದ ಬಣ್ಣ ಕಪ್ಪು ಇಲ್ಲವೇ ಬೂದುಮಿಶ್ರಿತ ಕಂದು. ದೇಹದ ಮೇಲೆ ಬಿಳಿ, ಕಂದು, ಕಗ್ಗಂದು ಬಣ್ಣದ ಮಚ್ಚೆಗಳು ಮತ್ತು ಪಟ್ಟೆಗಳು ಇವೆ. ಗಂಡು ಹಕ್ಕಿಯ ಬಣ್ಣ ಹೆಣ್ಣಿನದಕ್ಕಿಂತ ಹೆಚ್ಚು ಗಾಢವಾದ್ದು.

ಗೌಜಲು ಹಕ್ಕಿಗಳ ಚಟುವಟಿಕೆ ಸಂಜೆ ಹಾಗೂ ಬೆಳಗ್ಗೆ ಹೆಚ್ಚಾಗಿರುತ್ತದೆ. ಕತೀತರ್ – ಕತೀತರ್ ಇಲ್ಲವೆ ಚಿಕ್‌ಚೀಕ್‌ಚೀಕ್‌ಕೆರೇ ಎಂಬಂತೆ, ಸಿಳ್ಳು ಹೊಡೆದಂತೆ ಕೂಗಿಕೊಂಡು ಇವು ತಿರುಗಾಡುತ್ತಿರುತ್ತವೆ. ನೆಲದ ಮೇಲೆ ಇವು ಬಲು ಚೆನ್ನಾಗಿ ಓಡಬಲ್ಲವು; ಇವುಗಳ ಚಲನೆಯೆಲ್ಲ ಸಾಮಾನ್ಯವಾಗಿ ಕಾಲುಗಳಿಂದಲೆ. ಆದರೆ ಅನಿರೀಕ್ಷಿತ ಅಪಾಯವೊದಗಿ ಬಂದಾಗ ಮಾತ್ರ ಭರ್ರನೆ ಕೆಳಮಟ್ಟದಲ್ಲಿ ಹಾರುತ್ತವೆ. ಹಾರುವುದಾದರೂ ಕೇವಲ ಕೆಲವೇ ಮೀಟರುಗಳು ಮಾತ್ರ. ಮತ್ತೆ ನೆಲಕ್ಕಿಳಿದು ಓಡಿ ಪೊದೆಯೊಳಗೆ ಅವಿತುಕೊಂಡುಬಿಡುತ್ತವೆ. ಇವುಗಳ ಸಂತಾನಾಭಿವೃದ್ಧಿಯ ಕಾಲ ಜೂನ್– ಸೆಪ್ಟೆಂಬರ್. ಹುಲ್ಲು ಇಲ್ಲವೆ ಕಬ್ಬಿನ ಗದ್ದೆಗಳಲ್ಲಿ ಗೂಡು ಕಟ್ಟಿ ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಸಂಖ್ಯೆ 4–8.

ಗೌಜಲು ಹಕ್ಕಿಗಳು ಒಳ್ಳೆಯ ಬೇಟೆಯ ಹಕ್ಕಿಗಳೆನಿಸಿವೆ. ಬೂದುಗೌಜಲು ಹಕ್ಕಿಯ ಗಂಡುಗಳನ್ನು ಹಿಡಿದು ಅವುಗಳ ನಡುವೆ ಕಾಳಗವನ್ನೇರ್ಪಡಿಸುವುದುಂಟು. ಗೌಜಲು ಹಕ್ಕಿಗಳ ಮಾಂಸಕ್ಕೆ ವಿಶಿಷ್ಟವಾದ ರುಚಿ ಹಾಗೂ ವಾಸನೆಯಿರುವುದರಿಂದ ಇವನ್ನು ಆಹಾರಕ್ಕಾಗಿ ಜನ ಬೇಟೆಯಾಡುತ್ತಾರೆ. (ಎನ್.ಬಿ.ಕೆ.)

**ಗೌಡ ದೇಶ :** ಪಶ್ಚಿಮ ಮತ್ತು ವಾಯವ್ಯ ಬಂಗಾಲ ಪ್ರದೇಶಕ್ಕೆ ಹಿಂದೆ ಇದ್ದ ಹೆಸರು. ಈ ಪ್ರದೇಶದ ರಾಜಧಾನಿಯಾಗಿದ್ದ ಗೌಡ ನಗರದಿಂದಾಗಿ ಇದಕ್ಕೆ ಗೌಡದೇಶವೆಂಬ ಹೆಸರು ಬಂದಿರಬಹುದು. ಗೌಡ ಎಂಬುದು ಗೊನರ್ದ ಎಂಬುದರ ಅಪಭ್ರಂಶವಿರಬಹುದೆಂಬುದು ಕನ್ನಿಂಗ್‌ಹ್ಯಾಮನ ಅಭಿಪ್ರಾಯ. ಗೌಡ ಎಂಬ ಶಬ್ದ ದೇಶ ಹಾಗೂ ಜನ ವಾಚಕವಾಗಿ ಬಳಕೆಯಲ್ಲಿತ್ತು. ಪಾಣಿನಿ, ಕೌಟಿಲ್ಯ ಮುಂತಾದವರು ಈ ಎರಡೂ ಅರ್ಥಗಳಲ್ಲಿ ಈ ಶಬ್ದವನ್ನು ಬಳಸಿದ್ದಾರೆ. ಶ್ರಾವಸ್ತಿಯ ದಕ್ಷಿಣಕ್ಕೆ 72ಕಿಮೀ ದೂರದಲ್ಲಿರುವ ಇಂದಿನ ಗೋಂಡದ ಸುತ್ತಮುತ್ತಲಿನ ಪ್ರದೇಶವೇ ಗೌಡದೇಶವೆಂದು ಕೂರ್ಮಲಿಂಗ ಪುರಾಣಗಳಿಂದ ತಿಳಿದುಬರುತ್ತದೆ. ಹಿತೋಪದೇಶದ ಪ್ರಕಾರ ಕೌಶಾಂಬಿನಿ ಕೂಡ ಗೌಡ ದೇಶದಲ್ಲಿತ್ತು. ವಂಗದೇಶದಿಂದ ಹಿಡಿದು ಭುವನೇಶದ (ಒರಿಸ್ಸದ ಭುವನೇಶ್ವರ) ವರೆಗಿನ ಪ್ರದೇಶ ಗೌಡದೇಶವೆಂದು ಸ್ಕಾಂದಪುರಾಣದಲ್ಲಿ ವರ್ಣಿತವಾಗಿದೆ. ಬಾಣಭಟ್ಟನ ಹರ್ಷ ಚರಿತೆಯಲ್ಲೂ ಇದರ ಉಲ್ಲೇಖವುಂಟು. ಕಲ್ಹಣನ ರಾಜತರಂಗಿಣಿಯಲ್ಲಿ ಪಂಚಗೌಡ ಎಂಬ ಶಬ್ದ ಬರುತ್ತದೆ. ಬಂಗಾಲ, ಸಾರಸ್ವತ, ಕನ್ಯಾಕುಬ್ಜ, ಗೌಡ, ಉತ್ಕಲ, ಮೈಥಿಲ – ಇವು ದೇಶಗಳಾಗಿದ್ದುವೆಂದು ತಿಳಿದುಬರುತ್ತದೆ. ಗೌಡದೇಶ ಗುಪ್ತಸಾಮ್ರಾಜ್ಯದ ಅಂಗವಾಗಿದ್ದರೂ ಸಮುದ್ರಗುಪ್ತನ ಅಲಹಾಬಾದ್ ಶಾಸನ ಆ ಕುರಿತು ಏನನ್ನೂ ಸ್ಪಷ್ಟವಾಗಿ ಹೇಳಿದಂತಿಲ್ಲ. ಬಹುಶಃ ಗುಪ್ತ ಸಾಮ್ರಾಜ್ಯದ ಪತನಾನಂತರ ಗೌಡದೇಶ ಪ್ರಸಿದ್ಧಿಗೆ ಬಂದಿರಬಹುದು. ಗೌಡದೇಶದ ಉಲ್ಲೇಖ ಪ್ರಥಮತಃ ಬಂದಿರುವುದು ಹರಾಹಾ ಶಿಲಾಶಾಸನದಲ್ಲಿ (554) ಎಂದು ತಿಳಿಯಲಾಗಿದೆ. ಈಗಿನ ಗೊಂಡ್ವಾನದ ಹತ್ತಿರದ ಪ್ರದೇಶಗಳನ್ನೂ ಗೌಡ ದೇಶವೆಂದು ಕರೆಯುತ್ತಿದ್ದರೆಂದು ಚೇದಿರಾಜರ ತಾಮ್ರಪತ್ರದಿಂದ ತಿಳಿದುಬರುತ್ತದೆ.

ಗೌಡ ದೇಶವನ್ನು ಆಳಿದ ಅನೇಕ ಸ್ಥಳೀಯ ಅರಸರಲ್ಲಿ ಗೋಪಚಂದ್ರ **(ನೋಡಿ)**, ಸಮಯಾಚಾರ ದೇವ–ಇವರು ಪ್ರಸಿದ್ಧರು. ಇವರು ಗೌಡ ದೇಶದ ಶಕ್ತಿಯನ್ನು ವೃದ್ಧಿಸಿದರು. 7ನೆಯ ಶತಮಾನದಲ್ಲಿ ಗೌಡ ರಾಜನಾದ ಶಶಾಂಕನಿಗೂ ಥಾಣೇಶ್ವರದ ಹರ್ಷವರ್ಧನನಿಗೂ ಯುದ್ಧ ನಡೆದಿತ್ತು. ಶಶಾಂಕನ ಮರಣಾನಂತರ ಸುಮಾರು ಒಂದು ಶತಮಾನ ಕಾಲ ಗೌಡದೇಶ ಪರಕೀಯರ ಆಕ್ರಮಣ, ಆಂತರಿಕ ಅಶಾಂತಿಗಳಿಗೆ ಒಳಗಾಗಿತ್ತು. 750ರಲ್ಲಿ ಪಾಲವಂಶದ ಅರಸು ಅಧಿಕಾರಕ್ಕೆ ಬಂದಾಗಿನಿಂದ ಪರಿಸ್ಥಿತಿ ಸುಧಾರಿಸಿತು. ಪಾಲ ಅರಸರು ಗೌಡೇಶ್ವರ ಎಂಬ ಬಿರುದಿನಿಂದ ರಾಜ್ಯವಾಳಿದರು. ಧರ್ಮಪಾಲ (ಸು.752–810) ಮತ್ತು ದೇವನಪಾಲನ ಕಾಲದಲ್ಲಿ (ಸು. 810–49) ಗೌಡದೇಶ ಇಡೀ ಉತ್ತರ ಭಾರತದಲ್ಲೇ ಒಂದು ಪ್ರಬಲ ಶಕ್ತಿಯಾಗಿತ್ತು. ಕಾಲಕ್ರಮದಲ್ಲಿ ಗೌಡದೇಶ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಗೌಡ ನಗರದ ರೂಪದಲ್ಲಿ ಮುಂದುವರಿಯಿತು. ಮುಂದೆ ದೆಹಲಿ ಸುಲ್ತಾನರು ಈ ಪ್ರದೇಶವನ್ನಾಕ್ರಮಿಸಿಕೊಂಡರು. (ಎಚ್.ಆರ್.ಆರ್.ಬಿ.)

**ಗೌಡ ನಗರ :** ಪಶ್ಚಿಮ ಬಂಗಾಲದ ಮಾಲದಾ ಜಿಲ್ಲೆಯಲ್ಲಿದ್ದ ಒಂದು ಪ್ರಾಚೀನ ನಗರ. ಇದನ್ನು ಲಕ್ಷ್ಮಣಾವತಿ, ಲಖ್ನೌತಿ, ನಿರ್ವಿತಿ, ವಿಜಯಪುರ, ಪುಂಡ್ರವರ್ಧನ, ಬರೇಂದ್ರ ಎಂದೂ ಕರೆಯುತ್ತಿದ್ದರು. ಮಾಲದಾದಿಂದ 16 ಕಿಮೀ ದೂರದಲ್ಲಿದ್ದ ಈ ನಗರ ಗಂಗಾ ಮತ್ತು ಮಹಾನಂದಾ ನದಿಗಳ ಸಂಗಮ ಸ್ಥಾನದಲ್ಲಿತ್ತು.

ಮೇರುತುಂಗನ ಪ್ರಬಂಧಚಿಂತಾಮಣಿಯ ಪ್ರಕಾರ 730 ರಲ್ಲಿ ಗೌಡ ನಗರ ಗೌಡ ದೇಶದ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ದೇವಪಾಲ, ಮಹೇಂದ್ರಪಾಲ, ಆದಿಸುರ, ಬಲ್ಲಾಳ ಮೊದಲಾದ ಅರಸರ ಕಾಲದಲ್ಲೂ (11–12ನೆಯ ಶತಮಾನ) ಇದು ರಾಜಧಾನಿಯಾಗಿ ಮುಂದುವರಿಯಿತು. ದಿಯೊಪಾರ ಶಾಸನದಂತೆ ಬಲ್ಲಾಳಸೇನನ ಮಗನಾದ ಲಕ್ಷ್ಮಣಸೇನ ಗೌಡ ನಗರದಲ್ಲಿ ದೇವಾಲಯಗಳನ್ನೂ ಇತರ ಇಮಾರತುಗಳನ್ನೂ ಕಟ್ಟಿಸಿದನೆಂದೂ ನಗರಕ್ಕೆ ತನ್ನ ಹೆಸರನ್ನೆ (ಲಕ್ಷ್ಮಣಾವತಿ, ಲಖ್ನೌತಿ) ಇಟ್ಟಿದ್ದನೆಂದೂ ಗೊತ್ತಾಗುತ್ತದೆ. ಈತ ಸಂಸ್ಕೃತಕ್ಕೆ ವಿಶೇಷ ಪ್ರೋತ್ಸಾಹ ನೀಡಿದ್ದ. ಗೌಡ ನಗರ ಅನೇಕ ಉದ್ದಾಮ ಪಂಡಿತರಿಂದಲೂ ಕವಿಗಳಿಂದಲೂ ಶೋಭಿಸುತ್ತಿತ್ತು. ಗೀತ ಗೋವಿಂದದ ಕವಿ ಜಯದೇವ, ಕಲಾಪ ವ್ಯಾಕರಣದ ವ್ಯಾಖ್ಯಾನಕಾರನೂ ಲಕ್ಷ್ಮಣಸೇನನ ಮಂತ್ರಿಯೂ ಆಗಿದ್ದ ಉಮಾಪತಿಧರ, ಲಕ್ಷ್ಮಣಸೇನನ ಧರ್ಮಗುರುವೂ ಆರ್ಯ ಸಪ್ತಶತಿಯ ಕರ್ತೃವೂ ಆಗಿದ್ದ ಗೋವರ್ಧನಾಚಾರ್ಯ, ಶರಣ, ಪವನದೂತದ ಕರ್ತೃವೂ ಗೀತಗೋವಿಂದದಲ್ಲಿ ಜಯದೇವನಿಂದ ಕವಿ ಕ್ಷ್ಮಾಪತಿ ಶ್ರುತಿಧರನೆಂಬ ಹೊಗಳಿಕೆಗೆ ಭಾಜನನೂ ಆಗಿದ್ದ ಧೋಯಿ – ಈ ಐವರೂ ಲಕ್ಷ್ಮಣಸೇನನ ಆಸ್ಥಾನದ ಪಂಚರತ್ನರು ಎಂದು ವರ್ಣಿತರಾಗಿದ್ದಾರೆ. ಶಬ್ದಕೋಶಕಾರನೂ ರಾಜನ ಧರ್ಮೋಪದೇಶಕನೂ ಆಗಿದ್ದ ಹಲಾಯುಧ, ಸಾಧೂಕ್ತಿಕರ್ಣಾಮೃತದ ಕರ್ತೃ ಶ್ರೀಧರದಾಸ ಮುಂತಾದ ಇನ್ನೂ ಹಲವು ವಿದ್ವಾಂಸರು ಇಲ್ಲಿ ಇದ್ದರೆಂದು ಹೇಳಲಾಗಿದೆ. ಹೀಗೆ ಗೌಡ ನಗರ ಹಿಂದೂರಾಜರ ಉತ್ಕರ್ಷೆಯ ಕಾಲದಲ್ಲಿ ಒಂದು ಪ್ರಸಿದ್ಧ ಸಂಸ್ಕೃತ ವಿದ್ಯಾಕೇಂದ್ರವಾಗಿದ್ದಿರಬಹುದು. ಈ ನಗರ 12 ಕಿಮೀ ಉದ್ದವೂ 3.2 ಕಿಮೀ ಅಗಲವೂ ಇತ್ತೆಂದೂ ಇದರ ಸುತ್ತಲೂ ಭದ್ರವಾದ ಕೋಟೆಗೋಡೆಗಳಿದ್ದುವೆಂದೂ ತಿಳಿದುಬರುತ್ತದೆ.

ಗೌಡ ನಗರ 1203 ರಲ್ಲಿ ಮಲಿಕ್ ಇಕ್ತ್ಯಾರುದ್ದೀನ್ ಮಹಮದ್ ಬಖ್ತಿಯಾರನ ವಶವಾಯಿತು. 1220 ರಲ್ಲಿ ಘಿಯಾಸುದ್ದೀನ್ ಇವಾಜ್ ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಷೇರ್ ಶಹ 1538 ರಲ್ಲಿ ಈ ನಗರವನ್ನು ಕೊಳ್ಳೆಹೊಡೆದು ಸುಟ್ಟು ಹಾಕಿದ್ದ. ಹುಮಾಯೂನ್ ಗೌಡ ನಗರವನ್ನು ಪುನರ‍್ರಚಿಸಿ ಜೀರ್ಣೋದ್ಧಾರ ಮಾಡಿದ್ದ. 1570 ರಲ್ಲಿ ಅಕ್ಬರನ ದಂಡಯಾತ್ರೆಯ ವೇಳೆಯಲ್ಲಿ, ಆತನ ದಳದವರು ಈ ನಗರವನ್ನು ವಶಪಡಿಸಿಕೊಂಡಿದ್ದರು. 1575 ರಲ್ಲಿ ಅಕ್ಬರನ ಸುಬೇದಾರನೊಬ್ಬ ಈ ನಗರದ ಸೌಂದರ್ಯಕ್ಕೆ ಮಾರುಹೋಗಿ ತನ್ನ ರಾಜಧಾನಿಯನ್ನು ಪಾಂಡುವಾದಿಂದ ಗೌಡ ನಗರಕ್ಕೆ ಸ್ಥಳಾಂತರಿಸಿಕೊಂಡ. ಅನಂತರ ಬಂದ ಪಿಡುಗೊಂದರಿಂದಾಗಿ ನಗರದ ಜನಸಂಖ್ಯೆ ಬಹುವಾಗಿ ಇಳಿದುಹೋಯಿತು. ನಗರದ ಪಕ್ಕದಲ್ಲಿ ಹರಿಯುತ್ತಿದ್ದ ಗಂಗಾನದಿಯ ಪಾತ್ರವೂ ಬದಲಾಯಿತು. ಈ ಎಲ್ಲ ಕಾರಣಗಳಿಂದಾಗಿ ಗೌಡ ನಗರ ಪಾಳುಬಿದ್ದಿತು. ಕಾಡು ಬೆಳೆದುಕೊಂಡಿತು. ಪುರಾತತ್ತ್ವಜ್ಞರು ಇಲ್ಲಿಯ ಅವಶೇಷಗಳನ್ನು ಅಭ್ಯಸಿಸಿ ಪ್ರಾಚೀನ ನಗರದ ಇತಿಹಾಸ ವೈಭವಗಳನ್ನು ಅರಿಯಲು ಯತ್ನಿಸಿದ್ದಾರೆ. ಇಲ್ಲಿ ಈಗ ಉತ್ಖನನವನ್ನೂ ನಡೆಸಿದ್ದು ಅರಮನೆಯ ಅವಶೇಷಗಳು ಬೆಳಕಿಗೆ ಬಂದಿವೆ.

ಕಾವ್ಯದಲ್ಲಿ ಗೌಡಶೈಲಿಯೊಂದಿದ್ದಂತೆ, ವಾಸ್ತುಶಿಲ್ಪ ದೃಷ್ಟಿಯಿಂದಲೂ ಈ ನಗರದ್ದು ವಿಶಿಷ್ಟ ಶೈಲಿ. ದಪ್ಪನೆಯ ಕುಳ್ಳು ಕಲ್ಗಂಬಗಳು, ಚೂಪನೆಯ ಕಮಾನು, ಇಟ್ಟಿಗೆಗಳಿಂದ ರಚಿಸಿದ ಗೋಳಾಕಾರದ ಮುಚ್ಚಿಗೆ-ಇವು ಗೌಡ ನಗರದ ವಾಸ್ತುವಿನಲ್ಲಿ ಕಂಡುಬರುವ ಕೆಲವು ವೈಲಕ್ಷಣ್ಯಗಳು. ಅಲ್ಲಿಯ ಖಿಜಿಕಿ ಮಸೀದಿ, ದರಸ್ ಮಸೀದಿ ಮತ್ತು ದಖಿಲ್ ದರವಾಜಾ (ನಗರದ್ವಾರ) ಇವನ್ನು ಹುಸೇನ್ ಷಹ ಎಂಬ ಸುಲ್ತಾನ ಕಟ್ಟಿಸಿದ. ಇಲ್ಲಿಯ ನತುನ್ ಮಸೀದಿಯಂಥ ಒಂದೆರಡು ಕಟ್ಟಡಗಳನ್ನು ಬಣ್ಣ ಬಣ್ಣದ ಹೊಳಪಿಟ್ಟಿಗೆಗಳಿಂದ ಕಟ್ಟಿರುವುದು ಒಂದು ವಿಶೇಷ.

ಒಟ್ಟಿನಲ್ಲಿ, ಐತಿಹಾಸಿಕವಾಗಿ ಅನೇಕ ಏರಿಳಿತಗಳನ್ನು ಕಂಡುಂಡು ಅನೇಕ ಶತಮಾನಗಳವರೆಗೆ ಪ್ರಾಚೀನ ಬಂಗಾಲದ ರಾಜಧಾನಿಯಾಗಿ ಮೆರೆದ ಗೌಡ ನಗರ ಈಗ ಒಂದು ಹಳ್ಳಿಯಾಗಿದೆ. ಚೈತನ್ಯನ ಕಾಲದಿಂದಲೂ ನಡೆದುಕೊಂಡು ಬಂದ ರಾಮಕೇಳಿ ಎಂಬ ಉತ್ಸವ ಇಲ್ಲಿ ಇಂದಿಗೂ ನಡೆಯುತ್ತದೆ. (ಎಚ್.ಆರ್.ಆರ್.ಬಿ.)

**ಗೌಡ, ಕೆ.ಸಿ.ಎನ್. :** 1928-2012. ಕನ್ನಡ ಚಲನಚಿತ್ರ ನಿರ್ಮಾಣ, ಹಂಚಿಕೆ ಮತ್ತು ಪ್ರದರ್ಶನ ವಲಯದಲ್ಲಿ ದೊಡ್ಡ ಹೆಸರು ಮಾಡಿರುವ ಕೆ.ಸಿ.ಎನ್. ಸಂಸ್ಥೆಯ ನಿರ್ಮಾತೃ. ದೊಡ್ಡಬಳ್ಳಾಪುರದ ಸಮೀಪದ ಕೊನೇನಹಳ್ಳಿ ಹಳ್ಳಿಯ ರೈತ ಕುಟುಂಬದಲ್ಲಿ ಕೆ.ಸಿ. ನಂಜುಂಡೇಗೌಡರು 1926ರ ಜನವರಿ 6 ರಂದು ಜನಿಸಿದರು. ತಂದೆ ಕೆ.ಚವಡಯ್ಯ. ತಾಯಿ ಮುದ್ದಮ್ಮ. ಹಿರಿಯರ ಕಾಲದಿಂದಲೂ ಇವರದು ರೇಷ್ಮೆ ಉದ್ಯಮ. ಇವರ ರೇಷ್ಮೆ ಜವಳಿಗೆ ಭಾರಿ ಬೇಡಿಕೆ. ವ್ಯಾಪಾರವೂ ಅಷ್ಟೇ ಭಾರಿ. ಈ ಉದ್ಯಮದ ಜೊತೆಗೆ ಬಣ್ಣದ ಲೋಕದ ವ್ಯಾಪಾರಕ್ಕೂ ಇಳಿದರು. ದೊಡ್ಡಬಳ್ಳಾಪುರದಲ್ಲಿ ಸೌಂದರ್ಯಮಹಲ್, ಬೆಂಗಳೂರಿನಲ್ಲಿ ನವರಂಗ್, ಊರ್ವಶಿ ಚಿತ್ರ ಮಂದಿರಗಳನ್ನು ನಿರ್ಮಿಸಿ ಪ್ರದರ್ಶಕರಾದರು. ಕೆ.ಸಿ.ಎನ್.ಸಂಸ್ಥೆ ಸ್ಥಾಪಿಸಿ, ಚಲನಚಿತ್ರ ವಿತರಕರಾಗಿ ಕನ್ನಡ ಚಿತ್ರೋದ್ಯಮದ ಬೆಳವಣಿಗೆಗೆ ನೆರವಾದರು. ರಾಜಕಮಲ್ ಆರ್ಟ್ಸ್ ಸಂಸ್ಥೆ ಆರಂಭಿಸಿ ದೊಡ್ಡ ಮಟ್ಟದಲ್ಲಿ ಚಿತ್ರನಿರ್ಮಾಪಕರೂ ಆದರು. ಜೊತೆಗೆ ತಮ್ಮ ಇಬ್ಬರು ಪುತ್ರರನ್ನು-ಕೆ.ಸಿ.ಎನ್. ಚಂದ್ರಶೇಖರ್ ಮತ್ತು ಕೆ.ಸಿ.ಎನ್.ಮೋಹನ್-ಇವರನ್ನು ಚಿತ್ರೋದ್ಯಮದಲ್ಲಿ ತೊಡಗಿಸಿದರು. ಕೆ.ಸಿ.ಎನ್.ಚಂದ್ರಶೇಖರ್ ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಳಿ ಹಾಗೂ ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿಗಳ ಅಧ್ಯಕ್ಷರಾಗಿ ಉದ್ಯಮದ ಬೆಳವಣಿಗೆಗೆ ನೆರವಾಗಿದ್ದಾರೆ. ಇವರೀರ್ವರು ಶ್ರೇಷ್ಠ ನಿರ್ಮಾಪಕರು ಹಾಗೂ ವಿತರಕರೆಂದೂ ಹೆಸರು ಪಡೆದಿದ್ದಾರೆ.

ಕೆ.ಸಿ.ಎನ್.ಗೌಡರು, ಸಾರ್ವಕಾಲಿಕ ದಾಖಲೆ ನಿರ್ಮಿಸಿದ ಬಂಗಾರದ ಮನುಷ್ಯ ಚಿತ್ರದ ನಿರ್ಮಾಪಕರಿಗೆ ನೆರವು ನೀಡಿ, ಆ ಚಿತ್ರದ ವಿತರಣೆಯನ್ನೂ ಮಾಡಿದರು. ಹುಲಿಯ ಹಾಲಿನ ಮೇವು, ಬಬ್ರುವಾಹನದಂತಹ ಅದ್ದೂರಿಯ ಜನಪ್ರಿಯ ಚಿತ್ರಗಳನ್ನು ನಿರ್ಮಿಸಿದರಲ್ಲದೆ, ಉತ್ತಮ ಅಭಿರುಚಿಯ ಯಶಸ್ವಿ ಚಿತ್ರಗಳಾದ ಶರಪಂಜರ, ಭಲೇಜೋಡಿ ಮುಂತಾದ ನೂರಕ್ಕೂ ಹೆಚ್ಚು ಚಿತ್ರಗಳ ಹಂಚಿಕೆದಾರರು. ಕಸ್ತೂರಿ ನಿವಾಸ, ತಾಯಿ ದೇವರು, ಬಭ್ರುವಾಹನ, ದಾರಿ ತಪ್ಪಿದಮಗ, ದೂರದ ಬೆಟ್ಟ, ಹುಲಿಯ ಹಾಲಿನಮೇವು, ಸನಾದಿ ಅಪ್ಪಣ್ಣ, ಭಕ್ತ ಸಿರಿಯಾಳ, ರಂಗನಾಯಕಿ ಮೊದಲಾದ ಚಿತ್ರಗಳನ್ನು ತೆರೆಗಿತ್ತರು. ಹುಣಸೂರು ಕೃಷ್ಣಮೂರ್ತಿ, ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ವಿಜಯಾರೆಡ್ಡಿ ಮೊದಲಾದ ಪ್ರತಿಭಾವಂತ ನಿರ್ದೇಶಕರಿಗೆ ಪ್ರೋತ್ಸಾಹಿಸಿ, ಉತ್ತಮ ಚಿತ್ರಗಳ ನಿರ್ಮಾಣಕ್ಕೆ ನೀರೆರೆದರು.

ಚಲನಚಿತ್ರ ವಹಿವಾಟು ಕೇಂದ್ರವಾದ ಗಾಂಧಿನಗರದಲ್ಲಿ ಕೆ.ಸಿ.ಎನ್.ಸಂಸ್ಥೆ ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಹಲವು ದಶಕಗಳ ಕಾಲ ಮೆರೆಯಿತು. ನವರಂಗ್ ಚಿತ್ರಮಂದಿರ ಕನ್ನಡ ಚಿತ್ರಗಳಿಗೇ ಮೀಸಲಾಗಿರುವುದು ಗಮನಾರ್ಹ.

ಕರ್ನಾಟಕ ರಾಜ್ಯಸರ್ಕಾರ ಚಿತ್ರೋದ್ಯಮಕ್ಕೆ ಕೆ.ಸಿ.ಎನ್.ಗೌಡರ ವಿಶಿಷ್ಟ ಸೇವೆಗಾಗಿ 2002-2003ನೆಯ ಸಾಲಿನ ರಾಜಕುಮಾರ್ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಇವರು 2012ರ ಅಕ್ಟೋಬರ್ 4 ರಂದು ನಿಧನರಾದರು. (ಎಸ್.ಕೆ.)

**ಗೌಡಪಾದ :** ಶಂಕರಾಚಾರ್ಯರ ಗುರುಗಳಾದ ಗೋವಿಂದಪಾದರ ಗುರು. ಕಾಲ ಬಹುಶಃ ಏಳನೆಯ ಶತಮಾನದ ಅಂತ್ಯ ಇಲ್ಲವೆ ಎಂಟನೆಯ ಶತಮಾನದ ಆದಿ. ಶಂಕರಾದ್ವೈತಕ್ಕೆ ಆಧಾರವಾದ ಮುಖ್ಯ ಭಾವನೆಗಳೆಲ್ಲ ಇವರು ರಚಿಸಿದ ಮಾಂಡೂಕ್ಯಕಾರಿಕೆಯಲ್ಲಿ ಅಡಗಿವೆ. ಈ ಕಾರಿಕೆ ಮಾಂಡೂಕ್ಯೋಪನಿಷತ್ತಿನ ಆಧಾರದ ಮೇಲೆ ರಚಿತವಾದ್ದು. ಇವರು ಉತ್ತರಗೀತೆಯ ಮೇಲೂ ಒಂದು ವ್ಯಾಖ್ಯಾನವನ್ನು ಬರೆದಿದ್ದರೆಂದು ತಿಳಿದುಬರುತ್ತದೆ. ಈಗ ಉಪಲಬ್ಧವಿರುವುದು ಇವರ ಕಾರಿಕೆ ಮಾತ್ರ.

ಗೌಡಪಾದರ ಕಾಲದಲ್ಲಿ ಮಾಧ್ಯಮಿಕ ತತ್ತ್ವ ತುಂಬ ಪ್ರಬಲವಾಗಿತ್ತು. ಇವರು ಅದರ ಕೆಲವು ಭಾವನೆಗಳನ್ನು ಉಪನಿಷತ್ತಿನ ತತ್ತ್ವಕ್ಕೆ ಅಳವಡಿಸಿಕೊಂಡು ಹೊಸ ತತ್ತ್ವವನ್ನು ಸ್ಥಾಪಿಸಿದರು. ಅದರಲ್ಲಿ ಇವರು ಬೌದ್ಧರ ವಿಜ್ಞಾನವಾದವನ್ನೂ ಶೂನ್ಯವಾದವನ್ನೂ ಖಂಡಿಸಿ ಬ್ರಹ್ಮವೊಂದೇ ಸತ್ಯವೆಂದು ಸಾರಿರುತ್ತಾರೆ. ಇವರು ಆ ಸತ್ಯವನ್ನು ಶ್ರುತಿಯ ಆಧಾರದ ಮೇಲಲ್ಲದೆ ತರ್ಕಸಮ್ಮತವಾಗಿ ಬೆಳೆಸಿರುತ್ತಾರೆ. ಇವರ ತತ್ತ್ವ ಮಾಧ್ಯಮಿಕ ತತ್ತ್ವದಲ್ಲಿ ಸಾರಭೂತವಾದುದನ್ನು ಉಪನಿಷತ್ತಿನ ತತ್ತ್ವಕ್ಕೆ ಅಧೀನ ಮಾಡಿಕೊಂಡು ಬೌದ್ಧರ ಪ್ರಚಾರವನ್ನು ದುರ್ಬಲಗೊಳಿಸಿತು.

ಇವರ ಕಾರಿಕೆಯಲ್ಲಿ ನಾಲ್ಕು ಅಧ್ಯಾಯಗಳಿವೆ. ಮೊದಲನೆಯದಾದ ಆಗಮಾಧ್ಯಾಯದಲ್ಲಿ ಮಾಂಡೂಕ್ಯೋಪನಿಷತ್ತಿನ ಪಾಠವನ್ನು ಅದ್ವೈತತತ್ತ್ವಕ್ಕೆ ಆಧಾರ ಮಾಡಿಕೊಂಡಿರುತ್ತಾರೆ. ಎರಡನೆಯದಾದ ವೈತಥ್ಯ ಅಧ್ಯಾಯದಲ್ಲಿ ಆ ಶ್ರುತಿವಾಕ್ಯಗಳು ಹೇಗೆ ತರ್ಕಕ್ಕೆ ಸಂಗತವಾಗಿವೆಯೆಂದು ತೋರಿಸಿರುತ್ತಾರೆ. ಅದರಲ್ಲಿ ಇವರು ಭೇದಗಳಿಂದ ಕೂಡಿದ ವಿಶ್ವ ಪರಮಸತ್ಯವಾಗಲಾರದೆಂದು ವಾದಿಸಿರುತ್ತಾರೆ. ಮೂರನೆಯದು ಅದ್ವೈತಾಧ್ಯಾಯ. ಅದರಲ್ಲಿ ಅದ್ವೈತವೇ ಪರಮಸತ್ಯವೆಂದು ಸ್ಥಾಪಿಸಿರುತ್ತಾರೆ. ಕೊನೆಯದಾದ ಅಲಾತಶಾಂತಿ ಅಧ್ಯಾಯದಲ್ಲಿ ತಿರುಗಿಸುತ್ತಿರುವ ಕೊಳ್ಳಿಯಿಂದ ಹುಟ್ಟಿದ ಚಕ್ರಾಕಾರವಾದ ಒಂದು ಬೆಳಕು ತೋರಿಕೆಯಾದಂತೆ ವಿಶ್ವವೂ ಒಂದು ತೋರಿಕೆ ಎಂದು ಪರಿಸಮಾಪ್ತಿ ಮಾಡಿರುತ್ತಾರೆ.

ಮೊದಲನೆಯ ಅಧ್ಯಾಯದಲ್ಲಿ, ಮಾಂಡೂಕ್ಯೋಪನಿಷತ್ತಿನಲ್ಲಿ ಹೇಳಿರುವಂತೆ ಸ್ವಪ್ನ, ಜಾಗೃತ, ಸುಷುಪ್ತಿ, ತುರೀಯ ಎಂಬ ಜೀವನದ ನಾಲ್ಕು ಅವಸ್ಥೆಗಳ ಆಧಾರದ ಮೇಲೆ ಅವುಗಳಿಗೆ ಸಾಪೇಕ್ಷವಾದ ಶಕ್ತಿ ಸ್ವರೂಪವನ್ನು ತಿಳಿಸಿರುತ್ತದೆ. ಈ ಒಂದೊಂದೂ ಒಂದೊಂದು ವಿಶಿಷ್ಟವಾದ ವಿಶ್ವವನ್ನು ಪ್ರಕಾಶಿಸುತ್ತಿದೆ. ಅವುಗಳಲ್ಲೂ ಒಂದು ಕ್ರಮವಿದೆ. ಅವೂ ಒಂದು ರೀತಿಯಲ್ಲಿ ಫಲಕಾರಿಗಳು. ಸತ್ತಿನ ಅಂಶವಿರುವ ಯಾವುದೂ ಫಲಕಾರಿಯಾಗದಿರದು. ಸ್ವಪ್ನದಲ್ಲಿನ ನೀರೂ ದಾಹವನ್ನು ಅಡಗಿಸುತ್ತದೆ, ಅಲ್ಲಿನ ಹೆಂಗಸೂ ಕಾಮವನ್ನು ತೃಪ್ತಿಗೊಳಿಸುತ್ತಾಳೆ. ಆ ನೀರು, ಆ ಹೆಂಗಸು ಜಾಗ್ರತ್ ಪ್ರಪಂಚದ ವಸ್ತುವಾಗದಿದ್ದ ಮಾತ್ರಕ್ಕೆ, ಆ ಪ್ರಪಂಚದ ವಸ್ತುಗಳು ರೂಢಿಗೆ ಸಂಗತವಾಗಿಲ್ಲದಿರುವ ಮಾತ್ರಕ್ಕೆ ಅವು ಅಸತ್ತಲ್ಲ. ಸತ್ತಿನ ಆಶ್ರಯವಿಲ್ಲದ ಯಾವ ಅನುಭಾವವೂ ಇಲ್ಲ. ಅದ್ವಿತೀಯವಾದ ಸತ್ತೇ ಎಲ್ಲ ಅನುಭವಗಳಲ್ಲೂ ಆಯಾ ಅನುಭವದ ಯೋಗ್ಯತಾನುಸಾರವಾಗಿ ಅಭಿವ್ಯಕ್ತವಾಗುತ್ತದೆ ಎಂಬುದನ್ನೂ ಸತ್ತಿನ ಅದ್ವಿತೀಯತೆಯನ್ನೂ ಭಾವರೂಪವನ್ನೂ ತೋರಿಸಿದ್ದೇ ಗೌಡಪಾದರ ವೈಶಿಷ್ಟ್ಯ. ಕನಸು ಮತ್ತು ಎಚ್ಚರದ ಅನುಭವಗಳಿಗೆ ಆತ್ಮವೇ ಆಧಾರವಾದರೂ ಅವೆರಡೂ ಸುಷುಪ್ತಿಯ ಅನುಭವಕ್ಕಿಂತ ಭಿನ್ನ. ಸುಷುಪ್ತಿಯಲ್ಲಿ ಚೇತನ ಆತ್ಮದಲ್ಲಿ ಒಂದೇ ಆಗಿ ಅಡಗಿರುತ್ತದೆ. ಆದರೂ ಅವಿದ್ಯೆ ಅದಕ್ಕೆ ಅಂಟಿಕೊಂಡೇ ಕಾದಿರುತ್ತದೆ. ತುರೀಯದಲ್ಲಿ ಅವಿದ್ಯೆಯೆಂಬ ಉಪಾಧಿ ಸುಟ್ಟುಹೋಗಿ ಭೇದವಿಲ್ಲದ ಅಖಂಡವಾದ ಆತ್ಮರಲ್ಲಿ ಜೀವನ ಚೇತನ ಐಕ್ಯವಾಗುತ್ತದೆ. ಈ ತುರೀಯಾವಸ್ಥೆಯ ಸತ್ತಿನ ನಿಟ್ಟಿನಿಂದ ಸುಷುಪ್ತಿ ಜಾಗ್ರತ್ ಮತ್ತು ಸ್ವಪ್ನಾವಸ್ಥೆಯ ವಿಷಯಗಳು, ಭಿನ್ನಪ್ರಮಾಣಗಳಲ್ಲಿ ಭ್ರಮೆಗೆ ಒಳಪಟ್ಟಿವೆ. ಎಚ್ಚರ ಜೀವನವೂ ಹೆಚ್ಚು ದೀರ್ಘಕಾಲದ ಒಂದು ಕನಸೇ. ಭೇದವನ್ನು ಕಾಣುವಷ್ಟು ಕಾಲವೂ ನಮ್ಮ ಅನುಭವ ಕನಸೇ, ಆ ಭೇದಗಳು ಅನಿತ್ಯ, ಸರ್ವಕಾಲಿಕವಲ್ಲ. ಅವು ಅಖಂಡ ಚೇತನದ ಪರದೆಯ ಮೇಲೆ ಬಂದು ಹೋಗುವ ಬಿಂಬಗಳು. ನಿದ್ರೆಯಿಂದ ಎಚ್ಚೆತ್ತಾಗ ಕನಸಿನ ವಸ್ತುಗಳು ಇಲ್ಲವಾಗುತ್ತವೆ. ಐಕ್ಯಜ್ಞಾನ ಪಡೆದಾಗ ಎಚ್ಚರದ ಪ್ರಪಂಚದ ವಸ್ತುಗಳು

ತೇಲಿಹೋಗುತ್ತವೆ. ಸುಷುಪ್ತಿಯ ಐಕ್ಯಾನುಭವವೂ ತಾತ್ಕಾಲಿಕ ಮತ್ತು ಔಪಾಧಿಕ. ಎಲ್ಲ ಕಾಲದಲ್ಲೂ ಎಲ್ಲ ಅನುಭವಗಳಿಗೂ ಆಶ್ರಯವಾದ ಅಖಂಡಚೇತನವೇ ಸತ್ಯ. ಅದೇ ಸತ್. ಉಳಿದವು ಸತ್ ಮತ್ತು ಅಸತ್ತುಗಳ ಮಿಶ್ರಣ. ಅವು ಬಂಜೆಯ ಮಗನಂತೆ ಇಲ್ಲದವಲ್ಲ. ಇಲ್ಲದ್ದರಿಂದ, ಅಭಾವದಿಂದ, ಶೂನ್ಯದಿಂದ ಯಾವುದೂ ಹುಟ್ಟಲಾರದು. ಸೃಷ್ಟಿ ಎಂಬ ಕಾರ್ಯ, ಇಲ್ಲದ್ದರಿಂದ ಹುಟ್ಟಲಾರದು. ಅಸತ್ತಾದುದು ಶೂನ್ಯವಾದುದು ಸತ್ತಿನಿಂದ ಬರಲಾರದು. ನಾವು ವ್ಯವಹಾರದಲ್ಲಿ ಉಪಯೋಗಿಸುವ ಕಾರ್ಯಕಾರಣಭಾವ, ಕಾಲದೇಶಭಾವಗಳು ಪರಮ ಸತ್ತಿಗೆ ಅನ್ವಯಿಸಲಾರವು. ವಿಶ್ವ ಪುರುಷರೂಪನಾದ ಒಬ್ಬ ದೇವನ ಸೃಷ್ಟಿ ಎಂಬ ಭಾವನೆ ಅನೇಕ ಆಭಾಸಗಳಿಗೆ ಎಡೆಕೊಡುತ್ತದೆ. ಈ ವಿಶ್ವ ಸೃಷ್ಟಿಯಾಯಿತು ಎಂದು ಹೇಳಿದರೆ ಅದು ಹಿಂದೆ ಇರಲಿಲ್ಲ, ಈಗ ಇದೆ ಎಂದು ಹೇಳಿದಂತಾಗುತ್ತದೆ. ಮೊದಲಲ್ಲಿ ಇಲ್ಲದ್ದು ಕೊನೆಯಲ್ಲೂ ಇಲ್ಲದ್ದೇ ಆಗಬೇಕು. ಮೊದಲಲ್ಲೂ ಇಲ್ಲದ್ದು ಕೊನೆಯಲ್ಲೂ ಉಳಿಯದ್ದು ಮಧ್ಯದಲ್ಲಿ ಇರಲು ಹೇಗೆ ತಾನೆ ಸಾಧ್ಯ. ಆದ್ದರಿಂದ ನಿಜವಾದ ಸತ್ತಿಗೆ ಮೊದಲೂ ಇಲ್ಲ ಕೊನೆಯೂ ಇಲ್ಲ. ಆದಿಮಧ್ಯಾಂತ ರಹಿತವಾದ ಸತ್ತನ್ನು ತಿಳಿಯುವುದೇ ಪರಮಾರ್ಥಸತ್ಯ.

ಹೀಗೆಂದ ಮಾತ್ರಕ್ಕೆ ವಿಶ್ವ ಬರಿಯ ಕನಸೆಂದು ಭಾವಿಸಬಾರದು. ವ್ಯಾವಹಾರಿಕ ಪ್ರಪಂಚದ ವಸ್ತುಗಳು, ಬೌದ್ಧ ವಿಜ್ಞಾನವಾದಿಗಳು ವಾದಿಸಿರುವಂತೆ, ಕೇವಲ ಮಾನಸಿಕ ಭಾವನೆಗಳಲ್ಲ. ಅವು ಅಖಂಡ ಚೇತನದ ಭಾಸಮಾನರೂಪಗಳು; ಅದರ ಅದ್ಭುತ ಮಾಯೆಯಿಂದ ಭಾಸಮಾನವಾದ ರೂಪಗಳು. ಮಾಯೆ, ಜೀವರುಗಳ ದೃಷ್ಟಿಯಿಂದ ಅಖಂಡ ಚೇತನವನ್ನು ಮರೆಮಾಡಿ ಭೇದವನ್ನು ಅಭಿವ್ಯಕ್ತಗೊಳಿಸುತ್ತದೆ. ಮಾಯಾವಿಷ್ಟವಾದ ಅಖಂಡಚೇತನವೇ ಈಶ್ವರ. ಈಶ್ವರ ಬೇರೆ ಬೇರೆ ಹೆಸರುಗಳಿಂದ ಸ್ವಪ್ನ, ಜಾಗ್ರತ್, ಸುಷುಪ್ತಿಗಳ ಅಧ್ಯಕ್ಷನಾಗಿರುತ್ತಾನೆ. ಈಶ್ವರನ ಮಾಯೆ ಅವನನ್ನು ಬಂಧಿಸುವುದಿಲ್ಲ, ಅವನ ಸ್ವರೂಪವನ್ನು ಪ್ರಕಾಶಿಸುತ್ತದೆ. ಆದರೆ ಅದರ ಅಂಶವಾದ ಅವಿದ್ಯೆ ಜೀವರುಗಳ ದೃಷ್ಟಿಯನ್ನು ಮರೆ ಮಾಡುತ್ತದೆ. ತಾನು ಪರರು ಎಂಬ ಭೇದವನ್ನೂ ತಾನು ಹೊರವಸ್ತುಗಳು ಎಂಬ ಭೇದವನ್ನೂ ಹುಟ್ಟಿಸಿ, ತಾನು ಅಖಂಡ ಚೇತನನೆಂಬುದನ್ನು ಮರೆಯಿಸುತ್ತದೆ. ಆದರೂ ಈ ವಿಶ್ವದ ವಸ್ತುಗಳು ಕನಸಿನ ಭಾವನೆಗಳಂತೆ ಕ್ಷಣಿಕವಲ್ಲ. ನಾನು ಎಂಬುದು ಕೇವಲ ಕ್ಷಣಿಕ ಭಾವನೆಯಲ್ಲ. ಅದರಲ್ಲಿ ಒಗ್ಗಟ್ಟಿದೆ, ಸ್ವಲ್ಪಮಟ್ಟಿಗೆ ಸ್ಥಿರತೆ ಇದೆ ಎಂಬುದು ಅವುಗಳಿಗೆ ಸದಾ ಆಧಾರವಾದ ಚೇತನವನ್ನು ಜ್ಞಾಪಕಕ್ಕೆ ತರುತ್ತವೆ. ಹೀಗೆ ಆಗಾಗ ನಮ್ಮ ಚಿತ್ತಭೂಮಿಯಲ್ಲಿ ಕಾಣಿಸಿಕೊಂಡ ಭಾವನೆಯನ್ನು ಧ್ಯಾನದಿಂದ ಸ್ಥಿರವಾಗಿ ನಿಲ್ಲಿಸಿಕೊಂಡು ತಾನು ಅಖಂಡಚೇತನವೇ ಎಂಬ ಸ್ಮರಣೆಯನ್ನು ಬಲಪಡಿಸಿಕೊಂಡು ಎಲ್ಲ ಸಂದೇಹಗಳನ್ನೂ ನಿವಾರಣ ಮಾಡಿಕೊಳ್ಳುವುದೇ ಮೋಕ್ಷ. ಮೋಕ್ಷಸಿದ್ಧಿಗೆ ಜ್ಞಾನಯೋಗವೇ ಅಂತಿಮಸಾಧನ. ನಿಷ್ಕಾಮಕರ್ಮ, ಭಗವದುಪಾಸನೆ ಇದರ ಮೊದಲ ಹಂತ, ಜ್ಞಾನೋಪಾಸನೆ ಇದರ ಕೊನೆಯ ಹಂತ. ಸಮುದ್ರದ ನೀರನ್ನು ದರ್ಭೆಯ ಮೊನೆಯಿಂದ ಎತ್ತಿ ಅದನ್ನು ಬರಿದಾಗಿ ಮಾಡುವುದು ಎಷ್ಟು ಕಷ್ಟವೋ ಈ ಅದ್ವೈತವನ್ನು ಸಿದ್ಧಿಸಿಕೊಳ್ಳುವುದೂ ಅಷ್ಟೇ ಕಷ್ಟ. ಪಟ್ಟುಹಿಡಿದು ತಾಳ್ಮೆಯಿಂದ ಜ್ಞಾನಯೋಗದಲ್ಲಿ ನಿರತನಾದವನಿಗೆ ಅದು ಖಂಡಿತ ಸಿದ್ಧಿಸುತ್ತದೆ.

ಗೌಡಪಾದರು ಆಗ ಬಳಕೆಯಲ್ಲಿದ್ದ ಮಾಧ್ಯಮಿಕರ ಪಾರಿಭಾಷಿಕ ಶಬ್ದಗಳನ್ನು ವಿಶೇಷವಾಗಿ ಬಳಸಿರುತ್ತಾರೆ– ವಸ್ತುವಿಗೆ ಬದಲು ಧರ್ಮ, ವ್ಯಾವಹಾರಿಕ ಸತ್ಯಕ್ಕೆ ಬದಲು ಸಂವೃತಿ, ಹೊರವಸ್ತುಗಳಿಗೆ ಬದಲು ಸಂಘಾತ–ಹೀಗೆ. ನಾಗಾರ್ಜುನ ಬಳಸಿದ ಪದಗಳನ್ನೇ ಇವರು ಪುನಶ್ಚರಣೆ ಮಾಡಿರುತ್ತಾರೆ. ಬಂಧವೂ ಇಲ್ಲ, ಬಿಡುಗಡೆಯೂ ಇಲ್ಲ. ಸೃಷ್ಟಿಯೂ ಇಲ್ಲ, ವಿನಾಶವೂ ಇಲ್ಲ. ಇದೇ ಪರಮಸತ್ಯ ಎಂದು ನಾಗಾರ್ಜುನನ ಭಾಷೆಯಲ್ಲೇ ಪರಮಾರ್ಥವನ್ನು ವರ್ಣಿಸಿರುತ್ತಾರೆ. ಅಲಾತಚಕ್ರದ ಉಪಮಾನವೂ ಬೌದ್ಧಗ್ರಂಥಗಳಿಂದಲೇ ತೆಗೆದುಕೊಂಡದ್ದು. ಅನೇಕ ವೇಳೆ ಇವರು ಪರಮಾರ್ಥವನ್ನು ನೇತ್ಯರ್ಥ ಬೋಧಕ ಶಬ್ದಗಳಿಂದಲೇ ವರ್ಣಿಸಿರುವುದರಿಂದ ಅವರ ಪರಮಾರ್ಥ ಶೂನ್ಯವೆಂದು ಭಾವಿಸಲು ಅವಕಾಶ ಕೊಡುತ್ತದೆ. ತಮ್ಮ ವಾದ ಶೂನ್ಯವಾದವೆಂಬ ಶಂಕೆಗೆ ಎಡೆಕೊಡುತ್ತದೆ ಎಂಬುದನ್ನು ಗೌಡಪಾದರು ಗಮನಿಸಿರುತ್ತಾರೆ. ಆದ್ದರಿಂದ ಇವರು 'ಅದು ಶೂನ್ಯವಾದವಲ್ಲ; ನಾನು ಹೇಳಿದ ಅಸ್ಯರ್ಥಕ ಭೂಮ ಬ್ರಹ್ಮನನ್ನು ಬುದ್ಧ ಉಪದೇಶಿಸಲಿಲ್ಲ' ಎಂದು ಹೇಳಿ ತಮ್ಮ ಕಾರಿಕೆಯನ್ನು ಪರಿಸಮಾಪ್ತಿಗೊಳಿಸಿರುತ್ತಾರೆ.

ಗೌಡಪಾದರು ಮಾಯಾ ಎಂಬ ಪದವನ್ನು ಅನೇಕ ಅರ್ಥಗಳಲ್ಲಿ ಉಪಯೋಗಿಸಿ ಸಂದಿಗ್ಧತೆಗೆ ಅವಕಾಶ ಕೊಟ್ಟಿರುತ್ತಾರೆ. ವಿಶ್ವ ಮಾಯೆ ಎಂದರೆ ಕನಸಿಗೆ ಸದೃಶವಾದದ್ದು ಎಂಬ ಅರ್ಥವೇ ಹೆಚ್ಚಾಗಿ ಅದು ಮಾಧ್ಯಮಿಕರ ಸಂವೃತಿಯನ್ನು ಹೋಲುತ್ತದೆ. ಶಂಕರಾಚಾರ್ಯರು ಅದನ್ನು ಸದಸದ್‍ವಿಲಕ್ಷಣವೆಂಬ ಅರ್ಥದಲ್ಲಿ ಉಪಯೋಗಿಸುವುದೇ ಸಾಧುವೆಂದು ಹೇಳಿರುತ್ತಾರಲ್ಲದೆ ಮಾಧ್ಯಮಿಕರ ಪರಿಭಾಷೆಯನ್ನು ಬಿಟ್ಟು ವಿಶೇಷವಾಗಿ ಉಪನಿಷತ್ತಿನ ಪರಿಭಾಷೆಯಲ್ಲೇ ದ್ವೈತವನ್ನು ವಿವರಿಸಿ ಅದು ಬೌದ್ಧರ ಮಾಧ್ಯಮಿಕವಾದವಲ್ಲವೆಂಬುದನ್ನು ಸ್ಪಷ್ಟಪಡಿಸಿರುತ್ತಾರೆ.

ಗೌಡಪಾದರ ಕಾರಿಕೆಯಿಂದ ಶಂಕರಾಚಾರ್ಯರು ಸ್ಫೂರ್ತಿಪಡೆದು ಬಹು ಅಡಕ ವಾಗಿದ್ದ ಅದರಲ್ಲಿನ ಅದ್ವೈತತತ್ತ್ವವನ್ನು ತುಂಬ ವಿಸ್ತರಿಸಿದರು. (ಜಿ.ಎಚ್.)

**ಗೌತಮ :** ಸಪ್ತರ್ಷಿಗಳಲ್ಲಿ ಒಬ್ಬ. ದೀರ್ಘತಮ ಮತ್ತು ಪ್ರದ್ವೇಷಿಣಿಯರ ಮಗ. ಈತನ ತಂದೆ ಆಂಗಿರಸ ಕುಲದವನಿದ್ದು ಬೃಹಸ್ಪತಿಯ ಶಾಪದ ಮೂಲಕ ಹುಟ್ಟುಕುರುಡನಾಗಿದ್ದ. ಎಷ್ಟೋ ಕಡೆಗಳಲ್ಲಿ ದೀರ್ಘತಮ ತಾನೇ ಗೌತಮ ಎಂದು ಹೇಳಿಕೊಂಡಿದ್ದಾನೆ. ಗೌತಮನಿಗೆ ಔಶೀನರೀ ಎಂಬ ಶೂದ್ರ ಸ್ತ್ರೀಯಲ್ಲಿ ಕಕ್ಷೀವಾನ ಮುಂತಾದ ಮಕ್ಕಳು ಹುಟ್ಟಿದ್ದರು. ಸನತ್ಕುಮಾರ ಈತನಿಗೆ ಬ್ರಹ್ಮವಿದ್ಯೆ ಹೇಳಿಕೊಟ್ಟ ಗುರು. ಗೌತಮನಿಗೆ ಹಂಸ ಮತ್ತು ಪರಮಹಂಸ ಧ್ಯಾನವನ್ನು ಹೇಗೆ ಮಾಡಬೇಕೆಂದು ಗುರು ಹೇಳಿಕೊಟ್ಟ. ಗೌತಮನನ್ನು ಬ್ರಹ್ಮರ್ಷಿ ಎಂದು ಕರೆಯಲಾಗಿದೆ. ಬ್ರಹ್ಮದೇವನ ಮಾನಸಕನ್ಯೆ ಅಹಲ್ಯೆ **(ನೋಡಿ)** ಈತನ ಹೆಂಡತಿ. ಗೌತಮೀ ಎಂಬುದು ಈಕೆಯ ಒಂದು ಹೆಸರು. ಶತಾನಂದ ಈಕೆಯ ಮಗ. ಈಕೆಯ ಹೆಸರಿನಿಂದಲೇ ಗೋದಾವರಿ ನದಿಗೆ ಗೌತಮೀ ಎಂಬ ಹೆಸರು ಬಂದಿದೆ. ವೃಷಾದರ್ಭಿ ಎಂಬ ರಾಜ ತನ್ನ ರಾಜ್ಯದಲ್ಲಿ ಅನ್ನಕ್ಷಾಮ ಒದಗಿದ್ದರಿಂದ ಋಷಿಗಳಿಗೆ ದಾನ ಕೊಡಲು ನಿಶ್ಚಯಿಸಿದಾಗ ಆ ದಾನವನ್ನು ನಿರಾಕರಿಸಿದ ಏಳು ಋಷಿಗಳಲ್ಲಿ ಗೌತಮನೂ ಒಬ್ಬ. ತನ್ನ ಶಿಷ್ಯ ಉದಂಕನಿಗೇ ಮಗಳನ್ನು ಕೊಟ್ಟು ಲಗ್ನ ಮಾಡಿದನೆನ್ನಲಾಗಿದೆ.

ಗೌತಮನ ಆಶ್ರಮ ಪಾರಿಯಾತ್ರ (ವಿಂಧ್ಯ) ಪರ್ವತದ ಹತ್ತಿರ ಇತ್ತೆಂದು ಹೇಳಲಾಗಿದೆ. ಅಲ್ಲಿ ಈತ ಅರುವತ್ತು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿದನೆಂದು ಪ್ರತೀತಿ. ಆಗ ಅಲ್ಲಿ ಪ್ರತ್ಯಕ್ಷನಾದ ಯಮನನ್ನು ಪಿತೃಋಣದಿಂದ ಮುಕ್ತನಾಗುವ ಬಗೆಯನ್ನು ವಿವರಿಸುವಂತೆ ಈತ ಕೇಳಿಕೊಂಡ. ಸತ್ಯ, ಧರ್ಮ, ತಪಸ್ಸು ಮತ್ತು ಶುಚಿತ್ವಗಳನ್ನವಲಂಬಿಸಿ ತಂದೆತಾಯಿಗಳ ಸೇವೆ ಮಾಡಿದರೆ ಪವಿತ್ರಲೋಕ ಪ್ರಾಪ್ತಿಯಾಗುತ್ತದೆಂದು ಯಮ ಈತನಿಗೆ ಉತ್ತರವಿತ್ತ. ಹನ್ನೆರಡು ವರ್ಷದ ಬರಗಾಲ ಪ್ರಾಪ್ತವಾದರೂ ಗೌತಮ ಅಲ್ಲಿನ ಋಷಿಗಳಿಗೆ ಊಟವನ್ನು ಒದಗಿಸಿ ಬದುಕಿಸಿದ.

ಗೌತಮನೆಂಬ ಇನ್ನೊಬ್ಬ ಋಷಿ ಆಂಗಿರಸ ಕುಲದಲ್ಲಿನ ಋಷಿಯೂ ಪ್ರವರವೂ ಆಗಿದ್ದಾನೆ. ವೈವಸ್ವತ ಮನ್ವಂತರದಲ್ಲಿ ಈತ 20ನೆಯ ಪರ್ಯಾಯದ ವ್ಯಾಸ.

ಶಾಕ್ಯರಿಗೆ ಪೂಜ್ಯನಾದ ಬುದ್ಧದೇವನಿಗೂ ಗೌತಮನೆಂಬ ಹೆಸರಿದೆ. *

**ಗೌತಮ ಧರ್ಮಸೂತ್ರ :** ಈಗ ಉಪಲಬ್ಧವಿರುವ ಧರ್ಮಸೂತ್ರಗಳಲ್ಲೆಲ್ಲ ಹೆಚ್ಚು ಪ್ರಾಚೀನವೆಂದು ವಿದ್ವಾಂಸರು ಪರಿಗಣಿಸಿರುವ ಧರ್ಮಸೂತ್ರ. ಬೌಧಾಯನ ಧರ್ಮಸೂತ್ರದಲ್ಲಿಯೇ ಗೌತಮನ ಈ ಗ್ರಂಥದ ಉಲ್ಲೇಖವಿದೆ. ಇದರಲ್ಲಿ ಬೌದ್ಧಧರ್ಮದ ಉದಯದ ಪ್ರಸ್ತಾಪವೇ ಕಾಣಿಸದು. ಆದರೆ ಯವನ ಶಬ್ದ ಬರುತ್ತದೆ. ಆದ್ದರಿಂದ ಇದರ ಕಾಲ ಪ್ರ.ಶ.ಪೂ.ಸು. 600–400 ಎಂದು ಮಹಾಮಹೋಪಾಧ್ಯಾಯ ಪಿ.ವಿ. ಕಾಣೆ ತೀರ್ಮಾನಿಸಿದ್ದಾರೆ.

ಗೌತಮ ಧರ್ಮಸೂತ್ರ ಸಾಮವೇದದ ರಾಣಾಯಣೀಯ ಶಾಖೆಗೆ ಸೇರಿದುದು. ಆದ್ದರಿಂದ ಸಾಮವೇದಿಗಳು ಇದನ್ನು ತಮ್ಮ ಧರ್ಮಸೂತ್ರವೆಂದು ಭಾವಿಸುವುದು ಸಹಜ. ಆದರೆ ಪ್ರಾಚೀನ ವೇದವಿದ್ಯಾಚಾರ್ಯರಲ್ಲಿ ಗೌತಮನೆಂಬ ಹೆಸರಿನವರು ಅನೇಕರಿರುವುದರಿಂದ ಈ ಧರ್ಮಸೂತ್ರಕಾರ ಇವನೇ ಎನ್ನಲು ಖಚಿತವಾದ ಆಧಾರವಾವುದೂ ಸಿಕ್ಕಿಲ್ಲ.

ಗೌತಮ ಧರ್ಮಸೂತ್ರ ಗ್ರಂಥ ಹಲವು ಬಾರಿ ಅಚ್ಚಾಗಿದೆ–ಸ್ಟೆನ್‌ಬ್ಲರ್ 1876; ಕಲ್ಕತ್ತ 1876; ಆನಂದಾಶ್ರಮ 1910 ಮತ್ತು ಮೈಸೂರು. ಆನಂದಾಶ್ರಮ ಹಾಗೂ ಮೈಸೂರು ಆವೃತ್ತಿಗಳಲ್ಲಿ ಕ್ರಮವಾಗಿ ಹರದತ್ತ ಮತ್ತು ಮಸ್ಕರಿಗಳ ವ್ಯಾಖ್ಯಾನಗಳೂ ಅಚ್ಚಾಗಿವೆ.

ಈ ಗ್ರಂಥದಲ್ಲಿ ಬರುವ ಮುಖ್ಯವಾದ ವಿಷಯಗಳು ಹೀಗಿವೆ : 1. ಧರ್ಮದ ಮೂಲಗಳು, ವ್ಯಾಖ್ಯಾನವಿಧಿ, ಚಾತುರ್ವರ್ಣದವರಿಗೆ ಉಪನಯನಕಾಲ ಹಾಗೂ ನಿಯಮಿತ ಮೌಂಜಿ, ಅಜಿನ, ದಂಡಾದಿಗಳು, ಶೌಚ ಮತ್ತು ಆಚಮನ ವಿಧಿಗಳು. 2. ಬ್ರಹ್ಮಚಾರಿ ನಿಯಮಗಳು, ವಿದ್ಯಾಭ್ಯಾಸದ ಅವಧಿ. 3. ನಾಲ್ಕು ಆಶ್ರಮಗಳು, ಬ್ರಹ್ಮಚಾರಿ, ಭಿಕ್ಷು ಮತ್ತು ವೈಖಾನಸರ ಕರ್ತವ್ಯಗಳು. 4. ಗೃಹಸ್ಥನ ಕರ್ತವ್ಯಗಳು, ವಿವಾಹಕಾಲ ಹಾಗೂ ವಿಧಿ, ಎಂಟು ಬಗೆಯ ವಿವಾಹಗಳು, ಉಪಜಾತಿಗಳು. 5. ಪತ್ನೀಗಮನವನ್ನು ಕುರಿತ ವಿಧಿಗಳು, ಪಂಚಮಹಾಯಜ್ಞಗಳು, ಮಧುಪರ್ಕ, ಅತಿಥಿಸತ್ಕಾರ ಕ್ರಮ. 6. ಮಾತಾಪಿತೃಗಳಿಗೆ ಹಾಗೂ ಗುರುವಿಗೆ ಅಭಿವಾದನ ಕ್ರಮ, ಪ್ರಯಾಣಕಾಲದ ನಿಯಮಗಳು. 7. ಬ್ರಾಹ್ಮಣಧರ್ಮ, ಆಪದ್ಧರ್ಮ. 8. ನಲವತ್ತು ಸಂಸ್ಕಾರಗಳು ಮತ್ತು ಎಂಟು ಗುಣಗಳು (ದಯಾ ಇತ್ಯಾದಿ). 9. ಸ್ನಾತಕವ್ರತ. 10. ನಾಲ್ಕುವರ್ಣಗಳ ಕರ್ತವ್ಯಗಳು, ರಾಜಧರ್ಮಗಳು. 11. ಪುರೋಹಿತನ ಕರ್ತವ್ಯ. 12. ಕಳ್ಳತನ, ಖೂನಿ ಮುಂತಾದ ಅಪರಾಧಗಳಿಗೆ ವಿಹಿತವಾದ ಶಿಕ್ಷೆಗಳು, ಬಡ್ಡಿ ವ್ಯವಹಾರದ ನಿಯಮಗಳು. 13. ಸಾಕ್ಷಿಗಳ ಲಕ್ಷಣ. 14. ಅಶೌಚ ಮತ್ತು ಸೂತಕವಿಚಾರ. 15. ಐದು ಬಗೆಯ ಶ್ರಾದ್ಧಗಳು, ಶ್ರಾದ್ಧ ವಿಧಿಗಳು. 16. ಉಪಾಕರ್ಮ, ಅನಧ್ಯಯನ

ವಿಚಾರ. 17. ಬ್ರಾಹ್ಮಣಾದಿಗಳಿಗೆ ವಿಹಿತ ಹಾಗೂ ನಿಷಿದ್ಧ ಆಹಾರ. 18. ಸ್ತ್ರೀಕರ್ಮಗಳು, ನಿಯೋಗ ವಿಚಾರ. 19. ಪ್ರಾಯಶ್ಚಿತ್ತ, ಜಪ, ತಪಾದಿಗಳು. 20. ಬಹಿಷ್ಕಾರ. 21. ಮಹಾಪಾತಕಗಳು ಮತ್ತು ಉಪಪಾತಕಗಳು. 22. ಬ್ರಹ್ಮಹತ್ಯಾದಿಗಳಿಗೆ ಹೇಳುವ ಪ್ರಾಯಶ್ಚಿತ್ತಗಳು. 23. ಸುರಾ ಪಾನಾದಿಗಳಿಗೆ ಹೇಳುವ ಪ್ರಾಯಶ್ಚಿತ್ತ. 24. ಕೃಛ್ರ, ಅತಿಕೃಛ್ರ ಮುಂತಾದ ತೀವ್ರ ತಪಗಳು. 25. ಚಾಂದ್ರಾಯಣ ವ್ರತ. 26. ಸ್ತ್ರೀಧನ, ಆಸ್ತಿವಿಭಾಗ.

ಗೌತಮಧರ್ಮಸೂತ್ರ ಪೂರ್ಣವಾಗಿ ಗದ್ಯದಲ್ಲಿದೆ ; ಮಿಕ್ಕ ಧರ್ಮಸೂತ್ರಗಳಂತೆ ಇಲ್ಲಿ ಸ್ವರಚಿತ ಇಲ್ಲವೆ ಉದಾಹೃತ ಶ್ಲೋಕಗಳೊಂದೂ ಇಲ್ಲ. ಇಂದಿನ ಕಾನೂನು, ಸಮಾಜಶಾಸ್ತ್ರ, ಶಿಕ್ಷಣಶಾಸ್ತ್ರ, ವೈದಿಕಧರ್ಮ ಇವನ್ನು ಸಪ್ರಮಾಣವಾಗಿ ಅರಿಯಬೇಕೆನ್ನುವವರಿಗೆ ಇದು ಉತ್ತಮ ಪ್ರಮಾಣ ಗ್ರಂಥವಾಗಿದೆ (**ನೋಡಿ- ಧರ್ಮಸೂತ್ರಗಳು**). (ಕೆ.ಕೆ.)

**ಗೌತಮ ಬುದ್ಧ : ನೋಡಿ-ಬುದ್ಧ**

**ಗೌತಮೀಪುತ್ರ ಸಾತಕರ್ಣಿ :** ಸಾತವಾಹನವಂಶದ ಅರಸ. ಈತನ ಆಳಿಕೆಯ ಕಾಲ 62-86 ಎಂದೂ 106-130 ಎಂದೂ ವಾದಗಳಿವೆ. ಇವನು 106-130ರ ಕಾಲಾವಧಿಯಲ್ಲಿ ಆಳಿರಬಹುದು ಎಂಬ ಅಭಿಪ್ರಾಯ ಹೆಚ್ಚು ಸಮಂಜಸವಾದುದು. ಈತನ ಶಾಸನಗಳು ನಾಸಿಕದ ಗುಹೆಗಳಲ್ಲಿ ದೊರೆತಿವೆ. ಇವನ ಮಗನಾದ ವಾಸಿಷ್ಠೀಪುತ್ರ ಪುಳುಮಾವಿಯ ಶಾಸನದಲ್ಲಿ ಈತನ ಸಾಧನೆಗಳನ್ನು ಕುರಿತಾದ ವಿವರಗಳು ಲಭ್ಯವಾಗಿವೆ. ಪುರಾಣಗಳಲ್ಲಿ ಹಾಗೂ ಗ್ರೀಕ್ ಭೂಗೋಳಶಾಸ್ತ್ರಜ್ಞ ಟಾಲೆಮಿಯ ಗ್ರಂಥದಲ್ಲಿ ಕಂಡುಬರುವ ಉಲ್ಲೇಖಗಳಿಂದ ಈ ಸಾತವಾಹನ ಅರಸನಿಗೆ ಸಂಬಂಧಿಸಿದ ಅನೇಕ ವಿವರಗಳು ತಿಳಿದಿವೆ. ಭಾರತದ ಪಶ್ಚಿಮಕ್ಕೆ, ಈಗಿನ ಮಹಾರಾಷ್ಟ್ರಕ್ಕೆ ಸೇರಿದ ತೀರಪ್ರದೇಶಗಳು ಸಾತವಾಹನರ ಆಳಿಕೆಗೊಳಪಟ್ಟಿದ್ದುವು. ಪ್ರಸಕ್ತಶಕಾರಂಭದಲ್ಲಿ (ಅಥವಾ ಎರಡನೆಯ ಶತಮಾನದ ಆರಂಭದಲ್ಲಿ) ಗೌತಮೀಪುತ್ರ ಪಟ್ಟಕ್ಕೆ ಬರುವ ಮೊದಲು ಸಾತವಾಹನರು ಕ್ಷಹರಾತರ (ಕ್ಷತ್ರಪ) ದಾಳಿಗೆ ತುತ್ತಾಗಿ ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡಿದ್ದರು. ಗೌತಮೀಪುತ್ರ ಪಟ್ಟಕ್ಕೆ ಬಂದಾಗ ದುಃಸ್ಥಿತಿಯಲ್ಲಿದ್ದ ರಾಜ್ಯವನ್ನು ಭದ್ರಗೊಳಿಸಲು ಶತ್ರುಗಳ ದಮನ ಅತ್ಯಾವಶ್ಯಕವಾಗಿತ್ತು. ಆದ್ದರಿಂದ ಅದಕ್ಕೆ ಬೇಕಾದ ಸಕಲ ಸನ್ನಾಹಗಳನ್ನೂ ಮಾಡಿಕೊಂಡು 80 ರಲ್ಲಿ ಅಥವಾ 124ರಲ್ಲಿ ಈತ ಕ್ಷಹರಾತರ ವಿರುದ್ಧ ದಂಡೆತ್ತಿದ್ದ. ಈತ ತನ್ನ ವಿಜಯಸ್ಕಂಧಾವಾರವೆನಿಸಿದ ಗೋವರ್ಧನ ನಗರದ ನೆಲೆವೀಡಿನಲ್ಲಿದ್ದಾಗ ಇವನ ನಾಸಿಕ ಹಾಗೂ ಕಾರ್ಲೆ ಶಾಸನಗಳು ಬರೆಯಿಸಲ್ಪಟ್ಟವು. ಮೊದಲು ದೊರೆತ ಸಣ್ಣಪುಟ್ಟ ವಿಜಯಗಳು ಇವನನ್ನು ಹುರಿದುಂಬಿಸಿದುವು. ವೈಜಯಂತೀ ಸೈನ್ಯ ಈ ಕದನಗಳಲ್ಲಿ ಶ್ಲಾಘನೀಯವಾಗಿ ಹೋರಾಡಿತು. ಆದರೆ ಇಷ್ಟರಿಂದ ಗೌತಮೀಪುತ್ರನಿಗೆ ತೃಪ್ತಿಯುಂಟಾಗಲಿಲ್ಲ. ಸಾತವಾಹನರ ಗತವೈಭವವನ್ನು ಪುನಃ ಪ್ರತಿಷ್ಠಾಪಿಸುವುದು ಇವನ ಉದ್ದೇಶವಾಗಿತ್ತು.

ಇವನ ಈ ಉದ್ದೇಶ ಪೂರ್ಣಗೊಂಡಿತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದನ್ನು ಈತನ ತಾಯಿ ಗೌತಮೀ ಬಾಲಶ್ರೀ ನೆಲೆಗೊಳಿಸಿದ ಶಾಸನದಲ್ಲಿ ಸ್ಪಷ್ಟಗೊಳಿಸಿದ್ದಾಳೆ. ಈತನ ರಾಜ್ಯ ಅಸಿಕ, ಅಸಕ, ಮುಳಕ, ಸುರಠ, ಕುಕುರ, ಅಪರಾಂತ, ಅನೂಪ, ವಿದರ್ಭ, ಆಕರ ಮತ್ತು ಅವಂತಿ ರಾಜ್ಯಗಳನ್ನು, ವಿಂಧ್ಯ, ಋಕ್ಷವತ್, ಪಾರಿಯಾತ್ರ, ಸಹ್ಯ, ಕಣ್ಣಗಿರಿ, ಮತ್ಸ್ಯ, ಶ್ರೀಸ್ಥಾನ, ಮಲಯ, ಮಹೇಂದ್ರ, ಸೇತ ಮತ್ತು ಚಕೋರ ಪರ್ವತ ಪ್ರದೇಶಗಳನ್ನು ಒಳಗೊಂಡಿತ್ತೆಂದು ಆ ಶಾಸನ ವರ್ಣಿಸಿದೆ. ಹೀಗೆ ವಿಸ್ತಾರವಾದ ಈತನ ರಾಜ್ಯ ತ್ರಿಸಮುದ್ರಪರ್ಯಂತ ಹಬ್ಬಿತ್ತು. ಇವನ ವಾಹನ-ಅಶ್ವ ಮೂರು ಸಮುದ್ರಗಳ ನೀರನ್ನು ಕುಡಿದಿತ್ತಂತೆ! ಶಾಸನಗಳಲ್ಲಿ ಹೇಳಿರುವ ಪ್ರದೇಶಗಳನ್ನು ಗುರುತಿಸುವುದರಲ್ಲಿ ಅಲ್ಪಸ್ವಲ್ಪ ಭಿನ್ನಾಭಿಪ್ರಾಯಗಳಿವೆಯೇ ಹೊರತು ಹೆಚ್ಚಿನ ಸಂದೇಹಗಳಿಲ್ಲ.

ಅಸಿಕ ಕೃಷ್ಣಾ ನದೀತೀರದಲ್ಲಿ ಹಿಂದಿನ ಋಷಿಕ ನಗರದ ಸುತ್ತಲೂ ಇದ್ದ ಪ್ರದೇಶ. ಅಸಕ (ಅಶ್ಮಕ) ಗೋದಾವರೀ ತೀರದಲ್ಲಿ ಪೌದನ್ಯವನ್ನು ರಾಜಧಾನಿಯಾಗಿ ಹೊಂದಿದ್ದ ದೇಶ. ಈಗಿನ ನಿಜಾಮಾಬಾದ್ ಜಿಲ್ಲೆಯಲ್ಲಿರುವ ಬೋಧನವೇ ಪೌದನ್ಯವೆಂದು ಗುರುತಿಸಲಾಗಿದೆ. ಮುಳಕಕ್ಕೆ ಈಗಿನ ಪೈಠಣ ರಾಜಧಾನಿಯಾಗಿತ್ತು. ಸುರಠವೆಂಬುದು ಸೌರಾಷ್ಟ್ರ. ಉತ್ತರ ಕಾಠಿಯಾವಾಡವೇ ಕುಕುರ, ಉತ್ತರ ಕೊಂಕಣವೇ ಅಪರಾಂತ. ಈಗಿನ ನಿಮಾರ್ ಜಿಲ್ಲೆಯ ಮಾಂಧಾತಾದ (ಮಾಹಿಷ್ಮತೀನಗರ) ಸುತ್ತಲಿನ ದೇಶ ಅನೂಪ. ಆಕರ, ಅವಂತಿಗಳು ಕ್ರಮವಾಗಿ ವಿದಿಶಾ ಮತ್ತು ಉಜ್ಜಯಿನಿಗಳು ರಾಜಧಾನಿಯಾಗಿದ್ದ ಪೂರ್ವ ಮತ್ತು ಪಶ್ಚಿಮ ಮಾಳವ. ವಿದರ್ಭ ಸುಪರಿಚಿತ. ಇವೆಲ್ಲ ಇವನ ಸ್ವಾಧೀನದಲ್ಲಿದ್ದುವೆಂಬುದನ್ನು ಗಮನಿಸಿದರೆ ಇವನ ರಾಜ್ಯ ದಕ್ಷಿಣೋತ್ತರವಾಗಿ ಕೃಷ್ಣಾನದಿಯಿಂದ ಮಾಳವ, ಸೌರಾಷ್ಟ್ರದವರೆವಿಗೂ, ಪೂರ್ವಪಶ್ಚಿಮವಾಗಿ ವಿದರ್ಭದಿಂದ (ಬೀರಾರ) ಸಮುದ್ರ ಪರ್ಯಂತವೂ ಹಬ್ಬಿತ್ತೆಂಬುದು ಸ್ಪಷ್ಟವಾಗುತ್ತದೆ. ಪರ್ವತಪ್ರದೇಶಗಳನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಸಹ್ಯವೆಂಬುದು ನೀಲಗಿರಿಯ ಉತ್ತರಕ್ಕಿರುವ ಪಶ್ಚಿಮಘಟ್ಟ ಪ್ರದೇಶ. ಮಲಯ, ತಿರುವಾಂಕೂರಿನ ಬೆಟ್ಟಗಳಿಗಿದ್ದ ಹೆಸರು. ಮಹೇಂದ್ರವೆಂಬುದು ಪೂರ್ವ ಘಟ್ಟ. ಕಣ್ಣಗಿರಿ(ಕೃಷ್ಣ ಗಿರಿ) ಈಗಿನ ಕನ್ಹೇರಿ. ಶ್ರೀಶೈಲವೇ ಶ್ರೀಸ್ಥಾನ. ಚಕೋರವೆಂಬುದು ಅದರ ಸಮೀಪದಲ್ಲಿಯ ಇನ್ನೊಂದು ಗಿರಿಪ್ರದೇಶ. ಸೇತ ಎಂಬುದನ್ನು ಗುರುತಿಸಲಾಗಿಲ್ಲ. ಈ ಎಲ್ಲ ಪ್ರದೇಶಗಳನ್ನೂ ಸೇರಿಸಿದರೆ ಇಡೀ ದಕ್ಷಿಣ ಭಾರತವೇ ಇವನ ಆಳಿಕೆಗೊಳಪಟ್ಟಿತ್ತು ಎನ್ನಬೇಕಾದೀತಾದರೂ ಬಹುಶಃ ಈ ಪರ್ವತ ಪ್ರದೇಶಗಳು ಇವನ ಪ್ರಭಾವಕ್ಕೊಳಪಟ್ಟಿದ್ದು, ಇವನ ಸಾರ್ವಭೌಮತ್ವವನ್ನು ಒಪ್ಪಿದ್ದುವು ಎಂದು ಅರ್ಥೈಸುವುದು ಹೆಚ್ಚು ಸಮಂಜಸವಾದೀತು. ಅಂತೂ ತ್ರಿಸಮುದ್ರತೋಯಪೀತವಾಹನ ಎಂಬ ಬಿರುದು ಇವನಿಗೆ ಅನ್ವರ್ಥವಾಗಿದೆ.

ಕ್ಷಹರಾತರ ನಹಪಾನನನ್ನು ಸೋಲಿಸಿದ ಅನಂತರ ಇವನು ಆತ ಅಚ್ಚು ಹಾಕಿಸಿದ ನಾಣ್ಯಗಳ ಮೇಲೆ ತನ್ನ ಹೆಸರನ್ನು ಮುದ್ರಿಸಿ ಅವೇ ನಾಣ್ಯಗಳನ್ನು ಚಲಾವಣೆಗೆ ತಂದನೆಂಬುದು ಜೋಗಲ್ಥಂಬಿಯ ನಾಣ್ಯಸಂಗ್ರಹದಿಂದ ಸ್ಪಷ್ಟವಾಗಿದೆ. ಈ ಸಂಗ್ರಹದಲ್ಲಿ 13,270 ನಾಣ್ಯಗಳು ದೊರೆತಿವೆ. ಇವುಗಳಲ್ಲಿ 9,270 ನಾಣ್ಯಗಳ ಮೇಲೆ ಗೌತಮೀಪುತ್ರನ ಹೆಸರನ್ನು ನಹಪಾನನ ಹೆಸರಿನ ಮೇಲೆ ಮುದ್ರಿಸಲಾಗಿದೆ. ಈ ಅರಸ ನಹಪಾನನನ್ನಲ್ಲದೆ ಶಕ, ಯವನ, ಪಹ್ಲವರನ್ನೂ ಸೋಲಿಸಿದ.

ಆದರೆ ಇವನ ಈ ವಿಜಯಗಳು ಶಾಶ್ವತವಾಗಿರಲಿಲ್ಲ. ಗಿರಿನಗರದಲ್ಲಿ (ಜುನಾಗಡ) ಆಳುತ್ತಿದ್ದ ಕಾರ್ದಮಕ ಮನೆತನದ ರುದ್ರದಾಮ ಇವನನ್ನು ಸೋಲಿಸಿ ನಹಪಾನನಿಂದ ಇವನ ವಶವಾಗಿದ್ದ ಬಹುತೇಕ ಪ್ರದೇಶಗಳನ್ನು ಕಸಿದುಕೊಂಡ. ಮುಳಕ ದೇಶ ಮತ್ತು ಗೋವರ್ಧನ ನಗರಗಳು ಮಾತ್ರ ಸಾತಕರ್ಣಿಯ ವಶದಲ್ಲೇ ಉಳಿದುವು. ದಕ್ಷಿಣದಲ್ಲಿ ಹಬ್ಬಿದ್ದ ಇವನ ಪ್ರಭಾವ ಕುಂಠಿತವಾಯಿತು. ರುದ್ರದಾಮನೊಡನೆ ಗೌತಮೀಪುತ್ರ ರಕ್ತಸಂಬಂಧ ಬೆಳೆಸಿ, ಆಗಬಹುದಾಗಿದ್ದ ಸರ್ವನಾಶವನ್ನು ಆ ರೀತಿ ತಪ್ಪಿಸಿಕೊಂಡಂತೆ ತೋರುತ್ತದೆ. ರುದ್ರದಾಮನ ಮಗಳನ್ನು ಇವನ ಕಿರಿಯ ಮಗ ವಾಸಿಷ್ಠೀಪುತ್ರ ಸಾತಕರ್ಣಿ ಮದುವೆಯಾದಂತೆ ಕಾಣುತ್ತದೆ.

ಗೌತಮೀಪುತ್ರನನ್ನು ನಾಸಿಕದ ಶಾಸನ ಮುಕ್ತಕಂಠದಿಂದ ಹೊಗಳಿದೆ. ಈತನ ರೂಪಲಾವಣ್ಯಗಳಿಗೆ ಸಂಬಂಧಿಸಿದಂತೆ ಇವನನ್ನು ಪರಿಪೂರ್ಣಚಂದ್ರಮಂಡಲಸ ಶ್ರೀಕಪ್ರಿಯದರ್ಶಕನೆಂದು, ಭುಜಗಪತಿಭೋಗಪೀನವೃತ್ತವಿಪುಲದೀರ್ಘಸುಂದರಭುಜ ಉಳ್ಳವನೆಂದು ಹೇಳಿದೆ. ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಜಾನುರಾಗಿಯೂ ಅವರ ಸುಖದುಃಖಗಳಲ್ಲಿ ಸಮಭಾಗಿಯೂ ಆಗಿದ್ದವನೆಂದೂ ಧರ್ಮಶಾಸ್ತ್ರದಲ್ಲಿ ಸಮ್ಮತವಾದಂತೆ ಪ್ರಜೆಗಳ ಮೇಲೆ ಕರಾಕರಣೆಮಾಡುತ್ತಿದ್ದವನೆಂದೂ ವರ್ಣಸಂಕರವನ್ನು ತಡೆದವನೆಂದೂ ವರ್ಣಿಸಿದೆ. ಶೌರ್ಯಕ್ಕೆ ಸಂಬಂಧಿಸಿದಂತೆ, ಕ್ಷತ್ರಿಯರ ದರ್ಪವನ್ನು ಮುರಿದವನೆಂದೂ ಕ್ಷಹರಾತವಂಶನಿರವಶೇಷಕರನೆಂದೂ ಸಾತವಾಹನಕುಲಯಶಪ್ರತಿಷ್ಠಾಪನಕರನೆಂದೂ ವರ್ಣಿಸಿದೆ. ಸತ್ಪುರುಷರಿಗೆ ಆಶ್ರಯದಾತನೂ ವೇದಶಾಸ್ತ್ರಾದಿ ಜ್ಞಾನಗಳಿಗೆ ಆಧಾರನೂ ಏಕಾಂಕುಶ-ಏಕಶೂರ-ಏಕಬ್ರಾಹ್ಮಣನೂ ಆಗಿದ್ದ ಈತ ಶುಭದಿವಸಗಳಲ್ಲಿ ಪ್ರಜೆಗಳ ರಂಜನೆಗಾಗಿ ಮಹೋತ್ಸವಗಳನ್ನು ಏರ್ಪಡಿಸಿ ಪ್ರಜಾನುರಾಗವನ್ನು ಸಂಪಾದಿಸಿದ್ದ. ತ್ರಿವರ್ಗ (ಧರ್ಮಾರ್ಥಕಾಮ) ಲಾಭಕ್ಕಾಗಿ ಸ್ಥಾನ ಕಾಲಗಳಿಗೆ ಸಮನಾಗಿ ವ್ಯವಹರಿಸುತ್ತಿದ್ದ ಈತ ಅಪರಾಧಿಗಳಾದ ಶತ್ರುಗಳನ್ನು ಸಹ ಪ್ರಾಣಹಿಂಸೆಗೆ ಈಡುಮಾಡಲು ಹಿಂಜರಿಯುತ್ತಿದ್ದ.

ಆಳಿಕೆಯ ಕೊನೆಯ ಕಾಲದಲ್ಲಿ ರುದ್ರದಾಮನಿಂದ ಸೋಲಿಸಲ್ಪಟ್ಟ ಈತ ಸ್ವಲ್ಪಕಾಲ ಅನಾರೋಗ್ಯದಿಂದ ಬಳಲಿದ. ಈತನ ಆಳ್ವಿಕೆಯ 24 ನೆಯ ವರ್ಷದ ನಾಸಿಕದ ಶಾಸನದಲ್ಲಿ ಈತನ ತಾಯಿಯನ್ನು ಜೀವಸುತಾ ಎಂದು ವರ್ಣಿಸಲಾಗಿದೆ. ಜೀವದಿಂದಿದ್ದ ಮಗನ ತಾಯಿ ಎಂಬ ಅರ್ಥ ಬರುವ ಈ ಮಾತು, ಪ್ರಜೆಗಳಿಗೆ ರಾಜನ ಆರೋಗ್ಯವನ್ನು ಕುರಿತು ನೀಡಿದ ಆಶ್ವಾಸನೆಯ ಮಾತುಗಳಾಗಿರಬಹುದೆಂದು ಹೇಳಲಾಗಿದೆ. ಆದರೆ ಈ ಅನಾರೋಗ್ಯದಿಂದ ಗೌತಮೀಪುತ್ರ ಚೇತರಿಸಿಕೊಳ್ಳಲೇ ಇಲ್ಲ. (ಜಿ.ಬಿ.ಆರ್.)

**ಗೌರಮ್ಮ, ಕೊಡಗಿನ :** 1912-39. ಕನ್ನಡದ ಹೆಸರಾಂತ ಕಥೆಗಾರ್ತಿ. ಹುಟ್ಟಿದ್ದು ಮಡಿಕೇರಿಯಲ್ಲಿ. ಮನೆತನ ಹವ್ಯಕ ಬ್ರಾಹ್ಮಣರದ್ದು. ತಂದೆ ರಾಮಯ್ಯ, ತಾಯಿ ನಂಜಕ್ಕ. ಗೌರಮ್ಮ ತುಂಬ ಜಾಣೆ. ಮಡಿಕೇರಿಯ ಶಾಲೆಯಲ್ಲಿ ಓದಿದಳು. ಆಗ ಅಲ್ಲಿ ಕಾಲೇಜು ಇರಲಿಲ್ಲವಾಗಿ ಓದು ಮುಂದಕ್ಕೆ ನಡೆಯಲಿಲ್ಲ. 1928ರಲ್ಲಿ ಬಳಗ ದಲ್ಲೆ, ಬಿ.ಟಿ. ಗೋಪಾಲಕೃಷ್ಣ ಎಂಬುವರಿಗೆ ಕೊಟ್ಟು ಮದುವೆಯಾಯಿತು. ಈತ ತಮ್ಮ ಬಂಧುಗಳಾದ ಮಂಜನಾಥಯ್ಯನವರ ಕಾಫಿ ತೋಟದಲ್ಲಿ ಮ್ಯಾನೇಜರ ರಾಗಿದ್ದರು. 1931ರಲ್ಲಿ ಈ ದಂಪತಿಗಳಿಗೆ ಒಂದು ಗಂಡು ಮಗು ಆಯಿತು. ಮನೆಕೆಲಸ ಯಾವುದನ್ನೂ ಅಲಕ್ಷ್ಯ ಮಾಡದೆ, ಬಿಡುವಿನ ವೇಳೆಯಲ್ಲೆಲ್ಲ ಗೌರಮ್ಮ ಪುಸ್ತಕಗಳನ್ನು ಓದತೊಡಗಿದಳು. ಕಥೆಗಳನ್ನು ಬರೆಯತೊಡಗಿದಳು. ಮೊದಲಲ್ಲಿ ಪ್ರಕಟವಾದ ಕಥೆಯಲ್ಲಿ ಲೇಖಕಿಯ ಹೆಸರು ಮಿಸೆಸ್ ಬಿ.ಟಿ.ಜಿ. ಕೃಷ್ಣ ಎಂದಿತ್ತು. ಮನುವಿನ ರಾಣಿ ಎಂಬ ಆ ಕಥೆ ಈಕೆ ಶ್ರೇಷ್ಠ ಕತೆಗಾರ್ತಿ ಎನ್ನುವುದನ್ನು ಸಾಬೀತುಪಡಿಸಿತು. ಬಾಳನ್ನು ನೋಡಲು ಬಲ್ಲ ಕಣ್ಣು, ಸಹಾನುಭೂತಿಯ ಮನಸ್ಸು, ಸಹಜವಾದ ಕಥನ, ಸರಳವಾದ ಭಾಷೆ, ಕಥನದಲ್ಲಿ ಕ್ರಮ, ಮಿತ-ಇವೆಲ್ಲವನ್ನು ಅದರಲ್ಲಿ

ಸಾಕಷ್ಟು ಗುರುತಿಸಬಹುದು. ಗೌರಮ್ಮನವರ ಆಮೇಲಣ ಕಥೆಗಳಲ್ಲಿ ಈ ಗುಣಗಳು ಬೆಳೆದವು. ಅಲ್ಲಿ ಇಲ್ಲಿ ಪ್ರಕಟವಾದ ಈ ಕಥೆಗಳನ್ನು ಸೇರಿಸಿ ಪುಸ್ತಕವಾಗಿ ಪ್ರಕಟಿಸಲು ಧಾರವಾಡದ ಪ್ರಕಾಶಕ ದತ್ತಾತ್ರೇಯ ಕುಲಕರ್ಣಿಯವರು ಹವಣಿಸಿದರು. ಆ ಪುಸ್ತಕ ಹೊರಬರುವ ಮುನ್ನವೇ ಗೌರಮ್ಮ ಒಂದು ದಿನ ತಮ್ಮ ಮನೆಯ ಬದಿಯ ಹೊಳೆಯಲ್ಲಿ ಈಜುಹೋಗಿದ್ದವರು ನೀರಲ್ಲಿ ಮುಳುಗಿ ತೀರಿಕೊಂಡರು. ಚಿಗುರು ಎಂಬ ಹೆಸರಿನಿಂದ ಪ್ರಕಟವಾಗಬೇಕೆಂದು ಉದ್ದೇಶಿಸಿದ್ದ ಈಕೆಯ ಪುಸ್ತಕವನ್ನು ಮಿತ್ರರು ಕಂಬನಿ ಎಂದು ಹೆಸರಿಸಿ ಪ್ರಕಟಿಸಿದರು.

ಗೌರಮ್ಮನವರು ಹೊಸಕಾಲದ ಉನ್ನತ ಪ್ರೇರಣೆಗಳಿಗೆ ಮನತೆತ್ತ ಉದೀರ್ಣ ಚೇತನ. ಮಹಾತ್ಮಗಾಂಧಿ ಕೊಡಗಿನ ಪ್ರವಾಸದಲ್ಲಿ ಮಂಜನಾಥಯ್ಯನವರ ಅತಿಥಿಯಾಗಿ ಬಂದಾಗ, ಸತ್ಯಾಗ್ರಹಮಾಡಿ ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ದೇಶಸೇವೆಯ ನಿಧಿಗಾಗಿ ತಮ್ಮ ಒಡವೆಯನ್ನೆಲ್ಲ ಗೌರಮ್ಮ ಮುಡುಪಾಗಿ ಕೊಟ್ಟರು ಎಂಬ ಸಂಗತಿಯನ್ನು ಇಲ್ಲಿ ನೆನೆಯಬಹುದು. (ಎಂ.ವಿ.ಐ.)

**ಗೌರವ ರಕ್ಷೆ :** ವಿವಿಧ ರಕ್ಷಣಾ ಮತ್ತು ಸೇವಾದಳಗಳ ಸಮವಸ್ತ್ರಧಾರಿ ಯೋಧರು ತಮ್ಮ ರಾಷ್ಟ್ರದ ಗೌರವಕ್ಕೆ ಅರ್ಹನಾದ ಅಧಿಕಾರಿ ಅಥವಾ ಪ್ರತಿಷ್ಠಿತ ವ್ಯಕ್ತಿಗೆ ವಿಶಿಷ್ಟ ಸಂದರ್ಭಗಳಲ್ಲಿ ವ್ಯಕ್ತಪಡಿಸುವ ಶಸ್ತ್ರಸಹಿತ ಇಲ್ಲವೇ ಶಸ್ತ್ರರಹಿತ ಸಾಮೂಹಿಕ ಗೌರವ (ಗಾರ್ಡ್ ಆಫ್ ಆನರ್). ಗೌರವ ರಕ್ಷೆಯನ್ನು ಯಾರು, ಯಾರಿಗೆ, ಯಾವ ಸಂದರ್ಭದಲ್ಲಿ ಕೊಡಬೇಕೆಂಬುದು ಪ್ರತಿ ರಾಷ್ಟ್ರದಲ್ಲೂ ನಿಯಮಬದ್ಧವಾಗಿ ನಿಶ್ಚಿತವಾಗಿರುತ್ತದೆ. ಭಾರತ ಗಣರಾಜ್ಯದಲ್ಲಿ ಮತ್ತು ರಾಜ್ಯಗಳಲ್ಲಿ ಈ ಕೆಳಗಿನ ವ್ಯಕ್ತಿಗಳು ಅಥವಾ ಅಧಿಕಾರಿಗಳು ಗೌರವ ರಕ್ಷೆಗೆ ಅರ್ಹರೆಂದು ನಿಶ್ಚಿತವಾಗಿದೆ. ಅಲ್ಲದೆ ಇತರ ದೇಶದ ಯಾವ ಗಣ್ಯವ್ಯಕ್ತಿಗಾದರೂ ಸರ್ಕಾರ ತೀರ್ಮಾನಿಸಿದರೆ ಇಂಥ ಗೌರವ ರಕ್ಷೆಯನ್ನೀಯಬಹುದು. 1. ರಾಷ್ಟ್ರಾಧ್ಯಕ್ಷ, 2. ಉಪರಾಷ್ಟ್ರಾಧ್ಯಕ್ಷ, 3. ರಾಜ್ಯಪಾಲರು, 4. ಉಪರಾಜ್ಯಪಾಲ (ಲೆಫ್ಟಿನೆಂಟ್ ಗವರ್ನರ್), 5. ಪ್ರಧಾನ ಮಂತ್ರಿ, 6. ರಕ್ಷಣಾಮಂತ್ರಿ, 7. ರಕ್ಷಣೋತ್ಪಾದನಾ ಮಂತ್ರಿ, 8. ಉಪರಕ್ಷಣಾ ಮಂತ್ರಿ, 9. ರಾಜ್ಯಗಳ ಮುಖ್ಯಮಂತ್ರಿಗಳು, 10. ಪ್ರಧಾನ ದಂಡನಾಯಕ, 11. ಜನರಲ್ ಆಫಿಸರ್ ಕಮಾಂಡಿಂಗ್-ಇನ್-ಚೀಫ್ (ಪೂರ್ವ, ಪಶ್ಚಿಮ, ದಕ್ಷಿಣ ಇತ್ಯಾದಿ ವಲಯಗಳು) 12. ನೌಕಾದಳ ಮತ್ತು ವಾಯುಸೇನಾ ದಳಗಳ ದಂಡನಾಯಕರು, 13. ನೌಕಾದಳದ ಧ್ವಜಾಧಿಕಾರಿ. 14. ನೌಕಾದಳಗಳ ಮತ್ತು ವಾಯುಸೇನಾದಳಗಳ ಉಪದಂಡನಾಯಕರು, 15. ಭಾರತೀಯ ನೌಕಾದಳದ ಮುಂಬಯಿ ಮತ್ತು ಕೊಚಿನ್‌ಗಳ ಕಮಾಡೋರುಗಳು, 16. ಆಯಾ ಪ್ರದೇಶಗಳ ವಾಯುಸೇನಾದಳಪತಿಗಳು. ವಿಶ್ವವಿದ್ಯಾಲಯದ ಪದವಿ ಪ್ರಧಾನ ಸಮಾರಂಭ ಭಾಷಣಕ್ಕೆ ಆಹ್ವಾನಿತರಾಗಿ ಬಂದ ಪ್ರತಿಷ್ಠಿತ ವ್ಯಕ್ತಿಗೆ, ವಾರ್ಷಿಕ ಶಿಬಿರಗಳಿಗೆ ಆಹ್ವಾನಿತರಾಗಿ ಬಂದ ಪ್ರತಿಷ್ಠಿತ ವ್ಯಕ್ತಿಗಳಿಗೆ ಮತ್ತು ಆಯಾ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ನ್ಯಾಷನಲ್ ಕ್ಯಾಡೆಟ್ ಕೋರ್ ಕ್ಯಾಡೆಟುಗಳು ಗೌರವ ರಕ್ಷೆಯನ್ನು ನೀಡಿ ತಮ್ಮ ಗೌರವವನ್ನು ವ್ಯಕ್ತಪಡಿಸಬಹುದು. ರಾಜ್ಯದ ಗೃಹಮಂತ್ರಿ ತನ್ನ ರಾಜ್ಯದ ಸಶಸ್ತ್ರ ಪೊಲೀಸರ ಗೌರವ ರಕ್ಷೆಯನ್ನು ಪಡೆಯಲು ಅರ್ಹರು.

ಸಂಖ್ಯೆ : ಗೌರವ ರಕ್ಷೆಯನ್ನೀಯಬೇಕಾದ ಯೋಧರ ಸಂಖ್ಯೆಯನ್ನು ಸಹ ವರ್ಗವಾರು ನಿಷ್ಕರ್ಷಿಸಲಾಗಿದೆ. ರಾಷ್ಟ್ರಾಧ್ಯಕ್ಷರಿಗೆ ಮೂರು ಜನ ಅಧಿಕಾರಿಗಳನ್ನು ಸೇರಿದಂತೆ 153; ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳಿಗೆ ಒಬ್ಬ ಅಧಿಕಾರಿ ಮತ್ತು 100 ಜನ ಯೋಧರು. ಉಳಿದ ಎಲ್ಲರಿಗೂ ಒಬ್ಬ ಅಧಿಕಾರಿ ಮತ್ತು 50 ಮಂದಿ ಯೋಧರು.

ಪೂರ್ವ ಸಿದ್ಧತೆ : ಗೌರವ ರಕ್ಷೆಯನ್ನೀಯುವ ಯೋಧರು ಮತ್ತು ವಾದ್ಯ ವೃಂದದವರು ಉತ್ಸವೋಚಿತ ಸಮವಸ್ತ್ರ, ಶಸ್ತ್ರ ಮತ್ತು ವಾದ್ಯೋಪಕರಣಧಾರಿಗಳಾಗಿ ನಿಗದಿಯಾದ ಸ್ಥಳದಲ್ಲಿ ವಂದನಾವೇದಿಕೆಗೆ ಎದುರಾಗಿ ನಿಶ್ಚಿತ ದೂರದಲ್ಲಿ ಮಧ್ಯೆ ನಾಲ್ಕು ದಾಪುಗಳ ಅಥವಾ 120 ಅಂಗುಲಗಳ ಅಂತರದಲ್ಲಿ ಎರಡು ಸಾಲಾಗಿ ನಿಲ್ಲುವರು. ರಾಷ್ಟ್ರಾಧ್ಯಕ್ಷರಿಗೆ ರಕ್ಷೆಯೀಯುವ ಸಂದರ್ಭದಲ್ಲಿ ಯೋಧರ ಮುಂದಿನ ಸಾಲಿನಿಂದ ಮುಂದಕ್ಕೆ ಮಧ್ಯದಲ್ಲಿ ಎಂಟು ದಾಪುಗಳ ಅಂತರದಲ್ಲಿ ಗೌರವ ರಕ್ಷೆಯ ನಾಯಕ ನಿಲ್ಲುತ್ತಾನೆ. ಬಾಕಿ ಸಂದರ್ಭದಲ್ಲಿ 4-5 ದಾಪುಗಳ ಅಂತರದಲ್ಲಿ ನಿಲ್ಲುತ್ತಾನೆ. ವಾದ್ಯವೃಂದದವರು ಯೋಧರ ಮುಂದಿನ ಸಾಲಿನ ಬಲಗಡೆ ಕೊನೆಯ ನಿರ್ದೇಶಕನ ಬಲಕ್ಕೆ ಅದೇ ಸಾಲಿನಲ್ಲಿ ಏಳು ದಾಪು ಬಲಕ್ಕೆ ನೀಟಸಾಲುಗಳಲ್ಲಿ (ಕಾಲಮ್ಸ್) ನಾಲ್ಕು ಅಡ್ಡಸಾಲುಗಳಾಗಿ ನಿಲ್ಲುವರು. ನಗಾರಿ ಮೇಜರನ (ಡ್ರಮ್ ಮೇಜರ್) ಸ್ಥಾನ ಮುಂದಿನ ಅಡ್ಡಸಾಲಿನ ಮಧ್ಯದವನ ಮುಂದಕ್ಕೆ ಮೂರು ದಾಪು ಮುಂದಕ್ಕೆ ಇದೆ. ವಾದ್ಯನಾಯಕ ಅವನಿಂದ ಮುಂದಕ್ಕೆ ಎರಡು ದಾಪು ಮುಂದೆ ನಿಲ್ಲುತ್ತಾನೆ. ವಾದ್ಯದವರ ಒಟ್ಟು ಸಂಖ್ಯೆ 12+1+1 = 14.

ಗೌರವ ರಕ್ಷೆಯನ್ನು ಸ್ವೀಕರಿಸುವ ವ್ಯಕ್ತಿ ಬಂದು ನಿಂತುಕೊಳ್ಳುವ ವೇದಿಕೆಯ ಮುಂದಿನ ಅಂಚಿನ ಎಡಬಲಗಳಲ್ಲಿ ಎರಡು ದಾಪುಗಳ ಅಂತರದಲ್ಲಿ ಇಬ್ಬರು ಸಹಾಯಾಧಿಕಾರಿಗಳು ರಕ್ಷೆಯ ಯೋಧರಿಗೆ ಎದುರಾಗಿ ನಿಲ್ಲುವರು. ವೇದಿಕೆಗೂ ಗೌರವ ರಕ್ಷೆಯ ನಾಯಕನಿಗೂ ಮಧ್ಯೆ ಸ್ಥಳಾವಕಾಶಕ್ಕೆ ತಕ್ಕಂತೆ ಕನಿಷ್ಠ ಪಕ್ಷ ಏಳು ದಾಪುಗಳ ಅಂತರವಿರಬೇಕು. ರಕ್ಷೆಯನ್ನು ಸ್ವೀಕರಿಸುವ ವ್ಯಕ್ತಿಯನ್ನು ಆಹ್ವಾನಿಸುವ ಅಧಿಕಾರಿ (ಕಂಡಕ್ಟಿಂಗ್ ಆಫಿಸರ್) ತನ್ನ ಕರ್ತವ್ಯ ನಿರ್ವಹಿಸಿ ವೇದಿಕೆಯ ಮೇಲೆ ಆತ ನಿಂತ ತರುವಾಯ ಆತನಿಗೆ ಹಿಂದೆ ಮೂರು ದಾಪು ಅಂತರದಲ್ಲಿ ಸಾವಧಾನ ಸ್ಥಿತಿಗೆ ಬಂದು ನಿಲ್ಲಬೇಕು. ಈಗ ಆವರಣವೆಲ್ಲವೂ ನಿಶ್ಶಬ್ದವಾಗಿರುತ್ತದೆ. ಎಲ್ಲ ಸಮವಸ್ತ್ರಧಾರಿಗಳೂ ಸಾವಧಾನ ಸ್ಥಿತಿಯಲ್ಲಿರುತ್ತಾರೆ.

ಪ್ರದಾನ : ಪ್ರತಿಷ್ಠಿತ ವ್ಯಕ್ತಿ ವೇದಿಕೆಯ ಮೇಲೆ ಪೂರ್ವನಿಶ್ಚಿತ ಸ್ಥಾನದಲ್ಲಿ ಬಂದು ನಿಂತ ಬಳಿಕ ರಕ್ಷಾನಾಯಕ ಸಂದರ್ಭ ಮತ್ತು ವ್ಯಕ್ತಿಯ ಸ್ಥಾನ ಪ್ರತಿಷ್ಠೆಗಳನ್ನನುಸರಿಸಿ ರಾಷ್ಟ್ರೀಯ ವಂದನೆ (ನ್ಯಾಷನಲ್ ಸೆಲ್ಯೂಟ್) ಅಥವಾ ಸಾರ್ವತ್ರಿಕ ವಂದನೆಯನ್ನು (ಜನರಲ್ ಸೆಲ್ಯೂಟ್) ಘೋಷಿಸಿ ರಕ್ಷಕ ಯೋಧರು ಶಸ್ತ್ರವಂದನೆಯನ್ನು ಅರ್ಪಿಸುತ್ತಿರುವ ಸಮಕಾಲಕ್ಕೆ ತಾನೂ ವಂದನೆಯನ್ನು ಅರ್ಪಿಸುತ್ತ ಅದೇ ಭಂಗಿಯಲ್ಲಿ ತನ್ನವರೊಡನೆ ಅಚಲವಾಗಿ ನಿಲ್ಲುತ್ತಾನೆ. ಈಗ ವಾದ್ಯವೃಂದ ರಾಷ್ಟ್ರಗೀತೆಯನ್ನು ಮೇಳದಲ್ಲಿ ನುಡಿಸುತ್ತದೆ. ಇತರ ದೇಶಗಳ ಪ್ರತಿಷ್ಠಿತ ವ್ಯಕ್ತಿಗಳಿಗೆ ರಕ್ಷೆ ನೀಡುವಾಗ ಪೂರ್ವನಿಶ್ಚಿತವಾಗಿದ್ದರೆ ಆಯಾ ದೇಶದ ರಾಷ್ಟ್ರಗೀತೆಯನ್ನು ನುಡಿಸಬಹುದು. ವೇದಿಕೆಯ ಮೇಲಿರುವ ಪ್ರತಿಷ್ಠಿತ ವ್ಯಕ್ತಿ ಮಾತ್ರ ಪ್ರತಿವಂದನೆಯನ್ನು ನೀಡುವುದರ ಮೂಲಕ ವಂದನೆಯನ್ನು ಸ್ವೀಕರಿಸುವನು. ಬಾಕಿಯವರೆಲ್ಲರೂ ಸಾವಧಾನ ಸ್ಥಿತಿಯಲ್ಲಿ ಅಚಲರಾಗಿ ನಿಲ್ಲಬೇಕಾಗುತ್ತದೆ. ರಾಷ್ಟ್ರಗೀತೆ ಮುಗಿದ ತರುವಾಯ ನಾಯಕ ಶಸ್ತ್ರಗಳನ್ನು ಕೆಳಗಿಳಿಸುವ ಆಜ್ಞೆಯಿತ್ತು ತಾನೊಬ್ಬನೇ ಕ್ರಮಬದ್ಧ ಪದವಿನ್ಯಾಸದಿಂದ ಮುಂದುವರಿದು ವೇದಿಕೆಯ ಮುಂದೆ ಕನಿಷ್ಠ ಪಕ್ಷ ಮೂರು ದಾಪು ದೂರದಲ್ಲಿ ನಿಂತು ಮತ್ತೊಮ್ಮೆ ವೈಯಕ್ತಿಕ ವಂದನೆಯನ್ನು ಅರ್ಪಿಸಿ ಇಂಥ ಬೆಟಾಲಿಯನ್ನಿನ ಗೌರವ ರಕ್ಷೆ ತಮ್ಮ ನಿರೀಕ್ಷಣಕ್ಕೆ ಸಜ್ಜಾಗಿದೆ ಎಂದು ಪೂರ್ವನಿಶ್ಚಿತ ಭಾಷೆಯಲ್ಲಿ (ನಮ್ಮ ರಾಷ್ಟ್ರದಲ್ಲಿ ಹಿಂದಿ) ವರದಿ ಮಾಡಿ ಮತ್ತೆ ವಂದಿಸಿ, ಆ ಪ್ರತಿಷ್ಠಿತ ವ್ಯಕ್ತಿ ಮರುವಂದಿಸಿ ವೇದಿಕೆಯಿಂದ ಇಳಿದು ಮುಂದುವರಿಯಲು ಸಿದ್ಧನಾದ ಕೂಡಲೇ ತಾನೂ ಹಿಂತಿರುಗಿ ಆತನ ಬಳಿ ಪದ ವಿನ್ಯಾಸಕ್ಕೆ ತಕ್ಕಂತೆ ತನ್ನ ನಡಿಗೆಯನ್ನು ಹೊಂದಿಸಿಕೊಂಡು ಆತನ ಬಲಗಡೆಗೆ ಆದಂತೆ ಸ್ವಲ್ಪ ಮುಂದೆ ನಡೆಯುವನು. ರಾಷ್ಟ್ರಾಧ್ಯಕ್ಷರು ವಂದನೆ ಸ್ವೀಕರಿಸುವ ಸಂದರ್ಭದಲ್ಲಿ ಮಾತ್ರ ಅಂಗರಕ್ಷಕರು ಅವರ ಮುಂದೆ ಎಡಬಲಗಳಲ್ಲಿ ನಡಿಗೆಯಲ್ಲಿ ಹೋಗುವರು. ಬಾಕಿ ಸಂದರ್ಭಗಳಲ್ಲಿ ಅವರು ಸ್ವಸ್ಥಾನದಲ್ಲಿರುತ್ತಾರೆ.

ವೀಕ್ಷಣೆ : ಈಗ ಪ್ರತಿಷ್ಠಿತ ವ್ಯಕ್ತಿ ವಾದ್ಯವೃಂದವನ್ನು ಸಮೀಪಿಸಿ ನಗಾರಿಮೇಜರನ ಹಿಂದುಗಡೆಯಿಂದ ಹಾಯ್ದು ವಾದ್ಯವೃಂದವನ್ನು ನಿರೀಕ್ಷಿಸುವನು. ಅವರೆಲ್ಲರೂ ಸಾವಧಾನ ಸ್ಥಿತಿಗಳಲ್ಲಿ ನಿಂತಿರುತ್ತಾರೆ. ವೃಂದದ ಮುಂದಿನ ಸಾಲಿನ ಎಡಗಡೆಯ ವ್ಯಕ್ತಿಯನ್ನು ದಾಟುತ್ತಿದ್ದಂತೆಯೇ ಮಿಂಚಿನ ವೇಗದಿಂದ ವಾದ್ಯನಾಯಕ ಹಿಂದಕ್ಕೆ ತಿರುಗಿ ಸನ್ನೆಯ ಆಜ್ಞೆ ಮಾಡಿ ವಾದ್ಯ ನುಡಿಸಲು ಹೇಳುತ್ತಾನೆ. ಪ್ರತಿಷ್ಠಿತ ವ್ಯಕ್ತಿ ನಿಧಾನ ನಡಿಗೆಯಲ್ಲಿ ರಕ್ಷೆಯ ಯೋಧರ ಬಲ ನಿರ್ದೇಶಕನನ್ನು ಸಮೀಪಿಸಿದಂತೆ, ನಗಾರಿಯ ಪ್ರಥಮ ಹೊಡೆತದ ಸನ್ನೆಯಿಂದ ಗಕ್ಕನೆ ತಮ್ಮೆಲ್ಲರ ದೃಷ್ಟಿಯನ್ನು ಯೋಧರು ಆತನ ಮೇಲೆ ಹಾಯಿಸುತ್ತಾರೆ. ರಕ್ಷೆಯ ಯೋಧರ ಮುಂದಿನ ಸಾಲನ್ನು ಮಾತ್ರ ವ್ಯಕ್ತಿ ವೀಕ್ಷಿಸುತ್ತ ದಾಪುಗಳ ಅಂತರದಲ್ಲಿ ಮುಂದುವರಿಯುತ್ತಾನೆ. ಆತ ಮುಂದುವರಿದಂತೆ ಯೋಧರ ಶಿರಗಳೂ ದೃಷ್ಟಿಯೂ ಆತನತ್ತ ತಿರುಗುತ್ತಿರುತ್ತವೆ. ರಕ್ಷೆಯ ನಾಯಕ ಬಲಗಡೆ ಮುಂದುವರಿಯುತ್ತಿರುತ್ತಾನೆ. ಎಡಗಡೆ ಕೊನೆಯ ಎಡನಿರ್ದೇಶಕನನ್ನು ತಲುಪಿದ ಕೂಡಲೇ ನಗಾರಿತಾಡನ ಧ್ವನಿಯ ಸಂಜ್ಞೆಗೆ ಯೋಧರೆಲ್ಲರೂ ಕ್ಷಣಾರ್ಧದಲ್ಲಿ ಮುಮ್ಮುಖರಾಗುತ್ತಾರೆ. ನಿರೀಕ್ಷಣೆ ಮುಗಿಯುತ್ತದೆ.

ನಿಷ್ಕ್ರಮಣ : ಈಗ ಪ್ರತಿಷ್ಠಿತ ವ್ಯಕ್ತಿ ವೇಗ ನಡಿಗೆಯಲ್ಲಿ ವೇದಿಕೆಯತ್ತ ಮುಂದುವರಿಯುತ್ತಾನೆ. ಈ ಮಧ್ಯೆ ತನ್ನನ್ನು ಹಿಂಬಾಲಿಸುತ್ತಿರುವ ರಕ್ಷೆಯ ನಾಯಕನಿಗೆ ಆತ ಹಸ್ತಲಾಘವವಿತ್ತರೆ ನಾಯಕ ಅದನ್ನು ಸ್ವೀಕರಿಸಿ, ವಂದಿಸಿ, ಅದೇ ನಡಿಗೆಯಲ್ಲಿ ತನ್ನ ಸ್ಥಾನಕ್ಕೆ ಬಂದು ಉಳಿದವರಂತೆ ಸಾವಧಾನ ಸ್ಥಿತಿಯಲ್ಲಿ ನಿಲ್ಲುತ್ತಾನೆ. ಆಹ್ವಾನ ಮಾಡುವ ಅಧಿಕಾರಿ ಈ ವೇಳೆಗೆ ವೇದಿಕೆಯಿಂದಿಳಿದು, ಉಚಿತ ಸ್ಥಳದಲ್ಲಿ ನಿಂತು, ವ್ಯಕ್ತಿಯನ್ನು

ಪೂರ್ವನಿರ್ದಿಷ್ಟ ಸ್ಥಳಕ್ಕೆ ಕೊಂಡೊಯ್ಯುತ್ತಾನೆ. ಆತ ದೂರ ಸರಿದಂತೆ ಗೌರವ ರಕ್ಷೆಯ ನಾಯಕ ತನ್ನ ಯೋಧರಿಗೆ ಸ್ವಸ್ಥಾನಕ್ಕೆ ತೆರಳುವ ಆಜ್ಞೆಯೀಯುತ್ತಾನೆ. **ನೋಡಿ-ಉತ್ಸವ ಕವಾಯತಿ; ಕವಾಯತಿ.** (ಸಿ.ಜಿ.ಪಿ.)

**ಗೌರಾಮಿ :** ಪರ್ಸಿಫಾರ್ಮಿಸ್ ಗಣದ ಆಸ್ಫ್ರೋನಿಮಿಡೆ ಕುಟುಂಬಕ್ಕೆ ಸೇರಿದ ಮೀನುಗಳಿಗೆ ಇರುವ ಸಾಮಾನ್ಯ ಹೆಸರು. ಶಾಸ್ತ್ರೀಯ ನಾಮ ಆಸ್ಫ್ರೋನಿಮಸ್ ಗೊರಾಮಿ. ಮೂಲತಃ ಇಂಡೊನೇಷ್ಯ, ಥೈಲೆಂಡ್, ಮಲೇಶಿಯ, ಕಾಂಬೋಡಿಯ, ವಿಯಟ್ನಾಂ ದೇಶಗಳ ಸಿಹಿನೀರು ಪ್ರದೇಶಗಳಲ್ಲಿ ವಾಸಿಸುವ ಮೀನು. ಈಗ ಈ ಮೀನನ್ನು ಭಾರತ, ಫಿಲಿಪೀನ್ಸ್, ಶ್ರೀಲಂಕ, ಮಡಗಾಸ್ಕರ್ ಮೊದಲಾದ ದೇಶಗಳಲ್ಲಿಯೂ ಸಾಕಲಾಗುತ್ತಿದೆ. 1916 ರಲ್ಲಿ ಜಾವ ಮತ್ತು ಮಾರಿಷಸ್ ನಿಂದ ತಮಿಳುನಾಡಿಗೆ ತರಲಾದ ಗೌರಾಮಿಗಳನ್ನು ಸಾಕಿ ಭಾರತದಲ್ಲಿ ನೆಲೆಗೊಳ್ಳುವಂತೆ ಮಾಡಲಾಯಿತು. ಇದು ಉಷ್ಣವಲಯದ ಮೀನಾಗಿದ್ದು $15^0$ ಸೆ. ಗಿಂತ ಕಡಿಮೆ ಉಷ್ಣತೆಯ ಶೀತಲ ನೀರಿನಲ್ಲಿ ಬದುಕಿರಲಾರದು. ಇದು ಸುಮಾರು 65 ಸೆಂಮೀ ವರೆಗೆ ಬೆಳೆಯಬಲ್ಲುದು. ಕಿವಿರು ಗೂಡಿನಲ್ಲಿ ಶ್ವಾಸನೇಂದ್ರಿಯ ಗಳಿರುವುದರಿಂದ ಇದು ನೇರವಾಗಿ ನೀರಿನ ಹೊರಗಿನ ಗಾಳಿಯನ್ನು ಉಸಿರಾಟಕ್ಕೆ ಬಳಸಿಕೊಳ್ಳಬಲ್ಲುದು. ಗೌರಾಮಿ ಪ್ರಧಾನವಾಗಿ ಸಸ್ಯಾಹಾರಿ; ನೀರಿನಲ್ಲಿ ಬೆಳೆಯುವ ಮೃದು ಜಲಸಸ್ಯಗಳನ್ನು ತಿಂದು ಜೀವಿಸುತ್ತದೆ. ಇದಲ್ಲದೆ ಕೆಲವು ಬಾರಿ ಸಣ್ಣ ಹುಳ, ಸೀಗಡಿ, ಕೀಟದ ಮರಿಗಳು, ಇತ್ಯಾದಿಗಳನ್ನು ತಿನ್ನುತ್ತದೆ. ಮರಿ ಗೌರಾಮಿಗಳು ರೋಟಿಫರ್ ಮತ್ತು ಇನ್ಫುಸೋರಿಯನ್ ಜಾತಿಯ ಸೂಕ್ಷ್ಮ ಪ್ರಾಣಿ ಪ್ಲವಕಗಳನ್ನು ತಿನ್ನುತ್ತವೆ. ಈ ಮೀನು ಕೃತಕ ಆಹಾರವನ್ನೂ ತಿನ್ನುತ್ತವಾದ್ದರಿಂದ ಇವು ಸಾಕಣೆಗೆ ಯೋಗ್ಯವಾಗಿವೆ. ಆದರೆ ಮಂದಗತಿಯ ಬೆಳವಣಿಗೆಯ ಕಾರಣ ಭಾರತದಲ್ಲಿ ಈ ಮೀನನ್ನು ಅಷ್ಟಾಗಿ ಸಾಕುವುದಿಲ್ಲ.



ಅಂಡಾಕಾರದ ಮತ್ತು ಪಾರ್ಶ್ವದಿಂದ ಪಾರ್ಶ್ವಕ್ಕೆ ಚಪ್ಪಟೆಯಾದ ದೇಹ, ಭುಜದ ರೆಕ್ಕೆಯ ಬುಡದಲ್ಲಿರುವ ಕಪ್ಪು ಚುಕ್ಕೆ, ಮರಿ ಮೀನುಗಳಲ್ಲಿರುವ ನಾಲ್ಕೈದು ಉದ್ದ ಪಟ್ಟೆಗಳು - ಈ ಮೀನಿನ ಪ್ರಧಾನ ಲಕ್ಷಣಗಳು. ಗೌರಾಮಿ ಮೀನು ವರ್ಷಾದ್ಯಂತ ಸಂತಾನೋತ್ಪತ್ತಿ ಮಾಡುತ್ತದೆ. ಸಾಮಾನ್ಯವಾಗಿ ಬೇಸಿಗೆಯಲ್ಲಿ ಅಂದರೆ, ಏಪ್ರಿಲ್-ಮೇ ತಿಂಗಳಲ್ಲಿ ಸಂತಾನಾಭಿವೃದ್ಧಿ ತ್ವರಿತವಾಗಿರುತ್ತದೆ. ಈ ಮೀನು ಕೊಳಗಳಲ್ಲಿ ಬೆಳೆಯುವ ಸಸ್ಯಗಳ ಇಲ್ಲವೆ ಹುಲ್ಲಿನ ನಡುವೆ ಗೂಡುಕಟ್ಟಿ ಮೊಟ್ಟೆಯಿಡುತ್ತದೆ. ಸುಮಾರು 10 ದಿವಸಗಳಲ್ಲಿ ಮೊಟ್ಟೆಗಳು ಒಡೆದು ಮರಿಯಾಗುತ್ತವೆ. ಮೊಟ್ಟೆಗಳು ಹಳದಿ ಮಿಶ್ರಿತವಾಗಿದ್ದು ಅರೆಪಾರದರ್ಶಕವಾಗಿರುತ್ತವೆ. ತಂದೆ ತಾಯಿ ಮೀನುಗಳು ಸುಮಾರು ನಾಲ್ಕುವಾರಗಳ ವರೆಗೆ ಮರಿಗಳನ್ನು ರಕ್ಷಿಸುತ್ತವೆ.

ಅಕ್ವೇರಿಯಂಗಳಲ್ಲಿ ಈ ಮೀನುಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಬ್ಲೂ ಗೌರಾಮಿ, ಮೂರು ಚುಕ್ಕೆ ಗೌರಾಮಿ, ಕುಬ್ಜ ಗೌರಾಮಿ, ಹೊಂಬಣ್ಣದ ಗೌರಾಮಿ ಹೀಗೆ ಹಲವಾರು ಬಗೆಯ ತಳಿಗಳನ್ನು ಅಭಿವೃದ್ಧಿ ಪಡಿಸಿ ಮಾರಾಟ ಮಾಡಲಾಗುತ್ತಿದೆ. ಈವರೆಗೆ ಸುಮಾರು 90 ತಳಿಗಳನ್ನು ಗುರುತಿಸಲಾಗಿದೆ. (ಬಿ.ಎನ್.;ಟಿ.ಎಸ್.ವಿ.)

**ಗೌರಿ :** ಪಾರ್ವತಿಯ ರೂಪಾಂತರ. ಪೂಜಿಸುವುದರಿಂದ ಸಂತುಷ್ಟಳಾಗಿ ಸರ್ವಾಭೀಷ್ಟಗಳನ್ನು ಕೊಡುತ್ತಾಳೆಂದು ಪುರಾಣಗಳು ಹೇಳುತ್ತವೆ. ಚೈತ್ರ ಮೊದಲಾದ ಹನ್ನೆರಡು ಚಾಂದ್ರಮಾಸಗಳಲ್ಲೂ ಬರುವ ಶುಕ್ಲ ತೃತೀಯಾ ಮತ್ತು ಕೃಷ್ಣತೃತೀಯಾ ತಿಥಿಗಳಲ್ಲಿ ಗೌರಿಯನ್ನು ಬೇರೆ ಬೇರೆ ಹೆಸರುಗಳಿಂದ ಪೂಜಿಸುವ ವಿಧಾನ ಪುರಾಣಗಳಲ್ಲಿ ಉಕ್ತವಾಗಿದೆ. ತೃತೀಯಾತಿಥಿ ಮಾತ್ರವಲ್ಲದೆ ವೈಶಾಖ ಶುಕ್ಲಪಂಚಮಿ, ಜೇಷ್ಠ ಶುಕ್ಲ ಪ್ರಥಮಾ ಶ್ರಾವಣಮಾಸದ ಎಲ್ಲ ಮಂಗಳವಾರಗಳು, ಸೂರ್ಯ ಹಸ್ತ ನಕ್ಷತ್ರವನ್ನು ಪ್ರವೇಶಿಸುವ ದಿನ- ಈ ಕಾಲಗಳಲ್ಲೂ ಗೌರೀ ಪೂಜೆಯನ್ನು ಮಾಡಬೇಕೆಂದಿದೆ. ಗೌರ (ಹಳದಿ-ಬಿಳುಪು ಮಿಶ್ರ) ವರ್ಣದ ಶರೀರದಿಂದ ಕೂಡಿ ಪಾರ್ವತಿ ರೂಪಾಂತರವನ್ನು ತಳೆದುದರಿಂದ ಆಕೆಗೆ ಗೌರೀ ಎಂದು ಹೆಸರು ಬಂದಿದೆ. ಈ ವಿಚಾರವಾಗಿ ಒಂದು ಪೌರಾಣಿಕ ಕಥೆಯೂ ಇದೆ.

ದಕ್ಷಬ್ರಹ್ಮನಿಗೆ ಕಾಳೀ ಎಂಬ ಮಗಳಿದ್ದಳು. ಆಕೆ ಕನ್ನೈದಿಲೆಯಂತೆ ಕಪ್ಪುಬಣ್ಣದಿಂದ ಕೂಡಿದ್ದಳು. ದಕ್ಷ ಆಕೆಯನ್ನು ಈಶ್ವರನಿಗೆ ಕೊಟ್ಟು ವಿವಾಹವನ್ನು ಮಾಡಿದ್ದ. ಶಿವನೂ ಆಕೆಯೊಡನೆ ಸಂತೋಷದಿಂದಿದ್ದ. ಒಮ್ಮೆ ಆಸ್ಥಾನ ಮಂಟಪದಲ್ಲಿ ವಿಷ್ಣು ಮತ್ತು ದೇವತೆಗಳೊಡನೆ ಈಶ್ವರ ತನ್ನ ಪತ್ನಿಯನ್ನು ಕೃಷ್ಣ ವರ್ಣಳಾದ ಕಾಳಿಯೇ ಬಾ, ನಿನ್ನ ಬಣ್ಣ ಕಪ್ಪಾಗಿದ್ದರೂ ಸೌಂದರ್ಯದಿಂದ ಕೂಡಿದ ನಿನ್ನ ರೂಪ ನನಗೆ ಪ್ರಿಯವಾಗಿದೆ ಎಂದು ಹೇಳಿದ. ಈ ಮಾತನ್ನು ಕೇಳಿದ ಕಾಳಿ ಲಜ್ಜಿತಳಾಗಿ, ದುಃಖಿಸಿ ತನ್ನ ಕಪ್ಪು ದೇಹವನ್ನು ನೀಗಲು ದೇವಸಮುದಾಯದೆದುರಿನಲ್ಲೇ ಅಗ್ನಿಪ್ರವೇಶಮಾಡಿ ಮತ್ತೆ ಪರ್ವತರಾಜನಿಗೆ ಮಗಳಾಗಿ ಗೌರವರ್ಣ ಶರೀರದಿಂದ ಕೂಡಿದವಳಾಗಿ ಹುಟ್ಟಿ ಈಶ್ವರನನ್ನೇ ವಿವಾಹವಾದಳು. ಈ ಬಗ್ಗೆ ಇನ್ನೊಂದು ಕಥೆ ಇದೆ. ಶುಂಭ ನಿಶುಂಭರೆಂಬ ದೈತ್ಯರು ಲೋಕಕಂಟಕರಾಗಿ ದೇವತೆಗಳನ್ನು ತೊಂದರೆಪಡಿಸುತ್ತಿರಲು ದೇವತೆಗಳೆಲ್ಲ ಪಾರ್ವತಿಯನ್ನು ಮೊರೆಹೊಕ್ಕರು. ಆಗ ಪಾರ್ವತಿಯ ಶರೀರದಿಂದ ಕೌಶಿಕಿ ಎಂಬ ಸುಂದರಿ ಆವಿರ್ಭವಿಸಿ ಆ ರಾಕ್ಷಸರನ್ನು ಸಂಹರಿಸಿದಳು. ಕೌಶಿಕಿ ಆವಿರ್ಭವಿಸಿದ ಮೇಲೆ ಪಾರ್ವತಿ ಕಪ್ಪಾಗಿ ಕಂಡಳು, ಶಿವ ಆಕೆಯನ್ನು ಕಾಳಿ ಎಂದು ಕರೆದ. ಆಗ ಪಾರ್ವತಿ ತಪಸ್ಸುಮಾಡಿ ಗೌರಶರೀರವನ್ನು ಪಡೆದಳು.

ಕಥೆಯ ನಿರೂಪಣೆಯಲ್ಲಿ ಬದಲಾವಣೆ ಇದ್ದರೂ ಕಪ್ಪುಶರೀರವನ್ನು ತ್ಯಜಿಸಿ ಗೌರ ಶರೀರವನ್ನು ಪಡೆದ ಕಾರಣ ಪಾರ್ವತಿಗೆ ಗೌರಿ ಎಂಬ ಅನ್ವರ್ಥನಾಮ ಬಂತು ಎಂಬ ವಿಷಯ ಸತ್ಯ. ಭಾದ್ರಪದ ಶುದ್ಧ ತೃತೀಯಾ ದಿವಸಾದಿಯಾಗಿ ಪಾರ್ವತಿ-ಆವಿರ್ಭವಿಸಿದುದರಿಂದ ಆ ದಿವಸ ಸ್ವರ್ಣಗೌರೀವ್ರತವನ್ನು ತಪ್ಪದೆ ಆಚರಿಸುವುದು ಕರ್ನಾಟಕದಲ್ಲಿ ರೂಢಿಯಲ್ಲಿದೆ.

ಪೂಜೆಗೆ ಮೊದಲು ಜನ್ಮಜನ್ಮಾಂತರದಲ್ಲಿ ಸೌಭಾಗ್ಯ ಮತ್ತು ಪುತ್ರಪೌತ್ರ ಧನ ಧಾನ್ಯೈಶ್ವರ್ಯಗಳು ಲಭಿಸಲು ವ್ರತವನ್ನು ಮಾಡುತ್ತೇನೆಂದು ಸಂಕಲ್ಪ ಮಾಡಬೇಕು. ಬಳಿಕ ಗೌರಿಯನ್ನು ಆಹ್ವಾನಿಸಿ ಆಸನ ಪಾದ್ಯ ಅರ್ಘ್ಯ ಆಚಮನ ಸ್ನಾನವಸ್ತ್ರ ಚಂದನ ಸೌಭಾಗ್ಯದ್ರವ್ಯ (ಅರಿಶಿನ-ಕುಂಕುಮ) ಮತ್ತು ಪುಷ್ಪಗಳನ್ನು ಸಮರ್ಪಣೆ ಮಾಡಿ ಅಷ್ಟೋತ್ತರ ಶತನಾಮಗಳಿಂದ ಪೂಜಿಸಬೇಕು. ಬಳಿಕ ಧೂಪ ದೀಪ ನೈವೇದ್ಯ ದಕ್ಷಿಣೆ ಸಹಿತ ತಾಂಬೂಲವನ್ನು ಸಮರ್ಪಿಸಿ ನೀರಾಜನವನ್ನು ಬೆಳಗಿ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಪುತ್ರಂ ದೇಹಿ ಧನಂ ದೇಹಿ ಸೌಭಾಗ್ಯಂ ದೇಹಿ ಸುವ್ರತೇ! ಅನ್ಯಾಂಶ್ಚ ಸರ್ವಕಾಮಾಂಶ್ಚ ದೇಹಿ ದೇವಿ ನಮೋಸ್ತುತೇ-ಎಂದು ಪ್ರಾರ್ಥಿಸಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು.

ಸ್ವರ್ಣಗೌರೀವ್ರತ ಕಥೆ : ಸರಸ್ವತೀ ತೀರದಲ್ಲಿ ವಿಮಲಾ ಎಂಬ ಪಟ್ಟಣವಿತ್ತು. ಅಲ್ಲಿಗೆ ಚಂದ್ರಪ್ರಭ ಎಂಬಾತ ರಾಜ. ಆತನಿಗೆ ಇಬ್ಬರು ಹೆಂಡಿರು. ಆತನಿಗೆ ಜ್ಯೇಷ್ಠ ಪತ್ನಿಯಲ್ಲಿ ಅಧಿಕವಾದ ಪ್ರೀತಿ ಇತ್ತು. ಒಮ್ಮೆ ರಾಜ ಬೇಟೆಗಾಗಿ ಕಾಡಿಗೆ ಹೋದ. ಬೇಟೆ ಎಲ್ಲ ಮುಗಿದ ಮೇಲೆ ಬರುವಾಗ ಒಂದೆಡೆಯಲ್ಲಿ ಅಪ್ಸರೆಯರೆಲ್ಲ ಸೇರಿ ದೇವಿಯ ಅರ್ಚನೆ ಮಾಡುತ್ತಿದ್ದುದನ್ನು ಕಂಡು ಅದೇನೆಂದು ಪ್ರಶ್ನಿಸಿದ. ಆಗ ಅವರು ತಾವು ಮಾಡುತ್ತಿದ್ದ ಸ್ವರ್ಣಗೌರೀಪೂಜೆಯ ವಿಷಯವನ್ನು ತಿಳಿಸಿ ಸರ್ವಸಂಪದ್ಯಭಿವೃದ್ಧಿಕರವಾದ ಆ ವ್ರತವನ್ನು ಆತನೂ ಮಾಡುವಂತೆ ಪ್ರೇರೇಪಿಸುತ್ತಾರೆ. ಭಾದ್ರಪದ ಶುದ್ಧ ತೃತೀಯವಾದ ಅಂದೇ ಸಂಕಲ್ಪಮಾಡಿ ಹದಿನಾರು ಗಂಟುಗಳುಳ್ಳ ದಾರವನ್ನು ಬಲಗೈಗೆ ಕಟ್ಟಿಕೊಂಡು ವ್ರತವನ್ನು ಮಾಡಿ ಮುಗಿಸುತ್ತಾನೆ. ಅನಂತರ ಅರಮನೆಗೆ ಹಿಂತಿರುಗಿ ಬಂದು ತನ್ನ ಪತ್ನಿಯರಿಗೆ ಗೌರೀವ್ರತದ ಮಹಿಮೆಯನ್ನು ತಿಳಿಸುತ್ತಾನೆ. ಜ್ಯೇಷ್ಠ ಪತ್ನಿ ಆತನ ಕೈಯಲ್ಲಿ ಕಟ್ಟಿದ್ದ 16 ಗ್ರಂಥಿಗಳಿಂದ ಕೂಡಿದ ದಾರವನ್ನು ನೋಡಿ ಕುಪಿತಳಾಗಿ, ರಾಜ ಬೇಡವೆಂದು ತಡೆದರೂ ಕೇಳದೆ ಅದನ್ನು ಕಿತ್ತು ಒಂದು ಒಣಗಿದ ಮರದ ಮೇಲಕ್ಕೆಸೆಯುತ್ತಾಳೆ. ಕೂಡಲೆ ಆ ಮರ ಚಿಗುರುತ್ತದೆ. ಕಿರಿಹೆಂಡತಿ ಅದನ್ನು ನೋಡಿ ಕೂಡಲೆ ಆ ಸೂತ್ರವನ್ನು ತೆಗೆದುಕೊಂಡು ತನ್ನ ಕೈಗೆ ಕಟ್ಟಿಕೊಳ್ಳುತ್ತಾಳೆ. ಅದರ ಮಹಾತ್ಮ್ಯದಿಂದ ಆಕೆ ಪತಿಗೆ ಪ್ರೀತಿಪಾತ್ರಳಾಗುತ್ತಾಳೆ. ಅಪಚಾರವೆಸಗಿದ ಜ್ಯೇಷ್ಠಭಾರ್ಯೆ ಪತಿಯಿಂದ ತ್ಯಕ್ತಳಾಗಿ ದುಃಖದಿಂದ ಕಾಡಿಗೆ ಹೋಗುತ್ತಾಳೆ. ಯಾವ ಮುನಿಯೂ ಅವಳನ್ನು ಹತ್ತಿರಕ್ಕೆ ಸೇರಿಸುವುದಿಲ್ಲ. ಕೊನೆಗೆ ನಿರಾಹಾರಳಾಗಿ ಗೌರಿಯನ್ನೆ ಧ್ಯಾನಿಸುತ್ತಾಳೆ. ಆಗ ಗೌರಿ ಪ್ರತ್ಯಕ್ಷಳಾಗುತ್ತಾಳೆ. ಗೌರಿಯಿಂದ ವರಪಡೆದ ರಾಣಿ ಭಕ್ತಿಶ್ರದ್ಧೆಗಳಿಂದ ಗೌರೀವ್ರತವನ್ನು ಆಚರಿಸುತ್ತಾಳೆ. ಬಳಿಕ ಅವಳಿಗೆ ಸರ್ವವಿಧವಾದ ಸಂಪತ್ತೂ ಲಭಿಸುತ್ತದೆ. ಪತಿಯೊಡನೆ ಸುಖದಿಂದ ಬಹುಕಾಲ ಜೀವಿಸಿದ್ದು ಮರಣಾನಂತರ ಶಿವಲೋಕವನ್ನು ಪಡೆಯುತ್ತಾಳೆ.

ಹೀಗೆಯೇ ಪ್ರತಿಯೊಂದು ಗೌರೀ ವ್ರತಕ್ಕೂ ಒಂದೊಂದು ವ್ರತಕಥೆ ಇದೆ.

ಗೌರೀವ್ರತದ ದಿನ ಸ್ನಾನಾನಂತರ ನದಿಯ ಸಮೀಪಕ್ಕೆ ಹೋಗಿ ಶುಭವೇಳೆಯಲ್ಲಿ ಪೂಜಿಸಿ ನದಿಯಲ್ಲಿರುವ ಮರಳನ್ನು ತೆಗೆದುಕೊಂಡು ವಸ್ತ್ರದ ಮೇಲಿಟ್ಟು ಹಿಂಡಿ ಗೌರಿಯ

ಆಕಾರದಂತೆ ಮಾಡಿ ಅದನ್ನು ಪೂಜಿಸಿ ಬಳಿಕ ವಾದ್ಯದೊಡನೆ ಗೃಹಕ್ಕೆ ತಂದು ವ್ರತವನ್ನು ಮಾಡುವುದು ಈಗಲೂ ರೂಢಿಯಲ್ಲಿದೆ. ಕೆಲವರು ದಾರಕ್ಕೆ 16 ಗಂಟುಗಳನ್ನು ಹಾಕಿ ಅದರಲ್ಲೇ ಗೌರಿಯನ್ನು ಆವಾಹನೆ ಮಾಡಿ ಪೂಜಿಸುತ್ತಾರೆ. ಪೂಜೆ ಮಾಡಿದ ದಿನವೇ ವಿಸರ್ಜಿಸುವುದು ವಾಡಿಕೆ. ಕೆಲವು ದಿನಗಳಿಟ್ಟುಕೊಂಡಿದ್ದು ಪೂಜಿಸಿ ಶುಭದಿನವನ್ನು ನೋಡಿ ವಿಸರ್ಜಿಸುವುದೂ ಉಂಟು. ಗೌರೀಪೂಜೆಯ ಸಂದರ್ಭದಲ್ಲಿ ಮೊರದಲ್ಲಿ ಐದು ವಿಧ ಧಾನ್ಯ, ಹಣ್ಣು, ಸುಗಂಧದ್ರವ್ಯ, ಮಂಗಳದ್ರವ್ಯಗಳನ್ನು ಇಟ್ಟು ಪೂಜಿಸಿ ವಿಸರ್ಜನೆಯಾದ ಬಳಿಕ ಅದನ್ನು ಸುಮಂಗಲಿಯರಿಗೆ ಕೊಡುವುದು ಇಂದಿಗೂ ರೂಢಿ. ಇದನ್ನು ಗೌರಿಬಾಗಿನ ಎಂದು ಕರೆಯುತ್ತಾರೆ. ಸ್ವರ್ಣಗೌರೀ ವ್ರತವನ್ನು ತಪ್ಪದೆ ಪ್ರತಿವರ್ಷದಲ್ಲೂ ಆಚರಿಸುತ್ತಾರೆ. ಗೌರಿಯನ್ನು ಎಲ್ಲ ಮನೆಗಳಲ್ಲೂ ಇಡುವುದಿಲ್ಲ. ಇಡುವ ಪದ್ಧತಿ ಇಲ್ಲದವರು ಗೌರಿಯನ್ನು ಇಟ್ಟು ಪೂಜೆಮಾಡುವ ಮನೆಗೆ ಹೋಗಿ ಅಲ್ಲೇ ವಿಧಿವತ್ತಾಗಿ ಗೌರಿಯನ್ನು ಪೂಜಿಸುತ್ತಾರೆ. ಸ್ತ್ರೀಯರಿಗೆ ಇದೊಂದು ಸಂಭ್ರಮದ ಹಬ್ಬ.

ವಿವಾಹದ ದಿವಸದಲ್ಲಿ ಕನ್ಯಾದಾನಕ್ಕೆ ಪೂರ್ವಭಾವಿಯಾಗಿ ಕನ್ಯೆ ಗೌರೀಪೂಜೆಯನ್ನು ಮಾಡುವುದು ಕೆಲವರಲ್ಲಿರುವ ಪದ್ಧತಿ.

ಸ್ವರ್ಣಗೌರೀ ಪೂಜೆಯಂತೆಯೇ ಮಂಗಳಗೌರೀ ಪೂಜೆಯೂ ಬಹು ಮುಖ್ಯವಾದ್ದು. ಸ್ತ್ರೀಯರು ಇದನ್ನು ಸೌಮಾಂಗಲ್ಯ ವೃದ್ಧಿಗಾಗಿ ಮಾಡುತ್ತಾರೆ. ಶ್ರಾವಣಮಾಸದ ಎಲ್ಲ ಮಂಗಳವಾರಗಳಲ್ಲೂ ಈ ವ್ರತವನ್ನು ಮಾಡುತ್ತಾರೆ. ವಿವಾಹವಾದ ವರ್ಷದಲ್ಲಿ ತಂದೆಯ ಗೃಹದಲ್ಲೂ ಬಳಿಕ ನಾಲ್ಕು ವರ್ಷಗಳ ಕಾಲ ಪತಿಯ ಗೃಹದಲ್ಲೂ ಈ ವ್ರತವನ್ನು ಮಾಡಿ ವ್ರತೋದ್ಯಾಪನೆ ಮಾಡುತ್ತಾರೆ. ಸೂರ್ಯ ಹಸ್ತನಕ್ಷತ್ರಕ್ಕೆ ಪ್ರವೇಶಮಾಡುವ ದಿನದಲ್ಲಿ ಹಸ್ತಗೌರೀ ವ್ರತ ಮಾಡಬೇಕು. ಆನೆಯ ಮೇಲೆ ಗೌರಿಯನ್ನಿಟ್ಟು ಪೂಜಿಸುವುದರಿಂದ ಇದಕ್ಕೆ ಹಸ್ತ ಗೌರೀವ್ರತವೆಂದು ಹೆಸರು. ಈ ವ್ರತವನ್ನು ಗಾಂಧಾರಿ ಕುಂತಿಯರು ಮಾಡಿದರೆಂದು ವ್ರತಕಥೆಯಲ್ಲಿದೆ. ಇದಕ್ಕೆ ಐರಾವತ ಪೂಜೆ ಎಂಬ ಹೆಸರೂ ಇದೆ. ಇದರಂತೆಯೇ ಭಿನ್ನ ಭಿನ್ನ ಕಾಲಗಳಲ್ಲಿ ಮಾಡುವ ಹಲವು ಗೌರೀಪೂಜೆಗಳಿವೆ. ಅವುಗಳಲ್ಲಿ ಈಗ ಪ್ರಚಲಿತವಾಗಿರುವ ಕೆಲವು ವ್ರತಗಳ ಹೆಸರು ಮತ್ತು ವ್ರತಾನುಷ್ಠಾನ ಕಾಲ ಹೀಗಿದೆ. ಚೈತ್ರ ಮಾಸದ ಶುಕ್ಲಪಕ್ಷ ತೃತೀಯ ದಿವಸ ವಾರ್ತಾಕ ಗೌರೀವ್ರತ, ವೈಶಾಖ ಮಾಸದ ಶುಕ್ಲಪಕ್ಷ ಪಂಚಮಿಯ ದಿವಸ ಲಾವಣ್ಯಗೌರೀವ್ರತ, ಜ್ಯೇಷ್ಠ ಶುಕ್ಲಪಕ್ಷದ ಪ್ರಥಮಾ ದಿವಸ ಪುನ್ನಾಗಗೌರೀವ್ರತ, ಜ್ಯೇಷ್ಠ ಶುಕ್ಲಪಕ್ಷದ ತೃತೀಯ ದಿವಸ ಕದಳೀಗೌರೀವ್ರತ, ಶ್ರಾವಣ ಶುಕ್ಲಪಕ್ಷದ ತೃತೀಯ ದಿವಸ ಸಂಪದ್ಗೌರೀವ್ರತ, ಮಾಘ ಶುಕ್ಲಪಕ್ಷದ ತೃತೀಯ ದಿವಸ ಮೌನಗೌರೀವ್ರತ.

ಸೂರ್ಯೋದಯ ಕಾಲದಲ್ಲಿ ಉಕ್ತತಿಥಿ ಇರುವ ದಿವಸದಲ್ಲೇ ವ್ರತಾನುಷ್ಠಾನ ಮಾಡಬೇಕು.

ಕನ್ಯಾಕುಬ್ಜದಲ್ಲಿ ಪಾರ್ವತಿ ಗೌರೀಮೂರ್ತಿಯಾಗಿ ಪೀಠಾರೂಢಳಾಗಿದ್ದಳೆಂದು ದೇವಿಭಾಗವತದಲ್ಲಿದೆ. (ಎಸ್.ಎನ್.ಕೆ.)

**ಗೌರಿಬಿದನೂರು :** ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ (ಹಿಂದೆ ಕೋಲಾರ) ಜಿಲ್ಲೆಯ ಒಂದು ತಾಲ್ಲೂಕು; ಅದರ ಮುಖ್ಯ ಪಟ್ಟಣ. ಕೋಲಾರ ಜಿಲ್ಲೆಯ ವಾಯವ್ಯದಲ್ಲಿ ಉ.ಅ. $13^0\ 25^1 - 13^0\ 47^1$ ಮತ್ತು ಪೂ. ರೇ. $77^0\ 22' - 77^0\ 43'$ ನಡುವೆ ಇರುವ ಈ ತಾಲ್ಲೂಕಿನ ಮೇರೆಗಳು ಹೀಗಿವೆ: ಪಶ್ಚಿಮದಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳು, ಉತ್ತರದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕು, ಪೂರ್ವದಲ್ಲಿ ಕೋಲಾರ ಜಿಲ್ಲೆಯ ಗುಡಿಬಂಡೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕುಗಳು, ದಕ್ಷಿಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು. ಗೌರಿಬಿದನೂರು ತಾಲ್ಲೂಕಿನ ವಿಸ್ತೀರ್ಣ 881.7 ಚ.ಕಿಮೀ. ಜನಸಂಖ್ಯೆ 2,71,068 (2001). ಗೌರಿಬಿದನೂರು, ಹೊಸೂರು, ಮಂಚೇನಹಳ್ಳಿ, ನಗರಗೆರೆ, ದಾರಿನಾಯ್ಕನಪಾಳ್ಯ, ತೊಂಡೆಭಾವಿ – ಇವು ಇಲ್ಲಿಯ ಹೋಬಳಿಗಳು. ತಾಲ್ಲೂಕಿನಲ್ಲಿ 204 ಗ್ರಾಮಗಳೂ 2 ಪಟ್ಟಣಗಳೂ ಇವೆ. ತಾಲ್ಲೂಕಿನ ಆಗ್ನೇಯ ದಿಕ್ಕಿನಿಂದ ಉತ್ತರ ದಿಕ್ಕಿಗೆ ಉತ್ತರ ಪಿನಾಕಿನಿ ನದಿ ಹರಿಯುತ್ತದೆ. ಇಡೀ ತಾಲ್ಲೂಕು ಈ ನದಿಕಣಿವೆ ಪ್ರದೇಶ. ಪೂರ್ವದಲ್ಲಿ ನಂದೀದುರ್ಗ ಗಿರಿಶ್ರೇಣಿಯೂ ಪಶ್ಚಿಮದಲ್ಲಿ ಮಾಕಳಿದುರ್ಗದಿಂದ ಆರಂಭವಾಗುವ ಗಿರಿಪಂಕ್ತಿಯೂ ಈ ತಾಲ್ಲೂಕನ್ನು ತಬ್ಬಿ ಹಿಡಿದಿವೆ. ಉತ್ತರ ಪಿನಾಕಿನಿಯ ಒಂದು ಉಪನದಿ ಕುಮುದ್ವತಿ ಅಥವಾ ಕುಂದಾರ್. ಇದು ಬೆಂಗಳೂರು ಜಿಲ್ಲೆಯಲ್ಲಿ ಮಾಕಳಿದುರ್ಗದ ಪಶ್ಚಿಮದಲ್ಲಿ ಉಗಮಿಸಿ, ದಕ್ಷಿಣೋತ್ತರವಾಗಿ ತಾಲ್ಲೂಕಿನ ಮೂಲಕ ಹರಿದು, ಮಧುಗಿರಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮಾಕಳಿದುರ್ಗದ ಪೂರ್ವದಿಂದ ಸಣ್ಣ ಹೊಳೆಯೊಂದು ತೊಂಡೆಭಾವಿ ಹೋಬಳಿಯ ಮೂಲಕ ಹರಿದು ಬೊಮ್ಮಸಂದ್ರಕ್ಕೆ ಪೂರ್ವದಲ್ಲಿ ಉತ್ತರ ಪಿನಾಕಿನಿಯನ್ನು ಕೂಡುತ್ತದೆ.

ತಾಲ್ಲೂಕು ಅಕ್ಕಪಕ್ಕದ ತಾಲ್ಲೂಕುಗಳಿಗಿಂತ ತಗ್ಗಿನಲ್ಲಿದೆ. ನೆಲ ಸಡಿಲ, ಫಲವತ್ತು. ಗೌರಿಬಿದನೂರು ಪಟ್ಟಣದ ಬಳಿ ನೀರು ಮೇಲೆಯೇ ಸಿಗುತ್ತದೆ. ಜೊತೆಗೆ ನದೀ ನಾಲೆಗಳಿಂದ ನೀರಾವರಿ ಸೌಕರ್ಯವಿದೆ. ಬತ್ತ, ಕಬ್ಬು, ಅರಸಿನ, ತೆಂಗು, ಅಡಕೆ ಮುಖ್ಯ ಬೆಳೆಗಳು. ಬೆಟ್ಟ ಪ್ರದೇಶದಲ್ಲಿ ಮರಸೇಬು ವಿಶೇಷ.

ಬೆಂಗಳೂರು-ಗುಂತಕಲ್ ರೈಲುಮಾರ್ಗ ತಾಲ್ಲೂಕಿನ ಮಧ್ಯಭಾಗದಲ್ಲಿ ದಕ್ಷಿಣೋತ್ತರವಾಗಿ ತೊಂಡೆಭಾವಿ, ಗೌರಿಬಿದನೂರು ಮತ್ತು ದೊಡ್ಡ ಕುರುಗೋಡು ಮೂಲಕ ಹಾದುಹೋಗುತ್ತದೆ. ಗೌರಿಬಿದನೂರು ಪಟ್ಟಣದಿಂದ ಗುಡಿಬಂಡೆ, ಚಿಕ್ಕಬಳ್ಳಾಪುರ, ಹಿಂದೂಪುರ ಮುಂತಾದ ಸ್ಥಳಗಳಿಗೂ ತೊಂಡೆಭಾವಿಯಿಂದ ಮಧುಗಿರಿಗೂ ರಸ್ತೆಗಳುಂಟು.

ಗೌರಿಬಿದನೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ಇದು ಕೋಲಾರಕ್ಕೆ ವಾಯವ್ಯದಲ್ಲಿ 90 ಕಿಮೀ ದೂರದಲ್ಲಿ ಉತ್ತರ ಪಿನಾಕಿನಿ ನದಿಯ ಎಡದಂಡೆಯ ಮೇಲಿದೆ. ಬೆಂಗಳೂರು–ಗುಂತಕಲ್ ರೈಲುಮಾರ್ಗದಲ್ಲಿ ಇದೊಂದು ನಿಲ್ದಾಣ. ದೊಡ್ಡಬಳ್ಳಾಪುರ–ಹಿಂದೂಪುರ ರಸ್ತೆ ಇದರ ಮೂಲಕ ಸಾಗುತ್ತದೆ. ಬೆಂಗಳೂರಿನಿಂದ ಇಲ್ಲಿಗೆ 80 ಕಿಮೀ ದೂರ. ಇಲ್ಲಿ ಪುರಸಭೆ ಇದೆ. ಜನಸಂಖ್ಯೆ 80,673 (2001).

ಇದು ಹಿಂದೆ ವಿದುರನ ವಾಸಸ್ಥಳವಾಗಿತ್ತೆಂದೂ ಆದ್ದರಿಂದ ಇದಕ್ಕೆ ವಿದುರೂರು ಎಂಬ ಹೆಸರಿತ್ತೆಂದೂ ಹೇಳಲಾಗಿದೆ. ಇಲ್ಲಿಗೆ 6 ಕಿಮೀ ಉತ್ತರದಲ್ಲಿ, ದೊಡ್ಡ ಕುರುಗೋಡು ಬಳಿ ವಿದುರನೇ ನೆಟ್ಟನೆಂದು ನಂಬಲಾದ ಒಂದು ಅಶ್ವತ್ಥವೃಕ್ಷವುಂಟು. ಇದನ್ನು ಜನರು ಪೂಜಿಸುತ್ತಾರೆ. 1938ರ ಏಪ್ರಿಲ್ 25 ರಂದು ವಿದುರಾಶ್ವತ್ಥದಲ್ಲಿ ಆಗಿನ ಸಂಸ್ಥಾನ ಸರ್ಕಾರದ ಪ್ರತಿಬಂಧಕಾಜ್ಞೆಯನ್ನುಲ್ಲಂಘಿಸಿ ಕಾಂಗ್ರೆಸ್ ಧ್ವಜವನ್ನು ಆರೋಹಣ ಮಾಡಲು ಸತ್ಯಾಗ್ರಹಿಗಳು ಪ್ರಯತ್ನಿಸಿದಾಗ ಪೋಲಿಸರು ಗುಂಡು ಹಾರಿಸಿದ ಫಲವಾಗಿ ಹತ್ತು ಮಂದಿ ಮಡಿದರು. ಮೈಸೂರು ಸಂಸ್ಥಾನದ ಜವಾಬ್ದಾರಿ ಸರ್ಕಾರ ಹೋರಾಟದಲ್ಲಿ ಈ ದುರಂತ ಒಂದು ಮರೆಯದ ನೆನಪು.

ಹಿಂದೆ ಗೌರಿಬಿದನೂರು ಪಟ್ಟಣ ದಾರಿನಾಯ್ಕನಪಾಳ್ಯದ ಒಡೆಯನ ವಶದಲ್ಲಿತ್ತು. ಆತ ತನ್ನ ಮಗಳಾದ ಗೌರಿಗೆ ಇದನ್ನು ಬಳುವಳಿಯಾಗಿ ಕೊಟ್ಟ. ವಿದುರೂರು ಎಂಬ ಹೆಸರಿಗೆ ಆಕೆಯ ಹೆಸರೂ ಸೇರಿಕೊಂಡು ಇದು ಗೌರಿವಿದುರೂರು ಎನಿಸಿಕೊಂಡಿತು. ಅನಂತರ ಮುಸ್ಲಿಮರು ಇದನ್ನು ಗೋರಿಬಿದನೂರು ಎಂದು ಕರೆದರು. ಇದರ ಬಳಿಯಲ್ಲಿ ನಿರ್ಮಿಸಲಾಗಿದ್ದ ಗೋರಿಗಳಿಂದಾಗಿ ಇದಕ್ಕೆ ಈ ಹೆಸರು ಬಂತು. ಉತ್ತರ ಪಿನಾಕಿನಿ ನದಿಯ ಆಚೆಯ ದಡದಲ್ಲಿ, ಹಿರೇಬಿದನೂರಿನಲ್ಲಿ, ಬಿಜಾಪುರದ ಒಬ್ಬ ಶ್ರೀಮಂತನಾಗಿದ್ದ ಹುಸೇನ್ ಷಹ ಮಿರ್ಜಾನ ದರ್ಗಾ ಇದೆ. ಹುಸೇನ್ ಷಹ ಮಿರ್ಜಾ, ಆತನ ಹೆಂಡತಿ ಸೈದನಿ ಬೀ, ಸೊಸೆ ನ್ಯಾಮತ್ ಬೀ, ನ್ಯಾಮತಳ ಮಗಳು ಸಕೀಮಾ ಬೀ ಇವರ ಗೋರಿಗಳಿವೆ. ನ್ಯಾಮತ್‌ಬೀ ತುಂಬ ಪರಿಶುದ್ಧ ಜೀವನ ನಡೆಸುತ್ತಿದ್ದದ್ದರಿಂದ ಇದಕ್ಕೆ ನ್ಯಾಮತ್ ಬೀ ದರ್ಗಾ ಎಂದೂ ಹೆಸರು ಬಂದಿದೆ. ಅದೇ ಕಾಲದಲ್ಲಿ ಕಟ್ಟಲಾದ ದರ್ಗಾ ಒಂದು ಗೌರಿಬಿದನೂರಿನಲ್ಲೂ ಇದೆ. ಅದು ಜಲಾಲ್ ಬಖಾರಿ ವಲಿಯ ದರ್ಗಾ.

ಗೌರಿಬಿದನೂರಿನ ವೆಂಕಟರಮಣ ದೇವಸ್ಥಾನದ ವಿಗ್ರಹದ ಎತ್ತರ 4 ಅಡಿ. ಇಲ್ಲಿಯ ಇನ್ನೊಂದು ದೇವಸ್ಥಾನ ನವಗ್ರಹಗಳದ್ದು. ರೈಲುಮಾರ್ಗ ನಿರ್ಮಾಣವಾದಂದಿನಿಂದ ಗೌರಿಬಿದನೂರು ಪ್ರವರ್ಧಮಾನವಾಗಿದೆ. ಇಲ್ಲೊಂದು ಸಕ್ಕರೆ ಕಾರ್ಖಾನೆಯುಂಟು. ಒಂದು ಕಾಲೇಜೂ ಇದೆ. ಗೌರಿಬಿದನೂರಿನಲ್ಲಿ ಭಾಭಾ ಅಣುಶಕ್ತಿ ಸಂಶೋಧನ ಸಂಸ್ಥೆಗೆ ಸೇರಿದ ಭೂಕಂಪನ ಮಾಪನ ಕೇಂದ್ರವೊಂದುಂಟು. (ಕೆ.ಆರ್)

**ಗೌರೀಶ ಕಾಯ್ಕಿಣಿ :** 1912–2002. ಕನ್ನಡದ ವೈಚಾರಿಕ ಬರೆಹಗಳ ಹೆಸರಾಂತ ಲೇಖಕ. ಇವರು 1912ರ ಸೆಪ್ಟೆಂಬರ್ 12ರಂದು ಉತ್ತರ ಕನ್ನಡ ಜಿಲ್ಲೆ ಗೋಕರ್ಣದಲ್ಲಿ ಜನಿಸಿದರು. ತಂದೆ ವಿಠ್ಠಲರಾವ್ ವೆಂಕಟರಾವ್ ಕಾಯ್ಕಿಣಿ, ತಾಯಿ ಸೀತಾ ಬಾಯಿ. ಇವರ ಪ್ರಾಥಮಿಕ ವ್ಯಾಸಂಗ ಗೋಕರ್ಣದಲ್ಲಿ, ಮಾಧ್ಯಮಿಕ ಶಿಕ್ಷಣ ಕುಮಟೆಯ ಗಿಬ್ ಹೈಸ್ಕೂಲಿನಲ್ಲಿ ಆಯಿತು. ಮುಂದೆ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ವರೆಗೆ ಓದಿದರು. ಅನಂತರ ಬಂಕಿಕೊಡ್ಲಿನ ಆನಂದಾಶ್ರಮ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇರಿಕೊಂಡು ಎಸ್.ಟಿ.ಸಿ. ಶಿಕ್ಷಕರ ತರಬೇತಿಯಲ್ಲಿ ಮುಂಬಯಿ ಪ್ರಾಂತಕ್ಕೆ ಪ್ರಥಮರಾಗಿ ತೇರ್ಗಡೆ ಹೊಂದಿದರು (1945). ಅದೇ ಸಮಯ ಹಿಂದಿ ವಿಶಾರದ ಪರೀಕ್ಷೆ ಯಲ್ಲಿಯೂ ಉತ್ತೀರ್ಣರಾದರು. ಬಂಕಿಕೊಡ್ಲು ಆನಂದಾಶ್ರಮ, ಗೋಕರ್ಣದ ಭದ್ರಕಾಳಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ದುಡಿದು (1937–76) ನಿವೃತ್ತರಾದರು. 1973ರಲ್ಲಿ ಇವರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ಬಂತು.

ಎಳೆವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಬೆಳೆದದ್ದು ತಾಯಿಯ ತವರು ಮನೆಯಲ್ಲಿ; ಮನೆಯ ಸಾಂಪ್ರದಾಯಿಕ ವಾತಾವರಣದಲ್ಲಿ, ತಾಯಿ ಮತ್ತು ದೊಡ್ಡಮ್ಮನವರ ಪ್ರೀತಿಯಲ್ಲಿ. ಮನೆಗೆ ಬರುತ್ತಿದ್ದ ಶಾಂಡಿಲ್ಯ ಮಹಾರಾಜರೆಂಬ ಋಷಿಗಳ

ಮಾರ್ಗದರ್ಶನದಲ್ಲಿ, ಕುಂಭೇಶ್ವರ ಮಾಸ್ತರ್, ಎನ್.ಎಸ್. ಕಾಮತರಂತಹ ಗುರುಗಳು ನೀಡಿದ ಪ್ರೋತ್ಸಾಹದಲ್ಲಿ ಬೆಳೆದರು. ಮನೆಯಲ್ಲಿ ಓದುತ್ತಿದ್ದ ಮರಾಠಿ ಧಾರ್ಮಿಕ ಗ್ರಂಥಗಳಿಂದಲೂ ಧಾರ್ಮಿಕ ವಿಧಿವಿಧಾನಗಳಿಂದಲೂ ಶಾಂಡಿಲ್ಯ ಮಹಾರಾಜರ ವಿದ್ವತ್‌ಪೂರ್ಣ ಪ್ರವಚನದಿಂದಲೂ ಗೌರೀಶರಲ್ಲಿ ಓದುವ ಅಭಿರುಚಿ ಬೆಳೆಯಿತು. ಇವರು ಮೊದಲು ಮರಾಠಿಯ ಭಕ್ತಿಗೀತೆಗಳನ್ನು ಆಧರಿಸಿ ತಮ್ಮದೇ ಆದ ಭಕ್ತಿಗೀತೆ, ರಾಷ್ಟ್ರೀಯ ಸ್ಫೂರ್ತಿಗೀತೆ, ಭಾವಗೀತೆಗಳನ್ನು ರಚಿಸ ತೊಡಗಿದರು. ಮರಾಠಿಯಲ್ಲಿ ಶಾಂಡಿಲ್ಯ ಪ್ರೇಮಸುಧಾ ಎಂಬ ಭಕ್ತಿಗೀತೆಗಳ ಸಂಗ್ರಹ ಪ್ರಕಟಿಸಿದ್ದರು. ಅನಂತರ ನಂದಿನಿ ಪತ್ರಿಕೆಯಲ್ಲಿ ಸಂತ ಮೀರಾಬಾಯಿಯನ್ನು ಕುರಿತು ಒಂದು ಕಥೆ ಬರೆದರು. ಮುಂದೆ ನಂದಿನಿಯಲ್ಲಿ ಅನೇಕ ಲೇಖನಗಳನ್ನು ಬರೆದರು.



ಮಿಂಚಿನ ಬಳ್ಳಿಯಂತು ಬುರ್ಲಿ ಬಿಂದುಮಾಧವಾಚಾರ್ಯರ ಒತ್ತಾಸೆಯಿಂದ ಮನೋವಿಜ್ಞಾನದ ರೂಪರೇಖೆಗಳು ಎಂಬ ಗ್ರಂಥ ಬರೆದರು. ಇದು ಇವರ ಮೊದಲ ಕನ್ನಡ ಗ್ರಂಥ (1941). ಅಂದಿನ ದಿನಗಳಲ್ಲಿ ಕನ್ನಡ ನಾಟಕಗಳ ಅಗತ್ಯವನ್ನು ಮನಗಂಡು ಭೂಕೈಲಾಸ, ಆಶಾನಿರಾಶಾ, ಅಧಃಪಾತ, ಚಂದ್ರಗ್ರಹಣ, ತ್ರಿದಂಡಿ ಸನ್ಯಾಸ, ರಾಜ್ಯಾರೋಹಣ, ಸ್ವಯಂಸೇವಕ, ಮಾಡಿದ್ದೊಂದು ಆದದ್ದೊಂದು, ಚಿದಂಬರ ರಹಸ್ಯ, ಬೆಳ್ಳಿಯ ಬಟ್ಟಲು ಎಂಬ ನಾಟಕಗಳನ್ನು ಕನ್ನಡಕ್ಕೆ ತಂದರು. ಇವುಗಳಲ್ಲಿ ಬೆಳ್ಳಿಯ ಬಟ್ಟಲು ಇಂಗ್ಲಿಷಿನಿಂದಲೂ ಉಳಿದವು ಮರಾಠಿಯಿಂದಲೂ ಅನುವಾದಗೊಂಡಿವೆ. ಈ ನಾಟಕಗಳು ರಂಗಭೂಮಿಗೆ ಬಂದರೂ ಪುಸ್ತಕ ರೂಪದಲ್ಲಿ ಪ್ರಕಟವಾಗಲಿಲ್ಲ.

ಇವರು ಇಂಗ್ಲಿಷ್, ಸಂಸ್ಕೃತ, ಹಿಂದಿ, ಮರಾಠಿ, ಕನ್ನಡ, ಕೊಂಕಣಿ ಭಾಷೆಯ ಕೃತಿಗಳನ್ನೂ ಕಾರಂತ, ಬೇಂದ್ರೆ, ಶಂಬಾ, ಮಾಸ್ತಿ, ಶ್ರೀರಂಗ, ಗೋಕಾಕರ ಕನ್ನಡ ಕೃತಿಗಳನ್ನೂ ಓದಿ ಜ್ಞಾನಕ್ಷಿತಿಜವನ್ನು ವಿಸ್ತರಿಸಿಕೊಂಡರು. ಗಾಂಧಿವಾದ, ಮಾರ್ಕ್ಸವಾದ, ಎಂ. ಎನ್. ರಾಯ್‌ವಾದ, ಲೋಹಿಯಾವಾದಗಳನ್ನೂ ಅರವಿಂದ ತತ್ತ್ವಗಳನ್ನೂ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ವಿಚಾರಗಳನ್ನೂ ಕುರಾನ್, ಬೈಬಲ್‌ಗಳನ್ನೂ ಪಾಶ್ಚಾತ್ಯ, ಪೌರಸ್ತ್ಯ ತತ್ತ್ವಾದರ್ಶನಗಳನ್ನೂ ಅಭ್ಯಸಿಸಿ ತಮ್ಮದೇ ಆದ ವೈಚಾರಿಕ ನಿಲುವನ್ನು ರೂಪಿಸಿಕೊಂಡರು.

ಗಂಡು ಹೆಣ್ಣು (ವಿಲ್ ಡ್ಯುರಾಂಟನ ಕೃತಿಯ ಆಧಾರ), ಮಾರ್ಕ್ಸವಾದ, ವಿಚಾರವಾದ, ನಾಸ್ತಿಕನು ಮತ್ತು ದೇವರು, ಭಾರತೀಯ ಸಂಪ್ರದಾಯಗಳು ಮತ್ತು ಕುಟುಂಬ, ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ, ಪ್ರಜ್ಞಾನೇತ್ರದ ಬೆಳಕಿನಲ್ಲಿ, ಕಟಾಕ್ಷ, ಚೆನ್ನವೀರ ಕಣವಿಯವರ ಕಾವ್ಯದೃಷ್ಟಿ, ಕಂಪಿನಕರೆ (ಬೇಂದ್ರೆ ಕಾವ್ಯದೃಷ್ಟಿ), ವಾಲ್ಮೀಕಿ ತೂಕಡಿಸಿದಾಗ ಮೊದಲಾದ ವೈಚಾರಿಕ ವಿಮರ್ಶೆಯ ಗ್ರಂಥಗಳನ್ನು ಬರೆದರು. ಅನೇಕ ಜೀವನ ಚರಿತ್ರೆ, ವ್ಯಕ್ತಿಚಿತ್ರಗಳನ್ನು ರಚಿಸಿದರು.

ಇವರು ಅನುವಾದ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಲೆನಾಡಿಗರು (ಥಾಮಸ್ ಹಾರ್ಡಿ), ಮಣ್ಣಿನ ಮನುಷ್ಯ, ಬರ್ಲಿನ್ ಬಂತು ಗಂಗೆಯ ತಡಿಗೆ (ಬವಾದಖೇರ್) ಎಂಬ ಮೂರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇವುಗಳಲ್ಲಿ ಮೊದಲನೆಯದು ಇಂಗ್ಲಿಷ್ ಕೃತಿ, ಎರಡನೆಯದು ಒರಿಯಾ, ಕೊನೆಯದು ಮರಾಠಿ.

ಒಲವಿನ ಒಗಟು ಇವರ ಪ್ರಥಮ ಪ್ರಕಟಿತ ನಾಟಕ. ಇಂಗ್ಲಿಷ್, ಕನ್ನಡ, ಮರಾಠಿ, ಕೊಂಕಣಿ ಭಾಷೆಗಳಲ್ಲಿ ಇವರು 55ಕ್ಕೂ ಮಿಕ್ಕು ಗ್ರಂಥಗಳನ್ನು ಬರೆದಿದ್ದಾರೆ. ನ್ಯಾಷನಲ್ ಇಂಟಿಗ್ರೇಶನ್ ಇನ್ ಆಕ್ಷನ್, ಸರ್.ಎಂ. ವಿಶ್ವೇಶ್ವರಯ್ಯ, ಶಾಮರಾವ್ ವಿಠ್ಠಲ ಕಾಯ್ಕಿಣಿ, ಕಾಸ್ಟ್ ಅಂಡ್ ಕಾಸ್ಟಿಸಂ: ಇಟ್ಸ್ ಕಾಸ್ ಅಂಡ್ ಕ್ಯೂರ್, ಇನ್‌ಫ್ಲೂಯೆನ್ಸ್ ಆಫ್ ಕನ್ನಡ ಆನ್ ಕೊಂಕಣಿ – ಇವು ಇವರ ಇಂಗ್ಲಿಷ್ ಕೃತಿಗಳು (ಕೊನೆಯ ಎರಡು ಕೃತಿಗಳು ಪ್ರಕಟವಾಗಿಲ್ಲ.)

ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಇವರು ದಿ ಸರ್ವೆ ಆಫ್ ಹ್ಯೂಮನ್ ಡೆಸ್ಟಿನಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ ದಿ ಫ್ಯೂಚರ್ ಪೊಯೆಟ್ರಿ ಬೈ ಅರಬಿಂದೊ ಎಂಬ ಎರಡು ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಇವರು ಸುಮಾರು ನಲವತ್ತು ಗೌರವ ಗ್ರಂಥಗಳಿಗೆ, ಸ್ಮರಣ ಸಂಚಿಕೆಗಳಿಗೆ ನೂರಾರು ಲೇಖನಗಳನ್ನು ಬರೆದಿದ್ದಾರೆ. ಕನ್ನಡದ ಅಂಕಣ ಬರೆಹಗಾರರಲ್ಲಿ ಕಾಯ್ಕಿಣಿಯವರೂ ಒಬ್ಬರು. ಜನಸೇವಕ ಪತ್ರಿಕೆಗಾಗಿ ಇವರು ಪ್ರತಿವಾರವೂ ಮೂರು ಅಂಕಣ ಬರೆಯುತ್ತಿದ್ದರು (1955–72). ವಾರದ ಉಪ್ಪಿನಕಾಯಿ ಎಂಬ ಅಂಕಣದಲ್ಲಿ ಅಡಿಗೆಭಟ್ಟ ಎಂಬ ಕಾವ್ಯನಾಮದಿಂದಲೂ ವಾರದ ವಿಶ್ವ ಎಂಬ ಅಂಕಣದಲ್ಲಿ ವೈಶ್ವಾನರ ಎಂಬ ಕಾವ್ಯನಾಮದಿಂದಲೂ ಸಾಹಿತ್ಯದರ್ಪಣ ಅಂಕಣವನ್ನು ಜಿ.ವಿ.ಕೆ. ಎಂಬ ಹೆಸರಿನಲ್ಲೂ ಬರೆಯುತ್ತಿದ್ದರು. ಬೆಳಕು (ಧಾರವಾಡ), ನಾಗರಿಕ (ಕಾರವಾರ) ಪತ್ರಿಕೆಗಳ ಪ್ರಧಾನ ಸಂಪಾದಕರಾಗಿದ್ದರು. ಜನಪ್ರಗತಿ, ಸಮನ್ವಯ (ಶಿರಸಿ), ಕರಾವಳಿ ಗ್ರಾಮ ವಿಕಾಸ, ಕಸ್ತೂರಿ, ಗ್ರಾಮ ಜೀವನ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿಯೂ ಇವರು ಅಂಕಣಗಳನ್ನು ಬರೆದಿದ್ದಾರೆ. ಇವರ ಅಪ್ರಕಟಿತ ಕೃತಿಗಳು ಹಾಗೂ ಲೇಖನಗಳ ರಾಶಿ ಅಪಾರವಾಗಿವೆ.

ಇವರು ಪ್ರೋಗ್ರೆಸ್ ಮೈಸೂರ್ ಸಂಪಾದಕ ಮಂಡಳಿ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದ ಸಲಹಾ ಸಮಿತಿ, ಆಕಾಶವಾಣಿ ಸಲಹಾ ಸಮಿತಿ ಇವುಗಳ ಸದಸ್ಯರೂ ಕನ್ನಡ ಜಿಲ್ಲಾ ಲೇಖಕ, ಪ್ರಕಾಶಕ, ಪತ್ರಕರ್ತರ ಸಂಘದ ಅಧ್ಯಕ್ಷರೂ ಆಗಿದ್ದರು. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಗೌರವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶಂಬಾ ವಿಚಾರ ವೇದಿಕೆಯ ಸಂಶೋಧನ ಪ್ರಶಸ್ತಿ, ಉಗ್ರಾಣ ಮಂಗೇಶರಾವ್ ಪ್ರಶಸ್ತಿಗಳು ದೊರಕಿವೆ.

ಇವರ ಪತ್ನಿ ಶಾಂತಾ. ಇವರ ಪುತ್ರ ಜಯಂತ ಕಾಯ್ಕಿಣಿಯವರು ಕನ್ನಡದ ಹೊಸಪೀಳಿಗೆಯ ಮಹತ್ತ್ವದ ಲೇಖಕರಾಗಿದ್ದಾರೆ. ಗೌರೀಶರು ಗೋಕರ್ಣದಲ್ಲಿ 2002ರ ನವೆಂಬರ್ 14ರಂದು ನಿಧನಹೊಂದಿದರು. (ಎಸ್.ಎಂ.ಕೆ.)

**ಗೌವರ್** : ವೇಲ್ಸಿನ ಪಶ್ಚಿಮ ಗ್ಲಮಾರ್ಗನಿನ ಒಂದು ಪರ್ಯಾಯದ್ವೀಪ; ಸ್ವಾನ್‌ಸೀ ಕೌಂಟಿಯ ಅಂಗ. ಇದರ ಉತ್ತರದಲ್ಲಿ ಬರ್ರೀ ಖಾರಿಯೂ ದಕ್ಷಿಣದಲ್ಲಿ ಬ್ರಿಸ್ಟಲ್ ಕಾಲುವೆಯೂ ಇವೆ. ಈ ಪರ್ಯಾಯದ್ವೀಪದ ಬಹುಭಾಗ ಶಿಲಾಮಯ. 45–135 ಮೀ ಎತ್ತರದ ಪ್ರಸ್ಥಭೂಮಿ ಇದನ್ನು ಬಹುತೇಕ ಆವರಿಸಿಕೊಂಡಿದೆ. 180 ಮೀ ಗಿಂತ ಎತ್ತರದ ಗಿರಿಶ್ರೇಣಿಗಳಿವೆ. ಗೌವರಿನ ಹಲವು ಸಣ್ಣ ನದಿಗಳು ರಭಸದಿಂದ ಹರಿಯುತ್ತವೆ. ಪ್ರಸ್ಥಭೂಮಿ ನೆಲವನ್ನು ಆಳವಾಗಿ ಕೊರೆದಿದೆ. ದಕ್ಷಿಣ ಗೌವರಿನ ಕರಾವಳಿ ನಿಸರ್ಗಸೌಂದರ್ಯದಿಂದ ಕೂಡಿದ್ದು ಇಲ್ಲಿ ಪ್ರವಾಸೋದ್ಯಮ ವಿಶೇಷವಾಗಿ ಬೆಳೆದಿದೆ. ಪ್ರವಾಸಿಗರಿಗಾಗಿ ಅಲ್ಲಲ್ಲಿ ವಿಶ್ರಾಂತಿಧಾಮಗಳನ್ನೂ ಉಪವನಗಳನ್ನೂ ನಿರ್ಮಿಸಲಾಗಿದೆ. ಸಮುದ್ರತೀರದ ಕೆಲವು ಪ್ರಪಾತ ಪ್ರದೇಶಗಳನ್ನು ರಾಷ್ಟ್ರೀಯ ಟ್ರಸ್ಟ್‌ಗಳೆಂದು ಸಾರಿ ಅವನ್ನು ರಕ್ಷಿಸಲು ವ್ಯವಸ್ಥೆ ಮಾಡಲಾಗಿದೆ. ಗೌವರ್ ಜನ ತಮ್ಮ ಮೂಲಭಾಷೆ, ಉಡುಪು ಮತ್ತು ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆ.

ಆದಿಮಾನವನ ವಾಸಸ್ಥಾನವಾಗಿ ಗೌವರ್ ಜಿಲ್ಲೆಗೆ ಒಂದು ಇತಿಹಾಸವಿದೆ. 1823 ರಲ್ಲಿ ಪೆವಿಲ್ಯಾಂಡಿನ ಗೋಟ್ ಗುಹೆಯಲ್ಲಿ ಅಂತ್ಯ ಹಳೆಶಿಲಾಯುಗದ ಮಾನವನದೆಂದು ನಿರ್ಣಯಿಸಲಾದ ಒಂದು ಅಸ್ಥಿಪಂಜರ ಸಿಕ್ಕಿತು. ಇದು ಪೆವಿಲ್ಯಾಂಡಿನ ರೆಡ್ ಲೇಡಿ ಎಂದು ಪ್ರಸಿದ್ಧವಾಯಿತು. ಆದರೆ ಇದು ಪುರುಷನ ಅಸ್ಥಿಯೆಂದು ಈಗ ಖಚಿತಗೊಂಡಿದೆ. ಇದರ ಕಾಲಮಾನ 33,000 ವರ್ಷ. ಗೌವರಿನ ಪಶ್ಚಿಮ ದಿಣ್ಣೆ ಪ್ರದೇಶದಲ್ಲಿ ಅನೇಕ ಗೋರಿಕಲ್ಲುಗಳೂ ಬೇರೆಬೇರೆ ಯುಗಗಳ ಗೋರಿದಿಬ್ಬಗಳೂ ಸಿಕ್ಕಿವೆ. ಕಬ್ಬಿಣ ಯುಗದಲ್ಲೂ ಅನಂತರದ ಯುಗಗಳಲ್ಲೂ ಇಲ್ಲಿಯ ಮಲೆತಲೆಗಳ ಮೇಲೆ ಮಾನವವಸತಿ ಇತ್ತು. ರೋಮನರ ಕಾಲದಲ್ಲಿ ಗೌವರಿನ ಲೌಗರ್‌ನಲ್ಲಿ ಜನವಸತಿಯಿತ್ತು. ಆಯ್ಸ್ಟರ್‌ಮೌತ್‌ನಲ್ಲಿ ಒಂದು ಕುಟೀರ ಸಿಕ್ಕಿದೆ. ರೋಮನರ ನಿರ್ಗಮನಕ್ಕೂ ನಾರ್ಮನರ ಆಗಮನಕ್ಕೂ ನಡುವಣ ಕಾಲದಲ್ಲಿ ಕೆಲ್ಟಿಕ್ ಕ್ರೈಸ್ತಧರ್ಮ ಇಲ್ಲಿ ಪ್ರಸಾರವಾಯಿತು. ಆಗ ಇಲ್ಲಿ ಹಲವು ಚರ್ಚುಗಳು ನಿರ್ಮಾಣವಾದವು. ಇದಲ್ಲದೆ ಗೌವರಿನ ಕರಾವಳಿಯಲ್ಲಿ ಸ್ಕಾಂಡಿನೇವಿಯನ್ ಆಕ್ರಮಣದ ಹಲವು ಕುರುಹುಗಳು ಕಂಡುಬರುತ್ತವೆ. ಸ್ಕಾಂಡಿನೇವಿಯನ್ ಹೆಸರುಗಳನ್ನು ಹೋಲುವ ಹಲವು ಸ್ಥಳನಾಮಗಳು ಇಲ್ಲಿವೆ. 1100ರ ಅನಂತರ ವಾರ್‌ವಿಕ್‌ನ ಅರ್ಲ್ ಹೆನ್ರಿ ಡಿ ನ್ಯೂಬರ್ಗ್ ಗೌವರನ್ನು ಗೆದ್ದುಕೊಂಡ. 1536 ರಲ್ಲಿ ಗೌವರನ್ನು ಗ್ಲಮಾರ್ಗನ್ ಕೌಂಟಿಯಲ್ಲಿ ಸೇರಿಸಲಾಯಿತು.

16 ಮತ್ತು 17ನೆಯ ಶತಮಾನಗಳಲ್ಲಿ ಉತ್ತರ ಗೌವರಿನಲ್ಲಿ ಅಲ್ಪಸ್ವಲ್ಪ ಕಲ್ಲಿದ್ದಲು ಗಣಿ ಕೆಲಸ ನಡೆಯುತ್ತಿತ್ತು. ಮೂಲತಃ ಇದು ಒಂದು ಕೃಷಿ ಪ್ರಧಾನ ಜಿಲ್ಲೆ. ಮಿಶ್ರ ವ್ಯವಸಾಯ, ಹೈನು ಉತ್ಪತ್ತಿ ಮುಖ್ಯ. ಬಿಷಪ್‌ಸ್ಟನ್ ಮತ್ತು ರೊಸಿಲಿಗಳಲ್ಲಿ ಮಾರಾಟಕ್ಕಾಗಿ ತರಕಾರಿ ಬೆಳೆಯುತ್ತಾರೆ. (ಎಚ್.ಆರ್.ಆರ್.ಬಿ.)

**ಗೌಸ್, ಯೋಹಾನ್ ಕಾರ್ಲ್ ಫ್ರೀಡರಿಚ್** : 1777–1855. ಪ್ರಪಂಚದ ಸಾರ್ವಕಾಲಿಕ ಮಹಾ ಗಣಿತವಿದ್ವಾಂಸರಲ್ಲಿ ಒಬ್ಬ. ಕ್ರೋನೆಕರನ (1823–91) ಮಾತಿನಲ್ಲಿ 'ನಮ್ಮ ಶತಮಾನದ ಗಣಿತಶಾಸ್ತ್ರ ನೂತನ ವೈಜ್ಞಾನಿಕ ಭಾವನೆಗಳಾಗಿ ಆವಾಹಿಸಿದ್ದೇ ನಿದ್ದರೂ ಅವೆಲ್ಲವೂ ಗೌಸ್ ಪ್ರಣೀತ ವಾದವುಗಳೇ'. ವಿಶ್ಲೇಷಣ ಗಣಿತದ ಸೂಕ್ಷ್ಮಗಳನ್ನು ತನ್ನ 16–17ನೆಯ ವಯಸ್ಸಿನಲ್ಲೇ ಕಂಡುಕೊಂಡು ಆ ಗಣಿತವನ್ನು ಸುಭದ್ರ ತಳಪಾಯದ ಮೇಲೆ ನಿಲ್ಲಿಸಿ ಅದರ ವಿಸ್ತರಣೆಗೆ ಬುನಾದಿ ಸ್ಥಾಪಿಸಿದ ಯುಗಪುರುಷನಿವ. ಅಯೂಕ್ಲಿಡೀಯ ಜ್ಯಾಮಿತಿಯ ಮೂಲ ಭಾವನೆಗಳನ್ನು ಕಂಡುಕೊಂಡು ಆ ಜ್ಯಾಮಿತಿಯ ಸ್ಥಾಪನೆಗೆ ಕಾರಣರಾದವರಲ್ಲಿ ಒಬ್ಬನೀತ. ಅನ್ವಯ ಗಣಿತ, ಖಗೋಳ ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿಯೂ ಕೈಯಾಡಿಸಿ ತನ್ನ ಸ್ಥಿರ ಮುದ್ರೆಗಳನ್ನು ಅಲ್ಲಲ್ಲ ಗೌಸ್ ಒತ್ತಿದ್ದಾನೆ.

ಜರ್ಮನಿಯ ಬ್ರನ್ಸ್‌ವಿಕ್ ಎಂಬಲ್ಲಿ 1777ರ ಎಪ್ರಿಲ್ 30 ರಂದು ಗೌಸ್ ಜನಿಸಿದ. ಕಡು ನಿಷ್ಠುರಿಯೂ ಪ್ರಾಮಾಣಿಕನೂ ಆದ ತಂದೆ, ಬಲು ನಿಶಿತಮತಿಯ ತಾಯಿ, ಎಲ್ಲವನ್ನೂ ಮುಳುಗಿಸುವ ದಟ್ಟದಾರಿದ್ರ್ಯ. ಇಂಥ ಪರಿಸರದಲ್ಲಿ ಕೂಲಿಯೊಂದೇ ಈ ಕೂಸಿನ ಮುಂದಿದ್ದ ಹಾದಿ. ಆದರೆ ತಾಯಿ ಡೊರೋತಿಗೆ ತನ್ನ ಮಗನ ಪ್ರತಿಭೆಯ ಪಾರಲೌಕಿಕತೆಯ ವಿಚಾರದಲ್ಲಿ ಅಪ್ರತಿಮ ವಿಶ್ವಾಸ ವಿದ್ದದ್ದರಿಂದ ಇವನಿಗೆ ವಿದ್ಯಾವ್ಯಾಸಂಗ ಸಾಧ್ಯವಾಯಿತು. ಆಕೆ ತನ್ನ ಗಂಡನ ಪ್ರತಿಗಾಮೀ ಪ್ರವೃತ್ತಿಯನ್ನು ತೀವ್ರವಾಗಿ ಪ್ರತಿಭಟಿಸಿ ಮಗನ ವಿದ್ಯಾಭ್ಯಾಸಕ್ಕೆ ನೆರವಾದಳು. ತೀರ ಎಳವೆಯಲ್ಲೇ ಪ್ರಕಟವಾದ ಗೌಸನ ಪ್ರತಿಭೆ ಈತನ ಮರಣಪರ್ಯಂತವೂ ಅವ್ಯಾಹತವಾಗಿ ಪ್ರಕಾಶಿಸಿತು. ಮೂರು ವರ್ಷದ ಮಗು ಅಕ್ಷರಾಭ್ಯಾಸಕ್ಕೆ ಮೊದಲೇ ಅಂಕಗಳ ಸ್ವರೂಪವನ್ನು ಮನಗಂಡಿತು. ತಂದೆ ಒಂದು ದಿನ ಕೂಲಿ ಬಟವಾಡೆ ಮಾಡುತ್ತಿದ್ದಾಗ ಲೆಕ್ಕತಪ್ಪಿತೆಂದು ಅಕ್ಷರಾಭ್ಯಾಸ ಮಾಡುತ್ತಿದ್ದ ಮಗು ಹೇಳಿತಂತೆ. ಪ್ರಾಯಶಃ ಗೌಸನ ಅನುಪಮ ಜ್ಞಾಪಕಶಕ್ತಿ ಮತ್ತು ಪ್ರತಿಭೆ ಬೇರೆ ಯಾವ ಗಣಿತಜ್ಞರಲ್ಲಿಯೂ ಇರಲಿಲ್ಲ.

ಅಂದು ಜರ್ಮನಿಯಲ್ಲಿ ನಮ್ಮ ಕೂಲಿಮಠದಂಥ ಶಾಲೆಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ನಡೆಯುತ್ತಿತ್ತು. ಇಂಥ ಒಂದು ಶಾಲೆಯಲ್ಲಿ ಗೌಸನ ವಿದ್ಯಾಭ್ಯಾಸ ಪ್ರಾರಂಭವಾಯಿತು. ಇಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ಸೋಮಾರಿಯೂ ಒರಟನೂ ಆಗಿದ್ದ ಉಪಾಧ್ಯಾಯ ಮಕ್ಕಳಿಗೆ ಅತಿ ಕಠಿನವಾದ ಸಂಕಲನ ಲೆಕ್ಕವನ್ನು ಕೊಟ್ಟು ಬಳಿಕ ತಾನು ಗೊರಕೆ ಹೊಡೆಯುತ್ತಿದ್ದ. ಗೌಸ್ ಮೂರನೆಯ ತರಗತಿಯಲ್ಲಿದ್ದಾಗ (ವಯಸ್ಸು 10) ಈ ಕೆಳಗಿನ ಮಾದರಿಯ ಒಂದು ಲೆಕ್ಕವನ್ನು ಉಪಾಧ್ಯಾಯ ಮಕ್ಕಳಿಗೆ ವಿಧಿಸಿದ:

81297 + 81495 + 81693 + ................+ 100899 – ಈ ಶ್ರೇಣಿಯ ಮೊತ್ತವೆಷ್ಟು? ಇದೊಂದು ಸಮಾಂತರ ಶ್ರೇಣಿ; ಇದರಲ್ಲಿ 100 ಪದಗಳಿವೆ. ಇದರ ಸಾಮಾನ್ಯ ವ್ಯತ್ಯಾಸ 198. ಇಂದಿನ ಕಾಲೇಜು ಗಣಿತ ವಿದ್ಯಾರ್ಥಿಗಳಿಗೆ ಪರಿಚಯವಿರುವ ಒಂದು ಸೂತ್ರದ ಅನುಸಾರ

[ಮೊತ್ತ= <u>ಪದಗಳ ಸಂಖ್ಯೆ</u> X (ಮೊದಲ ಪದ+ಕೊನೆಯ ಪದ)]
2

ಉತ್ತರವನ್ನು ಒಡನೆಯೆ ಬರೆಯಬಹುದು. ಆದರೆ ಗೌಸನಿಗೆ ಇಂಥ ಶ್ರೇಣಿಯ ಪರಿಚಯವಾಗಲೀ ಈ ಸೂತ್ರದ ಇರವಿನ ಅರಿವಾಗಲೀ ಇದ್ದೇ ಇರಲಿಲ್ಲ. ಹಾಗಿದ್ದರೂ ಈತನ ಪ್ರತಿಭೆ ಸಮಾಂತರ ಶ್ರೇಣಿಯ ಗುಣವನ್ನು ಕಂಡುಕೊಂಡು ಅದರ ಮೊತ್ತವನ್ನು ಒಂದೇ ಹೆಜ್ಜೆಯಲ್ಲಿ ಪಡೆಯಿತು! ಬಾಲಕ ಗೌಸ್ ತನ್ನ ಸ್ಲೇಟಿನಲ್ಲಿ ಬರೆದದ್ದು ಕೇವಲ ಉತ್ತರವನ್ನು ಮಾತ್ರ. ಇದನ್ನು ಕಂಡು ಬೆರಗಾದ ಉಪಾಧ್ಯಾಯ ಇಂಥ ಪ್ರಚಂಡ ಮೇಧಾವಿಗೆ ತಾನು ಪಾಠ ಹೇಳುವುದು ಮೂರ್ಖತನವೆಂದು ಭಾವಿಸಿ ಈತನಿಗೆ ಅತ್ಯುತ್ತಮವಾದ ಅಂಕಗಣಿತ ಪುಸ್ತಕವನ್ನು ಕೊಂಡುಕೊಟ್ಟು ಮುಂದೆ ಇವನ ಗಣಿತ ವ್ಯಾಸಂಗಕ್ಕೆ ಪ್ರೋತ್ಸಾಹಿಸಿದ. ಅಲ್ಲದೆ ತನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದ ಗಣಿತ ಪ್ರವೀಣ ಮಾರ್ಟಿನ್ ಬಾರ್ಟಲ್ಸ್ ಎಂಬ ತರುಣ ಉಪಾಧ್ಯಾಯನಿಂದ ಗೌಸನಿಗೆ ನೆರವು ದೊರೆಯುವಂತೆ ಏರ್ಪಾಡು ಕೂಡ ಮಾಡಿದ. ಬಾರ್ಟಲ್ಸ್ ಮತ್ತು ಗೌಸ್ ಜೊತೆಗೂಡಿ ಗಣಿತಾಭ್ಯಾಸ ಮಾಡಿ ಹೊಸ ಹೊಸ ಸಾಧನೆಗಳನ್ನು ಕಂಡುಹಿಡಿದರು. ಹತ್ತುವರ್ಷದ ಗೌಸ್ ದ್ವಿಪದ ಪ್ರಮೇಯದ (ಬೈನಾಮಿಯಲ್ ಥಿಯೋರಮ್) ಸಾಧನೆಯನ್ನು ಸಿದ್ಧಿಸಿ ಗಣಿತದ ಇತಿಹಾಸದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿದ.

$$(1+x)^n = 1+\frac{n}{1}x+\frac{n(n-1)}{2!}x^2+\frac{n(n-1)(n-2)}{3!}x^3+......_\,x^n$$

ಎಂಬುದು ದ್ವಿಪದ ಪ್ರಮೇಯದ ನಿರೂಪಣೆ. ಇಲ್ಲಿ n ಒಂದು ಧನ ಪೂರ್ಣಾಂಕ; x ಯಾವುದೇ ನೈಜ ಸಂಖ್ಯೆ. ಈತ n ನ ಬೆಲೆಯ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದರೆ ಬಲಗಡೆಯಲ್ಲಿರುವ ಪದಗಳ ಸಂಖ್ಯೆ ಅನಂತವಾಗುತ್ತದೆ. ಹೀಗೆ ದೊರೆಯುವ ಅನಂತ ಶ್ರೇಣಿ ಅಭಿಸರಿಸಿ ಅದರ ಪರಿಮಿತಿ $(1+x)n$ ಆಗಬೇಕಾದರೆ x ನ ಬೆಲೆಯ ಮೇಲೆ $|x|<1$ ಎಂಬ ನಿರ್ಬಂಧವನ್ನು ವಿಧಿಸಬೇಕು. ಇದನ್ನು ಆವಿಷ್ಕರಿಸಿದ ಗೌಸ್ ಅನಂತ ಶ್ರೇಣಿಗಳ ಅಭಿಸರಣೆ ಮತ್ತು ಅಪಸರಣೆ ಎನ್ನುವ ಫಲವತ್ತಾದ ಮತ್ತು ವಿಶೇಷ ಕೃಷಿ ಮಾಡಿಲ್ಲದ ನೂತನ ಕ್ಷೇತ್ರವನ್ನು ಪ್ರವೇಶಿಸಿದ. ಇದರಿಂದ ಗಣಿತ ಶಾಖೋಪಶಾಖೆಗಳಾಗಿ ಬೆಳೆಯಲು ಅನುಕೂಲವಾಯಿತು. ನ್ಯೂಟನ್ (1642–1727), ಆಯ್ಲರ್ (1707–83) ಮತ್ತು ಲಗ್ರಾಂಜ್ (1736–1813) ಮೊದಲಾದ ಖ್ಯಾತ ಗಣಿತಜ್ಞರ ಕಾಲದ ಗಣಿತಕ್ಕಿಂತ ಭಿನ್ನವಾದ, ಕ್ರಾಂತಿಕಾರಕವಾದ ತಳಭದ್ರವಾದ ಗಣಿತ ಉದ್ಭವಿಸಿತು. ಯಾವುದೇ ಪ್ರಮೇಯವನ್ನು ಸಾರ್ವತ್ರೀಕರಿಸುವ (ಜನರಲೈಸ್) ಮನೋಧರ್ಮ ಗೌಸನದು. ಇದಕ್ಕೆ ಎರಡು ಉದಾಹರಣೆಗಳನ್ನು ಕೊಡಬಹುದು. ಒಂದು ಹೈಪರ್ ಜ್ಯಾಮಿತೀಯ ಅನಂತಸರಣಿ:

$$1+\frac{ab}{c}x+\frac{a(a+1)b(b+1)}{c(c+1)2!}x^2+\frac{a(a+1(a+2)b(b+1)(b+2)}{c(c+1)(c+2)3!}x^3 + ..............\infty$$

ಈ ಅನಂತ ಶ್ರೇಣಿಯಲ್ಲಿ *a, b, c, x* ಪದಗಳು ಯಾವ ನಿರ್ಬಂಧಗಳಿಗೆ ಒಳಪಟ್ಟರೆ ಇದು ಅಭಿಸರಿಸುತ್ತದೆ ಎಂಬುದನ್ನು ಈತ ಪೂರ್ಣವಾಗಿ ವಿಶ್ಲೇಷಿಸಿದ. ಇಲ್ಲಿ *a, b, c, x* ಗಳಿಗೆ ವಿವಿಧ ಬೆಲೆಗಳನ್ನು ಆದೇಶಿಸುವುದರಿಂದ ಬರುವ ಅನೇಕ ಅನಂತ ಶ್ರೇಣಿಗಳು ಗಣಿತ ಮತ್ತು ಭೌತಶಾಸ್ತ್ರಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿವೆ.

ಇಂಥ ಗಣಿತ ಸೃಷ್ಟಿಯ ಹಿನ್ನೆಲೆಯಲ್ಲಿ ಗೌಸ್ ಮಾಡಿದ ತಪಸ್ಸೇ ಕಾರಣ ಎಂಬುದನ್ನು ಮರೆಯಬಾರದು. ಇವನ ಸಾಧನೆಯನ್ನು ಊಹಿಸುವುದೂ ಬಹಳ ಕಷ್ಟ. ಅನವರತವೂ ಇವನ ಮನಸ್ಸು ಗಣಿತ ಸಮಸ್ಯೆಗಳಲ್ಲಿಯೇ ತಲ್ಲೀನವಾಗಿರುತ್ತಿತ್ತು. ಸಾಧಾರಣವಾದ ಲೆಕ್ಕಾಚಾರಗಳು ಇವನಿಗೆ ಲೀಲಾಜಾಲ. ಯಾವುದೋ ಒಂದು ಸಂದರ್ಭದಲ್ಲಿ + ಅಥವಾ – ಚಿಹ್ನೆ ಹಾಕಲು ಹಲವಾರು ದಿವಸಗಳ ಕಾಲವೇ ಚಿಂತಿಸಿದನಂತೆ. ಇಂಥ ಚಿಂತನೆ ವ್ಯರ್ಥ ಕಾಲಹರಣವಲ್ಲವೇ ಎಂದು ಪ್ರಶ್ನಿಸಿದಾಗ ಗೌಸ್ ಕೊಟ್ಟ ಉತ್ತರ 'ನಾನು ಚಿಂತಿಸಿದ ಸಮಸ್ಯೆಗೆ ಉತ್ತರ ಬರುವ ಹಾದಿಯಲ್ಲಿ ವಿಪುಲ ವಿಚಾರಗಳು ಹೊರಹೊಮ್ಮುತ್ತವೆ. ಆದ್ದರಿಂದ ಚಿಂತನೆ ಮಾಡುವವನಿಗೆ ಯಾವ ಸಮಸ್ಯೆಯೂ ಅಪರಿಹಾರ್ಯವಲ್ಲ'.

ಗೌಸನ ಸರ್ವಗ್ರಾಹೀ ಮನಸ್ಸು ಮುಂದೆ ಯೂಕ್ಲಿಡ್ ಜ್ಯಾಮಿತಿಯನ್ನು ಕೂಲಂಕಷವಾಗಿ ವಿಮರ್ಶಿಸಲು ತೊಡಗಿತು. ಅದರ ಸಾಧನೆಗಳನ್ನೂ ಆಧಾರ ಭಾವನೆಗಳನ್ನೂ ಈತ ಪರೀಕ್ಷಿಸಿದ. ಈ ಜಾಡಿನಲ್ಲಿ ಸಾಧನೆ ಎಂಬುದರ ಸರಿಯಾದ ಕಲ್ಪನೆಯನ್ನು ಮೊಟ್ಟಮೊದಲಿಗೆ ನಿರೂಪಿಸಿದವನೇ ಗೌಸ್ ಎಂದು ಹೇಳಬಹುದು. ಅಂದಿನವರೆಗೆ ಎಲ್ಲ ಗಣಿತಜ್ಞರೂ ಯೂಕ್ಲಿಡನ ಅವಿಚ್ಛಿನ್ನ ಭಕ್ತರಾಗಿದ್ದರು. ಗೌಸ್ ಆದರೋ ಯೂಕ್ಲಿಡ್ ಜ್ಯಾಮಿತಿಯ ತಳಪಾಯವನ್ನೆ ಜಗ್ಗಿಸಿ ಅಯೂಕ್ಲಿಡೀಯ ಜ್ಯಾಮಿತಿಗೆ ಪ್ರವರ್ತಕನೆನ್ನಿಸಿದ. ಇವನ ಅತ್ಯಂತ ಹಿರಿಯ ಕಾಣಿಕೆ ಹಾಗೂ ಪ್ರೀತಿಯ ಅಧ್ಯಯನ ಅಂಕಗಣಿತ ಶಾಸ್ತ್ರದಲ್ಲಿ. ಆ ಶಾಸ್ತ್ರಕ್ಕೆ ಗೌಸ್‌ನ ಅಧ್ಯಯನ ಮೆರುಗು ಕೊಟ್ಟಿತು.

ಬಾಲಕ ಗೌಸ್ ಪ್ರಕಟಿಸಿದ ಅಸಮಾನ ಪ್ರತಿಭೆಯನ್ನು ಕೇಳಿ ಸಂತೋಷಪಟ್ಟು ಬ್ರನ್ಸ್‌ವಿಕಿನ ಡ್ಯೂಕ್ ಈತನ ವಿದ್ಯಾಭ್ಯಾಸದ ಪೂರ್ಣ ಜವಾಬ್ದಾರಿ ವಹಿಸಿಕೊಂಡ. ಆತನ ನೆರವಿನಿಂದ ಗೌಸ್ ಯಾವ ಆರ್ಥಿಕಾತಂಕಗಳೂ ಇಲ್ಲದೆ ನಿಶ್ಚಿಂತೆಯಿಂದ ವಿದ್ಯಾಭ್ಯಾಸವನ್ನು ಮುಂದುವರಿಸುವುದು ಸಾಧ್ಯವಾಯಿತು. ತನ್ನ 18ನೆಯ ವಯಸ್ಸಿನಲ್ಲಿ (1795) ಈತ ಕಾಲೇಜಿಗೆ ಪ್ರವೇಶಿಸಿದ. ಇಷ್ಟು ಹೊತ್ತಿಗಾಗಲೇ ಇವನು, ರೀಮಾನಿಯನ್ ಜ್ಯಾಮಿತಿಯಲ್ಲಿ ಬರುವ ಕನಿಷ್ಠ ವರ್ಗ ವಿಧಾನದಲ್ಲಿ ಮತ್ತು ಸಂಭಾವ್ಯತಾ ಸಿದ್ಧಾಂತದಲ್ಲಿ ಸಾಕಷ್ಟು ಸ್ವತಂತ್ರ ಚಿಂತನೆ ನಡೆಸಿ ಪರಿಣತಿಗಳಿಸಿದ್ದ. ಕಾಲೇಜಿನಲ್ಲಿ ಭಾಷಾಶಾಸ್ತ್ರವನ್ನು ಅಭ್ಯಸಿಸಬೇಕೇ ಗಣಿತಶಾಸ್ತ್ರವನ್ನು ಅಭ್ಯಸಿಸಬೇಕೇ ಎಂಬ ವಿಚಾರದಲ್ಲಿ ಒಮ್ಮೆ ಸಂದೇಹ ಮೂಡಿದರೂ 1796ರ ವೇಳೆಗೆ ಗೌಸ್ ತನ್ನ ಭವಿಷ್ಯ ಪಥವನ್ನು ನಿರ್ಧರಿಸಿದ. ಅದು ಇವನ ಜೀವನದಲ್ಲಿ ಹೇಗೋ ಹಾಗೆ ಗಣಿತೇತಿಹಾಸದಲ್ಲೂ ಒಂದು ಸಂಕ್ರಮಣ ಮುಹೂರ್ತವಾಯಿತು. ಗೌಸ್ ಎಷ್ಟು ದೊಡ್ಡವನೆಂಬುದನ್ನು ಈತ ಪ್ರಕಟಿಸಿದ ಗ್ರಂಥಗಳಿಂದಾಗಲೀ 1791ರಿಂದ ಮುಂದಕ್ಕೆ ಇವನು ಬರೆದಿಟ್ಟ ದಿನಚರಿಗಳಿಂದಾಗಲೀ ಅಳೆಯುವುದು ಕಷ್ಟ. ಏಕೆಂದರೆ ಇವನ ಮನಸ್ಸಿನ ಅಸಾಧ್ಯ ಪ್ರವಾಹಕ್ಕೆ ಅಣೆಕಟ್ಟು ಕಟ್ಟುವುದು ಬಹು ಕಠಿಣ. ಇವನು ತನ್ನ ಸಂಶೋಧನೆಗಳನ್ನು ಪರಿಪೂರ್ಣ ಮಟ್ಟಕ್ಕೆ ಕೊಂಡೊಯ್ಯದಲ್ಲದೆ ಪ್ರಕಟಿಸುತ್ತಿರಲಿಲ್ಲ. ಮಧ್ಯದ ಹಂತಗಳ ನಿರೂಪಣೆಯನ್ನೇ ಮಾಡುತ್ತಿರಲಿಲ್ಲ. ಹೀಗಾಗಿ ಈ ಪರಿಪೂರ್ಣ ಫಲಿತಾಂಶಗಳನ್ನು ಬಿಡಿಸುವುದೇ ಮುಂದಿನವರಿಗೆ ಒಂದು ಸವಾಲಾಯಿತು. ಗೌಸ್ ಎಲ್ಲವನ್ನೂ ಸರಳವಾಗಿ, ಸಾಧಾರಣರಿಗೆ ಅರ್ಥವಾಗುವಂತೆ ಬರೆದಿದ್ದರೆ ವಿಜ್ಞಾನ ಇನ್ನೂ 500 ವರ್ಷ ಮುನ್ನಡೆಯುತ್ತಿತ್ತಂತೆ. 'ಕೆಲವೇ, ಆದರೆ ಪಕ್ವ' – ಇದು ಗೌಸನ ಜೀವನಸೂತ್ರ.

1799 ರಲ್ಲಿ ಗೌಸ್ ಹೆಲ್ಮ್‌ಸ್ಟೆಡ್ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಗಣಿತ ಕೃತಿಗೆ ಡಾಕ್ಟರೇಟ್ ಪದವಿ ಬಂದಿತು. 1807ರಲ್ಲಿ ಗಾಟಿಂಗೆನ್ ವೀಕ್ಷಣಾಲಯದ ನೇತಾರನಾಗಿಯೂ ಪ್ರಾಧ್ಯಾಪಕನಾಗಿಯೂ ನೇಮಕಗೊಂಡು ತನ್ನ ಮರಣಪರ್ಯಂತವೂ ಅಲ್ಲಿಯೇ ಅವಿರತವಾಗಿ ಶ್ರಮಿಸಿದ. ತನ್ನ ಅಚ್ಚುಮೆಚ್ಚಿನ ಅಂಕಗಣಿತಶಾಸ್ತ್ರದ ಸಂಶೋಧನೆಯಲ್ಲೇ ನಿರತನಾಗಿದ್ದ ಗೌಸನನ್ನು ಭೌತಶಾಸ್ತ್ರವೂ ಖಗೋಳಶಾಸ್ತ್ರವೂ ಆಕರ್ಷಿಸಿದುವು. ನ್ಯೂಟನ್ ನಡೆಸಿದ್ದ ಸಂಶೋಧನೆಗಳ ಆಕಾಶ ಗತಿವಿಜ್ಞಾನದಲ್ಲಿ ಗೌಸ್ ಬಲು ಮುಂದಕ್ಕೆ ನಿಷ್ಕೃಷ್ಟವಾಗಿ ಗಣಿಸಿದ ಕೂಡ. ಇಂಥ ಸಂಶೋಧನೆಯಲ್ಲಿ ಆ ಮೊದಲು ಲೆಪ್ಲಾಸ್ (1749–1827), ಆಯ್ಲರ್ ಮೊದಲಾದ ಖ್ಯಾತ ಗಣಿತಜ್ಞರೂ ಬಹುವಾಗಿ ಶ್ರಮಿಸಿದ್ದರೂ ಪೂರ್ಣ ಯಶಸ್ಸು ಪಡೆದಿರಲಿಲ್ಲ. ಇದು ಅತ್ಯಂತ ಕಠಿಣವಾದ ಗಣಿತವೆಂದು ನ್ಯೂಟನ್ ಅಭಿಪ್ರಾಯಪಟ್ಟಿದ್ದ.

ಗೌಸನ ವೈವಾಹಿಕ ಜೀವನ ಅಷ್ಟು ತೃಪ್ತಿಕರವಾಗಿರಲಿಲ್ಲ. ಮದುವೆಯಾದ ತರುಣದಲ್ಲೆ ಮೊದಲನೆಯ ಹೆಂಡತಿಯನ್ನು ಕಳೆದುಕೊಂಡು ಅತೀವ ದುಃಖಕ್ಕೀಡಾದ. ಮಕ್ಕಳ ದೈನ್ಯವನ್ನು ನೀಗಿಸುವ ಉದ್ದೇಶದಿಂದ ಮರುಮದುವೆ ಮಾಡಿಕೊಂಡ. ಆದರೆ ಮಕ್ಕಳು ಇವನ ಮನಸ್ಸಿಗೆ ಹಿತವಾಗುವಂತೆ ನಡೆಯಲಿಲ್ಲ.

ಗೌಸ್ ಬಿಟ್ಟು ಹೋದ ಗಣಿತ ನಿಧಿಯಲ್ಲಿ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಗುರುತಿಸಿದೆ.

1, 2, 3, 5, 7, 11 .... .... ಇತ್ಯಾದಿ ಪೂರ್ಣಾಂಕಗಳನ್ನು ಅಪವರ್ತಿಸಲಾಗುವುದಿಲ್ಲ. ಇವುಗಳಿಗೆ ಅವಿಭಾಜ್ಯ ಸಂಖ್ಯೆಗಳೆಂದು (ಪ್ರೈಮ್ ನಂಬರ್ಸ್) ಹೆಸರು. ಯೂಕ್ಲಿಡ್‌ನ ಕಾಲದಿಂದ ಇಂದಿನವರೆಗೂ ಇವುಗಳಿಗೆ ಸಂಬಂಧಿಸಿದಂತೆ ಅನೇಕ ಗಹನ ಸಮಸ್ಯೆಗಳು ಹೊರಬಿದ್ದಿವೆ. ಇಂಥ ಸಂಖ್ಯೆಗಳು ಅನಂತ ಎಂದು ಸಾಧಿಸಲಾಗಿದೆ. ಆದರೆ ಅವುಗಳ ವಿತರಣೆ ಎಂದರೆ ಸ್ಥಾನಾಂಕದ ಬಗ್ಗೆ ಯಾವ ಅವಧಿಯುತ ನಿಯಮವಾಗಲೀ ಸೂತ್ರವಾಗಲೀ ನಿರ್ದಿಷ್ಟವಾಗಿಲ್ಲ. ಯಾವುದೇ ದತ್ತ ಸಂಖ್ಯೆ ಅವಿಭಾಜ್ಯವಾಗುವ ಸಂಭಾವ್ಯತೆ ಎಷ್ಟು ? ಈ ಪ್ರಶ್ನೆಗೆ ಗೌಸ್ ಉತ್ತರ ಬರೆದಿಟ್ಟಿದ್ದಾನೆ: a ಎಂಬ ದೊಡ್ಡ ಸಂಖ್ಯೆಯನ್ನು ಅದರ ಲಘುಗಣಕದಿಂದ (ಲಾಗರಿತಮ್) ಭಾಗಿಸಿದಾಗ ಬರುವ ಭಾಗಲಬ್ಧ a ಗಿಂತ ಚಿಕ್ಕದಾದ ಒಟ್ಟು ಅವಿಭಾಜ್ಯಗಳ ಸಂಖ್ಯೆಯನ್ನು ಸನ್ನಿಹಿತವಾಗಿ ಕೊಡುತ್ತದೆ. a ದೊಡ್ಡದಾದಷ್ಟೂ ಈ ಸೂತ್ರ ಹೆಚ್ಚು ನಿಖರವಾದ ಬೆಲೆ ಕೊಡುತ್ತದೆ. ಗೌಸ್ ತನ್ನ 14ನೆಯ ವಯಸ್ಸಿನಲ್ಲಿ ಒಂದು ಕೋಷ್ಟಕದ ಹಿಂಭಾಗದಲ್ಲಿ ಬರೆದಿಟ್ಟಿದ್ದ ಈ ಸೂತ್ರವನ್ನು ತೀರ ಈಚೆಗೆ ಸಾಧಿಸಲಾಯಿತಷ್ಟೆ. ಇವನು ಬರೆದ ಗ್ರಂಥಗಳಲ್ಲಿ ಶಿಖರ ಪ್ರಾಯವಾದದ್ದು 'ಅಂಕಗಣಿತ ಶಾಸ್ತ್ರದ ಸಂಶೋಧನೆಗಳು' (1801). ಇದು ಗಣಿತಶಾಸ್ತ್ರಕ್ಕೆ ಹೊಸ ರೂಪ ಕೊಟ್ಟಿತಲ್ಲದೆ ಅದರ ಬಹು ಶಾಖಾವೃದ್ಧಿಗೆ ಕಾರಣವೂ ಆಯಿತು. ಇದನ್ನು ಸಪ್ತಮುದ್ರೆಗಳ ಗ್ರಂಥ (ಬುಕ್ ಆಫ್ ಸೆವೆನ್ ಸೀಲ್ಸ್) ಎಂದು ವಿಮರ್ಶಕರು ಕರೆದಿದ್ದಾರೆ. ವಿಜ್ಞಾನದ ವಿವಿಧ ಶಾಖೆಗಳಲ್ಲಿ ಪರಿಪೂರ್ಣ ಪಾಂಡಿತ್ಯ ಪಡೆದ ಕೊನೆಯ ವಿಜ್ಞಾನಿ ಗೌಸ್. ಮಿಶ್ರಸಂಖ್ಯೆಗಳಿಗೆ (ಕಾಂಪ್ಲೆಕ್ಸ್ ನಂಬರ್ಸ್) ಜ್ಯಾಮಿತೀಯ ಸ್ವರೂಪ ಕೊಟ್ಟು ಮಿಶ್ರ ಚರಗಳ ಸಿದ್ಧಾಂತಕ್ಕೆ ನಿರ್ದಿಷ್ಟ ರೂಪ ಕೊಟ್ಟು ಬೆಳೆಸಿದವನೀತ. ಮಿಶ್ರಸಂಖ್ಯೆಗಳನ್ನು ಬಳಸಿ ಹೊಸ ಅವಿಭಾಜ್ಯ ಸಂಖ್ಯೆಗಳನ್ನು ವ್ಯಾಖ್ಯೆ ಮಾಡಿದ. 3 ಎಂಬುದು ಈ ಅರ್ಥದಲ್ಲಿ ಅವಿಭಾಜ್ಯ. ಆದರೆ $1 + 2i$, $1 - 2i$ ಎಂಬ ಅಪವರ್ತನಗಳನ್ನು ಹೊಂದಿರುವ 5 ಎಂಬ ಸಂಖ್ಯೆ ಅವಿಭಾಜ್ಯವಲ್ಲ. ಇಲ್ಲಿ $i = \sqrt{-1}$. ಇಂಥ ಮಿಶ್ರಸಂಖ್ಯೆಗಳು ಅನೇಕ ಸಮಸ್ಯೆಗಳನ್ನು ಪರಿಹರಿಸಿದವು. ಬೀಜಗಣಿತದಲ್ಲಿ ಪ್ರಸಿದ್ಧವಾದ ಬೀಜಗಣಿತದ ಮೂಲ ಪ್ರಮೇಯದ ನಿರೂಪಣೆ ಹೀಗಿದೆ: ನೈಜಸಂಖ್ಯೆಗಳನ್ನು ಗುಣಾಂಕಗಳಾಗಿ ಪಡೆದಿರುವ ಪ್ರತಿಯೊಂದು ಬೀಜಗಣಿತೀಯ ಸಮೀಕರಣಕ್ಕೂ ಕೊನೆಯ ಪಕ್ಷ ಒಂದು ಮೂಲವಾದರೂ (ರೂಟ್) ಉಂಟು. ಗೌಸ್ ಈ ಪ್ರಮೇಯವನ್ನು ನೈಜಸಂಖ್ಯೆಗಳನ್ನು ಬಳಸಿ ಸಾಧಿಸಿದನಲ್ಲದೆ ಮಿಶ್ರ ಚರಗಳ ಸಿದ್ಧಾಂತ ರೀತ್ಯ ಸಹ ಸಾಧಿಸಿದ. ಇಂದು ಪ್ರಸಿದ್ಧವಾಗಿರುವ ಮತ್ತು ಪ್ರಚಲಿತ ಕೋಷಿ ಪ್ರಮೇಯವೆಂದು ಹೆಸರಾದ

$$\int_C f(z)dz = 0$$

(ಇಲ್ಲಿ $c$ ಎಂಬುದು ಒಂದು ಸಂವೃತ್ತ ರೇಖೆ) ಎಂಬುದನ್ನು ಕೋಷಿಗಿಂತ ಮೊದಲೇ ಗೌಸ್ ಸಾಧಿಸಿದನಲ್ಲದೆ ವಿಶ್ಲೇಷಕ ಉತ್ಪನ್ನಗಳ ಬಗ್ಗೆ ಅನೇಕ ವಿಚಾರಗಳನ್ನು ಕೂಡ ಪ್ರಕಟಿಸಿದ. ವಿದ್ಯುತ್ ಮತ್ತು ಕಾಂತ ಪ್ರಕರಣಗಳಲ್ಲಿ ಈತನ ಸಂಶೋಧನೆಗಳು ಉನ್ನತ ಮಟ್ಟದ್ದಾಗಿದ್ದುವು. ಗಾಟಿಂಗೆನ್ ಪಟ್ಟಣದಿಂದ ಹ್ಯಾನೊವರ್ ನಗರಕ್ಕೆ ತಂತಿ ಸಮಾಚಾರ ಕಳುಹಿಸುವ ಮೊದಲ ಪ್ರಯತ್ನಕ್ಕೆ ಇವು ಕಾರಣವಾದವು. $x^n = 1$ ಎಂಬ ಸಮೀಕರಣದ ($n$ ಎಂಬುದು ಧನ ಪೂರ್ಣಾಂಕ) ಮೂಲಗಳನ್ನು ಒಂದು ವೃತ್ತದ ಮೇಲೆ ಗುರ್ತಿಸುವುದರ ಮೂಲಕ 17 ಭುಜಗಳಿರುವ ಸಮಭುಜಾಕೃತಿಯನ್ನು ಕೇವಲ ಕೈವಾರ ಮತ್ತು ಮಾನಕ ಪಟ್ಟಿಗಳ ಸಹಾಯದಿಂದಲೇ ರಚಿಸಿದ; ಮತ್ತು ಈ ವಾದವನ್ನು ಸಾರ್ವತ್ರೀಕರಿಸಿದ [$n = n = 2^{p+1}$, $p = 2^k$, $n$ ಅವಿಭಾಜ್ಯ, $k = 0, 1, 2, 3, ....$ ಆಗಿದ್ದು $n$ ಭುಜಗಳಿರುವ ಆಕೃತಿಯ ರಚನೆ].

1820 ರಿಂದ ಈಚೆಗೆ ಇನ್ನೂ ಮಹತ್ತರ ಕ್ಷೇತ್ರದಲ್ಲಿ ಕೃಷಿಗೆ ಪ್ರಾರಂಭ ಮಾಡಿ ದೂರ ಸಾಗಿದ. ರೇಖೀಯ ನಿರ್ದೇಶಕಗಳನ್ನು (ಕರ್ವಿಲೀನಿಯರ್ ಕೋ ಆರ್ಡಿನೇಟ್ಸ್) ಬಳಸಿ ಘನವಸ್ತುಗಳ ಮೇಲ್ಮೈಯ ಸ್ವರೂಪ ಮತ್ತು ಗುಣಗಳನ್ನು ಆಳವಾಗಿ ಅಭ್ಯಸಿಸಿದ. ds ಎಂಬುದು ಮೇಲ್ಮೈಯ ಒಂದು ಸಣ್ಣ ತುಣುಕಾದರೆ $ds^2 = Edu^2 + Fdudv + Gdv^2$ ಎಂಬ ಸಮೀಕರಣ $ds$ ಎಂಬುದನ್ನು ನಿರ್ದೇಶಕಗಳಲ್ಲಿ ಸೂಚಿಸುತ್ತದೆ. ಇಂಥ ಮೇಲ್ಮೈಯ ಒಟ್ಟು ವಕ್ರತೆ (ಕರ್ವೆಚರ್) $E, F, G$ ಗಳನ್ನು ಅವಲಂಬಿಸಿದೆ ಎಂಬುದನ್ನು ಸ್ಪಷ್ಟಪಡಿಸಿದ. ಅವಕಲ ಜ್ಯಾಮಿತಿಯನ್ನು (ಡಿಫರೆನ್ಶಿಯಲ್ ಜಿಯೊಮೆಟ್ರಿ) ಪುಷ್ಟವಾಗಿ ಬೆಳೆಸಿದ.

ಅಧಿಕಾರ, ಕೀರ್ತಿ, ಪ್ರತಿಷ್ಠೆ, ಪ್ರಶಂಸೆ ಇತ್ಯಾದಿ ಪ್ರಲೋಭನೆಗಳಿಗೂ ಗೌಸನಿಗೂ ಮಹದಂತರ. ಇವನು ವಿಹರಿಸುತ್ತಿದ್ದುದು ಲೋಕಾತೀತ ಗಣಿತ ಪ್ರಪಂಚದಲ್ಲಿ. ಈತನ ಕೊನೆಯ ದಿನಗಳು ಪೂರ್ಣ ಸಂತೃಪ್ತಿಯಿಂದ ಸಾಗಿದ್ದುವು. ರಷ್ಯನ್ ಭಾಷೆಯನ್ನು ಕಲಿಯಲು ತೊಡಗಿ (77) ಸ್ವಲ್ಪ ಮುಂದುವರಿದಿದ್ದ. ಸಂಸ್ಕೃತಾಭ್ಯಾಸ ಸ್ವಲ್ಪ ಮಾಡಿದರೂ ಆಸಕ್ತಿ ಮೂಡಲಿಲ್ಲ. 1855ರ ಫೆಬ್ರವರಿ 25 ರಂದು ಗಣಿತಜ್ಞರ ರಾಜ (ಪ್ರಿನ್ಸ್ ಆಫ್ ಮ್ಯಾಥಮ್ಯಾಟೀಶಿಯನ್ಸ್) ಗೌಸ್ ನಿಧನನಾದ. (ಕೆ.ಎಂ.ಎಸ್.)

**ಗೌಹತಿ (ಗುವಾಹತಿ) :** ಅಸ್ಸಾಮಿನ ಕಾಮರೂಪ ಜಿಲ್ಲೆಯ ಮುಖ್ಯ ಪಟ್ಟಣ. ಅಸ್ಸಾಂ ರಾಜ್ಯದ ಸಾಂಸ್ಕೃತಿಕ ಕೇಂದ್ರ. ಇದು ಉ. ಅ. $26^0\ 11'$ ಪೂ.ರೇ. $91^0\ 45'$ ಮೇಲೆ ಇದೆ. ಜನಸಂಖ್ಯೆ 9,63,429 (2011). ಬ್ರಹ್ಮಪುತ್ರಾ ನದಿಯ ಮೇಲಿದೆ. ಏಕಕಾಲದಲ್ಲಿ ರೈಲು ಮತ್ತು ರಸ್ತೆ ಸಂಚಾರಕ್ಕೆ ಅನುಕೂಲವಾಗುವಂತೆ ಈ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ದೊಡ್ಡ ಸೇತುವೆಗೆ ಪಾಂಡು ಸೇತುವೆ ಎಂದು ಹೆಸರು. ಈ ನಗರದ ಒಂದು ಕಡೆ ದಟ್ಟಕಾಡು, ಅರ್ಧಚಂದ್ರಾಕಾರದ ಬೆಟ್ಟ, ಮತ್ತೊಂದು ಕಡೆ ಅಗಲವಾದ ಬ್ರಹ್ಮಪುತ್ರಾ ಪ್ರವಾಹ– ಇದೊಂದು ರಮಣೀಯ ದೃಶ್ಯ. ಈ ನಗರ ಇಡೀ ಈಶಾನ್ಯ ಭಾರತದ ಹೆಬ್ಬಾಗಿಲಿನಂತಿದೆ. ಅಲ್ಲದೆ ಇದು ಈಶಾನ್ಯ ಭಾರತದಲ್ಲಿಯೇ ಪ್ರಮುಖವಾದ ವಾಣಿಜ್ಯ ಹಾಗೂ ಶೈಕ್ಷಣಿಕ ಕೇಂದ್ರವಾಗಿದೆ.

ಒಂದು ಹಿಂದು ದೇವಾಲಯ

ಕೇಂದ್ರ ರಾಜ್ಯಸರ್ಕಾರಗಳ ಕಚೇರಿಗಳೂ ರಾಜ್ಯದ ಉಚ್ಚ ನ್ಯಾಯಾಲಯವೂ ಇಲ್ಲಿವೆ. ಗೌಹತಿ ಪ್ರಮುಖ ವಿದ್ಯಾಕೇಂದ್ರ. ಅನೇಕ ಪ್ರೌಢಶಾಲೆಗಳೂ ಇಂಜಿನಿಯರಿಂಗ್, ಮೆಡಿಕಲ್ ಮತ್ತು ವೆಟರನರಿ ಕಾಲೇಜುಗಳೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯೂ ಸ್ಥಾಪನೆಗೊಂಡಿವೆ. ಗೌಹತಿ ವಿಶ್ವವಿದ್ಯಾಲಯ ಈಶಾನ್ಯ ರಾಜ್ಯಗಳಲ್ಲೆಲ್ಲ ಪ್ರಸಿದ್ಧವಾದ್ದು. 1948 ರಲ್ಲಿ ಆರಂಭವಾದ ಈ ವಿಶ್ವವಿದ್ಯಾಲಯದ ಕಾರ್ಯಾಲಯ ಗೌಹತಿಯಲ್ಲಿದೆ. ಈ ನಗರದಲ್ಲಿ ಒಂದು ವಸ್ತು ಸಂಗ್ರಹಾಲಯವೂ ಒಂದು ಮೃಗಾಲಯವೂ ಉಂಟು. ನಗರಕ್ಕೆ 3 ಕಿಮೀ ದೂರದಲ್ಲಿ ಬೆಟ್ಟವೊಂದರ ಮೇಲಣ ಕಾಮಾಖ್ಯ ದೇವಾಲಯ, ಬ್ರಹ್ಮಪುತ್ರಾ ನದಿಯ ಶಿಲಾ ದ್ವೀಪವೊಂದರ ಮೇಲಣ ಉಮಾನಂದ ದೇವಾಲಯ, ಅಶ್ವಕ್ರಾಂತ ಮತ್ತು ನವಗ್ರಹ ದೇವಾಲಯಗಳು, ವಸಿಷ್ಠ ಆಶ್ರಮ – ಇವು ಈ ನಗರದ ಆಸುಪಾಸಿನ ಹಿಂದೂ ಕ್ಷೇತ್ರಗಳು. ಸಕಲೇಶ್ವರ ಬೆಟ್ಟದ ಬುಡದಲ್ಲಿ ಹಲವು ಸ್ಮಾರಕಗಳೂ ಕೆರೆಗಳೂ ಇವೆ. ಗೌಹತಿ ನಿವಾಸಿಗಳಲ್ಲಿ ಅಸ್ಸಾಮಿ ಭಾಷೆ ಆಡುವವರೇ ಹೆಚ್ಚು.

ಬೇಸಗೆಯಲ್ಲಿ ಇಲ್ಲಿ ಬಹಳ ಬಿಸಿಲು, ಚಳಿಗಾಲದಲ್ಲಿ ಬಹಳ ಚಳಿ. ಮಳೆ ಹೆಚ್ಚು. ಈ ಪ್ರದೇಶದ ಬೆಳೆಗಳಲ್ಲಿ ಮುಖ್ಯವಾದವು ಬತ್ತ, ಸೆಣಬು ಮತ್ತು ಎಣ್ಣೆಕಾಳುಗಳು. ಬ್ರಹ್ಮಪುತ್ರಾನದಿಯಲ್ಲಿ ಮೀನುಹಿಡಿಯುವುದು ಅನೇಕರ ವೃತ್ತಿ.

ಗೌಹತಿ ನಗರ ರಾಜ್ಯದ ಮುಖ್ಯ ವಾಣಿಜ್ಯ ಕೇಂದ್ರ. ಇದಕ್ಕೆ ಭೂ, ಜಲ, ವಾಯು ಸಂಪರ್ಕವಿದೆ. ರಾಜ್ಯದ ಎಲ್ಲೆಡೆಗಳಿಗೂ ಇಲ್ಲಿಂದ ರಸ್ತೆಗಳುಂಟು. ಇದು ಪ್ರಮುಖ ವಿಮಾನನಿಲ್ದಾಣಗಳಲ್ಲೊಂದು. ಈಶಾನ್ಯ ಭಾರತದ ಇತರ ರಾಜ್ಯಗಳಾದ ನಾಗಾಲೆಂಡ್, ತ್ರಿಪುರ, ಮಣಿಪುರ, ಮಿಜೊರಾಂ ಮತ್ತು ಅರುಣಾಚಲ ಪ್ರದೇಶಗಳಿಗೆ ಹೋಗುವ ವಿಮಾನಗಳೆಲ್ಲವೂ ಗೌಹತಿಯ ಮೂಲಕವೇ ಹೋಗಬೇಕು. ಇದಕ್ಕೆ ಸಮೀಪದಲ್ಲಿ ನೂನ್‌ಮತಿ ತೈಲ ಶುದ್ಧೀಕರಣ ಕೇಂದ್ರವಿದೆ (ಗುವಾಹತಿ ರಿಫೈನರಿ). ಮಕ್ಕಳ ಹಾಲಿನ ಪುಡಿಯನ್ನು ಉತ್ಪಾದಿಸುವ ಕಾರ್ಖಾನೆಯೂ (ಅಮುಲ್) ಇಲ್ಲಿದೆ. ಗುವಾಹತಿ ಟೀ ಆಕ್ಷನ್ ಸೆಂಟರ್ ಪ್ರಪಂಚದಲ್ಲೇ ಅತಿದೊಡ್ಡ ಚಹಸೊಪ್ಪಿನ ಮಾರುಕಟ್ಟೆಗಳಲ್ಲೊಂದು.



ಬ್ರಹ್ಮಪುತ್ರಾ ನದಿಯ ದಡದ ಒಂದು ದೇವಾಲಯ ಮತ್ತು ಸ್ನಾನಘಟ್ಟ

ಭಾರತದ ಪುರಾಣಪ್ರೋಕ್ತವಾದ ನಗರಗಳಲ್ಲಿ ಗೌಹತಿಯೂ ಒಂದು. ಇದು 400ರ ಸುಮಾರಿನಲ್ಲಿ ಕಾಮರೂಪ ರಾಜ್ಯದ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಆಗ ಇದಕ್ಕೆ ಪ್ರಾಗ್‌ಜ್ಯೋತಿಪುರವೆಂದು ಹೆಸರಿತ್ತು. 17 ನೆಯ ಶತಮಾನದಲ್ಲಿ 50 ವರ್ಷಗಳ ಅವಧಿಯಲ್ಲಿ, ಎಂಟು ಸಾರಿ ಇದನ್ನು ಮುಸ್ಲಿಮರೂ ಅಹೋಂ ದೊರೆಗಳೂ ಒಬ್ಬರಿಂದೊಬ್ಬರು ವಶಪಡಿಸಿಕೊಂಡಿದ್ದರು. 1681ರಲ್ಲಿ ಇದು ಕೆಳ ಅಸ್ಸಾಮಿನ ಅಹೋಂ ರಾಜ್ಯಪಾಲನ ಅಧಿಕಾರಸ್ಥಾನವೂ 1786 ರಲ್ಲಿ ಅಹೋಂ ದೊರೆಯ ರಾಜಧಾನಿಯೂ ಆಯಿತು. 1816 ಬರ್ಮೀಯರು ಇದನ್ನು ಆಕ್ರಮಿಸಿಕೊಂಡಿದ್ದರು. 1826ರಲ್ಲಿ ಅಸ್ಸಾಂ ಬ್ರಿಟಿಷರ ವಶವಾದಾಗ ಇದು ಅಸ್ಸಾಮಿನ ಆಡಳಿತಕೇಂದ್ರವಾಯಿತು. 1874 ರಲ್ಲಿ ರಾಜಧಾನಿಯನ್ನು ಷಿಲಾಂಗಿಗೆ ವರ್ಗಮಾಡಲಾಯಿತು. ಮೇಘಾಲಯ ರಾಜ್ಯ ಸ್ಥಾಪನೆಯಾದ ಮೇಲೆ ಅಸ್ಸಾಂ ಮೇಘಾಲಯಗಳೆರಡಕ್ಕೂ ಷಿಲಾಂಗೇ ರಾಜಧಾನಿಯಾಗಿತ್ತು.

1897 ರಲ್ಲಿ ಭೂಕಂಪದಿಂದಾಗಿ ಈ ನಗರ ನಾಶವಾಗಿತ್ತು. ಇದನ್ನು ಪುನರ್ ನಿರ್ಮಿಸಲಾಗಿದೆ. (ಎಂ.ಆರ್.ಜೆ.)

**ಗ್ಡಿನ್ಯಾ :** ಪೋಲೆಂಡಿನ ಒಂದು ನಗರ, ರೇವುಪಟ್ಟಣ. ಗ್ಡನ್ಸ್ಕ ಪ್ರಾಂತ್ಯದಲ್ಲಿ, ಡ್ಯಾನ್ಸಿಗ್ ಖಾರಿಯಲ್ಲಿ, ಡ್ಯಾನ್ಸಿಗ್‌ಗೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,47,324 (2010). 1919 ರ ವರ್ಸೇಲ್ಸ್ ಕೌಲಿನ ಪ್ರಕಾರ ಪೋಲೆಂಡಿಗೆ ಹಿಂದಿರುಗಿಸಲಾದ ಬಾಲ್ಟಿಕ್ ಕರಾವಳಿಯ ಸಣ್ಣ ಮೀನುಗಾರ ಗ್ರಾಮವಾಗಿದ್ದ ಗ್ಡಿನ್ಯಾವನ್ನು ಪೋಲಿಷ್ ಸರ್ಕಾರ ಡ್ಯಾನ್ಸಿಗ್‌ಗೆ ಪ್ರತಿಯಾಗಿ ಒಂದು ಬಂದರಾಗಿ ಪರಿವರ್ತಿಸಿತು. 1924 ರಿಂದ ಈಚೆಗೆ ಅದು ಬಾಲ್ಟಿಕ್ ಕರಾವಳಿಯ ಪ್ರಮುಖ ರೇವುಪಟ್ಟಣವಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನರು ಇದನ್ನು ಆಕ್ರಮಿಸಿಕೊಂಡರು. ಇದರ ಹೆಸರು ಗೋಟೆನ್‌ಹ್ಯಾಫೆನ್ ಎಂದು ಬದಲಾವಣೆಗೊಂಡಿತು. ಹಲವು ಪೋಲಿಷರು ಕೊಲೆಗೆ ಈಡಾದರು. ಅನೇಕರು ದೇಶಭ್ರಷ್ಟರಾದರು. ಅವರ ಆಸ್ತಿಯನ್ನು ಜರ್ಮನರು ವಶಪಡಿಸಿಕೊಂಡರು. ಜರ್ಮನರು ಸೋತು ಹಿನ್ನಡೆಯುತ್ತಿದ್ದಾಗ ಬಂದರನ್ನು ಬಹುತೇಕ ನಾಶಗೊಳಿಸಿದ್ದರು. ಯುದ್ಧಾನಂತರ ಕಾಲದಲ್ಲಿ ಬಂದರು ಸ್ಥಾವರಗಳು ಮತ್ತೆ ನಿರ್ಮಿತವಾದುವು. ಈಗ ಇದು ಡ್ಯಾನ್ಸಿಗ್ ಮತ್ತು ಸಾಪಾಟ್‌ಗಳೊಂದಿಗೆ ಒಂದು ಬಂದರಾಗಿದೆ. ಇದು ಪೋಲಿಷ್ ನೌಕಾನೆಲೆ, ಪ್ರಯಾಣಿಕ ಹಡಗು ಬಂದರು. ಕಲ್ಲಿದ್ದಲು, ನಾಟಾ, ಸಕ್ಕರೆ ರಫ್ತಾಗುತ್ತವೆ. ಕಬ್ಬಿಣ, ಅದಿರು, ಗೊಬ್ಬರ, ಆಹಾರಪದಾರ್ಥ ಇವು ಆಮದುಗಳು. ರಾಜ್ಯ ನೌಕಾಶಾಲೆ, ಸಾಗರಿಕ ಮೀನುಗಾರಿಕೆ ತಾಂತ್ರಿಕ ಕಾಲೇಜು, ಸಮುದ್ರ ಮೀನುಗಾರಿಕೆ ಸಂಸ್ಥೆ, ನೌಕಾ ವಸ್ತುಸಂಗ್ರಹಶಾಲೆ – ಇವು ಇಲ್ಲಿಯ ಮುಖ್ಯ ಸಂಸ್ಥೆಗಳು. ಇಲ್ಲೊಂದು ನಾಟ್ಯಶಾಲೆಯೂ ಇದೆ. (ಎನ್.ಸಿ.ವಿ.)

**ಗ್ಯಾಂಗ್ :** ಲೋಹಮಿಶ್ರಿತ ಅದಿರು ನಿಕ್ಷೇಪಗಳಿಗೆ ಸಂಬಂಧಿಸಿದಂಥ ಬೆಲೆಯಿಲ್ಲದ ಖನಿಜಗಳ ಹೆಸರು. ನಿಕ್ಷೇಪಗಳು ಯಾವ ರೀತಿ ಉತ್ಪತ್ತಿಯಾಗಿದ್ದರೂ ಕೆಲವು ಅನುಪಯುಕ್ತ ವಸ್ತುಗಳು ಅವುಗಳೊಡನೆ ವಿವಿಧ ಪ್ರಮಾಣಗಳಲ್ಲಿ ಮಿಶ್ರಿತವಾಗಿರುತ್ತವೆ. ಉಪಯುಕ್ತ ಲೋಹದೊಡನೆ ಲೋಹೇತರ ಖನಿಜಗಳೂ ಶಿಲಾಚೂರುಗಳೂ ಕೂಡಿರುವುವಲ್ಲದೆ ಕೆಲವು ಸಂದರ್ಭದಲ್ಲಿ ಅನುಪಯುಕ್ತ ಖನಿಜಗಳೂ ಇರುವುದುಂಟು. ಇವೇ ಗ್ಯಾಂಗ್. ಅಲೋಹ ನಿಕ್ಷೇಪಗಳಲ್ಲಿ ಉಪಯುಕ್ತ ಖನಿಜಗಳೊಡನೆ ಕೂಡಿರುವ ಉಪಯೋಗವಿಲ್ಲದ ಪದಾರ್ಥಗಳನ್ನು ಅನುಪಯುಕ್ತ ವಸ್ತುಗಳು ಎಂದು ಕರೆಯುವರು. ಹಲವು ವೇಳೆ ಆರ್ಥಿಕ ದೃಷ್ಟಿಯಿಂದ ಕೆಳದರ್ಜೆಯ ಅದಿರಿನೊಡನೆ ಬೆಲೆಬಾಳುವ ಖನಿಜಗಳು ಗ್ಯಾಂಗ್ ರೂಪದಲ್ಲಿ ದೊರೆತು ಅದಿರಿನ ಬೆಲೆಯನ್ನು ಹೆಚ್ಚಿಸುವುದೂ ಉಂಟು. ಗ್ಯಾಂಗಿನಲ್ಲಿರುವ ಪದಾರ್ಥಗಳನ್ನು ಉಪಪದಾರ್ಥಗಳನ್ನಾಗಿ ಬೇರ್ಪಡಿಸಬಹುದು. ಆಗ ಗ್ಯಾಂಗಿನಲ್ಲಿರುವ ಬೆಲೆಬಾಳುವ ಪದಾರ್ಥಗಳ ದೆಸೆಯಿಂದ ಕೆಳದರ್ಜೆಯ ಅದಿರನ್ನು ಕೂಡ ಗಣಿಗಾರಿಕೆಯಿಂದ ತೆಗೆಯಬಹುದು. ಸಾಮಾನ್ಯವಾಗಿ ಖನಿಜ ಸಂಸ್ಕರಣ ನಡೆಯುವಾಗ ಈ ಅನುಪಯುಕ್ತ ವಸ್ತುಗಳನ್ನು ಬೇರ್ಪಡಿಸುತ್ತಾರೆ. ಉದಾಹರಣೆಗೆ ಕೋಲಾರದ ಚಿನ್ನದ ಗಣಿಯಲ್ಲಿ ಚಿನ್ನದ ಜೊತೆಯಲ್ಲಿ ಬೆಳ್ಳಿಯನ್ನೂ ಉಪಪದಾರ್ಥವಾಗಿ ಶೇಖರಿಸುತ್ತಾರೆ. (ಟಿ.ಟಿ.)

**ಗ್ಯಾಂಗ್ಟ್‌ಸೆ :** ಮಧ್ಯ ಟಿಬೆಟಿನ ಒಂದು ಪಟ್ಟಣ. ನ್ಯಾಂಗ್ ಚು ನದಿಯ ದಂಡೆಯ ಮೇಲೆ ಇದೆ. ಜನಸಂಖ್ಯೆ ಸು. 62,000 (2012). ಗಿರಿಯೇಣೊಂದರ (4000 ಮೀ, 13,125') ಮೇಲೆ ನಿರ್ಮಿತವಾದ ಈ ನಗರದ ಎರಡು ಮುಖ್ಯ ಕಟ್ಟಡಗಳಲ್ಲಿ ಒಂದು

ಗ್ಯಾಂಗ್ಟ್‌ಸೆ ಪಟ್ಟಣದ ಹೊರವಲಯದಲ್ಲಿರುವ ಬೌದ್ಧ ಸ್ಮಾರಕ

ಇಲ್ಲಿಯ ಕೋಟೆ. ಅದು ಈಗ ಸ್ಥಳೀಯ ನ್ಯಾಯಾಲಯ. ಇನ್ನೊಂದು, ಲಾಮಗಳ ಮಠವಾಗಿದ್ದ ಕಟ್ಟಡ. 1954 ರ ಪ್ರವಾಹದಲ್ಲಿ ಈ ನಗರ ಬಹುತೇಕ ನಾಶವಾಗಿತ್ತು. ಈಗ ಇದನ್ನು ಮತ್ತೆ ನಿರ್ಮಿಸಲಾಗಿದೆ.

ಗ್ಯಾಂಗ್ಟ್‌ಸೆ ಒಂದು ವ್ಯಾಪಾರ ಕೇಂದ್ರ. ಲಾಸ, ಷಿಗಾಟ್ಸೆ, ಯೂಟುಂಗ್‌ಗಳಿಗೆ ಇಲ್ಲಿಂದ ಹೆದ್ದಾರಿಯುಂಟು. ಉಣ್ಣೆ ತುಪ್ಪುಳ, ಕಸ್ತೂರಿ, ಬೆಣ್ಣೆ, ಬಾರ್ಲಿ, ಚಹ, ಹೊಗೆಸೊಪ್ಪು, ಸಕ್ಕರೆ, ಹತ್ತಿ, ಜವಳಿ, ಒಣಗಿದ ಹಣ್ಣು, ಕಬ್ಬಿಣ ಸಾಮಾನು, ಮರದ ಬೋಗುಣಿ, ಅಕ್ಕಿ, ಮುಂತಾದ ಸರಕುಗಳು ಇಲ್ಲಿಗೆ ಬರುತ್ತವೆ. (ಎನ್.ಸಿ.ವಿ.)

**ಗ್ಯಾಂಟನ ಕಾರ್ಯ ಮತ್ತು ಬೋನಸ್ ಪದ್ಧತಿ :** ವೈಜ್ಞಾನಿಕ ವ್ಯವಸ್ಥಾಪನೆಯ ಪಿತನೆನಿಸಿದ ಫ್ರೆಡರಿಕ್ ಟೇಲರನೊಂದಿಗೆ ಕೆಲಸ ಮಾಡುತ್ತಿದ್ದ ಹೆನ್ರಿ ಎಲ್ ಗ್ಯಾಂಟ್ ಎಂಬವನು ರೂಪಿಸಿದ ಕೂಲಿ ಪಾವತಿ ಪದ್ಧತಿ (ಗ್ಯಾಂಟ್ ಟಾಸ್ಕ್ ಅಂಡ್ ಬೋನಸ್ ಸಿಸ್ಟಮ್). ಒಂದು ಕಾರ್ಖಾನೆಯಲ್ಲಿಯ ಕೆಲಸದ ಸ್ವರೂಪ ಮತ್ತು ಪರಿಸ್ಥಿತಿಗಳ ಅಧ್ಯಯನ ಮಾಡಿ, ಅತ್ಯಂತ ಸಮರ್ಪಕ ಪರಿಸ್ಥಿತಿಯಲ್ಲಿ ಒಬ್ಬ ಪ್ರಸಾಮಾನ್ಯ ಕಾರ್ಮಿಕನ ಸಾಮರ್ಥ್ಯ ಎಷ್ಟಿರುತ್ತದೆಂಬುದನ್ನು ನಿರ್ಧರಿಸಲಾಗುತ್ತದೆ. ಇದರ ಆಧಾರದ ಮೇಲೆ ಒಂದು ನಿಗದಿಯಾದ ಸಮಯದಲ್ಲಿ ನಿರ್ದಿಷ್ಟವಾದ ಕಾರ್ಯವನ್ನು ಮಾಡಲಾಗುತ್ತದೆ. ಒಬ್ಬ ಕಾರ್ಮಿಕ ಆ ಕಾರ್ಯವನ್ನು ಆ ಸಮಯದಲ್ಲಿ ಮುಗಿಸಿದ ಪಕ್ಷದಲ್ಲಿ ಅವನಿಗೆ ಅವನ ಕೂಲಿಯ ಜೊತೆಗೆ ಆ ಕಾರ್ಯಕ್ಕೆ ಗೊತ್ತುಮಾಡಲಾದ ಶಿಷ್ಟ ಸಮಯದ (ಸ್ಟಾಂಡರ್ಡ್ ಟೈಂ) ಶೇ.

25 ರಿಂದ ಶೇ. 50ರ ವರೆಗೆ ಅಧಿಕ ಸಮಯದ ಸಂಭಾವನೆ ಲಭ್ಯವಾಗುತ್ತದೆ. ಇದು ಅಧ್ಯಂಶ ಅಥವಾ ಬೋನಸ್. ನಿಗದಿಯಾದ ಸಮಯದಲ್ಲಿ ನಿರ್ದಿಷ್ಟವಾದ ಕೆಲಸವನ್ನು ಅವನು ಮಾಡದಿದ್ದ ಪಕ್ಷದಲ್ಲಿ ಅವನಿಗೆ ನಿಗದಿಯಾದ ದರದಲ್ಲಿ ಕೂಲಿ ಮಾತ್ರ ದೊರಕುತ್ತದೆ. ಹೀಗಾಗಿ, ಅಷ್ಟೇನೂ ದಕ್ಷನಲ್ಲದ ಕಾರ್ಮಿಕನಿಗೆ ಕನಿಷ್ಠ ವೇತನದ ಖಾತರಿ ಇರುತ್ತದೆ. ಇದು ಮಾನವೀಯ ದೃಷ್ಟಿಯಿಂದ ಅಗತ್ಯ. ಆದರೆ ದಕ್ಷನಾದ ಕಾರ್ಮಿಕನಿಗೆ ಅವನ ದಕ್ಷತೆಗೆ ಅನುಗುಣವಾಗಿ ಅಧಿಕ ಸಂಪಾದನೆ ಆಗುತ್ತದೆ; ಅವನ ದಕ್ಷತೆಗೆ ತಕ್ಕ ಪ್ರತಿಫಲ ಲಭ್ಯವಾಗುತ್ತದೆ. ನಿಗದಿಯಾದ ಮಟ್ಟದ ವರೆಗೆ ಕಾರ್ಮಿಕನ ಸಂಪಾದನೆ ($E$), ಅವನ ಕೆಲಸದ ವೇಳೆ ($T$) ಮತ್ತು ನಿಗದಿಯಾದ ಕೂಲಿದರ ($R$)– ಇವಕ್ಕೆ ಅನುಗುಣವಾಗಿರುತ್ತದೆ. ಎಂದರೆ:

$$E= TR$$

ಕಾರ್ಮಿಕ ನಿಗದಿಯಾದ ಮಟ್ಟವನ್ನು ನಿಲುಕಿದರೆ ಅಥವಾ ಅದನ್ನೂ ಮೀರಿದರೆ ಅವನ ಸಂಪಾದನೆಗೂ ($E$) ನಿಗದಿಯಾದ ಅವಧಿಯ ಕೂಲಿದರಕ್ಕೂ ($R$) ನಿಗದಿಯಾದ ಕಾರ್ಯವನ್ನು ಪೂರೈಸಲು ನಿರ್ಧರಿಸಲಾದ ಶಿಷ್ಟ ಸಮಯಕ್ಕೂ ($S$) ಇರುವ ಸಂಬಂಧವನ್ನು ಮುಂದಿನ ಸಮೀಕರಣ ಸೂಚಿಸುತ್ತದೆ:

$$E = (S+pS)\,R$$

(ಮೇಲಣ ಸಮೀಕರಣದಲ್ಲಿ $p$ ಎಂಬುದು ಕಾರ್ಯವನ್ನು ಪೂರೈಸಲು ನಿಗದಿಯಾದ ಶಿಷ್ಟಸಮಯದ ಶತಾಂಶ).

ಒಂದು ಮೋಟಾರು ಕಾರ್ಖಾನೆಯಲ್ಲಿ ಒಬ್ಬ ಪ್ರಸಾಮಾನ್ಯ ಕಾರ್ಮಿಕ 8 ಗಂಟೆಗಳ ದುಡಿತದ ದಿನದಲ್ಲಿ 32 ಚಕ್ರಗಳನ್ನು ಜೋಡಿಸಬಹುದೆಂದು ನಿರ್ಧರಿಸಲಾಗಿದೆಯೆಂದೂ, ಅವನ ದಿನಗೂಲಿ ದರ ರೂ. 8 (ಗಂಟೆಗೆ 1 ರೂ.) ಎಂದೂ, ನಿರ್ಧರಿಸಲಾದ ಸಮಯದ ಶೇ. 25 ರಷ್ಟು ಬೋನಸ್ಸನ್ನು ನೀಡಲು ಕಾರ್ಖಾನೆ ತೀರ್ಮಾನಿಸಿದೆಯೆಂದೂ ಭಾವಿಸೋಣ. ಒಂದು ಚಕ್ರವನ್ನು ಜೋಡಿಸಲು ನೀಡಲಾದ ಸಮಯ 0.25 ಗಂಟೆ. $A$ ಎಂಬ ಒಬ್ಬ ಕಾರ್ಮಿಕ 8 ಗಂಟೆಗಳ ದುಡಿತದ ದಿನದಲ್ಲಿ 30 ಚಕ್ರಗಳನ್ನಷ್ಟೇ ಜೋಡಿಸಿದರೆ ಅವನಿಗೆ ಆ ದಿನದ ಕೂಲಿ ಮಾತ್ರ (ರೂ. 8) ದೊರಕುತ್ತದೆ. $B$ ಎಂಬ ಇನ್ನೊಬ್ಬ ಕೆಲಸಗಾರ 8 ಗಂಟೆಗಳ ದುಡಿತದ ದಿನಕ್ಕೆ ನಿಗದಿಯಾದ 32 ಚಕ್ರಗಳನ್ನು ಆ ಅವಧಿಯಲ್ಲಿ ಜೋಡಿಸಿ ಪೂರೈಸಿದರೆ ಅವನ ಸಂಪಾದನೆ ಹೀಗಿರುತ್ತದೆ:

$$E = g\text{ರೂ. } (8 + 1/4x8) \text{ x } 1 = g\text{ ರೂ. } 10$$

$c$ ಎಂಬುವನು 8 ಗಂಟೆಗಳ ದಿನದಲ್ಲಿ 36 ಚಕ್ರಗಳನ್ನು ಜೋಡಿಸಿದ ಪಕ್ಷದಲ್ಲಿ, ಅಷ್ಟು ಸಂಖ್ಯೆಯ ಚಕ್ರಗಳನ್ನು ಜೋಡಿಸಲು ನೀಡಲಾದ ಶಿಷ್ಟ ಸಮಯದ (0.25x36 ಗಂಟೆ) ಕೂಲಿಯ ಜೊತೆಗೆ ಆ ಸಮಯದ ಶೇ.25 ರಷ್ಟಕ್ಕೆ ( $\frac{0.25\times 36}{4}$ ಗಂಟೆ) ಸಲ್ಲಬೇಕಾದ ಕೂಲಿಯನ್ನು ಬೋನಸ್ಸಾಗಿ ಕೊಡಲಾಗುತ್ತದೆ:

$$E = \text{ರೂ. } \left(6+\frac{9}{4}\right)\text{X1 = ರೂ. } 11\tfrac{1}{4}$$

ಶಿಷ್ಟಮಟ್ಟಕ್ಕಿಂತ ಕಡಿಮೆ ಉತ್ಪಾದಿಸುವ ಕಾರ್ಮಿಕನಿಗೆ ದಿನದ ದರದ ಕೂಲಿಯ ಭರವಸೆ ಇರುವುದೂ ಶಿಷ್ಟಮಟ್ಟದಲ್ಲಿ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉತ್ಪಾದಿಸುವವನಿಗೆ ಉತ್ಪಾದನಾಗುಣದ ಕೂಲಿ ದೊರಕುವುದೂ ಈ ಪದ್ಧತಿಯ ವೈಶಿಷ್ಟ್ಯ. ಇದೊಂದು ಸರಳವಿಧಾನ. ಮಾನವೀಯ ದೃಷ್ಟಿ, ಹೆಚ್ಚು ದಕ್ಷತೆಯಿಂದ ಕೆಲಸ ಮಾಡಲು ಉತ್ತೇಜನ–– ಎರಡನ್ನೂ ಇದರಲ್ಲಿ ಹೊಂದಿಸಲಾಗಿದೆ. ಕೆಲಸಗಾರ ಹೆಚ್ಚು ದಕ್ಷನೂ ಕುಶಲನೂ ಆಗುವಂತೆ ತರಬೇತು ನೀಡುವುದಕ್ಕೂ ಗಮನ ನೀಡಲಾಗುತ್ತದೆ. ಒಬ್ಬ ಫೋರ್‌ಮನನ (ಕಾರ್ಯ ಪ್ರಮುಖ ಅಥವಾ ಮೇಸ್ತ್ರಿ) ಅಧೀನದಲ್ಲಿರುವ ಕೆಲಸಗಾರರ ಪೈಕಿ ನಿರ್ದಿಷ್ಟ ಸಂಖ್ಯೆಯ ಕಾರ್ಮಿಕರು ಬೋನಸ್ ಸಂಪಾದಿಸಿದರೆ ಅಂಥ ಫೋರ್‌ಮನನಿಗೂ ಬೋನಸ್ ನೀಡಲಾಗುವುದರಿಂದ, ತನ್ನ ಕೈಕೆಳಗಿನ ಕಾರ್ಮಿಕರು ಹೆಚ್ಚು ದಕ್ಷರಾಗುವಂತೆ ಮಾಡಲೂ ಉತ್ಪಾದನೆಗೆ ಇರುವ ತಡೆಗಳನ್ನು ನಿವಾರಿಸಲೂ ಅವನಿಗೆ ಕಣಿಗು, ಉತ್ತೇಜನ ನೀಡಿದಂತಾಗುತ್ತದೆ.

ಗ್ಯಾಂಟನ ಕೂಲಿ ಪಾವತಿ ವಿಧಾನ ಅನೇಕ ಕಾರ್ಖಾನೆಗಳಲ್ಲಿ ಯಶಸ್ವಿಯಾಗಿದೆಯಾದರೂ ಕಾರ್ಮಿಕರಲ್ಲಿ ಬೋನಸ್ ಸಂಪಾದಿಸುವವರು, ಸಂಪಾದನೆ ಮಾಡಲಾಗದವರು ಎಂಬ ಎರಡು ವರ್ಗಗಳನ್ನು ನಿರ್ಮಿಸುವುದಾದ್ದರಿಂದ ಇದು ಒಳ್ಳೆಯ ಪದ್ಧತಿ ಅಲ್ಲವೆಂದು ಟೀಕಿಸಲಾಗಿದೆ. ಆದರೆ ದಕ್ಷತೆಗೆ ಉತ್ತೇಜನ ನೀಡುವ ಎಲ್ಲ ಪದ್ಧತಿಗಳಲ್ಲೂ ಇಂಥ ಅಂತರ ಅನಿವಾರ್ಯವೆಂಬುದು ಈ ಟೀಕೆಗೆ ನೀಡಲಾಗಿರುವ ಉತ್ತರ. (ಡಿ.ಎನ್.ಎಸ್.ಎಂ.)

**ಗ್ಯಾಂಬಿಯ :** ಪಶ್ಚಿಮ ಆಫ್ರಿಕದ ಒಂದು ದೇಶ. ಆ ಖಂಡದಲ್ಲೇ ಅತ್ಯಂತ ಕಿರಿದು. ಈ ದೇಶದ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವಿದೆ. ಉಳಿದ ಮೂರು ಕಡೆಯೂ ಸೆನಿಗಾಲ್ ಗಣರಾಜ್ಯ ಸುತ್ತುವರಿದಿದೆ. ಉ.ಅ. $13^{o}$–$14^{o}$ ಮತ್ತು ಪ.ರೇ. $14^{o}30''$–$17^{o}$ ನಡುವೆ ಇರುವ ಈ ದೇಶ ಗ್ಯಾಂಬಿಯ ನದಿಯ ಅಟ್ಲಾಂಟಿಕ್ ಸಾಗರದ ದಿಕ್ಕಿನ ಹರಿವಿನ ಕೊನೆಯ 480 ಕಿಮೀ ಇಬ್ಬದಿಯಲ್ಲೂ ಸಮಾನಾಂತರವಾಗಿ ಹಬ್ಬಿದೆ. ನದೀ ಭಾಗವೂ ಸೇರಿ ಈ ದೇಶದ ವಿಸ್ತೀರ್ಣ 11,295 ಚ.ಕಿಮೀ. ಜನಸಂಖ್ಯೆ 17,82,893 (2009). ಗ್ಯಾಂಬಿಯದ ರಾಜಧಾನಿ ಬಂಜುಲ್.




**ಮೇಲ್ಮೈಲಕ್ಷಣ:** ಗ್ಯಾಂಬಿಯವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು: 1. ನದೀ ಕಣಿವೆಯ ಪ್ರದೇಶ, ನೆರೆಮಣ್ಣಿನ ಫಲವತ್ತಾದ ಭೂಮಿ. ಮಳೆಗಾಲದಲ್ಲಿ ಇದು ಪ್ರವಾಹದಿಂದ ಆವೃತವಾಗಿರುತ್ತದೆ. 2. ಪ್ರಸ್ಥಭೂಮಿಯ ಕಚ್ಚುಕಚ್ಚಾದ ಏಣಿನ ಪ್ರದೇಶ. ಇದು ಮರಳ್ಗಲ್ಲಿನ ಕಡಿದಾದ ಬೆಟ್ಟಗಳಿಂದಲೂ ನಡುನಡುವೆ ಮರಳಿನ ಕಣಿವೆಗಳಿಂದಲೂ ಕೂಡಿದ್ದು. 3. ಮರುಳುಗಲ್ಲಿನ ಪ್ರಸ್ಥಭೂಮಿ. ಇದು ಕೆಲವೆಡೆ ಸೆನಿಗಾಲ್‌ನೊಳಕ್ಕೂ ಚಾಚಿಕೊಂಡಿದೆ. ಇದು ಅಷ್ಟೇನೂ ಫಲವತ್ತಾದ ಪ್ರದೇಶವಲ್ಲ.

**ವಾಯುಗುಣ:** ಗ್ಯಾಂಬಿಯದ್ದು ಉಷ್ಣವಲಯದ ವಾಯುಗುಣ. ಜೂನ್–ಅಕ್ಟೋಬರ್ ಮಳೆಗಾಲ. ಅನಂತರ ಒಣಹವೆ; ಉಷ್ಣತೆ ಕಡಿಮೆ. ಆಗ ದೂಳಿನಿಂದ ಕೂಡಿದ ಗಾಳಿ ಸಹಾರ ಮರುಭೂಮಿಯಿಂದ ಆಗಿಂದಾಗ್ಗೆ ಈ ದೇಶದ ಮೇಲೆ ಬೀಸುವುದುಂಟು. ವಾರ್ಷಿಕ ಸರಾಸರಿ ಮಳೆ 40". ಕರಾವಳಿಯಿಂದ ಒಳನಾಡಿನವರೆಗೆ ಮಳೆ 66" ರಿಂದ 24" ವರೆಗೆ ವ್ಯತ್ಯಾಸವಾಗುತ್ತದೆ. ಆಗಸ್ಟ್ ತಿಂಗಳಲ್ಲಿ ಅತಿ ಹೆಚ್ಚು ಮಳೆ. ಬೇಸಗೆಯಲ್ಲಿ ಉಷ್ಣತೆ $110^{o}$ ಫ್ಯಾವರೆಗೆ ಏರುವುದುಂಟು. ಒಣಹವೆಯ ಕಾಲದಲ್ಲಿ ಕರಾವಳಿಯ ಬಳಿಯ ಉಷ್ಣತೆ $65^{o}$–$90^{o}$ ಫ್ಯಾ; ಒಳನಾಡಿನಲ್ಲಿ $50^{o}$–$105^{o}$ ಫ್ಯಾ.

**ಸ್ವಾಭಾವಿಕ ಸಸ್ಯವರ್ಗ:** ಇಲ್ಲಿಯದು ಸವಾನ ಮಾದರಿಯ ಸಸ್ಯವರ್ಗ. ನದಿಯ ಬದಿಗಳಲ್ಲಿ ಅಂಚುಗಳಂತೆ ಕಾಡುಗಳು ಬೆಳೆದಿವೆ. ನದಿ ತೀರದ ಅರಣ್ಯಗಳಲ್ಲಿ ಪಶ್ಚಿಮ ಆಫ್ರಿಕನ್ ಪ್ರರೂಪಕ್ಕೆ ಸೇರಿದ ಹಲವು ಪಕ್ಷಿಗಳು ಜೀವಿಸುತ್ತವೆ. ನೈಲ್ ನದಿಯಲ್ಲಿರುವಂಥ ಮೊಸಳೆಗಳು ಗ್ಯಾಂಬಿಯ ನದಿಯ ಉದ್ದಕ್ಕೂ ಕರಾವಳಿಯ ಲಗೂನುಗಳಲ್ಲೂ ಉಂಟು. ಅಲ್ಲಲ್ಲಿ ನೀರಾನೆಗಳಿವೆ. ಸವಾನದಲ್ಲಿ ಜಿಂಕೆ, ಕೋತಿ ಮುಂತಾದ ಪ್ರಾಣಿಗಳುಂಟು. ವ್ಯವಸಾಯದಿಂದಾಗಿ ಹಲವು ಪ್ರಾಣಿಗಳು ಇಂದು ಇಲ್ಲದಂತಾಗಿವೆ. ಬೋಗನ್‌ವೀಲ ಕಣಿಗಲು, ಹಲವು ಬಗೆಯ ದಾಸವಾಳ ಇವು ಅರಣ್ಯದ ಮುಖ್ಯ ಮರಗಳು.

**ಇತಿಹಾಸ:** ಈ ಪ್ರದೇಶ ಹಿಂದೆ 1200 ರಿಂದ 1400ರಲ್ಲಿ ಬಲಿಷ್ಠ ಮಾಲಿ ಸಾಮ್ರಾಜ್ಯಕ್ಕೆ ಸೇರಿತ್ತು. ಪೋರ್ಚುಗೀಸ್ ನಾವಿಕರು 1455ರಲ್ಲಿ ಗ್ಯಾಂಬಿಯ ನದಿಯನ್ನು ಕಂಡರು. ಗುಲಾಮರ ಸಂಪಾದನೆಯೂ ಹತ್ತಿರದಲ್ಲೇ ಇತ್ತೆಂದು ನಂಬಲಾಗಿದ್ದ ಚಿನ್ನದ ನದಿಯನ್ನು ತಲುಪುವುದೂ ಅವರ ಮುಖ್ಯ ಉದ್ದೇಶಗಳಾಗಿದ್ದುವು. 1500ರಲ್ಲಿ ತೀರಪ್ರದೇಶ ಬ್ರಿಟಿಷ್ ಮತ್ತು ಪೋರ್ಚುಗೀಸರ ಗುಲಾಮರ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. 1588ರಲ್ಲಿ ಪೋರ್ಚುಗೀಸರು ಗ್ಯಾಂಬಿಯ ನದಿಯಲ್ಲಿ ವ್ಯಾಪಾರ ಮಾಡುವ ಹಕ್ಕನ್ನು ಕೆಲವು ಇಂಗ್ಲಿಷ್ ವರ್ತಕರಿಗೆ ಮಾರಿದರು. 1618ರಲ್ಲಿ 1ನೆಯ ಜೇಮ್ಸ್ ದೊರೆ ವ್ಯಾಪಾರ ಸಂಸ್ಥೆಯೊಂದಕ್ಕೆ ಸನ್ನದು ನೀಡಿದ. ಅದರ ಮೊದಲನೆಯ ಪ್ರತಿನಿಧಿಯನ್ನು ಸ್ಥಳೀಯ ಜನರು ಕೊಲೆ ಮಾಡಿದರು. ಅವನ ಅನಂತರ ಬಂದ ರಿಚರ್ಡ್ ಜಾಬ್ಸನ್ ಬ್ಯಾರಕುಂಡದ ವರೆಗೂ ಹೋಗಿದ್ದ. 1660ರಲ್ಲಿ ಇಂಗ್ಲೆಂಡಿನ ಜೇಮ್ಸ್ ಎಂಬುವನು ಸ್ಥಳೀಯ ಮುಖ್ಯಸ್ಥನೊಬ್ಬನಿಂದ ನದಿಯೊಳಗಿನ ದ್ವೀಪವೊಂದನ್ನು ಕೊಂಡು ಅಲ್ಲೊಂದು ಕೋಟೆ ಕಟ್ಟಿದ. ಇದು ಅನಂತರ ಫೋರ್ಟ್ ಜೇಮ್ಸ್ ದ್ವೀಪವೆಂದು ಹೆಸರಾಯಿತು. 1661ರಲ್ಲಿ 2ನೆಯ ಚಾರ್ಲ್ಸ್ ದೊರೆ ಸಾಹಸಿಗಳ ಇನ್ನೊಂದು ತಂಡಕ್ಕೆ ಇಲ್ಲಿ ವ್ಯಾಪಾರ ಹಕ್ಕುಗಳನ್ನು ಕೊಟ್ಟ. 1681ರಲ್ಲಿ ಫ್ರೆಂಚರು ಗೋರಿ ಎಂಬಲ್ಲಿದ್ದ ತಮ್ಮ ನೆಲೆಯಿಂದ ಗ್ಯಾಂಬಿಯ ನದಿಯ ಉತ್ತರ ಭಾಗದಲ್ಲಿ ವಿಸ್ತರಿಸಿಕೊಂಡರು. ಅನಂತರದ ನೂರು ವರ್ಷಗಳು ಫ್ರೆಂಚ್ ಮತ್ತು ಬ್ರಿಟಿಷರು ನದಿ ವ್ಯಾಪಾರದ ಮೇಲೆ ಹತೋಟಿ ಸಾಧಿಸಲು ಹೋರಾಡಿದರು. ಯುದ್ಧಗಳಲ್ಲಿ ನಾಲ್ಕು ಸಾರಿ ಫೋರ್ಟ್ ಜೇಮ್ಸ್ ದ್ವೀಪವನ್ನು ಹಿಡಿದುಕೊಂಡಿದ್ದರು. 1713 ಒಪ್ಪಂದದ ಪ್ರಕಾರ

ಅದನ್ನು ಬ್ರಿಟಿಷರಿಗೆ ಬಿಟ್ಟುಕೊಡಬೇಕಾಯಿತು. ಫ್ರೆಂಚರು 1779ರಲ್ಲಿ ಫೋರ್ಟ್ ಜೇಮ್ಸನ್ನು ನಾಶಮಾಡಿದರು. ಆದರೆ 1783ರ ವರ್ಸೇಲ್ಸ್ ಒಪ್ಪಂದದ ಪ್ರಕಾರ ಬ್ರಿಟಿಷರಿಗೆ ಗ್ಯಾಂಬಿಯ ನದಿಯ ಮೇಲಣ ಹಕ್ಕು ಉಳಿಯಿತು. ಬ್ರಿಟಿಷರು ಈಗಿನ ಗ್ಯಾಂಬಿಯ ಮತ್ತು ಸೆನಿಗಾಲ್‌ನ ಕೆಲವು ಪ್ರದೇಶವನ್ನು 1765ರಲ್ಲಿ ನೆಲೆಯಾಗಿ ಮಾಡಿಕೊಂಡು ಸೆನೆಗ್ಯಾಂಬಿಯ ಎಂಬ ಹೆಸರಿನಿಂದ ಕರೆಯುತ್ತಿದ್ದರು. 1783ರಲ್ಲಿ ಬ್ರಿಟಿಷರು ಸೆನಿಗಾಲ್ ಪ್ರದೇಶವನ್ನು ಫ್ರಾನ್ಸ್‌ಗೆ ವಹಿಸಿಕೊಟ್ಟರು.

ಕೋಂಬೋ ಪ್ರದೇಶದ ಮುಖ್ಯಸ್ಥ 1816ರಲ್ಲಿ ಬಂಜುಲ್ ದ್ವೀಪವನ್ನು ಬ್ರಿಟಿಷರಿಗೆ ಕೊಟ್ಟ. ಇದು ಸೇಂಟ್ ಮೇರಿ ದ್ವೀಪವೆಂದು ಹೆಸರಾಯಿತು. ಬ್ರಿಟಿಷರು ಅಲ್ಲಿ ವಸಾಹತು ಕಾರ್ಯದರ್ಶಿಯ ಹೆಸರಿನಲ್ಲಿ ಬ್ಯಾತರ್ಸ್ಟ್ ನಗರವನ್ನು ಸ್ಥಾಪಿಸಿದರು. ಅದು 1821ರಲ್ಲಿ ಸಿಯೆರ ಲಿಯೋನ್ ವಸಾಹತಿಗೆ ಅಧೀನವಾಯಿತು; 1843ರಲ್ಲಿ ಪ್ರತ್ಯೇಕ ವಸಾಹತಾಯಿತು. 1866ರಲ್ಲಿ ಮತ್ತೆ ಪಶ್ಚಿಮ ಆಫ್ರಿಕದ ವಸಾಹತಿನ ಭಾಗವಾಗಿದ್ದು ಮತ್ತೆ 1888ರಲ್ಲಿ ಪ್ರತ್ಯೇಕವಾಯಿತು. ಗ್ಯಾಂಬಿಯ ನದಿಯ ಉತ್ತರದಲ್ಲಿದ್ದ ಫ್ರೆಂಚ್ ಪ್ರದೇಶ ಆಲ್ಬ್ರೆಡ 1857ರಲ್ಲಿ ಬ್ರಿಟಿಷರಿಗೆ ಸೇರಿತು.

ಅನಂತರ ಹಲವಾರು ಪ್ರದೇಶಗಳು ಫ್ರೆಂಚರಿಗೂ ಬ್ರಿಟಿಷರಿಗೂ ನಡುವೆ ವಿನಿಮಯವಾದುವು. ಫ್ರೆಂಚರಿಂದ ಬೇರೆ ಪ್ರದೇಶ ಪಡೆದು ಗ್ಯಾಂಬಿಯವನ್ನು ಅವರಿಗೆ ಕೊಡುವ ಬಗ್ಗೆ ಸಂಧಾನಗಳು ನಡೆದಿದ್ದುವು. ಆದರೆ ಅವು ಮುರಿದು ಬಿದ್ದುವು. ಫ್ರೆಂಚರು ಸೆನಿಗಾಲಿನಲ್ಲಿ ತಮ್ಮ ಆಡಳಿತ ವಿಸ್ತರಿಸುತ್ತಿದ್ದರು. ಕೊನೆಗೆ 1889ರ ಒಪ್ಪಂದದ ಪ್ರಕಾರ ಗ್ಯಾಂಬಿಯ ನದಿಯ ಅಕ್ಕಪಕ್ಕಗಳಲ್ಲಿ ಕಿರಿದಾದ ಪ್ರದೇಶ ಬ್ರಿಟಿಷರದಾಗಿ ಉಳಿಯಿತು. ಇದು ಬ್ರಿಟಿಷ್ ಆರಕ್ಷಿತ ಪ್ರದೇಶವಾಯಿತು. 1902ರಲ್ಲಿ ಈಗಿನ ಗ್ಯಾಂಬಿಯ ಬ್ರಿಟಿಷರ ಆಳಿಕೆಗೆ ಒಳಪಟ್ಟಿತು.

ಎರಡನೆಯ ಮಹಾಯುದ್ಧದ (1945) ನಂತರ ಗ್ಯಾಂಬಿಯ ಕ್ರಮಕ್ರಮವಾಗಿ ಸ್ವಾಯತ್ತತೆ ಗಳಿಸಿತು. ಗ್ಯಾಂಬಿಯ ಸ್ವಾತಂತ್ರ್ಯ ಪಡೆದದ್ದು 1963ರಲ್ಲಿ. ಡೇವಿಡ್‌ಜವರ ಮೊದಲ ಪ್ರಧಾನಮಂತ್ರಿಯಾದ. ಸಂಪೂರ್ಣ ಸ್ವಾತಂತ್ರ್ಯವನ್ನು 1965ರ ಫೆಬ್ರವರಿ 18ರಂದು ಪಡೆಯಿತು. 1970ರ ಏಪ್ರಿಲ್ 24ರಂದು ಗಣರಾಜ್ಯವಾಯಿತು. ಡೇವಿಡ್‌ಜವರ ಮೊದಲ ಅಧ್ಯಕ್ಷನಾಗಿ ಚುನಾಯಿತನಾದ. ಇವನ ಸರ್ಕಾರ ರಸ್ತೆಗಳನ್ನು, ನೌಕಯಾನ ಮಾರ್ಗ, ಬಂಜುಲ್ ಬಂದರು ಮತ್ತು ಯನ್‌ಡಮ್ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಿತು. ಪ್ರವಾಸೋದ್ಯಮ ತ್ವರಿತವಾಗಿ ಅಭಿವೃದ್ಧಿ ಹೊಂದಿತು. ಹಾಗಾದರೂ ಕ್ಷಾಮ ವ್ಯವಸಾಯೋತ್ಪನ್ನಗಳನ್ನು ಕುಂಠಿತಗೊಳಿಸಿತು. ದೇಶದ ಆರ್ಥಿಕ ಸ್ಥಿತಿಗೆ ಧಕ್ಕೆ ತಂದಿತು.

1982ರಲ್ಲಿ ಗ್ಯಾಂಬಿಯ ಮತ್ತು ಸನಿಗಾಲ್ ಒಕ್ಕೂಟ ರಚಿಸಿಕೊಂಡವು. ಇದನ್ನು ಸೆನೆಗ್ಯಾಂಬಿಯ ಎಂದು ಕರೆದರು. ಈ ಒಕ್ಕೂಟದಿಂದ ಎರಡು ದೇಶಗಳ ಆರ್ಥಿಕಸ್ಥಿತಿ ಬಲಗೊಂಡಿತು. ಎರಡು ದೇಶಗಳ ಸೈನ್ಯಗಳು ಒಂದುಗೂಡಿದವು. ಆದರೆ ಎರಡೂ ದೇಶಗಳ ನಡುವಿನ ವಿವಾದಗಳು 1989ರಲ್ಲಿ ಒಕ್ಕೂಟವನ್ನು ಅಂತ್ಯಗೊಳಿಸಿತು. 1994ರಲ್ಲಿ ಗ್ಯಾಂಬಿಯ ಸೈನ್ಯಾಧಿಕಾರಿಗಳ ಒಂದು ಗುಂಪು ಯಹ್ಯ ಜಮ್ಮೆಹ್ ನಾಯಕತ್ವದಲ್ಲಿ ಜವರ ಆಳಿಕೆಯನ್ನು ಕೊನೆಗೊಳಿಸಿತು. ಆಡಳಿತವನ್ನು ಮಿಲಿಟರಿ ಕೌನ್ಸಿಲಿನ ಮೂಲಕ ನಡೆಸಿದರು. 1996ರ ಆಗಸ್ಟ್‌ನಿಂದ ಹೊಸ ಸಂವಿಧಾನ ಅಳವಡಿಸಿಕೊಂಡರು. ಯಹ್ಯ ಜಮ್ಮೆಹ್ ಅಧ್ಯಕ್ಷ ಚುನಾವಣೆಯಲ್ಲಿ ಜಯಶೀಲನಾದನು. ಚುನಾವಣೆ ಮುಗಿದ ಅನಂತರ ಮಿಲಿಟರಿ ಕೌನ್ಸಿಲ್ ಅನ್ನು ವಿಸರ್ಜಿಸಿದನು. 1997ರಲ್ಲಿ ನ್ಯಾಷನಲ್ ಅಸೆಂಬ್ಲಿ ಚುನಾವಣೆ ನಡೆಯಿತು. 2012ರಲ್ಲೂ ಯಹ್ಯ ಜಮ್ಮೆಹ್ ಅಧ್ಯಕ್ಷ.

**ಆಡಳಿತ:** ಗ್ಯಾಂಬಿಯದ ಪ್ರತಿನಿಧಿಸಭೆಯಲ್ಲಿ ಐದು ವರ್ಷಗಳ ಅವಧಿಗೆ ಚುನಾಯಿತರಾದ 32 ಸದಸ್ಯರಿರುತ್ತಾರೆ. 8 ಮಂದಿ ವಿಶೇಷ ಸದಸ್ಯರು. ಇವರಲ್ಲಿ ನಾಲ್ವರು ಬಣನಾಯಕರು, 3 ಮಂದಿ ನಾಮನಿರ್ದೇಶಿತ ಸದಸ್ಯರು ಮತ್ತು ಅಟಾರ್ನಿ ಜನರಲ್ ರಾಷ್ಟ್ರಾಧ್ಯಕ್ಷ ಅದರಿಂದ ಚುನಾಯಿತನಾಗುತ್ತಾನೆ. ಆತ ಒಬ್ಬ ಉಪರಾಷ್ಟ್ರಾಧ್ಯಕ್ಷನನ್ನು ನೇಮಿಸುತ್ತಾನೆ. ಇವನು ಪ್ರಧಾನಮಂತ್ರಿಯ ಅಧಿಕಾರಗಳನ್ನು ಹೊಂದಿರುತ್ತಾನೆ.

ಇಲ್ಲಿಯ ನ್ಯಾಯಪದ್ಧತಿ ಬ್ರಿಟಿಷ್ ಮಾದರಿಯದು. ಗ್ಯಾಂಬಿಯದಲ್ಲಿ ಒಂದು ಉಚ್ಚತಮ ನ್ಯಾಯಾಲಯ, ಅಪೀಲು ಕೋರ್ಟು ಮತ್ತು ಅಧೀನ ನ್ಯಾಯಾಲಯಗಳಿವೆ. ಮಹಮದೀಯ ಪ್ರಜೆಗಳಿಗಾಗಿ ಮುಸ್ಲಿಂ ನ್ಯಾಯಾಲಯಗಳುಂಟು.

**ಜನಜೀವನ:** ಗ್ಯಾಂಬಿಯದಲ್ಲಿ ಆಫ್ರಿಕದ ಹಲವು ಬಣಗಳಿಗೆ ಸೇರಿದ ಜನರಿದ್ದಾರೆ. ಅವುಗಳಲ್ಲಿ ಬಹು ಮುಖ್ಯ ಬಣ ಮ್ಯಾಂಡಿಂಗೋ. ಪೂರ್ವಭಾಗದಲ್ಲಿ ಫೂಲಾ ಬಣದವರು ಹೆಚ್ಚು. ವೋಲಾಫ್ ಜನ ಬ್ಯಾತರ್ಸ್ಟ್ ನಗರದಲ್ಲಿ ಮತ್ತು ಪಶ್ಚಿಮ ಭಾಗದಲ್ಲಿ ನೆಲೆಸಿದ್ದಾರೆ. ಸೆರಾಹುಲಿಗಳು ಮುಸ್ಲಿಮರು. ಮುಖ್ಯವಾಗಿ ವ್ಯಾಪಾರಿಗಳೂ ಕೃಷಿಕರೂ ಆದ ಇವರು ದೇಶದ ಪೂರ್ವಭಾಗದಲ್ಲಿ ಹೆಚ್ಚಾಗಿರುವರು. ಜೋಲುಗಳೂ ಬಹುತೇಕ ಕೃಷಿಕರು. ಇವರೂ ಇಸ್ಲಾಮಿಗೆ ಪರಿವರ್ತನೆ ಹೊಂದಿದವರು. ಬ್ಯಾತರ್ಸ್ಟ್ ನಗರದಲ್ಲಿ ವೋಲಾಫ್ ಜನ ಹೆಚ್ಚಾಗಿದ್ದರೂ ಗುಲಾಮರಾಗಿದ್ದು ಸ್ವತಂತ್ರರಾದರವರ ವಂಶಕ್ಕೆ ಸೇರಿದ ಆಕು ಜನ ಅಲ್ಲಿಯ ಆರ್ಥಿಕ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಹೊಂದಿದ್ದಾರೆ. ಸೆನಿಗಾಲ್, ಮಾಲಿ, ಗಿನಿಯ ಮತ್ತು ಮಾರಿಟಾನಿಯಗಳಿಂದ ವಲಸೆ ಬಂದ ಜನಕ್ಕೆ ಗ್ಯಾಂಬಿಯ ಆಶ್ರಯ ನೀಡಿದೆ.

ಇಂಗ್ಲಿಷ್ ಇಲ್ಲಿಯ ಸರ್ಕಾರದ ಭಾಷೆ. ಮಲಿಂಕ ಮತ್ತು ವೋಲೋಫ್ ಪ್ರಮುಖ ಭಾಷೆಗಳು.

**ಧರ್ಮ:** ಗ್ಯಾಂಬಿಯದಲ್ಲಿ 12 ನೆಯ ಶತಮಾನದಲ್ಲಿ ಇಸ್ಲಾಮಿನ ಪ್ರಚಾರವಾಯಿತು. ಇಲ್ಲಿಯ ಜನರಲ್ಲಿ ಶೇ. ಸು.90 ಮಂದಿ ಮುಸ್ಲಿಮರು, ಶೇ. 8 ಕ್ರೈಸ್ತರು. ಉಳಿದವರು ಸರ್ವಚೇತನ ಪಂಥದವರು.

**ಶಿಕ್ಷಣ:** ಗ್ಯಾಂಬಿಯದಲ್ಲಿ ಪ್ರಾಥಮಿಕ ಶಾಲೆಗಳು, ಸೆಕೆಂಡರಿ ಶಿಕ್ಷಣ ಶಾಲೆಗಳು ಮತ್ತು ವೃತ್ತಿ ಶಿಕ್ಷಣ ಶಾಲೆಗಳಿವೆ. ಯುನ್‌ಡಂ ನಗರದಲ್ಲಿ ಶಿಕ್ಷಕರ ತರಬೇತು ಸಂಸ್ಥೆ ಇದೆ. ಅರಬ್ಬೀ ಶಿಕ್ಷಣ ನೀಡುವ ಶಾಲೆಗಳು ಹಲವು ಇವೆ.

**ವ್ಯವಸಾಯ, ವಾಣಿಜ್ಯ, ಕೈಗಾರಿಕೆ:** ಉಷ್ಣವಲಯದ ಒಣಬೇಸಾಯದ ಸಸ್ಯಗಳನ್ನು ಇಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ನೆಲಗಡಲೆ ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಸಾವೆ, ಮೆಕ್ಕೆ ಜೋಳಗಳೂ ಅಧಿಕವಾಗಿ ಬೆಳೆಯುತ್ತವೆ. ಬತ್ತವನ್ನು ನದೀ ಪ್ರದೇಶದಲ್ಲಿ ಬೆಳೆಯುತ್ತಾರೆ. ಪಶ್ಚಿಮ ಭಾಗದಲ್ಲಿ ಮಾವು, ಕಿತ್ತಳೆ, ಬಾಳೆ, ನಿಂಬೆ ಬೆಳೆಯುತ್ತದೆ. ಅಟ್ಲಾಂಟಿಕ್ ತೀರದಲ್ಲಿ ಮೀನುಗಾರಿಕೆ ಅಭಿವೃದ್ಧಿಯಾಗಿದೆ. ಇಲ್ಲಿಂದ ರಫ್ತಾಗುವ ವಸ್ತುಗಳು ನೆಲಗಡಲೆ, ಕೊಬ್ಬರಿ, ಮತ್ತು ಒಣ ಮೀನು. ಯಂತ್ರೋಪಕರಣ, ಮೋಟಾರು ವಾಹನ, ಪೆಟ್ರೋಲ್, ಬಟ್ಟೆ ಔಷಧ, ಸಿಮೆಂಟ್ ಇವು ಆಮದುಗಳು.

**ಸಾರಿಗೆ ಸಂಪರ್ಕ:** ಗ್ಯಾಂಬಿಯದಲ್ಲಿ ಸರ್ವಋತು ರಸ್ತೆಗಳು ಹೆಚ್ಚಾಗಿ ಇಲ್ಲ. ಫ್ರೆಂಚ್ ಸರ್ಕಾರ ನಿರ್ಮಿಸಿದ ಗ್ಯಾಂಬಿಯಾಂತರ ರಸ್ತೆ ಬಲಿಂಗೊ ಮತ್ತು ಯೆಲಿಟೆಂಡ ಮೂಲಕ ಹೋಗುತ್ತದೆ. ಇದರಿಂದ ಸೆನಿಗಾಲ್‌ನಿಂದ ಕ್ಯಾಸಮಾನ್ಸ್ ನದಿಯವರೆಗೆ ಸಾರಿಗೆ ಸಂಪರ್ಕ ಏರ್ಪಟ್ಟಿದೆ. ಕಿರುದಾರಿಗಳಲ್ಲದೆ 1168 ಕಿಮೀ ಉದ್ದದ ರಸ್ತೆಗಳಿವೆ. ನೀರಿನಲ್ಲಿ 26' ಇಳಿದು ಚಲಿಸುವ ಸಮುದ್ರನೌಕೆಗಳು ಗ್ಯಾಂಬಿಯ ಅಳಿವೆಯಿಂದ ಬ್ಯಾತರ್ಸ್ಟ್ ವರೆಗೂ 17' ಇಳಿದು ಸಂಚರಿಸುವ ಹಡಗುಗಳು ಅಲ್ಲಿಂದ ಮುಂದಕ್ಕೆ ಕುಂಟೌರ್‌ವರೆಗೂ ಯಾನಮಾಡುತ್ತವೆ. ಬ್ಯಾತರ್ಸ್ಟ್ ಮುಖ್ಯಬಂದರು. ಇದು ಸೇಂಟ್ ಮೇರಿ ದ್ವೀಪದ ಮೇಲಿದೆ. ನೆಲಗಡಲೆ ಸಾಗುವುದು ಕುಂಟೌರ್, ಬಲಿಂಗೊ, ಕೌರ್ ಬಂದರುಗಳಿಂದ. ಇತರ ನದೀ ಬಂದರುಗಳು ಜಾರ್ಜ್‌ಟೌನ್ ಮತ್ತು ಫಟಾಟೊ. ಯನ್‌ಡಂನಲ್ಲಿ ವಿಮಾನ ನಿಲ್ದಾಣವಿದೆ. ಲಂಡನ್, ಲಿಸ್ಬನ್ ಮತ್ತು ಪಶ್ಚಿಮ ಆಫ್ರಿಕದ ಪಟ್ಟಣಗಳಿಗೆ ವಿಮಾನಸಂಪರ್ಕ ಉಂಟು. (ವಿ.ಜಿ.ಕೆ.; ಟಿ.ಇ.ಎಚ್.)

**ಗ್ಯಾಂಬಿಯ ನದಿ :** ಪಶ್ಚಿಮ ಆಫ್ರಿಕದ ಒಂದು ನದಿ. ಗಿನಿ ಗಣರಾಜ್ಯದ ಫೂಟ ಜಲಾನ್ ಪ್ರಸ್ಥಭೂಮಿಯಲ್ಲಿ ಸಮುದ್ರಕ್ಕೆ ಕೇವಲ 240 ಕಿಮೀ ದೂರದಲ್ಲಿ ಹುಟ್ಟಿ, ಮೊದಲು ಈಶಾನ್ಯಾಭಿಮುಖವಾಗೂ ಅನಂತರ ಪಶ್ಚಿಮಾಭಿಮುಖವಾಗೂ, ಒಟ್ಟು ಸು. 1120 ಕಿಮೀ ದೂರ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಇದು ಪಶ್ಚಿಮದ ಕಡೆಗೆ ತಿರುಗುವುದು ನೆರಿಕೊ ನದಿಯೊಂದಿಗೆ ಸೇರುವೆಡೆಯಲ್ಲಿ. ಇದರ ಮುಖ್ಯ ಉಪನದಿ ಗ್ರೇ. ಟೆಂಡಾ ಬೆಟ್ಟಗಳಿಂದ ಉತ್ತರಕ್ಕೆ ಹರಿದು ಗ್ಯಾಂಬಿಯ ರಾಜ್ಯದ ಎಲ್ಲೆಗೆ 40 ಕಿಮೀ ದೂರದಲ್ಲಿ ಗ್ಯಾಂಬಿಯ ನದಿಯನ್ನು ಸೇರುತ್ತದೆ. ರಾಜ್ಯದ ಗಡಿಯಲ್ಲಿ ವೇಗವಾಗಿ ಇಳಿಯುತ್ತದೆ. ಜೂನ್ ಮತ್ತು ನವೆಂಬರ್ ತಿಂಗಳುಗಳ ಮಧ್ಯೆ ನದಿಯಲ್ಲಿ ಪ್ರವಾಹ. ನದಿ ಸಮುದ್ರ ಸೇರುವೆಡೆಯಿಂದ 150 ಕಿಮೀ ದೂರದಲ್ಲಿಯ ಎಲಿಫೆಂಟ್ ದ್ವೀಪದ ಬಳಿ ಮತ್ತೆ ಪಶ್ಚಿಮದ ಕಡೆಗೆ ತಿರುಗುತ್ತದೆ. ಅಲ್ಲಿ ಸಾಮಾನ್ಯವಾಗಿ ನದಿಯ ನೀರು ಉಪ್ಪು. ಮಳೆಗಾಲದಲ್ಲಿ ಸಮುದ್ರದಿಂದ 130 ಕಿಮೀ ದೂರದ ಬಲಿಂಗೊ ವರೆಗೆ ನೀರು ಉಪ್ಪಾಗಿರುತ್ತದೆ. ಕೆಲವು ವೇಳೆ 240 ಕಿಮೀ ದೂರದ ಕುನ್ತಾರ್‌ವರೆಗೂ ನದಿ ಉಪ್ಪು ನೀರಿನಿಂದ ಕೂಡಿರುವುದುಂಟು. ನದಿಯ ಎರಡು ದಂಡೆಗಳನ್ನೂ ಗುಲ್ಮ ವೃಕ್ಷಗಳು ಆವರಿಸಿಕೊಂಡಿವೆ. ಇಲ್ಲಿ ನದಿಯ ಪಾತ್ರ ಹೆಚ್ಚು ಅಗಲ. ಎಲಿಫೆಂಟ್ ದ್ವೀಪದ ಬಳಿಯಿಂದಲೇ ನದಿಯ ಅಳಿವೆ ಪ್ರಾರಂಭವಾಗುತ್ತದೆನ್ನಬಹುದು. ಅಲ್ಲಿ 1.6 ಕಿಮೀ ಅಗಲವಿರುವ ನದಿ, ಬ್ಯಾತರ್ಸ್ಟ್ ರೇವಿನ ಬಳಿ 11.2 ಕಿಮೀ ಅಗಲವಾಗಿದೆ. ಆದರೆ ಬ್ಯಾತರ್ಸ್ಟ್ ಅನ್ನು ಒಳಗೊಂಡಿರುವ ಸೇಂಟ್ ಮೇರಿ ದ್ವೀಪದ ದಕ್ಷಿಣ ಚಾಚಿಗೂ ಅದರ ಎದುರಿಗಿನ ದಡಕ್ಕೂ ನಡುವೆ ನದಿಯ ಅಗಲ 4 ಕಿಮೀ. ಅಳಿವೆಯ ಕೆಳಭಾಗದಲ್ಲಿ ಪಾತ್ರದ ನಡುವೆ 1 ಕಿಮೀ ಅಗಲದ ನಾಲೆಯಲ್ಲಿ ಹಡಗು ಸಂಚಾರಕ್ಕೆ ಸೌಲಭ್ಯವುಂಟು. ಆದರೆ ಬ್ಯಾತರ್ಸ್ಟ್‌ಗೂ ಸಮುದ್ರಕ್ಕೂ ನಡುವೆ ಎರಡು ಎಡೆಗಳಲ್ಲಿ ನದಿ ತೀವ್ರವಾಗಿ ತಿರುಗುತ್ತದೆ. ನದೀಮುಖಕ್ಕೆ ಅಡ್ಡಲಾಗಿ ಇರುವ ಅಡಚಣೆಯಿಂದಾಗಿ ಹಡಗಿನ ಪ್ರವೇಶಕ್ಕೆ 26 ಅಡಿ ಅಗಲದಷ್ಟು ಮಾತ್ರ ಅವಕಾಶವುಂಟು. ಸಣ್ಣ ಹಡಗುಗಳು ಇದರ ಮೂಲಕ ಸ್ವಲ್ಪ ದೂರದವರೆಗೆ ಹೋಗಿ ಬರಬಹುದು.

ಟಾಲೆಮಿಗೂ ಅರಬ್ ಭೂಗೋಳಶಾಸ್ತ್ರಜ್ಞರಿಗೂ ಗ್ಯಾಂಬಿಯ ನದಿ ಗೊತ್ತಿತ್ತು. 1291 ರಲ್ಲಿ ಇಟಲಿಯ ಜಿನೋವ ನಗರದ ನಾವಿಕರು ಗ್ಯಾಂಬಿಯ ನದಿಯ ವರೆಗೂ

ಬಂದಿದ್ದಿರಬಹುದು. ಪೋರ್ಚುಗೀಸರಂತೂ ಇದನ್ನು ಕಂಡದ್ದು ನಿಜ. ಆದರೆ ಗ್ಯಾಂಬಿಯ ನದಿಯನ್ನು ಮೊದಲು ಪರಿಶೋಧಿಸಿದವನು (1455) ವೆನಿಸಿನ ಅಲ್ ವಿಸ್ ಕ ಡ ಮೊಸ್ಟೊ. ಅನಂತರ ಒಳನಾಡನ್ನು ಪರಿಶೋಧಿಸಿದವರು ಗ್ಯಾಂಬಿಯದ ಮೂಲಕ ಹೋಗುತ್ತಿದ್ದರು. ಇವರಲ್ಲಿ ಪ್ರಮುಖನಾದವನು ಮುಂಗೊ ಪಾರ್ಕ್. ಈತ 1795 ಮತ್ತು 1805 ರಲ್ಲಿ ಕೈಗೊಂಡ ಎರಡು ಪ್ರವಾಸಗಳನ್ನೂ ಈ ನದಿಯಿಂದಲೇ ಆರಂಭಿಸಿದ. ಗ್ಯಾಂಬಿಯದ ಉಗಮ ಸ್ಥಳವನ್ನು ಪತ್ತೆ ಹಚ್ಚಿದವನು (1818) ಗ್ಯಾಸ್ಪರ್ಡ್ ಮೋಲೀನ್ ಎಂಬ ಫ್ರೆಂಚ್ ಪ್ರಜೆ. ನದಿಯ ಮಧ್ಯಭಾಗವನ್ನು ಪರಿಶೋಧಿಸಿದವರು ಆರ್. ಜೆ. ಮ್ಯಾಕ್‍ಡಾನೆಲ್ (1851) ಮತ್ತು ವಿ. ಎಸ್. ಗೌಲ್ಡ್ಸ್‍ಬರಿ (1881). ಮ್ಯಾಕ್ ಡಾನೆಲ್ ಅದನ್ನು ಪರಿಶೋಧಿಸಿದ ಕಾಲದಲ್ಲಿ ಆ ವಸಾಹತಿನ ರಾಜ್ಯಪಾಲನಾಗಿದ್ದ. (ಬಿ.ಎಸ್.ಎಚ್.)

**ಗ್ಯಾಂಬೆಟ, ಲಿಯಾನ್ :** 1838–82. ಫ್ರೆಂಚ್ ರಾಜಕಾರಣಿ; ತೃತೀಯ ಗಣರಾಜ್ಯದ ಪ್ರಜಾಪ್ರಭುತ್ವದ ಸ್ಥಾಪಕರಲ್ಲೊಬ್ಬ. ಜನನ 1838ರ ಏಪ್ರಿಲ್ 2ರಂದು, ಕೇಆರ್‍ನಲ್ಲಿ. ತಂದೆ ಜೋಸೆಫ್ ಗ್ಯಾಂಬೆಟ, ತಾಯಿ ಒರಾಸಿ ಮ್ಯಾಸಾಬಿ. ಪ್ಯಾರಿಸಿನಲ್ಲಿ ನ್ಯಾಯಶಾಸ್ತ್ರ ವ್ಯಾಸಂಗ ಮಾಡಿ ಅಲ್ಲೇ ನ್ಯಾಯವಾದಿ ವೃತ್ತಿ ಅವಲಂಬಿಸಿದ. 3ನೆಯ ನೆಪೋಲಿಯನನ ನೀತಿಗಳಿಗೆ ಆಗ (1860) ಪ್ರಬಲವಾದ ವಿರೋಧವಿತ್ತು. ಈ ವಿರೋಧ ಪ್ಯಾರಿಸಿನಲ್ಲಿ ಅತ್ಯಂತ ತೀವ್ರವಾಗಿತ್ತು. ಗ್ಯಾಂಬೆಟನಿಗೆ ರಾಜಕೀಯ ಪತ್ರಿಕೋದ್ಯಮದಲ್ಲೂ ರಿಪಬ್ಲಿಕನ್ ಪಕ್ಷದ ಚಟುವಟಿಕೆಗಳಲ್ಲೂ ಆಸಕ್ತಿ ಬೆಳೆಯಿತು.

ಸರ್ಕಾರವಿರೋಧಿ ಚಟುವಟಿಕೆಯ ಆಪಾದನೆ ಹೊರಿಸಿ ವಿಚಾರಣೆಗೆ ಗುರಿಪಡಿಸಲಾಗುತ್ತಿದ್ದ ರಿಪಬ್ಲಿಕನ್ ರಾಜಕಾರಣಿಗಳ ಪರವಾಗಿ ವಾದಿಸುತ್ತಿದ್ದ ತರುಣ ನ್ಯಾಯವಾದಿಗಳಲ್ಲಿ ಗ್ಯಾಂಬೆಟನೂ ಒಬ್ಬನಾಗಿದ್ದ. ಆ ಸಮಯದಲ್ಲಿ ಸರ್ಕಾರವನ್ನು ತೀವ್ರವಾಗಿ ಟೀಕಿಸಲು ಅವಕಾಶ ದೊರಕುತ್ತಿತ್ತು. 1851ರ ಡಿಸೆಂಬರಿನ ಕ್ಷಿಪ್ರಾಕ್ರಮಣವನ್ನು ವಿರೋಧಿಸಿ ಹುತಾತ್ಮನಾದವನೊಬ್ಬನ ಸ್ಮಾರಕ ನಿರ್ಮಿಸಲೆತ್ನಿಸಿದ ಪತ್ರಿಕೋದ್ಯಮಿಗಳ ವಿರುದ್ಧ ಹೂಡಲಾದ ಮೊಕದ್ದಮೆಯಲ್ಲಿ ಆಪಾದಿತರ ಪರವಾಗಿ ವಾದಿಸಿದವರಲ್ಲಿ ಗ್ಯಾಂಬೆಟನೂ ಸೇರಿದ್ದ. ಗ್ಯಾಂಬೆಟ ಮಾಡಿದ ಪುಟ್ಟ ಕಟು ಭಾಷಣ ಪತ್ರಿಕೆಗಳಲ್ಲಿ ಪ್ರಕಟಗೊಂಡು ಈತನಿಗೆ ಪ್ರಸಿದ್ಧಿ ತಂದಿತು. 1869ರ ಚುನಾವಣೆಗಳಲ್ಲಿ ಇವನು ಪ್ಯಾರಿಸ್ ಮತ್ತು ಮಾರ್ಸೇಲ್ಸ್ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡರಲ್ಲೂ ಗೆದ್ದ. ಇವನು ಮಾರ್ಸೇಲ್ಸ್ ಪ್ರತಿನಿಧಿಯಾಗಿರಲು ತೀರ್ಮಾನಿಸಿದನಾದರೂ ಪ್ಯಾರಿಸಿನ ಕಾರ್ಮಿಕ ಕ್ಷೇತ್ರದ ಶಾಶ್ವತ ಪ್ರೀತಿಯನ್ನೂ ಗಳಿಸಿಕೊಂಡ.

ವಿಧಾನಸಭೆಯ ಪ್ರತಿನಿಧಿಯಾಗಿ ಗ್ಯಾಂಬೆಟ ತೀವ್ರಗಾಮಿ ತತ್ತ್ವಗಳನ್ನು ಪ್ರತಿಪಾದಿಸಿದ. ದ್ವಿತೀಯ ಚಕ್ರಾಧಿಪತ್ಯದ ರೀತಿನೀತಿಗಳನ್ನು ವಿರೋಧಿಸುವವರ ನಾಯಕನಾದ. 1870ರಲ್ಲಿ ಫ್ರಾನ್ಸ್ ಜರ್ಮನಿಗಳ ನಡುವೆ ಆರಂಭವಾದ ಯುದ್ಧಕ್ಕೆ ಕಾರಣವಾದ ಕ್ರಮಗಳ ಬಗ್ಗೆ ಇವನ ತೀವ್ರ ವಿರೋಧವಿತ್ತು. ಯುದ್ಧವಂತೂ ಆರಂಭವಾಗಿರುವುದರಿಂದ ಅದನ್ನು ಯಶಸ್ವಿಯಾಗಿ ಕೊನೆಗೊಳಿಸಬೇಕೆಂಬುದು ಇವನ ವಾದವಾಗಿತ್ತು. ಆದರೆ ಯುದ್ಧದಲ್ಲಿ ಫ್ರಾನ್ಸ್ ಪರಾಜಯದ ಹಾದಿ ಹಿಡಿದಿದ್ದ ವಾರ್ತೆ ಪ್ಯಾರಿಸನ್ನು ತಲುಪಿತು. ಪ್ಯಾರಿಸಿನ ರಕ್ಷಣೆಗಾಗಿ ಫ್ರೆಂಚ್ ಪ್ರಾಂತಗಳ ಜನರನ್ನು ಹುರಿದುಂಬಿಸಿ, ಜರ್ಮನ್ ಆಕ್ರಮಣದಿಂದ ದೂರವಾಗಿದ್ದ ಸ್ಥಳಗಳಲ್ಲಿ ಹೊಸ ಸೇನೆ ರೂಪಿಸುವುದಕ್ಕೆ ಇವನು ಪ್ರಯತ್ನಿಸಿದ. ಫ್ರಾನ್ಸಿನ ರಾಜಧಾನಿಯನ್ನು ಜರ್ಮನ್ ಸೇನೆ ಮುತ್ತಿದಾಗ ಗ್ಯಾಂಬೆಟ ಬಲೂನೊಂದರಲ್ಲಿ ಕುಳಿತು ಜರ್ಮನ್ ಸೈನ್ಯಸಾಲಿನ ಮೇಲೆ ತೇಲಿಹೋಗಿ ಏಮಿಯೆನ್ಸ್ ತಲುಪಿ, ಅಲ್ಲಿಂದ ಟೂರ್ ಸೇರಿ, ಅನಾಕ್ರಮಿತ ಫ್ರಾನ್ಸಿನ ಆಡಳಿತದ ನಾಯಕತ್ವ ವಹಿಸಿ ಕೊನೆಯವರೆಗೂ ಹೋರಾಟ ಮುಂದುವರಿಸಲು ಕಂಕಣಬದ್ಧನಾದ. ಆದರೂ 1871ರ ಜನವರಿ 28 ರಂದು ಶಾಂತಿ ಕೌಲಿಗೆ ಸಹಿ ಬಿತ್ತು. ಅದಕ್ಕೆ ಒಪ್ಪಿಗೆ ನೀಡಬೇಕಾಗಿದ್ದ ಹೊಸ ರಾಷ್ಟ್ರೀಯ ಸಭೆಗೆ ನಡೆದ ಚುನಾವಣೆಯಲ್ಲಿ ಗ್ಯಾಂಬೆಟ ಒಂಬತ್ತು ಕ್ಷೇತ್ರಗಳಿಂದ ಸ್ಪರ್ಧಿಸಿ ಗೆದ್ದ. ಸಭೆಯಲ್ಲಿ ಬಹುಮತೀಯರಾಗಿದ್ದ ರಾಜತ್ವವಾದಿಗಳು ಕೌಲಿಗೆ ಒಪ್ಪಿಗೆ ನೀಡಿದರು. ಕೌಲಿನ ಪ್ರಕಾರ ಅಲ್ಸ್ಯಾಸ್–ಲರೇನ್ ಜರ್ಮನಿಗೆ ಸೇರಿದ್ದರಿಂದ ಆಲ್ಸ್ಯಾಸ್ ವಿಭಾಗದ ಕ್ಷೇತ್ರದ ಪ್ರಾತಿನಿಧ್ಯ ಉಳಿಸಿಕೊಂಡಿದ್ದ ಗ್ಯಾಂಬೆಟನಿಗೆ ಸದಸ್ಯತ್ವ ಹೋಯಿತು. ಅನಂತರ ನಡೆದ ಉಪಚುನಾವಣೆಗಳಲ್ಲಿ ಗ್ಯಾಂಬೆಟ ಮತ್ತೆ ಗೆದ್ದ. ಈತನ ಕೀರ್ತಿ ಪ್ರತಿಷ್ಠೆಗಳು ಹೆಚ್ಚಿದವು.

ಮೂರನೆಯ ಗಣರಾಜ್ಯದ ಸ್ಥಾಪನೆಗಾಗಿ ಗ್ಯಾಂಬೆಟ ಬಹುವಾಗಿ ಶ್ರಮಿಸಿದ. ಇವನ ಪ್ರಯತ್ನಗಳಿಂದಾಗಿ ಪ್ರಜಾಪ್ರಭುತ್ವ ಸಂಸ್ಥೆಗಳು ಪುಷ್ಟಿಗೊಂಡವು. ರಿಪಬ್ಲಿಕನ್ ಒಕ್ಕೂಟ ಪ್ರಬಲವಾಯಿತು. 1876ರಲ್ಲಿ ನಡೆದ ಚುನಾವಣೆಗಳಲ್ಲಿ ರಿಪಬ್ಲಿಕನರ ಕೈ ಮೇಲಾಯಿತು. ಆದರೂ 1879ರಲ್ಲಿ ನಡೆದ ಚುನಾವಣೆಗಳಲ್ಲಿ ಗ್ಯಾಂಬೆಟನ ಪಕ್ಷವನ್ನು ಸರಿಗಟ್ಟುವ ಬೇರೆ ಪಕ್ಷ ಇರಲಿಲ್ಲ. ರಿಪಬ್ಲಿಕನ್ ಗಣರಾಜ್ಯ ಸರ್ಕಾರ ಸ್ಥಾಪಿತವಾಯಿತು. ಗ್ಯಾಂಬೆಟ ಪ್ರತಿನಿಧಿಗಳ ಸಭೆಯ (ಚೇಂಬರ್ ಆಫ್ ಡೆಪ್ಯೂಟೀಸ್) ಅಧ್ಯಕ್ಷನಾದ. 1881 ರಲ್ಲಿ ಸರ್ಕಾರ ರಚಿಸುವ ಅವಕಾಶ ಇವನಿಗೆ ಒದಗಿ ಬಂತು. ಆದರೆ ಗ್ಯಾಂಬೆಟ ಹಿಂದೆ ಬಯಸಿದ್ದಂಥ ಬಲಿಷ್ಠ ಸರ್ಕಾರ ಅದಾಗಲಿಲ್ಲ. ಸಂವಿಧಾನಪರಿಷ್ಕರಣ ಕಾರ್ಯದಲ್ಲಿ ಅದು ಅತಿಯಾಗಿ ನಿರತವಾಯಿತು. ಇವನು ಆಶಿಸಿದ್ದ ಸುಧಾರಣೆಗಳು ಪೂರೈಸಲಿಲ್ಲ. 1882 ರಲ್ಲಿ ಆ ಸರ್ಕಾರ ಪತನ ಹೊಂದಿತು. ಆ ವರ್ಷದ ಡಿಸೆಂಬರ್ 31 ರಂದು ಗ್ಯಾಂಬೆಟ ತೀರಿಕೊಂಡ. *

ಗ್ಯಾಂಬೆಟ ಅಧಿಕಾರದಲ್ಲಿದ್ದಾಗಿಗಿಂತ ವಿರೋಧಶಿಬಿರದಲ್ಲಿದ್ದಾಗಲೇ ಹೆಚ್ಚು ಯಶಸ್ವಿಯಾಗಿದ್ದನೆಂದು ಭಾವಿಸಲಾಗಿದೆ. ಪಕ್ಷ ಸಿದ್ಧಾಂತಗಳಿಗಿಂತ ರಾಷ್ಟ್ರೈಕ್ಯಕ್ಕೆ ಹೆಚ್ಚಿನ ಬೆಲೆ ಕೊಟ್ಟು ಗ್ಯಾಂಬೆಟ ತನ್ನ ವಿರೋಧಿಗಳ ಒತ್ತಡಕ್ಕೆ ಹಲವು ಸಾರಿ ಮಣಿದ. ಇದರಿಂದ ಇವನನ್ನು ಸಮಯಸಾಧಕನೆಂದು ಹಲವರು ತಪ್ಪಾಗಿ ತಿಳಿದುಕೊಂಡಿದ್ದರು. ಇವನ ಯಶಸ್ಸಿನ ಫಲವೆಂದರೆ ಫ್ರಾನ್ಸಿನ ಸಂಸದೀಯ ಪ್ರಜಾಪ್ರಭುತ್ವ. ದುರ್ಬಲ ಪಕ್ಷ ವ್ಯವಸ್ಥೆ ಗ್ಯಾಂಬೆಟನ ಸೋಲಿನ ಪರಿಣಾಮ. (ಬಿ.ಎಸ್.ಎ.)

**ಗ್ಯಾಡೊಲಿನ್, ಯೋಹಾನ್ :** 1760–1852. ಫಿನ್ಲೆಂಡಿನ ರಸಾಯನ ವಿಜ್ಞಾನಿ. ಅಬೊನಲ್ಲಿ 1760ರ ಜೂನ್ 5 ರಂದು ಜನನ. ಅಬೊ ಮತ್ತು ಉಪ್ಸಲಾ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ. ರಸಾಯನಶಾಸ್ತ್ರವನ್ನು ಟಾರ್ವರ್ನ್ ಒಲೊಫ್ ಬರ್ಗ್‍ಮನ್ ಎಂಬಾತನಲ್ಲಿ ಅಭ್ಯಾಸ ಮಾಡಿ ಬಳಿಕ ಅಬೊ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನದ ಪ್ರಾಧ್ಯಾಪಕನಾಗಿ 1797 ರಿಂದ 1822 ರವರೆಗೆ ಸೇವೆ ಸಲ್ಲಿಸಿದ. ಲೋಹ ಮತ್ತು ಖನಿಜಗಳ ಸಂಶೋಧನೆ ಈತನ ಪ್ರಮುಖಾಸಕ್ತಿ. ಸ್ಟಾಕ್‍ಹೋಮ್ ಬಳಿಯ ಇಟರ್ಬಿಯಲ್ಲಿ ದೊರೆತ (1794) ಒಂದು ಗಟ್ಟಿಯಾದ ಕಪ್ಪು ಕಲ್ಲಿನಲ್ಲಿ ವಿರಳ ಭಸ್ಮಧಾತುಗಳನ್ನು ಕಂಡುಹಿಡಿದ ಕೀರ್ತಿ ಈತನದು. ಇವುಗಳ ಪೈಕಿ ಈತ ಆವಿಷ್ಕರಿಸಿದ ಲೋಹಕ್ಕೆ ಇಟ್ರಿಯಮ್ ಎಂಬ ಹೆಸರಿಟ್ಟ. ಈ ಲೋಹಗಳ ಖನಿಜಕ್ಕೆ ಗ್ಯಾಡೊಲಿನ್ನನ ಗೌರವಾರ್ಥವಾಗಿ ಇಂದು ಗ್ಯಾಡೊಲಿನೈಟ್ ಎಂದೇ ಹೆಸರಾಗಿದೆ. ಗ್ಯಾಡೊಲಿನ್ ವಿರಳ ಭಸ್ಮಧಾತುಗಳ ಬಗ್ಗೆ ಹೆಚ್ಚು ಸಂಶೋಧನೆ ಮಾಡಿ ಹೆಸರು ಪಡೆದರೂ ಅವನು ರಸಾಯನಶಾಸ್ತ್ರದ ಇತರ ಭಾಗಗಳಾದ ಸಂಯೋಗ ದ್ರವ್ಯಸಂಬಂಧತೆ (ಸ್ಟಾಯ್‍ಕಿಯೊಮೆಟ್ರಿ), ಉಷ್ಣ ರಸಾಯನಶಾಸ್ತ್ರ ಹಾಗೂ ಕಬ್ಬಿಣದ ಅದಿರುಗಳನ್ನು ವಿಭಜಿಸುವ ಸಲುವಾಗಿ ಸ್ರಾವಕಗಳ ಶೋಧನೆಯಲ್ಲೂ ಆಸಕ್ತನಾಗಿದ್ದ. 1852 ರ ಆಗಸ್ಟ್ 15 ರಂದು ಈತ ಮೃತನಾದ. (ಪಿ.ಜಿ.ಆರ್.)

**ಗ್ಯಾಡೊಲಿನಿಯಮ್ :** ವಿರಳಭಸ್ಮ ಧಾತುಗಳಲ್ಲೊಂದು; ಆವರ್ತಕೋಷ್ಟಕದ 3 ನೆಯ ಗುಂಪಿನಲ್ಲಿದೆ (ಲ್ಯಾಂಥನೈಡ್). ಬೆಳ್ಳಿಯಂತೆ ಬಿಳುಪಾದ ತನ್ಯ (ಡಕ್ಟೈಲ್) ಲೋಹವಿದು. ಆಮ್ಲಜನಕ ಮತ್ತು ನೀರುಗಳೊಡನೆ ಇದರ ವರ್ತನೆ ನಿಧಾನ. 18° ಸೆಂ.ಗಿಂತಲೂ ಕಡಿಮೆ ಉಷ್ಣತೆಯಲ್ಲಿ ಫೆರೊಕಾಂತ (ಫೆರೋಮ್ಯಾಗ್ನೆಟಿಕ್) ಅತಿ ಶೀತಾವಸ್ಥೆಯಲ್ಲಿ ಇದು ಅಧಿವಾಹಕ. ದ್ರವನ ಬಿಂದು 1312° ಸೆಂ. ಷಟ್ಕೋನಾಕೃತಿಯ ಸಾಂದ್ರತೆ 7.895. ರಾಸಾಯನಿಕ ಸಂಕೇತ Gd. ಪರಮಾಣು ತೂಕ 157.25. ಪರಮಾಣು ಸಂಖ್ಯೆ 64. ಪರಮಾಣು ತೂಕ 152, 154, 155, 156, 157, 158 ಮತ್ತು 160 ಇರುವ ಐಸೊಟೋಪುಗಳನ್ನು ಶೋಧಿಸಲಾಗಿದೆ. ಗ್ಯಾಡೊಲಿನಿಯಮಿನ ಎಲ್ಲ ಸಂಯುಕ್ತಗಳಲ್ಲೂ ದ್ರಾವಣಗಳಲ್ಲೂ ಇದರ ವೇಲೆನ್ಸಿ 3. ಇದರ ಎಲೆಕ್ಟ್ರಾನಿಕ್ ವಿನ್ಯಾಸ $1s^2, 2s^2, 2p^6, 3s^2$ $3p^6$ $3d^{10}$ $4s^2$ $4p^6$ $4d^{10}$ $4f^7$ $5s^2$ $5p^6$ $4d^1$ $6s^2$. ವಿರಳ ಭಸ್ಮಧಾತುಗಳ ಗುಂಪಿನ ಸದಸ್ಯಧಾತುವಾಗಿರುವ ಗ್ಯಾಡೊಲಿನಿಯಮ್ ರಾಸಾಯನಿಕ ಗುಣಲಕ್ಷಣಗಳಲ್ಲಿ ಅವನ್ನು ಪರಸ್ಪರ ಬಹಳವಾಗಿ ಹೋಲುವುದು. ಇದು ಬಿಳಿ ಆಕ್ಸೈಡನ್ನೂ ಬಣ್ಣವಿಲ್ಲದ ಲವಣಗಳನ್ನೂ ಪಡೆದಿದೆ. ಇದರ ದ್ರಾವಣಗಳು ನಿರ್ವರ್ಣ. ಗ್ಯಾಡೊಲಿನಿಯಮ್ ಅಯಾನಿನ ತ್ರಿಜ್ಯ 0.938A°. $Gd^{3+}$ ಅಯಾನಿಗೆ ರೋಹಿತದ ಅತಿನೇರಳೆ ಪ್ರದೇಶದಲ್ಲಿ ಹೀರುವ ಹಂತಗಳು ಇರುವುದರಿಂದ ಇದನ್ನು ವಿಶ್ಲೇಷಣೆಗೆ ಅಳವಡಿಸಿಕೊಳ್ಳಬಹುದು. ಅಯುಗ್ಮ ಎಲೆಕ್ಟ್ರಾನುಗಳನ್ನು ಪಡೆದಿರುವುದರಿಂದ ಇದರ ಅಯಾನು ಪ್ರಬಲ ಅನುಕಾಂತತೆಯನ್ನು ತೋರಿಸುವುದು.

ಈ ಧಾತುವನ್ನು ಆವಿಷ್ಕರಿಸಿದ ಕೀರ್ತಿ ಜೆ.ಸಿ.ಜಿ. ಡ ಮ್ಯಾರಿಗ್ನಾಕ್ ಮತ್ತು ಪಿ.ಇ.ಎಲ್. ಡ ಬಾಯ್ಸಿ ಬಾಡ್ರಾನ್ ಎಂಬ ಇಬ್ಬರು ವಿಜ್ಞಾನಿಗಳಿಗೆ ಸಲ್ಲುತ್ತದೆ. ಡ ಮ್ಯಾರಿಗ್ನಾಕ್ 1880 ರಲ್ಲಿ ಸಮರ್‍ಸ್ಕೈಟಿನಿಂದ ಹೊಸ ವಿರಳ ಭಸ್ಮಧಾತು ಒಂದನ್ನು ಬೇರ್ಪಡಿಸಿದ. 1886 ರಲ್ಲಿ ಬಾಯ್ಸಿಬಾಡ್ರಾನ್ ಅದರದೇ ಸಾಕಷ್ಟು ಶುದ್ಧವಾದ ಪದಾರ್ಥಗಳನ್ನು ತಯಾರಿಸಿದ. ಫಿನ್‍ಲೆಂಡಿನ ಖ್ಯಾತ ರಸಾಯನ ವಿಜ್ಞಾನಿ ಗ್ಯಾಡೊಲಿನನ ಗೌರವಾರ್ಥ ಆ ಧಾತುವಿಗೆ ಗ್ಯಾಡೊಲಿನಿಯಮ್ ಎಂದೂ, ಧಾತುವಿನ ಆಕ್ಸೈಡಿಗೆ ಗ್ಯಾಡೊಲಿನವೆಂದೂ ಮ್ಯಾರಿಗ್ನಾಕನ ಒಪ್ಪಿಗೆ ಪಡೆದು ಹೆಸರಿಟ್ಟ. ಗ್ಯಾಡೊಲಿನಿಯಮ್ ಇತರ ವಿರಳ ಭಸ್ಮಧಾತುಗಳೊಡನೆ ಅನೇಕ ಖನಿಜಗಳಲ್ಲಿ ಇರುವುದು. ಆದರೆ ವಾಣಿಜ್ಯ ದೃಷ್ಟಿಯಿಂದ ಅದನ್ನು ಮಾನೋಜೈಟಿನಿಂದ ಪ್ರಧಾನವಾಗಿ ಪಡೆಯಲಾಗುತ್ತಿದೆ. ಬ್ಯಾಸ್ಟ್ನಸೈಟ್, ಗ್ಯಾಡೊಲಿನೈಟ್, ಗ್ಸಿನೋಟೈಮ್ ಮತ್ತು ಯುಕ್ಸಿನೈಟುಗಳು ಇದರ ಇತರ ಮುಖ್ಯ ಅದಿರುಗಳು. ಪರಮಾಣು ವಿದಳನೆಯ ಉತ್ಪನ್ನಗಳಲ್ಲಿಯೂ ಗ್ಯಾಡೊಲಿನಿಯಮ್ ದೊರೆಯುತ್ತದೆ. ಎರಡನೆಯ ಮಹಾಯುದ್ಧಕ್ಕೆ ಮುಂಚೆ ಇದನ್ನು ಮುಖ್ಯವಾಗಿ ಆಂಶಿಕ ಸ್ಫಟಿಕೀಕರಣದ ಮೂಲಕ ಶುದ್ಧೀಕರಿಸುತ್ತಿದ್ದರು. ಈಗ ಅಯಾನು ವಿನಿಮಯ ವಿಧಾನಗಳನ್ನು ಅಳವಡಿಸಿಕೊಂಡು ಉತ್ಪಾದಿಸುತ್ತಾರೆ. 30% ನೈಟ್ರಿಕ್ ಆಮ್ಲದಲ್ಲಿನ ಗ್ಯಾಡೊಲಿನಿಯಮ್ ನೈಟ್ರೇಟನ್ನು ಸ್ಫಟಿಕೀಕರಿಸುವುದರಿಂದ ಈ ಲೋಹದ ಸಂಯುಕ್ತಗಳನ್ನು ಇತರ ಲ್ಯಾಂಥನೈಡುಗಳಿಂದ ಪ್ರತ್ಯೇಕಿಸಬಹುದು. ನಿರ್ಜಲ ಗ್ಯಾಡೊಲಿನಿಯಮ್ ಕ್ಲೋರೈಡನ್ನು ಕ್ಯಾಲ್ಸಿಯಮಿನಿಂದ

ಉಷ್ಣಾಪಕರ್ಷಿಸಿ ಲೋಹವನ್ನು ತಯಾರಿಸಬಹುದು. ಗ್ಯಾಡೊಲಿನಿಯಮ್, ಪೊಟಾಸಿಯಂ ಮತ್ತು ಲಿಥಿಯಮ್ ಕ್ಲೋರೈಡುಗಳ ಮಿಶ್ರಣವನ್ನು ವಿದ್ಯುದ್ವಿಶ್ಲೇಷಿಸಿ 98.4% ಶುದ್ಧವಾಗಿರುವ ಗ್ಯಾಡೊಲಿನಿಯಮ್ ಲೋಹವನ್ನು ಪಡೆಯಲಾಗಿದೆ. ಹೀಗೆ ಪಡೆದ ಮಿಶ್ರಲೋಹವನ್ನು ಕ್ವಾರ್ಟ್ಸ್ ನಳಿಗೆಯಲ್ಲಿ ನಿರ್ವಾತ ಆಸವಿಸಿ ಇತರ ಲೋಹಗಳನ್ನು ಆವಿಯಾಗಿಸುವುದರಿಂದ ಶುದ್ಧ ಗ್ಯಾಡೊಲಿನಿಯಮ್ ಲೋಹವನ್ನು ಪಡೆಯಬಹುದು.

$1^{\circ}K(-272^{\circ}$ ಸೆ.) ಗಿಂತಲೂ ಕಡಿಮೆ ಉಷ್ಣತೆ ಪಡೆಯುವ ಅತ್ಯಂತ ಶೀತಾವಸ್ಥೆಯ ಅಧ್ಯಯನದ ಪ್ರಾರಂಭದಲ್ಲಿ ಉಪಯೋಗಿಸಿದ್ದು ಗ್ಯಾಡೊಲಿನಿಯಮ್ ಲವಣಗಳನ್ನು. ಪ್ರಕೃತಿಯಲ್ಲಿ ದೊರೆಯುವ ಧಾತುಗಳಲ್ಲೆಲ್ಲ ಉಷ್ಣನ್ಯೂಟ್ರಾನುಗಳನ್ನು ಅತಿ ಹೆಚ್ಚು ಹೀರುವ ಕೊಯ್ತ ಇದಕ್ಕಿದೆ. ಈ ಗುಣಕ್ಕಾಗಿಯೇ ಇದನ್ನು ಪರಮಾಣು ರಿಯಾಕ್ಟರುಗಳಲ್ಲಿ ನಿಯಂತ್ರಕ ರಾಳವಾಗಿ ಉಪಯೋಗಿಸುವ ಸಾಧ್ಯತೆ ಉಂಟು. ಇದರ ವಿಶಾಲ ಕೊಯ್ತಕ್ಕೆ $^{155}Gd$ ಮತ್ತು $^{157}Gd$ ಐಸೊಟೋಪುಗಳೇ ಕಾರಣ. ಅವು ಉಷ್ಣನ್ಯೂಟ್ರಾನುಗಳನ್ನು ಹೀರಿಕೊಂಡು ಕ್ರಮವಾಗಿ $^{156}Gd$ ಮತ್ತು $^{158}Gd$ ಐಸೊಟೋಪುಗಳಾಗಿ ಪರಿವರ್ತಿತವಾಗುವವು. ವಿಶೇಷ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ, ಹೆಚ್ಚು ಉಷ್ಣತೆಯ ಉಷ್ಣನಿರೋಧಕಗಳಲ್ಲಿ, ಅತಿ ಶೀತಾವಸ್ಥೆಯ ಅಧ್ಯಯನದಲ್ಲಿ ಮತ್ತು ಮಿಶ್ರ ಲೋಹಕಾರಕವಾಗಿ ಗ್ಯಾಡೊಲಿನಿಯಮನ್ನು ಉಪಯೋಗಿಸುತ್ತಾರೆ **ನೋಡಿ– ಲ್ಯಾಂಥನೈಡುಗಳು; ವಿರಳ–ಭಸ್ಮಧಾತುಗಳು.** (ಪಿ.ಜಿ.ಆರ್.)

**ಗ್ಯಾನಿ ಜೈಲ್‌ಸಿಂಗ್ :** 1916–94. ಭಾರತದ ಏಳನೆಯ ರಾಷ್ಟ್ರಪತಿ. ಶ್ರೀಸಾಮಾನ್ಯ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗೆ ಪಾತ್ರರು. ಅನುಪಮ ಬುದ್ಧಿ ಮತ್ತು ಸಹೃದಯಿ ಗುಣಗಳ ಸಮ್ಮಿಶ್ರಣದ ವ್ಯಕ್ತಿಯೊಬ್ಬರು ರಾಷ್ಟ್ರಸೇವೆಯ ಅತ್ಯುನ್ನತ ಪದವಿಯನ್ನು ಅಲಂಕರಿಸಿದ್ದು ನಾಡಿನ ಹೆಮ್ಮೆ. ಸ್ವಾತಂತ್ರ್ಯ ಹೋರಾಟಗಾರ, ಸಮಾಜ ಸುಧಾರಕ, ದಲಿತರ ರೂವಾರಿ, ರಾಜ್ಯ ಕಾಂಗ್ರೆಸ್ ನಾಯಕ, ಯಶಸ್ವೀ ಮುಖ್ಯಮಂತ್ರಿ ಹಾಗೂ ಕೇಂದ್ರಗೃಹಸಚಿವರಾಗಿ ಗ್ಯಾನಿ ಜೈಲ್‌ಸಿಂಗ್ ಅವರ ಸಾರ್ವಜನಿಕ ಜೀವನ ವಿಭಿನ್ನ, ವಿಶಿಷ್ಟ ಹಾಗೂ ವಿಶಾಲ. ಸ್ವಾತಂತ್ರ್ಯಪೂರ್ವದಲ್ಲಿ ವಿದೇಶೀ ಆಳಿಕೆ, ಅರಸೊತ್ತಿಗೆ ಹಾಗೂ ಪಾಳೇಗಾರಿಕೆ ವಿರುದ್ಧ ಇವರದು ಸತತ ಹೋರಾಟ. ಕೋಮುವಾದ, ಆರ್ಥಿಕ ಅಸಮಾನತೆ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ ಇವರದು ನಿರಂತರ ಹೋರಾಟ. ಎತ್ತರದ ನಿಲುವು ಆಕರ್ಷಕ ಮೈಕಟ್ಟು, ಬಲು ಚೊಕ್ಕವಾಗಿ ಉಡುಪು ಧರಿಸುವ ಅಭಿರುಚಿ. ಅತ್ಯಂತ ಸರಳ, ದೈವಶ್ರದ್ಧೆಯ ನೈಜಮಣ್ಣಿನ ಮಗ. ಲೋಕತಂತ್ರದ ಮೌಲ್ಯಗಳಲ್ಲಿ ನೆಟ್ಟ ನಂಬಿಕೆ. ಭಾರತೀಯ ಸಾರ್ವಜನಿಕ ಜೀವನದಲ್ಲಿ ಸಹಜವಾಗಿಯೇ ಇವರಿಗೆ ವಿಶಿಷ್ಟ ಸ್ಥಾನ.



ಇವರು 1916 ಮೇ5 ರಂದು ಫರೀದ್‌ಕೋಟ್ ಜಿಲ್ಲೆಯ ಸಂಧ್ವಾನ ಗ್ರಾಮದಲ್ಲಿ ಜನಿಸಿದರು. ಕರಕುಶಲ ಮನೆತನ; ಆದರೆ ಬೇಸಾಯವನ್ನು ಕಸಬಾಗಿ ಮಾಡಿಕೊಂಡಿತ್ತು. ತಂದೆ ಸರ್ದಾರ್ ಕಿಶನ್‌ಸಿಂಗ್‌ರಿಗೆ ಸುಮಾರು 56 ಎಕರೆ ಜಮೀನಿತ್ತು. ಇದು ಜೈಲ್‌ಸಿಂಗ್ ಹಾಗೂ ಇವರ ಇಬ್ಬರು ಸಹೋದರರೊಡನೆ ಹಂಚಿಕೆ ಆಯಿತು. ಪ್ರಭಾವ ಪ್ರತಿಷ್ಠೆಗಳಿಂದ ದೂರವಾದ ಕುಗ್ರಾಮವೊಂದರ ಮಣ್ಣಿನ ಜೋಪಡಿ ಮನೆಯಲ್ಲಿ ಇವರು ಹುಟ್ಟಿ ಬೆಳೆದವರು. ಇವರು ಬಟ್ಟೆ ಹೊಲಿದರು. ಕಲ್ಲು ಒಡೆದರು. ನೇಗಿಲು ಹಿಡಿದು ಬೇಸಾಯ ಮಾಡಿದರು. ರಸ್ತೆ ನಿರ್ಮಾಣದಲ್ಲೂ ದುಡಿದರು. ಬಾವಿ ತೋಡಿದರು. ಖಡ್ಗ ತಯಾರಿಸಿದರು. ಶ್ರೀಸಾಮಾನ್ಯನ ಅಳಲು ಆಶೋತ್ತರಗಳನ್ನು ಸ್ವತಃ ಕಂಡರು. ಇದೇ ಇವರಿಗೆ ಮೂಲ ಶಿಕ್ಷಣವಾಯಿತು. ಜತೆಗೆ ಸಿಖ್ ಪವಿತ್ರ ಗ್ರಂಥಗಳ ವ್ಯಾಸಂಗ, ಕುರಾನ್, ಗೀತೆ, ರಾಮಾಯಣಗಳ ಅಧ್ಯಯನ ಮಾಡಿದರು.

ಬಾಲ್ಯದಿಂದಲೇ ಸಾಹಿತ್ಯ ಅಭಿರುಚಿ ಬೆಳೆಸಿಕೊಂಡ ಇವರ ಸಮವಯಸ್ಕರು ಮೆಟ್ರಿಕ್ ಪರೀಕ್ಷೆ ಪಾಸಾದರೆ ಇವರು ಸಿಖ್ ಧರ್ಮ, ಸಿಖ್ಖರ ಇತಿಹಾಸ ಹಾಗೂ ಶಾಸ್ತ್ರಗಳ ಅಧ್ಯಯನ ಪೂರ್ಣಗೊಳಿಸಿದರು. ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರೂ ಅಷ್ಟಾಗಿ ಇಂಗ್ಲಿಷ್ ಬರುತ್ತಿರಲಿಲ್ಲ. ಸ್ವಂತ ಶಕ್ತಿಯಿಂದ ಮೇಲೆ ಬರುವ ಛಲ, ಗುರಿಸಾಧನೆಯ ತಾಳ್ಮೆ, ಶ್ರಮಪೂರ್ಣ ದುಡಿಮೆ, ಅಪ್ಪಟ ಪ್ರಾಮಾಣಿಕತೆ ಸಾಮಾನ್ಯ ಮನುಷ್ಯರನ್ನು ಅತ್ಯುನ್ನತ ಪದವಿಗೆ ಏರಿಸಬಲ್ಲದು ಎಂಬುದಕ್ಕೆ ಇವರು ಒಂದು ನಿಚ್ಚಳ ನಿದರ್ಶನ.

ಭಗತ್‌ಸಿಂಗ್ ಹಾಗೂ ಅವರ ಸಹಚರರು 1931 ಮಾರ್ಚ್ 23ರಂದು ಹುತಾತ್ಮರಾದಾಗ ಇವರಿಗೆ 16 ವರ್ಷ. ಈ ಘಟನೆ ಇವರ ಮೇಲೆ ಗಾಢ ಪರಿಣಾಮ ಬೀರಿತು. 1938ರಲ್ಲಿ ಫರೀದ್‌ಕೋಟ್ ಪ್ರಾಂತದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಶಾಖೆ ಆರಂಭವಾಗುವುದರೊಡನೆ ಇವರ ಹೋರಾಟದ ಬದುಕು ಆರಂಭವಾಯಿತು. ಅಲ್ಲಿನ ಅರಸೊತ್ತಿಗೆ ಇವರನ್ನು ಸಾಮಾನ್ಯ ಅಪರಾಧಿಯೆಂದು ಪರಿಗಣಿಸಿತು. ಕಾಂಗ್ರೆಸ್ ಕಚೇರಿಯ ಆರಂಭ ಮಹಾರಾಜನ ದೃಷ್ಟಿಯಲ್ಲಿ ರಾಜದ್ರೋಹವಾಯಿತು. ಫರೀದ್‌ಕೋಟ್ ರಾಜ್ಯದಲ್ಲಿ ಕಾಂಗ್ರೆಸ್ ಸ್ಥಾಪನೆ ಮಾಡಿದರೆಂದು ಇವರಿಗೆ 5 ವರ್ಷಗಳ ಜೈಲುಶಿಕ್ಷೆ; ಏಕಾಂತ ವಾಸ, ಬಿಡುಗಡೆಯ ನಂತರವೂ ಇವರಿಗೆ ಕಿರುಕುಳ ಮುಂದುವರೆಯಿತು. ಸ್ವಲ್ಪ ಕಾಲ ರಾಜ್ಯದ ಹೊರಗುಳಿದರು. ತಮ್ಮ ರಾಜ್ಯದಲ್ಲಿ ಸ್ವಾತಂತ್ರ್ಯ ಚಳವಳಿಗೆ ಬೆಂಬಲವನ್ನು ರೂಢಿಸಿದರು. ಇದೇ ಸಮಯದಲ್ಲಿ ಮಹಾತ್ಮ ಗಾಂಧಿಯವರ ಅಹಿಂಸಾತತ್ತ್ವ ಇವರ ಮೇಲೆ ಪ್ರಭಾವ ಬೀರಿತು.

ರಾಷ್ಟ್ರಪಿತ ಹಾಕಿದ ದಾರಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮುಂದುವರೆಸಲು 1946ರಲ್ಲಿ ಫರೀದ್‌ಕೋಟ್ ರಾಜ್ಯಕ್ಕೆ ಇವರು ಹಿಂತಿರುಗಿದರು. ರಾಷ್ಟ್ರಧ್ವಜ ಹಾರಿಸಲು ಫರೀದ್‌ಕೋಟ್ ರಾಜ್ಯ ಏಕವ್ಯಕ್ತಿಯಾಗಿ ಎದ್ದು ನಿಂತಿತು. ಆದರೆ ಅಲ್ಲಿನ ಮಹಾರಾಜ ಬರ್ಬರ ದಬ್ಬಾಳಿಕೆ ನಡೆಸಿದ. ವಿಷಯ ಜವಹರಲಾಲ್ ನೆಹರುರವರಿಗೆ ತಿಳಿದು ರಾಷ್ಟ್ರಧ್ವಜ ಹಾರಿಸಲು ಫರೀದ್‌ಕೋಟ್‌ಗೆ ಹೋಗಲು ತೀರ್ಮಾನಿಸಿದರು. ಈ ಪ್ರಸಂಗದಿಂದ ಪಂಡಿತ್‌ಜೀಯವರ ಜೊತೆ ಗ್ಯಾನೀಜೀಯವರ ನಿಕಟ ಬಂಧುತ್ವ ಬೆಳೆಯಿತು. ಯುವ ಹೋರಾಟಗಾರನ ಬಗ್ಗೆ ಪಂಡಿತ್‌ಜೀಗೆ ಅಪಾರ ಅಭಿಮಾನ. ಫರೀದ್‌ಕೋಟ್‌ನಲ್ಲಿ ಪರ್ಯಾಯ ಸರ್ಕಾರದ ರಚನೆ ಗ್ಯಾನಿ ಜೈಲ್‌ಸಿಂಗ್‌ರವರ ಒಂದು ದೊಡ್ಡ ಸಾಹಸದ ಕ್ರಮ. ರಾಜನ ಸರ್ಕಾರದ ವಿರುದ್ಧ ಬಂಡಾಯ ಹೂಡಿದರೆಂಬ ಆರೋಪದ ಮೇಲೆ ಇವರನ್ನು ತಪ್ಪಿತಸ್ಥನೆಂದು ಬಂಧಿಸಲಾಯಿತು.

ಸ್ವಾತಂತ್ರ್ಯಾನಂತರ ಇಂದಿರಾಗಾಂಧಿಯವರ ನಿಕಟವರ್ತಿಯಾಗಿ ಗೃಹಸಚಿವ ಹುದ್ದೆಗೆ ಏರಿದ ಇವರು 1982ರ ಜುಲೈ 25ರಂದು ಭಾರತದ 7ನೆಯ ರಾಷ್ಟ್ರಪತಿಯಾದರು. 1987ರ ಜುಲೈ 25ರವರೆಗೆ ಆ ಹುದ್ದೆಯನ್ನು ಅಲಂಕರಿಸಿದ್ದರು. ಇಂದಿರಾಗಾಂಧಿಯವರ ಅಮಾನುಷ ಹತ್ಯೆ, ತದನಂತರದ ರಾಜಕೀಯ ವಿದ್ಯಮಾನ, ರಾಜೀವ್‌ಗಾಂಧಿ ಪ್ರಧಾನಿಯಾದದ್ದು, ಆ ಸಮಯದಲ್ಲಿ ತಮ್ಮ ಸ್ವತಂತ್ರ ಮನೋಭಾವವನ್ನು ಕೆಲವು ಸಂದರ್ಭಗಳಲ್ಲಿ ಪ್ರಕಟಿಸಿದ್ದು ಜೈಲ್‌ಸಿಂಗ್‌ರವರ ವ್ಯಕ್ತಿತ್ವಕ್ಕೆ ಮೆರುಗು ತಂದುಕೊಟ್ಟಿತು. ಮುದ್ರಿತ ಭಾಷಣ ಮುಗಿಸಿ ಧಿಢೀರ್ ತಮ್ಮ ಅನಿಸಿಕೆಗಳನ್ನು ಪ್ರಕಟಿಸಿಬಿಡುತ್ತಿದ್ದ ಗ್ಯಾನಿ ಜೈಲ್‌ಸಿಂಗ್‌ರವರು ಸದಾ ನಗುಮೊಗದ ಸಜ್ಜನಿಕೆಯ ಸರಳಮೂರ್ತಿ. (ಕೆ.ಎಸ್.ಎ)

**ಗ್ಯಾಬಾನ್ :** ಆಫ್ರಿಕದ ಒಂದು ಗಣರಾಜ್ಯ. ಸಮಭಾಜಕ ವೃತ್ತದ ಮೇಲಿದೆ. ಗ್ಯಾಬಾನಿಗೆ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ಉತ್ತರದಲ್ಲಿ ರಿಯೊಮುನಿ ಮತ್ತು ಕ್ಯಾಮರೂನ್, ಪೂರ್ವ– ದಕ್ಷಿಣಗಳಲ್ಲಿ ಕಾಂಗೊ ಇವೆ. ಗ್ಯಾಬಾನಿನ ವಿಸ್ತೀರ್ಣ 2,67,668 ಚ. ಕಿಮೀ. ಜನಸಂಖ್ಯೆ 14,75,000 (2009). ರಾಜಧಾನಿ ಲೀಬ್ರವೀಲ್.

**ಭೌತಲಕ್ಷಣ:** ಗ್ಯಾಬಾನ್ ರಾಜ್ಯದ ಕರಾವಳಿ ಕಿರಿದಾಗಿದೆ; ಮರಳುಗಲ್ಲು ಮತ್ತು ಮೆಕ್ಕಲುಮಣ್ಣಿನಿಂದ ಕೂಡಿದೆ; ಉತ್ತರಕ್ಕೆ ಹೋದಂತೆ ಅಗಲವಾಗುತ್ತದೆ. ಲೋಪೆಜ್ ಭೂಶಿರಕ್ಕೆ ದಕ್ಷಿಣದಲ್ಲಿ ಅಟ್ಲಾಂಟಿಕ್ ಸಾಗರದ ಬೆಂಗ್ಯುಲ ಪ್ರವಾಹದಿಂದಾಗಿ ಮರಳುದಂಡೆಗಳೇರ್ಪಟ್ಟಿವೆ. ಈ ಕಡಲ ಪ್ರವಾಹ ಪಶ್ಚಿಮ ಆಫ್ರಿಕದ ಅಂಚಿನಲ್ಲಿ ಉತ್ತರಾಭಿಮುಖವಾಗಿ ಸಾಗಿ, ನದಿಗಳು ಸಾಗರಕ್ಕೆ ಬೀಳುವ ಕಡೆ ಮರಳುದಂಡೆಗಳು ಸುತ್ತುವರಿದ ಲಗೂನ್‌ಗಳನ್ನು ನಿರ್ಮಿಸಿದೆ. ಲೋಪೆಜ್ ಭೂಶಿರದ ಬಳಿ ತೀರ ಡೊಂಕಾಗಿದೆ. ಗ್ಯಾಬಾನ್ ನದಿ ಸಾಗರಕ್ಕೆ ಬೀಳುವ ಕಡೆ ವಿಶಾಲವಾದ ಅಳಿವೆಯುಂಟು. ರಾಜ್ಯದ ಒಳನಾಡಿನ ಮೇಲ್ಮೈ ಸಂಕೀರ್ಣವಾದ್ದು. ಉತ್ತರದಲ್ಲಿ ಸ್ಫಟಿಕಾಕಾರದ ಬಂಡೆಗಳಿಂದ ಕೂಡಿದ ಪರ್ವತಗಳ ನಡುವೆ ಉಲೆಯು, ನಟೆಮ್ ಮತ್ತು ಇವಿಂಡೊ ನದೀಬಯಲುಗಳಿವೆ. ದಕ್ಷಿಣದಲ್ಲಿ ಓಗೊವೇ ನದಿ ತಡಿಯಾಕಾರದ ಪರ್ವತಗಳ ನಡುವೆ ಹರಿಯುತ್ತದೆ. ಅಲ್ಲಿ ಮರಳುಗಲ್ಲು ಮತ್ತು ಖನಿಜ ಪದರ ಶಿಲೆಗಳು ಹೆಚ್ಚು; ಲಂಬಾರೇನೇ ಬಳಿ ಬೆಣಚುಕಲ್ಲುಗಳು ಹೇರಳ. ಸಾಗರತೀರದ ದಕ್ಷಿಣ ಭಾಗ ಬೆಟ್ಟ ಸೀಮೆ. ಇದರ ನೆರೆಯ ಬಯಲುಗಳಲ್ಲಿ ನ್ಯಾಂಗ ಮತ್ತು ನೌನೀ ನದಿಗಳು ಹರಿಯುತ್ತವೆ. ನೌನೀ ನದಿ ಓಗೊವೇಯ ಉಪನದಿ. ನೌನೀ ಮತ್ತು ಓಗೊವೇ ನದಿಗಳ ನಡುವಣ ದಟ್ಟ ಪರ್ವತಶ್ರೇಣಿಯಲ್ಲಿ 5,168 (1,575 ಮೀ) ಎತ್ತರದ ಇಬೌಂಡ್ಜಿ ಪರ್ವತವಿದೆ. ಇದು ಗ್ಯಾಬಾನಿನ ಅತ್ಯಂತ ಎತ್ತರವಾದ ಪರ್ವತ.

**ವಾಯುಗುಣ ಮತ್ತು ಸಸ್ಯ ಪ್ರಾಣಿಜೀವನ:** ಗ್ಯಾಬಾನಿನದು ಸಮಭಾಜಕ ವೃತ್ತದ ವಾಯುಗುಣ. ಋತುಗಳ ವ್ಯತ್ಯಾಸ ಅಷ್ಟಾಗಿ ಕಂಡುಬರುವುದಿಲ್ಲ; ಉಷ್ಣತೆಯಲ್ಲೂ ಹೆಚ್ಚು ಬದಲಾವಣೆಗಳಿಲ್ಲ. ಇಡೀ ವರ್ಷ ಮಳೆ ಬೀಳುತ್ತದೆ. ಸಮುದ್ರದ ಬೆಂಗ್ಯುಲ ಶೀತೋದಕ ಪ್ರವಾಹದಿಂದಾಗಿ ಕರಾವಳಿಯಲ್ಲಿ ಉಷ್ಣತೆ ಮತ್ತು ಮಳೆ ಕಡಿಮೆ. ಒಳನಾಡಿನಲ್ಲಿ ಇವೆರಡೂ

ಹೆಚ್ಚು. ಇಡೀ ರಾಜ್ಯ ನಿತ್ಯಹಸುರಿನ ಕಾಡುಗಳಿಂದ ಕೂಡಿದೆ. ಸುಮಾರು 3,000 ಜಾತಿಗಳ ಮರಗಳು ಇಲ್ಲಿವೆ. ಓಕೌಮೆ ಅಥವಾ ಗ್ಯಾಬಾನ್ ಮಹಾಗನಿ ವಾಣಿಜ್ಯ ಮೌಲ್ಯವುಳ್ಳದ್ದು. ಕರಾವಳಿಯಲ್ಲಿ ಗುಲ್ಮವೃಕ್ಷಗಳು ಅಧಿಕ. ಕೆಳ ಓಗೋವೇ ಪ್ರದೇಶದ ಸರೋವರದಲ್ಲಿ ಪಪೈರಸ್ ಸಾಮಾನ್ಯ. ಬಗೆಬಗೆಯ ಕೋತಿಗಳು, ಗೊರಿಲ, ಜಿಂಕೆ, ಕಾಡುಕೋಣ, ನೀರುಕುದುರೆ ಇವು ಇಲ್ಲಿಯ ವನ್ಯಮೃಗಗಳು.




**ಜನಜೀವನ:** ಗ್ಯಾಬಾನಿನಲ್ಲಿ ಸು. 10,000 ಮಂದಿ ಐರೋಪ್ಯರಿದ್ದಾರೆ. ಸ್ಥಳೀಯ ಜನರ ಪೈಕಿ ಕುಬ್ಜರು (ಪಿಗ್ಮಿ) ಸಣ್ಣಸಣ್ಣ ಗುಂಪುಗಳಲ್ಲಿ ಕಾಡಿನಲ್ಲಿ ಚದುರಿದ್ದಾರೆ. ಬೇಟೆ, ಆಹಾರ ಸಂಗ್ರಹ – ಇವು ಇವರ ಜೀವನೋಪಾಯ. ಇಲ್ಲಿಯ ಜನರಲ್ಲಿ ತುಂಬ ಮುಂದುವರಿದವರಾದ ಮ್ಪಾಂಗ್ವೇಗಳು ವಿಶೇಷವಾಗಿ ಕರಾವಳಿಯಲ್ಲಿ ವಾಸಿಸುತ್ತಾರೆ. ಇವರು ಫ್ಯಾಂಗ್ ಜನರೊಂದಿಗೆ ಭಾಗಶಃ ಬೆರೆತಿದ್ದಾರೆ. ಈಶಾನ್ಯದಲ್ಲಿ ಬಕೋಟ ಮುಂತಾದ ತಂಡಗಳುಂಟು. ಈ ಜನ ಕ್ಯಾಮರೂನಿನ ಗುಂಪುಗಳೊಡನೆ ಸಂಬಂಧ ಹೊಂದಿದ್ದಾರೆ. ಮಧ್ಯಭಾಗದಲ್ಲಿ ಕಾಂಡ ಜನರಿದ್ದಾರೆ. ಇಲ್ಲಿಯ ಜನ ಮೂಲತಃ ಸರ್ವಚೇತನವಾದಿಗಳು. ಈಚೆಗೆ ಇಲ್ಲಿ ಕ್ರೈಸ್ತಮತ ಪ್ರಚಾರಕ್ಕೆ ಬಂದಿದೆ. ನೆಲದ ಒಡೆತನ ಸಾಮೂಹಿಕವಾಗಿದ್ದು, ಗುಂಪುಗಳ ಯಜಮಾನರು ಅದನ್ನು ನಿರ್ವಹಿಸುತ್ತಾರೆ. ಕಾಡುಗಳನ್ನು ಸುಟ್ಟು ಕೃಷಿ ಮಾಡುವ ಪದ್ಧತಿ ಇದೆ. ಉತ್ತರದ ಜನ ಫ್ಯಾಂಗ್ ಭಾಷೆ ಆಡುತ್ತಾರೆ. ಉಳಿದೆಡೆಗಳಲ್ಲಿ ಬಾಂಟು ಉಪಭಾಷೆಗಳು ಬಳಕೆಯಲ್ಲಿವೆ. ಫ್ರೆಂಚ್ ಅಧಿಕೃತ ಭಾಷೆಯಾಗಿ ಸ್ವೀಕೃತವಾಗಿದೆ. ಅದೇ ಸದ್ಯಕ್ಕೆ ಶಿಕ್ಷಣ ಮಾಧ್ಯಮ.

**ಆರ್ಥಿಕ ಪರಿಸ್ಥಿತಿ:** ಕೃಷಿ ಇಲ್ಲಿಯ ಜನರ ಮುಖ್ಯ ಜೀವನೋಪಾಯ. ಬಾಳೆ, ಮರಗೆಣಸು, ಕೆಸವು ಮುಖ್ಯ ಉತ್ಪನ್ನಗಳು. ಸಮುದ್ರತೀರದಲ್ಲಿ ಮೀನುಗಾರಿಕೆಯೂ ಒಂದು ಮುಖ್ಯ ಕಸಬು. ರಬ್ಬರ್, ಕೋಕೋ – ಇವು ಇತರ ಬೆಳೆಗಳು. ತಾಳೆ ಎಣ್ಣೆ, ದಂತ, ಮರ ಇವು ಅರಣ್ಯೋತ್ಪನ್ನಗಳು. ಪೋರ್ಟ್–ಜೆಂಟಿಲಿನಲ್ಲಿ ಪದರ ಹಲಗೆ (ಪ್ಲೈವುಡ್) ಕಾರ್ಖಾನೆಯುಂಟು. ಚಿನ್ನ, ವಜ್ರ, ಕಲ್ಲು, ಪೊಟಾಷ್ ಇಲ್ಲಿಯ ಮುಖ್ಯ ಖನಿಜಗಳು. ಲೋಪೆಜ್ ಭೂಶಿರ ಭಾಗದಲ್ಲಿ ಪೆಟ್ರೋಲಿಯಂ ಸಿಗುತ್ತದೆ. ಫ್ರಾನ್ಸ್‌ವೀಲ್ ಬಳಿ ಮ್ಯಾಂಗನೀಸ್ ನಿಕ್ಷೇಪಗಳಿವೆ. ಈಶಾನ್ಯದಲ್ಲಿರುವ ಮೆಕಾಂಬೊದಲ್ಲೂ ನೈರುತ್ಯದ ಟ್ಚಿಬಾಂಗದಲ್ಲೂ ಕಬ್ಬಿಣ ಅದುರು ಉಂಟು. ಫ್ರಾನ್ಸ್‌ವೀಲ್ ಬಳಿ ಮೌನಾನದಲ್ಲಿ ಯುರೇನಿಯಂ ಸಿಗುತ್ತದೆ.

ಗ್ಯಾಬಾನ್ ರಾಜ್ಯದ ಮುಖ್ಯ ಆಮದುಗಳು ಆಹಾರ ಮತ್ತು ಯಂತ್ರೋಪಕರಣ. ರಫ್ತುಗಳು ಚೌಬೀನೆ, ಮ್ಯಾಂಗನೀಸ್, ಯುರೇನಿಯಂ, ಕಚ್ಚಾತೈಲ, ಪೆಟ್ರೋಲಿಯಂ, ತಾಳೆ ಎಣ್ಣೆ. ಪೋರ್ಟ್ – ಜೆಂಟಿಲ್ ಮುಖ್ಯ ರೇವು ಪಟ್ಟಣ ಮತ್ತು ಕೈಗಾರಿಕಾ ಕೇಂದ್ರ. ನಡ್ಜೊಲೇ, ಮೌಯಿಲ, ಫ್ರಾನ್ಸ್‌ವೀಲ್ ಮತ್ತು ಲಂಬಾರೇನೇ – ಇವು ಇತರ ಪಟ್ಟಣಗಳು. ಲಂಬಾರೇನೇಯಲ್ಲಿ ಆಲ್ಬರ್ಟ್ ಷ್ವೀಟ್ಜರ್ 1913 ರಲ್ಲಿ ಆಸ್ಪತ್ರೆ ಸ್ಥಾಪಿಸಿದ್ದರು.

**ಇತಿಹಾಸ:** ಗ್ಯಾಬಾನಿನಲ್ಲಿ ಹಳೆ ಶಿಲಾಯುಗ ಮತ್ತು ನವಶಿಲಾಯುಗಗಳ ಉಪಕರಣಗಳು ಸಿಕ್ಕಿವೆ. ಪ್ರಾರಂಭದಲ್ಲಿ ಮೈನೇ ಭಾಷಾಗುಂಪಿನ ಜನ ಓಗೋವೇ ನದೀಬಯಲು ಮತ್ತು ಸಾಗರತೀರದಲ್ಲಿ ಜೀವಿಸುತ್ತಿದ್ದರು. ಕಾಲಕ್ರಮದಲ್ಲಿ ಇತರ ಬಣಗಳು ಈ ಭಾಗಕ್ಕೆ ಬಂದುವು. 19ನೆಯ ಶತಮಾನದ ಹೊತ್ತಿಗೆ ಮ್ಪಾಂಗ್ವೇ, ಮಿಟ್ಸೊಗೊ – ಓಕಂಡೆ, ಬಪುನ ಎಷಿರ, ಮ್ಬೇಡೆಅಡುಮ– ಟೇಕೇ, ಫ್ಯಾಂಗ್ ಮತ್ತು ಬಕೇಲೇ ಬಣಗಳು ನೆಲೆಸಿದುವು.

ಗ್ಯಾಬಾನಿನ ರಾಜಧಾನಿ ಲೀಬ್ರವೀಲ್, ಒಂದು ನೋಟ

ಪೋರ್ಚುಗೀಸ್ ನಾವಿಕರು ಸು. 1472 ರಲ್ಲಿ ಗ್ಯಾಬಾನ್ ಪಶ್ಚಿಮ ತೀರದ ಅಳಿವೆಯನ್ನು ಕಂಡುಹಿಡಿದು ಅದಕ್ಕೆ ಗ್ಯಾಬಾನ್ ಎಂದು ಹೆಸರಿಟ್ಟರು. ತರುವಾಯ ಲೋಪೊ ಗಾನ್‌ಸಾಲ್ವಿಸ್ ಎಂಬ ನಾವಿಕ ಲೋಪೆಜ್ ಭೂಶಿರವನ್ನು ಬಳಸಿದ. 1475 ರಲ್ಲಿ ರ್‍ಯು ಡಿ ಸೆಕ್ವೇರ 160 ಕಿಮೀ ದಕ್ಷಿಣಕ್ಕಿರುವ ಸೇಂಟ್ ಕ್ಯಾದರೀನ್ ಭೂಶಿರವನ್ನು ಮುಟ್ಟಿದ. ಪೋರ್ಚುಗೀಸರು ಚೌಬೀನೆ ಮತ್ತು ದಂತ ವ್ಯಾಪಾರಕ್ಕಾಗಿ ಇಲ್ಲಿಗೆ ಬರುತ್ತಿದ್ದರು. 17ನೆಯ ಶತಮಾನದಲ್ಲಿ ಡಚ್ಚರು ಕೊರಿಸ್ಕೊ ದ್ವೀಪದಲ್ಲಿ ನೆಲಸಿ ಅಲ್ಲಿಂದ ಗ್ಯಾಬಾನ್ ತೀರದ ಅಳಿವೆಯನ್ನು ಸೂರೆ ಮಾಡಿದರು. ಇಂಗ್ಲಿಷರೂ ಫ್ರೆಂಚರೂ ವ್ಯಾಪಾರದಲ್ಲಿ ಪೈಪೋಟಿ ನಡೆಸಿದರೂ ಗ್ಯಾಬಾನಿನ ಸರಕುಗಳನ್ನು ಪೋರ್ಚುಗೀಸರೇ ಹೆಚ್ಚಾಗಿ ಕೊಂಡು ವ್ಯಾಪಾರವನ್ನು ನಿಯಂತ್ರಿಸಿದ್ದರು. 1815 ರಲ್ಲಿ ಗುಲಾಮ ಮಾರಾಟವನ್ನು ಹೆಸರಿಗೆ ಮಾತ್ರ ರದ್ದು ಮಾಡಲಾಯಿತು. 1880ರ ವರೆಗೆ ಇದು ನಡೆಯುತ್ತಲೇ ಇತ್ತು. ಮ್ಪಾಂಗ್ವೇ, ಓರುಂಗು ಮತ್ತು ಗ್ಯಾಲೋ ಬುಡಕಟ್ಟಿನ ವ್ಯಾಪಾರಿಗಳು ತಮ್ಮ ಬಣಗಳ ಜನರನ್ನು ಹಿಡಿದು ದೋಣಿಗಳಲ್ಲಿ ಸಾಗಿಸಿ ಸಾಗರತೀರದಲ್ಲಿ ಗುಲಾಮರನ್ನಾಗಿ ಮಾರುತ್ತಿದ್ದರು. ಅಲ್ಲಿಂದ ಇವರನ್ನು ಹಡಗುಗಳಲ್ಲಿ ವಿದೇಶಗಳಿಗೆ ಸಾಗಿಸಲಾಗುತ್ತಿತ್ತು. 1839 ರಲ್ಲಿ ಕ್ಯಾಪ್ಟನ್ ಎಲ್.ಇ. ಬಾಯೆಟ್ – ವಿಲಿಯಂಮೆಜ಼್ ಗುಲಾಮ ವ್ಯಾಪಾರವನ್ನು ತಡೆಯುವ ಕೆಲಸಕ್ಕೆ ನೇಮಿತನಾಗಿ ಗ್ಯಾಬಾನ್ ಅಳಿವೆಯ ಬಲದಂಡೆಯ ಬಣದ ನಾಯಕನೊಡನೆ ಒಪ್ಪಂದ ಮಾಡಿಕೊಂಡ; ಇನ್ನೊಬ್ಬ ನಾಯಕನಿಂದ ಎಡದಂಡೆಯನ್ನು ಪಡೆದುಕೊಂಡು ಅಲ್ಲಿ 1843 ರಲ್ಲಿ ಕೋಟೆಯೊಂದನ್ನು ಕಟ್ಟಿದ. 1842 – 44ರ ಅವಧಿಯಲ್ಲಿ ಕ್ರೈಸ್ತ ಪಾದ್ರಿಗಳು ಅಲ್ಲಿ ನೆಲಸಿ ಕ್ರೈಸ್ತಧರ್ಮ ಪ್ರಚಾರ ಮಾಡತೊಡಗಿದರು. 1848ರಲ್ಲಿ ಈ ನೆಲೆ, ಕ್ಯಾಪ್ಟನ್ ಬಾಯೆಟ್ ವಿಲಿಯಂಮೆಜ಼್ ಸ್ಥಾಪಿಸಿದ ಫ್ರೆಂಚ್ ಕೋಟೆ ಇವೆರಡನ್ನೂ ಸೇರಿಸಿ ಲೀಬ್ರವೀಲ್ ಎಂಬ ಹೆಸರಿಡಲಾಯಿತು.

1855ರಲ್ಲಿ ಪಾಲ್ ಬಿ ಡ್ಯು ಶೈಲ್ಯು ಅಮೆರಿಕದ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್‌ನಿಂದ ಗ್ಯಾಬಾನ್ ನದೀಮುಖಜ ಭೂಮಿಯನ್ನು ಪರಿಶೋಧಿಸಲು ನಿಯೋಜಿತನಾದ. ಅವನು ಇಲ್ಲಿ ಕುಬ್ಜರನ್ನೂ ಗೊರಿಲಗಳನ್ನೂ ಕಂಡ; ನ್ಗೌನೀ ನದಿಯ ಮೇಲು ಪ್ರದೇಶಗಳತ್ತ ಸಂಚರಿಸಿದ. ಅಲ್ಲಿಯ ಪರ್ವತಶ್ರೇಣಿಗೆ ಅವನ ಹೆಸರನ್ನು ಕೊಡಲಾಗಿದೆ. 1867ರಲ್ಲಿ ಭೂಪರಿಶೋಧಕ ಎ.ಎಂ.ಎ. ಏಮೆಸ್, 1873 ರಲ್ಲಿ ಬ್ರಿಟಿಷ್ ವ್ಯಾಪಾರಿ ಆರ್.ಬಿ.ಎನ್. ವಾಕರ್ ಇವರು ಓಗೋವೇ ನದಿಯ ಪ್ರವಾಹಕ್ಕೆ ಎದುರಾಗಿ ಸಂಚರಿಸಿ ಅದರ ಮೂಲವನ್ನು ಕಂಡುಹಿಡಿಯಲು ಪ್ರಯತ್ನಿಸಿದರು. ಓಗೋವೇ– ಇವಿಂಡೊ ನದೀ ಸಂಗಮ ಸ್ಥಳವನ್ನು 1874 ರಲ್ಲಿ ಆಲ್‌ಫ್ರೆಡ್ ಮಾರ್ಚೆ ಮತ್ತು ಎಲ್.ಇ.ಎಚ್. ಡ್ಯುಪಾಂಟ್ ಮುಟ್ಟಿದರು. ಓಗೋವೇ ನದಿಯ ಮೂಲವನ್ನು 1877ರಲ್ಲಿ ಪಿಯೆರ್ ಸವೊರ್ಗಾನ್ ಡಿ ಬ್ರಾಜಾ ತಲುಪಿದ. 1880 ರಲ್ಲಿ ಅವನು ಫ್ರಾನ್ಸ್‌ವೀಲ್ ಸ್ಥಾಪಿಸಿದ.

1886 ರಲ್ಲಿ ಗ್ಯಾಬಾನಿಗೆ ಫ್ರೆಂಚ್ ಗವರ್ನರೊಬ್ಬ ನೇಮಕನಾದ. ಆಗ ಇದು ಫ್ರೆಂಚ್ ಕಾಂಗೋಗೆ ಸೇರಿತ್ತು (1889–1904). ತರುವಾಯ ಇದು ಆಫ್ರಿಕ ಸಮಭಾಜಕವೃತ್ತೀಯ ಫ್ರೆಂಚ್ ಪ್ರಾಂತವಾಯಿತು. ಗ್ಯಾಬಾನ್ ಮತ್ತು ಕ್ಯಾಮರೂನ್ ನಡುವಣ ಗಡಿಯನ್ನು 1885 ರಲ್ಲಿ ನಿರ್ಧರಿಸಲಾಯಿತು. ಸ್ಪ್ಯಾನಿಷ್ ಗಿನಿಯ ಕಡೆಯ ಗಡಿಯನ್ನು 1900 ರಲ್ಲಿ ಖಚಿತಗೊಳಿಸಲಾಯಿತು.

ಎರಡನೆಯ ಮಹಾಯುದ್ಧದಲ್ಲಿ ಸ್ವತಂತ್ರ ಫ್ರೆಂಚ್ ಪಡೆಗಳು ವಿಚಿ (ಫ್ರೆಂಚ್) ಸರ್ಕಾರದಿಂದ ಗ್ಯಾಬಾನನ್ನು ವಶಪಡಿಸಿಕೊಂಡವು. 1946 ರಲ್ಲಿ ಗ್ಯಾಬಾನ್ ಫ್ರಾನ್ಸಿನ ಸಾಗರಾಂತರ ಪ್ರದೇಶವಾಯಿತು. ಇದರ ಪ್ರಾಂತೀಯ ಸಭೆಗೆ 1957 ರಲ್ಲಿ ಚುನಾವಣೆ ನಡೆಯಿತು. 1958 ರಲ್ಲಿ ಗ್ಯಾಬಾನ್ ಫ್ರೆಂಚ್ ಬಂಧು ಕೂಟದೊಳಗೆ ಒಂದು ಸ್ವಯಮಾಡಳಿತ ಪ್ರದೇಶವಾಯಿತು. ಫ್ರಾನ್ಸಿನೊಂದಿಗೆ ಸಹಕಾರ ಒಪ್ಪಂದ ಮಾಡಿಕೊಂಡು 1960 ರ ಆಗಸ್ಟ್ 17 ರಂದು ಸ್ವಾತಂತ್ರ್ಯ ಘೋಷಿಸಿಕೊಂಡಿತು. 1960 ರ ನವೆಂಬರ್ 14 ರಂದು ಅಂಗೀಕರಿಸಲಾದ ಸಂವಿಧಾನದ ಪ್ರಕಾರ ಗ್ಯಾಬಾನ್ ಸಂಸದೀಯ ಪ್ರಜಾಸತ್ತೆಯಾಗಿದೆ. 1961ರಲ್ಲಿ ಲಿಯೊಮ್ಬ ಮೊತ್ತಮೊದಲ ಅಧ್ಯಕ್ಷನಾಗಿ ಚುನಾಯಿತನಾದ. (ವಿ.ಜಿ.ಕೆ.)

1964ರಲ್ಲಿ ಲಿಯೊಮ್ಬ ಸಂಸತ್ತು ವಿಸರ್ಜಿಸಿದ. ಒಂದು ತಿಂಗಳ ಅನಂತರ ಸೈನ್ಯದಲ್ಲಿಯ ದಂಗೆಕೋರರು ಲಿಯೊಮ್ಬನನ್ನು ಹೊರಹಾಕುವ ಪ್ರಯತ್ನವಾಗಿ ಬಂಧಿಸಿದರು. ಆದರೆ ಫ್ರೆಂಚ್ ಸೈನ್ಯ ಲಿಯೊಮ್ಬ ಸಹಾಯಕ್ಕೆ ಬಂದು ದಂಗೆಯನ್ನು ಹತ್ತಿಕ್ಕಿತ್ತು. ಲಿಯೊಮ್ಬ ಪುನಃ ಅಧಿಕಾರಕ್ಕೆ ಬಂದನು. 1967ರಲ್ಲಿ ಲಿಯೊಮ್ಬ ಪುನಃ ಅಧ್ಯಕ್ಷನಾಗಿ ಚುನಾಯಿತನಾದ, ಆದರೆ ಅದೇ ವರ್ಷ ನಿಧನನಾದ. ಇವನ ಅನಂತರ ಉಪಾಧ್ಯಕ್ಷನಾಗಿದ್ದ ಬರ್ನಾರ್ಡ್–ಅಲ್ಬರ್ಟ್ ಬೊಂಗೊ ಅಧ್ಯಕ್ಷನಾದ. ಇವನು 1998ರ ವರೆಗೆ ಅಧ್ಯಕ್ಷನಾಗಿದ್ದ. 2010ರಲ್ಲಿ ಅಲಿ ಬೊಂಗೊ ಅದಿಂಬ ಅಧ್ಯಕ್ಷನಾಗಿದ. *

**ಗ್ಯಾಬ್ರೊ :** ಕಪ್ಪು ಇಲ್ಲವೇ ನೇರಳೆ ಬಣ್ಣಮಿಶ್ರಿತ ಅಗ್ನಿಶಿಲೆ. ಶಿಲಾರಸ ಭೂತಳದಲ್ಲಿರುವ ಬಿರುಕುಗಳಿಗೆ ನುಗ್ಗಿ, ನಿಧಾನವಾಗಿ ಘನೀಭವಿಸಿದಾಗ ಇದು ಉಂಟಾಗುತ್ತದೆ. ಹೀಗಾಗಿ ಇದರ ಖನಿಜಗಳಿಗೆ ವಿಶೇಷತಃ ಪೂರ್ಣಸ್ಫಟಿಕತ್ವದ, ಪೂರ್ಣಾಕಾರದ ಮತ್ತು ಗಾತ್ರದಲ್ಲಿ ಉರುಟಾದ ಖನಿಜ ಸಂಯೋಜನೆ ಉಂಟು. ಭೂಮಿಯ ಅಂತರಾಳದಲ್ಲೇ ಶಿಲೆಯಾಗುವ ಅಗ್ನಿಶಿಲೆಗಳನ್ನು ಅಂತರಾಗ್ನಿಶಿಲೆಗಳೆಂದು ಕರೆಯುವುದರಿಂದ ಗ್ಯಾಬ್ರೊಶಿಲೆಯನ್ನು ಈ ಗುಂಪಿಗೆ ಸೇರಿಸುತ್ತಾರೆ. ಈ ಗುಂಪಿನ ಶಿಲೆಗಳು ಹೆಚ್ಚಾಗಿ ಲೊಪೊಲಿತ್ ಅಥವಾ ಡೈಕ್ ಆಕೃತಿಯಲ್ಲಿ ಇರುತ್ತವೆ. ಆರುತ್ತಿರುವ ಶಿಲಾರಸದಿಂದ ಮೊದಲು ಬೇರ್ಪಟ್ಟು ಘನೀಭವಿಸುತ್ತಿರುವ ಶಿಲೆಗಳಲ್ಲಿ ಸಿಲಿಕಾಂಶ ಕಡಿಮೆ ಇರುತ್ತದೆ. ಆಮೇಲೆ ಘನೀಭವಿಸುವ ಶಿಲೆಗಳಲ್ಲಿ ಕ್ರಮೇಣ ಆ ಅಂಶ ಜಾಸ್ತಿಯಾಗುತ್ತದೆ. ಸಿಲಿಕಾಂಶದ ಆಧಾರದ ಮೇಲೆ ಶಿಲೆಗಳನ್ನು ಅತಿಪರ್ಯಾಪ್ತ (ಸಿಲಿಕಾಂಶ ಶೇ.80 – ಶೇ.60), ಪರ್ಯಾಪ್ತ (ಸಿಲಿಕಾಂಶ ಶೇ.50– ಶೇ.48) ಮತ್ತು ಅಪರ್ಯಾಪ್ತ (ಸಿಲಿಕಾಂಶ ಶೇ.54.5 – ಶೇ.41) ಶಿಲೆಗಳೆಂದು ವಿಂಗಡಿಸುವುದು ವಾಡಿಕೆ. ಇದರ ಪ್ರಕಾರ ಗ್ಯಾಬ್ರೊಶಿಲೆ ಪರ್ಯಾಪ್ತ ಶಿಲಾಪಂಗಡಕ್ಕೆ ಸೇರುತ್ತದೆ. ಪರ್ಯಾಪ್ತ ಅಂತರಾಗ್ನಿ ಶಿಲೆಗಳನ್ನು ಗ್ಯಾಬ್ರೊ, ಅನಾರ್ತೊಸೈಟ್, ಪೆರಿಡೊಟೈಟ್ ಮುಂತಾಗಿ ಅವುಗಳ ಖನಿಜಸಂಯೋಜನೆಗೆ ಅನುಗುಣವಾಗಿ ಕರೆಯುತ್ತಾರೆ. ಗ್ಯಾಬ್ರೊ ಶಿಲೆಯಲ್ಲಿ ಪ್ಲೇಜಿಯೋಕ್ಲೇಸ್ ಮತ್ತು ಪೈರಾಕ್ಸೀನ್ ಮುಖ್ಯ ಖನಿಜಗಳು. ಇವುಗಳಲ್ಲದೆ ಬಯೋಟೈಟ್, ಹಾರನ್‌ಬ್ಲಂಡ್, ಇಲ್ಮನೈಟ್, ಮ್ಯಾಗ್ನಟೈಟ್ ಮುಂತಾದ ಖನಿಜಗಳು ಆನುಷಂಗಿಕವಾಗಿ ಇರಬಹುದು. ಕೆಲವು ವೇಳೆ ಗ್ಯಾಬ್ರೊಶಿಲೆಯಲ್ಲಿ ಬೆಣಚುಕಲ್ಲು ಅಥವಾ ಆಲಿವೀನ್ ಖನಿಜಗಳು ಬೆರೆತಿರುವ ಸಾಧ್ಯತೆ ಉಂಟು. ಇಂಥವುಗಳಿಗೆ ಬೆಣಚುಕಲ್ಲು ಗ್ಯಾಬ್ರೊ ಅಥವಾ ಆಲಿವೀನ್ ಗ್ಯಾಬ್ರೊ ಎಂದು ಹೆಸರು. ಗ್ಯಾಬ್ರೊ ಮತ್ತು ಇದರ ಗುಂಪಿಗೆ ಸೇರಿದ ಇತರ ಶಿಲೆಗಳು ವಿಶೇಷವಾಗಿ ಇಂಗ್ಲೆಂಡಿನ ಲೇಕ್ ಡಿಸ್ಟ್ರಿಕ್ಟ್, ಕೆನಡದ ಸಡ್‌ಬೆರಿ, ಗ್ರೀನ್ಲೆಂಡಿನ ಸ್ಕೇಲ್‌ಗಾರ್ಡ್, ದಕ್ಷಿಣ ಆಫ್ರಿಕದ ಬುಷ್‌ವೆಲ್ಡ್ ಹಾಗೂ ಭಾರತದ ಗಿರ್‌ನಾರ್ ಗುಡ್ಡಗಳು ಮತ್ತು ಸೇಲಮ್ ಜಿಲ್ಲೆ ಪ್ರದೇಶಗಳಲ್ಲಿ ದೊರೆಯುತ್ತವೆ. ಈ ಶಿಲೆಗಳಲ್ಲಿರುವ ಪ್ಲೇಜಿಯೋಕ್ಲೇಸ್ (ಲ್ಯಾಬ್ರೊಡರೈಟ್) ಖನಿಜದಿಂದಾಗಿ ಅವುಗಳಿಗೆಲ್ಲ ಒಂದು ಬಗೆಯ ನೇರಳೆಬಣ್ಣ ಬರುವುದುಂಟು. ಇದಲ್ಲದೆ ಈ ಖನಿಜದಿಂದಾಗಿ ಗ್ಯಾಬ್ರೊ ಶಿಲೆಯನ್ನು ಬೇರೆ ಬೇರೆ ಕೋನದಿಂದ ನೋಡಿದಾಗ ಬೇರೆ ಬೇರೆ ಬಣ್ಣ ಕಾಣುವುದೂ ಉಂಟು. ಹೀಗಾಗಿ ಗ್ಯಾಬ್ರೊಶಿಲೆಯನ್ನು ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಅಲಂಕಾರ ಶಿಲೆಯಾಗಿ ಉಪಯೋಗಿಸುತ್ತಾರೆ. (ಸಿ.ಎಸ್.)

**ಗ್ಯಾಮ ಉತ್ಪನ್ನ :** ಅನಂತ ಅನುಕಲ

$$\Gamma(z) = \int_0^\infty e^{-t}\ t^{z-1}\ dt$$

ಎಂಬುದರ ಹೆಸರು. ಆಯ್ಲರನ ದ್ವಿತೀಯ ಅನುಕಲ ಎಂಬ ಹೆಸರು ಕೂಡ ಉಂಟು. $z$ನ ಎಲ್ಲ ಧನ ನೈಜ ಬೆಲೆಗಳಿಗೆ ಇದು ಅಭಿಸರಿಸುತ್ತದೆ. ಇದರ ಮುಖ್ಯ ಗುಣಗಳಲ್ಲಿ ಕೆಲವು

$$\Gamma(z+1) = z\,\Gamma(z)$$

$$\Gamma(z)\,\Gamma(1-z) = \Pi \csc \Pi$$

$$\Gamma\left(\frac{1}{2}\right) = \sqrt{\Pi}$$

$z=n$ ಎಂಬ ಒಂದು ಧನ ಪೂರ್ಣಾಂಕವಾದಾಗ $\Gamma(n)=(n\text{-}1)\,!$ ಹೀಗಾಗಿ ಗ್ಯಾಮ ಉತ್ಪನ್ನವನ್ನು ಹಲವಾರು ಸಂದರ್ಭಗಳಲ್ಲಿ ಕ್ರಮಗುಣಿತ ಉತ್ಪನ್ನ (ಫ್ಯಾಕ್ಟೋರಿಯಲ್ ಫಂಕ್ಷನ್) ಎಂಬುದಾಗಿ ಸಹ ಕರೆಯುವುದುಂಟು.

ಸ್ವಾಭಾವಿಕ ಸಂಖ್ಯೆಗಳ ಅಥವಾ ಧನ ಪೂರ್ಣಾಂಕಗಳ ಕ್ರಮಗುಣಿತದ (ಕಂಟಿನ್ಯೂಡ್ ಪ್ರಾಡಕ್ಟ್) ಭಾವನೆಯನ್ನು ಸಾರ್ವತ್ರೀಕರಿಸುವ ಸಂದರ್ಭದಲ್ಲಿ ಗ್ಯಾಮ ಉತ್ಪನ್ನದ ಆವಶ್ಯಕತೆ ಕಂಡುಬಂದಿತು. ಇದು ಹೇಗೆ ಎನ್ನುವುದನ್ನು ಮುಂದೆ ವಿಶದೀಕರಿಸಿದೆ.

$$\int_0^\infty e^{-t}\ t^{z}\ dt$$

ಎಂಬ ಅನುಕಲವನ್ನು ಗಮನಿಸೋಣ. ಇಲ್ಲಿ ಒಂದು ಅನುಕಲನ ಪರಿಮಿತಿ ಅನಂತ. ಆದ್ದರಿಂದ ಇದು ಒಂದು ಅನುಚಿತ ಅನುಕಲ (ಇಂಪ್ರಾಪರ್ ಇಂಟೆಗ್ರಲ್). $z=n$ ಎಂಬ ಧನಪೂರ್ಣಾಂಕವಾದಾಗ ಈ ಅನುಚಿತ ಅನುಕಲದ ಬೆಲೆ $n!$ ಆಗುತ್ತದೆ ಎನ್ನುವುದನ್ನು ವಾಸ್ತವಿಕ ಅನುಕಲನದಿಂದ ತಿಳಿಯಬಹುದು. $z$ ಧನ ಪೂರ್ಣಾಂಕವಲ್ಲದೆ ಬೇರೆ ಒಂದು ನೈಜಸಂಖ್ಯೆಯಾದಾಗ, ಕ್ರಮಗುಣಿತವಾದ $n!$ (ಅಂದರೆ $z!$) ಅರ್ಥರಹಿತವಾಗುವುದು. ಎಲ್ಲ ನೈಜಸಂಖ್ಯೆಗಳಿಗೂ ಈ ಕ್ರಮಗುಣಿತದ ಭಾವನೆಯನ್ನು ಸಾರ್ವತ್ರೀಕರಣ ಮಾಡುವ ಬಗೆ ಹೇಗೆ?

$$\int_0^\infty e^{-t}\ t^{n}\ dt = n\,! \quad \text{(n ಒಂದು ಧನಪೂರ್ಣಾಂಕ)}$$

ಮೇಲಿನ ಸಮೀಕರಣದಲ್ಲಿ $n$ ನ ಸ್ಥಾನದಲ್ಲಿ $z$ ಎಂಬ ನೈಜಸಂಖ್ಯೆಯನ್ನು ಆದೇಶಿಸಿ $z$ ಯಾವ ನೈಜಸಂಖ್ಯೆಯೇ ಆಗಿರಲಿ $z!$ ಎಂಬ ಕ್ರಮಗುಣಿತಕ್ಕೆ

$$z\,! = \int_0^\infty e^{-t}\ t^{z}\ dt$$

ಎಂಬ ವ್ಯಾಖ್ಯೆಯನ್ನು ನೀಡುವುದೇನೋ ಸಹಜವಾದ ಕ್ರಮವೇ ಆಗಿದೆ. ಇದರ ಬದಲು

$$\int_0^\infty e^{-t}\ t^{n-1}\ dt = (n-1)\,!$$

ಆದ್ದರಿಂದ ಮೇಲಿನ ಸಮೀಕರಣದಲ್ಲಿ $n$ ನ ಬದಲು $z$ ಅನ್ನು ಆದೇಶಿಸಿ ಇದರ ಬೆಲೆಯನ್ನು $(z-1)!$ ಎಂದು ಸೂಚಿಸುವ ಬದಲು $\Gamma(z)$ (ಗ್ಯಾಮ $z$) ಎಂದು ಸೂಚಿಸುತ್ತೇವೆ.

$$\Gamma(z) = \int_0^\infty e^{-t}\ t^{z-1}\ dt$$

ಇಲ್ಲಿ $z$ ಒಂದು ನೈಜಸಂಖ್ಯೆ.

$z$ ನ ಯಾವ ಯಾವ ಬೆಲೆಗಳಿಗೆ ಈ ಅನುಚಿತ ಅನುಕಲ ಅಸ್ತಿತ್ವದಲ್ಲಿರುವುದು ಎಂಬುದನ್ನು ಈಗ ನಿರ್ಧರಿಸಬೇಕಾಗಿದೆ.

$(z-1)<0$ ಮತ್ತು $t\ 0$ ಆದಾಗ $t^{2-1}\ 0$ ಆಗುವುದರಿಂದ $e^{-t}\,t^{z-1}$ ಉತ್ಪನ್ನಕ್ಕೆ $t=0$ ಎಂಬುದೂ ಒಂದು ಅನಂತವಿಚ್ಛಿನ್ನತಾ ಬಿಂದು.

$$\therefore \int_0^\infty e^{-t}\ t^{z-1}\ dt = \frac{\lim}{\varepsilon\to 0}\int_\varepsilon^1 e^{-t}\ t^{z-1}\ dt$$

$$+ \ \underset{\varepsilon\to\infty}{\lim I_1} \int_1^\delta e^{-t}\ t^{z-1}\ dt$$

$$\equiv \underset{\varepsilon\to 0}{\lim I_1} + \underset{\delta\to 0}{\lim I_2} \qquad \ldots(1)$$

ಇಲ್ಲಿ

$$I_1 = \int_\varepsilon^1 e^{-t}\ t^{z-1}\ dt$$

$$I_2 = \int_1^\delta e^{-t}\ t^{z-1}\ dt$$

(1) ರಲ್ಲಿರುವ ಎರಡು ಪರಿಮಿತಿಗಳೂ ಅಸ್ತಿತ್ವದಲ್ಲಿದ್ದಾಗ

$$\int_0^\infty e^{-t}\ t^{z-1}\ dt = \Gamma(z)$$

ಈ ಅನುಚಿತ ಅನುಕಲ ಅಸ್ತಿತ್ವದಲ್ಲಿರುವುದು.

(a) $t>0$ ಆದಾಗ $e^{-t} = \dfrac{1}{e^{t}} < 1$ ಆಗುವುದರಿಂದ

$$I_1 = \int_{\varepsilon}^{1} e^{-t}\, t^{z-1}\, dt > \int_{\varepsilon}^{1} 1.t^{\,z-1}\, dt = \int_{\varepsilon}^{1} t^{z-1}\, dt = \frac{t^z}{z} \Big|_{\varepsilon}^{1}$$

$$= \frac{1}{z} - \frac{\varepsilon}{z} < \frac{1}{Z}$$

ಆದ್ದರಿಂದ $I_1$ರ ಉಚ್ಚ ಪರಿಬಂಧ $1/z$ ಆಗಿರುವುದು. ಅಲ್ಲದೆ $z$ನ್ನು ಸ್ಥಿರವಾಗಿಟ್ಟು $e$ನ್ನು ಕ್ರಮೇಣ ಶೂನ್ಯದತ್ತ ಸಾಗುವಂತೆ ಮಾಡಿದರೆ $(\varepsilon > 0)$ $1/z - \varepsilon^z/z$ ನ ಬೆಲೆ ಏಕತಾನವಾಗಿ ವರ್ಧಿಸುವುದರಿಂದಲೂ $I_1 < 1/z$ ಆಗುವುದರಿಂದಲೂ

$$\lim_{\varepsilon \to 0} I_1$$

ಅಸ್ತಿತ್ವದಲ್ಲಿರುವುದು.

(b) $t > 0$ ಆದಾಗ

$$e^t = 1 + t + \frac{t^2}{2!} + \frac{t^3}{3!} + \ldots\ldots + \frac{t^n}{n!} + \ldots\ldots$$

ಈ ಶ್ರೇಣಿಯಲ್ಲಿರುವ ಪ್ರತಿಯೊಂದು ಪದವೂ ಒಂದು ಧನಸಂಖ್ಯೆ. ಆದ್ದರಿಂದ

$$e^t > \frac{t^n}{n!} \quad \text{ಅಥವಾ} \quad \frac{1}{e^t} < \frac{n!}{t^n}$$

ಅಂದರೆ $e^{-t} < \dfrac{n!}{t^n}$

$$\therefore\ e^{-t}\ t^{z-1} < \frac{n!\ t^{z-1}}{t^n}$$

ಅಥವಾ $e^{-t}\ t^{z-1} < \dfrac{n!}{t^{n-z+1}}$

$$I_2 = \int_1^{\delta} e^{-t}\ t^{z-1}\ dt < n! \int_1^{\delta} \frac{dt}{t^{n-z+1}}$$

$$= \frac{n!}{n-z}\left\{1 - \frac{1}{\delta\ n-z}\right\}$$

$$\therefore\ I2 < \frac{n!}{n-z}, \quad \text{ಇಲ್ಲಿ}\ \ n > z+1$$

$z$ ನ್ನು ಸ್ಥಿರವಾಗಿರಿಸಿ $\delta$ ದ ಬೆಲೆಗಳನ್ನು ಅನಂತದತ್ತ ಸಾಗುವಂತೆ ಮಾಡಿದಾಗ $1 - \dfrac{1}{\delta\, n-z}$ ನ ಬೆಲೆ ಏಕತಾನವಾಗಿ ವರ್ಧಿಸುತ್ತದೆ. ಆದ್ದರಿಂದ $I_2$ರ ಬೆಲೆಯೂ ಏಕತಾನವಾಗಿ ವರ್ಧಿಸುವುದು ಮತ್ತು ಇದರ ಒಂದು ಉಚ್ಚ ಪರಿಬಂಧ $\dfrac{n!}{n-z}$ ಆಗುವುದು $\left(I_2 < \dfrac{n!}{n-z}\right)$. ಆದಕಾರಣ $\lim\limits_{\delta \to \infty} I_2$ ಪರಿಮಿತಿ ಕೂಡ ಅಸ್ತಿತ್ವದಲ್ಲಿರುವುದು. ಆದ್ದರಿಂದ

$$\Gamma(z) = \int_0^{\infty} e^{-t}\ t^{z-1}\ dt$$

ಎಂಬ ಅನುಚಿತ ಅನುಕಲ ಅಸ್ತಿತ್ವದಲ್ಲಿರುವುದು.

ಈಗ $\Gamma\,(z) = \int_0^{\infty} e^{-t}\ t^{z-1}\ dt$ ಆಗಿರುವುದರಿಂದ

$$\Gamma(z+1) = \int_0^{\infty} e^{-t}\, t^{z-1}\, dt$$

ಈಗ $\int_{\varepsilon}^{\delta} e^{-t}\ t^{z}\ dt$ ಎಂಬ ಈ ಅನುಕಲವನ್ನು ಭಾಗಶಃ ಅನುಕಲಿಸಿದರೆ

$$\int_{\varepsilon}^{\delta} e^{-t}\, t^{z}\, dt = -e^{-t}\, t^{z}\Big|_{\varepsilon}^{\delta} + z\int_{\varepsilon}^{\delta} e^{-t}\, t^{z-1}\, dt$$

$$= \left[\frac{\varepsilon^z}{e^{\varepsilon}} - \frac{\delta^z}{e^{\delta}}\right] + z\int_{\varepsilon}^{\delta} e^{-t}\ t^{z-1}\ dt$$

ಹಿಂದಿನಂತೆ $\dfrac{1}{e\delta} < \dfrac{n!}{\delta^{\,n}}$ ಮತ್ತು $\dfrac{\delta^x}{e^{\delta}} < \dfrac{n!}{\delta^{\,n-z}}$

ಮತ್ತು $\lim\limits_{\delta\to\infty} \dfrac{n!}{\delta^{n-z}} = 0,\ \lim\limits_{\varepsilon\to 0} \dfrac{\varepsilon^x}{e^{\varepsilon}} = 0$

ಆದ್ದರಿಂದ $\varepsilon \to 0,\ \delta \to \infty$ ಆದಾಗ ಪರಿಮಿತಿಯನ್ನು ತೆಗೆದುಕೊಂಡರೆ

$$\Gamma\,(z+1) = \int_0^{\infty} e^{-t}\ t^{z}\ dt$$

$$= z\int_0^{\infty} e - t\ t^{z-1}\ dt$$

ಆದ್ದರಿಂದ $\Gamma\,(z+1) = z\,\Gamma\,(z)$ ... (2)

ಇದು $\Gamma(z)$ ಉತ್ಪನ್ನದ ಅತಿ ಮುಖ್ಯವಾದ ಲಕ್ಷಣ. ಕ್ರಮಗುಣಿತದ ಭಾವನೆಯ ಸಾರ್ವತ್ರೀಕರಣದಿಂದ ಉದ್ಭವಿಸಿದ ಈ $\Gamma(z)$ ಉತ್ಪನ್ನಕ್ಕೆ ಕ್ರಮಗುಣಿತಗಳ ಪ್ರಮುಖ ಲಕ್ಷಣವಾದ $n! = n \times (n-1)!$ ಎಂಬ ಲಕ್ಷಣಕ್ಕೆ ಹೋಲುವ $\Gamma(z+1) = z\,\Gamma(z)$ ಎಂಬ ಲಕ್ಷಣವಿದೆ.

ಈಗ $\Gamma(z)$ನ ಬೆಲೆ $0 < x \le 1$ ಅಂತರದಲ್ಲಿ ತಿಳಿದಿದ್ದರೆ (2)ರ ಸಹಾಯದಿಂದ $1 < x \le 2$ ಅಂತರದಲ್ಲಿ $\Gamma(z)$ ನ ಬೆಲೆಗಳನ್ನು ಪಡೆಯಬಹುದು. ಇದರಿಂದ $2 < z \le 3$ ಅಂತರದಲ್ಲಿ ಇದರ ಬೆಲೆಯನ್ನು ಪಡೆಯಬಹುದು. ಹೀಗೆಯೇ z ನ ಎಲ್ಲ ನೈಜದ ಮೌಲ್ಯಗಳಿಗೂ $\Gamma(z)$ ನ ಬೆಲೆಗಳನ್ನು ಕಂಡುಹಿಡಿಯುವುದು ಸಾಧ್ಯ.

(2)ರ ಸಹಾಯದಿಂದ

$$\Gamma(z+n) = (z+n-1)\ \Gamma\ (z+n-1)$$
$$= (z+n-1)\ (z+n-2)\ \Gamma\ (z+n-2)$$
$$= \ldots\ldots\ldots\ldots$$
$$= (z+n-1)\ (z+n-2)\ \ldots\ \ldots\ (z+1)\ z\ \Gamma(z)$$

... (3)

(3) ನೆಯ ಸಮೀಕರಣ n ಎಂಬ ಪ್ರತಿಯೊಂದು ಧನಪೂರ್ಣಾಂಕಕ್ಕೂ ನಿಜ.

ಇಲ್ಲಿಯವರೆಗೆ $z$ ಧನ ನೈಜಸಂಖ್ಯೆಯಾದಾಗ ಮಾತ್ರ $\Gamma(z)$ ಉತ್ಪನ್ನಕ್ಕೆ ವ್ಯಾಖ್ಯೆಯನ್ನು ಮಾಡಿದಂತಾಯಿತು. ಋಣ ನೈಜಸಂಖ್ಯೆಗಳಿಗೆ ಸಂಬಂಧಿಸಿದಂತೆಯೂ $\Gamma(z)$ ನ ವ್ಯಾಖ್ಯೆಯನ್ನು ಈಗ ನಾವು ವಿಸ್ತರಿಸಬಹುದು.

$-n < z < -n+1$ (ಇಲ್ಲಿ $n$ ಒಂದು ಧನಪೂರ್ಣಾಂಕ) ಆದಾಗ $\Gamma(z)$ ಉತ್ಪನ್ನದ ವ್ಯಾಖ್ಯೆಯನ್ನು ಹೀಗೆ ಮಾಡುತ್ತೇವೆ :

$$\Gamma\ (n) = \frac{1}{z(z+1)\ (z+2)\ \ldots\ \ldots\ (z+n-1)}\ \Gamma\,(z+n) \quad \ldots (4)$$

ಈ ವ್ಯಾಖ್ಯೆಗೆ ಆಧಾರ (3)ನೆಯ ಸಮೀಕರಣ ಎಂಬುದನ್ನು ಗಮನಿಸಬೇಕು.

$$-n < z < -n+1$$

ಆದಾಗ $0 < z+n < 1$ ಆಗುವುದು. ಆದ್ದರಿಂದ $\Gamma(z+n)$ ಉತ್ಪನ್ನಕ್ಕೆ ನಾವು ಆಗಲೇ ವ್ಯಾಖ್ಯೆ ಮಾಡಿದ್ದೇವೆ. ಹೀಗಾಗಿ (4)ನೆಯ ಸಮೀಕರಣದಲ್ಲಿ ಮಾಡಿರುವ $\Gamma(n)$ ನ ವ್ಯಾಖ್ಯೆ ಸರಿಯಾಗಿಯೇ ಇದೆ.

ಆದರೆ (4)ರ ಪ್ರಕಾರ $z = 0$ ಆದಾಗ ಅಥವಾ $z$ ಒಂದು ಋಣಪೂರ್ಣಾಂಕವಾದಾಗ (4)ರ ಬಲಭಾಗದಲ್ಲಿ ಛೇದ ಶೂನ್ಯವಾಗುವುದರಿಂದ $z$ ನ ಈ ಬೆಲೆಗಳಿಗೆ $\Gamma(z)$ ವ್ಯಾಖ್ಯಿತವಾಗಿಲ್ಲ.

$$\Gamma(z) = \int_0^\infty e^{-t}\ t^{z-1}\ dt$$

ಆದ್ದರಿಂದ $\Gamma(1) = \int_0^\infty e^{-t}\ dt\ = 1$ ಎಂಬುದನ್ನು ಗಮನಿಸಬೇಕು.

$\Gamma(z)$ನ ಕೆಲವು ಮುಖ್ಯವಾದ ಲಕ್ಷಣಗಳು :

1. $$\Gamma(z) = \lim_{n\to\infty} \frac{n^z.\quad n!}{z(z+1)\ \dots\ \dots\ (z+n)}$$

2. $$\Gamma(z) = e^{-Cz}\ \frac{1}{z}\ \prod_{i=1}^{\infty} \frac{e^{z/i}}{1+\frac{z}{i}}$$

ಇಲ್ಲಿ $C\ =\ \lim_{n\to\infty} \left[1 + \frac{1}{2} + \frac{\Gamma}{3} + \dots + \frac{1}{n} - \log\ \ n\right]$

$C$ ಗೆ ಆಯ್ಲರನ ಸ್ಥಿರಾಂಕ ಎಂದು ಹೆಸರು.

3. $\Gamma(z)$ ಗೆ ಆಯ್ಲರನ ದ್ವಿತೀಯ ಅನುಕಲ ಎಂಬ ಹೆಸರಿರುವುದನ್ನು ಹಿಂದೆ ಹೇಳಿದೆ. ಆತನ ಹೆಸರಿನ ಪ್ರಥಮ ಅನುಕಲಕ್ಕೆ ಬೀಟ ಉತ್ಪನ್ನ ಎಂದು ಹೆಸರು. ಅದರ ನಿರೂಪಣೆ ಹೀಗಿದೆ :

$$B(x,y) = \int_0^1 t^{x-1}\ (1-t)^{y-1}\ dt$$

ಈಗ ಇವೆರಡು ಅನುಕಲಗಳ ಪರಸ್ಪರ ಸಂಬಂಧ ಹೀಗಿದೆ.

$$B\ (x,y)\ =\ \frac{\Gamma(x)\ \Gamma(y)}{\Gamma(x+y)}$$

ಇಲ್ಲಿ $x = \frac{1}{2}, y = \frac{1}{2}$ ಆಗಿದ್ದರೆ ಆಗ

$$B(\frac{1}{2},\ \frac{1}{2})\ =\ \frac{\left[\Gamma(\frac{1}{2})\right]^2}{\Gamma(1)}$$

ಆದರೆ $B\ \left(\frac{1}{2}, \frac{1}{2}\right) = \pi$ ಎಂದು ತೋರಿಸಬಹುದು.

ಅಲ್ಲದೆ $\Gamma(1) = 1$ ಆಗಿದೆ.

$$\therefore\ \Gamma(\frac{1}{2})\ =\ \sqrt{\pi}$$ ಆಗುವುದು.

ಈಗ $\Gamma(z+1) = z\ F\ (z)$ ಸಮೀಕರಣದ ಸಹಾಯದಿಂದ $n$ ಒಂದು ಧನಪೂರ್ಣಾಂಕವಾದಾಗಲೆಲ್ಲ $\Gamma(n + \frac{1}{2})$ದ ಬೆಲೆಯನ್ನು ಕಂಡುಹಿಡಿಯಬಹುದು.

4. $z$ ನ ಅತಿ ದೊಡ್ಡ ಬೆಲೆಗಳಿಗೆ ಸರಿಹೊಂದುವ ಸಮೀಕರಣಗಳು :

$$\Gamma(z) = \sqrt{2\pi}\ \ z^{z-\frac{1}{2}}\ e^{-z} + \mu(z) \qquad \dots(1)$$

ಇಲ್ಲಿ $\mu(z) = \sum_{n=0}^{\infty}(z+n+\frac{1}{2})\ \log\ (1+\frac{1}{z+n}) - 1 = \frac{\theta}{12z}, 0 < \theta < 1 \quad \dots(2)$

ಮತ್ತು $$n! = \sqrt{2\pi_n}\ ^{n+\frac{1}{2}e^{-n}+\frac{\theta}{12n}} \qquad \dots(3)$$

$$\Gamma(\frac{z}{2})\,\Gamma(\frac{z+1}{2})\ \dots\ \Gamma(\frac{z+p-1}{p}) = \frac{(2\pi)^{\frac{p-1}{2}}}{p^{z-\frac{1}{2}}}\Gamma(z) \quad \dots(4)$$

ಇಲ್ಲಿ $p$ ಒಂದು ಧನಪೂರ್ಣಾಂಕ. $p = 2$ ಆದಾಗ ಈ ಫಲಿತಾಂಶ ತಾಳುವ ರೂಪ

$$\Gamma(\frac{z}{p})\ \ \Gamma(\frac{z+1}{P})\ \dots\ \frac{\sqrt{\pi}}{2^{z-1}}\ \Gamma(z) \quad \dots(5)$$

(1), (2), (3)ಗಳು $z$ನ ಅತಿ ದೊಡ್ಡ ಬೆಲೆಗಳಿಗೆ $\Gamma(z)$ ನಡೆದುಕೊಳ್ಳುವ ರೀತಿಯನ್ನು ವಿವರಿಸುತ್ತವೆ. ಇವುಗಳಿಗೆ ಸ್ಟರ್ಲಿಂಗನ ಸೂತ್ರಗಳು ಎಂದು ಹೆಸರು. $p(z)$ನ ಸರಿಸುಮಾರು ಬೆಲೆಯನ್ನು ಉಪಯೋಗಿಸಿದರೆ, $z$ ಹೆಚ್ಚಿದಂತೆಲ್ಲ $\Gamma(z)$ನ ಬೆಲೆಗಳು ಯಥಾರ್ಥ ಬೆಲೆಗೆ ಹೆಚ್ಚು ಹೆಚ್ಚು ಸಾಮೀಪ್ಯದಲ್ಲಿರುವುವು. (4)ಕ್ಕೆ ಗೌಸನ ಸೂತ್ರ (ಆತ ಆವಿಷ್ಕರಿಸಿದುದರಿಂದ) ಎಂದು ಹೆಸರು. ಇದರಲ್ಲಿ $p = 2$ ಆದಾಗ ಬರುವ (5)ಕ್ಕೆ ಲರ್ಯಾಂಡರನ ಸಂಬಂಧ ಎಂದು ಹೆಸರು.

5 $\Gamma(z)$ ಮತ್ತು $\sin z$ ಗಳಿಗಿರುವ ಸಂಬಂಧ :

$$\Gamma(z)\ \Gamma(1-z)\ =\ \frac{\pi}{\sin \pi z}$$

ಇದರಲ್ಲಿ $z = 1/2$ ಆದೇಶಿಸಿದರೆ $[\Gamma(1/2)]^2 = \pi$ ಅಥವಾ $\Gamma(1/2) = \sqrt{\pi}$ ದೊರೆಯುತ್ತದೆ. ಈ ಸಮೀಕರಣದ ಸಹಾಯದಿಂದ sine ಉತ್ಪನ್ನದ ಅನಂತ ಗುಣಲಬ್ಧವನ್ನು ಪಡೆಯಬಹುದು.

$$\sin \pi z = \ ^{\pi z}\prod_{i=1}^{\infty}\left(1 - \frac{x^2}{i^2}\right)$$

(ಎಲ್.ಎನ್.ಸಿ.)

**ಗ್ಯಾಮಕಿರಣ ಖಗೋಳವಿಜ್ಞಾನ :** ಆಕಾಶಕಾಯಗಳ ಹಾಗೂ ಅವುಗಳ ನಡುವಣ ಪ್ರದೇಶಗಳಲ್ಲಿ ನಡೆಯುವ ಕ್ರಿಯೆಗಳ ಪರಿಣಾಮವಾಗಿ ಉತ್ಸರ್ಜಿಸಲ್ಪಟ್ಟ (ಸುಮಾರು 0.1 MeV ಗಿಂತಲೂ ಹೆಚ್ಚು ಶಕ್ತಿ ಇರುವ) ಗ್ಯಾಮ ಕಿರಣಗಳ ಅಧ್ಯಯನದಿಂದ ವಿಶ್ವದ (ಯೂನಿವರ್ಸ್) ಸ್ಥಿತಿ ಮತ್ತು ವಿಕಾಸದ ಬಗ್ಗೆ ಅರಿಯಲು ಪ್ರಯತ್ನಿಸುವ ವಿಜ್ಞಾನ (ಗ್ಯಾಮ ರೇ ಅಸ್ಟ್ರಾನಮಿ). ವಿಶ್ವದ ಅನೇಕ ಕಡೆಗಳಲ್ಲಿ ಆವಿಷ್ಟ ಕಣಗಳು (ಚಾರ್ಜ್ಡ್ ಪಾರ್ಟಿಕಲ್ಸ್) ಹರಡಿಕೊಂಡಿವೆ. ಇವು ವಿಶ್ವಕಿರಣಗಳೊಡನೆ ವರ್ತಿಸಿ ಶಕ್ತಿಯುತ ಗ್ಯಾಮಕಿರಣಗಳನ್ನು ಉತ್ಸರ್ಜಿಸುವುದು ಸಾಧ್ಯವಿದೆ. ಆದ್ದರಿಂದ ಆಕಾಶದ ಬೇರೆ ಬೇರೆ ಭಾಗಗಳಿಂದ ಗ್ಯಾಮಕಿರಣಗಳು ಭೂಮಿಯೆಡೆಗೆ ಬರುವುದನ್ನು ನಿರೀಕ್ಷಿಸಬಹುದು ಎಂಬುದಾಗಿ ವಿಜ್ಞಾನಿಗಳು 1950 ರಿಂದೀಚೆಗೆ ತರ್ಕಿಸತೊಡಗಿದ್ದರು. ಈ ಕಿರಣಗಳು ಇತರ ಯಾವ ಕಣವೂ ಚಲಿಸದಷ್ಟು ದೂರ ಒಂದೇ ನೇರದಲ್ಲಿ ಚಲಿಸಬಲ್ಲವಾದ್ದರಿಂದ ವಿಶ್ವದ ಅಂಚನ್ನು ಕುರಿತು ಇವು ಹೆಚ್ಚು ಮಾಹಿತಿಯನ್ನು ಒದಗಿಸಬಲ್ಲುವು ಎಂಬುದಾಗಿ ಕೂಡ ವಿಜ್ಞಾನಿಗಳು ಭಾವಿಸಿದ್ದರು. ಆದರೆ ಗ್ಯಾಮಕಿರಣಗಳನ್ನು ಭೂತಳದಲ್ಲಿ ನಿಂತು ಪಡೆಯುವುದಾಗಲೀ ಶೋಧಿಸುವುದಾಗಲೀ ಸಾಧ್ಯವಿರಲಿಲ್ಲ. ಏಕೆಂದರೆ ವಾಯುಮಂಡಲ ಗ್ಯಾಮಕಿರಣಗಳಿಗೆ ಅಪಾರದರ್ಶಕ. ಉಪಕರಣಗಳನ್ನು ಬಲೂನುಗಳಲ್ಲೋ ಕೃತಕೋಪಗ್ರಹಗಳಲ್ಲೋ ಇಟ್ಟು ವಾಯುಮಂಡಲದಿಂದ ಆಚೆಗೆ ರವಾನಿಸಿ ಶೋಧನೆ ನಡೆಸಬೇಕಾಗುತ್ತದೆ. ಈ ಕಾರಣದಿಂದ ಗ್ಯಾಮಕಿರಣ ಖಗೋಳವಿಜ್ಞಾನ ಆಕಾಶಯುಗದ (ಸ್ಪೇಸ್ ಏಜ್) ಕೂಸು ಎಂದರೆ ಸಲ್ಲುತ್ತದೆ. ಈ ದಿಶೆಯಲ್ಲಿ ಮೊದಮೊದಲು ನಡೆದ ಪ್ರಯತ್ನಗಳು ವಿಶೇಷ ಫಲಕಾರಿ ಆಗಲಿಲ್ಲ – ಆಕಾಶಗಂಗೆಯಿಂದ (ಮಿಲ್ಕಿವೇ) ಬರುವ ಗ್ಯಾಮ ಕಿರಣಗಳ ವಿನಾ ಬೇರಾವುವನ್ನೂ ಸಂಗ್ರಹಿಸಲಾಗಲಿಲ್ಲ. 1962ರಲ್ಲಿ ಪ್ರಥಮವಾಗಿ ಎಕ್ಸ್ ಕಿರಣಾಕರವೊಂದನ್ನು ಗುರುತಿಸಿದ ಬಳಿಕ ಗ್ಯಾಮಕಿರಣಾಕರಗಳ ಇರವಿನ ಶೋಧನೆಗೆ ಹೆಚ್ಚಿನ ಕುಮ್ಮಕ್ಕು ಲಭಿಸಿತು. ಗ್ಯಾಮನಕ್ಷತ್ರಗಳ ಶೋಧನೆಯಲ್ಲಿ ಮೊದಲ ಬಾರಿಗೆ ಯಶಸ್ಸು ದೊರೆತದ್ದು 1970ರಲ್ಲಿ. 1972ರ ವೇಳೆಗೆ ಐದಾರು ಗ್ಯಾಮನಕ್ಷತ್ರಗಳ ಶೋಧನೆ ಆಗಿದೆ. ಇವುಗಳ ಪೈಕಿ ಕೆಲವು ಎಕ್ಸ್‌ಕಿರಣ ಮತ್ತು ಅಥವಾ ರೇಡಿಯೋ ಆಕರಗಳೂ ಹೌದು. ಕ್ರ್ಯಾಬ್ ನೆಬ್ಯುಲದ ಪ್ರದೇಶದಲ್ಲಿ ಗ್ಯಾಮ ಪಲ್ಸಾರ್ ಒಂದನ್ನು ಸಹ ಗುರುತಿಸಲಾಗಿದೆ. ಗ್ಯಾಮನಕ್ಷತ್ರಗಳೆಂದರೆ ಗ್ಯಾಮಕಿರಣಗಳನ್ನು ಹೊರಚೆಲ್ಲುವ ಶಕ್ತಿಯುತ ಆಕಾಶಕಾಯಗಳು. ಸಾಂಪ್ರದಾಯಿಕ ಅರ್ಥದ, ಅಂದರೆ ಬೆಳಕು ಬೀರಿ ತನ್ಮೂಲಕ ದೃಗ್ಗೋಚರವಾಗುವ– ಉದಾಹರಣೆಗೆ ಸೂರ್ಯ, ಲುಬ್ಧಕ, ಅಗಸ್ತ್ಯ ಇತ್ಯಾದಿಗಳಂಥ–ನಕ್ಷತ್ರಗಳಿವಲ್ಲ.

ವಿಶ್ವ ಗ್ಯಾಮಕಿರಣಗಳನ್ನು ಉತ್ಸರ್ಜಿಸಲು ಕಾರಣವಾಗಬಲ್ಲ ಕೆಲವು ಮುಖ್ಯ ಕ್ರಿಯೆಗಳನ್ನು ಇಲ್ಲಿ ವಿವರಿಸಿದೆ.

1) ಬ್ರೆಮ್‌ಸ್ಟ್ರಾಲುಂಗ್ : ಶಕ್ತಿಯುತ ಎಲೆಕ್ಟ್ರಾನುಗಳು ಅಂತರನಾಕ್ಷತ್ರಿಕ ಜಲಜನಕವೇ ಮೊದಲಾದ ವಸ್ತುಗಳ ಹತ್ತಿರ ಬಂದಾಗ ನಡೆಯುವ ಕ್ರಿಯೆಯಿಂದ ಗ್ಯಾಮಕಿರಣಗಳು ಜನಿಸುತ್ತವೆ.

2) ಕಾಂಪ್ಟನ್ ಚದರಿಕೆ : ಗ್ಯಾಮಕಣ (ಉದಾಹರಣೆಗೆ ಉಷ್ಣೀಯ ಫೋಟಾನುಗಳು– ಥರ್ಮಲ್ ಫೋಟಾನ್) ಹಾಗೂ ಎಲೆಕ್ಟ್ರಾನುಗಳ ನಡುವಣ ಘರ್ಷಣೆಯಲ್ಲಿ ಎಲೆಕ್ಟ್ರಾನುಗಳು

ಅತಿಶಕ್ತಿಯುತವಾಗಿದ್ದಲ್ಲಿ ಅವುಗಳಿಂದ ಶಕ್ತಿ ವರ್ಗಾಯಿಸಲ್ಪಟ್ಟು ಗ್ಯಾಮಕಿರಣಗಳು ಶಕ್ತಿಯುತವಾಗಿ ಪರಿಣಮಿಸುತ್ತವೆ. ಅಂದರೆ, $E=hv$ ಎಂಬ ಸೂತ್ರದಂತೆ ಹೆಚ್ಚು ಆವರ್ತಾಂಕವುಳ್ಳದ್ದಾಗಿ ಪರಿಣಮಿಸುತ್ತವೆ.

$10^5$ MeV ವರೆಗೆ ಇವೆರಡೇ ಕ್ರಿಯೆಗಳು ಪ್ರಧಾನವಾದವು.

3) $\pi^0$ ಮೆಸಾನಿನ ಕ್ಷಯ ($\pi^0 \rightarrow 2\gamma$) : ವಿಶ್ವಕಿರಣಗಳ ಹಾಗೂ ಸರ್ವವ್ಯಾಪೀ ಜಲಜನಕ ಅಣುಗಳ ಪರಸ್ಪರ ಕ್ರಿಯೆಗಳಲ್ಲಿ ಅಥವಾ ಮತ್ತಿತರ ಅನೇಕ ನ್ಯೂಕ್ಲಿಯರ್ ಪ್ರಕ್ರಿಯೆಗಳಲ್ಲಿ ಪಯಾನುಗಳು ಜನಿಸುವುದರಿಂದ ಇವುಗಳ ಕ್ಷಯ ಕೂಡ ಅತಿಮುಖ್ಯವಾದದ್ದು. $10^5$ MeV ಗಿಂತ ಹೆಚ್ಚು ಶಕ್ತಿಯುಳ್ಳ ಗ್ಯಾಮಕಣಗಳಿಗೆ ಇವೇ ಮುಖ್ಯ ಕಾರಣ.

ಮೇಲೆ ಹೇಳಿದ ಕ್ರಿಯೆಗಳೆಲ್ಲ ಅವಿಚ್ಛಿನ್ನ (ಕಂಟಿನ್ಯುವಮ್–ಅಂದರೆ ಒಂದು ನಿರ್ದಿಷ್ಟ ಶಕ್ತಿಯಿರದೆ ಬೇರೆ ಬೇರೆ ಶಕ್ತಿಯುಳ್ಳ ಗ್ಯಾಮಕಿರಣಗಳನ್ನು ನೀಡುತ್ತವೆ). ಇವಲ್ಲದೆ ಒಂದು ನಿಖರವಾದ ಶಕ್ತಿಯುಳ್ಳ ಗ್ಯಾಮಕಿರಣಗಳನ್ನು ಅಥವಾ ಗ್ಯಾಮರೇಖೆಗಳನ್ನು ನೀಡುವ ಕ್ರಿಯೆಗಳೂ ಇವೆ. ಅವುಗಳಲ್ಲಿ ಮುಖ್ಯವಾದವು ಈ ಕೆಳಗಿನಂತಿವೆ.

4) ಎಲೆಕ್ಟ್ರಾನ್ ಪಾಸಿಟ್ರಾನ್ ಲಯ (ಅನಿಹಿಲೇಷನ್) : ವಿಶ್ವಕಿರಣಗಳ ಶಕ್ತಿಯುತ ಪಾಸಿಟ್ರಾನುಗಳು ಲಯಹೊಂದುವ ಮುನ್ನ ಅಂತರನಾಕ್ಷತ್ರಿಕ ಮಾಧ್ಯಮದಿಂದ ತಡೆಯಲ್ಪಟ್ಟು ಹೆಚ್ಚು ಕಡಿಮೆ ನಿಶ್ಚಲವಾಗುವುದರಿಂದ 0.51 MeVಯಲ್ಲಿ ಕೇಂದ್ರೀಕೃತ ಗ್ಯಾಮರೇಖೆ ಲಭಿಸುವುದು.

5) ಡ್ಯೂಟೀರಿಯಮ್–ಉತ್ಪನ್ನಕ ಕ್ರಿಯೆ ($p + n$ g $d + \gamma$) : ಇದರಿಂದ 2.23 MeVಯ ಗ್ಯಾಮರೇಖೆ ಜನಿಸುತ್ತದೆ.

ಗ್ಯಾಮ ಶೋಧಕಗಳು (ಗ್ಯಾಮ ಡಿಟೆಕ್ಟರ್ಸ್) : ಈ ಹಿಂದೆಯೇ ತಿಳಿಸಿದಂತೆ ಗ್ಯಾಮಕಿರಣಗಳನ್ನು ಶೋಧಿಸುವ ಉಪಕರಣಗಳನ್ನು ಬಲೂನು ಅಥವಾ ಕೃತಕ ಉಪಗ್ರಹಗಳ ಸಹಾಯದಿಂದ ವಾಯುಮಂಡಲಕ್ಕಿಂತ ಮೇಲ್ಮಟ್ಟದಲ್ಲಿ ಇಡಲಾಗುತ್ತದೆ. ಅಲ್ಲಿಯೂ ಗ್ಯಾಮಕಿರಣಗಳನ್ನು ನೇರವಾಗಿ ಗುರ್ತಿಸಲಾಗುವುದಿಲ್ಲ. ಅವುಗಳೊಡನೆ ವಸ್ತುವಿನ ಪ್ರಕ್ರಿಯೆಗಳಿಂದಾಗಿ ಬರುವ ಆವಿಷ್ಟ ಕಣಗಳನ್ನೋ ಬೆಳಕಿನ ಕಣಗಳನ್ನೋ ಅಳೆಯಲಾಗುತ್ತದೆ. 0.1 MeV ಯಿಂದ 10 MeV ವರೆಗಿನ ಗ್ಯಾಮಕಿರಣಗಳನ್ನು ಪತ್ತೆಮಾಡಲು ಉಪಯೋಗಿಸುವ ಶೋಧಕಗಳು ಮುಖ್ಯವಾಗಿ ಕಾಂಪ್ಟನ್ ಹಾಗೂ ದ್ಯುತಿವಿದ್ಯುತ್ ಕ್ರಿಯೆಗಳನ್ನು ಬಳಸುತ್ತವೆ. ಉದಾಹರಣೆಗೆ ಪ್ರಸ್ಫುರಣ ಗುಣಕದಲ್ಲಿ (ಸಿಂಟಿಲೇಷನ್ ಕೌಂಟರ್) ವಸ್ತು ಹಾಗೂ ಗ್ಯಾಮಕಿರಣಗಳ ಪರಸ್ಪರ ಕ್ರಿಯೆಯಿಂದ ಬರುವ ಆವಿಷ್ಟ ಕಣಗಳ ಚಲನೆಯಿಂದ ಫೋಟಾನುಗಳನ್ನು (ಬೆಳಕಿನ ಕಣಗಳು) ಚಿಮ್ಮುವ ಒಂದು ವಿಶಿಷ್ಟ ಮಾಧ್ಯಮವನ್ನು ಬಳಸುತ್ತಾರೆ. ಇಂಥ ಮಾಧ್ಯಮಕ್ಕೆ ಪ್ರಸ್ಫುರಣಕ (ಸಿಂಟಿಲೇಟರ್) ಎಂದು ಹೆಸರು. ಇವುಗಳಲ್ಲಿ ಹೆಚ್ಚಿಗೆ ಬಳಸುವ ವಸ್ತುಗಳೆಂದರೆ ಥಾಲಿಯಮ್ ಸಕ್ರಿಯಗೊಳಿಸಿದ (ಆ್ಯಕ್ಟಿವೇಟೆಡ್) ಸೋಡಿಯಮ್ ಅಯೊಡೈಡ್ NaI(TI) ಅಥವಾ ಸೀಸಿಯಮ್ ಅಯೊಡೈಡ್ CsI(TI) ಅಥವಾ ಕೆಲವು ಪ್ಲಾಸ್ಟಿಕ್ ಪ್ರಸ್ಫುರಣಕಗಳು. ಆಗಮಿಸುವ ಫೋಟಾನುಗಳನ್ನು ದ್ಯುತಿವಿದ್ಯುತ್ ಕೋಶಗಳ ಮೂಲಕ ಅಳೆಯಲಾಗುತ್ತದೆ. ಒಂದೇ ನೇರದಲ್ಲಿ ಬರುವ ಗ್ಯಾಮಕಿರಣಗಳನ್ನು ಪತ್ತೆ ಮಾಡಲು ಕಾಂಪ್ಟನ್ ಟೆಲಿಸ್ಕೋಪ್ ಎಂಬ ಉಪಕರಣವನ್ನು ಬಳಸುತ್ತಾರೆ. ಇದರಲ್ಲಿ ಎರಡು ಪ್ರಸ್ಫುರಣ ಶೋಧಕಗಳು ಒಂದರ ಹಿಂದೊಂದು ಇದ್ದು ಅವೆರಡರಲ್ಲಿಯೂ ಏಕಕಾಲದಲ್ಲಿ ಬೀಳುವ ಗ್ಯಾಮಕಿರಣಗಳನ್ನು ಮಾತ್ರ ಪತ್ತೆಮಾಡಲಾಗುತ್ತದೆ.

10 MeV ಯಿಂದ $10^4$ MeV ವರೆಗಿನ ಗ್ಯಾಮಕಿರಣಗಳನ್ನು ಪತ್ತೆ ಮಾಡಲು ಬಳಸುವ ಶೋಧಕಗಳಲ್ಲಿನ ಮುಖ್ಯಕ್ರಿಯೆಯೆಂದರೆ ಎಲೆಕ್ಟ್ರಾನ್–ಪಾಸಿಟ್ರಾನ್ ಯುಗ್ಮೋತ್ಪಾದನೆ (ಪೇರ್ ಪ್ರೊಡಕ್ಷನ್). ಇವುಗಳಲ್ಲಿ ಎಮಲ್ಷನ್, ಕಿಡಿಮಂದಿರ (ಸ್ಪಾರ್ಕ್ ಛೇಂಬರ್) ಹಾಗೂ ಚೆರೆಂಕಾಫ್ ಗುಣಕಗಳು ಮುಖ್ಯವಾದವು. $10^5$ MeV ಗಿಂತ ಹೆಚ್ಚು ಶಕ್ತಿಯುಳ್ಳ ಗ್ಯಾಮ ಕಣಗಳು ವಾಯುಮಂಡಲದಲ್ಲಿ ಶಕ್ತಿಯುತ ಕಣಗಳ ಸರಪಳಿಯನ್ನೋ ಚೆರೆಂಕಾಫ್ ಬೆಳಕನ್ನೋ ಕೊಡುತ್ತವೆ. ನೆಲದ ಮೇಲಿರುವ ಶೋಧಕಗಳಿಂದಲೇ ಇವನ್ನು ಪತ್ತೆಮಾಡಲು ಸಾಧ್ಯ. ಇಂಥ ಗ್ಯಾಮಕಿರಣಗಳ ಅಭಿವಾಹ (ಫ್ಲಕ್ಸ್) ಬೇರೆಯವಕ್ಕಿಂತ ಬಹಳ ಕಡಿಮೆಯಾದರೂ ಬಲೂನುಗಳನ್ನು ಉಪಯೋಗಿಸುವುದಕ್ಕಿಂತ ಸರಳವಾಗಿರುವುದರಿಂದ ಪ್ರಯೋಗಗಳಿಗೆ ಉತ್ತೇಜನ ನೀಡಬಲ್ಲುದಾಗಿದೆ.

ಈಗ ವಿಶ್ವದ ವಿವಿಧ ಭಾಗಗಳಿಂದ ಬರುವ ಗ್ಯಾಮಕಿರಣಗಳ ಸ್ವರೂಪದ ಬಗ್ಗೆ ಎರಡು ಮಾತು. ಸೂರ್ಯನಲ್ಲಿ ಸಾಮಾನ್ಯವಾಗಿ ಉದ್ರೇಕಗಳಲ್ಲಿನ (ಫ್ಲೇರ್ಸ್) ನ್ಯೂಕ್ಲಿಯರ್ ಪ್ರಕ್ರಿಯೆಗಳ ಫಲವಾಗಿ ಮಾತ್ರ ಶಕ್ತಿಯುತ ಗ್ಯಾಮಕಿರಣಗಳು ಉಂಟಾಗುತ್ತವೆ. 0.5 MeV, 2.23 MeV ಮತ್ತಿತರ ಕೆಲವು ಗ್ಯಾಮರೇಖೆಗಳೂ ಇವೆ. ಇವು ಉದ್ರೇಕಸಮಯಗಳಲ್ಲಿ ನಡೆಯುವ ಕ್ರಿಯೆಗಳ ಸೂಚಕಗಳಾಗಿವೆ.

ಸ್ಥಳೀಯ (ಅಂದರೆ ನಮ್ಮ) ಬ್ರಹ್ಮಾಂಡದಿಂದ (ಆಕಾಶಗಂಗೆ) ಬರುವ ಗ್ಯಾಮಕಿರಣಗಳು ಮುಖ್ಯವಾಗಿ ವಿಶ್ವಕಿರಣಗಳು ಅಂತರನಾಕ್ಷತ್ರಿಕ ಮಾಧ್ಯಮಗಳಲ್ಲಿ ಬಿದ್ದಾಗ ಲಭಿಸುವ πಗಳ ಕ್ಷಯದಿಂದಾಗಿ ಬರುತ್ತವೆ. ಅದರ ಕೇಂದ್ರದ ಬಳಿ ಒಂದು ತೀಕ್ಷ್ಣ ಗ್ಯಾಮಾಕರವಿರುವಂತೆ ತೋರುತ್ತದೆ. ಆಕಾಶಗಂಗೆಯ ಗ್ಯಾಮಕಿರಣಗಳ ಅಭಿವಾಹ ಎಲ್ಲ ಕಡೆಗಳಲ್ಲೂ ಒಂದೇ ಆಗಿಲ್ಲದೆ ಅದರ ಸಮತಲದಿಂದ ದೂರ ಹೋದಂತೆ ಅಭಿವಾಹ ಕಡಿಮೆಯಾಗುತ್ತದೆ. ಈ ಗ್ಯಾಮಕಿರಣಗಳ ಶಕ್ತಿ ಹೆಚ್ಚಿದಂತೆಯೂ ಅಭಿವಾಹ ಕಡಿಮೆಯಾಗುತ್ತದೆ [ಒಟ್ಟು ಅಭಿವಾಹ ∝ (ಗ್ಯಾಮಶಕ್ತಿ)– 1.8.

ಅಂತರನಾಕ್ಷತ್ರಿಕ ಮಾಧ್ಯಮದಲ್ಲಿ ಮುಖ್ಯ ಕ್ರಿಯೆಗಳು ಕಾಂಪ್ಟನ್ ಹಾಗೂ ಬ್ರೆಮ್‌ಸ್ಟ್ರಾಲುಂಗ್. ಇವು $10^5$ MeV ವರೆಗಿನ ಗ್ಯಾಮಕಿರಣಗಳಿಗೆ ಕಾರಣವಾಗಿವೆ. 10 MeV ವರೆಗೆ ಕಾಂಪ್ಟನ್ ಕ್ರಿಯೆಯೇ ಪ್ರಧಾನವಾಗಿರುವುದು. ಬ್ರೆಮ್‌ಸ್ಟ್ರಾಲುಂಗ್ ಗ್ಯಾಮಕಿರಣಗಳ ಅಭಿವಾಹ ಎಲ್ಲ ದಿಕ್ಕುಗಳಲ್ಲಿಯೂ ಒಂದೇ ಆಗಿರುವುದಿಲ್ಲ. ಆದರೆ ಕಾಂಪ್ಟನ್ ಗ್ಯಾಮಕಿರಣಗಳ ಅಭಿವಾಹ ಎಲ್ಲ ದಿಕ್ಕುಗಳಲ್ಲಿಯೂ ಹೆಚ್ಚು ಕಡಿಮೆ ಸಮವಾಗಿದ್ದು ಅತಿಹೆಚ್ಚಿನ ಸರಾಸರಿಯುಳ್ಳದ್ದಾಗಿದೆ. ಇವಲ್ಲದೆ $\pi^+$ ಮೆಸಾನಿನ ಕ್ಷಯದಿಂದ ದೊರೆಯುವ ಪಾಸಿಟ್ರಾನುಗಳ ಲಯದಿಂದ ಬರುವ 0.5 MeV ಗ್ಯಾಮರೇಖೆ ಹಾಗೂ $\pi^0$ ಕ್ಷಯದ ಗ್ಯಾಮಕಿರಣಗಳೂ ಇವೆ. 0.5 MeV ಮತ್ತು $\pi^0$ ಗ್ಯಾಮಗಳ ಒಟ್ಟು ಅಭಿವಾಹಗಳ ನಿಷ್ಪತ್ತಿ ಒಂದು ಬಿಲಿಯನ್ (ಸಾವಿರ ಮಿಲಿಯನ್) ವರ್ಷಗಳ ಹಿಂದೆ ವಿಶ್ವಕಿರಣ ತೀವ್ರತೆಯ ಮಾಪನವಾಗಿದೆ (ಗ್ಯಾಮಕಿರಣಗಳ ಮುಖ್ಯ ಕಾರಣ ವಿಶ್ವಕಿರಣಗಳ ಪ್ರಕ್ರಿಯೆಗಳು ಎಂದು ಭಾವಿಸಿದಲ್ಲಿ).

ಅಂತರಬ್ರಹ್ಮಾಂಡ ಮಾಧ್ಯಮದಲ್ಲಿ ಮುಖ್ಯ ಕ್ರಿಯೆಗಳು $\pi^0$ ಕ್ಷಯ, ಬ್ರೆಮ್‌ಸ್ಟ್ರಾಲುಂಗ್ ಮತ್ತು ಕಾಂಪ್ಟನ್ ಕ್ರಿಯೆಗಳು. 10MeVಗಿಂತ ಮುಂದೆ $\pi^0$ ಮತ್ತು ಹೈಪರಾನುಗಳ ಕ್ಷಯಗಳು ಮಾತ್ರ ಭಾಗವಹಿಸುತ್ತವೆ. ಈ ಕ್ರಿಯೆಗಳ ಪರಸ್ಪರ ಪ್ರಾಮುಖ್ಯವೆಷ್ಟು ಎಂಬುದನ್ನು ಹೇಳುವುದು ಬಹಳ ಕಷ್ಟ. ಏಕೆಂದರೆ, ಇದಕ್ಕಾಗಿ ತಿಳಿದಿರಬೇಕಾದ ಅಂತರಬ್ರಹ್ಮಾಂಡ ಮಾಧ್ಯಮದ ವಸ್ತುಸಾಂದ್ರತೆ, ಕಾಂತಕ್ಷೇತ್ರ ಸಾಮರ್ಥ್ಯ ಮುಂತಾದವುಗಳ ಬಗ್ಗೆ ಈಗ ನಮಗಿರುವ ಜ್ಞಾನ ತೀರ ಅಸ್ಪಷ್ಟವಾಗಿದೆ. ಅಂತರಬ್ರಹ್ಮಾಂಡ ಮಾಧ್ಯಮದಿಂದ ಬರುವ ಗ್ಯಾಮಕಿರಣಗಳು ಸಮದೈಶಿಕವಾಗಿವೆ (ಐಸೊಟ್ರಾಪಿಕ್–ಎಲ್ಲ ದಿಕ್ಕುಗಳಲ್ಲೂ ಒಂದೇ ಅಭಿವಾಹವುಳ್ಳವಾಗಿ). ಆಕಾಶಗಂಗೆಯ ಗ್ಯಾಮಕಿರಣಗಳು ಈ ರೀತಿ ಅಲ್ಲವೆಂದು ಈ ಹಿಂದೆಯೇ ತಿಳಿಸಿದೆ. ಆದ್ದರಿಂದ ಸಮದೈಶಿಕತ್ವದ ಮಟ್ಟವನ್ನು ಅಳೆದಲ್ಲಿ ಆಕಾಶಗಂಗೆಯ ಪಾತ್ರವನ್ನು ಬೇರ್ಪಡಿಸಿ ಅಂತರಬ್ರಹ್ಮಾಂಡ ಮಾಧ್ಯಮದ ಶಕ್ತಿಯುತ ಕಣಗಳ ಸಂಖ್ಯಾಸಾಂದ್ರತೆಯ ಬಗ್ಗೆ ತಿಳಿಯಲು ಸಾಧ್ಯ.

ಇವಲ್ಲದೆ ವಿಶ್ವದ ಕೆಲವು ನಿರ್ದಿಷ್ಟ ಆಕಾಶಕಾಯಗಳಿಂದಲೂ ಗ್ಯಾಮಕಿರಣಗಳು ಬರುತ್ತಿವೆಯೆಂದು ಈಚೆಗೆ ತಿಳಿದುಬಂದಿದೆ. ಈವರೆಗೆ (1973) ದೊರೆತಿರುವ ಇಂಥ ಗ್ಯಾಮನಕ್ಷತ್ರಗಳು ಬಹಳ ಕಡಿಮೆ. ತಿಳಿದಿರುವ ಐದಾರು ಗ್ಯಾಮ ನಕ್ಷತ್ರಗಳಲ್ಲೂ ಒಂದೆರಡರ ನೈಜತೆಯ ಬಗ್ಗೆ ಇನ್ನೂ ಅನುಮಾನವೇ ಉಂಟು. ಒಂದು ಬಹು ಚಂಚಲವಾಗಿದೆ. ಅಂದರೆ ಇದರ ಅಭಿವಾಹ (ಬರೀ ಗ್ಯಾಮಕಿರಣಗಳಲ್ಲೇ ಅಲ್ಲದೆ ರೇಡಿಯೋ ಮತ್ತು ಎಕ್ಸ್‌ಕಿರಣಗಳಲ್ಲಿ ಕೂಡ) ಸದಾ ಒಂದೇ ಆಗಿರದೆ ಅನಿರ್ದಿಷ್ಟ ಗತಿಯಲ್ಲಿ ಬದಲಿಸುತ್ತಿರುತ್ತದೆ. ಬಹುಶಃ ಈ ಗ್ಯಾಮಕಿರಣಗಳು ಸೂರ್ಯನ ಉದ್ರೇಕಗಳನ್ನು ಹೋಲುವ ಶಕ್ತಿಯುತ ಘಟನೆಗಳಲ್ಲಿ ಉದ್ಭವಿಸಬಹುದೆಂದು ಹಲವರು ತಿಳಿದಿದ್ದಾರೆ. ಅಸಾಧಾರಣ ಶಕ್ತಿಯುತವಾದ ಕ್ವೇಸಾರು (**ನೋಡಿ**)ಗಳಂಥ ಆಕಾಶಕಾಯಗಳು 1–1000 MeV ವರೆಗಿನ ಗ್ಯಾಮಕಿರಣಗಳನ್ನು ಆಗಾಗ್ಗೆ ಚಿಮ್ಮಬಲ್ಲವಾಗಿವೆಯೆಂದು ಇವರ ನಂಬಿಕೆ. ಅಂದರೆ ಎಲ್ಲ ಗ್ಯಾಮನಕ್ಷತ್ರಗಳೂ ರೇಡಿಯೋ ಮತ್ತು/ಅಥವಾ ಎಕ್ಸ್‌ಕಿರಣ ಆಕರಗಳಾಗಬೇಕೆಂಬ ನಿಯಮವೇನೂ ಇಲ್ಲ. ಬರಿಯ ಗ್ಯಾಮಕಿರಣಗಳಲ್ಲಿಯೇ ಪ್ರಭಾವಶಾಲಿಯಾಗಿರಬಹುದಾದ ಗ್ಯಾಮನಕ್ಷತ್ರಗಳಲ್ಲೂ ಇರಬಹುದೆಂಬುದಕ್ಕೆ ಆಧಾರ ಉಂಟು. ಕ್ರ್ಯಾಬ್ ನೆಬ್ಯುಲದ ಪ್ರದೇಶದಲ್ಲಿ ಒಂದೇ ಗ್ಯಾಮಪಲ್ಸಾರ್ ಇದೆಯೆಂದು ತಿಳಿದಿದೆ. ನ್ಯೂಟ್ರಾನ್ ನಕ್ಷತ್ರಗಳಿಗೂ ಕೆಲವು ಗ್ಯಾಮನಕ್ಷತ್ರಗಳಿಗೂ ಕೆಲವು ಸಂಬಂಧ ಇರಬಹುದೆಂಬ ಶಂಕೆಯೂ ಉಂಟು. ಕೇವಲ ಎರಡು ವರ್ಷಗಳಿಂದ ಅದೂ ಐದಾರು ಮಾತ್ರ ಗ್ಯಾಮನಕ್ಷತ್ರಗಳನ್ನು ಕಂಡಿರುವಾಗ ಇವುಗಳ ಬಗ್ಗೆ ಸಮರ್ಪಕ ಸಿದ್ಧಾಂತಗಳಿಲ್ಲದಿರುವುದು ಸಹಜವೇ ಸರಿ.

ಈಗಿರುವಂಥ ಅಸ್ಪಷ್ಟ ಮಾಹಿತಿಗಳಲ್ಲೇ ಗ್ಯಾಮಕಿರಣ ಖಗೋಳಶಾಸ್ತ್ರ ಕೆಲವು ವಿಶ್ವವಿಜ್ಞಾನ ಸಮಸ್ಯೆಗಳನ್ನು ಎದುರಿಸಲು ಸಹಾಯಮಾಡಿದೆಯೆಂಬ ಅಂಶ ಗಮನಾರ್ಹವಾಗಿದೆ. ಫ್ರೆಡ್‌ಹಾಯ್ಲನ ಸ್ತಿಮಿತ ವಿಶ್ವವಾದದ (ಸ್ಟೆಡಿ ಸ್ಟೇಟ್ ಥಿಯರಿ) ಒಂದು ಮುಖ್ಯಾಂಶವೆಂದರೆ ದ್ರವ್ಯ ಮತ್ತು ಪ್ರತಿದ್ರವ್ಯಗಳು ಏಕಕಾಲದಲ್ಲಿ ಸೃಷ್ಟಿಸಲ್ಪಡುತ್ತವೆಂಬುದು. ಇದಕ್ಕೆ ಈಗ ಬಂದಿರುವ ಗ್ಯಾಮಕಿರಣಗಳ ಮಾಹಿತಿಗಳು ಬೆಂಬಲ ನೀಡುವುದಿಲ್ಲ. ವಿಶ್ವದಲ್ಲಿ ಪ್ರತಿದ್ರವ್ಯ (ಆ್ಯಂಟಿಮ್ಯಾಟರ್) ಇರುವುದೇ ಆದಲ್ಲಿ ಅದು ದ್ರವ್ಯದಿಂದ ಬೇರ್ಪಡಿಸಲ್ಪಟ್ಟಿದ್ದು ಇವೆರಡರ ಲಯದಿಂದ ಗ್ಯಾಮಕಿರಣಗಳು

ಬರದಂತಿರಬೇಕೆಂದು ಇವು ತಿಳಿಸುತ್ತವೆ. ಇದಲ್ಲದೆ ಅಂತರಬ್ರಹ್ಮಾಂಡ ಮಾಧ್ಯಮದಲ್ಲಿನ ಎಲೆಕ್ಟ್ರಾನುಗಳ ಸಂಖ್ಯಾಸಾಂದ್ರತೆ ಆಕಾಶಗಂಗೆಯದಕ್ಕಿಂತ ಕಡೆಯ ಪಕ್ಷ ಹತ್ತರಷ್ಟಾದರೂ ಇರಬೇಕೆಂದು ಈ ಮಾಹಿತಿಗಳು ತಿಳಿಸುತ್ತವೆ.

ಇತ್ತೀಚಿನ ವರ್ಷಗಳಲ್ಲಿ ಬಾಹ್ಯಕಾಶ ವೀಕ್ಷಣಾಲಯಗಳು ಈ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿವೆ. ವಿಶ್ವದ ಮೂಲೆಯಲ್ಲೆಲ್ಲೋ ಆಗುವ ಗ್ಯಾಮಾ ಸ್ಫೋಟಗಳನ್ನು ಗುರುತಿಸಲು ಸಾಧ್ಯವಾಗಿದೆ. ಕ್ಷಣಿಕವಾದ ಈ ವಿದ್ಯಮಾನಗಳು ಕೆಲವೇ ನಿಮಿಷಗಳಲ್ಲಿ ಅಡಗಿ ಹೋಗುವುವಾದರೂ ಕೆಲವು ಸ್ವಯಂಚಾಲಿತ ರೊಬೊಟಿಕ್ ದೂರದರ್ಶಕಗಳ ಸಹಾಯದಿಂದ ಇಂತಹ ಗ್ಯಾಮಾ ರೇ ಬರ್ಸ್ಟ್‌ಗಳನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ. ಈ ಪ್ರಕ್ರಿಯೆ ಎರಡು ನ್ಯೂಟ್ರಾನ್ ನಕ್ಷತ್ರಗಳ ವಿಲೀನವೇ ಅಥವಾ ಕಪ್ಪುಕುಳಿಯ ಸೃಷ್ಟಿಯೇ ಎಂಬ ಬಗ್ಗೆ ಸಿದ್ಧಾಂತಗಳು ರೂಪುಗೊಳ್ಳುತ್ತಿವೆ.

ಈಗ ಗ್ಯಾಮಕಿರಣ ಖಗೋಳಶಾಸ್ತ್ರದ ಮುಂದಿರುವ ಸಮಸ್ಯೆಗಳು ಅನೇಕವಾಗಿವೆ. ಬ್ರಹ್ಮಾಂಡ ಗ್ಯಾಮಾಭಿವಾಹದ ಮೂಲ ಇನ್ನೂ ಒಂದು ಒಗಟೇ ಆಗಿದೆ. ಇದು ಅಂತರನಾಕ್ಷತ್ರಿಕ ಮಾಧ್ಯಮದಲ್ಲಿನ ಶಕ್ತಿಯುತ ಕಣಗಳ ಪರಸ್ಪರ ಕ್ರಿಯೆಗಳಿಂದ ಜನಿಸಿದ್ದು, ಚದರಿಕೊಂಡಿದೆಯೋ ಅಥವಾ ಈಗಿನ ಉಪಕರಣಗಳಿಂದ ವಿಂಗಡಿಸಲಾಗದ ವಿಭಿನ್ನ ಆಕರಗಳ ಒಕ್ಕೂಟವೋ ಎಂಬುದೊಂದು ದೊಡ್ಡ ಪ್ರಶ್ನೆ. ಮತ್ತೊಂದು ಪ್ರಶ್ನೆ ಗ್ಯಾಮನಕ್ಷತ್ರಗಳನ್ನು ಕುರಿತದ್ದು–ಇವು ಆಕಾಶದಲ್ಲಿ ಎಷ್ಟಿವೆ? ಇವು ಕ್ಷಣಿಕವೆ? ಅಥವಾ ಆಕಾಶಗಂಗೆಯಲ್ಲೇ ನಡೆಯುತ್ತಿರುವ ಕ್ರಿಯೆಗಳೆ? ಪಲ್ಸಾರುಗಳು ಗ್ಯಾಮಕಿರಣಜನಕಗಳೆ? ಇದಕ್ಕಿಂತ ಹೆಚ್ಚು ಮನಸೆಳೆಯುವ ಪ್ರಶ್ನೆಯೆಂದರೆ ವಿಸರಿತ (ಡಿಫ್ಯೂಸ್ಡ್) ಗ್ಯಾಮ ಪ್ರಸರಣದ ಮೂಲ. ಇದು ವಿಶ್ವದ ಬೆಳೆವಣಿಗೆಯ ಮೊದಲ ಹಂತಗಳ ಅವಶೇಷವೆ?

ಇವೆಲ್ಲಕ್ಕೂ ಉತ್ತರ ನೀಡಲು ಇನ್ನೂ ಹೆಚ್ಚು ಹೆಚ್ಚು ಗ್ಯಾಮಕಿರಣಗಳ ಅಧ್ಯಯನ ಆಗಬೇಕು. ಹೆಚ್ಚು ಮಾಹಿತಿ ದೊರೆಯಬೇಕು. ವಿಶ್ವದಲ್ಲಿ ಶಕ್ತಿಯುತ ಕಣಗಳ ಹಾಗೂ ವಿಸರಣೆಯ ವಿಂಗಡಣೆ ಮತ್ತು ಸಾಂದ್ರತೆಗಳ ಬಗೆಗಿನ ಪ್ರಶ್ನೆಗಳ ಉತ್ತರ ಕೇವಲ ಗ್ಯಾಮಕಿರಣ ಖಗೋಳಶಾಸ್ತ್ರದ ಭವಿಷ್ಯದಲ್ಲಡಗಿರಬಹುದೆಂದು ಅನೇಕ ವಿಜ್ಞಾನಿಗಳ ಮತ. ಇನ್ನೂ ಪ್ರಯೋಗಗಳು ಕಠಿಣವಾಗಿಯೇ ಇವೆ. ಪ್ರಯೋಗ ಸಾಮಗ್ರಿಗಳಲ್ಲಿ ಹೆಚ್ಚಿನ ಬೆಳೆವಣಿಗೆ ನಡೆದು ಹೆಚ್ಚು ಹೆಚ್ಚು ಮಾಹಿತಿಗಳು ದೊರೆತಂತೆ ಈ ಹೊಸ ವಿಜ್ಞಾನ ಬಹಳ ಫಲಪ್ರದವಾಗುವುದರಲ್ಲಿ ಸಂಶಯವಿಲ್ಲ. (ಸಿ.ಆರ್.ಎಸ್.)

**ಗ್ಯಾಮಕಿರಣಗಳು :** ಪರಮಾಣು ನ್ಯೂಕ್ಲಿಯಗಳು ಉದ್ದೀಪ್ತಸ್ಥಿತಿಯಿಂದ ಕೆಳಗಿನ ಉದ್ದೀಪ್ತ ಸ್ಥಿತಿಗಳಿಗೆ ಅಥವಾ ಭೂಸ್ಥಿತಿಗೆ ಬರುವಾಗ ಉತ್ಸರ್ಜಿಸುವ (ಎಮಿಟ್) ವಿದ್ಯುತ್ಕಾಂತ ವಿಸರಣ. ಆಲ್ಫ ಮತ್ತು ಬೀಟ ವಿಸರಣ, ನ್ಯೂಕ್ಲಿಯ ಕ್ರಿಯೆ, ವಿದಳನ ಮುಂತಾದ ವಿದ್ಯಮಾನಗಳ ಪರಿಣಾಮವಾಗಿ ನ್ಯೂಕ್ಲಿಯಗಳು ಉದ್ದೀಪ್ತ ಸ್ಥಿತಿಯನ್ನು ಹೊಂದಬಹುದು. ಆಗ ಅವು ಗ್ಯಾಮಕಿರಣಗಳನ್ನು ಉತ್ಸರ್ಜಿಸುವುದರ ಜೊತೆಗೆ ಎಲೆಕ್ಟ್ರಾನುಗಳನ್ನು ಉತ್ಸರ್ಜಿಸಿಯೂ ತಮ್ಮ ಉದ್ದೀಪನ ಶಕ್ತಿಯನ್ನು ಕಳೆದುಕೊಳ್ಳಬಹುದು. ಈ ಕ್ರಿಯೆಗೆ ಒಳಮಾರ್ಪಾಡು ಎಂದು ಹೆಸರು.

ಸಾಮಾನ್ಯವಾಗಿ ಉದ್ದೀಪನಕ್ಕೆ ಕಾರಣವಾದ ಕ್ರಿಯೆ ನಡೆದ $10^{-12}$ ಸೆಕೆಂಡಿಗಿಂತ ಕಡಿಮೆ ಕಾಲದಲ್ಲಿ ನ್ಯೂಕ್ಲಿಯಗಳು ಗ್ಯಾಮಕಿರಣವನ್ನು ಹೊರದೂಡುತ್ತವೆ. ಇದಕ್ಕೆ ಅಪವಾದವಾಗಿ $10^{-8}$ ಸೆಕೆಂಡಿನಿಂದ ಕೆಲವು ತಿಂಗಳುಗಳ ವರೆಗಿನ ಉದ್ದೀಪನ ಸ್ಥಿತಿಯಲ್ಲಿರುವ ನ್ಯೂಕ್ಲಿಯಗಳೂ ಉಂಟು. ಅಂಥವುಗಳಿಗೆ ನ್ಯೂಕ್ಲಿಯ ಐಸೊಮರುಗಳು ಎಂದು ಹೆಸರು.

ಉದ್ದೀಪ್ತ ನ್ಯೂಕ್ಲಿಯಗಳು ಹೊರದೂಡುವ ವಿದ್ಯುತ್ಕಾಂತ ವಿಸರಣವನ್ನಲ್ಲದೆ ವೇಗೋತ್ಕರ್ಷ ಇಲ್ಲವೆ ವೇಗಾಪಕರ್ಷಕ್ಕೊಳಗಾದ ಎಲೆಕ್ಟ್ರಾನು ಮತ್ತು ಇತರ ವಿದ್ಯುದಾವಿಷ್ಟ ಕಣಗಳು ಹೊರದೂಡುವ ಬ್ರೆಮ್‌ಸ್ಟ್ರಾಲುಂಗನ್ನೂ ಗ್ಯಾಮಕಿರಣಗಳೆಂದು ಕರೆಯುವುದು ರೂಢಿ (**ನೋಡಿ–ಬ್ರೆಮ್‌ಸ್ಟ್ರಾಲುಂಗ್**). ನ್ಯೂಕ್ಲಿಯ ಗ್ಯಾಮಕಿರಣಗಳ ಶಕ್ತಿ ಸುಮಾರು 10 MeV ವರೆಗೂ ಇರಬಲ್ಲದು. ಆದರೆ ಬ್ರೆಮ್‌ಸ್ಟ್ರಾಲುಂಗ್ 100 MeV ಗಳಿಗಿಂತ ಹೆಚ್ಚು ಶಕ್ತಿಯನ್ನು ಹೊಂದಿರುವುದೂ ಸಾಧ್ಯ.

ಗ್ಯಾಮಕಿರಣಗಳು ಫೋಟಾನುಗಳ ಸಮೂಹ. ಒಂದೊಂದು ಗ್ಯಾಮ ಫೋಟಾನಿಗೂ ಸಂಬಂಧಿಸಿದಂತೆ ಅದರ ಅಲೆಯುದ್ದ λ, ಆವರ್ತಾಂಕ ν ಮತ್ತು ಶಕ್ತಿ Eγ ಗಳನ್ನು ಕುರಿತು ಮಾತಾಡುತ್ತೇವೆ. ಇವುಗಳಿಗಿರುವ ಸಂಬಂಧ ಹೀಗಿದೆ:

$$E\gamma = \frac{hc}{\lambda}$$

$$= h\nu \qquad \ldots(1)$$

ಇಲ್ಲಿ $c$ ಎಂಬುದು ನಿರ್ವಾತದಲ್ಲಿ ಬೆಳಕಿನ ವೇಗವನ್ನೂ, $h$ ಎಂಬುದು ಪ್ಲಾಂಕನ ನಿಯತಾಂಕವನ್ನೂ ಪ್ರತಿನಿಧಿಸುತ್ತವೆ.

ಗ್ಯಾಮಕಿರಣಗಳ ಹೀರಿಕೆ : ಗ್ಯಾಮಕಿರಣಗಳ ಹೀರಿಕೆಗೆ ಮೂರು ಕ್ರಿಯೆಗಳು ಮುಖ್ಯವಾದವು– ದ್ಯುತಿವಿದ್ಯುತ್ ಪರಿಣಾಮ, ಕಾಂಪ್ಟನ್ ಪರಿಣಾಮ ಮತ್ತು ಅವಳಿ ಸೃಷ್ಟಿ. ದ್ಯುತಿವಿದ್ಯುತ್ ಪರಿಣಾಮದಲ್ಲಿ ಒಂದು ಬಂಧಿತ ಎಲೆಕ್ಟ್ರಾನ್ ಗ್ಯಾಮ ಫೋಟಾನನ್ನು ಹೀರಿಕೊಂಡು ಬಿಡುಗಡೆ ಹೊಂದಿ ಹೊರಬರುತ್ತದೆ. $E\gamma, E_{e-}$ ಮತ್ತು $E_B$ ಗಳು ಅನುಕ್ರಮವಾಗಿ ಫೋಟಾನಿನ ಶಕ್ತಿ, ಬಿಡುಗಡೆ ಹೊಂದಿದ ಎಲೆಕ್ಟ್ರಾನಿನ ಶಕ್ತಿ ಮತ್ತು ಪರಮಾಣುವಿನಲ್ಲಿ ಎಲೆಕ್ಟ್ರಾನಿನ ಬಂಧನಶಕ್ತಿ ಆಗಿದ್ದರೆ ಅವುಗಳಿಗಿರುವ ಸಂಬಂಧವನ್ನು

$$E_{e-} = E_\gamma - E_B \qquad \ldots(2)$$

ಎಂದು ಬರೆಯಬಹುದು.

ಕಾಂಪ್ಟನ್ ಪರಿಣಾಮದಲ್ಲಿ ಫೋಟಾನ್ ನಿಶ್ಚಲವಾಗಿರುವ ಅನಿರ್ಬಂಧಿತ ಎಲೆಕ್ಟ್ರಾನಿಗೆ ಡಿಕ್ಕಿ ಹೊಡೆದು ತನ್ನ ಶಕ್ತಿಯ ಸ್ವಲ್ಪಭಾಗವನ್ನು ಕಳೆದುಕೊಳ್ಳುತ್ತದೆ. $E\gamma$, $E\gamma'$ ಮತ್ತು $\phi$ಗಳು ಅನುಕ್ರಮವಾಗಿ ಪತನ ಫೋಟಾನಿನ ಶಕ್ತಿ, ಚದರಿದ ಫೋಟನಿನ ಶಕ್ತಿ ಮತ್ತು ಪತನ ಫೋಟಾನು ಚಲಿಸುತ್ತಿದ್ದ ಮತ್ತು ಚದರಿದ ಫೋಟಾನು ಚಲಿಸುವ ನೇರಗಳ ನಡುವಿನ ಕೋನವಾಗಿದ್ದರೆ ಆಗ

$$E_\gamma' = \frac{E_\gamma}{1 + m_0c^2 / E_\gamma (1 - \cos\varphi)} \qquad \ldots(3)$$

ಎಂದು ಬರೆಯಬಹುದು. ಇಲ್ಲಿ $m_0$ ಎಲೆಕ್ಟ್ರಾನಿನ ನಿಶ್ಚಲ ದ್ರವ್ಯರಾಶಿ. $E_{e-}$ ಜಿಗಿದ ಎಲೆಕ್ಟ್ರಾನಿನ ಶಕ್ತಿಯಾಗಿದ್ದರೆ ಆಗ

$$E_{e-} = E_\gamma \cdot \frac{\alpha(1 - \cos\phi)}{1 + \alpha(1 - \cos\phi)} \qquad \ldots(4)$$

ಎಂದು ಬರೆಯಬಹುದು. ಇಲ್ಲಿ $\alpha = E_\gamma / m_0c^2$

ಅವಳಿ ಸೃಷ್ಟಿಯಲ್ಲಿ ಒಂದು ಫೋಟಾನು ಅದೃಶ್ಯವಾಗಿ ಒಂದು ಎಲೆಕ್ಟ್ರಾನು ಮತ್ತು ಒಂದು ಪಾಸಿಟ್ರಾನು ಸೃಷ್ಟಿಯಾಗುತ್ತದೆ. $E_{e-}$ ಮತ್ತು $E_{e+}$ ಅನುಕ್ರಮವಾಗಿ ಎಲೆಕ್ಟ್ರಾನಿನ ಮತ್ತು ಪಾಸಿಟ್ರಾನಿನ ಚಲನಶಕ್ತಿಗಳಾದರೆ

$$E_\gamma = E_{e-} + E_{e+} + 2m_0c^2 \qquad \ldots(5)$$

ಎಂದು ಬರೆಯಬಹುದು.



**ಚಿತ್ರ 1. ಗ್ಯಾಮಕಿರಣಗಳ ಕ್ಷೀಣತಾಂಕವನ್ನು ಕಂಡುಹಿಡಿಯಲು ಬಳಸುವ ಉಪಕರಣ ವ್ಯವಸ್ಥೆ**

ಪರಮಾಣುಗಳಲ್ಲಿ ಬಂಧಿತವಾಗಿರುವ ಎಲೆಕ್ಟ್ರಾನುಗಳು ಕೂಡ ಗ್ಯಾಮಕಿರಣಗಳನ್ನು ಚದರಿಸುತ್ತವೆ. ಈ ಕ್ರಿಯೆಗೆ ರ್‍ಯಾಲೆ ಚದರಿಕೆ ಎಂದು ಹೆಸರು. ಇದರಿಂದ ಗ್ಯಾಮ ಕಿರಣದ ಶಕ್ತಿ ಕುಂಠಿತವಾಗುವುದಿಲ್ಲ. ಕಾಂಪ್ಟನ್ ಪರಿಣಾಮದಲ್ಲಿ ಎಲೆಕ್ಟ್ರಾನಿನ ಬಂಧನವನ್ನು ಉಪೇಕ್ಷಿಸುತ್ತೇವೆಂಬುದನ್ನು ಗಮನಿಸಬೇಕು. ನ್ಯೂಕ್ಲಿಯಗಳೂ ಗ್ಯಾಮ ಕಿರಣಗಳನ್ನು ಚದರಿಸುತ್ತವೆ. ಈ ಕ್ರಿಯೆಗೆ ನ್ಯೂಕ್ಲಿಯ ಥಾಮ್ಸನ್ ಚದರಿಕೆ ಎಂದು ಹೆಸರು. ಥಾಮ್ಸನ್ ಚದರಿಕೆಯಲ್ಲಿ ಕೂಡ ಗ್ಯಾಮ ಕಿರಣಗಳ ಶಕ್ತಿ ಕುಂದುವುದಿಲ್ಲ. ಗ್ಯಾಮಕಿರಣಗಳ ಚದರಿಕೆಗೆ ಸಂಬಂಧಪಟ್ಟಂತೆ ಮಾತಾಡುವಾಗ ಡೆಲ್ಬ್ರುಕ್ ಚದರಿಕೆ ಮತ್ತು ನ್ಯೂಕ್ಲಿಯ ಅನುರಣನ ಚದರಿಕೆಗಳನ್ನು ಕುರಿತು ಕೂಡ ವಿವೇಚಿಸುತ್ತೇವೆ. ಆದರೆ ಹೀರಿಕೆಯಲ್ಲಿ ಈ ಚದರಿಕೆಗಳ ಪ್ರಭಾವವೇನೂ ಇಲ್ಲವೆಂದೇ ಹೇಳಬಹುದು.

ಚೆನ್ನಾಗಿ ಸಮಾಂತರಕರಿಸಲ್ಪಟ್ಟ (ಕಾಲಿಮೇಟೆಡ್) ಗ್ಯಾಮಕಿರಣಗಳ ದೂಲ ಪದಾರ್ಥದ ಮೂಲಕ ಹಾಯುವಾಗ ಘಾತೀಯ ಹೀರಿಕೆಗೊಳಗಾಗುತ್ತದೆ. $I_0$ ಆರಂಭ ತೀವ್ರತೆಯುಳ್ಳ ಗ್ಯಾಮಕಿರಣಗಳ ದೂಲವೊಂದು x ದಪ್ಪವುಳ್ಳ ಯಾವುದಾದರೂ ಒಂದು ವಸ್ತುವಿನ ಮೂಲಕ ಹಾಯ್ದಮೇಲೆ ಅದರ ತೀವ್ರತೆ I ಆಗುತ್ತದೆಂದುಕೊಳ್ಳೋಣ.

ಆಗ

$$I = I_0 \exp(-\mu x) \qquad \ldots(6)$$

ಎಂದು ಬರೆಯಬಹುದು. ಇಲ್ಲಿ $\mu$ ಒಂದು ನಿಯತಾಂಕ. ಇದಕ್ಕೆ ರೇಖೀಯ ಕ್ಷೀಣನಾಂಕ ಎಂದು ಹೆಸರು. ಇದರ ಮೌಲ್ಯ ವಸ್ತುವಿನ ಗುಣ ಮತ್ತು ಗ್ಯಾಮಕಿರಣದ ಶಕ್ತಿಗಳನ್ನು ಅವಲಂಬಿಸಿದೆ. $\mu$ ವನ್ನು ಕಂಡು ಹಿಡಿಯಲು ಉಪಯೋಗಿಸುವ ವ್ಯವಸ್ಥೆಯನ್ನು ಚಿತ್ರ(1)ರಲ್ಲಿ ತೋರಿಸಿದೆ. ಪ್ರಯೋಗದಿಂದ ವಸ್ತುವಿನ ಬೇರೆ ಬೇರೆ ದಪ್ಪಕ್ಕೆ ಸಂಬಂಧಪಟ್ಟಂತೆ $I$ ಯನ್ನು ಕಂಡುಹಿಡಿದು log I ಯನ್ನು $x$ ಎದುರು ಆಲೇಖಿಸಿ ತತ್ಸಂಬಂಧ ವಾಗಿ ಉಂಟಾಗುವ ರೇಖೆಯ ಓಟವನ್ನು ಲೆಕ್ಕಿಸಿ $\mu$ ವನ್ನು ನಿರ್ಧರಿಸಬಹುದು. ಇಂಥ ಒಂದು ನಕ್ಷೆಯನ್ನು ಚಿತ್ರ(2)ರಲ್ಲಿ ಕಾಣಿಸಿದೆ.




ಚಿತ್ರ 2

ಗ್ಯಾಮಕಿರಣಗಳ ಶಕ್ತಿಯ ಅಳತೆ: ಗ್ಯಾಮಕಿರಣಗಳ ಶಕ್ತಿ ಯೆಂದರೆ ಗ್ಯಾಮ ಫೋಟಾನಿನ ಶಕ್ತಿ ಎಂದರ್ಥ. ಇದನ್ನು ಅಳೆಯುವ ಕೆಲವು ವಿಧಾನಗಳನ್ನು ಮುಂದೆ ವಿವರಿಸಿದೆ.

1. ಗ್ಯಾಮಕಿರಣಗಳ ರೋಹಿತಮಾಪಕ : ಸ್ಫಟಿಕ ಜಾಲಂಧ್ರಗಳ ನೆರವಿನಿಂದ 2. MeV ವರೆಗಿನ ಗ್ಯಾಮಕಿರಣಗಳ ಅಲೆಯುದ್ದವನ್ನು ಅಳೆಯಬಹುದು. ಡೂಮಾಂಡ್ ಮತ್ತು ಅವನ ಸಂಗಡಿಗರು ಈ ಕಾರ್ಯಕ್ಕೆ ಬೇಕಾಗುವ ರೋಹಿತಮಾಪಕ ವೊಂದನ್ನು ಸಂಯೋಜಿಸಿದ್ದಾರೆ. ಡೊಂಕಿಸಿದ ಸ್ಫಟಿಕವನ್ನು ಉಪಯೋಗಿಸುವುದರಿಂದ ಈ ಉಪಕರಣಕ್ಕೆ ಡೊಂಕಿಸಿದ ಸ್ಫಟಿಕಮಾಪಕವೆಂದು ಹೆಸರು ಬಂದಿದೆ. ಇದನ್ನು ಚಿತ್ರ(3)ಲ್ಲಿ ಕಾಣಿಸಿದೆ.




ಚಿತ್ರ 3. ಡೊಂಕಿಸಿದ ಸ್ಫಟಿಕರೋಹಿತ ಮಾಪಕ

$R$ ಎಂಬಲ್ಲಿ ಗ್ಯಾಮಕಿರಣದ ಆಕರವಿದ್ದರೆ ಸ್ಫಟಿಕದಲ್ಲಿ ಬ್ರ್ಯಾಗ್ ಪ್ರತಿಫಲನ ಹೊಂದಿದ ಕಿರಣಗಳು ಸಮಾಂತರಕಾರಕದ (ಕಾಲಿಮೇಟರ್) $A$ ಮೂಲಕ ಹಾಯ್ದು ದರ್ಶಕ $D$ ಯನ್ನು ತಲಪುತ್ತವೆ. ಇವು ತೋರ್ಕೆ ಸಂಗಮಬಿಂದು $V$ ಯಿಂದ ಬಂದಂತೆ ಕಾಣುತ್ತದೆ. $O$ ಕೇಂದ್ರವಾಗಿ ಸ್ಫಟಿಕದ ವಕ್ರತಾತ್ರಿಜ್ಯದ ಅರ್ಧದಷ್ಟು ತ್ರಿಜ್ಯವಿರುವಂತೆ ರಚಿಸಿರುವ ವೃತ್ತದ ಮೇಲೆ $R, V$ ಮತ್ತು $B$ ಗಳು ಇವೆ. ಈ ವೃತ್ತಕ್ಕೆ ಸಂಗಮವೃತ್ತ ಎಂದು ಹೆಸರು. ಗ್ಯಾಮಕಿರಣದ ಆಕರವನ್ನು ಇದರ ಮೇಲೆ ಸರಿಸುತ್ತ ಹೋದಂತೆ ಬ್ರ್ಯಾಗ್ ನಿಯಮಕ್ಕೆ ಅನುಗುಣವಾಗಿರುವ ಸ್ಥಾನಕ್ಕೆ ಆಕರ ಬಂದಾಗ ದರ್ಶಕದ ಸೂಚ್ಯಂಕ (ರೀಡಿಂಗ್) ಗರಿಷ್ಠವಾಗುತ್ತದೆ. ಪ್ರತಿಫಲಿಸುವ ತಲ ಮತ್ತು ಕಿರಣದ ನಡುವಿನ ಕೋನ $\theta$ ವನ್ನು ಇದರಿಂದ ಅಳೆಯಬಹುದು. ಅನಂತರ ಸಮೀಕರಣ

$$2d \sin \theta = n\lambda \qquad \ldots(7)$$

ಇದರಿಂದ ಅಲೆಯುದ್ದ ಘವನ್ನು ಲೆಕ್ಕಿಸಬಹುದು. ಇಲ್ಲಿ $d$ ಸ್ಫಟಿಕದ ಲ್ಯಾಟಿಸ್ ನಿಯತಾಂಕ ಮತ್ತು $n$ ಪ್ರತಿಫಲನದ ವರ್ಗ. $\lambda$ ತಿಳಿದರೆ ಸಮೀಕರಣ (1)ರಿಂದ ಗ್ಯಾಮಕಿರಣದ ಶಕ್ತಿಯನ್ನು ಗಣಿಸಬಹುದು. ಈ ಪ್ರಯೋಗದ ಯಶಸ್ಸಿಗೆ ಹೆಚ್ಚು ತ್ರಾಣದ ಆಕರ ಬೇಕು. ಅಂಥ ಆಕರ ದೊರೆತರೆ ನಿಖರವಾದ ಅಳತೆ ಮಾಡುವುದು ಸುಲಭವಾಗುತ್ತದೆ.

(2) ಅವಳಿ ರೋಹಿತಮಾಪಕ : ಅವಳಿಗಳ ಒಟ್ಟು ಶಕ್ತಿಗೂ ಗ್ಯಾಮ ಫೋಟಾನಿನ ಶಕ್ತಿಗೂ ಇರುವ ಸಂಬಂಧವನ್ನು ಸಮೀಕರಣ (5) ತಿಳಿಸುತ್ತದೆ. ಅವಳಿಗಳು ಗ್ಯಾಮಫೋಟಾನ್ ಚಲಿಸುವ ದಿಕ್ಕಿನಲ್ಲೇ ಚಲಿಸುತ್ತವೆ. ಅವನ್ನು ಕಾಂತಕ್ಷೇತ್ರದಲ್ಲಿ ಬಾಗಿಸಿ ಸಮಪಾತವಾಗಿ ಪತ್ತೆಹಚ್ಚಿದರೆ ಗ್ಯಾಮ ಫೋಟಾನಿನ ಶಕ್ತಿಯನ್ನು ಗಣನೆ ಮಾಡಬಹುದು.




ಚಿತ್ರ 4. ಅವಳಿರೋಹಿತಮಾಪಕದ ಲಾಕ್ಷಣಿಕ ನಕಾಸೆ

ಈ ಕೆಲಸಕ್ಕೆ ಬಳಸುವ ಉಪಕರಣಕ್ಕೆ ಅವಳಿರೋಹಿತಮಾಪಕ ಎಂದು ಹೆಸರು. ಇದನ್ನು ಚಿತ್ರದಲ್ಲಿ ಕಾಣಿಸಿದೆ. ವಿಸಾರಕ ರೇಕಿನಲ್ಲಿ ಗ್ಯಾಮ ಫೋಟಾನಿನಿಂದ ಹುಟ್ಟಿದ ಎಲೆಕ್ಟ್ರಾನ್ ಮತ್ತು ಪಾಸಿಟ್ರಾನುಗಳು ವಿರುದ್ಧ ದಿಕ್ಕಿನಲ್ಲಿ ಬಾಗಿ ದರ್ಶಕಗಳನ್ನು (1,2,3,4) ಸೇರುತ್ತವೆ. ಎಲೆಕ್ಟ್ರಾನಿಕ್ ಉಪಕರಣದಿಂದ ಸಮಪಾತವಾಗಿ ದರ್ಶಕಗಳನ್ನು ಸೇರುವ ಅವಳಿಗಳನ್ನು ಗೊತ್ತುಮಾಡಬಹುದು. $r_1$ ಮತ್ತು $r_2$ಗಳ ಎಲೆಕ್ಟ್ರಾನ್ ಮತ್ತು ಪಾಸಿಟ್ರಾನುಗಳು ಚಲಿಸುವ ವೃತ್ತಭಾಗಗಳ ವಕ್ರತಾತ್ರಿಜ್ಯಗಳಾದರೆ

$Pe^- = Her_1$ ಮತ್ತು $P+ = Her_2$ ಎಂದು ಬರೆಯಬಹುದು. ಇಲ್ಲಿ $H$ ಕಾಂತಕ್ಷೇತ್ರದ ತೀವ್ರತೆ, $e$ ಎಲೆಕ್ಟ್ರಾನ್ ಮತ್ತು ಪಾಸಿಟ್ರಾನುಗಳ ವಿದ್ಯುದಾವೇಶದ ಮೌಲ್ಯ. $Pe^-$ ಮತ್ತು $Pe^+$ ಅನುಕ್ರಮವಾಗಿ ಎಲೆಕ್ಟ್ರಾನ್ ಮತ್ತು ಪಾಸಿಟ್ರಾನುಗಳ ಸಂವೇಗಗಳು. ಅವಳಿಗಳ ಒಟ್ಟು ಶಕ್ತಿ ಅವುಗಳ ನಿಶ್ಚಲ ದ್ರವ್ಯರಾಶಿ ಶಕ್ತಿಗಿಂತ ಹೆಚ್ಚಾಗಿದ್ದರೆ ಫೋಟಾನಿನ ಶಕ್ತಿ

$$E_\gamma \approx Pe^- c + Pe^+ c$$

$$= Hec(r_1 + r_2)$$

$$= 2Hec\ r \qquad \ldots(8)$$

ಎಂಬುದಾಗಿ ಬರೆಯಬಹುದು. $r_1\ r_2 = 2r$ ನ್ನು ಪ್ರಯೋಗದಿಂದ ಶೋಧಿಸಿ $E\gamma$ ವನ್ನು ಗಣಿಸುತ್ತಾರೆ.

ಅವಳಿ ರೋಹಿತಮಾಪಕದ ನೆರವಿನಿಂದ 650 MeV ಗಳಿಗೂ ಹೆಚ್ಚು ಶಕ್ತಿಯುಳ್ಳ ಫೋಟಾನುಗಳ ಶಕ್ತಿಯನ್ನು ಅಳೆಯುವುದು ಸಾಧ್ಯವಾಗಿದೆ.

3 ಕಾಂಪ್ಟನ್ ರೋಹಿತಮಾಪಕ: ಒಂದು ಗ್ಯಾಮಫೋಟಾನ್ ನಿಶ್ಚಲವಾಗಿರುವ ಅನಿರ್ಬಂಧಿತ ಎಲೆಕ್ಟ್ರಾನಿಗೆ ಡಿಕ್ಕಿ ಹೊಡೆದರೆ ಎಲೆಕ್ಟ್ರಾನ್ ಪಡೆಯುವ ಚಲನಶಕ್ತಿಯನ್ನು ಸಮೀಕರಣ (4)ರಿಂದ

$$E_{e-} = \frac{E_\gamma}{1 + 1/2\alpha} \qquad \ldots(9)$$

ಎಂದು ಬರೆಯಬಹುದು. ಚದರಿದ ಫೋಟಾನ್ ಹಿನ್ನೆಗೆಯುತ್ತದೆ. ಪತನ ಫೋಟಾನಿನ ನೇರದಲ್ಲಿ ಚಲಿಸುವ ಎಲೆಕ್ಟ್ರಾನನ್ನು ಕಾಂತಕ್ಷೇತ್ರದಲ್ಲಿ ಬಾಗಿಸಿ ಅದರ ಚಲನಶಕ್ತಿಯನ್ನು ಅಳೆಯಬಹುದು. ಹೀಗೆ ಮಾಡಲು ಬಳಸುವ ಉಪಕರಣವನ್ನು ಚಿತ್ರ(5)ರಲ್ಲಿ ಕಾಣಿಸಿದೆ. ಇದಕ್ಕೆ ಕಾಂಪ್ಟನ್ ರೋಹಿತ ಮಾಪಕ ಎಂದು ಹೆಸರು.

ಮಾದರಿಯಲ್ಲಿ $S$ ನ್ಯೂಟ್ರಾನುಗಳ ಹಿಡಿಕೆಯಿಂದ ಗ್ಯಾಮಕಿರಣಗಳು ಉತ್ಪತ್ತಿಯಾಗುತ್ತವೆ. ಅವನ್ನು ಚೆನ್ನಾಗಿ ಸಮಾಂತರಕರಿಸಿ ಪಾಲಿಸ್ಟಿರಿನ್ ಹಾಳೆಯ ಮೇಲೆ ಹಾಯಿಸಿದರೆ ಕಾಂಪ್ಟನ್ ಪರಿಣಾಮ ನಡೆಯುತ್ತದೆ. ಪತನ ಕಿರಣಗಳ ನೇರದಲ್ಲಿ ಹೊರಬರುವ ಎಲೆಕ್ಟ್ರಾನುಗಳು ನಿಡುಗಂಡಿ $A$ ಬಳಿ ಸಂಗಮಿಸುವಂತೆ ಕಾಂತಕ್ಷೇತ್ರದ ತೀವ್ರತೆಯನ್ನು ಹೊಂದಿಸಬಹುದು. $A$ ಮತ್ತು $B$ ಗಳನ್ನು ಕುದುರಿಸುವ (ಟ್ರಿಗರ್) ಎಲೆಕ್ಟ್ರಾನುಗಳನ್ನು ಮಾತ್ರ ಎಣಿಕೆಯ ವ್ಯವಸ್ಥೆ ಸ್ವೀಕರಿಸುತ್ತದೆ. ಎಲೆಕ್ಟ್ರಾನಿನ ಪಥದ ಜ್ಯಾಮಿತಿ ಮತ್ತು ಕಾಂತಕ್ಷೇತ್ರದ ತೀವ್ರತೆ ಇವುಗಳಿಂದ $E_{e-}$ ಯನ್ನು ಲೆಕ್ಕಿಸಬಹುದು. ಅನಂತರ ಸಮೀಕರಣ (9)ರಿಂದ $E\gamma$ ವನ್ನು ತಿಳಿಯಬಹುದು.

ಕಾಂಪ್ಟನ್ ರೋಹಿತಮಾಪಕವನ್ನು ಸಾಮಾನ್ಯವಾಗಿ ನ್ಯೂಕ್ಲಿಯ ಕ್ರಿಯೆಗಳಲ್ಲಿ ಉತ್ಪತ್ತಿಯಾಗುವ ಗ್ಯಾಮಕಿರಣಗಳ ಶಕ್ತಿಯನ್ನು ಅಳೆಯಲು ಉಪಯೋಗಿಸುತ್ತಾರೆ.

4. ಪ್ರಸ್ಫುರಣ (ಸಿಂಟಿಲೇಷನ್) ರೋಹಿತಮಾಪಕ: ಗ್ಯಾಮಫೋಟಾನುಗಳು ಪದಾರ್ಥದಲ್ಲಿ ಪ್ರಕ್ರಿಯೆಗೊಳ್ಳುವಾಗ ಅವುಗಳ ಶಕ್ತಿಯನ್ನು ಪೂರ್ತಿ ಇಲ್ಲವೆ ಭಾಗಶಃ ಎಲೆಕ್ಟ್ರಾನುಗಳಿಗೆ ಕೊಡುತ್ತವೆ. ಈ ಎಲೆಕ್ಟ್ರಾನುಗಳು (ಅವಳಿಸೃಷ್ಟಿಯಲ್ಲಿ ಪಾಸಿಟ್ರಾನೂ ಸೇರಿದಂತೆ) ಪದಾರ್ಥದಲ್ಲಿ ಅವುಗಳ ಶಕ್ತಿಯನ್ನು ಅಯಾನೀಕರಣ ಮತ್ತು ಉದ್ದೀಪನ ಕ್ರಿಯೆಗಳಿಂದ ಕಳೆದುಕೊಳ್ಳುತ್ತವೆ. ತತ್ಫಲವಾಗಿ ಬೆಳಕಿನ ಕಿರಣಗಳು ಮತ್ತು ಉಷ್ಣ ಉತ್ಪತ್ತಿಯಾಗುತ್ತವೆ. ಬೆಳಕಿನ ಕಿರಣಗಳು ಉತ್ಪತ್ತಿಯಾಗುವ ವಸ್ತು ಪಾರದರ್ಶಕವೂ ಆಗಿದ್ದರೆ ಅಂಥ ವಸ್ತುವನ್ನು ಗ್ಯಾಮಫೋಟಾನನ್ನು ಪತ್ತೆ ಹಚ್ಚಲು ಮತ್ತು ಅದರ ಶಕ್ತಿಯನ್ನು ಅಳತೆ ಮಾಡಲು ಬಳಸಬಹುದು. NaI (TI) ಮತ್ತು CsI (TI) ಸ್ಫಟಿಕಗಳು ಅಂಥವು. ಅವುಗಳಿಗೆ ಪ್ರಸ್ಫುರಣಕಗಳು (ಸಿಂಟಿಲೇಟರ್ಸ್) ಎಂದು ಹೆಸರು. ಯಾವುದೇ ಪ್ರಸ್ಫುರಣಕವನ್ನು ಬಳಸಿದರೂ ಅದರಿಂದ ಬರುವ ಬೆಳಕನ್ನು ದ್ಯುತಿಗುಣಕದ ಮೇಲೆ ಬೀಳುವಂತೆ ಮಾಡಬೇಕು. ದ್ಯುತಿಗುಣಕ ಬೆಳಕಿನ ಶಕ್ತಿಗೆ ಅನುಪಾತವಾದ ವಿದ್ಯುತ್ ಮಿಡಿತವನ್ನು ಕೊಡುತ್ತದೆ. ಇದನ್ನು ರೇಖೀಯವಾಗಿ ವೃದ್ಧಿಸಿ ಎಲೆಕ್ಟ್ರಾನಿಕ್ ಉಪಕರಣಕ್ಕೆ ರವಾನಿಸಬಹುದು. ಪ್ರಸ್ಫುರಣಕದಲ್ಲಿ ಉತ್ಪತ್ತಿಯಾದ ಬೆಳಕಿನ ಶಕ್ತಿ ಗ್ಯಾಮಫೋಟಾನ್ ಕಳೆದುಕೊಂಡ ಶಕ್ತಿಗೆ ಅನುಪಾತವಾಗಿದ್ದರೆ ಎಲೆಕ್ಟ್ರಾನಿಕ್ ಉಪಕರಣ ಅಳೆಯುವ ಮಿಡಿತಗಳ ಎತ್ತರಗಳನ್ನು ವಿಶ್ಲೇಷಿಸಿ ಗ್ಯಾಮಫೋಟಾನಿನ ಶಕ್ತಿಯ ಅಳತೆಯನ್ನು ಮಾಡಬಹುದು.




ಚಿತ್ರ 5. ಕಾಂಪ್ಟನ್ ರೋಹಿತಮಾಪಕ

ಮೇಲೆ ಹೇಳಿದ ವಿಧಾನಗಳೇ ಅಲ್ಲದೆ ದ್ಯುತಿವಿದ್ಯುತ್ ಪರಿಣಾಮ ಮತ್ತು ಒಳ ಮಾರ್ಪಾಡಿನಿಂದ ಹೊರಬರುವ ಎಲೆಕ್ಟ್ರಾನುಗಳ ಶಕ್ತಿಯನ್ನು ಅಳೆದು ತತ್ಸಂಬಂಧವಾದ ಫೋಟಾನಿನ ಶಕ್ತಿಯನ್ನು ನಿರ್ಧರಿಸಲು ಅನುಕೂಲವಾಗುವ ಬೇರೆ ಬೇರೆ ವಿಧಾನಗಳೂ ಬಳಕೆಯಲ್ಲಿವೆ.

ಗ್ಯಾಮಕಿರಣಗಳ ದರ್ಶಕಗಳು: ಅಯಾನೀಕರಣ ಮಂದಿರ, ಅನುಪಾತ ಗೈಗರ್ ಮತ್ತು ಪ್ರಸ್ಫುರಣ ಗುಣಕಗಳು, ಮೇಘಮಂದಿರ, ಗುಳ್ಳೆಮಂದಿರ ಮುಂತಾದ ಉಪಕರಣಗಳಿಂದ ಗ್ಯಾಮಕಿರಣಗಳನ್ನು ಪತ್ತೆ ಮಾಡಬಹುದು. ಗ್ಯಾಮಕಿರಣ ತೀವ್ರತೆಯ ಅಳತೆಗೆ ಅಯಾನೀಕರಣ ಮಂದಿರ ಸಹಾಯಕವಾದರೆ ಗೈಗರ್ ಗುಣಕ ಅವುಗಳ ಎಣಿಕೆಗೆ ಸಹಾಯಕವಾಗುತ್ತದೆ. ಅನುಪಾತ ಗುಣಕ, ಪ್ರಸ್ಫುರಣ ಗುಣಕಗಳ ನೆರವಿನಿಂದ ಗ್ಯಾಮಕಿರಣಗಳ ಎಣಿಕೆಯ ಜೊತೆಗೆ ಅವುಗಳ ಶಕ್ತಿಯನ್ನೂ ಅಳತೆ ಮಾಡಬಹುದು. ಅವಳಿಸೃಷ್ಟಿ ಮತ್ತು ವೃಷ್ಟಿ ಬೆಳೆವಣಿಗೆಯನ್ನು ಅಭ್ಯಾಸ ಮಾಡಲು ಮೇಘಮಂದಿರ ಮತ್ತು ಗುಳ್ಳೆಮಂದಿರ ಬೇಕಾಗುತ್ತವೆ.

(ಎಸ್.ಎ.ಎಚ್.)

**ಗ್ಯಾಮಕ್ಷಯ :** ಆಲ್ಫ ಅಥವಾ ಬೀಟ ಕ್ಷಯದ ಪರಿಣಾಮವಾಗಿ ಉದ್ದೀಪ್ತ ಸ್ಥಿತಿಯಲ್ಲಿರುವ ಒಂದು ನ್ಯೂಕ್ಲಿಯಸ್ ಗ್ಯಾಮಕಿರಣವನ್ನು ಹೊರದೂಡಿ ಕೆಳಗಿನ ಒಂದು ಉದ್ದೀಪ್ತ ಸ್ಥಿತಿಗೆ ಇಲ್ಲವೆ ಭೂಮಟ್ಟಕ್ಕೆ ಬರುವ ಕ್ರಿಯೆ (ಗ್ಯಾಮ ಡಿಕೇ). ನ್ಯೂಕ್ಲಿಯಸಿನ ಪ್ರತಿಯೊಂದು ಸ್ತರಕ್ಕೂ ಅಂದರೆ ಪ್ರಾವಸ್ಥೆಗೂ (ಫೇಸ್) ಸಂಬಂಧಿಸಿದಂತೆ ಬೇರೆ ಬೇರೆ ಶಕ್ತಿ, ಕೋನಸಂವೇಗ (ಆಂಗ್ಯುಲರ್ ಮೊಮೆಂಟಮ್) ಮತ್ತು ಪ್ಯಾರಿಟಿಗಳಿರುತ್ತವೆ. ನ್ಯೂಕ್ಲಿಯಸಿನ ಪ್ರಾವಸ್ಥಾ ಪರಿವರ್ತನೆಯನ್ನು ನಿಯಂತ್ರಿಸುವ ವಿಶಿಷ್ಟ ಗುಣಗಳಿವು.

ಗ್ಯಾಮಕ್ಷಯವನ್ನು ಅರ್ಥ ಮಾಡಿಕೊಳ್ಳಲು ನ್ಯೂಕ್ಲಿಯಸನ್ನು ವೈದ್ಯುತ ಮತ್ತು ಕಾಂತೀಯ ಬಹುಧ್ರುವಗಳ ಸಂಯೋಜನೆ ಎಂದು ಭಾವಿಸಬಹುದು. ಪ್ರೋಟಾನುಗಳ ಹಂಚಿಕೆಯಿಂದ ವೈದ್ಯುತ ಬಹುಧ್ರುವಗಳನ್ನೂ ಅವುಗಳ ಚಲನೆಯಿಂದುಂಟಾದ ವಿದ್ಯುತ್ ಪ್ರವಾಹಗಳಿಂದ ಕಾಂತೀಯ ಬಹುಧ್ರುವಗಳನ್ನೂ ಚಿತ್ರಿಸಿಕೊಳ್ಳಬಹುದು. ಈ ಬಹುಧ್ರುವಗಳ ಸರಳ ಸಂಗತ ಆಂದೋಳನಗಳಿಂದ ಗ್ಯಾಮಕಿರಣಗಳು ಉತ್ಪತ್ತಿಯಾಗುತ್ತವೆ.

ಗ್ಯಾಮಕ್ಷಯದಲ್ಲಿ ಒಟ್ಟು ವ್ಯವಸ್ಥೆಯ ಶಕ್ತಿ, ಕೋನಸಂವೇಗ ಮತ್ತು ಪ್ಯಾರಿಟಿಗಳು ನಿಯತವಾಗಿರುತ್ತವೆ. ನ್ಯೂಕ್ಲಿಯಸ್ ಹೊರದೂಡಿದ ಗ್ಯಾಮ ಕಿರಣದ ಶಕ್ತಿ $\Delta E$ ಮತ್ತು ಕೋನಸಂವೇಗ $L$ ಆಗಿವೆ ಎಂದುಕೊಳ್ಳೋಣ. ಆಗ ಅದರ ಪ್ಯಾರಿಟಿ $(-1)^L$ ಆಗಿರುತ್ತದೆ. ನ್ಯೂಕ್ಲಿಯಸಿನ ಆರಂಭಶಕ್ತಿ, ಕೋನ ಸಂವೇಗ ಮತ್ತು ಪ್ಯಾರಿಟಿಗಳು ಅನುಕ್ರಮವಾಗಿ $E_i$, $J_i$ ಮತ್ತು $\pi_a$ ಆಗಿರಲಿ. ಗ್ಯಾಮ ಕ್ಷಯವಾದ ಬಳಿಕ ಈ ಪ್ರಾಚಲಗಳ ಮೌಲ್ಯಗಳು $E_f$ $J_f$ ಮತ್ತು $\pi_b$ ಆಗಿದ್ದರೆ ಆಗ

$$\Delta E = E_i - E_f \qquad \ldots(1)$$

$$|J_i - J_f| \le L \le J_i + J_f \qquad \ldots(2)$$

$$\pi_a = \pi_b \pi_\gamma \qquad \ldots(3)$$

ಎಂದು ಬರೆಯಬಹುದು. ಇಲ್ಲಿ $\pi_\gamma$ ಗ್ಯಾಮಕಿರಣದ ಪ್ಯಾರಿಟಿ. ವೈದ್ಯುತ ಮತ್ತು ಕಾಂತೀಯ ಬಹುಧ್ರುವ ಪ್ರಾವಸ್ಥಾಪರಿವರ್ತನೆಯಲ್ಲಿ ಪ್ಯಾರಿಟಿ ಚಿಹ್ನೆಯನ್ನು ಬದಲಾಯಿಸಲೂಬಹುದು; ಅಥವಾ ಬದಲಾಯಿಸದೆಯೂ ಇರಬಹುದು. ಪ್ಯಾರಿಟಿ ಬದಲಾವಣೆ $(-1)^L$ ಗೆ ಸಂಬಂಧಿಸಿದಂತೆ ನಡೆದರೆ ಅಂಥ ಪ್ರಾವಸ್ಥಾ ಪರಿವರ್ತನೆ ಯನ್ನು ವೈದ್ಯುತ ಬಹುಧ್ರುವ ಪ್ರಾವಸ್ಥಾ ಪರಿವರ್ತನೆಯೆಂದೂ $(-1)^{L+1}$ಕ್ಕೆ ಸಂಬಂಧಿಸಿದಂತೆ ನಡೆದರೆ ಅಂಥ ಪ್ರಾವಸ್ಥಾ ಪರಿವರ್ತನೆಯನ್ನು ಕಾಂತೀಯ ಬಹುಧ್ರುವ ಪ್ರಾವಸ್ಥಾ ಪರಿವರ್ತನೆಯೆಂದೂ ಕರೆಯುತ್ತೇವೆ. ಇದಕ್ಕೆ ಕಾರಣ ತತ್ಸಂಬಂಧವಾದ ಅಲೆಉತ್ಪನ್ನಗಳ ಗುಣಗಳೇ. ಪ್ರಾವಸ್ಥಾ ಪರಿವರ್ತನೆಯ ಬಹುಧ್ರುವೀಯತೆಯನ್ನು $2^L$ ತಿಳಿಸುತ್ತದೆ. $L$=1 ಆಗಿದ್ದರೆ ಅಂಥ ಪ್ರಾವಸ್ಥಾ ಪರಿವರ್ತನೆಗೆ ದ್ವಿಧ್ರುವ ಪ್ರಾವಸ್ಥಾ ಪರಿವರ್ತನೆಯೆಂದು ಹೆಸರು. $L$=2 ಮತ್ತು 3 ಆಗಿದ್ದರೆ ಅಂಥವುಗಳಿಗೆ ಚತುರ್ಧ್ರುವ ಮತ್ತು ಅಷ್ಟಧ್ರುವ ಪ್ರಾವಸ್ಥಾ ಪರಿವರ್ತನೆಗಳೆಂದು ಹೆಸರು. ಉದಾಹರಣೆಗೆ ಈ ಕೆಳಗಿನ ಕೆಲವು ಪ್ರಾವಸ್ಥಾ ಪರಿವರ್ತನೆಗಳನ್ನು ಪರಿಶೀಲಿಸಬಹುದು.

$$J_i = 1^+ \rightarrow J_f = 0^+ \qquad \ldots.\ (4)$$

ತತ್ಸಂಬಂಧವಾದ ಸ್ಥಿತಿ ಸಮಪ್ಯಾರಿಟಿಯನ್ನು ಹೊಂದಿದೆ ಎಂಬುದನ್ನು ಚಿಹ್ನೆ+ ತಿಳಿಸುತ್ತದೆ. ಇಲ್ಲಿ ಪ್ಯಾರಿಟಿಯಲ್ಲಿ ಬದಲಾವಣೆಯಾಗಿಲ್ಲ. $L$=1 ಪ್ಯಾರಿಟಿ ಬದಲಾವಣೆ ಆಗದಿರಬೇಕಾದರೆ ಈ ಪ್ರಾವಸ್ಥಾಪರಿವರ್ತನೆ $(-1)^{L+1}$ ನಿಯಮದಂತೆ ಆಗಿರಬೇಕು. ಅಂದರೆ ಇದನ್ನು ಕಾಂತೀಯ ದ್ವಿಧ್ರುವ ಪ್ರಾವಸ್ಥಾಪರಿವರ್ತನೆಯೆಂದೂ ಕರೆಯಬಹುದು. ಇದನ್ನು $M1$(ಎಮ್ ಒಂದು) ಪ್ರಾವಸ್ಥಾಪರಿವರ್ತನೆಯೆಂದು ಸಹ ಕರೆಯುತ್ತೇವೆ. ಹೀಗೆಯೇ ಕಾಂತೀಯ ಚತುರ್ಧ್ರುವ ಮತ್ತು ಅಷ್ಟಧ್ರುವ ಪ್ರಾವಸ್ಥಾಪರಿವರ್ತನೆಗಳನ್ನು $M2$ ಮತ್ತು $M3$ ಪ್ರಾವಸ್ಥಾಪರಿವರ್ತನೆಗಳೆಂದು ಕರೆಯುತ್ತೇವೆ.

$$J_i = 1^- \rightarrow J_f = 0^+ \qquad \ldots(5)$$

ನ್ಯೂಕ್ಲಿಯಸಿನ ಆರಂಭಸ್ಥಿತಿ ಅಸಮಪ್ಯಾರಿಟಿಯನ್ನು ಹೊಂದಿದೆ ಎಂಬುದನ್ನು ಚಿಹ್ನೆ– ತೋರಿಸಿದರೆ ಅದರ ಅಂತಿಮ ಸ್ಥಿತಿ ಸಮಪ್ಯಾರಿಟಿಯನ್ನು ಹೊಂದಿದೆ ಎಂಬುದನ್ನು ಚಿಹ್ನೆ + ತೋರಿಸುತ್ತದೆ. ಇಲ್ಲಿ ಪ್ಯಾರಿಟಿ ಬದಲಾವಣೆ ಆಗಿದೆ. $L$=1 ಪ್ಯಾರಿಟಿ ಬದಲಾವಣೆ ಆಗಬೇಕಾದರೆ ಈ ಪ್ರಾವಸ್ಥಾಪರಿವರ್ತನೆ $(-1)^L$ ನಿಯಮದಂತೆ ಆಗಿರಬೇಕು. ಅಂದರೆ ಇದನ್ನು ವೈದ್ಯುತ ದ್ವಿಧ್ರುವ ಪ್ರಾವಸ್ಥಾಪರಿವರ್ತನೆ ಎಂದು ಕರೆಯಬಹುದು. ಇದನ್ನು $E1$ ಪ್ರಾವಸ್ಥಾಪರಿವರ್ತನೆ ಎಂದು ಸಹ ಕರೆಯುತ್ತೇವೆ. ಹೀಗೆಯೇ ವೈದ್ಯುತ ಚತುರ್ಧ್ರುವ ಮತ್ತು ಅಷ್ಟಧ್ರುವ ಪ್ರಾವಸ್ಥಾಪರಿವರ್ತನೆಗಳನ್ನು $E2$ ಮತ್ತು $E3$ ಪ್ರಾವಸ್ಥಾಪರಿವರ್ತನೆಗಳೆಂದು ಕರೆಯುತ್ತೇವೆ. ಹೆಚ್ಚಿನ ಧ್ರುವ ಪ್ರಾವಸ್ಥಾಪರಿವರ್ತನೆಗಳನ್ನು 16, 32 ಇತ್ಯಾದಿ ಧ್ರುವ ಪ್ರಾವಸ್ಥಾಪರಿವರ್ತನೆಗಳೆಂದು ಕರೆಯಬಹುದು.

$$J_i = 3/2^+ \rightarrow J_f = \frac{1}{2}^+ \qquad \ldots(6)$$

ಈಗ $1 \le L \le 2$ ಮತ್ತು ಪ್ಯಾರಿಟಿ ಬದಲಾವಣೆಯಾಗಿಲ್ಲ. ಆದ್ದರಿಂದ $M1$ ಮತ್ತು $E2$ ಪ್ರಾವಸ್ಥಾಪರಿವರ್ತನೆಗಳೆರಡೂ ಇಲ್ಲಿ ಸಾಧ್ಯ. ನ್ಯೂಕ್ಲಿಯಸಿನ ಪ್ರಾವಸ್ಥಾಪರಿವರ್ತನೆ $M1$ ಮತ್ತು $E2$ ಪ್ರಾವಸ್ಥಾ ಪರಿವರ್ತನೆಗಳೆರಡರ ಮಿಶ್ರಣವಾಗಿರುತ್ತದೆ.

ವೈದ್ಯುತ ಬಹುಧ್ರುವ ಪ್ರಾವಸ್ಥಾಪರಿವರ್ತನೆಗಳ ಸಂಭಾವ್ಯತೆ ಕಾಂತೀಯ ಬಹುಧ್ರುವ ಪ್ರಾವಸ್ಥಾಪರಿವರ್ತನೆಗಳ ಸಂಭಾವ್ಯತೆಗಿಂತ ಹೆಚ್ಚು. ಯಾವುದೇ ಬಗೆಯ ಪ್ರಾವಸ್ಥಾಪರಿವರ್ತನೆಯೂ ತತ್ಸಂಬಂಧವಾದ ಬಹುಧ್ರುವೀಯತೆ ಹೆಚ್ಚಾದಂತೆ ಕಡಿಮೆಯಾಗುತ್ತದೆ.

(ಎಸ್.ಎ.ಎಚ್.)

**ಗ್ಯಾಮ ವಿತರಣೆ :** ಸಂಖ್ಯಾಕಲನಶಾಸ್ತ್ರದಲ್ಲಿ (ಸ್ಟ್ಯಾಟಿಸ್ಟಿಕ್ಸ್) ಬರುವ ಒಂದು ಪರಿಕಲ್ಪನೆ; ಗಣಿತಶಾಸ್ತ್ರದ ಗ್ಯಾಮ ಉತ್ಪನ್ನವಾದ $\Gamma(n)$ಗೆ ಸಂಬಂಧಿಸಿರುವುದರಿಂದ ಈ ಹೆಸರು ಬಂದಿದೆ. ಈಗ $\Gamma(n) = \int_0^\infty x^{n-1} e^{-x} dx, n > 0$ ಎಂಬುದು ಗ್ಯಾಮ ಉತ್ಪನ್ನದ ನಿರೂಪಣೆ. ಇಲ್ಲಿ $x$ ಎಂಬುದು ಅನೃಣ (ನಾನ್‌ನೆಗೆಟಿವ್) ಅವಿಚ್ಛಿನ್ನ ಸಂಭಾವ್ಯತಾ ವಿಚಾರವಾಗಿದ್ದು (ಪ್ರಾಬಬಿಲಿಟಿ ವೇರಿಯಬಲ್) ಅದರ ಸಂಭಾವ್ಯತಾಸಾಂದ್ರತೆ $G = (x|a) = \frac{1}{\Gamma(a)} e^{-x} x^{a-1}$ ಆಗಿದ್ದರೆ ಆಗ $x$ನ ವಿತರಣೆಗೆ ಗ್ಯಾಮ ವಿತರಣೆ ಎಂದು ಹೆಸರು. ಇದನ್ನು $G(x)$ ಎಂದು ಸೂಚಿಸುವುದೂ ಉಂಟು. ಇಲ್ಲಿ $a > 0$ ಇರಬೇಕು. $a$ಗೆ ಈ ವಿತರಣೆಯ ಪ್ರಾಚಲ ಎಂದು ಹೆಸರು. ಗ್ಯಾಮ ವಿತರಣೆಯನ್ನು ಪಾಲಿಸುವ ವಿಚರಕ್ಕೆ (ವೇರಿಯೇಟ್) ಗ್ಯಾಮವಿಚರವೆಂದು ಹೆಸರು.

ಗ್ಯಾಮ ವಿತರಣೆಯ ಗುಣಗಳು : ಈ ವಿತರಣೆಯ ವಕ್ರರೇಖೆಗೆ $x$- ಅಕ್ಷ ಅನಂತಸ್ಪರ್ಶಿ (ಅಸಿಂಪ್ಟೋಟ್) ಆಗಿರುವುದು. $a > 1$ ಆದಾಗ $x = a - 1$ ಎಂಬಲ್ಲಿ ಬಹುಳಕ (ಮೋಡ್) ಇರುವುದು. $x > 2$ ಆದಾಗ $x$- ಅಕ್ಷ ಈ ವಕ್ರವನ್ನು ಮೂಲಬಿಂದುವಿನಲ್ಲಿ ಸ್ಪರ್ಶಿಸುತ್ತದೆ. $1 < a < 2$ ಆದಾಗ $y$- ಅಕ್ಷ ಈ ವಕ್ರವನ್ನು ಮೂಲಬಿಂದುವಿನಲ್ಲಿ ಸ್ಪರ್ಶಿಸುತ್ತದೆ. $0 < a < 1$ ಆದಾಗ ಎರಡು ಅಕ್ಷಗಳೂ ವಕ್ರದ ಅನಂತಸ್ಪರ್ಶಿಗಳಾಗಿರುವುವು.

ಗ್ಯಾಮ ವಿತರಣೆಯ ಗಣಿತ ನಿರೀಕ್ಷೆಯನ್ನು $E(x) = \int_0^\infty \frac{e^{-x} x^a}{\Gamma(a)} dx$ ಎಂಬ ಸಾಮ್ಯದಿಂದ ಕಂಡುಹಿಡಿಯಬಹುದು. ಈ ಅವಕಲವನ್ನು ಸಾಧಿಸಲು $\mu = E(x) = a$ ಎಂಬ ಬೆಲೆ ದೊರೆಯುವುದು. $x = 0$ ಬಿಂದುವನ್ನು ಕುರಿತು ಎರಡನೆಯ ಘೂರ್ಣವನ್ನು (ಮೊಮೆಂಟ್) ಗಣಿಸಲು $a(a+1)$ ದೊರೆಯುವುದು. ಆದ್ದರಿಂದ ಈ ವಿತರಣೆಯ ವಿಚರಣೆ (ವೇರಿಯನ್ಸ್) $a$ ಇರುವುದು. ಅಂದರೆ ಗ್ಯಾಮ ವಿತರಣೆಯ ಮಧ್ಯಮ ಮತ್ತು ವಿಚರಣೆ ಎರಡೂ ಸಮಾನವಾಗಿರುವುವು. ಈ ಗುಣ ಪೋಸಾನ್ ವಿತರಣೆಗೂ ಇರುವುದೆಂಬುದನ್ನು ಗಮನಿಸಬಹುದು.

ಸಾರ್ವತ್ರಿಕವಾಗಿ $x = 0$ ಬಿಂದುವನ್ನು ಕುರಿತು $r$ನೆಯ ಘೂರ್ಣವನ್ನು ಗಣಿಸಲಾಗಿ $\mu_r' = a(a+1)(a+2) \ldots \ldots (a+r-1)$ ಎಂಬ ಫಲ ದೊರೆಯುವುದು.

ಗ್ಯಾಮ ಉತ್ಪನ್ನದ ಒಂದು ವಿಶೇಷ ಗುಣವನ್ನು ಇಲ್ಲಿ ಸೂಚಿಸಬಹುದು. $x$ ಸಂಭಾವ್ಯತಾವಿಚರ ಪ್ರಸಾಮಾನ್ಯ ವಿತರಣೆಯನ್ನು (ನಾರ್ಮಲ್ ಡಿಸ್ಟ್ರಿಬ್ಯೂಷನ್) ಪಾಲಿಸುತ್ತದೆ ಎನ್ನೋಣ. ಇದರ ಮಧ್ಯಮ $a$ ಇದ್ದು ಶಿಷ್ಟವಿಚಲನೆ (ಸ್ಟ್ಯಾಂಡರ್ಡ್ ಡೀವಿಯೇಷನ್) $\sigma$ ಇದ್ದರೆ $u = \frac{1}{2}(x-a)^2/\sigma^2$ ಎಂಬ ಒಂದು ಹೊಸ ವಿಚರವನ್ನು ಕಲ್ಪಿಸಿಕೊಳ್ಳುವ. $x$ನ ವ್ಯಾಪ್ತಿ $-\infty$ ದಿಂದ $+\infty$ ದವರೆಗೆ ಇರುವುದು. ಆದರೆ $u$ವಿನ ವ್ಯಾಪ್ತಿ $0$ಯಿಂದ $+\infty$ ದ ವರೆಗೆ ಇರುವುದು. ಇವನ್ನು ಲಕ್ಷ್ಯದಲ್ಲಿಟ್ಟುಕೊಂಡು $u$ ವಿಚರದ ಸಂಭಾವ್ಯತಾ ಸಾಂದ್ರತೆಯನ್ನು ಗಣಿಸಲಾಗಿ $e^{-u} u^{-\frac{1}{2}} \Big/ \Gamma\left(\frac{1}{2}\right)$ ದೊರೆಯುವುದು. ಇದರಿಂದಾಗಿ $u$ ಎಂಬುದು ಪ್ರಾಚಲ 1/2 ಇರುವ ಗ್ಯಾಮವಿಚರ ಎಂಬುದನ್ನು ಕಾಣಬಹುದು. ಈ ಫಲಿತವನ್ನು ಹೀಗೆ ನಿರೂಪಿಸಬಹುದು : ಮಧ್ಯಮ $a$ ಮತ್ತು ಶಿಷ್ಟವಿಚಲನೆ $\sigma$ ಇರುವ ಪ್ರಸಾಮಾನ್ಯ ವಿತರಣೆಯ ಮೇರೆಗೆ $x$ನ ಸಂಭಾವ್ಯತಾವಿಚರ ಹರವಿದ್ದಾಗ $u = \frac{(x-a)^2}{2\sigma^2}$ ಎಂಬುದು ಪ್ರಾಚಲ $\frac{1}{2}$ ಇರುವ ಗ್ಯಾಮವಿಚರವಾಗಿರುವುದು. ಇದು ಬಹಳ ಮುಖ್ಯವಾದ ಫಲಿತ.

ಗ್ಯಾಮ ವಿರತಣೆಯ ಘೂರ್ಣ ಜನಕ ಉತ್ಪನ್ನ (ಮೊಮೆಂಟ್ ಜನರೇಟಿಂಗ್ ಫಂಕ್ಷನ್)

$$M(h) = \int_0^\infty e^{hx} \; G(x) \; dx$$

ಇದರಲ್ಲಿ $0<h<1$ ಎಂದು ತೆಗೆದುಕೊಂಡು $(1-h)x = u$ ಎಂದು ಆದೇಶಿಸಿದರೆ $M(h) = (1-h)^{-a}$ ಎಂದಾಗುವುದು. ಹಾಗೂ ಇದರ ಲಕ್ಷಣ ಉತ್ಪನ್ನ (ಕ್ಯಾರೆಕ್ಟರಿಸ್ಟಿಕ್ ಫಂಕ್ಷನ್)

$$C(h) = \int_0^\infty e^{ihx} \; G(x)dx = (1-ih)^{-1} = 1 + iah + \frac{i^2h^2}{2!} a(a+1) + \ldots$$

ಈ ಉತ್ಪನ್ನಗಳಿಂದ ವಿತರಣೆಯ ಘೂರ್ಣಗಳನ್ನು ಕಂಡುಹಿಡಿಯಬಹುದು. ಇದೇ ರೀತಿ ಗ್ಯಾಮ ವಿತರಣೆಯ ಸಮಾಕಲಿತ (ಕ್ಯುಮ್ಯಲೆಂಟ್) ಜನಕ ಉತ್ಪನ್ನವನ್ನು ಗಣಿಸಲು

$$k(h) = -a\log(1-ih) = a\left[ih + \frac{(ih)^2}{2} + \frac{(ih)^3}{3} + \ldots\right]$$

ಆದ್ದರಿಂದ $k_1 = a, k_2 = a, k_3 = 2a, k_4 = 6a, \ldots\ldots, k_r = a\,\Gamma(r)$ ಈ ಸಾಮ್ಯಗಳಿಂದಲೂ ಗ್ಯಾಮ ವಿತರಣೆಯ ಮಧ್ಯಮಾನ (ಮೀನ್) ಮತ್ತು ವಿಚರಣೆ $a$ಗೆ ಸಮ ಎಂಬುದು ಕಾಣುತ್ತದೆ. ಈ ವಿಚರಣೆಯ ಅಸಮ್ಮಿತಿ (ಸ್ಕ್ಯೂನೆಸ್) $k_3/k_2^{3/2} = 2a^{-1/2}$ ಮತ್ತು ಶೃಂಗತೆ (ಕುರ್ಟೋಸಿಸ್) $k_4/k_2^2 = 6a^{-1}$. ಪ್ರಾಚಲ ಹೆಚ್ಚಿದಂತೆಲ್ಲ ಈ ವಿತರಣೆ ಸಮಾಂಗ ವಿತರಣೆಯನ್ನು (ಸಿಮೆಟ್ರಿಕ್ ಡಿಸ್ಟ್ರಿಬ್ಯೂಷನ್) ಸಮೀಪಿಸುವುದು.

ಗ್ಯಾಮ ವಿತರಣೆಗೂ $\chi^2$ (ಕೈ–ಸ್ಕ್ವೇರ್) ವಿತರಣೆಗೂ ನಿಕಟ ಸಂಬಂಧ ಉಂಟು. $x_1, x_2, \ldots\ldots, x_n$ ಎಂಬವು ಶಿಷ್ಟ ಪ್ರಸಾಮಾನ್ಯ ವಿಚರಗಳಾದರೆ (ಸ್ಟ್ಯಾಂಡರ್ಡ್ ನಾರ್ಮಲ್ ವೇರಿಯೇಟ್ಸ್) ಇವುಗಳ ವರ್ಗಸಂಕಲನವನ್ನು $X^2$ ಪ್ರತೀಕದಿಂದ ಸೂಚಿಸುತ್ತೇವೆ. ಅಂದರೆ $\chi^2 = x_1^2 + x_2^2 + \ldots + x^2 n$. ಇಲ್ಲಿ $n$ ಸ್ವಾತಂತ್ರ್ಯಾಂಕ (ಡಿಗ್ರಿ ಆಫ್ ಫ್ರೀಡಮ್). ಇದು ಧನಪೂರ್ಣಾಂಕವಾಗಿರಬೇಕು. $x_i$ಗಳ ವ್ಯಾಪ್ತಿ $-\infty$ ದಿಂದ $+\infty$ ದ ವರೆಗೆ ಇದ್ದು $\chi^2$ ದ ವ್ಯಾಪ್ತಿ $o$ ಯಿಂದ $+\infty$ ದ ವರೆಗೆ ಇರುವುದು $\frac{\chi^2}{2} = z$ ಎಂದು ಪರಿವರ್ತಿಸಿದರೆ $z$ ವಿಚರದ ಸಂಭಾವ್ಯತಾ ಸಾಂದ್ರತೆ $e^{-z} z^{n/2} \Big/ \Gamma\left(\frac{n}{2}\right)$ ಎಂದಾಗುವುದು. ಇದರಿಂದ $z$ ವಿಚರದ ವಿತರಣೆ ಗ್ಯಾಮ ವಿತರಣೆ ಆಗಿರುವುದೆಂದೂ, ಅದರ ಪ್ರಾಚಲ $n/2$ ಇರುವುದೆಂದೂ ತಿಳಿಯಬರುತ್ತದೆ. $z$ ವಿಚರದ ಪ್ರಾಚಲ $\chi^2$ ವಿಚರದ ಸ್ವಾತಂತ್ರ್ಯಾಂಕದ ಅರ್ಧದಷ್ಟು ಇರುವುದು ಎಂಬುದು ಸ್ಪಷ್ಟ. ಅಂದರೆ ಗ್ಯಾಮ ವಿತರಣೆಯನ್ನು ಅನುಸರಿಸುವ $z$ ವಿಚರ ಪ್ರಾಚಲ ಧನಪೂರ್ಣಾಂಕದ ಅರ್ಧದಷ್ಟಿದ್ದಾಗ ಅದು $\chi^2$ ವಿತರಣೆಯೊಡನೆ ಅಭಿನ್ನವಾಗಿ ಹೊಂದಿಕೊಳ್ಳುವುದು.

ಗ್ಯಾಮವಿಚರಗಳ ಸಂಕಲನ : ಸ್ವತಂತ್ರವಾದ ಹಲವು ಗ್ಯಾಮವಿಚರಗಳ ಸಂಕಲನದ ಕೆಲವು ಗುಣಗಳನ್ನು ಈಗ ವಿವೇಚಿಸೋಣ. $x, y$ ಎಂಬವು ಸ್ವತಂತ್ರ ಗ್ಯಾಮವಿಚರಗಳಾಗಿದ್ದು ಅವುಗಳ ಪ್ರಾಚಲಗಳು $a, b$ ಆಗಿರಲಿ. $u = x+y$ ಆಗಿದ್ದರೆ ಆಗ $u$ ವಿಚರ $(a+b)$ ಪ್ರಾಚಲದ ಗ್ಯಾಮವಿಚರವಾಗುವುದು. ಇದರ ವಿಲೋಮ ಕೂಡ ಸಾಧು. ಅಂದರೆ ಸ್ವತಂತ್ರವಾದ ಎರಡು ಧನವಿಚರಗಳ ಮೊತ್ತ $a+b$ ಪ್ರಾಚಲದ ಗ್ಯಾಮವಿಚರವಾಗಿದ್ದು ಅವುಗಳಲ್ಲೊಂದು $a$ ಪ್ರಾಚಲದ ವಿಚರವಾಗಿದ್ದರೆ ಮತ್ತೊಂದು ವಿಚರ $b$ ಪ್ರಾಚಲದ ಗ್ಯಾಮವಿಚರವಾಗಿರುವುದು. ಮೇಲೆ ಹೇಳಿದ ವಿಲೋಮ ಪ್ರಮೇಯದ ಫಲಿತಾಂಶವನ್ನು ಸಾರ್ವತ್ರೀಕರಿಸಬಹುದು. $x_1, x_2, \ldots\ldots, x_n$ ಎಂಬವು ಪರಸ್ಪರ ಸ್ವತಂತ್ರ ಗ್ಯಾಮವಿಚರಗಳಾಗಿದ್ದು ಅವುಗಳ ಪ್ರಾಚಲಗಳು $a_1, a_2, \ldots\ldots, a_n$ ಆಗಿದ್ದರೆ $u = x_1 + x_2 + \ldots + x_n$ ಎಂಬ ವಿಚರದ ವಿತರಣೆ $a_1 + a_2 + \ldots + a_n$ ಪ್ರಾಚಲದ ಗ್ಯಾಮ ವಿತರಣೆ ಆಗಿರುವುದು. ಈ ಗುಣಕ್ಕೆ ಪ್ರಜನನ ಗುಣ (ರಿಪ್ರೊಡಕ್ಟಿವ್ ಪ್ರಾಪರ್ಟಿ) ಎಂದು ಹೆಸರು. ಅಂದರೆ ಗ್ಯಾಮವಿತರಣೆಗೆ ಪ್ರಜನನ ಗುಣ ಉಂಟೆಂದಂತಾಯಿತು.

ಪ್ರಸಾಮಾನ್ಯ ವಿತರಣೆಗೂ ಗ್ಯಾಮ ವಿತರಣೆಗೂ ಇರುವ ಸಂಬಂಧವನ್ನು ಉಪಯೋಗಿಸಿಕೊಂಡು ಈ ಪ್ರಮೇಯವನ್ನು ಹೀಗೆ ಪರಿವರ್ತಿಸಬಹುದು : $x_i$ ( $i$ = 1, 2, ... ..., $n$) ಎಂಬ ಪರಸ್ಪರ ಸ್ವತಂತ್ರ ಸಂಭಾವ್ಯತಾ ವಿಚರಗಳ ವಿತರಣೆಗಳು ಮಧ್ಯಮಾನ (ಮೀನ್) ಸೊನ್ನೆಯುಳ್ಳ ಪ್ರಸಾಮಾನ್ಯ ವಿತರಣೆಗಳಾಗಿದ್ದು ಅವುಗಳ ಶಿಷ್ಟವಿತರಣೆಗಳು $\sigma i$ ಇದ್ದರೆ $\chi^2 = \sum x_i^2/\sigma_i^2$ ಎಂದಿಟ್ಟುಕೊಂಡಾಗ $\frac{1}{2}\chi^2$ ಎಂಬುದು ಪ್ರಾಚಲ $\frac{1}{2}n$ ಇರುವ ಗ್ಯಾಮವಿಚರವಾಗಿರುವುದು. ಇದರ ವಿಶಿಷ್ಟ ಪಕ್ಷವಾಗಿ $\sigma_i = 1$ ಎಂದು ತೆಗೆದುಕೊಂಡರೆ ಹಿಂದೆ ಹೇಳಿದ $X^2$ ವಿಚರದ ವಿತರಣೆ ದೊರೆಯುವುದು. ಅಂದರೆ $X^2$ ಎಂಬುದು $n$ ಪರಸ್ಪರ ಸ್ವತಂತ್ರವಾದ ಶಿಷ್ಟಪ್ರಸಾಮಾನ್ಯ ವಿಚರಗಳ ವರ್ಗಸಂಕಲನಕ್ಕೆ ಸಮವಾಗಿದ್ದರೆ $\frac{1}{2}\chi^2$ ಸಂಭಾವ್ಯತಾವಿಚರ ಪ್ರಾಚಲ $\frac{1}{2}n$ ಪ್ರಾಚಲ ಇರುವ ಗ್ಯಾಮ ವಿಚರಣೆಯಾಗುವುದು.

ಬೀಟ ವಿಚರಣೆಗಳೊಡನೆ ಸಂಬಂಧ : ಗ್ಯಾಮವಿಚರಕ್ಕೆ ಬೀಟ ಸಂಭಾವ್ಯತಾ ವಿಚರಗಳೊಡನೆ ಕೆಲವು ವಿಶಿಷ್ಟ ಸಂಬಂಧ ಉಂಟು. ಇವನ್ನು ಕೆಲವು ಪ್ರಮೇಯಗಳ ರೂಪದಲ್ಲಿ ನಿರೂಪಿಸಬಹುದು.

$x$ ಸಂಭಾವ್ಯತಾಚರದ ವ್ಯಾಪ್ತಿ 0ಯಿಂದ 1ರ ವರೆಗೆ ಇದ್ದು ಅದರ ಸಂಭಾವ್ಯತಾವಕಲ (ಪ್ರಾಬಬಿಲಿಟಿ ಡಿಫರೆನ್ಷಿಯಲ್) $\frac{1}{\beta(a,b)}\, x^{a-1}\,(1-x)^{b-1}\,dx$ ಎಂದಿದ್ದರೆ xನ್ನು ಮೊದಲನೆಯ ಜಾತಿಯ ಬೀಟ ವಿಚರ ಎಂದು ಕರೆಯುತ್ತೇವೆ. ಇಲ್ಲಿ $a, b$ಗಳು ಧನವಾಗಿರಬೇಕು. ಇಂಥ ವಿಚರವನ್ನು $\beta_1(a, b)$ ಸಂಭಾವ್ಯತಾವಿಚರ ಎಂದು ಪ್ರತೀಕಿಸುತ್ತೇವೆ. $a, b$ಗಳಿಗೆ ಈ ವಿತರಣೆಯ ಪ್ರಾಚಲಗಳೆಂದು ಹೆಸರು.

$x, y$ಗಳು ಪರಸ್ಪರ ಸ್ವತಂತ್ರ ಗ್ಯಾಮ ವಿಚರಗಳಾಗಿದ್ದು ಅವುಗಳ ಪ್ರಾಚಲಗಳು $a, b$ ಇದ್ದರೆ $x/(x+y)$ ಎಂಬುದು ಮೊದಲನೆಯ ಜಾತಿಯ ಬೀಟ ವಿಚರವಾಗಿರುವುದು; ಮತ್ತು ಅದರ ಪ್ರಾಚಲಗಳು $a, b$ ಗಳಾಗಿರುವುವು. $u = x + y,\ v = x/(x+y)$ ಎಂಬ ಪರಿವರ್ತನದಿಂದ ಇದನ್ನು ಸಾಧಿಸಬಹುದು. ಆಗ $x = uv, y = u\,(1-v)$ ಎಂದಾಗುವುದು; ಮತ್ತು ಪರಿವರ್ತನೆಯ ಜಕೋಬಿಯನ್ $J = u$ ಇರುವುದು. $x, y$ಗಳ ಜಂಟಿಸಂಭಾವ್ಯತಾವಕಲ

$\exp[-(x+y)]x^{a-1}y^{b-1}\ dxdy/\Gamma(a)\ \Gamma(b)$ ಇರುವುದು. $u, v$ ವಿಚರ ಗಳಿಗೆ ಪರಿವರ್ತಿಸಿದಾಗ $u, v$ಗಳ ಜಂಟಿಸಂಭಾವ್ಯತಾವಕಲ

$$\frac{e^{-u}u^{a+b-1}du}{\Gamma\ (a+b)} \quad \frac{v^{a-1}(1-v)^{b-1}dv}{\beta\ (a,\ b)}$$

ಎಂದಾಗುವುದು. ಇದರಿಂದಾಗಿ $u$ ವಿಚರ $a$+$b$ ಪ್ರಾಚಲದ ಗ್ಯಾಮವಿಚರವಾಗಿರುವುದೆಂದೂ $v$ ವಿಚರ $a, b$ ಪ್ರಾಚಲಗಳ ಮೊದಲನೆಯ ಜಾತಿಯ ಬೀಟ ವಿಚರವಾಗಿರುವುದೆಂದೂ ಸಿದ್ಧವಾಗುತ್ತದೆ. ಎರಡು ಸ್ವತಂತ್ರ ಗ್ಯಾಮವಿಚರಗಳ ಮೊತ್ತ ಗ್ಯಾಮವಿತರಣೆಯನ್ನು ಪಾಲಿಸುವುದೆಂದೂ ಅದರ ಪ್ರಾಚಲ ದತ್ತ ವಿಚರಗಳ ಪ್ರಾಚಲಗಳ ಮೊತ್ತಕ್ಕೆ ಸಮವಾಗಿರುವುದೆಂದೂ ಹಿಂದೆ ಹೇಳಲಾಗಿದೆ. ಅದಕ್ಕೆ ಈಗ ಉಪಪತ್ತಿ ದೊರೆತಂತಾಯಿತು.

ಮೇಲೆ ಕೊಟ್ಟಿರುವ ಸಂಭಾವ್ಯತಾವಕಲದಿಂದ ಮತ್ತೊಂದು ಪ್ರಮೇಯವನ್ನು ಸಾಧಿಸಬಹುದು : ಪರಸ್ಪರ ಸ್ವತಂತ್ರವಾದ $\beta_1(a, b)$ ಮತ್ತು $\Gamma(a+b)$ ವಿಚರಗಳ ಗುಣಲಬ್ಧ $\Gamma(a)$ ವಿಚರವಾಗಿರುವುದು $a, b$ಗಳು ಧನಸಂಖ್ಯೆಗಳಾಗಿದ್ದು ಧನ ಸಂಭಾವ್ಯತಾವಿಚರ $x$ನ ಸಂಭಾವ್ಯತಾವಕಲ $\frac{1}{\beta(a,\ b)} \cdot \frac{x^{b-1}\ dx}{(1+x)\ a+b}$ ಆಗಿದ್ದರೆ ಆಗ $x$ನ್ನು ಎರಡನೆಯ ಜಾತಿಯ ಬೀಟ ವಿಚರ ಎನ್ನುತ್ತೇವೆ. ಪ್ರಾಚಲಗಳು $a, b$ ಇರುವ ಎರಡು ಸ್ವತಂತ್ರ ಗ್ಯಾಮವಿತರಣೆಗಳ ನಿಷ್ಪತ್ತಿಯ ವಿತರಣೆ $a, b$ ಪ್ರಾಚಲಗಳುಳ್ಳ ಎರಡನೆಯ ಜಾತಿಯ ಬೀಟ ವಿತರಣೆಯಾಗಿರುವುದು. ದತ್ತ ಗ್ಯಾಮವಿಚರಗಳು $x, y$ ಆಗಿರಲಿ. $u = x + y,\ v = x/y$ ಎಂಬ ಪರಿವರ್ತನೆಗಳನ್ನು ಮಾಡಲಾಗಿ ಜಕೋಬಿಯನ್ $u/(1+v)^2$ ಆಗುವುದು. $x, y$ ಗಳ ಜಂಟಿ ಸಂಭಾವ್ಯತಾವಕಲವನ್ನು ಬರೆದು ವಿಚರಗಳ ಪರಿವರ್ತನೆಯನ್ನು ಮಾಡಿದರೆ ವಾಂಛಿತಫಲ ಸಿದ್ಧಿಸುವುದು. ಎರಡು ಸ್ವತಂತ್ರವಾದ ಗ್ಯಾಮ ವಿಚರಗಳ ಭಾಗಲಬ್ಧವನ್ನು ಸೂಕ್ತ ಸ್ಥಿರಾಂಕದಿಂದ (ಕಾನ್ಸ್‌ಟೆಂಟ್) ಗುಣಿಸಿದರೆ ದೊರೆಯುವ ವಿಚರ ಸ್ನೆಡಕೋರ್ ಎಂಬಾತನ $F$ ವಿತರಣೆಯನ್ನು ಪಾಲಿಸುತ್ತದೆ. ಅಂದರೆ $\frac{x}{y} = \frac{aF}{b}$ ಎಂದು ಪರಿವರ್ತನೆ ಮಾಡಲು $F = \frac{a}{b} \cdot \frac{x}{y}$ ಆಗುವುದು. ಇದರ ವಿತರಣೆಯನ್ನು ಫಿಷರನ ವಿಚರಣ–ನಿಷ್ಪತ್ತಿ ವಿತರಣೆ ಎಂದು ಸಹ ಕರೆಯುವರು. ವಿಚರಿತ ವಿಶ್ಲೇಷಣೆಯ ಪರೀಕ್ಷಣದಲ್ಲಿ $F$ ವಿಚರದ ವಿತರಣೆ ಉಪಯೋಗವಾಗುತ್ತದೆ.

ಎರಡು ಪ್ರಾಚಲಗಳ ಗ್ಯಾಮ ವಿತರಣೆ : ಮೇಲೆ ಹೇಳಿರುವ ಗ್ಯಾಮ ವಿತರಣೆಗೆ ಒಂದೇ ಒಂದು ಪ್ರಾಚಲ ಇರುವುದು. ಇದನ್ನು ಸಾರ್ವತ್ರೀಕರಿಸಿ ಎರಡು ಪ್ರಾಚಲಗಳಿರುವ ಗ್ಯಾಮ ವಿತರಣೆಯನ್ನು ಅಳವಡಿಸಿಕೊಂಡಿರುವರು. ಇದರ ಸಂಭಾವ್ಯತಾಸಾಂದ್ರತೆ

$$G(x|\alpha, a) = \frac{\alpha^a}{\Gamma(a)}e^{-\alpha x}\ x^{a-1},\ \alpha > 0,\ a > 0,\ 0 < x < \infty\ .$$

ಇದರಲ್ಲಿ $\alpha = 1$ ಎಂದು ತೆಗೆದುಕೊಂಡರೆ ಏಕ ಪ್ರಾಚಲದ ಗ್ಯಾಮ ವಿತರಣೆ ದೊರೆಯುವುದು. ಎರಡು ಪ್ರಾಚಲಗಳ ಈ ಗ್ಯಾಮ ವಿತರಣೆಯ ಸಮಾಕಲಿತಗಳನ್ನು $k_1, k_2$, ... ಎಂದು ಸೂಚಿಸಿದರೆ $k_r = a\Gamma(r)/\alpha^r$ ಎಂದು ತೋರಿಸಬಹುದು.

ಈ ಗ್ಯಾಮವಿಚರದ ವಿತರಣೆಯ ಉತ್ಪನ್ನ

$F(x) = \frac{1}{\Gamma(a)} \int_0^{\alpha x} e^{-v}v^{a-1}dv$ ಇಲ್ಲಿ $v = u\alpha$. ಇದು ಅಪೂರ್ಣ ಬೀಟ ಉತ್ಪನ್ನಕ್ಕೆ ಸಂಬಂಧಿಸಿದ್ದಾಗಿದೆ. $\Gamma_y\ (a) = \int_0^y e^{-v}v^{a-1}dx$ ಎಂಬ ($y$, $a$)ಗಳ ಉತ್ಪನ್ನಕ್ಕೆ ಅಪೂರ್ಣ ಗ್ಯಾಮ ಉತ್ಪನ್ನ ಎಂದು ಹೆಸರು. ಪಿಯರ್ಸನ್ನನ ಕೋಷ್ಟಕಗಳಲ್ಲಿ ಅಪೂರ್ಣ ಗ್ಯಾಮ ಉತ್ಪನ್ನಗಳ ಬೆಲೆಗಳನ್ನು ಕೊಟ್ಟಿದೆ. ಮೇಲೆ ವ್ಯಾಖ್ಯಿಸಿರುವ $F(x)$ನ ಬೆಲೆಯನ್ನು ಕಂಡುಹಿಡಿಯಲು ಈ ಕೋಷ್ಟಕಗಳನ್ನು ನೋಡಿ ತಿಳಿಯಬಹುದು. ಅಪೂರ್ಣ ಗ್ಯಾಮ ಉತ್ಪನ್ನಕ್ಕೂ ಪೂರ್ಣ ಗ್ಯಾಮ ಉತ್ಪನ್ನಕ್ಕೂ ಇರುವ ನಿಷ್ಪತ್ತಿಯನ್ನು $I(u, a\text{-}1)$ ಎಂದು ಸೂಚಿಸುತ್ತೇವೆ. ಅಂದರೆ $I(u,\ a-1) = F_y\ (a)/\Gamma(a)$ . ಇಲ್ಲಿ $u = ya^{-\frac{1}{2}}$. $F(x)$ನ ಬೆಲೆಯನ್ನು ಕಂಡುಹಿಡಿಯಬೇಕೆಂದರೆ $x$ ದತ್ತವಾದಾಗ $I\left(xa^{-\frac{1}{2}},\ a-1\right)$ ಇದರ ಬೆಲೆಯನ್ನು ಕೋಷ್ಟಕದಲ್ಲಿ ನೋಡಬೇಕು. $x_1, x_2$ ಸಂಭಾವ್ಯತಾವಿಚರಗಳ ವಿತರಣೆಗಳು $G\ (x_1|\alpha, a_1)$ . $G\ (x_2|\alpha, a_2)$ ಆಗಿದ್ದರೆ ಆಗ $x_1 + x_2$ ವಿಚರದ ವಿತರಣೆ $G\ (x_1 + x_2|\alpha, a_1 + a_2)$ ಇರುವುದೆಂದು ತೋರಿಸಬಹುದು. ಅಂದರೆ $\alpha$ ಪ್ರಾಚಲ ಬದಲಾಗದಿದ್ದಾಗ ಗ್ಯಾಮ ವಿತರಣೆಗೆ ಪ್ರಜನನ ಗುಣ ಇರುತ್ತದೆ.

ಬಹುವಿಚರ ಗ್ಯಾಮ ವಿತರಣೆ (ಮಲ್ಟಿವೇರಿಯೇಟ್ ಗ್ಯಾಮ ಡಿಸ್ಟ್ರಿಬ್ಯೂಷನ್) : ಇಲ್ಲಿಯ ವರೆಗೆ ಏಕವಿಚರ ಗ್ಯಾಮ ವಿತರಣೆಯನ್ನು ಅಭ್ಯಾಸ ಮಾಡಿದೆವು. ಇದನ್ನು ಬಹು ವಿಚರದ ಪಕ್ಷಕ್ಕೆ ಕೂಡ ಸಾರ್ವತ್ರೀಕರಿಸಬಹುದು. ಪೂರ್ವಭಾವಿಯಾಗಿ $a$ಯ $p$ ದರ್ಜೆಯ ಪಲಮಡಿ ಗ್ಯಾಮ ಉತ್ಪನ್ನದ (ಮಲ್ಟಿಪ್ಲೆಕ್ಸ್ ಗ್ಯಾಮ ಫಂಕ್ಷನ್ ಆಫ್ ಆರ್ಡರ್ $p$) ವ್ಯಾಖ್ಯೆಯನ್ನು ಮೊದಲು ಕೊಡುತ್ತೇವೆ. ಇದಕ್ಕೆ $\Gamma p\,(a)$ ಎಂಬ ಪ್ರತೀಕವನ್ನು ಬಳಸುತ್ತೇವೆ.

$$\Gamma_p\,(a) = \prod_{j=0}^{p-1}\left[\Gamma\left(\frac{1}{2}\right)(a - j/2)\right]$$

$$= p\,(p-1)/4\left\{\Gamma(a)\ \Gamma\left(a-\frac{1}{2}\right)\ \Gamma(a-1) \ldots \ldots \ldots \Gamma\left(a - \frac{p-1}{2}\right)\right\}$$

ಇದರಲ್ಲಿ $p = 1$ ಎಂದು ಆದೇಶಿಸಿದರೆ ಇದು ಸಾಧಾರಣ ಗ್ಯಾಮ ಉತ್ಪನ್ನವಾಗುವುದು. $A$ ಎಂಬುದು ಸ್ಥಿರಾಂಕಗಳ ಖಚಿತ ಧನ ನೈಜ $p\times p$ ಸಮಾಂಗ ಮಾತೃಕೆಯಾಗಿದ್ದು (ಸಿಮೆಟ್ರಿಕ್ ಮ್ಯಾಟ್ರಿಕ್ಸ್) $X$ ಎಂಬುದು ವಿಚರಗಳ ಖಚಿತ ಧನ ನೈಜ $pXp$ ಸಮಾಂಗ ಮಾತೃಕೆ ಆಗಿದ್ದರೆ ಆಗ

$$\int_{X>0} e^{-\mathrm{tr}\ AX}\ |X|^{\ a-\frac{1}{2}(p+1)}dX\ ,\ \ a > \frac{1}{2}(p+1)$$

ಎಂಬ ಅನುಕಲದ ಬೆಲೆ $\Gamma_p(a)\left|\,|A|\right.^a$ ಇರುವುದು. ಇದಕ್ಕೆ ಸೀಗಲನ ಉಪಪ್ರಮೇಯ (ಲೆಮ್ಮ) ಎಂದು ಹೆಸರು. ಇಲ್ಲಿ tr *AX* ಎಂಬುದು *AX* ಮಾತೃಕೆಯ ಟ್ರೇಸ್ ಅಥವಾ ಪ್ರಧಾನ ಕರ್ಣದ ಮೇಲಿರುವ ಪದಗಳ ಮೊತ್ತ. ಸಂಭಾವ್ಯತಾವಿಚರಗಳ ಮಾತೃಕೆ *X* ಇರಲಿ; ಮತ್ತು ಇದರ ಸಂಭಾವ್ಯತಾ ಸಾಂದ್ರತೆ

$$\frac{|A|^a}{\Gamma_p(a)} e^{-\mathrm{tr}AX} \; |X|^{\;a-\frac{1}{2}(p+1)} \; dX$$

ಆಗಿದ್ದರೆ ಆಗ ಪಲಮಡಿಗ್ಯಾಮ ವಿವರ್ತದಂತೆ *X*ನ ವಿತರಣೆ ಇರುವುದು ಎನ್ನುತ್ತೇವೆ. ಇದನ್ನು $G\,(X|A,a)$ ಅಥವಾ *G (A, a)* ಎಂಬ ಪ್ರತೀಕದಿಂದ ಸೂಚಿಸುತ್ತೇವೆ. ಇದರಲ್ಲಿ *A=I* ಇದ್ದಾಗ ಇದರ ವಿಶಿಷ್ಟ ರೂಪ $G\;(X|I,a)$ ಆಗುವುದು.

ಸ್ವಾತಂತ್ರ್ಯಾಂಕ *n* ಇದ್ದು ಸಹವಿಚರಣೆ ಮಾತೃಕೆ (ಕೋವೇರಿಯೆನ್ಸ್ ಮ್ಯಾಟ್ರಿಕ್ಸ್) Σ ಇರುವ *S*ನ ವಿಷಾರ್ಟ್ ವಿತರಣೆ ಹೀಗಿರುವುದು:

$$G\left(S, \frac{1}{2}\Sigma^{-1}, \frac{n}{2}\right) = \frac{1}{2^{\,np/2}\,|\Sigma|^{\,n/2}\,\Gamma_p\left(n/2\right)}$$

$$X \;\; \exp\left[-\frac{1}{2}\mathrm{tr}\;\Sigma^{-1}S\right] \; |S|\,(n-p-1)/2 \;\; dS$$

ಆದ್ದರಿಂದ *S*ನ ವಿತರಣೆ ಪಲಮಡಿ ಗ್ಯಾಮವಿವರ್ತದಂತಿರುವುದು ಎಂದು ಗೊತ್ತಾಗುತ್ತದೆ.

ಏಕವಿವರ್ತ ಗ್ಯಾಮವಿತರಣೆಯ ಗುಣಗಳಿಗೆ ಸಂವಾದಿಯಾದ ಗುಣಗಳು ಪಲಮಡಿ ಗ್ಯಾಮವಿತರಣೆಗಳಿಗೆ ಇವೆ. *X,Y* ಎಂಬುದು *G (A,a), G (A,b)* ಪಲಮಡಿಗ್ಯಾಮ ವಿವರ್ತಗಳಾದರೆ *U=X+Y* ಎಂಬುದು *G (A,a+b)* ಎಂಬ ಪಲಮಡಿ ಗ್ಯಾಮವಿವರ್ತವಾಗಿರುವುದು. ಇದರಂತೆಯೇ

$V = (X+Y)^{-\frac{1}{2}} \; X \; (X+Y)^{-\frac{1}{2}}$ ಎಂಬುದು ಪಲಮಡಿ ಬೀಟ ವಿವರ್ತವಾಗಿರುವುದು. ಪಲಮಡಿ ಬೀಟ ಉತ್ಪನ್ನವನ್ನು ಕೆಳಗೆ ಕಾಣಿಸಿದ ಎರಡು ಬೇರೆ ಬೇರೆ ರೀತಿಯಾಗಿ ವ್ಯಾಖ್ಯೆ ಮಾಡಬಹುದು.

$$B_p(a,b) = \int_0^I \; |X|^{\;a-\frac{1}{2}(p+1)} \; |I-X|^{\;b-\frac{1}{2}(p+1)} \; dX$$

ಅನುಕಲದ ಕೆಳಗಣ ಪರಿಮಿತಿ *0* ಎಂದರೆ $X>0$ ಎಂದರ್ಥ, ಎಂದರೆ *X* ಎಂಬುದು ಧನ ಖಚಿತ ಮಾತೃಕೆ ಮತ್ತು ಮೇಲಣ ಪರಿಮಿತಿ *I* ಎಂದರೆ *I-X* ಎಂಬ ಮಾತೃಕೆ ಧನ ಖಚಿತವಾದದ್ದು ಎಂದರ್ಥ. ಹಾಗೂ

$a > \frac{1}{2}(p-1),\; b > \frac{1}{2}(p-1)$. ಇದಕ್ಕೆ *p*- ಮಡಿ ಬೀಟ ಉತ್ಪನ್ನ ಎಂದು ಹೆಸರು. ಇದನ್ನೇ ಮತ್ತೊಂದು ರೀತಿಯಲ್ಲಿ ವ್ಯಾಖ್ಯಿಸಬಹುದು.

$$B_p\,(a,b) = \int \frac{|Y|^{\;a-\frac{1}{2}(p+1)}}{|I+Y|^{\;a+b}} \; dY,\;\; Y>0,\;\; a>\frac{1}{2}(p-1),\;\; b>\frac{1}{2}(p-1)$$

ಪಲಮಡಿ ಗ್ಯಾಮ ಉತ್ಪನ್ನಕ್ಕೂ ಪಲಮಡಿ ಬೀಟ ಉತ್ಪನ್ನಕ್ಕೂ ಇರುವ ಸಂಬಂಧವನ್ನು ಹೀಗೆ ನಿರೂಪಿಸಬಹುದು:

$$B_p\;(a,\,b) = \frac{\Gamma_p\;(a)\;\Gamma_p\;(b)}{\Gamma_b\;(a+b)}$$

(ಎಂ.ವಿ.ಜೆ.)

**ಗ್ಯಾಮೆಕ್ಸೇನ್ :** ಪ್ರಬಲ ಕೀಟನಾಶಕ. ಗ್ಯಾಮ–ಬೆಂಜೀನ್ ಹೆಕ್ಸಕ್ಲೋರೈಡ್, $C_6H_6Cl_6$. 1,2,3,4,5,6– ಹೆಕ್ಸಕ್ಲೋರೋಸೈಕ್ಲೋಹೆಕ್ಸೇನಿನ ಗ್ಯಾಮ ಐಸೊಮರ್. ಇದರ ಇತರ ಹೆಸರುಗಳು : ಲಿಂಡೇನ್, ಬಿಎಚ್‌ಸಿ, 666. ಬಿಳಿಯ ಸ್ಫಟಿಕಾಕೃತಿಯ ಪುಡಿ. ಸ್ವಲ್ಪ ಹಳತು ವಾಸನೆಯುಳ್ಳದ್ದು. ಕರಗುವ ಉಷ್ಣತೆ $112.5^0$ ಸೆಂ. ಅಸಿಟೋನ್, ಬೆಂಜೀನ್ ಮತ್ತು ಕ್ಲೋರೋಫಾರಮುಗಳಲ್ಲಿ ಯಥೇಚ್ಛವಾಗಿ ಲೀನವಾಗುವುದು. ಆಲ್ಕೊಹಾಲಿನಲ್ಲಿ ಪೂರ್ತಿ ದ್ರಾವ್ಯ, ಈಥೈಲ್ ಗ್ಲೈಕಾಲಿನಲ್ಲಿ ಸ್ವಲ್ಪ ಮಾತ್ರ ದ್ರಾವ್ಯ, ನೀರಿನಲ್ಲಿ ಅದ್ರಾವ್ಯ. ಚರ್ಮದ ಮುಖಾಂತರ ಹೀರುವುದು. ನುಂಗಿದರೆ ಸಾವು ಸಂಭವಿಸಬಹುದು.

1945ರಲ್ಲಿ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸಿನವರು ಪ್ರಥಮವಾಗಿ ಇದನ್ನು ಪ್ರಕಟಿಸಿದರು. ಡಿಡಿಟಿಗಿಂತಲೂ ಸ್ಥಿರವಾದ ಮತ್ತು ಅದಕ್ಕಿಂತಲೂ ಶೀಘ್ರವಾಗಿ ಪರಿಣಾಮಕಾರಿಯಾದ ಕೀಟನಾಶಕವಿದು. ಇದರ ಅಣು ಇತರ ಸ್ಟೀರಿಯೊ ಐಸೊಮರು ಗಳಿಗಿಂತ ಚಿಕ್ಕದು. ಆದ್ದರಿಂದ ಇದು ಸುಲಭವಾಗಿ ತೂರಿಹೋಗಿ ಪರಿಣಾಮಕಾರಿಯಾಗ ಬಲ್ಲದು ಎಂದು ಮುಲ್ಲಿನ್ಸ್ ಅಭಿಪ್ರಾಯ. ಬೀಟ ಐಸೊಮರಿನಂತಲ್ಲದೆ ಇದು ಸೋಡಿಯಯಮ್ ಇಥಾಕ್ಸೈಡಿನ ಆಲ್ಕೊಹಾಲ್ ದ್ರಾವಣದೊಂದಿಗೆ ವರ್ತಿಸಿ ಹೈಡ್ರೋಜನ್ ಕ್ಲೋರೈಡನ್ನು ಸುಲಭವಾಗಿ ಬಿಟ್ಟುಕೊಡುವುದು. ಗ್ಯಾಮೆಕ್ಸೇನಿನ ಅಕ್ಕಪಕ್ಕದ ಮೂರು ಕ್ಲೋರಿನ್ ಪರಮಾಣುಗಳು ಅಕ್ಷದ ಸುತ್ತಲಿನ ಸ್ಥಾನಗಳಲ್ಲೂ ಉಳಿದ ಮೂರು ಪರಮಾಣುಗಳು ವೃತ್ತ ಸಮೀಪದ ಸ್ಥಾನಗಳಲ್ಲೂ ಇರುವುದಾಗಿ ಎಕ್ಸ್‌ಕಿರಣಗಳ ಅಧ್ಯಯನದಿಂದ ಗೊತ್ತಾಗಿದೆ. ಬೆಂಜೀನನ್ನು ಅತಿನೇರಳೆ ಬೆಳಕಿನ ಸಮ್ಮುಖದಲ್ಲಿ ಕ್ಲೋರಿನೀಕರಿಸುವುದರಿಂದ ಶೇ.12 ಗ್ಯಾಮೆಕ್ಸೇನ್ ಇರುವ ಸ್ಟೀರಿಯೊ ಐಸೊಮರುಗಳ ಮಿಶ್ರಣ ಉತ್ಪತ್ತಿಯಾಗುವುದು. ಈ ಮಿಶ್ರಣವನ್ನು ಆಂಶಿಕ ಸ್ಫಟಿಕೀಕರಿಸಿ ಗ್ಯಾಮೆಕ್ಸೇನನ್ನು ಬೇರ್ಪಡಿಸಬಹುದು. ಇದನ್ನು ಚೀಲಗಳಲ್ಲಿಯೂ ಪೀಪಾಯಿಗಳಲ್ಲಿಯೂ ಶೇಖರಿಸಿಡಬಹುದು.



ಗ್ಯಾಮೆಕ್ಸೇನ್ (666)

(ಪಿ.ಜಿ.ಆರ್.)

**ಗ್ಯಾರಿಕ್, ಡೇವಿಡ್ :** 1717–79. ಇಂಗ್ಲೆಂಡಿನ ಜನಪ್ರಿಯ ನಟ, ನಾಟಕಕಾರ ಮತ್ತು ರಂಗಭೂಮಿಯ ನಿಯಂತ್ರಕ. ಸಹಜ ಅಭಿನಯವನ್ನು ಪ್ರಚಾರಕ್ಕೆ ತಂದವ. ಜನಿಸಿದ್ದು ಲಿಚ್‌ಫೀಲ್ಡ್‌ನ ಬಳಿ. ಪ್ರಾರಂಭದ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪಡೆದು ಅನಂತರ ಸ್ಯಾಮ್ಯುಯೆಲ್ ಜಾನ್‌ಸನ್‌ನೊಂದಿಗೆ ಲಂಡನಿಗೆ ಹೋದ. ಕಾನೂನು ಶಿಕ್ಷಣ ಪಡೆಯುವ ಆಶೆಯನ್ನು ತ್ಯಜಿಸಿ, ಸ್ವಲ್ಪ ಕಾಲ ದ್ರಾಕ್ಷಾರಸ ವ್ಯಾಪಾರ ಮಾಡಿದ. ಅನಂತರ ನಾಟಕದ ಗೀಳು ಹಿಡಿದು ನಟನಾದ. ಚಾರ್ಲ್ಸ್ ಮ್ಯಾಕ್ಲಿನ್‌ನಂಥ ಹೆಸರಾಂತ ರಂಗಭೂಮಿಯ ನಿರ್ವಾಹಕರ ಸ್ನೇಹ ಸಂಪಾದಿಸಿದ. ಸುಖಾಂತ, ದುಃಖಾಂತ ನಾಟಕಗಳ ವಿವಿಧ ಪ್ರಕಾರಗಳನ್ನು ಆಳವಾಗಿ ಅಭ್ಯಾಸಮಾಡಿದ.



ರಂಗಭೂಮಿಯ ಮೇಲೆ ಮೊದಲ ಬಾರಿಗೆ ಈತ ಕಾಣಿಸಿಕೊಂಡಿದ್ದು 1741ರಲ್ಲಿ. ಅದೇ ವರ್ಷ ಮೂರನೆಯ ರಿಚರ್ಡ್ ಆಗಿ ಅಭಿನಯಿಸಿ ಹೆಸರುಗಳಿಸಿದ. ಪ್ರವೇಶದ 7 ತಿಂಗಳ ಅವಧಿಯಲ್ಲಿ 18 ವಿವಿಧ ಪಾತ್ರಗಳನ್ನು ಅಭಿನಯಿಸಿದ. ಅಭಿನಯದಲ್ಲಿ ಸಹಜತೆಯನ್ನು ಸಾಧಿಸಿ, ನೂತನ ಮಾರ್ಗವನ್ನು ತೆರೆದು, ಲಂಡನ್ ಜನತೆಗೆ ಪ್ರಿಯನಾದ. ಈತನ ಅಭಿನಯವನ್ನು ಕವಿ ಅಲೆಗ್ಸಾಂಡರ್ ಪೋಪ್ ತುಂಬ ಮೆಚ್ಚಿಕೊಂಡಿದ್ದ.

ಗ್ಯಾರಿಕ್ ಅನಂತರ ಡ್ರೂರಿ ಲೇನ್ ಥಿಯೇಟರಿನ ನಿಯಂತ್ರಕನೂ ಅದರ ಒಬ್ಬ ಪಾಲುಗಾರನೂ ಆದ (1747). ರಂಗಭೂಮಿಯಲ್ಲಿನ ನೆರಳು ಬೆಳಕಿನ ವಿನ್ಯಾಸ ಮತ್ತು ಪೀಠೋಪಕರಣಗಳಲ್ಲಿ ಹೊಸ ಮಾರ್ಪಾಡುಗಳನ್ನು ಮಾಡಿದನಲ್ಲದೆ, ಅಭಿನಯಿಸುವ ರೀತಿಯಲ್ಲಿಯೂ ಅನೇಕ ಸುಧಾರಣೆಗಳನ್ನು ತಂದ. ಷೇಕ್ಸ್‌ಪಿಯರ್ ಮತ್ತು ಜಾನ್‌ಸನ್‌ರ ಅನೇಕ ನಾಟಕಗಳನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ರಂಗಭೂಮಿಯ ಮೇಲೆ ಪ್ರದರ್ಶಿಸಿ ಅವನ್ನು ಪುನರುಜ್ಜೀವನಗೊಳಿಸಿದ. ಹೊಸ ನಾಟಕಕಾರರ ಅನೇಕ ನಾಟಕಗಳನ್ನು ಪ್ರದರ್ಶಿಸಿ ಅವರನ್ನು ಪ್ರೋತ್ಸಾಹಿಸಿದ. ಈತ ಅನೇಕ ನಾಟಕಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಮುಖ್ಯವಾಗಿ ಲೈಯಿಂಗ್ ವ್ಯಾಲೆಟ್ (1741), ಮಿಸ್ ಇನ್ ಹರ್ ಟೀನ್ಸ್ (1747) ಮತ್ತು ಐರಿಷ್ ವಿಡೊ (1772) ಇವುಗಳನ್ನು ಹೆಸರಿಸಬಹುದು.

ಈವ್ ಮೇರಿ ವಯೊಲೆಟ್ಟ ಎಂಬ ಫ್ರೆಂಚ್ ನರ್ತಕಿಯನ್ನು ಗ್ಯಾರಿಕ್ 1749ರಲ್ಲಿ ಮದುವೆಯಾದ.

ಗ್ಯಾರಿಕ್ ತನ್ನ ಜೀವಾವಧಿಯಲ್ಲಿ ಒಟ್ಟು 96 ವಿವಿಧ ಪಾತ್ರಗಳನ್ನು ಅಭಿನಯಿಸಿ ನಾಟಕ ಕಲೆಗೆ ಒಂದು ವಿಶಿಷ್ಟವಾದ ಮೆರುಗನ್ನು ಕೊಟ್ಟ. ಈತ ನಿರ್ವಹಿಸಿದ ಪಾತ್ರಗಳಲ್ಲಿ ಮುಖ್ಯವಾದುವು ಮೂರನೆಯ ರಿಚರ್ಡ್, ಹ್ಯಾಮ್ಲೆಟ್, ಕಿಂಗ್ ಲಿಯರ್ ಮತ್ತು ಅಬೆಲ್ ಡ್ರಗರ್–ಇವು. ತನ್ನ ಆಕರ್ಷಕ ಸಂಭಾಷಣೆ ಮತ್ತು ಸುಸಂಸ್ಕೃತ ನಡೆವಳಿಕೆಯಿಂದ ಅಸಂಖ್ಯಾತ ಅಭಿಮಾನಿಗಳನ್ನೂ ಸ್ನೇಹಿತರನ್ನೂ ಗ್ಯಾರಿಕ್ ಸಂಪಾದಿಸಿದ. ಈತ ಜಾನ್ಸನ್‌ನ ಸ್ನೇಹಕೂಟದ ಒಬ್ಬ ಸದಸ್ಯನೂ ಆಗಿದ್ದ. ಈತನ ಔದಾರ್ಯವನ್ನು ಜಾನ್ಸನ್ ಪ್ರಶಂಸಿಸಿದ್ದಾನೆ. ಗ್ಯಾರಿಕ್‌ನನ್ನು ಕುರಿತ ಅನೇಕ ಜೀವನ ಚರಿತ್ರೆಗಳೂ ಪ್ರಕಟವಾಗಿವೆ. ಅವುಗಳಲ್ಲಿ ಹೆಸರಿಸಬಹುದಾದ್ದು ಮಾರ್ಗರೆಟ್ ಬಾರ್ಟನ್ನಳದು(1948).

ಈತ 1779 ರ ಜನವರಿ 20 ರಂದು ನಿಧನನಾದ. ಗ್ಯಾರಿಕ್‌ನನ್ನು ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ಪೋಯೆಟ್ಸ್ ಕಾರ್ನರ್ ಎಂಬ ಸ್ಥಳದಲ್ಲಿ ಷೇಕ್ಸ್‌ಪಿಯರನ ಪ್ರತಿಮೆಯ ಪಕ್ಕದಲ್ಲಿ ಸಮಾಧಿ ಮಾಡಿದ್ದಾರೆ. ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ಸಮಾಧಿಯಾಗುವ ಗೌರವಕ್ಕೆ ಪಾತ್ರನಾದ ಮೊದಲ ನಟ ಇವನು. ಈತ ಸತ್ತಾಗ ಜಾನ್ಸನ್ 'ರಾಷ್ಟ್ರಗಳ ಉಲ್ಲಾಸವೇ ಅಸ್ತಂಗತವಾಯಿತು' ಎಂದು ಶೋಕಿಸಿದನಂತೆ.

ಗ್ಯಾರಿಕ್‌ನ ಮರಣಾನಂತರ, ಗ್ಯಾರಿಕ್ ಕ್ಲಬ್ ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಲಾಯಿತು (1831). ನಾಟಕಕಲೆಗೆ ಪ್ರೋತ್ಸಾಹ ಕೊಡುವುದು, ನಟನ ಕಲೆಗೆ ಸಂಬಂಧಿಸಿದ ಗ್ರಂಥಭಂಡಾರವೊಂದನ್ನು ತೆರೆಯುವುದು ಇದರ ಮುಖ್ಯ ಉದ್ದೇಶವಾಗಿತ್ತು. ಕ್ಲಬ್ಬಿನ ಆಸ್ತಿಯಾಗಿ 1000 ನಾಟಕಸಂಬಂಧಿ ಚಿತ್ರಗಳೂ ಇತರ ಚಿತ್ರಗಳೂ ಇವೆ. ಜೊತೆಗೆ ನಾಟಕ ರಂಗಕ್ಕೆ ಸಂಬಂಧಿಸಿದ ಹಳೆಯ ದಾಖಲೆಗಳನ್ನು ವಿಪುಲವಾಗಿ ಸಂಗ್ರಹಿಸಲಾಗಿದೆ. 1881ರಲ್ಲಿ ವೆಸ್ಟ್‌ಮಿನಿಸ್ಟರ್ ನಗರದಲ್ಲಿ ಸ್ಥಾಪಿತವಾದ ಗ್ಯಾರಿಕ್ ಥಿಯೇಟರ್ ಇಂದಿಗೂ ಕ್ರಿಯಾಶೀಲವಾಗಿದೆ. (ಪಿ.ಎಮ್.ಎಚ್.)

**ಗ್ಯಾರಿಸನ್, ವಿಲಿಯಮ್ ಲಾಯ್ಡ್ :** 1805–79. ಅಮೆರಿಕದಲ್ಲಿ ಗುಲಾಮಗಿರಿಯ ವಿರುದ್ಧ ಹೋರಾಟ ನಡೆಸಿದವರಲ್ಲೊಬ್ಬ. ಮೆಸಾಚುಸೆಟ್ಸ್‌ನ ನ್ಯೂಬರಿಪೋರ್ಟಿನಲ್ಲಿ 1805ರ ಡಿಸೆಂಬರ್ 12ರಂದು ಜನಿಸಿದ. ತಂದೆ ಅಬಿಜಾ ಹಡಗು ಚಾಲಕ, ಕುಡುಕ. ಗ್ಯಾರಿಸನ್ ಮಗುವಾಗಿದ್ದಾಗಲೇ ಇವನ ತಂದೆ ಮನೆ ತೊರೆದ. ತಾಯಿ ಸುಶೀಲೆ, ರೂಪವಂತೆ. ಗ್ಯಾರಿಸನ್‌ನಿಗೆ ಹೆಚ್ಚು ಶಿಕ್ಷಣವೇನೂ ದೊರೆಯಲಿಲ್ಲ. ಆದರೆ ತನಗೆ ದೊರೆತ ಅವಕಾಶಗಳನ್ನೆಲ್ಲ ಇವನು ಸದುಪಯೋಗ ಪಡಿಸಿಕೊಂಡ. ನ್ಯೂಬರಿಪೋರ್ಟ್ ಮತ್ತು ಬಾಲ್ಟಿಮೋರ್‌ನಲ್ಲಿ ಚಪ್ಪಲಿ ತಯಾರಿಕೆಯನ್ನು ಕಲಿಯಲು ಇವನನ್ನು ಸೇರಿಸಲಾಗಿತ್ತು. ಅನಂತರ ಇವನು ಅಲಮಾರು ತಯಾರಕನೊಬ್ಬನಲ್ಲಿ ತರಬೇತುದಾರನಾಗಿದ್ದ. ನಡುವೆಯೇ ಇವನು ಓಡಿಹೋದ. ನ್ಯೂಬರಿಪೋರ್ಟ್ ಹೆರಾಲ್ಡ್ ಪತ್ರಿಕೆಯಲ್ಲಿ ಮೊಳೆ ಜೋಡಿಸುವ ಕೆಲಸ ಕಲಿಯಲು ಇವನನ್ನು ಹಚ್ಚಲಾಯಿತು. ಅದರಲ್ಲೇ ಇವನು ಪಳಗಿದ. ಅನಂತರ ಆ ಪತ್ರಿಕೆಗಾಗಿ ಅಜ್ಞಾತವಾಗಿ ಲೇಖನಗಳನ್ನು ಬರೆದು ಸಂಪಾದಕನ ಮೆಚ್ಚುಗೆ ಗಳಿಸಿದ.



ಇತರ ಅನೇಕ ಪತ್ರಿಕೆಗಳಿಗೂ ಲೇಖನ ಬರೆದ. ಮೊಳೆ ಜೋಡಿಸುವ ಕೆಲಸದಲ್ಲೂ ಪರಿಣತಿ ಪಡೆದ ಗ್ಯಾರಿಸನ್‌ನಿಗೆ ಮೇಸ್ತ್ರಿಯ ಹುದ್ದೆ ದೊರಕಿತು. ಬರೆವಣಿಗೆಯಲ್ಲಿ ಇವನು ಗಳಿಸಿದ ಸಾಮರ್ಥ್ಯ ಸಾಮಾನ್ಯವಾದದ್ದಲ್ಲ. ಸಂಪಾದಕ ಸ್ವಲ್ಪಕಾಲ ತನ್ನ ಕೆಲಸ ನಿರ್ವಹಿಸಲಾಗದಾಗ ಪತ್ರಿಕೆ ನಡೆಸುವ ಹೊಣೆ ಇವನದಾಗಿತ್ತು.

ಮುದ್ರಣಾಲಯದಲ್ಲಿ ಗ್ಯಾರಿಸನ್ ನಿಜವಾದ ವಿದ್ಯೆ ಸಂಪಾದಿಸಿದ. ಸ್ವಾತಂತ್ರ್ಯದ ಬಗ್ಗೆ ಈತನ ಕಾಳಜಿ ಅಪಾರ. ತುರ್ಕಿಯ ಆಡಳಿತದಿಂದ ವಿಮೋಚನೆ ಹೊಂದಲು ಗ್ರೀಕರು ಕೈಗೊಂಡಿದ್ದ ಹೋರಾಟದಲ್ಲಿ ಇವನಿಗೆ ಸಹಾನುಭೂತಿ ಇತ್ತು. ತಾನೂ ಏಕೆ ಸಿಪಾಯಿಯ ತರಬೇತು ಹೊಂದಿ ಯುದ್ಧಕ್ಕೆ ಧುಮುಕಬಾರದು ಎಂದೂ ಆಲೋಚಿಸುತ್ತಿದ್ದ. 1826ರಲ್ಲಿ ಇವನ ತರಬೇತಿಯ ಅವಧಿ ಮುಗಿಯಿತು. ತಾನೇ ಫ್ರೀ ಪ್ರೆಸ್ ಎಂಬ ಪತ್ರಿಕೆಯೊಂದನ್ನಾರಂಭಿಸಿದ. ಸ್ವದೇಶಾಭಿಮಾನವನ್ನು ಬೆಳೆಸುವುದೇ ಇವನ ಪತ್ರಿಕೆಯ ಮುಖ್ಯೋದ್ದೇಶ. ಆದರೆ ಇವನ ಪತ್ರಿಕೆ ಅತ್ಯಂತ ತೀವ್ರಗಾಮಿಯೆನಿಸಿಕೊಂಡು ನಿಂತುಹೋಯಿತು. ಅನಂತರ ಈತ ಬಾಸ್ಟನ್ನಿಗೆ ಹೋಗಿ ಮುದ್ರಣ ಕಾರೇಗಾರ (ಜರ್ನಿಮನ್) ಆದ. ನ್ಯಾಷನಲ್ ಫಿಲಾಂತ್ರಪಿಸ್ಟ್ ಎಂಬ ಪತ್ರಿಕೆಯೊಂದು ಇವನ ಸಂಪಾದಕತ್ವದಲ್ಲಿ ಹೊರಡುತ್ತಿತ್ತು. ಮದ್ಯಪಾನವನ್ನು ವರ್ಜಿಸಬೇಕೆಂಬ ಉದ್ದೇಶವಿದ್ದ ಪ್ರಥಮ ಅಮೆರಿಕನ್ ಪತ್ರಿಕೆಯಿದು. ಆ ವರ್ಷದ ಕೊನೆಯೊಳಗೆ ಪತ್ರಿಕೆಯ ಒಡೆತನ ಬದಲಾದ್ದರಿಂದ ಈತ ಅದನ್ನು ಬಿಡಬೇಕಾಯಿತು. 1828ರಲ್ಲಿ ಬೆನಿಂಗ್ಟನಿನಲ್ಲೊಂದು ಪತ್ರಿಕೆ ಪ್ರಾರಂಭಿಸಿದ. ಆ ಪತ್ರಿಕೆಯೂ ಒಂದು ವರ್ಷದೊಳಗೆ ಪರಿಸಮಾಪ್ತಿ ಹೊಂದಿತು.

ಗುಲಾಮಗಿರಿ ನಿರ್ಮೂಲವಾಗಬೇಕೆಂದು ಆಗ ಪ್ರಚಾರ ನಡೆಸುತ್ತಿದ್ದ ಬೆಂಜಮಿನ್ ಲಂಡಿಯ ಪರಿಚಯ ಇವನಿಗೆ ಆಯಿತು. ಗ್ಯಾರಿಸನನಿಗೂ ಈ ವಿಷಯವಾಗಿ ಆಸಕ್ತಿ ಬೆಳೆಯಿತು. ಗುಲಾಮರ ವಿಮೋಚನೆ ಕ್ರಮಕ್ರಮವಾಗಿ ಆಗಬೇಕೆಂಬ, ವಿಮೋಚನೆಗೊಂಡ ಗುಲಾಮರನ್ನು ಅಮೆರಿಕ ಸಂಯುಕ್ತ ಸಂಸ್ಥಾನದಿಂದಾಚೆ ಎಲ್ಲಾದರೂ ನೆಲೆಗೊಳಿಸಬೇಕೆಂಬ ಲಂಡಿಯ ಅಭಿಪ್ರಾಯಕ್ಕೆ ಪ್ರಾರಂಭದಲ್ಲಿ ಗ್ಯಾರಿಸನನ ವಿರೋಧವೇನೂ ಇರಲಿಲ್ಲ. ಲಂಡಿ ಪ್ರಕಟಿಸುತ್ತಿದ್ದ ಜೀನಿಯಸ್ ಆಫ್ ಯೂನಿವರ್ಸಲ್ ಇಮಾನ್ಸಿಪೇಷನ್ ಎಂಬ ಪತ್ರಿಕೆಯ ಸಂಪಾದನ ಕಾರ್ಯದಲ್ಲಿ ಸಹಾಯ ನೀಡಬೇಕೆಂಬ ಲಂಡಿಯ ಆಹ್ವಾನವನ್ನೊಪ್ಪಿಕೊಂಡು ಅವನೊಂದಿಗೆ ಕೆಲಸ ಆರಂಭಿಸಿದ ಮೇಲೆ ಗ್ಯಾರಿಸನನ ವಿಚಾರಗಳು ಕ್ರಮೇಣ ಬದಲಾದವು. ಗುಲಾಮಗಿರಿ ಕೂಡಲೇ ರದ್ದಾಗಬೇಕೆಂದು ಗ್ಯಾರಿಸನ್ ಪ್ರತಿಪಾದಿಸಿದ. ಗುಲಾಮಗಿರಿಯ ದುಷ್ಪರಿಣಾಮಗಳನ್ನು ಮಾತ್ರ ಬಯಲಿಗೆಳೆಯುತ್ತಿದ್ದು, ಅದರ ನಿರ್ಮೂಲನದ ಕರ್ತವ್ಯವನ್ನು ಭವಿಷ್ಯದ ಪೀಳಿಗೆಗಳಿಗೆ ವರ್ಗಾಯಿಸುವ ಧೋರಣೆಗಳನ್ನು ಇವನು ಒಪ್ಪಲಿಲ್ಲ. ತನ್ನ ವಿಚಾರಗಳ ಪ್ರಚಾರಕ್ಕೆ ಇವನು ಜೀನಿಯಸ್ ಪತ್ರಿಕೆಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡ. ಗುಲಾಮರ ಒಡೆಯರು ಪತ್ರಿಕೆಯನ್ನೂ ಗ್ಯಾರಿಸನನನ್ನೂ ದ್ವೇಷಿಸತೊಡಗಿದರು. ಗುಲಾಮರ ಸಾಗಣೆಯ ಹಡಗೊಂದರ ಯಜಮಾನ ಹೂಡಿದ ಮಾನನಷ್ಟ ಮೊಕದ್ದಮೆಯಲ್ಲಿ ಇವನಿಗೆ 50 ಡಾಲರುಗಳ ದಂಡ ವಿಧಿಸಲಾಯಿತು. ಗ್ಯಾರಿಸನ್ ದಂಡ ತೆರಲಾರದೆ ಕಾರಾಗೃಹಕ್ಕೆ ಹೋಗಿ ಶಿಕ್ಷೆಯನ್ನು ಭಾಗಶಃ ಅನುಭವಿಸಿದ ಮೇಲೆ ಅಭಿಮಾನಿಯೊಬ್ಬ ದಂಡದ ಹಣ ನೀಡಿದ್ದರಿಂದ ಇವನಿಗೆ ಬಿಡುಗಡೆ ಆಯಿತು. ಲಂಡಿ–ಗ್ಯಾರಿಸನರ ಸಹಯೋಗ ಕೊನೆಗೊಂಡಿತು. ತನ್ನದೇ ಪತ್ರಿಕೆಯೊಂದನ್ನು ಬಾಸ್ಟನಿನಲ್ಲಿ ಆರಂಭಿಸಲು ಗ್ಯಾರಿಸನ್ ಮನಸ್ಸು ಮಾಡಿದ. ಉತ್ತರದ ಪ್ರಮುಖ ಊರುಗಳಲ್ಲಿ ಪ್ರಚಾರೋಪನ್ಯಾಸ ಮಾಡಬೇಕೆಂದು ನಿಶ್ಚಯಿಸಿದ. ಬಾಸ್ಟನಿನಲ್ಲಿ ಇದಕ್ಕಾಗಿ ಸ್ಥಳವೊಂದನ್ನು ಕಷ್ಟಪಟ್ಟು ಸಂಪಾದಿಸಿಕೊಂಡ. ಐಸಾಕ್ ನ್ಯಾಪ್ ಎಂಬುವನೊಂದಿಗೆ ಕೂಡಿ ಲಿಬರೇಟರ್ ಎಂಬ ಪತ್ರಿಕೆ ಹೊರಡಿಸಿದ. ಆರಂಭದಲ್ಲಿ ಅದಕ್ಕೆ ಬಂಡವಾಳವಾಗಲೀ ಚಂದಾದಾರರಾಗಲೀ ಇರಲಿಲ್ಲ. ತನ್ನ ಮಾತುಗಳನ್ನು ಜನ ಆಲಿಸುವವರೆಗೂ, ಗುರಿ ಸಾಧಿಸುವವರೆಗೂ ನಿಲ್ಲುವುದಿಲ್ಲವೆಂಬುದು ಇವನ ಛಲವಾಗಿತ್ತು.

ಗ್ಯಾರಿಸನ್ ಶಾಂತಿಪ್ರಿಯ. ನೈತಿಕ ಮಾರ್ಗಗಳಿಂದಲೇ ಗುಲಾಮಗಿರಿಯನ್ನು ನಿರ್ನಾಮಗೊಳಿಸಬೇಕೆಂಬುದು ಈತನ ಇಚ್ಛೆಯಾಗಿತ್ತು. ಉತ್ತರದಲ್ಲಿ ಉಪನ್ಯಾಸ ಮಾಡಿ, ದಕ್ಷಿಣದ ರಾಜ್ಯಗಳ ಮೇಲೆ ಉತ್ತರದವರ ನೈತಿಕ ಒತ್ತಾಯ ಬೀಳುವ ಹಾಗೆ ಮಾಡಲು ಯತ್ನಿಸಿದ. ಉತ್ತರದವರು ಆಸಕ್ತಿ ತೋರಲಿಲ್ಲ. ಗ್ಯಾರಿಸನನಿಗೆ ಕೋಪ ಬಂತು. ಅವರನ್ನು ಹೀಗಳೆದ. 1840ರ ವೇಳೆಗೆ ಈತ ಸಂಪ್ರದಾಯಗಳನ್ನು ಕಿತ್ತೊಗೆಯುವಂಥ ತೀವ್ರವಾದಿಯಾದ. 1832ರಲ್ಲಿ ಇವನು ನ್ಯೂ ಇಂಗ್ಲೆಂಡ್ ಗುಲಾಮಗಿರಿ ವಿರೋಧಿ ಸಂಘ ಸ್ಥಾಪಿಸಿದ. ಈತನ ಥಾಟ್ಸ್ ಆನ್ ಆಫ್ರಿಕನ್ ಕಾಲೊನೈಸೇಷನ್ ಎಂಬ ಪುಸ್ತಕ ಪ್ರಕಟವಾದ್ದು ಅದೇ ವರ್ಷ. ಅಮೆರಿಕನ್ ವಸಾಹತು ನಿರ್ಮಾಣ ಸಂಘ ಗುಲಾಮಗಿರಿಯ ಸಾಧನೆಗಾಗಿ ಸ್ಥಾಪಿತವಾಗಿರುವ ಸಂಘವೆಂದು ಈತ ವಾದಿಸಿದ. ತನ್ನ ಸಂಘದ ಪ್ರತಿನಿಧಿಯಾಗಿ ಈತ 1833ರಲ್ಲಿ ಇಂಗ್ಲೆಂಡಿಗೆ ಹೋದದ್ದು ಅಮೆರಿಕನ್ ವಸಾಹತು ನಿರ್ಮಾಣ ಸಂಘದ ದುರುದ್ದೇಶಗಳನ್ನು ಬಯಲಿಗೆಳೆಯುವುದಕ್ಕಾಗಿ. ಅಲ್ಲಿಯ ಗುಲಾಮಗಿರಿ ವಿರೋಧಿಗಳು ಗ್ಯಾರಿಸನನನ್ನು ಪ್ರೀತ್ಯಾದರಗಳಿಂದ ಸ್ವಾಗತಿಸಿದರಲ್ಲದೆ ಇವನ ಯತ್ನಗಳಿಗೆ ತಮ್ಮ ಬೆಂಬಲ ಸೂಚಿಸಿದರು.

ಗ್ಯಾರಿಸನನ ತಾಯಿನಾಡಿನಲ್ಲಿದ್ದ ಗುಲಾಮಗಿರಿಪ್ರಿಯರು ಕ್ರೋಧಗೊಂಡರು. ಅಮೆರಿಕದ ಗುಲಾಮಗಿರಿ ವ್ಯವಸ್ಥೆಯ ವಿರುದ್ಧ ಉಪನ್ಯಾಸ ನೀಡಲು ಜಾರ್ಜ್ ಥಾಮ್ಸನನನ್ನು ನೇಮಿಸಿರುವುದಾಗಿ ಗ್ಯಾರಿಸನ್ ಪ್ರಕಟಿಸಿದ. ಗುಲಾಮಗಿರಿಯ ಪರವಾದವರ ವಿರೋಧ ಇನ್ನೂ ಉಗ್ರವಾಯಿತು. ಆಗ ಸ್ಥಾಪನೆಗೊಂಡ ಅಮೆರಿಕನ್ ಗುಲಾಮಗಿರಿ ವಿರೋಧಿ ಸಂಘಕ್ಕೆ ಸ್ಫೂರ್ತಿ ನೀಡಿದವನು ಗ್ಯಾರಿಸನನೇ. ಥಾಮ್ಸನನ ಭಾಷಣಗಳೂ ಈ ಸಂಘದ ಚಟುವಟಿಕೆಗಳೂ ಗುಲಾಮರೊಡೆಯರನ್ನು ಇನ್ನಷ್ಟು ಕೆರಳಿಸಿದವು. ಥಾಮ್ಸನ್ ಗುಟ್ಟಾಗಿ ಇಂಗ್ಲೆಂಡಿಗೆ ಹಿಂದಿರುಗಬೇಕಾಯಿತು. ಬಾಸ್ಟನಿನಲ್ಲಿ ಸ್ತ್ರೀಯರ ಗುಲಾಮವಿರೋಧಿ ಸಂಘಟವನ್ನುದ್ದೇಶಿಸಿ ಅವನು ಭಾಷಣ ಮಾಡುವುದಾಗಿ ಪ್ರಕಟಿಸಲಾಗಿತ್ತು. ಥಾಮ್ಸನ್ ಅಲ್ಲಿರಲಿಲ್ಲ. ಜನರು ಗ್ಯಾರಿಸನನನ್ನೇ ಹಿಡಿದು ಬೀದಿಯಲ್ಲಿ ಎಳೆದಾಡಿದರು. ಇವನನ್ನು ಬಿಡಿಸಿ ಕಾರಾಗೃಹದಲ್ಲಿಟ್ಟು ರಕ್ಷಣೆ ನೀಡಬೇಕಾಯಿತು.

1839–40 ರವರೆಗೂ ಅಮೆರಿಕದ ಗುಲಾಮಗಿರಿ ನಿರ್ಮೂಲವಾದಿಗಳಲ್ಲಿ ಒಗ್ಗಟ್ಟಿತ್ತು. ಅನಂತರ ಇದು ಒಡೆಯಿತು. ಗ್ಯಾರಿಸನ್ ತನ್ನ ಉದ್ದೇಶ ಸಾಧನೆಗಾಗಿ ಸ್ತ್ರೀಯರ ನೆರವನ್ನೂ ಪಡೆದುಕೊಂಡಿದ್ದ. ಅವರೂ ಭಾಷಣ ನೀಡುತ್ತಿದ್ದರು. ಸ್ತ್ರೀಪುರುಷರಿಬ್ಬರೂ ಸಮಾನರೆಂಬುದು

ಇವನ ನಂಬಿಕೆಯಾಗಿತ್ತು. ಸ್ತ್ರೀಸ್ವಾತಂತ್ರ್ಯವನ್ನು ವಿರೋಧಿಸುತ್ತಿದ್ದವರ ವಿರೋಧವನ್ನು ಇದರಿಂದ ಕಟ್ಟಿಕೊಳ್ಳಬೇಕಾಯಿತು. ಚರ್ಚೂ ಎದುರುಬಿತ್ತು. ಏಕೆಂದರೆ ಚರ್ಚನ್ನೂ ಇವನು ಟೀಕಿಸಿದ್ದ. 1840ರಲ್ಲಿ ಹೊಸದೊಂದು ಗುಲಾಮಗಿರಿ ವಿರೋಧ ಸಂಘವೂ ಲಿಬರ್ಟಿ ಪಕ್ಷವೂ ಸ್ಥಾಪಿತವಾದುವು. ಲಂಡನಿನಲ್ಲಿ ಆ ವರ್ಷ ನಡೆಯಲಿದ್ದ ಗುಲಾಮಗಿರಿ ವಿರೋಧಿಗಳ ಸಮಾವೇಶಕ್ಕೆ ಈ ಎರಡು ಸಂಸ್ಥೆಗಳೂ ಪ್ರತಿನಿಧಿಗಳನ್ನು ಕಳಿಸಿದುವು. ಆ ಸಮಾವೇಶದಲ್ಲಿ ಸ್ತ್ರೀ ಪ್ರತಿನಿಧಿಗಳಿಗೆ ಅವಕಾಶವಿರಲಿಲ್ಲವೆಂಬ ಕಾರಣದಿಂದಾಗಿ ಗ್ಯಾರಿಸನ್ ಅದರಲ್ಲಿ ಭಾಗವಹಿಸಲೊಪ್ಪಲಿಲ್ಲ.

ಅಮೆರಿಕ ಸಂಯುಕ್ತಸಂಸ್ಥಾನದ ಸಂವಿಧಾನ ಗುಲಾಮಗಿರಿಯ ಪರವಾಗಿದೆಯೆಂಬ ಕಾರಣದಿಂದ ಗ್ಯಾರಿಸನ್ ಅದನ್ನೂ ಟೀಕಿಸಿದ. ಸಂವಿಧಾನಕ್ಕೆ ಬೆಂಬಲ ನೀಡುವ ಪ್ರತಿಜ್ಞಾವಚನ ಸ್ವೀಕರಿಸುವುದು ಪಾಪಕರವೆಂಬುದು ಇವನ ಭಾವನೆ. ಸಂವಿಧಾನದ ಪ್ರತಿಯನ್ನು ಇವನು ಸುಟ್ಟ. ಒಕ್ಕೂಟವನ್ನು ಒಡೆಯಬೇಕೆಂದೂ ಇವನು ಪ್ರಚಾರ ಮಾಡತೊಡಗಿದ.

1861ರಲ್ಲಿ ದಕ್ಷಿಣ ಸಂಸ್ಥಾನಗಳು ಪ್ರತ್ಯೇಕವಾದವು. ಒಕ್ಕೂಟದ ವಿರುದ್ಧ ಹೋರಾಟ ಆರಂಭಿಸಿದುವು. ಈ ಸಂಘರ್ಷದ ಪರಿಣಾಮವಾಗಿ ಗುಲಾಮಗಿರಿ ವಿಧಿಗಳು ಸಂವಿಧಾನದಿಂದ ತೊಡೆದುಹೋಗುವುವೆಂದು ಇವನಿಗೆ ಮನವರಿಕೆಯಾಯಿತು. ಆದ್ದರಿಂದ ಅಲ್ಲಿಂದ ಮುಂದೆ ಇವನು ಒಕ್ಕೂಟದ ರಕ್ಷಣೆಗಾಗಿ ಕಂಕಣಬದ್ಧನಾದ. ಲಿಂಕನ್ ಇವನನ್ನು ಗೌರವಿಸಿದ. ಗುಲಾಮಗಿರಿಯ ವಿರೋಧವಾಗಿ ಇವನ ನಿರ್ಭಯ ಹೋರಾಟವನ್ನು ಹಲವರು ಮೆಚ್ಚಿಕೊಂಡರು.

ಅಮೆರಿಕಜ ಅಂತರ್ಯುದ್ಧ ಕೊನೆಗೊಂಡು ಗುಲಾಮಗಿರಿ ರದ್ದಾದಾಗ, 1865ರಲ್ಲಿ ಗುಲಾಮಗಿರಿ ನಿರ್ನಾಮವಾಗಿ ತನ್ನ ಕರ್ತವ್ಯ ತೀರಿತೆಂದು ಗ್ಯಾರಿಸನ್ ಘೋಷಿಸಿದ. ಅಮೆರಿಕನ್ ಗುಲಾಮಗಿರಿ ವಿರೋಧಿ ಸಂಘವನ್ನು ವಿಸರ್ಜಿಸಬೇಕೆಂದು ಈತ ಸಲಹೆ ಮಾಡಿದ. ವಿಮೋಚನೆಗೊಂಡ ಗುಲಾಮರ ಸ್ವಾತಂತ್ರ್ಯದ ರಕ್ಷಣೆಗಾಗಿ ಪ್ರತ್ಯೇಕ ಸಂಸ್ಥೆಗಳ ಸ್ಥಾಪನೆಯಾಗಲೆಂದು ಈತ ಸೂಚಿಸಿದ. ಏನೇ ಕಷ್ಟ ಬಂದರೂ ಈತ ಸತತವಾಗಿ ನಡೆಸುತ್ತಿದ್ದ ಲಿಬರೇಟರ್ ಪತ್ರಿಕೆ, 35 ವರ್ಷಗಳ ಅನಂತರ ನಿಂತಿತು. 1846 ಮತ್ತು 1867ರಲ್ಲಿ ಈತ ಇಂಗ್ಲೆಂಡಿಗೆ ಭೇಟಿ ನೀಡಿದಾಗ ಪ್ರಜಾಸಮೂಹವೂ ಸರ್ಕಾರವೂ ಇವನಿಗೆ ವೀರೋಚಿತ ಸ್ವಾಗತ ನೀಡಿದವು. ಅನಂತರ ಇವನು ಮುಕ್ತ ವ್ಯಾಪಾರಕ್ಕಾಗಿ ಚಳವಳಿ ಹೂಡಿದ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಎಲ್ಲ ಬಗೆಯ ಸುಂಕಗಳೂ ರದ್ದಾಗಬೇಕೆಂಬುದು ಇವನ ವಾದ. 1869ರಲ್ಲಿ ಈತ ಮುಕ್ತ ವ್ಯಾಪಾರ ಸಂಘದ ಅಧ್ಯಕ್ಷನಾದ. 1877ರಲ್ಲಿ ಈತ ಮತ್ತೆ ಇಂಗ್ಲೆಂಡಿಗೆ ಭೇಟಿ ನೀಡಿದ. ಗ್ಯಾರಿಸನ್ 1879ರ ಮೇ 24ರಂದು ನಿಧನನಾದ.

ಈತ ಕೆಲವು ಪದ್ಯಗಳನ್ನು ಬರೆದಿದ್ದಾನೆ. ಅವು 1843ರಲ್ಲಿ ಸಂಕಲನರೂಪದಲ್ಲಿ ಪ್ರಕಟವಾದವು. ಇವನ ಆಯ್ದ ಲೇಖನೋಪನ್ಯಾಸಗಳ ಸಂಪುಟವೊಂದು ಬೆಳಕು ಕಂಡಿದೆ (1852). (ಎಂ.ಆರ್.ಎಎನ್.)

**ಗ್ಯಾಲಪ್ ಎಣಿಕೆ :** ಪ್ರಚಲಿತ ಸಮಸ್ಯೆಯೊಂದನ್ನು (ಉದಾಹರಣೆಗೆ ಸಾರ್ವತ್ರಿಕ ಚುನಾವಣೆ) ಕುರಿತು ಜನಾಭಿಪ್ರಾಯವನ್ನು ಶಾಸ್ತ್ರೀಯವಾಗಿ ಸಂಗ್ರಹಿಸಿ ವಿಶ್ಲೇಷಿಸಿ ಅಧ್ಯಯಿಸಿ ಭವಿಷ್ಯವನ್ನು ನುಡಿಯುವ ಪ್ರಕ್ರಮ (ಗ್ಯಾಲಪ್ ಪೋಲ್). ಉತ್ತರ ಅಮೆರಿಕದ ಸಂಖ್ಯಾಕಲನಶಾಸ್ತ್ರಜ್ಞ ಜಾರ್ಜ್ ಹೋರೇಸ್ ಗ್ಯಾಲಪ್ (1901–84) ಎಂಬಾತನಿಂದ ಆವಿಷ್ಕರಿಸಲ್ಪಟ್ಟುದರಿಂದ ಈ ಹೆಸರು ಬಂದಿದೆ. ಎಣಿಕೆಯನ್ನು ನಡೆಸುವ ಸಂಸ್ಥೆಗೂ ಗ್ಯಾಲಪ್ ಪೋಲ್ ಎಂಬ ಹೆಸರನ್ನೇ ನೀಡಲಾಗಿದೆ. ಅಮೆರಿಕ ಸಂಯುಕ್ತ ರಾಷ್ಟ್ರದಂಥ ಪ್ರಜಾಪ್ರಭುತ್ವದಲ್ಲಿ ಅಧ್ಯಕ್ಷರ ಆಯ್ಕೆ ಎಂದರೆ, ಅಂತಿಮವಾಗಿ, ಬಹುಮಂದಿ ಮತದಾರರು ಓರ್ವ ಅಭ್ಯರ್ಥಿಯನ್ನು ಬೆಂಬಲಿಸುವುದು ಎಂದರ್ಥವಾಗುವುದು. ಈ ಜನಾಭಿಪ್ರಾಯವನ್ನು ಅಥವಾ ಅದರ ಸೂಚಿಯನ್ನು ಚುನಾವಣೆಗೆ ಮೊದಲೇ ಯಾವುದೇ ವಿಧಾನದಿಂದ ಅರಿಯುವುದು ಸಾಧ್ಯವಾದರೆ ಅಭ್ಯರ್ಥಿಗಳ ಗೆಲುವು ಸೋಲನ್ನು ಮುನ್ನುಡಿಯಬಹುದು.

ಗ್ಯಾಲಪ್‌ನ ಚಿಂತನೆ ನಡೆದದ್ದು ಈ ಹಾದಿಯಲ್ಲಿ. 1933ರಲ್ಲಿ ಈತ ತನ್ನ ಪ್ರಯೋಗವನ್ನು ಆರಂಭಿಸಿದ. ಎರಡು ವರ್ಷಗಳ ಬಳಿಕ ಅಮೆರಿಕದ ಜನಾಭಿಪ್ರಾಯ ಸಂಸ್ಥೆ (ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಒಪಿನಿಯನ್) ಎಂಬ ಪತ್ರಿಕಾಸಂಸ್ಥೆಯನ್ನು ಸ್ಥಾಪಿಸಿ ಅದರ ನಿರ್ದೇಶಕನಾದ. ಈ ಸಂಸ್ಥೆಗೆ ಗ್ಯಾಲಪ್ ಪೋಲ್ ಎಂಬ ಹೆಸರೂ ಇದೆ. ಬ್ರಿಟನಿನಲ್ಲಿ ಇಂಥದೇ ಒಂದು ಸಂಸ್ಥೆ ಈತನ ನಿರ್ದೇಶಕತ್ವದಲ್ಲಿ ಸ್ಥಾಪಿತವಾದದ್ದು 1936ರಲ್ಲಿ.

ಗ್ಯಾಲಪ್ ಪೋಲ್ ಸಂಸ್ಥೆ ವಿವಿಧ ವಿಚಾರಗಳ ಬಗ್ಗೆ ಜನಾಭಿಪ್ರಾಯ ಸಂಗ್ರಹಗಳನ್ನು ನಡೆಸುತ್ತದೆ. ಈ ಸಂಸ್ಥೆಯ ಆರಂಭದ ದಿನಗಳಲ್ಲಿ ಹೆಚ್ಚಾಗಿ ಸಂದರ್ಶನಕಾರರು ಜನಾಭಿಪ್ರಾಯ ಸಂಗ್ರಹಣೆಗಾಗಿ ವಿವಿಧ ವರ್ಗಗಳಲ್ಲಿ ಪೂರ್ವನಿಶ್ಚಿತ ಸಂಖ್ಯೆಯಷ್ಟು ವ್ಯಕ್ತಿಗಳು ಸಿಕ್ಕುವವರೆಗೆ ತಮಗೆ ಇಷ್ಟಬಂದ ವ್ಯಕ್ತಿಗಳನ್ನು ಸಂದರ್ಶಿಸುತ್ತಿದ್ದರು. ಈ ವಿಧಾನಕ್ಕೆ ಕೋಟ ಪ್ರತಿಚಯನ (ಕೋಟ ಸ್ಯಾಂಪ್ಲಿಂಗ್) ಎಂದು ಹೆಸರು. ಇದರ ಬದಲು ಇಡೀ ದೇಶದ ಜನತೆಯನ್ನು ಪ್ರತಿನಿಧಿಸುವ ಒಂದು ಯಾದೃಚ್ಛಿಕ ಪ್ರತಿಚಯವನ್ನು ಗ್ಯಾಲಪ್ ಮೊದಲೇ ಆರಿಸಿ ಅದರಲ್ಲಿರುವ ವ್ಯಕ್ತಿಗಳನ್ನು ಮಾತ್ರ ಸಂದರ್ಶಿಸಿ ಅವರಿಂದ ಅಭಿಪ್ರಾಯ ಸಂಗ್ರಹಿಸಲು ಆರಂಭಿಸಿದ. ಇದಕ್ಕಾಗಿ ಯೋಗ್ಯ ಸಂದರ್ಶನಕಾರರನ್ನು ಆಯ್ದು ಅವರನ್ನು ವಿಶೇಷವಾಗಿ ತರಬೇತುಗೊಳಿಸಲಾಯಿತು. ಈ ವಿಧಾನದಿಂದ ದೊರೆತ ಫಲಿತಾಂಶಗಳು ಹೆಚ್ಚು ನಿಖರವಾಗಿರುವುವೆಂದು ಅನುಭವದಿಂದ ತಿಳಿಯಿತು. ಹೀಗಾಗಿ ಇದು ಬಹುಜನರ ವಿಶ್ವಾಸಕ್ಕೆ ಪಾತ್ರವಾಯಿತು.

ಅಮೆರಿಕದ ಅಧ್ಯಕ್ಷಸ್ಥಾನಕ್ಕೆ ಡೆಮೊಕ್ರೆಟಿಕ್ ಪಕ್ಷದ ಅಭ್ಯರ್ಥಿಯಾಗಿ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟರೂ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಆಲ್‌ಫ್ರೆಡ್ ಎಂ. ಲಂಡನ್ನರೂ 1936ರಲ್ಲಿ ಸ್ಪರ್ಧಿಸಿದರು. ಈ ಸಮಸ್ಯೆಯನ್ನು ಗ್ಯಾಲಪ್ ಎತ್ತಿಕೊಂಡು ತನ್ನ ನೂತನ ವಿಧಾನರೀತ್ಯ ವಿಶ್ಲೇಷಿಸಿ ಅಧ್ಯಯಿಸಿ ರೂಸ್‌ವೆಲ್ಟರು ಗೆಲ್ಲುವರೆಂದು ಭವಿಷ್ಯ ನುಡಿದ. ಇದು ಸಾಮಾನ್ಯ ಜನರ ನಿರೀಕ್ಷೆಗೆ ವ್ಯತಿರಿಕ್ತವಾಗಿದ್ದರೂ ವಾಸ್ತವದಲ್ಲಿ ನಿಜವಾಯಿತು. ಅದೂ ಅಲ್ಲದೆ 1936–48ರ ಅವಧಿಯಲ್ಲಿ ನಡೆದ ಅನೇಕ ಚುನಾವಣೆಗಳ ಬಗ್ಗೆ ಗ್ಯಾಲಪ್ ನುಡಿದ ಭವಿಷ್ಯ ಹೆಚ್ಚಿನಮಟ್ಟಿಗೆ ನಿಜವಾದ್ದರಿಂದ ಈತನ ಸಂಸ್ಥೆ ಅಪಾರ ಜನಪ್ರಿಯತೆಯನ್ನು ಗಳಿಸಿತು. ಆದರೆ 1948ರಲ್ಲಿ ಗ್ಯಾಲಪ್ ಡೆಮೊಕ್ರೆಟಿಕ್ ಪಕ್ಷದ ಅಭ್ಯರ್ಥಿ ಹ್ಯಾರಿ ಎಸ್. ಟ್ರೂಮನ್‌ರ ಜನಪ್ರಿಯತೆಯನ್ನು ಅಳೆಯುವಲ್ಲಿ ತಪ್ಪು ಅಂದಾಜನ್ನು ಮಾಡಿದ. ಆಗ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಟ್ರೂಮನ್‌ರ ವಿರುದ್ಧ ಥಾಮಸ್ ಇ. ಡ್ಯೂಯಿ ಸ್ಪರ್ಧಿಸಿದ್ದರು. ಟ್ರೂಮನ್‌ರಿಗೆ ಕೇವಲ 44.5% ಮತಗಳು ದೊರೆತು ಅವರು ಸೋಲುವರು ಎಂದು ಗ್ಯಾಲಪ್ ನುಡಿದಿದ್ದ ಭವಿಷ್ಯ ಸುಳ್ಳಾಯಿತು. ಈತನ ಭವಿಷ್ಯವಾಣಿಯ ಬಗ್ಗೆ ಪೂರ್ಣ ವಿಶ್ವಾಸವಿದ್ದುದರಿಂದ ಡ್ಯೂಯಿ ಮತ್ತು ಅವರ ಅನೇಕ ಬೆಂಬಲಿಗರು (ಡ್ಯೂಯಿ ಗೆಲ್ಲುವುದು ಹೇಗೂ ಖಂಡಿತ ಎಂದು ಭಾವಿಸಿ) ಮತಕಟ್ಟೆಗೆ ಹೋಗುವ ಬಗ್ಗೆ ಉದಾಸೀನರಾದರು. ಟ್ರೂಮನ್‌ರ ಅನುಯಾಯಿಗಳಾದರೋ ಹೆಚ್ಚು ಡೆಮೊಕ್ರೆಟಿಕ್ ಮತದಾರರು ಮತದಾನ ಮಾಡುವಂತೆ ಪ್ರಯತ್ನಿಸಿದರು. ಇದು ಡ್ಯೂಯಿಯವರ ಸೋಲಿಗೆ ತುಸುಮಟ್ಟಿಗೆ ಕಾರಣವಾಗಿದ್ದಿರಬಹುದೆಂದು ನಂಬಲಾಗಿದೆ.

ಗ್ಯಾಪಲ್ ಎಣಿಕೆ 1936ರಲ್ಲಿ ನಡೆಸಿದ ಅಧ್ಯಯನದ ಅನುಭವದ ಮೇಲಿನಿಂದ ಅದು ತನ್ನ ಮುಂದಿನ ಎಲ್ಲ ಅಧ್ಯಯನಗಳಲ್ಲಿ ಎರಡು ಮುಖ್ಯನಿಯಮಗಳನ್ನು ಅನುಸರಿಸ ಲಾರಂಭಿಸಿತು. ಮೊದಲು ಜನಾಭಿಪ್ರಾಯವನ್ನು ಅಂಚೆಯ ಮೂಲಕ ಇಲ್ಲವೆ ವೈಯಕ್ತಿಕ ಸಂದರ್ಶನಗಳ ಮೂಲಕ ಸಂಗ್ರಹಿಸಲಾಗುತ್ತಿತ್ತು. ಅಂದರೆ ಗ್ರಾಮೀಣ ಮತ್ತು ಕೆಳ ಆದಾಯ ವರ್ಗಗಳನ್ನು ವೈಯಕ್ತಿಕವಾಗಿ ಸಂದರ್ಶಿಸಲಾಗುತ್ತಿತ್ತು. ಮಧ್ಯಮ ವರ್ಗ ಮತ್ತು ಉನ್ನತವರ್ಗದವರಿಂದ ಮಾತ್ರ ಅಂಚೆಯ ಮೂಲಕ ಅಭಿಪ್ರಾಯ ಸಂಗ್ರಹಣೆ ಮಾಡಲಾಗುತ್ತಿತ್ತು. ಆದರೆ ಫಲಿತಾಂಶಗಳನ್ನು ವಿಶ್ಲೇಷಿಸಿದಾಗ ಅಂಚೆಯ ಮತಗಳು ಅಪ್ರಾತಿನಿಧಿಕವಾಗಿರುವುದು ಬೆಳಕಿಗೆ ಬಂತು. ಆದ್ದರಿಂದ ಮುಂದಿನ ಎಲ್ಲ ಅಧ್ಯಯನಗಳಲ್ಲಿಯೂ ಅಂಚೆಯ ವಿಧಾನವನ್ನು ಕೈಬಿಟ್ಟು ವ್ಯಕ್ತಿಗಳ ನೇರಭೇಟಿಯಿಂದಲೇ ಅಭಿಪ್ರಾಯ ಸಂಗ್ರಹಣೆ ನಡೆಸುವಂತಾಯಿತು. ಎರಡನೆಯದಾಗಿ, ದೊಡ್ಡ ಪ್ರಮಾಣದ ಒಂದೇ ಅಧ್ಯಯನದ ಬದಲು ಚುನಾವಣಾಪ್ರಚಾರದ ವಿವಿಧ ಹಂತಗಳ ಕಾಲದಲ್ಲಿ ಸಣ್ಣ ಪ್ರಮಾಣದಲ್ಲಿ ಹಲವು ಅಧ್ಯಯನಗಳನ್ನು ನಡೆಸುವ ಪದ್ಧತಿ ಆರಂಭವಾಯಿತು.

ರಾಷ್ಟ್ರೀಯ ಮತ್ತು ಸ್ಥಳೀಯ ಚುನಾವಣೆಗಳ ಬಗ್ಗೆ ಮಾತ್ರವಲ್ಲದೆ ಇತರ ಪ್ರಚಲಿತ ಸಾಮಾಜಿಕ, ರಾಜಕೀಯ ಇಲ್ಲವೇ ಆರ್ಥಿಕ ಪ್ರಶ್ನೆಗಳ ಬಗ್ಗೆಯೂ ಗ್ಯಾಲಪ್ ಹಲವು ಗ್ರಂಥಗಳನ್ನು ಬರೆದಿದ್ದಾನೆ. ಅವುಗಳ ಪೈಕಿ ಸೋಲ್ ಪೋರ್ಬ್ಸ್‌ರೇ ಎಂಬಾತನೊಡಗೂಡಿ ಬರೆದಿರುವ ದಿ ಪಲ್ಸ್ ಆಫ್ ಡೆಮೊಕ್ರೆಸಿ ಎಂಬುದು ಒಂದು ಉದ್ಗ್ರಂಥ. ಗ್ಯಾಲಪ್ ಎಣಿಕೆ ಅನುಸರಿಸಿದ ವಿಧಾನಗಳನ್ನು ಅನೇಕ ದೇಶಗಳಲ್ಲಿ ಉಪಯೋಗಿಸಲಾಗುತ್ತಿದೆ. (ಎಸ್.ಟಿ.)

**ಗ್ಯಾಲಿಫಾರ್ಮೀಸ್ :** ಏವೀಸ್ ವರ್ಗದಲ್ಲಿನ ಒಂದು ಉಪವರ್ಗ. ಗೌಜಲು, ಟರ್ಕಿ ಕೋಳಿ, ನವಿಲು, ಕೋಳಿ ಮುಂತಾದವು ಈ ಗುಂಪಿಗೆ ಸೇರಿವೆ. ಇವುಗಳಲ್ಲೆಲ್ಲ ಕೊಕ್ಕು ಸಣ್ಣದಾಗಿಯೂ ಉಗುರುಗಳು ಮೊಂಡಾಗಿಯೂ ಇವೆ. ಕಾಲ್ಬೆರಳುಗಳ ಸಂಖ್ಯೆ 4. ಇವುಗಳಲ್ಲಿ ಮೂರು ಮುಂದಕ್ಕೂ ಒಂದು ಹಿಂದಕ್ಕೂ ಬಾಗಿವೆ. ಇದರಿಂದ ನೆಲವನ್ನು ಕೆರೆಯಲೂ ಓಡಲೂ ಅನುಕೂಲ. ಮರಿಗಳ ಮೈ ತುಂಬ ಹತ್ತಿಯಂಥ ಬಹು ಮೃದುವಾದ ಪುಕ್ಕಗಳಿದ್ದು ಇವು ನೋಡಲು ಬಹಳ ಸುಂದರವಾಗಿ ಕಾಣುತ್ತವೆ. ಈ ಗುಂಪಿನ ಹಕ್ಕಿಗಳು ಪಾಲಿನೇಷ್ಯ ಮತ್ತು ಅಂಟಾರ್ಕ್‌ಟಿಕಗಳನ್ನು ಬಿಟ್ಟು ಪ್ರಪಂಚದ ಉಳಿದ ಭಾಗಗಳಲ್ಲೆಲ್ಲ ಕಾಣದೊರೆಯುತ್ತವೆ. ಇವುಗಳಲ್ಲಿ ಬಹುಪಾಲು ಬಗೆಯವು ಭಕ್ಷ್ಯಯೋಗ್ಯವಾದ ಹಕ್ಕಿಗಳೆಂದು ಹೆಸರಾಗಿವೆ. ಮಾನವ ಸಾಕಲು ತೊಡಗಿದ ಹಕ್ಕಿಗಳಲ್ಲಿ ಇವು ಕೂಡ ಸೇರಿವೆ. (ಜಿ.ಎಂ.ಬಿ.)

**ಗ್ಯಾಲಿಯಮ್ :** ನೀಲಿ ಛಾಯೆಯ ಬಿಳುಪು ಬಣ್ಣದ ಮೃದು ಲೋಹ ಧಾತು. ಆವರ್ತಕೋಷ್ಟಕದ ಪ್ರಧಾನ ಗುಂಪು 3ರ ಲೋಹ ಧಾತು; ಪರಮಾಣು ಸಂಖ್ಯೆ 31; ಪರಮಾಣು ತೂಕ 69.72; ಸಂಕೇತ Ga. ಎಲೆಕ್ಟ್ರಾನ್ ವಿನ್ಯಾಸ

$1s^2 2s^2 2p^6 3s^2 3p^6 3d^{10} 4s^2 4p^1$ 29.78$^0$ ಸೆ. ಉಷ್ಣತೆಯಲ್ಲಿಯೇ ಕರಗಿ ಬಿಳಿಬಣ್ಣದ ದ್ರವವಾಗುವುದು. ಕುದಿಬಿಂದು 2070$^0$ ಸೆ. ದ್ರವರೂಪಕ್ಕೆ ಇರುವ ಈ ವ್ಯಾಪ್ತಿ ಗ್ಯಾಲಿಯಮಿನ ವೈಶಿಷ್ಟ್ಯ. ಗೊತ್ತಿರುವ ಯಾವುದೇ ಧಾತುವಿಗಿಂತ ಇದರದ್ದು ಉಪಯುಕ್ತವಾದ ಮತ್ತು ಅತ್ಯಂತ ದೀರ್ಘವಾದ ವ್ಯಾಪ್ತಿ. ಅಧಿಕ ಉಷ್ಣತೆಯಲ್ಲೂ ಇದರ ಆವಿಯೊತ್ತಡ ಕಡಿಮೆ: 1315$^0$ ಸೆ. ನಲ್ಲಿ 1 ಮಿ.ಮೀ. Hg; 1726$^0$ ಸೆಂ. ನಲ್ಲಿ 100 ಮಿ.ಮೀ Hg. ಘನೀಭವಿಸಿದಾಗ ಸುಮಾರು 3% ರಷ್ಟು ವಿಕಸಿಸುವುದು ಮತ್ತು ಅಧಿಶೈತ್ಯಗೊಳ್ಳುವುದು. ಇದನ್ನು ಮೃದುವಾದ ಪಾತ್ರೆಗಳಲ್ಲಿ ಶೇಖರಿಸಿಡಬೇಕು. ಮೋ಼ ಕಾಠಿನ್ಯಮಾನದಲ್ಲಿ ಇದರ ಕಠಿನತೆ 2–3. ಕಡಿಮೆ ಉಷ್ಣತೆಯಲ್ಲಿ ಪೆಡಸು. ಲೋಹದ ಹರಳು ಆರ್ಥೋರ್‌ರಾಂಬಿಕ್, ದ್ವಿಪರಮಾಣ್ವಕ ಅಣು. ಶೇ. 69 (60.1) ಮತ್ತು ಶೇ.71 (39.9) ಪರಮಾಣು ತೂಕವಿರುವ ಎರಡು ಸ್ಥಿರ ಐಸೊಟೋಪುಗಳಿವೆ. ವಿಕಿರಣಪಟು ಐಸೊಟೋಪುಗಳು ಮತ್ತು ಅವುಗಳ ಅರ್ಧಾಯುಗಳು ಹೀಗಿವೆ: 64 (2.5 ಮಿ), 65 (15 ಮಿ), 66 (9.4 ಗಂ), 67 (78 ಗಂ) 68 (68 ಮಿ). 70 (21 ಮಿ). 72 (14.1 ಗಂ), 73 (5 ಗಂ), 74 (~ 8 ಮಿ). ಸಾಂದ್ರತೆ 20$^0$ ಸೆ. ಉಷ್ಣತೆಯಲ್ಲಿ 5.907. ಪರಮಾಣು ಗಾತ್ರ 11.76 ಗ್ರಾಹ್ಯೋಷ್ಣ 0.0977.

1857 ರಲ್ಲಿ ಲೆಕಾಕ್ ಡಿ ಬಾಯ್ಸ್ ಬ್ಯಾಡ್ರಾನ್ ಎಂಬಾತ ಈ ಧಾತುವನ್ನು ಆವಿಷ್ಕರಿಸಿದ. ಫ್ರಾನ್ಸಿನ ಸತುಬ್ಲೆಂಡಿನಿಂದ ಪ್ರತ್ಯೇಕಿಸಿ ಪಡೆದ ಒಂದು ಪದಾರ್ಥವನ್ನು ಪರೀಕ್ಷಿಸುತ್ತಿದ್ದಾಗ ಈ ಧಾತುವಿನ ಪ್ರಧಾನ ರೋಹಿತರೇಖೆಗಳನ್ನು ($\lambda$ 4172.2 Å ಮತ್ತು 4033.2 Å) ಅವನು ಗಮನಿಸಿದ. ಪೊಟಾಸಿಯಂ ಗ್ಯಾಲೇಟ್ ದ್ರಾವಣವನ್ನು ವಿದ್ಯುದ್ವಿಭಜಿಸಿ ಅಲ್ಪ ಮೊತ್ತದಲ್ಲಿ ಬೇರ್ಪಡಿಸಿ ಅದರ ಗುಣಗಳನ್ನು ಅಭ್ಯಸಿಸಿದ. ಇದಕ್ಕೆ ಕೇವಲ ಕೆಲವೇ ವರ್ಷಗಳ ಹಿಂದೆ ಮೆಂಡಲೀಫ್ ತನ್ನ ಆವರ್ತಕೋಷ್ಟಕದಲ್ಲಿ ಕೆಲವು ಸ್ಥಾನಗಳನ್ನು ಖಾಲಿಬಿಟ್ಟ, ಅವನ್ನು ಭರ್ತಿ ಮಾಡುವ ಧಾತುಗಳನ್ನು ಭವಿಷ್ಯದಲ್ಲಿ ಕಂಡುಹಿಡಿಯಲಾಗುವುದೆಂದೂ ಅವುಗಳ ಗುಣಲಕ್ಷಣಗಳು ಹೀಗೆಯೇ ಇರುವುವೆಂದೂ ಮುನ್ನುಡಿದಿದ್ದ. 3b ಉಪಗುಂಪಿನಲ್ಲಿ ಅಲ್ಯುಮಿನಿಯಮ್ ಕೆಳಗೆ ಒಂದು ಸ್ಥಾನವನ್ನು ತೆರಪುಬಿಟ್ಟು ಅದರ ಹೆಸರನ್ನು ಏಕ–ಅಲ್ಯುಮಿನಿಯಮ್ ಎಂದು ಕರೆದಿದ್ದ. ಗ್ಯಾಲಿಯಮ್ ಕಂಡುಹಿಡಿದ ಬಳಿಕ ಆ ಸ್ಥಾನವನ್ನು ಭರ್ತಿಮಾಡಲಾಗಿದೆ. ಮೆಂಡಲೀಫನ ಏಕ–ಅಲ್ಯುಮಿನಿಯಮಿನ ಮತ್ತು ಗ್ಯಾಲಿಯಮಿನ ಗುಣಲಕ್ಷಣಗಳು ಪರಸ್ಪರ ಸಂಪೂರ್ಣವಾಗಿ ಹೋಲುತ್ತವೆ.

ಗ್ಯಾಲಿಯಮ್ ಅಪರೂಪ ಲೋಹವಾಗಿದ್ದರೂ ಅದು ಭೂಮಿಯ ಹೊರಪದರದಲ್ಲಿ (0.0015%) ದೊರೆಯುವ ಧಾತುಗಳ ಶ್ರೇಣಿಯಲ್ಲಿ 37ನೆಯದು. ಅಲ್ಯುಮಿನಿಯಮ್ ಮತ್ತು ಸತುವಿನ ಖನಿಜ ಸಂಪನ್ಮೂಲಗಳಲ್ಲಿ ಇದು ಹೇರಳವಾಗಿ ಹರಡಿದೆ. ಅಲ್ಲದೆ ಕೆಲವು ಕಲ್ಲಿದ್ದಲುಗಳಲ್ಲೂ ಸೇರಿರುತ್ತದೆ. ಅತ್ಯಂತ ಹೆಚ್ಚು ಗ್ಯಾಲಿಯಮ್ ಯುಕ್ತವಾದ ಖನಿಜವೆಂದರೆ ಜರ್ಮನೈಟ್. ಇದು ಸತು– ತಾಮ್ರ– ಆರ್ಸೆನಿಕ್– ಜರ್ಮೇನಿಯಂ ಸಲ್ಫೈಡುಗಳ ಯುಗ್ಮಲವಣ. ಇದರಲ್ಲಿ ಶೇ. 0.1– 0.8 ರ ವರೆಗೆ ಗ್ಯಾಲಿಯಮ್ ಉಂಟು. ಆದರೆ ಈ ಖನಿಜ ಬಲು ವಿರಳ. ಆದ್ದರಿಂದ ಇದು ಗ್ಯಾಲಿಯಮಿನ ಆಕರವಾಗುವುದು ಅವ್ಯಾವಹಾರಿಕ. ಅಮೆರಿಕದ ಕೆಲವು ಸತುವಿನ ಅದಿರುಗಳು ಶೇ. 0.02 ರಷ್ಟು ಗ್ಯಾಲಿಯಮನ್ನು ಪಡೆದಿವೆ. ಬಾಕ್ಸೈಟ್ ಮತ್ತು ಅಲ್ಯುಮಿನಿಯಮಿನ ಇತರ ಅದಿರುಗಳಲ್ಲಿ ಶೇ. 0.001–0.01 ರಷ್ಟು ಗ್ಯಾಲಿಯಮ್ ಉಂಟು. ಇವುಗಳಿಂದ ಮುಖ್ಯವಸ್ತುಗಳನ್ನು ತಯಾರಿಸುವಾಗ ಗ್ಯಾಲಿಯಮ್ ಕೆಲವು ಉಪೋತ್ಪನ್ನಗಳಲ್ಲಿ ಕೇಂದ್ರೀಕೃತವಾಗುತ್ತದೆ. ಇಂಥ ಉಪೋತ್ಪನ್ನಗಳೇ ಗ್ಯಾಲಿಯಮಿನ ಅತ್ಯುತ್ತಮ ಆಕರಗಳು. ಸತುವಿನ ಹೊಗೆಗಂಡಿ ದೂಳುಗಳಿಂದ, ವಿದ್ಯುದ್ವಿಶ್ಲೇಷಿತ ಸತುವಿನ ದ್ರಾವಣಗಳ ಶೇಷವಸ್ತುಗಳಿಂದ ಮತ್ತು ಬೇಯರನ ಅಲ್ಯೂಮಿನದ ಶೇಷವಸ್ತುಗಳಿಂದ ಗ್ಯಾಲಿಯಮನ್ನು ಸೋಡಿಯಮ್ ಗ್ಯಾಲೇಟಾಗಿ ಕ್ಲಿಷ್ಟ ವಿಧಾನಗಳಿಂದ ತಯಾರಿಸುತ್ತಾರೆ. ಸೋಡಿಯಮ್ ಗ್ಯಾಲೇಟಿನ ದ್ರಾವಣವನ್ನು 30$^0$ ಸೆ. ಗಿಂತಲೂ ಹೆಚ್ಚಿನ ಉಷ್ಣತೆಯಲ್ಲಿ ವಿದ್ಯುದ್ವಿಭಜಿಸಿ ಲೋಹವನ್ನು ಪಡೆಯುತ್ತಾರೆ. ಗ್ಯಾಲಿಯಮಿನ ವಾರ್ಷಿಕ ಉತ್ಪಾದನೆ ಸುಮಾರು 200 ಪೌಂಡುಗಳು. ಅಷ್ಟೇ ಅಲ್ಲದೇ ಅದರ ಬಳಕೆಯೂ ಉಂಟು. ವಿನೂತನ ಉಪಯೋಗಗಳಿಗೆ ಬೇಕಾದರೆ ಈ ಲೋಹವನ್ನು ವರ್ಷಕ್ಕೆ 20 ಟನ್ನಿನಷ್ಟು ಕೂಡ ಉತ್ಪಾದಿಸಲು ಸಾಧ್ಯ. ಒಂದು ಗ್ರಾಂ ಗ್ಯಾಲಿಯಮಿನ ಬೆಲೆ ಕೆಜಿಗೆ 480$ (ಅಮೆ) (2012). ಇಂಗ್ಲೆಂಡಿನಲ್ಲಿ ಸತುವಿನ ಹೊಗೆಗಂಡಿ ದೂಳುಗಳಿಂದ ಗ್ಯಾಲಿಯಮನ್ನು ಕೈಗಾರಿಕಾ ಪ್ರಮಾಣದಲ್ಲಿ ತಯಾರಿಸುತ್ತಾರೆ. ದೂಳುಗಳನ್ನು ಸೋಡಿಯಮ್ ಕಾರ್ಬೋನೇಟ್, ಸುಣ್ಣ, ಇದ್ದಲು, ತಾಮ್ರದ ಆಕ್ಸೈಡುಗಳೊಂದಿಗೆ ದ್ರವಿಸುತ್ತಾರೆ. ಹೆಚ್ಚು ಪಾಲು ಜರ್ಮೇನಿಯಮ್ ಮತ್ತು ಗ್ಯಾಲಿಯಮ್ ಹೊಂದಿರುವ ಲೋಹಮಿಶ್ರಣ ಒಂದು ಗೋಲಿಯ ರೂಪದಲ್ಲಿ ಉತ್ಪತ್ತಿಯಾಗುವುದು. ಅದು ಕಿಟ್ಟದ ಕೆಳಭಾಗದಲ್ಲಿ ಸಂಗ್ರಹಿಸಿರುವುದು. ಅದನ್ನು ಫೆರಿಕ್ ಕ್ಲೋರೈಡಿನ ದ್ರಾವಣದಲ್ಲಿ ವಿಲಂಬಿಸಿ, ಕ್ಲೋರೀನನ್ನು ಹಾಯಿಸಿ, ಗ್ಯಾಲಿಯಮ್ ಟ್ರೈಕ್ಲೋರೈಡನ್ನು ಪಡೆಯುತ್ತಾರೆ. ಮತ್ತು ಆಸವಿಸಿ ಗ್ಯಾಲಿಯಮ್ ಕ್ಲೋರೈಡನ್ನು ಪ್ರತ್ಯೇಕಿಸುತ್ತಾರೆ. ತಾಮ್ರಲವಣಗಳನ್ನು ಮತ್ತು ಒತ್ತರಿಸಬಹುದಾದ ಇತರ ಲೋಹಗಳನ್ನು ಒತ್ತರಿಸುವುದರಿಂದಲೂ ಕಬ್ಬಿಣವನ್ನು ಫೆರಸ್ ಸ್ಥಿತಿಗೆ ಅಪಕರ್ಷಿಸುವುದರಿಂದಲೂ ಶೇಷದ್ರಾವಣವನ್ನು ಇನ್ನಷ್ಟು ಶುದ್ಧೀಕರಿಸಬಹುದು. ಈಥರನ್ನು ಸೇರಿಸಿ ಗ್ಯಾಲಿಯಮ್ ಕ್ಲೋರೈಡನ್ನು ಸಂಸ್ಕರಿಸಿ ಬಂದ ಸಾಂದ್ರವಾದ ದ್ರವ್ಯವನ್ನು ಆಸವಿಸಿ ಈಥರನ್ನು ಹೊರತೆಗೆಯುತ್ತಾರೆ. ಹೀಗೆ ಪಡೆದ ಶುದ್ಧ ಗ್ಯಾಲಿಯಮ್ ಟ್ರೈಕ್ಲೋರೈಡಿನಿಂದ ಲೋಹವನ್ನು ತಯಾರಿಸುತ್ತಾರೆ.

ರಾಸಾಯನಿಕ ಗುಣಲಕ್ಷಣಗಳಲ್ಲಿ ಗ್ಯಾಲಿಯಮ್ ಅಲ್ಯುಮಿನಿಯಮನ್ನು ವಿಶೇಷವಾಗಿ ಹೋಲುವುದು. ತೇವವಾದ ಗಾಳಿಯಲ್ಲಿಟ್ಟಾಗ ಲೋಹದ ಮೈಮೇಲೆ ಅದರ ಆಕ್ಸೈಡಿನ ರಕ್ಷಾಕವಚ ಏರ್ಪಡುತ್ತದೆ. ಕೆಂಗಾವಿನಲ್ಲಿಯೂ ಇದು ಆಕ್ಸಿಜನ್ನಿನೊಡನೆ ವರ್ತಿಸುವುದಿಲ್ಲ. ಇನ್ನೂ ಹೆಚ್ಚಿನ ಉಷ್ಣತೆಯಲ್ಲಿ ಆಕ್ಸೈಡಾಗುವುದು. ನೀರನ್ನು 100$^0$ ಸೆ. ನಲ್ಲೂ ಇದು ವಿಭಜಿಸುವುದಿಲ್ಲ. ಖನಿಜಾಮ್ಲಗಳು ಸಾವಕಾಶವಾಗಿ ಲೋಹದ ಮೇಲೆ ವರ್ತಿಸುವವು. ಅಲ್ಯುಮಿನಿಯಮಿನಂತೆ ನೈಟ್ರಿಕ್ ಆಮ್ಲದಲ್ಲಿ ಇದೂ ನಿಷ್ಕಟುವಾಗುವುದು. ಬಿಸಿ ನೈಟ್ರಿಕ್ ಆಮ್ಲದೊಡನೆ ಗ್ಯಾಲಿಯಮ್ ನೈಟ್ರೇಟಾಗುವುದು. ಇದು ಉಭಯವರ್ತಿ (ಆಂಫೊಟೆರಿಕ್). ಕಾಸ್ಟಿಕ್ ಕ್ಷಾರಗಳ ಸಾರಯುತ ದ್ರಾವಣಗಳೊಡನೆ ಕುದಿಸಿದಾಗ ದ್ರಾವ್ಯವಾದ ಆಯಾ ಗ್ಯಾಲೇಟುಗಳು ಮತ್ತು ಹೈಡ್ರೋಜನ್ ಉಂಟಾಗುತ್ತದೆ. ಅಲ್ಯುಮಿನಿಯಮಿನಂತೆ ಗ್ಯಾಲಿಯಮ್ ಹ್ಯಾಲೋಜನ್ನುಗಳೊಡನೆ ವರ್ತಿಸಿ ಟ್ರೈಹ್ಯಾಲೈಡುಗಳನ್ನು ಕೊಡುವುದು. ಅಮೋನಿಯದೊಂದಿಗೆ 900$^0$–1000$^0$ ಸೆ. ಉಷ್ಣತೆಯಲ್ಲಿ ವರ್ತಿಸಿ ಗ್ಯಾಲಿಯಮ್ ನೈಟ್ರೈಡಾಗುವುದು. ತನ್ನ ಸಮಸ್ತ ಸಂಯುಕ್ತಗಳಲ್ಲೂ ಗ್ಯಾಲಿಯಮ್ ಮುಖ್ಯವಾಗಿ ತ್ರಿವೇಲೆನ್ಸೀಯ. ಆದರೆ ದ್ವಿವೇಲೆನ್ಸೀಯ ಸಂಯುಕ್ತಗಳೂ ಇವೆ. ಉದಾಹರಣೆಗೆ ಗ್ಯಾಲಸ್ ಹ್ಯಾಲೈಡುಗಳು, ಸಲ್ಫೈಡು ಮತ್ತು ಆಕ್ಸೈಡು. ಗ್ಯಾಲಿಯಮ್ ಸಲ್ಫೈಡ್ $Ga_2S$ ಮತ್ತು ಸೆಲಿನೈಡ್ $Ga_3Se$ ಇವನ್ನು ಬಿಟ್ಟರೆ ಅದರ ಏಕವೇಲೆನ್ಸೀಯ ಸಂಯುಕ್ತಗಳು ಬಹುಶಃ ಇರಲಾರವು. ಗ್ಯಾಲಿಯಮ್ ಆರ್ಸನೈಡ್ ಒಂದು ಮುಖ್ಯ ಅರೆವಾಹಕ.

ಗ್ಯಾಲಿಯಮಿನ ಅಸಾಮಾನ್ಯ ಗುಣಗಳು ಅದರ ಉಪಯೋಗಗಳ ಬಗ್ಗೆ ಕುತೂಹಲ ಕೆರಳಿಸಿವೆ. ಆದರೂ ಅದು ಇನ್ನೂ ಹೆಚ್ಚಿನ ಬಳಕೆಗೆ ಬರಬೇಕಾಗಿದೆ. ಗ್ಯಾಲಿಯಮ್ ಕಡಿಮೆ ಆವಿಯೊತ್ತಡ ಮತ್ತು ಅತಿ ಹೆಚ್ಚು ಕುದಿಯುವ ಉಷ್ಣತೆ ಪಡೆದಿರುವುದರಿಂದ ಕ್ವಾರ್ಟ್ಜ್ ಕೊಳವೆಗಳಲ್ಲಿ ಅದನ್ನು ತುಂಬಿ ಅಧಿಕ ಉಷ್ಣತೆಗಳಲ್ಲಿ ಉಪಯೋಗಿಸುವ ಉಷ್ಣತಾಮಾಪಕಗಳನ್ನು ತಯಾರಿಸುತ್ತಾರೆ. ಗ್ಯಾಲಿಯಮ್ ಸಲ್ಫೈಡಿನಂಥ ಅರೆವಿದ್ಯುದ್ವಾಹಿಗಳ ತಯಾರಿಕೆಯಲ್ಲಿ ಮತ್ತು ಯುರೇನಿಯಮಿನ ರೋಹಿತಲೇಖಿ ವಿಶ್ಲೇಷಣೆಯಲ್ಲಿ ಇದರ ಸದ್ಯದ ಉಪಯೋಗ ಉಂಟು. ದ್ಯುತಿ ಕನ್ನಡಿಗಳ ಹಿಂಬದಿಗೆ ಹಚ್ಚಲು, ಹೆಚ್ಚಿನ ಉಷ್ಣತೆಗಳಲ್ಲಿ ದ್ರವಮುದ್ರಿಕೆಯ ಲೋಹವಾಗಿ ಮತ್ತು ಅತಿನೇರಳೆ ದೀಪಗಳಲ್ಲಿ ಪಾದರಸದ ಬದಲಾಗಿ ಗಾಲಿಯಮನ್ನು ಉಪಯೋಗಿಸುವ ಸಾಧ್ಯತೆ ಉಂಟು. ಇದರಿಂದ $GaU_3$ ರಂಥ ಅಧಿವಿದ್ಯುದ್ವಾಹಿಗಳನ್ನು ತಯಾರಿಸಬಹುದು. ಗ್ಯಾಲಿಯಮ್ ಕಡಿಮೆ ಉಷ್ಣತೆ ಬೆಸುಗೆ ಪದಾರ್ಥ ಮತ್ತು ಹೆಚ್ಚಿನ ಉಷ್ಣತೆಯಲ್ಲಿ ಕೀಲೆಣ್ಣೆ, ಫ್ರೆಡಲ್–ಕ್ರಾಫ್ಟನ ಕ್ರಿಯೆಯಲ್ಲಿ ಗ್ಯಾಲಿಯಮ್ ಕ್ಲೋರೈಡ್, ಅಲ್ಯುಮಿನಿಯಂ ಕ್ಲೋರೈಡಿಗಿಂತ ಉಪಯುಕ್ತ ವೇಗವರ್ಧಕ. ಎಲುಬಿನ ಕ್ಯಾನ್ಸರಿನ ನಿರ್ಣಯ ಮತ್ತು ಚಿಕಿತ್ಸೆಗಳಲ್ಲಿ ಐಸೊಟೋಪನ್ನು ಉಪಯೋಗಿಸುವರು. ನ್ಯೂಕ್ಲಿಯರ್ ಕ್ರಿಯಾಕಾರಿಗಳಲ್ಲಿ ಉಷ್ಣವಿನಿಮಯ ಮಧ್ಯವರ್ತಿಯಾಗಿ ಗ್ಯಾಲಿಯಮನ್ನು ಉಪಯೋಗಿಸಬಹುದು. ಆದರೆ ಗ್ಯಾಲಿಯಮ್ ತುಕ್ಕು ಹಿಡಿಯುತ್ತದೆ. ಹೆಚ್ಚಿನ ಉಷ್ಣತೆಗಳಲ್ಲಿ ಟಂಗ್‌ಸ್ಟನ್ ಮತ್ತು ಟ್ಯಾಂಟಲಮ್ ವಿನಾ ಎಲ್ಲ ಲೋಹಗಳ ಮೇಲೂ ಅದರ ಪ್ರಭಾವವಿದೆ. ಅದಕ್ಕಾಗಿಯೇ ಅದರ ಮಿಶ್ರ ಲೋಹಗಳನ್ನು ಉಪಯೋಗಿಸುವ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. (ಪಿ.ಜಿ.ಆರ್.)

**ಗ್ಯಾಲ್ವ, ಎವರಿಸ್ಟ್ :** 1811–32. ಫ್ರಾನ್ಸಿನ ಶ್ರೇಷ್ಠ ಗಣಿತ ವಿಜ್ಞಾನಿ. ಗ್ರೂಪ್ ಸಿದ್ಧಾಂತದ ಪ್ರವರ್ತನಕಾರ. ಬಾಳಿದ್ದು ಕೇವಲ ಹತ್ತೊಂಬತ್ತು ವರ್ಷಗಳ ಕಾಲ. ಮಹೋಜ್ವಲ ಉಲ್ಕೆಯಂತೆ; ಆದರೆ ಗಣಿತರಂಗದಲ್ಲಿ ಸಾಧಿಸಿದ ಹಿರಿಮೆ ಅಸಾಮಾನ್ಯ ಮಟ್ಟದ್ದು, ಶಾಶ್ವತ ಮೌಲ್ಯಯುತವಾದದ್ದು, ನಕ್ಷತ್ರದಂತೆ. ಇಷ್ಟಿದ್ದರೂ ವ್ಯಾವಹಾರಿಕವಾಗಿ ಹಸುಳೆಯಂತೆ ವರ್ತಿಸಿ ಇತರರ ಪಿತೂರಿಯ ಫಲವಾಗಿ ಅಪಮೃತ್ಯುವನ್ನಪ್ಪಿದ ತರುಣ. ಗ್ಯಾಲ್ವನ ಜನನವಾದದ್ದು 1811ರ ಅಕ್ಟೋಬರ್ 25 ರಂದು, ಪ್ಯಾರಿಸಿನ ಹತ್ತಿರದ ಒಂದು ಗ್ರಾಮದಲ್ಲಿ. ಈತನ ತಂದೆ ಆ ಊರಿನ ಮೇಯರ್. ಅಂದಿನ ಕಲುಷಿತ ರಾಜಕೀಯದಲ್ಲಿ ಅವನು ಸಕ್ರಿಯ ಪಾತ್ರ ವಹಿಸುತ್ತಿದ್ದ. ತಾಯಿ ವಿದ್ಯಾವಂತರ, ನ್ಯಾಯಾಧೀಶರ ಪೀಳಿಗೆಯಲ್ಲಿ ಬಂದವಳು; ಸ್ವತಃ ವಿದ್ಯಾವತಿ. ಮಗನ ವಿದ್ಯಾಭ್ಯಾಸವನ್ನು ಆಸಕ್ತಿಯಿಂದ ಅವಳೇ ಪೂರೈಸುತ್ತಿದ್ದಳು. ಹನ್ನೊಂದನೆಯ ವಯಸ್ಸಿನ ವರೆಗೂ ಗ್ಯಾಲ್ವನಿಗೆ ನೆಮ್ಮದಿಯ ಮತ್ತು ಸುಖಸಂತೋಷಗಳ ದಿನಗಳೇ ಒದಗಿದ್ದವು. ಹನ್ನೆರಡನೆಯ ವಯಸ್ಸಿನಲ್ಲಿ (1823) ಪ್ಯಾರಿಸಿನ ಶಾಲೆಯೊಂದಕ್ಕೆ ಈತ ಸೇರಿದಂದಿನಿಂದಲೇ ಪ್ರಾರಂಭವಾಯಿತು ಇವನ ಸತ್ವಪರೀಕ್ಷೆ. ಇದರಲ್ಲಿ ಇವನು ಕೊನೆಯ ವರೆಗೂ ಯಶಸ್ವಿಯಾಗಲೇ ಇಲ್ಲ. 1789ರ ಕ್ರಾಂತಿಯಿಂದ ತತ್ತರಿಸಿದ್ದ ಫ್ರಾನ್ಸಿನ ಪ್ರಕ್ಷುಬ್ಧ ರಾಜಕೀಯ ವಾತಾವರಣ ಇನ್ನೂ ಕದಡಿಕೊಂಡೇ

ಇತ್ತು. ಅಲ್ಲಲ್ಲಿ ಸಂದೇಹಾಸ್ಪದ ಒಳಸಂಚುಗಳು ನಡೆಯುತ್ತಲೇ ಇದ್ದುವು. ವಿದ್ಯಾರ್ಥಿಗಳಲ್ಲಿ ಅಶಿಸ್ತು, ಅತೃಪ್ತಿಗಳು ತಾಂಡವವಾಡುತ್ತಿದ್ದವು. ಇಂಥ ವಾತಾವರಣದಲ್ಲಿ ರಾಜಕೀಯ ಕುತಂತ್ರಗಳಿಂದ ಜುಗುಪ್ಸೆಗೊಂಡ ಗ್ಯಾಲ್ವನ ತಂದೆ ಆತ್ಮಹತ್ಯೆ ಮಾಡಿಕೊಂಡ. ಇತ್ತ ಗ್ಯಾಲ್ವನ ಪರಿಸ್ಥಿತಿಯಾದರೋ ಬಲು ವಿಚಿತ್ರ. ತರಗತಿಯಲ್ಲಿ ಉಪಾಧ್ಯಾಯರು ಪಾಠ ಹೇಳುವ ಕ್ರಮ ಇವನಿಗೆ ಏನೇನೂ ಹಿಡಿಸುತ್ತಿರಲಿಲ್ಲ. ಆಂತರಿಕ ಕ್ಷೋಭೆಯಿಂದ ಬಳಲುತ್ತಿದ್ದ ಈತನ ಚರ್ಯೆ ಅಧ್ಯಾಪಕರಿಗೆ ವಿಕೃತವಾಗಿ ಕಂಡು ಸಂದೇಹ ಮೂಡಿಸುತ್ತಿತ್ತು. ಗಣಿತಶಾಸ್ತ್ರಕ್ಕಾಗಿಯೇ ಎರಕ ಹೊಯ್ದಂತೆ ಇದ್ದ ಇವನ ಪ್ರತಿಭೆ ಇತರ ಪಾಠಗಳಲ್ಲಿ ಕುಂಠಿತವಾಯಿತು. ಈ ಶಾಸ್ತ್ರವನ್ನು ಇವನು ಸ್ವಂತವಾಗಿ ಅಭ್ಯಸಿಸಲು ತೊಡಗಿದ. ಲಝಾಂಡರನ (1752–1833) ಅತ್ಯಂತ ಕಠಿಣವೂ ಪಾಂಡಿತ್ಯಪೂರ್ಣವೂ ಆಗಿದ್ದ ಜ್ಯಾಮಿತಿ ಗ್ರಂಥವನ್ನು ಗ್ಯಾಲ್ವ ಆಮೂಲಾಗ್ರವಾಗಿ ತೀರ ಸುಲಭವಾಗಿ ಓದಿ ಆ ಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯ ಪಡೆದ. ಮುಂದೆ ಇವನ ಮನಸ್ಸು ಬೀಜಗಣಿತಕ್ಕೆ ಪ್ರವೇಶ ಮಾಡಲನುವಾಯಿತು. ಆದರೆ ಲಝಾಂಡರನ ಜ್ಯಾಮಿತಿಯಂಥ ಉನ್ನತ ಗ್ರಂಥ ಬೀಜಗಣಿತದಲ್ಲಿರಲಿಲ್ಲ. ದೊರೆತ ಬೀಜಗಣಿತ ಗ್ರಂಥಗಳನ್ನು ನಿರ್ಲಕ್ಷ್ಯದಿಂದ ತಿರುವಿ ಎಸೆದ. ತಾನೇ ಬೀಜಗಣಿತದಲ್ಲಿ ಹೊಸ ಜಾಡನ್ನು ಸೃಷ್ಟಿಸಬೇಕೆಂಬ ಹಂಬಲ ಗ್ಯಾಲ್ವನಲ್ಲಿ ಬಲವಾಗಿ ಬೇರೂರಿತು. ಅಂದಿನ ಗಣಿತ ಪ್ರಪಂಚದಲ್ಲಿ ಕೀರ್ತಿಗಳಿಸಿದ್ದ ಲಗ್ರಾಂಜನ (1736–1813) ಉನ್ನತ ಕೊಡುಗೆಗಳನ್ನು ಶ್ರದ್ಧೆಯಿಂದ ಅಭ್ಯಸಿಸಿದ. ಎಳೆಯ ವಯಸ್ಸಿನಲ್ಲೇ ಬೀಜಗಣಿತದ ಸಮೀಕರಣಗಳಲ್ಲಿ ಮಹತ್ತನ್ನು ಸಾಧಿಸಿದ್ದ ಆಬೆಲನ (1802–1829) ಕೃತಿಗಳನ್ನು ಕೂಲಂಕಷವಾಗಿ ವ್ಯಾಸಂಗ ಮಾಡಿದ. ಇಂಥವನಿಗೆ ತರಗತಿಯ ನೀರಸ ಪಾಠಪ್ರವಚನಗಳು ಯಾವ ವಿಧವಾದ ಕುತೂಹಲವನ್ನೂ ಪ್ರಚೋದಿಸಲಿಲ್ಲ. ಅಧ್ಯಾಪಕರು ಇವನ ಬಗ್ಗೆ ಬಿರುನುಡಿಗಳನ್ನಾಡಿ ದಡ್ಡ, ದುಷ್ಟ ಎಂದು ಮುಂತಾಗಿ ಹೇಳಿದರು. ಗಣಿತದಲ್ಲಿ ಮೇಧಾವಿಯಾದರೂ ಇತರ ಪಾಠಗಳಲ್ಲಿ ನಿಷ್ಪ್ರಯೋಜಕನೆಂದು ಮತ್ತೆ ಕೆಲವರೆಂದರು. ಸಹೋದ್ಯೋಗಿಗಳಾದರೋ ಈತನ ಗಣಿತ ಕ್ರಿಯಾಶಕ್ತಿಯಿಂದ ಚಕಿತರಾಗಿ, ಪ್ಯಾರಿಸಿನ ಎಲ್ಲ ಗಣಿತಜ್ಞರ ಸಂಗಮಕ್ಷೇತ್ರವಾದ ಪಾಲಿಟೆಕ್ನಿಕ್ ಶಾಲೆಯ ಪ್ರವೇಶ ಪರೀಕ್ಷೆಗೆ ಕೂರುವಂತೆ ಪ್ರೇರೇಪಿಸಿದರು. ಆದರೆ ಪರೀಕ್ಷೆಗಳಲ್ಲಿ ಗ್ಯಾಲ್ವನ ಉತ್ತರಪತ್ರಿಕೆಗಳ ಮೌಲ್ಯಮಾಪನ ಸಮರ್ಥರಿಂದ ನಡೆಯದೇ ಇವನು ಅನುತ್ತೀರ್ಣನಾದ. ಎರಡು ಸಾರಿ ಪ್ರಯತ್ನಪಟ್ಟರೂ ಸಾರ್ಥಕವಾಗದೆ ಖತಿಗೊಂಡ ಗ್ಯಾಲ್ವ ಗಣಿತಜ್ಞರ ಜ್ಞಾನವನ್ನೇ ಪ್ರಶ್ನಿಸಿದ. ಮೊದಲೇ ಜುಗುಪ್ಸೆಗೊಂಡಿದ್ದ ಇವನ ಮನಸ್ಸು ಈಗ ರೋಸಿಹೋಗಿತ್ತು. ಇವನ ಅದ್ಭುತ ಪ್ರತಿಭೆಯನ್ನು ಮನಸಾರೆ ಮೆಚ್ಚಿದ ಗಣಿತಶಾಸ್ತ್ರಜ್ಞ ರಿಚರ್ಡ್ ಎಂಬಾತ ಪರೀಕ್ಷೆಯನ್ನು ಮಾಡದೆಯೇ ಗ್ಯಾಲ್ವನಂಥ ಮೇಧಾವಿಯನ್ನು ನೇರವಾಗಿ ಆಯ್ದುಕೊಳ್ಳಬೇಕೆಂದು ಒತ್ತಾಯಪಡಿಸಿದ. ನಾರ್ಮಲ್ ಶಾಲೆಯಲ್ಲಿ ಗ್ಯಾಲ್ವನಿಗೆ ಅವಕಾಶ ಸಿಕ್ಕಿದರೂ (1830) ಅದು ಬಹುಕಾಲ ದಕ್ಕಲಿಲ್ಲ. ಯಾವುದೋ ವೃತ್ತಪತ್ರಿಕೆಯಲ್ಲಿ ಆಕ್ಷೇಪಣೀಯ ಲೇಖನವನ್ನು ಪ್ರಕಟಿಸಿದನೆಂಬ ಆಪಾದನೆಯ ಮೇಲೆ ಇವನನ್ನು ವಜಾ ಮಾಡಿದರು. ದೊರೆ ಲೂಯಿ ಫಿಲಿಪ್ಪೆಯ ವಿರುದ್ಧ ಗ್ಯಾಲ್ವ ಭಾಷಣ ಮಾಡಿದನೆಂದು ಇವನನ್ನು ಸೆರೆಹಿಡಿದರು (1831). ಆದರೆ ಈತನ ವಕೀಲನ ಜಾಣ್ಮೆಯಿಂದ ಆಪಾದನೆ ಸ್ಥಿರವಾಗದೆ ಗ್ಯಾಲ್ವನಿಗೆ ತುರಂಗವಾಸ ಮೊದಲ ಬಾರಿಗೆ ತಪ್ಪಿತು. ಆದರೆ ಕಾನೂನುಬಾಹಿರ ಸಮವಸ್ತ್ರ ಧರಿಸಿ, ಆಕ್ಷೇಪಣೀಯ ಆಯುಧಗಳನ್ನು ಹೊಂದಿದ್ದನೆಂದು ಗ್ಯಾಲ್ವನಿಗೆ 6 ತಿಂಗಳ ಕಾರಾಗೃಹ ಶಿಕ್ಷೆಯನ್ನು ವಿಧಿಸಿದರು. ಶಿಕ್ಷಾನಂತರ ಹೊರಬಿದ್ದ ಇಪ್ಪತ್ತರ ಈ ತರುಣ ಎಪ್ಪತ್ತರ ಮುದಿಯನಂತೆ ಕಾಣುತ್ತಿದ್ದ. ಇದಾದ ಸ್ವಲ್ಪ ದಿವಸಗಳಲ್ಲಿಯೇ ಪೋಲಿಸರ ಕುತಂತ್ರದಿಂದ ಪ್ರೇರಿತನಾಗಿ ಗ್ಯಾಲ್ವ ಕ್ರೂರಿಯಾದ ಸ್ನೇಹಿತನೊಂದಿಗೆ ದ್ವಂದ್ವ ಕಾಳಗಕ್ಕೆ ಇಳಿದ. 1832ರ ಮೇ 31 ರಂದು ಆ ಕಾಳಗದಲ್ಲಿ ಗುಂಡುಗಳ ಹೊಡೆತಕ್ಕೆ ತುತ್ತಾಗಿ ಅಕಾಲದಲ್ಲಿ ವಿನಾಕಾರಣ ಅಸುನೀಗಿದ.

ಗ್ಯಾಲ್ವನ ಗಣಿತಸಾಧನೆ ಅದ್ಭುತ. ಇವನ ಕೃತಿಗಳು ಗಣಿತಲೋಕವನ್ನು ಕ್ರಾಂತಿಗೆ ಒಳಪಡಿಸಿದುವು. ಇವನ ಆವಿಷ್ಕಾರಗಳು, ವಿಶೇಷವಾಗಿ ಗ್ರೂಪ್ ಸಿದ್ಧಾಂತ, ಪ್ರವೇಶಿಸದ ಗಣಿತ ವಿಭಾಗವಿಲ್ಲ. ಆಧುನಿಕ ಬೀಜಗಣಿತದ ಅಡಿಪಾಯ ಗ್ರೂಪ್ ಸಿದ್ಧಾಂತ. ಆ ಕಲ್ಲುಗಳಿಂದಲೇ ಬೀಜಗಣಿತದ ಪೂರ್ಣ ಕಟ್ಟಡ ನಿರ್ಮಿತವಾಗಿರುವುದು. ಇನ್ನೊಂದು ವೈಶಿಷ್ಟ್ಯವೆಂದರೆ ಗ್ರೂಪ್ ಸಿದ್ಧಾಂತವನ್ನು ಸಮೀಕರಣಗಳಿಗೆ ಬಳಸಿದ್ದು ಗ್ಯಾಲ್ವನ ಅಪೂರ್ವ ಪ್ರತಿಭೆಗೆ ಸಾಕ್ಷಿ. ಜೀವಂತನಾಗಿದ್ದಾಗ ಕೆಲವು ಸಣ್ಣ ಗಣಿತ ಲೇಖನಗಳನ್ನು ಪ್ರಕಟಿಸಿದ್ದ ಗ್ಯಾಲ್ವ ಅಂದಿನ ಗಣಿತಜ್ಞರಲ್ಲಿ ಬಹು ಶ್ರೇಷ್ಠನಾದ ಕೋಷಿಗೆ (1789–1857) ಅವನ್ನು ಕೊಟ್ಟು ಆತನ ಉತ್ತೇಜನವನ್ನು ಬಯಸಿದ. ತನ್ನ ಪ್ರತಿಯೊಂದು ಕಾರ್ಯದಲ್ಲೂ ಬಹು ಶಿಸ್ತಿನಿಂದ ವರ್ತಿಸುತ್ತಿದ್ದ ಕೋಷಿ ಗ್ಯಾಲ್ವನ ದುರದೃಷ್ಟದಿಂದಲೋ ಎಂಬಂತೆ ಈ ಕರಡು ಪ್ರತಿಯನ್ನು ಎಲ್ಲೋ ಇಟ್ಟು ಮರೆತು ಅದರ ಪ್ರಸ್ತಾಪವನ್ನೇ ಯಾರಲ್ಲಿಯೂ ಮಾಡಲಿಲ್ಲ. ಎರಡನೆಯ ಬಾರಿ ತನ್ನ ಮತ್ತೊಂದು ಕೃತಿಯನ್ನು ಫ್ರೆಂಚ್ ಅಕಾಡೆಮಿಗೆ ಪ್ರಶಸ್ತಿ ಪಡೆಯಲು ಸಾದರಪಡಿಸಿದ. ಇದು ಅರ್ಥವಾಗದ ವ್ಯರ್ಥಾಲಾಪವೆಂದು ತೀರ್ಮಾನಿಸಲ್ಪಟ್ಟು ತಿರಸ್ಕೃತವಾಯಿತು. ಅದರ ಬೆಲೆಯನ್ನು ಕಂಡುಹಿಡಿಯಲು ಗಣಿತಜ್ಞರಿಗೆ ಒಂದು ಶತಮಾನದ ಕಾಲಾವಕಾಶವೇ ಬೇಕಾಯಿತು. ಗ್ಯಾಲ್ವನ ಸಂಶೋಧನೆಗಳಲ್ಲಿ ಮುಖ್ಯವಾದವು ಇವನು ಸಾಯುವ ದಿನದ ಹಿಂದಿನ ರಾತ್ರಿ ಇಡೀ ಕುಳಿತು ಬರೆದಿಟ್ಟ ಪತ್ರದಲ್ಲಿವೆ. 'ನನಗೆ ಸಮಯವಿಲ್ಲ. ಬೆಳಗ್ಗೆ ಸಾಯಬೇಕು' ಎಂದು ಪದೇ ಪದೇ ಆ ಕಾಗದದಲ್ಲಿ ಬರೆದಿರುವುದು ಎಂಥವರಿಗೂ ಕರುಳು ಕಿವುಚಿದಂತಾಗುತ್ತದೆ. ಈ ಮರಣಪೂರ್ವ ಪತ್ರದಲ್ಲಿ ಗ್ಯಾಲ್ವ ಮೂರು ಗಣಿತಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದ್ದಾನೆ. ಮೊದಲನೆಯದು ಎಲಿಪ್ಟಿಕ್ ಅನುಕಲಗಳು ಮತ್ತು ಬೀಜಗಣಿತೋತ್ಪನ್ನಗಳ ಅನುಕಲಗಳಿಗೆ ಸಂಬಂಧಿಸಿದ್ದು (ಎಲಿಪ್ಟಿಕ್ ಇಂಟೆಗ್ರಲ್ಸ್ ಅಂಡ್ ಇಂಟೆಗ್ರಲ್ಸ್ ಆಫ್ ಆಲ್ಜಿಬ್ರಾಯಿಕ್ ಫಂಕ್ಷನ್). ಉಳಿದೆರಡು ಬೀಜಗಣಿತ ಸಮೀಕರಣಗಳನ್ನು ಕುರಿತದ್ದು. ಸಮೀಕರಣಗಳು ಮತ್ತು ಅವುಗಳ ಮೂಲಗಳ ಬಗ್ಗೆ ಬಹುವರ್ಷಗಳಿಂದ ಪರಿಹಾರವಾಗದಿದ್ದ ಸಮಸ್ಯೆಯನ್ನು ಆಬೆಲ್ ಬಿಡಿಸಿ ಗಣಿತಶಾಸ್ತ್ರದಲ್ಲಿ ದಾಖಲೆ ಸ್ಥಾಪಿಸಿದ್ದ. ಅದೇ ಸಮಸ್ಯೆಯನ್ನು ಗ್ಯಾಲ್ವ ತನ್ನದೇ ಆದ ಅದ್ಭುತ ರೀತಿಯಲ್ಲಿ ಬಿಡಿಸಿ ತೋರಿಸಿದ್ದಾನೆ. ಇದಕ್ಕೆ ಗ್ಯಾಲ್ವ ಸಿದ್ಧಾಂತ ಎಂದು ಹೆಸರು. ಗ್ಯಾಲ್ವ ಸಿದ್ಧಾಂತ ಆಧುನಿಕ ಬೀಜಗಣಿತದ ಆಧಾರದ ಮೇಲೆ ಕಟ್ಟಿದ ಬಹು ಭವ್ಯ ಕಟ್ಟಡ. 1846ರ ವರೆಗೆ ಗ್ಯಾಲ್ವನ ಕೃತಿಗಳಿಗೆ ವಿಶೇಷ ಮನ್ನಣೆ ದೊರೆತಂತೆ ಕಾಣುವುದಿಲ್ಲ. ಆ ವರ್ಷ ಲೈವಿಲ್ಲೆ ಎಂಬಾತ ಗ್ಯಾಲ್ವನ ಕೃತಿಗಳನ್ನು ಪ್ರಶಂಸಾತ್ಮಕ ಮುನ್ನುಡಿಸಹಿತ ಪ್ರಕಟಪಡಿಸಿದ. ಇದು ಗಣಿತಜ್ಞರಿಗೆ ಗ್ಯಾಲ್ವನ ಪರಿಕಲ್ಪನೆಗಳಿಗೆ ಸುಲಭ ಪ್ರವೇಶ ದೊರಕಿಸಿಕೊಟ್ಟಿತು. ಮುಂದೆ ಬೇರೆಬೇರೆ ದೇಶಗಳಲ್ಲಿ ಗ್ಯಾಲ್ವ ಸಿದ್ಧಾಂತಗಳು ತೀವ್ರಗತಿಯಿಂದ ಬೆಳೆದುವು. ಗ್ಯಾಲ್ವನ ಫಲಿತಾಂಶಗಳನ್ನು ವಿಸ್ತರಿಸಿ ಅವುಗಳ ಉಪಯುಕ್ತತೆಯನ್ನು ಶ್ರುತಪಡಿಸಿದ ಕೀರ್ತಿ ಫ್ರಾನ್ಸಿಸ್ ಸಿ. ಜೋರ್ಡನ್‌ನಿಗೆ ಸಲ್ಲಬೇಕು (**ನೋಡಿ–ಗ್ರೂಪ್‌ಸಿದ್ಧಾಂತ**). (ಕೆ.ಎಂ.ಎಸ್.;ಬಿ.ಬಿ.ಬಿ.)

**ಗ್ಯಾಲ್ವ ಸಿದ್ಧಾಂತ :** $ax^2 + bx + c = 0$ ಎಂಬುದು ಒಂದು ವರ್ಗ ಸಮೀಕರಣ. ಇಲ್ಲಿ $a,b,c$ ಗಳು ಪರಿಮೇಯ ಸಂಖ್ಯೆಗಳು.

$$x_1 = \frac{-b + \sqrt{b^2 - 4ac}}{2a}, \quad x_2 = \frac{-b - \sqrt{b^2 - 4ac}}{2a}$$

ಎಂಬುದು ಈ ಸಮೀಕರಣದ ಎರಡು ಮೂಲಗಳು ಎಂದು ನಮಗೆ ತಿಳಿದಿದೆ. ಇವನ್ನು ಪಡೆಯುವ ವಿಧಾನ ಬಲು ಸರಳ. ಆದರೆ

$$ax^3 + bx^2 + cx + d = 0$$

ಎಂಬ ಘನ ಸಮೀಕರಣವನ್ನು ಪರಿಶೀಲಿಸುವಾಗ ಸಮಸ್ಯೆ ಗಂಭೀರವಾಗುತ್ತದೆ. ಇಲ್ಲಿಯೂ ಮೂಲಗಳನ್ನು ನೀಡುವ ಸೂತ್ರ ಉಂಟು. ಆದರೆ ಅದು ಬಲು ಜಟಿಲವಾದದ್ದು ಎಂದು ಸಾಧಿಸಲಾಗಿದೆ (1545). ಚತುರ್ಘಾತದ ಸಮೀಕರಣ

$$ax^4 + bx^3 + cx^2 + dx + e = 0$$

ಎದುರಾದಾಗ ಸಮಸ್ಯೆ ಇನ್ನಷ್ಟು ಜಟಿಲವಾಗುತ್ತದೆ. ಆದರೆ ಇಲ್ಲಿಯೂ ಮೂಲಗಳನ್ನು ನೀಡಬಲ್ಲ ಸೂತ್ರವನ್ನು ಪಡೆಯಬಹುದು ಎಂದು ಸಾಧಿಸಲಾಗಿದೆ (16ನೆಯ ಶತಮಾನ). ಆದರೆ ಪಂಚಮ ಮತ್ತು ಅಧಿಕ ಘಾತಗಳ ಸಮೀಕರಣಗಳಲ್ಲಿ, ಅಂದರೆ

$$a_0x^n + a_1x^{n-1} + a_2x^{n-2} \ldots\ldots\ldots + a_n = 0, n \geq 5$$

ಆಗಿರುವ ಸಮೀಕರಣಗಳಲ್ಲಿ ಪರಿಹಾರಗಳನ್ನು ಪಡೆಯುವುದು ಸಾಧ್ಯವೇ ಅಲ್ಲವೇ ಎಂಬ ವಿಚಾರದಲ್ಲಿ ಖ್ಯಾತ ಗಣಿತ ವಿದ್ವಾಂಸರು ಶತಮಾನಗಳ ಕಾಲ ಯಾವ ನಿರ್ಧಾರಕ್ಕೂ ಬರದೆ ತೊಳಲುತ್ತಿದ್ದರು. ಮೊಟ್ಟಮೊದಲಿಗೆ ಆಬೆಲ್ ಇದು ಸಾಧ್ಯವಿಲ್ಲ ಎಂದು ಸಾಧಿಸಿದ. ಇದೇ ವಿಚಾರವನ್ನು ಗ್ಯಾಲ್ವ ಬಹು ಸೊಗಸಾದ ನೂತನ ರೀತಿಯಲ್ಲಿ ಸಾಧಿಸಿದ್ದಾನೆ. ಮೇಲಿನ ಸಮೀಕರಣಗಳನ್ನು $f(x)=0$ ಎಂದು ಬರೆಯೋಣ. ಇಲ್ಲಿ $a$ ಗಳು ಪರಿಮೇಯ ಸಂಖ್ಯೆಗಳು. $f(x)$ ನ್ನು $n$ಗಿಂತ ಚಿಕ್ಕ ಘಾತಾಂಕ ಬೀಜವಾಕ್ಯಗಳ ಅಪವರ್ತನ ರೂಪದಲ್ಲಿ ಬರೆಯಲಾಗುವುದಿಲ್ಲ ಎಂದು ಭಾವಿಸೋಣ. $x_1, x_2, \ldots\ldots\ldots\ldots x_n$ ಎಂಬುವು $f(x)=0$ ಸಮೀಕರಣದ ಮೂಲಗಳಾಗಿರಲಿ. ಇವು ಮಿಶ್ರ ಅಥವಾ ನೈಜಸಂಖ್ಯೆಗಳಾಗಿರಬಹುದು. ಈ $n$ ಮೂಲಗಳಿಂದ $n!$ ಕ್ರಮಯೋಜನೆಗಳು (ಪರ್ಮ್ಯುಟೇಷನ್ಸ್) ಲಭಿಸುತ್ತವೆ. ಇವು ಒಂದು ಗ್ರೂಪ್. ಇದಕ್ಕೆ ಸಿಮೆಟ್ರಿಕ್ ಗ್ರೂಪ್ ಎಂದು ಹೆಸರು. $x_1, x_2, \ldots\ldots\ldots\ldots x_n$ ಮೂಲಗಳು ಯಾವುದೇ ಬೀಜವಾಕ್ಯ ಸಂಬಂಧವನ್ನು ಹೊಂದಿದ್ದರೆ ಆ ಬೀಜವಾಕ್ಯ

$$\begin{pmatrix} x_1, x_2 \ldots\ldots\ldots, x_n \\ x_{i_1}, x_{i_2} \ldots\ldots\ldots, x_{i_n} \end{pmatrix}$$ ಎಂಬ ಕ್ರಮಯೋಜನೆಯಿಂದ ಪಾಲಿತವಾದರೆ ಅದಕ್ಕೆ ಗ್ರಾಹ್ಯ (ಅಡ್ಮಿಸಿಬಲ್) ಕ್ರಮಯೋಜನೆ ಎಂದು ಹೆಸರು; ಹಾಗಿಲ್ಲದಿದ್ದರೆ ಅಗ್ರಾಹ್ಯ ಕ್ರಮಯೋಜನೆ ಎಂದು ಹೆಸರು. ಉದಾಹರಣೆಗೆ

$x^4-2=0$ ಸಮೀಕರಣದ ಮೂಲಗಳು $x_1 = +2^{1/4}$, $x_2 = ix_1$,

$x_3 = -x_1, x_4 = -i\, x_1$ ಇಲ್ಲಿ $i = \sqrt{-1}.$

$$\begin{pmatrix} x_1 & x_2 & x_3 & x_4 \\ x_2 & x_1 & x_4 & x_3 \end{pmatrix}$$

ಎಂಬುದು ಗ್ರಾಹ್ಯ ಕ್ರಮಯೋಜನೆಯಲ್ಲ. ಏಕೆಂದರೆ $x_1 x_2 + x_3 x_4$ ಮೂಲಗಳು $x_1$, $x_3 + x_2, x_4 = 0$ ಎಂಬುದನ್ನು ಪಾಲಿಸುತ್ತವೆ. ನಮ್ಮ ಕ್ರಮಯೋಜನೆಯಿಂದ ಈ ಸಂಬಂಧ $x_3 + x_2, x_4 = 0$ ಆಗುತ್ತದೆ. ಎಂದರೆ

$$i\, x_1(-x_1) + x_1(-ix_1) = -2i\, x_1^2 \neq 0$$

ಅಂತೆಯೇ $\begin{pmatrix} x_1 & x_2 & x_3 & x_4 \\ x_2 & x_1 & x_4 & x_3 \end{pmatrix}$ ಎಂಬುದು ಗ್ರಾಹ್ಯ ಕ್ರಮಯೋಜನೆ. ಈ ಕ್ರಮಯೋಜನೆ ಮೇಲಿನ ಸಂಬಂಧವನ್ನು ಪಾಲಿಸುತ್ತದೆ. ಈ ಕಾರಣದಿಂದಲೇ ಗ್ರಾಹ್ಯ ಎಂದು ಹೇಳಲಾಗುವುದಿಲ್ಲ. ಗ್ರಾಹ್ಯ ಅಥವಾ ಅಗ್ರಾಹ್ಯ ಎಂಬುದನ್ನು ತೀರ್ಮಾನಿಸುವ ಕ್ರಮ ಇಲ್ಲಿ ನಿರೂಪಿಸುವುದು ಕಷ್ಟ.

ಸಮೀಕರಣದ ಮೂಲಗಳೆಲ್ಲದರ ಕ್ರಮಯೋಜನೆಗಳು ಸಿಮೆಟ್ರಿಕ್ ಗ್ರೂಪ್ ಆಗುತ್ತವೆ ಎಂದು ಮೇಲೆ ಹೇಳಿದೆಯಷ್ಟೆ. ಗ್ರಾಹ್ಯ ಕ್ರಮಯೋಜನೆಗಳೆಲ್ಲ ಒಂದು ಗ್ರೂಪ್ ಆಗುತ್ತವೆ. ಇದಕ್ಕೆ ಗ್ಯಾಲ್ವ ಗ್ರೂಪ್ ಎಂದು ಹೆಸರು.

$G = G_1, G_2, G_3 ......Gr = \{1\}$ ಎಂಬವು $G$ ಎಂಬ ಸಾಂತಪದಗಳ ಗ್ರೂಪಿನ ಉಪಗ್ರೂಪುಗಳಾಗಿರಲಿ (ಸಬ್‌ಗ್ರೂಪ್ಸ್). ಈಗ ಪ್ರತಿಯೊಂದು $G_{i+1}$ ಎಂಬುದು $G_i$ ಗ್ರೂಪಿನ ಪ್ರಸಾಮಾನ್ಯ ಗ್ರೂಪಾಗಿದ್ದು (ನಾರ್ಮಲ್ ಗ್ರೂಪ್) $H$ ಎಂಬುದು $G$ ಯ ಉಪಗ್ರೂಪಾಗಿದ್ದು $G$ ಯಲ್ಲಿರುವ ಯಾವುದೇ $a$ಯು $aoH=Hoa$ ಎಂಬ ನಿಯಮವನ್ನು ಪಾಲಿಸಿದರೆ ಆಗ $H$ ಗೆ ಪ್ರಸಾಮಾನ್ಯ ಉಪಗ್ರೂಪ್ ಎನ್ನುತ್ತೇವೆ.

$$\frac{G_i \text{ ಯಲ್ಲಿರುವ ಪದಗಳು}}{G_{i+1} \text{ರಲ್ಲಿರುವ ಪದಗಳು}} = Pi \text{ (ಒಂದು ಅವಿಭಾಜ್ಯ ಸಂಖ್ಯೆ)}$$

ಆಗಿದ್ದರೆ $G$ ಯನ್ನು ಪರಿಹಾರ್ಯ ಗ್ರೂಪ್ ಎನ್ನುತ್ತೇವೆ (ಸಾಲ್ವಬಲ್ ಗ್ರೂಪ್). ಈಗ ಒಂದು ಸಮೀಕರಣವನ್ನು ಸೂತ್ರರೂಪದಿಂದ ಬಿಡಿಸಬೇಕಾದರೆ ಅದರ ಗ್ಯಾಲ್ವಗ್ರೂಪ್ ಒಂದು ಪರಿಹಾರ್ಯ ಗ್ರೂಪ್ ಆಗಿರಲೇಬೇಕು. $n \geq 5$ ಆಗಿದ್ದರೆ ಸಮೀಕರಣದ ಸಿಮೆಟ್ರಿಕ್ ಗ್ರೂಪ್ ಬಿಡಿಸಲಾಗದ ಗ್ರೂಪ್ ಎಂಬುದನ್ನು ಸಾಧಿಸಿ $n \geq 5$ ಆಗಿರುವ ಸಮೀಕರಣಗಳ ಮೂಲಗಳನ್ನು ಸೂತ್ರರೂಪದಲ್ಲಿ ಬರೆಯಲಾಗುವುದಿಲ್ಲ ಎನ್ನುತ್ತಾನೆ ಗ್ಯಾಲ್ವ. (ಕೆ.ಎಂ.ಎಸ್.)

**ಗ್ಯಾಲ್ವನೀಕರಣ :** ಕಬ್ಬಿಣದ ಇಲ್ಲವೇ ಉಕ್ಕಿನ ಪದಾರ್ಥಗಳಲ್ಲಿನ ಫೆರಸ್ ತಳಕ್ಕೆ ತುಕ್ಕು ಹಿಡಿಯದಂತೆ ಮಾಡಲು ಅವುಗಳಿಗೆ ತೆಳು ಪದರವನ್ನು ಲೇಪಿಸಲು ಬಳಸುವ ವಿವಿಧ ತಂತ್ರಗಳ ಸಾಮೂಹಿಕ ಹೆಸರು (ಗ್ಯಾಲ್ವನೈಸೇಷನ್). ಗಾಳಿ, ನೀರು ಮತ್ತು ಆಮ್ಲಗಳ ಪ್ರಭಾವದಿಂದ ಲೋಹಗಳು ಕ್ಷಯಿಸುತ್ತವೆ. ಬಯಲಲ್ಲಿ ಬಿದ್ದಿರುವ ಕಬ್ಬಿಣ ತುಕ್ಕು ಹಿಡಿಯುವುದು ಇದಕ್ಕೊಂದು ಉದಾಹರಣೆ. ಆಮ್ಲಜನಕ, ತೇವ ಮತ್ತು ಇಂಗಾಲಾಮ್ಲಗಳ ಪ್ರಭಾವದಿಂದ ಉಂಟಾಗುವ ಕ್ರಿಯಾವಿಶೇಷವೇ ತುಕ್ಕು. ಇದು ಪದಾರ್ಥಗಳ ಮೇಲ್ಮೈಯನ್ನು ತಿನ್ನುತ್ತ ಅವುಗಳ ನಾಶಕ್ಕೆ ಕಾರಣವಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಪದಾರ್ಥಗಳಿಗೆ ಯುಕ್ತ ಮೇಲು ಹೊದಿಕೆಯನ್ನು ಹೊದಿಸಿ ರಕ್ಷಿಸಬೇಕಾಗುತ್ತದೆ. ಇದಕ್ಕಾಗಿ ಬಳಸುವ ಪದಾರ್ಥಗಳಲ್ಲಿ ಸತುವೇ ಅತಿ ಸುಲಭದ ವಸ್ತು. ಸತುವಿನ ಕವಚದ ಮೇಲ್ಮೈಯ ಪದರ ಮೊದಲು ಕ್ಷಯಿಸಿ ಒಂದು ಬಗೆಯ ಕಾರ್ಬೊನೇಟ್ ಉತ್ಪನ್ನವಾಗುವುದು. ಕರಗದೇ ಇರುವ ಕಾರ್ಬೊನೇಟಿನ ಪದರ ಲೋಹಕ್ಕೆ ತುಕ್ಕುಹಿಡಿಯದಂತೆ ಮಾಡುವುದು.

ಸತುವನ್ನು ಲೇಪಿಸಿದ ಪದಾರ್ಥಗಳು ಎಲ್ಲ ಸಂದರ್ಭಗಳಲ್ಲಿಯೂ ಉಪಯುಕ್ತ ವಾಗಿರುವುದಿಲ್ಲ. ಸತುವಿನ ಹೊದಿಕೆಯನ್ನು ಸಮುದ್ರದ ಮೇಲಿನ ಲವಣಮಿಶ್ರಿತ ವಾಯು ಮತ್ತು ಗಂಧಕದ ಹವೆಯಿಂದ ಕೂಡಿದ ಪಟ್ಟಣದ ವಾಯು ಭೇದಿಸುತ್ತವೆ. ಆಮ್ಲ ಕ್ಷಾರಗಳೆರಡೂ ಸತುವನ್ನು ತಿನ್ನುವುದರಿಂದ ಆಹಾರ ಪದಾರ್ಥಗಳನ್ನಿಡುವ ಡಬ್ಬಗಳಿಗೆ ಸತು ಹೊದಿಕೆಯನ್ನು ಹೊದಿಸುವುದಿಲ್ಲ. ಬರೀ ಸತುವಿನ ಹೊದಿಕೆಗಿಂತ ಸತು ಮತ್ತು ನಿಕ್ಕಲುಗಳ ಮಿಶ್ರಣದ ಹೊದಿಕೆ ಉತ್ತಮವಾದ ರಕ್ಷಾಕವಚವನ್ನು ಒದಗಿಸುತ್ತದೆ. ಇಂಥ ಹೊದಿಕೆ ಬೇಕಾದಾಗ ವಿದ್ಯುಲ್ಲೇಪನ (ಎಲೆಕ್ಟ್ರೋಪ್ಲೇಟಿಂಗ್) ವಿಧಾನದಿಂದ ನಿಕ್ಕಲ್ ಪೊರೆಯನ್ನು ರಚಿಸುತ್ತಾರೆ. ಬಳಿಕ ಕುಲುಮೆಯಲ್ಲಿ ಕಾಯಿಸಿದಾಗ ಎರಡು ಪೊರೆಗಳೂ ಒಗ್ಗೂಡಿ ಭದ್ರ ಹೊರಕವಚ ಏರ್ಪಡುವುದು. (ವೈ.ವಿ.ಆರ್.)

**ಗ್ಯಾಲ್ವಾನಿ, ಲ್ವಿಗಿ :** 1737–98. ಇಟಲಿ ದೇಶದ ಶಾರೀರಿಕ ಹಾಗೂ ಅಂಗರಚನಾ ವಿಜ್ಞಾನಿ. ಜನನ ಬೊಲೋನದಲ್ಲಿ 1737ರ ಸೆಪ್ಟೆಂಬರ್ 9ರಂದು. ಗ್ಯಾಲಿಯಾನ್ಸಿ ಎಂಬ ವೈದ್ಯನಲ್ಲಿ ವೈದ್ಯವಿಜ್ಞಾನವನ್ನು ಅಭ್ಯಸಿಸಿ ಆತನ ಮಗಳನ್ನೇ ಮದುವೆಯಾದ. ಸ್ಥಳೀಯ ವಿಶ್ವವಿದ್ಯಾಲಯದಲ್ಲಿ ಅಂಗರಚನಾಶಾಸ್ತ್ರದ ಪ್ರಾಧ್ಯಾಪಕನಾಗಿ 1797ರ ವರೆಗೆ ಸೇವೆ ಸಲ್ಲಿಸಿದ. ಈತ ಪ್ರಸಿದ್ಧಿ ಪಡೆದದ್ದು ಶಸ್ತ್ರವೈದ್ಯದಲ್ಲಿ ಮತ್ತು ಪಕ್ಷಿಗಳನ್ನು ಕುರಿತಂತೆ ಶ್ರವಣಾಂಗ, ಜನನಾಂಗ ಹಾಗೂ ಮೂತ್ರಾಂಗಗಳ ತೌಲನಿಕ ಅಂಗರಚನಾಶಾಸ್ತ್ರದಲ್ಲಿ. ದೇಹದಿಂದ ಬೇರ್ಪಡಿಸಲ್ಪಟ್ಟ ಕಪ್ಪೆಯ ಕಾಲುಗಳಿಗೆ ವಿದ್ಯುದಾವಿಷ್ಟ ಚಾಕನ್ನು ಮುಟ್ಟಿಸಿದಾಗ ಅವು ಅಲುಗಾಡುತ್ತವೆ ಎಂಬ ಅಂಶವನ್ನು ಗ್ಯಾಲ್ವಾನಿಯ ಗಮನಕ್ಕೆ ಇವನ ಪತ್ನಿ ತಂದಿದ್ದಳು (1770). ಪ್ರಯೋಗಕ್ಕಾಗಿ ಕಪ್ಪೆಗಳನ್ನು ಕಬ್ಬಿಣದ ಕಂಬಿಗಳ ಮೇಲೆ ತಾಮ್ರದ ಕೊಕ್ಕೆಗಳಿಂದ ನೇತುಹಾಕಿರುವ ರೂಢಿ ಇತ್ತಷ್ಟೆ. ಗಾಳಿಯಿಂದ ಇವು ಅಲುಗಾಡಿ ತಾಮ್ರ ಮತ್ತು ಕಬ್ಬಿಣ ಪದಾರ್ಥಗಳು ಸ್ಪರ್ಶಗೊಂಡಾಗಲೆಲ್ಲ ಕಪ್ಪೆಯ ಕಾಲುಗಳು ಸೆಟೆದುಕೊಳ್ಳುವುದನ್ನು ಗ್ಯಾಲ್ವಾನಿ ಗಮನಿಸಿದ (1786). ಇದು ಕಪ್ಪೆಯ ದೇಹದಲ್ಲಿನ ಧನವಿದ್ಯುದಾವೇಶವನ್ನು ಲೋಹದ ತಂತಿಯಿಂದ ಋಣವಿದ್ಯುದಾವೇಶಕ್ಕೆ ಸಂಪರ್ಕಿಸಿದಾಗ ಉಂಟಾಗುವ ವಿದ್ಯುತ್ ಪ್ರವಾಹದ ಪ್ರಭಾವ ಎಂದು ಗ್ಯಾಲ್ವಾನಿ ತರ್ಕಿಸಿದ. ದೇಹಜನಿತವಾದ ಇಂಥ ವಿದ್ಯುತ್‌ಪ್ರವಾಹಗಳಿಂದ ಚಲನೆ ಉಂಟಾಗುತ್ತದೆಂಬುದನ್ನು ಪುಷ್ಟೀಕರಿಸಲು ಎರಡು ಅರ್ಧಗಳೂ ಬೇರೆ ಬೇರೆ ಲೋಹಗಳಿಂದ ಮಾಡಲ್ಪಟ್ಟ ಒಂದು ಕಮಾನನ್ನು ಗ್ಯಾಲ್ವಾನಿ ತಯಾರಿಸಿದ. ಇದರ ಒಂದು ತುದಿಯಿಂದ ಕಪ್ಪೆಯ ಕಾಲಿನ ಸ್ನಾಯುವನ್ನೂ ಇನ್ನೊಂದು ತುದಿಯಿಂದ ಆ ಸ್ನಾಯುವನ್ನು ಹೊಗುವ ನರವನ್ನೂ ಸಂಪರ್ಕಿಸಿದರೆ ಧನಾವೇಶವಿರುವ ಸ್ನಾಯುವಿನ ಹೊರಭಾಗದಿಂದ ಋಣಾವೇಶವಿರುವ ಸ್ನಾಯುವಿನ ಒಳಭಾಗಕ್ಕೆ ನರದ ಮೂಲಕ ವಿದ್ಯುತ್‌ಪ್ರವಾಹ ಹರಿದು ಅದರ ಫಲವಾಗಿಯೇ ಸ್ನಾಯು ಸೆಟೆಯುವುದೆಂದು ವಿವರಿಸಿದ. ಆದರೆ ದೇಹಜನಿತ ವಿದ್ಯುತ್ತನ್ನು ಈ ಪ್ರಯೋಗದಿಂದ ತೋರಿಸಿ ಕೊಟ್ಟಂತಾಯಿತೆಂಬ ಇವನ ತೀರ್ಮಾನ ಮಾತ್ರ ತಪ್ಪು. ದೇಹಜನಿತ ವಿದ್ಯುತ್ತಿನ ವಿಷಯವನ್ನು ಗ್ಯಾಲ್ವಾನಿ ತನ್ನ ಪುಸ್ತಕದಲ್ಲಿ ಪ್ರಕಟಿಸಿದಾಗ (1791) ಇಟಲಿಯ ಇನ್ನೊಬ್ಬ ಪ್ರಸಿದ್ಧ ವಿಜ್ಞಾನಿ ಅಲ್ಲೆಸ್ಸಾಂಡ್ರೋ ವೋಲ್ಟ ಎಂಬಾತ ಅದನ್ನು ಪ್ರಬಲವಾಗಿ ವಿರೋಧಿಸಿದ. ಬೇರೆ ಬೇರೆ ಲೋಹಗಳು ಸಂಪರ್ಕಿಸಲ್ಪಟ್ಟಾಗ ವಿದ್ಯುತ್ತು ಜನಿಸುವುದೆಂದೂ ಆ ವಿದ್ಯುತ್ತೇ ಕಪ್ಪೆಯ ಸ್ನಾಯುವಿನ ಸೆಟೆತಕ್ಕೆ ಕಾರಣವೆಂದೂ ಆತ ವಾದಿಸಿದ. ಆದರೆ ದೇಹಜನಿತ ವಿದ್ಯುತ್ತು ಇಲ್ಲವೆಂಬ ವೋಲ್ಟನ ಸೂಚನೆಯೂ ಸರಿಯಲ್ಲ. ಈ ವಿವಾದ ಇವರಿಬ್ಬರು ವಿಜ್ಞಾನಿಗಳಲ್ಲಿ ಬಹು ಕಟುವಾಗಿ ಉದ್ರೇಕಗೊಂಡಿತಾದರೂ ಇದರ ಪರಿಣಾಮವಾಗಿ ದೇಹಜನಿತ ವಿದ್ಯುತ್ತನ್ನು ಕುರಿತ ತೀವ್ರಾಭ್ಯಾಸಕ್ಕೆ ಇದು ನಾಂದಿಯಾಯಿತು. ವಿದ್ಯುದ್ವಿಜ್ಞಾನದಲ್ಲಿ ಅನೇಕ ಪದಗಳು ಗ್ಯಾಲ್ವಾನಿಯ ಗೌರವಾರ್ಥವಾಗಿ ಅಂಕಿತವಾಗಿವೆ. ಶಾರೀರಿಕ ವಿಜ್ಞಾನದಲ್ಲೂ ಗ್ಯಾಲ್ವಾನಿಸಮ್ ಎಂಬ ಪದಪ್ರಯೋಗ ಉಂಟು.

ಗ್ಯಾಲ್ವಾನಿ ರಾಜವಾದಿಯಾಗಿದ್ದ. ಇವನಿದ್ದ ಇಟಲಿಯ ಭಾಗ 1797ರಲ್ಲಿ ಪ್ರಜಾರಾಜ್ಯವೆಂದು ಸಾರಲ್ಪಟ್ಟಾಗ ಅದಕ್ಕೆ ತನ್ನ ನಿಷ್ಠೆಯನ್ನು ತೋರಲು ಒಪ್ಪಲಿಲ್ಲವಾಗಿ ಕೆಲಸ ಕಳೆದುಕೊಂಡ. 1798ರ ಡಿಸೆಂಬರ್ 4ರಂದು ಬೊಲೋನ ನಗರದಲ್ಲಿ ನಿಧನನಾದ. (ಎಸ್.ಆರ್.ಆರ್.)

**ಗ್ಯಾಸರ್, ಹರ್ಬರ್ಟ್ ಸ್ಪೆನ್ಸರ್ :** 1888–1963. ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮೆರಿಕನ್ ಅಂಗರಚನಾ ಶಾಸ್ತ್ರಜ್ಞ. ವಿಸ್ಕಾನ್ಸಿನ್ನಿನ ಪ್ಲಾಟ್‌ವಿಲ್ ನಗರದಲ್ಲಿ 1888ರ ಜುಲೈ 5ರಂದು ಜನಿಸಿದ. ಅಲ್ಲಿನ ವಿಶ್ವವಿದ್ಯಾಲಯದಲ್ಲೇ ವಿದ್ಯಾಭ್ಯಾಸ ಮಾಡಿ ಪದವೀಧರನಾದ (1910). ಸಮಕಾಲೀನ ಪ್ರಸಿದ್ಧ ಅಂಗರಚನಾಶಾಸ್ತ್ರಜ್ಞ ಜೋಸೆಫ್ ಎರ್ಲಾಂಗರ್ (1874–1965) ಎಂಬಾತನ ಜೊತೆಯಲ್ಲಿ ಗ್ಯಾಸರನ ಸಂಶೋಧನೆಗಳು 1916ರಲ್ಲಿ ಪ್ರಾರಂಭ ವಾದುವು. ಕ್ಯಾಥೋಡ್ ಕಿರಣ ಆಂದೋಳಲೇಖಿ (ಕ್ಯಾಥೋಡ್ ರೇ ಆಸಿಲೋಗ್ರಾಫ್) ಎಂಬ ಸಾಧನವನ್ನು ಉಪಜ್ಞಿಸಿ ಅದರ ನೆರವಿನಿಂದ ನರಗಳ ಜೈವಿಕ ವಿದ್ಯುತ್ ಕ್ರಿಯೆಗಳನ್ನು ಸಮರ್ಥವಾಗಿ ವಿವರಿಸಿದ (1921) ಹಿರಿಮೆ ಇವರದು. ಈ ಸಾಧನೆ ಗ್ಯಾಸರ್ ಮತ್ತು ಎರ್ಲಾಂಗರ್‌ದ್ವಯರಿಗೆ ಶಾರೀರಿಕ ಹಾಗೂ ವೈದ್ಯವಿಜ್ಞಾನ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ದೊರಕಿಸಿಕೊಟ್ಟಿತು. (1944). ನರಪ್ರಚೋದನೆ (ನರ್ವ್ ಇಂಪಲ್ಸ್) ಎಂಬುದು ವಾಸ್ತವಿಕವಾಗಿ ವಿದ್ಯುದ್ಘನ ಅಲೆಯಿಂದ ಸಾಗುತ್ತದೆ ಎಂಬುದಾಗಿ ಡ್ಯೂಬಾಯ್ ರೇಮಂಡ್ (1818–96) ಎಂಬ ಅಂಗರಚನಾಶಾಸ್ತ್ರಜ್ಞ ಆ ಮೊದಲೇ ಮುನ್ನುಡಿದಿದ್ದ. ಇದನ್ನು ಗ್ಯಾಸರ್ ಎರ್ಲಾಂಗರ್‌ದ್ವಯರು ತಮ್ಮ ಉಪಕರಣದ ನೆರವಿನಿಂದ ಸ್ಥಿರೀಕರಿಸಿ ನಿಜವೆಂದು ತೋರಿಸಿದರು. ನರಪ್ರಚೋದನೆ ಸಾಗುವ ವೇಗ ಗಣಿತಶಾಸ್ತ್ರದ ಪ್ರಕಾರ ಮತ್ತು ಇತರ ಕಾರಣಗಳಿಗೆ ಅನುಸಾರವಾಗಿ ನರಗಳ ಗಾತ್ರವನ್ನೇ ಅವಲಂಬಿಸಿರುತ್ತದೆ ಎಂದು ಖಚಿತಮಾಡಿಕೊಟ್ಟರು. ನರಪ್ರಚೋದನೆಯ ಸಾಗಣೆಯ ವೇಗವನ್ನೂ ನರಗಳ ಗಾತ್ರವನ್ನೂ ಗಮನಿಸಿ ದೇಹದಲ್ಲಿನ ನರಗಳನ್ನೆಲ್ಲ ಅವರು A, B, C ಎಂಬ ಮೂರು ರೀತಿಯವಾಗಿ ವಿಂಗಡಿಸಿದರು.

ಗ್ಯಾಸರ್ ಅಮೆರಿಕದ ಸೇಂಟ್ ಲೂಯಿಯ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ಔಷಧಶಾಸ್ತ್ರದ ಪ್ರಾಧ್ಯಾಪಕನಾಗಿ 1921ರಿಂದ 31 ರವರೆಗೆ ಸೇವೆ ಸಲ್ಲಿಸಿದ. ಬಳಿಕ 4 ವರ್ಷ

ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ಅಂಗರಚನಾ ವಿಜ್ಞಾನದ ಪ್ರಾಧ್ಯಾಪಕನಾಗಿದ್ದ. 1935ರಲ್ಲಿ ಅಮೆರಿಕದ ರಾಕ್‌ಫೆಲ್ಲರ್ ಇನ್‌ಸ್ಟಿಟ್ಯೂಟ್ ಫಾರ್ ಮೆಡಿಕಲ್ ರಿಸರ್ಚ್ ಸಂಸ್ಥೆಯ ಮುಖ್ಯಸ್ಥನಾಗಿ 1953ರಲ್ಲಿ ನಿವೃತ್ತಿಗೊಂಡ. 1963 ಮೇ 11 ರಂದು ನಿಧನ ಹೊಂದಿದ. (ಎಸ್.ಆರ್.ಆರ್.)

**ಗ್ಯಾಸ್ಕೋಇನ್, ಜಾರ್ಜ್ :** 1525–77. ಇಂಗ್ಲಿಷ್ ಕವಿ, ಕಾದಂಬರಿಕಾರ, ನಾಟಕಕಾರ, ರಾಜಕಾರಣಿ, ಯೋಧ. ಇಂಗ್ಲಿಷ್ ಸಾಹಿತ್ಯದ ಪುನರುಜ್ಜೀವನ ಕಾಲದಲ್ಲಿ ನವ್ಯಮಾರ್ಗವನ್ನು ತುಳಿದ ಕವಿಗಳಲ್ಲಿ ಮೊದಲಿಗ. ನಿಜಜೀವನದಿಂದ ಘಟನೆಗಳನ್ನು ಎತ್ತಿಕೊಂಡು ಗದ್ಯದಲ್ಲಿ ಕಥೆ ಬರೆದವರಲ್ಲಿ ಮೊದಲಿಗನೆಂದೂ ಗದ್ಯದಲ್ಲಿ ಗಂಭೀರ ನಾಟಕ ಬರೆದವರಲ್ಲಿ ಮೊದಲಿಗನೆಂದೂ ಇಟಾಲಿಯನ್ ಭಾಷೆಯಿಂದ ಮೊದಲ ಬಾರಿ ಗಂಭೀರ ನಾಟಕವನ್ನು ಭಾಷಾಂತರಿಸಿದವನೆಂದೂ ಮೊದಲನೆಯ ವಿಡಂಬನಕಾರನೆಂದೂ ಇಂಗ್ಲಿಷ್‌ನಲ್ಲಿ ಕೆಲವು ಹೊಸ ಛಂದೋಮಾದರಿಗಳನ್ನು ಬಳಕೆಗೆ ತಂದವನೆಂದೂ ಪ್ರಸಿದ್ಧಿ ಪಡೆದಿದ್ದಾನೆ.

ಗ್ಯಾಸ್ಕೋಇನ್ ಕಾರ್ಡಿಂಗ್‌ಟನ್‌ನ ಬೆಡ್‌ಫರ್ಡ್‌ಷೈರ್‌ನಲ್ಲಿ ಜನಿಸಿದ. ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನಲ್ಲಿ ವ್ಯಾಸಂಗಮಾಡಿದ. ಲಾ ಶಿಕ್ಷಣವನ್ನು ಪಡೆಯಲು ಪ್ರಾರಂಭಿಸಿ ಮಧ್ಯೆ ಅದನ್ನು ಬಿಟ್ಟು ರಾಜಕೀಯವನ್ನು ಪ್ರವೇಶಿಸಿದ. ಬೆಡ್‌ಫರ್ಡ್‌ನ ಪಾರ್ಲಿಮೆಂಟ್ ಸದಸ್ಯನಾದ (1557–59). ಒಳ್ಳೆಯ ಮನೆತನಕ್ಕೆ ಸೇರಿದವನಾದರೂ ಅನೇಕ ಸಂಪ್ರದಾಯಗಳನ್ನು ಮುರಿದ. ಎಲಿಜಬೆತ್ ಬ್ರೆಟನ್ ಎಂಬ ವಿಧವೆಯನ್ನು 1561ರಲ್ಲಿ ಮದುವೆಯಾಗಿ ಆ ವಾವೆಯಿಂದ ಕವಿ ನಿಕೊಲಾಸ್ ಬ್ರೆಟನ್‌ಗೆ ಬಲತಂದೆಯಾದ. 1572–74 ರವರೆಗೆ ಇಂಗ್ಲಿಷ್ ಸೈನ್ಯದಲ್ಲಿ ಸೇವೆಸಲ್ಲಿಸಿ ಕ್ಯಾಪ್ಟನ್ ದರ್ಜೆಗೇರಿದ. ಹಾಲೆಂಡಿನಲ್ಲಿ ರಾಜಪ್ರತಿನಿಧಿಯಾಗಿಯೂ ಕಾರ್ಯ ನಿರ್ವಹಿಸಿದ (1576). ಮುಂದೆ ಬಂದ ಅಷ್ಟಪಟ್ಟದಿಯ ಅನುಕ್ರಮವನ್ನು ಮೊದಲೇ ಆರಂಭಿಸಿದ ಶ್ರೇಯಸ್ಸು ಈತನದು. ಈತನ ಅನುವಾದ ಕೃತಿಗಳಾದ ದಿ ಸಪೋಸಸ್ (ಆರಿಯೋಸ್ಟೊ), ಜೊಕಾಸ್ಟ (ಯೂರಿಪಿಡೀಸ್) ಎಂಬುವು 1566ರಲ್ಲಿ ಪ್ರದರ್ಶನಗೊಂಡವು. ಈತನ ಎ ಹಂಡ್ರಡ್ತ್ ಸಂಡ್ರಿ ಫ್ಲವರ್ಸ್ (1573) ಎಂಬುದು ಒಂದು ಗದ್ಯಪದ್ಯ ಸಂಕಲನವಾಗಿದೆ. 1573ರ ಅನಂತರ ಇವನ ಒಲವು ನೀತಿ ಹಾಗೂ ಶುಚಿತ್ವದ ಕಡೆ ಬಾಗಿತು. ಆಗಲೇ ದಿ ಗ್ಲ್ಯಾಸ್ ಆಫ್ ಗವರ್ನಮೆಂಟ್ (1575) ಎಂಬ ವಿಡಂಬನಾತ್ಮಕ ನಾಟಕ ಬರೆದ. ಆಮೇಲೆ ದಿ ಸ್ಟೀಲ್ ಗ್ಲಾಸ್ (1576) ಎಂಬ ವಿಡಂಬನೆ ಪ್ರಕಟವಾಯಿತು. ಸರ್ಟನ್ ನೋಟ್ಸ್ ಆಫ್ ಇನ್‌ಸ್ಟ್ರಕ್ಷನ್ (1575) ಎಂಬ ಈತನ ಕೃತಿ ಕಾವ್ಯ ಬರೆಯುವ ವಿಧಾನವನ್ನು ಕುರಿತದ್ದಾಗಿದೆ. ಒಂದು ಕಾಲದಲ್ಲಿ ಇಟಾಲಿಯನ್ ರೀತಿಯನ್ನು ಪ್ರೀತಿಸಿದ ಈತ ಕೊನೆಕೊನೆಗೆ ಅದನ್ನು ವಿರೋಧಿಸಿದ. ಈತನ ಕಾವ್ಯಗಳಲ್ಲಿ ಸ್ವದೇಶಭಾಷಾಪ್ರೇಮ ಎದ್ದು ಕಾಣುತ್ತದೆ. ಪ್ರತಿಭೆಯ ಹರವಿದ್ದರೂ, ಕಲಾತ್ಮಕ ಸೊಗಸಿಲ್ಲದ ಈತನ ಸರಳರಗಳೆಗಳು (ಬ್ಲಾಂಕ್ ವರ್ಸ್) ಆಕರ್ಷಕವಾಗಿಲ್ಲ.

ಸಾಹಿತ್ಯದಲ್ಲಿ ಈತ ಹೇಗೆ ಪರಂಪರೆ ಮುರಿದನೋ ಅಂತೆಯೇ ಜೀವನದಲ್ಲೂ ಮುರಿದ. ಯಾವ ಕಟ್ಟುನಿಟ್ಟನ್ನೂ ಪಾಲಿಸದ ಈತ ದುಂದುವೆಚ್ಚ, ಸಾಲಗಳ ಕಾರಣದಿಂದಾಗಿ ಜೈಲುವಾಸವನ್ನನುಭವಿಸಿದ. ಈತ 1577ರ ಅಕ್ಟೋಬರ್ 7 ರಂದು ನಿಧನನಾದ. ಸ್ಟ್ಯಾಮ್‌ಫರ್ಡ್‌ನಲ್ಲಿ ಈತನನ್ನು ಸಮಾಧಿ ಮಾಡಲಾಯಿತು. ಈತನ ಎಲ್ಲ ಕೃತಿಗಳನ್ನೂ ಎರಡು ಸಂಪುಟಗಳಲ್ಲಿ ಜೆ. ಡಬ್ಲ್ಯು. ಕನ್‌ಲಿಫ್ ಎಂಬಾತ ಸಂಪಾದಿಸಿ ಪ್ರಕಟಿಸಿದ್ದಾನೆ (1907–10). (ಪಿ.ಎಂ.ಎಚ್.)

**ಗ್ಯಾಸ್ಟೀರಿಯ :** ಲಿಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯಜಾತಿ; ದಕ್ಷಿಣ ಆಫ್ರಿಕದ ಮೂಲವಾಸಿ. ಇದರಲ್ಲಿ ಸುಮಾರು 50 ಪ್ರಭೇದಗಳಿವೆ. ಹೂವಿನ ಬುಡ ಭಾಗ ಉಬ್ಬಿಕೊಂಡಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಗ್ರೀಕಿನಲ್ಲಿ ಗ್ಯಾಸ್ಟರ್ ಎಂದರೆ ಹೊಟ್ಟೆ ಎಂದು ಅರ್ಥ. ಈ ಗಿಡಗಳನ್ನು ಕುಂಡಸಸ್ಯ ಮತ್ತು ಕಲ್ಲೇರಿ ಸಸ್ಯಗಳಾಗಿ ಬೆಳೆಸುತ್ತಾರೆ. ಗ್ಯಾಸ್ಟೀರಿಯ ಕಾಂಡವಿಲ್ಲದ ರಸಭರಿತ ಸಸ್ಯ; ತನ್ನ ಹತ್ತಿರ ಸಂಬಂಧಿಯಾದ ಆಲವೀ (ಆಲೊ) ಯನ್ನು ಬಹುವಾಗಿ ಹೋಲುತ್ತದೆ. ಅದರಲ್ಲಿರುವಂತೆಯೇ ಇದರಲ್ಲೂ ಎಲೆಗಳು ಗಿಡದ ಬುಡದಲ್ಲಿ ಗುಲಾಬಿ ದಳಗಳ ಮಾದರಿಯಲ್ಲಿ ಜೋಡಣೆಗೊಂಡಿವೆ. ಕೆಲವು ಪ್ರಭೇದಗಳಲ್ಲಿ ಮಾತ್ರ ಪುಟ್ಟ ಕಾಂಡವೊಂದಿದ್ದು ಅದರ ಮೇಲೆ ಎರಡು ಸಾಲುಗಳಲ್ಲಿ ಎಲೆಗಳು ಜೋಡಣೆಗೊಂಡಿರುತ್ತವೆ. ಎಲೆಗಳ ಮೇಲೆ ಬಿಳಿಯ ಇಲ್ಲವೆ ಊದಾಬಣ್ಣದ ಸಣ್ಣಸಣ್ಣ ಚುಕ್ಕೆಗಳಿದ್ದು ಗಿಡದ ಅಂದವನ್ನು ಹೆಚ್ಚಿಸಿವೆ. ಹೂಗಳ ಬುಡಭಾಗ ಕೆಂಪು ಅಥವಾ ಗುಲಾಬಿ ಬಣ್ಣದ ಕೊಳವೆಯಂತೆ ಇದ್ದು, ಮೇಲ್ಭಾಗ ನಸು ಹಸುರು ಬಣ್ಣದಿಂದ ಕೂಡಿದೆ. ಇದರಿಂದ ಹೂಗಳು ಬಲು ಸುಂದರವಾಗಿ ಕಾಣುತ್ತವೆ. ಪ್ರಕಂದದ ತುಂಡುಗಳಿಂದ ಇಲ್ಲವೆ ಎಲೆಗಳಿಂದ ಗಿಡಗಳನ್ನು ವೃದ್ಧಿಸಬಹುದು. ಉದ್ಯಾನಗಾರಿಕೆಯಲ್ಲಿ ಅತಿ ಮುಖ್ಯವಾದ ಪ್ರಭೇದಗಳಿವು; ಗ್ಯಾ.ಅಸಿನಾಸಿಫೋಲಿಯ, ಗ್ಯಾ.ಅಂಗ್ಯುಲೇಟ, ಗ್ಯಾ.ಆರ್ಮ್‌ಸ್ಟ್ರಾಂಗಿಯೈ, ಗ್ಯಾ.ಕ್ಯಾಂಡಿಕನ್ಸ್, ಗ್ಯಾ.ಕ್ಯಾರಿನೇಟ, ಗ್ಯಾ.ಮ್ಯಾಕ್ಯುಲೇಟ, ಗ್ಯಾ.ನೈಟಿಡ ಮತ್ತು ಗ್ಯಾ.ವೆರುಕೋಸ. (ಬಿ.ಎ.ಪಿ.)

**ಗ್ಯಾಸ್ಟ್ರಪೊಡ :** ಮಾಲಸ್ಕ ವಂಶಕ್ಕೆ ಸೇರಿದ ಒಂದು ದೊಡ್ಡ ವರ್ಗ. 3500ಕ್ಕಿಂತ ಹೆಚ್ಚು ಜೀವಂತ ಪ್ರಭೇದಗಳನ್ನೂ 1500ಕ್ಕಿಂತ ಹೆಚ್ಚು ಲುಪ್ತಪ್ರಭೇದಗಳನ್ನೂ ಒಳಗೊಂಡಿದೆ. ಪ್ರಾಚೀನ ಜೀವಶಾಸ್ತ್ರದ ಪ್ರಕಾರ ಈ ವರ್ಗದ ಪ್ರಾಣಿಗಳು ಕೇಂಬ್ರಿಯನ್ ಕಾಲದಲ್ಲಿ ಉಗಮವಾಗಿ ಈವರೆಗೂ ವಿಕಾಸಗೊಂಡು ಬಂದಿವೆ. ಮಾಲಸ್ಕ ವಂಶದ ಪ್ರಾಣಿಗಳಲ್ಲಿ ಇವು ವಿಕಾಸದ ಉನ್ನತ ಮಜಲನ್ನು ಮುಟ್ಟಿದ್ದು ಆ ವಂಶದ ಉಳಿದೆಲ್ಲ ವರ್ಗಗಳ ಪ್ರಾಣಿಗಳಿಗಿಂತಲೂ ಈ ವರ್ಗದ ಪ್ರಾಣಿಗಳು ಅತಿ ಹೆಚ್ಚಿನ ಹೊಂದಾಣಿಕಾ ಪ್ರಸರಣವನ್ನು ತೋರುತ್ತವೆ. ನಾನಾರೀತಿಯ ಪರಿಸರಗಳಲ್ಲಿ ಬದುಕುವ ಸಾಮರ್ಥ್ಯವನ್ನು ಗಳಿಸಿಕೊಂಡಿರುವ ಇವು ಜಲ ನೆಲಗಳೆರಡರಲ್ಲೂ ಕಾಣಬರುತ್ತವೆ. ಕೆಲವು ಸಮುದ್ರದ ತಳಭಾಗದಲ್ಲಿ ವಾಸಿಸಿದರೆ, ಇನ್ನು ಕೆಲವು ತೇಲುಜೀವಿಗಳಾಗಿ ಬದುಕುತ್ತವೆ. ಸಿಹಿನೀರಿನ ಆಗರಗಳಲ್ಲಿ ಕೂಡ ಇವು ವಾಸಿಸುತ್ತವೆ. ಪಲ್ಮನೇಟ ಗಣಕ್ಕೆ ಸೇರಿದ ಬಸವನ ಹುಳುಗಳು ನೇರವಾಗಿ ಗಾಳಿಯನ್ನೇ ಉಸಿರಾಡಬಲ್ಲ ರಚನೆಗಳನ್ನು ರೂಪಿಸಿಕೊಂಡು ನೆಲದ ಮೇಲೆ ಬದುಕುವ ಶಕ್ತಿಯನ್ನು ಪಡೆದಿವೆ. ಇಲ್ಲಿ ಮ್ಯಾಂಟಲ್ ಕುಹರ ಪುಪ್ಪುಸವಾಗಿ ಮಾರ್ಪಟ್ಟಿದೆ.




**ಚಿತ್ರ 1. ಆದಿಮಬಗೆಯ ಗ್ಯಾಸ್ಟ್ರಪೊಡದ ಮೇಲ್ನೋಟ, A ನುಲಿಗೆಗೆ ಮುನ್ನ, B ನುಲಿಗೆಯ ಅನಂತರ, C ಪ್ರೊಸೋಬ್ರ್ಯಾಂಕ್ ಗ್ಯಾಸ್ಟ್ರಪೊಡದ ಪ್ರರೂಪೀ ಬಗೆ, D-G ಅಸಮಮಿತಿ ಚಿಪ್ಪಿನ ವಿಕಾಸದ ವಿವಿಧ ಹಂತಗಳು, 1. ತಲೆ, 2. ಜಠರ, 3. ಅಯೋರ್ಟ, 4. ಹೃತ್ಕುಕ್ಷಿ, 5. ಹೃತ್ಕರ್ಣ, 6. ಕಿವಿರು, 7. ಮ್ಯಾಂಟಲ್ ಕುಹರ, 8. ಗುದದ್ವಾರ, 9. ಅನ್ನನಾಳ, 10. ಕರುಳು, 11. ಚಿಪ್ಪು, 12. ಪಾದ**

ಉಗಮ ಮತ್ತು ವಿಕಾಸ: ಗ್ಯಾಸ್ಟ್ರಪೊಡಗಳಿಗೂ ಆದಿಮಾಲಸ್ಕಗಳಿಗೂ ರಚನೆಯಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಆದರೆ ಈ ವರ್ಗದಲ್ಲಿ ಕಾಣುವ ಒಂದು ಮಹತ್ತ್ವದ ಬದಲಾವಣೆ ಎಂದರೆ ಶರೀರದ ನುಲಿಗೆ (ಟಾರ್ಷನ್). ನುಲಿಗೆಯಿಂದಾಗಿ ಶರೀರದ ಇತರ ಭಾಗಗಳೂ ತಿರುಚಿಕೊಂಡಿವೆ. ಆದಿಯಲ್ಲಿ ಇವುಗಳ ಚಿಪ್ಪು ಮಾತ್ರ ನುಲಿಗೆಗೆ ಒಳಗಾಗಿತ್ತು. ಪಳೆಯುಳಿಕೆಗಳ ಚಿಪ್ಪು ಸುರುಳಿಯಂತೆ ಸುತ್ತಿಕೊಂಡಿರುವುದು ಇದನ್ನು ವ್ಯಕ್ತಪಡಿಸುತ್ತದೆ. ನುಲಿಗೆ ಪೂರ್ವದ

ಚಿಪ್ಪು (ಕಂಬು) ಸಮತಳ ಸುರುಳಿಯ ರೀತಿಯಲ್ಲಿತ್ತು. ಅಂದರೆ ಚಿಪ್ಪು ಶಂಕುವಿನಂತೆ ಇರದೆ ಪ್ರತಿಯೊಂದು ಸುರುಳಿಯೂ ಒಂದರ ಹೊರಗೆ ಒಂದರಂತೆ ಸಮತಲದಲ್ಲಿ ಜೋಡಿತವಾಗಿದ್ದುವು. ಕೇವಲ ಚಿಪ್ಪಿನ ತಿರುಚುವಿಕೆಯೇ ಅಲ್ಲದೆ ಇನ್ನೂ ಗುರುತರವಾದ ಬದಲಾವಣೆಗಳನ್ನು ನುಲಿಗೆ ಒಳಗೊಂಡಿದ್ದು ಜೀವಿಯ ಅಂಗಸಮೂಹ, ಮ್ಯಾಂಟಲ್ ಮತ್ತು ಮ್ಯಾಂಟಲ್ ಕುಹರಗಳು $180^0$ ಅಪ್ರದಕ್ಷಿಣವಾಗಿ ಸುತ್ತಿಕೊಳ್ಳುವಂತೆ ಮಾಡಿದೆ. ಇದರಿಂದಾಗಿ ಮ್ಯಾಂಟಲ್ ಕುಹರ, ಕಿವಿರುಗಳು, ಗುದದ್ವಾರ ಮತ್ತು ಶುದ್ಧೀಕರಣ ರಂಧ್ರಗಳು ತಲೆಯ ಹಿಂದೆ ದೇಹದ ಮುಂಭಾಗಕ್ಕೆ ತೆರೆದುಕೊಳ್ಳುವಂತಾಗಿದೆ. ಜೀರ್ಣಾಂಗ ಮತ್ತು ನರಮಂಡಲಗಳು U-ಆಕೃತಿಯಲ್ಲಿ ಉಳಿದುಕೊಂಡಿವೆ. ಇಷ್ಟಾದರೂ ಚಿಪ್ಪು ಮಾತ್ರ ಸಮಮಿತಿಯ ಸುರುಳಿಯಂತೆ ಉಳಿದುಕೊಂಡಿದೆ. ಇವುಗಳ ಡಿಂಭ ಪ್ರಥಮದಲ್ಲಿ ದ್ವಿಪಾರ್ಶ್ವ ಸಮಮಿತಿಯನ್ನೊಳಗೊಂಡಿದ್ದು ಇದ್ದಕ್ಕಿದ್ದಂತೆಯೇ ನುಲಿಗೆಗೊಳಗಾಗುತ್ತದೆ(ಚಿತ್ರ 1). ನುಲಿಗೆ ಕೇವಲ ವಿಕಾಸದಿಂದಾದ ಕ್ರಿಯೆ ಅಲ್ಲ. ಏಕೆಂದರೆ ಈಗಿನ ಗ್ಯಾಸ್ಟ್ರಪೊಡಗಳ ಭ್ರೂಣದ ಬೆಳವಣಿಗೆಯ ಕಾಲದಲ್ಲಿಯೇ ಇದು ಕಂಡುಬರುತ್ತದೆ. ನುಲಿಗೆಯ ವಿಕಾಸದ ಮಹತ್ತ್ವವನ್ನು ಅರಿಯಲು ನಾನಾ ಸಿದ್ಧಾಂತಗಳನ್ನು ಪ್ರತಿಪಾದಿಸಲಾಗಿದೆ. ಇದು ಡಿಂಭಗಳ ಬೆಳವಣಿಗೆಯ ಹಂತದಲ್ಲಿ ಕಂಡುಬರುವುದರಿಂದ ಈ ಕ್ರಿಯೆ ಒಂದು ರೀತಿಯ ಡಿಂಭದ ಹೊಂದಿಕೆಯೆಂದು ಗಾರ್‌ಸ್ಟಾಂಗ್ ಎಂಬಾತ ಪ್ರತಿಪಾದಿಸಿದ (1928). ನುಲಿಗೆಗಿಂತ ಮೊದಲು ಶಿಲಕಾವೃತವಾದ ವೀಲಮ್ ಎಂಬ ಚಲನಾಂಗವನ್ನು ಡಿಂಭದ ಮ್ಯಾಂಟಲ್




**ಚಿತ್ರ 2. ವಿವಿಧ ಬಗೆಯ ಚಿಪ್ಪುಗಳು : A ಚಿಪ್ಪಿನ ಉದ್ದಸೀಳಿಕೆ, B ಹ್ಯಾಲಿಯೋಟಿಸ್, C ಬ್ಯೂಸಿಕಾನ್, D ಪ್ಯೂಪ, E ಕ್ರೆಪಿಡ್ಯುಲ, F ಲಾಂಬಿಸ್, G ಯೂರೊಕ್ಯಲೇರಿಯ, H ಕೋನಸ್, I ಹೆಲಿಕೊಡಿಸ್ಕಸ್, J ಟೆಸ್ಟಸೆಲ, K ವರ್ಮಿಕ್ಯುಲೇರಿಯ, L ಅಟ್ಲಾಂಟ, 1. ಚಿಪ್ಪಿನ ತುದಿ, 2. ಕಾಲುಮೆಲ, 3. ಸುರುಳಿ, 4. ತೆರಪು, 5. ಸೈಫನ್, 6. ಕೊಂಡಿ**

ಕುಹರದೊಳಕ್ಕೆ ಎಳೆದುಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. ಏಕೆಂದರೆ ಡಿಂಭದ ಪಾದ ಈ ಕ್ರಿಯೆಗೆ ಅಡ್ಡಿಬರುತ್ತಿತ್ತು. ಆದರೆ ತಿರುಚುವಿಕೆಯಿಂದ ಮ್ಯಾಂಟಲ್ ಕುಹರ ಶರೀರದ ಮುಂಬದಿಗೆ ಸರಿದು ಡಿಂಭ ತನ್ನ ವೀಲಮ್ ಅನ್ನು ಒಳಕ್ಕೆಳೆದುಕೊಳ್ಳಲು ಅನುಕೂಲವಾಯಿತು. ಚಲಿಸುತ್ತಿರುವ ಡಿಂಭ ಶತ್ರುವಿನ ಕೈಗೆ ಸಿಕ್ಕಾಗ ತನ್ನ ವೀಲಮ್ ಅನ್ನು ಒಳಗೆಳೆದುಕೊಂಡು ನೀರಿನ ತಳಕ್ಕೆ ಮುಳುಗಿ ಶತ್ರುದಾಳಿಯಿಂದ ತಪ್ಪಿಸಿಕೊಳ್ಳುತ್ತಿತ್ತು. ಹೀಗೆ ಈ ಕ್ರಿಯೆ ಡಿಂಭದ ಉಳಿವಿಗೆ ಅಗತ್ಯವಾಗಿತ್ತು. ಆದರೆ ನುಲಿಗೆ ಕ್ರಿಯೆಯಿಂದ ವಯಸ್ಕ ಜೀವಿಗೆ ಯಾವ ಅನುಕೂಲವೂ ಇಲ್ಲ. ಬದಲಿಗೆ ವಯಸ್ಕ ಜೀವಿಗಳಲ್ಲಿ ಈ ಕ್ರಿಯೆ ಬಹಳ ಸಮಸ್ಯೆಗಳ ಉದ್ಭವಕ್ಕೆ ಕಾರಣವಾಗಿದೆ.

ಆಧುನಿಕ ಸಿದ್ಧಾಂತದ ಪ್ರಕಾರ ನುಲಿಗೆ ಡಿಂಭಗಳ ಹೊಂದಿಕೆ ಅಲ್ಲ, ಬದಲಾಗಿ ಇದು ವಯಸ್ಕ ಜೀವಿಗಳ ಹೊಂದಿಕೆ ಮತ್ತು ಗ್ಯಾಸ್ಟ್ರಪೊಡ ಜೀವಿಗಳು ಇತರ ಜೀವಿಗಳಂತೆಯೇ ಪರಿಸರದೊಡನೆ ಹೊಂದಿಕೊಳ್ಳಲು ಪ್ರಯತ್ನ ನಡೆಸಿದಾಗ ಉದ್ಭವವಾದ ಕ್ರಿಯೆ. ನುಲಿಗೆಗೊಳಗಾಗದ ಅಥವಾ ನುಲಿಗೆಯ ಪೂರ್ವಸ್ಥಿತಿಯಲ್ಲಿದ್ದ ಜೀವಿಗಳಲ್ಲಿ ಮ್ಯಾಂಟಲ್ ಕುಹರದ ತೆರವು, ಗುದದ್ವಾರ, ಕಿವಿರುಗಳು ಮತ್ತು ಶುದ್ಧೀಕರಣರಂಧ್ರಗಳು ಪ್ರಾಣಿಯ ಹಿಂಭಾಗದಲ್ಲಿದ್ದವು. ಪ್ರಾಣಿ ಚಲಿಸುವಾಗ ಉತ್ಪತ್ತಿಯಾಗುತ್ತಿದ್ದ ನೀರಿನ ಪ್ರವಾಹ ದೇಹದ ಮುಂಬದಿಯಿಂದ ಹಿಂಬದಿಗೆ ಹರಿಯುತ್ತಿತ್ತು. ಇದರಿಂದಾಗಿ ನೀರನ್ನು ಮ್ಯಾಂಟಲ್ ಕುಹರದೊಳಕ್ಕೆ ವಿರುದ್ಧ ದಿಕ್ಕಿನಿಂದ ಎಳೆದುಕೊಳ್ಳಬೇಕಾಗಿತ್ತು. ನುಲಿಗೆಯಿಂದಾಗಿ ಮ್ಯಾಂಟಲ್ ಕುಹರ ದೇಹದ ಮುಂಭಾಗಕ್ಕೆ ಬಂದದ್ದರಿಂದ ನೀರು ಮ್ಯಾಂಟಲ್ ಕುಹರದೊಳಕ್ಕೆ ನುಗ್ಗಿ ಹೊರಬರುವಂತಾಯಿತು. ಉಸಿರಾಟಕ್ಕೆ ಹಾಗೂ ತ್ಯಾಜ್ಯವಸ್ತುಗಳನ್ನು ಹೊರಹಾಕುವುದಕ್ಕೆ ಇದರಿಂದ ಅನುಕೂಲವಾಯಿತು. ಈ ಸಿದ್ಧಾಂತಕ್ಕೂ ಬಹಳ ಇತಿಮಿತಿಗಳಿವೆ. ಏಕೆಂದರೆ ಬಹುಪಾಲು ಮಾಲಸ್ಕ ಜೀವಿಗಳಲ್ಲಿ ನೀರನ್ನು ಒಳಗೆಳೆದುಕೊಳ್ಳಲು ಮತ್ತು ಹೊರಹಾಕಲು ಮ್ಯಾಂಟಲ್ ಕುಹರದಲ್ಲಿ ಶಿಲಕೆಗಳಿಂದ ತುಂಬಿದ ಕೊಳವೆಗಳಂಥ ರಚನೆಗಳಿವೆ. ಇದರಿಂದ ಇವು ತಮಗೆ ಬೇಕೆಂದ ದಿಕ್ಕಿನಿಂದ ನೀರನ್ನು ತೆಗೆದುಕೊಂಡು ಹೊರಹಾಕಬಲ್ಲವು. ಗ್ಯಾಸ್ಟ್ರಪೊಡದಲ್ಲಿಯೂ ಇಂಥ ರಚನೆಗಳು ಕಂಡುಬರುತ್ತವೆ. ನುಲಿಗೆ ಗ್ಯಾಸ್ಟ್ರಪೊಡಗಳ ಹೊಂದಾಣಿಕಾ ಸಾಮರ್ಥ್ಯವನ್ನು ಹೆಚ್ಚಿಸಿದೆಯೇ ಎನ್ನುವುದು ಖಚಿತವಾಗಿಲ್ಲ.

ನುಲಿಗೆಯನ್ನು ಪ್ರದರ್ಶಿಸುವ ಪ್ರಾಣಿಯಲ್ಲಿ ಇದರಿಂದ ನಾನಾರೀತಿಯ ಕ್ರಿಯಾ ಸಂಬಂಧಿ ಸಮಸ್ಯೆಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಅತಿ ಮುಖ್ಯವಾದ್ದು ಮ್ಯಾಂಟಲ್ ಕುಹರದೊಳಕ್ಕೆ ತುಂಬಿಕೊಳ್ಳುವ ಮಲಿನ ಪದಾರ್ಥಗಳನ್ನು ಆದಿಮಾಲಸ್ಕ ಜೀವಿಗಳು ಹೇಗೆ ಹೊರಹಾಕುತ್ತಿದ್ದುವು ಎಂಬುದು. ಇವುಗಳ ಮ್ಯಾಂಟಲ್ ಕುಹರದಲ್ಲಿ ನೀರು ಉಳಿಯುವಂತೆ ಗ್ಯಾಸ್ಟ್ರಪೊಡಗಳಲ್ಲೂ ನೀರು ಉಳಿದರೆ ಗುದದ್ವಾರದಿಂದ ಮತ್ತು ನೆಫ್ರೀಡಿಯಗಳಿಂದ ಬರುವ ತ್ಯಾಜ್ಯವಸ್ತುಗಳೆಲ್ಲವನ್ನೂ ತಲೆಯ ಮೇಲೆಯೇ ಸುರಿದುಕೊಳ್ಳಬೇಕಾಗುತ್ತದೆ. ನಿಮ್ನ ರೀತಿಯ ಪ್ರಭೇದಗಳು ಮ್ಯಾಂಟಲ್ ಕುಹರದ ಮೇಲ್ಭಾಗದಲ್ಲಿ ಒಂದು ರೀತಿಯ ಸೀಳುಗಾಲುವೆಯಂಥ ರಚನೆಯನ್ನು ರೂಪಿಸಿಕೊಂಡು, ಗುದದ್ವಾರವನ್ನು ಮ್ಯಾಂಟಲ್ ಕುಹರದ ತುದಿಯಿಂದ ಒಳಗೆಳೆದುಕೊಂಡು ಈ ಸೀಳುಗಾಲುವೆಯ ತಳದ ಒಂದು ಭಾಗಕ್ಕೆ ತೆರೆದುಕೊಳ್ಳುವಂತೆ ಮಾಡಿಕೊಂಡು ಈ ಸಮಸ್ಯೆಯನ್ನು ಪರಿಹರಿಸಿಕೊಂಡಿವೆ. ಇದರಿಂದಾಗಿ ನೀರು ತಲೆಯ ಮೇಲಿಂದ ಒಳನುಗ್ಗಿ ಕಿವಿರುಗಳ ಮೇಲೆ ಹರಿದು ತಾನು ಪ್ರವೇಶಿಸಿದ ದಿಕ್ಕಿನಲ್ಲಿಯೇ ಸೀಳುಗಾಲುವೆಯ ಮೂಲಕ ಹೊರಬರುತ್ತದೆ. ಹೀಗೆ ಹೊರಬರುವಾಗ ಗುದದ್ವಾರದಿಂದ ಮತ್ತು ನೆಫ್ರೀಡಿಯಗಳಿಂದ ಉತ್ಪತ್ತಿಯಾಗುವ ವಸ್ತುಗಳನ್ನು ಹೊರಸಾಗಿಸುತ್ತದೆ.

ಹೆಚ್ಚು ವಿಕಾಸಗೊಂಡ ಗ್ಯಾಸ್ಟ್ರಪೊಡಗಳಲ್ಲಿ ಕೊನೆಯ ಹಂತದ ಬದಲಾವಣೆ ಯೆಂದರೆ ಚಿಪ್ಪಿನಲ್ಲಾದ ಬದಲಾವಣೆ. ಲುಪ್ತಪ್ರಭೇದಗಳಲ್ಲಿ ಸಮತಳ ಸುರುಳಿ ಸಮಮಿತಿಯ ಚಿಪ್ಪುಗಳಿದ್ದರೂ ಜೀವಂತವಾಗಿರುವ ಎಲ್ಲ ಪ್ರಭೇದಗಳ ಚಿಪ್ಪುಗಳೂ ಅಸಮಮಿತಿಯನ್ನೊಳಗೊಂಡಿವೆ. ಇಲ್ಲೂ ಕೆಲವು ಚಿಪ್ಪುಗಳಲ್ಲಿ ಸಮಮಿತಿಯಿದೆಯಾದರೂ ಅದನ್ನು ಅವು ದ್ವಿತೀಯಕವಾಗಿ ಗಳಿಸಿಕೊಂಡಿವೆ. ಸಮತಳ ಸುರುಳಿಯ ಚಿಪ್ಪು ಕೆಲವು ನ್ಯೂನತೆಗಳನ್ನೊಳಗೊಂಡಿತ್ತು. ಇದು ಒತ್ತಾಗಿ ಅಥವಾ ಅಚ್ಚುಕಟ್ಟಾಗಿ ಜೋಡಿಸಿಕೊಂಡಿರಲಿಲ್ಲ. ಏಕೆಂದರೆ ಪ್ರತಿಯೊಂದು ಸುರುಳಿಯೂ ತನ್ನ ಹಿಂದಿನ ಸುರುಳಿಯ ಹೊರಗೆ ಇರುತ್ತಿತ್ತು. ಇದರಿಂದಾಗಿ ಚಿಪ್ಪಿನ ಸುತ್ತಳತೆ ಬಹಳ ಹೆಚ್ಚಾಗಿರುತ್ತಿತ್ತು. ಈ ಸಮಸ್ಯೆ ಅಸಮಮಿತಿಯ ಸುರುಳಿಯುಳ್ಳ ಚಿಪ್ಪುಗಳ ಪ್ರಾಣಿಗಳಲ್ಲಿಲ್ಲ. ಇಂಥ ಚಿಪ್ಪಿನಲ್ಲಿ ಸುರುಳಿಗಳು ಕೇಂದ್ರ ಅಕ್ಷವೊಂದರ ಸುತ್ತಲೂ ಒಂದರ ಮೇಲೊಂದರಂತೆ ಜೋಡಿತವಾಗಿರುವುದರಿಂದ ಚಿಪ್ಪಿನ ಸುತ್ತಳತೆ ಹೆಚ್ಚಾಗಿ ಹಿಗ್ಗಲು ಸಾಧ್ಯವಿಲ್ಲ. ಆದರೆ ಇಂಥ ಚಿಪ್ಪಿನಲ್ಲಿ ಶರೀರದ ತೂಕ ಒಂದೇ ಕಡೆಗೆ ಬೀಳುವ ಸಂಭವ ಇದೆ. ಸಮತಳ ಸುರುಳಿ ಚಿಪ್ಪಿನಲ್ಲಿ ಇಂಥ ಸಂಭಾವ್ಯತೆ ಇರಲಿಲ್ಲ. ತೂಕವನ್ನು ಸಮವಾಗಿರಿಸಲು ಚಿಪ್ಪಿನ ಸ್ಥಾನ ಸ್ವಲ್ಪಮಟ್ಟಿಗೆ ಬದಲಾಗಿದೆ. ಇದರ ನೀಳ ಅಕ್ಷರೇಖೆ ಮೇಲೆ ಹೋದಂತೆ ಹಿಂಬದಿಗೆ ಬಾಗಿರುವುದರಿಂದ ದೇಹದ ನೀಳ ಅಕ್ಷ ವಿಷಮ ದಿಕ್ಕಿಗೆ ಬಾಗಿದೆ. ಈ ರೀತಿಯ ಚಿಪ್ಪಿನ ಬಾಗುವಿಕೆಯನ್ನು ಈಗ ಬದುಕಿರುವ ಎಲ್ಲ ಗ್ಯಾಸ್ಟ್ರಪೊಡಗಳಲ್ಲಿ ಕಾಣಬಹುದು. ಚಿಪ್ಪಿನ ಈ ಹೊಸ ಸ್ಥಾನದಿಂದ ಮ್ಯಾಂಟಲ್ ಕುಹರ ದೇಹದ ಒಂದು ಭಾಗಕ್ಕೆ ಮಾತ್ರ ಸೀಮಿತಗೊಳ್ಳುವಂತಾಯಿತು. ಇದರ ವಿರುದ್ಧ ದಿಕ್ಕಿನ ದೇಹಭಾಗ ಚಿಪ್ಪಿನ ಗೋಡೆಗೆ ಒತ್ತಿಕೊಂಡಂತೆ ಇದೆ. ಈ ಒತ್ತುವಿಕೆಯಿಂದ

ದೇಹದ ಮೇಲೆ ಮಹತ್ತರ ಪರಿಣಾಮವುಂಟಾಗಿದೆ. ಯಾವ ಭಾಗ ಚಿಪ್ಪಿನ ಕಡೆಗೆ ಒತ್ತಿಕೊಂಡಂತಿದೆಯೊ ಆ ಭಾಗದ ಗಾತ್ರ ಕುಗ್ಗಿದೆ. ಆ ಭಾಗದ ಕಿವಿರು, ಹೃತ್ಕರಣ, ಮೂತ್ರಕೋಶಗಳೆಲ್ಲ ನಶಿಸಿಹೋಗಿವೆ.

ಆಧುನಿಕ ಗ್ಯಾಸ್ಟ್ರಪೊಡಗಳಲ್ಲಿ ಶಂಕುವಿನಾಕಾರದ ಚಿಪ್ಪಿನ ವಿಕಾಸವಾದ ಮೇಲೆ ಮೂರು ಬಗೆಗಳಲ್ಲಿ ದೇಹದ ನೈರ್ಮಲ್ಯಕ್ರಿಯೆಯ ಸಮಸ್ಯೆಯನ್ನು ಇವು ಪರಿಹರಿಸಿಕೊಂಡಿವೆ. ಮೊದಲನೆಯದು ಆದಿ ಗ್ಯಾಸ್ಟ್ರಪೊಡಗಳಲ್ಲಿದ್ದ ಮ್ಯಾಂಟಲ್ ಕುಹರದಲ್ಲಿ ಕಾಲುವೆಯನ್ನು ಉಳಿಸಿಕೊಂಡಿರುವುದು ಅಥವಾ ಚಿಪ್ಪಿನಲ್ಲಿ ರಂಧ್ರಗಳಿರುವುದು. ಎರಡನೆಯದು ನುಲಿಗೆ ಕ್ರಿಯೆಯಿಂದ ಉಳಿದ ಒಂದೇ ಕಿವಿರನ್ನು ಹೊಸ ಮ್ಯಾಂಟಲ್ ಕುಹರದೊಳಕ್ಕೆ ಬೆಳೆಸಿಕೊಂಡು ನೀರಿನ ಚಲನೆಯನ್ನು ತಲೆಯ ಪಕ್ಕಕ್ಕೆ ಸೀಮಿತಗೊಳಿಸಿರುವುದು. ಮೂರನೆಯದು ವಿನುಲಿಗೆ (ಡಿಟಾರ್ಷನ್). ಇದು ನುಲಿಗೆಗೆ ವ್ಯತಿರಿಕ್ತವಾದ್ದು. ವಿನುಲಿಗೆಯಿಂದಾಗಿ ಮ್ಯಾಂಟಲ್ ಕುಹರ ಮತ್ತು ಗುದದ್ವಾರಗಳು ಪ್ರಾಣಿಯ ಹಿಂಬದಿಗೆ ಬಂದಿವೆ. ಅಲ್ಲದೆ ದೇಹಕ್ಕೆ ದ್ವಿತೀಯಕ ಸಮಪಾರ್ಶ್ವ ಸಮಮಿತಿ ಬಂದಿದೆ.

ನುಲಿಗೆಯ ಆಧಾರದ ಮೇಲೆ ಗ್ಯಾಸ್ಟ್ರಪೊಡ ವರ್ಗವನ್ನು ಮೂರು ಉಪವರ್ಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಪ್ರೋಸೋಬ್ರ್ಯಾಂಕಿಯ. ಇವು ಮ್ಯಾಂಟಲ್ ಕುಹರದೊಳಗಿರುವ ಕಿವಿರುಗಳಿಂದ ಉಸಿರಾಡುತ್ತವೆ. ಇವುಗಳ ಕಿವಿರು ಮತ್ತು ಗುದದ್ವಾರ ದೇಹದ ಮುಂಭಾಗದಲ್ಲಿವೆ. ಅಂದರೆ ಇವುಗಳಲ್ಲಿ ನುಲಿಗೆ ಕ್ರಿಯೆ ಇದೆ ಎಂದಾಯಿತು. ಜೀವಂತ ಗ್ಯಾಸ್ಟ್ರಪೊಡಗಳ ಬಹುಪಾಲು ಪ್ರಭೇದಗಳು ಈ ಉಪವರ್ಗಕ್ಕೆ ಸೇರಿವೆ. ಎರಡನೆಯ ಉಪವರ್ಗವಾದ ಪಲ್ಮನೇಟಕ್ಕೆ ಬಸವನ ಹುಳು, ಶಂಭುಕಗಳು ಸೇರಿವೆ. ಇವು ಭೂವಾಸಿಗಳು. ಇವುಗಳ ಗುದದ್ವಾರ ಮತ್ತು ಮ್ಯಾಂಟಲ್ ಕುಹರಗಳು ದೇಹದ ಮುಂಭಾಗದಲ್ಲೇ ಇವೆ. ಈ ಜೀವಿಗಳಿಗೆ ಕಿವಿರುಗಳಿಲ್ಲ. ಮ್ಯಾಂಟಲ ಕುಹರ ಪುಪ್ಪುಸದಂತೆ ಕೆಲಸ ಮಾಡುತ್ತದೆ. ಮೂರನೆಯ ಉಪವರ್ಗ ಒಫಿಸ್ತೊಬ್ರ್ಯಾಂಕಿಯ. ಇದಕ್ಕೆ ಸೇರಿದ ಪ್ರಾಣಿಗಳಲ್ಲಿ ನಾನಾ ಹಂತಗಳ ವಿನುಲಿಗೆ ಕಂಡುಬರುತ್ತದೆ. ಬಹುಪಾಲು ಜೀವಿಗಳು ದ್ವಿತೀಯಕವಾಗಿ ಸಮಪಾರ್ಶ್ವ ಸಮಮಿತಿಯನ್ನು ಗಳಿಸಿಕೊಂಡಿವೆ. ಇವುಗಳ ಚಿಪ್ಪು ಚಿಕ್ಕವಾಗಿರಬಹುದು ಅಥವಾ ಸಂಪೂರ್ಣವಾಗಿ ನಶಿಸಿಹೋಗಿರಬಹುದು. ಇವು ನೀರಿನಲ್ಲಿ ಈಜಿಕೊಂಡು ಅಥವಾ ತೇಲಿಕೊಂಡು ಬದುಕುತ್ತವೆ. ಕಡಲ ಮೊಲಗಳೂ ನ್ಯೂಡಿಬ್ರ್ಯಾಂಕ್‌ಗಳೂ ಈ ಉಪವರ್ಗದ ಉದಾಹರಣೆಗಳು.

**ಚಿಪ್ಪು ಮತ್ತು ಮ್ಯಾಂಟಲ್ :** ಗ್ಯಾಸ್ಟ್ರಪೊಡಗಳ ಪ್ರರೂಪಿ ಚಿಪ್ಪು ಸುರುಳಿ ಸುತ್ತಿದ ನಳಿಕೆಯಂತಿರುವ ಶಂಖಾಕೃತಿಯ ಕವಚ. ಇದರೊಳಗೆ ಪ್ರಾಣಿಯ ಎಲ್ಲ ಅಂಗವ್ಯೂಹಗಳೂ (ಅಂಗಸ) ಇವೆ. ಶಂಖಿನಂತಿರುವ ಚಿಪ್ಪಿನ ತುದಿಯಲ್ಲಿ ಅತಿ ಚಿಕ್ಕದಾದ ಪ್ರಥಮ ಸುರುಳಿ ಇದೆ. ಇದೇ ಅತಿ ವಯಸ್ಸಾದ ಸುರುಳಿ. ಇದಾದ ಮೇಲೆ ಇನ್ನುಳಿದ ಅನುಕ್ರಮ ಸುರುಳಿಗಳು ಚಿಪ್ಪಿನ ಲಂಬದ ಅಕ್ಷರೇಖೆಯ ಸುತ್ತಲೂ ಸುತ್ತಿಕೊಂಡಿವೆ. ಈ ಅಕ್ಷರೇಖೆಗೆ ಕಾಲುಮೆಲ ಎಂದು ಹೆಸರು. ಕೊನೆಯ ಸುರುಳಿ ದೊಡ್ಡದಾಗಿದ್ದು ಅದಕ್ಕೊಂದು ಅಗಲವಾದ ರಂಧ್ರವಿದೆ. ಇದರ ಮೂಲಕ ಪ್ರಾಣಿ, ತಲೆ ಮತ್ತು ಪಾದಗಳನ್ನು ಹೊರಚಾಚುತ್ತದೆ. ಶಂಖಿನಂತಿರುವ ಚಿಪ್ಪಿನ ಸುರುಳಿ ಎಡಮುರಿ ಅಥವಾ ಬಲಮುರಿ ಸ್ಥಿತಿಯಲ್ಲಿರಬಹುದು. ಬಲಮುರಿ ಬಗೆಯಲ್ಲಿ ಶಂಖಿನ ರಂಧ್ರ ಕಾಲುಮೆಲದ ಬಲಭಾಗಕ್ಕೆ ತೆರೆದುಕೊಳ್ಳುತ್ತದೆ. ಎಡಮುರಿಯದರಲ್ಲಿ ಶಂಖಿನ ರಂಧ್ರ ಕಾಲುಮೆಲದ ಎಡಭಾಗಕ್ಕೆ ತೆರೆದುಕೊಳ್ಳುತ್ತದೆ.

ಶಂಖಿನ ಸುರುಳಿಯ ಪ್ರಥಮ ಆವರಣವನ್ನು ಈ ಪ್ರಾಣಿಗಳ ಡಿಂಭಗಳು ಉತ್ಪಾದಿಸುತ್ತವೆ. ಈ ಭಾಗಕ್ಕೆ ಪ್ರೋಟೋಕಾಂಕ್ ಎಂದು ಹೆಸರು. ಶಂಖಿನ ಇತರ ಭಾಗಗಳಿಗಿಂತ ಇದು ವಿಭಿನ್ನವಾಗಿರುತ್ತದೆ. ಇದರಲ್ಲಿ ಯಾವ ರೀತಿಯ ಕುಸುರಿ ರಚನೆಗಳಿರುವುದಿಲ್ಲ. ಇನ್ನುಳಿದ ಭಾಗಗಳು ಒಂದೇ ರೀತಿಯ ರಚನೆಯನ್ನು ತೋರುತ್ತವೆ. ಪ್ರಾಣಿಯ ಮ್ಯಾಂಟಲಿನ ತುದಿಯಿಂದ ಶಂಖು ಅಥವಾ ಚಿಪ್ಪು ಉತ್ಪತ್ತಿಯಾಗುತ್ತದೆ.

ಶಂಖುವಿನಲ್ಲಿ ಮೂರು ಪದರಗಳನ್ನು ನೋಡಬಹುದು: ಹೊರಗಿನ ಪೆರಿ–ಆಸ್ಟ್ರಕಮ್, ಮಧ್ಯದ ಪ್ರಿಸ್ಮ್ಯಾಟಿಕ್ ಮತ್ತು ಒಳಗಡೆಯ ನೆಕ್ರಿಯಸ್ ಪದರಗಳು. ಪೆರಿ–ಆಸ್ಟ್ರಕಮ್ ಪದರ ತೆಳುವಾಗಿದೆ. ಇದರಲ್ಲಿ ಗಡುಸಾಗಿರುವ, ಜಡ್ಡುಗಟ್ಟಿದ ಸಾವಯವ ವಸ್ತುವಿನಿಂದಾದ ಕಾಂಕಿಯೋಲಿನ್ ಎಂಬ ವಸ್ತುವಿದೆ. ಉಳಿದೆರಡು ಪದರಗಳು ಕ್ಯಾಲ್ಸಿಯಮ್ ಕಾರ್ಬೊನೇಟಿನಿಂದ ರಚಿತವಾಗಿವೆ. ಪ್ರಿಸ್ಮ್ಯಾಟಿಕ್ ಪದರದಲ್ಲಿ ಕ್ಯಾಲ್ಸಿಯಂ ಕಾರ್ಬೊನೇಟ್ ಹರಳುಗಳು ನೀಳವಾಗಿ ಜೋಡಿತವಾಗಿವೆ. ನೆಕ್ರಿಯಸ್ ಪದರದಲ್ಲಿ ತೆಳ್ಳಗಿರುವ ಮತ್ತು ಹೊಳೆಯುತ್ತಿರುವ ಹಾಳೆಗಳಂಥ ರಚನೆಗಳಿವೆ.

ಗ್ಯಾಸ್ಟ್ರಪೊಡಗಳ ಚಿಪ್ಪುಗಳಿಗೆ ನಾನಾರೀತಿಯ ಬಣ್ಣಗಳಿವೆ. ಶಂಖಿನ ರಚನೆ, ಅದರಲ್ಲಿರುವ ಕುಸುರಿ ಕೆಲಸಗಳು ಮತ್ತು ಆಕಾರ, ವೈವಿಧ್ಯತೆಯಿಂದ ಕೂಡಿವೆ. ಆದರೆ ಇಲ್ಲಿ ಕೆಲವು ಮುಖ್ಯ ಮಾರ್ಪಾಟುಗಳನ್ನೊಳಗೊಂಡಿರುವ ಚಿಪ್ಪುಗಳ ವಿಚಾರವನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಬಹುಪಾಲು ಪ್ರಭೇದಗಳಲ್ಲಿ ಜೀವಿ ಎಳೆಯದಾಗಿದ್ದಾಗ ಮಾತ್ರ ಸುರುಳಿಯಂತಿರುವ ಚಿಪ್ಪು ಇರುತ್ತದೆ. ವಯಸ್ಕ ಜೀವಿಗಳಲ್ಲಿ ಸುರುಳಿ ರಚನೆ ಮಾಯವಾಗುತ್ತದೆ. ಹ್ಯಾಲಿಯೋಟಿಸ್ ಮತ್ತು ಕ್ರೆಪಿಡ್ಯುಲಗಳಲ್ಲಿ ಚಿಪ್ಪು ಇನ್ನೂ ಅಸಮಮಿತಿಯಲ್ಲಿಯೇ ಉಳಿದಿದೆ. ಲಿಂಪೆಟ್‌ಗಳಲ್ಲಿ (ಪಟೆಲ) ಚಿಪ್ಪು ಚೀನಿಯರ ಟೋಪಿಯಂತೆ ಇದ್ದು ದ್ವಿತೀಯಕ ಸಮಮಿತಿಯನ್ನು ಗಳಿಸಿಕೊಂಡಿದೆ. ವರ್ಮಿಟಿಡೀ ಕುಟುಂಬದ ಜೀವಿಗಳಲ್ಲಿ ಚಿಪ್ಪು ಎಳೆಯ ಪ್ರಾಣಿಗಳಲ್ಲಿ ಉಳಿದವುಗಳ ಚಿಪ್ಪಿನಂತೆಯೇ ಸುತ್ತಿಕೊಂಡಿರುತ್ತದೆ. ಆದರೆ, ಪ್ರಾಣಿ ಬೆಳೆದಂತೆ ಪ್ರತಿ ಸುರುಳಿಯೂ ಬೇರೆಬೇರೆಯಾಗುತ್ತ ಬಂದು ಪ್ರಬುದ್ಧಾವಸ್ಥೆಯಲ್ಲಿ ಕಾರ್ಕ್–ಸ್ಕ್ರೂವಿನಂತೆ ಆಗುತ್ತದೆ.

ಚಿಪ್ಪಿನ ಗಾತ್ರ ಕಡಿಮೆಯಾಗುವುದನ್ನು ಇಲ್ಲವೇ ಸಂಪೂರ್ಣವಾಗಿ ನಶಿಸಿಹೋಗುವುದನ್ನು ಕೆಲವು ಪ್ರಭೇದಗಳಲ್ಲಿ ಕಾಣಬಹುದು. ಪ್ರೋಸೋಬ್ರ್ಯಾಂಕಿಯ ಉಪವರ್ಗದ ಸೈನಮ್ ಎಂಬುದರಲ್ಲಿ ಪಾದ ಮತ್ತು ಮ್ಯಾಂಟಲ್‌ಗಳು ಅಗಲವಾಗಿದ್ದು ಚಿಪ್ಪಿನ ಮೇಲೆ ಮಡಿಸಿಕೊಂಡು ಒಂದು ರೀತಿಯ ಹೊದಿಕೆಯಂತಿವೆ. ಇದರಿಂದ ಚಿಪ್ಪು ಹೊರಕ್ಕೆ ಕಾಣುವುದಿಲ್ಲ. ಭೂಚರ ಪಲ್ಮನೇಟಗಳಲ್ಲೂ ಈ ಬಗೆಯ ಮಾರ್ಪಾಟನ್ನು ಕಾಣಬಹುದು. ಲೈಮ್ಯಾಕ್ಸ್, ಫಿಲೊಮೈಕಸ್ ಮುಂತಾದವುಗಳಲ್ಲಿ ಚಿಪ್ಪು ಬಹಳವಾಗಿ ಕುಗ್ಗಿ ಮ್ಯಾಂಟಲಿನೊಳಗೆ ಹುದುಗಿಹೋಗಿದೆ.



**ಚಿತ್ರ 3. ಲಿಮಾಸೈನ ಎಂಬ ಕಡಲಚಿಟ್ಟೆಯ ಈಜುವಿಕೆ. 1. ಚಿಪ್ಪು, 2. ಪ್ಯಾರಪೋಡಿಯಂ**

ಚಿಪ್ಪಿನ ಕ್ಷೀಣತೆ ಒಫಿಸ್ತೊಬ್ರ್ಯಾಂಕುಗಳ ಒಂದು ಮುಖ್ಯ ಗುಣ. ಇಲ್ಲಿ ಚಿಪ್ಪಿನ ಕ್ಷೀಣತೆಗೂ ವಿನುಲಿಗೆ ಕ್ರಿಯೆಗೂ ಒಂದು ರೀತಿಯ ಸಂಬಂಧವಿದೆ. ಗುಳ್ಳೆಶಂಖು, ಪಿರಾಮಿಡಿಲಿಡೀ ಮತ್ತು ಟೀರಾಪಾಡ್‌ಗಳಲ್ಲಿ (ಕಡಲ ಚಿಟ್ಟೆ) ಚಿಪ್ಪು ಚೆನ್ನಾಗಿ ರೂಪುಗೊಂಡಿದೆಯಾದರೆ ಕಡಲ ಮೊಲದಲ್ಲಿ ಬಲು ಕ್ಷೀಣವಾಗಿ ಮ್ಯಾಂಟಲ್ ಒಳಗೆ ಹುದುಗಿದೆ. ನ್ಯೂಡಿಬ್ರ್ಯಾಂಕ್‌ಗಳಲ್ಲಿ ಸಂಪೂರ್ಣ ವಿನುಲಿಗೆಯನ್ನು ಕಾಣಬಹುದು (ಉದಾ: ಆಂಕಿಡಿಯಮ್). ಇವುಗಳಲ್ಲಿ ಚಿಪ್ಪು ಇಲ್ಲ. ಚಿಪ್ಪುಗಳ ಗಾತ್ರದಲ್ಲೂ ವ್ಯತ್ಯಾಸಗಳುಂಟು. ಪ್ಯೂಪ ಜಾತಿಯ ಭೂಚರ ಪಲ್ಮನೇಟಗಳಲ್ಲಿ ಅತಿ ಚಿಕ್ಕಗಾತ್ರದ ಚಿಪ್ಪು (ಸುಮಾರು 1 ಮಿಮೀ.) ಕಂಡುಬಂದರೆ ಮೆಗಲೊಟ್ರ್ಯಾಕ್ಟಸ್ ಎಂಬುದರಲ್ಲಿ ಬಲುದೊಡ್ಡ ಗಾತ್ರದ ಚಿಪ್ಪು (2' ಎತ್ತರದ) ಕಂಡುಬರುತ್ತದೆ.

ಗ್ಯಾಸ್ಟ್ರಪೊಡಗಳು ರಿಟ್ರ್ಯಾಕ್ಟರ್ ಮಾಂಸಖಂಡಗಳ ಸಹಾಯದಿಂದ ತಮ್ಮ ತಲೆ ಮತ್ತು ಪಾದಗಳನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುತ್ತವೆ. ಕೆಲವು ಬಗೆಗಳಲ್ಲಿ ಚಿಪ್ಪಿನ ರಂಧ್ರವನ್ನು ಮುಚ್ಚಿಕೊಳ್ಳಲು ದಾರದ ಮೇಲೆ ಒಪರ್‌ಕ್ಯುಲಂ ಎನ್ನಲಾಗುವ ಒಂದು ಮುಚ್ಚಳವೂ ಇರುತ್ತದೆ.

**ಪಾದ:** ಆದಿಮಾಲಸ್ಕಗಳಲ್ಲಿರುವಂಥ, ಮತ್ತು ತೆವಳಲು ಅನುಕೂಲವಾಗಿರುವ ಚಪ್ಪಟೆಯಾದ ಪಾದ ಗ್ಯಾಸ್ಟ್ರಪೊಡಗಳಲ್ಲಿದೆ. ಇದು ವಿವಿಧ ವಸ್ತುಗಳ ಮೇಲೆ ಚಲಿಸಲು ಅನುಕೂಲಿಸುವಂತೆ ಮಾರ್ಪಾಟಾಗಿರುವುದನ್ನು ಕಾಣಬಹುದು. ಉದಾ: ಬಂಡೆಗಳ ಮೇಲೆ ಬರುವ ಲಿಂಪೆಟ್‌ಗಳಲ್ಲಿ ಕೈಪಾನಿನಲ್ಲಿರುವಂತೆ ಆಸರೆಗೆ ಅಂಟಿಕೊಳ್ಳಲು ಅನುಕೂಲವಾದ ಪಾದ ಇದೆ.

ಸಾಮಾನ್ಯವಾಗಿ ಪಾದದಲ್ಲಿ ಪ್ರೋಪೋಡಿಯಂ, ಮೀಸೊಪೋಡಿಯಂ ಮತ್ತು ಮೆಟಪೋಡಿಯಂ ಎಂಬ ಮೂರು ಭಾಗಗಳನ್ನು ಗುರುತಿಸಬಹುದು. ಅಲ್ಲದೆ ಪಾದದ ಮುಂಭಾಗದಲ್ಲಿ ಅಥವಾ ತಳಭಾಗದಲ್ಲಿ ಒಂದು ಲೋಳೆ ಗ್ರಂಥಿ ಇದೆ. ಇದರಿಂದ ಉತ್ಪತ್ತಿಯಾಗುವ ಲೋಳೆ ಪ್ರಾಣಿ ಚಲಿಸಿದ ಹಾದಿಯಲ್ಲಿ ಲೋಳೆಯಂಥ ಜಾಡನ್ನು ಬಿಡುತ್ತದೆ. ಪಾದದಲ್ಲಿ ಪುಷ್ಟವಾಗಿ ಬೆಳೆದ ಸ್ನಾಯುಗಳನ್ನೂ ಕಾಣಬಹುದು. ಇವುಗಳ ಅಲೆಯ ರೀತಿಯ ಚಲನೆಯಿಂದ ಪ್ರಾಣಿ ಚಲಿಸುತ್ತದೆ.

ಇನ್ನು ಕೆಲವು ಗ್ಯಾಸ್ಟ್ರಪೊಡಗಳಲ್ಲಿ ಬೇರೆ ಬಗೆಯ ಚಲನೆಯನ್ನು ಕಾಣಬಹುದು. ಉದಾಹರಣೆಗೆ ಜೌಗುಪ್ರದೇಶದಲ್ಲಿ ವಾಸಿಸುವ ಮೆಲಾಂಪಸ್ ಎಂಬುದು ಪಾದದ ಮುಂಭಾಗವನ್ನು ಮೊದಲು ಮುಂಚಾಚಿ ಅದರಿಂದ ನೆಲವನ್ನಾಗಲೀ ಇನ್ನಾವ ವಸ್ತುವನ್ನಾಗಲೀ ಹಿಡಿದುಕೊಂಡು ಆಮೇಲೆ ತನ್ನ ದೇಹವನ್ನು ಎಳೆದುಕೊಳ್ಳುತ್ತದೆ.

ಲ್ಯಾಕುನ ಎಂಬ ಪ್ರಾಣಿಯ ಪಾದದ ತಳಭಾಗದ ಮಧ್ಯದಲ್ಲಿ ಉದ್ದಕ್ಕೆ ಒಂದು ಕಾಲುವೆಯಿದ್ದು ಅದು ಪಾದವನ್ನು ಎಡ ಮತ್ತು ಬಲಭಾಗಗಳಾಗಿ ವಿಭಾಗಿಸಿದೆ. ಹುಳು ಚಲಿಸುವಾಗ ಈ ಭಾಗಗಳು ಒಂದಾದ ಮೇಲೆ ಒಂದರಂತೆ ಚಲಿಸುತ್ತವೆ.

ನೀರಿನ ತಳಭಾಗದಲ್ಲಿರುವ ಮೃದುವಾದ ಮಣ್ಣಿನಲ್ಲಿನ ಬಿಲಗಳಲ್ಲಿ ವಾಸಿಸುವ ಪ್ರೋಸೋಬ್ರ್ಯಾಂಕ್‌ಗಳು ಮತ್ತೊಂದು ರೀತಿಯಲ್ಲಿ ತಮ್ಮ ಪಾದವನ್ನು ಮಾರ್ಪಾಟು ಮಾಡಿಕೊಂಡಿವೆ. ಇವುಗಳ ಪಾದದ ಪ್ರೋಪೋಡಿಯಂ ಗುದ್ದಲಿಯಾಕಾರದಲ್ಲಿದ್ದು ನೆಲವನ್ನು ಅಗೆಯಲು ಸಹಾಯಕವಾಗಿದೆ. ಪಾದದ ಮುಂತುದಿಯಲ್ಲಿರುವ ಒಂದು ಪದರ ಗುರಾಣಿಯಂತೆ ತಲೆಯನ್ನು ಮುಚ್ಚಿದ್ದು ಮಣ್ಣು ಆ ಕಡೆಗೆ ಹೋಗದಂತೆ ತಡೆಯುತ್ತದೆ. ಚಿಪ್ಪುಗಳುಳ್ಳ ಪ್ರಭೇದಗಳ ಪಾದದ ಹಿಂತುದಿಯ ಮೇಲ್ಭಾಗದಲ್ಲಿ ಪೆರಿಆಸ್ಟ್ರಕಮ್ ಅಥವಾ ಕ್ಯಾಲ್ಸಿಯಂ ಕಾರ್ಬೋನೇಟಿ ನಿಂದ ಕೂಡಿದ ಗಡುಸಾದ ತಟ್ಟೆಯಂಥ ರಚನೆ ಇದೆ. ಇದಕ್ಕೆ ಒಪರ್‌ಕ್ಯುಲಂ ಎಂದು ಹೆಸರು. ಪ್ರಾಣಿ ಪಾದವನ್ನು ಚಿಪ್ಪಿನೊಳಕ್ಕೆಳೆದುಕೊಂಡಾಗ ಇದು ಚಿಪ್ಪಿನ ರಂಧ್ರವನ್ನು ಅಚ್ಚುಕಟ್ಟಾಗಿ ಮುಚ್ಚುತ್ತದೆ. ಸ್ಟ್ರಾಂಬಸ್ ಎಂಬ ಪ್ರಾಣಿಯಲ್ಲಿ ಪಾದ ಚಿಕ್ಕದಾಗಿದ್ದು ಒಪರ್‌ಕ್ಯುಲಂ ನಖದಂತೆ ಇದೆ. ಇಂಥ ಒಪರ್‌ಕ್ಯುಲಂ ಪ್ರಾಣಿ ನೆಲದೊಳಗೆ ಹುದುಗಿಕೊಳ್ಳುವುದಕ್ಕೂ ನೆಲ ದಿಂದ ಹೊರಕ್ಕೆ ಬರುವುದಕ್ಕೂ ಸಹಾಯಕವಾಗಿದೆ.

ಪ್ರೋಸೋಬ್ರ್ಯಾಂಕಿಯ ಉಪವರ್ಗದ ಹೆಟರಾಪೊಡ ಮತ್ತು ಒಫಿಸ್ತೊಬ್ರ್ಯಾಂಕಿಯ ಗುಂಪಿನ ಕಡಲ ಚಿಟ್ಟೆಗಳ ಪಾದ ಈಜುವುದಕ್ಕೆ, ನೀರಿನಲ್ಲಿ ತೇಲುವುದಕ್ಕೆ ಸಹಾಯಕವಾಗುವಂತೆ ಈಜುರೆಕ್ಕೆಯಾಗಿ ಮಾರ್ಪಟ್ಟಿದೆ. ಇನ್ನು ಕೆಲವು ಒಫಿಸ್ತೊಬ್ರಾಂಕ್‌ಗಳ ಪಾದ ಬೇರೆ ರೀತಿಯಲ್ಲಿ ಮಾರ್ಪಾಟಾಗಿದೆ. ಇವುಗಳಲ್ಲಿ ಪಾದದ ಎರಡು ಬದಿಯಿಂದ ಹುಟ್ಟಿ, ದೇಹದ ಎರಡು ಕಡೆಗಳಲ್ಲೂ ವಿಶಾಲವಾಗಿ ಹರಡಿರುವ ಎರಡು ರೆಕ್ಕೆಗಳಿವೆ. ಇವಕ್ಕೆ ಪ್ಯಾರಪೋಡಿಯ ಎಂದು ಹೆಸರು. ಇವು ಅಗಲವಾಗಿದ್ದು ಈಜಲು ಸಹಾಯಕವಾಗಿವೆ. ಕಡಲ ಚಿಟ್ಟೆಗಳಲ್ಲಿ ಪ್ಯಾರಪೋಡಿಯಗಳು ಉದ್ದವಾಗಿದ್ದು ಪಾದದ ಮುಂದಿನ ತುದಿಯಲ್ಲಿರುತ್ತದೆ. ಕೆಲವು ಗ್ಯಾಸ್ಟ್ರಪೊಡಗಳಲ್ಲಿ ಚಲನೆಯೇ ಇಲ್ಲ. ಇವು ಯಾವುದಾದರೊಂದು ಪದಾರ್ಥಕ್ಕೆ ಅಂಟಿಕೊಂಡು ಬದುಕುತ್ತವೆ. ಉದಾ: ಸತ್ತ ಅಥವಾ ಬದುಕಿರುವ ಇತರ ಮಾಲಸ್ಕಗಳ ಚಿಪ್ಪಿಗೆ ಅಂಟಿಕೊಂಡಿರುವ ಕ್ರೆಪಿಡ್ಯುಲ. ಇದರಲ್ಲೂ ಪಾದ ಪೂರ್ಣವಾಗಿ ಇಲ್ಲವೆಂದು ಹೇಳಲಾಗದು. ಇದು ಇತರ ಪದಾರ್ಥಗಳಿಗೆ ಅಂಟಿಕೊಳ್ಳಲು ಸಹಾಯಕವಾದ ಅಂಟುಸಿಂಬಿಯಾಗಿ ಮಾರ್ಪಟ್ಟಿದೆ.

**ಜಲಚಲನೆ ಮತ್ತು ಉಸಿರಾಟ :** ಗ್ಯಾಸ್ಟ್ರಪೊಡಗಳ ದೇಹದ ಮ್ಯಾಂಟಲ್ ಕುಹರದೊಳಗೆ ಪ್ರವಹಿಸುವ ನೀರಿನ ಚಲನೆ ಉಸಿರಾಟಕ್ಕೆ ಹಾಗೂ ದೇಹದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳನ್ನು ಹೊರಹಾಕುವುದಕ್ಕೆ ಸಹಾಯ ಮಾಡುತ್ತದೆ. ಮ್ಯಾಂಟಲ್ ಕುಹರದಲ್ಲಿ ಉಸಿರಾಟಕ್ಕೆ ಸಹಾಯಕವಾದ ಟಿನೀಡಿಯ ಅಥವಾ ಕಿವಿರುಗಳು ಇವೆ.

ಅತ್ಯಂತ ಕೆಳಮಟ್ಟದ ಕಿವಿರು ರಚನೆ ಹಾಗೂ ಜಲಚಲನೆಯನ್ನು ಕೆಲವು ಬಗೆಯ ಪ್ರೋಸೋಬ್ರ್ಯಾಂಕ್‌ಗಳಲ್ಲಿ ಕಾಣಬಹುದು. ಉದಾಹರಣೆ : ಆರ್ಕಿಗ್ಯಾಸ್ಟ್ರಪೊಡ ಉಪಗಣದ ಹ್ಯಾಲಿಯೋಟಿಸ್, ಸಿಸುರೆಲ ಮತ್ತು ಕೆಲವು ಬಗೆಯ ಲಿಂಪೆಟ್‌ಗಳು. ಇವುಗಳ ಮ್ಯಾಂಟಲ್ ಕುಹರದಲ್ಲಿ ಪ್ರತ್ಯೇಕವಾದ ಸೀಳುಗಾಲುವೆ ಇರುತ್ತದೆ ಅಥವಾ ಚಿಪ್ಪಿನಲ್ಲಿ ರಂಧ್ರಗಳಿರುತ್ತವೆ. ಜೊತೆಗೆ ಇವುಗಳಲ್ಲಿ ಆದಿಮಾಲಸ್ಕ ಗುಂಪಿನ ಕಿವಿರುಗಳನ್ನು ಹೋಲುವ ನಿಮ್ನದರ್ಜೆಯ ಎರಡು ಕಿವಿರುಗಳಿವೆ. ಮಲಾಶಯ ಮತ್ತು ಗುದದ್ವಾರಗಳು ಮ್ಯಾಂಟಲ್ ಕುಹರದ ಅಂಚಿನಿಂದ ಬೇರ್ಪಟ್ಟು ಸೀಳುಗಾಲುವೆಯೊಳಗೆ ಅಥವಾ ಚಿಪ್ಪಿನ ರಂಧ್ರದ ಒಳಗೆ ತೆರೆಯುತ್ತವೆ.

ಅಸಮಸ್ಥಿತಿಯ ದೇಹವನ್ನುಳ್ಳ ಹ್ಯಾಲಿಯೋಟಿಸ್ ಟ್ಯೂಬರ್‌ಕ್ಯುಲೇಟ ಎಂಬ ಪ್ರಾಣಿಯ ಮ್ಯಾಂಟಲ್ ಕುಹರದಲ್ಲಿ ಜೋಡಿತವಾಗಿರುವ ಕಿವಿರುಗಳು ಅದನ್ನು ತಳಭಾಗ ಹಾಗೂ




**ಚಿತ್ರ 4. ಮ್ಯಾಂಟಲ್ ಕುಹರದಲ್ಲಿ ನೀರಿನ ಪ್ರವಾಹವನ್ನು ತೋರಿಸುವ ಚಿತ್ರ. 1. ನೆಫ್ರೀಡಿಯಂ, 2. ಕಿವಿರುರಂಧ್ರಗಳು, 3. ಚಿಪ್ಪು, 4. ಕಿವಿರು, 5. ಮಲಾಶಯ**

ಮೇಲ್ಭಾಗಗಳಾಗಿ ವಿಭಾಗಿಸುತ್ತವೆ. ನೀರು ಹೊರಗಿನಿಂದ ಕಿವಿರುಗಳ ತಳಭಾಗಕ್ಕೆ ನುಗ್ಗಿ ಕಿವಿರುಗಳ ಮೇಲೆ ಹರಿಯುತ್ತದೆ. ಆಗ ಆಕ್ಸಿಜನ್ ಮತ್ತು ಕಾರ್ಬನ್ ಡೈ ಆಕ್ಸೈಡ್‌ಗಳ ವಿನಿಮಯವಾಗುತ್ತದೆ. ಅನಂತರ ನೀರು ಕಿವಿರುಗಳ ಮೇಲ್ಭಾಗಕ್ಕೆ ಬಂದು ಚಿಪ್ಪಿನ ರಂಧ್ರಗಳ ಮೂಲಕ ಹೊರಬರುತ್ತದೆ. ಹಾಗೆ ಹೊರಬರುವಾಗ ಶುದ್ಧೀಕರಣಾಂಗಗಳು ಮತ್ತು ಜೀರ್ಣಾಂಗಗಳು ವಿಸರ್ಜಿಸುವ ತ್ಯಾಜ್ಯವಸ್ತುಗಳನ್ನು ನೀರು ತನ್ನೊಂದಿಗೆ ಹೊರಸಾಗಿಸುತ್ತದೆ.

ಸಿಸುರೆಲದಲ್ಲಿಯೂ ಹ್ಯಾಲಿಯೋಟಿಸ್‌ನಲ್ಲಿರುವಂತೆಯೇ ಸುರುಳಿ ಸುತ್ತಿದ ಚಿಪ್ಪಿದ್ದು ಜಲಚಲನೆ ಅದರಂತೆಯೇ ನಡೆಯುತ್ತದೆ. ಆದರೆ ಸಿಸುರೆಲದ ಚಿಪ್ಪಿನಲ್ಲಿ ರಂಧ್ರಗಳಿಲ್ಲ. ಚಿಪ್ಪಿನ ಮುಂತುದಿಯ ಭಾಗದಲ್ಲಿ ಆಳವಾದ ಕಾಲುವೆಯಂಥ ರಚನೆಯಿದೆ. ದೇಹವನ್ನು




**ಚಿತ್ರ 5. ಲಿಂಪೆಟ್‌ಗಳು : A ಡಯೋಡೋರ, B ಏಕ್ಮೀಯ; 1. ತಲೆ, 2. ಚಿಪ್ಪು, 3. ಚಿಪ್ಪಿನ ರಂಧ್ರ, 4. ಮ್ಯಾಂಟಲಿನ ಸೈಫನ್, 5. ಪಾದ, 6. ಬಾಯಿ, 7. ಮ್ಯಾಂಟಲಿನ ಕರಬಳ್ಳಿ, 8. ಗುದದ್ವಾರ, 9. ಬಲ ನೆಫ್ರೀಡಿಯ ರಂಧ್ರ, 10. ಚಿಪ್ಪಿನ ಸ್ನಾಯು, 11. ಕಿವಿರು, 12. ಎಡ ನೆಫ್ರೀಡಿಯ ರಂಧ್ರ**

ಪ್ರವೇಶಿಸುವ ನೀರು ಕಿವಿರುಗಳ ಮೇಲೆ ಹರಿದು ಮ್ಯಾಂಟಲ್ ಕುಹರದ ಮೇಲ್ಭಾಗವನ್ನು ತಲಪಿ ಅಲ್ಲಿಂದ ಈ ಕಾಲುವೆಯ ಮೂಲಕ ಹೊರಬರುತ್ತದೆ. ಹೀಗೆ ಹೊರಬರುವಾಗ ಗುದದ್ವಾರ ಮತ್ತು ನೆಫ್ರೀಡಿಯಗಳಿಂದ ತ್ಯಾಜ್ಯವಸ್ತುಗಳನ್ನು ಹೊರತರುತ್ತದೆ.

ಕೀಹೋಲ್ ಲಿಂಪೆಟ್‌ಗಳಲ್ಲಿ ದ್ವಿತೀಯಕ ಸಮಮಿತಿಯನ್ನು ಪಡೆದಿರುವ ತ್ರಿಕೋನಾಕಾರದ ಚಿಪ್ಪಿದೆ. ಚಿಪ್ಪಿನ ಮುಂತುದಿಯಲ್ಲಿ ಕಾಲುವೆಯಂಥ ರಚನೆ ಇರಬಹುದು ಅಥವಾ ರಂಧ್ರವಿರಬಹುದು. ಚಿಪ್ಪಿನ ತುದಿಯಲ್ಲಿ ರಂಧ್ರವಿರುವ ಸ್ಥಿತಿಯನ್ನು ಡಯೊಡೋರದಲ್ಲಿ ಕಾಣಬಹುದು. ದೇಹದ ಮುಂಭಾಗದಿಂದ ಒಳಪ್ರವೇಶಿಸಿದ ನೀರು, ಕಿವಿರುಗಳ ಮೇಲೆ ಪ್ರವಹಿಸಿ ಚಿಪ್ಪಿನ ತುದಿಯ ಕಡೆಗೆ ಬಿರುಸಿನಿಂದ ಸಾಗಿ ರಂಧ್ರದ ಮೂಲಕ ಚಿಲುಮೆಯಂತೆ ಹೊರಬರುತ್ತದೆ. ರಂಧ್ರದ ತಳಭಾಗದ ಅಂಚಿನಲ್ಲಿ ಶುದ್ಧೀಕರಣಾಂಗರಂಧ್ರ ಹಾಗೂ ಗುದದ್ವಾರಗಳು ತೆರೆದುಕೊಳ್ಳುವುದರಿಂದ ಹೊರಬರುವ ನೀರು ತ್ಯಾಜ್ಯವಸ್ತುಗಳನ್ನು ಹೊರತರುತ್ತದೆ. ನಿಜವಾದ ಕಡಲು ಲಿಂಪೆಟ್‌ಗಳಾದ ಪಟಲ್ಲೇಸಿಯಗಳು ಕೂಡ ಆರ್ಕಿಗ್ಯಾಸ್ಟ್ರಪೊಡಗಳ ಒಂದು ಗುಂಪು. ಕೀಹೋಲ್ ಲಿಂಪೆಟ್‌ಗಳನ್ನೇ ಹೋಲುವ ಇವುಗಳ ಚಿಪ್ಪಿನಲ್ಲೂ ದ್ವಿತೀಯಕ ಸಮಪಾರ್ಶ್ವ ಸ್ಥಿತಿ ಇದೆ. ಚಿಪ್ಪು ತ್ರಿಕೋನಾಕಾರಕ್ಕಿದೆ. ಆದರೆ ಇವುಗಳಲ್ಲಿ ಮ್ಯಾಂಟಲ್ ಕುಹರದ ಕಾಲುವೆಯಾಗಲೀ ಚಿಪ್ಪಿನಲ್ಲಿ ರಂಧ್ರವಾಗಲೀ ಇಲ್ಲ. ಕೆಲವು ಬಗೆಗಳಲ್ಲಿ ಕಿವಿರುಗಳು ಕ್ಷೀಣಿಸಿರುವುದನ್ನು ಮತ್ತೆ ಕೆಲವು ಬಗೆಗಳಲ್ಲಿ ನಶಿಸಿಹೋಗಿರುವುದನ್ನು ಕಾಣಬಹುದು. ಏಕ್ಮೀಯ ಎಂಬುದರಲ್ಲಿ ಒಂದೇ ಒಂದು ಕಿವಿರಿದೆ; ಮ್ಯಾಂಟಲ್ ಪದರ ಪುಷ್ಟವಾಗಿ ಬೆಳೆದಿದ್ದು ಶರೀರದಿಂದ ಹೊರಬರುತ್ತದೆ. ಪಾದದ ಸುತ್ತ ಇಳಿಬಿದ್ದಿರುವ ಈ ಮ್ಯಾಂಟಲ್‌ನಲ್ಲಿ ಪಾದಕ್ಕೆ ಅಭಿಮುಖವಾಗಿರುವ ಒಂದು ಕಾಲುವೆಯಿದೆ. ದೇಹದೊಳಕ್ಕೆ ಬರುವ ನೀರು ದೇಹದ ಎಡಭಾಗದ ಕಾಲುವೆಯ ಮೂಲಕ ಹರಿದು ಕಿವಿರಿನ ಮೇಲೆ ಪ್ರವಹಿಸಿ ಬಲಭಾಗದ ಕಾಲುವೆಯ ಮೂಲಕ ಪಾದದ ಹಿಂಬದಿಯಲ್ಲಿ ಹೊರಹೋಗುತ್ತದೆ.

ಪಟೆಲದಲ್ಲಿ ನಿಜಕಿವಿರುಗಳು ಮಾಯವಾಗಿ ಇವಕ್ಕೆ ಬದಲಾಗಿ ದ್ವಿತೀಯಕ ಕಿವಿರುಗಳು ಹುಟ್ಟಿಕೊಂಡಿವೆ. ಕಿವಿರುಗಳು ಮ್ಯಾಂಟಲಿನ ಕಾಲುವೆಯೊಳಕ್ಕೆ ದೇಹದ ಎರಡೂ ಕಡೆಗಳಿಂದಲೂ ಜೋತುಬಿದ್ದಿವೆ. ದೇಹದೊಳಕ್ಕೆ ಬರುವ ನೀರಿನ ಪ್ರವಾಹ ಈ ಕಾಲುವೆಗಳ ಮೂಲಕ ಮುಂತುದಿಯಿಂದ ಹರಿದುಬಂದು ಹಿಂತುದಿಯಿಂದ ಹೊರಬರುತ್ತದೆ.

ಉಳಿದ ಪ್ರೋಸೋಬ್ರ್ಯಾಂಕ್‌ಗಳಲ್ಲಿ ಜಲಚಲನೆ ಮತ್ತು ಕಿವಿರುಗಳ ರಚನೆಯಲ್ಲಿ ಕೆಲವು ಮೂಲಭೂತ ಬದಲಾವಣೆಗಳನ್ನು ಕಾಣಬಹುದು. ಇವುಗಳಲ್ಲಿ ಬಲಭಾಗದ ಕಿವಿರು ಸಂಪೂರ್ಣವಾಗಿ ಮಾಯವಾಗಿದೆ. ಸಿಹಿನೀರಿನಲ್ಲಿ ವಾಸಿಸುವ ವ್ಯಾಲ್ವೇಟ ಒಂದನ್ನು

ಬಿಟ್ಟರೆ ಉಳಿದವುಗಳಲ್ಲಿ ಎಡಭಾಗದ ಕಿವಿರು ತನ್ನ ಆದಿಗುಣವಾದ ಬೈಪೆಕ್ಟಿನೇಟ್ ಸ್ಥಿತಿಯನ್ನು ಕಳೆದುಕೊಂಡಿದೆ. ಕಿವಿರಿನ ಅಕ್ಷದ ಒಂದು ಕಡೆ ಮಾತ್ರ ಫಿಲಮೆಂಟ್‌ಗಳು ಇವೆ. ಅಲ್ಲದೆ ಕಿವಿರು ದೇಹದ ಒಳಭಾಗಕ್ಕೆ ಅಂಟಿಕೊಂಡು ತೂಗಾಡುತ್ತದೆ. ನೀರು ತಲೆಯ ಎಡಬದಿಯಿಂದ ಒಳನುಗ್ಗಿ ಮ್ಯಾಂಟಲ್ ಕುಹರದಲ್ಲಿ ಪ್ರವಹಿಸಿ ಬಲತುದಿಯಿಂದ ಹೊರಬರುತ್ತದೆ. ಮಲಾಶಯ ಉದ್ದವಾಗಿದ್ದು ಗುದದ್ವಾರ ದೇಹದ ಬಲಭಾಗದ ಮ್ಯಾಂಟಲ್ ಪದರದ ತುದಿಯಲ್ಲಿ ತೆರೆದುಕೊಳ್ಳುವುದರಿಂದ ಒಳಬರುವ ನೀರು ತ್ಯಾಜ್ಯವಸ್ತುಗಳಿಂದ ಮಲಿನಗೊಳ್ಳದು. ನುಲಿಗೆ ಕ್ರಿಯೆಯಿಂದ ಉದ್ಭವಿಸಿದ ಶರೀರ ನೈರ್ಮಲ್ಯ ಸಮಸ್ಯೆಗಳನ್ನು ಈ ಜೀವಿಗಳು ಹೀಗೆ ಪರಿಹರಿಸಿಕೊಂಡಿವೆ.

ಉಸಿರಾಟಕ್ಕೆ ಬೇಕಾದ ನೀರಿನ ಪ್ರವಾಹದ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಬಹುಪಾಲು ಪ್ರಭೇದಗಳಲ್ಲಿ ನೀರು ಒಳ ಪ್ರವಹಿಸುವ ಭಾಗದ ಮ್ಯಾಂಟಲ್ ಪದರದ ಅಂಚು ಒಂದುಗೂಡಿ ಒಂದು ರೀತಿಯ ಸೈಫನ್ ಕೊಳವೆಯಂತಾಗಿದೆ. ಉದಾ : ಬಕ್‌ಸಿನಮ, ಕೋಲಸ್, ಬ್ಯೂಸಿಕಾನ್ ಮತ್ತು ಪ್ಯಾಸಿಯೊಲರಿಯ. ಜೊತೆಗೆ ಈ ಸೈಫನ್ ಕೊಳವೆಯನ್ನಿಟ್ಟುಕೊಳ್ಳಲು ಚಿಪ್ಪಿನ ಮುಂತುದಿಯ ರಂಧ್ರದ ಭಾಗದಲ್ಲಿ ಉದ್ದವಾದ ಕಾಲುವೆಯಂಥ ರಚನೆಯೊಂದಿದೆ.

ಉಪವರ್ಗಗಳಾದ ಒಫಿಸ್ತೊಬ್ರ್ಯಾಂಕಿಯ ಮತ್ತು ಪಲ್ಮನೇಟಗಳು ಕೇವಲ ಎಡಕಿವಿರನ್ನು ಉಳಿಸಿಕೊಂಡಿದ್ದ ಪ್ರೋಸೋಬ್ರ್ಯಾಂಕ್‌ಗಳಿಂದ ಹುಟ್ಟಬಂದಿರಬೇಕೆಂದು ಊಹಿಸಲಾಗಿದೆ.

ಒಫಿಸ್ತೊಬ್ರ್ಯಾಂಕ್‌ಗಳಲ್ಲಿ ವಿನುಲಿಗೆಯ ಜೊತೆಗೆ ಮೂಲ ಕಿವಿರು ಮಾಯವಾಗಿ ದ್ವಿತೀಯಕ ಕಿವಿರುಗಳು ಹುಟ್ಟಿಕೊಂಡಿವೆ. ಗುಳ್ಳೆ ಚಿಪ್ಪುಗಳು ಮತ್ತು ಕಡಲ ಮೊಲಗಳು ಆದಿಯಲ್ಲಿದ್ದ ಒಂದೇ ಕಿವಿರನ್ನು ಉಳಿಸಿಕೊಂಡಿವೆ. ಅಪೂರ್ಣ ವಿನುಲಿಗೆಯಿಂದಾಗಿ ಈ ಕಿವಿರು ದೇಹದ ಬಲಭಾಗದಲ್ಲಿದೆ. ಸಂಪೂರ್ಣವಾಗಿ ವಿನುಲಿಗೆಗೆ ಒಳಗಾಗಿರುವ ನ್ಯೂಡಿಬ್ರ್ಯಾಂಕ್‌ಗಳಲ್ಲಿ (ಕಡಲಗೊಂಡೆ ಹುಳುಗಳು) ಮ್ಯಾಂಟಲ್ ಕುಹರ ಹಾಗೂ ಕಿವಿರುಗಳು ಅದೃಶ್ಯವಾಗಿವೆ. ಆದ್ದರಿಂದ ಇವುಗಳಲ್ಲಿ ದೇಹದ ಮೇಲ್ಮೈನಿಂದ ಅಥವಾ ದ್ವಿತೀಯಕ ಕಿವಿರುಗಳಿಂದ ಉಸಿರಾಟ ನಡೆಯುತ್ತದೆ. ಬಹುಪಾಲು ನ್ಯೂಡಿಬ್ರ್ಯಾಂಕ್‌ಗಳಲ್ಲಿ ದೇಹದ ಬೆನ್ನುಭಾಗ ಅತಿ ಅಗಲವಾಗಿದ್ದು ಅದರ ಮೇಲೆ ಸೆರೇಟಗಳೆಂಬ ರಚನೆಗಳು ಬೆಳೆದುಕೊಂಡಿವೆ. ಇವು ಸಾಮಾನ್ಯವಾಗಿ ಅನೇಕ ಸಾಲುಗಳಲ್ಲಿ ಜೋಡಣೆಗೊಂಡಿವೆ. ಸೆರೇಟಗಳು ಇಯೋಲಿಡಿಯದಲ್ಲಿ ಗದೆಯಾಕಾರದವಾಗಿದ್ದರೆ ಡೆಂಡ್ರೋನೋಟಸಿನಲ್ಲಿ ಕವಲೊಡೆದಿವೆ. ಡೋರಿಸ್ ಮುಂತಾದ ನ್ಯೂಡಿಬ್ರ್ಯಾಂಕ್‌ಗಳಲ್ಲಿ ಸೆರೇಟಗಳೇ ಇಲ್ಲ. ಆದರೆ ಇವುಗಳಲ್ಲಿ ಗುದದ್ವಾರದ ಸುತ್ತ ಜೋಡಣೆಗೊಂಡಿರುವ ದ್ವಿತೀಯಕ ಕಿವಿರುಗಳಿವೆ. ನ್ಯೂಡಿಬ್ರ್ಯಾಂಕ್‌ಗಳ




**ಚಿತ್ರ 6. ಕೆಲವು ಬಗ್ಗೆಯ ಶಂಭುಕಗಳು : A ಇಯೋಲಿಡಿಯ, B ಹೆಲಿಕ್ಸ್, C ಗ್ಲಾಸೊಡೋರಿಸ್; 1. ಕರಬಳ್ಳಿ, 2. ರೈನೋಫೋರ್, 3. ಸೆರೇಟ, 4. ಚಿಪ್ಪು, 5. ಕಾಲುಮೆಲ, 6. ಅಂಗಸರಾಶಿ, 7. ಪಾದ, 8. ಕಿವಿರು, 9. ಮ್ಯಾಂಟರ್**

ಸೆರೇಟ ಮತ್ತು ದೇಹದ ಇತರ ಭಾಗಗಳು ಸಾಮಾನ್ಯವಾಗಿ ಕೆಂಪು, ಹಳದಿ, ಕಿತ್ತಳೆ, ನೀಲಿ, ಹಸುರು ಮುಂತಾದ ವಿವಿಧ ರೀತಿಯ ಉಜ್ವಲ ಬಣ್ಣಗಳಿಂದ ಕೂಡಿದ್ದು ಈ ಪ್ರಾಣಿಗಳನ್ನು ಮಾಲಸ್ಕ ಗುಂಪಿನ ಅತ್ಯಂತ ಸುಂದರ ಪ್ರಾಣಿಗಳನ್ನಾಗಿ ಮಾಡಿವೆ.

ಆರ್ತ್ರಾಪೊಡ ಗುಂಪನ್ನು ಬಿಟ್ಟರೆ ಭೂವಾಸಕ್ಕೆ ಹೊಂದಿಕೊಂಡಿರುವ ಅಕಶೇರುಕಗಳೆಂದರೆ ಪಲ್ಮನೇಟ ಗುಂಪು. ಹೊಸತೆರನ ಪರಿಸರದಿಂದಾಗಿ ಇವುಗಳ ಉಸಿರಾಟದ ಸಂಯಂತ್ರದಲ್ಲಿ ಮೂಲಭೂತ ಬದಲಾವಣೆಗಳಾಗಿವೆ. ಕಿವಿರುಗಳು ಮಾಯವಾಗಿರುವುದು, ಮ್ಯಾಂಟಲ್ ಕುಹರ ಅತಿ ಹೆಚ್ಚಿನ ರಕ್ತ ಪರಿಚಲನೆ ಪಡೆದಿದ್ದು ಪುಪ್ಫುಸವಾಗಿರುವುದು, ಮ್ಯಾಂಟಲ್ ಪದರದ ಅಂಚು ಭದ್ರವಾಗಿ ಪಾದದ ಸುತ್ತಲೂ ಅಂಟಿಕೊಂಡು ಚೀಲದಂತಾಗಿರುವುದು, ಇವಕ್ಕೆ ಬಲಭಾಗದಲ್ಲಿ ಮಾತ್ರ ನ್ಯೂಮೋಸ್ಟೋಮ್ ಎಂಬ ಒಂದು ಸಣ್ಣ ರಂಧ್ರವಿರುವುದು ಮತ್ತು ಮ್ಯಾಂಟಲ್ ಕುಹರದ ತಳಭಾಗದಲ್ಲಿ ಮಾಂಸಖಂಡಗಳು ಪುಷ್ಟವಾಗಿ ಬೆಳೆದಿದ್ದು ಅದು ವಪೆಯಂತೆ ಕೆಲಸ ಮಾಡುವುದು–ಇವು ಈ ಬದಲಾವಣೆಗಳಲ್ಲಿ ಮುಖ್ಯವಾದುವು. ನ್ಯೂಮೋಸ್ಟೋಮ್ ರಂಧ್ರ ತೆರೆದುಕೊಳ್ಳಲು ಹಾಗೂ ಮುಚ್ಚಿಕೊಳ್ಳಲು ಅದರ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳೇ ಕಾರಣ. ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳಿಂದ ರಕ್ತ ಆಕ್ಸಿಜನ್ನನ್ನು ಹೀರಿಕೊಳ್ಳಲು ಅನುಕೂಲವಾಗುತ್ತದೆ. ಜನೆಲ್ಲ ಮುಂತಾದ ಕೆಲವು ಭೂಚರ ಶಂಭುಕಗಳ ಮ್ಯಾಂಟಲ್ ಪದರದಿಂದ ಬೆರಳುಗಳಂಥ ರಚನೆಗಳು ಮ್ಯಾಂಟಲ್ ಕುಹರದೊಳಕ್ಕೆ ಚಾಚಿಕೊಂಡಿವೆ. ಇವಕ್ಕೆ ಟ್ರೇಕಿಯಗಳೆಂದು ಹೆಸರು. ಇವುಗಳಿಂದಾಗಿ ಮ್ಯಾಂಟಲ್ ಕುಹರದ ಹರವು ಹೆಚ್ಚಿದೆ.

ಗ್ಯಾಸ್ಟ್ರೊಪೊಡ ಗುಂಪಿನಲ್ಲಿ ಕೇವಲ ಪಲ್ಮನೇಟುಗಳು ಮಾತ್ರ ಭೂವಾಸಿಗಳಾಗಿಲ್ಲ. ಪ್ರೋಸೋಬ್ರ್ಯಾಂಕಿಯ ಉಪವರ್ಗದ ಹೆಲಿಸಿನಿಡೀ, ಸೈಕ್ಲೊಫೋರಿಡೀ ಮತ್ತು ಪೊಮ್ಯಾಟಿಯಾಸಿಡೀ ಕುಟುಂಬಕ್ಕೆ ಸೇರಿದ ಸುಮಾರು 4,000 ಪ್ರಭೇದಗಳೂ ಭೂವಾಸಿಗಳೇ.

ಸಿಹಿನೀರಿನಲ್ಲಿ ವಾಸಿಸುವ ಬಸವನ ಹುಳುಗಳು ಭೂವಾಸಿ ಬಸವನ ಹುಳುಗಳಿಂದ ಉದ್ಭವವಾಗಿವೆ. ಭೂಜೀವನದಿಂದ ಜಲಜೀವನಕ್ಕೆ ಮರಳಿ ಬಂದಿರುವ ಇವುಗಳಲ್ಲಿ ಉಸಿರಾಟ ವ್ಯವಸ್ಥೆಯ ಅಂಗಗಳು ವಿವಿಧ ಬಗೆಗಳಲ್ಲಿ ವಿಕಾಸವಾಗಿವೆ. ಲಿಮ್‌ನೇಯಿಡೀ ಮತ್ತು ಫೈಸಿಡೀ ಕುಟುಂಬಗಳ ಪ್ರಾಣಿಗಳು ನೀರಿನಲ್ಲಿ ಜೀವಿಸಿದರೂ ನೇರವಾಗಿ ಗಾಳಿಯನ್ನೇ ಉಸಿರಾಡುತ್ತವೆ. ಗಾಳಿ ಸೇವಿಸಲು ಇವು ಆಗಾಗ ನೀರಿನ ಮೇಲ್ಮೈಗೆ ಬರುತ್ತವೆ. ಇವುಗಳ ನ್ಯೂಮೋಸ್ಟೋಮ್ ಸುತ್ತ ಇರುವ ಮ್ಯಾಂಟಲ್ ಪದರ ಒಂದು ರೀತಿಯ ಕೊಳವೆಯಂತಾಗಿ ನೀರಿನಿಂದ ಹೊರಚಾಚಿ ಗಾಳಿಯನ್ನು ಎಳೆದುಕೊಳ್ಳುತ್ತದೆ. ಈ ಎರಡು ಕುಟುಂಬಗಳ ಇನ್ನು ಕೆಲವು ಪ್ರಭೇದಗಳು ನೀರಿನಿಂದ ಮೇಲೆ ಬರುವುದೇ ಇಲ್ಲ. ಇವು ತಮಗೆ ಅಗತ್ಯವಾದ ಆಕ್ಸಿಜನ್‌ನನ್ನು ನೀರಿನಿಂದಲೇ ಪಡೆಯುತ್ತವೆ.

ಪಲ್ಮನೇಟ ಉಪವರ್ಗದ ಪ್ಲೇನಾರ್‌ಬಿಡೀ ಮತ್ತು ಆಂಕೈಲಿಡೀ ಕುಟುಂಬಗಳ ಪ್ರಭೇದಗಳು ಪೂರ್ಣವಾಗಿ ಜಲವಾಸಕ್ಕೇ ಹೊಂದಿಕೊಂಡಿವೆ. ಇವುಗಳಲ್ಲಿ ಮ್ಯಾಂಟಲ್ ಕುಹರ ಕ್ಷೀಣಿಸಿಹೋಗಿದೆ. ಪಾದದ ಎಡಭಾಗದಲ್ಲಿ ಚೂಪಾದ, ತ್ರಿಕೋನಾಕಾರದ ದ್ವಿತೀಯಕ ಕಿವಿರು ರೂಪುಗೊಂಡಿದೆ. ಇದಕ್ಕೆ ಮಿಥ್ಯಾಪುಪ್ಫುಸ ಎಂದು ಹೆಸರು.

**ಶುದ್ಧೀಕರಣ ಮತ್ತು ಜಲನಿಯಂತ್ರಣ :** ಆರ್ಕಿಗ್ಯಾಸ್ಟ್ರೊಪೊಡದಲ್ಲಿ ಎರಡು ನೆಫ್ರೀಡಿಯಗಳು ಇವೆ. ಉಳಿದವುಗಳಲ್ಲಿ ಜನನೇಂದ್ರಿಯ ನಾಳದ ರಚನೆಯಲ್ಲಿ ಪಾಲುಗೊಳ್ಳುವ ಕೊಂಚ ಭಾಗವನ್ನು ಬಿಟ್ಟು ಬಲಗಡೆಯ ನೆಫ್ರೀಡಿಯಮ್ ಮಾಯವಾಗಿದೆ. ಎಡಗಡೆ ಇರುವ ನೆಫ್ರೀಡಿಯಮ್ ನುಲಿಗೆ ಕ್ರಿಯೆಯಿಂದಾಗಿ ಅಂಗಸ ರಾಶಿಯ ಮುಂಭಾಗದಲ್ಲಿ ಸ್ಥಿತವಾಗಿದೆ. ನೆಫ್ರೀಡಿಯಮ್ ತನ್ನ ರಚನೆಯಲ್ಲಿ ಮಾಲಸ್ಕ ವಿಭಾಗದ ಇತರ ಪ್ರಾಣಿಗಳಲ್ಲಿದ್ದಂತೆಯೇ ಇದೆ. U-ಆಕಾರದಲ್ಲಿರುವ ಇದರ ಗೋಡೆಗಳ ಮೇಲೆ ಮಡಿಕೆಗಳಂಥ ರಚನೆಗಳಿವೆ. ಇದರಿಂದಾಗಿ ನೆಫ್ರೀಡಿಯಮಿನ ಸ್ರಾವಕ ಪ್ರದೇಶ ಹೆಚ್ಚಾಗಿದೆ. ತ್ಯಾಜ್ಯವಸ್ತುಗಳು ಯೂರೆಟರ್ ಎಂಬ ಮೋಟು ನಾಳದ ಮೂಲಕ ಹೊರಬೀಳುತ್ತವೆ. ಪ್ರೋಸೋಬ್ರ್ಯಾಂಕ್ ಮತ್ತು ಒಫಿಸ್ತೊಬ್ರ್ಯಾಂಕ್‌ಗಳಲ್ಲಿ ನೆಫ್ರೀಡಿಯಮ್ ರಂಧ್ರ ಮ್ಯಾಂಟಲ್ ಕುಹರದ ಹಿಂಭಾಗದಲ್ಲಿ ತೆರೆದುಕೊಳ್ಳುತ್ತದೆ. ಈ ರಂಧ್ರದಿಂದ ಹೊರಬರುವ ತ್ಯಾಜ್ಯ ವಸ್ತುಗಳು ನೀರಿನ ಪರಿಚಲನೆಯ ಪ್ರವಾಹದ ಮೂಲಕ ಹೊರಹೋಗುತ್ತವೆ. ಈ ರೀತಿಯ ವ್ಯವಸ್ಥೆ ಪಲ್ಮನೇಟುಗಳಲ್ಲಿ ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಮ್ಯಾಂಟಲ್ ಕುಹರ ಪುಪ್ಫುಸವಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಇವುಗಳಲ್ಲಿ ಯೂರೆಟರ್ ಉದ್ದವಾಗಿದೆ. ಇದು ಬಲಮ್ಯಾಂಟಲ್ ಗೋಡೆಯ ಮೇಲೆ ಹಾದು ಗುದದ್ವಾರದ ಬಳಿ ಹೊರತೆರೆದುಕೊಳ್ಳುತ್ತದೆ.

ಜಲವಾಸಿ ಗ್ಯಾಸ್ಟ್ರೊಪೊಡಗಳಲ್ಲಿ ತ್ಯಾಜ್ಯವಸ್ತುಗಳು ಅಮೋನಿಯ ಮತ್ತು ಅಮೋನಿಯಮ್ ಸಂಯುಕ್ತಗಳ ರೂಪದಲ್ಲಿರುತ್ತವೆ. ಭೂಚರ ಪಲ್ಮನೇಟಗಳು ತ್ಯಾಜ್ಯವಸ್ತುಗಳನ್ನು ಅಮೋನಿಯದ ರೂಪದಲ್ಲಿ ಹೊರಹಾಕದೆ ಯೂರಿಕ್ ಆಮ್ಲದ ಹರಳುಗಳ ರೂಪದಲ್ಲಿ ತ್ಯಜಿಸುತ್ತವೆ. ಇದರಿಂದ ದೇಹದಲ್ಲಿನ ನೀರು ಹೊರಬಾರದು.

ಭೂವಾಸಿ ಪಲ್ಮನೇಟಗಳು ತಮ್ಮ ದೇಹದ ಜಲವನ್ನು ಕಾಯ್ದಿಟ್ಟುಕೊಳ್ಳುವ ಸಲುವಾಗಿ ಯಾವಾಗಲೂ ಜೌಗು ಭೂಮಿಯಲ್ಲೇ ವಾಸಿಸುತ್ತವೆ. ಹಗಲು ಸೊಪ್ಪುಸದೆಗಳ ಕುಪ್ಪೆಗಳಡಿಯಲ್ಲಿ, ದಿಮ್ಮಿಗಳ ತಳಭಾಗದಲ್ಲಿ ಹುದುಗಿದ್ದು ರಾತ್ರಿಯಲ್ಲಿ ಮಾತ್ರ ಹೊರ

ಹೊರಡುತ್ತವೆ. ಚಳಿಗಾಲದಲ್ಲಿ, ಶುಷ್ಕ ವಾತಾವರಣವಿರುವ ಕಾಲಗಳಲ್ಲಿ ಇವು ನೆಲದಲ್ಲಿ ಬಿಲಗಳನ್ನು ತೋಡಿಕೊಂಡು ಹುದುಗಿದ್ದು ಸುಪ್ತವಾಗಿರುತ್ತವೆ. ಈ ಕಾಲದಲ್ಲಿ ಇವುಗಳ ಮ್ಯಾಂಟಲಿನ ಅಂಚು ಹೊರಬಂದು ಒಟ್ಟುಗೂಡಿ ಚಿಪ್ಪಿನ ತೆರಪಿನ ಬಳಿ ಒಂದು ರಕ್ಷಾಪೊರೆಯನ್ನು ಉತ್ಪಾದಿಸಿಕೊಳ್ಳುತ್ತವೆ. ಸಿಹಿನೀರಿನ ಶಂಭುಕಗಳಲ್ಲಿ, ಅವು ವಾಸಿಸುವ ಕೆರೆಕುಂಟೆಗಳು ಒಣಗಿ ಹೋದಾಗ, ಈ ರೀತಿಯ ಸುಪ್ತಾವಸ್ಥೆ ಕಂಡುಬರುತ್ತದೆ.




ಚಿತ್ರ 7. ಬ್ಯೂಸಿಕಾನಿನ ದೇಹದ ವಿವಿಧ ಭಾಗಗಳು : 1. ಕಣ್ಣು, 2. ಬಾಯಿ, 3. ಸೊಂಡಿಲು, 4. ಕರಬಳ್ಳಿ, 5 ಶಿಶ್ನ, 6. ಆಸ್ಫ್ರಾಡಿಯಂ, 7. ಗುದದ್ವಾರ, 8. ಮಲಾಶಯ, 9. ದ್ವಿತೀಯಕ ಹೃದಯ, 10. ನೆಫ್ರೀಡಿಯಂ ರಂಧ್ರ, 11. ಮೂತ್ರಪಿಂಡ, 12. ಹೃತ್ಕುಕ್ಷಿ, 13. ವೃಷಣ, 14. ಜಠರ, 15. ಅಯೋರ್ಟ, 16. ಒಪರ್ಕ್ಯುಲಂ, 17. ಪಾದ, 18. ಸೈಫನ್

ಬಹುಪಾಲು ಗ್ಯಾಸ್ಟ್ರಪೊಡಗಳ ಶುದ್ಧೀಕರಣ ಕ್ರಿಯೆಯಲ್ಲಿ ಅವುಗಳ ಜೀರ್ಣಗ್ರಂಥಿ ಸ್ವಲ್ಪಮಟ್ಟಿನ ಪಾತ್ರವಹಿಸುತ್ತದೆ. ಈ ಅಂಗವನ್ನು ಪರಿಶೀಲಿಸಿದಾಗ ಅದರಲ್ಲಿ ಶುದ್ಧೀಕರಣ ಕೋಶಗಳು ಇರುವುದು ಕಂಡುಬಂದಿದೆ. ಇವು ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಿ ಜಠರ ಮತ್ತು ಕರುಳಿನ ಮೂಲಕ ಹೊರಸಾಗಿಸುತ್ತವೆ.

**ರಕ್ತಪರಿಚಲನೆ:** ನುಲಿಗೆಯಿಂದಾಗಿ ಗ್ಯಾಸ್ಟ್ರಪೊಡಗಳ ಹೃದಯ ಅಂಗಸ ರಾಶಿಯ ಮುಂಭಾಗಕ್ಕೆ ಬಂದಿದೆ. ಈ ಒಂದು ಬದಲಾವಣೆಯನ್ನು ಬಿಟ್ಟರೆ ಆರ್ಕಿಗ್ಯಾಸ್ಟ್ರಪೊಡಗಳ ರಕ್ತಪರಿಚಲನೆ ಆದಿಮಾಲಸ್ಕಗಳಲ್ಲಿರುವಂತೆಯೇ ಇದೆ. ಇವುಗಳಲ್ಲಿ ಎರಡು ಹೃತ್ಕರ್ಣಗಳಿವೆ. ಉಳಿದ ಎಲ್ಲ ಗ್ಯಾಸ್ಟ್ರಪೊಡಗಳಲ್ಲೂ ಬಲ ಹೃತ್ಕರ್ಣ ಕ್ಷೀಣವಾಗಿದೆ. ಕೆಲವದರಲ್ಲಂತೂ ಈ ಹೃತ್ಕರ್ಣ ಸಂಪೂರ್ಣವಾಗಿ ಮಾಯವಾಗಿದೆ. ಬಲಹೃತ್ಕರ್ಣ ನಶಿಸಿಹೋಗಿರುವುದರಿಂದ ಬಲಭಾಗದ ಕಿವಿರು ಕೂಡ ಮಾಯವಾಗಿದೆ. ಗ್ಯಾಸ್ಟ್ರಪೊಡಗಳ ಹೃತ್ಕುಕ್ಷಿಯಿಂದ ಮೋಟಾಗಿರುವ ಒಂದು ಅಯೋರ್ಟ ಹೊರಡುತ್ತದೆ. ಇದು ಎರಡು ಕವಲುಗಳಾಗಿ ವಿಭಾಗಗೊಳ್ಳುತ್ತದೆ. ಮೊದಲನೆಯ ಕವಲು (ಹಿಂಭಾಗದ ಅಂಗಸದ ಅಪಧಮನಿ) ಅಂಗಸರಾಶಿಗೆ ರಕ್ತವನ್ನೊದಗಿಸುತ್ತದೆ. ಎರಡನೆಯದು (ಮುಂಭಾಗದ ಶಿರದ ಅಪಧಮನಿ) ತಲೆ ಮತ್ತು ಪಾದಗಳಿಗೆ ರಕ್ತವನ್ನು ಒದಗಿಸುತ್ತದೆ. ಇದರ ಒಂದು ಭಾಗ ಅಗಲವಾಗಿ ಎರಡನೆಯ ಹೃದಯವಾಗುವುದೂ ಉಂಟು. ಉದಾ: ಬ್ಯೂಸಿಕಾನ್. ಎರಡನೆಯ ಹೃದಯ ಬಹುಶಃ ರಕ್ತದ ಒತ್ತಡವನ್ನು ನಿಯಂತ್ರಿಸುತ್ತದೆ. ರಕ್ತ ಮೂತ್ರಕೋಶದಿಂದ ಕಿವಿರಿನ ಮೂಲಕ ಇಲ್ಲವೆ ನೇರವಾಗಿಯೇ ಹೃದಯವನ್ನು ತಲಪುತ್ತದೆ.

**ಆಹಾರ ಸೇವನೆ ಕ್ರಮ :** ಗ್ಯಾಸ್ಟ್ರಪೊಡಗಳಲ್ಲಿ ನಾನಾರೀತಿಯ ಆಹಾರ ಸೇವನೆ ಕ್ರಮ ಇದೆ. ಸಸ್ಯಾಹಾರಿಗಳು, ಮಾಂಸಾಹಾರಿಗಳು, ಕೊಳೆತಿನಿಗಳು ಹೀಗೆ ಎಲ್ಲ ಬಗೆಯ ಪ್ರಾಣಿಗಳೂ ಇವೆ. ಕೆಲವು ಬಗೆಯವು ಶಿಲಕೆಗಳ ಸಹಾಯದಿಂದ ಆಹಾರವನ್ನು ಹಿಡಿದರೆ ಇನ್ನು ಕೆಲವು ಪರಾವಲಂಬಿಗಳು. ಸಾಮಾನ್ಯವಾಗಿ ಗ್ಯಾಸ್ಟ್ರಪೊಡಗಳಲ್ಲಿ ಆಹಾರ ಸೇವನೆಗೆ ರ್‍ಯಾಡ್ಯುಲ ಎಂಬ ರಚನೆಯ ಬಳಕೆಯಿದೆ. ಜೀರ್ಣಕ್ರಿಯೆ ಸ್ವಲ್ಪಮಟ್ಟಿಗೆ ಕೋಶಗಳ ಹೊರಗೆ ನಡೆಯುತ್ತದೆ. ಕೆಲವು ವಿಶಿಷ್ಟ ಜೀವಿಗಳನ್ನು ಬಿಟ್ಟರೆ ಜೀರ್ಣಕ್ರಿಯೆಗೆ ಬೇಕಾದ ಕಿಣ್ವಗಳನ್ನು ಜೊಲ್ಲುಗ್ರಂಥಿಗಳು, ಅನ್ನನಾಳದ ಚೀಲಗಳು, ಜೀರ್ಣಾಂಗ ಗ್ರಂಥಿಗಳು ಉತ್ಪಾದಿಸುತ್ತವೆ. ಜೀರ್ಣಕ್ರಿಯೆ ನಡೆಯುವುದು ಜಠರದಲ್ಲಾದರೂ ಆಹಾರ ಹೀರಿಕೆ ನಡೆಯುವುದು ಪಿತ್ತಕೋಶದಲ್ಲಿ. ನುಲಿಗೆಯಿಂದಾಗಿ ಜಠರ $180^0$ ಗಳಷ್ಟು ತಿರುಚಿಕೊಂಡಿರುವುದರಿಂದ ಅನ್ನನಾಳ ಜಠರವನ್ನು ಹಿಂತುದಿಯಿಂದ ಸೇರುವಂತೆಯೂ ಕರುಳು ಜಠರದ ಮುಂತುದಿಯಿಂದ ಹೊರಡುವಂತೆಯೂ ಇವೆ. ಮುಂದುವರಿದ ಗ್ಯಾಸ್ಟ್ರಪೊಡಗಳಲ್ಲಿ ಮಾತ್ರ ಅನ್ನನಾಳ ಜಠರದ ಮುಂತುದಿಯ ಭಾಗಕ್ಕೆ ಬಂದು ಸೇರಿಕೊಳ್ಳುವಂತ ಮಾರ್ಪಾಟುಗಳು ನಡೆದಿವೆ.

ರ್‍ಯಾಡ್ಯುಲ ಬಹುಪಾಲು ಗ್ಯಾಸ್ಟ್ರಪೊಡಗಳಲ್ಲಿ ಬಲುಚೆನ್ನಾಗಿ ರೂಪುಗೊಂಡ ರಚನೆಯಾದರೂ ಕೆಲವು ಪ್ರಭೇದಗಳಲ್ಲಿ ಇಲ್ಲವೇ ಇಲ್ಲ. ರ್‍ಯಾಡ್ಯುಲದಲ್ಲಿ 3 ಸಾಲುಗಳಲ್ಲಿ ಜೋಡಣೆಗೊಂಡಿರುವ ಹಲ್ಲುಗಳಿವೆ. ಇವುಗಳ ಸಂಖ್ಯೆ 16–750,000. ಹಲ್ಲುಗಳ ಆಕಾರ ಮತ್ತು ರಚನೆಗಳಲ್ಲಿ ಸಾಲಿನಿಂದ ಸಾಲಿಗೆ ಅನೇಕ ವ್ಯತ್ಯಾಸಗಳಿವೆ. ಗ್ಯಾಸ್ಟ್ರಪೊಡ ವರ್ಗದ ವಿವಿಧ ಉಪಗುಂಪುಗಳಲ್ಲಿ ಈ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿದ್ದು ಒಂದೊಂದು ಗುಂಪೂ ತನಗೆ ವಿಶಿಷ್ಟವಾದ ರಚನಾವ್ಯತ್ಯಾಸಗಳನ್ನು ತೋರುತ್ತದೆ. ಇದರಿಂದಾಗಿ ಗ್ಯಾಸ್ಟ್ರಪೊಡದ ವರ್ಗೀಕರಣದಲ್ಲಿ ರ್‍ಯಾಡ್ಯುಲದ ಪಾತ್ರ ಮುಖ್ಯವಾದ್ದು.

ನಿಮ್ನರೀತಿಯ ಪಚನಕ್ರಿಯೆಯನ್ನು ಆರ್ಕಿಗ್ಯಾಸ್ಟ್ರಪೊಡಗಳಾದ ಡಯೊಡೋರ, ನೆರಿಟೈನ, ಮಾನೊಡಾಂಟ ಮುಂತಾದವುಗಳಲ್ಲಿ ಕಾಣಬಹುದು. ಇವು ಸ್ಪಂಜು ಪ್ರಾಣಿಗಳನ್ನು ತಿನ್ನುತ್ತವೆ. ಆಹಾರ ಜೀವಿಗಳನ್ನು ತಮ್ಮ ರ್‍ಯಾಡ್ಯುಲದಿಂದ ಉಜ್ಜಿ ಅದರಿಂದ ಒಸರುವ ವಸ್ತುಗಳನ್ನು ಜೊಲ್ಲುಗ್ರಂಥಿಗಳು ಸ್ರವಿಸುವ ಲೋಳೆಯೊಂದಿಗೆ ಸೇರಿಸಿ ನುಂಗುತ್ತವೆ. ಇವುಗಳ ಅನ್ನನಾಳದ ಇಕ್ಕೆಲದಲ್ಲಿರುವ ಚೀಲಗಳು ಜೀರ್ಣಕ್ರಿಯೆಗೆ ಬೇಕಾದ ಕೆಲವು ಕಿಣ್ವಗಳನ್ನು ಉತ್ಪತ್ತಿ ಮಾಡುತ್ತವೆ. ಉಳಿದ ಕಿಣ್ವಗಳು ಜೀರ್ಣಗ್ರಂಥಿಯಲ್ಲಿ ಉತ್ಪತ್ತಿಯಾಗುತ್ತವೆ.




ಚಿತ್ರ 8. ರ್‍ಯಾಡ್ಯುಲದ ರಚನೆ : 1. ಪಾರ್ಶ್ವದ ಹಲ್ಲುಗಳು, 2. ಅಂಚಿನ ಹಲ್ಲುಗಳು, 3. ಮಧ್ಯದ ಹಲ್ಲುಗಳು

ಅನ್ನನಾಳಕ್ಕೆ ಹತ್ತಿರದಲ್ಲಿರುವ ಜಠರಭಾಗದಲ್ಲಿ ಕೈಟಿನಿನಿಂದ ರಚಿತವಾದ ಏಣುಗಳಿವೆ. ಈ ಭಾಗಕ್ಕೆ ಆಹಾರವಸ್ತುಗಳನ್ನು ಬೇರ್ಪಡಿಸುವ ಭಾಗವೆಂದು ಹೆಸರು. ಕರುಳಿನ ಹತ್ತಿರದಲ್ಲಿರುವ ಜಠರದ ಭಾಗ ತ್ರಿಕೋನಾಕಾರಕ್ಕಿದ್ದು ಸ್ಟೈಲ್ ಚೀಲ ಎಂಬ ರಚನೆಯಾಗಿದೆ. ಇದರ ಉದ್ದಕ್ಕೂ ಒಂದು ಆಳವಾದ ತೋಡು ಇದೆ. ಈ ತೋಡು ಸ್ಟೈಲ್ ಚೀಲಕ್ಕೂ ಜಠರಕ್ಕೂ ಸಂಪರ್ಕ ಕಲ್ಪಿಸುತ್ತದೆ. ಆಹಾರವನ್ನು ವಿಂಗಡಿಸುವ ಭಾಗ ಜಠರ ಜೀರ್ಣಿಸಲಾಗದ




ಚಿತ್ರ 9. ಹೆಲಿಕ್ಸ್ ಪ್ರಾಣಿಯ ದೇಹ ಭಾಗಗಳು : 1. ಜಠರ, 2. ಜೀರ್ಣಗ್ರಂಥಿ, 3. ಗುದದ್ವಾರ, 4. ನೆಫ್ರೀಡಿಯಂ, 5. ಜೊಲ್ಲುಗ್ರಂಥಿ, 6. ಮೇತೆ, 7. ಸೆರಬ್ರಲ್ ನರಮುಡಿ, 8. ಶಿಶ್ನ, 9. ಡಾರ್ಟ್ ಚೀಲ, 10. ಪೀಡಲ್ ನರಮುಡಿ, 11. ಶುಕ್ರಾಣು ನಾಳ, 12. ಅಂಡಾಣು ನಾಳ, 13. ಪಾದ

ಪದಾರ್ಥಗಳನ್ನು ಬೇರ್ಪಡಿಸಿ ಸ್ಟೈಲ್ ಚೀಲದೊಳಕ್ಕೂ ಜೀರ್ಣವಾಗುವಂಥ ಆಹಾರವನ್ನು ಲೋಳೆಯೊಂದಿಗೆ ಮಿಶ್ರಿಸಿ ಚೆಂಡಿನಂತೆ ಮಾಡಿ ಕರುಳಿನೊಳಕ್ಕೂ ನೂಕುತ್ತದೆ. ಉಳಿದ ಉಚ್ಚಮಟ್ಟದ ಗ್ಯಾಸ್ಟ್ರಪೊಡಗಳಲ್ಲಿ ಬಲು ಸರಳ ರೀತಿಯ ಜಠರ ಇದೆ. ಇದರಲ್ಲಿ ಕೈಟಿನಿನ ಲೇಪನ, ವಿಂಗಡಣಾ ವಿಭಾಗ, ಸ್ಟೈಲ್ ಚೀಲ ಮುಂತಾದವು ಇಲ್ಲ.

ಪ್ರೋಸೋಬ್ರ್ಯಾಂಕ್, ಒಫಿಸ್ಟೊಬ್ರ್ಯಾಂಕ್ ಮತ್ತು ಪಲ್ಮನೇಟಗಳ ಸಸ್ಯಾಹಾರಿ ಬಗೆಗಳಲ್ಲಿ ರ್‍ಯಾಡ್ಯುಲದಲ್ಲಿ ಹಲ್ಲುಗಳು ಅಸಂಖ್ಯಾತವಾಗಿವೆ. ಇವುಗಳ ಅಂಗುಳದ ಮೇಲಿನ ಅಂಚಿನಲ್ಲಿ

ಕೈಟಿನಿನಿಂದ ಕೂಡಿದ ದವಡೆಯಿದೆ. ಬಹುಪಾಲು ಪ್ರಭೇದಗಳಲ್ಲಿ ಅನ್ನನಾಳ ಅಗಲವಾದ ಮೇತೆಯಂತೆ ಹಿಗ್ಗಿದೆ. ಇದನ್ನು ಜಠರದ ಮುಂಭಾಗದಲ್ಲಿ ಕಾಣಬಹುದು. ಮೇತೆಯಲ್ಲಿ ಆಹಾರ ತಾತ್ಕಾಲಿಕವಾಗಿ ಸಂಗ್ರಹವಾಗುತ್ತದೆ. ಜೀರ್ಣಗ್ರಂಥಿ ಹಾಗೂ ಜೊಲ್ಲುಗ್ರಂಥಿಗಳಲ್ಲಿ ಉತ್ಪತ್ತಿಯಾದ ಕಿಣ್ವಗಳು ಇದರೊಳಕ್ಕೆ ಬರುತ್ತವೆ. ಅಪ್ಲೀಸಿಯದಲ್ಲಿ ಮೇತೆಯ ಗೋಡೆಯ ಮೇಲೆ ಕೈಟಿನ್ ತಟ್ಟೆಗಳಿವೆ. ಇದು ಗಿಜರ್ಡಿನಂತೆ ಕಾರ್ಯ ನಿರ್ವಹಿಸುತ್ತದೆ.




**ಚಿತ್ರ 10. ಅಪ್ಲೀಸಿಯ ಮತ್ತು ಕೋನಸ್‌ಗಳ ಜೀರ್ಣಾಂಗ ಮತ್ತು ನರಮಂಡಲ A ಅಪ್ಲೀಸಿಯ, C-D ಕೋನಸ್, 1. ಬಕಲ್ ನರ, 2. ರೈನೋಫೋರ್, 3. ಸೆರಬ್ರಲ್ ನರಮುಡಿ, 4. ಮೇತೆ, 5. ಗಿಜರ್ಡ್, 6. ಜಠರ, 7. ಕರುಳು, 8. ಜೀರ್ಣಗ್ರಂಥಿ, 9. ಗುದದ್ವಾರ, 10. ರ್‍ಯಾಡ್ಯುಲ ಹಲ್ಲು, 11. ವಿಷಗೊಳವೆ, 12. ರ್‍ಯಾಡ್ಯುಲ ಚೀಲ, 13. ಸೊಂಡಿಲು, 14. ವಿಷಗ್ರಂಥಿ**

ಮಾಂಸಾಹಾರಿಗಳಾದ ಕೆಲವು ಪ್ರೋಸೋಬ್ರ್ಯಾಂಕ್, ಒಫಿಸ್ಟೊಬ್ರ್ಯಾಂಕ್ ಮತ್ತು ಪಲ್ಮನೇಟಗಳ ರ್‍ಯಾಡ್ಯುಲದಲ್ಲಿ ಅತಿ ದೊಡ್ಡ ಹಲ್ಲುಗಳು ಇವೆ. ಹಲ್ಲುಗಳ ಸಂಖ್ಯೆ ಕಡಿಮೆ. ಪ್ರೋಸೋಬ್ರ್ಯಾಂಕ್‌ಗಳಲ್ಲಿ ದವಡೆಗಳಿಲ್ಲ. ಬಾಯಂಗುಳ ಮಡಿಸಿಕೊಂಡಂತಾಗಿ ಸೊಂಡಿಲಿನಂಥ ರಚನೆಯಾಗಿ ರೂಪುಗೊಂಡಿದೆ. ಈ ಸೊಂಡಿಲಿನ ಒಳಾವರಣದಲ್ಲಿ ಅನ್ನನಾಳದ ವರೆಗೂ ಹರಡಿರುವ ರ್‍ಯಾಡ್ಯುಲಗಳಿವೆ. ಆಹಾರ ಸೇವನೆಯ ಕಾಲದಲ್ಲಿ ರ್‍ಯಾಡ್ಯುಲಗಳು ಸೊಂಡಿಲಿನ ತುದಿಯಿಂದ ಹೊರಚಾಚಿಕೊಳ್ಳುತ್ತವೆ. ಆಹಾರ ಸೇವನೆ ಮುಗಿದ ಅನಂತರ ಸೊಂಡಿಲು ಒಳಗೆಳೆಯಲ್ಪಡುತ್ತದೆ. ಸೊಂಡಿಲನ್ನು ಇಟ್ಟುಕೊಳ್ಳುವುದಕ್ಕಾಗಿಯೇ ಬಾಯಲ್ಲಿ ಒಂದು ಪ್ರತ್ಯೇಕ ಅವಕಾಶವಿದೆ. ಕೆಲವು ಪ್ರೋಸೋಬ್ರ್ಯಾಂಕ್ ಕುಟುಂಬಗಳಲ್ಲಿ, ಮುಖ್ಯವಾಗಿ ಮ್ಯೂರಿಸಿಡೀ ಕುಟುಂಬದಲ್ಲಿ ಕಪ್ಪೆಚಿಪ್ಪಿನ ಹುಳುಗಳನ್ನು ತಿನ್ನಬಲ್ಲಂಥ ಜೀವಿಗಳಿವೆ. ಇವು ಆಹಾರಜೀವಿಯ ಚಿಪ್ಪನ್ನು ತಮ್ಮ ರ್‍ಯಾಡ್ಯುಲದಿಂದ ಕೊರೆದು ಚಿಪ್ಪಿನ ಒಳಗಿರುವ ಮೃದು ಶರೀರವನ್ನು ಹೀರುತ್ತವೆ. ಉದಾ: ಯೂರೊಸ್ಯಾಲ್ಪಿಂಕ್ಸ್, ಮ್ಯೂರೆಕ್ಸ್, ಯೂಪ್ಲ್ಯೂರ ಇತ್ಯಾದಿ.

ಕಡಲಿನಲ್ಲಿ ವಾಸಿಸುವ ಪ್ರೋಸೋಬ್ರ್ಯಾಂಕ್‌ಗಳ ಒಂದು ಜಾತಿಯಾದ ಕೋನಸ್ ಎಂಬುದು ಜೀವಂತ ಮೀನುಗಳನ್ನೂ ಕಡಲ ಅನೆಲಿಡಗಳನ್ನೂ ತಿನ್ನುತ್ತದೆ. ಇದು ತನ್ನ ಹರಿತವಾದ ರ್‍ಯಾಡ್ಯುಲಗಳಿಂದ ಆಹಾರಜೀವಿಗಳನ್ನು ತಿವಿದು ಅದರೊಳಕ್ಕೆ ತೀಕ್ಷ್ಣ ಬಗೆಯ ವಿಷವನ್ನು ಹೊಗಿಸಿ ಕೊಲ್ಲುತ್ತದೆ.

ಶಿಲಕೆಗಳ ಸಹಾಯದಿಂದ ಆಹಾರ ಸೇವನೆ : ಕೆಲವು ಗ್ಯಾಸ್ಟ್ರೊಪೊಡಗಳು ತಮ್ಮ ಶಿಲಕೆಗಳ ಸಹಾಯದಿಂದ ನೀರಿನಲ್ಲಿರುವ ಪ್ಲಾಂಕ್ಟನ್ ಮುಂತಾದ ಆಹಾರವನ್ನು ಶೋಧಿಸಿ ಸೇವಿಸುತ್ತವೆ. ಉದಾ: ಕ್ರೆಪಿಡ್ಯುಲ, ಸ್ಟ್ರಾಂಬಸ್ ಮತ್ತು ವರ್ಮಿಟಸ್. ಇಂಥ ಪ್ರಾಣಿಗಳಲ್ಲಿ ಪ್ರೋಟೀನ್ ವಸ್ತುವಿನಿಂದ ರಚಿತವಾದ ಸಲಾಕೆಯಂಥ ಸ್ಟೈಲ್ ಇರುತ್ತದೆ. ಜಠರದ ಹಿಂತುದಿಯ ಸ್ಟೈಲ್ ಚೀಲದಿಂದ ಉತ್ಪತ್ತಿಯಾಗುವ ಇದು ಜಠರದ ಕರುಳು ಭಾಗದಲ್ಲಿ ಹುದುಗಿರುತ್ತದೆ. ಆಹಾರ ಜೀರ್ಣವಾಗುವ ಕಾಲದಲ್ಲಿ ಶಿಲಕೆಗಳ ಸಹಾಯದಿಂದ ಇದು ತಿರುಗುತ್ತಿದ್ದು ಆಹಾರ ಬೆರೆಯುವುದಕ್ಕೂ ಜೀರ್ಣವಾಗುವುದಕ್ಕೂ ಸಹಾಯ ಮಾಡುತ್ತದೆ. ಅಲ್ಲದೆ ಇದರಲ್ಲಿ ಪಿಷ್ಟ ಪದಾರ್ಥಗಳನ್ನು ಜೀರ್ಣಿಸಬಲ್ಲ ಕಿಣ್ವಗಳಿವೆ.

ಕೆಲವು ಗ್ಯಾಸ್ಟ್ರೊಪೊಡಗಳು ಪರಾವಲಂಬಿಗಳಾಗಿವೆ. ಉದಾ : ಪಿರಾಮಿಡಿಲೇಸಿಯ. ಪೈರಾಮ್ ಶಂಭುಕಗಳು ಪಾಲಿಕೀಟ ಮತ್ತು ಕಪ್ಪೆಚಿಪ್ಪಿನ ಹುಳುಗಳ ಮೇಲೆ ಬಾಹ್ಯ ಪರಾವಲಂಬಿಗಳಾಗಿ ಜೀವನ ಸಾಗಿಸಿದರೆ ಸ್ಟೈಲಿಫರ್ ಎಂಬುದು ನಕ್ಷತ್ರಮೀನುಗಳ ದೇಹದೊಳಗೂ ಎಂಟೋಕಾಂಕ ಎಂಬುದು ಕಡಲಸೌತೆಗಳ ಅಂಗಾಂಗಗಳ ಒಳಗೂ ಇದ್ದು ಅಂತರ್ ಪರಾವಲಂಬಿಗಳಾಗಿ ಜೀವನ ನಡೆಸುತ್ತವೆ.

**ನರಮಂಡಲ :** ಗ್ಯಾಸ್ಟ್ರೊಪೊಡಗಳ ನರಮಂಡಲ ಸಂಕೀರ್ಣ ಮಾದರಿಯದು. ಇದರಲ್ಲಿ ನಿರ್ದಿಷ್ಟವಾದ ನರಮುಡಿಗಳನ್ನು ಕಾಣಬಹುದು. ನುಲಿಗೆ ಪೂರ್ವ ಸ್ಥಿತಿಯಲ್ಲಿ ಇದು ಹೇಗಿತ್ತು ಎಂಬುದನ್ನು ತಿಳಿದುಕೊಂಡರೆ ನುಲಿಗೆಗೊಳಗಾದ ಮೇಲೆ ಇದರಲ್ಲಿ ಉಂಟಾದ ವ್ಯತ್ಯಾಸಗಳೇನು ಎಂಬುದನ್ನು ಅರಿಯುವುದು ಸುಲಭ. ಅನ್ನನಾಳದ




**ಚಿತ್ರ 11. ನರಮಂಡಲ. A ನುಲಿಗೆಗೆ ಮುನ್ನ, B ನುಲಿಗೆಯ ಅನಂತರ ; 1. ಬಕಲ್ ನರಮುಡಿ, 2. ಸೆರಬ್ರಲ್‌ನರಮುಡಿ, 3. ಪ್ಲ್ಯೂರಲ್ ನರಮುಡಿ, 4. ಪೀಡಲ್ ನರಮುಡಿ, 5. ಪರೈಟಲ್ ನರಮುಡಿ, 6. ಅಂಗಸದ ನರಮುಡಿ, 7. ಇನ್‌ಫ್ರ ಪರೈಟಲ್ ನರಮುಡಿ, 8. ಸುಪ್ರ ಪರೈಟಲ್ ನರಮುಡಿ**

ಹಿಂತುದಿಯಲ್ಲಿ ಒಂದು ಜೊತೆ ಸೆರಬ್ರಲ್ ನರಮುಡಿಗಳು ಇವೆ. ಇವುಗಳಿಂದ ಹೊರಡುವ ನರಗಳು ಕಣ್ಣು, ಕರಬಳ್ಳಿಗಳು ಮುಂತಾದ ಅಂಗಗಳಿಗೆ ಹೋಗುತ್ತವೆ. ಸೆರಬ್ರಲ್ ನರಮುಡಿಗಳ ಮುಂಭಾಗದಲ್ಲಿ ಬಾಯ ಇಕ್ಕೆಲದಲ್ಲಿ ಒಂದು ಜೊತೆ ಬಕಲ್ ನರಮುಡಿಗಳು ಇವೆ. ಇವಕ್ಕೂ ಸೆರಬ್ರಲ್ ನರಮುಡಿಗಳೂ ನರತಂತುಗಳ ಸಂಪರ್ಕ ಇದೆ. ಬಕಲ್ ನರಮುಡಿಗಳಿಂದ ರ್‍ಯಾಡ್ಯುಲದ ಸ್ನಾಯುಗಳಿಗೂ ಬಾಯಂಗಳಕ್ಕೂ ನರಗಳು ಹೋಗುತ್ತವೆ. ಪ್ರತಿಯೊಂದು ಸೆರಬ್ರಲ್ ನರಮುಡಿಯಿಂದ ಅನ್ನನಾಳದ ಇಕ್ಕೆಲದಲ್ಲಿ ತಳಭಾಗಕ್ಕೆ ಒಂದು ನರಹುರಿ ಹೊರಡುತ್ತದೆ. ಇವಕ್ಕೆ ಪಾದದ ನರಹುರಿಗಳು ಎಂದು ಹೆಸರು. ಇವು ಪಾದದ ಮಧ್ಯಭಾಗದಲ್ಲಿರುವ ಪಾದದ ನರಮುಡಿಗಳಿಗೆ ತಲಪುತ್ತವೆ. ಪಾದದ ನರಮುಡಿಗಳಿಂದ ನರತಂತುಗಳು ಹೊರಟು ಪಾದದ ಸ್ನಾಯುಗಳನ್ನು ತಲಪುತ್ತವೆ. ಸೆರಬ್ರಲ್ ನರಮುಡಿಗಳಿಂದ ಮತ್ತೊಂದು ಜೊತೆ ನರಹುರಿಗಳು ಹೊರಡುತ್ತವೆ. ಇವಕ್ಕೆ ಅಂಗಸದ ನರಹುರಿಗಳೆಂದು ಹೆಸರು. ಇವು ಶಿರದ ಭಾಗದಿಂದ ಹೊರಟು ಹಿಂದಕ್ಕೆ ಸಾಗಿ ಅಂಗಸರಾಶಿಯಲ್ಲಿ ಹುದುಗಿರುವ ಅಂಗಸದ ನರಮುಡಿಗಳಿಗೆ ಬಂದು ಕೊನೆಗೊಳ್ಳುತ್ತವೆ. ಅಂಗಸದ ನರಹುರಿಗಳು ಅಂಗಸರಾಶಿಯ ನರಮುಡಿಗಳನ್ನು ತಲಪುವುದಕ್ಕಿಂತ ಮುಂಚೆ ಎರಡು ಜೊತೆ ನರಮುಡಿಗಳು ಹೊರಡುತ್ತವೆ. ಮೊದಲನೆಯ ಜೊತೆ ನರಮುಡಿಗಳಿಗೆ ಪ್ಲ್ಯೂರಲ್ ನರಮುಡಿಗಳೆಂದು ಹೆಸರು. ಇವು ದೇಹದ ಮುಂತುದಿಯಲ್ಲಿವೆ. ಇವುಗಳ ನರಗಳು

ಚಿಪ್ಪಿನ ಕಾಲುಮೆಲದ ಸ್ನಾಯುಗಳಿಗೆ ಹೋಗುತ್ತದೆ. ಪ್ಲ್ಯೂರಲ್ ನರಮುಡಿಗಳಿಂದ ಒಂದು ಜೊತೆ ನರಗಳು ಪೀಡಲ್ ನರಮುಡಿಗೆ ಹೋಗುತ್ತವೆ. ಇವಕ್ಕೆ ಪೀಡಲ್ ಸಂಬಂಧಿಕೆಗಳೆಂದು ಹೆಸರು. ಅಂಗಸದ ನರಹುರಿಗಳಲ್ಲಿರುವ ಎರಡನೆಯ ಜೊತೆ ನರಮುಡಿಗಳಿಗೆ ಪರೈಟಲ್ ನರಮುಡಿಗಳೆಂದು ಹೆಸರು. ಇವು ದೇಹದ ಹಿಂಭಾಗದಲ್ಲಿವೆ.




ಚಿತ್ರ 12. ವಿವಿಧ ಬಗೆಯ ಗ್ಯಾಸ್ಟ್ರಪೊಡಗಳಲ್ಲಿ ನರಮಂಡಲದ ರಚನೆ ; A ಹ್ಯಾಲಿಯೋಟಿಸ್, B ಬ್ಯೂಸಿಕಾನ್, C ಹೆಲಿಕ್ಸ್, D ಅಪ್ಲೀಸಿಯ, 1. ಸೆರಬ್ರಲ್ ನರಮುಡಿ, 2. ಸುಪ್ರಪರೈಟಲ್ ನರಮುಡಿ, 3. ಇನ್‌ಫ್ರ ಪರೈಟಲ್ ನರಮುಡಿ, 4. ಅಂಗಸದ ನರಮುಡಿ, 5. ಪ್ಲ್ಯೂರಲ್ ನರಮುಡಿ, 6. ಬಕಲ್ ನರಮುಡಿ, 7. ಪರೈಟಲ್ ನರಮುಡಿ, 8. ಪೀಡಲ್ ನರಮುಡಿ

ಇವುಗಳ ನರಗಳು ಆಸ್ಫಾಡಿಯ, ಮ್ಯಾಂಟಲ್ ಮತ್ತು ಕಿವಿರುಗಳಿಗೆ ಸಾಗುತ್ತವೆ. ಅಂಗಸದ ನರಮುಡಿಗಳಿಂದ ನರಗಳು ಅಂಗಸರಾಶಿಯ ವಿವಿಧ ಅಂಗಗಳಿಗೆ ಹೋಗುತ್ತವೆ. ಈ ರೀತಿಯ ನರಜಾಲ ನುಲಿಗೆಪೂರ್ವಸ್ಥಿತಿಯಲ್ಲಿ ಕಂಡುಬರುತ್ತದೆ.

ನುಲಿಗೆಯಿಂದಾಗಿ ಗ್ಯಾಸ್ಟ್ರಪೊಡಗಳ ನರಮಂಡಲದಲ್ಲಿ ಕೆಲವು ವ್ಯತ್ಯಾಸಗಳು ಉಂಟಾಗಿವೆ. ಪೂರ್ವಸ್ಥಿತಿಯಲ್ಲಿ ಸಮಪಾರ್ಶ್ವ ಸ್ಥಿತಿಯಲ್ಲಿರುವ ನರಮಂಡಲ ನುಲಿಗೆಯಾದ ಮೇಲೆ ಅಸಮಪಾರ್ಶ್ವ ರೀತಿಯದ್ದಾಗಿ 8 ಅಂಕಿಯಂತಾಗಿದೆ. ನುಲಿಗೆಯಿಂದ ನರಗಳ ಮೂಲಸ್ಥಾನ ಅದಲು ಬದಲಾಗಿದೆ. ನುಲಿಗೆ ಪೂರ್ವಸ್ಥಿತಿಯಲ್ಲಿದ್ದ ಬಲಗಡೆಯ ಪರೈಟಲ್ ನರಮುಡಿ ಈಗ ಎಡಕ್ಕೂ ಎಡಗಡೆಯ ಪರೈಟಲ್ ನರಮುಡಿ ಬಲಕ್ಕೂ ತಿರುಚಿಕೊಂಡಿವೆ. ಜೊತೆಗೆ ಎಡಕ್ಕೆ ಬಂದ ನರಮುಡಿ ಅಂಗಸರಾಶಿಯ ಮೇಲ್ಭಾಗಕ್ಕೆ ಹಾಗೂ ಮುಂಭಾಗಕ್ಕೆ ಸರಿಯುತ್ತದೆ. ಇದರಿಂದಾಗಿ ಇವನ್ನು ಸುಪ್ರ ಪರೈಟಲ್ ನರಮುಡಿ ಮತ್ತು ಇನ್‌ಫ್ರಪರೈಟಲ್ ನರಮುಡಿ ಎಂದು ಕರೆಯಲಾಗುತ್ತದೆ. ನುಲಿಗೆಯಿಂದ ದೇಹದ ಮುಂಭಾಗದಲ್ಲಿರುವ ಪ್ಲ್ಯೂರಲ್ ನರಮುಡಿಗಳ ಸ್ಥಾನಮಾನಗಳಲ್ಲಿ ಮಾತ್ರ ಯಾವ ಬದಲಾವಣೆಯೂ ಆಗಿಲ್ಲ.

ನರಮಂಡಲದ ನುಲಿಗೆ ಗ್ಯಾಸ್ಟ್ರಪೊಡ ನರಮಂಡಲದ ಆದಿಮ ಸ್ಥಿತಿಯನ್ನು ತೋರಿಸುತ್ತದೆ. ಏಕೆಂದರೆ ನುಲಿಗೆ ಕ್ರಿಯೆ ಗ್ಯಾಸ್ಟ್ರಪೊಡಗಳ ವಿಕಾಸದ ಪ್ರಥಮದಲ್ಲೇ ನಡೆದಿರುವ ಕ್ರಿಯೆ. ಅಲ್ಲದೆ ನರಮಂಡಲದಲ್ಲಿ ಪ್ರತ್ಯೇಕವಾಗಿರುವ ನರಮುಡಿ ಮತ್ತು ನರಹುರಿಗಳು ಕೂಡ ಆದಿಮಾವಸ್ಥೆಯಲ್ಲಿಯೆ ಇವೆ. ಈ ರೀತಿಯ ಆದಿಮಾವಸ್ಥೆಯ ನರಮಂಡಲ ಕೆಲವು ಬದಲಾವಣೆಗಳೊಂದಿಗೆ ಹಳೆಯ ಸ್ಥಿತಿಯಲ್ಲಿಯೇ ಇರುವುದನ್ನು ಪ್ರೋಸೋಬ್ರ್ಯಾಂಕ್ ಗುಂಪಿನ ಪಟೆಲ ಮತ್ತು ಹ್ಯಾಲಿಯೋಟಿಸುಗಳಲ್ಲಿ ಕಾಣಬಹುದು. ಆದರೆ ಅನೇಕ ಗ್ಯಾಸ್ಟ್ರಪೊಡಗಳಲ್ಲಿ ವಿಕಾಸದಿಂದಾಗಿ ಈ ಮೂಲಭೂತ ವ್ಯವಸ್ಥೆ ವ್ಯತ್ಯಾಸವಾಗಿದೆ. ನರಮುಡಿಗಳು ಒಂದುಗೂಡಿರುವುದರಿಂದ ಇವುಗಳ ಸಂಬಂಧಿಕೆಗಳು ಅತಿ ಚಿಕ್ಕವಾಗಿರುವುದು ಮತ್ತು ನರಮುಡಿಗಳು ಹಾಗೂ ನರಹುರಿಗಳು ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ಗಳಿಸಿಕೊಂಡಿರುವುದು–ಇವು ಈ ವ್ಯತ್ಯಾಸಗಳಲ್ಲಿ ಮುಖ್ಯವಾದವು.

ಸಾಮಾನ್ಯವಾಗಿ ಪ್ರತಿಯೊಂದು ಪ್ರಭೇದದಲ್ಲೂ ನರಮುಡಿಗಳು ಸ್ವಲ್ಪಮಟ್ಟಿಗೆ ಕೇಂದ್ರೀಕೃತಗೊಂಡಿರುವುದು ಕಂಡುಬರುತ್ತದೆ. ಪ್ಲ್ಯೂರಲ್ ನರಮುಡಿಗಳು ಯಾವಾಗಲೂ ಸೆರಬ್ರಲ್ ನರಮುಡಿಗಳ ಪಕ್ಕದಲ್ಲಿಯೇ ಇರುತ್ತವೆ. ಅಂಗಸದ ನರಮುಡಿಗಳು ಒಂದುಗೂಡಿ ಒಂದೇ ನರಮುಡಿಯಂತಾಗಿವೆ. ಹ್ಯಾಲಿಯೋಟಿಸಿನಲ್ಲಿ ಪೀಡಲ್ ನರಮುಡಿಗಳು ಪ್ಲ್ಯೂರಲ್ ನರಮುಡಿಗಳೊಂದಿಗೆ ಸೇರಿಬಿಟ್ಟಿವೆ. ಇವನ್ನು ಪೀಡಲ್–ಪ್ಲ್ಯೂರಲ್ ನರಮುಡಿಗಳೆಂದು ಕರೆಯಲಾಗುತ್ತದೆ. ಬ್ಯೂಸಿಕಾನಿನಲ್ಲಿ ಅಂಗಸದ ನರಮುಡಿಗಳನ್ನು ಬಿಟ್ಟು ಉಳಿದೆಲ್ಲವೂ ದೇಹದ ಮುಂಭಾಗಕ್ಕೆ ಸರಿದು ಅನ್ನನಾಳದ ಸುತ್ತ ಸೆರಬ್ರಲ್ ನರಮುಡಿಯ ಅಡಿಯಲ್ಲಿ ಕೇಂದ್ರೀಕೃತಗೊಂಡಿವೆ. ಇವುಗಳ ಅಂಗಸ ಸಂಬಂಧಿಕೆಗಳನ್ನು ಬಿಟ್ಟು ಉಳಿದ ಎಲ್ಲ ಸಂಬಂಧಿಕೆಗಳೂ ಮಾಯವಾಗಿವೆ. ಪಲ್ಮನೇಟಗಳಲ್ಲಿ ಅಂಗಸದ ನರಮುಡಿ ಸಹ ಮುಂಭಾಗಕ್ಕೆ ಸರಿದುಬಿಟ್ಟಿದೆ. ಇದರಿಂದ ಸಂಬಂಧಿಕೆಗಳ ಉದ್ದ ಕಡಿಮೆಯಾಗಿ ನರಮಂಡಲ ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ತಲುಪಿದೆ. ಒಫಿಸ್ತೊಬ್ರ್ಯಾಂಕುಗಳಲ್ಲಿ ವಿನುಲಿಗೆಯಿಂದಾಗಿ ಅಂಗಸದ ನರಹುರಿಗಳು ಸಮಪಾರ್ಶ್ವ ಸ್ಥಿತಿಯನ್ನು ಗಳಿಸಿಕೊಂಡಿವೆ. ಅಪ್ಲೀಸಿಯದಲ್ಲಿ ಎಡಗಡೆಯ ಪರೈಟಲ್ ನರಮುಡಿ ಮಾಯವಾಗಿ ಬಲಗಡೆಯ ನರಮುಡಿ ಒಂದುಗೂಡಿರುವ ಅಂಗಸದ ನರಮುಡಿಗಳ ಪಕ್ಕದಲ್ಲಿದೆ.




ಚಿತ್ರ 13 ಪ್ರೋಸೋಬ್ರ್ಯಾಂಕುಗಳ ಕಣ್ಣುಗಳು, A ಪಟೆಲ, B ಮ್ಯೂರೆಕ್ಸ್ 1. ರೆಟಿನ, 2. ಕಣ್ಣಿನ ನರ, 3. ಮಸೂರ

ಜ್ಞಾನೇಂದ್ರಿಯಗಳು : ಕಣ್ಣು, ಕರಬಳ್ಳಿ, ಆಸ್ಫಾಡಿಯ ಮತ್ತು ಸ್ಟ್ಯಾಟೋಸಿಸ್ಟುಗಳೇ ಗ್ಯಾಸ್ಟ್ರಪೊಡಗಳ ಜ್ಞಾನೇಂದ್ರಿಯಗಳು.

ಕಣ್ಣುಗಳು ಶಿರದ ಕರಬಳ್ಳಿಗಳ ತಳದಲ್ಲಿವೆ. ಪಟೆಲದಲ್ಲಿ ಇವು ಸರಳ ಕುಳಿಗಳಂತಿವೆ. ಇವುಗಳೊಳಗೆ ಬೆಳಕನ್ನು ಗ್ರಹಿಸಬಲ್ಲ ಅಂಗವೂ ವರ್ಣದ್ರವ್ಯಕೋಶಗಳೂ ಇವೆ. ಆದರೆ ಉಳಿದ ಎಲ್ಲ ಉನ್ನತ ಗ್ಯಾಸ್ಟ್ರಪೊಡಗಳಲ್ಲಿ ಕುಳಿ ಮುಚ್ಚಿ ಹೋಗಿ ಅದರಲ್ಲಿ ಕಾರ್ನಿಯ ಮತ್ತು ಮಸೂರಗಳು ಬೆಳೆದುಕೊಂಡಿವೆ. ಕರಬಳ್ಳಿಯ ಬುಡದಲ್ಲಿರುವ ಕಣ್ಣುಗಳ ದ್ಯುತಿಗ್ರಾಹಕ ಅಂಗ ಯಾವಾಗಲೂ ಬೆಳಕಿನ ಮೂಲದೆಡೆಗೆ ನಿರ್ದೇಶಿತವಾಗಿರುತ್ತದೆ. ಹೆಟರಾಪೊಡ ಗುಂಪಿನ ಶಂಭುಕಗಳ ಕಣ್ಣುಗಳು ಉನ್ನತಮಟ್ಟದವಾಗಿದ್ದು ಮೀನುಗಳ ಕಣ್ಣಿಗಿಂತಲೂ ಉಚ್ಚಮಟ್ಟದವು ಎಂದು ಹೇಳಲಾಗಿದೆ. ಇಷ್ಟಾದರೂ ಗ್ಯಾಸ್ಟ್ರಪೊಡಗಳ ಕಣ್ಣಿನ ಕೆಲಸ ಕೇವಲ ಬೆಳಕನ್ನು ಗ್ರಹಿಸುವುದು ಮಾತ್ರ.

ಪ್ರೋಸೋಬ್ರ್ಯಾಂಕುಗಳಲ್ಲಿ ಕೇವಲ ಒಂದು ಜೊತೆ ಶಿರದ ಕರಬಳ್ಳಿಗಳಿದ್ದರೆ ಒಫಿಸ್ತೊಬ್ರ್ಯಾಂಕ್ ಹಾಗೂ ಪಲ್ಮನೇಟಗಳಲ್ಲಿ ಎರಡು ಜೊತೆ ಇವೆ. ಇವು ಕಣ್ಣುಗಳಿಗೆ ಆಶ್ರಯವಾಗಿರುವುದೊಂದೇ ಅಲ್ಲದೆ ಇವುಗಳಲ್ಲಿ ಸ್ಪರ್ಶವೇದಿ ಹಾಗೂ ರಸಗ್ರಾಹಿ ಜೀವಕೋಶಗಳಿವೆ. ನ್ಯೂಡಿಬ್ರ್ಯಾಂಕುಗಳಲ್ಲಿ ಕರಬಳ್ಳಿಯ ಮೇಲಿನ ಅರ್ಧ ಭಾಗ ಫಲಕದಂತೆ ಅಗಲವಾಗಿದೆ. ಇದರಲ್ಲಿ ಮಡಿಕೆಗಳು ಬೆಳೆದಿವೆ. ಇವು ರಸಗ್ರಾಹಿಗಳು. ಇವಕ್ಕೆ ರೈನೋಫೋರುಗಳೆಂದು ಹೆಸರು.

ಗ್ಯಾಸ್ಟ್ರಪೊಡಗಳ ಪಾದಗಳಲ್ಲಿ ಪೀಡಲ್ ನರಮುಡಿಯ ಬಳಿ ಒಂದು ಜೊತೆ ಸ್ಟ್ಯಾಟೋಸಿಸ್ಟುಗಳಿವೆ. ನ್ಯೂಡಿಬ್ರ್ಯಾಂಕ್‌ಗಳಲ್ಲಿ ಮತ್ತು ಕೆಲವು ಒಫಿಸ್ತೊಬ್ರ್ಯಾಂಕ್‌ಗಳಲ್ಲಿ ಸ್ಟ್ಯಾಟೋಸಿಸ್ಟುಗಳು ಸೆರಬ್ರಲ್ ನರಮುಡಿಯ ಒಳಗೆ ಸರಿದಿರುವುದು ಕಂಡುಬರುತ್ತದೆ. ಇವು ದೇಹದ ಸಮತೋಲನ ಸ್ಥಿತಿಯನ್ನು ಕಾಯ್ದಿರಿಸಲು ಸಹಾಯಕವಾಗಿವೆ. ಗ್ಯಾಸ್ಟ್ರಪೊಡಗಳ ಆಸ್ಫಾಡಿಯಗಳಿಗೂ ಕಿವಿರುಗಳ ವಿಕಾಸಕ್ಕೂ ಸಂಬಂಧವಿದೆ. ಆರ್ಕಿಗ್ಯಾಸ್ಟ್ರಪೊಡಗಳಲ್ಲಿ ಪ್ರತಿ ಕಿವಿರಿನಲ್ಲಿಯೂ ಒಂದೊಂದು ಆಸ್ಫಾಡಿಯಮ್ ಇದೆ. ಉಳಿದ ಪ್ರೋಸೋಬ್ರ್ಯಾಂಕುಗಳಲ್ಲಿ ಒಂದೇ ಕಿವಿರು ಇರುವುದರಿಂದ ಆಸ್ಫಾಡಿಯಮ್ ಕೂಡ ಒಂದೇ ಇದೆ. ಇದು ಮ್ಯಾಂಟಲ್ ಕುಹರದ ಗೋಡೆಯ ಮೇಲೆ ಕಿವಿರಿನ ಬುಡದ ಮುಂಭಾಗದಲ್ಲಿದೆ. ಬಹುಪಾಲು ಪ್ರಭೇದಗಳಲ್ಲಿ ಆಸ್ಫಾಡಿಯಮಿನ ಹೊರಮೈಮೇಲೆ

ತಂತುಗಳಂಥ ಅಥವಾ ಮಡಿಕೆಗಳಂಥ ರಚನೆಗಳಿರುವುದರಿಂದ ಅದರ ವಿಸ್ತಾರ ಹೆಚ್ಚಿದೆ. ಸಂಪೂರ್ಣವಾಗಿ ಕಿವಿರುಗಳನ್ನು ಕಳೆದುಕೊಂಡಿರುವ ಗ್ಯಾಸ್ಟ್ರೊಪೊಡಗಳಲ್ಲಿ ಆಸ್ಫ್ರಾಡಿಯಮ್ ಇಲ್ಲ. ಯಾಂಗ್‌ನ (1947) ಪ್ರಕಾರ ಆಸ್ಫ್ರಾಡಿಯಮ್ ಕಿವಿರಿನ ಮೇಲೆ ಹರಿಯುವ ನೀರಿನಲ್ಲಿರುವ ಗಸಿಯನ್ನು ಗೊತ್ತುಹಚ್ಚುವ ಕೆಲಸವನ್ನು ನಿರ್ವಹಿಸುತ್ತದೆ.

**ಜನನೇಂದ್ರಿಯಗಳು :** ಅನೇಕ ಗ್ಯಾಸ್ಟ್ರೊಪೊಡಗಳು ಭಿನ್ನಲಿಂಗಿಗಳು. ಇವುಗಳ ಜನನೇಂದ್ರಿಯ ಜೀರ್ಣಗ್ರಂಥಿಯ ಮುಂಭಾಗದಲ್ಲಿ ಅಂಗಸದ ನುಲಿಗೆಗಳೊಳಗೆ ಅಡಗಿರುತ್ತದೆ. ಇದರಿಂದ ಹೊರಡುವ ನಾಳ ಸರಳವಾಗಿರಬಹುದು. ಇಲ್ಲವೇ ಸಂಕೀರ್ಣವಾಗಿರಬಹುದು.




ಚಿತ್ರ 14. ಮೂರು ಬಗೆಯ ಗ್ಯಾಸ್ಟ್ರೊಪೊಡಗಳ ಜನನಾಂಗ ವ್ಯವಸ್ಥೆ A ಟ್ರೋಕಿಡ್, B ನ್ಯೂಸೆಲ, C ಅಪ್ಲೀಸಿಯ 1. ಗೊನ್ಯಾಡ್, ನೆಫ್ರೀಡಿಯಮ್, ಆಲ್ಬ್ಯುಮಿನ್ ಗ್ರಂಥಿ, 4. ಸೆಮಿನಲ್ ರಿಸೆಪ್ಟಕಲ್, 5. ಸಂಪುಟದ ಗ್ರಂಥಿ, 6. ಹೆಣ್ಣಿನ ಜನನದ್ವಾರ, 7. ಕಾಪ್ಯುಲೇಟರಿ ಬರ್ಸ, 8. ಯೋನಿ, 9. ಲೋಳೆ ಗ್ರಂಥಿ, 10. ವಾಸಡೆಫರೆನ್ಸ್

ಇದು ಬಲಗಡೆಯ ನೆಫ್ರೀಡಿಯಮಿನ ಜೊತೆಯಲ್ಲಿಯೇ ಬೆಳೆದುಬರುತ್ತದೆ. ಕ್ರಿಯಾಶೀಲವಾಗಿರುವ ಎರಡು ನೆಫ್ರೀಡಿಯಗಳನ್ನುಳ್ಳ ಆರ್ಕಿಗ್ಯಾಸ್ಟ್ರೊಪೊಡಗಳಲ್ಲಿ ಬಲಗಡೆಯ ನೆಫ್ರೀಡಿಯಮ್ ಶುಕ್ರಾಣುಗಳನ್ನು ಅಥವಾ ಅಂಡಗಳನ್ನು ಹೊರಸಾಗಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ಲಿಂಗಾಣುಗಳು ಜನನೇಂದ್ರಿಯದಿಂದ ಹೊರಡುವ ಒಂದು ಚಿಕ್ಕನಾಳದ ಮೂಲಕ ಮೂತ್ರಕೋಶದೊಳಕ್ಕೆ ಬಂದು ಅಲ್ಲಿಂದ ನೆಫ್ರೀಡಿಯಮ್ ರಂಧ್ರದ ಮೂಲಕ ಮ್ಯಾಂಟಲ್ ಕುಹರದೊಳಕ್ಕೆ ಬರುತ್ತವೆ. ಇದರಿಂದಾಗಿ ಜನನೇಂದ್ರಿಯ ನಾಳದಲ್ಲಿ ಜನನೇಂದ್ರಿಯಕ್ಕೆ ಸಂಬಂಧಿಸಿದ ಎರಡು ಭಾಗಗಳಿವೆ. ಇಂಥ ಜನನೇಂದ್ರಿಯ ವ್ಯವಸ್ಥೆಯುಳ್ಳ ಹೆಣ್ಣುಗಳಲ್ಲಿ ಅಂಡಾಶಯದಿಂದ ಹುಟ್ಟುವ ಅಂಡಗಳ ಸುತ್ತ ಜೆಲ್ಯಾಟನ್ನಿನ ಒಂದು ಕವಚವಿದೆ. ಏಕೆಂದರೆ ಜನನೇಂದ್ರಿಯ ನಾಳದಲ್ಲಿ ವಿಶಿಷ್ಟತೆಯಿಲ್ಲದಿರುವುದರಿಂದ ಅಂಡಗಳಿಗೆ ಈ ರೀತಿಯ ಕವಚ ಆವಶ್ಯಕ. ಈ ಜೀವಿಗಳಲ್ಲಿ ಆಂತರಿಕ ನಿಷೇಚನ ಕ್ರಿಯೆ ನಡೆಯುವುದಿಲ್ಲ. ಆದ್ದರಿಂದ ಅಂಡಗಳು ಮ್ಯಾಂಟಲ್ ಕುಹರದಿಂದ ನೀರಿಗೆ ಬರುತ್ತವೆ. ನೀರಿಗೆ ಬಂದ ಅಂಡಗಳು ಶುಕ್ರಾಣುಗಳಿಂದ ನಿಷೇಚನಗೊಳ್ಳುತ್ತವೆ. ಉಳಿದ ಗ್ಯಾಸ್ಟ್ರೊಪೊಡಗಳಲ್ಲಿ ಬಲಗಡೆಯ ನೆಫ್ರೀಡಿಯಮ್ ನಶಿಸಿಹೋಗಿದ್ದು ಅದರ ಸ್ವಲ್ಪ ಭಾಗ ಮಾತ್ರ ಜನನಾಂಗದ ನಾಳದೊಳಕ್ಕೆ ಸೇರಿದೆ. ಇವುಗಳಲ್ಲಿ ಜನನಾಂಗನಾಳ ಅತಿ ಉದ್ದವಾಗಿದೆ. ಇದಕ್ಕೆ ಕಾರಣ ಮ್ಯಾಂಟಲ್. ಈ ನಾಳದ ಬೆಳೆವಣಿಗೆಗೆ ಮ್ಯಾಂಟಲ್ ಕೂಡ ತನ್ನ ಸ್ವಲ್ಪ ಭಾಗವನ್ನು ದಾನ ಮಾಡಿದೆ. ಮ್ಯಾಂಟಲಿನಿಂದ ಬಂದಿರುವ ಭಾಗಕ್ಕೆ ಪೇಲಿಯಲ್ ಭಾಗ ಎಂದು ಹೆಸರು. ಇದು ಅಂಡದ ಪೊರೆಯನ್ನು ಉತ್ಪತ್ತಿಮಾಡುವ ಕೆಲಸವನ್ನು ನಿರ್ವಹಿಸುತ್ತದೆ. ಗಂಡಿನಲ್ಲಿ ಆಂತರಿಕ ನಿಷೇಚನ ಕ್ರಿಯೆಗೆ ಬೇಕಾದ ಶಿಶ್ನ ಇದೆ. ಇದು ದೇಹದ ಭಿತ್ತಿಯಿಂದ ಬಲಗಡೆಯ ಶಿರದ ಕರಬಳ್ಳಿಯ ಬಳಿ ಹುಟ್ಟಿಕೊಳ್ಳುತ್ತದೆ. ಪೇಲಿಯಲ್ ನಾಳದ ಭಾಗ ಶಿಲಕೆಗಳಿಂದ ಕೂಡಿದ ತೋಡಿನಂಥ ರಚನೆಯನ್ನು ಪಡೆದಿದ್ದು ಶಿಶ್ನದ ತುದಿಯಲ್ಲಿ ಹೊರತೆರೆಯುತ್ತದೆ. ಪೇಲಿಯಲ್ ನಾಳದ ಒಂದು ಭಾಗ ಪ್ರಾಸ್ಟೇಟ್ ಗ್ರಂಥಿಯಾಗಿ ಕೆಲಸ ಮಾಡುತ್ತದೆ.

ಹೆಣ್ಣಿನಲ್ಲಿ ಪೇಲಿಯಲ್ ನಾಳದ ಒಂದು ಭಾಗ ಆಲ್ಬ್ಯುಮಿನ್ ಗ್ರಂಥಿಯಾಗಿ ಮಾರ್ಪಟ್ಟಿದೆ. ಅಲ್ಲದೆ ಇದರ ಜೊತೆಗೆ ಒಂದು ದೊಡ್ಡ ಲೋಳೆ ಗ್ರಂಥಿ ಅಥವಾ ಸಂಪುಟ ಗ್ರಂಥಿಯೂ ಇದೆ. ಅಂಡಗಳ ಸುತ್ತ ಲೋಳೆಯಂಥ ಸಂಪುಟವನ್ನು ಉತ್ಪತ್ತಿ ಮಾಡುವುದು ಈ ಗ್ರಂಥಿಯ ಕೆಲಸ. ಪೇಲಿಯಲ್ ನಾಳದ ತುದಿಯಲ್ಲಿ ಸೆಮಿನಲ್ ರಿಸೆಪ್ಟಕಲ್ ಎಂಬ ಭಾಗವಿದೆ. ಗಂಡಿನಿಂದ ಬರುವ ಶುಕ್ರಾಣುಗಳನ್ನು ಇದು ಸಂಗ್ರಹಿಸುತ್ತದೆ. ಲಿಟ್ಟೊರೈನ, ಯೂರೊಸ್ಯಾಲ್ಪಿಂಕ್ಸ್, ಮ್ಯೂರೆಕ್ಸ್, ಬ್ಯೂಸಿಕಾನ್ ಮುಂತಾದವುಗಳಲ್ಲಿ ಶುಕ್ರಾಣುಗಳು ಸೆಮಿನಲ್ ರಿಸೆಪ್ಟಕಲಿಗೆ ಬರುವುದಿಲ್ಲ. ಬದಲಾಗಿ ಅಂಡಾಶಯನಾಳದ ತುದಿಯ ಭಾಗಕ್ಕೆ ಇವು ತಲುಪುತ್ತವೆ. ಈ ಭಾಗದಲ್ಲಿ ಕಾಪ್ಯುಲೇಟರಿ ಬರ್ಸ ಎಂಬ ರಚನೆ ಇದೆ. ಇಲ್ಲಿಂದ ಶುಕ್ರಾಣು ಸೆಮಿನಲ್ ರಿಸೆಪ್ಟಕಲಿಗೆ ಬರುತ್ತವೆ. ಅಂಡಗಳು ಇಲ್ಲಿಗೆ ಬಂದಾಗ ನಿಷೇಚನ ಕ್ರಿಯೆ ನಡೆಯುತ್ತದೆ.

ಕೆಲವು ಪ್ರೋಸೋಬ್ರ್ಯಾಂಕುಗಳು, ಎಲ್ಲ ಒಫಿಸ್ತೊಬ್ರ್ಯಾಂಕ್ ಹಾಗೂ ಪಲ್ಮನೇಟಗಳು ಉಭಯಲಿಂಗಿಗಳು. ಕ್ರೆಪಿಡ್ಯುಲ ಎಳೆಯ ವಯಸ್ಸಿನಲ್ಲಿ ಗಂಡಾಗಿಯೂ ವಯಸ್ಸಾದಂತೆ ಹೆಣ್ಣಾಗಿಯೂ ಇರುತ್ತದೆ. ಇದರಲ್ಲಿರುವ ಒಂದೇ ಒಂದು ಜನನೇಂದ್ರಿಯ ಅಂಡ ಮತ್ತು ಶುಕ್ರಾಣುಗಳೆರಡನ್ನೂ ಉತ್ಪಾದಿಸಬಲ್ಲದು.

ಕಡಲ ಮೊಲ ಮತ್ತು ಅಪ್ಲೀಸಿಯದಲ್ಲಿ ಉಭಯಲಿಂಗನಾಳವಿದೆ. ಇದರಲ್ಲಿ ಅಂಡಗಳು ಹಾಗೂ ಶುಕ್ರಾಣುಗಳು ಬರುವುದಕ್ಕೆ ಪ್ರತ್ಯೇಕ ಭಾಗಗಳಿವೆ. ಅಂಡಗಳು ಬರುವ ಭಾಗಕ್ಕೆ ಅಂಡಾಶಯ ನಾಳವೆಂದೂ ಶುಕ್ರಾಣುಗಳು ಬರುವ ಭಾಗಕ್ಕೆ ವಾಸಡೆಫರೆನ್ಸ್ ಎಂದೂ ಹೆಸರು. ಅಂಡಾಶಯ ನಾಳದ ಕೊನೆಯ ಭಾಗದಲ್ಲಿ ಯೋನಿದ್ವಾರವಿದೆ. ಇದಕ್ಕೂ ಸೆಮಿನಲ್ ರಿಸೆಪ್ಟಕಲಿಗೂ ಸಂಪರ್ಕವುಂಟು. ಶಿಶ್ನದಿಂದ ಶುಕ್ರಾಣುಗಳನ್ನು ನೇರವಾಗಿ ರಿಸೆಪ್ಟಕಲ್ ಪಡೆಯುತ್ತದೆ. ಈ ಪ್ರಾಣಿಯಲ್ಲಿ ಕಾಪ್ಯುಲೇಟರಿ ಬರ್ಸ ಇದೆಯಾದರೂ ಇದರ ನಿರ್ದಿಷ್ಟ ಕೆಲಸ ತಿಳಿಯದು.

ಪಲ್ಮನೇಟಗಳ ಜನನೇಂದ್ರಿಯಗಳು ಅಪ್ಲೀಸಿಯದ ಜನನೇಂದ್ರಿಯಗಳನ್ನೇ ಹೋಲುತ್ತವಾದರೂ ಇವುಗಳಲ್ಲಿ ಕೆಲವು ವ್ಯತ್ಯಾಸಗಳುಂಟು. ಜನನೇಂದ್ರಿಯ ನಾಳದಲ್ಲಿ ಅಂಡಗಳನ್ನು ಸಾಗಿಸುವ ಭಾಗದಲ್ಲಿ ಡಾರ್ಟ್ ಚೀಲವೆಂಬ ರಚನೆಯಿದೆ. ಇದರಲ್ಲಿ ಸುಣ್ಣದಿಂದಾದ ಸ್ಪಿಕ್ಯೂಲುಗಳು ಉತ್ಪತ್ತಿಯಾಗುತ್ತವೆ.

**ಭ್ರೂಣದ ಬೆಳೆವಣಿಗೆ:** ಕೆಳಮಟ್ಟದ ಪ್ರೋಸೋಬ್ರ್ಯಾಂಕುಗಳಲ್ಲಿ ಬಾಹ್ಯ ನಿಷೇಚನ ನಡೆಯುತ್ತದೆ. ಅಂಡಗಳು ಒಂಟಿಯಾಗಿರಬಹುದು ಅಥವಾ ಜೆಲ್ಯಾಟಿನ್‌ನಿಂದ ಆವೃತವಾದ ಕುಪ್ಪೆಗಳಂತೆ ಅಥವಾ ಪಟ್ಟಿಗಳಂತೆ ಇರಬಹುದು. ಉಳಿದ ಪ್ರೋಸೋಬ್ರ್ಯಾಂಕುಗಳಲ್ಲಿ, ಒಫಿಸ್ತೊಬ್ರ್ಯಾಂಕುಗಳಲ್ಲಿ, ಸಿಹಿನೀರಿನಲ್ಲಿ ವಾಸಿಸುವ ಪಲ್ಮನೇಟಗಳಲ್ಲಿ ವಿಶಿಷ್ಟರೀತಿಯ ಹಾಗೂ ಉಚ್ಚಮಟ್ಟದ ಅಂಡಪೊರೆಗಳು ಕಾಣಬರುತ್ತವೆ. ಲಿಟ್ಟೊರೈನದ ಅಂಡಗಳಲ್ಲಿ ಆಲ್ಬ್ಯುಮಿನ್ ಪದರವೂ ಒಂದು ಕವಚವೂ ಇದೆ. ಈ ರೀತಿಯ ಅಂಡಗಳು ಜೆಲ್ಯಾಟಿನ್ನಿನ ಕುಪ್ಪೆಯಂತೆ ಒಂದುಗೂಡಿರುತ್ತವೆ. ಸಿಹಿನೀರಿನಲ್ಲಿ ವಾಸಿಸುವ ಪಲ್ಮನೇಟಗಳ ಅಂಡಗಳ ಕವಚ ಜೆಲ್ಯಾಟಿನಿನಂತಿದ್ದರೆ ಭೂಚರ ಪಲ್ಮನೇಟಗಳ ಅಂಡಗಳ ಸುತ್ತ ಸುಣ್ಣಕಲ್ಲಿನ ಕವಚ ಇದೆ. ಇದು ಮೊಟ್ಟೆಯಿಂದ ನೀರು ಹೊರಹೋಗದಂತೆ ಕಾಪಾಡುತ್ತದೆ.

ಗ್ಯಾಸ್ಟ್ರೊಪೊಡಗಳ ಬೆಳೆವಣಿಗೆಯಲ್ಲಿ ಡಿಂಭಾವಸ್ಥೆಗಳಿವೆ. ಕೆಳದರ್ಜೆಯ ಆರ್ಕಿಗ್ಯಾಸ್ಟ್ರೊಪೊಡಗಳಲ್ಲಿ ಟ್ರೋಕೋಫೋರ್ ಡಿಂಭ ಇದೆ. ಆದರೆ ಉಳಿದವುಗಳಲ್ಲಿ ಈ ಅವಸ್ಥೆ ಮೊಟ್ಟೆಯೊಳಗೇ ಪೂರ್ಣಗೊಳ್ಳುತ್ತದೆ. ಕಡಲ ಗ್ಯಾಸ್ಟ್ರೊಪೊಡಗಳಲ್ಲಿ ಸ್ವತಂತ್ರವಾಗಿ ಈಜಬಲ್ಲ ವೆಲಿಜರ್ ಡಿಂಭ ಉಂಟು. ಇದು ಅತಿ ಕ್ಲಿಷ್ಟರೀತಿಯ ಡಿಂಭ. ಇದರಲ್ಲಿ ಅರ್ಧಚಂದ್ರಾಕೃತಿಯ ಎರಡು ಹಾಳೆಗಳುಳ್ಳ, ಶಿಲಕೆಗಳಿಂದ ಕೂಡಿದ ಮತ್ತು ಈಜಲು ಸಹಾಯಕವಾದ ವೀಲಮ್ ಎಂಬ ಅಂಗವಿದೆ. ಇದು ಟ್ರೋಕೋಫೋರ್ ಡಿಂಭದ ಪ್ರೋಟೋಟ್ರೋಕಿನ ಮುಂಚಾಚಿದ ರಚನೆಯಾಗಿ ಬೆಳೆದುಕೊಂಡಿದೆ. ಉಳಿದ ರಚನೆಗಳು ವೆಲಿಜರ್ ಡಿಂಭದ ಬೆಳೆವಣಿಗೆಯ ಹಂತದಲ್ಲಿ ನಾನಾ ಮಾರ್ಪಾಟುಗಳನ್ನು ತೋರುತ್ತವೆ. ಪಾದ, ಕಣ್ಣು, ಕರಬಳ್ಳಿಗಳು ಹುಟ್ಟಿಕೊಳ್ಳುತ್ತವೆ. ಟ್ರೋಕೋಫೋರ್ ಸ್ಥಿತಿಯಲ್ಲಿ ಹುಟ್ಟಿಬಂದ ಚಿಪ್ಪು ವೆಲಿಜರ್ ಹಂತದಲ್ಲಿ ಸುರುಳಿಯಂತೆ ಸುತ್ತಿಕೊಳ್ಳುತ್ತದೆ. ಇದಕ್ಕೆ ಕಾರಣ ಈ ಜೀವಿಯ ಅಸಮ ಬೆಳೆವಣಿಗೆ. ಬಾಯ ಒಳರಚನೆಗಳು, ಜಠರ ಹಾಗೂ ರಿಟ್ರ್ಯಾಕ್ಟರ್ ಸ್ನಾಯುಗಳು ಕ್ರಮೇಣ ಬೆಳೆದುಕೊಳ್ಳುತ್ತವೆ. ವೆಲಿಜರ್ ಹಂತದಲ್ಲಿ ನುಲಿಗೆ ಕ್ರಿಯೆ ಪ್ರಾರಂಭವಾಗುವುದರಿಂದ ಚಿಪ್ಪು ಹಾಗೂ ಅಂಗಸರಾಶಿಗಳು $180^0$ ಗಳಷ್ಟು ತಿರುಚಿಕೊಳ್ಳುತ್ತವೆ.

ನುಲಿಗೆ ಕೇವಲ ಕೆಲವೇ ನಿಮಿಷಗಳಲ್ಲಿ ಮುಗಿದುಹೋಗಬಹುದು (ಏಕ್ಮೀಯದಲ್ಲಿ ಈ ಕ್ರಿಯೆ ಕೇವಲ 3 ನಿಮಿಷಗಳಲ್ಲಿ ನಡೆಯುತ್ತದೆ) ಇಲ್ಲವೆ ಹಲವು ದಿವಸಗಳಲ್ಲಿ ಪೂರ್ಣವಾಗಬಹುದು (ಉದಾಹರಣೆಗೆ, ಪೋಮಾಟಿಯಾಸಿನಲ್ಲಿ 20 ದಿವಸಗಳು ಹಿಡಿಯುತ್ತವೆ). ಹ್ಯಾಲಿಯೋಟಿಸ್, ಪಟೆಲ ಮುಂತಾದವುಗಳಲ್ಲಿ ಇದು ಎರಡು ಹಂತಗಳಲ್ಲಿ

ನಡೆಯುತ್ತದೆ. ಮೊದಲನೆಯದು ಶೀಘ್ರಗತಿಯಲ್ಲೂ ಎರಡನೆಯದು ನಿಧಾನವಾಗಿಯೂ ನಡೆಯುತ್ತವೆ. ನುಲಿಗೆಯಿಂದಾಗಿ ಪಾದ ಹೊರಚಾಚಿಕೊಳ್ಳುತ್ತದೆ. ಈಗ ಡಿಂಭ ವೀಲಮಿನಿಂದ ಈಜಲು, ಪಾದದಿಂದ ತೆವಳಲು ಉಪಕ್ರಮಿಸುತ್ತದೆ. ಡಿಂಭ ಬೆಳೆದಂತೆ ವೀಲಮ್ ಕ್ಷೀಣವಾಗುತ್ತ ಬಂದು ಕೊನೆಗೆ ಮಾಯವಾಗುತ್ತದೆ. ಮರಿಯನ್ನೀ ಈಯುವ ಕೆಲವು ಗ್ಯಾಸ್ಟ್ರಪೊಡಗಳಲ್ಲಿ ಡಿಂಭಾವಸ್ಥೆಗಳು ತಾಯಿಯ ದೇಹದೊಳಗೇ ನಡೆಯುತ್ತವೆ. ಉದಾ: ಲಿಟ್ಟೊರೈನದ ಕೆಲವು ಪ್ರಭೇದಗಳು.




**ಚಿತ್ರ 15. ಕ್ರೆಪಿಡ್ಯುಲದ ವೆಲಿಜರ್ ಡಿಂಭ A ಪಾರ್ಶ್ವ ನೋಟ, B ಎದುರು ನೋಟ, 1. ಪೀಡಲ್ ನರಮುಡಿ, 2. ಪಾದ, 3. ಒಪರ್‌ಕ್ಯುಲಮ್, 4. ಸ್ಟ್ಯಾಟೋಸಿಸ್ಟ್, 5. ಜಠರ, 6. ಸ್ಟೈಲ್ ಚೀಲ, 7. ನೆಫ್ರೀಡಿಯಮ್, 8. ಕರುಳು, 9. ವೀಲಮ್, 10. ಕಣ್ಣು, 11. ನರಬಳ್ಳಿ, 12. ಚಿಪ್ಪು, 13. ಹೃದಯ**

**ಆರ್ಥಿಕ ಪ್ರಾಮುಖ್ಯ :** ಗ್ಯಾಸ್ಟ್ರಪೊಡಗಳು ಇತರ ಜೀವಿಗಳಿಗೆ ಆಹಾರವೆನಿಸಿವೆ. ಕ್ಯಾಲಿಫೋರ್ನಿಯದಲ್ಲಿ ಜನ ಹ್ಯಾಲಿಯೋಟಿಸನ್ನು ತಿನ್ನುತ್ತಾರೆ. ಯುರೋಪಿನಲ್ಲಿ ಹೆಲಿಕ್ಸ್ ಪೋಮೇಟಿಯ ಎಂಬ ಬಸವನಹುಳು ರಸಭಕ್ಷ್ಯವೆನಿಸಿದೆ. ಆದರೂ ಗ್ಯಾಸ್ಟ್ರಪೊಡಗಳಿಂದ ಮನುಷ್ಯನಿಗೆ ಸಾಕಷ್ಟು ಹಾನಿಯೂ ಉಂಟು. ಕೆಲವು ಬಸವನಹುಳುಗಳು ಅನೇಕ ಬಗೆಯ ರೋಗಗಳನ್ನು ಹರಡುವ ಮಧ್ಯವರ್ತಿ ಆತಿಥೇಯ ಜೀವಿಗಳಾಗಿವೆ. ಇನ್ನು ಕೆಲವು ಬಗೆಗಳು ಸಸ್ಯ ಪಿಡುಗುಗಳೆನಿಸಿಕೊಂಡಿವೆ.

**ವರ್ಗೀಕರಣ :** ಗ್ಯಾಸ್ಟ್ರಪೊಡ ವರ್ಗವನ್ನು ಕಿವಿರು ಮತ್ತು ನರಮಂಡಲದ ಲಕ್ಷಣಗಳ ಆಧಾರದ ಮೇಲೆ ಪ್ರೊಸೋಬ್ರ್ಯಾಂಕಿಯ, ಒಪಿಸ್ತೊಬ್ರ್ಯಾಂಕಿಯ ಮತ್ತು ಪಲ್ಮನೇಟ ಎಂಬ ಮೂರು ಉಪವರ್ಗಗಳನ್ನಾಗಿ ವಿಂಗಡಿಸಲಾಗಿದೆ.

**ಉಪವರ್ಗ I ಪ್ರೊಸೋಬ್ರ್ಯಾಂಕಿಯ (ಸ್ಟ್ರೆಪ್ಟನ್ಯೂರ) :** ಇದಕ್ಕೆ ಸೇರಿದ ಶಂಭುಕಗಳು ಸಿಹಿನೀರು ಹಾಗೂ ಸಮುದ್ರಗಳೆರಡರಲ್ಲಿಯೂ ವಾಸಿಸುತ್ತವೆ. ಇವುಗಳಲ್ಲಿ ಉಸಿರಾಡಲು ಕಿವಿರುಗಳಿವೆ. ಇವುಗಳ ಮ್ಯಾಂಟಲ್ ಕುಹರ ಹಾಗೂ ಅದರೊಳಗಿನ ಅಂಗಗಳು ದೇಹದ ಮುಂಭಾಗಕ್ಕೆ ಸೀಮಿತಗೊಂಡಿವೆ. ಈ ಉಪವರ್ಗದ ಜೀವಿಗಳಲ್ಲಿ ಚಿಪ್ಪು ಇದೆ. ಇದರಲ್ಲಿ ಆರ್ಕಿಗ್ಯಾಸ್ಟ್ರಪೊಡ, ಮಿಸೊಗ್ಯಾಸ್ಟ್ರಪೊಡ, ನಿಯೋಗ್ಯಾಸ್ಟ್ರಪೊಡಗಳೆಂಬ ಮೂರು ಗಣಗಳಿವೆ.

**ಗಣ 1 ಆರ್ಕಿಗ್ಯಾಸ್ಟ್ರಪೊಡ (ಆಸ್ಪಿಡೋಬ್ರ್ಯಾಂಕಿಯ) :** ಈ ಗಣದ ಜೀವಿಗಳು ಆದಿಮಸ್ಥಿತಿಯವು. ಇವುಗಳಲ್ಲಿ ಎರಡು ಕಿವಿರುಗಳು, ಎರಡು ಹೃತ್ಕರ್ಣಗಳು ಮತ್ತು ಎರಡು ಮೂತ್ರಕೋಶಗಳು ಇವೆ. ನರಮಂಡಲ ಕೇಂದ್ರೀಕೃತಗೊಂಡಿಲ್ಲ. ಚಿಪ್ಪು ನುಲಿಗೆಗೊಳಗಾಗಿದೆ. ಕೆಲವು ಜೀವಿಗಳಲ್ಲಿ ದ್ವಿತೀಯಕ ಸಮಪಾರ್ಶ್ವಸ್ಥಿತಿಯನ್ನು ಕಾಣಬಹುದು. ಚಿಪ್ಪಿನಲ್ಲಿ ರಂಧ್ರಗಳಿವೆ. ಉದಾಹರಣೆಗೆ ಸಿಸ್ಸುರೆಲ, ಹ್ಯಾಲಿಯೋಟಿಸ್, ಪಂಕ್ಟ್ಯುರೆಲ, ಡಯೊಡೋರ, ಪಟೆಲ, ನೆರೀಟ ಮುಂತಾದವು.

**ಗಣ 2 ಮೀಸೊಗ್ಯಾಸ್ಟ್ರಪೊಡ (ಪೆಕ್ಟಿನಿಬ್ರ್ಯಾಂಕಿಯ) :** ಈ ಗಣದ ಜೀವಿಗಳಲ್ಲಿ ಕೇವಲ ಒಂದು ಕಿವಿರು, ಒಂದು ಹೃತ್ಕರ್ಣ ಮತ್ತು ಒಂದು ಮೂತ್ರಕೋಶ ಇವೆ. ಬಲಭಾಗದ ಕಿವಿರು, ಹೃತ್ಕರ್ಣ ಮತ್ತು ಮೂತ್ರಕೋಶಗಳು ಮಾಯವಾಗಿವೆ. ಒಪರ್‌ಕ್ಯುಲಮ್ ಇರಬಹುದು. ಸೊಂಡಿಲು ಇದೆ. ಇವೆಲ್ಲ ಪ್ರಮುಖವಾಗಿ ಸಮುದ್ರ ಜೀವಿಗಳು. ಸಿಹಿನೀರಿನ ಜಾತಿಗಳು ಇಲ್ಲದಿಲ್ಲ. ಗ್ಯಾಸ್ಟ್ರಪೊಡ ವರ್ಗದಲ್ಲಿಯೇ ಈ ಗಣ ಅತಿ ದೊಡ್ಡದು. ಉದಾಹರಣೆಗೆ ಲಿಟ್ಟೊರೈನ, ಜಾಂತಿನ, ಕ್ರೆಪಿಡ್ಯುಲ, ಸ್ಟ್ರಾಂಬಸ್, ಲ್ಯಾಂಬಿಸ್, ಕೊರೆಯುವ ನಾಟಿಸಿಡುಗಳಾದ ನಾಟಿಕ, ಸೈನಮ್ ಮುಂತಾದವು. ಈಜುವ ಹೆಟರಾಪೊಡಗಳಾದ ಅಟ್ಲಾಂಟ, ಕ್ಯಾರಿನೇರಿಯ, ಜಂತು ಕಂಬಗಳಾದ ವರ್ಮಿಟಸ್ ಹಾಗೂ ಸಿಹಿನೀರಿನಲ್ಲಿ ಕಾಣಸಿಗುವ ವೈವಿಪ್ಯಾರಸ್, ಹೈಡ್ರೋಬಿಯ, ಗೋನಿಯೋಬೇಸಿಸ್ ಮುಂತಾದವು.

**ಗಣ 3 ನಿಯೋಗ್ಯಾಸ್ಟ್ರಪೊಡ (ಸ್ಟೀನೊಗ್ಲಾಸ) :** ಈ ಗಣದ ಜೀವಿಗಳಲ್ಲಿ ಮೀಸೊಗ್ಯಾಸ್ಟ್ರಪೊಡಗಳಲ್ಲಿಲ್ಲದ ಕೆಲವು ಗುಣಗಳನ್ನು ಕಾಣಬಹುದು. ಇವುಗಳಲ್ಲಿ ಆಸ್ಫ್ರಾಡಿಯಮ್ ಬೈಪೆಕ್ಟಿನೇಟ್ ಸ್ಥಿತಿಯಲ್ಲಿದೆ. ನರಮಂಡಲ ಕೇಂದ್ರೀಕೃತವಾಗಿದೆ. ಚಿಪ್ಪಿನಲ್ಲಿ ಸಾಮಾನ್ಯವಾಗಿ ಸೈಫನ್ ಕಾಲುವೆ ಇದೆ. ಮಾಂಸಾಹಾರಿಗಳಲ್ಲಿ ಸೊಂಡಿಲು ಇದೆ. ರ್‍ಯಾಡ್ಯುಲದಲ್ಲಿ ಎರಡು ಅಥವಾ ಮೂರು ಬಲು ಅಗಲವಾದ ಹಲ್ಲುಗಳಿರುವ ಸಾಲಿದೆ. ಕೆಲವು ಜೀವಿಗಳಲ್ಲಿ ವಿಷಗ್ರಂಥಿಗಳಿವೆ. ಸಾಮಾನ್ಯವಾಗಿ ಎಲ್ಲ ಜೀವಿಗಳಲ್ಲೂ ಒಪರ್‌ಕ್ಯುಲಮ್ ಇದೆ. ಇದಕ್ಕೆ ಸೇರಿದ ಎಲ್ಲ ಪ್ರಭೇದಗಳೂ ಕಡಲಜೀವಿಗಳು. ಉದಾಹರಣೆಗೆ, ಕೊರೆಯುವ ಮ್ಯೂರಿಸಿಡುಗಳಾದ ಮ್ಯೂರೆಕ್ಸ್, ಯೂರೊಸ್ಯಾಲ್‌ಪಿಂಕ್ಸ್ ಮತ್ತು ಪರಪ್ಯುರ, ಬ್ಯೂಸಿಕಾನ್, ಒಳಿವ, ಮಿಟ್ರ, ಕೋನಸ್ ಮುಂತಾದವು.

**ಉಪವರ್ಗ II ಒಫಿಸ್ತೊಬ್ರ್ಯಾಂಕಿಯ (ಯೂಥಿನ್ಯೂರ) :** ಇವುಗಳಲ್ಲಿ ಒಂದು ಹೃತ್ಕರ್ಣ ಹಾಗೂ ಮೂತ್ರಕೋಶ ಇವೆ. ಈ ಉಪವರ್ಗದ ಜೀವಿಗಳಲ್ಲಿ ವಿನುಲಿಗೆ ಕ್ರಿಯೆ ನಾನಾ ಹಂತದಲ್ಲಿರುವುದು ಕಂಡುಬರುತ್ತದೆ. ಜೊತೆಗೆ ಚಿಪ್ಪಿನ ಹಾಗೂ ಮ್ಯಾಂಟಲ್ ಕುಹರದ ಕ್ಷೀಣತೆಗಳೂ ಈ ಜೀವಿಗಳಲ್ಲಿ ನಾನಾ ಹಂತಗಳಲ್ಲಿ ಕಂಡುಬರುತ್ತವೆ. ಎಲ್ಲ ಪ್ರಭೇದಗಳೂ ಸಮುದ್ರಜೀವಿಗಳು. ಇದರಲ್ಲಿ ಟೆಕ್ಟಿಬ್ರ್ಯಾಂಕಿಯ, ಟೀರಾಪೊಡ, ನ್ಯೂಡಿಬ್ರ್ಯಾಂಕಿಯಗಳೆಂಬ ಮೂರು ಗಣಗಳಿವೆ.

**ಗಣ 1 ಟೆಕ್ಟಿಬ್ರ್ಯಾಂಕಿಯ :** ಚಿಪ್ಪು ಇದೆ. ಇದು ಕ್ಷೀಣಿಸಿರಬಹುದು ಮತ್ತು ಇದರ ಮೇಲೆ ಮ್ಯಾಂಟಲ್ ಬೆಳೆದಿದ್ದು ಮುಚ್ಚಿಕೊಂಡಿರಬಹುದು. ನಿಜವಾದ ಒಂದೇ ಕಿವಿರಿದೆ. ಕೆಲವು ಜೀವಿಗಳಲ್ಲಿ ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ಕಾಣಬಹುದು. ಉದಾಹರಣೆಗೆ, ಬುಲ, ಅಪ್ಲೀಸಿಯ, ಪರತಂತ್ರ ಜೀವಿಗಳಾದ ಪಿರಮಿಡೆಲ, ಸ್ಟೈಲಿಫೆರ ಮುಂತಾದವು.

**ಗಣ 2 ಟೀರಾಪೊಡ :** ಈ ಗಣದ ಜೀವಿಗಳನ್ನು ಕಡಲ ಚಿಟ್ಟೆಗಳೆಂದು ಕರೆಯುತ್ತಾರೆ. ಚಿಪ್ಪು ಇರಬಹುದು ಅಥವಾ ಇಲ್ಲದಿರಬಹುದು. ಪಾದದ ಮುಂದಿನ ಭಾಗ ಬಹಳ ಅಗಲವಾಗಿದ್ದು ಈಜುರೆಕ್ಕೆಗಳಾಗಿ ಮಾರ್ಪಟ್ಟಿದೆ. ಈ ಗಣದ ಉಪಗಣವಾದ ಥೀಕೊಸೊಮ್ಯಾಟದ ಪ್ರಭೇದಗಳಲ್ಲಿ ಚಿಪ್ಪಿಲ್ಲ. ಉದಾ : ಸ್ಪೈರಟಿಲ, ಕ್ಲಿಯೋ, ಲಿಮಾಸೈನ ಇತ್ಯಾದಿ. ಉಪಗಣ ಜಿಮ್ನೊಸೊಮ್ಯಾಟದ ಜೀವಿಗಳಲ್ಲಿ ಚಿಪ್ಪು ಇಲ್ಲ. ಉದಾ : ನ್ಯೂಮೊಡರ್ಮ, ಕ್ಲೈಯೊಪ್ಸಿಸ್ ಮತ್ತು ನೋಟೊಬ್ರ್ಯಾಂಕಿಯ.

**ಗಣ 3 ನ್ಯೂಡಿಬ್ರ್ಯಾಂಕಿಯ :** ಇವನ್ನು ಕಡಲಗೊಂಡೆ ಹುಳುಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಚಿಪ್ಪು ಇಲ್ಲ. ದೇಹ ದ್ವಿತೀಯಕ ಸಮಪಾರ್ಶ್ವ ಸ್ಥಿತಿಯನ್ನು ಗಳಿಸಿಕೊಂಡಿದೆ. ಮ್ಯಾಂಟಲ್ ಕುಹರವಾಗಲೀ ನಿಜವಾದ ಕಿವಿರುಗಳಾಗಲೀ ಇಲ್ಲ. ಉಸಿರಾಟ ದೇಹದ ಭಿತ್ತಿಯ ಸಹಾಯದಿಂದ ನಡೆಯುತ್ತದೆ. ಗುದದ್ವಾರದ ಸುತ್ತಲೂ ಸೆರೇಟಗಳು (ದ್ವಿತೀಯಕ ಕಿವಿರುಗಳು) ಬೆಳೆದಿವೆ. ಜೀರ್ಣಗ್ರಂಥಿ ವಿಪುಲವಾಗಿ ಕವಲೊಡೆದಿದ್ದು ದೇಹದ ಅವಕಾಶದೊಳಗೆಲ್ಲ ತುಂಬಿಕೊಂಡಿದೆ. ನರಮಂಡಲ ಕೇಂದ್ರೀಕೃತಗೊಂಡಿದೆ. ಎರಡನೆಯ ಜೊತೆ ಕರಬಳ್ಳಿಗಳು ರೈನೋಫೋರುಗಳಾಗಿ ಮಾರ್ಪಾಡುಗೊಂಡಿವೆ. ಉದಾ : ಡೋರಿಸ್, ಡೆಂಡ್ರೊನೋಟಸ್, ಎಲೀಸಿಯ ಮತ್ತು ಇಯೋಲಿಡಿಯ.

**ಉಪವರ್ಗ III ಪಲ್ಮನೇಟ :** ಇವುಗಳಲ್ಲಿ ಒಂದು ಹೃತ್ಕರ್ಣ ಹಾಗೂ ಒಂದು ಮೂತ್ರಕೋಶ ಇವೆ. ಕಿವಿರುಗಳು ಇಲ್ಲ. ಮ್ಯಾಂಟಲ್ ಕುಹರದ ಮುಂಭಾಗ ಅನೇಕ

ರಕ್ತನಾಳಗಳನ್ನೊಳಗೊಂಡಿದ್ದು ಗಾಳಿಯ ಉಸಿರಾಟಕ್ಕೂ ದ್ವಿತೀಯಕವಾಗಿ ನೀರಿನ ಉಸಿರಾಟಕ್ಕೂ ಮಾರ್ಪಾಟುಗೊಂಡಿದೆ. ನರಮಂಡಲ ಸಮಪಾರ್ಶ್ವ ಸ್ಥಿತಿಯಲ್ಲಿದ್ದು ಕೇಂದ್ರೀಕೃತಗೊಂಡಿದೆ. ಸಾಮಾನ್ಯವಾಗಿ ಚಿಪ್ಪು ಇರುತ್ತದೆ. ಒಪರ್‍ಕ್ಯುಲಮ್ ಇಲ್ಲ. ಇವು ಉಭಯಲಿಂಗಿಗಳು. ಬೆಳವಣಿಗೆ ನೇರ ಬಗೆಯದು. ಈ ಉಪವರ್ಗದ ಜೀವಿಗಳು ಭೂಮಿಯ ಮೇಲೂ ಸಿಹಿನೀರಿನಲ್ಲೂ ವಾಸಿಸುತ್ತವೆ. ಕೆಲವು ಮಾತ್ರ ಕಡಲಜೀವಿಗಳು. ಈ ಉಪವರ್ಗದಲ್ಲಿ ಸ್ಟೈಲೋಮ್ಯಾಟೊಫೋರ ಹಾಗೂ ಬೇಸೋಮ್ಯಾಟೊಫೋರ ಎಂಬ ಎರಡು ಗಣಗಳಿವೆ.

**ಗಣ 1 ಸ್ಟೈಲೋಮ್ಯಾಟೊಫೋರ :** ಇದಕ್ಕೆ ಸೇರಿದ ಜೀವಿಗಳಲ್ಲಿ ಎರಡು ಜೊತೆ ಕರಬಳ್ಳಿಗಳಿವೆ. ಕಣ್ಣುಗಳು ಹಿಂದಿನ ಜೊತೆ ಕರಬಳ್ಳಿಗಳ ತುದಿಯಲ್ಲಿವೆ. ಇವೆಲ್ಲವೂ ಭೂವಾಸಿಗಳು. ಹೆಲಿಕ್ಸ್, ಪಾಲಿಗೈರ, ಜೆನೆಲ, ಲೈಮ್ಯಾಕ್ಸ್, ರೆಟಿನೆಲ, ಪ್ಯೂಪ ಮುಂತಾದವು ಇದರ ಉದಾಹರಣೆಗಳು.

**ಗಣ 2 ಬೇಸೋಮ್ಯಾಟೊಫೋರ** ಈ ಗಣದ ಜೀವಿಗಳಲ್ಲಿ ಒಂದೇ ಒಂದು ಜೊತೆ ಕರಬಳ್ಳಿಗಳಿವೆ. ಕಣ್ಣುಗಳು ಕರಬಳ್ಳಿಗಳ ಬುಡದಲ್ಲಿವೆ. ಈ ಗಣದ ಎಲ್ಲ ಜೀವಿಗಳೂ ಸಿಹಿನೀರಿನಲ್ಲಿ ವಾಸಿಸುವಂಥವು. ನೇರವಾಗಿ ಗಾಳಿಯನ್ನೇ ಉಸಿರಾಡುತ್ತವಾದರೂ ಕೆಲವು ಬಗೆಯವು ನೀರನ್ನು ಮ್ಯಾಂಟಲ್ ಕುಹರದೊಳಕ್ಕೆ ತೆಗೆದುಕೊಂಡು ಉಸಿರಾಡುವುದುಂಟು. ಕೆಲವು ಜೀವಿಗಳಲ್ಲಿ ದ್ವಿತೀಯಕ ಕಿವಿರುಗಳಿವೆ. ಉದಾ : ಲಿಮ್ನೀಯ, ಪ್ಲನೋರಬಿಸ್, ಫೈಸ, ಆಂಕೈಲಸ್ ಮುಂತಾದವು. (ಎಲ್.ಎಸ್.ಜಿ.)

**ಗ್ಯಾಸ್ಟ್ರೋಟ್ರೈಕ :** ಆಸ್ಕೆಲ್‌ಮಿಂಥೀಸ್ ವಿಭಾಗಕ್ಕೆ ಸೇರಿದ ಒಂದು ವರ್ಗ. ಇದರಲ್ಲಿ ಸುಮಾರು 200 ಪ್ರಭೇದಗಳಿವೆ. ಇವೆಲ್ಲವೂ ಸೂಕ್ಷ್ಮ ಗಾತ್ರದ ಅಕಶೇರುಕಗಳು. ಸಿಹಿನೀರು ಮತ್ತು ಉಪ್ಪು ನೀರಿನಲ್ಲಿ ಜೀವಿಸುತ್ತವೆ. ದೇಹ ನೀಳಾಕಾರದ್ದು. ಇದರಲ್ಲಿ ವಲಯವಿಭಜನೆಯಿಲ್ಲ. ದೇಹದ ಹಿಂಭಾಗದಲ್ಲಿ ಇಬ್ಭಾಗವಾದ ಬಾಲವಿದೆ. ಬಾಲದಲ್ಲಿರುವ ಗ್ರಂಥಿಗಳು ಸ್ರವಿಸುವ ದ್ರವದ ಸಹಾಯದಿಂದ ಈ ಪ್ರಾಣಿಗಳು ಆಸರೆಗಳಿಗೆ ಅಂಟುತ್ತವೆ. ದೇಹದ ಕೆಳಭಾಗದಲ್ಲಿ ನೀಳವಾದ ಶಿಲಕೆಗಳ ಪಟ್ಟೆಗಳಿವೆ. ಇವು ಪ್ರಾಣಿಗಳ ಚಲನೆಗೆ ನೆರವಾಗುತ್ತವೆ. ದೇಹದ ಮೇಲ್ಭಾಗದ ಪಾರದರ್ಶಕ ಕ್ಯೂಟಿಕಲ್ ಪೊರೆಯ ಮೇಲೆ ಅನೇಕ ಬಿರುಗೂದಲುಗಳಿವೆ. ದೇಹಾಂತರಾವಕಾಶ ಮಿಥ್ಯಾಸ್ವರೂಪದ್ದು. ದೇಹದ ಮುಂದಿನ ತುದಿಯಲ್ಲಿ ಬಾಯಿದೆ. ಇದರ ಸುತ್ತ ಸೂಕ್ಷ್ಮವಾದ ಮತ್ತು ಸಂವೇದನಶಕ್ತಿಯುಳ್ಳ ಕೂದಲಿನಂಥ ರಚನೆಗಳಿವೆ. ನೀರಿನಲ್ಲಿ ಬೆಳೆಯುವ ಸೂಕ್ಷ್ಮಜೀವಿಗಳೇ ಇವುಗಳ ಆಹಾರ. ಉಪ್ಪುನೀರಿನಲ್ಲಿ ವಾಸಿಸುವ ಪ್ರಭೇದಗಳು ದ್ವಿಲಿಂಗಿಗಳು. ಆದರೆ ಸಿಹಿನೀರುವಾಸಿಗಳು ಏಕಲಿಂಗಿಗಳು ಹಾಗೂ ಇವುಗಳಲ್ಲಿ ಹೆಣ್ಣುಗಳು ಮಾತ್ರ ಕಂಡುಬರುತ್ತವೆ. ಇದರಿಂದ ಇವುಗಳಲ್ಲಿ ಪಿತೃರಹಿತ ಪ್ರಜನನಕ್ರಿಯೆ ಮಾತ್ರ ನಡೆಯುತ್ತವೆ. ಈ ಗುಂಪಿನ ಪ್ರಾಣಿಗಳಲ್ಲಿನ ಮೊಟ್ಟೆಗಳ ಹೊರಕವಚ ಗಟ್ಟಿಯಾಗಿದ್ದು ಇತರ ವಸ್ತುಗಳಿಗೆ ಅಂಟಿಕೊಳ್ಳಲು ಸಹಾಯಕವಾಗುವ ರಚನೆಗಳನ್ನು ಪಡೆದಿವೆ. ಇವುಗಳ ಜೀವನಚರಿತ್ರೆಯಲ್ಲಿ ರೂಪಪರಿವರ್ತನೆಯಿಲ್ಲ.

ಗ್ಯಾಸ್ಟ್ರೋಟ್ರೈಕದಲ್ಲಿ ಮ್ಯಾಕ್ರೊಡಸಿಯಾಯ್ಡಿಯ ಮತ್ತು ಕೀಟೊನಾಯ್ಡಿಯ ಎಂಬ ಎರಡು ಉಪವರ್ಗಗಳಿವೆ. ಮ್ಯಾಕ್ರೊಡಸಿಸ್ ಮತ್ತು ಕೆಫಲೊಡಸಿಸ್ ಮೊದಲನೆಯ ಉಪವರ್ಗಕ್ಕೆ ಉದಾಹರಣೆಗಳಾದರೆ ಕೀಟೋನೋಟಸ್ ಮತ್ತು ನಿಯೊಡಸಿಸ್ ಎರಡನೆಯ ಉಪವರ್ಗಕ್ಕೆ ಉದಾಹರಣೆಗಳು. (ಪಿ.ಎಸ್.ಆರ್.)

**ಗ್ರಂಥ್ ಸಾಹೆಬ್ :** ಸಿಕ್ಖರ ಪೂಜ್ಯ ಧರ್ಮಗ್ರಂಥ : ಗ್ರಂಥರಾಜ ಎಂದು ಇದರ ಅರ್ಥ. ಸಿಖ್ ಧರ್ಮದ ಪ್ರತಿಷ್ಠಾಪಕ ಗುರು ನಾನಕ್ ಒಪ್ಪಿಕೊಂಡ ಮತ್ತು ರಚಿಸಿದ ಭಕ್ತಿಗೀತಗಳನ್ನೂ ಅವನ ಅನಂತರ ಬಂದ ಅಂಗದ ದೇವ, ಅಮರದಾಸ ರಾಮದಾಸ, ಅರ್ಜನ, ತೇಗ್‌ಬಹದ್ದೂರ್ ಗುರುಗಳು ರಚಿಸಿದ ಗೀತಗಳು ಮತ್ತು ಶ್ಲೋಕಗಳನ್ನೂ ಹತ್ತನೆಯ ಗುರುವಾದ ಗುರು ಗೋಬಿಂದಸಿಂಹ ರಚಿಸಿದ ಒಂದು ದ್ವಿಪದಿಯನ್ನೂ ಗುರುಗಳ ಶುಶ್ರೂಷೆಯಲ್ಲಿ ತೊಡಗಿದ್ದು ಅವರನ್ನು ಮೆಚ್ಚಿದ ಶಿಷ್ಯರು ಬರೆದ ಸ್ತೋತ್ರಗಳನ್ನೂ ಈ ಗ್ರಂಥ ಒಳಗೊಂಡಿದೆ. ಗುರುಗಳ ಗೀತಗಳನ್ನು ಅವರವರ ಹೆಸರಿನ ಕೆಳಗೆ ಒಂದು ಕಡೆ ಸೇರಿಸಿಲ್ಲ. ಗೀತಗಳು ಮೂವತ್ತೊಂದು ರಾಗಗಳಲ್ಲಿ ಇವೆ ; ಅವನ್ನು ರಾಗಗಳ ಪ್ರಕಾರ ವಿಭಾಗ ಮಾಡಿದೆ. ಗ್ರಂಥದಲ್ಲಿ ನಾನಕ್ ಗುರುವಿನವು 974, ಅಂಗದದೇವನವು 62, ಅಮರದಾಸನವು 907, ರಾಮದಾಸನವು 679, ಅರ್ಜನದೇವನವು 2218, ಗುರು ತೇಗ್‌ಬಹದ್ದೂರನವು 115 ಗೀತಗಳಿವೆ. ಅಲ್ಲದೆ ಪೂರ್ವದ ಭಕ್ತರಲ್ಲಿ ಕಬೀರನ ಹಾಡು 541, ಷೇಕ್ ಫರೀದ್ ಎಂಬ ಮುಸ್ಲಿಂ ಸಂತನವು 138, ಭಕ್ತ ರವಿದಾಸನವು 41, ರಾಮಾನಂದನದು 1, ಪರಮಾನಂದನದು 1, ಸಾಧನ, ಪೀಪ, ಸೇನ, ಭಿಕನ, ಜಯದೇವ, ಬೇಲಿ – ಇವರವು ಒಂದೆರಡು, ಧನ್ನ, ತ್ರಿಲೋಚನ ಇವರವು ನಾಲ್ಕು ನಾಲ್ಕು, ನಾಮದೇವನವು ಕೆಲವು ಸೇರಿವೆ. ಅಲ್ಲದೆ ನಾನಕ್ ಗುರುವಿಗೆ ಭಜನೆಯಲ್ಲಿ ಕಿನ್ನರಿ ಬಾರಿಸಿದ ಮರ್ದನ ರಚಿಸಿದವು 3, ಗುರು ಅಂಗದದೇವ ಕೀರ್ತನೆಗಳಲ್ಲಿ ನೇಮಿಸಿಕೊಳ್ಳುತ್ತಿದ್ದ ಪಟ್ಟ, ಬಲವಂದ ಗಾಯಕ ವೃತ್ತಿಯ ಜೊತೆಗಾರರವು 8, ಗುರು ಅಮರದಾಸನ ಮರಿಮಗ ಸುಂದರನದು 1, ಸೂರದಾಸನ ಮರಿಮಗ ಪುರಂದರನದು 1, ಸೂರದಾಸನವು 2, ವರದಿ, ಕಲಷಾ ಮತ್ತು ಅವನ ಜೊತೆಯ ಇನ್ನು ಹತ್ತುಮಂದಿ ಗಾಯಕರ 122, ಜಲಾಪ್ ಭಿಕ್ಕ, ಪಾಲ್ಹ, ಭಾಲ, ನಲ್ಹ, ಜ್ಞಾನಿ, ಬಲ, ಮಥುರ ಕಿರಾತ, ಹರವಂಶ ಎಂಬವರವು ಕೆಲವು ಇವೆ.

ಅಮೃತಸರದ ಸ್ವರ್ಣಮಂದಿರದಲ್ಲಿ ಪವಿತ್ರಗ್ರಂಥದ ಪಠನ

ಗೀತಗಳನ್ನು ಪೇರಿಸಿರುವ ಶೀರ್ಷಿಕೆಯ ರಾಗಗಳು ಇವು ; ಶ್ರೀರಾಗ, ಮಜ್ಝ್, ಗೌರೀ, ಅಸಾ, ಗೂಜರಿ, ದೇವಗಾಂಧಾರಿ, ಬಿಹಾಗರ, ವಧಂಸ್, ಸೋರತ್, ಧನಾಸರಿ, ಜಯತ್‌ಸರಿ, ತೋಡಿ, ಬೈರಾಗಿ, ತಿಲಾಂಗ್, ಸೂಹಿ, ಬಿಲಾವರ್, ಗೌಂಡ್, ರಾಮಕಲಿ, ನಟ್, ಮಾಳಿಗೌರ, ಮಾರು, ತುಖಾರಿ, ಕೇದಾರ, ಭೈರೋ, ಬಸಂತ್, ಸಾರಂಗ್, ಮಲಾರ್, ಕಾನ್ರ, ಕಲ್ಯಾಣ್, ಪ್ರಭಾತಿ, ಜೈಜಾವಂತಿ.

ಮೊದಲಲ್ಲಿ ಗುರುಗಳ ಗೀತಗಳು, ಆಮೇಲೆ ಭಕ್ತರ ಗೀತಗಳು ಬರುತ್ತವೆ. ಈ ಗೀತಗಳ ಭಾಷೆ ಪ್ರಾಚೀನ ಪಂಜಾಬಿ. ಇವುಗಳ ಪದಗಳು, ಪದಪ್ರಯೋಗ, ಅವುಗಳ ರಚನೆಯ ದೇಶಕಾಲದಲ್ಲಿ ಬಳಕೆಯಲ್ಲಿದ್ದವು. ಇವುಗಳ ವ್ಯಾಕರಣ ಬಳಕೆಯ ಭಾಷೆಯದು, ಗ್ರಂಥಸ್ಥ ಭಾಷೆಯದಲ್ಲ. ಹೀಗಾಗಿ ಅನೇಕ ವೇಳೆ ಮಾತುಗಳ ಅರ್ಥ ಏನು ಎಂದು ತಿಳಿಯಲು ಸಂಪ್ರದಾಯದ ಸಹಾಯ ತೀರ ಅವಶ್ಯವಾಗುತ್ತದೆ. ಸಂಪ್ರದಾಯದಂತೆ ಅರ್ಥ ಇದು ಎಂದು ಹೇಳುವ ಜನರನ್ನು ಸಿಕ್ಖ ಸಮಾಜ ಜ್ಞಾನಿ ಎಂದು ಕರೆಯುತ್ತಾರೆ. ಸಿಕ್ಖ ಮತದಲ್ಲಿ ಗುರು ನಾನಕ್ ಮೊದಲಾಗಿ ಗುರುಗೋಬಿಂದಸಿಂಹನ ವರೆಗಿನ ಹತ್ತು ಜನ ಗುರುಗಳು ಒಂದೇ ಗುರುವ್ಯಕ್ತಿ ಎಂಬ ಭಾವನೆ ಇದೆ. ಆದಿ ಗುರುವಿನ ತೇಜಸ್ಸು ಅವನಿಂದ ಎರಡನೆಯ ಗುರುವಿಗೆ, ಆತನಿಂದ ಮೂರನೆಯವನಿಗೆ, ಹಾಗೆಯೇ ಒಂಬತ್ತನೆಯ ಗುರುವಿನಿಂದ ಹತ್ತನೆಯವನಿಗೆ ಬಂದಿತೆನ್ನುವುದು ಇವರ ನಂಬಿಕೆ. ಹತ್ತನೆಯ ಗುರುಗೋಬಿಂದಸಿಂಹ ತನ್ನ ಅನಂತರ ಗುರುಗಳಿಲ್ಲ ಎಂದು ಹೇಳಿ, ಇನ್ನು ಮುಂದೆ ಶಿಷ್ಯರಿಗೆ ಗ್ರಂಥ್ ಸಾಹೆಬ್ ಗುರು ಎಂದು ನಿಯಮಿಸಿದ. ಹೀಗೆ ಈ ಗ್ರಂಥ ಸಿಕ್ಖ ಜನರಿಗೆ ಗುರುಪರಂಪರೆಯ ಮೂರ್ತಿಯಾಗಿ ನಿಂತಿದೆ. ಇದನ್ನು ಯಾವಾಗಲೂ ರೇಷ್ಮೆಯ ಕವಚದಲ್ಲಿ ಇಟ್ಟಿರುತ್ತಾರೆ ; ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯಬೇಕಾದರೆ ಒಂದು ಪೀಠದ ಮೇಲೆ ಏರಿಸಿ ಶುಚಿಯಾದ ಜನ ಎತ್ತಿ ತರುತ್ತಾರೆ.

ಇದರಲ್ಲಿ ಕೆಲವು ಗೀತಗಳು ಹಲವು ಸಲ ಬರುವುದುಂಟು. ರಾತ್ರಿ ಮಗ ಹುಟ್ಟಿದನೆಂದು ಸಂತೋಷಪಟ್ಟ ವ್ಯಾಪಾರಿಯೊಬ್ಬ ಬೆಳಗಾದಾಗ ಆ ಮಗು ಸತ್ತಿತು ಎಂದು ಅಳುತ್ತಿದ್ದ ಎಂದು ಹೇಳಿ ಲೋಕದ ಸುಖವನ್ನು ನೆಚ್ಚಬೇಡ ಎಂದು ಎಚ್ಚರ ನುಡಿಯುವ ಗೀತ– ಸರಿಸುಮಾರು ಅದೇ ಮಾತುಗಳಲ್ಲಿ ನಾಲ್ಕು ಸಲ ಬಂದಿದೆ. ಈ ನಾಲ್ಕು ಪಾಠಗಳಲ್ಲಿ ಎರಡು ನಾನಕ್ ಗುರುವಿನವು, ಒಂದು ರಾಮದಾಸ ಗುರುವಿನದು, ಒಂದು ಗುರು ಅರ್ಜನದೇವನದು.

ಗ್ರಂಥ್ ಸಾಹೆಬ್ ಸಿಕ್ಖ ಜನರ ಪೂಜೆಯ ವಸ್ತುವಾಗಿದೆ. ಅದರ ಪ್ರತಿಯನ್ನಿರಿಸಿ ದೇವರ ಪೂಜೆ ನಡೆಸಿ ಪ್ರಯಾಣಿಕರಿಗೆ ತಂಗಲು ಸ್ಥಳ ಒದಗಿಸಿ, ಮಕ್ಕಳಿಗೆ ಧರ್ಮಬೋಧೆ ಮಾಡುವ ಮಂದಿರಗಳು ಉಂಟು. ಇವನ್ನು ಈ ಮತದಲ್ಲಿ ಧರ್ಮಶಾಲೆ ಎಂದು ಕರೆಯುತ್ತಾರೆ **(ನೋಡಿ–ಗುರುದ್ವಾರ)**.

ಮೊದಲಲ್ಲಿ ಈ ಗ್ರಂಥ ನಾಗರೀಲಿಪಿಯಲ್ಲಿತ್ತು. ನಾನಕ್ ಗುರುವಿನ ನುಡಿ ಅದಕ್ಕೇ ಮೀಸಲಾದ ಒಂದು ಲಿಪಿಯಲ್ಲಿರುವುದು ಯೋಗ್ಯ ಎಂದು ಭಾವಿಸಿ ಅಂಗದದೇವ ಅದನ್ನು ಮಾರ್ಪಡಿಸಿ ಪಂಜಾಬೀ ವರ್ಣಮಾಲೆಯೊಂದನ್ನು ಮಾಡಿದ. ಗುರುಮುಖದಿಂದ ಬಂದ ಮಾತನ್ನು ಬರೆಯುವ ಲಿಪಿ ಎಂಬ ಕಾರಣದಿಂದ ಅದನ್ನು ಗುರುಮುಖಿ **(ನೋಡಿ)** ಎಂದು ಕರೆದ. ಈ ವರ್ಣಮಾಲೆಯಲ್ಲಿ 35 ಅಕ್ಷರ ಇವೆ. ಕೆಲವು ಅಕ್ಷರ ನಾಗರಿ ಅಕ್ಷರದಂತೆಯೇ ಕಾಣುತ್ತವೆ. ಆದರೆ ಅವುಗಳ ಉಚ್ಚಾರ ಬೇರೆ. ಗುರುಮುಖಿಯ ಸ, ಮ, ವ, ಧ, ನಾಗರಿಯ ಮ, ಭ, ದ, ಪ.

ಗ್ರಂಥ್ ಸಾಹೆಬ್ ಕೃತಿ ಸಂಗ್ರಹವನ್ನು ಈಗಿನ ರೂಪಕ್ಕೆ ತಂದವ ಗುರು ಅರ್ಜನದೇವ. ಗುರುದಾಸ್ ಎಂಬ ಶಿಷ್ಯನನ್ನು ಕರೆದು ಗೀತೆಗಳನ್ನೆಲ್ಲ ಹೇಳಿ ಅವನ್ನು ಅವನ ಕೈಯಿಂದ ಬರೆಯಿಸಿದ. ಹಿಂದಿನ ಕಾಲದ ಭಕ್ತರ ಗೀತಗಳನ್ನು ಸರಿಯಾಗಿ ಹೇಳಲು ಗುರು ಅರ್ಜನ ಹಿಂದೂ ಮುಸ್ಲಿಂ ಭಕ್ತಗಾಯಕರನ್ನು ಬರಮಾಡಿಕೊಂಡು ಗ್ರಂಥ್ ಸಾಹೆಬ್ ಸಂಗ್ರಹದಲ್ಲಿ ಸೇರಬಹುದಾದ ಗೀತಗಳನ್ನು ಕುರಿತು ಸಲಹೆ ಪಡೆದ. ಗ್ರಂಥ್ ಸಾಹೆಬ್‌ದಲ್ಲಿ ದೊರೆಯುವಂತೆ ಭಕ್ತರ ಈ ಗೀತಗಳಲ್ಲಿ ಕೆಲವೆಡೆ ಕೆಲವು ಪದಗಳು ಆಯಾ ಪ್ರಾಂತದಲ್ಲಿ ವಾಡಿಕೆಯಾಗಿರುವ ಪದಗಳಿಂದ ಬೇರೆಯಾಗಿವೆ. ಈ ಭೇದಕ್ಕೆ ಕಾರಣ ಆಗಿನ ದಿನದಲ್ಲಿ ಅವನ್ನು ಹಾಡಿದ ಆ ಭಕ್ತರು ಕೊಟ್ಟ ಪಾಠ ಹಾಗೆ ಇತ್ತು ಎನ್ನುವುದು. ಗುರು ಅರ್ಜನ್ ಮಾಡಿದ ಈ ಸಂಗ್ರಹ ಗ್ರಂಥ್ ಸಾಹೆಬ್ ಸಂಗ್ರಹದ ಮೊದಲ ರೂಪ. ಇದು 1604ರಲ್ಲಿ ಆಯಿತು. ಇದರ ಪರಿಷ್ಕೃತ ಅಂತಿಮ ರೂಪ 1705ರಲ್ಲಿ ಗುರು ಗೋಬಿಂದ ಸಿಂಹನಿಂದ ಸಿದ್ಧವಾಯಿತು.

ಗ್ರಂಥ್ ಸಾಹೆಬ್ ಇಂಥ ನಿಷ್ಕೃಷ್ಟ ಗ್ರಂಥ. ಅದರ ಒಂದು ಅಕ್ಷರವನ್ನು ಬೇರೆ ಮಾಡುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ಜಹಾಂಗೀರ್ ಚಕ್ರವರ್ತಿ ಗುರು ಅರ್ಜನದೇವನನ್ನು ಕರೆದು, ತನಗೆ ರುಚಿಸದ ಕೆಲವು ಮಾತನ್ನು ಅದರಿಂದ ತೆಗೆದುಹಾಕು ಎಂದು ಅವನಿಗೆ ಆಜ್ಞೆ ಮಾಡಿದ. ಅದರ ಒಂದು ಅಕ್ಷರವನ್ನೂ ಬೇರೆ ಮಾಡಲು ತಾನು ಒಪ್ಪುವವನಲ್ಲ ಎಂದು ಗುರು ತಿಳಿಸಿ ತನ್ನ ನಿಷ್ಠೆಗಾಗಿ ಪ್ರಾಣವನ್ನೇ ಬಲಿಕೊಟ್ಟ. ಹರರಾಯ್ ಗುರುವಿನ ಹಿರಿಯಮಗ ರಾಮರಾಯ್ ತಂದೆಯ ಪ್ರತಿನಿಧಿಯಾಗಿ ಔರಂಗಜೇಬ್ ಚಕ್ರವರ್ತಿಯ ಬಳಿಗೆ ಹೋದಾಗ ಚಕ್ರವರ್ತಿ ಮುಸ್ಲಿಮರನ್ನು ಹಳಿಯುವ ಅರ್ಥದ ಒಂದು ಶ್ಲೋಕವನ್ನು ಗ್ರಂಥ್ ಸಾಹೆಬ್‌ದಿಂದ ಎತ್ತಿ ಅದರ ಅರ್ಥ ಏನು ಎಂದು ಕೇಳಿದನಂತೆ. ಶ್ಲೋಕ ಮುಸ್ಲಿಮರನ್ನು ಹಳಿಯುತ್ತದೆ ಎಂದು ಹೇಳಲು ಇಷ್ಟವಿಲ್ಲದೆ ರಾಮರಾಯ್, ಅದರಲ್ಲಿ ಒಂದು ಪದ ತಪ್ಪಿ ಬಿದ್ದಿದೆ, ಅದರ ಅರ್ಥ ಬೇರೆ ಎಂದನಂತೆ. ಈ ಮಾತು ಗುರು ಹರರಾಯ್ ಕಿವಿಗೆ ಮುಟ್ಟಿದಾಗ ಗುರು, 'ನಾನಿನ್ನು ಈ ಮಗನ ಮುಖವನ್ನು ನೋಡುವುದಿಲ್ಲ. ಗ್ರಂಥ್ ಸಾಹೆಬ್ ವಿರೋಧ ಯಾವ ಆಕ್ಷೇಪಕ್ಕೂ ಸಮ್ಮತಿಸಬೇಡ ಎಂದು ಇವನಿಗೆ ಎಚ್ಚರ ಹೇಳಿದ್ದೆ. ಇವನು ನನ್ನ ಮಾತನ್ನು ಮೀರಿದ್ದಾನೆ' – ಎಂದನಂತೆ.

ಗುರು ಒಮ್ಮೆ ಹಾಸಿಗೆಯಲ್ಲಿ ಮಲಗಿದ್ದ ವೇಳೆ ಹೊರಗಿನಿಂದ ಕೆಲವು ಸಿಕ್ಖರು ಗ್ರಂಥದ ಗೀತಗಳನ್ನು ಹಾಡುತ್ತ ಬಂದರು. ದೇಹಸ್ಥಿತಿ ಸರಿಯಾಗಿಲ್ಲದಿದ್ದರೂ ಗುರು ಹಾಸಿಗೆಯಿಂದ ಎದ್ದನಂತೆ. ಏಕೆ ಈ ತೊಂದರೆ ತೆಗೆದುಕೊಂಡಿರಿ – ಎಂದು ಕೇಳಲು ಗುರುವಿನ ಮೂರ್ತಿ, ನಾನು ಅದಕ್ಕೆ ಮರ್ಯಾದೆ ತೋರದಿದ್ದರೆ ನನ್ನ ಶಿಷ್ಯರು ತೋರದೆ ಬಿಡುತ್ತಾರೆ ಎಂದನಂತೆ.

ಗ್ರಂಥ್ ಸಾಹೆಬ್ ಜಪಜೀ ಎಂಬ ಧ್ಯಾನಪ್ರಾರ್ಥನೆಯಿಂದ ಆರಂಭವಾಗುತ್ತದೆ. ಇಕ್, ಓಂಕಾರ್, ಸತ್‌ನಾಂ, ಕರ್ತಾ, ಪುರುಖ್ – ಇವು ಮೊದಲ ಪದಗಳು. ಧ್ಯಾನಪ್ರಾರ್ಥನೆಯ ಈ ಮಾತುಗಳಿಂದ ಆರಂಭವಾಗುವ ವಾಕ್ಯಗಳ ಅರ್ಥ ಹೀಗಿದೆ: ದೇವರು ಇರುವುದು ಒಬ್ಬ. ನಿತ್ಯಸತ್ಯ ಎಂದು ಹೆಸರು. ಅವನು ಎಲ್ಲ ವಸ್ತುಗಳ ಸೃಷ್ಟಿಕರ್ತ. ಅವನು ನಿರ್ಭೀತ, ನಿರ್ದ್ವೇಷಿ. ಅವನ ಮೂರ್ತಿ ಕಲಾತೀತ. ಅವನು ಅಜ. ತನ್ನ ಆತ್ಮದ ಆತ್ಮ ಅವನೇ; ಗುರುವಿನ ಅನುಗ್ರಹದಿಂದ ಮನುಜರಿಗೆ ಜ್ಞೇಯನಾಗುತ್ತಾನೆ. ಇದಾದ ಮೇಲೆ ಈ ಧ್ಯಾನದ ವಾಕ್ಯಗಳು ಬರುತ್ತವೆ; ಅವನು ಆರಂಭದಲ್ಲಿ ಸತ್ಯ ಸ್ವರೂಪ; ಹೀಗೆ ಇದ್ದು ಮನ್ವಂತರ ಹರಿದಂತೆ ಹಾಗೆಯೇ ಸತ್ಯಸ್ವರೂಪನಾಗಿ ಇದ್ದಿದ್ದಾನೆ. ಹಾಗೆಯೇ ಈಗಲೂ ಅವನು ಅಂತರ್ಯಾಮಿ ಸತ್ಯವಾಗಿದ್ದಾನೆ. ಹಾಗೆ ಅನಂತ ಕಲ್ಪಾಂತರಕ್ಕೂ ಶಾಶ್ವತ ಸತ್ಯ ಆಗಿ ಇರುತ್ತಾನೆ.

ಗ್ರಂಥ್ ಸಾಹೆಬ್ ಮಹಾಗ್ರಂಥದ ಸ್ವರೂಪ ಸ್ವಲ್ಪಮಟ್ಟಿಗೆ ತಿಳಿಯುವಂತೆ ಕೆಲವು ವಾಕ್ಯಗಳನ್ನು ಇಲ್ಲಿ ಹೇಳಬಹುದು; ದೇವರನ್ನು ತಿಳಿಯುವುದಕ್ಕೆ ಯೋಚನೆ ಒಂದು ದಾರಿ ಅಲ್ಲ. ಹಾಗಾದರೆ ಅವನನ್ನು ತಿಳಿಯುವುದು ಹೇಗೆ? ಅವನ ಇಚ್ಛೆಯಂತೆ ನಡೆ. ನಿನ್ನ ಇಚ್ಛೆಯನ್ನು ನಿನ್ನ ಹೃದಯದಲ್ಲಿ ಬರೆದಿರುವ ಅವನ ಇಚ್ಛೆಯಾಗಿ ಮಾಡು. ಅವನ ಸಂಕಲ್ಪದಿಂದ ಅವನು ಎಲ್ಲ ವಸ್ತುಗಳ ರೂಪವನ್ನೂ ನಿರ್ಮಿಸಿದ್ದಾನೆ. ಎಲ್ಲ ಜೀವನ ಆ ಆಜ್ಞೆಯಿಂದ ರೂಪು ತಳೆದಿದೆ. ಅವನ ಇಚ್ಛೆಯಿಂದ ಹೊರತು ವಸ್ತುಲೇಶ ಇಲ್ಲ. ಓ ನಾನಕ್! ಪರಮಪುರುಷನ ಸಂಕಲ್ಪ ಇರುವುದನ್ನು ಅನುಭವಿಸಿದವನು ಎಂದಾಗಲಿ ಅಹಂಭಾವದಿಂದ ನಾನು ಎಂಬ ಹೆಮ್ಮೆಯ ಮಾತನ್ನು ಉಸುರನು. ಓ ನಾನಕ್! ನಾವು ಇಷ್ಟನ್ನು ತಿಳಿದರೆ ಸಾಕು: ಸತ್ಯಸ್ವರೂಪನಾದ ದೈವ ಎಲ್ಲರ ಪಾಲಿನ ಏಕೈಕ ಜ್ಯೋತಿ. ಅವನನ್ನು ಒಂದು ವಿಗ್ರಹವಾಗಿ ಪ್ರತಿಷ್ಠೆ ಮಾಡುವುದು ಸಾಧ್ಯವಲ್ಲ. ಅಷ್ಟೇ ದಿಟ, ಮಾನವ ಅವನ ಆಕಾರವನ್ನು ರೂಪಿಸಲಾರ. ಆತನ ನಾಮವನ್ನಾಲಿಸಿದರೆ ಪಾಪ, ದುಃಖ ನಾಶವಾಗುತ್ತವೆ. ಹೆಸರನ್ನು ದೃಢವಾಗಿ ನಂಬಿದವರ ದಾರಿಯನ್ನು ತಡೆಯಬಲ್ಲದೂ ಇಲ್ಲ, ಕೆಡಿಸಬಲ್ಲದೂ ಇಲ್ಲ. ಆತನ ಸೌಂದರ್ಯವನ್ನು ಆತನ ಸೃಷ್ಟಿಯ ಶಕ್ತಿಯನ್ನು ಬಣ್ಣಿಸಲು ಹೇಗೆ ಸಾಧ್ಯ? ನಿನ್ನ ಔದಾರ್ಯವನ್ನು ಅಳೆಯುವ ಶಕ್ತಿ ಯಾರಿಗುಂಟು ಓ ಪ್ರಭೂ! ನನ್ನಂಥ ಒಂದು ಅಲ್ಪ ಜಂತು ನಿನ್ನ ಸೃಷ್ಟಿಯ ವಿಸ್ತಾರವನ್ನೂ ಆಶ್ಚರ್ಯವನ್ನೂ ಹೇಗೆ ಬಣ್ಣಿಸಬಹುದು? ನಿನ್ನ ನಾಮಗಳು ಅಸಂಖ್ಯ. ನಿನ್ನ ನಿವಾಸಗಳು ಅಸಂಖ್ಯ. ಅನಂತ ಕೋಟಿ ಲೆಕ್ಕದ ನಿನ್ನ ಪ್ರಪಂಚಗಳು ಊಹೆ ಮುಟ್ಟಬಲ್ಲ ಮೇರೆಯನ್ನು ಮೀರಿವೆ; ಅವುಗಳ ಸಂಖ್ಯೆಯನ್ನು ಅನಂತಕೋಟಿಯೆಂದು ಎಣಿಕೆಗೆ ಗುರಿಮಾಡುವುದು ತಪ್ಪು. ಕ್ಷೇತ್ರ ಯಾತ್ರೆ, ತಪಸ್ಸು, ದಯೆ, ದಾನ ಮೊದಲಾದವು ಸ್ವಲ್ಪ ಪುಣ್ಯವನ್ನು ತರುತ್ತವೆ, ಸಾಸಿವೆ ಕಾಳಿನ ಗಾತ್ರದಷ್ಟು. ಆದರೆ ನಾಮವನ್ನು ಕೇಳಿ ನಂಬಿ ಭಜಿಸುವ ಮನುಷ್ಯ ತನ್ನಲ್ಲಿರುವ ಒಂದು ಕ್ಷೇತ್ರದ ತೀರ್ಥದಲ್ಲಿ ಸ್ನಾನ ಮಾಡುತ್ತಾನೆ. ಯಾವ ಕಾಲದಲ್ಲಿ ಯಾವ ಕಲ್ಪದಲ್ಲಿ, ತಿಂಗಳ ಅಥವಾ ವಾರದ ಯಾವ ದಿವಸ, ಯಾವ ಋತುವಿನಲ್ಲಿ ಯಾವ ಮಾಸದಲ್ಲಿ, ನೀನು ಯಾವಾಗ ಲೋಕವನ್ನು ಸೃಷ್ಟಿಸಿದೆ? ಲೋಕವನ್ನು ಸೃಷ್ಟಿಸಿದ ದೇವರೊಬ್ಬ ಬಲ್ಲ, ತಾನು ಅದನ್ನು ಎಂದು ಸೃಷ್ಟಿಸಿದೆ ಎನ್ನುವುದನ್ನು. ನಿನ್ನನ್ನು ಸ್ತುತಿಸಿದವರು ನೀನು ಎಷ್ಟು ಹಿರಿಯ ಎನ್ನುವುದನ್ನು ಕಾಣದೇ ಇದ್ದಾರೆ. ನದೀನದಗಳು ಸಮುದ್ರದ ಒಳಕ್ಕೆ ಹರಿಯುತ್ತವೆಯಾದರೂ ಅದರ ವಿಸ್ತಾರವನ್ನು ಕಾಣವು.

ಇರುವುದಕ್ಕಾಗಲೀ ಸಾಯುವುದಕ್ಕಾಗಲೀ ನಿನಗೆ ಶಕ್ತಿಯಿಲ್ಲ. ಧನವನ್ನು ಪದವಿಯನ್ನು ಗಳಿಸಿ ಹೆಮ್ಮೆಪಡಲು ನಿನ್ನ ಅಳವಲ್ಲ. ಮನಸ್ಸನ್ನು ಯೋಚಿಸುವಂತೆ ವಿಚಾರಿಸುವಂತೆ ಬಲಾತ್ಕರಿಸಲು ನಿನಗೆ ಶಕ್ತಿಯಿಲ್ಲ. ಯಾರಿಗೆ ಶಕ್ತಿಯಿದೆ ಅವನು ನಿರ್ಮಿಸುತ್ತಿದ್ದಾನೆ ನೋಡಿಕೊಳ್ಳುತ್ತಾನೆ.

ನಾನಕ್! ಕರುಣಾಳು ನಮ್ಮ ಪ್ರಭು ಒಂದು ನೋಟದಿಂದ ನಮ್ಮನ್ನು ಸುಖಿಗಳನ್ನಾಗಿ ಮಾಡುತ್ತಾನೆ. ನೀರು ನಮ್ಮ ತಂದೆ, ನೆಲ ನಮ್ಮ ತಾಯಿ, ಹಗಲು ಇರುಳು ನಮ್ಮನ್ನು ಸಾಕುವ ದಾದಿಯರು. ನಿನ್ನನ್ನು ವರ್ಣಿಸಲು ಯತ್ನ ಮಾಡುವವರು ನಿನ್ನ ಆಳದಲ್ಲಿ ದಾರಿಗೆಡುತ್ತಾರೆ. ಓ ನನ್ನ ಜೀವವೇ! ನೀನೇಕೆ ಹೀಗೆ ಒದ್ದಾಡಿ ಕಳವಳಪಡುತ್ತೀಯೇ? ದೇವರು ನೋಡಿಕೊಳ್ಳುತ್ತಾನೆ ಎಂದು ನೀ ಕಾಣೆಯಾ? ಕಲ್ಲಿನಲ್ಲಿ ಬಂಡೆಯಲ್ಲಿ ಅವನು ಜೀವ ಜಂತುಗಳನ್ನು ನಿಲ್ಲಿಸಿದ್ದಾನೆ. ಅವುಗಳೆದುರಿಗೆ ಅವುಗಳ ಆಹಾರವನ್ನು ಇಡುತ್ತಾನೆ. ಪ್ರಭೂ! ಓ ಸ್ರಷ್ಟಾರ! ಓ ಸತ್ಯ! ನಿನ್ನ ಮನ ಎಂತು, ಅಂತು ನಡೆಯುತ್ತದೆ. ನೀನು ನೀಡಿದ್ದನ್ನು ನಾನು ಪಡೆಯುತ್ತೇನೆ. ಇರುವುದು ಏನೋ ಅದೆಲ್ಲ ನಿನ್ನದು. ಜೀವರಾಶಿ ಎಲ್ಲ ನೀನು ಆಡುತ್ತಿರುವ ಆಟ. ನೀನು ಬೇರೆಯಾಗಿ ನಿಂತೆ. ಒಬ್ಬ ತಾನು ಬೇರೆಯಾದ. ನೀನು ಸೇರಿ ಬಂದೆ, ಒಬ್ಬ ನಿನ್ನಲ್ಲಿ ಬೆರೆತ. ಗಗನ ನಿನ್ನ ತಾಂಬಾಳ; ಸೂರ್ಯ ಚಂದ್ರ ನಿನ್ನ ಹಣತೆಗಳು. ನಕ್ಷತ್ರಗಳ ಮಹಾಮಾಲೆ ಚೆಲ್ಲಿದ ಮುತ್ತಿನಂತಿದೆ; ಚಂದನ ವನಗಳು ನಿನಗೆ ಧೂಪ; ಮಾರುತಗಳು ನಿನ್ನ ರಾಜವೀಜನವನ್ನು ಬೀಸುತ್ತಿವೆ; ಕಾನನಗಳ ಪುಷ್ಪರಾಜಿ ನಿನ್ನ ಪದದೆಡೆ ಅರ್ಪಿತವಾಗಿ ಬಿದ್ದಿದೆ; ಓ ಭಯನಾಶಕ! ಇದು ಎಂಥ ಅದ್ಭುತ ದೀಪೋತ್ಸವ; ಪ್ರಭು ಬಳಿಯಲ್ಲಿದ್ದಾನೆ; ಪ್ರಭು ದೂರವಾಗಿದ್ದಾನೆ, ಇದರ ಅದರ ಅಂತರದಲ್ಲಿ ಇದ್ದಾನೆ ಪ್ರಭು. ಕೇಳು ನನ್ನ ಹೃದಯವೆ; ಮೀನು ನೀರನ್ನು ಪ್ರೀತಿಸುವಂತೆ ನೀನು ದೇವರನ್ನು ನಿರಂತರ ಪ್ರೀತಿಸು. ನಾನಕ್, ದೇವರು ಏಕೈಕ ಮಾರ್ಗ; ದೇವರು ಏಕೈಕ ಲಕ್ಷ್ಯ. ಅವನನ್ನು ಬಿಟ್ಟು ಬೇರೆ ಶರಣಿಲ್ಲ. ಉತ್ತಮ ಜನ್ಮ, ಪ್ರಚಂಡ ಕೀರ್ತಿ, ಮಣ್ಣು ಹುಡಿಯಂತೆ ತೀರ ವ್ಯರ್ಥ. ದೇವರು ಯಾರನ್ನು ಉದ್ಧಾರ ಮಾಡುತ್ತಾನೊ; ಅವನೀಗ ಉದ್ಧಾರವಾದ. ಒಳ್ಳೆಯ ಊಟ ಚೆನ್ನಾದ ಬಟ್ಟೆ ಇಷ್ಟರಿಂದ ಬಂದ ಫಲವೇನು, ನಮ್ಮ ಒಳಗೆ ಸತ್ಯ ಇಲ್ಲವಾದರೆ? ಮಾನವನ ದೇವನ ಮಧ್ಯೆ ಸಂಬಂಧವನ್ನು ನಿರ್ಮಿಸುವುದಕ್ಕೆ ದಾರಿ ಎಂದರೆ ದೇವರನ್ನು ಸ್ತುತಿಸುವುದು. ಲೋಕದ ಅತಿಶ್ರೇಷ್ಠ ಚೇತನರು ಕಂಡು ಮರೆಯುವ ಕ್ಷಣಮಾತ್ರದ ಜೀವಗಳು. ನೀನೊಬ್ಬ ಇದೀಯೆ, ನೀನೊಬ್ಬ ಇದೀಯೆ.

ಬಹುಪಾಲು ಜನ ಆಯುಷ್ಯವನ್ನು ಕೊಂಚ ಕೊಂಚವಾಗಿ ವ್ಯರ್ಥ ಮಾಡುತ್ತಾರೆ. ಬಾ ಎಂದು ಕರೆಯದೆ ಬರುತ್ತದೆಂದು ನೆನೆಯದೆ, ಸಾವು ಬಂದಾಗ, ನಾನಕ್, ಈ ಹಾಳು ಕಳವಿನ ತಪ್ಪಿಗೆ ಯಾರು ಹೊಣೆ? ಜೀವದ ಮೂಗುದಾರ ನಮ್ಮ ಒಡೆಯನ ಕೈಯಲ್ಲಿದೆ, ಮೆಯ್ಗಳ ಕೂಟ ಎಷ್ಟೇ ನಿಕಟವಾಗಲಿ ಕೂಟವಲ್ಲ. ಚೇತನ ಚೇತನ ಯಾವಾಗ ಕೂಡುತ್ತವೆ ಆಗ ನಾವು ದಿಟವಾದ ಕೂಟದ ಮಾತಾಡಬಹುದು. ನಿಸರ್ಗ ಹೊರಗಿನ ದೃಷ್ಟಿ ಇಲ್ಲದಂತೆ ಮಾಡಿದವರನ್ನು ಕುರುಡು ಎಂದು ಕರೆಯಲೇಕೆ? ದೇವರ ಸಂಕಲ್ಪವನ್ನು ಅರಿಯದವನು ಯಾರು, ಅವನೀಗ, ನಾನಕ್ ದಿಟವಾಗಿ ಕುರುಡ. ದಿಟವಾಗಿ ಗುರು ಆದವನು ತನ್ನ ಶಿಷ್ಯರನ್ನು ನೋಡಲು ಬಯಸುತ್ತಾನೆ. ನಾನು ಯಾರ ಪಕ್ಷಕ್ಕೆ ಸೇರಿದವನು? ಇಹದಲ್ಲಿ ಪರದಲ್ಲಿ ನನ್ನನ್ನು ನೋಡಿಕೊಳ್ಳಬಲ್ಲ ದೇವರ ಪಕ್ಷಕ್ಕೆ. ಪ್ರಭು! ನೀನೆ ಗುರು. ನೀನು ಅವನ ಶಿಷ್ಯ. ಗುರುವನ್ನು ಆರಾಧಿಸುವಂದು ನಾನು ದಿಟವಾಗಿ ನಿನ್ನನ್ನು ಪೂಜಿಸುತ್ತೇನೆ.

ಪ್ರಭು! ನಿನ್ನ ಸೇವಕ ನಾನಕನಿಗೆ ಈ ಒಂದು ಹಂಬಲ! ನೀನು ಸಲ್ಲಿಸು; ನನಗೆ ನಿನ್ನ ದರ್ಶನ ನೀಡು. ಈ ಒಡಲಿಗೆ, ಆತ್ಮಕ್ಕೆ ಶಾಂತಿಯನ್ನು ಅನುಗ್ರಹಿಸು. ಎಲ್ಲ ಧರ್ಮಗಳಲ್ಲಿ ಉತ್ಕೃಷ್ಟ ಧರ್ಮ ಇದು. ಭಗವನ್ನಾಮವನ್ನು ಭಕ್ತಿಯಿಂದ ಉಚ್ಚರಿಸುವುದು; ಒಳ್ಳೆಯದನ್ನು ಮಾಡುವುದು ಮಂದಿರಗಳಲ್ಲೆಲ್ಲ ಉತ್ಕೃಷ್ಟ ಮಂದಿರ, ನಾನಕ್, ದೇವರು ಆವಾಸಮಾಡಿಕೊಂಡಿರುವ ಮಾನವ ಹೃದಯ. ದೇವರನ್ನು ಬಲ್ಲವನು ದೇವರನ್ನು

ಹೊರತು ಬೇರೆ ಒಂದನ್ನು ನೆನೆಯುವುದಿಲ್ಲ. ನೀನು ನನ್ನ ತಂದೆ, ನೀನು ನನ್ನ ತಾಯಿ, ನೀನು ನನ್ನ ಒಡಹುಟ್ಟು, ನೀನು ನನ್ನ ನಂಟು. ಎಲ್ಲ ಎಡೆಯಲ್ಲಿಯೂ ನೀನು ರಕ್ಷಕ. ನಾನು ಅಂಜಲಿ ಏಕೆ? ಚಿಂತಿಸಲಿ ಏಕೆ. ನನ್ನ ಆಸೆಗಳು ಪೂರ್ಣವಾದವು. ನನ್ನನ್ನು ಶಾಂತಿ ಹಿಡಿದಿದೆ. ಪ್ರಿಯನ ಕಥೆ ಇನಿದಾಗಿದೆ. ಕಳೆದುಹೋಗಿದೆ, ನನ್ನ ರತ್ನ. ಅವನನ್ನು ನಾನು ಮರಳಿ ಪಡೆದೆ. ಮನುಷ್ಯ ದೇವರನ್ನು ತನ್ನ ಕೋಟೆಯಾಗಿ ಮಾಡಿಕೊಳ್ಳಲಿ ಆಮೇಲೆ ಅವನ ಎಲ್ಲ ಕರ್ಮ ಸತ್ಕರ್ಮ ಆಗುತ್ತದೆ. ಮೊದಲು ಸಾಯಲು ಒಪ್ಪು. ಬದುಕುವ ಆಸೆಯನ್ನು ತೊರೆ. ಎಲ್ಲರ ಅಡಿಯ ದೂಳಾಗು. ಆಮೇಲೆ ನನ್ನತ್ತ ಬಾ! ದುಃಖದಿಂದ ಭೂಗತನಾಗದೆ ಸುಖದಲ್ಲಿ ಪ್ರಹೃಷ್ಟನಾಗದೆ ಅಹಂಕಾರ, ಲೋಭ, ಪ್ರಕಾಮಗಳ ಶಕ್ತಿಯಿಂದ ದೂರ ಇರುವಂಥ ಮನುಷ್ಯ ದೇವರ ಪ್ರತೀಕ ಎಂದು ನಾನಕ್ ಹೇಳುತ್ತಾನೆ. ದೈವ ಪ್ರೇಮದ ಒಂದಾದರೂ ಕಿಡಿ ಎಂದೂ ಹೊತ್ತದ ಹೃದಯದ ಮನುಷ್ಯನ ದೇಹ ಒಂದು ಹಂದಿಯ, ಒಂದು ನಾಯಿಯ, ದೇಹಕ್ಕಿಂತ ಹೆಚ್ಚಿನದಲ್ಲ. ಚೈತ್ರಾನಿಲ ಭಯದಲ್ಲಿ ಸುಳಿದಾಡುತ್ತದೆ. ನೂರು ಸಾವಿರ ನದಿಗಳು ಭಯದಲ್ಲಿ ಹರಿಯುತ್ತವೆ. ಸೂರ್ಯ ಭಯದಲ್ಲಿ ನಡೆಯುತ್ತಾನೆ. ಚಂದ್ರ ಭಯದಲ್ಲಿ ನಡೆಯುತ್ತಾನೆ. ದೇವರು ಎಲ್ಲರಿಗೂ ಭಯವನ್ನು ವಿಧಿಸಿದ್ದಾನೆ. ಭಯ ಇಲ್ಲದೆ ಇರುವುದು, ನಾನಕ್ ನಿರಾಕಾರನಾದ ಸತ್ಯಸ್ವರೂಪ ಅವನೊಬ್ಬನಿಗೆ. ನನಗೆ ಈ ನೋವನ್ನು ಕೊಟ್ಟ ನನ್ನ ಸೃಷ್ಟಿಕರ್ತ ಇದರ ನಿವಾರಣೆಯನ್ನೂ ಮಾಡುತ್ತಾನೆ. ದೇವರ ಹೆಸರು ಹೇಳಿದೆ, ನಾನು ಬಾಳಿದೆ. ನಾನು ಅದನ್ನು ಮರೆತೆ ಸತ್ತೆ. ನಿನ್ನ ಹೃದಯದಲ್ಲಿ ದೇವರ ಭಯಕ್ಕೆ ಎಡೆ ಕೊಡು. ಸಾವಿನ ಭಯ ಆಗ ಭಯಪಟ್ಟು ಅಲ್ಲಿಂದ ತೊಲಗುತ್ತದೆ.

ಗ್ರಂಥ್ ಸಾಹೆಬ್ ಲೋಕದ ಅತ್ಯುತ್ತಮ ಧರ್ಮಗ್ರಂಥಗಳಲ್ಲಿ ಒಂದಾದ ಉನ್ನತ ಕೃತಿ. ದೈವಭಕ್ತಿಯ ಪರಾಕಾಷ್ಠೆಯನ್ನು ಸಹಜ ಸುಂದರ ಶಬ್ದಗಳಲ್ಲಿ ಪ್ರಕಟಿಸಿರುವ ಇದರ ಗೀತಗಳು ಎಷ್ಟು ಶ್ರೇಷ್ಠ ಧಾರ್ಮಿಕ ಕೃತಿಗಳೋ ಅಷ್ಟೇ ಶ್ರೇಷ್ಠ ಸಾಹಿತ್ಯ ಕೃತಿಗಳೂ ಹೌದು. ಇದರ ಕೆಲವು ಮಾತು ವೇದ ಉಪನಿಷತ್ತುಗಳ ಛಾಯೆ ಆಗಿವೆ; ಇನ್ನು ಕೆಲವು ಸುಂದರ ಸರಳ ಚೇತನಗಳ ಸರಳ ಸುಂದರ ಪ್ರಕಾಶನ ಆಗಿವೆ. ಸರಳ ಸುಂದರ ಆಗಿರುವುದರಿಂದ ಅವುಗಳಲ್ಲಿ ಉನ್ನತ ಕಾವ್ಯದ ರಸ ಕಾಣುತ್ತದೆ. ಇದಕ್ಕೆ ನಿದರ್ಶನವಾಗಿ ಇಲ್ಲಿ ಈ ಗೀತವನ್ನು ಕೊಡಬಹುದು:

ಅಶ್ರುತಗಾನ ನಿನ್ನ ಮಂದಿರದ ದುಂದುಭಿ ಧ್ವಾನ.
ನಿನ್ನ ಕಣ್ಣು ಸಾವಿರ; ಎಂದೂ ನಿನಗೆ ಕಣ್ಣಿಲ್ಲ.
ನಿನ್ನ ಆಕಾರ ಸಾವಿರ; ಎಂದೂ ನಿನಗೆ ಆಕಾರ ಇಲ್ಲ.
ನಿನ್ನ ಪಾವನಾಂಘ್ರಿ ಸಾವಿರ ಇದ್ದೂ ನಿನಗೆ
ಒಂದಾದರೂ ಪಾದ ಇಲ್ಲ.
ನಿನ್ನ ಘ್ರಾಣ ಸಾವಿರ; ಹೀಗಿದ್ದೂ
ನಿನಗೆ ಘ್ರಾಣ ಇಲ್ಲ.
ಇದೆಲ್ಲ ನಿನ್ನ ಲೀಲೆ; ಇದರಿಂದ
ನಾನು ಮರುಳಾಗಿದ್ದೇನೆ.
ಒಂದೊಂದು ಹೃದಯದಲ್ಲೂ ಜ್ಯೋತಿ ಇದೆ;
ಆ ಜ್ಯೋತಿ ನೀನು.
ದೇವರಿಂದಲೆ ಬಂದ ಆ ಬೆಳಕಿನಿಂದ
ಒಂದೊಂದು ಹೃದಯವೂ ಬೆಳಗುತ್ತಿದೆ.
ಇದ್ದೂ ಈ ದಿವ್ಯಜ್ಯೋತಿ ಗುರುವಿನ ಉಪದೇಶ
ದೊರೆತ ಮೇಲೆಯೆ ಆವಿಷ್ಕೃತವಾಗುತ್ತದೆ.
ಓ ಪ್ರಭು; ದುಂಬಿ ಹೂವಿನ ರಸಕ್ಕೆ ಹಂಬಲಿಸುವಂತೆ
ನನ್ನ ಮನಸ್ಸು ನಿನ್ನ ಪದಕಮಲಗಳನ್ನು ಬಯಸುತ್ತಿದೆ.
ಹಗಲೇನು ಇರುಳೇನು ನನಗೆ ನಿನ್ನನ್ನು ಬಯಸಿ ಆಸರು.
ನಾನಕನಿಗೆ ನಿನ್ನ ಕರುಣೆಯ ಜಲವನ್ನು ನೀಡು.
ಅವನು ಸಾರಂಗದಂತೆ, ಮೇಘದಂತೆ ಬೀಳುತ್ತಿರುವ
ಹನಿಯನ್ನು ಕುಡಿಯುವ ಚಾತಕದಂತೆ, ಆಗಿದ್ದಾನೆ.
ಅವನು ಸದಾ ನಿನ್ನ ಹೆಸರ ಶಾಂತಿಯಲ್ಲಿ ನೆಲಸುವಂತೆ ಮಾಡು.

**(ನೋಡಿ– ನಾನಕ್, ಗುರು)** (ಎಂ.ವಿ.ಐ.)

**ಗ್ರಂಥ ಸಂಪಾದನೆ :** ಉಪಲಬ್ಧವಿರುವ ಪ್ರತಿಗಳ ಆಧಾರದ ಮೇಲೆ ಗ್ರಂಥದ ಮೂಲಪಾಠವೇನಿದ್ದಿರಬಹುದೆಂಬುದನ್ನು ಗುರುತಿಸುವ ಹಾಗೂ ಸಮಗ್ರ ಗ್ರಂಥದ ಬಗ್ಗೆ ವಿಮರ್ಶೆಯನ್ನು ನೀಡುವ ಕೆಲಸ (ಟೆಕ್ಸ್‌ಚುಅಲ್ ಕ್ರಿಟಿಸಿಸಂ). ಕೈಬರೆಹದಲ್ಲಿ ಉಳಿದಿರುವ ಕೃತಿಗಳ ಸಂಪಾದನೆಯಲ್ಲೇ ಹೆಚ್ಚಿನ ಕ್ಲೇಶಗಳು ಕಂಡುಬರುತ್ತವಾಗಿ ಅವನ್ನೇ ಗಮನದಲ್ಲಿಟ್ಟುಕೊಂಡು ವಿಷಯವನ್ನಿಲ್ಲಿ ವಿಮರ್ಶಿಸಲಾಗಿದೆ.

ಹಿಂದಿನ ಕಾಲದಲ್ಲಿ ಕವಿಗಳು, ಜ್ಞಾನಿಗಳು, ಸಂತರು ತಾವು ಲೋಕಕ್ಕೆ ಹೇಳಬಯಸಿದ ವಿಚಾರಗಳನ್ನು ಭೂರ್ಜಪತ್ರಗಳ ಮೇಲೂ ತಾಳೆಗರಿಗಳ ಮೇಲೂ ಬರೆದಿಡುತ್ತಿದ್ದರು. ಅಶೋಕ ಚಕ್ರವರ್ತಿ ತನ್ನ ಶಾಸನಗಳನ್ನು ಅನೇಕ ಬಂಡೆಗಳ ಮೇಲೂ ಸ್ತಂಭಗಳ ಮೇಲೂ ಕೆತ್ತಿಸಿದ್ದಾನೆ. ಅನೇಕ ರಾಜರು ಬೇರೆ ಬೇರೆ ಸನ್ನಿವೇಶಗಳಲ್ಲಿ ತಾವು ಕೊಟ್ಟ ಭೂದಾನಗಳನ್ನು ಕಲ್ಲುಗಳ ಮೇಲೂ ತಾಮ್ರದ ರೇಕುಗಳ ಮೇಲೂ ಕೆತ್ತಿಸಿದ್ದಾರೆ. ಈ ತಾಮ್ರಶಾಸನ, ಶಿಲಾಶಾಸನಗಳಲ್ಲಿ ಅನೇಕ ಶ್ಲೋಕಗಳೂ ಪದ್ಯಗಳೂ ಇವೆ. ಕಾಗದ ಲಭಿಸುವ ಮುಂಚೆ ಜನ ಹತ್ತಿಯ ಬಟ್ಟೆಯ ಮೇಲೆ ಬರೆಯುತ್ತಿದ್ದುದೂ ಉಂಟು. ಪಟ, ಕಾರ್ಪಾಸಿಕ ಪಟ ಮೊದಲಾದ ಹೆಸರುಗಳು ಸಾತವಾಹನರ ಕಾಲದ ಶಾಸನಗಳಲ್ಲಿ ಕಾಣಿಸುತ್ತವೆ. ಕಡತ ಎಂಬ ಒಂದು ಬಗೆಯ ಮೇಣದ ಬಟ್ಟೆಯನ್ನು ಕನ್ನಡನಾಡಿನಲ್ಲಿ ಬರೆವಣಿಗೆಯ ಕೆಲಸಕ್ಕೆ ಬಳಸುತ್ತಿದ್ದರು. ಇಂಥ ಸಾಧನಗಳನ್ನು ಬಳಸಿ ಬರೆದಿಟ್ಟ ಗ್ರಂಥಗಳು, ಶಾಸನಗಳು ಎಲ್ಲ ಕಾಲಕ್ಕೂ ಕೆಡದೆ ಶುದ್ಧವಾಗಿರುವುದು ಅಸಂಭವ. ಮಳೆ ಗಾಳಿಗಳ ದೆಸೆಯಿಂದಲೂ ಮಾನವರಿಂದ ಸಂಭವಿಸಬಹುದಾದ ಉಪದ್ರವಗಳಿಂದಲೂ ಶಾಸನಾದಿಗಳು ಮುರಿದು ಹಾಳಾಗಬಹುದು. ಅವುಗಳಲ್ಲಿನ ಅನೇಕ ಶಬ್ದಗಳು ಅಳಿಸಿ ಹೋಗಬಹುದು. ಅಂಥ ಅವಾಂತರ ಕಾರಣಗಳಿಂದ ಅಳಿದು ಉಳಿದ ಗ್ರಂಥಗಳನ್ನು ಅವುಗಳ ನಕಲುಗಳನ್ನು ನೋಡಿ ಅವುಗಳ ಆಧಾರದಿಂದ ಮೂಲಪಾಠ ಹೇಗಿದ್ದಿರಬಹುದೆಂಬುದನ್ನು ಊಹಿಸಬೇಕಾದ, ನಿರ್ಧರಿಸಬೇಕಾದ ಅಗತ್ಯ ಬೀಳುತ್ತದೆ. ಲಭ್ಯವಾದ ಎಲ್ಲ ನಕಲುಗಳನ್ನೂ ಸಂಗ್ರಹಿಸಿ ಅವನ್ನು ಅವಲೋಕಿಸಿ ಅವುಗಳ ಮೂಲಪಾಠವನ್ನು ನಿರ್ಣಯಿಸಬೇಕಾಗುತ್ತದೆ.

ಕವಿ ಬರೆದ ಕೃತಿಯನ್ನು ಓದಬಯಸುವವರು, ಓದಿಸಿ ಕೇಳಬಯಸುವವರು ಅನೇಕರು ಇರುತ್ತಾರೆ. ಅವರೆಲ್ಲರಿಗೂ ಕವಿಯೇ ಬರೆದುಕೊಡುವುದು ಸಾಧ್ಯವಿಲ್ಲ. ಆಗ ಪ್ರತಿಕಾರರು ಕವಿಕೃತಿಗಳನ್ನು ಯಥಾವತ್ತಾಗಿ ನಕಲು ಮಾಡಿಕೊಡುತ್ತಾರೆ. ಗ್ರಂಥ ಬಹಳ ದೊಡ್ಡದಾದರೆ ಹೆಚ್ಚು ಮಂದಿ ಪ್ರತಿಕಾರರ ಅಗತ್ಯ ಕಂಡುಬರುತ್ತದೆ. ಉದಾರಿಗಳಾದ ಶ್ರೀಮಂತರು ತಾವು ಮೆಚ್ಚಿಕೊಂಡ ಮಹಾಕೃತಿಯೊಂದನ್ನು ಹಲವರು ಪ್ರತಿಕಾರರ ನೆರವಿನಿಂದ ಪ್ರತಿ ಮಾಡಿಸಿ ದಾನ ಮಾಡುತ್ತಿದ್ದುದೂ ಉಂಟು. ದಾನಚಿಂತಾಮಣಿ ಅತ್ತಿಮಬ್ಬೆ ನಡೆಸಿದ ಗ್ರಂಥ ದಾನವನ್ನು ಕನ್ನಡ ಕವಿ ರನ್ನ ಕೊಂಡಾಡಿದ್ದಾನೆ. ಹೀಗೆ ಒಂದು ಮೂಲಗ್ರಂಥವನ್ನು ಅನೇಕ ಬರೆಹಗಾರರು ಪ್ರತಿ ಮಾಡುವಾಗ ತಿಳಿದೋ ತಿಳಿಯದೆಯೋ ಹಲವು ತಪ್ಪುಗಳಾಗುವ ಸಂಭವವಿದೆ. ಕವಿಯೇ ಸ್ವಂತವಾಗಿ ಬರೆದ ಗ್ರಂಥಗಳಲ್ಲಿಯೂ ಕೆಲವು ತಪ್ಪುಗಳಾದರೆ ಆಶ್ಚರ್ಯವೇನೂ ಇಲ್ಲ. ಬರೆಯುವ ಭರದಲ್ಲಿ ಹಲವು ಅಕ್ಷರ ಸ್ಖಾಲಿತ್ಯಗಳು ಅನಿವಾರ್ಯವಾಗಿ ಉಂಟಾಗುತ್ತವೆ. ಒಂದೊಂದು ಸಲ ನಕಲು ಮಾಡಿದಾಗಲೂ ಹೊಸ ತಪ್ಪುಗಳು ಆಗುವ ಸಂಭವವಿದೆ. ಆದ್ದರಿಂದ ಕವಿಯ ಕಾಲಕ್ಕೆ ಬಹಳ ದೂರವಾದ ಪ್ರತಿಗಳಲ್ಲಿ ಹೆಚ್ಚು ತಪ್ಪುಗಳಿರುತ್ತವೆ. ಇಂಥ ಹಲವು ಪ್ರತಿಗಳನ್ನು ನೋಡಿದಾಗ ಕವಿ ಬರೆದ ಮೂಲ ಪಾಠವನ್ನು ಗುರುತಿಸುವುದು ಕಷ್ಟವಾಗುತ್ತದೆ. ಈ ಮೂಲಪಾಠ ನಿರ್ಣಯ ಕಾರ್ಯಕ್ಕೆ ಬೇಕಾದ ಸಿದ್ಧತೆ, ಅದರಲ್ಲಿ ನಾವು ಇದಿರಿಸಬೇಕಾದ ಸಮಸ್ಯೆಗಳು ಅವುಗಳ ಪರಿಹಾರ ವಿಧಾನ ಮೊದಲಾದ ವಿಚಾರಗಳನ್ನು ತಿಳಿಸುವುದೇ ಗ್ರಂಥಸಂಪಾದನ ಶಾಸ್ತ್ರದ ಕೆಲಸ.

ಕವಿಯೇ ಸ್ವಂತವಾಗಿ ಬರೆದ ಪ್ರತಿ ಸಿಕ್ಕುವುದು ಬಹಳ ಅಪೂರ್ವ; ಇಲ್ಲವೇ ಇಲ್ಲವೆಂದರೂ ಸಲ್ಲುತ್ತದೆ. ಅದರ ಹತ್ತಿರದ ನಕಲುಗಳು ಲಭಿಸಿದರೆ ಪುಣ್ಯ. ಕವಿ ತಾನು ಬರೆದ ಪ್ರತಿಯನ್ನು ಮತ್ತೆ ಓದಿ ನೋಡಿದರೆ ಹಲವು ತಪ್ಪುಗಳನ್ನು ತಿದ್ದುವುದರಲ್ಲಿ ಸಂಶಯವಿಲ್ಲ. ಕೆಲವು ವೇಳೆ ಮೊದಲು ತನಗೆ ತೋರದೆ ಇದ್ದ ಉತ್ತಮ ಪಾಠಗಳನ್ನು ಆಮೇಲೆ ಜೋಡಿಸುವುದೂ ಉಂಟು. ಪಂಪ ತನ್ನ ಒಂದು ಪದ್ಯವನ್ನು ಹಾಗೆ ತಿದ್ದಿದನೆಂದು ತಿಳಿದುಬಂದಿದೆ. ಅಂಥ ತಿದ್ದುಪಡಿಗಳನ್ನು ಓಲೆಗರಿಯ ಪಾರ್ಶ್ವದಲ್ಲಿ ಅಥವಾ ಎರಡು ಪಂಕ್ತಿಗಳ ನಡುವೆ ಗುರುತು ಮಾಡುವುದು ವಾಡಿಕೆ. ಪ್ರತಿಕಾರ ಅಂಥ ತಿದ್ದುಪಡಿಗಳನ್ನು ಗ್ರಂಥದ ಸೂಕ್ತ ಸ್ಥಾನಗಳಲ್ಲಿ ಅಳವಡಿಸಿಕೊಳ್ಳಬೇಕು.

ಇನ್ನು ಕೆಲವು ಸಂದರ್ಭಗಳಲ್ಲಿ ಪ್ರತಿಕಾರರು ತಮಗೆ ಅರ್ಥವಾಗದ ಶಬ್ದಗಳನ್ನು ಬಿಟ್ಟುಬಿಡುವುದುಂಟು. ಇನ್ನು ಕೆಲವರು ಅಪರಿಚಿತ ಶಬ್ದಗಳ ಸ್ಥಾನದಲ್ಲಿ ಪರಿಚಿತ ಶಬ್ದಗಳನ್ನು ಸೇರಿಸಿ ಪಾಠಾಂತರಗಳನ್ನು ಸೃಷ್ಟಿಸಿಬಿಡುತ್ತಾರೆ. ಇಂಥ ಸಂದರ್ಭಗಳಲ್ಲಿ ಹೊಸ ಮಾತು ಆ ಸನ್ನಿವೇಶಕ್ಕೆ ಹೊಂದದೆ, ಅರ್ಥವಾಗದ ಅಪಪಾಠಗಳೂ ಏರ್ಪಡುತ್ತವೆ. ಒಂದು ಭಾಷೆಯ ಕೆಲವು ಅಕ್ಷರಗಳ ಸಾದೃಶ್ಯದಿಂದ ಲಿಪಿಕಾರರು ಭ್ರಾಂತಿ ಪಟ್ಟು ಒಂದರ ಬದಲು ಇನ್ನೊಂದು ಅಕ್ಷರವನ್ನು ಬರೆದು ಮೂಲಪಾಠವನ್ನು ಕೆಡಿಸುತ್ತಾರೆ. ಇನ್ನು, ಓಲೆಗರಿಯನ್ನು ಓದುವಾಗ ಪಂಕ್ತಿಭ್ರಮಣೆಯಿಂದ ಆಗುವ ಕ್ಲೇಶಗಳು ಅನೇಕ. ಹಲವು ಪದಗಳು ಅಥವಾ ವಾಕ್ಯಗಳೇ ಬಿಟ್ಟುಹೋಗಬಹುದು. ಒಂದು ಪದ್ಯದ ಉತ್ತರಾರ್ಧವನ್ನೂ ಇನ್ನೊಂದು ಪದ್ಯದ ಪೂರ್ವಾರ್ಧವನ್ನೂ ಸೇರಿಸಿ ಒಂದು ಪದ್ಯ ಮಾಡಿರುವ ಸಂದರ್ಭಗಳೂ ಉಂಟು. ಪದ್ಯಗಳ ಕ್ರಮ ವ್ಯತ್ಯಾಸವಾಗುವುದು ಸರ್ವಸಾಧಾರಣ ಸಂಗತಿ.

ಉದಾಹರಣೆಗೆ ನಾಗವರ್ಮನ ವರ್ಧಮಾನ ಪುರಾಣದ ಮೂರನೆಯ ಆಶ್ವಾಸದಲ್ಲಿನ ಈ ಭಾಗವನ್ನು ನೋಡಬಹುದು.

ವ ॥ ಅಂತು ಪೊಕ್ಕಾತನಾತ್ಮೀಯಸ್ವಾಮಿಯಂ ಜ್ವಲನಜಟಿಮಹಾರಾಜನಂ ಸರ್ವಾಂಗ ಪ್ರಣುತನಾಗಿ ಕಂಡು ತನ್ನ ಕೆಯ್ಯೊಳಾ ಪ್ರಜಾಪತಿ ಮಹಿಪತಿಯಟ್ಟಿವು ಪಳಾರತ್ನಮಂ ತೋಱಿ ಪೋದ ಬಂದ ವೃತ್ತಾಂತಮುಮಂ ಪೌದನ ಪುರೇಶನ ಮನಃಪ್ರಮೋದಮುಮಂ ತಿಳಿಯೆ ಪೇೞ್ದೆಯೆಡೆಯೊಳೆನಿಸುಂ ವಿಳಂಬಮಂ ಮಾಡದೆ ಮದುವೆಗೆಪ್ಪ ಸಾಮಗ್ರಿಯಂ ಮಾಡಿ ಬಿಜಯಂಗೆಯ್ವುದೆಂದು ಬಿನ್ನವಿಸಿದಾಗಳೂ ಎನಿತೊಳವುಂ ಚರಲೋಕದೊಳನಿತುಂ ವಸ್ತುಗಳನೆಯ್ದೆ ತರಿಸಿ ಮಹಾತ್ವಂ ತನುಜೆಯ ವಿವಾಹಕಾರ್ಯಕ್ಕನುಕೂಳದೊಳಾ ಖಗೇಶ್ವರಂ ಪೊಱಮಟ್ಟಂ

ಇನ್ನು ಅಧಿಕ ಪಾಠಗಳ ವಿಚಾರ. ಒಂದು ಪ್ರತಿಯಲ್ಲಿ ಇಲ್ಲದ ಪದ್ಯಗಳು, ಅಧ್ಯಾಯಗಳು, ಬೇರೊಂದು ಪ್ರತಿಯಲ್ಲಿ ಕಾಣಿಸಿದಾಗ ಕವಿಯ ಮೂಲ ಪ್ರತಿಯಲ್ಲಿ ಆ ಭಾಗಗಳು ಇದ್ದುವೆ, ಇಲ್ಲವೆ ಎಂಬ ಸಂದೇಹ ಮೂಡುತ್ತದೆ. ಕವಿ ಹೇಳದೆ ಬಿಟ್ಟ ಅಂಶಗಳನ್ನು ಆ ಮೇಲಿನ ವಿದ್ವಾಂಸರು ಆ ಗ್ರಂಥದಲ್ಲಿ ಸೇರಿಸಲು ಬಯಸಿ ಪದ್ಯಗಳನ್ನು ರಚಿಸಿ ಸೇರಿಸಿರಬಹುದು. ಇಂಥವನ್ನು ಪ್ರಕ್ಷೇಪಗಳೆಂದು ಕರೆಯುವುದು ವಾಡಿಕೆ. ನಮ್ಮ ನಾಡಿನಲ್ಲಿ ಪ್ರಖ್ಯಾತ ಗ್ರಂಥಗಳಾದ ರಾಮಾಯಣ, ಭಾರತ, ಭಾಗವತಗಳಲ್ಲಿಯೇ ಇಂಥ ಪ್ರಕ್ಷಿಪ್ತ ಭಾಗಗಳಿವೆಯೆಂಬುದು ತಿಳಿದ ವಿಚಾರ. ಆದರೆ ಇಂಥ ಪ್ರಕ್ಷಿಪ್ತ ಭಾಗಗಳನ್ನು ರಚಿಸಿದವನೂ ಸಮರ್ಥ ಕವಿಯಾಗಿದ್ದರೆ, ಯಾವುದು ಮೂಲಪಾಠ, ಯಾವುದು ಆಮೇಲೆ ಸೇರಿದ ಅಧಿಕಪಾಠ ಎಂದು ನಿರ್ಧರಿಸುವುದು ತುಂಬ ಕಷ್ಟವಾಗಬಹುದು. ಕುಮಾರವ್ಯಾಸನ



ಗದಾಯುದ್ಧದ ಓಲೆಗರಿ (ಪತ್ರ 7). ಕಾಲ ನಮೂದಿತ ಕನ್ನಡ ಓಲೆಯಲ್ಲಿ ಇದೇ ಅತ್ಯಂತ ಪ್ರಾಚೀನವಾದುದು (ಪ್ರ.ಶ. 1342). ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಭಂಡಾರದಲ್ಲಿದೆ (K 757). ಅಳತೆ 25x4.5 ಸೆಂಮೀ

ಇಲ್ಲಿ ಇದಿಷ್ಟೂ ಒಂದೇ ವಚನವಾಗಿದ್ದು ಬಿನ್ನವಿಸಿದಾಗಳೂ ಎಂಬುದನ್ನು ಬಿನ್ನವಿಸಿದಾಗಳ್ ಎಂದು ತಿದ್ದುವುದನ್ನು ಬಿಟ್ಟರೆ ಇನ್ನೇನೂ ತೊಂದರೆ ಕಾಣುವುದಿಲ್ಲ. ಆದರೆ, ಸರಿಯಾದ ಸಂಪಾದಕ ಈ ವಚನದಲ್ಲಿ ಸೇರಿಹೋಗಿರುವ ಕಂದಪದ್ಯವನ್ನು ಗುರುತಿಸದೆ ಇರಲಾರ. ಬಿನ್ನವಿಸಿದಾಗಳ್ ಎಂಬುದರ ಅನಂತರ

ಎನಿತೊಳವುಂ ಚರಲೋಕದೊ
ಳನಿತುಂ ವಸ್ತುಗಳನೆಯ್ದೆ ತರಿಸಿ ಮಹಾತ್ವಂ
ತನುಜೆಯ ವಿವಾಹಕಾರ್ಯ
ಕ್ಕನುಕೂಳದೊಳಾ ಖಗೇಶ್ವರಂ ಪೊಱಮಟ್ಟಂ

ಎಂಬ ಕಂದಪದ್ಯ ಕಾಣುತ್ತದೆ. ಇದರ ಮುಂದಕ್ಕೆ ಕ– ಎಂದು ಪ್ರಾರಂಭವಾಗುವ ಕಂದಪದ್ಯವನ್ನು ಛಂದಸ್ಸಿಗನುಸಾರವಾಗಿ ಬರೆದಾಗ

ತಳೆತಳೆಯೊಳ್ ಕೊಡೆಕೊಡೆಯೊಳ್
ಪಳವಿಗೆ ಪಳವಿಗೆ ವಿಭವದೊಳಿಭಸಮಿತಿಗಳಂ ತ
ಳ್ಪಳದೊಳ್ ವಿಮಾನದೊಳ್ ಬೆಂ
ಬಳಿವಿಡಿದು ವಿಮಾನಮೊಂದಿ ಸಂಧಿಸಿ ತಳರ್ದಂ

ಎಂದಾಗುತ್ತದೆ. ಇದರ ನಾಲ್ಕು ಪಾದಗಳಲ್ಲಿಯೂ ಪ್ರಾಸ ಸರಿಯಾಗಿದೆ. ಇಲ್ಲಿ ಹಸ್ತಪ್ರತಿಯಲ್ಲಿ ೞ ಪ್ರಯೋಗವಿಲ್ಲದಿದ್ದರೂ ಈ ಕಾವ್ಯದ ಕಾಲದ ದೃಷ್ಟಿಯಿಂದ ಸಂಪಾದಕ ತೞ್, ಪೞವಿಗೆ, ತಳ್ಪೞ್, ಬೞಿವಿಡಿದು ಮೊದಲಾಗಿ ೞ ಕಾರಗಳನ್ನು ಹಾಕಬೇಕಾಗುತ್ತದೆ. ಎರಡನೆಯ ಪಾದದಲ್ಲಿ ಬರಬೇಕಾದ 4 ಮಾತ್ರೆಗಳ 5 ಗಣಗಳಿಗಿಂತ ಮಿಗಿಲಾಗಿರುವುದರಿಂದ ಸಂಪಾದಕ ತನ್ನ ವ್ಯುತ್ಪತ್ತಿ ಮತ್ತು ಪ್ರತಿಭೆಯಿಂದ ಕವಿಯ ಮೂಲ ಏನಿರಬಹುದು ಎಂಬುದನ್ನು ಊಹಿಸಬೇಕಾಗುತ್ತದೆ. ಹಾಗೆ ಊಹಿಸಿ ಸರಿಪಡಿಸಿದಾಗ ಪೞವಿಗೆಯೊಳ್ ಪೞವಿಗೆ ಯಿಭದೊಳಿ (ಭಂಗಳ್) ತ– ಎಂದು ಮೂರನೆಯ ಪಾದವನ್ನು ತಿದ್ದಬೇಕಾಗುತ್ತದೆ. ಹೀಗೆಯೇ ಮುಂದಣ ವಚನ ಮತ್ತು ಪದ್ಯಗಳನ್ನು ಸರಿಪಡಿಸಿ, ಕಿಱುಗೂಸಂ ಎಂದು ಮೊದಲಾಗುವ ವೃತ್ತದ ಅನಂತರ ಬರುವ ವಚನವನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಇದು ವಚನ ಎಂದಿದ್ದರೂ

ಕಂಡು ನಡೆ ನೋಡುವಬಳಾ
ಸವಿಳಾಳಸ್ಮೇರರುಚಿರ ನೇತ್ರಾಂಶುಗಳಿಂ
ಕುವಳಯವನಮಲರ್ದಂತಾ
ದುವು ತತ್ಪುರವರದ ಪಾರಜಾಳಪ್ರಕರಂ

ಎಂಬುದಾಗಿ ಕಂದಪದ್ಯವನ್ನಾಗಿ ಬರೆಯಬಹುದಾಗಿದೆ. ಇಲ್ಲಿ ಪ್ರತಿಕಾರನ ದೋಷವನ್ನು ಗುರುತಿಸಬಹುದಾಗಿದೆ. ವಚನ ಮತ್ತು ಕಂದಪದ್ಯಗಳೆರಡೂ ಪ್ರತಿಕಾರನ ಕೈಯಲ್ಲಿ ಒಂದುಗೂಡಿ ವಚನದ ಸ್ವಲ್ಪ ಭಾಗ ಮತ್ತು ಕಂದಪದ್ಯದ ಸ್ವಲ್ಪ ಭಾಗ ಸೇರಿಹೋಗಿವೆ. ನಾಲ್ಕು ಪದಗಳೂ ಕಂದಪದ್ಯದ ಛಂದಸ್ಸಿಗನುಗುಣವಾಗಿದ್ದರೂ ಇರಬೇಕಾದ ಪ್ರಾಸ ಮೊದಲ ಪಾದದಲ್ಲಿಲ್ಲ. ಇದು ಪ್ರತಿಕಾರನ ಕಣ್ಣಿನ ದೋಷದಿಂದಾದ ತಪ್ಪಾಗಿದೆ.

ಭಾರತದಲ್ಲಿ ಬಂದಿರುವ ದೂರ್ವಾಸಾತಿಥ್ಯಭಾಗ ಇಂಥ ಅಧಿಕ ಪಾಠವೆಂಬ ಹೇಳಿಕೆ ಇದೆ. ಇನ್ನು ಕೆಲವು ಸಂದರ್ಭಗಳಲ್ಲಿ ಗ್ರಂಥ ಬಹಳ ದೀರ್ಘವಾಯಿತೆನ್ನಿಸಿ ಅದನ್ನು ಸಂಕ್ಷೇಪಗೊಳಿಸಿರುವುದೂ ಉಂಟು. ಕನ್ನಡ ಭಾಗವತದ ಹನ್ನೊಂದನೆಯ ಸ್ಕಂದದಲ್ಲಿ ಮೂವತ್ತಾರು ಅಧ್ಯಾಯಗಳಿವೆ. ಹಲವು ತಾಳೆಗರಿ ಪ್ರತಿಗಳಲ್ಲಿ ಅದು ಕೇವಲ ಹದಿನೇಳು ಅಧ್ಯಾಯಗಳಿಗೆ ಸೀಮಿತವಾಗಿದೆ. ರಾಮಾಯಣ ಭಾರತಾದಿಗಳಿಗೆ ವ್ಯಾಖ್ಯಾನ ಬರೆದ ವಿದ್ವಾಂಸರು ಇಂಥ ಅಧಿಕ ಪಾಠಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.



ನಾಗವರ್ಮನ ವರ್ಧಮಾನ ಪುರಾಣದ ಕಾಗದದ ಹಸ್ತಪ್ರತಿ (ಪ್ರ.ಶ. 1567). ಮೂಡಬಿದರೆಯ ದಿಗಂಬರ ಜೈನ ಧರ್ಮಶಾಲೆಯಲ್ಲಿದೆ. ಅಳತೆ 36x14.5 ಸೆಂಮೀ

ಗ್ರಂಥ ಸಂಪಾದನೆಯ ಕ್ರಮ ಭಾರತದಲ್ಲಿ ಪೂರ್ವಿಕರಿಗೆ ಅಪರಿಚಿತವಾದ್ದೇನೂ ಆಗಿರಲಿಲ್ಲ. ಮಧ್ವಾಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯನಿರ್ಣಯ ಗ್ರಂಥದ ಆರಂಭದಲ್ಲಿ ಭಾರತದ ಮೂಲಪಾಠ ಅಥವಾ ಶುದ್ಧಪಾಠವನ್ನು ನಿರ್ಣಯಿಸುವುದಕ್ಕೆ ಇರುವ ಕ್ಲೇಶಗಳನ್ನು ವಿವರಿಸುವಾಗ ಪ್ರತಿಕಾರರು ಸಾಮಾನ್ಯವಾಗಿ ಮಾಡುವ ಬುದ್ಧಿಪೂರ್ವಕವಾದ ತಪ್ಪುಗಳನ್ನು ಪಟ್ಟಿ ಮಾಡಿ ಹೇಳಿದ್ದಾರೆ. ಹಾಗೆಯೇ ಸಾಕಷ್ಟು ಅವಧಾನವಿರದೆ ಹೋಗುವುದರಿಂದ ಆಗುವ ತಪ್ಪುಗಳನ್ನೂ ಹೇಳಿದ್ದಾರೆ. ಸಂಸ್ಕೃತದ ಹಲವು ಕಾವ್ಯಗಳಿಗೆ ಸಂಸ್ಕೃತದಲ್ಲಿಯೇ ವ್ಯಾಖ್ಯಾನ ಬರೆದ ಮಲ್ಲಿನಾಥ ಪಂಡಿತ ಇಲ್ಲಿಂದ ಮುಂದಿನ ಮೂರು ಶ್ಲೋಕಗಳು ಪ್ರಕ್ಷಿಪ್ತವಾದರೂ ಅವಕ್ಕೆ ವ್ಯಾಖ್ಯಾನ ಮಾಡುತ್ತೇನೆ ಎಂದು ಒಂದೆಡೆ ಹೇಳಿದ್ದಾನೆ. ಹೀಗೆಯೇ ಇನ್ನೂ ಅನೇಕ ಪ್ರಾಚೀನ ಕಾಲದ ಹಿರಿಯ ವಿದ್ವಾಂಸರು ಗ್ರಂಥಗಳಲ್ಲಿ ಸಂಭವಿಸಬಹುದಾದ ಗ್ರಂಥಪಾತ, ಪ್ರಕ್ಷೇಪ, ಅಪಪಾಠ ಮೊದಲಾದ ದೋಷಗಳನ್ನೂ ಅವನ್ನು ಬೇರೆ ಪ್ರತಿಗಳ ಆಧಾರದಿಂದ ತಿದ್ದುವ ಕ್ರಮವನ್ನೂ ಬಲ್ಲವರಾಗಿದ್ದರೆಂಬುದು ಖಚಿತವಾಗಿದೆ. ಏಕನಾಥನೆಂಬ ಮಹಾರಾಷ್ಟ್ರದ ಕವಿಯೊಬ್ಬ ತನ್ನ ಕಾಲಕ್ಕೇ ಜ್ಞಾನೇಶ್ವರಿಯ ಹಲವು ಪ್ರತಿಗಳು ಬಹಳ ದೋಷಯುಕ್ತವಾಗಿದ್ದುದರಿಂದ ತನಗೆ ದೊರೆತ ಆ ಗ್ರಂಥದ ಎಲ್ಲ ಪ್ರತಿಗಳನ್ನೂ ಶೇಖರಿಸಿ ಪರಿಶೀಲಿಸಿ ಶುದ್ಧ ಪಾಠವನ್ನು ಕುದುರಿಸಿದನೆಂದು ತಿಳಿಯಬಂದಿದೆ. ಆತ ಈ ಗ್ರಂಥ ಸಂಪಾದನೆಯ ಕೆಲಸದಲ್ಲಿ ಅನುಸರಿಸಿದ ಕ್ರಮಗಳ ವಿವರಣೆ ಸಿಕ್ಕಿಲ್ಲ. ಅಂಥ ವಿವರಣೆಯನ್ನು ಆತ ಬರೆದಿಟ್ಟ ಹಾಗೂ ತೋರುವುದಿಲ್ಲ. ಅದು ಲಭಿಸಿದ್ದರೆ ಭಾರತೀಯ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಒಂದು ಶಾಸ್ತ್ರಗ್ರಂಥವಾಗುತ್ತಿತ್ತು. ವ್ಯಾಕರಣಾದಿ ಶಾಸ್ತ್ರಗಳನ್ನು ವೃದ್ಧಿಪಡಿಸಿದ ಹಾಗೆ ಭಾರತೀಯರು ಗ್ರಂಥಸಂಪಾದನಶಾಸ್ತ್ರವನ್ನು ಬೆಳೆಸಲಿಲ್ಲ.

ಪಾಶ್ಚಾತ್ಯರಲ್ಲಿ ಇದು ಬಹಳ ಹಿಂದೆಯೇ ಆರಂಭವಾಯಿತು. ಗ್ರೀಸಿನ ಸಾಫೊಕ್ಲೀಸ್, ಯುರಿಪಿಡೀಸ್ ಮೊದಲಾದ ಪ್ರಾಚೀನ ಕವಿಶೇಖರರ ಕೃತಿಗಳ ಅನೇಕ ಪ್ರತಿಗಳು ಲಭಿಸಿದ್ದು ಅವುಗಳಲ್ಲಿ ಹಲವು ಭಿನ್ನ ಪಾಠಗಳಿದ್ದುದರಿಂದ ಶುದ್ಧ ಪಾಠ ಅಥವಾ ಮೂಲಪಾಠವನ್ನು ನಿರ್ಧರಿಸುವ ಅಗತ್ಯವುಂಟಾಯಿತು. ಶುದ್ಧ ಪಾಠವೇ ಮೂಲಪಾಠವಾಗಿರಬೇಕೆಂಬ ನಿಯಮವೇನೂ ಇಲ್ಲ. ಅನೇಕ ಸಂದರ್ಭಗಳಲ್ಲಿ ಮೂಲಪಾಠಗಳಲ್ಲಿ ಕೆಲವು ತಪ್ಪುಗಳೂ ಇರಬಹುದು. ಮೂಲಪಾಠಕ್ಕೆ ಅತ್ಯಂತ ಸಮೀಪಕಾಲದ ಮಾತೃಕೆಗೆ ಸರಿಯಾದ ಪಾಠವನ್ನು

ಹರಿದಾಸ ಸಾಹಿತ್ಯದ ಒಂದು ಹಸ್ತಪ್ರತಿ

ನಿರ್ಣಯಿಸಬಲ್ಲವನಾದರೆ ಸಂಪಾದಕ ತಾನು ಕೃತಕೃತ್ಯನೆಂದು ಭಾವಿಸಿಕೊಳ್ಳಬಹುದು. ಪ್ರಾಚೀನ ಗ್ರೀಸಿನ ಸಾಕ್ರಟೀಸ್ ತನ್ನ ತತ್ತ್ವಗಳನ್ನು ಶಿಷ್ಯರಿಗೆ ನೇರವಾಗಿ ಉಪದೇಶ ಮಾಡಿದನೇ ಹೊರತು ಅವನ್ನು ತಾನೇ ಬರೆದಿಡಲಿಲ್ಲ; ಪ್ಲೇಟೊ ಮೊದಲಾದ ಅವನ ಶಿಷ್ಯರು ಬರೆದಿಟ್ಟ ಗ್ರಂಥಗಳಿಂದ ಸಾಕ್ರಟೀಸನ ತತ್ತ್ವಸ್ವರೂಪವನ್ನು ನಿರ್ಣಯಿಸಿಕೊಳ್ಳಬೇಕಾಯಿತು. ಇನ್ನು ಕ್ರೈಸ್ತರ ಪೂಜ್ಯ ಗ್ರಂಥವಾದ ಬೈಬಲ್ಲನ್ನು ಪ್ರತಿ ಮಾಡಿದವರು ಅನೇಕರು. ಅದರ ಅನೇಕ ಪ್ರತಿಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಮೂಲಗ್ರಂಥದ ಸ್ವರೂಪವನ್ನು ನಿರ್ಧರಿಸಬೇಕಾಯಿತು. ಮೇರು ಸದೃಶವಾದ ಈ ಮಹಾಕಾರ್ಯವನ್ನು ಯೂರೋಪಿನ ಪ್ರಾಚೀನ ವಿದ್ವಾಂಸರು ಮಾಡುವಾಗ ಅನುಸರಿಸಿದ ವಿಧಿವಿಧಾನಗಳು ಪ್ರಸಿದ್ಧವಾಗಿ ಗ್ರಂಥಸಂಪಾದನಕ್ರಮ ರೂಢಿಗೆ ಬಂದಿತು. ಇಂಗ್ಲಿಷಿನಲ್ಲಿಯೂ ಇತರ ಐರೋಪ್ಯ ಭಾಷೆಗಳಲ್ಲಿಯೂ ಈ ವಿಷಯವನ್ನು ಕುರಿತು ಹಲವು ಪ್ರೌಢಗ್ರಂಥಗಳು ರಚಿತವಾಗಿವೆ.

ಗ್ರಂಥ ಸಂಪಾದನಕಾರ್ಯವನ್ನು ಸಾಮಾನ್ಯವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಹಂತಕ್ಕೆ ಸಾಮಗ್ರಿಸಂಕಲನ ಎಂದು ಹೆಸರು. ಮೊದಲು ಗ್ರಂಥದ ಲಭ್ಯ ಪ್ರತಿಗಳನ್ನೆಲ್ಲ ಸಂಗ್ರಹಿಸಬೇಕು. ಎಲ್ಲ ಲಿಖಿತ ಸಾಮಗ್ರಿಗಳನ್ನೂ ಒಂದೆಡೆಯಲ್ಲಿ ಸೇರಿಸಿ ಪರಿಶೀಲನೆ ನಡೆಸಿ ಅವನ್ನು ಕಾಲಾನುಗುಣವಾಗಿ ವರ್ಗೀಕರಿಸಬೇಕು. ಅವುಗಳಲ್ಲಿ ಯಾವುದು ಅತ್ಯಂತ ಪ್ರಾಚೀನ, ಅದರ ನೇರವಿರದ ನಕಲುಗಳು ಯಾವುವು – ಎಂಬುದನ್ನೆಲ್ಲ ವಿಚಾರ ಮಾಡಿ ಪ್ರತಿಗಳ ಪರಸ್ಪರ ಸಂಬಂಧ ಮತ್ತು ಪೀಳಿಗೆಗಳನ್ನು ರಚಿಸಬೇಕು.

ಸಾಮಗ್ರಿಸಂಕಲನವಾದ ಮೇಲೆ ಅವುಗಳ ವಿಭಿನ್ನ ಪಾಠಗಳ ಪರಂಪರೆಯ ಅವಲೋಕನದಿಂದ ಗ್ರಂಥದ ಮೂಲಪಾಠ ಅಥವಾ ಪ್ರಧಾನ ಮಾತೃಕೆಯ ಪಾಠವೇನಿರಬಹುದೆಂಬುದನ್ನು ಕಂಡುಹಿಡಿಯುವುದು ಎರಡನೆಯ ಹಂತ. ಇದು ಬಹಳ ಸೂಕ್ಷ್ಮವಾದ ಕೆಲಸ; ಬಹಳ ಕಷ್ಟದ ಕೆಲಸವೂ ಹೌದು. ಡಿ.ಎಲ್. ನರಸಿಂಹಾಚಾರ್ಯರು ಹೇಳಿರುವಂತೆ ಇದು ಜೀರ್ಣ ದೇವಾಲಯವನ್ನು ಉದ್ಧಾರ ಮಾಡುವ ಕಾರ್ಯ ಎಷ್ಟು ಪವಿತ್ರವೊ ಅಷ್ಟೇ ಪುಣ್ಯಕರವಾದದ್ದು. ಪಾಠ ಪರಿಷ್ಕರಣ ಕಾರ್ಯ ನದಿಯ ಜನ್ಮಸ್ಥಾನದಿಂದ ಹೊರಟು ಅದರ ಶಾಖೋಪಶಾಖೆಗಳಲ್ಲಿ ಸಂಚಾರ ಮಾಡುವುದಕ್ಕೆ ಪ್ರತಿಯಾಗಿ ಶಾಖೋಪಶಾಖೆಗಳ ಮಾರ್ಗವಾಗಿ ನಡೆದು ಜನ್ಮಸ್ಥಾನವನ್ನು ಮುಟ್ಟುವಂಥ ಶ್ರಮಸಾಧ್ಯವಾದ ಸಾಹಸ. ಈ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಸಂಪಾದಕ ಆ ಭಾಷೆಯಲ್ಲಿ ಪಂಡಿತನಾಗಿದ್ದು ಕವಿಯ ಹಿನ್ನೆಲೆಯನ್ನು ಅರಿತುಕೊಂಡು ಕವಿಯ ಸಂಪ್ರದಾಯವನ್ನು ಬಲ್ಲವನಾಗಬೇಕು. ಕವಿಹೃದಯವನ್ನು ಬಲ್ಲವನಾದ ಪಂಡಿತಸಂಪಾದಕ ಕವಿಯ ಆಲೋಚನಾ ಕ್ರಮಕ್ಕೆ ಅನುಗುಣವಾದ ಪಾಠಗಳನ್ನೇ ಆರಿಸಿಕೊಳ್ಳಬಲ್ಲವನಾಗಿರುತ್ತಾನೆ. ಅವನು ಸುಲಭತೃಪ್ತನಾಗದೆ ಲಭ್ಯವಾದ ಎಲ್ಲ ಪಾಠಗಳನ್ನೂ ಗಮನವಿಟ್ಟು ಪರೀಕ್ಷಿಸಿ ನಿಜವಾದ ಪಾಠವನ್ನು ಆರಿಸಬೇಕು. ಮೂಲಪಾಠ ನಿರ್ಣಯವಾದ ಮೇಲೆಯೂ ಗ್ರಂಥದಲ್ಲಿ ಕೆಲವು ತಪ್ಪುಗಳು ಉಳಿಯುವ ಸಂಭವ ಉಂಟು. ಅಂಥ ಪಾಠಕ್ಲೇಶಗಳನ್ನು ಪರಿಹರಿಸುವುದೇ ಗ್ರಂಥ ಸಂಪಾದನೆಯ ಮೂರನೆಯ ಹಂತ. ಇದನ್ನು ಪಾಠಸಂಯೋಜನೆಯೆಂದು ಕರೆಯಲಾಗಿದೆ. ಕೆಲವು ವೇಳೆ ಪಾಠಾಂತರಗಳೇ ಇರುವುದಿಲ್ಲ. ಗ್ರಂಥದಲ್ಲಿ ಇರುವ ಒಂದು ಪಾಠ ಅರ್ಥವಾಗುವಂತಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಊಹಾತ್ಮಕವಾದ ಪರಿಷ್ಕರಣವೊಂದೇ ಸಂಪಾದಕನಿಗೆ ಉಳಿದಿರುವ ದಾರಿ. ಈ ದಾರಿಯನ್ನು ಅನುಸರಿಸುವ ಸಂಪಾದಕ ಬಹಳ ಎಚ್ಚರದಿಂದ ಮುಂದುವರಿಯಬೇಕಾಗುತ್ತದೆ. ಅದು ಕವಿಯ ಪಾಠವಲ್ಲವೆಂದೂ ಸಂಪಾದಕನೇ ಸಂಯೋಜನೆ ಮಾಡಿದ ಪಾಠವೆಂದೂ ತಿಳಿಸಬೇಕಲ್ಲದೆ ಅರ್ಥವಾಗದ ಮೂಲಪಾಠವನ್ನು ಗ್ರಂಥದ ಅಡಿ ಟಿಪ್ಪಣಿಯಲ್ಲಿ ಕೊಡಬೇಕು. ಇಂಥ ಸಂಯೋಜಿತ ಪಾಠ ಅಂತಸ್ಸಂಭಾವ್ಯತೆಯನ್ನು ಪಡೆದಿರಬೇಕಲ್ಲದೆ ಪ್ರತಿಕಾರರು ಸಾಧಾರಣವಾಗಿ ಮಾಡುವ ದೋಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ನಿಯಮಗಳಿಗೆ ಅನುಗುಣವಾಗಿ ಜೋಡಿಸಿದ್ದಾಗಬೇಕು. ಅನೇಕರು ಇಂಥ ಊಹಾತ್ಮಕ ಪರಿಷ್ಕರಣಗಳನ್ನು ಒಪ್ಪುವುದಿಲ್ಲ. ಇದರಿಂದ ಮೂಲಪಾಠವನ್ನು ಸ್ವಲ್ಪವೂ ವ್ಯತ್ಯಾಸಗೊಳಿಸಲಾಗದೆಂಬ ನಿಷ್ಠುರ ಸೂತ್ರಕ್ಕೆ ಭಂಗಬರುವುದೆಂದು ಅವರ ವಾದ. ಹಾಗೆ ಪರಿಷ್ಕರಿಸದೆ ಬಿಟ್ಟುಬಿಟ್ಟರೆ ಅನೇಕ ಅಪಪಾಠಗಳು ಎಲ್ಲ ಕಾಲಕ್ಕೂ ಸ್ಥಿರವಾಗಿ ಉಳಿದುಬಿಡುತ್ತವೆ. ಅವುಗಳ ದೆಸೆಯಿಂದ ಕಾವ್ಯದ ಸ್ವಾರಸ್ಯಾನುಭೂತಿಗೆ ಕಂಟಕವಾಗುತ್ತದೆ. ಆದ್ದರಿಂದ ಈ ಊಹಾತ್ಮಕ ಪರಿಷ್ಕರಣಗಳನ್ನು ಅತ್ಯಂತ ಮಿತವಾಗಿ, ತೀರ ಅನಿವಾರ್ಯವಾದ ಪ್ರಸಂಗಗಳಲ್ಲಿ ಮಾತ್ರ ಮಾಡುವ ನಿಯಮವನ್ನು ಪರಿಪಾಲಿಸಬೇಕು. ಇವು ಅತಿಯಾದರೆ ಮೂಲಕೃತಿಯ ರೂಪವೇ ನಷ್ಟವಾಗಿ ಬಿಡಬಹುದು. ಇರುವ ಪಾಠಕ್ಕೆ ಅರ್ಥಕಲ್ಪನೆ ಮಾಡಬೇಕೇ ಹೊರತು ಹೊಸ ಪಾಠಗಳನ್ನು ಜೋಡಿಸಬಾರದೆಂಬ ನೀತಿ ಮೆಚ್ಚತಕ್ಕದ್ದೇ. ಆದರೆ ಹಾಗೆ ಅರ್ಥಮಾಡುವಾಗ ಸಹಜತೆಗೆ ಭಂಗ ಬರಬಾರದು. ಅರ್ಥಕಲ್ಪನೆ ವ್ಯಾಖ್ಯಾನಕಾರನ ಚಮತ್ಕಾರವನ್ನೂ ಪಾಂಡಿತ್ಯವನ್ನೂ ಮೆರೆಯುವ ಒಂದು ಅವಕಾಶವಾಗಬಾರದು. ಕವಿ ಉದ್ದೇಶಪಡದಿರಬಹುದಾದ ಅರ್ಥವನ್ನು ಆ ಕಾವ್ಯಪಾಠದ ಮೇಲೆ ಬಲವಂತವಾಗಿ ಹೇರಬಾರದು. ಹಾಗೆ ಮಾಡುವುದಕ್ಕಿಂತ ಸುಸಂಸ್ಕೃತನೂ ಉತ್ತಮ ಕಾವ್ಯಾಭಿರುಚಿ ಯುಳ್ಳವನೂ ಆದ ಉತ್ತಮ ಸಂಪಾದಕ ಮಾಡುವ ಪಾಠಸಂಯೋಜನೆಯೇ ಶ್ರೇಷ್ಠ.

ಇನ್ನು, ಗ್ರಂಥಸಂಪಾದನೆಯ ನಾಲ್ಕನೆಯ ಹಂತ ಉನ್ನತ ವಿಮರ್ಶೆ. ಇಲ್ಲಿ ಕೃತಿಯ ಮೂಲ ಆಕರಗಳು ಯಾವುವಿರಬಹುದೆಂಬ ವಿಶ್ಲೇಷಣೆ ಮೊದಲ ಭಾಗ. ಕೃತಿಯ ವಸ್ತು, ರಸ, ಮೌಲ್ಯಗಳನ್ನು ನಿಷ್ಕರ್ಷೆ ಮಾಡುವ ಕಾರ್ಯ ಎರಡನೆಯದು. ಇದು ಬಹಳ ನಾಜೂಕಿನ ಕೆಲಸ. ಇದನ್ನು ಹೀಗೆಯೇ ಮಾಡಬೇಕೆಂದು ನಿಯಮ ಮಾಡುವುದು ಸಾಧುವಲ್ಲ. ಶಾಸ್ತ್ರಜ್ಞರ ಹಿಡಿತಕ್ಕೆ ಇದು ಸಿಕ್ಕುವ ವಿಚಾರವೂ ಅಲ್ಲ. ಈ ಕಾರ್ಯದಲ್ಲಿ ಸಂಪಾದಕನ ಆಳವಾದ ಸಾಹಿತ್ಯಾಭ್ಯಾಸ, ಅಭಿರುಚಿ, ಸಂಸ್ಕೃತಿ, ಕವಿಯ ದೇಶಕಾಲಗಳ ಅರಿವು ಆ ಕಾಲದ ಇತಿಹಾಸದ ತಿಳಿವಳಿಕೆ – ಎಲ್ಲವೂ ಇಲ್ಲಿ ತಮ್ಮ ಪ್ರಭಾವವನ್ನು ಬೀರುತ್ತವೆ.

ಪಾಶ್ಚಾತ್ಯ ವಿದ್ವಾಂಸರು ಬೆಳೆಸಿಕೊಂಡು ಬಂದ ಈ ಗ್ರಂಥ ಸಂಪಾದನಶಾಸ್ತ್ರದ ಪರಿಚಯ ಪಡೆದು ಅದನ್ನು ಭರತಖಂಡದ ಸ್ಥಿತಿಗತಿಗಳಿಗೆ ಹೊಂದಿಸಿಕೊಂಡು ನಮ್ಮ ನಾಡಿನ ಹಲವು ಪ್ರಾಚೀನ ಗ್ರಂಥಗಳ ಪರಿಷ್ಕರಣ ಕಾರ್ಯವನ್ನು ಕೈಕೊಂಡ ವಿದ್ವಾಂಸರನ್ನು ಇಲ್ಲಿ ಸ್ಮರಿಸಬೇಕು. ಮಹಾಭಾರತದ ವಿಭಿನ್ನ ಪಾಠಸಂಪ್ರದಾಯಗಳ ಅನೇಕಾನೇಕ ಪ್ರತಿಗಳನ್ನು ಸಂಗ್ರಹಿಸಿ ಅವನ್ನೆಲ್ಲ ಸಕ್ರಮವಾಗಿ ಶೋಧಿಸಿ ಮೂಲಪಾಠವನ್ನು ನಿರ್ಣಯಿಸುವ ಅಗಾಧವಾದ ಕಾರ್ಯವನ್ನು ನಡೆಸಿದ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ವಿ.ಎಸ್. ಸುಕ್ಥಂಕರ್ ತಾವು ಸಂಪಾದಿಸಿದ ಆದಿಪರ್ವಕ್ಕೆ ಬರೆದ ಪೀಠಿಕೆ ಭಾರತೀಯ ಗ್ರಂಥಸಂಪಾದನಶಾಸ್ತ್ರಕ್ಕೆ ನೀಡಿದ ಮಹತ್ತ್ವದ ಕಾಣಿಕೆಯಾಗಿದೆ. ಇವರಲ್ಲದೆ ಲಕ್ಷ್ಮಣ ಸರೂಪ್, ಕೆ.ಎಂ. ಕತ್ರೆ ಮೊದಲಾದ ಅನೇಕ ವಿದ್ವಾಂಸರು ಈ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದ್ದಾರೆ.

ಕನ್ನಡದ ಅನೇಕ ಪ್ರಾಚೀನ ಕಾವ್ಯಗಳನ್ನೂ ಶಾಸನಗಳನ್ನೂ ಶೋಧಿಸಿ ಪ್ರಕಟಿಸುವ ಕಾರ್ಯವನ್ನು ಕೈಗೊಂಡು ಈ ಕ್ಷೇತ್ರದಲ್ಲಿ ಆದ್ಯ ಪ್ರವರ್ತಕರಾದ ಕಿಟ್ಟೆಲ್, ಬಿ.ಎಲ್. ರೈಸ್, ಆರ್. ನರಸಿಂಹಾಚಾರ್ಯ, ಬಿ. ಮಲ್ಲಪ್ಪ, ಟಿ.ಎಸ್, ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರೀ ಮೊದಲಾದ ಮಹನೀಯರೂ ವಡ್ಡಾರಾಧನೆ, ಸಿದ್ಧರಾಮಚರಿತೆ, ಪಂಪರಾಮಾಯಣಸಂಗ್ರಹ, ಶಬ್ದಮಣಿದರ್ಪಣ ಮೊದಲಾದ ಹಲವು ಕೃತಿಗಳನ್ನು ಪರಿಶೋಧಿಸಿ ಗ್ರಂಥ ಸಂಪಾದನೆ ಎಂಬ ಒಂದು ಗ್ರಂಥವನ್ನು ರಚಿಸಿದ ಡಿ.ಎಲ್. ನರಸಿಂಹಾಚಾರ್ಯರೂ ಕನ್ನಡಿಗರ ಕೃತಜ್ಞತೆಗೆ ಪಾತ್ರರು. (ಕೆ.ವಿಇ.)

**ಕನ್ನಡದಲ್ಲಿ ಗ್ರಂಥಸಂಪಾದನೆ:** ಕನ್ನಡದಲ್ಲಿ ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿ ಬೆಳೆದಿದೆ. ಮುದ್ರಣಸೌಲಭ್ಯವಿಲ್ಲದ ಕಾಲದಲ್ಲಿ ಗ್ರಂಥಗಳನ್ನು ಓಲೆಗರಿಗಳಲ್ಲಿ ಬರೆದಿಡಲಾಗುತ್ತಿತ್ತು. ಇದಕ್ಕಾಗಿ ನಿಯತವಾಗಿ ಪ್ರತಿಕಾರರೇ ಇರುತ್ತಿದ್ದರು. ಇಂಥ ಪ್ರತಿಕಾರರಿಂದಲೇ ದಾನಚಿಂತಾಮಣಿ ಅತ್ತಿಮಬ್ಬೆ, ಪೊನ್ನನ ಶಾಂತಿಪುರಾಣದ ಸಹಸ್ರ ಪ್ರತಿಗಳನ್ನು ಮಾಡಿಸಿ ಹಂಚಿದ ವಿಷಯ ಇತಿಹಾಸ ಪ್ರಸಿದ್ಧವಾಗಿದೆ. ಹೀಗೆ ಪ್ರತಿ ಮಾಡುವಾಗ ಕೈ ತಪ್ಪಿನಿಂದಲೋ ಅನವಧಾನದಿಂದಲೋ ಕೆಲವು ದೋಷಗಳು ಉಂಟಾಗುತ್ತವೆ. ಕೆಲವು ಪ್ರೌಢ ಪ್ರತಿಕಾರರು ಬುದ್ಧಿ ಪೂರ್ವಕವಾಗಿಯೇ ಕೆಲವು ತಿದ್ದುಪಡಿ ಮಾಡಿರುವುದೂ ಹಲವಾರು ಪದ್ಯಗಳನ್ನೂ ಪದ್ಯಭಾಗಗಳನ್ನೂ ಹೊಸದಾಗಿ ಸೇರಿಸಿರುವುದೂ ಕಂಡುಬರುತ್ತದೆ. ಇಂಥ ಕಾರ್ಯದಿಂದ

ಮೂಲಗ್ರಂಥಗಳ ಸ್ವರೂಪ ಬದಲಾಗಿ ಮೂಲಕರ್ತೃವಿನ ಪಾಠವೇನಿರಬಹುದೆಂಬ ಸಮಸ್ಯೆ ತಲೆದೋರುತ್ತದೆ. ಇಂಥ ಗ್ರಂಥದ ಹಲವು ಪ್ರತಿಗಳ ಸಹಾಯದಿಂದ ಮೂಲಪಾಠವನ್ನು ನಿರ್ಣಯಿಸಿ, ಕೃತಿಯ ಪರಿಚಯ ವಿಮರ್ಶೆ ಮೊದಲಾದವುಗಳೊಡನೆ ಗ್ರಂಥವನ್ನು ಹೊರತರುವುದೇ ಸಂಪಾದನಾ ಕಾರ್ಯ. ಈ ನಿಟ್ಟಿನಲ್ಲಿ ಅನುಸರಿಸಬೇಕಾದ ಮೂಲ ತತ್ತ್ವಗಳೇ ಸಂಪಾದನಾ ಶಾಸ್ತ್ರದ ನಿಯಮಗಳಾಗಿವೆ.

ಭಾರತದಲ್ಲಿ 19ನೆಯ ಶತಮಾನದ ಆದಿಭಾಗದಲ್ಲಿ ಮ್ಯಾಕ್ಸ್ ಮುಲ್ಲರ್, ಬ್ಯೂಲರ್ ಮೊದಲಾದ ವಿದೇಶಿ ವಿದ್ವಾಂಸರು ಹಾಗೂ ಪಿ.ಎಲ್.ವೈದ್ಯ, ಎಸ್.ಎಂ.ಕತ್ರೆ ಮೊದಲಾದ ಸ್ವದೇಶೀ ವಿದ್ವಾಂಸರಿಂದ ಗ್ರಂಥಸಂಪಾದನೆ ಕಾರ್ಯ ಒಂದು ಸ್ವರೂಪವನ್ನು ಪಡೆಯಿತು. ಇದನ್ನೇ ಕನ್ನಡದಲ್ಲಿಯೂ ವಿದ್ವಾಂಸರು ಆದರ್ಶವಾಗಿ ತೆಗೆದುಕೊಂಡರು. ಆದರೆ ಈ ಕಾರ್ಯ ಬಹು ಹಿಂದಿನಿಂದಲೂ ಭಾರತದಲ್ಲಿ ನಡೆಯುತ್ತಲೇ ಬಂದಿರುವುದನ್ನು ಯಾರೂ ಮರೆಯುವಂತಿಲ್ಲ. ಏಕೆಂದರೆ ಸು. 1400ರಲ್ಲಿದ್ದ ಮಲ್ಲಿನಾಥ ಮೇಘದೂತದಲ್ಲಿಯ ಪೂರ್ವಮೇಘದಲ್ಲಿನ ಕೆಲವು ಶ್ಲೋಕಗಳನ್ನು ಪ್ರಕ್ಷಿಪ್ತವೆಂದು ಗುರುತಿಸಿದ್ದಾನೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ನಾವು ಕನ್ನಡ ಗ್ರಂಥಸಂಪಾದನೆಯ ಪ್ರಗತಿಯಲ್ಲಿ ಹಲವಾರು ಹಂತಗಳನ್ನು ಗುರುತಿಸಬಹುದು.

ಮುದ್ರಣ ಉಪಯೋಗ ಪಾಶ್ಚಾತ್ಯ ದೇಶಗಳಲ್ಲಿ 1457ರ ವೇಳೆಗೆ ಆರಂಭವಾದರೂ ಅದು ಕನ್ನಡ ಭಾಷೆಗೆ ಲಭ್ಯವಾದದ್ದು 1817ರಲ್ಲಿ. ಬಂಗಾಲದ ಶ್ರೀರಾಮಪುರದಲ್ಲಿ ಕ್ರೈಸ್ತಮತ ಪ್ರಚಾರಕನಾಗಿದ್ದ ವಿಲಿಯಂ ಕೇರಿ ಎಂಬುವನು ತನ್ನ ಹಿಸ್ಟರಿ ಆಫ್ ಕರ್ನಾಟ ಲಾಂಗ್ವೇಜ್ ಎಂಬ ಪುಸ್ತಕಕ್ಕೆ ಕನ್ನಡದ ಅಚ್ಚುಮೊಳೆಗಳನ್ನು ಪ್ರಥಮ ಬಾರಿಗೆ (1817ರಲ್ಲಿ) ಬಳಸಿದಂತೆ ತಿಳಿಯುತ್ತದೆ. ಅನಂತರ ಜಾನ್ ಮೆಕ್ಕೆರಲ್ ಎಂಬಾತ ಬರೆದ ಗ್ರಾಮರ್ ಆಫ್ ದಿ ಕರ್ನಾಟಿಕ ಲಾಂಗ್ವೇಜ್ ಎಂಬ ಮತ್ತೊಂದು ಕೃತಿ 1820ರಲ್ಲಿ ಮದರಾಸಿನಲ್ಲಿ (ಚೆನ್ನೈ) ಪ್ರಕಾಶಿತವಾಯಿತು. 1824ರಲ್ಲಿ ವಿಲಿಯಂರೀವ್ ಎಂಬುವನಿಂದ ರಚಿತವಾದ ಇಂಗ್ಲಿಷ್ – ಕನ್ನಡ ನಿಘಂಟು, 1832ರಲ್ಲಿ ಆತನಿಂದಲೇ ರಚಿತವಾದ ಕನ್ನಡ – ಇಂಗ್ಲಿಷ್ ನಿಘಂಟು ಪ್ರಕಟವಾದವು. ಅನಂತರ ಶ್ರೀರಂಗಪಟ್ಟಣದ ಕೃಷ್ಣಮಾಚಾರಿಯ 'ಹೊಸಗನ್ನಡ ನುಡಿಗನ್ನಡಿ' ಎಂಬ ಅಪೂರ್ವ ಕೃತಿ 1838ರಲ್ಲಿ ಮದರಾಸಿನಲ್ಲಿ ಮುದ್ರಿತವಾಯಿತು. ಇದಕ್ಕೂ ಮುಂಚೆ ಬಳ್ಳಾರಿಯಲ್ಲಿ ಕ್ರಿಶ್ಚಿಯನ್ನರ ಮೇಲ್ವಿಚಾರಣೆಯಲ್ಲಿ 1820ರಲ್ಲಿ ಬೈಬಲ್‌ನ ಕನ್ನಡ ಅನುವಾದವೊಂದು ತೆಲುಗು ಲಿಪಿಯಲ್ಲಿ ಪ್ರಕಟವಾಗಿತ್ತು.

ಆದರೆ ಪೂರ್ವಗ್ರಂಥಗಳನ್ನೂ ಬಿಡಿ ಹಾಡುಗಳನ್ನೂ ಸಂಕಲಿಸಿ ಪ್ರಕಟಿಸುವ ಸಂಪಾದನಾಕಾರ್ಯ ಮೊದಲುಗೊಂಡದ್ದು 1841ರಲ್ಲಿ ಮಂಗಳೂರಿನಲ್ಲಿ ಜರ್ಮನ್ ಮಿಶನರಿಯವರು ತೆರೆದ ಮುದ್ರಣಶಾಲೆಯದ ಮೂಲಕ. ಇವರು ಜನಪ್ರಿಯವಾದ ತುಳು ಕೀರ್ತನೆಗಳು, ಗಾದೆಗಳು, ದಾಸರ ಪದಗಳು ಹಾಗೂ ಜೈಮಿನಿ ಭಾರತ (1848), ಬಸವಪುರಾಣ (1850), ಕುಮಾರವ್ಯಾಸ ಭಾರತ (1851), ಚೆನ್ನಬಸವ ಪುರಾಣ (1851) – ಈ ಗ್ರಂಥಗಳನ್ನು ಕಲ್ಲಚ್ಚಿನ ಮೂಲಕ ಹೊರತಂದರು. ಮೊದಮೊದಲು ಶುದ್ಧವೋ ಅಶುದ್ಧವೋ ಜನತೆಗೆ ಗ್ರಂಥಗಳು ದೊರೆಯುವಂತಾಗಬೇಕೆಂಬ ಹಂಬಲದಿಂದ ಓಲೆಕಟ್ಟುಗಳಲ್ಲಿದ್ದುದನ್ನು ಮುದ್ರಿಸತೊಡಗಿದರು. ಆದರೆ ಮುದ್ರಿತ ಅನಂತರದಲ್ಲಿ ರೆವರೆಂಡ್ ಎಫ್. ಕಿಟ್ಟೆಲ್, ಬಿ.ಎಲ್. ರೈಸ್ ಮೊದಲಾದ ವಿದ್ವಾಂಸರು ಲಭ್ಯ ಹಸ್ತಪ್ರತಿಗಳನ್ನೆಲ್ಲ ಸಂಗ್ರಹಿಸಿ, ಅವುಗಳನ್ನು ಪರಸ್ಪರ ಪರಿಶೀಲಿಸಿ, ಮೂಲಪಾಠಗಳನ್ನು ನಿರ್ಣಯಿಸಿ, ಕೃತಿಯ ಪರಿಚಯ, ವಿಮರ್ಶೆ ಮೊದಲಾದ ಸೂಕ್ತ ಪೀಠಿಕೆಯೊಡನೆ ಗ್ರಂಥಗಳನ್ನು ಓದುಗರಿಗೆ ಒದಗಿಸಲು ಬದ್ಧಕಂಕಣರಾದರು. ಹಾಗಾಗಿ ಜೆ.ಗ್ಯಾರೆಟ್ ಎಂಬುವರು 1868ರಲ್ಲಿ ಪ್ರಕಟಿಸಿದ್ದ ಕೇಶಿರಾಜನ ಶಬ್ದಮಣಿದರ್ಪಣವನ್ನು ಅನಂತರ ಕಿಟ್ಟೆಲ್ಲರು ಒಂಬತ್ತು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಿ ಪ್ರಕಟಿಸಿದರು (1872). ಮೂಲಪಾಠ ನಿಷ್ಕರ್ಷೆಯಲ್ಲಿ ತಾವು ಅಗಾಧ ಕಷ್ಟವನ್ನು ಅನುಭವಿಸಿರುವುದಾಗಿ, ತೊಳಲಾಟಕ್ಕೆ ಸಿಕ್ಕಿರುವುದಾಗಿ ಅವರು ಪೀಠಿಕೆಯಲ್ಲಿ ಹೇಳಿಕೊಂಡಿದ್ದಾರೆ. ಈ ಗ್ರಂಥವನ್ನೇ ಮತ್ತೆ ಸಂಪಾದಿಸಿದ ಡಿ.ಎಲ್. ನರಸಿಂಹಾಚಾರ್ಯರು ಪೀಠಿಕೆಯಲ್ಲಿ 'ಕೇಶಿರಾಜನ ಸ್ವಹಸ್ತಪ್ರತಿಯ' ಸ್ವರೂಪವನ್ನು ಕಂಡುಹಿಡಿಯುವುದಕ್ಕೂ ಅದು ಸಾಧ್ಯವಾಗದಿದ್ದಲ್ಲಿ ಅದಕ್ಕೆ ಅತಿ ಸಮೀಪವಾದ ಪಾಠವನ್ನು ಗೊತ್ತುಪಡಿಸುವುದಕ್ಕೂ ಪಾಠ ಸಮಸ್ಯೆಗಳ ವಿಶದೀಕರಣಕ್ಕೂ ಸರ್ವ ಪಾಠಭೇದಗಳನ್ನೊಳಗೊಂಡ ಸಶಾಸ್ತ್ರೀಯ ಸವಿಮರ್ಶೆ ಪರಿಷ್ಕರಣವನ್ನು (ವೇರಿಯೋರಂ ಅಂಡ್ ಕ್ರಿಟಿಕಲ್ ಎಡಿಷನ್ ಬೇಸ್ಡ್ ಆನ್ ದಿ ಸೈನ್ಸ್ ಆಫ್ ಟೆಕ್ಸ್ಚುಅಲ್ ಕ್ರಿಟಿಸಿಸಂ) ಸಿದ್ಧಪಡಿಸಬೇಕಾದ ಆವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಗ್ರಂಥ ಸಂಪಾದನೆಯಲ್ಲಿರುವ ಸಂಕಷ್ಟಗಳೆಷ್ಟೆಂಬುದು ವಿದಿತವಾಗುತ್ತದೆ. ಎಫ್. ಕಿಟ್ಟೆಲ್ಲರು ಸಂಪಾದಿಸಿರುವ ಒಂದನೆಯ ನಾಗವರ್ಮನ ಛಂದೋಂಬುಧಿಯೂ ಶಬ್ದಮಣಿದರ್ಪಣ ದಂತೆಯೇ ಒಂದು ಮುಖ್ಯಕೃತಿಯಾಗಿದ್ದು ಇದು 1875ರಲ್ಲಿ ಪ್ರಕಟವಾಯಿತು. ಇದನ್ನು ಅವರು ಹದಿನಾಲ್ಕು ಪ್ರತಿಗಳನ್ನು ಆಧರಿಸಿ ಸಂಪಾದಿಸಿದ್ದಾರೆ. ಎಫ್. ಕಿಟ್ಟೆಲ್ಲರಂತೆಯೇ ಸಂಪಾದನಾಕಾರ್ಯದಲ್ಲಿ ಬಹು ಶ್ರದ್ಧೆಯಿಂದ ದುಡಿದ ಮುಖ್ಯರೆಂದರೆ ಶಾಸನ ಇಲಾಖೆಯ ಮುಖ್ಯಸ್ಥರಾಗಿದ್ದ ಬಿ.ಎಲ್. ರೈಸ್. ಇವರು ಕನ್ನಡ ಶಾಸನಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆಗಳಲ್ಲಿ ವಹಿಸಿದ ಆಸಕ್ತಿಯನ್ನೇ ಪ್ರಾಚೀನ ಕನ್ನಡ ಗ್ರಂಥಗಳ ಪ್ರಕಾಶದಲ್ಲಿಯೂ ತೋರಿಸಿದರು. ಇವರಿಂದಲೇ ಬಿಬ್ಲಿಯೋಥಿಕ ಕರ್ನಾಟಿಕ ಎಂಬ ಅಂಕಿತದಲ್ಲಿ ಕನ್ನಡದ ಪ್ರಾಚೀನ ಕೃತಿಗಳ ಪ್ರಕಾಶನ ಮೊದಲಾಯಿತು. ಪಂಪ ರಾಮಾಯಣ (1882), ಕರ್ಣಾಟಕ ಶಬ್ದಾನುಶಾಸನ (1890), ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ (1884), ಪಂಪಭಾರತ (1898), ಕವಿರಾಜಮಾರ್ಗ ಮೊದಲಾದ ಗ್ರಂಥಗಳು ಈ ಮಾಲೆಯಲ್ಲಿ ಪ್ರಸಿದ್ಧವಾದವು. ಈ ಗ್ರಂಥಗಳೊಂದೊಂದಕ್ಕೂ ರೈಸ್ ಅವರು ಬರೆದಿರುವ ಪ್ರಸ್ತಾವನೆಗಳು ಮುಂದಣ ಸಂಪಾದಕರಿಗೆ ದಿಕ್ಸೂಚಿಯಾಗಿವೆ. ಕನ್ನಡದ ಮಹಾಕಾವ್ಯಗಳಲ್ಲಿ ಒಂದಾದ ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯ (ಪಂಪ ಭಾರತ) ಮೊದಲ ಬಾರಿಗೆ ಪ್ರಕಟವಾದದ್ದು ಬಿ.ಎಲ್. ರೈಸ್ ಅವರಿಂದ. ಇವರ ಅನಂತರ ಈ ಕಾರ್ಯದಲ್ಲಿ ಮುಂದುವರಿದ ರಾ.ನರಸಿಂಹಾಚಾರ್ಯರೇ ಮೊದಲಾದವರು ರೈಸ್ ಅವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದ್ದಾರೆ.

ರಾ. ನರಸಿಂಹಾಚಾರ್ಯರು ರೈಸ್ ಅವರ ಹಾದಿಯಲ್ಲೇ ನಡೆದು ಎರಡನೆಯ ನಾಗವರ್ಮನ ಕಾವ್ಯಾವಲೋಕನವನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿ ಪ್ರಥಮ ಬಾರಿಗೆ ಪ್ರಕಟಿಸಿದರು (1902). ರೈಸ್ ಅವರ ಮೇಲ್ವಿಚಾರಣೆಯಲ್ಲಿಯೇ ಕವಿರಾಜಮಾರ್ಗವನ್ನು ಸಂಪಾದಿಸಿದ ಕೆ.ಬಿ. ಪಾಠಕ್ ಅವರು ಮೂರು ಹಸ್ತಪ್ರತಿಗಳನ್ನು ಆಧರಿಸಿ ಕೆಲಸಮಾಡಿದ್ದಾರೆ. ಈ ಕೃತಿ 1898ರಲ್ಲಿ ಪ್ರಕಟವಾಯಿತು. ಹೀಗೆ 19ನೆಯ ಶತಮಾನದಲ್ಲಿ ಆರಂಭವಾಗಿ 20ನೆಯ ಶತಮಾನದ ಆರಂಭ ಕಾಲದವರೆಗೆ ಕ್ರಮಕ್ರಮವಾಗಿ ಅಭಿವೃದ್ಧಿಹೊಂದಿದ ಕನ್ನಡ ಗ್ರಂಥ ಸಂಪಾದನೆಯ ಕಾರ್ಯ ಮುಂದಿನ ಪೀಳಿಗೆಗೆ ಭದ್ರವಾದ ಅಸ್ತಿಭಾರವನ್ನು ಹಾಕಿತು.

ಗ್ರಂಥಸಂಪಾದನೆಗೆ ಆವಶ್ಯವಾಗಿ ಬೇಕಾಗಿದ್ದ ಹಸ್ತಪ್ರತಿಗಳ ಸಂಗ್ರಹಕಾರ್ಯ ಹಾಗೂ ಸಂಪಾದನೆ ಮೊದಲು ಪ್ರಾಕ್ತನ ಇಲಾಖೆಗೆ ಸೇರಿದ್ದಿತು. ಕನ್ನಡ ಸಾಹಿತ್ಯದ ಅಗಾಧ ಗ್ರಂಥಸಮುದಾಯ ಹಸ್ತಪ್ರತಿಗಳಲ್ಲಡಗಿರುವುದನ್ನು ಗಮನಿಸಿದ ಸರ್ಕಾರ ಗ್ರಂಥಗಳ ಸಂಪಾದನಾಕಾರ್ಯಕ್ಕಾಗಿಯೇ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯಬೇಕೆಂಬ ಯೋಚನೆಯಿಂದ 1891ರಲ್ಲಿ ಮೈಸೂರಿನಲ್ಲಿ ಓರಿಯಂಟಲ್ ಲೈಬ್ರರಿಯನ್ನು ಸ್ಥಾಪಿಸಿತು. ಇಲ್ಲಿ ಸಂಸ್ಕೃತ, ಕನ್ನಡ ಗ್ರಂಥಗಳೆರಡನ್ನೂ ಸಂಪಾದಿಸುವ ಹಾಗೂ ಪ್ರಕಟಿಸುವ ಯೋಜನೆ ಸಿದ್ಧವಾಯಿತು. ಈ ಸಂಸ್ಥೆಯ ಕನ್ನಡ ಮಾಲೆಯಲ್ಲಿ ಪ್ರಕಟವಾದ ಮೊದಲ ಗ್ರಂಥ ಪಂಪನ ಆದಿಪುರಾಣ (1900). ಇದನ್ನು ಎಸ್.ಜಿ. ನರಸಿಂಹಾಚಾರ್ಯರು ಸಂಪಾದಿಸಿಕೊಟ್ಟರು. ಕುಮಾರವ್ಯಾಸಭಾರತ ಈ ಮೊದಲು ಅಚ್ಚಾಗಿದ್ದರೂ ಇದರ ಶುದ್ಧವಾದ ಪ್ರತಿಯನ್ನು ಹೊರತರಬೇಕೆಂಬ ಸದಿಚ್ಛೆಯಿಂದ ವಿ. ಶ್ಯಾಮಾಚಾರ್ಯರೇ ಮೊದಲಾದವರು ಮೊದಲ ಐದು ಪರ್ವಗಳನ್ನು ಸಂಪಾದಿಸಿದರು. ಯುದ್ಧಪಂಚಕದ ಸಂಪಾದನಾ ಕಾರ್ಯಕ್ಕೆ ಬಿ.ಎಂ. ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ, ಡಿ. ಶ್ರೀನಿವಾಸಾಚಾರ್, ತೀ.ನಂ. ಶ್ರೀಕಂಠಯ್ಯ – ಇವರುಗಳನ್ನೊಳಗೊಂಡ ಸಂಪಾದಕ ಮಂಡಲಿಯನ್ನು ರಚಿಸಲಾಯಿತು. ಈ ಮಂಡಲಿಯಲ್ಲಿ ಆಗಿಂದಾಗ್ಗೆ ಬದಲಾವಣೆಗಳಾಗಿ ಸಂಪಾದನಾ ಕಾರ್ಯದಲ್ಲಿ ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎಸ್.ಬಸವಲಿಂಗಯ್ಯ, ಡಿ.ಎಲ್. ನರಸಿಂಹಾಚಾರ್, ಎಚ್. ದೇವೀರಪ್ಪ ಮೊದಲಾದವರು ಭಾಗವಹಿಸಿದ್ದಾರೆ. ಒಟ್ಟಿನಲ್ಲಿ ಸಂಸ್ಥೆ ಪ್ರಕಟಿಸಿದ ಕುಮಾರವ್ಯಾಸ ಭಾರತದ 10 ಪರ್ವಗಳನ್ನು ಗಮನಿಸಿದರೆ ಕನ್ನಡ ಗ್ರಂಥಸಂಪಾದನಾಕಾರ್ಯದ ಹಲವು ಸಮಸ್ಯೆಗಳು, ಅದು ಬೆಳೆದು ಬಂದ ಹಲವಾರು ಹಂತಗಳು ವಿದಿತವಾಗುತ್ತದೆ. ಈ ಸಂಸ್ಥೆಯ ಆಶ್ರಯದಲ್ಲಿ 43 ಕನ್ನಡ ಗ್ರಂಥಗಳು ಪ್ರಕಟವಾದವು (1967). ವಿವಿಧ ಧರ್ಮಗಳಿಗೆ ಸಂಬಂಧಿಸಿದ ಕೃತಿಗಳನ್ನೂ ಶಾಸ್ತ್ರಗ್ರಂಥಗಳನ್ನೂ ಪ್ರಕಟಿಸಿದ ಯಶಸ್ಸು ಈ ಸಂಸ್ಥೆಗೆ ಸಲ್ಲುತ್ತದೆ.

ಕನ್ನಡ ಪ್ರಾಚೀನ ಗ್ರಂಥಗಳ ಪ್ರಕಟನೆಯ ಕಾರ್ಯದಲ್ಲಿ ಇದೇ ರೀತಿ ಮಹತ್ತ್ವದ ಪಾತ್ರ ವಹಿಸಿದ ಹಿರಿಯ ಸಂಸ್ಥೆಗಳಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಂಶೋಧನ ಸಂಸ್ಥೆ, ಕನ್ನಡ ಅಧ್ಯಯನ ಸಂಸ್ಥೆ, ಮದರಾಸು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಮುಖ್ಯವಾದುದಾಗಿವೆ. 1968ರಲ್ಲಿ ಅಸ್ತಿತ್ವಕ್ಕೆ ಬಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಈಗಾಗಲೇ 37 ಪ್ರಾಚೀನ ಗ್ರಂಥಗಳನ್ನು ಪ್ರಚುರಪಡಿಸಿದೆ. ಇವುಗಳಲ್ಲಿ ಬಹು ಕಾಲದಿಂದ ಅಲಭ್ಯವಾಗುಳಿದಿದ್ದ ಬಿ.ಎಸ್. ಸಣ್ಣಯ್ಯನವರಿಂದ ಸಂಪಾದಿತವಾಗಿರುವ ಎರಡನೆಯ ನಾಗವರ್ಮನ ವರ್ಧಮಾನ ಪುರಾಣ (1974) ಬಹುಮುಖ್ಯವಾದುದು. ಹಾಗೆಯೇ ಇದುವರೆಗೆ ಅಪ್ರಕಟಿತವಾಗುಳಿದಿದ್ದ ಬಂಧುವರ್ಮನ ಹರಿವಂಶಾಭ್ಯುದಯ, ಇಮ್ಮಡಿ ಗುರುಸಿದ್ಧರ ಹಾಲಾಸ್ಯ ಪುರಾಣ ಮೊದಲಾದ ಗ್ರಂಥಗಳೂ ವಿದ್ವಾಂಸರ ಗಮನವನ್ನು ಸೆಳೆದಿವೆ. ಇವೇ ಅಲ್ಲದೆ ಇದೇ ಸಂಸ್ಥೆಯ

ಹರಿದಾಸ ಸಾಹಿತ್ಯ ವಿಭಾಗದಿಂದ ಹರಿದಾಸರ ಕೀರ್ತನೆಗಳ ಸಂಪಾದನಾಕಾರ್ಯ ನಡೆದಿದ್ದು ಈಗಾಗಲೇ ಹನ್ನೆರಡು ಸಂಪುಟಗಳು ಪ್ರಕಟವಾಗಿವೆ. ಸಂಸ್ಥೆಯ ಜಾನಪದ ವಿಭಾಗದಿಂದ ಜಾನಪದ ಮಾಲೆಯಲ್ಲಿ ಅನೇಕ ಗ್ರಂಥಗಳು ಪ್ರಕಟವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಪಂಪರಾಮಾಯಣ, ಪಂಪಭಾರತ, ಶಬ್ದಮಣಿದರ್ಪಣಗಳು ಗಮನಾರ್ಹವಾದುವಾಗಿವೆ. ಇವುಗಳ ಕಾರ್ಯ ತೃಪ್ತಿಕರವಾಗಿರಲು ಮುಖ್ಯ ಕಾರಣರಾದವರೆಂದರೆ ಬೆಳ್ಳಾವೆ ವೆಂಕಟನಾರಣಪ್ಪನವರು.

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯವರು ಶಿ.ಶಿ. ಬಸವನಾಳ, ಶಿ.ಚೆ. ನಂದೀಮಠ, ಎಸ್.ಎಸ್. ಮಾಳವಾಡ ಮೊದಲಾದ ವಿದ್ವಾಂಸರ ಬೆಂಬಲದಿಂದ ಚೆನ್ನಬಸವಪುರಾಣ, ಪ್ರಭುಲಿಂಗಲೀಲೆ, ಗಿರಿಜಾಕಲ್ಯಾಣ, ರಕ್ಷಾಶತಕ, ಪಂಪಾಶತಕ ಮೊದಲಾದ ಗ್ರಂಥಗಳನ್ನು ಪ್ರಸಿದ್ಧಪಡಿಸಿ ಸಂಪಾದನಾಕಾರ್ಯದಲ್ಲಿ ಸಾಕಷ್ಟು ಹೆಸರು ಗಳಿಸಿದ್ದಾರೆ.

ಹೀಗೆ ಸಂಸ್ಥೆಗಳಲ್ಲದೆ ಕೆಲವು ವ್ಯಕ್ತಿಗಳೂ ಈ ಸಂಪಾದನಾಕಾರ್ಯದಲ್ಲಿ ನಿಷ್ಣಾತರಾಗಿ ದುಡಿದಿದ್ದಾರೆ. ಇವರಲ್ಲಿ ಎಸ್.ಜಿ. ನರಸಿಂಹಾಚಾರ್ ಮತ್ತು ಎಂ.ಎ. ರಾಮಾನುಜಯ್ಯಂಗಾರ್ ಎಂಬ ಎರಡು ಹೆಸರುಗಳು ಪ್ರಮುಖವಾದುವು. ಇವರು ಕರ್ನಾಟಕ ಕಾವ್ಯ ಕಲಾನಿಧಿ ಮತ್ತು ಕರ್ನಾಟಕ ಕಾವ್ಯಮಂಜರಿ ಗ್ರಂಥಮಾಲೆಗಳ ಮೂಲಕ ಕನ್ನಡದ ಹಲವಾರು ಅಪೂರ್ವ ಗ್ರಂಥಗಳನ್ನು ಸಂಪಾದಿಸಿ, ಮೊದಲ ಬಾರಿಗೆ ಪ್ರಕಟಿಸಿದರು. ಈ ಸಾಹಸದಿಂದ ಕನ್ನಡಿಗರ ಕೃತಜ್ಞತೆಗೆ ಪಾತ್ರರಾದರು. ನೇಮಿಚಂದ್ರನ ನೇಮಿನಾಥಪುರಾಣ (ಅರ್ಧನೇಮಿ), ಲೀಲಾವತಿ ಪ್ರಬಂಧ, ಮಂಗರಸನ ಜಯನೃಪಕಾವ್ಯ, ಚತುರಾಸ್ಯನ ಚತುರಾಸ್ಯ ನಿಘಂಟು ಮೊದಲಾದ ಗ್ರಂಥಗಳು ಇವರಿಂದ ಬೆಳಕು ಕಂಡವು.

ಒಂದನೆಯ ನಾಗವರ್ಮನ ಕರ್ನಾಟಕ ಕಾದಂಬರಿಯನ್ನು ಏಕೈಕ ಹಸ್ತಪ್ರತಿಯ ಸಹಾಯದಿಂದಲೇ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಬಿ.ಮಲ್ಲಪ್ಪನವರಿಗೆ ಸಲ್ಲುತ್ತದೆ. ಇದು 1892ರಲ್ಲಿ ಮುದ್ರಿತವಾಗಿ ಸಂಶೋಧಕರ ಮೆಚ್ಚುಗೆಯನ್ನು ಗಳಿಸಿದೆ. ಬಿಜಾಪುರದಲ್ಲಿ ವಕೀಲರಾಗಿದ್ದ ರಾವಬಹಾದ್ದೂರ, ಫ.ಗು.ಹಳಕಟ್ಟಿಯವರು ವಚನಸಾಹಿತ್ಯ ಹಾಗೂ ಹರಿಹರನ ರಗಳೆಗಳನ್ನು ಸಂಪಾದಿಸಿ ಪ್ರಕಟಿಸುವಲ್ಲಿ ತಮ್ಮ ಆಯುಷ್ಯವನ್ನು ಸವೆಸಿದರು. ಸಂಪಾದನಾ ಕ್ಷೇತ್ರದಲ್ಲಿ ಅವರು ಮಾಡಿರುವ ಸೇವೆ ಅಪರಿಮಿತವಾದುದು. ಆರ್.ಸಿ. ಹಿರೇಮಠ, ಆರ್.ಎಸ್. ಪಂಚಮುಖಿ, ಎಸ್.ಎಸ್. ಭೂಸನೂರಮಠ, ಬಿ. ಶಿವಮೂರ್ತಿಶಾಸ್ತ್ರಿ, ಉಳ್ಳಾಲ ಮಂಗೇಶರಾವ್, ಕೆ.ಜಿ.ಕುಂದಣಗಾರ, ಎ. ಶಾಂತರಾಜಶಾಸ್ತ್ರಿ, ಟಿ.ಎಸ್. ವೆಂಕಣ್ಣಯ್ಯ, ತೀ.ನಂ. ಶ್ರೀಕಂಠಯ್ಯ, ಎಂ.ವಿ. ಸೀತಾರಾಮಯ್ಯ, ಜಿ. ಬ್ರಹ್ಮಪ್ಪ, ಎಂ.ಎಂ. ಕಲಬುರ್ಗಿ, ಎಲ್. ಬಸವರಾಜು ಎಸ್. ಶಿವಣ್ಣ, ಜಿ.ಜಿ. ಮಂಜುನಾಥನ್, ಹ.ಕ. ರಾಜೇಗೌಡ ಮೊದಲಾದವರು ಈ ಕೆಲಸದಲ್ಲಿ ಶ್ರದ್ಧೆಯಿಂದ ದುಡಿದಿದ್ದಾರೆ. ಬೆಟಗೇರಿ ಕೃಷ್ಣಶರ್ಮರು ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ ಪುರಂದರದಾಸರ ಕೀರ್ತನೆಗಳ 6 ಸಂಪುಟಗಳನ್ನೂ ಕನಕದಾಸರ ಕೀರ್ತನೆಗಳ ಒಂದು ಸಂಪುಟವನ್ನೂ ಪರಿಷ್ಕರಿಸಿ, ಸಂಪಾದಿಸಿ ಪ್ರಕಟಿಸಿರುವುದು ಅಭಿನಂದನಾರ್ಹವಾಗಿದೆ. ದೇ.ಜವರೇಗೌಡರು ಕಬ್ಬಿಗರ ಕಾವ ಮತ್ತು ಲೀಲಾವತಿ ಪ್ರಬಂಧಗಳನ್ನು (ಇತರರೊಡನೆ) ಸಂಪಾದಿಸಿ ಅವುಗಳಿಗೆ ಬರೆದಿರುವ ವಿದ್ವತ್ಪೂರ್ಣ ಕವಿ – ಕಾವ್ಯ ಪರಿಚಯಗಳು ಅತ್ಯಂತ ಮಹತ್ತ್ವದಿಂದ ಕೂಡಿವೆ. ಡಿ.ಎಲ್.ನರಸಿಂಹಾಚಾರ್ಯರ ವಡ್ಡಾರಾಧನೆ, ಅವರು ಟಿ.ಎಸ್.ವೆಂಕಣ್ಣಯ್ಯ ನವರೊಡನೆ ಸಂಪಾದಿಸಿರುವ ಸಿದ್ಧರಾಮಚಾರಿತ್ರ ಗಮನಾರ್ಹವಾದುವು. ಎಲ್.ಬಸವರಾಜು ಅವರು ಸಂಪಾದಿಸಿರುವ ಅಲ್ಲಮನ ವಚನಚಂದ್ರಿಕೆ, ಶಿವದಾಸ ಗೀತಾಂಜಲಿ, ಶೂನ್ಯಸಂಪಾದನೆ, ಆದಿಪುರಾಣ ಮೊದಲಾದ ಗ್ರಂಥಗಳು ಮುಂದಿನ ಸಂಪಾದಕರಿಗೆ ಮಾದರಿ ಗ್ರಂಥಗಳಾಗಿವೆ. ಎನ್. ಬಸವಾರಾಧ್ಯ, ಕೆ. ವೆಂಕಟರಾಮಪ್ಪ, ಎಚ್. ತಿಪ್ಪೇರುದ್ರಸ್ವಾಮಿ, ಕೆ. ರಾಘವೇಂದ್ರರಾವ್, ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ, ಬಿ.ಎಸ್. ಕುಲಕರ್ಣಿ, ಬಿ.ಎಸ್. ಸಣ್ಣಯ್ಯ, ಎಂ.ಪಿ. ಮಂಜಪ್ಪಶೆಟ್ಟಿ, ಮೈಲಹಳ್ಳಿ ರೇವಣ್ಣ, ಟಿ.ಎನ್. ನಾಗರತ್ನ, ವೈ.ಸಿ. ಭಾನುಮತಿ, ಎಫ್.ಟಿ. ಹಳ್ಳಿಕೇರಿ, ಕೆ. ರವೀಂದ್ರನಾಥ ಮೊದಲಾದವರೂ ಈ ಕಾರ್ಯದಲ್ಲಿ ನಿರತರಾಗಿದ್ದಾರೆ. ಗ್ರಂಥ ಸಂಪಾದನೆ ಶಾಸ್ತ್ರವನ್ನು ಕುರಿತಂತೆ ಡಿ.ಎಲ್. ನರಸಿಂಹಾಚಾರ್ ಅವರು ಕನ್ನಡ ಗ್ರಂಥಸಂಪಾದನೆ ಎಂಬ ಅಮೂಲ್ಯ ಗ್ರಂಥವನ್ನು ರಚಿಸಿದ್ದಾರೆ.

ಕನ್ನಡ ಗ್ರಂಥಸಂಪಾದನೆಯ ಕಾರ್ಯ ಒಂದು ನಿರಂತರ ಪ್ರಕ್ರಿಯೆ. ಅದು ನಡೆಯುತ್ತಲೇ ಇರಬೇಕು. ಹೊಸ ಹೊಸ ಹಸ್ತಪ್ರತಿಗಳ ಶೋಧವಾದಾಗಲೂ ಸಂಪಾದನ ಕಾರ್ಯವೂ ಶೋಧಿತವಾಗುತ್ತ ಹೊಸದು ಸೇರ್ಪಡೆಗೊಳ್ಳುತ್ತ ಸಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲಸ ಮುಂದುವರಿದ್ದು, 1978 ರಿಂದೀಚೆಗೆ ಈ ಕ್ಷೇತ್ರದಲ್ಲಿ ಆಗಿರುವ ಕೆಲಸದ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಹೀಗೆ ಪರಿಷ್ಕೃತವಾಗಿ ಪ್ರಕಟವಾಗಿರುವ ಗ್ರಂಥಗಳಲ್ಲಿ ಕೆಲವು ಪ್ರಥಮ ಬಾರಿಗೆ ಬೆಳಕು ಕಂಡರೆ, ಮತ್ತೆ ಕೆಲವು ಮರುಪರಿಷ್ಕರಣವಾಗಿವೆ. ಅಲ್ಲದೆ ಕೆಲವು ಸಂಗ್ರಹ ಕೃತಿಗಳಾಗಿಯೂ ಹೊರಬಂದಿವೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಆರಾಧ್ಯ ಚಾರಿತ್ರ, ಚತುರಾಚಾರ್ಯ ಚಾರಿತ್ರ, ಸಹ್ಯಾದ್ರಿ ಖಂಡ, ಷಟ್ಸ್ಥಲ ತಿಲಕ, ಧರ್ಮಪರೀಕ್ಷೆ, ಚಂದ್ರಪ್ರಭ ಚರಿತೆ, ಕೃಷ್ಣಾರ್ಜುನರ ಕಾಳಗ, ಬತ್ತೀಸ ಪುತ್ತಳಿ ಕಥೆ, ರಾಜಾವಳಿ ಕಥಾಸಾರ ಮೊದಲಾದ ಕೃತಿಗಳು ದೊರೆತ ಹಸ್ತಪ್ರತಿಗಳನ್ನು ಉಪಯೋಗಿಸಿ ಶಾಸ್ತ್ರನಿಬದ್ಧವಾಗಿ ಪರಿಷ್ಕರಣಗೊಂಡು (1980–88) ಪ್ರಕಟಗೊಂಡಿವೆ. ಹಾಗೆಯೇ ಬೇರೆ ಬೇರೆ ಕಡೆಗಳಿಂದ ಪ್ರಕಟವಾಗಿರುವ ನಿಂಬಸಾಮಂತ ಚರಿತೆ, ಷಟ್ಸ್ಥಲ ಶಿವಾಯಣ ಮೊದಲಾದ ಕೃತಿಗಳೂ ಅಚ್ಚುಕಟ್ಟಾಗಿ ಸಂಪಾದಿತವಾಗಿ ಪ್ರಕಟವಾಗಿವೆ. ಇವೆಲ್ಲವೂ ಮೊದಲ ಬಾರಿಗೆ ಓಲೆಗಳಿಂದ ಬಿಡುಗಡೆಗೊಂಡು ಅಚ್ಚಿನ ಮೂಲಕ ಸಹೃದಯರ ಕೈಸೇರಿದ ಪ್ರಥಮ ಮುದ್ರಣಗಳಾಗಿವೆ.

ನೀಲಕಂಠಾಚಾರ್ಯ (1485) ರಚಿಸಿರುವ ಆರಾಧ್ಯ ಚಾರಿತ್ರ ಎಂಬ ವಾರ್ಧಕ ಷಟ್ಪದಿ ಗ್ರಂಥವನ್ನು ಎನ್. ಬಸವಾರಾಧ್ಯರು ಪರಿಷ್ಕರಣ ಮಾಡಿದ್ದಾರೆ (1980). ಇದರ ಸಂಪಾದನೆಗೆ ಮೂರು ಹಸ್ತಪ್ರತಿಗಳನ್ನೂ ಒಂದು ಅಸಮಗ್ರ ಅಚ್ಚಿನ ಪ್ರತಿಯನ್ನೂ ಬಳಸಲಾಗಿದೆ. ಶುದ್ಧ ಹಸ್ತಪ್ರತಿಗಳು ದೊರೆತಿರುವುದರಿಂದ ಹೆಚ್ಚಿನ ಪಾಠ ಸಮಸ್ಯೆಗಳು ಕಂಡುಬರುವುದಿಲ್ಲ. ವಿಸ್ತಾರವಾದ ಪೀಠಿಕೆಯಲ್ಲಿ ಕವಿ ಕೃತಿಗಳ ವಿಷಯ ನಿರೂಪಣೆಯಲ್ಲದೆ ದೀರ್ಘ ಕಥಾಸಾರವನ್ನೂ ನೀಡಲಾಗಿದೆ. ಹಾಗೆಯೇ ಇದೇ ಸಂಪಾದಕರಿಂದ ಪರಿಷ್ಕೃತವಾದ ಸಂಪಾದನೆಯ ಪರ್ವತೇಶ (1698) ರಚಿಸಿರುವ ವಾರ್ಧಕ ಷಟ್ಪದಿಯ ಬೃಹತ್ಕೃತಿ ಚತುರಾಚಾರ್ಯ ಚಾರಿತ್ರ. ನಾಲ್ಕು ಹಸ್ತಪ್ರತಿಗಳ ಉಪಯೋಗದಿಂದ ಮಾಡಿರುವ ಸಂಪಾದನಾ ಕಾರ್ಯ ಉತ್ತಮವಾಗಿದೆ. ದೀರ್ಘ ಪೀಠಿಕೆಯಲ್ಲಿ ಕಥಾಸಾರ ಕವಿಕಾವ್ಯಗಳ ಪರಿಚಯ ಮಾಡಿಕೊಡಲಾಗಿದೆ.

ಸಹ್ಯಾದ್ರಿಖಂಡ (1984) 89 ಸಂಧಿಗಳೂ 3272 ಭಾಮಿನಿ ಷಟ್ಪದಿಗಳಿರುವ ಬೃಹತ್‌ಕಾವ್ಯ. ಇದನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ವೈ.ಸಿ. ಭಾನುಮತಿಯವರು ಸಮರ್ಥ ರೀತಿಯಲ್ಲಿ ಪರಿಷ್ಕರಿಸಿರುವರು. ಇದರಲ್ಲಿ ಅಳವಡಿಸಿರುವ ಭಾವಚಿತ್ರಗಳು ಕೃತಿಯ ಅಂದವನ್ನು ಹೆಚ್ಚಿಸಿವೆ.

ಪಾರ್ಶ್ವ ಕವಿಯ (ಸು.1700) ನಿಂಬಸಾಮಂತಚರಿತೆ ಎಂಬ ಷಟ್ಪದಿ ಕಾವ್ಯ ಎಂ.ಎಂ. ಕಲಬುರ್ಗಿಯವರಿಂದ ಸಂಪಾದಿತವಾಗಿದೆ (1981). ಇದರಲ್ಲಿ 5 ಸಂಧಿಗಳೂ 506 ಭಾಮಿನಿ ಷಟ್ಪದಿಗಳೂ ಇವೆ. ಈ ಕೃತಿಯನ್ನು ಎರಡು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಲಾಗಿದೆ. ಪಾಠನಿರ್ಣಯ ಉತ್ತಮವಾಗಿದೆ. ಪ್ರಸ್ತಾಪನೆಯಲ್ಲಿ ನಿಂಬಸಾಮಂತನ ಬಗೆಗೆ ದೊರೆಯುವ ಎಲ್ಲ ಸಾಮಗ್ರಿಗಳನ್ನೂ ಕೂಡಿಸಿಕೊಂಡು ಮಾಡಿರುವ ವಿಮರ್ಶೆ ಉತ್ತಮ ಗುಣಮಟ್ಟದಿಂದ ಕೂಡಿದೆ. ಅನುಬಂಧಗಳು ಉಪಯುಕ್ತವಾಗಿವೆ.

ವಿಮಲಾನಂದನ ಕೃಷ್ಣಾರ್ಜುನರ ಕಾಳಗ ಎಂಬ ಕೃತಿಯನ್ನು ಕೆ.ಆರ್.ಶೇಷಗಿರಿ ಅವರು ಮೂರು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದ್ದಾರೆ (1981). ಕೆಲವು ಪ್ರಾಸಸ್ಥಾನಗಳನ್ನು ಬಿಟ್ಟರೆ ಹೆಚ್ಚಿನ ಪಾಠಸಂದಿಗ್ಧತೆ ಕಂಡುಬರುವುದಿಲ್ಲ. ಪೀಠಿಕೆಯಲ್ಲಿ ಮಾಡಿರುವ ವಿಚಾರ ವಿಮರ್ಶೆ ಚೆನ್ನಾಗಿದೆ. ಪದ್ಯಗಳ ಅಕಾರಾದಿ ಅರ್ಥಕೋಶಗಳು ಉಪಯುಕ್ತವಾಗಿವೆ.

ಇದೇ ಮೊದಲ ಬಾರಿಗೆ ಪ್ರಕಟವಾಗಿರುವ ದೇವಚಂದ್ರನ ರಾಜಾವಳೀ ಕಥಾಸಾರ (1988), ಬತ್ತೀಸಪುತ್ತಳಿ ಕಥೆ (1989) ಮೊದಲಾದ ಗದ್ಯಕೃತಿಗಳೂ ನಮ್ಮ ಗಮನ ಸೆಳೆಯುತ್ತವೆ. ಈ ಎರಡೂ ಕೃತಿಗಳನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹೊರತಂದಿದೆ. ಎಲ್ಲ ವಿಧದ ಸಂಶೋಧಕರಿಗೆ ಅಗತ್ಯವಾಗಿ ಬೇಕಾದ ಮಾಹಿತಿಯನ್ನೊಳಗೊಂಡು ಸಾಹಿತ್ಯ ಧರ್ಮ ಜಾನಪದ ಇತಿಹಾಸಗಳಲ್ಲದೆ ತತ್ತ್ವನಿರೂಪಣೆಯ ತಾರ್ಕಿಕ ಮಂಡನೆ ಯನ್ನೊಳಗೊಂಡ ರಾಜಾವಳೀ ಕಥಾಸಾರವೆಂಬ ಅಪೂರ್ವ ಕೃತಿಯನ್ನು ಪರಿಷ್ಕರಣ ಮಾಡಿರುವವರು ಬಿ.ಎಸ್. ಸಣ್ಣಯ್ಯ ಅವರು. ಬತ್ತೀಸ ಪುತ್ತಳಿ ಕಥೆಯನ್ನು ವೈ.ಸಿ. ಭಾನುಮತಿ ಅವರು ಸಂಪಾದಿಸಿದ್ದಾರೆ.

ಹೀಗೆ ಮೊದಲ ಬಾರಿಗೆ ಪ್ರಕಟವಾಗಿರುವ ಗ್ರಂಥಗಳಲ್ಲದೆ ಮರುಪರಿಷ್ಕರಣಗೊಂಡು ಹೊರಬಂದಿರುವ ಹಲವಾರು ಗ್ರಂಥಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದಾಗಿದೆ.

ರನ್ನನ ಸಾಹಸಭೀಮವಿಜಯ ಗ್ರಂಥವನ್ನು ಪೂರ್ವದ ಆವೃತ್ತಿಗಳೆಲ್ಲವನ್ನೂ ಗಮನಿಸಿ ಹೊಸ ಹಸ್ತಪ್ರತಿಯ ಸಹಾಯದಿಂದ ಪರಿಷ್ಕರಣ ಮಾಡಿರುವವರು ಬಿ.ಎಸ್. ಸಣ್ಣಯ್ಯ ಮತ್ತು ರಾಮೇಗೌಡ ಅವರು. ಇದು 1985ರಲ್ಲಿ ಪ್ರಕಟವಾಗಿದೆ. ಹೊಸ ಓಲೆ ಪ್ರತಿಯು ಶಕ 1264ರ ಕಾಲನಮೂದಿತ ಪ್ರತಿಯಾಗಿದ್ದು ಶಕಟರೇಫವನ್ನೊಳಗೊಂಡಿದೆ; ಸಾಕಷ್ಟು ಶುದ್ಧವಾಗಿದ್ದು ಉತ್ತಮ ಪಾಠಗಳು ದೊರೆಯುತ್ತವೆ. ಇದನ್ನು ಪೂರ್ವದ ಸಂಪಾದಕರಾರೂ ಬಳಸಿಕೊಂಡಿಲ್ಲ. ಇದಕ್ಕೆ ಆಧಾರವೆಂದರೆ ತೀನಂಶ್ರೀ ಅವರು ತಮ್ಮ ಗದಾಯುದ್ಧ ಸಂಗ್ರಹದಲ್ಲಿ ಸರಿಯಾದ ಪಾಠವಿರಬಹುದೆಂದು ಊಹಿಸಿ ಕಂಸದಲ್ಲಿ ಕೊಟ್ಟಿರುವ ಪಾಠಗಳು ಈ ಪ್ರತಿಯಲ್ಲಿ ದೊರೆಯುತ್ತವೆ. ಪೀಠಿಕೆಯಲ್ಲಿ ಮಾಡಿರುವ ಗ್ರಂಥದ ಮೌಲ್ಯಮಾಪನ ಉತ್ತಮವಾಗಿದೆ; ಕಥಾಸಾರ ಮತ್ತು ಟಿಪ್ಪಣಿಗಳಿಂದ ಸಾಮಾನ್ಯ ಓದುಗರಿಗೂ ಅನುಕೂಲವಾಗಿದೆ.

ರನ್ನನ ಅಜಿತನಾಥ ತೀರ್ಥಂಕರ ಪುರಾಣತಿಲಕ ಎಂಬ ಕೃತಿಯನ್ನು ಬಿ.ಎಸ್.ಸಣ್ಣಯ್ಯ ಮತ್ತು ರಾಮೇಗೌಡ ಹೊಸ ಹಸ್ತಪ್ರತಿಯ ಸಹಾಯದಿಂದ ಪರಿಷ್ಕರಿಸಿದ್ದಾರೆ. ಇದರಲ್ಲಿ ಉತ್ತಮ ಪಾಠಗಳ ಆಯ್ಕೆಯಿದೆ. ಆಶ್ವಾಸ 5–61ನೆಯ ಪದ್ಯದ ನಾಲ್ಕನೆಯ ಪಾದದಲ್ಲಿದ್ದ ಅಪೂರ್ಣತೆಯನ್ನು ಹೋಗಲಾಡಿಸಲಾಗಿದೆ. ಮುಂದಣ 62ನೆಯ ಪದ್ಯದಲ್ಲಿ ಇದುವರೆಗೂ ಉಪಯೋಗವಾಗಿದ್ದ 'ಅರಳೆಲೆ' ಪದವನ್ನು ಪ್ರಾಸಕ್ಕನುಸಾರವಾಗಿ ತಿದ್ದಿ ಸಮರ್ಥನೆ ನೀಡಲಾಗಿದೆ. ಕವಿ ಕಾವ್ಯಗಳ ಬಗೆಗೆ ಮಾಡಿರುವ ವಿಮರ್ಶೆ ಉತ್ತಮವಾಗಿದೆ. ಕೊಟ್ಟಿರುವ ಟಿಪ್ಪಣಿಗಳು, ಪದ್ಯಗಳ ಅಕಾರಾದಿ ಓದುಗರಿಗೆ ಅನುಕೂಲಕರವಾಗಿದೆ.

ಈ ಮೊದಲಿಗೆ ಎರಡು ಮೂರು ಬಾರಿ ಪ್ರಕಟವಾಗಿದ್ದ ಜನ್ನನ ಯಶೋಧರ ಚರಿತೆಯನ್ನು ಸಿ.ಪಿ.ಕೃಷ್ಣಕುಮಾರ್ ಅವರು ಗದ್ಯಾನುವಾದ ಸಹಿತವಾಗಿ ಸಿದ್ಧಪಡಿಸಿದ್ದು, ಇದನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದಿದೆ (1994). ಇಲ್ಲಿನ ವಿಶೇಷವೆಂದರೆ ಇದುವರೆಗೆ ಪ್ರಕಟವಾಗಿದ್ದ ಆವೃತ್ತಿಗಳಲ್ಲಿ ಮೂಲಪಾಠಗಳು ಅರ್ಥವಾಗದೆ ಹೇಗೆ ಅಪಪಾಠಗಳನ್ನು ಊಹಿಸಿದ್ದಾರೆ ಎಂಬುದನ್ನು ಸಾಧಾರವಾಗಿ ನಿರೂಪಿಸಲಾಗಿದೆ. ಅಲ್ಲದೆ ಕಥಾಸಾರ ಆಕರ ಕಾವ್ಯೋದ್ದೇಶ ಪಾತ್ರರಚನೆ ವರ್ಣನೆಗಳು ಶೈಲಿ ಸ್ಥಾನನಿರ್ದೇಶ ಎಂಬ ಅಂಕಿತಗಳಲ್ಲಿ ಚಿಕ್ಕದಾದರೂ ಚೊಕ್ಕದಾದ ನಿರ್ದಿಷ್ಟ ವಿವರಣೆಗಳನ್ನು ನೀಡುವ ಮೂಲಕ ಕೃತಿಯ ಆಂತರಿಕ ಸೌಂದರ್ಯವನ್ನು ತೆರೆದು ತೋರಿಸಿರುವ ರೀತಿ ಮೆಚ್ಚುವಂಥದ್ದು.

ಹಿರಿಯ ವಿದ್ವಾಂಸರಾದ ಎಲ್.ಬಸವರಾಜು ಅವರು ಪಂಪನ ವಿಕ್ರಮಾರ್ಜುನ ವಿಜಯವನ್ನು ಸರಳ ಪಂಪಭಾರತ ಎಂಬ ಹೆಸರಿನಲ್ಲಿ, ಮುಖ್ಯವಾಗಿ ಸಾಮಾನ್ಯ ಓದುಗರನ್ನೂ ಪಂಡಿತ ವರ್ಗವನ್ನೂ ದೃಷ್ಟಿಯಲ್ಲಿಟ್ಟುಕೊಂಡು ವಿನೂತನವಾಗಿ ರೂಪಿಸಿದ್ದಾರೆ. ಈ ಆವೃತ್ತಿಯ ಅರಿಕೆಯಲ್ಲಿ ನಿರೂಪಣಕಾರರು ಪ್ರಸ್ತಾಪಿಸಿರುವಂತೆ ಚಂಪೂ ಶೈಲಿಯಲ್ಲಿ ಎಡೆಬಿಡದೆ ಸಂಧಿಸಮಾಸಗಳ ಉದ್ದುದ್ದವಾದ, ವಾಕ್ಯಗಳಿರುವುದು ಪ್ರತಿಷ್ಠೆಯ ಮಾತಾಗಿತ್ತು......... ಅವರ ಕಾವ್ಯವನ್ನು ಎಲ್ಲಿ ನಿಲ್ಲಿಸಬೇಕು, ಯಾವುದನ್ನು ಎಲ್ಲೆಲ್ಲಿಗೆ ಬಿಡಿಸಿ ಕೂಡಿಸಿ ಓದಬೇಕೆಂಬುದೂ ತಿಳಿಯದೆ ಯಾರಾಗಲಿ ತಬ್ಬಿಬ್ಬಾಗುವುದುಂಟು ಎಂಬೆಲ್ಲಾ ಆಲೋಚನೆಯಿಂದ ಮಾಡಿರುವ ಈ ಪರಿಷ್ಕರಣ ಕಾರ್ಯ ಒಂದು ವಿನೂತನ ಮಾದರಿಯದು. ಆದರೆ ಹೀಗೆ ಪದ ಪದಪುಂಜಗಳನ್ನು ಬೇರೆ ಬೇರೆ ಮಾಡಿದಷ್ಟರಿಂದ ಸಾಮಾನ್ಯ ಓದುಗರೂ ಇದನ್ನು ಓದಬಹುದು ಎಂದು ಭಾವಿಸುವುದು ಸೂಕ್ತವಾದರೂ ಕಾವ್ಯಾರ್ಥವನ್ನು ಗ್ರಹಿಸಲು ಸ್ವಲ್ಪಮಟ್ಟಿನ ಭಾಷಿಕ ಪರಿಶ್ರಮ, ಸಾಮರ್ಥ್ಯ ಬೇಕೆಂಬ ಅಂಶವನ್ನು ನಾವು ಮರೆಯುವಂತಿಲ್ಲ.

ಸಾಹಿತ್ಯ ಕೃತಿಗಳಲ್ಲಿ 1978ರಲ್ಲಿ ಪ್ರಕಟವಾಗಿರುವ ಜಿನಸೇನ ದೇಶವ್ರತಿಯ ವರ್ಧಮಾನಪುರಾಣ, ಪರ್ವತದೇವನ ನನ್ನಯ್ಯ ಚಾರಿತ್ರ, 1979ರಲ್ಲಿ ಹೊರಬಂದಿರುವ ಸೋಮನಾಥನ ರುಕ್ಮಾಂಗದ ಚರಿತೆ, 1980ರಲ್ಲಿ ಪ್ರಕಟವಾಗಿರುವ ದೊಡ್ಡಯ್ಯನ ಚಂದ್ರಪ್ರಭ ಚರಿತೆ, ಸಿದ್ಧಕವಿಯ ಸಿರುಮಣನಾಯಕನ ಸಾಂಗತ್ಯ, 1996ರಲ್ಲಿ ಪ್ರಕಾಶಿತವಾಗಿರುವ ದೇವರಸನ ಮದನಮೋಹಿನಿ ಚರಿತೆ ಮೊದಲಾದ ಅನೇಕ ಕೃತಿಗಳು ಕಂಡುಬರುತ್ತವೆ. ಇವುಗಳಲ್ಲಿ ಬಹುಮಟ್ಟಿನವು ಪ್ರಥಮ ಬಾರಿಗೆ ಪ್ರಕಟವಾಗಿ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಕಾರಣವಾಗಿವೆ. ಇವುಗಳಲ್ಲಿ ಜಿನಸೇನ ದೇಶವ್ರತಿಯ ವರ್ಧಮಾನ ಪುರಾಣ ಮತ್ತು ದೇವರಸನ ಮದನಮೋಹಿನಿ ಚರಿತೆಗಳು ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗುಳಿದಿದ್ದ ಕೃತಿಗಳಾಗಿವೆ.

ಸಾಹಿತ್ಯದ ಇತರ ಪ್ರಕಾರಗಳಲ್ಲಿಯೂ ಅನೇಕ ಕೃತಿಗಳು ಹೊರಬಂದಿರುವುದುಂಟು. ಟಿ.ಎನ್.ನಾಗರತ್ನ ಅವರು ಪರಿಷ್ಕರಿಸಿರುವ ವಾದಿರಾಜರ ಕೃತಿಗಳು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಹೊರಬಂದಿವೆ (1980). ಇದರಲ್ಲಿ 290 ಕೀರ್ತನೆಗಳು, 10 ಸುಳಾದಿಗಳು, 12 ಉಗಾಭೋಗಗಳಿವೆ. ಇವುಗಳಲ್ಲಿ ಕೆಲವು ಈಗಾಗಲೆ ಪ್ರಕಟವಾಗಿದ್ದರೂ ಅನೇಕ ಹಸ್ತಪ್ರತಿಗಳನ್ನು ಬಳಸಿಕೊಂಡು ಮಾಡಿರುವ ಕೆಲಸ ಶಾಸ್ತ್ರ ನಿಬದ್ಧತೆಯನ್ನು ಪಡೆದು ಅಧಿಕೃತತೆಯನ್ನು ಹೊಂದಿದೆ. ಇವರೇ ಪರಿಷ್ಕರಿಸಿರುವ ಜಗನ್ನಾಥದಾಸರ ಕೃತಿಗಳು 1987ರಲ್ಲಿ ಪ್ರಕಟವಾಗಿದೆ. ಸುಮಾರು 112 ಆಕರಗಳನ್ನು ಆಧರಿಸಿ ಮಾಡಿರುವ ಕೃತಿ ಕರ್ತೃಗಳ ಮೌಲಿಕ ವಿಚಾರವನ್ನೊಳಗೊಂಡ ಉತ್ತಮ ಸಂಪಾದಿತ ಕೃತಿಯಿದು.

ಇತ್ತೀಚೆಗೆ ಹೆಸರಿಸಬಹುದಾದ ವಚನ ಸಾಹಿತ್ಯ ಕೃತಿಗಳೆಂದರೆ ಮುಖ್ಯವಾಗಿ ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ವೀರಶೈವ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ಸ್ವರ ವಚನಗಳ ಆರು ಸಂಪುಟಗಳು (1982–86) ಮತ್ತು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಲ್ಲಿ ಹೊರಬಂದಿರುವ ಸ್ವರವಚನಗಳ ಹತ್ತು ಸಂಪುಟಗಳು (1995–98). ಹಾಗೆಯೇ ವೀರಶೈವ ಅಧ್ಯಯನ ಸಂಸ್ಥೆಯಿಂದ ಸಹೃದಯರ ಕೈಸೇರಿರುವ ವಚನ ಸಂಕಲನ ಸಂಪುಟ 1–5 ಗ್ರಂಥಗಳು ಪ್ರಮುಖವಾದುವಾಗಿವೆ (1990–92). ಈ ಎಲ್ಲ ಕೃತಿಗಳಲ್ಲಿ ಪೂರ್ವದಲ್ಲಿಯೇ ವಿವಿಧೆಡೆಗಳಲ್ಲಿ, ಬೇರೆ ಬೇರೆ ರೀತಿಯಲ್ಲಿ ಪ್ರಕಾಶಿತವಾಗಿದ್ದ ಕೃತಿಗಳು ಸೇರಿದ್ದರೂ ಎಲ್ಲವೂ ಒತ್ತಟ್ಟಿಗೆ ನವೀನ ರೀತಿಯಲ್ಲಿ ಹೊರಬಂದಿರುವದು ಉತ್ತೇಜನಕಾರಿಯಾಗಿದೆ. ಇವುಗಳ ಜತೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಜನಪ್ರಿಯ ಆವೃತ್ತಿಯ ಹೆಸರಿನಲ್ಲಿ ಸಮಗ್ರ ವಚನಗಳ 15 ಸಂಪುಟಗಳನ್ನು ಪ್ರಕಟಿಸಿದೆ (1993). ದಾಸಸಾಹಿತ್ಯದ 50 ಸಂಪುಟಗಳನ್ನು 2003ರಲ್ಲಿ ಹೊರತಂದಿದೆ. ಶಾಸ್ತ್ರ ಪ್ರಕಾರ ಗ್ರಂಥಗಳಲ್ಲಿಯೂ ಕೆಲವು ಉತ್ತಮ ಕೃತಿಗಳು ಹೊರಬಂದಿರುವುದುಂಟು. ಅವುಗಳಲ್ಲಿ ಬಿ.ಎಸ್.ಸಣ್ಣಯ್ಯ ಅವರಿಂದ ಪರಿಷ್ಕರಣವಾಗಿ 1984ರಲ್ಲಿ ಹೊರಬಂದಿರುವ ಸಕಲವೈದ್ಯ ಸಂಹಿತಾಸಾರಾರ್ಣವ ಸಂ.2 ಮತ್ತು ಇವರಿಂದಲೇ ಪರಿಷ್ಕರಣಗೊಂಡು 1993ರಲ್ಲಿ ಪ್ರಕಾಶಿತವಾಗಿರುವ ಬೊಮ್ಮಯ್ಯನ ವೈದ್ಯಕಂದ ಮೊದಲಾದುವನ್ನು ಇಲ್ಲಿ ಗಣಿಸಬಹುದಾಗಿದೆ. ಇವೆರಡೂ ಮೊದಲ ಬಾರಿಗೆ ಬೆಳಕು ಕಂಡರೆ ಛಂದೋಂಬುಧಿ, ಶಬ್ದಮಣಿದರ್ಪಣಂ ಮೊದಲಾದ ಇತರ ಗ್ರಂಥಗಳು ಮರುಪರಿಷ್ಕರಣವಾದ ವಿವಿಧ ಆವೃತ್ತಿಗಳಾಗಿವೆ. ಇವರ 'ಪ್ರಾಚೀನ ಕನ್ನಡ ಗ್ರಂಥಸಂಪಾದನೆ' (2002) ಕನ್ನಡದಲ್ಲಿ ಪ್ರಕಟವಾದ ಪ್ರಾಚೀನ ಕಾವ್ಯಗಳ ಚಾರಿತ್ರಿಕ ಅಧ್ಯಯನವಾಗಿದೆ.

ಈ ಎಲ್ಲಾ ಪರಿಷ್ಕೃತ ಕೃತಿಗಳನ್ನು ಪರಿವೀಕ್ಷಿಸಿದಾಗ ಕಂಡುಬರುವ ಅಂಶವೆಂದರೆ ಕೆಲವು ಕೃತಿಗಳು ಸಂಪಾದನಾಶಾಸ್ತ್ರಕ್ಕನುಗುಣವಾಗಿ ಸಂಪಾದಿತವಾಗಿದ್ದರೆ ಮತ್ತೆ ಕೆಲವು ಕೃತಿಗಳಲ್ಲಿ ಅನೇಕ ಲೋಪದೋಷಗಳು ನುಸುಳಿವೆ. ಮರುಪರಿಷ್ಕರಣವಾದ ಕೃತಿಗಳಲ್ಲಿ ಕೆಲವೊಮ್ಮೆ ಪೂರ್ವದ ಆವೃತ್ತಿಗಳಿಗಿಂತ ಗುಣಮಟ್ಟದಲ್ಲಿ ಹಿಂಜರಿತ ಉಂಟಾಗಿದೆ. ಅಲ್ಲದೆ ಅಪ್ರಕಟಿತ ಗ್ರಂಥಗಳು ಓಲೆಕಟ್ಟುಗಳಲ್ಲಿಯೇ ನಶಿಸಿ ಹೋಗುತ್ತಿದ್ದರೂ ಅವುಗಳನ್ನು ಗಮನಿಸಿದೆ ಪ್ರಕಟವಾಗಿರುವ ಕೃತಿಗಳನ್ನೆ ಸಂಪಾದನೆಗೆ ಆಯ್ದುಕೊಳ್ಳುವ ಪ್ರವೃತ್ತಿ ಹೆಚ್ಚಾಗಿದೆ. ಇಂತಹ ಮನೋವಾಂಛಲ್ಯದಿಂದ ಮುಕ್ತವಾದರೆ ಮಾತ್ರ ಹಲವಾರು ಅಪ್ರಕಟಿತ ಕೃತಿಗಳು ಪ್ರಕಟವಾಗಿ ಕನ್ನಡ ಸಾಹಿತ್ಯ ಶ್ರೀಮಂತವಾಗುವುದಲ್ಲದೆ ಪೂರ್ವದ ಕೃತಿಕಾರರ ಆಶಯವೂ ಈಡೇರಿದಂತಾಗುತ್ತದೆ. ಇಂತಹ ಕಾರ್ಯಸಾಧನೆಗೆ ಕನ್ನಡದಲ್ಲಿ ವಿಪುಲ ಅವಕಾಶಗಳಿವೆ.

(ಬಿ.ಎಸ್.ಎಸ್.)

ಈಚೆಗೆ ಸಮಗ್ರ ಸಾಹಿತ್ಯ ಪ್ರಕಟಣೆಯ ಕಡೆಗೆ ಒಲವು ಮೂಡುತ್ತಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಮಗ್ರ ಕನ್ನಡ ಜೈನಸಾಹಿತ್ಯ ಮಾಲಿಕೆಯಲ್ಲಿ ಪ್ರಕಟವಾದ ಪಂಪಸಂಪುಟ, ರನ್ನಸಂಪುಟ ಮುಂತಾದ 20 ಸಂಪುಟಗಳು (2007) ತುಂಬ ಮಹತ್ವಪೂರ್ಣವಾಗಿವೆ. ಮೊದಲ ಹತ್ತೊಂಬತ್ತು ಸಂಪುಟಗಳಲ್ಲಿ ಪಂಪ, ಶಿವಕೋಟ್ಯಾಚಾರ್ಯ, ಚಾವುಂಡರಾಯ, ಪೊನ್ನ, ಕಮಲಭವ, ರನ್ನ, ನಾಗವರ್ಮ, ಶಾಂತಿನಾಥ, ಆಂಡಯ್ಯ, ನಾಗಚಂದ್ರ, ನಯಸೇನ, ಬ್ರಹ್ಮಶಿವ, ವೃತ್ತವಿಲಾಸ, ನೇಮಿಚಂದ್ರ, ಬಂಧುವರ್ಮ, ಆಚಣ್ಣ, ಅಗ್ಗಳ, ಜನ್ನ, ಇಮ್ಮಡಿ ಗುಣವರ್ಮ, ಪಾರ್ಶ್ವಪಂಡಿತ, ಮಧುರ, ಬಾಹುಬಲಿ, ಮಂಗರಸ, ರತ್ನಾಕರವರ್ಣಿ, ಸಾಳ್ವ, ದೇವಚಂದ್ರ ಇವರ ಕೃತಿಗಳಿವೆ. ಒಂದಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ ಕವಿಗಳ ಗ್ರಂಥಗಳು ಒಂದೇ ಸಂಪುಟದಲ್ಲಿ ಲಭ್ಯವಾಗುತ್ತವೆ. ಉತ್ತಮ ಪಾಠ, ಅಭ್ಯಾಸಪೂರ್ಣ ಪ್ರಸ್ತಾವನೆ, ಅರ್ಥಕೋಶ, ಪಾರಿಭಾಷಿಕ ಸೂಚಿಗಳೊಂದಿಗೆ ಈ ಗ್ರಂಥಗಳು ಸಂಪಾದಿತವಾಗಿವೆ.

ಒಂದು ಪ್ರಕಾರ ಅಥವಾ ಒಬ್ಬ ವ್ಯಕ್ತಿ ಕುರಿತ ಸಮಗ್ರಸಾಹಿತ್ಯ ಪ್ರಕಟಿಸುವುದು ಗ್ರಂಥಸಂಪಾದನೆಯ ಈಚಿನ ಪ್ರವೃತ್ತಿಗಳಲ್ಲಿ ಒಂದು. ಮಧ್ಯಕಾಲೀನ ವಚನಕಾರ, ಅನುಭಾವಿ, ವೀರಶೈವ ಪುನರುಜ್ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದ ತೋಂಟದ ಸಿದ್ಧಲಿಂಗಯತಿಗಳ ಮೇಲೆ ವಿಪುಲವಾದ ಸಾಹಿತ್ಯ ರಚನೆಯಾಗಿದೆ. ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ ಧನಸಹಾಯದಿಂದ 'ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರ ಸಾಹಿತ್ಯ'ವು ಹತ್ತು ಸಂಪುಟಗಳಲ್ಲಿ 2005ರಲ್ಲಿ ಎಡೆಯೂರಿನಿಂದ ಪ್ರಕಟವಾಗಿದ್ದು ಈ ಕುರಿತು ಅಧ್ಯಯನ ಕೈಗೊಳ್ಳಲು ಸಮಗ್ರ ಪಠ್ಯ ದೊರಕುವಂತಾಗಿದೆ. ಗ್ರಂಥಸಂಪಾದನೆಯ ಹಿರಿಯ ವಿದ್ವಾಂಸರು ಈ ಸಂಪುಟಗಳನ್ನು ಸಂಪಾದಿಸಿಕೊಟ್ಟಿದ್ದಾರೆ.

ಕಳೆದ ಶತಮಾನದಲ್ಲಿ ಗ್ರಂಥಸಂಪಾದನೆಗೆ ಪ್ರಾಮುಖ್ಯತೆ ಸಿಕ್ಕಿದ್ದರಿಂದ ಇದರ ಭಾಗವಾದ ಹಸ್ತಪ್ರತಿ ಅಧ್ಯಯನ ಗೌಣವಾಗಿತ್ತು. ಆದರೆ 1982ರಿಂದ ಈಚೆಗೆ ಇದೊಂದು ಅಧ್ಯಯನ ಶಾಖೆಯಾಗಿ ಬೆಳೆಯತೊಡಗಿತು. ಎಂ.ಎಂ. ಕಲಬುರ್ಗಿಯವರ ಕನ್ನಡ ಹಸ್ತಪ್ರತಿ ಶಾಸ್ತ್ರ (1993) ಇದಕ್ಕೊಂದು ಶಾಸ್ತ್ರೀಯ ಸ್ವರೂಪ ನೀಡಿತು. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಅಧ್ಯಯನ ಹಾಗೂ ಹಸ್ತಪ್ರತಿ ವ್ಯಾಸಂಗ ಸಂಪುಟಗಳು ಹಸ್ತಪ್ರತಿ ಅಧ್ಯಯನದ ಮಹತ್ವವನ್ನು ತಿಳಿಸಿಕೊಡುವುದರ ಜೊತೆಗೆ ಹೊಸ ಓದಿಗೆ ಕಾರಣವಾಗಿವೆ. ಪಾಠಗಳ ಚಲನಶೀಲತೆ, ಒಪ್ಪಿತ ಪಾಠ ಮುಂತಾದ ಚರ್ಚೆಗಳನ್ನು ಹುಟ್ಟುಹಾಕಿವೆ. ವೀರೇಶ ಬಡಿಗೇರ ಅವರ 'ಹಸ್ತಪ್ರತಿ ಸಾಫ್ಟ್‌ವೇರ್' ಗ್ರಂಥ ಹೊಸ ಕಾಲಮಾನಕ್ಕೆ ಹಸ್ತಪ್ರತಿಯನ್ನು ಸ್ಥಿರಗೊಳಿಸುವ ಪ್ರಯತ್ನವಾಗಿದೆ. ನಾ. ಗೀತಾಚಾರ್ಯರ ಹಸ್ತಪ್ರತಿಶಾಸ್ತ್ರ ವಿವೇಚನೆ (2000) ಮತ್ತು ಹಸ್ತಪ್ರತಿ ಅಧ್ಯಯನ ಶಾಸ್ತ್ರ (2010), ವೀರೇಶ ಬಡಿಗೇರ ಅವರ ಹಲಗೆ–ಬಳಪ (2003) ಕೃತಿಗಳು ಹಸ್ತಪ್ರತಿ ಅಧ್ಯಯನವನ್ನು ಮತ್ತಷ್ಟು ಮುನ್ನಡೆಸಿವೆ.

ಗ್ರಂಥಸಂಪಾದನೆಯ ವಿವಿಧ ಆಯಾಮಗಳನ್ನು ಕುರಿತ ಅಧ್ಯಯನಗಳಿಗೆ ವೈ.ಸಿ. ಭಾನುಮತಿ ಅವರ ಗ್ರಂಥಸಂಪಾದನೆ ಕೆಲವು ಅಧ್ಯಯನ (1997), ಗ್ರಂಥಸಂಪಾದನೆ

ವಿವಕ್ಷೆ (2003), ಗ್ರಂಥಸಂಪಾದನೆ ಎಳೆಗಳು (2009), ಎಫ್.ಟಿ. ಹಳ್ಳಿಕೇರಿ ಅವರ ಕಂಠಪತ್ರ (2003) ಒಂದು ಮತ್ತು ಎರಡನೆಯ ಸಂಪುಟಗಳು, ಎಸ್.ಎಸ್. ಅಂಗಡಿ ಅವರ ಕನ್ನಡ ಹಸ್ತಪ್ರತಿ: ಭಾಷಿಕ ಅಧ್ಯಯನ (2006) ಎಂಬ ಗ್ರಂಥಗಳು ಇಂಬು ನೀಡಿವೆ. ಮೋಡಿಲಿಪಿ ಓದುವವರ ಸಂಖ್ಯೆ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಅದರ ಅಗತ್ಯವನ್ನರಿತು ಹೊರಬಂದ ವೀರೇಶ ಬಡಿಗೇರ ಅವರ ಕನ್ನಡ ಮೋಡಿ ಲಿಪಿ ಸಂರಚನೆ ಮತ್ತು ಸಂವರ್ಧನೆ (2011) ಮೋಡಿಲಿಪಿಯನ್ನು ರಚನಾತ್ಮಕ ಮತ್ತು ಸಾಂಸ್ಕೃತಿಕ ನೆಲೆಯಿಂದ ನಿರ್ವಚಿಸಿದಂಥ ಕೃತಿಯಾಗಿದೆ.

ಸಂಗ್ರಹಿತವಾದ ಹಸ್ತಪ್ರತಿ ವಿದ್ವಾಂಸರ ಉಪಯೋಗಕ್ಕೆ ಬರಬೇಕಾದರೆ ಸೂಚೀಕರಣ ಅಗತ್ಯ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗ ಇದುವರೆಗೆ 38 ಗ್ರಂಥಗಳನ್ನು ಪ್ರಕಟಿಸಿದೆ. ಈ ಪೈಕಿ 'ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ' ಐದು ಸಂಪುಟಗಳನ್ನು (2003–2006) ವೀರೇಶ ಬಡಿಗೇರ, ಕೆ. ರವೀಂದ್ರನಾಥ್, ಎಫ್.ಟಿ. ಹಳ್ಳಿಕೇರಿ, ಎಸ್.ಎಸ್. ಅಂಗಡಿ, ಎಸ್.ಆರ್. ಚನ್ನವೀರಪ್ಪ ಅವರು ಸಿದ್ಧಪಡಿಸಿದ್ದಾರೆ. ಶ್ರವಣಬೆಳಗೊಳ ಹಸ್ತಪ್ರತಿ ಭಂಡಾರದಿಂದ ಕನ್ನಡ, ಸಂಸ್ಕೃತ, ಪ್ರಾಕೃತ ಹಸ್ತಪ್ರತಿಗಳ ವಿವರಗಳು ಏಳು ಸಂಪುಟಗಳಲ್ಲಿ (2003–2010) ಬಿ.ಎಸ್. ಸಣ್ಣಯ್ಯನವರ ಸಂಪಾದಕತ್ವದಲ್ಲಿ ಹೊರಬಂದಿವೆ. ಗೌ.ಮ. ಉಮಾಪತಿಶಾಸ್ತ್ರಿಗಳು ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿರುವ ಹಸ್ತಪ್ರತಿಗಳನ್ನಾಧರಿಸಿ ಯಕ್ಷಗಾನ ಹಸ್ತಪ್ರತಿ ಸೂಚಿ (2003) ಪ್ರಕಟಿಸಿದ್ದಾರೆ. ಇವರ ಕಲ್ಲಚ್ಚಿನ ಕನ್ನಡ ಹೊತ್ತಗೆಗಳ ವಿವರಣ ಸೂಚಿ (2003) ವಿಶಿಷ್ಟವಾಗಿದೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಸರ್ಜಾ ಹನುಮೇಂದ್ರ ಯಶೋವಿಲಾಸಂ (1996), ಸೌಂದರಕಾವ್ಯ (1996), ರಾಜವಂಶ ರತ್ನಪ್ರಭೆ (1997) ಎಂಬ ಗ್ರಂಥಗಳು ವಿರಳವಾದ ಚಾರಿತ್ರಿಕ ಕಾವ್ಯಗಳಾಗಿವೆ. ಸರ್ಜಾ ಹನುಮೇಂದ್ರ ಯಶೋವಿಲಾಸಂ ಸಂತೆಬೆನ್ನೂರು ಪಾಳೆಯಗಾರನಾದ ಸರ್ಜಾ ಹನುಮಪ್ಪನಾಯಕನನ್ನೂ, ಸೌಂದರಕಾವ್ಯ ಮೈಸೂರಿನ ದಳವಾಯಿಗಳನ್ನೂ, ರಾಜವಂಶ ರತ್ನಪ್ರಭೆ ಮೈಸೂರು ದೊರೆಗಳನ್ನೂ ಕೇಂದ್ರವಾಗಿಟ್ಟುಕೊಂಡು ರಚಿತವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಶಾಸ್ತ್ರೀಯ ಭಾಷೆಯ ಕ್ರಿಯಾಯೋಜನೆಯ ಮಾಲಿಕೆಯಲ್ಲಿ 20 ಅಪ್ರಕಟಿತ ಗ್ರಂಥಗಳನ್ನು 2011ರಲ್ಲಿ ಪ್ರಕಟಿಸಿದೆ. ಇವುಗಳಲ್ಲಿ ಬಹುಪಾಲು ಮುಮ್ಮಡಿಯವರ ಕಾಲದ ಕೃತಿಗಳಾಗಿವೆ. ಅಳಿಯ ಲಿಂಗರಾಜ ಕವಿಯ ಯಕ್ಷಗಾನ ಸಾಹಿತ್ಯ ಐದು ಸಂಪುಟಗಳಲ್ಲಿ ಬೆಳಕು ಕಂಡಿದೆ. ಅಕಾರಾದಿ ನಿಘಂಟು ಮತ್ತು ವೈದ್ಯನಿಘಂಟು, ಸೂಕ್ತ ಮುಕ್ತಾವಳಿ ಎಂಬ ಬೃಹತ್ ಗದ್ಯಗ್ರಂಥ ಇಂಥ ಕೆಲವು ಈ ಮಾಲಿಕೆಯ ವೈಶಿಷ್ಟ್ಯಗಳು.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ 'ಅಪ್ರಕಟಿತ ಪ್ರಾಚೀನ ಸಾಹಿತ್ಯ ಮಾಲೆ'ಯಲ್ಲಿ ಎಂ.ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ 25 ವಿಭಿನ್ನವಾದ ಗ್ರಂಥಗಳನ್ನು 2007ರಲ್ಲಿ ಹೊರತಂದಿದೆ. ಈ ಮಾಲಿಕೆಯಲ್ಲಿ ಪ್ರಾಚೀನ ಕಾವ್ಯಗಳ ಜೊತೆಗೆ ಮೈಸೂರು ಒಡೆಯರ ಆಕರ ಸಾಹಿತ್ಯ, ಮುನಿವಂಶಾಭ್ಯುದಯ, ಮೂಡಬಿದಿರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕಪುಸ್ತಕ ಇವೇ ಮೊದಲಾದ ಚರಿತ್ರೆಯ ಆಕರ ಗ್ರಂಥಗಳೂ ಇವೆ. ಎರಡನೆಯ ಕಂತಿನ 25 ಅಪ್ರಕಟಿತ ಗ್ರಂಥಗಳನ್ನು ಇದೇ ಇಲಾಖೆ 2012ರಲ್ಲಿ ಸಂಪಾದಿಸಿ ಪ್ರಕಟಿಸುತ್ತಿದೆ. ಶಾಸ್ತ್ರೀಯ ಭಾಷೆಯಾಗಿ ಕನ್ನಡಕ್ಕೆ ಮಾನ್ಯತೆ ಸಿಕ್ಕಿದ ಹಿನ್ನೆಲೆಯಲ್ಲಿ ಹಲವಾರು ಪ್ರಾಚೀನ ಗ್ರಂಥಗಳು ಪ್ರಕಟವಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. (ವೈ.ಸಿ.ಬಿ.)

**ಗ್ರಂಥಸ್ವಾಮ್ಯ: ನೋಡಿ-ಕೃತಿಸ್ವಾಮ್ಯ**

**ಗ್ರಂಥಾಲಯ** : ಗ್ರಂಥಾಲಯ ಎಂಬ ಪದಕ್ಕೆ ಗ್ರಂಥಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಇಟ್ಟಿರುವ ಕಟ್ಟಡ ಎಂದು ಅರ್ಥವಿಸಬಹುದು (ಲೈಬ್ರರಿ). ಇದನ್ನು ಗ್ರಂಥ ಭಂಡಾರ, ಪುಸ್ತಕ ಭಂಡಾರ, ಸರಸ್ವತೀ ಮಹಲ್ ಮುಂತಾದ ಹೆಸರುಗಳಿಂದ ಕರೆದಿರುವುದೂ ಉಂಟು. ಇಲ್ಲಿ ಗ್ರಂಥವೆಂದರೆ ಲಿಪಿಗಿಳಿದ ಯಾವ ದಾಖಲೆಯೂ ಆಗಬಹುದು. ಮುದ್ರಣ ಬರುವುದಕ್ಕೆ ಮೊದಲು ಗ್ರಂಥಗಳು ಹಸ್ತಪ್ರತಿಗಳಾಗಿರುತ್ತಿದ್ದವು. ಬಹು ಹಿಂದೆ, ಬರೆಯಲು ಜಂಬುಕಾಗದ, ಓಲೆಗರಿ ಅನಂತರ ಅಥವಾ ಅವುಗಳ ಜೊತೆಗೇ ಶಿಲಾಫಲಕ, ಕಾಷ್ಠಫಲಕ, ಲೋಹಫಲಕ, ಮಣ್ಣಿನಫಲಕ, ಚರ್ಮಪಟ್ಟಿ ಇತ್ಯಾದಿಗಳನ್ನು ಬಳಸಲಾಗುತ್ತಿತ್ತು. ಅನಂತರ ಮುದ್ರಣದ ಜೊತೆಗೇ ಕಾಗದವೂ ಸಿದ್ಧವಾಗಿ ಮುದ್ರಿತ ಪುಸ್ತಕಗಳು ಬರತೊಡಗಿದವು. ಮೂಲಗ್ರಂಥ, ಅದಕ್ಕೆ ಟೀಕೆ ಟಿಪ್ಪಣಿಗಳು, ವ್ಯಾಖ್ಯಾನಗಳು ಹುಟ್ಟಿಕೊಂಡವು. ಪ್ರಾಚೀನ ಗ್ರಂಥಾಲಯಗಳು ಕೇವಲ ಹಸ್ತಪ್ರತಿ ಸಂಗ್ರಹಗಳಾಗಿದ್ದವು. ಕ್ರಮೇಣ ಅವುಗಳೊಂದಿಗೆ ಮುದ್ರಿತ ಗ್ರಂಥಗಳು ಸೇರಿದವು. ಈಗೀಗ ಗ್ರಂಥಾಲಯಗಳಲ್ಲಿ ಲಿಪಿಗಿಳಿದ ಎಲ್ಲ ಮುಖ್ಯ ದಾಖಲೆಗಳನ್ನೂ ಸಂಗ್ರಹಿಸಲಾಗುತ್ತಿದೆ. ಅಂದರೆ ಗ್ರಂಥಗಳ ಜೊತೆಗೆ ನಿಯತಕಾಲಿಕೆಗಳು, ವೃತ್ತಪತ್ರಿಕೆಗಳು, ಚಿತ್ರಪಟಗಳು, ಮ್ಯಾಪುಗಳು, ಚಲನಚಿತ್ರಗಳು, ಫಿಲ್ಮುಗಳು, ಧ್ವನಿಮುದ್ರಿತ ತಟ್ಟೆಗಳು, ಟೇಪುಗಳು, ನಕ್ಷೆಗಳು–ಇವೆಲ್ಲ ಸೇರುತ್ತವೆ. ಇವನ್ನು ಸಂಗ್ರಹಿಸಿ ಜೋಪಾನಿಸುವುದರ ಜೊತೆಗೆ ಈಗಿನ ಗ್ರಂಥಭಂಡಾರಗಳು ಅವನ್ನು ಯುಕ್ತವಾಗಿ ವರ್ಗೀಕರಿಸಿ, ಅವಕ್ಕೆ ಸಂಬಂಧಿಸಿದ ಗ್ರಂಥಸೂಚಿಗಳು, ಲೇಖಕ– ಪುಸ್ತಕ ಕಾರ್ಡುಗಳು, ಕೈಪಿಡಿಗಳು ಮೊದಲಾದವುಗಳ ಸಹಾಯದಿಂದ ಗ್ರಂಥಲಾಭ ಸುಲಭದಲ್ಲಿ ದೊರೆಯುವಂತೆ ಮಾಡಿವೆ. ಗ್ರಂಥಾಲಯಗಳ ಉಗಮ ಮತ್ತು ಬೆಳೆವಣಿಗೆ, ಗ್ರಂಥಾಲಯಗಳ ಆಡಳಿತ ಮತ್ತು ವ್ಯವಸ್ಥೆ, ಗ್ರಂಥಾಲಯ ಪ್ರಕಾರಗಳಲ್ಲಿನ ವೈವಿಧ್ಯ, ಗ್ರಂಥಾಲಯಗಳಲ್ಲಿ ಈಚೆಗೆ ದೊರಕುತ್ತಿರುವ ಪ್ರಲೇಖನ ಹಾಗೂ ಪರಾಮರ್ಶನ ಸೇವೆಗಳ ವಿಚಾರ, ಗ್ರಂಥಾಲಯ ಗಳಲ್ಲಿನ ಸ್ವಯಂತ್ರೀಕರಣ ವ್ಯವಸ್ಥೆ, ವಿದ್ಯುತ್ ಮಾಹಿತಿ ಆಕರಗಳು, ಗ್ರಂಥಾಲಯ ವಿಜ್ಞಾನಿಗಳು –ಈ ಎಲ್ಲ ವಿಷಯಗಳನ್ನೂ ಕುರಿತ ವಿವರಗಳು ಇಲ್ಲಿವೆ. ಗ್ರಂಥಾಲಯ ವಿಜ್ಞಾನದ ಬಗ್ಗೆ ಪ್ರತ್ಯೇಕ ಲೇಖನವೇ ಇದೆ:

ಗ್ರಂಥಾಲಯಕ್ಕೆ ಸಂಬಂಧಿಸಿದ ಪ್ರಸ್ತುತ ಲೇಖನ ವಿನ್ಯಾಸ ಹೀಗಿದೆ :

I ಗ್ರಂಥಾಲಯಗಳ ಉಗಮ ಮತ್ತು ವಿಕಾಸ
- 1 ಪ್ರಾಚೀನ ಮತ್ತು ಮಧ್ಯಯುಗೀನ ಗ್ರಂಥಾಲಯಗಳು
- 2 ಭಾರತದಲ್ಲಿ ಗ್ರಂಥಾಲಯಗಳು
- 3 ಕರ್ನಾಟಕದಲ್ಲಿ ಗ್ರಂಥಾಲಯಗಳು
- 4 ಗ್ರೇಟ್ ಬ್ರಿಟನಿನಲ್ಲಿ ಗ್ರಂಥಾಲಯಗಳ ಬೆಳವಣಿಗೆ
- 5 ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಗ್ರಂಥಾಲಯಗಳು
- 6 ಸೋವಿಯೆತ್ ದೇಶದ ಗ್ರಂಥಾಲಯಗಳು

II ಗ್ರಂಥಾಲಯ ಕಾಯದೆ

III ಗ್ರಂಥಾಲಯ ಆಡಳಿತ ಮತ್ತು ವ್ಯವಸ್ಥೆ
- 1 ಗ್ರಂಥಾಲಯದ ಪಂಚಸೂತ್ರಗಳು
- 2 ಗ್ರಂಥ ಪರಿಚಲನೆ
- 3 ಆಯ್ಕೆ ಮತ್ತು ಸಂಗ್ರಹಣೆ
- 4 ವರ್ಗೀಕರಣ
- 5 ಸೂಚೀಕರಣ
- 6 ಗ್ರಂಥಗಳ ಕಣ್ಮರೆ ಹಾಗೂ ಹಾನಿ
- 7 ಗ್ರಂಥ ಸಂರಕ್ಷಣೆ
- 8 ಗ್ರಂಥಾಲಯ ಪ್ರಚಾರ
- 9 ಗ್ರಂಥಾಲಯ ಸಿಬ್ಬಂದಿ
- 10 ಕಾರ್ಯಮಾಪನಗಳು ಮತ್ತು ಗ್ರಂಥಾಲಯ ಸಿಬ್ಬಂದಿ ಸೂತ್ರ
- 11 ಗ್ರಂಥಾಲಯ ನಿಯಮಗಳು
- 12 ಗ್ರಂಥಾಲಯ ಕೈಪಿಡಿ
- 13 ಗ್ರಂಥಾಲಯ ಸಮಿತಿ
- 14 ಗ್ರಂಥಾಲಯ ಆಯವ್ಯಯ
- 15 ಗ್ರಂಥಾಲಯ ಕಟ್ಟಡ

IV ಗ್ರಂಥಾಲಯ ಪ್ರಕಾರಗಳು

A ಸಾರ್ವಜನಿಕ ಗ್ರಂಥಾಲಯ
- 1 ದೆಹಲಿ ಸಾರ್ವಜನಿಕ ಗ್ರಂಥಾಲಯ
- 2 ಖುದಾಭಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯ

B ಶೈಕ್ಷಣಿಕ ಗ್ರಂಥಾಲಯಗಳು
- 1 ಶಾಲಾ ಗ್ರಂಥಾಲಯಗಳು
- 2 ಕಾಲೇಜು ಗ್ರಂಥಾಲಯಗಳು
- 3 ವಿಶ್ವವಿದ್ಯಾಲಯ ಗ್ರಂಥಾಲಯಗಳು

C ಮಕ್ಕಳ ಗ್ರಂಥಾಲಯಗಳು

D ವಿಶಿಷ್ಟ ಗ್ರಂಥಾಲಯಗಳು
- 1 ತಾಂತ್ರಿಕ ಗ್ರಂಥಾಲಯಗಳು
- 2 ಕೈಗಾರಿಕಾ ಗ್ರಂಥಾಲಯಗಳು
- 3 ವೈದ್ಯಕೀಯ ಗ್ರಂಥಾಲಯಗಳು
- 4 ಸರ್ಕಾರಿ ಆಡಳಿತ ಶಾಖೆ ಗ್ರಂಥಾಲಯಗಳು
- 5 ಇಂಡಿಯ ಆಫೀಸ್ ಗ್ರಂಥಾಲಯ
- 6 ಆರ್ಕೈವ್ಸ್

7 ಹಸ್ತಪ್ರತಿ ಗ್ರಂಥಾಲಯಗಳು
8 ವೃತ್ತಪತ್ರಿಕಾ ಗ್ರಂಥಾಲಯಗಳು
9 ಚಲನಚಿತ್ರ ಗ್ರಂಥಾಲಯಗಳು
10 ಧ್ವನಿಮುದ್ರಿಕೆ ಗ್ರಂಥಾಲಯಗಳು
11 ಕುರುಡರಿಗಾಗಿ ಗ್ರಂಥಾಲಯಗಳು
12 ಜೈಲು ಗ್ರಂಥಾಲಯಗಳು
E ರಾಷ್ಟ್ರೀಯ ಗ್ರಂಥಾಲಯಗಳು
1 ಲೈಬ್ರರಿ ಆಫ್ ಕಾಂಗ್ರೆಸ್
2 ಜಪಾನಿನ ರಾಷ್ಟ್ರೀಯ ಸಂಸತ್ ಗ್ರಂಥಾಲಯ
3 ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯ
4 ಫ್ರಾನ್ಸಿನ ರಾಷ್ಟ್ರೀಯ ಗ್ರಂಥಾಲಯ
5 ಪೀಕಿಂಗ್ ಗ್ರಂಥಾಲಯ
6 ಭಾರತದ ರಾಷ್ಟ್ರೀಯ ಗ್ರಂಥಾಲಯ
F ಸಂಪರ್ಕ ಗ್ರಂಥಾಲಯಗಳು
G ಕಾಪಿರೈಟ್ ಗ್ರಂಥಾಲಯ
V ಪರಾಮರ್ಶನ ಮತ್ತು ಪ್ರಲೇಖನ ಸೇವೆಗಳು
1 ಪರಾಮರ್ಶನ ಸೇವೆ ಮತ್ತು ಪರಾಮರ್ಶನ ಗ್ರಂಥಗಳು
2 ಪ್ರಲೇಖನ :
(a) ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರ
b) ಭಾರತದ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ
(c) ಭಾರತೀಯ ಸಮಾಜ ವಿಜ್ಞಾನ ಸಂಶೋಧನ ಸಂಸ್ಥೆ
VI ಗ್ರಂಥಾಲಯ ಮತ್ತು ಸ್ವಯಂತ್ರೀಕರಣ : ರಿಪ್ರೋಗ್ರಫಿ
VII ಗ್ರಂಥಾಲಯ ಸಂಘಗಳು
1 ಯುನೆಸ್ಕೊ ಮತ್ತು ಗ್ರಂಥಾಲಯಗಳ ಅಭಿವೃದ್ಧಿ
2 ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಯುಕ್ತ ಮಹಾಸಂಘ
3 ಅಂತಾರಾಷ್ಟ್ರೀಯ ಸಂಗೀತ ಗ್ರಂಥಾಲಯಗಳ ಸಂಘ
4 ಅಮೆರಿಕದ ಗ್ರಂಥಾಲಯ ಸಂಘ
5 ಭಾರತೀಯ ಗ್ರಂಥಾಲಯಗಳ ಸಂಘ
6 ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಮತ್ತು ಸಮಾಚಾರ ಕೇಂದ್ರಗಳ ಸಂಘ
VIII ಗ್ರಂಥಾಲಯ ಸಹಕಾರ
IX ಪುಸ್ತಕಶಾಸ್ತ್ರ : ಪುಸ್ತಕವಿಕಸನ
1 ಪುಸ್ತಕಶಾಸ್ತ್ರ
2 ಪುಸ್ತಕ ವಿಕಸನ
X ಗ್ರಂಥಾಲಯ ವಿಜ್ಞಾನಿಗಳು
1 ಕಾರ್ನೇಗಿ, ಆಂಡ್ರ್ಯೂ
2 ಕಟ್ಟರ್, ಚಾರಲ್ಸ್ ಅಮ್ಮಿ
3 ಖುದಾಭಕ್ಷ್ ಖಾನ್
4 ಡ್ಯೂಯಿ, ಮೆಲ್‌ವಿಲ್
5 ಬ್ಲಿಸ್, ಹೆನ್ರಿ ಎವ್ಲಿನ್
6 ಬರ್ವಿಕ್ ಸೇಯರ್ಸ್, ಡಬ್ಲ್ಯು.ಸಿ.
7 ಅಸದುಲ್ಲ, ಖಲೀಫ್ ಮಹಮದ್
8 ರಂಗನಾಥನ್, ಎಸ್. ಆರ್.
9 ಮಾರ್ಷಲ್, ಡಿ.ಎನ್.
10 ಕೇಶವನ್, ಬಿ. ಎಸ್.
XI ಗ್ರಂಥಾಲಯ–ಒಂದು ಮುನ್ನೋಟ

## I ಗ್ರಂಥಾಲಯಗಳ ಉಗಮ ಮತ್ತು ವಿಕಾಸ

**1 ಪ್ರಾಚೀನ ಮತ್ತು ಮಧ್ಯಯುಗೀನ ಗ್ರಂಥಾಲಯಗಳು:** ಬರೆಹದ ಮೂಲಕ ತಾನು ಸಂಗ್ರಹಿಸಿದ ಜ್ಞಾನಭಂಡಾರ ತನ್ನ ಮಕ್ಕಳು ಮೊಮ್ಮಕ್ಕಳಿಗೆ ದೊರಕಲೆಂಬ ಮಾನವನ ಹಂಬಲ ಗ್ರಂಥಾಲಯಗಳ ಜನನಕ್ಕೆ ಕಾರಣವಾಯಿತಷ್ಟೆ. ಗ್ರಂಥಾಲಯಗಳ ಉಗಮ, ಬೆಳೆವಣಿಗೆಗಳ ಕಥೆ ಸ್ವಾರಸ್ಯಮಯವಾಗಿದೆ. ಮೊದಲು ಗ್ರೀಸ್, ರೋಮ್ ಮತ್ತು ಭಾರತಗಳಲ್ಲಿನ ಪ್ರಾಚೀನ ಗ್ರಂಥಾಲಯಗಳ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

**ಗ್ರೀಕರ ಗ್ರಂಥಾಲಯಗಳು :** ಗ್ರೀಕ್ ಸಾಹಿತ್ಯದ ಪ್ರಾರಂಭ ಕಾಲದಲ್ಲಿ ಲಿಖಿತ ಸಾಹಿತ್ಯವಿರಲಿಲ್ಲ. ಗ್ರೀಕ್ ಪರ್ಷಿಯ ಯುದ್ಧಕಾಲದಲ್ಲಿಯೂ ಗ್ರಂಥಾಲಯಗಳ ಬಗ್ಗೆ ಸಾಕಷ್ಟು ವಿವರ ಸಿಗುವುದಿಲ್ಲ. ಪ್ರ.ಶ.ಪೂ. 9ನೆಯ ಶತಮಾನದಲ್ಲಿ ಬರೆವಣಿಗೆ ಕಲೆ ಗ್ರೀಕ್ ದೇಶದಲ್ಲಿ ಪ್ರಚಲಿತವಿದ್ದುದು ಕಂಡುಬರುತ್ತದೆ. ಅದು ಇಲಿಯಡ್ ಹಾಗೂ ಒಡಿಸ್ಸಿ ಮಹಾಕಾವ್ಯಗಳು ರಚನೆಗೊಂಡ ಕಾಲ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಅಥೆನ್ಸಿನ ದೊರೆಯಾಗಿದ್ದ ಪೈಸಿಸ್ಟ್ರೇಟಸ್ ಸಾರ್ವಜನಿಕ ಗ್ರಂಥಾಲಯದ ಪಿತಾಮಹನೆಂದು, ಓಲಿಸ್ ಗೆಲಿಯಸ್ (2ನೆಯ ಶತಮಾನ) ಎಂಬ ಲೇಖಕ ಹೇಳಿದ್ದಾನೆ. ತಾವು ಸ್ಥಾಪಿಸಿದ

**ಅಲೆಕ್ಸಾಂಡ್ರಿಯ ವಿಶ್ವವಿದ್ಯಾಲಯವಿದ್ದ ಸ್ಥಳ–ಪಾಂಪೆಯ ಕಂಬ. ಇಲ್ಲಿಯ ಗ್ರಂಥಾಲಯದಲ್ಲಿ 5,00,000 ಹಸ್ತಪ್ರತಿ ಸುರುಳಿಗಳಿದ್ದುವಂತೆ. ಪ್ರ.ಶ. 640ರಲ್ಲಿ ಇದು ಬೆಂಕಿಗಾಹುತಿಯಾಯಿತು**

ಪ್ರತಿಯೊಂದು ಪಟ್ಟಣದಲ್ಲಿಯೂ ಗ್ರೀಕರು ಗ್ರಂಥಾಲಯಗಳನ್ನು ತೆರೆದರು. ಜ್ಞಾನಪರ್ವತಗಳಾದ ಪ್ಲೇಟೋ ಮತ್ತು ಅರಿಸ್ಟಾಟಲರು ಖಾಸಗಿ ಗ್ರಂಥಾಲಯಗಳನ್ನು ಹೊಂದಿದ್ದರು. ಅವರು ಓದಿದ ಹಾಗೂ ಬರೆದ ಪುಸ್ತಕಗಳು ಜಂಬುಕಾಗದ (ಪಪೈರಸ್) ದಿಂದಾದುವು. ಯೂಕ್ಲಿಡ್ ಹಾಗೂ ಯೂರಿಪಿಡಿಸರೂ ವೈಯಕ್ತಿಕ ಗ್ರಂಥಾಲಯಗಳನ್ನು ಇಟ್ಟುಕೊಂಡಿದ್ದರು. ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಗ್ರಂಥಾಲಯಗಳು ಅಸ್ತಿತ್ವದಲ್ಲಿದ್ದ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ. ಪ್ಲೇಟೋ ಸ್ಥಾಪಿಸಿದ ಅಕಾಡೆಮಿಯಲ್ಲಿ ಒಂದು ಗ್ರಂಥಾಲಯವಿದ್ದಿರಬೇಕು. ಪ್ಲೇಟೋನ ದಾರ್ಶನಿಕ ಗ್ರಂಥಗಳು ಇಲ್ಲಿ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಅರಿಸ್ಟಾಟಲನ ವೈಯಕ್ತಿಕ ಗ್ರಂಥಾಲಯ ಬೆಳೆದು, ತುಸು ಹಾಳಾಗಿ, ಜೀರ್ಣೋದ್ಧಾರವಾದ ಸಂಗತಿ ಗಮನಾರ್ಹ. ವೈಯಕ್ತಿಕ ಗ್ರಂಥಾಗಾರಗಳನ್ನು ಬೆಳೆಸಿದವರಲ್ಲಿ ಇವನಿಗೆ ಅಗ್ರಪಟ್ಟ ಸಲ್ಲಬೇಕು. ಅರಿಸ್ಟಾಟಲನ ಅನಂತರ ಇವನ ಗ್ರಂಥಾಲಯದ ಒಡೆತನ ಹಲವರ ಸೊತ್ತಾಯಿತು. ಪರ್ಗಮಮ್ ದೊರೆಗಳು ಈ ಗ್ರಂಥಾಲಯವನ್ನು ದೋಚಿಕೊಂಡು ಹೋಗಬಾರದೆಂದು ಇದನ್ನು ಹೂಳಲಾಯಿತು. ಅಗೆದು ಹೊರತೆಗೆದಾಗ ಈ ಗ್ರಂಥಾಲಯ ಬಹುಪಾಲು ಮಣ್ಣು, ಹುಳುಗಳು ಪಾಲಾಗಿತ್ತು. ಆದರೂ ಎಪಿಲಕೋನ ಸರದಾರ ಸಲ್ಲ ಅದನ್ನು ರೋಮ್ ನಗರಕ್ಕೆ ಸ್ಥಳಾಂತರಿಸಿದ. ಪ್ರ.ಶ.ಪೂ. 40ರ ಸುಮಾರಿನಲ್ಲಿ ಅರಿಸ್ಟಾಟಲನ ಗ್ರಂಥಗಳು ಇಲ್ಲಿಂದಲೇ ಹೊರಬಿದ್ದುವು. ಈ ಗ್ರಂಥಗಳೇ ಇಂದಿಗೂ ಅರಿಸ್ಟಾಟಲನ ಕೃತಿಗಳಿಗೆ ಮೂಲಾಧಾರ. ಟಾಲೆಮಿ ದೊರೆಗಳು ಅರಿಸ್ಟಾಟಲನ ಕೆಲ ಗ್ರಂಥಗಳನ್ನು ಕೊಂಡು ತಮ್ಮ ಅಲೆಕ್ಸಾಂಡ್ರಿಯ ಗ್ರಂಥಾಲಯದಲ್ಲಿ ಶೇಖರಿಸಿದರೆಂದು ಪ್ರತೀತಿ. ಬಹುಶಃ ಅವು ನಕಲುಗಳಿರಬಹುದು. ಜಂಬುಕಾಗದದ ಸುರಳಿಯಲ್ಲಿದ್ದ ಅರಿಸ್ಟಾಟಲನ ಯಾವ ಗ್ರಂಥವೂ ಬಹುಶಃ ಉಳಿದುಬಂದಂತಿಲ್ಲ.

**ಅಲೆಕ್ಸಾಂಡ್ರಿಯ ಗ್ರಂಥಾಲಯ :** ಇಡೀ ಪ್ರಪಂಚವನ್ನೇ ಗೆಲ್ಲಲು ಹೊರಟ ಮಹತ್ವಾಕಾಂಕ್ಷಿ ಅಲೆಕ್ಸಾಂಡರ್ ಈ ಗ್ರಂಥಾಲಯ ಸ್ಥಾಪನೆಗೆ ಕಾರಣವಾದ. ಅರಿಸ್ಟಾಟಲನ ಶಿಷ್ಯನಾದ ಅಲೆಕ್ಸಾಂಡರನಿಗೆ ಗ್ರಂಥಗಳ ಬಗ್ಗೆ ಅಮಿತವಾದ ಆದರ ಮತ್ತು ಗೌರವವಿತ್ತು. ಅಲೆಕ್ಸಾಂಡ್ರಿಯ ಗ್ರಂಥಾಲಯ ಗ್ರೀಕರ ಕೊಡುಗೆ. ಅನೇಕ ಚಕ್ರವರ್ತಿಗಳ, ಆಶ್ರಯದಾತರ ಹೆಸರುಗಳು ಈ ಗ್ರಂಥಾಲಯದ ಪೋಷಕ ವರ್ಗದಲ್ಲಿ ಬಂದಿವೆ. ಇದು ಗ್ರೀಕ್ ಸಾಹಿತ್ಯ ಸಂಸ್ಕೃತಿಗಳ ಅಂತಾರಾಷ್ಟ್ರಿಯ ಕೇಂದ್ರವಾಗಬೇಕೆಂದು ಟಾಲೆಮಿ ದೊರೆಗಳು ಕನಸು ಕಂಡಿದ್ದರು. ಈ ಗ್ರಂಥಾಲಯದಲ್ಲಿ ಇತರ ಸಾಹಿತ್ಯಗಳಿಂದ ಗ್ರೀಕ್ ಸಾಹಿತ್ಯಕ್ಕೆ ಭಾಷಾಂತರಿಸುವ ಏರ್ಪಾಡು ಇತ್ತು. ಈ ಗ್ರಂಥಾಲಯ ಎರಡು ವಿಭಾಗಗಳನ್ನೊಳಗೊಂಡಿತ್ತು. ವಸ್ತುಸಂಗ್ರಹಾಲಯದಲ್ಲಿ ನಡೆದ ಅಭ್ಯಾಸಕ್ಕೆ ಈ ಗ್ರಂಥಾಲಯದ ವಿಭಾಗಗಳು ಪೂರಕವಾಗಿದ್ದುವು. 3ನೆಯ ಟಾಲೆಮಿ ಇದನ್ನು ಸ್ಥಾಪಿಸಿದನೆಂದು ಕಂಡುಬರುತ್ತದೆ. ಸಾಹಿತಿಗಳಿಗೆ ಪಂಡಿತರಿಗೆ ಮತ್ತು ಸಂಶೋಧಕರಿಗೆ ಇದೊಂದು ಸರಸ್ವತೀ ಮಂದಿರವೆನಿಸಿತ್ತು.

ಅಂದಿನ ಗ್ರಂಥಪಾಲರನ್ನು ವಿದ್ವನ್ಮಣಿಗಳ ಗುಂಪಿಗೆ ಸೇರಿಸಲಾಗಿತ್ತು. ಈ ಗ್ರಂಥಾಲಯದಲ್ಲಿ ಸಂಜ್ಞೆಗಳ ಬಳಕೆಯ ಉಗಮವನ್ನು ಕಾಣಬಹುದಾಗಿದೆ. ಗ್ರೀಕ್ ಸಾಹಿತ್ಯದ ನಾನಾ ಮುಖಗಳನ್ನು ತಿಳಿಸುವ ಸೂಚಿಪಟ್ಟಿ ಇದ್ದುದು ಗ್ರಂಥವಿಜ್ಞಾನದ ಪ್ರಗತಿಪಥದಲ್ಲಿ ಒಂದು ಮೈಲುಗಲ್ಲಾಗಿತ್ತು. ಕ್ಯಾಲಿಮಕಸ್‌ನ ನೇತೃತ್ವದಲ್ಲಿ ರಾಷ್ಟ್ರೀಯ ಸೂಚಿಪಟ್ಟಿಯನ್ನು ಸಿದ್ಧಗೊಳಿಸಲಾಯಿತು. ಇಂದಿಗೂ ಅಳಿದುಳಿದ ಅದರ ಕೆಲ ಅವತರಣಿಕೆಗಳು ಅದರ ಮಾಹಿತಿಯನ್ನು ಸಾರಿ ಹೇಳುವುದಲ್ಲದೆ, ಸೂಚಿಪಟ್ಟಿಯ ಮುಖ್ಯಾಂಶಗಳನ್ನು ಬೆಂಬಲಿಸಿವೆ. ಇದರಲ್ಲಿ ಈ ಗ್ರಂಥಾಗಾರದ $^{1}/_{5}$ ರಷ್ಟು ಪುಸ್ತಕಗಳ ವಿವರಣೆ ಮಾತ್ರ ಇದೆ. ಮುಂದೆ ಬಂದ ಗ್ರಂಥಪಾಲರು ಅರ್ಧಕ್ಕೆ ನಿಂತ ಕೆಲಸವನ್ನು ಪೂರೈಸಿದರು. ಪ್ರ.ಶ.ಪೂ. 47ರಲ್ಲಿ ಜೂಲಿಯಸ್ ಸೀಸರ್ ಈಜಿಪ್ಟಿನ ಮೇಲೆ ದಾಳಿ ಮಾಡಿದಾಗ ಈ ಗ್ರಂಥಾಲಯದ ಕೆಲಭಾಗ ನಾಶವಾಯಿತು. ಮುಂದೆ ಇದು ಮಹಮದೀಯರ ದಾಳಿಗೂ ತುತ್ತಾದಂತೆ ಕಂಡುಬರುತ್ತದೆ.

ಪರ್ಗಮಮ್ ಗ್ರಂಥಾಲಯ : ಏಷ್ಯ ಮೈನರ್‌ನಲ್ಲಿ ಪರ್ಗಮಮ್ ಎಂಬುದು ಗ್ರೀಕರ ವಸಾಹತು. ಇಲ್ಲಿನ ಗ್ರಂಥಾಲಯ ಮಹತ್ತ್ವದ್ದಾಗಿತ್ತು. ಧನಿಕರ ಆಶ್ರಯದಡಿಯಲ್ಲಿದ್ದ ಈ ಗ್ರಂಥಾಲಯ ಗತಕಾಲದ ಸಾಂಸ್ಕೃತಿಕ ಕೇಂದ್ರವಾಗಿತ್ತು. ಈ ಗ್ರಂಥಾಲಯ ಕೈಗೊಂಡ ಪ್ರಮುಖ ಕೆಲಸಗಳಲ್ಲಿ ತಾಡೋಲೆಗಳ ಶೋಧ ಒಂದು. ಗ್ರಂಥಗಳನ್ನು ಕಲೆಹಾಕುವ ಕಾರ್ಯದಲ್ಲಿ ಈಜಿಪ್ಟಿನ ದೊರೆಗಳಿಗೂ ಪರ್ಗಮಮ್ ದೊರೆಗಳಿಗೂ ಸ್ಪರ್ಧೆ ಮೂಡಿತು. ಈಜಿಪ್ಟಿನಿಂದ ರಫ್ತಾಗುತ್ತಿದ್ದ ಜಂಬು ಕಾಗದವನ್ನು ದೊರೆಗಳು ಪರ್ಗಮಮ್ ಸಾಗಿಸಗೊಡಲಿಲ್ಲ. ಅದರಿಂದಾಗಿ ಪರ್ಗಮಮ್‌ಗೆ ವಾಸಿಗಳು ಬರೆಯಲು ಜಂಬುಕಾಗದದ ಬದಲು ನಯವಾದ ಪ್ರಾಣಿಚರ್ಮವನ್ನು ಉಪಯೋಗಿಸತೊಡಗಿದರು. ಅಂದು ಬರೆಯುವ ಸಾಧನಸಾಮಗ್ರಿಗಳಲ್ಲಿ ಚರ್ಮವೂ ಒಂದಾಗಿತ್ತು. ಕ್ರಮೇಣ ಚರ್ಮದಲ್ಲಿ ನಯವನ್ನು ತರಲು ಪ್ರಯತ್ನಿಸಿದರು. ಸುಮಾರು 3 ಲಕ್ಷ ಕೈ ಬರೆಹದ ಪ್ರತಿಗಳು ಈ ಗ್ರಂಥಾಲಯದ ನಿಧಿಯಾಗಿದ್ದವು. ಪ್ರ.ಶ.ಪೂ. 411ರಲ್ಲಿ ದೊರೆ ಮಾರ್ಕ್ ಆಂಟೋನಿ ಕ್ಲಿಯೋಪಾತ್ರ ರಾಣಿಗೆ ಕೊಟ್ಟ ಗ್ರಂಥಗಳು ಅಲೆಕ್ಸಾಂಡ್ರಿಯ ಗ್ರಂಥಾಲಯಕ್ಕೆ ಸೇರಿದವೆಂದು ಪ್ರತೀತಿ. ಹೀಗೆ ಈ ಗ್ರಂಥಾಲಯ ಹಾಳಾದಂತೆ ಅಲೆಕ್ಸಾಂಡ್ರಿಯ ಗ್ರಂಥಾಲಯದ ಜೀರ್ಣೋದ್ಧಾರ ವಾಯಿತು. ಅಲೆಕ್ಸಾಂಡರನ ಉತ್ತರಾಧಿಕಾರಿಗಳು ಈ ಪಟ್ಟಣವನ್ನು ವಿದ್ಯಾಕೇಂದ್ರವಾಗಿ ಬೆಳೆಸಿದರು. ಜಂಬುಕಾಗದದಂತೆ ಚರ್ಮದ ತುಂಡುಗಳನ್ನು ಒಂದಕ್ಕೊಂದು ಅಂಟಿಸಿ ಸುರುಳಿ ಮಾಡಲು ಬರುವುದಿಲ್ಲ. ಹೀಗಾಗಿ ಗ್ರಂಥಪಾಲರು ಬಿಡಿಹಾಳೆಗಳ ಒಂದು ಬದಿಯನ್ನು ಹೊಲಿಯತೊಡಗಿದರು. ಹೀಗೆ ಚೌಕಾಕೃತಿ ಪುಸ್ತಕರೂಪ ತಾಳಿತು.

**ಗ್ರಂಥಾಲಯದಲ್ಲಿ ಪುಸ್ತಕ ಪರಿಶೀಲಿಸುತ್ತಿರುವ ಮಹಿಳೆ**

ಗ್ರೀಕ್ ಸಂಸ್ಕೃತಿಕೇಂದ್ರಗಳಾದ ಮ್ಯಾಸಿಡೋನಿಯ, ಆಂಟಿಯಾಕ್, ಸ್ಮಿರ್ನೆ, ಕಾಶ ಮತ್ತು ರೋಡ್ಸ್‌ಗಳಲ್ಲಿ ಗ್ರಂಥಾಲಯಗಳಿದ್ದವೆಂದು ಪ್ರತೀತಿ. ಪ್ರ.ಶ.ಪೂ. 168ರಲ್ಲಿ ರೋಮಿನವನಾದ ಎಮಿಯಸ್ ಪಾಲಸ್ ಮ್ಯಾಸಿಡೋನಿಯ ರಾಜ್ಯ ಗ್ರಂಥಾಲಯವನ್ನು ಲೂಟಿಮಾಡಿದ. ಅಂದಿನ ಮೆಸಪೊಟೇಮಿಯ ಆಖ್ಯಾತದಲ್ಲಿ ಅನೇಕ ದೇವಾಲಯಗಳಲ್ಲಿ ದೊರೆತ ಒಂದು ಶಿಲಾಶಾಸನ ಗ್ರಂಥಪಾಲನ ಮಾಹಿತಿಯನ್ನು ಸಾರಿ ಹೇಳುವ ಮೌನ ಸಾಕ್ಷಿಯಾಗಿದೆ. ಗ್ರಂಥಪಾಲರಾದ ತಂದೆ ಮತ್ತು ಮಗನ ಎರಡು ಸಮಾಧಿಗಳನ್ನು ಗುರುತಿಸಲಾಗಿದೆ. ಗ್ರಂಥಪಾಲರ ಕೆಲಸ ವಂಶಪಾರಂಪರ್ಯವಾಗಿತ್ತೆಂದು ಇದರಿಂದ ತಿಳಿದುಬರುವುದು. ಉತ್ಖನನದಲ್ಲಿ ಗ್ರಂಥಾಲಯ ಕಟ್ಟಡದ ಅವಶೇಷಗಳು ಬೆಳಕಿಗೆ ಬಂದಿವೆ. ಜಂಬುಕಾಗದದ ಸುರುಳಿಗಳ ರೂಪದಲ್ಲಿದ್ದ ಅಲ್ಲಿಯ ಪುಸ್ತಕಗಳಿಂದಾಗಿ ಆ ಕಟ್ಟಡಕ್ಕೆ ಜಂಬುಕಾಗದ ಗೃಹವೆಂಬ (ಪಪೈರಸ್ ಗೃಹ) ಹೆಸರೇ ಇತ್ತು. ಗೋಡೆಯ ಮೇಲೆ ಕೆತ್ತಲಾದ ಸೂಚಿಪಟ್ಟಿಯನ್ನು ನಂಬುವುದಾದರೆ ಈ ಗ್ರಂಥಾಗಾರದಲ್ಲಿ ಧರ್ಮಶಾಸ್ತ್ರ, ಬೇಟೆ, ಜ್ಯೋತಿಷ್ಯ, ಖಗೋಳ ಮುಂತಾದ ಶಾಸ್ತ್ರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಶೇಖರಿಸಲಾಗಿತ್ತೆಂದು ತಿಳಿಯಬಹುದು. ಗ್ರೀಕ್ ಸಾಮ್ರಾಜ್ಯದ ಅವನತಿಯೊಂದಿಗೆ ಇಂಥ ಎಲ್ಲ ಸಾಂಸ್ಕೃತಿಕ ಸಂಸ್ಥೆಗಳೂ ನಾಮಾವಶೇಷವಾದವು.

**ರೋಮನ್ ಗ್ರಂಥಾಲಯಗಳು :** ರೋಮನರು ಬಹುಪಾಲು ಬೇಸಾಯ ಇಲ್ಲವೇ ಯುದ್ಧಗಳಲ್ಲಿ ತೊಡಗಿರುತ್ತಿದ್ದರಾದ ಕಾರಣ ಮೊದಲು ಅವರು ಓದು ಬರೆಹದ ಕಡೆಗೆ ಅಷ್ಟು ಲಕ್ಷ್ಯ ಕೊಡಲಿಲ್ಲ. ಹಾಗೆ ನೋಡಿದರೆ ಪ್ರಾರಂಭದಲ್ಲಿ ರೋಮನರಿಗೆ ತಮ್ಮದಾದ ಸಾಹಿತ್ಯ ಮತ್ತು ಭಾಷೆಗಳೇ ಇರಲಿಲ್ಲ. ರೋಮಿನಲ್ಲಿದ್ದ ಗ್ರೀಕ್ ವಿದ್ವಾಂಸರ ಆಸಕ್ತಿಯಿಂದಾಗಿ ರೋಮನರು ಓದು ಬರೆಹಗಳತ್ತ ಗಮನ ಹರಿಸತೊಡಗಿದರು.

ಪ್ರ.ಶ.ಪೂ. 168ರಲ್ಲಿ ಜರುಗಿದ ಕಾಳಗದಲ್ಲಿ ತಮ್ಮ ಕೈಮೇಲಾಯಿತಾಗಿ ರೋಮನರು ಮ್ಯಾಸಿಡೋನಿಯ ರಾಜನ ಗ್ರಂಥಾಲಯವನ್ನು ತಮ್ಮ ರಾಜಧಾನಿಗೆ ಸ್ಥಳಾಂತರಿಸಿದರು. ಅಂದಿನಿಂದ ಗ್ರೀಕ್ ಪಂಡಿತರು ಹೆಚ್ಚು ಹೆಚ್ಚಾಗಿ ರೋಮ್ ನಗರಕ್ಕೆ ಬರತೊಡಗಿದರಲ್ಲದೆ ಗ್ರೀಕ್ ಸಂಸ್ಕೃತಿ ಕೂಡ ಮೆಲ್ಲಗೆ ಪಸರಿಸತೊಡಗಿತು. ಗ್ರೀಕ್ ಸಾಹಿತ್ಯದ ಅಭಿರುಚಿ ಹಾಗೂ ಅಭ್ಯಾಸ ಒಳ್ಳೆಯ ಹುಮ್ಮಸ್ಸಿನಿಂದ ಪ್ರಾರಂಭವಾಯಿತು. ರೋಮಿನ ಗ್ರಂಥಾಲಯದ ಇತಿಹಾಸದಲ್ಲಿ ವೈಯಕ್ತಿಕ ಗ್ರಂಥಾಲಯ ಮಹತ್ತ್ವದ ಪಾತ್ರವಹಿಸಿದೆ. ಪ್ರ.ಶ.ಪೂ. 1ನೆಯ ಶತಮಾನದಲ್ಲಿ ಪೌರಸ್ತ್ಯ ದೇಶಗಳಿಂದ ಗ್ರಂಥ ಶೇಖರಣೆ ನಡೆಯಿತೆನ್ನಲಾಗಿದೆ. ವೈಯಕ್ತಿಕ ಗ್ರಂಥಾಲಯಗಳು ತಲೆಯೆತ್ತಿದ ಮೇಲೆ ಸಾರ್ವಜನಿಕ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬರಲಾರಂಭಿಸಿದುವು. ರೋಮ್ ಅಧಿಪತಿ ಜೂಲಿಯಸ್ ಸೀಸರ್ ರಾಷ್ಟ್ರೀಯ ಗ್ರಂಥಾಲಯದ ರೂಪರೇಖೆಯನ್ನು ಹಾಕಲು ಕಾರಣನಾದುದು ಕಂಡುಬರುತ್ತದೆ. 4ನೆಯ ಶತಮಾನದಲ್ಲಿ 30 ಸಾರ್ವಜನಿಕ ಗ್ರಂಥಾಲಯಗಳು ಹಾಗೂ ಗುಡಿ ಗುಡಾರಗಳಲ್ಲಿ ಗ್ರಂಥಸಂಗ್ರಹಗಳು ಇದ್ದ ಬಗ್ಗೆ ವಿವರಗಳೂ ದೊರೆತಿವೆ.

ಸು. 98–117 ರ ವರೆಗೆ ಆಳಿದ ರೋಮನ್ ದೊರೆ ಟ್ರೋಜನನ ಕಾಲದಲ್ಲಿ ಬಿಬ್ಲಿಯೋಥಿಕ ಉಲ್ಪಿಯಾನ ಎಂಬ ಗ್ರಂಥಾಲಯ ತಲೆಯೆತ್ತಿತು. 5ನೆಯ ಶತಮಾನದವರೆಗೆ ಇದು ರಾಷ್ಟ್ರೀಯ ಗ್ರಂಥಾಲಯವಾಗಿ ಉಳಿದುಬಂತು. ಈ ಗ್ರಂಥಾಲಯ ಎಷ್ಟು ಸುವ್ಯವಸ್ಥಿತ ರೀತಿಯಲ್ಲಿತ್ತೆಂಬುದರ ಬಗ್ಗೆ ವಿವರಗಳು ಸಿಗುತ್ತವೆ. ರೋಮ್ ಸಾಮ್ರಾಜ್ಯದ ಅವನತಿಯೊಂದಿಗೆ ಈ ಎಲ್ಲ ಗ್ರಂಥಾಲಯಗಳೂ ಹಾಳಾಗಿ ಹೇಗೋ ಕೆಲ ಹಸ್ತಪತ್ರಿಕೆಗಳು ಮಾತ್ರ ಉಳಿದುಕೊಂಡುಬಂದಂತೆ ಕಾಣುತ್ತದೆ.

**ಭಾರತ :** ಭಾರತದಲ್ಲಿ ಗ್ರಂಥಾಲಯದ ಹುಟ್ಟು ಮತ್ತು ಬೆಳವಣಿಗೆಯ ವಿಷಯ ಕುತೂಹಲಕಾರಿಯಾಗಿದೆ. ಪ್ರಾಚೀನ ಭಾರತದಲ್ಲಿ ಗುರುಕುಲ ಆಶ್ರಮದ ಪದ್ಧತಿಗೆ ಅನುಗುಣವಾಗಿ ಅಭ್ಯಾಸ ಅವ್ಯಾಹತವಾಗಿ ನಡೆಯುತ್ತಿತ್ತು. ಗುರುಗಳ ಪಾಠ ಪ್ರವಚನಗಳು ಮೌಖಿಕವಾಗಿ ನಡೆಯುತ್ತಿದ್ದುವು. ಹೀಗಾಗಿ ಜ್ಞಾನಶ್ರುತಿ ಮತ್ತು ಸ್ಮೃತಿಶಕ್ತಿಗಳನ್ನವಲಂಬಿಸಿ ಬೆಳೆದು ಉಳಿದುಬಂತು. 8ನೆಯ ಶತಮಾನದಲ್ಲಿ ಸಾಧನ ಸಾಮಗ್ರಿಗಳನ್ನು ಬಳಸಿ ಬರೆಯುವ ರೂಢಿ ಪ್ರಾರಂಭವಾಯಿತು. ವೇದ, ಪುರಾಣ, ಖಂಡಕಾವ್ಯಗಳೂ ಅಲ್ಲದೆ ಧರ್ಮಶಾಸ್ತ್ರ, ಖಗೋಳಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ತತ್ತ್ವಶಾಸ್ತ್ರ ಮೊದಲಾದ ವಿಷಯಗಳ ಮೇಲೆ ಗ್ರಂಥಗಳು ನಿರ್ಮಾಣವಾಗತೊಡಗಿದವು. ಇಲ್ಲಿಯ ಅನೇಕ ಉತ್ತಮ ವಿಶ್ವವಿದ್ಯಾಲಯಗಳ ಹಾಗೂ ಗ್ರಂಥಾಲಯಗಳ ಉಲ್ಲೇಖವನ್ನು ಚೀನದ ಪ್ರವಾಸಿಗರು ಮಾಡಿದ್ದಾರೆ. ಭಾರತದ ಕೆಲ ವಿಶ್ವವಿದ್ಯಾಲಯಗಳು ಪ್ರಪಂಚ ಪ್ರಸಿದ್ಧವಾಗಿದ್ದವು. ನಾಲಂದ, ತಕ್ಷಶಿಲೆ, ವಿಕ್ರಮಶಿಲೆ, ವಲಭಿ ವಿದ್ಯಾಕೇಂದ್ರ, ಉಜ್ಜಯನಿ, ಅಮರಾವತಿ, ಉದಂತಪುರ ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ಗ್ರಂಥಾಲಯಗಳಿದ್ದವೆಂದು ತಿಳಿದುಬರುವುದು. ಅಲ್ಲಿ ವಿಷಯ, ಪಾಠ ಹಾಗೂ ಪ್ರವಚನಗಳಿಗೆ ತಕ್ಕಂತೆ ಪುಸ್ತಕಗಳ ಶೇಖರಣೆಯಾಗುತ್ತಿತ್ತು. ನಾಲಂದ ಅಂದಿಗೆ ಪ್ರಪಂಚದಲ್ಲೇ ಅತಿ ದೊಡ್ಡ ವಿಶ್ವವಿದ್ಯಾಲಯ ವಾಗಿತ್ತು. ವಿವಿಧ ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲು ಅಲ್ಲಿ ಬೇರೆ ಬೇರೆ ಸಭಾಂಗಣಗಳಿದ್ದುವು. ಗ್ರಂಥಾಲಯವೂ ಇಂಥ ಅನೇಕ ಸಭಾಂಗಣಗಳನ್ನು ಹೊಂದಿತ್ತು.

ಪ್ರ.ಶ.ಪೂ. 2000– ಪ್ರ.ಶ. 1200ರ ವರೆಗಿನ ಅವಧಿಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಈ ವಿಶ್ವವಿದ್ಯಾಲಯ 12ನೆಯ ಶತಮಾನದಲ್ಲಿ ಪರಕೀಯರ ದಾಳಿಯಿಂದಾಗಿ ನಶಿಸಿತು. ಮಧ್ಯಪ್ರದೇಶದ ಅನೇಕ ಬೌದ್ಧ ವಿಹಾರಗಳಲ್ಲಿ ಗ್ರಂಥಾಲಯಗಳು (ಹಸ್ತಪ್ರತಿ ಸಂಗ್ರಹ) ಇದ್ದವೆಂದು ಯುವಾನ್ ಚಾಂಗ್ ಹೇಳಿದ್ದಾನೆ.

ಧರ್ಮ ಸಂಸ್ಕೃತಿ ಶಾಸ್ತ್ರ ಪರಂಪರೆ, ಸಾಹಿತ್ಯಗಳಿಗೆ ನೇರವಾಗಿ ನೆರವಾದ ಭಾರತೀಯ ಗ್ರಂಥಾಲಯಗಳು ಒಂದೊಂದರಂತೆ ಹಾಳಾದವು. ಪರಕೀಯರ ದಾಳಿಗೆ ಕೆಲ ಗ್ರಂಥಾಗಾರಗಳು ತುತ್ತಾದರೆ, ಕೆಲವು ಬೆಂಕಿಯಲ್ಲಿ ಉರಿದುಹೋದವು. ಆದರೂ ಕೆಲವು ಸಂಗ್ರಹಗಳು ಕೈತಪ್ಪಿ, ಕಣ್ಣುತಪ್ಪಿ ಉಳಿದುಕೊಂಡಿವೆ. ಪ್ರಾಚೀನ ಭಾರತೀಯ ಶಿಕ್ಷಣದ ಮಾಹಿತಿಯನ್ನು ಸಾರುವ ಹಾಗೂ ಸಂಸ್ಕೃತಿಯನ್ನು ಬಿಂಬಿಸುವ ಕೆಲವು ಗ್ರಂಥಭಂಡಾರಗಳು ಇಂದಿನ ನಾಗರಿಕತೆಯಲ್ಲಿ ಒಂದು ಗಟ್ಟಿಮುಟ್ಟಾದ ಸೇತುವೆಯಾಗಿ ನಿಂತಿವೆ. **ಹೆಚ್ಚಿನ ವಿವರಗಳಿಗೆ ನೋಡಿ – ಇದೇ ಲೇಖನದ ಭಾಗ 1 – 2.**

ಮಧ್ಯಯುಗೀನ ಗ್ರಂಥಾಲಯಗಳು : ಮಧ್ಯಯುಗದ ಯುರೋಪಿನಲ್ಲಿ ಚರ್ಚುಗಳು ಪ್ರಧಾನ ವಿದ್ಯಾಕೇಂದ್ರಗಳಾಗಿದ್ದು ಧಾರ್ಮಿಕ ಸಾಹಿತ್ಯವನ್ನು ಬೋಧಿಸುವಲ್ಲಿ, ಸಂಗ್ರಹಿಸುವಲ್ಲಿ, ಪ್ರತಿಮಾಡಿಸುವಲ್ಲಿ ತುಂಬ ಆಸ್ಥೆಯಿಂದ ಕೆಲಸಮಾಡಿದುವು.

6ನೆಯ ಶತಮಾನದಲ್ಲಿ ಶಿಕ್ಷಣ ಹಾಗೂ ಗ್ರಂಥಾಲಯದ ಪ್ರಸಾರದಲ್ಲಿ ಸೇಂಟ್ ಬೆನೆಡಿಕ್ಟ್ ಹಾಗೂ ಕಸೋಡಿರಿಯನ್ ಭದ್ರ ಬುನಾದಿ ಹಾಕಿದರು. ಓದು ಬರೆಹದ ಸವಿಯನ್ನುಂಡ ಬೆನೆಡಿಕ್ಟ್ ಶಾಲೆ ಮತ್ತು ಗ್ರಂಥಾಲಯಗಳನ್ನು ಒದಗಿಸಿ ಪಾದ್ರಿ ಬಳಗದಲ್ಲಿ ಒಂದು ಶಿಸ್ತಿನ ವ್ಯಾಸಂಗಕ್ರಮವನ್ನು ಏರ್ಪಡಿಸಿದ. 526ರಲ್ಲಿ ಈತನ ಗ್ರಂಥಾಲಯ ಕಟ್ಟಳೆ ಎಂಬ ಗ್ರಂಥ ಪ್ರಕಟವಾಯಿತು. ಬೆನೆಡಿಕ್ಟ್ ಬಳಕೆಗೆ ತಂದ ಹೊಸ ಸಂಪ್ರದಾಯ ಆಗಲೇ ಬೇರೂರಿತ್ತು. ಎಲ್ಲ ಧಾರ್ಮಿಕ ಕೇಂದ್ರಗಳು ಅದನ್ನು ಪಾಲಿಸುತ್ತಿದ್ದವು. ಇನ್ನೊಬ್ಬ ಪಾದ್ರಿಯಾದ ಕ್ಯಾಸಿಡೋರಸ್ ಕೂಡ ಈ ಸಂಪ್ರದಾಯವನ್ನು ಬೆಂಬಲಿಸಿದ. ಪುಸ್ತಕಗಳ ಸಂಗ್ರಹ ತಲತಲಾಂತರದಿಂದ ಉಳಿದು ಬಂದಿದ್ದು ಈ ಮಹಾನುಭಾವನ ಪುಣ್ಯವೆಂದೇ ಹೇಳಬಹುದು.



ಇಥಿಯೋಪಿಯದ ಸಮುದಾಯ ಗ್ರಂಥಾಲಯ

ಪಾದ್ರಿಗಳಿಗಾಗಿ ಸಿದ್ಧಾಂತದ ಪಾಠಗಳು ಪುಸ್ತಕ ರೂಪದಲ್ಲಿ ಬರತೊಡಗಿದುವು. ಇವನ ವಿವೇರಿಯಂ ಗ್ರಂಥಾಲಯದ ಸಂಗ್ರಹದಲ್ಲಿ 300ಕ್ಕೂ ಹೆಚ್ಚಿನ ಸಂಖ್ಯೆಯ ಪುಸ್ತಕಗಳಿದ್ದವು. ಈ ಗ್ರಂಥಾಲಯದಲ್ಲಿ ಬರೆದ ಗ್ರಂಥಗಳ ಉಲ್ಲೇಖ ಮಧ್ಯಯುಗದ ಅನೇಕ ಸೂಚಿಪತ್ರಗಳಲ್ಲಿ ಬಂದಿವೆ.

15ನೆಯ ಶತಮಾನ ದಾಟಿದ ಮೇಲೆ ಚರ್ಚುಗಳು ಪಶ್ಚಿಮ ಯುರೋಪಿನಲ್ಲಿ ಭರದಿಂದ ಬೆಳೆಯತೊಡಗಿದವು. ಈಜಿಪ್ಟ್, ಸಿರಿಯಗಳಿಂದ ಬೀಸಿ ಬಂದ ಸುಳಿಗಾಳಿ ಇಲ್ಲೂ ಪ್ರಭಾವ ಬೀರಿತು. ಈ ಬೆಳವಣಿಗೆಗೆ ಅನೇಕ ದೇಶಗಳಲ್ಲಿ ಹಾರ್ದಿಕ ಸ್ವಾಗತ ದೊರೆಯಿತು. ಬೆನೆಡಿಕ್ಟನ ಸುಧಾರಣೆಗಳಿಂದ ಫ್ರಾನ್ಸ್‌ನಲ್ಲಿ ಧಾರ್ಮಿಕ ಗ್ರಂಥಾಲಯಗಳ ಪ್ರಸಾರ ಬೆಳೆಯತೊಡಗಿತು. ಮತ್ತು ಇಂಗ್ಲೆಂಡಿನಲ್ಲಿ ಪಾದ್ರಿ ಡರ್ಸ್ಟನ್ ಈ ಪ್ರಸಾರಕ್ಕೆ ಕಾರಣನಾದ. ಬೆನೆಡಿಕ್ಟನ ಓದು ಬರೆಹದ ಸಂಪ್ರದಾಯ ಉಳಿದ ಮಠಗಳಿಗೂ ತಾಗಿತು. ಪ್ರತಿಯೊಬ್ಬ ಪಾದ್ರಿಗೂ ಓದಲು ಒಂದೊಂದು ಪುಸ್ತಕ ಸಿಕ್ಕಿತು. ಪುಸ್ತಕಗಳ ವಾರ್ಷಿಕ ಎಣಿಕೆಗಳ ಬಗ್ಗೆ ಸಹ ನಿರ್ದಿಷ್ಟ ಸೂಚನೆಗಳನ್ನು ಕೊಡಲಾಗಿತ್ತು. ಓದಲು ಹೆಚ್ಚು ಪುಸ್ತಕಗಳು ಬೇಕಿದ್ದರೆ, ಅವನ್ನು ಸಲೀಸಾಗಿ ಪೂರೈಸುವ ಏರ್ಪಾಡಿತ್ತು. ಸಾಮಾನ್ಯವಾಗಿ ಗ್ರಂಥಪಾಲ ಮೇಲಧಿಕಾರಿಯಾಗುತ್ತಿದ್ದ. ಚರ್ಚ್‌ಗಳಲ್ಲಿ ವಾಸಿಸುವವರಿಗೆ ಸುಮಾರು ಐದು ತಾಸು ಓದುವುದು ಕಡ್ಡಾಯವಾಗಿತ್ತು. ಉಪಯೋಗಕ್ಕೆ ತಕ್ಕಂತೆ ಪುಸ್ತಕಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಇರಿಸಲಾಗುತ್ತಿತ್ತು. ಹೀಗಾಗಿ ಚರ್ಚ್ ಧಾರ್ಮಿಕ ಜೀವನದಲ್ಲಿ ಓದುಬರೆಹಕ್ಕೆ ಸ್ಫೂರ್ತಿಯೊದಗಿ ಬಂತು.

13–14ನೆಯ ಶತಮಾನದಲ್ಲಿ ಓದುಗನಿಗಾಗಿ ಧಾರ್ಮಿಕ ಗ್ರಂಥಾಲಯಗಳಲ್ಲಿ ಕುರ್ಚಿ ಮೇಜುಗಳಿಂದ ಸುಸಜ್ಜಿತವಾದ ಸ್ಥಳವನ್ನು (ಕ್ಯಾರೆಲ್ಸ್) ಕಾಯ್ದಿರಿಸಲಾಗುತ್ತಿತ್ತು. ಅಲ್ಲಿ ಶೇಖರಿಸಿದ ಪುಸ್ತಕಗಳಲ್ಲಿ ಹೆಚ್ಚಿನ ವೈವಿಧ್ಯವಿತ್ತು. ಕೊಡುಗೆಯಿಂದಲೂ ಕೊಂಡೂ ಪುಸ್ತಕಗಳನ್ನು ಕಲೆಹಾಕಲಾಗುತ್ತಿತ್ತು. ಪಂಡಿತರ ಕೋರಿಕೆಯ ಮೇರೆಗೆ ವ್ಯಾಕರಣ, ವೈದ್ಯ ಗ್ರಂಥಗಳನ್ನು ಶೇಖರಿಸಿದರೂ ಬೈಬಲ್‌ಗೆ ಅಗ್ರಸ್ಥಾನವಿತ್ತು. ಅಂತೆಯೇ ಬೈಬಲ್ ಗ್ರಂಥದ ಅನೇಕ ನಕಲುಗಳು ಬರತೊಡಗಿದ್ದವು. ಧಾರ್ಮಿಕ ವಿದ್ಯಾಕೇಂದ್ರಗಳಲ್ಲಿರುವ ಗ್ರಂಥಗಳ ಸೂಚಿಪತ್ರಗಳು ಪ್ರಚುರಗೊಂಡವು. ಕ್ರಮೇಣ ಪಾದ್ರಿಗಳ ಜೊತೆಗೆ ಶ್ರೀಸಾಮಾನ್ಯನೂ ಪುಸ್ತಕದ ಬಗ್ಗೆ ಅಭಿರುಚಿ ತಾಳತೊಡಗಿದ.

ಮಧ್ಯಯುಗದ ಇನ್ನೊಂದು ಮುಖ್ಯ ಕೊಡುಗೆಯೆಂದರೆ ಮುದ್ರಣ ಯಂತ್ರ ನಿರ್ಮಾಣ. ಅದು ಒದಗಿ ಅದರಲ್ಲಿ ಮಾರ್ಪಾಟುಗಳಾದಂತೆ ಜನರಲ್ಲಿ ಗ್ರಂಥಗಳ ಬಳಕೆ ಹೆಚ್ಚಿತು, ಗ್ರಂಥಗಳ ಸಂಖ್ಯೆ ಬೆಳೆಯಿತು. ಗ್ರಂಥಭಂಡಾರಗಳು ಹುಟ್ಟಿದುವು. ವ್ಯಾಸಂಗ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಆಯಿತು. (ಆರ್.ಆರ್.ಎ.)

**2. ಭಾರತದಲ್ಲಿ ಗ್ರಂಥಾಲಯಗಳು:** ಶ್ರುತಿ, ಸ್ಮೃತಿಗಳಾಗಿ ಉಳಿದಿದ್ದ ಭಾರತೀಯ ವಾಙ್ಮಯ ಬಹಳ ಹಿಂದೆಯೇ ಅಕ್ಷರರೂಪವನ್ನು ತಾಳಿತಷ್ಟೆ. ಅಂದಿನ ಬರೆಹಗಾರರು ಕಲ್ಲು, ಗಿಡದ ತೊಗಟೆ, ಮರ, ತಾಡವೋಲೆ ಮುಂತಾದ ಮಾಧ್ಯಮಗಳನ್ನು ತಮ್ಮ ಬರೆಹಕ್ಕೆ ಉಪಯೋಗಿಸುತ್ತಿದ್ದರು. ಗ್ರಂಥಗಳನ್ನು ರಚಿಸುವ ಜನರ ಒಂದು ವಿಶೇಷ ಗುಂಪೇ ಅಂದಿದ್ದು ಅವರನ್ನು ಗ್ರಂಥಕಾರ, ಲಿಪಿಕಾರ, ದಿವಿರಪತಿ, ಕಾಯಸ್ಥ, ಲೇಖಕ ಮುಂತಾಗಿ ಕರೆಯುತ್ತಿದ್ದರು. ವಿದ್ವಾಂಸರು ಮೊಟ್ಟಮೊದಲಿಗೆ ರಚಿಸಿದ ಕೃತಿಗಳನ್ನು ಈ ಲಿಪಿಕಾರರು ಪ್ರತಿ ಮಾಡುತ್ತಿದ್ದರು. ಇಂಥ ಹಸ್ತಪ್ರತಿಗಳ ಸಂಗ್ರಹಗಳು ಹೆಚ್ಚಾಗಿ ಹಿಂದೂಗಳ ಮಠ–ಗುಡಿಗಳು, ಬೌದ್ಧರ ವಿಹಾರಗಳು, ಜೈನರ ಬಸದಿಗಳಲ್ಲಿ ಉಳಿದುಬಂದುವು. 4ನೆಯ ಶತಮಾನದಿಂದ 13ನೆಯ ಶತಮಾನದವರೆಗೆ ಈ ಬಗೆಯ ಗ್ರಂಥ ಸಂಗ್ರಹಗಳು ಇದೇ ರೀತಿಯಾಗಿ ಬೆಳೆದುಬಂದುವು. ಹಾಗೆಯೇ ಅರಮನೆಗಳಲ್ಲಿ, ವಿದ್ವಾಂಸರ ಹಾಗೂ ಶ್ರೀಮಂತರ ಭವನಗಳಲ್ಲಿ – ಅಮೂಲ್ಯ ಗ್ರಂಥಸಂಗ್ರಹಗಳು ಉಳಿದು ಬಂದುದೂ ಉಂಟು. ಇಂಥವನ್ನು ಭಾರತೀ ಭಂಡಾರ, ಸರಸ್ವತೀ ಭಂಡಾರ ಎಂದು ವಾಡಿಕೆಯಾಗಿ ಕರೆಯುತ್ತಿದ್ದರು.

ಏಷ್ಯಾಟಿಕ್ ಸೊಸೈಟಿ ಲೈಬ್ರರಿ, ಮುಂಬಯಿ

ಕಾಲಾನುಕ್ರಮದಲ್ಲಿ ಇಂಥ ಅನೇಕ ಹಿಂದೂ, ಬೌದ್ಧ ಹಾಗೂ ಜೈನ ಧರ್ಮ ಪೀಠಗಳು ಬೆಳೆದು ವಿಸ್ತಾರಗೊಂಡು ವಿದ್ಯಾಪ್ರಸಾರವನ್ನೂ ಕೈಗೊಂಡವು. ಇವು ಆ ಕಾಲದ ವಿಶ್ವವಿದ್ಯಾಲಯಗಳಾಗಿ ಘನತೆಯನ್ನು ಪಡೆದವು. ಈ ಧರ್ಮಪೀಠಗಳಲ್ಲಿ ಕಾರ್ಯನಿರತರಾದ ಸಂನ್ಯಾಸಿಗಳು ಹಾಗೂ ಅವರ ಅನುಯಾಯಿಗಳು ಹೆಚ್ಚಿನ ಶ್ರದ್ಧೆ, ವಿಶ್ವಾಸ ಹಾಗೂ ಪ್ರೀತಿಯಿಂದ ಕೃತಿಗಳನ್ನು ಪ್ರತಿ ಮಾಡಿಸುತ್ತಿದ್ದರು. ವಿದ್ಯಾಮಠ ಹಾಗೂ ಘಟಿಕಗಳೆಂದು ಪರಿಚಿತವಾದ ಇಂಥ ವಿಶ್ವವಿದ್ಯಾಲಯಗಳಲ್ಲಿ ಗ್ರಂಥಗಳನ್ನು ಸಂಗ್ರಹಿಸುವ, ಕೂಡಿಡುವ, ಪ್ರತಿಮಾಡುವ ಕಾರ್ಯಗಳು ಅನೂಚಾನವಾಗಿ ಹಾಗೂ ಅವ್ಯಾಹತವಾಗಿ ನಡೆದು ಬಂತು. ಇಂಥ ಸ್ಥಳಗಳಲ್ಲಿ ಬೆಳೆದುಬಂದ ಗ್ರಂಥಸಂಗ್ರಹಗಳು ಅನೇಕ ಶತಮಾನಗಳು ವಿಶ್ವವಿಖ್ಯಾತಿಯನ್ನು ಗಳಿಸಿದುವು. ಅವುಗಳಲ್ಲಿ ನಾಲಂದ ಬಹು ಶ್ರೇಷ್ಠವಾದುದು.

ನಾಲಂದ : ಇಂದಿನ ಬಿಹಾರ ರಾಜ್ಯದಲ್ಲಿಯ ಬಾರಾಗಾಂವ್ ಎಂಬ ಹಳ್ಳಿಯೇ ಅಂದಿನ ನಾಲಂದ ವಿಶ್ವವಿದ್ಯಾಲಯದ ಸ್ಥಾನವಾಗಿತ್ತು. 300ರಲ್ಲಿ ಬಾಲಾದಿತ್ಯನೆಂಬ ಮಗಧರಾಜ ಇಲ್ಲೊಂದು ಬೌದ್ಧ ವಿಹಾರವನ್ನು ಕಟ್ಟಿಸಿದ. ಮುಂದೆ ಸುಮಾರು ಒಂದೂವರೆ ಶತಮಾನದ ಅವಧಿಯಲ್ಲಿ ಈ ಬೌದ್ಧ ವಿಹಾರ ಪ್ರಪಂಚ ಖ್ಯಾತವಾದ ವಿಶ್ವವಿದ್ಯಾಲಯವಾಗಿ ಬೆಳೆಯಿತು. ವಿಶ್ವವಿದ್ಯಾಲಯವಿದ್ದ ಭಾಗವನ್ನು ಅಂದು ಧರ್ಮ ಗಂಜವೆಂದು ಕರೆಯುತ್ತಿದ್ದರು. ಈ ವಿಶ್ವವಿದ್ಯಾಲಯ ರತ್ನೋದಧಿ, ರತ್ನರಂಜಕ ಹಾಗೂ ರತ್ನಾಗಾರ ಎಂಬ ಮೂರು ಭವ್ಯಭವನಗಳನ್ನು ವ್ಯಾಪಿಸಿತ್ತು. ರತ್ನೋದಧಿ ಎಂಬ ಒಂಬತ್ತನೆಯ ಅಂತಸ್ತಿನಲ್ಲಿ ವಿದ್ಯಾಲಯದ ಗ್ರಂಥಾಲಯವನ್ನು ಕೇಂದ್ರೀಕರಿಸಲಾಗಿತ್ತು. ಏಳನೆಯ ಶತಮಾನದಲ್ಲಿ ನಾಲಂದಕ್ಕೆ ಭೇಟಿ ನೀಡಿದ ಚೀನ ದೇಶದ ಪ್ರವಾಸಿ ಯುವಾನ್ ಚಾಂಗ್ ಇಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದುದಾಗಿ ತಿಳಿಸಿದ್ದಾನೆ. ತನ್ನ ವ್ಯಾಸಂಗ ಪೂರೈಸಿ ಈತ ಅಲ್ಲಿಂದ ಮರಳುವಾಗ ಚಕ್ಕಡಿಗಳ ತುಂಬ ಬೆಲೆಯುಳ್ಳ ಗ್ರಂಥಗಳನ್ನು ಪ್ರತಿ ಮಾಡಿಸಿ ಕೊಂಡೊಯ್ದನೆಂದು ಉಲ್ಲೇಖವಿದೆ.

ಯುವಾನ್ ಚಾಂಗನ ಅನಂತರ ಮೂವತ್ತು ವರ್ಷಗಳ ಮೇಲೆ ಭಾರತಕ್ಕೆ ಬಂದ ಚೀನಿ ಪ್ರವಾಸಿ ಇತ್ಸಿಂಗ್ ಐದು ಲಕ್ಷ ಸಂಸ್ಕೃತ ಶ್ಲೋಕಗಳುಳ್ಳ ಒಟ್ಟು ನಾಲ್ಕು ನೂರು ಸಂಸ್ಕೃತ ಗ್ರಂಥಗಳ ಪ್ರತಿಗಳನ್ನು ತಯಾರಿಸಿಕೊಂಡು ಹೋದನಂತೆ. ಹೀಗೆ ದಿನದಿಂದ ದಿನಕ್ಕೆ ಪ್ರವರ್ಧಮಾನಗೊಳ್ಳುತ್ತಿದ್ದ ನಾಲಂದ ವಿಶ್ವವಿದ್ಯಾಲಯ ಹಾಗೂ ಅದರ ಗ್ರಂಥಾಲಯಗಳ ಖ್ಯಾತಿ 9ನೆಯ ಶತಮಾನದಲ್ಲಿ ಅತ್ಯಂತ ಊರ್ಜಿತಾವಸ್ಥೆಯನ್ನು ತಲುಪಿತ್ತು. ಬಲಪುತ್ರದೇವನೆಂಬ ಜಾವ ದೇಶದ ದೊರೆ ಈ ವಿಶ್ವವಿದ್ಯಾಲಯಕ್ಕಾಗಿ ಒಂದು ಮಠವನ್ನು ಕಟ್ಟಿಸಿಕೊಟ್ಟನಲ್ಲದೆ ತನ್ನ ಮಿತ್ರನೂ ಬಂಗಾಲದ ದೊರೆಯೂ ಆದ ದೇವಪಾಲನಿಗೆ ಬಿನ್ನವಿಸಿ ವಿಶ್ವವಿದ್ಯಾಲಯಕ್ಕೆ ಐದು ಹಳ್ಳಿಗಳನ್ನು ದಾನವಾಗಿ ಕೊಡಲು ವ್ಯವಸ್ಥೆ ಮಾಡಿದನೆಂದು ಇತಿಹಾಸ ಹೇಳುತ್ತದೆ.

ತಕ್ಷಶಿಲೆ ಮತ್ತು ವಾರಾಣಸಿ: ತಕ್ಷಶಿಲೆ ಹಾಗೂ ವಾರಾಣಸಿಗಳ ವಿಶ್ವವಿದ್ಯಾಲಯಗಳೂ ನಾಲಂದ ವಿಶ್ವವಿದ್ಯಾಲಯದ ಸಮಕಾಲೀನ ವಿದ್ಯಾಸಂಸ್ಥೆಗಳಾಗಿದ್ದುವಲ್ಲದೆ ಅಷ್ಟೇ ಖ್ಯಾತಿಯನ್ನು ಗಳಿಸಿದ್ದುವು. ವೈಯಾಕರಣಿಯಾದ ಪಾಣಿನಿ, ಅರ್ಥಶಾಸ್ತ್ರಪಂಡಿತ ಕೌಟಿಲ್ಯ, ಆಯುರ್ವೇದ ಪಂಡಿತ ಚರಕ ಶುಶ್ರುತರು ತಕ್ಷಶಿಲೆಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾಗಿದ್ದರು ಎಂಬುದನ್ನು ಇಲ್ಲಿ ನೆನೆಯಬಹುದು. ನಾಲಂದ ವಿಶ್ವವಿದ್ಯಾಲಯದಲ್ಲಿ ಧರ್ಮ ಪ್ರಧಾನ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯವಿತ್ತು.

ವಲಭಿ ವಿಶ್ವವಿದ್ಯಾಲಯ: ಸೌರಾಷ್ಟ್ರ ಎಂದಿನಿಂದಲೂ ವಿದ್ಯಾಪ್ರೇಮಿಗಳ ನಾಡಾಗಿತ್ತು. ವಿದ್ಯಾಪ್ರೇಮಿಯಾದ ಭೋಜರಾಜನ ಕಾರ್ಯಕ್ಷೇತ್ರ ಈ ಸೌರಾಷ್ಟ್ರವೆಂದಾಗ ಆ ನೆಲದಲ್ಲಿ ವಿದ್ಯಾಪ್ರೇಮದ ಗುಣ ಹಿಂದಿನಿಂದಲೂ ಬೆಳೆದುಬಂದದ್ದು ವಿದಿತವಾಗುವುದು. 480–775ರವರೆಗೆ ವಿದ್ಯಾಪಕ್ಷಪಾತಿಗಳಾದ ಮೈತ್ರಕ ವಂಶದ ಅರಸರ ಆಡಳಿತಕ್ಕೆ ಸೌರಾಷ್ಟ್ರ ಒಳಗಾಗಿತ್ತು. ಅವರು ವಲಭಿಯಲ್ಲಿ ಒಂದು ವಿಶ್ವವಿದ್ಯಾಲಯ ಹಾಗೂ ಗ್ರಂಥಾಲಯವನ್ನು ಕಟ್ಟಿ, ಬೆಳೆಸಿ ಪೋಷಿಸಿಕೊಂಡು ಬಂದರು.

ಇತ್ತ ಪ್ರಾಚೀನ ಆಂಧ್ರಪ್ರದೇಶದಲ್ಲೂ ವಿಶ್ವವಿದ್ಯಾಲಯಗಳೂ ಗ್ರಂಥಾಲಯಗಳೂ ಮೂಡಿ ಜ್ಞಾನಪ್ರಸಾರ ಕಾರ್ಯದಲ್ಲಿ ತೊಡಗಿದ್ದವು. ಧನಕಟಕ (ಅಮರಾವತಿ) ಕೃಷ್ಣಾ ತೀರದಲ್ಲಿನ ಹಾಗೂ ಗುಂಟೂರು ಜಿಲ್ಲೆಯಲ್ಲಿನ ಪಾರವಾಟ ವಿಹಾರಗಳು ಆಗಿನ ಕಾಲದ ಶ್ರೇಷ್ಠ ವಿದ್ಯಾಕೇಂದ್ರಗಳಾಗಿದ್ದುವು. ಪಾರವಾಟ ವಿಹಾರದಲ್ಲಿ ಮೆರೆದು ಹೋದ ನಾಗಾರ್ಜುನ ವಿದ್ಯಾಪೀಠದ ವರ್ಣನೆಯನ್ನು ಫಾಹಿಯಾನ್ ಮತ್ತು ಯುವಾನ್ ಚಾಂಗ್ ಇಬ್ಬರೂ ಮಾಡಿದ್ದಾರೆ. ನಾಗಾರ್ಜುನನ (7ನೆಯ ಶತಮಾನ) ಗ್ರಂಥಾಲಯ ಹೆಸರುವಾಸಿಯಾಗಿತ್ತು. ಇದರಲ್ಲಿ ತ್ರಿಪೀಠಕಗಳು ಹಾಗೂ ಸಸ್ಯಶಾಸ್ತ್ರ, ಭೂಗೋಳ, ವೈದ್ಯಶಾಸ್ತ್ರ, ಖನಿಜಶಾಸ್ತ್ರ ಇವಕ್ಕೆ ಸಂಬಂಧಪಟ್ಟ ಗ್ರಂಥಗಳಿದ್ದುವು. ಅಮರಾವತಿ ವಿದ್ಯಾಕೇಂದ್ರದಲ್ಲಿ ಚೀನ ಹಾಗೂ ಸಿಲೋನ್ ಮುಂತಾದ ದೇಶದ ವಿದ್ಯಾರ್ಥಿಗಳು ಓದುತ್ತಿದ್ದರು.

ಕರಾವಳಿಯಲ್ಲಿನ ಡಿಜಿಟಲ್ ಗ್ರಂಥಾಲಯ, ಮಂಗಳೂರು

**ಕರ್ನಾಟಕ :** ಕರ್ನಾಟಕದಲ್ಲಿಯೂ ಅನೇಕ ವಿಶ್ವವಿದ್ಯಾಲಯಗಳು ಹಾಗೂ ತತ್ಸಂಬಂಧಿತ ಗ್ರಂಥಾಲಯಗಳು ಚೆನ್ನಾಗಿ ಪೋಷಿತವಾಗಿದ್ದವೆಂದು ತೋರುತ್ತದೆ. ಕನ್ನಡ ನಾಡನ್ನಾಳಿದ ಕದಂಬ, ರಾಷ್ಟ್ರಕೂಟ, ಚಾಳುಕ್ಯ ಹಾಗೂ ಹೊಯ್ಸಳ ರಾಜರುಗಳು ತಮ್ಮ ಆಳ್ವಿಕೆಯ ಕಾಲದಲ್ಲಿ ವಿದ್ಯಾಪೀಠಗಳನ್ನು ಕಟ್ಟಿ ಪೋಷಿಸಿದರು. ಅವರೊಟ್ಟಿಗೆ ಗ್ರಂಥಪ್ರಿಯರೂ ವಿದ್ಯಾಪಕ್ಷಪಾತಿಗಳೂ ಆದ ಮಾಂಡಳಿಕರೂ ಅವರ ಈ ಕಾರ್ಯದಲ್ಲಿ ಆಸ್ಥೆ ವಹಿಸಿ ವೈಯಕ್ತಿಕವಾಗಿ ಹಾಗೂ ಸಾಂಘಿಕವಾಗಿ ಶ್ರಮಿಸಿದರು. ಇದರ ಫಲವಾಗಿ ತಾಳಗುಂದ, ಪಾವಿಟ್ಟಿಗೆ (ಸಾಲೊಟಗಿ), ನಾಗಾವಿ, ಬಳ್ಳಿಗಾವೆ, ಕುಪಟೂರು, ಐಹೊಳೆ, ಪಟ್ಟದಕಲ್ಲು ಮುಂತಾದ ಸ್ಥಳಗಳಲ್ಲಿ ವಿಶ್ವವಿದ್ಯಾಲಯಗಳು ಹಾಗೂ ಗ್ರಂಥಾಲಯಗಳು ಬೆಳೆದು ಬಾಳಿದವೆಂದು ಶಾಸನಗಳು ಸಾರುತ್ತವೆ (ಇವುಗಳ ವಿವರಗಳು ಇದೇ ಲೇಖನದಲ್ಲಿ ಮುಂದೆ ನೀಡಿದೆ).

ಶ್ರೀರಂಗಪಟ್ಟಣವನ್ನು ಆಳುತ್ತಿದ್ದ ಟಿಪ್ಪುಸುಲ್ತಾನ್ ಗ್ರಂಥಪ್ರೇಮಿಯಾಗಿದ್ದು ಅವನಲ್ಲಿ 2400 ಗ್ರಂಥಗಳ ಸಂಗ್ರಹವಿತ್ತು. 1799ರಲ್ಲಿ ಬ್ರಿಟಿಷರು ಅವನಲ್ಲಿದ್ದ ಗ್ರಂಥ ಸಂಗ್ರಹವನ್ನು ಕೂಲಂಕಷವಾಗಿ ಅವಲೋಕಿಸಿ ಒಂದು ಗ್ರಂಥಸೂಚಿಯನ್ನು ತಯಾರಿಸಿದರು. ಇದನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯ 1807ರಲ್ಲಿ ಮುದ್ರಿಸಿ ಬಿಡುಗಡೆ ಮಾಡಿತು. ಕುರಾನ್ ಧರ್ಮಗ್ರಂಥಕ್ಕೆ ವಿವರಣೆಯಾಗಿ ರಚಿತಗೊಂಡ 63 ಕೃತಿಗಳು ಟಿಪ್ಪುವಿನ ಗ್ರಂಥ ಸಂಗ್ರಹಣೆಯಲ್ಲಿತ್ತು ಎಂಬ ಸಂಗತಿ ಮಹತ್ತರವಾದುದು.

**ಬಿಹಾರ :** ದಿಲ್ಲಿಯ ಸುಲ್ತಾನರುಗಳ ಉಚ್ಛ್ರಾಯ ಕಾಲದ ವಿನಾಶಗಳಲ್ಲಿ ಸಿಕ್ಕಿ ನಲುಗಿ ಹೋಗುವವರೆಗೂ ಬಿಹಾರದ ವಿಕ್ರಮಶಿಲಾ ಹಾಗೂ ಓದನಪುರಗಳಲ್ಲಿ ಪಾಲ ರಾಜರುಗಳಿಂದ ನಿರ್ಮಿತಿಗೊಂಡ ಉತ್ತಮಮಟ್ಟದ ಸಾರ್ವಜನಿಕ ಗ್ರಂಥಾಲಯಗಳು ಪ್ರವರ್ಧಮಾನವಾಗಿದ್ದವು. 13ನೆಯ ಶತಮಾನದಲ್ಲಿ ಬಖ್ತಿಯಾರ ಖಿಲ್ಜಿ ಇವನ್ನು ನೆಲಸಮ ಮಾಡಿದ.

**ಗುಜರಾತ್:** ಜರ್ಮನಿಯ ಬಾನ್ ವಿಶ್ವವಿದ್ಯಾಲಯದಲ್ಲಿ ಇಂದು ಅಮೂಲ್ಯ ನಿಧಿಯಂತೆ ಜೋಪಾನಿಸಿರುವ ರಾಮಾಯಣದ ಹಸ್ತಪ್ರತಿ ಗುಜರಾತಿನ ರಾಜನಾದ ವಿಶಾಲದೇವ ಚೌಳುಕ್ಯನ ಗ್ರಂಥಾಲಯದಲ್ಲಿಯದು. ಇದೇ ಅರಸನ ಗ್ರಂಥಾಲಯದಲ್ಲಿ ಕಾಮಸೂತ್ರ ಹಾಗೂ ನೈಷಧೀಯ ಗ್ರಂಥಗಳ ಪ್ರತಿಗಳೂ ಇದ್ದವು. ಇವನ್ನು ಅವಗಾಹಿಸಿದರೆ ಅಂದಿನ ಗುಜರಾತಿನಲ್ಲಿ ಉತ್ತಮ ಗ್ರಂಥಾಲಯಗಳ ಪರಂಪರೆ ಬೆಳೆದುಬಂದಿತ್ತೆಂಬುದು ಸುಸ್ಪಷ್ಟವಾಗುವುದು. ಕವಿ ಬಾಣಭಟ್ಟ ಸ್ವಂತ ಗ್ರಂಥಾಲಯವನ್ನು ಹೊಂದಿದ್ದನಲ್ಲದೆ ಒಬ್ಬ ವಾಚಕನನ್ನೂ ನಿಯಮಿಸಿಕೊಂಡಿದ್ದನಂತೆ. ಐತಿಹಾಸಿಕ ವ್ಯಕ್ತಿಯಾದ ಹಾಗೂ ಜನಜೀವನದ ಕಥೆಗಳಲ್ಲಿ ಹಾಸುಹೊಕ್ಕಾಗಿ ಬೆರೆತುಹೋಗಿರುವ, ಮಹಾಪ್ರತಾಪಿ ಹಾಗೂ ಪಂಡಿತ ಭೋಜರಾಜ ಒಂದು ಗ್ರಂಥಾಲಯವನ್ನು ಕಟ್ಟಿದ್ದ. ಅದರಲ್ಲಿ ಸಂಸ್ಕೃತ ಭಾಷೆಯ ಅಲಭ್ಯ ಗ್ರಂಥಗಳ ಅಪಾರ ಸಂಗ್ರಹವಿದ್ದಿತ್ತೆಂದು ಪ್ರತೀತಿ.

**ಮೊಗಲ್ ಗ್ರಂಥಾಲಯಗಳು :** 12 ಹಾಗೂ 13ನೆಯ ಶತಮಾನಗಳು ಕತ್ತಲೆಯ ಕಾಲವೆನಿಸಿವೆ. ಪರಕೀಯರ ದಾಳಿಯಿಂದಾಗಿ ಭಾರತದ ಸುವರ್ಣಸಂಪತ್ತಿನ ಜೊತೆಗೆ ಜ್ಞಾನ ಸಂಪತ್ತೆನಿಸಿದ ಗ್ರಂಥಗಳೂ ಆ ಕಾಲದಲ್ಲಿ ಇಲ್ಲವಾದುವು. ಕೆಲ ದಾಳಿಗಾರರು

ಸಾರ್ವಜನಿಕ ಗ್ರಂಥಾಲಯ, ದೆಹಲಿ

ಭಾರತದಲ್ಲೇ ನೆಲೆಸಿಬಿಟ್ಟರು. ಅವರಲ್ಲೂ ಕೆಲವು ವಿದ್ಯಾಪ್ರೇಮಿಗಳಿದ್ದರೆಂಬ ಅಂಶ ಕುತೂಹಲಕಾರಿಯಾಗಿದೆ. ತುಘಲಕ್ ವಂಶದ ಫಿರೋಜ್ ಷಹ ಇಲ್ಲಿ ತನ್ನ ಆಳಿಕೆಯಲ್ಲಿ ಕೆಲವು ಶಾಲೆ ಕಾಲೇಜುಗಳನ್ನು ಸ್ಥಾಪಿಸಿದನೆಂಬುದು ವಿಚಾರಣೀಯವಾಗಿದೆ. ನಾಗರಕೋಟ ಎಂಬ ಊರನ್ನು ಗೆದ್ದುಕೊಂಡಾಗ ಇವನಿಗೆ ಅಲ್ಲಿಯ ಹಿಂದೂ ಗುಡಿಯೊಂದರಲ್ಲಿ

1300 ಗ್ರಂಥಗಳಿದ್ದದ್ದು ಕಂಡುಬಂದಿತು. ಅವನ್ನೆಲ್ಲ ಈತ ನಾಶಪಡಿಸದೆ ಜೋಪಾನವಾಗಿ ತೆಗೆದುಕೊಂಡು ಹೋಗಿ ತನ್ನ ಗ್ರಂಥಾಲಯದಲ್ಲಿಟ್ಟುಕೊಂಡನೆಂದೂ ಕಾಲಾಂತರದಲ್ಲಿ ಅವುಗಳಲ್ಲಿಯ ಕೆಲವನ್ನು ಅರಬ್ಬಿಗೆ ಭಾಷಾಂತರ ಮಾಡಿಸಿದನೆಂದೂ ತಿಳಿದುಬರುತ್ತದೆ. ಇಂಥ ಉದಾಹರಣೆಗಳು ಅಲ್ಲಲ್ಲಿ ಮಿಂಚುವ ಬೆಳಕಿನಂತೆ, ಅಷ್ಟೇ.

ಶಾಂತಿ ಹಾಗೂ ಸ್ಥಿರತೆಯನ್ನು ಇಂಥ ವಾತಾವರಣಕ್ಕೆ ನಿಜವಾಗಿ ತಂದವರು ಮೊಗಲರು. ಇವರು ಸ್ವತಃ ವಿದ್ಯಾಪ್ರೇಮಿಗಳೂ ಕಲಾವಂತರೂ ರಸಿಕರೂ ಆದ್ದರಿಂದ ಇವರ ಕಾಲದಲ್ಲಿ ಗ್ರಂಥರಚನೆ ಹಾಗೂ ಪೋಷಣೆಗಳಿಗೆ ಪುಷ್ಟಿ ದೊರೆಯಿತು. ಬಾಬರನಿಂದಲೇ ಪ್ರಾರಂಭವಾದ ಕಾಲೇಜುಗಳ ಸ್ಥಾಪನೆ, ಗ್ರಂಥಾಲಯ ರಚನೆಯ ಕಾರ್ಯಗಳು ಮುಂದಿನ ಅರಸರ ಕಾಲದಲ್ಲಿ ಮುಂದುವರಿದವು. ಶೂರನಾದ ಬಾಬರ್ ಸ್ವತಃ ಪ್ರಭಾವೀ ಲೇಖಕ ಹಾಗೂ ಕವಿಯಾಗಿದ್ದ. ಇವನ ಆಳಿಕೆ ಕೇವಲ ನಾಲ್ಕು ವರ್ಷಗಳ (1526–30) ಅಲ್ಪಾವಧಿಯದಾಗಿದ್ದರೂ ವಿದ್ಯಾಮಂದಿರಗಳ ಸ್ಥಾಪನೆ ಹಾಗೂ ಗ್ರಂಥರಚನೆ ಆ ಕಾಲಾವಧಿಯಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದಿತು. ಸದಾ ಯುದ್ಧಗಳಲ್ಲೇ ನಿರತನಾಗಿದ್ದರೂ ಬಾಬರ್ ಅಲ್ಪಸ್ವಲ್ಪ ಕಾಲಾವಕಾಶ ಮಾಡಿಕೊಂಡು ವ್ಯಾಸಂಗ ಮಾಡುತ್ತಿದ್ದ. ಮೊಗಲರ ಇಂಪೀರಿಯಲ್ ಲೈಬ್ರರಿಯ ತಳಹದಿಯನ್ನು ಹಾಕಿದವ ಬಾಬರನೇ. ಆತ ಸ್ವಂತಕ್ಕೂ ಒಂದು ಗ್ರಂಥಾಲಯವನ್ನು ಕಟ್ಟಿಕೊಂಡಿದ್ದ. ಬಾಜಬಹಾದ್ದೂರನೆಂಬಾತ ಇವನ ಗ್ರಂಥಪಾಲನಾಗಿದ್ದ. ಬಾಬರನ ಮಗ ಹುಮಾಯೂನನೂ ಅತ್ಯಂತ ವಿದ್ಯಾಪಕ್ಷಪಾತಿಯೂ ಸ್ವತಃ ಪಂಡಿತನೂ ಆಗಿದ್ದ. ಇವನ ಸಾವು ಕೂಡ ಗ್ರಂಥಾಲಯದಲ್ಲೇ ಆಯಿತು. ಗ್ರಂಥ ಹುಡುಕಲು ತನ್ನ ಸ್ವಂತ ಗ್ರಂಥಾಲಯದ ಮಹಡಿಯ ಮೇಲೆ ಹತ್ತಿದ ಈತ ಅಲ್ಲಿಂದಲೇ ಕಾಲುಜಾರಿ ಬಿದ್ದು ನಿಧನನಾದ.

ಅಕ್ಬರನ ಕಾಲದಲ್ಲಿ ಮೊಗಲರ ಆಳಿಕೆ ಘನತೆಯನ್ನು ಮುಟ್ಟಿದಂತೆ ಗ್ರಂಥಾಲಯಗಳ ವ್ಯವಸ್ಥೆಯೂ ಚನ್ನಾಗಿಯೇ ಬೆಳೆಯಿತು. ಇವನ ಕಾಲದಲ್ಲಿಯೇ ಗ್ರಂಥಾಲಯದ ಅಂಗವಾಗಿ ಭಾಷಾಂತರ ವಿಭಾಗ ಸ್ಥಾಪಿತವಾಯಿತು. ಇದರಿಂದಾಗಿ ಅನೇಕ ಸಂಸ್ಕೃತ ಗ್ರಂಥಗಳು ಭಾಷಾಂತರಗೊಂಡವು. ಆಸ್ಥಾನ ಪಂಡಿತರುಗಳಾದ ಬದ್‌ಯೂನಿಯ ಲೇಖನಿಯಿಂದ ರಾಮಾಯಣ (1589), ನಬೀಬ್‌ಖಾನನ ಮೇಲ್ವಿಚಾರಣೆಯಲ್ಲಿ ಮಹಾಭಾರತಗಳ (1583) ಭಾಷಾಂತರಗಳು ಬೆಳಕು ಕಂಡವು. ಅಥರ್ವವೇದ, ಲೀಲಾವತಿ ಗ್ರಂಥಗಳೂ ರೂಪಾಂತರಗೊಂಡವು. ಆಗ್ರದ ಕಿಲ್ಲೆಯಲ್ಲಿಯೂ ಅಕ್ಬರ್ ಬಾದಶಹ ವಿಷಯಾನುಕ್ರಮದಲ್ಲಿ ವರ್ಗವಿಭಾಗ ಹೊಂದಿದ್ದ ಇಂಪೀರಿಯಲ್ ಗ್ರಂಥಾಲಯವನ್ನು ಸ್ಥಾಪಿಸಿದ್ದ. ಇಲ್ಲಿ 24,000 ಗ್ರಂಥಗಳು ಇದ್ದವೆಂದೂ ಈ ಹೊತ್ತಿನ ಬೆಲೆಯಲ್ಲಿ ಅವುಗಳ ಬೆಲೆ 74 ಲಕ್ಷ ಪೌಂಡುಗಳಿಗೂ ಮೀರಿದ್ದಾಗಿತ್ತೆಂದೂ ಅಂದಾಜು ಮಾಡಲಾಗಿದೆ. ಇಲ್ಲಿಯ ಗ್ರಂಥಗಳು ಕವಿತೆ, ಜ್ಯೋತಿಷ್ಯ, ತತ್ತ್ವಜ್ಞಾನ, ಖಗೋಳಶಾಸ್ತ್ರ, ಭೂಮಿತಿ, ಆಯುರ್ವೇದ ಮುಂತಾದ ವಿಭಾಗಗಳಾಗಿ ವರ್ಗೀಕರಿಸಲ್ಪಟ್ಟಿದ್ದವು. ಗ್ರಂಥಾಲಯಕ್ಕೆ ಬಂದ ಹೊಸಗ್ರಂಥಗಳನ್ನು ಅಕ್ಬರ್ ಓದಿಸಿ ಕೇಳುತ್ತಿದ್ದ. ಗ್ರಂಥಕರ್ತೃಗಳು ಅರಮನೆಯ ಗ್ರಂಥಾಲಯಕ್ಕೆ ಕಡ್ಡಾಯವಾಗಿ ತಮ್ಮ ಗ್ರಂಥಗಳ ಪ್ರತಿಗಳನ್ನು ಒಪ್ಪಿಸಬೇಕಾಗಿತ್ತು. ಗುಜರಾತಿನ ದಾಳಿಯ ಸಮಯದಲ್ಲಿ ಅಲ್ಲಿಯ ಇತ್ತಿಮಾದ ಖಾನನ ಗುಜರಾತಿ ಗ್ರಂಥಾಲಯವನ್ನೂ ಅಬುಲ್ ಫೈಜಿಯ ಸಾವಿನ ಅನಂತರ ಅವನ ಗ್ರಂಥಾಲಯವನ್ನೂ ಅಕ್ಬರ್ ವಶಪಡಿಸಿಕೊಂಡು ತನ್ನ ಗ್ರಂಥಾಲಯಕ್ಕೆ ಸೇರಿಸಿಕೊಂಡ. ಹಜ್ ಯಾತ್ರಿಕರು ದಾರಿಯಲ್ಲಿ ತಮಗೆ ಕಂಡುಬಂದ ಉತ್ತಮ ಗ್ರಂಥಗಳನ್ನು ಕೊಂಡುತಂದು ಅರಮನೆಯ ಗ್ರಂಥಾಲಯಕ್ಕೆ ನೀಡಿದರೆ ಅವುಗಳ ಬೆಲೆಯನ್ನಲ್ಲದೆ ಅವರ ಶ್ರಮದ ಬೆಲೆಯನ್ನೂ ಕೊಡಲಾಗುತ್ತಿತ್ತು. ಇವನ ಆಳಿಕೆಯ ಕಾಲದಲ್ಲಿಯೇ ಅಂದವಾಗಿ ಪ್ರತಿಮಾಡುವ ಕಲೆ (ಕ್ಯಾಲಿಗ್ರಫಿ), ಪುಸ್ತಕಕ್ಕೆ ರಟ್ಟು ಕಟ್ಟುವ ಕಲೆ ಹಾಗೂ ಹಸ್ತಪ್ರತಿಗಳಿಗೆ ಬಣ್ಣದ ಚಿತ್ರಗಳನ್ನೊದಗಿಸುವ ಕಲೆಗಳು ವೃದ್ಧಿಗೊಂಡವು.

ಹೀಗೆ ಅಕ್ಬರನಿಂದ ಘನತೆಗೇರಿದ ಪರಂಪರೆ ವಿಲಾಸಪ್ರಿಯನಾದ ಜಹಂಗೀರನ ಕಾಲದಲ್ಲಿ ಅವನ ರಸಿಕತೆಯಿಂದಾಗಿ ಇನ್ನೂ ಚೆನ್ನಾಗಿ ಮುಂದುವರಿಯಿತು. ಗ್ರಂಥಾಲಯಗಳು ಬಾಹ್ಯ ಸೌಂದರ್ಯವನ್ನೂ ಪಡೆದವು. ಮಹತ್ತ್ವದ ಗ್ರಂಥಗಳನ್ನು ಕಲೆಹಾಕುವಲ್ಲಿ ಆತ ಅಪಾರ ಹಣ ವೆಚ್ಚ ಮಾಡುತ್ತಿದ್ದ. ಯುಸುಫ್–ಎ–ಖಲೇಖಾ ಎಂಬ ಗ್ರಂಥದ ಪ್ರತಿಯನ್ನು ಕೊಳ್ಳಲು ಆತ 1000 ಬಂಗಾರದ ಮೊಹರುಗಳನ್ನು ನೀಡಿದನಂತೆ. ಆತನ ಪತ್ನಿ ನೂರ್‌ಜಹಾನ್ ಕೂಡ ಗ್ರಂಥಪ್ರೇಮಿ, ಹಣ ಸೂರೆಮಾಡಿ ಗ್ರಂಥ ಕೊಳ್ಳುತ್ತಿದ್ದಳು. ಮಿರ್ಜ ಕಾಮರಾನನ ದಿವಾನ ಗ್ರಂಥವನ್ನು ಮೂರು ಬಂಗಾರದ ಮೊಹರುಗಳಿಗೆ ಖರೀದಿಸಿದ ಉಲ್ಲೇಖವಿದೆ. ಇಂದಿಗೂ ಖುದಾಬಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯದಲ್ಲಿ ಜಹಂಗೀರನ ಜ್ಯೋತಿಷ್ಯಶಾಸ್ತ್ರದ ಗ್ರಂಥ ಲಭ್ಯವಿದೆ. ಈ ಗ್ರಂಥದಲ್ಲಿ ಆತ ಸ್ವತಃ ಮಾಡಿದ ಟಿಪ್ಪಣಿಗಳಿವೆ. ಅರಮನೆ ಗ್ರಂಥಾಲಯಕ್ಕೆ ವರ್ಣಚಿತ್ರಗಳ ಶ್ರೇಣಿಯೊಂದನ್ನು ಜಹಂಗೀರ್ ಜೋಡಿಸಿದನೆನ್ನಲಾಗಿದೆ.

ಷಹಜಹಾನನೂ ಗ್ರಂಥಪ್ರೇಮಿಯಾಗಿದ್ದ. ಇವನ ಹಸ್ತಾಕ್ಷರವನ್ನುಳ್ಳ ಗ್ರಂಥಗಳು ಇಂದಿಗೂ ದೇಶದಲ್ಲಿಯ ಕೆಲವು ಗ್ರಂಥಾಲಯಗಳಲ್ಲಿ ಲಭ್ಯವಿವೆ. ಇವನ ಕಾಲದಲ್ಲೇ ದಿಲ್ಲಿಯಲ್ಲಿ ಇಂಪೀರಿಯಲ್ ಕಾಲೇಜು ಸ್ಥಾಪನೆಗೊಂಡಿತು. ಷಹಜಹಾನನಾಮಾದ ಕರ್ತೃವೂ ಕಾಶ್ಮೀರದ ರಾಜ್ಯಪಾಲನೂ ಆಗಿದ್ದ ಆಶಾನಾ ಮಹಮ್ಮದ್ ತಾಹೀರ್ ಇವನ ಗ್ರಂಥಪಾಲನಾಗಿದ್ದ. ಈ ಕಾಲದಲ್ಲೇ ಜೆಸುಯಿಟರು ಆಗ್ರ, ದೆಹಲಿಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಿದರು. ಆಗ ಪ್ರಮುಖ ಗ್ರಂಥಪಾಲನಿಗೆ ಕಿತಾಬದಾರ ಅಥವಾ ನಿಜಾಮ ಎಂದೂ ಸಹಾಯಕನಿಗೆ ದರೋಗಾ ಮುಹತಮಿನ್ ಎಂದೂ ಕರೆಯುತ್ತಿದ್ದರು.

ಷಹಜಹಾನನ ಹಿರಿಯ ಮಗ ದಾರಾ ಗ್ರಂಥಾಲಯ ಬೆಳವಣಿಗೆಗೆ ಅಮೂಲ್ಯ ಕಾಣಿಕೆ ನೀಡಿದ್ದಾನೆ. ಅವನ ಕಾಲದಲ್ಲಿ ಉಪನಿಷತ್ತುಗಳು, ಭಗವದ್ಗೀತೆ, ಯೋಗವಾಸಿಷ್ಠ, ಪ್ರಬೋಧ ಚಂದ್ರೋದಯಗಳು ಪಾರಸಿ ಭಾಷೆಗೆ ತರ್ಜುಮೆಗೊಂಡವು. ಸ್ವತಃ ದಾರಾ ಆರು ತಿಂಗಳಲ್ಲಿ 52 ಉಪನಿಷತ್ತುಗಳನ್ನು ತರ್ಜುಮೆ ಮಾಡಿದನಂತೆ.

ಧಾರ್ಮಿಕ ನಿಷ್ಠೆಯುಳ್ಳ ಔರಂಗಜೇಬ್ ಕುರಾನಿನ ಪ್ರತಿ ಮಾಡುತ್ತಿದ್ದ. ದಾಳಿಗಳ ಕಾಲದಲ್ಲಿ ಈತ ಗ್ರಂಥಾಲಯಗಳನ್ನು ನಾಶಮಾಡಲಿಲ್ಲ. ಬೀದರ್‌ನ ಮಹಮೂದ್ ಗಾವಾನನ ಗ್ರಂಥಾಲಯವನ್ನು ಆತ ಅರಮನೆ ಗ್ರಂಥಾಲಯಕ್ಕೆ ಸೇರಿಸಿದ.

ಆದರೆ ನಾದಿರ್‌ಷಹನ ದಾಳಿಯ ಕಾಲದಲ್ಲಿ ಭಾರತದ ಆರ್ಥಿಕ ಸಂಪತ್ತಿನ ಜೊತೆಗೆ ಗ್ರಂಥ ಸಂಪತ್ತೂ ದೇಶಾಂತರಗೊಂಡಿತು. ಅನೇಕ ಗ್ರಂಥಾಲಯಗಳು ನಾಮಾವಶೇಷವಾದವು.

ಖುದಾಬಕ್ಷ್ ಗ್ರಂಥಾಲಯ, ಪಟಣ

ಖುದಾಬಕ್ಷ್ ಖಾನ್ ಎಂಬ ಪ್ರಸಿದ್ಧ ವಕೀಲ ಪಾಟ್ನದಲ್ಲಿ ಸ್ಥಾಪಿಸಿದ (1891) ಸಾರ್ವಜನಿಕ ಗ್ರಂಥಾಲಯವೊಂದು ಅಮೂಲ್ಯವಾದ ಹಸ್ತಪ್ರತಿಗಳ ಸಂಗ್ರಹವೆನಿಸಿದೆ. (ವಿವರಗಳಿಗೆ ಮುಂದೆ *ನೋಡಿ*)

ಮುದ್ರಣ ಕಲೆಯ ಉಗಮ ಹಾಗೂ ಬೆಳೆವಣಿಗೆ : ಮುದ್ರಣಕಲೆ ಗ್ರಂಥಾಲಯಗಳ ಬೆಳೆವಣಿಗೆಗೆ ಹೊಸ ಚೈತನ್ಯವನ್ನು ತುಂಬಿತು. ಪೋರ್ಚುಗೀಸರು ಸೇಂಟ್ ಪಾಲ್ ಕಾಲೇಜಿನಲ್ಲಿ ಒಂದು ಮುದ್ರಣಾಲಯ ಸ್ಥಾಪಿಸಿದರು. ಇಲ್ಲಿಂದ ಹೊರಬಂದ ಮೊದಲ ಗ್ರಂಥ ಕಾಂಕ್ಲುಸೋಸ್ ಪಬ್ಲಿಕಾಸ್. ಮೊದಮೊದಲು ಪಶ್ಚಿಮ ಕರಾವಳಿಯಲ್ಲಿ ಮುದ್ರಣಾಲಯಗಳು ಕಂಡುಬಂದವು. ಅನಂತರ ಪೂರ್ವ ಕರಾವಳಿಗೆ ವಿಸ್ತರಣೆಗೊಂಡವು. 1557ರ ಸುಮಾರಿಗೆ ಪೋರ್ಚುಗೀಸ್ ಭಾಷೆಯಲ್ಲಿ ಮುದ್ರಣಗೊಂಡ ಡಾಕ್ಟ್ರಿನ ಕ್ರಿಸ್ತಾವೊ ಗ್ರಂಥದ ಮಲಬಾರೀ ತಮಿಳು ಭಾಷೆಯ ಭಾಷಾಂತರ ಕೃತಿ ಕ್ರಿಸ್ತ್ಯವಣ್ಣಕಣಂ. ಇದರ ದ್ವಿತೀಯ ಮುದ್ರಣದ ಪ್ರತಿಯೊಂದು ಇಂದು ಫ್ರಾನ್ಸಿನ ರಾಷ್ಟ್ರೀಯ ಗ್ರಂಥಾಲಯದಲ್ಲಿದೆ.

ಮುದ್ರಿತ ಗ್ರಂಥಗಳನ್ನು ಪ್ರಥಮವಾಗಿ ಹೊಂದಿದ ಭಾಷೆಗಳೆಂದರೆ ತಮಿಳು ಹಾಗೂ ಮಲೆಯಾಳಂ. ಇಗ್ಲೇಸಿಯನ್ ಕಾಮೋನಿ ಎಂಬವನು ತಮಿಳು ಭಾಷೆಯ ಮುದ್ರಣ ಮೊಳೆಗಳನ್ನು ತಯಾರಿಸುವವರೆಗೆ ಆ ಭಾಷೆಯ ಕೃತಿಗಳೂ ಮಲಯಾಳಂ ಲಿಪಿಯಲ್ಲಿ ಅಚ್ಚಾಗುತ್ತಿದ್ದವು. ಈತನ ಮೊಳೆಗಳಿಂದ ಮುದ್ರಣಗೊಂಡ ಪ್ರಥಮ ಕೃತಿ ಪೋರ್ಚುಗೀಸ್–ತಮಿಳು ನಿಘಂಟು. 1863ರಲ್ಲಿ ಮದ್ರಾಸಿನಲ್ಲಿ 10 ಮುದ್ರಣಾಲಯ ಗಳಿದ್ದುವು. 1862ರಲ್ಲಿ ಹಂಟ್ ಎಂಬಾತ ಸುಧಾರಿತ ತಮಿಳು ಲಿಪಿಯ ಮೊಳೆಗಳನ್ನು ತಯಾರಿಸಿದ. ಇವುಗಳಿಂದ ಮುದ್ರಣಗೊಂಡ ತಮಿಳು–ಇಂಗ್ಲಿಷ್ ಶಬ್ದಕೋಶ ಮುದ್ರಣ ದೃಷ್ಟಿಯಿಂದ ಇಂದಿಗೂ ಯಾವುದೇ ಮುದ್ರಿತ ಗ್ರಂಥದೊಂದಿಗೆ ಸ್ಪರ್ಧಿಸುವಂತಿದೆ.

ಭೀಮಜಿ ಪಾರೀಖ್ ಎಂಬ ಗುಜರಾತಿ 1674ರಲ್ಲಿ ಒಬ್ಬ ಇಂಗ್ಲಿಷ್ ತಜ್ಞನ ಸಹಾಯದಿಂದ ಬೊಂಬಾಯಿಯಲ್ಲೊಂದು ಮುದ್ರಣಾಲಯ ಸ್ಥಾಪಿಸಿದ. ಮರಾಠಿ, ಅಸ್ಸಾಮಿ ಹಾಗೂ ಗುಜರಾತಿ ಭಾಷೆಯ ಮೊದಲ ಗ್ರಂಥಗಳು ಹೆಚ್ಚಾಗಿ ಶ್ರೀರಾಂಪುರ ಮುದ್ರಣಾಲಯದಲ್ಲಿಯೇ ಅಚ್ಚುಗೊಂಡವು. ಅಚ್ಚು ಮೊಳೆಗಳನ್ನು ಮಾಡಲು ಬೇಕಾಗುವ ಕೈಬರೆಹಗಳನ್ನು ಕಾಳೀಕುಮಾರ ರಾಯ್ ಎಂಬ ಬಂಗಾಲೀ ಅಧ್ಯಾಪಕ ತಯಾರಿಸುತ್ತಿದ್ದನಂತೆ. ಅವುಗಳಿಂದ ಪಂಚಾನನ ಕರ್ಮಕರ ಎಂಬಾತ ಅಚ್ಚು ಮೊಳೆಗಳನ್ನು ತಯಾರಿಸುತ್ತಿದ್ದನಂತೆ. 1792ರಲ್ಲಿ ಬೊಂಬಾಯಿಯಲ್ಲಿ ದಿ ಬಾಂಬೆ ಕುರಿಯರ್ ಎಂಬ ವಾರ್ತಾಪತ್ರಿಕೆ ಇಂಗ್ಲಿಷ್, ಮರಾಠಿ ಹಾಗೂ ಗುಜರಾತಿ ಭಾಷೆಗಳಲ್ಲಿ ಮುದ್ರಣಗೊಳ್ಳುತ್ತಿತ್ತೆಂಬ ಅಂಶ ಮನನೀಯವಾಗಿದೆ. ಈ ಪತ್ರಿಕೆಯ ಒಬ್ಬ ಕೆಲಸಗಾರನಾದ ಬೈರಾಮಜಿ ಜೀಜೀಭಾಯ್ ಎಂಬಾತ ಗುಜರಾತಿ ಅಚ್ಚುಮೊಳೆಗಳನ್ನು ತಯಾರಿಸಿದನಂತೆ. ಹೀಗೆ ಮುದ್ರಣಕಲೆ ಬೆಳೆದಂತೆ ಗ್ರಂಥಗಳ ಸಂಖ್ಯೆ ಹಾಗೂ ತನ್ಮೂಲಕ ಗ್ರಂಥಾಲಯಗಳ ವ್ಯವಸ್ಥಿತ ಬೆಳವಣಿಗೆ ಮುಂದುವರಿಯಿತು.

19ನೆಯ ಶತಮಾನ ಗ್ರಂಥಾಲಯಗಳ ಬೆಳವಣಿಗೆಯ ಇತಿಹಾಸದಲ್ಲಿ ಮಹತ್ತ್ವದ್ದಾಗಿದೆ. ಆಗ ಶೈಕ್ಷಣಿಕ ಪ್ರಗತಿ ಬಹುವಾಗಿ ಹೆಚ್ಚತೊಡಗಿತು. ಅದರಿಂದ ಗ್ರಂಥಾಲಯಗಳ ಆವಶ್ಯಕತೆಯೂ ಎದ್ದು ತೋರತೊಡಗಿತು. ಜೊತೆಗೆ ಮುದ್ರಣಕಲೆಯೂ ಸಾಕಷ್ಟು ಪ್ರಗತಿಯನ್ನು ಸಾಧಿಸಿತ್ತು. ಪರಿಣಾಮವಾಗಿ ಹೆಚ್ಚುಹೆಚ್ಚಾಗಿ ಗ್ರಂಥಾಲಯಗಳು ಹುಟ್ಟಿಕೊಂಡವು. 1808ರಲ್ಲಿ ಮುಂಬಯಿ ಸರ್ಕಾರ ಸಾಹಿತ್ಯ ಪ್ರೋತ್ಸಾಹ ನಿಧಿ ಯೋಜನೆಯನ್ವಯ ಪ್ರಕಟಿಸಿದ ಗ್ರಂಥಗಳ ಪ್ರತಿಗಳ ವಿತರಣೆ ಮಾಡಲು ಅಂದಿನ ಗ್ರಂಥಾಲಯಗಳ ಪಟ್ಟಿಯೊಂದನ್ನು ತಯಾರಿಸಿದ್ದು ಗ್ರಂಥಾಲಯ ಇತಿಹಾಸದಲ್ಲಿ ಮಹತ್ತ್ವದ ಮೈಲಿಗಲ್ಲಾಗಿದೆ. ಇದೇ ಕಾಲದಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿ, ಮದ್ರಾಸ್ ಲೈಬ್ರರಿ ಸೊಸೈಟಿ, ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಮೊದಲಾದ ಸಂಸ್ಥೆಗಳು ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಿದುವು.

ಆಂಗ್ಲ ಅಧಿಕಾರಿಗಳು ತಮ್ಮ ಹಾಗೂ ನೌಕರರ ಉಪಯೋಗಕ್ಕಾಗಿ ಸ್ಥಳೀಯ ಸಾರ್ವಜನಿಕ ಗ್ರಂಥಾಲಯಗಳನ್ನು ಸ್ಥಾಪಿಸಿದರು. ಮುಂದೆ ಮುಂಬಯಿ, ಮದ್ರಾಸು ಹಾಗೂ ಕಲ್ಕತ್ತಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪನೆಯಾದ ತರುವಾಯ ಅಲ್ಲಲ್ಲಿ ದೊಡ್ಡ ಪ್ರಮಾಣದಲ್ಲಿ ಗ್ರಂಥಾಲಯಗಳು ಬೆಳೆದವು. ಈಸ್ಟ್ ಇಂಡಿಯ ಕಂಪನಿಯ ಆಳ್ವಿಕೆಯ ಕಾಲದಲ್ಲೇ ಬೆಳೆಯತೊಡಗಿದ ಗ್ರಂಥಾಲಯಗಳ ಸಂಖ್ಯೆ ಮುಂದೆ ವಿಕ್ಟೋರಿಯಾ ರಾಣಿಯ ಆಡಳಿತ ಬಂದಾಗ ಮತ್ತೂ ಬೆಳೆಯಿತು. ಭಾರತದ ವಿವಿಧ ಭಾಗಗಳಲ್ಲಿ ರಾಣಿಯ ಆಳ್ವಿಕೆಯ ನೆನಪಿಗಾಗಿ ಜ್ಯೂಬಿಲಿ ಗ್ರಂಥಾಲಯಗಳು ಸ್ಥಾಪನೆಗೊಂಡವು.

ಜಿಲ್ಲಾಗ್ರಂಥಾಲಯ, ಲಕೀಮ್‌ಪುರ್, ಅಸ್ಸಾಂ

ಮುಂದಿನ ಸ್ವಾತಂತ್ರ್ಯ ಆಂದೋಲನದ ಕಾಲದಲ್ಲೂ ಹೊಸ ಗ್ರಂಥಾಲಯಗಳು ಸ್ಥಾಪನೆಗೊಂಡವು. ನಾಗಪುರದ ದೀಕ್ಷಿತ ಗ್ರಂಥಾಲಯ (1895), ಶ್ರೀನಗರದ ಸಾರ್ವಜನಿಕ ವಾಚನಾಲಯ (1898) ಹಾಗೂ ಮದ್ರಾಸಿನ ಕನ್ನೆಮಾರಾ ಸಾರ್ವಜನಿಕ ಗ್ರಂಥಾಲಯ (1896) – ಇವು ಆ ಕಾಲದ ಪ್ರಮುಖ ದೇಣಿಗೆಯಾಗಿವೆ. 1890ರಲ್ಲಿ ಧಾರವಾಡದಲ್ಲಿ ಸ್ಥಾಪನೆಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘ (**ನೋಡಿ**) ಈ ದಿಶೆಯಲ್ಲಿ ಬಹುವಾಗಿ ಕೆಲಸ ಮಾಡಿತು. ಇಂದಿಗೂ ಈ ಸಂಘ ಸ್ಥಿರವಾಗಿ ಬೆಳೆದು ನಿಂತಿದೆ.

ಬರೋಡದ ಸಯ್ಯಾಜಿರಾವ್ ಗಾಯಕವಾಡರು ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಮಹತ್ತ್ವದ ಪಾತ್ರ ವಹಿಸಿದ್ದಾರೆ. 20ನೆಯ ಶತಮಾನದಲ್ಲಿ ಗ್ರಂಥಾಲಯ ಬೆಳವಣಿಗೆಯನ್ನು ತೀವ್ರಗೊಳಿಸಲು ನಾಂದಿ ಹಾಕಿದವರು ಇವರೇ. ಅಮೆರಿಕದ ತಜ್ಞ ವಿಲಿಯಂ ಆಲೆನ್‌ಸನ್ ಬೋರ್ಡನ್ ಎಂಬಾತನನ್ನು ಕರೆಸಿಕೊಂಡು ಅವರು ಬರೋಡ ಸಂಸ್ಥಾನದಲ್ಲಿ ಒಂದು ದೊಡ್ಡ ಕೇಂದ್ರ ಗ್ರಂಥಾಲಯ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಸ್ಥಳಗಳಲ್ಲಿ ಉಪಗ್ರಂಥಾಲಯಗಳನ್ನು ಸ್ಥಾಪಿಸಿದರು. ಸಂಚಾರಿ ಗ್ರಂಥಾಲಯಗಳನ್ನೂ ಅವರೇ ಬಳಕೆಗೆ ತಂದರು; ಗ್ರಂಥಾಲಯ ಶಿಕ್ಷಣದ ಏರ್ಪಾಡು ಮಾಡಿದರು. 1926ರಲ್ಲಿ ಬರೋಡ ಗ್ರಂಥಾಲಯ ಸಂಘ ಹುಟ್ಟಿಕೊಂಡಿತು. ಮಹಾರಾಜರ ಈ ದೂರದರ್ಶಕತ್ವದ ಫಲವಾಗಿ ಇಂದು ಅಲ್ಲಿ ಶೇಕಡ 85ರಷ್ಟು ಜನತೆಗೆ ಗ್ರಂಥಾಲಯ ಸೌಲಭ್ಯ ದೊರೆತಿದೆ. ಗಾಯಕವಾಡರನ್ನು ಭಾರತ ಗ್ರಂಥಾಲಯ ಚಳವಳಿಯ ಪಿತೃವೆಂದು ಕರೆದಿರುವುದು ಉಚಿತವೇ ಆಗಿದೆ.

1914ರಲ್ಲಿ ಆಂಧ್ರ ಗ್ರಂಥಾಲಯ ಸಂಘ ಸ್ಥಾಪನೆಗೊಂಡಿತು. 1939ರ ಅನಂತರ ಆಂಧ್ರ ಗ್ರಂಥಾಲಯಮು ಎಂಬ ನಿಯತಕಾಲಿಕೆ ಪ್ರಕಟವಾಗುತ್ತಿತ್ತು. ತೆಲುಗರು ಬೇರೆ ಬೇರೆ ವಿಧಾನಗಳಿಂದ ಗ್ರಂಥಾಲಯ ಸೇವೆಯನ್ನು ಒದಗಿಸಲು ಪ್ರಯತ್ನಿಸಿದರು. ಸೈಕಲ್ ಮೇಲೆ ಹಾಗೂ ನಾವೆಗಳಲ್ಲಿ ಗ್ರಂಥಗಳನ್ನು ಪೂರೈಸುವ ವ್ಯವಸ್ಥೆ ಮಾಡಿದರು; ಗ್ರಂಥಭಂಡಾರಿಗಳ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದರು.

ಅಮೆರಿಕದಿಂದ ಬಂದ ಅಸಾ ಡಾನ್ ಡಿಕಿನ್‌ಸನ್ ಎಂಬಾತ ಪಂಜಾಬ್ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಹೊಸ ತಿರುವನ್ನೇ ನೀಡಿದ; 1915ರಲ್ಲಿ ಗ್ರಂಥಭಂಡಾರಿಗಳ ತರಬೇತಿಗಾಗಿ ಶಿಬಿರಗಳನ್ನು ನಡೆಸಿದ; ಗ್ರಂಥಾಲಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಪ್ರಥಮ ಭಾರತೀಯ ಗ್ರಂಥವೆನಿಸಿದ ಪಂಜಾಬ್ ಲೈಬ್ರರಿ ಪ್ರಿಮರ್ ಎಂಬ ಗ್ರಂಥವನ್ನು ಮುಕುಂದಲಾಲ ಭಾಟಿಯಾ ಎಂಬಾತನೊಂದಿಗೆ ಸೇರಿ ಪ್ರಕಟಿಸಿದ.

ಮದ್ರಾಸು ರಾಜ್ಯ ಗ್ರಂಥಾಲಯ ಕಾಯಿದೆಯನ್ನು ಅಂಗೀಕರಿಸಿ ಸರ್ವರಿಗೂ ಅವುಗಳ ಸೇವೆ ದೊರೆಯುವಂತೆ ಮಾಡಿದ ಪ್ರಥಮ ರಾಜ್ಯವೆನಿಸಿದೆ. 1928ರಲ್ಲಿ ಸ್ಥಾಪನೆಗೊಂಡ ಗ್ರಂಥಾಲಯ ಸಂಘದ ಪ್ರಥಮ ಕಾರ್ಯದರ್ಶಿ ಎಸ್. ಆರ್. ರಂಗನಾಥನ್ ಅವರ ಪ್ರಯತ್ನದಿಂದಾಗಿ ಇಂದು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ವಿಜ್ಞಾನ ವಿಭಾಗ ಬೆಳೆಯಿತು. ಇಲ್ಲಿ ಗ್ರಂಥಪಾಲರ ತರಬೇತಿಗೂ ಅವಕಾಶವಿದೆ. ಇಂದು ತಮಿಳುನಾಡು ರಾಜ್ಯದ ಪ್ರತಿಯೊಂದು ದೊಡ್ಡ ಪಟ್ಟಣದಲ್ಲೂ ಗ್ರಂಥಾಲಯ ಉಂಟು. ಸಂಚಾರಿ ಗ್ರಂಥಾಲಯಗಳ ವ್ಯವಸ್ಥೆಯೂ ಉಂಟು. ಚಂಗಲಪೇಟ್, ಸೇಲಂ ಹಾಗೂ ತಿರುನಲ್ವೇಲಿ ಜಿಲ್ಲೆಗಳಲ್ಲಿ ಟೆಂಪೋ ವಾಹನಗಳಲ್ಲಿ ಸಂಚಾರಿ ಗ್ರಂಥಾಲಯ ವ್ಯವಸ್ಥೆ ಇದೆ. ಸ್ಥಳೀಯ ಗ್ರಂಥಾಲಯಗಳಿಗೂ ರಾಜ್ಯ ಸರ್ಕಾರ ಸಹಾಯ ನೀಡುತ್ತಿದೆ. ಇಂದು ಚೆನ್ನೈನಲ್ಲಿರುವ ಗ್ರಂಥಾಲಯಗಳಲ್ಲಿ ಕೇಂದ್ರೀಯ ಗ್ರಂಥಾಲಯಗಳು, ವಿಭಾಗೀಯ ಗ್ರಂಥಾಲಯಗಳು ಹಾಗೂ ಗ್ರಂಥ ವಿತರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

1930ರಲ್ಲಿ ಕೇರಳದಲ್ಲಿ ಕೇಂದ್ರ ಗ್ರಂಥಾಲಯ ಸ್ಥಾಪನೆಗೊಂಡಿತು. ಇದೇ ಸಮಯದಲ್ಲಿ ಕುನ್ನಿಯ ಎಂಬವರು ಅಖಿಲ ಕೇರಳ ಗ್ರಂಥಾಲಯ ಸಂಘವನ್ನು ಸ್ಥಾಪನೆ ಮಾಡಿದರು. 1931ರಲ್ಲಿ ಈ ಸಂಘ ಗ್ರಂಥವಿಹಾರ ಎಂಬ ನಿಯತಕಾಲಿಕೆಯನ್ನು ಪ್ರಕಟಿಸಿತು. 1938ರಲ್ಲಿ ಮಲಬಾರ್ ಗ್ರಂಥಾಲಯ ಸಂಘವೆಂಬ ಇನ್ನೊಂದು ಸಂಘ ಜನ್ಮ ತಾಳಿತು. 1945ರಿಂದ ಈಚೆಗೆ ಕೇರಳ ಗ್ರಂಥಶಾಲಾ ಸಂಘಮ್ ಎಂಬ ಹೆಸರಿನಿಂದ ಈ ಸಂಘ ಕೆಲಸ ಮಾಡುತ್ತಿದೆ. ಇಂದು ಕೇರಳದಲ್ಲಿ 2,600ಕ್ಕಿಂತ ಹೆಚ್ಚು ಕಾರ್ಯನಿರತ ಗ್ರಂಥಾಲಯಗಳಿವೆ.

ಬಂಗಾಲದಲ್ಲಿ 1946ರಿಂದ ಬಂಗಾಲ ಗ್ರಂಥಾಲಯ ಸಂಘ ಪ್ರಾರಂಭವಾಗಿ ಕಾರ್ಯನಿರತವಾಗಿದೆ. ಈ ಸಂಘ ಗ್ರಂಥಾಗಾರ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರಡಿಸುತ್ತಿದೆ. ರಾಜ್ಯ ಸರ್ಕಾರ ಗ್ರಂಥಾಲಯ ನಿರ್ಮಾಣ ಕಾರ್ಯಕ್ಕೆ ಸಹಾಯ ನೀಡುತ್ತಿದೆ.

1936ರಲ್ಲಿ ಬಿಹಾರ ರಾಜ್ಯ ಪುಸ್ತಕಾಲಯ ಸಂಘ ಸ್ಥಾಪನೆಗೊಂಡಿತು. ಇದೀಗ ಪುಸ್ತಕಾಲಯ ಎಂಬ ತ್ರೈಮಾಸಿಕವನ್ನು ಹೊರಡಿಸುತ್ತಿದೆ. ರಾಜ್ಯ ಸರ್ಕಾರ ಗ್ರಂಥಾಲಯಗಳಿಗೆ ಪ್ರತಿವರ್ಷ ಸಹಾಯಧನವನ್ನು ನೀಡುತ್ತಿದೆ. ಇಂದು ಬಿಹಾರದ ಪಾಟ್ನದಲ್ಲಿ (ಪಟಣ) ಒಂದು ರಾಜ್ಯ ಕೇಂದ್ರ ಗ್ರಂಥಾಲಯ, 12 ಬೇರೆ ಬೇರೆ ಜಿಲ್ಲಾ ರಾಜ್ಯ ಗ್ರಂಥಾಲಯಗಳು, 41 ಉಪವಿಭಾಗೀಯ ಗ್ರಂಥಾಲಯಗಳು, 587 ಬ್ಲಾಕ್ ಗ್ರಂಥಾಲಯಗಳು ಇವೆ. ಕೇಂದ್ರ ಗ್ರಂಥಾಲಯದಲ್ಲಿ ಮೂರು ತಿಂಗಳ ಅವಧಿಯ ಗ್ರಂಥಪಾಲ ತರಬೇತಿ ಕಾರ್ಯಕ್ರಮ ನಡೆಯುತ್ತಿದೆ. ಅಲ್ಲದೆ, ಪಾಟ್ನಾ, ಭಾಗಲಪುರ, ಮುಜಫರ್‌ಪುರ ಹಾಗೂ ರಾಂಚಿಗಳಲ್ಲಿ ಒಂದು ತಿಂಗಳ ತರಬೇತಿಯ ಚಿಕ್ಕ ಕಾರ್ಯಕ್ರಮಗಳೂ ಇವೆ. ಒಟ್ಟಿನಲ್ಲಿ ಬಿಹಾರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ 4,569.

1942ರಲ್ಲಿ ಮಹಾರಾಷ್ಟ್ರ ಗ್ರಂಥಾಲಯ ಸಂಘ, 1944ರಲ್ಲಿ ಉತ್ಕಲ ಗ್ರಂಥಾಲಯ ಸಂಘ, 1944ರಲ್ಲಿ ಮುಂಬಯಿ ಗ್ರಂಥಾಲಯ ಸಂಘ, 1953ರಲ್ಲಿ ದೆಹಲಿ ಗ್ರಂಥಾಲಯ ಸಂಘ, 1956ರಲ್ಲಿ ಉತ್ತರ ಪ್ರದೇಶ ಗ್ರಂಥಾಲಯ ಸಂಘ, 1957ರಲ್ಲಿ ಮಧ್ಯ ಪ್ರದೇಶ ಗ್ರಂಥಾಲಯ ಸಂಘ ಮುಂತಾದವು ಸ್ಥಾಪನೆಗೊಂಡವು. ಉತ್ತರ ಪ್ರದೇಶದ ಗ್ರಂಥಾಲಯ

ಸಂಘ ಲೈಬ್ರರಿ ಕ್ರಾನಿಕಲ್ ಎಂಬ ಪತ್ರಿಕೆಯನ್ನು, ದೆಹಲಿ ಗ್ರಂಥಾಲಯ ಸಂಘ ಲೈಬ್ರರಿ ಹೆರಲ್ಡ್ ಎಂಬ ತ್ರೈಮಾಸಿಕವನ್ನು ಹೊರಡಿಸುತ್ತಿವೆ. 1958ರಿಂದ ಈಚೆಗೆ ದೆಹಲಿ ಗ್ರಂಥಾಲಯ ಸಂಘ ಗ್ರಂಥಾಲಯ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ. 1938ರಲ್ಲಿ ಸರ್ಕಾರದ ವಿವಿಧ ಶಾಖೆಗಳ ಗ್ರಂಥಾಲಯ ಸಂಘವೂ ಒಂದು ಉಗಮವಾಗಿ ಪ್ರಗತಿಯ ದಿಶೆಯಲ್ಲಿ ಕಾರ್ಯನಿರತವಾಗಿದೆ.

ಅಸ್ಸಾಮಿನಲ್ಲಿ 1954ರ ವರೆಗೂ ಹೇಳಿಕೊಳ್ಳುವಂಥ ಪ್ರಗತಿ ಆಗಿರಲಿಲ್ಲ. 1903ರಲ್ಲಿ ಸರ್ಕಾರಿ ಸಾರ್ವಜನಿಕ ಗ್ರಂಥಾಲಯವೊಂದು ರೂಪು ತಳೆಯಿತು. 1954ರಲ್ಲಿ ಷಿಲ್ಲಾಂಗ್‌ನಲ್ಲಿ ಕೇಂದ್ರೀಯ ಗ್ರಂಥಾಲಯ ಹಾಗೂ ಜಿಲ್ಲಾ ಮುಖ್ಯ ಪಟ್ಟಣಗಳಲ್ಲಿ ಏಳು ಜಿಲ್ಲಾ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು. 1957ರಲ್ಲಿ ಷಿಲ್ಲಾಂಗ್, ಗೌಹಾತಿ (ಗುಹಾವಟಿ), ತೇಜಪುರ, ನೌಗಾಂಗ್, ಸಿಲ್‌ಚೇರ್ ಹಾಗೂ ಜೋರಹಟ್‌ಗಳಲ್ಲಿ ಗ್ರಂಥಾಲಯಗಳಿಗಾಗಿ ಹೊಸ ಕಟ್ಟಡಗಳನ್ನು ಕಟ್ಟಿಸಲಾಯಿತು. ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಾಯ ಧನ ನೀಡಿದವು. 1960ರ ಸುಮಾರಿಗೆ ಎಲ್ಲ ಗ್ರಂಥಾಲಯಗಳೂ ಹೊಸ ಕಟ್ಟಡಗಳಿಗೆ ಸ್ಥಳಾಂತರಗೊಂಡವು. ಡುಬ್ರಿಯಲ್ಲಿಯ ಹಳೆಯ ಗ್ರಂಥಾಲಯವನ್ನು ಸರ್ಕಾರ ವಹಿಸಿಕೊಂಡು ಚೇತನ ನೀಡಿತು. 1955–56ರಲ್ಲಿ ನಾಲ್ಕು ಸಂಚಾರಿ ಗ್ರಂಥಾಲಯಗಳನ್ನೂ 170 ಸ್ವೀಕರಣ ಕೇಂದ್ರಗಳನ್ನೂ ಸ್ಥಾಪಿಸಲಾಯಿತು. 1967–68ರಲ್ಲಿ ಗೋಲಪಾರಾ, ಗೋಲಘಾಟ್, ಕರೀಮಗಂಜ್, ಉತ್ತರ ಲಾಖಿಮ್‌ಪುರ ಹಾಗೂ ಶಿವಸಾಗರಗಳಲ್ಲಿ ಉಪವಿಭಾಗೀಯ ಗ್ರಂಥಾಲಯಗಳನ್ನು ಸ್ಥಾಪಿಸಲಾಯಿತು. 1969–70ರಲ್ಲಿ ಇಂಥವೇ ಗ್ರಂಥಾಲಯಗಳನ್ನು ನಾಲಬಾರಿ, ಮಂಗಳ ಡೋಲು, ಬಾರಪೇಟಾ ಹೈಲಕಂಡಿ ಹಾಗೂ ಶೋತ್ರಾಝೂರ್ ಗಳಲ್ಲೂ ನೆಲೆಗೊಳಿಸಲಾಯಿತು. 1967–68ರಲ್ಲಿ ದೀಫ್, ತುರಾ, ದಾಫ್‌ಘರ್ ಹಾಗೂ ಜೋವಾಯಿಗಳಲ್ಲಿ ಗಿರಿ ಗ್ರಂಥಾಲಯಗಳನ್ನು (ಹಿಲ್ ಲೈಬ್ರರೀಸ್) ಸ್ಥಾಪಿಸಲಾಗಿದೆ. ಮೇಘಾಲಯ ರಾಜ್ಯ ರಚನೆಯಾದ ಮೇಲೆ ಇವುಗಳಲ್ಲಿ ತುರಾ ಹಾಗೂ ಜೋವಾಯಿಗಳ ಗ್ರಂಥಾಲಯಗಳು ಮೇಘಾಲಯಕ್ಕೆ ಸೇರಿವೆ. 1970ರಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಗ್ರಂಥಗಳು ಓದುಗರ ಕೈಸೇರಿದವೆಂದು ತಿಳಿದುಬಂದಿದೆ.

ಮೆಲ್ಕ್ ಆಬೆ ಗ್ರಂಥಾಲಯ, ಆಸ್ಟ್ರಿಯ

1918ರಲ್ಲಿ ಹುಟ್ಟಿ 1933 ರಲ್ಲಿ ಪುನಃ ಚೇತನಗೊಂಡ ಭಾರತೀಯ ಗ್ರಂಥಾಲಯಗಳ ಸಂಘ ಐಎಲ್‌ಎ ಗ್ರಂಥಾಲಯ ಚಳವಳಿಯಲ್ಲಿ ಗಮನಾರ್ಹ ಕೆಲಸ ಮಾಡಿದೆ. ಇದರ ವಿವರಗಳು ಭಾರತೀಯ ಗ್ರಂಥಾಲಯ ಸಂಘ ಶೀರ್ಷಿಕೆಯ ಅಡಿ ಬಂದಿವೆ.

1951ರ ಸರ್ವೇಕ್ಷಣೆಯ ಪ್ರಕಾರ ಭಾರತದಲ್ಲಿ 1166 ಗ್ರಂಥಾಲಯಗಳು ಇದ್ದವು. 1954ರಲ್ಲಿ ಈ ಸಂಖ್ಯೆ 32,000ಕ್ಕೆ ಏರಿತು. ದೇಶದಲ್ಲಿರುವ ಶೇ. 30 ಅಕ್ಷರಸ್ಥರಿಗೆ ಗ್ರಂಥಾಲಯ ಸೌಲಭ್ಯವನ್ನೊದಗಿಸಲು ಕೇಂದ್ರ ಗ್ರಂಥಾಲಯ 1, ರಾಜ್ಯ ಗ್ರಂಥಾಲಯಗಳು 22, ಪಟ್ಟಣ ಗ್ರಂಥಾಲಯಗಳು 154, ಪಟ್ಟಣ ಗ್ರಂಥಾಲಯ ಶಾಖೆಗಳು 712, ಗ್ರಾಮೀಣ ಗ್ರಂಥಾಲಯಗಳು 373, ಗ್ರಾಮೀಣ ಗ್ರಂಥಾಲಯ ಶಾಖೆಗಳು 4,100, ಸಂಚಾರಿ ಗ್ರಂಥಾಲಯಗಳು 13,107, ಬಿತ್ತರಣೆ ಕೇಂದ್ರಗಳು 2,68,361 – ಇಷ್ಟು ಅಗತ್ಯವೆಂದು ರಂಗನಾಥನ್ ಅವರ ಆಗ ಅಭಿಪ್ರಾಯ ಪಟ್ಟಿದ್ದರು.

1964ರಲ್ಲಿ ಯೋಜನಾ ಆಯೋಗದವರು ನಡೆಸಿದ ಸಮೀಕ್ಷೆಯ ಪ್ರಕಾರ 10,000 ಗ್ರಂಥಾಲಯಗಳಿರುವುದು ಗೊತ್ತಾಗಿದೆ. ಅಂದಿನ 12 ರಾಜ್ಯಗಳಲ್ಲಿ 12 ಕೇಂದ್ರ ಗ್ರಂಥಾಲಯಗಳು, 5 ಕೇಂದ್ರಾಡಳಿತ ಪ್ರದೇಶಗಳ ಗ್ರಂಥಾಲಯಗಳು, 205 ಜಿಲ್ಲಾ ಕೇಂದ್ರ ಗ್ರಂಥಾಲಯಗಳು, 1,394 ಬ್ಲಾಕ್ ಗ್ರಂಥಾಲಯಗಳು, 28,317 ಗ್ರಾಮೀಣ ಗ್ರಂಥಾಲಯಗಳು ಇದ್ದವೆಂದು ಹೇಳಲಾಗಿದೆ. ಇದೇ ಸಮೀಕ್ಷೆಯ ಪ್ರಕಾರ ಗ್ರಂಥಾಲಯಗಳ ಮೇಲಿನ ವೆಚ್ಚ ತಲಾ 3 ಪೈಸೆಗಳಂತೆ ಇತ್ತೆಂದು ಕಂಡುಬರುವುದು. ಈ ವೆಚ್ಚ ಇಂಗ್ಲೆಂಡಿನಲ್ಲಿ ತಲಾ 6 ರೂ., ಅಮೆರಿಕದಲ್ಲಿ ತಲಾ 12 ರೂ. ಇದ್ದುವು.

ಗ್ರಂಥಸಂಪತ್ತು : ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್ ಒಂದರಲ್ಲಿಯೇ ಹದಿನಾರು ಕೋಟಿಗೂ ಹೆಚ್ಚಿನ ಗ್ರಂಥಗಳಿವೆ. ಇದೀಗ ಭಾರತ ಸರ್ಕಾರ ಗ್ರಂಥಾಲಯ ಅಭಿವೃದ್ಧಿಯಲ್ಲಿ ಕಾರ್ಯೋನ್ಮುಖವಾಗಿದೆ. ದೇಶೀಯ ಭಾಷಾ ಸಾಹಿತ್ಯಗಳೂ ಬೆಳೆಯುತ್ತಿವೆ. ಒಂದು ಭಾಷೆಯ ಗ್ರಂಥ ಸಮೃದ್ಧಿ ಇನ್ನೊಂದು ಭಾಷೆಗೆ ತರ್ಜುಮೆಗೊಳ್ಳುತ್ತಿದೆ. ವಿಜ್ಞಾನ ಕ್ಷೇತ್ರದಲ್ಲಿ ದೇಶೀ ಭಾಷೆಗಳಲ್ಲಿ ಮಹತ್ತ್ವದ ಗ್ರಂಥಗಳು ಬರುತ್ತಿವೆ. ವೈದ್ಯ ಕ್ಷೇತ್ರದಲ್ಲೂ ಗಣನೀಯ ಗ್ರಂಥಗಳು ರಚನೆಗೊಳ್ಳುತ್ತಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿನ ಉತ್ತಮ ಗ್ರಂಥಗಳನ್ನು ಉಳಿದೆಲ್ಲ ಭಾರತೀಯ ಭಾಷೆಗಳಿಗೂ ಭಾಷಾಂತರಿಸಿ ಪ್ರಕಟಿಸುತ್ತಿದೆ. ಭಾರತದ ಶ್ರೇಷ್ಠ ಪ್ರಾಚೀನ ಸಾಹಿತ್ಯದ ಪುನರುಜ್ಜೀವನ, ಅರ್ವಾಚೀನ ಸಾಹಿತ್ಯದ ಶ್ರೇಷ್ಠ ಗ್ರಂಥಗಳ ಭಾಷಾಂತರ ಹಾಗೂ ಶ್ರೇಷ್ಠಮಟ್ಟದ ಸಾಹಿತ್ಯ ನಿರ್ಮಾಣಗಳ ಉದ್ದೇಶದಿಂದ 1957ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ ನಿರ್ಮಾಣಗೊಂಡಿದೆ. ಸದಭಿರುಚಿಯ ಸಾಹಿತ್ಯ ಹುಟ್ಟಬೇಕು ಹಾಗೂ ಬೆಳೆದು ಬಾಳಬೇಕೆಂಬ ಸ್ಥಿರವಾದ ನಿಲುವನ್ನು ಹೊಂದಿ ಈ ಸಂಸ್ಥೆ ಕೆಲಸ ಮಾಡುತ್ತಿದೆ.

ಭಾರತೀಯ ಭಾಷಾ ಸಾಹಿತ್ಯಗಳು ಬೆಳೆಯಬೇಕೆಂಬ ಉದ್ದೇಶದಿಂದ ವಿಶ್ವಕೋಶಗಳು ಹಾಗೂ ದ್ವಿಭಾಷಾ ಶಬ್ದಕೋಶಗಳು (ಬೈಲಿಂಗ್ವಲ್ ಡಿಕ್ಷನರೀಸ್) – ಮೊದಲಾದವುಗಳ ಪ್ರಕಾಶನದ ಮೇಲೆ ಖರ್ಚಿನಲ್ಲಿ 50ರಷ್ಟು ಹಣವನ್ನು ನೀಡುವ ಯೋಜನೆಯನ್ನು ಕೇಂದ್ರಸರ್ಕಾರ ಇಟ್ಟುಕೊಂಡಿತ್ತು. ಅಂತಾರಾಷ್ಟ್ರೀಯ ಗ್ರಂಥವರ್ಷದ ಅಂಗವಾಗಿ ದೆಹಲಿಯ ಜಾಗತಿಕ ಗ್ರಂಥ ಪ್ರದರ್ಶನವನ್ನು ನ್ಯಾಷನಲ್ ಬುಕ್ ಟ್ರಸ್ಟ್‌ನವರು ಅದ್ದೂರಿಯಾಗಿ ನಡೆಸಿದರು. ಮಕ್ಕಳಿಗಾಗಿ ಪ್ರತ್ಯೇಕವಾದ ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಸ್ಥಾಪಿತವಾಗಿದೆ. ಮಕ್ಕಳಲ್ಲಿ ಹುದುಗಿರುವ ಕಲೆ ಹಾಗೂ ಸಾಹಿತ್ಯ ಪ್ರತಿಭೆ ಅರಳಬೇಕೆಂಬುದು ಇದರ ಉದ್ದೇಶವಾಗಿದೆ. ಶಂಕರ್ಸ್ ವೀಕ್ಲಿಯ ಮುಖ್ಯಸ್ಥ ಶಂಕರ್ ಅವರ ನೇತೃತ್ವದಲ್ಲಿ ಮಕ್ಕಳಿಗಾಗಿ, ಮಕ್ಕಳಿಂದ ಗ್ರಂಥಗಳು ಸಿದ್ಧವಾಗಿವೆ.

ಯುರೋಪಿನ ಮೊದಲ ಸಾರ್ವಜನಿಕ ಗ್ರಂಥಾಲಯ, ಸೆಸೆನ, ಇಟಲಿ

ದಕ್ಷಿಣ ಭಾರತ ಗ್ರಂಥ ಉದ್ಯಮ ಸಂಸ್ಥೆ ಹಾಗೂ ದಕ್ಷಿಣ ಭಾಷೆಗಳ ಗ್ರಂಥನಿಧಿ ಎಂಬ ಎರಡು ಸಂಸ್ಥೆಗಳು ಫೋರ್ಡ್ ಫೌಂಡೇಷನ್ನಿನ ಸಹಾಯದಿಂದ ಹುಟ್ಟಿವೆ. ದಕ್ಷಿಣ ಭಾಗದ ಭಾಷೆಗಳಲ್ಲಿ ಘನವಾದ ಗ್ರಂಥಗಳು ಉತ್ಪಾದನೆಗೊಳ್ಳಬೇಕೆಂಬುದೇ ಈ ಸಂಸ್ಥೆಗಳ ಉದ್ದೇಶ. ಗ್ರಂಥ ಬೆಳವಣಿಗೆಗೆ ಯೋಜನೆಯೊಂದು ಅಮೆರಿಕ, ಇಂಗ್ಲೆಂಡ್ ಹಾಗೂ ರಷ್ಯ ಸರ್ಕಾರಗಳ ಸಹಕಾರದಿಂದ ಪ್ರಾರಂಭಗೊಂಡಿದ್ದವು. ಆಯಾ ರಾಷ್ಟ್ರಗಳಲ್ಲಿನ ಉನ್ನತಮಟ್ಟದ ಗ್ರಂಥಗಳ ಪುನರ್ಮುದ್ರಣವೇ ಇದರ ಧ್ಯೇಯವಾಗಿತ್ತು. ಈ ಯೋಜನೆಯ ಮೇರೆಗೆ ಅಮೆರಿಕದ 1100, ಇಂಗ್ಲೆಂಡಿನ 443 ಹಾಗೂ ರಷ್ಯದ 125 ಗ್ರಂಥಗಳು ಬೆಳಕು ಕಂಡಿವೆ. ಭಾರತಕ್ಕೆ ಸಂಬಂಧಿಸಿದಂತೆ ಈ ಯೋಜನೆಯನ್ನು ಪರಿಶೀಲಿಸಲು 1967ರಲ್ಲಿ ಭಾರತ ಸರ್ಕಾರ ರಾಷ್ಟ್ರೀಯ ಗ್ರಂಥ ಅಭಿವೃದ್ಧಿ ಮಂಡಳಿಯನ್ನು ನಿರ್ಮಾಣ ಮಾಡಿದೆ. ಗ್ರಂಥ ಸಂಪತ್ತಿಗಾಗಿ ಭಾರತ ಪರದೇಶಗಳತ್ತ ನೋಡದಂತಾಗಿ ಸ್ವಾವಲಂಬಿಯಾಗಬೇಕೆಂಬುದೇ ಈ ಎಲ್ಲ ಯೋಜನೆಗಳ ಮುಖ್ಯ ಗುರಿ.

(ನೋಡಿ: ಗ್ರಂಥಾಲಯ ಬೆಳವಣಿಗೆಯಲ್ಲಿ ಪ್ರಮುಖ ಘಟ್ಟಗಳಾಗಿರುವ ಭಾರತ ರಾಷ್ಟ್ರೀಯ ಗ್ರಂಥಾಲಯ ಮತ್ತು ದೆಹಲಿ ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ಪ್ರತ್ಯೇಕ ಲೇಖನಗಳಿವೆ).

ಗ್ರಂಥಾಲಯ ತೋರಣ : ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ 9 ರಾಜ್ಯ ಕೇಂದ್ರ ಗ್ರಂಥಾಲಯಗಳನ್ನು ಹಾಗೂ 148 ಜಿಲ್ಲಾ ಕೇಂದ್ರ ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದೆ. ಮುಂದಿನ ಯೋಜನೆಗಳಲ್ಲಿ ಮುಂಬಯಿ, ಮದ್ರಾಸುಗಳಲ್ಲಿ ಮತ್ತೆರಡು ರಾಷ್ಟ್ರೀಯ ಗ್ರಂಥಾಲಯಗಳನ್ನು ಯೋಜಿಸಲಾಯಿತು. ರಂಗನಾಥನ್ ಅವರ ಸೂಚನೆಯಂತೆ ಪಟ್ಟಣ ಗ್ರಂಥಾಲಯ, ಗ್ರಾಮೀಣ ಗ್ರಂಥಾಲಯ ಹಾಗೂ ಸಂಚಾರಿ ಗ್ರಂಥಾಲಯಗಳನ್ನು ಸ್ಥಾಪಿಸುವ ಯೋಜನೆ ಜಾರಿಗೆ ಬಂದಿದೆ.

ಕುರುಡರಿಗಾಗಿ ಗ್ರಂಥಾಲಯ : ಪ್ರತ್ಯೇಕ ಬ್ರೇಲ್ ಲಿಪಿಯ ಗ್ರಂಥಗಳಿಂದ ಕೂಡಿದ ಕುರುಡರ ರಾಷ್ಟ್ರೀಯ ಗ್ರಂಥಾಲಯ 1963ರಲ್ಲಿ ಡೆಹರಾಡೂನ್‌ನಲ್ಲಿ ಸ್ಥಾಪಿತವಾಗಿದೆ. ಇದು ಸಾವಿರಾರು ಕುರುಡರಿಗೆ ಟಪಾಲು ಮೂಲಕ ಗ್ರಂಥಗಳ ಸೇವೆಯನ್ನು ಉಚಿತವಾಗಿ ಸಲ್ಲಿಸುತ್ತಿದೆ.

1952ರಲ್ಲಿ ಅಸ್ತಿತ್ವಕ್ಕೆ ಬಂದ ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ (ಐಎನ್‌ಎಸ್‌ಡಿಓಸಿ) ಭಾರತದಲ್ಲಿ ಏರ್ಪಡಿಸುತ್ತಿರುವ ವೈದ್ಯಕೀಯ ಗ್ರಂಥಾಲಯಗಳು, ಭಾರತೀಯ ಸಮಾಜ ವಿಜ್ಞಾನ ಸಂಶೋಧನ ಸಂಸ್ಥೆ (1969), ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಮತ್ತು ಸಮಾಚಾರ ಕೇಂದ್ರಗಳ ಸಂಘ (1955) ಇವು ತಮ್ಮದೇ ಆದ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಿರುವ ಸಂಸ್ಥೆಗಳಾಗಿವೆ. ಇವುಗಳ ಕಾರ್ಯ ವಿವರಗಳನ್ನು ಇದೇ ಲೇಖನದಲ್ಲಿ ಬೇರೆಡೆ ನೀಡಿದೆ.

**ವಿಶ್ವವಿದ್ಯಾಲಯ ಧನ ಸಹಾಯ ಆಯೋಗ :** ವಿಶ್ವವಿದ್ಯಾಲಯಗಳ ಜೀವಾಳವಾದ ಗ್ರಂಥಾಲಯಗಳ ಏಳಿಗೆಗೆ ಹೆಚ್ಚಿನ ಗಮನ ನೀಡುತ್ತಿದೆ. ಗ್ರಂಥಾಲಯಗಳ ರಚನೆ ಹಾಗೂ ಬೆಳವಣಿಗೆಗಾಗಿ ಮುಕ್ತ ಹಸ್ತದಿಂದ ಸಹಾಯ ಧನ ನೀಡುತ್ತಿದೆ. ವಿವಿಧ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗಾಗಿ ಈ ಆಯೋಗದ ಧನ ಸಹಾಯದಿಂದ ಗ್ರಂಥಾಲಯ ಕಟ್ಟಡಗಳನ್ನು ಹೊಂದುವಂತಾಗಿದೆ; ಜೊತೆಗೆ ಅನೇಕ ಗ್ರಂಥಾಲಯ ಸೌಲಭ್ಯಗಳು ವಿಫುಲವಾಗಿ ಒದಗಿವೆ.

ಶಿಕ್ಷಣ ಶಾಖೆಯವರೂ ಗ್ರಂಥಾಲಯಗಳ ಬೆಳವಣಿಗೆಗೆ ಗಮನವೀಯುತ್ತಿದ್ದಾರೆ. ಅನೇಕ ಗ್ರಂಥಪಾಲರು ಹೆಚ್ಚಿನ ವ್ಯಾಸಂಗಕ್ಕೆ ಅಮೆರಿಕಕ್ಕೆ ಹೋಗಿ ಬಂದಿದ್ದಾರೆ. ಕೊಲಂಬೊ ಯೋಜನೆಯಲ್ಲಿ ಭಾರತಕ್ಕೆ ಯೋಗ್ಯ ಪಾಲು ದೊರೆತು, ವಿವಿಧ ದೇಶಗಳಿಂದ ಉಪಯುಕ್ತ ಗ್ರಂಥಗಳು ಭಾರತದ ವಿವಿಧ ವಿಶ್ವವಿದ್ಯಾಲಯಗಳಿಗೆ ದೊರೆಯುವಂತಾಗಿದೆ.

**ಸಂಪರ್ಕ ಗ್ರಂಥಾಲಯಗಳು :** ಅಮೆರಿಕ, ಬ್ರಿಟನ್ ಮೊದಲಾದ ದೇಶಗಳ ಸುದ್ದಿಸಂಸ್ಥೆಗಳು, ರಾಯಭಾರಿ ಕಚೇರಿಗಳು, ಬ್ರಿಟಿಷ್ ಕೌನ್ಸಿಲ್ ಗ್ರಂಥಾಲಯಗಳು ಮುಂತಾದವು ಭಾರತದ ಗ್ರಂಥಾಲಯ ಚಳವಳಿಗೆ ಪುಷ್ಟಿ ಕೊಟ್ಟಿವೆ. ಅಮೆರಿಕ ಸಾಂಸ್ಕೃತಿಕ ಕೇಂದ್ರ ಹಾಗೂ ಬ್ರಿಟಿಷ್ ಕೌನ್ಸಿಲ್ ಬೇರೆ ಬೇರೆ ನಗರಗಳಲ್ಲಿ ಗ್ರಂಥ ಪ್ರದರ್ಶನಗಳು, ವಿಚಾರ ಸಂಕಿರಣಗಳು ಮೊದಲಾದವನ್ನು ಏರ್ಪಡಿಸಿ ಗ್ರಂಥಾಲಯ ಚಳವಳಿಗೆ ಹೊಸ ಶಕ್ತಿಯನ್ನು ನೀಡಿವೆ.

**ಮಾಧ್ಯಮಿಕ ಶಾಲಾ ಗ್ರಂಥಾಲಯಗಳು :** ದೇಶದಲ್ಲಿಯ ಅನೇಕ ಮಾಧ್ಯಮಿಕ ಶಾಲೆಗಳಿಗೆ ಸರ್ಕಾರ ಗ್ರಂಥಾಲಯ ರಚನೆಗಾಗಿ ಧನ ಸಹಾಯ ನೀಡಿದೆ. ಲಕ್ಷ್ಮಣಸ್ವಾಮಿ ಮುದಲಿಯಾರರ ಮುಖಂಡತ್ವದಲ್ಲಿ ರಚನೆಗೊಂಡ ಸಮಿತಿ ಸಲ್ಲಿಸಿದ ವರದಿಯನ್ನು ಸರಿಸಿ ಪ್ರಮುಖ ಶಾಲೆಗಳಿಗೆ ಗ್ರಂಥಾಲಯ ಕಟ್ಟಲು ಧನ ಸಹಾಯ ದೊರಕಿತು. ಎಲ್ಲ ಮಾಧ್ಯಮಿಕ ಶಾಲೆಗಳ ಗ್ರಂಥಾಲಯಗಳಿಗೂ ಅಧಿಕೃತ ಮನ್ನಣೆ ನೀಡಿ ಅವನ್ನು ಬೆಳೆಸುವ ಯೋಜನೆ ಫಲಪ್ರದವಾಗಿದೆ.

ಗ್ರಂಥಾಲಯಗಳು ಬೆಳೆದಂತೆಲ್ಲ ಗ್ರಂಥಾಲಯ ಶಿಕ್ಷಣದ ಅಗತ್ಯ ಹೆಚ್ಚಾಗುತ್ತ ಬಂತು. ಭಾರತದಲ್ಲಿ ಗ್ರಂಥಾಲಯ ವಿಜ್ಞಾನ ಹೇಗೆ ಬೆಳೆದು ಬಂದಿತೆಂಬುದನ್ನು ಗ್ರಂಥಾಲಯ ವಿಜ್ಞಾನವೆಂಬ ಲೇಖನದಲ್ಲಿ ವಿವರಿಸಿದೆ.

**ಗ್ರಂಥಾಲಯ ಕಾಯದೆ :** ಕಾಯದೆಯ ಮೂಲಕವೂ ಗ್ರಂಥಾಲಯ ಚಳವಳಿಗೆ ಹೆಚ್ಚಿನ ಶಕ್ತಿ ನೀಡಲು 1930ರಲ್ಲಿ ರಂಗನಾಥನ್ ಅವರ ಅಧ್ಯಕ್ಷತೆಯಲ್ಲಿ ವಾರಾಣಸಿ ಅಧಿವೇಶನದಲ್ಲಿ ಕಾಯಿದೆ ಕರಡನ್ನು ತಯಾರಿಸಲಾಯಿತು. ಆದರೆ ಅದು ಕಾರ್ಯರೂಪಕ್ಕೆ ಬಂದದ್ದು 1948 ರಲ್ಲಿ. ಮದ್ರಾಸ್ ರಾಜ್ಯ 1948ರಲ್ಲಿ ಕಾಯದೆಯನ್ನು ಕಾರ್ಯರೂಪಕ್ಕೆ ತಂದ ಪ್ರಥಮ ರಾಜ್ಯವೆನ್ನಿಸಿಕೊಂಡಿತು. ಅನಂತರ ಆಂಧ್ರದಲ್ಲೂ 1956ರ ಅನಂತರ ಕರ್ನಾಟಕದಲ್ಲೂ ಅನಂತರ ಮಹಾರಾಷ್ಟ್ರ ರಾಜ್ಯದಲ್ಲೂ ಇತರೆಡೆಗಳಲ್ಲೂ ಈ ಕಾಯಿದೆ ಕಾರ್ಯರೂಪಕ್ಕೆ ಬಂದಿದೆ.

1957ರಲ್ಲಿ ಗ್ರಂಥಾಲಯಗಳ ಸೌಕರ್ಯ ಸುಧಾರಿಸುವ ಸಲುವಾಗಿ ಭಾರತ ಸರ್ಕಾರ ಟಿ. ಕೆ. ಸಿಂಹರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನಿಯಮಿಸಿತು. 1959ರಲ್ಲಿ ಈ ಸಮಿತಿ ತನ್ನ ವರದಿಯನ್ನು ಒಪ್ಪಿಸಿತು. ಈ ವರದಿಯ 25 ವರ್ಷಗಳ ಯೋಜನೆಯೊಂದನ್ನು ನೀಡಿದ್ದು ಅದು ದೆಹಲಿಯ ಕೇಂದ್ರ ಗ್ರಂಥಾಲಯದಿಂದ ತೊಡಗಿ ಗ್ರಾಮೀಣ ಗ್ರಂಥಾಲಯಗಳ ವರೆಗಿನ ಸಮಗ್ರ ಅಂಶಗಳನ್ನು ವಿವರವಾಗಿ ಪರಿಶೀಲಿಸಿತು. ಈ ಯೋಜನೆಯಂತೆ ಭಾರತದ ಗ್ರಂಥಾಲಯಗಳ ಸ್ವರೂಪ ಸಾಕಷ್ಟು ಸುಧಾರಣೆಗೊಂಡಿದೆ. **(ಕೆ.ಎಸ್.ಡಿಇ.)**

**ರಾಜಾರಾಮ್ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ :** ರಾಜಾರಾಮ್ ಮೋಹನ್‌ರಾಯರ ದ್ವಿಶತಮಾನೋತ್ಸವದ ಸಂದರ್ಭದಲ್ಲಿ (1972) ಭಾರತ ಸರ್ಕಾರ ಕಲ್ಕತ್ತ ನಗರದಲ್ಲಿ ಪ್ರಾರಂಭ ಮಾಡಿದ ಒಂದು ಸಂಸ್ಥೆ. ಅದೇ ವರ್ಷ ಭಾರತ ತನ್ನ ಸ್ವಾತಂತ್ರ್ಯೋತ್ಸವದ ಬೆಳ್ಳಿಹಬ್ಬವನ್ನು ಆಚರಿಸಿತಲ್ಲದೆ ಪ್ರಪಂಚಾದ್ಯಂತ ಅಂತಾರಾಷ್ಟ್ರೀಯ ಗ್ರಂಥೋತ್ಸವವೂ ನಡೆಯಿತು.

ರಾಷ್ಟ್ರಾದ್ಯಂತ ಗ್ರಂಥಾಲಯಗಳ ಬೆಳವಣಿಗೆ ಹಾಗೂ ಪೋಷಣೆಯನ್ನೇ ಪ್ರಮುಖ ಗುರಿಯನ್ನಾಗಿರಿಸಿಕೊಂಡ ಈ ಪ್ರತಿಷ್ಠಾನ ಕೆಳಗಿನ ಪ್ರಮುಖ ಧ್ಯೇಯಗಳನ್ನು ಹೊಂದಿದೆ: 1) ರಾಷ್ಟ್ರೀಯ ಗ್ರಂಥಾಲಯದ ತತ್ತ್ವಪ್ರಣಾಲಿಯನ್ನು ಪ್ರಾಂತೀಯ ಹಾಗೂ ಕೇಂದ್ರ ಸರ್ಕಾರಗಳ ಸಹಕಾರದ ಮೂಲಕ ಪ್ರಚುರಗೊಳಿಸುವುದು. 2) ರಾಷ್ಟ್ರೀಯ ಗ್ರಂಥಾಲಯ ಸೇವಾಪದ್ಧತಿಯನ್ನು ವೃದ್ಧಿಗೊಳಿಸಲು ರಾಷ್ಟ್ರೀಯ, ಪ್ರಾಂತೀಯ, ಜಿಲ್ಲಾ ಹಾಗೂ ಉಳಿದ ವಿಶಿಷ್ಟ ಗ್ರಂಥಾಲಯಗಳ ಸೇವೆಯನ್ನು ಕೇಂದ್ರೀಕರಿಸಿ ಅಂತರ ಗ್ರಂಥಾಲಯ ಎರವಲು ಸೌಲಭ್ಯವನ್ನೊದಗಿಸುವುದು. 3) ದೇಶದಾದ್ಯಂತ ಗ್ರಂಥಾಲಯ ಕಾನೂನನ್ನು ಜಾರಿಗೆ ತರಲಿಕ್ಕೆ ಪ್ರಚಾರ ಕೈಗೊಳ್ಳುವುದು. 4) ರಾಷ್ಟ್ರೀಯ ಬರೆಹಗಾರರ, ಪ್ರಕಾಶಕರ, ಹಂಚಿಕೆದಾರರ



**ಕ್ಯಾಟಲಾಗ್ ಕೊಠಡಿ, ಸ್ಟರ್ಲಿಂಗ್ ಮೆಮೋರಿಯಲ್ ಗ್ರಂಥಾಲಯ, ಯೇಲ್ ವಿಶ್ವವಿದ್ಯಾಲಯ**

ಹಾಗೂ ಗ್ರಂಥಾಲಯಗಳ ಸಹಕಾರದೊಂದಿಗೆ ದೇಶೀಯ ಹಾಗೂ ವಿದೇಶೀಯ ಗ್ರಂಥಗಳನ್ನು ಪಡೆಯುವಲ್ಲಿ ಏಕರೂಪತೆಯನ್ನು ಸಾಧಿಸಲು ಯತ್ನಿಸುವುದು. 5) ಸಹಕಾರಿ ಸಂಘಗಳನ್ನು ಸಂಸ್ಥಾಪಿಸಿ ತನ್ಮೂಲಕ ಭಾರತೀಯ ಗ್ರಂಥಗಳನ್ನು ಗ್ರಂಥಾಲಯ ಆವೃತ್ತಿಗಳಲ್ಲಿ ಹೆಚ್ಚು ಹೆಚ್ಚಾಗಿ ಹೊರತರಲಿಕ್ಕೆ ಪ್ರಕಾಶಕರನ್ನು ಪ್ರೋತ್ಸಾಹಿಸುವುದು. 6) ಇನ್ನಿತರ ಗ್ರಂಥಾಲಯಗಳ ನೆರವಿನಿಂದ, ಭಾರತೀಯ ಪ್ರಕಟಣೆಗಳ ಕೇಂದ್ರೀಯ ಗ್ರಂಥಸೂಚಿಯ ಮುದ್ರಿತ ಕಾರ್ಡುಗಳನ್ನು, ಇಚ್ಛಿಸುವ ಗ್ರಂಥಾಲಯಗಳಿಗೆ ಸರಬರಾಜು ಮಾಡಲು ಯತ್ನಿಸುವುದು. 7) ಗ್ರಂಥಾಲಯಗಳಿಗೆ ತಾಂತ್ರಿಕ ಹಾಗೂ ಆರ್ಥಿಕ ಸಹಾಯವನ್ನೀಯುವುದು. 8) ಗ್ರಂಥಾಲಯದ ಬೆಳವಣಿಗೆಗಾಗಿ ಸೇವೆಗೈಯುವ ಯಾವುದೇ ಸಂಸ್ಥೆಗೆ ಆರ್ಥಿಕ ಸಹಾಯವನ್ನೀಯುವುದು. 9) ರಾಷ್ಟ್ರೀಯ ಅಥವಾ ಪ್ರಾಂತೀಯ ಗ್ರಂಥಾಲಯ ಸಂಘಗಳಿಗೆ ತಮ್ಮ ಧ್ಯೇಯ ಧೋರಣೆಗಳನ್ನು ಸುಗಮಗೊಳಿಸುವುದಕ್ಕಾಗಿ ಆರ್ಥಿಕ ಸಹಾಯವನ್ನು ನೀಡುವುದು. 10) ದೇಶದಲ್ಲಿಯ ಗ್ರಂಥಾಲಯ ಬೆಳವಣಿಗೆಯನ್ನು ಕುರಿತು ಆಗಾಗ ಪರಿಶೀಲನೆಯನ್ನು ನಡೆಸುವುದು. 11) ದೇಶದ ಗ್ರಂಥಾಲಯಗಳು ಹೊಂದಿರುವ ಎಲ್ಲ ಗ್ರಂಥಗಳ ರಾಷ್ಟ್ರೀಯ ಸಂಯುಕ್ತ ಗ್ರಂಥಸೂಚಿಯ ತಯಾರಿಕೆಗೆ ಪ್ರೋತ್ಸಾಹವನ್ನೀಯುವುದು. 12) ಮುದ್ರಿತ ಗ್ರಂಥಗಳ ಇಲ್ಲವೆ ಹಸ್ತಪ್ರತಿಗಳ ನಕಲುಗಳನ್ನು

ಪೂರೈಸುವುದಕ್ಕಾಗಿ, ಉಪಯುಕ್ತ ಗ್ರಂಥಗಳ ಸಂರಕ್ಷಣೆಯ ಕಾರ್ಯವೆಸಗುವುದಕ್ಕಾಗಿ ದೇಶದಲ್ಲಿ ಪ್ರಾಂತೀಯ ಗ್ರಂಥಾಲಯ ಸೇವಾಕೇಂದ್ರಗಳನ್ನು ಸ್ಥಾಪಿಸುವುದು. 13) ವಿಷಯ ಸೂಚಿಗಳನ್ನು ಹಾಗೂ ಪ್ರಲೇಖನಗಳ ಯಾದಿಗಳನ್ನು ತಯಾರಿಸಿ ಪ್ರಕಟಿಸಲು ಪ್ರೋತ್ಸಾಹವನ್ನೀಯುವುದು. 14) ಗ್ರಂಥಾಲಯ ಚಳವಳಿಯ ವ್ಯಾಪಕ ಹಾಗೂ ತೀವ್ರ ಪ್ರಸಾರಕ್ಕೋಸ್ಕರ ಭಾರತ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡುವುದು. 15) ಪದವೀಧರ ಗ್ರಂಥಪಾಲರು ಹಾಗೂ ಅವರ ವಿಷಯ ಪ್ರಾವೀಣ್ಯವನ್ನು ಕುರಿತು ರಾಷ್ಟ್ರೀಯ ಯಾದಿಯನ್ನು ತಯಾರಿಸುವುದು. 16) ಗ್ರಂಥಾಭಿವೃದ್ಧಿಯ ಕಾರ್ಯದಲ್ಲಿ ತಲೆದೋರುವ ಸಮಸ್ಯೆಗಳ ಬಗೆಗಿನ ಸಂಶೋಧನೆಗೆ ಪ್ರೋತ್ಸಾಹವನ್ನೀಯುವುದು.

ದೇಶದ ಪ್ರತಿಹಳ್ಳಿಯ ಪ್ರತಿಯೊಬ್ಬನಿಗೂ ಓದುವ ಸೌಲಭ್ಯ ದೊರಕಿ ಜ್ಞಾನ ಪ್ರಸಾರವುಂಟಾಗಿ ಅಜ್ಞಾನದಿಂದ ಜ್ಞಾನದತ್ತ ದೇಶವು ಪ್ರಗತಿಪಥದಲ್ಲಿ ಮುನ್ನಡೆ ಯುವಂತಾಗಲಿಕ್ಕೆ ಅವಿರತ ಶ್ರಮಿಸುವ ಈ ಗ್ರಂಥಾಲಯ ಪ್ರತಿಷ್ಠಾನದ ಸ್ಥಾಪನೆ ನಿಜವಾಗಿಯೂ ಶ್ಲಾಘನೀಯವಾಗಿದೆಯಲ್ಲದೆ ನಾಡಿನ ಅಜ್ಞಾನವನ್ನು ತೊಲಗಿಸಲು ಸತತ ಪ್ರಯತ್ನ ನಡೆಸಿದ ದೇಶಭಕ್ತ ರಾಜಾರಾಮ್ ಮೋಹನ್‌ರಾಯರಿಗೆ ಉಚಿತವಾದ ಸ್ಮಾರಕವೂ ಆಗಿದೆ. (ಸಿ.ಪಿ.ಎಚ್.)

**3 ಕರ್ನಾಟಕದಲ್ಲಿ ಗ್ರಂಥಾಲಯಗಳು :** ಇತರ ದೇಶಗಳಲ್ಲಿ ಹೇಗೋ ಹಾಗೆ ಕನ್ನಡ ನಾಡಿನಲ್ಲೂ ಆಯಾ ಕಾಲದ ರಾಜಮನೆತನದವರ ಪ್ರೋತ್ಸಾಹ ಹಾಗೂ ಜನತೆಯ ಆಶಯಗಳಿಗೆ ತಕ್ಕಂತೆ ಗ್ರಂಥಗಳ ರಚನೆ, ಪೋಷಣೆ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳು ಹಿಂದಿನಿಂದ ನಡೆದುಬರುತ್ತಿವೆ. ಕದಂಬ, ರಾಷ್ಟ್ರಕೂಟ, ಚಾಳುಕ್ಯ, ಸೇವುಣ, ಹೊಯ್ಸಳ, ವಿಜಯನಗರದ ಅರಸರು, ಮೈಸೂರು ಒಡೆಯರು ಮುಂತಾದ ಅರಸು ಮನೆತನದವರು




ಸಾಹಿತ್ಯಪ್ರಿಯರೂ ವಿದ್ಯಾಭಿಮಾನಿಗಳೂ ಆಗಿದ್ದು ತಮ್ಮ ಆಳಿಕೆಯ ಉನ್ನತಿಯ ಕಾಲದಲ್ಲಿ ಶ್ರೇಷ್ಠ ವಿದ್ಯಾಲಯಗಳನ್ನೂ ಗ್ರಂಥಾಲಯಗಳನ್ನೂ ಕಟ್ಟಿ ಪೋಷಿಸಿದರು. ಅನೇಕ ವಿಶ್ವವಿದ್ಯಾಲಯಗಳೂ ಗ್ರಂಥಾಲಯಗಳೂ ಉನ್ನತಿಯನ್ನು ಹೊಂದಿದ್ದವೆಂಬುದಕ್ಕೆ ಶಾಸನಾಧಾರ ಉಂಟು. ತಾಳಗುಂದ, ಪಾವಿಟ್ಟಿಗೆ (ಸಾಲೊಟಗಿ), ನಾಗಾವಿ, ಬಳ್ಳಿಗಾವೆ, ಕುಪಟೂರು, ಐಹೊಳೆಗಳಲ್ಲಿ ಉತ್ತಮ ಗ್ರಂಥಾಲಯುಗಳನ್ನೊಳಗೊಂಡ ವಿಶ್ವವಿದ್ಯಾಲಯಗಳಿದ್ದುವೆಂದು ತಿಳಿದುಬಂದಿದೆ. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಾಲೊಟಗಿ ಗ್ರಾಮ ಹಿಂದೆ ಪಾವಿಟ್ಟಿಗೆಯೆಂದು ಹೆಸರಾಗಿತ್ತು. 10ನೆಯ ಶತಮಾನದಲ್ಲಿ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಮಂತ್ರಿಯಾಗಿದ್ದ ಚಕ್ರಾಯುಧಬುಧನೆಂಬಾತ ತನ್ನ ಆಳಿಕೆಯಲ್ಲಿದ್ದ ಪಾವಿಟ್ಟಿಗೆಯ ವಿಶ್ವವಿದ್ಯಾಲಯಕ್ಕಾಗಿ 123 ಮತ್ತರು ಭೂಮಿಯನ್ನು ವಿದ್ಯಾರ್ಥಿಗಳ ವಸತಿಗಾಗಿ 27 ಭವ್ಯ ಭವನಗಳನ್ನೂ ಬಿಟ್ಟುಕೊಟ್ಟ (945). ನಾಗಾವಿಯ ತ್ರಿಪುರೇಶ್ವರ ದೇವರ ಗುಡಿಯಲ್ಲಿ ಒಂದು ವಿಶ್ವವಿದ್ಯಾಲಯವಿತ್ತು. ಚಾಳುಕ್ಯ ತ್ರೈಲೋಕ್ಯಮಲ್ಲದೇವನ ಮಾಂಡಲೀಕನೂ ಕೋಳೂರಿನ ಅಧಿಪತಿಯೂ ಆಗಿದ್ದ ಅಯ್ಯರಸನೆಂಬಾತ ನಾಗಾವಿಯ ವಿಶ್ವವಿದ್ಯಾಲಯಕ್ಕೆ 350 ಮತ್ತರು ಭೂಮಿಯನ್ನು ದತ್ತಿಯಾಗಿ ಕೊಟ್ಟ (1058). ಈ ಸಮಯದಲ್ಲಿ ವಿಶ್ವವಿದ್ಯಾಲಯದಲ್ಲಿ 200 ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರಿಗೆ ವ್ಯಾಸಂಗ ಮಾಡಿಸಲು ತಜ್ಞ ಗುರುಗಳಿದ್ದರಲ್ಲದೆ ಆರು ಜನ ಗ್ರಂಥಪಾಲರೂ ಇದ್ದರೆಂಬ ವಿವರಣೆ ದೊರೆಯುತ್ತದೆ. ಅಯ್ಯರಸನ ದೇಣಿಗೆಯಲ್ಲಿ ಪ್ರತಿಯೊಬ್ಬ ಗ್ರಂಥಪಾಲನಿಗೆ 22 ಮತ್ತರಿನಷ್ಟು ಭೂಮಿಯನ್ನು ಹಂಚಲಾಗಿತ್ತಂತೆ. ಬಿಜಾಪುರ ಜಿಲ್ಲೆಯ ಐಹೊಳೆ ಎಂಬಲ್ಲಿ 5–6ನೆಯ ಶತಮಾನದಲ್ಲಿ ಒಂದು ವಿಶ್ವವಿದ್ಯಾಲಯವಿತ್ತು. ಇಲ್ಲಿ ವಿದ್ಯಾಭ್ಯಾಸ ಮಾಡಿಸಲು 500 ಜನ ಪಂಡಿತರಿದ್ದರೆಂದ ಮೇಲೆ ವಿಶ್ವವಿದ್ಯಾಲಯದ ಜೀವಾಳವಾದ ಗ್ರಂಥಾಲಯ ಎಷ್ಟು ದೊಡ್ಡದಿದ್ದಿರಬೇಕೆಂಬುದನ್ನು ಊಹಿಸಿಕೊಳ್ಳಬಹುದು.

ಇವುಗಳಲ್ಲದೆ ಅನೇಕ ಗುರುಮಠಗಳಲ್ಲಿ ಅಮೂಲ್ಯವಾದ ಕೈಬರೆಹಗಳ ಪ್ರತಿಗಳ ಅಪಾರ ಸಂಗ್ರಹಗಳೂ ಇದ್ದುವು. ಬಸವೇಶ್ವರರ ಕಾಲದಲ್ಲಿದ್ದ ವಚನಭಂಡಾರಿ ಶಾಂತರಸ ಸಾರ್ವಜನಿಕರಿಗಾಗಿ ತನ್ನ ಸ್ವಂತ ಗ್ರಂಥಭಂಡಾರವನ್ನು ಮುಕ್ತವಾಗಿಟ್ಟಿದ್ದನೆನ್ನಲು ಆಧಾರಗಳಿವೆ. ಇಂದಿಗೂ ಅನೇಕ ಗುಡಿ, ಬಸದಿ ಹಾಗೂ ಮಠ ಮಾನ್ಯಗಳಲ್ಲಿ ಕೈಬರೆಹದ, ತಾಳೆಗರಿಯ ಗ್ರಂಥಸಂಗ್ರಹವಿರುವುದು ಈ ಮಾತಿಗೆ ಸಾಕ್ಷಿಯಾಗಿದೆ. ವೀರಶೈವ ಮಠಗಳಾದ ಯಕ್ಕುಂಡಿಯ ವಿರಕ್ತಮಠ, ಬಾದಾಮಿಯ ಶಿವಯೋಗೀಶ್ವರ ಮಠಗಳಲ್ಲಿ ಅನುಕ್ರಮವಾಗಿ 300 ಹಾಗೂ 600 ಹಸ್ತಪ್ರತಿಗಳ ಸಂಗ್ರಹಗಳಿವೆ. ವೈಷ್ಣವರ ಉತ್ತರಾದಿ ಮಠದಲ್ಲಿ ಇಂದಿಗೂ ನಾಲ್ಕು ಚಕ್ಕಡಿಗಳಲ್ಲಿ ತುಂಬಬಹುದಾದಷ್ಟು ಹಸ್ತಪ್ರತಿಗಳ ಸಂಗ್ರಹವಿದೆ. ದಕ್ಷಿಣಕನ್ನಡ ಜಿಲ್ಲೆಯ ಮೂಡಬಿದರೆಯಲ್ಲಿ ಹಾಗೂ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಜೈನಧರ್ಮಕ್ಕೆ ಸಂಬಂಧಪಟ್ಟ ಅನೇಕ ಅಮೂಲ್ಯ ಹಸ್ತಪ್ರತಿಗಳ ಸಂಗ್ರಹವಿದೆ.

ವಿಜಯನಗರದ ಅರಸರೂ ಬಿಜಾಪುರದ ಆದಿಲ್‌ಷಹನೂ ಉತ್ತಮ ಗ್ರಂಥಾಲಯ ಗಳನ್ನು ಕಟ್ಟಿ ಪೋಷಿಸಿದರು. ಬುಕ್ಕರಾಜ ಪೌರಾಣಿಕ ಕವಿ ಕೃಷ್ಣಭಟ್ಟನಿಗೆ ಶೃಂಗೇರಿಯ ಮಠವೊಂದರಲ್ಲಿದ್ದ ಗ್ರಂಥಾಲಯದ ಪುನರುಜ್ಜೀವನಕ್ಕಾಗಿ ಭೂಮಿಯನ್ನು ದಾನವಾಗಿ ಕೊಟ್ಟನೆನ್ನಲಾಗಿದೆ. ವಿಜಯನಗರದ ಪತನದ ಅನಂತರ ಕೊಂಚ ಕಾಲ ವಿದ್ಯಾಸಂಸ್ಥೆಗಳ ಅಭಿವೃದ್ಧಿಯೂ ಇಳಿಮುಖವಾಯಿತು.

ಕರ್ನಾಟಕದ ಕೇಂದ್ರ ಗ್ರಂಥಾಲಯ, ಬೆಂಗಳೂರು

ಬಹಮನಿ ಅರಸರು ಕೂಡ ಉತ್ತಮ ಗ್ರಂಥಾಲಯವನ್ನು ಕಟ್ಟಿಸಿಕೊಂಡಿದ್ದರು. ಅವರ ಪ್ರಸಿದ್ಧ ಮಂತ್ರಿ ಮಹಮೂದ್ ಗಾವಾನ್ ಕಟ್ಟಿಸಿದ ಗ್ರಂಥಾಲಯ ಇಂದಿಗೂ ಬೀದರಿನಲ್ಲಿದೆ. ಇದರಲ್ಲಿಯ ಗ್ರಂಥಗಳನ್ನು ಔರಂಗಜೇಬ್ ತನ್ನ ಗ್ರಂಥಾಲಯಕ್ಕೆ ಸೇರಿಸಿಕೊಂಡ. ಟಿಪ್ಪುಸುಲ್ತಾನ್ ಒಳ್ಳೆಯ ಗ್ರಂಥಾಲಯವನ್ನು ಬೆಳೆಸಿದ್ದ. ಇದರಲ್ಲಿ 2000 ಕ್ಕೂ ಹೆಚ್ಚು ಧಾರ್ಮಿಕ ಹಾಗೂ ಇತರ ಗ್ರಂಥಗಳಿದ್ದವು. ಆಗಿನ ಕಾಲಕ್ಕೆ ಸುಮಾರು

9000 ರೂಪಾಯಿ ಬೆಲೆಯುಳ್ಳ ಔರಂಗಜೇಬನ ಕುರಾನ್ ಈ ಗ್ರಂಥಾಲಯದಲ್ಲಿತ್ತು. ಜೀರ್ಣವಾಗುತ್ತಿದ್ದ ಗ್ರಂಥಗಳಿಗೆ ಬಿಗಿಯಾದ ರಟ್ಟು ಕಟ್ಟಿಸುವಲ್ಲಿ ಟಿಪ್ಪು ಹೆಚ್ಚು ಆಸ್ಥೆಯನ್ನು ತೋರಿಸುತ್ತಿದ್ದನೆನ್ನಲಾಗಿದೆ. ಅಖಂಡವಾಗಿದ್ದ ಕನ್ನಡನಾಡು ಬ್ರಿಟಿಷರ ಕಾಲದಲ್ಲಿ ಐದು ಭಾಗಗಳಾಗಿ ಒಡೆದು ಹೋಯಿತು.

19ನೆಯ ಶತಮಾನದಲ್ಲಿ ಮುಂಬಯಿ ಕರ್ನಾಟಕದ ಭಾಗದಲ್ಲಂತೂ ಕನ್ನಡದ ಸ್ಥಾನ ತೀರ ಗೌಣವಾಗಿತ್ತು. ಮರಾಠಿಯ ಪ್ರಾಬಲ್ಯವೇ ಹೆಚ್ಚಾಗಿತ್ತು. 1826ರ ಹೊತ್ತಿಗೆ ಹುಬ್ಬಳ್ಳಿ, ಧಾರವಾಡಗಳಲ್ಲಿದ್ದ ಪ್ರಾಥಮಿಕ ಶಾಲೆಗಳು ಮರಾಠಿಯವಾಗಿದ್ದವು. 1836ರಲ್ಲಿ ರಾಣಿಬೆನ್ನೂರಿನಲ್ಲೊಂದು ಕನ್ನಡ ಪ್ರಾಥಮಿಕ ಶಾಲೆ ಏರ್ಪಟ್ಟಿತು. 1848ರಲ್ಲಿ ಧಾರವಾಡದಲ್ಲಿ ಪ್ರಾರಂಭವಾದ ಮಾಧ್ಯಮಿಕ ಶಾಲೆ ಆ ವಿಭಾಗದಲ್ಲಿಯೇ ಪ್ರಪ್ರಥಮವಾದದ್ದು. 1867ರಲ್ಲಿ ಹೆಣ್ಣು ಮಕ್ಕಳಿಗಾಗಿಯೂ ಒಂದು ಮಾಧ್ಯಮಿಕ ಶಾಲೆ ಧಾರವಾಡದಲ್ಲಿ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಗ್ರಂಥಾಲಯಗಳ ಆವಶ್ಯಕತೆ ತಲೆದೋರಿತು. ಧಾರವಾಡ ವಿಭಾಗದಲ್ಲಿಯಂತೆ ಬೆಳಗಾಂವಿ ಹಾಗೂ ಬಿಜಾಪುರ ವಿಭಾಗಗಳಲ್ಲಿ, ಕಾರವಾರ ವಿಭಾಗದಲ್ಲಿ ಅಲ್ಲಲ್ಲಿ ಈ ಅವಧಿಯಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳೂ ಪ್ರಾರಂಭವಾದವು. 1835ರಲ್ಲಿ ಬೆಳಗಾಂವಿಯಲ್ಲಿ ಒಂದು ಮಾಧ್ಯಮಿಕ ಶಾಲೆಯೂ ಪ್ರಾರಂಭಿಸಲ್ಪಟ್ಟಿತು. ಆದರೂ ಕನ್ನಡದ ಪ್ರಭಾವ ದಟ್ಟವಾಗಿ ತೋರಲು ಮತ್ತೂ ವೇಳೆ ಹಿಡಿಯಿತು. ರಸೆಲ್, ಡೆಪ್ಯುಟಿ ಚನ್ನಬಸಪ್ಪ, ವೆಂಕಟ ರಂಗೋಕಟ್ಟಿ, ರೊದ್ದ ಶ್ರೀನಿವಾಸರಾವ್, ರಾ. ಹ. ದೇಶಪಾಂಡೆ ಮುಂತಾದ ಮಹನೀಯರು ಕನ್ನಡದ ಶ್ರೇಯೋನ್ನತಿಗಾಗಿ ಆ ಕಾಲದಲ್ಲಿ ಹೆಚ್ಚಿನ ಪ್ರಯತ್ನ ಮಾಡಿದರು. ಅಂಥವರ ಪ್ರಯತ್ನದಿಂದ ಕನ್ನಡದ ಪ್ರಭಾವ ಏರತೊಡಗಿ ಕನ್ನಡ ಶಾಲೆಗಳು ತಲೆಯೆತ್ತಿದವು. ಅವುಗಳಲ್ಲಿ ಪಠ್ಯಪುಸ್ತಕಗಳ ಕೊರತೆ ನೀಗಲು ಸರ್ಕಾರದ ಪರವಾಗಿ ಮುಂಬಯಿಯಲ್ಲಿ ಎಜುಕೇಷನ್ ಸೊಸೈಟಿಯ ಮುದ್ರಣಾಲಯದವರು ಕನ್ನಡ ಪುಸ್ತಕಗಳನ್ನು ಅಚ್ಚು ಮಾಡತೊಡಗಿದರು. ಬಾಸೆಲ್ ಮಿಶನ್‌ರವರು ಮಂಗಳೂರಿನಲ್ಲಿ ಕನ್ನಡದ ಅಚ್ಚು ಮೊಳೆಗಳನ್ನು ಹೊಂದಿದ ಮುದ್ರಣಾಲಯವನ್ನು ಪ್ರಾರಂಭಿಸಿದರು. ಆದರೂ ಸಾಗಾಟದ ಸೌಲಭ್ಯ ಇರಲಿಲ್ಲವಾಗಿ ವೆಂಕಟ ರಂಗೋಕಟ್ಟಿಯವರು ಧಾರವಾಡದಲ್ಲಿಯೇ ಜ್ಞಾನವರ್ಧಕ ಪ್ರೆಸ್ಸನ್ನು ಪ್ರಾರಂಭಿಸಿದರು. ಬೆಳಗಾಂವಿಯಲ್ಲಿ ರಾಮತತ್ತ್ವ ಪ್ರಕಾಶನ ಸಂಸ್ಥೆ ಜನ್ಮ ತಾಳಿತು. ಹೀಗೆ ಮುದ್ರಣ ಸೌಲಭ್ಯದ ಪ್ರಗತಿಯಿಂದಾಗಿ ಕನ್ನಡದಲ್ಲಿ ಗ್ರಂಥಗಳು ತಲೆದೋರತೊಡಗಿ ಗ್ರಂಥಾಲಯ ಚಳವಳಿಗೆ ಹೊಸ ಚೇತನ ಮೂಡಿತು.

ಈ ಸಂಧಿಕಾಲದಲ್ಲಿ ಗ್ರಂಥಾಲಯ ಚಳವಳಿಯನ್ನು ಕೈಗೆತ್ತಿಕೊಂಡು ನಡೆಸಲು ಕಾರಣವಾದ ಘಟನೆಗಳನ್ನು ಈ ರೀತಿ ನಿರೂಪಿಸಬಹುದು.

1. ಉತ್ತರ ಕರ್ನಾಟಕ ವಿಭಾಗ : ಧಾರವಾಡ, ಬೆಳಗಾಂವಿ ಮುಂತಾದ ಜಿಲ್ಲಾ ಕೇಂದ್ರಗಳಲ್ಲಿ ದೇಶೀಯ ಸಾಮಾನ್ಯ ಗ್ರಂಥಾಲಯಗಳು ಸ್ಥಾಪನೆಗೊಂಡವು. ಧಾರವಾಡದ ಗ್ರಂಥಾಲಯ ಎಲ್.ಎಸ್. ನಾಗಪೂರಕರರಿಂದ ಸ್ಥಾಪಿತವಾಯಿತು (1854). ಅಲ್ಲಿ 1882ರ ಸುಮಾರಿಗೆ 414 ಇಂಗ್ಲಿಷ್, 90 ಮರಾಠಿ ಹಾಗೂ 7 ಕನ್ನಡ ಗ್ರಂಥಗಳಿದ್ದವು. ಈ ಗ್ರಂಥಾಲಯ ಇಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಹಸ್ತಾಂತರಗೊಂಡು ಸುಸಜ್ಜಿತವಾದ ನಗರಕೇಂದ್ರ ಗ್ರಂಥಾಲಯವಾಗಿ ಕಾರ್ಯನಿರ್ವಹಿಸುತ್ತಿದೆ.

2. ಕ್ರಮೇಣ ಕಾರವಾರ, ಕುಮಟ ಹಾಗೂ ಕುಂದಗೋಳ ಮುಂತಾದ ಊರುಗಳಲ್ಲಿ ಜ್ಯೂಬಿಲಿ ಗ್ರಂಥಾಲಯಗಳು ಸ್ಥಾಪನೆಗೊಂಡವು. 1865ರಲ್ಲಿ ಹುಬ್ಬಳ್ಳಿಯಲ್ಲಿ, 1873ರಲ್ಲಿ ರಾಣಿಬೆನ್ನೂರಿನಲ್ಲಿ, 1881ರಲ್ಲಿ ಶಿರಹಟ್ಟಿಯಲ್ಲಿ, 1876ರಲ್ಲಿ ಗದಗಿನಲ್ಲಿ ಪ್ರಾರಂಭಗೊಂಡ ಗ್ರಂಥಾಲಯಗಳೂ ಚೇತನಗೊಂಡವು. ಬಿ.ಜಿ. ಖೇರ್ ಅವರಿಂದ ಸ್ಥಾಪನೆಗೊಂಡ ಕುಂದಗೋಳದ ಗ್ರಂಥಾಲಯದಲ್ಲಿ ಸುಮಾರು 3490 ಗ್ರಂಥಗಳಿದ್ದವು. ಬೆಳಗಾಂವಿ ನೇಟಿವ್ ಜನರಲ್ ಲೈಬ್ರರಿ ಎಂದು ಕರೆಯಲ್ಪಡುವ ಗ್ರಂಥಾಲಯ 1848ರಲ್ಲಿ ಅಂದಿನ ಬೆಳಗಾಂವಿಯ ಕಲೆಕ್ಟರ್ ಜೆ.ಟಿ. ಇನ್‌ವರಾರಿಟಿಯವರಿಂದ ಸ್ಥಾಪನೆಗೊಂಡ ದೇಶೀಯ ಗ್ರಂಥಾಲಯ. ಇದರ ಪ್ರಭಾವದಿಂದಾಗಿ ಅಂದು ಗೋಕಾಕ (1865), ಅಥಣಿ (1865), ಚಿಕ್ಕೋಡಿ (1866), ಸಂಪಗಾಂವ (1866), ಖಾನಾಪುರ (1868), ಸವದತ್ತಿ (1870), ನಿಪ್ಪಾಣಿ (1875) ಮುಂತಾದ ಊರುಗಳಲ್ಲಿ ವಾಚನಾಲಯಗಳು ತಲೆದೋರಿದವು.

ಬಿಜಾಪುರ ವಿಭಾಗದಲ್ಲಿ ಬಿಜಾಪುರ, ಬಾಗಲಕೋಟೆ, ಬೀಳಗಿ, ಕಲಾದಗಿ, ಬಾಗೇವಾಡಿ, ಮುದ್ದೇಬಿಹಾಳ ಮೊದಲಾದ ಊರುಗಳಲ್ಲಿ ಸ್ಥಾಪನೆಗೊಂಡ ಗ್ರಂಥಾಲಯಗಳು ಶಾಶ್ವತ ನಿಧಿಯ ಬಡ್ಡಿಯ ಹಣದಿಂದ ಇಲ್ಲವೆ ಚಂದಾದಾರರ ನೆರವು ಹಾಗೂ ಮುನಿಸಿಪಾಲಿಟಿಗಳ ಧನ ಸಹಾಯದಿಂದ ನಡೆಸಲ್ಪಡುತ್ತಿದ್ದವು.

ಕಾರವಾರ ವಿಭಾಗ ಈ ದೃಷ್ಟಿಯಿಂದ ಮಂದಗತಿಯಲ್ಲಿ ಸಾಗಿತ್ತು. 1880ರಲ್ಲಿ ಕಾರವಾರ, ಕುಮಟ, ಹಳಿಯಾಳ ಹಾಗೂ ಶಿರಸಿಗಳಲ್ಲಿ ಮಾತ್ರ ಗ್ರಂಥಾಲಯಗಳು ನೆಲೆಗೊಂಡವು. 1948 ರಲ್ಲಿ ಜಿಲ್ಲಾ ಗ್ರಂಥಾಲಯವೆಂದು ಪರಿವರ್ತನೆಗೊಂಡ ಕಾರವಾರ ಗ್ರಂಥಾಲಯ 1864 ರಲ್ಲಿ ಸ್ಥಾಪನೆಗೊಂಡದ್ದೇ ಆಗಿದೆ.

3. 1890ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾಯಿತು. ಇದು ತನ್ನದೇ ಆದ ಸಾರ್ವಜನಿಕ ಗ್ರಂಥಾಲಯ ಹಾಗೂ ವಾಗ್ಭೂಷಣವೆಂಬ ನಿಯತಕಾಲಿಕೆಯನ್ನು ಪ್ರಾರಂಭಿಸಿತು. ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಗಳ ಪುನರುದ್ಧಾರ ಹಾಗೂ ಉತ್ತಮ ಗ್ರಂಥಾಲಯ ಸ್ಥಾಪನೆ ಈ ಸಂಘದ ಗುರಿಯಾಗಿತ್ತು. 1887ರಲ್ಲಿ ಶ್ರೀಮದ್ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ ಪ್ರಾರಂಭವಾಗಿ ಅದರ ಅಂಗವಾಗಿ ಒಂದು ಪ್ರತ್ಯೇಕ ಸಂಸ್ಕೃತ ಗ್ರಂಥಾಲಯ ಏರ್ಪಟ್ಟಿತು. ವಂಗಭಂಗ ಚಳವಳಿ ಮತ್ತು ಟಿಳಕರ ಹೋಂ ರೂಲ್ ಚಳವಳಿಗಳಿಂದಾಗಿ ಗ್ರಂಥಾಲಯ ಪ್ರಗತಿಯೂ ತ್ವರೆಗೊಂಡಿತು. ಟಿಳಕರ ಅನುಯಾಯಿಗಳಾಗಿದ್ದ ಆಲೂರು ವೆಂಕಟರಾಯರೇ ಮೊದಲಾದವರು ಭಾರತ ವಾಚನಾಲಯವನ್ನು ಸ್ಥಾಪಿಸಿ ಸ್ವರಾಜ್ಯ ಚಳವಳಿಗೆ ಕಳೆ ತಂದುಕೊಟ್ಟರು.

ಶತಮಾನದ ಆದಿಯಿಂದ ಇದ್ದ ಕನ್ನಡಿಗರ ಬೇಡಿಕೆಗಳ ಹಾಗೂ ರೊದ್ದ ಶ್ರೀನಿವಾಸ ರಾಯರು ಮತ್ತು ಅರಟಾಳ ರುದ್ರಗೌಡರ ಪ್ರಯತ್ನಶೀಲತೆಯಿಂದಾಗಿ 1917ರಲ್ಲಿ ಧಾರವಾಡದಲ್ಲಿ ಈ ವಿಭಾಗದ ಪ್ರಪ್ರಥಮ ಕಾಲೇಜು ಸ್ಥಾಪಿತವಾಯಿತು. ಕಾಲೇಜು ಗ್ರಂಥಾಲಯಕ್ಕೆ ಪುಣೆಯಲ್ಲಿನ ಡೆಕ್ಕನ್ ಕಾಲೇಜಿನ ಗ್ರಂಥಾಲಯದಲ್ಲಿನ ಕೆಲವೊಂದು ಅಮೂಲ್ಯ ಗ್ರಂಥಸಂಗ್ರಹ ದೊರಕಿತು. ವಿಭಾಗದ ಎರಡನೆಯ ಕಾಲೇಜು ಲಿಂಗರಾಜ ಕಾಲೇಜು ಬೆಳಗಾಂವಿಯಲ್ಲಿ 1933ರಲ್ಲಿ ಸ್ಥಾಪಿತವಾಯಿತು.

1920ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ ಶಾಂತೇಶ ವಾಚನಾಲಯ ಇಂದಿಗೂ ಸೇವೆ ಸಲ್ಲಿಸುತ್ತಿದೆ.

ಇದೇ ಸಮಯಕ್ಕೆ ಧಾರವಾಡದಲ್ಲಿ ವಿ.ವಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಸೇರಿದ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ನಾಡಿನ ತುಂಬ ಸಾಕಷ್ಟು ಗ್ರಂಥಾಲಯಗಳನ್ನು ಸ್ಥಾಪಿಸಬೇಕೆಂಬ ಗೊತ್ತುವಳಿಯನ್ನು ಅಂಗೀಕರಿಸಿತು.

1914ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ಇತಿಹಾಸ ಸಂಶೋಧನ ಸಂಘ ತನ್ನ ಗುರಿಯನ್ನು ಸಾಧಿಸಲು ಒಂದು ಯೋಗ್ಯ ಗ್ರಂಥಾಲಯವನ್ನು ಬೆಳೆಸಿಕೊಂಡು ಬಂದಿತು.

4. 1924ರಲ್ಲಿ ಬೆಳಗಾಂವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನದ ಅಂಗವಾಗಿ ಸಿ.ಆರ್. ದಾಸ್ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನವೊಂದು ಜರುಗಿತು. ಧಾರವಾಡ (1929, 1948, 1958), ಕುಂದಗೋಳ (1952) ಹಾಗೂ ಕುಮಟದಲ್ಲಿ (1953) ಅಖಿಲ ಕರ್ನಾಟಕ ಗ್ರಂಥಾಲಯ ಸಮ್ಮೇಳನಗಳು ನಡೆದವು. ಇವೆಲ್ಲ ಗ್ರಂಥಾಲಯ ಚಳವಳಿಯನ್ನು ಜಾಗೃತಗೊಳಿಸಿದವು.

1929ರಲ್ಲಿ ಶಾಂತೇಶ ವಾಚನಾಲಯದ ಆಶ್ರಯದಲ್ಲಿಯೇ ಮೇಲೆ ಹೇಳಿದ ಮುಂಬಯಿ ಕರ್ನಾಟಕ ಗ್ರಂಥಾಲಯ ಸಂಘದ ಪರಿಷತ್ತು ಸೇರಿ ಕರ್ನಾಟಕ ಗ್ರಂಥಾಲಯ ಸಂಘವನ್ನು ಸ್ಥಾಪಿಸಿತು.

5. 1939ರಲ್ಲಿ ಆಗಿನ ಮುಂಬಯಿ ಸರ್ಕಾರ ಎ.ಎ.ಎ. ಫೈಜಿಯವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಸುಧಾರಣೆಗಾಗಿ ನೇಮಕವಾದ ಸಮಿತಿ ಒಂದು ವರದಿಯನ್ನು ಸಿದ್ಧ ಮಾಡಿತು. ಮುಂದೆ ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಈ ವರದಿಯನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಗಳು ನಡೆದವು. ಫಲವಾಗಿ ಧಾರವಾಡದಲ್ಲಿ ಕರ್ನಾಟಕ ಪ್ರಾದೇಶಿಕ ಗ್ರಂಥಾಲಯ ಅಸ್ತಿತ್ವಕ್ಕೆ ಬಂತು. ಇದೊಂದು ಕಾಪಿರೈಟ್ ಗ್ರಂಥಾಲಯ. ಕರ್ನಾಟಕ ವಿದ್ಯಾವರ್ಧಕ ಸಂಘ ಇದರ ಜವಾಬ್ದಾರಿ ಹೊತ್ತುಕೊಂಡಿತು. 1967ರಲ್ಲಿ ಈ ಗ್ರಂಥಾಲಯದ 17,000 ಕಾಪಿರೈಟ್ ಗ್ರಂಥಗಳು ಬೆಂಗಳೂರಿನ ಕೇಂದ್ರ ಗ್ರಂಥಾಲಯಕ್ಕೆ ಸ್ಥಾನಾಂತರಗೊಂಡವು. ಉಳಿದ ಅವಶೇಷ ಧಾರವಾಡ ನಗರದ ಕೇಂದ್ರ ಗ್ರಂಥಾಲಯಕ್ಕೆ ಸೇರಿತು.

6. ಧಾರವಾಡದಲ್ಲಿ ಸ್ಥಾಪನೆಗೊಂಡ (1950) ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯ ಅತಿ ಶ್ರೀಮಂತವಾಗಿ ಬೆಳೆದು ಬಂತು. ಇಲ್ಲಿ ಐದು ಲಕ್ಷಕ್ಕೂ ಹೆಚ್ಚಿನ ಗ್ರಂಥಗಳೂ ಸುಮಾರು ಎರಡು ಸಾವಿರ ನಿಯತಕಾಲಿಕೆಗಳೂ ಇವೆ. ಪ್ರತಿ ದಿನ 13 ಗಂಟೆ ತೆರೆದಿರುವ ಈ ಗ್ರಂಥಾಲಯ ದಿನಂಪ್ರತಿ ಸುಮಾರು 600 ಜನರಿಗೆ ಗ್ರಂಥಾಲಯ ಸೇವೆಯನ್ನು ಒದಗಿಸುತ್ತದೆ. ಇಲ್ಲಿ ಮೈಕ್ರೋಫಿಲ್ಮ್ ಮತ್ತು ಕಾರ್ಡುಗಳಿಗಾಗಿ ಪ್ರತ್ಯೇಕ ವ್ಯವಸ್ಥೆ ಇದೆ. ವಿಶ್ವಸಂಸ್ಥೆಯ 12ನೆಯ ಸಂಗ್ರಹಣಾ ಕೇಂದ್ರವೆಂದು ಪರಿಗಣಿಸಲ್ಪಟ್ಟ ಈ ಗ್ರಂಥಾಲಯ ಸಾಕಷ್ಟು ಗ್ರಂಥಗಳನ್ನು ಆ ಸಂಸ್ಥೆಯ ಮುಖಾಂತರ ಪಡೆದಿದೆ.

ಸುಮಾರು 44,000 ಗ್ರಂಥಗಳುಳ್ಳ ಕರ್ನಾಟಕ ಕಾಲೇಜು ಗ್ರಂಥಾಲಯ, 5,200 ಗ್ರಂಥಗಳುಳ್ಳ ಮಾಧ್ಯಮಿಕ ಶಿಕ್ಷಕರ ತರಬೇತಿ ಕಾಲೇಜು ಗ್ರಂಥಾಲಯ, 3,300 ಗ್ರಂಥಗಳುಳ್ಳ ಕರ್ನಾಟಕ ವಿಶ್ವವಿದ್ಯಾಲಯ ಕಾಯಿದೆ ಕಾಲೇಜು ಗ್ರಂಥಾಲಯಗಳು ಈ ಮುಖ್ಯ ಗ್ರಂಥಾಲಯಕ್ಕೆ ಜೋಡಿಸಲ್ಪಟ್ಟಿವೆ. ಕನ್ನಡ ಸಂಶೋಧನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯದ ಭಾಗವಾಗಿ ಇಂದು ಬೆಳೆಯುತ್ತಿದ್ದು 12,000 ಗ್ರಂಥಗಳುಳ್ಳ ತನ್ನದೇ ಆದ ಗ್ರಂಥಾಲಯವನ್ನು ಹೊಂದಿದೆ. ಗ್ರಂಥಾಲಯ ವಿಜ್ಞಾನ ವಿಭಾಗ ಇಂದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಚೆನ್ನಾಗಿ ಬೆಳೆದು ಬರುತ್ತಿದೆ. ಇದರ ಅಂಗವಾಗಿ 1962ರಿಂದ ಗ್ರಂಥಾಲಯ ಶಿಕ್ಷಣ

ಕ್ಷೇತ್ರದಲ್ಲಿ ಬ್ಯಾಚುಲರ್ ಪದವಿಗೂ 1972ರಿಂದ ಮಾಸ್ಟರ್ ಪದವಿಗೂ ತರಬೇತಿ ನೀಡಲಾಗುತ್ತಿದೆ. ಇದರ ಅಂಗವಾಗಿ 1964ರಿಂದ ಟ್ರೈಮ್‌ಲೆಸ್ ಫೆಲೋಷಿಪ್ ಎಂಬ ಗ್ರಂಥಾಲಯ ಶಾಸ್ತ್ರ ವಿಷಯ ವಾರ್ಷಿಕ ಪತ್ರಿಕೆಯೊಂದು ಹೊರತಂದಿವೆ.

ಈ ವಿಭಾಗದ ನೇತೃತ್ವದಲ್ಲಿ ಧಾರವಾಡದಲ್ಲಿ ಕಾಲೇಜು ಗ್ರಂಥಪಾಲರುಗಳ ಸಮ್ಮೇಳನವೂ ಭಾರತೀಯ ಗ್ರಂಥಾಲಯ ವಿಜ್ಞಾನ ಶಿಕ್ಷಕರ ಸಂಘದ ದ್ವಿತೀಯ ಸಮ್ಮೇಳನವೂ ನಡೆದವು. ಗ್ರಂಥಾಲಯ ಶಿಕ್ಷಣ ವಿಭಾಗ ವಿಶ್ವವಿದ್ಯಾಲಯದ ಧನ ಆಯೋಗದ ಸಹಕಾರದೊಂದಿಗೆ ಪ್ರಥಮವಾಗಿ ಗ್ರಂಥಾಲಯ ವಿಜ್ಞಾನದಲ್ಲಿ ಬೇಸಗೆ ಶಿಬಿರವೊಂದನ್ನು ನಡೆಸಿದೆ.

**ಹಳೆಯ ಮೈಸೂರು ವಿಭಾಗ :** ಮೈಸೂರು ಸಂಸ್ಥಾನದ ಅಂದಿನ ದಿವಾನರಾಗಿದ್ದ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ (1913) ಶಿಕ್ಷಣ ಸಮಿತಿಯ ಶಿಫಾರಸಿನ ಪರಿಣಾಮವಾಗಿ 1914ರಲ್ಲಿ ಮೈಸೂರಿನಲ್ಲೊಂದು ಹಾಗೂ ಬೆಂಗಳೂರಿನಲ್ಲೊಂದು ಹೀಗೆ ಎರಡು ಸಾರ್ವಜನಿಕ ಗ್ರಂಥಾಲಯಗಳು ಸ್ಥಾಪಿಸಲ್ಪಟ್ಟವು. ಬೆಂಗಳೂರಿನ ಶೇಷಾದ್ರಿ ಭವನದಲ್ಲಿ ಪ್ರಾರಂಭವಾದ ಗ್ರಂಥಾಲಯವೇ ಇಂದು ರಾಜ್ಯದ ಕೇಂದ್ರ ಗ್ರಂಥಾಲಯವಾಗಿ ಬೆಳೆದು ನಿಂತಿದೆ.

**ಮೈಸೂರು ವಿಶ್ವವಿದ್ಯಾನಿಲಯ :** ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಮೈಸೂರು ವಿಶ್ವವಿದ್ಯಾನಿಲಯ 1961ರ ಜುಲೈ 22ರಂದು ಸ್ಥಾಪನೆಗೊಂಡಿತು. ಇಂದು ಇಡೀ ರಾಜ್ಯದಲ್ಲಿ ಅತಿ ದೊಡ್ಡ ಗ್ರಂಥಾಲಯವೆಂದರೆ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ. ಸುಮಾರು ಆರು ಲಕ್ಷ ಗ್ರಂಥಗಳನ್ನು ಹೊಂದಿರುವ ಈ ಗ್ರಂಥಾಲಯ 1,200 ನಿಯತಕಾಲಿಕೆಗಳನ್ನು ತರಿಸುತ್ತಿದೆ. ಇದಲ್ಲದೆ ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ ಎರಡು ಲಕ್ಷಕ್ಕೂ ಮೀರಿದ ಸಂಖ್ಯೆಯಲ್ಲಿ ಗ್ರಂಥಗಳನ್ನು ಹೊಂದಿರುವ ಒಂದು ಗ್ರಂಥಾಲಯವನ್ನೂ ಕನ್ನಡ ಹಾಗೂ ಪ್ರಾಚೀನ ಇತಿಹಾಸ ಸಂಶೋಧನ ವಿದ್ಯಾರ್ಥಿಗಳಿಗೆ ಮೀಸಲಿರುವ ಮತ್ತೊಂದು ಗ್ರಂಥಾಲಯವನ್ನೂ ವಿಶ್ವವಿದ್ಯಾನಿಲಯ ಹೊಂದಿದೆ. ಈ ಗ್ರಂಥಾಲಯದಲ್ಲಿ ಹಸ್ತಪ್ರತಿಗಳ ಅಮೂಲ್ಯ ಸಂಗ್ರಹವಿದೆ. 1965–66 ರಿಂದ ಗ್ರಂಥಾಲಯ ವಿಜ್ಞಾನ ಪದವಿ ಪರೀಕ್ಷೆಗಾಗಿ ಹಾಗೂ 1971–72 ರಿಂದ ಸ್ನಾತಕೋತ್ತರ ಗ್ರಂಥಾಲಯ ವಿಜ್ಞಾನ ಪರೀಕ್ಷೆಗಾಗಿ ತರಬೇತಿ ತರಗತಿಗಳನ್ನೂ ವಿಶ್ವವಿದ್ಯಾನಿಲಯ ನಡೆಸುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ

ಇದೇ ವಿಶ್ವವಿದ್ಯಾನಿಲಯದ ಅಂಗವಾಗಿ 1939ರಲ್ಲಿ ಪ್ರಾರಂಭಗೊಂಡ ಮೈಸೂರು ವಯಸ್ಕರ ಶಿಕ್ಷಣ ಸಮಿತಿ ಗ್ರಾಮೀಣ ವಿಭಾಗದಲ್ಲಿ ಗ್ರಂಥಾಲಯ ಸೌಲಭ್ಯ ಒದಗಿಸಲು ಬಹುವಾಗಿ ಶ್ರಮಿಸಿದೆ. ಗ್ರಂಥಾಲಯ ಚಳವಳಿಗಾಗಿಯೇ ಮೀಸಲಾದ ಪುಸ್ತಕ ಪ್ರಪಂಚವೆಂಬ ನಿಯತಕಾಲಿಕೆಯೊಂದು ಇದರ ವತಿಯಿಂದ ಪ್ರಕಟವಾಗುತ್ತಿತ್ತು. ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆ ಮೇಲ್ಮಟ್ಟದ ಗ್ರಂಥಾಲಯವನ್ನು ಹೊಂದಿದೆ. ಅಮೆರಿಕದ ಅಣುಶಕ್ತಿ ವಿಭಾಗದ 14,000 ಕ್ಕೂ ಮಿಕ್ಕ, ತಾಂತ್ರಿಕ ವಿವರಣೆಗಳಿರುವ ಗ್ರಂಥಗಳು ಈ ಸಂಸ್ಥೆಯಲ್ಲಿವೆ.

**ಮೈಸೂರು ಗ್ರಂಥಾಲಯ ಸಂಘ :** 1962 ರಲ್ಲಿ ಆರಂಭವಾಯಿತು. ಎ.ಸಿ. ದೇವೇಗೌಡ, ಎಸ್.ಆರ್. ರಂಗನಾಥನ್ ಮೊದಲಾದವರು ಈ ಸಂಘದಲ್ಲಿ ಕೆಲಸ ಮಾಡಿದ್ದಾರೆ. ಈ ಸಂಘ ಲೈಬ್ರರಿ ವೀಕ್ ಸೂವೆನೀರ್ (1963), ಲೈಬ್ರರಿ ಸರ್ವಿಸ್ ಫಾರ್ ಆಲ್ (1966) ಮುಂತಾದ ಪ್ರಕಟಣೆಗಳನ್ನು ಹೊರಡಿಸಿದೆ.

**ಬೆಂಗಳೂರು ವಿಶ್ವವಿದ್ಯಾಲಯ :** 1965ರಲ್ಲಿ ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯ ದಲ್ಲೂ ಉತ್ತಮ ಗ್ರಂಥಾಲಯವಿದೆ. ಬೆಂಗಳೂರು ಸೆಂಟ್ರಲ್ ಕಾಲೇಜು ಗ್ರಂಥಾಲಯದ ಕೊಡುಗೆಯಾದ 40,000 ಗ್ರಂಥಗಳಿಂದ ಪ್ರಾರಂಭವಾದ ಈ ಗ್ರಂಥಾಲಯ ಇಂದು ಮೂರು ಲಕ್ಷಕ್ಕೂ ಮೀರಿ ಗ್ರಂಥಗಳನ್ನು ಹೊಂದಿದೆ. ಇಲ್ಲಿಗೆ ಬರುವ ನಿಯತಕಾಲಿಕೆಗಳು ಸಾವಿರಕ್ಕೂ ಹೆಚ್ಚಿವೆ. ಪ್ರಮುಖ ದಿನಪತ್ರಿಕೆಗಳ ಫೈಲುಗಳನ್ನು ಈ ಗ್ರಂಥಾಲಯ ಕಾಯ್ದುಕೊಂಡು ಬಂದಿದೆ.

**ಸ್ನಾತಕೋತ್ತರ ಕೇಂದ್ರಗಳು :** 1968ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮಂಗಳೂರಿನಲ್ಲೂ ಕರ್ನಾಟಕ ವಿಶ್ವವಿದ್ಯಾಲಯ ಗುಲ್ಬರ್ಗದಲ್ಲೂ ಒಂದೊಂದು ಸ್ನಾತಕೋತ್ತರ ಶಿಕ್ಷಣ ಕೇಂದ್ರಗಳನ್ನು ತೆರೆದವು. ಅನಂತರದಲ್ಲಿ ಈ ಕೇಂದ್ರಗಳೇ ಪ್ರತ್ಯೇಕ ವಿಶ್ವವಿದ್ಯಾನಿಲಯಗಳಾದವು. ಇವುಗಳಲ್ಲಿನ ಗ್ರಂಥಾಲಯಗಳು ಊರ್ಜಿತಾವಸ್ಥೆಯಲ್ಲಿವೆ.

**ಕರ್ನಾಟಕ ಗ್ರಂಥಾಲಯ ಕಾಯದೆ :** ಎಸ್.ಆರ್. ರಂಗನಾಥನ್ ಅವರು ರಚಿಸಿಕೊಟ್ಟ ಕಾಯದೆ ಕರಡು ಕರ್ನಾಟಕ ಸರ್ಕಾರದಿಂದ ಕರ್ನಾಟಕ ರಾಜ್ಯ ಸರ್ಕಾರ ಗ್ರಂಥಾಲಯ ಕಾಯದೆಯಾಗಿ 1965ರಲ್ಲಿ ಅಂಗೀಕೃತವಾಯಿತು. ಇದರಿಂದ ರಾಜ್ಯದಲ್ಲಿ ಏಕರೂಪ ಗ್ರಂಥಾಲಯ ಸೇವೆ ಲಭ್ಯವಾಯಿತು. ಬೆಂಗಳೂರಿನಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ, ಮುಖ್ಯ ಪಟ್ಟಣಗಳಲ್ಲಿ ಪಟ್ಟಣ ಗ್ರಂಥಾಲಯ, ಜಿಲ್ಲಾ ಮುಖ್ಯ ಪಟ್ಟಣಗಳಲ್ಲಿ ಜಿಲ್ಲಾ ಗ್ರಂಥಾಲಯ ಮತ್ತು ಗ್ರಾಮೀಣ ಗ್ರಂಥಾಲಯಗಳು ಏರ್ಪಡಲು ಇದರಿಂದ ಸಹಾಯವಾಯಿತು. ಒಂದು ಪ್ರತ್ಯೇಕ ಗ್ರಂಥಾಲಯ ಇಲಾಖೆ ಹುಟ್ಟಿಕೊಂಡಿತು. ಇದಕ್ಕೆ ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ.

**ಇಲಾಖೆಯ ಅಧೀನದಲ್ಲಿರುವ ಗ್ರಂಥಾಲಯಗಳ ಸೂಕ್ಷ್ಮ ಪರಿಚಯ**

**ರಾಜ್ಯ ಕೇಂದ್ರ ಗ್ರಂಥಾಲಯ**

ಈ ಗ್ರಂಥಾಲಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರ ನೇರ ಆಡಳಿತದಲ್ಲಿ ಕಾರ್ಯ ನಿರ್ವಹಿಸುವುದು. ರಾಜ್ಯ ಕೇಂದ್ರ ಗ್ರಂಥಾಲಯ, ರಾಜ್ಯದ ಎಲ್ಲಾ ಗ್ರಂಥಾಲಯಗಳ ಮಕುಟವಾಗಿದೆ. ಇದು ಎಲ್ಲಾ ವಿಷಯಗಳ ಮತ್ತು ಭಾಷೆಯ ಆಕರ ಗ್ರಂಥಗಳನ್ನು ಹೊಂದಿರುವುದರಿಂದ ಇದನ್ನು ಪರಾಮರ್ಶನ ಗ್ರಂಥಾಲಯ ಎಂದು ಘೋಷಿಸಲಾಗಿದೆ. ರಾಜ್ಯ ಕೇಂದ್ರ ಗ್ರಂಥಾಲಯವನ್ನು ರಾಷ್ಟ್ರೀಯ ಗ್ರಂಥಾಲಯದ ಮಟ್ಟಕ್ಕೆ ಅಭಿವೃದ್ಧಿಪಡಿಸಲು ಸಹ ಕ್ರಮ ಕೈಗೊಳ್ಳಲಾಗಿದೆ.

**ರಾಜ್ಯ ಕೇಂದ್ರ ಗ್ರಂಥಾಲಯದ ಸೇವಾ ರೂಪರೇಷೆಗಳು**

**1. ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ**

ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಕೇಂದ್ರ ಗ್ರಂಥಾಲಯದ ಅಡಿಯಲ್ಲಿ 3–10–1994ರಂದು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯವನ್ನು ರಾಜ್ಯ ಮಟ್ಟದಲ್ಲಿ ಆರಂಭಿಸಲಾಯಿತು. ರಾಜ್ಯ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳು ಇದರ ಪುಸ್ತಕಗಳ ವ್ಯವಸ್ಥೆ ನಿರ್ವಹಿಸುವರು. ನಗರ ಮತ್ತು ಜಿಲ್ಲಾ ಗ್ರಂಥಾಲಯಗಳಲ್ಲಿ ಪ್ರತ್ಯೇಕ ಮಕ್ಕಳ ವಿಭಾಗ ತೆರೆಯಲಾಗಿದೆ.

**2. ಗ್ರಂಥಸ್ವಾಮ್ಯ ವಿಭಾಗ:**

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರ ನಿಯಮಾನುಸಾರ ಸೆಕ್ಷನ್ 37 ಸಬ್‌ಸೆಕ್ಷನ್ (ಅ) ಪ್ರಕಾರ ಪ್ರಥಮವಾಗಿ ಮುದ್ರಣವಾದ ಭಾಷಾವಾರು ಶೀರ್ಷಿಕೆಯ 3 ಪ್ರತಿಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯದ ಗ್ರಂಥಸ್ವಾಮ್ಯ ವಿಭಾಗಕ್ಕೆ ಸ್ವೀಕರಿಸಿಕೊಳ್ಳಲಾಗುವುದು. ಕರ್ನಾಟಕದಲ್ಲಿ ಮುದ್ರಿತವಾಗಿರುವ ಯಾವುದೇ ಗ್ರಂಥಗಳ 3 ಪ್ರತಿಗಳನ್ನು ಈ ವಿಭಾಗಕ್ಕೆ ಲೇಖಕರು, ಪ್ರಕಾಶಕರು, ಇಲ್ಲವೇ ಮುದ್ರಕರು ಯಾರಾದರೂ ಒಬ್ಬರು ಕಳುಹಿಸಬೇಕಾದುದು ಕಾನೂನುಬದ್ಧವಾಗಿ ಕಡ್ಡಾಯವಾಗಿದೆ. ತಪ್ಪಿದಲ್ಲಿ ಅವರ ವಿರುದ್ಧ ಕ್ರಮ ಜರುಗಿಸಲು ನಿರ್ದೇಶಕರು ಅಧಿಕಾರ ಹೊಂದಿರುವರು. ಈ ವಿಭಾಗದಲ್ಲಿ ಸ್ವೀಕರಿಸಲಾಗುವ 3 ಪ್ರತಿಗಳಲ್ಲಿ ಒಂದು ಪ್ರತಿಯನ್ನು ಕೇಂದ್ರ ಸರ್ಕಾರದ ಸಚಿವಾಲಯದ ಗ್ರಂಥಾಲಯಕ್ಕೆ ಕಳುಹಿಸಲಾಗುವುದು. ಇನ್ನುಳಿದ ಪ್ರತಿಗಳಲ್ಲಿ ಒಂದನ್ನು ಸಾರ್ವಜನಿಕರ ಅವಗಾಹನೆಗೆ ಮತ್ತು ಇನ್ನೊಂದನ್ನು ಮುಂದಿನ ಪೀಳಿಗೆಯವರಿಗಾಗಿ ಸಂರಕ್ಷಿಸಿ ಇಡಲಾಗುವುದು. ಪ್ರತಿ ವರ್ಷ ಈ ಗ್ರಂಥಗಳ ಗ್ರಂಥಸೂಚಿಯನ್ನು ಸಿದ್ಧಪಡಿಸಿ ರಾಜ್ಯದ ಎಲ್ಲ ಗ್ರಂಥಾಲಯಗಳಿಗೆ ಸಾರ್ವಜನಿಕರ ಮಾಹಿತಿಗಾಗಿ ಕಳುಹಿಸಲಾಗುತ್ತಿದೆ.

2002–03ರಲ್ಲಿ ಒಟ್ಟು 3348 ಗ್ರಂಥಗಳು ಸಂಗ್ರಹವಾಗಿದ್ದು, ಇದರಲ್ಲಿ ಕೆಲವು ಗ್ರಂಥಗಳನ್ನು ಗಣಕೀಕರಿಸಲಾಗಿದೆ.

**3. ಅಂಧರಿಗಾಗಿ ಗ್ರಂಥಾಲಯ:**

ರಾಜ್ಯ ಕೇಂದ್ರ ಗ್ರಂಥಾಲಯದ ಅಂಧರ ಗ್ರಂಥಾಲಯ ವಿಭಾಗದಲ್ಲಿ ಬ್ರೈಲ್ ಲಿಪಿಯಲ್ಲಿರುವ ಒಟ್ಟು 1080 ಗ್ರಂಥಗಳಿದ್ದು, ಈ ಸೌಲಭ್ಯವನ್ನು ಅಂಧರು ಪಡೆಯುತ್ತಿದ್ದಾರೆ.

**4. ಜಿಲ್ಲಾ ಮತ್ತು ನಗರ ಕೇಂದ್ರ**

**ಅ. ಜಿಲ್ಲಾ ಕೇಂದ್ರ**

ರಾಜ್ಯದ 29 ಜಿಲ್ಲೆಗಳಲ್ಲಿ ಕೇಂದ್ರ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಉಳಿದೆಡೆ ಆಡಳಿತ ಕಛೇರಿ ಮಾತ್ರ ಇರುವುದು. ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಕಾರ್ಯ ತಾಲ್ಲೂಕು, ಪುರಸಭೆ, ಹೋಬಳಿ, ಗ್ರಾಮ ಪಂಚಾಯಿತಿ ಸ್ಥಳಗಳಲ್ಲಿ ಗ್ರಂಥಾಲಯ ಪ್ರಾರಂಭಿಸಿ ಸೇವೆ ಕೊಡುವುದಾದುದರಿಂದ ಜಿಲ್ಲಾ ಕೇಂದ್ರಸ್ಥಾನದ ಗ್ರಂಥಾಲಯಗಳ ವ್ಯಾಪ್ತಿ ನಗರ ಗ್ರಂಥಾಲಯಕ್ಕೆ ಸೇರುತ್ತದೆ. ಸರ್ಕಾರದ ಪತ್ರ ಸಂಖ್ಯೆ ಆರ್‌ಡಿ–42,

ಎಆರ್‌ಡಿ-87 ದಿನಾಂಕ: 16-7-1997ರನ್ವಯ ಸರ್ಕಾರ ಘೋಷಿಸಿದ 7 ಜಿಲ್ಲೆಗಳು ವಿಂಗಡಣೆಯಾಗಿ ಜಿಲ್ಲೆಗಳ ಸಂಖ್ಯೆ 20 ರಿಂದ 27 ಆಗಿದೆ. ಇನ್ನೂ 3 ಹೊಸ ಜಿಲ್ಲೆಗಳಾಗಿ ಒಟ್ಟು 29 ಜಿಲ್ಲಾ ಕೇಂದ್ರ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

**ಆ. ನಗರ ಕೇಂದ್ರ ಗ್ರಂಥಾಲಯಗಳು:**

ಒಂದು ಲಕ್ಷ ಹಾಗೂ ಅದಕ್ಕೆ ಮೇಲ್ಪಟ್ಟ ಜನಸಂಖ್ಯೆ ಹೊಂದಿರುವ 26 ನಗರಗಳಲ್ಲಿ (ಬೆಂಗಳೂರು, ಬೆಳಗಾಂವಿ, ಬಿಜಾಪುರ, ದಾವಣಗೆರೆ, ಧಾರವಾಡ, ಗುಲ್ಬರ್ಗ, ಹಾಸನ, ಕೋಲಾರ, ಮೈಸೂರು, ಮಂಗಳೂರು ಶಿವಮೊಗ್ಗ) ನಗರ ಕೇಂದ್ರ ಗ್ರಂಥಾಲಯಗಳು ಮತ್ತು ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದ 5 ವಲಯಗಳು ಸೇರಿ ಒಟ್ಟು ನಗರ ಕೇಂದ್ರ ಗ್ರಂಥಾಲಯಗಳ ಸಂಖ್ಯೆ 26 ಆಗಿದೆ. ರಾಯಚೂರು ಮತ್ತು ಮಂಡ್ಯ ನಗರಗಳಲ್ಲಿ ನಗರ ಕೇಂದ್ರ ಗ್ರಂಥಾಲಯ ಕಛೇರಿಗಳು 2000-01ನೆಯ ಸಾಲಿನಲ್ಲಿ ಪ್ರಾರಂಭವಾಗಿವೆ. ಅಲ್ಲದೆ ಗದಗ ಮತ್ತು ಹೊಸಪೇಟೆ ನಗರ ಕೇಂದ್ರ ಗ್ರಂಥಾಲಯಗಳ ಪ್ರಾಧಿಕಾರ ರಚನೆಯಾಗಿದೆ.

**5. ಆಸ್ಪತ್ರೆ ಗ್ರಂಥಾಲಯಗಳು ಮತ್ತು ಜೈಲು**

ಒಂದು ಸಮುದಾಯದ ಸರ್ವರಿಗೂ ಉಚಿತವಾಗಿ ಜ್ಞಾನವನ್ನು ಪೂರೈಸುವ ಪರಿಕಲ್ಪನೆಯಲ್ಲಿ ಪ್ರಾರಂಭವಾಗಿರುವ ಸಾರ್ವಜನಿಕ ಗ್ರಂಥಾಲಯಗಳು ತಮ್ಮ ಸೇವಾಪರಿಧಿಯನ್ನು ವಿಸ್ತಾರಗೊಳಿಸಿ ಇಂದು ಆಸ್ಪತ್ರೆ ಹಾಗೂ ಜೈಲುಗಳಲ್ಲಿ ಗ್ರಂಥಾಲಯ ಸೇವೆ ನೀಡುತ್ತಲಿವೆ.

**ಅ. ಆಸ್ಪತ್ರೆ**

ಒಂದು ದೇಶ ಆರೋಗ್ಯಯುತವಾದ ಮಾನವ ಸಂಪನ್ಮೂಲಗಳನ್ನು ಹೊಂದದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎನ್ನುವುದು ನಿರ್ವಿವಾದ ಅಂಶ. ಈ ನಿಟ್ಟಿನಲ್ಲಿ ಆಸ್ಪತ್ರೆಯ ಒಳರೋಗಿಗಳಿಗೆ ಅವರನ್ನು ನೋಡಿಕೊಳ್ಳುವ ಮೇಲ್ವಿಚಾರಕರಿಗೆ ಹಾಗೂ ಆಸ್ಪತ್ರೆ ಸಿಬ್ಬಂದಿ ವರ್ಗದವರಿಗೆ ಬೇಕಾದ ಉಪಯುಕ್ತ ಗ್ರಂಥಗಳನ್ನು ಮತ್ತು ನಿಯತ ಕಾಲಿಕೆಗಳನ್ನು ಆಯ್ಕೆಮಾಡಿ ಆಸ್ಪತ್ರೆ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಕರ್ನಾಟಕದ 14 ಪ್ರಮುಖ ಆಸ್ಪತ್ರೆಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ರೋಗಿಗಳಿಗೆ ಮತ್ತು ವೈದ್ಯಕೀಯ ಸಿಬ್ಬಂದಿಗಳಿಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತಲಿವೆ.

**ಆ. ಜೈಲು**

ಖೈದಿಗಳಿಗೆ ಮನರಂಜನೆಯ ಜೊತೆಗೆ ಆದರ್ಶವಾಗಿ ಬಾಳಲು ತಿಳಿವಳಿಕೆ ಕೊಡುವ ಸಲುವಾಗಿ ಕರ್ನಾಟಕದ 16 ಜೈಲುಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಖೈದಿಗಳಿಗೆ ಮುಖ್ಯವಾಗಿ ಎರಡು ರೀತಿಯಲ್ಲಿ ಈ ಗ್ರಂಥಾಲಯಗಳು ನೆರವಾಗುತ್ತವೆ. ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಒದಗಿಸಿ ಹೊರಗಿನ ಪ್ರಪಂಚದ ಆಗುಹೋಗುಗಳ ಬಗ್ಗೆ ತಿಳಿವಳಿಕೆ ಕೊಡುವುದು ಮತ್ತು ಉತ್ತಮ ಗ್ರಂಥಗಳನ್ನು ಒದಗಿಸಿ ಅವರ ವ್ಯಕ್ತಿತ್ವವನ್ನು ಸುಧಾರಿಸಿಕೊಳ್ಳಲು ಜೈಲು ಗ್ರಂಥಾಲಯಗಳು ನೆರವಾಗುತ್ತಲಿವೆ.

ಬೆಂಗಳೂರಿನ ಸಾರ್ವಜನಿಕ ಗ್ರಂಥಾಲಯ ರಾಜ್ಯ ಕೇಂದ್ರ ಗ್ರಂಥಾಲಯವಾಗಿ ಪರಿವರ್ತನೆಗೊಳ್ಳುವ ಮುನ್ನ ಅದರಲ್ಲಿ 37,000 ಗ್ರಂಥಗಳಿದ್ದವು. ಈಗ ಆ ಸಂಖ್ಯೆ ಮೂರು ಲಕ್ಷವನ್ನು ದಾಟಿದೆ. ಈಗ ಗ್ರಂಥಾಲಯದಲ್ಲಿ 1) ಕಾಪಿರೈಟ್ ಸಂಗ್ರಹ ವಿಭಾಗ, 2) ಕುರುಡರ ಗ್ರಂಥಾಲಯ ವಿಭಾಗ, 3) ಗ್ರಂಥಾಲಯಗಳ ನಡುವಣ ವಿನಿಮಯ ವ್ಯವಸ್ಥೆ, 4) ಗ್ರಂಥಸೂಚಿ ವಿಭಾಗ, 5) ತಾಂತ್ರಿಕ ಸೇವಾ ವಿಭಾಗ – ಹೀಗೆ ರಾಜ್ಯಮಟ್ಟದ ಐದು ವಿಭಾಗಗಳು ಕೆಲಸ ಮಾಡುತ್ತಿವೆ.

**ಗ್ರಂಥಾಲಯ ವಿಜ್ಞಾನ :** ಗ್ರಂಥಾಲಯ ಕಾಯದೆ ಕಾರ್ಯರೂಪದಲ್ಲಿ ಬಂದ ಮೇಲೆ ಈ ವಿಭಾಗದ ಶಿಕ್ಷಣದ ಆವಶ್ಯಕತೆ ತೀವ್ರವಾಯಿತು. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಈ ವಿಜ್ಞಾನದ ಪದವಿ ಶಿಕ್ಷಣದ ತರಬೇತಿ ವರ್ಗಗಳು ಪ್ರಾರಂಭವಾದವು. ಸರ್ಕಾರದವರೂ ಬೆಂಗಳೂರಿನಲ್ಲಿ ಗ್ರಂಥಾಲಯ ತರಬೇತಿ ಕೇಂದ್ರವನ್ನು ತೆರೆದಿದ್ದಾರೆ. ಶಿಕ್ಷಕರಿಗಾಗಿ ಆರು ವಾರ ಹಾಗೂ ಕಾರ್ಯಕರ್ತರಿಗಾಗಿ ಹನ್ನೆರಡು ವಾರಗಳ ತರಬೇತಿಯನ್ನು ಈ ಕೇಂದ್ರ ನೀಡುತ್ತಿದೆ. ಬೆಂಗಳೂರಿನ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮಹಿಳೆಯರಿಗಾಗಿ ಹದಿನೆಂಟು ತಿಂಗಳ ಅವಧಿಯ ಡಿಪ್ಲೊಮ ತರಬೇತಿಯನ್ನು ನೀಡುವ ವ್ಯವಸ್ಥೆಯನ್ನು ಮಾಡಿದೆ. ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರ ಬೆಂಗಳೂರಿನಲ್ಲಿ 1962ರಲ್ಲಿ ಪ್ರಾರಂಭವಾಯಿತು. 20 ತಿಂಗಳ ಇಲ್ಲಿಯ ತರಬೇತಿಯನ್ನು ಪೂರೈಸಿದ ಅಭ್ಯರ್ಥಿ ಪ್ರಲೇಖನದಲ್ಲಿ ಡಿಪ್ಲೊಮ ಪಡೆಯುತ್ತಾನೆ. ಈ ಕೋರ್ಸನ್ನು ಸ್ನಾತಕೋತ್ತರ ಪದವಿಗೆ ಸಮಾನವೆಂದು ಪರಿಗಣಿಸಲಾಗಿದೆ.

ಹೈದರಾಬಾದ್ ಕರ್ನಾಟಕ ವಿಭಾಗ : ಸ್ವಾತಂತ್ರ್ಯೋತ್ಸವ ಕಾಲದಲ್ಲಿ ಈ ಭಾಗ ಶೈಕ್ಷಣಿಕವಾಗಿ ಹಿಂದುಳಿದಿತ್ತು. ಇಂದು ಬೀದರ್ ಜಿಲ್ಲೆಯಲ್ಲಿ ಶಾಲಾಕಾಲೇಜು ಗ್ರಂಥಾಲಯಗಳೂ ಪ್ರತ್ಯೇಕ ಗ್ರಾಮೀಣ ಗ್ರಂಥಾಲಯಗಳೂ ಇವೆ. ಗುಲ್ಬರ್ಗ ಜಿಲ್ಲೆಯಲ್ಲಿ 1 ವೈದ್ಯಕೀಯ ಹಾಗೂ 1 ತಾಂತ್ರಿಕ ಕಾಲೇಜು, 1 ವಾಣಿಜ್ಯ ಹಾಗೂ 1 ಕಾಯಿದೆ ಕಾಲೇಜುಗಳಲ್ಲಿ ಸುಸಜ್ಜಿತ ಗ್ರಂಥಾಲಯಗಳು ಇವೆ. ರಾಯಚೂರು ಜಿಲ್ಲೆಯಲ್ಲಿಯೂ 3 ಕಾಲೇಜು, 30 ಉಪಯುಕ್ತ ಗ್ರಂಥಾಲಯಗಳಿವೆ. ಇವಲ್ಲದೆ 2 ಸ್ವತಂತ್ರ ಗ್ರಂಥಾಲಯಗಳೂ ಇವೆ.

ಮದ್ರಾಸು ಕರ್ನಾಟಕ ವಿಭಾಗ: ಗ್ರಂಥಾಲಯ ಚಳವಳಿಯ ದೃಷ್ಟಿಯಿಂದ ಈ ಭಾಗ ಹಿಂದೆ ಸಾಕಷ್ಟು ಪ್ರಗತಿಯನ್ನು ಸಾಧಿಸಿತ್ತು. 1948ರ ಮದ್ರಾಸು ಗ್ರಂಥಾಲಯ ಕಾಯದೆ ಈ ಭಾಗದಲ್ಲಿ ಗ್ರಂಥಾಲಯಗಳು ಬೆಳೆಯಲು ಅನುವು ಮಾಡಿಕೊಟ್ಟಿತು. ಇತ್ತೀಚೆಗೆ ಈ ಭಾಗದವರು ದಕ್ಷಿಣ ಕನ್ನಡ ಗ್ರಂಥಾಲಯ ಸಂಘವನ್ನು ಕಟ್ಟಿಕೊಂಡಿದ್ದಾರೆ. ಕರ್ನಾಟಕ ಗ್ರಂಥಾಲಯ ಕಾಯದೆಯ ಕಾರ್ಯಗತ ಯೋಜನೆಯಂತೆ ಉಡುಪಿ, ಕಾರ್ಕಳ, ಕುಂದಾಪುರ, ಪುತ್ತೂರು ಹಾಗೂ ಬೆಳ್ತಂಗಡಿಗಳಲ್ಲಿ ಐದು ಗ್ರಂಥಾಲಯ ಶಾಖೆಗಳನ್ನು ಈ ಭಾಗ ತೆರೆದಿದೆ.

ಕೊಡಗು ವಿಭಾಗ: ಕೊಡಗಿನಲ್ಲಿ ಸುಸಜ್ಜಿತವಾದ ಜಿಲ್ಲಾ ಕೇಂದ್ರ ಗ್ರಂಥಾಲಯ ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಕೆಲವು ಮೇಲ್ಮಟ್ಟದ ಗ್ರಂಥಾಲಯಗಳಿವೆ. ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಗ್ರಂಥಾಲಯ ಈ ಭಾಗದ ಹಳೆಯ ಗ್ರಂಥಾಲಯವಾಗಿದೆ. 1954ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾದ ಮಹಾತ್ಮಗಾಂಧಿ ಗ್ರಂಥಾಲಯವೇ ಈ ಭಾಗದ ಉತ್ತಮ ಗ್ರಂಥಾಲಯಗಳಲ್ಲೊಂದು. ಇದೀಗ 10,000 ಗ್ರಂಥಗಳನ್ನು ಹೊಂದಿದೆ.

ವಿಶಿಷ್ಟ ಗ್ರಂಥಾಲಯಗಳು : ವಿಶಿಷ್ಟವಾದ ವಿಷಯಗಳ ಬಗ್ಗೆ ವಿಶೇಷಜ್ಞರಿಗಾಗಿ ಪ್ರತ್ಯೇಕ ಗ್ರಂಥಾಲಯಗಳಿವೆ. ಇವನ್ನು ಕೈಗಾರಿಕಾ ಗ್ರಂಥಾಲಯಗಳು, ಸಂಶೋಧನ ಗ್ರಂಥಾಲಯಗಳು, ನಿರ್ವಾಹಕ ಹಾಗೂ ಸಂಶೋಧನ ಗ್ರಂಥಾಲಯಗಳು ಎಂದು ವರ್ಗೀಕರಿಸಲಾಗಿದೆ.

ಕೈಗಾರಿಕಾ ಗ್ರಂಥಾಲಯಗಳಲ್ಲಿ ಹಿಂದುಸ್ಥಾನ ಏರೋನಾಟಿಕ್ಸ್, ಹಿಂದುಸ್ಥಾನ ಮಷೀನ್ ಟೂಲ್ಸ್ ಹಾಗೂ ಹಿಂದುಸ್ಥಾನ ಟೆಲಿಫೋನ್ ಇಂಡಸ್ಟ್ರೀಸ್ ಗ್ರಂಥಾಲಯಗಳು ಮುಖ್ಯವಾಗಿವೆ.

ಸಂಶೋಧನ ಗ್ರಂಥಾಲಯಗಳಲ್ಲಿ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದ್ದು ಪ್ರಮುಖವಾದುದು. ಇದರಲ್ಲಿ ಸು. 30,000 ಗ್ರಂಥಗಳಿವೆ. ರಾಷ್ಟ್ರೀಯ ಡೈರಿ ಸಂಶೋಧನ ಕೇಂದ್ರ, ಕನ್ನಡ ಸಾಹಿತ್ಯ ಪರಿಷತ್ತು, ಭಾರತೀಯ ಮಾನಸಿಕ ಸ್ವಾಸ್ಥ್ಯ ಕೇಂದ್ರ, ಭಾರತೀಯ ಸಮಾಜಶಾಸ್ತ್ರ ಸಂಶೋಧನ ಕೇಂದ್ರ, ಭಾರತೀಯ ಭಾಷೆಗಳ ಕೇಂದ್ರ ಮೊದಲಾದವುಗಳ ಗ್ರಂಥಾಲಯಗಳು ಈ ವಿಭಾಗದಲ್ಲಿ ಬರುತ್ತವೆ.

ಶೈಕ್ಷಣಿಕ ಕೇಂದ್ರಗಳು ವೈದ್ಯಕೀಯ ಹಾಗೂ ತಾಂತ್ರಿಕ ಕಾಲೇಜುಗಳು, ಕಾಯದೆ ಕಾಲೇಜುಗಳು, ವಿಶಿಷ್ಟ ವಿಜ್ಞಾನ ಹಾಗೂ ಕಲೆಗಳ ತರಬೇತಿ ಕೇಂದ್ರಗಳು ತಮ್ಮವೇ ಆದ ಗ್ರಂಥಾಲಯಗಳನ್ನು ಹೊಂದಿವೆ. ಸೂಚಿಪತ್ರ ನಿರ್ಮಾಣ ಹಾಗೂ ಭಾಷಾಂತರ ಕೆಲಸವನ್ನು ಅನೇಕ ಗ್ರಂಥಾಲಯಗಳು ನೆರವೇರಿಸುತ್ತಿವೆ. ಫೋಟೋಪ್ರತಿ (ರಿಪ್ರೋಗ್ರಾಫ್) ಮುಂತಾದ ಸೇವೆಯನ್ನು ಸಲ್ಲಿಸುತ್ತಿವೆ.

ಭಾರತ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರದ ಪ್ರಾದೇಶಿಕ ಕೇಂದ್ರ ಬೆಂಗಳೂರಿನಲ್ಲಿ 1964ರಲ್ಲಿ ಸ್ಥಾಪಿತಗೊಂಡಿದ್ದು ಅದು ಈ ಬಗೆಯ ಸೇವೆ ಸಲ್ಲಿಸುತ್ತಿದೆ. 1. ಮೈಕ್ರೊಫಿಲ್ಮ್, ಫೋಟೊಸ್ಟಾಟ್ ಅಥವಾ ಜೆರಾಕ್ಸ್ ರೂಪದಲ್ಲಿ ವಿಶಿಷ್ಟ ಪ್ರಕಟಿತ ಮಾಹಿತಿಯನ್ನು ಒದಗಿಸುವುದು; 2. ವಿಶಿಷ್ಟ ವಿಷಯಗಳ ಮೇಲೆ ಪ್ರಕಟಿಸಲ್ಪಟ್ಟ ಗ್ರಂಥಗಳ ಗ್ರಂಥಸೂಚಿಗಳನ್ನು ಕಲೆಹಾಕಿ ಪರಿಷ್ಕರಣೆ ಮಾಡುವುದು; 3. ವಿದೇಶಗಳಲ್ಲಿ ಪ್ರಕಟಿತವಾಗಿರುವ ವರದಿ ಸಾಹಿತ್ಯವನ್ನು ವಿವಿಧ ಮೂಲಗಳಿಂದ ಕಲೆಹಾಕಿ ಒದಗಿಸುವುದು; 4. ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳ ಪ್ರಗತಿಯ ವಿಷಯಗಳನ್ನು ಪ್ರಯೋಗನಿರತ ವಿಜ್ಞಾನಿಗಳು ಹಾಗೂ ತಂತ್ರಜ್ಞರಿಗೆ ಬೇಡಿದಾಗ ಒದಗಿಸುವುದು – ಇತ್ಯಾದಿ.

**ಕೃಷಿ ಮಹಾವಿದ್ಯಾಲಯಗಳು :** 1966ರಷ್ಟು ತಡವಾಗಿ ಪ್ರಾರಂಭವಾದರೂ ಕರ್ನಾಟಕ ರಾಜ್ಯದ ಕೃಷಿ ಮಹಾವಿದ್ಯಾಲಯ ಉತ್ತಮ ಗ್ರಂಥಾಲಯವನ್ನು ಹೊಂದಿದೆ. ಅಲ್ಲಿ ಸುಮಾರು 15,000 ಗ್ರಂಥಗಳಿವೆ. ಸಂಬಂಧಪಟ್ಟ ಕೃಷಿ ವಿದ್ಯಾಕಾಲೇಜುಗಳು ಹೆಬ್ಬಾಳ ಹಾಗೂ ಧಾರವಾಡಗಳಲ್ಲಿ ಇದ್ದು ಆಯಾ ಕ್ಷೇತ್ರಗಳಲ್ಲಿನ ವಿಶಿಷ್ಟವಾದ ಗ್ರಂಥಗಳನ್ನೊಳಗೊಂಡ ಉತ್ತಮ ಗ್ರಂಥಾಲಯಗಳನ್ನು ಹೊಂದಿವೆ. (ಕೆ.ಎಸ್.ಡಿ.ಇ.)

**ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಗ್ರಂಥಾಲಯಗಳು:** ವಯಸ್ಕರನ್ನು ಕೇವಲ ಅಕ್ಷರಸ್ಥರನ್ನಾಗಿ ಮಾಡಿದರೆ ಸಾಲದು. ಅವರಿಗೆ ತಕ್ಕ ಸಾಹಿತ್ಯವನ್ನು ಒದಗಿಸಿ ಅವರು ಕಲಿತ ಓದನ್ನು ಸ್ಥಿರಪಡಿಸಿ, ಮುಂದುವರಿಸಿ, ಅದನ್ನು ತಮ್ಮ ನಿತ್ಯಜೀವನದಲ್ಲಿ ಬಳಸಬೇಕಾದ್ದು ಆವಶ್ಯಕ. ಇದಕ್ಕಾಗಿ ವಯಸ್ಕರ ಶಿಕ್ಷಣ ಸಮಿತಿ ಅವರಿಗೆ ಅನುಕೂಲವಾದ ಸಾಹಿತ್ಯವನ್ನು ಹೇರಳವಾಗಿ ಸಿದ್ಧ ಮಾಡಿದೆ, ಮಾಡುತ್ತಿದೆ.

ಸಮಿತಿಯ ಗ್ರಂಥಾಲಯಗಳ ಹುಟ್ಟಿಗೆ ನಾಂದಿಯಾದದ್ದು ವಿದ್ಯಾಮಂದಿರಗಳ ಸ್ಥಾಪನೆ. ವಯಸ್ಕರ ತರಗತಿಗಳು ಸುಮಾರಾಗಿ ಆರು ತಿಂಗಳು ನಡೆದು, ಮೊದಲ ಮತ್ತು ಎರಡನೆಯ ಹಂತ ಮುಗಿಸಿ ಉತ್ತೀರ್ಣರಾದ ವಯಸ್ಕರಿಗೆ ಮುಂದೆ ಮೂರು ತಿಂಗಳ

ಕಾಲ ತಮ್ಮ ಓದನ್ನು ಮುಂದುವರಿಸಲು ವಿದ್ಯಾಮಂದಿರ ನೆರವಾಗುತ್ತದೆ. ವಯಸ್ಕರಿಗಾಗಿ ಪ್ರಕಟಿಸಿರುವ 150ಕ್ಕೂ ಹೆಚ್ಚು ಪುಸ್ತಕಗಳನ್ನು ಈ ವಿದ್ಯಾಮಂದಿರಗಳಿಗೆ ಉಚಿತವಾಗಿ ಹಂಚಲಾಗುವುದು. ಅವರವರ ಅಭಿರುಚಿಗೆ ತಕ್ಕಂತೆ ಪುಸ್ತಕಗಳನ್ನು ಆರಿಸಿಕೊಂಡು ವಯಸ್ಕರು ಉಪಾಧ್ಯಾಯರ ನೇತೃತ್ವದಲ್ಲಿ ಓದುವರು. ಹೀಗೆ ಸಣ್ಣ ಪ್ರಮಾಣದಲ್ಲಿ ಸಮಿತಿಯ ಪುಸ್ತಕ ಭಂಡಾರಗಳು ಕಾಣಿಸಿಕೊಂಡವು. ಸಮಿತಿಯ ಆಶ್ರಯದಲ್ಲಿ ಸುಮಾರು 1469 ಗ್ರಾಮಪುಸ್ತಕ ಭಂಡಾರಗಳಿದ್ದವು.

ಮೊದಲ ಗ್ರಾಮಪುಸ್ತಕ ಭಂಡಾರ ಆರಂಭವಾದದ್ದು ಮಂಡ್ಯ ಜಿಲ್ಲೆಯ ಸಂತೆ ಬಾಚಹಳ್ಳಿಯಲ್ಲಿ (1944). ಅಲ್ಲಿಂದೀಚೆಗೆ ಅನೇಕ ಗ್ರಾಮಪುಸ್ತಕ ಭಂಡಾರಗಳು ಸ್ಥಾಪನೆಯಾಗಿವೆ.

ಗ್ರಾಮಭಂಡಾರ ಯೋಜನೆಯ ವಿವರ ಹೀಗಿದೆ: ಶಿಕ್ಷಣ ಪಡೆದ ವಯಸ್ಕರು ತಮಗೊಂದು ಗ್ರಂಥಾಲಯದ ಅಗತ್ಯವಿದೆಯೆಂಬ ಮನವಿಯನ್ನು ಗ್ರಾಮಪಂಚಾಯತಿ ಅಧ್ಯಕ್ಷರಿಗೆ ತಿಳಿಸುತ್ತಾರೆ. ಗ್ರಾಮಪಂಚಾಯತಿ ಆರಂಭದ ಹಣವಾಗಿ ರೂ. 30ನ್ನು ಸಮಿತಿಗೆ ಕೊಡುತ್ತವೆ. ಈ ಹಣಕ್ಕೆ ಸಮಿತಿ ರೂ. 70ನ್ನು ಸೇರಿಸುತ್ತದೆ. ರೂ. 100ಕ್ಕೆ ಪುಸ್ತಕ ಪತ್ರಿಕೆ ಬೀರುಗಳನ್ನು ಒದಗಿಸಲಾಗುವುದು. ಭಂಡಾರವನ್ನು ಸಾಮಾನ್ಯವಾಗಿ ಊರಿನಲ್ಲಿರುವ ಉಪಾಧ್ಯಾಯ ಅಥವಾ ಉತ್ಸಾಹಿ ಯುವಕ ನೋಡಿಕೊಳ್ಳುತ್ತಾನೆ. ಭಂಡಾರದ ಅಧಿಕಾರಿಗೆ ಭಂಡಾರ ನಡೆಸುವ ಬಗ್ಗೆ ತರಬೇತಿ ಕೊಡಲಾಗುವುದು. ಮುಂದಿನ ವರ್ಷಗಳಲ್ಲಿ ಗ್ರಾಮಪಂಚಾಯತಿ ಮತ್ತು ಸಮಿತಿಗಳು ವೆಚ್ಚವನ್ನು ಸಮಸಮನಾಗಿ ಹಂಚಿಕೊಂಡು ಭಂಡಾರವನ್ನು ಬೆಳೆಸುತ್ತವೆ. ಹಲವು ಗ್ರಾಮ ಭಂಡಾರಗಳಿಗೆ ದಾನ ರೂಪವಾಗಿ ವಿಶೇಷ ಹಣ, ಪುಸ್ತಕ ಬರುವುದುಂಟು. ಈ ಭಂಡಾರದ ಮೇಲ್ವಿಚಾರಣೆಗೆಂದು ಒಂದು ಭಂಡಾರದ ಸಮಿತಿ ಉಂಟು. ಗ್ರಾಮ ಪಂಚಾಯತಿ ಅಧ್ಯಕ್ಷರೇ ಇದರ ಅಧ್ಯಕ್ಷರು. ಭಂಡಾರದ ಅಧಿಕಾರಿ ಕಾರ್ಯದರ್ಶಿ, ಹಾಗೂ 2–3 ಮಂದಿ ಭಂಡಾರದಲ್ಲಿ ಆಸಕ್ತಿಯುಳ್ಳ ಊರಿನವರು ಸದಸ್ಯರು.

ಪ್ರತಿ ಭಂಡಾರವೂ ಒಂದು ವಾಚನಾಲಯ ನಡೆಸುವುದು. ಭಂಡಾರದ ಆಶ್ರಯದಲ್ಲಿ ಅಕ್ಷರ ಪ್ರಚಾರ ತರಗತಿ, ರಾಷ್ಟ್ರೀಯ ಹಬ್ಬಗಳು, ಚರ್ಚಾಗೋಷ್ಠಿಗಳು, ಹರಿಕಥೆ, ಧಾರ್ಮಿಕ ಗ್ರಂಥಗಳ ವಾಚನ, ಜನಪದ ನಾಟಕ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಚಲನಚಿತ್ರ ಪ್ರದರ್ಶನಗಳು ಆಗಾಗ ನಡೆಯುತ್ತಿರುತ್ತವೆ. ಪುಸ್ತಕ ಭಂಡಾರದ ಪ್ರಗತಿಯ ಬಗ್ಗೆ ಕಾರ್ಯಕ್ರಮ ಕೈಗೊಳ್ಳುವ ಪೂರ್ಣ ಸ್ವಾತಂತ್ರ್ಯ ಭಂಡಾರ ಸಮಿತಿಗಿದೆ. ವಯಸ್ಕರ ಶಿಕ್ಷಣ ಸಮಿತಿ ತಾಂತ್ರಿಕ ನೆರವು ನೀಡುವುದು ಹಾಗೂ ಭಂಡಾರ ಸಮಿತಿ ಅನುಮೋದಿಸಿದ ಪುಸ್ತಕಗಳನ್ನು ವರ್ತಮಾನ ಪತ್ರಿಕೆಗಳನ್ನು ಮಾಸಿಕೆಗಳನ್ನು ಒದಗಿಸುವುದು. ಇವುಗಳ ಜೊತೆಗೆ ಪ್ರತಿ ಭಂಡಾರ ಸಮಿತಿ ಪ್ರಕಟಿಸುವ ವಾರಪತ್ರಿಕೆಯಾದ ಬೆಳಕು ಹಾಗೂ ಮಾಸಿಕೆಯಾದ ಪುಸ್ತಕ ಪ್ರಪಂಚದ ಪ್ರತಿಗಳನ್ನು ಒದಗಿಸುವುದು, ಗ್ರಾಮವಾಸಿಗಳಿಗೆ ಉಪಯುಕ್ತವಾದ ಲೇಖನಗಳನ್ನು ಪ್ರಕಟಿಸುವುದು, ಹೊಸ ಹೊಸ ಪುಸ್ತಕಗಳ ಪರಿಚಯ ಮಾಡಿಕೊಡುವುದು, ಪುಸ್ತಕ ಭಂಡಾರದ ಅಧಿಕಾರಿಗಳಿಗೆ ಪುಸ್ತಕಗಳನ್ನು ಆರಿಸುವ ಬಗ್ಗೆ ಸೂಚನೆ ಸಲಹೆಗಳನ್ನು ಕೊಡುವುದು ಹಾಗೂ ಮಾರ್ಗದರ್ಶನ ನೀಡುವುದು – ಪುಸ್ತಕ ಪ್ರಪಂಚದ ಉದ್ದೇಶ. ಗ್ರಾಮಾಂತರ ನಿವಾಸಿಗಳು ರಾಷ್ಟ್ರದಲ್ಲಿ ನಡೆಯುವ ಮುಖ್ಯ ಘಟನೆಗಳನ್ನೂ ಸಂಭವಿಸುವ ಬದಲಾವಣೆಗಳನ್ನೂ ತಿಳಿಯಲು ಸಹಾಯ ಮಾಡುವುದು ಮತ್ತು ಅವರ ಓದಿನ ಕಲೆಯನ್ನು ರೂಢಿಸಿಕೊಳ್ಳಲಿಕ್ಕೆ ಮಾರ್ಗ ಕಲ್ಪಿಸುವುದು – ಬೆಳಕು ಪತ್ರಿಕೆಯ ಉದ್ದೇಶ.

ಶಿಕ್ಷಣ ಸಮಿತಿ ತನ್ನ ಪ್ರಕಟಣೆಗಳನ್ನೂ ಇತರ ಉತ್ತಮ ಗ್ರಂಥಗಳನ್ನೂ ಗ್ರಂಥ ಭಂಡಾರಗಳಿಗೆ ಒದಗಿಸುತ್ತಿತ್ತು. ಭಂಡಾರಗಳಿಗೆ ಬೇಕಾಗುವ ಪುಸ್ತಕಗಳನ್ನು ಆರಿಸಲು ಒಂದು ತಜ್ಞರ ಸಮಿತಿ ಇತ್ತು. ಅದು ತಯಾರಿಸಿದ ಪುಸ್ತಕಗಳ ಪಟ್ಟಿಯನ್ನು ಪ್ರತಿ ಭಂಡಾರಕ್ಕೂ ಕೊಡಲಾಗುತ್ತಿತ್ತು. ಸೂಕ್ತ ಪುಸ್ತಕಗಳನ್ನು ಅಧಿಕಾರಿಗಳು ಆರಿಸುತ್ತಿದ್ದರು. ಕೇಂದ್ರ ಭಂಡಾರ ಇತರ ಜಿಲ್ಲಾ ಭಂಡಾರಗಳಿಗೆ, ಅವು ಗ್ರಾಮಾಂತರ ಭಂಡಾರಗಳಿಗೆ ಪುಸ್ತಕಗಳನ್ನು ಒದಗಿಸುವ ಏರ್ಪಾಟಿತ್ತು.

ಭಾರತ ಸರ್ಕಾರದ ಸಹಾಯ ಪಡೆದು ಸಮಿತಿ 1954ರಲ್ಲಿ ಸಾಹಿತ್ಯ ರಚನಾಲಯವನ್ನು ಏರ್ಪಡಿಸಿ ವಯಸ್ಕರ ಸಾಹಿತ್ಯ ರಚಿಸುವ ತರಬೇತನ್ನು ಹಲವು ಬರೆಹಗಾರರಿಗೆ ನೀಡಿತು. ಇಲ್ಲಿ ಸಿದ್ಧವಾಗಿ ಚೆನ್ನಾಗಿರುವ ಪುಸ್ತಕಗಳನ್ನು ಸಮಿತಿ ಅಚ್ಚುಮಾಡುತ್ತಿತ್ತು.

ಗ್ರಾಮಪಂಚಾಯತಿಯವರು, ರಾಜ್ಯಸರ್ಕಾರ, ಹಲವೊಮ್ಮೆ ಭಾರತ ಸರ್ಕಾರ, ಇದಕ್ಕಿಂತ ಹೆಚ್ಚಾಗಿ ದಾನಿಗಳಿಂದ ಬಂದ ಹಣ – ಹೀಗೆ ಸಂಗ್ರಹವಾದ ಹಣದಿಂದ ಪ್ರಕಟಣೆ ಮತ್ತು ಗ್ರಂಥ ಹಂಚಿಕೆ ಕೆಲಸ ಸುಗಮವಾಗಿ ನಡೆಯುತ್ತಿತ್ತು. (ಕೆ.ಎಸ್.ಎಂ.)

**4. ಗ್ರೇಟ್ ಬ್ರಿಟನಿನಲ್ಲಿ ಗ್ರಂಥಾಲಯಗಳ ಬೆಳೆವಣಿಗೆ :** ಇಂಗ್ಲೆಂಡಿನ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ ಪ್ರ.ಶ.ಪೂ. 40 ರ ವೇಳೆಗೆ ರೋಮನರ ಪ್ರಭುತ್ವಕ್ಕೆ ಅದು ಒಳಗಾಗಿತ್ತೆಂಬುದು ವೇದ್ಯವಾಗುತ್ತದೆ. ಮುಂದೆ ನಾನೂರು ವರ್ಷಗಳವರೆಗೂ ರೋಮನರ ಆಳಿಕೆ ಮುಂದುವರೆಯಿತು. 5ನೇಯ ಶತಮಾನದಲ್ಲಿ ಐರ್ಲೆಂಡಿನ ಜನ ಸೇಂಟ್ ಪ್ಯಾಟ್ರಿಕ್‌ನ ಪ್ರಭಾವಕ್ಕೊಳಗಾಗಿ ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರು. ಈ ಪ್ರಭಾವ ಇಂಗ್ಲೆಂಡ್, ಸ್ಕಾಟ್ಲೆಂಡ್, ಫ್ರಾನ್ಸ್ ಮತ್ತು ಯುರೋಪಿನ ಅನೇಕ ಭಾಗಗಳಿಗೆ ಹಬ್ಬಿತು. ಅನೇಕ ಚರ್ಚ್‌ಗಳನ್ನು ಸ್ಥಾಪಿಸಿ ಮತಧರ್ಮದ ಬಗ್ಗೆ ಹಾಗೂ ಇನ್ನಿತರ ಶಾಸ್ತ್ರಗಳ ಮೇಲಿನ ಕೃತಿಗಳನ್ನು ಸಂಗ್ರಹಿಸಿ ಗ್ರಂಥಾಲಯಗಳನ್ನು ತೆರೆದರು.

ಮೊಟ್ಟಮೊದಲಿಗೆ ಇಂಗ್ಲೆಂಡಿನ ಚರ್ಚ್‌ಗಳಲ್ಲಿ ಗ್ರಂಥಾಲಯಗಳು ಸ್ಥಾಪನೆಗೊಂಡದ್ದು ಸೇಂಟ್ ಆಗಸ್ಟಿನ್‌ನ ಪ್ರಯತ್ನದಿಂದಾಗಿ. ರೋಮ್‌ನಿಂದ 597ರಲ್ಲಿ ಈತ ಧರ್ಮ ಪ್ರಚಾರಕ್ಕಾಗಿ ಇಂಗ್ಲೆಂಡಿಗೆ ಬಂದ. ರೋಮ್, ಇಟಲಿಯ ಇತರ ಭಾಗಗಳು ಮೊದಲಾದ ಕಡೆಗಳಿಂದ ಕ್ರೈಸ್ತಧರ್ಮೀಯ ಗ್ರಂಥಗಳನ್ನು ಈತ ಇಂಗ್ಲೆಂಡಿನ ಗ್ರಂಥಾಲಯಗಳಿಗಾಗಿ ಸಂಗ್ರಹಿಸಿದ. ಬೆನೆಡಿಕ್ಟ್‌ನಿಂದ ಪ್ರಣೀತವಾದ ಗ್ರಂಥಾಲಯದ ಕಾನೂನುಗಳನ್ನು ಈತ ಅರಿತಿದ್ದ. ಕ್ಯಾಂಟರ್‌ಬರಿಯಲ್ಲಿ ಬೈಬಲ್ ಮುಂತಾದ ಮತೀಯ ಗ್ರಂಥಗಳ ಸಂಗ್ರಹವುಳ್ಳ ಒಂದು ಸಣ್ಣ ಗ್ರಂಥಾಲಯ ಸ್ಥಾಪನೆಯಾಯಿತು. 7ನೆಯ ಶತಮಾನದಲ್ಲಿ ಬೆನೆಡಿಕ್ಟ್ ಬಿಸ್ಕೋ ಎಂಬಾತ ವೇರ್‌ಮೌತ್ ಎಂಬಲ್ಲಿ ಚರ್ಚ್ ಸ್ಥಾಪಿಸಿ ಅದಕ್ಕೊಂದು ಗ್ರಂಥಾಲಯ ವನ್ನು ವ್ಯವಸ್ಥೆಗೊಳಿಸಿದ. ಈತ ಆರು ಸಲ ರೋಮ್ ನಗರಕ್ಕೆ ಭೇಟಿ ಕೊಟ್ಟು ಪ್ರತಿಯೊಂದು ಸಲವೂ ಬರುವಾಗ ವೇರ್‌ಮೌತ್ ಮತ್ತು ಜ್ಯಾರೊಗಳಲ್ಲಿರುವ ಗ್ರಂಥಾಲಯಗಳಿಗಾಗಿ ಗ್ರಂಥಗಳನ್ನು ತಂದು ಬಿಸ್ಕೋನ ಉತ್ತರಾಧಿಕಾರಿಯಾಗಿದ್ದ ಕೋತ್ ಫ್ರಾಯಿಡ್ ಗ್ರಂಥಾಲಯಗಳ ಅಭಿವೃದ್ಧಿಗಾಗಿ ತುಂಬ ಶ್ರಮವಹಿಸಿದ. ಎಗ್‌ಬರ್ಡ್ ಎಂಬ ಇನ್ನೊಬ್ಬ ಕ್ರೈಸ್ತ ಪಾದ್ರಿ ಯಾರ್ಕ್ ನಗರದ ಕ್ರೈಸ್ತ ದೇವಾಲಯದ ಶಾಲೆಯಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಿದ. ಇದು 7–8ನೆಯ ಶತಮಾನದವರೆಗೂ ಉತ್ತಮ ಸ್ಥಿತಿಯಲ್ಲಿತ್ತು. 8ನೆಯ ಶತಮಾನದ ಕೊನೆಯಲ್ಲಾದ ಡೇನಿಷ್ ಮತ್ತು ವೈಕಿಂಗ್ ದಾಳಿಗಳಿಂದಾಗಿ ಯಾರ್ಕ್ ಹಾಗೂ ಇಂಗ್ಲೆಂಡಿನ ಬಹು ಚರ್ಚ್‌ಗಳು, ಗ್ರಂಥಾಲಯಗಳು ನಾಶಗೊಂಡವು.

ಲಾರೆನ್ಷಿಯನ್ ಗ್ರಂಥಾಲಯದ ಓದುವ ಕೋಣೆ

ಚರ್ಚ್‌ನ ಪ್ರಧಾನ ಗುರುಗಳು ಹಾಗೂ ಪ್ರಾಂತೀಯ ಗುರುಗಳಿಗಾಗಿ ಅಲ್ಲಲ್ಲಿ ರೂಪುಗೊಂಡಿದ್ದ ದೊಡ್ಡ ದೊಡ್ಡ ಆರಾಧನಾಮಂದಿರಗಳಲ್ಲಿ ಸಾಕಷ್ಟು ಗ್ರಂಥಗಳನ್ನು ಕೂಡಿಡುವುದು ಪದ್ಧತಿಯಾಗಿತ್ತು. ಬಹುಪಾಲು ಗ್ರಂಥ ದತ್ತಿಯಾಗಿ ಬಂದಂಥವು. ಗ್ರಂಥಗಳನ್ನು ಕೊಳ್ಳಲು ಸಾಕಷ್ಟು ನಿಧಿಯೂ ದೊರಕುತ್ತಿತ್ತು. ಮತಧರ್ಮಕ್ಕೆ ಸಂಬಂಧಪಟ್ಟ ಗ್ರಂಥಗಳಷ್ಟನೇ ಅಲ್ಲದೆ ಹೆಚ್ಚು ಪ್ರಮಾಣದಲ್ಲಿ ಲೌಕಿಕ ವಿಷಯಕ ಗ್ರಂಥಗಳನ್ನೂ ಸಂಗ್ರಹಿಸುತ್ತಿದ್ದರು. ಇಂಗ್ಲೆಂಡಿನ ಡರ್‌ಹ್ಯಾಮ್, ಕ್ಯಾಂಟರ್‌ಬರಿ, ಯಾರ್ಕ್ ಮೊದಲಾದೆಡೆಗಳಲ್ಲಿ ಇಂಥ ಅನೇಕ ಗ್ರಂಥಾಲಯಗಳು ಮಧ್ಯಯುಗದಲ್ಲಿ ಪ್ರಾರಂಭಗೊಂಡವು. ಡರ್‌ಹ್ಯಾಮಿನ ಗ್ರಂಥಾಲಯಗಳಲ್ಲಿ 1200ರ ಹೊತ್ತಿಗೆ ಕೇವಲ 600 ಗ್ರಂಥಗಳಿದ್ದವು. ಅವುಗಳಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಉತ್ತಮ ಪುಸ್ತಕಗಳಿದ್ದವು. ಕ್ಯಾಂಟರ್‌ಬರಿ ಗ್ರಂಥಾಲಯದಲ್ಲಿ 1300ರ ಹೊತ್ತಿಗೆ ಸುಮಾರು 5,000 ಪುಸ್ತಕಗಳು ಇದ್ದುದು ಅಚ್ಚರಿಯ ಸಂಗತಿ. ಸಂಖ್ಯೆಯಲ್ಲಿ ಕತೀಡ್ರಲ್ ಗ್ರಂಥಾಲಯಗಳು ಕಡಿಮೆ ಯಾಗಿದ್ದರೂ ಚರ್ಚ್‌ಗಳು ಮತ್ತು ವಿಶ್ವವಿದ್ಯಾಲಯಗಳ ನಡುವೆ ಪರಸ್ಪರ ಸಂಪರ್ಕ ವ್ಯವಸ್ಥೆಗೆ ಹಾಗೂ ಪಶ್ಚಿಮ ಯುರೋಪಿನ ಬೌದ್ಧಿಕ ಸಾಂಸ್ಕೃತಿಕ ಸಂಪತ್ತುಗಳು ಸಮ್ಮಿಲನಗೊಳ್ಳಲು ಅವು ತುಂಬ ಸಹಕಾರಿಯಾದವು. 13ನೆಯ ಶತಮಾನದವರೆಗೂ ಮಠಗಳ ಅಧೀನದಲ್ಲಿದ್ದ ಗ್ರಂಥಾಲಯಗಳು ಸಂಖ್ಯೆಯಲ್ಲಿ ಗಾತ್ರದಲ್ಲಿ ಕಡಿಮೆಯಾಗಿದ್ದುವು. ಗ್ರಂಥಭಂಡಾರಕ್ಕಾಗಿ ಪ್ರತ್ಯೇಕ ಕಟ್ಟಡಗಳಿದ್ದಿರಲಿಲ್ಲ. ಸನ್ಯಾಸಿಗಳಿಂದ, ಶ್ರೀಮಂತರಿಂದ, ಪಂಡಿತರಿಂದ ಹಾಗೂ ಸಂದರ್ಶಕ ಉದಾರಿಗಳಿಂದ

ಕೊಡುಗೆಯಾಗಿ ಬಂದ ಗ್ರಂಥಗಳ ಸಂಖ್ಯೆಯೇ ಹೆಚ್ಚು. ಬೈಬಲ್‌ಗಳು ಹಾಗೂ ಮತಗ್ರಂಥಗಳು, ಚರ್ಚಿನ ಪಿತಾಮಹರಿಂದ ರಚಿಸಲ್ಪಟ್ಟ ಗ್ರಂಥಗಳು, ಸಾಧು ಸಂತರ ಜೀವನ ಚರಿತ್ರೆಗಳು, ಲ್ಯಾಟಿನ್ ಪಠ್ಯಗ್ರಂಥಗಳು, ವ್ಯಾಕರಣ ಗ್ರಂಥಗಳು, ಸ್ಥಳಪುರಾಣಗಳು – ಮೊದಲಾದವುಗಳು ಆ ಸಂಗ್ರಹಗಳಲ್ಲಿನ ವಿಶೇಷಗಳಾಗಿದ್ದುವು.

ಗ್ರಂಥಾಲಯಗಳ ವ್ಯವಸ್ಥೆ : 12ನೆಯ ಶತಮಾನದ ಪುಸ್ತಕಗಳು ಚರ್ಮದ ಹಾಳೆಗಳ ಮೇಲೆ ಕೈ ಬರೆಹದಲ್ಲಿ ಬರೆದುವುಗಳು. ಜಂಬುಕಾಗದಗಳು (ಪಪೈರಸ್) ಬಳಕೆಯಲ್ಲಿರಲಿಲ್ಲ. ಹಲವು ಗ್ರಂಥಾಲಯಗಳೊಳಗೆ ಪರಸ್ಪರ ಗ್ರಂಥವಿನಿಮಯಗಳು ಕೆಲವೊಮ್ಮೆ ಮಾತ್ರ ನಡೆಯುತ್ತಿದ್ದುವು. ಸ್ಥೂಲವಾಗಿ ಗ್ರಂಥಗಳನ್ನು ಮೊದಲು ವಿಷಯಾನುಕ್ರಮವಾಗಿ, ತರುವಾಯ ಗಾತ್ರ ಮತ್ತು ಆನುಷಂಗಿಕ ಕ್ರಮಾಂಕಗಳ ಪ್ರಕಾರ ಜೋಡಿಸುತ್ತಿದ್ದರು. ಅನೇಕ ಮಠಗಳಲ್ಲಿ ಗ್ರಂಥಾಲಯಗಳಲ್ಲಿ ಗ್ರಂಥಗಳ ಯಾದಿಗಳನ್ನು ತಯಾರಿಸುತ್ತಿದ್ದರು. ಮುಖ್ಯವಾಗಿ ಲೇಖಕರ, ಶೀರ್ಷಿಕೆಗಳ ಪಟ್ಟಿಗಳನ್ನು ತಯಾರಿಸುವುದು ವಾಡಿಕೆಯಲ್ಲಿತ್ತು. ಯಾರಾದರೊಬ್ಬ ಸನ್ಯಾಸಿ ಗ್ರಂಥಪಾಲನಾಗಿ ನಿಯುಕ್ತವಾಗಿರುತ್ತಿದ್ದ. ಇನ್ನಿತರ ಕೆಲಸಗಳ ಜೊತೆಗೆ ಪುಸ್ತಕಗಳ ಸಂರಕ್ಷಣೆಯ ಹೊಣೆಯೂ ಆತನದಾಗಿತ್ತು.

ಮಧ್ಯಯುಗದ ಕೊನೆಯ ಹೊತ್ತಿಗೆ ಚರ್ಚ್‌ಗಳ ಹಾಗೂ ಮಂದಿರಗಳ ಗ್ರಂಥಾಲಯಗಳ ಗಾತ್ರದಲ್ಲೂ ಸಂಖ್ಯೆಯಲ್ಲೂ ಉತ್ಕರ್ಷ ಕಂಡುಬಂತು. ಸಾವಿರಾರು ಗ್ರಂಥಗಳು ಸಂಗ್ರಹಿಸಲ್ಪಟ್ಟವು. ಓದಲು ಇಳಿಮೇಜುಗಳು, ಪ್ರತ್ಯೇಕ ಕಪಾಟುಗಳು ಸಿದ್ಧವಾದವು. ಜೊತೆಗೆ ಸ್ಥಳ ಅಭಾವದ ಪ್ರಶ್ನೆಯೂ ಉದ್ಭವಿಸಿತು. 15ನೆಯ ಶತಮಾನದ ಕೊನೆಯ ವೇಳೆಗೆ ಅನೇಕ ನೂತನ ಕಟ್ಟಡಗಳು ನಿರ್ಮಿತವಾದವು. ಗ್ರಂಥಗಳನ್ನು ಮುಖ್ಯವಾಗಿ ಎರಡು ವಿಭಾಗಗಳಾಗಿ ವಿಂಗಡಿಸಲಾಯಿತು. ಸಾರ್ವತ್ರಿಕವಾಗಿ ಉಪಯೋಗಿಸಲ್ಪಟ್ಟ ಗ್ರಂಥಗಳನ್ನು ಇಳಿಮೇಜುಗಳಿಗೆ ಸರಪಳಿಗಳಿಂದ ಬಿಗಿಯಲಾಗುತ್ತಿತ್ತು. ಕ್ರಮೇಣ ಗ್ರಂಥಾಲಯಗಳಿಗೆ ಮುದ್ರಿತ ಗ್ರಂಥಗಳ ಸೇರ್ಪಡೆಯಾದಂತೆ ಹಸ್ತಲಿಖಿತ ಗ್ರಂಥಗಳನ್ನು ಮಾತ್ರ ಸಂರಕ್ಷಣೆಗಾಗಿ ಸರಪಳಿಗಳಿಂದ ಕಟ್ಟುತ್ತಿದ್ದರು. ವೃತ್ತಾಕಾರದ ಇಳಿಮೇಜುಗಳಲ್ಲಿ ಗ್ರಂಥಗಳನ್ನು ಅಂದವಾಗಿ ಜೋಡಿಸುತ್ತಿದ್ದರು. ಓದುವಾಗ ಮೇಜಿನ ಸುತ್ತ ಗ್ರಂಥಗಳಿಗಾಗಿ ಓಡಾಡಬೇಕಾಗಿತ್ತು. ಕೆಲವೊಮ್ಮೆ ಈ ಇಳಿಮೇಜುಗಳಿಗೆ ಗಾಲಿಗಳನ್ನು ಅಳವಡಿಸುತ್ತಿದ್ದರು.



ಸೆಲ್ಸಸ್ ಗ್ರಂಥಾಲಯದ ಭಗ್ನಾವಶೇಷಗಳು, ಟರ್ಕಿ

ಚರ್ಚ್ ಗ್ರಂಥಾಲಯಗಳ ಅವನತಿ : ಚರ್ಚ್‌ಗಳ ಗ್ರಂಥಾಲಯಗಳು ಅನೇಕ ವರ್ಷ ಅಧ್ಯಯನ ಕೇಂದ್ರವಾಗಿದ್ದುವು. ಕತೀಡ್ರಲ್ ಗ್ರಂಥಾಲಯಗಳು ಹೆಚ್ಚಾದಂತೆ, ವಿಶ್ವವಿದ್ಯಾಲಯಗಳು ಸ್ಥಾಪನೆಯಾದಂತೆ ಚರ್ಚ್ ಗ್ರಂಥಾಲಯಗಳ ಪ್ರಾಮುಖ್ಯ ಕಡಿಮೆಯಾಗಿ 17ನೆಯ ಶತಮಾನದಲ್ಲಿ ಅನೇಕ ಗ್ರಂಥಾಲಯಗಳು ಮುಚ್ಚಲ್ಪಟ್ಟವು. 16ನೆಯ ಶತಮಾನದಲ್ಲಿ 8ನೆಯ ಹೆನ್ರಿಯ ಕಾಲದಲ್ಲಿ ಚರ್ಚ್‌ಗಳೆಲ್ಲ ನಾಶಗೊಂಡಿದ್ದರಿಂದ ಅಲ್ಲಿಯ ಅಮೂಲ್ಯ ಹಸ್ತಪ್ರತಿಗಳು, ಗ್ರಂಥರಾಶಿಗಳು ಗ್ರಂಥ ವ್ಯಾಪಾರಿಗಳ ಕೈಸೇರಿದವು. ಹೆಚ್ಚಿನವುಗಳು ಸುಟ್ಟುಹೋದವು.

ವಿಶ್ವವಿದ್ಯಾಲಯಗಳ ಗ್ರಂಥಾಲಯಗಳು : 1150ರ ಸುಮಾರಿಗೆ ಅನೇಕ ಧಾರ್ಮಿಕ ಶಾಲೆಗಳು ಪ್ಯಾರಿಸ್, ನಾಟರ್‌ಡೇಮ್ ಮುಂತಾದೆಡೆಗಳಲ್ಲಿ ಪ್ರಾರಂಭವಾದುವು. 1167ರಲ್ಲಿ ಕೆಲವು ವಿದ್ಯಾರ್ಥಿಗಳು ಸೇರಿ ಇಂಗ್ಲೆಂಡಿನಲ್ಲಿ ಅಂಥ ಶಾಲೆಯೊಂದನ್ನು ತೆರೆದರು. ಇದನ್ನೇ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರಾರಂಭವೆನ್ನಬಹುದು. 13ನೆಯ ಶತಮಾನದ ಹೊತ್ತಿಗೆ ಆಕ್ಸ್‌ಫರ್ಡ್‌ನ ಅಧೀನಕ್ಕೆ ಒಳಪಟ್ಟ ಕಾಲೇಜುಗಳು ಕೆಲವಿದ್ದರೂ ಗ್ರಂಥಾಲಯಗಳು ಪ್ರಾರಂಭಗೊಳ್ಳಲು ಮತ್ತೊಂದು ಶತಮಾನವೇ ಕಳೆಯಬೇಕಾಯಿತು. ನ್ಯೂ ಕಾಲೇಜು ಪ್ರಾರಂಭದಲ್ಲೇ (1380) ಗ್ರಂಥಾಲಯವನ್ನು ಹೊಂದಿತ್ತು. ಆಕ್ಸ್‌ಫರ್ಡ್ ಗ್ರಂಥಾಲಯದಲ್ಲಿ 15ನೆಯ ಶತಮಾನದವರೆಗೂ ಯೋಗ್ಯ ಸಂಗ್ರಹ ಇರಲಿಲ್ಲ. ಮಾರ್ಸೆಸ್ಟರದ ಬಿಷಪ್ ಆಗಿದ್ದ ಥಾಮಸ್ ಕಬ್‌ಹ್ಯಾಮ್ 1320ರಲ್ಲಿ ಆಕ್ಸ್‌ಫರ್ಡ್ ಗ್ರಂಥಾಲಯಕ್ಕಾಗಿ ಒಂದು ಕಟ್ಟಡವನ್ನು ಕಟ್ಟಿಸಿದ. ಅದರಲ್ಲಿ ಕಾಬ್‌ಹ್ಯಾಮ್ ಸಂಗ್ರಹಿಸಿದ ಮತ್ತು ಗ್ಲೌಸ್ಟರಿನ ಡ್ಯೂಕ್ ಆಗಿದ್ದ ಹಂಫ್ರಿ ದಾನವಾಗಿತ್ತ ಪುಸ್ತಕಗಳನ್ನು ಕೂಡಿಸಿದರು.

ಕೇಂಬ್ರಿಜ್ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳಲ್ಲಿ ಗ್ರಂಥಾಲಯಗಳು ಸ್ಥಾಪನೆಗೊಂಡಿದ್ದರೂ 16ನೆಯ ಶತಮಾನದವರೆಗೂ ಅಲ್ಲಿನ ಗ್ರಂಥಗಳ ಸಂಖ್ಯೆ ಬಹಳ ಕಡಿಮೆಯಾಗಿತ್ತು. ಪೆಂಬ್ರೋಕ್ ಕಾಲೇಜಿನ ಗ್ರಂಥಾಲಯ 1347ರಲ್ಲೂ ಯೂನಿವರ್ಸಿಟಿ ಕಾಲೇಜಿನ ಗ್ರಂಥಾಲಯ 1350ರಲ್ಲೂ ಕಿಂಗ್ಸ್ ಕಾಲೇಜಿನ ಗ್ರಂಥಾಲಯ 1441ರಲ್ಲೂ ಪ್ರಾರಂಭವಾದುವು. ವಿಶ್ವವಿದ್ಯಾಲಯದ ಪ್ರಧಾನ ಗ್ರಂಥಾಲಯ ಸುಮಾರು 1415ರಲ್ಲಿ ಪ್ರಾರಂಭವಾಗಿ 1480ರ ತನಕವೂ ನಿಧಾನವಾಗಿ ಬೆಳೆಯಿತು. ಅದೇ ವರ್ಷ ಯಾರ್ಕ್‌ನ ಆರ್ಚ್‌ಬಿಷಪ್ ಆಗಿದ್ದ ಥಾಮಸ್ ರೋಥಕ್‌ಹ್ಯಾಮ್ ಹೊಸ ಕಟ್ಟಡವೊಂದನ್ನು ಕಟ್ಟಿಸಿದ.

ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಹೆಚ್ಚಿನ ಗ್ರಂಥಗಳು ರಾಜರಿಂದ, ಶ್ರೀಮಂತರಿಂದ, ಬಿಷಪ್‌ಗಳಿಂದ ಹಾಗೂ ವ್ಯಾಪಾರಿಗಳಿಂದ ಉಚಿತವಾಗಿ ಬಂದುವು. ಗ್ರಂಥಾಲಯಗಳ ಕಟ್ಟಡಗಳು, ಗ್ರಂಥಗಳ ಜೋಡಣೆ ವ್ಯವಸ್ಥೆ ಬಹುಮಟ್ಟಿಗೆ ಚರ್ಚ್‌ಗಳ ಗ್ರಂಥಾಲಯ ಕ್ರಮಗಳನ್ನು ಹೋಲುತ್ತಿದ್ದವು. 12ನೆಯ ಶತಮಾನದಲ್ಲಿ ಪುರಾತನ ಕೈ ಬರೆಹದ ಗ್ರಂಥಗಳನ್ನು ಕಪಾಟುಗಳಲ್ಲಿ ಭದ್ರವಾಗಿಡುತ್ತಿದ್ದರು. 13 ಮತ್ತು 14ನೆಯ ಶತಮಾನದಲ್ಲಿ ಅವನ್ನು ಇಳಿಮೇಜುಗಳ ಮೇಲ್ಭಾಗದಲ್ಲಿ ಜೋಡಿಸಿದ ಸಣ್ಣ ಸಣ್ಣ ಕಪಾಟುಗಳಲ್ಲಿ ಇಡುತ್ತಿದ್ದರು. ಸಾಮಾನ್ಯವಾಗಿ ಗ್ರಂಥಗಳಿಗೆ ಸರಪಳಿ ಇರುತ್ತಿತ್ತು. 15ನೆಯ ಶತಮಾನದ ಹೊತ್ತಿಗೆ ಗ್ರಂಥಗಳನ್ನಿಡಲು ಪ್ರತ್ಯೇಕ ಕಟ್ಟಡಗಳ ನಿರ್ಮಾಣವಾಯಿತು. ದೊಡ್ಡ ಕಿಟಕಿಗಳಿಂದಾಗಿ ಸಾಕಷ್ಟು ಬೆಳಕು ಇರುವ ಉದ್ದನೆಯ ಇಕ್ಕಟ್ಟಾದ ಕೋಣೆಗಳಲ್ಲಿ ದೊಡ್ಡ ಗ್ರಂಥಗಳ ಕಪಾಟುಗಳು ಇರುತ್ತಿದ್ದವು. ಕೋಣೆಗಳ ಮಧ್ಯೆ ಸಾಲಾಗಿದ್ದ ಇಳಿಮೇಜುಗಳ ಮೇಲೆ ಸೂರ್ಯಪ್ರಕಾಶ ನೇರವಾಗಿ ಬೀಳುತ್ತಿದ್ದುದರಿಂದ ಓದಲು ಅನುಕೂಲವಾಗುವಂತಿತ್ತು. ಕ್ರಮೇಣ 16ನೆಯ ಶತಮಾನದಲ್ಲಿ 5 ಅಥವಾ 6 ಅಂತಸ್ತು ಹಲಗೆಗಳುಳ್ಳ ದೊಡ್ಡ ದೊಡ್ಡ ಕಪಾಟುಗಳನ್ನು ಇಳಿಮೇಜುಗಳಿಗೆ ಜೋಡಿಸುವ ಪದ್ಧತಿ ಬಳಕೆಗೆ ಬಂತು. ಇದರಿಂದಾಗಿ ಕಡಿಮೆ ಸ್ಥಳಾವಕಾಶದಲ್ಲಿ ಹೆಚ್ಚು ಹೆಚ್ಚು ಗ್ರಂಥಗಳನ್ನು ಜೋಡಿಸಲು ಅನುಕೂಲವಾಯಿತು. ಮುದ್ರಣ ಪ್ರಾರಂಭವಾದ ಮೇಲೆ ಹಸ್ತಪ್ರತಿಗಳು ಕಡಿಮೆಯಾಗಿ ಹೆಚ್ಚು ಪ್ರಮಾಣದಲ್ಲಿ ಗ್ರಂಥಗಳು ಬರಲಾರಂಭಿಸಿದುವು.

ವೇಲ್ಸ್‌ನ ರಾಷ್ಟ್ರೀಯ ಗ್ರಂಥಾಲಯ

ಗ್ರಂಥಾಲಯಗಳ ಆಡಳಿತ ವ್ಯವಸ್ಥೆ : ಗ್ರಂಥಸೂಚಿಯನ್ನು ಅಕಾರಾದಿಯಾಗಿ, ಕರ್ತೃ ಶಿರೋನಾಮೆ ಪ್ರಕಾರವಾಗಿ ತಯಾರಿಸುತ್ತಿದ್ದರು. ಕೆಲವೊಮ್ಮೆ ಗ್ರಂಥಗಳನ್ನು ಒತ್ತೊತ್ತಾಗಿ ಸಾಲಿನಲ್ಲಿ ಇಟ್ಟಿರುವ ನಿದರ್ಶನಗಳೂ ಇವೆ. ಹೆಚ್ಚು ಬೇಡಿಕೆಯಿರುವ ಗ್ರಂಥಗಳನ್ನು ಸರಪಳಿಗಳಿಂದ ಕಟ್ಟಿಟ್ಟು ಬೇಕಾದಾಗ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳು ಸ್ಥಳದಲ್ಲೇ ಓದುವ ವ್ಯವಸ್ಥೆಯಿತ್ತು. ಕೆಲವೊಮ್ಮೆ ಅಮೂಲ್ಯ ಗ್ರಂಥಗಳನ್ನು ಭದ್ರವಾಗಿ ಮೂರು ಬೀಗಗಳುಳ್ಳ ಬೀರುಗಳಲ್ಲಿ ಜೋಪಾನ ಮಾಡಲಾಗುತ್ತಿತ್ತು. ಮೂರು ಬೀಗದ ಕೈಗಳು ಬೇರೆ ಬೇರೆ ಅಧಿಕಾರಿಗಳ ವಶವಿದ್ದುದರಿಂದ ಅಂಥ ಪುಸ್ತಕಗಳನ್ನು ಪಡೆಯಲು ಆ ಮೂವರೂ ಹಾಜರಿರಬೇಕಾಗುತ್ತಿತ್ತು.

ಕಿರಿಯ ಅಧ್ಯಾಪಕನಾಗಲಿ, ಹಿರಿಯ ವಿದ್ಯಾರ್ಥಿಗಳಾಗಲಿ ಗ್ರಂಥಾಲಯದ ಜವಾಬ್ದಾರಿಯನ್ನು ಹೊರಬೇಕಾಗುತ್ತಿತ್ತು. ಮತೀಯ ಸಂಸ್ಥೆಗಳ ಅಧೀನದಲ್ಲಿದ್ದ ಕಾಲೇಜುಗಳ

ಗ್ರಂಥಾಲಯಗಳ ಮೇಲ್ವಿಚಾರಣೆ ಸನ್ಯಾಸಿಗಳದ್ದಾಗಿತ್ತು. ವರ್ಷಂಪ್ರತಿ ಕಾಲೇಜಿನ ಮೇಲಧಿಕಾರಿಯ ಸಮಕ್ಷಮದಲ್ಲಿ ಗ್ರಂಥಗಳ ಲೆಕ್ಕ ನಡೆಯುತ್ತಿತ್ತು. ಕಳೆದುಹೋದ ಗ್ರಂಥಗಳ ಮೌಲ್ಯವನ್ನು ಗ್ರಂಥಪಾಲರು ತೆರಬೇಕಾದ ಪ್ರಸಂಗಗಳೂ ಇಲ್ಲದಿರಲಿಲ್ಲ.

ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಗ್ರಂಥಾಲಯಗಳ ಗ್ರಂಥಗಳ ಉಪಯೋಗ ಎಲ್ಲರಿಗೂ ದೊರಕುತ್ತಿತ್ತು. ಗ್ರಂಥಗಳು ಹಾಳಾದಲ್ಲಿ ಹೊಸ ಪ್ರತಿಗಳನ್ನು ತಯಾರಿಸುತ್ತಿದ್ದರು. ಮಧ್ಯಯುಗದ ಗ್ರಂಥಭಂಡಾರಿಗಳಿಂದ ಸಾವಿರಾರು ವಿದ್ಯಾರ್ಥಿಗಳು ಜ್ಞಾನೋಪಾಸಕರಾಗುವಂತಾಯಿತು. ವೈದ್ಯಶಾಸ್ತ್ರ, ತತ್ತ್ವಶಾಸ್ತ್ರ, ನ್ಯಾಯಶಾಸ್ತ್ರ ಮುಂತಾದ ವಿಷಯಗಳಲ್ಲಿ ಅಪಾರ ಜ್ಞಾನ ಸಂಪಾದಿಸಿ ಅನೇಕರು ಪರದೇಶಗಳಿಗೆ ಹೋಗಿ ಜ್ಞಾನಪ್ರಸಾರ ಮಾಡಿದರು. ಮಧ್ಯಯುಗದ ವಿಶ್ವವಿದ್ಯಾಲಯಗಳಿಂದ ಮತ್ತು ಅವುಗಳ ಗ್ರಂಥಪಾಲರಿಂದ ಜನತೆಗೆ ಜ್ಞಾನದ ಮೊತ್ತ ಲಭ್ಯವಾಯಿತು. ಮುಂದಿನ ಶತಮಾನದಲ್ಲಾದ ಸಾಹಿತ್ಯ ಮತ್ತು ಕಲೆಗಳ ಪುನರುಜ್ಜೀವನದ ದೊಡ್ಡ ಕ್ರಾಂತಿಗೆ ಸಹಕಾರಿಯಾಗುವುದರಲ್ಲಿ ಗ್ರಂಥಾಲಯಗಳು ಯಶಸ್ವಿಯಾದವು.

1500 ರ ಹೊತ್ತಿಗೆ ಮುದ್ರಣ ಕಲೆಯ ಪ್ರಸಾರದಿಂದಾಗಿ ಬಹುಸಂಖ್ಯೆಯಲ್ಲಿ ಪುಸ್ತಕಗಳು ಗ್ರಂಥಾಲಯವನ್ನು ಸೇರುವಂತಾಯಿತು. 16 ನೆಯ ಶತಮಾನದಿಂದ 19 ನೆಯ ಶತಮಾನದವರೆಗೆ ಯುರೋಪಿನಲ್ಲಿ ವ್ಯಾಪಿಸಿದ ರಾಜಕೀಯ ಕ್ರಾಂತಿಗೊಂದಲಗಳಿಂದಾಗಿ ಬಹುತೇಕ ಚರ್ಚ್‌ಗಳು ಮುಚ್ಚಲ್ಪಟ್ಟವು. ಅವುಗಳಿಗೆ ಸೇರಿದ ಪುಸ್ತಕಗಳು ಮತ್ತು ಅಪಾರ ಹಸ್ತಪ್ರತಿಗಳು ವಿಶ್ವವಿದ್ಯಾಲಯಗಳ ಹಾಗೂ ಕಾಲೇಜುಗಳ ಗ್ರಂಥಭಂಡಾರಗಳಿಗೆ ಸೇರಿಸಲ್ಪಟ್ಟವು. 1550 ರಲ್ಲಿ 8 ನೆಯ ಹೆನ್ರಿಯ ಅಧಿಕಾರಿಗಳು ಕೇಂಬ್ರಿಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಿಗೆ ಪ್ರವೇಶಿಸಿ ಹಲವಾರು ಗ್ರಂಥಗಳನ್ನು ನಿರ್ನಾಮಗೊಳಿಸಿದರು. ಮುಂದೆ ಸರ್ ಥಾಮಸ್ ಬೋಡ್ಲೆಯ ಅಪಾರ ಪರಿಶ್ರಮಗಳಿಂದಾಗಿ 1602ರಲ್ಲಿ ಆಕ್ಸ್‌ಫರ್ಡಿನ ಪ್ರಧಾನ ಗ್ರಂಥಾಲಯಗಳು ಮತ್ತೊಮ್ಮೆ ಚಿಗುರುವಂತಾದವು. ಈತ ತನ್ನ ಸ್ವಂತ ಗ್ರಂಥಸಂಗ್ರಹಗಳನ್ನು ದಾನವಾಗಿತ್ತನಲ್ಲದೆ ಅನೇಕ ಗ್ರಂಥಗಳನ್ನು ಕ್ರಯಕ್ಕೆ ಪಡೆದು ಆಕ್ಸ್‌ಫರ್ಡ್ ಗ್ರಂಥಾಲಯಕ್ಕೆ ಸೇರಿಸಿದ. ಸಾಮಾನ್ಯ ಪ್ರಜೆಯಾಗಿಯೂ ಸರ್ಕಾರದ ಪ್ರತಿನಿಧಿಯಾಗಿಯೂ ದೇಶದ ಎಲ್ಲೆಡೆ ಸಂಚರಿಸಿ ನಾನಾ ಕಡೆಗಳಿಂದ ಗ್ರಂಥಗಳನ್ನೂ ಅಮೂಲ್ಯ ಹಸ್ತಪ್ರತಿಗಳನ್ನೂ ಈತ ಸಂಗ್ರಹಿಸಿದ. ಮುಂದೆ ಈ ಗ್ರಂಥಾಲಯಕ್ಕೆ ಬೋಡ್ಲೀಯನ್ ಲೈಬ್ರರಿ ಎಂದೇ ನಾಮಕರಣವಾಯಿತು. ಈತನ ಕಾಲದಲ್ಲಿ 655 ಪುಟಗಳ ಗ್ರಂಥಸೂಚಿಯೊಂದು ಸಿದ್ಧವಾಯಿತು (1605). 1605ರಲ್ಲಿ ಪ್ರಥಮ ಗ್ರಂಥಪಾಲನಾಗಿದ್ದ ಥಾಮಸ್ ಜೇಮ್ಸ್ ಪ್ರಥಮ ಮುದ್ರಿತ ಗ್ರಂಥಸೂಚಿಯನ್ನು ತಯಾರಿಸಿದ. ಅಲ್ಲಿಂದೀಚೆಗೆ ಈ ಗ್ರಂಥಾಲಯ ನಿರಂತರವಾಗಿ ಪ್ರವರ್ಧಮಾನಗೊಂಡಿದೆ. 1900ರ ವೇಳೆಗೆ ಆಕ್ಸ್‌ಫರ್ಡ್ ಗ್ರಂಥಾಲಯ ಎಂಟು ಲಕ್ಷಕ್ಕೂ ಹೆಚ್ಚು ಗ್ರಂಥಗಳನ್ನು, 40,000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಪಡೆದಿತ್ತು.

ರಾಷ್ಟ್ರೀಯ ಗ್ರಂಥಾಲಯ, ಸಿಂಗಪುರ

16ನೆಯ ಶತಮಾನದ ಕೊನೆಗೆ ಹಾಗೂ 17 ನೆಯ ಶತಮಾನದ ಆದಿ ಭಾಗದಲ್ಲಿ ಕಾಲೇಜು ಗ್ರಂಥಾಲಯಗಳು ಪುನರ್ರಚನೆಗೊಂಡವು. 1612ರಲ್ಲಿ ಸ್ಥಾಪನೆಗೊಂಡ ವಾಧಾಮ್ ಕಾಲೇಜು ಎರಡನೆಯ ವರ್ಷದಲ್ಲಿ ಸ್ವಂತ ಗ್ರಂಥಾಲಯವನ್ನು ಏರ್ಪಡಿಸಿಕೊಂಡಿತು. 1612ರಲ್ಲಿ ಬೋಡ್ಲೀಯನ್ ಗ್ರಂಥಾಲಯ ನೂತನ ಕಟ್ಟಡವನ್ನು ಪಡೆಯಿತು. 1700ರ ಹೊತ್ತಿಗೆ ಈ ಗ್ರಂಥಾಲಯದಲ್ಲಿ ಸುಮಾರು 30,000 ಗ್ರಂಥಗಳಿದ್ದವು. ಈ ಶತಮಾನದಲ್ಲಿ ಗ್ರಂಥಾಲಯಗಳಿಗೆ ಬಂದ ಗ್ರಂಥಗಳಲ್ಲಿ ಮಹನೀಯರಿಂದ ಕೊಡುಗೆಯಾಗಿ ಬಂದವೇ ಹೆಚ್ಚು. ಕ್ರೈಸ್ತ ಪಾದ್ರಿ ಲಾಡ್‌ಗೆ ಸೇರಿದ 1300 ಅಮೂಲ್ಯ ಹಸ್ತಪ್ರತಿಗಳು, ಖ್ಯಾತ ವಕೀಲ ಜಾನ್ ಸೆಲ್ಡನ್ನಿಗೆ ಸೇರಿದ 8,000 ಗ್ರಂಥಗಳು ದಾನವಾಗಿ ಬಂದವು. 1714ರಲ್ಲಿ ಜಾನ್ ರ‍್ಯಾಡ್‌ಕ್ಲಿಫ್ ಎಂಬ ವೈದ್ಯ ವೈದ್ಯವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಕೊಡುಗೆಯಾಗಿತ್ತ.

16ನೆಯ ಶತಮಾನದ ಅರಾಜಕ ಪರಿಸ್ಥಿತಿಗಳಿಂದಾಗಿ ಕೇಂಬ್ರಿಜ್ ವಿಶ್ವವಿದ್ಯಾಲಯ ಗ್ರಂಥಾಲಯದ ಬೆಳವಣಿಗೆ ಕುಂಠಿತಗೊಂಡಿತು. 1650ರಲ್ಲಿ ಗ್ರಂಥಾಲಯದಲ್ಲಿ ಕೇವಲ 1000 ಗ್ರಂಥಗಳು ಮತ್ತು 400 ಹಸ್ತಪ್ರತಿಗಳು ಇದ್ದವು. ಇಂಗ್ಲೆಂಡಿನ ರಾಜಪ್ರಭುತ್ವ ಸ್ಥಾಪನೆಗೊಂಡ ಮೇಲೆ 2ನೆಯ ಚಾರ್ಲ್ಸ್ ದೊರೆ ಕೇಂಬ್ರಿಜ್ ವಿಶ್ವವಿದ್ಯಾಲಯದ ಸುಧಾರಣೆಯತ್ತ ಗಮನ ಹರಿಸಿದ. ಅನೇಕ ಮಹನೀಯರಿಂದ ಗ್ರಂಥಗಳು ಹಸ್ತಪ್ರತಿಗಳು ಉದಾರವಾಗಿ ಬಂದವು. 1715ರಲ್ಲಿ 1ನೆಯ ಜಾರ್ಜ್ ದೊರೆ ಬಿಷಪ್‌ಮೂರ್‌ಗೆ ಸೇರಿದ 30,000 ಗ್ರಂಥಗಳನ್ನು ಗ್ರಂಥಾಲಯಕ್ಕೆ ಕೊಟ್ಟ. ಈ ಸಂಗ್ರಹದಲ್ಲಿ ಇಂಗ್ಲೆಂಡಿನ ಇತಿಹಾಸ

ಸಾರ್ವಜನಿಕ ಗ್ರಂಥಾಲಯ, ಪೋಲಂಡ್

ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಖಚಿತ ಮಾಹಿತಿಗಳಿವೆ. 1755ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ ಹೊಸ ಕಟ್ಟಡ ಬಂತು. 1900ರಲ್ಲಿ ಈ ಗ್ರಂಥಾಲಯದಲ್ಲಿ ಸುಮಾರು 10 ಲಕ್ಷ ಗ್ರಂಥಗಳ ಸಂಗ್ರಹವಿತ್ತು. ಅನೇಕ ಶತಮಾನಗಳ ವರೆಗೆ ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳು ಮಾತ್ರ ಇದ್ದವು. ಕ್ರಮೇಣ ಸ್ಕಾಟ್ಲೆಂಡ್ ಮತ್ತು ಐರ್ಲೆಂಡಗಳಲ್ಲೂ ವಿಶ್ವವಿದ್ಯಾಲಯಗಳು ಪ್ರಾರಂಭಗೊಂಡವು. ಗ್ಲ್ಯಾಸ್ಗೊ ವಿಶ್ವವಿದ್ಯಾಲಯ 1453ರಲ್ಲಿ ಸ್ಥಾಪನೆಗೊಂಡಾಗ ಅದರಲ್ಲಿ ಒಂದು ಸುಸಜ್ಜಿತ ಗ್ರಂಥಾಲಯವಿತ್ತು. ಸ್ಕಾಟ್ಲೆಂಡಿನಲ್ಲಿ ಪ್ರಾರಂಭಗೊಂಡ (1610) ಸೇಂಟ್ ಆಂಡ್ರೂ ವಿಶ್ವವಿದ್ಯಾಲಯದಲ್ಲೂ ಅಷ್ಟೆ. ಕ್ಲೆಮೆಂಟ್ ಲಿಟಲ್ ಎಂಬ ಧನಿಕ ವ್ಯಾಪಾರಿ ಬೇಕಾದಷ್ಟು ಧನ ಹಾಗೂ ಗ್ರಂಥಗಳನ್ನು ದಾನವಾಗಿತ್ತ ಪ್ರಯುಕ್ತ 1553ರಲ್ಲಿ ಎಡಿನ್‌ಬರೊ ವಿಶ್ವವಿದ್ಯಾಲಯಕ್ಕೆ ಉತ್ತಮ ಗ್ರಂಥಾಲಯವೊಂದು ಒದಗಿದಂತಾಯಿತು. 1634ರಲ್ಲಿ ಅಬರ್‌ಡೀನ್‌ನಲ್ಲಿ ಪ್ರಾರಂಭಗೊಂಡ ವಿಶ್ವವಿದ್ಯಾಲಯ ಒಂದು ಗ್ರಂಥಾಲಯವನ್ನು ಹೊಂದಿತ್ತಾದರೂ ಗಾತ್ರದಲ್ಲಿ ಮತ್ತು ಗ್ರಂಥಗಳ ಸಂಖ್ಯೆಯಲ್ಲಿ ಕಿರಿದಾಗಿತ್ತು. 1601ರಲ್ಲಿ ಐರ್ಲೆಂಡಿನ ಡಬ್ಲಿನ್ ಎಂಬಲ್ಲಿನ ಟ್ರಿನಿಟಿ ಕಾಲೇಜಿನಲ್ಲಿ ಗ್ರಂಥಾಲಯದ ಸ್ಥಾಪನೆಯಾಯಿತು. 1604ರಲ್ಲಿ ಕೇವಲ 4,000 ಗ್ರಂಥಗಳಿದ್ದ ಈ ಗ್ರಂಥಾಲಯ ಕ್ರಮೇಣ ಸಾಕಷ್ಟು ಪುಷ್ಟಿಗೊಂಡು ಐರ್ಲೆಂಡಿನ ಗ್ರಂಥಾಲಯಗಳಲ್ಲಿ ಪ್ರಧಾನವೆನಿಸಿಕೊಂಡಿತು. 19 ಹಾಗೂ 20ನೆಯ ಶತಮಾನಗಳಲ್ಲಿ ಇನ್ನೂ ಹಲವು ಎಡೆಗಳಲ್ಲಿ ಕಾಲೇಜುಗಳು ಸುಸಜ್ಜಿತ ಗ್ರಂಥಾಲಯಗಳ ಸಮೇತ ಪ್ರಾರಂಭವಾದವು.

ಡರ್‌ಹ್ಯಾಮಿನಲ್ಲಿ (1832) ಲಂಡನ್ನಿನಲ್ಲಿ (1837), ಮ್ಯಾಂಚೆಸ್ಟರ್‌ನಲ್ಲಿ (1851), ಲಿವರ್‌ಪೂಲಿನಲ್ಲಿ (1882), ಪ್ರಾರಂಭಗೊಂಡ ವಿಶ್ವವಿದ್ಯಾಲಯಗಳು ಇಂದು ಬಹು ದೊಡ್ಡ ಗ್ರಂಥಾಲಯಗಳಿಂದ ಸಜ್ಜಾಗಿವೆ. 50 ವರ್ಷಗಳ ಒಳಗಾಗಿ ಇವುಗಳಲ್ಲಿ ಒಂದು ಲಕ್ಷದಿಂದ ಐದು ಲಕ್ಷದವರೆಗೆ ಗ್ರಂಥಗಳು ಶೇಖರಿಸಲ್ಪಟ್ಟವು. 1950ರ ಸುಮಾರಿಗೆ ಆಕ್ಸ್‌ಫರ್ಡ್ ಅನೇಕ ಗ್ರಂಥಾಲಯಗಳ ಆಗರವೆನಿಸಿತು. ಬೋಡ್ಲಿಯನ್ ಗ್ರಂಥಾಲಯ ಮುಖ್ಯವಾಗಿ ವಿಶ್ವವಿದ್ಯಾಲಯದ ಗ್ರಂಥಾಲಯವಾಗಿದ್ದರೂ ವಸ್ತುತಃ ಬೋಡ್ಲೆ ಸಮುದಾಯದ ಒಂದು ಗ್ರಂಥಾಲಯವಾಗಿತ್ತು. ಹೀಗೆ ವರ್ಷಗಳು ಸರಿದಂತೆ ಹೊಸ ಕಾಲೇಜುಗಳು ಅವನ್ನು ಅನುಸರಿಸಿ ಗ್ರಂಥಾಲಯಗಳು ಹುಟ್ಟಿಕೊಂಡು ಇಂದಿಗೆ ವ್ಯಾಪಕವಾಗಿ ಬೆಳೆದು ನಿಂತಿವೆ. ಬಹುಪಾಲು ಗ್ರಂಥಾಲಯಗಳು ಸಂಶೋಧನ ಕೇಂದ್ರಗಳಿಗಾಗಿ ವಿಸ್ತರಣೆಗೊಂಡಿವೆ.

ತಿರುವನಂತಪುರದಲ್ಲಿರುವ ಕೇರಳದ ಮೊದಲ ಸಾರ್ವಜನಿಕ ಗ್ರಂಥಾಲಯ, ಕೇರಳ

ಖಾಸಗಿ ಗ್ರಂಥಾಲಯ : ಮಧ್ಯಯುಗದ ಯುರೋಪಿನಲ್ಲಿ ಅನೇಕ ಶ್ರೀಮಂತರು, ಚರ್ಚುಗಳ ಅಧಿಕಾರಿ ವರ್ಗದವರು ತಮ್ಮದೇ ಆದ ಖಾಸಗಿ ಗ್ರಂಥಾಲಯಗಳನ್ನು ಬೆಳೆಸಿಕೊಂಡಿದ್ದರು. ಆ ಕಾಲದ ಸಾಹಿತ್ಯ, ಕಲೆ, ಅಧ್ಯಾತ್ಮ ಮತ್ತು ಇನ್ನಿತರ ವೈಶಿಷ್ಟ್ಯಗಳಲ್ಲಿ ಸಾಕಷ್ಟು ಮಾರ್ಗದರ್ಶಿಯೆನಿಸುವ ಅವರ ಗ್ರಂಥ ಸಂಗ್ರಹಗಳು ಕ್ರಮೇಣ ವಿಶ್ವವಿದ್ಯಾಲಯಗಳಿಗೆ ಮತ್ತು ಸಾರ್ವಜನಿಕ ಗ್ರಂಥಾಲಯಗಳಿಗೆ ದತ್ತಿಯಾಗಿ ಬಂದು ಸೇರಿದವು. ಖಾಸಗಿ ಗ್ರಂಥಾಲಯಗಳಲ್ಲಿದ್ದ ಗ್ರಂಥಗಳು ಅಂದವಾಗಿ ರಟ್ಟು ಹಾಕಲ್ಪಟ್ಟವು. ಮುದ್ದಾದ ಆ ಗ್ರಂಥಗಳನ್ನು ವಿಶೇಷ ಎಚ್ಚರಿಕೆಯಿಂದ ನೋಡಿಕೊಂಡು ಬರಲಾಗುತ್ತಿತ್ತು. ಕ್ರೈಸ್ತಪಾದ್ರಿಗಳು, ಶ್ರೀಮಂತರುಗಳಲ್ಲದೆ ಇನ್ನೂ ಅನೇಕ ಗಣ್ಯರು ವೈದ್ಯರು ಕುಶಲ ಕೆಲಸಗಾರರು ಸ್ವಂತಕ್ಕಾಗಿ ಗ್ರಂಥಗಳನ್ನು ಸಂಪಾದಿಸುತ್ತಿದ್ದರು. ಇಂಗ್ಲೆಂಡಿನ ಪ್ರಸಿದ್ಧ ಗ್ರಂಥ ಪ್ರೇಮಿಯಾದ ಡರ್‌ಹ್ಯಾಮಿನ ಬಿಷಪ್ ರಿಚರ್ಡ್‌ಡಿ ಬರಿ ತನ್ನ ಪ್ರೀತಿಯ ಗ್ರಂಥಗಳ ಬಗ್ಗೆ ಹಾಗೂ ಗ್ರಂಥ ಸಂಗ್ರಹ ಕಾರ್ಯಕ್ರಮದ ಬಗ್ಗೆ ಸವಿವರವಾದ ಕೃತಿಗಳನ್ನು ರಚಿಸಿದ್ದಾನೆ. ಇಂಗ್ಲೆಂಡಿನ ರಾಜರನೇಕರು ಗ್ರಂಥ ಪ್ರೇಮಿಗಳಾಗಿದ್ದು ತಮ್ಮ ಖಾಸಗಿ ಗ್ರಂಥ ಸಂಗ್ರಹಗಳನ್ನು ವಿಸ್ತರಿಸಿದ್ದರು.

ಗ್ರಂಥಾಲಯಗಳ ಬೆಳವಣಿಗೆಯ ದೃಷ್ಟಿಯಿಂದ 19ನೆಯ ಶತಮಾನದಲ್ಲಿ ಅನೇಕ ವ್ಯಕ್ತಿಗಳ ವೈಯಕ್ತಿಕ ಗ್ರಂಥಾಲಯಗಳು ಹೆಚ್ಚಿನ ಪಾತ್ರವನ್ನು ವಹಿಸಿದವು. ಸ್ಪೇನಿನಿಂದ ಇಂಗ್ಲೆಂಡಿನವರೆಗೂ ಅನೇಕ ಕಲಾತ್ಮಕ ಕಟ್ಟಡಗಳು ಗ್ರಂಥಾಲಯಗಳಿಗಾಗಿಯೇ ನಿರ್ಮಾಣಗೊಂಡವು. ಮಧ್ಯಕಾಲದ ಗ್ರಂಥಾಲಯಗಳಲ್ಲಿ ಬಹುಪಾಲಿನವು ಜ್ಞಾನೋಪಾಸನೆಗೆ ಮುಕ್ತದ್ವಾರವಾಗಿದ್ದವು. ಓದುವ ಸಲುವಾಗಿ ದ್ವಿಪ್ರತಿಗಳಿರುವ ಗ್ರಂಥಗಳನ್ನು ಎರವಲು ಕೊಡುತ್ತಿದ್ದರು. ಎರವಲು ಪಡೆಯಲು ಕೆಲವೆಡೆ ಠೇವಣಿಗಳನ್ನು ಕಟ್ಟಿಡಬೇಕಾಗುತ್ತಿತ್ತು. ನಕಲು ತೆಗೆದು ಪ್ರತಿಗಳನ್ನು ತಯಾರಿಸುವುದು, ಹರಿದ ಗ್ರಂಥಗಳನ್ನು ದುರಸ್ತಿ ಮಾಡಿಸುವುದು, ರಟ್ಟು ಹಾಕಿಸುವುದು ಮೊದಲಾದ ಕೆಲಸಗಳಿಗೆ ವಿಶೇಷ ಗಮನ ನೀಡಲಾಗುತ್ತಿತ್ತು. ವಿದ್ಯಾರ್ಥಿಗಳು, ಪಂಡಿತರು, ಲೇಖಕರು, ಕವಿಗಳು, ಸಂಗೀತಗಾರರು ಹೀಗೆ ಎಲ್ಲರಿಗೂ ಈ ಗ್ರಂಥಾಲಯಗಳಲ್ಲಿ ಓದಲು ಅವಕಾಶವಿರುತ್ತಿತ್ತು. ಮಧ್ಯಕಾಲದ ಸಾಹಿತ್ಯ ಮತ್ತು ಕಲೆಗಳ ಪುನರುಜ್ಜೀವನಕ್ಕೆ ಈ ಗ್ರಂಥಾಲಯಗಳು ಬಹಳ ಮಟ್ಟಿಗೆ ನೆರವಾದವು. ಮುದ್ರಣ ಸೌಲಭ್ಯ ಒದಗಿದಂದಿನಿಂದ ಗ್ರಂಥಗಳ ಬೆಲೆ ಕಡಿಮೆಯಾಯಿತು. ಅದರಂತೆ ಬಹುಸಂಖ್ಯೆಯಲ್ಲಿ ಹೊರಬಂದವು. ಇದರಿಂದಾಗಿ ವಿದ್ಯಾವಂತ ವರ್ಗದಲ್ಲಿ ಓದುಗರ ಸಂಖ್ಯೆ ಅಪಾರವಾಗಿ ಹೆಚ್ಚಿತು. ಖಾಸಗಿ ವ್ಯಕ್ತಿಗಳು ಅಪೂರ್ವಗ್ರಂಥಗಳನ್ನು ಶೇಖರಿಸಿ ತಮ್ಮ ಅಭಿರುಚಿಯನ್ನು ಪ್ರಕಟಿಸಿದರು. ಕ್ರಮೇಣ ಇವು ಪೀಳಿಗೆಯಿಂದ ಪೀಳಿಗೆಗೆ ಬೆಳೆಯುತ್ತ ಬಂದವು. ಯುರೋಪಿನ ಸಾಹಿತ್ಯ ಮತ್ತು ಕಲೆಗಳ ಪುನರುಜ್ಜೀವನ ಕಾಲದಲ್ಲಿ ಇವು ವಹಿಸಿದ ಪಾತ್ರ ಗಮನಾರ್ಹವಾದುದು.

17 ರಿಂದ 19ನೆಯ ಶತಮಾನದವರೆಗಿನ ಕಾಲದಲ್ಲಿ ಖಾಸಗಿ ಗ್ರಂಥಾಲಯಗಳು ಬಹಳ ಉಚ್ಛ್ರಾಯ ಸ್ಥಿತಿಗೆ ಬಂದವು. ಈ ವೇಳೆಯಲ್ಲಿ ಇಂಗ್ಲೆಂಡಿನ ರಾಜಪ್ರಭುತ್ವವೂ ವಿಸ್ತಾರವಾಗುತ್ತ ಬಂತು. ಹೊಸದಾಗಿ ಕೈವಶವಾದ ದೇಶಗಳ ಸಂಸ್ಕೃತಿ ಸಾಹಿತ್ಯಗಳನ್ನು ಅರಿಯಲೋಸುಗ ಆಯಾ ದೇಶಗಳ ಅಮೂಲ್ಯ ಕೃತಿಗಳನ್ನು ಸಂಗ್ರಹಿಸಲಾಯಿತು. ಇಂಗ್ಲೆಂಡಿನ ಜಾನ್ ಲೀಲ್ಯಾಂಡ್ ಎಂಬಾತ ಇಂಥ ಸಂಗ್ರಾಹಕರಲ್ಲಿ ಮುಖ್ಯನಾದವನು. ಇವನ ಖಾಸಗಿ ಸಂಗ್ರಹ ಈಗ ಬ್ರಿಟಿಷ್ ಮ್ಯೂಸಿಯಂ ಮತ್ತು ಬೋಡ್ಲಿಯನ್ ಗ್ರಂಥಾಲಯಗಳಲ್ಲಿ ಸೇರಿದೆ. ಇಂಗ್ಲೆಂಡಿನ ಆರ್ಚ್‌ಬಿಷಪ್ ಮ್ಯಾಥ್ಯು ಪಾರ್ಕರ್ ಅಪೂರ್ವ ಗ್ರಂಥರಾಶಿಯನ್ನು ಸಂಗ್ರಹಿಸಿದ್ದ. ಅದು ಕೊನೆಯಲ್ಲಿ ಕೇಂಬ್ರಿಜ್ ಕಾರ್ಪಸ್ ಕ್ರಿಸ್ಟಿ ಕಾಲೇಜಿನಲ್ಲಿ ಐಕ್ಯವಾಯಿತು. ಪ್ರಸಿದ್ಧ ಇತಿಹಾಸಕಾರ ವಿಲಿಯಂ ಕಾಮ್‌ಡನ್ನನ (1551–1623) ಅಪೂರ್ವ ಗ್ರಂಥಗಳು ಹಾಗೂ ಹಸ್ತಪ್ರತಿಗಳನ್ನು ಸರ್ ರಾಬರ್ಟ್ ಕಾಟನ್ನನ ಗ್ರಂಥಾಲಯದಲ್ಲಿ ಸಂಗ್ರಹವಾಗಿದ್ದವು. ಈ ಎಲ್ಲ ಖಾಸಗಿ ಗ್ರಂಥಾಲಯಗಳು ಕೊನೆಗೆ ಕೇಂಬ್ರಿಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ವಿಲೀನಗೊಂಡವು. ಹೀಗೆ ಖಾಸಗಿ ಗ್ರಂಥಾಲಯಗಳನ್ನು ಹೊಂದಿ ಕಡೆಗೆ ಅವನ್ನು ಕೊಡುಗೆಯಾಗಿ ಇತ್ತವರಲ್ಲಿ ಆರ್ಚ್‌ಬಿಷಪ್ ವಿಲಿಯಂ ಲಾಡ್, ಕೆನೆಮ್ ಡಿಗ್ಬಿ, ಸರ್ ರಾಬರ್ಟ್ ಬ್ರೂಸ್, ಕಟನ್ ಜಾರ್ಜ್ ಥಾಮಸ್ ಇವರು ಪ್ರಮುಖರು.




ಕೇಂದ್ರ ಗ್ರಂಥಾಲಯ, ವೆಲ್ಲಿಂಗ್‌ಟನ್

ಥಾಮಸ್ ರಾಲಿನ್‌ಸನ್ (1681–1725) ಎರಡು ಲಕ್ಷ ಅಪೂರ್ವ ಗ್ರಂಥಗಳನ್ನು ಸಂಗ್ರಹಿಸಿದ್ದ. 1721 ರಿಂದ 34ರ ಅವಧಿಯಲ್ಲಿ 16 ಬಾರಿ ಇವನ ಗ್ರಂಥ ಸಂಗ್ರಹವನ್ನು ಮಾರಲಾಯಿತು. ಕೆಲವು ಅತ್ಯಮೂಲ್ಯ ಗ್ರಂಥಗಳನ್ನು ಬೋಡ್ಲಿಯನ್ ಗ್ರಂಥಾಲಯಕ್ಕೆ ಕೊಡಲಾಯಿತು. ಸರ್ ಹ್ಯಾನ್ಸ್ ಸ್ಲೋನನ 50,000ಕ್ಕೂ ಹೆಚ್ಚಿನ ಗ್ರಂಥಗಳನ್ನು ಹಾಗೂ 4,000 ಹಸ್ತಪ್ರತಿಗಳನ್ನು ಬ್ರಿಟಿಷ್ ಸರ್ಕಾರ ಕೊಂಡುಕೊಂಡು ಬ್ರಿಟಿಷ್ ಮ್ಯೂಸಿಯಮಿಗೆ ಅಸ್ತಿಭಾರ ಹಾಕಿತು. ಅಂಥೋನಿ ಅಸ್ಕೂ, ವಿಲಿಯಂ ಹಂಟರ್, ಜಾನ್ಸನ್ – ಇವರು ಸಾವಿರಾರು ಕೃತಿಗಳನ್ನು ತಮ್ಮ ಖಾಸಗಿ ಗ್ರಂಥಾಲಯಕ್ಕೆ ತರಿಸಿಕೊಂಡಿದ್ದರು. 18ನೆಯ ಶತಮಾನದ ಇಂಗ್ಲೆಂಡಿನ ಖ್ಯಾತ ನಟ ಡೇವಿಡ್ ಗ್ಯಾರಿಕ್ ಷೇಕ್ಸ್‌ಪಿಯರನ ಅನೇಕ ನಾಟಕ ಹಾಗೂ ವಿಮರ್ಶನ ಗ್ರಂಥಗಳನ್ನೂ ರಂಗಭೂಮಿಯ ಇತಿಹಾಸಕ್ಕೆ ಸಂಬಂಧಿಸಿದ ಅಪಾರ ಗ್ರಂಥರಾಶಿಯನ್ನೂ ಹೊಂದಿದ್ದ. ಇವೆಲ್ಲ ಕೊನೆಗೆ ಬ್ರಿಟಿಷ್ ಮ್ಯೂಸಿಯಮಿಗೆ ಸೇರಿದವು.

19ನೆಯ ಶತಮಾನದಲ್ಲಿ ಶ್ರೀಮಂತ ವರ್ಗದವರಲ್ಲಿ ಗ್ರಂಥಗಳನ್ನು ಸಂಗ್ರಹಿಸುವ ಆಸಕ್ತಿ ಬಹಳವಾಗಿತ್ತು. ಅದಕ್ಕಾಗಿ ಅವರು ಅಪಾರ ಹಣವನ್ನು ತೆರುತ್ತಿದ್ದರು. ಲಾರ್ಡ್ ಸ್ಪೆನ್ಸರ್ (1758–1834) ವಂಶಪಾರಂಪರ್ಯವಾಗಿ ಬಂದ ತನ್ನ ಗ್ರಂಥಾಲಯಕ್ಕೆ ಬಹು ದೊಡ್ಡ ಸಂಖ್ಯೆಯಲ್ಲಿ ಗ್ರಂಥಗಳನ್ನು ಸೇರಿಸಿದ. ಗ್ರಂಥಗಳ ಮೇಲ್ವಿಚಾರಣೆಗೆ ಮತ್ತು ಸೂಚಿಪಟ್ಟಿಯನ್ನು ತಯಾರಿಸಲು ಥಾಮಸ್ ಎಫ್. ಡಿಬ್‌ಡಿನ್ ಎಂಬುವವನನ್ನು ನೇಮಿಸಿಕೊಂಡಿದ್ದ. ಮುದ್ರಣ ಪ್ರಾರಂಭದ ಕಾಲದ ಗ್ರಂಥಗಳು ಗುಟೆನ್‌ಬರ್ಗ್ ಬೈಬಲ್, ಇತರೆ ನೂರಾರು ಬೈಬಲ್ ಪ್ರತಿಗಳು, ಸ್ತೋತ್ರ ಗೀತಗಳು, ಭಾಷಾಂತರಗಳು, ಚರ್ಮಪತ್ರಗಳ ಮೇಲೆ ಬರೆದ ಗ್ರಂಥಗಳು, ಅನೇಕ ಅಪೂರ್ವ ಗ್ರಂಥಗಳು ಇವನ ಸಂಗ್ರಹದ ವಿಶೇಷಗಳಾಗಿದ್ದವು. 1892ರ ವರೆಗೂ ಇವು ಅಲ್‌ತ್ರೋಫ್‌ನ ನಿವಾಸದಲ್ಲಿ ಸುರಕ್ಷಿತವಾಗಿದ್ದವು. ಈಗ ಈ ಸಂಗ್ರಹ ಮ್ಯಾಂಚೆಸ್ಟರನ ಜಾನ್ ರಾಯ್‌ಲ್ಯಾಂಡ್ಸ್ ಗ್ರಂಥಾಲಯದ ಪ್ರಮುಖ ಭಾಗವಾಗಿದೆ.

ಥಾಮಸ್ ಗ್ರೆನವಿಲ್‌ನ (1755–1846) ಗ್ರಂಥಾಲಯದಲ್ಲಿ ಪ್ರಾಚೀನ ಗ್ರೀಕ್ ಗ್ರಂಥಗಳೂ ಅಮೆರಿಕದ ಮಾಹಿತಿಗಳನ್ನು ನೀಡಬಲ್ಲ ಎಲ್ಲ ಬಗೆಯ ಗ್ರಂಥಗಳೂ 15ನೆಯ ಶತಮಾನದಲ್ಲಿ ಮುದ್ರಿತವಾದ ಗ್ರಂಥಗಳೂ ಇದ್ದವು. ಕೊನೆಗೆ ಇವು ಬ್ರಿಟಿಷ್ ಮ್ಯೂಸಿಯಮಿಗೆ ಸೇರಿದವು. ಹಸ್ತಪ್ರತಿಗಳ ಸಂಗ್ರಹದಲ್ಲಿ ದಾಖಲೆ ಸ್ಥಾಪಿಸಿದ ಥಾಮಸ್ ಫಿಲಿಪ್ಸ್‌ನ ದಾಖಲೆ ಸಂಗ್ರಹದಲ್ಲಿ ಕಾನೂನು, ಅಧ್ಯಾತ್ಮ, ಭಾಷೆ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ 60,000 ಹಸ್ತಪ್ರತಿಗಳಿದ್ದವು.

ಹೀಗೆ ಅನೇಕ ವೈಯಕ್ತಿಕ ಸಂಗ್ರಹಗಳು ದೇಶದ ದೊಡ್ಡ ಗ್ರಂಥಾಲಯಗಳಿಗೆ ಸೇರಿಹೋದವು. ಸಮಗ್ರ ಯುರೋಪಿನ ಸಾಹಿತ್ಯ, ಇತಿಹಾಸ, ಕಲೆ, ಧರ್ಮ ಮೊದಲಾದವುಗಳ ಬಗ್ಗೆ ಅಮೂಲ್ಯವಾದ ಕೃತಿಗಳನ್ನು ಕೂಡಿಸಿ ಉಳಿಸಿಕೊಂಡು ಬಂದ ಕೀರ್ತಿ ಅಲ್ಲಿನ ಖಾಸಗಿ ಗ್ರಂಥಾಲಯಗಳಿಗೆ ಸಲ್ಲುತ್ತದೆ.

ಸಾರ್ವಜನಿಕ ಗ್ರಂಥಾಲಯಗಳು : ಮೊದಲು ಶ್ರೀಮಂತರು ಹಾಗೂ ರಾಜರು ಖಾಸಗಿಯಾಗಿ ಹೊಂದಿದ್ದ ಗ್ರಂಥಾಲಯಗಳು ಕ್ರಮೇಣ ಒಟ್ಟುಗೂಡಿ ಸಾರ್ವಜನಿಕ ಗ್ರಂಥಾಲಯಗಳಿಗಾಗಿ ಮಾರ್ಪಟ್ಟವು. ಆಗ ಅನೇಕ ವಿಶ್ವವಿದ್ಯಾಲಯಗಳ ಗ್ರಂಥಭಂಡಾರಗಳನ್ನು ಸರ್ಕಾರವೇ ನಡೆಸುತ್ತಿತ್ತು. ಒಂದು ದೃಷ್ಟಿಯಿಂದ ಅವು ಆಗ ಸಾರ್ವಜನಿಕ ಗ್ರಂಥಾಲಯಗಳೇ ಆಗಿದ್ದವು. ನಿಜವಾದ ಸಾರ್ವಜನಿಕ ಗ್ರಂಥಾಲಯಗಳು ಕಾಣಸಿಗುವುದು 17ನೆಯ ಶತಮಾನದ ಪ್ರಾರಂಭದ ವರ್ಷಗಳಿಂದ.

ಬ್ರಿಸ್ಟಲ್‌ನಲ್ಲಿ ಟೋಬಿ ಮಾಥ್ಯೂ ಮತ್ತು ರಾಬರ್ಟ್ ರೆಡ್‌ವುಡ್ ಅವರ ಪ್ರಯತ್ನದ ಫಲವಾಗಿ 1615ರಲ್ಲಿ ಪ್ರಸಿದ್ಧವಾದ ಸಾರ್ವಜನಿಕ ಗ್ರಂಥಾಲಯವೊಂದು ತೆರೆಯಲ್ಪಟ್ಟಿತು. 1632ರಲ್ಲಿ ಲೀಸ್ಟರ್‌ನಲ್ಲೂ 1953ರಲ್ಲಿ ಮ್ಯಾಂಚೆಸ್ಟರ್‌ನಲ್ಲೂ ಹಂಫ್ರಿ ಬಿಹಾಮ್ ಎಂಬಾತನ ಕೊಡುಗೆಯ ಫಲವಾಗಿ ಸಾರ್ವಜನಿಕ ಗ್ರಂಥಾಲಯಗಳು ಆರಂಭಗೊಂಡವು. ಈ ಗ್ರಂಥಾಲಯಗಳ ಹೆಚ್ಚಿನ ಗ್ರಂಥಗಳು ಪ್ರಾಚೀನ ಹಾಗೂ ಅಧ್ಯಾತ್ಮಪರವಾದವುಗಳಾದ್ದರಿಂದ ಸಾರ್ವಜನಿಕರಿಗೆ ಎರವಲು ಸಿಗುತ್ತಿರಲಿಲ್ಲ. ಹೀಗಾಗಿ ಇವುಗಳಿಂದ ವಾಸ್ತವವಾಗಿ ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗವಾಗುತ್ತಿರಲಿಲ್ಲ.

18ನೆಯ ಶತಮಾನದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ ಅಧಿಕಗೊಂಡಿತು. ಈ ಶತಮಾನದಲ್ಲಿ ಪ್ಯಾರಿಷ್ ಗ್ರಂಥಾಲಯಗಳು ಹಾಗೂ ವಂತಿಗೆ ಗ್ರಂಥಾಲಯಗಳು ಸಾರ್ವಜನಿಕರ ಉಪಯೋಗಕ್ಕಾಗಿ ಹೆಚ್ಚಿನ ಕೆಲಸ ಮಾಡಿದವು. ಥಾಮಸ್ ಬ್ರೇ ಎಂಬಾತ ಇಂಗ್ಲೆಂಡಿನಲ್ಲಿ 60 ಪ್ಯಾರಿಷ್ ಗ್ರಂಥಾಲಯಗಳನ್ನು ಸ್ಥಾಪಿಸಿ ಗ್ರಂಥಾಲಯಗಳ ಉಪಯೋಗವನ್ನು ಬಹುವಾಗಿ ಹೆಚ್ಚಿಸಿದ. ಇವುಗಳಲ್ಲಿ ರಾಜಕೀಯ, ಆಧ್ಯಾತ್ಮಿಕ ಗ್ರಂಥಗಳು ಹೆಚ್ಚಿನವುಗಳಾಗಿದ್ದು ಇವನ್ನು ಜನ ಸಾಮಾನ್ಯರು ಬಳಸಿಕೊಳ್ಳಲು ಅಧಿಕ ಶುಲ್ಕ ತೆರಬೇಕಾಗಿತ್ತು.

ಕೋಲ್ಕತದಲ್ಲಿರುವ ರಾಷ್ಟ್ರೀಯ ಗ್ರಂಥಾಲಯದ ಪ್ರಧಾನ ವಾಚನಾಲಯ

ವಂತಿಗೆ ಗ್ರಂಥಾಲಯಗಳು : ಇವು ಮುಖ್ಯವಾಗಿ ಗ್ರಂಥವ್ಯಾಪಾರಿಗಳು ಲಾಭಗಳಿಸಲು ನಡೆಸುತ್ತಿದ್ದಂಥವು. ಕೆಲವು ಲಾಭದಾಸೆಯಿಲ್ಲದೆ ಕೆಲಸ ಮಾಡುತ್ತಿದ್ದದೂ ಉಂಟು. 1725ರಲ್ಲಿ ಎಡಿನ್‌ಬರೊದಲ್ಲೂ 1740ರಲ್ಲಿ ಲಂಡನ್ನಿನಲ್ಲೂ ಈ ಬಗೆಯ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು. ಜನಸಾಮಾನ್ಯರು ತಿಂಗಳಿಗೆ ಒಂದು ಷಿಲಿಂಗಿನಂತೆ ಶುಲ್ಕ ಕೊಟ್ಟು ಗ್ರಂಥಗಳನ್ನು ಎರವಲು ಪಡೆಯಬಹುದಾಗಿತ್ತು. 1800ರ ಹೊತ್ತಿಗೆ ಇಂಗ್ಲೆಂಡಿನ ಅನೇಕ ಪಟ್ಟಣಗಳಲ್ಲಿ ಸಂಚಾರಿ ಗ್ರಂಥಾಲಯಗಳು ಸ್ಥಾಪಿತಗೊಂಡು ಪ್ರಸಿದ್ಧಿ ಪಡೆದವು. ಲಂಡನ್ನಿನ ವಿಲಿಯಂ ಲೇನ್ ಎಂಬಾತ ಇಂಥ ಸಂಚಾರಿ ಗ್ರಂಥಾಲಯಗಳ ಸರಪಣಿಯನ್ನೇ ಸ್ಥಾಪಿಸಿ ಅನೇಕ ಜನಪ್ರಿಯ ಕಾದಂಬರಿಗಳನ್ನು ಅವುಗಳಲ್ಲಿ ಸೇರಿಸಿದ. ಅದರಂತೆ ಚಾರ್ಲ್ಸ್ ಎಡ್ವರ್ಡ್ ಸ್ಥಾಪಿಸಿದ ಮುಡೀಸ್ ಸಂಚಾರಿ ಗ್ರಂಥಾಲಯಗಳು ಬಹಳ ಪ್ರಸಿದ್ಧವಾದವು. 20ನೆಯ ಶತಮಾನದಲ್ಲಿ ಪ್ರಾರಂಭವಾದ ವಾರಿಸ ಸಾರ್ವಜನಿಕ ಗ್ರಂಥಾಲಯಗಳು ಹಾಗೂ ಪೇಪರ್ ಬ್ಯಾಕ್ ಗ್ರಂಥಗಳಿಂದಾಗಿ ಸಂಚಾರಿ ಗ್ರಂಥಾಲಯಗಳು ಕ್ರಮೇಣ ಕಡಿಮೆಯಾದವು.

ಠೇವಣಿ ಗ್ರಂಥಾಲಯಗಳು : 18ನೆಯ ಶತಮಾನದ ಕೊನೆಯ ಭಾಗದಲ್ಲಿ ಈ ಬಗೆಯ ಗ್ರಂಥಾಲಯಗಳು ಬೆಳೆದವು. ಸಮಾಜದ ಕೆಲವು ಪ್ರತಿಷ್ಠಿತ ವ್ಯಕ್ತಿಗಳು ಸೇರಿ ವಾಚನಾಲಯವನ್ನೂ ಜೊತೆಗೆ ಸದಸ್ಯರ ಉಪಯೋಗಕ್ಕಾಗಿ ಗ್ರಂಥಾಲಯವನ್ನೂ ಸ್ಥಾಪಿಸುತ್ತಿದ್ದರು. ಇಂಥ ಸಂಸ್ಥೆಗಳಿಗೆ ಸದಸ್ಯರಾಗಬಯಸುವವರು ತಿಂಗಳಿಗೆ ಒಂದು ಸಾರಿ ಇಲ್ಲವೆ ವರ್ಷಕ್ಕೆ ಒಂದು ಸಾರಿಯಾಗಲಿ ನಿಗದಿಯಾದ ಚಂದಾಹಣವನ್ನು ಕೊಡಬೇಕಾಗಿತ್ತು. ಬಾಡಿಗೆಗೆ ಪಡೆದ ಮನೆಗಳಲ್ಲಾಗಲಿ ದೊಡ್ಡ ಪಡಸಾಲೆಗಳಲ್ಲಾಗಲಿ ಗ್ರಂಥಗಳನ್ನು ಜೋಡಿಸಿ ಕೆಲವೇ ಗಂಟೆಗಳು ತೆರೆದಿದ್ದು ಯಾರಾದರೊಬ್ಬರ ಮೇಲ್ವಿಚಾರಣೆಯಲ್ಲಿ ಪುಸ್ತಕ ವಿತರಣೆ ನಡೆಯುವ ಏರ್ಪಾಡಿತ್ತು. ಇದರಿಂದ ಸಾರ್ವಜನಿಕರಿಗೆ ಠೇವಣಿಯ ಮೇಲೆ ಗ್ರಂಥಗಳು ಸಿಗುವಂತಾಯಿತು. ಬ್ರ್ಯಾಡ್‌ಫರ್ಡ್, ಬರ್ಮಿಂಗ್‌ಹ್ಯಾಮ್, ಲೀಸ್ಟರ್, ನ್ಯೂಕ್ಯಾಸಲ್, ಯಾರ್ಕ್, ಲಿವರ್ ಪೂಲ್ ಮೊದಲಾದ ಎಡೆಗಳಲ್ಲಿ ಠೇವಣಿ ಗ್ರಂಥಾಲಯಗಳು ಉತ್ತಮವಾಗಿ ವ್ಯವಹರಿಸಿದವು.

ಕಸಬುದಾರರ ಗ್ರಂಥಾಲಯಗಳು : ಕೆಲಸಗಾರರ ಹಾಗೂ ಸಣ್ಣ ಉದ್ದಿಮೆದಾರರ ಮತ್ತು ವ್ಯಾಪಾರಿಗಳ ಉಪಯೋಗಕ್ಕಾಗಿ ಕೆಲವು ಉದಾರ ವ್ಯಕ್ತಿಗಳ ನೆರವಿನಿಂದ ಕೆಲಸಗಾರರ ಸಂಸ್ಥೆಗಳು ನಿರ್ಮಾಣವಾದವು. ಈ ಸಂಸ್ಥೆಗಳು ಗ್ರಂಥಾಲಯಗಳನ್ನು ತೆರೆದವು. ಇಲ್ಲಿ ಕಡಿಮೆ ಶುಲ್ಕ ಪಡೆದು ಖ್ಯಾತ ಗ್ರಂಥಗಳನ್ನು ಓದಲು ಕೊಡುತ್ತಿದ್ದರು. ಬರ್ಮಿಂಗ್‌ಹ್ಯಾಮ್ ಕಸಬುದಾರರ ಗ್ರಂಥಭಂಡಾರ (1795) ಈ ಶ್ರೇಣಿಯಲ್ಲಿ ಹುಟ್ಟಿದ ಮೊದಲ ಸಂಸ್ಥೆ. 1823ರಲ್ಲಿ ಹುಟ್ಟಿಕೊಂಡ ಗ್ಲಾಸ್ಗೋ ಕೆಲಸಗಾರರ ಸಂಸ್ಥೆ ಗ್ರಂಥಾಲಯವನ್ನು ನಡೆಸುವ ಹೊಣೆಯ ಜೊತೆಗೆ ಕೆಲಸಗಾರರ ತರಬೇತಿಯನ್ನೂ ನಿರ್ವಹಿಸಹತ್ತಿತು. ಅನಂತರ ಈ ಸಂಸ್ಥೆ ಕಾಲೇಜಾಗಿ ಪರಿವರ್ತನೆಗೊಂಡಿತು. ಹೀಗೆ 1821ರಲ್ಲಿ ಎಡಿನ್‌ಬರೊದಲ್ಲಿಯೂ 1823ರಲ್ಲಿ ಲಿವರ್‌ಪೂಲಿನಲ್ಲಿಯೂ 1824ರಲ್ಲಿ ಅಬರ್‌ಡೀನ್ ಮತ್ತು ಲಂಡನ್ ನಗರಗಳಲ್ಲಿಯೂ ಈ ತೆರನಾದ ಗ್ರಂಥಾಲಯಗಳು ಹುಟ್ಟಿಕೊಂಡವು. ಬ್ರಿಟನ್ನಿನಲ್ಲಿ 1850ರ ಸುಮಾರಿಗೆ ಇಂಥ 400ಕ್ಕೂ ಮಿಕ್ಕಿದ ಗ್ರಂಥಾಲಯಗಳು ಕಾರ್ಯವೆಸಗುತ್ತಿದ್ದವು. ಸಾರ್ವಜನಿಕ ಗ್ರಂಥಾಲಯ ಕಾಯಿದೆ ಬ್ರಿಟನ್ನಿನಲ್ಲಿ ಜಾರಿಗೆ ಬಂದ ಮೇಲೆ ಅಂಥ ಗ್ರಂಥಾಲಯಗಳು ಸಾರ್ವಜನಿಕ ಗ್ರಂಥಾಲಯಗಳಾಗಿ ಮಾರ್ಪಟ್ಟವು. ಕೆಲವೊಂದು ಸಾರ್ವಜನಿಕ ಗ್ರಂಥಾಲಯಗಳಿಗೆ ಕೂಡಿಸಲ್ಪಟ್ಟವು. ಹೀಗೆ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಠೇವಣಿ ಹಾಗೂ ಕಸಬುದಾರರ ಗ್ರಂಥಾಲಯಗಳು ವಿಶಿಷ್ಟಪಾತ್ರಗಳನ್ನು ವಹಿಸಿದ್ದವು. ಕ್ರಮೇಣ ಜನರಿಗೆ ಓದಿನ ಅಭಿರುಚಿ ಹುಟ್ಟಿಸುವಲ್ಲಿ ಈ ಗ್ರಂಥಾಲಯಗಳ ಅಸ್ತಿತ್ವ ತುಂಬ ಸಹಕಾರಿಯಾಯಿತು.

ಕುವೆಂಪು ವಿಶ್ವವಿದ್ಯಾಲಯದ ಗ್ರಂಥಾಲಯ

ಉಚಿತ ಸಾರ್ವಜನಿಕ ಗ್ರಂಥಾಲಯಗಳು : 1847 ಗ್ರೇಟ್ ಬ್ರಿಟನ್ನಿನ ಸಾರ್ವಜನಿಕ ಗ್ರಂಥಾಲಯಗಳ ಚರಿತ್ರೆಯಲ್ಲಿ ಅವಿಸ್ಮರಣೀಯ ವರ್ಷ. ಬ್ರಿಟಿಷ್ ಪಾರ್ಲಿಮೆಂಟು ಸಾರ್ವಜನಿಕ ಗ್ರಂಥಾಲಯ ಸಮಿತಿಯೊಂದನ್ನು ರಚಿಸುವ ಕಾಯಿದೆಯನ್ನು ಅಂಗೀಕರಿಸಿತು. ಅದರಂತೆ ದೇಶದ ಎಲ್ಲೆಡೆ ಗ್ರಂಥಾಲಯಗಳನ್ನು ಸ್ಥಾಪಿಸುವ ಆವಶ್ಯಕತೆಯನ್ನು ವಿಮರ್ಶಿಸುವಂತೆ ಸಮಿತಿಗೆ ಆದೇಶ ನೀಡಿತು. ಇದರ ಫಲವಾಗಿ ಬ್ರಿಟಿಷ್ ಪಾರ್ಲಿಮೆಂಟು 1850ರ ಆಗಸ್ಟ್ 14ರಂದು ಸಾರ್ವಜನಿಕ ಗ್ರಂಥಾಲಯ ಕಾಯಿದೆಯನ್ನು ಜಾರಿಗೆ ತಂದಿತು. ಈ ಮಸೂದೆಗೆ ಅನೇಕರ ವಿರೋಧವಿತ್ತಾದರೂ ಎಡ್‌ವರ್ಡ್ ಎಡ್‌ವರ್ಡ್ಸ್, ವಿಲಿಯಂ ಎವರ್ಟ್ ಮುಂತಾದ ಉತ್ಸಾಹಿಗಳ ಹಾಗೂ ಇನ್ನಿತರ ಗಣ್ಯರ ಪ್ರಯತ್ನಗಳ ಫಲವಾಗಿ ಕಾಯಿದೆ ಅನುಷ್ಠಾನಕ್ಕೆ ಬರುವಂತಾಯಿತು. ಇದರಿಂದಾಗಿ, ಗ್ರಂಥಾಲಯ ಕಟ್ಟಡ ನಿರ್ಮಾಣ ಹಾಗೂ ಗ್ರಂಥಾಲಯ ನಿರ್ವಹಣೆಗಾಗಿ ಪೌಂಡಿಗೆ ಅರ್ಧ ಪೆನ್ನಿಯಂತೆ ಕರ ಎತ್ತುವ ಅಧಿಕಾರ ಪ್ರತಿಯೊಂದು ನಗರಸಭೆಗೂ ಬಂತು. ಜೊತೆಗೆ ಈ ಕಾಯಿದೆಯಿಂದಾಗಿ ಸಾರ್ವಜನಿಕರಿಗೆ ಗ್ರಂಥಾಲಯ ಸೇವೆ ಉಚಿತವಾಗಿ ದೊರೆಯುವಂತಾಯಿತು. 1855ರಲ್ಲಿ ಆದ ಕಾಯಿದೆ ತಿದ್ದುಪಡಿಯ ಪ್ರಕಾರ 5,000 ಜನರುಳ್ಳ ಪ್ರತಿ ನಗರವೂ ಸಾರ್ವಜನಿಕ ಗ್ರಂಥಾಲಯವನ್ನು

ಪಡೆಯುವಂತಾಯಿತು. ಪುನಃ 1866ರಲ್ಲಿ ಆದ ತಿದ್ದುಪಡಿಯಿಂದಾಗಿ ಜನಸಂಖ್ಯೆಯ ಮಿತಿಯನ್ನು ತೆಗೆದುಹಾಕಲಾಯಿತು. 1887ರ ತಿದ್ದುಪಡಿಯಂತೆ ಗ್ರಂಥಾಲಯಗಳ ಆಡಳಿತ ನೇರವಾಗಿ ಸರ್ಕಾರದ ವಶಕ್ಕೆ ಬಂತು. ಮುಂದಿನ ಒಂದೆರಡು ಮಸೂದೆಗಳಿಂದಾಗಿ ಗ್ರಂಥಾಲಯ ವ್ಯವಸ್ಥೆಯಲ್ಲಿ ಇನ್ನೂ ಸುಧಾರಣೆಗಳು ಏರ್ಪಟ್ಟು ವೆಚ್ಚದ ಸ್ವಾತಂತ್ರ್ಯ ಸಿಕ್ಕಿತು. ಗ್ರಂಥಾಲಯ ಪ್ರಾಧಿಕಾರ ಮಂಡಳ ಸಂಸ್ಥೆಗಳ ಸ್ಥಾಪನೆಯಾಗಿ ಸಾರ್ವಜನಿಕ ಗ್ರಂಥಾಲಯಗಳ ಸರ್ವತೋಮುಖ ಪ್ರಗತಿಗೆ ನಾಂದಿಯಾಯಿತು.

ಇಪ್ಪತ್ತನೆಯ ಶತಮಾನದ ಸಾರ್ವಜನಿಕ ಗ್ರಂಥಾಲಯಗಳು : ಈ ಶತಮಾನದ ಎರಡು ಮಹಾಯುದ್ಧಗಳ ಪರಿಣಾಮ ಇಂಗ್ಲೆಂಡನ್ನು ಆರ್ಥಿಕ ಸಂಕಟಕ್ಕೆ ಸಿಲುಕಿಸಿತ್ತು. ಹೀಗಾಗಿ ಗ್ರಂಥಾಲಯಗಳ ಬೆಳವಣಿಗೆ ನಿಧಾನವಾಯಿತು. 1919ರಲ್ಲಿ ರಾಷ್ಟ್ರೀಯ ಗ್ರಂಥಾಲಯ ಕಾನೂನು ಜಾರಿಗೆ ಬಂದುದರಿಂದ ಸ್ಥಳೀಯ ಸಂಸ್ಥೆಗಳು ಹೊರಿಸುವ ಗ್ರಂಥಾಲಯ ತೆರಿಗೆಯ ಮೇಲಿದ್ದ ಮಿತಿಯನ್ನು ತೆಗೆದು ಹಾಕಲಾಯಿತು. ಪರಿಣಾಮವಾಗಿ ಹೆಚ್ಚು ಹಣ ದೊರೆತು ಗ್ರಂಥಾಲಯಗಳು ಸುಸಜ್ಜಿತವಾಗಲು ಅವಕಾಶವಾಯಿತು. 1920ರ ದಶಕದಲ್ಲಿ ಅನೇಕ ನಗರ ಗ್ರಂಥಾಲಯಗಳು ಕಾರ್ನೇಗಿ ಯುನೈಟೆಡ್ ಕಿಂಗ್‍ಡಂ ಟ್ರಸ್ಟನ ನೆರವಿನಿಂದಾಗಿ ಪ್ರಾರಂಭಗೊಂಡವು. ಹೆಚ್ಚು ಹೆಚ್ಚು ಸಾರ್ವಜನಿಕ ಗ್ರಂಥಾಲಯದ ಶಾಖೆಗಳು ತೆರೆಯಲ್ಪಟ್ಟವು.

ಬಾಂಬ್ ದಾಳಿಯಿಂದ ಅಪಾರವಾಗಿ ನಷ್ಟಗೊಂಡಿದ್ದ ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯವನ್ನು ಪುನರುಜ್ಜೀವನಗೊಳಿಸಲಾಯಿತು. 1962ರಲ್ಲಿ ಬ್ರಿಟನ್ನಿನಲ್ಲಿ 549 ಸಾರ್ವಜನಿಕ ಗ್ರಂಥಾಲಯದ ಆಡಳಿತ ಕೇಂದ್ರಗಳು, 40,000 ಪ್ರತ್ಯೇಕ ವಿವರಣ ಕೇಂದ್ರಗಳು ಇದ್ದವು. ಈ ಗ್ರಂಥಾಲಯಗಳಲ್ಲಿ ಸುಮಾರು 75 ದಶಲಕ್ಷಕ್ಕೂ ಹೆಚ್ಚು ಗ್ರಂಥಗಳಿದ್ದವು. ಒಂದು ವರ್ಷಕ್ಕೆ ಸುಮಾರು 450 ದಶಲಕ್ಷ ಗ್ರಂಥಗಳನ್ನು ಇವು ವಿತರಣೆ ಮಾಡುತ್ತಿದ್ದವು.

**ರಾಷ್ಟ್ರೀಯ ಗ್ರಂಥಾಲಯಗಳು :** ಇಂಗ್ಲೆಂಡಿನ ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯ ಪ್ರಪಂಚದ ಅತಿ ದೊಡ್ಡ ರಾಷ್ಟ್ರೀಯ ಗ್ರಂಥಾಲಯಗಳಲ್ಲೊಂದೆನಿಸಿದೆ. ಇದು ಸ್ಥಾಪನೆಯಾದದ್ದು 1753ರಲ್ಲಿ (ಇದರ ವಿವರಗಳು ಇದೇ ಲೇಖನದ ಬೇರೊಂದೆಡೆ ಬಂದಿವೆ). 1925ರಲ್ಲಿ ಸ್ಕಾಟ್ಲೆಂಡಿನಲ್ಲೂ ರಾಷ್ಟ್ರೀಯ ಗ್ರಂಥಾಲಯ ಅಸ್ತಿತ್ವಕ್ಕೆ ಬಂತು. 1709ರಲ್ಲಿ ಗ್ರೇಟ್ ಬ್ರಿಟನ್ನಿನಲ್ಲಿ ಪ್ರಕಟವಾದ ಗ್ರಂಥಗಳೆಲ್ಲಾ ಈ ಗ್ರಂಥಾಲಯಕ್ಕೆ ದೊರಕುವಂತೆ ಕಾಯಿದೆಯನ್ನು ಮಾಡಲಾಯಿತು. ಆ ವೇಳೆಗೆ ಇದು ಪ್ರಸಿದ್ಧ ಚರಿತ್ರಕಾರ ಡೇವಿಡ್ ಹ್ಯೂಮನ ನೇತೃತ್ವದಲ್ಲಿ 30,000 ಗ್ರಂಥಗಳನ್ನು ಪಡೆದಿತ್ತು. ಕ್ರಮೇಣ ಬೆಳವಣಿಗೆ ಹೊಂದಿದ ಈ ರಾಷ್ಟ್ರೀಯ ಗ್ರಂಥಾಲಯದಲ್ಲಿ 1964ರ ಸುಮಾರಿಗೆ ಸುಮಾರು 20 ದಶಲಕ್ಷ ಗ್ರಂಥ ಸಂಗ್ರಹವಿತ್ತು.

ನೆಹರು ಮೆಮೋರಿಯಲ್ ಮ್ಯೂಸಿಯಂ ಮತ್ತು ಗ್ರಂಥಾಲಯ, ದೆಹಲಿ

ವೇಲ್ಸಿನ ರಾಷ್ಟ್ರೀಯ ಗ್ರಂಥಾಲಯ ಅಬೇರಿರಯ್‍ಸ್ಟವಾಯತ್‍ನಲ್ಲಿ 1873ರಲ್ಲಿ ಸ್ಥಾಪನೆಗೊಂಡಿತು. ವೇಲ್ಸಿನ ಶಸ್ತ್ರವೈದ್ಯ ಜಾನ್ ವಿಲಿಯಂ, ಭಾಷಾಶಾಸ್ತ್ರಜ್ಞ ಎಡ್ವರ್ಡ್ ಓವೆನ್ ಇವರುಗಳ ಸಂಗ್ರಹಗಳಲ್ಲದೆ, ವೇಲ್ಸಿನ ಯೂನಿವರ್ಸಿಟಿ ಕಾಲೇಜಿಗೆ ಸೇರಿದ ಗ್ರಂಥಾಲಯವನ್ನೆಲ್ಲಾ ಒಳಗೊಂಡು ಈ ಗ್ರಂಥಾಲಯ ಪ್ರಾರಂಭವಾಯಿತು. ಭಾಷಾಸಂಬಂಧಿಯಾದ ಎಲ್ಲ ಗ್ರಂಥಗಳನ್ನೂ ಈ ಗ್ರಂಥಾಲಯ ಸಂಗ್ರಹಿಸಿದೆ. 1916ರಲ್ಲಿ ಇದಕ್ಕೆ ಸ್ವಂತ ಕಟ್ಟಡ ದೊರೆಯಿತು. ಅಲ್ಲಿಂದೀಚೆಗೆ ಇದು ಅಭಿವೃದ್ಧಿಯ ಹಾದಿಯಲ್ಲಿ ಸಾಗಿದೆ.

ವಿಶಿಷ್ಟ ಗ್ರಂಥಾಲಯಗಳು : ಪ್ರಪಂಚ ಪ್ರಸಿದ್ಧವಾದ ಕೆಲವು ವಿಶಿಷ್ಟ ಗ್ರಂಥಾಲಯಗಳು ಇಂಗ್ಲೆಂಡಿನಲ್ಲಿ ಸ್ಥಾಪಿತವಾದವು. ಬ್ರಿಟಿಷ್ ಮ್ಯೂಸಿಯಂ ಇದರಲ್ಲಿ ಮುಖ್ಯವಾದದ್ದು. ಇದರೊಳಗಿನ ವೃತ್ತಪತ್ರಿಕೆಗಳ ಸಂಗ್ರಹ ಪ್ರಪಂಚದಲ್ಲಿ ಅತಿದೊಡ್ಡ ಸಂಗ್ರಹವೆನಿಸಿದೆ. ಅದರಂತೆ ರಾಯಲ್ ಸೊಸೈಟಿ ಆಫ್ ಮೆಡಿಸಿನ್ ಮತ್ತು ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಇವುಗಳ ಗ್ರಂಥಾಲಯಗಳು ಕೂಡ ವಿಶಿಷ್ಟ ಗ್ರಂಥಾಲಯಗಳೆನಿಸಿವೆ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆ ಅರ್ಥಶಾಸ್ತ್ರದ ಮೇಲೆ ಉತ್ತಮ ಗ್ರಂಥಗಳನ್ನು ಹೊಂದಿದೆ.

ಬ್ರಿಸ್ಟಲ್ ಗ್ರಂಥಾಲಯದ ಹೊರನೋಟ

ಲಂಡನ್ನಿನ ಪಬ್ಲಿಕ್ ರೆಕಾರ್ಡ್ ಆಫೀಸ್ ಸರ್ಕಾರ ಮತ್ತು ಶಾಸಕಾಂಗದ ವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆ ಗ್ರಂಥಗಳನ್ನು ಒಳಗೊಂಡಿದೆ. ನ್ಯಾಯಾಂಗಕ್ಕೆ ಸಂಬಂಧಿಸಿದ ವಿಷಯಗಳನ್ನುಳ್ಳ ಲಿಂಕನ್ಸ್ ಇನ್ ಪ್ರಪಂಚದಲ್ಲೇ ಈ ಬಗೆಯ ಗ್ರಂಥಾಲಯದಲ್ಲಿ ಅತಿ ದೊಡ್ಡದು. 1497ರಲ್ಲಿ ಈ ಸಂಸ್ಥೆ ಪ್ರಾರಂಭವಾಯಿತು. ಗ್ರೇಸ್ ಇನ್ ಮತ್ತು ದಿ ಇನ್ನರ್ ಟೆಂಪಲ್ ಸಂಸ್ಥೆಗಳು, ಇನ್ನಿತರ ಪ್ರಸಿದ್ಧ ನ್ಯಾಯವಾದಿ ಸಂಸ್ಥೆಗಳು, ಲಂಡನ್ನಿನ ಸೈನ್ಸ್ ಮ್ಯೂಸಿಯಂ ಗ್ರಂಥಾಲಯ, ವಿಕ್ಟೋರಿಯ ಮತ್ತು ಆಲ್ಬರ್ಟ್ ಆರ್ಟ್ ಮ್ಯೂಸಿಯಂ ಗ್ರಂಥಾಲಯಗಳು ವಿಶಿಷ್ಟ ಗ್ರಂಥಾಲಯಗಳೆನಿಸಿವೆ. ಭಾರತೀಯ ಸಂಸ್ಕೃತಿ ಮತ್ತು ಚರಿತ್ರೆಗೆ ಸಂಬಂಧಿಸಿದ ಗ್ರಂಥಗಳನ್ನು ಹೊಂದಿರುವ ಇಂಡಿಯಾ ಆಫೀಸ್ ಲೈಬ್ರರಿಯೂ ಇಂಗ್ಲೆಂಡಿನಲ್ಲಿ ಗಮನಾರ್ಹ ಗ್ರಂಥಾಲಯವೆನಿಸಿದೆ. ರಾಯಲ್ ಕಾಲೇಜ್ ಆಫ್ ಮ್ಯೂಸಿಕ್ ಇಂಗ್ಲಿಷ್ ಸಂಗೀತಶಾಸ್ತ್ರದ ಬಗ್ಗೆ ವಿಪುಲ ಮಾಹಿತಿಗಳನ್ನು ಒದಗಿಸುವ ಸಂಸ್ಥೆ. ಕುರುಡರಿಗಾಗಿ ವಿಶೇಷ ನಮೂನೆಯ ಗ್ರಂಥ ಸಂಗ್ರಹ ನ್ಯಾಷನಲ್ ಬ್ಲೈಂಡ್ಸ್ ಲೈಬ್ರರಿಯಲ್ಲಿ ಇದೆ. ಸ್ಕಾಟ್ಲೆಂಡಿನ ಎಡಿನ್‍ಬರೊದಲ್ಲಿ ಸ್ಥಾಪಿತವಾಗಿರುವ ಸಿಗ್ನೆಟ್ ಗ್ರಂಥಾಲಯದಲ್ಲಿ 1950ರ ವೇಳೆಗೆ ಕಾನೂನು ಮತ್ತು ಅಧ್ಯಾತ್ಮಕ್ಕೆ ಸಂಬಂಧಿಸಿದ ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಗ್ರಂಥಗಳು ಶೇಖರಗೊಂಡಿದ್ದವು. 1929ರಿಂದೀಚೆಗೆ ಗ್ರೇಟ್ ಬ್ರಿಟನ್ನಿನ ಪ್ರಮುಖ ಪಟ್ಟಣಗಳಿಗೆಲ್ಲ ವಾಣಿಜ್ಯ ಹಾಗೂ ತಾಂತ್ರಿಕ ವಿಭಾಗಗಳ ವಿಶಿಷ್ಟ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

ಇಂಗ್ಲೆಂಡಿನ ಗ್ರಂಥಾಲಯ ಸಂಘ : 1877ರಲ್ಲಿ ಪ್ರಾರಂಭವಾದ ಈ ಸಂಘ 1964ರ ಹೊತ್ತಿಗೆ ಸುಮಾರು 10,000 ಸದಸ್ಯರನ್ನು ಪಡೆದಿತ್ತು. ಗ್ರಂಥಾಲಯ ವಿಷಯದಲ್ಲಿ ಶಿಕ್ಷಣ, ಸಂಶೋಧನೆ ಹಾಗೂ ಗ್ರಂಥಾಲಯ ಶಾಸನಗಳ ಸುಧಾರಣೆ – ಈ ಕ್ಷೇತ್ರಗಳಲ್ಲಿ ಈ ಸಂಘ ಪರಿಶ್ರಮ ವಹಿಸಿ ಕೆಲಸ ಮಾಡಿದೆ. (ಎನ್.ಬಿ.ಪಿ.)

**5 ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಗ್ರಂಥಾಲಯಗಳು :** ಅಮೆರಿಕ ಸಂಯುಕ್ತ ಸಂಸ್ಥಾನಗಳ ಇತಿಹಾಸ ಕೇವಲ ಮೂರು ಶತಮಾನಗಳಷ್ಟು ಹಿಂದಿನದು. ಮೊಟ್ಟಮೊದಲು ಇಲ್ಲಿ ಬಂದು ನೆಲೆಸಿದವರೆಂದರೆ ಯುರೋಪಿನವರು. ಅಂತೆಯೇ ಅಲ್ಲಿನ ರಾಜಕೀಯ, ಸಾಂಸ್ಕೃತಿಕ ಮತ್ತು ವೈಜ್ಞಾನಿಕ ವಿಚಾರಗಳು ಕೂಡ ಪುಸ್ತಕಗಳ ಮೂಲಕ ಅಮೆರಿಕದಲ್ಲಿ ಕಾಲಿಟ್ಟವು. ಈ ಕಾರಣದಿಂದಾಗಿ ಅಮೆರಿಕದ ಜನತೆಯಲ್ಲಿ ವಾಚನಾಭಿರುಚಿ ಮೊದಲಿನಿಂದಲೂ ಬೇರೂರಿದೆ ಮತ್ತು ಪುಸ್ತಕಗಳು ದೇಶದ ಉನ್ನತಿಗೆ ಕಾರಣವಾಗಬಲ್ಲವೆಂಬ ಪ್ರಜ್ಞೆ ಮೊದಲಿನಿಂದಲೂ ಇದೆ.

17ನೆಯ ಶತಮಾನದ ಅಮೆರಿಕದಲ್ಲಿ ಸರ್ಕಾರವಾಗಲಿ, ಸಂಘಸಂಸ್ಥೆಗಳಾಗಲಿ ಸಾರ್ವಜನಿಕ ಗ್ರಂಥಾಲಯಗಳ ಅಗತ್ಯದ ಬಗ್ಗೆ ಅಷ್ಟೇನೂ ಆಲೋಚಿಸಿದಂತೆ ಕಾಣುವುದಿಲ್ಲ. ಸಾರ್ವಜನಿಕ ಗ್ರಂಥಾಲಯ ಸೌಕರ್ಯಗಳನ್ನು ಒದಗಿಸುವುದು ತಮ್ಮ ಕರ್ತವ್ಯವೆಂದು ಪೌರಸಭೆಗಳು ಪರಿಗಣಿಸಿರಲಿಲ್ಲ. ಈ ನಿಟ್ಟಿನಲ್ಲಿ ಅತ್ಯಂತ ಮುಖ್ಯ ಹೆಜ್ಜೆಯೆಂದರೆ 1731ರಲ್ಲಿ ಬೆಂಜಮಿನ್ ಫ್ರಾಂಕ್ಲಿನ್ ಮತ್ತು ಸಂಗಡಿಗರಿಂದ ಸ್ಥಾಪಿಸಲ್ಪಟ್ಟ ಗ್ರಂಥಾಲಯ ಕೂಟ (ಲೈಬ್ರರಿ ಕಂಪನಿ).

18ನೆಯ ಶತಮಾನದಲ್ಲಿ ಅಂಥ ಗ್ರಂಥಾಲಯಗಳನ್ನು ಸ್ಥಾಪಿಸಲು ಇನ್ನೂ ಅನೇಕ ಪ್ರಯತ್ನಗಳು ನಡೆದವಾದರೂ ಆ ಕಾಲದ ರಾಜಕೀಯ ಪರಿಸ್ಥಿತಿಗಳಿಂದಾಗಿ ಅವು ಫಲಕಾರಿಯಾಗಲಿಲ್ಲ. ಆದರೂ ಆ ಕಾಲದಲ್ಲಿ ಆದ ಒಂದು ಮುಖ್ಯ ಬೆಳವಣಿಗೆಯೆಂದರೆ ಪಟ್ಟಣ ಪ್ರದೇಶಗಳಲ್ಲಿ ವಂತಿಗೆ ಗ್ರಂಥಾಲಯಗಳು (ಸಬ್‌ಸ್ಕ್ರಿಪ್ಷನ್ ಲೈಬ್ರರೀಸ್) ಅಸ್ತಿತ್ವಕ್ಕೆ ಬಂದುದು.

19ನೆಯ ಶತಮಾನದ ಆದಿಯಿಂದ ಸುಮಾರು 75 ವರ್ಷಗಳ ಅವಧಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ರಾಜಕೀಯ, ಕೈಗಾರಿಕಾ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿತು. ವ್ಯಾಪಾರ, ಕೈಗಾರಿಕೆ ಮತ್ತು ಸಂಪರ್ಕ ಕ್ಷೇತ್ರಗಳಲ್ಲಿ ಅದ್ಭುತ ಬೆಳವಣಿಗೆಯೊಂದಿಗೆ ಗ್ರಂಥಾಲಯವೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿತವಾದವು. ವಂತಿಗೆ ಗ್ರಂಥಾಲಯಗಳ ಸ್ಥಾಪನೆಯೊಂದಿಗೇ ಯಂತ್ರಕುಶಲಿಗಳ ಸಂಸ್ಥೆಗಳ (ಮೆಕ್ಯಾನಿಕ್ಸ್ ಇನ್‌ಸ್ಟಿಟ್ಯೂಟ್) ಗ್ರಂಥಾಲಯಗಳೂ ವಾಣಿಜ್ಯ ಗ್ರಂಥಾಲಯಗಳೂ ಸ್ಥಾಪಿತವಾದವು.

ಸಾರ್ವಜನಿಕ ಗ್ರಂಥಾಲಯ, ನ್ಯೂಯಾರ್ಕ್

ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಮತ್ತೊಂದು ಮುಖ್ಯ ಹೆಜ್ಜೆಯೆಂದರೆ 1812ರಲ್ಲಿ ಅಸ್ತಿತ್ವಕ್ಕೆ ಬಂದ ನ್ಯೂಯಾರ್ಕ್ ರಾಜ್ಯದ ಶಾಲಾಕಾಯಿದೆಗಳು. ಇವು ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಸಹಾಯಕ್ಕಾಗಿ ಶಾಲೆಗಳಲ್ಲಿ ಗ್ರಂಥಾಲಯಗಳನ್ನು ತೆರೆಯಬೇಕೆಂದು ಆದೇಶ ನೀಡಿದವು. 1835ರ ಮತ್ತೊಂದು ಕಾಯಿದೆ ಲೋಸುಗ ತೆರಿಗೆ ವಿಧಿಸುವ ಅಧಿಕಾರವನ್ನು ಕೊಟ್ಟಿತು. ಈ ವ್ಯವಸ್ಥೆ ಉತ್ತಮ ಪ್ರಗತಿಯನ್ನು ಸಾಧಿಸಿತು. 1850ರ ವೇಳೆಗೆ ಸುಮಾರು 11,000 ಶಾಲಾ ಜಿಲ್ಲೆಗಳಲ್ಲಿ ಈ ರೀತಿಯ 8,000 ಗ್ರಂಥಾಲಯಗಳು ಕೆಲಸ ಮಾಡುತ್ತಿದ್ದವು. ಇವುಗಳ ಒಟ್ಟು ಸಂಗ್ರಹಣೆ ಸುಮಾರು 13 ಲಕ್ಷ ಗ್ರಂಥಗಳಷ್ಟಿತ್ತು. 1876ರ ವೇಳೆಗೆ ಇನ್ನೂ 17 ರಾಜ್ಯಗಳಲ್ಲಿ ಈ ರೀತಿಯ ವ್ಯವಸ್ಥೆ ಜಾರಿಗೆ ಬಂತು. ಈ ವ್ಯವಸ್ಥೆ ಶಾಶ್ವತ ಸ್ವಭಾವದ್ದಾಗಿರಲಿಲ್ಲವಾದರೂ ಇದರಿಂದ ಕಾಯದೆಗಳ ಮೂಲಕ ಗ್ರಂಥಾಲಯ ಸೌಕರ್ಯಗಳನ್ನು ಒದಗಿಸಬಹುದು, ಜನತೆ ಸಾರ್ವಜನಿಕ ಗ್ರಂಥಾಲಯ ಕಾಯದೆಗಳನ್ನು ವಿರೋಧಿಸುವುದಿಲ್ಲ ಎಂಬ ಎರಡು ಅಂಶಗಳು ಸ್ಪಷ್ಟವಾದವು.

19ನೆಯ ಶತಮಾನದ ಮಧ್ಯಭಾಗದ ವೇಳೆಗೆ ವಂತಿಗೆ ಗ್ರಂಥಾಲಯಗಳು ಜನತೆಯಲ್ಲಿ ಬೆಳೆಯುತ್ತಿದ್ದ ವಾಚನಾವಶ್ಯಕತೆಗಳನ್ನು ಸಮರ್ಪಕವಾಗಿ ಪೂರೈಸಲು ಅಸಮರ್ಥವಾದವು. ಅಲ್ಲದೆ ಅಷ್ಟೇನೂ ಶ್ರೀಮಂತರಲ್ಲದ ಜನಸಾಮಾನ್ಯರಿಗೂ ಗ್ರಂಥಾಲಯ ಸೌಕರ್ಯಗಳನ್ನು ಒದಗಿಸಬೇಕೆಂಬ ಬೇಡಿಕೆಯೂ ಇತ್ತು. ಒಟ್ಟಿನಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗೆ ಕಾಲ ಸನ್ನಿಹಿತವಾಗಿತ್ತು.

ಪ್ರಪಂಚದ ಪ್ರಥಮ ಸಾರ್ವಜನಿಕ ಗ್ರಂಥಾಲಯ ಕಾಯಿದೆ : ಬಾಸ್ಟನ್ ನಗರ 1851ನೆಯ ಮಾರ್ಚ್ 18ರಂದು ಒಂದು ವಿಶಿಷ್ಟ ಕಾಯಿದೆಯನ್ನು ಜಾರಿಗೆ ತಂದು ಆ ನಗರದಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯದ ಸ್ಥಾಪನೆಗೆ ವ್ಯವಸ್ಥೆಮಾಡಿತು. ಈ ಕಾರಣಕ್ಕಾಗಿ ನಗರಾಡಳಿತವರ್ಗದವರಿಗೆ 5,000 ಡಾಲರುಗಳಷ್ಟು ತೆರಿಗೆ ವಿಧಿಸುವ ಅಧಿಕಾರವನ್ನೂ ಈ ಕಾಯಿದೆ ಕೊಟ್ಟಿತು. 1854ರ ಮಾರ್ಚ್‌ನಲ್ಲಿ ಈ ಕಾಯಿದೆಯ ಮೂಲಕ ಒಂದು ಉಚಿತ ಸಾರ್ವಜನಿಕ ಗ್ರಂಥಾಲಯ ಬಾಸ್ಟನ್ ನಗರದಲ್ಲಿ ಸ್ಥಾಪಿತವಾಯಿತು. ಆರಂಭದಲ್ಲಿ ಗ್ರಂಥಪಾಲಕರಾಗಿ ಇಲ್ಲಿ ಕೆಲಸಮಾಡಿದ ಕಾರ್ಲ್‌ಸ್ ಜೊವೆಟ್ ಮತ್ತು ಜಸ್ಟಿನ್ ವಿನ್ಸರ್ ಅವರು ಗ್ರಂಥಾಲಯದ ಬೆಳವಣಿಗೆಗೆ ಉತ್ತಮ ಅಸ್ತಿಭಾರ ಹಾಕಿ ಅದನ್ನು ಉಳಿದ ಗ್ರಂಥಾಲಯಗಳಿಗೆ ಮಾದರಿಯಂತೆ ವ್ಯವಸ್ಥೆಗೊಳಿಸಿದರು. ಬಾಸ್ಟನ್ ನಗರಕ್ಕೆ ಮಾತ್ರ ಸೀಮಿತವಾಗಿದ್ದ ಈ ಕಾಯದೆಯನ್ನು 1851ರಲ್ಲಿ ಮ್ಯಾಸಚೂಸೆಟ್ಸಿನ ಉಳಿದ ಪ್ರದೇಶಗಳಿಗೂ ಅನ್ವಯಿಸುವಂತೆ ವಿಸ್ತರಿಸಲಾಯಿತು. 1875ರ ವೇಳೆಗೆ ಮ್ಯಾಸಚೂಸೆಟ್ಸಿನ 144 ವಿಭಾಗಗಳು ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗಾಗಿ ತೆರಿಗೆ ವಿಧಿಸುವ ಅಧಿಕಾರವನ್ನು ಉಪಯೋಗಿಸಿಕೊಂಡಿದ್ದವು. ಮುಂದಿನ ಹಲವು ದಶಕಗಳಲ್ಲಿ ಅಮೆರಿಕದ ಅನೇಕ ರಾಜ್ಯಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯಿದೆ ಜಾರಿಗೆ ಬಂತು.

ಅಮೆರಿಕದ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಈ ಗ್ರಂಥಾಲಯಗಳು ಜನ ಸಾಮಾನ್ಯರಿಗೇ ಅಲ್ಲದೆ ಸಂಶೋಧಕರಿಗೆ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಕೂಡ ಹೊತ್ತುಕೊಂಡದ್ದು. ಈ ವಿಷಯದಲ್ಲಿ ನ್ಯೂಯಾರ್ಕ್ ನಗರದ ಗ್ರಂಥಾಲಯ ಉಳಿದೆಲ್ಲವಕ್ಕಿಂತ ಮುಂದಿತ್ತು.

ಸರ್ಕಾರಿ ಗ್ರಂಥಾಲಯಗಳು: ಸರ್ಕಾರಿ ಗ್ರಂಥಾಲಯಗಳು ಸಾರ್ವಜನಿಕ ಗ್ರಂಥಾಲಯಗಳಿಗಿಂತ ಮೊದಲೇ ಅಸ್ತಿತ್ವಕ್ಕೆ ಬಂದಿದ್ದರೂ ಅವು ದೇಶದ ಸಾರ್ವಜನಿಕ ವ್ಯವಸ್ಥೆಯ ಅಂಗವಾಗಿ ಕೆಲಸ ಮಾಡಲಿಲ್ಲ. 1811ರಲ್ಲಿ ದೇಶದ ಪ್ರಥಮ ಸರ್ಕಾರಿ ಗ್ರಂಥಾಲಯ ನ್ಯೂಜರ್ಸಿಯಲ್ಲಿ ಸ್ಥಾಪಿತವಾಯಿತು. ಉಳಿದ ರಾಜಧಾನಿ ನಗರಗಳಲ್ಲೂ ಕ್ರಮೇಣ ಇದೇ ರೀತಿಯ ಗ್ರಂಥಾಲಯಗಳನ್ನು ತೆರೆಯಲಾಯಿತು. ಈ ಗ್ರಂಥಾಲಯಗಳು ಸಾರ್ವಜನಿಕ ಗ್ರಂಥಾಲಯಗಳಿಲ್ಲದಿದ್ದ ಸ್ಥಳಗಳಲ್ಲಿ ತೆರೆಯಲ್ಪಟ್ಟವಾದ್ದರಿಂದ ಸಾರ್ವಜನಿಕ ಗ್ರಂಥಾಲಯಗಳ ಪಾತ್ರವನ್ನೂ ಸ್ವಲ್ಪಮಟ್ಟಿಗೆ ನಿರ್ವಹಿಸಿದವು.

ಗ್ರಂಥಾಲಯ ಸಮಿತಿಗಳು: ಗ್ರಂಥಾಲಯ ಸಮಿತಿಗಳು ಅಮೆರಿಕದ ಸಾರ್ವಜನಿಕ ಗ್ರಂಥಾಲಯ ಚಳವಳಿಯ ಮತ್ತೊಂದು ವೈಶಿಷ್ಟ್ಯ. 1890ರ ಅನಂತರ ದೇಶದ ಅನೇಕ ರಾಜ್ಯಗಳಲ್ಲಿ ಕಾಯಿದೆಗಳ ಮೂಲಕ ಗ್ರಂಥಾಲಯ ಸಮಿತಿಗಳನ್ನು ರೂಪಿಸಲಾಯಿತು. ಈ ಸಮಿತಿಗಳು ಅಸಮರ್ಪಕ ಗ್ರಂಥಾಲಯ ಸೌಕರ್ಯಗಳ ವಿವಿಧ ಕಾರಣಗಳನ್ನು ಗಮನಕ್ಕೆ ತಂದುಕೊಟ್ಟಿದ್ದೇ ಅಲ್ಲದೆ ವಿವಿಧ ರಾಜ್ಯಗಳ ಗ್ರಂಥಾಲಯ ಕಾಯಿದೆಗಳ ಕುಂದುಕೊರತೆಗಳನ್ನೂ ಗುರುತಿಸಿದವು.

1876ರಲ್ಲಿ ಆದ ಎರಡು ಮುಖ್ಯ ಬೆಳವಣಿಗೆಗಳಿಂದ ಸಾರ್ವಜನಿಕ ಗ್ರಂಥಾಲಯ ಚಳವಳಿಗೆ ಮತ್ತಷ್ಟು ಉತ್ತೇಜನ ದೊರೆಯಿತು. ಮೊದಲನೆಯದು ಅಮೆರಿಕದ ಗ್ರಂಥಾಲಯ ಸಂಘದ ಸ್ಥಾಪನೆ. ಎರಡನೆಯದು ಸರ್ಕಾರದ ಶಿಕ್ಷಣ ಖಾತೆ ದೇಶದ ಗ್ರಂಥಾಲಯಗಳ ಸ್ಥಿತಿಗತಿಗಳ ಬಗ್ಗೆ ಪ್ರಕಟಿಸಿದ ಒಂದು ವರದಿ. ಇದು ಅಮೆರಿಕದ ಗ್ರಂಥಾಲಯಗಳ ಸ್ಥಿತಿಗತಿಗಳ ಮೇಲಿನ ಮೊದಲ ಅಧಿಕೃತ ವರದಿ. ಈ ಎರಡು ಘಟನೆಗಳಿಂದಾಗಿ 19ನೆಯ ಶತಮಾನದ ಕೊನೆಯ ಭಾಗದಲ್ಲಿ ಹಾಗೂ 20ನೆಯ ಶತಮಾನದ ಮೊದಲ ಭಾಗದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 3,682 ಇದ್ದ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ 1900ರ ವೇಳೆಗೆ 5,300 ಆಯಿತು. ಅವುಗಳ ಗ್ರಂಥ ಸಂಗ್ರಹಣೆ ಕೂಡ ಅದೇ ಅವಧಿಯಲ್ಲಿ 1 ಕೋಟಿ 20 ಲಕ್ಷದಿಂದ 4 ಕೋಟಿ 40 ಲಕ್ಷಕ್ಕೆ ಏರಿತ್ತು.

ಈ ತ್ವರಿತ ಬೆಳವಣಿಗೆಗೆ ಅನೇಕ ಸಾಮಾಜಿಕ ಪ್ರಭಾವಗಳೂ ಕಾರಣವಾಗಿವೆ. ಮೊದಲನೆಯದಾಗಿ ಹೆಚ್ಚು ಹೆಚ್ಚು ಜನ ಗ್ರಾಮಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗತೊಡಗಿದರು. 1860ರಲ್ಲಿ ದೇಶದ ಒಟ್ಟು ಪ್ರಜಾಸಂಖ್ಯೆಯ ಶೇ. 16 ಭಾಗ ಮಾತ್ರ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. 1900ರ ವೇಳೆಗೆ ಈ ಪ್ರಮಾಣ ಶೇ. 31 ಕ್ಕೆ ಏರಿತು. ನಗರವಾಸ ಜನರಿಗೆ ಬೌದ್ಧಿಕ ಹವ್ಯಾಸಗಳಲ್ಲಿ ಹೆಚ್ಚು ಕಾಲ ಕಳೆಯಲು ಅವಕಾಶ ಕಾಣಬರುತ್ತಿತ್ತು. 1800ರಲ್ಲಿ ಕೇವಲ 100 ಪ್ರೌಢಶಾಲೆಗಳಿದ್ದವು. 1900ರ ವೇಳೆಗೆ ಅವುಗಳ ಸಂಖ್ಯೆ 7000 ಆಗಿ ಸುಮಾರು 5 ದಶಲಕ್ಷ ವಿದ್ಯಾರ್ಥಿಗಳು ಈ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ಈ ಗ್ರಂಥಾಲಯಗಳು ಜನತೆಯ ಹಾಗೂ ವಿದ್ಯಾರ್ಥಿಗಳ ಸಾಧನಗಳಾಗಿದ್ದವು. ಮೂರನೆಯದಾಗಿ ಗ್ರಂಥಾಲಯಗಳ ಸ್ಥಾಪನೆಗೆ ಶಾಸನಬದ್ಧ ಆಧಾರಗಳಿದ್ದವು. ನಾಲ್ಕನೆಯದಾಗಿ ವಿನ್ಸರ್, ಕಟ್ಟರ್, ಮೆಲ್‌ವಿಲ್ ಡ್ಯೂಯಿ ಮುಂತಾದ ಶ್ರೇಷ್ಠ ಗ್ರಂಥಾಲಯ ವಿಜ್ಞಾನಿಗಳು ಈ ಬಗ್ಗೆ ವಿಶಿಷ್ಟ ಕೆಲಸ ಮಾಡಿದರು. ಗ್ರಂಥಾಲಯಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಿಕೊಂಡು ಆವಶ್ಯಕವಾದ ಧನ ಸಹಾಯವನ್ನು ಅಮೆರಿಕದ ಅತಿ ದೊಡ್ಡ ದಾನಶೀಲನಾದ ಆಂಡ್ರ್ಯೂ ಕಾರ್ನೇಗಿ ಒದಗಿಸಿದ. ಈ ವ್ಯಕ್ತಿ ತನ್ನ ಜೀವಮಾನದ ಗಳಿಕೆಯನ್ನೆಲ್ಲ ಗ್ರಂಥಾಲಯಗಳ ಬೆಳವಣಿಗೆಗಾಗಿ ವಿನಿಯೋಗಿಸಿದ. ಈತನ ಮೇಲ್ಪಂಕ್ತಿಯನ್ನನುಸರಿಸಿ ಅಮೆರಿಕದ ಅನೇಕ ಶ್ರೀಮಂತರು ಗ್ರಂಥಾಲಯಗಳ ಬೆಳವಣಿಗೆಗೆ ಸಹಾಯ ಮಾಡಲು ಮುಂದೆ ಬಂದರು. ಈ ರೀತಿ ನಗರ ಪ್ರದೇಶಗಳ ಜನಜೀವನದಲ್ಲಿ ಸಾರ್ವಜನಿಕ ಗ್ರಂಥಾಲಯಗಳು ದೃಢವಾಗಿ ನೆಲೆಯೂರಿದ ಅನಂತರ, ಈ ವ್ಯವಸ್ಥೆಯನ್ನು ವಿಸ್ತರಿಸಲು, ನವೀಕರಣ ಗೊಳಿಸಲು ಮತ್ತು ಕ್ರೋಡೀಕರಿಸಲು ಪ್ರಯತ್ನ ನಡೆಯಿತು. ಗ್ರಂಥಾಲಯ ಸೌಕರ್ಯಗಳನ್ನು ಶಾಖಾಗ್ರಂಥಾಲಯಗಳ, ಗ್ರಾಮಾಂತರ ಗ್ರಂಥಾಲಯಗಳ ಹಾಗೂ ಸಂಚಾರೀ ಗ್ರಂಥಾಲಯಗಳ ಮೂಲಕ ಗ್ರಾಮಾಂತರ ಪ್ರದೇಶದ ಜನರಿಗೂ ಒದಗಿಸಲಾಯಿತು.

ಇವೇ ಅಲ್ಲದೆ ಗ್ರಂಥಾಲಯ ಕಟ್ಟಡಗಳ ಶೈಲಿ, ವಿನ್ಯಾಸ, ಪೀಠೋಪಕರಣಗಳು ಹಾಗೂ ಗ್ರಂಥಾಲಯ ಸೇವಾಕಾರ್ಯಗಳಲ್ಲಿ ಅನೇಕ ಪ್ರಯೋಗಗಳನ್ನು ಕೈಗೊಳ್ಳಲಾಯಿತು. ಈ ಎಲ್ಲ ಕ್ಷೇತ್ರಗಳಲ್ಲಿ ಅಮೆರಿಕದ ಗ್ರಂಥಾಲಯ ಸಂಘ ಸೂಕ್ತ ಹಾಗೂ ಉಪಯುಕ್ತ ಸಲಹೆ ನೀಡಿತು.

ಕೇಂದ್ರ ಸರ್ಕಾರದ ಗ್ರಂಥಾಲಯ ಚಟುವಟಿಕೆಗಳು : ಅಮೆರಿಕದ ಕೇಂದ್ರ ಸರ್ಕಾರದ ಗ್ರಂಥಾಲಯ ಚಟುವಟಿಕೆಗಳ ಗಾತ್ರದಲ್ಲಿ ಹಾಗೂ ವ್ಯಾಪ್ತಿಯಲ್ಲಿ ಇತರ ಕ್ಷೇತ್ರಗಳಲ್ಲಿನ ಸರ್ಕಾರಿ ಚಟುವಟಿಕೆಗಳಂತೆಯೇ ಬೆಳೆದಿದೆ. 1930ರಿಂದೀಚೆಗೆ ಸಮರ್ಥ ರೀತಿಯಲ್ಲಿ ಆಡಳಿತವನ್ನು ನಿರ್ವಹಿಸಲು ರಾಜಕಾರಣಿಗಳೂ ವಿಜ್ಞಾನ ಮತ್ತು ಇತರ ಕ್ಷೇತ್ರಗಳಲ್ಲಿನ ಬೆಳವಣಿಗೆಗಳ ಬಗ್ಗೆ ತಿಳಿಯಬೇಕಾದ ಆವಶ್ಯಕತೆಯನ್ನು ಹೆಚ್ಚು ಹೆಚ್ಚಾಗಿ ಗ್ರಹಿಸಲಾಗಿದೆ. ಈ ಕಾರಣದಿಂದಾಗಿ ಅಮೆರಿಕದ ಗ್ರಂಥಾಲಯ ಕ್ಷೇತ್ರದ ಹಲವು ಅತಿ ಮುಖ್ಯ ಕಾರ್ಯಕ್ರಮಗಳನ್ನು ಅಲ್ಲಿನ ಕೇಂದ್ರಸರ್ಕಾರವೇ ವಹಿಸಿಕೊಂಡಿದೆ.

ಸರ್ಕಾರದ ಆಡಳಿತ ಕಚೇರಿಗಳು ಫಿಲಿಡೆಲ್ಫಿಯದಲ್ಲಿದ್ದಾಗ ಸರ್ಕಾರಿ ಅಧಿಕಾರಿಗಳು ಮತ್ತು ಸಂಸತ್ ಸದಸ್ಯರು ಖಾಸಗೀ ಗ್ರಂಥಾಲಯಗಳ ಸಂಗ್ರಹಣೆಯನ್ನು ಅವಲಂಬಿಸ ಬೇಕಾದ ಪರಿಸ್ಥಿತಿಯಿತ್ತು. 1800ರಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಗ್ರಂಥಾಲಯ ಈ ಕೊರತೆಯನ್ನು ಬಹುಮಟ್ಟಿಗೆ ನೀಗಿಸಿತು.

**ಶರಣಸಾಹಿತ್ಯ ಗ್ರಂಥಾಲಯ ಮತ್ತು ಸಂಶೋಧನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ**

ಸರ್ಕಾರದ ಕಾರ್ಯವ್ಯಾಪ್ತಿ ಹೆಚ್ಚಿದಂತೆ ಹೊಸ ವಿಭಾಗಗಳನ್ನು ತೆರೆಯಲಾಯಿತು. ಈ ಎಲ್ಲ ವಿಭಾಗಗಳಿಗೆ ಪ್ರತ್ಯೇಕ ಗ್ರಂಥಾಲಯಗಳನ್ನೊದಗಿಸಲಾಯಿತು. ಸರ್ಕಾರದ ವಿವಿಧ ವಿಭಾಗಗಳು ಮತ್ತು ಸಂಸ್ಥೆಗಳು ತಮ್ಮದೇ ಆದ ಗ್ರಂಥಾಲಯಗಳನ್ನು ಬೆಳೆಸಿಕೊಳ್ಳಲು ಕಾಯಿದೆಗಳ ಮೂಲಕ ಎಲ್ಲ ಸೌಕರ್ಯಗಳನ್ನು ಕಲ್ಪಿಸಲಾಯಿತು. ಪ್ರಸ್ತುತ ಕಾಂಗ್ರೆಸ್ ಗ್ರಂಥಾಲಯ ಮತ್ತು ರಾಷ್ಟ್ರೀಯ ಪತ್ರಾಗಾರಗಳ ವಿನಾ ದೇಶದ ಉಳಿದೆಲ್ಲ ಸರ್ಕಾರಿ ಗ್ರಂಥಾಲಯಗಳೂ ವಿವಿಧ ವಿಭಾಗಗಳ ಸಂಸ್ಥೆಗಳ ಅವಿಭಾಜ್ಯ ಅಂಗಗಳಾಗಿವೆ. ಕೇಂದ್ರಸರ್ಕಾರ ಸದ್ಯ ದೇಶವಿದೇಶಗಳಲ್ಲಿ ಅನೇಕ ಸಹಸ್ರ ಗ್ರಂಥಾಲಯಗಳನ್ನು ನಡೆಸುತ್ತಿದೆ. 1965ರಲ್ಲಿ ಸರ್ಕಾರಿ ಗ್ರಂಥಾಲಯಗಳ ಆಯವ್ಯಯ, ಸಂಗ್ರಹಣೆ ಮುಂತಾದ ವಿಷಯಗಳನ್ನು ಪರಿಶೀಲಿಸಲು 12 ಮಂದಿ ಸರದಿಯ ಪ್ರಕಾರ ನೇಮಿಸಲ್ಪಡುವ ಸದಸ್ಯರುಗಳನ್ನುಳ್ಳ ಒಂದು ಕೇಂದ್ರ ಗ್ರಂಥಾಲಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಸಲಹೆಗಳ ಪ್ರಕಾರ ಸರ್ಕಾರಿ ಗ್ರಂಥಾಲಯಗಳು ಸರ್ಕಾರದ ಎಲ್ಲ ಯೋಜನೆಗಳನ್ನು ಕಾರ್ಯಕ್ಕಾಗಿ ಈ ಗ್ರಂಥಾಲಯಗಳು (1) ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಯಾವುದೇ ರೂಪದಲ್ಲಿದ್ದರೂ ಸಂಗ್ರಹಿಸುವುದು, (2) ಈ ರೀತಿ ಸಂಗ್ರಹಿಸಿದ ಮಾಹಿತಿಯನ್ನು ಗುರುತಿಸಲು ಮತ್ತು ಉಪಯೋಗಿಸಲು ಬೇಕಾದ ಸೌಕರ್ಯಗಳನ್ನು ಒದಗಿಸುವುದು, (3) ಸಂಬಂಧಪಟ್ಟ ಮಾಹಿತಿಯನ್ನು ಸೂಕ್ತರೀತಿಯಲ್ಲಿ ಪ್ರಚುರಪಡಿಸುವುದು, (4) ತಮ್ಮ ಸಂಗ್ರಹ ಹಾಗೂ ಸೌಕರ್ಯಗಳನ್ನು ಸಂಬಂಧಪಟ್ಟ ಎಲ್ಲರಿಗೂ ತಿಳಿಯುವಂತೆ ಮಾಡುವುದು– ಇವೇ ಮೊದಲಾದ ಕಾರ್ಯಗಳಿಗೆ ಬದ್ಧವಾಗಬೇಕಾಯಿತು.

**ರಾಷ್ಟ್ರೀಯ ಪತ್ರಾಗಾರ (ನ್ಯಾಷನಲ್ ಆರ್ಕೈವ್ಸ್) :** 1770ರಿಂದ ಇಂದಿನವರೆಗಿನ ದೇಶದ ಎಲ್ಲ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲ ಅಧಿಕೃತ ದಾಖಲೆಗಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಈ ಎಲ್ಲ ದಾಖಲೆಗಳನ್ನೂ ವ್ಯವಸ್ಥೆಗೊಳಿಸುವುದು ಮಾತ್ರವೇ ಅಲ್ಲದೆ ಅವನ್ನು ಉಪಯೋಗಿಸಲು ಆವಶ್ಯಕವಾದ ಕೈಪಿಡಿಗಳನ್ನೂ ಪತ್ರಾಗಾರ ತಯಾರಿಸಿ ಒದಗಿಸುತ್ತದೆ. ದೇಶ ವಿದೇಶಗಳ ಸಂಶೋಧಕರಿಗೆ ಅಧಿಕೃತ ದಾಖಲೆಗಳ ಜೆರಾಕ್ಸ್ ಇತ್ಯಾದಿಗಳನ್ನು ಬೇಡಿಕೆಯ ಮೇಲೆ ಒದಗಿಸಲಾಗುತ್ತಿದೆ.

**ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯ :** 1836ರಲ್ಲಿ ಸರ್ಜನ್ ಜನರಲ್ಲರ ಕಚೇರಿಗೆ ಸೇರಿದಂತೆ ಸ್ಥಾಪಿತವಾದ ಈ ಗ್ರಂಥಾಲಯ 1855–95ರವರೆಗೆ ಗ್ರಂಥಪಾಲರಾಗಿದ್ದ ಜಾನ್ ಷಾ ಬಿಲಿಂಗ್ಸ್‌ರ ಶ್ರೇಷ್ಠ ನೇತೃತ್ವದಲ್ಲಿ ತೀವ್ರಪ್ರಗತಿಯನ್ನು ಸಾಧಿಸಿತು. ಈ ಅವಧಿಯಲ್ಲಿ ಗ್ರಂಥಾಲಯದ ಸಂಗ್ರಹಣೆ 3 ಸಾವಿರದಿಂದ 30 ಲಕ್ಷಕ್ಕೆ ಏರಿತು. ಈ ಗ್ರಂಥಾಲಯ ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲ ಪುಸ್ತಕಗಳು, ನಿಯತಕಾಲಿಕೆಗಳು, ಸಂಶೋಧನ ವರದಿಗಳು ಮುಂತಾದ ಪ್ರಕಟಣೆಗಳನ್ನು ಸಂಗ್ರಹಿಸಿ ಅವುಗಳಲ್ಲಿರುವ ಮಾಹಿತಿಯನ್ನು ಪ್ರಚಾರಪಡಿಸುತ್ತದೆ. ಉತ್ತಮ ಹಾಗೂ ತ್ವರಿತ ಸೇವೆಯನ್ನೊದಗಿಸಲು ವೈದ್ಯಕೀಯ ಸಾಹಿತ್ಯ ವಿಶ್ಲೇಷಣೆ ಮತ್ತು ಉದ್ಧರಣಾ ವ್ಯವಸ್ಥೆಯೊಂದನ್ನು (ಮೆಡಿಕಲ್ ಲಿಟರೇಚರ್ ಅನಾಲಿಸಿಸ್ ಅಂಡ್ ರಿಟ್ರೀವಲ್ ಸಿಸ್ಟಮ್) ಅಳವಡಿಸಿಕೊಂಡಿದೆ. 1964ರ ಜನವರಿಯಿಂದ ಜಾರಿಯಲ್ಲಿರುವ ಈ ವ್ಯವಸ್ಥೆಯಲ್ಲಿ ಕಂಪ್ಯೂಟರ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ.

**ರಾಷ್ಟ್ರೀಯ ಕೃಷಿ ಗ್ರಂಥಾಲಯ :** ಸರ್ಕಾರದ ಕೃಷಿ ವಿಭಾಗದ ಅಂಗವಾಗಿ 1862ರಲ್ಲಿ ಸ್ಥಾಪಿತವಾದ ಈ ಗ್ರಂಥಾಲಯ 1962ರಲ್ಲಿ ಒಂದು ರಾಷ್ಟ್ರೀಯ ಗ್ರಂಥಾಲಯವಾಗಿ ರೂಪಿತಗೊಂಡಿತು. ಸದ್ಯ ಗ್ರಂಥಾಲಯ ಪ್ರಪಂಚದ 50 ಭಾಷೆಗಳಲ್ಲಿನ ಸುಮಾರು 15 ಲಕ್ಷ ಗ್ರಂಥಗಳನ್ನು ಸಂಗ್ರಹಿಸಿದೆ. ಈ ಸಂಗ್ರಹವನ್ನು ಗುರುತಿಸಲು ಅನುಕೂಲವಾಗುವಂತೆ ಗ್ರಂಥಸೂಚಿಯನ್ನೊದಗಿಸಲಾಗಿದೆ. ಗ್ರಂಥಾಲಯ ಪರಾಮರ್ಶನ, ಗ್ರಂಥವಿತರಣೆ, ಜೆರಾಕ್ಸ್ ಪ್ರತಿಗಳನ್ನೊದಗಿಸುವುದು ಮೊದಲಾದ ಕಾರ್ಯಗಳನ್ನು ಕೈಗೊಂಡಿದೆ. ಪ್ರಪಂಚದ ಕೃಷಿ ಸಾಹಿತ್ಯವನ್ನು ವಿಶ್ಲೇಷಿಸಿ ಕೃಷಿ ಗ್ರಂಥಸೂಚಿ ಎಂಬ ಮಾಸಿಕವೊಂದನ್ನು ಗ್ರಂಥಾಲಯ ಹೊರತಂದಿದೆ.

**ಇತರ ಗ್ರಂಥಾಲಯಗಳು:** ಮೇಲೆ ಹೇಳಿದ ಗ್ರಂಥಾಲಯಗಳೇ ಅಲ್ಲದೆ ಅಮೆರಿಕದ ಸರ್ಕಾರ ತನ್ನ ವಿವಿಧ ವಿಭಾಗಗಳ ಅಂಗವಾಗಿ ಇನ್ನೂ ಹಲವು ಪ್ರಮುಖ ಗ್ರಂಥಾಲಯಗಳನ್ನು ನಡೆಸುತ್ತಿದೆ. ಉದಾಹರಣೆಗೆ ಅಮೆರಿಕದ ಶ್ರೇಷ್ಠ ನ್ಯಾಯಾಲಯದ ಗ್ರಂಥಾಲಯ, ಸರ್ಕಾರದ ವಾಣಿಜ್ಯ ವಿಭಾಗದ ಗ್ರಂಥಾಲಯ. ಈ ಎಲ್ಲ ಗ್ರಂಥಾಲಯಗಳೂ ತಮ್ಮ ತಮ್ಮ ಸಿಬ್ಬಂದಿ ವರ್ಗದವರಿಗೆ ಮಾತ್ರವೇ ಅಲ್ಲದೆ, ಉಳಿದ ವಿಭಾಗಗಳ ಸಿಬ್ಬಂದಿ ವರ್ಗದವರಿಗೂ ಸಂಸತ್ ಸದಸ್ಯರಿಗೂ ಸಾಧ್ಯವಾದಷ್ಟು ಮಟ್ಟಿಗೆ ಜನ ಸಾಮಾನ್ಯರಿಗೂ ಸೌಕರ್ಯಗಳನ್ನೊದಗಿಸಿ ಕೊಡುತ್ತವೆ. ಈ ರೀತಿ ಸರ್ಕಾರದ ನೆರವಿನಿಂದ ಕೆಲಸ ಮಾಡುತ್ತಿರುವ ಈ ಸಹಸ್ರಾರು ಗ್ರಂಥಾಲಯಗಳಲ್ಲಿ ಅನೇಕ ಗ್ರಂಥಾಲಯಗಳು ಗ್ರಂಥಾಲಯ ಒಕ್ಕೂಟಗಳ (ಲೈಬ್ರರಿ ಸಿಸ್ಟಮ್ಸ್) ಅಂಗವಾಗಿ ಕೆಲಸ ಮಾಡುತ್ತಿವೆ.

**ಗ್ರಂಥಾಲಯಗಳಿಗೆ ಸರ್ಕಾರದ ನೆರವು :** ಗ್ರಂಥಾಲಯಗಳಿಗೆ ನೆರವು ಕೊಡುವಲ್ಲಿ ಸರ್ಕಾರದ ಪಾತ್ರವನ್ನು ಕುರಿತು ಈ ಹಿಂದೆಯೇ ಹೇಳಲಾಗಿದೆ. ಇದೇ ಅಲ್ಲದೆ ಸರ್ಕಾರದ ವಿವಿಧ ಕಚೇರಿಗಳು ಹಾಗೂ ನಿಯೋಗಗಳು ತಮ್ಮ ನಿಯತಕಾರ್ಯಕ್ರಮಗಳ ಅಂಗವಾಗಿ ಗ್ರಂಥಾಲಯಗಳಿಗೆ ನೆರವನ್ನೊದಗಿಸುತ್ತಿವೆ. ಉದಾಹರಣೆಗೆ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ ಪ್ರಚಲಿತ ಸಂಶೋಧನೆಗಳ ಮೇಲಿನ ಮಾಹಿತಿಗಳನ್ನು ವಿಜ್ಞಾನಿಗಳಿಗೆ ಮುಟ್ಟುವಂತೆ ಮಾಡಲು ಇರುವ ಸಾಧನಗಳನ್ನು ವಿಸ್ತರಿಸಲು ಹಾಗೂ ಉತ್ತಮಪಡಿಸಲು ಕಾರ್ಯಕ್ರಮಗಳನ್ನು ಸ್ವತಃ ಕೈಗೊಂಡಿದೆ ಹಾಗೂ ಪ್ರೋತ್ಸಾಹಿಸುತ್ತಿದೆ.

1895ರಲ್ಲಿ ಕಾಂಗ್ರೆಸ್ ಒಂದು ಕಾಯಿದೆಯನ್ನು ಹೊರತಂದು ವಿವಿಧ ರೀತಿಯ 637 ಗ್ರಂಥಾಲಯಗಳನ್ನು ಠೇವಣಿಗ್ರಂಥಾಲಯ (ಡೆಪಾಸಿಟರಿ ಲೈಬ್ರರೀಸ್) ಗಳನ್ನಾಗಿ ಮಾರ್ಪಡಿಸಿತು. ಇದರ ಪ್ರಕಾರ ಸರ್ಕಾರದ ಎಲ್ಲ ಪ್ರಕಟಣೆಗಳೂ ಈ ಎಲ್ಲ ಗ್ರಂಥಾಲಯಗಳಲ್ಲಿ ಕಡ್ಡಾಯವಾಗಿ ದಾಸ್ತಾನಾಗುತ್ತವೆ. ಇಷ್ಟೇ ಅಲ್ಲದೆ, ಅವನ್ನು ದೇಶದ ಸಂಶೋಧಕರಿಗೆ ಅವಶ್ಯವಾದಲ್ಲಿ ಈ ಗ್ರಂಥಾಲಯಗಳು ಒದಗಿಸಬೇಕೆಂದೂ ಕಾಯಿದೆ ನಿಯಮಿಸಿದೆ.

ಅನೇಕ ವರ್ಷಗಳಿಂದ ಸರ್ಕಾರದ ಶಿಕ್ಷಣ ಕಚೇರಿ ಗ್ರಂಥಾಲಯಗಳ ಸ್ಥಿತಿಗತಿಗಳ ಬಗ್ಗೆ ಅಂಕಿಸಂಖ್ಯೆಗಳನ್ನು ಸಂಗ್ರಹಿಸಿ ವರದಿಗಳನ್ನು ಪ್ರಕಟಿಸುತ್ತಿದೆ. ಈ ಕಚೇರಿಯ ಅಂಗವಾಗಿ 1937ರಲ್ಲಿ ಅಸ್ತಿತ್ವಕ್ಕೆ ಬಂದ ಗ್ರಂಥಾಲಯ ಸೌಕರ್ಯ ಶಾಖೆ (ಲೈಬ್ರರಿ ಸರ್ವಿಸಸ್ ಬ್ರ್ಯಾಂಚ್) ಗ್ರಂಥಾಲಯ ಸಂಘಗಳು, ಸರ್ಕಾರಿ ನಿಯೋಗಗಳು, ಶಿಕ್ಷಣವೇತ್ತರು ಹಾಗೂ ಶ್ರೇಷ್ಠ ಗ್ರಂಥಾಲಯ ವಿಜ್ಞಾನಿಗಳೊಡನೆ ಸಹಕರಿಸಿ ವಿವಿಧ ರೀತಿಯ ಗ್ರಂಥಾಲಯಗಳ ಸಂಗ್ರಹಣೆ ಮತ್ತು ಸೌಕರ್ಯಗಳನ್ನು ವಿಸ್ತರಿಸಲು ಎಲ್ಲ ರೀತಿಯ ಸಹಾಯವನ್ನೊದಗಿಸುತ್ತಿದೆ.

ಗ್ರಂಥಾಲಯಗಳ ಬೆಳವಣಿಗೆಗೆ ಸರ್ಕಾರದ ನೆರವಿನಲ್ಲಿ 1956ನೆಯ ವರ್ಷ ಒಂದು ಸಂಧಿಕಾಲವೆನ್ನಬಹುದು. ಈ ವರ್ಷದಲ್ಲಿ ಜಾರಿಗೆ ಬಂದ ಗ್ರಂಥಾಲಯ ಸೌಕರ್ಯಗಳ ಕಾಯಿದೆಯನ್ನು 1962ರ ಠೇವಣಿ ಗ್ರಂಥಾಲಯ ಕಾಯಿದೆ, 1963ರ ಉನ್ನತ ಶಿಕ್ಷಣ ಸೌಕರ್ಯಗಳ ಕಾಯಿದೆ 1965ರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾಯಿದೆ ಮತ್ತು 1965ರ ಉನ್ನತ ಶಿಕ್ಷಣ ಕಾಯಿದೆಗಳು ಹಿಂಬಾಲಿಸಿದವು. ಇವೆಲ್ಲ ಪರೋಕ್ಷವಾಗಿ ಗ್ರಂಥಾಲಯಗಳ ಬೆಳವಣಿಗೆಗೆ ನೆರವಾದುದೇ ಅಲ್ಲದೆ, ಗ್ರಂಥಗಳ ಸಂಗ್ರಹಣೆ ಹಾಗೂ ಸೌಕರ್ಯಗಳ ವಿಸ್ತರಣೆಗೆ ಸಂಬಂಧಪಟ್ಟಂತೆ ನಿರ್ದಿಷ್ಟ ನಿಬಂಧನೆಗಳನ್ನೊಳಗೊಂಡಿದ್ದವು. ಇವುಗಳಲ್ಲಿ ಶೈಕ್ಷಣಿಕ ಮತ್ತು ಸಂಶೋಧನ ಗ್ರಂಥಾಲಯಗಳ ಮೇಲೆ ಅತಿಹೆಚ್ಚಿನ ಪ್ರಭಾವ ಬೀರಿದ ಉನ್ನತ ಶಿಕ್ಷಣ ಕಾಯಿದೆಯ ಪ್ರಕಾರ ಕಾಂಗ್ರೆಸ್ ಗ್ರಂಥಾಲಯ ಈ ಎರಡು ಕಾರ್ಯಗಳಿಗೆ ಬದ್ಧವಾಗಬೇಕಾಯಿತು : (1) ಸಾಧ್ಯವಾದಷ್ಟು ಮಟ್ಟಿಗೆ ಪ್ರಪಂಚದ ಎಲ್ಲೆಡೆ

ಪ್ರಕಟವಾದ ಮತ್ತು ಸಂಶೋಧನೆಗೆ ನೆರವಾಗುವ ಎಲ್ಲ ಗ್ರಂಥಗಳನ್ನೂ ಸಂಗ್ರಹಿಸುವುದು, (2) ಈ ರೀತಿ ಸಂಗ್ರಹಿಸಿದ ಎಲ್ಲ ಗ್ರಂಥಗಳನ್ನೂ ಸೂಚೀಕರಿಸಿ, ಸೂಚೀರೇಖೆಯನ್ನು ವಿವಿಧ ಗ್ರಂಥಾಲಯಗಳಿಗೆ ಒದಗಿಸುವುದು.

ಗ್ರಂಥಾಲಯ ಚಳವಳಿಯಲ್ಲಿ ಸರ್ಕಾರ ಮಾಡಿದ್ದ ಇನ್ನೊಂದು ದೊಡ್ಡ ಕೆಲಸವೆಂದರೆ 1966ರಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಲಹಾ ಸಮಿತಿಯನ್ನು ನೇಮಿಸಿದ್ದು. ಶ್ರೇಷ್ಠ ಶಿಕ್ಷಣವೇತ್ತರು, ಗ್ರಂಥಪಾಲರು, ಗ್ರಂಥಾಲಯ ವಿಜ್ಞಾನಿಗಳು ಸದಸ್ಯರಾಗಿರುವ ಈ ಸಮಿತಿ ಗ್ರಂಥಾಲಯಗಳ ಪಾತ್ರವನ್ನು ವಿಮರ್ಶಿಸಿ ಅವುಗಳ ಬೆಳೆವಣಿಗೆಗೆ ಸಲಹೆಗಳನ್ನೀಯುತ್ತದೆ.

**ಶಾಲಾಗ್ರಂಥಾಲಯಗಳು** : ಸಾರ್ವಜನಿಕ ಗ್ರಂಥಾಲಯಗಳಂತೆಯೇ ಶಾಲಾ ಗ್ರಂಥಾಲಯಗಳೂ ಅವುಗಳ ಸಂಗ್ರಹಣೆ ಮತ್ತು ಸೌಕರ್ಯಗಳ ಆವಶ್ಯಕತೆ ಬಿದ್ದಾಗ ಅಸ್ತಿತ್ವಕ್ಕೆ ಬಂದವು. ಅವುಗಳ ಸೌಕರ್ಯಕ್ಕೆ ಹೆಚ್ಚಿನ ಬೇಡಿಕೆ ಇಲ್ಲದಿದ್ದಾಗ ಅವುಗಳ ಸಂಗ್ರಹಣೆ ಕೂಡ ಸೀಮಿತವಾಗಿತ್ತು. ಈ ಬೇಡಿಕೆ ಹೆಚ್ಚಿದಂತೆಲ್ಲ ಈ ಗ್ರಂಥಾಲಯಗಳನ್ನು ಬೆಳೆಸಲು ಎಲ್ಲ ರೀತಿಯ ಪ್ರಯತ್ನಗಳೂ ನಡೆದವು. ಇಷ್ಟಾದರೂ ಶಾಲಾ ಶಿಕ್ಷಣ ಕ್ರಮದಲ್ಲಿ ಗ್ರಂಥಾಲಯ ಒಂದು ಅವಿಭಾಜ್ಯ ಅಂಗವೆಂಬುದನ್ನು ಶಿಕ್ಷಣಕಾರರು, ಶಾಲಾ ಆಡಳಿತ ವರ್ಗದವರು, ರಾಜಕಾರಣಿಗಳು ಹಾಗೂ ವಿದ್ಯಾರ್ಥಿಗಳ ಪೋಷಕರು ಇನ್ನೂ ಸಂಪೂರ್ಣವಾಗಿ ಮನಗಂಡಿಲ್ಲ.

19ನೆಯ ಶತಮಾನದ ಪೂರ್ತ ಮತ್ತು ಈ ಶತಮಾನದ ಆದಿಯಲ್ಲಿ ಪಠ್ಯ ಪುಸ್ತಕಗಳಲ್ಲಿನ ವಿಷಯ ಗ್ರಹಣವೇ ಶಾಲಾಶಿಕ್ಷಣದ ಮುಖ್ಯ ಉದ್ದೇಶವಾಗಿದ್ದಾಗ ಗ್ರಂಥಾಲಯದ ಆವಶ್ಯಕತೆ ಅಷ್ಟಾಗಿ ಕಂಡುಬರಲಿಲ್ಲ. ಮೊದಮೊದಲು ಸ್ಥಾಪಿತವಾದ ಶಾಲಾಗ್ರಂಥಾಲಯಗಳನ್ನು ವಿದ್ಯಾರ್ಥಿಗಳೂ ಹಾಗೂ ಶಿಕ್ಷಕರೂ ಹೆಚ್ಚಾಗಿ ಉಪಯೋಗಿಸುತ್ತಿರಲಿಲ್ಲ. ಈ ಕಾರಣದಿಂದಾಗಿ ಶಿಕ್ಷಣ ಕಾರ್ಯಕ್ರಮದಲ್ಲಿ ಶಾಲಾ ಗ್ರಂಥಾಲಯಗಳು ಸಹಾಯಕ ಪಾತ್ರವನ್ನು ವಹಿಸಲು ಸಾಧ್ಯವಾಗಲಿಲ್ಲ. ಶಾಲಾಶಿಕ್ಷಣ ಕಡ್ಡಾಯವಾದ ಮೇಲೆ ಪಠ್ಯಕ್ರಮದಲ್ಲಿ ಅನೇಕ ಬದಲಾವಣೆಗಳಾಗಿ ಭೌತವಿಜ್ಞಾನ, ರಸಾಯನವಿಜ್ಞಾನ ಮುಂತಾದ ಹೊಸ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಿದರೂ ಶಾಲಾಗ್ರಂಥಾಲಯದಲ್ಲಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡುವುದು ಆವಶ್ಯಕವಾಗಿ ಕಾಣಲಿಲ್ಲ. ಆದರೆ 20ನೆಯ ಶತಮಾನದ 3ನೆಯ ಮತ್ತು 4ನೆಯ ದಶಕಗಳಲ್ಲಿ ಪಠ್ಯಕ್ರಮಕ್ಕಿಂತ ಹೆಚ್ಚಾಗಿ ಕಲಿಯುವವರಿಗೆ ಪ್ರಾಧಾನ್ಯ ನೀಡಿದಾಗ ಶಾಲಾ ಗ್ರಂಥಾಲಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಗ್ರಂಥಾಲಯಗಳಿಗೆಂದು ಒಂದು ಪ್ರತ್ಯೇಕ ಕೊಠಡಿಯನ್ನು ಬಿಟ್ಟುಕೊಟ್ಟಿದ್ದೇ ಅಲ್ಲದೆ ಒಬ್ಬ ಶಿಕ್ಷಕನನ್ನು ಗ್ರಂಥಪಾಲನನ್ನಾಗಿ ನೇಮಿಸಲಾಯಿತು. ಈ ಅವಧಿಯಲ್ಲಿ ಶಾಲಾಗ್ರಂಥಾಲಯಗಳ ಸಂಗ್ರಹಣೆ ವಿಶೇಷವಾಗಿ ಬೆಳೆಯಿತು. ಈ ಶತಮಾನದ ನಾಲ್ಕನೆಯ ದಶಕದ ಕೊನೆಯ ವೇಳೆಗೆ ಸರ್ಕಾರದ ಶಿಕ್ಷಣ ಕಚೇರಿಯ ಪ್ರಕಾರ ದೇಶದಲ್ಲಿ ಒಟ್ಟು 27,800 ಕೇಂದ್ರೀಕೃತ ಶಾಲಾಗ್ರಂಥಾಲಯಗಳಿದ್ದುವು; ಇವುಗಳ ಒಟ್ಟು ಸಂಗ್ರಹಣೆ 28,300ರಷ್ಟಿತ್ತು. ಇಷ್ಟಾದರೂ 33,000ಕ್ಕೂ ಹೆಚ್ಚು ಶಾಲೆಗಳು ಸಾರ್ವಜನಿಕ ಗ್ರಂಥಾಲಯಗಳಿಂದ ಎರವಲು ಪಡೆದ ಪುಸ್ತಕಗಳನ್ನೇ ಅವಲಂಬಿಸಿದ್ದುವು.

ಕೇಂದ್ರ ಗ್ರಂಥಾಲಯ, ಆಂಧ್ರಪ್ರದೇಶ

ವಿವಿಧ ರಾಜ್ಯಗಳ ಶಿಕ್ಷಣ ಶಾಖೆಗಳು ಶಾಲೆಗಳನ್ನು ಅಂಗೀಕರಿಸಲು ಕನಿಷ್ಠ ಗ್ರಂಥಾಲಯ ಸೌಕರ್ಯಗಳ ಬಗ್ಗೆ ಒತ್ತಾಯಪಡಿಸಿದರೂ ಶಾಲೆಗಳೂ ಅಂಗೀಕರಣವಿಲ್ಲದೆಯೇ ಕೆಲಸ ಮಾಡಬಲ್ಲವಾಗಿದ್ದುವು.

20ನೆಯ ಶತಮಾನದ 5ನೆಯ ದಶಕದಲ್ಲಿ ಶಾಲಾಶಿಕ್ಷಣದ ಉದ್ದೇಶದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ಪಠ್ಯಕ್ರಮದಲ್ಲಿ ಮಾತ್ರವೇ ಅಲ್ಲದೆ ಶಿಕ್ಷಣ ಕ್ರಮದಲ್ಲೂ ಗಮನಾರ್ಹ ಬದಲಾವಣೆಗಳು ಕಂಡುಬಂದವು. ಈ ಉದ್ದೇಶಗಳನ್ನು ಸಾಧಿಸಲು ಹೆಚ್ಚಿನ ಗ್ರಂಥಾಲಯ ಸೌಕರ್ಯ ಅವಶ್ಯವಾಯಿತು. 1940ರಲ್ಲಿ ಅಮೆರಿಕದ ಗ್ರಂಥಾಲಯ ಸಂಘ ಮತ್ತು ರಾಷ್ಟ್ರೀಯ ಶಿಕ್ಷಣ ಸಂಘಗಳ ಸಂಯುಕ್ತ ಸಮಿತಿ ಗ್ರಂಥಾಲಯ ಸೇವೆಯಲ್ಲಿ ಶಾಲಾ ಮತ್ತು ಸಾರ್ವಜನಿಕ ಗ್ರಂಥಾಲಯಗಳ ಸಹಕಾರ ಎಂಬ ಒಂದು ವರದಿಯನ್ನು ಸಲ್ಲಿಸಿತು. ಪ್ರಾಂತೀಯ ಶಿಕ್ಷಣ ಸಮಿತಿಗಳು ಪ್ರಾಂತ್ಯದ ಎಲ್ಲ ಶಾಲೆಗಳಲ್ಲೂ ಶಾಲಾಗ್ರಂಥಾಲಯಗಳನ್ನು ಒದಗಿಸಬೇಕೆಂದು ಈ ವರದಿ ಒತ್ತಾಯಪಡಿಸಿತು. 1945ರಲ್ಲಿ ಶಾಲಾಗ್ರಂಥಾಲಯಗಳ ಮೇಲೆ ಅಮೆರಿಕದ ಗ್ರಂಥಾಲಯ ಸಂಘ ಪ್ರಥಮ ರಾಷ್ಟ್ರೀಯ ಮಾನಕವೊಂದನ್ನು ಹೊರತಂದಿತು. ಈ ಮಾನಕ ಶಾಲಾಗ್ರಂಥಾಲಯದ ಗಾತ್ರ, ಯೋಗ್ಯತೆಗಳ ಬಗ್ಗೆ ಮಾತ್ರವೇ ಅಲ್ಲದೆ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಸೌಕರ್ಯಗಳೂ ಹಾಗೂ ಶಾಲಾಗ್ರಂಥಾಲಯಗಳ ಸಿಬ್ಬಂದಿ ವರ್ಗದವರ ಬಗ್ಗೆಯೂ ನಿರ್ದಿಷ್ಟ ಉಲ್ಲೇಖನಗಳನ್ನೊಳಗೊಂಡಿತ್ತು. ಶಾಲಾ ಗ್ರಂಥಾಲಯಗಳ ಬೆಳೆವಣಿಗೆಯ ಬಗ್ಗೆ ಮೊದಲಿನಿಂದಲೂ ಆಸಕ್ತಿ ವಹಿಸಿದ್ದ ಅಮೆರಿಕದ ಗ್ರಂಥಾಲಯ ಸಂಘ 1936ರಲ್ಲಿ ಒಂದು ಶಾಲಾ ಮತ್ತು ಮಕ್ಕಳ ಗ್ರಂಥಾಲಯ ವಿಭಾಗವನ್ನು ಸ್ಥಾಪಿಸಿತು. ಇಷ್ಟೇ ಅಲ್ಲದೆ 1951ರಲ್ಲಿ ಶಾಲಾಗ್ರಂಥಪಾಲರ ಸಂಘವೊಂದು ಅಮೆರಿಕ ಗ್ರಂಥಾಲಯ ಸಂಘದ ಅಂಗವಾಗಿ ಸ್ಥಾಪಿಸಲ್ಪಟ್ಟಿತು. 1960ರಲ್ಲಿ ಈ ಸಂಸ್ಥೆ ಅಮೆರಿಕದ ರಾಷ್ಟ್ರೀಯ ಶಿಕ್ಷಣ ಸಂಘದ ಅಂಗವಾಗಿಯೂ ಪರಿಗಣಿಸಲ್ಪಟ್ಟಿತು. ಈ ಸಂಸ್ಥೆಯ ಮುಖ್ಯ ಉದ್ದೇಶವೆಂದರೆ ಶಾಲಾ ಶಿಕ್ಷಣ ಕ್ರಮವನ್ನು ಶಕ್ತಿಯುತಗೊಳಿಸಲು ಅಗತ್ಯವಾದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಗ್ರಂಥಾಲಯ ಸೌಕರ್ಯಗಳನ್ನು ಉತ್ತಮಗೊಳಿಸಲು ಹಾಗೂ ವಿಸ್ತರಿಸಲು ಮಾರ್ಗಗಳನ್ನು ರೂಪಿಸುವುದು.

1937ರಲ್ಲಿ ಅಸ್ತಿತ್ವಕ್ಕೆ ಬಂದ ಅಮೆರಿಕದ ಶಿಕ್ಷಣ ಕಚೇರಿಯ ಗ್ರಂಥಾಲಯ ಸೌಕರ್ಯ ಶಾಖೆಯ ಸಿಬ್ಬಂದಿವರ್ಗದಲ್ಲಿ ಒಬ್ಬ ಶಾಲಾಗ್ರಂಥಪಾಲನೂ ಇದ್ದಾನೆ. ಕೇಂದ್ರ ಸರ್ಕಾರದ ಈ ನಿಯೋಗ ಅನೇಕ ಸಮ್ಮೇಳನಗಳನ್ನು ಹಾಗೂ ಶಾಲಾ ಗ್ರಂಥಾಲಯಗಳಿಗೆ ಸಂಬಂಧಪಟ್ಟಂತೆ ಅನೇಕ ಅಧ್ಯಯನಗಳನ್ನು ನಡೆಸುವುದರ ಮೂಲಕ ಅವುಗಳ ಬೆಳೆವಣಿಗೆಗೆ ಸಹಾಯಕವಾಗಿದೆ. ಇಷ್ಟೆಲ್ಲ ಆದರೂ 1964ರಲ್ಲಿ ಅಮೆರಿಕ ಗ್ರಂಥಾಲಯ ಸಂಘದ ಮಾನಕವನ್ನು ಆಧಾರವಾಗಿಟ್ಟುಕೊಂಡು ಅಮೆರಿಕದ ಕೇಂದ್ರೀಕೃತ ಶಾಲಾ ಗ್ರಂಥಾಲಯಗಳನ್ನು ಪರಿಶೀಲಿಸಿದಾಗ ಒಟ್ಟಿನಲ್ಲಿ ಸುಮಾರು 200 ದಶಲಕ್ಷ ಪುಸ್ತಕಗಳ ಕೊರತೆ ಕಂಡುಬಂತು.

1960ರಲ್ಲಿ ಅಮೆರಿಕದ ಶಾಲಾ ಗ್ರಂಥಾಲಯಗಳ ಬಗ್ಗೆ ಹೊಸ ಮಾನಕವೊಂದನ್ನು ಹೊರತಂದಾಗ ಶಾಲಾಗ್ರಂಥಾಲಯಗಳ ಇತಿಹಾಸದಲ್ಲಿ ಹೊಸ ಯುಗ ಆರಂಭವಾಯಿತು. ಇದೇ ಅಲ್ಲದೆ ಅನೇಕ ರಾಷ್ಟ್ರೀಯ ಹಾಗೂ ಪ್ರಾಂತೀಯ ಸಮಿತಿಗಳು ಶಾಲಾಗ್ರಂಥಾಲಯಗಳನ್ನು ಉತ್ತಮಗೊಳಿಸಲು ಅನೇಕ ಸಲಹೆಗಳನ್ನು ಮಾಡಿದುವು. ಆದರೂ ಅಮೆರಿಕದಲ್ಲಿ ಶಾಲಾಗ್ರಂಥಾಲಯಗಳ ಬೆಳೆವಣಿಗೆಯನ್ನು ಅಭ್ಯಸಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಈ ಮಾನಕಗಳೇ ಆಗಲಿ ಅಥವಾ ಸಲಹೆಗಳೇ ಆಗಲಿ ಶಾಲಾಗ್ರಂಥಾಲಯಗಳ ಸಮರ್ಪಕ ಬೆಳೆವಣಿಗೆಯ ಭರವಸೆಯನ್ನು ಕೊಡಲಾರವು. ಶಾಲಾಗ್ರಂಥಾಲಯ ಶಾಲೆಯ ಅವಿಭಾಜ್ಯ ಅಂಗ ಮತ್ತು ಶಾಲೆಯ ಉದ್ದೇಶ ಸಾಧನೆಗಾಗಿಯೇ ಅಸ್ತಿತ್ವಕ್ಕೆ ಬಂದಿರುವ ಸಂಸ್ಥೆ. ಶಾಲೆಯ ಉದ್ದೇಶ ಸಾಧಿಸುವಲ್ಲಿ ಗ್ರಂಥಾಲಯದ ಆವಶ್ಯಕತೆ ಹೆಚ್ಚಾಗಿರುತ್ತದೆ. ಗ್ರಂಥಾಲಯದ ಸೌಲಭ್ಯಗಳು ಎಷ್ಟು ಹೆಚ್ಚಾಗಿರುತ್ತವೋ ಅಷ್ಟರಮಟ್ಟಿಗೆ ಶಾಲೆಯ ಉದ್ದೇಶ ಸಾಧನೆಯಾಗುತ್ತದೆ.

ಅಮೆರಿಕದ ಶಾಲಾಗ್ರಂಥಾಲಯಗಳ ಬೆಳೆವಣಿಗೆಗೆ ಅನೇಕ ದಾನಶೀಲರು ಹಾಗೂ ದಾನಶೀಲಸಂಸ್ಥೆಗಳೂ ನೆರವಾಗಿವೆ. ಉದಾಹರಣೆಗೆ 1962ರಲ್ಲಿ ಗ್ರಂಥಾಲಯ ಸಾಧನ ಸಂಪತ್ತುಗಳ ಮಂಡಳಿ ಶಾಲಾಗ್ರಂಥಾಲಯಗಳ ಬೆಳೆವಣಿಗೆಗೆ 1 ಲಕ್ಷ ಡಾಲರುಗಳಷ್ಟು ಧನಸಹಾಯ ನೀಡಿತು. ಇವೇ ಅಲ್ಲದೆ ಈ ಮೊದಲೇ ಹೇಳಿದ ಕಾಯದೆಗಳೂ ಶಾಲಾಗ್ರಂಥಾಲಯಗಳ ಬೆಳೆವಣಿಗೆಗೆ ಅನೇಕ ರೀತಿ ನೆರವಾಗಿವೆ.

ಈ ರೀತಿ ಹಲವು ವರ್ಷಗಳಲ್ಲಿ ಶಾಲಾಪಠ್ಯಕ್ರಮವನ್ನು ಹಿಂದೆಂದಿಗಿಂತಲೂ ವಿಸ್ತಾರವಾಗಿ ವಿಮರ್ಶಿಸಲಾಗುತ್ತಿದೆ. ಅಭ್ಯಾಸ ಹಾಗೂ ವಾಚನಾಭಿರುಚಿ ಶಾಲಾಮಕ್ಕಳಿಗೆ ಹಾಗೂ ಯುವಕರಿಗೆ ಮಾತ್ರ ಸೀಮಿತವಾದದ್ದಲ್ಲ. ಅದು ಜೀವನದುದ್ದಕ್ಕೂ ಬೆಳೆಸಿಕೊಂಡು ಬರಬೇಕಾದ ಕಲೆ. ಶಾಲಾ ಮಕ್ಕಳಲ್ಲಿ ಇಂಥ ವಾಚನಾಭಿರುಚಿಯನ್ನು ಬೆಳೆಸಲು ಪಣತೊಟ್ಟಿವೆ. ಈ ಉದ್ದೇಶ ಸಾಧನೆಯ ಹಿನ್ನೆಲೆಯಲ್ಲಿ ಶಾಲಾಗ್ರಂಥಾಲಯಗಳ ಪಾತ್ರ ಹಿಂದೆಂದಿಗಿಂತಲೂ ಹಿರಿದಾಗಿ ಕಾಣುತ್ತದೆ.

**ಕಾಲೇಜು ಮತ್ತು ವಿಶ್ವವಿದ್ಯಾಲಯ ಗ್ರಂಥಾಲಯಗಳು (ಶೈಕ್ಷಣಿಕ ಗ್ರಂಥಾಲಯಗಳು):** ಉನ್ನತ ವ್ಯಾಸಂಗ ಸಂಸ್ಥೆಗಳ ಗ್ರಂಥಾಲಯಗಳು ಆ ಸಂಸ್ಥೆಗಳಷ್ಟೇ ವಿಭಿನ್ನ ರೀತಿಯಲ್ಲಿವೆ. ಕಿರಿಯ ಕಾಲೇಜುಗಳು, ಶಿಕ್ಷಕರ ಕಾಲೇಜುಗಳು, ಕೃಷಿ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು– ಈ ಎಲ್ಲ ಸಂಸ್ಥೆಗಳಲ್ಲೂ ಗ್ರಂಥಾಲಯಗಳಿವೆ. ಇವೇ ಅಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಕೇಂದ್ರೀಕೃತ ಗ್ರಂಥಾಲಯಗಳನ್ನು ಅವುಗಳಿಗೆ ಸೇರಿದ ಕಾಲೇಜುಗಳ ವಿಶಿಷ್ಟ ಗ್ರಂಥಾಲಯಗಳೆಲ್ಲವನ್ನು ಒಟ್ಟಿಗೆ ಶೈಕ್ಷಣಿಕ ಗ್ರಂಥಾಲಯಗಳೆಂದು ಕರೆಯಬಹುದು.

ಅಮೇರಿಕದಲ್ಲಿ ಶೈಕ್ಷಣಿಕ ಗ್ರಂಥಾಲಯಗಳ ಬೆಳವಣಿಗೆಯನ್ನು ಗಮನಿಸಿದರೆ ಅನೇಕ ಸಂಘಸಂಸ್ಥೆಗಳು, ಕೇಂದ್ರಸರ್ಕಾರದ ಕಾಯಿದೆ ಕ್ರಮಗಳು ಹಾಗೂ ಅನೇಕ ದಾನಶೀಲರು ಅದರಲ್ಲಿ ಮಹತ್ತ್ವದ ಪಾತ್ರ ವಹಿಸಿರುವುದು ಕಂಡುಬರುತ್ತದೆ.

**ಅಂಗೀಕಾರ ಸಂಸ್ಥೆಗಳು :** 1784ರಷ್ಟು ಹಿಂದೆಯೇ ನ್ಯೂಯಾರ್ಕ್ ರಾಜ್ಯದ ರಾಜಪ್ರತಿನಿಧಿ ಮಂಡಳಿ ಆ ರಾಜ್ಯದ ಉನ್ನತ ವ್ಯಾಸಂಗ ಸಂಸ್ಥೆಗಳಿಗೆ ಸಂಬಂಧಪಟ್ಟ ಮಾನಕಗಳನ್ನು ಸಂಗ್ರಹಿಸುವಲ್ಲಿ ನಿರತವಾಯಿತು. ಸಾಮಾನ್ಯವಾಗಿ ರಾಜ್ಯ ಶಿಕ್ಷಣ ಖಾತೆ ಅಥವಾ ರಾಜ್ಯ ವಿಶ್ವವಿದ್ಯಾಲಯ ಮಾನಕಗಳನ್ನು ತಯಾರಿಸುವ ಕಾರ್ಯವನ್ನು ಕೈಗೊಂಡಿರುತ್ತವೆ.

ಅಮೇರಿಕದ ಉನ್ನತ ವ್ಯಾಸಂಗಕ್ಕೆ ಸಂಬಂಧಪಟ್ಟ ಒಂದು ಮುಖ್ಯ ಬೆಳವಣಿಗೆ ಯೆಂದರೆ ಖಾಸಗಿ ಅಂಗೀಕಾರ ಸಂಸ್ಥೆಗಳ ಮತ್ತು ಪ್ರಾಂತೀಯ ಶಾಲಾಕಾಲೇಜುಗಳ ಸಂಘಗಳ ಸ್ಥಾಪನೆ. ಈ ಸಂಸ್ಥೆಗಳು ಉನ್ನತ ವ್ಯಾಸಂಗಕ್ಕೆ ಸಂಬಂಧಪಟ್ಟ ಹಲವು ಸಮಸ್ಯೆಗಳನ್ನು ಎದುರಿಸಲು ಕಳೆದ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಅಸ್ತಿತ್ವಕ್ಕೆ ಬರಲಾರಂಭಿಸಿದವು. ಈ ಸಂಸ್ಥೆಗಳು ಅನೇಕ ಮಾನಕಗಳನ್ನು ರೂಪಿಸಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಅಂಗೀಕರಿಸುವ ಮುನ್ನ ಈ ಮಾನಕಗಳ ಆಧಾರದ ಮೇಲೆ ಈ ಸಂಸ್ಥೆಗಳನ್ನು ಪರೀಕ್ಷೆ ಮಾಡಲಾರಂಭಿಸಿದುವು. ಈ ಕಾರಣದಿಂದಾಗಿ ಗ್ರಂಥಾಲಯವನ್ನೂ ಒಳಗೊಂಡು ಉನ್ನತ ವ್ಯಾಸಂಗಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಮೇಲೆ ಮಾನಕಗಳನ್ನು ರೂಪಿಸಲಾಯಿತು.

**ಕೈಗಾರಿಕಾ ಸಂಸ್ಥೆಗಳು :** ಕಾಲೇಜು ಮತ್ತು ಸಂಶೋಧನ ಗ್ರಂಥಾಲಯಗಳ ಸಂಘ 1938ರಲ್ಲಿ ಅಮೇರಿಕದ ಗ್ರಂಥಾಲಯದ ಸಂಘದ ಅಂಗವಾಗಿ ಸ್ಥಾಪಿತವಾಯಿತು. ಈ ಸಂಸ್ಥೆ ಗ್ರಂಥಾಲಯಗಳ ಉಪಯೋಗಕ್ಕಾಗಿ ಮಾನಕಗಳನ್ನು ರೂಪಿಸುವುದು ಮತ್ತು ಗ್ರಂಥಾಲಯಗಳ ಸೌಕರ್ಯಗಳನ್ನು ವಿಮರ್ಶಿಸುವುದು ಇವೇ ಮೊದಲಾದ ಕಾರ್ಯಗಳನ್ನು ಕೈಗೊಂಡಿದೆ.

ಈ ಸಂಘವೇ ಅಲ್ಲದೇ ವಿವಿಧಮಟ್ಟಗಳಲ್ಲಿ ಕೆಲಸಮಾಡುತ್ತಿರುವ ಇನ್ನೂ ಅನೇಕ ಗ್ರಂಥಾಲಯಗಳ ಸಂಘಗಳು ಶೈಕ್ಷಣಿಕ ಗ್ರಂಥಾಲಯಗಳ ಬೆಳವಣಿಗೆಗೆ ನೆರವಾಗಿವೆ.



ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಗ್ರಂಥಾಲಯ

**ಖಾಸಗಿ ದಾನಶೀಲ ಸಂಸ್ಥೆಗಳ ಪಾತ್ರ :** 1917ರ ಮೊದಲು ಶೈಕ್ಷಣಿಕ ಗ್ರಂಥಾಲಯಗಳ ಕಟ್ಟಡಗಳನ್ನು ಕಟ್ಟಿಸಲು ಮಾತ್ರ ಧನಸಹಾಯ ಮಾಡುತ್ತಿದ್ದ ಕಾರ್ನೇಗಿ ಕಾರ್ಪೊರೇಷನ್ ಅನಂತರ ಗ್ರಂಥಾಲಯ ಸೌಕರ್ಯಗಳ ಬೆಳವಣಿಗೆಗೂ ಧನಸಹಾಯ ಮಾಡಲಾರಂಭಿಸಿತು. 1921 ರಿಂದ 1935ರ ಅವಧಿಯಲ್ಲಿ ಈ ನಿಗಮ ಗ್ರಂಥಾಲಯ ಸಾಮಗ್ರಿಗಳಿಗೋ ಗ್ರಂಥಪಾಲರ ವೇತನಕ್ಕಾಗಿಯೋ ಉಪಯೋಗಿಸಿಕೊಳ್ಳಲು 11 ಶಿಕ್ಷಣ ಸಂಸ್ಥೆಗಳಿಗೆ ಧನಸಹಾಯ ನೀಡಿತು. ಅಷ್ಟೇ ಅಲ್ಲದೆ 21 ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಿಗೆ 6 ಲಕ್ಷದ 67 ಸಾವಿರದ 5 ನೂರು ಡಾಲರುಗಳಷ್ಟು ಧನಸಹಾಯವನ್ನೂ ನೀಡಿತು.

ಕಾಲೇಜು ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಕಾರ್ನೇಗಿ ನಿಗಮದ ಪ್ರಮುಖ ಪಾತ್ರ 1928ರಲ್ಲಿ ನಿಗಮದ ಅಂಗವಾಗಿ ಅಸ್ತಿತ್ವಕ್ಕೆ ಬಂದ ಕಾಲೇಜು ಗ್ರಂಥಾಲಯ ಸಲಹಾ ಮಂಡಳಿಯೊಂದಿಗೆ ಪ್ರಾರಂಭವಾಯಿತು. ಈ ಮಂಡಳಿ ಸುಮಾರು 200 ಕಾಲೇಜುಗಳ ಸ್ಥಿತಿಗತಿಗಳ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಿದುದೇ ಅಲ್ಲದೆ ಅವುಗಳಲ್ಲಿ 81 ಕಾಲೇಜುಗಳಿಗೆ ಪದವಿಪೂರ್ವ ಮಟ್ಟದ ಪುಸ್ತಕಗಳನ್ನು ಕೊಳ್ಳಲು ಒಂದು ದಶಲಕ್ಷ ಡಾಲರುಗಳಷ್ಟು ಧನ ಸಹಾಯ ನೀಡಿತು. 1934ರಲ್ಲಿ ಅಸ್ತಿತ್ವಕ್ಕೆ ಬಂದ ಕಾರ್ನೇಗಿ ಕಿರಿಯ ಕಾಲೇಜುಗಳ ಸಲಹಾ ಮಂಡಳಿ ಈ ಕಾಲೇಜುಗಳ ಗ್ರಂಥಾಲಯಗಳ ಕೊರತೆಗಳನ್ನು ವರದಿ ಮಾಡಿತು. ಆ ಪ್ರಕಾರ 92 ಕಿರಿಯ ಕಾಲೇಜುಗಳಿಗೆ 1500 ರಿಂದ 6000 ಡಾಲರುಗಳವರೆಗೆ ಧನಸಹಾಯ ನೀಡಲಾಯಿತು. ಕಾಲೇಜು ಗ್ರಂಥಾಲಯಗಳ ಬೆಳವಣಿಗೆಗೆ ಕಾರ್ನೇಗಿ ನಿಗಮದ ಇನ್ನೊಂದು ಅತ್ಯಮೂಲ್ಯ ಕೊಡುಗೆಯೆಂದರೆ ಟೀಚಿಂಗ್ ವಿತ್ ಬುಕ್ಸ್ ಎಂಬ ಒಂದು ಪ್ರಕಟಣೆ. ಇದು ಕಾಲೇಜು ಶಿಕ್ಷಣಕ್ರಮದಲ್ಲಿ ಗ್ರಂಥಾಲಯಗಳ ಪ್ರಾಮುಖ್ಯವನ್ನು ಎತ್ತಿ ತೋರುತ್ತದೆ.

ಎರಡನೆಯ ಮಹಾಯುದ್ಧದ ಅನಂತರ ಕಾರ್ನೇಗಿ ನಿಗಮ ವಿಶ್ವವಿದ್ಯಾಲಯಗಳಲ್ಲಿ ವಿವಿಧ ದೇಶಗಳನ್ನು ಅಧ್ಯಯನ ಮಾಡಲು ಕೇಂದ್ರಗಳನ್ನು ಸ್ಥಾಪಿಸುತ್ತಿದೆ. ಈ ಶಿಕ್ಷಣ ಕ್ರಮಗಳಿಗೆ ನೆರವಾಗುವಂತೆ ಗ್ರಂಥಾಲಯಗಳ ಬೆಳವಣಿಗೆಗೂ ಸಹಾಯ ನೀಡಲಾಗುತ್ತದೆ.

ಕಾರ್ನೇಗಿ ನಿಗಮವೇ ಅಲ್ಲದೆ ಇನ್ನೂ ಅನೇಕ ಸಂಸ್ಥೆಗಳೂ ಗ್ರಂಥಾಲಯಗಳ ಬೆಳವಣಿಗೆಗೆ ನೆರವನ್ನೀಯುತ್ತಿವೆ. ಇವುಗಳಲ್ಲಿ ಮುಖ್ಯವಾದುದೆಂದರೆ ಫೋರ್ಡ್ ಫೌಂಡೇಷನ್. 1956ರಲ್ಲಿ ಈ ಸಂಸ್ಥೆಯ ಅಂಗವಾಗಿ ಸ್ಥಾಪಿತವಾದ ಸಾಧನ ಸಂಪತ್ತುಗಳ ಮಂಡಳಿ ಗ್ರಂಥಾಲಯ ವಿಜ್ಞಾನದಲ್ಲಿ ಸಂಶೋಧನೆ ನಡೆಸಲು ವಿಶೇಷ ನೆರವನ್ನೀಯುತ್ತಿದೆ.

**ವಿಶ್ವವಿದ್ಯಾಲಯ ಗ್ರಂಥಾಲಯಗಳು :** ಕ್ರಾಂತಿಗೆ ಮೊದಲು ಅಮೇರಿಕದಲ್ಲಿ ಎಲ್ಲ ಉನ್ನತ ವ್ಯಾಸಂಗ ಸಂಸ್ಥೆಗಳನ್ನೂ ಕಾಲೇಜುಗಳೆಂದೇ ಕರೆಯಲಾಗುತ್ತಿತ್ತು. ಕ್ರಾಂತಿಯ ಅನಂತರ ರಾಜ್ಯಗಳ ಹಲವು ವಿಶ್ವವಿದ್ಯಾಲಯಗಳು ಹಾಗೂ ವಿಶ್ವವಿದ್ಯಾಲಯಗಳಾಗಿ ವಿಸ್ತರಿಸಿದ ಹಲವು ಖಾಸಗಿ ಕಾಲೇಜುಗಳು ಅಸ್ತಿತ್ವಕ್ಕೆ ಬಂದುವು. ರಾಜ್ಯಸರ್ಕಾರಗಳೇ ಸ್ಥಾಪಿಸಿದ ಹಲವು ವಿಶ್ವವಿದ್ಯಾಲಯಗಳು 18ನೆಯ ಶತಮಾನದ ಕೊನೆಯ ಭಾಗದಲ್ಲಿ ಅಸ್ತಿತ್ವಕ್ಕೆ ಬಂದರೂ ರಾಜ್ಯಸರ್ಕಾರಗಳು ಉನ್ನತ ಶಿಕ್ಷಣಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಲು ಧನಸಹಾಯವನ್ನೊದಗಿಸಲಿಲ್ಲ. ಈ ಕಾರಣದಿಂದಾಗಿ 1825ರಲ್ಲಿ ಸ್ಥಾಪಿತವಾದ ವರ್ಜೀನಿಯ ವಿಶ್ವವಿದ್ಯಾಲಯವನ್ನು ಅಮೇರಿಕದ ಪ್ರಥಮ ವಿಶ್ವವಿದ್ಯಾಲಯವೆಂದು ಕರೆಯುತ್ತಾರೆ.

ಕೇಂದ್ರ ಗ್ರಂಥಾಲಯ, ಬೆಂಗಳೂರು

ಅಮೇರಿಕದ ಉನ್ನತ ವ್ಯಾಸಂಗದ ಮೇಲೆ, 19ನೆಯ ಶತಮಾನದಲ್ಲಿ, ಜರ್ಮನಿಯ ವಿಶ್ವವಿದ್ಯಾಲಯಗಳು ವಿಶಿಷ್ಟ ಪ್ರಭಾವವನ್ನು ಬೀರಿದುವು. ಜರ್ಮನಿಯ ಮಾದರಿಯಲ್ಲಿ ಸ್ಥಾಪಿತವಾದ ಪ್ರಪ್ರಥಮ ಅಮೇರಿಕದ ವಿಶ್ವವಿದ್ಯಾಲಯವೆಂದರೆ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ. ಈ ಮಾದರಿಯನ್ನನುಸರಿಸಿ ಹಾರ್ವರ್ಡ್, ಏಲ್, ಕೊಲಂಬಿಯ, ಪ್ರಿನ್ಸ್‌ಟನ್ ಮುಂತಾದ ಖಾಸಗಿ ಕಾಲೇಜುಗಳು ವಿಶ್ವವಿದ್ಯಾಲಯಗಳಾಗಿ ಪರಿವರ್ತನೆ ಗೊಳ್ಳಲ್ಪಟ್ಟುವು. ಜರ್ಮನಿಯ 37 ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಪಡೆದ ಶಿಕ್ಷಣತಜ್ಞರು ಅಲ್ಲಿನ ಶಿಕ್ಷಣ ಕ್ರಮವನ್ನೂ ಅಮೇರಿಕದಲ್ಲಿ ಉಪಯೋಗಿಸಲಾರಂಭಿಸಿದರು. ಈ ಹೊಸ ಶಿಕ್ಷಣಕ್ರಮಗಳ ಉಪಯೋಗ ವಿಶ್ವವಿದ್ಯಾಲಯಗಳ ಬೆಳವಣಿಗೆಯ ಜೊತೆಗೇ ಅವುಗಳ ಗ್ರಂಥಾಲಯಗಳ ಬೆಳವಣಿಗೆಯ ಮೇಲೂ ವಿಶಿಷ್ಟ ಪ್ರಭಾವ ಬೀರಿತು.

20ನೆಯ ಶತಮಾನದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗೂ ಪ್ರಾಮುಖ್ಯ ನೀಡಲಾಗುತ್ತಿದೆ. ಈ ಕಾರಣದಿಂದಾಗಿ ಗ್ರಂಥಾಲಯಗಳ ಬೆಳವಣಿಗೆಗೆ ವಿಶೇಷ ಆದ್ಯತೆ ಬಂದಿದೆ. ವಿದ್ಯಾರ್ಥಿಗಳ ಸಂಖ್ಯೆ ತ್ವರಿತವಾಗಿ ಬೆಳೆಯುತ್ತಿದೆ. ಈ ವಿದ್ಯಾರ್ಥಿ ಸಮೂಹದ ಆವಶ್ಯಕತೆಗಳನ್ನು ಈಡೇರಿಸುವುದು ಅಮೇರಿಕದ ವಿಶ್ವವಿದ್ಯಾಲಯ ಗ್ರಂಥಾಲಯದ ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಸೇರಿದಂತೆ ಗ್ರಂಥಗಳ ಸಂಖ್ಯೆಯೂ ಬೆಳೆಯುತ್ತಿದೆ. ಯಾವುದೇ ಒಂದು ಗ್ರಂಥಾಲಯವೂ ಈ ಎಲ್ಲ ಗ್ರಂಥಗಳನ್ನು ಸಂಗ್ರಹಿಸುವುದು ಅಸಾಧ್ಯ. ಈ ಕಾರಣದಿಂದಾಗಿ ಅಮೇರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳು ಪರಸ್ಪರ ಸಹಕರಿಸಲು ಯೋಜನೆಗಳನ್ನು ಕೈಗೊಂಡಿವೆ.

ಮ್ಯಾಸಚೂಸೆಟ್ಸ್ ತಾಂತ್ರಿಕ ವಿಶ್ವವಿದ್ಯಾಲಯ ಭವಿಷ್ಯ ನುಡಿದಿದ್ದಂತೆ ಅಮೇರಿಕದ ವಿಶ್ವವಿದ್ಯಾಲಯಗಳು ತಾಂತ್ರಿಕ ಸಾಧನಗಳಾದ ಗಣಕಗಳನ್ನು ಗ್ರಂಥಾಲಯ ಸೇವೆಗಳಿಗಾಗಿ ವಿಶೇಷವಾಗಿ ಬಳಸಿಕೊಳ್ಳುತ್ತವೆ.

**ವಿಶಿಷ್ಟ ಗ್ರಂಥಾಲಯಗಳು :** ಎರಡನೆಯ ಮಹಾಯುದ್ಧ ಅನಂತರ ಕೈಗಾರಿಕಾ ರಾಷ್ಟ್ರಗಳು ಸಂಶೋಧನೆಗೆ, ಅದರಲ್ಲೂ ಮುಖ್ಯವಾಗಿ ವಿಜ್ಞಾನ ಮತ್ತು ಕೈಗಾರಿಕಾ ವಿಜ್ಞಾನಗಳಿಗೆ ವಿಶೇಷ ಆದ್ಯತೆಯನ್ನಿತ್ತಿವೆ. ಸಂಶೋಧನೆಗೆ ಬೇಕಾದ ಅತಿ ಮುಖ್ಯ ಸಾಮಗ್ರಿಯೆಂದರೆ ಮಾಹಿತಿ. ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಸಂಶೋಧನೆಯಿಂದಾಗಿ ಅನೇಕ ಪುಸ್ತಕಗಳು, ನಿಯತಕಾಲಿಕೆಗಳಲ್ಲಿನ ಲೇಖನಗಳು, ಸಂಶೋಧನ ವರದಿಗಳು ಹೆಚ್ಚುಹೆಚ್ಚಾಗಿ ಬರತೊಡಗಿವೆ. ಹೀಗೆ ಪ್ರಕಟವಾಗುತ್ತಿರುವ ಮಾಹಿತಿಯನ್ನು ಗುರುತಿಸುವ, ಸಂಗ್ರಹಿಸುವ ಮತ್ತು ಪ್ರಸರಿಸುವ ಧ್ಯೇಯವನ್ನು ಹೊಂದಿರುವ ವಿಶಿಷ್ಟ ಗ್ರಂಥಾಲಯಗಳೂ ವಿಶಿಷ್ಟ ಗ್ರಂಥಾಲಯಗಳ ಸಂಘವೂ ಸ್ಥಾಪಿತವಾದುವು.

1920ರಲ್ಲಿ ಅಮೆರಿಕದಲ್ಲಿ ಕೇವಲ 1000 ವಿಶಿಷ್ಟ ಗ್ರಂಥಾಲಯಗಳಿದ್ದುವು. 1965ರ ವೇಳೆಗೆ ಅವುಗಳ ಸಂಖ್ಯೆ 10 ಸಾವಿರ ಆಯಿತು. ವಿಶಿಷ್ಟ ಗ್ರಂಥಾಲಯಗಳ ಬಗ್ಗೆ ಮಾನಕಗಳನ್ನು ತಯಾರಿಸಿರುವ ವಿಶಿಷ್ಟ ಗ್ರಂಥಾಲಯದ ಸಂಘದ ಪ್ರಕಾರ 1970ರಲ್ಲಿ ಅಮೆರಿಕದಲ್ಲಿ ಸುಮಾರು 15 ಸಾವಿರ ವಿಶಿಷ್ಟ ಗ್ರಂಥಾಲಯಗಳಿದ್ದುವು. ವಿಶಿಷ್ಟ ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಒಂದು ಮುಖ್ಯ ಘಟನೆಯೆಂದರೆ ವೈಜ್ಞಾನಿಕ ಮತ್ತು ತಾಂತ್ರಿಕ ಮಾಹಿತಿ ಸಮಿತಿಯ ಸ್ಥಾಪನೆ. ಈ ಸಮಿತಿ ಗಣಕಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡಬಲ್ಲ ಮಾಹಿತಿ ಕೇಂದ್ರಗಳ ಹಾಗೂ ವಿಶಿಷ್ಟ ಗ್ರಂಥಾಲಯಗಳ ಒಕ್ಕೂಟವೊಂದನ್ನು ರಚಿಸಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದಲ್ಲದೆ 1966ರ ಮಾರ್ಚ್‌ನಲ್ಲಿ ಒಂದು ವೈಜ್ಞಾನಿಕ ಮತ್ತು ತಾಂತ್ರಿಕ ಸಂಸರ್ಗ ಸಮಿತಿ ಸ್ಥಾಪಿತವಾಯಿತು. ಇದರ ಮೂಲ ಉದ್ದೇಶ ರಾಷ್ಟ್ರೀಯ ಮಾಹಿತಿ ಒಕ್ಕೂಟಗಳಲ್ಲಿ ವಿಜ್ಞಾನಿಗಳ ಮತ್ತು ತಂತ್ರಜ್ಞರ ಪಾತ್ರವನ್ನು ಕುರಿತು ಅಭ್ಯಾಸ ಮಾಡುವುದು.

ಅಮೆರಿಕದಲ್ಲಿ ವಿವಿಧ ರೀತಿಯ ಗ್ರಂಥಾಲಯಗಳ ಬೆಳವಣಿಗೆಯನ್ನು ಗಮನಿಸಿದರೆ ಎರಡು ವಿಷಯಗಳಂತೂ ಸ್ಪಷ್ಟವಾಗುತ್ತದೆ.

1. ಸಂಘಸಂಸ್ಥೆಗಳು, ಕೇಂದ್ರಸರ್ಕಾರದ ವಿವಿಧ ಕಚೇರಿಗಳು. ಸರ್ಕಾರದ ಕಾಯದೆಗಳು, ದಾನಶೀಲಸಂಸ್ಥೆಗಳು ಹಾಗೂ ಶ್ರೇಷ್ಠ ಗ್ರಂಥಾಲಯ ವಿಜ್ಞಾನಿಗಳ ಸಾಮೂಹಿಕ ಪ್ರಯತ್ನದಿಂದ ಮಾತ್ರ ಅಲ್ಲಿನ ದಿನನಿತ್ಯದ ಜನಜೀವನದಲ್ಲಿ ಗ್ರಂಥಾಲಯಗಳು ಒಂದುಪ್ರಮುಖ ಪಾತ್ರವನ್ನು ವಹಿಸಲು ಸಾಧ್ಯವಾಯಿತು.

2. ಸಾರ್ವಜನಿಕ ಗ್ರಂಥಾಲಯಗಳು ವಿದ್ಯಾರ್ಥಿಗಳ, ಸಂಶೋಧಕರ ಬೇಡಿಕೆಗಳನ್ನು ಸಮರ್ಪಕವಾಗಿ ಈಡೇರಿಸಲು ಅಸಮರ್ಥವಾದಾಗ ಉಳಿದ ರೀತಿಯ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು.

ಕಳೆದ ಶತಮಾನದಿಂದ ಆಗುತ್ತಿರುವ ಜ್ಞಾನಸ್ಫೋಟದಿಂದಾಗಿ ವಿವಿಧ ರೀತಿಯ ಗ್ರಂಥಾಲಯಗಳ ಜವಾಬ್ದಾರಿಗಳು ವಿಶೇಷವಾಗಿ ಹೆಚ್ಚಿವೆ. ಈ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ಗ್ರಂಥಾಲಯಗಳು, ಕೇಂದ್ರ ಸರ್ಕಾರದ ವಿವಿಧ ಕಚೇರಿಗಳು, ಗ್ರಂಥಾಲಯ ಸಂಘಸಂಸ್ಥೆಗಳು ಪರಸ್ಪರ ಸಹಕರಿಸಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿವೆ. **(ಕೆ.ಎಸ್.ಆರ್‌ಎಜಿ.)**

**6 ಸೋವಿಯೆತ್ ದೇಶದ ಗಂಥಾಲಯಗಳು :** ಸೋವಿಯೆತ್ ದೇಶದಲ್ಲಿ ಗ್ರಂಥಾಲಯಗಳು ವ್ಯಾಪಕವಾಗಿ, ಸುವ್ಯವಸ್ಥೆಯಿಂದ ಬೆಳೆದಿರುವುದು 1917ರ ಮಹಾಕ್ರಾಂತಿಯ ಅನಂತರ ಹಾಗೂ ಅದರ ಪರಿಣಾಮವಾಗಿ. ಸೋವಿಯೆತ್ ದೇಶದ ಮಹಾನಾಯಕನಾದ ಲೆನಿನ್, ಗ್ರಂಥಾಲಯಗಳ ಬಗ್ಗೆ ಒಂದು ಹೊಸ ನಿಲುವನ್ನೇ ತಾಳಿದ್ದ. ದೇಶದ ಪ್ರತಿಯೊಬ್ಬ ಪ್ರಜೆಗೂ ಪುಸ್ತಕಗಳು ದೊರೆಯಬೇಕೆಂಬುದೇ ಅವನ ಉದ್ದೇಶವಾಗಿತ್ತು. ಆಗ ಪ್ರತಿ ನಾಲ್ಕು ಪ್ರಜೆಗಳಿಗೆ ಒಬ್ಬ ನಿರಕ್ಷರಕುಕ್ಷಿ ಇದ್ದ. ಈ ಅಜ್ಞಾನವನ್ನು ನಿರ್ಮೂಲನಗೊಳಿಸಲು ದೇಶದ ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳನ್ನು ಕೃಷಿ, ಕೈಗಾರಿಕೆಗಳನ್ನು ಸುಧಾರಿಸಲು ಜನಸಾಮಾನ್ಯರ ಶಿಕ್ಷಣಮಟ್ಟ ಉತ್ತಮಗೊಳ್ಳಬೇಕೆಂದೂ ಅದಕ್ಕೆ ಹೆಚ್ಚು ಹೆಚ್ಚು ಗ್ರಂಥಾಲಯಗಳನ್ನು ಸ್ಥಾಪಿಸುವುದೇ ಮುಖ್ಯ ಮಾರ್ಗವೆಂದೂ ಆತ ಯೋಚಿಸಿದ. ಇದರಲ್ಲಿ ಸರ್ಕಾರದ ಪಾತ್ರ ಎಷ್ಟು ಮುಖ್ಯವೆಂಬುದನ್ನು ಗಮನಿಸಿ, ರಾಜ್ಯಸರ್ಕಾರ ಪುಸ್ತಕಗಳ ಪ್ರಕಟಣೆ, ವಿತರಣೆ ಮತ್ತು ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗಳನ್ನು ಕೈಗೊಳ್ಳಬೇಕೆಂದು ಸಲಹೆಕೊಟ್ಟ. ಅತ್ಯಲ್ಪಕಾಲದಲ್ಲಿಯೇ ಆತನ ಸಲಹೆಗಳು ಕಾರ್ಯರೂಪಕ್ಕೆ ಬಂದುವು.

ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಗ್ರಂಥ ಪ್ರಕಟಣೆಗಳ ಅಭಿವೃದ್ಧಿಗೆ ಹೆಚ್ಚು ಪ್ರಾಮುಖ್ಯ ನೀಡಲಾಯಿತು. ಭಾಷೆಗೆ ಲಿಪಿಯೇ ಇಲ್ಲದಂಥ ಪ್ರಕಟಣೆಗೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ಒದಗಿಸಲಾಯಿತು. ಇದು ಸಾರ್ವಜನಿಕರ ಮೇಲೆ ಹೆಚ್ಚಿನ ಪರಿಣಾಮ ಬೀರಲಾರಂಭಿಸಿತು. ಯುದ್ಧಕಾಲದಲ್ಲಿ ನಾಶಗೊಂಡ ಅನೇಕ ಪುಸ್ತಕಗಳ ಸ್ಥಾನಗಳನ್ನು ಮತ್ತೆ ಹೊಸ ಪುಸ್ತಕಗಳಿಂದ ತುಂಬಲಾಯಿತು. ಆಗ ಪ್ರಪಂಚದಲ್ಲಿ ಪ್ರಕಟವಾಗುತ್ತಿದ್ದ ಪುಸ್ತಕಗಳಲ್ಲಿ ಶೇ. 25 ಭಾಗ ರಷ್ಯದಲ್ಲಿಯೇ ನಿರ್ಮಾಣವಾಗುತ್ತಿತ್ತು. 1918–70ರ ಅವಧಿಯಲ್ಲಿ 89 ವಿವಿಧ ಭಾಷೆಗಳಲ್ಲಿ ಗ್ರಂಥಗಳು ಪ್ರಕಟವಾಗಿವೆ. 1917ಕ್ಕೆ ಮುಂಚೆ 43 ಅಲ್ಪಸಂಖ್ಯಾತ ರಾಜ್ಯಗಳಲ್ಲಿ ಭಾಷೆಗಳಿಗೆ ಲಿಪಿ ಕೂಡ ಇರಲಿಲ್ಲ.

ಯುನೆಸ್ಕೊ ಗಣನೆಯ ಪ್ರಕಾರ ರಷ್ಯದ ಭಾಷಾಂತರಿತ ಗ್ರಂಥಗಳ ಪ್ರಕಟಣೆ ಪ್ರಪಂಚದಲ್ಲಿಯೇ ಒಂದು ದಾಖಲೆಯನ್ನು ಸ್ಥಾಪಿಸಿದೆ. ಇದು ಬ್ರಿಟನ್ನಿನಲ್ಲಿ ಪ್ರಕಟವಾಗುವುದಕ್ಕಿಂತ ಶೇ. 9 ರಷ್ಟು, ಜಪಾನಿನಲ್ಲಿ ಪ್ರಕಟವಾಗುವುದಕ್ಕಿಂತ ಶೇ. 4–5 ರಷ್ಟು ಅಮೆರಿಕದಲ್ಲಿ ಪ್ರಕಟವಾಗುವುದಕ್ಕಿಂತ ಶೇ. 4 ರಷ್ಟು ಹೆಚ್ಚಿನದಾಗಿದೆ. 76 ಭಾಷೆಗಳಲ್ಲಿನ 29,000 ಗ್ರಂಥಗಳನ್ನು ಅನೇಕ ರಷ್ಯನ್ ಭಾಷೆಗಳಿಗೆ ಅನುವಾದ ಮಾಡಲಾಗಿದೆ. 1918–71ರ ವರೆಗೆ 1,200 ದಶಲಕ್ಷ ಪ್ರತಿಗಳನ್ನು ಮುದ್ರಿಸಲಾಗಿದೆ. ಷೇಕ್ಸ್‌ಪಿಯರನನ್ನು 320 ಬಾರಿ, ಬಾಲ್‌ಜಾಕನನ್ನು 287 ಬಾರಿ, ಎಮಿಲಿ ಝೋಲನನ್ನು 247 ಬಾರಿ ಅಚ್ಚು ಮಾಡಲಾಗಿದೆ. ರೊಮೇನ್ ರೋಲಾನ್‌ನ್ನು 21 ಭಾಷೆಗಳಲ್ಲೂ ಹೇನ್‌ನನ್ನು 20 ಭಾಷೆಗಳಲ್ಲೂ ಅನುವಾದ ಮಾಡಲಾಗಿದೆ.

**ರಾಷ್ಟ್ರೀಯ ಲೈಬ್ರರಿಯ ಹೊಸ ಕಟ್ಟಡ, ರಷ್ಯ**

1960ರ ಗಣನೆಯ ಪ್ರಕಾರ ರಷ್ಯದ ಪಟ್ಟಣಿಗರಲ್ಲಿ ಶೇ. 89.3 ಮಂದಿ ದಿನ ಪತ್ರಿಕೆಗಳನ್ನೂ ಶೇ. 75.3 ಮಂದಿ ಗ್ರಂಥಗಳನ್ನೂ ಶೇ.72.3 ಮಂದಿ ನಿಯತಕಾಲಿಕೆಗಳನ್ನೂ ಓದುತ್ತಿದ್ದರು. ಇದು 1920–40ರ ಅವಧಿಯಲ್ಲಿದ್ದುದಕ್ಕಿಂತ ಎರಡರಷ್ಟು.

ಕಾರ್ಮಿಕರು ಹಾಗೂ ತಜ್ಞರಲ್ಲಿ ಓದುಗರ ಸಂಖ್ಯೆ ನಗರಗಳಲ್ಲಿ ಶೇ. 82 ಎಂದೂ ಪಟ್ಟಣಗಳಲ್ಲಿ ಶೇ. 89 ಎಂದೂ ಗ್ರಂಥವಿಜ್ಞಾನಿಗಳ ಅಭಿಪ್ರಾಯ.

ಯುರೋಪಿನ ಇತರ ರಾಷ್ಟ್ರಗಳಲ್ಲಿರುವಂತೆ ರಷ್ಯದಲ್ಲೂ ಅನೇಕಾನೇಕ ಖಾಸಗಿ ಗ್ರಂಥಾಲಯಗಳು ಇದ್ದುವು. ಕಾರ್ಲ್‌ಮಾರ್ಕ್ಸ್, ಲೆನಿನ್ ಮತ್ತು ಪುಷ್ಕಿನ್ ಮೊದಲಾದವರ ಖಾಸಗಿ ಗ್ರಂಥಾಲಯಗಳು ಈಗ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸೇರ್ಪಡೆಗೊಂಡಿವೆ.

ಲೆನಿನ್ನನ ಆದೇಶದಂತೆ ಸರ್ಕಾರ ಮುತುವರ್ಜಿ ವಹಿಸಿ 1920ರ ಹೊತ್ತಿಗಾಗಲೆ ಸುಮಾರು 50,000 ಗ್ರಂಥಾಲಯಗಳನ್ನು ವ್ಯವಸ್ಥೆಗೊಳಿಸಿತು. ಅನಕ್ಷರಸ್ಥರಿಗಾಗಿ ಹಳ್ಳಿಗಳಲ್ಲಿ ಅನೇಕ ಗ್ರಂಥಾಲಯಗಳು ಪ್ರಾರಂಭವಾದುವು. 1934ರ ಹೊತ್ತಿಗೆ ರಷ್ಯದಲ್ಲಿ 1,15,000 ವಿವಿಧ ರೀತಿಯ ಗ್ರಂಥಾಲಯಗಳಿದ್ದುವು. ಇವುಗಳಲ್ಲಿ 30 ಕೋಟಿ ಗ್ರಂಥಗಳಿದ್ದುವು ಎನ್ನಲಾಗಿದೆ.

1970ರ ಹೊತ್ತಿಗೆ ಪ್ರತಿ 1,500 ಹಳ್ಳಿಗರಿಗೆ ಒಂದು ಗ್ರಂಥಾಲಯವೂ ಪ್ರತಿ 2,000 ಪಟ್ಟಣಿಗರಿಗೆ ಒಂದು ಗ್ರಂಥಾಲಯವೂ ಇತ್ತೆನ್ನಲಾಗಿದೆ. ಅಂದು ರಾಷ್ಟ್ರದಲ್ಲಿನ ಓದುಗರ ಸಂಖ್ಯೆ 18 ಕೋಟಿ.

1972ರ ಹೊತ್ತಿಗೆ ರಷ್ಯದಲ್ಲಿನ ಗ್ರಂಥಾಲಯಗಳ ಸಂಖ್ಯೆ 3,60,000ಕ್ಕೂ ಹೆಚ್ಚಿದ್ದು ಅವುಗಳಲ್ಲಿನ ಗ್ರಂಥಗಳ ಸಂಖ್ಯೆ 330 ಕೋಟಿ ಇತ್ತು ಎಂಬುದು ಗಮನಾರ್ಹವಾದ ಸಂಗತಿ. ಈ ಗ್ರಂಥಾಲಯಗಳಲ್ಲಿ ಅನೇಕವಕ್ಕೆ ಅಂತಾರಾಷ್ಟ್ರೀಯ ಖ್ಯಾತಿ ಇದೆ.

ಶೇ. 90 ಗ್ರಂಥಾಲಯಗಳನ್ನು ರಾಜ್ಯ ಸರ್ಕಾರಗಳೇ ನಡೆಸುತ್ತಿವೆ. ಕೇವಲ ಶೇ. 10 ಗ್ರಂಥಾಲಯಗಳು ಸಾರ್ವಜನಿಕ ಸಂಘಗಳಿಗೆ ಸೇರಿವೆ. ಸಾರ್ವಜನಿಕ ಗ್ರಂಥಾಲಯಗಳೇ ಅಲ್ಲದೆ ಅನೇಕ ವಿಶಿಷ್ಟ ಗ್ರಂಥಾಲಯಗಳಾದ ವೈಜ್ಞಾನಿಕ ಮತ್ತು ತಾಂತ್ರಿಕ ಗ್ರಂಥಾಲಯಗಳು, ಸಮಾಜ ವಿಜ್ಞಾನ ಅಕಾಡೆಮಿ ಗ್ರಂಥಾಲಯ, ರಾಷ್ಟ್ರೀಯ ಆರ್ಥಿಕ ಪರಿಷತ್ತಿನ ಗ್ರಂಥಾಲಯ ಮತ್ತು ರಾಜ್ಯದ ಕೇಂದ್ರ ವೈದ್ಯಕೀಯ ಗ್ರಂಥಾಲಯ ಇವು ದೇಶದ ಸರ್ವತೋಮುಖವಾದ ಜ್ಞಾನಾಭಿವೃದ್ಧಿಗೆ ಕಾರಣವಾದುವು.

ಆಧುನಿಕ ಗ್ರಂಥಾಲಯಗಳಲ್ಲಿ ಟೇಪ್‌ರೆಕಾರ್ಡ್‌ರುಗಳೂ ಟೆಲಿವಿಷನ್, ಫಿಲ್ಮ್ ಮತ್ತು ಸ್ಲೈಡ್ ಪ್ರೊಜೆಕ್ಟರುಗಳೂ ಪ್ರಲೇಖನ ಹಾಗೂ ಸ್ವಯಂತ್ರೀಕರಣ ವ್ಯವಸ್ಥೆ – ಮೊದಲಾದ ಎಲ್ಲ ಆಧುನಿಕ ಸಾಧನೆಗಳೂ ಬಳಕೆಗೊಂಡು ಈಗ ಕಂಪ್ಯೂಟರ್ ತಂತ್ರಜ್ಞಾನ ಬಳಕೆಗೊಳ್ಳುತ್ತಿದೆ.

ಇಲ್ಲಿನ ಮತ್ತೊಂದು ಅತಿ ಮುಖ್ಯ ಚಟುವಟಿಕೆಯೆಂದರೆ ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ವಿವಿಧ ಕೋಶಗಳಿಂದ ಸಂಗ್ರಹಿಸಿದ ಇತ್ತೀಚಿನ ಸಾಧನೆಗಳನ್ನು ರೆಕಾರ್ಡು ಮಾಡಿಕೊಂಡು ಅವುಗಳಿಗೆ ಗ್ರಂಥಸೂಚಿಗಳನ್ನು ತಯಾರಿಸಿ ಕ್ರಮವಾದ ವ್ಯವಸ್ಥೆಯ

ಮೂಲಕ ಅವನ್ನು ಓದುಗರಿಗೆ ಒದಗಿಸುತ್ತಿರುವುದು. ಇಂಥ ಕೆಲಸ ಮಾಡುತ್ತಿರುವ ಅತಿ ದೊಡ್ಡ ಸಂಸ್ಥೆಯೆಂದರೆ ಸಂಯುಕ್ತ ವೈಜ್ಞಾನಿಕ ಮತ್ತು ತಾಂತ್ರಿಕ ಸಂಘ (ಯೂನಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಇನ್‍ಫರ್‍ಮೇಷನ್). ಇದನ್ನು ವಿನಿತಿ ಎಂದು ಕರೆಯುತ್ತಾರೆ.

ರಷ್ಯದ ಎಲ್ಲ ಗ್ರಂಥಾಲಯಗಳಲ್ಲೂ ಒಂದೇ ರೀತಿಯಾದ ಮತ್ತು ಒಂದೇ ತೆರನಾದ ಯೋಜಿತ ವ್ಯವಸ್ಥೆಯಿರಬೇಕೆಂಬ ಸಲಹೆಯನ್ನು ಪ್ರಥಮತಃ 1919ರಲ್ಲಿ ಲೆನಿನ್ ಜನತೆಯ ಮುಂದಿಟ್ಟ. ಕಷ್ಟಸಾಧ್ಯವಾದ ಈ ಕೆಲಸ ಕ್ರಮೇಣ ಕಾರ್ಯರೂಪಕ್ಕಿಳಿಯಿತು. ರಾಷ್ಟ್ರದಲ್ಲಿನ ಪ್ರತಿಯೊಂದು ಸಣ್ಣ ಆಡಳಿತ ಶಾಖೆಯೂ ತನ್ನದೇ ಆದ ಒಂದು ಗ್ರಂಥಾಲಯವನ್ನು ಹೊಂದಿದೆ. ಇಂಥ ಪ್ರತಿಯೊಂದು ಗ್ರಂಥಾಲಯವೂ ತನ್ನ ಕಾರ್ಯಕ್ಷೇತ್ರದಲ್ಲಿ ಕೇಂದ್ರ ಗ್ರಂಥಾಲಯದ ನಿರ್ದೇಶನವನ್ನು ಪಡೆಯುತ್ತದೆ. ಹೀಗಾಗಿ ಆಡಳಿತ ವ್ಯವಸ್ಥೆಯಲ್ಲಿ ಏಕರೂಪತೆ ಸಾಧ್ಯವಾಗಿದೆ. ಅಂದು 100–300 ಜನ ಮಾತ್ರ ಇರುವ ಸ್ವಾಸ್ಥ್ಯಗಳಿಗೆ ಪುಸ್ತಕಗಳನ್ನೊದಗಿಸಲು ಇಡೀ ದೇಶದಲ್ಲಿರುವ 60,000 ಶಾಶ್ವತ ಗ್ರಂಥಾಲಯಗಳು ತಮ್ಮ ವತಿಯಿಂದ 2,15,000 ಸಂಚಾರಿ ಗ್ರಂಥಾಲಯಗಳನ್ನು ನಡೆಸುತ್ತಿತ್ತು.

ಗ್ರಂಥಾಲಯ ಕಟ್ಟಡಗಳಿಗಾಗಿ ರಷ್ಯದಲ್ಲಿ ಹೊಸ ಯೋಜನೆಗಳನ್ನು ರೂಪಿಸಲಾಗಿದೆ. ಅನೇಕ ಹಳೆಯ ಅರಮನೆಗಳು, ಶ್ರೀಮಂತಗೃಹಗಳು ಗ್ರಂಥಾಲಯಗಳಾಗಿವೆ. ವರ್ಷೇ ವರ್ಷೇ ಹೊಸ ಕಟ್ಟಡಗಳ ನಿರ್ಮಾಣವಾಗುತ್ತಿದೆ. ಮಾಸ್ಕೊ ನಗರದಲ್ಲಿರುವ ಅಂತಾರಾಷ್ಟ್ರೀಯ ಗ್ರಂಥಾಲಯ ಸಂಘದ 36 ನೆಯ ಅಧಿವೇಶನ ಸಮಾವೇಶಗೊಂಡ (1970) ಯು. ಎಸ್. ಎಸ್. ಆರ್. ಸ್ಟೇಟ್ ಲೈಬ್ರರಿ ಆಫ್ ಫಾರಿನ್ ಲಿಟರೇಚರ್ ಗ್ರಂಥಾಲಯದ ಕಟ್ಟಡ, ಸೆಂಟ್ರಲ್ ಅಗ್ರಿಕಲ್ಚರಲ್ ಸೈನ್ಸ್ ಗ್ರಂಥಾಲಯದ ಕಟ್ಟಡಗಳು ಭವ್ಯವಾಗಿವೆ. ಯು.ಎಸ್. ಎಸ್. ಆರ್ ಸ್ಟೇಟ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಗ್ರಂಥಾಲಯ ಮತ್ತು ಯು.ಎಸ್. ಎಸ್. ಆರ್ ಸೆಂಟ್ರಲ್ ಮೆಡಿಕಲ್ ಗ್ರಂಥಾಲಯಗಳಿಗಾಗಿ ಹೊಸ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಲೆನಿನ್ ಗ್ರಂಥಾಲಯಕ್ಕಾಗಿ 50,000 ಚ.ಮೀ ಪ್ರದೇಶದಲ್ಲಿ ದಿವ್ಯವಾದ ಹೊಸ ಭವನ ಏರ್ಪಟ್ಟಿದೆ. 1966–67 ಅವಧಿಯಲ್ಲಿ ಸುಮಾರು 16,000 ಗ್ರಂಥಾಲಯ ಕಟ್ಟಡಗಳನ್ನು ರಾಜ್ಯ ಸರ್ಕಾರಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆಯೆಂದು ತಿಳಿದುಬರುತ್ತದೆ.

ಗ್ರಂಥಾಲಯಗಳಲ್ಲಿ ಯುಕ್ತ ಗ್ರಂಥಸೂಚಿಗಳ ವ್ಯವಸ್ಥೆ ಇದೆ. ಬುಕ್ ರಿವ್ಯೂ ಇನ್ ದಿ ವರ್ಲ್ಡ್ ಮೊದಲಾದ ಪ್ರಸಿದ್ಧ ಗ್ರಂಥಸೂಚಿಗಳು ಬಹಳ ಸಹಾಯಕ ಸಾಮಗ್ರಿಯನ್ನು ಒದಗಿಸುತ್ತವೆ. ರಾಷ್ಟ್ರದ ದೊಡ್ಡ ಪತ್ರಿಕೆಗಳೂ ವಾರಪತ್ರಿಕೆಗಳೂ ಸ್ಥಳೀಯ ಪತ್ರಿಕೆಗಳೂ ಮತ್ತಿತರ ನಿಯತಕಾಲಿಕೆಗಳೂ ಪುಸ್ತಕ ವಿಮರ್ಶೆಗಳನ್ನು ಪ್ರಕಟಿಸುತ್ತವೆ. ರಾಜ್ಯ ಗ್ರಂಥಸೂಚಿಗಳು ಹೊಸದಾಗಿ ಬರುವ ಪ್ರತಿಯೊಂದು ಪ್ರಕಟಣೆಯನ್ನೂ ಪ್ರಕಟಿಸಲಾಗುತ್ತದೆ. ಕ್ರಾನಿಕಲ್ ಆಫ್ ಪೀರಿಯಾಡಿಕಲ್ಸ್ ಎಂಬುದು ರಾಷ್ಟ್ರದ ಎಲ್ಲ ದಿನಪತ್ರಿಕೆ ಮತ್ತು ಸಂಕೀರ್ಣ ಪತ್ರಿಕೆಗಳನ್ನೂ ಪಟ್ಟಿಮಾಡುತ್ತದೆ. ಗ್ರಂಥಸೂಚಿ ಸಾಹಿತ್ಯದ ಬಗ್ಗೆ ಅತ್ಯಂತ ಮುಖ್ಯವಾದ ಕೇಂದ್ರ ಕಾರ್ಯಾಲಯ ಎಂದರೆ (ಯು. ಎಸ್. ಎಸ್. ಆರ್.) ವಿನಿತಿ. ಜರ್ನಲ್ ಆಫ್ ಅಬ್‍ಸ್ಟ್ರಾಕ್ಟ್ಸ್ ಎಂಬ ನಿಯತಕಾಲಿಕೆಯ ಹದಿನಾರು ವಿವಿಧ ಭಾಗಗಳು ನೂರು ಹೊರದೇಶಗಳಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕ, ಲೇಖನ ಮತ್ತು ಇತರ ಪ್ರಕಟಣೆಗಳನ್ನೊಳಗೊಂಡಿರುತ್ತದೆ. ರ್‍ಯಾಪಿಡ್ ಇನ್‍ಫರ್‍ಮೇಷನ್ ಸಿರೀಸ್ ನಿಯತಕಾಲಿಕೆ ಹೊರದೇಶದ ಪುಸ್ತಕಗಳ ರಷ್ಯನ್ ಭಾಷಾಂತರ ಪಟ್ಟಿಯನ್ನು ಪ್ರಕಟಿಸುತ್ತದೆ. ಯುವಜನರಿಗಾಗಿ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಇನ್ನೊವೇಷನ್ ಮತ್ತು ಲಿಟರೇಚರ್ ಆಫ್ ದಿ ಪೀಪಲ್ಸ್ ಆಫ್ ದಿ ಯು.ಎಸ್. ಎಸ್. ಆರ್. ಮತ್ತು ಲಿಟರೇಚರ್ ಅಂಡ್ ಆರ್ಟ್ – ಇವು ಪ್ರಕಟಗೊಂಡಿವೆ. ಬುಕ್ ಅಬೌಟ್ ಬುಕ್ಸ್ ಎಂಬುದು ಮತ್ತೊಂದು ಮುಖ್ಯ ಗ್ರಂಥಸೂಚಿ.

ಪ್ರಮುಖ ಗ್ರಂಥಾಲಯಗಳು: ಸೋವಿಯೆತ್ ದೇಶದ 9 ಮುಖ್ಯ ಗ್ರಂಥಾಲಯಗಳ ಸ್ಥೂಲ ಪರಿಚಯ ಇಲ್ಲಿದೆ. ಇವುಗಳಲ್ಲಿ ಮಾಸ್ಕೊದ ಲೆನಿನ್ ಲೈಬ್ರರಿ ಹಾಗೂ ಲೆನಿನ್‍ಗ್ರಾಡಿ ಸಾಲ್ಟಿಕೋವ್– ಷೆಡ್ರಿನ್ ಲೈಬ್ರರಿಗಳು ಪ್ರಪಂಚದ ಮೂರು ಮಹಾಗ್ರಂಥಾಲಯಗಳ ಪಟ್ಟಿಗೆ ಸೇರಿದುವಾಗಿದೆ.

(1) ಮ್ಯಾಟೆನಡೇರಾನ್ : ಮ್ಯಾಟೆನಡೇರಾನ್ ಅಥವಾ ಆರ್ಮೇನಿಯ ಪುಸ್ತಕ ಶೇಖರಣಾಲಯ ಬಹು ಪುರಾತನವಾದದ್ದು. ಇದು ಆರ್ಮೇನಿಯನ್ನಿನ ರಾಜಧಾನಿಯಾದ ಎರ್‍ವಾನ್‍ನಲ್ಲಿ 5ನೆಯ ಶತಮಾನದಲ್ಲೇ ಸ್ಥಾಪಿತವಾದದ್ದು. ಈ ಗ್ರಂಥಾಲಯದ ಸಂಗ್ರಹದಲ್ಲಿ ಆರ್ಮೇನಿಯನ್ ಸಾಹಿತ್ಯಕ್ಕೆ ಸಂಬಂಧಪಟ್ಟ 11,000 ಕ್ಕೂ ಹೆಚ್ಚಿನ ಪುರಾತನ ಹಸ್ತಪ್ರತಿಗಳಿವೆ. 1,500 ರಷ್ಟು ಹಸ್ತಪ್ರತಿಗಳು ಪ್ರಾಚ್ಯಭಾಷೆಯವಾಗಿವೆಯಲ್ಲದೆ ಚರಿತ್ರಕಾರರ, ಭೂಗೋಳಶಾಸ್ತ್ರಜ್ಞರ ಬರೆವಣಿಗೆಗಳೂ ಇಲ್ಲಿವೆ. ಈ ಗ್ರಂಥಾಲಯ ತನ್ನ ಅನುವಾದಿತ ಗ್ರಂಥಗಳಿಗಾಗಿ ಪ್ರಸಿದ್ಧಿ ಹೊಂದಿದೆ. ಮೂಲಪ್ರತಿಗಳು ಕಳೆದುಹೋಗಿರುವ ಅನೇಕ ಹಿಂದಿನ ಬರೆವಣಿಗೆಗಳು ಆರ್ಮೇನಿಯನ್ ಭಾಷೆಯಲ್ಲಿ ಇಲ್ಲಿ ಸಿಗುತ್ತವೆ. ಉದಾಹರಣೆಗೆ ಯೂಕ್ಲಿಡ್‍ನ ಜ್ಯಾಮಿತಿ ಲ್ಯಾಟಿನ್ ಭಾಷೆಗೂ ಆರ್ಮೇನಿಯನ್ ಭಾಷೆಗೂ ಅನುವಾದವಾಗಿತ್ತು. ಈ ಗ್ರಂಥಾಲಯದ ಹಸ್ತಪ್ರತಿಗಳು ಆರ್ಮೇನಿಯನ್ ರಾಷ್ಟ್ರದ ಇತಿಹಾಸವನ್ನು ಸಮಗ್ರವಾಗಿ ಗುರುತಿಸುವಷ್ಟಿವೆ.

(2) ವಿಲ್‍ನಿಯಸ್ ವಿಶ್ವವಿದ್ಯಾಲಯ ಗ್ರಂಥಾಲಯ: ಇದು ಸೋವಿಯತ್‍ನ ಮತ್ತೊಂದು ಪ್ರಾಚೀನ ಗ್ರಂಥಾಲಯ. ಜೆಸೂಯಿಟ್ಟರ ಕಾಲೇಜಿನ ಅಂಗವಾಗಿ ಇದು 1570 ರಲ್ಲಿ ಸ್ಥಾಪಿತವಾದಾಗ ಇದರ ಗ್ರಂಥಸಂಗ್ರಹಣೆ 2,500 ಇತ್ತು. 1579 ರಲ್ಲಿ ಈ ಪ್ರೌಢ ವಿದ್ಯಾಲಯ ಅಕಾಡೆಮಿಯಾಗಿ ಪುನರ್‍ವ್ಯವಸ್ಥೆಗೊಂಡಿತು. ಅನೇಕರಿಂದ ಧನಸಹಾಯವನ್ನು ಪಡೆದು ಲೆಕ್ಕವಿಲ್ಲದಷ್ಟು ಪುಸ್ತಕಗಳನ್ನು ಸಂಗ್ರಹಿಸಿತು. 200 ವರ್ಷಗಳ ಅನಂತರ ಈ ಅಕಾಡೆಮಿ ಈಗಿನ ವಿಲ್‍ನಿಯಸ್ ಪುಸ್ತಕ ಶೇಖರಣಾಲಯವೆಂದು ಪ್ರಸಿದ್ಧಿ ಹೊಂದಿ, 1780 ರಲ್ಲಿ ಕಾಪಿರೈಟ್ ಹಕ್ಕನ್ನು ಪಡೆಯಿತು. ಇದರ ಪರಿಣಾಮವಾಗಿ ಲಿಥುವೇನಿಯದಲ್ಲಿ ಪ್ರಕಟವಾಗುವ ಪುಸ್ತಕಗಳ ಪ್ರತಿಯೊಂದು ಪ್ರಕಟಣೆಯೂ ಇಲ್ಲಿಯ ಗ್ರಂಥಾಲಯಕ್ಕೆ ಸೇರುತ್ತಿತ್ತು. ತಮ್ಮ ಸ್ವಂತ ಗ್ರಂಥ ಭಂಡಾರವನ್ನು ವಿಶ್ವವಿದ್ಯಾಲಯಕ್ಕೆ ಉಯಿಲು ಮೂಲಕ ದಾನವಾಗಿ ಕೊಟ್ಟ ಮಹನೀಯರಲ್ಲಿ ಕ್ಯಾಪ್ಟನ್ ಕುಕ್‍ನೊಂದಿಗೆ ಯಾನ ಸಾಹಸದಲ್ಲಿ ಭಾಗಿಯಾದ ಪ್ರಕೃತಿ ವಿಜ್ಞಾನಿ ಜಾರ್ಜ್ ಫಾರ್ಸ್ಟ್ರನೂ ಒಬ್ಬ. ಈ ಗ್ರಂಥಾಲಯದ ಸಂಗ್ರಹದಲ್ಲಿ 310 ಕ್ಕೂ ಹೆಚ್ಚಿನವು ಮುದ್ರಣ ಬೆಳಕಿಗೆ ಬರುವ ಮೊದಲೇ ಬರೆದ ಪುಸ್ತಕಗಳಾಗಿವೆ. ಚರ್ಮದ ಕಾಗದದ ಮೇಲೆ ಬರೆದ ಪುಸ್ತಕಗಳು, ಸಹಿಯಿರುವ ಅನೇಕ ಹಸ್ತಪ್ರತಿಗಳು, ಆರ್ಥಿಕ ಮತ್ತು ನ್ಯಾಯಾಲಯಕ್ಕೆ ಸಂಬಂಧಪಟ್ಟ ದಾಖಲೆ ಪುಸ್ತಕಗಳು, ಹದಿನಾರು ಮತ್ತು ಹದಿನೇಳನೆಯ ಶತಮಾನದ ಲಿಥುವೇನಿಯದ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಬೆಳಕು ಬೀರುವಂಥ ವರದಿಗಳೂ ಇಲ್ಲಿವೆ. ಹದಿನಾರನೆಯ ಶತಮಾನದ ಸುಮಾರು 5,000 ಪುಸ್ತಕಗಳೂ ಹದಿನೇಳನೆಯ ಶತಮಾನದ 19,000 ಪುಸ್ತಕಗಳೂ ಈ ಸಂಗ್ರಹದಲ್ಲಿವೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಖ್ಯಾತ ವಿದ್ವಾಂಸರು, ಇತರ ಸಾರ್ವಜನಿಕ ಪ್ರಮುಖರುಗಳಿಗೆ ಸಂಬಂಧಿಸಿದ ಅಮೂಲ್ಯವಾದ ಖಾಸಗಿ ಪತ್ರಗಳೂ ಜೀವನಚರಿತ್ರೆಗಳೂ ಇಲ್ಲಿವೆ. ಮಹಾಕ್ರಾಂತಿಗೆ ಸಂಬಂಧಪಟ್ಟ ಅನೇಕ ಕಾಗದ ಪತ್ರಗಳೂ ಲಿಥುವೇನಿಯದ ಕಮ್ಯುನಿಸ್ಟ್ ಪಕ್ಷದ ಸಾಂಸ್ಕೃತಿಕ ಸಮಿತಿಯ ಕಮ್ಯುನಿಸ್ಟಾಸ್ ಎಂಬ ದಿನಪತ್ರಿಕೆಯ ಸಂಪೂರ್ಣ ಕಡತವೂ ಇಲ್ಲಿ ಶೇಖರಿಸಲ್ಪಟ್ಟಿವೆ. ಸೋವಿಯೆತ್ ದೇಶದ ಡೆಮಾಕ್ರಟಿಕ್ ಮತ್ತು ಕಮ್ಯುನಿಸ್ಟ್ ಪಕ್ಷದ ಅನೇಕ ಪ್ರಕಟಣೆಗಳ ಪ್ರತಿಗಳು ಇಲ್ಲಿವೆ. ಗ್ರಂಥಾಲಯದ ಈಗಿನ ಒಟ್ಟು ಸಂಗ್ರಹಣೆ 30 ಲಕ್ಷವನ್ನೂ ಮೀರಿದೆ. ಪ್ರತಿ ವರ್ಷವೂ 70 ರಿಂದ 80 ಸಾವಿರ ಹೊಸ ಪುಸ್ತಕಗಳು ಗ್ರಂಥಾಲಯವನ್ನು ಸೇರುತ್ತವೆ.

3. ಮಾಸ್ಕೊ ವಿಶ್ವವಿದ್ಯಾಲಯ ಗ್ರಂಥಾಲಯ: ಸೋವಿಯೆತ್‍ನ ಇನ್ನೊಂದು ಪ್ರಮುಖ ಗ್ರಂಥಾಲಯವಾದ ಇದು 1750ರಲ್ಲಿ ರಷ್ಯದ ಪ್ರಮುಖ ವಿದ್ವಾಂಸ ಮೈಕೇಲ್ ಲೊಮೊನೊಸೊಫ್ ಎಂಬುವನಿಂದ ಸ್ಥಾಪಿತವಾಯಿತು. ಇತರ ಗ್ರಂಥಾಲಯಗಳಂತೆಯೇ ಇದು ಕೂಡ ಅನೇಕ ಕೊಡುಗೆಗಳಿಂದ ವಿಸ್ತಾರವಾಯಿತು. ಆದರೆ ಈ ಗ್ರಂಥಾಲಯ ಹೆಚ್ಚುಅಭಿವೃದ್ಧಿ ಹೊಂದಿದ್ದು ಮಹಾಕ್ರಾಂತಿಯ ಅನಂತರವೇ. ದೇಶದಲ್ಲಿ ಪ್ರಕಟವಾಗುವ ಎಲ್ಲ ವಿಶ್ವವಿದ್ಯಾಲಯಗಳ ಪುಸ್ತಕಗಳನ್ನೂ 1920 ರಿಂದ, ಆಗಿನ ನಿಯಮಕ್ಕನುಸಾರವಾಗಿ, ಈ ಗ್ರಂಥಾಲಯ ಸ್ವೀಕರಿಸುತ್ತದೆ. ಇಲ್ಲಿನ ಒಟ್ಟು ಸಂಗ್ರಹ 60 ಲಕ್ಷಕ್ಕೂ ಮೀರಿದೆಯಲ್ಲದೆ ಪ್ರತಿ ವರ್ಷವೂ 43,000 ಕ್ಕೂ ಹೆಚ್ಚಿನ ಓದುಗರಿಗೆ ಗ್ರಂಥಾಲಯ ಸೇವೆ ಸಲ್ಲುತ್ತಿದೆ. ಅಧಿಕ ಸಂಖ್ಯೆಯಲ್ಲಿರುವ ವಿದ್ಯಾರ್ಥಿಗಳಿಗೆ ಯಥೋಚಿತವಾದ ಗ್ರಂಥಾಲಯ ಸೇವೆಯನ್ನು ಸಲ್ಲಿಸಲು ಪ್ರಮುಖ ಗ್ರಂಥಾಲಯ ಒಂದೊಂದು ಶಿಕ್ಷಣಭಾಗಕ್ಕೂ ಒಂದೊಂದರಂತೆ ಹದಿನಾಲ್ಕು ಉಪಶಾಖೆಗಳನ್ನು ಹೊಂದಿದೆ. ಇದಲ್ಲದೆ ಪ್ರತಿಯೊಂದು ವಿದ್ಯಾರ್ಥಿ ಡಾರ್ಮಿಟರಿಯಲ್ಲೂ ಪ್ರತ್ಯೇಕ ಗ್ರಂಥಭಂಡಾರವಿದೆ. ಇಲ್ಲಿನ ಪ್ರಾಚೀನ ಹಸ್ತಪ್ರತಿ ವಿಭಾಗ ಮಹತ್ತ್ವದ್ದಾಗಿದೆ. ಅಚ್ಚಾದ ಪುಸ್ತಕಗಳಲ್ಲಿ 1445–50ರ ಸುಮಾರಿನಲ್ಲಿ ಗುಟೆನ್‍ಬರ್ಗ್ ಅಚ್ಚು ಮಾಡಿದ ಲ್ಯಾಟಿನ್ ವ್ಯಾಕರಣದ ಅವಶೇಷ ಮುಖ್ಯವಾದುದು. ಈ ಗ್ರಂಥಾಲಯದ ವಿಶೇಷವೆಂದರೆ ಹತ್ತೊಂಬತ್ತನೆಯ ಶತಮಾನದ ವೈಜ್ಞಾನಿಕ ಬರೆವಣಿಗೆಗಳ ಸಂಗ್ರಹ. ಇಷ್ಟೇ ಅಲ್ಲದೆ 1872ರಲ್ಲಿ ಸೇಂಟ್ ಪೀಟರ್ಸ್‍ಬರ್ಗ್‍ನಲ್ಲಿ ಪ್ರಕಟವಾದ, ಕಾರ್ಲ್ ಮಾರ್ಕ್ಸ್ ಕ್ಯಾಪಿಟಲ್ ಗ್ರಂಥದ ಮೊಟ್ಟಮೊದಲನೆಯ ಪ್ರತಿ ಹಾಗೂ 1859ರಲ್ಲಿ ಪ್ರಕಟವಾದ ಕಾರ್ಲ್ ಮಾರ್ಕ್ಸ್‍ನ ಕಾಂಟ್ರಿಬ್ಯೂಷನ್ ಟು ದಿ ಕ್ರಿಟೀಕ್ ಪೊಲಿಟಿಕಲ್ ಎಕಾನಮಿ ಎಂಬ ಗ್ರಂಥದ ಮೊದಲ ಪ್ರತಿ, ಲೆನಿನ್ನನ ಎಲ್ಲ ಮೊದಲ ಪ್ರತಿಗಳು ಮತ್ತು ಆತನ ಇಸ್ಕ್ರಾ ದಫ್ತರಿನ ಪೂರ್ಣಕಟ್ಟು ಮತ್ತು ಹರ್ಜನ್ನನ ಕೊಲೊಕೋಲ್ – ಇವು ಈ ಗ್ರಂಥಾಲಯದ ಹೆಮ್ಮೆಯ ಶೇಖರಣೆಗಳಾಗಿವೆ.

ಅಕಾಡೆಮಿ ಆಫ್ ಸೈನ್ಸಸ್ ಗ್ರಂಥಾಲಯ: ಅಂತಾರಾಷ್ಟ್ರೀಯವಾಗಿ ಪ್ರಸಿದ್ಧಿ ಹೊಂದಿದ ಸೋವಿಯೆತ್ ಗ್ರಂಥಾಲಯಗಳಲ್ಲಿ ಒಂದಾಗಿರುವ ಇದು ಲೆನಿನ್‍ಗ್ರಾಡಿನಲ್ಲಿದೆ. ಸೋವಿಯೆತ್ ದೇಶದ ಸೈನ್ಸ್ ಅಕಾಡೆಮಿಯ 300 ವಿವಿಧ ಗ್ರಂಥಾಲಯಗಳು ಈ ಕೇಂದ್ರ ಗ್ರಂಥಾಲಯಕ್ಕೆ

ಅಧೀನವಾಗಿವೆ. 1714ರಲ್ಲಿ ಸ್ಥಾಪಿತವಾದ ಇದು ದೇಶದ ವೈಜ್ಞಾನಿಕ ಗ್ರಂಥಾಲಯ. ಇಲ್ಲಿನ ಒಟ್ಟು ಸಂಗ್ರಹ 12,500. 1783 ರಿಂದ ಇದು ಕಾಪಿರೈಟ್ ಗ್ರಂಥಾಲಯವಾಯಿತು. ರಷ್ಯದ ವೈಜ್ಞಾನಿಕ ಸಾಹಿತ್ಯದ ಬಹು ಭಾಗವೆಲ್ಲ ಇಲ್ಲಿದೆ. ಸೈನ್ಸ್ ಅಕಾಡೆಮಿಯ ಎಲ್ಲ ಪ್ರಕಟಣೆಗಳೂ ಇಲ್ಲಿವೆ. 1707–25ರ ವರೆಗಿನ ಅತಿ ವಿರಳವೂ ದುರ್ಲಭವೂ ಆದ ಪುಸ್ತಕಗಳೂ 1726–1825ರ ವರೆಗೆ ರಷ್ಯದಲ್ಲಿ ಪ್ರಕಟವಾದ ಪುಸ್ತಕ ಮತ್ತು ನಿಯತಕಾಲಿಕೆಗಳ ಸಂಗ್ರಹವೂ ಇಲ್ಲಿದೆ. 1517–19ರಲ್ಲಿ ಪ್ರಾಗ್‍ನಲ್ಲಿ ಅಚ್ಚಾದ ರಷ್ಯನ್ ಬೈಬಲ್ ಮತ್ತು ಆಕ್ಟ್ಸ್ ಆಫ್ ದಿ ಅಪೋಸಲ್ಸ್ (1564) – ಇವು ಇಲ್ಲಿನ ಅಮೂಲ್ಯವಾದ ಸಂಗ್ರಹಗಳೆನಿಸಿಕೊಂಡಿವೆ.

1940ರಲ್ಲಿ 4,000 ಇದ್ದ ಓದುಗರ ಸಂಖ್ಯೆ 1972ರಲ್ಲಿ 30,000 ಇತ್ತು. ಈಗ ಇನ್ನೂ ಹೆಚ್ಚಾಗಿದೆ. ಇಲ್ಲಿನ 48 ಕೊಠಡಿಗಳಲ್ಲಿ ಒಟ್ಟು 973 ಓದುಗರಿಗೆ ವ್ಯಾಸಂಗದ ಅವಕಾಶವಿದೆ. 97 ದೇಶಗಳ 3,000ಕ್ಕೂ ಹೆಚ್ಚಿನ ಸಂಸ್ಥೆಗಳೊಡನೆ ಪುಸ್ತಕಗಳ ಮತ್ತು ಇತರ ಅಚ್ಚಾದ ಪ್ರತಿಗಳ ವಿನಿಮಯಕ್ಕೆ ಈ ಗ್ರಂಥಾಲಯ ವ್ಯವಸ್ಥೆ ಮಾಡಿದೆ.

5. ವಿದೇಶೀ ಸಾಹಿತ್ಯದ ಸೋವಿಯೆತ್ ರಾಜ್ಯ ಗ್ರಂಥಾಲಯ: ನಿಯೊಫೈಲಲಾಜಿಕಲ್ ಲೈಬ್ರರಿ ಎಂಬ ಹೆಸರಿನಲ್ಲಿ 1921ರಲ್ಲಿ ಪ್ರಾರಂಭವಾದ ಈ ಗ್ರಂಥಾಲಯದಲ್ಲಿ ಅಂದಿಗೆ ಕೇವಲ ಮೂರು ಭಾಷೆಗಳ ಕೆಲವೇ ನೂರು ಗ್ರಂಥಗಳಿದ್ದವು. ಮುಂದಿನ ಐವತ್ತು ವರ್ಷಗಳಲ್ಲಿ ವಿದೇಶೀ ಭಾಷೆಗಳ ದೊಡ್ಡ ಪುಸ್ತಕ ಶೇಖರಣಾಲಯವಾಗಿ ಅಭಿವೃದ್ಧಿಗೊಂಡು ಪ್ರಮುಖ ಗ್ರಂಥಸೂಚಿಗಳನ್ನು ಪ್ರಕಟಿಸುವ ಕೇಂದ್ರವಾಗಿತ್ತು. 1936ರಲ್ಲಿ ಫ್ಯಾಸಿಸ್ಟ್ ವಿರೋಧಿಗಳು ಮಾಡಿದ ದಾನದ ಪರಿಣಾಮವಾಗಿ ಸ್ಪ್ಯಾನಿಷ್ ಚರಿತ್ರೆ ಮತ್ತು ಸಂಸ್ಕೃತಿಗಳ ಉತ್ತಮ ಪುಸ್ತಕಗಳು ಇಲ್ಲಿ ಸೇರಿವೆ. ಪ್ರಪಂಚದ ವಿವಿಧ ಕಲೆಗಳ ಬಗ್ಗೆ ಇಲ್ಲಿ 50,000, ಪ್ರಕೃತಿ ವಿಜ್ಞಾನದ ಬಗ್ಗೆ ಹಲವು ಪುಸ್ತಕಗಳಿವೆ. ಇವೆಲ್ಲವೂ ಎರಡನೆಯ ಮಹಾಯುದ್ಧಾನಂತರ ಸಂಗ್ರಹಿಸಲ್ಪಟ್ಟವು. ಪೂರ್ವ ಮತ್ತು ಪಶ್ಚಿಮದ 92 ದೇಶಗಳಿಂದ 50,000ಕ್ಕೂ ಹೆಚ್ಚಿನ ವಿವಿಧ ನಿಯತಕಾಲಿಕೆಗಳನ್ನು ಈ ಗ್ರಂಥಾಲಯ ಪಡೆಯುತ್ತಿದೆ; ಈ ಗ್ರಂಥಾಲಯ ಯುನೆಸ್ಕೊದ ಪ್ರಲೇಖನ ಮೊದಲಾದ ಶಾಖೆಗಳೊಡನೆ ಮತ್ತು ಇಫ್ಲ (ಐಫ್‍ಆರ್‍ಎ)– ಸಂಸ್ಥೆಯೊಂದಿಗೆ ಸಹಕರಿಸಿ ಯುನೆಸ್ಕೊ ಬುಲೆಟಿನ್ ಫಾರ್ ಲೈಬ್ರರೀಸ್ ಮತ್ತು ಇಫ್ಲನ್ಯೂಸ್ ಮೊದಲಾದ ನಿಯತಕಾಲಿಕೆಗಳನ್ನು ರಷ್ಯನ್ ಭಾಷೆಯಲ್ಲಿ ತರಲು ಸಹಾಯ ಮಾಡುತ್ತಿದೆ. ವಿದೇಶೀ ಭಾಷೆಯ ಗ್ರಂಥಸೂಚಿಗಳ ಕೇಂದ್ರವಾಗಿ ಇದು ಅನೇಕ ಸಂಯುಕ್ತಸೂಚಿ ಹಾಗೂ ಸಾರಸಂಗ್ರಹಗಳನ್ನೂ ಪ್ರಕಟಿಸಿದೆ. ಇದು ಪ್ರಕಟಿಸುವ ದಿ ಕಾಂಟೆಂಪೊರರಿ ಫಿಕ್ಷನ್ ಅಬ್ರಾಡ್ ಎಂಬ ನಿಯತಕಾಲಿಕೆ ಪ್ರಮುಖ ಸಾಹಿತ್ಯ ವಿಮರ್ಶಕರ ನಾಟಕ ಮತ್ತು ಇತರ ಕಲೆಗಳ ಬಗ್ಗೆ ವಿಶೇಷ ವಿಷಯನ್ನು ಓದುಗರಿಗೆ ಒದಗಿಸಿಕೊಡುತ್ತದೆ. ಮತ್ತೊಂದು ನಿಯತಕಾಲಿಕೆಯಾದ ಫಾರಿನ್ ಆಥರ್ ಸೀರೀಸ್ ಎಂಬುದರಲ್ಲಿ ಹಳೆಯ ಮತ್ತು ಹೊಸ ಲೇಖಕರ ಬಗ್ಗೆ ಪರಿಚಯಾತ್ಮಕವಾದ ಕಿರುಹೊತ್ತಗೆಗಳನ್ನು ಪ್ರಕಟಿಸಿದೆ.

6. ಸೋವಿಯೆತ್ ದೇಶದ ವೈಜ್ಞಾನಿಕ ಮತ್ತು ತಾಂತ್ರಿಕ ಗ್ರಂಥಾಲಯ: 1958ರಲ್ಲಿ ಮಾಸ್ಕೊ ನಗರದಲ್ಲಿ ಈ ಗ್ರಂಥಾಲಯ ಸ್ಥಾಪಿತವಾಯಿತು. ಈ ಗ್ರಂಥಾಲಯದಲ್ಲಿ 1971ರ ಸುಮಾರಿಗೆ ಕೈಗಾರಿಕೆಗೆ ಸಂಬಂಧಪಟ್ಟ ವಿಶೇಷ ಪುಸ್ತಕಗಳ ಭಾಷಾಂತರಗಳು ಮತ್ತು ಗಣಕ ಒಳಗೊಂಡಂತೆ 70 ದಶಲಕ್ಷ ಗ್ರಂಥಾದಿಗಳಿದ್ದವು. ಇದು ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯ ವಿತರಣೆಗಳ ಕೇಂದ್ರವಾಗಿಯೂ ಸ್ವದೇಶ ಮತ್ತು ವಿದೇಶಗಳ ವೈಜ್ಞಾನಿಕ ಮತ್ತು ತಾಂತ್ರಿಕ ಗ್ರಂಥಸಾರ ಮತ್ತು ಸಾಹಿತ್ಯಗಳ ಶೇಖರಣಾಲಯವಾಗಿಯೂ ಕೆಲಸ ಮಾಡುತ್ತಿದೆ. ಈ ಗ್ರಂಥಾಲಯ ವರ್ಷಕ್ಕೆ ಸುಮಾರು 70,000 ಗ್ರಂಥಗಳನ್ನು ಓದುಗರಿಗೆ ಒದಗಿಸುತ್ತಿದೆ. ವಿಶೇಷವಾಗಿ ಸ್ವಯಂತ್ರೀಕರಣ, ಟೆಲಿಮೆಕ್ಯಾನಿಕ್ಸ್, ಗಣಕ ಎಂಜಿನಿಯರಿಂಗ್, ಗಣಿತ ಶಾಸ್ತ್ರ ಮತ್ತು ಭೌತವಿಜ್ಞಾನದ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಗ್ರಂಥಾಲಯದಲ್ಲಿ ಗ್ರಂಥಗಳ ಅಥವಾ ಅದರ ಭಾಗಗಳ ಪ್ರತಿಗಳನ್ನು ಪಡೆದುಕೊಳ್ಳಲು ಮೈಕ್ರೊಫಿಲ್ಮ್ ಸೇವೆಯನ್ನು ಒದಗಿಸಲಾಗಿದೆ. ಈ ಗ್ರಂಥಾಲಯ ನಲವತ್ತೈದು ವಿವಿಧ ದೇಶಗಳಲ್ಲಿ ತನ್ನದೇ ಮಾದರಿಯ ಗ್ರಂಥಾಲಯಗಳೊಡನೆ ಪುಸ್ತಕಗಳ ವಿನಿಮಯದ ವ್ಯವಸ್ಥೆಯನ್ನು ಹೊಂದಿದೆ. ವಾಙ್ಮಯದರ್ಶನಾತ್ಮಕ ಸೂಚಿಗಳನ್ನು ಪ್ರಕಟಿಸುವುದಲ್ಲದೆ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದ ವಿದೇಶೀ ಪ್ರಕಟಣೆಗಳನ್ನು ರಷ್ಯನ್ ಭಾಷೆಗೆ ಭಾಷಾಂತರಿಸುವ ಕೆಲಸವನ್ನೂ ಇದು ಮಾಡುತ್ತದೆ. ಸೋವಿಯೆತ್ ಗ್ರಂಥಾಲಯಗಳಿಗೆ ಬರುವ ಎಲ್ಲ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳನ್ನೊಳಗೊಂಡ ಪ್ರಕಟಣೆಗಳನ್ನೂ ಸಂಯುಕ್ತ ಸೂಚಿಯ ಮೂಲಕ ಇದು ಪ್ರಕಟಿಸುತ್ತದೆ.

7. ಸಾಲ್ಟಿಕೋವ್ – ಷೆಡ್ರಿನ್ ಸಾರ್ವಜನಿಕ ಗ್ರಂಥಾಲಯ: 1814ರಲ್ಲಿ ಪ್ರಾರಂಭವಾದ ಈ ಗ್ರಂಥಾಲಯ ಪ್ರಪಂಚದ ಅತಿದೊಡ್ಡ ಗ್ರಂಥಾಲಯಗಳಲ್ಲಿ ಒಂದು. 1870ರಲ್ಲಿ ಕಾಪಿರೈಟ್ ಗ್ರಂಥಾಲಯವಾಗಿ, ದೇಶದಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕಗಳನ್ನೂ ಇದು ಸಂಗ್ರಹಿಸಲಾರಂಭಿಸಿತು. ಇದರ ಪರಿಣಾಮವಾಗಿ ಪ್ರಪಂಚದಲ್ಲೇ ರಷ್ಯನ್ ಭಾಷೆಯಲ್ಲಿನ ಪುಸ್ತಕಗಳು ಮತ್ತು ನಿಯತಕಾಲಿಕೆಗಳ ಅತಿ ದೊಡ್ಡ ಸಂಗ್ರಹಣಾಲಯವಾಯಿತು. ಇದು ಪ್ರಕಟಪಡಿಸುತ್ತಿರುವ ರಷ್ಯನ್ ಗ್ರಂಥಗಳ ಸಂಯುಕ್ತಸೂಚಿ ಎಂಬ ಸಂಕಲನ 1962–1967ರ ಅವಧಿಯಲ್ಲಿ ಐದು ಸಂಪುಟಗಳಲ್ಲಿ ಹೊರಬಂದಿದೆ. ರಷ್ಯದ ಕ್ರಾಂತಿಗೆ ಸಂಬಂಧಪಟ್ಟ ಅನೇಕ ನಿಯತಕಾಲಿಕೆಗಳೂ ಅನಧಿಕೃತವಾಗಿ ಪ್ರಕಟವಾಗಿರುವ ಲೆನಿನ್ನನ ಅನೇಕ ಬರೆವಣಿಗೆಗಳೂ ಇತರ ಬೋಲ್ಷೆವಿಸ್ಟ್‍ಸಾಹಿತ್ಯಗಳೂ ಈ ಸಂಗ್ರಹದಲ್ಲಿವೆ. 5,000 ಪ್ರತಿಗಳಷ್ಟು ಪುಷ್ಕಿನ್‍ನ ಕೃತಿಗಳೂ ವಾಲ್ಟೇರನ ಖಾಸಗಿ ಸಂಗ್ರಹಗಳೂ ಸುಮಾರು 20 ಲಕ್ಷದಷ್ಟು ವಿದೇಶೀ ಸಾಹಿತ್ಯವೂ 3,25,000 ಕ್ಕೂ ಹೆಚ್ಚಿನ ಪ್ರಾಚ್ಯ ಭಾಷೆಗಳ ಪುಸ್ತಕಗಳೂ ನಿಯತಕಾಲಿಕೆಗಳೂ ಖಾಸಗಿ ಹಸ್ತಪ್ರತಿಗಳೂ ಇಲ್ಲಿ ಸಂಗ್ರಹಿಸಲ್ಪಟ್ಟಿವೆ. ಈ ಗ್ರಂಥಾಲಯದ ಒಟ್ಟು ಸಂಗ್ರಹ 170 ಹೆಚ್ಚಿದೆ. ಪ್ರತಿ ವರ್ಷವೂ ಇಲ್ಲಿನ ಓದುಗರ ಸಂಖ್ಯೆ 20 ಲಕ್ಷಕ್ಕೂ ಹೆಚ್ಚು.

ಗ್ರಂಥಾಲಯ ವಿಜ್ಞಾನ, ಪುಸ್ತಕ ಸಂಗ್ರಹಣೆ ಮತ್ತು ಗ್ರಂಥಸೂಚಕ ವರ್ಗೀಕರಣ ಪದ್ಧತಿ ಮುಂತಾದ ವಿಷಯಗಳ ಬಗ್ಗೆ ಸಂಶೋಧನ ಕಾರ್ಯವನ್ನು ಈ ಸಾರ್ವಜನಿಕ ಗ್ರಂಥಾಲಯ ನಡೆಸುತ್ತಿದೆ. ಹೊಸ ಗ್ರಂಥಗಳ ವಿಷಯವನ್ನು ತಿಳಿಸುವ ಸಲುವಾಗಿ ಅನೇಕ ಗ್ರಂಥಸೂಚಿಗಳನ್ನೂ ಹೊರತರಲಾಗಿದೆ. ಸೋವಿಯೆತ್ ದೇಶದ ಗದ್ಯ ಬರೆಹಗಾರರು ಎಂಬ ನಿಯತಕಾಲಿಕೆಯ ಮಾದರಿಯಲ್ಲಿ, ಬರೆಹಗಾರರು, ವಿಜ್ಞಾನಿಗಳು ಮತ್ತು ಎಂಜಿನಿಯರುಗಳಿಗೆ ಸಂಬಂಧಿಸಿದಂತೆ ಪ್ರತಿವರ್ಷವೂ ಸುಮಾರು ಅರವತ್ತು ಗ್ರಂಥಸೂಚಿಗಳು ಪ್ರಕಟವಾಗುತ್ತಿವೆ.

8. ಸೋವಿಯೆತ್ ದೇಶದ ಯುವಜನ ಗ್ರಂಥಾಲಯ: ಈ ಗ್ರಂಥಾಲಯ 1966ರಲ್ಲಿ ಸ್ಥಾಪಿತವಾಯಿತು. ಇದರ ಮುಖ್ಯ ಕಾರ್ಯ ಯುವಜನಾಂಗಕ್ಕೆ ಸಂಬಂಧಿಸಿದಂತೆ ಗ್ರಂಥಾಲಯ ಸಮಸ್ಯೆಗಳನ್ನು ಪರಿಹರಿಸುವುದು. ವ್ಯಾಸಂಗ ವಸ್ತುಗಳ ವಿತರಣೆಯ ಜೊತೆಗೆ ಈ ಗ್ರಂಥಾಲಯ ಬೇರೆ ರೀತಿಯ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನೂ ನಡೆಸುತ್ತದೆ – ದೇಶದ ಹಿರಿಯರ ಸಂದರ್ಶನ, ಪ್ರವಾಸ, ಯುವಕ ಸಮ್ಮೇಳನಗಳು, ಚರ್ಚಾಕೂಟಗಳು ಇತ್ಯಾದಿ.

**9. ಲೆನಿನ್ ಗ್ರಂಥಾಲಯ :** ಪ್ರಪಂಚದಲ್ಲೇ ಅತಿ ಮುಖ್ಯವಾದ ಗ್ರಂಥಾಲಯಗಳಲ್ಲೊಂದು. ಮಾಸ್ಕೊದಲ್ಲಿ ಕ್ರೆಮ್‍ಲಿನ್ ಹತ್ತಿರ ಇದೆ. ಇದು ವಯಸ್ಸಿನಲ್ಲಿ ಪ್ಯಾರಿಸಿನ ರಾಷ್ಟ್ರೀಯ ಗ್ರಂಥಾಲಯಕ್ಕಿಂತ 500 ವರ್ಷ, ಬ್ರಿಟಿಷ್ ಮ್ಯೂಸಿಯಮ್ ಗ್ರಂಥಾಲಯಕ್ಕಿಂತ ನೂರು ವರ್ಷ, ಲೈಬ್ರರಿ ಆಫ್ ಕಾಂಗ್ರೆಸ್ಸಿಗಿಂತ ಐವತ್ತು ವರ್ಷ ಕಿರಿಯದು. ಮಹಾಕ್ರಾಂತಿಯ

ಲೆನಿನ್ ಗ್ರಂಥಾಲಯ, ಮಾಸ್ಕೊ

ಅನಂತರ ಲೆನಿನ್ನನ ಆದೇಶ ಹಾಗೂ ಪ್ರೋತ್ಸಾಹದಿಂದ ಇದು ಅಭಿವೃದ್ಧಿ ಹೊಂದಿತು. 1924ರಲ್ಲಿ ಇದಕ್ಕೆ ಲೆನಿನ್ ಗ್ರಂಥಾಲಯವೆಂಬ ಹೆಸರು ಬಂತು. ಈ ಗ್ರಂಥಾಲಯ ಅತ್ಯಂತ ಆಧುನಿಕವಾದ ಸ್ವಯಂಚಾಲಿತ ಯಂತ್ರಗಳನ್ನೊಳಗೊಂಡ ದೊಡ್ಡ ಗ್ರಂಥಸಂಗ್ರಹಾಲಯವಾಗಿದೆ. 2,500ರಷ್ಟು ಉದ್ಯೋಗಸ್ಥರಿರುವ ಈ ಗ್ರಂಥಾಲಯದ ಒಟ್ಟು ಸಂಗ್ರಹ 260 ಲಕ್ಷ ಗ್ರಂಥಗಳು. ಪ್ರತಿವರ್ಷದ ಓದುಗರ ಸಂಖ್ಯೆ 25 ಲಕ್ಷ. ರಷ್ಯದಲ್ಲಿ ಮೊಟ್ಟಮೊದಲ ಬಾರಿಗೆ ಮುಕ್ತದ್ವಾರ ಪದ್ಧತಿ ಪ್ರಾರಂಭವಾದುದು ಈ ಗ್ರಂಥಾಲಯದಲ್ಲೇ.

ಸಮಾಜ ವಿಜ್ಞಾನ, ಪ್ರಕೃತಿ ವಿಜ್ಞಾನ, ತಾಂತ್ರಿಕ ವಿಜ್ಞಾನಗಳಿಗಾಗಿ ಮೀಸಲಾಗಿರುವ ಕೊಠಡಿಗಳಲ್ಲದೆ ಹಸ್ತಪ್ರತಿಗಳನ್ನಿಡಲು, ಅಪೂರ್ವ ಗ್ರಂಥಗಳಿಗಾಗಿ, ಸಮಾಚಾರ ಪತ್ರಗಳಿಂದ ಕತ್ತರಿಸಿದ ಭಾಗಗಳ ಸಂಗ್ರಹಣೆ ಮತ್ತು ಕಚೇರಿಗೆ ಸಂಬಂಧಪಟ್ಟ ಪ್ರಕಟಣೆಗಳಿಗಾಗಿ ಪ್ರತ್ಯೇಕ ಕೊಠಡಿಗಳಿವೆ.

ಒಳದೇಶದ ಗ್ರಂಥಾಲಯಗಳೊಂದಿಗೆ ಯು.ಎಸ್. ಲೈಬ್ರರಿ ಆಫ್ ಕಾಂಗ್ರೆಸ್, ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯ, ಪ್ಯಾರಿಸ್ ರಾಷ್ಟ್ರೀಯ ಗ್ರಂಥಾಲಯ, ಸ್ಟಾಕ್

ಹೋಮ್‌ನ ರಾಯಲ್ ಗ್ರಂಥಾಲಯ ಮೊದಲಾದವುಗಳೊಡನೆಯೂ ಈ ಗ್ರಂಥಾಲಯ ವಿನಿಮಯ ವ್ಯವಸ್ಥೆ ಮಾಡಿಕೊಂಡಿದೆ. 1970ರಲ್ಲಿ ಇದು 95 ದೇಶಗಳ 3,743 ಗ್ರಂಥಾಲಯಗಳೊಡನೆ ಪುಸ್ತಕ ವಿನಿಮಯ ನಡೆಸಿತು.

6ನೆಯ ಶತಮಾನದಿಂದ ಸಂಗ್ರಹಿಸಿದ ಎಲ್ಲ ಹಸ್ತಪ್ರತಿಗಳೂ ಇಲ್ಲಿವೆ. ಇಷ್ಟೇ ಅಲ್ಲದೆ ಅಪೂರ್ವ ಗ್ರಂಥಗಳನ್ನು ಮೈಕ್ರೊಫಿಲ್ಮ್ ರೂಪದಲ್ಲಿ ಸಂಗ್ರಹಿಸಲಾಗಿದೆ. ಗ್ರಂಥಾಲಯ ವಿಜ್ಞಾನದಲ್ಲಿ ಮತ್ತು ಗ್ರಂಥಸೂಚಿ ನಿರ್ಮಾಣದಲ್ಲಿ ಇದೊಂದು ಅತ್ಯುತ್ತಮ ಕಾರ್ಯಾಗಾರವೆನಿಸಿದೆ. ವಿದ್ವಾಂಸರು ಸಾದರಪಡಿಸಿದ ಎಲ್ಲ ವಿದ್ವತ್ ಪ್ರಬಂಧಗಳನ್ನೂ ಇಲ್ಲಿ ಸಂಗ್ರಹಿಸಿರುವುದು ಇನ್ನೊಂದು ದೊಡ್ಡ ಆಕರ್ಷಣೆ.

ಗ್ರಂಥಸೂಚಿಗಳಲ್ಲಿ ಮುಖ್ಯವಾಗಿ ಲೆನಿನ್ನನ ಬಗ್ಗೆ ಇರುವ ಲೆನಿನಿಯಾನ ಗ್ರಂಥ ಸೂಚಿ, ಆತನ ಪತ್ನಿಯ ಬಗೆಗಿನ ಬರೆಹಗಳ ಗ್ರಂಥಸೂಚಿ, ಸಾಹಿತ್ಯವನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಮಾಡಲು ಎಲ್ಲ ವಿಷಯಗಳ ಬಗ್ಗೆ ವಿಷಯ ಸಂಗ್ರಹಣೆ ಮಾಡಿರುವ ಬುಕ್ ಅಬೌಟ್ ಬುಕ್ಸ್ ಎಂಬ ಒಂದು ಜನಪ್ರಿಯ ಗ್ರಂಥಸೂಚಿ – ಇವನ್ನು ಹೆಸರಿಸಬಹುದು.

(ಸಿ.ಆರ್.ಎಸ್‌ಯು.)

### I ಗ್ರಂಥಾಲಯ ಕಾಯದೆ

ಸಾರ್ವಜನಿಕ ಆರೋಗ್ಯ, ವಿದ್ಯಾಭ್ಯಾಸ ಮೊದಲಾದವು ಹೇಗೋ ಹಾಗೆ ಯುಕ್ತ ಗ್ರಂಥಾಲಯಗಳ ಸ್ಥಾಪನೆ, ಬೆಳವಣಿಗೆ, ಸೇವಾವಿಸ್ತರಣೆ– ಇವೂ ಒಂದು ರೀತಿಯಲ್ಲಿ ಸರ್ಕಾರದ ಹೊಣೆಯಾಗಿರುತ್ತವೆ. ಅನೇಕ ಸರ್ಕಾರಗಳು ಆಗಿಂದಾಗ್ಗೆ ಕೆಲವು ಕಾಯದೆಗಳನ್ನು ಅಂಗೀಕರಿಸುವುದರ ಮೂಲಕ ಈ ಉದ್ದೇಶ ಸಾಧನೆಗೆ ನೆರವಾಗಿವೆ. ಪುಸ್ತಕ ಸಂಗ್ರಹಣೆ, ವಿತರಣೆ, ಗ್ರಂಥಾಲಯಗಳ ಹಕ್ಕು ಬಾಧ್ಯತೆಗಳು, ಅವಶ್ಯವಾದ ಸಂಪನ್ಮೂಲಗಳ ವಿಷಯ, ಹೊಸ ತೆರಿಗೆಗಳು– ಹೀಗೆ ಅನೇಕ ಸರ್ಕಾರಗಳು ಆಗಿಂದ್ದಾಗ್ಗೆ ಯತ್ನಿಸಿವೆ. ಅಂತಾರಾಷ್ಟ್ರೀಯ ರಂಗದಲ್ಲಿ ಗ್ರೇಟ್ ಬ್ರಿಟನ್, 1850ರಲ್ಲಿ ಪ್ರಥಮವಾಗಿ ಒಂದು ಕಾಯಿದೆಯನ್ನು ಅಂಗೀಕರಿಸಿತು. ಇದೇ ಸಮಯಕ್ಕೆ ಅಮೆರಿಕದ ಮ್ಯಾಸಾಚುಸೆಟ್ಸ್ ರಾಜ್ಯಗ್ರಂಥಾಲಯ ಒಂದು ಕಾಯಿದೆಯನ್ನು ಅಂಗೀಕರಿಸಿತು. ಭಾರತದಲ್ಲಿ ಪ್ರಥಮವಾಗಿ ಅಂದಿನ ಮದ್ರಾಸು ಪ್ರಾಂತ್ಯದಲ್ಲಿ 1948ರಲ್ಲಿ ಇಂಥ ಕಾಯದೆ ಜಾರಿಗೆ ಬಂತು. ಇದಕ್ಕೂ ಹಿಂದೆ ಬರೋಡದ ಮಹಾರಾಜರು, ಕೊಲ್ಲಾಪುರದ ಸಂಸ್ಥಾನಿಕರು ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಕೆಲಸ ಮಾಡಿದ್ದರು ಎಂಬುದನ್ನು ಇಲ್ಲಿ ನೆನೆಯಬಹುದು. ಆಮೇಲೆ 1955ರಲ್ಲಿ ಹಿಂದಿನ ಹೈದರಾಬಾದ್ ಸಂಸ್ಥಾನದಲ್ಲಿ, ಅನಂತರ ರಾಜ್ಯಗಳ ಪುನರ್ವಿಂಗಡನೆಯಾದ ಮೇಲೆ 1960ರಲ್ಲಿ ಎರಡು ಕಾಯಿದೆಗಳು, ತರುವಾಯ ಕರ್ನಾಟಕ ರಾಜ್ಯದಲ್ಲಿ 1965ರಲ್ಲಿ, ಮಹಾರಾಷ್ಟ್ರ ರಾಜ್ಯದಲ್ಲಿ 1968ರಲ್ಲಿ– ಇಂಥ ಕಾಯಿದೆಗಳು ಆಗಿವೆ. ಗ್ರಂಥಾಲಯಗಳ ಸಂಬಂಧವಾಗಿ ರಾಜ್ಯಸರ್ಕಾರಗಳ ಕಾಯಿದೆಗಳೊಂದಿಗೆ ಕೇಂದ್ರಸರ್ಕಾರದ ಕಾಯಿದೆಯೊಂದು ಆಗಬೇಕಾದ ಅಗತ್ಯವಿದೆ.

ಕೆನಡದ ಟೊರೆಂಟೊ ವಿಶ್ವವಿದ್ಯಾಲಯದ ರಾಬರ್ಟ್ಸ್ ಗ್ರಂಥಾಲಯ

ಇಂಗ್ಲೆಂಡ್, ಅಮೆರಿಕ ಮತ್ತು ಭಾರತಗಳಲ್ಲಿ ಗ್ರಂಥಾಲಯ ಶಾಸನದ ಸಾಧನೆಗಳೂ ಕೂಡಿದಂತೆ ಸಂಕ್ಷಿಪ್ತ ಇತಿಹಾಸ ಹೀಗಿದೆ:

ಇಂಗ್ಲೆಂಡ್: 1849ರ ಸಾರ್ವಜನಿಕ ಗ್ರಂಥಾಲಯಗಳ ಸಮಿತಿಯ ವರದಿಯ ಫಲವಾಗಿ 1850ರ ಆಗಸ್ಟ್ 14 ರಂದು ಬ್ರಿಟಿಷ್ ಪಾರ್ಲಿಮೆಂಟು ಬಹುಶಃ ಪ್ರಪಂಚದಲ್ಲೇ ಮೊದಲನೆಯದೂ ಇಡೀ ರಾಷ್ಟ್ರಕ್ಕೆ ಅನ್ವಯವಾದುದೂ ಆದ ಸಾರ್ವಜನಿಕ ಗ್ರಂಥಾಲಯ ಕಾಯಿದೆಯನ್ನು ಅಂಗೀಕರಿಸಿತು.

ಪಟ್ಟಣಗಳ ಮಂಡಳಿಗಳು: ಗ್ರಂಥಾಲಯದ ಉಪಯೋಗಕ್ಕೆ ಸೂಕ್ತವಾಗುವ ಕಟ್ಟಡಗಳನ್ನು ವಶಕ್ಕೆ ತೆಗೆದುಕೊಂಡು ಅಲ್ಲಿ ಗ್ರಂಥಾಲಯ ನಡೆಸಬೇಕೆಂದೂ ಈ ಉದ್ದೇಶಕ್ಕಾಗಿ ಪೌಂಡಿಗೆ ಅರ್ಧ ಪೆನ್ನಿಯಂತೆ ವಿಶೇಷವಾಗಿ ಲೆವಿ ಹಾಕಬೇಕೆಂದೂ ಕಾಯಿದೆ ಆದೇಶ ನೀಡಿತು. ಈ ಕಾಯಿದೆಗೆ ಒಂದು ಪರಿಮಿತಿ ಇತ್ತು. 10,000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಸ್ಥಳಗಳಿಗೆ ಮಾತ್ರ ಇದು ಅನ್ವಯಿಸುತ್ತಿತ್ತು. ಅಲ್ಲಿಯೂ ಆ ಉದ್ದೇಶಕ್ಕಾಗಿ ಕರೆದ ಸಾರ್ವಜನಿಕ ಸಭೆಯ ಮೂರನೆಯ ಎರಡು ಭಾಗ ಒಪ್ಪಿದರೆ ಮಾತ್ರ ಅದು ಸಿಂಧುವಾಗುತ್ತಿತ್ತು. ಈ ಕಾಯಿದೆಯ ಪ್ರಕಾರ ಸ್ಥಾಪಿತವಾದ ಗ್ರಂಥಾಲಯಗಳಲ್ಲಿ ಸದಸ್ಯರಿಗೆಲ್ಲ ಪುಸ್ತಕ ಎರವಲೇ ಮೊದಲಾದ ರೀತಿಯ ಸೌಲಭ್ಯಗಳೂ ಉಚಿತವಾಗಿ ದೊರೆಯುತ್ತಿದ್ದವು. ಗ್ರಂಥಾಲಯಕ್ಕಾಗಿ ಆಸ್ತಿಯನ್ನು ಕೊಳ್ಳಲು ಅವಕಾಶ ಮಾಡಲಾಗಿತ್ತು. ಆದರೆ ಈ ಕಾಯಿದೆಯಲ್ಲಿದ್ದ ಮುಖ್ಯ ದೋಷವೆಂದರೆ, ಗ್ರಂಥಾಲಯಕ್ಕಾಗಿ ಪುಸ್ತಕಗಳನ್ನೂ ಸಂಬಂಧಪಟ್ಟ ಇತರ ಸಾಮಗ್ರಿಗಳನ್ನೂ ಕೊಳ್ಳಲು ಅದರಲ್ಲಿ ಅವಕಾಶ ಇಲ್ಲದ್ದು.

1850 ರಿಂದ 1919 ರವರೆಗಿನ ಅವಧಿಯಲ್ಲಿ ಈ ಕಾಯಿದೆಗೆ ಹಲವಾರು ತಿದ್ದುಪಡಿಗಳನ್ನು ತರಲಾಯಿತು. ಅವುಗಳಲ್ಲಿ 1919ರ ಸಾರ್ವಜನಿಕ ಗ್ರಂಥಾಲಯ (ತಿದ್ದುಪಡಿ) ಕಾಯಿದೆ ದೂರವ್ಯಾಪಿಯಾದ ಸುಧಾರಣೆಗಳನ್ನು ಜಾರಿಗೆ ತಂದಿತು. ಅದು ಪೆನ್ನಿ ದರವನ್ನು ರದ್ದುಪಡಿಸಿ ಗ್ರಂಥಾಲಯಾಧಿಕಾರಿಗಳು ಅಗತ್ಯ ಬಂದಂತೆ ಸಾರ್ವಜನಿಕ ಗ್ರಂಥಾಲಯಗಳ ಮೇಲೆ ಹೆಚ್ಚು ಹೆಚ್ಚಾಗಿ ವೆಚ್ಚ ಮಾಡಲು ಅವಕಾಶ ದೊರಕಿಸಿತು. ಕೌಂಟಿ ಕೌನ್ಸಿಲುಗಳು ಜನಸಂಖ್ಯೆಯ ಮಿತಿಯನ್ನು ಪರಿಗಣಿಸದೆ ಗ್ರಂಥಾಲಯ ಸೇವೆ ಇಲ್ಲದ ಸ್ಥಳಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲು ತಮಗೆ ಅಗತ್ಯವಾದ ರೀತಿಗಳಲ್ಲಿ ಶಾಸನ ರಚಿಸಿಕೊಳ್ಳಲು ಅಧಿಕಾರ ಕೊಟ್ಟಿತು. ಜೊತೆಗೆ ಆ ಕಾಲದಲ್ಲಿ ಇದ್ದ ಪಟ್ಟಣ ಹಾಗೂ ಜಿಲ್ಲಾ ಭಾಗಗಳಲ್ಲಿನ ಗ್ರಂಥಾಲಯಾಧಿಕಾರಿಗಳು ಸ್ವತಂತ್ರರಾಗಿ ಕಾರ್ಯನಿರ್ವಹಿಸಲು ಅನುಮತಿ ನೀಡಿತು.

ಇದಾದ ಮೇಲೆ ಅತ್ಯಂತ ಮುಖ್ಯವಾದ ಹಾಗೂ ಈಗ ಇಂಗ್ಲೆಂಡಿನಲ್ಲಿ ಜಾರಿಯಲ್ಲಿರುವ ಕಾಯಿದೆಯೆಂದರೆ, 1964ರ ಸಾರ್ವಜನಿಕ ಗ್ರಂಥಾಲಯಗಳು ಮತ್ತು ವಸ್ತು ಸಂಗ್ರಹಾಲಯಗಳದ್ದು. ಇದು ಜಾರಿಗೆ ತಂದ ಅತ್ಯಂತ ಮುಖ್ಯವಾದ ಬದಲಾವಣೆಗಳಿವು:

ಮೊತ್ತಮೊದಲನೆಯ ಬಾರಿಗೆ, ಪಾರ್ಲಿಮೆಂಟಿಗೆ ಜವಾಬ್ದಾರನಾಗಿರುವ ರಾಷ್ಟ್ರದ ಒಬ್ಬ ಸಚಿವನಿಗೆ ಸಾರ್ವಜನಿಕ ಗ್ರಂಥಾಲಯಗಳ ಮೇಲ್ವಿಚಾರಣೆ ಮತ್ತು ಅಭಿವೃದ್ಧಿಯ ಹೊಣೆಗಾರಿಕೆಯನ್ನು ನಿರ್ದಿಷ್ಟವಾಗಿ ವಹಿಸಿಕೊಟ್ಟು, ಆತ ತನ್ನ ಕಾರ್ಯವನ್ನು ಸರಾಗವಾಗಿ ನಿರ್ವಹಿಸಲು ಅನುಕೂಲವಾಗುವಂತೆ ವ್ಯಾಪಕವಾದ ಅಧಿಕಾರಗಳನ್ನು ಕೊಡಲಾಯಿತು. ಗ್ರಂಥಾಲಯ ಸೇವೆಯಲ್ಲಿ ರಾಷ್ಟ್ರವ್ಯಾಪೀ ಸಹಕಾರಯುತವಾದ ಒಂದು ಏಕೀಕೃತ ವ್ಯವಸ್ಥೆಗೆ ಅವಕಾಶ ಮಾಡಲಾಯಿತು. ಅಸಮರ್ಪಕ ಗ್ರಂಥಾಲಯ ಸಂಸ್ಥೆಗಳು ಅಧಿಕಾರ ಕಳೆದುಕೊಳ್ಳುವಂತಾಯಿತು. ಸಮಗ್ರವೂ ಸಮರ್ಪಕವೂ ಆದ ಸೇವೆಯನ್ನು ಒದಗಿಸಲು ನೆರವಾಗುವ ಸಲುವಾಗಿ ಗ್ರಂಥಾಲಯ ಸಂಸ್ಥೆಗಳ ಮೇಲೆ ಒಂದು ತೆರಿಗೆ ವಿಧಿಸಲಾಯಿತು.

ಒಂದು ಸಂಸ್ಥೆಗೆ ಕರ್ತವ್ಯ ನಿರ್ವಹಣೆಯಲ್ಲಿ ಯಾವ ತೊಡಕೂ ಉಂಟಾಗದಂತೆ ಅಧಿಕಾರಗಳನ್ನು ಕರ್ತವ್ಯಗಳನ್ನು ಸಾಮಾನ್ಯರೂಪದಲ್ಲಿ ನಿರೂಪಿಸಲಾಯಿತು.

ಅದುವರೆಗೆ ಅಧಿಕಾರ ಹೊಂದಿರದ (ಅಥವಾ ಹಿಂದೆ ಅಧಿಕಾರ ಪಡೆದು ಆಮೇಲೆ ಬಿಟ್ಟು ಕೊಟ್ಟಿದ್ದ ಸಂಸ್ಥೆಗಳಿಗೆ) ಕೆಲವು ಸ್ಥಳೀಯ ಸಂಸ್ಥೆಗಳಿಗೆ ಗ್ರಂಥಾಲಯಾಧಿಕಾರ ನೀಡಬಹುದು ಎಂದುದರಿಂದ ಕೌಂಟಿ ಗ್ರಂಥಾಲಯವಿದ್ದರೂ ಕೆಲವು ದೊಡ್ಡಪಟ್ಟಣಗಳು ತಾವೇ ಸ್ವತಂತ್ರವಾಗಿ ಗ್ರಂಥಾಲಯ ವ್ಯವಸ್ಥೆ ಮಾಡಿಕೊಳ್ಳಲು ಅವಕಾಶವಾಯಿತು.

ಗ್ರಂಥಾಲಯ ಸಲಹಾ ಮಂಡಳಿಗಳ ರಚನೆಗೆ ಕಾಯಿದೆ ಅವಕಾಶ ಮಾಡಿಕೊಟ್ಟಿತು. ಅವುಗಳ ಕರ್ತವ್ಯ ಎರಡು ಬಗೆಯದು: 1 ಗ್ರಂಥಾಲಯ ಸಂಬಂಧವಾದ ವಿಚಾರಗಳಲ್ಲಿ ತಾವಾಗಿಯೇ ಮುಂದೆ ಬಂದು ಸಲಹೆ ನೀಡುವುದು, 2 ನಿರ್ದಿಷ್ಟವಾಗಿ ತಮ್ಮನ್ನು ಕೇಳಿದ ವಿಷಯಗಳಲ್ಲಿ ಸಲಹೆ ನೀಡುವುದು.

ಈ ಅವಕಾಶಗಳು, ಸ್ಪಷ್ಟವೇ ಆಗಿರುವಂತೆ, ಆಡಳಿತ ಹಣಕಾಸು ಗ್ರಂಥಾಲಯ ಸೌಲಭ್ಯ ಮತ್ತು ಸಹಕಾರ– ಈ ಎಲ್ಲ ಅಂಶಗಳಿಂದಲೂ ಸಾರ್ವಜನಿಕ ಗ್ರಂಥಾಲಯ ಸೇವೆಗೆ ಒಂದು ಭದ್ರವಾದ ನೆಲೆಯನ್ನು ದೊರಕಿಸಿಕೊಟ್ಟಿವೆ. ನಿರೀಕ್ಷಿತ ಮಟ್ಟಕ್ಕೆ ಅನುಗುಣವಾದ ಸೇವೆ ಎಲ್ಲಿ ಲಭ್ಯವಾಗುತ್ತಿಲ್ಲವೋ ಆ ಸ್ಥಳದಲ್ಲಿ ಸಮರ್ಪಕವಾದ ಗ್ರಂಥಾಲಯ ಸೇವೆ ದೊರಕುವಂತೆ ಮಾಡಲು ಕಾಯಿದೆ ಭರವಸೆ ಕೊಡುತ್ತದೆ.

ಅಮೆರಿಕ: ಮೊದಲು ಗ್ರಂಥಾಲಯ ಕಾಯಿದೆಯನ್ನು ಜಾರಿಗೆ ತಂದ ಕೀರ್ತಿ ಮ್ಯಾಸಚುಸೆಟ್ಸ್ ರಾಜ್ಯಕ್ಕೆ ಸಲ್ಲುತ್ತದೆ. ಆ ಕಾಯಿದೆ ಒಂದು ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಿ ನಿರ್ವಹಿಸಲು ಬಾಸ್ಟನ್ ನಗರಕ್ಕೆ ಅಧಿಕಾರ ಕೊಟ್ಟಿತು (1848). ಆದರೆ, ಗ್ರಂಥಾಲಯಗಳ ನೆರವಿಗಾಗಿ ತೆರಿಗೆಗಳನ್ನು ಎತ್ತಲು ನಗರಗಳಿಗೆ ಅನುಮತಿ ಕೊಡುವ ಸಾಮಾನ್ಯರೂಪದ ಕಾಯಿದೆಯನ್ನು ಅಂಗೀಕರಿಸಿದ (1849) ಕೀರ್ತಿ ಸಲ್ಲುವುದು ನ್ಯೂ ಹ್ಯಾಂಪ್‌ಷೈರ್ ರಾಜ್ಯಕ್ಕೆ. ಇಂದು ಎಲ್ಲ ರಾಜ್ಯಗಳೂ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆ ಮತ್ತು ನಿರ್ವಹಣೆಗಳಿಗೆ ಅವಕಾಶ ಕೊಡುವ ಕಾನೂನುಗಳನ್ನು ಹೊಂದಿವೆ.

ಸಾರ್ವಜನಿಕ ಗ್ರಂಥಾಲಯಗಳ ಬೆಳೆವಣಿಗೆಯ ಇತಿಹಾಸವನ್ನು ಅವಲೋಕಿಸಿದಾಗ ವಿವಿಧ ರೀತಿಯ ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ ಶಾಸನ ವಿಧಾನಗಳ ವಿಕಾಸದಲ್ಲಿ ವಿಶಿಷ್ಟ ಹಂತಗಳನ್ನು ಕಾಣುತ್ತೇವೆ; 1 ಸಾಮಾಜಿಕ ಗ್ರಂಥಾಲಯಗಳು: 2 ಶಾಲಾ–ಜಿಲ್ಲಾ ಗ್ರಂಥಾಲಯಗಳು; 3 ನಗರ ಮತ್ತು ಪಟ್ಟಣ ಗ್ರಂಥಾಲಯಗಳು; 4 ರಾಜ್ಯ ಅಥವಾ ಪ್ರಾದೇಶಿಕ ಗ್ರಂಥಾಲಯಗಳು ಮತ್ತು 5 ಕೌಂಟಿ ಗ್ರಂಥಾಲಯಗಳು.

ಹಸ್ತಪ್ರತಿಗಳ ಸಂಗ್ರಹ, ಸರಸ್ವತಿಮಹಲ್, ತಂಜಾವೂರು

ವಿವಿಧ ರೀತಿಯ ಗ್ರಂಥಾಲಯಗಳಿಗೆ (ಸಾರ್ವಜನಿಕ ಗ್ರಂಥಾಲಯಗಳಿಗೂ ಕೂಡಿದಂತೆ) ಅವಕಾಶ ಮಾಡಿಕೊಡುವ ಕಾನೂನುಗಳನ್ನು ಮೂರು ಮುಖ್ಯ ಶೀರ್ಷಿಕೆಗಳಲ್ಲಿ ವಿಂಗಡಿಸಬಹುದು: 1 ಫೆಡರಲ್ ಸರ್ಕಾರದ ಕಾನೂನುಗಳು, 2 ರಾಜ್ಯಗಳ ಕಾನೂನುಗಳು ಮತ್ತು ಸಂವಿಧಾನಗಳು; 3 ಪುರಸಭೆಗಳ ಸನ್ನದುಗಳು ಮತ್ತು ಸುಗ್ರೀವಾಜ್ಞೆಗಳು.

ಅಮೆರಿಕದಲ್ಲಿ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಒಂದೇ ಮಾದರಿಯನ್ನು ಕಾಣಲಾಗದು. ರೂಪುಗೊಂಡ ಮಾದರಿ ವೈವಿಧ್ಯವನ್ನು ತೋರಿಸುತ್ತದೆಯೇ ಹೊರತು ಏಕರೂಪತೆಯನ್ನಲ್ಲ. ಆದರೂ ಸಾಮಾನ್ಯವಾದ ವ್ಯವಸ್ಥಾತ್ಮಕ ಮಾದರಿಗಳನ್ನು ಗಮನಕ್ಕೆ ತಂದುಕೊಂಡು ಮುಖ್ಯವಾದ ನಾಲ್ಕು ಬಗೆಗಳನ್ನು ಇಲ್ಲಿ ಹೆಸರಿಸಬಹುದು;

1 ರಾಜ್ಯ ಗ್ರಂಥಾಲಯ ಸಂಸ್ಥೆಗಳಿಂದ ನೇರವಾಗಿ ಸೇವಾ ಸೌಲಭ್ಯ – ಇದು ಕೇಂದ್ರೀಯ ವ್ಯವಸ್ಥೆ.

2 ರಾಜ್ಯ ನೆರವು ಪಡೆದ ಸಹಾಯಕ ಸೇವಾಘಟಕಗಳು – ಇದು ಸಹಾಯಕ ರೂಪದ ವ್ಯವಸ್ಥೆ.

3 ಸಮಗ್ರಗೊಂಡ ಗ್ರಂಥಾಲಯ ವ್ಯವಸ್ಥೆ, ಪೂರ್ಣವಾಗಿ ಅಥವಾ ಭಾಗಶಃ – ಇದು ಸಮಗ್ರರೂಪದ ವ್ಯವಸ್ಥೆ.

4 ಗ್ರಂಥಾಲಯಗಳ ಒಕ್ಕೂಟ – ಇದು ಒಕ್ಕೂಟ ವ್ಯವಸ್ಥೆ.

1956ರ ಗ್ರಂಥಾಲಯ ಸೇವಾ ಕಾಯಿದೆ: ಗ್ರಂಥಾಲಯ ಸೇವೆಗಳನ್ನು ಒದಗಿಸುವ ವಿಚಾರ ರಾಜ್ಯಸರ್ಕಾರಗಳ ಕಕ್ಷೆಗೆ ಬರುತ್ತದಾಗಿ, ಅಮೆರಿಕದ ಫೆಡರಲ್ ಸರ್ಕಾರ ಸಂವಿಧಾನವನ್ನು ಮುಂದೆಮಾಡಿಕೊಂಡು ಇಲ್ಲಿ ಮಧ್ಯಪ್ರವೇಶ ಮಾಡಲು ಸಾಧ್ಯವಿಲ್ಲ. ಆದರೂ ಅನೇಕ ಕಾರಣಗಳಿಂದ ಈ ಸೇವೆ ಬಹು ಅಲ್ಪವಾಗಿರುವ ಪ್ರದೇಶಗಳಲ್ಲಿ ಪರೋಕ್ಷವಾಗಿ ಅದು ನೆರವಾಗುತ್ತಿದೆ. ಅಮೆರಿಕದ ಫೆಡರಲ್ ಸರ್ಕಾರ ಕೈಗೊಂಡ ಇಂಥ ಮೊದಲು ಪ್ರಯತ್ನವೆಂದರೆ, 1956ರ ಗ್ರಂಥಾಲಯ ಸೇವಾ ಶಾಸನವನ್ನು ಅಂಗೀಕರಿಸಿದ್ದು. ಉದ್ದೇಶ ಇಷ್ಟೇ: ಯಾವ ಗ್ರಾಮ ಪ್ರದೇಶದಲ್ಲಿ ಗ್ರಂಥಾಲಯ ಸೇವೆ ಇಲ್ಲವೋ ಅಥವಾ ಸಾಕಷ್ಟಿಲ್ಲವೋ ಅಂಥಲ್ಲಿ ರಾಜ್ಯಗಳು ಆ ಸೇವೆಯನ್ನು ವಿಸ್ತರಿಸಿ ಅಭಿವೃದ್ಧಿ ಪಡಿಸಲು ನೆರವಾಗುವುದು.

1956ರ ಕಾಯದೆಗೆ 1963ರಲ್ಲಿ ತಿದ್ದುಪಡಿ ತರಲಾಯಿತು. ಈ ತಿದ್ದುಪಡಿ 1956ರ ಶಾಸನದ ಅವಕಾಶಗಳನ್ನು ಎಲ್ಲ ಸಮಾಜಗಳಿಗೂ ವಿಸ್ತರಿಸಿತು. ಮೊದಲಿದ್ದ ಶಾಸನವಾದರೋ ಕೇವಲ ಗ್ರಾಮಾಂತರ ಜನತೆಗೆ ಮಾತ್ರ ಅನ್ವಯವಾಗುತ್ತಿತ್ತು. ತಿದ್ದುಪಡಿ ಕಾಯಿದೆ ಆರ್ಥಿಕ ವರ್ಷದಲ್ಲಿ ಸಾರ್ವಜನಿಕ ಗ್ರಂಥಾಲಯ ಕಟ್ಟಡಗಳನ್ನು ಕಟ್ಟುವುದಕ್ಕಾಗಿ 20 ದಶಲಕ್ಷ ಡಾಲರುಗಳನ್ನು ಧನಸಹಾಯ ಒದಗಿಸಿ ಇನ್ನೊಂದು ಸುಧಾರಣೆಯನ್ನು ತಂದಿತು.

1956ರ ಕಾಯಿದೆಯಲ್ಲಿ ಸಮರ್ಥವಾದ ಗ್ರಂಥಾಲಯಸೇವೆಯನ್ನು ಒದಗಿಸಲು ಕೆಲವು ಕಷ್ಟಗಳಿದ್ದುವು. ಅವನ್ನು ಪರಿಹರಿಸಲು 1964ರ ಫೆಬ್ರುವರಿ 11ರಂದು ಗ್ರಂಥಾಲಯಸೇವೆ ಮತ್ತು ನಿರ್ಮಾಣಗಳ ಕಾಯಿದೆಯನ್ನು ಅಂಗೀಕರಿಸಲಾಯಿತು. ಸಾರ್ವಜನಿಕ ಗ್ರಂಥಾಲಯಗಳು ಇಲ್ಲದ ಅಥವಾ ಗ್ರಂಥಾಲಯಸೇವೆ ಸಾಕಷ್ಟಿಲ್ಲದ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಆ ಸೌಲಭ್ಯಗಳನ್ನು ವಿಸ್ತರಿಸುವ ಸಲುವಾಗಿ ಒಟ್ಟು ಆರ್ಥಿಕ ನೆರವನ್ನು ಈ ಕಾಯಿದೆ ಹೆಚ್ಚಿಸಿತು. ಸಾರ್ವಜನಿಕ ಗ್ರಂಥಾಲಯ ಕಟ್ಟಡಗಳು ಮುಂತಾದವುಗಳ ನಿರ್ಮಾಣಕ್ಕೂ ಹಣ ಒದಗಿಸಿತು. ಮೊದಲನೆಯದಾಗಿ, ಸಾರ್ವಜನಿಕ ಗ್ರಂಥಾಲಯ ಸೇವೆಯ ಹಣವನ್ನು ವೇತನಗಳು, ಕೂಲಿಗಳು, ಪುಸ್ತಕ ಮತ್ತಿತರ ಸಾಮಗ್ರಿ ಹಾಗೂ ಗ್ರಂಥಾಲಯ ಸಲಕರಣೆಗಳನ್ನು ಕೊಳ್ಳುವುದು ಮತ್ತು ಸಾಮಾನ್ಯ ನಿರ್ವಹಣ ವೆಚ್ಚ ಮುಂತಾದವುಗಳಿಗೆ ಉಪಯೋಗಿಸಲು ಅವಕಾಶ ಮಾಡಲಾಯಿತು. ಈ ನೆರವನ್ನು ಕೊಟ್ಟದ್ದು, ರಾಜ್ಯಸರ್ಕಾರಗಳು ಅಷ್ಟೇ ಮೊತ್ತದ ಹಣವನ್ನು ನೀಡಬೇಕೆಂಬ ಷರತ್ತಿನ ಮೇಲೆ. 1965ರಲ್ಲಿ ಆರು ಗ್ರಂಥಾಲಯ ಸಂಸ್ಥೆಗಳು ಈ ಕಾಯಿದೆಯ ಅನ್ವಯ 5,82,000 ಡಾಲರುಗಳನ್ನು ನಗರಭಾಗಗಳ ಸೌಲಭ್ಯರಹಿತ ನೆರೆಹೊರೆಯಲ್ಲಿ ಗ್ರಂಥಾಲಯ ಸೇವೆಯನ್ನು ವಿಸ್ತರಿಸಲು ವೆಚ್ಚಮಾಡಿದುವು. ಎರಡನೆಯದಾಗಿ, ಹೊಸ ಸಾರ್ವಜನಿಕ ಗ್ರಂಥಾಲಯ ಕಟ್ಟಡಗಳ ನಿರ್ಮಾಣಕ್ಕಾಗಿ ಅಥವಾ ಇರುವ ಕಟ್ಟಡಗಳ ವಿಸ್ತರಣೆ, ಹೊಸ ರೂಪ ಕೊಡುವುದು, ಬದಲಾವಣೆ ಮಾಡುವುದು ಮೊದಲಾದ ಕೆಲಸಗಳಿಗೆ ಹಣವನ್ನು ಉಪಯೋಗಿಸಬಹುದು ಎಂದಾಯಿತು. 1966ನೆಯ ಆರ್ಥಿಕ ವರ್ಷದಲ್ಲಿ ಈ ಉದ್ದೇಶಕ್ಕಾಗಿ 30 ದಶಲಕ್ಷ ಡಾಲರುಗಳನ್ನು ಬಳಸಲಾಯಿತು.

ಭಾರತ ಸ್ವಾತಂತ್ರ್ಯಕ್ಕೆ ಮೊದಲೂ ಆ ಮೇಲೆಯೂ ಎಸ್. ಆರ್. ರಂಗನಾಥನ್ ಮೊದಲಾದ ಹಿರಿಯವ್ಯಕ್ತಿಗಳು ಭಾರತದಲ್ಲಿ ಕಾನೂನಿನ ಪ್ರಕಾರ ಸಾರ್ವಜನಿಕ ಗ್ರಂಥಾಲಯಸೇವೆಯನ್ನು ಒದಗಿಸಲು ಹಲವಾರು ಪ್ರಯತ್ನಗಳನ್ನು ಮಾಡಿದರು. ಆದರೆ ಇಲ್ಲಿಯವರೆಗೆ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ – ಈ ನಾಲ್ಕು ರಾಜ್ಯಗಳು ಮಾತ್ರವೇ ಸಾರ್ವಜನಿಕ ಗ್ರಂಥಾಲಯ ಸೇವೆಯನ್ನು ಕಾನೂನಿನ ತಳಹದಿಯ ಮೇಲೆ ನಿಲ್ಲಿಸಿವೆ.

ಭಾರತದಲ್ಲಿ ಮೊತ್ತಮೊದಲು ಒಂದು ಗ್ರಂಥಾಲಯ ಕಾಯಿದೆಯನ್ನು ಜಾರಿಗೆ ತಂದದ್ದು ಆಗಿನ ಮದ್ರಾಸು ಪ್ರಾಂತ್ಯ. 1948ರ ಮದ್ರಾಸು ಸಾರ್ವಜನಿಕ ಗ್ರಂಥಾಲಯ ಕಾಯಿದೆ ಪ್ರಕಾರ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆಗಳನ್ನು ಅಂಗೀಕರಿಸಿತು. ಅಲ್ಲಿಂದ 1966ರ ಕೊನೆಯವರೆಗೆ ಈ ಕಾಯಿದೆ ಸಾಧಿಸಿರುವ ಅಂಶಗಳು ಏನೆಂಬುದನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ಸಿಬ್ಬಂದಿಗೆ ತರಬೇತಿ ನೀಡುವುದು ಮತ್ತು ತರಬೇತಾದ ಸಿಬ್ಬಂದಿಯನ್ನೇ ನೇಮಿಸಿಕೊಳ್ಳುವುದು – ಈ ಎರಡು ಅಂಶಗಳ ಬಗ್ಗೆ ಕಾಯಿದೆ ಏನೂ ಹೇಳಿಲ್ಲವಾಗಿ ಅದರ ಉಪಯೋಗ ಅಷ್ಟರಮಟ್ಟಿಗೆ ಕಡಿಮೆಯಾಗಿದೆ.

ಆಂಧ್ರಪ್ರದೇಶ 1960ರಲ್ಲಿ ಗ್ರಂಥಾಲಯ ಕಾಯಿದೆಯನ್ನು ಜಾರಿಗೆ ತಂದು ಸಾರ್ವಜನಿಕ ಗ್ರಂಥಾಲಯಗಳಿಗೆಂದೇ ಪ್ರತ್ಯೇಕವಾದೊಂದು ವಿಭಾಗವನ್ನು ತೆರೆಯಲು ಅವಕಾಶ ಮಾಡಿಕೊಟ್ಟಿತು. ಅಲ್ಲದೆ ಆಸ್ತಿಯ ತೆರಿಗೆ ಅಥವಾ ಮನೆ ಕಂದಾಯದ ಮೇಲೆ ಪ್ರತಿಯೊಂದು ರೂಪಾಯಿಗೆ ನಾಲ್ಕರಿಂದ ಎಂಟು ಪೈಸೆಯಷ್ಟು ಗ್ರಂಥಾಲಯ ಮೇಲುತೆರಿಗೆಯಾಗಿ ವಿಧಿಸಲು ಇದರಿಂದ ಅವಕಾಶವಾಯಿತು. ಇದರಿಂದಾಗಿ ವಾರ್ಷಿಕ ಮೇಲುತೆರಿಗೆ ಸಂಗ್ರಹ 15 ಲಕ್ಷ ಹೆಚ್ಚಿತು.

ಆಂಧ್ರಪ್ರದೇಶ ತನ್ನ ಎಲ್ಲ ಇಪ್ಪತ್ತು ಜಿಲ್ಲೆಗಳಲ್ಲೂ ಜಿಲ್ಲಾ ಗ್ರಂಥಾಲಯಗಳನ್ನು ಒದಗಿಸಿರುವ ಏಕಮಾತ್ರ ರಾಜ್ಯವಾಗಿದೆ. ಅತ್ಯಂತ ಹೆಚ್ಚು ಸಂಖ್ಯೆಯ ಗ್ರಂಥಾಲಯ ಸಿಬ್ಬಂದಿ ಇರುವುದು ಈ ರಾಜ್ಯದಲ್ಲೇ. ಅಷ್ಟು ಮಾತ್ರವಲ್ಲ, ತರಬೇತಿ ಪಡೆದ ಹಾಗೂ ಪಡೆಯದ ಸಿಬ್ಬಂದಿಯ ಪರಿಮಾಣ ಇಲ್ಲಿ ಸಾಕಷ್ಟಿದೆ. ಜಿಲ್ಲಾ ಗ್ರಂಥಾಲಯಗಳಲ್ಲಿ ತರಬೇತಿ ಪಡೆದ ಸಿಬ್ಬಂದಿ ಹೆಚ್ಚಾಗಿರುವುದೂ ಆಂಧ್ರಪ್ರದೇಶದಲ್ಲೇ. ಜಿಲ್ಲಾ ಗ್ರಂಥಾಲಯಗಳಿಗೆ ಒದಗಿಸುವ ವಾರ್ಷಿಕ ಆಯವ್ಯಯ ದೃಷ್ಟಿಯಿಂದಲೂ ಇದೇ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ.

ಕರ್ನಾಟಕ ರಾಜ್ಯ ತನ್ನ ಮೊದಲ ಸಾರ್ವಜನಿಕ ಗ್ರಂಥಾಲಯ ಕಾಯದೆಯನ್ನು ಅಂಗೀಕರಿಸಿದ್ದು 1965ರಲ್ಲಿ, ರಂಗನಾಥನ್ ಅವರ ಮಾರ್ಗದರ್ಶನದಲ್ಲಿ. ಮದ್ರಾಸು ಮತ್ತು ಆಂಧ್ರಪ್ರದೇಶ ಶಾಸನಗಳಲ್ಲಿದ್ದ ಕೊರತೆಗಳಲ್ಲಿ ಹಲವನ್ನು ಈ ಕಾಯದೆ ನಿವಾರಿಸಿದೆ. ಇದರ ಕೆಲವು ಮುಖ್ಯ ಅಂಶಗಳು ಹೀಗಿವೆ;

1. ಸಮಗ್ರವಾದ ಗ್ರಾಮೀಣ ಮತ್ತು ನಗರ ಗ್ರಂಥಾಲಯ ಸೇವಾ ವ್ಯವಸ್ಥೆಗೆ ಅವಕಾಶ ಮಾಡಿದೆ.

2. ಒಂದು ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಪ್ರತಿಯೊಂದು ನಗರ ಅಥವಾ ಪಟ್ಟಣಪ್ರದೇಶದಲ್ಲಿಯೂ ಒಂದೊಂದು ನಗರ ಕೇಂದ್ರ ಗ್ರಂಥಾಲಯ ಇರತಕ್ಕದ್ದು ಎಂದು ಸ್ಪಷ್ಟವಾಗಿ ವಿಧಿಸಿದೆ.

3. ಸಾರ್ವಜನಿಕ ಗ್ರಂಥಾಲಯಗಳಿಗೆಂದೇ ಪ್ರತ್ಯೇಕ ವಿಭಾಗವಿರಬೇಕು, ಅರ್ಹತೆಪಡೆದಿರುವ ತಜ್ಞಗ್ರಂಥಪಾಲ ಅದರ ಮುಖ್ಯನಾಗಿರಬೇಕು. ರಾಜ್ಯಗ್ರಂಥಪಾಲ ಈ ವಿಭಾಗದ ಮುಖ್ಯ. ಅನೇಕ ಜವಾಬ್ದಾರಿಯುತ ಕರ್ತವ್ಯಗಳು ಇವನಿಗುಂಟು.

4. ಸಾರ್ವಜನಿಕ ಗ್ರಂಥಾಲಯ ಸಿಬ್ಬಂದಿಗೆಂದೇ ಪ್ರತ್ಯೇಕವಾದ ಸೇವಾ ವರ್ಗವನ್ನು ರಚಿಸಲಾಗುತ್ತದೆ. ಕರ್ನಾಟಕ ರಾಜ್ಯ ಗ್ರಂಥಾಲಯ ಸೇವಾ ವರ್ಗ ಎಂದರೆ ಇದೇ. ಇದರ ಸದಸ್ಯರು ರಾಜ್ಯ ಸರ್ಕಾರದ ಉದ್ಯೋಗಿಗಳಾಗಿರುತ್ತಾರಲ್ಲದೆ ಇತರ ಸರ್ಕಾರೀ ಉದ್ಯೋಗಿಗಳ ಸೌಲಭ್ಯಗಳನ್ನೇ ಪಡೆಯುತ್ತಾರೆ.

5. ಗ್ರಂಥಾಲಯ ಮೇಲುತೆರಿಗೆಯನ್ನು ಇನ್ನೂ ವ್ಯಾಪಕವಾಗಿ ವಿಧಿಸಲು ಅವಕಾಶವಿದೆ. ಭೂಮಿ ಮತ್ತು ಕಟ್ಟಡಗಳ ಮೇಲಿನ ತೆರಿಗೆಗಳು, ಬಳಕೆ ಅಥವಾ ಮಾರಾಟಕ್ಕಾಗಿ ವಸ್ತುಗಳನ್ನು ಸ್ಥಳೀಯ ಪ್ರದೇಶಕ್ಕೆ ತಂದ ಆಕ್ಟ್ರಾಯ್ ತೆರಿಗೆ, ವಾಹನಗಳ ತೆರಿಗೆ, ವೃತ್ತಿಗಳ, ವ್ಯಾಪಾರಗಳ, ಕಸುಬುಗಳ, ಉದ್ಯೋಗಗಳ ಮೇಲಿನ ತೆರಿಗೆ – ಈ ತೆರಿಗೆಗಳ ಮೇಲೆ ಮೇಲುತೆರಿಗೆ ವಿಧಿಸಬಹುದು.

6 ಪ್ರತಿಯೊಂದು ಕಂದಾಯ ಜಿಲ್ಲೆಯಲ್ಲಿ ಸಂಗ್ರಹಿಸಿದ ಭೂಕಂದಾಯದ ವರಮಾನದಲ್ಲಿ ಶೇ. 6ರಷ್ಟನ್ನು ಗ್ರಾಮೀಣ ಗ್ರಂಥಾಲಯ ಸಂಸ್ಥೆಗಳಿಗಾಗಿ ರಾಜ್ಯಸರ್ಕಾರ ನೀಡುತ್ತದೆ. ಕರ್ನಾಟಕದಲ್ಲಿ ಶೇ. 6ರಂತೆ ಭೂಕಂದಾಯದ ಮೇಲೆ ಹಾಗೂ ಆಸ್ತಿಕರದ ಮೇಲೆ ಗ್ರಂಥಾಲಯ ಉಪಕರವನ್ನು ಸಂಗ್ರಹಿಸಲಾಗುತ್ತಿದೆ.

7. ರಾಜ್ಯಸರ್ಕಾರ ಗ್ರಂಥಾಲಯಗಳ ಇಲಾಖೆಯ ವೆಚ್ಚವನ್ನೂ ಸಿಬ್ಬಂದಿ ಶಿಕ್ಷಣದ ವೆಚ್ಚವನ್ನೂ ಹೊತ್ತುಕೊಳ್ಳುತ್ತದೆ. ಕಟ್ಟಡಗಳ ಮೇಲೆ ಮೂಲವೆಚ್ಚದ ಶೇ. 75 ರಷ್ಟನ್ನು ವಹಿಸಿಕೊಳ್ಳುತ್ತದೆ. ಜೊತೆಗೆ ಖಾಸಗಿ ಗ್ರಂಥಾಲಯಗಳಿಗೆ ನೆರವುಧನ ಕೊಡುತ್ತದೆ.

ಈ ಕಾಯಿದೆಯನ್ನು ಜಾರಿಗೆ ತಂದ ಅನಂತರ ಆರು ವರ್ಷಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳ ವಿಭಾಗ ಬೆಂಗಳೂರಿನಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯವನ್ನೂ 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳನ್ನೂ 5 ನಗರ ಕೇಂದ್ರ ಗ್ರಂಥಾಲಯಗಳನ್ನೂ 68 ಗ್ರಂಥಾಲಯ ಶಾಖೆಗಳನ್ನೂ 62 ವಿತರಣ ಕೇಂದ್ರಗಳನ್ನೂ ಸ್ಥಾಪಿಸಿದೆ.

ಗ್ರಂಥಾಲಯ ಕಾಯಿದೆಯನ್ನು ಇತ್ತೀಚೆಗೆ (1967) ಅಂಗೀಕರಿಸಿದ ರಾಜ್ಯ ಮಹಾರಾಷ್ಟ್ರ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿಯ ರಾಜ್ಯಗ್ರಂಥಾಲಯ ಅಥಾರಿಟಿಗಳಿಗೆ ಸಂವಾದಿಯಾಗಿ ರಾಜ್ಯ ಗ್ರಂಥಾಲಯ ಮಂಡಳಿಯ ರಚನೆಗೆ ಈ ಕಾಯಿದೆ ಅವಕಾಶ ಮಾಡಿದೆ. ಗ್ರಂಥಾಲಯಗಳ ಪ್ರತ್ಯೇಕವಾದೊಂದು ವಿಭಾಗವೇ ಇದ್ದು, ಪೂರ್ಣಕಾಲದ ಅರ್ಹ ಗ್ರಂಥಪಾಲನೊಬ್ಬ ಇದರ ಮುಖ್ಯನಾಗಿರುತ್ತಾನೆ. ಕರ್ನಾಟಕದ್ದರಂತೆಯೇ ಈ ಕಾಯಿದೆಯೂ ರಾಜ್ಯ ಗ್ರಂಥಾಲಯ ಸೇವಾವರ್ಗವನ್ನು ರಚಿಸುತ್ತದೆ. ಆದರೆ ಆ ಸೇವಾವರ್ಗ ರಾಜ್ಯದ ಎಲ್ಲ ಸಾರ್ವಜನಿಕ ಗ್ರಂಥಾಲಯಗಳ ಎಲ್ಲ ನೌಕರರನ್ನೂ ಒಳಗೊಳ್ಳುವುದಿಲ್ಲ. ಇತರ ಕಾಯಿದೆಗಳಂತೆ ಇದು ಯಾವುದೇ ಬಗೆಯ ಮೇಲುತೆರಿಗೆ ವಿಧಿಸಲು ಅವಕಾಶ ಮಾಡುವುದಿಲ್ಲವಾಗಿ ಸಾರ್ವಜನಿಕ ಗ್ರಂಥಾಲಯಗಳು ರಾಜ್ಯದ ನೆರವು ಧನವನ್ನು ಮಾತ್ರವೇ ಅವಲಂಬಿಸುವಂತೆ ಮಾಡಿದೆ. ರಾಜ್ಯ ಇದಕ್ಕಾಗಿ ವರ್ಷಕ್ಕೆ 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿ ನೀಡಬೇಕಾಗಿದೆ.

ಉಚಿತ ಸಾರ್ವಜನಿಕ ಗ್ರಂಥಾಲಯ ಸೇವೆ ಅವಕಾಶ ಮಾಡಿಲ್ಲದ್ದು, ಜಿಲ್ಲಾ ಹಾಗೂ ಇತರ ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರವಾದ ಸಾರ್ವಜನಿಕ ಗ್ರಂಥಾಲಯಗಳ ಜಾಲ ಇಲ್ಲದ್ದು, ಗ್ರಂಥಾಲಯ ಮೇಲುತೆರಿಗೆ ವಿಧಿಸದುದರಿಂದಾಗಿ ಗ್ರಂಥಾಲಯ ಸೇವೆಗೆ ಭದ್ರವಾದ ಆರ್ಥಿಕ ತಳಹದಿ ಇಲ್ಲವಾದ್ದು, ಸರ್ಕಾರಿ ನೆರವು ಸಾಕಷ್ಟಿಲ್ಲವಾದ್ದು – ಇವು ಈ ಕಾಯಿದೆಯ ಕೆಲವು ಕೊರತೆಗಳು. (ಜಿ.ಎಂ.ಪಿ.;ಎಚ್.ಎ.ಕೆ)

## III ಗ್ರಂಥಾಲಯ ಆಡಳಿತ ಮತ್ತು ವ್ಯವಸ್ಥೆ

ಗ್ರಂಥಾಲಯ ಬೆಳೆಯುತ್ತ ಹೋದಂತೆ ಹಾಗೂ ಆಧುನಿಕ ಉಪಕರಣಗಳು ಬಳಕೆಗೆ ಬಂದಂತೆ ಅದರ ಆಡಳಿತ ಮತ್ತು ವ್ಯವಸ್ಥೆಗಳು ಮಾರ್ಪಾಡಾಗುತ್ತವಲ್ಲದೆ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತ ಹೋಗುತ್ತವೆ. ಈ ಲೇಖನಭಾಗದಲ್ಲಿ ಆಡಳಿತ ಮತ್ತು ವ್ಯವಸ್ಥೆಗೆ ಸಂಬಂಧಿಸಿದ ಹದಿನೈದು ಮುಖ್ಯ ಅಂಶಗಳನ್ನು ಪರಿಶೀಲಿಸಲಾಗಿದೆ.

1. ಗ್ರಂಥಾಲಯದ ಪಂಚಸೂತ್ರಗಳು: ಭಾರತೀಯ ಗ್ರಂಥಾಲಯ ವಿಜ್ಞಾನಿ ಎಸ್. ಆರ್. ರಂಗನಾಥನ್ ರೂಪಿಸಿದ ಐದು ಸೂತ್ರಗಳಿವು:

1. ಗ್ರಂಥಗಳು ಉಪಯೋಗಕ್ಕಾಗಿವೆ.
2. ಪ್ರತಿಯೊಬ್ಬ ಓದುಗನಿಗೆ ಅವನ ಪುಸ್ತಕ.
3. ಪ್ರತಿಯೊಂದು ಪುಸ್ತಕಕ್ಕೆ ಅದರ ಓದುಗ.
4. ಓದುಗನ ಸಮಯ ಉಳಿಸಿ.
5. ಗ್ರಂಥಾಲಯ ಬೆಳೆಯುವ ಸಂಸ್ಥೆ.

ಯಾವುದೇ ಗ್ರಂಥಾಲಯ ಸುವ್ಯವಸ್ಥೆಯಿಂದ ನಡೆಯಬೇಕಾದರೆ ಈ ಸೂತ್ರಗಳ ಪಾಲನೆ ಅಗತ್ಯ. ಇವು ಗ್ರಂಥಾಲಯದ ತಾಮ್ರಪಟವಿದ್ದಂತೆ.

**ಪ್ರಥಮ ಸೂತ್ರ:** ಗ್ರಂಥಾಲಯದ ಪ್ರತಿ ಪುಸ್ತಕ ಉಪಯೋಗಕ್ಕಾಗಿದೆ. ಯಾವ ಪುಸ್ತಕವೂ ಅಲಂಕಾರಕ್ಕಾಗಿ ಇಟ್ಟಿದ್ದಲ್ಲ. ಹೆಚ್ಚು ಜನ ಅದರ ಉಪಯೋಗ ಪಡೆಯಬೇಕೆಂಬುದು ಈ ಸೂತ್ರದ ಉದ್ದೇಶ. ಪ್ರಾಚೀನ, ಮಧ್ಯಯುಗೀನ ಕಾಲಗಳಲ್ಲಿ ಗ್ರಂಥಗಳ ಉತ್ಪಾದನೆ ಬೆರಳೆಣಿಕೆಯಷ್ಟಿತ್ತು. ಅದರ ಸ್ವತ್ತು ಮತ್ತು ಉಪಯೋಗ ಸಮಾಜದ ಕೆಲವೇ ಜನ ಪ್ರತಿಷ್ಠಿತ ವ್ಯಕ್ತಿಗಳಿಗೆ ಸೀಮಿತವಾಗಿತ್ತು. ಇದರಿಂದ ಗ್ರಂಥಗಳನ್ನು ಸರಪಣಿಯಿಂದ ಕಟ್ಟಿಡುತ್ತಿದ್ದುದುಂಟು. ಸಾಮಾನ್ಯನಿಗೆ ಗ್ರಂಥಗಳಲ್ಲಿಯ ಜ್ಞಾನ ಲಭ್ಯವಿರಲಿಲ್ಲ. ಗ್ರಂಥಾಲಯ ಇಡೀ ಮಾನವ ಜನಾಂಗದ ಸ್ವತ್ತು ಎಂಬುದನ್ನು ಪ್ರಥಮ ಸೂತ್ರ ಸ್ಪಷ್ಟಪಡಿಸುತ್ತದೆ. ಜ್ಞಾನ ಒಬ್ಬರ ಸ್ವತ್ತಲ್ಲ. ಅದು ಮಾನವಜನಾಂಗಕ್ಕೆಲ್ಲ ಸರಿಸಮಾನವಾಗಿ ವಿತರಣೆಯಾಗಬೇಕು. ಗ್ರಂಥಾಲಯದ ಸ್ಥಳ, ಕೆಲಸದ ಸಮಯ, ಸಿಬ್ಬಂದಿ ಪೀಠೋಪಕರಣಗಳು – ಇವೆಲ್ಲ ವಿಷಯಗಳ ಮೇಲೂ ಈ ಸೂತ್ರದ ಪ್ರಭಾವವನ್ನು ಕಾಣಬಹುದು.

(ಅ) ಗ್ರಂಥಾಲಯದ ಸ್ಥಳ: ಈ ಸೂತ್ರದ ಪ್ರಕಾರ ಸಮಾಜದ ಎಲ್ಲ ಜನರೂ ನಿರಾಯಾಸವಾಗಿ ಗ್ರಂಥಾಲಯಕ್ಕೆ ಬಂದು ಅದರ ಸದುಪಯೋಗವನ್ನು ಪಡೆಯಲನು ವಾಗುವಂತೆ ಗ್ರಂಥಾಲಯ ಕಟ್ಟಡ ನಗರದ ಮಧ್ಯಭಾಗದಲ್ಲಿರಬೇಕು. ಜನ ತಮ್ಮ ಪ್ರತಿನಿತ್ಯದ ಕೆಲಸಕ್ಕಾಗಿ ಬರಹೋಗುವ ಸ್ಥಳಗಳಿಗೆ ಸಮೀಪದಲ್ಲಿಯೇ ಗ್ರಂಥಾಲಯವಿದ್ದರೆ ಗ್ರಂಥಗಳ ಉಪಯೋಗ ತನ್ನಿಂದ ತಾನೇ ಆಗುತ್ತದೆ. ಶೈಕ್ಷಣಿಕ ಸಂಸ್ಥೆ, ಕೈಗಾರಿಕಾ ಕೇಂದ್ರ ಮುಂತಾದವುಗಳಲ್ಲಿಯ ಗ್ರಂಥಾಲಯಗಳೂ ಆಯಾ ಆವರಣದಲ್ಲಿ ಮಧ್ಯದಲ್ಲಿರಬೇಕು. ಗ್ರಂಥಾಲಯದ ಒಳಗೂ ಹೊರಗೂ ಸಾಧ್ಯವಿದ್ದಷ್ಟು ಸ್ವಚ್ಛವಾಗಿದ್ದು ಆಕರ್ಷಕವಾಗಿರಬೇಕು. ಸುತ್ತಲೂ ಹೂದೋಟವಿದ್ದರೆ ಓದುಗರು ಪ್ರಶಾಂತಮನಸ್ಕರಾಗಿ ಪುನಃ ಪುನಃ ಅಲ್ಲಿಗೆ ಬರಬೇಕೆಂದೆನಿಸುವುದು.

(ಆ) ಗ್ರಂಥಾಲಯ ಕೆಲಸಮಾಡುವ ಸಮಯ: ಸಮಯೋಚಿತವಾಗಿ ಗ್ರಂಥಾಲಯವನ್ನು ತೆರೆದಿಟ್ಟು ಉತ್ಸುಕ ಓದುಗರಿಗೆ ಗ್ರಂಥಗಳನ್ನು ಒದಗಿಸಬೇಕು. ಗ್ರಂಥಾಲಯವನ್ನು ತೆರೆದಿಡುವ ಸಮಯ ಮತ್ತು ಬಿಡುವಿನ ದಿನವನ್ನು ತೀರ್ಮಾನಿಸುವುದು ಆಯಾ ಗ್ರಂಥಾಲಯ ಪ್ರಕಾರಗಳು ಹಾಗೂ ಪ್ರಾದೇಶಿಕ ಸ್ಥಿತಿಗತಿಗಳನ್ನು ಅವಲಂಬಿಸಿರುವುದಾದರೂ ಗ್ರಂಥಾಲಯವನ್ನು ಓದುಗರಿಗೆ ಅನುಕೂಲವಾಗುವಂತೆ ಸೂಕ್ತ ಸಮಯದಲ್ಲಿ ಮತ್ತು ಅಧಿಕ ಸಮಯದವರೆಗೆ ತೆರೆದಿಡಬೇಕು. ಅಮೆರಿಕದಂಥ ದೇಶಗಳಲ್ಲಿ ಗ್ರಂಥಾರಾಧಕರು ಗ್ರಂಥಗಳಿಗಾಗಿ ಬಂದಾಗ ಗ್ರಂಥಾಲಯ ಮುಚ್ಚಿರುವುದು ಅಪರಾಧ ಎಂದು ಪರಿಗಣಿಸುತ್ತಾರೆ. ಗ್ರಂಥಾಲಯವನ್ನು ಅಧಿಕ ಸಮಯದವರೆಗೆ ತೆರೆದರೆ ಅಧಿಕ ಗ್ರಂಥಗಳ ಉಪಯೋಗವಾಗುವುದು.

(ಇ) ಪೀಠೋಪಕರಣಗಳು: ಹಿಂದಿನ ಕಾಲದಲ್ಲಿ ಗ್ರಂಥಾಲಯದಲ್ಲಿ ಅತಿ ಕಡಿಮೆ ಸ್ಥಳದಲ್ಲಿ ಅತ್ಯಲ್ಪ ಖರ್ಚಿನಲ್ಲಿ ಅತ್ಯಧಿಕ ಗ್ರಂಥಗಳನ್ನು ಸಂಗ್ರಹಿಸುವುದೊಂದು ಅಗಾಧ ಕಾರ್ಯವೆನಿಸಿತ್ತು. ಆಗ ಓದುಗರು ಆರಾಮದಾಯಕವಾದ ಕುರ್ಚಿ ಮೇಜುಗಳ ಕಡೆಗಾಗಲೀ ಇನ್ನಿತರ ಸೌಕರ್ಯಗಳ ಕಡೆಗಾಗಲೀ ಹೆಚ್ಚಿನ ಗಮನವನ್ನೀಯುತ್ತಿರಲಿಲ್ಲ. ಗ್ರಂಥಾಲಯದ ಪ್ರಥಮ ಸೂತ್ರದ ಪರಿಣಾಮದಿಂದ ಆಧುನಿಕ ಗ್ರಂಥಾಲಯಗಳಲ್ಲಿ ಮಹತ್ತರ ಬದಲಾವಣೆಗಳು ಕಂಡು ಬಂದುವು. ಓದುಗರಿಗೆ ಸುಖಪ್ರದವಾದ ಕುರ್ಚಿ ಮೇಜುಗಳು, ವಿದ್ಯುದ್ದೀಪಗಳು, ಫ್ಯಾನುಗಳು, ವಿಶಾಲವಾದ ಓದು ಕೋಣೆಗಳು, ಆಕರ್ಷಕ ಚಿತ್ರಗಳು ಅಲ್ಲಿಯ ದ್ವಿಮುಖ ಬೀರುಗಳಲ್ಲಿ ಸುವ್ಯವಸ್ಥಿತ ಗ್ರಂಥಗಳ ಜೋಡಣೆ–ಇವೇ ಮೊದಲಾದ ಆಧುನಿಕ ಸಲಕರಣೆಗಳನ್ನಲ್ಲದೆ ಕುಡಿಯಲು ತಣ್ಣನೆಯ ನೀರು, ವಿಶ್ರಾಂತಿಗೃಹ ಮತ್ತು ಉಪಾಹಾರಗೃಹ, ಶೌಚಗೃಹ ಮುಂತಾದ ಸೌಕರ್ಯಗಳನ್ನೂ ಈಗ ಅನೇಕ ಗ್ರಂಥಾಲಯಗಳಲ್ಲಿ ಒದಗಿಸಲಾಗುತ್ತಿದೆ.

(ಈ) ಗ್ರಂಥಾಲಯ ಸಿಬ್ಬಂದಿ : ಒಳ್ಳೆಯ ಸಿಬ್ಬಂದಿಯಿಂದ ಒಳ್ಳೆಯ ಗ್ರಂಥಾಲಯ, ಒಳ್ಳೆಯ ಗ್ರಂಥಾಲಯದಲ್ಲಿ ಅಧಿಕ ಪುಸ್ತಕಗಳ ಉಪಯೋಗ. ಆದ್ದರಿಂದ ಗ್ರಂಥಾಲಯದಲ್ಲಿ ಓದುಗರಿಗೆ ಸೇವೆಯನ್ನು ಸಲ್ಲಿಸುವ ದಕ್ಷ ಸಿಬ್ಬಂದಿಯನ್ನು ಆಯ್ಕೆ ಮಾಡುವುದು ಅಗತ್ಯ. ಗ್ರಂಥಪಾಲ ಹಾಗೂ ಗ್ರಂಥಾಲಯ ಸಿಬ್ಬಂದಿಯವರು ಗ್ರಂಥಾಲಯವಿಜ್ಞಾನದಲ್ಲಿ ಪರಿಣತರಿರಬೇಕು. ಗ್ರಂಥಾಲಯ ಸೇವೆಯೆಂದರೆ ಸಮಾಜಸೇವೆ ಎಂಬ ಮನೋಭಾವ ಅವರಲ್ಲಿರಬೇಕಾದ್ದು ಅಗತ್ಯ.

**ದ್ವಿತೀಯ ಸೂತ್ರ :** ಗ್ರಂಥಾಲಯದಲ್ಲಿ ಪ್ರತಿಯೊಬ್ಬರಿಗೂ ತಮಗೆ ಬೇಕಾದ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಯಾವುದೇ ಅಡೆತಡೆಗಳು ಇರಕೂಡದು. ಗ್ರಂಥಾಲಯದಲ್ಲಿ ನೇರ ಪ್ರವೇಶ ಪದ್ಧತಿಯನ್ನು ಬಳಕೆಯಲ್ಲಿ ತರುವುದು ಒಳ್ಳೆಯದು. ಗ್ರಂಥಾಲಯದಲ್ಲಿ ಅವರವರ ಪುಸ್ತಕಗಳನ್ನು ಪಡೆಯಲು ಈ ಪದ್ಧತಿ ಅತ್ಯುತ್ತಮವಾದ್ದೆಂಬುದು ಅನೇಕ ವರ್ಷಗಳಿಂದ ಅನುಭವಕ್ಕೆ ಬಂದರುವ ಸಂಗತಿ. ನೇರಪ್ರವೇಶ ಪದ್ಧತಿಯನ್ನು ಜಾರಿಗೆ ತಂದ ಗ್ರಂಥಾಲಯದಲ್ಲಿ ಆರೇಳು ಅಡಿ ಎತ್ತರಕ್ಕೆ ಮೀರದ ತೆರೆದ ಕಪಾಟುಗಳು, ಕಪಾಟುಗಳ ನಡುವೆ ಓದುಗರು ಮತ್ತು ಸಿಬ್ಬಂದಿಯವರು ಓಡಾಡಲು ಸಾಕಷ್ಟು ಸ್ಥಳ, ಓದುಗರ ಅಭಿರುಚಿಯನ್ನರಿತು ಗ್ರಂಥಸಂಗ್ರಹಣೆ ಮಾಡುವುದು – ಇವೇ ಮುಂತಾದ ಸಂಗತಿಗಳಿಗೆ ಗಮನ ಕೊಟ್ಟಿರುತ್ತಾರೆ. ಪ್ರತಿಯೊಬ್ಬ ಓದುಗನಿಗೂ ಅವನ ಪುಸ್ತಕ ದೊರೆಯ ಬೇಕಾದರೆ ಕೇವಲ ವಿದ್ವಾಂಸರು ಓದುವ ಪುಸ್ತಕಗಳನ್ನು ಮಾತ್ರವೇ ಇಡದೇ ಜನಸಾಮಾನ್ಯರ

ಬುದ್ಧಿಮತ್ತೆಗೆ ಸರಿಹೋಗುವ ಸರಳ ಸುಂದರ ಶೈಲಿಯ ಪುಸ್ತಕಗಳನ್ನು ಸಹ ಇಡಬೇಕು. ಪಂಡಿತರು, ಪಾಮರರು, ವರಿಷ್ಠರು, ಗರಿಷ್ಠರು, ಪುರುಷರು, ಸ್ತ್ರೀಯರು, ನಗರವಾಸಿಗಳು, ಗ್ರಾಮವಾಸಿಗಳು, ಬಾಲರು, ವೃದ್ಧರು, ಅಂಗವಿಕಲರು ಹಾಗೂ ಹೃಷ್ಟಪುಷ್ಟರು ಎಂಬ ತಾರತಮ್ಯ ಮಾಡದೆ ಅವರವರ ಪುಸ್ತಕಗಳು ಅವರವರಿಗೆ ದೊರೆಯುವ ಏರ್ಪಾಡು ಇರಬೇಕೆಂದು ಈ ಸೂತ್ರ ಹೇಳುತ್ತದೆ. ಓದುಗರು ಗ್ರಂಥಾಲಯಕ್ಕೆ ಬರಲು ಸಾಧ್ಯವಾಗದೆ ಇದ್ದಲ್ಲಿ ಅವರಿದ್ದೆಡೆಗೆ ಅವರು ಇಚ್ಛಿಸಿದ ಗ್ರಂಥವನ್ನು ಒದಗಿಸುವ ವ್ಯವಸ್ಥೆ ಇರಬೇಕೆಂದು ಕೂಡ ಈ ಸೂತ್ರ ಅಪೇಕ್ಷಿಸುತ್ತದೆ. ಇದರ ಪ್ರಕಾರ ಆಸ್ಪತ್ರೆಗಳಲ್ಲಿಯ ರೋಗಿಗಳಿಗೆ ಓದಲು ಅನುಕೂಲವಾಗುವಂತೆ ಆಸ್ಪತ್ರೆ ಗ್ರಂಥಾಲಯಗಳನ್ನು, ಕೈದಿಗಳು ಓದಲು ಅನುಕೂಲವಾಗುವಂತೆ ಜೈಲು ಗ್ರಂಥಾಲಯಗಳನ್ನು ಅಳವಡಿಸಬೇಕಲ್ಲದೆ ಕುರುಡರಿಗೆ ಅವರು ಓದಬಹುದಾದ ಬ್ರೇಲ್ ಗ್ರಂಥಗಳನ್ನೂ ಒದಗಿಸಬೇಕು. ಇಂಥ ವ್ಯಾಪಕವಾದ ಗ್ರಂಥಾಲಯ ಸೇವಾಕಾರ್ಯನಿರ್ವಹಣೆ ಗ್ರಂಥಾಲಯ ಕಾಯಿದೆ ಇಲ್ಲದೆ ಸಾಧ್ಯವಾಗುವುದಿಲ್ಲ. 1850 ರಿಂದ ಈಚೆಗೆ ಅನೇಕ ಪಾಶ್ಚಾತ್ಯ ಹಾಗೂ ಪೌರಸ್ತ್ಯ ರಾಷ್ಟ್ರಗಳಲ್ಲಿ (ಭಾರತವನ್ನೊಳಗೊಂಡಂತೆ) ಗ್ರಂಥಾಲಯ ಕಾಯಿದೆ ಜಾರಿಗೆ ಬಂದು ಗ್ರಂಥಾಲಯದ ದ್ವಿತೀಯ ಸೂತ್ರಕ್ಕೆ ಮನ್ನಣೆ ದೊರೆತಿದೆ.

**ತೃತೀಯ ಸೂತ್ರ :** ವಿಶ್ವಸಂಸ್ಥೆ 1972ನೆಯ ವರ್ಷವನ್ನು ಅಂತಾರಾಷ್ಟ್ರೀಯ ಪುಸ್ತಕ ವರ್ಷವೆಂದು ಸಾರಿ, ಈ ಸೂತ್ರದ ಉಪಸೂತ್ರವಾದ ಎಲ್ಲರಿಗೂ ಗ್ರಂಥಗಳು ಎಂಬ ಘೋಷಣೆಯನ್ನು ಸಾರ್ಥಕಗೊಳಿಸಿದೆ. ಈ ಸೂತ್ರ ಗ್ರಂಥಪಾಲನ ದಕ್ಷತೆಯ ಅಳತೆಗೋಲು. ವ್ಯಕ್ತಿವ್ಯಕ್ತಿಗಳಲ್ಲಿ ಅಭಿರುಚಿ ಭಿನ್ನಭಿನ್ನವಾಗಿರುವುದರಿಂದ ಸಾಧ್ಯವಿದ್ದಷ್ಟೂ ಹೆಚ್ಚು ಜನ ಗ್ರಂಥಾಲಯಕ್ಕೆ ಬರುವಂತಾದರೆ ಪ್ರತಿಯೊಂದು ಪುಸ್ತಕವೂ ತನ್ನ ಓದುಗನನ್ನು ದೊರಕಿಸಿಕೊಳ್ಳಲು ಹೆಚ್ಚುಹೆಚ್ಚು ಅವಕಾಶ ಮಾಡಿಕೊಟ್ಟಂತಾಗುವುದು. ಗ್ರಂಥಾಲಯಕ್ಕೆ ಹೆಚ್ಚು ಜನರನ್ನು ಆಕರ್ಷಿಸಲು ಗ್ರಂಥಪಾಲ ಪ್ರಚಾರ ಕಾರ್ಯವನ್ನೂ ಪ್ರಸಾರ ಕಾರ್ಯವನ್ನೂ ಕೈಗೊಳ್ಳಬೇಕು. ಓದುಗರ ನಡುವೆ ಸುಗಮ ವ್ಯವಹಾರ ನಡೆಯುವಂತೆ ತೆರೆದ ಕಪಾಟಿನಲ್ಲಿ ಪುಸ್ತಕಗಳನ್ನು ಇಡುವುದಲ್ಲದೆ ಗ್ರಂಥಸೂಚಿಯನ್ನು ತಯಾರಿಸಿಟ್ಟಿರಬೇಕು.

ಓದುಗರ ಅಭಿರುಚಿಗೆ ತಕ್ಕಂಥ ಗ್ರಂಥಗಳನ್ನು ಆಯ್ಕೆ ಮಾಡುವುದರಿಂದ ಮೂರನೆಯ ಸೂತ್ರದ ಬಹುತೇಕ ಉದ್ದೇಶಗಳು ಬಗೆಹರಿಯುವುವು. ಕಥಾಸಮಯ, ವಿಚಾರಮಂಥನ, ಚಲನಚಿತ್ರ ಪ್ರದರ್ಶನ ಮುಂತಾದ ವಿಶೇಷ ಕಾರ್ಯಕ್ರಮಗಳ ಮುಖಾಂತರ ಜನರನ್ನು ಆಕರ್ಷಿಸಬಹುದಾಗಿದೆ. ಹೀಗೆ ಮಾಡುವುದರಿಂದ ಅಪರೂಪದ ಓದುಗರು ನಿಜವಾದ ಓದುಗರಾಗಿ ಪರಿವರ್ತಿತರಾಗಿ ಗ್ರಂಥಾಲಯದಲ್ಲಿಯ ಅಧಿಕ ಪುಸ್ತಕಗಳಿಗೆ ಅವುಗಳ ಓದುಗರು ದೊರಕುವರು.

**ಚತುರ್ಥ ಸೂತ್ರ :** ಓದುಗರ ಸಮಯವೆಂದರೆ ಹಣವಿದ್ದಂತೆ. ಅವರ ಸಮಯವನ್ನು ವ್ಯರ್ಥ ಮಾಡದೆ ಅವರು ಕೇಳಿದ ಗ್ರಂಥಗಳನ್ನು ಸಮಯೋಚಿತವಾಗಿ ಒದಗಿಸಿಕೊಟ್ಟರೆ ರಾಷ್ಟ್ರದ ಆರ್ಥಿಕಮಟ್ಟ ಹೆಚ್ಚಿಸಿದಂತೆಯೇ ಸರಿ. ಓದುಗನಿಗೆ ಆತ ಕೇಳಿದ ಪುಸ್ತಕಗಳನ್ನು ತತ್‌ಕ್ಷಣ ಒದಗಿಸದಿದ್ದರೆ ಮುಂದೆ ಆ ಪುಸ್ತಕಗಳ ಬಗ್ಗೆ ಅವನ ಆಸಕ್ತಿ ಕುಗ್ಗಬಹುದು. ಇದರಿಂದ ಗ್ರಂಥಾಲಯ ಆ ಓದುಗನನ್ನು ಕಳೆದುಕೊಳ್ಳುವುದಲ್ಲದೆ ಮೊದಲಿನ ಮೂರು ಸೂತ್ರಗಳನ್ನೂ ಮುರಿದಂತಾಗುವುದು. ಓದುಗನ ವೇಳೆ ಅಮೂಲ್ಯವಾದ್ದೆಂಬುದನ್ನು ಗ್ರಂಥಾಲಯದ ಸಿಬ್ಬಂದಿ ಅರಿತಿರಬೇಕು. ಇದಕ್ಕೆ ನೇರಪ್ರವೇಶ ಪದ್ಧತಿ ಅತ್ಯಂತ ಪರಿಣಾಮಕಾರಿಯಾದ ಸಾಧನ. ಈ ಪದ್ಧತಿಯಲ್ಲಿ ಓದುಗ ತನಗೆ ಬೇಕಾದ ಪುಸ್ತಕಗಳಿದ್ದ ಬೀರುವಿನ ಕಡೆಗೆ ಹೋಗಿ ಪುಸ್ತಕಗಳನ್ನು ಆಯ್ದುಕೊಂಡು ಓದಲು ಪೂರ್ಣ ಸ್ವಾತಂತ್ರ್ಯವಿರುವುದರಿಂದ ಅವನ ಸಮಯದ ಉಳಿತಾಯವಾಗುವುದು. ಓದುಗನ ಸಮಯವನ್ನುಳಿಸಲು ಸಿಬ್ಬಂದಿಯವರು ಗಮನಿಸಬಹುದಾದ ಕೆಲವು ಸಂಗತಿಗಳಿವು :

ಗ್ರಂಥ ವಿಂಗಡಣೆ ಹಾಗೂ ಜೋಡಣೆ : ಹಿಂದಿನ ಕಾಲದಲ್ಲಿ ಮಾಡುತ್ತಿದ್ದಂತೆ ಗ್ರಂಥಗಳನ್ನು ಹೇಗೆ ಕೊಳ್ಳಲಾಗುತ್ತದೋ ಹಾಗೆಯೇ, ಇಲ್ಲವೇ ವರ್ಣಾನುಕ್ರಮವಾಗಿ ಜೋಡಿಸದೆ ವರ್ಗಾನುಕ್ರಮವಾಗಿ, ಜೋಡಿಸಬೇಕು. ಓದುಗರಿಂದ ಯಾವ ವರ್ಗದ ಪುಸ್ತಕಗಳ ಬೇಡಿಕೆ ಅಧಿಕವಾಗಿದೆಯೋ ಅಂಥ ಪುಸ್ತಕಗಳನ್ನು ಗ್ರಂಥಾಲಯ ಪ್ರವೇಶದ್ವಾರದ ಸಮೀಪದಲ್ಲಿಯ ಬೀರುಗಳಲ್ಲಿ ಜೋಡಿಸುವ ವ್ಯವಸ್ಥೆ ಆಗಬೇಕು.

ಪುಸ್ತಕ ಸಂಗ್ರಹಾವರಣ ಫಲಕಗಳು : ಪುಸ್ತಕ ಸಂಗ್ರಹಾವರಣದಲ್ಲಿಟ್ಟ ನೂರಾರು ಬೀರುಗಳಲ್ಲಿ ತನಗೆ ಅಗತ್ಯವಿದ್ದ ಪುಸ್ತಕಗಳು ಯಾವ ಬೀರುಗಳಲ್ಲಿವೆ ಎಂಬುದು ಕೂಡಲೇ ಗೊತ್ತಾಗುವಂತೆ ಫಲಕಗಳನ್ನು ಬರೆಯಿಸಿ ಹಾಕಬೇಕು. ಪುಸ್ತಕ ಸಂಗ್ರಹಾವರಣದ ರೂಪರೇಖೆಗಳನ್ನೊಳಗೊಂಡ ಭೂಪಟವೊಂದನ್ನು ಪ್ರವೇಶ ದ್ವಾರದಲ್ಲಿಡಬೇಕು. ಪ್ರತಿಯೊಂದು ಕಪಾಟಿಗೆ, ಕಪಾಟಿನ ಪ್ರತಿಯೊಂದು ಖಾನೆಗೆ ಇಂಥ ಫಲಕಗಳನ್ನು ಹಚ್ಚಬೇಕು. ವಿಶೇಷ ವಿಷಯಗಳ ಮೇಲೆ ಗ್ರಂಥಗಳ ಯಾದಿಯನ್ನು ತಯಾರಿಸುವುದು, ಪರಾಮರ್ಶನ ಸೇವಾ ವಿಭಾಗದಲ್ಲಿ ಅರ್ಹರಾದ ಹಾಗೂ ಅನುಭವಿ ಸಿಬ್ಬಂದಿಯ ಮುಖಾಂತರ ಪರಾಮರ್ಶನ ಸೇವೆಯನ್ನು ನೀಡುವುದು, ಗ್ರಂಥ ಪರಿಚಲನ ವಿಭಾಗದಲ್ಲಿ ಆಧುನಿಕ ರೀತಿಯ ಕಾರ್ಡು ಪದ್ಧತಿಯನ್ನು ಬಳಕೆಗೆ ತರುವುದು–ಇವೇ ಮೊದಲಾದ ವಿಧಾನಗಳನ್ನು ಅನುಸರಿಸುವುದರಿಂದ ಓದುಗನ ಸಮಯ ಉಳಿಯುವುದರಲ್ಲಿ ಸಂದೇಹವಿಲ್ಲ.

ಸಿಬ್ಬಂದಿಯ ವೇಳೆಯನ್ನು ಉಳಿಸಿರಿ ಎಂಬುದು ಈ ಸೂತ್ರದ ಉಪಸೂತ್ರ. ಗ್ರಂಥಾಲಯ ಸಹಕಾರದಿಂದ ಸಿಬ್ಬಂದಿಯ ವೇಳೆಯನ್ನು ವರ್ಗೀಕರಣ, ಸೂಚೀಕರಣ ಮುಂತಾದ ಕಾರ್ಯಗಳಿಂದ ವಿಮೋಚನೆಗೊಳಿಸಿ ಉಳಿಸಬಹುದು. ಹೀಗಿ ಉಳಿಸಿದ ವೇಳೆಯನ್ನು ಓದುಗರಿಗೆ ವೈಯಕ್ತಿಕ ಸಹಾಯ ಒದಗಿಸಲು ಉಪಯೋಗಿಸಬಹುದಾಗಿದೆ (ನೋಡಿ–ಇದೇ ಲೇಖನದ ಭಾಗ VIII).

**ಪಂಚಮ ಸೂತ್ರ :** ಗ್ರಂಥಾಲಯ ನಿರ್ಮಾಣವಾದ ಮೇಲೆ ಗ್ರಂಥಾಲಯದ ಮೂರು ಘಟಕಗಳಾದ ಗ್ರಂಥಗಳು, ಓದುಗರು ಹಾಗೂ ಸಿಬ್ಬಂದಿ–ಇವು ಕ್ರಮೇಣ ಬೆಳೆಯುತ್ತ ಹೋಗುವುದು ಸ್ವಾಭಾವಿಕ. ಹುಟ್ಟಿದ ಶಿಶು ಬೆಳೆಯುವಂತೆ ಗ್ರಂಥಾಲಯ ಬೆಳೆಯದಿದ್ದರೆ ಅದರ ಆಡಳಿತದಲ್ಲಿ ಲೋಪ ದೋಷವಿದೆಯೆಂದೇ ಅರ್ಥ. ಒಂದು ಹಂತಕ್ಕೆ ಬಂದ ಬಳಿಕ ಓದುಗರ ಸಂಖ್ಯೆಯಲ್ಲಿ ವಿಶೇಷ ಹೆಚ್ಚಳ ಕಂಡುಬರುವುದಿಲ್ಲವಾದರೂ ಬದಲಾವಣೆ ನಡೆದೇ ಇರುತ್ತದೆ. ಈ ತಲೆಮಾರಿನ ಓದುಗರಿಂದ ಮುಂದಿನ ತಲೆಮಾರಿನ ಓದುಗರಿಗೆ ಬದಲಾವಣೆ ಕಂಡುಬರುತ್ತದೆ. ಈ ಬದಲಾವಣೆಯನ್ನು ಬೆಳೆವಣಿಗೆಯೆಂದೇ ಹೇಳಬೇಕು. ಗ್ರಂಥಾಲಯಕ್ಕೆ ಮುಪ್ಪಿಲ್ಲ; ಆದ್ದರಿಂದ ಅದಕ್ಕೆ ಸಾವೂ ಇಲ್ಲ. ಗ್ರಂಥಾಲಯದ ಈ ಲಕ್ಷಣವನ್ನು ಪಂಚಮ ಸೂತ್ರ ಒತ್ತಿ ಹೇಳುತ್ತದೆ. ಈ ಸೂತ್ರದ ಪ್ರಕಾರ ಪುಸ್ತಕಗಳ ಸಂಖ್ಯೆ ಹೆಚ್ಚಾಗುತ್ತಿರುತ್ತದೆ. ಹೊಸ ಪುಸ್ತಕಗಳನ್ನು ವರ್ಗೀಕೃತ ವ್ಯವಸ್ಥೆಯ ಪ್ರಕಾರ ಆಯಾ ಕಪಾಟುಗಳಲ್ಲಿ ಆಯಾ ಖಾನೆಗಳಲ್ಲಿ ಸೂಕ್ತವಾದ ಸ್ಥಳದಲ್ಲಿ ಹಳೆಯ ಪುಸ್ತಕಗಳ ಮಧ್ಯದಲ್ಲಿ ಸೇರಿಸಬೇಕಾಗುವುದು. ಓದುಗರ ಹಾಗೂ ಸಿಬ್ಬಂದಿಯ ಕಾಲ ಹಾಗೂ ಶ್ರಮ ಹರಣವಾಗದಂತೆ ನೋಡಿಕೊಳ್ಳಬೇಕಾದರೆ ಪ್ರತಿ ಕಪಾಟಿನಲ್ಲೂ ಸಾಕಷ್ಟು ಸ್ಥಳಾವಕಾಶವನ್ನು ಮೊದಲೇ ಇಟ್ಟುಕೊಂಡಿರಬೇಕು. ಗ್ರಂಥಾಲಯ ಬೆಳೆಯುತ್ತಲೆ ಇರುವುದಾದ್ದರಿಂದ ಸಾಕಷ್ಟು ಸ್ಥಳಾವಕಾಶವನ್ನು ಬಿಟ್ಟುಕೊಂಡರೂ ಅದು ಸಾಲದೆ ಇರಬಹುದು. ಅಂಥ ಸಂದರ್ಭಗಳಲ್ಲಿ ಎಲ್ಲ ಪುಸ್ತಕಗಳನ್ನೂ ಅವುಗಳ ಮುಂದಿನ ಖಾನೆಗಳಿಗೆ ಸರಿಸಬೇಕಾಗುತ್ತದೆ. ಇದಕ್ಕನುಗುಣವಾಗಿ ಫಲಕಗಳನ್ನು ಸರಿಸಬೇಕಾಗುತ್ತದೆ. ಪುಸ್ತಕಗಳ ಸಂಖ್ಯೆಯ ಜೊತೆಗೆ ಓದುಗರು ಮತ್ತು ಸಿಬ್ಬಂದಿಯವರು ಹೆಚ್ಚಾಗುವುದರಿಂದ ಗ್ರಂಥಾಲಯದ ಕಟ್ಟಡವನ್ನು ವಿಸ್ತರಿಸಬೇಕಾಗುತ್ತದೆ. ಕಟ್ಟಡ ವರ್ತುಳಾಕಾರವಾಗಿದ್ದರೆ ವಿಸ್ತರಣೆಗೆ ಅವಕಾಶವಿರುವುದಿಲ್ಲ. ವಿಸ್ತರಣೆಗೆ ಅನುಕೂಲವಾಗುವಂತೆ ಗ್ರಂಥಾಲಯಕಟ್ಟಡ ಆಯಾಕಾರದ್ದಾಗಿರಬೇಕು.

ಗ್ರಂಥಗಳು, ಓದುಗರು ಹಾಗೂ ಸಿಬ್ಬಂದಿಯೆಂಬ ಮೂರು ಘಟಕಗಳ ನಡುವೆ ಸಮನ್ವಯವನ್ನು ಏರ್ಪಡಿಸಿ ಜ್ಞಾನ ಪ್ರಸಾರವಾಗುವಂತೆ ಮಾಡುವುದೇ ಪಂಚಸೂತ್ರಗಳ ಮುಖ್ಯೋದ್ದೇಶ. (ಜಿ.ಸಿ.ಎಂ.;ಜಿ.ಬಿ.ಎಸ್.)

**2. ಗ್ರಂಥ ಪರಿಚಲನೆ :** ಪುಸ್ತಕಗಳನ್ನು ಗ್ರಂಥಾಲಯದಲ್ಲಿಯೇ ಓದುವುದಕ್ಕಾಗಲಿ, ಮನೆಗೆ ಒಯ್ಯುವುದಕ್ಕಾಗಲಿ ಕೊಡುವ, ಹಾಗೆ ಕೊಟ್ಟವನ್ನು ಮರಳಿ ತೆಗೆದುಕೊಳ್ಳುವ ಕೆಲಸ ಗ್ರಂಥಾಲಯದ ದೈನಂದಿನ ಮುಖ್ಯ ಜವಾಬ್ದಾರಿಗಳಲ್ಲೊಂದು. ಅಂಥ ಸಂದರ್ಭಗಳಲ್ಲಿ ಪುಸ್ತಕ ನಡೆಸುವ ಓಡಾಟವನ್ನು ಗ್ರಂಥ ಪರಿಚಲನೆ (ಬುಕ್ ಸರ್ಕ್ಯುಲೇಷನ್) ಎನ್ನುತ್ತೇವೆ. ಯಾವ ಒಂದು ಪುಸ್ತಕವನ್ನು ಗ್ರಂಥಾಲಯದಿಂದ ಹೊರಗೆ ಕೊಟ್ಟಿದೆ, ಯಾರಿಗೆ ಕೊಟ್ಟಿದೆ, ಯಾವಾಗ ಅದು ಮರಳಿ ಬರಬೇಕು ಮುಂತಾದ ವಿಷಯಗಳನ್ನು ದಾಖಲೆ ಮಾಡುವುದೇ ಈ ವಿಭಾಗದ ಪ್ರಮುಖ ಕಾರ್ಯ. ಇಷ್ಟೇ ಅಲ್ಲದೆ ಓದುಗರಿಗೆ ಪುಸ್ತಕಗಳನ್ನು ಕಾದಿರಿಸುವುದು ಆಯಾ ದಿನದ ಪುಸ್ತಕ ಪರಿಚಲನೆಯ ಅಂಕಿಸಂಖ್ಯೆಗಳನ್ನಿಡುವುದು ಮತ್ತು ಇತರ ಗ್ರಂಥಾಲಯಗಳೊಡನೆ ನಡೆಸುವ ಅಂತರ ಗ್ರಂಥಾಲಯ ಎರವಲುಗಳ ಅಂಕಿ ಅಂಶವನ್ನಿಡುವುದು–ಈ ಕೆಲಸಗಳೂ ಈ ವಿಭಾಗಕ್ಕೇ ಸೇರುತ್ತವೆ.

ಗ್ರಂಥ ಪರಿಚಲನ ಕಾರ್ಯದಲ್ಲಿ ಬಳಕೆಯಲ್ಲಿರುವ ಆಯಾ ಪದ್ಧತಿಗಳಿಗೆ ಉಪಯೋಗಿಸುವ ಸಾಮಗ್ರಿಗಳಿಗೆ ಅನುಸಾರವಾಗಿ ಕೆಳಕಂಡ ವರ್ಗೀಕರಣವನ್ನು ಮಾಡಲಾಗಿದೆ.

1. ದಾಖಲೆ ಪುಸ್ತಕ ಪದ್ಧತಿ (ರಿಜಿಸ್ಟರ್ ಸಿಸ್ಟಮ್)
2. ಪತ್ರಕ ಪದ್ಧತಿ (ಕಾರ್ಡ್ ಸಿಸ್ಟಮ್)
3. ಯಾಂತ್ರಿಕ ಪದ್ಧತಿ (ಮಷೀನ್ ಚಾರ್ಜಿಂಗ್ ಸಿಸ್ಟಮ್)
4. ಛಾಯಾಚಿತ್ರ ಗ್ರಹಣ ಪದ್ಧತಿ (ಫೋಟೋಚಾರ್ಜಿಂಗ್ ಸಿಸ್ಟಮ್)
5. ಶ್ರವಣ ಪದ್ಧತಿ (ಆಡಿಯೊ–ಚಾರ್ಜಿಂಗ್ ಸಿಸ್ಟಮ್)
6. ಇತರ ಪದ್ಧತಿಗಳು

**1. ದಾಖಲೆ ಪುಸ್ತಕ ಪದ್ಧತಿ :** ಈ ಪದ್ಧತಿಯಲ್ಲಿ ಬಹು ಹಳೆಯದೆಂದರೆ ಡೇ ಬುಕ್ ಪದ್ಧತಿ (ರೋಜುಪುಸ್ತಕ ಪದ್ಧತಿ). ಇದು ಬಹು ಸರಳವಾಗಿದ್ದು ಬಹುಶಃ ಪ್ರಾರಂಭದಲ್ಲಿ

ಇದ್ದ ಪದ್ಧತಿಯಿರಬೇಕು. ಇದಕ್ಕೆ ಬೇಕಾದುದು ಕೇವಲ ಒಂದು ದಾಖಲೆ ಪುಸ್ತಕ. ಇದರಲ್ಲಿ ಆಯಾ ದಿನದ ಕೊಡುಕೊಳ್ಳುವ ಗ್ರಂಥಗಳ ದಾಖಲೆಯನ್ನು ಆಯಾ ತಾರೀಕಿನ ಕೆಳಗೆ ಒಂದರ ಕೆಳಗೆ ಒಂದರಂತೆ ಗುರುತು ಮಾಡುವುದು. ಆದರೆ ಈ ಪದ್ಧತಿಯನ್ನು ಅನುಸರಿಸುವುದರಿಂದ ಯಾವ ಪುಸ್ತಕವನ್ನು ಯಾರಿಗೆ ಕೊಟ್ಟಿದೆ, ಪ್ರತಿ ಓದುಗನಿಗೆ ಎಷ್ಟು ಪುಸ್ತಕ ಮತ್ತು ಯಾವ ಪುಸ್ತಕ ಯಾವಾಗ ಮರಳಿ ಬರುತ್ತದೆ–ಎಂಬುದನ್ನು ತಿಳಿಯಲು ಕಷ್ಟವಾಗುತ್ತದೆ.

ಡೇ ಬುಕ್ ಪದ್ಧತಿಯ ಸುಧಾರಿತ ರೂಪ ಲೆಡ್ಜರ್ (ಖಾತೆ) ಪದ್ಧತಿ. ಇಲ್ಲಿಯ ದಾಖಲೆ ಪುಸ್ತಕದಲ್ಲಿ ಪ್ರತಿಪುಟಕ್ಕೂ ಒಂದೊಂದು ಸಂಖ್ಯೆಯನ್ನು ಕೊಟ್ಟು ಪ್ರತಿಯೊಬ್ಬ ಓದುಗನಿಗೂ ಒಂದು ಪುಟವನ್ನು ಮೀಸಲಾಗಿಟ್ಟಿರುತ್ತದೆ. ವಾಚಕರ ಹೆಸರುಗಳ ಒಂದು ಸೂಚಿ ತಯಾರಾಗಿರುತ್ತದೆ. ಓದುಗನಿಗೆ ಯಾವ ಒಂದು ರೀತಿಯ ಗುರುತು ಪತ್ರಕವೂ ಇರುವುದಿಲ್ಲ. ಕೊಡುಕೊಳ್ಳುವ ವ್ಯವಹಾರ ಮೊದಲು ರೋಜುಪುಸ್ತಕ ದಾಖಲಾಗಿ ಅನಂತರ ಖಾತೆಪುಸ್ತಕಗಳಿಗೆ ವರ್ಗವಾಗುತ್ತದೆ. ಈ ಪದ್ಧತಿ ಭಾರತದಲ್ಲಿಯ ಅನೇಕ ಪ್ರೌಢ ವಿದ್ಯಾಲಯಗಳಲ್ಲೂ ಸಾರ್ವಜನಿಕ ಗ್ರಂಥಾಲಯಗಳಲ್ಲೂ ಆಚರಣೆಯಲ್ಲಿದೆ. ಇದಕ್ಕೆ ಕಾರಣ ಬಹುಶಃ ನಿಯಮಿತ ವೇಳೆಗಿಂತ ತಡವಾಗಿ ಪುಸ್ತಕಗಳು ಗ್ರಂಥಾಲಯಕ್ಕೆ ವಾಪಸಾದಾಗ ದಂಡವನ್ನು ತೆಗೆದುಕೊಳ್ಳುವ ಮತ್ತು ಪುಸ್ತಕಗಳ ಕೊಡುಕೊಳ್ಳುವ ವ್ಯವಹಾರಗಳ ಶಾಶ್ವತ ದಾಖಲೆಗಳಿರಬೇಕೆಂಬ ಲೆಕ್ಕಪರಿಶೋಧಕರ ಆಗ್ರಹವಿರಬಹುದು. ಇಲ್ಲವೆ ಪುಸ್ತಕ ತೆಗೆದುಕೊಳ್ಳುವವರ ಸಂಖ್ಯೆ ಕಡಿಮೆಯಿರಬಹುದು ಇಲ್ಲವೆ ಗ್ರಂಥಾಲಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನುರಿತ ಸಿಬ್ಬಂದಿ ಇಲ್ಲದಿರಬಹುದು. ಈ ಪದ್ಧತಿಯ ಪ್ರಕಾರ ಆಯಾ ಓದುಗನಿಗೆ ಮೀಸಲಾದ ಪುಟವನ್ನು ತೆಗೆದು ನೋಡದೆ ಯಾವಾಗ ಪುಸ್ತಕ ಮರಳಿ ಬರುತ್ತದೆ ಮತ್ತು ಎಷ್ಟು ಪುಸ್ತಕಗಳು ಮರಳಿ ಬರಬೇಕು ಎಂಬುದನ್ನು ತಿಳಿಯಲು ಸಾಧ್ಯವಿಲ್ಲ. ದೊಡ್ಡದೊಡ್ಡ ಗ್ರಂಥಾಲಯಗಳಲ್ಲಿ ಬಹಳ ತೊಡಕಿನ ಹಾಗೂ ಹೆಚ್ಚು ವೇಳೆಯನ್ನು ತೆಗೆದುಕೊಳ್ಳುವ ಪದ್ಧತಿಯಾಗಿರುವ ಕಾರಣದಿಂದ ಇದು ಈಗ ಬಳಕೆಯಲ್ಲಿಲ್ಲ.

**2. ಪತ್ರಕ ಪದ್ಧತಿ :** ಈ ಪದ್ಧತಿಯಲ್ಲಿ ದಾಖಲೆ ಪುಸ್ತಕ ಅಥವಾ ಬಿಡಿಹಾಳೆಗಳಿಗೆ ಬದಲಾಗಿ ಪತ್ರಕಗಳನ್ನು ಬಳಸಲಾಗುತ್ತದೆ. ಇದರಲ್ಲಿ ಮುಖ್ಯ ಪದ್ಧತಿಗಳು ಕೆಳಕಂಡಂತಿವೆ.

**(ಅ) ಬ್ರೌನ್ ಪದ್ಧತಿ :** ಬಾಸ್ಟನ್ನಿನ ಲೈಬ್ರರಿ ಬ್ಯೂರೊವಿನ ಗ್ರಂಥಾಲಯಾಧಿಕಾರಿ ಯಾದ ನೀನಾ ಇ ಬ್ರೌನ್ ಎಂಬಾಕೆ ಈ ಪದ್ಧತಿಯನ್ನು ಪ್ರಾರಂಭಿಸಿದಳು. ಈ ಪದ್ಧತಿ ಎಲ್ಲಿ ಉಗಮವಾಯಿತೋ ಆ ದೇಶಕ್ಕಿಂತ ಭಾರತದಲ್ಲಿಯೇ ಹೆಚ್ಚು ಆಚರಣೆಯಲ್ಲಿದೆ.

ಪ್ರತಿಯೊಂದು ಗ್ರಂಥಕ್ಕೂ 5"X3" ಆಕಾರದ ಒಂದು ಗ್ರಂಥ ಪತ್ರಕ ಇರುತ್ತದೆ. ಇದರಲ್ಲಿ ಆಯಾ ಗ್ರಂಥದ ಕರ್ತೃ, ಗ್ರಂಥದ ಶಿರೋನಾಮೆ, ಬೋಧಾಂಕ(ಕಾಲ್ ನಂಬರ್), ಪರಿಗ್ರಹಣ ಕ್ರಮಾಂಕಗಳು (ಆಕ್ಸೆಷನ್ ನಂಬರ್) ಇರುತ್ತವೆ. ಗ್ರಂಥದಲ್ಲಿ ಅಂಟಿಸಿರುವ ಗ್ರಂಥಪಾಕೀಟಿನಲ್ಲಿ ಇದನ್ನು ಇಟ್ಟಿರುತ್ತಾರೆ. ಈ ಗ್ರಂಥಪಾಕೀಟು ಗ್ರಂಥಾಲಯದ ನಿಯಮಗಳನ್ನು ಸೂಚಿಸುತ್ತದೆ. ಪ್ರತಿಯೊಂದು ಗ್ರಂಥಕ್ಕೂ ಆ ಗ್ರಂಥವನ್ನು ಹಿಂದಿರುಗಿಸುವ ದಿನಾಂಕವನ್ನು ಸೂಚಿಸುವ ತಾರೀಕು ಚೀಟಿಯನ್ನು ಅಂಟಿಸಿರುತ್ತದೆ. ಪ್ರತಿಯೊಬ್ಬ ಓದುಗನಿಗೂ ಆತ ಎಷ್ಟು ಪುಸ್ತಕಗಳನ್ನು ಪಡೆಯಬಹುದೋ ಅಷ್ಟು ವಾಚಕ ಪತ್ರಕ ಅಥವಾ ಟಿಕೀಟುಗಳನ್ನು ಕೊಟ್ಟಿರುತ್ತಾರೆ. ಈ ಟಿಕೀಟುಗಳಲ್ಲಿ ಓದುಗನ ಹೆಸರು, ವಿಳಾಸ ಮತ್ತು ಅವನ ಸಹಿಗಳಿರುತ್ತವೆ. ಪುಸ್ತಕವನ್ನು ಓದುಗರಿಗೆ ಕೊಡುವಾಗ ಅದರಲ್ಲಿರುವ ಗ್ರಂಥ ಪತ್ರಕವನ್ನು ವಾಚಕ ಟಿಕೀಟಿನಲ್ಲಿಟ್ಟು ಅದನ್ನು ಆಯಾ ದಿನದ ತಾರೀಖಿನ ಕೆಳಗೆ ಜೋಡಿಸಲಾಗುತ್ತದೆ. ಪುಸ್ತಕದಲ್ಲಿರುವ ತಾರೀಕು ಚೀಟಿಯ ಮೇಲೆ ಪುಸ್ತಕವನ್ನು ಹಿಂದಿರುಗಿಸುವ ತಾರೀಕನ್ನು ನಮೂದಿಸಲಾಗುತ್ತದೆ. ಪುಸ್ತಕ ಮತ್ತೆ ಗ್ರಂಥಾಲಯಕ್ಕೆ ಮರಳಿ ಬಂದಾಗ ತಾರೀಕು ಚೀಟಿಯ ಮೇಲೆ ನಮೂದಿಸಿರುವ ದಿನಾಂಕವನ್ನು ನೋಡಿ ಅದರ ಪ್ರಕಾರ ಆ ಪುಸ್ತಕದ ಗ್ರಂಥಪತ್ರಕವನ್ನು ಆ ಓದುಗನ ವಾಚಕ ಟಿಕೀಟುಗಳೊಡನೆ ತೆಗೆದು, ವಾಚಕನ ಟಿಕೀಟನ್ನು ಓದುಗನಿಗೆ ಹಿಂದಿರುಗಿಸಿ ಗ್ರಂಥಪತ್ರಕವನ್ನು ಪುಸ್ತಕದಲ್ಲಿಟ್ಟು ಗ್ರಂಥವನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುತ್ತದೆ.

ಈ ಪದ್ಧತಿ ಸರಳವೂ ಗಂಟೆಯಲ್ಲಿ 300 ಪುಸ್ತಕಗಳನ್ನು ಕೊಡಲು ಸಾಧ್ಯವೆಂದೂ ಅಂದಾಜು ಮಾಡಲಾಗಿದೆ. ಆಯಾ ದಿನಾಂಕದ ಕೆಳಗೆ ವಾಚಕ ಟಿಕೀಟನ್ನು ಗ್ರಂಥ ಪತ್ರಕಗಳೊಡನೆ ಜೋಡಿಸುವುದರಿಂದ ಯಾವ ಪುಸ್ತಕ ಗ್ರಂಥಾಲಯಕ್ಕೆ ಮರಳಿ ಬಂದಿಲ್ಲವೆಂಬುದು ತಿಳಿಯುತ್ತದೆ. ಜ್ಞಾಪಕಪತ್ರವನ್ನು ಕಳುಹಲೂ ತಡವಾಗಿ ಬಂದ ಪುಸ್ತಕಗಳಿಗೆ ನಿಯಮಿತ ದಂಡವನ್ನು ವಸೂಲುಮಾಡಲೂ ಪುಸ್ತಕ ಪರಿಚಲನೆಯ ಅಂಕಿ ಸಂಖ್ಯೆಗಳನ್ನು ನೀಡಲೂ ಅನುಕೂಲವಾಗುತ್ತದೆ. ಈ ಪದ್ಧತಿಯಿಂದ ಕೆಲವು ಅನಾನುಕೂಲಗಳು ಉಂಟು. ಇದರಿಂದ ಯಾವ ಪುಸ್ತಕ ಯಾರ ಹೆಸರಿನಲ್ಲಿದೆ ಎಂದು ತಿಳಿಯುವುದಾಗಲಿ ಶಾಶ್ವತ ದಾಖಲೆ ಇಡುವುದಾಗಲಿ ಸಾಧ್ಯವಿಲ್ಲ. ಒಂದೊಂದು ವೇಳೆ ವಾಚಕ ಟಿಕೇಟುಗಳನ್ನು ಅವುಗಳ ಗ್ರಂಥಪತ್ರಕಗಳೊಡನೆ ತಪ್ಪು ತಾರೀಕಿನ ಕೆಳಗೆ ಜೋಡಿಸಿರುವುದರಿಂದ ಹಾಗೂ ಗ್ರಂಥಪತ್ರಕಗಳನ್ನು ತಪ್ಪುವಾಚಕ ಟಿಕೀಟಿನಲ್ಲಿ ಸೇರಿಸುವುದರಿಂದ ಪುಸ್ತಕಗಳನ್ನು ಮರಳಿ ಪಡೆಯುವುದರಲ್ಲಿ ವಿಳಂಬವಾಗಬಹುದು.

**(ಆ) ರಂಗನಾಥನ್ನರ ರೀಡರ್ಸ್ ಟಿಕೆಟ್ ಬುಕ್ ಪದ್ಧತಿ :** ಇದನ್ನು ರಂಗನಾಥನ್ ಮದ್ರಾಸು ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ 1920–30ರ ಸುಮಾರಿನಲ್ಲಿ ಆಚರಣೆಗೆ ತಂದರು. ಇದು ಬ್ರೌನ್ ಪದ್ಧತಿಯಿಂದ ಸ್ವಲ್ಪಮಟ್ಟಿಗೆ ಬೇರೆಯಾಗಿದೆ.

**(ಇ) ನೆವಾರ್ಕ್ ಪದ್ಧತಿ :** 1900ರಲ್ಲಿ ಅಮೆರಿಕದ ನ್ಯೂಜೆರ್ಸಿ ರಾಜ್ಯದ ನೆವಾರ್ಕ್‍ನ ಸಾರ್ವಜನಿಕ ಗ್ರಂಥಾಲಯದಲ್ಲಿ ಆಗಿನ ಗ್ರಂಥಾಲಯಾಧಿಕಾರಿಯಾಗಿದ್ದ ಜಾನ್ ಕಾಟನ್ ಡ್ಯಾನ ಈ ಪದ್ಧತಿಯನ್ನು ಆಚರಣೆಗೆ ತಂದರು. ಇದರಂತೆ ಗ್ರಂಥಾಲಯದ ಪ್ರತಿಯೊಬ್ಬ ಸದಸ್ಯನೂ ಒಂದು ವಾಚಕಪತ್ರಕ ಅಥವಾ ಗುರುತು ಪತ್ರಕವನ್ನು ಹೊಂದಿರುತ್ತಾನೆ. ಈ ಪತ್ರಕದಲ್ಲಿ ಸದಸ್ಯನ ಹೆಸರು, ವಿಳಾಸ ಮತ್ತು ಸದಸ್ಯತ್ವದ ಸಂಖ್ಯೆ, ಪುಸ್ತಕ ಕೊಡುವ ದಿನಾಂಕ ಮತ್ತು ಅದನ್ನು ಮರಳಿ ಪಡೆಯುವ ದಿನಾಂಕಗಳನ್ನು ಗುರುತಿಸಲಾಗಿದೆ. ಪ್ರತಿಯೊಂದು ಪುಸ್ತಕದ ಗ್ರಂಥಪತ್ರಕವೂ ಗ್ರಂಥಕರ್ತೃ, ಪುಸ್ತಕದ ಶಿರೋನಾಮೆ, ಬೋಧಾಂಕ ಮತ್ತು ಪರಿಗ್ರಹಣ ಕ್ರಮಾಂಕಗಳಲ್ಲದೆ ಪುಸ್ತಕ ಕೊಡುವ ಮತ್ತು ಅದನ್ನು ಮರಳಿ ಪಡೆಯುವ ದಿನಾಂಕಗಳನ್ನೊಳಗೊಂಡಿರುತ್ತದೆ.

ಪುಸ್ತಕವನ್ನು ಸದಸ್ಯನಿಗೆ ಕೊಡುವಾಗ, ಕೊಡುವ ದಿನಾಂಕ ಮತ್ತು ಅದನ್ನು ಹಿಂದಿರುಗಿಸಬೇಕಾದ ದಿನಾಂಕಗಳನ್ನು ಪುಸ್ತಕಕ್ಕೆ ಲಗತ್ತಿಸಿರುವ ವಾಯಿದೆ ದಿನಾಂಕ ಚೀಟಿಯ ಮೇಲೂ ಗ್ರಂಥಪತ್ರಕ ಮತ್ತು ವಾಚಕ ಪತ್ರಕಗಳ ಮೇಲೂ ಗುರುತಿಸಲಾಗುತ್ತದೆ. ವಾಚಕನ ಸದಸ್ಯತ್ವದ ದಾಖಲೆಯ ಸಂಖ್ಯೆಯನ್ನು ಗ್ರಂಥಪತ್ರಕದಲ್ಲಿ ಬರೆದು ಅನಂತರ ಪುಸ್ತಕ ಮತ್ತು ವಾಚಕಪತ್ರಕ ಇಲ್ಲವೆ ಗುರುತುಪತ್ರಕವನ್ನು ಓದುಗನಿಗೆ ಹಿಂದಿರುಗಿಸಲಾಗುವುದು. ಗ್ರಂಥಪತ್ರಕವನ್ನು ಆಯಾ ದಿನದ ಡೇಟ್ ಗೈಡ್ ಕೆಳಗಡೆ ಜೋಡಿಸಲಾಗುವುದು. ಪುಸ್ತಕವನ್ನು ಮರಳಿ ಪಡೆಯುವಾಗ ವಾಯಿದೆ ದಿನಾಂಕ ಚೀಟಿಯ ಮೇಲಿರುವ ದಿನಾಂಕವನ್ನು ನೋಡಿ ಅದರ ಪ್ರಕಾರ ಗ್ರಂಥಪತ್ರಕವನ್ನು ತೆಗೆದು ಪುಸ್ತಕ ಹಿಂದಿರುಗಿದ ದಿನಾಂಕವನ್ನು ಗ್ರಂಥಪತ್ರಕ ಮತ್ತು ವಾಚಕ ಪತ್ರಕದಲ್ಲಿ ಬರೆದು ಗ್ರಂಥಪತ್ರಕವನ್ನು ಪುಸ್ತಕದಲ್ಲಿಟ್ಟು ಗ್ರಂಥವನ್ನು ಸ್ವಸ್ಥಾನಕ್ಕೆ ಸೇರಿಸುತ್ತಾರೆ. ಈ ಪದ್ಧತಿಯಿಂದ ಆಗುವ ಅನುಕೂಲವೆಂದರೆ ಒಂದು ಪುಸ್ತಕಕ್ಕೆ ಇರುವ ಬೇಡಿಕೆ, ಒಬ್ಬ ಓದುಗ ಎಷ್ಟು ಪುಸ್ತಕಗಳನ್ನು ತೆಗೆದುಕೊಂಡಿದ್ದಾನೆ, ಮತ್ತು ಯಾವ ಪುಸ್ತಕ ಯಾರಲ್ಲಿದೆ ಎಂಬುದನ್ನು ಸುಲಭವಾಗಿ ತಿಳಿಯಬಹುದು. ಬ್ರೌನ್ ಪದ್ಧತಿಯಲ್ಲಿ ಆಗುವ ಹಾಗೆ ಇಲ್ಲಿ ಪುಸ್ತಕಗಳನ್ನು ಕೊಟ್ಟ ದಾಖಲೆಗಳು ಸ್ಥಾನಪಲ್ಲಟವಾಗುವ ಸಂಭವವಿಲ್ಲ. ಆದರೆ ಈ ಪದ್ಧತಿಯಿಂದ ಹೆಚ್ಚು ಸಮಯ ವ್ಯಯವಾಗುತ್ತದೆ. ಪುಸ್ತಕವನ್ನು ಕೊಡುವಾಗ ಮತ್ತು ಅದನ್ನು ಮರಳಿ ಪಡೆಯುವಾಗ ಮೂರು ಕಡೆ ದಿನಾಂಕದ ಗುರುತನ್ನು ಒತ್ತುವುದಲ್ಲದೆ ಸದಸ್ಯತ್ವದ ಸಂಖ್ಯೆಯನ್ನು ಗ್ರಂಥಪುಸ್ತಕದ ಮೇಲೆ ಬರೆಯಬೇಕಾಗುತ್ತದೆ.

**ಡೆಟ್ರಾಯಿಟ್ ಸೆಲ್ಫ್ ಚಾರ್ಜಿಂಗ್ ಪದ್ಧತಿ :** ರಾಲ್ಫ್ ಎ. ಅಲ್‍ವೆಲಿಂಗ್ ಎಂಬಾತ 1929ರಲ್ಲಿ ಈ ಪದ್ಧತಿಯನ್ನು ಡೆಟ್ರಾಯಿಟ್ ಸಾರ್ವಜನಿಕ ಗ್ರಂಥಾಲಯದಲ್ಲಿ ಪ್ರಾರಂಭಿಸಿದ. ನೆವಾರ್ಕ್ ಪದ್ಧತಿಗೆ ಬೇಕಾಗುವ ಸಾಮಗ್ರಿಗಳನ್ನೇ ಇದಕ್ಕೆ ಬಳಸಬಹುದು. ಆದರೆ ವಾಯಿದೆ ದಿನಾಂಕ ಚೀಟಿಗಳ ಬದಲಾಗಿ ಡೇಟ್ ಡ್ಯೂ ಪತ್ರಕಗಳನ್ನು ಬಳಸುತ್ತಾರೆ. ತನಗೆ ಬೇಕೆನಿಸಿದ ಪುಸ್ತಕವನ್ನು ಆಯ್ದು, ಓದುಗ ಸದಸ್ಯತ್ವದ ಸಂಖ್ಯೆಯನ್ನು ಗ್ರಂಥಪತ್ರದಲ್ಲಿ ಬರೆದು, ಗ್ರಂಥಾಲಯದ ಸಹಾಯಕನಿಗೆ ಕೊಡಬೇಕು. ಅನಂತರ ಸಹಾಯಕ ಗ್ರಂಥ ಪಾಕೀಟಿನಲ್ಲಿ ವಾಯಿದೆ ದಿನಾಂಕ ಪತ್ರಕವನ್ನು ಸೇರಿಸಿ ವಾಚಕಪತ್ರದ ಜೊತೆಯಲ್ಲಿ ಪುಸ್ತಕವನ್ನು ಓದುಗನಿಗೆ ಕೊಡುತ್ತಾನೆ. ಪುಸ್ತಕ ಗ್ರಂಥಾಲಯಕ್ಕೆ ಮರಳಿ ಬಂದಾಗ ಅದರಲ್ಲಿರುವ ವಾಯಿದೆ ದಿನಾಂಕ ಪತ್ರಕವನ್ನು ನೋಡಿ ಅದರಂತೆ ಗ್ರಂಥಪತ್ರಕವನ್ನು ತೆಗೆದು ಆ ಪುಸ್ತಕದಲ್ಲಿ ಮತ್ತೆ ಸೇರಿಸಿ, ಪುಸ್ತಕವನ್ನು ಹಿಂದಿರುಗಿ ಪಡೆಯುತ್ತಾನೆ. ವಾಯಿದೆ ದಿನಾಂಕ ಪತ್ರಕಗಳನ್ನು ಒಂದಕ್ಕಿಂತ ಹೆಚ್ಚು ಬಾರಿ ಬಳಸಲು ಸಾಧ್ಯ.

ಈ ಪದ್ಧತಿಯಿಂದ ಪುಸ್ತಕವಿನಿಯೋಗ ಕಾಲವನ್ನು ಮಿತಗೊಳಿಸಬಹುದು. ಅಲ್ಲದೇ ನೆವಾರ್ಕ್ ಪದ್ಧತಿಯಂತೆ ಅನೇಕ ಕಡೆ ಬರೆಯುವ ಆವಶ್ಯಕತೆಯಿರುವುದಿಲ್ಲ ಮತ್ತು ಕೆಡಿಸಬೇಕಾದುದಿಲ್ಲ. ಆದರೆ ಓದುಗ ಬರೆದ ಪತ್ರಕಗಳನ್ನು ಪರೀಕ್ಷಿಸದೆ ಪುಸ್ತಕಗಳನ್ನು ಕೊಡುವುದು ಅಪಾಯಕರ.

**3. ಯಾಂತ್ರಿಕ ಪದ್ಧತಿ :** ಇದರಲ್ಲಿ ಎರಡು ಬಗೆಗಳಿವೆ :

(ಅ) ಡಿಕ್‍ಮನ್ ಚಾರ್ಜಿಂಗ್ ಪದ್ಧತಿ: ಈ ಪದ್ಧತಿಯಲ್ಲಿ ಪುಸ್ತಕಗಳನ್ನು ಕೊಡುವಾಗ, ಮರಳಿ ಪಡೆಯುವಾಗ ಡಿಕ್‍ಮನ್ ಮೆಕ್ಯಾನಿಕಲ್ ಬುಕ್ ಚಾರ್ಜರನ್ನು ಉಪಯೋಗಿಸಲಾಗುತ್ತದೆ. ಅನೇಕ ಪ್ರಯೋಗಗಳ ಅನಂತರ ಇದನ್ನು 1927ರಲ್ಲಿ ನ್ಯೂಯಾರ್ಕಿನ ಲೈಬ್ರರಿ ಎಫಿಷಿಯೆನ್ಸಿ ಕಾರ್ಪೋರೇಷನ್ ಅವರಿಂದ ಮಾಡಿಸಿ ಕೊಲಂಬಿಯ ಡಿಸ್ಟ್ರಿಕ್ಟಿನ ಸಾರ್ವಜನಿಕ ಗ್ರಂಥಾಲಯದಲ್ಲಿ ಮೊದಲು ಸ್ಥಾಪಿಸಲಾಯಿತು.

ಈ ಪದ್ಧತಿಯಲ್ಲಿ ವಾಚಕ ಪತ್ರಗಳಿಗೆ ಸದಸ್ಯತ್ವದ ದಾಖಲೆಯ ಸಂಖ್ಯೆಯನ್ನು ಹೊಂದಿರುವ ಒಂದು ಲೋಹದ ತಗಡನ್ನು ಸೇರಿಸಲಾಗಿರುತ್ತದೆ. ಪುಸ್ತಕಗಳನ್ನು ಕೊಡಲು ಪ್ರಾರಂಭಿಸುವ ಮೊದಲು ಬುಕ್ ಚಾರ್ಜಿಂಗ್ ಮಷೀನಿನ ಬಲಭಾಗದ ಕಿಂಡಿಯ ಹತ್ತಿರ ತಾರೀಕನ್ನು ಕೆತ್ತಿರುವ ಲೋಹದ ತಗಡನ್ನು ಸೇರಿಸಬೇಕು. ಓದುಗ ಪುಸ್ತಕಗಳೊಡನೆ ವಾಚಕ ಪತ್ರಕಗಳನ್ನು ಕೊಡುತ್ತಾನೆ. ಗ್ರಂಥಾಲಯದ ಸಹಾಯಕ ಪುಸ್ತಕದಿಂದ ಯಂತ್ರಪುಸ್ತಕವನ್ನು ತೆಗೆದು ಈ ಯಂತ್ರದಲ್ಲಿಡುತ್ತಾನೆ. ಸದಸ್ಯತ್ವದ ದಾಖಲೆ ಸಂಖ್ಯೆಯನ್ನು ಹೊಂದಿರುವ ಲೋಹದ ತಗಡನ್ನು ಯಂತ್ರದ ಎಡಭಾಗದಲ್ಲಿಡಲಾಗುತ್ತದೆ. ಅನಂತರ, ಯಂತ್ರ ಕೆಲಸ ಮಾಡಿದಾಗ ಸದಸ್ಯತ್ವ ದಾಖಲೆ ಸಂಖ್ಯೆ ಮತ್ತು ಪುಸ್ತಕ ಕೊಡುವ ದಿನಾಂಕ ಗ್ರಂಥ ಪ್ರತಕದ ಮೇಲೆ ಮುದ್ರಿತವಾಗುತ್ತದೆ. ವಾಯಿದೆ ದಿನಾಂಕ ಗ್ರಂಥಪತ್ರಕದ ಮೇಲೆ ಮುದ್ರಿತವಾಗುತ್ತದೆ. ವಾಯಿದೆ ದಿನಾಂಕ ಪತ್ರಕವನ್ನು ಗ್ರಂಥ ಪಾಕೀಟಿನಲ್ಲಿಟ್ಟು ಗ್ರಂಥಸಹಾಯಕ ಪುಸ್ತಕವನ್ನು ಓದುಗನಿಗೆ ಕೊಡುತ್ತಾನೆ. ಪುಸ್ತಕ ಗ್ರಂಥಾಲಯಕ್ಕೆ ಮರಳಿ ಬಂದಾಗ ಗ್ರಂಥಪತ್ರಕವನ್ನು ವಾಯಿದೆ ದಿನಾಂಕ ಪತ್ರಕದ ಮೇರೆಗೆ ತೆಗೆದು ಗ್ರಂಥ ಪಾಕೀಟಿನಲ್ಲಿಟ್ಟು ಪುಸ್ತಕವನ್ನು ಹಿಂತೆಗೆದುಕೊಳ್ಳಲಾಗುತ್ತದೆ.

ಈ ಪದ್ಧತಿಯಲ್ಲಿ ಹೆಚ್ಚು ಸಿಬ್ಬಂದಿಗಳ ಆವಶ್ಯಕತೆಯಿರುವುದಿಲ್ಲ, ಕೈಯಿಂದ ಬರೆಯುವ ತಾಪತ್ರಯವಿರುವುದಿಲ್ಲ. ಕೆಲಸ ಬೇಗ ಆಗುತ್ತದೆ. ಇದರಿಂದ ಯಾವ ಪುಸ್ತಕ ಯಾರಲ್ಲಿದೆ, ಯಾವಾಗ ಗ್ರಂಥಾಲಯಕ್ಕೆ ಮರಳಿ ಬರುತ್ತದೆ ಎಂಬ ಅಂಶಗಳ ಹಾಗೂ ಪುಸ್ತಕಗಳನ್ನು ಕೊಡುಕೊಳ್ಳುವ ಶಾಶ್ವತ ದಾಖಲೆಗಳನ್ನು ಇಡಲು ಸಹಾಯಕವಾಗುತ್ತದೆ.

ಅನಾನುಕೂಲತೆಗಳೆಂದರೆ ಪ್ರತಿಯೊಂದು ವಾಚಕ ಪತ್ರಕಕ್ಕೂ ಒಂದು ಲೋಹದ ತಗಡಿನ ಆವಶ್ಯಕತೆ ಇದೆ. ಯಂತ್ರ ಹೆಚ್ಚು ಶಬ್ದ ಮಾಡುವುದರಿಂದ ಓದುಗರಿಗೆ ತೊಂದರೆಯಾಗುತ್ತದೆ ಮತ್ತು ಒಂದು ವೇಳೆ ಯಂತ್ರ ಕೆಟ್ಟು ಹೋದರೆ ಕೊಡುಕೊಳ್ಳುವ ವ್ಯವಹಾರ ಸಂಪೂರ್ಣವಾಗಿ ನಿಂತು ಹೋಗುತ್ತದೆ.

(ಆ) ಗೇಲಾರ್ಡ್ ಚಾರ್ಜಿಂಗ್ ಪದ್ಧತಿ: 1932 ರಲ್ಲಿ ಗೇಲಾರ್ಡ್ ಸಹೋದರರು ವಿದ್ಯುತ್ತಿನ ಸಹಾಯದಿಂದ ಗ್ರಂಥವನ್ನು ಕೊಡುಕೊಳ್ಳುವ ಎಲೆಕ್ಟ್ರಿಕ್ ಚಾರ್ಜಿಂಗ್ ಪದ್ಧತಿಯನ್ನು ಪ್ರಥಮತಃ ಜಾರಿಗೆ ತಂದರು. ಇದೊಂದು ವಿಷಯವನ್ನು ಬಿಟ್ಟರೆ ಮಿಕ್ಕ ವಿಚಾರದಲ್ಲಿ ಇದು ನೆವಾರ್ಕ್ ಪದ್ಧತಿಯಲ್ಲಿ ಉಪಯೋಗಿಸುವ ಎಲ್ಲ ವಿಧಾನ ಮತ್ತು ದಾಖಲೆಗಳನ್ನು ಉಳಿಸಿಕೊಂಡಿದೆ.

**4 ಛಾಯಾಚಿತ್ರಗ್ರಹಣ ಪದ್ಧತಿ:** ಈ ಪದ್ಧತಿಯನ್ನು ಪ್ರಥಮತಃ ಜಾರಿಗೆ ತರಲು ಕಾರಣನಾದವನು ವಾಷಿಂಗ್ಟನ್ನಿನ ಯು. ಎಸ್. ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರ್ ಲೈಬ್ರರಿಯ ಗ್ರಂಥಾಲಯಾಧಿಕಾರಿಯಾದ ರಾಲ್ಫ್ ಆರ್.ಷಾ. ಈತ 1940ರಲ್ಲಿ ಗ್ಯಾರಿ ಸಾರ್ವಜನಿಕ ಗ್ರಂಥಾಲಯದಲ್ಲಿ ಗ್ರಂಥಾಲಯಾಧಿಕಾರಿಯಾಗಿದ್ದಾಗ, ಗ್ರಂಥ ಪರಿಚಲನೆಯ ಕಾರ್ಯವನ್ನು ದಾಖಲು ಮಾಡಲು, ಮೈಕ್ರೊಫಿಲ್ಮ್ ಕ್ಯಾಮರಾವನ್ನು ಉಪಯೋಗಿಸಿದ. ಇದನ್ನು 1955ರಲ್ಲಿ ಗ್ರೇಟ್ ಬ್ರಿಟನ್ನಿನ ಕೇಂದ್ರ ಸಾರ್ವಜನಿಕ ಗ್ರಂಥಾಲಯದಲ್ಲಿ ಪ್ರಥಮತಃ ಬಳಸಿ ಆ ಪ್ರಯೋಗ ಜಯಪ್ರದವಾದಮೇಲೆ ಇದನ್ನು ಇತರ ಗ್ರಂಥಾಲಯಗಳಲ್ಲಿಯೂ ಉಪಯೋಗಕ್ಕೆ ತರಲಾಯಿತು. ಇದಕ್ಕೆ ಬೇಕಾಗುವ ಸಾಮಗ್ರಿಗಳು: ಪ್ರತಿ ಗ್ರಂಥದಲ್ಲೂ ಒಂದೊಂದು ಗ್ರಂಥ ಪಾಕೀಟು ಇರುತ್ತದೆ. ಪ್ರತಿ ಪುಸ್ತಕದ ಒಳಗಡೆಯ ಮೊದಲ ಹಾಳೆಯ ಬಲತುದಿಯ ಮೇಲೆ ಕಪ್ಪು ಶಾಯಿಯಲ್ಲಿ ಆ ಗ್ರಂಥದ ಕರ್ತೃ, ಶಿರೋನಾಮೆ, ಬೋಧಾಂಕ ಮತ್ತು ಪರಿಗ್ರಹಣ ಕ್ರಮಾಂಕವನ್ನು ಬರೆಯಬೇಕು. ವಾಚಕ ಪತ್ರಕ ಓದುಗರ ಬಗ್ಗೆ ಎಲ್ಲ ವಿಷಯಗಳನ್ನೂ ಒಳಗೊಂಡಿರುತ್ತದೆ. ಇಷ್ಟೇ ಅಲ್ಲದೆ, 10 ಮಿಮೀ ಫಿಲ್ಮ್‌ಗಳು ಫಿಲ್ಮ್ ರೋಲುಗಳು, ಮೈಕ್ರೊಫಿಲ್ಮ್ ರೀಡರ್, ದಿನಾಂಕ ಮತ್ತು ಕ್ರಮಸಂಖ್ಯೆಗಳನ್ನೊಳಗೊಂಡ ವ್ಯವಹಾರ ಪತ್ರಕಗಳೂ ಬೇಕಾಗುತ್ತದೆ.

ಆರಿಸಿದ ಪುಸ್ತಕವನ್ನು ಓದುಗ ತನ್ನ ಗುರುತು ಪತ್ರಕದೊಡನೆ ಗ್ರಂಥಾಲಯ ಸಹಾಯಕನಿಗೆ ತಂದುಕೊಡುತ್ತಾನೆ. ಗ್ರಂಥಾಲಯ ಸಹಾಯಕ ಮೊದಲೇ ಗುರುತಿಸಿದ ದಿನಾಂಕ ಮತ್ತು ಸಂಖ್ಯೆಯನ್ನೊಳಗೊಂಡ ವ್ಯವಹಾರ ಪತ್ರಕ ಮತ್ತು ಗುರುತಿನ ಪತ್ರಕದೊಂದಿಗೆ ಆ ಗ್ರಂಥವನ್ನು ಮೈಕ್ರೊಫಿಲ್ಮ್ ಯಂತ್ರದಲ್ಲಿ ಒಂದು ಗೊತ್ತಾದ ವಿಧಾನದಲ್ಲಿ ಅಳವಡಿಸುತ್ತಾನೆ. ಗುಂಡಿಯನ್ನು ಒತ್ತಿದಾಗ ಕೊಡಬೇಕಾಗಿರುವ ಪುಸ್ತಕದ, ಮೇಲೆ ಹೇಳಿದ ದಾಖಲೆಗಳೆಲ್ಲವೂ ಫಿಲ್ಮಿನ ಮೇಲೆ ಚಿತ್ರಿತವಾಗುತ್ತವೆ. ಇದಾದ ಮೇಲೆ ಗ್ರಂಥ ಪಾಕೀಟಿನಲ್ಲಿರುವ ವ್ಯವಹಾರ ಪತ್ರಕದೊಂದಿಗೆ ಪುಸ್ತಕವನ್ನು ಓದುಗನಿಗೆ ಕೊಡಲಾಗುತ್ತದೆ. ಪುಸ್ತಕ ಗ್ರಂಥಾಲಯಕ್ಕೆ ಮರಳಿ ಬಂದಾಗ ವ್ಯವಹಾರ ಪತ್ರಕವನ್ನು ಹೊರತೆಗೆದು ಅದನ್ನು ಪ್ರತ್ಯೇಕವಾಗಿಡುತ್ತಾನೆ. ಹೀಗೆ, ಕೊಟ್ಟ ಗ್ರಂಥವನ್ನು ಮರಳಿ ಪಡೆಯಬೇಕು. ಈ ಪತ್ರಕಗಳನ್ನು ಕ್ರಮಸಂಖ್ಯೆಯ ಪ್ರಕಾರ ಜೋಡಿಸಬೇಕು. ಹಾಗೆ ಜೋಡಿಸಿದಾಗ ಯಾವುದಾದರೂ ಸಂಖ್ಯೆ ಇಲ್ಲದಿದ್ದರೆ ಅದಕ್ಕೆ ಸಂಬಂಧಿಸಿದ ಗ್ರಂಥ ಗ್ರಂಥಾಲಯಕ್ಕೆ ಮರಳಿ ಬಂದಿಲ್ಲವೆಂದು ಅರ್ಥ. ಅನಂತರ ಅವುಗಳಿಗೆ ಜ್ಞಾಪಕ ಪತ್ರಗಳನ್ನು ಕಳುಹಿಸಲೂ ಅನುಕೂಲವಾಗುತ್ತದೆ.

ಇಲ್ಲಿ ಸಂಪೂರ್ಣ ಕೆಲಸ ಯಂತ್ರದ ಸಹಾಯದಿಂದ ಆಗುವುದರಿಂದ ದಾಖಲೆಗಳನ್ನು ಸರಿಯಾಗಿಡಲು ಸಾಧ್ಯವಾಗುತ್ತದೆ ಮತ್ತು ತಪ್ಪಿಗೆ ಎಲ್ಲೂ ಅವಕಾಶವಿರುವುದಿಲ್ಲ. ವೇಳೆ ಉಳಿಯುತ್ತದೆ. ಗ್ರಂಥಗಳ ಕೊಡುಕೊಳ್ಳುವ ಶಾಶ್ವತ ದಾಖಲೆಗಳನ್ನಿಡಲು, ಪರಿಚಲನೆಯ ಅಂಕಿಅಂಶಗಳನ್ನು ಕ್ರಮವಾಗಿಡಲು ಅನುಕೂಲ.

ಗ್ರಂಥ ಪತ್ರಕಗಳಿಲ್ಲದಿರುವುದರಿಂದ ಈ ಪದ್ಧತಿಯಲ್ಲಿ ಯಾವ ಪುಸ್ತಕ ಎಲ್ಲಿದೆ ಎಂಬುದನ್ನು ಫಿಲ್ಮನ್ನು ಮೈಕ್ರೊಫಿಲ್ಮ್ ರೀಡರ್‌ನಲ್ಲಿ ಓದದೆ ತತ್‌ಕ್ಷಣ ಹೇಳಲು ಸಾಧ್ಯವಿಲ್ಲ. ಓದುಗರಿಗೆ ಅವರು ಎಷ್ಟು ಪುಸ್ತಕ ಓದಿದ್ದಾರೆ ಎಂಬುದರ ದಾಖಲೆಯೂ ಸಿಗುವುದಿಲ್ಲ. ವ್ಯವಹಾರ ಪತ್ರಕಗಳು ಕಳೆದು ಹೋಗುವ ಸಂಭವವೂ ಉಂಟು.

**5. ಶ್ರವಣ ಪದ್ಧತಿ:** 1948 – 49 ಈ ಪದ್ಧತಿಯನ್ನು ಮೊದಲನೆಯದಾಗಿ ಸೇಂಟ್ ಲೂಯಿ ನಗರ ಸಾರ್ವಜನಿಕ ಗ್ರಂಥಾಲಯದಲ್ಲಿ ಬಳಕೆಗೆ ತರಲಾಯಿತು. ಇದನ್ನು ಡಿಕ್ಟಾಫೋನ್ ಚಾರ್ಜಿಂಗ್ ಸಿಸ್ಟಮ್ ಎಂದು ಕರೆಯುತ್ತಾರೆ. ಇದು ಎಲ್ಲ ವಿಷಯದಲ್ಲೂ ಫೋಟೋ ಚಾರ್ಜಿಂಗ್ ಪದ್ಧತಿಯನ್ನೇ ಹೋಲುತ್ತದೆ. ಆದರೆ ದಾಖಲೆಗಳನ್ನು ಮೈಕ್ರೊಫಿಲ್ಮ್ ಮಾಡುವ ಬದಲು ಬೇಕಾದ ವಿಷಯಗಳನ್ನು ಮೈಕ್ರೊಫೋನಿನ ಮೂಲಕ ಹೇಳಿ ಅವನ್ನು ಟೇಪುಗಳಲ್ಲಿ ಇಲ್ಲವೆ ರಿಕಾರ್ಡಿಂಗ್ ಡಿಸ್ಕುಗಳಲ್ಲಿ ದಾಖಲು ಮಾಡಲಾಗುತ್ತದೆ.

**6. ಇತರ ಪದ್ಧತಿಗಳು:**

**(ಅ) ರಂಧ್ರಕ ಪತ್ರಕ ಪದ್ಧತಿ (ಪಂಚ್ ಕಾರ್ಡ್ ಸಿಸ್ಟಮ್) :** ಈ ಪದ್ಧತಿಯ ವೈಶಿಷ್ಟ್ಯವೆಂದರೆ ಈ ರಂಧ್ರಕ ಪತ್ರಕಗಳನ್ನು ಪುಸ್ತಕಗಳನ್ನು ಕೊಡುಕೊಳ್ಳುವ ವ್ಯವಹಾರದಲ್ಲಿ, ಕರೆ ಪತ್ರಕ (ಕಾಲ್ ಕಾರ್ಡ್), ಗ್ರಂಥ ಪತ್ರಕ, ವ್ಯವಹಾರ ಪತ್ರಕ (ಟ್ರ್ಯಾನ್ಸ್ಯಾಕ್ಷನ್ ಕಾರ್ಡ್) ಗಳನ್ನಾಗಿ ಬಳಸುತ್ತಾರೆ. ಇವುಗಳಲ್ಲಿ ಮುಖ್ಯವಾಗಿ ಹಾಲೆತ್, ಐ.ಬಿ.ಎಮ್., ರೆಮಿಂಗ್‌ಟನ್, ಮ್ಯಾಕ್‌ಬೀ, ಕೀಸಾರ್ಟ್ ಪತ್ರಕಗಳು ಹೆಚ್ಚು ಬಳಕೆಯಲ್ಲಿವೆ. ಈ ಪದ್ಧತಿ ಮೊಟ್ಟಮೊದಲು 1936ರಲ್ಲಿ ರಾಲ್ಫ್ ಎಚ್. ಪಾರ್ಕರ್ ಎಂಬಾತನಿಂದ ಟೆಕ್ಸಸ್ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಬಳಕೆಗೆ ಬಂತು. ಫ್ರೆಡ್ರಿಕ್ ಜಿ. ಕಿಲ್‌ಗೂರ್ ಎಂಬಾತ ಕೀಸಾರ್ಟ್ ರಂಧ್ರಕ ಪತ್ರಕಗಳನ್ನು 1939ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಬಳಕೆಗೆ ತಂದ.

ಈ ಪದ್ಧತಿಯಿಂದ ಕೆಲಸ ತ್ವರಿತ ಗತಿಯಿಂದಲೂ ದಕ್ಷತೆಯಿಂದಲೂ ನಡೆಯುತ್ತದೆ. ಪುಸ್ತಕಗಳ ಪರಿಚಲನೆಯ ಅಂಕಿ ಸಂಖ್ಯೆಗಳನ್ನಿಡಲು ಸಾಧ್ಯವಾಗುತ್ತದೆ. ವಾಯಿದೆ ದಿನಾಂಕ ವಿಷಯಗಳೂ ಹಾಗೂ ಗ್ರಂಥದ ವಿವರಣೆಗಳೂ ಒಂದೇ ಪತ್ರಕದಲ್ಲಿ ಸಿಗುತ್ತವೆ. ಇದಕ್ಕಾಗಿ ಪ್ರತ್ಯೇಕ ಪತ್ರಕಗಳ ಆವಶ್ಯಕತೆಯಿರುವುದಿಲ್ಲ. ದಾಖಲೆಗಳನ್ನು ಒಂದೇ ಖಾತೆಯಲ್ಲಿ ಇಡಬಹುದು. ರಂಧ್ರಕ ಪತ್ರಕಗಳು ಗಟ್ಟಿಯಾಗಿರುವುದರಿಂದ ಬಳಸಲು ಅನುಕೂಲವಾಗಿವೆ.

ಒಂದು ನಿರ್ದಿಷ್ಟ ಪುಸ್ತಕವನ್ನು ಪರಿಚಲನ ಕಡತದಿಂತ ಹುಡುಕಿ ತೆಗೆಯುವುದು ಕಷ್ಟ ಕರೆ ಪತ್ರಕಗಳನ್ನು ಓದುಗರೇ ಬರೆಯುವುದರಿಂದ ಅವು ಓದಲು ಅಸ್ಪಷ್ಟವಾಗಿರಬಹುದು. ಅಲ್ಲದೆ ಇಷ್ಟು ದೊಡ್ಡ ದೊಡ್ಡ ಯಂತ್ರಗಳನ್ನು ಕೊಳ್ಳಲು ಸಣ್ಣ ಗ್ರಂಥಾಲಯಗಳಿಗೆ ಸಾಧ್ಯವಾಗಲಾರದು. ಯಂತ್ರಗಳನ್ನು ಬಳಸಲು ತರಬೇತಿ ಸಿಬ್ಬಂದಿಯೇ ಬೇಕಾಗುತ್ತದೆ.

**(ಆ) ವಿಸಿಬಲ್ ರೆಕಾರ್ಡ್ ಚಾರ್ಜಿಂಗ್ ಪದ್ಧತಿ:** ಓದುಗರನ್ನು ಕಂಡಕೂಡಲೇ ಗುರುತಿಸಬಹುದಾದ್ದರಿಂದ ಇದನ್ನು ಸಿಗ್ನೇಚರ್ ಚಾರ್ಜಿಂಗ್ ಪದ್ಧತಿ ಎನ್ನುತ್ತಾರೆ. ಇಂಥ ಎರಡು ಪದ್ಧತಿಗಳಾದ ಡೆಮ್ಕೊ ರೆಕಾರ್ಡ್ ಚಾರ್ಜಿಂಗ್ ಪದ್ಧತಿ ಮತ್ತು ರೆಮಿಂಗ್‌ಟನ್ ರ‍್ಯಾಂಡ್ ಇಂಡೆಕ್ಸ್ ಪದ್ಧತಿಗಳು ಡೆಮ್ಕೊ ಲೈಬ್ರರಿ ಬ್ಯೂರೊ ಡಿವಿಷನ್ ಆಫ್ ರೆಮಿಂಗ್‌ಟನ್ ಎಂಬ ಪ್ರಸಿದ್ಧ ಸಂಸ್ಥೆಗಳಿಂದ ಬಳಕೆಗೆ ಬಂದಿವೆ.

**(ಇ) ಐ.ಬಿ.ಎಮ್. ಸರ್ಕ್ಯುಲೇಷನ್ ಪದ್ಧತಿ:** ಈ ಪದ್ಧತಿಯನ್ನು 1947ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನಡೆದ ಅಮೆರಿಕದ ಗ್ರಂಥಾಲಯಗಳ ಸಮ್ಮೇಳನದಲ್ಲಿ ಅಂತಾರಾಷ್ಟ್ರೀಯ ವ್ಯವಹಾರ ಯಂತ್ರ ತಯಾರಿಕಾ ಸಂಸ್ಥೆ (ಐಬಿಎಂ) ಪ್ರತ್ಯಕ್ಷವಾಗಿ ಪ್ರಯೋಗ ಮಾಡಿ ತೋರಿಸಿತು. ಇದರಲ್ಲೂ ವ್ಯವಹಾರ ಪತ್ರಕಗಳನ್ನು ಉಪಯೋಗಿಸಲಾಗುತ್ತದೆ. ಪುಸ್ತಕ ಎರವಲು ದಾಖಲೆಗಳನ್ನು ಸಂಖ್ಯಾವಾರು ಇಡಲಾಗುತ್ತದೆ.

**(ಈ) ಐ.ಬಿ.ಎಮ್. ಮಾಡಿಫಿಕೇಷನ್:** ಮೇಲೆ ಹೇಳಿರುವ ಪದ್ಧತಿಯನ್ನು ಜಾರ್ಜ್ ಜಿ. ಯಂಗ್ ಎಂಬಾತ 1948ರಲ್ಲಿ ಸ್ವಲ್ಪ ಮಾರ್ಪಡಿಸಿ ಕಡಿಮೆ ಖರ್ಚಿನಲ್ಲಾಗುವ ಈ ಸುಧಾರಿತ ಪದ್ಧತಿಯನ್ನು ಯೋಚಿಸಿದ.

ಆಧುನಿಕವಾಗಿ ಗಣಕ ತಂತ್ರಾಂಶ ಬಳಸಿ ಗ್ರಂಥಗಳನ್ನು ಎರವಲು ನೀಡುವುದು ಹಾಗೂ ಹಿಂದಕ್ಕೆ ಪಡೆಯುವ ವ್ಯವಸ್ಥೆ ಹೆಚ್ಚುತ್ತಲಿವೆ. ಇದರಿಂದಾಗಿ ಕಾರ್ಯವು ತ್ವರಿತವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನಡೆಯುತ್ತದೆ. ಗ್ರಂಥಾಲಯಗಳಲ್ಲಿನ ಕಾರ್ಯಚಟುವಟಿಕೆಗಳನ್ನು ಗಣಕೀಕರಿಸಲು ಕಳೆದ ಒಂದೂವರೆ ದಶಕದಿಂದೀಚೆಗೆ ಹಲವಾರು ತಂತ್ರಾಂಶಗಳನ್ನು ಅಳವಡಿಸಲಾಗುತ್ತಿದೆ. ಪ್ರಮುಖವಾಗಿ ಕಂಡುಬರುವ LIBSYS, NEWGENLIB, SOUL ಮತ್ತು KOHA ಗ್ರಂಥಾಲಯ ತಂತ್ರಾಂಶಗಳನ್ನು ಹೆಚ್ಚಾಗಿ ಅಳವಡಿಸಲಾಗಿದೆ.

(ಸಿ.ಆರ್.ಎಸ್‌ಯು.; ಎನ್.ಡಿ.ಬಿ.; ಸಿ.ವಿ.ಎಚ್.)

**3. ಆಯ್ಕೆ ಮತ್ತು ಸಂಗ್ರಹಣೆ:** ಗ್ರಂಥಗಳ ಆಯ್ಕೆ ಆಯಾ ಗ್ರಂಥಾಲಯಗಳ ಉದ್ದೇಶ, ವ್ಯಾಪ್ತಿ ಮೊದಲಾದ ಅಂಶಗಳನ್ನು ಅವಲಂಬಿಸಿರುತ್ತದೆ. ಸಾರ್ವಜನಿಕ ಗ್ರಂಥಾಲಯಗಳು, ಶೈಕ್ಷಣಿಕ ಗ್ರಂಥಾಲಯಗಳು ಹಾಗೂ ವಿಶಿಷ್ಟ ಗ್ರಂಥಾಲಯಗಳು ತಮ್ಮ ತಮ್ಮ ಅಗತ್ಯ ಮತ್ತು ಹಣಕಾಸು ಸ್ಥಿತಿಗಳಿಗನುಸಾರ ಗ್ರಂಥಗಳನ್ನು ಕೊಳ್ಳಬೇಕಾಗುತ್ತದೆ. ಒಂದೊಂದು ಗ್ರಂಥಾಲಯದ ಉದ್ದೇಶ, ವ್ಯಾಪ್ತಿ, ಅಭಿರುಚಿಗಳ ಬಗ್ಗೆ ಆಯಾ ಗ್ರಂಥಾಲಯ ಪ್ರಕಾರವನ್ನು ಕುರಿತ ಲೇಖನದಲ್ಲಿ ಹೇಳಲಾಗಿದೆ. ಗ್ರಂಥಗಳನ್ನು ಆಯುವಾಗ, ಮುಖ್ಯವಾಗಿ ಅಲ್ಲದೆ ಸಾಮಾನ್ಯವಾಗಿ, ಅನುಸರಿಸಬೇಕಾದ ಕೆಲವು ನಿಯಮಗಳನ್ನು ಇಲ್ಲಿ ಹೇಳಲಾಗಿದೆ.

ಗ್ರಂಥಗಳ ಆಯ್ಕೆಯಲ್ಲಿ ಅನುಸರಿಸಬೇಕಾದ ಮಹತ್ತ್ವದ ಸೂತ್ರವೆಂದರೆ ಆದಷ್ಟು ಕಡಿಮೆ ಖರ್ಚಿನಲ್ಲಿ ಹೆಚ್ಚು ಜನರಿಗೆ ಉಪಯುಕ್ತವಾಗುವ ಪಠಣ ಸಾಮಗ್ರಿಯನ್ನು ತೀವ್ರವಾಗಿ ಒದಗಿಸುವುದು.

ಗ್ರಂಥಗಳ ಆಯ್ಕೆ ಮಾಡುವಾಗ ಗ್ರಂಥ ಅಚ್ಚಾಗಿರುವ ರೀತಿ, ಕಾಗದದ ಗುಣಮಟ್ಟ, ಅಚ್ಚಿನ ಸ್ಫುಟತೆ, ರಟ್ಟಿನ ಭದ್ರತೆ ಇವುಗಳ ಬಗ್ಗೆ ಗಮನವಿಡಬೇಕು. ಶಾಸ್ತ್ರಗ್ರಂಥಗಳನ್ನು ಕೊಳ್ಳುವಾಗ ಆದಷ್ಟು ಹೊಸ ಆವೃತ್ತಿಗಳನ್ನು ಆಯುವುದು ಒಳ್ಳೆಯದು. ಗ್ರಂಥದ ಒಂದೇ ಪ್ರತಿ ಸಾಕೆ, ಒಂದಕ್ಕಿಂತ ಹೆಚ್ಚಿನ ಪ್ರತಿ ಬೇಕೆ ಎಂಬುದನ್ನು ಗ್ರಂಥದ ಯೋಗ್ಯತೆ ಹಾಗೂ ಉಪಯೋಗಿಸುವವರ ಸಂಖ್ಯೆಗಳನ್ನು ಗಮನಿಸಿ ನಿರ್ಧರಿಸಬೇಕು. ಈಗಂತೂ ಅಸಂಖ್ಯ ಗ್ರಂಥಗಳು ಮುದ್ರಣವಾಗುತ್ತಿವೆ. ಅವನ್ನು ಪರಿಪತ್ರಗಳ ಮೂಲಕ ಚೆನ್ನಾಗಿ ಜಾಹಿರಾತು ಮಾಡಿರುತ್ತಾರೆ. ಅವುಗಳಲ್ಲಿ ಸಾಧಾರಣ ಗುಣಮಟ್ಟದವೇ ಹೆಚ್ಚಿರಬಹುದು. ಚರ್ವಿತಚರ್ವಣವಾಗಿ ಹಳೆಯ ವಿಷಯವೇ ಹೊಸ ಹೊದಿಕೆಯಲ್ಲಿ ಬಂದಿರಬಹುದು. ಆದ್ದರಿಂದ ಯಾವುದು ನಿಜಕ್ಕೂ ಉತ್ತಮವಾದುದು ಎಂದು ಗುರುತಿಸುವುದು ಅನೇಕ ವೇಳೆ ಕಷ್ಟದ ಕೆಲಸವಾಗುತ್ತದೆ. ಅಂಥ ಸಂದರ್ಭಗಳಲ್ಲಿ ಮುದ್ರಿತ ವಾಙ್ಮಯದರ್ಶಕ ಗ್ರಂಥಸೂಚಿಗಳನ್ನು ನೋಡಿ, ಪರಿಣತರ ಹಾಗೂ ಓದುಗರ ಸಲಹೆ ಪಡೆದು ಗ್ರಂಥಾಲಯದ ವಿತರಣ ಕೇಂದ್ರ ಕೊಡುವ ವಿಶ್ಲೇಷಿತ ಅಂಕಿಅಂಶಗಳನ್ನು ನೋಡಿ ಕೊನೆಯದಾಗಿ ವೈಯಕ್ತಿಕ ಜವಾಬ್ದಾರಿಯಿಂದ ಗ್ರಂಥಗಳನ್ನು ಆಯಬೇಕಾಗುತ್ತದೆ.

ಗ್ರಂಥಗಳನ್ನು ಆಯ್ಕೆ ಮಾಡುವ ಮುನ್ನ ತತ್‍ಕ್ಷಣ ಕೊಳ್ಳಲೇಬೇಕಾದ ಗ್ರಂಥಗಳು, ಕಡಿಮೆ ಬೆಲೆಗೆ ಕೊಳ್ಳುವಂಥ ಗ್ರಂಥಗಳು, ಕೊಡುಗೆಯಾಗಿ ಬರಬಹುದಾದ ಗ್ರಂಥಗಳು, ವಿನಿಮಯದಿಂದ ಒದಗಿಸಬಹುದಾದ ಗ್ರಂಥಗಳು, ಎರವಲಾಗಿ ತರಬಹುದಾದ ಗ್ರಂಥಗಳು ಯಾವುವು ಎಂಬುದನ್ನು ಪರಿಶೀಲಿಸುವುದು ಒಳ್ಳೆಯದು.

ಗ್ರಂಥಗಳ ಪ್ರಪಂಚ ಬಹಳ ವೈವಿಧ್ಯಮಯವಾಗಿದೆ. ಏಕೆಂದರೆ ವಾಚಕರ ಆವಶ್ಯಕತೆಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಗ್ರಂಥಗಳು ಪ್ರಕಟವಾಗುವುವಲ್ಲದೆ ನವೀನ ವಿಷಯಗಳನ್ನೊಳಗೊಂಡ ಗ್ರಂಥಗಳೂ ಅಪಾರ ಉಂಟು. ಆದ್ದರಿಂದ ಗ್ರಂಥಪಾಲರು ಗ್ರಂಥಗಳನ್ನು ಕೊಳ್ಳುವಾಗ ಸುವರ್ಣ ಮಾಧ್ಯಮವನ್ನು ಅನುಸರಿಸುವುದು ಸೂಕ್ತ.

ಭಾರತೀಯ ಪ್ರಕಟಣೆಗಳನ್ನು ಕೊಳ್ಳಲು ನೆರವಾಗುವ ಸಾಧನಗಳೆಂದರೆ 1. ಹಿಂದೆ ಪ್ರಕಟವಾದ ಗ್ರಂಥಗಳಿಗೆ ಸಾಹಿತ್ಯ ಅಕಾಡೆಮಿ ಹೊರತಂದಿರುವ ಭಾರತೀಯ ಸಾಹಿತ್ಯದ ಗ್ರಂಥಸೂಚಿ (ಮೂರು ಸಂಪುಟಗಳು) 2. ಪ್ರಚಲಿತ ಗ್ರಂಥಗಳಿಗೆ ಇರುವ ರಾಷ್ಟ್ರೀಯ ಗ್ರಂಥಸೂಚಿ, 3. ಲಭ್ಯ ಭಾರತೀಯ ಗ್ರಂಥಸೂಚಿ (1955–1967).

ಮುಖ್ಯವಾದ ಈ ಸೂಚಿಗಳಲ್ಲದೆ ಪ್ರಧಾನ ದೈನಿಕಗಳಾದ ಟೈಂಸ್ ಆಫ್ ಇಂಡಿಯ, ಹಿಂದೂ, ಸ್ಟೇಟ್ಸ್‍ಮನ್ಸ್, ಅಮೃತಬಜಾರ್ ಪತ್ರಿಕೆ, ಡೆಕ್ಕನ್ ಹೆರಾಲ್ಡ್ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿನ ಪ್ರಮುಖ ಪತ್ರಿಕೆಗಳಲ್ಲಿ ಬರುವ ಪುಸ್ತಕ ವಿಮರ್ಶಾಭಾಗಗಳೂ ಆಯ್ಕೆಗೆ ದಾರಿತೋರಬಲ್ಲವು.

ಇವುಗಳ ಜೊತೆಗೆ ಭಾರತ ಸರ್ಕಾರದ ವರ್ತಮಾನ ಪತ್ರಿಕೆಗಳ ರಿಜಿಸ್ಟ್ರಾರ್‌ರವರ ವಾರ್ಷಿಕ ವರದಿ, ಇನ್ಸ್‌ಡಾಕ್‌ನ ವೈಜ್ಞಾನಿಕ ನಿಯತಕಾಲಿಕೆಗಳ ಪಟ್ಟಿ, ಮುಖ್ಯವಾಗಿ ನೆರವಾಗುವ ಸಾಧನಗಳು. ನಿಫೋರ್‌ ಗೈಡು, ಗಿದ್‌ವಾನಿಯವರ ಗೈಡ್ ಟು ಇಂಡಿಯನ್ ಪೀರಿಯಾಡಿಕಲ್ಸ್ – ಇವನ್ನೂ ನೋಡಬಹುದು.

ಆಂಗ್ಲ ಗ್ರಂಥಗಳನ್ನು ಕೊಳ್ಳಲು ನೆರವಾಗುವ ಪ್ರಮುಖ ಸಾಧನಗಳೆಂದರೆ ಬ್ರಿಟಿಷ್ ರಾಷ್ಟ್ರೀಯ ಗ್ರಂಥಸೂಚಿ, ಸಂಚಿತ ಗ್ರಂಥಸೂಚಿ ಮತ್ತು ವಿಂಚೆಲ್‌ರ ಪರಾಮರ್ಶನ ಗ್ರಂಥಗಳ ಮಾರ್ಗದರ್ಶಿಕೆ – ಮೊದಲಾದವು. (ಟಿ.ವಿ.ವಿಇ.)

**4. ವರ್ಗೀಕರಣ:** ಗ್ರಂಥಾಲಯದಲ್ಲಿ ಗ್ರಂಥಗಳನ್ನು ಯಾವ ರೀತಿಯಲ್ಲಿ ವರ್ಗೀಕರಿಸಿ ಇಡಲಾಗುತ್ತದೆ ಎಂಬ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಗ್ರಂಥಾಲಯ ಬಹು ಚಿಕ್ಕದಾಗಿದ್ದಲ್ಲಿ ವರ್ಗೀಕರಣದ ವಿಷಯ ದೊಡ್ಡ ಸಮಸ್ಯೆಯಾಗುವುದೇ ಇಲ್ಲ. ಗ್ರಂಥಾಲಯ ದೊಡ್ಡದಾಗಿದ್ದಲ್ಲಿ, ವಿವಿಧ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳು ಇದ್ದಲ್ಲಿ, ವಿಶಿಷ್ಟ ಗ್ರಂಥಗಳು ಇದ್ದಲ್ಲಿ ವರ್ಗೀಕರಣ ನಿಜಕ್ಕೂ ಅನೇಕ ಅಡೆತಡೆಗಳನ್ನು ಒಡ್ಡುತ್ತದೆ. ಗ್ರಂಥಸೂಚಿಗಳು ಇರುತ್ತವಾದರೂ ಓದುಗ ತನ್ನ ಪುಸ್ತಕಕ್ಕಾಗಿ ಎಲ್ಲಿ ಹುಡುಕಬೇಕು? ಒಂದು ವೇಳೆ ಪುಸ್ತಕದ ಹೆಸರು ಗೊತ್ತಾದ ಮೇಲೂ ಅದು ಯಾವ ಕಪಾಟಿನಲ್ಲಿದೆ ಎಂದು ಗ್ರಂಥಾಲಯ ಸಿಬ್ಬಂದಿ ಪತ್ತೆ ಮಾಡುವುದು ಹೇಗೆ? ಯಾರೊಬ್ಬರ ಕಾಲವೂ ಅಪವ್ಯಯವಾಗದಂತೆ ಗ್ರಂಥಗಳನ್ನು ಪತ್ತೆ ಹಚ್ಚಲು ಅನೇಕ ವರ್ಗೀಕರಣ ವಿಧಾನಗಳನ್ನು ಬಳಕೆಗೆ ತರಲಾಗಿದೆ. ವರ್ಗೀಕರಣದ ಅಂಕಿಯನ್ನು ಕಪಾಟಿನ ಮೇಲೂ ಗ್ರಂಥದ ಮೇಲೂ ಗ್ರಂಥಸೂಚಿಯಲ್ಲಿ ನಮೂದಿಸಿದ್ದರೆ ಅದನ್ನು ಪತ್ತೆ ಹಚ್ಚುವುದು ಸುಲಭ. ವಿಷಯನಿಷ್ಠವಾದ ಪದ್ಧತಿಯೇ ವರ್ಗೀಕರಣ ವಿಧಾನಗಳಲ್ಲಿ ಉತ್ತಮವಾದುದೆಂದು ಪರಿಗಣಿಸಲಾಗಿದೆ. ವಿವಿಧ ವಿಷಯಗಳನ್ನು ಅವುಗಳ ಸಂಬಂಧಗಳನ್ನು ಗಮನಿಸಿ ಒಂದುಗೂಡಿಸುತ್ತ ಹೋಗಿ ಹೊಂದದವನ್ನು ಹೊರತು ಮಾಡಿದಲ್ಲಿ ವರ್ಗೀಕರಣ ಸಮರ್ಪಕವಾಗುತ್ತ ಹೋಗುತ್ತದೆ. ಯುಕ್ತ ವರ್ಗೀಕರಣದ ಉಪಯೋಗ ಇಷ್ಟೇ ಅಲ್ಲ. ಯಾವುದಾದರೊಂದು ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಎಲ್ಲಿದೆ ಎಂದು ಪತ್ತೆ ಹಚ್ಚಲು ವರ್ಗೀಕರಣದಿಂದ ಸಾಧ್ಯ. ಅಲ್ಲದೆ ಪರಾಮರ್ಶನ ಭಾಗದ ಓದುಗರ ಪ್ರಶ್ನೆಗಳಿಗೆ ಉತ್ತರ ಕೊಡಲು, ಸೂಚಿಗಳನ್ನು ಸಮರ್ಥವಾಗಿ ಸಿದ್ಧಪಡಿಸಲು, ಪ್ರಲೇಖನ ಪಟ್ಟಿಗಳನ್ನು ತಯಾರಿಸಲು ವರ್ಗೀಕರಣ ನೆರವು ನೀಡುತ್ತದೆ.

ಹಸ್ತಪ್ರತಿ, ಸರಸ್ವತಿಮಹಲ್

ಇಲ್ಲಿ ಪ್ರಸಿದ್ಧವಾದ ಕೆಲವು ವರ್ಗೀಕರಣ ವಿಧಾನಗಳ ಪರಿಚಯವಿದೆ.

ಗ್ರಂಥಾಲಯ ವರ್ಗೀಕರಣ ಪದ್ಧತಿಗಳಲ್ಲಿ ಮುಖ್ಯವಾಗಿ ಎರಡು ಪ್ರಭೇದಗಳಿವೆ: (ಅ) ಸಾಮಾನ್ಯವಾಗಿ ಎಲ್ಲ ವಿಧದ ಗ್ರಂಥಾಲಯಗಳೂ ಬಳಸಲು ಅನುಕೂಲವಿರುವಂಥ ಸಾಮಾನ್ಯ ವರ್ಗೀಕರಣ ಪದ್ಧತಿಗಳು (ಆ) ಕೆಲವು ವಿಶಿಷ್ಟ ಗ್ರಂಥಾಲಯಗಳಿಗೆ ಮಾತ್ರ ಸೀಮಿತವಾಗಿರುವಂಥ ವಿಶಿಷ್ಟ ವರ್ಗೀಕರಣ ಪದ್ಧತಿಗಳು. ಸಾಮಾನ್ಯ ವರ್ಗೀಕರಣ ಪದ್ಧತಿಗಳಲ್ಲಿ ಮುಖ್ಯವಾಗಿ ಈ ಕೆಳಗಿನವು ಹೆಸರುವಾಸಿಯಾಗಿವೆ.

1. ಡ್ಯೂಯಿ ದಾಶಮಿಕ ವರ್ಗೀಕರಣ ಪದ್ಧತಿ (1876) (ಡ್ಯೂಯಿ ಡೆಸಿಮಲ್ ಕ್ಲ್ಯಾಸಿಫಿಕೇಷನ್)

2. ಕಟ್ಟರ್‌ನ ವಿಸ್ತರಣಶೀಲ ವರ್ಗೀಕರಣ ಪದ್ಧತಿ (1891) (ಕಟ್ಟರ್ಸ್ ಎಕ್ಸ್‌ಪ್ಯಾನ್ಸಿವ್ ಕ್ಲ್ಯಾಸಿಫಿಕೇಷನ್)

3. ಕಾಂಗ್ರೆಸ್ ಗ್ರಂಥಾಲಯ ವರ್ಗೀಕರಣ ಪದ್ಧತಿ (1904) (ಲೈಬ್ರರಿ ಆಫ್ ಕಾಂಗ್ರೆಸ್ ಕ್ಲ್ಯಾಸಿಫಿಕೇಷನ್)

4. ವಿಷಯ ವರ್ಗೀಕರಣ ಪದ್ಧತಿ (1906) – ಸಬ್ಜೆಕ್ಟ್ ಕ್ಲ್ಯಾಸಿಫಿಕೇಷನ್

5. ಸಾರ್ವತ್ರಿಕ ದಾಶಮಿಕ ವರ್ಗೀಕರಣ ಪದ್ಧತಿ (1905) (ಯೂನಿವರ್ಸಲ್ ಡೆಸಿಮಲ್ ಕ್ಲ್ಯಾಸಿಫಿಕೇಷನ್)

6. ಕೋಲನ್ ವರ್ಗೀಕರಣ ಪದ್ಧತಿ (1933) (ಕೋಲನ್ ಕ್ಲ್ಯಾಸಿಫಿಕೇಷನ್)

7. ವಾಙ್ಮಯ ದರ್ಶನಾತ್ಮಕ ವರ್ಗೀಕರಣ ಪದ್ಧತಿ (1935) (ಬಿಬ್ಲಿಯಾಗ್ರಫಿಕ್ ಕ್ಲ್ಯಾಸಿಫಿಕೇಷನ್)

**1. ಡ್ಯೂಯಿ ದಾಶಮಿಕ ವರ್ಗೀಕರಣ ಪದ್ಧತಿ:** ಗ್ರಂಥಾಲಯ ವರ್ಗೀಕರಣದ ಇತಿಹಾಸದಲ್ಲಿ ಮೊತ್ತಮೊದಲಿನ ಕೊಡುಗೆ ಮೆಲ್ವಿಲ್ ಡ್ಯೂಯಿಯ ದಾಶಮಿಕ ಪದ್ಧತಿ. ಆಮ್‌ಹರ್ಸ್ಟ್ ಕಾಲೇಜಿನಲ್ಲಿ ಉಪಗ್ರಂಥಪಾಲಕನಾಗಿದ್ದಾಗಲೇ ಈತ ಒಂದು ವ್ಯವಸ್ಥಿತ ರೀತಿಯ ವರ್ಗೀಕರಣ ಪದ್ಧತಿಯ ತಯಾರಿಕೆಯಲ್ಲಿ ತೊಡಗಿ ಯಶಸ್ವಿಯಾದ. 1876ರಲ್ಲಿ ತನ್ನ ಮೊದಲ ವರ್ಗೀಕರಣ ಪದ್ಧತಿಯ ಮೊದಲ ಆವೃತ್ತಿಯನ್ನು ಅಜ್ಞಾತನಾಮದೊಂದಿಗೆ ಪ್ರಕಟಿಸಿದ. ಈ ಪ್ರಥಮ ಆವೃತ್ತಿ ಕೇವಲ ಹನ್ನೆರಡು ಪುಟಗಳ ಪೀಠಿಕೆ, ಹನ್ನೆರಡು ಪುಟಗಳ ಕೋಷ್ಟಕ ಮತ್ತು ಹದಿನೆಂಟು ಪುಟಗಳ ವಿಷಯಗಳ ಅಕಾರಾದಿ ಸೂಚಿಯೊಂದಿಗೆ ಪ್ರಕಟವಾಯಿತು. ಈ ಪದ್ಧತಿಯ ಮೂರು ಮುಖ್ಯ ಹೊಸ ಅಂಶಗಳೆಂದರೆ 1. ಕಪಾಟಿನ ಹಲಗೆಗಳಿಗೆ ಕ್ರಮಾಂಕಗಳನ್ನು ವಿಧಿಸುವ ಬದಲು, ಪ್ರತಿ ಗ್ರಂಥಕ್ಕೂ ದಾಶಮಿಕ ಅಂಕನ ಪದ್ಧತಿಯ ಪ್ರಕಾರ ವರ್ಗೀಕರಣಾಂಕಗಳನ್ನು ವಿಧಿಸುವುದು 2. ಅನ್ಯೋನ್ಯ ಸಂಬಂಧವುಳ್ಳ ವಿಷಯಗಳನ್ನು ವಿವರವಾಗಿ ನಿರ್ದಿಷ್ಟಪಡಿಸುವುದು ಮತ್ತು 3. ಪಾರಸ್ಪರಿಕ ಸಂಬಂಧ ವಿಷಯಸೂಚಿಯನ್ನು ಒದಗಿಸುವುದು.

1883ರಲ್ಲಿ ಡ್ಯೂಯಿ ತನ್ನ ಹೆಸರಿನಲ್ಲಿ ವರ್ಗೀಕರಣ ಪದ್ಧತಿಯ ಎರಡನೆಯ ಆವೃತ್ತಿಯನ್ನು ಪ್ರಕಟಿಸಿದ. 1932ರಲ್ಲಿ 13ನೆಯ ಆವೃತ್ತಿ ಪ್ರಕಟವಾಗುವವರೆಗೂ ಈ ಪದ್ಧತಿ ಡ್ಯೂಯಿಯ ನೇತೃತ್ವದಲ್ಲಿ ಬೆಳೆಯಿತು. ಪ್ರಥಮ ಆವೃತ್ತಿ ಕೇವಲ 43 ಪುಟಗಳ ಸಂಪುಟವಾದರೆ 13ನೆಯದು 1,647 ಪುಟಗಳ ಬೃಹತ್ ಸಂಪುಟವಾಯಿತು. ಜ್ಞಾನದ ಎಲ್ಲೆ ವಿಸ್ತರಿಸುತ್ತಿದ್ದಂತೆ ವಿಷಯಗಳ ಸೂಕ್ಷ್ಮಸ್ತರಗಳನ್ನು ಮೂಲರೂಪರೇಖೆಗಳಿಗೆ ಚ್ಯುತಿಬಾರದ ರೀತಿಯಲ್ಲಿ ಹೊಸ ಆವೃತ್ತಿಗಳಲ್ಲಿ ಸೇರಿಸಲಾಯಿತು. 1942ರಲ್ಲಿ ಪ್ರಕಟವಾದ 14ನೆಯ ಆವೃತ್ತಿಯ ಬೃಹದ್ಗಾತ್ರವನ್ನು ಗಮನಿಸಿದ ಅಮೆರಿಕದ ಕೆಲವು ಗ್ರಂಥಪಾಲರು ತಮ್ಮ ಅಸಮಾಧಾನಗಳನ್ನು, ಆತಂಕಗಳನ್ನು ವ್ಯಕ್ತಪಡಿಸಿದರು. ಇದರ ಫಲಶ್ರುತಿ 1951ರಲ್ಲಿ ಪ್ರಕಟವಾದ ಸ್ಟ್ಯಾಂಡರ್ಡ್ ಆವೃತ್ತಿಯಲ್ಲಿ ಗೋಚರವಾಯಿತು. 14ನೆಯ ಆವೃತ್ತಿಯಲ್ಲಿ ಕಂಡುಬಂದ 31,000 ವಿಷಯಗಳ ಬಾಬುಗಳು 15ನೆಯ ಆವೃತ್ತಿಯಲ್ಲಿ 4,700ಕ್ಕೆ ಇಳಿಯಿತು.

ಡ್ಯೂಯಿ ದಾಶಮಿಕ ಪದ್ಧತಿ ಜನಪ್ರಿಯತೆಯ ಮುಖ್ಯ ಕಾರಣಗಳು ಇವು; 1. ಈ ಪದ್ಧತಿ ಆಯಾ ಕಾಲದ ಅಗತ್ಯಕ್ಕನುಗುಣವಾಗಿ ನಡೆದು ಬಂತು. 2. ಎಷ್ಟೋ ಆವೃತ್ತಿಗಳಲ್ಲಿ ಪ್ರಕಟವಾಗಿದ್ದರೂ ಅಂಕೆಗಳ ದೃಢತೆ ಮತ್ತು ವಿಷಯ ದೃಢತೆಗಳಲ್ಲಿ ಏಕತೆ ಒಡಮೂಡಿ ಬಂದಿತ್ತು.



ವಾಚನಾಲಯ, ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯ, ಇಂಗ್ಲೆಂಡ್

ಹದಿನೈದನೆಯ ಆವೃತ್ತಿಯಲ್ಲಿ ವಿಷಯಗಳ ಸೂಕ್ಷ್ಮಾಂಕ ಪ್ರಾತಿನಿಧ್ಯಕ್ಕೆ ಗಮನ ಕೊಡದೆ ಗಾತ್ರವನ್ನು ಕಡಿಮೆ ಮಾಡಿದ್ದನ್ನು ಗ್ರಂಥಪಾಲರು ಸಹಿಸದಾದರು. ಕೆಲವೆಡೆ ಈ ಪದ್ಧತಿಯ ಅವಸಾನ ಸನ್ನಿಹಿತವಾಯಿತೆಂಬ ಸ್ವರವೂ ಕೇಳಿ ಬಂತು. 1958ರಲ್ಲಿ ಪ್ರಕಟವಾದ 16ನೆಯ ಆವೃತ್ತಿಯಲ್ಲಿ ವಿಷಯಗಳ ಸೂಕ್ಷ್ಮಾಂಶ ಪ್ರಾತಿನಿಧ್ಯಕ್ಕೆ ಮತ್ತೆ ಆದ್ಯತೆ ಕೊಡಲಾಯಿತು. 15ನೆಯ ಆವೃತ್ತಿಯಲ್ಲಿ ಸ್ಥಳಾಂತರಿಸಲ್ಪಟ್ಟ ಅನೇಕ ವಿಷಯಗಳನ್ನು ಅವುಗಳ ಸ್ವಸ್ಥಾನಕ್ಕೂ ಅನೇಕ ವಿಷಯಗಳನ್ನು ಹೊಸ ಸ್ಥಳಗಳಿಗೂ ವರ್ಗಾಯಿಸಲಾಯಿತು. ಸಾವಯವ ರಸಾಯನಶಾಸ್ತ್ರ ಮತ್ತು ನಿರವಯವ ರಸಾಯನಶಾಸ್ತ್ರಗಳಿಗೆ ನವೀನ ಕೋಷ್ಟಕಗನ್ನು ರಚಿಸಿ ಅದನ್ನು ಮುಂದಣ ಆವೃತ್ತಿಯಲ್ಲೂ ಮುಂದುವರಿಸಲಾಯಿತು.

ಡ್ಯೂಯಿ ಜ್ಞಾನಜಗತ್ತನ್ನು ಒಂದು ಸಮಷ್ಟಿಯೆಂದು ತಿಳಿದು ಅದರಲ್ಲಡಕವಾಗಿರುವ ಶಾಸ್ತ್ರಗಳು ಹಾಗೂ ವಿಜ್ಞಾನಗಳನ್ನು ಒಂಬತ್ತು ಪ್ರಮುಖ ವಿಭಾಗಗಳನ್ನಾಗಿ ವಿಂಗಡಿಸಿದ. ಈ ಪ್ರಮುಖ ವಿಭಾಗಗಳನ್ನು ಸೂಚಿಸಲು ಮರು ಅಂಕಿಗಳ ತಳಹದಿಯ ಮೇರೆಗೆ ಒಂಬತ್ತರ ವರೆಗಿನ ಅರಾಬಿಕ್ ಅಂಕಿಗಳನ್ನು ದಾಶಮಿಕ ರೀತಿಯಲ್ಲಿ ಉಪಯೋಗಿಸಿದ. ಹೀಗೆ ಉತ್ಪನ್ನವಾದ ಒಂಬತ್ತು ಪ್ರಧಾನ ವಿಭಾಗಗಳು:

| | |
|---|---|
| ತತ್ತ್ವಶಾಸ್ತ್ರ | 100 |
| ಧರ್ಮಶಾಸ್ತ್ರ | 200 |
| ಸಮಾಜಶಾಸ್ತ್ರ | 300 |
| ಭಾಷಾವಿಜ್ಞಾನ | 400 |
| ಶುದ್ಧವಿಜ್ಞಾನಗಳು | 500 |
| ಪ್ರಾಯೋಗಿಕ ವಿಜ್ಞಾನಗಳು | 600 |
| ಲಲಿತಕಲೆಗಳು | 700 |
| ಸಾಹಿತ್ಯ | 800 |
| ಭೂಗೋಳ, ಜೀವನಚರಿತ್ರೆ, ಇತಿಹಾಸ | 900 |

ಮೇಲಣ ಯಾವ ಪ್ರಧಾನವರ್ಗಕ್ಕೂ ಸೇರದ ವಿಷಯಗಳನ್ನು ಒಂದು ಪ್ರತ್ಯೇಕ ಪ್ರಧಾನವರ್ಗಕ್ಕೆ ಸೇರಿಸಿ ಸಾಮಾನ್ಯ ಕೃತಿಗಳು ಎಂಬ ಅಭಿದಾನದಿಂದ ಅದನ್ನು ನಿಗದಿಪಡಿಸಿದ. ಹೀಗೆ ಲಬ್ಧವಾದ ಪ್ರತಿಯೊಂದು ಪ್ರಧಾನ ವರ್ಗವನ್ನೂ ಹತ್ತು ವಿಭಾಗಗಳಾಗಿಯೂ ಪ್ರತಿಯೊಂದು ವಿಭಾಗವನ್ನು ಉಪಭಾಗಗಳನ್ನಾಗಿಯೂ_ವಿಂಗಡಿಸಿ ಪ್ರತಿಯೊಂದನ್ನೂ ಅರಾಬಿಕ್ ಅಂಕಿಯಲ್ಲಿ ಅರ್ಥೈಸಿದ. ಹೀಗೆಯೇ ವಿಭಜನಾಕ್ರಮವನ್ನು ವಿಷಯದ ಆಳಕ್ಕೆ ಹೊಂದಿದಂತೆ ಅಪೇಕ್ಷಿತ ಮಟ್ಟದವರೆಗೆ ಕೊಂಡೊಯ್ಯಬಹುದಾಗಿದೆ. ಗ್ರಂಥಸ್ಥ ವಿಷಯಗಳೊಂದಿಗೆ ನೇರ ಸಂಪರ್ಕವಿಲ್ಲದೆ ಅವನ್ನು ಬೇರೆ ಬೇರೆ ಸ್ವರೂಪಗಳಲ್ಲಿ ನಿರೂಪಿಸಲು ಸಾಧ್ಯವಿದೆಯಷ್ಟೆ. ಉದಾ: ವಿಶ್ವಕೋಶ, ಶಬ್ದಕೋಶ, ಸಂಕಲನ, ಕೈಪಿಡಿ, ನಿಯತಕಾಲಿಕೆ, ಸಮ್ಮೇಳನ ನಡಾವಳಿ ಇತ್ಯಾದಿ. ಗ್ರಂಥ ಸ್ವರೂಪ ನಿರ್ಣಯ ಪದಗಳನ್ನು ಡ್ಯೂಯಿ ಪ್ರತ್ಯೇಕಿಸಿ ಬೇರೆಯೇ ಕೋಷ್ಟಕ ರಚಿಸಿ ಇದರ ಯಾವುದೇ ವರ್ಗವನ್ನು ಪ್ರಧಾನವರ್ಗಕ್ಕೆ ಸಂಯೋಜಿಸಲು ಅವಕಾಶವಿತ್ತ. ಇವನ್ನು ಸಾಮಾನ್ಯ ಉಪವಿಭಾಗಗಳೆನ್ನುತ್ತಾರೆ. ಪ್ರದೇಶ, ಕಾಲ ಇವನ್ನು ತಿಳಿಸುವ ವರ್ಗಗಳನ್ನು ಪ್ರತ್ಯೇಕವಾಗಿ ದಾಶಮಿಕಪದ್ಧತಿಯಲ್ಲಿ ಪಟ್ಟಿ ಮಾಡಲಾಗಿದೆ. ಸಾಮಾನ್ಯ ಉಪವಿಭಾಗಗಳನ್ನು ಪ್ರಧಾನ ವಿಭಾಗಗಳನ್ನು ಖಚಿತವಾದ ರೀತಿಯಲ್ಲಿ ಅದೇ ವಿಷಯದ ಅಥವಾ ಕೋಷ್ಟಕದಲ್ಲಿ ನಿರ್ದೇಶಿಸಿದ ಯಾವ ವಿಷಯಗಳೊಂದಿಗೂ ಸಂಯೋಜಿಸುವ ಅಪೂರ್ವ ಕ್ರಮಗಳಿಂದಾಗಿ ಡ್ಯೂಯಿ ಪದ್ಧತಿಯೂ ಸ್ವಲ್ಪಮಟ್ಟಿಗೆ ವಿಶ್ಲೇಷಣ–ಸಂಶ್ಲೇಷಣ ತತ್ತ್ವಗಳನ್ನು ಹೊಂದಿದೆಯೆಂದು ಹೇಳಬಹುದು.

ಡ್ಯೂಯಿ ಪದ್ಧತಿಯ ಸಂಕ್ಷಿಪ್ತ ಆವೃತ್ತಿ 1894 ರಲ್ಲೂ 18ನೆಯ ಆವೃತ್ತಿ 1971ರಲ್ಲೂ ಪ್ರಕಟವಾಯಿತು. ಡ್ಯೂಯಿ ಸ್ಥಾಪಿಸಿದ ಲೇಕ್ ಪ್ಲಾಸಿಡ್ ಎಜುಕೇಷನ್ ಫೌಂಡೇಷನ್ ಕ್ಲಬ್ ಈ ವರ್ಗೀಕರಣದ ಬೆಳೆವಣಿಗೆ ಹಾಗೂ ಪರಿಷ್ಕರಣ ಕಾರ್ಯಗಳಿಗೆ ಹಣವೊದಗಿಸುವ ಸಂಸ್ಥೆಯಾಗಿದೆ. 1927ರಲ್ಲಿ ಇದರ ಸಂಪಾದನ ಮಂಡಳಿಯ ಕಚೇರಿ ಲೈಬ್ರರಿ ಆಫ್ ಕಾಂಗ್ರೆಸಿಗೆ ವರ್ಗಾಯಿಸಲ್ಪಟ್ಟಿತು. 1930 ರಿಂದ ಕಾಂಗ್ರೆಸ್ ಲೈಬ್ರರಿಯ ಜವಾಬ್ದಾರಿಯಲ್ಲಿ ನೇಮಕಗೊಂಡ ಸಮಿತಿ ಗ್ರಂಥಾಲಯ ಮುದ್ರಿಸುವ ಗ್ರಂಥ ಸೂಚಿಯ ಪತ್ರಕಗಳ ಮೇಲೆ ಡ್ಯೂಯಿ ದಾಶಮಿಕಪದ್ಧತಿಯ ರೀತ್ಯ ವರ್ಗೀಕರಣಾಂಕಗಳನ್ನು ಮುದ್ರಿಸುತ್ತಿದೆ. 1958 ರಲ್ಲಿ ಡ್ಯೂಯಿ ದಾಶಮಿಕ ವರ್ಗೀಕರಣ ಕಚೇರಿಯೂ ಸಂಪಾದನ ಮಂಡಳಿಯ ಕಚೇರಿಯೂ ಪರಸ್ಪರ ವಿಲೀನಗೊಂಡವು. ಲೇಕ್ ಪ್ಲಾಸಿಡ್ ಕ್ಲಬ್ ಮತ್ತು ಕಾಂಗ್ರೆಸ್ ಗ್ರಂಥಾಲಯ ಈ ಕಚೇರಿಯ ಕೆಲಸಕಾರ್ಯಗಳಿಗೆ ಬೆನ್ನೆಲುಬಾಗಿ ನಿಂತು ಸಹಕಾರವೀಯುತ್ತವೆ. 1971ರ ಜನವರಿ ತಿಂಗಳಿಂದ ಬ್ರಿಟನಿನ ರಾಷ್ಟ್ರೀಯ ಗ್ರಂಥಸೂಚಿಯೂ ಡ್ಯೂಯಿ ಪದ್ಧತಿಯ 18ನೆಯ ಆವೃತ್ತಿಯನ್ನು ಅನುಸರಿಸುತ್ತಿದೆ.

ಡ್ಯೂಯಿ ಪದ್ಧತಿಯನ್ನು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿನ ಗ್ರಂಥಾಲಯಗಳು ಉಪಯೋಗಿಸುತ್ತಿವೆ. ಆಫ್ಘಾನಿಸ್ತಾನ, ಅರ್ಜೆಂಟೀನ, ಶ್ರೀಲಂಕ, ಡೆನ್‌ಮಾರ್ಕ್, ಈಜಿಪ್ಟ್, ಇಥಿಯೋಪಿಯ, ಫಿನ್ಲೆಂಡ್, ಭಾರತ, ಇರಾನ್, ಇಸ್ರೇಲ್, ಜಪಾನ್, ಲೈಬೀರಿಯ, ಮೆಕ್ಸಿಕೊ, ಫಿಲಿಪೀನ್ಸ್, ಪೋಲೆಂಡ್, ಥೈಲೆಂಡ್ ಮತ್ತು ಜಾಂಬಿಯಗಳಲ್ಲಿ ಈ ಪದ್ಧತಿ ಬಳಕೆಯಲ್ಲಿದೆ. ಕಾಮನ್‌ವೆಲ್ತ್ ಒಕ್ಕೂಟದ ಸದಸ್ಯರಾಷ್ಟ್ರಗಳಲ್ಲಿ ಮುಖ್ಯವಾಗಿ ಆಸ್ಟ್ರೇಲಿಯ, ಕೆನಡ, ಇಂಗ್ಲೆಂಡ್, ಭಾರತ ಮತ್ತು ಪಾಕಿಸ್ತಾನಗಳು ಈ ಪದ್ಧತಿಯನ್ನು ಬಳಸಿಕೊಳ್ಳುತ್ತಿವೆ. ಹೀಬ್ರೂ, ಸ್ಪಾನಿಷ್, ಥಾಯಿ, ವಿಯೆಟ್ನಾಮ್ ಭಾಷೆಗಳಲ್ಲೂ ಈ ಪದ್ಧತಿ ಭಾಷಾಂತರಿಸಲ್ಪಟ್ಟಿದೆ. ಸದ್ಯದಲ್ಲಿ ಫ್ರೆಂಚ್‌ನಲ್ಲೂ ಈ ಪದ್ಧತಿ ಇದೆ.

2. ಕಟ್ಟರ್‌ನ ವಿಸ್ತರಣಶೀಲ ವರ್ಗೀಕರಣ ಪದ್ಧತಿ: ಗಾತ್ರದಲ್ಲಿ ಹಿರಿದು ಕಿರಿದೆನ್ನದೆ ಎಲ್ಲ ಬಗೆಯ ಗ್ರಂಥಾಲಯಗಳಿಗೂ ಅವುಗಳ ಏಕರೂಪದ ವರ್ಗೀಕರಣ ಪದ್ಧತಿಯನ್ನು ರಚಿಸಬೇಕೆಂಬ ಗ್ರಂಥಪಾಲರ ಮನವಿಯ ಮೇರೆಗೆ ಚಾರ್ಲ್ಸ್ ಅಮ್ಮಿ ಕಟ್ಟರ್ (1837–1903) ತಾನು ಗ್ರಂಥಪಾಲನಾಗಿ ಕೆಲಸ ಮಾಡುತ್ತಿದ್ದ ಬಾಸ್ಟನ್ ಆಥಿನಿಯಮ್ ಗ್ರಂಥಾಲಯದ ಸುಮಾರು 1,70,000 ಗ್ರಂಥಗಳ ವರ್ಗೀಕರಣ ಹಾಗೂ ಸಂಘಟನೆಯಲ್ಲಿ ಪಡೆದ ಅನುಭವದ ಹಿನ್ನೆಲೆಯಲ್ಲಿ ತನ್ನ ಈ ಹೊಸ ಪದ್ಧತಿಯನ್ನು ರಚಿಸಿದ (1891). ಗ್ರಂಥಾಲಯಗಳಲ್ಲಿ ಗ್ರಂಥಸಂಗ್ರಹಗಳ ಪ್ರಮಾಣಕ್ಕನುಗುಣವಾಗಿ ಹೆಚ್ಚು ಕಡಿಮೆ ಸವಿಸ್ತಾರವಾದ ಒಂದು ಪದ್ಧತಿಯ ಅಳವಡಿಕೆಯನ್ನು ಇಲ್ಲಿ ಕಾಣಬಹುದು.

ಕಟ್ಟರನ ಈ ಪದ್ಧತಿ ಅಂತಿಮವಾಗಿ 7 ಪ್ರತ್ಯೇಕ ವರ್ಗೀಕರಣಗಳಾಗಿ ಪ್ರಕಟವಾಗಿದೆ. ವರ್ಗೀಕರಣ ಕ್ರಮಗಳು ಬಹಳ ಸಂಕ್ಷೇಪವಾಗಿಯೂ ಸರಳವಾಗಿಯೂ ಇವೆ. ಮುಖ್ಯವಾಗಿ ಸಣ್ಣ ಗಾತ್ರದ ಗ್ರಂಥಾಲಯಗಳಲ್ಲಿ ಬಳಕೆಗೆ ಯೋಗ್ಯವಾಗಿವೆ. ಕ್ರಮಗಳ ಯಾದಿ ಕೆಲವೇ ಪ್ರಧಾನ ವರ್ಗಗಳನ್ನೊಳಗೊಂಡಿದೆ. ವಿಷಯಗಳ ಉಪವಿಭಾಗ ಮತ್ತು ಸೂಕ್ಷ್ಮಾಂಶಗಳಿಗೆ ಇದರಲ್ಲಿ ಪ್ರಾತಿನಿಧ್ಯವಿಲ್ಲ. ಗ್ರಂಥಾಲಯಗಳ ಸಂಗ್ರಹ ಬೆಳೆಯುತ್ತ ಬಂದಂತೆ ವರ್ಗೀಕರಣ ಪದ್ಧತಿಯೂ ಗ್ರಂಥಗಳ ಸೂಕ್ಷ್ಮವಿಭಾಗಗಳನ್ನು ಪ್ರತಿನಿಧಿಸತಕ್ಕದ್ದು. ಕಟ್ಟರನ ಪದ್ಧತಿ ಸರಳವಾದ ವರ್ಗೀಕರಣ ವಿಧಾನದಿಂದ ವಸ್ತುಗಳ ಅಥವಾ ವಿಷಯಗಳ ಹರವು, ಗಾಂಭೀರ್ಯ ಬೆಳೆದಂತೆ ಅವುಗಳಿಗೆ ಸರಿಸಮಾನವಾಗಿ ಬೆಳೆದು ಅನುವಾಗುತ್ತದೆ. ಕಟ್ಟರನ ಕೊನೆಯ ವರ್ಗೀಕರಣ ಯಾದಿಗಳು ವಿಷಯಗಳ ಕ್ಲಿಷ್ಟತೆಗೆ ಸರಿಯಾಗಿ ವರ್ಗೀಕರಣ ಕೋಷ್ಟಕಗಳನ್ನು ನೀಡುವಂಥವಾಗಿವೆ. ಈ ಅರ್ಥದಲ್ಲೇ ಈ ವರ್ಗೀಕರಣ ಪದ್ಧತಿ ವಿಸ್ತರಣಶೀಲ ವರ್ಗೀಕರಣ

ಪದ್ಧತಿ ಎಂದು ಕರೆಯಲ್ಪಟ್ಟಿದೆ. ಕಟ್ಟರ್ ಜ್ಞಾನದ ವಿಕಾಸ ಹಾಗೂ ಚಾರಿತ್ರಿಕ ಬೆಳೆವಣಿಗೆಯ ಆಧಾರದ ಮೇಲೆ ವಿಷಯಗಳ ಪ್ರಧಾನ ವರ್ಗಗಳನ್ನೂ ಉಪವರ್ಗಗಳನ್ನೂ ನಿರ್ದಿಷ್ಟಪಡಿಸಿದ್ದಲ್ಲದೆ ಗ್ರಂಥಗಳ ಸಂಗ್ರಹ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡುವ ವಿಧಾನವನ್ನೂ ಗಣನೆಗೆ ತಂದುಕೊಂಡು ತನ್ನ ವರ್ಗೀಕರಣ ಪದ್ಧತಿಯನ್ನು ರಚಿಸಿದ. ಈ ಕಾರ್ಯದಲ್ಲಿ ಅನೇಕ ವಿಷಯಪರಿಣತರ ನೆರವನ್ನು ಪಡೆದ.



**ಕೇಂದ್ರ ಗ್ರಂಥಾಲಯ, ವಾಂಕುವಾರ್, ಕೆನಡ**

ಈ ಪದ್ಧತಿ ಬಹಳ ಸರಳವಾದ ಸಂಕೇತಗಳನ್ನು ಬಳಸುತ್ತದೆ. ರೋಮನ್ ಅಕ್ಷರಮಾಲೆಯ ದೊಡ್ಡಕ್ಷರಗಳು ಮತ್ತು ಅರಾಬಿಕ್ ಅಂಕಿಗಳ ಮಿಶ್ರಸಂಕೇತಗಳನ್ನು ಇಲ್ಲಿ ಕಾಣಬಹುದು. ದೊಡ್ಡಕ್ಷರಗಳು ಪ್ರಧಾನಶಾಸ್ತ್ರ ಹಾಗೂ ವಿಜ್ಞಾನಗಳನ್ನು ತಿಳಿಸುತ್ತವೆ. ಉದಾ: ಸಾಮಾನ್ಯಕೃತಿಗಳು– A, ತತ್ತ್ವಶಾಸ್ತ್ರ ಮತ್ತು ಧರ್ಮಶಾಸ್ತ್ರ– B, ಜೀವಶಾಸ್ತ್ರ – E, ಭೂಗೋಳಶಾಸ್ತ್ರ – G ಇತ್ಯಾದಿ. ಪ್ರಧಾನಶಾಸ್ತ್ರದ ಶಾಖೆಗಳನ್ನು ದೊಡ್ಡಕ್ಷರಗಳನ್ನೆ ಸಣ್ಣದಾಗಿ ಬರೆದು ನಮೂದಿಸಲಾಗುತ್ತದೆ. ಉದಾ: ಸಾಮಾನ್ಯಕೃತಿಗಳು – A, ಶಬ್ದಕೋಶಗಳು – AD, ವಿಶ್ವಕೋಶಗಳು – AE, ಸೂಚಿಗಳು – AI, ನಿಯತಕಾಲಿಕೆಗಳು – AP ಇತ್ಯಾದಿ. ದೊಡ್ಡಕ್ಷರಗಳನ್ನು ಪ್ರಧಾನ ವಿಷಯ ಮತ್ತು ಅವುಗಳ ಉಪವಿಭಾಗವನ್ನು ನಿರೂಪಿಸಲು ಉಪಯೋಗಿಸುವುದು ತುಂಬ ಗೊಂದಲಕ್ಕೆ ಕಾರಣವಾಗುತ್ತದೆ. ಕೆಲವೊಮ್ಮೆ ಪದಗಳ ಮೊದಲ ಅಕ್ಷರಗಳನ್ನು ವರ್ಗೀಕರಣದ ಕೊನೆಗೆ ಜ್ಞಾಪಕಸೂತ್ರಾಂಕಗಳಾಗಿ (ನೀಮಾನಿಕ್ಸ್) ಸೇರಿಸುವ ಕ್ರಮವೂ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಈ ವರ್ಗೀಕರಣ ಪದ್ಧತಿ ಪ್ರಧಾನ ವಿಷಯಗಳಿಗೆ ದೀರ್ಘಸಂಕೇತಗಳನ್ನೂ ಉಪವಿಭಾಗಗಳಿಗೆ ಹ್ರಸ್ವ ಸಂಕೇತಗಳನ್ನೂ ನೀಡುತ್ತದೆ. ಸಾಮಾನ್ಯ ಸಹಾಯಕವರ್ಗಗಳ ಯಾದಿಗಳನ್ನು ಪ್ರತ್ಯೇಕವಾಗಿ ನಮೂದಿಸಿರುವುದರಿಂದ ಯಾವುದೇ ಪ್ರಧಾನ ಉಪವಿಭಾಗಗಳೊಂದಿಗೆ ನೇರವಾಗಿ ಸಹಾಯಕ ವರ್ಗಗಳ ಸಂಖ್ಯೆ ಒಂಬತ್ತು ಇದ್ದು ಇವುಗಳನ್ನು ಅರಾಬಿಕ್ ಅಂಕೆಗಳಲ್ಲಿ ನಮೂದಿಸಲಾಗಿದೆ. ಅಮೆರಿಕದ ಕೆಲವು ಗ್ರಂಥಾಲಯಗಳು ಈ ಪದ್ಧತಿಯನ್ನು ತಮ್ಮ ಆವಶ್ಯಕತೆಗಳಿಗನುಗುಣವಾಗಿ ಪರಿಷ್ಕರಿಸಿ ಬಳಸುತ್ತಿವೆ.

**3. ಕಾಂಗ್ರೆಸ್ ಗ್ರಂಥಾಲಯ ವರ್ಗೀಕರಣ ಪದ್ಧತಿ:** 1814ರ ಆಗಸ್ಟ್ 24ರಂದು ಬ್ರಿಟಿಷ್ ಸೇನಾ ತುಕಡಿಗಳು ಕಾಂಗ್ರೆಸ್ ಗ್ರಂಥಾಲಯವನ್ನು ಸುಟ್ಟ ಪರಿಣಾಮವಾಗಿ ಬಹ್ವಂಶ ಗ್ರಂಥಗಳು ನಿರ್ನಾಮವಾದುವು. ಆಗಿನ ಅಮೆರಿಕದ ಅಧ್ಯಕ್ಷ ತಾಮಸ್ ಜೆಫರ್‌ಸನ್ನನ ಸ್ವಂತ ಗ್ರಂಥಸಂಗ್ರಹವನ್ನು ಕಾಂಗ್ರೆಸ್ ತನ್ನ ಗ್ರಂಥಾಲಯಕ್ಕೆ ಕೊಂಡುಕೊಂಡಿತು. ಈ ಗ್ರಂಥಗಳೆಲ್ಲವನ್ನೂ ಫ್ರಾನ್ಸಿಸ್ ಬೇಕನ್ನನ ವರ್ಗೀಕರಣ ಮಾದರಿಯನ್ನನುಸರಿಸಿ ವಿಂಗಡಿಸಲಾಗಿತ್ತು. 1890ರ ಹೊತ್ತಿಗೆ ಈ ವರ್ಗೀಕರಣ ಕ್ರಮವನ್ನೂ ಕೈಬಿಟ್ಟು ಕಾಂಗ್ರೆಸ್ ಗ್ರಂಥಾಲಯ ತನ್ನ ದಶಲಕ್ಷ ಗ್ರಂಥಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ವರ್ಗೀಕರಣ ಪದ್ಧತಿಯೊಂದನ್ನು ಯೋಚಿಸಿತು. ಗ್ರಂಥಪಾಲ ಜಾನ್ ರಸೆಲ್ ಯಂಗನ ಆದೇಶದಂತೆ ಗ್ರಂಥಸೂಚಿ ವಿಭಾಗದ ಮುಖ್ಯಸ್ಥ ಜೇಮ್ಸ್ ಸಿ.ಎಂ. ಹ್ಯಾನ್‌ಸನ್ ಪ್ರಧಾನ ವರ್ಗೀಕರಣಾಧಿಕಾರಿ ಚಾರ್ಲ್ಸ್ ಮಾರ್ಟೆಲ್ – ಇಬ್ಬರೂ ಕೂಡಿ ಈ ಕೆಲಸವನ್ನು ಕೈಗೆತ್ತಿಕೊಂಡರು. ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಕಟ್ಟರ್, ಬ್ರೂನೆ, ಡ್ಯೂಯಿ, ಮತ್ತು ಬ್ರಸೆಲ್ಸ್ ಮೊದಲಾದವರ ಪದ್ಧತಿಗಳಲ್ಲಿಯ ಮುಖ್ಯ ಗುಣಲಕ್ಷಣಗಳನ್ನೊಳಗೊಂಡು ಮೂಡಿ ಬಂದ ಪದ್ಧತಿಯೇ ಕಾಂಗ್ರೆಸ್ ವರ್ಗೀಕರಣ ಪದ್ಧತಿ ಎನಿಸಿತು.

ಕಾಂಗ್ರೆಸ್ ವರ್ಗೀಕರಣ ಒಬ್ಬ ವ್ಯಕ್ತಿಯ ಕೃತಿಯಾಗಿರದೆ ಕೆಲಜನರ ಪರಿಶ್ರಮದ ಫಲವಾಗಿದೆ. ಈ ಪದ್ಧತಿ ಕೇವಲ ಕಾಂಗ್ರೆಸ್ ಗ್ರಂಥಾಲಯದ ಗ್ರಂಥಗಳಿಗಾಗಿ ರಚಿಸಲ್ಪಟ್ಟಿದ್ದರೂ ಇದರ ಕೋಷ್ಟಕಗಳ ಮುದ್ರಿತ ಪ್ರತಿಗಳು ದೊರಕುತ್ತಿದ್ದುದರಿಂದ ಅಮೆರಿಕದ ಹಲವೆಡೆ ಇದರ ಬಳಕೆ ಪ್ರಾರಂಭವಾಯಿತು. ವರ್ಗೀಕರಣದ ಪ್ರಧಾನ ವರ್ಗಗಳ ಕೋಷ್ಟಕಗಳು ಒಮ್ಮೆಲೆ ಪ್ರಕಟವಾಗದೆ ಕಾಲಾಂತರದಲ್ಲಿ ಒಂದೊಂದಾಗಿ ಪ್ರಕಟವಾದವು. ಪ್ರತಿಯೊಂದು ಕೋಷ್ಟಕವೂ ತನ್ನದೇ ಆದ ವಿಷಯಾನುಕ್ರಮ ಮತ್ತು ಸ್ವತಂತ್ರವಾದ ದೇಶ ಹಾಗೂ ಸ್ವರೂಪ ವಿಭಾಗಗಳನ್ನೀಯುವ ಸಾಮಾನ್ಯ ವಿಷಯ ವಿಭಾಗಗಳ ಕೋಷ್ಟಕಗಳನ್ನು ಹೊಂದಿವೆ. 1904ರಲ್ಲಿ ಮೊದಲ ಬಾರಿ ಕಾಂಗೆಸ್ ವರ್ಗೀಕರಣದ ರೂಪರೇಖೆ ಪ್ರಕಟವಾಯಿತು.

ರೋಮನ್ ವರ್ಣಮಾಲೆಯ ಅಕ್ಷರಗಳನ್ನು ಗ್ರಂಥಗಳ ಪ್ರಧಾನ ವರ್ಗಗಳನ್ನು ಸೂಚಿಸಲು ವಿಸ್ತಾರವಾಗಿ ಬಳಸಲಾಗಿದೆ. ಪ್ರಧಾನವರ್ಗಗಳು ರೋಮನ್ ಆದ್ಯಕ್ಷರಗಳಲ್ಲಿ ನಮೂದಿತವಾಗಿವೆ. ಉದಾ: ಸಾಮಾನ್ಯಕೃತಿಗಳು A, ತತ್ತ್ವಶಾಸ್ತ್ರ B, ಚರಿತ್ರೆ C, ಇತ್ಯಾದಿ. ಯಾವುದೇ ಪ್ರಧಾನವಿಷಯದ ಶಾಖೆಯನ್ನು ಮತ್ತೊಮ್ಮೆ ರೋಮನ್ ದೊಡ್ಡಕ್ಷರಗಳನ್ನು ಪ್ರಧಾನವರ್ಗದ ಸಂಕೇತದ ಜೊತೆಗೆ ಸ್ವಲ್ಪ ಚಿಕ್ಕದಾಗಿ ಬರೆದು ನಿರೂಪಿಸಲಾಗಿದೆ. ಉದಾ: ತರ್ಕಶಾಸ್ತ್ರ Bc, ಆಧ್ಯಾತ್ಮಶಾಸ್ತ್ರ Bd ಇತ್ಯಾದಿಯಾಗಿ ವಿಷಯಗಳ, ಉಪವಿಷಯ ಅಥವಾ ಉಪವರ್ಗಗಳನ್ನು ಅರಾಬಿಕ್ ಅಂಕೆಗಳನ್ನು ಉಪಯೋಗಿಸಿ ಪಡೆಯಬಹುದು. ಉದಾ: ಸಸ್ಯವಿಜ್ಞಾನ, QK ಜೀವದ್ರವ್ಯಪರಿಣಾಮ, QK 881, ದ್ಯುತಿಸಂಶ್ಲೇಷಣೆ – QK 852 ಇತ್ಯಾದಿಯಾಗಿ. ಇದಕ್ಕಾಗಿ ಬಳಸುವ ಅರಾಬಿಕ್ ಅಂಕೆಗಳನ್ನು ಅವುಗಳ ಕಲನ ಶ್ರೇಣಿಯ ರೀತ್ಯ ಓದಬೇಕಾಗುತ್ತದೆ. ಕಾಂಗ್ರೆಸ್ ವರ್ಗೀಕರಣ ಪದ್ಧತಿಯ ಹಲವು ಪ್ರಧಾನ ವಿಭಾಗಗಳು ಕೆಲವು ಬಾರಿ ಪರಿಷ್ಕರಿಸಲ್ಪಟ್ಟಿವೆ.

ಅಮೆರಿಕ, ಇಂಗ್ಲೆಂಡ್ ಮತ್ತು ಏಷ್ಯದ ಕೆಲವು ರಾಷ್ಟ್ರಗಳು ಈ ಪದ್ಧತಿಯನ್ನು ಉಪಯೋಗಿಸುತ್ತಿವೆ. ಕಾಂಗ್ರೆಸ್ ಗಂಥಾಲಯ ಗ್ರಂಥಸೂಚಿ ಪತ್ರಕಗಳನ್ನು ಗ್ರಂಥಗಳ ವರ್ಗೀಕರಣದೊಂದಿಗೆ ಅಚ್ಚುಹಾಕಿಸಿ ಪ್ರಪಂಚದ ಅನೇಕ ಗ್ರಂಥಾಲಯಗಳಿಗೆ ಕಳಿಸುತ್ತದೆ. ಅವನ್ನು ಪಡೆಯುವ ಗ್ರಂಥಾಲಯಗಳು ತಮ್ಮ ಹೆಚ್ಚಿನ ಸಮಯವನ್ನು ಪುಸ್ತಕ ವರ್ಗೀಕರಣ, ಸೂಚೀ ರಚನೆ ಇತ್ಯಾದಿ ತಾಂತ್ರಿಕ ಕೆಲಸಗಳಿಗೆ ವ್ಯಯಮಾಡದೆ ಗ್ರಂಥಗಳು ತ್ವರಿತಗತಿಯಿಂದ ಓದುಗರ ಕೈಸೇರುವಂತೆ ಮಾಡುತ್ತವೆ.

**4. ವಿಷಯ ವರ್ಗೀಕರಣ ಪದ್ಧತಿ:** 19ನೆಯ ಶತಮಾನದ ಕೊನೆಯ ಹೊತ್ತಿಗೆ, ಬ್ರಿಟನ್ನಿನ ಅನೇಕ ಗ್ರಂಥಾಲಯಗಳು ಪುಸ್ತಕ ವಿತರಣೆಯಲ್ಲಿ ಮುಕ್ತ ಪದ್ಧತಿಯನ್ನು ಪ್ರಾರಂಭಿಸಿದ ಕಾಲದಲ್ಲಿ, ಗ್ರಂಥಗಳ ಕ್ರಮಬದ್ಧ ವ್ಯವಸ್ಥೆಗೆ ತಕ್ಕ ವರ್ಗೀಕರಣ ಪದ್ಧತಿಯೊಂದು ಅಗತ್ಯವೆಂದು ಮನಗಂಡ ಜೆ.ಡಿ. ಬ್ರೌನ್ ತನ್ನ ಸೋದರಳಿಯ ಜೆ. ಡಿ. ಸ್ಟುವರ್ಟನ ಸಹಕಾರದೊಂದಿಗೆ 1906 ರಲ್ಲಿ ವಿಷಯ ವರ್ಗೀಕರಣ ಪದ್ಧತಿಯನ್ನು ಪ್ರಕಟಿಸಿದ. ಈ ಹೊತ್ತಿಗಾಗಲೆ ಡ್ಯೂಯಿ ದಾಶಮಿಕ ಪದ್ಧತಿ ಬ್ರಿಟನ್ನಿನ ಗ್ರಂಥಾಲಯಗಳಿಗೆ ಪದಾರ್ಪಣೆಮಾಡಿ ನಿಧಾನವಾಗಿ ತಳವೂರುತ್ತಿತ್ತು.

ಈ ವರ್ಗೀಕರಣಪದ್ಧತಿ ದೀರ್ಘವಾದ ಪರಿಶೋಧನೆ ಮತ್ತು ಅಭ್ಯಾಸಗಳ ನೆರವಿಲ್ಲದೆ ಸುಲಭಗ್ರಾಹ್ಯವೂ ವೇದ್ಯವೂ ಆಗಿರುವುದಲ್ಲದೆ ವರ್ಗೀಕರಣ ವಿಧಾನದಲ್ಲೂ ಯೋಗ್ಯಸಲಹೆ ಮತ್ತು ಖಚಿತ ಅಭಿಪ್ರಾಯಗಳಿರುವ ಒಳ್ಳೆಯ ಪ್ರಸ್ತಾವನೆಯಿಂದೊಡಗೂಡಿದೆ. 1914ರಲ್ಲಿ ಹೊರಬಂದ ಎರಡನೆಯ ಆವೃತ್ತಿ ಬ್ರೌನ್ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಬೆಂಬಲ ಗಳಿಸಿತು. ಬ್ರೌನನ ತಾಯ್ನಾಡಾದ ಇಂಗ್ಲೆಂಡಿಗೆ ಹೆಚ್ಚು ಮಹತ್ತ್ವ ನೀಡಿರುವುದರಿಂದ ಈ ಪದ್ಧತಿ ಗ್ರೇಟ್ ಬ್ರಿಟನ್ನಿಗೆ ಸಂಬಂಧಿಸಿದ ವಿಷಯಗಳಿಗೆ ವಿಸ್ತಾರವಾದ ಕೋಷ್ಟಕವನ್ನೀಯುತ್ತದೆ. ವರ್ಗೀಕರಣದ ಅನುಷ್ಠಾನಕ್ಕೆ ಆವಶ್ಯಕವಾದ ಎಲ್ಲ ಅಗತ್ಯಗಳನ್ನೂ ಹೆಚ್ಚು ಕಡಿಮೆ ಈ ಪದ್ಧತಿ ಪೂರೈಸುತ್ತದೆ. ಸಾಮಾನ್ಯ ಕೃತಿಗಳಿಗಾಗಿ ಪ್ರತ್ಯೇಕ ವರ್ಗ, ಗ್ರಂಥಸ್ಥ ವಿಷಯಗಳ

ನಿರೂಪಣೆಯ ನಾನಾಸ್ವರೂಪಗಳನ್ನು ತಿಳಿಸುವ ಪ್ರತ್ಯೇಕವರ್ಗ, ವಿಷಯಗಳ ಅಕಾರಾದಿಸೂಚಿ ಮತ್ತು ವರ್ಗೀಕರಣಾಂಕಗಳಿಗೆ ಬಳಸಲಾದ ಸರಳ ಹಾಗೂ ಸಂಕ್ಷಿಪ್ತವಾದ ಸಂಕೇತಭಾಷೆ–ಇವು ಈ ವರ್ಗೀಕರಣ ಪದ್ಧತಿಯ ಗುಣಮಟ್ಟವನ್ನು ತೋರಿಸುತ್ತವೆ.

ಒಂದು ಬೃಹತ್ ವಿಷಯಕ್ಕೆ ಸಂಬಂಧಿಸಿದ ಎಲ್ಲ ಗ್ರಂಥಗಳನ್ನೂ ಏಕತ್ರ ವರ್ಗೀಕರಿಸುವುದು ಬ್ರೌನ್ ಪದ್ಧತಿಯ ಉದ್ದೇಶ. ಉದಾಹರಣೆಗೆ ಹಣ ಎಂಬ ವಿಷಯವನ್ನು ಆರಿಸಿ ಅದರ ಕುರಿತಾದ ಗ್ರಂಥಗಳನ್ನೆಲ್ಲ ಒಟ್ಟಿಗೆ ಕಲೆಹಾಕುತ್ತಾರಾಗಿ ಅದರ ಜೊತೆಗೆ ನಾಣ್ಯ ಮುದ್ರಣ ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳೂ ಬಂದುಬಿಡುತ್ತವೆ. ಇದರ ಪರಿಣಾಮವಾಗಿ ವಿಭಿನ್ನ ವಿಷಯಕ ಗ್ರಂಥಗಳು ಒಂದೇಕಡೆ ಜೊತೆಯಾಗಿ ನಿಲ್ಲುತ್ತವೆ. ವಿಷಯಗಳನ್ನು ಏಕತ್ರ ಸಮಾವೇಶಗೊಳಿಸುವುದರಿಂದ ಈ ವರ್ಗೀಕರಣಪದ್ಧತಿ ವಿಷಯವರ್ಗೀಕರಣ ಪದ್ಧತಿಯೆಂಬ ತನ್ನ ಹೆಸರನ್ನು ಅನ್ವರ್ಥಗೊಳಿಸುತ್ತದೆ.

ತಾಂತ್ರಿಕ ವಿಜ್ಞಾನಗಳನ್ನು ಅವುಗಳ ಮೂಲಹೇತುವಾದ ಆಯಾ ಶುದ್ಧ ವಿಜ್ಞಾನಗಳೊಂದಿಗೆ ಬೆರೆಸಿರುವುದು ಬ್ರೌನ್ ವರ್ಗೀಕರಣ ಪದ್ಧತಿಯ ಇನ್ನೊಂದು ಲಕ್ಷಣ. ವಿಷಯಗಳು ವೈಜ್ಞಾನಿಕವಾಗಿ ಬೆಳೆದುಬಂದಿರುವ ಕ್ರಮವನ್ನು ಪಾಲಿಸಿ ತಾಂತ್ರಿಕ ವಿಜ್ಞಾನಗಳನ್ನು ಅವು ಮೊಳಕೆಹೊಂದಿರುವ ಶುದ್ಧವಿಜ್ಞಾನದೊಂದಿಗೆ ವರ್ಗೀಕರಿಸಲಾಗುತ್ತದೆ. ಹೀಗೆ ಶುದ್ಧವಿಜ್ಞಾನದಿಂದ ಪ್ರಾದುರ್ಭವಿಸಿದ ತಾಂತ್ರಿಕ ವಿಜ್ಞಾನ, ಇನ್ನೊಂದು ಶುದ್ಧವಿಜ್ಞಾನ, ತತ್ಸಂಬಂಧ ಜನಿತವಾದ ಇನ್ನೊಂದು ತಾಂತ್ರಿಕ ವಿಜ್ಞಾನಗಳೆಂದು ಈ ರೀತಿ ವಿಷಯಗಳ ವರ್ಗೀಕರಣ ನಡೆಯುತ್ತದೆ. ಈ ಪದ್ಧತಿ ಪ್ರಧಾನ ವಿಷಯಗಳನ್ನು ಅವುಗಳ ವೈಜ್ಞಾನಿಕ ವಿಕಾಸದ ಕ್ರಮಾನುಗತಿಯ ಮೇರೆಗೆ ವಿಂಗಡಿಸುತ್ತದೆ. ಬ್ರೌನನ ಅಭಿಪ್ರಾಯದಂತೆ ವಸ್ತುಗಳ ಕ್ರಮಾನುಗತಿ ತತ್ತ್ವದ ಪ್ರಕಾರ ಮೊದಲಿಗೆ ವಸ್ತು ಮತ್ತು ಚೇತನಗಳಿಂದ ಜನ್ಯವಾದ ಭೌತವಿಜ್ಞಾನಗಳೂ ಅವುಗಳಿಂದ ಜೀವವೂ ಹುಟ್ಟುತ್ತವೆ. ಇದರಿಂದ ಜೀವವಿಜ್ಞಾನ, ಜನಾಂಗೀಯ ಅಧ್ಯಯನ (ಎತ್ನಾಲಜಿ) ಮತ್ತು ವೈದ್ಯವಿಜ್ಞಾನಗಳು ಹುಟ್ಟುತ್ತವೆ. ಜೀವನದಲ್ಲಿ ಕ್ರಮೇಣ ಮನಸ್ಸು, ಆಲೋಚನೆ, ಅದರಿಂದಾಗಿ ತತ್ತ್ವಶಾಸ್ತ್ರ, ಧರ್ಮಶಾಸ್ತ್ರ, ಸಾಮಾಜಿಕ ಹಾಗೂ ರಾಜ್ಯಶಾಸ್ತ್ರಗಳೂ ಇವುಗಳಿಂದಾಗಿ ಕ್ರಮೇಣ ದಾಖಲೆಗಳೂ ಹುಟ್ಟುತ್ತವೆ. ಈ ಕೊನೆಯದು ಭಾಷಾ ವಿಜ್ಞಾನ, ಸಾಹಿತ್ಯ, ಸಾಹಿತ್ಯ ಸ್ವರೂಪಗಳು, ಚರಿತ್ರೆ, ಭೂಗೋಳಶಾಸ್ತ್ರ ಮತ್ತು ಜೀವನಚರಿತ್ರೆ – ಇವುಗಳ ಸೃಷ್ಟಿಗೆ ಕಾರಣವಾಗುತ್ತದೆ. ಈ ತತ್ತ್ವಗಳಿಗನುಗುಣವಾಗಿ ವರ್ಗೀಕರಣ ಪದ್ಧತಿಯಲ್ಲಿ ವಿಷಯಗಳನ್ನು ವಿಂಗಡಿಸಿ ವರ್ಗೀಕರಿಸಲಾಗಿದೆ.

ಬ್ರೌನ್ ಪದ್ಧತಿಯ ಇನ್ನೊಂದು ವೈಶಿಷ್ಟ್ಯವೆಂದರೆ ಇತರ ವರ್ಗೀಕರಣ ಪದ್ಧತಿಗಳಲ್ಲಿ ಕಾಣುವ ಸಾಮಾನ್ಯಕೃತಿಗಳು ಎಂಬ ಪ್ರಧಾನ ವಿಭಾಗಗಳಲ್ಲಿರುವ ತಾದಾತ್ಮ್ಯ ಇಲ್ಲದಿರುವುದು. ಇಲ್ಲಿ ಕಾಣುವ ಮುಖ್ಯ ವಿಭಾಗಗಳೆಂದರೆ ಶಿಕ್ಷಣ (A 100), ತರ್ಕಶಾಸ್ತ್ರ (A 300), ಗಣಿತ (A 400), ರೇಖನ ಹಾಗೂ ಪ್ಲ್ಯಾಸ್ಟಿಕ್ ಕಲೆ (A 600), ಛಾಯಾಚಿತ್ರಣ (A 750), ಮೂರ್ತಿಶಿಲ್ಪ (A 790), ಸಾಮಾನ್ಯ ವಿಜ್ಞಾನ (A 900), ವೈಜ್ಞಾನಿಕ ಪರ್ಯಟನ ಮತ್ತು ಸರ್ವೇಕ್ಷಣೆ (A 950) – ಹೀಗೆ.

ರೋಮನ್ ಅಕ್ಷರಮಾಲೆಯ ಆದ್ಯಕ್ಷರಗಳನ್ನು ಇಲ್ಲಿ ಸಂಕೇತಗಳನ್ನಾಗಿ ಉಪಯೋಗಿಸಲಾಗಿದೆ. ವೈ ಮತ್ತು ಜ಼ಡ್ ಅಕ್ಷರಗಳ ಹೊರತಾಗಿ ಉಳಿದೆಲ್ಲ ಅಕ್ಷರಗಳನ್ನೂ ಪ್ರಧಾನ ವಿಷಯಗಳಿಗಾಗಿಯೂ ಮುಂದೆ ಉಪವಿಭಾಗಗಳನ್ನು ಪಡೆಯಲು 000–999 ರ ಮೂರು ಮೂರು ನಿಯಮಿತ ಅಂಕೆಗಳ ಆಧಾರದ ಮೇಲೆ ಪಡೆಯಲಾಗುತ್ತದೆ. ವರ್ಗೀಕರಣದಲ್ಲಿ ವಿಷಯಗಳ ಕ್ರಮಬದ್ಧ ಶ್ರೇಣಿಯನ್ನು ನಿರ್ಲಕ್ಷಿಸಲಾಗಿದೆ. ಸಾಮಾನ್ಯ ಸಹಾಯಕ ವರ್ಗಗಳ ಕೋಷ್ಟಕಗಳನ್ನು ಪ್ರಧಾನ ವರ್ಗಗಳ ಕೋಷ್ಟಕದೊಂದಿಗಿರಿಸದೆ ಪ್ರತ್ಯೇಕವಾಗಿ ಕೊಟ್ಟಿರುವುದರಿಂದ ಯಾವುದೇ ವಿಷಯಗಳ ಭಾಗವಾಗಿಯೋ ವಿಷಯನಿರೂಪಣೆಯ ಸ್ವರೂಪವನ್ನು ತೋರಿಸುವ ವರ್ಗವೆಂದಾಗಿಯೋ ಬೇಕಾದಂತೆ ಬೇಕಾದಲ್ಲಿ ಹೊಂದಿಸಿಕೊಳ್ಳಲು ಅವಕಾಶವಿದೆ. ಇದು, ಸ್ವಲ್ಪಮಟ್ಟಿಗೆ ಈ ಪದ್ಧತಿ ವಿಷಯಗಳ ಸಂಶ್ಲೇಷಣೆಗೆ ಅನುವು ಮಾಡಿಕೊಡುತ್ತದೆಂಬುದನ್ನು ತೋರಿಸುತ್ತದೆ. ಪ್ರಧಾನ ವರ್ಗಗಳಿಗೆ ಇವನ್ನು ಒಂದು ಚುಕ್ಕೆಯೊಂದಿಗೆ ಹೊಂದಿಸಬೇಕು. ಉದಾ: ಚಿಲ್ಲರೆ ವ್ಯಾಪಾರದ ಬೆಳವಣಿಗೆ L 855.375; ಸನ್ಯಾಸಿಯ ಆತ್ಮಚರಿತ್ರೆ K 404.41 ಇತ್ಯಾದಿ. ಬ್ರೌನ್ ಪದ್ಧತಿಯ ಮೂರನೆಯ ಆವೃತ್ತಿ 1939ರಲ್ಲಿ ಪ್ರಕಟವಾಯಿತು. ಗ್ರೇಟ್ ಬ್ರಿಟನ್ ಒಂದನ್ನು ಬಿಟ್ಟರೆ ಪರದೇಶಗಳಲ್ಲಿ ಈ ವರ್ಗೀಕರಣದ ಬಳಕೆ ತೀರ ಕಡಿಮೆ.

**5. ಸಾರ್ವತ್ರಿಕ ದಾಶಮಿಕ ವರ್ಗೀಕರಣ ಪದ್ಧತಿ :** ಪ್ರಪಂಚದಲ್ಲಿ ಪ್ರಕಟವಾಗಿರುವ ನಾನಾ ವಿಷಯಗಳ ಸಮಗ್ರ ಸೂಚಿಯೊಂದನ್ನು ತಯಾರಿಸುವ ಬೃಹತ್ ಯೋಜನೆಯನ್ನು ಬೆಲ್ಜಿಯಮಿನ ಪಾಲ್ ಆಟ್ಲೆಟ್ ಮತ್ತು ಲಾ ಫಾಂತೇನ್ ಎಂಬುವರು 1894ರಲ್ಲಿ ಕೈಗೊಂಡರು. ಈ ಬೃಹತ್‌ಸೂಚಿಯನ್ನು ಅಕಾರಾದಿಯಾಗಿ ತಯಾರಿಸುವುದು ಅಸಾಧ್ಯವೂ ಆದುದರಿಂದ ವಿಷಯಾನುಕ್ರಮವಾಗಿ ವರ್ಗೀಕರಿಸಲು ಯೋಚಿಸಿದರು. ಇದಕ್ಕಾಗಿ ವಿಶ್ವದಾದ್ಯಂತ ಬಳಕೆಯಲ್ಲಿರುವ, ಅಲ್ಲದೆ ಡ್ಯೂಯಿ ದಾಶಮಿಕ ಪದ್ಧತಿಯಲ್ಲೂ ಬಳಸಿರುವ ಅರಾಬಿಕ್ ಅಂಕಿಗಳನ್ನು ಬಳಸಲು ನಿರ್ಧರಿಸಲಾಯಿತು. ಈ ಹೊತ್ತಿಗಾಗಲೇ ಡ್ಯೂಯಿ ದಾಶಮಿಕ ಪದ್ಧತಿ ಪ್ರಚಾರದಲ್ಲಿದ್ದರೂ ವಿಷಯಗಳ ಸೂಕ್ಷ್ಮಾಂಶ ವಿಶ್ಲೇಷಣೆಯಲ್ಲಿ ವಿಫಲ ಹೊಂದಿತ್ತು. ಈ ಪದ್ಧತಿಯನ್ನೇ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ತಮ್ಮ ಸೂಚಿಗೆ ಉಪಯೋಗಿಸಿಕೊಳ್ಳಲು ಡ್ಯೂಯಿಯ ಒಪ್ಪಿಗೆ ಕೇಳಲಾಯಿತು. 1895ರಲ್ಲಿ ಮೊದಲ ಅಂತಾರಾಷ್ಟ್ರೀಯ ಗ್ರಂಥ ಸಮ್ಮೇಳನ, ಪ್ರಕಟವಾಗಿರುವ ಸಮಗ್ರಜ್ಞಾನಸೂಚಿಯ ಈ ನಿರ್ಮಾಣಯೋಜನೆಯನ್ನು ಸ್ವಾಗತಿಸಿತು. ಇದಕ್ಕಾಗಿ ಅಂತಾರಾಷ್ಟ್ರೀಯ ಸೂಚೀಕರಣ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಉದ್ದೇಶಸಾಧನೆಗಾಗಿ ಡ್ಯೂಯಿಯ ದಾಶಮಿಕ ಪದ್ಧತಿಯನ್ನು ಪರಿಷ್ಕರಿಸಲಾಯಿತು. ಹೊಸದಾಗಿ ರಚಿಸಲ್ಪಟ್ಟ ಈ ವರ್ಗೀಕರಣ ಪದ್ಧತಿಯಲ್ಲಿ ವಿಷಯಗಳ ಸೂಕ್ಷ್ಮಾಂಶ ವಿಶ್ಲೇಷಣೆಗೆ ಅವಕಾಶವಿತ್ತು. ಅದರಂತೆ ವರ್ಗೀಕರಣ ಮಾಡುವ ಕ್ರಮಕ್ಕೆ ಆದ್ಯತೆ ನೀಡಲಾಗಿತ್ತು. 1905ರಲ್ಲಿ ಈ ಹೊಸ ಪದ್ಧತಿ ಪ್ರಥಮವಾಗಿ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಯಿತು. ಯುರೋಪಿನ ಅನೇಕ ಗ್ರಂಥಾಲಯಗಳು ಈ ಪದ್ಧತಿಯನ್ನು ಮೆಚ್ಚಿಕೊಂಡವು. 1914–18ರ ಒಂದನೆಯ ಮಹಾಯುದ್ಧ ಕಾಲದಲ್ಲಿ ಸೂಚಿ ನಿರ್ಮಾಣ ಕಾರ್ಯ ಸ್ಥಗಿತವಾಯಿತು. ಹೇಗೊ 1920ರ ಹೊತ್ತಿಗೆ ಈ ಪದ್ಧತಿ ಪ್ರಪಂಚದ ಅನೇಕ ಗ್ರಂಥಾಲಯಗಳಲ್ಲಿ ಬಳಕೆಗೆ ಬಂದಿದ್ದು ಜನಪ್ರಿಯವಾಯಿತು. 1929–33ರ ಅವಧಿಯಲ್ಲಿ ಇದರ ಎರಡನೆಯ ಆವೃತ್ತಿ ಪ್ರಕಟವಾಯಿತು. ಆವೃತ್ತಿಯ ಮಾನವಿಕ ಮತ್ತು ಸಮಾಜಶಾಸ್ತ್ರಗಳ ವಿಷಯ ವಿಭಾಗಗಳು ಆಟ್ಲೆಟ್ ಮತ್ತು ಫಾಂತೇನರ ಹಾಗೂ ಪ್ರಕೃತಿ ವಿಜ್ಞಾನದ ವಿಭಾಗ ಫ್ರಿಟ್ಸ್ ಡಾಂಕರ್ ಡೂಯಿ ಅವರ ನೇತೃತ್ವದಲ್ಲಿ ಸಂಪಾದಿಸಲ್ಪಟ್ಟವು. 1934ರಲ್ಲಿ ಮೂರನೆಯ ಆವೃತ್ತಿ ಜರ್ಮನ್ ಭಾಷೆಯಲ್ಲಿ ಪ್ರಕಟವಾಗಲು ಪ್ರಾರಂಭಗೊಂಡು ಯುದ್ಧಕ್ಷೋಭೆಯ ಕಾರಣಗಳಿಂದಾಗಿ ಪ್ರಕಟಣ ಕಾರ್ಯ ಪೂರ್ಣವಾಗಲು 18 ವರ್ಷಗಳು ಸಂದವು.

ಡಾಂಕರ್ ಡೂಯಿ ಅಂತಾರಾಷ್ಟ್ರೀಯ ಗ್ರಂಥಸೂಚಿ ಸಂಸ್ಥೆಯ ಕಾರ್ಯದರ್ಶಿಯಾಗಿ ಸಲ್ಲಿಸಿದ ಸೇವಾವಧಿಯಲ್ಲಿ (1929–59) ಈ ಪದ್ಧತಿ ಅನೇಕ ಸುಧಾರಣೆಗಳನ್ನು ಕಂಡಿತು. 1937ರಲ್ಲಿ ಈ ಸಂಸ್ಥೆಗೆ ಅಂತಾರಾಷ್ಟ್ರೀಯ ಪ್ರಲೇಖನ ಸಂಸ್ಥೆಯೆಂದು ಹೆಸರಾಯಿತು. ಇಂಗ್ಲಿಷಿನಲ್ಲಿ ಮೊತ್ತಮೊದಲು 1936ರಲ್ಲಿ ಬ್ರ್ಯಾಡ್‌ಫರ್ಡ್ ಎಂಬವರು ಈ ಪದ್ಧತಿಯ ಸಂಕ್ಷಿಪ್ತ ಕೋಷ್ಟಕಗಳನ್ನು ಪ್ರಕಟಿಸಿದರು. ಕ್ರಮೇಣ ಇಂಗ್ಲಿಷ್ ಆವೃತ್ತಿಯ ಸಂಪಾದನೆಯ ಹೊಣೆಯನ್ನು ಬ್ರಿಟಿಷ್ ಸ್ಟ್ಯಾಂಡರ್ಡ್ಸ್ ಸಂಸ್ಥೆಗೆ ವಹಿಸಿಕೊಡಲಾಯಿತು. 1943 ರಿಂದ ಈ ಪದ್ಧತಿಯ ನಾಲ್ಕನೆಯ ಆವೃತ್ತಿಯನ್ನು ತರುವ ಕಾರ್ಯ ಪ್ರಾರಂಭವಾಯಿತು. ಜ್ಞಾನದ ಬೇರೆ ಬೇರೆ ಪ್ರಕಾರಗಳಿಗೆ ಸಂಬಂಧಿಸಿದಂತೆ ಅವುಗಳ ವರ್ಗೀಕರಣ ಕೋಷ್ಟಕಗಳನ್ನು ಪರಿಷ್ಕರಿಸಿ ಬಿಡಿಬಿಡಿಯಾಗಿ ಪ್ರಕಟಿಸಲಾಗುತ್ತಿದೆ. 1958ರಲ್ಲಿ ಜರ್ಮನ್, ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಬಂದ ತ್ರಿಭಾಷಾ ಸಂಪುಟವನ್ನು ಒಂದು ಮಹತ್ತ್ವದ ಪ್ರಕಟಣೆಯೆನ್ನಬಹುದು. 1961ರಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಸಾರ್ವತ್ರಿಕ ದಾಶಮಿಕ ಪದ್ಧತಿಯ ಮೂರನೆಯ ಸಂಕ್ಷಿಪ್ತ ಸಂಪುಟದ ಪ್ರಕಟಣೆಯಾಯಿತು. ಜಪಾನಿ ಭಾಷೆಯಲ್ಲಿ ಈ ಪದ್ಧತಿಯ ಪೂರ್ಣ ಆವೃತ್ತಿಗಳು ಮುದ್ರಿತವಾಗಿವೆ. ಇಷ್ಟೇ ಅಲ್ಲದೆ ಪೋರ್ಚುಗೀಸ್, ಪೋಲಿಷ್, ಸ್ವೀಡಿಷ್, ರಷ್ಯನ್ ಮೊದಲಾದ 16 ಭಾಷೆಗಳಲ್ಲಿ ಇದರ ಸಂಕ್ಷಿಪ್ತ ಆವೃತ್ತಿಗಳು ಬಂದಿವೆ.

ಈ ಪದ್ಧತಿ ಸಾರ್ವತ್ರಿಕ ಎಂಬ ಅನ್ವರ್ಥನಾಮವನ್ನು ಹೊಂದಲು ಮುಖ್ಯಕಾರಣವೇನೆಂದರೆ ಅದು ತನ್ನ ವರ್ಗೀಕರಣ ವ್ಯಾಪ್ತಿಯಲ್ಲಿ ಜ್ಞಾನದ ಎಲ್ಲ ಪ್ರಕಾರಗಳನ್ನೂ ಎಲ್ಲ ವಿಜ್ಞಾನಗಳನ್ನೂ ಕಲೆ, ಕಸುಬು, ಹಾಗೂ ಮಾನವನ ಎಲ್ಲ ಬಗೆಯ ಚಟುವಟಿಕೆಗಳನ್ನೂ ಪ್ರತಿನಿಧಿಸುತ್ತದೆ. ಎರಡನೆಯದಾಗಿ, ಪ್ರಪಂಚದ ಶೇ. 80 ಕ್ಕಿಂತಲೂ ಹೆಚ್ಚಿನ ರಾಷ್ಟ್ರಗಳ ಸದಸ್ಯತ್ವಪಡೆದಿರುವ ಅಂತಾರಾಷ್ಟ್ರೀಯ ಪ್ರಲೇಖನ ಸಂಸ್ಥೆ ಈ ವರ್ಗೀಕರಣ ಪದ್ಧತಿಯ ಮುನ್ನಡೆ, ಪ್ರಚಾರ ಮತ್ತು ಪರಿಷ್ಕರಣದ ಜವಾಬ್ದಾರಿ ಹೊತ್ತಿರುವುದರಿಂದ ಇದರ ಅಂತಾರಾಷ್ಟ್ರೀಯತೆಗೆ ಇನ್ನಷ್ಟು ಅರ್ಥ ಬಂದಿದೆ.

ವರ್ಗೀಕರಣ ಜ್ಞಾನದ ಎಲ್ಲ ಶಾಖೆಗಳನ್ನೂ ಉಲ್ಲೇಖಿಸುತ್ತದೆ. ಜ್ಞಾನ ಜಗತ್ತನ್ನು ಡ್ಯೂಯಿ ದಾಶಮಿಕ ಮಾದರಿಯಲ್ಲಿ ಪ್ರಧಾನ ವಿಷಯ, ವಿಭಾಗ, ಉಪವಿಭಾಗವಾಗಿ ವಿಂಗಡಿಸುತ್ತದೆ. ಡ್ಯೂಯಿ ಪದ್ಧತಿಯಲ್ಲಿ ಕಾಣುವಂತೆ ಪ್ರಧಾನ ವಿಷಯಗಳು ಮೂರು ಕನಿಷ್ಠ ಅಂಕೆಯ ತಳಹದಿಯ ಮೇಲೆ ರೂಪಿತವಾಗಿರದೆ ಒಂದೇ ಅಂಕೆಯ ಆಧಾರದ ಮೇಲೆ ನಿಂತಿವೆ. ಉದಾ: ತತ್ತ್ವಶಾಸ್ತ್ರ– 1, ಧರ್ಮಶಾಸ್ತ್ರ– 2 ಹೀಗೆ, ಪ್ರತಿಯೊಂದು ಪ್ರಧಾನ ವಿಷಯವನ್ನೂ ಪ್ರತಿನಿಧಿಸುವ ಕ್ರಮಾಂಕಕ್ಕೆ ಇನ್ನೊಂದು ಅಂಕಿಯನ್ನು ಜೋಡಿಸಿ ಅದರ ವಿಭಾಗಗಳನ್ನಾಗಿ ವಿಂಗಡಿಸಬಹುದು. ಪ್ರತಿ ಮೂರು ಅಂಕಿಗಳ ಅನಂತರ ಕಡ್ಡಾಯವಾಗಿ ಹಾಕುವುದರ ಮೂಲಕ ಸೂಕ್ಷ್ಮವಾದ ಜ್ಞಾನ ವಿಭಾಗಗಳನ್ನು ಅಂಕಿಗಳ ಮೂಲಕ ಪ್ರತಿನಿಧಿಸುವಾಗ ಅಂಕಿಗಳ ಪಂಕ್ತಿ ದೀರ್ಘವಾಗಿ ಬೆಳೆದರೂ ಪ್ರತಿ ಮೂರು ಅಂಕಿಗಳಿಗೊಮ್ಮೆ ವಿರಾಮವಿತ್ತು ವರ್ಗೀಕರಣವನ್ನು ಸರಳವಾಗಿ ಓದಬಹುದಾಗಿದೆ.

ವೈಜ್ಞಾನಿಕ ಯುಗದಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳು, ಲೇಖನಗಳು, ಸಂಶೋಧನ ಬರೆಹಗಳು ಮೊದಲಾದುವು ನೇರವಾಗಿ ವಿಷಯದ ವಿಸ್ತಾರವಾದ ವಿವರಣೆ ನೀಡುವುದು ಮಾತ್ರವಲ್ಲದೆ ಹೆಚ್ಚುಹೆಚ್ಚು ಆಳವಾದ ಸೂಕ್ಷ್ಮಸ್ತರಗಳ ನಿರೂಪಣೆಗಳಾಗಿರುತ್ತವೆ. ಮಾತ್ರವಲ್ಲದೆ ಕೆಲವೊಮ್ಮೆ ವಿಜ್ಞಾನ ಇಲ್ಲವೆ ಶಾಸ್ತ್ರಗಳು ಅನ್ಯೋನ್ಯಸಂಬಂಧವುಳ್ಳವಾಗಿ ವಿಚಾರಮಂಥನ, ಸಂಶೋಧನೆಗಳ ಫಲವಾಗಿ ಹೊಸ ವಿಚಾರಗಳ ಸೃಷ್ಟಿಯಾಗಿರುತ್ತವೆ. ಇಂಥ ಜಟಿಲ ವಿಷಯಗಳನ್ನೂ ವರ್ಗೀಕರಿಸಲು ವಿಷಯಗಳ ಅನ್ಯೋನ್ಯಗಳ ಸಂಬಂಧ ದ್ಯೋತಕಗಳಾಗಿ ವರ್ಗೀಕರಣಾಂಕ ದ್ವಿಬಿಂದು ಚಿಹ್ನೆಗಳನ್ನು ಉಪಯೋಗಿಸುತ್ತದೆ. ಸಾರ್ವತ್ರಿಕ ದಾಶಮಿಕ ಪದ್ಧತಿ ವಿಷಯವಿಶ್ಲೇಷಣೆ ಹಾಗೂ ಸಂಶ್ಲೇಷಣೆಗೆ ಕೊಡುವ ಮಹತ್ತ್ವಕ್ಕೆ ಇದು ನಿದರ್ಶನವಾಗಿದೆ. ದೇಶ, ಕಾಲ, ದೃಷ್ಟಿಕೋನ, ವಿಷಯನಿರೂಪಣೆಯ ಸ್ವರೂಪ ಇತ್ಯಾದಿ ಸಾಮಾನ್ಯ ಉಪವರ್ಗಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಿ ಬೇಕೆಂದಾಗ ಅವನ್ನು ಪ್ರಧಾನ ವರ್ಗೀಕರಣಾಂಕಗಳೊಂದಿಗೆ ಜೋಡಿಸಲು ಅವಕಾಶವಿತ್ತಿರುವುದು ಈ ಪದ್ಧತಿಯ ಇನ್ನೊಂದು ವೈಶಿಷ್ಟ್ಯ. ಕೆಲವೊಮ್ಮೆ ನಿರ್ದಿಷ್ಟವಾದ ಶಾಸ್ತ್ರ ಅಥವಾ ವಿಜ್ಞಾನಗಳಿಗೆ ಮಾತ್ರ ಸೀಮಿತವಾಗಿ ಬರುವ ಸಾಮಾನ್ಯ ವಿಭಾಗಗಳನ್ನು ಆಯಾ ಪ್ರಧಾನ ವಿಭಾಗಗಳೊಂದಿಗೆ ವಿಷಯ ವಿಶ್ಲೇಷಣೆಗಳೆಂದು ಪಟ್ಟಿ ಮಾಡಲಾಗಿದೆ. ಈ ವಿಷಯ ವಿಶ್ಲೇಷಣೆಗಳನ್ನು ಮುಖ್ಯವಾಗಿ ಚುಕ್ಕೆ, ಸೊನ್ನೆ, ಕೂಡುಗೆರೆ ಇತ್ಯಾದಿ ಸಂಯೋಜಕ ಚಿಹ್ನೆಗಳ ಮೂಲಕ ಪ್ರಧಾನ ವಿಷಯಗಳ ಉಪವರ್ಗಗಳನ್ನಾಗಿ ಜೊತೆಗೂಡಿಸಬಹುದು. ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳನ್ನೂ ಈ ವರ್ಗೀಕರಣ ಪದ್ಧತಿ ವಿಷಯಗಳ ವಿಂಗಡನೆಗಾಗಿ ಉಪಯೋಗಿಸುತ್ತದೆ.

ಪ್ರಪಂಚದ ಅನೇಕ ರಾಷ್ಟ್ರಗಳು, ಅದರಲ್ಲೂ ಮುಖ್ಯವಾಗಿ ಯುರೋಪಿನ ಬಹುತೇಕ ವಿಶಿಷ್ಟ ಗ್ರಂಥಾಲಯಗಳು ಸಾರ್ವತ್ರಿಕ ದಾಶಮಿಕ ಪದ್ಧತಿಯನ್ನು ಗ್ರಂಥಗಳ ವರ್ಗೀಕರಣದ ಸಲುವಾಗಿಯೂ ಪ್ರಲೇಖನ ಪಟ್ಟಿಗಳ ನಿರ್ಮಾಣಕ್ಕಾಗಿಯೂ ಉಪಯೋಗಿಸುತ್ತಿವೆ.

**6. ಕೋಲನ್ ವರ್ಗೀಕರಣ ಪದ್ಧತಿ :** ಗ್ರಂಥಾಲಯ ವಿಜ್ಞಾನಕ್ಕೆ ಭಾರತೀಯರೊಬ್ಬರ ಅಪೂರ್ವ ಕೊಡುಗೆಯಿದು. ಇದನ್ನು ದ್ವಿಬಿಂದು ವರ್ಗೀಕರಣ ಪದ್ಧತಿ ಎಂದೂ ಕರೆವುದಿದೆ. ಅಂತಾರಾಷ್ಟ್ರೀಯ ಖ್ಯಾತಿಗಳಿಸಿರುವ ಈ ವರ್ಗೀಕರಣ ಪದ್ಧತಿಯ ಕರ್ತೃ ಭಾರತದ ಗ್ರಂಥಾಲಯ ಚಳವಳಿಯ ಪಿತಾಮಹ ಎಸ್. ಆರ್. ರಂಗನಾಥನ್. ಗ್ರಂಥಾಲಯ ವಿಜ್ಞಾನದಲ್ಲಿ ಇಂಗ್ಲೆಂಡಿನಲ್ಲಿ ತರಬೇತಿ ಪಡೆದು ಬಂದಮೇಲೆ ಮದ್ರಾಸ್ ವಿಶ್ವವಿದ್ಯಾಲಯದ ಗ್ರಂಥಪಾಲರಾಗಿದ್ದಾಗ 1933ರಲ್ಲಿ ಈ ಮೇರುಕೃತಿಯ ಸೃಷ್ಟಿಯಾಯಿತು. ಇದರ ಎರಡನೆಯ ಆವೃತ್ತಿ 1939ರಲ್ಲೂ ಮೂರನೆಯದು 1950ರಲ್ಲೂ ಅದರ ಪುನರ್ ಮುದ್ರಣ 1963ರಲ್ಲೂ ಪ್ರಕಟವಾದುವು. ರಂಗನಾಥನ್ನರ ಪಾಂಡಿತ್ಯ, ಸ್ವತಂತ್ರ ವಿಚಾರಧಾರೆ ಮತ್ತು ವಿಶ್ಲೇಷಣ ಪ್ರಜ್ಞೆಗಳ ಪರಿಣಾಮವಾಗಿ ವರ್ಗೀಕರಣ ಪ್ರಪಂಚದಲ್ಲಿ ಇವರ ಪದ್ಧತಿ ಅತ್ಯಂತ ಮಹತ್ತ್ವವುಳ್ಳದ್ದಾಗಿದೆ.

ಇತರ ವರ್ಗೀಕರಣ ಪದ್ಧತಿಗಳು ಜ್ಞಾನ ಜಗತ್ತನ್ನು ಒಂದು ಸಮಷ್ಟಿಯೆಂದು ತಿಳಿದು ಯಾವುದೇ ವಿಷಯವನ್ನು ಪ್ರಮುಖ ವರ್ಗ, ಉಪವರ್ಗ, ವಿಭಾಗ, ಉಪವಿಭಾಗ ಮುಂತಾಗಿ ವಿಂಗಡಿಸಿ ಸಂಕೇತಮಾಲೆಯ ಅಕ್ಷರಗಳ ಮೂಲಕ ಅವನ್ನು ತಿಳಿಸಹೊರಡುತ್ತವೆ. ಆದರೆ ಕೋಲನ್ ಪದ್ಧತಿ ಸಂಪೂರ್ಣವಾಗಿ ವಿಶ್ಲೇಷಣಾತ್ಮಕ ಪದ್ಧತಿಯಾಗಿದೆ. ಪ್ರತಿಯೊಂದು ವಿಷಯವೂ ಅನೇಕ ಮೂಲಭಾಗಗಳನ್ನು ಅಥವಾ ಗುಣಧರ್ಮವನ್ನು ಹೊಂದಿದೆ. ಇವನ್ನು ರಂಗನಾಥನ್ ತಮ್ಮ ವಿಶ್ಲೇಷಣ ತತ್ತ್ವಗಳ ಆಧಾರದ ಮೇರೆಗೆ ಸುಸಂಬದ್ಧವಾಗಿ ಬಿಡಿಸಿ ವರ್ಗಾಂಗಗಳೆಂದು ಹೆಸರಿಸುತ್ತಾರೆ. ಪ್ರತಿಯೊಂದು ವರ್ಗಾಂಗದಲ್ಲಿ ಅಡಕವಾಗಿರುವ ಭಾವ ಅಥವಾ ಕಲ್ಪನೆಗಳು ಮೂಲತಃ ವಿಂಗಡನೆಗೆ ಸಹಕಾರಿಯಾಗಿರುವ ಒಂದೇ ವಿಶೇಷ ಗುಣದಿಂದ ಹುಟ್ಟಿದವಾಗಿವೆ. ಬೇರೆ ಬೇರೆ ವರ್ಗಾಂಗಗಳಿಗೆ ಸೇರಿದ ಭಾವ ಅಥವಾ ಕಲ್ಪನೆಗಳು ಮೂಲತಃ ವಿಂಗಡನೆಗೆ ಸಹಕಾರಿಯಾಗಿರುವ ಒಂದೇ ವಿಶೇಷ ಗುಣದಿಂದ ಹುಟ್ಟಿದವಾಗಿವೆ. ಬೇರೆ ಬೇರೆ ವರ್ಗಾಂಗಗಳಿಗೆ ಸೇರಿದ ಭಾವ ಅಥವಾ ಕಲ್ಪನೆಗಳನ್ನು ವರ್ಗೀಕರಣ ಪದ್ಧತಿ ನಿರ್ದಿಷ್ಟಪಡಿಸುವ ಶ್ರೇಣಿಯಲ್ಲಿ ಸಂಯೋಜಿಸಿದಾಗ ವಿಷಯಗಳ ವರ್ಗೀಕರಣಾಂಕಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಈ ವರ್ಗೀಕರಣ ಕಾರ್ಯ ಮೂರು ಪ್ರತ್ಯೇಕ ಕ್ಷೇತ್ರಗಳಲ್ಲಿ ನಡೆಯುತ್ತದೆ. 1. ಭಾವನಾ ಕ್ಷೇತ್ರ (ಐಡಿಯ ಪ್ಲೇನ್), 2. ಪದಗ್ರಹಣ ಕ್ಷೇತ್ರ (ವರ್ಬಲ್ ಪ್ಲೇನ್) ಮತ್ತು 3. ಸಾಂಕೇತಿಕ ಕ್ಷೇತ್ರ (ನೋಷನಲ್ ಪ್ಲೇನ್). ಭಾವನಾ ಕ್ಷೇತ್ರದಲ್ಲಿ ನಡೆಸುವ ಕೆಲಸವೇ ವರ್ಗೀಕರಣ ಕಾರ್ಯದಲ್ಲಿ ಅತ್ಯಂತ ಮಹತ್ತ್ವದ ಸ್ಥಾನಗಳಿಸುತ್ತದೆ. ಈ ಘಟ್ಟದಲ್ಲಿ ವಿಷಯಗಳಲ್ಲಿ ಅಡಕವಾಗಿರುವ ಬೇರೆ ಬೇರೆ ಘಟಕ ಅಥವಾ ಅಂಶಗಳನ್ನು ವಿಶ್ಲೇಷಿಸಿ, ಪ್ರತಿಯೊಂದನ್ನೂ ಅವು ಅಭಿವ್ಯಕ್ತಿಗೊಳಿಸುವ ವರ್ಗಾಂಗಗಳೊಂದಿಗೆ ಸೇರಿಸಿ ಅವನ್ನು ರಂಗನಾಥನ್ ವಿಧಿಸಿದ ಶ್ರೇಣಿಯ ಕ್ರಮದಂತೆ ಹೊಂದಿಸಿಕೊಳ್ಳಬೇಕು. ಯಾವುದೇ ವಿಷಯದ ವಿವಿಧ ಘಟಕಗಳು ವ್ಯಕ್ತಿತ್ವ, ಪದಾರ್ಥ, ಚೇತನ, ಪ್ರದೇಶ ಮತ್ತು ಕಾಲಗಳೆಂಬ ಐದು ಮುಖ್ಯ ವರ್ಗಾಂಗಗಳ ಅಭಿವ್ಯಕ್ತಿ ಸ್ವರೂಪಗಳೆಂದು ತಿಳಿಯಬೇಕು. ಹೀಗೆ ವಿಷಯ ವಿಶ್ಲೇಷಣೆ ನಡೆಸಿ ವರ್ಗಾಂಗಗಳನ್ನು ಮೇಲೆ ಹೇಳಿದ ಯಾದಿಯ ಅನುಕ್ರಮವಾಗಿ ಸೇರಿಸಬೇಕು. ಪ್ರತಿಯೊಂದೂ ವರ್ಗಾಂಗದ ಸಂಯೋಜನೆಗೆ ನಿರ್ದಿಷ್ಟವಾದ ಚಿಹ್ನೆಗಳಿವೆ. ಪದಗ್ರಹಣ ಕ್ಷೇತ್ರದಲ್ಲಿ ಪ್ರತಿಯೊಂದು ಪದವೂ ನಿರ್ದುಷ್ಟವಾಗಿದ್ದು ಪ್ರಪಂಚದ ಎಲ್ಲೆಡೆಯಲ್ಲೂ ಮಾನ್ಯತೆ ಪಡೆದುದಾಗಿರಬೇಕು. ಅಂದರೆ ಒಂದು ಪದಕ್ಕೆ ಒಂದೇ ಅರ್ಥವಿರಬೇಕು. ಆ ಅರ್ಥದಲ್ಲಿ ಆ ಪದವನ್ನು ಬಹುಕಾಲ ಎಲ್ಲರೂ ಬಳಸುತ್ತಿರಬೇಕು. ಸಾಂಕೇತಿಕ ಕ್ಷೇತ್ರದಲ್ಲಿ ಅಂಥ ಪದಗಳನ್ನು ಸಾಂಕೇತಿಕ ಭಾಷೆಯಲ್ಲಿ ಅನುವಾದಿಸಿ ಅಂತಿಮ ವರ್ಗೀಕರಣವನ್ನು ನಿರ್ಧರಿಸಬೇಕು. ಈ ರೀತಿ ವರ್ಗೀಕರಣ ಕಾರ್ಯ ಸಫಲವಾಗಿ ನೆರವೇರಲು ಅಗತ್ಯವಾದ ನಿಯಮಾದಿಗಳನ್ನು ರಂಗನಾಥನ್ ತಮ್ಮ ಪದ್ಧತಿಯ ಪ್ರಥಮಾರ್ಧದಲ್ಲಿ ಸ್ಫುಟವಾಗಿ ತಿಳಿಸಿದ್ದಾರೆ. ವರ್ಗೀಕರಣಕಾರ ಇವೆಲ್ಲವನ್ನೂ ಅಗತ್ಯ ತಿಳಿದಿರಬೇಕಾಗುತ್ತದೆ. ಹೀಗೆ ವಿಷಯಗಳ ವರ್ಗಾಂಗ ವಿಶ್ಲೇಷಣೆ ಮತ್ತು ಸಂಯೋಜಕ ಗುಣದಿಂದ ಕೂಡಿರುವ ಕೋಲನ್ ಪದ್ಧತಿಯನ್ನು ವಿಶ್ಲೇಷಣ ಸಂಶ್ಲೇಷಣ ತತ್ತ್ವನಿಷ್ಠ ವರ್ಗೀಕರಣ ಪದ್ಧತಿಯೆಂದು ಕರೆಯುತ್ತಾರೆ.

ಮೊದಲ ಆವೃತ್ತಿಗಳಲ್ಲಿ ವರ್ಗಾಂಗಗಳ ಸಂಯೋಜನೆಗೆ ಕೋಲನ್ (:) ಚಿಹ್ನೆಯನ್ನು ಮಾತ್ರ ಉಪಯೋಗಿಸುತ್ತಿದ್ದುದರಿಂದ ಈ ಪದ್ಧತಿಗೆ ಕೋಲನ್ ವರ್ಗೀಕರಣ ಪದ್ಧತಿಯೆಂದು ಹೆಸರು ಬಂತು. ಕ್ರಮೇಣ ಪೂರ್ಣವಿರಾಮ, ಅಲ್ಪವಿರಾಮ, ತಲೆ ಕೆಳಗುಮಾಡಿದ ಅಲ್ಪವಿರಾಮ, ಚುಕ್ಕೆ ಇತ್ಯಾದಿ ಚಿಹ್ನೆಗಳು ಬಳಕೆಗೆ ಬಂದವು. ಈ ಪದ್ಧತಿ ರೋಮನ್ ವರ್ಣಮಾಲೆಯ 26 ಆದ್ಯಕ್ಷರಗಳನ್ನೂ, ಐ, ಎಲ್ ಮತ್ತು ಒ ಇವುಗಳನ್ನುಳಿದು 23 ಸಣ್ಣಕ್ಷರಗಳನ್ನೂ ಅರಾಬಿಕ್ ಅಂಕೆಗಳನ್ನೂ ಕೆಲವು ಗ್ರೀಕ್ ಅಕ್ಷರಗಳನ್ನೂ ಕೆಲವು ಸಂಯೋಜಕ ಚಿಹ್ನೆಗಳನ್ನೂ ಅಂದರೆ ಮಿಶ್ರ ಸಂಕೇತಗಳನ್ನೂ ತನ್ನ ಸಂಕೇತಮಾಲೆಯಲ್ಲಿ ಬಳಸುತ್ತದೆ. ಈ ಎಲ್ಲ ಸಂಕೇತಗಳಿಗೂ ಪೂರ್ವನಿರ್ದಿಷ್ಟವಾಗಿ ಸ್ಥಾನನಿರ್ದೇಶನ ಮಾಡಲಾಗಿದೆ. ಜ್ಞಾನಜಗತ್ತಿನ ಮೂರು ಪ್ರಮುಖ ವಿಷಯಗಳಾದ ವಿಜ್ಞಾನಗಳು, ಮಾನವಿಕಗಳು ಮತ್ತು ಸಮಾಜಶಾಸ್ತ್ರಗಳಿಗೆ ಸೇರಿದ ಎಲ್ಲ ಶಾಸ್ತ್ರ, ವಿಜ್ಞಾನ, ಕಲೆಗಳನ್ನು, ಅವುಗಳ ಅನುಪೂರ್ವಿ ವಿಕಾಸ ತತ್ತ್ವದ ಮೇಲೆ ರೋಮನ್ ದೊಡ್ಡಕ್ಷರಗಳಲ್ಲಿ ಕಾಣಿಸಲಾಗಿದೆ. ಉದಾ A = ಪ್ರಕೃತಿಶಾಸ್ತ್ರ, AZ = ಗಣಿತಶಾಸ್ತ್ರಗಳು, B = ಗಣಿತ, BZ = ಭೌತಶಾಸ್ತ್ರಗಳು, C = ಭೌತಶಾಸ್ತ್ರ, D = ಯಂತ್ರಶಾಸ್ತ್ರ, E = ರಸಾಯನಶಾಸ್ತ್ರ ಇತ್ಯಾದಿ. ಜ್ಞಾನ ಬೆಳೆದಂತೆಲ್ಲ ಹೊಸ ವಿಜ್ಞಾನಗಳ, ಶಾಸ್ತ್ರಗಳ ಸೃಷ್ಟಿಯಾಗುತ್ತದೆ. ಆದುದರಿಂದ ಕೋಲನ್ ಪದ್ಧತಿಯಲ್ಲಿ ಕಾಣುವ ಪ್ರಧಾನ ವರ್ಗಗಳ ಶ್ರೇಣಿಯ ಯಾವ ಭಾಗದಲ್ಲಾದರೂ ನೂತನ ಪ್ರಧಾನ ವರ್ಗಗಳನ್ನು ಸೇರಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಇದು ಈ ಪದ್ಧತಿಯ ವಿಶಿಷ್ಟ ಗುಣವೆಂದು ಹೇಳಬಹುದು. ಈ ಗುಣ ಪ್ರಧಾನ ವಿಷಯಗಳಿಗೆ ಸೀಮಿತವಾಗಿರದೆ ವಿಭಾಗ ಉಪವಿಷಯಗಳಿಗೂ ಅನ್ವಯಿಸುತ್ತದೆ. ರೂಢಿಯಲ್ಲಿರುವ ಪ್ರಧಾನ ವರ್ಗಗಳಲ್ಲದೆ ಇನ್ನೂ ಅನೇಕ ಪ್ರಧಾನ ವರ್ಗಗಳನ್ನು ಅವುಗಳ ಕೋಷ್ಟಕದ ಮೊದಲಿಗೆ ಕೊಡಲಾಗಿದೆ. ಈ ಯಾದಿಯಲ್ಲಿ ಬರುವ ಜ್ಞಾನಜಗತ್ತು, ಗ್ರಂಥಾಲಯವಿಜ್ಞಾನ, ಗ್ರಂಥ ವಿಜ್ಞಾನ, ಪತ್ರಿಕೋದ್ಯಮ ಇತ್ಯಾದಿ ಪ್ರಧಾನ ವರ್ಗಗಳನ್ನು ಅರಾಬಿಕ್ ಅಂಕಿಗಳಲ್ಲಿ ಕೊಡಲಾಗಿದೆ. ಪ್ರಧಾನ ವಿಷಯವನ್ನು ವಿಭಜಿಸಿದಾಗ ದೊರೆಯುವ ಉಪವಿಭಾಗಗಳನ್ನು ಅರಾಬಿಕ್ ಅಂಕೆಗಳಲ್ಲಿ ದಾಶಮಿಕ ರೀತಿಯಲ್ಲಿ ವಿಂಗಡಿಸಿ ನಿರ್ದಿಷ್ಟಪಡಿಸಲಾಗಿದೆ.

ವಿಷಯಗಳ ಹರವು ಎಷ್ಟೇ ವಿಸ್ತಾರವಾಗಿದ್ದರೂ ಆಳವಾಗಿದ್ದರೂ ಕೋಲನ್ ವರ್ಗೀಕರಣ ಪದ್ಧತಿ ಸೂಕ್ಷ್ಮಾಂಶಗಳನ್ನು ಬಿಡಿಬಿಡಿಯಾಗಿ ವಿಶ್ಲೇಷಿಸಿ ಅವುಗಳ ಸಾಪೇಕ್ಷ ಕ್ರಮಕ್ಕನುಗುಣವಾಗಿಯೋ ಪಾರಸ್ಪರಿಕ ಸಂಬಂಧಕ್ಕನುಗುಣವಾಗಿಯೋ ನಿರ್ದಿಷ್ಟಪಡಿಸಿ ತತ್ತ್ವಗಳು, ನಿಯಮಾವಳಿಗಳು ಹಾಗೂ ಯುಕ್ತಿಗಳಿಂದ ಸಂಕಲಿಸಿ, ವರ್ಗೀಕರಣಾಂಕವನ್ನು ನಿಗದಿಪಡಿಸಿ, ಗ್ರಂಥಗಳು ಉಪಯುಕ್ತವಾಗುವ ರೀತಿಯಲ್ಲಿ ಓದುಗರಿಗೆ ದೊರಕುವಂತೆ ಮಾಡಬಲ್ಲ ವಿಶೇಷ ಗುಣವನ್ನು ಹೊಂದಿದೆ. ಗ್ರಂಥಗಳಲ್ಲಿ ವಿಷಯಗಳು ನಿರೂಪಿಸಲ್ಪಡುವ ಬೇರೆ ಬೇರೆ ಸ್ವರೂಪಗಳನ್ನು ಪಟ್ಟಿಮಾಡಿ ಬೇಕಾದಾಗ ಪ್ರಧಾನ ವರ್ಗಗಳಿಗೂ ಉಪವರ್ಗಗಳಿಗೂ ಜೋಡಿಸಲು ಅವಕಾಶವಾಗುವಂತೆ ಸಾಮಾನ್ಯ ವಿಷಯಗಳ ಕೋಷ್ಟಕಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಐದು ಮುಖ್ಯವರ್ಗಾಂಗಗಳಿರುವಂತೆಯೇ ಈ ಸಾಮಾನ್ಯ ವಿಷಯಗಳಲ್ಲೂ ಅದೇ ರೀತಿಯ ವರ್ಗಗಳಿವೆ. ಕೆಲವು ಸಾಮಾನ್ಯ ವಿಷಯ ವರ್ಗಗಳನ್ನು ಯಾವ ಸಂಯೋಜನ ಚಿಹ್ನೆಯಿಲ್ಲದೆಯೂ ಜೋಡಿಸಲು ಅವಕಾಶಗಳಿವೆ. ಸಾಮಾನ್ಯ ವಿಷಯ ವರ್ಗಗಳನ್ನು ರೋಮನ್ ಸಣ್ಣಕ್ಷರಗಳಲ್ಲಿ ನಮೂದಿಸಲಾಗಿದೆ. ಪ್ರದೇಶ ಹಾಗೂ ಕಾಲಗಳನ್ನು ತಿಳಿಸುವ ಸಾಮಾನ್ಯ ವಿಷಯ ವರ್ಗಗಳ ಕೋಷ್ಟಕವನ್ನು ಪ್ರತ್ಯೇಕ ಕೊಡಲಾಗಿದೆ.

ಕೋಲನ್ ವರ್ಗೀಕರಣದ ಮೊದಲ ಆರು ಆವೃತ್ತಿಗಳು ಮುಖ್ಯವಾಗಿ ಸಾರ್ವತ್ರಿಕ, ಕಾಲೇಜು, ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಉಪಯೋಗಿಸಲು ಅನುಕೂಲವಾಗಿವೆ. ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟ ಪ್ರಲೇಖನ ಸಂಶೋಧನೆ ಮತ್ತು ಶಿಕ್ಷಣ ಸಂಸ್ಥೆ ಕೋಲನ್

ವರ್ಗೀಕರಣದ ಏಳನೆಯ ಆವೃತ್ತಿಯ ಪರಿಷ್ಕರಣಕಾರ್ಯವನ್ನು ನಡೆಸಿದೆ. ಮುಖ್ಯವಾಗಿ ಎಲ್ಲ ಗ್ರಂಥಾಲಯಗಳಲ್ಲೂ ಬಳಸಬಹುದಾದ, ವಿಶಿಷ್ಟ ಗ್ರಂಥಾಲಯಗಳಲ್ಲಿ ಮಾತ್ರ ಬಳಸಬಹುದಾದ ಎರಡು ಪ್ರತ್ಯೇಕ ಕೋಷ್ಟಕಗಳನ್ನೊಳಗೊಂಡಿದೆ. ವರ್ಗೀಕರಣವನ್ನು ಹೆಚ್ಚು ಆಳವಾದ ಮತ್ತು ವಿಷಯಗಳ ಸೂಕ್ಷ್ಮವಾದ ಸ್ತರಗಳಿಗೆ ಕೊಂಡೊಯ್ದು ಪ್ರಲೇಖನ ಸೇವೆಗೆ ಸಮರ್ಥ ವರ್ಗೀಕರಣ ಪದ್ಧತಿಯಾಗುವಂತೆ ಈ ಹೊಸ ಆವೃತ್ತಿಯನ್ನು ತರಲಾಗುತ್ತಿದೆ.

ಗ್ರಂಥಗಳ ಸಂಗ್ರಹ ನಿಷ್ಪನ್ನವಾಗಿರದೆ ವಿಷಯ ನಿಷ್ಪನ್ನವಾಗಿರುವ ಈ ಕೋಲನ್ ವರ್ಗೀಕರಣದ ಖ್ಯಾತಿ ಈಗಾಗಲೇ ಭಾರತದ ಎಲ್ಲೆ ಮೀರಿ ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯ ಮುಂತಾದ ಕಡೆಗಳಲ್ಲೂ ಹರಡಿದೆ.

**7. ವಾಙ್ಮಯದರ್ಶನಾತ್ಮಕ ವರ್ಗೀಕರಣ :** ಹೆನ್ರಿ ಎವ್‍ಲಿನ್ ಬ್ಲಿಸ್ (1870–1955) ವರ್ಗೀಕರಣ ತತ್ತ್ವ ಹಾಗೂ ವಿಧಾನಗಳನ್ನೂ ಕುರಿತು ದೀರ್ಘಕಾಲ ಸಂಶೋಧನೆ ನಡೆಸಿ ಆಧುನಿಕ ಗ್ರಂಥಾಲಯ ವರ್ಗೀಕರಣಕ್ಕೆ ಅನುಕೂಲವಾಗಿರುವ ಈ ಹೊಸ ವಿಧಾನವನ್ನು ಬೆಳಕಿಗೆ ತಂದ. 1908ರಲ್ಲಿ ಮೊದಲ ಬಾರಿಗೆ ಇದರ ಸಂಕ್ಷಿಪ್ತ ರೂಪ ರೇಖೆಗಳು ಸಿದ್ಧವಾಗಿ 1910ರಲ್ಲಿ ಲೈಬ್ರರಿ ಜರ್ನಲ್ ಎಂಬ ನಿಯತಕಾಲಿಕೆಯಲ್ಲಿ ಪ್ರಕಟವಾಯಿತು. ಇದನ್ನೇ ಬ್ಲಿಸ್ ಮತ್ತಷ್ಟು ಪರಿಷ್ಕರಿಸಿ ಎ ಸಿಸ್ಟಮ್ ಆಫ್ ಕ್ಲ್ಯಾಸಿಫಿಕೇಷನ್ ಎಂಬ ಅಭಿದಾನವಿತ್ತು 1935ರಲ್ಲಿ ಪ್ರಕಟಿಸಿದ. ಮುಂದೆ ತನ್ನ ಜೀವಮಾನವಿಡೀ ಆತ ವರ್ಗೀಕರಣ ಪದ್ಧತಿಯಲ್ಲಿ ಬರುವ ಪೂರ್ಣ ಕೋಷ್ಟಕಗಳ ರಚನೆಯಲ್ಲಿ ತೊಡಗಿದ. ನಾನಾ ಶಾಸ್ತ್ರಗಳಲ್ಲಿಯೂ ವಿಜ್ಞಾನಗಳಲ್ಲಿ ಬರುವ ವಿಷಯಗಳಲ್ಲೂ ಕಂಡುಬರುವ ಸರ್ವಸಾಮಾನ್ಯ ಮುಖಗಳನ್ನು ಒಂದೆಡೆ ಸೇರಿಸಿ ಮಾಡಿದ ಯಾದಿ ಹಾಗೂ ತತ್ತ್ವಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಖಗೋಳಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರಗಳೆಂಬ ಪ್ರಧಾನ ವಿಷಯ ವರ್ಗಗಳಿಂದೊಡಗೂಡಿದ ವರ್ಗೀಕರಣಗಳ ಪ್ರಥಮ ಸಂಪುಟ 1940ರಲ್ಲಿಯೂ ಮಾನವಿಕ, ಮನಃಶಾಸ್ತ್ರ, ಶಿಕ್ಷಣಶಾಸ್ತ್ರ, ಸಮಾಜಶಾಸ್ತ್ರಗಳ ವರ್ಗೀಕರಣ ಕೋಷ್ಟಕ ಎರಡನೆಯ ಸಂಪುಟವಾಗಿ 1946ರಲ್ಲೂ ಪ್ರಕಟವಾದುವು. ಈ ಎರಡು ಸಂಪುಟಗಳೂ ಪರಿಷ್ಕರಿಸಲ್ಪಟ್ಟು ಒಂದೇ ಸಂಪುಟದಲ್ಲಿ 1951ರಲ್ಲಿ ಪ್ರಕಟಗೊಂಡಿತು. ಚರಿತ್ರೆ, ಧರ್ಮಶಾಸ್ತ್ರ, ಪ್ರಾಯೋಗಿಕ ಸಮಾಜಶಾಸ್ತ್ರ ಮತ್ತು ನೀತಿಶಾಸ್ತ್ರ, ರಾಜಕೀಯ ವಿಜ್ಞಾನ, ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ಲಲಿತಕಲೆಗಳು, ಭಾಷಾವಿಜ್ಞಾನ, ಸಾಹಿತ್ಯ, ಗ್ರಂಥವಿಜ್ಞಾನಗಳಿಂದೊಡಗೂಡಿದ ಮೂರನೆಯ ಸಂಪುಟದಲ್ಲೂ ಮತ್ತು ಈ ಎಲ್ಲ ಸಂಪುಟಗಳಿಗೂ ತಯಾರಿಸಿದ ಸೂಚಿ 4 ನೆಯ ಸಂಪುಟವಾಗಿಯೂ 1953ರಲ್ಲಿ ಪ್ರಕಟವಾದುವು.

ಪ್ರಥಮ ಹಾಗೂ ದ್ವಿತೀಯ ಸಂಪುಟಗಳು ವಾಙ್ಮಯ ದರ್ಶನಾತ್ಮಕ ವರ್ಗೀಕರಣದ ಮೂಲ ಸಮಸ್ಯೆಗಳು, ತತ್ತ್ವಗಳು, ಇತ್ಯಾದಿ ವಿವರಣೆಯನ್ನು ನೀಡುವ ಸುದೀರ್ಘ ಪ್ರಸ್ತಾವನೆ ಹಾಗೂ ಮೇಲೆ ತಿಳಿಸಿದ ಪ್ರಧಾನ ವಿಷಯಗಳ ವರ್ಗೀಕರಣಾಂಕದ ಯಾದಿಯನ್ನು ಒಳಗೊಂಡಿವೆ. ಬ್ಲಿಸ್ ಈ ಗ್ರಂಥದಲ್ಲಿ ಚರ್ಚಿಸುವ ವಿಷಯಗಳು ಈ ವರ್ಗೀಕರಣ ಪದ್ಧತಿಗೆ ಮಾತ್ರ ಸೀಮಿತವಾಗಿರದೆ ಸಾರ್ವಕಾಲಿಕವಾಗಿ ಎಲ್ಲರೂ ಮನನ ಮಾಡಲು ಯೋಗ್ಯವಾದ ಅಪೂರ್ವ ವಿಚಾರಧಾರೆಗಳನ್ನೊಳಗೊಂಡಿದೆ. ಕೋಷ್ಟಕ ವಿಭಾಗ ಮುಖ್ಯವಾಗಿ ಸಂಕ್ಷಿಪ್ತ ಸಾರಾಂಶ ಹಾಗೂ ಸಾಮಾನ್ಯ ಸಾರಾಂಶಗಳಿಂದ ಪ್ರಾರಂಭವಾಗುತ್ತದೆ. ಇವು ಮುಖ್ಯವಾಗಿ ಶಾಸ್ತ್ರ, ವಿಜ್ಞಾನಗಳ ಅನುಪೂರ್ವಿಕ ಕ್ರಮವನ್ನು ನಿರ್ದೇಶಿಸುತ್ತದೆ. ಈ ಸಾರಾಂಶ ಸೂಚಿಗಳ ಆಧಾರದ ಮೇಲೆ ಬ್ಲಿಸ್ ವಿಷಯ ವರ್ಗಗಳ ಕ್ರಮಾಗತ ಯಾದಿಗಳನ್ನು, ಸೂಚಿಸುವ ಪ್ರತ್ಯೇಕ ಕೋಷ್ಟಕಗಳನ್ನು ರಚಿಸಿದ್ದಾನೆ. ಮುಂದೆ ವ್ಯವಸ್ಥಾತ್ಮಕ ಮತ್ತು ಸಾಮಾನ್ಯ ಸಹಕಾರಿ ಕೋಷ್ಟಕಗಳು ಮತ್ತು ವಾಚ್ಯಾರ್ಥ ಜ್ಞಾಪಕ ಸೂತ್ರಗಳ ಕೋಷ್ಟಕಗಳು ಈ ಸಂಪುಟಗಳಲ್ಲಿ ಅಡಕವಾಗಿವೆ. ಯಾವುದೇ ವಿಷಯದಲ್ಲೂ ವರ್ಗೀಕರಣ ಯಾದಿಯಲ್ಲಿ ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ಪಟ್ಟಿ ಮಾಡಬಹುದಾದಂಥ ಅಂಶಗಳಿದ್ದರೆ ಅವನ್ನು ಅನ್ಯಸ್ಥಳಗಳಲ್ಲಿ ಎಲ್ಲಿ ಮತ್ತು ಹೇಗೆ ಸೇರಿಸಿಕೊಳ್ಳಬಹುದೆಂದು ನಿರ್ದಿಷ್ಟವಾಗಿ ಹೇಳಿ ಪರ್ಯಾಯ ಯಾದಿಗಳನ್ನು ಬ್ಲಿಸ್ ವರ್ಗೀಕರಣ ಪದ್ಧತಿ ನೀಡುತ್ತದೆ. ಅವುಗಳ ಉಪವರ್ಗಗಳು ರೋಮನ್ ವರ್ಣಮಾಲೆಯ ಆದ್ಯಕ್ಷರಗಳಿಂದ ಪ್ರತಿನಿಧಿಸಲ್ಪಟ್ಟಿವೆ. ವರ್ಣಮಾಲೆಯ ಸಣ್ಣಕ್ಷರಗಳು ಮತ್ತು ಅರಾಬಿಕ್ ಅಂಕೆಗಳನ್ನು ಸಾಮಾನ್ಯ ಸಹಕಾರಿ ಕೋಷ್ಟಕ ಮತ್ತು ವ್ಯವಸ್ಥಾತ್ಮಕ ಕೋಷ್ಟಕಗಳಲ್ಲಿ ಉಪಯೋಗಿಸಲಾಗಿದೆ. ಈ ಸಂಕೇತಗಳನ್ನು ವಿಷಯಗಳ ಸೂಕ್ಷ್ಮಾಂಶಗಳ ನಿರೂಪಣೆಗೆ ಸಹಾಯಕವಾಗುವ ಸಂಕೇತ ಭಾಷೆಗಳನ್ನಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

1. ಮುಖ್ಯವಾಗಿ ಬ್ಲಿಸ್‍ನ ವರ್ಗೀಕರಣ ಕ್ರಮ ವಸ್ತುಗಳ ಅಥವಾ ವಿಷಯಗಳ ಅನುಪೂರ್ವಿಕ ಕ್ರಮವನ್ನು ನಿರ್ದಿಷ್ಟಪಡಿಸುತ್ತದೆ.

2. ಈ ವ್ಯವಸ್ಥೆ ಜ್ಞಾನದ ವರ್ಗೀಕರಣಕ್ಕೆ ತಳಹದಿಯೆನಿಸುತ್ತದೆ.

3. ವಿಷಯ ಅಥವಾ ವಸ್ತುಗಳ ವ್ಯವಸ್ಥೆಯಲ್ಲಿ ವಿಜ್ಞಾನಿಗಳಿಗೆ ಹಾಗೂ ಸಂಶೋಧಕರಿಗೆ ಅನುಕೂಲವಾಗುವಂತೆ ಉಪಯೋಗನಿಷ್ಠ ವ್ಯವಸ್ಥೆಯಾಗಿದೆ.

4. ಜ್ಞಾನದ ವಿವಿಧ ಪ್ರಕಾರಗಳನ್ನು ಸಂಕೀರ್ಣವಾದ ರೀತಿಯಲ್ಲಿ ಸಂಗತಗೊಳಿಸಿದಂತೆ ವರ್ಗೀಕರಣದ ಸಂಕೀರ್ಣ ಪದ್ಧತಿಯನ್ನು ತಿಳಿಯಲು ಸಾಧ್ಯವಾಗುತ್ತದೆ.

ಮುಖ್ಯವಾಗಿ ಬ್ಲಿಸ್‍ನ ವರ್ಗೀಕರಣ ಪದ್ಧತಿ ಗ್ರೇಟ್ ಬ್ರಿಟನ್ ಮತ್ತು ಕಾಮನ್‍ವೆಲ್ತ್ ಒಕ್ಕೂಟದ ಕೆಲವು ದೇಶಗಳಲ್ಲಿ ಬಳಕೆಯಲ್ಲಿದೆ. ಪ್ರಧಾನ ವಿಷಯಗಳ ವಿಶದೀಕರಣ ಅಷ್ಟು ಸಮರ್ಪಕವಾಗಿಲ್ಲದಿದ್ದರೂ ಈ ಪದ್ಧತಿಯಲ್ಲಿ ವಿಷಯಗಳ ಸಂಕಲನಕ್ಕಿಂತ ವಸ್ತುಗಳ ಸಂಕಲನ ತತ್ತ್ವಕ್ಕೆ ಮಹತ್ತ್ವ ನೀಡಲಾಗಿದೆ.

ವಾಚನಾಲಯ, ಟ್ರಿನಿಟಿ ಕಾಲೇಜು, ಬರ್ಕಲಿ

**B ವಿಶಿಷ್ಟ ವರ್ಗೀಕರಣ ಪದ್ಧತಿಗಳು :** ಯಾವುದಾದರೊಂದು ನಿರ್ದಿಷ್ಟ ಗ್ರಂಥಾಲಯಕ್ಕೋಸ್ಕರ ರಚಿತವಾದ ಪದ್ಧತಿ ಹಾಗೂ ವಿಶಿಷ್ಟವಾದ ವಿಷಯಗಳಿಗಾಗಿ ರಚಿಸಲ್ಪಟ್ಟ ವರ್ಗೀಕರಣ ಪದ್ಧತಿಗಳ ಪ್ರಸ್ತಾಪ ಇಲ್ಲಿ ಬರುತ್ತದೆ. ಇಂಥ ಪದ್ಧತಿಗಳು ಸಾಂಪ್ರದಾಯಿಕವಾಗಿ ಬಂದಿರುವ ವರ್ಗೀಕರಣಗಳಿಗಿಂತ ಉದ್ದೇಶ ಹಾಗೂ ಸ್ವರೂಪಗಳಲ್ಲಿ ಭಿನ್ನವಾಗಿರುತ್ತದೆ. ವಿಶಿಷ್ಟ ವರ್ಗೀಕರಣ ಪದ್ಧತಿಗಳ ರಚನೆಯಲ್ಲಿ ಮೊದಲು ತೊಡಗಿದವರು ಲಂಡನಿನ ವರ್ಗೀಕರಣ ಸಂಶೋಧನ ತಂಡದ ಸದಸ್ಯರು. 1952ರ ಫೆಬ್ರುವರಿ ತಿಂಗಳಲ್ಲಿ ಇಂಗ್ಲೆಂಡಿನ ಕೆಲ ಪ್ರಮುಖ ಗ್ರಂಥಪಾಲರ ಆಶೋತ್ತರಗಳ ಫಲವಾಗಿ ಈ ತಂಡ ಈ ಕೆಲಸವನ್ನು ಎತ್ತಿಕೊಂಡಿತು. ವರ್ಗೀಕರಣದ ಮೂಲತತ್ತ್ವಗಳ ಮೇಲೆ ಸಾಕಷ್ಟು ಚರ್ಚೆ ನಡೆದ ಮೇಲೆ 1956ರಲ್ಲಿ ತಂಡದ ಸದಸ್ಯರಲ್ಲಿ ಕೆಲವರು ವಿಶಿಷ್ಟ ವರ್ಗೀಕರಣ ಪದ್ಧತಿಗಳನ್ನು ರಚಿಸಲಾರಂಭಿಸಿದರು. ಹೀಗೆ ಬಂದ ವರ್ಗೀಕರಣ ಪದ್ಧತಿಗಳಲ್ಲಿ ಫಾಸ್ಕೆಟ್‍ನ ಇಂಡಸ್ಟ್ರಿಯಲ್ ಸೇಫ್ಟಿ, ಬಿ.ಸಿ. ವಿಕೆರಿಯ ಭೂಸಾರ ವಿಜ್ಞಾನ, ಇ. ಜೆ. ಕೋಟ್ಸ್‍ನ ಬ್ರಿಟಿಷ್ ಕ್ಯಾಟಲಾಗ್ ಆಫ್ ಮ್ಯೂಸಿಕ್ ಕ್ಲ್ಯಾಸಿಫಿಕೇಷನ್, ಬಾರ್ಬರ್ ಕೈಲ್‍ನ ಸಮಾಜವಿಜ್ಞಾನಗಳು, ಜೆ. ಬಿನ್ಸ್‍ನ ಇಂಗ್ಲಿಷ್ ಎಲೆಕ್ಟ್ರಿಕಲ್ ಸ್ಕೀಮ್, ಜೆ.ಇ.ಎಲ್. ಫರಡೇನ್‍ನ ಡಯಮಂಡ್ ಟೆಕ್ನಾಲಜಿ ಮುಂತಾದ ವರ್ಗೀಕರಣ ಪದ್ಧತಿಗಳು ಪ್ರಸಿದ್ಧಿ ಪಡೆದವು. ಗ್ರಂಥಾಲಯ ವಿಜ್ಞಾನ ವಿಷಯದ ಮೇಲೆ ಈ ವರ್ಗೀಕರಣ ಸಂಶೋಧನ ತಂಡದವರು ರಚಿಸಿದ ವಿಶಿಷ್ಟ ವರ್ಗೀಕರಣ ಪದ್ಧತಿಯೂ ಪ್ರಸಿದ್ಧಿ ಪಡೆದಿದೆ. ವಿಶಿಷ್ಟ ವರ್ಗೀಕರಣ ಪದ್ಧತಿಯ ಸಮಸ್ಯೆಗಳು ಮತ್ತು ವಿಧಾನಗಳ ಬಗ್ಗೆ ವಿಕೆರಿ ತನ್ನ ವರ್ಗಾಂಗನಿಷ್ಠ ವರ್ಗೀಕರಣವೆಂಬ ಗ್ರಂಥದಲ್ಲಿ ವಿಶದವಾಗಿ ಬರೆದಿದ್ದಾನೆ.

ಭಾರತದಲ್ಲಿ ಈ ದಿಸೆಯಲ್ಲಿ ಬೆಂಗಳೂರಿನ ಪ್ರಲೇಖನ ಸಂಶೋಧನ ಮತ್ತು ಶಿಕ್ಷಣ ಕೇಂದ್ರ ಕೆಲಸ ಮಾಡುತ್ತಿದೆ. ರಂಗನಾಥನ್‍ರ ನೇತೃತ್ವದಲ್ಲಿ ಪ್ರಾರಂಭವಾದ ಈ ಸಂಸ್ಥೆ ಕಳೆದ ಹತ್ತು ವರ್ಷಗಳಲ್ಲಿ ಕೋಲನ್ ಪದ್ಧತಿಯ ತತ್ತ್ವಗಳು, ನಿಯಮಾವಳಿಗಳು, ಸಿದ್ಧಾಂತಗಳು ಮೊದಲಾದುವುಗಳ ಹಿನ್ನೆಲೆಯಲ್ಲಿ ಅನೇಕ ವಿಷಯಗಳ ಮೇಲೆ ವರ್ಗೀಕರಣಗಳನ್ನು ತಯಾರಿಸಿ ಪ್ರಕಟಿಸಿದೆ. ಉದಾ : ಅರ್ಥಶಾಸ್ತ್ರ, ಮಾನವ ರೋಗಗಳು, ಬ್ಯಾಂಕಿಂಗ್, ಆಹಾರವಿಜ್ಞಾನ, ಚರಕಿ ಯಂತ್ರೋತ್ಪಾದನೆ, ಆವಿ ಉತ್ಪಾದನೆಯ ಯಂತ್ರವಿದ್ಯೆ, ತೆರಿಗೆ ಪದ್ಧತಿ, ಸಾಗಾಟದ ಅರ್ಥಶಾಸ್ತ್ರ ಇತ್ಯಾದಿ ಸೂಕ್ಷ್ಮವಿಷಯಗಳ ವಿಶಿಷ್ಟ ವರ್ಗೀಕರಣಗಳನ್ನು ರಚಿಸಿದೆ. ಕೋಲನ್ ವರ್ಗೀಕರಣದ ಏಳನೆಯ ಆವೃತ್ತಿಯ ಒಂದು ಸಂಪುಟ ವಿಶಿಷ್ಟ ವರ್ಗೀಕರಣ ಕೋಷ್ಟಕಗಳ ಸಂಪುಟವಾಗಿ ಸದ್ಯದಲ್ಲೆ ಬರಲಿದೆ.

ವಿಶಿಷ್ಟ ವರ್ಗೀಕರಣ ಕಾರ್ಯ ಗ್ರಂಥ ಹಾಗೂ ಓದುವ ಸಾಮಗ್ರಿಗಳ ಬಾಹ್ಯ ಸ್ವರೂಪ ನಿಷ್ಠವಾಗಿಯೂ ರಚಿಸಲ್ಪಡುತ್ತದೆ. ಉದಾ : ಚಿತ್ರಗಳು, ಗ್ರಾಮಫೋನ್ ರೆಕಾರ್ಡುಗಳು, ನಕ್ಷೆಗಳು, ಭೂಪಟಗಳು, ವ್ಯಾಪಾರಿ ಸಂಸ್ಥೆಗಳ ಸಾಹಿತ್ಯಗಳು, ವಾಣಿಜ್ಯ ವಿಷಯಗಳು, ಪೇಟೆಂಟುಗಳು.

ವರ್ಗೀಕರಣ ಹಾಗೂ ಇತರ ಏರ್ಪಾಡುಗಳಲ್ಲಿ ತುಂಬ ಸಮಸ್ಯೆಗಳನ್ನೊಡ್ಡುತ್ತವೆ. ಈ ಸಮಸ್ಯೆಗಳ ಪರಿಣಾಮವಾಗಿಯೂ ಈ ರೀತಿಯ ವಿವಿಧ ಸ್ವರೂಪಗಳ ಗ್ರಂಥ ಸಾಮಗ್ರಿಗಳ ವ್ಯವಸ್ಥಿತ ಏರ್ಪಾಡಿಗಾಗಿಯೂ ವಿಶಿಷ್ಟವಾದ ಮಾದರಿಯಲ್ಲಿ ವರ್ಗೀಕರಣಗಳನ್ನು ತಯಾರಿಸುವ ಕ್ರಮ ಬಳಕೆಯಲ್ಲಿದೆ. (ಎಂ.ಆರ್.ಕೆಯು.; ವೈ.ವೈ.ವೈ.; ಎನ್.ಬಿ.ಪಿ.)

**5 ಸೂಚೀಕರಣ :** ಗ್ರಂಥಾಲಯದಲ್ಲಿರುವ ವಿವಿಧ ಗ್ರಂಥಗಳ ಬಗ್ಗೆ ಓದುಗರಿಗೆ ಸಂಕ್ಷಿಪ್ತಮಾಹಿತಿಗಳನ್ನು ಕ್ರಮಬದ್ಧವಾಗಿ ಒಂದೆಡೆ ಕಲೆಹಾಕುವ ವಿಧಾನ (ಕ್ಯಾಟಲಾಗಿಂಗ್). ಹೀಗೆ ರೂಪಗೊಂಡ ಗ್ರಂಥವಿವರಣಾ ಪಟ್ಟಿಗಳೇ ಗ್ರಂಥ ಸೂಚಿಗಳು (ಕ್ಯಾಟಲಾಗುಗಳು). ಉತ್ತಮ ಸೂಚೀಕರಣ ಸಾಹಿತ್ಯದ ನಿರ್ಮಾಣ ಎಲ್ಲ ಆಧುನಿಕ ಗ್ರಂಥಾಲಯಗಳ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ. ಇದು ಗ್ರಂಥಾಲಯ ವಿಜ್ಞಾನದ ಮುಖ್ಯ ಭಾಗವೂ ಹೌದು.

ಗ್ರಂಥಸೂಚಿಗಳು ಕಾರ್ಡುಗಳ ರೂಪದಲ್ಲಿರಬಹುದು ಇಲ್ಲವೆ ಪುಸ್ತಕರೂಪ ದಲ್ಲಿರಬಹುದು ಅಥವಾ ಗಣಿತದಲ್ಲಿ ಶೇಖರಿಸಿದ ದತ್ತಾಂಶ ರೂಪದಲ್ಲಿರಬಹುದು. ರೂಪು ಯಾವುದೇ ಆದರೂ ಗ್ರಂಥಸೂಚಿಯಲ್ಲಿ ಸಾಮಾನ್ಯವಾಗಿ ಈ ಎಲ್ಲ ವಿವರಗಳೂ ಇರಬೇಕಾಗುತ್ತದೆ. 1. ಲೇಖಕರ ಪೂರ್ಣ ಹೆಸರು; 2. ಗ್ರಂಥದ ಪೂರ್ಣ ಶೀರ್ಷಿಕೆ; 3. ಪ್ರಕಾಶಕರ ವಿಳಾಸ; 4. ಪ್ರಕಾಶನ ವರ್ಷ; 5. ಗ್ರಂಥದ ಆವೃತ್ತಿ, ಪುಟ ಸಂಖ್ಯೆಗಳು, ಬೆಲೆ, ಗಾತ್ರ, ಇತ್ಯಾದಿ; 6. ಭಾಷಾಂತರಗೊಂಡದ್ದೋ ಇಲ್ಲವೆ ಸಂಪಾದಿತವಾದದ್ದೋ ಆಗಿದ್ದರೆ ಭಾಷಾಂತರಕಾರರ ಇಲ್ಲವೆ ಸಂಪಾದಕರ ಪೂರ್ಣ ಹೆಸರು; 7. ಗ್ರಂಥಕ್ಕೆ ಟೀಕೆ ಬರೆದವರ ಹೆಸರು; 8. ಆ ವಿಷಯದ ಮೇಲೆ ಲಭ್ಯವಿರಬಹುದಾದ ಇತರ ಗ್ರಂಥಗಳು ಹಾಗೂ ಲೇಖನಗಳು; 9. ವೈಯಕ್ತಿಕ ಲೇಖಕರ ಗ್ರಂಥಗಳು, ಲೇಖನಗಳು ಮತ್ತು ಇಂಥ ಲೇಖಕರನ್ನು ಕುರಿತು ಇತರರು ಬರೆದ ಗ್ರಂಥಗಳು, ಲೇಖನಗಳು. ಕೆಲವು ಸೂಚಿಯಲ್ಲಿ ಇಷ್ಟು ವಿವರಗಳು ದೊರೆಯದಿದ್ದರೂ ಮೊದಲ ಐದಾರು ಅಂಶಗಳು ಇದ್ದೇ ಇರುತ್ತವೆ.

**ಗ್ರಂಥಸೂಚಿಯ ರಚನೆ:** ಗ್ರೀಕ್ ನಾಗರಿಕತೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೇ ಗ್ರೀಕ್ ಭಾಷೆಯಲ್ಲಿನ ಕೆಲವು ಉದ್ಗ್ರಂಥಗಳ ಬಗ್ಗೆ ವಿವರಗಳನ್ನು ಉಳ್ಳ ವಿವರಣ ಪಟ್ಟಿಗಳು (ಪಿನೇಕ್ಸ್) ಇದ್ದುದಾಗಿ ತಿಳಿದುಬರುತ್ತದೆ. ಗ್ರಂಥನಾಮ ಮತ್ತು ಕರ್ತೃಗಳ ಹೆಸರುಗಳ ವರ್ಣಾನಾತ್ಮಕ ವರ್ಗೀಕರಣ ಅಂದೇ ಜಾರಿಯಲ್ಲಿದ್ದುದಕ್ಕೆ ಆಧಾರಗಳು ದೊರೆತಿವೆ. ರೋಮ್ ಸಾಮ್ರಾಜ್ಯದಲ್ಲೂ ಗ್ರಂಥಸೂಚಿಯ ಬಳಕೆ ಇತ್ತು. 15 ರಿಂದ 17ನೆಯ ಶತಮಾನಗಳ ಅವಧಿಯಲ್ಲಿ ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಮುಂತಾದ ದೇಶಗಳಲ್ಲಿ ಗ್ರಂಥಾಲಯ ವ್ಯವಸ್ಥೆ ರೂಪುಗೊಂಡು ಅಲ್ಲಿನ ಗ್ರಂಥಾಲಯ ಮೇಲ್ವಿಚಾರಕರು ಒಂದು ರೀತಿಯಲ್ಲಿ ಗ್ರಂಥಸೂಚಿಗಳನ್ನು ತಯಾರಿಸಿದ್ದರೆನ್ನಲಾಗಿದೆ. 18ನೆಯ ಶತಮಾನದಲ್ಲಂತೂ ಯುರೋಪ್ ಮತ್ತು ಅಮೆರಿಕಗಳ ಗ್ರಂಥಾಲಯಗಳಲ್ಲಿ ಕಾರ್ಡ್‌ಸೂಚೀಕರಣ (ಕಾರ್ಡ್ ಕ್ಯಾಟಲಾಗ್) ವ್ಯವಸ್ಥೆ ಬೆಳೆದುಬಂದು ಗ್ರಂಥಸೂಚಿಗಳ ನಿರ್ಮಾಣಕಾರ್ಯ ಹೆಚ್ಚಿನ ವ್ಯಾಪ್ತಿ ಪಡೆಯಿತು. ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಗ್ರಂಥಾಲಯ ವ್ಯವಸ್ಥೆ ಏರ್ಪಟ್ಟು ಅವು ತಮ್ಮವೇ ಆದ ಗ್ರಂಥಸೂಚಿ ರಚನೆಯ ಕಾರ್ಯವನ್ನು ಕೈಗೆತ್ತಿಕೊಂಡು ಗ್ರಂಥಾಲಯದ ಸೇವಾ ವಿಸ್ತರಣೆಯಲ್ಲಿ ಹೆಚ್ಚಿನ ಶ್ರಮವಹಿಸಿದುವು. ರಾಷ್ಟ್ರಗಳು ತಯಾರಿಸುವ ಗ್ರಂಥಸೂಚಿಯಲ್ಲಿ ವೈವಿಧ್ಯ ಹೆಚ್ಚಿದಾಗ ಗ್ರಂಥಾಲಯ ವ್ಯವಸ್ಥೆ ಮತ್ತು ಸೂಚೀಕರಣದಲ್ಲಿ ವಿವಿಧ ರಾಷ್ಟ್ರಗಳ ಗ್ರಂಥಪಾಲರು ಸೂಚೀಕರಣದಲ್ಲಿ ವಿವಿಧ ಬಗೆಯ ಸಂಘಟನಾ ನಿಯಮಗಳನ್ನು ರೂಪಿಸಿದರು. ಈ ಸಂದರ್ಭದಲ್ಲಿ ಅಂಗೀಕೃತವಾದ ನಿಯಮಗಳನ್ನು ಗ್ರಂಥಸೂಚೀ ಸಂಹಿತೆಯೆಂದು (ಕ್ಯಾಟಲಾಗ್ ಕೋಡ್) ಕರೆಯುವುದಿದೆ.

ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದ ಮುಖ್ಯಾಧಿಕಾರಿ, 1836 ರಲ್ಲಿ ಹೊರಡಿಸಲಾದ ಸರ್ಕಾರಿ ಆಜ್ಞೆಯ ಅನುಸಾರವಾಗಿ ಸಿದ್ಧಪಡಿಸಿದ 91 ನಿಯಮಗಳುಳ್ಳ ಸೂಚೀಸಂಹಿತೆ, 1852 ರಲ್ಲಿ ಅಮೆರಿಕದ ಬಾಸ್ಟನ್ ನಗರದ ಆಥೇನಿಯಮ್ ಗ್ರಂಥಾಲಯದ ಮುಖ್ಯಾಧಿಕಾರಿ ಚಾರಲ್ಸ್ ಅಮ್ಮಿ ಕಟ್ಟರ್ ತಯಾರಿಸಿದ (1876) ಒಂದನೆಯ ಆವೃತ್ತಿಯ 205 ಸೂತ್ರಗಳು ಮತ್ತು 1903ರ ನಾಲ್ಕನೆಯ ಆವೃತ್ತಿಯ 69 ಸೂತ್ರಗಳು ಇರುವಂಥ ಒಂದು ಸೂಚೀ ಸಂಹಿತೆ, ಅಮೆರಿಕದ ಗ್ರಂಥಾಲಯ ಸಂಘ ಮತ್ತು ಬ್ರಿಟನ್ನಿನ ಗ್ರಂಥಾಲಯ ಸಂಘದವರು ಕೂಡಿ ತಯಾರಿಸಿದ (1908) ಗ್ರಂಥಕರ್ತೃ ಮತ್ತು ಗ್ರಂಥ ಶಿರೋನಾಮೆಗಳ ಉಲ್ಲೇಖವನ್ನುಳ್ಳ ಸೂಚೀಸಂಹಿತೆ ಮತ್ತು ತಲೆದೋರಿದ ಸಮಸ್ಯೆಗಳ ಪರಿಹಾರಗಳನ್ನು ನೀಡಿರುವ ಇದರ ಪರಿಷ್ಕೃತ ನಾಲ್ಕನೆಯ ಆವೃತ್ತಿಯಲ್ಲಿ (1962) ಪ್ರಕಟವಾದ ನಿವಾರಣೋಪಾಯಗಳು, 1949ರಲ್ಲಿ ಅಮೆರಿಕದ ಗ್ರಂಥಾಲಯ ಸಂಘ ಪ್ರಕಟಿಸಿದ ಗ್ರಂಥಕರ್ತೃ ಮತ್ತು ಗ್ರಂಥ ಶಿರೋನಾಮೆಗಳ ಸೂಚೀಸಂಹಿತೆ, ಇಟಲಿ, ಸ್ಪೇನ್ ಮುಂತಾದ ರಾಷ್ಟ್ರಗಳಲ್ಲಿ ಬಳಕೆಯಲ್ಲಿದ್ದ ಗ್ರಂಥಸೂಚೀಸಂಹಿತೆಗಳು. ಈ ವಿವಿಧ ಸೂಚೀಸಂಹಿತೆಗಳಲ್ಲಿರಬಹುದಾದ ಲೋಪದೋಷಗಳ ನಿವಾರಣೋಪಾಯವನ್ನು ಸೂಚಿಸಿ ಭಾರತದ ಎಸ್. ಆರ್. ರಂಗನಾಥನ್ ತಯಾರಿಸಿದ ವರ್ಗೀಕೃತ ಗ್ರಂಥಸಂಹಿತೆ (1934) ಮತ್ತು ಇದರ ಪರಿಷ್ಕೃತ ಐದನೆಯ ಆವೃತ್ತಿ (1964), ಜಾಗತಿಕ ಮಟ್ಟದಲ್ಲಿ ವಿಶ್ವಗ್ರಂಥಸೂಚೀಸಂಹಿತೆಯ ಮೂಲಸೂತ್ರಗಳನ್ನು ನಿರ್ಣಯಿಸಲು ಗ್ರಂಥಾಲಯ ಸಂಘಗಳ ಅಂತಾರಾಷ್ಟ್ರೀಯ ಸಂಸ್ಥೆ 1959ರಲ್ಲಿ ಕೆಲವಾರು ಸೂತ್ರಗಳನ್ನು ಹೊಂದಿಸಿ ತಯಾರಿಸಿದ ಗ್ರಂಥಸೂಚೀಸಂಹಿತೆ – ಈ ಮೊದಲಾದವು ಆಧುನಿಕ ಗ್ರಂಥಸೂಚಿ ರಚನೆಗೆ ಆಧಾರವಾದವು.

ಯಾವುದೊಂದು ಗ್ರಂಥವನ್ನು ಓದುಗನಿಗೆ ದೊರಕಿಸುವಲ್ಲಿ ಗ್ರಂಥಸೂಚಿಯಲ್ಲಿನ ಪ್ರಧಾನ ಉಲ್ಲೇಖ (ಮೇನ್ ಎಂಟ್ರಿ), ಪೂರಕ ಉಲ್ಲೇಖ (ಆಡೆಡ್ ಎಂಟ್ರಿ), ಅಡ್ಡಸೂಚಿ ಉಲ್ಲೇಖ (ಕ್ರಾಸ್ ರೆಫರೆನ್ಸ್ ಎಂಟ್ರಿ), ನಾಮಾಂತರ ನಿರ್ದೇಶಿತ ಉಲ್ಲೇಖ– ಇವು ಸಹಾಯ ಮಾಡುತ್ತವೆ.

ಗ್ರಂಥಸೂಚಿಯ ಬಾಹ್ಯಸ್ವರೂಪಗಳು: ಇವು ಅದರ ವಿವಿಧ ಅಂಗರಚನೆಗೆ ಸಂಬಂಧಿಸಿದವಾಗಿವೆ. ಪ್ರಪಂಚದ ಗ್ರಂಥಾಲಯಗಳಲ್ಲಿ ಮುಖ್ಯವಾಗಿ ಮೂರು ಬಗೆಯ ಗ್ರಂಥಸೂಚಿಗಳು ಕಂಡುಬರುತ್ತವೆ. 1 ಮುದ್ರಿತ ಗ್ರಂಥರೂಪದ ಸೂಚಿ 2 ಪತ್ರಗುಚ್ಛ ಗ್ರಂಥಸೂಚಿ (ಶೀಫ್ ಕ್ಯಾಟಲಾಗ್), 3 ಕಾರ್ಡ್ ಗ್ರಂಥಸೂಚಿ (ಕಾರ್ಡ್ ಕ್ಯಾಟಲಾಗ್).

ಈ ಮೂರೂ ಬಗೆಯ ಗ್ರಂಥಸೂಚಿಗಳ ಸಂಕ್ಷಿಪ್ತ ಮಾಹಿತಿಯನ್ನು ಕೆಳಗೆ ಕೊಟ್ಟಿದೆ.

**1 ಮುದ್ರಿತ ಗ್ರಂಥಸೂಚಿ:** ಮೊದಮೊದಲಿಗೆ ಪರಿಗ್ರಹಣ ರಿಜಿಸ್ಟರನ್ನೇ (ಅಕ್ಸೆಷನ್ ರಿಜಿಸ್ಟರ್) ಗ್ರಂಥಸೂಚಿಯಂತೆ ಉಪಯೋಗಿಸಿದ್ದುಂಟು. ವರ್ಗೀಕರಣ, ಸೂಚೀಕರಣ ಗಳಲ್ಲಿ ಸುಧಾರಣೆಗಳಾದಂತೆ ಕೈಬರಹದ ಗ್ರಂಥಸೂಚಿಗಳನ್ನೇ ಅನೇಕ ಗ್ರಂಥಾಲಯಗಳು ಮುದ್ರಿಸಿ ಪ್ರಕಟಿಸಿದವು.

ಮುದ್ರಿತ ಗ್ರಂಥಸೂಚಿಯ ಪ್ರತಿಯೊಂದು ಪುಟದಲ್ಲಿ 15–20 ಉಲ್ಲೇಖಗಳು ಒಮ್ಮೆಲೆ ಓದುಗನಿಗೆ ಕಣ್ಣಿಗೆ ಬೀಳುವ ಅವಕಾಶವಿದೆ. ಗ್ರಂಥಾಲಯಕ್ಕೆ ಭೇಟಿಕೊಡುವ ವಾಚಕರಿಗಲ್ಲದೆ ಪ್ರಪಂಚದ ನಾನಾ ಮೂಲೆಗಳಲ್ಲಿ ಅಭ್ಯಸಿಸುತ್ತಿರುವ ವಿದ್ವಾಂಸರಿಗೆ ಇದರ ಅವಲೋಕನ ಸಾಧ್ಯವಾಗುತ್ತದೆ. ಈ ಉದ್ದೇಶದಿಂದಲೇ ಅಮೆರಿಕದ ರಾಷ್ಟ್ರೀಯ ಕಾಂಗ್ರೆಸ್ ಗ್ರಂಥಾಲಯ ಮತ್ತು ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯಗಳು ತಮ್ಮ ತಮ್ಮ ಗ್ರಂಥಸೂಚಿಗಳನ್ನು ಮುದ್ರಿಸಿ ಪ್ರಕಟಿಸಿವೆ.

**2 ಪತ್ರಗುಚ್ಛ ಗ್ರಂಥಸೂಚಿ :** ಇದರಲ್ಲಿ ಪ್ರತಿಯೊಂದು ಗ್ರಂಥಕ್ಕೆ ಸಂಬಂಧಿಸಿದ ವಿವರಗಳನ್ನು ಒಳಗೊಂಡ 6" X 4" ಆಕಾರದ ಉಲ್ಲೇಖ ಕಾರ್ಡುಗಳಿರುತ್ತವೆ. ಇವನ್ನು ಬೇಕಾದ ಹಾಗೆ ಸ್ಥಾನಾಂತರಿಸಬಹುದು. ಬೇಡವಾದವನ್ನು ತೆಗೆದು ಬೇಕಾದ ಹೊಸವನ್ನು ಸೇರಿಸಲು ಅವಕಾಶವಿದೆ. ಅಕಾರಾದಿಯಾಗಿ ಕಾರ್ಡುಗಳನ್ನು ಹೊತ್ತಿಗೆಗಳಲ್ಲಿ ಜೋಡಿಸಲ್ಪಟ್ಟಿರಲಾಗುತ್ತದೆ. ಈ ಬಗೆಯ ಗ್ರಂಥಸೂಚಿಗಳು ಬ್ರಿಟನ್ನಿನ ಬರ್ಮಿಂಗ್ ಹ್ಯಾಮ್, ಲಿವರ್ ಪೂಲ್, ಷಫೀಲ್ಡ್, ವೆಸ್ಟ್‌ಮಿನ್‌ಸ್ಟರ್ ಮುಂತಾದ ಮುಂತಾದ ನಗರಗಳಲ್ಲಿನ ಗ್ರಂಥಾಲಯಗಳಲ್ಲಿ ಹೆಚ್ಚು ಪ್ರಚಾರದಲ್ಲಿವೆ.

**3 ಕಾರ್ಡು ಗ್ರಂಥಸೂಚಿ :** ಪತ್ರಗುಚ್ಛ ಸೂಚಿಯಲ್ಲಿ 6"X4" ಆಕಾರದ ಕಾರ್ಡುಗಳನ್ನು ಉಪಯೋಗಿಸಿದರೆ ಇದರಲ್ಲಿ 5"X3" ಆಕಾರದ ಕಾರ್ಡುಗಳನ್ನು ಉಪಯೋಗಿಸಲಾಗುವುದು. ಮರದ ಇಲ್ಲವೆ ಕಬ್ಬಿಣದ ಕ್ಯಾಬಿನೆಟ್‌ಗಳಲ್ಲಿ ಕಾರ್ಡುಗಳನ್ನು ವರ್ಗಾನುಕ್ರಮದಲ್ಲಾಗಲಿ, ವರ್ಣಾನುಕ್ರಮವಾಗಿಯಾಗಲಿ, ಇಲ್ಲವೆ ಇನ್ನಾವುದೇ ಸೂಕ್ತ ಕಂಡ ರೀತಿಯಲ್ಲಿ ಜೋಡಿಸಿಕೊಳ್ಳಬಹುದು. ಕ್ಯಾಬಿನೆಟ್ಟುಗಳಲ್ಲಿ 1,000 ದಿಂದ 1,500 ಕಾರ್ಡುಗಳನ್ನಿಡುವಷ್ಟು ಸ್ಥಳಾವಕಾಶವಿರುತ್ತದೆ. ಹೊಸ ಗ್ರಂಥಗಳಿಗೆ ಸಿದ್ಧಪಡಿಸಿದ ಉಲ್ಲೇಖ ಕಾರ್ಡುಗಳನ್ನು ಮೊದಲಿನ ಕಾರ್ಡುಗಳನ್ನು ಸ್ಥಾನ ಪಲ್ಲಟವಾಗದಂತೆ ಸುಲಭದಲ್ಲಿ ಸೇರಿಸಬಹುದು. ಪತ್ರಗುಚ್ಛ ಸೂಚಿಗೆ ಸಂಬಂಧಿಸಿದ ಎಲ್ಲ ಉತ್ತಮಾಂಶಗಳನ್ನೂ ಈ ಗ್ರಂಥಸೂಚಿ ಒಳಗೊಂಡಿದೆ. ಸಂಯುಕ್ತಗ್ರಂಥಸೂಚೀ ರಚನೆಯಲ್ಲೂ (ಯೂನಿಯನ್ ಕ್ಯಾಟಲಾಗಿಂಗ್) ಸಹಕಾರೀ ಗ್ರಂಥಸೂಚಿಕಾರ್ಯದಲ್ಲೂ ಕೇಂದ್ರೀಕೃತ ಗ್ರಂಥಸೂಚೀಕಾರ್ಯದಲ್ಲೂ ಈ ವಿಧಾನ ಉಪಯುಕ್ತವಾಗಿದೆ.

ಅಮೆರಿಕದ ಗ್ರಂಥಾಲಯಗಳಲ್ಲಿ ಕಾರ್ಡು ಗ್ರಂಥಸೂಚಿ ವಿಧಾನವನ್ನು ಯಂತ್ರೀಕರಿಸ ಲಾಗಿದೆ. ವಿದ್ಯುಚ್ಚಾಲಿತ ಗ್ರಂಥಸೂಚಿಗಳು ಅಲ್ಲಿ ಬಳಕೆಗೆ ಬಂದಿವೆ. ನಿಮಿಷಕ್ಕೆ 560 ಕಾರ್ಡುಗಳನ್ನು ತೋರಿಸುವ ಅಂತಾರಾಷ್ಟ್ರೀಯ ವಿಂಗಡಣಾಯಂತ್ರ (ಇಂಟರ್ ನ್ಯಾಷನಲ್ ಮಷೀನ್ ಸಾರ್ಟರ್) ಮತ್ತು ನಿಮಿಷಕ್ಕೆ 500 ಅಡಿ ಉದ್ದದ ಮೈಕ್ರೊಫಿಲ್ಮ್ ಸುರುಳಿಯನ್ನೂ 12,000 ಕಾರ್ಡುಗಳನ್ನೂ ತತ್‌ಕ್ಷಣ ತೋರಿಸುವ ಶೀಘ್ರ ಆಯ್ಕೆಯ ಯಂತ್ರ (ರ್‍ಯಾಪಿಡ್ ಸೆಲೆಕ್ಟರ್) – ಮುಂತಾದ ಯಂತ್ರಗಳು ಕೆಲವು ಗ್ರಂಥಾಲಯಗಳಲ್ಲಿ ಬಳಕೆಯಲ್ಲಿ ಬಂದಿವೆ. 1967 ರಿಂದೀಚೆಗೆ ಈ ದಿಸೆಯಲ್ಲಿ ತ್ವರಿತವಾಗಿ ಕಾರ್ಯ ಸಾಧಿಸಲು ಗಣಕಗಳ (ಕಂಪ್ಯೂಟರ್ಸ್) ಬಳಕೆ ಹೆಚ್ಚಿದೆ. ಇದರ ಜೊತೆಗೆ ಯಂತ್ರವಾಚನ ಸೂಚಿಯಂಥ (ಮಷೀನ್ ರೀಡೆಬಲ್ ಕ್ಯಾಟಲಾಗ್ ಮಾರ್ಕ್) ಸಲಕರಣೆಗಳೂ ಗ್ರಂಥಸೂಚೀಕರಣದಲ್ಲಿ ಹೆಚ್ಚಿಗೆ ಉಪಯುಕ್ತವಾಗಿವೆ. ಅಮೆರಿಕದ ಕಾಂಗ್ರೆಸ್ ಗ್ರಂಥಾಲಯದಲ್ಲಿ ಈ ಯಂತ್ರದ ಸಹಾಯದಿಂದ ಗ್ರಂಥಸೂಚಿಯ ವಿಷಯವನ್ನು ಕಾಂತ ಟೇಪುಗಳಲ್ಲಿ ಅತ್ಯಲ್ಪ ಸಮಯದಲ್ಲಿ ಸಂಗ್ರಹಿಸಿ ಇತರ 60 ಸದಸ್ಯ ಗ್ರಂಥಾಲಯಗಳಿಗೆ ಪೂರೈಸಲಾಗಿದೆ. ಬ್ರಿಟಿಷ್ ರಾಷ್ಟ್ರೀಯ ಗ್ರಂಥಸೂಚಿಯನ್ನು ಸಿದ್ಧಪಡಿಸುವಲ್ಲಿ ಈ ಯಂತ್ರವನ್ನು ಬಳಸಲಾಗಿದೆ.

**ಗ್ರಂಥಸೂಚಿ ಆಂತರಿಕ ಸ್ವರೂಪ :** ಕಾರ್ಡುಗ್ರಂಥಸೂಚಿ ವಿಧಾನವನ್ನು ಉದಾಹರಣೆಗಾಗಿ ತೆಗೆದುಕೊಂಡರೆ ಅದರಲ್ಲಿ ಕಂಡುಬರುವ ಉಲ್ಲೇಖಗಳಿಗೆ ಸಂಬಂಧಿಸಿ ದಂತೆ ಮೂರು ಬಗೆಯ ಆಂತರಿಕ ಜೋಡಣೆಗಳನ್ನು ಕಾಣಬಹುದು. 1. ಅಕ್ಷರಾನುಕ್ರಮ ಜೋಡಣೆ, 2. ವರ್ಗೀಕೃತ ಜೋಡಣೆ, 3. ಇವೆರಡರ ಮಿಶ್ರ ಜೋಡಣೆ.



ಗ್ರಂಥಕರ್ತ ಸೂಚಿ ಕಾರ್ಡುಗಳು

**1 ಅಕ್ಷರಾನುಕ್ರಮ ಜೋಡಣೆ:** ಈ ಕ್ರಮವೇ (ಆಲ್ಫಬೆಟೈಸೇಷನ್) ಹೆಚ್ಚು ಬಳಕೆಯಲ್ಲಿದೆ. ನಿಘಂಟಿನಂಥ ಹೊತ್ತಿಗೆಗಳಲ್ಲಿ ಇದರ ಸ್ಥಾನ ಹಿರಿದು. ವಿಶ್ವಕೋಶದಲ್ಲಿ ವಿಷಯಗಳನ್ನು ಜೋಡಿಸುವಾಗ, ವಿವಿಧ ಗ್ರಂಥಗಳ ಕೊನೆಗೆ ವಿಷಯ ಸೂಚಿಯನ್ನು ನಮೂದಿಸುವಾಗ ಈ ಜೋಡಣೆ ತೀರ ಅವಶ್ಯ. ಲಿಪಿಯನ್ನು ಹೊಂದಿರುವ ಭಾಷೆಗೆ ವರ್ಣಗಳು ಇರುವುವಷ್ಟೆ. ಒಂದೊಂದು ಭಾಷೆಗೂ ಅಲ್ಲಿ ಬರುವ ವರ್ಣಾನುಕ್ರಮವೇ ಅಲ್ಲಿಯ ಅಕ್ಷರಾನುಕ್ರಮ ಆಗುತ್ತದೆ. ಉದಾ: ಕನ್ನಡದಲ್ಲಿ ಅ ಆ ಇ ಈ; ಇಂಗ್ಲಿಷಿನಲ್ಲಿ ಎ ಬಿ ಸಿ ಡಿ. ಒತ್ತಕ್ಷರಗಳ ಭಾಷೆಗೆ ಅಕ್ಷರಾನುಕ್ರಮ ಸರಳ. ಕಾಗುಣಿತಕ್ಕೂ ಉಚ್ಚಾರಕ್ಕೂ ಅಲ್ಲಿ ಭೇದವಿದ್ದರೂ ಜೋಡಣೆಯಲ್ಲಿ ಬರವಣಿಗೆಯ ರೂಪವೇ ಆಧಾರ. ಸಾಮಾನ್ಯವಾಗಿ ಉಚ್ಚಾರದ ರೂಪವನ್ನೇ ಅನುಸರಿಸಿದ ಕಾಗುಣಿತವನ್ನು ಪಡೆಯುವ ಕನ್ನಡದಲ್ಲಿ ಇದು ಸ್ವಲ್ಪ ತೊಡಕಿನದು.

ಈ ಗೊಂದಲ ಎರಡು ಕಾರಣಗಳಿಂದ ಉಂಟಾಗುತ್ತದೆ. (i) ಅನುಸ್ವಾರ ಸೂಚಕವಾದ ಸೊನ್ನೆಯಿಂದ. (ii) ಕ್ಷ, ಜ್ಞ ಗಳು ಸ್ವತಂತ್ರ ಅಕ್ಷರಗಳು ಅಥವಾ ಒತ್ತಕ್ಷರಗಳೆಂದು ಪರಿಗಣಿಸುವುದರಿಂದ (iii) ಒತ್ತಕ್ಷರಗಳನ್ನು ಬರೆಯುವ ರೂಢಿಯಿಂದ.

ಅಕ್ಷರಾನುಕ್ರಮ ಜೋಡಣೆಯಲ್ಲಿ ಅನುಸ್ವಾರದ ಕಾರಣದಿಂದುಂಟಾದ ಗೊಂದಲ ಅತಿಯಾಗಿದೆ. ರೀವ್ ಅವರ ಕನ್ನಡ – ಇಂಗ್ಲಿಷ್ ನಿಘಂಟು, ಕಿಟ್ಟೆಲ್ ಅವರ ಕನ್ನಡ – ಇಂಗ್ಲಿಷ್ ನಿಘಂಟು, ಕಾರಂತರ ಸಿರಿಗನ್ನಡ ಅರ್ಥಕೋಶ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಸಂಕಲ್ಪಿಸುತ್ತಿರುವ ಕನ್ನಡ ನಿಘಂಟು ಇವುಗಳಲ್ಲೆಲ್ಲ ಅನುಸ್ವಾರದ ಸ್ಥಾನ ಬೇರೆ ಬೇರೆಯಾಗಿದೆ. ಕನ್ನಡ ವರ್ಣಮಾಲೆಯಲ್ಲಿ ಸೊನ್ನೆಯ ಸ್ಥಾನವೇನು ಎಂಬುದನ್ನು ಆಲೋಚಿಸಿ ನಿಷ್ಕರ್ಷಿಸದ ಕಾರಣ ಈ ಗೊಂದಲ ಉಂಟಾಗಿದೆ. ಅಕ್ಷರಾನುಕ್ರಮ ಜೋಡಣೆಯಲ್ಲಿ ಸೊನ್ನೆಯ ಸ್ಥಾನವನ್ನು ನಾಲ್ಕು ರೀತಿಯಲ್ಲಿ ಬಳಸಲಾಗಿದೆ: (i) ಅದರ ದ್ವಿಪಾತ್ರ. ಅಂದರೆ ವರ್ಗೀಯ ವ್ಯಂಜನಗಳಲ್ಲಿ ಅದು ಆಯಾ ವರ್ಗದ ಅನುನಾಸಿಕ. ಉದಾ ಮಣ್ಟಪ (ಮಂಟಪ) ಕನ್ದ (ಕಂದ) ಪಮ್ಪ (ಪಂಪ). ಕಿಟ್ಟೆಲ್ ಅವರು ಅನುಸರಿಸಿದ ಕ್ರಮ ಇದು. ಹೀಗೆ ಅನುನಾಸಿಕವೆಂದು ಗಣಿಸಲ್ಪಟ್ಟಾಗ ಸೊನ್ನೆ ಒಂದೆಡೆಗೆ ಸ್ಥಿರವಾಗಿ ನಿಲ್ಲದೆ ಹಾಸು ಹೊಯ್ದಂತೆ ಐದು ವರ್ಗಗಳ ವ್ಯಂಜನಗಳ ಸುತ್ತ ಅಲೆಯುತ್ತದೆ. ಅನುಸ್ವಾರ ಬರುವುದೇ ವರ್ಗಪಂಚಮಾಕ್ಷರದ ಬದಲಾಗಿ, ಬರವಣಿಗೆಯ ಸೌಲಭ್ಯಕ್ಕಾಗಿ – ಎಂದಾಗ ಈ ಕ್ರಮ ತಪ್ಪು ಎಂದು ಹೇಳಲಾಗದು. ಆದರೆ ವರ್ಗೀಯ ವ್ಯಂಜನಗಳ ಸಂಬಂಧದಲ್ಲಿ ಅನುಸ್ವಾರ ಬಂದಾಗ ತೊಡಕುಂಟಾಗುತ್ತದೆ. ಉದಾ – ಸ್ವಯಂವರ, ಸಂಬಂಧದಲ್ಲಿ ಸ್ವಯಂವರ, ಸಂಶಯ (ii) ಮಧ್ಯಸ್ಥಾನ : ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಸೊನ್ನೆಗೆ ಮಧ್ಯಸ್ಥಾನವನ್ನು ಅಂದರೆ ಸ್ವರಗಳ ಅನಂತರ ಮತ್ತು ವ್ಯಂಜನಗಳ ಮೊದಲು – ಕಲ್ಪಿಸಿದ್ದಾರೆ. ಉದಾ:– ಅರಿ, ಅರಿಉರ, ಅರಿಂಜಯ, ಕಿಟ್ಟೆಲ್ ಅನುಸರಿಸಿದಂತೆ ಇಲ್ಲಿ ಅನುಸ್ವಾರ ಬರುವ ಕಡೆ ವರ್ಗಪಂಚಾಕ್ಷರದ ಸಂಯುಕ್ತವೆಂದು ಗಣಿಸದೆ, ಅನುಸ್ವಾರದ ಬಳಕೆ ಮಾಡಿ, ಅವನ್ನು ಸ್ವರಗಳ ಅನಂತರ ಜೋಡಿಸಿದೆ. ಉದಾ: ಅ, ಅಂಕ, ಅಂಗ. (iii) ಅಂತ್ಯ ಸ್ಥಾನ. ಕಾರಂತರು ತಮ್ಮ ಅರ್ಥಕೋಶದಲ್ಲಿ ಸೊನ್ನೆಗೆ ಕೊನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಅವರು ಈ ಬಗ್ಗೆ ಹೀಗೆ ಹೇಳಿದ್ದಾರೆ. 'ಮಕ, ಮಖ, ಮಟಾ, ಮದ, ಮನ, ಮಳಿ ಮುಗಿದ ಮೇಲೆ ಮಂಕ ಮಂಗ ಇತ್ಯಾದಿ ಪದಗಳನ್ನು ಹುಡುಕಬೇಕು'. ಆದರೆ ಇವು ಯಾವುವೂ ಸಮಂಜಸ ಎನಿಸುವುದಿಲ್ಲ. ಕಿಟ್ಟೆಲ್ ಶಾಸ್ತ್ರೀಯವಾಗಿರಲು ಪ್ರಯತ್ನಿಸಿದರೆ ಕಾರಂತರು ಸೌಲಭ್ಯದ ದೃಷ್ಟಿಯನ್ನು ಅನುಸರಿಸಿದ್ದಾರೆ. ಸಾಹಿತ್ಯ ಪರಿಷತ್ತು ಅನುಸರಿಸಿದ ಮಾರ್ಗ ಇನ್ನೂ ಸುಲಭದ್ದಾಗಿ ಇಂದು ಹೆಚ್ಚಾಗಿ ಬಳಕೆಗೆ ಬರುತ್ತಿದೆ.

ಕ್ಷ, ಜ್ಞ ಅಕ್ಷರಗಳು ಕನ್ನಡ ವರ್ಣಮಾಲೆಯಲ್ಲಿ ಸ್ವತಂತ್ರ ಅಕ್ಷರಗಳೆಂದು ಕೆಲವರು ಹೇಳಿದರೆ ಇನ್ನು ಕೆಲವರು ಅವನ್ನು ಸಂಯುಕ್ತಾಕ್ಷರಗಳೆಂದೇ ಪರಿಗಣಿಸುತ್ತಾರೆ. ಈ ಭಿನ್ನಾಭಿಪ್ರಾಯ ದೇವನಾಗರೀ ಲಿಪಿಯಲ್ಲೂ ಇದೆ. ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಇವನ್ನು ಸಂಯುಕ್ತಾಕ್ಷರಗಳೆಂದೇ ಇಟ್ಟುಕೊಳ್ಳಲಾಗಿದೆ.

ಅಕ್ಷರಾನುಕ್ರಮ ಜೋಡಣೆಯಲ್ಲಿ ಎದುರಾಗುವ ಇನ್ನೊಂದು ಗೊಂದಲವೆಂದರೆ ಒತ್ತಕ್ಷರಗಳು, ಮತ್ತು ಅವುಗಳ ಅಸಮಂಜಸ ಬರೆಹ ಪದ್ಧತಿ. ಒತ್ತಕ್ಷರಗಳನ್ನು ಎರಡು ವಿಧವಾಗಿ ಬರೆಯಬಹುದು: (i) ಒಂದೇ ಸಾಲಿನಲ್ಲಿ ಬರೆಯುವುದು. ಹೀಗೆ ಮಾಡುವಲ್ಲಿ ಅರ್ಧ ವ್ಯಂಜನವನ್ನು ಮೊದಲು ಬರೆದು ಅನಂತರ ಸ್ವರಯುಕ್ತ ವ್ಯಂಜನವನ್ನು ಈ ಪರಿಯಾಗಿ ಬರೆಯುವುದು – ತದ್‌ಭವ, ಕಣ್‌ಮಣಿ, ಸಕ್‌ಕರೆ ಸೂರ್‌ಯ; ಹೀಗೆ ಬರೆದಲ್ಲಿ ಗೊಂದಲ, ಸಮಸ್ಯೆಗಳು ಉಂಟಾಗಲಾರವು. ಆದರೆ ಇದು ರೂಢಿಯಲ್ಲಿಲ್ಲ. (ii) ಒಂದರ ಕೆಳಗೆ ಒಂದು ವ್ಯಂಜನವನ್ನು ಬರೆಯುವುದು ರೂಢಿ. ತದ್ಭವ, ಕಣ್ಮಣಿ, ಸಕ್ಕರೆ, ಸೂರ್ಯ–ಸೂರ್ಯ –ಹೀಗೆ ಬರೆದಲ್ಲಿ ಸಮಸ್ಯೆಗಳು ಉಂಟಾಗುವುವು. ಉಚ್ಚಾರಕ್ಕೂ ಬರೆಹಕ್ಕೂ ವ್ಯತ್ಯಯ. ಉಚ್ಚಾರದಲ್ಲಿ ಸ್ವರಯುಕ್ತವಾದುದು ಸ್ವರರಹಿತವಾಗಿ ಕೆಳಗೆ ಬರೆಯಲ್ಪಡುವುದು. ಅಕ್ಷರಾನುಕ್ರಮದಲ್ಲಿ ಮೇಲೆ ಇರುವ ಅಕ್ಷರವನ್ನಷ್ಟೇ ಗಣನೆಗೆ ತಂದುಕೊಳ್ಳಬೇಕೇ ಇಲ್ಲವೇ ಕೆಳಗಿರುವ ಒತ್ತನ್ನೂ ಲಕ್ಷಕ್ಕೆ ತಂದುಕೊಳ್ಳಬೇಕೇ ಎಂಬ ಸಮಸ್ಯೆ ಇದೆ. ಸಾಮಾನ್ಯವಾಗಿ ಕೆಳಗಿರುವ ಒತ್ತನ್ನೂ ಗಣನೆಗೆ ತಂದುಕೊಳ್ಳುವುದು, ಅಲ್ಲದೆ ರ ಕಾರವನ್ನು ಅರ್ಕಾವಳಿಯಾಗಿ ಸೂರ್ಯ ಎಂಬಂತೆ ಬರೆದಾಗ ಉಚ್ಚಾರವನ್ನು ಗಮನದಲ್ಲಿ ತಂದುಕೊಳ್ಳುವುದು – ಇವು ಒತ್ತಕ್ಷರದ ಅಕ್ಷರಾನುಕ್ರಮದ ಗೊಂದಲಕ್ಕೆ ಕಾರಣ. ಅಕ್ಷರಗಳಿಗಿಂತ ಭಿನ್ನವಾದ ಒತ್ತುಗಳ ಚಿಹ್ನೆಗಳಿಂದ (ಉದಾ – ್ದ ್ರ ್ಯ) ಅಕ್ಷರಾನುಕ್ರಮ ಜೋಡಣೆ ಮತ್ತಷ್ಟು ಗಡುಚಾದದ್ದಾಗಿದೆ. ಅಕ್ಷರಾನುಕ್ರಮ ಜೋಡಣೆಯಲ್ಲಿ ಉಚ್ಚಾರ ಗೌಣವಾದುದರಿಂದ ಒತ್ತಕ್ಷರಗಳ ವಿಷಯದಲ್ಲಿ ಮೇಲಕ್ಷರವನ್ನಷ್ಟೇ ಗಮನಿಸಿ ಅಕ್ಷರಾನುಕ್ರಮ ಜೋಡಣೆಯನ್ನು ಮಾಡುವುದು ಸರಳ ಹಾಗೂ ಸುಲಭವೆಂದು ಕಂಡುದರಿಂದ ಅದನ್ನೇ ಅನೇಕರು ಅನುಸರಿಸುತ್ತಾರೆ. ಆದರೆ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಒತ್ತಕ್ಷರದಲ್ಲೂ ವರ್ಣಾನುಕ್ರಮವನ್ನು ಅನುಸರಿಸಲಾಗಿದೆ. ಉದಾ: ಅಕಲ, ಅಕ್ಕ, ಅಕ್ಕಾರು, ಅಕ್ಕಿ, ಅಕ್ಕಡ, ಅಕ್ತ, ಅಕ್ರಮ, ಅಕ್ಷ, ಅಕ್ಷಿ, ಅಖಂಡ.

ಕನ್ನಡ ವಿಶ್ವಕೋಶದ ಲೇಖನಗಳ ಅಕ್ಷರಾನುಕ್ರಮವೂ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಕ್ರಮವನ್ನೇ ಅನುಸರಿಸಿದೆ.

ಅಮೆರಿಕದ ಗ್ರಂಥಾಲಯ ಸಂಘದ ಗ್ರಂಥಸೂಚಿಸಂಹಿತೆಯಲ್ಲಿನ ನಿಯಮಗಳು ಗ್ರಂಥಗಳ ಕರ್ತೃ ಮತ್ತು ಗ್ರಂಥಶಿರೋನಾಮೆಗಳನ್ನಾಯ್ದು ಕಾರ್ಡುಗಳಲ್ಲಿ ಬರೆಯುವ ರೀತಿಯಲ್ಲಿ ಮಾತ್ರ ವಿವರಿಸುತ್ತದೆ. ಗ್ರಂಥದ ಆವೃತ್ತಿ, ಪ್ರಕಾಶನ ಸ್ಥಳ, ಪ್ರಕಾಶಕನ ಹೆಸರು, ಪ್ರಕಟನಾ ದಿನಾಂಕ, ಒಟ್ಟು ಪುಟಗಳು, ಆಕಾರ ಇತ್ಯಾದಿ ಹೆಚ್ಚಿನ ವಿವರಗಳನ್ನು ಬರೆಯುವ ಕ್ರಮದ ನಿಯಮಗಳು ಈ ಸಂಹಿತೆಯಲ್ಲಿ ಕಾಣಬರದು. ಈ ವಿವರಗಳನ್ನೂ ಉಳ್ಳ ಗ್ರಂಥವನ್ನು ಅಮೆರಿಕದ ಗ್ರಂಥಾಲಯ ಕಾಂಗ್ರೆಸ್ ಪ್ರಕಟಪಡಿಸಿದೆ. ಇದಕ್ಕೆ ಅಕ್ಷರಾನುಕ್ರಮ ಸೂಚೀಸಂಹಿತೆ ಎಂದು ಹೆಸರು. ಇದು ಹಾಗೂ ಗ್ರಂಥಾಲಯ ಸಂಘದ ಕರ್ತೃ ಮತ್ತು ಗ್ರಂಥಶಿರೋನಾಮಸೂಚೀ ಸಂಹಿತೆ ಇವೆರಡೂ ಒಂದಕ್ಕೊಂದು ಪೂರಕವಾಗಿವೆ. ಇವೆರಡೂ ಕೂಡಿದಾಗ ಒಂದು ಸಮಗ್ರ ಸೂಚೀಸಂಹಿತೆ ಒದಗುತ್ತದೆ. ಇವೆರಡರ ಸಹಾಯದಿಂದ ಗ್ರಂಥಗಳು, ನಿಯತಕಾಲಿಕೆಗಳು, ಪ್ರಾಚೀನ ಮುದ್ರಿತ ಗ್ರಂಥಗಳು, ತಾಡ ಓಲೆಯ ಗ್ರಂಥಗಳು, ಧ್ವನಿ ಮುದ್ರಿಕೆಗಳು, ನಕಾಶೆ ಇತ್ಯಾದಿಗಳ ಬಗ್ಗೆ ಎಲ್ಲ ವಿವರಗಳನ್ನೂ ವಿಶಿಷ್ಟ ರೀತಿಯಲ್ಲಿ ಕಾರ್ಡುಗಳ ಮೇಲೆ ಬರೆಯುವುದು ಸಾಧ್ಯವಾಗುತ್ತದೆ.

ಎಸ್. ಆರ್. ರಂಗನಾಥನ್‌ರ ಅನುವರ್ಗಸೂಚೀಸಂಹಿತೆಯಲ್ಲಿ ಅಕ್ಷರಾನುಕ್ರಮದಲ್ಲಿ ವರ್ಣಿಸಿದ ಸೂಚೀಕರಣದ ವಿವರಗಳು ಕಾಣಸಿಗುತ್ತವೆ.

**2 ವರ್ಗೀಕೃತ ಜೋಡಣೆ :** ಯಾವುದೇ ಒಂದು ವರ್ಗೀಕರಣ ಪದ್ಧತಿಯಿಂದ ಗ್ರಂಥಗಳನ್ನು ವಿಂಗಡಿಸಿ ವರ್ಗಾಂಕಗಳನ್ನು (ಕ್ಲಾಸ್ ನಂಬರ್ಸ್) ಕೊಟ್ಟು ಕಾರ್ಡುಗಳನ್ನು ಬರೆದು ತರ್ಕಬದ್ಧವಾಗಿ ಸೂಚಿಯಲ್ಲಿ ಹೊಂದಿಸುವ ವರ್ಗಾನುಕ್ರಮವಿದು (ಕ್ಲ್ಯಾಸಿಫೈಡ್

ಕ್ಯಾಟಲಾಗ್). ಇದರಲ್ಲಿ ಯಾವುದೇ ಒಂದು ವಿಷಯದ ಸ್ಥೂಲ ಹಾಗೂ ಸೂಕ್ಷ್ಮ ಅಂಶಗಳನ್ನೊಳಗೊಂಡ ಅನೇಕ ಗ್ರಂಥಗಳ ಕಾರ್ಡುಗಳು ಒಂದೆಡೆ ವ್ಯವಸ್ಥಿತ ರೀತಿಯಲ್ಲಿ ಇರುತ್ತವಾದ್ದರಿಂದ ಸಂಶೋಧಕರಿಗೆ ಹೆಚ್ಚು ಸಹಾಯವಾಗುವುದು.

ವರ್ಗೀಕೃತ ಗ್ರಂಥಸೂಚಿಯ ವಿಧಾನದಲ್ಲಿ ಕಾರ್ಡುಗಳನ್ನು ಜೋಡಿಸಿದ ಕ್ರಮದಲ್ಲಿಯೇ ಕಪಾಟುಗಳಲ್ಲಿ ಗ್ರಂಥಗಳನ್ನು ಇಟ್ಟಿರುವುದರಿಂದ ಮುಕ್ತದ್ವಾರಪದ್ಧತಿ (ಓಪನ್ ಆಕ್ಸೆಸ್) ಇರುವಂಥ ಗ್ರಂಥಾಲಯಗಳಲ್ಲಿ ಓದುಗ ಸೂಚಿಯ ಅವಲೋಕನಾ ನಂತರ ತನಗೆ ಬೇಕಾದ ಗ್ರಂಥವನ್ನು ಸುಲಭವಾಗಿ ಕಪಾಟಿನಿಂದ ಆಯ್ದುಕೊಳ್ಳಬಹುದು. ವಿಷಯಗಳು ಯಾವುದೇ ಭಾಷೆಯಲ್ಲಿ ಲಿಪಿಯಲ್ಲಿದ್ದರೂ ವರ್ಗಾಂಕಗಳು ಏಕರೀತಿಯವಾಗಿರುವುದರಿಂದ ಈ ಕ್ರಮ ಅಂತಾರಾಷ್ಟ್ರೀಯ ಸಹಕಾರಗ್ರಂಥಸೂಚಿಯಾಗಲು ಬೇಕಾದ ಎಲ್ಲ ಅರ್ಹತೆಗಳನ್ನೂ ಹೊಂದಿದೆ.

**3 ಮಿಶ್ರ ಜೋಡಣೆ:** ಮೇಲಿನ ಎರಡೂ ಬಗೆಯ ವಿಧಾನಗಳ ಮಿಶ್ರಣವಿದು. ಗ್ರಂಥಗಳನ್ನು ಬೇಕಷ್ಟು ವರ್ಗಗಳಲ್ಲಿ ವಿಂಗಡಿಸಿ ಪ್ರತಿಯೊಂದು ವರ್ಗದಲ್ಲಿನ ಉಲ್ಲೇಖ ಕಾರ್ಡುಗಳನ್ನು ಅಕ್ಷರಾನುಕ್ರಮದಲ್ಲಿ ಹೊಂದಿಸಿ, ಈ ಬಗೆಯ ಗ್ರಂಥಸೂಚಿಯನ್ನು ತಯಾರಿಸುತ್ತಾರೆ.

ಗ್ರಂಥಪಾಲರು ತಮ್ಮ ವಾಚಕರ ಸೌಲಭ್ಯಕ್ಕನುಗುಣವಾಗಿ ಉಲ್ಲೇಖ ಕಾರ್ಡುಗಳನ್ನು ಮತ್ತಾವುದೇ ಸೂಕ್ತರೀತಿಯಲ್ಲಿ ಹೊಂದಿಸಿಕೊಳ್ಳಲು ಅವಕಾಶವಿರುತ್ತದೆ.

ಗ್ರಂಥಸೂಚಿಗಳಲ್ಲಿ ಬಗೆಗಳುಂಟು. ವೈಯಕ್ತಿಕ ಗ್ರಂಥಸೂಚಿ, ವಿಷಯ ಗ್ರಂಥಸೂಚಿ, ರಾಷ್ಟ್ರೀಯ ಗ್ರಂಥಸೂಚಿ, ಪ್ರಾದೇಶಿಕ ಗ್ರಂಥಸೂಚಿ, ಅಂತಾರಾಷ್ಟ್ರೀಯ ಗ್ರಂಥಸೂಚಿ – ಹೀಗೆ ಒಂದು ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳ ಇಲ್ಲವೇ ಲೇಖನಗಳ ಬಗ್ಗೆ ಪೂರ್ಣ ಮಾಹಿತಿಗಳು ಇದ್ದ ಪಕ್ಷಕ್ಕೆ ಅಂಥವನ್ನು ಸಂಪೂರ್ಣ ಗ್ರಂಥಸೂಚಿಗಳೆಂದೂ ಕೆಲವೇ ಗ್ರಂಥಗಳ ಇಲ್ಲವೇ ಲೇಖನಗಳ ಬಗ್ಗೆ ಪೂರ್ಣ ಮಾಹಿತಿ ಇದ್ದ ಪಕ್ಷಕ್ಕೆ ಅಂಥವನ್ನು ಆಯ್ದ ಗ್ರಂಥಸೂಚಿಗಳೆಂದೂ ಕರೆವುದಿದೆ.

ಪ್ರಪಂಚದ ಹಲವಾರು ರಾಷ್ಟ್ರಗಳ ಗ್ರಂಥಾಲಯಗಳು ತಮ್ಮ ಅಗತ್ಯಗಳಿಗನುಗುಣವಾಗಿ ತಮ್ಮವೇ ಆದ ರಾಷ್ಟ್ರೀಯ ಗ್ರಂಥಸೂಚಿಗಳನ್ನು ನಿರ್ಮಿಸಿಕೊಂಡಿವೆ. ಇಂಥವಲ್ಲಿ ಪ್ರಮುಖವೆನಿಸಿರುವ ಭಾರತ ರಾಷ್ಟ್ರೀಯ ಗ್ರಂಥಸೂಚಿ ಮತ್ತು ಬ್ರಿಟಿಷ್ ರಾಷ್ಟ್ರೀಯ ಗ್ರಂಥಸೂಚಿಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ.

**ಭಾರತದ ರಾಷ್ಟ್ರೀಯ ಗ್ರಂಥಸೂಚಿ :** ಇದು ಭಾರತ ಸರ್ಕಾರದ ಪರವಾಗಿ 1958 ರಿಂದ ಮೊದಲುಗೊಂಡು ತ್ರೈಮಾಸಿಕವಾಗಿಯೂ ಅನಂತರ 1968 ರಿಂದ ಮಾಸಿಕವಾಗಿಯೂ ಕಲ್ಕತ್ತದಿಂದ ಪ್ರಕಟವಾಗುತ್ತಿದೆ. ಭಾರತ ಸರ್ಕಾರದ ಗ್ರಂಥಾಲಯ ಕಾಯಿದೆಗೆ ಅನುಗುಣವಾಗಿ ಭಾರತದಲ್ಲಿ ಪ್ರಕಟವಾಗಿರುವ ಹಾಗೂ ಅವುಗಳ ಪ್ರಕಾಶಕರಿಂದ ಕಳುಹಿಸಲ್ಪಟ್ಟ ಗ್ರಂಥಗಳ ವಿವರಗಳನ್ನು ಈ ಸೂಚಿಯಲ್ಲಿ ಕೊಡಲಾಗುತ್ತದೆ. ಸಮಾವೇಶದ ಎಲ್ಲ ಗ್ರಂಥಗಳ ಬಗ್ಗೆ ವಿವರಗಳನ್ನು ರೋಮನ್ ಲಿಪಿಯಲ್ಲಿ ಉಲ್ಲೇಖಿಸಿ ಕೊನೆಯಲ್ಲಿ ಗ್ರಂಥಗಳ ಭಾಷೆಯನ್ನು ಸಂಜ್ಞೆಯ ಮೂಲಕ ಸೂಚಿಸಿರುತ್ತಾರೆ. ಗ್ರಂಥಗಳನ್ನೆಲ್ಲ ದಾಶಮಿಕ ವರ್ಗೀಕರಣಪದ್ಧತಿಯಂತೆ ವಿಭಾಗಿಸಿ, ಆಯಾ ಗ್ರಂಥಗಳ ವರ್ಗೀಕರಣ ಅಂಕವನ್ನು ದಾಶಮಿಕ ವರ್ಗೀಕರಣ ಪದ್ಧತಿಯ ಕ್ರಮದಲ್ಲೂ ದ್ವಿಬಿಂದು ವರ್ಗೀಕರಣ ಪದ್ಧತಿಯ ಕ್ರಮದಲ್ಲೂ ತೋರಿಸಿರುತ್ತಾರೆ. ಸೂಚಿಯ ಕೊನೆಯಲ್ಲಿ ಅಕಾರಾದಿಯಾಗಿ ಕೊಟ್ಟಿರುವ ಪರಿಶಿಷ್ಟದ ಸಹಾಯದಿಂದ ಒಬ್ಬ ಲೇಖಕನ ಯಾವ ಯಾವ ಕೃತಿಗಳು ಗ್ರಂಥಸೂಚಿಯಲ್ಲಿ ಸಮಾವೇಶವಾಗಿವೆಯೆಂಬುದನ್ನು ಸುಲಭವಾಗಿ ತಿಳಿಯಬಹುದು. ಭಾರತದಲ್ಲಿ ಪ್ರತಿ ವರ್ಷ ಬೇರೆ ಬೇರೆ ಭಾಷೆಗಳಲ್ಲಿ ಹಾಗೂ ಬೇರೆ ಬೇರೆ ವಿಷಯಗಳಲ್ಲಿ ಎಷ್ಟು ಗ್ರಂಥಗಳು ಪ್ರಕಟವಾಗಿವೆಯೆಂಬುದನ್ನೂ ತಿಳಿಯಬಹುದು. ವರ್ಷದ ಕೊನೆಯಲ್ಲಿ ಪ್ರತಿ ತಿಂಗಳಿನ ಸಂಚಿಕೆಯಲ್ಲಿ ಸಮಾವೇಶವಾದ ಗ್ರಂಥಗಳ ದಾಖಲೆಗಳನ್ನು ಒಂದುಗೂಡಿಸಿ ಒಂದು ಪ್ರತ್ಯೇಕ ಸಂಪುಟವನ್ನು ಪ್ರಕಟಿಸಲಾಗುತ್ತಿದೆ. ಪ್ರತಿಯೊಂದು ಸಂಚಿಕೆಯಲ್ಲಿಯೂ ಎರಡು ಭಾಗಗಳಿದ್ದು ಮೊದಲ ಭಾಗದಲ್ಲಿ ವೈಯಕ್ತಿಕ ಲೇಖಕರು ಹಾಗೂ ಸಂಘಸಂಸ್ಥೆಗಳಿಂದ ಪ್ರಕಟವಾದ ಗ್ರಂಥಗಳ ಬಗ್ಗೆಯೂ ಎರಡನೆಯ ಭಾಗದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪ್ರಕಟವಾದ ಗ್ರಂಥಗಳ ಬಗ್ಗೆಯೂ ವಿವರಗಳನ್ನು ಕೊಡಲಾಗಿರುತ್ತದೆ.

**ಬ್ರಿಟಿಷ್ ರಾಷ್ಟ್ರೀಯ ಗ್ರಂಥಸೂಚಿ :** ಇದು ಬ್ರಿಟಿಷ್ ನ್ಯಾಷನಲ್ ಬಿಬ್ಲಿಯೋಗ್ರಫಿ ಎಂಬ ಹೆಸರಿನಿಂದ 1950 ರಿಂದಲೂ ಪ್ರಕಟವಾಗುತ್ತಿದೆ. ಈ ಸೂಚಿಯಲ್ಲಿ ಬ್ರಿಟನ್ನಿನಲ್ಲಿ ಪ್ರಕಟವಾಗುವ ಎಲ್ಲ ಗ್ರಂಥಗಳ ಬಗ್ಗೆ ವಿವರಗಳನ್ನು ದಾಶಮಿಕ ವರ್ಗೀಕರಣ ಕ್ರಮದಲ್ಲಿ ಕೊಡಲಾಗಿದೆ. ಸೂಚಿಯ ಕೊನೆಯಲ್ಲಿ ಅಕಾರಾದಿಯಾಗಿ ಕೊಟ್ಟಿರುವ ಪರಿಶಿಷ್ಟದ ಸಹಾಯದಿಂದ ಯಾವೊಬ್ಬ ಲೇಖಕನ ಯಾವ ಯಾವ ಕೃತಿಗಳು ಸಮಾವೇಶ ವಾಗಿವೆಯೆಂಬುದು ಸುಲಭವಾಗಿ ತಿಳಿಯಬಹುದು.

ಈ ಗ್ರಂಥಸೂಚಿ ವಾರಕ್ಕೊಮ್ಮೆ ಪ್ರಕಟಗೊಳ್ಳುತ್ತಿದ್ದು ಪ್ರಕಟವಾದ ಸೂಚಿಗಳನ್ನು ಕೂಡಿಸಿ ಪ್ರಕಟಗೊಳಿಸಲಾಗುತ್ತದೆ.



ರೆನ್ ಗ್ರಂಥಾಲಯ, ಟ್ರಿನಿಟಿ ಕಾಲೇಜು, ಕೇಂಬ್ರಿಜ್

ಕ್ಯುಮ್ಯುಲೇಟಿವ್ ಬುಕ್ ಇಂಡೆಕ್ಸ್ ಎಂಬುದು ಇನ್ನೊಂದು ಜಗತ್ಪ್ರಸಿದ್ಧ ಗ್ರಂಥಸೂಚಿ. ಗ್ರಂಥಾಲಯ ಜಗತ್ತಿನಲ್ಲಿ ಪ್ರಮುಖ ಪರಾಮರ್ಶನ ಗ್ರಂಥಗಳನ್ನು ಪ್ರಕಟಿಸುತ್ತಿರುವ ನ್ಯೂಯಾರ್ಕಿನ ಎಚ್.ಡಬ್ಲ್ಯೂ. ವಿಲ್ಸನ್ ಕಂಪನಿ ಈ ಗ್ರಂಥಸೂಚಿಯನ್ನು ಪ್ರಕಟಿಸುತ್ತಿದೆ. ಅಮೆರಿಕದ ಸಂಯುಕ್ತಸಂಸ್ಥಾನದಲ್ಲಿ ಪ್ರಕಟವಾಗುವ ಎಲ್ಲ ಗ್ರಂಥಗಳ ಹಾಗೂ ಇತರ ದೇಶಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುವ ಎಲ್ಲ ಗ್ರಂಥಗಳ ಬಗ್ಗೆ ಉಪಯುಕ್ತವಾದ ಮಾಹಿತಿಯನ್ನು ಈ ಸೂಚಿ ನೀಡುತ್ತದೆ. ಸಮಾವೇಶವಾದ ಗ್ರಂಥಗಳ ಬಗ್ಗೆ ವಿವರಗಳನ್ನು ಅಕಾರಾದಿಯಾಗಿ ಕೊಟ್ಟಿರುವುದರಿಂದ ಗ್ರಂಥಕ್ಕೆ ಸಂಬಂಧಪಟ್ಟ ಯಾವುದೇ ಒಂದು ವಿಷಯ ಗೊತ್ತಿದ್ದರೂ ಸಾಕು, ಆ ಗ್ರಂಥದ ಇತರ ವಿವರಗಳನ್ನು ಕಂಡುಹಿಡಿಯಲು ಬರುತ್ತದೆ. ಪ್ರತಿ ತಿಂಗಳಿಗೊಮ್ಮೆ ಪ್ರಕಟವಾಗುವ ಈ ಗ್ರಂಥಸೂಚಿಯನ್ನು ಆರು ತಿಂಗಳಿಗೊಮ್ಮೆ ಕೂಡಿಸಿ ವರ್ಷದಲ್ಲಿ ಎರಡು ಸಂಪುಟಗಳಲ್ಲಿ ಪ್ರತ್ಯೇಕವಾಗಿ ಪ್ರಕಟಿಸುತ್ತಾರೆ. ವರ್ಷದ ಕೊನೆಯಲ್ಲಿ ಈ ಎರಡೂ ಸಂಪುಟಗಳನ್ನೊಳಗೊಂಡ ಒಂದೇ ಸಂಪುಟವನ್ನು ಪ್ರಕಟಿಸುವುದೂ ಉಂಟು. ಇಲ್ಲವೆ ಮೂರು ವರ್ಷದ ಸಂಪುಟಗಳನ್ನು ಸೇರಿಸಿ ಒಂದು ಹಾಗೂ ಸಂಪುಟದ ಕೊನೆಯಲ್ಲಿ ಪ್ರಕಾಶಕರ ಪಟ್ಟಿಯೊಂದನ್ನು ಅವರ ವಿಳಾಸ ಸಹಿತ ಅಕಾರಾದಿಯಾಗಿ ಕೊಟ್ಟಿರುತ್ತಾರೆ.

ಅಮೆರಿಕದಲ್ಲಿ ಪ್ರಕಟವಾಗುತ್ತಿರುವ ಇಂಗ್ಲಿಷ್ ಭಾಷೆಯ ವಿವಿಧ ಗ್ರಂಥಗಳ ವಿವರಗಳನ್ನು ನ್ಯೂಯಾರ್ಕಿನ ಆರ್. ಆರ್. ಬೌಕರ್ ಕಂಪನಿ ಪ್ರತಿವರ್ಷ ಪ್ರಕಟಿಸುವ ಬುಕ್ ಇನ್ ಪ್ರಿಂಟ್ ಎಂಬ ಸೂಚಿ ನೀಡುತ್ತದೆ.

ಭಾರತದಲ್ಲಿ ಪ್ರಚಲಿತವಿರುವ ವಿವಿಧ ಭಾಷಾಗ್ರಂಥಸೂಚಿಗಳ ಪ್ರಕಟನೆಯನ್ನು ವಿವಿಧ ಸಂಘಸಂಸ್ಥೆಗಳು ಕೈಗೊಂಡಿವೆ. ಅಂಥ ಕೆಲವು ಸೂಚಿಗಳ ವಿಚಾರವನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ.

1955–67ರ ಅವಧಿಯಲ್ಲಿ ಭಾರತದಲ್ಲಿ ಪ್ರಕಾಶಿತವಾದ ಇಂಗ್ಲಿಷ್ ಭಾಷೆಯ ಪುಸ್ತಕಗಳ ಬಗ್ಗೆ ವಿವರಗಳನ್ನು ಕೊಡುವ ಇಂಡಿಯನ್ ಬುಕ್ ಇನ್ ಪ್ರಿಂಟ್ 1955–67 ಎಂಬ

ಗ್ರಂಥಸೂಚಿ, ಶೇರ್‌ಸಿಂಗ್ ಮತ್ತು ಸಾಧು ಎಂಬವರು ಸಂಪಾದಿಸಿರುವ ಸೆಲೆಕ್ಟ್ ಬಿಬ್ಲಿಯಾಗ್ರಫಿ ಆಫ್ ಇಂಗ್ಲಿಷ್ ಬುಕ್ಸ್ ಪ್ರಿಂಟೆಡ್ ಇನ್ ಇಂಡಿಯ ಎಂಬ ಗ್ರಂಥಸೂಚಿ– ಇವನ್ನು ಹೆಸರಿಸಬಹುದು. ಸೆಲೆಕ್ಟ್ ಬಿಬ್ಲಿಯಾಗ್ರಫಿಯಲ್ಲಿ 1967ರ ಅನಂತರ ಪ್ರಕಾಶನಗೊಂಡ ಗ್ರಂಥಗಳ ಬಗ್ಗೆ ವಿವರಗಳನ್ನು ಕೊಡುವ ಪುರವಣಿ ಸಂಪುಟವನ್ನೂ ಪ್ರಕಟಿಸಲಾಗಿದೆ. ಇಲ್ಲಿನ ವಿವರಗಳು ದಾಶಮಿಕ ವರ್ಗೀಕರಣ ಪದ್ಧತಿಯಂತಿವೆ. ಲೇಖಕ, ಗ್ರಂಥ, ಶೀರ್ಷಿಕೆ– ಈ ವಿಷಯಗಳಿಗನುಸಾರವಾಗಿ ಮೂರು ಬೇರೆ ಬೇರೆ ಪರಿಶಿಷ್ಟಗಳನ್ನು ಹಾಗೂ ಪ್ರಕಾಶಕರ ವಿಳಾಸಗಳನ್ನು ಕೊನೆಯಲ್ಲಿ ಕೊಟ್ಟಿದ್ದಾರೆ. ಇದೇ ಮಾದರಿಯ ಇಂಡೆಕ್ಸ್ ರೆಫರೆನ್ಸ್ ಕ್ಯಾಟಲಾಗ್ ಆಫ್ ಇಂಡಿಯನ್ ಬುಕ್ಸ್ 1960 – ಎಂಬ ಸೂಚಿಯಲ್ಲಿ ಭಾರತದಲ್ಲಿ ಪ್ರಕಟವಾದ ಮಹತ್ತ್ವದ ಇಂಗ್ಲಿಷ್ ಗ್ರಂಥಗಳ ಉಲ್ಲೇಖವಿದೆ. ಇದರ ಪುರವಣಿ ಸಂಪುಟ 1962 ರಲ್ಲಿ ಹೊರಬಂದಿತು.

ನವದೆಹಲಿಯಲ್ಲಿರುವ ಸಾಹಿತ್ಯ ಅಕಾಡೆಮಿಯ ಬಿ. ಎಸ್. ಕೇಶವನ್ನರ ಪ್ರಧಾನ ಸಂಪಾದಕತ್ವದಲ್ಲಿ ನ್ಯಾಷನಲ್ ಬಿಬ್ಲಿಯಾಗ್ರಫಿ ಆಫ್ ಇಂಡಿಯನ್ ಲಿಟರೇಚರ್ 1901 – 53 ಎಂಬ 4 ಸಂಪುಟಗಳ ಗ್ರಂಥಸೂಚಿಯ ಪ್ರಕಟಣ ಯೋಜನೆಯಲ್ಲಿ 3 ಸಂಪುಟಗಳು ಹೊರಬಂದಿವೆ. ಇಂಗ್ಲಿಷ್ ಮತ್ತು ಸಿಂಧೀ ಭಾಷೆಗಳನ್ನೊಳಗೊಂಡಂತೆ ಭಾರತದ ಎಲ್ಲ ಭಾಷೆಗಳಲ್ಲಿ 1901 ರಿಂದ 1953 ರ ವರೆಗಿನ ಅವಧಿಯಲ್ಲಿ ಪ್ರಕಟವಾದ ಎಲ್ಲ ಗ್ರಂಥಗಳ ವಿವರಣೆಯನ್ನೂ ಈ ಸೂಚಿ ಒದಗಿಸುತ್ತದೆ. ಅಸ್ಸಾಮಿ, ಬಂಗಾಳಿ, ಇಂಗ್ಲಿಷ್, ಗುಜರಾತಿ, ಭಾಷೆಗಳಲ್ಲಿ ಪ್ರಕಟವಾದ ಗ್ರಂಥಗಳ ಬಗ್ಗೆ ವಿವರಗಳನ್ನು ಒಂದನೆಯ ಸಂಪುಟದಲ್ಲೂ ಹಿಂದಿ, ಕನ್ನಡ, ಕಾಶ್ಮೀರಿ, ಮಲಯಾಳಂ ಭಾಷೆಗಳಲ್ಲಿನ ಗ್ರಂಥಗಳ ಬಗ್ಗೆ ಎರಡನೆಯ ಸಂಪುಟದಲ್ಲೂ ಮರಾಠಿ, ಒರಿಯ, ಪಂಜಾಬೀ, ಸಂಸ್ಕೃತ ಭಾಷೆಗಳಲ್ಲಿನ ಗ್ರಂಥಗಳ ಬಗ್ಗೆ ಮೂರನೆಯ ಸಂಪುಟದಲ್ಲೂ ಸಿಂಧಿ, ತಮಿಳು, ತೆಲುಗು, ಉರ್ದು ಭಾಷೆಗಳಲ್ಲಿನ ಗ್ರಂಥಗಳ ಬಗ್ಗೆ ನಾಲ್ಕನೆಯ ಸಂಪುಟದಲ್ಲೂ ರೋಮನ್ ಲಿಪಿಯಲ್ಲಿ ಕೊಡಲಾಗಿದೆ. ಪ್ರತಿಯೊಂದು ಭಾಷೆಯಲ್ಲಿ ಲಭ್ಯವಿರುವ ಗ್ರಂಥಗಳ ವರ್ಗೀಕರಣ ಹೀಗಿದೆ:

1 ಸಾಮಾನ್ಯ ಗ್ರಂಥಗಳು: ಈ ಗುಂಪಿನಲ್ಲಿ ಆಯಾ ಭಾಷೆಗಳಲ್ಲಿಯ ಗ್ರಂಥಸೂಚಿಗಳು, ವಿಶ್ವಕೋಶಗಳು ಮತ್ತು ನಿಘಂಟುಗಳು ಸಮಾವೇಶಗೊಂಡಿವೆ. 2 ತತ್ತ್ವಶಾಸ್ತ್ರ ಮತ್ತು ಧಾರ್ಮಿಕ ಗ್ರಂಥಗಳು, 3 ಸಾಮಾಜಿಕ ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳು, 4 ಭಾಷಾಶಾಸ್ತ್ರದ ಗ್ರಂಥಗಳು, 5 ಕಲೆಗಳು, 6 ಸಾಹಿತ್ಯ ಮತ್ತು ಪ್ರವಾಸ ಕಥನಗಳು, 7 ಇತಿಹಾಸ, ಪ್ರವಾಸ ಮತ್ತು ಚರಿತ್ರೆ, 8 ಸಂಕೀರ್ಣ ಗ್ರಂಥಗಳು.

ಪ್ರತಿಯೊಂದು ವಿಭಾಗದಲ್ಲೂ ಗ್ರಂಥಗಳನ್ನು ಲೇಖಕರ ಹೆಸರಿನಡಿ ಅಕಾರಾದಿಯಾಗಿ ಕೊಡಲಾಗಿದೆ. ಪ್ರತಿಯೊಂದು ಸಂಪುಟದ ಕೊನೆಯಲ್ಲಿನ ಪರಿಶಿಷ್ಟ ಅಕಾರಾದಿಯಾಗಿದೆ.

ಭಾರತದ ಬೇರೆ ಬೇರೆ ಭಾಷೆಗಳಲ್ಲಿಯೂ ಗ್ರಂಥಸೂಚಿಗಳು ಲಭ್ಯವಿವೆ. ಇವುಗಳಲ್ಲಿ ದಾಶಮಿಕ ವರ್ಗೀಕರಣ ಪದ್ಧತಿಯಲ್ಲಿ ಸಿದ್ಧವಾದ ಶಂಕರಗಣೇಶ ದಾತೆಯವರ ಮರಾಠಿ ಗ್ರಂಥಸೂಚೀ (1800 – 1937) ಎಂಬುದು 1800–1937 ಅವಧಿಯಲ್ಲಿ ಮರಾಠಿಯಲ್ಲಿ ಅಚ್ಚಾದ ಎಲ್ಲ ಗ್ರಂಥಗಳ ವಿವರಗಳನ್ನೂ ಕೊಡುತ್ತದೆ. ಭಾರತೀಯ ತತ್ತ್ವಶಾಸ್ತ್ರ, ಹಿಂದೂಧರ್ಮ, ಭಾರತೀಯ ಇತಿಹಾಸ ಹಾಗೂ ಇವುಗಳಿಗೆ ಸಂಬಂಧಪಟ್ಟ ಇತರ ವಿಷಯಗಳನ್ನು ಕುರಿತ ಗ್ರಂಥಗಳನ್ನು ದ್ವಿಬಿಂದು ವರ್ಗೀಕರಣದ ಪದ್ಧತಿಯಂತೆ ವಿಭಜಿಸಲಾಗಿದೆ. ಈ ಗ್ರಂಥಗಳಲ್ಲಿ ಎರಡು ಭಾಗಗಳಿದ್ದು ಮೊದಲ ಭಾಗದಲ್ಲಿ ವಿಷಯಾನುಕ್ರಮದಲ್ಲೂ ಎರಡನೆಯ ಭಾಗದಲ್ಲಿ ಅಕ್ಷರಾನುಕ್ರಮದಲ್ಲೂ ಗ್ರಂಥಗಳ ಬಗ್ಗೆ ವಿವರಗಳನ್ನು ಕೊಡಲಾಗಿದೆ.

ನಿರ್ಬಾಚಿತ ಬಂಗ್ಲಾ ಗ್ರಂಥೇರ ತಾಲಿಕಾ ಎಂಬ ಗ್ರಂಥಸೂಚಿಯಲ್ಲಿ ಬಂಗಾಳಿಯ ಆಯ್ದ 2,354 ಗ್ರಂಥಗಳ ವಿವರಗಳು ದಾಶಮಿಕ ವರ್ಗೀಕರಣ ಪದ್ಧತಿಗನುಗುಣವಾಗಿ ಬಂದಿವೆ.

ಇತ್ತೀಚೆಗೆ 1971ರಲ್ಲಿ ಹಿಂದೀ ಸಾಹಿತ್ಯ ಸಾರಿಣೀ ಅಥವಾ ಹಿಂದೀ ಬಿಬ್ಲಿಯಾಗ್ರಫಿ ಎಂಬ ಗ್ರಂಥಸೂಚಿಯ ಮೊದಲ ಸಂಪುಟ ಪೀತಾಂಬರ ನಾರಾಯಣ ಹಾಗೂ ಎಸ್. ಭಾಸ್ಕರನ್ ನಾಯರ್ ಎಂಬವರಿಂದ ಸಂಪಾದಿತವಾಗಿ ಪಂಜಾಬಿನ ಹೋಶಿಯಾರಪುರ ದಲ್ಲಿರುವ ವಿಶ್ವೇಶ್ವರಾನಂದ ಸಂಸ್ಥೆಯ ವತಿಯಿಂದ ಪ್ರಕಟವಾಗಿದೆ. ಇದರಲ್ಲಿ 1864 ರಿಂದ ಹಿಂದಿ ಭಾಷೆಯಲ್ಲಿ ಬೆಳಕು ಕಂಡ ಗ್ರಂಥಗಳ ಬಗ್ಗೆ ವಿವರಗಳಿವೆ. ಒಟ್ಟಾರೆ 11 ಸಂಪುಟಗಳ ಈ ಯೋಜನೆಯಲ್ಲಿ 40,000 ಗ್ರಂಥಗಳ ವಿವರಗಳು ಬರುತ್ತವೆ. ಮೊದಲ ಸಂಪುಟದಲ್ಲಿ ಹಿಂದೀ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳ ವಿವರಗಳಿವೆ. ಇನ್ನುಳಿದ 10 ಸಂಪುಟಗಳಲ್ಲಿ ಭಾಷಾವಿಜ್ಞಾನ ಮತ್ತು ವ್ಯಾಕರಣ, ದರ್ಶನ ಹಾಗೂ ಮನಃಶಾಸ್ತ್ರ, ಧರ್ಮ, ಸಾಮಾಜಿಕ ವಿಜ್ಞಾನ, ವಿಜ್ಞಾನ (ಶುದ್ಧ ಹಾಗೂ ಆನ್ವಯಿಕ), ಲಲಿತ ಕಲೆಗಳು,ಉಪಯುಕ್ತ ಕಲೆಗಳು, ಇತಿಹಾಸ, ಭೂಗೋಳ ಮತ್ತು ಕೊನೆಯದಾಗಿ ವಿವಿಧ ವಿಷಯಗಳು – ಹೀಗೆ ಹಲವಾರು ವಿಷಯಗಳಲ್ಲಿ ಪ್ರಕಟವಾಗಿರುವ ಗ್ರಂಥಗಳ ವಿವರಗಳಿವೆ.

ಕನ್ನಡದಲ್ಲಿ ಗ್ರಂಥಸೂಚಿ ಸಂಕಲನ ಕಾರ್ಯ 20 ನೆಯ ಶತಮಾನದ ಆರಂಭ ಕಾಲದಿಂದೀಚೆಗೆ ನಡೆದಿದೆ. 1910ರಲ್ಲಿ ಎಲ್.ಡಿ. ಬಾರ್‌ನೆಟ್ ಎಂಬ ಆಂಗ್ಲ ವಿದ್ವಾಂಸ ಲಂಡನಿನ ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದಲ್ಲಿನ ಕನ್ನಡ, ಕೊಡಗು ಮತ್ತು ಬಡಗ ಗ್ರಂಥ ಗಳ ಸೂಚಿಯೊಂದನ್ನು ತಯಾರಿಸಿದ. ಇದನ್ನು ತಯಾರಿಸುವಲ್ಲಿ ಆರ್. ನರಸಿಂಹಾಚಾರ್ಯ ಮತ್ತು ಜೆ.ಎಫ್. ಫ್ಲೀಟರ ನೆರವು ಆತನಿಗೆ ದೊರಕಿತು. ಮೊದಲ ಸೂಚಿ ಪ್ರಕಟಣೆಯಾದ ಅನೇಕ ವರ್ಷಗಳ ಬಳಿಕ ಇತರ ಕೆಲವು ಸೂಚಿಗಳು ಪ್ರಕಟವಾಗಿವೆ. ಭಾರತದ ರಾಷ್ಟ್ರೀಯ ಗ್ರಂಥಸೂಚಿಯಲ್ಲಿ ಸಮಾವೇಶವಾದ ಕನ್ನಡ ಗ್ರಂಥಗಳ ಪ್ರತ್ಯೇಕ ಪ್ರಕಟಣೆ ಹಾಗೂ ಸಾಹಿತ್ಯ ಅಕಾಡೆಮಿಯವರಿಂದ ಪ್ರಕಟಿಸಲ್ಪಟ್ಟ ನ್ಯಾಷನಲ್ ಬಿಬ್ಲಿಯಾಗ್ರಫಿ ಆಫ್ ಇಂಡಿಯನ್ ಲಿಟರೇಚರ್ (2 ನೆಯ ಸಂಪುಟ) – ಇವು ಲಭ್ಯವಿರುವ ಎರಡು ಪ್ರಮುಖ ಗ್ರಂಥಸೂಚಿಗಳು. ಇವಲ್ಲದೆ 1956ರಲ್ಲಿ ನವದೆಹಲಿಯ ಸಾಹಿತ್ಯ ಅಕಾಡೆಮಿಯ ಕೋರಿಕೆಯ ಮೇರೆಗೆ ಕೆ.ಎಸ್. ದೇಶಪಾಂಡೆಯವರು ಸಿದ್ಧಪಡಿಸಿದ ಸುಮಾರು 1,200 ಕನ್ನಡ ಗ್ರಂಥ ಸೂಚಿ (ಅಪ್ರಕಟಿತ), ಧಾರವಾಡದಲ್ಲಿ 1957ರಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ ಜ್ಞಾನ– ವಿಜ್ಞಾನ ಗ್ರಂಥಗಳ ಪ್ರದರ್ಶನದಲ್ಲಿಡಲಾದ ಗ್ರಂಥಗಳ ಸೂಚಿ, ಶ್ರೀನಿವಾಸ ಹಾವನೂರರ ಒಂದು ಸಾವಿರ ಪುಸ್ತಕಗಳು– ಇಂಥವು ವಿವಿಧ ವ್ಯಕ್ತಿಗಳು ತಯಾರಿಸಿದ ಸೂಚಿಗಳು. ಈ ಎಲ್ಲ ಸೂಚಿಗಳೂ ಒಂದೊಂದು ಕಾಲಾವಧಿಗೆ ಮಾತ್ರ ಸೀಮಿತಗೊಂಡಿರುವುದರಿಂದ ಕನ್ನಡದಲ್ಲಿ ಪ್ರಕಟವಾದ ಎಲ್ಲ ಗ್ರಂಥಗಳ ಬಗ್ಗೆ ಸಮಗ್ರವಾದ ವಿವರಗಳನ್ನು ಹೊಂದಿದ ಒಂದೇ ಒಂದು ಸೂಚಿಯ ಅಗತ್ಯ ಕಂಡುಬಂತು. ಇದರ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಗ್ರಂಥಸೂಚಿ: ಮುದ್ರಿತ ಕನ್ನಡ ಕೃತಿಗಳ ವಿವರಣಾತ್ಮಕ ಗ್ರಂಥಸೂಚಿ 1818–1968 –ಎಂಬ ಪ್ರಕಟನೆಯ ಕಾರ್ಯ ಮುಂದುವರಿಯುತ್ತಿದೆ. ಒಟ್ಟು ಆರು ಸಂಪುಟಗಳಲ್ಲಿ ಪ್ರಕಟವಾಗುವ ಈ ಸೂಚಿಯಲ್ಲಿ ಕನ್ನಡದಲ್ಲಿ 1817–1968 ರ ವರೆಗೆ ಅಚ್ಚಾದ ಸುಮಾರು 40,000 ಗ್ರಂಥಗಳ ವಿವರಗಳು ಇರುತ್ತವೆ. ಶುದ್ಧ ವಿಜ್ಞಾನ ಗ್ರಂಥಗಳಿಗೆ ಸಂಬಂಧಿಸಿದ ಮೊದಲ ವಿವರಗಳು ಇರುತ್ತವೆ. ಶುದ್ಧ ವಿಜ್ಞಾನಗ್ರಂಥಗಳಿಗೆ ಸಂಬಂಧಿಸಿದ ಮೊದಲ ಸಂಪುಟ 1971ರಲ್ಲಿ ಹೊರಬಂತು. ಈ ಸಂಪುಟದಲ್ಲಿ ಸಾಮಾನ್ಯ ವಿಜ್ಞಾನ, ಭೌತ ವಿಜ್ಞಾನ, ಗಣಿತ, ಇಂಜಿನಿಯರಿಂಗ್, ರಸಾಯನ ವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ಕೃಷಿ ವಿಜ್ಞಾನ, ವೈದ್ಯವಿಜ್ಞಾನ – ಇತ್ಯಾದಿ ಪ್ರಕಟವಾದ ಗ್ರಂಥಗಳ ವಿವರಗಳಿವೆ. ಸ್ಥೂಲ ವಿಷಯಾನುಕ್ರಮದಲ್ಲಿ ಗ್ರಂಥಗಳನ್ನು ವರ್ಗೀಕರಿಸಿ ಪ್ರತಿಯೊಂದು ಗ್ರಂಥಕ್ಕೆ ಲೇಖಕನ ಹೆಸರು ಮತ್ತು ಹುಟ್ಟಿದ ತಾರೀಖು, ಗ್ರಂಥದ ಪೂರ್ಣ ಶೀರ್ಷಿಕೆ, ಅನುವಾದವಿದ್ದರೆ ಯಾವ ಭಾಷೆಯಿಂದ ಮತ್ತು ಈ ಸಂದರ್ಭದಲ್ಲಿ ಮೂಲ ಕೃತಿಯ ಪೂರ್ಣ ಶೀರ್ಷಿಕೆ ಆಯಾ ಭಾಷೆಯಲ್ಲಿದ್ದಂತೆ, ಪ್ರಕಾಶನ ಸ್ಥಳ, ಪ್ರಕಾಶಕ, ಪ್ರಕಾಶನ ವರ್ಷ, ಪುಟಸಂಖ್ಯೆ, ಆಕಾರ, ರಟ್ಟು ಯಾವ ಬಗೆಯದು ಎಂಬ ವಿವರ, ಗ್ರಂಥದ ಬೆಲೆ ಮತ್ತು ಆ ಗ್ರಂಥ ಯಾವ ಗ್ರಂಥಾಲಯದಲ್ಲಿ ಲಭ್ಯವಿದೆ ಎನ್ನುವ ವಿಚಾರ – ಮುಂತಾದವನ್ನು ಕೊಡಲಾಗಿದೆ. ಗ್ರಂಥಗಳಲ್ಲಿ ಚಿತ್ರಗಳಿದ್ದರೆ ಅವನ್ನು ಸಚಿತ್ರ ಎಂದು ಉಲ್ಲೇಖಿಸಲಾಗಿದೆ. ಪಠ್ಯಪುಸ್ತಕಗಳಿದ್ದರೆ ಯಾವ ತರಗತಿಗೆ ಎಂಬುದನ್ನು ಕಾಣಿಸಲಾಗಿದೆ. ಪ್ರತಿಯೊಂದು ಗ್ರಂಥಕ್ಕೂ ಕ್ರಮಾಂಕವಿದೆ. ಪ್ರತಿಯೊಂದು ಗ್ರಂಥದ ಸಂಕ್ಷಿಪ್ತ ವಿವರವನ್ನು ಕೊಡಲಾಗಿದೆ. ಸಂಪುಟದ ಕೊನೆಯಲ್ಲಿ ಗ್ರಂಥಕರ್ತೃ ಸೂಚಿ, ಕೃತಿ ಸೂಚಿ, ವಿಷಯ ವಿಭಾಗ ಕ್ರಮ, ಪ್ರಕಾಶಕರು, ಮಾಲಿಕೆಗಳು, ಗ್ರಂಥಭಂಡಾರಗಳು ಮತ್ತು ಅವುಗಳಿಗೆ ಉಪಯೋಗಿಸಿದ ಸಂಕೇತಗಳು ಎಂಬ ಅನುಬಂಧಗಳಿವೆ.

ಸೂಚೀಕರಣದ ಇನ್ನಿತರ ಪ್ರಕಾರಗಳನ್ನು ಕೆಳಗೆ ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ:

**ಆಯ್ಕೀಕೃತ ಸೂಚೀಕರಣ:** ಒಂದು ಗ್ರಂಥಾಲಯದಲ್ಲಿರುವ ಗ್ರಂಥಗಳ ಸಂಖ್ಯೆಗೆ ಸಮನಾಗಿ ಉಲ್ಲೇಖ ಕಾರ್ಡುಗಳೂ ಇರಬೇಕಾಗುತ್ತದೆ. ಇವನ್ನು ಸಂಗ್ರಹಿಸುವ ಮರದ ಇಲ್ಲವೇ ಕಬ್ಬಿಣದ ಕ್ಯಾಬಿನೆಟ್ಟುಗಳ, ಆವರಿಸಿಕೊಳ್ಳುವ ಸ್ಥಳ – ಇತ್ಯಾದಿಗಳನ್ನು ಕುರಿತು ಯೋಚಿಸಬೇಕಾದ್ದು ಅಗತ್ಯ. ಕಾರ್ಡುಸೂಚಿಯ ಗಾತ್ರ ದೊಡ್ಡದಾದಂತೆ ಗ್ರಂಥಾಲಯಗಳಲ್ಲಿ ಸಾಕಷ್ಟು ವಿಸ್ತಾರವಾದ ಸ್ಥಳ ಬೇಕಾಗುತ್ತದೆ. ಗ್ರಂಥಗಳು ಹೆಚ್ಚಾದಂತೆ ಬೆಳೆಯುವ ಗ್ರಂಥಸೂಚಿಗಳು ಗ್ರಂಥಪಾಲರಿಗೆ ಹೆಚ್ಚಿನ ಸಮಸ್ಯೆಯನ್ನು ತಂದೊಡ್ಡುತ್ತವೆ. ಈ ಅಡ್ಡಿ ಆತಂಕಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ನಿವಾರಣೆಗಾಗಿ ದೊಡ್ಡ ದೊಡ್ಡ ಗ್ರಂಥಾಲಯಗಳಲ್ಲಿ ಗ್ರಂಥಸೂಚಿಗಳು ಕೈಮೀರಿ ಬೆಳೆಯದಂತೆ ಹಿಡಿತದಲ್ಲಿಟ್ಟುಕೊಂಡು ಹೋಗಲು ಆಯ್ಕೀಕೃತ ಸೂಚೀಕರಣ ಪದ್ಧತಿಯನ್ನು (ಸೆಲೆಕ್ಟಿವ್ ಕ್ಯಾಟಲಾಗ್) ಅನುಸರಿಸಲಾಗುತ್ತದೆ.

ನಿತ್ಯೋಪಯೋಗದಲ್ಲಿರುವ ಮಹತ್ತ್ವದ ಗ್ರಂಥಗಳನ್ನಾಯ್ದು ಅವುಗಳಿಗೆ ಬಹಳವೆಂದರೆ ಎರಡು ಉಲ್ಲೇಖಗಳನ್ನು ಮಾಡುತ್ತಾರೆ. ಅಧಿಕ ಸಂಖ್ಯೆಯ ಇತರ ಸಾಮಾನ್ಯ ಗ್ರಂಥಗಳಿಗೆ ಒಂದು ಉಲ್ಲೇಖವನ್ನು ಮಾತ್ರ ಕೊಡಲಾಗುವುದು. ನಿರಾತಂಕವಾಗಿ ಕೆಲಸ ನಿರ್ವಹಿಸುತ್ತಿರುವ ಗ್ರಂಥಾಲಯಗಳಲ್ಲಿ, ಅಲ್ಲಿರುವ ಕಥೆ, ಕಾದಂಬರಿ, ಇತ್ಯಾದಿ ಸಾಧಾರಣ ಲಲಿತ

ಸಾಹಿತ್ಯಗ್ರಂಥಗಳಿಗೆ ಸಂಬಂಧಿಸಿದಂತೆ ಒಂದು ಕಾರ್ಡನ್ನೂ ಬರೆಯುವುದಿಲ್ಲ. ಕೇವಲ ವಿಶಿಷ್ಟ ಗ್ರಂಥಗಳನ್ನು ಕುರಿತಂತೆ ಮಾತ್ರ ಕಾರ್ಡುಗಳು ತಯಾರಾಗುತ್ತವೆ. ಬಹುಮುಖ ಉಳಿತಾಯ ಕಾಣುವ ಈ ಕ್ರಮದಿಂದ ಗ್ರಂಥಸೂಚಿ ಅತಿಯಾಗಿ ಬೆಳೆಯದಂತೆ ತಡೆಬಹುದು.

**ಸಂಕ್ಷಿಪ್ತ ಸೂಚೀಕರಣ:** ಇದರ ಪ್ರಕಾರ ಕೆಲವೇ ಶಬ್ದಗಳನ್ನುಪಯೋಗಿಸಿ ಕಾರ್ಡಿನ ಮೇಲೆ ಗ್ರಂಥದ ವಿವರಗಳನ್ನು ಕೊಡಲಾಗುತ್ತದೆ. ಪ್ರಮುಖವಾಗಿ ಲೇಖಕನ ಹೆಸರು, ಗ್ರಂಥದ ಶಿರೋನಾಮೆ ಇವೆರಡೂ ಸಾಧ್ಯವಿದ್ದಷ್ಟೂ ಸಂಕ್ಷಿಪ್ತವಾಗಿರುತ್ತವೆ. ಆಯ್ಕೀಕೃತ ಸೂಚಿಗಿಂತ ಸಂಕ್ಷಿಪ್ತ ಸೂಚಿಯನ್ನು ಸಿದ್ಧಪಡಿಸುವಲ್ಲಿ ಕಡಿಮೆ ಸಮಯ ಹಿಡಿಯುತ್ತದೆ, ವೆಚ್ಚವೂ ಕಡಿಮೆ.

**ಸಹಕಾರೀ ಸೂಚೀಕರಣ:** ವಿವಿಧ ಆಡಳಿತಕ್ಕೊಳಪಟ್ಟ ಅನೇಕ ಗ್ರಂಥಾಲಯಗಳು ಸಾಮೂಹಿಕ ಸಹಕಾರದಿಂದ ಸೂಚೀಕರಣ ಕಾರ್ಯಕ್ಕಾಗಿ ಒಂದು ಸ್ವತಂತ್ರ ಕೇಂದ್ರವನ್ನು ತೆರೆದು ಅಲ್ಲಿ ಗ್ರಂಥಸೂಚಿಯ ಉಲ್ಲೇಖವನ್ನು ಸಾಕಷ್ಟು ಸಂಖ್ಯೆಯಲ್ಲಿ ಸಿದ್ಧಪಡಿಸಿ ಸದಸ್ಯ ಗ್ರಂಥಾಲಯಗಳಿಗೆ ಯೋಗ್ಯಬೆಲೆಗೆ ಒದಗಿಸುತ್ತವೆ. ಇದರಿಂದ ಪ್ರತಿಯೊಂದು ಸದಸ್ಯ ಗ್ರಂಥಾಲಯವೂ ಪ್ರತ್ಯೇಕವಾಗಿ ಸೂಚಿಗಳನ್ನು ತಯಾರಿಸುವ ಅಗತ್ಯ ಒದಗದು.

ಸಹಕಾರೀ ಸೂಚೀಕರಣದ ಯಶಸ್ಸು ಸದಸ್ಯ ಗ್ರಂಥಾಲಯಗಳ ಸಂಖ್ಯೆ, ಒಂದೇ ಬಗೆಯ ಗ್ರಂಥ ಉಲ್ಲೇಖಗಳ ಸಂಖ್ಯೆ – ಇವನ್ನು ಅವಲಂಬಿಸಿದೆ. ಸದಸ್ಯ ಗ್ರಂಥಾಲಯಗಳ ಸಂಖ್ಯೆ ಹೆಚ್ಚಿದಷ್ಟೂ ಲಾಭ ಅಧಿಕ. ಈ ಎಲ್ಲ ಗ್ರಂಥಾಲಯಗಳಲ್ಲಿ ಒಂದೇ ತರದ ಗ್ರಂಥಸೂಚಿಸಂಹಿತೆಯಿದ್ದರೆ ಕಾರ್ಡುಗಳನ್ನು ಬರೆಯುವ ಕೆಲಸ ಸುಗಮವಾಗುತ್ತದೆ.

**ಕೇಂದ್ರೀಕೃತ ಸೂಚೀಕರಣ:** ಒಂದೇ ಆಡಳಿತಕ್ಕೊಳಪಟ್ಟ ಗ್ರಂಥಾಲಯ ವ್ಯವಸ್ಥೆಯ ಗ್ರಂಥಗಳಿಗೆಲ್ಲ ಕಾರ್ಡುಗಳನ್ನು ಬರೆದು ಅನಂತರ ಸಂಬಂಧಪಟ್ಟ ಶಾಖಾಗ್ರಂಥಾಲಯಗಳಿಗೆ ಕಳಿಸಿಕೊಡುವ ಪದ್ಧತಿ ಕೇಂದ್ರ ಗ್ರಂಥಾಲಯಗಳಲ್ಲಿರುವುದರಿಂದ ಒಂಥ ಸೂಚೀಕರಣಕ್ಕೆ ಈ ಹೆಸರಿದೆ (ಸೆಂಟ್ರಲೈಸ್ಡ್ ಕ್ಯಾಟಲಾಗಿಂಗ್). ಇದು ಒಂದು ರೀತಿಯಲ್ಲಿ ಸಹಕಾರೀ ಸೂಚೀಕರಣವನ್ನು ಹೋಲುತ್ತದೆ. ಆದರೆ ಇವೆರಡರಲ್ಲಿ ವ್ಯತ್ಯಾಸಗಳಿಲ್ಲದಿಲ್ಲ. ಕೇಂದ್ರೀಕೃತ ಸೂಚೀಕರಣ ಒಂದೇ ಆಡಳಿತದ ಕ್ಷೇತ್ರದಲ್ಲಿ ಬರುವ 40–50 ಹಳ್ಳಿಯ ಗ್ರಂಥಾಲಯಗಳಿಗೆ ಸೀಮಿತ. ಉದಾಹರಣೆಗೆ ಸಾರ್ವಜನಿಕ ಗ್ರಂಥಾಲಯ ಮಂಡಲದ ತಾಲ್ಲೂಕು ಕೇಂದ್ರ ಗ್ರಂಥಾಲಯದ ಸುತ್ತಮುತ್ತಲಿನ 40–50 ಗ್ರಾಮ ಗ್ರಂಥಾಲಯಗಳಿಗೆ ಹೊಸ ಹೊಸ ಗ್ರಂಥಗಳನ್ನು ಪೂರೈಸಬೇಕಾದರೆ ಆಗ ಗ್ರಂಥಗಳ ಆಯ್ಕೆ, ಕೊಳ್ಳುವುದು, ಸಿದ್ಧತೆ, ವರ್ಗೀಕರಣ ಸೂಚೀಕರಣ– ಈ ಎಲ್ಲ ತಾಂತ್ರಿಕ ಕೆಲಸಗಳೂ ತಾಲ್ಲೂಕು ಗ್ರಂಥಾಲಯದಲ್ಲಿಯೇ ನಡೆಯಬೇಕಾಗುತ್ತದೆ. ಅಲ್ಲಿಂದ ಗ್ರಂಥಗಳನ್ನು ಅವುಗಳ ಕಾರ್ಡುಗಳೊಂದಿಗೆ ಗ್ರಾಮ ಗ್ರಂಥಾಲಯಗಳಿಗೆ ಕಳುಹಿಸಬೇಕಾಗುತ್ತದೆ. ಇವುಗಳಲ್ಲಿನ ಸೂಚೀಕರಣ ಕಾರ್ಯ ಗ್ರಂಥಾಲಯದಲ್ಲೇ ನಡೆದಿರುವುದರಿಂದ ಶಾಖಾ ಗ್ರಂಥಾಲಯಗಳಿಗೆ ವೇಳೆ, ಶ್ರಮ, ಹಣ – ಇವುಗಳ ಉಳಿತಾಯವಾಗುತ್ತದೆ.

**ಲಿಪ್ಯಂತರ:** ಒಂದು ಗ್ರಂಥಸೂಚಿಯಲ್ಲಿ ದೊರೆಯುವ ಎಲ್ಲ ವಿವರಗಳನ್ನು ಬೇರೆ ಬೇರೆ ಭಾಷೆಗಳನ್ನಾಡುವ ಜನರಿಗೆ ದೊರಕಿಸುವ ಸಲುವಾಗಿ ಒಂದು ಭಾಷೆಯಲ್ಲಿರುವ ವಿವರಗಳನ್ನು ಇನ್ನಿತರ ಭಾಷೆಗಳಲ್ಲಿ ಲಿಪ್ಯಂತರ (ಟ್ರಾನ್ಸ್‌ಲಿಟರೇಟ್) ಮಾಡುವ ಪದ್ಧತಿಯೂ ಅನೇಕ ಗ್ರಂಥಾಲಯಗಳಲ್ಲಿದೆ.

ಒಂದು ಭಾಷೆಯಲ್ಲಿನ ಗ್ರಂಥಸೂಚಿಯನ್ನು ಇನ್ನಿತರ ಭಾಷೆಗಳಲ್ಲಿ ಲಿಪ್ಯಂತರ ಮಾಡುವಾಗ ಒದಗಬಹುದಾದ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳಲು ಕೆಲವು ಸರ್ವಮಾನ್ಯ ಪದ್ಧತಿಗಳನ್ನು ಅನುಸರಿಸಲಾಗುತ್ತದೆ. ಪೌರಸ್ತ್ಯ ಲಿಪಿಗಳಲ್ಲಿನ ಗ್ರಂಥಸೂಚಿಗಳನ್ನು ರೋಮನ್ ಲಿಪಿಯಲ್ಲಿ ಲಿಪ್ಯಂತರಗೊಳಿಸುವ ಕಾರ್ಯ ಜರ್ಮನ್ ಪದ್ಧತಿ, ಫ್ರೆಂಚ್ ಪದ್ಧತಿ ಅಮೆರಿಕ ಕಾಂಗ್ರೆಸ್ ಗ್ರಂಥಾಲಯ ಪದ್ಧತಿ ಹಾಗೂ ಅಂತಾರಾಷ್ಟ್ರೀಯ ಪದ್ಧತಿಗಳಿಗೆ ಅನುಗುಣವಾಗಿ ನಡೆಯುತ್ತದೆ. ಇವುಗಳಲ್ಲಿ ಅಂತಾರಾಷ್ಟ್ರೀಯ ಪದ್ಧತಿಯೇ ಹೆಚ್ಚು ಬಳಕೆಯಲ್ಲಿದೆ. ಭಾರತ ರಾಷ್ಟ್ರೀಯ ಗ್ರಂಥಸೂಚಿಯಲ್ಲಿ ಇದೇ ಪದ್ಧತಿಯನ್ನು ಅನುಸರಿಸಲಾಗಿದೆ.

ಎಲ್ಲ ಭಾಷೆಗಳ ವರ್ಣಮಾಲೆಯಲ್ಲಿ ಸಮಾನ ಅಕ್ಷರಗಳನ್ನು ಇರುವುದಿಲ್ಲವಾದ ಕಾರಣ ಒಂದು ಲಿಪಿಯಿಂದ ಮತ್ತೊಂದು ಲಿಪಿಗೆ ಬದಲಿಸುವಾಗ ಕೆಲವಾರು ಅಂತಾರಾಷ್ಟ್ರೀಯ ಚಿಹ್ನೆಗಳನ್ನು ಉಪಯೋಗಿಸುತ್ತಾರೆ (ಬಿ.ಬಿ.ಎಚ್.;ಎಸ್‌ಆರ್.ಜಿಯು.;ಜಿ.ಎಂ.ಪಿ.)

**6 ಗ್ರಂಥಗಳ ಕಣ್ಮರೆ ಹಾಗೂ ಹಾನಿ:** ಗ್ರಂಥಾಲಯಗಳಲ್ಲಿರುವ ಗ್ರಂಥ, ಪತ್ರಿಕೆ, ಫಿಲ್ಮ್ ಮತ್ತು ಇತರ ಪಠನ ಸಾಮಗ್ರಿಗಳೆಲ್ಲ ಸಾವಯವ ಸಂಯುಕ್ತಗಳಾಗಿದ್ದು ಅವುಗಳ ಆಯುಷ್ಯ ಪರಿಮಿತವಾಗಿರುತ್ತದೆ. ಸ್ವಾಭಾವಿಕವಾದ ಜೀರ್ಣಾವಸ್ಥೆ ಒದಗುವ ಮುನ್ನವೇ ಇಲ್ಲಿಯ ಅನೇಕ ವಸ್ತುಗಳು ಇತರೇ ಬಗೆಯ ಹಾನಿಗಳಿಗೆ ತುತ್ತಾಗುತ್ತವೆ. ಈ ಹಾನಿ ಮಾನವನಿಂದಾಗಬಹುದು, ಕ್ರಿಮಿಕೀಟಗಳಿಂದಾಗಬಹುದು, ನೈಸರ್ಗಿಕ ಕಾರಣಗಳಿಂದಾಗಬಹುದು.

ಮಾನವನಿಂದಾಗುವ ಹಾನಿಗಳಲ್ಲಿ ಎರಡು ಬಗೆ: 1 ಸಾಮೂಹಿಕ ರೂಪದ ಸಾಮಾಜಿಕ ಹಾಗೂ ರಾಜಕೀಯ ಮೂಲದವು. 2 ವೈಯಕ್ತಿಕ ಮೂಲದವು.

**1 ಸಾಮೂಹಿಕ ರೂಪದ ಸಾಮಾಜಿಕ ಮತ್ತು ರಾಜಕೀಯ ಕಾರಣಗಳು:** ಗ್ರಂಥಾಲಯದ ಇತಿಹಾಸ ಹಾಗೂ ಮಾನವನ ಸಾಮಾನ್ಯ ಇತಿಹಾಸಗಳನ್ನು ಪರಿಶೀಲಿಸಿದಾಗ ಒಂದೆಡೆ ಮಾನವ ಜನಾಂಗ ಸಾಹಿತ್ಯ, ಕಲೆ ಮುಂತಾದವುಗಳ ಉಪಾಸಕನಾಗಿ ಸಂಸ್ಕೃತಿಯ ಪಥದಲ್ಲಿ ಸಾಗುತ್ತಿದ್ದರೆ, ಇನ್ನೊಂದೆಡೆ ಅವುಗಳ ನಾಶದತ್ತ ಪ್ರಯತ್ನಿಸಿರುವುದನ್ನು ಕಾಣಬಹುದು. ಅಲೆಗ್ಸಾಂಡ್ರಿಯ, ಭಾರತದ ನಾಲಂದ, ತಕ್ಷಶಿಲೆ ಮುಂತಾದ ಕಡೆಗಳಲ್ಲಿದ್ದ ಅತ್ಯಮೂಲ್ಯ ಗ್ರಂಥಾಲಯಗಳನ್ನು ಧ್ವಂಸಗೊಳಿಸಲು ಮಾನವನೇ ಕಾರಣ. ಆಧುನಿಕ ಕಾಲವೂ ಈ ತರದ ವಿಧ್ವಂಸಕ ಕೃತ್ಯಗಳಿಗೆ ಹೊರತಾಗಿಲ್ಲ. ಕಳೆದ ಎರಡನೆಯ ಮಹಾಯುದ್ಧದಲ್ಲಿ ಮನಿಲ, ಮಿಲಾನ್, ಲಂಡನ್, ಕೊರಿಯ, ಶಾಂಘಾಯ್ ಮುಂತಾದೆಡೆಗಳಲ್ಲಿ ಅನೇಕ ಅಮೂಲ್ಯ ಗ್ರಂಥಾಲಯಗಳು ನಾಶವಾಗಿವೆ. ಚೆಕೊಸ್ಲೊವಾಕಿಯದಲ್ಲಿ ನೂರಾರು ಗ್ರಂಥಾಲಯಗಳು ನಷ್ಟವಾಗಿವೆಯಲ್ಲದೆ ಪೋಲೆಂಡಿನಲ್ಲಿ ಪೋಲಿಷ್ ಭಾಷೆಯ ಒಂದೂ ಗ್ರಂಥ ಉಳಿಯದಂತೆ ನಾಶವಾಗಿದೆ ಎಂದು ಹೇಳಲಾಗಿದೆ. ಈ ರೀತಿಯ ಹಾನಿಗಳು ಯುದ್ಧಕಾರಣದಿಂದ ಉಂಟಾಗುತ್ತವೆ. ಯುದ್ಧಕಾಲದಲ್ಲಿ ಐತಿಹಾಸಿಕ ಕಟ್ಟಡಗಳು, ಆಸ್ಪತ್ರೆಗಳು, ವಸ್ತುಸಂಗ್ರಹಾಲಯಗಳಿಗೆ ಯಾವ ರೀತಿಯಲ್ಲಿ ರಕ್ಷಣೆ ಕೊಡಬೇಕೋ ಅದೇ ರೀತಿಯಲ್ಲಿ ಗ್ರಂಥಾಲಯಗಳಿಗೂ ರಕ್ಷಣೆ ಕೊಡಬೇಕಾದುದು ಸಂಸ್ಕೃತಿ ಹಾಗೂ ಜನಾಂಗ ಪ್ರಗತಿಯ ದೃಷ್ಟಿಯಿಂದ ಅಗತ್ಯ.

ಸಾಮಾಜಿಕ ಕಾರಣಗಳಿಂದ ಗ್ರಂಥಾಲಯಗಳಿಗೆ ಹಾನಿಯೊದಗುವುದೂ ಇದೆ. ವೈಷಮ್ಯ, ಅಸೂಯೆ, ಇಲ್ಲವೇ ಬೇಜವಾಬ್ದಾರಿತನಗಳಿಂದ ಗ್ರಂಥಾಲಯಗಳ ಅಮೂಲ್ಯ ಗ್ರಂಥಗಳು ನಾಶವಾಗುವುದುಂಟು. ವಿದ್ಯಾರ್ಥಿ ಗಲಭೆಗಳಲ್ಲಿ ವಿಶ್ವವಿದ್ಯಾಲಯಗಳ ಶಾಲಾ ಕಾಲೇಜುಗಳ ಗ್ರಂಥಭಂಡಾರಗಳು ನಷ್ಟಕ್ಕೆ ಒಳಗಾಗುವುದೂ ಉಂಟು.

**2 ವೈಯಕ್ತಿಕ ಕಾರಣಗಳು:** ಕೆಲವೊಂದು ಸಮಾಜಘಾತುಕ ವ್ಯಕ್ತಿಗಳಿಂದ ಗ್ರಂಥಾಲಯದಲ್ಲಿ ಅನೇಕ ಬಗೆಯ ನಷ್ಟಗಳು ಸಂಭವಿಸುವುದುಂಟು. ಈ ನಷ್ಟ ಕಾಲ ದೇಶ ಪರಿಸ್ಥಿತಿಗನುಗುಣವಾಗಿ ಭಿನ್ನವಾಗಿರುತ್ತದೆ. ಪರ್ಷಿಯದ ರಾಜ ಎರಡನೆಯ ರಾಮ್ಸೆಸ್‌ನ ಗ್ರಂಥಾಲಯದಲ್ಲಿ ಆಗುತ್ತಿದ್ದ ಗ್ರಂಥಚೌರ್ಯದ ವಿಚಾರದಲ್ಲಿ ಅವನ ನಿಯಮ ಹೀಗಿತ್ತು. ಯಾವಾತ ಪುಸ್ತಕವನ್ನು ಕದ್ದೊಯ್ಯುವನೋ ಆತ ಸಾವಿರ ಛಡಿಗಳ ಶಿಕ್ಷೆಗೆ ಒಳಗಾಗಬೇಕಿತ್ತು. ಅಲ್ಲದೆ ಆತ ಕುಷ್ಠರೋಗ ಮೊದಲಾದ ಭಯಂಕರ ರೋಗಕ್ಕೆ ತುತ್ತಾಗಲಿ ಎಂಬ ಶಾಪವನ್ನು ಹಾಕಲಾಗುತ್ತಿತ್ತು. ಇಂಗ್ಲೆಂಡಿನ ರಾಜ ನಾಲ್ಕನೆಯ ಹೆನ್ರಿಯ ಕಾಲದಲ್ಲಿ ಗ್ರಂಥಚೋರನಿಗೆ ಮರಣದಂಡನೆಯ ತನಕವೂ ಶಿಕ್ಷೆ ವಿಧಿಸಲಾಗುತ್ತಿತ್ತು.

ಸರ್ವಸಾಮಾನ್ಯವಾಗಿ ಆಧುನಿಕ ಗ್ರಂಥಾಲಯಗಳಲ್ಲಿ ವ್ಯಕ್ತಿಗಳಿಂದ ಮೂರು ರೀತಿಯಲ್ಲಿ ಹಾನಿಗಳೊದಗುತ್ತವೆ. ಅ) ಸ್ವಾರ್ಥಬುದ್ಧಿಯಿಂದ ಗ್ರಂಥಗಳನ್ನು ಸ್ಥಾನಪಲ್ಲಟ ಮಾಡುವುದು. ಆ) ಗ್ರಂಥಗಳನ್ನು ಹರಿದು ವಿರೂಪಗೊಳಿಸಿ ಹಾಳುಗೆಡಹುವುದು. ಇ) ಗ್ರಂಥಗಳನ್ನು ಕದ್ದೊಯ್ಯುವುದು.

ಅ) ಗ್ರಂಥಗಳ ಸ್ಥಾನಪಲ್ಲಟ: ಗ್ರಂಥಗಳನ್ನು ಸ್ವಾರ್ಥಬುದ್ಧಿಯಿಂದ ತಮ್ಮ ಸ್ವಂತ ಉಪಯೋಗಕ್ಕಾಗಿ ಇಲ್ಲವೆ ಸಹಜವಾದ ಮರವೆಯಿಂದ, ಅಸಡ್ಡೆಯಿಂದ, ಇತರರಿಗೆ ಸಿಗದ ರೀತಿಯಲ್ಲಿ ಗ್ರಂಥಾಲಯದೊಳಗೆ ಬೇರೊಂದು ಸ್ಥಳಕ್ಕೆ ಸ್ಥಳಾಂತರಿಸುವುದು ಕಂಡುಬಂದಿದೆ. ಇದು ಹೆಚ್ಚಾಗಿ ಮುಕ್ತದ್ವಾರ ಪದ್ಧತಿ ಇರುವ ಗ್ರಂಥಾಲಯಗಳಲ್ಲಿರುವ ದುಶ್ಚಟ. ಈ ರೀತಿ ಸ್ಥಳಾಂತರಿಸಿ ಇತರರಿಗೆ ಗ್ರಂಥಗಳು ದೊರಕದಂತೆ ಮಾಡುವುದರಿಂದ, ಇತರ ಓದುಗರ ಮಟ್ಟಿಗೆ ಆ ಪುಸ್ತಕಗಳು ಕಳವಾದ ಗ್ರಂಥಗಳಂತೆಯೇ. ಈ ತರದ ದುಶ್ಚಟಗಳು ಹೆಚ್ಚಾಗಿ ಶಾಲಾ ಕಾಲೇಜುಗಳಲ್ಲಿ ಪರೀಕ್ಷಾ ಸಮಯದಲ್ಲಿ ಕಾಣಿಸಿಕೊಳ್ಳುತ್ತವೆ. ಇದನ್ನು ನಿವಾರಿಸುವ ಇಲ್ಲವೆ ಕಡಿಮೆಗೊಳಿಸುವ ಉಪಾಯವೆಂದರೆ ತುಂಬ ಬೇಡಿಕೆಯಿರುವ ಪುಸ್ತಕಗಳನ್ನು ಪ್ರತ್ಯೇಕವಾಗಿ ಮುಚ್ಚಿದ ಕಪಾಟಿನಲ್ಲಿಟ್ಟು ಓದುಗರಿಗೆ ಕೊಡುವುದು.

ಆ) ಗ್ರಂಥಭಾಗಗಳನ್ನು ಹರಿದೊಯ್ಯುವುದು ಇಲ್ಲವೆ ವಿರೂಪಗೊಳಿಸಿ ಹಾಳುಗೆಡಹುವುದು ಇನ್ನೊಂದು ಬಗೆಯ ಕೆಟ್ಟಚಾಳಿ. ಈ ತೆರನ ನಷ್ಟ ಕೇವಲ ಮುಕ್ತದ್ವಾರ ಪದ್ಧತಿಯಿರುವ ಗ್ರಂಥಾಲಯಕ್ಕೆ ಮಾತ್ರ ಸೀಮಿತವಾಗಿಲ್ಲ. ಗ್ರಂಥಗಳಲ್ಲಿನ ಪುಟಗಳನ್ನು ಹರಿದೊಯ್ಯುವುದು, ಚಿತ್ರಗಳನ್ನು ಕತ್ತರಿಸುವುದು, ಪುಸ್ತಕಗಳಲ್ಲಿ ಟೀಕೆ ಟಿಪ್ಪಣಿ ಅಲ್ಲದೆ ಇನ್ನೂ ಏನೇನೋ ಬರೆದು ವಿರೂಪಗೊಳಿಸುವುದು– ಇಂಥ ಹಲವಾರು ದುಷ್ಕೃತ್ಯಗಳಿಂದ ಪುಸ್ತಕಗಳು ನಷ್ಟಗೊಳ್ಳುವ ಸಂಗತಿ ಎಲ್ಲ ಗ್ರಂಥಪಾಲಕರ ಅನುಭವಕ್ಕೆ ಬಂದ ವಿಷಯವೇ ಆಗಿದೆ. ಇಂಥ ದುಷ್ಕೃತ್ಯಗಳು ವ್ಯಕ್ತಿಗಳ ನಾಗರಿಕ ಪ್ರಜ್ಞೆಯನ್ನು ಅವಲಂಬಿಸಿದೆ. ಗ್ರಂಥಾಲಯ ಒಂದು ಸಾರ್ವಜನಿಕ ಸಂಪತ್ತು, ಅದಕ್ಕೆ ಒದಗುವ ಹಾನಿ, ತನ್ನ ಸ್ವಂತದ ಹಾನಿ ಹಾಗೂ ರಾಷ್ಟ್ರದ ಹಾನಿ ಎಂಬ ಭಾವನೆ ವ್ಯಕ್ತಿಗಳಲ್ಲಿ ಜಾಗೃತವಾಗಬೇಕು. ಗ್ರಂಥಾಲಯದ ನೌಕರರು ಸಾರ್ವಜನಿಕರಿಗೆ ಈ ವಿಷಯವನ್ನು ಆಗಾಗ ಹೇಳಿ ಅವರ ಮನಃಪರಿವರ್ತನೆ ಮಾಡುವುದು ಒಳ್ಳೆಯದು. ಗ್ರಂಥಗಳನ್ನು ಓದುಗರು ತೀರ ಅಲಕ್ಷ್ಯದಿಂದ ಉಪಯೋಗಿಸಿ ಹಾಳುಗೆಡಹುವ ಪ್ರವೃತ್ತಿಯನ್ನೂ ಇದೇ ರೀತಿಯಲ್ಲಿ ಕಡಿಮೆಗೊಳಿಸಬೇಕು. ಈ ರೀತಿ ಉಂಟಾಗುವ

ಗ್ರಂಥಗಳ ನಷ್ಟ ನಿವಾರಣೆ ಹೆಚ್ಚಾಗಿ ನೌಕರವರ್ಗದ ದಕ್ಷತೆ, ನಿಪುಣತೆಗಳನ್ನು ಅವಲಂಬಿಸಿದೆ. ಒಳ್ಳೆಯ ಗ್ರಂಥಾಲಯ ತನ್ನ ಸೇವೆಯೊಂದಿಗೆ ಜನ ಸಾಮಾನ್ಯರ ವ್ಯಕ್ತಿತ್ವವನ್ನು ವಿಕಾಸಗೊಳಿಸಿ ನಾಗರಿಕ ಪ್ರಜ್ಞೆಯನ್ನು ಮೂಡಿಸಿ ಸತ್ಪ್ರಜೆಗಳನ್ನಾಗಿ ಮಾಡುವ ಒಂದು ಮಹತ್ತರ ಜವಾಬ್ದಾರಿಯನ್ನೂ ಹೊರಬೇಕಾಗುತ್ತದೆ.

ಅನವರತ ನೂರಾರು ಓದುಗರ ಉಪಯೋಗದಿಂದಾಗಿ ಗ್ರಂಥಗಳು ಸ್ವಾಭಾವಿಕವಾಗಿ ಹಾನಿಗೊಳಗಾಗುವುದು ಸಹಜ. ಗ್ರಂಥಗಳ ರಕ್ಷಾಪುಟಗಳು ಹರಿದು ಹೋಗುವುದು, ಹಾಳೆಗಳು ಕಿತ್ತು ಬರುವುದು, ಹೊಲಿಗೆಯ ನೂಲು ತುಂಡಾಗಿ ಪುಟಗಳು ಬಿಡಿಬಿಡಿಯಾಗಿ ಎದ್ದು ಬರುವುದು, ಪುಟಗಳ ದಂಡೆಗಳು ಮಡಚಲ್ಪಡುವುದು ಇತ್ಯಾದಿ ಹಾನಿಗಳಿಗೆ ಪುಸ್ತಕಗಳು ಆಗಾಗ ಒಳಗಾಗುತ್ತಿರುತ್ತವೆ. ಪುಸ್ತಕಗಳು ಶಾಶ್ವತ ವಸ್ತುಗಳಲ್ಲ. ಆದರೆ ಅಂಥ ಅವಸ್ಥೆಗಿಳಿದ ಗ್ರಂಥಗಳನ್ನು ಕ್ಲುಪ್ತ ಸಮಯದಲ್ಲಿ ಯೋಗ್ಯ ದುರಸ್ತಿಗೊಳಪಡಿಸುವುದರಿಂದ, ಅವುಗಳ ಉಪಯುಕ್ತತೆಯನ್ನು ಹೆಚ್ಚಿಸಿ, ಅವುಗಳಿಗೆ ಒದಗಬಹುದಾದ ನಷ್ಟಗಳನ್ನು ನೀಗಿಸಬಹುದು. ಸರಿಯಾದ ರೀತಿಯಲ್ಲಿ ಪುನಃ ಹೊಲಿದು ರಕ್ಷಾಪುಟಗಳನ್ನು ಹೊಸದಾಗಿ ಹಾಕುವ ಅಗತ್ಯವಿದ್ದರೆ ತಕ್ಷಣವೇ ಅಂಥ ಗ್ರಂಥಗಳನ್ನು ಬೇರ್ಪಡಿಸಿದರೆ ಅವುಗಳಿಗೆ ಉಂಟಾಗಬಹುದಾದ ಹೆಚ್ಚಿನ ಹಾನಿಯನ್ನು ತಪ್ಪಿಸಬಹುದು. ಈ ರೀತಿ ಪುನಃ ರಟ್ಟು ಕಟ್ಟಿಸುವಾಗಲೂ ಅವುಗಳಿಗೆ ಉಪಯೋಗಿಸುವ ರಟ್ಟು, ಕಾಗದ, ಅಂಟು, ದಾರ, ಹೊದಿಕೆ ಬಟ್ಟೆ, ಚರ್ಮ– ಮುಂತಾದ ಸಾಮಗ್ರಿಗಳು ಉತ್ತಮ ಮಟ್ಟದ್ದಾಗಿದ್ದು, ರಟ್ಟುಕಟ್ಟುವ ಕ್ರಮ, ಹೊಲಿಗೆ, ಪುಸ್ತಕಗಳ ಗಾತ್ರ, ಅವುಗಳ ಹಾಳೆಗಳ ಗುಣಮಟ್ಟ, ಉಪಯುಕ್ತತೆಗಳನ್ನು ಗಮನಿಸಿ ಅನುಭವವುಳ್ಳವರಿಂದ ಆ ಕೆಲಸ ಮಾಡಿಸಬೇಕು, ಇಲ್ಲದಿದ್ದರೆ ಅವು ಬೇಗನೆ ನಷ್ಟಕ್ಕೆ ಒಳಗಾಗುತ್ತವೆ. ತೆಳುರಟ್ಟಿನ ಪುಸ್ತಕಗಳಿಗೆ ಅವು ಹೊಸದಾಗಿ ಗ್ರಂಥಾಲಯಕ್ಕೆ ಬಂದಾಗಲೇ ದಪ್ಪ ರಟ್ಟು ಕಟ್ಟಿ, ಸೆಕ್ಷನ್ ಹೊಲಿಗೆ ಹಾಕಿಸಿಬಿಡುವುದು ಒಳ್ಳೆಯದು.

ಇ) ಪುಸ್ತಕಗಳನ್ನು ಕದ್ದೊಯ್ಯುವುದು: ಗ್ರಂಥಗಳ ಕಳವು ಗ್ರಂಥಾಲಯ ಇತಿಹಾಸ ಆದಿಯಿಂದಲೇ ಅನುಭವಕ್ಕೆ ಬಂದಿರುವ ವಿಷಯ. ಆಧುನಿಕ ಕಾಲದಲ್ಲಂತೂ ಈ ಸಮಸ್ಯೆ ಸರ್ವವ್ಯಾಪಿಯಾಗಿದೆ. ಸಾಮಾನ್ಯವಾಗಿ ಗ್ರಂಥಚೌರ್ಯ ಗ್ರಂಥಾಲಯದ ಅಸಡ್ಡೆ, ಅಜಾಗರೂಕತೆಗಳ ಪರಿಣಾಮವೆಂದೂ ಆದ್ದರಿಂದ ಸಿಬ್ಬಂದಿ ವರ್ಗದವರೇ ಸಂಪೂರ್ಣ ಜವಾಬ್ದಾರರೆಂದೂ ತಿಳಿಯುವುದು ಸರಿಯಲ್ಲ. ಭಾರತದಲ್ಲಿ ಕಳವಿನ ಭೀತಿ ಇರುವುದರಿಂದಲೇ ಮುಕ್ತದ್ವಾರ ಪದ್ಧತಿಯನ್ನು ಹೆಚ್ಚುಹೆಚ್ಚಾಗಿ ಬಳಕೆಗೆ ತರಲು ಸಾಧ್ಯವಾಗುತ್ತಿಲ್ಲ. ಇದೊಂದು ಸಾಮಾಜಿಕ ಸಮಸ್ಯೆ.

ಸುಮಾರು 50 ವರ್ಷಗಳ ಹಿಂದೆಯೇ ಬ್ರಿಟನಿನ ಕ್ರಾಯ್‌ಡನ್ ಸಾರ್ವಜನಿಕ ಗ್ರಂಥಾಲಯದ ಮುಖ್ಯ ಗ್ರಂಥಪಾಲನಾಗಿದ್ದ ಬರ್ವಿಕ್ ಸೇಯರ್ಸ್ ಎರವಲಾಗಿ ಕೊಡುವ ಪ್ರತಿ 1,000 ಪುಸ್ತಕಗಳಲ್ಲಿ ಒಂದು ಪುಸ್ತಕ ಕಳೆದುಹೋಗುವುದು ಬ್ರಿಟನ್ನಿನಲ್ಲಿ ಸ್ವಾಭಾವಿಕವೆಂದು ತಿಳಿಸಿದ್ದಾನೆ. ಅಮೆರಿಕದಲ್ಲಿ ಸಾಧಾರಣವಾಗಿ ಪ್ರತಿ 1,000 ಪುಸ್ತಕಗಳಲ್ಲಿ ಎರಡು ನಷ್ಟವಾಗುವುದು ಸ್ವಾಭಾವಿಕವೆಂದು ತಿಳಿದುಬಂದಿದೆ. ಭಾರತದಲ್ಲಿನ ಪರಿಸ್ಥಿತಿಯನ್ನು ಗಮನಿಸಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಗ್ರಂಥಾಲಯ ಸಮಿತಿ 1965ರಲ್ಲಿ ತಯಾರಿಸಿದ ವರದಿಯಂತೆ ಪ್ರತಿ ಗ್ರಂಥಾಲಯ ಕಳಕೊಂಡ ಪುಸ್ತಕಗಳ ಹೊಣೆಯನ್ನು ಗ್ರಂಥಾಲಯ ಸಿಬ್ಬಂದಿಯ ಮೇಲೆ ಹೊರಿಸದೆ ಆ ನಷ್ಟವನ್ನು ಮನ್ನಿಸಿ ವಜಾಗೊಳಿಸಬೇಕಾಗುತ್ತದೆ. ಎರಡಕ್ಕಿಂತ ಹೆಚ್ಚಿನ ನಷ್ಟವುಂಟಾದರೆ ಸೂಕ್ತ ಕ್ರಮ ಕೈಗೊಂಡು ಉಂಟಾಗಬಹುದಾದ ನಷ್ಟವನ್ನು ಹತೋಟಿಯಲ್ಲಿರಿಸಲು ಪ್ರಯತ್ನಿಸಬೇಕು. ಗ್ರಂಥಚೌರ್ಯಕ್ಕೆ ಸಿಬ್ಬಂದಿವರ್ಗ ಶಾಮೀಲಾಗಿದ್ದರೆ ತನಿಖೆ, ಯುಕ್ತ ಶಿಕ್ಷೆ ಅಗತ್ಯವಾದೀತು. ಅಖಿಲ ಭಾರತ ಗ್ರಂಥಾಲಯ ಸಂಸ್ಥೆ (ಐಎಲ್‌ಎ) ತಿರುಪತಿಯ ಸಮ್ಮೇಳನದಲ್ಲಿ ಪ್ರತಿ 1,000 ಪುಸ್ತಕ ಎರವಲಿಗೆ 3 ಪುಸ್ತಕಗಳ ನಷ್ಟ ಸಹಜ ಎಂದು ನಿರ್ಣಯಿಸಿದೆ.

ಆಧುನಿಕ ಗ್ರಂಥಾಲಯಗಳು ಹಗಲು ರಾತ್ರಿ ತೆರೆದಿದ್ದು ಸದಾ ಕಾಲವೂ ಭಿನ್ನ ರೀತಿಯ ಓದುಗನ ಚಲನವಲನಗಳನ್ನು ವೀಕ್ಷಿಸುವುದು ಗ್ರಂಥಾಲಯದ ಸಿಬ್ಬಂದಿವರ್ಗಕ್ಕೆ ಕಷ್ಟಸಾಧ್ಯ. ಎರಡನೆಯದಾಗಿ ಈಚೆಗೆ ಪುಸ್ತಕಗಳೂ ನಾನಾ ಗಾತ್ರದಲ್ಲಿ ಹೊರಬರುತ್ತಿವೆ. ಅನೇಕ ಪುಸ್ತಕಗಳು ಕಿರಿದಾದ ಕೈಹೊತ್ತಗೆಯಂತಿದ್ದು ಜೇಬಿನಲ್ಲೋ ಬಟ್ಟೆ ಬರೆಗಳೊಳಗೋ ಮುಚ್ಚಿ ಕದ್ದೊಯ್ಯಲು ಅನುಕೂಲವಾಗಿವೆ. ಪ್ರವೇಶದ್ವಾರದಲ್ಲಿ ಕಾವಲಿದ್ದರೂ ಪ್ರತಿಯೊಬ್ಬನನ್ನೂ ಪರೀಕ್ಷಿಸಿ ಹೊರಬಿಡುವ ಮಾತಂತೂ ಅಸಾಧ್ಯ, ಅಸಭ್ಯ. ಓದುಗರು ಮಹಿಳೆಯರಾದರಂತೂ ಈ ಸಮಸ್ಯೆ ಇನ್ನೂ ಕಠಿಣವಾಗುತ್ತದೆ. ಕಳ್ಳತನ ಮಾಡುವ ಉದ್ದೇಶದಿಂದಲೇ ಬರುವವರನ್ನು ಕಾಯುವುದು ತುಂಬ ಕಷ್ಟದ ಕೆಲಸ. ಈ ರೀತಿಯ ನಷ್ಟಗಳು ಗಮನಕ್ಕೆ ಬರುವುದು ವಾರ್ಷಿಕ ಸಂಗ್ರಹದ ತನಿಖೆ ಆದನಂತರ. ಲಕ್ಷಗಟ್ಟಳೆ ಪುಸ್ತಕವಿರುವ ಬೃಹತ್ ಗ್ರಂಥಾಲಯಗಳಲ್ಲಿ ಸಂಗ್ರಹದ ತನಿಖೆ ಬಲು ಕಷ್ಟದ ಕೆಲಸವೆನಿಸುತ್ತದೆ. ಇತ್ತೀಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಈ ಕ್ರಮವನ್ನೇ ಕೈಬಿಡಲಾಗಿದೆ.

ಇಂಥ ನಷ್ಟಗಳು ವಿಶಿಷ್ಟ ಗ್ರಂಥಾಲಯಗಳಿಗಿಂತ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಹೆಚ್ಚು. ಅಂತೆಯೇ ಮನಶಾಸ್ತ್ರಜ್ಞರ ಅಭಿಪ್ರಾಯದಂತೆ ಗ್ರಂಥಚೌರ್ಯದ ದುಶ್ಚಟ 16 ರಿಂದ 25 ವರ್ಷಗಳ ವರೆಗಿನ ಓದುಗರಲ್ಲಿ ಹೆಚ್ಚಾಗಿರುವುದೆಂದು ಭಾವಿಸಲಾಗಿದೆ. ಹೀಗಾಗಿ ಶಾಲಾ ಕಾಲೇಜುಗಳಲ್ಲಿ ಕಳವಾಗುವ ಪುಸ್ತಕಗಳ ಸಂಖ್ಯೆ ಹೆಚ್ಚು. ಕಥೆ, ಕಾದಂಬರಿ, ಪಠ್ಯಪುಸ್ತಕಗಳು, ಕಿರು ಹೊತ್ತಿಗೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಳವಿಗೆ ಒಳಗಾಗುತ್ತವೆ.

ನೇರವಾಗಿ ಕಳವಲ್ಲದಿದ್ದರೂ ಅದೇ ಮಾದರಿಯ ಒಂದು ನಷ್ಟ ಗ್ರಂಥಾಲಯದಲ್ಲಾಗುವುದು ಸಹಜ. ಮುದ್ರಣದಲ್ಲಿಲ್ಲದ, ತೀರ ಹಳೆಯದಾದ, ಅಮೂಲ್ಯವಾದ ಗ್ರಂಥವನ್ನು ಎರವಲು ಪಡೆದೊಯ್ದು ಕೆಲಕಾಲಾನಂತರ ಅದು ಕಳೆದು ಹೋಯಿತೆಂದು ಹೇಳಿ ಅದರ ಹಣ ಕಟ್ಟುವ ವ್ಯಕ್ತಿಗಳಿದ್ದಾರೆ. ಇವರಿಗೆ ಹಣ ಮುಖ್ಯವಲ್ಲ, ಇವರಿಗೆ ಬೇಕಾದುದು ಪುಸ್ತಕ. ಹೀಗಾದಾಗ ಕಳೆದುಹೋದ ಪುಸ್ತಕದ ಹಣ ಗ್ರಂಥಾಲಯಕ್ಕೆ ಬರುತ್ತದಾದರೂ ಅದೇ ಪುಸ್ತಕವನ್ನು ಮತ್ತೆ ಶೇಖರಣೆ ಮಾಡಲಿಕ್ಕೆ ಆಗದೇ ಹೋಗಬಹುದು. ಎರವಲು ಕೊಡುವಾಗ ಇದನ್ನು ಗಮನಿಸುವುದು ಒಳ್ಳೆಯದು. ಅಂಥ ಅಪರೂಪ ಪುಸ್ತಕದ ಪ್ರತಿ ಒಂದೇ ಇದ್ದಾಗಲಂತೂ ಅದನ್ನು ಎರವಲು ಕೊಡದಿರುವುದೇ ಲೇಸು. ಅಂಥ ಅಮೂಲ್ಯ ಪುಸ್ತಕ ಕಳೆದು ಹೋದಾಗ ಅದರ ಫೋಟೊಕಾಪಿಯೊಂದನ್ನು ಒದಗಿಸುವಂತೆ ಒತ್ತಾಯಮಾಡುವುದು ಒಳ್ಳೆಯದು.

ನಿವಾರಣೋಪಾಯ: ಗ್ರಂಥಾಲಯದಲ್ಲಿ ಆಗುವ ಗ್ರಂಥ ನಷ್ಟಗಳ ಪರಿಮಾಣವನ್ನು ಕಡಿಮೆಗೊಳಿಸಲು ಕೆಲವೊಂದು ಮುಂಜಾಗ್ರತಾ ಕ್ರಮವನ್ನು ಅವಶ್ಯವಾಗಿ ಕೈಗೊಳ್ಳಬೇಕು.

1 ಗ್ರಂಥಾಲಯದ ಕಿಟಕಿಗಳಿಗೆ ಕಬ್ಬಿಣದ ಜಾಲರಿಗಳನ್ನು ಹೊದಿಸಬೇಕು.

2 ಗ್ರಂಥಾಲಯಕ್ಕೆ ಒಂದೇ ಪ್ರವೇಶ ದ್ವಾರ ಮತ್ತು ನಿರ್ಗಮದ್ವಾರ ಇರಬೇಕು.

3 ಪ್ರವೇಶ ಮತ್ತು ನಿರ್ಗಮದ್ವಾರದಲ್ಲಿ ಕಟ್ಟುನಿಟ್ಟಿನ ಕಾವಲಿರಬೇಕು.

4 ಓದುಗರ ಚೀಲ, ಫೈಲು, ಸ್ವಂತ ಪುಸ್ತಕಗಳು ಇತ್ಯಾದಿಗಳನ್ನು ಪ್ರವೇಶ ದ್ವಾರದಲ್ಲೇ ತಡೆಹಿಡಿಯುವ ವ್ಯವಸ್ಥೆ ಮಾಡಬೇಕು.

5 ಸಂಶಯ ರೀತಿಯಲ್ಲಿ ವರ್ತಿಸುವ ಓದುಗರ ಮೇಲೆ ವಿಶೇಷ ಗಮನವಿರಿಸಿ ಅವರ ಚಲನವಲನಗಳನ್ನು ಪರೀಕ್ಷಿಸಬೇಕು.

6 ಓದುಗರಲ್ಲಿ ನಾಗರಿಕ ಪ್ರಜ್ಞೆ ಹೆಚ್ಚಿಸುವ ರೀತಿಯಲ್ಲಿ ಯೋಗ್ಯ ಸಾರ್ವಜನಿಕ ಸಂಪರ್ಕ ಕ್ರಮಗಳನ್ನು ಕೈಗೊಳ್ಳಬೇಕು.

7 ಓದುಗರಿಗೆ ಅಗತ್ಯವಾಗಿ ಬೇಕಾದ ಗ್ರಂಥಭಾಗಗಳ ಪ್ರತಿಯನ್ನು ಅಗ್ಗದ ದರದಲ್ಲಿ ಸುಲಭವಾಗಿ ಒದಗಿಸುವ ವ್ಯವಸ್ಥೆ ಮಾಡಬೇಕು.

ಒಟ್ಟಿನಲ್ಲಿ ಇಷ್ಟು ಹೇಳಬಹುದು. ಪುಸ್ತಕಗಳನ್ನು ಕ್ರಿಕೆಟ್, ಫುಟ್‌ಬಾಲ್ ಮೊದಲಾದ ಆಟದ ಸಾಮಾನುಗಳನ್ನು ಬಳಸುವ ರೀತಿಯಲ್ಲಿ ಧಾರಾಳ ಬುದ್ಧಿಯಿಂದ ಉಪಯೋಗಿಸುವುದು ಒಳ್ಳೆಯದು. ಬಹು ಜನಪ್ರಿಯವಾದ ಪುಸ್ತಕಗಳು ಬಹು ಬೇಗ ಹರಿದು ಹಾಳಾಗುತ್ತವೆ. ಇನ್ನು ಕೆಲವು ಹಳೆಯವೆನಿಸಿ ಜನಕ್ಕೆ ಬೇಡವಾಗುತ್ತವೆ. ಇಂಥವನ್ನು ವರ್ಷದ ಕೊನೆಯಲ್ಲಿ ತೆಗೆದುಹಾಕಿ ಮತ್ತೆ ಬೇಕಾದವನ್ನು ಹೊಸದಾಗಿ ತರಿಸಿಕೊಳ್ಳುವುದು ಒಳ್ಳೆಯದು. ಇಂಥ ನಷ್ಟಕ್ಕೆ ಯಾರೂ ಜವಾಬ್ದಾರರಾಗಬೇಕಾಗಿಲ್ಲ. ಗ್ರಂಥಾಲಯ ಇರುವುದೇ ಜನರ ಉಪಯೋಗಕ್ಕೆ. ಉಪಯೋಗದಿಂದ ಹಾಳಾದ ಪುಸ್ತಕಗಳ ಬಗ್ಗೆ ಯೋಚನೆ ಮಾಡಬೇಕಾದುದಿಲ್ಲ.

ಕ್ರಿಮಿಕೀಟಗಳ ಹಾಗೂ ನೈಸರ್ಗಿಕ ಕಾರಣಗಳಿಂದ ಆಗುವ ಹಾನಿಗಳಿಗೆ ಇದೇ ಲೇಖನದ ಭಾಗ III–7ನ್ನು ನೋಡಿ. (ಎ.ಐ.)

**7 ಗ್ರಂಥ ಸಂರಕ್ಷಣೆ:** ನಮ್ಮ ಬದುಕಿನ ಅಮೂಲ್ಯ ಸ್ವತ್ತಾಗಿ ಉಳಿದು ಬಂದಿರುವ, ಬರುತ್ತಿರುವ ಗ್ರಂಥಗಳನ್ನು ಜೋಪಾನಿಸಿಡುವುದು ಬಹು ಅಗತ್ಯದ ಕೆಲಸ. ಬಹು ಹಿಂದಿನಿಂದ ಉಳಿದುಬಂದಿರುವ ಪ್ರಾಚೀನ ಗ್ರಂಥ ಪ್ರತಿಗಳನ್ನೂ ದಿನೇ ದಿನೇ ಅಧಿಕ ಸಂಖ್ಯೆಯಲ್ಲಿ ಪ್ರಕಟವಾಗುತ್ತಿರುವ ಪುಸ್ತಕ ಹಾಗೂ ನಿಯತಕಾಲಿಕೆಗಳನ್ನೂ ರಕ್ಷಿಸಿಡಲು ಅನೇಕ ಪ್ರಯತ್ನಗಳು ನಡೆದಿವೆ.

ಗ್ರಂಥಗಳು ಹಾಳಾಗಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದು ಅವನ್ನು ನಾವು ಉಪಯೋಗಿಸುವ ಕ್ರಮ. ಜಾಗರೂಕತೆಯಿಂದ ಪುಸ್ತಕಗಳನ್ನು ಬಳಸುವುದರಿಂದ ಅವು ಬಹುಕಾಲ ಬಾಳುತ್ತವೆ. ಪುಸ್ತಕವನ್ನು ಕಪಾಟಿನಿಂದ ತೆಗೆಯುವಾಗ ಬೆನ್ನನ್ನು ಹಿಡಿದೆಳೆಯುವುದಾಗಲಿ, ತೆಗೆದ ಪುಸ್ತಕವನ್ನು ಓದುತ್ತ ಹೋದಂತೆ ಅವುಗಳಲ್ಲಿ ಟೀಕೆ ಟಿಪ್ಪಣಿಗಳನ್ನು ಗುರುತಿಸುವುದಾಗಲಿ, ಮಧ್ಯದ ಹಾಳೆಗಳನ್ನು ಮಡಿಸುವುದಾಗಲಿ, ಪುಸ್ತಕವನ್ನು ಬೆನ್ನು ಕಡೆಗೆ ಮುರಿಯುವುದಾಗಲಿ, ಓದಿದ ಪುಸ್ತಕಗಳನ್ನು ಎಲ್ಲೆಂದರಲ್ಲಿ ಬಿಸಾಡುವುದಾಗಲಿ, ಬೇಕಾದ ಭಾಗಗಳನ್ನು ಕತ್ತರಿಸುವುದಾಗಲಿ, ಇಷ್ಟಬಂದ ಪುಸ್ತಕಗಳನ್ನು ಮನೆಗೊಯ್ದು ಮರಳಿ ಕೊಡದಿರುವುದಾಗಲಿ ಗ್ರಂಥದ ನಷ್ಟಕ್ಕೆ ಕಾರಣವಾಗುತ್ತದೆ. ಇವುಗಳೆಲ್ಲದರಲ್ಲಿಯೂ ಎಚ್ಚರ ವಹಿಸುವುದು ಗ್ರಂಥಪಾಲರ ಹಾಗೂ ಓದುಗರ ಕರ್ತವ್ಯ.

ಗ್ರಂಥಗಳ ಬಾಳಿಕೆಗೆ ಅಗತ್ಯವಾದ ಮತ್ತೊಂದು ಅಂಶವೆಂದರೆ ಅವಕ್ಕೆ ಉಪಯೋಗಿಸುವ ಕಾಗದ, ಮಸಿ, ಹೊದಿಕೆ, ಬೇಷು, ದಾರ, ಅಂಟು ಮೊದಲಾದುವು; ಇವು ಉತ್ತಮವಾಗಿರಬೇಕು. ಈ ದಿಸೆಯಲ್ಲಿ ಹಲವಾರು ಪ್ರಯೋಗಗಳು ನಡೆದಿವೆ. ಪ್ರಕಾಶಕರು, ಮುದ್ರಕರು ಗ್ರಂಥಾಲಯ ಪ್ರತಿಗಳನ್ನು ಹೇಗೆ ಯಾವ ಪದಾರ್ಥಗಳನ್ನುಪಯೋಗಿಸಿ ಅಚ್ಚು ಮಾಡಿಸಬೇಕೆಂಬ ವಿಷಯವನ್ನು ಇತ್ಯರ್ಥಮಾಡಲಾಗಿದೆ. ಇದನ್ನು ಪಾಲಿಸಬೇಕಾದುದು ಅವರ ಕರ್ತವ್ಯ.



ಗ್ರಂಥಾಲಯ, ಸಾಲಮಾಂಕ ವಿಶ್ವವಿದ್ಯಾಲಯ, ಸ್ಪೇನ್

ಬೆಳಕು, ಕತ್ತಲೆ ಹಾಗೂ ಗಾಳಿಗಳಿಂದಲೂ ಪುಸ್ತಕಗಳು ನಶಿಸುತ್ತವೆ. ಸೂರ್ಯನ ಕಿರಣಗಳು ನೇರವಾಗಿ ಗ್ರಂಥಗಳ ಮೇಲೆ ಬೀಳದಂತೆ ನೋಡಿಕೊಳ್ಳಬೇಕು. ಸೂರ್ಯನ ಬೆಳಕು ಮತ್ತು ಶಾಖದಿಂದ ಹಲವಾರು ಕ್ರಿಮಿಕೀಟಗಳನ್ನು ದೂರವಿಡಬಹುದಾದರೂ ಶಾಖ ಪ್ರಖರತೆಯಿಂದ ಹಾಳೆಗಳು ಸತ್ವಹೀನವಾಗುತ್ತವೆ. ಹಾಗೆಯೇ ಕತ್ತಲೆಯಲ್ಲಿ ಗ್ರಂಥಗಳನ್ನಿಟ್ಟರೆ ಶೀತಾಂಶ ಹೆಚ್ಚಿ ಬೂಷ್ಟು ಬರಲು ಅವಕಾಶವಾಗುವುದಲ್ಲದೆ, ಕ್ರಿಮಿಕೀಟಗಳು ಹೆಚ್ಚಲು ಸಹಾಯವಾಗುತ್ತದೆ. ಗಾಳಿಯಿಂದಾಗಲಿ ಇಲ್ಲವೆ ಹೆಚ್ಚು ಶೀತದಿಂದಾಗಲಿ ಕೂಡಿದ್ದರೆ ಗ್ರಂಥಗಳಿಗೆ ಅಪಾಯ ತಪ್ಪಿದ್ದಲ್ಲ. ಉಷ್ಣತೆ ಜಾಸ್ತಿಯಾದರೆ ಗ್ರಂಥಗಳ ಕಾಗದ, ಹೊದಿಕೆಯ ಚರ್ಮ ಮೊದಲಾದವು ಒಣಗಿ ಒರಟಾಗಿ ಹರಿಯುವಂತಾಗುತ್ತವೆ. ಶೀತ ಹೆಚ್ಚಿ ಬೂಷ್ಟು ಬಂದರೆ ಗ್ರಂಥಗಳಿಗೆ ಉಪಯೋಗಿಸಿದ ಅಂಟು ಸಡಿಲವಾಗುವುದಲ್ಲದೆ ಕಾಗದ ಮತ್ತು ಚರ್ಮ ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಹಾಗೆಯೇ ಗಾಳಿಯಲ್ಲಿನ ಕೆಲವು ಅನಿಲಗಳು ಕಾಗದದಲ್ಲಿರುವ ಸೆಲ್ಯುಲೋಸ್ ಮತ್ತು ಉಳಿದ ಪದಾರ್ಥಗಳೊಡನೆ ಸೇರಿ ಅವುಗಳ ಕ್ಷೀಣತೆಗೆ ದಾರಿ ಮಾಡುತ್ತವೆ.

ದೂಳಿನಿಂದ ಗ್ರಂಥಗಳಿಗೆ ಆಗುವ ಅನಾಹುತ ಅಲ್ಪವಲ್ಲ. ದೂಳಿನ ಮೂಲಕ ವಾಗಿಯೇ ಕೀಟಗಳ ಅಂಡಾಣುಗಳು ಹೊರಗಿನಿಂದ ಬಂದು ಗ್ರಂಥದಲ್ಲಿ ಸೇರಲು ಸಹಾಯವಾಗುತ್ತದೆ. ಆದ್ದರಿಂದ ಗಾಳಿಯ ಮೂಲಕ ಬರುವ ದೂಳನ್ನು ತಡೆಯುವುದೇ ಅಲ್ಲದೆ, ಬಂದ ದೂಳನ್ನು ಆಗಾಗ್ಗೆ ಹೊರತೆಗೆಯುವುದು ಅವಶ್ಯವಾಗಿ ಆಗಬೇಕಾದ ಕೆಲಸ. ದೂಳನ್ನು ತುಂಬ ಅಚ್ಚುಕಟ್ಟಾಗಿ ಹೊರತೆಗೆಯುವ ಸಾಧನವೆಂದರೆ ನಿರ್ವಾತ ಶುದ್ಧತಾ ಸಾಧನ (ವ್ಯಾಕ್ಯೂಂ ಕ್ಲೀನರ್). ಬಟ್ಟೆಯಿಂದ ಪುಸ್ತಕಗಳ ಎಲ್ಲ ಭಾಗಗಳನ್ನು ಒರೆಸುವುದರಿಂದಲೂ ಮೃದುವಾದ ಪೊರಕೆಯಿಂದ ಜಾಡಿಸುವುದರಿಂದಲೂ ಸಾಕಷ್ಟು ದೂಳನ್ನು ತೆಗೆಯಬಹುದು.

ಹೀಗೆ ಗ್ರಂಥದ ರಕ್ಷಣೆಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬಹುದಾದರೂ ಕೀಟಗಳಿಂದ ಗ್ರಂಥಗಳಿಗೆ ಆಗುವ ನಷ್ಟ ಅಪಾರವಾಗಿದೆ. ಅದರಲ್ಲಿಯೂ ಹಸ್ತಪ್ರತಿ ಮತ್ತು ದಾಖಲೆ ಪತ್ರಗಳಿಗೆ ಅವುಗಳ ಉಪಟಳ ಅತಿ ಹೆಚ್ಚಿನದು.

ಗ್ರಂಥಗಳು ಮತ್ತು ಜನ ದೇಶಕ್ಕೆ ಬರುವುದು ಹೋಗುವುದು ಹೆಚ್ಚಿದಂತೆಲ್ಲ ಗ್ರಂಥಗಳಿಗೆ ಅಪಾಯ ಮತ್ತು ಕೆಡಕು ಹೆಚ್ಚುತ್ತ ಹೋಗುತ್ತದೆ. ಇದರಿಂದ ಒಂದು ದೇಶದ ಕ್ರಿಮಿಕೀಟಗಳು ಮತ್ತೊಂದು ದೇಶಕ್ಕೆ ಬೇಗ ಹರಡಲು ಸಾಧ್ಯವಾಯಿತು. ಈ ಕೀಟಗಳ ಬೆಳವಣಿಗೆಯನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು; ಒಂದು–ಪೂರ್ಣವಾಗಿ ಬೆಳೆಯದ ಪೊರೆ ಹುಳುಗಳು. ಈ ಗುಂಪಿಗೆ ಸೇರುವ ಕೀಟಗಳೆಂದರೆ ಜಿರಲೆ, ಗೆದ್ದಲು, ನುಸಿ (ಬೆಳ್ಳಿಮೀನು) ಮತ್ತು ಪುಸ್ತಕಹೇನು. ಎರಡನೆಯ ಗುಂಪಿಗೆ ಸೇರಿದ ಕೀಟಗಳೆಂದರೆ ತಮ್ಮ ಜೀವಿತ ವೇಳೆಯಲ್ಲಿ ಗಮನಿಸಬಹುದಾದ ರೂಪಾಂತರಗಳನ್ನು ಹೊಂದುವ ಜೀರುಂಡೆ ಮರಿ ಅಥವಾ ರೂಢಿಯ ಹೆಸರಿನ ಪುಸ್ತಕಕ್ರಿಮಿ (ಬುಕ್ ವರ್ಮ್).

ಜಿರಲೆಗಳಲ್ಲಿ 1,200 ಪ್ರಭೇದಗಳಿವೆಯೆಂದು ತಿಳಿದುಬರುತ್ತದೆ. ಇವುಗಳ ನಾಲ್ಕು ಪ್ರಭೇದಗಳು ವಿಶ್ವವ್ಯಾಪಿಯಾಗಿವೆ. ಮೂರು ಜಾತಿಯವು ಸಾಮಾನ್ಯವಾಗಿ ಎಲ್ಲ ಗ್ರಂಥಾಲಯಗಳಲ್ಲಿಯೂ ಕಂಡುಬರುತ್ತವೆ. ಈ ಜಿರಲೆಗಳನ್ನು ಗ್ರಂಥಗಳ ಶತ್ರುಗಳೆಂದು 1602ರಲ್ಲಿಯೇ ಯೂಲಿಸಸ್ ಆಲ್ಡ್ರೊವಾಂಡಸ್ ಎಂಬಾತ ತೀರ್ಮಾನಿಸಿದ್ದಾನೆ. 1837ರಲ್ಲಿ ವೆಸ್ಟ್ ಇಂಡೀಸಿನಲ್ಲಿ ಜಿರಲೆಗಳು ಹೆಚ್ಚು ಸಂಖ್ಯೆಯಲ್ಲಿದ್ದು ಅನೇಕ ಗ್ರಂಥಗಳನ್ನು ನಾಶಮಾಡಿದುವಲ್ಲದೆ ರೋಗಿಗಳನ್ನೂ ಸತ್ತವರನ್ನೂ ಮುತ್ತಿದ್ದುವು ಎಂದು ಹೇಳಲಾಗಿದೆ. ಇವು ಪುಸ್ತಕಗಳಲ್ಲಿನ ಅಂಟು, ಕಾಗದ ಮೊದಲಾದವನ್ನು ತಿಂದು ಹಾಳು ಮಾಡುವುದಲ್ಲದೆ, ತಾವು ಓಡಾಡುವೆಡೆಗಳಲ್ಲೆಲ್ಲ ಕಪ್ಪು ಬಣ್ಣದ ದ್ರವಪದಾರ್ಥವನ್ನು ವಿಸರ್ಜಿಸುತ್ತವೆ. ಇದರಿಂದ ಗ್ರಂಥಗಳು ಕಪ್ಪು ಕಲೆಗಳಿಂದ ಕೂಡಿ ನೋಡಲು ಅಸಹ್ಯವಾಗಿ ಕಾಣುತ್ತವೆ.

ಪುಸ್ತಕಕ್ರಿಮಿ ಪುಸ್ತಕದಲ್ಲಿಯೇ ಹುಟ್ಟಿ ಅಲ್ಲಿಯೇ ಬದುಕುವುದರಿಂದ ಇದಕ್ಕೆ ಆ ಹೆಸರು. ಈ ಹುಳುಗಳು ಕಾಗದದಿಂದ ತಯಾರಾದ ಗ್ರಂಥಗಳಲ್ಲಿ ಅಲ್ಲದೆ ಓಲೆ ಗ್ರಂಥಗಳಲ್ಲಿಯೂ ಕಂಡುಬರುತ್ತವೆ. ಇವು ಪುಟ ಅಥವಾ ಪತ್ರಗಳಲ್ಲಿ ರಂಧ್ರಗಳನ್ನು ಕೊರೆದು ಗ್ರಂಥಗಳನ್ನು ಹಾಳುಮಾಡುತ್ತವೆ. ಅಂತೆಯೇ ಗೆದ್ದಲು, ಫೈರ್ ಬ್ರ್ಯಾಟುಗಳು, ಸೋಸಿಡ್ಡುಗಳು– ಮೊದಲಾದ ಕೀಟಗಳೂ ಗ್ರಂಥಗಳ ಶತ್ರುಗಳಾಗಿವೆ.

ಮಿಲ್‌ಡ್ಯೂ ಬೂಷ್ಟು ಸಸ್ಯವರ್ಗಕ್ಕೆ ಸೇರಿದುದೆಂದೂ ಇದರಲ್ಲಿ ವಿವಿಧ ವರ್ಗಗಳಿವೆಯೆಂದೂ ತಿಳಿದುಬರುತ್ತದೆ. ಹೆಚ್ಚು ಶೀತಾಂಶವಿದ್ದೆಡೆಯಲ್ಲಿ ಅಧಿಕ ಉಷ್ಣಾಂಶ ಸೇರಿದರೆ ಬೆಳೆಯುವ ಒಂದು ವಿಧದ ಬೂಷ್ಟು ಗ್ರಂಥಗಳಿಗೆ ಅಪಾಯಕಾರಿಯಾಗಿದೆ. ಪ್ರಪಂಚದ ಯಾವ ಗ್ರಂಥಾಲಯಗಳೂ ಬೂಷ್ಟಿನಿಂದ ಹೊರತಾಗಿಲ್ಲ. ತೇವಾಂಶ ಜಾಸ್ತಿಯಾದಾಗ ಬೂಷ್ಟಿನ ಬೆಳವಣಿಗೆ ಹೆಚ್ಚುತ್ತದೆ. ಇದು ಒಂದು ಗ್ರಂಥಕ್ಕೆ ಅಂಟಿದರೆ ಉಳಿದವುಗಳಿಗೂ ಹರಡುವುದು ಸಾಮಾನ್ಯ. ಆದ್ದರಿಂದ ಬೂಷ್ಟು ಬರುವುದನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದು ಕಂಡಕೂಡಲೆ ಬೂಷ್ಟು ಹಿಡಿದ ಗ್ರಂಥಗಳನ್ನು ಬೇರ್ಪಡಿಸಿ ಶುದ್ಧಗೊಳಿಸಿ ಅಗತ್ಯ ಉಪಚಾರ ನೀಡಬೇಕಾಗುತ್ತದೆ.

ಗ್ರಂಥ ಸಂರಕ್ಷಣೆಯ ಕೆಲಸ ಬಹಳ ಸೂಕ್ಷ್ಮವಾದುದು. ಗ್ರಂಥಾಲಯದ ಪ್ರತಿ ಗ್ರಂಥವೂ ಪ್ರತ್ಯೇಕವಾದ ಸಂಸ್ಕಾರವನ್ನು ನಿರೀಕ್ಷಿಸುತ್ತದೆ. ಉಷ್ಣಾಂಶ ಶೀತಾಂಶಗಳ ಮತ್ತು ಕ್ರಿಮಿಕೀಟಗಳ ಕಾಟ ಆಯಾ ದೇಶಕ್ಕೆ, ಪ್ರಾಂತ್ಯಕ್ಕೆ ಸಂಬಂಧಿಸಿ ಬದಲಾಗಿರುತ್ತದೆ. ಉಷ್ಣವಲಯ ಮತ್ತು ಅದರ ಪರಿಸರದ ದೇಶಗಳಲ್ಲಿನ ಗ್ರಂಥಾಲಯಗಳು ಕೀಟಗಳ ಹಾವಳಿಗೆ ಹೆಚ್ಚಾಗಿ ತುತ್ತಾಗುತ್ತವೆ.

ಈ ವಿವಿಧ ರೀತಿಯ ಹಾವಳಿಗಳಿಂದ ಗ್ರಂಥಗಳನ್ನು ಸಂರಕ್ಷಿಸುವ ಪ್ರಯತ್ನಗಳು ಪುರಾತನ ಕಾಲದಿಂದಲೂ ನಡೆದಿವೆ ಎಂಬುದಕ್ಕೆ ಹಲವಾರು ಸಾಕ್ಷಿಗಳಿವೆ. ಗ್ರಂಥಗಳಿಗೆ ಕೀಟಗಳಿಂದೊದಗುವ ಅಪಾಯದ ಬಗ್ಗೆ ಬಹು ಹಿಂದೆಯೇ ಮ್ಯಾಸಿಡೋನಿಯದ ಆಂಟಿಫೇನ್ಸ್, ಅಸೋನಿಯಸ್, ಇಂಸಿಡೊರಸ್, ಹಿಸ್ಪಲೆನ್ಸಿಸ್ ಮೊದಲಾದವರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಚೀನದಲ್ಲಿ ಬರೆಯಲು ಉಪಯೋಗಿಸುತ್ತಿದ್ದ ಬೊಂಬುಗಳಿಂದ ಮಾಡಿದ ಹಲಗೆಗಳನ್ನು ಪೆಟ್ಟಿಗೆಗಳಲ್ಲಿಟ್ಟು ರಕ್ಷಿಸುತ್ತಿದ್ದರಲ್ಲದೆ ಬರೆಯುವುದಕ್ಕೆ ಮೊದಲು, ಅವನ್ನು ಬೆಂಕಿಗೆ ಹಿಡಿದು ಅವುಗಳಲ್ಲಿನ ರಸ ಇಂಗಿಹೋಗುವಂತೆ ಮಾಡುತ್ತಿದ್ದರು. ಇದರಿಂದ ರಸದ ಆಶೆಗಾಗಿ ಬರುತ್ತಿದ್ದ ಹುಳುಗಳು ಬಾರದಂತಾಗುತ್ತಿತ್ತು. ಓಲೆಗರಿಗಳನ್ನು ಬೆಂಕಿಯ ಶಾಖದಲ್ಲಿಡುತ್ತಿದ್ದುದೂ ಅಡಿಗೆಯ ಮನೆಯ ಅಟ್ಟಗಳಲ್ಲಿ ಒಟ್ಟುತ್ತಿದ್ದುದೂ ಇದೇ ಉದ್ದೇಶದಿಂದಲೇ. ಅರಿಸ್ಟಾಟಲ್ ತನ್ನ ಹಿಸ್ಟೋರಿಯ ಅನಿಮ್ಯಾಲಿಯಮ್ ಎಂಬ ಗ್ರಂಥದಲ್ಲಿ ತಾನು ಪುಸ್ತಕಗಳಲ್ಲಿ ಬಾಲವಿಲ್ಲದ ಚೇಳು, ಆರ್ಚೆನಿಡ್, ಚೆಲಿಫರ್, ಕಾನ್‌ಕ್ರೊಯ್ಡ್ಸ್ ಮತ್ತಿತರ ಕೀಟಗಳನ್ನು ಕಂಡುದಾಗಿ ಹೇಳಿದ್ದಾನೆ. ದೇವದಾರು ಮರದ ಎಣ್ಣೆಯನ್ನು ಗ್ರಂಥಗಳಿಗೆ ಸವರಿ, ಮೆರುಗುಕೊಟ್ಟ ಸೈಪ್ರಸ್ ಮರದಿಂದ ತಯಾರಾದ ಪೆಟ್ಟಿಗೆಗಳಲ್ಲಿಟ್ಟು ಸಂರಕ್ಷಿಸುವ ವಿಧಾನವನ್ನು ಹೋರೇಸ್

ವಿವರಿಸಿದ್ದಾನೆ. ದೇವದಾರು ಎಣ್ಣೆಯನ್ನು ಉಪಯೋಗಿಸಿದ ಗ್ರಂಥಗಳು ನುಮಪಾಂಪಿಲಿಸ್ ಎಂಬುವನ ಗೋರಿಯಲ್ಲಿ ಐನೂರು ವರ್ಷಗಳಿಂದ ಒಳ್ಳೆಯ ಸ್ಥಿತಿಯಲ್ಲಿದ್ದುದನ್ನು ಹಿರಿಯ ಪ್ಲೀನಿ ಕಂಡಿದ್ದಾನೆ. ಗ್ರಂಥಗಳನ್ನು ಕ್ರಿಮಿಕೀಟಗಳಿಂದ ರಕ್ಷಿಸಬೇಕಾದರೆ ಅವನ್ನು ಪದೇ ಪದೇ ಉಪಯೋಗಿಸುತ್ತಿರಬೇಕು ಎಂದು ಎರಾಸ್‌ಮಸ್ ಹೇಳಿದ್ದಾನೆ. 17ನೆಯ ಶತಮಾನದ ರಾಬರ್ಟ್ ಬ್ರೂಕ್ ಎಂಬ ರಸಾಯನ ಮತ್ತು ಭೌತಶಾಸ್ತ್ರಜ್ಞನುಸಿ ಹುಳುವನ್ನು ಕಾಲಪುರುಷನ ದವಡೆ–ಎಂದು ಕರೆದಿದ್ದಾನೆ. ಇ.ಜಿ.ಪೈನಾಟ್ ಎಂಬ ಫ್ರೆಂಚ್ ಗ್ರಂಥ ಸೂಚೀಕಾರ 1807ರಲ್ಲಿ ಪ್ರಕಟವಾದ ತನ್ನ ಇನ್ಸೆಕ್ಟ್ಸ್ ಕ್ವಿ ರಾನ್‌ಜೆಂಟ್ಲೆಸ್ ಲಿವ್ರಸ್ ಎಂಬ ಗ್ರಂಥದಲ್ಲಿ ಪುಸ್ತಕಕ್ರಿಮಿಯೊಂದು ನೇರ ದಾರಿಯಲ್ಲಿ 27 ಸಂಪುಟಗಳನ್ನು ಹಾದು ಹೋಗಿರುವುದನ್ನು ಕಂಡುದಾಗಿ ತಿಳಿಸಿದ್ದಾನೆ.

ಹದಿನೆಂಟು ಹತ್ತೊಂಬತ್ತನೆಯ ಶತಮಾನದಲ್ಲಿ ಗ್ರಂಥಗಳನ್ನು ರಕ್ಷಿಸುವುದು ಗ್ರಂಥಾಲಯಗಳ ಒಂದು ದೊಡ್ಡ ಜವಾಬ್ದಾರಿಯಾಗಿತ್ತು. ಈ ರಕ್ಷಣೆಯಲ್ಲಿ ಅನುಸರಿಸ ಬೇಕಾದ ಉತ್ತಮ ವಿಧಾನವನ್ನು ಕಂಡುಹಿಡಿಯಲೋಸುಗ ಹಲವಾರು ಸಂಸ್ಥೆಗಳು ಬಹುಮಾನ ನೀಡಲು ಮುಂದೆಬಂದವು. 1774 ರಲ್ಲಿ ರಾಯಲ್ ಸೊಸೈಟಿ ಆಫ್ ಗಾಟಿಂಗೆನ್ ಸಂಸ್ಥೆ ಗ್ರಂಥಗಳಿಗೆ ಕೀಟಗಳ ಹಾವಳಿ ಮತ್ತು ಅದರ ನಿವಾರಣೋಪಾಯಗಳ ಬಗ್ಗೆ ಅಧ್ಯಯನ ನಡೆಸಿ ಯಶಸ್ವಿಯಾದ ಜೊಹಾನ್ ಎಂಬಾತನಿಗೆ 12 ಡಕಟ್ ಹಣವನ್ನು ಬಹುಮಾನವಾಗಿ ನೀಡಿತು. ಈ ದಿಸೆಯಲ್ಲಿ ಅಮೆರಿಕ, ಬ್ರಿಟನ್, ಫ್ರಾನ್ಸ್, ಇಟಲಿ ಮೊದಲಾದ ದೇಶಗಳೇ ಅಲ್ಲದೆ, ಮೆಕ್ಸಿಕೊ, ಸಿರಿಯ, ಭಾರತ ಮೊದಲಾದ ರಾಷ್ಟ್ರಗಳಲ್ಲೂ ಅಧ್ಯಯನ ನಡೆದಿದೆ. ಅಮೆರಿಕದ ಎ.ಇ. ಕಿಂಬರ್ಲಿ ಮತ್ತು ಬಿ. ಡಬ್ಲ್ಯುಸ್ಕಿಬ್ನರ್ ಅವರು ತಯಾರಿಸಿದ (1904) ಸಮ್ಮರಿ ರಿಪೋರ್ಟ್ ಆಫ್ ದಿ ಬ್ಯೂರೋ ಆಫ್ ಸ್ಟ್ಯಾಂಡರ್ಡ್ಸ್ ರಿಸರ್ಚ್ ಆನ್ ಪ್ರಿಸರ್ವೇಷನ್ ಆಫ್ ರೆಕಾರ್ಡ್ಸ್ ಎಂಬ ಹೊತ್ತಗೆ ಗ್ರಂಥ ಸಂರಕ್ಷಣಾಧ್ಯಯನದಲ್ಲಿ ಒಂದು ಮೈಲಿಗಲ್ಲಾಗಿ ಉಳಿದಿದೆ.

ಗೆದ್ದಲು ಬಾರದಂತೆ ಮಾಡಲು ಕಟ್ಟಡಗಳ ತಳಪಾಯದಲ್ಲಿಯೂ ಗೋಡೆಗಳ ಸುತ್ತಲೂ ಕೀಟನಿರೋಧಕ ಬಳಸಲಾಗುತ್ತಿದೆ. ಇದರಲ್ಲಿ ಟ್ರೈಕ್ಲೋರೊಬೆಂಜೀನ್, ಪೆಂಟಕ್ಲೋರೊ ಫೀನಾಲ್, ಸೋಡಿಯಂ ಆರ್ಸಿನೇಟ್ ಮತ್ತು ಮದ ಬರಿಸುವ ಪದಾರ್ಥಗಳಿಂದ ಕೂಡಿದ ಇತರ ದ್ರಾವಣಗಳು ಅತ್ಯಂತ ಪರಿಣಾಮಕಾರಿ ಎಂದು ತಿಳಿದುಬಂದಿದೆ. ಈಚೆಗೆ ಡೈಲ್ಡ್ರಿನ್ ಎಂಬ ವಸ್ತುವನ್ನು ಉಪಯೋಗಿಸುವುದು ರೂಢಿಗೆ ಬಂದಿದೆ. ಈಗಾಗಲೇ ಕಟ್ಟಿದ ಕಟ್ಟಡಗಳಲ್ಲಿ ಬಿರುಕುಗಳಿಗೆ ಮತ್ತು ಬಿಲಗಳಿಗೆ ಗೆದ್ದಲು ನಿರೋಧಕ ವಸ್ತುವಾದ ಸೋಡಿಯಂ ಆರ್ಸಿನೇಟ್ ದ್ರಾವಣವನ್ನು ಹಾಕಿ ಕಾಂಕ್ರೀಟಿನಿಂದ ಮುಚ್ಚುವುದು ಒಳ್ಳೆಯದು. ಇದರಿಂದ ಗೆದ್ದಲನ್ನು ತಡೆಗಟ್ಟಬಹುದು. ಗೆದ್ದಲು ಬರಬಹುದಾದಂಥ ಕಟ್ಟಡಗಳಲ್ಲಿ ಪುಸ್ತಕದ ಕಪಾಟುಗಳನ್ನು ಲೋಹದ ತಗಡುಗಳ ಮೇಲಿಡುವುದು ಮೇಲು. ಇದು ಸಾಧ್ಯವಿಲ್ಲದಾಗ ಕಪಾಟುಗಳ ಕಾಲುಗಳನ್ನು ಕೋಲ್‌ಟಾರ್ ಇಲ್ಲವೆ ವುಡ್‌ಟಾರ್‌ಗಳಿಂದ ಭಟ್ಟಿಯಿಳಿಸಿ ತೆಗೆದ ಕ್ರಿಯೊಸೋಟ್ ಎಣ್ಣೆ ತುಂಬಿದ ಡಬ್ಬಗಳಲ್ಲಿಡಬಹುದು. ಮರಕ್ಕೆ ಬರುವ ಗೆದ್ದಲು ಹುಳುಗಳು ಕಟ್ಟಡದೊಳಗೆ ತೆಗೆದ ಕಿಟಕಿಗಳ ಮೂಲಕ ಬಂದು ಮರಮುಟ್ಟುಗಳ ಮೇಲೂ, ಗ್ರಂಥಗಳಲ್ಲಿಯೂ ಸೇರುತ್ತದೆ. ಇವನ್ನು ತಡೆಗಟ್ಟುವ ಸಾಧನವೆಂದರೆ ಕಿಟಕಿಗಳಿಗೆ ಪರದೆಗಳನ್ನು ಹಾಕುವುದು ಮತ್ತು ಮರಮುಟ್ಟುಗಳಿಗೆ ಟಾರೆಣ್ಣೆ ಬಳಿಯುವುದು. ಟಾರೆಣ್ಣೆಯನ್ನು ಉಪಯೋಗಿಸಲು ಸಾಧ್ಯವಿಲ್ಲದೆಡೆಗಳಲ್ಲಿ ನೀರಿನಲ್ಲಿ ಕರಗುವಂಥ ಫ್ಲೋರ್–ಕ್ರೋಮ್–ಡೈನೈಟ್ರೋ–ಫೀನಾಲ್ ಮಿಶ್ರಣದಿಂದ ಕೂಡಿದ ಉಲ್‌ಮಾನ್‌ಸಾಲ್ಟ್ ಎಂಬ ಲವಣಗಳನ್ನು ಉಪಯೋಗಿಸುವುದು ಉಚಿತ. ಇದರಂತೆಯೇ ನ್ಯಾಫ್ತ ವಸ್ತುವಿನಿಂದ ಕೂಡಿದ ಕೀಟನಾಶಕ ಗುಳಿಗೆಗಳನ್ನು ಉಪಯೋಗಿಸಬಹುದು. ಇವುಗಳಿಗೆ ಬದಲಾಗಿ ಉಪಯೋಗಿಸಬಹುದಾದ ಮತ್ತೊಂದು ವಸ್ತುವೆಂದರೆ ಕ್ಸೈಲಮನ್ ಕ್ರಿಮಿನಾಶಕ. ಇವೆಲ್ಲವೂ ಮರದ ಸಾಮಗ್ರಿಗಳಿಗೆ ಉಪಯೋಗಿಸಬಹುದಾದವೇ ಹೊರತು ಪುಸ್ತಕಗಳಿಗಲ್ಲವೆಂಬುದನ್ನು ನೆನಪಿನಲ್ಲಿಟ್ಟು ಕೊಳ್ಳುವುದು ಅತ್ಯಂತ ಮುಖ್ಯ. ಅಮೆರಿಕದಲ್ಲಿ ಒಣಗಿದ ಮರಗಳಿಗೆ ಬರುವ ಗೆದ್ದಲು ಕಟ್ಟಡದೊಳಗಿದ್ದರೆ ಹೈಡ್ರೋಸಯಾನಿಕ್ ಅನಿಲದ ಧೂಪ ಹಾಕಿ ನಾಶ ಮಾಡುತ್ತಾರೆ. ಇದನ್ನುಪಯೋಗಿಸಿದಾಗ ಗೆದ್ದಲಿರುವ ಪ್ರದೇಶವನ್ನು 48 ಗಂಟೆಗಳು ಮುಚ್ಚಿದ್ದು ಮತ್ತೆ 48 ಗಂಟೆಗಳ ಕಾಲ ಗಾಳಿಗೆ ತೆರೆದಿಡಬೇಕು. ಹೈಡ್ರೋಸಯಾನಿಕ್ ಹಬೆಗೆ ಬದಲಾಗಿ ಮೀಥೈಲ್ ಬ್ರೋಮೈಡನ್ನು ಉಪಯೋಗಿಸಬಹುದು. ಇದನ್ನು ಉಪಯೋಗಿಸಿದಾಗ 48 ಗಂಟೆಗಳ ಬದಲು 12 ಗಂಟೆ ಸಾಕಾಗುತ್ತದೆ. ಈ ಅನಿಲಗಳು ತುಂಬ ಅಪಾಯಕಾರಿಗಳಾದುದರಿಂದ ಈ ಕೆಲಸವನ್ನು ತಜ್ಞರಿಂದ ಮಾತ್ರ ಮಾಡಿಸಬೇಕಲ್ಲದೆ ಆ ಸ್ಥಳದಿಂದ ದೂರ ಇರುವುದು ಒಳ್ಳೆಯದು.

ಬೂಷ್ಟು ಹಿಡಿದಿರುವ ಗ್ರಂಥಗಳನ್ನು ಪ್ರತ್ಯೇಕಿಸಿ ಚೊಕ್ಕಟಗೊಳಿಸಬೇಕು. ಆ ಗ್ರಂಥಗಳಿರುವ ಕಪಾಟುಗಳಿಗೆ ಅರಿಗಿನಿಂದ ತಯಾರಿಸಿದ ಮೆರುಗೆಣ್ಣೆಯನ್ನು ಸಿಂಪಡಿಸಿದಲ್ಲಿ ಬೂಷ್ಟು ನಾಶವಾಗುವುದಲ್ಲದೆ ಅದು ಮತ್ತೆ ಹರಡದಂತಾಗುವುದು. ಪುಸ್ತಕದ ಹೊದಿಕೆಯಲ್ಲಿ ಹಿಟ್ಟಿನ ಗೋಂದು ಬಳಿದಿರುವ ಬಟ್ಟೆಯ ಭಾಗ ಇದೆಯಷ್ಟೆ. ಅದಕ್ಕೂ ಮೆರುಗೆಣ್ಣೆ ಲೇಪಿಸುವುದು ಒಳ್ಳೆಯದು. ಬೂಷ್ಟಿನಿಂದ ಕಾಗದದ ಮೇಲೆ ಆಗಿರುವ ಕಲೆಗಳನ್ನು ಮದ್ಯಸಾರ ಉಪಯೋಗಿಸಿ ಹೋಗಲಾಡಿಸಬಹುದು.

ಇತ್ತೀಚಿನ ಅಧ್ಯಯನದಿಂದ ಬೂಷ್ಟು, ಕ್ರಿಮಿಕೀಟಗಳು ಇವೇ ಮೊದಲಾದವನ್ನು ಕ್ರಿಮಿನಾಶಕ ವಸ್ತುಗಳ ಧೂಪದಿಂದ ನಾಶಪಡಿಸಬಹುದೆಂದು ತಿಳಿದುಬಂದಿದೆ. ಹೊರಗಿನಿಂದ ಬಂದ ಯಾವುದೇ ಗ್ರಂಥವನ್ನು ಗ್ರಂಥಾಲಯಕ್ಕೆ ಸೇರಿಸುವುದಕ್ಕೆ ಮೊದಲು ಒತ್ತಡಕ್ಕೆ ಒಳಪಡಿಸುವುದು ಒಳಿತು. ಇದರಿಂದ ಹೊರಗಿನಿಂದ ಬರಬಹುದಾದ ಯಾವುದೇ ಕ್ರಿಮಿಕೀಟಗಳನ್ನು ತಡೆಗಟ್ಟಿದಂತಾಗುತ್ತದೆ.

ಗ್ರಂಥಾಲಯಗಳಲ್ಲಿ ಕೀಟಗಳ ಬಾಧೆ ಕಂಡುಬಂದಾಗ ಇಡೀ ಗ್ರಂಥಾಲಯವನ್ನೇ ಪ್ರಧೂಮನ ಕ್ರಿಯೆಗೆ ಒಳಪಡಿಸುವುದು ಮೇಲು. ಕೆಲವು ಪುಸ್ತಕಗಳು ಮಾತ್ರ ಕೀಟಗಳಿಗೆ ತುತ್ತಾದಾಗ ಅವನ್ನು ಮಾತ್ರ ಬೇರ್ಪಡಿಸಿ ಈ ಚಿಕಿತ್ಸೆ ಮಾಡಬಹುದು. ನವದೆಹಲಿ ಯಲ್ಲಿರುವ ಭಾರತ ರಾಷ್ಟ್ರೀಯ ಪತ್ರಾಗಾರದಲ್ಲಿರುವಂತೆ ಗಾಳಿ ಹೋಗದ ಕಪಾಟನ್ನು ನಿರ್ಮಿಸಬೇಕು. ಒಳಗಡೆ ಜಾಲರಿಗಳಿರುವ ಹಂತಗಳನ್ನು ರಚಿಸಬೇಕು. ಈ ಹಂತಗಳಲ್ಲಿ ಪುಸ್ತಕಗಳನ್ನು ಬಿಚ್ಚಿ ಬೆನ್ನು ಮೇಲೆ ಬರುವಂತೆ ಜೋಡಿಸಬೇಕು. ಕಪಾಟಿನ ಕೆಳಗಣ ಹಂತದಲ್ಲಿ ಒಂದು ರಂಧ್ರಮಾಡಿ ಅದರಲ್ಲಿ ಶುದ್ಧ ಉಕ್ಕಿನ ತಟ್ಟೆಯನ್ನು ಅಳವಡಿಸಬೇಕು. ಈ ತಟ್ಟೆಯ ಮೇಲ್ಭಾಗದಲ್ಲಿ ಕಪಾಟಿನ ಒಳಗಡೆ ಥೈಮಾಲಿರುವ ಗಾಜಿನ ತಟ್ಟೆಯನ್ನಿಡಬೇಕು. ಗಾಜಿನ ತಳಭಾಗದಿಂದ ಶಾಖ ಬರುವಂತೆ 40–60 ವಾಟ್ ಶಕ್ತಿಯ ಒಂದು ವಿದ್ಯುತ್ ದೀಪವನ್ನು ಅಳವಡಿಸಬೇಕು. ಕಪಾಟಿನ ಬಾಗಿಲನ್ನು ಮುಚ್ಚಿ, ವಿದ್ಯುತ್ ದೀಪ ಹಚ್ಚಿದರೆ ಆ ದೀಪದ ಶಾಖ ಥೈಮಾಲಿರುವ ತಟ್ಟೆಗೆ ತಟ್ಟಿ ಥೈಮಾಲ್ ಅನಿಲ ಉತ್ಪತ್ತಿಯಾಗುತ್ತದೆ. ಹೀಗೆ ಉತ್ಪತ್ತಿಯಾದ ಅನಿಲ ಪುಸ್ತಕಗಳಲ್ಲಿ ಸೇರಿ ಅದರಲ್ಲಿರುವ ಕೀಟಗಳನ್ನು ನಾಶಪಡಿಸುತ್ತದೆ. ಬೂಷ್ಟು ನಾಶಕ್ಕೆ ಇದು ಒಳ್ಳೆಯ ಉಪಾಯ. ಕೀಟಗಳಿಗೆ ಪ್ಯಾರ ಡೈಕ್ಲೋರೊಬೆಂಜೀನ್ ಮತ್ತು ಕಿಲ್ಲೊಟೆರಾಗಳನ್ನೇ ಉಪಯೋಗಿಸಬೇಕಾಗುತ್ತದೆ.

ಕೆಲವು ಗ್ರಂಥಾಲಯಗಳಲ್ಲಿ ಪುಸ್ತಕಗಳ ರಕ್ಷಣೆಗೆ ನ್ಯಾಫ್ತಲಿನ್ ಬಿಲ್ಲೆಗಳನ್ನು ಉಪಯೋಗಿಸುತ್ತಾರೆ. ಇದೂ ಸಾಕಷ್ಟು ಪರಿಣಾಮಕಾರಿ. ಇದಲ್ಲದೆ ಪೈರೆತ್ರಮ್ ಪುಡಿಯನ್ನು ಉಪಯೋಗಿಸಬಹುದು. ಇದು ಮನುಷ್ಯರಿಗೆ ಅಪಾಯಕಾರಿಯಾದುದರಿಂದ ಬಹಳ ಜಾಗರೂಕತೆಯಿಂದಿರಬೇಕಾಗುತ್ತದೆ. ಸೋಡಿಯಂ ಫ್ಲೋರೈಡನ್ನು 12:100ರ ಪ್ರಮಾಣದಲ್ಲಿ ಗೋದಿಯ ಹಿಟ್ಟಿನೊಡನೆ ಬೆರೆಸಿ ಕಪಾಟುಗಳಲ್ಲಿ ಅಥವಾ ಕತ್ತಲ ಮೂಲೆಗಳಲ್ಲಿ ಇಟ್ಟು ಜಿರಲೆಗಳನ್ನು ನಾಶಮಾಡಬಹುದು.

ಈ ದಿಸೆಯಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರಯೋಗಗಳು ನಡೆದುಬಂದಿವೆ ಮತ್ತು ನಡೆಯುತ್ತಿವೆ. ಹಲವು ಕಡೆ ಹಲವು ರೀತಿಯಲ್ಲಿ ರಾಸಾಯನಿಕ ವಸ್ತುಗಳನ್ನು ಬಳಸುತ್ತಿದ್ದಾರೆ. ಘಾನ ವಿಶ್ವವಿದ್ಯಾಲಯ ಗ್ರಂಥಾಲಯದಲ್ಲಿ 1.6 ಔನ್ಸ್ ಮರ್ಕ್ಯೂರಿಕ್ ಕ್ಲೋರೈಡ್ ಮತ್ತು ಶೇ.0.5 ಬೀಚ್ ಮರದ ಕ್ರಿಯೊಸೋಟ್ ಎಣ್ಣೆಯನ್ನು ಒಂದು ಗ್ಯಾಲನ್ ಮೀಥೈಲ್ ಆಲ್ಕೊಹಾಲಿನೊಡನೆ ಮಿಶ್ರಮಾಡಿ ಸಣ್ಣ ಕುಂಚದಿಂದ ಪುಸ್ತಕಗಳ ಎರಡೂ ರಟ್ಟುಗಳ ಒಳಭಾಗಕ್ಕೂ ವಿಭಾಗ ಹೊಲಿಗೆಗಳ ಸಂದುಗಳಿಗೂ ಪುಸ್ತಕದ ಬೆನ್ನು ಭಾಗಕ್ಕೂ ನಡುವೆ ಕಾಣುವ ಭಾಗಕ್ಕೂ ಪುಸ್ತಕಗಳ ಅಂಚುಗಳಿಗೂ ಸವರಿ, ಒಣಗಿದ ಅನಂತರ ಗ್ರಂಥಗಳನ್ನು ಕಪಾಟುಗಳಲ್ಲಿ ಜೋಡಿಸುತ್ತಾರೆ. ಹಾಗೆಯೇ ನೈಜೀರಿಯದ ಇಬದಾನ್, ಸಿಂಗಪುರ, ಮಲಯ– ಮೊದಲಾದೆಡೆಗಳಲ್ಲೆಲ್ಲ ವಿವಿಧ ರೀತಿಯ ದ್ರಾವಣ ಮಿಶ್ರಣಗಳನ್ನು ಬಳಸಿ ಯಶಸ್ವಿಯಾಗಿದ್ದಾರೆ.

ಗ್ರಂಥಗಳ ಚರ್ಮದ ಹೊದಿಕೆಗಳನ್ನು ಕಾಪಾಡಲು ಭಾರತದ ರಾಷ್ಟ್ರೀಯ ಪತ್ರಾಗಾರ ಲ್ಯಾನೋಲಿನ್ ಎಣ್ಣೆಯನ್ನು ಬಳಸುತ್ತಿದೆ. ಇದರಿಂದ ಚರ್ಮದ ಹೊದಿಕೆಗಳನ್ನು ರಕ್ಷಿಸಬಹುದಾಗಿದೆ. ಓಲೆಗರಿಗಳಿಗೆ ಸ್ಥಳೀಯವಾಗಿ ತಯಾರಾಗುವ ಒಂದು ಬಗೆಯ ಎಣ್ಣೆಯನ್ನು ಉಪಯೋಗಿಸುವಲ್ಲಿ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗಳು ಯಶಸ್ವಿಯಾಗಿವೆ.

ಕೀಟಗಳನ್ನು ತಡೆಗಟ್ಟುವಲ್ಲಿ, ಹವೆಯ ವೈಪರೀತ್ಯಗಳಿಂದ ಗ್ರಂಥಗಳನ್ನು ರಕ್ಷಿಸುವಲ್ಲಿ ಮೇಲೆ ಹೇಳಿದ ಎಲ್ಲ ನಿವಾರಣೋಪಾಯಗಳಿಗೂ ಮೇಲಾದ ಹಾಗೂ ಅತ್ಯಂತ ಪರಿಣಾಮಕಾರಿಯಾದ ಕ್ರಮವೆಂದರೆ ಹವಾ ನಿಯಂತ್ರಣ. ಇದೂ ಸಾಧ್ಯವಿಲ್ಲದಾಗ ನೀರನ್ನಾಗಲಿ ಕ್ಯಾಲ್ಸಿಯಂ ಕ್ಲೋರೈಡನ್ನಾಗಲಿ ಋತುಮಾನಕ್ಕೆ ತಕ್ಕಂತೆ ಉಪಯೋಗಿಸಿ ಹವಾನಿಯಂತ್ರಣವನ್ನು ಸ್ವಲ್ಪಮಟ್ಟಿಗೆ ಸಾಧಿಸಬಹುದು. ಆದರೆ ಇದರಿಂದ ಗಾಳಿಯ ಶುದ್ಧತೆಯನ್ನು ಕಾಪಾಡಲು ಸಾಧ್ಯವಾಗುವುದಿಲ್ಲ.

ಈ ಎಲ್ಲ ನಿವಾರಣೋಪಾಯಗಳಲ್ಲದೆ, ಅತ್ಯಂತ ಸುಲಭವಾಗಿ ಗ್ರಂಥ ರಕ್ಷಣೆ ಮಾಡಬಹುದಾದ ವಿಧಾನವೆಂದರೆ, ಗ್ರಂಥಗಳಿಗೆ ದೂಳು ಬಾರದಂತೆ ನೋಡಿಕೊಳ್ಳುವುದು. ದೂಳೇ ಮುಖ್ಯವಾಗಿ ಎಲ್ಲ ಹುಳಹುಪ್ಪಡಿಗಳ ಮಾಧ್ಯಮವಾದ್ದರಿಂದ ಗ್ರಂಥಗಳನ್ನು

ತಿಂಗಳಿಗೊಮ್ಮೆಯಾದರೂ ಹೊರತೆಗೆದು ಅವುಗಳಲ್ಲಿರುವ ದೂಳನ್ನು ಜಾಡಿಸಿ ಒದ್ದೆ ಬಟ್ಟೆಯಿಂದ ಕಪಾಟನ್ನು ಸ್ವಚ್ಛಗೊಳಿಸಿ ಒಣಗಿಸಿ ಆಮೇಲೆ ಪುಸ್ತಕಗಳನ್ನು ಜೋಡಿಸುವುದು ಸೂಕ್ತ. ಅವುಗಳನ್ನಿಟ್ಟಿರುವ ಕೊಠಡಿಯ ನೆಲವನ್ನು ಸಹ ಒದ್ದೆ ಬಟ್ಟೆಯಿಂದ ಬರೆಸಿ ಸ್ವಚ್ಛಗೊಳಿಸಬೇಕು. ಗಾಳಿ ಬೆಳಕು ಚೆನ್ನಾಗಿ ಬರುವಂತೆ ಕಿಟಕಿ ಬಾಗಿಲುಗಳನ್ನು ತೆರೆದಿರಬೇಕು. ಜೊತೆಗೆ ದೂಳನ್ನು ತಡೆಗಟ್ಟುವಂಥ ಏರ್ಪಾಡೂ ಇರಬೇಕು.

ಈ ಎಲ್ಲ ಏರ್ಪಾಡುಗಳ ಜೊತೆ, ಆಗಲೆ ಹುಳುಗಳಿಂದ ಹಾಗೂ ಹವೆಯ ಒತ್ತಡದಿಂದ ಕ್ಷೀಣವಾಗಿರುವ ಗ್ರಂಥಗಳ ದುರಸ್ತಿ ಕಡೆಗೆ ಗಮನ ಕೊಡುವುದು ಒಳ್ಳೆಯದು. ನಶಿಸಿದ ಬಿಡಿ ಹಾಳೆಗಳನ್ನು ಟಿಷ್ಯೂ, ಷಿಫಾನ್ ಮೊದಲಾದವನ್ನು ಉಪಯೋಗಿಸಿ ಲ್ಯಾಮಿನೇಷನ್ ಮಾಡಬಹುದಾಗಿದೆ. ಹೀಗೆ ಮಾಡುವುದಕ್ಕೆ ಮೊದಲು ಕಾಗದದಲ್ಲಿರುವ ಆಮ್ಲತೆಯನ್ನು ಹೋಗಲಾಡಿಸಬೇಕಾಗುತ್ತದೆ. ಈ ಕಾರ್ಯದಲ್ಲಿ ಭಾರತ ರಾಷ್ಟ್ರೀಯ ಪತ್ರಾಗಾರದವರು ನಿರ್ದೇಶಿಸಿರುವ ಕ್ರಮಗಳಲ್ಲಿಯೇ ಆಯಾ ವಸ್ತುಗಳನ್ನೇ ಉಪಯೋಗಿಸುವುದು ಸೂಕ್ತ.

ಗ್ರಂಥ ಜೋಪಾಸನೆ ಅಸಾಧ್ಯ ಎನಿಸಿದಾಗ ಬೇರೆ ಪ್ರತಿಮಾಡಿಸಬೇಕು. ಇಲ್ಲವೇ ಮೈಕ್ರೊಫಿಲ್ಮ್ ಮಾಡಿಸಬೇಕು. ಮೈಕ್ರೊಫಿಲ್ಮ್ ಪ್ರತಿಗೆ ಮೂಲದ ಮೌಲ್ಯ ದೊರೆಯುವುದಲ್ಲದೆ ಬೇಕಷ್ಟು ಪ್ರತಿಗಳನ್ನೂ ಸುಲಭವಾಗಿ ಮಾಡಿಕೊಳ್ಳಬಹುದು ಹಾಗೂ ಅವನ್ನು ಕಾಪಾಡುವುದೂ ಸುಲಭ. (ಎಸ್.ಬಿ.ಎಸ್.)

**8 ಗ್ರಂಥಾಲಯ ಪ್ರಚಾರ:** ಕಾಲವಿಳಂಬ ಮಾಡದೆ ಓದುಗರ ಅಗತ್ಯಗಳನ್ನು ಪೂರೈಸಿದಲ್ಲಿ ಗ್ರಂಥಾಲಯ ತನ್ನ ಬಗ್ಗೆ ಸಾಕಷ್ಟು ಪ್ರಚಾರವನ್ನು ಮಾಡಿದಂತಾಗುತ್ತದೆ. ಯುಕ್ತ ಸೇವೆ ಗ್ರಂಥಾಲಯ ಪ್ರಚಾರದಲ್ಲಿನ ಬಹು ಮುಖ್ಯ ಅಂಶ. ಪುಸ್ತಕಗಳನ್ನು ಎರವಲು ಪಡೆಯಲೋ ವಿಷಯ ಸಂಗ್ರಹಣೆಗೋ ಪ್ರಲೇಖನ ಇಲ್ಲವೆ ಪರಾಮರ್ಶನ ಸೇವೆಯನ್ನು ಬಯಸಿಯೋ ಬರುವ ಓದುಗನಿಗೆ ನಿರಾಯಾಸವಾಗಿ ಅವನವನ ಅಗತ್ಯದ ಪೂರೈಕೆ ಆಗುವಂತೆ ನೋಡಿಕೊಳ್ಳುವುದು ಗ್ರಂಥಾಲಯ ಸಿಬ್ಬಂದಿವರ್ಗದ ಆದ್ಯ ಕರ್ತವ್ಯ. ಇದರ ಜೊತೆಗೆ ಗ್ರಂಥಾಲಯ ಕೈಗೊಳ್ಳಬೇಕಾದ ಪ್ರಚಾರ ಕಾರ್ಯದ ವಿವರಗಳನ್ನು ಇಲ್ಲಿ ಕೊಟ್ಟಿದೆ.

ಗ್ರಂಥಾಲಯದ ಒಟ್ಟು ಆವರಣ ಶುಚಿಯಾಗಿಯೂ ರಮ್ಯವಾಗಿಯೂ ಇರಬೇಕು. ಗಾಳಿ ಬೆಳಕು ಯಥೇಚ್ಛವಾಗಿ ಬರುವ ದೊಡ್ಡ ಕೊಠಡಿಗಳು, ತೆರೆದ ಕಪಾಟುಗಳು, ಪ್ರತಿಕಪಾಟಿಗೂ ಅಲ್ಲಿನ ಪುಸ್ತಕಗಳ ವಿಭಾಗಗಳನ್ನು ಸೂಚಿಸುವ ಶೀರ್ಷಿಕೆಗಳು, ಕುಳಿತು ಓದಲು, ಬರೆಯಲು ಅನುಕೂಲವಾಗಿರುವ ಅಣಿಕಟ್ಟುಗಳು, ಸಮರ್ಪಕವಾದ ಲೇಖಕ ಹಾಗೂ ಗ್ರಂಥಸೂಚಿಗಳು – ಇವೆಲ್ಲ ಇದ್ದಲ್ಲಿ ಓದುಗ ಮತ್ತೆ ಮತ್ತೆ ಅಯಾಚಿತವಾಗಿ ಗ್ರಂಥಾಲಯಕ್ಕೆ ಬರುತ್ತಾನೆ.

ಒಂದು ಗ್ರಂಥ ಇಲ್ಲ ಎಂದು ಹೇಳುವುದಕ್ಕೂ ಇದ್ದರೆ ಅದನ್ನು ತೆಗೆದುಕೊಡುವುದಕ್ಕೂ ಗ್ರಂಥಾಲಯ ಸಿಬ್ಬಂದಿ ಹೆಚ್ಚು ಕಾಲ ತೆಗೆದುಕೊಳ್ಳಬಾರದು. ಮುಖ್ಯ ಗ್ರಂಥವಾಗಿದ್ದು ಅದು ಇಲ್ಲದಲ್ಲಿ ಬೇರೆ ಕಡೆಗಳಿಂದ ಅದನ್ನು ಎರವಲು ತರಿಸಿಕೊಡುವ ಹೊಣೆ ಗ್ರಂಥಾಲಯದ್ದು. ಇಡೀ ವರ್ಷದ ಜನರ ಬೇಡಿಕೆಗಳನ್ನು ಪರಿಶೀಲಿಸಿ ಯಾವ ಯಾವ ಗ್ರಂಥಗಳನ್ನು, ಅವುಗಳ ಎಷ್ಟು ಪ್ರತಿಗಳನ್ನು ತರಿಸಬೇಕೆಂಬುದನ್ನು ನಿರ್ಧರಿಸಬೇಕಾಗುತ್ತದೆ. ಕೇಳಿದ ಪುಸ್ತಕ ಯಾವಾಗಲೂ ಇಲ್ಲವಾದರೆ ಓದುಗ ಗ್ರಂಥಾಲಯದ ಕಡೆ ಮುಖ ಹಾಕುವುದಿಲ್ಲ.

ಆಯಾ ಗ್ರಂಥಾಲಯ ತನ್ನ ಧ್ಯೇಯಧೋರಣೆಗಳಿಗೆ ತಕ್ಕಂತೆ ವರ್ಷದಲ್ಲಿ ಒಮ್ಮೆಯೋ ಎರಡು ಬಾರಿಯೋ ಸಾರ್ವಜನಿಕ ಸಭೆಗಳನ್ನು ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸಿ ಸದಸ್ಯರನ್ನೂ ಇತರರನ್ನೂ ತನ್ನೆಡೆಗೆ ಆಕರ್ಷಿಸಬೇಕು. ಗಾಂಧಿ, ನೆಹರು, ಬಸವೇಶ್ವರ ಮೊದಲಾದ ಪ್ರಭೃತಿಗಳ ಜಯಂತ್ಯುತ್ಸವಗಳಲ್ಲಿ, ಖ್ಯಾತ ವ್ಯಕ್ತಿಯೊಬ್ಬ ಊರಿಗೆ ಆಗಮಿಸಿದಾಗ, ಇಲ್ಲವೆ ವಿಶಿಷ್ಟ ಪ್ರಶಸ್ತಿ ಗಳಿಸಿದಾಗ, ನಿಧನನಾದಾಗ – ಆತನ ಬಗ್ಗೆ ಅವನ ಎಲ್ಲ ಗ್ರಂಥಗಳ, ಅವನ ಬಗ್ಗೆ ಇತರರು ಬರೆದ ಗ್ರಂಥಗಳ ಪ್ರದರ್ಶನ ಏರ್ಪಡಿಸಬಹುದು. ಕಾಲೇಜು ಮಟ್ಟದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ವಾರ್ಷಿಕ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರಬಂಧ ರಚನೆಗೆ ಅನುವಾಗುವ ಸಾಧನ ಸಾಹಿತ್ಯವನ್ನು ಒದಗಿಸಿದಲ್ಲಿ ಗ್ರಂಥಾಲಯಕ್ಕೆ ಒಳ್ಳೆಯ ಪ್ರಚಾರ ಸಿಕ್ಕಂತಾಗುತ್ತದೆ. ಹಿರಿಯ ವ್ಯಕ್ತಿಗಳಿಂದ ಭಾಷಣಗಳನ್ನೇರ್ಪಡಿಸುವುದು, ಗ್ರಂಥಾಲಯ ಆಡಳಿತ ಹಾಗೂ ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದ ಚಲನಚಿತ್ರ ಪ್ರದರ್ಶನ ನಡೆಸುವುದು ಕೆಲವು ಪ್ರಚಾರ ಮಾದರಿಗಳು.

ಗ್ರಂಥಾಲಯದ ಕಾರ್ಯಕಲಾಪಗಳನ್ನು ಮುಖ್ಯವಾಗಿ ಗ್ರಂಥಾಲಯಕ್ಕೆ ಹೊಸದಾಗಿ ಬಂದ ಗ್ರಂಥಗಳ ಒಳಪಟ್ಟಿಯನ್ನು ಆಗಾಗ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕು.

ಪ್ರಚಾರಕಾರ್ಯದಲ್ಲಿ ರಾಷ್ಟ್ರೀಯ, ರಾಜ್ಯ ಮಟ್ಟದ ನಗರ ಮತ್ತು ಸ್ಥಳೀಯ ಗ್ರಂಥಾಲಯ ಸಂಘಗಳ ಸಹಕಾರ, ಸಹಾಯಗಳನ್ನು ಪಡೆದುಕೊಳ್ಳಬಹುದು.

ಈಚೆಗೆ ಆಕಾಶವಾಣಿ, ಟೆಲಿವಿಷನ್‌ಗಳು ಹಾಗೂ ಇಟರ್‌ನೆಟ್ ಸಾಧನಗಳಿಂದ ಗ್ರಂಥಾಲಯ ಪ್ರಚಾರದಲ್ಲಿ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಲಾಗಿದೆ. (ಎನ್.ಡಿ.ಬಿ.)

**9 ಗ್ರಂಥಾಲಯ ಸಿಬ್ಬಂದಿ:** ಗ್ರಂಥಾಲಯ ಸೇವೆಯಲ್ಲಿ ಗ್ರಂಥಾಲಯ ಸಿಬ್ಬಂದಿಯ ಪಾತ್ರ ದೊಡ್ಡದು. ಗ್ರಂಥ, ಓದುಗ ಹಾಗೂ ಸಿಬ್ಬಂದಿ ಈ ಮೂರು ವಿಭಾಗಗಳಲ್ಲಿ ಸಿಬ್ಬಂದಿಗೇ ಮೊದಲ ಸ್ಥಾನ ಸಲ್ಲುತ್ತದೆ. ಗ್ರಂಥಾಲಯ ಸಾಮರ್ಥ್ಯ, ಸಾರ್ಥಕತೆ, ಉಪಯುಕ್ತತೆ ಹಾಗೂ ಜನಪ್ರಿಯತೆಗಳು ಸಿಬ್ಬಂದಿ ಸಲ್ಲಿಸುವ ಸೇವೆಯ ಆಧಾರದ ಮೇಲೆಯೇ ರೂಪುಗೊಳ್ಳುವವು. ಗ್ರಂಥಾಲಯ ಪದ್ಧತಿಯ ನಿಜ ಪರಿಣಾಮವನ್ನು ಅಳೆಯಲು ತೃಪ್ತ ಬಳಕೆದಾರರ ಸಂಖ್ಯೆಯೇ ಮಾಪಕ. ಗ್ರಂಥಾಲಯದ ಸ್ಥಳ, ವೇಳೆ, ಗ್ರಂಥಾಲಯದ ಪೀಠೋಪಕರಣಗಳು ಹಾಗೂ ಗ್ರಂಥಗಳನ್ನು ವ್ಯವಸ್ಥೆಗೊಳಿಸಿದ ರೀತಿ ಎಂತಿದ್ದರೂ ಅಂತಿಮವಾಗಿ ಗ್ರಂಥಾಲಯ ಸಿಬ್ಬಂದಿಯೇ ಗ್ರಂಥಾಲಯದ ಉಳಿವು ಅಳಿವುಗಳಿಗೆ ಕಾರಣ ಎಂದು ಎಸ್. ಆರ್. ರಂಗನಾಥನ್ ತಮ್ಮ ಗ್ರಂಥಾಲಯ ಪಂಚಸೂತ್ರಗಳು ಎಂಬ ಪುಸ್ತಕದಲ್ಲಿ ಹೇಳಿದ್ದಾರೆ.

ಗ್ರಂಥಾಲಯದಲ್ಲಿ ಸೇವೆಗೈಯಲು ಯಾರಾದರೂ ಸಾಕು ಎನ್ನುವ ಕಾಲವೊಂದಿತ್ತು. ಇಂದಿನ ಗ್ರಂಥಪಾಲ ಸಮಾಜದಲ್ಲಿಯ ಅತಿ ಶ್ರೇಷ್ಠ ವ್ಯಕ್ತಿಯಾಗಿರಬೇಕಾಗುತ್ತದೆ. ಬುದ್ಧಿ ಹಾಗೂ ಹೃದಯ ಸಿರಿವಂತಿಕೆಯುಳ್ಳ ವ್ಯಕ್ತಿಗಳು ಗ್ರಂಥಾಲಯದಲ್ಲಿ ಕೆಲಸ ಮಾಡಲು ಅರ್ಹರೆಂದು ಈಗ ಸರ್ವಸಾಮಾನ್ಯವಾಗಿ ಪರಿಗಣಿಸಲ್ಪಟ್ಟಿದೆ. ಗ್ರಂಥಾಲಯ ಸಿಬ್ಬಂದಿ ವರ್ಗದವರು ಓದಿದವರಾಗಿರಬೇಕು. ವಿಶಿಷ್ಟ ತರಬೇತಿ ಪಡೆದವರಾಗಿರಬೇಕು. ಸೇವಾಮನೋಭಾವದವರಾಗಿರಬೇಕು. ಬಹುಜನ ಸಂಪರ್ಕದಲ್ಲಿ ಹೇಗೆ ನಡೆಯಬೇಕು ಎಂಬುದನ್ನು ತಿಳಿದವರಾಗಿರಬೇಕು. ಸಹನಶೀಲರೂ ಶ್ರಮಜೀವಿಗಳೂ ಆಗಿರಬೇಕು.

ಗ್ರಂಥಾಲಯ ಸಿಬ್ಬಂದಿ ವರ್ಗಕ್ಕೆ ಉಚಿತ ಸ್ಥಾನಮಾನಗಳನ್ನು ಒದಗಿಸುವಲ್ಲಿ ಬಹಳ ಪ್ರಯತ್ನಗಳು ನಡೆದಿವೆ.

ವಿವಿಧ ಪ್ರಕಾರದ ಗ್ರಂಥಾಲಯಗಳಲ್ಲಿ ಸಾಮಾನ್ಯವಾಗಿ, ಸಿಬ್ಬಂದಿ ಮಾದರಿ ಈ ಕೆಳಗಿನಂತಿರುವುದು ಅಪೇಕ್ಷಣೀಯ.

ಸಾರ್ವಜನಿಕ ಗ್ರಂಥಾಲಯಗಳು : ಸಾರ್ವಜನಿಕ ಗ್ರಂಥಾಲಯ ಕಾಯಿದೆ ಜಾರಿಯಲ್ಲಿರುವ ರಾಜ್ಯಗಳಲ್ಲಿ ರಾಜ್ಯದ ಮುಖ್ಯ ಗ್ರಂಥಾಲಯಾಧಿಕಾರಿ ಸಾರ್ವಜನಿಕ ಗ್ರಂಥಾಲಯಗಳ ನಿರ್ದೇಶಕನಾಗಿರಬೇಕು. ಅವನ ವೇತನ ಹಾಗೂ ಸ್ಥಾನಮಾನಗಳು ಸರ್ಕಾರದ ಇನ್ನುಳಿದ ಮುಖ್ಯ ಶಾಖೆಗಳ ನಿರ್ದೇಶಕರಿಗೆ ಸರಿಸಮಾನವಿರಬೇಕು. ಅವನು ಉಚ್ಚ ಸ್ನಾತಕ ಪದವಿಯನ್ನು ಪಡೆದಿರಬೇಕಲ್ಲದೆ ಗ್ರಂಥಾಲಯ ವಿಜ್ಞಾನದಲ್ಲಿ ವಿಶ್ವವಿದ್ಯಾಲಯ ಡಿಪ್ಲೊಮ ಇಲ್ಲವೆ ಪದವಿ ಪಡೆದವನಾಗಿದ್ದು ಅವನಿಗೆ ಕನಿಷ್ಠ 15 ವರ್ಷಗಳ ಅನುಭವವೂ ಇರಬೇಕು.

ಸಹನಿರ್ದೇಶಕ ಮೇಲೆ ಹೇಳಿದ ಪದವಿಗಳೊಂದಿಗೆ ಕನಿಷ್ಠ ಹತ್ತು ವರ್ಷಗಳ ಅನುಭವ ಇದ್ದವನಿರಬೇಕು. ಮಿಕ್ಕ ಸಿಬ್ಬಂದಿ ವರ್ಗದವರೂ ಪದವೀಧರರಾಗಿದ್ದು ಯಥೋಚಿತ ಗ್ರಂಥಾಲಯ ತರಬೇತಿ ಪಡೆದವರಾಗಿರಬೇಕು.

**ಶೈಕ್ಷಣಿಕ ಗ್ರಂಥಾಲಯಗಳು :** ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಸಿಬ್ಬಂದಿ ಮಾದರಿ ಕೆಳಗಿನಂತಿರಬೇಕು.

ಒಬ್ಬ ಮುಖ್ಯ ಗ್ರಂಥಪಾಲ, ಇಬ್ಬರು ಸಹ– ಗ್ರಂಥಪಾಲರು (ಒಬ್ಬರು ಸೇವೆಗಾಗಿ ಮತ್ತು ಓದುಗರ ಸೇವೆಗಾಗಿ), ಮೂವರು ಸಹಾಯಕ ಗ್ರಂಥಪಾಲರು ಹಾಗೂ ಇವರಿಗೆ ಸಹಾಯಕರು ಇರಬೇಕು.

ಗ್ರಂಥಗಳನ್ನು ದೊರಕಿಸುವ ವಿಭಾಗದ ಸಿಬ್ಬಂದಿ ಮುಖ್ಯವಾಗಿ ಗ್ರಂಥಗಳು, ನಿಯತಕಾಲಿಕೆಗಳು ಹಾಗೂ ಇನ್ನುಳಿದ ಪಠನಸಾಮಗ್ರಿಯನ್ನು ಗ್ರಂಥಾಲಯಕ್ಕೆ ದೊರಕಿಸುವ ಹೊಣೆ ಹೊತ್ತಿರುವುದರ ಜೊತೆಗೆ ಗ್ರಂಥದಾನಗಳು, ಗ್ರಂಥಗಳ ವಿನಿಮಯ, ಪ್ರಾದೇಶಿಕ ಭಾಷಾ ಪ್ರಕಟಣೆಗಳು ಮುಂತಾದವುಗಳ ಬಗೆಗೂ ಗಮನವೀಯಬೇಕಾಗುವುದು.

ತಾಂತ್ರಿಕ ವಿಭಾಗದಲ್ಲಿ ಸೂಚೀಕರಣಕಾರರು, ವರ್ಗೀಕರಣಕಾರರು, ಸಾರ್ವಜನಿಕ ಸೂಚೀ ಸಹಾಯಕರು ಮುಂತಾದವರು ಕಾರ್ಯ ಮಾಡುವರು. ಇವರು ವಿವಿಧ ವಿಷಯಗಳಲ್ಲಿ ಪರಿಣತರಾಗಿರುವುದು ಅವಶ್ಯವಾಗಿದೆ.

ಓದುಗರ ಸೇವಾ ವಿಭಾಗದಲ್ಲಿ (ಎ) ಚಾರ್ಜಿಂಗ್ ಡೆಸ್ಕ್, (ಬಿ) ಪರಾಮರ್ಶನ ವಿಭಾಗ, (ಸಿ) ಮಾನವಿಕಗಳು, (ಡಿ) ಸಮಾಜ ವಿಜ್ಞಾನಗಳು, (ಇ) ವಿಜ್ಞಾನ ಹಾಗೂ ಕೈಗಾರಿಕ ವಿಜ್ಞಾನ ಎಂಬ ಉಪ–ವಿಭಾಗಗಳಿರುತ್ತವೆ. ಈ ಎಲ್ಲ ವಿಭಾಗಗಳೂ ದಿನದ ಸುಮಾರು 19 ತಾಸುಗಳ ವರೆಗೆ ಕಾರ್ಯವೆಸಗುವುದರಿಂದ ಈ ವಿಭಾಗಗಳಲ್ಲಿ ಪರಿಣಿತಿ ಪಡೆದ ಸಾಕಷ್ಟು ಸಿಬ್ಬಂದಿ ಇರಬೇಕು.

ಪ್ರಲೇಖನ ಸೇವಾ ವಿಭಾಗದಲ್ಲಿ ಗ್ರಂಥಸೂಚಿಸೇವೆ, ಪರಾಮರ್ಶನ ಸೇವೆ ಮುಂತಾದವು ಸಮಾವೇಶವಾಗಿದ್ದು ಈ ವಿಭಾಗದಲ್ಲಿ ಒಬ್ಬ ಮುಖ್ಯ ಪ್ರಲೇಖನ ಅಧಿಕಾರಿ ಇರಬೇಕು. ಅಲ್ಲದೆ ಫೋಟೋ ದ್ವಿಪ್ರತಿ ಸಲಕರಣೆಗಳ ಅನುಭವವಿದ್ದ ಒಬ್ಬ ತಂತ್ರಕುಶಲನೂ ಇರಬೇಕು.

ದೃಕ್ – ಶ್ರವಣ ವಿಭಾಗ, ವಿಸ್ತರಣ ವಿಭಾಗ ಹಾಗೂ ಗ್ರಂಥಪ್ರದರ್ಶನ ವಿಭಾಗಗಳಿಗೆ ಸಂಬಂಧಿಸಿದಂತೆ ಒಬ್ಬ ಪದವೀಧರನಾದ ಕಲಾಕಾರ – ತಾಂತ್ರಿಕನಿರಬೇಕು.

ಗ್ರಂಥ ರಕ್ಷಣಾ ಪ್ರಯೋಗಾಲಯ ವಿಭಾಗದಲ್ಲಿ ರಸಾಯನಶಾಸ್ತ್ರದಲ್ಲಿ ಪದವೀಧರನಾದ ಹಾಗೂ ಗ್ರಂಥಗಳ ರಟ್ಟು ಕಟ್ಟುವಿಕೆ ಮತ್ತು ಗ್ರಂಥರಕ್ಷಣೆಯ ಪದ್ಧತಿಗಳಲ್ಲಿ ನುರಿತ ಮುಖ್ಯಸ್ಥನಿರಬೇಕು.

ಹಿರಿಯ ಮತ್ತು ಕಿರಿಯ ಸಹಾಯಕರು, ಬೆರಳಚ್ಚುಗಾರರು, ಕಾರಕೂನರು, ಗ್ರಂಥ ಸಂಗ್ರಹ ಕೊಠಡಿ ಸಹಾಯಕರು, ರಟ್ಟುಕಟ್ಟುವ ಸಹಾಯಕರು, ಪರಿಚಾರಕರು, ಕಸಗುಡಿಸುವವರು ಮುಂತಾದವರು ಉಳಿದ ಸಹಾಯಕ ಸಿಬ್ಬಂದಿ ವರ್ಗದಲ್ಲಿ ಬರುತ್ತಾರೆ.

ಒಬ್ಬ ಆಡಳಿತಾಧಿಕಾರಿ, ಒಬ್ಬ ಲೆಕ್ಕಿಗ, ಗ್ರಂಥಪಾಲರಿಗೆ ಒಬ್ಬ ಕಾರ್ಯದರ್ಶಿ, ಶೀಘ್ರಲಿಪಿಕಾರ, ಬೆರಳಚ್ಚುಗಾರ ಮತ್ತು ಕಾರಕೂನರು ಗ್ರಂಥಾಲಯ ಕಚೇರಿಯಾಡಳಿತಕ್ಕೆ ಇರಬೇಕಾಗುತ್ತದೆ.

ವಿಶಿಷ್ಟ ಗ್ರಂಥಾಲಯಗಳು: ವಿಶಿಷ್ಟ ಗ್ರಂಥಾಲಯಗಳಲ್ಲಿ ಗ್ರಂಥಾಲಯ ಗಾತ್ರಕ್ಕನುಸರಿಸಿ ಮೇಲೆ ವಿವರಿಸಿದ ಸಿಬ್ಬಂದಿ ಪ್ರಮಾಣ ಇರಬೇಕಲ್ಲದೆ ಮುಖ್ಯ ಗ್ರಂಥಪಾಲ ಅಥವಾ ಸಮಾಚಾರ ಅಧಿಕಾರಿ ಆಯಾ ಸಂಸ್ಥೆಯ ವಿಷಯದಲ್ಲಿ ಪರಿಣತನಿರಬೇಕು. (ಕೆ.ಎಸ್.ಡಿಇ.)

**10 ಕಾರ್ಯ ಮಾಪನಗಳು ಮತ್ತು ಗ್ರಂಥಾಲಯ ಸಿಬ್ಬಂದಿ ಸೂತ್ರ:** ಗ್ರಂಥಾಲಯ ಸಿಬ್ಬಂದಿಯ ಕಾರ್ಯಶಕ್ತಿಯನ್ನು ಅಳೆಯಲು ಕೆಲವು ಪ್ರಯತ್ನಗಳು ನಡೆದಿವೆ. ಸಿಬ್ಬಂದಿಯಿಂದ ಸಾಮಾನ್ಯವಾಗಿ ಎಷ್ಟು ಪರಿಮಾಣದ ಕೆಲಸವನ್ನು ಅಪೇಕ್ಷಿಸಬಹುದೆಂಬುದನ್ನು ಕಾರ್ಯಮಾಪನಗಳು ತಿಳಿಸುತ್ತವೆ. ಕೆಲಸದಲ್ಲಿ ಮಂದಗತಿಯಾದಾಗ, ಕೊರೆಯುಂಟಾದಾಗ ಮಾಪನಪಟವನ್ನು ಪರಿಶೀಲಿಸಿ ಅದರ ಕಾರಣ ಎಲ್ಲಿದೆ ಎಂದು ಕಂಡುಹಿಡಿಯುವುದು ಸುಲಭ.

ಕಾರ್ಯಮಾಪನಗಳನ್ನು ಗ್ರಂಥಾಲಯದ ಸರ್ವಸಾಮಾನ್ಯ ಸಿಬ್ಬಂದಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಆದರೆ ಪ್ರತಿಭಾವಂತ ಹಾಗೂ ದಕ್ಷ ಕೆಲಸಗಾರ ಈ ಮಾಪನಗಳನ್ನು ಮೀರಿ ಕಾರ್ಯವೆಸಗಬಹುದು.

ಗ್ರಂಥಾಲಯದ ವಿವಿಧ ಕಾರ್ಯಗಳನ್ನು ಎರಡು ವಿಧವಾಗಿ – ವೃತ್ತಿ ತರಬೇತಿ ಪಡೆದ ಸಿಬ್ಬಂದಿ ಮಾಡುವ ಕಾರ್ಯ ಹಾಗೂ ವೃತ್ತಿ ತರಬೇತಿ ಪಡೆಯದ ಸಿಬ್ಬಂದಿ ಮಾಡುವ ಕಾರ್ಯ ಎಂದು ವಿಂಗಡಿಸಬಹುದು. ಅಲ್ಲದೆ ಈ ಕಾರ್ಯಗಳಲ್ಲಿ ಕೆಲವನ್ನು ಅಳೆಯಲು ಬರುವುದಿಲ್ಲ. ವರ್ಗೀಕರಣ ಕಾರ್ಯವನ್ನು ಅಳೆಯಬಹುದು. ಪರಾಮರ್ಶನ ಸೇವೆಯನ್ನು ಅಳೆಯಲಾಗದು. ಆದ್ದರಿಂದ ಅಳೆಯಲು ಬರುವಂಥ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಯಮಾಪನಗಳನ್ನು ರೂಪಿಸಲಾಗಿದೆ.

ಈ ದಿಶೆಯಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ 1959ರಲ್ಲಿ ಎಸ್.ಆರ್. ರಂಗನಾಥನ್ ಅವರ ನೇತೃತ್ವದಲ್ಲಿ ಕಾಲೇಜು ಹಾಗೂ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿನ ಕೆಲಸಕಾರ್ಯದ ಬಗ್ಗೆ ಸಮ್ಮೇಳನವನ್ನು ಏರ್ಪಡಿಸಿತ್ತು. ಅಲ್ಲಿ ರಂಗನಾಥನ್ ರೂಪಿಸಿದ ಸಿಬ್ಬಂದಿ ಸೂತ್ರವನ್ನು ಪರಿಶೀಲಿಸಿ ಸೂಕ್ತ ಬದಲಾವಣೆಗಳೊಂದಿಗೆ ಅಂಗೀಕರಿಸಲಾಯಿತು. ಅದರಂತೆ ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನಾ ಮಂಡಳದ (ಸಿಎಸ್ಐಆರ್) ಅಂಗವಾಗಿ ನವೆಂಬರ್ 1966ರಲ್ಲಿ ಇನ್ಸ್‌ಡಾಕ್‌ನಲ್ಲಿ ಇದೇ ವಿಷಯದ ಬಗ್ಗೆ ಒಂದು ಸಮ್ಮೇಳನ ಜರುಗಿತು. ಅದರಲ್ಲಿ ನಿರ್ದಿಷ್ಟ ಕಾರ್ಯಮಾಪನಗಳನ್ನು ರೂಪಿಸಬೇಕೆಂದು ನಿರ್ಧರಿಸಲಾಯಿತು.

ಈ ಕೆಳಗಿನವು ಕೆಲ ತಾತ್ಕಾಲಿಕ ವ್ಯಕ್ತಿಗತ ಕಾರ್ಯಮಾಪನಗಳು.

**1 ಗ್ರಂಥ ಆಯ್ಕೆ ವಿಭಾಗ :** (a) ಪ್ರತಿನಿತ್ಯ ಗ್ರಂಥ ಶಿಫಾರಸು ಪತ್ರಗಳನ್ನು ತಯಾರಿಸುವುದು – 85 – 100. (b) ಇಂಥ ಪತ್ರಕಗಳನ್ನು ಎಲ್ಲ ದಾಖಲೆಗಳೊಂದಿಗೆ ಪರಿಶೀಲಿಸುವುದು – 75. (c) ಪತ್ರಕಗಳನ್ನು ದಫ್ತರಿಸುವುದು–130.

**2 ತಾಂತ್ರಿಕ ವಿಭಾಗ :** (a) ಒಂದು ದಿನಕ್ಕೆ ಗ್ರಂಥಗಳನ್ನು ತಾಳೆ ನೋಡುವುದು (ಕೊಲೇಷನ್) – 80 (b) ಅನುಕ್ರಮಣಿಕಾ ರಿಜಿಸ್ಟರಿನಲ್ಲಿ ನಮೂದಿಸುವುದು–80 (c) ಸಂಪೂರ್ಣ ಸೂಚೀಕರಣ–25. (ಸರಾಸರಿ ಒಂದು ಗ್ರಂಥಕ್ಕೆ 5 ಪತ್ರಕಗಳನ್ನು ಸಿದ್ಧ ಮಾಡಬೇಕಾಗುವುದು. ಒಂದು ಶೀರ್ಷಿಕೆಯನ್ನು ಸೂಚೀಕರಿಸಲು ಸುಮಾರು 16 ಮಿನಿಟುಗಳು ಬೇಕಾಗುತ್ತದೆ). (d) ಒಂದು ದಿನಕ್ಕೆ ಗ್ರಂಥಗಳನ್ನು ವರ್ಗೀಕರಿಸುವುದು –25 (ಒಂದು ಶೀರ್ಷಿಕೆಯನ್ನು ಸೂಚೀಕರಿಸಲು ಸುಮಾರು 16 ಮಿನಿಟುಗಳು ಬೇಕಾಗುತ್ತದೆ). (e) ಸೂಚೀಕರಣ ಪತ್ರಕಗಳನ್ನು ಫೈಲ್ ಮಾಡುವುದು; ಲೇಖಕ ಪತ್ರಕಗಳು–250; ವರ್ಗೀಕೃತ ಪತ್ರಕಗಳು–300. (f) ಒಂದು ಗ್ರಂಥವನ್ನು ಅನುಕ್ರಮಣಿಕಾ ರಿಜಿಸ್ಟರಿನಲ್ಲಿ ನಮೂದಿಸಲು ಸಾಧಾರಣ 5 ಮಿನಿಟುಗಳು ಬೇಕು. (g) 300 ಗ್ರಂಥಗಳ ವರ್ಗೀಕೃತ ಕ್ರಮಾಂಕವನ್ನು ಅವುಗಳ ಬೆನ್ನಿನ ಮೇಲೆ ಬರೆಯಬಹುದು. (h) 250 – 300 ಗ್ರಂಥಗಳಿಗೆ ಗ್ರಂಥ ಪತ್ರಕಗಳನ್ನು (ಬುಕ್ ಕಾರ್ಡ್ಸ್) ತಯಾರಿಸಬಹುದು. (i) 60 ಗ್ರಂಥಗಳಿಗೆ ಗ್ರಂಥಸ್ವಾಮ್ಯ ಲೇಬಲ್ (ಪ್ರಾಪರ್ಟಿ ಲೇಬಲ್), ಗ್ರಂಥ ಪಾಕೀಟುಗಳು, ಗ್ರಂಥ ಮರಳಿ ಕೊಡುವ ದಿನಾಂಕ ತೋರಿಸುವ ಚೀಟಿ, ಟ್ಯಾಗುಗಳು ಮುಂತಾದವನ್ನು ಅಂಟಿಸಿ ಸ್ಟಾಂಪ್ ಮಾಡಬಹುದು.

**3 ನಿಯತಕಾಲಿಕೆ ವಿಭಾಗ :** (a) ಒಂದು ನಿಯತಕಾಲಿಕೆ ಪ್ರತಿಯನ್ನು ಸ್ಟಾಕ್ ತೆಗೆದುಕೊಳ್ಳಲು 6 ಮಿನಿಟುಗಳು ಬೇಕಾಗುವವು. ಈ ಕಾರ್ಯ ಪಾರ್ಸಲ್ ತೆರೆಯುವುದು, ಪರಿಶೀಲಿಸುವುದು, ದಾಖಲು ಮಾಡುವುದು, ಪ್ರದರ್ಶನ ಕಪಾಟುಗಳಲ್ಲಿ ಇಡುವುದು ಮುಂತಾದವುಗಳನ್ನು ಒಳಗೊಂಡಿದೆ. (b) ಒಂದು ದಿನಕ್ಕೆ 25 ನಿಯತಕಾಲಿಕೆಗಳ ಸಂಪುಟಗಳನ್ನು ರಟ್ಟು ಕಟ್ಟಲು ತಯಾರಿಸಬಹುದು.

**4 ನಿರ್ವಹಣ ವಿಭಾಗ :** (a) ಒಬ್ಬ ವ್ಯಕ್ತಿ ಒಂದು ದಿನಕ್ಕೆ 300 ಗ್ರಂಥಗಳನ್ನು ಕಪಾಟುಗಳಲ್ಲಿ ಅವುಗಳ ಸರಿಯಾದ ಸ್ಥಾನದಲ್ಲಿ ಹೊಂದಿಸಬಹುದು. ಇಲ್ಲಿ ವರ್ಗೀಕರಣ ಪದ್ಧತಿ ಹಾಗೂ ಗ್ರಂಥ ಸಂಗ್ರಹದ ಗಾತ್ರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಏಕೆಂದರೆ ಗ್ರಂಥ ಸಂಗ್ರಹದ ಗಾತ್ರ ದೊಡ್ಡದಾಗಿದ್ದಾಗ ಕಪಾಟಿನಿಂದ ಕಪಾಟಿಗೆ ಅಡ್ಡಾಡಲು ಸಾಕಷ್ಟು ವೇಳೆ ಬೇಕಾಗುವುದು. (b) ಕಪಾಟಿನ ಅಳತೆ 3' X 6' X 20' ಇದ್ದು 5 ಭಾಗಗಳಾಗಿರುತ್ತವೆ.

**5 ಪರಿಚಲನ ವಿಭಾಗ :** ಒಬ್ಬ ವ್ಯಕ್ತಿ ಒಂದು ದಿನಕ್ಕೆ 300 ಗ್ರಂಥಗಳನ್ನು ಎರವಲು ಕೊಡಬಹುದು; ಅದರಂತೆ 250 ಗ್ರಂಥಗಳನ್ನು ಮರಳಿ ಪಡೆಯಬಹುದು.

**ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಗ್ರಂಥಾಲಯ ಸಮಿತಿ ಕಾರ್ಯ ಮಾಪನಗಳನ್ನಾಧರಿಸಿ ಸಿದ್ಧಪಡಿಸಿದ ಸೂತ್ರ ಹೀಗಿದೆ :**

(a) ಗ್ರಂಥಾಲಯ ತಾನು ವಾರ್ಷಿಕವಾಗಿ ಪಡೆಯುವ ಪ್ರತಿ 2,000 ಗ್ರಂಥಗಳಿಗೆ ಒಬ್ಬನಂತೆ ಗ್ರಂಥ ವಿಭಾಗದಲ್ಲಿ ಸಿಬ್ಬಂದಿ ಇರಬೇಕು. ಈ ಸಿಬ್ಬಂದಿಯಲ್ಲಿ ಒಬ್ಬ ವೃತ್ತಿ ತರಬೇತಿ ಪಡೆದವನಾಗಿರಬೇಕು.

(b) ಗ್ರಂಥಾಲಯ ತಾನು ವಾರ್ಷಿಕವಾಗಿ ಪಡೆಯುವ ಪ್ರತಿ 5,000 ಗ್ರಂಥಗಳಿಗೆ ನಾಲ್ಕು ಜನರಂತೆ ವರ್ಗೀಕರಣ ಹಾಗೂ ಸೂಚೀಕರಣ ವಿಭಾಗದಲ್ಲಿ ಸಿಬ್ಬಂದಿ ಇರಬೇಕು. ಇವರಲ್ಲಿ ಅರ್ಧದಷ್ಟು ಸಿಬ್ಬಂದಿ ವೃತ್ತಿ ತರಬೇತಿ ಪಡೆದವರೂ ಉಳಿದವರು ಅರೆ ತರಬೇತಿ ಪಡೆದವರೂ ಆಗಿರಬೇಕು.

(c) ನಿಯತಕಾಲಿಕೆ ವಿಭಾಗದಲ್ಲಿ ಪ್ರತಿ 500 ನಿಯತಕಾಲಿಕೆಗಳಿಗೆ ಒಬ್ಬನಂತೆ ಸಿಬ್ಬಂದಿ ಇರಬೇಕು. ಕನಿಷ್ಠ ಪಕ್ಷ ಒಬ್ಬನಾದರೂ ವೃತ್ತಿ ತರಬೇತಿ ಪಡೆದವನಿರಬೇಕು.

(d) ನಿರ್ವಹಣೆ ವಿಭಾಗದಲ್ಲಿ (ಮೇಂಟೆನೆನ್ಸ್ ಸೆಕ್ಷನ್) ಒಂದು ದಿವಸಕ್ಕೆ 500 ಗ್ರಂಥಗಳನ್ನು ಕಪಾಟಿನಲ್ಲಿ ಹೊಂದಿಸಲು ಒಬ್ಬನಂತೆ ಸಿಬ್ಬಂದಿ ಇರಬೇಕು. 1 ಲಕ್ಷ ಗ್ರಂಥಗಳುಳ್ಳ ಕಪಾಟು ವಿಭಾಗದಲ್ಲಿ (ಸ್ಟ್ಯಾಕ್ ರೂಮ್) ವ್ಯವಸ್ಥೆಗಾಗಿ ಒಬ್ಬನಂತೆ ಇರಬೇಕು. ಇವರಲ್ಲಿ ಒಬ್ಬನಾದರೂ ತರಬೇತಿ ಪಡೆದವನಿರಬೇಕು.

(e) ಪರಿಚಲನ ವಿಭಾಗದಲ್ಲಿ ಒಂದು ವರ್ಷದಲ್ಲಿಯ ಪ್ರತಿ 1,500 ಗೇಟ್ ಅವರ್ಸ್‌ಗಳಿಗೆ ಒಬ್ಬನಂತೆ ಸಿಬ್ಬಂದಿ ಇರಬೇಕು; ಇವರಲ್ಲಿ ಒಬ್ಬ ವೃತ್ತಿ ತರಬೇತಿ ಪಡೆದವನಿರಬೇಕು. ಉಳಿದವರು ಅರೆ ತರಬೇತಿ ಪಡೆದವರು ಆಗಿರಬಹುದು.

(f) ಪರಾಮರ್ಶನ ಸೇವಾ ವಿಭಾಗದಲ್ಲಿ ಪ್ರತಿ 50 ಓದುಗರಿಗೆ (ಪಠ್ಯ ಗ್ರಂಥ ಸಂಗ್ರಹ ಉಪಯೋಗಿಸುವವರನ್ನು ಹೊರತುಪಡಿಸಿ) ಒಬ್ಬನಂತೆ ಸಿಬ್ಬಂದಿ ಇರಬೇಕು. ಈ ವಿಭಾಗದಲ್ಲಿ ಎಲ್ಲರೂ ವೃತ್ತಿ ತರಬೇತಿ ಪಡೆದವರಾಗಿರಬೇಕು.

(g) 15,000 ಗ್ರಂಥಗಳನ್ನು ಅನುಕ್ರಮಣಿಕೆ ರಿಜಿಸ್ಟರಿನಲ್ಲಿ ನಮೂದಿಸಲು ಒಬ್ಬನಂತೆ ಸಿಬ್ಬಂದಿ ಇರಬೇಕು. ಇವರಲ್ಲಿ ಒಬ್ಬ ವೃತ್ತಿ ತರಬೇತಿ ಪಡೆದವನಾಗಿರಬೇಕು. ಪ್ರತಿ 15,000 ಗ್ರಂಥಗಳಿಗೆ ಅನುಕ್ರಮ ಸಂಖ್ಯೆ ಕೊಡಲು ಒಬ್ಬನಿರಬೇಕು. ಅವನು ಅರೆ ತರಬೇತಿ ಪಡೆದವನಾದರೂ ಸಾಕು.

(h) ಕಚೇರಿಯ ಕಾರ್ಯಕ್ಕಾಗಿ ಬೇಕಾದ ಅತಿ ಕಡಿಮೆ ಸಿಬ್ಬಂದಿಯೆಂದರೆ – ಒಬ್ಬ ಲೆಕ್ಕಿಗ, ಒಬ್ಬ ಬೆರಳಚ್ಚುಗಾರ, ಒಬ್ಬ ಕಾರಕೂನ. (ಕೆ.ಎಸ್.ಡಿಇ.; ಟಿ.ಎಲ್.ಬಿ.; ಎಚ್.ಸಿ.ಆರ್.)

**11 ಗ್ರಂಥಾಲಯ ನಿಯಮಗಳು :** ಗ್ರಂಥಾಲಯದಲ್ಲಿನ ಎಲ್ಲ ಪ್ರಕಾರದ ಪಠನ ಸಾಮಗ್ರಿಯ ಯೋಗ್ಯ ಹಾಗೂ ಹೆಚ್ಚಿನ ಉಪಯೋಗ ಓದುಗರಿಗೆ ಸಮರ್ಪಕವಾಗಿ ದೊರೆಯುವಂತೆ ಅನುವು ಮಾಡಿಕೊಡಲು ಹಾಕಿಕೊಂಡ ನಿಯಮಗಳಿವು. ಒಂದೊಂದು ಗ್ರಂಥಾಲಯಕ್ಕೂ ಅದರ ವೈಶಿಷ್ಟ್ಯಕ್ಕೆ ತಕ್ಕಂತೆ ಬೇರೆ ಬೇರೆ ನಿಯಮಗಳು ಇರಬಹುದಾದರೂ ಯಾವ ಗ್ರಂಥಾಲಯವೂ ಗ್ರಂಥಾಲಯದ ಪಂಚಸೂತ್ರಗಳನ್ನು ಅಲಕ್ಷಿಸುವಂತಿಲ್ಲ. ಓದುಗ, ಗ್ರಂಥ ಹಾಗೂ ಸಿಬ್ಬಂದಿ– ಇವುಗಳ ನಡುವೆ ಯುಕ್ತ ಹೊಂದಾಣಿಕೆ ಏರ್ಪಡುವಂತೆ ನಿಯಮಗಳನ್ನು ರೂಪುಗೊಳ್ಳಬೇಕು. ಈ ನಿಯಮಗಳನ್ನೊಳಗೊಂಡ ಒಂದು ಚಿಕ್ಕ ಕರಪತ್ರವನ್ನು ಗ್ರಂಥಾಲಯ ಪ್ರತ್ಯೇಕವಾಗಿ ಹೊರಡಿಸಬಹುದು. ಇಲ್ಲವೆ ಗ್ರಂಥಾಲಯ ಕೈಪಿಡಿಯಲ್ಲಿ ಇವನ್ನು ಸಮಾವೇಶಗೊಳಿಸಬಹುದು. ನಿಯಮಗಳ ಒಕ್ಕಣೆ, ಅಸಂದಿಗ್ಧವೂ ಸುಲಭಗ್ರಾಹ್ಯವೂ ಆಗಿರಬೇಕು.

ಯಾವುದೇ ಪ್ರಕಾರದ ಗ್ರಂಥಾಲಯವಿದ್ದರೂ ಅದರ ನಿಯಮಗಳಲ್ಲಿ ಈ ಕೆಳಗಿನ ಮುಖ್ಯ ಅಂಶಗಳು ಅಡಕವಾಗಿರಬೇಕು. 1) ಗ್ರಂಥಾಲಯ ಕೆಲಸಮಾಡುವ ವೇಳೆ, 2) ಸದಸ್ಯತ್ವದ ನಿಯಮಗಳು, 3) ಸದಸ್ಯರ ಹಕ್ಕುಬಾಧ್ಯತೆಗಳು, 4) ಗ್ರಂಥಾಲಯ ನೀಡುವ

ಸೇವೆಯ ವಿವರಗಳು, 5) ಎಷ್ಟು ಗ್ರಂಥಗಳು ಎರವಲು ಸಿಗುತ್ತವೆ, ಅವನ್ನು ಎಷ್ಟು ಕಾಲ ಓದುಗ ಇಟ್ಟುಕೊಳ್ಳಬಹುದು ಎಂಬ ವಿಚಾರ, 6) ಗ್ರಂಥಾಲಯದ ಒಳಗೆ ಓದುಗರು ಗಮನಿಸಬೇಕಾದ ಶಿಷ್ಟಾಚಾರಗಳನ್ನು ತಿಳಿಸಬೇಕು. ಗ್ರಂಥಾಲಯದಲ್ಲಿ ಎಲ್ಲ ಸದಸ್ಯರು ಸಾಮಾನ್ಯವಾಗಿ ಪಾಲಿಸಬೇಕಾದ ಶಿಸ್ತಿನ ನಿಯಮಗಳು ಇಲ್ಲಿ ಬರುತ್ತವೆ. ಇವುಗಳಲ್ಲಿ ಸಾಮಾನ್ಯ ನಿಯಮಗಳಾದ– ಗ್ರಂಥಾಲಯದಲ್ಲಿ ಧೂಮಪಾನ ಮಾಡಬಾರದು, ಮೇಲು ಧ್ವನಿಯಲ್ಲಿ ಮಾತಾಡಬಾರದು, ನಾಯಿ ಹಾಗೂ ಉಳಿದ ಪ್ರಾಣಿಗಳನ್ನು ಒಳಗೆ ತರಬಾರದು, ಗ್ರಂಥಾಲಯದಲ್ಲಿ ನಿದ್ರಿಸಬಾರದು, ಏನನ್ನೂ ತಿನ್ನಬಾರದು ಎಂಬವು ಮುಖ್ಯ. ಸಾಂಕ್ರಾಮಿಕ ರೋಗವಿದ್ದ ವ್ಯಕ್ತಿಗೆ ಪ್ರವೇಶವಿಲ್ಲ ಎಂಬಂಥ ವಿಶೇಷ ಎಚ್ಚರಿಕೆಯ ನಿಯಮಗಳೂ ಇಲ್ಲೇ ಬರುತ್ತವೆ. ಅಲ್ಲದೆ ಗ್ರಂಥಾಲಯ ನಿಯಮಗಳನ್ನು ಪಾಲಿಸುವಲ್ಲಿ ಕರ್ತವ್ಯಚ್ಯುತನಾದ ಸದಸ್ಯನಿಗೆ ಗ್ರಂಥಾಲಯ ವಿಧಿಸುವ ದಂಡದ ವಿಷಯವೂ ಇಲ್ಲಿ ಬರಬೇಕು.

ಈ ನಿಯಮಗಳಿಂದ ಗ್ರಂಥಾಲಯದ ಓದುವ ಸಾಮಗ್ರಿಯ ಯೋಗ್ಯ ಉಪಯೋಗ ಹೇಗೆ ಮಾಡಿಕೊಳ್ಳಬೇಕು ಎಂಬ ವಿಷಯವಾಗಿ ಓದುಗರಿಗೆ ಮನದಟ್ಟಾಗಬೇಕು. ಗ್ರಂಥಾಲಯ ಸ್ವತ್ತಿನ ಸಮರ್ಪಕ ಉಪಯೋಗದಲ್ಲಿ ಓದುಗರು ಪಾಲಿಸಬೇಕಾದ ಅಂಶಗಳನ್ನು ಇವು ತಿಳಿಯ ಹೇಳಬೇಕು. ಗ್ರಂಥಾಲಯ ಸಂಪತ್ತು ಯಾರೊಬ್ಬರ ವೈಯಕ್ತಿಕ ಸ್ವತ್ತಾಗಿರದೆ ಎಲ್ಲ ಓದುಗರ, ಆಯಾ ಸಂಸ್ಥೆಯ, ಸಾರ್ವಜನಿಕರ ಸ್ವತ್ತಾಗಿದ್ದು ಅದರ ಉಪಯೋಗ ಎಲ್ಲರಿಗೂ ಸಮವಾಗಿ ಸದಾಕಾಲವೂ ದೊರೆಯಬೇಕು. ಗ್ರಂಥ ಸಾಮಗ್ರಿ ತಲತಲಾಂತರವಾಗಿ ಯೋಗ್ಯ ರೀತಿಯಲ್ಲಿ ಲಭ್ಯವಾಗುವಂತೆ ಕಾಯ್ದುಕೊಂಡು ಹೋಗುವುದೇ ಗ್ರಂಥಾಲಯ ಸಿಬ್ಬಂದಿಯ ಹಾಗೂ ಓದುಗರ ಕರ್ತವ್ಯ. ಅದರ ಸಲುವಾಗಿಯೇ ಈ ನಿಯಮಗಳು.

**12 ಗ್ರಂಥಾಲಯ ಕೈಪಿಡಿ :** ಯಾವುದೇ ವಿಷಯದ ಬಗ್ಗೆ ಮಾಹಿತಿ ಪಡೆಯಲು, ತಮಗೆ ಅಗತ್ಯವೆನಿಸುವ ಪುಸ್ತಕಗಳನ್ನು ಎರವಲು ಪಡೆಯಲು ಗ್ರಂಥಾಲಯಕ್ಕೆ ಬರುವ ಓದುಗರಿಗೆ ಆ ಗ್ರಂಥಾಲಯದ ವಿವರಗಳನ್ನೆಲ್ಲ ಸುಲಭವಾಗಿ ಸುಂದರವಾಗಿ ಸಂಗ್ರಹವಾಗಿ ಒದಗಿಸುವ ಪುಸ್ತಿಕೆ (ಲೈಬ್ರರಿ ಗೈಡ್). ಈಚೆಗೆ ಗ್ರಂಥಾಲಯ ಬೆಳವಣಿಗೆ ತ್ವರಿತವಾಗಿ ಸಾಗಿರುವುದರಿಂದ ಅವುಗಳ ಆಡಳಿತ ಮತ್ತು ವ್ಯವಸ್ಥೆಯ ಸಮಸ್ಯೆ ದಿನೇ ದಿನೇ ಜಟಿಲವಾಗುತ್ತಲಿದೆ. ಇದರಿಂದ ಹೊಸ ಓದುಗರು ಗ್ರಂಥಗಳ ಅಪಾರ ಸಮುದಾಯವನ್ನು ನೋಡಿ ಆಶ್ಚರ್ಯಚಕಿತರಾಗಿ ಅವುಗಳ ವಿಪುಲ ಉಪಯುಕ್ತತೆಯ ಸಾಧನೆಗಳನ್ನರಿಯದೇ ಹೋಗಬಹುದು. ಸಾರ್ವಜನಿಕ ಗ್ರಂಥಾಲಯಗಳಲ್ಲಿ, ವಿಶೇಷವಾಗಿ ವಿಶ್ವವಿದ್ಯಾಲಯ ಮತ್ತು ಕಾಲೇಜು ಗ್ರಂಥಾಲಯಗಳಲ್ಲಿ ಓದುಗರ ಅಭಿರುಚಿ ಭಿನ್ನ ಭಿನ್ನವಾಗಿರುವುದರಿಂದ ಅವರ ಅಭಿರುಚಿ, ಒಲವು ಬೇಡಿಕೆಗಳಿಗನುಗುಣವಾಗಿ ಸರ್ವ ವಿಧದ ಗ್ರಂಥಗಳನ್ನೂ ಖರೀದಿಸಿ ಸಜ್ಜುಗೊಳಿಸಬೇಕಾಗುವುದು ಅನಿವಾರ್ಯವಾಗುತ್ತದೆ. ಹೀಗಾಗಿ ಗ್ರಂಥಸಂಗ್ರಹ ಒಂದೇ ಸಮನೆ ವೃದ್ಧಿ ಹೊಂದುತ್ತ ಹೋಗುತ್ತದೆ. ಅಮೆರಿಕದಲ್ಲಿ ಗ್ರಂಥಾಲಯಗಳು ಸಾಧಾರಣವಾಗಿ ಈ 20 ವರ್ಷಗಳಲ್ಲಿ ತಮ್ಮ ಆಕಾರದಲ್ಲಿ ದ್ವಿಗುಣಿತಗೊಂಡಿವೆ. ಈ ಗ್ರಂಥಾಲಯಗಳ ವ್ಯವಸ್ಥೆ ಮತ್ತು ಆಡಳಿತ ವೈಚಾರಿಕವಾಗಿ ಒಂದೇ ಆಗಿದ್ದರೂ ಅವುಗಳ ರೂಪವಿನ್ಯಾಸ ಬೇರೆಬೇರೆ ಆಗಿರುವುದು ಅನಿವಾರ್ಯ.

ಆದ್ದರಿಂದ ಆಧುನಿಕ ಗ್ರಂಥಾಲಯಗಳು ಹೊಸ ಓದುಗರಿಗಾಗಿ ಅನುಕೂಲವಾಗಲೆಂದು ಗ್ರಂಥಾಲಯ ನಿರ್ದೇಶಕ ಪಾಠಕ್ರಮ (ಓರಿಯೆಂಟೇಷನ್ ಕೋರ್ಸ್), ಮುಕ್ತದ್ವಾರ ಪದ್ಧತಿ (ಓಪನ್ ಆಕ್ಸೆಸ್ ಸಿಸ್ಟಮ್), ಲಘುವಾಚನ ಕೊಠಡಿಗಳು (ಬ್ರೌಸಿಂಗ್ ರೂಮ್ಸ್), ಹೊಸ ಗ್ರಂಥಗಳ ಸೂಚಿ ಮೊದಲಾದ ಕಾರ್ಯಕ್ರಮಗಳ ಜೊತೆಗೆ ಕೈಪಿಡಿಯನ್ನು ಪ್ರಕಟಿಸಿ ಹಂಚುವ ಕೆಲಸವನ್ನೂ ಮಾಡುತ್ತದೆ.

ಗ್ರಂಥಾಲಯ ಕೈಪಿಡಿ ಒಳ್ಳೆಯ ಪ್ರಚಾರಸಾಧನವಾಗಿರುವುದಲ್ಲದೆ ಆಯಾ ಗ್ರಂಥಾಲಯದ ಅಂತರಂಗವನ್ನು ಓದುಗನಿಗೆ ಪರಿಣಾಮಕಾರಿಯಾಗಿ ತಿಳಿಯಪಡಿಸುವುದರ ಜೊತೆಗೆ ಆಡಳಿತವರ್ಗ ಮತ್ತು ಓದುಗರ ನಡುವೆ ನಿಕಟ ಸಂಬಂಧಗಳನ್ನು ಏರ್ಪಡಿಸಲು ಸಹಕಾರಿಯಾಗುತ್ತದೆ. ಓದುಗರ ಬಹುಪಾಲು ಸಮಸ್ಯೆಗಳಿಗೆಲ್ಲ ಅದರಲ್ಲಿ ಯುಕ್ತ ಉತ್ತರ ಸಿಕ್ಕುತ್ತದಾಗಿ ಆತ ಹೆಚ್ಚು ಕಾಲಹರಣಮಾಡದೆ, ಸಿಬ್ಬಂದಿ ವರ್ಗದವರನ್ನು ಪೀಡಿಸದೆ, ತನಗೆ ಬೇಕಾದುದನ್ನು ಸುಲಭವಾಗಿ ಪಡೆದುಕೊಳ್ಳುತ್ತಾನೆ.

ಒಳ್ಳೆಯ ಕೈಪಿಡಿ ಅಲ್ಲಲ್ಲಿಯ ಭಾಷೆಗಳಲ್ಲಿರಬೇಕಲ್ಲದೆ ಈ ಕೆಲವು ವಿಷಯಗಳನ್ನೂ ಒಳಗೊಂಡಿರಬೇಕು.

1) ಗ್ರಂಥಾಲಯದ ಸಂಕ್ಷಿಪ್ತ ಇತಿಹಾಸ, ಅದು ಬೆಳೆದು ಬಂದ ರೀತಿ, ಮಹತ್ತ್ವದ ಸಂಗ್ರಹಗಳು, ಗ್ರಂಥದಾನ ಮಾಡಿದ ಉದಾರಿಗಳ ಹೆಸರು, ಗ್ರಂಥ ಸಂಗ್ರಹದ ವಿವರ ಇತ್ಯಾದಿ. 2) ಗ್ರಂಥಾಲಯ ಕಟ್ಟಡ ರಚನೆಯ ವಿವರಗಳು. 3) ಗ್ರಂಥಾಲಯದ ತೆರೆದಿರುವ ವೇಳೆ. 4) ಗ್ರಂಥಾಲಯದ ಸದಸ್ಯರಾಗುವ ಬಗೆ. 5) ಗ್ರಂಥಾಲಯದ ಅಂತರಂಗದ ವಿವರಣೆ. ಇದು ಪ್ರತಿಯೊಂದು ವಿಭಾಗದ ಬೇರೆ ಬೇರೆ ಕೊಠಡಿಗಳ ವಿವರಣೆಗಳನ್ನೊಳಗೊಂಡಿರಬೇಕು. 6) ಗ್ರಂಥಗಳ ವಿಂಗಡಣೆಯ ವ್ಯವಸ್ಥೆ. 7) ವರ್ಗೀಕರಣ ಪದ್ಧತಿ, ಗ್ರಂಥಸೂಚಿ, ಗ್ರಂಥದ ಬಾಹ್ಯರಚನೆಯ ಬಗ್ಗೆ ಸಂಕ್ಷಿಪ್ತ ವಿವರ. 8) ನಿಯತಕಾಲಿಕೆಗಳ ವಿಭಾಗ, ಪರಾಮರ್ಶನ ಗ್ರಂಥಗಳ ವಿಭಾಗ ಮತ್ತು ಮಹತ್ತ್ವದ ಕೆಲವು ಸಂದರ್ಭ ಗ್ರಂಥಗಳ ವಿವರ ಮತ್ತು ವಿದ್ಯುನ್ಮಾನ ಮಾಹಿತಿ ಆಕರಗಳ ವಿವರ. 9) ದಿನನಿತ್ಯ ಕಾರ್ಯದ ಒಂದಿಷ್ಟು ಮಾಹಿತಿ. 10) ಓದುಗರಿಗಿರುವ ಹೆಚ್ಚಿನ ಸೌಕರ್ಯ. ಇದರಲ್ಲಿ ಅಂತರ ಗ್ರಂಥಾಲಯ ಎರವಲು, ಗ್ರಂಥ ಪ್ರದರ್ಶನಗಳು, ಗ್ರಂಥಸೂಚಿಗಳು, ಸಂಕ್ಷಿಪ್ತಸಾರಸೇವೆ (ಅಬ್ಸ್ಟ್ರ್ಯಾಕ್ಟಿಂಗ್ ಸರ್ವಿಸ್), ಭಾಷಾಂತರ ಮೊದಲಾದ ಹೆಚ್ಚಿನ ಸೇವೆಗಳ ವಿವರಗಳು. 11) ಗ್ರಂಥಗಳನ್ನು ಉಪಯೋಗಿಸುವ ಬಗ್ಗೆ ಸೂಚನೆಗಳು. 12) ಕೆಲವು ಮಹತ್ತ್ವದ ವಿಷಯಗಳು ಮತ್ತು ಅವುಗಳ ವರ್ಗೀಕರಣ ಸಂಜ್ಞೆಗಳು. 13) ಗ್ರಂಥಾಲಯದ ಎಲ್ಲ ವಿಭಾಗಗಳ ನಕಾಶೆ. 14) ಗ್ರಂಥಾಲಯದ ಎಲ್ಲ ಚಟುವಟಿಕೆಗಳನ್ನೂ ಪ್ರತಿಬಿಂಬಿಸುವ ಚಿತ್ರಗಳು ಇದ್ದರೆ ಉತ್ತಮ. 15) ಲಿಪ್ಯಂತರಕ್ಕೆ ಉಪಯೋಗಿಸುವ ಸಂಜ್ಞೆಗಳು. 16) ದೂರವಾಣಿ ನಂಬರ್ ಮತ್ತು ವಿಳಾಸ. 17) ಗ್ರಂಥಾಲಯ ನಿಯಮಗಳ ಸಂಕ್ಷಿಪ್ತ ವಿವರ. **(ಕೆ.ಎಸ್.ಡಿಇ.;ಟಿ.ಎಲ್.ಬಿ.)**

**13 ಗ್ರಂಥಾಲಯ ಸಮಿತಿ :** ಗ್ರಂಥಾಲಯ ಸುವ್ಯವಸ್ಥಿತ ಆಡಳಿತಕ್ಕೆ ಅಗತ್ಯವೆನಿಸಿರುವ ಗ್ರಂಥಾಲಯ ಸಮಿತಿಯ ಮುಖ್ಯ ಉದ್ದೇಶ ಹಾಗೂ ಪ್ರಯೋಜನವೆಂದರೆ (1) ಗ್ರಂಥಾಲಯದ ಹಣಕಾಸಿನ ವ್ಯವಹಾರದ ಉಸ್ತುವಾರಿ ಮಾಡುವುದು, (2) ಗ್ರಂಥಾಲಯದ ಸಿಬ್ಬಂದಿ ಹಾಗೂ ಓದುಗರಲ್ಲಿ ಮಧುರ ಸಂಬಂಧವೇರ್ಪಡುವಂತೆ ನೋಡಿಕೊಳ್ಳುವುದು.

ಗ್ರಂಥಾಲಯ ಸಮಿತಿ ಸಲಹಾ ಸಮಿತಿಯಾಗಿರಬಹುದು ಇಲ್ಲವೆ ಕಾರ್ಯ ನಿರ್ವಾಹಕ ಸಮಿತಿಯಾಗಿರಬಹುದು. ಪಾಶ್ಚಾತ್ಯ ದೇಶಗಳಲ್ಲಿ ಸಲಹಾ ಸಮಿತಿಗಳಾಗಿರುವುದೇ ಹೆಚ್ಚು. ಆದರೆ ಭಾರತದಲ್ಲಿ ಇವು ಕಾರ್ಯನಿರ್ವಾಹಕ ಸಮಿತಿಗಳಾಗಿವೆ. ಹೀಗಾಗಿ ಗ್ರಂಥಾಲಯದ ಆಡಳಿತದ ಎಲ್ಲ ಹೊಣೆ ಈ ಸಮಿತಿಗಳಿಗೆ ಸೇರಿರುತ್ತದೆ. ಗ್ರಂಥಪಾಲ ಕೇವಲ ಸಮಿತಿಯ ಆದೇಶದ ಮೇರೆಗೆ ನಡೆಯುವ ಅಧಿಕಾರಿಯಾಗುತ್ತಾನೆ. ಅಂತೆಯೇ ಕಾರ್ಲ್ ಎಮ್. ವೈಟ್ ತಮ್ಮ ದೆಹಲಿ ವಿಶ್ವವಿದ್ಯಾಲಯ ಗ್ರಂಥಾಲಯದ ಸಮೀಕ್ಷಣೆ ಎಂಬ ವರದಿಯಲ್ಲಿ ಗ್ರಂಥಾಲಯ ಸಮಿತಿ ಸಲಹಾ ಸಮಿತಿಯಾಗಿರಬೇಕೆಂಬ ಅಭಿಪ್ರಾಯಕ್ಕೆ ಪುಷ್ಟಿಕೊಟ್ಟಿದ್ದಾರೆ.

ಸಮಿತಿಗಳು ಬೇರೆ ಬೇರೆ ಪ್ರಕಾರದ ಗ್ರಂಥಾಲಯಗಳಿಗನುಗುಣವಾಗಿ ರೂಪುಗೊಳ್ಳುತ್ತವೆ. ಮುಖ್ಯವಾಗಿ ಇಂಥ ಸಮಿತಿಗಳನ್ನು ಸಾರ್ವಜನಿಕ ಗ್ರಂಥಾಲಯ ಸಮಿತಿ, ಶೈಕ್ಷಣಿಕ ಗ್ರಂಥಾಲಯ ಸಮಿತಿ ಹಾಗೂ ವಿಶಿಷ್ಟ ಗ್ರಂಥಾಲಯ ಸಮಿತಿಗಳೆಂದು ವಿಂಗಡಿಸಬಹುದು.

**ಸಾರ್ವಜನಿಕ ಗ್ರಂಥಾಲಯ ಸಮಿತಿ:** ಭಾರತದಲ್ಲಿ ತಮಿಳುನಾಡು (1948), ಆಂಧ್ರಪ್ರದೇಶ (1960), ಕರ್ನಾಟಕ (1965) ಹಾಗೂ ಮಹಾರಾಷ್ಟ್ರ (1967)– ಈ ನಾಲ್ಕು ರಾಜ್ಯಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯಿದೆಗಳು ಬಳಕೆಗೆ ಬಂದಮೇಲೆ ಎರಡು ಬಗೆಯ ಸಮಿತಿಗಳು ಕಾರ್ಯೋನ್ಮುಖವಾಗಿವೆ. ಒಂದು, ರಾಜ್ಯಮಟ್ಟದಲ್ಲಿ ರಾಜ್ಯ ಗ್ರಂಥಾಲಯ ಸಮಿತಿ; ಈ ಸಮಿತಿಯ ಸದಸ್ಯರ ಸಂಖ್ಯೆ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆಬೇರೆಯಾಗಿದೆ. ಕರ್ನಾಟಕ ರಾಜ್ಯ ಗ್ರಂಥಾಲಯ ಸಮಿತಿಯಲ್ಲಿ 20 ಸದಸ್ಯರಿದ್ದು ರಾಜ್ಯ ಗ್ರಂಥಾಲಯಮಂತ್ರಿ ಸಮಿತಿಯ ಅಧ್ಯಕ್ಷರಾಗಿರುವರು. ರಾಜ್ಯ ಗ್ರಂಥಾಲಯದ ಮುಖ್ಯಾಧಿಕಾರಿ ಸಮಿತಿಯ ಕಾರ್ಯದರ್ಶಿ. ಮೂಲತಃ ಈ ಸಮಿತಿ ಆಯಾ ರಾಜ್ಯಕ್ಕೆ ಸೇರಿದ ಗ್ರಂಥಾಲಯಗಳ ವಿಷಯವಾಗಿ ಸಲಹೆಗಳನ್ನು ಕೊಡುವುದಲ್ಲದೆ ರಾಜ್ಯದ ಕೇಂದ್ರ ಗ್ರಂಥಾಲಯದ ಆಡಳಿತ ನಡೆಸುತ್ತದೆ. ಸ್ಥಾನಿಕ ಗ್ರಂಥಾಲಯ ಸಮಿತಿ; ನಗರ ಗ್ರಂಥಾಲಯ ಸಮಿತಿ ಮತ್ತು ಜಿಲ್ಲಾ ಗ್ರಂಥಾಲಯ ಸಮಿತಿಗಳು ಎರಡನೆಯ ಬಗೆಯವು.

ಕರ್ನಾಟಕದಲ್ಲಿ ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಮೈಸೂರು ಹಾಗೂ ಬೆಳಗಾವಿ–ಈ ಐದು ನಗರಗಳಿಗೆ ನಗರ ಗ್ರಂಥಾಲಯ ಸಮಿತಿಗಳಿವೆ. ಜಿಲ್ಲೆಗೊಂದರಂತೆ ಜಿಲ್ಲಾ ಗ್ರಂಥಾಲಯ ಸಮಿತಿಗಳಿವೆ. ನಗರ ಗ್ರಂಥಾಲಯ ಸಮಿತಿಯಲ್ಲಿ 11 ಜನ ಸದಸ್ಯರಿದ್ದು ಆಯಾ ನಗರದ ಸಭಾಧ್ಯಕ್ಷ ಸಭಾಪತಿಯಾಗಿರುತ್ತಾನೆ. ನಗರದ ಮುಖ್ಯ ಗ್ರಂಥಾಲಯಾಧಿಕಾರಿ ಕಾರ್ಯದರ್ಶಿಯಾಗಿರುತ್ತಾನೆ. ಜಿಲ್ಲಾ ಗ್ರಂಥಾಲಯ ಸಮಿತಿಯಲ್ಲಿ 18ರಿಂದ 20ಜನ ಸದಸ್ಯರಿದ್ದು ಜಿಲ್ಲಾಧಿಕಾರಿ ಸಮಿತಿಯ ಸಭಾಪತಿಯಾಗಿರುತ್ತಾನಲ್ಲದೆ, ಜಿಲ್ಲೆಯ ಮುಖ್ಯ ಗ್ರಂಥಾಲಯಾಧಿಕಾರಿ ಕಾರ್ಯದರ್ಶಿಯಾಗಿರುತ್ತಾನೆ.

ಶೈಕ್ಷಣಿಕ ಗ್ರಂಥಾಲಯ ಸಮಿತಿ: ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇಂಥ ಸಮಿತಿಗಳಿರುತ್ತವೆ. ಶಾಲೆಗಳಲ್ಲಿ ಇಂಥವುಗಳ ಅಗತ್ಯ ಕಂಡುಬಂದಿಲ್ಲ. ಭಾರತದ ವಿಶ್ವವಿದ್ಯಾಲಯ ಗ್ರಂಥಾಲಯ ಸಮಿತಿಗಳ ರಚನೆಯಲ್ಲಿ ಏಕರೂಪತೆ ಇಲ್ಲ. ಬಹುಮಟ್ಟಿಗೆ ಎಲ್ಲ ಸಮಿತಿಗಳೂ ಕಾರ್ಯನಿರ್ವಾಹಕ ಸಮಿತಿಗಳಾಗಿರುವುದೇ ಹೆಚ್ಚು. ಇವು ಸಲಹಾ ಸಮಿತಿಗಳಾದಲ್ಲಿ ಹೆಚ್ಚು ಅನುಕೂಲ. ಅಲ್ಲದೆ ಸಮಿತಿಗಳು ಚಿಕ್ಕವಾಗಿದ್ದರೊಳ್ಳೆಯದು. ಈಗಿರುವಂತೆ ಸಮಿತಿಯ ಅಧ್ಯಕ್ಷ ಕುಲಪತಿ, ಕಾರ್ಯದರ್ಶಿ ಗ್ರಂಥಪಾಲ. ಭಾರತದಲ್ಲಿ ಕಾಲೇಜು ಗ್ರಂಥಾಲಯ ಸಮಿತಿಗಳ ಏಕರೂಪತೆ ಇಲ್ಲ. ಸಾಮಾನ್ಯವಾಗಿ ಒಬ್ಬ ಪ್ರಾಧ್ಯಾಪಕನ ಮೇಲ್ವಿಚಾರಣೆಯಲ್ಲಿ ಗ್ರಂಥಪಾಲ ಕೆಲಸ ನಿರ್ವಹಿಸುತ್ತಾನೆ. ಕೆಲವು ಕಡೆ ಒಬ್ಬಿಬ್ಬರು ಪ್ರಾಧ್ಯಾಪಕರು ಸಮಿತಿಯ ಸದಸ್ಯರಾಗಿರುವುದುಂಟು.

ವಿಶಿಷ್ಟ ಗ್ರಂಥಾಲಯ ಸಮಿತಿ: ವಿಶಿಷ್ಟ ಗ್ರಂಥಾಲಯಗಳಲ್ಲಿನ ಸಮಿತಿಗಳು ಗಾತ್ರದಲ್ಲಿ ಚಿಕ್ಕವು. ಬಹುತೇಕ ಇವು ಸಲಹಾ ಸಮಿತಿಗಳಾಗಿದ್ದು ವಿಷಯ ತಜ್ಞರು ಇವುಗಳ ಸದಸ್ಯರಾಗಿರುತ್ತಾರೆ. (ಎನ್.ಡಿ.ಬಿ.)

**14 ಗ್ರಂಥಾಲಯ ಆಯವ್ಯಯ:** ಶೈಕ್ಷಣಿಕ ಸಂಸ್ಥೆಗಳಂತೆ ಗ್ರಂಥಾಲಯಗಳೂ ಖರ್ಚಿನ ಬಾಬುಗಳೇ ಹೊರತು ಆದಾಯದ ಬಾಬುಗಳಲ್ಲ.

ಭಾರತ ಸರ್ಕಾರ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮುಖಾಂತರ ಉನ್ನತ ಶಿಕ್ಷಣದ ಪ್ರಭಾವಿ ಅಂಗಗಳಾದ ವಿಶ್ವವಿದ್ಯಾಲಯ ಹಾಗೂ ಕಾಲೇಜು ಗ್ರಂಥಾಲಯಗಳ ಸ್ಥಾಪನೆ, ವ್ಯವಸ್ಥೆ, ಆಡಳಿತ, ಬೆಳವಣಿಗೆಗಾಗಿ ದೊಡ್ಡ ಮೊತ್ತದಲ್ಲಿ ಹಣವನ್ನೊದಗಿಸುತ್ತಿವೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ಹೊಣೆ ಹೊತ್ತ ರಾಜ್ಯ ಸರ್ಕಾರಗಳು ಈ ದಿಶೆಯಲ್ಲಿ ಗಣನೀಯ ಪರಿಮಾಣದಲ್ಲಿ ಹಣವನ್ನು ಖರ್ಚು ಮಾಡುತ್ತಿವೆ. ಅಲ್ಲದೆ ರಾಜ್ಯವಿಡೀ ಸಾರ್ವಜನಿಕ ಗ್ರಂಥಾಲಯಗಳನ್ನು ತೆರೆಯಲು ಅನೇಕ ಸರ್ಕಾರಗಳು ಸಾರ್ವಜನಿಕ ಗ್ರಂಥಾಲಯ ಕಾಯಿದೆಗಳನ್ನು ಅಂಗೀಕರಿಸಿ ಅವುಗಳ ಅನ್ವಯ ಗ್ರಂಥಾಲಯ ಕರವನ್ನು ಎತ್ತಲು ಅನುವು ಮಾಡಿಕೊಂಡಿವೆ. ಭಾರತದಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳು ವಿಧಿಸುವ ಕರದ ಮೇಲೆ ಹೆಚ್ಚಿನ ಕರವಾಗಿ ಒಂದು ರೂಪಾಯಿಗೆ ಮೂರು ಪೈಸೆಯಿಂದ ಆರು ಪೈಸೆಯವರೆಗೆ ಗ್ರಂಥಾಲಯ ಕರವನ್ನು ಎತ್ತಲು ಅನುಮಾಡಿಕೊಂಡಿದೆ.

**ಆಯದ ಬಾಬುಗಳು:** ರಾಜ್ಯ ಸರ್ಕಾರಗಳು ಎತ್ತುವ ಗ್ರಂಥಾಲಯ ಕರ ಸಾರ್ವಜನಿಕ ಗ್ರಂಥಾಲಯಗಳಿಗೆ ಪ್ರಮುಖ ಉತ್ಪನ್ನವಾಗಿವೆ. ಅಲ್ಲದೆ ಈ ರೀತಿ ಕೂಡಿಸಲ್ಪಟ್ಟ ಗ್ರಂಥಾಲಯ ಕರದ ಪರಿಮಾಣಕ್ಕನುಗುಣವಾಗಿ ರಾಜ್ಯ ಸರ್ಕಾರಗಳು ಧನಸಹಾಯ ಸಲ್ಲಿಸುತ್ತವೆ. ಈ ರೀತಿ ಕೂಡಿದ ಉತ್ಪನ್ನದ ಪರಿಮಾಣಕ್ಕನುಗುಣವಾಗಿ ಸಾರ್ವಜನಿಕ ಗ್ರಂಥಾಲಯ ಆಯವ್ಯಯ ಪಟ್ಟಿ ಸಿದ್ಧವಾಗಬೇಕು. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾಗ್ರಂಥಾಲಯಗಳಿಗೂ ರಾಜ್ಯ ಸರ್ಕಾರಗಳು ಗ್ರಂಥಾಲಯ ಹಾಗೂ ವಾಚನಾಲಯ ನಿಧಿಗೆ ಹಣ ಒದಗಿಸುತ್ತಿವೆ. ವಿಶ್ವವಿದ್ಯಾಲಯ ಹಾಗೂ ಕಾಲೇಜು ಗ್ರಂಥಾಲಯಗಳಿಗೆ ಸರ್ಕಾರ ಕೊಡುತ್ತಿರುವ ಯೋಗ್ಯ ಧನಸಹಾಯ ಆ ಗ್ರಂಥಾಲಯಗಳಿಗೆ ಪ್ರಮುಖ ಉತ್ಪನ್ನವಾಗಿದೆ. ಇದಲ್ಲದೆ ಸಾರ್ವಜನಿಕ ದಾನಿಗಳಿಂದ ಗ್ರಂಥಾಲಯಗಳಿಗೆ ದಾನವಾಗಿ ಹಣ ಒದಗುವುದುಂಟು. ಈ ರೀತಿಯ ಕೊಡುಗೆಗಳು ಗ್ರಂಥಾಲಯ ಉತ್ಪನ್ನದ ಉಪಅಂಶಗಳಾಗಿವೆ. ಗ್ರಂಥಾಲಯ ತಾನು ಪ್ರಕಟಿಸಿದ ಪ್ರಕಟನೆಗಳ (ಉದಾ: ಗ್ರಂಥಾಲಯ ಕೈಪಿಡಿ, ಗ್ರಂಥಸೂಚಿ, ಮುಂತಾದವುಗಳ) ಅಲ್ಪಸ್ವಲ್ಪ ಹಣ ಪಡೆಯಬಹುದು. ಇವೂ ಉತ್ಪನ್ನದ ಬಾಬುಗಳಾಗಿವೆ. ಎರವಲು ಕೊಟ್ಟ ಗ್ರಂಥಗಳು ಸರಿಯಾದ ವೇಳೆಗೆ ಓದುಗರಿಂದ ಬರದಿದ್ದಾಗ ಗ್ರಂಥಾಲಯ ದಂಡವನ್ನು ಹಾಕುತ್ತದಷ್ಟೆ. ಈ ರೀತಿಯಲ್ಲಿ ಬಂದದ್ದು ಅಲ್ಪ ಪರಿಮಾಣದ್ದಾದರೂ ಆದಾಯವೇ ಆಗುತ್ತದೆ.

**ವ್ಯಯದ ಬಾಬುಗಳು:** ಹೀಗೆ ಕೂಡಲ್ಪಟ್ಟ ಹಣವನ್ನು ಗ್ರಂಥಾಲಯ ಕೆಲವು ಅಂಶಗಳಿಗೆ ಖರ್ಚು ಮಾಡಬೇಕಾಗುತ್ತದೆ.: 1) ಗ್ರಂಥಾಲಯ ಸಿಬ್ಬಂದಿಯ ಪಗಾರ 2) ಗ್ರಂಥಗಳು, ನಿಯತಕಾಲಿಕೆಗಳು ಹಾಗೂ ಇತರ ಓದುವ ಸಾಮಗ್ರಿಗಳ ಖರೀದಿ, 3) ಪೀಠೋಪಕರಣ ಹಾಗೂ ಸಾಧನ ಸಲಕರಣೆಗಳ ಖರೀದಿ, 4) ಕಟ್ಟಡದ ನಿರ್ವಹಣೆ (ರಿಪೇರಿ, ಹೊಸ ಕಟ್ಟಡ ನಿರ್ಮಾಣ, ನಗರಸಭೆ ಹಾಗೂ ದೀಪದ ತೆರಿಗೆಗಳು, ಸುಣ್ಣ ಬಣ್ಣ), ಹಾಗೂ 5) ಇತರ ಬಾಬುಗಳು (ಸ್ಟೇಷನರಿ, ಅಂಚೆವೆಚ್ಚ, ಮುದ್ರಣ, ಗ್ರಂಥಾಲಯ ಸಮಿತಿ ಸದಸ್ಯರಿಗೆ ಹಾಗೂ ಸಿಬ್ಬಂದಿಗೆ ಭತ್ಯೆ, ರಟ್ಟು ಕಟ್ಟುವುದು, ಸಾಂಸ್ಕೃತಿಕ ಚಟುವಟಿಕೆಗಳು, ಅಲ್ಲದೆ ಆಫೀಸಿನ ಖರ್ಚು, ದೂರವಾಣಿ ಬಿಲ್ಲು, ಪರಿಚಾರಕರ ಉಡುಪು– ಇತ್ಯಾದಿ ಚಿಲ್ಲರೆ ಖರ್ಚು).

ಸಂಸ್ಥೆಯ ಒಟ್ಟು ಆದಾಯದ ಶೇ. 6ರಿಂದ 10 ಭಾಗ ಹಣವನ್ನು ಗ್ರಂಥಾಲಯಕ್ಕೆ ಮೀಸಲಾಗಿರಿಸಬೇಕು. 1957ರ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಗ್ರಂಥಾಲಯ ಸಲಹಾ ಸಮಿತಿ ಶೇ.50 ಹಣವನ್ನು ಗ್ರಂಥ ಹಾಗೂ ನಿಯತಕಾಲಿಕೆಗಳ ಖರೀದಿ ಹಾಗೂ ಇನ್ನಿತರ ಖರ್ಚುಗಳಿಗಾಗಿಯೂ ಶೇ.50 ಹಣವನ್ನು ಗ್ರಂಥಾಲಯ ಸಿಬ್ಬಂದಿಯ ವೇತನಕ್ಕಾಗಿಯೂ ವ್ಯಯ ಮಾಡಬೇಕೆಂದು ಸಲಹೆ ಮಾಡಿದೆ. ಎಸ್. ಆರ್. ರಂಗನಾಥನ್ ಈ ವ್ಯಯವನ್ನು (1) ಗ್ರಂಥಗಳ ಹಾಗೂ ನಿಯಕಾಲಿಕೆಗಳ ಖರೀದಿಗಾಗಿ ಶೇ.40 (2) ಇತರ ಖರ್ಚಿಗಾಗಿ ಶೇ.10 (3) ಸಿಬ್ಬಂದಿಯ ವೇತನ ಶೇ.50 ಎಂದು ನಿಗದಿಪಡಿಸಿದ್ದಾರೆ. (ಎನ್.ಡಿ.ಬಿ.; ಎಸ್.ಆರ್.ಜಿಯು.)

**15 ಗ್ರಂಥಾಲಯ ಕಟ್ಟಡ:** ಗ್ರಂಥಗಳನ್ನು ಶೇಖರಿಸಿಡುವುದಕ್ಕೆಂದೇ ವಿಶೇಷ ರೀತಿಯಲ್ಲಿ ನಿರ್ಮಿಸಿದ ಆದರ್ಶ ಕಟ್ಟಡ ಹೇಗಿರಬೇಕು ಎಂಬ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಭದ್ರತೆ, ವಾತಾವರಣದಲ್ಲಿನ ಏರುಪೇರುಗಳಿಂದ ಉಂಟಾಗುವ ಬಾಧೆಗಳ ವಿರುದ್ಧ ರಕ್ಷಣೆ ಮತ್ತು ಗ್ರಂಥಾಲಯವನ್ನು ಉಪಯೋಗಿಸುವವರ ಸೌಕರ್ಯ–ಈ ಪ್ರಧಾನಾವಶ್ಯಕತೆಗಳನ್ನು ಗಮನಿಸಿ ಗ್ರಂಥಾಲಯ ಕಟ್ಟಡಗಳನ್ನು ನಿರ್ಮಿಸಲಾಗುತ್ತದೆ. ಕಟ್ಟಡ ಸಾಮಾನ್ಯವಾಗಿ ದೊಡ್ಡದಾಗಿದ್ದು ಸುತ್ತಲೂ ವಿಶಾಲವಾದ ಬಯಲು ಭೂಮಿ ಇಲ್ಲವೆ ಉದ್ಯಾನ ಇದ್ದಲ್ಲಿ ಚೆನ್ನಾಗಿರುತ್ತದೆ. ಕಟ್ಟಡದ ನಿರ್ಮಾಣಕಾರ್ಯದಲ್ಲಿ ಗ್ರಂಥಪಾಲ, ಆಲೇಖ್ಯವನ್ನು ರೂಪಿಸುವ ವಾಸ್ತುಶಿಲ್ಪಿ ಮತ್ತು ಕಟ್ಟಡದ ಮೇಲ್ವಿಚಾರಕನಾದ ಎಂಜಿನಿಯರ್–ಈ ಮೂವರೂ ಭಾಗಿಗಳಾಗಿರುತ್ತಾರೆ.

ಗ್ರಂಥಾಲಯ ಕಟ್ಟಡ ರಚನೆ ಹೆಚ್ಚು ಕಡಿಮೆ ಸಾಮಾನ್ಯ ಕಟ್ಟಡಗಳ ರಚನೆಯನ್ನೇ ಹೋಲುತ್ತದಾದರೂ ಇಲ್ಲಿ ಪ್ರಮುಖವಾಗಿ ಕಾಣಬರುವುದು ವಿಶಾಲವಾದ ಕೋಣೆಗಳು ಮತ್ತು ಹಜಾರಗಳು. ಸಾಮಾನ್ಯ ಕಟ್ಟಡಗಳಿಗೆ ಅನ್ವಯಿಸುವ ಕಟ್ಟಡ ಸೂತ್ರಗಳಾದ ತಳಪಾಯ, ಗೋಡೆಗಳು, ಅಡ್ಡಗೋಡೆಗಳು, ತಡಿಕೆ, ಮಾಡು, ನೆಲ, ಗಿಲಾವು, ಮಹಡಿಯ ಮೆಟ್ಟಲುಗಳು, ಕಿಟಕಿಗಳು, ಬಾಗಿಲುಗಳು–ಮುಂತಾದವು ಗ್ರಂಥಾಲಯ ಕಟ್ಟಡಗಳ ನಿರ್ಮಾಣದಲ್ಲೂ ಸರಿಹೊಂದುತ್ತವೆ. ಗ್ರಂಥಾಲಯ ಕಟ್ಟಡಗಳು ಬಹು ದೊಡ್ಡವಾದ್ದರಿಂದ ಅವುಗಳ ನಿರ್ಮಾಣದಲ್ಲಿ ವಿಶೇಷ ಮೇಲ್ವಿಚಾರಣೆ ಅಗತ್ಯವಾಗುತ್ತದೆ.

ವಿಸ್ತರಣ ಸಾಮರ್ಥ್ಯ: ವರ್ಷ ವರ್ಷಕ್ಕೆ ಗ್ರಂಥಸಂಗ್ರಹ ಹಾಗೂ ಓದುಗರ ಸಂಖ್ಯೆ ಬೆಳೆಯುತ್ತ ಹೋದಂತೆ ಗ್ರಂಥಾಲಯ ಸಿಬ್ಬಂದಿಯ ಸಂಖ್ಯೆ ಕೂಡ ಅನುಗುಣವಾಗಿ ಬೆಳೆಯುತ್ತ ಹೋಗುತ್ತದೆ. ಹೀಗಾಗಿ ಗ್ರಂಥಾಲಯದ ಇತರ ವಿಭಾಗಗಳಲ್ಲಿ ಹೇಗೋ ಹಾಗೆ ಆಡಳಿತ ಹಾಗೂ ತಾಂತ್ರಿಕ ವಿಭಾಗಗಳ ವಿಸ್ತರಣಕ್ಕೆ ಮೊದಲೇ ಅವಕಾಶ ಮಾಡಿಕೊಳ್ಳಬೇಕು. ಅಲ್ಲದೆ ಅವಶ್ಯಕವೆನಿಸಿದಾಗ ಕೆಲವಾರು ಆಂತರಿಕ ಬದಲಾವಣೆಗಳನ್ನು ಸಹಜವಾಗಿ ಮಾಡಿಕೊಳ್ಳಲು ಬರುವಂತೆ ಇಡೀ ಕಟ್ಟಡದ ಒಳರಚನೆಯನ್ನು ಆಲೇಖ್ಯಿಸಿರಬೇಕು. ಈ ದಿಶೆಯಲ್ಲಿ ಯೋಚಿಸಿದಾಗ ಭವ್ಯವಾದ ಕೋಣೆಗಳು ಮತ್ತು ವಿಶಾಲವಾದ ಹಜಾರಗಳು ಗ್ರಂಥಾಲಯ ಕಟ್ಟಡದ ಪ್ರಮುಖ ವಿಭಾಗಗಳೆನಿಸುತ್ತವೆ. ಮುಖ್ಯಕಟ್ಟಡವನ್ನೂ ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಲು ಅನುಕೂಲವಾಗುವಂತೆ ಆಲೇಖ್ಯಿಸಬೇಕು.

ಕಟ್ಟಡದ ಒಳಭಾಗದ ರೂಪರೇಷೆ: ಗ್ರಂಥಾಲಯದ ಒಳರಚನೆಯನ್ನು ಯೋಚಿಸುವಾಗ ಓದುಗರ ಸೇವೆ, ತಾಂತ್ರಿಕ ವಿಭಾಗದ ಸೇವೆ, ಆಡಳಿತ ವಿಭಾಗದ ಕಾರ್ಯಕ್ಷೇತ್ರ–ಈ ಮೂರು ಅಂಶಗಳನ್ನೂ ಲಕ್ಷ್ಯದಲ್ಲಿಡುವುದು ಅತ್ಯಗತ್ಯ.

ಪ್ರವೇಶ ದ್ವಾರಕ್ಕೆ ಸಮೀಪವಿರುವ ಪಡಸಾಲೆ ದೊಡ್ಡದಾಗಿದ್ದು ಅಲ್ಲಿ ಸ್ವಾಗತಕಾರನ (ರಿಸೆಪ್ಷನಿಸ್ಟ್) ಅಗತ್ಯಕ್ಕೆ ತಕ್ಕ ಅಣಿಕಟ್ಟುಗಳಿಗೆ ಅವಕಾಶವಿರಬೇಕು. ಇವಲ್ಲದೆ ವಿವಿಧ ರೀತಿಯ ಗ್ರಂಥಸೂಚಿ ಕಾರ್ಡುಗಳಿಗಿರುವ ಕ್ಯಾಬಿನೆಟ್ಟುಗಳು, ಹೊಸಗ್ರಂಥಗಳನ್ನು ಪ್ರದರ್ಶಿಸುವ ಸ್ಟ್ಯಾಂಡುಗಳು, ಓದುಗರು ಕುಳಿತುಕೊಳ್ಳಲು ಯೋಗ್ಯ ಆಸನ ವ್ಯವಸ್ಥೆಗಳು, ಪುಸ್ತಕಗಳನ್ನು ಎರವಲು ಹಾಗೂ ಮರಳಿ ಪಡೆಯುವ ಮೇಜುಗಳು (ಚಾರ್ಜಿಂಗ್ ಡೆಸ್ಕ್)– ಇವೆಲ್ಲವನ್ನೂ ಆ ಪಡಸಾಲೆ ಒಳಗೊಳ್ಳುವಂತಿರಬೇಕು. ಓದುಗರು ತಮ್ಮ ಜೊತೆಯಲ್ಲಿ ತಂದ ವಸ್ತುಗಳನ್ನು ಜೋಪಾನವಾಗಿರಿಸಲು ಅನುಕೂಲವಾಗುವಂತೆ ಪಡಸಾಲೆಗೆ ಸೇರಿದಂತೆ ಇನ್ನೊಂದು ಚಿಕ್ಕ ಕೋಣೆಯಿರುವುದೂ ಉಂಟು.

ಸಾಮಾನ್ಯವಾಗಿ ಓದುವ ಕೋಣೆ ಹಾಗೂ ಗ್ರಂಥಸಂಗ್ರಹ ಕೋಣೆಗಳನ್ನು ಬೇರೆ ಬೇರೆ ಮಾಡದೆ ಇವೆರಡೂ ಒಂದರಲ್ಲೊಂದಿರುವಂತೆ ಮಾಡುವುದೊಳ್ಳೆಯದು. ಆವಶ್ಯಕವೆನಿಸಿದಲ್ಲಿ ಅಷ್ಟೊಂದು ಉಪಯುಕ್ತವಲ್ಲದ, ಕ್ವಚಿತ್ತಾಗಿ ಉಪಯೋಗಿಸಲ್ಪಡುವ ಗ್ರಂಥಗಳನ್ನು ಇಡಲು ಬೇರೊಂದು ಹಜಾರವನ್ನು ಉಪಯೋಗಿಸಬಹುದು.

ಗ್ರಂಥಗಳು ಇರುವ ಕೋಣೆಯಲ್ಲೇ ಓದುಗರಿಗೆ ಅವರು ಬಯಸಿದ ಪುಸ್ತಕಗಳನ್ನು ಎರವಲು ಕೊಡುವಷ್ಟು ಸ್ಥಳಾವಕಾಶ ಇರುವುದು ಉತ್ತಮ. ಪರಾಮರ್ಶನ ಸೇವೆಯನ್ನು ನೀಡುವ ಗ್ರಂಥಾಲಯ ಸಿಬ್ಬಂದಿಗೆ ಅವರು ಪ್ರಶಸ್ತವಾಗಿ ಕೆಲಸಮಾಡಲು ಸ್ಥಳಾವಕಾಶವಿರಬೇಕು.

ಚರ್ಚಾಗೋಷ್ಠಿಗಳನ್ನೇರ್ಪಡಿಸಲು ವಿಶಾಲವಾದ ಸಭಾಂಗಣವೊಂದು ಅವಶ್ಯ ಇರಬೇಕಾಗುತ್ತದೆ. ಸಂಶೋಧನೆಯಲ್ಲಿ ತೊಡಗಿರುವ ಓದುಗರ ಉಪಯೋಗಕ್ಕಾಗಿ, ಹಗುರವಾದ ಮರದಿಂದ ನಿರ್ಮಿಸಲಾದ ಚಿಕ್ಕ ಕೋಣೆಗಳನ್ನು (ರಿಸರ್ಚ್ ಕ್ಯಾರೆಲ್ಸ್) ಹೆಚ್ಚಿನ ಸಂಖ್ಯೆಯಲ್ಲಿ ಅಳವಡಿಸಬೇಕು. ಅಂಥವು ಗದ್ದಲವಿಲ್ಲದಿರುವ ಸ್ಥಳಗಳಲ್ಲಿದ್ದರೆ ಇನ್ನೂ ಒಳ್ಳೆಯದು. ಓದುಗರು ತಮ್ಮ ಟೀಕೆಟಿಪ್ಪಣಿಗಳನ್ನು ಬರೆದುಕೊಳ್ಳುವುದರ ಬದಲಾಗಿ ಟೈಪುಮಾಡಿಕೊಳ್ಳಲು ಇಚ್ಛಿಸಿದರೆ ಅಂಥವರ ಸೌಕರ್ಯಕ್ಕಾಗಿ ಬೆರಳಚ್ಚು ಯಂತ್ರಗಳಿರಬೇಕಾಗುತ್ತದೆ.

ಟೈಪುಮಾಡುವಾಗ ಗದ್ದಲವಾಗುತ್ತದಾದ್ದರಿಂದ ಆ ಕೆಲಸಕ್ಕೆ ಶಬ್ದವಾಗದ ಕೋಣೆಯಿದ್ದರೆ ಒಳ್ಳೆಯದು. ಇಂಥ ಸೌಕರ್ಯ ಕೆಲವೇ ಗ್ರಂಥಾಲಯಗಳಲ್ಲಿ ಮಾತ್ರ ಇರುತ್ತದೆ. ಸ್ಥಳೀಯ ಇತಿಹಾಸಕ್ಕೆ ಸಂಬಂಧಿಸಿದ ಗ್ರಂಥಸಂಗ್ರಹ, ಸರ್ಕಾರಿ ಪ್ರಕಟಣೆಗಳು ಹಾಗೂ ಮುದ್ರಿತ ಕಾಗದ ಪತ್ರಗಳು, ಕಾಪಿರೈಟ್‌ಸಂಗ್ರಹ, ಬ್ರೇಲ್‌ಸಂಗ್ರಹ–ಇವನ್ನು ಶೇಖರಿಸಿಡಲು ವಿಶಾಲವಾದ ಪ್ರತ್ಯೇಕ ಕೋಣೆಗಳಿರಬೇಕು. ಹಸ್ತಪ್ರತಿಗಳು, ಅಪೂರ್ವ ಗ್ರಂಥಗಳು, ನಕಾಶೆಗಳು–ಇವೆಲ್ಲವುಗಳ ಸಂಗ್ರಹ ಸಾಧ್ಯವಾದಷ್ಟು ಒಂದಕ್ಕೊಂದು ಹತ್ತಿರವಿದ್ದು ಎಲ್ಲವನ್ನೂ ಶಕ್ಯವಿದ್ದರೆ ವಾತಾನುಕೂಲಿತ (ಏರ್ ಕಂಡೀಷನ್ಡ್) ಸ್ಥಿತಿಯಲ್ಲಿ ಜೋಪಾನಿಸಿಡುವುದೊಳ್ಳೆಯದು. ಸಂಗೀತ ಮುಂತಾದ ಕಾರ್ಯಕ್ರಮಗಳು, ಶ್ರವಣ ಸಾಧನಗಳ ಬಳಕೆ, ಚಲನಚಿತ್ರ ಪ್ರದರ್ಶನ–ಮುಂತಾದವನ್ನು ನಡೆಸಲು ಶಬ್ದವಾಗದ ದೃಕ್‌ಶ್ರವಣ (ಆಡಿಯೋ ವಿಷ್ಯುಯಲ್) ಹಜಾರಗಳ ಅಗತ್ಯವಿದೆ.

ಹಲವಾರು ಗಂಟೆ ಒಂದೆಡೆ ಕುಳಿತು ಕ್ಲಿಷ್ಟ ವಿಷಯಗಳನ್ನು ಅಭ್ಯಸಿಸುವ ಓದುಗರಿಗೆ ಅಲ್ಪಸ್ವಲ್ಪ ವಿರಾಮವನ್ನು ದೊರಕಿಸಿಕೊಡುವ ಸಲುವಾಗಿಯೂ ಅವು ತಮ್ಮ ಬೇಸರವನ್ನು

ಹೋಗಲಾಡಿಸಿಕೊಳ್ಳಲು ಸಾಧ್ಯವಾಗುವಂತೆಯೂ ಲಘುವಾಚನಾಲಯವನ್ನು (ಬ್ರೌಸಿಂಗ್ ರೂಮ್) ಒದಗಿಸಬೇಕಾಗುತ್ತದೆ. ಇಂಥ ಹಜಾರವನ್ನು ಸೋಫಾಸೆಟ್ಟು ಮುಂತಾದ ಸುಖಾಸನಗಳಿಂದ ಸಜ್ಜುಗೊಳಿಸಿ ಅಲ್ಲಿ ಲಘುಸಾಹಿತ್ಯ ಹಾಗೂ ಜನಪ್ರಿಯ ಸಚಿತ್ರ ನಿಯತಕಾಲಿಕೆಗಳನ್ನು ಇಡಬೇಕು. ಈ ಕೊಠಡಿ ಸಾಲಂಕೃತವಾಗಿದ್ದರೆ ಓದುಗರಿಗೆ ಹೆಚ್ಚಿನ ವಿರಾಮ, ಉಲ್ಲಾಸ ಸಿಕ್ಕಿದಂತಾಗುತ್ತದೆ.

ಸಾಧ್ಯವಿದ್ದಲ್ಲಿ ಓದುಗರ ಅನುಕೂಲಕ್ಕಾಗಿ, ಲಘು ಆಹಾರಪದಾರ್ಥಗಳನ್ನೊದಗಿಸುವ ಉಪಾಹಾರಗೃಹವೊಂದನ್ನು ಗ್ರಂಥಾಲಯ ಕಟ್ಟಡದ ಹೊರಗಡೆ ಏರ್ಪಡಿಸುವುದು ಒಳ್ಳೆಯದು.

ಗ್ರಂಥಾಲಯ ಸಿಬ್ಬಂದಿವರ್ಗದವರು ತಮ್ಮ ವಿರಾಮದ ಅವಧಿಯಲ್ಲಿ ವಿಶ್ರಮಿಸಿಕೊಳ್ಳಲು, ಆಹಾರ ಸೇವಿಸಲು ಅನುಕೂಲವಾಗುವಂತೆ ಅವರಿಗೇ ಪ್ರತ್ಯೇಕವಾದ ವಿಶ್ರಾಂತಿ ಕೋಣೆಗಳಿರುವುದು ಒಳ್ಳೆಯದು.

ಪುಸ್ತಕಗಳ ಸಂರಕ್ಷಣೆಗೆ ಸಂಬಂಧಿಸಿದ ಒಂದು ಪ್ರಯೋಗಶಾಲೆ, ಒಂದು ಚಿಕ್ಕ ಮುದ್ರಣಶಾಲೆ ಹಾಗೂ ಒಂದು ರಟ್ಟುಕಟ್ಟುವ ವಿಭಾಗ–ಇವು ಇರಲನುಕೂಲವಾಗುವಂತೆ ಕೆಲವು ಗ್ರಂಥಾಲಯ ಕಟ್ಟಡಗಳಲ್ಲಿ ಅವಕಾಶಗಳನ್ನು ಕಲ್ಪಿಸಬೇಕು. ಗ್ರಂಥಾಲಯದ ಆಡಳಿತ ಮತ್ತು ತಾಂತ್ರಿಕಶಾಖೆಯ ಸಿಬ್ಬಂದಿಯವರು ಕೆಲಸ ಮಾಡುವ ಕಚೇರಿ ವಿಸ್ತಾರವಾದ ಪಡಸಾಲೆಯಲ್ಲಿದ್ದು, ಅದರಲ್ಲೇ ಒಂದುಕಡೆ ಗಾಜಿನ ಫಲಕಗಳಿಂದ ಪ್ರತ್ಯೇಕಿಸಲ್ಪಟ್ಟ ಕೋಣೆಗಳಲ್ಲಿ ಮೇಲ್ವಿಚಾರಣೆಮಾಡುವ ಅಧಿಕಾರಿಗಳು ಇದ್ದರೊಳ್ಳೆಯದು. ಗ್ರಂಥಪಾಲನ ಕೋಣೆಯ ಪಕ್ಕದಲ್ಲಿ ವಿಶೇಷ ಅತಿಥಿಗಳಿಗಾಗಿ ನಿರೀಕ್ಷಣೆಯ ಕೋಣೆಯೊಂದು (ವೇಯ್‌ಟಿಂಗ್ ರೂಮ್) ಸಾಮಾನ್ಯವಾಗಿ ಇರುತ್ತದೆ.

**ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ ಕಟ್ಟಡದ ಆಲೇಖ್ಯ**

ಶಾಲೆ ಮತ್ತು ಕಾಲೇಜು ಗ್ರಂಥಾಲಯಗಳಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ಪುಸ್ತಕ, ಟಿಪ್ಪಣಿ ಇತ್ಯಾದಿಗಳನ್ನು ತಂದು ಓದಲು ಅನುಕೂಲವಾಗುವಂತೆ ಒಂದು ಅಭ್ಯಾಸ ಕೋಣೆ (ಸ್ಟಡಿ ಹಾಲ್) ಇರಬೇಕು. ವಿದ್ಯಾರ್ಥಿಗಳಿಗೆ ಅಗತ್ಯವಾದ ಪಠ್ಯಗ್ರಂಥಗಳು ಹಾಗೂ ಇತರ ವಿಶೇಷ ಪುಸ್ತಕಗಳು ಮತ್ತು ಪರಾಮರ್ಶನ ಗ್ರಂಥಗಳು–ಇವನ್ನು ಸಂಗ್ರಹಿಸಿಟ್ಟಿರುವಂಥ ಪಠ್ಯಗ್ರಂಥ ಕೊಠಡಿಯ (ಟೆಕ್ಸ್ಟ್‌ಬುಕ್ ರೂಮ್) ಅಗತ್ಯವೂ ಇದೆ.

ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಕ್ಕಳಿಗಾಗಿಯೇ ಮೀಸಲಾಗಿರುವ ಬೇರೆ ಕಟ್ಟಡ ವಿಭಾಗಗಳಿದ್ದು, ಅಲ್ಲಿ ಅವಕ್ಕೆ ತಕ್ಕಂಥ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ಹೀಗೆಯೇ ಕಾಪಿರೈಟ್ ಗ್ರಂಥಾಲಯಗಳಲ್ಲಿ ವಿಶೇಷರೀತಿಯ ಕಟ್ಟಡ ವಿಭಾಗಗಳನ್ನು ಕಾಣಬಹುದು.

ಬೆಳಕಿನ ವ್ಯವಸ್ಥೆ: ಓದುವ ಕೋಣೆಗಳಲ್ಲಿ ಬೆಳಕು ಎಲ್ಲ ಕಡೆಗೂ ಒಂದೇ ಸಮನಾಗಿ ಬೀಳುವಂತಿರಬೇಕು. ಎಲ್ಲೂ ಬೆಳಕು ಕಣ್ಣು ಕೋರೈಸುವಂತಿರಬಾರದು. ಓದುವ ಮೇಜುಗಳಿಗೇ ಉರುಳೆದೀಪಗಳನ್ನು ಅಳವಡಿಸಿರುವ ಏರ್ಪಾಡು ಹಲವಾರು ಗ್ರಂಥಾಲಯಗಳಲ್ಲಿದೆ.

ಪೀಠೋಪಕರಣಗಳು: ಗ್ರಂಥಾಲಯದಲ್ಲಿ ಉಪಯೋಗಕ್ಕಿರುವ ಕುರ್ಚಿ, ಮೇಜು ಮುಂತಾದ ಪೀಠೋಪಕರಣಗಳನ್ನು ವಿಶಿಷ್ಟ ರೀತಿಯಲ್ಲಿ ತಯಾರಿಸಿರುತ್ತಾರೆ. ಬಹುಕಾಲ ಬಾಳುವ ಮರದ ಇಲ್ಲವೆ ಕಬ್ಬಿಣದ ಕ್ಯಾಟಲಾಗ್ ಕ್ಯಾಬಿನೆಟ್ಟುಗಳು, ವಿವಿಧ ಬಗೆಯ ಶಬ್ದಕೋಶಗಳನ್ನಿಡುವ ಆಧಾರಪೀಠಗಳು (ಸ್ಟ್ಯಾಂಡ್ಸ್) ಚಿತ್ರ ಹಾಗೂ ಪುಸ್ತಕ ಪ್ರದರ್ಶನಕ್ಕೆ ಬೇಕಾಗುವ ನಿಲುವಿನ ಆಧಾರಪೀಠಗಳು ಮುಂತಾದ ವಿಶೇಷರೀತಿಯಲ್ಲಿ ರಚಿತವಾದ ಸಲಕರಣೆಗಳು ಇರುತ್ತವೆ.

ಸಾಮಾನ್ಯ ಓದುಗರಿಗಾಗಿ, ವಿದ್ಯಾರ್ಥಿಗಳಿಗಾಗಿ, ವಿಶೇಷಾಭ್ಯಾಸ ಮಾಡುವ ಸಂಶೋಧಕರಿಗಾಗಿ, ಗ್ರಂಥಾಲಯದ ಆಡಳಿತ ವರ್ಗದವರಿಗಾಗಿ –ಹೀಗೆ ಹಲವಾರು ವರ್ಗದವರ ಸೌಕರ್ಯಗಳಿಗನುಗುಣವಾಗಿ ಪೀಠೋಪಕರಣಗಳನ್ನು ಅಳವಡಿಸಬೇಕಾಗುತ್ತದೆ.

ಗ್ರಂಥಾಲಯದ ಒಳ ಅಲಂಕರಣ: ಗೋಡೆಗಳಿಗೆ ತಿಳಿಯಾದ ಬಣ್ಣ ಹಾಕಿ ಕಟ್ಟಡ ವಿವಿಧ ಸ್ಥಳಗಳಲ್ಲಿ ನಾಡಿನ ಖ್ಯಾತ ಕಲಾವಿದರ ವರ್ಣಚಿತ್ರಗಳು ಮತ್ತು ತೈಲಚಿತ್ರಗಳನ್ನು ನೇತು ಹಾಕಿ ನಡುನಡುವೆ ಅಲ್ಲೊಂದು ಇಲ್ಲೊಂದು ಹೂದಾನಿಗಳನ್ನಿಟ್ಟರೆ ಗ್ರಂಥಾಲಯದ ಅಂದ ಹೆಚ್ಚುತ್ತದೆ.

ಆ ಕಟ್ಟಡದ ವಿವಿಧ ಭಾಗಗಳಿಗೆ ಸುಣ್ಣಬಣ್ಣಗಳನ್ನು ವರ್ಷಕ್ಕೊಮ್ಮೆ ಮಾಡಿಸುವುದು, ಅಸಮರ್ಪಕವಾಗಿ ಕೆಲಸ ಮಾಡುವ ಫ್ಯಾನು ಮುಂತಾದ ವಿದ್ಯುದುಪಕರಣಗಳ ರಿಪೇರಿ, ಸತತ ಉಪಯೋಗದಿಂದ ಮುರಿದುಹೋಗಿರಬಹುದಾದ ಪೀಠೋಪಕರಣಗಳ ದುರಸ್ತಿ, ಕಟ್ಟಡದ ನೆಲ, ಗೋಡೆ, ಚಾವಣಿ ಮುಂತಾದೆಡೆ ಸಂಭವಿಸಿರಬಹುದಾದ ಜಖಂಗಳನ್ನು ಪತ್ತೆಮಾಡಿ ದುರಸ್ತಿಮಾಡುವುದು–ಇವುಗಳಿಂದ ಕಟ್ಟಡದ ಆಯುಷ್ಯ ಹೆಚ್ಚುತ್ತದಲ್ಲದೆ ಗ್ರಂಥಾಲಯ ಯಾವಾಗಲೂ ಅಂದವಾಗಿರುತ್ತದೆ.

ಉಪವನಗಳು: ಗ್ರಂಥಾಲಯ ಕಟ್ಟಡದ ಸುತ್ತಮುತ್ತ ಹಚ್ಚಹಸುರಾದ ಹುಲ್ಲುಗಾವಲುಗಳೂ ಆಕರ್ಷಕ ಉಪವನಗಳೂ ಇದ್ದರೆ ಉತ್ತಮ. ಸಾಮಾನ್ಯವಾಗಿ ಕಟ್ಟಡ ರಚನೆಗಾಗಿ ಮಂಜೂರಾದ ಹಣದಲ್ಲೇ ಉಪವನ ಹಾಗೂ ಹುಲ್ಲುಗಾವಲುಗಳ ನಿರ್ಮಾಣಕ್ಕೂ ಅವಕಾಶ ನೀಡಲಾಗುತ್ತದೆ.

ವಾಹನಗಳ ನಿಲುಗಡೆ ಸ್ಥಳ: ಸೈಕಲ್ಲು, ಸ್ಕೂಟರು, ಕಾರು–ಮುಂತಾದ ವಾಹನಗಳನ್ನು ನಿಲ್ಲಿಸಲು ಗ್ರಂಥಾಲಯದ ಕಟ್ಟಡದ ಹಿಂಭಾಗದಲ್ಲಿ ಸ್ಥಳಾವಕಾಶವಿರುತ್ತದೆ. ಅತ್ಯಾಧುನಿಕ ಗ್ರಂಥಾಲಯಗಳಲ್ಲಿ ನಿಲ್ದಾಣ ಭೂಗತವಾಗಿರುತ್ತದೆ ಇಲ್ಲವೆ ಅಟ್ಟಣೆಗಳಂತೆ ಒಂದರ ಮೇಲೆ ಒಂದು ಇರುತ್ತದೆ.

ಗ್ರಂಥಸಂಗ್ರಹಣೆ ವಿಪುಲವಾಗಿ ಬೆಳೆಯುತ್ತಿರುತ್ತದಾದ ಕಾರಣ ಸ್ಥಳ ಎಷ್ಟಿದ್ದರೂ ಸಾಕಾಗುವುದಿಲ್ಲ. ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಈಚೆಗೆ ಅನೇಕ ಅಂತಸ್ತುಗಳುಳ್ಳ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೆ. ಇಳಿದು ಹತ್ತಿಮಾಡಲು ಮೆಟ್ಟಲುಗಳಿರುತ್ತವೆ; ಲಿಫ್ಟ್ ಯಂತ್ರಗಳಿರುವುದೂ ಉಂಟು.

ಪ್ರವೇಶ ಹಾಗೂ ನಿರ್ಗಮ ದ್ವಾರ ಇಡೀ ಗ್ರಂಥಾಲಯಕ್ಕೆ ಒಂದೇ ಒಂದಿದ್ದರೊಳ್ಳೆಯದು. ಬೇರೆ ಬೇರೆ ಬಾಗಿಲುಗಳಿದ್ದರೂ ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಅವನ್ನು ಬಳಸಬೇಕು. ಗ್ರಂಥಾಲಯ ಆಗಿಂದಾಗ್ಗೆ ಕೊಳ್ಳುವ ಪುಸ್ತಕಗಳು, ಅಣಿಕಟ್ಟುಗಳು ಮುಂತಾದವನ್ನು ಒಳತರಲು ಮಹಾದ್ವಾರವನ್ನಲ್ಲದೆ ಇತರ ಬಾಗಿಲುಗಳನ್ನು ಬಳಸುವುದೊಳ್ಳೆಯದು.

ಗ್ರಂಥಾಲಯಗಳಲ್ಲಿ ಓದುಗರು ಹೆಚ್ಚು ಹೊತ್ತು ಇರುತ್ತಾರಾದ ಕಾರಣ ಒಳ್ಳೆಯ ಶೌಚಗೃಹಗಳು ಅಗತ್ಯವಾಗುತ್ತವೆ.

ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯ, ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್‌ನ ಗ್ರಂಥಾಲಯ, ಬೊಂಬಾಯಿ ವಿಶ್ವವಿದ್ಯಾಲಯ ಗ್ರಂಥಾಲಯ, ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾಲಯಗಳ ಗ್ರಂಥಾಲಯಗಳು–ಹೀಗೆ ವಿಶ್ವದ ಹಲವಾರು ಭಾಗಗಳಲ್ಲಿನ ಗ್ರಂಥಾಲಯಗಳು ಬೃಹತ್ ಕಟ್ಟಡಗಳಾಗಿದ್ದು ವಿಸ್ತರಣೆಗೆ ಸಾಕಷ್ಟು ಅವಕಾಶ ಮಾಡಿಕೊಂಡಿವೆ. ವಿದೇಶಗಳಲ್ಲಿ ಕಂಡುಬರುವ ಅನೇಕ ಅಂತಸ್ತುಗಳ ಗ್ರಂಥಾಲಯ ಕಟ್ಟಡಗಳು ಆ ಸ್ಥಳದ ಸೌಂದರ್ಯವನ್ನೂ ಹಿರಿಮೆಯನ್ನೂ ಹೆಚ್ಚಿಸಿವೆ. **(ಕೆ.ಎಸ್.ಡಿ.ಇ.;ಆರ್.ಎನ್.ಕೆ.)**

## IV ಗ್ರಂಥಾಲಯ ಪ್ರಕಾರಗಳು

ಗ್ರಂಥಾಲಯಗಳನ್ನು ಸಾರ್ವಜನಿಕ, ಶೈಕ್ಷಣಿಕ ಸಂಸ್ಥೆಗಳವು, ಮಕ್ಕಳಿಗೆ ಸಂಬಂಧಪಟ್ಟವು, ವಿಶಿಷ್ಟ, ರಾಷ್ಟ್ರೀಯ, ಸಂಪರ್ಕ– ಎಂಬ ಆರು ವಿಶಿಷ್ಟ ಪ್ರಕಾರಗಳಾಗಿ ವಿಂಗಡಿಸಿ ಅವಕ್ಕೆ ಸಂಬಂಧಿಸಿದ ವಿವರಗಳನ್ನು ಇಲ್ಲಿ ಕೊಟ್ಟಿದೆ.

ಸಾರ್ವಜನಿಕ ಗ್ರಂಥಾಲಯಗಳು: ಸಾರ್ವಜನಿಕರ ವಾಚನಾಭಿರುಚಿಯ, ಜ್ಞಾನಾರ್ಜನೆಯ ಅಗತ್ಯಗಳಿಗೆ ಅನುಗುಣವಾಗಿ ಅವರಿಗೆ ಬೇಕಾದ ಪುಸ್ತಕಗಳನ್ನೂ ಮಾಹಿತಿಗಳನ್ನೂ ಒದಗಿಸುವ ಗ್ರಂಥಾಲಯಗಳು. ಸಾರ್ವಜನಿಕರೆಂದರೆ ಮಕ್ಕಳೂ ಶಾಲಾ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿನಿಗಳೂ, ಶಿಕ್ಷಕರೂ ಕಚೇರಿಗಳಲ್ಲಿ ಕೆಲಸ ಮಾಡುವವರೂ ಕಾರ್ಖಾನೆ ಮುಂತಾದ ಕೈಗಾರಿಕ ಕ್ಷೇತ್ರಗಳಲ್ಲಿರುವವರೂ ಸಂಶೋಧಕರೂ ವಿವಿಧ ವಿಷಯಗಳಲ್ಲಿ ಆಸಕ್ತರೂ ಮುಂತಾಗಿ ಹಲವು ಬಗೆಯ ವ್ಯಕ್ತಿಗಳಿರುವುದರಿಂದ ಆಯಾ ವ್ಯಕ್ತಿಯ ಅಗತ್ಯಗಳು ವಿಭಿನ್ನವಾಗಿರುತ್ತವೆ. ಈ ಅಗತ್ಯಗಳನ್ನು ಪೂರೈಸಿಕೊಡಲು ನಗರಗಳಲ್ಲೂ ಪಟ್ಟಣಗಳಲ್ಲೂ ಗ್ರಾಮಾಂತರ ಪ್ರದೇಶಗಳಲ್ಲೂ ಸಾರ್ವಜನಿಕ ಗ್ರಂಥಾಲಯಗಳಿರುತ್ತವೆ.

ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪುಸ್ತಕಗಳ ವಿಂಗಡಣಾಕ್ರಮ ಹೀಗಿರುತ್ತದೆ; ಚಿಕ್ಕ ಚಿಕ್ಕ ಮಕ್ಕಳಿಗೆ ಬೇಕಾಗುವಂಥ ಯಕ್ಷಿಣಿ ಕಥೆಗಳಿರುವ ಪುಸ್ತಕಗಳು, ಚಿತ್ರ ಕಥೆಗಳಿರುವ ಪುಸ್ತಕಗಳು, ಪ್ರತಿಷ್ಠಿತ ವ್ಯಕ್ತಿಗಳ ಸರಳ ಜೀವನಚರಿತ್ರೆಗಳ ಪುಸ್ತಕಗಳು, ವಿಜ್ಞಾನ ವಿಷಯಗಳನ್ನು ಅತಿ ಸುಲಭದಲ್ಲಿ ತಿಳಿಸಿಕೊಡುವಂಥ ಸಚಿತ್ರ ಪುಸ್ತಕಗಳು, ಸ್ಥಳಪರಿಚಯ ಮಾಡಿಕೊಡುವಂಥ

ಸಣ್ಣ ಸಣ್ಣ ಪುಸ್ತಕಗಳು ಇರುತ್ತವೆ. ಈ ಪುಸ್ತಕಗಳನ್ನು ಮಕ್ಕಳಾಗಲೀ ಅಥವಾ ಅವರ ಪರವಾಗಿ ಅವರ ತಾಯಿತಂದೆಗಳೋ ಪೋಷಕರೋ ಎರವಲು ಪಡೆಯಲು ಅವಕಾಶವಿರುತ್ತದೆ.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅವರ ಅಗತ್ಯಗಳನ್ನನುಸರಿಸಿ ಸೂಕ್ತವಾದ ಪುಸ್ತಕಗಳನ್ನು ಒದಗಿಸಲಾಗುತ್ತದೆ. ಪಠ್ಯಪುಸ್ತಕಗಳು, ಪರಾಮರ್ಶನ ಪುಸ್ತಕಗಳು, ನೀತಿಬೋಧಪ್ರದ ಕಥೆಗಳಿರುವ ಪುಸ್ತಕಗಳು, ಚರಿತ್ರೆ, ಭೂಗೋಳ, ಸಮಾಜಶಾಸ್ತ್ರ, ವಿಜ್ಞಾನಶಾಸ್ತ್ರಗಳು–ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳೂ ಇರುತ್ತವೆ. ಇವಲ್ಲದೆ ಭಾಷೆಗಳಿಗೆ ಸಂಬಂಧಿಸಿದ ಪುಸ್ತಕಗಳೂ ಆಯಾ ಭಾಷೆಗಳಲ್ಲಿನ ಕಥೆ ಕಾದಂಬರಿಗಳೂ ಕವನ ಸಂಗ್ರಹಗಳೂ ಇರುತ್ತವೆ.

ಶಿಕ್ಷಕರಿಗೆ ಅನುಕೂಲವಾಗುವಂತೆ ಒಂದು ವಿಷಯದ ಬೋಧನಾಕ್ರಮವನ್ನು ತಿಳಿಸುವ ಪುಸ್ತಕಗಳೂ ಪರಾಮರ್ಶನ ಗ್ರಂಥಗಳೂ ಅವರ ಸಾಮಾನ್ಯಜ್ಞಾನವನ್ನು ವೃದ್ಧಿಸಲು ಸಹಕಾರಿಯಾಗುವಂಥ ಪುಸ್ತಕಗಳೂ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಾಣಬರುತ್ತವೆ. ಒಂದು ವಿಷಯವನ್ನು ಕುರಿತು ಅಧ್ಯಯನ ಸಂಶೋಧನೆಗಳನ್ನು ನಡೆಸುವವರ ಅನುಕೂಲಕ್ಕಾಗಿ ಅಪೂರ್ವ ಗ್ರಂಥಗಳನ್ನು ಸಂಗ್ರಹಿಸಿಟ್ಟು, ಅವನ್ನು ಪರಾಮರ್ಶೆಗೆ ನೀಡಲಾಗುತ್ತದೆ. ಕೆಲವಾರು ಗ್ರಂಥಗಳನ್ನು ವಿಶೇಷ ಅಪ್ಪಣೆಯ ಮೇಲೆ ಅಗತ್ಯವನ್ನನುಸರಿಸಿ ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ಎರವಲು ಕೊಡುವ ಪದ್ಧತಿಯೂ ಕೆಲವು ಗ್ರಂಥಾಲಯಗಳಲ್ಲಿ ಉಂಟು.

ಕಚೇರಿಗಳಲ್ಲೋ ಕಾರ್ಖಾನೆಗಳಲ್ಲೋ ದಿನವಿಡೀ ದುಡಿಯುವವರಿಗೆ ತಮ್ಮ ವಿರಾಮ ವೇಳೆಯಲ್ಲಿ ಮನೋಲ್ಲಾಸಕ್ಕಾಗಿಯೋ ಜುಗುಪ್ಸಾ ನಿವಾರಣೆಗೋ ಕಾದಂಬರಿಗಳನ್ನು ಓದುವ ಪದ್ಧತಿಯಿದೆಯಾದ ಕಾರಣ ಅವರ ಅಗತ್ಯಕ್ಕೆ ತಕ್ಕಂತೆ ಒಂದು ಭಾಷೆಯಲ್ಲಿ ಪ್ರಕಟವಾಗಿರುವಂಥ ಜನಪ್ರಿಯ ಕಾದಂಬರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಸಂಗ್ರಹಿಸಿಡಬೇಕಾಗುತ್ತದೆ. ಕಾದಂಬರಿಗಳನ್ನು ಓದುವ ಹವ್ಯಾಸ ಯುವ ಜನಾಂಗದಲ್ಲೂ ಗೃಹಿಣಿಯರಲ್ಲೂ ಹೆಚ್ಚಿರುವ ಕಾರಣ ಕಥೆ ಕಾದಂಬರಿಗಳ ಅಗತ್ಯ ಇನ್ನೂ ಹೆಚ್ಚುತ್ತಿದೆ.

ಒಂದು ದೇಶದ ಪುರಾಣಕಥೆಗಳ ಮತ್ತು ಧರ್ಮಶಾಸ್ತ್ರಗಳ ಬಗ್ಗೆಯೂ ಪುಸ್ತಕಗಳನ್ನೂ ಗ್ರಂಥಗಳನ್ನೂ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಾಣಬಹುದು.

ಸಾರ್ವಜನಿಕ ಗ್ರಂಥಾಲಯಗಳು ಸಾರ್ವಜನಿಕರಿಗೆ ಗ್ರಂಥಗಳನ್ನೂ ಪುಸ್ತಕಗಳನ್ನೂ ಎರವಲು ಕೊಡುವುದಲ್ಲದೆ ವಾಚನಾಲಯದ ಸೌಲಭ್ಯವನ್ನೂ ಒದಗಿಸುತ್ತವೆ. ವೃತ್ತಪತ್ರಿಕೆಗಳನ್ನೂ ನಿಯತಕಾಲಿಕೆಗಳನ್ನೂ ಇನ್ನಿತರ ಅನಿಯತಕಾಲಿಕೆಗಳನ್ನೂ ವಾಚನಾಲಯಕ್ಕೆ ತರಿಸುವುದುಂಟು.

**ಆಡಳಿತ ಮತ್ತು ಕಾರ್ಯವ್ಯಾಪ್ತಿ:** ಸಾರ್ವಜನಿಕ ಗ್ರಂಥಾಲಯಗಳು ಸಾಮಾನ್ಯವಾಗಿ ಒಂದು ರಾಜ್ಯದ ಸರ್ಕಾರದ ವತಿಯಲ್ಲೋ ಅಥವಾ ಖಾಸಗೀ ಸಂಘ ಸಂಸ್ಥೆಗಳ ಆಶ್ರಯದಲ್ಲೋ ನಡೆಯುತ್ತಿರುತ್ತವೆ. ಆಂಡ್ರ್ಯೂ ಕಾರ್ನೇಗಿಯವರಂಥ ಶ್ರೀಮಂತರಿಂದ ಅಮೆರಿಕದ ಸಂಯುಕ್ತಸಂಸ್ಥಾನಗಳು ಮತ್ತು ಗ್ರೇಟ್‌ಬ್ರಿಟನ್‌ಗಳಲ್ಲಿ 19ನೆಯ ಮತ್ತು 20ನೆಯ ಶತಮಾನಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದದ್ದೂ ಉಂಟು. ರಾಜ್ಯಸರ್ಕಾರದ ಆಶ್ರಯದಲ್ಲಿ ನಡೆಯುವ ಸಾರ್ವಜನಿಕ ಗ್ರಂಥಾಲಯಗಳ ಆಡಳಿತವನ್ನು ನೋಡಿಕೊಳ್ಳುವ ಸಲುವಾಗಿ ಗ್ರಂಥಾಲಯ ಇಲಾಖೆಗಳನ್ನು ಆಯಾ ಸರ್ಕಾರಗಳು ತೆರೆದಿವೆ. ಇಂಥ ಕ್ರಮ ಭಾರತದಲ್ಲಿ ಉಂಟು. ರಾಜ್ಯಗಳಲ್ಲಿರುವ ನಗರಗಳಲ್ಲೂ ಪಟ್ಟಣಗಳಲ್ಲೂ ನಗರಕೇಂದ್ರ ಗ್ರಂಥಾಲಯಗಳನ್ನು ತೆರೆದಿದ್ದು ಅವುಗಳ ಮೇಲ್ವಿಚಾರಣೆಗೆ ಒಬ್ಬೊಬ್ಬ ಗ್ರಂಥಪಾಲನನ್ನೂ ಕಚೇರಿ ಸಿಬ್ಬಂದಿ ವರ್ಗದವರನ್ನೂ ರಾಜ್ಯಸರ್ಕಾರ ನೇಮಿಸುತ್ತದೆ. ನಗರ ಕೇಂದ್ರ ಗ್ರಂಥಾಲಯಗಳಲ್ಲದೆ ಗ್ರಂಥಾಲಯ ಶಾಖೆಗಳೂ ಇರುವುದುಂಟು. ನಗರ ಕೇಂದ್ರಗಂಥಾಲಯಗಳ ಮತ್ತು ಪಟ್ಟಣ ಕೇಂದ್ರಗ್ರಂಥಾಲಯಗಳ ಒಟ್ಟಾರೆ ಮೇಲ್ವಿಚಾರಣೆಯನ್ನು ರಾಜ್ಯದ ರಾಜಧಾನಿಯಲ್ಲಿರುವ ಕೇಂದ್ರ ಗ್ರಂಥಾಲಯ ನಿರ್ವಹಿಸುತ್ತದೆ. ಗ್ರಂಥಾಲಯವನ್ನು ಓರಣವಾಗಿಟ್ಟುಕೊಳ್ಳುವುದರ ಬಗ್ಗೆ ಶಿಕ್ಷಣವನ್ನೀಯುವ ತರಬೇತಿ ಶಿಬಿರಗಳನ್ನು ರಾಜ್ಯಗಳ ಕೇಂದ್ರ ಗ್ರಂಥಾಲಯಗಳು ನಡೆಸುತ್ತವೆ. ಗ್ರಂಥಪಾಲರ ಕರ್ತವ್ಯಗಳ ನಿರೂಪಣೆ, ಕಚೇರಿಯ ಸಿಬ್ಬಂದಿ ವರ್ಗದವರ ವೇತನ ವ್ಯವಸ್ಥೆ, ತರಿಸಬೇಕಾದ ಗ್ರಂಥಗಳ ನಿಯತಕಾಲಿಕೆಗಳ ಬಗ್ಗೆ ನಿರ್ದೇಶನ ನೀಡುವುದು–ಮುಂತಾದ ವಿಷಯಗಳು ಕೇಂದ್ರಗ್ರಂಥಾಲಯಕ್ಕೆ ಸೇರಿದುವು. ಕೆಲಸ ನಿರ್ವಹಣೆಗೆ ಅನುಕೂಲವಾಗುವಂತೆ ಸಲಹಾ ಮಂಡಲಿಗಳೂ ಸಾರ್ವಜನಿಕರ ಅಗತ್ಯಗಳನ್ನು ಕುರಿತಂತೆ ಶಿಫಾರಸುಗಳನ್ನು ಮಾಡಲು ರಚಿತವಾಗಿರುವ ಉಪಗ್ರಂಥಾಲಯ ಸಮಿತಿಗಳೂ ಇರುತ್ತವೆ.

ಖಾಸಗೀ ಸಂಘ ಸಂಸ್ಥೆಗಳ ಆಶ್ರಯದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳಿಗೆ ವಾರ್ಷಿಕ ಧನಸಹಾಯವನ್ನೂ ಕೆಲವಾರು ಪುಸ್ತಕಗಳನ್ನೂ ಕೇಂದ್ರ ಗ್ರಂಥಾಲಯ ಇಲಾಖೆ ನೀಡುತ್ತದೆ. ಧನಸಹಾಯದಿಂದ ಖಾಸಗೀ ಸಾರ್ವಜನಿಕ ಗ್ರಂಥಾಲಯಗಳು ತಮಗೆ ಬೇಕಾಗಿರುವ ಪುಸ್ತಕಗಳನ್ನು ಕೊಳ್ಳುವುದೂ ಗ್ರಂಥಾಲಯವನ್ನು ಓರಣವಾಗಿಟ್ಟುಕೊಳ್ಳುವುದೂ ಸಾಧ್ಯವಾಗಿದೆ. ಖಾಸಗೀ ಸಂಘ ಸಂಸ್ಥೆಗಳು ನಡೆಸುತ್ತಿರುವ ಗ್ರಂಥಾಲಯಗಳು ಸದಸ್ಯತ್ವದ ವಿಚಾರದಲ್ಲಿ ತಮ್ಮವೇ ಆದ ಕೆಲವು ನಿಬಂಧನೆಗಳನ್ನು ರೂಪಿಸಿಕೊಂಡು ಸಾರ್ವಜನಿಕರ ಮತ್ತು ತನ್ನ ಸದಸ್ಯರ ಬೇಡಿಕೆಗಳನ್ನು ಪೂರೈಸುತ್ತವೆ.

**ಸದಸ್ಯತ್ವ :** ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸಾರ್ವಜನಿಕರ ಬೇಡಿಕೆಗಳನ್ನು ಪೂರೈಸುವ ಸಲುವಾಗಿಯೋ ರಾಜ್ಯಸರ್ಕಾರಕ್ಕೆ ಅದರಿಂದ ತಗಲುವ ವೆಚ್ಚವನ್ನು ತುಂಬಿಸಿಕೊಡುವ ಸಲುವಾಗಿಯೋ ಸಾರ್ವಜನಿಕರಿಂದ ಎಚ್ಚರಿಕೆಯ ಹಣವನ್ನು (ಕಾಷನ್ ಡೆಪಾಸಿಟ್) ಸ್ವೀಕರಿಸಿ ಅವರಿಗೆ ಸದಸ್ಯತ್ವದ ಕಾರ್ಡುಗಳನ್ನು ನೀಡುವ ಕ್ರಮ ಇದೆ. ಒಬ್ಬ ವ್ಯಕ್ತಿ ಒಂದು ಸಲಕ್ಕೆ ಎರವಲು ಪಡೆಯಬಹುದಾದ ಪುಸ್ತಕಗಳ ಸಂಖ್ಯೆಗೆ ಮಿತಿ ಉಂಟು. ತನ್ನ ಸದಸ್ಯತ್ವವನ್ನು ಮುಂದುವರಿಸಲಿಚ್ಛಿಸದಿರುವ ವ್ಯಕ್ತಿಗೆ ಎಚ್ಚರಿಕೆಯ ಹಣವನ್ನು ಹಿಂತಿರುಗಿಸಲಾಗುತ್ತದೆ.

**ಸೇವಾವ್ಯವಸ್ಥೆ :** ಉತ್ತಮ ವ್ಯವಸ್ಥೆ ಇರುವ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಒಂದು ಕ್ರಮಬದ್ಧರೀತಿಯಲ್ಲಿ ವರ್ಗೀಕರಿಸಿ ಸಾರ್ವಜನಿಕರು ಅತಿ ಕಡಿಮೆ ಸಮಯದಲ್ಲಿ ತಮಗೆ ಬೇಕಾದ ಪುಸ್ತಕಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಿರುತ್ತಾರೆ. ಪುಸ್ತಕಗಳು ತೆರೆದ ಕಪಾಟುಗಳಲ್ಲಿರುವುದರಿಂದ ಸಾರ್ವಜನಿಕರು ಸದಸ್ಯರಾಗಿರಲೀ ಆಗದಿರಲೀ ಯಾವ ಪುಸ್ತಕವನ್ನಾದರೂ ಅವಲೋಕಿಸಲು ಅವಕಾಶವಿರುತ್ತದೆ. ಸಾರ್ವಜನಿಕರ ಅನುಕೂಲಕ್ಕಾಗಿ ಲೇಖಕರ ವರ್ಗೀಕೃತ ಸೂಚಿಗಳೂ ವಿಷಯ ವರ್ಗೀಕೃತ ಸೂಚಿಗಳೂ ಇರುತ್ತವೆ. ಇವಲ್ಲದೆ ಪುಸ್ತಕಗಳನ್ನು ಎರವಲು ಪಡೆಯಲು ಸಹಾಯಮಾಡುವ ಸಹಾಯಕರೂ ಗ್ರಂಥಾಲಯದಲ್ಲಿ ಇರುತ್ತಾರೆ. ವಿಶೇಷ ಮಾಹಿತಿಗಳನ್ನು ನೀಡುವ ಸಲುವಾಗಿಯೇ ವಿಚಾರಣಾ ವಿಭಾಗವೊಂದು ಇರುತ್ತದೆ.

ಕೇವಲ ಪುಸ್ತಕಗಳಲ್ಲದೆ ಸಾರ್ವಜನಿಕರಿಗೆ ವೃತ್ತಪತ್ರಿಕೆಗಳನ್ನೂ ನಿಯತಕಾಲಿಕೆಗಳನ್ನೂ ಒದಗಿಸಿ ಅವರ ವಾಚನಾಭಿರುಚಿಗೆ ಪೋಷಕವಾಗುವಂಥ ವಾಚನಾಲಯಗಳೂ ಗ್ರಂಥಾಲಯಕ್ಕೆ ಸೇರಿದಂತಿರುತ್ತವೆ.

ಕೇವಲ ಪುಸ್ತಕಗಳನ್ನು ವೃತ್ತಪತ್ರಿಕೆಗಳನ್ನು ನಿಯತಕಾಲಿಕೆಗಳನ್ನು ಸಂಗ್ರಹಿಸಿ, ವಿತರಣೆಮಾಡುವ ಕೆಲಸವನ್ನಲ್ಲದೆ ಸಾರ್ವಜನಿಕ ಗ್ರಂಥಾಲಯಗಳು ಇತ್ತೀಚೆಗೆ ಧ್ವನಿಮುದ್ರಿತ ತಟ್ಟೆಗಳನ್ನೂ ಟೇಪುಗಳನ್ನೂ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಮೈಕ್ರೊಫಿಲ್ಮ್‌ಗಳನ್ನೂ ಚಲನಚಿತ್ರಗಳನ್ನೂ ಸಂಗ್ರಹಿಸಿಕೊಂಡು ಬೇಡಿಕೆ ಬಂದಾಗ ಅವನ್ನೂ ಸಾರ್ವಜನಿಕರಿಗೆ ಸಂಘಸಂಸ್ಥೆಗಳಿಗೆ ನೀಡಿ ಜ್ಞಾನಾರ್ಜನೆಗೆ ಹೆಚ್ಚಿನ ಅವಕಾಶಗಳನ್ನೂ ಒದಗಿಸುತ್ತಿದೆ.

(ಕೆ.ಎಸ್.ಡಿಇ.;ಟಿ.ಎಲ್.ಬಿ.)

**ಸಂಚಾರಿ ಗ್ರಂಥಾಲಯಗಳು :** ಸ್ಥಾವರ ಗ್ರಂಥಾಲಯಗಳು ಒಂದೆಡೆ ನೆಲೆಯಾಗಿದ್ದು ಓದುಗರಿಗೆ ವಾಚನಸೌಲಭ್ಯವನ್ನೊದಗಿಸುತ್ತವೆ. ಸಂಚಾರಿ ಗ್ರಂಥಾಲಯಗಳಾದರೋ ಜಂಗಮ ಗ್ರಂಥಾಲಯಗಳು. ಈಚೆಗಂತೂ ಇವು ಅನೇಕ ದೊಡ್ಡ ಸಾರ್ವಜನಿಕ ಗ್ರಂಥಾಲಯಗಳ




ಸಂಚಾರಿ ಗ್ರಂಥಾಲಯ

ಅನಿವಾರ್ಯ ಅಂಗಗಳಾಗಿದ್ದು, ಸ್ಥಳದಿಂದ ಸ್ಥಳಕ್ಕೆ ಹೋಗಿ ಓದುಗರಿಗೆ ಅವರಿದ್ದಲ್ಲಿಯೇ ಪುಸ್ತಕಗಳನ್ನು ಒದಗಿಸುತ್ತವೆ. ಯಾವಾಗಲೂ ಅಲ್ಲದಿದ್ದರೂ ಅನೇಕ ವೇಳೆ ಗ್ರಾಮಾಂತರ ಜನ ಸಮುದಾಯಕ್ಕೆ ಗ್ರಂಥಾಲಯ ಸೌಲಭ್ಯವನ್ನು ನೀಡುವುದಕ್ಕೆಂದೇ ಇವು ನಿರ್ದೇಶಿತವಾದವು. ಸಾರ್ವಜನಿಕ ಗ್ರಂಥಾಲಯಗಳು ತಮ್ಮ ಸೇವಾಕ್ಷೇತ್ರವನ್ನು ದೂರ ಪ್ರದೇಶಗಳಿಗೆ ವಿಸ್ತರಿಸಿದಾಗ ಸಂಚಾರಿ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು. ಇಂಗ್ಲೆಂಡಿನಲ್ಲಿ ಅನೇಕ ಮುನಿಸಿಪಲ್ ಮತ್ತು ಕೌಂಟಿ ಗ್ರಂಥಾಲಯಗಳು ಈ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುತ್ತಿವೆ. ಏಷ್ಯ, ಆಫ್ರಿಕ ಮತ್ತು ಮಧ್ಯಪ್ರಾಚ್ಯದ ಬಹುಭಾಗಗಳಲ್ಲಿ ಗ್ರಂಥಾಲಯ

ಸೇವೆಯ ಅಭಿವೃದ್ಧಿಯಲ್ಲಿ ಸಂಚಾರಿ ಗ್ರಂಥಾಲಯಗಳು ಗಮನಾರ್ಹ ಕಾಣಿಕೆ ನೀಡುತ್ತಿವೆ. ಕೌಂಟಿ ಗ್ರಂಥಾಲಯ ವ್ಯವಸ್ಥೆಯಲ್ಲಿ ಚಲಿಸುವ ಗ್ರಂಥಾಲಯ ಶಾಖೆಗೂ ಸ್ಥಳದಿಂದ ಸ್ಥಳಕ್ಕೆ ಚಲಿಸುವ ಗ್ರಂಥಾಲಯಗಳಿಗೂ ವ್ಯತ್ಯಾಸ ಕಲ್ಪಿಸಲಾಗಿದೆ. ಚಲಿಸುವ ಗ್ರಂಥಾಲಯ ಶಾಖೆ ಮಧ್ಯಮ ಗಾತ್ರದ ಅಥವಾ ದೊಡ್ಡ ಒಂದು ವಾಹನದಲ್ಲಿ 2000ಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಜೋಡಿಸಿಕೊಂಡು ಗ್ರಾಮ ಪ್ರದೇಶಗಳಿಗೆ ಹೋಗಿ ವ್ಯವಹಾರ ನಡೆಸುತ್ತದೆ. ಸ್ಥಳದಿಂದ ಸ್ಥಳಕ್ಕೆ ಪ್ರಯಾಣ ನಡೆಸುವ ಗ್ರಂಥಾಲಯದ ವಾಹನ ಇನ್ನೂ ಚಿಕ್ಕದು. ಇಲ್ಲಿರುವ ಪುಸ್ತಕಗಳ ಸಂಖ್ಯೆಯೂ ಕಡಿಮೆ. ಚದರಿದ ಜನಸಮುದಾಯಗಳಿಗೆ ಇವುಗಳ ಸೇವೆ ಲಭ್ಯ. ಕೆಲವು ಸಂದರ್ಭಗಳಲ್ಲಿ ಮನೆಬಾಗಿಲಿಗೆ ಸೇವಾ ಸೌಲಭ್ಯವನ್ನು ಒದಗಿಸುವುದೂ ಉಂಟು. ದೂರದ ಮೂಲೆ ಮೂಲೆಯ ಹಳ್ಳಿಗಳಿಗೆ ಇದು ಉಪಯುಕ್ತ.

ಸಂಚಾರಿ ಗ್ರಂಥಾಲಯವೊಂದರ ಅತಿಪ್ರಾಚೀನ ದಾಖಲೆಯೆಂದರೆ, 1860ರ ಜನವರಿ 21ರಂದು ಇಲಸ್ಟ್ರೇಟೆಡ್ ಲಂಡನ್ ನ್ಯೂಸ್ ಪತ್ರಿಕೆಯಲ್ಲಿ ಕಾಣಿಸಿಕೊಂಡದ್ದು. ಕುದುರೆ ಹೂಡಿದ್ದ ಈ ಸಂಚಾರಿ ಗ್ರಂಥಾಲಯವನ್ನು 1859ರಲ್ಲಿ ಲಂಕಾಷೈರ್‌ನ ವಾರಿಂಗ್‌ಟನ್ ಎಂಬಲ್ಲಿ ಸ್ಥಾಪಿಸಲಾಯಿತು. ಅದನ್ನು ಸ್ಥಾಪಿಸಿದ ಕಾರ್ಮಿಕರ ಸಂಸ್ಥೆ ಅದಕ್ಕೆ ಕೊಟ್ಟಿದ್ದ ಹೆಸರು ಪೆರಾಂಬುಲೇಟಿಂಗ್ ಲೈಬ್ರರಿ ಎಂಬುದಾಗಿ. ಕಾರ್ಮಿಕ ಜನರಿಗೆ ವಾಚನ ಸಾಮಗ್ರಿಯನ್ನು ಒದಗಿಸುತ್ತ ಅದು ಮನೆಯಿಂದ ಮನೆಗೆ ಹೋಗುತ್ತಿತ್ತು.

ದಾಖಲೆಯಿರುವ ಮೊದಲ ಸಾರ್ವಜನಿಕ ಸಂಚಾರಿ ಗ್ರಂಥಾಲಯ ಅಮೆರಿಕದ ಮೇರಿ ಲ್ಯಾಂಡ್ ಎಂಬಲ್ಲಿತ್ತು. ಹ್ಯಾಗರ್‌ಸ್ಟೌನ್ ಎಂಬ ಗ್ರಾಮಾಂತರ ಜಿಲ್ಲೆಯಲ್ಲಿದ್ದ ಈ ಗ್ರಂಥಾಲಯ 1907ರಲ್ಲಿ ಕೆಲಸ ಪ್ರಾರಂಭಿಸಿತು. ಗ್ರಂಥಸಂಗ್ರಹದ ವಾಹನವನ್ನು ಮೊದಲಿಗೆ ಎರಡು ಕುದುರೆಗಳು ಎಳೆಯುತ್ತಿದ್ದುವೆನ್ನಲಾಗಿದೆ.

ಹೊಸ ಹೊಸ ಭಾವನೆಗಳನ್ನು, ವಿಚಾರಗಳನ್ನು, ವಿಶೇಷವಾಗಿ ಸಾರಿಗೆ ಕ್ಷೇತ್ರದಲ್ಲಿ, ಲಾಭದಾಯಕವಾಗಿ ಬಳಸಿಕೊಳ್ಳುವುದರಲ್ಲಿ ಅಧಿಕ ಸಾಮರ್ಥ್ಯ ಹೊಂದಿರುವ ಅಮೆರಿಕನ್ನರು, ಸಂಚಾರಿ ಗ್ರಂಥಾಲಯ ಸೇವಾಕ್ಷೇತ್ರದಲ್ಲಿ ಆಗಿನಿಂದಲೂ ಮುಂದಾಗಿಯೇ ಇದ್ದಾರೆ. 1944ರಲ್ಲಿ ಅವರ ಬಳಿ ಕಾರ್ಯಪ್ರವೃತ್ತವಾಗಿದ್ದ 300 ವಾಹನಗಳಿದ್ದರೆ 1959ರಲ್ಲಿ 1000ಕ್ಕಿಂತ ಹೆಚ್ಚಿದ್ದುವು. ಈಗ ಅವು ಅಪಾರವಾಗಿವೆ. 1961ರಲ್ಲಿ ಕೆಂಟಕಿಯಲ್ಲಿ ಒಂದೇ ದಿನ 87 ಸಂಚಾರಿ ಗ್ರಂಥಾಲಯಗಳನ್ನು ಸ್ಥಾಪಿಸಲಾಯಿತು.

ಅಮೆರಿಕದಲ್ಲಿ ಸಂಚಾರಿ ಗ್ರಂಥಾಲಯಗಳನ್ನು ಸ್ಥಾಪಿಸಲು ಮುಂದಾದವರು ಗ್ರಾಮಾಂತರ ಗ್ರಂಥಾಲಯ ಅಧಿಕಾರಿಗಳು. ಬ್ರಿಟನ್ನಿನಲ್ಲಾದರೆ ಪಟ್ಟಣಿಗರು.

1931ರಲ್ಲಿ ಮ್ಯಾಂಚೆಸ್ಟರಿನ ಹಳೆಯ ಒಂದು ಬಸ್ಸನ್ನು ಸಜ್ಜುಗೊಳಿಸಿಕೊಂಡು ಒಂದು ಸಂಚಾರಿ ಗ್ರಂಥಾಲಯವನ್ನು ಆರಂಭಿಸಿತು. ಕೌಂಟಿ ಗ್ರಂಥಾಲಯಗಳಲ್ಲಿ ಮೊದಲನೆಯದಾಗಿ ಕೆಂಟಿನಲ್ಲಿ 1935ರಲ್ಲಿ ಅನಂತರ ಲಂಕಾಷೈರ್‌ನಲ್ಲಿ 1938ರಲ್ಲಿ ವಾಹನಗಳ ಬಳಕೆ ಪ್ರಾರಂಭವಾಯಿತು. ಆದರೆ ಯುದ್ಧದಿಂದಾಗಿ ಈ ಪ್ರಗತಿಯೆಲ್ಲ ಕುಸಿದುಬಿದ್ದಿತು. 1946ರ ವೇಳೆಗೆ ಎಲ್ಲೋ ಬೆರಳೆಣಿಕೆಯಷ್ಟು ಸಂಚಾರಿ ಗ್ರಂಥಾಲಯಗಳು, ಮುಖ್ಯವಾಗಿ ಪಟ್ಟಣಗಳಲ್ಲಿ, ಉಳಿದುಕೊಂಡಿದ್ದುವು. ಯುದ್ಧ ಮುಗಿದ ಮೇಲೂ ಕೌಂಟಿ ಗ್ರಂಥಾಲಯಗಳು ಮಂದಗತಿಯಲ್ಲೇ ಇದ್ದುವು. ವಾಸ್ತವವಾಗಿ ಈ ಜಡತ್ವಹೋಗಿ ಚುರುಕು ಬಂದದ್ದು 1950ರ ಅನಂತರವೇ. ಈ ವೇಳೆಗೆ, ಮುಂದುವರಿದಿದ್ದ ಅನೇಕ ಕೌಂಟಿಗಳು, ತಮ್ಮ ಗ್ರಾಮಾಂತರ ಗ್ರಂಥಾಲಯಗಳನ್ನು ರದ್ದುಪಡಿಸಿ ಸಂಚಾರಿ ಗ್ರಂಥಾಲಯಗಳ ಮೂಲಕ ಅದೇ ಸೇವೆಯನ್ನು ಒದಗಿಸುವ ಆಲೋಚನೆ ಮಾಡಿದುವು. ಕಳೆದ 15 ವರ್ಷಗಳಲ್ಲಿ ಪ್ರತಿಯೊಂದು ಇಂಗ್ಲಿಷ್ ಕೌಂಟಿ ಗ್ರಂಥಾಲಯಕ್ಕೂ ಕೊನೆಯ ಪಕ್ಷ ಒಂದು ಸಂಚಾರಿ ಗ್ರಂಥ ಭಂಡಾರವಿದೆ. ಈಗ 3–4 ದಶಲಕ್ಷ ಜನಗಳಿಗೆ ಸೇವೆ ಸಲ್ಲಿಸುತ್ತಿರುವ 300ಕ್ಕಿಂತ ಹೆಚ್ಚಿನ ಸಂಚಾರಿ ಗ್ರಂಥಾಲಯಗಳು ಚಾಲ್ತಿಯಲ್ಲಿವೆ.

ಅಮೆರಿಕ ಹಾಗೂ ಇಂಗ್ಲೆಂಡುಗಳೆರಡರಲ್ಲೂ ಗ್ರಂಥವಿತರಣೆಗಾಗಿ ದಿನೇ ದಿನೇ ಹೆಚ್ಚು ಹೆಚ್ಚು ದೊಡ್ಡದಾದ ವಾಹನಗಳನ್ನು ಕೊಳ್ಳಬೇಕೆಂಬ ಮನೋಭಾವ ಕಂಡುಬರುತ್ತಿದೆ. ನಿದರ್ಶನಕ್ಕೆ ಹೇಳುವುದಾದರೆ ಮೊದಲನೆಯ ಲಂಕಾಷೈರ್ ಸಂಚಾರಿ ಗ್ರಂಥಾಲಯಕ್ಕೆ ಎರಡು ಟನ್ ತೂಕವಿರುವ ಒಂದು ಬೆಡ್‌ಫರ್ಡ್ ಗಾಡಿ ಇತ್ತು. ಹಲವು ಸಂಸ್ಥೆಗಳು 15–30 ಹಂಡ್ರಡ್‌ವೇಟ್ ವ್ಯಾನುಗಳನ್ನು ಬಳಸುತ್ತಿದ್ದುವು. ಈಚಿನ ದಿನಗಳಲ್ಲಿ ಅತ್ಯಂತ ದೂರದ ಗ್ರಾಮಾಂತರ ಪ್ರದೇಶಗಳಲ್ಲಿಯೂ 3–4 ಟನ್ನು ತೂಕದ ಗಾಡಿಗಳನ್ನು ಬಳಸುತ್ತಿದ್ದಾರೆ. ಸುಮಾರು 2,000 ಪುಸ್ತಕಗಳ ಪ್ರದರ್ಶನ ಅವುಗಳಲ್ಲಿರುತ್ತದೆ.

ವಾಹನಕ್ಕೆ ಬಳಸಿದ ಷಾಸಿಯ ಗಾತ್ರವನ್ನು ಅನುಸರಿಸಿ ಗ್ರಂಥಾಲಯದ ಸಂಗ್ರಹ 700ರಿಂದ ಮೊದಲುಗೊಂಡು 3,000ಕ್ಕಿಂತಲೂ ಹೆಚ್ಚಾಗಿರಬಹುದು. ಪುಸ್ತಕಗಳನ್ನು ತೆರೆದ ಕಪಾಟುಗಳಲ್ಲಿ ಇಟ್ಟು, ಹೆಚ್ಚಿನ ಪುಸ್ತಕಗಳನ್ನು ವಿಶೇಷವಾಗಿ ನಿರ್ಮಿಸಲಾದ ಬೀರುಗಳಲ್ಲೋ ಹೊರಗಿನ ದಾಸ್ತಾನುಖಾನೆಗಳಲ್ಲೋ ಇಟ್ಟಿರುತ್ತಾರೆ. ಕಟ್ಟುನಿಟ್ಟಾಗಿ ಒಂದೇ ವಾಹನ ಇರಬೇಕೆಂದಿಲ್ಲ. ಅಂಥವುಗಳ ಜೊತೆಗೆ ಪಕ್ಕಪಕ್ಕದಲ್ಲಿ ಜೋಡಿಸಿದ (ಟ್ರೇಲರ್) ಮಾದರಿಯ ವಾಹನಗಳೋ ಅಥವಾ ಕ್ಯಾರವಾನ್ ಮಾದರಿಯಲ್ಲಿ ಒಂದರ ಹಿಂದೊಂದು ಹೋಗುವ ವಾಹನಗಳೋ ಆಗಲೂಬಹುದು. ಅನೇಕ ಸಂದರ್ಭಗಳಲ್ಲಿ ಪ್ರಯಾಣಿಕರ ಬಸ್ಸಿನ ಷಾಸಿಯನ್ನೇ ಉಪಯೋಗಿಸಿಕೊಳ್ಳಲಾಗುತ್ತದೆ. ಓಡಿಸುವುದರಲ್ಲಿ ಕಾಣಬರುವ ಉಳಿತಾಯದ ದೃಷ್ಟಿಯಿಂದ 3 ಟನ್ನಿನ ವಾಹನ ಬಹಳ ಜನಪ್ರಿಯ ಆಯ್ಕೆಯಾಗಿ ಪರಿಣಮಿಸಿದೆ. ಅಮೆರಿಕದ ಕೆಲಭಾಗಗಳಲ್ಲಿ ಮತ್ತು ಇತರ ಕೆಲವು ರಾಷ್ಟ್ರಗಳಲ್ಲಿ ಅನೇಕ ಸಂಚಾರಿ ಗ್ರಂಥಾಲಯಗಳಿಗೆ ಅರಗೀಲುಗಳಿರುವ ಪಕ್ಕಗಳಿರುತ್ತವೆ. ಪುಸ್ತಕಗಳ ಮುಖ ಹೊರಗಡೆಗೆ ಕಾಣುವಂತೆ ಆ ಪಕ್ಕಗಳನ್ನು ಮೇಲೆ ಎತ್ತಿಡಬಹುದು. ಇಂಗ್ಲೆಂಡಿನಲ್ಲಾದರೆ ಓದುಗ ಒಳಗೆ ಪ್ರವೇಶಿಸಲು ಅನುಕೂಲವಾಗುವಂತೆ ವಾಹನದ ಒಳಭಾಗವನ್ನು ರಚಿಸಿರುತ್ತಾರೆ. ಆದ್ದರಿಂದ ಪುಸ್ತಕದ ಕಪಾಟುಗಳು ಒಳಮುಖ ವಾಗಿರುತ್ತವೆ. ಸಾಮಾನ್ಯವಾಗಿ ವಾಹನದ ಮೂರೂಪಕ್ಕಗಳಲ್ಲಿ ಕಪಾಟುಗಳು ಅಣಿಗೊಂಡಿರುತ್ತವೆ. ನಾಲ್ಕನೆಯ ಪಕ್ಕದಲ್ಲಿ ಪುಸ್ತಕ ವಿತರಣೆಯ ಮೇಜು ಇರುತ್ತದೆ. ಕಪಾಟುಗಳನ್ನು ಸಾಮಾನ್ಯವಾಗಿ ಒಂದರಿಂದ ಒಂದೂವರೆ ಅಡಿ ಹಿಂದಕ್ಕೆ ವಾಲಿಸಿ ಇಟ್ಟಿರುತ್ತದೆ. ಇದರಿಂದ ವಾಹನ ಚಲಿಸುವಾಗಲೂ ಪುಸ್ತಕಗಳು ಕೆಳಗೆ ಬೀಳದೆ ಇರಲು ಅನುಕೂಲ. ಪುಸ್ತಕದ ಒರಗು ಅಂಚುಗಳನ್ನು ಉಪಯೋಗಿಸುತ್ತಾರೆ. ಸರಿಹೊಂದಿಕೊಳ್ಳಬಹುದಾದ ಆಸನವಿರುವುದರಿಂದ ಗ್ರಂಥಪಾಲ ನಿಲುದಾಣಗಳಲ್ಲಿ ವಾಚಕರತ್ತ ಮುಖಮಾಡಿ ಕುಳಿತುಕೊಳ್ಳಬಹುದು, ವಾಹನ ಚಲಿಸುವಾಗ ಮುಂದುಗಡೆ ತಿರುಗಿ ಕೂಡಬಹುದು. ಮೇಲಿನಿಂದ ದೀಪಗಳನ್ನು ತೂಗುಬಿಡುವುದರಿಂದ ಬೆಳಕು ಸಹಜವಾಗಿರುತ್ತದೆ. ಈಚೆಗೆ ಕಣ್ಣಿಗೆ ಹಿತವೆನಿಸುವ ಅನೇಕ ದೀಪ ಸಾಧನಗಳು ಬಳಕೆಗೆ ಬಂದಿವೆ.

ಸಾರ್ವಜನಿಕ ಸಂಚಾರಿ ಗ್ರಂಥಾಲಯ ವ್ಯಾನಿನ ಒಳನೋಟ

ಕಾರ್ಯವಿಧಾನದ ವಿವರಗಳು ಸಂಸ್ಥೆಸಂಸ್ಥೆಗೂ ಬೇರೆ ಬೇರೆ. ಸಾಮಾನ್ಯವಾಗಿ ಪ್ರಧಾನ ಗ್ರಂಥಾಲಯದ ವ್ಯವಹಾರಕ್ರಮವನ್ನೇ ಶಾಖೆಗಳೂ ಅನುಸರಿಸುತ್ತವೆ. ಆದರೆ ಕೌಂಟಿಗ್ರಂಥಾಲಯಗಳಲ್ಲಿ ಕುಟುಂಬಕ್ಕೆ ಒಂದು ಕಾರ್ಡು ಇಡುವ ಪದ್ಧತಿ ಇದೆ. ವಾರ, ಎರಡು ವಾರ, ಮೂರು ವಾರ ಅಥವಾ ನಾಲ್ಕುವಾರದ ಅಂತರಗಳನ್ನು ಬಿಟ್ಟು ಈ ಗ್ರಂಥಾಲಯಗಳು ಗ್ರಾಮಗಳಿಗೆ ಭೇಟಿ ಕೊಡುತ್ತವೆ. ಇದರಿಂದಾಗಿ ವಾಚಕನಿಗೆ ನೀಡುವ ಪುಸ್ತಕಗಳ ಸಂಖ್ಯೆ ಧಾರಾಳವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಎರವಲು ತೆಗೆದುಕೊಳ್ಳುವ ಪುಸ್ತಕಗಳ ಸಂಖ್ಯೆಗೆ ಮಿತಿಯೇ ಇರುವುದಿಲ್ಲ. ಪಟ್ಟಣ ಪ್ರದೇಶಗಳಲ್ಲಿ ಸಂಚಾರಿ ಗ್ರಂಥಾಲಯಗಳು ವಾರಕ್ಕೆ ಎರಡು ಮೂರು ಬಾರಿ ಬಂದು ಹೋಗುವುದುಂಟು. ವರ್ಷಕ್ಕೆ ವಿರತಣಗೊಳ್ಳುವ ಪುಸ್ತಕಗಳ ಸಂಖ್ಯೆ ಒಂದು ವಾಹನಕ್ಕೆ 25,000ದಿಂದ 1,25,000ದ ವರೆಗೆ ಇರುತ್ತದೆ. ಇವುಗಳಲ್ಲಿ ಕಥೆ ಕಾದಂಬರಿಗಳಲ್ಲದ ಸಾಹಿತ್ಯವೇ ಶೇ.

40 ಭಾಗ ಎಂಬುದು ಗಮನಾರ್ಹ. ಸಂಚಾರಿ ಗ್ರಂಥಾಲಯದ ಸರಾಸರಿ ಸಂಗ್ರಹ 2,000 ಗ್ರಂಥಗಳಾದರೂ ಅದು ತನ್ನ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ 10,000ದಷ್ಟು ಪುಸ್ತಕಗಳನ್ನು ವಿತರಣೆ ಮಾಡುವ ಸಾಮರ್ಥ್ಯ ಪಡೆದಿರುತ್ತದೆ.

ಗ್ರಂಥಾಲಯ ವ್ಯವಸ್ಥೆಯಲ್ಲಿ ಸಂಚಾರಿ ಗ್ರಂಥಾಲಯ ಗಮನಾರ್ಹ ಪಾತ್ರವಹಿಸಿದೆ. ಸಾಮುದಾಯಿಕ ಕೈಗಾರಿಕೆ ಹಾಗೂ ವ್ಯವಸಾಯ ಉದ್ಯಮಗಳಲ್ಲಿ ನಿರತವಾಗಿರುವ ರಷ್ಯ ದೇಶದಂಥ ದೊಡ್ಡ ದೇಶಗಳಲ್ಲಿ ಇದರ ಅಗತ್ಯ ಇನ್ನೂ ಹೆಚ್ಚಿನದಾಗಿದೆ. 100–200 ಜನ ಕಾರ್ಮಿಕರು ಇರುವ ದೂರದ ಸ್ವಾಸ್ಥ್ಯಗಳಿಗೂ ಸಂಚಾರಿ ಗ್ರಂಥಾಲಯಗಳು ಸುಲಭವಾಗಿ ಪುಸ್ತಕಗಳನ್ನು ಒದಗಿಸುತ್ತಿವೆ.

ಭಾರತದಲ್ಲಿ ಮೊತ್ತಮೊದಲಿಗೆ ಸಂಚಾರಿ ಗ್ರಂಥಾಲಯ ಪ್ರಾರಂಭವಾದದ್ದು ಮದ್ರಾಸ್ ಪ್ರಾಂತ್ಯದ ತಂಜಾವೂರು ಜಿಲ್ಲೆಯ ಮನ್ನಾರ್‌ಗುಡಿ ಎಂಬಲ್ಲಿ (1931). ಅಲ್ಲಿನ ಎಸ್.ವಿ. ಕನಗಸಭೈ ಪಿಳ್ಳೈ ಎಂಬಾತ ಸಂಚಾರಿ ಗ್ರಂಥಾಲಯಗಳ ನಿರ್ಮಾಣದಲ್ಲಿ ಆಸಕ್ತಿ ತೋರಿಸಿ ಎತ್ತಿನ ಬಂಡಿಯಲ್ಲಿ ಪುಸ್ತಕಗಳನ್ನು ಜೋಡಿಸಿ ಹಳ್ಳಿಗರಿಗೆ ಗ್ರಂಥಗಳನ್ನು ಒದಗಿಸುವ ಯೋಜನೆಯೊಂದನ್ನು ತಯಾರಿಸಿದ. ಅಲ್ಲದೆ ತನ್ನ ಪ್ರಥಮ ಪ್ರಯತ್ನ ಕಾರ್ಯಗತವಾಗಲು ಆರ್ಥಿಕ ಸಹಾಯವನ್ನಿತ್ತ. 1931ರ ಅಕ್ಟೋಬರ್ ತಿಂಗಳ 21ರಂದು ಮನ್ನಾರ್‌ಗುಡಿಯಿಂದ 8 ಕಿಮೀ ಪಶ್ಚಿಮಕ್ಕಿರುವ ಮಲವಾಸಲ್ ಎಂಬ ಹಳ್ಳಿಯಲ್ಲಿ ಭಾರತದ ಮೊದಲ ಸಂಚಾರಿ ಗ್ರಂಥಾಲಯವನ್ನು ಎಸ್.ಆರ್. ರಂಗನಾಥನ್ ಉದ್ಘಾಟಿಸಿದರು. 1932ರ ಹೊತ್ತಿಗೆ ಈ ಭಾಗದ 242 ಹಳ್ಳಿಗಳ ಪೈಕಿ 75 ಹಳ್ಳಿಗಳಿಗೆ ಈ ಗ್ರಂಥಾಲಯಗಳ ಸೇವಾಸೌಲಭ್ಯ ದೊರಕುವಂತಾಯಿತು.

ಭಾರತದಲ್ಲಿ ಸಂಚಾರಿ ಗ್ರಂಥಾಲಯಗಳು ಸಾಕಷ್ಟು ಪ್ರಗತಿ ಸಾಧಿಸದಿರುವುದಕ್ಕೆ ಮುಖ್ಯ ಕಾರಣ ನಾಲ್ಕು ರಾಜ್ಯಗಳು ಮಾತ್ರ ಸಾರ್ವಜನಿಕ ಗ್ರಂಥಾಲಯ ಕಾಯದೆಯನ್ನು ಜಾರಿಗೆ ತಂದಿರುವುದು. ಈ ರಾಜ್ಯಗಳ ಕೇಂದ್ರ ಸಾರ್ವಜನಿಕ ಗ್ರಂಥಾಲಯಗಳು ಮಾತ್ರ ದೂರದ ಹಳ್ಳಿಗಳಿಗೆ ಪುಸ್ತಕಗಳನ್ನು ಮೋಟರ್ ವಾಹನಗಳ ಮೂಲಕ ಒಯ್ದು ಗ್ರಂಥಗಳನ್ನು ವಿತರಣೆ ಮಾಡುತ್ತಿವೆ. ದೆಹಲಿಯಲ್ಲಿನ ಸಾರ್ವಜನಿಕ ಗ್ರಂಥಾಲಯ ನಾಲ್ಕು ಸಂಚಾರಿ ಗ್ರಂಥಾಲಯಗಳನ್ನು ಹೊಂದಿದೆ. ಈ ಭಾಗದ ದೂರದಲ್ಲಿ ವಾಸಿಸುತ್ತಿರುವ ಜನರಿಗೆ ಮೋಟರ್ ಬಂಡಿಗಳು ಗ್ರಂಥಗಳನ್ನು ಒದಗಿಸಿಕೊಡುತ್ತವೆ. ತಿಂಗಳ ಅಥವಾ ವಾರದ ನಿರ್ದಿಷ್ಟ ದಿನಗಳಲ್ಲಿ ನಿಯಮಿತ ವೇಳೆಯಲ್ಲಿ ಹಾಗೂ ನಿರ್ದಿಷ್ಟ ಸ್ಥಳಗಳಲ್ಲಿ ಗ್ರಂಥ ವಿತರಣೆ ನಡೆಯುತ್ತದೆ. ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿರುವ ಕೇಂದ್ರ ಗ್ರಂಥಾಲಯದಲ್ಲೂ ಸಂಚಾರಿ ಗ್ರಂಥಾಲಯಗಳ ಮೂಲಕ ಹಳ್ಳಿಗಳಿಗೆ ಪುಸ್ತಕಗಳನ್ನು ಒದಗಿಸುವ ಏರ್ಪಾಟಿದೆ. ಮದ್ರಾಸಿನ ಕನ್ನೆಮರಾ ಸಾರ್ವಜನಿಕ ಗ್ರಂಥಾಲಯದಲ್ಲೂ ಈ ವ್ಯವಸ್ಥೆ ಉಂಟು. (ಎನ್.ಬಿ.ಪಿ.)

ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿ, ನ್ಯೂಯಾರ್ಕ್ (ಯು.ಎಸ್.ಎ.); ಆಂಟೇರಿಯೊ ಪಬ್ಲಿಕ್ ಲೈಬ್ರರಿ, ಟೊರಾಂಟೊ (ಕೆನಡ); ದೆಹಲಿ ಸಾರ್ವಜನಿಕ ಗ್ರಂಥಾಲಯ, ದೆಹಲಿ; ಕ್ರಾಯ್ಡನ್ ಪಬ್ಲಿಕ್ ಲೈಬ್ರರಿ, ಕ್ರಾಯ್ಡನ್ (ಯು.ಕೆ.)– ಇವು ಪ್ರಪಂಚದ ಕೆಲವು ಪ್ರಸಿದ್ಧ ಸಾರ್ವಜನಿಕ ಗ್ರಂಥಾಲಯಗಳು. ಇವುಗಳಲ್ಲಿ ದೆಹಲಿ ಸಾರ್ಮಜನಿಕ ಗ್ರಂಥಾಲಯ ಮತ್ತು ಖುದಾಬಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯಗಳ ವಿಷಯವನ್ನಿಲ್ಲಿ ಕೊಡಲಾಗಿದೆ. (ಕೆ.ಎಸ್.ಡಿಇ.;ಟಿ.ಎಲ್.ಬಿ.)

**1 ದೆಹಲಿ ಸಾರ್ವಜನಿಕ ಗ್ರಂಥಾಲಯ :** ಭಾರತದಲ್ಲಿ ಗ್ರಂಥಾಲಯ ಚಳವಳಿಯ ಪ್ರಮುಖ ಘಟ್ಟವಾಗಿ, ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದ ಆರಂಭದಲ್ಲಿ ಸ್ಥಾಪನೆಯಾದ ಪ್ರಮುಖ ಗ್ರಂಥಾಲಯ. ಹಳೆ ದೆಹಲಿಯ ರೈಲ್ವೆ ನಿಲ್ದಾಣದ ಎದುರಿಗಿರುವ ಕಟ್ಟಡದಲ್ಲಿದೆ. ಇದು ಸ್ಥಾಪನೆಯಾದದ್ದು ಭಾರತೀಯ ಗ್ರಂಥಾಲಯ ಚಳವಳಿಯ ಪ್ರಮುಖ ಎಸ್. ಆರ್. ರಂಗನಾಥನ್‌ರವರ ಕೋರಿಕೆಯಂತೆ. ಭಾರತ ಸರ್ಕಾರ ಮತ್ತು ದೆಹಲಿಯ ಪುರಸಭೆಗಳ ನೆರವಿನೊಂದಿಗೆ ಯುನೆಸ್ಕೊ ಇದನ್ನು ಮಾದರಿ ಯೋಜನೆಯನ್ನಾಗಿ ಪ್ರಾರಂಭಿಸಿತು.

ಈ ಗ್ರಂಥಾಲಯದಲ್ಲಿ ಸಾರ್ವಜನಿಕ ಗ್ರಂಥಾಲಯದ ಸಾಮಾನ್ಯ ವಿಭಾಗಗಳಲ್ಲದೆ, ಶಿಶುಗ್ರಂಥಾಲಯ, ಸಾಮಾಜಿಕ ಜ್ಞಾನಪ್ರಸಾರ ವಿಭಾಗ, ವಿಸ್ತರಣ ವಿಭಾಗ ಮತ್ತು ಅಂಧ ಓದುಗರ ವಿಭಾಗಗಳಿವೆ.

ಇಂಗ್ಲಿಷ್, ಹಿಂದಿ, ಉರ್ದು, ಹಾಗೂ ಸಿಂಧೀ ಭಾಷೆಗಳಲ್ಲಿನ ಗ್ರಂಥಗಳನ್ನೇ ಹೆಚ್ಚಾಗಿ ಈ ಗ್ರಂಥಾಲಯದಲ್ಲಿ ಶೇಖರಿಸಲಾಗುತ್ತಿದೆ. ಗ್ರಂಥಗಳನ್ನು ವರ್ಗೀಕರಿಸಲು ಡ್ಯೂಯಿಯ ದಾಶಮಿಕ ಪದ್ಧತಿಯನ್ನು ಹಲ ಕೆಲವು ಮಾರ್ಪಾಡುಗಳೊಂದಿಗೆ ಅಳವಡಿಸಿಕೊಂಡಿದೆ. ಸೂಚೀಕರಣಕ್ಕಾಗಿ ಆಂಗ್ಲೋ ಅಮೆರಿಕನ್ (1966) ನಿಯಮವನ್ನು ಕೆಲವು ಬದಲಾವಣೆಗಳೊಂದಿಗೆ ಬಳಸಲಾಗಿದ್ದು ವರ್ಗೀಕೃತ ಗ್ರಂಥಸೂಚಿಯನ್ನು ತಯಾರಿಸಲಾಗಿದೆ.

ಪರಾಮರ್ಶನ ಸೇವಾ ವಿಭಾಗಕ್ಕೆ ಮುಕ್ತಪ್ರವೇಶ ಉಂಟು. ಅಲ್ಪಾವಧಿ ಹಾಗೂ ದೀರ್ಘಾವಧಿ ಪರಾಮರ್ಶನ ಸೇವೆಯನ್ನು ಇಲ್ಲಿ ಒದಗಿಸಲಾಗುತ್ತದೆ. ಮುಖತಃ ಪತ್ರವ್ಯವಹಾರದ ಮೂಲಕ ಅಥವಾ ದೂರವಾಣಿಯ ಮೂಲಕ ಪರಾಮರ್ಶನ ಸೇವೆಯನ್ನು ಪಡೆಯಬಹುದಾಗಿದೆ.

ಗ್ರಂಥಾಲಯದಲ್ಲಿ ಅತ್ಯಂತ ಚಟುವಟಿಕೆಯುಳ್ಳದ್ದು ಮಕ್ಕಳ ವಿಭಾಗ. ಮೊದಲಿಗೆ ಸ್ಥಳದಲ್ಲೇ ಓದುವ ಸೌಲಭ್ಯ ಮಾತ್ರ ಇತ್ತು. 1952ರ ಮೇ ತಿಂಗಳಿನಿಂದ ಮನೆಗೆ ಎರವಲು ಕೊಡುವ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ಸಾಮಾಜಿಕ ಜ್ಞಾನಪ್ರಸಾರ ವಿಭಾಗದ ಮೂಲಕ ವಸ್ತುಪ್ರದರ್ಶನ, ಚಲನಚಿತ್ರ ಪ್ರದರ್ಶನ, ಟೆಲಿವಿಷನ್ ಪ್ರಸಾರ ಯೋಜನೆ, ಆರೋಗ್ಯ ಹಾಗೂ ಆರೋಗ್ಯಶಾಸ್ತ್ರ ವಿಭಾಗ, ಹೋಮಿಯೊಪತಿ ಚಿಕಿತ್ಸೆ ಅಧ್ಯಯನ, ಸಾಹಿತ್ಯ ಅಧ್ಯಯನ, ಸಮಾಜಶಾಸ್ತ್ರ ಅಧ್ಯಯನ, ಎಸ್ಪರ್‍ಯಾಂಟೊ ಪ್ರವರ್ತನ ವಿಭಾಗಗಳು ಕೆಲಸ ಮಾಡುತ್ತಿವೆ. ಸಂಗೀತ ಹಾಗೂ ಕಲೆಯ ಬಗ್ಗೆ ವಿಶೇಷ ವಿಭಾಗವೊಂದಿದ್ದು, ಭಾರತೀಯ ಹಾಗೂ ಪಾಶ್ಚಾತ್ಯ ಪದ್ಧತಿಯ ಗ್ರಂಥಗಳನ್ನು ಸಂಗ್ರಹಿಸಲಾಗುತ್ತಿದೆ.

ವಿಸ್ತರಣ ವಿಭಾಗ ಸಂಚಾರಿ ಗ್ರಂಥಾಲಯದ ಮೂಲಕ ಸೇವೆ ಕೈಗೊಳ್ಳುತ್ತಿದೆ. ದೂರದೂರದ ಸ್ಥಳಗಳಿಗೆ ಈ ಸೌಲಭ್ಯ ಲಭ್ಯವಾಗುತ್ತಿದೆ. ದೆಹಲಿಯ ಕೇಂದ್ರಕಾರಾಗೃಹ ವಾಸಿಗಳಿಗೂ ಹಾಗೂ ಕೆಲವು ಆಸ್ಪತ್ರೆಗಳಲ್ಲಿನ ರೋಗಿಗಳಿಗೂ ಗ್ರಂಥಗಳನ್ನೊದಗಿಸಲಾಗುತ್ತಿದೆ.

ಈ ಗ್ರಂಥಾಲಯದಲ್ಲಿ 3280 ಬ್ರೇಲ್ ಗ್ರಂಥಗಳಿವೆ. ಇವುಗಳ ಉಪಯೋಗವನ್ನು 411 ಅಂಧ ಸದಸ್ಯರು ಪಡೆಯುತ್ತಿದ್ದಾರೆ; ಜೊತೆಗೆ ಓದು ಬಾರದವರಿಗಾಗಿ ಟೇಪ್‌ಮೇಲೆ ಮೂಡಿಸಲಾದ ಮಾತನಾಡುವ ಪುಸ್ತಕಗಳನ್ನು ಒದಗಿಸಲಾಗುತ್ತಿದೆ.

ಹೆಚ್ಚಿನ ಜನಸಂಖ್ಯೆಯುಳ್ಳ ದೆಹಲಿಯಲ್ಲಿ ಸಾಧ್ಯವಾದಷ್ಟೂ ಹೆಚ್ಚಿನ ಸೌಕರ್ಯ ಒದಗಲೆಂದು, ಮುಖ್ಯ ಶಾಖೆಗಳು ಹಾಗೂ ಎಂಟು ಉಪಶಾಖೆಗಳನ್ನು ಪ್ರಾರಂಭಿಸಲಾಗಿದೆ. ಪ್ರತಿಯೊಂದು ಮುಖ್ಯಶಾಖೆಯೂ 15,000–20,000 ವರೆಗೆ ಗ್ರಂಥಗಳನ್ನು ಹೊಂದಿದ್ದು ಒಬ್ಬ ಗ್ರಂಥಪಾಲಕನ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ.

ಗ್ರಂಥಾಲಯದ ಆದಾಯದಲ್ಲಿ ಶೇ. 90 ಭಾಗ ಕೇಂದ್ರ ಶಿಕ್ಷಣ ವಿಭಾಗದಿಂದಲೂ ಶೇ. 50 ಭಾಗ ದೆಹಲಿಯ ಪುರಸಭೆಯಿಂದಲೂ ಬರುತ್ತದೆ.

ಹನ್ನೆರಡಕ್ಕೆ ಮೀರದ ಸದಸ್ಯರುಳ್ಳ ಆಡಳಿತ ವರ್ಗದಲ್ಲಿ ಮೂವರು ಕೇಂದ್ರ ಸರ್ಕಾರ ನಾಮಕರಣ ಮಾಡಿದ ಸದಸ್ಯರು. ಇಬ್ಬರು ದೆಹಲಿ ಜಿಲ್ಲಾ ಬೋರ್ಡು ಹಾಗೂ ಯುನೆಸ್ಕೊದಿಂದ ನಾಮಕರಣವಾದ ಸದಸ್ಯರು ಇರುವರು.

ನವೀನ ತಂತ್ರಗಳನ್ನು ಉಪಯೋಗಿಸಿಕೊಂಡು ದೆಹಲಿ ಸಾರ್ವಜನಿಕ ಗ್ರಂಥಾಲಯ ಹೊಸದಾಗಿ ಓದುಬರೆಹ ಕಲಿತವರು ಹಾಗೂ ಕಡಿಮೆ ಕಲಿತವರಿಗಾಗಿ ವಿಶೇಷ ಗಮನಕೊಡುತ್ತಿದೆ. ಪಾಶ್ಚಾತ್ಯ ದೇಶಗಳಲ್ಲಿನ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಾಣಬರುವ ಉದಾರ ತತ್ತ್ವಗಳನ್ನು ಇಲ್ಲಿಯೂ ಸಾಧಿಸಲಾಗಿದೆ. (ಕೆ.ಎನ್.ಪಿ.)

**2 ಖುದಾಭಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯ:** ಪಾಟ್ನದ ಸುಪ್ರಸಿದ್ಧ ವಕೀಲನಾಗಿದ್ದ ಖುದಾಭಕ್ಷ್‌ಖಾನ್ ಶಿಕ್ಷಣಕ್ಷೇತ್ರಕ್ಕೆ ನೀಡಿದ ಅಮೂಲ್ಯವೂ ವಿಶಿಷ್ಟವೂ ಆದ ಕೊಡುಗೆ. ಈತನ ತಂದೆ ಮಹಮದ್ ಭಕ್ಷ್ ಸ್ವತಃ ವಿದ್ವಾಂಸನೂ ಪುಸ್ತಕ ಪ್ರೇಮಿಯೂ ಆಗಿದ್ದು ತನ್ನ ವರಮಾನದ ಬಹು ಭಾಗವನ್ನು ಪುಸ್ತಕಗಳನ್ನು ಕೊಳ್ಳಲು ವಿನಿಯೋಗಿಸಿದ್ದ. ಆತ ನಿಧನನಾದಾಗ (1876) ಆತ ಸಂಗ್ರಹಿಸಿದ್ದ ಹಸ್ತಪ್ರತಿಗಳ ಸಂಖ್ಯೆ 1400. ಆತನ ನಿರೂಪದಂತೆ ಮಗ ಖುದಾಭಕ್ಷ್ ಒಂದು ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಿ (1891) ಆ ಎಲ್ಲ ಹಸ್ತಪ್ರತಿಗಳನ್ನೂ ಎಲ್ಲರಿಗೂ ದೊರೆಯುವಂತೆ ಮಾಡಿದ.

ಖುದಾಭಕ್ಷ್ ಗ್ರಂಥಗಳನ್ನು ಸಂಗ್ರಹಿಸುವಲ್ಲಿ ಮಹಮದ್ ಮಾಕಿ ಎಂಬ ಪ್ರಸಿದ್ಧ ಅರಬ್ಬೀ ಗ್ರಂಥಸಂಗ್ರಹಕಾರನೊಬ್ಬನ ನೆರವು ಪಡೆದ. ಆತನಿಗೆ ಕೊಡುತ್ತಿದ್ದ ವೇತನ, 18 ವರ್ಷಗಳವರೆಗೆ, ಕಮಿಷನ್ ಅಲ್ಲದೆ ತಿಂಗಳಿಗೆ 50ರೂ. ಆಗಿತ್ತು. ಅಪೂರ್ವ ಹಸ್ತಪ್ರತಿಗಳನ್ನು ಸಂಗ್ರಹಿಸಿಡಲು ಮಾಕಿಯನ್ನು ಸಿರಿಯ, ಅರೇಬಿಯ, ಈಜಿಪ್ಟ್ ಮತ್ತು ಪರ್ಷಿಯಗಳಿಗೆ ಕಳುಹಿಸಲಾಯಿತು. ಅಲ್ಲದೆ ತನ್ನ ಬಳಿಗೆ ಹಸ್ತಪ್ರತಿ ಮಾರಲೆಂದು ಬಂದ ಪ್ರತಿಯೊಬ್ಬನಿಗೂ ಭಕ್ಷ್ ರೈಲು ವೆಚ್ಚದ ಎರಡರಷ್ಟು ಹಣ ಕೊಡುತ್ತಿದ್ದ. ಅಪರೂಪದ ಹಸ್ತಪ್ರತಿಗಳಿಗೆ ಅದಕ್ಕೂ ಹೆಚ್ಚಿನ ಬೆಲೆ ಕೊಡುತ್ತಿದ್ದುದೂ ಉಂಟು.

ಒಬ್ಬ ರಟ್ಟುಕಟ್ಟುವವ ಒಮ್ಮೆ ಖುದಾಭಕ್ಷನ ಗ್ರಂಥಾಲಯಕ್ಕೆ ಕಳ್ಳತನದಿಂದ ನುಗ್ಗಿ ಕೆಲವು ಹಸ್ತಪ್ರತಿಗಳನ್ನು ಕದ್ದು ಲಾಹೋರಿನ ಒಬ್ಬ ವ್ಯಾಪಾರಿಗೆ ಮಾರಲು ಹೋದ. ಆ ವ್ಯಾಪಾರಿ ಆ ಹಸ್ತಪ್ರತಿಗಳಿಗೆ ಬೆಲೆ ಕಟ್ಟುವುದಕ್ಕೆ, ವ್ಯಾಪಾರ ಕುದುರಿಸುವುದಕ್ಕೆ, ಖುದಾಭಕ್ಷನೇ ಸರಿಯಾದ ವ್ಯಕ್ತಿ ಎಂದು ನಿರ್ಧರಿಸಿ ಆತನನ್ನು ಭಕ್ಷನ ಬಳಿಗೇ ಹೋಗಲು ಹೇಳಿದನಂತೆ.

ಹಸ್ತಪ್ರತಿಗಳ ಸಂಗ್ರಹ ಹೆಚ್ಚಿದಂತೆ ಅದಕ್ಕೇ ಬೇರೆಯಾದ ಒಂದು ಕಟ್ಟಡದ ಆವಶ್ಯಕತೆ ಕಂಡುಬಂತು. ಆದ್ದರಿಂದ ಹಸ್ತಪ್ರತಿಗಳನ್ನು, ಆಗ ಖುದಾಭಕ್ಷ್ ಓರಿಯೆಂಟಲ್ ಪಬ್ಲಿಕ್

ಲೈಬ್ರೆರಿ ಎಂದು ಕರೆಯುವ ಕಟ್ಟಡಕ್ಕೆ ವರ್ಗಾಯಿಸಲಾಯಿತು (1888). ತನ್ನೊಬ್ಬನಿಂದಲೇ ಗ್ರಂಥಾಲಯವನ್ನು ನಿರ್ವಹಿಸುವುದು ಸಾಧ್ಯವಾಗಲಾರದೆಂಬುದನ್ನು ಮನಗಂಡ ಖುದಾಭಕ್ಷ್ ಆ ಸಂಗ್ರಹವನ್ನು ಬಂಗಾಲ ಸರ್ಕಾರಕ್ಕೆ ವಹಿಸಿಕೊಟ್ಟ. ಆಗಿನ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಚಾರ್ಲ್ಸ್ ಎಲಿಯಟ್ 1891ರಲ್ಲಿ ಗ್ರಂಥಾಲಯವನ್ನು ಔಪಚಾರಿಕವಾಗಿ ಉದ್ಘಾಟಿಸಿದ.

ವಿವಿಧ ಐರೋಪ್ಯ ಮತ್ತು ಸಿಮಿಟಿಕ್ ಭಾಷೆಗಳ ಹಸ್ತಪ್ರತಿಗಳು ಮತ್ತು ಗ್ರಂಥಗಳ ಜೊತೆಗೆ, ಈಗ್ರಂಥಾಲಯದಲ್ಲಿ ಡೇ ಸ್ಯಾಸಿ, ಗೋರ್‌ಔಸ್ಲೆ, ಬ್ಲೋಕ್‌ಮನ್ ಮೊದಲಾದ ಪ್ರಾಚ್ಯ ವಿದ್ಯಾತಜ್ಞರಿಗೆ ಸೇರಿದ್ದ ಕೆಲವು ಹಸ್ತಪ್ರತಿಗಳೂ ಇವೆ.

ಈ ಗ್ರಂಥಾಲಯಕ್ಕೆ 1961ರಲ್ಲಿ ಸುಮಾರು 7000 ಗ್ರಂಥಗಳು ಸೇರ್ಪಡೆಯಾದುವು. ಇವು ಡೆಸ್ನನ ಅಲ್ ಇಸ್ಲಾಂ ಗ್ರಂಥಾಲಯದ ಇಡೀ ಸಂಗ್ರಹ. ಈ ಸಂಗ್ರಹವನ್ನೇ ಬೇರೆಯಾಗಿ ಇರಿಸಿ ಅದನ್ನು ಡೆಸ್ನ ಸಂಗ್ರಹ ಎಂದು ಕರೆಯಲಾಗಿದೆ. 19ನೆಯ ಶತಮಾನದ ಮೊದಲ ಭಾಗಕ್ಕೆ ಸೇರಿದ ಹಲವು ಬಹುಮುಖ್ಯ ನಿಯತಕಾಲಿಕೆಗಳು ಖುದಾಭಕ್ಷ್ ಗ್ರಂಥಾಲಯದಲ್ಲಿವೆ.

ಇದುವರೆಗೆ ಗ್ರಂಥಾಲಯ ಅರಬ್ಬೀ ಮತ್ತು ಪರ್ಷಿಯನ್ ಹಸ್ತಪ್ರತಿಗಳ ಸೂಚಿಯ 32 ಸಂಪುಟಗಳನ್ನು ಪ್ರಕಟಿಸಿದೆ.

ಗ್ರಂಥಾಲಯದಲ್ಲಿರುವ ಗ್ರಂಥಗಳ ವಿವರಗಳು ಹೀಗಿವೆ:

| ಹಸ್ತಪ್ರತಿಗಳು | | ಅಚ್ಚಾದ ಗ್ರಂಥಗಳು | | ನಿಯತ ಕಾಲಿಕೆಗಳು |
|---|---|---|---|---|
| ಭಾಷೆ | ಸಂಖ್ಯೆ | ಭಾಷೆ | ಸಂಖ್ಯೆ | |
| ಅರಬ್ಬೀ | 4,106 | ಅರಬ್ಬೀ ಪರ್ಷಿಯನ್ ಮತ್ತು ಉರ್ದು | 23,944 | 5,911 |
| ಪರ್ಷಿಯನ್ | 3,883 | | | |
| ಉರ್ದು | 243 | ಇಂಗ್ಲಿಷ್ | 9,682 | |
| ತುರ್ಕಿ | 20 | ಫ್ರೆಂಚ್ | 875 | |
| ಹಿಂದಿ, ಸಂಸ್ಕೃತ | 35 | ಜರ್ಮನ್ | 982 | |
| ಓಲೆಗರಿಗಳು | 200 | ಸ್ಪ್ಯಾನಿಷ್ | 2 | |
| | | ಲ್ಯಾಟಿನ್ | 12 | |
| | | ಇಟಾಲಿಯನ್ | 3 | |

1962ರ ಸೆಪ್ಟೆಂಬರ್ 26ರಿಂದ ಗ್ರಂಥಾಲಯದ ಆಡಳಿತವನ್ನು ಒಂದು ಆಡಳಿತ ಮಂಡಲಿ ನಿರ್ವಹಿಸುತ್ತಿದೆ. ಆಗಿನಿಂದ ಗ್ರಂಥಾಲಯದ ಕೆಲಸಕಾರ್ಯಗಳನ್ನು ಪುನರ್ ವ್ಯವಸ್ಥೆಗೊಳಿಸಿ 1 ಹಸ್ತಪ್ರತಿ ವಿಭಾಗ, 2 ಮುದ್ರಿತ ಕೃತಿಗಳ ವಿಭಾಗ, 3 ಪರಾಮರ್ಶನ ಗ್ರಂಥಗಳ ಮತ್ತು ವಾಚನಾಲಯ ವಿಭಾಗ, 4 ಮೈಕ್ರೊಫಿಲ್ಮ್ ವಿಭಾಗ ಮತ್ತು ರಕ್ಷಣೆಯ ವಿಭಾಗ, 5 ಆಡಳಿತ ವಿಭಾಗ –ಹೀಗೆ ಹಂಚಲಾಗಿದೆ.

ಗ್ರಂಥಾಲಯಕ್ಕೆ ಭಾರತ ಸರ್ಕಾರದಿಂದಲೂ ಬಿಹಾರ ಸರ್ಕಾರದಿಂದಲೂ ನೆರವು ಧನ ಬರುತ್ತಿದೆ. ಅಲ್ಲದೆ ವರ್ಷಾಶನ ಮತ್ತು ಹಸ್ತಪ್ರತಿಗಳ ಮೈಕ್ರೊಫಿಲ್ಮ್ ಹಾಗೂ ಛಾಯಾಚಿತ್ರಪ್ರತಿಗಳ ಮಾರಾಟದಿಂದಲೂ ವರಮಾನವಿದೆ. ತಾವೇ ಸ್ವತಃ ಅಲ್ಲಿಗೆ ಬಂದು ಪರಿಶೀಲಿಸಲು ಸಾಧ್ಯವಿಲ್ಲದ ವಿದ್ವಾಂಸರಿಗೆ ಹಸ್ತಪ್ರತಿಗಳ ಛಾಯಾಚಿತ್ರ ಪ್ರತಿಗಳನ್ನು ಒದಗಿಸಲಾಗುತ್ತದೆ.

ಈ ಗ್ರಂಥಾಲಯದಲ್ಲಿರುವ ಅಪೂರ್ವವೂ ಮಹತ್ತರವೂ ಆದ ಕೆಲವು ಹಸ್ತಪ್ರತಿಗಳು ಇವು:

1 ಕುರಾನ್, ಭಾಗ 1, ಸಂಖ್ಯೆ 1118, ನಕ್ಷ ಲಿಪಿಯಲ್ಲಿ ಬರೆದದ್ದು.

ಎ. ಎಲ್. 668–ಪ್ರ.ಶ. 1269. ಬರೆದವ ಯಾಕ್ತ್–ಅಲ್–ಮುಸ್ತಾ ಸಮಿ ಎಂಬ ಬಹು ಪ್ರಸಿದ್ಧ ಲಿಪಿಕಾರ.

2 ದಿವಾನ್ ಎ ಹಾಫೀಜ್–ಜ್ಯೋತಿಶ್ಶಾಸ್ತ್ರ ಕೃತಿ. ಕ್ವಾಬು ಶಂಸುದ್ದೀನ್ ಮೊಹಮದ್ ಹಫೀಕ್ಸ್ ಅಲ್–ಷಿರಾಜಿ, ನಸ್ತಲಿಕ್‌ನಲ್ಲಿ ಬರೆದ ಇದು ಎ.ಎಚ್. 9ನೆಯ ಶತಮಾನದ್ದು. ದಿವಾನನ ವಿಶಿಷ್ಟವಾದ ಪ್ರತಿ. ಚಕ್ರವರ್ತಿ ಹುಮಾಯೂನ್ ಮತ್ತು ಜಹಾಂಗೀರ್ ಅವರು ಸ್ವಹಸ್ತದಿಂದ ಅಂಚಿನಲ್ಲಿ ಟಿಪ್ಪಣಿಗಳನ್ನು ಬರೆದಿದ್ದಾರೆ.

3 ತಾರೀಖ್ ಖಾನ್‌ದಾನೀ ತೈಮೂರಿಯಾ: ಅಕ್ಬರನ ಆಳ್ವಿಕೆಯ 22ನೆಯ ವರ್ಷದ ವರೆಗೆ ತೈಮೂರನ ಚರಿತ್ರೆಯಿದೆ. ನಸ್ತಲಿಕ್‌ನಲ್ಲಿ ಬರೆದಿದೆ. ಅಕ್ಬರನ ಆಸ್ಥಾನದಲ್ಲಿದ್ದ ಪ್ರಸಿದ್ಧ ಕಲಾವಿದರು ಬರೆದ 132 ಅಮೋಘವಾದ ಚಿತ್ರಗಳಿವೆ. ಅಲ್ಲದೆ ಆಗಿನ ಪ್ರಸಿದ್ಧ ವ್ಯಕ್ತಿಗಳ ಸಹಿ ಮತ್ತು ಠಸ್ಸೆಗಳಿವೆ.

4 ದಿವಾನ್ ಎ ಮಿರ್ಜಾ ಕಮ್ರಾನ್: ಮಿರ್ಜಾ ಕಮ್ರಾನ್ ಹುಮಾಯೂನ್ ಚಕ್ರವರ್ತಿಯ ತಮ್ಮ. ನಸ್ತಲಿಕ್‌ನಲ್ಲಿ ಬರೆದ ಇದು ಕವಿಯ ಜೀವಿತಕಾಲಕ್ಕೇ ಸೇರಿದ್ದು. ಜಹಾಂಗೀರ್, ಷಹಜಹಾನ್ ಮತ್ತಿತರ ಅರಸರ ಆಸ್ಥಾನದ ಅನೇಕ ಸುಪ್ರಸಿದ್ಧ ಅಧಿಕಾರಿಗಳ, ರಾಜಮನೆತನದವರ ಮುದ್ರೆಗಳು, ರುಜುಗಳು ಇದರಲ್ಲಿ ಇವೆ.

ಇವಲ್ಲದೆ ಶಸ್ತ್ರಚಿಕಿತ್ಸೆಯ ಕೃತಿ ಕಿತಾಬ್ ಅಲ್ ತನ್ಸಿಫ್ ಇಲ್ಲಿದೆ. ಇಲ್ಲಿರುವ ಬಾದಶಾಹನಾಮಾದಲ್ಲಿ ಷಹಜಹಾನನ ಪೂರ್ಣ ಇತಿಹಾಸ ದೊರಕುತ್ತದೆ. ವರ್ಣಾಲಂಕಾರ ಹಾಗೂ ಅಂಚಿನ ಹೂಚಿತ್ರಗಳು ಈ ಕೃತಿಯ ವೈಶಿಷ್ಟ್ಯ. ಶಾಹನಾಮಾದಲ್ಲಿ ಪರ್ಷಿಯದ 23 ವರ್ಣರಂಜಿತ ಕಿರುಚಿತ್ರಗಳಿವೆ. ಇನಾಯತುಲ್ಲಾಖಾನನ ಅಹಕಂ ಇ ಆಲಂಗೀರಿ ಕೃತಿಯಲ್ಲಿ ಔರಂಗಜೇಬನ ಪತ್ರಗಳನ್ನು ನೋಡಬಹುದು. ಜಾಮಿ ಕವಿಯ ಯೂಸುಫ್ ವ ಜುಲೇಖ ಕವನದ ಮೀರ್ ಅಲಿ ಲಿಪಿಕಾರನ ಪ್ರತಿಯನ್ನು ಇಲ್ಲಿ ಕಾಣಬಹುದು. ರಣಜಿತ್ ಸಿಂಗನ ಭಾರತ ಇತಿಹಾಸ ಇಲ್ಲಿದೆ. ಚೀನ, ಮಧ್ಯಏಷ್ಯ, ಪರ್ಷಿಯ, ಇರಾನ್‌ಗಳ ಪ್ರಸಿದ್ಧ ತೈಲಚಿತ್ರಗಳನ್ನಿಲ್ಲಿ ನೋಡಬಹುದು. ಮಿಕ್ಕಂತೆ ವಾಲ್ಟರ್ ಸ್ಕಾಟನ ವೇವರ್ಲೀ ಕಾದಂಬರಿಗಳ ಪ್ರಥಮ ಆವೃತ್ತಿ, ಆಲ್ಬೆರೂನಿಯ ನಿಘಂಟು–ಇವು ಇಲ್ಲಿನ ಇತರ ಮುಖ್ಯ ಗ್ರಂಥಗಳು. (ಎಚ್.ಎ.ಕೆ.;ಎಲ್.ವಿ.ಜಿ.)

**B. ಶೈಕ್ಷಣಿಕ ಗ್ರಂಥಾಲಯಗಳು**: ಶಿಕ್ಷಣ ಕ್ಷೇತ್ರಕ್ಕೆ ಸಾಮಾನ್ಯವಾಗಿ ಅನ್ವಯಿಸುವ ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಗ್ರಂಥಾಲಯಗಳು ಹೇಗಿರಬೇಕು, ಅವುಗಳ ಸ್ಥೂಲ ಇತಿಹಾಸವೇನು ಎಂಬುದನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ವಿಶಿಷ್ಟ ತರಬೇತಿ ಕೊಡುವ ಪಾಲಿಟೆಕ್ನಿಕ್ಕುಗಳು, ವೈದ್ಯ, ಶಿಲ್ಪ ಮುಂತಾದ ವಿಶಿಷ್ಟ ವಿಷಯಗಳನ್ನು ಬೋಧಿಸುವ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ವಿವರಗಳು ಇದೇ ಲೇಖನದ ಡಿ ವಿಭಾಗದಲ್ಲಿವೆ (**ನೋಡಿ : ಮಕ್ಕಳ ಗ್ರಂಥಾಲಯಗಳು**).

**1 ಶಾಲಾಗ್ರಂಥಾಲಯಗಳು:** ಮಕ್ಕಳ ವಯೋಧರ್ಮಕ್ಕನುಗುಣವಾಗಿ ಶಾಲೆಗಳಲ್ಲಿ ಗ್ರಂಥಾಲಯಗಳಿರಬೇಕಾದುದು ಅಗತ್ಯ. ಶಿಶುವಿಹಾರಗಳಲ್ಲಿ ಓದುವ ಮುಗ್ಧ ಬಾಲಕ ಬಾಲಕಿಯರಿಗಾಗಿ ಅಲ್ಲಿನ ಗ್ರಂಥಾಲಯ ವಿಶೇಷರೀತಿಯಲ್ಲಿ ಸಜ್ಜುಗೊಂಡಿರಬೇಕಾಗುತ್ತದೆ. ಮಕ್ಕಳು ಪ್ರಾಥಮಿಕ ಶಾಲೆಯನ್ನು ಸ್ವಲ್ಪ ಮುಟ್ಟಿ ಹೆಚ್ಚಿನ ಮಟ್ಟದ ಪಾಠಪ್ರವಚನಗಳನ್ನು ಅಭ್ಯಾಸ ಮಾಡುವಾಗ ಅವರಿಗೆ ಅಗತ್ಯವಾದ ಪಠ್ಯಪುಸ್ತಕಗಳನ್ನೂ ಭಾಷೆಯನ್ನು ಸರಳವಾಗಿ ಕಲಿಸಿಕೊಡುವ ಪುಸ್ತಕಗಳನ್ನೂ ಸಾಮಾನ್ಯಜ್ಞಾನ ಹಾಗೂ ವಿಜ್ಞಾನ ವಿಷಯಗಳನ್ನು ಸಂಕ್ಷಿಪ್ತವಾಗಿ ಸುಲಭವಾಗಿ ಪರಿಚಯಿಸಿಕೊಡುವಂಥ ಪುಸ್ತಕಗಳನ್ನೂ ಪ್ರೌಢ ವಿದ್ಯಾಭ್ಯಾಸಗಳಲ್ಲಿ ಅವರು ಕಲಿಯುವ ವಿಷಯಗಳಿಗೆ ಆಧಾರಭೂತವಾಗಿರುವಂಥ ಪುಸ್ತಕಗಳನ್ನೂ ಪ್ರಾಥಮಿಕ ಶಾಲಾಗ್ರಂಥಾಲಯ ಒದಗಿಸಬೇಕಾಗುತ್ತದೆ. ಒಂದು ನಾಡಿಗೆ ಸಂಬಂಧಿಸಿದಂತೆ ಅದರ ಸಾಮಾಜಿಕ, ಆರ್ಥಿಕ, ರಾಜಕೀಯ, ಪರಿಸ್ಥಿತಿಗಳನ್ನು ಸರಳವಾಗಿ ಸಂಕ್ಷಿಪ್ತವಾಗಿ ತಿಳಿಸುವ ಚಾರಿತ್ರಿಕ, ಭೌಗೋಳಿಕ ಪುಸ್ತಕಗಳು ಪ್ರಾಥಮಿಕ ಗ್ರಂಥಾಲಯಗಳಲ್ಲಿರಬಹುದು.

ರೋಟರಿ ಕ್ಲಬ್, ಲಯನ್ಸ್ ಕ್ಲಬ್ ಮುಂತಾದ ಸಾರ್ವಜನಿಕ ಸಂಸ್ಥೆಗಳು ಚಿಕ್ಕ ಮಕ್ಕಳಿಗಾಗಿಯೇ ಪುಸ್ತಕವಿಭಾಗವನ್ನು ತೆರೆದು, ಅವರ ಜ್ಞಾನಾರ್ಜನೆಗೆ ಪೋಷಕವಾಗಿವೆ. ಇಂಥ ಕೆಲವು ಸಂಘಗಳು ಶಾಲೆಗಳಿಗೆ ಪುಸ್ತಕಗಳನ್ನು ಕೊಡುಗೆಯಾಗಿ ನೀಡುವುದೂ ಉಂಟು. ನರ್ಸರಿ ಶಾಲಾ ವಿದ್ಯಾರ್ಥಿಗಳಿಗೂ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೂ ಇಂಥ ಗ್ರಂಥಾಲಯಗಳಿಂದ ಹೆಚ್ಚಿನ ಅನುಕೂಲ ಒದಗಿದೆ. ಖಾಸಗೀ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಎರವಲು ಪಡೆಯಲು ಅಲ್ಪಸ್ವಲ್ಪ ಶುಲ್ಕವನ್ನು ತೆಗೆದುಕೊಳ್ಳುವುದೂ ಉಂಟು. ಈ ಹಣ ಸಂಗ್ರಹದಿಂದ ಮಕ್ಕಳಿಗೆ ಬೇಕಾದ ಇತರ ಪುಸ್ತಕಗಳನ್ನು ತರಿಸುವುದು ಸಾಧ್ಯವಾಗುತ್ತದೆ.

ಮಕ್ಕಳು ಪ್ರಾಥಮಿಕ ಶಿಕ್ಷಣದ ಬಳಿಕ ಮಾಧ್ಯಮಿಕ ಶಿಕ್ಷಣವನ್ನು ನೀಡುವ ಶಾಲೆಯನ್ನು ಪ್ರವೇಶಿಸಿದಾಗ, ಅವರಿಗೆ ಹೊಸದೊಂದು ಪರಿಸರದ ಅನುಭವವಾಗುತ್ತದೆ. ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ವಿಭಾಗವೇ ಅಲ್ಲಿರುತ್ತದೆ. ಆ ಗ್ರಂಥಾಲಯದಲ್ಲಿನ ಪುಸ್ತಕಗಳು ಒಂದು ವಿಶಿಷ್ಟ ರೀತಿಯಲ್ಲಿ ಜೋಡಣೆಗೊಂಡಿರುತ್ತವೆ. ಹಲವಾರು ವಿಷಯಗಳನ್ನು ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಭ್ಯಾಸ ಮಾಡುವ ಕಾರಣ ವಿಷಯಗಳಿಗನುಗುಣವಾಗಿ ಈ ಪುಸ್ತಕಗಳ ವರ್ಗೀಕರಣ ನಡೆದು ಅವನ್ನು ಓರಣಗೊಳಿಸಲಾಗಿರುತ್ತದೆ. ಪ್ರೌಢಶಾಲೆಯಲ್ಲಿರುವ ಗ್ರಂಥಾಲಯ ವಿಭಾಗ ರಚನೆಯೂ ವಿದ್ಯಾರ್ಥಿಗಳಿಗೆ ಅನುಕೂಲಕರ ಸನ್ನಿವೇಶಗಳನ್ನು ಒದಗಿಸುವಂತಿರಬೇಕು. ಬಿಸಿಲು, ಗಾಳಿ, ಮಳೆ ಮುಂತಾದವುಗಳಿಂದ ಬಾಧಿತವಾಗದಂಥ ಕಟ್ಟಡ, ಕುಳಿತು ಓದಿ ಬರೆಯಲು ಸೂಕ್ತವಾದ ಆಸನ ವ್ಯವಸ್ಥೆ, ಪುಸ್ತಕಗಳನ್ನು ಪರಾಮರ್ಶನೆಗೆ ತೆಗೆದುಕೊಳ್ಳಲು ಮತ್ತು ಪುಸ್ತಕಗಳನ್ನು ಎರವಲು ಪಡೆಯಲು ಅನುಕೂಲವಾಗುವಂತೆ ಮಾರ್ಗದರ್ಶನವೀಯುವಂಥ ಸಹಾಯ–ಇವು ಅವಶ್ಯ ಇರಬೇಕು. ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನದಲ್ಲಿಟ್ಟು ಅವರಿಗೆ ಪಾಠ ಹೇಳಿಕೊಡುವ ಉಪಾಧ್ಯಾಯರಿಗೆ ಅಗತ್ಯವಿರುವ ಬೋಧನ ಕ್ರಮವನ್ನೂ ವಿಷಯ ನಿರೂಪಣೆಯನ್ನೂ ತಿಳಿಸುವ ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಸಂಗ್ರಹಿಸಬೇಕಾಗುತ್ತದೆ. ಈ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಪಡೆದ ಗ್ರಂಥಪಾಲನನ್ನು ಶಾಲೆಗಳಲ್ಲಿ ನೇಮಿಸುವುದು ಅಷ್ಟೇ ಅಗತ್ಯದ ಕೆಲಸ.

ಶಾಲಾಗ್ರಂಥಾಲಯಗಳಲ್ಲಿ ಪಠ್ಯಪುಸ್ತಕಗಳೂ ಸಾಮಾನ್ಯಜ್ಞಾನವನ್ನು ತಿಳಿಸುವ ಪುಸ್ತಕಗಳೂ ಇರುವುದರ ಜೊತೆಗೆ ನಿರ್ದಿಷ್ಟ ವಿಷಯಗಳನ್ನು ಕುರಿತಂಥ (ಉದಾ: ಆರೋಗ್ಯಶಾಸ್ತ್ರ, ಮನುಷ್ಯನ ಅಂಗರಚನೆ, ಗಿಡದ ವಿವಿಧ ಭಾಗಗಳು ಇತ್ಯಾದಿ) ಗೋಡೆಪಟಗಳೂ ಭೌಗೋಳಿಕ ಸನ್ನಿವೇಶಗಳನ್ನು ಚಿತ್ರಿಸುವ ಭೂಪಟಗಳೂ ಗೋಡೆಭೂಪಟಗಳೂ ಇರುತ್ತವೆ. ಇವಲ್ಲದೆ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳ ಬುದ್ಧಿಯನ್ನು ಕುದುರಿಸುವಂಥ ವೃತ್ತಪತ್ರಿಕೆಗಳನ್ನೂ ನಿಯತಕಾಲಿಕೆಗಳನ್ನೂ ಕರಪತ್ರಗಳನ್ನೂ ಕಿರುಪುಸ್ತಿಕೆಗಳನ್ನೂ ಒದಗಿಸುವಂಥ ಸುಸಜ್ಜಿತ ವಾಚನಾಲಯವೂ ಇರುತ್ತದೆ. ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ ಇತರ ಪಠ್ಯಬೋಧನೆಗಳಲ್ಲದೆ ಗ್ರಂಥಾಲಯ ಮತ್ತು ವಾಚನಾಲಯಕ್ಕೆ ಭೇಟಿ ಎಂದೆನ್ನುವ ಒಂದು ವಿಷಯವೂ ಇರುತ್ತದೆ. ವಿದ್ಯಾರ್ಥಿಗಳು ಆ ಸಮಯದಲ್ಲಿ ಗ್ರಂಥಾಲಯಕ್ಕೆ ಭೇಟಿ ನೀಡಿ ತಮಗೆ ಅಗತ್ಯವಿದ್ದ ಪುಸ್ತಕಗಳನ್ನು ಪಡೆದು, ಉಪಾಧ್ಯಾಯರು ತಿಳಿಸಿರುವ ಇತರ ಗ್ರಂಥಗಳ ಪರಾಮರ್ಶನ ಮಾಡಿ, ವಾಚನಾಲಯದ ಉಪಯೋಗಪಡೆಯುತ್ತಾರೆ.

ಶಾಲಾಗ್ರಂಥಾಲಯಗಳು ಬಹುಮುಖ್ಯವಾಗಿ ಗಮನಿಸಬೇಕಾದ ಅಂಶಗಳಿವು. ಅಲ್ಲಿನ ಪುಸ್ತಕಗಳು ಸಚಿತ್ರವಾಗಿದ್ದು ವಿಷಯಗಳನ್ನು ಸುಲಭವಾಗಿ ನಿರೂಪಿಸುವಂಥ ವಾಗಿರಬೇಕು. ಕಥೆ, ಕವನ ಪ್ರಬಂಧಗಳು, ನಾಟಕಗಳು, ನೀತಿಕಥೆಗಳು, ಪ್ರವಾಸ ಕಥನಗಳು, ಕಾಲ್ಪನಿಕ ಕಾದಂಬರಿಗಳು–ಇವು ಹೇರಳವಾಗಿರಬೇಕಲ್ಲದೆ ಇವೆಲ್ಲ ಮಕ್ಕಳ ಮಟ್ಟಕ್ಕೆ ಮೀರಿದವಾಗಿರಬಾರದು. ಮೂಲದಲ್ಲಿ ಬಹು ದೊಡ್ಡ ಗಾತ್ರದವಾಗಿರುವ ಕಥೆ ಕಾದಂಬರಿಗಳನ್ನು ಹಾಗೆಯೇ ತರಿಸಿಡುವುದರ ಬದಲು ಅವುಗಳ ಸಚಿತ್ರ ಸಂಗ್ರಹಗಳನ್ನು ತರಿಸಿಡುವುದು ಒಳ್ಳೆಯದು. ಭಾಷೆಯನ್ನು ಸುಲಭೀಕರಿಸಿದ್ದರೆ ಇನ್ನೂ ಉತ್ತಮ.

ಇದರ ಜೊತೆಗೆ ಪ್ರತಿದಿನವೂ ವೃತ್ತಪತ್ರಿಕೆಗಳ ಮುಖ್ಯ ಸುದ್ದಿ ಸಮಾಚಾರಗಳ ಸಾರಸಂಗ್ರಹವನ್ನು ಕಪ್ಪು ಹಲಗೆಯ ಮೇಲೆ ಬರೆದಿಡುವುದು, ನಾಡಿನ ಧುರೀಣರ ಜಯಂತಿ, ವರ್ಧಂತಿಗಳು ಏರ್ಪಟ್ಟಾಗ ಅವರ ವಿಷಯಕವಾದ ಪುಸ್ತಕ, ಚಿತ್ರ ಮೊದಲಾದವುಗಳ ಪ್ರದರ್ಶನ ಏರ್ಪಡಿಸುವುದು, ಶಾಲಾ ವಾರ್ಷಿಕೋತ್ಸವಗಳಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸುವುದು, ಕಾಲಕಾಲಕ್ಕೆ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಅವುಗಳ ರಚನೆಗೆ ಬೇಕಾದ ಮೂಲ ಸಾಹಿತ್ಯವನ್ನು ಪ್ರತ್ಯೇಕಿಸಿ ಒದಗಿಸುವುದು, ಪ್ರತಿದಿನವೂ ಮಕ್ಕಳ ಕುತೂಹಲ ಕೆರಳುವಂತೆ ಬೇರೆ ಬೇರೆ ಪುಸ್ತಕಗಳನ್ನು ಒಂದು ಕನ್ನಡಿ ಕಪಾಟಿನಲ್ಲಿ ತೆರೆದಿಡುವುದು, ವರ್ಷದಲ್ಲಿ ಹೆಚ್ಚು ಪುಸ್ತಕಗಳನ್ನು ಓದಿದವರಿಗೆ ಬಹುಮಾನ ಕೊಡುವುದು, ಪುಸ್ತಕವನ್ನು ಎರವಲು ಪಡೆದು ಒಯ್ದ ವಿದ್ಯಾರ್ಥಿ ಅದನ್ನು ಎಷ್ಟರಮಟ್ಟಿಗೆ ಓದಿ ಗ್ರಹಿಸಿದ್ದಾನೆ ಎಂಬುದನ್ನು ತಿಳಿಯಲು ಯಾವ ಬಗೆಯಲ್ಲಾದರೂ ಅವನನ್ನು ಪರೀಕ್ಷೆ ಮಾಡುವುದು, ವ್ಯಾಸಂಗ ಗೋಷ್ಠಿಗಳನ್ನು ಏರ್ಪಡಿಸಿ ಹತ್ತು ವಿದ್ಯಾರ್ಥಿಗಳ ಕೈಲಿ ಹತ್ತು ಪುಸ್ತಕಗಳನ್ನು ಓದಿಸಿ ಅವುಗಳ ಸಾರಾಂಶವನ್ನವರು ಬರೆದು ಗೋಷ್ಠಿಯಲ್ಲಿ ಓದುವಂತೆ ಮಾಡಿ ಅವನ್ನು ಚರ್ಚೆಗೆ ಒಳಪಡಿಸುವುದು– ಈ ಮೊದಲಾದ ವಿಷಯಗಳಿಗೆ ಗಮನ ಕೊಡುವುದು ಒಳ್ಳೆಯದು.

ರಾಜ್ಯಗಳಲ್ಲಿನ ರಾಜ್ಯಸರ್ಕಾರದ ಧನಸಹಾಯದಿಂದ ಶಾಲೆಗಳಲ್ಲಿ ಗ್ರಂಥಾಲಯಗಳ ಪರಿಸ್ಥಿತಿ ಸುಧಾರಿಸುವುದಲ್ಲದೆ ಕೆಲವೊಂದು ಖಾಸಗೀ ಸಂಘ ಸಂಸ್ಥೆಗಳೂ ಇತರ ರಾಷ್ಟ್ರಗಳ ಖಾಸಗೀ ಸಂಘ ಸಂಸ್ಥೆಗಳು ಶಾಲಾಗ್ರಂಥಾಲಯಗಳಿಗೆ ಉಪಯುಕ್ತ ಪುಸ್ತಕಗಳನ್ನು ನೀಡುತ್ತಿವೆ.

ಭಾರತದಲ್ಲಿ ಶಾಲಾಗ್ರಂಥಾಲಯಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರವೂ ರಾಜ್ಯ ಸರ್ಕಾರಗಳೂ ಅನೇಕ ತುರ್ತು ಕ್ರಮಗಳನ್ನು ಕೈಗೊಂಡಿವೆ. 1959ರಲ್ಲಿ ದೆಹಲಿಯಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಸಾಕ್ಷರತಾ ಸಮ್ಮೇಳನದಲ್ಲಿ ಶಾಲಾಗ್ರಂಥಾಲಯಗಳು ನಿರ್ವಹಿಸಬೇಕಾದ ಪಾತ್ರಗಳನ್ನು ಕುರಿತು ವಿಪುಲ ಚರ್ಚೆ ನಡೆಯಿತು.

ಶಾಲಾಗ್ರಂಥಾಲಯಗಳ ಆಡಳಿತ ಸಾಮಾನ್ಯವಾಗಿ ಶಾಲಾ ಆಡಳಿತವರ್ಗದ ಕಾರ್ಯ ವ್ಯಾಪ್ತಿಗೆ ಬರುತ್ತದೆ. ಗ್ರಂಥಾಲಯಕ್ಕೆ ಅಗತ್ಯವಿರುವ ಆಸನ ಸೌಲಭ್ಯಗಳು, ಪುಸ್ತಕಗಳನ್ನಿಡಲು ಬೇಕಾಗುವ ಕಪಾಟುಗಳು, ಪುಸ್ತಕಗಳು, ವೃತ್ತಪತ್ರಿಕೆಗಳು, ನಿಯತಕಾಲಿಕೆಗಳು, ಪುಸ್ತಕಗಳ ಜೋಪಾನಿಕೆಗೆ ತಗಲುವ ವೆಚ್ಚ ಅಲ್ಲಿನ ಗ್ರಂಥಪಾಲರಿಗೆ ನೀಡಬೇಕಾದ ವೇತನ, ಬೇಡಿಕೆಯನ್ನು ಪೂರೈಸಲು ವಾರ್ಷಿಕ ಬಜೆಟ್ಟಿನಲ್ಲಿ ಗ್ರಂಥಾಲಯಕ್ಕೆ ಮೀಸಲಿಡಬೇಕಾದ ಹಣ, ವಿದ್ಯಾರ್ಥಿಗಳಿಂದ ವಸೂಲಿ ಮಾಡಬೇಕಾದ ಶುಲ್ಕ ಈ ಮುಂತಾದ ವಿಚಾರಗಳು ಶಾಲಾ ಆಡಳಿತಮಂಡಳಿಗೆ ಸೇರಿದ್ದು. (ಸಿ.ಕೆ.ಪಿ.ಎ.; ಎಂ.ಎಸ್.ವೈ.)

2 **ಕಾಲೇಜು ಗ್ರಂಥಾಲಯಗಳು** : ಕಾಲೇಜು ವ್ಯಾಸಂಗ ಪ್ರೌಢ ಶಿಕ್ಷಣಗಳ ಹಂತಗಳಲ್ಲೊಂದಾಗಿದೆ. ಮಾಧ್ಯಮಿಕ ಶಿಕ್ಷಣ ತರಗತಿಯಲ್ಲಿನ ಬೋಧನೆ ಹಾಗೂ ಗ್ರಂಥ ವ್ಯಾಸಂಗಗಳನ್ನು ಅವಲಂಬಿಸಿದರೆ, ಉನ್ನತಮಟ್ಟದ ವ್ಯಾಸಂಗವೆನಿಸಿದ ಸ್ನಾತಕೋತ್ತರ ಅಧ್ಯಯನದಲ್ಲಿ ಪ್ರಾಧ್ಯಾಪಕರ ಕೇವಲ ಮಾರ್ಗದರ್ಶನದೊಡನೆ ಗ್ರಂಥವ್ಯಾಸಂಗವನ್ನು ಹೆಚ್ಚು ಅವಲಂಬಿಸಬೇಕಾಗುತ್ತದೆ. ಕಾಲೇಜು ವ್ಯಾಸಂಗ ಈ ಎರಡು ಹಂತಗಳನ್ನು ಜೋಡಿಸುವ ಕೊಂಡಿಯಂತಿದೆ. ಇಲ್ಲಿ ಬೋಧನೆ ಕಡಿಮೆಯಾಗುತ್ತ ಬಂದು ವಿದ್ಯಾರ್ಥಿ ಸ್ವಾವಲಂಬಿಯಾಗಿ ಹೆಚ್ಚು ಹೆಚ್ಚಾಗಿ ಓದಿ ವಿಷಯ ಜ್ಞಾನವನ್ನು ಪಡೆದುಕೊಳ್ಳುವ ಪರಿಪಾಟ ಹೆಚ್ಚುತ್ತದೆ.

ರಾಜಾರಾಮ್ ಮೋಹನ್‌ರಾಯ್ ಅವರ ಪರಿಶ್ರಮದ ಫಲವಾಗಿ, ಭಾರತದಲ್ಲಿ ಮೊಟ್ಟಮೊದಲಿಗೆ 1816ರಲ್ಲಿ ಕಲ್ಕತ್ತದಲ್ಲಿ ಕಾಲೇಜೊಂದು ಸ್ಥಾಪಿತಗೊಂಡಿತು. ಮುಂದೆ ಎರಡು ವರ್ಷಗಳಲ್ಲಿ ಮೊದಲ ಮಿಷನರಿ ಕಾಲೇಜು ಶ್ರೀರಾಂಪುರದಲ್ಲಿ ಸ್ಥಾಪಿತವಾಯಿತು.

ಕರ್ನಾಟಕದಲ್ಲಿ ಮೊದಲನೆಯದಾಗಿ 1875ರಲ್ಲಿ ಮೈಸೂರಿನ ಮಹಾರಾಜ ಕಾಲೇಜು, ಅನಂತರ 1880ರಲ್ಲಿ ಮಂಗಳೂರಿನ ಸೇಂಟ್ ಅಲೋಯಿಸಿಸ್ ಕಾಲೇಜು, ತರುವಾಯ 1919ರಲ್ಲಿ ಧಾರವಾಡದ ಕರ್ನಾಟಕ ಕಾಲೇಜು ಸ್ಥಾಪಿತಗೊಂಡು, ತಾವಿರಿಸಿಕೊಂಡ ದೃಷ್ಟಿಕೋನದತ್ತ ಒಳ್ಳೆ ಗುಣಮಟ್ಟವನ್ನು ಕಾಯ್ದುಕೊಂಡು ಕಾಲೇಜು ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆ ಪರಂಪರೆಯನ್ನು ಕಾಪಾಡಿಕೊಂಡು ಬಂದಿವೆ.

ಸ್ವಾತಂತ್ರ್ಯೋತ್ತರ ಶೈಕ್ಷಣಿಕ ಪ್ರಗತಿಯಿಂದಾಗಿ ಎಲ್ಲೆಡೆಯಲ್ಲಿ ಶಿಕ್ಷಣ ಸಂಸ್ಥೆಗಳೂ ಗ್ರಂಥಾಲಯಗಳೂ ತಲೆಯೆತ್ತಿ ನಿಂತವು. ಇಂದು ಕಾಲೇಜುಗಳು ವೃತ್ತಿ ವಿಶಿಷ್ಟತೆಯ ಮೇಲೆ ಹಲವು ವಿಧಗಳಲ್ಲಿ ಹುಟ್ಟಿಕೊಂಡಿರುತ್ತವೆ. ಕಲಾ, ವಿಜ್ಞಾನ, ಬೇಸಾಯ, ತಾಂತ್ರಿಕ, ವಾಣಿಜ್ಯ, ಕಾನೂನು, ಶಿಕ್ಷಣ ಇತ್ಯಾದಿ ಕಾಲೇಜುಗಳು ಇಂದಿನ ಸಾಮಾಜಿಕ ಬೇಡಿಕೆಗಳ ಆವಶ್ಯಕತೆಗಳನ್ನು ಪೂರೈಸಲನುವಾಗಿವೆ.

ಶೈಕ್ಷಣಿಕ ಸಂಸ್ಥೆಗಳಾದ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಮಟ್ಟ ಅವುಗಳ ಗ್ರಂಥಾಲಯಗಳನ್ನು ಅವಲಂಬಿಸಿದ್ದು, ಗ್ರಂಥಾಲಯಗಳು ಜ್ಞಾನಭಂಡಾರದ ಮುದ್ರೆಯನ್ನೊಡೆಯುವ ಹಲವಾರು ಸಾಧನಗಳತ್ತ ಓದುಗರನ್ನು ಆಕರ್ಷಿಸುವಂತಾಗಬೇಕಲ್ಲದೆ ಅವು ವಿದ್ಯಾರ್ಥಿಗಳಿಗೆ ಮಹತ್ತ್ವದ ಮಾರ್ಗದರ್ಶನ ನೀಡಿ ಅವರ ವ್ಯಕ್ತಿತ್ವದ ಸರ್ವತೋಮುಖ ಬೆಳೆವಣಿಗೆಗಾಗಿ ಅತ್ಯಂತ ಸಹಾಯಕಾರಿಯಾಗಬೇಕು. ಈ ದಿಸೆಯಲ್ಲಿ ಕಾಲೇಜು ಗ್ರಂಥಾಲಯಗಳ ಪಾತ್ರ ಅತಿ ಮಹತ್ತ್ವದ್ದೆನಿಸಿದೆ – ಹೀಗೆ ಅಭಿಪ್ರಾಯಪಟ್ಟ ಸ್ಯಾಡ್ಲರ್ ಕಮಿಷನಿನ ವರದಿ (1917) ಸಂಸ್ಮರಣೀಯವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯ, ಧಾರವಾಡ

ಕಾಲೇಜು ಗ್ರಂಥಾಲಯ ಶೈಕ್ಷಣಿಕ ಕಾರ್ಯವನ್ನೆಸಗುವ ಸಂಸ್ಥೆಯಾಗಿದ್ದು ವಿದ್ಯಾರ್ಥಿ ಕೇವಲ ಪುಸ್ತಕದ ಹುಳುವೂ ಸಾಮಾನ್ಯ ಪರೀಕ್ಷಾಭ್ಯರ್ಥಿಯೂ ಆಗಿರದೇ ಗ್ರಂಥಾಲಯ ಅಗಣಿತ ಜ್ಞಾನದ ಪ್ರಯೋಗ ಶಾಲೆಯೆಂದರಿತು ಜ್ಞಾನಸಂಪಾದನೆಗಾಗಿ ಗ್ರಂಥಗಳ ಜೊತೆಗೆ ಇರಬೇಕಾಗುತ್ತದೆ. ಗೌಹತಿಯ ಕಾಟನ್ ಕಾಲೇಜು, ಹಾಗೂ ಕೋಲ್ಕತದ ಪ್ರೆಸಿಡೆನ್ಸಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಪ್ರಾಧ್ಯಾಪಕರು ಗ್ರಂಥಾಲಯದಲ್ಲಿಯೇ ಸಂಧಿಸುತ್ತಾರೆ. ಅಲ್ಲಿ ಅವರು ಯಾವ ಗ್ರಂಥಗಳನ್ನು ಹೇಗೆ ಓದಬೇಕೆಂದು ನಿರ್ದೇಶನವನ್ನೀಯುತ್ತಾರೆ. ಇಂಥ ಸತ್ಸಂಪ್ರದಾಯ ಎಲ್ಲೆಡೆಯಲ್ಲಿಯೂ ಬೆಳೆದುಬರಬೇಕಾಗಿದೆ.

ಪ್ರೆಸಿಡೆಂಟ್ ಟ್ರೂಮನ್ನರ ಕಮಿಷನ್ ಆನ್ ಹೈಯರ್ ಎಜುಕೇಶನ್ ಸಮಿತಿಯ ಹೇಳಿಕೆಯಂತೆ ಕಾಲೇಜು ವಿದ್ಯಾಭ್ಯಾಸದಲ್ಲಿ ತರಗತಿಯ ಬೋಧನೆಯಷ್ಟೇ ಮುಖ್ಯವಾದದ್ದು ಗ್ರಂಥಾಲಯ ಬಳಕೆ. ಭಾರತದಲ್ಲಿ ಸ್ವಾತಂತ್ರ್ಯಪೂರ್ವ ವರ್ಷಗಳಲ್ಲಿ ಕಾಲೇಜು ಗ್ರಂಥಾಲಯಗಳ ಬೆಳೆವಣಿಗೆಗಾಗಿ ಯಾರೂ ಹೆಚ್ಚು ಗಮನ ಕೊಡಲಿಲ್ಲ. 1948ರಲ್ಲಿ ಎಸ್. ರಾಧಾಕೃಷ್ಣನ್‌ರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡ ವಿಶ್ವವಿದ್ಯಾಲಯ ಶಿಕ್ಷಣ ಸಮಿತಿ ಕಾಲೇಜು ಗ್ರಂಥಾಲಯಗಳಿಗೆ ವಿಪುಲ ಪ್ರೋತ್ಸಾಹವನ್ನಿತ್ತು ಹೇರಳವಾದ ಧನಸಹಾಯ ಕೊಡಲು ಶಿಫಾರಸು ಮಾಡಿತು.

ಅನಂತರ 1959ರಲ್ಲಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗ ಎಸ್.ಆರ್. ರಂಗನಾಥನ್‌ರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯ ಹಾಗೂ ಕಾಲೇಜು ಗ್ರಂಥಾಲಯಗಳ

ಬೆಳೆವಣಿಗೆಯ ಬಗ್ಗೆ ವಿಶೇಷ ಗಮನಕೊಟ್ಟಿತು. ಗ್ರಂಥಾಲಯಗಳಲ್ಲಿ ದುಡಿಯುವ ಸಿಬ್ಬಂದಿಯ ವೇತನಶ್ರೇಣಿಯನ್ನು ಸುಧಾರಿಸಲು, ಕಾಲೇಜು ಗ್ರಂಥಾಲಯಗಳಿಗಾಗಿ ಗ್ರಂಥಗಳನ್ನು ಕೊಳ್ಳಲು, ಪಠ್ಯಪುಸ್ತಕಗಳ ವಿಭಾಗವನ್ನಾರಂಭಿಸಲು, ಗ್ರಂಥಾಲಯ ಕಟ್ಟಡಗಳನ್ನು ಕಟ್ಟಲು ಧಾರಾಳವಾದ ಧನ ಸಹಾಯವನ್ನು ನೀಡಲು ಮುಂದೆ ಬಂದ ಸಂಗತಿ ಗ್ರಂಥಾಲಯ ಅಭಿವೃದ್ಧಿಯ ಮಾರ್ಗದಲ್ಲಿ ಮೈಲುಗಲ್ಲಾಗಿದೆ. ಕಾಲೇಜುಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ, ಗ್ರಂಥಾಲಯಗಳನ್ನು ಕಡೆಗಣಿಸುವುದು ಶೈಕ್ಷಣಿಕ ಮೌಲ್ಯಗಳ ಮೂಲವನ್ನೇ ಮೊಟಕುಗೊಳಿಸಿದಂತೆ – ಎಂದು 1964ರಲ್ಲಿ ನೇಮಕಗೊಂಡ ಕೊಠಾರಿ ಆಯೋಗ ಒತ್ತಿ ಹೇಳಿದುದು ಸ್ತುತ್ಯವಾಗಿದೆ. ಪಠ್ಯಗ್ರಂಥಗಳೇ ಇರಲಿ ಪಠ್ಯೇತರ ಗ್ರಂಥಗಳೇ ಇರಲಿ ಅವು ಗುರುಶಿಷ್ಯರ ನಡುವೆ ಜ್ಞಾನವಾಹಿನಿಯ ಸೇತುವೆಯಂತೆ ಸಹಾಯ ಮಾಡುತ್ತವೆ. ಕಾಲೇಜು ಗ್ರಂಥಾಲಯಗಳು ಶೈಕ್ಷಣಿಕ ವಿಶೇಷ ಗ್ರಂಥಾಲಯಗಳಾಗಿರುತ್ತವೆ. ಅಲ್ಲಿಯ ಓದುಗರೂ ಅವರ ಅಭಿರುಚಿಗಳೂ ವಿಶಿಷ್ಟವಾಗಿರುತ್ತವೆ.

ಕಾಲೇಜು ಗ್ರಂಥಾಲಯಗಳಲ್ಲಿ ಇನ್ನಿತರ ಗ್ರಂಥಾಲಯಗಳಂತೆ ಉತ್ತಮ ಗ್ರಂಥಗಳನ್ನು ಸಂಗ್ರಹಿಸುವುದರ ಜೊತೆಗೆ, ಪಠ್ಯಪುಸ್ತಕಗಳನ್ನೂ ಆಯಾ ವಿಷಯ ನಿರೂಪಣೆಯ ಆಧಾರ ಗ್ರಂಥಗಳನ್ನೂ ಟೀಕೆ, ವಿಮರ್ಶೆಗಳನ್ನೂ ಹೆಚ್ಚಾಗಿ ಸಂಗ್ರಹಿಸಬೇಕಾಗುತ್ತದೆ. ಕಾಲೇಜು ಗ್ರಂಥಾಲಯಗಳನ್ನು ವೃದ್ಧಿಗೊಳಿಸುವಾಗ ವಿಶೇಷವಾಗಿ ಅವು ಇರಿಸಿಕೊಂಡ ಪ್ರಮುಖ ದೃಷ್ಟಿಕೋನಕ್ಕೆ ಪೂರಕವಾಗುವ ಹಾಗೆ ಪಠ್ಯಕ್ರಮ, ಬೋಧನಭಾಷೆ, ಓದುಗರು – ಈ ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಗ್ರಂಥಗಳನ್ನು ಮತ್ತು ಇತರ ಓದುವ ಸಾಮಗ್ರಿಗಳನ್ನು ಕೊಳ್ಳುವಾಗ ಆಯಾ ಕಾಲೇಜುಗಳಲ್ಲಿರುವ ಪಠ್ಯಕ್ರಮವನ್ನು ಸಂಪೂರ್ಣವಾಗಿ ಲಕ್ಷದಲ್ಲಿಟ್ಟುಕೊಳ್ಳಬೇಕು. ಇದು ಶೈಕ್ಷಣಿಕ ಗ್ರಂಥಾಲಯವಾದುದರಿಂದ ವಿದ್ಯಾರ್ಥಿಗಳು ಅರಿತುಕೊಳ್ಳಬೇಕಾದ ವಿಷಯಗಳಿಗೆ ಸಂಬಂಧಪಟ್ಟ ಪಠ್ಯಗ್ರಂಥಗಳನ್ನು ಅತ್ಯವಶ್ಯವಾಗಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಕೊಂಡುಕೊಳ್ಳಬೇಕಾಗುತ್ತದೆ. ಪಠ್ಯಗ್ರಂಥಗಳಿಗೆ ಪೂರಕವಾದ ಇನ್ನಿತರ ಗ್ರಂಥಗಳನ್ನೂ ಸಂಗ್ರಹಿಸಬೇಕಾಗುತ್ತದೆ. ಜೊತೆಗೆ ಕೆಲವು ಮಹತ್ತ್ವದ ಪರಾಮರ್ಶನ ಗ್ರಂಥಗಳ ಸಂಗ್ರಹವೂ ಇರುವುದು ಉಚಿತ.

ಕಾಲೇಜಿನಲ್ಲಿ ಕಲಿಸತಕ್ಕ ವಿಷಯಗಳನ್ನು ಸಾಮಾನ್ಯವಾಗಿ ಇಂಗ್ಲಿಷ್ ಮಾಧ್ಯಮದಿಂದ ಬೋಧಿಸಲಾಗುತ್ತದೆ. ಸ್ವಾತಂತ್ರ್ಯಾನಂತರ ಮಾತೃಭಾಷೆ ಶಿಕ್ಷಣದ ಮಾಧ್ಯಮವಾಗಬೇಕೆಂಬ ಅಭಿಪ್ರಾಯ ಶಿಕ್ಷಣತಜ್ಞರಲ್ಲಿ ಹೆಚ್ಚಿದ್ದರಿಂದ ಭಾರತೀಯ ಕಾಲೇಜುಗಳಲ್ಲಿ ಆಯಾ ಪ್ರಾದೇಶಿಕ ಭಾಷೆ ಬೋಧನ ಭಾಷೆಯಾಗುತ್ತಿದೆ. ಈ ಸಂಕ್ರಮಣ ಕಾಲದಲ್ಲಿ ಗ್ರಂಥಾಲಯಗಳು ಬೋಧನ ಭಾಷೆಯಲ್ಲಿನ ಪಠ್ಯಪುಸ್ತಕಗಳನ್ನು ಕೊಳ್ಳಲು ಹೆಚ್ಚಾಗಿ ಹಣವನ್ನು ಮುಡಿಪಿಡಬೇಕಾಗುತ್ತದೆ. ಕಾಲೇಜಿನಲ್ಲಿ ಕಲಿಸುವ ವಿಷಯಗಳಲ್ಲಿ ಹೆಚ್ಚು ವೈವಿಧ್ಯವಿರುವುದರಿಂದ ಆಯಾ ವಿಷಯಗಳನ್ನು ಕುರಿತಾದ ಗ್ರಂಥಗಳನ್ನು ಸಹ ಕೊಳ್ಳಬೇಕಾಗುತ್ತದೆ. ಇಷ್ಟಾದರೂ ಇಂಗ್ಲಿಷ್ ಗ್ರಂಥಗಳ ಅಗತ್ಯ ಇದ್ದೇ ಇದೆ. ಅವನ್ನು ಕೈಬಿಡಲಾಗದು.

ಕಾಲೇಜು ಗ್ರಂಥಾಲಯದ ಓದುಗರು ಮುಖ್ಯವಾಗಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು. ಇವರ ಓದು ಹೆಚ್ಚಾಗಿ ಪಠ್ಯಗ್ರಂಥಗಳನ್ನು ಅವಲಂಬಿಸಿರುತ್ತದೆ. ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದೇ ವಿದ್ಯಾರ್ಥಿಗಳ ಅಂತಿಮ ಉದ್ದೇಶವಾದುದರಿಂದ ಪಠ್ಯ ಗ್ರಂಥಗಳನ್ನು ಹೊರತುಪಡಿಸಿ ಇತರ ವಿಷಯಗಳ ಮೇಲಿನ ಗ್ರಂಥಗಳ ಮತ್ತು ನಿಯತಕಾಲಿಕೆಗಳ ಅವಲೋಕನದಲ್ಲಿ ಅವರ ಮನಸ್ಸು ಹೋಗುವುದು ಕಡಿಮೆ. ಇಂದು ಪಠ್ಯಗ್ರಂಥಗಳನ್ನಾಧರಿಸಿದ ಬೋಧನೆಯೇ ಹೆಚ್ಚು. ಹೀಗಾಗಿ ಕಾಲೇಜು ಗ್ರಂಥಾಲಯಗಳಲ್ಲಿ ಸಂಶೋಧನಕಾರ್ಯ ನಡೆಸುವವರು ವಿರಳ. ಇದಕ್ಕೆ ಅಪವಾದವಾಗಿ ಕೆಲವು ಉತ್ತಮ ಮಟ್ಟದ ಕಾಲೇಜು ಗ್ರಂಥಾಲಯಗಳು ಸಕಲ ವಿಧದಲ್ಲಿ ಸಹಾಯ ಮಾದಲು ಅರ್ಹವಾಗಿರುತ್ತವೆ. ಅಲ್ಲಿ ಅವಶ್ಯ ಗ್ರಂಥಗಳು ಹಾಗೂ ನಿಯತಕಾಲಿಕೆಗಳು ಇರುತ್ತವೆ. ವಿದ್ಯಾರ್ಥಿಗಳಿಗೆ, ಉಪಾಧ್ಯಾಯರಿಗೆ ಅಗತ್ಯವೆನಿಸುವ ಪಠ್ಯ ಹಾಗೂ ಪಠ್ಯಸಹಾಯಕ ಗ್ರಂಥಗಳ ಪ್ರತಿಗಳು ಸಾಕಷ್ಟಿರುವುದು ಒಳ್ಳೆಯದು.

ಭಾರತೀಯ ವಿದ್ಯಾರ್ಥಿಗಳ ಶಿಕ್ಷಣದ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಕಾಲೇಜು ಗ್ರಂಥಾಲಯಗಳಿಗೆ ಬಡ ಮತ್ತು ಜಾಣ ವಿದ್ಯಾರ್ಥಿಗಳಿಗೆ ಸಹಾಯಮಾಡುವ ಉದ್ದೇಶದ ಜೊತೆಗೆ ಕಾಲೇಜು ಗ್ರಂಥಾಲಯದ ಬೆಳೆವಣಿಗೆಗಾಗಿ ಪಠ್ಯಗ್ರಂಥಗಳನ್ನು ಕೊಳ್ಳಲು ತಗಲುವ ವೆಚ್ಚದ ಶೇ. 50ರಷ್ಟು ಹಣವನ್ನು ಸಹಾಯಧನವಾಗಿ ಒದಗಿಸುತ್ತಿರುವರು. ಅದಲ್ಲದೆ ಪ್ರತಿಯೊಂದು ಕಾಲೇಜಿನ ಗ್ರಂಥಾಲಯದಲ್ಲಿ ಪಠ್ಯಗ್ರಂಥಗಳ ಪ್ರತ್ಯೇಕ ವಿಭಾಗ ತೆರೆಯಲು 5,000 ರೂ.ಗಳಿಗೆ ಕಡಿಮೆಯಿಲ್ಲದಷ್ಟು ಧನಸಹಾಯವನ್ನು ಕೆಲವು ನಿಯಮಗಳಿಗನುಸಾರ ಕೊಡುತ್ತಿರುವರು. ಇದರಿಂದಾಗಿ ಕೆಲವು ಕಾಲೇಜುಗಳು ಉತ್ತಮ ಪಠ್ಯಗ್ರಂಥ ವಿಭಾಗಗಳನ್ನು ಬೆಳೆಸಿವೆ.

ಕೆಲವು ಸಂಸ್ಥೆಗಳು ಹಣಕಾಸಿನ ವಿನಿಮಯದಿಂದ ಓದುಗರ ಬೇಡಿಕೆಗಳಿಗನುಗುಣವಾಗಿ ಬುಕ್ ಬ್ಯಾಂಕ್‌ಗಳಿಂದ ಕೆಲವು ಅವಧಿಯವರೆಗೆ ಗ್ರಂಥಗಳನ್ನು ಎರವಲು ನೀಡುತ್ತವೆ. ಇದರಿಂದ ಆರ್ಥಿಕವಾಗಿ ಅಸಮರ್ಥರಾದ ಓದುಗರಿಗೆ ಅನುಕೂಲವಾಗಿದೆ. ಕಾಲೇಜು ಗ್ರಂಥಾಲಯದಲ್ಲಿ ಇಂಥ ಬುಕ್ ಬ್ಯಾಂಕ್‌ಗಳನ್ನು ಸ್ಥಾಪಿಸಿದರೆ ಜಾಣ, ಬಡ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ. ಉದಾಹರಣೆಗಾಗಿ ಬೆಂಗಳೂರಿನ ರೋಟರಿ ಕ್ಲಬ್ ಮತ್ತು ರಾಮನಾರಾಯಣ ಚೆಲ್ಲಾರಾಮ್ ಅಂಡ್ ಸನ್ಸ್ ಚಾರಿಟಬಲ್ ಟ್ರಸ್ಟ್ – ಈ ಎರಡು ಸಂಘಗಳು ಒಂದಾಗಿ 1959ರಲ್ಲಿ ವಿದ್ಯಾರ್ಥಿಗಳಿಗೆ ಸಹಾಯಮಾಡುವ ಉದ್ದೇಶದಿಂದ ವಿದ್ಯಾರ್ಥಿ ಸಹಾಯಕ ಸಂಘವೊಂದನ್ನು ಸ್ಥಾಪಿಸಿವೆ. ಇದರ ಮುಖಾಂತರ ಕರ್ನಾಟಕ ರಾಜ್ಯದ ಕಾಲೇಜು ಗ್ರಂಥಾಲಯಗಳಲ್ಲಿ ಬುಕ್ ಬ್ಯಾಂಕ್‌ಗಳ ವಿಭಾಗಗಳನ್ನು ತೆರೆಯಲು ಸಾಧ್ಯವಾಗಿದೆ. ಇದರ ಲಾಭ ಪಡೆದು ಅನೇಕ ಕಾಲೇಜು ಗ್ರಂಥಾಲಯಗಳು ಪಠ್ಯಗ್ರಂಥ ವಿಭಾಗಗಳನ್ನು ಚೆನ್ನಾಗಿ ಬೆಳೆಸಿವೆ.

ಬ್ರಿಟಿಷ್ ಕೌನ್ಸಿಲಿನವರು ಭಾರತದಲ್ಲಿನ ಕಾಲೇಜು ಗ್ರಂಥಾಲಯಗಳಿಗೆ ಬ್ರಿಟನ್ನಿನಲ್ಲಿ ಹೆಚ್ಚು ಬೆಲೆಗೆ ಮಾರಾಟವಾಗುತ್ತಿರುವ ಅಮೂಲ್ಯ ಪಠ್ಯಗ್ರಂಥಗಳನ್ನು ಒಂದು ವರ್ಷದವರೆಗೆ ಎರವಲಾಗಿ ಕೊಡುತ್ತಿದ್ದುದುಂಟು. ಈ ಸಂಚಾರಿ ಪಠ್ಯಗ್ರಂಥಾಲಯ ಸಹಾಯ ಪಡೆಯಬಯಸುವ ಕಾಲೇಜು ಗ್ರಂಥಾಲಯ ಪ್ರತಿವರ್ಷ 20 ರೂ. ವಂತಿಗೆಯನ್ನು ಕೊಡಬೇಕಾಗುತ್ತಿದ್ದಿತು. ಈ ಯೋಜನೆಯ ಲಾಭವನ್ನು ರಾಜ್ಯದ ಅನೇಕ ಕಾಲೇಜು ಗ್ರಂಥಾಲಯಗಳು ಪಡೆದುವು.

ಕಾಲೇಜು ಗ್ರಂಥಾಲಯದ ಮಹತ್ತ್ವವನ್ನರಿತು ಆಯಾ ಕಾಲೇಜಿನ ಆಡಳಿತ ವರ್ಗದವರು ತರಬೇತಿ ಪಡೆದ ನುರಿತ ಗ್ರಂಥಪಾಲರನ್ನು ಹಾಗೂ ಸರಿಯಾದ ಸಿಬ್ಬಂದಿವರ್ಗವನ್ನು ನೇಮಿಸಿದರೆ ಕಾಲೇಜು ಗ್ರಂಥಾಲಯಗಳು ತಮ್ಮ ಪಾಲಿನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುವುದು.

ಅನೇಕ ಕಾಲೇಜುಗಳಲ್ಲಿ ಗ್ರಂಥಾಲಯಗಳು ಮುಖ್ಯ ಶೈಕ್ಷಣಿಕ ಕಟ್ಟಡದ ಒಂದು ಕೋಣೆಯಲ್ಲಿರುತ್ತವೆ. ಪ್ರತ್ಯೇಕ ಗ್ರಂಥಾಲಯ ಕಟ್ಟಡಗಳಿರುವ ಕಾಲೇಜುಗಳ ಸಂಖ್ಯೆ ತೀರ ಕಡಿಮೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಪ್ರೇರಣೆ ಹಾಗೂ ಪ್ರೋತ್ಸಾಹದಿಂದ ಅನೇಕ ಕಾಲೇಜುಗಳು ಸ್ವತಂತ್ರ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿವೆ.

ಗ್ರಂಥಾಲಯ ಸೇವೆ ಸಮರ್ಪಕವಾಗಿ ಸಲ್ಲಬೇಕಾದರೆ ಈ ಕೆಲವು ಅಂಶಗಳನ್ನು ಗಮನಿಸುವುದು ಒಳ್ಳೆಯದು.

1. ಕಾಲೇಜು ಕೆಲಸ ಮಾಡುವ ವೇಳೆಯಲ್ಲಲ್ಲದೆ ಉಳಿದ ಬಿಡುವಿನ ವೇಳೆಗಳಲ್ಲೂ ಅಂದರೆ ಬೆಳಗಿನ ಎಂಟರಿಂದ ರಾತ್ರಿ ಎಂಟರವರೆಗೂ ತೆರೆದಿಡಬೇಕು.

2. ವಿದ್ಯಾರ್ಥಿ ಕೇಳಿದ ಪುಸ್ತಕ ಕೂಡಲೆ ಅವನಿಗೆ ಸಿಗುವಂತಾಗಬೇಕು.

3. ಅಲ್ಲೇ ಕೂತು ಓದುವ, ಟಿಪ್ಪಣಿ ತೆಗೆದುಕೊಳ್ಳುವ ವಿದ್ಯಾರ್ಥಿಗೆ ಸಾಕಷ್ಟು ಸ್ಥಳ ಹಾಗೂ ಆಸನಾವಕಾಶವಿರಬೇಕು.

4. ಪರಾಮರ್ಶನ ಸೇವೆ ಸುಲಭವಾಗಿ ಸಿಗುವಂತಿರಬೇಕು.

5. ಪಠ್ಯವಲ್ಲದ ಇತರ ವಿಷಯಿಕ ಗ್ರಂಥಗಳು ಯಾವ ವಿದ್ಯಾರ್ಥಿಗೂ – ಆತ ಬಯಸಿದಲ್ಲಿ ನೇರವಾಗಿ ದೊರೆಯುವಂತಿರಬೇಕು.

6. ಆಗಾಗ ಬರುವ ಹೊಸ ಪುಸ್ತಕಗಳನ್ನು ಪ್ರತ್ಯೇಕ ಸ್ಥಳದಲ್ಲಿಟ್ಟು ಅವಕ್ಕೆ ಸಾಕಷ್ಟು ಪ್ರಚಾರ ಕೊಡುವುದು ಉತ್ತಮ. **(ಎಸ್.ಆರ್.ಜೆಯು.;ಪಿ.ಎಸ್.ಎಂ.;ಸಿ.ವಿ.ಎಚ್.)**

**3 ವಿಶ್ವವಿದ್ಯಾಲಯ ಗ್ರಂಥಾಲಯಗಳು** : ಪ್ರತಿಯೊಂದು ವಿಶ್ವವಿದ್ಯಾಲಯಕ್ಕೂ ಸುಸಜ್ಜಿತವಾದ ಗ್ರಂಥಾಲಯದ ಅವಶ್ಯಕತೆ ಇದೆ ಎಂಬುದನ್ನು ಅನೇಕ ಶಿಕ್ಷಣತಜ್ಞರು ಒತ್ತಿ ಹೇಳಿದ್ದಾರೆ. ಪಾಲ್ ಬಕ್ ಎಂಬುವರು ಹೀಗೆ ಅಭಿಪ್ರಾಯಪಡುತ್ತಾರೆ : 'ಗ್ರಂಥಾಲಯ ಶೈಕ್ಷಣಿಕ ಕಾರ್ಯಗಳ ಹೃದಯ. ಅದು ಮಾನವನ ಪ್ರಕಟಿತ ಜಿಜ್ಞಾಸೆ ಮತ್ತು ಅಭಿಪ್ರಾಯಗಳ ಉಗ್ರಾಣ. ಉತ್ಕೃಷ್ಟ ಗ್ರಂಥಾಲಯಗಳಿಲ್ಲದೆ ಶಿಕ್ಷಣದಲ್ಲಿ ಗುಣಮಟ್ಟದ ಸಾಧನೆ ಅಸಾಧ್ಯ. ಶ್ರೇಷ್ಠ ಗ್ರಂಥಾಲಯಗಳಿಲ್ಲದ ಕಡೆ ಶ್ರೇಷ್ಠ ಅಧ್ಯಾಪಕರೂ ಇರುವುದು ಸಾಧ್ಯವಿಲ್ಲ; ಜ್ಞಾನವಾಹಿನಿಯ ಮುಕ್ತ ದರ್ಶನಕ್ಕೆ ಗ್ರಂಥಾಲಯವೇ ಹೆಬ್ಬಾಗಿಲು'. 1917ರಲ್ಲಿ ಭಾರತ ಸರ್ಕಾರದಿಂದ ನೇಮಕಗೊಂಡ ಮೈಕೆಲ್ ಸ್ಯಾಡ್ಲರ್ ಸಮಿತಿ ತನ್ನ ವರದಿಯಲ್ಲಿ ಸುಸಜ್ಜಿತ ಗ್ರಂಥಾಲಯ ಮತ್ತು ಪ್ರಯೋಗ ಮಂದಿರಗಳ ಸ್ಥಾಪನೆ ಮತ್ತು ವ್ಯವಸ್ಥೆ ವಿಶ್ವವಿದ್ಯಾಲಯದ ಆದ್ಯಕರ್ತವ್ಯಗಳಲ್ಲೊಂದು ಎಂದು ಹೇಳಿದೆ. ಉತ್ತಮ ಬೋಧನೆ ಮತ್ತು ಸಂಶೋಧನೆಗೆ ಸಾಧನ ಸೌಲಭ್ಯಗಳನ್ನು ಅಧ್ಯಾಪಕರು ಸದುಪಯೋಗಪಡಿಸಿಕೊಳ್ಳಬೇಕೆಂದು ವಿಶ್ವವಿದ್ಯಾಲಯಗಳು ನಿರೀಕ್ಷಿಸಬೇಕು. ಸುಸಜ್ಜಿತವಾದ ಗ್ರಂಥಾಲಯ ಮತ್ತು ಸಂಶೋಧನ ಕೇಂದ್ರಗಳನ್ನು ಸ್ಥಾಪಿಸುವುದು ವಿಶ್ವವಿದ್ಯಾಲಯಗಳಿಗೆ ಸಮಂಜಸವೂ ಅನಿವಾರ್ಯವೂ ಆಗಿರುತ್ತದೆ. ಇವು ಆ ಸಮಿತಿಯ ಇತರ ಸಲಹೆಗಳು. ಭಾರತ ಸರ್ಕಾರದಿಂದ 1948ರಲ್ಲಿ

ರಚಿತವಾದ ರಾಧಾಕೃಷ್ಣನ್ ಸಮಿತಿ ವೈಜ್ಞಾನಿಕ ಸಂಶೋಧನೆಗೆ ಪ್ರಯೋಗಶಾಲೆಗಳು ಎಷ್ಟು ಆವಶ್ಯಕವೋ ಸಾಮಾಜಿಕ, ಮಾನವಿಕ ಮತ್ತು ಸಾಹಿತ್ಯ ಸಂಶೋಧನೆಗಳಿಗೆ ಗ್ರಂಥಾಲಯಗಳು ಅಷ್ಟೇ ಆವಶ್ಯಕ – ಎಂದು ಹೇಳಿದೆ.

ವಿಶ್ವವಿದ್ಯಾಲಯ ಗ್ರಂಥಾಲಯಗಳ ಇತಿಹಾಸ ಉನ್ನತ ಶಿಕ್ಷಣದ ಬೆಳೆವಣಿಗೆಯಲ್ಲಿ ಹಾಸುಹೊಕ್ಕಾಗಿ ಬೆರೆತು ಬಂದಿದೆ. ಗ್ರಂಥಾಲಯಗಳು ಉನ್ನತ ಶಿಕ್ಷಣ ಸಂಸ್ಥೆಗಳ ಉತ್ತಮಾಂಗಗಳಾಗಿ ಪೋಷಿಸಲ್ಪಟ್ಟಿವೆ. ಗ್ರಂಥಾಲಯಗಳ ಇತಿಹಾಸವನ್ನು ಅಭ್ಯಸಿಸುವಾಗ ಅವುಗಳ ಪೋಷಕ ಸಂಸ್ಥೆಗಳಾದ ವಿಶ್ವವಿದ್ಯಾಲಯಗಳ ಧೋರಣೆಗಳ ಚೌಕಟ್ಟಿನೊಳಗೆ ಗ್ರಂಥಾಲಯಗಳ ವ್ಯವಸ್ಥೆ, ಸಂಗ್ರಹ ಕಾರ್ಯ, ಸೇವಾವಿಧಾನ ಮೊದಲಾದವು ಅಡಕವಾಗುತ್ತವೆ.

ಕಾಲಧರ್ಮಕ್ಕನುಗುಣವಾಗಿ ವಿಶ್ವವಿದ್ಯಾಲಯಗಳಲ್ಲಿನ ಪಠ್ಯಕ್ರಮ, ಬೋಧನ ವಿಧಾನ ಮತ್ತು ಸಂಶೋಧನ ವಿನ್ಯಾಸಗಳು ಬದಲಾಗುತ್ತ ಹೋಗುತ್ತವೆ. ಈ ಬಗೆಯ ಮಾರ್ಪಾಡುಗಳು ಆಗಾಗ್ಗೆ ಆಗುತ್ತಿದ್ದರೂ ವಿಶ್ವವಿದ್ಯಾಲಯಗಳ ಮೂಲಭೂತ ಧೋರಣೆಗಳಲ್ಲಿ ಮತ್ತು ಆದರ್ಶಗಳಲ್ಲಿ ಸ್ಥಿರತೆ ಕಂಡುಬರುತ್ತದೆ. ಆ ಆದರ್ಶಗಳಲ್ಲಿ ಜ್ಞಾನವಾಹಿನಿಯ ಹಾಗೂ ಅಭಿಪ್ರಾಯಗಳ ಪೋಷಣೆ, ಬೋಧನೆ, ಜ್ಞಾನಪ್ರಸಾರ ಮತ್ತು ಸೇವೆ, ಸಂಶೋಧನೆ ಮತ್ತು ಪ್ರಕಟಣೆ – ಇವು ಮುಖ್ಯವಾದವು. ಈ ಐದು ತತ್ತ್ವಗಳು ಒಂದಕ್ಕೊಂದು ಹೊಂದಿಕೊಂಡಿದ್ದು ವಿಶ್ವವಿದ್ಯಾಲಯಕ್ಕೆ ಹೇಗೋ ಹಾಗೆಯೇ ಅದರ ಗ್ರಂಥಾಲಯಕ್ಕೂ ಅನ್ವಯಿಸುತ್ತವೆ.

ಕಳೆದ ಐದಾರು ಶತಕಗಳಲ್ಲಿ ವಿಶ್ವವಿದ್ಯಾಲಯಗಳು ಮಾನವ ಜನಾಂಗದ ಪ್ರಕಟಿತ ಅರಿವು ಮತ್ತು ಅಭಿಪ್ರಾಯಗಳ ಪ್ರಮುಖ ಸಂರಕ್ಷಕ ಕೇಂದ್ರಗಳಾಗಿ ಬೆಳೆದುಬಂದಿವೆ. ಬೌದ್ಧಿಕ, ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಸಾಹಿತ್ಯಗಳನ್ನು ಗ್ರಂಥಾಲಯ, ಪ್ರಯೋಗಮಂದಿರ, ವಸ್ತು ಸಂಗ್ರಹಾಲಯ ಮತ್ತು ಇತರ ಸಾಮಾಜಿಕ ಸಂಸ್ಥೆಗಳ ಮೂಲಕ ಪೋಷಿಸಿ ಬೆಳೆಸಿಕೊಂಡು ಬರುವುದರಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಪ್ರಶಂಸನೀಯ. ಸಾಮಾಜಿಕ ಪ್ರಗತಿಯ ಸ್ಥಿತಿಗತಿಗಳು ಮಾನವನ ಅರಿವು, ಸಂಶೋಧನೆ ಮತ್ತು ಪರಂಪರೆಯನ್ನವಲಂಬಿಸಿರುತ್ತವೆ. ಎಲ್ಲ ಸಂಶೋಧನೆಗಳೂ ಹೊಸ ಅಭಿಪ್ರಾಯಗಳೂ ಸಮಾಜದಲ್ಲಿ ಪರಂಪರಾನುಗತವಾಗಿ ರಕ್ಷಿಸಿಕೊಂಡು ಬಂದಿರುವ ಜ್ಞಾನವನ್ನು ಬಹುಮಟ್ಟಿಗೆ ಅವಲಂಬಿಸಿರುತ್ತವೆ. ಇಂಥ ಸಂರಕ್ಷಿತ ಜ್ಞಾನಕೇಂದ್ರಗಳಾಗಿ ಗ್ರಂಥಾಲಯಗಳು ಬೆಳೆದುಬಂದಿವೆ.

ವಿಶ್ವವಿದ್ಯಾಲಯದ ಧ್ಯೇಯ, ಧೋರಣೆ ಮತ್ತು ಕಾರ್ಯಕ್ರಮಗಳನ್ನನುಸರಿಸಿ ಅದರ ಗ್ರಂಥಾಲಯದ ಆಡಳಿತ ಮತ್ತು ಸೇವಾ ವಿಧಾನಗಳನ್ನು ರೂಪಿಸಬೇಕಾಗುತ್ತದೆ. ಆಧುನಿಕ ಗ್ರಂಥಾಲಯವೊಂದರ ಆವಶ್ಯಕತೆಗಳು ಹೀಗಿರುತ್ತವೆ: ಬೋಧನೆ ಮತ್ತು ಸಂಶೋಧನಾ ಕಾರ್ಯಗಳಿಗೆ ಅಗತ್ಯವಾದ ಗ್ರಂಥ ಸಂಪತ್ತಿನ ಸಂಗ್ರಹಣೆ, ಈ ಗ್ರಂಥ ಸಂಗ್ರಹಣೆ ಮತ್ತು ನಿರ್ವಹಣಕಾರ್ಯಗಳಿಗೆ ಅಗತ್ಯವಾದ ದಕ್ಷ ಸಿಬ್ಬಂದಿ, ಓದುಗರ ಅನುಕೂಲಕ್ಕೆ ಸಹಾಯಕವಾದ ರೀತಿಯಲ್ಲಿ ಗ್ರಂಥಗಳ ವ್ಯವಸ್ಥೆಗೆ ತಕ್ಕ ಸ್ಥಳ ಮತ್ತು ಸಲಕರಣೆಗಳು, ವಿಶ್ವವಿದ್ಯಾಲಯದ ಆಡಳಿತ ಹಾಗೂ ಶೈಕ್ಷಣಿಕ ಕಾರ್ಯ ನೀತಿಗಳೊಡನೆ ಗ್ರಂಥಾಲಯದ ಕಾರ್ಯಕ್ರಮಗಳ ಸಂಘಟನೆ, ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಗ್ರಂಥಾಲಯ ಕೇಂದ್ರ ಮತ್ತು ಸಂಘಗಳೊಡನೆ ಸಹಕಾರ, ಈ ಎಲ್ಲ ಕಾರ್ಯಕ್ರಮಗಳ ನಿರ್ವಹಣೆಗೆ ಅಗತ್ಯವಾದ ಆರ್ಥಿಕ ಸೌಲಭ್ಯಗಳು ಮತ್ತು ಗ್ರಂಥಾಲಯದ ಆಡಳಿತ ಹಾಗೂ ಸೇವೆಗೆ ಆವಶ್ಯಕವಾದ ನೀತಿ ನಿರೂಪಗಳು.

ವಿಶ್ವವಿದ್ಯಾಲಯ ಗ್ರಂಥಾಲಯದ ಆಡಳಿತ ವ್ಯವಸ್ಥೆ ಅದರ ಧ್ಯೇಯ ಧೋರಣೆ ಮತ್ತು ಸೇವಾವಿಧಾನಗಳನ್ನು ಅವಲಂಬಿಸಿರುವುದರ ಜೊತೆಗೆ ಅಲ್ಲಿರುವ ಗ್ರಂಥ ಸಂಗ್ರಹದ ಸಂಖ್ಯೆ, ವಾರ್ಷಿಕವೆಚ್ಚ, ಸ್ಥಳಾವಕಾಶ, ಸಿಬ್ಬಂದಿ ಮೊದಲಾದ ಅಂಶಗಳನ್ನೂ ಅವಲಂಬಿಸಿರುತ್ತದೆ. ಅಲ್ಲಿ ನಡೆಯುವ ಕೆಲಸಕಾರ್ಯಗಳನ್ನು ತಾಂತ್ರಿಕ ಹಾಗೂ ಸೇವಾ ವಿಭಾಗಗಳೆಂದು ಎರಡು ಬಗೆಯಾಗಿ ವಿಂಗಡಿಸಬಹುದು. ಗ್ರಂಥಗಳ ಆಯ್ಕೆ, ಸಂಗ್ರಹಣೆ, ವರ್ಗೀಕರಣ, ಸೂಚೀಕರಣ ಮತ್ತು ಪ್ರಲೇಖ ಕಾರ್ಯಗಳನ್ನು ತಾಂತ್ರಿಕ ವಿಭಾಗಗಳೆಂದೂ ಗ್ರಂಥ ವಿತರಣೆ, ವ್ಯವಸ್ಥೆ, ಪರಾಮರ್ಶನ ಸೇವೆ ಮೊದಲಾದುವುಗಳನ್ನು ಸೇವಾ ವಿಭಾಗಗಳೆಂದೂ ವಿಭಾಗಿಸಬಹುದು. ಈ ಒಂದೊಂದು ವಿಭಾಗದಲ್ಲೂ ಕನಿಷ್ಠ ಒಬ್ಬೊಬ್ಬ ತರಬೇತಾದ ಗ್ರಂಥಪಾಲನಿರುತ್ತಾನೆ. ಸಾಮಾನ್ಯವಾಗಿ ಗ್ರಂಥಾಲಯದ ಆಡಳಿತ ಸಿಬ್ಬಂದಿಯಲ್ಲಿ ಪ್ರಧಾನ ಗ್ರಂಥಪಾಲ, ಉಪಗ್ರಂಥಪಾಲ ಮತ್ತು ಸಹಾಯಕ ಗ್ರಂಥಪಾಲ ಎಂಬ ಮೂರು ಅಂತಸ್ತುಗಳಿರುತ್ತವೆ. ಇವರ ವಿದ್ಯಾರ್ಹತೆ, ಸ್ಥಾನಮಾನ ಮತ್ತು ವೇತನ ಶ್ರೇಣಿಗಳು ಕ್ರಮವಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಉಪಪ್ರಾಧ್ಯಾಪಕ (ರೀಡರ್) ಮತ್ತು ಅಧ್ಯಾಪಕರಿಗೆ ಸರಿಸಮನಾಗಿರುತ್ತವೆ. ಗ್ರಂಥಗಳ ಆಯ್ಕೆ ಮತ್ತು ಸಂಗ್ರಹ ಕಾರ್ಯಗಳಲ್ಲಿ ಗ್ರಂಥಾಲಯದ ಸಿಬ್ಬಂದಿ ಅಧ್ಯಾಪಕವರ್ಗದ ಸಹಾಯ ಮತ್ತು ಸಹಕಾರವನ್ನು ನಿರೀಕ್ಷಿಸುತ್ತದೆ. ಉತ್ಕೃಷ್ಟ ಗ್ರಂಥ ಸಂಗ್ರಹ ಈ ಎರಡು ವರ್ಗಗಳ ಪರಸ್ಪರ ಸಹಕಾರ ಮತ್ತು ಸಹಾಯವನ್ನವಲಂಬಿಸಿರುತ್ತದೆ.

ಆದರ್ಶ ವಿಶ್ವವಿದ್ಯಾಲಯ ಗ್ರಂಥಾಲಯ ಒಂದು ಕಡೆ ಬೋಧಕರಿಗೂ ಮತ್ತೊಂದು ಕಡೆ ವಿದ್ಯಾರ್ಥಿಗಳಿಗೂ ಸಂಶೋಧಕರಿಗೂ ಬೇಕಾದ ಸೇವೆಯನ್ನು ನೀಡಲು ಸಮರ್ಥವಾಗಿರಬೇಕಾಗುತ್ತದೆ. ಉತ್ತಮವಾದ ವರ್ಗೀಕರಣ, ಕಾಲ ವಿಳಂಬವಿಲ್ಲದ ಪರಾಮರ್ಶನ ಸೇವೆ, ಈಚೆಗೆ ಮುಖ್ಯವಾಗುತ್ತಿರುವ ಪ್ರಲೇಖನಾದಿ ವಿಶಿಷ್ಟ ಸೇವೆಗಳು ದೊರೆಯುವಂತಾಗಬೇಕು. ಹೊಸ ಹೊಸ ಪುಸ್ತಕಗಳನ್ನು ಕೊಂಡು ಶೇಖರಿಸುವುದೇ ಬಹು ದೊಡ್ಡ ಜವಾಬ್ದಾರಿ. ಜೊತೆಗೆ ಅಪಾರವಾಗಿ ಬೆಳೆಯುತ್ತಿರುವ ಸಂಶೋಧನ ನಿಯತಕಾಲಿಕೆಗಳ ಶೇಖರಣೆ ಹಾಗೂ ವಿತರಣೆ ಈಚೆಗೆ ಮುಖ್ಯವೆನಿಸಿದೆ. ವಿವಿಧ ಸೂಚಿಗಳ ನಿರ್ಮಾಣ, ವಾಙ್ಮಯದರ್ಶಕ ಮಾದರಿಯ ಸೂಚಿಗಳ ತಯಾರಿಕೆ–ಇವುಗಳ ಕಡೆ ಗಮನ ಹರಿಯಬೇಕಾದುದಿದೆ. ಅನೇಕ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಗಣಕ ಮೊದಲಾದ ಯಂತ್ರಗಳು ಬಳಕೆಯಲ್ಲಿವೆ. ಒಟ್ಟಿನಲ್ಲಿ ಸಾರಸ್ವತ ಪ್ರಪಂಚದಲ್ಲಿ ಶರವೇಗದಲ್ಲಾಗುತ್ತಿರುವ ಜ್ಞಾನಸ್ಫೋಟವನ್ನು ಎದುರಿಸುವ ಸಾಹಸವನ್ನು ವಿಶ್ವವಿದ್ಯಾಲಯ ಗ್ರಂಥಾಲಯಗಳು ಮಾಡಬೇಕಾದುದಿದೆ.

**ಪಾಶ್ಚಾತ್ಯ ದೇಶಗಳ ಗ್ರಂಥಾಲಯಗಳು :** 1800ಕ್ಕೆ ಮೊದಲು ಬ್ರಿಟನ್ನಿನಲ್ಲಿ ಕೇವಲ ಏಳು ವಿಶ್ವವಿದ್ಯಾಲಯಗಳಿದ್ದವು. ಅವುಗಳಲ್ಲಿ ಅತ್ಯಂತ ಹಳೆಯವೆಂದರೆ ಆಕ್ಸ್‌ಫರ್ಡ್ (1163), ಕೇಂಬ್ರಿಜ್ (1209), ಸೇಂಟ್ ಆಂಡ್ರಿವ್ಸ್ (1411), ಗ್ಲ್ಯಾಸ್ಗೋ (1453) ಮತ್ತು ಅಬರ್ಡೀನ್ (1494). ಉಳಿದವು 16ನೆಯ ಶತಮಾನದಿಂದೀಚೆಗೆ ಸ್ಥಾಪಿತವಾದವು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ 1163ರಲ್ಲಿ ಸ್ಥಾಪಿತವಾದರೂ ಅದು ಒಂದು ಗ್ರಂಥಾಲಯವನ್ನು ಹೊಂದಿದ್ದು 1332ರಲ್ಲಿ. ಅದಕ್ಕೆ ಒಬ್ಬ ಗ್ರಂಥಪಾಲನನ್ನು ನೇಮಿಸಿದ್ದು 1367ರಲ್ಲಿ. ಅವನ ಕರ್ತವ್ಯಗಳ ಬಗ್ಗೆ ನಿಯಮಗಳನ್ನು ಮಾಡಿದ್ದು 1412ರಲ್ಲಿ. ಆ ಗ್ರಂಥಾಲಯ ಉತ್ತಮಸ್ಥಿತಿಗೆ ಬಂದದ್ದು ಥಾಮಸ್ ಬೋಡ್ಲೆ (1545–1613) ಎಂಬವನ ವಿಶೇಷ ಆಸಕ್ತಿ ಹಾಗೂ ಪರಿಶ್ರಮಗಳಿಂದಾಗಿ. 1601ರಲ್ಲಿ ಬೋಡ್ಲೆ ಅದನ್ನು ತನ್ನ ಅನೇಕ ಮಿತ್ರರ ಸಹಾಯದಿಂದ ಹೊಸ ಸಲಕರಣೆಗಳೊಡನೆ ಪುನರ್ವ್ಯವಸ್ಥೆಗೊಳಿಸಿದ. 1602ರಲ್ಲಿ ಈ ಗ್ರಂಥಾಲಯಕ್ಕೆ ಬೋಡ್ಲೀಯನ್ ಲೈಬ್ರರಿ ಎಂದು ಪುನರ್ನಾಮಕರಣ ಮಾಡಲಾಯಿತು. ಕಾಪಿರೈಟ್ ಶಾಸನದನ್ವಯ ಇದು ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯ ಗ್ರಂಥಾಲಯಗಳು ಬ್ರಿಟನ್ನಿನಲ್ಲಿ ಪ್ರಕಟವಾಗುವ ಎಲ್ಲ ಗ್ರಂಥಗಳನ್ನೂ ಪಡೆಯುತ್ತಿವೆ. ಕೇಂಬ್ರಿಜ್ ಗ್ರಂಥಾಲಯದಲ್ಲಿ ಗ್ರಂಥಗಳೂ ಹಸ್ತಪ್ರತಿಗಳೂ ಇವೆ. ಇಲ್ಲಿನ ವೈಶಿಷ್ಟ್ಯವೆಂದರೆ ಅಪಾರ ಭೂಪಟಗಳ ಸಂಗ್ರಹ. 15ನೆಯ ಶತಮಾನದ ಪ್ರಾರಂಭದಿಂದ ಇಲ್ಲಿಯವರೆಗೆ ಸಂಗ್ರಹಿಸಿ ಸಂರಕ್ಷಿಸಿ ಇಡಲಾಗಿರುವ ಭೂಪಟಗಳ ಸಂಖ್ಯೆ 6 ಲಕ್ಷವನ್ನೂ ಮೀರುತ್ತದೆ.

ಜರ್ಮನಿಯ ವಿಶ್ವವಿದ್ಯಾಲಯಗಳ ಇತಿಹಾಸ 14ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ. ರುಪ್ರೆಚ್–ಕಾರ್ಲ್ ವಿಶ್ವವಿದ್ಯಾಲಯ (1386), ಹೈಡೆಲ್‌ಬರ್ಗ್ ವಿಶ್ವವಿದ್ಯಾಲಯ (1386) ಮತ್ತು ಕೋಲೋನ್ ವಿಶ್ವವಿದ್ಯಾಲಯ (1388)– ಇವು ಅತ್ಯಂತ ಹಳೆಯವು. ಕೇಂಬ್ರಿಜ್ ಮತ್ತು ಆಕ್ಸ್‌ಫರ್ಡುಗಳಲ್ಲಿರುವಂತೆ ಇಲ್ಲಿನ ವಿಶ್ವವಿದ್ಯಾಲಯದ ಗ್ರಂಥಾಲಯಗಳಲ್ಲಿಯೂ ಪ್ರಾಚ್ಯವಿಷಯಗಳ ಅಮೂಲ್ಯಗ್ರಂಥ ಸಂಗ್ರಹಗಳಿವೆ.

ಬ್ರಿಟನ್ನಿನ ವಿಶ್ವವಿದ್ಯಾಲಯಗಳಿಗಿಂತ ನಾಲ್ಕೈದು ಶತಮಾನಗಳಷ್ಟು ಇತ್ತೀಚಿನವಾಗಿದ್ದರೂ ಅಮೆರಿಕದ ಸಂಯುಕ್ತಸಂಸ್ಥಾನಗಳ ವಿಶ್ವವಿದ್ಯಾಲಯ ಗ್ರಂಥಾಲಯಗಳು ಗ್ರಂಥಗಳ ಬೃಹತ್ ಸಂಗ್ರಹಗಳನ್ನು ಹೊಂದಿವೆ. ಹಾರ್ವರ್ಡ್ ಗ್ರಂಥಾಲಯ (1696) ದಲ್ಲಿ 6.5 ದಶಲಕ್ಷ, ಯೇಲ್ ಗ್ರಂಥಾಲಯದಲ್ಲಿ 4.5 ದಶಲಕ್ಷ ಮತ್ತು ಇತರ 20 ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ 1 ದಶಲಕ್ಷಕ್ಕಿಂತ ಹೆಚ್ಚು ಗ್ರಂಥಗಳಿವೆ. ಇವುಗಳಲ್ಲಿ ಕೆಲವು ಗ್ರಂಥಾಲಯಗಳು ಅನೇಕ ವಿಧದ ವಿಷಯ ವಿಭಾಗಗಳನ್ನು ಹೊಂದಿದ್ದು ತಮ್ಮ ತಮ್ಮ ವಿಶಿಷ್ಟ ಸಂಗ್ರಹಗಳಿಗೆ ಹೆಸರಾಗಿವೆ. ಇಲ್ಲಿಯ ಗ್ರಂಥಾಲಯಗಳ ಗ್ರಂಥಸಂಗ್ರಹಣ ಶಕ್ತಿಯು ದ್ವಿಗುಣಗೊಂಡದ್ದು 19ನೆಯ ಶತಮಾನದ ಉತ್ತರಾರ್ಧದಿಂದೀಚೆಗೆ.

**ಭಾರತದ ವಿಶ್ವವಿದ್ಯಾಲಯ ಗ್ರಂಥಾಲಯಗಳು :** ಪ್ರಾಚೀನ ಭಾರತದಲ್ಲಿ ಉನ್ನತ ವ್ಯಾಸಂಗ ಮುಖ್ಯವಾಗಿ ಗುರುಕುಲಕೇಂದ್ರಗಳಲ್ಲಿ ಪ್ರಾರಂಭವಾಯಿತು. ಇಲ್ಲಿ ಗುರು ಮತ್ತು ಶಿಷ್ಯರಲ್ಲಿ ನಿಕಟವಾದ ಸಂಪರ್ಕವಿದ್ದು ಶಿಷ್ಯರು ತಮ್ಮ ಜ್ಞಾನಾರ್ಜನೆಗೆ ಪ್ರತ್ಯಕ್ಷವಾಗಿ ಗುರುಗಳನ್ನೇ ಅವಲಂಬಿಸಿರುತ್ತಿದ್ದರು. ಇಂಥ ಒಂದು ಶಿಕ್ಷಣ ಪದ್ಧತಿಯಲ್ಲಿ ಗ್ರಂಥ ಅಥವಾ ಗ್ರಂಥಾಲಯದ ಆವಶ್ಯಕತೆ ಹೆಚ್ಚಾಗಿರುತ್ತಿರಲಿಲ್ಲವೆಂದು ರಾಧಾಕುಮುದ ಮುಖರ್ಜಿ ಹೇಳಿದ್ದಾರೆ. ಅಲ್ಲಿನ ಶಿಕ್ಷಣ ಪದ್ಧತಿ ಸಾಮೂಹಿಕವಾಗಿರದೆ ವೈಯಕ್ತಿಕವಾಗಿರುತ್ತಿತ್ತು. ಸಾಮೂಹಿಕ ಶಿಕ್ಷಣ ವಿಧಾನವಿಲ್ಲದ ಕಡೆಗಳಲ್ಲಿ ಗ್ರಂಥಾಲಯಗಳ ಬೆಳವಣಿಗೆ ವಿರಳ. ಈ ಬಗೆಯ ಶಿಕ್ಷಣ ವಿಧಾನ ಬೌದ್ಧಧರ್ಮ ಪ್ರಬುದ್ಧಮಾನಕ್ಕೆ ಬರುವವರೆಗೆ ಮುಂದುವರಿಯಿತು. ಅಲ್ಲಿಂದ ಗುರುಕುಲಗಳಲ್ಲಿಯ ವೈಯಕ್ತಿಕ ಶಿಕ್ಷಣ ಮಾರ್ಪಟ್ಟು ವಿಹಾರಗಳಲ್ಲಿಯ ಸಾಮೂಹಿಕ ಶಿಕ್ಷಣ ಹೆಚ್ಚು ಹೆಚ್ಚಾಗಿ ಆಚರಣೆಗೆ ಬಂತು. ಇಂಥ ಬೌದ್ಧವಿಹಾರಗಳಲ್ಲಿ ಪ್ರ.ಶ.ಪೂ. 7ನೆಯ ಶತಮಾನದಲ್ಲಿ ಪ್ರಾರಂಭವಾದ ತಕ್ಷಶಿಲ ಎಂಬುದು ಅನಂತರದ ಹತ್ತು ಶತಮಾನಗಳ

ವರೆಗೆ ಜ್ಞಾನಾರ್ಜನೆಯ ಪ್ರಮುಖ ಕೇಂದ್ರವಾಗಿತ್ತು. ಈ ಕೇಂದ್ರಕ್ಕೆ ಹೊಂದಿಕೊಂಡಂತೆ ಒಂದು ಗ್ರಂಥಾಲಯವಿತ್ತೇ ಎಂಬುದಕ್ಕೆ ದಾಖಲೆಗಳಿಲ್ಲದಿದ್ದರೂ ಹಸ್ತಪ್ರತಿಗಳ ಸಂಗ್ರಹಗಳನ್ನೊಳಗೊಂಡ ಒಂದು ಗ್ರಂಥಾಲಯವಿದ್ದಿರಬೇಕೆಂದು ಎ. ಕೆ. ಮುಖರ್ಜಿ ಊಹಿಸುತ್ತಾರೆ. ಪ್ರ. ಶ. 400ರಲ್ಲಿ ಪ್ರಾರಂಭವಾದ ನಾಲಂದ ವಿಶ್ವವಿದ್ಯಾಲಯದ ಬಗ್ಗೆ ದಾಖಲೆಗಳಿವೆ. ಇದನ್ನು ಮೊದಲನೆಯ ಕುಮಾರಗುಪ್ತ ಸ್ಥಾಪಿಸಿದ. ಇದರ ಗ್ರಂಥಾಲಯ ಧರ್ಮಗಂಜ್ ಎಂಬ ಪ್ರತ್ಯೇಕ ಸ್ಥಳದಲ್ಲಿ ಮೂರು ವಿಶಾಲ ಕಟ್ಟಡಗಳಲ್ಲಿ ವ್ಯವಸ್ಥೆಗೊಂಡಿತ್ತು. ಮುಸಲ್ಮಾನರ ಆಕ್ರಮಣ ಭಾರತದ ಮೇಲೆ ಆಗುವವರೆಗೆ ನಾಲಂದ ಪ್ರಮುಖ ಶಿಕ್ಷಣ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿತ್ತು. ನಾಲಂದವನ್ನೇ ಹೋಲುವ ವಿಶ್ವವಿದ್ಯಾಲಯಗಳು ಉಜ್ಜೈನಿ, ವಲಭೀ, ವಿಕ್ರಮಶಿಲೆ, ವಾರಾಣಸಿ ಮತ್ತು ಕಂಚಿಯೆಂಬ ಸ್ಥಳಗಳಲ್ಲಿದ್ದುವೆಂದು ತಿಳಿದುಬರುತ್ತದೆ. ಮುಸಲ್ಮಾನರ ಆಡಳಿತದ ಅವಧಿಯಲ್ಲಿ (12ರಿಂದ 18ನೆಯ ಶತಮಾನ) ಹೇಳಿಸಿಕೊಳ್ಳುವಂಥ ಶಿಕ್ಷಣ ಕೇಂದ್ರಗಳಾಗಲೀ ಅವುಗಳಿಗೆ ಹೊಂದಿಕೊಂಡಂಥ ಗ್ರಂಥಾಲಯಗಳಾಗಲೀ ಇರಲಿಲ್ಲ. ಕೆಲವು ಮುಸಲ್ಮಾನ ದೊರೆಗಳು ಪುಸ್ತಕಪ್ರಿಯರಾಗಿದ್ದುದೇನೋ ನಿಜ. ಅವರಿಂದ ಅರಮನೆಯ ಗ್ರಂಥಾಲಯಗಳು ಅಭಿವೃದ್ಧಿಗೊಂಡವೇ ಹೊರತು ಶಿಕ್ಷಣ ಕೇಂದ್ರಗಳ ಗ್ರಂಥಾಲಯಗಳಲ್ಲ.



ಮುಂಬಯಿ ವಿಶ್ವವಿದ್ಯಾಲಯ ಗ್ರಂಥಾಲಯ

ಆಧುನಿಕ ಭಾರತದಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಪ್ರಾರಂಭವಾದದ್ದು 1857ರಲ್ಲಿ. ಆ ವರ್ಷವೇ ಕಲ್ಕತ್ತ, ಮುಂಬಯಿ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳು ಸ್ಥಾಪನೆಯಾದದ್ದು. ಅನಂತರದ ಇಪ್ಪತ್ತೈದು ವರ್ಷಗಳ ವರೆಗೆ ಇಡೀ ರಾಷ್ಟ್ರದ ಉನ್ನತ ಶಿಕ್ಷಣದ ಎಲ್ಲ ಆವಶ್ಯಕತೆಗಳನ್ನೂ ಈ ಮೂರೇ ವಿಶ್ವವಿದ್ಯಾಲಯಗಳು ಪೂರೈಸುತ್ತಿದ್ದವು. ಪಂಜಾಬ್ ವಿಶ್ವವಿದ್ಯಾಲಯ (ಲಾಹೋರಿನಲ್ಲಿ) 1882 ರಲ್ಲೂ ಅಲಹಾಬಾದ್ ವಿಶ್ವವಿದ್ಯಾಲಯ 1887 ರಲ್ಲೂ ಅಸ್ತಿತ್ವಕ್ಕೆ ಬಂದವು. ಈ ಐದು ವಿಶ್ವವಿದ್ಯಾಲಯಗಳ ಧ್ಯೇಯ ಧೋರಣೆಗಳು ಮತ್ತು ಕಾರ್ಯವಿಧಾನಗಳು ಗ್ರಂಥಾಲಯಗಳ ಬೆಳವಣಿಗೆಗೆ ಪೋಷಕವಾಗಿರಲಿಲ್ಲ. ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳು ಈ ವಿಶ್ವವಿದ್ಯಾಲಯಗಳ ಚಟುವಟಿಕೆಗಳ ಚೌಕಟ್ಟಿನಲ್ಲೇ ಇದ್ದಿರಲಿಲ್ಲವೆಂಬಂತೆ ತೋರುತ್ತದೆ. ಬೋಧನೆಯ ಕೆಲಸವೆಲ್ಲ ಕಾಲೇಜುಗಳ ಮಟ್ಟದಲ್ಲೇ ನಡೆಯುತ್ತಿತ್ತು. ಕಾಲೇಜುಗಳಿಗೆ ಅಫಿಲಿಯೇಷನ್ ನೀಡುವುದು, ಪಠ್ಯಕ್ರಮವನ್ನು ನಿರ್ಧರಿಸುವುದು ಮತ್ತು ಪರೀಕ್ಷೆಗಳನ್ನು ನಡೆಸುವುದರಲ್ಲೇ ನಿರತವಾಗಿರುತ್ತಿದ್ದವು. ಇಂಥ ವಾತಾವರಣ ಗ್ರಂಥಾಲಯಗಳ ಬೆಳವಣಿಗೆಗೆ ಪ್ರತಿಕೂಲವಾಗಿತ್ತೆಂದೇ ಹೇಳಬಹುದು.

ವಿಶ್ವವಿದ್ಯಾಲಯದ ಪ್ರಾರಂಭದ ಜೊತೆಗೇ ಅದರ ಗ್ರಂಥಾಲಯದ ಸ್ಥಾಪನೆಯೂ ಆಗಬೇಕು ಎಂದು ಶಿಕ್ಷಣತಜ್ಞರು ಹೇಳುತ್ತಾರೆ. ಇಂಥ ಕೆಲಸ ಮೊದಲ ಐದು ವಿಶ್ವವಿದ್ಯಾಲಯಗಳಲ್ಲಿ ನಡೆಯಲೇ ಇಲ್ಲ. ತಡವಾಗಿಯಾದರೂ ಚಿಂತೆಯಿಲ್ಲ, ಮೊದಲ ಗ್ರಂಥಾಲಯವನ್ನು ಸ್ಥಾಪಿಸಿದ ಶ್ರೇಯಸ್ಸು ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ. ಅಲ್ಲಿ 1873ರಲ್ಲಿ ಒಂದು ಗ್ರಂಥಾಲಯ ಸ್ಥಾಪನೆಯಾಯಿತು. ಅಂದಿನ ಅದರ ವಾರ್ಷಿಕ ವೆಚ್ಚ ರೂ. 7000. ಇಷ್ಟು ಕಡಿಮೆ ವಾರ್ಷಿಕ ಬಜೆಟ್ಟನ್ನುಳ್ಳ ಗ್ರಂಥಾಲಯಕ್ಕೆ ಪ್ರತ್ಯೇಕ ಕಟ್ಟಡ ಇಲ್ಲವೆ ಪರಿಣತ ಸಿಬ್ಬಂದಿಯ ಆವಶ್ಯಕತೆ ಇದ್ದಿರಲಿಲ್ಲ. 1873ರಿಂದ 1911ರ ವರೆಗೆ ಈ ಗ್ರಂಥಾಲಯವನ್ನು ಸೆನೆಟ್ ಪ್ರಾಂಗಣದ ಒಂದು ಭಾಗದಲ್ಲಿ ನಡೆಸಲಾಗುತ್ತಿತ್ತು. 1912ರಲ್ಲಿ ಗ್ರಂಥಾಲಯಕ್ಕೆಂದು ಒಂದು ಪ್ರತ್ಯೇಕ ಕಟ್ಟಡವನ್ನು ನಿರ್ಮಿಸಲಾಯಿತು. ಈ ಕಟ್ಟಡದ ನಿರ್ಮಾಣಕ್ಕೆ ಮತ್ತು ಗ್ರಂಥಾಲಯದ ಬೆಳವಣಿಗೆಗೆ ಜಯ್ ಕಿಷನ್ ಮುಖರ್ಜಿ, ಇಷನ್ ಚಂದ್ರಬೋಸ್ ಮತ್ತು ದರ್ಭಾಂಗದ ಮಹಾರಾಜ-ಇವರು ಸಹಾಯಮಾಡಿದರು.

ಮುಂಬಯಿ ಮತ್ತು ಮದ್ರಾಸ್ ವಿಶ್ವವಿದ್ಯಾಲಯ ಗ್ರಂಥಾಲಯಗಳು ಸ್ಥಾಪನೆಯಾದದ್ದು ಇದೇ ರೀತಿಯ ದಾನ ದತ್ತಿಗಳ ದೆಸೆಯಿಂದ. ಮುಂಬಯಿ ವಿಶ್ವವಿದ್ಯಾಲಯ ಗ್ರಂಥಾಲಯದ ಕಟ್ಟಡಕ್ಕೆ ಅಲ್ಲಿನ ಪ್ರಮುಖ ವರ್ತಕ ಪ್ರೇಮಚಂದ್ ರಾಯ್ ಚಂದ್ ಅವರಿಂದ ಧನಸಹಾಯವೂ ಭಾರತ ಸರ್ಕಾರದಿಂದ ಹಲವು ಗ್ರಂಥಗಳೂ ದಾನವಾಗಿ ಬಂದವು. ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಮೊದಲ ಐವತ್ತು ವರ್ಷಗಳ ವರೆಗೆ ಗ್ರಂಥಾಲಯವೇ ಇರಲಿಲ್ಲ. ಗ್ರಿಫಿತ್ ಎಂಬುವವರಿಂದ ದಾನವಾಗಿ ದೊರೆತ ಗ್ರಂಥ ಸಂಗ್ರಹ ಮತ್ತು ಭಾರತ ಸರ್ಕಾರ ನೀಡಿದ ಧನಸಹಾಯದಿಂದ ಈ ಗ್ರಂಥಾಲಯವನ್ನು 1911ರಲ್ಲಿ ಸ್ಥಾಪಿಸಲಾಯಿತು. ಮದ್ರಾಸ್ ಸರ್ಕಾರದಿಂದ ವಾರ್ಷಿಕ ಧನಸಹಾಯ ದೊರೆತದ್ದು 1914ರಿಂದ ಈಚೆಗೆ.

ವಿಶ್ವವಿದ್ಯಾಲಯಗಳಿಗೆ ಗ್ರಂಥಾಲಯಗಳ ಆವಶ್ಯಕತೆಯನ್ನು ಕುರಿತು ಹಲವಾರು ತಜ್ಞರು ಮತ್ತು ಸಮಿತಿಗಳು ಶಿಫಾರಸು ಮಾಡುತ್ತ ಬಂದಿದ್ದರೂ ಭಾರತದಲ್ಲಿ ಅವುಗಳ ಸ್ಥಿತಿಗತಿಗಳು ಉತ್ತಮಗೊಳ್ಳಲಿಲ್ಲ. ಹಂಟರ್ ಆಯೋಗದಿಂದ (1882) ಕೊಠಾರಿ ಆಯೋಗದ (1964-66) ವರೆಗೆ ಅನೇಕ ಆಯೋಗಗಳು ಭಾರತದ ವಿಶ್ವವಿದ್ಯಾಲಯ ಗ್ರಂಥಾಲಯಗಳ ಶೋಚನೀಯ ಪರಿಸ್ಥಿತಿಯ ಸುಧಾರಣೆಗೆ ಸಲಹೆಗಳನ್ನು ನೀಡಿವೆ. ಹಂಟರ್ ಆಯೋಗ ಗ್ರಂಥಾಲಯಗಳ ಅಭಿವೃದ್ಧಿಯ ಸಲುವಾಗಿಯೇ ಪ್ರತ್ಯೇಕ ಧನಸಹಾಯವನ್ನು ಸರ್ಕಾರ ನೀಡಬೇಕೆಂಬ ಸಲಹೆಯನ್ನು 1882ರಷ್ಟು ಹಿಂದೆಯೇ ಮಾಡಿತ್ತು. ಈ ಧನಸಹಾಯ ಇಂತಿಷ್ಟೇ ಮೊತ್ತದ್ದಿರಬೇಕೆಂಬ ಸಲಹೆ ಬಂದದ್ದು ರಾಧಾಕೃಷ್ಣನ್ ಸಮಿತಿಯಿಂದ (1948-49). ರಾಧಾಕೃಷ್ಣನ್ ಆಯೋಗ ಪಾಶ್ಚಾತ್ಯ ದೇಶಗಳ ಹಾಗೂ ಭಾರತದ ಹಿರಿಯ ವಿಶ್ವವಿದ್ಯಾಲಯ ಗ್ರಂಥಾಲಯಗಳ ವಾರ್ಷಿಕ ವೆಚ್ಚಗಳ ತೌಲನಿಕ ಪರಿಶೀಲನೆ ಮಾಡಿತು. ಪಾಶ್ಚಾತ್ಯ ದೇಶಗಳಲ್ಲಿ ವಿಶ್ವವಿದ್ಯಾಲಯಗಳು ಗ್ರಂಥಾಲಯಗಳ ಬಗ್ಗೆ ಮಾಡುತ್ತಿರುವ ವೆಚ್ಚ ತಮ್ಮ ಒಟ್ಟು ವೆಚ್ಚದ ಶೇ. 6.25ಕ್ಕಿಂತ ಹೆಚ್ಚಾಗಿದ್ದರೆ ಭಾರತದಲ್ಲಿ ಆ ವೆಚ್ಚ ಶೇ 2.7ರಷ್ಟಿತ್ತೆಂದು ಆಯೋಗ ತಿಳಿಸಿತು. ಈ ಅಂಕಿಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮೇಣ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಗ್ರಂಥಗಳ ಬೆಲೆಗಳನ್ನು ಪರಿಗಣಿಸಿ ರಾಧಾಕೃಷ್ಣನ್ ಆಯೋಗ ಈ ರೀತಿ ಸಲಹೆ ಮಾಡಿದೆ: ಪ್ರತಿಯೊಂದು ವಿಶ್ವವಿದ್ಯಾಲಯವೂ ಗ್ರಂಥಾಲಯದ ಬಗ್ಗೆ ತನ್ನ ಒಟ್ಟು ವೆಚ್ಚದ ಶೇ. 6.25ರಷ್ಟನ್ನು ವಿದ್ಯಾರ್ಥಿಗೆ ಪ್ರತಿವರ್ಷ ಖರ್ಚು ಮಾಡಬೇಕು. ಇದರ ಜೊತೆಗೆ ಭಾರತೀಯ ಸಾಹಿತ್ಯ, ಇತಿಹಾಸ, ದರ್ಶನಶಾಸ್ತ್ರ ಮೊದಲಾದ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಗೆ ಮೂಲ ಆಧಾರಗಳೆನಿಸಿದ ಹಸ್ತಪ್ರತಿ ಮತ್ತು ವಿರಳಗ್ರಂಥಗಳನ್ನು ಸಂಗ್ರಹಿಸಲು ವಿಶೇಷ ಧನಸಹಾಯವನ್ನು ನೀಡಬೇಕು.

ಕೊಠಾರಿ ಆಯೋಗ (1964-66) ಕೂಡ ಗ್ರಂಥಾಲಯಗಳ ಅಭಿವೃದ್ಧಿಗೆ ವಿಶ್ವವಿದ್ಯಾಲಯಗಳು ಮಾಡಬೇಕಾದ ವೆಚ್ಚಗಳ ಬಗ್ಗೆ ತನ್ನ ವರದಿಯಲ್ಲಿ ಚರ್ಚಿಸಿದೆ. ವಿಶೇಷವೆಂದರೆ, ಈ ಆಯೋಗ ಹದಿನೆಂಟು ವರ್ಷಗಳ ಹಿಂದೆ ರಾಧಾಕೃಷ್ಣನ್ ಆಯೋಗ ನಿಗದಿ ಮಾಡಿದ್ದಕ್ಕಿಂತ ಬಹಳ ಕಡಿಮೆ ಮೊತ್ತವನ್ನು ಶಿಫಾರಸುಮಾಡಿತು. ರಾಧಾಕೃಷ್ಣನ್ ಆಯೋಗ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ರೂ. 40ನ್ನು ನಿಗದಿಮಾಡಿದರೆ ಕೊಠಾರಿ ಆಯೋಗ ಅದನ್ನು ರೂ. 25ಕ್ಕೆ ಇಳಿಸಿತು.

1956ರಲ್ಲಿ ಭಾರತ ಸರ್ಕಾರದಿಂದ ಸ್ಥಾಪನೆಯಾದ ವಿಶ್ವವಿದ್ಯಾಲಯಗಳಿಗೆ ಹೊಸ ಚೇತನವನ್ನು ನೀಡಿದೆ. ಅದು ಗ್ರಂಥಾಲಯಗಳ ಬೆಳವಣಿಗೆಗೂ ಅಪಾರ ವೆಚ್ಚ ಮಾಡಿದೆ. ಗ್ರಂಥಾಲಯಗಳ ಕಟ್ಟಡ, ಸಿಬ್ಬಂದಿ, ಸಲಕರಣೆ ಮತ್ತು ಗ್ರಂಥ ಸಂಗ್ರಹಣೆಗಳಿಗೆ ನಿಗದಿ ಮಾಡಿದ ರೂಪದಲ್ಲಿ ಪಂಚವಾರ್ಷಿಕ ಯೋಜನೆಗಳ ಆಧಾರದ ಮೇಲೆ ಧನಸಹಾಯ ನೀಡುತ್ತ ಬಂದಿದೆ. ಗ್ರಂಥಾಲಯಗಳ ಅಭಿವೃದ್ಧಿಗೆ ತಾನು ಹೇಗೆ ಮತ್ತು ಯಾವ ರೂಪದಲ್ಲಿ ಧನಸಹಾಯ ನೀಡಬೇಕೆಂಬುದರ ಬಗ್ಗೆ ನಿರ್ದಿಷ್ಟ ಸಲಹೆಗಳನ್ನು ಕೊಡಬೇಕೆಂದು ರಂಗನಾಥನ್ ಸಮಿತಿಯನ್ನು ರಚಿಸಿತು. ಈ ಸಮಿತಿ 1958ರಲ್ಲಿ ಗ್ರಂಥಪಾಲರ ವಿಚಾರ ಸಂಕಿರಣವನ್ನೇರ್ಪಡಿಸಿ ಗ್ರಂಥಾಲಯಗಳ ಸಮಸ್ಯೆ ಮತ್ತು ಆವಶ್ಯಕತೆಗಳನ್ನು ಕೂಲಂಕಷವಾಗಿ ಚರ್ಚಿಸಿ ತನ್ನ ಸಲಹೆಗಳನ್ನು ಧನಸಹಾಯ ಆಯೋಗಕ್ಕೆ ಸಲ್ಲಿಸಿತು. ಗ್ರಂಥಾಲಯಗಳ ಸರ್ವತೋಮುಖ ಅಭಿವೃದ್ಧಿಗೆ ಧನಸಹಾಯ ಆಯೋಗ ನೀಡಬೇಕಾದ ಸಹಾಯ ಸೌಲಭ್ಯಗಳು ಅದರಲ್ಲಿ ಚರ್ಚಿತವಾಗಿವೆ.

ಭಾರತದಲ್ಲಿ ಈಗ 430ಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳಿವೆ. ಇವುಗಳ ಜೊತೆಗೆ ವಿಶ್ವವಿದ್ಯಾಲಯಗಳಿಗೆ ತತ್ಸಮವಾದ ಇತರ ವಿದ್ಯಾಸಂಸ್ಥೆಗಳೂ ರಾಷ್ಟ್ರೀಯ ಪ್ರಾಮುಖ್ಯ ಹೊಂದಿರುವ ಶಿಕ್ಷಣ ಮತ್ತು ಸಂಶೋಧನ ಕೇಂದ್ರಗಳೂ ಇವೆ. ಈ ಎಲ್ಲ ಕೇಂದ್ರಗಳಲ್ಲಿ ಪ್ರತಿಯೊಂದೂ ತನ್ನದೇ ಆದ ಗ್ರಂಥಾಲಯವನ್ನು ಹೊಂದಿದೆ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಉನ್ನತ ಶಿಕ್ಷಣ ಪದ್ಧತಿ ಆಂಗ್ಲ ಶಿಕ್ಷಣ ಪದ್ಧತಿಯ ಪ್ರತಿರೂಪವಾಗಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿಯ ಶಿಕ್ಷಣ ವಿಧಾನದಲ್ಲಿ ಹಲವಾರು ಬದಲಾವಣೆಗಳು ಮತ್ತು ಪ್ರಯೋಗಗಳು ನಡೆದಿದ್ದರೂ ಮೊದಲಿನ ರೂಪ ರೇಖೆಗಳು ಇನ್ನೂ ಉಳಿದುಕೊಂಡು ಬಂದಿವೆ. ಭಾರತದ ಶಿಕ್ಷಣ ಸಂಸ್ಥೆಗಳು ಬ್ರಿಟಿಷ್ ಶಿಕ್ಷಣ ಪದ್ಧತಿಯನ್ನು ಅನುಕರಿಸುತ್ತಿದ್ದರೂ ಆ ಅನುಕರಣೆ ಮತ್ತು ಆಚರಣೆಯಲ್ಲಿ ಅಸಾಧಾರಣ ವಿಳಂಬ ಎದ್ದು ಕಾಣುತ್ತಿದೆ. ಈ ವಿಳಂಬ ಗ್ರಂಥಾಲಯ ಕ್ಷೇತ್ರಕ್ಕೂ ವ್ಯಾಪಿಸಿದೆ. (ಬಿ.ಎಸ್‌ಎಚ್.)

**C. ಮಕ್ಕಳ ಗ್ರಂಥಾಲಯಗಳು :** ಶೈಕ್ಷಣಿಕ ಗ್ರಂಥಾಲಯಗಳಲ್ಲಿ ವಿಶಿಷ್ಟ ವರ್ಗದವು ಎನಿಸಿದ ಮಕ್ಕಳ ಗ್ರಂಥಾಲಯಗಳು ಮಗುವನ್ನು ಪುಸ್ತಕಪ್ರಪಂಚಕ್ಕೆ ಕರೆದೊಯ್ದು ಅದು ತನಗೆ ಬೇಕಾದ ವಿಚಾರಗಳಲ್ಲಿ ಹೆಚ್ಚು ವಿಷಯಸಂಗ್ರಹಣ ಮಾಡುವ ವಿಧಾನವನ್ನು ತೋರಿಸುವಂತಿರಬೇಕು. ವಿವಿಧ ವಿಷಯಗಳಲ್ಲಿ ಅದು ತೋರುವ ಸಹಜಾಸಕ್ತಿಯನ್ನು ಬೆಳೆಸಿ, ಅದು ಒಡ್ಡುವ ಏನು, ಹೇಗೆ, ಏಕೆ, ಎಷ್ಟು, ಎಲ್ಲಿ ಎಂಬ ನೂರಾರು ಸಮಸ್ಯೆಗಳಿಗೆ ಉತ್ತರಕೊಟ್ಟು ಅದರ ಮನಸ್ಸನ್ನು ರಂಜಿಸುವುದರ ಜೊತೆಗೆ ಅದರ ಭಾವನೆ, ಕಲ್ಪನೆ, ಬುದ್ಧಿಗಳಿಗೆ ಆಹಾರ ಒದಗಿಸಬಲ್ಲ ಗ್ರಂಥಗಳನ್ನು ಅಲ್ಲಿ ಸಂಗ್ರಹಿಸಬೇಕಾಗುತ್ತದೆ. ಅಲ್ಲದೆ ಮಕ್ಕಳು ತಾವು ಬೆಳೆಯುತ್ತಿರುವ ಪರಿಸರವನ್ನು ಅರ್ಥಮಾಡಿಕೊಂಡು, ಸಂಘಜೀವಿಗಳಾಗಿ ಪರಸ್ಪರ ಅರಿತುಕೊಳ್ಳಲು ಚರ್ಚಾಕೂಟ, ವಾಚನಕೂಟ, ಹವ್ಯಾಸಕೂಟ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಮಕ್ಕಳ ಗ್ರಂಥಾಲಯಗಳು ಅವಕಾಶಗಳನ್ನು ಏರ್ಪಡಿಸಬೇಕಾಗುತ್ತದೆ.

ಆಕರ್ಷಕ ವಾತಾವರಣವನ್ನು ಕಲ್ಪಿಸಲು ಮಕ್ಕಳ ಗ್ರಂಥಾಲಯದ ಗೋಡೆಗಳಿಗೆ, ಮೇಜು ಕುರ್ಚಿಗಳಿಗೆ ತಿಳಿಯಾದ ಬಣ್ಣ, ಅದಕ್ಕೆ ಹೊಂದಿಕೊಂಡಂಥ ಬಣ್ಣದ ಜಮಖಾನೆ, ಕುಡಿಯುವ ನೀರಿನ ಸೌಕರ್ಯ, ಶೌಚಗೃಹ ಮುಂತಾದುವು ಇರಬೇಕು. ಗೋಡೆಯಲ್ಲಿ ಅಲ್ಲಲ್ಲಿ ಚಿತ್ರಗಳು, ಲೋಹಫಲಕಗಳು ಇರಬಹುದು. ಮಕ್ಕಳು ತಮಗೆ ಬೇಕಾದಲ್ಲಿ ಕುಳಿತು ಓದುವ ಸೌಕರ್ಯ ಒದಗಿಸಲು ನೆಲಕ್ಕೆ ದಪ್ಪ ಜಮಖಾನೆ ಹಾಸಿರಬೇಕು. ಮೇಜು ಕುರ್ಚಿ, ಕಪಾಟುಗಳು ಮಕ್ಕಳ ಆಕಾರಕ್ಕೆ ಸರಿಯಾಗಿರಬೇಕು. ಸಹಜ ವರ್ಣ ಚಿತ್ರಗಳು, ಮುದ್ದಾದ ಅಕ್ಷರಗಳಿರುವ ಪುಸ್ತಕ–ಇವನ್ನು ಕಂಡರೆ ಅವರಿಗೆ ತುಂಬ ಮೆಚ್ಚಿಕೆ.

ಮಕ್ಕಳಿಗಾಗಿ ಬರೆದ ಪುಸ್ತಕ ಸತ್ತ್ವಯುತವಾಗಿ, ಸುಲಭ ಶೈಲಿಯಲ್ಲಿ ಬರೆದುದಾಗಿದ್ದು ಅದರಲ್ಲಿ ಬರುವ ಘಟನೆಗಳು ಮಕ್ಕಳ ಕಲ್ಪನೆಗೆ ಆಹಾರ ಒದಗಿಸುವಂತಿರಬೇಕು. ಪುಸ್ತಕಗಳೆಲ್ಲ ಮಕ್ಕಳ ಮಾತೃಭಾಷೆಯಲ್ಲಿರುವುದು ಒಳ್ಳೆಯದು.

ಕಥೆ ಕೇಳುವ ಕುತೂಹಲ ಎಲ್ಲ ಮಕ್ಕಳಲ್ಲೂ ಇರುವುದು ಸಹಜ. ಇದನ್ನು ತಣಿಸಲು ಕಥೆ ಹೇಳುವುದಕ್ಕಾಗಿ ಗ್ರಂಥಾಲಯ ತನ್ನ ವೇಳಾಪಟ್ಟಿಯಲ್ಲಿ ಒಂದು ಸಮಯವನ್ನು ಗೊತ್ತುಮಾಡಬೇಕು. ಉಪಾಧ್ಯಾಯರೋ ಇತರರೋ ಕಥೆ ಹೇಳುವ ಕೆಲಸವನ್ನು ಮಾಡಬೇಕಾಗುತ್ತದೆ. ಕಥೆ ಕೇಳುತ್ತ ಕೇಳುತ್ತ ಮಕ್ಕಳು ಆಸಕ್ತರಾಗಿ ತಾವೇ ಕಥೆ ಪುಸ್ತಕಗಳನ್ನು ಓದತೊಡಗುತ್ತಾರೆ. ಕಥೆ ಹೇಳುವುದೂ ಒಂದು ಕಲೆ. ಉತ್ತಮ ಕಥೆಗಾರ ತನ್ನ ಹಾವಭಾವಪ್ರದರ್ಶನ, ಧ್ವನಿಯಲ್ಲಿ ಏರಿಳಿತ ಇವುಗಳಿಂದ ಕಥಾನಕವನ್ನು ಕಣ್ಣು ಮುಂದೆ ನಡೆಯುತ್ತಿರುವಂತೆ ವಿವರಿಸಬಲ್ಲ.

ಮಕ್ಕಳಿಂದ ಪದ್ಯಗಳನ್ನು ಓದಿಸಿ, ಹಾಡಿಸಿ, ತನ್ಮೂಲಕ ಅವರಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸಬಹುದು. ನಾಟಕ, ನೃತ್ಯ, ಸಂಗೀತಗಳಿಂದ ಕಲಾಪ್ರತಿಭೆಗೆ ಉತ್ತೇಜನವೀಯಬಹುದು. ವಾಚನ, ಚರ್ಚೆ, ವಿಮರ್ಶೆಗಳು ಬುದ್ಧಿಯನ್ನು ಚುರುಕುಗೊಳಿಸುವುದಲ್ಲದೆ ವಾಗ್ಮಿಗಳಾಗಲು ಅವಕಾಶನೀಡುತ್ತವೆ. ನಾಡಿನ ನಾನಾ ವಿಚಾರಗಳಿಗೆ ಸಂಬಂಧಿಸಿದಂತೆ ಚಲನಚಿತ್ರ ಪ್ರದರ್ಶನ ಅಪೇಕ್ಷಣೀಯ. ಹಾಡು, ಹಸೆ, ಒಗಟುಗಳು, ಚತುರರೀತಿಯ ಪ್ರಶ್ನೆಗಳಿಂದ ಮನರಂಜನೆ ಸಾಧ್ಯ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ವಿಪುಲವಾಗಿ ಬೆಳೆದಿದೆ. ಪಂಚತಂತ್ರ, ಕಥಾ ಸರಿತ್ಸಾಗರ ಇವುಗಳಲ್ಲಿ ಕಥೆಗಳಲ್ಲದೆ ಪೌರಾಣಿಕ, ಚಾರಿತ್ರಿಕ ವೀರರ ಕಥೆಗಳೂ ಜನಪದ ಕಥೆಗಳೂ ಅಪಾರವಾಗಿವೆ. ಎಂ.ಎಸ್. ಪುಟ್ಟಣ್ಣನವರ ನೀತಿಚಿಂತಾಮಣಿ, ಅಲ್ಲದೆ ಶಾಂತಕವಿ, ವೆಂಕಟರಂಗೋಕಟ್ಟಿ, ಡೆಪ್ಯುಟಿ ಚನ್ನಬಸಪ್ಪ ಮೊದಲಾದವರ ಕೃತಿಗಳು ಮಕ್ಕಳಿಗೆ ಚೆನ್ನು. ಮಂಗಳೂರಿನಲ್ಲಿ ಪಂಜೆ ಮಂಗೇಶರಾಯರ ನೇತೃತ್ವದಲ್ಲಿ ಬಾಲಸಾಹಿತ್ಯಮಂಡಲ ಪ್ರಚುರಪಡಿಸಿದ ಪುಸ್ತಕಗಳು, ಈಚೆಗೆ ಸತ್ಯಶೋಧನ ಪ್ರಕಟಣಾಲಯ, ಕಾವ್ಯಾಲಯ, ಶಾರದಾ ಮಂದಿರ, ಮೋಹನ ಪ್ರಕಾಶನ, ಇಂಡಿಯ ಬುಕ್ ಹೌಸ್ ಮೊದಲಾದವರು ಹೊರತಂದಿರುವ ಬಾಲಸಾಹಿತ್ಯ ಬಹು ಸೊಗಸಾಗಿದೆ. ಶಿಶುಗೀತಗಳನ್ನು ರಚಿಸಿದವರಲ್ಲಿ ಪ್ರಮುಖರು ಹೊಯ್ಸಳ, ಮೇವುಂಡಿ ಮಲ್ಲಾರಿ, ರಾಜರತ್ನಂ. ಬಣ್ಣದ ಚಿತ್ರವನ್ನೊಳಗೊಂಡ ಅವರ ಪುಸ್ತಕಗಳು ಹೆಚ್ಚು ಪ್ರಕಟವಾಗಿವೆ. ಮಕ್ಕಳಿಗೆ ಕಾಲ್ಪನಿಕ ಕಥೆಗಳಲ್ಲದೆ ಪ್ರಕೃತಿಯ ಅನೇಕ ವಿಸ್ಮಯಗಳ ಮರ್ಮವನ್ನರಿಯುವ, ಸಾಹಸಸಂಗತಿಗಳನ್ನು ಕೇಳಿತಿಳಿಯುವ ಸಹಜ ಪ್ರವೃತ್ತಿ ಇದೆ. ಅದನ್ನು ತಣಿಸುವಂಥ ಪುಸ್ತಕಗಳನ್ನು ಅವರಿಗೆ ಒದಗಿಸಬೇಕು. ಕನ್ನಡದಲ್ಲಿ ಈ ಬಗೆಯ ಸಾಹಿತ್ಯ ಸಾಕಷ್ಟು ಸೃಷ್ಟಿಯಾಗಿದೆ.

ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಂಸ್ಥೆ, ಮೈಸೂರಿನ ರೋಟರಿ ಸಂಸ್ಥೆ–ಇವು ಪ್ರತ್ಯೇಕವಾಗಿಯೇ ಮಕ್ಕಳ ಗ್ರಂಥಾಲಯವನ್ನು ನಡೆಸುತ್ತಿವೆ. ಈಚೆಗೆ ಅನೇಕ ಕಡೆ ಸಾರ್ವಜನಿಕ ಗ್ರಂಥಾಲಯದ ಅಂಗವಾಗಿ ಮಕ್ಕಳ ವಿಭಾಗವೂ ಇರುತ್ತವೆ.

1960ರಲ್ಲಿ ಕಲ್ಕತ್ತದ ಭಾರತ ರಾಷ್ಟ್ರೀಯ ಗ್ರಂಥಾಲಯ ಮಕ್ಕಳ ವಿಭಾಗವನ್ನು ಆರಂಭಿಸಿ ಅಂಥ ಗ್ರಂಥಾಲಯ ನಿರ್ವಹಣೆಗೆ ಯುಕ್ತಮಾರ್ಗದರ್ಶನ ನೀಡಿದೆ. ನಾಡಿನ ಪುಸ್ತಕಗಳಲ್ಲದೆ ದೇಶವಿದೇಶಗಳಿಂದ ಬಂದ ಪುಸ್ತಕಗಳ ಕೊಡುಗೆಯನ್ನೂ ಅಲ್ಲಿ ನೋಡಬಹುದು. ಈ ವಿಭಾಗದಲ್ಲಿ ವಿವಿಧ ಬಣ್ಣದ ಮೀನುಗಳಿರುವ ದೊಡ್ಡ ತೊಟ್ಟಿಗಳಿವೆ. ಇದು ಮಕ್ಕಳನ್ನು ಹೆಚ್ಚು ಸಂಖ್ಯೆಯಲ್ಲಿ ಆಕರ್ಷಿಸುವ ವಿಭಾಗಗಳಲ್ಲೊಂದಾಗಿದೆ. ಇಂಥ ಹಲವು ಬಗೆಯ ಆಕರ್ಷಣೆಗಳನ್ನು ಒದಗಿಸುವುದು ಮಕ್ಕಳ ಗ್ರಂಥಾಲಯಗಳ ಕೆಲಸವಾಗಬೇಕು. ಯುನೆಸ್ಕೊ ಸಹಾಯದಿಂದ ಸ್ಥಾಪಿತವಾದ ದೆಹಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ಮಕ್ಕಳ ವಿಭಾಗದಲ್ಲಿ ಅವರಿಗಾಗಿ ಹಿಂದಿ, ಉರ್ದು, ಇಂಗ್ಲಿಷ್ ಭಾಷೆಯ ಪುಸ್ತಕಗಳಿದ್ದು, ಕಥೆ ಹೇಳಲು ಪ್ರತ್ಯೇಕ ಕಾಲವನ್ನು ನಿಗದಿ ಮಾಡಲಾಗಿದೆ ಅಲ್ಲದೆ ಚಿತ್ರಪ್ರದರ್ಶನ, ನಾಟಕ, ಸಂಗೀತ ಕಾರ್ಯಕ್ರಮಗಳಿಗೂ ಅವಕಾಶ ಕಲ್ಪಿಸಲಾಗಿದೆ.

ಮಕ್ಕಳ ಗ್ರಂಥಾಲಯ ಒಂದು ದೃಷ್ಟಿಯಲ್ಲಿ ಅವರ ಓದಿನ ಕೋಣೆ, ಅವರ ಆಟದ ಮೈದಾನ, ಅವರ ವಾಚನ ಭಾಷಣ ಮತ್ತು ಚರ್ಚೆಗಳ ಪ್ರಾಂಗಣ, ಅವರ ಚಿತ್ರಕಲಾಶಾಲೆ, ಅವರ ಮ್ಯೂಸಿಯಂ, ಅವರ ಪ್ರಾಣಿ ಸಂಗ್ರಹಾಲಯ, ಅವರ ಪ್ರಯೋಗಾಲಯ, ಅವರ ವಿಶ್ರಾಂತಿಗೃಹ–ಎಲ್ಲ ಆಗಿದೆ, ಆಗಿರಬೇಕು. (ಟಿ.ವಿ.ಎಸ್.)



ವಾಚನಾಲಯದ ಒಂದು ನೋಟ. ಮುಂಬಯಿ ವಿಶ್ವವಿದ್ಯಾಲಯ ಗ್ರಂಥಾಲಯ

**ಡಿ. ವಿಶಿಷ್ಟ ಗ್ರಂಥಾಲಯಗಳು :** ಯಾವುದೋ ಒಂದು ಉದ್ದೇಶಕ್ಕಾಗಿ, ಅದಕ್ಕೆ ಸಂಬಂಧಪಟ್ಟ ಸಾಮಗ್ರಿಗಳನ್ನೇ ಸಂಗ್ರಹಿಸಿ, ವಿಶಿಷ್ಟ ಆಸಕ್ತಿಯ ಓದುಗರಿಗೂ ಸಂಶೋಧಕರಿಗೂ ಬೇಕಾದ ವಿಷಯಗಳನ್ನು ಒದಗಿಸುವ ಗ್ರಂಥಾಲಯಗಳನ್ನು ಈ ಹೆಸರಿನಿಂದ ಕರೆಯಲಾಗಿದೆ. ಇಲ್ಲಿ ವಿವರಿಸುವ 12 ಗ್ರಂಥಾಲಯಗಳೂ 12 ವಿಶಿಷ್ಟ ವಿಷಯಗಳಿಗೆ ಸಂಬಂಧಿಸಿದವಾಗಿವೆ.

**1. ತಾಂತ್ರಿಕ ಗ್ರಂಥಾಲಯಗಳು :** ಭೌತ, ಜೀವವಿಜ್ಞಾನಗಳಂಥ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ತಾಂತ್ರಿಕ ಕ್ಷೇತ್ರಗಳಲ್ಲಿನ ವಿಷಯಜ್ಞಾನವನ್ನು ಸಂಗ್ರಹಿಸುವ, ವ್ಯವಸ್ಥೆಗೊಳಿಸುವ ಮತ್ತು ಆಸಕ್ತ ವಿಜ್ಞಾನಿಗಳಿಗೂ ಸಂಶೋಧಕರಿಗೂ ವಿತರಣೆಮಾಡುವ ಕೆಲಸವನ್ನು ತಾಂತ್ರಿಕ ಗ್ರಂಥಾಲಯಗಳು ನಿರ್ವಹಿಸುತ್ತವೆ. ಲೂಸಿಲ್ ಜಾಕ್‌ಸನ್ನನ ಅಭಿಪ್ರಾಯದಂತೆ ಮುಖ್ಯವಾಗಿ ಇವುಗಳ ಕರ್ತವ್ಯ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ತನ್ನಲ್ಲಿನ ಹಲವಾರು ದಫ್ತರಗಳಿಂದಲೂ ಮುದ್ರಿತ ಸಾಮಗ್ರಿಯಲ್ಲೂ ದೊರಕುವ ಸಮಸ್ತ ವಿಷಯಜ್ಞಾನವನ್ನು ಸಂಪಾದಿಸುವುದು, ಜೋಡಿಸುವುದು, ವಿತರಣೆಮಾಡುವುದು. ಹೀಗಾಗಿ ತಾಂತ್ರಿಕ ಸಂಸ್ಥೆಗಳು, ಸಂಶೋಧನ ಪ್ರಯೋಗಾಲಯಗಳು ಮತ್ತು ದೊಡ್ಡ ದೊಡ್ಡ ಕೈಗಾರಿಕಾ ಸ್ಥಾವರಗಳಿಗೆ ಸೇರಿರುವ ಗ್ರಂಥಾಲಯಗಳು ಈ ಹೆಸರಿಗೆ ಅರ್ಹವಾಗುತ್ತವೆ. ಇಂಥ ಗ್ರಂಥಾಲಯಗಳನ್ನು ಕುರಿತು ಹೇಳುವಾಗ ಗ್ರಂಥಾಲಯ ಎಂಬ ಪದವನ್ನು ಕೆಲವು ವೇಳೆ ಬಳಸುವುದಿಲ್ಲ. ಏಕೆಂದರೆ ಆ ಪದದ ಅರ್ಥ ಸಾಕಷ್ಟು ವ್ಯಾಪಕವಾದುದಲ್ಲ. ಆದ್ದರಿಂದ ತಾಂತ್ರಿಕ ಗ್ರಂಥಾಲಯ ಎಂಬ ಮಾತಿಗೆ ಸಂವಾದಿಯಾಗಿ ಬಳಕೆಯಲ್ಲಿರುವ ಕೆಲವು ಪದಗಳು ಹೀಗಿವೆ : ತಾಂತ್ರಿಕ ವಾರ್ತಾ ಸೇವೆ, ತಾಂತ್ರಿಕ ವಾರ್ತಾ ವಿಭಾಗ, ಸಂಶೋಧನ ಗ್ರಂಥಾಲಯ, ಸಂಶೋಧನ ಪ್ರಯೋಗಾಲಯ ಗ್ರಂಥಾಲಯ, ತಾಂತ್ರಿಕ ವಾರ್ತಾಗುಚ್ಛ, ತಾಂತ್ರಿಕ ಸಾಹಿತ್ಯ ಸಂಶೋಧನ ವಿಭಾಗ, ಸಂಶೋಧನ ಮತ್ತು ಅಭಿವೃದ್ಧಿ ಗ್ರಂಥಾಲಯ, ಇಂಟೆಲಿಜೆನ್ಸ್ ಸರ್ವಿಸ್, ವಿಜ್ಞಾನವಾರ್ತಾ ಸೇವೆ.

ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳಿಗೆ ಸಂಬಂಧಪಟ್ಟ ಗ್ರಂಥಾಲಯಗಳು ಹುಟ್ಟಿದ್ದು ನಿರ್ದಿಷ್ಟವೂ ವಿಶಿಷ್ಟವೂ ಆದ ವ್ಯವಸ್ಥಿತ ವಾರ್ತಾ ಸೇವೆಗಳ ಅಗತ್ಯದಿಂದ. ಒಂದು ಸಂಸ್ಥೆಯ ಉಗಮ ಕಾಲದಿಂದಲೇ ಅದಕ್ಕೆ ಹೊಂದಿದಂತೆ ಒಂದು ಗ್ರಂಥಾಲಯವನ್ನು ಅದರ ಅಂತರ್ಗತ ಅಂಗವಾಗಿ ರೂಢಿಸುವುದು ಒಳ್ಳೆಯದು. ಅನೇಕ ಸಂಸ್ಥೆಗಳಲ್ಲಿ ಅಷ್ಟು ಇಷ್ಟು ವಿಷಯಗಳ ಸಂಗ್ರಹಣೆ ನಡೆದಿರುತ್ತದಾದರೂ ಅದರಲ್ಲಿ ಯಾವ ಕ್ರಮವೂ

ಕಂಡುಬರುವುದಿಲ್ಲ. ಅಷ್ಟೇ ಅಲ್ಲ, ಸಂಗ್ರಹಣೆ ಸಮರ್ಪಕವೂ ಆಗಿರುವುದಿಲ್ಲ. ಸುಸಜ್ಜಿತ ಹಾಗೂ ಕ್ರಮಬದ್ಧ ಗ್ರಂಥಾಲಯ ಮೇಲಿನ ಎಲ್ಲ ಅವ್ಯವಸ್ಥೆಯನ್ನು ದೂರ ಮಾಡಬಲ್ಲದು. ಸ್ಥೂಲವಾಗಿ ಹೇಳುವುದಾದರೆ ತಾಂತ್ರಿಕ ಗ್ರಂಥಾಲಯದ ಮುಖ್ಯ ಕರ್ತವ್ಯಗಳು ಇವು:

1. ಪುಸ್ತಕಗಳು, ನಿಯತಕಾಲಿಕೆಗಳು ಮತ್ತಿತರ ಪ್ರಕಟಣೆಗಳ ಸಂಗ್ರಹಣ. 2. ವಿಶಿಷ್ಟವಾದ ವಿಷಯಸೂಚಿಗಳು, ದಫ್ತರಗಳು ಮತ್ತು ಪದಸೂಚಿಗಳನ್ನು ತಯಾರಿಸುವುದು. 3. ವೈಯಕ್ತಿಕ ಪ್ರಕಟಣೆ, ಗ್ರಂಥಾಲಯ ಕೈಪಿಡಿ ಮತ್ತು ವಿಶಿಷ್ಟ ಸೇವಾ ಪ್ರಕಟಣೆಗಳ ಮೂಲಕ ಪ್ರಸ್ತುತ ವಿಷಯವಿಜ್ಞಾನದ ವಿಹಿತ ಪ್ರಸಾರ. 4. ಪುಸ್ತಕಗಳ ಹಾಗೂ ನಿಯತಕಾಲಿಕೆಗಳ ಕ್ರಮಬದ್ಧ ವಿತರಣೆ. 5. ಸ್ವವಿಷಯಕ ವರದಿಗಳನ್ನು, ತಾಂತ್ರಿಕ ಪತ್ರವ್ಯವಹಾರಗಳನ್ನು ದಫ್ತರಿಸುವುದು, ಸೂಚಿಗಳನ್ನು ತಯಾರಿಸುವುದು. 6. ಪರಾಮರ್ಶನ ಸೇವೆ. 7. ಗ್ರಂಥ ಸೂಚಿಗಳ ನಿರ್ಮಾಣ, ವರದಿಗಳ ನಿಯೋಜನೆ. 8. ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಸಂಪಾದಕೀಯ ಸೇವೆ. 9. ವಿದೇಶಭಾಷಾ ಪ್ರಕಟಣೆಗಳ ಭಾಷಾಂತರ. 10. ವಿವಿಧ ರೀತಿಗಳ ವೈಯಕ್ತಿಕ ಸೇವಾ ವಿತರಣೆ.

ತಾಂತ್ರಿಕ ಗ್ರಂಥಾಲಯದ ಸಂಗ್ರಹದಲ್ಲಿ ಮುಖ್ಯವಾಗಿ ಇರುವುದು ನಿಯತಕಾಲಿಕೆಗಳು ಹಾಗೂ ಅವುಗಳ ಹಿಂದಿನ ಸೂಚಿಗಳು, ಬುಲೆಟಿನ್‌ಗಳು, ವರದಿಗಳು, ಪ್ರಬಂಧಗಳು, ಭಾಷಾಂತರಗಳು, ಮೈಕ್ರೊಫಿಲ್ಮ್‌ಗಳು, ವಾರ್ತಾದಫ್ತರಗಳು ಮತ್ತು ನಿಬಂಧಗಳೇ ಮೊದಲಾದ ಸಂಶೋಧನ ದಾಖಲೆಗಳು–ಇತ್ಯಾದಿ ಇರುತ್ತವೆ. ಇಂಥ ಗ್ರಂಥಾಲಯಕ್ಕೆ ಸಾಮಾನ್ಯವಾದ ಅಣಿಕಟ್ಟು ಮತ್ತು ಸಲಕರಣೆಗಳಲ್ಲದೆ ಅತ್ಯಾಧುನಿಕ ಮಾದರಿಯ ಪುನರ್ ಪ್ರತೀಕರಣ ಸಲಕರಣೆಯ ಆವಶ್ಯಕತೆ ಇರುತ್ತದೆ. ಹಾಗೆಯೇ ಸಾಂಕೇತಿಕ ವಿಷಯಗಳನ್ನು ಕುರಿತು ವ್ಯವಹರಿಸಲು ತಕ್ಕ ಉಪಕರಣಗಳೂ ಅಗತ್ಯ.

ಭಾರತದಲ್ಲಿ ಐಐಟಿ, ಐ.ಐ.ಎಸ್.ಸಿ.; ಟಿ.ಐ.ಎಫ್.ಆರ್.; ಭಾಭಾ ಅಣುಶಕ್ತಿ ಸಂಶೋಧನ ಕೇಂದ್ರ, ಸಂಶೋಧನ ಪ್ರಯೋಗಾಲಯಗಳು, ಜ಼ುವಾಲಾಜಿಕಲ್ ಸರ್ವೆ ಆಫ್ ಇಂಡಿಯ, ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯ, ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯ (ಎಎಸ್‌ಐ), ಬೊಟ್ಯಾನಿಕಲ್ ಸರ್ವೆ ಆಫ್ ಇಂಡಿಯ–ಈ ಸಂಸ್ಥೆಗಳಲ್ಲಿ ತಾಂತ್ರಿಕ ಗ್ರಂಥಾಲಯಗಳಿವೆ. ಕೈಗಾರಿಕಾ ಸ್ಥಾವರಗಳಲ್ಲಿ ಫೈಜ಼ರ್ ಪ್ರೈವೇಟ್ ಲಿಮಿಟೆಡ್; ರ್‍ಯಾಲೀಸ್ಲಿಮಿಟೆಡ್; ಸೀಬಾ ಮತ್ತು ಎಚ್.ಎಂ.ಟಿ. ಗಳಲ್ಲಿರುವ ಗ್ರಂಥಾಲಯಗಳು ಶ್ರೇಷ್ಠಮಟ್ಟದವಾಗಿವೆ. (ಎಚ್.ಎ.ಕೆ.)

**2. ಕೈಗಾರಿಕಾ ಗ್ರಂಥಾಲಯಗಳು :** ಒಂದು ನಿರ್ದಿಷ್ಟ ಕೈಗಾರಿಕೆಗೆ, ಇಲ್ಲವೆ ಉದ್ಯಮ ಸಮೂಹಕ್ಕೆ ಸಂಬಂಧಪಟ್ಟ ಸಾಹಿತ್ಯಕ್ಕೆ ಮೀಸಲಾಗಿರುವ ಗ್ರಂಥಾಲಯಗಳು. ಯುರೋಪಿನಲ್ಲಿ 19ನೆಯ ಶತಮಾನದಲ್ಲೂ ಅಮೆರಿಕದಲ್ಲಿ 18ನೆಯ ಶತಮಾನದಲ್ಲೂ ಈ ಮಾದರಿಯ ಗ್ರಂಥಾಲಯಗಳಿದ್ದವು. ಇವು ಅನೇಕ ರಾಷ್ಟ್ರಗಳಲ್ಲಿ ಬೆಳೆದದ್ದು ಎರಡನೆಯ ಮಹಾಯುದ್ಧದ ಅನಂತರವೇ.

ಉತ್ಪಾದಕ ಸಂಸ್ಥೆಗಳಿಗೆ ಇಲ್ಲವೆ ಅಂಥ ಸಂಸ್ಥೆಯ ಕೇಂದ್ರ ಕಚೇರಿಗಳಿಗೆ ಇವು ಹೊಂದಿಕೊಂಡಿರುತ್ತವೆ. ಇವು ಕೇವಲ ಸಮಾಚಾರ ಕೇಂದ್ರಗಳಾಗಿರದೆ ಉದ್ದಿಮೆದಾರರಿಗೆ, ಗ್ರಾಹಕರಿಗೆ ಅವರವರ ಉದ್ದಿಮೆಗಳಲ್ಲಿ ಹೆಚ್ಚು ಹೆಚ್ಚು ಮೌಲಿಕ ಉತ್ಪಾದನೆ ಮಾಡಲು ಪ್ರಚೋದಿಸುವಂಥ, ಸಹಾಯವಾಗುವಂಥ ವಿಷಯ ಜ್ಞಾನವನ್ನು ನೀಡುವ ದೊಡ್ಡ ಧ್ಯೇಯವುಳ್ಳ ಸಂಸ್ಥೆಗಳಾಗಿವೆ. ಉನ್ನತ ನಿರ್ವಹಣಾಧಿಕಾರಿಗಳಿಗೆ ಮಹತ್ವದ ವಿಷಯಗಳಲ್ಲಿ ತಕ್ಷಣವೇ ತೀರ್ಮಾನ ಕೈಗೊಳ್ಳಲು ಅನುಕೂಲವಾಗುವಂಥ ಸಕಾಲಿಕ ಸೂಕ್ತ ಸಮಾಚಾರ, ವಿಷಯ ವಿವರಗಳನ್ನು ಒದಗಿಸುವ ಪರಿಣಾಮಕಾರಿಯಾದ ಕೇಂದ್ರವಾಗಿ ಸೇವೆ ಸಲ್ಲಿಸುವುದು; ಸ್ವಯಂಸುಧಾರಣೆಗೆ, ವೃತ್ತಿಸುಧಾರಣೆಗೆ ಅನುಕೂಲವಾದ ಸಾಹಿತ್ಯವನ್ನು ಒದಗಿಸಿ ಕೈಗಾರಿಕೆಯ ನೌಕರರು ತಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ನೆರವಾಗುವುದು; ಉತ್ಪಾದಕ ಸಂಸ್ಥೆಗಳ ಉತ್ಪಾದನ ಸಾಮರ್ಥ್ಯ ಹಾಗೂ ಲಾಭವನ್ನು ಹೆಚ್ಚಿಸಲು ನೆರವಾಗುವುದು–ಇವು ಇದರ ಕೆಲವು ಉದ್ದೇಶಗಳು.

ಗ್ರಂಥಸೂಚಿಗಳು, ವರದಿಗಳು, ಏಕಸ್ವ ಮಾರುಕಟ್ಟೆಯ ಸಂಶೋಧನೆಯ ಸಾಹಿತ್ಯ ಮುಂತಾದವುಗಳ ಸಂಗ್ರಹ ಕಾರ್ಯ; ಭಾಷಾಂತರ ಮತ್ತು ಪ್ರತೀಕರಣ ಸೇವೆ; ಬೇರೆ ಬೇರೆ ವಾರ್ತಾಪತ್ರಗಳಿಂದ ಸಂಗ್ರಹಿಸಿದ ವಿವರಗಳನ್ನು ಸಂಕಲಿಸಿ ಗ್ರಂಥಾಲಯ ವಾರ್ತಾಪತ್ರಗಳನ್ನು ಹೊರಡಿಸುವುದು; ಸಂಶೋಧನೆ ಮತ್ತು ತಾಂತ್ರಿಕ ವರದಿ ದಫ್ತರಗಳನ್ನು ಕಾಪಾಡುವುದು; ದತ್ತಾಂಶ ಬ್ಯಾಂಕುಗಳನ್ನು ನಿರ್ಮಿಸುವುದು– ಇವು ಈ ಗ್ರಂಥಾಲಯಗಳ ಕೆಲವು ಮುಖ್ಯ ಕೆಲಸಗಳಾಗಿವೆ.

ಒಂದು ವ್ಯವಹಾರೋದ್ಯಮಕ್ಕೆ ಸಂಬಂಧಿಸಿದಂತೆ ಮೌಲಿಕ ನಿರ್ಣಯವನ್ನು ಕೈಗೊಳ್ಳುವಾಗ ಬಾಹ್ಯ, ಸ್ಪರ್ಧಾ, ಮತ್ತು ಆಂತರಿಕ– ಎಂಬ ಮೂರು ಬಗೆಯ ವಿವರಣೆಗಳು ಬೇಕು. ಅವನ್ನು ಒದಗಿಸುವುದು ಈ ಗ್ರಂಥಾಲಯಗಳ ಗುರಿ.

ಯೋಜನೆ ಮತ್ತು ನೀತಿನಿರ್ಣಯಕ್ಕೆ ಅಗತ್ಯವಾದವು ಬಾಹ್ಯ ವಿವರಗಳು. ಇದರಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅರ್ಥವ್ಯವಸ್ಥೆ, ವಾಣಿಜ್ಯ, ವ್ಯಾಪಾರ, ತಾಂತ್ರಿಕ ಜ್ಞಾನ, ಸಂಶೋಧನೆ, ಅಭಿವೃದ್ಧಿ, ನೂತನ ಪರವಾನಗಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ನೀತಿ, ಬದಲಾಗುವ ಔದ್ಯೋಗಿಕ, ಕಾರ್ಮಿಕ ಮತ್ತು ನಿರ್ವಹಣಾವಿಧಾನಗಳು, ವಿದೇಶದ ನೂತನ ಉತ್ಪನ್ನಗಳ ಸ್ವರೂಪ, ರಫ್ತು ಅಂಕಿ ಸಂಖ್ಯೆಗಳು–ಮುಂತಾದ ವಿಚಾರಗಳಿಗೆ ಸಂಬಂಧಿಸಿದ ವಿವರಗಳೂ ಸೇರುತ್ತವೆ.

ಮಹತ್ತ್ವಪೂರ್ಣವಾದ, ಕುಶಲತೆತುಂಬಿದ ನಿರ್ಣಯಗಳನ್ನು ಕೈಗೊಳ್ಳಲು ಸ್ಪರ್ಧಾವಿವರಗಳು ಬೇಕು. ನೂತನ ಪರವಾನಗಿ, ನೂತನ ವಸ್ತುಗಳು, ಮಾರುಕಟ್ಟೆಗೆ ಸಂಬಂಧಿಸಿದ ಬುದ್ಧಿಕೌಶಲ, ಹಣಕಾಸುನೀತಿ, ವಿಸ್ತರಣ ಕಾರ್ಯಕ್ರಮಗಳು, ಇತರರೊಂದಿಗೆ ಸಹಭಾಗಿತ್ವ, ಸ್ಪರ್ಧಾಳುಗಳಿಗೆ ಸೇರಿದಂತೆ ವಿಲೀನ ಮುಂತಾದ ವಿವರಗಳನ್ನು ಇದು ಒಳಗೊಳ್ಳುತ್ತದೆ.

ನಿಯಂತ್ರಣ ನಿರ್ಣಯಗಳನ್ನು ಕೈಗೊಳ್ಳಲು ಆಂತರಿಕ ವಿವರಗಳು ಅಗತ್ಯ. ಪ್ರಗತಿ ಸೂಚಿಸುವ ವರದಿಗಳು, ಹಣಕಾಸು ಸ್ಥಿತಿ, ಉತ್ಪಾದನೆ, ಮಾರುಕಟ್ಟೆ ಸಂಶೋಧನೆ, ಅಭಿವೃದ್ಧಿ ನಿರ್ವಹಣೆ ಮುಂತಾದವುಗಳಿಗೆ ಸಂಬಂಧಿಸಿದ ವರದಿಗಳು ಈ ಗುಂಪಿನಲ್ಲಿ ಸೇರುತ್ತವೆ.

ಕಂಪನಿ ನೀತಿ ಮತ್ತು ಆಸಕ್ತಿಗಳನ್ನು ಕುರಿತ ಎಲ್ಲ ಅಂಶಗಳ ಬಗೆಗೆ ವ್ಯಾಪಕವಾದ ಜ್ಞಾನ, ಪ್ರಸ್ತುತ ಯೋಜನೆಗಳು ಸಂಭವನೀಯವಾದ ಮುಂದಿನ ಒಲವುಗಳು, ಇವುಗಳ ಬಗೆಗೆ ತಿಳಿವಳಿಕೆ ಇದರ ಗ್ರಂಥಪಾಲಕನಿಗೆ ಚೆನ್ನಾಗಿರಬೇಕು. ವಿಷಯಕ್ಕೆ ನೇರವಾಗಿ ಸಂಬಂಧಿಸಿದ, ಅದಕ್ಕೆ ಸಮೀಪವಾದ ಗ್ರಂಥಗಳು ದೊರೆಯುವಂತೆ ಆತ ಗ್ರಂಥಾಲಯವನ್ನು ಸಜ್ಜುಗೊಳಿಸಿರಬೇಕು. ಭಾರತದಲ್ಲಿ ತಾತಾ ಕೈಗಾರಿಕೆ ಸಂಸ್ಥೆಗಳು, ಸಾರಾಭಾಯಿ ಕೆಮಿಕಲ್ಸ್ ಮುಂತಾದವು ತಮ್ಮವೇ ಆದ ಸುಸಜ್ಜಿತ ಗ್ರಂಥಾಲಯ, ಸಂಶೋಧನಾಲಯಗಳನ್ನು ಹೊಂದಿವೆ. (ಎಲ್.ಎಂ.ಪಿ.)

**3. ವೈದ್ಯಕೀಯ ಗ್ರಂಥಾಲಯಗಳು :** ವೈದ್ಯಕೀಯ ವಿಷಯಗಳಿಗೆಂದೇ ಪ್ರತ್ಯೇಕವಾದ ಗ್ರಂಥಾಲಯಗಳು ಏರ್ಪಟ್ಟದ್ದು ಈಚೆಗೆ. ಹಿಂದೆ ಅವು ಸಾರ್ವಜನಿಕ ಗ್ರಂಥಾಲಯದ ಒಂದು ಭಾಗವಾಗಿದ್ದುವು. ವೈದ್ಯವಿದ್ಯಾಶಾಲೆಗಳು, ಆಸ್ಪತ್ರೆಗಳು, ಔಷಧಿ ತಯಾರಿಕೆ ಸಂಸ್ಥೆಗಳು, ಸಾರ್ವಜನಿಕ ಆರೋಗ್ಯ ಇಲಾಖೆಗಳು–ಮುಂತಾದ ಸಂಸ್ಥೆಗಳು ಒಳ್ಳೆಯ ವೈದ್ಯಕೀಯ ಗ್ರಂಥಗಳನ್ನು ಸಂಗ್ರಹಿಸುತ್ತವೆ. ಮಧ್ಯಯುಗದಲ್ಲಿ ಕಾರ್ಡೋವ ಮತ್ತು ಬುಖಾರಾಗಳಲ್ಲಿನ ಗ್ರಂಥಾಲಯಗಳಲ್ಲಿ ವೈದ್ಯವಿಷಯಕ್ಕೆ ಸಂಬಂಧಪಟ್ಟ ಗ್ರಂಥಗಳು ಹೇರಳವಾಗಿದ್ದವು. ಲಂಡನ್ನಿನ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ (1518) ಸಂಸ್ಥೆಯಲ್ಲಿನ ಗ್ರಂಥಾಲಯ ಆಧುನಿಕ ಗ್ರಂಥಾಲಯಗಳಲ್ಲಿ ತೀರ ಹಳೆಯದೆನ್ನಲಾಗಿದೆ.

**ಕ್ರೈಸ್ತ ವೈದ್ಯಕೀಯ ಕಾಲೇಜು ಗ್ರಂಥಾಲಯದ ಒಂದು ನೋಟ, ವೆಲ್ಲೂರು**

ಇಂದಿನ ಗ್ರಂಥಾಲಯಗಳು ವೈದ್ಯಗ್ರಂಥಗಳನ್ನು ಮಾತ್ರವಲ್ಲದೆ ಅಸಂಖ್ಯಾತ ನಿಯತಕಾಲಿಕೆಗಳನ್ನೂ ಸಂಗ್ರಹಿಸತೊಡಗಿವೆ. ವೈದ್ಯಕೀಯ ಸಾಹಿತ್ಯದ ಬೆಳಸು ವ್ಯಾಪಕವೂ ಕ್ಷಿಪ್ರತರವೂ ಆದಂತೆಲ್ಲ ಸೂಚಿಗಳು ಸಾರಾಂಶಗಳು ಅನುವಾದಗಳು ಮತ್ತು ಗ್ರಂಥಸೂಚಿಗಳ ರೂಪದಲ್ಲಿ ಪರಾಮರ್ಶನ ಸೇವೆ–ಇವು ಬಹುವಿಶೇಷವಾದ ಪ್ರಾಮುಖ್ಯ ಪಡೆಯತೊಡಗಿವೆ. ಬೇರೆ ಬೇರೆ ವೈದ್ಯಕೀಯ ಗ್ರಂಥಾಲಯಗಳ ನಡುವಿನ ಸಹಕಾರ ಈಚೆಗೆ ಹೆಚ್ಚುತ್ತಿರುವುದು ಇನ್ನೊಂದು ಮುಖ್ಯ ಅಂಶ. ಮೆಡ್ಲರ್ಸ್ ವೈದ್ಯಕೀಯ ಸಾಹಿತ್ಯದ ವಿಶ್ಲೇಷಣೆ ಮತ್ತು ರಿಟ್ರೀವಲ್ ವ್ಯವಸ್ಥೆ ಇದಕ್ಕೆ ಒಂದು ನಿದರ್ಶನ. ಕೆಲವು ಪ್ರಸಿದ್ಧ ಗ್ರಂಥಾಲಯಗಳು ತಮ್ಮಲ್ಲಿರುವ ಗ್ರಂಥಗಳ ಪಟ್ಟಿಯನ್ನು ತಯಾರಿಸಿದ್ದು ವೈದ್ಯಕೀಯ ಸಾಹಿತ್ಯವನ್ನು ವರ್ಗೀಕರಿಸುವುದಕ್ಕೆ ವಿಶೇಷವಾದ ಅನುಸೂಚಿಗಳನ್ನು ರೂಪಿಸಿವೆ.

ವೈದ್ಯಕೀಯ ಗ್ರಂಥಾಲಯ ವಿಷಯಗಳಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯವಾಗಿ ಎರಡು ಸಮ್ಮೇಳನಗಳು: ಒಂದು–ಲಂಡನ್‌ನಲ್ಲಿ (1953), ಎರಡು–ವಾಷಿಂಗ್ಟನ್‌ನಲ್ಲಿ (1963) ನಡೆದವು.

ಜಿನೀವದಲ್ಲಿರುವ ವಿಶ್ವ ಆರೋಗ್ಯಸಂಸ್ಥೆಯ (ಡಬ್ಲ್ಯುಎಚ್‌ಒ) ಗ್ರಂಥಾಲಯ ವೈದ್ಯಕೀಯ ಜ್ಞಾನಕ್ಷೇತ್ರದಲ್ಲಿ ವಿಶ್ವಸಹಕಾರದ ಸಂಕೇತವಾಗಿದೆ. ಕೊಲಂಬಿಯ ವಿಶ್ವವಿದ್ಯಾಲಯ ಹಾಗೂ ಎಮೋರಿ ವಿಶ್ವವಿದ್ಯಾಲಯಗಳು ವೈದ್ಯಕೀಯ ಗ್ರಂಥಪಾಲನೆಯಲ್ಲಿ ಉನ್ನತ ಶಿಕ್ಷಣ ನೀಡುತ್ತವೆ.

ಪ್ರಾಚೀನ ಭಾರತದಲ್ಲಿ ವೈದ್ಯಕೀಯ ಗ್ರಂಥಾಲಯಗಳಿದ್ದುವೇ ಇಲ್ಲವೇ ಎಂಬುದು ಸ್ಪಷ್ಟವಿಲ್ಲ. ಆಯುರ್ವೇದವನ್ನೇನೋ ತಕ್ಷಶಿಲೆ ಮತ್ತು ನಾಲಂದ ವಿಶ್ವವಿದ್ಯಾಲಯಗಳಲ್ಲಿ ಕ್ರಮಬದ್ಧವಾಗಿ ಅಧ್ಯಯನ ಮಾಡಲಾಗುತ್ತಿತ್ತು ಎಂಬುದು ಸತ್ಯ. ಐರೋಪ್ಯರು ಭಾರತಕ್ಕೆ ಹೋಮಿಯೋಪತಿ ಮತ್ತು ಅಲೋಪತಿಗಳನ್ನು ಪರಿಚಯ ಮಾಡಿಕೊಟ್ಟರು. ಭಾರತದಲ್ಲಿ ವೈದ್ಯಕೀಯ ಗ್ರಂಥಾಲಯಗಳ ನಡುವೆ ಸಹಕಾರ ಇರಬೇಕೆಂದು ಮೊದಲು ಸೂಚಿಸಿದ ಕೀರ್ತಿ ಬಹುಶಃ ಬಂಗಾಲ ವೈದ್ಯಕೀಯ ಸೇವಾವರ್ಗದಲ್ಲಿದ್ದ (1788) ಜಾನ್ ಪೀಟರ್ ಎನ್ನುವವನಿಗೆ ಸಲ್ಲುತ್ತದೆ. ಆದರೆ ಆತನ ಸಲಹೆಯನ್ನು ವೈದ್ಯಕೀಯ ಮಂಡಳಿ ಕೂಡಲೇ ಅಂಗೀಕರಿಸಲಿಲ್ಲ.

ಭಾರತದಲ್ಲಿ ಮೊದಲು ವೈದ್ಯಕೀಯ ಕಾಲೇಜು ಪ್ರಾರಂಭವಾದ್ದು ಕಲ್ಕತ್ತದಲ್ಲಿ (1855). ಆದರೆ ಅದರಲ್ಲಿ ಗ್ರಂಥಾಲಯವಾಗಲಿ, ಆಸ್ಪತ್ರೆಯಾಗಲಿ ಇರಲಿಲ್ಲ. ಸ್ವಾತಂತ್ರ್ಯ ಬಂದ ಸಮಯದಲ್ಲಿ ಭಾರತದಲ್ಲಿ 25 ವೈದ್ಯಕೀಯ ಕಾಲೇಜುಗಳಿದ್ದವು. ಆದರೆ ಅವುಗಳಲ್ಲಿ ಯಾವುದೂ 230ಕ್ಕಿಂತ ಹೆಚ್ಚು ಪತ್ರಿಕೆಗಳಿಗೆ ಚಂದಾದಾರಿಕೆ ಪಡೆದಿರಲಿಲ್ಲ. 1946ರಲ್ಲಿ ಡಿ.ಪಿ. ಮೆಕ್‌ಡೊನಾಲ್ಡ್ ಎಂಬಾತ ಒಂದು ಕೇಂದ್ರ ಗ್ರಂಥಾಲಯ ಬ್ಯೂರೋ ಸ್ಥಾಪಿಸಬೇಕೆಂದೂ ಸಾರಸಂಗ್ರಹ, ಅನುವಾದ, ಮೈಕ್ರೊಫಿಲ್ಮ್ ಮುಂತಾದ ಕೆಲಸಗಳಲ್ಲಿ ಅದು ತೊಡಗಬೇಕೆಂದೂ ಗ್ರಂಥಪಾಲಕತ್ವದಲ್ಲಿ ವಿಶೇಷ ತರಬೇತಿ ವ್ಯವಸ್ಥೆ ಮಾಡಬೇಕೆಂದೂ ಶಿಫಾರಸು ಮಾಡಿದ.

ಸ್ವಾತಂತ್ರ್ಯಾನಂತರ ಅಲೋಪತಿ, ಆಯುರ್ವೇದ ಮತ್ತು ಯುನಾನಿ ಮಾದರಿಯ ವೈದ್ಯಕೀಯ ಶಾಲೆಗಳ ಸಂಖ್ಯೆ ಸ್ಥಿರಗತಿಯಲ್ಲಿ ಹೆಚ್ಚಿದೆ. 79 ಆಯುರ್ವೇದ ಕಾಲೇಜುಗಳು ಮತ್ತು ಸಂಸ್ಥೆಗಳ ಕಾರ್ಯವಿಧಾನವನ್ನು ಅಧ್ಯಯನ ಮಾಡಿದ (1960) ಉಡುಪ ಸಮಿತಿ, ಅವುಗಳಲ್ಲಿ ಕೇವಲ 31ಕ್ಕೆ ಮಾತ್ರ ಒಂದು ರೀತಿಯ ಗ್ರಂಥಾಲಯ ಸೌಲಭ್ಯ ಎನ್ನುವುದು ಇದ್ದಿತು, 27ಕ್ಕೆ ಆ ಸೌಲಭ್ಯ ಇರಲಿಲ್ಲ, 25 ಸಂಸ್ಥೆಗಳು ಆ ಬಗೆಗೆ ಯಾವ ವಿವರವನ್ನೂ ತಿಳಿಸಲಿಲ್ಲ ಎಂದು ವರದಿಮಾಡಿತು.

**ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯ** : 1966ರ ಏಪ್ರಿಲ್ 7ರಂದು ಆರೋಗ್ಯ ಸೇವೆಗಳ ಡೈರೆಕ್ಟರ್ ಜನರಲ್ ಅವರ ಕೇಂದ್ರ ವೈದ್ಯಕೀಯ ಗ್ರಂಥಾಲಯವನ್ನು ಭಾರತದ ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯ ಎಂದು ಘೋಷಿಸಲಾಯಿತು. ಸದ್ಯದಲ್ಲಿ ಇದು ನವದೆಹಲಿಯಲ್ಲಿನ ಕಂಬೈನ್ಸ್ ಕೌನ್ಸಿಲ್ ಕಟ್ಟಡದಲ್ಲಿದೆ. ಸಮಗ್ರ ರಾಷ್ಟ್ರದಲ್ಲಿ ವೈದ್ಯವೃತ್ತಿಯ ಯಾರೇ ಆಗಲಿ ಇಲ್ಲಿ ನೆರವು ಪಡೆಯಬಹುದು. 1966ರ ಕೊನೆಗೆ ಈ ಗ್ರಂಥಾಲಯದಲ್ಲಿ ಸು. 4,60,000 ಗ್ರಂಥಗಳು ಮತ್ತು ವರದಿಗಳು, ನಿಯತಕಾಲಿಕೆಗಳ 18,000 ಕಟ್ಟುಕಟ್ಟಿದ ಸಂಪುಟಗಳು, 2200 ಪುನರ್ಮುದ್ರಣಗಳು, 1000 ಮೈಕ್ರೋಕಾರ್ಡುಗಳು ಮತ್ತು 25 ಮೈಕ್ರೊಫಿಲ್ಮುಗಳು ಮತ್ತು ಫೋಟೋಪ್ರತಿಗಳು ಸಂಗ್ರಹವಾಗಿದ್ದವು. 1500 ನಿಯತಕಾಲಿಕೆಗಳು ಬರುತ್ತಿದ್ದವು.

ಭಾರತದ ಗ್ರಂಥಾಲಯಗಳಲ್ಲಿನ ವೈದ್ಯಕೀಯ ನಿಯತಕಾಲಿಕಗಳ ಕೇಂದ್ರೀಯ ಸೂಚಿ ಮತ್ತು ಭಾರತೀಯ ವೈದ್ಯಕೀಯ ನಿಯತಕಾಲಿಕೆಗಳ ಸೂಚಿ ಎಂಬ ಎರಡು ಸೂಚಿಗಳನ್ನು ಈ ಗ್ರಂಥಾಲಯ ಪ್ರಕಟಿಸುತ್ತಿದೆ.

ಶೈಕ್ಷಣಿಕ ಸಂಸ್ಥೆಗಳಿಗೆ ಸೇರಿರುವ ಗ್ರಂಥಾಲಯಗಳಲ್ಲದೆ ಭಾರತದಲ್ಲಿ ಇನ್ನು ಕೆಲವು ಪ್ರಮುಖವಾದ ವೈದ್ಯಕೀಯ ಗ್ರಂಥಾಲಯಗಳಿವೆ. ಅವು ಭಾರತದ ಮಲೇರಿಯಾ ಸಂಸ್ಥೆ, ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ (ಮೈಸೂರು), ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ (ಬೆಂಗಳೂರು), ಕೇಂದ್ರ ಸಂಶೋಧನ ಸಂಸ್ಥೆ (ಕಸೌಲಿ), ತಾತಾ ಇನ್‌ಸ್ಟಿಟ್ಯೂಟ್ ಆಫ್ ಕ್ಯಾನ್ಸರ್ ರಿಸರ್ಚ್ (ಮುಂಬಯಿ), ದಿ ಹಫ್‌ಕೈನ್ ಇನ್‌ಸ್ಟಿಟ್ಯೂಟ್ (ಮುಂಬಯಿ), ಗಿಂಡಿಯಲ್ಲಿರುವ ಕಿಂಗ್ ಇನ್‌ಸ್ಟಿಟ್ಯೂಟ್, ದೆಹಲಿಯ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಮತ್ತು ದಿ ಡೈರೆಕ್ಟೊರೇಟ್ ಜನರಲ್ ಆಫ್ ಹೆಲ್ತ್ ಸರ್ವಿಸಸ್–ಈ ಸಂಸ್ಥೆಗಳಲ್ಲಿವೆ. (ಎಚ್.ಎ.ಕೆ.)

**4. ಸರ್ಕಾರಿ ಆಡಳಿತ ಶಾಖೆ ಗ್ರಂಥಾಲಯಗಳು** : ಒಂದು ರಾಷ್ಟ್ರದ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ವಿವಿಧ ಸಚಿವ ಖಾತೆಗಳಿಗೆ, ವಿಭಾಗಗಳಿಗೆ, ವಿಶಿಷ್ಟ ಸಂಸ್ಥೆಗಳಿಗೆ ಸೇರಿಕೊಂಡಿರುವ ಗ್ರಂಥಾಲಯಗಳನ್ನು ಈ ಬಗೆಯವಾಗಿ ವಿಂಗಡಿಸುತ್ತಾರೆ. ಇವುಗಳ ನಿರ್ವಹಣೆ, ವೆಚ್ಚ ಎಲ್ಲವೂ ಸಂಬಂಧಪಟ್ಟ ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ.

ಈಚಿನ ದಶಕಗಳಲ್ಲಿ ಸರ್ಕಾರದ ವ್ಯವಹಾರ ಗಣನೀಯ ಪ್ರಮಾಣದಲ್ಲಿ ಬೆಳೆಯುತ್ತಲಿದೆ. ಸ್ವತಂತ್ರ ಭಾರತದಲ್ಲಂತೂ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಅನ್ಯರಾಷ್ಟ್ರಗಳೊಂದಿಗೆ ಬಾಂಧವ್ಯಗಳಿಂದಾಗಿ ಸರ್ಕಾರದ ಆಡಳಿತ ವ್ಯವಹಾರ ದಿನೇದಿನೇ ವಿಶಾಲತರವಾಗುತ್ತ ಹೋಗುತ್ತಿದೆ. ಆಡಳಿತಗಾರರು ಎಷ್ಟೇ ಸಮರ್ಥರಾಗಿರಲಿ, ಅವರಿಗೆ ವಿಶಿಷ್ಟ ಪರಿಣತರ ನೆರವು ಬೇಕು. ಅದಕ್ಕೆ ಪೋಷಕವಾಗಿ ದೇಶವಿದೇಶಗಳಿಗೆ ಭೂತವರ್ತಮಾನಕಾಲಗಳಿಗೆ ಸಂಬಂಧಿಸಿದ ವಿಷಯಜ್ಞಾನ ಒದಗಿಸುವ ಬರೆಹ, ದಾಖಲೆಗಳೂ ಬೇಕು. ಆಡಳಿತಗಾರರು ಕೈಗೊಳ್ಳುವ ನಿರ್ಣಯಗಳು ತಪ್ಪಾದ ಅಥವಾ ಅಸಂಪೂರ್ಣವಾದ ಅಂಕಿಅಂಶಗಳ ಮೇಲೆ ಆಧಾರಗೊಂಡು ಅನಾಹುತಕ್ಕೆ ಎಡೆಗೊಡದಿರಬೇಕಾದರೆ ಇದು ಅತ್ಯಗತ್ಯ ಎಂದೇ ಸರ್ಕಾರಿ ವ್ಯವಹಾರಕ್ಕೆ ಬಹು ಸಮರ್ಪಕವಾದ ಗ್ರಂಥಾಲಯ ಸೇವೆ ಅತ್ಯಾವಶ್ಯಕವಾಗಿದೆ.

ಇಂಥ ಗ್ರಂಥಾಲಯ ಮುಖ್ಯವಾಗಿ ಸರ್ಕಾರದ ಎಲ್ಲ ಪ್ರಕಟಣೆಗಳನ್ನೂ ಮೊದಲು ಸಂಗ್ರಹಿಸಿಡಬೇಕು. ಅಲ್ಲದೆ ಸಂಗ್ರಹಿಸಿದ ಸಾಹಿತ್ಯವನ್ನು ವ್ಯವಸ್ಥೆಗೊಳಿಸಿ, ದಾಖಲಿಟ್ಟು ಅಗತ್ಯವಾಗಿ ತಪ್ಪದೆ ಒದಗಿಸಲು ಏರ್ಪಾಡು ಮಾಡಬೇಕು. ಕ್ರಮೇಣ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಇತರ ಸಾಹಿತ್ಯ ಸಾಮಗ್ರಿಯನ್ನು–ಪುಸ್ತಕ, ಕರಪತ್ರ, ವರದಿ ಮುಂತಾದ ರೂಪಗಳಲ್ಲಿ ಪ್ರಕಟವಾಗಿರುವುದನ್ನು, ಸ್ವದೇಶ ವಿದೇಶ ಸರ್ಕಾರಗಳಿಗೆ ಸಂಬಂಧಪಟ್ಟಿರುವುದನ್ನು ಸಂಗ್ರಹಿಸಿ ಒದಗಿಸಲು ಯತ್ನಿಸಬೇಕು. ಮುಖ್ಯವಾಗಿ ಈ ಗ್ರಂಥಾಲಯಗಳು ಪರಾಮರ್ಶನ ಗ್ರಂಥಾಲಯಗಳು. ತಿಳಿವಳಿಕೆ ಒದಗಿಸುವುದು ಇವುಗಳ ಮುಖ್ಯ ಕೆಲಸ. ಸರ್ಕಾರದ ವರದಿಗಳು, ಬುಲೆಟಿನ್‌ಗಳು, ಗೆಜೆಟಿಯರುಗಳು, ಪುಸ್ತಿಕೆಗಳು, ವಿಷಯಾತ್ಮಕ ಸರ್ವೆಗಳು, ಶಾಸನಗಳು, ಕೈಪಿಡಿಗಳು ಮುಂತಾದ ಖಾಸಗಿ ಉಪಯೋಗಕ್ಕೆಂದೇ ಪ್ರಕಟವಾದ ಮೂಲಸಾಮಗ್ರಿ ಮೊತ್ತಮೊದಲು ಈ ಗ್ರಂಥಾಲಯಗಳಿಗೆ ಒದಗುವುದರಿಂದ ಇವುಗಳ ಪ್ರಾಧಾನ್ಯ ಅಧಿಕವಾಗಿದೆ. ಇದರ ಜೊತೆಗೆ ಇವು ಸಾಮಾನ್ಯವಾಗಿ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ನ್ಯಾಯ, ಭೂಗೋಳ, ಪ್ರವಾಸ, ಕೃಷಿವಿಜ್ಞಾನ, ಕಲೆ, ವಾಸ್ತುಶಿಲ್ಪ ಮತ್ತು ಜೀವನಚರಿತ್ರೆಗಳಿಗೆ ಸಂಬಂಧಿಸಿದ ಮುಖ್ಯ ಗ್ರಂಥಗಳನ್ನೂ ನಿಯತಕಾಲಿಕೆಗಳನ್ನೂ ಸಂಗ್ರಹಿಸುತ್ತವೆ.

ಕೇಂದ್ರ ಸೆಕ್ರೆಟೇರಿಯಟ್ ಗ್ರಂಥಾಲಯ ಹಾಗೂ ರಾಜ್ಯ ಸೆಕ್ರೆಟೇರಿಯಟ್ ಗ್ರಂಥಾಲಯಗಳು ತಮ್ಮ ತಮ್ಮ ಸರ್ಕಾರದ ಪ್ರಕಟಣೆಗಳೆಲ್ಲದರ ಒಂದೊಂದು ಪ್ರತಿಯನ್ನಾದರೂ ಇಟ್ಟಿರುವುದು ಒಳ್ಳೆಯದು.

ವ್ಯವಸ್ಥೆ, ವರ್ಗೀಕರಣ, ಸೂಚೀಕರಣ ಮುಂತಾದ ತಾಂತ್ರಿಕ ಅಂಶಗಳು ಒಂದೊಂದು ಗ್ರಂಥಾಲಯದಲ್ಲೂ ಒಂದೊಂದು ರೀತಿಯಲ್ಲಿರುತ್ತವೆ. ಮುಖ್ಯವಾಗಿ ಗ್ರಂಥಾಲಯಗಳಲ್ಲಿನ ಸಿಬ್ಬಂದಿಯ ಬಹುಪಾಲು ಜನ ಪರಾಮರ್ಶನ ಹಾಗೂ ದಾಖಲು ಕೆಲಸಕ್ಕೆ ಗಮನ ಕೊಡಬೇಕಾಗುತ್ತದೆ.

ವಿಭಾಗ ಗ್ರಂಥಾಲಯಗಳಿಗೆ ಪುಸ್ತಕ ಕೊಳ್ಳುವಿಕೆ, ವರ್ಗೀಕರಣ, ಸೂಚೀಕರಣ ಮುಂತಾದ ಕೆಲಸಗಳನ್ನು ಕೇಂದ್ರೀಕರಿಸುವುದು ಉತ್ತಮ. ಇದರಿಂದ ಈ ಗ್ರಂಥಾಲಯಗಳ ತಾಂತ್ರಿಕ ಸಿಬ್ಬಂದಿ ಹೆಚ್ಚು ಕಾಲವನ್ನು ಸಮರ್ಪಕವಾದ ಪರಾಮರ್ಶನ ಹಾಗೂ ದಾಖಲು ಕೆಲಸಗಳಿಗೆ ವಿನಿಯೋಗಿಸುವುದು ಸಾಧ್ಯವಾಗುತ್ತದೆ.

ನವದೆಹಲಿಯ ಕೇಂದ್ರ ಸೆಕ್ರೆಟೇರಿಯಟ್ ಗ್ರಂಥಾಲಯ ಮತ್ತು ಪಾರ್ಲಿಮೆಂಟ್ ಗ್ರಂಥಾಲಯ, ಭಾರತದ ಮಾನವಶಾಸ್ತ್ರ ಸರ್ವೇಕ್ಷಣ ಗ್ರಂಥಾಲಯ, ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯ ಗ್ರಂಥಾಲಯ, ರಾಜ್ಯ ಸರ್ಕಾರಗಳ ಅರ್ಥಸಚಿವ ಶಾಖೆ, ಆಡಳಿತ ಹಾಗೂ ಶಿಕ್ಷಣ ಖಾತೆಗಳ ಗ್ರಂಥಾಲಯಗಳು–ಇವು ತಮ್ಮವೇ ಆದ ಉತ್ತಮ ಗ್ರಂಥಾಲಯಗಳನ್ನು ಹೊಂದಿವೆ. (ಎಚ್.ಎ.ಕೆ.)

**5. ಇಂಡಿಯನ್ ಆಫೀಸ್ ಗ್ರಂಥಾಲಯ** : ಈಸ್ಟ್ ಇಂಡಿಯ ಕಂಪನಿಯ ಅಧಿಕಾರಿಗಳಲ್ಲಿ ಕೆಲವರು ಭಾರತದಲ್ಲಿ ತಮಗೆ ಲಭ್ಯವಾದ ಸುಂದರ ಹಸ್ತಪ್ರತಿಗಳನ್ನು ಸಂಗ್ರಹಿಸಿದರಲ್ಲದೆ ಸ್ವದೇಶಕ್ಕೆ ಮರಳಿದ ಬಳಿಕ ತಾವು ಕಲೆಹಾಕಿದ ಹಸ್ತಪ್ರತಿಗಳನ್ನು ಕಂಪನಿಗೆ ಕಾಣಿಕೆಯಾಗಿ ಕೊಟ್ಟರು. ಹೀಗೆ ಪ್ರಾರಂಭವಾದ ಹಸ್ತಪ್ರತಿ ಹಾಗೂ ಗ್ರಂಥಗಳ ಸಂಗ್ರಹವನ್ನು ಕಂಪನಿಯ ನಿರ್ದೇಶಕರು 1801ರಲ್ಲಿ ಕಂಪನಿಯ ಗ್ರಂಥಾಲಯವನ್ನಾಗಿ ಪರಿವರ್ತಿಸಿದರು. 1858ರಲ್ಲಿ ಬ್ರಿಟಿಷ್ ಸರ್ಕಾರ ಕಂಪನಿಯ ಕಡೆಯಿಂದ ಅಧಿಕಾರವನ್ನು ವಹಿಸಿಕೊಂಡಿತು. ಅಂದಿನಿಂದ ಈ ಗ್ರಂಥಾಲಯ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಅವರ ಕಚೇರಿಯ ಗ್ರಂಥಾಲಯವಾಗಿ ಮಾರ್ಪಾಡಾಯಿತು. 1947ರ ಅನಂತರ ಇದು ಕಾಮನ್‌ವೆಲ್ತ್ ಸೆಕ್ರೆಟರಿ ಆಫ್ ಸ್ಟೇಟ್ ಅವರ ಕಚೇರಿಯ ಗ್ರಂಥಾಲಯವಾಗಿ ತನ್ನ ಸೇವೆಯನ್ನು ಮುಂದುವರಿಸಿದೆ. ಈಗ ಭಾರತ ಹಾಗೂ ಇತರ ಪೌರಸ್ತ್ಯ ದೇಶಗಳಿಗೆ ಸಂಬಂಧಪಟ್ಟ ಅಮೂಲ್ಯ ಸಾಮಗ್ರಿಗಳ ಸಂಗ್ರಹ ಈ ಗ್ರಂಥಾಲಯದಲ್ಲಿದೆ.

ಈ ಗ್ರಂಥಾಲಯದಲ್ಲಿ ಮುದ್ರಿತ ಗ್ರಂಥಗಳ ಉತ್ತಮ ಸಂಗ್ರಹವಿದೆ. ಇಂಥ ಗ್ರಂಥಗಳನ್ನು ಕೊಂಡುಕೊಂಡಾಗಲಿ ಇಲ್ಲವೆ 1867 ರಿಂದ 1948ರ ಅವಧಿಯಲ್ಲಿ 1867ರ ಇಂಡಿಯನ್ ಪ್ರೆಸ್ ಮತ್ತು ರಿಜಿಸ್ಟ್ರೇಶನ್ ಆಫ್ ಬುಕ್ಸ್ ಕಾಯದೆಯ ಸೌಲಭ್ಯದಿಂದ ಇಲ್ಲವೆ ಇತರ

ಗ್ರಂಥಾಲಯಗಳು ಮತ್ತು ಸಂಘಸಂಸ್ಥೆಗಳೊಡನೆ ಗ್ರಂಥಗಳ ಅದಲುಬದಲಾವಣೆಯಿಂದ ಈ ಸಂಗ್ರಹವನ್ನು ಬೆಳೆಸಲಾಗಿದೆ. 1948ರ ಅನಂತರ ಭಾರತ ಮತ್ತು ಪಾಕಿಸ್ತಾನಗಳ ಪ್ರಚಲಿತ ಪ್ರಕಟನೆಗಳನ್ನು ಕೊಂಡುಕೊಂಡೇ ಈ ಸಂಗ್ರಹಕ್ಕೆ ಕೂಡಿಸಲಾಗುತ್ತಿದೆ.

ಭಾರತೀಯ ವಿಷಯದ ಎಲ್ಲ ಮಹತ್ತ್ವದ ಗ್ರಂಥಗಳನ್ನೂ ಸಂಗ್ರಹಿಸುವ ಧೋರಣೆಗಳನ್ನು ಈಗಲೂ ಈ ಗ್ರಂಥಾಲಯ ಇಟ್ಟುಕೊಂಡಿದೆ. ಅಂತೆಯೇ ಭಾರತ–ಪಾಕಿಸ್ತಾನಗಳ ಇತಿಹಾಸ, ಜನಜೀವನ, ಸಂಸ್ಕೃತಿಗಳ ವಿಷಯದ ಯಾವ ಗ್ರಂಥ ಅದಾವ ಭಾಷೆಯಲ್ಲಿದ್ದರೂ ಈ ಸಂಸ್ಥೆಯಲ್ಲಿ ಅದನ್ನು ಕಾಣಬಹುದಾಗಿದೆ.

ಜೊತೆಗೆ 90,000 ಮುದ್ರಿತ ಐರೋಪ್ಯ ಗ್ರಂಥಗಳ ಸಂಗ್ರಹವೂ ಇದ್ದು ಅದರಲ್ಲಿ ಇಂಗ್ಲಿಷ್ ಮತ್ತು ಯುರೋಪಿನ ಭಾಷೆಗಳಲ್ಲಿನ ಗ್ರಂಥಗಳಿವೆ. ಸರ್ಕಾರಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಹಿಂದಿನಿಂದ ಇಂದಿನವರೆಗಿನ ಪ್ರಕಟಣೆಗಳೆಲ್ಲವನ್ನೂ ಇಲ್ಲಿ ಸಂಗ್ರಹಿಸಲಾಗಿದೆ.

ಈ ಗ್ರಂಥಾಲಯದಲ್ಲಿ 2700 ನಿಯತಕಾಲಿಕೆಗಳ ಸಂಗ್ರಹವಿದ್ದು ಇವೆಲ್ಲ ಭಾರತೀಯ ವಿಷಯಗಳ ಮೇಲೆ ಐರೋಪ್ಯ ಭಾಷೆಗಳಲ್ಲಿವೆ. ಇಂಥ ಭಾರತೀಯ ಅಭ್ಯಾಸದ ಮೇಲಿನ ಪ್ರಚಲಿತ ನಿಯತಕಾಲಿಕೆಗಳನ್ನು ಈಗಲೂ ಗ್ರಂಥಾಲಯ ಪಡೆಯುತ್ತಲಿದೆ.

ಗ್ರಂಥಾಲಯ ಪ್ರಮುಖ ಭಾರತೀಯ ವೃತ್ತಪತ್ರಿಕೆಗಳನ್ನು ತರಿಸುತ್ತಲಿದೆಯಲ್ಲದೆ, ಇಲ್ಲಿ 18ನೆಯ ಶತಮಾನದ ಮಹತ್ತ್ವದ ಸಮಾಚಾರ ಪತ್ರಗಳ ಸಂಪೂರ್ಣ ಸಂಗ್ರಹವಿದೆ.

**ಪ್ರಾಚ್ಯ ಮುದ್ರಿತ ಗ್ರಂಥಗಳು :** ಈ ಸಂಗ್ರಹ ಎಲ್ಲ ಪೌರಸ್ತ್ಯ ಭಾಷೆಗಳಲ್ಲಿನ ಮುದ್ರಿತ ಗ್ರಂಥಗಳನ್ನೂ ಐರೋಪ್ಯ ಭಾಷೆಗಳಲ್ಲಿ ಭಾಷಾಂತರಗೊಂಡ ಕೃತಿಗಳನ್ನೂ ಒಳಗೊಂಡಿದೆ. ಇದರಲ್ಲಿ ಅರಬ್ಬೀ (6,500), ಪರ್ಷಿಯನ್ (6,000) ಸಂಸ್ಕೃತ ಮತ್ತು ಪ್ರಾಕೃತ (21,500), ಅವೆಸ್ತ ಮತ್ತು ಪಹ್ಲವಿ (100), ಚೀನಿ (1,850) ಭಾಷೆಗಳ ಅತ್ಯಮೂಲ್ಯ ಮುದ್ರಿತ ಗ್ರಂಥಗಳಿವೆ. ಅಲ್ಲದೆ ಬರ್ಮೀಸ್, ಟಿಬೆಟನ್ ಭಾಷೆಗಳ ಗ್ರಂಥಗಳು ಸೇರಿವೆ. ಮಿಕ್ಕಂತೆ ಆರ್ಯಭಾಷೆಗಳಿಗೆ ಸಂಬಂಧಿಸಿದಂತೆ ಅಸ್ಸಾಮಿ (700), ಬಂಗಾಲಿ (24,000), ಗುಜರಾತಿ (10,000), ಹಿಂದಿ (23,000), ಕಾಶ್ಮೀರಿ (129), ಮರಾಠಿ (9,500), ನೇಪಾಳಿ (478), ಒರಿಯ (4,000), ಪಂಜಾಬಿ (6,000), ರಾಜಸ್ಥಾನಿ (94), ಸಿಂಧಿ (2,500), ಉರ್ದು (16,000) ಗ್ರಂಥಗಳೂ ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದಂತೆ ಬ್ರಾಹೂಈ (12), ಕನ್ನಡ (3,000), ಕೊತ (4), ಕುಯಿ (6), ಮಲೆಯಾಳಂ (2,500), ತಮಿಳು (15,500), ತೆಲುಗು (6,500), ತುಳು (28), ತೋಡ (2) ಗ್ರಂಥಗಳೂ ಇವೆ.

**ಹಸ್ತಪ್ರತಿಗಳು :** ಈ ಸಂಗ್ರಹದಲ್ಲಿ ಕಾಗದ, ತಾಡೋಲೆ, ಕಟ್ಟಿಗೆ, ಡವಗಿ, ಬಮಗಾರ, ಬೆಳ್ಳಿ ಮತ್ತು ಇತರ ಸಾಮಗ್ರಿಗಳ ಮೇಲೆ ಅಕ್ಷರ ಕೆತ್ತಿದ ಇಲ್ಲವೆ ಟೈಪ್ ಮಾಡಿದ ಪ್ರತಿಗಳನ್ನು ಶೇಖರಿಸಲಾಗಿದೆ. ಇವನ್ನು ಭಾಷಾವಾರು ವಿಂಗಡಿಸಿ ಒಂದೆಡೆ ಸಂಗ್ರಹಿಸಲಾಗಿದೆ. ಇದರಲ್ಲಿ ಓರ್ಮೆ ಸಂಗ್ರಹ (ಈಸ್ಟ್ ಇಂಡಿಯ ಕಂಪನಿಯ ಇತಿಹಾಸಕಾರ ರಾಬರ್ಟ ಓರ್ಮೆ ಕಲೆಹಾಕಿದ ಗ್ರಂಥಗಳು) ಮೊಟ್ಟಮೊದಲಿನದಾಗಿವೆ. ಬೆಲೆಯುಳ್ಳ ಸುಮಾರು 87 ವೈಯಕ್ತಿಕ ಸಂಗ್ರಹಗಳು ಈ ಗ್ರಂಥಾಲಯದ ಸಂಪತ್ತಾಗಿದ್ದು ಅಮೂಲ್ಯವೆನಿಸಿವೆ. ಈ ಗ್ರಂಥಾಲಯದ ಸಂಗ್ರಹ 3,50,000ಕ್ಕೂ ಮಿಕ್ಕಿದೆ. ಗ್ರಂಥ ಹಾಗೂ ಹಸ್ತಪ್ರತಿ ಇತ್ಯಾದಿಗಳ ವಿವರಗಳು ಈ ಕೆಳಗಿನಂತಿವೆ:

| | | ಗ್ರಂಥಗಳು | ಹಸ್ತಪ್ರತಿಗಳು | ಕಿರುಚಿತ್ರಣ | ಕಲಾಕೃತಿ | ಚಿತ್ರಾವಳಿ |
|---|---|---|---|---|---|---|
| 1. | ಪೌರಸ್ತ್ಯ ಭಾಷೆ | 2,50,000 | 20,000 | – | – | – |
| 2. | ಐರೋಪ್ಯ ಭಾಷೆ | – | 20,000 | – | – | – |
| 3. | ಭಾರತೀಯ ಹಾಗೂ ಪರ್ಷಿಯನ್ | – | – | 6,000 | – | – |
| 4. | ಬ್ರಿಟಿಷ್ | – | – | – | 10,000 | – |
| 5. | ಆಗ್ನೇಯ ಏಷ್ಯ | – | – | – | – | 800 |
| 6. | ಭಾರತೀಯ ಬಣ್ಣದ ಚಿತ್ರಗಳು | – | – | – | – | 5,000 |
| 7. | ದಕ್ಷಿಣೇಷ್ಯ ರಾಷ್ಟ್ರಗಳ ಐತಿಹಾಸಿಕ ಚಿತ್ರಗಳು | – | – | – | – | 5,000 |
| 8. | 16, 17, 18ನೆಯ ಶತಮಾನಗಳ ಭಾರತೀಯ ಕಲಾಕೃತಿಗಳು | – | – | 3,400 | – | – |

ಅಲ್ಲದೆ ದಕ್ಷಿಣ ಏಷ್ಯದ ನಕಾಶೆಗಳು 5000, ಸರ್ಕಾರಿ ಪ್ರಕಟಣೆಗಳು 10,000, 19ನೆಯ ಶತಮಾನದ ಪ್ರಾರಂಭದಿಂದಲೂ ಪ್ರಕಟಿಸಲ್ಪಟ್ಟ ಭಾರತೀಯ ನಿಯತಕಾಲಿಕೆಗಳ ಹಳೆಯ ಸಂಪುಟಗಳೂ ಲಭ್ಯವಿವೆ. 1947ರ ಅನಂತರ ಈ ಗ್ರಂಥಾಲಯಕ್ಕೆ ಹಲವು ವೈಸರಾಯರ–ಗವರ್ನರುಗಳ ಹಾಗೂ ಇನ್ನಿತರ ಬ್ರಿಟಿಷ್ ಅಧಿಕಾರಿಗಳ ಖಾಸಗೀ ಪತ್ರಗಳು ಕಾಗದಪತ್ರಗಳೂ ಸೇರಿದುವು. ಹೀಗಾಗಿ ಭಾರತದಲ್ಲಿಯ ಬ್ರಿಟಿಷರ ಆಳ್ವಿಕೆಯ ಇತಿಹಾಸವನ್ನು ಸಮಗ್ರವಾಗಿ ಬರೆಯಲಿಕ್ಕೆ ಈ ಸಂಗ್ರಹದ ಅವಲೋಕನ ಅವಶ್ಯ. ಇವುಗಳಿಗೆ ಸಹಾಯಕವಾಗಿ ವಿವಿಧ ಸೂಚಿಗಳೂ ಇವೆ.

ಈ ಗ್ರಂಥಾಲಯ ಇಷ್ಟು ಉಚ್ಚಮಟ್ಟಕ್ಕೆ ಬರಲು ಕಾರಣ ಅಲ್ಲಿ ಸೇವೆ ಸಲ್ಲಿಸಿದ ಚಾರ್ಲ್ಸ್ ವಿಲ್ಕಿನ್ಸ್, ಎಚ್. ಎಚ್. ವಿಲ್ಸನ್, ಜೇಮ್ಸ್ ಬ್ಯಾಲೆಂಟಿನ್, ಹಾಲ್, ರೊಸ್ಟ್, ಸ್ಟ್ಯಾನ್ಲೆ, ಸಟನ್ ಮೊದಲಾದ ಬಹು ಭಾಷಾತಜ್ಞ ವಿದ್ವಾಂಸರು ಹಾಗೂ ನಿಪುಣ ಗ್ರಂಥಪಾಲರುಗಳು.

ಭಾರತ ಸ್ವಾತಂತ್ರ್ಯ ಪಡೆದ ಅನಂತರ, ಈ ಗ್ರಂಥಾಲಯದ ಸ್ವಾಮ್ಯ ಗ್ರೇಟ್ ಬ್ರಿಟನ್, ಭಾರತ, ಪಾಕಿಸ್ತಾನ ಈ ಮೂರು ದೇಶದೊಳಗೆ ಯಾವ ದೇಶಕ್ಕೆ ಸೇರಬೇಕು ಎಂಬ ವಿಷಯದ ಬಗ್ಗೆ ವಿವಾದವಿದೆ. ಭಾರತೀಯ ವಿಷಯದಲ್ಲಿ ಸಂಶೋಧನೆ ನಡೆಸಿರುವ ಸಂಶೋಧಕರಿಗೆ ಅವರು ಎಲ್ಲಿಯೇ ಇರಲಿ ಅವರಿಗೆ ಬೇಕಾದ ಮಾಹಿತಿಯನ್ನು ಫೋಟೋ ಪ್ರತಿ ಅಥವಾ ಮೈಕ್ರೊಫಿಲ್ಮ್ ಮೂಲಕ ಕಳಿಸಿಕೊಡುವ ವ್ಯವಸ್ಥೆ ಮಾಡಲಾಗಿತ್ತು.

(ಕೆ.ಎಸ್.ಡಿ.ಇ.;ಎಸ್.ಆರ್.ಎಸ್.ಇ.)

**6. ಆರ್ಕೈವ್ಸ್ (ಪತ್ರಾಗಾರ) :** ದಾಖಲೆ ಪತ್ರಗಳು, ಇವುಗಳನ್ನಿಟ್ಟಿರುವ ಸ್ಥಳ ಮತ್ತು ಇವನ್ನು ರಕ್ಷಿಸಿಕೊಂಡು ಬರಲು ರಚಿತವಾಗಿರುವ ಆಡಳಿತ ವ್ಯವಸ್ಥೆ ಈ ಮೂರನ್ನೂ ಇದೇ ಹೆಸರಿನಿಂದ ಕರೆಯುತ್ತಾರೆ. ಹಳೆಯ ಗ್ರೀಕ್‌ನ ಪ್ರಕಾರ ಕಾರ್ಯಾಲಯಕ್ಕೆ ಸೇರಿದ ಎಲ್ಲ ವಸ್ತುಗಳು ಈ ಪದದಲ್ಲಿ ಅಡಕವಾಗಿವೆ. ಇಂದು ಇದರ ಅರ್ಥ ದಿನನಿತ್ಯ ವ್ಯವಹಾರದಲ್ಲಿ ಉಪಯೋಗಿಸಲ್ಪಡುವ ಇಲ್ಲವೆ ಉತ್ತರೋತ್ತರ ಉಪಯೋಗಕ್ಕಾಗಿ ರಕ್ಷಿಸಲ್ಪಟ್ಟಿರುವ ದಾಖಲೆ ಪತ್ರಗಳಿಗೆ ಮಾತ್ರ ಸೀಮಿತವಾಗಿದೆ. ಸರ್ಕಾರ, ಸಂಸ್ಥೆ, ಸಂಸಾರ ಅಥವಾ ವ್ಯಕ್ತಿಗಳು ತಮ್ಮ ಆಡಳಿತದಲ್ಲಿ ಅಥವಾ ವ್ಯವಹಾರದಲ್ಲಿ ತಾವು ಕಳುಹಿಸಿದ, ಪಡೆದ ಅಥವಾ ತಮ್ಮಲ್ಲಿಯೇ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲು ಬಳಸಿದ ಕಾಗದಪತ್ರಗಳು, ಪುಸ್ತಕ, ನಕ್ಷೆ, ಛಾಯಾ ಚಿತ್ರ, ವೃತ್ತಪತ್ರಿಕೆಗಳ ಕತ್ತರಿಸಿದ ಭಾಗಗಳು ಆರ್ಕೈವ್ಸ್ ಎನ್ನಿಸಿಕೊಳ್ಳುತ್ತವೆ. ಹಾಗೆ ನೋಡಿದರೆ ಈ ನಿಯಮಕ್ಕೆ ಒಳಪಟ್ಟ ತಾಮ್ರಶಾಸನ, ಓಲೆ, ಕಡ್ತನ್ ಮೊದಲಾದ ಎಲ್ಲ ದಾಖಲೆ ಪತ್ರಗಳನ್ನೂ ಆರ್ಕೈವ್ಸ್ ಎಂದೇ ಕರೆಯಬೇಕಾಗುತ್ತದೆ. ಕನ್ನಡದಲ್ಲಿ ಆರ್ಕೈವ್ಸ್ ಎಂಬುದಕ್ಕೆ ಪತ್ರಾಗಾರ ಎಂಬ ಪದವನ್ನು ಬಳಸಲಾಗುತ್ತಿದೆ.

ಪ್ರಪಂಚದಲ್ಲಿ ಆರ್ಕೈವ್ಸ್ ಸಂಸ್ಥೆಯ ಸ್ಥಾಪನೆ ಮೊದಲು ಪ್ರಾರಂಭವಾದದು ಫ್ರಾನ್ಸಿನಲ್ಲಿ. 1789ರ ಮಹಾಕ್ರಾಂತಿಯ ಅನಂತರ ಹಿಂದಣ ದಾಖಲೆಪತ್ರಗಳನ್ನು ಕಾಪಾಡಲೋಸುಗ ಈ ಸಂಸ್ಥೆ ಹುಟ್ಟಿಕೊಂಡಿತು. ಇಂಗ್ಲೆಂಡಿನಲ್ಲಿ 1838ರಲ್ಲಿ ಪಬ್ಲಿಕ್ ರಿಕಾರ್ಡ್ ಆಫೀಸ್ ಸ್ಥಾಪಿತವಾಯಿತು. ಅನಂತರ ಸುಮಾರು 100 ವರ್ಷಗಳಾದ ಮೇಲೆ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ನ್ಯಾಷನಲ್ ಆರ್ಕೈವ್ಸ್ ಸಂಸ್ಥೆ ಪ್ರಾರಂಭವಾಯಿತು (1934). ಹೀಗೆಯೆ ಕೆನಡ, ಆಸ್ಟ್ರೇಲಿಯ, ಆಫ್ರಿಕ ಮತ್ತು ಏಷ್ಯಗಳಲ್ಲೂ ಇಂಥ ಸಂಸ್ಥೆಗಳು ಸ್ಥಾಪಿತವಾದವು. ಏಷ್ಯದಲ್ಲೇ ಅತ್ಯಂತ ದೊಡ್ಡದಾದ ಮತ್ತು ಆಧುನಿಕ ಯಂತ್ರೋಪಕರಣ ಗಳಿಂದ ಕೂಡಿದ ಸಂಸ್ಥೆಯೆಂದರೆ ಭಾರತದಲ್ಲಿ ಸ್ಥಾಪಿತವಾಗಿರುವ ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯ. ಇದು 1891ರಲ್ಲಿ ಕಲ್ಕತ್ತ ನಗರದಲ್ಲಿ ಜನ್ಮತಾಳಿ ಈಗ ನವದೆಹಲಿಯಲ್ಲಿ ಕೆಲಸ ಮಾಡುತ್ತಿದೆ. ಇಲ್ಲಿ ಈಸ್ಟ್ ಇಂಡಿಯ ಕಂಪನಿ ಸರ್ಕಾರದ ಕಾಗದ ಪತ್ರಗಳೂ ಸೇರಿದಂತೆ 1748ರಿಂದಲೂ ಕೇಂದ್ರ ಸರ್ಕಾರದಲ್ಲಿ ಉಪಯೋಗಗೊಂಡ ಎಲ್ಲ ದಾಖಲೆ ಪತ್ರಗಳನ್ನೂ ಕಾಪಾಡಲಾಗಿದೆ. ಜೊತೆಗೆ ಗಾಂಧೀಜಿ, ತಾಂಡನ್, ಗೋಖಲೆ, ಶ್ರೀನಿವಾಸಶಾಸ್ತ್ರಿ ಮೊದಲಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ವ್ಯಕ್ತಿಗಳ ಕಾಗದ ಪತ್ರಗಳು ರಕ್ಷಿತವಾಗಿವೆ. ಇವನ್ನು ಇಲ್ಲಿ ಆಧುನಿಕ ಸಲಕರಣೆಗಳ ಸಹಾಯದಿಂದ ರಕ್ಷಿಸಿರುವುದೇ ಅಲ್ಲದೆ ಸಂಶೋಧನೆಗೆ ಉಪಯೋಗಿಸಿಕೊಳ್ಳಲು ಎಲ್ಲ ವಿಧವಾದ ನೆರವನ್ನೂ ನಡೆಸುತ್ತಿರುವುದಲ್ಲದೆ ಇಂಡಿಯನ್ ಆರ್ಕೈವ್ಸ್ ಎಂಬ ನಿಯತಕಾಲಿಕೆಯನ್ನೂ ಪ್ರಕಟಿಸಲಾಗುತ್ತಿದೆ.

ಈ ಕೇಂದ್ರೀಯ ಸಂಸ್ಥೆಯಂತೆಯೇ ಪ್ರಾಂತೀಯ ಸರ್ಕಾರಗಳೂ ಆರ್ಕೈವ್ಸ್ ಸಂಸ್ಥೆಗಳನ್ನು ಸ್ಥಾಪಿಸಿ ದಾಖಲೆಪತ್ರಗಳನ್ನು ಕಾಪಾಡಿಕೊಂಡು ಬರುತ್ತಿವೆ. ಕೆಲವು ವಿಶ್ವವಿದ್ಯಾಲಯಗಳೂ ಸ್ವತಂತ್ರ ಸಂಸ್ಥೆಗಳೂ ಈ ಕೆಲಸವನ್ನು ಇದೀಗ ಮಾಡುತ್ತಿವೆ. ಎಲ್ಲ ಕಾಗದಪತ್ರಗಳೂ ಆರ್ಕೈವ್ಸ್ ಆಗುವುದಿಲ್ಲ. ಅಥವಾ ಎಲ್ಲ ದಾಖಲೆ ಪತ್ರಗಳನ್ನೂ ಯಾವತ್ತಿಗೂ ಸಂರಕ್ಷಿಸಿಡಬೇಕಾದುದಿಲ್ಲ. ಯಾವುವು ಬಳಕೆಯಿಂದ ಹೊರತಾಗಿ, ಮುಂದಣ ಉಪಯುಕ್ತತೆಯ ದೃಷ್ಟಿಯಿಂದ ತಮಗಾಗಲಿ ತಮ್ಮ ಮುಂದಿನವರಿಗಾಗಲಿ ಕಾಪಾಡಲ್ಪಟ್ಟಿವೆಯೋ ಅವುಗಳು

ಮಾತ್ರ ಆರ್ಕೈವ್ಸ್ ಎನಿಸಿಕೊಳ್ಳುತ್ತವೆ. ಗ್ರಂಥಪಾಲರು ಆಗಿಂದಾಗ್ಗೆ ತಮ್ಮಲ್ಲಿರುವ ದಾಖಲೆಪತ್ರಗಳನ್ನು ಪರಿಶೀಲಿಸಿ, ಅನುಪಯುಕ್ತವಾದುವನ್ನು ನಾಶಪಡಿಸಿ, ಉಪಯುಕ್ತವಾದುವನ್ನು ಒಪ್ಪವಾಗಿಸಬೇಕಾಗುತ್ತದೆ.

ದಾಖಲೆ ಪತ್ರಗಳ ವಿಶೇಷ ಗುಣಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಒಂದು ಆಡಳಿತ ಅನುಕೂಲತೆ, ಮತ್ತೊಂದು ಸಂಶೋಧನ ಸಹಾಯಕತೆ. ಆಡಳಿತದ ಅನುಕೂಲತೆಯಲ್ಲಿ ನಾಲ್ಕು ಮುಖ್ಯ ಗುಣಗಳನ್ನು ಗುರುತಿಸಬಹುದು : 1. ಆಡಳಿತ ಯಂತ್ರದಲ್ಲಿ ದಕ್ಷತೆಯನ್ನು ಹೆಚ್ಚಿಸುವುದು. ಸಂಸ್ಥೆ ಹಿಂದೆ ಅನುಸರಿಸಿದ ಕಾರ್ಯನೀತಿಗಳೂ ಕಾರ್ಯಚಟುವಟಿಕೆಗಳೂ ಮುಂದೆ ಅನುಸರಿಸಿ ಮಾಡಬೇಕಾದ ಕಾರ್ಯವ್ಯಾಪ್ತಿಯ ಅರಿವೂ ಉಂಟಾಗಿ ಕಾರ್ಯದಕ್ಷತೆ ಹೆಚ್ಚುತ್ತದೆ. 2. ಯಾವುದಾದರೂ ಆಸ್ತಿಯ ಅಥವಾ ಬೇರಾವುದೋ ತರಹದ ಹಕ್ಕನ್ನು ಸ್ಥಾಪಿಸುವಲ್ಲಿ ದಾಖಲೆಪತ್ರಗಳೇ ಮೂಲಾಧಾರವಾಗುತ್ತವೆ. 3. ಅವುಗಳಲ್ಲಡಗಿರುವ ಅಪೂರ್ವ ವಿಷಯಗಳು ಮತ್ತೆಲ್ಲಿಯೂ ದೊರಕಲಾರವು. ಯಾವುದೇ ವಿಷಯದ ತೀರ್ಮಾನ ಅಥವಾ ಅಂತಿಮ ನಿರ್ಧಾರ ಅಚ್ಚಾಗಿ ಪ್ರಕಟಗೊಂಡರೂ ಅದರ ಹಿನ್ನೆಲೆಯಲ್ಲಿ ನಡೆದ ಪತ್ರವ್ಯವಹಾರ ವಿಚಾರ ವಿನಿಮಯವೆಲ್ಲವೂ ದೊರೆಯುವುದು ದಾಖಲೆ ಪತ್ರಗಳಲ್ಲಿಯೇ. 4. ಅವುಗಳು ಆಡಳಿತ ಯಂತ್ರದ ಮೂಲ ಮತ್ತು ಬೆಳವಣಿಗೆಯನ್ನು ಸಾಧಾರಣವಾಗಿ ತೋರಿಸುತ್ತವೆ. ಈ ವಿಷಯ ಸರಿಯಾಗಿ ತಿಳಿದುಬರಬೇಕಾದರೆ ದಾಖಲೆಪತ್ರಗಳು ಹುಟ್ಟಿ ಬೆಳೆದುಬಂದ ರೀತಿಯಲ್ಲಿಯೇ ಅವನ್ನು ಕಾಪಾಡಿಕೊಂಡು ಬರಬೇಕಾಗುತ್ತದೆ. ಇನ್ನು ಸಂಶೋಧನೆಯ ವಿಚಾರ. ಹಿಂದೆ ದಾಖಲೆಪತ್ರಗಳನ್ನು ವಂಶಪರಂಪರೆ ಮತ್ತು ರಾಜಕೀಯ ಚರಿತ್ರೆಯ ಸಂಶೋಧನೆಗೆ ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದರು. ಈಗ ಇವುಗಳ ವ್ಯಾಪ್ತಿ ವಿಸ್ತಾರಗೊಂಡಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ, ಭೌಗೋಳಿಕ, ಕೈಗಾರಿಕಾದಿ ವಿಷಯಗಳಲ್ಲಿಯೇ ಅಲ್ಲದೆ, ಜನಸಂಖ್ಯೆ, ಯುದ್ಧ, ತಂತ್ರ, ವಿಜ್ಞಾನ–ಮೊದಲಾದ ವಿವಿಧ ವಿಷಯಗಳಲ್ಲಿ ಇವನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಸಂಶೋಧನೆಗಳಿಗೆ ಆಕರವಾಗಿ ಅತ್ಯಂತ ನಿಖರವೂ ಸಾಧಾರಣವೂ ಆದ ವಿಷಯಗಳೂ ದೊರೆಯುವುದು ಈ ಪತ್ರಗಳಲ್ಲೇ.

ಇವುಗಳ ರಕ್ಷಣೆ ಮತ್ತು ಸರಿಯಾದ ಉಪಯೋಗ ಅತ್ಯಂತ ಮುಖ್ಯವಾದುದು. ಹೀಗೆ ವಿವಿಧ ಸಂಸ್ಥೆಗಳಿಂದ ರಕ್ಷಿತವಾದ ದಾಖಲೆಪತ್ರಗಳು, ಆಡಳಿತದಲ್ಲಿಯೇ ಅಲ್ಲದೆ ಸಂಶೋಧನ ಕೇಂದ್ರಗಳಲ್ಲಿಯೂ ಅತ್ಯಂತ ಉಪಯುಕ್ತವಾದ ಸಾಧನಗಳಾಗಿವೆ. (ಎಸ್.ಬಿ.ಎಸ್.)

**7. ಹಸ್ತಪ್ರತಿ ಗ್ರಂಥಾಲಯಗಳು** : ಮನುಷ್ಯ ತನ್ನ ಕೈಯಿಂದ ಪೆನ್ನು, ಪೆನ್ಸಿಲು ಅಥವಾ ಬೇರೆ ಬೇರೆ ಯಾವುದೇ ಉಪಕರಣದ ಸಹಾಯದಿಂದ ಬರೆದಿಟ್ಟ ದಾಖಲೆ ಹಸ್ತಪ್ರತಿ ಎನಿಸುತ್ತದೆ. ಮುದ್ರಣವನ್ನು ಕಂಡುಹಿಡಿಯುವುದಕ್ಕಿಂತಲೂ ಮುಂಚಿನ ಎಲ್ಲ ಲಿಖಿತ ದಾಖಲೆಗಳನ್ನು ಹಸ್ತಪ್ರತಿ ಎಂದು ಕರೆಯುವುದು ಸಂಪ್ರದಾಯ. ಬೆರಳಚ್ಚು ಮಾಡಿದ ಪ್ರತಿ ಹಸ್ತಪ್ರತಿಯಲ್ಲ. ಆದರೆ ವ್ಯವಹಾರದಲ್ಲಿ ಅದರ ವಿಶಿಷ್ಟ ಲಕ್ಷಣದಿಂದಾಗಿ ಅದೂ ಹಸ್ತಪ್ರತಿ ಎನಿಸಿಕೊಳ್ಳುತ್ತದೆ. ಅನೇಕ ಗ್ರಂಥಾಲಯಗಳು ಈಗ ಪ್ರಾಚೀನ ಹಸ್ತಪ್ರತಿಗಳನ್ನು ಮೈಕ್ರೊಫಿಲ್ಮ್, ಫೋಟೋಸ್ಟಾಟ್, ಜೆರಾಕ್ಸ್‌ಪ್ರತಿ ಮೊದಲಾದ ರೂಪಗಳಲ್ಲಿ ಕಾಪಾಡುತ್ತಿವೆ. ಹಸ್ತಪ್ರತಿಯನ್ನು ಬರೆಯಲು ಬಳಸುವ ವಸ್ತುಗಳು ವಿವಿಧವಾಗಿವೆ : ಜೇಡಿಮಣ್ಣಿನ ಹಲಗೆಗಳು, ಓಲೆಗರಿಗಳು, ಪಪೈರಸ್, ಮರ, ಚರ್ಮ ಅಥವಾ ಕಾಗದ ಇತ್ಯಾದಿ. ಹಾಗೆಯೇ ಅವು ಹಲವು ರೂಪುಗಳಲ್ಲಿಯೂ ಇರಬಹುದು– ಸುರಳಿಗಳು, ಬಿಡಿಹಾಳೆಗಳು, ಹೊಲಿದ ಪುಸ್ತಕಗಳು ಇತ್ಯಾದಿ.

ಮುಖ್ಯವಾಗಿ ಹಸ್ತಪ್ರತಿಗಳಲ್ಲಿ ಕಲಾತ್ಮಕ ಹಸ್ತಪ್ರತಿಗಳು, ಸಾಹಿತ್ಯಕ ಹಸ್ತಪ್ರತಿಗಳು, ಪತ್ರಾಗಾರಗಳು (ಆರ್ಕೈವ್ಸ್) ಎಂದು ಮೂರು ಬಗೆ. ಕಲಾತ್ಮಕ ಹಸ್ತಪ್ರತಿ ಅತ್ಯಂತ ಪ್ರಮುಖವಾದ ಮಾದರಿ ಚಿತ್ರಗಳಿಂದ ಕೂಡಿರುತ್ತದೆ. ಅನೇಕ ವೇಳೆ ಬರೆದವರ ರುಜುವಿರುತ್ತದೆ. ಸಾಹಿತ್ಯಕ ಹಸ್ತಪ್ರತಿಗಳಲ್ಲಿ ಕಲಾತ್ಮಕ ಉತ್ಕೃಷ್ಟತೆಗಿಂತ ಮುಖ್ಯವಾಗಿ ಸಾಹಿತ್ಯ ಪಾಠದ ಕಡೆಗೆ ಹೆಚ್ಚು ಪ್ರಾಮುಖ್ಯವಿರುತ್ತದೆ. ಅಲ್ಲಿ ರೂಪಕ್ಕಿಂತ ವಿಷಯ ಮುಖ್ಯ. ಪುಸ್ತಕ ಪ್ರಕಟಣೆ ಮತ್ತು ಮಾರಾಟಗಳು ಹೆಚ್ಚಿದಂತೆ ಸಾಹಿತ್ಯಕ ಹಸ್ತಪ್ರತಿಗಳ ಪ್ರಾಮುಖ್ಯವೂ ಹೆಚ್ಚಿತು. ನೂತನ ಕ್ಷೇತ್ರದ ಮೂಲಕ ಒಬ್ಬ ಲೇಖಕನ ಪ್ರಸಿದ್ಧಿಯನ್ನು ಬೆಳಗಿಸಲು ಅವು ಕಾರಣವಾದವು. ಗ್ರಂಥಸಂಪಾದನ ಕಾರ್ಯದಲ್ಲಂತೂ ಮೂಲ ಪ್ರತಿಗಳಿಗೆ ಬಹಳ ಮಹತ್ತ್ವವಿದೆ. ಡೆಡ್‌ಸೀ ಸ್ಕ್ರಾಲ್ಸ್ ಮೊದಲಾದ ಹಸ್ತಪ್ರತಿಗಳ ಪ್ರಾಮುಖ್ಯ ಎಷ್ಟೆಂಬುದು ಸರ್ವವಿದಿತವಾದ ವಿಷಯ.

ಪತ್ರಾಗಾರಗಳಲ್ಲಿನ ಪ್ರತಿಗಳು ಬೆರಳಚ್ಚು ಅಥವಾ ಸಂಸ್ಕರಿಸಿದ ರೂಪಗಳಲ್ಲಿರಬಹುದು ಅಥವಾ ಮುದ್ರಿತ ವಸ್ತುಗಳೊಂದಿಗೆ ಮಿಶ್ರಿವಾಗಿರಬಹುದು. ಆದರೆ ಸಾಮಾನ್ಯವಾಗಿ ಅವೂ ಹಸ್ತಪ್ರತಿಗಳೇ. ಒಂದು ಪತ್ರಾಗಾರದಲ್ಲಿರುವ ಒಂದು ಬಿಡಿ ಹಸ್ತಪ್ರತಿಯ ಪ್ರಾಮುಖ್ಯ ಅದು ಇಡೀ ಪತ್ರಾಗಾರದೊಂದಿಗೆ ಯಾವ ರೀತಿಯಲ್ಲಿ ಸಂಬಂಧಿಸಿದೆ ಎಂಬುವುದನ್ನವಲಂಬಿಸಿರುತ್ತದೆ. ಒಂದು ಹಸ್ತಪ್ರತಿಯ ಪ್ರಾಮುಖ್ಯ ಅದರ ಅಪರೂಪತೆಯಲ್ಲಿರಬಹುದು, ಒಳಗೊಂಡ ವಿಷಯದಲ್ಲಿರಬಹುದು, ಅದು ಒಳಗೊಂಡಿರುವ ಚಿತ್ರದಲ್ಲಿರಬಹುದು ಅಥವಾ ಐತಿಹಾಸಿಕ ದಾಖಲೆಗಳಲ್ಲಿ ಒಂದು ಕೊಂಡಿಯಾಗಿ ಅದು ಉಪಯೋಗಕ್ಕೆ ಬರುವ ರೀತಿಯಲ್ಲಿರಬಹುದು.

ಹಸ್ತಪ್ರತಿ ಗ್ರಂಥಾಲಯ ಈ ಕೆಲವು ಕನಿಷ್ಠ ಅಗತ್ಯಗಳನ್ನು ಪೂರೈಸುವಂತಿರಬೇಕು: 1. ಇಡೀ ಆವರಣ ಅಗ್ನಿನಿರೋಧಕವಾಗಿರಬೇಕು. 2. ಸಂಶೋಧಕರಿಗೆ ಹಸ್ತಪ್ರತಿಗಳು ಎಟಕುವ ಸ್ಥಳದಲ್ಲಿರಬೇಕು ಅಥವಾ ವ್ಯವಸ್ಥಿತವಾದ ಒಂದು ಕ್ರಮದಲ್ಲಿ ದೊರಕುವಂತಿರಬೇಕು. 3. ಸಿಬ್ಬಂದಿ ವರ್ಗದವರಿಗೆ ತಕ್ಕ ಅರ್ಹತೆಯಿರಬೇಕು. ಇದಕ್ಕಾಗಿ ಕೊಟ್ಟ ವಿಶೇಷ ಪರಿಣತಿ ಅವರಿಗೆ ಇರಬೇಕು. 4. ಹಣಕಾಸಿನ ಪರಿಸ್ಥಿತಿ ಮೇಲಿನ ಮೂರು ಅಗತ್ಯಗಳನ್ನು ಪೂರೈಸುವ ಹಾಗಿರಬೇಕು.

ಹಸ್ತಪ್ರತಿಗ್ರಂಥಾಲಯದ ಮುಖ್ಯ ಕರ್ತವ್ಯ ಸಂಶೋಧಕನಿಗೆ ಅವನ ಸಂಶೋಧನೆಯಲ್ಲಿ ನೆರವುನೀಡುವುದು. ಹಸ್ತಪ್ರತಿಗಳ ಸಂಗ್ರಹಣ ಮತ್ತು ರಕ್ಷಣೆ ಇದಕ್ಕೆ ಪೂರಕವಾದ ಅಂಶಗಳು ಪುನರುಕ್ತಿಯಾಗದಂತೆ, ವ್ಯವಸ್ಥಿತ ಬೆಳೆವಣಿಗೆಗೆ ಸಾಧ್ಯವಾಗುವಂತೆ ಧ್ಯೇಯೋದ್ದೇಶಗಳನ್ನು ಖಚಿತವಾಗಿ ಕಲ್ಪಿಸಿಕೊಳ್ಳಬೇಕಾದದ್ದು ಅಗತ್ಯ.

ಹಸ್ತಪ್ರತಿ ಗ್ರಂಥಾಲಯ ನಾಗರಿಕತೆಯಷ್ಟೇ ಪ್ರಾಚೀನ. ಈಜಿಪ್ಟ್, ಸಿಂಧೂಬಯಲು ಮತ್ತು ಚೀನ ಮೊದಲಾದ ಪ್ರಾಚೀನ ನಾಗರಿಕತೆಯ ಕೇಂದ್ರಗಳೆಲ್ಲವೂ ಈ ಮಾಹಿತಿಗೆ ನಿದರ್ಶನಗಳಾಗಿವೆ. ಈಚಿನ ದಿನಗಳಲ್ಲಿ ಗತಕಾಲದ ಮಾನವ ದಾಖಲೆಗಳನ್ನು ಪ್ರಕಟಿಸುವ ಸಾಧನವಾಗಿ ಹಸ್ತಪ್ರತಿಗಳ ಸಂಗ್ರಹಣಕಾರ್ಯ ಹೆಚ್ಚಿನ ಗಮನವನ್ನು ಸೆಳೆಯುತ್ತಿದೆ. ಹಸ್ತಪ್ರತಿಗಳ ಸಂಸ್ಕರಣಕ್ಕೆ ಆಧುನಿಕ ಸಾಧನಗಳು ಒದಗಿಸಿರುವ ಉಪಕಾರದಿಂದಾಗಿ ಇಂದು ಗ್ರಂಥಾಲಯವೆಂದರೆ ಸಂಶೋಧಕರ ಆಶ್ರಯಸ್ಥಾನವಾಗಿ ಪರಿಣಮಿಸಿದೆ.

ಭಾರತದಲ್ಲಿ ಕೆಲವು ಪ್ರಪಂಚಪ್ರಸಿದ್ಧ ಹಸ್ತಪ್ರತಿ ಗ್ರಂಥಾಲಯಗಳಿವೆ: ಮಹಾರಾಜ ಸರ್ಫೋಜಿ ಸರಸ್ವತಿಮಹಲ್ ಗ್ರಂಥಾಲಯ, ತಂಜಾವೂರು (ಇದರ ವಿವರಗಳು ಪ್ರಸ್ತುತ ಲೇಖನದ ಕೊನೆಯಲ್ಲಿವೆ), ಖುದಾಭಕ್ಷ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯ, ಪಾಟ್ನ ಇತ್ಯಾದಿ. ಇವಲ್ಲದೆ ಏಷ್ಯಾಟಿಕ್ ಸೊಸೈಟಿ, ಪ್ರಾಚ್ಯ ವಿದ್ಯಾಸಂಶೋಧನಾಲಯಗಳು, ಕೆಲವು ಹಿರಿಯ ವಿಶ್ವವಿದ್ಯಾಲಯಗಳು ಸಮೃದ್ಧವಾದ ಹಸ್ತಪ್ರತಿ ಸಂಗ್ರಹಗಳನ್ನು ಕಾಪಾಡಿಟ್ಟಿವೆ. ಹಾಗೆಯೇ ಕೆಲವರು ಪ್ರಮುಖ ವ್ಯಕ್ತಿಗಳು, ಹಿಂದಿನ ರಾಜಮನೆತನಗಳವರು ಹಸ್ತಪ್ರತಿ ಸಂಗ್ರಹಗಳನ್ನು ಹೊಂದಿದ್ದಾರೆ.

ಬುಹಾರ್ ಗ್ರಂಥಾಲಯದ ಕೆಲವು ಹಸ್ತಪ್ರತಿ ಗ್ರಂಥಗಳು

ಹಸ್ತಪ್ರತಿಗಳ ಯೋಗ್ಯತಾನಿರ್ಮಾಣ ಅತ್ಯಂತ ಕಷ್ಟವಾದದ್ದು. ಒಂದು ದಾಖಲೆಯ ಮೂಲ ಸ್ವರೂಪ, ಅದನ್ನು ಬರೆದಿರುವ ತಾರೀಕು ಅಥವಾ ಕಾಲ, ಅದನ್ನು ಬರೆದಿರುವ ಸಾಮಗ್ರಿಗಳ ಬಾಳಿಕೆ, ಅದು ಒಳಗೊಂಡಿರುವ ವಿಷಯ ಇತ್ಯಾದಿ ಅಂಶಗಳ ಮೇಲೆ ಬೆಳಕು ಚೆಲ್ಲುವ ಕಾಗದಪತ್ರಗಳನ್ನು ಗ್ರಂಥಪಾಲ ಆಳವಾಗಿ ಅಧ್ಯಯನ ಮಾಡಬೇಕು. ತನ್ನ ವೃತ್ತಿಯಲ್ಲಿ ಪರಿಣತ ಶಿಕ್ಷಣ ಪಡೆದಿರುವವನು ಮಾತ್ರ ಇಲ್ಲಿ ಜಾಣ್ಮೆಯಿಂದ ನಿರ್ಧಾರ ಕೈಗೊಳ್ಳುವುದು ಸಾಧ್ಯ.

ಹಸ್ತಪ್ರತಿಗಳ ಜೋಡಣೆ ಅಕಾರಾದಿಯಾಗಿರಬಹುದು, ಕಾಲಾನುಕ್ರಮವಾಗಿರಬಹುದು, ವಿಷಯಾನುಗುಣವಾಗಿರಬಹುದು, ದಾನಿಗಳ ಹೆಸರಿಗನುಗುಣವಾಗಿರಬಹುದು ಅಥವಾ ಇವೆಲ್ಲವುಗಳ ಮಿಶ್ರಣವಾಗಿರಲೂಬಹುದು. ಜೋಡಣೆಯ ಸಮಸ್ಯೆಗಳಿಗೆ ಪ್ರಮಾಣಭೂತವಾದ ಪರಿಹಾರಗಳು ಯಾವುವೂ ಇಲ್ಲ. ಸುಸಂಬದ್ಧತೆಯ ಗುಣಗಳು ಇದ್ದೇ ಇವೆಯಾದರೂ ಒಂದು ನಿರ್ದಿಷ್ಟ ಸಂಗ್ರಹಕ್ಕೆ ಅತ್ಯುತ್ತಮ ಪರಿಹಾರ ಯಾವುದು ಎನ್ನುವುದರ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಸುಲಭವಾಗಿ ಸಿಕ್ಕುವಿಕೆ, ಪ್ರಸ್ತುತ ಇರುವ

ವ್ಯವಸ್ಥೆಯ ಉಪಯುಕ್ತತೆ, ಸಂಗ್ರಹದ ಸ್ವಸಂಪೂರ್ಣತೆ, ಅದರ ಉಪಯೋಗದ ತೀವ್ರತೆ ಮುಂತಾದ ಅಂಶಗಳ ಮೇಲೆ ಪರಿಹಾರ ನಿಲ್ಲುತ್ತದೆ. ಹಸ್ತಪ್ರತಿಗಳ ಜೋಪಾನಿಕೆ ಬಹು ಕಷ್ಟದ ಕೆಲಸ. ಸರದಿಯ ಮೇಲೆ ಅವುಗಳ ಎಲೆಗಳಿಗೆ ಕ್ರಿಮಿನಾಶಕ ಎಣ್ಣೆ ಸವರುವುದು, ಕಪಾಟುಗಳಿಗೆ ಪ್ರತಿಗಳಿಗೂ ಆಗಿಂದಾಗ್ಗೆ ಪ್ರಧೂಮನ ಮಾಡುವುದು ಅತ್ಯಗತ್ಯ.

ಸಾಮಾನ್ಯವಾಗಿ ಹಸ್ತಪ್ರತಿ ಗ್ರಂಥಾಲಯದಲ್ಲಿ ವಿವಿಧ ಕ್ಷೇತ್ರಗಳ ಸಂಶೋಧಕರಿಗೆ, ಸರ್ಕಾರಿ ಅಧಿಕಾರಿಗಳಿಗೆ ಅನಿರ್ಬಂಧಿತವಾಗಿ ಹಸ್ತಪ್ರತಿಗಳು ದೊರಕುತ್ತವೆ. ಇದು ಪ್ರಾಚೀನ ಹಸ್ತಪ್ರತಿಗಳ ವಿಷಯದಲ್ಲಿ ಸರಿ. ಆದರೆ ಸಮಕಾಲೀನ ಲೇಖನಗಳಿಗೆ ಬಂದರೆ, ಅನಿರ್ಬಂಧಿತವಾಗಿ ಅವು ದೊರಕುವಂತೆ ಮಾಡುವುದು ಕಷ್ಟವಾಗುತ್ತದೆ. ಈ ಬಗೆಯ ಒದಗಣೆಯ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಹುದಾದ ಮಾರ್ಗವೆಂದರೆ, ವ್ಯಕ್ತಿಗತ ಲೇಖನಗಳನ್ನೆಲ್ಲ ಅವುಗಳ ಬಳಕೆ ಯಾವುದೇ ರೀತಿಯಲ್ಲಿ ಯಾವನೇ ಜೀವಂತ ವ್ಯಕ್ತಿಗಾಗಲಿ ಅಥವಾ ರಾಷ್ಟ್ರದ ಭದ್ರತೆಗಾಗಲಿ ಕೆಡಕು ಮಾಡುವುದಿಲ್ಲ ಎಂಬ ನಂಬಿಕೆ ಬರುವವರೆಗೂ ಅವನ್ನು ಬಳಕೆಗೆ ಕೊಡದಿರುವುದು. ಈಗ ಸಾಮಾನ್ಯವಾಗಿ ಕಳೆದ ಮೂವತ್ತು ವರ್ಷಗಳಿಗೆ ಸಂಬಂಧಪಟ್ಟ ಸಮಕಾಲೀನ ಪತ್ರಗಳನ್ನು ಸಾರ್ವಜನಿಕ ಉಪಯೋಗಕ್ಕೆ ಕೊಡುತ್ತಿಲ್ಲ.

ಹಸ್ತಪ್ರತಿಗಳ ತೀವ್ರತರ ಉಪಯೋಗಕ್ಕೆ ದರ್ಶಕ ಉಪಕರಣಗಳು ಹೆಚ್ಚು ನೆರವಾಗುತ್ತವೆ. ಆದರೂ ಜೆರಾಕ್ಸ್, ಮೈಕ್ರೊಫಿಲ್ಮ್ ಮೊದಲಾದ ಪ್ರತಿಕರಣ ಸಲಕರಣೆಗಳೂ ಅಷ್ಟೇ ಮುಖ್ಯವಾದವು. ಒಂದು ದಾಖಲೆಯನ್ನು ಒಮ್ಮೆ ಪ್ರತಿಮಾಡಿತೆಂದಮೇಲೆ, ಗ್ರಂಥಾಲಯ ಮೂಲತಃ ತನ್ನ ವಸ್ತುವಿನ ಮೇಲೆ ನಿಯಂತ್ರಣವನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ವಿಶೇಷವಾಗಿ ಉದ್ಧರಣಗಳ ಮೇಲೆ, ಸಾಹಿತ್ಯಕ ಹಕ್ಕುಗಳ ಮೇಲೆ, ಸೂಕ್ತವಾಚನದ ಅಗತ್ಯಗಳಿಗೆ ತಕ್ಕಂತೆ ನಿರಂತರವಾದ ನಿಯಂತ್ರಣವನ್ನು ಇಟ್ಟುಕೊಳ್ಳಲು ಅನುವಾಗುವಂಥ ತಂತ್ರಗಳನ್ನು ಯೋಚಿಸಿರಬೇಕು.

ಹಕ್ಕುಗಳ ಬಗೆಗೆ ಹೇಳುವುದಾದರೆ, ಒಂದು ಹಸ್ತಪ್ರತಿ ಗ್ರಂಥಾಲಯ ಹಕ್ಕುಗಳನ್ನು ಪರಿಹರಿಸುವ ಅಥವಾ ಅನುಮತಿ ಕೊಡುವ ಹೊಣೆಗಾರಿಕೆಯನ್ನು ಪಡೆದುಕೊಳ್ಳಲಾರದು. ಅದು ಬಳಕೆದಾರನದೇ ಸಂಪೂರ್ಣ ಹೊಣೆಗಾರಿಕೆ. ಆದರೆ ಅವನಿಗೆ ಅವನ ಬಾಧ್ಯತೆಗಳ ಬಗೆಗೆ ಅರಿವು ಮೂಡಿಸಬೇಕು.

ಒಂದು ಹಸ್ತಪ್ರತಿ ಗ್ರಂಥಾಲಯದ ಸಂಗ್ರಹಗಳು ವಿದ್ವಾಂಸರಿಗೆ ತುಂಬ ಉಪಯೋಗ ವಾಗಬೇಕಾದರೆ, ಗ್ರಂಥಾಲಯ ಸೂಕ್ತವಾದ ಹುಡುಕು ಸಲಕರಣೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲೇಬೇಕು. ಕ್ಯಾಲೆಂಡರು, ಸಂಪೂರ್ಣವಾದ ನಾಮಸೂಚಿ ಅಥವಾ ವಿಸ್ತೃತ ಪಟ್ಟಿ–ಇವೆಲ್ಲ ಕೆಲವು ಬಗೆಯ ಸಂಗ್ರಹಗಳಿಗೆ ಉಪಯುಕ್ತವಾಗುವ ಹುಡುಕು ಸಲಕರಣೆಗಳು. ಸಾಮಾನ್ಯವಾಗಿ ಅತ್ಯುತ್ತಮ ಹಸ್ತಪ್ರತಿ ಗ್ರಂಥಾಲಯಗಳಲ್ಲಿ ಒಂದು ಸಾಮಾನ್ಯ ಸೂಚಿಪಟ್ಟಿ, ಜೊತೆಗೆ ಕಾಲಾನುಕ್ರಮ ಸೂಚಿ ಇರುತ್ತವೆ. ಇವುಗಳಿಗೆ ವಿಸ್ತೃತಸೂಚಿಗಳು ಮತ್ತು ಕಪಾಟು ಪಟ್ಟಿಗಳು ಸೇರಿದರೆ ಆ ಸಂಗ್ರಹಗಳ ಬಗೆಗೆ ಅತ್ಯುತ್ತಮ ನಿಯಂತ್ರಣವಿದ್ದಂತಾಗುತ್ತದೆ. ಆಗ ಹುಡುಕು ಸಲಕರಣೆಗಳು ಅತ್ಯುತ್ತಮ ರೀತಿಯದಾಗುತ್ತವೆ. ಸಾಮಾನ್ಯ ಸೂಚಿಪಟ್ಟಿಯನ್ನು ತಯಾರಿಸುವುದಕ್ಕೆ ಅತ್ಯಧಿಕ ಶ್ರಮ ಸಿಬ್ಬಂದಿ, ಕಾಲ ಮತ್ತು ಜಾಣ್ಮೆಗಳನ್ನು ವ್ಯಯಮಾಡಬೇಕು.

ಮೇಲೆ ಸೂಚಿಸಿದ ಪರಿಣತಸೇವೆ ಸಲ್ಲಿಸಲು ಹಸ್ತಪ್ರತಿ ಗ್ರಂಥಾಲಯದಲ್ಲಿ ಅರ್ಹತೆಯಿರುವ ಸಾಕಷ್ಟು ಜನ ಇರುವ ಸಿಬ್ಬಂದಿವರ್ಗಬೇಕೆಂಬುದು ಸ್ಪಷ್ಟವಾಗಿಯೇ ಇದೆ. ಹೇಗೂ ವರ್ಗೀಕರಣ, ಶುದ್ಧೀಕರಣ ಮತ್ತು ಜೋಡಣೆ–ಈ ದಿನನಿತ್ಯದ ಕೆಲಸಗಳನ್ನು ಸ್ವಲ್ಪವೇ ತರಬೇತಿ ಮತ್ತು ಅನುಭವಗಳಿಂದ ನಿರ್ವಹಿಸಬಹುದು.

ಆಧುನಿಕ ಹಸ್ತಪ್ರತಿ ಗ್ರಂಥಾಲಯ ಇನ್ನೊಂದು ಮುಖ್ಯ ಕರ್ತವ್ಯವನ್ನು ನಿರ್ವಹಿಸುತ್ತದೆ, ಅದು ಪ್ರಕಟಣೆ. ಸುವ್ಯವಸ್ಥಿತವಾದ ಪ್ರಕಟಣಾ ಕಾರ್ಯಕ್ರಮ ನಾಲ್ಕು ಕರ್ತವ್ಯಗಳನ್ನು ನೆರವೇರಿಸುತ್ತದೆ. ಮೊದಲನೆಯದಾಗಿ ಎಲ್ಲಿಗೇ ಆಗಲಿ ಒಯ್ದು ಉಪಯೋಗಿಸಬಹುದಾದ ವಿವರಗಳನ್ನು ಒದಗಿಸುತ್ತದೆ. ಎರಡನೆಯದಾಗಿ ಮೂಲಮಾತೃಕೆಗಳನ್ನು ಪ್ರಕಟಿಸುವುದರ ಮೂಲಕ ವ್ಯಾಪಕವಾಗಿ ಅವು ವಿದ್ವಾಂಸರಿಗೂ ಸಾಮಾನ್ಯ ಜನರಿಗೂ ದೊರಕುವಂತೆ ಮಾಡುತ್ತದೆ. ಮೂರನೆಯದಾಗಿ ತತ್ತ್ವಗಳು, ಕಾರ್ಯ ವಿಧಾನಗಳು ಮುಂತಾದುವುಗಳ ಮೇಲೆ ಬೆಳಕು ಚೆಲ್ಲುವಂಥ ಪ್ರಕಟಣೆಗಳ ಮೂಲಕ ಆ ನಿಟ್ಟಿನಲ್ಲಿ ಇತರ ಪತ್ರಾಗಾರಗಳಿಗೆ ಅಥವಾ ಗ್ರಂಥಾಲಯಗಳಿಗೆ ಶಿಕ್ಷಣ ಕೊಡುತ್ತದೆ. ಹಾಗೆಯೇ ಹೊಸಹೊಸದಾಗಿ ಬರುವ ಸಿಬ್ಬಂದಿ ವರ್ಗಕ್ಕೆ ಆ ವಿವರಗಳನ್ನು ಒದಗಿಸಿದಂತಾಗುತ್ತದೆ. ನಾಲ್ಕನೆಯದಾಗಿ ದಾನಿಗಳು, ದಾನ ಮಾಡಲಿಚ್ಛಿಸುವವರು ಮತ್ತು ಬಳಕೆದಾರರು– ಎಲ್ಲರಲ್ಲಿಯೂ ಸಮಾನವಾಗಿ ಸದ್ಭಾವನೆಯನ್ನು ಹರಡುತ್ತದೆ. ಹಾಗಾಗಿ ಪ್ರಕಟಣೆಗಳು ಮಹತ್ತ್ವದ ಸಾರ್ವಜನಿಕ ಸಂಪರ್ಕದ ಕರ್ತವ್ಯವನ್ನು ನಿರ್ವಹಿಸುತ್ತವೆ. (ಎಚ್.ಎ.ಕೆ.)

**ತಂಜಾವೂರು ಮಹಾರಾಜ ಸರ್ಫೋಜಿ ಸರಸ್ವತಿ ಮಹಲ್ ಗ್ರಂಥಾಲಯ:** ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ನೆಲೆವೀಡಾದ ತಂಜಾವೂರಿನಲ್ಲಿ ಈ ಗ್ರಂಥಾಲಯವಿದೆ. ಇದಕ್ಕೆ ಒಂದು ರೂಪ ಬಂದದ್ದು 16ನೆಯ ಶತಮಾನದಲ್ಲಿ. ತೆಲುಗು ನಾಯಕ ಅರಸರ ಆಳ್ವಿಕೆಯಲ್ಲಿ ಎಂದು ಹೇಳುತ್ತಾರೆ. 9ನೆಯ ಶತಮಾನದಿಂದಲೇ ತಾಡೋಲೆಯ ಹಸ್ತಪ್ರತಿಗಳನ್ನು ಸಂಗ್ರಹಿಸುವ ಕೆಲಸ ಇಲ್ಲಿ ಪ್ರಾರಂಭವಾಗಿತ್ತು. 19ನೆಯ ಶತಮಾನದಲ್ಲಿ ಮರಾಠರು ಸಂಸ್ಕೃತದ ಹಸ್ತಪ್ರತಿಗಳನ್ನು ಕಲೆಹಾಕಿದರು. ಇವರಲ್ಲಿ ಮಹಾರಾಜ ಸರ್ಫೋಜಿ ಪ್ರಮುಖ. ಈತ 1820–30ರ ಅಂತರದಲ್ಲಿ ವಾರಾಣಸಿಗೆ ಭೇಟಿಯಿತ್ತು ಹಸ್ತಪ್ರತಿಗಳನ್ನು ಸಂಗ್ರಹ ಮಾಡಿದ. ಅನಂತರ ತನ್ನಲ್ಲಿಯ ಗ್ರಂಥಗಳನ್ನೂ ವರ್ಣಮಯ ಚಿತ್ರಗಳನ್ನೂ ಗ್ರಂಥಾಲಯಕ್ಕೆ ದಾನ ಮಾಡಿದ. ಅಲ್ಲದೆ ತನ್ನ ಜೀವವನ್ನೇ ಆ ಗ್ರಂಥಾಲಯದ ಬೆಳವಣಿಗೆಗೆ ಮುಡಿಪಿಟ್ಟ. ಈ ಕಾರಣದಿಂದಾಗಿ ಗ್ರಂಥಾಲಯವನ್ನು ಆತನ ಹೆಸರಿನಿಂದಲೇ ಕರೆಯಲಾಗಿದೆ.



ಗ್ರಂಥಾಲಯ, ಸರಸ್ವತಿಮಹಲ್, ತಂಜಾವೂರು

ತಂಜಾವೂರಿನಲ್ಲಿ ಚೋಳರು, ನಾಯಕರು, ಮರಾಠರು ಹೀಗೆ ಮೂರು ರಾಜಮನೆತನದವರು ಆಳಿದರು. ಈ ಮೂರೂ ರಾಜವಂಶಗಳ ಬೌದ್ಧಿಕ ಸಾಧನೆಯ ಪ್ರತೀಕ ಈ ಗ್ರಂಥಾಲಯ. ಹಲವು ಭಾಷಾ ಲಿಪಿಗಳಲ್ಲಿ ಬರೆದಿಟ್ಟಿರುವ ಇಲ್ಲಿನ ಹಸ್ತಪ್ರತಿಗಳಿಂದ ಅಂದಿನ ಸಾಂಸ್ಕೃತಿಕ ಭಾವೈಕ್ಯದ ಕಲ್ಪನೆ ಎಷ್ಟಿತ್ತೆಂಬುದು ದೃಢವಾಗುತ್ತದೆ. ಈ ಗ್ರಂಥಾಲಯದಲ್ಲಿ ತೆಲುಗು ಅಥವಾ ದೇವನಾಗರಿ ಲಿಪಿಯಲ್ಲಿ ಬರೆದಿರುವ ತಮಿಳು ಕೃತಿಗಳು ಹಾಗೂ ತೆಲುಗು ಲಿಪಿಯ ಮರಾಠಿ ಗ್ರಂಥಗಳು ಇವೆ. ಇದೇ ಇದರ ವೈಶಿಷ್ಟ್ಯ.

ಈ ಗ್ರಂಥಾಲಯ ಬಹುಶಃ ಪ್ರಪಂಚದಲ್ಲಿಯೇ ಅತಿ ದೊಡ್ಡದು. ಬೇರೆ ಬೇರೆ ಪಾಠಕ್ರಮಗಳ ಸಂಸ್ಕೃತದ ಎಲ್ಲ ಕೃತಿಗಳೂ ಕೆಲವು ಹೊಸ ಕೃತಿಗಳೂ ಉತ್ತಮ ಹಸ್ತಪ್ರತಿಗಳೂ ಇಲ್ಲಿವೆ ಎಂದು ಎ.ಸಿ. ಬರ್ನೆಲ್ ಎಂಬ ವಿದ್ವಾಂಸ ಹೇಳಿದ್ದಾನೆ. ಇನ್ನೊಬ್ಬ ಪ್ರಾಚ್ಯ ವಿದ್ವಾಂಸ ಬ್ಯೂಲರ್ ಅತ್ಯುಪಯುಕ್ತವೂ ಪ್ರಾಚೀನವೂ ಅಪೂರ್ವವೂ ಹೆಚ್ಚು ಹಣತೆತ್ತು ಕಷ್ಟದಿಂದ ಸಂಗ್ರಹಿಸಲು ಮಾತ್ರ ಸಾಧ್ಯವಾಗುವಂಥ ಕೃತಿಗಳೂ ಈ ಗ್ರಂಥಾಲಯದಲ್ಲಿವೆ ಎಂದಿದ್ದಾನೆ.

19ನೆಯ ಶತಮಾನದ ಕೊನೆಯ ದಶಕದ ಅನಂತರದ ವರ್ಷಗಳಲ್ಲಿ ಈ ಗ್ರಂಥಾಲಯಕ್ಕೆ ಜಂಬುನಾಥ ಭಟ್, ಲಾಂಡಗಾಯ್, ಪತಂಗ ಅವಧೂತಸ್ವಾಮಿ, ಕಾಗಲಕಾರ್, ಧವಳೀಕರ್ ಮತ್ತು ಎಸ್. ಸುಬ್ರಹ್ಮಣ್ಯಶಾಸ್ತ್ರಿ ಇವರ ಅಪೂರ್ವ ಹಸ್ತಪ್ರತಿ ಸಂಗ್ರಹಗಳನ್ನು ಸೇರಿಸಲಾಗಿದೆ.

ಇಲ್ಲಿ 40,000 ಕ್ಕೂ ಹೆಚ್ಚು ಬೇರೆ ಬೇರೆ ಭಾಷೆಗಳ ಹಸ್ತಪ್ರತಿಗಳ ವಿಶೇಷ ಸಂಗ್ರಹವಿದೆ. ಅವು ಈ ರೀತಿ ಇವೆ: ಸಂಸ್ಕೃತ 30,000, ಮರಾಠಿ 5,000, ತೆಲುಗು 2,500, ತಮಿಳು 2,000, ಇತರ ಭಾಷೆಗಳು 500. ಅಲ್ಲದೆ 4,000ಕ್ಕೂ ಹೆಚ್ಚು ಪ್ರಾಚೀನ ಇಂಗ್ಲಿಷ್ ಪುಸ್ತಕಗಳು, ಗ್ರೀಕ್, ಫ್ರೆಂಚ್, ಇಟಾಲಿಯನ್ ಭಾಷೆಗಳಿಗೆ ಸೇರಿದ ಸುಮಾರು 500 ಪುಸ್ತಕಗಳು ಇಲ್ಲಿವೆ. ಇವೆಲ್ಲವನ್ನೂ ರಾಜ ಸರ್ಫೋಜಿ ಕೊಂಡು ಸಂಗ್ರಹಿಸಿದ. ಪ್ರತಿಯೊಂದು ಪುಸ್ತಕದಲ್ಲಿಯೂ ಆತನ ಸಹಿ ಇದೆಯಲ್ಲದೆ ಕೊಂಡು ತಂದ ವರ್ಷಗಳನ್ನು ನಮೂದಿಸಲಾಗಿದೆ.

ಇತಿಹಾಸದ ಮೇಲೆ ಬೆಳಕು ಬೀರುವ ಕೆಲವು ಅಪೂರ್ವ ಹಸ್ತಪ್ರತಿಗಳು ಇಲ್ಲಿವೆ. ಉದಾಹರಣೆಗಾಗಿ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಚತುರ ದಾಮೋದರನ ಸಂಗೀತ ದರ್ಪಣ, ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ತುಳಜರಾಜ, ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಶೃಂಗಾರ ರಸಂಬಂಧ ಪ್ರದೀಪಿಕಾ, ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದ ಸಾಯಣಾಚಾರ್ಯರ ಜಾತಕಾರ್ಣವ ಹಾಗೂ ಭಾಸ್ಕರಾಚಾರ್ಯನ ಲೀಲಾವತಿ – ಇವನ್ನು ಹೆಸರಿಸಬಹುದು. ಇವಲ್ಲದೆ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಸೌರಭೇಂದ್ರ ವೈದ್ಯ ರತ್ನಾವಳಿ (3,000 ಸಿದ್ಧೌಷಧಿಗಳ ಉಲ್ಲೇಖವಿದೆ), ಪ್ರ.ಶ.ಪೂ. 300 ವರ್ಷಗಳಿಗೂ ಹಿಂದೆ ಆತ್ರೇಯನ ಶಿಷ್ಯನಾದ ಬೇಳಕೃತ ಬೇಳಸಂಹಿತಾ (ಈ ಗ್ರಂಥಾಲಯದಲ್ಲಿ ಮಾತ್ರ ಈ ಹಸ್ತಪ್ರತಿಯನ್ನು ಕಾಣಬಹುದಾಗಿದೆ), ಮರಾಠಿಯಲ್ಲಿರುವ ಸಿದ್ಧ ನಾಗಾರ್ಜುನೀಯ ಹಾಗೂ ರಸಿಕರಂಜಿನಿ– ಇವೂ ಇಲ್ಲಿವೆ. ಪಥ್ಯಪುಸ್ತಕದ ಮಾಲಿಕೆಗೆ ಸೇರಿದ ಅಷ್ಟಾಂಗಹೃದಯ, ಆಹಾರ

ವಿಷಯವನ್ನೊಳಗೊಂಡ ಅನ್ನಪಾನವಿಧಿ, ಮಕ್ಕಳ ಬೇನೆಯ ಮೇಲೆ ಬರೆದ ಬಾಲತಂತ್ರ, ವೈದ್ಯ ನಿಘಂಟು – ಇವು ಇಲ್ಲಿವೆ. ಭಾರತ ಸರ್ಕಾರದಿಂದ ನೇಮಿಸಲ್ಪಟ್ಟ ಸಂಶೋಧಕ ತಂಡವೊಂದು ಇಲ್ಲಿ ವೈದ್ಯಶಾಸ್ತ್ರದಲ್ಲಿಯ 3,000 ಹಸ್ತಪ್ರತಿಗಳ ಸಂಶೋಧನೆ ನಡೆಯಿಸಿದೆ.

ಇಲ್ಲಿರುವ ಚಿತ್ರ ಹಾಗೂ ಪಟಗಳ ಸಂಗ್ರಹದಲ್ಲಿ ಮಾನವನ ಮುಖಗಳು ಹಾಗೂ ಕೆಲವೊಂದು ಪ್ರಾಣಿ–ಪಕ್ಷಿಗಳ ಮುಖಗಳಲ್ಲಿರುವ ಸಾಮ್ಯವನ್ನು ಎತ್ತಿತೋರಿಸುವ ಚಿತ್ರಗಳು, ಚೀನದೇಶದಲ್ಲಿ ಪ್ರಚಲಿತವಿದ್ದ ಕ್ರೂರಶಿಕ್ಷೆಯನ್ನು ತೋರಿಸುವ ಪಟಗಳು, ಗಿಡಮೂಲಿಕೆಗಳ ನೈಜರೂಪಗಳ ಚಿತ್ರಗಳು ಇವೆ. ಇಲ್ಲಿರುವ ಅತಿಸೂಕ್ಷ್ಮವೂ ಅಂದವೂ ಆದ ಕೈಬರೆಹಗಳೂ ಚಿಕ್ಕ ವರ್ಣಮಯ ಚಿತ್ರಗಳೂ ಪುರಾಣದ ಚಿತ್ರಗಳೂ ಬಹು ಹಳೆಯವಾದರೂ ಹೊಚ್ಚಹೊಸವೆನ್ನುವಂತಿವೆ.

ಅರಮನೆಗೆ ಸಂಬಂಧಿಸಿದ ಸ್ವತ್ತುಗಳ ಹಕ್ಕುಬಾಧ್ಯತೆ ಬಗೆಗೆ ವಾದವಿವಾದಗಳಿದ್ದುದರಿಂದ ಈ ಗ್ರಂಥಾಲಯವನ್ನು 1918 ರಲ್ಲಿ ಒಂದು ಸಾರ್ವಜನಿಕ ನ್ಯಾಸವಾಗಿ ಪರಿವರ್ತಿಸಲಾಯಿತು. ಈ ಸಂಬಂಧವಾಗಿ ಸರ್ಕಾರ 5 ಅಕ್ಟೋಬರ್ 1918 ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಜಿಲ್ಲಾ ಕಲೆಕ್ಟರು, ಜಿಲ್ಲಾ ನ್ಯಾಯಾಧೀಶರು, ರಾಜ ಮನೆತನಕ್ಕೆ ಸೇರಿದ ಒಬ್ಬರು, ಇಬ್ಬರು ಖಾಸಗಿ ಸದಸ್ಯರು – ಹೀಗೆ ಐವರ ಸಮಿತಿಯನ್ನು ಏರ್ಪಡಿಸಿತು. ಇವರಲ್ಲಿ ಒಬ್ಬರನ್ನು ರಾಜ್ಯಸರ್ಕಾರ ನಾಮಕರಣ ಮಾಡುತ್ತದೆ. ಆತನೇ ಗ್ರಂಥಾಲಯದ ಗೌರವಕಾರ್ಯದರ್ಶಿ ಆಗಿರುತ್ತಾನೆ. ಇನ್ನೊಬ್ಬನನ್ನು ಸಮಿತಿಯ ಸದಸ್ಯರು ನಾಮಕರಣ ಮಾಡುತ್ತಾರೆ.

ಈ ಗ್ರಂಥಾಲಯದಲ್ಲಿರುವ ಅಪಾರಸಂಖ್ಯೆಯ ಹಸ್ತಪ್ರತಿಗಳ ಸೂಚೀಕರಣವನ್ನು 1884ರಲ್ಲಿ ಜರ್ಮನ್ ವಿದ್ವಾಂಸ ಬರ್ನೆಲ್ ಪ್ರಾರಂಭಿಸಿದ. ಗ್ರಂಥಾಲಯದಲ್ಲಿನ ಸಂಸ್ಕೃತಿ ಕೃತಿಗಳ ಮೊದಲನೆಯ ಸೂಚಿಯನ್ನು ಲಂಡನ್ ಮ್ಯೂಸಿಯಂ ಪ್ರಕಟಿಸಿತು. ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾಗಿದ್ದ ಪಿ.ಪಿ.ಸುಬ್ರಹ್ಮಣ್ಯಶಾಸ್ತ್ರಿಗಳು 1925ರಿಂದ 1930ರ ಅವಧಿಯಲ್ಲಿ ಕೆಲವು ಪಂಡಿತರ ನೆರವಿನಿಂದ ಗ್ರಂಥಾಲಯದ ಸಂಸ್ಕೃತ ಹಸ್ತಪ್ರತಿಗಳ 19 ಸಂಪುಟಗಳ ವರ್ಣಾನಾತ್ಮಕ ಸೂಚಿಯನ್ನು ಪ್ರಕಟಿಸಿದರು. 20ನೆಯ ಸಂಪುಟ 1952ರಲ್ಲಿ ಪ್ರಕಟವಾಯಿತು. 1925–26ರ ಅವಧಿಯಲ್ಲಿ ತಮಿಳು ಹಸ್ತಪ್ರತಿಗಳ ಮೂರು ಸಂಪುಟಗಳು ಹೊರಬಿದ್ದುವು. ನಾಲ್ಕನೆಯ ಹಾಗೂ ಸಂಪೂರ್ಣವಾಗಿ ವೈದ್ಯಕೀಯ ಹಸ್ತಪ್ರತಿಗಳಿಗೇ ಸಂಬಂಧಿಸಿದ ಸಂಪುಟ 1965ರಲ್ಲಿ ಬಂತು. ಅದೇ ರೀತಿ ಮರಾಠೀ ಭಾಷೆಯ ಕೃತಿಗಳ ನಾಲ್ಕು ಸಂಪುಟಗಳು ಮುದ್ರಿತವಾಗಿವೆ. ಮೊದಲನೆಯದು 1929ರಲ್ಲೂ ನಾಲ್ಕನೆಯ ಹಾಗೂ ಐದನೆಯ ಸಂಪುಟ 1963ರಲ್ಲೂ ಬಂದಿವೆ. ಈ ಗ್ರಂಥಾಲಯದಲ್ಲಿನ ತೆಲುಗು ಹಸ್ತಪ್ರತಿಗಳ ವರ್ಣಾನಾತ್ಮಕ ಗ್ರಂಥಸೂಚಿಯ ಮೊದಲನೆಯ ಕಿರು ಸಂಪುಟವನ್ನು 1933ರಲ್ಲಿ ಆಂಧ್ರ ವಿಶ್ವವಿದ್ಯಾಲಯ ಪ್ರಕಟಿಸಿತು. 1965ರಲ್ಲಿ ಎರಡನೆಯ ಸಂಪುಟ ಬಂತು. ಗ್ರಂಥಾಲಯಕ್ಕೆ ಹೊಸಹೊಸದಾಗಿ ಸೇರ್ಪಡೆಯಾಗುತ್ತಿರುವ ಗ್ರಂಥಗಳ ಸೂಚೀಕರಣ ಕಾರ್ಯ ಮುಂದುವರಿಯುತ್ತಲೇ ಇದೆ. ಹಸ್ತಪ್ರತಿಗಳ ಪುರವಣಿಸಂಪುಟಗಳನ್ನೂ ಗ್ರಂಥಾಲಯ ಪ್ರಕಟಿಸಿದೆ.

ಸಂಶೋಧನೆಗೆ ಅನುಕೂಲವಾಗುವಂತೆ ಹಲವು ಭಾಷೆಗಳಲ್ಲಿ ಹಸ್ತಪ್ರತಿಗಳ ಸೂಚಿಯ 30 ವರ್ಣಾನಾತ್ಮಕ ಸಂಪುಟಗಳನ್ನು ಇದುವರೆಗೆ ಪ್ರಕಟಿಸಲಾಗಿದೆ. ವಾಚಕರ ಸೌಲಭ್ಯಕ್ಕಾಗಿ, ಬೇರೆ ಎಲ್ಲೂ ಪ್ರಕಟವಾಗಿರದ 160 ಅತ್ಯಂತ ಮುಖ್ಯ ಕೃತಿಗಳನ್ನು ಮೊದಲ ಬಾರಿ ಮುದ್ರಿಸಿ ಪ್ರಕಟಿಸಲಾಗಿದೆ. ಒಂದು ಸಾಹಿತ್ಯಕ ಪತ್ರಿಕೆಯನ್ನು ವರ್ಷದಲ್ಲಿ ಮೂರು ಸಾರಿ ಹೊರಡಿಸಲಾಗುತ್ತದೆ. ಚಿಕ್ಕ ಅಪ್ರಕಟಿತ ಹಸ್ತಪ್ರತಿಗಳನ್ನು ಈ ಪತ್ರಿಕೆಯ ಮೂಲಕ ಪ್ರಕಟಿಸಲಾಗುತ್ತದೆ.

ಅಪಾರ ಸಂಖ್ಯೆಯಲ್ಲಿದ್ದು ರಾಜ ದಾಖಲೆಗಳು ಎಂದು ಕರೆಸಿಕೊಳ್ಳುವ, ಮೋಡಿಲಿಪಿಯಲ್ಲಿದ್ದ ಬಹುಮಟ್ಟಿನ ದಾಖಲೆಗಳನ್ನು ಮರಾಠಿಗೆ ಲಿಪ್ಯಂತರಮಾಡಿ, ಅವುಗಳಲ್ಲಿ ಅತ್ಯಂತ ಮುಖ್ಯವಾದವನ್ನು ತಮಿಳಿಗೆ ಭಾಷಾಂತರಿಸಲಾಗಿದೆ. ರಾಜ್ಯಸರ್ಕಾರ ನೀಡುವ ವಿದ್ಯಾರ್ಥಿ ವೇತನದ ನೆರವಿನಿಂದ ಕೆಲವರಿಗೆ ಮೋಡಿ ಲಿಪಿಯನ್ನು ಓದುವುದರಲ್ಲಿ ಮತ್ತು ಲಿಪ್ಯಂತರಗೊಳಿಸುವುದರಲ್ಲಿ ತರಬೇತಿ ಕೊಡಲಾಗುತ್ತಿದೆ.

ವೈದ್ಯಕೀಯ ಸಂಶೋಧನ ವಿಭಾಗ ಅಪೂರ್ವ ವೈದ್ಯಕೀಯ ಕೃತಿಗಳ 16 ಸಂಪುಟಗಳನ್ನು ಇಂಗ್ಲಿಷ್, ಹಿಂದಿ ಮತ್ತು ಮರಾಠಿಗಳಿಗೆ ಭಾಷಾಂತರ ಮಾಡಿ ಪ್ರಕಟಣೆಗೆ ಸಿದ್ಧಪಡಿಸಿದೆ. ದಕ್ಷಿಣದ ವೈದ್ಯಕೀಯ ಕೃತಿಗಳ ಸಂಪತ್ತು ಭಾರತದ ಇತರ ಭಾಗಗಳಿಗೆ ದೊರಕುವಂತಾಗಲೆಂಬುದೇ ಇದರ ಉದ್ದೇಶ.

ಭಾರತದ ಹಾಗೂ ವಿದೇಶದ ವಿದ್ವಾಂಸರಿಗೆ, ತುಲನೆ ಮತ್ತು ಸಂಪಾದನೆಗಳಿಗಾಗಿ, ಸಂಸ್ಕೃತ, ತಮಿಳು, ತೆಲುಗು ಮತ್ತು ಮರಾಠಿ ಹಸ್ತಪ್ರತಿಗಳನ್ನು ಸ್ವಲ್ಪ ಖರ್ಚಿನಲ್ಲಿ ಪ್ರತಿಮಾಡಿಸಿಕೊಡುವ ಏರ್ಪಾಟಿದೆ.

ಗ್ರಂಥಾಲಯದಲ್ಲಿ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಅಪೇಕ್ಷಿಸುವ ವಿದ್ವಾಂಸರಿಗೆ, ಸಂಶೋಧಕರಿಗೆ ಉಚಿತವಾಗಿ ಹಸ್ತಪ್ರತಿಗಳನ್ನು ಒದಗಿಸಲಾಗುತ್ತದೆ.

ಈ ಗ್ರಂಥಾಲಯವನ್ನು ರಾಷ್ಟ್ರೀಯ ಪ್ರಮುಖ ಸಂಸ್ಥೆಯನ್ನಾಗಿ ಮೇಲುದರ್ಜೆಗೇರಿಸಬೇಕೆಂಬ ಸಲಹೆಯೊಂದು ಭಾರತ ಸರ್ಕಾರದ ಪರಿಶೀಲನೆಯಲ್ಲಿದೆ. **(ಎಚ್.ಎ.ಕೆ.; ಎಲ್.ವಿ.ಜಿ.)**

**5. ವೃತ್ತಪತ್ರಿಕಾ ಗ್ರಂಥಾಲಯಗಳು :** ಸಂಪಾದಕ ವರ್ಗಕ್ಕೆ ಅತ್ಯಗತ್ಯವೆನಿಸುವ ಒಂದು ನಿರ್ದಿಷ್ಟ ವಿಷಯ ಅಥವಾ ಘಟನೆಯನ್ನು ಕುರಿತು ಅತ್ಯಲ್ಪ ಕಾಲಾವಕಾಶದಲ್ಲಿ ನಿಖರವಾದ ಕರಾರುವಾಕ್ಕಾದ ವಿಷಯ ವಿವರಣೆ ಒದಗಿಸುವುದೇ ಇಂಥ ಗ್ರಂಥಾಲಯದ ಗುರಿ. ಸುದ್ದಿ ಸಮಾಚಾರಗಳ ಸಂಪಾದನೆ ಮತ್ತು ವರ್ಗೀಕರಣ, ಛಾಯಾಚಿತ್ರಗಳ, ರೇಖಾಚಿತ್ರಗಳ ಸಂಪಾದನೆ ಮತ್ತು ವರ್ಗೀಕರಣ – ಈ ಕೆಲಸಗಳೂ ಕ್ರಮಬದ್ಧವಾಗಿ ಇಲ್ಲಿ ನಡೆದಿರುತ್ತದೆ. ಸಂಪಾದಕೀಯವನ್ನು ಬರೆಯುವಾಗ ಆಗಲಿ, ಒಂದು ನಿರ್ದಿಷ್ಟ ವಿಷಯವನ್ನು ಕುರಿತು ನಿರೂಪಣಾ ಲೇಖನಗಳನ್ನು ಬರೆಯುವಾಗ ಆಗಲಿ, ನಿರೂಪಣೆಗೆ ತಕ್ಕಂತೆ ಪಡಿಯಚ್ಚುಗಳನ್ನು ಅಳವಡಿಸುವಾಗ ಆಗಲಿ, ವೃತ್ತಪತ್ರಿಕಾ ಗ್ರಂಥಾಲಯ ಬಹಳ ನೆರವಿಗೆ ಬರುತ್ತದೆ. ಹೀಗಾಗಿ ಇಂಥ ಗ್ರಂಥಾಲಯದ ಗ್ರಂಥಪಾಲನ ಹಾಗೂ ಸಿಬ್ಬಂದಿಗಳ ಕಾರ್ಯಜವಾಬ್ದಾರಿ ವಾಸ್ತವವಾಗಿ ಬಹಳ ಹೆಚ್ಚಿನದು.

ಸಂಗ್ರಹಿತವಾಗುವ ವಸ್ತುವಿನ ದೃಷ್ಟಿಯಿಂದ ಪತ್ರಿಕಾ ಗ್ರಂಥಾಲಯಕ್ಕೂ ಸಾಮಾನ್ಯ ಗ್ರಂಥಾಲಯಕ್ಕೂ ವ್ಯತ್ಯಾಸಗಳಿವೆ. ವೃತ್ತಪತ್ರಿಕಾ ಗ್ರಂಥಾಲಯದಲ್ಲಿನ ಸಾಮಗ್ರಿಯನ್ನು 5 ವರ್ಗಗಳಾಗಿ ವಿಂಗಡಿಸಬಹುದು. 1. ವೃತ್ತಪತ್ರಿಕೆಯಿಂದ ಕತ್ತರಿಸಿದ ತುಣುಕುಗಳು, 2. ಸಂದರ್ಭ ಮತ್ತು ಸಾಮಾನ್ಯ ಗ್ರಂಥಗಳು, 3. ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳು, 4. ಸರ್ಕಾರೀ ಪ್ರಕಟಣೆಗಳು ಮತ್ತು ಕರಪತ್ರಗಳು, 5. ಛಾಯಾಚಿತ್ರಗಳು, ಪಡಿಯಚ್ಚು ಇತ್ಯಾದಿ.

**1. ಪತ್ರಿಕೆಯ ತುಣುಕುಗಳು :** ಮೂರು ಮೂಲಗಳಿಂದ ಇವನ್ನು ಸಂಗ್ರಹಿಸಲಾಗುತ್ತದೆ. ಸ್ವಂತ ವೃತ್ತಪತ್ರಿಕೆ, ಇತರ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು. ಸಾಮಾನ್ಯವಾಗಿ ಪ್ರತಿಯೊಂದು ವೃತ್ತಪತ್ರಿಕಾ ಗ್ರಂಥಾಲಯವೂ ತನ್ನ ಪತ್ರಿಕೆಯ ಪ್ರತಿಯೊಂದು ಸಂಚಿಕೆಯ ಸಂಪಾದಕೀಯವನ್ನು ಸಂಗ್ರಹಿಸುತ್ತದೆ. ಆದರೆ ಇತರ ಸುದ್ದಿ ವಿವರಗಳಿಗೆ ಸಂಬಂಧಿಸಿದಂತೆ ಸಂಗ್ರಹಣ ಪದ್ಧತಿ ಬೇರೆಯಾಗಿರುತ್ತದೆ. ಪತ್ರಿಕಾ ತುಣುಕುಗಳನ್ನು ಸಂಗ್ರಹಿಸಿಡುವಲ್ಲಿ ಸ್ವಂತ ವೃತ್ತಪತ್ರಿಕೆಯ ವಿಷಯಗಳನ್ನು ಸಂಪೂರ್ಣವಾಗಿ ಕತ್ತರಿಸಿ ಇಟ್ಟುಕೊಳ್ಳಲಾಗುತ್ತದೆ. ಇತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಒಂದೋ ಎರಡೋ ಅತ್ಯಂತ ಪ್ರಧಾನವಾದ ಪತ್ರಿಕೆಗಳನ್ನು ಆರಿಸಿಕೊಂಡು ಅವನ್ನು ಸ್ವಂತ ಪತ್ರಿಕೆಯ ತುಣುಕುಗಳ ಜೊತೆಗೆ ಪೂರಕ ಸಾಮಗ್ರಿಯಾಗಿ ಬಳಸಿಕೊಳ್ಳಲಾಗುತ್ತದೆ. ಜೀವನಚರಿತ್ರೆಗೆ ಸಂಬಂಧಿಸಿದಂತೆ ಅಥವಾ ಒಂದು ವಿಶಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಸಂಗ್ರಹಿಸಿಕೊಟ್ಟಿರುವ ವಿಶೇಷ ಲೇಖನಗಳನ್ನೂ ಮಹತ್ತ್ವಪೂರ್ಣವಾದ, ವಿಶಿಷ್ಟ ಸುದ್ದಿವಿವರಗಳನ್ನೂ ಕಾಪಾಡಿಡಲಾಗುತ್ತದೆ.

ಕೆಲವು ಪತ್ರಿಕೆಗಳು ಕೆಲವು ವಿಶಿಷ್ಟ ರೀತಿಯ ಸುದ್ದಿಗಳನ್ನು ಪ್ರಕಟಿಸುವುದರಲ್ಲಿ ಪ್ರಧಾನ ಪಾತ್ರ ವಹಿಸಿ ತಮಗೆ ಸೂಕ್ತವಾದ ವಿವರಗಳನ್ನು ಇತರ ಪತ್ರಿಕೆಗಳಿಂದ ತೆಗೆದು ಸಂಗ್ರಹಿಸಿಡುತ್ತವೆ.

**2. ಪರಾಮರ್ಶನ ಮತ್ತು ಸಾಮಾನ್ಯ ಗ್ರಂಥಸಂಗ್ರಹಗಳು :** ಗ್ರಂಥಾಲಯದ ವ್ಯಾಪ್ತಿ, ಗ್ರಂಥಗಳನ್ನು ಕೊಳ್ಳಲು ಒದಗಿಸುವ ಹಣ, ಜೋಡಿಸಿಡಲು ಇರುವ ಜಾಗ–ಇವನ್ನು ಅವಲಂಬಿಸಿ ಗ್ರಂಥಗಳ ಆಯ್ಕೆ, ಸಂಗ್ರಹ ನಡೆಯುತ್ತದೆ. ಹೇಗೇ ಇರಲಿ, ಒಂದು ವೃತ್ತಪತ್ರಿಕಾ ಗ್ರಂಥಾಲಯದಲ್ಲಿ ಪದೇ ಪದೇ ಬೇಡಿಕೆ ಬರುವ ಹೂ ಈಸ್ ಹೂ, ವಿಲ್ಲಿಂಗ್ಸ್ ಪ್ರೆಸ್‌ಗೈಡ್, ಆಕ್ಸಫರ್ಡ್ ನಿಘಂಟು, ಬ್ರಿಟಾನಿಕ ವಿಶ್ವಕೋಶ, ವ್ಹಿಟೇಕರ್ ಆಲ್ಮನಾಕ್, ಸ್ಟೀವನ್‌ಸನ್ಸ್ ಬುಕ್ ಆಫ್ ಕೋಟೇಷನ್ಸ್, ಸ್ಟೇಟ್ಸಮನ್ ಇಯರ್ ಬುಕ್ ಮುಂತಾದ ಪರಾಮರ್ಶನ ಗ್ರಂಥಗಳು ಸಾಮಾನ್ಯವಾಗಿ ಇರುತ್ತವೆ.

ಸಾಮಾನ್ಯ ಹಾಗೂ ವಿಶಿಷ್ಟ ಜೀವನಚರಿತ್ರೆ ನಿಘಂಟುಗಳು, ಅಟ್ಲಾಸುಗಳು, ನಕ್ಷೆಗಳು ವ್ಯಾಪಾರ ಮತ್ತು ವೃತ್ತಿಸಂಬಂಧಿ ನಕ್ಷೆಗಳು ಮುಂತಾದವು ಯಾವುದೇ ವೃತ್ತಿಪತ್ರಿಕಾ ಗ್ರಂಥಾಲಯದಲ್ಲಿ ಅಗತ್ಯವಾಗಿ ಇರಬೇಕಾದಂಥವು. ವೃತ್ತಿವಿಭಾಗದಲ್ಲಿ ಹೇಳುವುದಾದರೆ, ಕೆಮ್ಸ್ಲೀ ಮ್ಯಾನ್ಯುಯಲ್ ಆಫ್ ಜರ್ನಲಿಸಂ ಬರುವುದುಂಟು.

**3. ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳು :** ಇವು ವೃತ್ತಪತ್ರಿಕಾ ಗ್ರಂಥಾಲಯಗಳಲ್ಲಿ ಅವಶ್ಯ ಇರಬೇಕಾದ ಮೂರನೆಯ ಗುಂಪಿನ ವಸ್ತುಗಳು. ಇಂಥ ಪ್ರತಿಯೊಂದು ಗ್ರಂಥಾಲಯವೂ ತನ್ನ ಪತ್ರಿಕೆಯ ಸಂಚಿಕೆಯನ್ನು ರಟ್ಟುಕಟ್ಟಿದ ಸಂಪುಟಗಳಲ್ಲೋ ಮೈಕ್ರೊಫಿಲ್ಮ್ ಪ್ರತಿಗಳಾಗಿಯೋ ಸಂಗ್ರಹಿಸಿಡುತ್ತದೆ. ಇವು ಒಂದು ವೃತ್ತಪತ್ರಿಕೆಯ ಇತಿಹಾಸವನ್ನೂ ಸಾಧನೆಗಳನ್ನೂ ಪ್ರತಿನಿಧಿಸುತ್ತದೆ. ದಿ ಟೈಂಸ್ ಆಫ್ ಇಂಡಿಯಾ ಪತ್ರಿಕೆ ನೂರು ವರ್ಷಗಳ ಹಿಂದೆ ಗತವರ್ಷವೊಂದರ ಮಹತ್ತ್ವದ ಸುದ್ದಿಯನ್ನು ಪ್ರಸಕ್ತವಾಗಿ ಪ್ರಕಟಿಸುವಂತೆ, ದಿ ಹಿಂದೂ ಪತ್ರಿಕೆ ಐವತ್ತು ವರ್ಷಗಳ ಹಿಂದೆ– ಪ್ರಜಾವಾಣಿ 50 ವರ್ಷಗಳ ಹಿಂದೆ, ಎಂಬ ಶಿರೋನಾಮೆಯಲ್ಲೂ ಕನ್ನಡದ ಸಂಯುಕ್ತ ಕರ್ನಾಟಕ ಪತ್ರಿಕೆ

ಮೂವತ್ತು ವರ್ಷಗಳ ಹಿಂದೆ–ಎಂಬ ಶಿರೋನಾಮೆಯಡಿಯಲ್ಲಿ ಆಗಿನ ಮಹತ್ತ್ವದ ಘಟನೆಗಳನ್ನು ಕುರಿತ ಸಂಕ್ಷಿಪ್ತ ಸುದ್ದಿಯನ್ನು ಮರುಪ್ರಕಟಿಸುತ್ತಿವೆ. ಇವೆಲ್ಲವೂ ಹಿಂದಿನಿಂದಲೂ ಸಂಗ್ರಹಿಸಿಟ್ಟ ಸಂಪುಟಗಳಿಂದಲೋ ಮೈಕ್ರೊಫಿಲ್ಮ್ ಪ್ರತಿಗಳಿಂದಲೋ ತೆಗೆದವಾಗಿರುತ್ತದೆ.

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನಿಯತಕಾಲಿಕೆಗಳನ್ನು ಸಂಗ್ರಹಿಸುವುದು ಪತ್ರಿಕಾ ಗ್ರಂಥಾಲಯಗಳ ಒಂದು ಮುಖ್ಯ ಕೆಲಸ. ವೃತ್ತಿನಿಯತಕಾಲಿಕೆಗಳ ಪೈಕಿ ನ್ಯೂಸ್ ಪೇಪರ್ ವರ್ಲ್ಡ್ ಹಾಗೂ ವರ್ಲ್ಡ್ಸ್ ಪ್ರೆಸ್ ನ್ಯೂಸ್ ಅತ್ಯಂತ ಅನಿವಾರ್ಯ ಪತ್ರಿಕೆಗಳು.

**4. ಸರ್ಕಾರೀ ಪ್ರಕಟಣೆಗಳು ಮತ್ತು ಕರಪತ್ರಗಳು** : ಇವು ಸರ್ಕಾರದ ನೀತಿಯ ಎಲ್ಲ ಮುಖಗಳ ಬಗೆಗೂ ಅಧಿಕೃತವಾದ ವಿವರಗಳನ್ನೂ ರಾಷ್ಟ್ರದ ಸಾಮಾಜಿಕ ಹಾಗೂ ಆರ್ಥಿಕ ಜೀವವನ್ನು ಕುರಿತು ಪ್ರಾಮಾಣಿಕವಾದ ಅಧಿಕೃತ ಅಂಕಿಅಂಶಗಳನ್ನೂ ಒದಗಿಸುತ್ತವೆ. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಂದ ಹೊರಬರುವ ಗಣನೀಯ ಪ್ರಮಾಣದ ಕರಪತ್ರಗಳನ್ನೂ ಪತ್ರಿಕಾ ಗಂಥಾಲಯ ಪಡೆಯುತ್ತವೆ. ಅಮೂಲ್ಯ ವಿಷಯ ವಿವರಗಳನ್ನು ಕೊಡುವಂಥವನ್ನು ಮಾತ್ರವೇ ದಾಖಲು ಮಾಡಿಟ್ಟುಕೊಂಡು ಮಿಕ್ಕವನ್ನು ತ್ಯಜಿಸಲಾಗುತ್ತದೆ.

**5. ಛಾಯಾಚಿತ್ರಗಳು, ಪಡಿಯಚ್ಚು, ಇತ್ಯಾದಿ :** ಇವನ್ನು ಅನೇಕ ಸುದ್ದಿಸಂಸ್ಥೆಗಳಿಂದ ಶುಲ್ಕ ಕೊಟ್ಟು ತರಿಸಿಕೊಳ್ಳಲಾಗುತ್ತದೆ. ಪ್ರತಿನಿತ್ಯವೂ ಬರುವ ಛಾಯಾಚಿತ್ರಗಳ ಶೀರ್ಷಿಕೆಯನ್ನು ತಾಳೆ ನೋಡಲಾಗುತ್ತದಲ್ಲದೆ ಅವನ್ನು ದಾಖಲು ಮಾಡಿಕೊಂಡು ಅನಂತರ ಆ ತಾರೀಖನ್ನು ಚಿತ್ರದ ಹಿಂಬದಿಯಲ್ಲಿ ನಮೂದಿಸಲಾಗುತ್ತದೆ. ಪತ್ರಿಕೆಯಲ್ಲಿ ಚಿತ್ರವನ್ನು ಉಪಯೋಗಿಸಿದರೆ ಆ ಚಿತ್ರದ ಅಡಿಬರೆಹದ ತುಣುಕೊಂದನ್ನು ಕತ್ತರಿಸಿ ಆ ಛಾಯಾಚಿತ್ರದ ಹಿಂಬದಿಯಲ್ಲಿ ಅಂಟಿಸಲಾಗುತ್ತದೆ.

ಪಡಿಯಚ್ಚುಗಳು ವೃತ್ತಪತ್ರಿಕೆಗಳಿಗೆ ಅತ್ಯಂತ ಉಪಯುಕ್ತವಾದ ಕಾರಣ ಅವನ್ನು ಕಾಪಾಡಿಡುವುದರಿಂದ ಮತ್ತೆ ಮತ್ತೆ ಒಂದೇ ವಸ್ತುವನ್ನು ಕುರಿತು ಹೊಸದಾಗಿ ಪಡಿಯಚ್ಚನ್ನು ತಯಾರಿಸುವುದು ತಪ್ಪುತ್ತದೆ. ತುರ್ತುಸಂದರ್ಭದಲ್ಲಿ ಪತ್ರಿಕೆಗಳಿಗೆ ಬೇಕಾಗುವ ಚಿತ್ರವನ್ನು ಹೊಂದಿಸಲು ಇಂಥ ಪಡಿಯಚ್ಚುಗಳು ಬಹಳ ಸಹಾಯಕವಾಗುತ್ತವಾಗಿ ಪಡಿಯಚ್ಚುಗಳ ಜೋಪಾನಿಕೆ ಅವಶ್ಯವಾಗುತ್ತದೆ. ರಾಷ್ಟ್ರಪ್ರಮುಖರಿಗೆ, ಪ್ರತಿಷ್ಠಿತ ವ್ಯಕ್ತಿಗಳಿಗೆ ಸಂಬಂಧಿಸಿದ ಪಡಿಯಚ್ಚುಗಳನ್ನು ಜೋಪಾನಿಸಿಡುವುದು ವಾಡಿಕೆ.

**ವರ್ಗೀಕರಣ, ಜೋಡಣೆ ಮತ್ತು ವಸ್ತುಗಳ ದಫ್ತರಿಕೆ :** ಪತ್ರಿಕಾ ಗ್ರಂಥಾಲಯಕ್ಕೂ ಇತರ ಗ್ರಂಥಾಲಯಗಳಿಗೂ ಇರುವ ಮೂಲಭೂತ ವ್ಯತ್ಯಾಸಗಳಿಂದಾಗಿ ಪ್ರತಿಯೊಬ್ಬ ಪತ್ರಿಕಾ ಗ್ರಂಥಾಪಾಲನೂ ತನಗೆ ಸೂಕ್ತವೆನಿಸಿದ ರೀತಿಯಲ್ಲಿ ವರ್ಗೀಕರಣ ವಿಧಾನವನ್ನು ರೂಪಿಸಿಕೊಳ್ಳುತ್ತಾನೆ. ಈ ವಿಧಾನಗಳು ಆಯಾ ಪತ್ರಿಕೆಯ ಅಗತ್ಯಕ್ಕೆ ತಕ್ಕಂತೆ ಬೇರೆಬೇರೆ ಯಾಗಿರಲು ಸಾಧ್ಯ.

**ದಫ್ತರಿಕೆ:** ವಿದೇಶಗಳಲ್ಲಿನ ಪತ್ರಿಕಾ ಗ್ರಂಥಾಲಯಗಳಲ್ಲಿ ಪತ್ರಿಕಾ ತುಣುಕುಗಳನ್ನು ಜೀವನಚರಿತ್ರೆ, ಸಾಮಾನ್ಯವಿಷಯಗಳು ಮತ್ತು ಹೊರರಾಷ್ಟ್ರ ವಿಪಯಗಳು–ಎಂಬ ಮೂರು ಮುಖ್ಯ ವಿಭಾಗಗಳಲ್ಲಿ ದಫ್ತರಿಸುತ್ತಾರೆ. ಟೈಂಸ್ ಆಫ್ ಇಂಡಿಯಾ ಗ್ರಂಥಾಲಯದಲ್ಲಿ ದಫ್ತರಗಳನ್ನು ಸಾಮಾನ್ಯ, ಗೃಹ ವಿದೇಶ ಮತ್ತು ಜೀವನಚರಿತ್ರೆ ಎಂಬ ನಾಲ್ಕು ಮುಖ್ಯ ಗುಂಪುಗಳಾಗಿ ವಿಂಗಡಿಸಿದ್ದಾರೆ. ಸಾಮಾನ್ಯ ವಿಷಯಗಳ ದಫ್ತರಗಳು ಸ್ವದೇಶ ಹಾಗೂ ವಿದೇಶಗಳಲ್ಲಿ ನಡೆಯುವ ಘಟನೆಗಳಿಗೆ ಸಂಬಂಧಿಸಿದ್ದು ಭೌಗೋಳಿಕ ಅಂಶಗಳಿಗೆ ಅತೀತವಾಗಿರುತ್ತವೆ. ಈ ತುಣುಕುಗಳ ಜೋಡಣೆಯಲ್ಲಿ ಸಾಮಾನ್ಯವಾಗಿ ನಿಘಂಟಿನ ಕ್ರಮವನ್ನೇ ಅನುಸರಿಸಲಾಗುತ್ತದೆ. ಕೆಲವು ಗ್ರಂಥಾಲಯಗಳಲ್ಲಿ ಎರಡೂ ಪದ್ಧತಿಗಳನ್ನು ಬಳಸುವುದುಂಟು. ಯಾವುದೇ ವಿಧಾನದಲ್ಲಿ ಸಾಕಷ್ಟು ಪ್ರಮಾಣದ ಸೂಚಿ ಉಲ್ಲೇಖಗಳಿರಬೇಕಾದದ್ದು ಅಗತ್ಯ. ಗೃಹವಿಷಯಗಳ ದಫ್ತರುಗಳನ್ನು ಮುಖ್ಯ ವರ್ಗಗಳಾಗಿಯೂ ಅನಂತರ ಉಪ ವಿಭಾಗಗಳಾಗಿಯೂ ವಿಂಗಡಿಸುವುದುಂಟು. ಟೈಂಸ್ ಆಫ್ ಇಂಡಿಯಾ ಗ್ರಂಥಾಲಯದಲ್ಲಿ ಈ ವಿಭಾಗಗಳನ್ನು ಅಕ್ಷರಾನುಕ್ರಮವಾಗಿ ಜೋಡಿಸಲಾಗಿದೆ. ವಿಶೇಷ ವಿಷಯಗಳ ದಫ್ತರಗಳಲ್ಲಿ ಪ್ರತಿಯೊಂದು ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ದಫ್ತರುಗಳಿರುತ್ತವೆ. ಇವನ್ನೂ ಅಕ್ಷರಾನುಕ್ರಮದಲ್ಲಿ ಜೋಡಿಸಲಾಗುತ್ತದೆ. ಆಮೇಲೆ ಪ್ರತಿಯೊಂದು ರಾಷ್ಟ್ರದ ದಫ್ತರದಲ್ಲಿ ವಿಷಯ ಹಾಗೂ ಅದರ ಉಪವಿಭಾಗಗಳ ಪ್ರಕಾರ ವರ್ಗೀಕರಣ ನಡೆದಿರುತ್ತದೆ. ಕಾಮನ್‌ವೆಲ್ತ್ ಅಥವಾ ಏಷ್ಯನ್ ವ್ಯವಹಾರಗಳನ್ನು ಕುರಿತ ವಿಶಿಷ್ಟ ಗ್ರಂಥಾಲಯಗಳು ಆ ವಿಷಯಗಳ ಮೇಲೆ ಅತ್ಯಂತ ವ್ಯಾಪಕವಾದ ವರ್ಗೀಕರಣಕ್ಕೆ ಅವಕಾಶ ಮಾಡಿಕೊಂಡಿರುತ್ತದೆ. ಜೀವನ ಚರಿತ್ರೆಗೆ ಸಂಬಂಧಿಸಿದ ಧಫ್ತರುಗಳನ್ನು ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ ತುಣುಕುಗಳನ್ನು ತೆಗೆದು ಸಂಗ್ರಹಿಸಿ ಬೇರೆ ಬೇರೆ ಮಡಿಕೆಗಳಲ್ಲಿ ಅಕ್ಷರಾನುಕ್ರಮದಲ್ಲಿ ಇಡಲಾಗುತ್ತದೆ. ಕೆಲವು ಗ್ರಂಥಾಲಯಗಳಲ್ಲಿ ಸಂಖ್ಯಾ ಪದ್ಧತಿ ಇದ್ದು, ನಿರ್ದಿಷ್ಟ ವ್ಯಕ್ತಿಗೆ ಒಂದು ನಿರ್ದಿಷ್ಟ ಸಂಖ್ಯೆಯನ್ನು ನಿಗದಿ ಮಾಡಲಾಗುತ್ತದೆ.

ಸರ್ಕಾರಿ ಪ್ರಕಟಣೆಗಳು, ಕರಪತ್ರಗಳು ಮತ್ತು ವರದಿಗಳು ಭಾರೀ ಗಾತ್ರವಾಗಿಲ್ಲದಾಗ ಸೂಕ್ತ ಮಡಿಕೆಯಲ್ಲಿ ಅವನ್ನು ಇತರ ತುಣುಕುಗಳೊಂದಿಗೆ ಇಡುವುದು ಸಾಮಾನ್ಯ ಪದ್ಧತಿ. ರಾಯ್ಟರ್ ಮತ್ತು ದಿ ಪ್ರೆಸ್ ಅಸೋಸಿಯೇಷನ್ ಹೀಗೆ ಮಾಡುತ್ತವೆ. ಪ್ರಕಟಣೆಗಳು ಭಾರಿ ಗಾತ್ರದವಾದಾಗ ಪಟ್ಟಿಗೆ ದಫ್ತರ ಪದ್ಧತಿಯನ್ನು ಅನುಸರಿಸುತ್ತಾರೆ.

ಒಬ್ಬ ವ್ಯಕ್ತಿಯ ಛಾಯಾಚಿತ್ರವನ್ನು ಆತನ ಹೆಸರಿನಡಿಯಲ್ಲಿ ದಫ್ತರಿಸಲಾಗುತ್ತದೆ. ಸಮೂಹಚಿತ್ರವಾದರೆ, ಆ ಸಮೂಹದಲ್ಲಿ ಅತ್ಯಂತ ಪ್ರಮುಖ ವ್ಯಕ್ತಿಯಾರಿದ್ದರೋ ಅವರ ಹೆಸರಿನಲ್ಲಿ ಫೈಲು ಮಾಡಿ, ಮಿಕ್ಕವರಿಗೆ ಸೂಚಿ ಉಲ್ಲೇಖಗಳನ್ನು ಕೊಡಲಾಗುತ್ತದೆ. ಚಿತ್ರ ಸ್ವದೇಶದ ಒಂದು ಘಟನೆಯನ್ನೋ ವಿಷಯವನ್ನೋ ತಿಳಿಸುವುದಿದ್ದರೆ, ಆಗ ಆ ಚಿತ್ರವನ್ನು ಸಾಮಾನ್ಯ ವಿಷಯಗಳ ವಿಭಾಗದಲ್ಲಿ ಆ ನಿರ್ದಿಷ್ಟ ಘಟನೆ ಅಥವಾ ವಿಷಯದ ಅಡಿಯಲ್ಲಿ ಜೋಡಿಸಲಾಗುತ್ತದೆ.

**ಸುದ್ದಿಸೂಚಿಗಳು ಮತ್ತು ಸೂಚೀಕರಣ :** ಯಾವುದೇ ವೃತ್ತಪತ್ರಿಕಾ ಗ್ರಂಥಾಲಯದಲ್ಲಿ ಸುದ್ದಿಗೆ ಸಾಕಷ್ಟು ಪ್ರಮಾಣದ ಸೂಚಿಗಳನ್ನು ಒದಗಿಸುವುದು ಅನಿವಾರ್ಯ. ಆದರ್ಶರೀತಿಯ ಸೂಚೀಕರಣದಲ್ಲಿ ಬರಲಿರುವ ಘಟನೆಗಳ ಪ್ರಸಕ್ತ ಸುದ್ದಿಗಳ ಮತ್ತು ಆಗಿಹೋದ ಘಟನೆಗಳು, (ಸ್ವದೇಶ ಹಾಗೂ ವಿದೇಶಗಳದ್ದು) ಇತರ ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕಗಳ ವಿಷಯಗಳನ್ನು ಕುರಿತ ಪ್ರಕಟಿತ ಸೂಚಿಗಳು, ಸ್ವಂತ ವೃತ್ತಪತ್ರಿಕೆಯ ವಿಷಯಗಳ ಸೂಚಿ, ಗ್ರಂಥಾಲಯದಲ್ಲಿನ ವಿಷಯ ಮೂಲಗಳಿಗೆ ಸಾಮಾನ್ಯ ಹಾಗೂ ವಿಶಿಷ್ಟ ಸೂಚಿಗಳು–ಹೀಗೆ ವಿವಿಧ ಬಗೆಯ ಸೂಚಿಗಳು ಇರುವುದುಂಟು. ಬರಲಿರುವ ಘಟನೆಗಳನ್ನು ಕುರಿತು ಕಮಿಂಗ್ ಇವೆಂಟ್ ಇನ್ ಬ್ರಿಟನ್ ಎಂಬ ಹೆಸರಿನಲ್ಲಿ ಬ್ರಿಟಿಷ್ ಟ್ರ್ಯಾವಲ್ ಅಂಡ್ ಹಾಲಿಡೇಸ್ ಅಸೋಸಿಯೇಷನ್ ಪ್ರಕಟಿಸುತ್ತದೆ. ಬುಲೆಟಿನ್ ಆಫ್ ದಿ ಯುನೈಟೆಡ್ ನೇಷನ್ ಎಂಬುದು ಮುಂದೆ ಬದರಲಿರುವ ಅಂತಾರಾಷ್ಟ್ರೀಯ ಸಮ್ಮೇಳನಗಳ ತಾರೀಕುಗಳನ್ನು ಒದಗಿಸುತ್ತದೆ.

ಪ್ರಸಕ್ತ ಘಟನೆಗಳನ್ನು ಕುರಿತಂತೆ ಕೀಸಿಂಗ್ಸ್ ಕಾಂಟೆಂಪೊರರಿ ಆರ್ಕೈವ್ಸ್ ರೆಕಾರ್ಡ್ಸ್ ಅಂಡ್ ಸ್ಟ್ಯಾಟಿಸ್ಟಿಕ್ಸ್ ಎಂಬುದು ಎಕಾನಮಿಸ್ಟ್ ಪತ್ರಿಕೆಗೆ ಪುರವಣಿಯಾಗಿ ಪ್ರಕಟವಾಗುತ್ತಿದೆ. ಇವಲ್ಲದೆ ಗತವರ್ಷಗಳಲ್ಲಿ ಸಂದ ಘಟನೆಗಳನ್ನು ಅಂಕಿಅಂಶಗಳ ಸಮೇತ ನೀಡುವಂಥ ವಾರ್ಷಿಕ ಪುಸ್ತಕಗಳನ್ನು ಗ್ರಂಥಾಲಯ ಒಳಗೊಂಡಿರುತ್ತದೆಯಲ್ಲದೆ ಅವುಗಳ ಸೂಕ್ತ ವರ್ಗೀಕರಣ, ಸೂಚೀಕರಣ ಮುಂತಾದುವೂ ನಡೆದಿರುತ್ತದೆ. ಛಾಯಾಚಿತ್ರಗಳಿಗೆ ಸಂಬಂಧಿಸಿದಂತೆಯೂ ವರ್ಗೀಕರಣ, ಸೂಚೀಕರಣ, ದಫ್ತರಿಕೆಗಳು ನಡೆದಿರುತ್ತವೆ.

ಪ್ರತಿವರ್ಷವೂ ಪತ್ರಿಕಾ ತುಣುಕುಗಳ ಹೊಸ ಸರಣಿಯನ್ನು ಪ್ರಾರಂಭಿಸುವುದು ಪತ್ರಿಕಾ ಗ್ರಂಥಾಲಯಗಳ ಒಂದು ಪದ್ಧತಿ. ಹಿಂದಿನ ವರ್ಷದ ತುಣುಕುಗಳಲ್ಲಿ ಬೇಡವಾದದ್ದೆಲ್ಲವನ್ನು ತೆಗೆದುಹಾಕಿ, ಮುಖ್ಯವಾದವನ್ನು ಉಗ್ರಾಣಕ್ಕೆ ಸಾಗಿಸಿ, ಹೊಸ ಸರಣಿಗೆ ಸ್ಥಳಾವಕಾಶ ಮಾಡಲಾಗುತ್ತದೆ. (ಎಚ್.ಎ.ಕೆ.)

**9. ಚಲನಚಿತ್ರ ಗ್ರಂಥಾಲಯಗಳು :** ಗ್ರಂಥಗಳನ್ನು ಹೇಗೋ ಹಾಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದ ಚಲನಚಿತ್ರಗಳ ಫಿಲ್ಮುಗಳನ್ನೂ ಸಂಗ್ರಹಿಸಿ, ವರ್ಗೀಕರಿಸಿ, ವಿತರಣೆ ಮಾಡಲು ಏರ್ಪಟ್ಟ ಸಂಸ್ಥೆ. ಮಕ್ಕಳಿಗೆ ಆಸಕ್ತಿ ಹುಟ್ಟಿಸುವಂಥ ಬೋಧಪ್ರದವಾದ ವಿಷಯವನ್ನೋ ಸಾರ್ವಜನಿಕರ ಬೌದ್ಧಿಕ ಪ್ರಜ್ಞೆಯನ್ನು ಉದ್ದೀಪನಗೊಳಿಸುವ ಇನ್ನಾವುದೇ ವಿಷಯವನ್ನೋ ಅಥವಾ ಐತಿಹಾಸಿಕ ಸಾಮಾಜಿಕ ಘಟನೆಗಳನ್ನು ಕುರಿತಂಥ ಚಲನಚಿತ್ರಗಳಿಗೆ ಅಗತ್ಯವಿರುವ ಕೆಲವಾರು ಸರ್ವೇಸಾಮಾನ್ಯ ಚಿತ್ರವಿಷಯಗಳನ್ನೋ ಕುರಿತಂತೆ ಪೂರ್ಣ ಮಾಹಿತಿಗಳನ್ನು ಒದಗಿಸುವಂಥ ಚಲನಚಿತ್ರಗಳನ್ನು ಕಾಪಾಡಿಡಬೇಕಾಗುತ್ತದೆ. ಇಂಥ ಚಲನಚಿತ್ರಗಳ ಪ್ರದರ್ಶನದ ಅಗತ್ಯ ಆಗಾಗ ಕಂಡುಬರುವುದುಂಟು. ಆರ್ಥಿಕ ದೃಷ್ಟಿಯಿಂದ, ಸಮಯದ ದೃಷ್ಟಿಯಿಂದ ಮತ್ತು ಬೇಡಿಕೆಯ ದೃಷ್ಟಿಯಿಂದ ಇಂಥವನ್ನು ಬೇಕಾದ ಸಮಯದಲ್ಲಿ ತಯಾರಿಸುವುದು ದುಸ್ತರವಾಗಬಹುದು. ಆದ ಕಾರಣ ಒಮ್ಮೆ ತಯಾರಾದ ಚಲನಚಿತ್ರಗಳನ್ನು–ಅಂದರೆ ಫಿಲ್ಮುಗಳನ್ನು (ನೆಗೆಟಿವ್ಸ್–ವಿಷಮಪ್ರತಿಗಳು) ಬೇಡಿಕೆಗೆ ತಕ್ಕಂತೆ ಬೇಕಾದಷ್ಟು ಪ್ರತಿ ಮಾಡಿಟ್ಟುಕೊಳ್ಳಬಹುದು. ಚಲನಚಿತ್ರಸುರುಳಿಗಳ (ನೆಗೆಟಿವ್ ರೋಲ್ಸ್) ಸಂಗ್ರಹಣೆ, ವರ್ಗೀಕರಣ ಮತ್ತು ಅಗತ್ಯ ಬಿದ್ದಾಗ ಪ್ರದರ್ಶನಕ್ಕೋಸ್ಕರ ಎರವಲು ನೀಡುವುದು–ಇವೇ ಗ್ರಂಥಾಲಯದ ಪ್ರಮುಖ ಕರ್ತವ್ಯಗಳು.

ಚಲನಚಿತ್ರ ಗ್ರಂಥಾಲಯ ವ್ಯವಸ್ಥೆ ಚಲನಚಿತ್ರೋದ್ಯಮದಷ್ಟೆ ಹಳೆಯದು. ಈ ಗ್ರಂಥಾಲಯಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಿದ್ದು ಕೇವಲ ಏಳು ದಶಕಗಳ ಹಿಂದೆ. 1935ರಲ್ಲಿ ಸ್ಥಾಪನೆಯಾದ ಗ್ರೇಟ್ ಬಿಟನ್ನಿನ ರಾಷ್ಟ್ರೀಯ ಚಲನಚಿತ್ರ ಗ್ರಂಥಾಲಯದ ಸಂಗ್ರಹದಲ್ಲಿ 25,000ಕ್ಕೂ ಹೆಚ್ಚಿನ ಚಲನಚಿತ್ರಗಳಿದ್ದವು. ಭಾರತದಲ್ಲಿ ಇಂಥ ವ್ಯವಸ್ಥೆ ಆದದ್ದು ಎರಡನೆಯ ಮಹಾಯುದ್ಧದ ಮುಕ್ತಾಯದ ವೇಳೆಗೆ. ಹೀಗೆ ರೂಪುಗೊಂಡ ಗ್ರಂಥಾಲಯವನ್ನು ಸಾಕ್ಷ್ಯಚಿತ್ರಗಳನ್ನೂ ವಾರ್ತಾಚಿತ್ರಗಳನ್ನೂ ತಯಾರಿಸುತ್ತಿರುವ ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಶಾಖೆಯ ಚಲನಚಿತ್ರ ವಿಭಾಗಕ್ಕೆ ಸೇರಿಸಿದ್ದು 1948ರಲ್ಲಿ.

ಚಲನಚಿತ್ರ ಗ್ರಂಥಾಲಯ ಹೊಣೆಗಾರಿಕೆ, ಚಿತ್ರಗಳ ಬೇಡಿಕೆಯನ್ನು ಅದು ಎಷ್ಟರಮಟ್ಟಿಗೆ ಪೂರೈಸುತ್ತದೆ ಎಂಬುದನ್ನು ಆಧರಿಸಿದೆ. ಅಧಿಕ ಬೇಡಿಕೆ ಬಂದಾಗ, ಅಂದರೆ ಒಂದೇ ಚಿತ್ರದ ನೂರಾರು ಪ್ರತಿಗಳು ಬೇಕಾದಾಗ ಗ್ರಂಥಾಲಯ ಯಾವರೀತಿ ತನ್ನ ಕೆಲಸವನ್ನು ನಿರ್ವಹಿಸುತ್ತದೆ ಎಂಬ ಅಂಶಗಳು ಆ ವ್ಯವಸ್ಥೆಯ ಕ್ರಮಬದ್ಧ ಕಾರ್ಯಾಚರಣೆಯ ಪರಿಚಯ ಮಾಡಿಕೊಡುತ್ತವೆ. ಸಾಮಾನ್ಯವಾಗಿ ನೆಗಟಿವ್ ಪ್ರತಿಯನ್ನು ಛಾಯಾಚಿತ್ರಕಲೆಯ ವಿವಿಧ ಪ್ರಕ್ರಮಗಳಿಗೆ ಒಳಪಡಿಸಿ ಆ ನೆಗೆಟಿವ್ ಪ್ರತಿಯ ಛಾಯಾಚಿತ್ರವನ್ನು ಪಡೆಯಬಹುದು. ನೆಗೆಟಿವ್ ಚಿತ್ರದ ಹೆಚ್ಚಿನ ಪ್ರತಿಗಳು ಬೇಕಾದಾಗ ಆಧುನಿಕ ತಂತ್ರವಿಧಾನಗಳನ್ನು ಅನುಸರಿಸಿ ಅಗತ್ಯವಿರುವಷ್ಟು ಪ್ರತಿಗಳನ್ನು ಮಾಡಿಕೊಳ್ಳಬಹುದು. ಈ ತಂತ್ರದಲ್ಲಿ ಮೂಲಸಮಚಿತ್ರ (ಮಾಸ್ಟರ್ ಪಾಸಿಟಿವ್), ಚಿತ್ರದ ವಿಷಮ ಪ್ರತಿ (ಪಿಕ್ಚರ್ ನೆಗೆಟಿವ್) ಮತ್ತು ದ್ವಿಪ್ರತಿ ವಿಷಮ ಚಿತ್ರಗಳ (ಡೂಪ್ ನೆಗೆಟಿವ್) ತಯಾರಿಕೆ ಸೇರಿರುತ್ತದೆ. ಮಾಸ್ಟರ್ ಪಾಸಿಟಿವ್ ಎನ್ನುವುದು ಕೇವಲ ಒಂದು ಪಾಸಿಟಿವ್ ಚಿತ್ರ. ಇದರಲ್ಲಿ ಚಿತ್ರಕ್ಕೆ ಸಂಬಂಧಿಸಿದ ಶಬ್ದಜೋಡಣೆ ಇರುವುದಿಲ್ಲ. ಯಾವುದೇ ಭಾಷೆಯ ಶಬ್ದವನ್ನಾದರೂ ಇದಕ್ಕೆ ಹೊಂದಿಸಿ ಆ ಭಾಷೆಯಲ್ಲಿ ವಿವರಣೆ ನೀಡುವ ಚಲನಚಿತ್ರವನ್ನು ತಯಾರಿಸಬಹುದು. ಪಿಕ್ಚರ್ ನೆಗೆಟಿವ್ ಎನ್ನುವುದು ಚಲನಚಿತ್ರದ ಪ್ರಕ್ರಿಯೆಯಲ್ಲಿ ಮೊತ್ತಮೊದಲು ತಯಾರಿಸಿಕೊಂಡ ನೆಗೆಟಿವ್ ಚಿತ್ರ. ಇದರಿಂದ ದ್ವಿಪ್ರತಿ ನೆಗೆಟಿವ್‌ಗಳನ್ನು ತಯಾರಿಸಿಕೊಳ್ಳಬಹುದು. ಡೂಪ್ ನೆಗೆಟಿವ್ ಅನ್ನು 30 ಅಥವಾ 40 ಸಲ ಉಪಯೋಗಿಸಿದರೂ ಅದರ ಗುಣಮಟ್ಟ ಕೆಡುವುದಿಲ್ಲ.

ಹೀಗೆ ಮೂರು ಬಗೆಯ ಚಿತ್ರಗಳ್ನು ತಯಾರಿಸುವುದು, ಶಬ್ದಜೋಡಣೆ, ಹಿನ್ನೆಲೆ ಸಂಗೀತವನ್ನು ಅಳವಡಿಸುವುದು– ಇವೆಲ್ಲವೂ ಚಲನಚಿತ್ರ ಗ್ರಂಥಾಲಯದ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ.

ಚಿತ್ರಗಳ ಜೋಪಾನಿಕೆಯಲ್ಲಿ ಗ್ರಂಥಾಲಯ ಅನುಸರಿಸಬೇಕಾದ ಕ್ರಮಗಳು ಹೀಗಿವೆ. ಗಾಳಿಹೋಗದ ಪೆಟ್ಟಿಗೆಯಲ್ಲಿ ಚಲನಚಿತ್ರಗಳನ್ನಿಟ್ಟು, ಆ ಪೆಟ್ಟಿಗೆಗಳನ್ನು ವಿಶೇಷವಾಗಿ ನಿರ್ಮಿಸಿದ ಗೂಡುಗಳಲ್ಲಿ ಕಾಪಾಡುವುದು. ವಾತಾವರಣದ ಏರಿಳಿತಗಳಿಂದ ಚಿತ್ರಗಳು ಹಾಳಾಗದಂತೆ ನೋಡಿಕೊಳ್ಳುವುದು. ಒಂದು ಚಲನಚಿತ್ರಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳೂ – ಚಿತ್ರದ ಶೀರ್ಷಿಕೆ, ಭಾಷೆ, ಓದುವ ಅವಧಿ, ಸ್ವರೂಪ, ಬಣ್ಣದ್ದೇ ಅಥವಾ ಕಪ್ಪು ಬಿಳುಪಿನದೇ, ಚಿತ್ರ ತೆಗೆದ ತಾರೀಖು, ಬಿಡುಗಡೆ ಮಾಡಿದ ತಾರೀಖು, ಕ್ರಮಾಂಕ, ನೀಡಿಕೆ ಇತ್ಯಾದಿ ಚಿತ್ರ ವರ್ಗೀಕರಣದಲ್ಲಿ ಸೇರುವಂತೆ ನೋಡಿಕೊಳ್ಳುವುದು. ಅನುಕೂಲಕ್ಕೆ ತಕ್ಕಂತೆ ಸಮಗ್ರ ಚಲನಚಿತ್ರಗಳು (ಪೂರ್ಣ ಸುರುಳಿಗಳು)ಮತ್ತು ಸ್ಟಾಕ್ – ಷಾಟ್ ಚಿತ್ರಗಳು ಎಂದು ಎರಡು ಬಗೆಯಲ್ಲಿ ವಿಂಗಡಿಸಿಕೊಂಡು ಪ್ರತಿಯೊಂದಕ್ಕೂ ಮೇಲಿನಂತೆ ಎಲ್ಲ ವಿವರಗಳನ್ನು ನೀಡುವ ಸೂಚಿ ತಯಾರಿಸುವುದು– ಇವೆಲ್ಲವೂ ಕ್ರಮಬದ್ಧ ಜೋಪಾನಿಕೆಯಲ್ಲಿ ಬರುತ್ತವೆ. ಚಿತ್ರಕ್ಕೆ ಸಂಬಂಧಿಸಿದ ಪಾಸಿಟಿವ್ ಮತ್ತು ನೆಗೆಟಿವ್ ಫಿಲ್ಮುಗಳನ್ನೂ ಸ್ಟಾಕ್–ಷಾಟ್‌ಗಳನ್ನೂ ಚಲನಚಿತ್ರ ನಿರ್ಮಾಣ ಸಂಸ್ಥೆಗಳಿಗೆ ಒದಗಿಸಿಕೊಡುವುದಲ್ಲದೆ ಖಾಸಗಿ ನಿರ್ಮಾಪಕರಿಗೂ ಮಾರುವುದೂ ಉಂಟು.

ಚಲನಚಿತ್ರಗಳ ನೆಗೆಟಿವ್ ಮತ್ತು ಪಾಸಿಟಿವ್ ಪ್ರತಿಗಳನ್ನು ಸಂಗ್ರಹಿಸಿ, ವರ್ಗೀಕರಿಸಿ ವಿತರಣೆ ಮಾಡುವ ಕೆಲಸ ಫಿಲ್ಮ್ ಲೈಬ್ರರಿಯ ಪ್ರಧಾನ ಕೆಲಸವಾದರೂ ಇತ್ತೀಚೆಗೆ ಅಮೂಲ್ಯ ಗ್ರಂಥಗಳ ಹಸ್ತಪ್ರತಿಗಳನ್ನು ಛಾಯಾಚಿತ್ರಮಾಡಿಕೊಂಡು ಅವುಗಳ ನೆಗೆಟಿವ್ ಪ್ರತಿಗಳನ್ನು ತಯಾರಿಸಿ, ವರ್ಗೀಕರಿಸಿ, ಬೇಕೆಂದಾಗ ಪ್ರೊಜೆಕ್ಟರಿನ ಸಹಾಯದಿಂದ ನಿಶ್ಚಲ ಚಿತ್ರಗಳನ್ನು ತೆರೆಯ ಮೇಲೆ ಪ್ರಕ್ಷೇಪಿಸಿ ಗ್ರಂಥಸಂಪಾದನ ಮತ್ತು ಸಂಶೋಧನ ಕಾರ್ಯಗಳಿಗೆ ಅನುಕೂಲ ಮಾಡಿಕೊಡುವ ಕೆಲಸವೂ ಸೇರಿದೆ. ಭಾರತದ ವಿವಿಧ ಗ್ರಂಥಾಲಯಗಳಲ್ಲಿ, ಸಂಶೋಧನ ಸಂಸ್ಥೆಗಳಲ್ಲಿ ಮೈಕ್ರೊಫಿಲ್ಮ್ ವಿಭಾಗಗಳು ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸುತ್ತಿವೆ. ಈ ವಿಭಾಗದಲ್ಲಿ ನೆಗೆಟಿವ್ ಫಿಲ್ಮುಗಳ ಸಂಗ್ರಹಣ, ವರ್ಗೀಕರಣ ಮತ್ತು ಅಗತ್ಯಕ್ಕೆ ತಕ್ಕಂತೆ ವಿತರಣೆ ಮತ್ತು ಜೋಪಾನಿಕೆ – ಇವುಗಳ ಚಲನಚಿತ್ರ ಗ್ರಂಥಾಲಯಗಳ ಕ್ರಮವನ್ನೇ ಅನುಸರಿಸಲಾಗುತ್ತದೆ.

ಈಚೆಗೆ ಅನೇಕ ಶಾಲಾಕಾಲೇಜುಗಳಲ್ಲಿ, ಸರ್ಕಾರದ ಪ್ರಚಾರಶಾಖೆಯ ಕಚೇರಿಗಳಲ್ಲಿ ಚಲನಚಿತ್ರ ಗ್ರಂಥಾಲಯಗಳು ಸುವ್ಯವಸ್ಥಿತವಾಗಿ ರೂಪುಗೊಳ್ಳುತ್ತಿವೆ. **(ಹೆಚ್.ಎ.ಕೆ.)**

**10. ಧ್ವನಿಮುದ್ರಿಕೆ ಗ್ರಂಥಾಲಯಗಳು :** ಜನತೆಗೆ ಮನರಂಜನೆಯನ್ನು ಒದಗಿಸುವುದು ಮಾತ್ರವಲ್ಲದೆ ಶೈಕ್ಷಣಿಕ ಬೋಧನೆಯನ್ನೂ ಗುರಿಯಾಗಿಟ್ಟುಕೊಂಡಿರುವ ವಿಶಿಷ್ಟ ಸಂಗ್ರಹಾಲಯ. ಗ್ರಾಮಫೋನ್ ಧ್ವನಿಮುದ್ರಿಕೆಗಳೇ ಇಲ್ಲಿನ ಮುಖ್ಯ ಸಂಗ್ರಾಹ್ಯವಸ್ತು. ಈ ಗ್ರಂಥಾಲಯಗಳ ಬೆಳವಣಿಗೆ ಈಚಿನದು. ಮೊದಮೊದಲು ಶಾಲೆ, ಚರ್ಚು, ಸಂಗೀತ ಸಂಸ್ಥೆ ಮುಂತಾದುವಕ್ಕೆ ಧ್ವನಿಮುದ್ರಿಕೆಗಳ ಅಗತ್ಯ ಕಂಡುಬಂತು. ಕ್ರಮೇಣ ಮನರಂಜನ ಸಂಗೀತಕ್ಕೆ ಜನತೆಯಿಂದ ಬೇಡಿಕೆ ಹೆಚ್ಚಿದಂತೆ ಯು.ಕೆ. ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ ಸಾರ್ವಜನಿಕ ಗ್ರಂಥಾಲಯಗಳು ಧ್ವನಿಮುದ್ರಿಕೆಗಳನ್ನು ಸಂಗ್ರಹಿಸಲು ತೊಡಗಿದವು. ಅಮೆರಿಕದಲ್ಲಿ ಇಂಥ ಗ್ರಂಥಾಲಯವೊಂದು 1914ರಲ್ಲಿ ಮಿನಿಸೋಟದ ಸೇಂಟ್ ಪಾಲ್ಸ್‌ನಲ್ಲಿ ಪ್ರಾರಂಭವಾಯಿತು. ಇಂಗ್ಲೆಂಡಿನಲ್ಲಿ 1935ರಲ್ಲಿ ಇಂಥ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು. ಮೊದಮೊದಲಿಗೆ ಧ್ವನಿಮುದ್ರಿಕೆಗಳು ಮಿನಿಟಿಗೆ 78 ಸಲ ಆವರ್ತಿಸುವ ತಟ್ಟೆಗಳು (ಷಾರ್ಟ್ ಪ್ಲೇ ರೆಕಾರ್ಡ್ಸ್) ಮಾತ್ರ ಇದ್ದು ಈಗ ಮಿನಿಟಿಗೆ 33 ಮತ್ತು 45 ಸಲ ಆವರ್ತಿಸುವ ತಟ್ಟೆಗಳು (ಲಾಂಗ್ ಪ್ಲೇ ರೆಕಾರ್ಡ್ಸ್) ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ.

ಧ್ವನಿಮುದ್ರಿಕೆ ಗ್ರಂಥಾಲಯದಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಿಸಿದ ಧ್ವನಿ ಮುದ್ರಿಕೆಗಳ ಜೊತೆಗೆ ಲಘುಗೀತೆಗಳ ಧ್ವನಿಮುದ್ರಿಕೆಗಳೂ ಇರುತ್ತವೆ. ಈಗ ಕಾವ್ಯವಾಚನಗಳು, ನಾಟಕಗಳು, ಭಾಷಾಶಿಕ್ಷಣ, ಚಲನಚಿತ್ರ ಮುಂತಾದುವನ್ನು ಧ್ವನಿಮುದ್ರಿಸಿಕೊಂಡು ಸಂಗ್ರಹಿಸುವುದೂ ಬಳಕೆಯಲ್ಲಿದೆ. ಧ್ವನಿಮುದ್ರಣ ಕಾರ್ಯ ಸಾಮಾನ್ಯವಾಗಿ ಎರಡು ಬಗೆಯದು. ಒಂದು ತಟ್ಟೆಗಳನ್ನು ತಯಾರಿಸುವುದು, ಮತ್ತೊಂದು ಕಾಂತಧ್ವನಿಮುದ್ರಣ. ಎರಡನೆಯ ಕ್ರಮವಾದ ಟೇಪ್ ರೆಕಾರ್ಡಿಂಗ್ ಪದ್ಧತಿ ಹೆಚ್ಚಿದವು.

ಗ್ರಾಮಫೋನ್ ತಟ್ಟೆಗಳನ್ನು ಸಂಗ್ರಹಮಾಡುವ ಗ್ರಂಥಾಲಯ ಅವನ್ನು ಅಪೇಕ್ಷಿಸುವವರಿಗೆ ಎರವಲು ನೀಡುವ ಒಂದು ಕೆಲಸವನ್ನು ನಿರ್ವಹಿಸುತ್ತದೆ. ಸೂಕ್ತವಾದ ನಿಯಮಾವಳಿಗಳನ್ನು ರಚಿಸಿಕೊಂಡು ಧ್ವನಿಮುದ್ರಿಕೆಗಳ ಸಂಗ್ರಹಣೆ ಸಾರ್ಥಕವಾಗುವಂತೆ ನೋಡಿಕೊಳ್ಳುತ್ತದೆ. ಧ್ವನಿಮುದ್ರಿಕೆಗಳ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಅವುಗಳ ಸಂಗ್ರಹಣೆಗೆ ಸಂಬಂಧಿಸಿದಂತೆ ಸೂಚೀಕರಣ ಕಾರ್ಯ ನಡೆದಿರುತ್ತದೆ. ಈ ಕಾರ್ಯದಲ್ಲಿ ಕಾರ್ಡುಗಳನ್ನು ಬಳಸಲಾಗುತ್ತದೆ. ಶೀರ್ಷಿಕೆಯನ್ನು ಸೂಚಿಸಲು ಬಿಳಿಯ ಕಾರ್ಡು, ಕೃತಿಕಾರರ ಉಲ್ಲೇಖಕ್ಕೆ ಹಳದಿ ಕಾರ್ಡು, ಕಲಾವಿದರ ಉಲ್ಲೇಖಕ್ಕೆ ನೀಲಿ ಕಾರ್ಡು– ಹೀಗೆ ಬೇರೆ ಬೇರೆ ಬಣ್ಣದ ಕಾರ್ಡುಗಳನ್ನು ಬಳಸುವುದುಂಟು. ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಸಂಸ್ಥೆಯ (ಬಿ.ಬಿ.ಸಿ.) ಧ್ವನಿಮುದ್ರಿಕೆ ಗ್ರಂಥಾಲಯ ಸಿದ್ಧಪಡಿಸಿರುವ ಒಂದು ಕೃತಿಕಾರರ ಸೂಚಿಯಲ್ಲಿ ರಚನೆಗಾರರು, ಕವಿಗಳು, ನಾಟಕಕಾರರು, ಅನುವಾದಕರು– ಈ ಮುಂತಾದ ವಿವರಗಳು ದೊರಕುತ್ತವೆ.

ದೊಡ್ಡ ದೊಡ್ಡ ಧ್ವನಿಮುದ್ರಿಕೆ ಗ್ರಂಥಾಲಯಗಳಲ್ಲಿ ಒಂದು ಧ್ವನಿಮುದ್ರಿಕೆಯನ್ನು ಅದರ ಶೀರ್ಷಿಕೆಯಡಿಯಲ್ಲಿ ಸೂಚೀಕರಿಸಲಾಗುತ್ತದೆ. ಅದರ ವಿವರಗಳಲ್ಲಿ ಅಲ್ಲಿ ಬೇರೆ ಬೇರೆ ಭಾಷೆಗಳಲ್ಲೂ ತಿಳಿಸಲಾಗಿರುತ್ತದೆ. ಪ್ರಕಾಶಕರ ಹೆಸರೂ ಇರುವುದಲ್ಲದೆ ಶೀರ್ಷಿಕೆಯ ಕೆಳಗೆ ಕೆಂಪುಬಣ್ಣದಲ್ಲಿ ಧ್ವನಿಮುದ್ರಿಕೆ ಬಿಡುಗಡೆಗೊಂಡ ತಾರೀಖು, ವ್ಯಾಪಾರೀ ಸಂಕೇತ ಸಂಖ್ಯೆ, ಕರ್ತೃವಿನ ಹೆಸರು, ಕಲಾವಿದನ ಅಥವಾ ಕಲಾವಿದರ ಹೆಸರುಗಳು, ಅದು ಯಾವುದರ ಭಾಗವಾಗಿದೆಯೋ ಅಂಥ ಚಲನಚಿತ್ರ ಅಥವಾ ನಾಟಕ ಅಥವಾ ಪುಸ್ತಕದ ಹೆಸರು, ಬಳಸಿರುವ ಪ್ರಧಾನ ಸಂಗೀತವಾದ್ಯ ಮತ್ತು ಭಾಷೆ – ಈ ಎಲ್ಲ ವಿವರಗಳೂ ಇರುತ್ತವೆ.

ಸಾರ್ವಜನಿಕ ಧ್ವನಿಮುದ್ರಿಕೆ ಗ್ರಂಥಾಲಯಗಳಲ್ಲೂ ಗಾನಮುದ್ರಿಕೆಗಳ ಸಂಗ್ರಹದ ಜೊತೆಗೆ ಸೂಚೀಕರಣ ಒಂದು ನಿರ್ದಿಷ್ಟ ಪದ್ಧತಿಯಲ್ಲಿ ನಡೆದಿರುತ್ತದೆ. ಅಲ್ಲಿ ಮುಖ್ಯ ಉಲ್ಲೇಖ ಕೃತಿಕಾರನ ಹೆಸರಿನಲ್ಲಿರುತ್ತದೆ. ಅಮೆರಿಕನ್ ಗ್ರಂಥಾಲಯ ಸಂಘ 1958 ರಲ್ಲಿ ಪ್ರಕಟಿಸಿದ ಕೋಡ್ ಫಾರ್ ಕ್ಯಾಟಲಾಗಿಂಗ್ ಮ್ಯೂಸಿಕ್ ಅಂಡ್ ಫೋನೋ ರೆಕಾರ್ಡ್ಸ್ ಎಂಬುದು ಇಂಥ ಸೂಚೀ ಸಿದ್ಧಪಡಿಸಲು ತುಂಬ ಉಪಯೋಗವಾಗುತ್ತದೆ.

ಧ್ವನಿಮುದ್ರಿಕೆಗಳನ್ನು ಸಂಗ್ರಹಿಸಿ, ವರ್ಗೀಕರಿಸಿ, ಸೂಚೀಕರಿಸಿ, ಗ್ರಾಹಕರಿಗೆ ಬೇಕಾದಾಗ ಅವನ್ನು ಒದಗಿಸಿಕೊಡುವ ಕೆಲಸವನ್ನಲ್ಲದೆ ಅವನ್ನು ಜೋಪಾನಿಸಿಡುವ ಕೆಲಸವನ್ನು ಧ್ವನಿಮುದ್ರಿಕೆ ಗ್ರಂಥಾಲಯ ನಿರ್ವಹಿಸುತ್ತದೆ. ವಾತಾವರಣದಲ್ಲಿ ಆಗುವ ಏರುಪೇರುಗಳಿಂದ ಧ್ವನಿಮುದ್ರಿಕೆಗಳು ಕೆಡದಂತೆ ನೋಡಿಕೊಳ್ಳಲು ವಿಶೇಷ ರೀತಿಯಲ್ಲಿ ನಿರ್ಮಿಸಿದ ಕಪಾಟುಗಳಲ್ಲಿ ತಟ್ಟೆಗಳ ಜೋಪಾನಿಕೆ ನಡೆದಿರುತ್ತದೆ. ಕಪಾಟಿನ ನಿಲುವುಗಳಲ್ಲಿ ಪೂರ್ತಿಯಾಗಿ ನೆಟ್ಟಗೆ ತಟ್ಟೆಗಳನ್ನು ನಿಲ್ಲಿಸುವ ಕ್ರಮ ಒಂದಾದರೆ ಟೆಂಪ್ಲೇಟ್ ನಿಯಂತ್ರಿತ ರೀತಿಯಲ್ಲಿ ನಿಲ್ಲಿಸುವ ಕ್ರಮ ಇನ್ನೊಂದು.

ಪ್ರಸಿದ್ಧ ಧ್ವನಿಮುದ್ರಿಕೆ ಗ್ರಂಥಾಲಯಗಳಾದ ಬಿ.ಬಿ.ಸಿ., ಗ್ರಾಮೊಫೋನ್ ಲೈಬ್ರರಿ (ಯು.ಕೆ.) ಮತ್ತು ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿಗಳಲ್ಲಿ ಸಮಗ್ರ, ಸಮೃದ್ಧ ಧ್ವನಿಮುದ್ರಿಕೆಗಳ ಸಂಗ್ರಹ ಇದೆ. 1969 ರ ಸುಮಾರಿನಲ್ಲಿ ಬಿ.ಬಿ.ಸಿ. ಗ್ರಾಮೊಫೋನ್ ಗ್ರಂಥಾಲಯಗಳಲ್ಲಿ 8 ಲಕ್ಷ ತಟ್ಟೆಗಳಿದ್ದವು. ಅನಂತರದ ದಶಕಗಳಲ್ಲಿ ಪ್ರತಿವರ್ಷವೂ ಸುಮಾರು 30,000 ತಟ್ಟೆಗಳನ್ನು ಸೇರಿಸಲಾಯಿತು. ನ್ಯೂಯಾರ್ಕ್ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸಾರ್ವಜನಿಕರಿಗೆ ಎರವಲು ಕೊಡುವ ಅತ್ಯಂತ ದೊಡ್ಡ ಧ್ವನಿಮುದ್ರಿಕೆ ಸಂಗ್ರಹಗಳಿವೆ. ಎಲ್ಲ ಬಗೆಯ ಧ್ವನಿಮುದ್ರಿಕೆಗಳು, ಅಪೂರ್ವವಾದ ಸಂದರ್ಭ ಸಂಗ್ರಹಗಳು ಅಲ್ಲಿವೆ. ಧ್ವನಿಮುದ್ರಣ ಮತ್ತು ಪುನರ್‌ಪ್ರಸಾರದ ಸ್ಟುಡಿಯೋಗಳ ಜೊತೆಗೆ ಪ್ರಸಾರ ಮತ್ತು ಟೆಲಿವಿಷನ್ ಸ್ಟುಡಿಯೋ ಸೌಲಭ್ಯಗಳೂ ಇಲ್ಲಿವೆ.

ಲೈಬ್ರರಿ ಆಫ್ ಕಾಂಗ್ರೆಸಿನಲ್ಲಿರುವ ಮುದ್ರಿತ ಧ್ವನಿ ವಿಭಾಗವು ಪ್ರತ್ಯೇಕವಾಗಿದ್ದು ಸಂಗ್ರಹದಲ್ಲಿ ತಟ್ಟೆಗಳಿದ್ದು ಇದು ಅಮೆರಿಕದಲ್ಲೇ ಅತ್ಯಂತ ದೊಡ್ಡ ಪರಾಮರ್ಶ ಸಂಗ್ರಹ.

ಭಾರತದಲ್ಲಿ ಆಲ್ ಇಂಡಿಯ ರೇಡಿಯೋ (ಆಕಾಶವಾಣಿ) ದೊಡ್ಡ ದೊಡ್ಡ ಸಂಗೀತ ಕಚೇರಿಗಳ ಜೊತೆಗೆ ಭಾಷಾ ಶಿಕ್ಷಣಕ್ಕೆ ಸಂಬಂಧಿಸಿದ ಪಾಠಪ್ರವಚನಗಳನ್ನೂ ತಟ್ಟೆಗಳ ಮೇಲೆ ಧ್ವನಿಮುದ್ರಿಸಿಕೊಂಡೊ ಇಲ್ಲವೇ ಟೇಪ್‍ರೆಕಾರ್ಡ್ ಮಾಡಿಕೊಂಡೊ ಆಗಾಗ ಬಿತ್ತರಿಸುತ್ತದೆ. ಹೀಗಾಗಿ ಬಾನುಲಿ ನಿಲಯಗಳು ತಮ್ಮವೇ ಆದ ಧ್ವನಿಮುದ್ರಿಕೆ ಗ್ರಂಥಾಲಯಗಳನ್ನು ಹೊಂದಿರುತ್ತವೆ. ಈ ಗ್ರಂಥಾಲಯಗಳಲ್ಲಿ ಇಂಥ ಧ್ವನಿಮುದ್ರಿಕೆಗಳ ಜೊತೆಗೆ ಶ್ರೋತೃಗಳ ಕೋರಿಕೆಗೆ ತಕ್ಕಂತೆ ಸಂಗೀತ, ಲಘುಗೀತೆ, ನಾಟಕ, ಚಲನಚಿತ್ರ, ಭಾಷಣ ಮುಂತಾದುವಕ್ಕೆ ಸಂಬಂಧಿಸಿದ ಧ್ವನಿಮುದ್ರಿಕೆಗಳೂ ಇದ್ದು, ಅವುಗಳ ವರ್ಗೀಕರಣ, ಸೂಚೀಕರಣ ನಡೆದಿರುತ್ತದೆ. ಇದೇ ರೀತಿ ಭಾರತದಲ್ಲಿ ಇರುವ ಭಾಷಾವಿಜ್ಞಾನ ಸಂಸ್ಥೆಗಳೂ ರಾಜ್ಯವಯಸ್ಕರ ಶಿಕ್ಷಣ ಸಂಸ್ಥೆಗಳೂ ಇತರ ಕೆಲವು ಶಿಕ್ಷಣ ಸಂಸ್ಥೆಗಳೂ ತಮ್ಮವೇ ಆದ ಧ್ವನಿಮುದ್ರಿಕೆ ಗ್ರಂಥಾಲಯಗಳನ್ನು ಹೊಂದಿವೆ. (ಎಚ್.ಎ.ಕೆ.)

**11. ಕುರುಡರಿಗಾಗಿ ಗ್ರಂಥಾಲಯಗಳು :** 18ನೆಯ ಶತಮಾನದ ಕೊನೆಯ ಭಾಗದಿಂದ ಈಚೆಗೆ ಕುರುಡರಿಗಾಗಿ ವ್ಯಾಪಕವಾದ ಸಹಾನುಭೂತಿಯೂ ನೆರವೂ ದೊರಕುತ್ತಿದೆ. ಅಂಥವರಿಗಾಗಿ ಮೊದಲನೆಯ ಶಾಲೆ ಫ್ರೆಂಚ್ ಕ್ರಾಂತಿಗಿಂತಲೂ ಮೊದಲೇ ಪ್ಯಾರಿಸಿನಲ್ಲಿ ಸ್ಥಾಪಿತವಾಯಿತು. ಯುನೈಟೆಡ್ ಕಿಂಗ್‍ಡಮಿನಲ್ಲಿ ಅಂಥದೇ ಒಂದು ಶಾಲೆಯನ್ನು 1791ರಲ್ಲಿ ಸ್ಥಾಪಿಸಿದರು. ಅದು ಈಗ ರಾಯಲ್ ಸ್ಕೂಲ್ ಫಾರ್ ದಿ ಬ್ಲೈಂಡ್ ಎಂದು ಪ್ರಸಿದ್ಧವಾಗಿದೆ.

19ನೆಯ ಶತಮಾನ ಗ್ರಂಥಾಲಯಗಳ ಇತಿಹಾಸದಲ್ಲಿಯೇ ಒಂದು ಮುಖ್ಯವಾದ ಮಜಲನ್ನು ಗುರುತಿಸಿತು. ತತ್ತ್ವತಃ ಗ್ರಂಥಾಲಯಗಳು ಒಂದು ಸಮುದಾಯದ ಎಲ್ಲ ಸದಸ್ಯರ ಅಗತ್ಯಗಳನ್ನು ಪೂರೈಸಬೇಕು ಎಂಬ ತತ್ತ್ವ ಮುಖ್ಯವಾಯಿತು. ಪಾಶ್ಚಾತ್ಯ ಜಗತ್ತಿನ ಗ್ರಂಥಾಲಯಗಳು ಕುರುಡರ ಅಗತ್ಯಗಳನ್ನು ಪೂರೈಸಲು ತೊಡಗಿದ್ದಾಗ ಈ ಗುರಿಯ ಸಾಧನೆಯ ಕಡೆಗೆ ಧೀರ ಪ್ರಯತ್ನ ಮೊದಲಾದಂತಾಯಿತು. ಕುರುಡರು ಸಾಂಪ್ರದಾಯಿಕ ರೀತಿಯಲ್ಲಿ ಬರೆದ ಅಥವಾ ಅಚ್ಚಿನ ಪುಸ್ತಕಗಳನ್ನು ಓದಲಾರರಾದುದರಿಂದ, ಅವರು ಸ್ಪರ್ಶದಿಂದಲೇ ಓದಬಹುದಾದ ಬೇರೊಂದು ಮಾದರಿಯ ಪುಸ್ತಕಗಳನ್ನು ಕಂಡುಹಿಡಿಯಲಾಯಿತು.

ಈ ವರ್ಗದಲ್ಲಿ ಮುಖ್ಯವಾಗಿ ಎರಡು ಮಾದರಿಯ ಪುಸ್ತಕಗಳಿರುತ್ತವೆ. ಮೂನ್ ಮಾದರಿ ಪುಸ್ತಕಗಳಿಗೆ ಮೂಲಪುರುಷ ವಿಲಿಯಂ ಮೂನ್ (1818–94). ಈತ 1847ರಲ್ಲಿ ಸರಳವಾದ ವರ್ಣಮಾಲೆಯೊಂದನ್ನು ಕಂಡುಹಿಡಿದು ತನ್ನ ಹೆಸರಿನಿಂದ ಅದನ್ನು ಮೂನ್ ಅಕ್ಷರ ಎಂದು ಕರೆದ. ಆದರೆ ಅದಕ್ಕಿಂತಲೂ ಹೆಚ್ಚು ಜನಪ್ರಿಯವಾದ ಹೆಚ್ಚು ಬಳಕೆಯಲ್ಲಿರುವ ಪುಸ್ತಕಗಳು ಬ್ರೇಲ್ ಮಾದರಿಯ ಅಕ್ಷರಗಳಿರುವ ಪುಸ್ತಕಗಳು. ಫ್ರಾನ್ಸಿನವನಾದ ಲೂಯಿ ಬ್ರೇಲ್ (1809–52) ಇವನ್ನು ತಯಾರಿಸಿದ. ಈ ಇಬ್ಬರು ಹಾಕಿಕೊಟ್ಟ ನಿಯಮಗಳಿಗನುಸಾರವಾಗಿಯೇ ಈಗ ಪುಸ್ತಕಗಳು ತಯಾರಾಗುತ್ತಿವೆ. ಕುರುಡರು ಕಾಗದದ ಮೇಲೆ ಉಬ್ಬಿದ ಚುಕ್ಕೆಗಳ ಮೇಲೆ ಕೈಬೆರಳನ್ನು ಆಡಿಸುವುದರಿಂದ ಆ ಬರೆವಣಿಗೆಯ ಅರ್ಥ ಏನೆಂಬುದನ್ನು ತಿಳಿದುಕೊಳ್ಳುತ್ತಾರೆ.

1825 ರ ಬ್ರೇಲ್ ಪದ್ಧತಿಗೆ ಆಧಾರವಾದದ್ದು ಅದಕ್ಕೂ ಹಿಂದೆ ಚಾರ್ಲ್ಸ್ ಬೆರ್ಬಿಯರ್ ರೂಪದ ಚುಕ್ಕೆ ಪದ್ಧತಿ. ಬೆರ್ಬಿಯರನ 12 ಚುಕ್ಕೆ ಪ್ರಸ್ತಾರವನ್ನು 6 ಚುಕ್ಕೆಯ ಪ್ರಸ್ತಾರಕ್ಕೆ ಬ್ರೇಲ್ ಕುಗ್ಗಿಸಿದ. ಧ್ವನಿಯ ಆಧಾರಕ್ಕೆ ಪ್ರತಿಯಾಗಿ ಅದರ ಸ್ಥಾನದಲ್ಲಿ ಅಕ್ಷರ ಆಧಾರವನ್ನು ಇರಿಸಿದ. 4 ಉಬ್ಬಿದ ಚುಕ್ಕೆಗಳನ್ನು ಉಪಯೋಗಿಸಿ ಕೊಂಡು 10 ಮೂಲ ಸಂಕೇತಗಳನ್ನು ರೂಪಿಸಿದ. ಅವು A ಯಿಂದ J ವರೆಗಿನ ಅಕ್ಷರಗಳನ್ನು ಪ್ರತಿನಿಧಿಸಿದವು. ಈ ಹತ್ತು ಅಕ್ಷರಗಳಿಗೂ ಒಂದೇ ಬಗೆಯ ಐದನೆಯ ಚುಕ್ಕೆಯನ್ನು ಸೇರಿಸಿ K ಯಿಂದ T ವರೆಗಿನ ಹತ್ತು ಅಕ್ಷರಗಳನ್ನು ರೂಪಿಸಲಾಯಿತು. ಏಕರೂಪದ ಆರನೆಯ ಚುಕ್ಕೆಯೊಂದನ್ನು ಅವುಗಳಿಗೆ ಸೇರಿಸಿ ವರ್ಣಮಾಲೆಯನ್ನು ಪೂರ್ಣಗೊಳಿಸಲಾಯಿತು. ಇದರಲ್ಲಿ ಆಘಾತಸಹಿತಾಕ್ಷರಗಳಿಗೂ ಅವಕಾಶ ಕಲ್ಪಿಸಲಾಯಿತು.

ಗ್ರಂಥಾಲಯದ ಬಳಕೆದಾರರಲ್ಲಿ ಜೀವನದಲ್ಲಿ ಸ್ವಲ್ಪ ಸಮಯದ ಅನಂತರ ಕುರುಡರಾದವರು, ಮಾನಸಿಕ ಸಾಮರ್ಥ್ಯ ಅಷ್ಟಾಗಿ ಇಲ್ಲದವರು ಅಥವಾ ಬ್ರೇಲ್ ಪದ್ಧತಿಯ ಅನ್ವಯ ತಿಳಿಯಲಾರದವರು ಅಥವಾ ಬಹು ಸೂಕ್ಷ್ಮವಾದ ಸ್ಪರ್ಶೇಂದ್ರಿಯ ಶಕ್ತಿಯಿಲ್ಲದವರು ಬ್ರೇಲ್‍ಗೆ ಬದಲಾಗಿ ಮೂನ್ ಮಾದರಿಪುಸ್ತಕಗಳನ್ನು ಓದಬಹುದು. ಅಲ್ಲದೆ ಮೂನ್ ಮಾದರಿ ಪುಸ್ತಕಗಳು ಬ್ರೇಲ್‍ಗಿಂತ ಹೆಚ್ಚುಕಾಲ ಬಾಳಿಕೆ ಬರುತ್ತವೆ. ಇವಕ್ಕೆದುರಾಗಿ ಬ್ರೇಲ್ ಪದ್ಧತಿಯ ಬರೆಹಗಳು ಸೂಕ್ಷ್ಮವಾಗಿರುತ್ತವೆ. ಇವುಗಳ ಬಳಕೆಯಲ್ಲಿ ವೇಗ ಮತ್ತು ವ್ಯಾಪ್ತಿಹೆಚ್ಚು. ಇದರ ಮೂಲಕ ಅಪಾರ ಸಂಖ್ಯೆಯ ಅಂಧರಿಗೆ ಜ್ಞಾನದ ಬಾಗಿಲು ವಿಶಾಲವಾಗಿ ತೆರೆದಿದೆ. ಅಲ್ಲದೆ ಕುರುಡರ ನಡುವೆಯೇ ಅದು ಸಂಪರ್ಕ ಮಾಧ್ಯಮವಾಗಿ ಪರಿಣಮಿಸಿದೆ. ಬ್ರೇಲ್ ಮತ್ತು ಮೂನ್ ಪದ್ಧತಿಗಳು ಅಪಾರವಾದ ಶಕ್ತಿಸಾಮರ್ಥ್ಯಗಳನ್ನು ಒಳಗೊಂಡಿರುವ ಬರೆಹ ರೂಪಗಳು ಎಂಬುದಾಗಿ ಡಾ. ಥಾಮಸ್ ರ್‍ಹೋಡ್ಸ್ ಆರ್ಮಿಟೇಜ್ ಮತ್ತು ಅವರ ಮಿತ್ರರು ನಿರ್ಧರಿಸಿದರು. ಅವರ ಆ ನಿರ್ಣಯವೇ ಕಾರಣವಾಗಿ ಕುರುಡರಿಗೆ ಪುಸ್ತಕಗಳನ್ನು ಒದಗಿಸುವುದು ಸಾಧ್ಯವಾಯಿತು.

ಪ್ರಾರಂಭದಲ್ಲಿ ಪಶ್ಚಿಮದ ಚರ್ಚು, ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳು ಕುರುಡರಿಗಾಗಿ ಗ್ರಂಥಾಲಯ ಸೇವೆಯನ್ನು ಒದಗಿಸುವ ಪ್ರಯತ್ನದಲ್ಲಿ ಪ್ರಧಾನವಾದ ಪಾತ್ರವಹಿಸಿದವು. ಇಂಗ್ಲೆಂಡಿನಲ್ಲಿ ಸ್ವಯಂ ಕುರುಡಿಯಾಗಿದ್ದ ಮಿಸ್ ಮಾರ್ಥಾ ಆರ್ನಲ್ಡ್ ಎಂಬಾಕೆ ಮಿಸ್ ಹೌಡನ್ ಮತ್ತು ಇತರ ಕೆಲವರೊಂದಿಗೆ ಬ್ರೇಲ್ ಪುಸ್ತಕಗಳನ್ನು ಸಂಗ್ರಹಿಸತೊಡಗಿದರು. ಇದು 1882 ರಲ್ಲಿ ಕುರುಡರಿಗಾಗಿ ರಾಷ್ಟ್ರೀಯ ಗ್ರಂಥಾಲಯವೊಂದರ ಸ್ಥಾಪನೆಗೆ ಬೀಜವಾಯಿತು. ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಕಟ್ಟಿದ ಕೀರ್ತಿ ಅಲ್ಲಿಯ ಗ್ರಂಥಪಾಲ ಎಥೆಲ್ ಮಿನಿಫ್ರೆಡ್ ಆಸ್ಟಿನ್‍ಗೆ ಸಲ್ಲುತ್ತದೆ.

ಹೀಗಾಗಿ ಇಲ್ಲಿ ಗಮನಿಸಬೇಕಾದ ಬಹುಮುಖ್ಯವಾದ ಒಂದು ಅಂಶ ಇದು. ಬ್ರಿಟನ್ನಿನಲ್ಲಿ ಈ ಗ್ರಂಥಾಲಯ ಸೇವೆಯ ಒಂದು ಅಗತ್ಯವನ್ನು ಪೂರೈಸಿದುದು ದಾನ ಮನೋಭಾವವಿದ್ದ ವ್ಯಕ್ತಿಗಳ ಕೊಡುಗೆಯಿಂದಲ್ಲ; ಅದು ಆದದ್ದು ಸ್ವಯಂ ಅಂಧನಾದ ವ್ಯಕ್ತಿಯೊಬ್ಬನ ಪರಿಶ್ರಮದಿಂದ. ಇನ್ನೊಂದು ಮುಖ್ಯ ವಿಚಾರವೆಂದರೆ ಮೊದಲಿಂದಲೇ ಇಲ್ಲಿ ಸ್ವಯಂಪ್ರೇರಣೆಗೆ ಪ್ರಾಧಾನ್ಯ ಕೊಟ್ಟದ್ದು. ಇಂದಿಗೂ ಕುರುಡರಿಗಾಗಿರುವ ರಾಷ್ಟ್ರೀಯ ಗ್ರಂಥಾಲಯದಲ್ಲಿ ಹಾಗೂ ವಿದ್ಯಾರ್ಥಿಗಳ ಗ್ರಂಥಾಲಯದಲ್ಲಿ ಲಿಪ್ಯಂತರಕ್ಕೆ ಮೊದಲಿನಿಂದಲೂ ಆಧಾರವಾಗಿ ಇಟ್ಟುಕೊಂಡಿರುವುದು ಇದೇ ಸ್ವಯಂ ಪ್ರೇರಣೆಯ ತತ್ತ್ವವನ್ನೇ.

ಸದ್ಯದಲ್ಲಿ ಕುರುಡರ ರಾಷ್ಟ್ರೀಯ ಗ್ರಂಥಾಲಯದಲ್ಲಿ ಕುರುಡರಿಗಾಗಿಯೇ 3 ಲಕ್ಷಗಳಿಗಿಂತಲೂ ಹೆಚ್ಚು ಪುಸ್ತಕಗಳಿವೆ. ಇದಲ್ಲದೆ ದಿ ರಾಯಲ್ ನ್ಯಾಷನಲ್ ಇನ್‍ಸ್ಟಿಟ್ಯೂಟ್ ಫಾರ್ ದಿ ಬ್ಲೈಂಡ್ ಎಂಬ ಸಂಸ್ಥೆ ಬೇರೆ ಬೇರೆ ಹಂತದ, ವರ್ಗದ ವಾಚಕರಿಗೆಂದೇ ಪುಸ್ತಕಗಳನ್ನು ರಚಿಸುತ್ತಿದೆ.

ವೆಸ್ಟ್‍ಮಿನಿಸ್ಟರನಲ್ಲಿರುವ ನ್ಯಾಷನಲ್ ಲೈಬ್ರರಿ ಫಾರ್ ದಿ ಬ್ಲೈಂಡ್ ಸಂಸ್ಥೆ ಬ್ರಿಟನ್ನಿಗೆ ಮಾತ್ರವಲ್ಲ, ಸಾಗರಾಂತರ ಪ್ರದೇಶಗಳಿಗೂ ತನ್ನ ಸೇವಾಹಸ್ತವನ್ನು ಚಾಚಿದೆ. ಪ್ರತಿ ವರ್ಷವೂ ಕುರುಡರಿಗಾಗಿ ವಾಚನ ಸ್ಪರ್ಧೆಯನ್ನು ಅದು ನಡೆಸುತ್ತದೆ. ಬ್ರೇಲ್ ಕರಡಚ್ಚು ತಿದ್ದುವವರು ಮತ್ತು ಪ್ರತಿಗಾರರಿಗೆ ಕೆಲಸ ಕೊಡುವ ಒಂದು ಯೋಜನೆ ಕೂಡ ಈ ಗ್ರಂಥಾಲಯದಲ್ಲಿದೆ. ಇದು ಆ ಗ್ರಂಥಾಲಯಕ್ಕೂ ಮನೆಯಲ್ಲಿಯೇ ಕುಳಿತು ಕೆಲಸ ಮಾಡುವವರಿಗೂ ಏಕಕಾಲದಲ್ಲಿ ನೆರವು ನೀಡುತ್ತದೆ.

ಕುರುಡು ವಿದ್ಯಾರ್ಥಿಗಳಿಗಾಗಿ ಗ್ರಂಥಾಲಯವನ್ನು 1920ರಲ್ಲಿ ಸ್ಥಾಪಿಸಲಾಯಿತು. ಇದು ಒಂದನೆಯ ಮಹಾಯುದ್ಧದ ಸಮಯದಲ್ಲಿ ಅನುಭವಕ್ಕೆ ಬಂದ ಬೇಡಿಕೆಯ ಫಲ. ಸೈನ್ಯದ ಅನೇಕಾನೇಕ ಯುವಕರು ಕಣ್ಣು ಕಳೆದುಕೊಂಡಿದ್ದರು. ಯುದ್ಧಾನಂತರದ ವೃತ್ತಿಗಾಗಿ ಅವರಿಗೆ ತರಬೇತಿ ಕೊಡಬೇಕಾದ ಅಗತ್ಯ ಉಂಟಾಯಿತು. ಇದರ ಫಲವಾಗಿ ಅವರಿಗೆ ಪಠ್ಯಪುಸ್ತಕಗಳನ್ನು ಒದಗಿಸಲೆಂದೇ ಒಂದು ಗ್ರಂಥಾಲಯ ಹುಟ್ಟಿದ್ದು. 1970ರ ದಶಕದಲ್ಲಿ ಅದರಲ್ಲಿ 30,000ಕ್ಕಿಂತಲೂ ಹೆಚ್ಚು ಪುಸ್ತಕಗಳಿದ್ದು ಪ್ರಪಂಚದ ಎಲ್ಲ ಭಾಗಗಳ ಅಂಧವಿದ್ಯಾರ್ಥಿಗಳಿಗೂ ಅದು ಈಗ ಸೇವೆ ಸಲ್ಲಿಸುತ್ತಿದೆ. ಅದರ ಮುಖ್ಯ ಕರ್ತವ್ಯ ವಾಚಕರಿಗೆ, ಮುಖ್ಯವಾಗಿ ಬ್ರಿಟನ್ನಿನಲ್ಲಿರುವವರಿಗೆ, ಅಧ್ಯಯನ ಅಥವಾ ವೃತ್ತಿಗೆ ಸಂಬಂಧಿಸಿದಂತೆ ವಿಷಯವನ್ನು ಬ್ರೇಲ್ ಲಿಪಿಯಲ್ಲಿ ಒದಗಿಸುವುದು.

ಕುರುಡರ ರಾಷ್ಟ್ರೀಯ ಗ್ರಂಥಾಲಯ ಹಾಗೂ ವಿದ್ಯಾರ್ಥಿ ಗ್ರಂಥಾಲಯಗಳು ಇತರ ಗ್ರಂಥಾಲಯಗಳಿಗಿಂತ ಬೇರೆಯೇ ಆಗಿವೆ. ಅವು ಪುಸ್ತಕಗಳನ್ನು ವಿತರಣೆ ಮಾಡುವುದಲ್ಲದೆ ಪುಸ್ತಕಗಳನ್ನು ತಯಾರಿಸುತ್ತವೆ; ಅಂಚೆ ಮೂಲಕ ರವಾನಿಸುತ್ತವೆ.

ವಾಚಕರು ಪುಸ್ತಕಗಳನ್ನು ಆರಿಸಿಕೊಳ್ಳಲು ಅನುಕೂಲವಾಗುವಂತೆ ನ್ಯಾಷನಲ್ ಲೈಬ್ರರಿ ಅಚ್ಚಿನಲ್ಲೂ ಬ್ರೇಲ್‍ನಲ್ಲೂ ಸೂಚಿಗಳನ್ನು ಪ್ರಕಟಿಸುತ್ತದೆ. ಮಿಕ್ಕೆಲ್ಲ ಅಚ್ಚಾದ ಗ್ರಂಥಸೂಚಿಗಳಂತೆ ಇವು ಪ್ರಕಟವಾಗುವುದಕ್ಕೆ ಮೊದಲೇ ತುಂಬ ಹಳತಾಗಿ ಬಿಡುತ್ತಿದ್ದುದರಿಂದ ವರ್ಷಕ್ಕೆ ಆರು ಸಲ ಸಾಮಾನ್ಯ ಅಚ್ಚಿನಲ್ಲೂ ಬ್ರೇಲ್‍ನಲ್ಲೂ ಬ್ರೇಲ್ ಲೈಬ್ರರಿ ಬುಲೆಟಿನ್ ಪ್ರಕಟವಾಗುತ್ತಿದೆ.

ಅನೇಕ ವರ್ಷಗಳ ಪ್ರಯೋಗಗಳಾದ ಮೇಲೆ ರಾಯಲ್ ನ್ಯಾಷನಲ್ ಇನ್ಸ್‍ಸ್ಟಿಟ್ಯೂಟ್ ಫಾರ್ ದಿ ಬ್ಲೈಂಡ್ (ಆರ್‍ಎನ್‍ಐಬಿ) ಸಂಸ್ಥೆ ತೆಳುವಾದ ಆದರೆ ಗಟ್ಟಿಯಾದ ಕಾಗದದ ಮೇಲೆ ಪ್ಲಾಸ್ಟಿಕ್ಕಿನ ಗಟ್ಟಿ ಚುಕ್ಕೆಗಳನ್ನಿಡುವ ಮತ್ತು ಶಾಖದಿಂದ ಅವನ್ನು ಸೀಲುಮಾಡುವ ವಿಧಾನವೊಂದನ್ನು ರೂಪಿಸಿದೆ. ಬ್ರೇಲ್ ಮುದ್ರಣದ ಈ ಹೊಸ ವಿಧಾನ ಗಟ್ಟಿ ಚುಕ್ಕೆ ವಿಧಾನವೆಂದು ವ್ಯಾಪಕವಾಗಿ ಪ್ರಸಿದ್ಧಿ ಗಳಿಸಿದೆ. ಹಿಂದಿನ ಸಾಂಪ್ರದಾಯಿಕ ಬ್ರೇಲನ ವಿಧಾನದಲ್ಲಿ ಎರಡು ಅನನುಕೂಲಗಳಿದ್ದವು. ಉಪಯೋಗಿಸುವ ಕಾಗದ ಮಂದವಾಗಿದ್ದು ಹಾಗೂ ಚುಕ್ಕೆಗಳು ಹೆಚ್ಚು ಕಾಲ ಬಾಳಿಕೆ ಬರುತ್ತಿರಲಿಲ್ಲ. ಗಟ್ಟಿ ಚುಕ್ಕೆ ವಿಧಾನದಲ್ಲಿ ಬಳಸುವ ಕಾಗದ ತೆಳು, ಪ್ಲಾಸ್ಟಿಕ್ ಚುಕ್ಕೆಗಳು ಸವೆಯದಂಥವು.

**ಮಾತನಾಡುವ ಪುಸ್ತಕಗಳು :** ಬ್ರೇಲ್ ಓದಿಕೆಯ ಮೇಲೆ ಪರಿಣಾಮ ಮಾಡಿದ ಒಂದು ಹೊಸ ತಂತ್ರ ಮಾತಾಡುವ ಪುಸ್ತಕಗಳನ್ನು ಕಂಡುಹಿಡಿದದ್ದು. ಆರ್‍ಎನ್ ಐಬಿಯ ಶಾಖೆಯಾದ ಬ್ರಿಟಿಷ್ ಟಾಕಿಂಗ್ ಬುಕ್ ಲೈಬ್ರರಿ ಫಾರ್ ದಿ ಬ್ಲೈಂಡ್ ಸಂಸ್ಥೆ ಇವನ್ನು

ರೂಪಿಸಿತು. ಯು. ಕೆ. ಯಲ್ಲಿ ಅಂಧಜನತೆಯ ಶೇ.21 ಭಾಗ ಬ್ರೇಲ್ ಓದುತ್ತಾರೆ. ಶೇ.7 ಮೂನ್ ಓದುತ್ತಾರೆ. ಮಿಕ್ಕ ಶೇ.72 ಭಾಗ ಸ್ವಲ್ಪವೂ ಓದಲಾರರು– ಎಂದು ಒಂದು ಅಂದಾಜು. ಆದ್ದರಿಂದ ಈ ಬಗೆಯ ಜನರಿಗೆ ಮಾತನಾಡುವ ಪುಸ್ತಕಗಳು ವರವಾಗಿ ಪರಿಣಮಿಸಿವೆ.

ಈ ಸೇವೆ 1930ರ ಸುಮಾರಿನಲ್ಲಿ ಮಾಮೂಲಿ ಗ್ರಾಮಾಫೋನ್ ಧ್ವನಿಮುದ್ರಿಕೆಗಳಿಂದ ಪ್ರಾರಂಭವಾಯಿತು. ವಾಸ್ತವವಾಗಿ ಇದರ ನಿಜವಾದ ಪ್ರಯೋಜನ ಗೊತ್ತಾದದ್ದು ತಟ್ಟೆಗಳಿಂದಲ್ಲ. ಆಯಸ್ಕಾಂತ ಟೇಪುಗಳಿಂದ. ಕೆಲವು ವರ್ಷಗಳ ಪ್ರಯೋಗವಾದ ಮೇಲೆ 1959ರಲ್ಲಿ ಮಾತಾಡುವ ಪುಸ್ತಕಗಳ ಗ್ರಂಥಾಲಯ ಟೇಪುಗಳಿಗೆ ಪರಿವರ್ತಿತವಾಯಿತು. ಇದಕ್ಕೆ 18 ಜಾಡುಗಳಿರುವ ಟೇಪನ್ನು ಉಪಯೋಗಿಸಲಾಗುತ್ತದೆ. ಸಂಪೂರ್ಣವಾಗಿ ಇದನ್ನು ಒಂದು ಸುರುಳಿಯಲ್ಲಿ ಅಡಕಗೊಳಿಸಿರುತ್ತಾರೆ. ಓದುಗ ಮಾಡಬೇಕಾದದ್ದು ಇಷ್ಟೇ. ಅದನ್ನು ಒಂದು ವಿಶೇಷ ಯಂತ್ರದ ಮೇಲಿಟ್ಟು ಸ್ವಿಚ್ಚನ್ನು ಅದುಮುವುದು ಮತ್ತು ಶಬ್ದವನ್ನು ತನಗೆ ಬೇಕಾದ ಪ್ರಮಾಣಕ್ಕೆ ಹೊಂದಿಸಿಕೊಳ್ಳುವುದು. ಈ ವಿಧಾನ ಬಹು ಸರಳ. ವಿಶೇಷ ಯಂತ್ರಗಳಿಂದ ಮಾತ್ರವೇ ಇದನ್ನು ನಡೆಸಲು ಸಾಧ್ಯ ಎಂದು ನಿಗದಿ ಮಾಡಿ ಗ್ರಂಥ ಸ್ವಾಮ್ಯದ ಸಮಸ್ಯೆಯನ್ನು ಪರಿಹರಿಸಲಾಗಿದೆ. ಈ ಬಗೆಯ ಗ್ರಂಥಾಲಯ ಸೇವೆ ಬಹಳ ವೇಗವಾಗಿ ಬೆಳೆದಿದೆ. ಆಗಲೇ ಮೊದಲಿನ ಬ್ರೇಲ್ ಮತ್ತು ಮೂನ್ ಮಾದರಿಗಳನ್ನು ಇದು ಹಿಂದೆ ಹಾಕುತ್ತಿದೆ. ಆದರೂ ಕಾರ್ಯತಃ ಆ ವಿಧಾನಗಳೊಂದಿಗೆ ಇದೂ ಒಂದಾಗಿದೆ.

ಭಾಗಶಃ ಅಂಧರಾಗಿರುವವರ ಸಮಸ್ಯೆ ನಿಜಕ್ಕೂ ವಿಚಿತ್ರವಾದುದು. ಸಾಮಾನ್ಯವಾದ ಮುದ್ರಿತ ಪುಸ್ತಕಗಳನ್ನು ಅವರು ಓದಲಾರರು. ಬ್ರೇಲ್ ಅಥವಾ ಕುರುಡರಿಗಾಗಿರುವ ಇತರ ಸೇವೆಗಳನ್ನು ಉಪಯೋಗಿಸಿಕೊಳ್ಳಬೇಕಾದಷ್ಟು ಅವರು ಕುರುಡರಲ್ಲ. ಅಂಥವರಿಗಾಗಿಯೇ ನ್ಯಾಷನಲ್ ಲೈಬ್ರರಿ ಫಾರ್ ದಿ ಬ್ಲೈಂಡ್ ವಿಶೇಷ ರೀತಿಯ ದಪ್ಪಕ್ಷರದ ಅಚ್ಚಿನ ಪುಸ್ತಕಗಳನ್ನು ತಯಾರಿಸಿದೆ.

ಅಂಧರಿಗಾಗಿ ಗ್ರಂಥಾಲಯ ಸೇವೆಯನ್ನು ಒದಗಿಸುವಲ್ಲಿ ತೀವ್ರವಾದ ಆಸಕ್ತಿ ತಳೆದಿರುವ ಇತರ ರಾಷ್ಟ್ರಗಳೆಂದರೆ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಕೆನಡ, ರಷ್ಯ, ಆಸ್ಟ್ರೇಲಿಯ, ನ್ಯೂಜಿಲೆಂಡ್, ಮೆಕ್ಸಿಕೊ, ಸ್ವೀಡನ್ ಮತ್ತು ಭಾರತ.

1965ರ ಮೇ ತಿಂಗಳಿನಿಂದ ಗ್ರೇಟ್‌ಬ್ರಿಟನ್ ಮತ್ತು ಉತ್ತರ ಐರ್ಲೆಂಡಿನಲ್ಲಿ ಕುರುಡರಿಗಾಗಿ ತಯಾರಾಗಿರುವ ಎಲ್ಲ ಬಗೆಯ ಪುಸ್ತಕಗಳನ್ನು ಅಂಚೆವೆಚ್ಚವಿಲ್ಲದೆ ಉಚಿತವಾಗಿ ಕಳುಹಿಸಲಾಗುತ್ತಿದೆ.

1963ರಲ್ಲಿ ಡೆಹರಾಡೂನಿನಲ್ಲಿ ಕುರುಡರಿಗಾಗಿ ಒಂದು ರಾಷ್ಟ್ರೀಯ ಗ್ರಂಥಾಲಯವನ್ನು ಸ್ಥಾಪಿಸಿ ಭಾರತ ಸರ್ಕಾರ ಈ ನಿಟ್ಟಿನಲ್ಲಿ ಮಹತ್ತ್ವದ ಹೆಜ್ಜೆಯಿಟ್ಟಿತು. ಈಗ ಈ ಗ್ರಂಥಾಲಯ ಸಂಗ್ರಹದಲ್ಲಿ ಬ್ರೇಲ್ ಪುಸ್ತಕಗಳಿವೆ. ರಾಷ್ಟ್ರಾದ್ಯಂತ ಬಹಳಷ್ಟು ಅಂಧರು ಅವನ್ನು ಉಪಯೋಗಿಸುತ್ತಿದ್ದಾರೆ. ಯು. ಕೆ. ಯಂತೆಯೇ ಭಾರತದಲ್ಲಿ ಯಾವ ಭಾಗದ ವ್ಯಕ್ತಿಯೇ ಆಗಲಿ, ಕುರುಡನಾಗಿದ್ದರೆ, ಅಂಚೆವೆಚ್ಚವಿಲ್ಲದೆ ಉಚಿತವಾಗಿ ಪುಸ್ತಕಗಳನ್ನು ಎರವಲು ಪಡೆಯಬಹುದು. ಪ್ರತಿಯೊಂದು ರಾಜ್ಯದಲ್ಲೂ ಅವರಿಗಾಗಿಯೇ ಒಂದೊಂದು ಸ್ವತಂತ್ರವಾದ ಗ್ರಂಥಾಲಯವನ್ನೋ ಅಥವಾ ರಾಜ್ಯ ಗ್ರಂಥಾಲಯಗಳಲ್ಲಿ ವಿಶಿಷ್ಟವಾದ ವಿಭಾಗಗಳನ್ನೋ, ತೆರೆಯಬೇಕಾದ ತುರ್ತು ಅಗತ್ಯವಿದೆ. 1965ರ ಮೈಸೂರು ಸಾರ್ವಜನಿಕ ಗ್ರಂಥಾಲಯ ಕಾಯಿದೆಯ ಪ್ರಕಾರ ಬೆಂಗಳೂರಿನ ಕೇಂದ್ರ ರಾಜ್ಯ ಗ್ರಂಥಾಲಯದಲ್ಲಿ ಅಂಥದೊಂದು ವಿಭಾಗವನ್ನು ತೆರೆಯಲು ಅವಕಾಶ ಉಂಟಾಗಿದೆ. (ಎಚ್.ಎ.ಕೆ.)

**12. ಜೈಲು ಗ್ರಂಥಾಲಯಗಳು :** ಕೈದಿಗಳಿಗೆ ಮನರಂಜನೆಯ ಜೊತೆಗೆ ತಿಳಿವಳಿಕೆಯನ್ನು ಕೊಡುವ ಸಲುವಾಗಿ ಇರುವ ಗ್ರಂಥಾಲಯಗಳಿವು. ಇವು ಜೈಲುಗಳಿಗೆ ಹೊಂದಿಕೊಂಡಂತೆಯೇ ಇರುತ್ತವೆ. ಕೈದಿಗಳಿಗೆ ಮುಖ್ಯವಾಗಿ ಎರಡು ರೀತಿಯಲ್ಲಿ ಇವು ನೆರವಾಗುತ್ತವೆ; ವೃತ್ತಪತ್ರಿಕೆಗಳನ್ನು ಒದಗಿಸಿ ಹೊರಗಿನ ಪ್ರಪಂಚದ ಆಗುಹೋಗುಗಳ ಬಗ್ಗೆ ತಿಳಿವಳಿಕೆ ಕೊಡುವುದು. ಉತ್ತಮ ಗ್ರಂಥಗಳನ್ನು ಒದಗಿಸಿ ವ್ಯಕ್ತಿತ್ವವನ್ನು ಸುಧಾರಿಸಿಕೊಳ್ಳಲು ಪ್ರೇರೇಪಿಸುವುದು.

ಜೈಲು ಗ್ರಂಥಾಲಯಗಳನ್ನು ಕುರಿತ ಮೊದಲ ಶಾಸನ ಇಂಗ್ಲೆಂಡಿನಲ್ಲಿ ಜಾರಿಗೆ ಬಂದದ್ದು 1877ರಲ್ಲಿ. ಮೊದಮೊದಲು ತಮ್ಮ ಶಿಕ್ಷೆಯ ಮೂರು ತಿಂಗಳ ಅವಧಿಯನ್ನು ಪೂರೈಸಿದವರಿಗೆ ಮಾತ್ರ ಅಲ್ಲಿ ಪುಸ್ತಕಗಳನ್ನು ಕೊಡುತ್ತಿದ್ದರಂತೆ.

ಭಾರತದಲ್ಲಿ ಸ್ವಾತಂತ್ರ್ಯಸಮರದ ಸಮಯದಲ್ಲಿ ಜೈಲು ಗ್ರಂಥಾಲಯಗಳು ವಿಶೇಷವಾಗಿ ಬೆಳೆದವು. ಹಿಂಡು ಹಿಂಡಾಗಿ ಜೈಲುಗಳನ್ನು ಪ್ರವೇಶಿಸುತ್ತಿದ್ದ ಸುಶಿಕ್ಷಿತ ರಾಜಕೀಯ ಕೈದಿಗಳಿಗೆ ಪುಸ್ತಕಗಳನ್ನು ಒದಗಿಸುವುದು ಇವುಗಳ ಮುಖ್ಯ ಕೆಲಸವಾಗಿತ್ತು. ಕೆಲವರಿಗೆ ತಮ್ಮ ಸ್ವಂತ ಪುಸ್ತಕಗಳನ್ನು ಜೈಲಿಗೆ ತೆಗೆದುಕೊಂಡು ಹೋಗುವ ಅವಕಾಶವೂ ಇತ್ತು.

ಜೈಲು ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡುವಾಗ ವಿಶೇಷ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಸಾಕಷ್ಟು ಕಲಿತ ಕೈದಿಗಳಿಗೆ ಉಪಯೋಗವಾಗುವುದರ ಜೊತೆಗೆ ಸಾಮಾನ್ಯ ಜ್ಞಾನಮಟ್ಟದ ಕೈದಿಗಳಿಗೂ ಅದರಿಂದ ಪ್ರಯೋಜನವಾಗುವಂತಿರಬೇಕು. ಶುದ್ಧವಾದ ಸಂತೋಷ, ವಿಶ್ರಾಂತಿ, ಆದರ್ಶ– ಇವನ್ನು ನೀಡಬಲ್ಲ ಪುಸ್ತಕಗಳಿದ್ದರೆ ಉತ್ತಮ. ಸಾಮಾನ್ಯ ಕೈದಿಗಳಿಗೆ ಪುಸ್ತಕದ ಒಪ್ಪ–ಓರಣಗಳನ್ನು ಕುರಿತು ಹೇಳುವುದು ಒಳ್ಳೆಯದು.

ಅಮೆರಿಕ, ಇಂಗ್ಲೆಂಡ್, ನ್ಯೂಜಿಲೆಂಡ್ ಮೊದಲಾದ ವಿದೇಶಗಳ ಜೈಲು ಗ್ರಂಥಾಲಯಗಳು ವಿಶೇಷ ಪ್ರಗತಿಯನ್ನು ಸಾಧಿಸಿವೆ. ಭಾರತದ ಜೈಲು ಗ್ರಂಥಾಲಯಗಳು ಸುಧಾರಣೆಯ ದಾರಿಯಲ್ಲಿವೆ. (ಎಚ್.ಎ.ಕೆ.)

**E. ರಾಷ್ಟ್ರೀಯ ಗ್ರಂಥಾಲಯಗಳು :** ಗ್ರಂಥಾಲಯ ಚರಿತ್ರೆಯಲ್ಲಿ ರಾಷ್ಟ್ರೀಯ ಗ್ರಂಥಾಲಯಗಳ ಸ್ಥಾಪನೆ ಮುಖ್ಯ ಘಟ್ಟಗಳಲ್ಲೊಂದಾಗಿದೆ. ರಾಷ್ಟ್ರೀಯ ವ್ಯಾಪ್ತಿಯ, ಪ್ರಮುಖ ದಾಖಲೆಗಳನ್ನು ಸಂಗ್ರಹಿಸುವಲ್ಲಿ ರಾಷ್ಟ್ರದ ವಿವಿಧ ವರ್ಗದ ಗ್ರಂಥಾಲಯಗಳನ್ನು ಬೆಳೆಸುವಲ್ಲಿ ಇವು ನಿರ್ವಹಿಸುತ್ತಿರುವ ಪಾತ್ರ ನಿಜಕ್ಕೂ ಗಮನಾರ್ಹವಾದುದು. ಇಲ್ಲಿ ಏಳು ರಾಷ್ಟ್ರೀಯ ಗ್ರಂಥಾಲಯಗಳ ಪರಿಚಯವನ್ನು ಕೊಡಲಾಗಿದೆ.

**1 ಲೈಬ್ರರಿ ಆಫ್ ಕಾಂಗ್ರೆಸ್ :** ಅಮೆರಿಕದ ರಾಷ್ಟ್ರೀಯ ಗ್ರಂಥಾಲಯ. ವಾಷಿಂಗ್ಟನ್ ಪಟ್ಟಣದಲ್ಲಿದೆ. ಸುಮಾರು ಮೂರು ಕೋಟಿಗಿಂತಲೂ ಹೆಚ್ಚು ಗ್ರಂಥಗಳನ್ನು ಹೊಂದಿರುವ ಇದು ಪ್ರಪಂಚದಲ್ಲಿಯೇ ಅತಿ ದೊಡ್ಡ ಎರಡು ಗ್ರಂಥಾಲಯಗಳಲ್ಲೊಂದು. ಮತ್ತೊಂದು ಲೈಬ್ರರಿ ಕಾಂಗ್ರೆಸ್ ಸೆನೆಟ್ ಸದಸ್ಯರಿಗೂ ಸರ್ಕಾರಿ ಅಧಿಕಾರಿಗಳಿಗೂ ಅವಶ್ಯವಾದ ಮಾಹಿತಿಗಳನ್ನು ಮತ್ತು ಗ್ರಂಥಗಳನ್ನು ಪೂರೈಸುವ ಉದ್ದೇಶದಿಂದ ಈ ಗ್ರಂಥಾಲಯ ಸ್ಥಾಪಿಸಲ್ಪಟ್ಟಿತು (1800). ಗ್ರಂಥಾಲಯ ಬೆಳೆದಂತೆ ಸಾರ್ವಜನಿಕರಿಗೂ ಇದರ ಸೇವೆ ದೊರೆಯತೊಡಗಿತು.

ಲೈಬ್ರರಿ ಆಫ್ ಕಾಂಗ್ರೆಸ್–ಪ್ರಧಾನ ವಾಚನಾಲಯ

ನಾಲ್ಕು ಭವ್ಯ ಕಟ್ಟಡಗಳಲ್ಲಿರುವ ಈ ಮಹಾಗ್ರಂಥಾಲಯಕ್ಕೆ ಆರು ಎಕರೆಯಷ್ಟು ವಿಸ್ತಾರವಾದ ಪರಿಸರವಿದೆ. ಇಟಾಲಿಯನ್ ವಾಸ್ತುಶೈಲಿಯಲ್ಲಿರುವ ಮೊದಲನೆಯ ಕಟ್ಟಡ 1897ರಲ್ಲಿ ಮತ್ತು ಐದು ಮಾಳಿಗೆಯ ಎರಡನೆಯ ಕಟ್ಟಡ 1939ರಲ್ಲಿ ಕಟ್ಟಲ್ಪಟ್ಟವು. ನೆಲಮಾರ್ಗವೊಂದು ಎರಡೂ ಕಟ್ಟಡಗಳ ನಡುವೆ ಸಂಪರ್ಕ ಕಲ್ಪಿಸಲು ಸಹಾಯಕ ವಾಗಿದೆ. ನೆಲಮಾರ್ಗದ ಉದ್ದಕ್ಕೂ ಇರುವ ನ್ಯೂಮಾಟಿಕ್ ಟ್ಯೂಬುಗಳು ಗ್ರಂಥಗಳನ್ನು ಒಂದು ಕಟ್ಟಡದಿಂದ ಮತ್ತೊಂದು ಕಟ್ಟಡಕ್ಕೆ ಕೇವಲ ಮೂವತ್ತು ಸೆಕೆಂಡುಗಳಲ್ಲಿ ತಲುಪಿಸುತ್ತವೆ. ಹನ್ನೊಂದನೆಯ ಗ್ರಂಥಪಾಲನಾದ ಎಲ್. ಕ್ವಿನ್ಸಿ ಮಂಫೋರ್ಡನ ಅವಧಿಯಲ್ಲಿ (1953–74) ಮೂರನೆಯ ಕಟ್ಟಡವೂ 1990ರ ದಶಕದಲ್ಲಿ ನಾಲ್ಕನೆಯ ಕಟ್ಟಡವೂ ನಿರ್ಮಾಣಗೊಂಡವು. ಗ್ರಂಥಾಲಯದಲ್ಲಿರುವ ಗ್ರಂಥಗಳು, ನಿಯತಕಾಲಿಕೆಗಳು, ಗ್ರಾಮಾಫೋನ್ ರೆಕಾರ್ಡುಗಳು, ನಕಾಶೆಗಳು, ಹಸ್ತಪ್ರತಿಗಳು ಮೊದಲಾದವುಗಳನ್ನಿಟ್ಟ ಕಪಾಟುಗಳನ್ನು ಸಾಲಾಗಿ ನಿಲ್ಲಿಸಿದರೆ 400 ಮೈಲಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಪ್ರಪಂಚದ ಮೂಲೆ ಮೂಲೆಗಳಿಂದ ಪ್ರತಿವಾರವೂ ಸಾವಿರಾರು ಗ್ರಂಥಗಳು ಇಲ್ಲಿಗೆ ಬರುತ್ತವೆ. ಅಲ್ಲದೆ ಕೃತಿಸ್ವಾಮ್ಯ ಕಾನೂನಿನ ಅನ್ವಯ ಅಮೆರಿಕದಲ್ಲಿ ಪ್ರಕಟಗೊಂಡ ಗ್ರಂಥಗಳ ಒಂದೊಂದು ಪ್ರತಿ ಗ್ರಂಥಾಲಯವನ್ನು ಸೇರುತ್ತದೆ. ಗ್ರಂಥಗಳ ವಿನಿಮಯದ ಮೂಲಕ ಹಾಗೂ ದಾನರೂಪದಲ್ಲಿ ಸಾವಿರಾರು ಗ್ರಂಥಗಳು ಇಲ್ಲಿ ಪ್ರತಿವರ್ಷ ಸಂಗ್ರಹವಾಗುತ್ತವೆ.

ಈ ಗ್ರಂಥಾಲಯ ಎರಡು ವಿಪತ್ತುಗಳನ್ನು ಎದುರಿಸಿದೆ. ಮೊದಲನೆಯದು ಗ್ರಂಥಾಲಯ ಪ್ರಾರಂಭವಾದ ಕೆಲವೇ ವರ್ಷಗಳಲ್ಲಿ ಇಲ್ಲಿದ್ದ 1,000 ಗ್ರಂಥಗಳು ಆಕಸ್ಮಿಕವಾಗಿ ಅಗ್ನಿಗೆ

ಆಹುತಿಯಾದವು (1814). 1851ರಲ್ಲಿ ಪುನಃ ಗ್ರಂಥಾಲಯದಲ್ಲಿಯ ಸುಮಾರು ಅರ್ಧದಷ್ಟು ಗ್ರಂಥಗಳು ಬೆಂಕಿಯ ಒಡಲನ್ನು ಸೇರಿದವು. ಥಾಮಸ್ ಜೆಫರಸನ್ನನ 6,487 ಗ್ರಂಥಗಳನ್ನು 1815ರಲ್ಲಿ ಈ ಗ್ರಂಥಾಲಯ ಪಡೆಯಿತು.

ಈ ಗ್ರಂಥಾಲಯದಲ್ಲಿರುವ ಅನ್ಯತ್ರ ಅಲಭ್ಯ, ಅಮೂಲ್ಯ ಗ್ರಂಥಗಳ ಸಂಖ್ಯೆ ಮೂರು ಲಕ್ಷಕ್ಕಿಂತಲೂ ಹೆಚ್ಚು. ಚಲಿಸುವ ಅಚ್ಚುಗಳಲ್ಲಿ ಪ್ರಪ್ರಥಮವಾಗಿ ಮುದ್ರಿತವಾಗಿ ಪ್ರಕಟವಾದ ಗುಟೆನಬರ್ಗ್ ಬೈಬಲ್ ಇಲ್ಲಿದೆ. 1501ಕ್ಕಿಂತ ಮೊದಲು ಪ್ರಕಟವಾದ ಸುಮಾರು 5,600 ಗ್ರಂಥಗಳು ಇಲ್ಲಿವೆ. ಅಮೆರಿಕದ ಮಾಜೀ ಅಧ್ಯಕ್ಷರುಗಳ ಪತ್ರಗಳು ಮತ್ತು ಭಾಷಣಗಳ ಸಂಗ್ರಹ ಹಾಗೂ ಸಾಹಿತಿಗಳ ಹಸ್ತಪ್ರತಿಗಳನ್ನು ಇಲ್ಲಿ ಕಾಣಬಹುದು. ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮದ ಹಲವು ದಾಖಲೆಗಳೂ ಇಲ್ಲಿವೆ.

ಚೀನಿ ಭಾಷೆಯ 3,60,000 ಗ್ರಂಥಗಳಲ್ಲದೆ ಜಪಾನಿ, ಕೊರಿಯ, ಪಾರಸಿ, ಬಂಗಾಲಿ, ಸಂಸ್ಕೃತ, ಹಿಂದಿ, ಉರ್ದು, ಮರಾಠಿ, ಕನ್ನಡ ಭಾಷೆಗಳ ಹಲವಾರು ಗ್ರಂಥಗಳೂ ಇಲ್ಲಿವೆ.

ಈ ಗ್ರಂಥಾಲಯದಲ್ಲಿ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸುವವರ ಸಂಖ್ಯೆ 4000. ಇವರಲ್ಲಿ ಅನೇಕರು ಪ್ರಪಂಚದ ವಿವಿಧ ಭಾಷೆಗಳಲ್ಲಿ ಪರಿಣತರು. ಈ ಗ್ರಂಥಾಲಯಕ್ಕೆ ಪ್ರತಿನಿತ್ಯವೂ ಓದುಗರು ಗ್ರಂಥಗಳನ್ನು ಎರವಲು ಪಡೆಯುವುದಕ್ಕೆ, ಅಧ್ಯಯನಕ್ಕೆ ಮತ್ತು ಮಾಹಿತಿ ಪಡೆಯುವುದಕ್ಕೆ ಬರುತ್ತಾರೆ. ಅಂಚೆಯ ಮೂಲಕ ವಿವಿಧ ವಿಷಯಗಳ ಮಾಹಿತಿಯನ್ನು ಒದಗಿಸುವ ಸೌಲಭ್ಯವೂ ಇಲ್ಲುಂಟು. ಪ್ರಪಂಚದ ವಿವಿಧ ದೇಶಗಳ ಸುಮಾರು ಓದುಗರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೀಗೆ ಕಾಂಗ್ರೆಸ್ ಗ್ರಂಥಾಲಯದ ಸೇವೆ ಅಮೆರಿಕದ ಜನರಿಗಷ್ಟೇ ಅಲ್ಲ ಪ್ರಪಂಚದ ವಿವಿಧ ದೇಶಗಳಲ್ಲಿರು ವವರಿಗೂ ದೊರೆಯುತ್ತಿದೆ.

ಲೈಬ್ರರಿ ಆಫ್ ಕಾಂಗ್ರೆಸ್ ಅಮೆರಿಕದ ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವೂ ಹೌದು. ಇಲ್ಲಿ ಕಾಲಕಾಲಕ್ಕೆ ದೇಶ ವಿದೇಶಗಳ ಸಾಹಿತ್ಯದ ಮಹಾಗ್ರಂಥಗಳ ವಿಮರ್ಶನ ಕಾರ್ಯವನ್ನು ವಿದ್ವಾಂಸರು ಕೈಗೊಳ್ಳುತ್ತಾರೆ. 1961ರಲ್ಲಿ ರವೀಂದ್ರನಾಥ ಠಾಕೂರರ ಕೃತಿಗಳ ಪ್ರದರ್ಶನವೊಂದನ್ನು ಇಲ್ಲಿ ಏರ್ಪಡಿಸಲಾಗಿತ್ತು.

ಮುದ್ರಿತ ಸೂಚೀಪತ್ರಗಳ ವಿತರಣ ಕಾರ್ಯವನ್ನು ಲೈಬ್ರರಿ ಆಫ್ ಕಾಂಗ್ರೆಸ್ ಪ್ರಾರಂಭಿಸಿದ್ದು 1901ರಿಂದ. ಇಂದು ಸುಮಾರು 25,000 ಚಂದಾದಾರ ಗ್ರಂಥಾಲಯಗಳಿಗೆ ಅವುಗಳ ವಿತರಣೆ ಆಗುತ್ತಿದೆ. ಇತ್ತೀಚೆಗೆ ಈ ವಿತರಣ ಕಾರ್ಯವನ್ನು ಸಂಪೂರ್ಣವಾಗಿ ಯಂತ್ರೀಕರಿಸಲಾಗಿದೆ.

ಪ್ರಥಮತಃ 84 ಗ್ರಂಥಾಲಯಗಳ ಸಹಕಾರದೊಂದಿಗೆ ಸಂಯುಕ್ತಸೂಚಿಯನ್ನು ತಯಾರಿಸುವ ಕಾರ್ಯ ಪ್ರಾರಂಭವಾಯಿತು. ಈ ಬೃಹತ್ ಯೋಜನೆಗೆ ರಾಕ್‍ಫೆಲರ್ ಪ್ರತಿಷ್ಠಾನ ಧನಸಹಾಯವಿತ್ತಿದೆ. ಇಂದು ಈ ಯೋಜನೆಯಲ್ಲಿ ಸುಮಾರು 700 ಗ್ರಂಥಾಲಯಗಳು ಭಾಗವಹಿಸುತ್ತಿದ್ದು ಸುಮಾರು ಒಂದು ಕೋಟಿ ಗ್ರಂಥಗಳ ಸೂಚೀಪತ್ರಗಳನ್ನು ಸಂಕಲ್ಪಿಸಲಾಗಿದೆ.

ಲೈಬ್ರರಿ ಆಫ್ ಕಾಂಗ್ರೆಸ್‍ನ ಪ್ರಸ್ತುತ (13ನೆಯ ಗ್ರಂಥಪಾಲ ಜೇಮ್ಸ್ ಎಚ್. ಬಿಲ್ಲಿಂಗ್‍ಟನ್ ಇವನ ಅವಧಿಯಲ್ಲಿ ಡಿಜಿಟಲ್ ಲೈಬ್ರರಿ ರೂಪಪಡೆಯಿತು. ಹನ್ನೊಂದನೆಯ ಗ್ರಂಥಪಾಲ. ಅಮೆರಿಕದ ಉನ್ನತ ದರ್ಜೆಯ ಅಧಿಕಾರಿಗಳಿಗೆ ಸಲ್ಲುವ ಸ್ಥಾನಮಾನ, ವೇತನಗಳನ್ನೇ ಗ್ರಂಥಪಾಲಕರಿಗೆ ಕೊಡಲಾಗಿದೆ. (ಎಸ್.ಎಚ್.ಕೆ.)

**2. ಜಪಾನಿನ ರಾಷ್ಟ್ರೀಯ ಸಂಸತ್ ಗ್ರಂಥಾಲಯ** : ಇಂದೊಂದು ರಾಷ್ಟ್ರೀಯ ಗ್ರಂಥಾಲಯ. 1948ರ ಫೆಬ್ರುವರಿ 9 ರಂದು ಜಾರಿಗೆ ಬಂದ ರಾಷ್ಟ್ರೀಯ ಸಂಸತ್ ಗ್ರಂಥಾಲಯ ಕಾನೂನಿನಂತೆ ಸ್ಥಾಪಿತವಾಯಿತು. ಇದು ಎರಡು ಸರ್ಕಾರಿ ಗ್ರಂಥಾಲಯಗಳ ಮತ್ತು ಹಲವು ಖಾಸಗಿ ಗ್ರಂಥಾಲಯಗಳ ಸಮಾವೇಶದಿಂದಾದುದು. ಸರ್ಕಾರದ ಕಾರ್ಯಾಂಗ ಮತ್ತು ನ್ಯಾಯಾಂಗ ವಿಭಾಗಗಳ ಗ್ರಂಥಾಲಯಗಳೂ ಇದರಲ್ಲಿ ಸೇರ್ಪಡೆಯಾಗಿವೆ. ಗ್ರಂಥಾಲಯ ಕಾನೂನಿನಂತೆ ದೇಶದಲ್ಲಿ ಪ್ರಕಟವಾಗುವ ಪತ್ರಿಕೆ ಮತ್ತು ಪುಸ್ತಕಗಳ ಒಂದೊಂದು ಪ್ರತಿಗಳು ಇಲ್ಲಿಗೆ ಬರುತ್ತವೆ. ಗ್ರಂಥಾಲಯದಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆ ಸು. 5 ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ಅತ್ಯಾಧುನಿಕ ಕಟ್ಟಡವನ್ನು ಹೊಂದಿರುವ ಗ್ರಂಥಾಲಯದಲ್ಲಿ ಸಾವಿರಕ್ಕೂ ಮಿಕ್ಕ ಓದುಗರಿಗೆ ಸ್ಥಳಾವಕಾಶ ಇದೆ. ಸಂಸತ್ತಿನ ಅನುಮತಿ ಪಡೆದು ಗ್ರಂಥಪಾಲಕನನ್ನು ನೇಮಿಸಲಾಗುತ್ತದೆ. ಗ್ರಂಥಾಲಯದ ಕಾರ್ಯ ನಿರ್ವಹಣೆ, ಚಟುವಟಿಕೆ ಮುಂತಾದುವನ್ನು ಈತ ಸಂಸತ್ತಿಗೆ ಆಗಾಗ್ಗೆ ವರದಿ ಮಾಡುತ್ತಾನೆ.

ಗ್ರಂಥಾಲಯಕ್ಕೆ ಮುಕ್ತ ಪ್ರವೇಶ ಇದೆ. ಸಂಸತ್ತು ಪರಿಶೀಲಿಸುವ ಕರಡು ಪ್ರತಿಗಳ ಸಿದ್ಧತೆಯಲ್ಲಿ ಇದರ ಪಾತ್ರ ಗಮನಾರ್ಹ. ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಿ ಸಂಸತ್ತಿಗೆ ಇದು ಒದಗಿಸುತ್ತದೆ. ಸಂಶೋಧನ ವಿಭಾಗ, ಗ್ರಂಥಸೂಚಿ ವಿಭಾಗ ಮೊದಲಾದ ವಿಶಿಷ್ಟ ವಿಭಾಗಗಳನ್ನಿದು ಹೊಂದಿದೆ.

ಗ್ರಂಥಾಲಯದ ಪ್ರಕಟಣೆಗಳಿವು : 1. ರಾಷ್ಟ್ರೀಯ ಗ್ರಂಥಸೂಚಿ. 2. ಕಾನೂನುಗಳ ಸೂಚಿ. 3. ಸಂಸತ್ ಚರ್ಚೆಗಳ ಸೂಚಿ. 4. ನಿಯತಕಾಲಿಕೆಗಳ ಲೇಖನ ಸೂಚಿ. 5. ಅಂಕಿ ಅಂಶಗಳ ಸೂಚಿ. 6. ವಿದೇಶೀ ಶಾಸನಗಳ ಸೂಚಿ.

ಅಂತಾರಾಷ್ಟ್ರೀಯ ಎರವಲು ಸೇವೆ ಗ್ರಂಥಾಲಯದ ಪ್ರಮುಖ ಚಟುವಟಿಕೆಗಳಲ್ಲೊಂದು. ವಿನಿಮಯದ ಮೂಲಕ ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳನ್ನು ಕುರಿತ ಪುಸ್ತಕಗಳನ್ನು ಇಲ್ಲಿ ವಿಶೇಷವಾಗಿ ಸಂಗ್ರಹಿಸಲಾಗುತ್ತಿದೆ. ಪರಾಮರ್ಶನ ಮತ್ತು ಛಾಯಾಚಿತ್ರಗಳಿಗೆ ಸಂಬಂಧಿಸಿದಂತೆ ದೇಶ ವಿದೇಶಗಳಿಂದ ಬರುವ ಕೋರಿಕೆಗಳನ್ನು ಈಡೇರಿಸುವಲ್ಲಿಯೂ ಈ ಸಂಸ್ಥೆ ಹೆಚ್ಚಿನ ಆಸ್ಥೆವಹಿಸುತ್ತಿದೆ.

ಅಂತಾರಾಷ್ಟ್ರೀಯ ಚಟುವಟಿಕೆಗಳಿಗಾಗಿಯೇ ಈ ಸಂಸ್ಥೆ ಎರಡು ಪ್ರಕಟಣೆಗಳನ್ನು ಹೊರಡಿಸುತ್ತಿದೆ. ಅಂತಾರಾಷ್ಟ್ರೀಯ ವಿನಿಮಯ ವಾರ್ತೆ ಎಂಬುದು ಒಂದು. ಇನ್ನೊಂದು, ಹಿಂದೂ ಪೆಸಿಫಿಕ್ ವಿನಿಮಯ ವಾರ್ತಾ ಪತ್ರ ಎಂಬ ತ್ರೈಮಾಸಿಕೆ. 1963ರಿಂದ ಇದು ರಾಷ್ಟ್ರೀಯ ಸಂಸತ್ ಗ್ರಂಥಾಲಯ ವಾರ್ತಾ ಪತ್ರಿಕೆ ಎಂಬ ಹೆಸರಿನಿಂದ ಪ್ರಕಟವಾಗುತ್ತಿದೆ. 1957ರ ನವೆಂಬರ್‌ನಲ್ಲಿ ಗ್ರಂಥಾಲಯದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಕುರಿತ ಸಮ್ಮೇಳನವೊಂದು ನಡೆಯಿತು. (ಕೆ.ಎಸ್.ಆರ್.ಎಜಿ.)

**3. ಬ್ರಿಟಿಷ್ ಮ್ಯೂಸಿಯಮ್ ಗ್ರಂಥಾಲಯ** : ಗ್ರೇಟ್ ಬ್ರಿಟನಿನ ರಾಷ್ಟ್ರೀಯ ಗ್ರಂಥಾಲಯ. ಬ್ರಿಟನಿನ ಕೆಲವು ಪ್ರತಿಭಾವಂತರು ಸರ್ ರಾಬರ್ಟ್ ಕಾಟನನ ನೇತೃತ್ವದಲ್ಲಿ ಪ್ರಾಚೀನ ಹಾಗೂ ಅಮೂಲ್ಯ ಗ್ರಂಥಗಳನ್ನು ಕಲೆ ಹಾಕಿ ಅವನ್ನು ಸಂರಕ್ಷಿಸುವ ಕೋರಿಕೆಯ ಪ್ರಣಾಳಿಕೆಯೊಂದನ್ನು ರಾಣಿ ಎಲಿಜಬೆತ್‍ಗೆ ಅರ್ಪಿಸಿದರು. ಅದೇ ಬ್ರಿಟನಿನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ಗ್ರಂಥಾಲಯ ಸ್ಥಾಪನೆಗೆ ನಾಂದಿಯಾಯಿತು.

ವೈದ್ಯ ಮತ್ತು ನಿಸರ್ಗ ವಿಜ್ಞಾನಿ ಸರ್ ಹ್ಯಾನ್ಸ್ ಸ್ಲೋನ್ ತನ್ನ ವೈಯಕ್ತಿಕ ಸಂಗ್ರಹವಾದ 40,000 ಮುದ್ರಿತ ಗ್ರಂಥಗಳು, 7,000 ಹಸ್ತಪ್ರತಿಗಳು, ಅಮೂಲ್ಯವಾದ ಪದಕ, ನಾಣ್ಯ, ಗ್ರೀಕ್, ರೋಮ್, ಈಜಿಪ್ಟ್‍ಗಳ ಪುರಾತನ ವಸ್ತುಗಳು, ಮುದ್ರೆ, ಕೆತ್ತನೆಗಳಿಂದೊಡಗೂಡಿದ ಪ್ರಾಣಿಗಳ ಚಿಪ್ಪು, ಚಿತ್ರಗಳು – ಇಂಥವನ್ನು ಸರ್ಕಾರಕ್ಕೆ ದಾನವಾಗಿ ಕೊಟ್ಟ. ಪ್ರತಿಯಾಗಿ ತನ್ನ ವಾರಸುದಾರರಿಗೆ ಸರ್ಕಾರ 20 ಸಾವಿರ ಪೌಂಡ್ ಕೊಡಬೇಕೆಂದು ಕೇಳಿದ. ಪಾರ್ಲಿಮೆಂಟು ಇದಕ್ಕೆ ಒಪ್ಪಿತು. 1753ರ ಕಾನೂನಿನ ಅನ್ವಯ ಈ ಸಂಗ್ರಹ ಮ್ಯೂಸಿಯಮ್ ಅಸ್ತಿತ್ವಕ್ಕೆ ಕಾರಣವಾಯಿತು. ಇದರ ಕ್ಷೇಮಾಭಿವೃದ್ಧಿಗಾಗಿ ನ್ಯಾಸವೊಂದನ್ನು ರಚಿಸಲಾಯಿತು. ಮಾಂಟೆಗ್ಯೂ ಹೌಸಿನಲ್ಲಿ ಈ ಸಂಗ್ರಹಾಲಯಕ್ಕೆ ಸ್ಥಳ ದೊರೆತದ್ದು 1759ರಲ್ಲಿ.

ಅದೇ ಕಾಲಕ್ಕೆ ಹಾರ್ಲೆ ಮತ್ತು ರಾಬರ್ಟ್ ಕಾಟನ್‍ರ ಸಂಗ್ರಹಗಳೂ ಇಂಗ್ಲೆಂಡಿನ ಅರಸ ಎರಡನೆಯ ಜಾರ್ಜ್‌ನ ಗ್ರಂಥಾಲಯದ ಕೊಡುಗೆಯೂ (1757) ಸ್ಲೋನನ ಸಂಗ್ರಹದೊಡನೆ ಸೇರಿದವು. ಬಳಿಕ ಸ್ಟೇಷನರ್ಸ್ ಹಾಲಿನಲ್ಲಿ ದಾಖಲಾದ ಪುಸ್ತಕಗಳ ಒಂದೊಂದು ಪ್ರತಿ ಉಚಿತವಾಗಿ ದೊರೆಯುವ ಸೌಲಭ್ಯ ಏರ್ಪಟ್ಟಿತು. ಮೂರನೆಯ ಜಾರ್ಜ್ ದೊರೆಯ ಗ್ರಂಥಾಲಯವನ್ನು ನಾಲ್ಕನೆಯ ಜಾರ್ಜ್‌ನಿಂದ ಕೊಂಡುಕೊಂಡಿದ್ದು 1823ರಲ್ಲಿ.

ಜೋಸೆಫ್ ಬ್ಯಾಂಕರ್ಸ್, ರಿಜ್, ಅರುಂಡೇಲ್, ಚಾಸರ್ ಮುಂತಾದವರು ತಮ್ಮ ಗ್ರಂಥಗಳು, ಹಸ್ತಪ್ರತಿಗಳು, ವೈಯಕ್ತಿಕ ಗ್ರಂಥ ಸಂಗ್ರಹಗಳು, ಪ್ರಾಚೀನ ವೃತ್ತಪತ್ರಿಕೆಗಳು ಮುಂತಾದವನ್ನು ನೀಡಿದ್ದರಿಂದ ಗ್ರಂಥಾಲಯ ಪುಷ್ಟಿಗೊಂಡಿತು.

16–18 ನೆಯ ಶತಮಾನಗಳ ಫ್ರೆಂಚ್, ಇಟಾಲಿಯನ್ ಲೇಖಕರ, ವಿಜ್ಞಾನಿಗಳ, ರಾಜನೀತಿಜ್ಞರ ಬರೆಹ ಹಾಗೂ ಕಾಗದ ಪತ್ರಗಳ ಸಂಗ್ರಹಗಳು ಇಲ್ಲಿವೆ. ಅಲೆಗ್ಸಾಂಡ್ರಿಯದ ಪೇಟ್ರಿಯಾರ್ಕ್ ಒಂದನೆಯ ಚಾರ್ಲ್ಸ್‌ನಿಗೆ ದಾನವಾಗಿತ್ತ 5 ನೆಯ ಶತಮಾನದ ಬೈಬಲಿನ ಕೋಡೆಕ್ಸ್ ಅಲೆಗ್ಸಾಂಡ್ರಿನಸ್; 1000ರಲ್ಲಿ ಬರೆದ ಬೆವುಲ್ಫ್ ಪ್ರತಿ, ಮ್ಯಾಗ್ನಕಾರ್ಟದ ಎರಡು ಪ್ರತಿಗಳು, ಪುರಾತನ ಮುದ್ರಣದ ಕೆಲವು ಅವಶೇಷಗಳು, ಪ್ರಾಚೀನ ಆಂಗ್ಲೋಸ್ಯಾಕ್ಸನ್ ಶಬ್ದಕೋಶ, ಹೀಬ್ರೂ, ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಮಹತ್ತ್ವದ ಹಸ್ತಪ್ರತಿಗಳು – ಇವು ಇಲ್ಲಿಯ ವಿರಳ ಸಂಗ್ರಹಗಳಲ್ಲಿ ಮುಖ್ಯವಾದುದು. ಇವಲ್ಲದೆ 3ನೆಯ ಶತಮಾನದಿಂದ ಅರ್ವಾಚೀನ ಕಾಲದವರೆಗಿನ ವಿಪುಲವಾದ ಹಾಗೂ ವಿರಳವಾದ ಗ್ರಂಥಗಳ ಸಂಗ್ರಹಗಳು ಇಲ್ಲಿವೆ. ಪ್ರಾಚೀನ ಕಾಲದ ಪಪೈರಸ್ ಹಸ್ತಲಿಖಿತ ಪ್ರತಿಗಳಿಂದ ತೊಡಗಿ ಮೈಕ್ರೊಫಿಲ್ಮ್, ಮೈಕ್ರೋಕಾರ್ಡ್ ಫೋಟೋ ಪ್ರತಿಗಳವರೆಗಿನ ಅತ್ಯಾಧುನಿಕ ಸಂಗ್ರಹವನ್ನು ಈ ಗ್ರಂಥಾಲಯ ಹೊಂದಿದೆ.

ಭಾರತೀಯ ವಿಷಯಕ್ಕೆ (ಇಂಡಾಲಜಿ) ಸಂಬಂಧಿಸಿದಂತೆ ಇಲ್ಲಿರುವ ಸಂಗ್ರಹ ಅಪೂರ್ವವಾದದ್ದು.

ಪ್ರಪಂಚದ ವಿವಿಧ ಭಾಷೆಗಳ ಹಾಗೂ ವಿಷಯಗಳ ಗ್ರಂಥಗಳು ಹಾಗೂ ಹಸ್ತಲಿಖಿತ ಪ್ರತಿಗಳು ಇಲ್ಲಿವೆ (1969). ಒಂದು ವರ್ಷಕ್ಕೆ ಸುಮಾರು ಒಂದು ದಶಲಕ್ಷದಷ್ಟು ಹೊಸ ಗ್ರಂಥಗಳನ್ನು ಇದು ತನ್ನ ಸಂಗ್ರಹಕ್ಕೆ ಸೇರಿಸುತ್ತಲಿದೆ.

ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದಲ್ಲಿ ಕೆಳಕಂಡ ಪ್ರಮುಖ ವಿಭಾಗಗಳಿವೆ: 1. ಮುದ್ರಿತ ಗ್ರಂಥ ವಿಭಾಗ, 2. ಹಸ್ತಪ್ರತಿಗಳ ವಿಭಾಗ, 3. ಪ್ರಾಚ್ಯ ಮುದ್ರಿತ ಗ್ರಂಥಗಳ ಹಾಗೂ ಹಸ್ತಲಿಖಿತ ಪ್ರತಿಗಳ ವಿಭಾಗ, 4. ವೈಜ್ಞಾನಿಕ ಹಾಗೂ ತಾಂತ್ರಿಕ ವ್ಯಾಸಂಗಕ್ಕೋಸ್ಕರ ಪ್ರತ್ಯೇಕ ವಿಭಾಗ, 5. ವೃತ್ತಪತ್ರಿಕೆಗಳ ವಿಭಾಗ, 6. ಅಂಚೆಚೀಟಿಗಳ ವಿಶೇಷ ವಿಭಾಗ, 7. ಪರಾಮರ್ಶನ ಸೇವಾ ವಿಭಾಗ.

ಸರ್ಕಾರದವರು ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯವನ್ನು ಪೇಟೆಂಟ್ ಆಫೀಸ್ ಗ್ರಂಥಾಲಯದೊಂದಿಗೆ ಸಮಾವೇಶಗೊಳಿಸುವ ಒಂದು ಯೋಜನೆಯನ್ನು ಹಾಕಿ ಕೊಂಡಿದ್ದು 1960ರಲ್ಲಿ ಈ ಯೋಜನೆಯನ್ವಯ ಸುಮಾರು 10,00,000ರಷ್ಟು ಪ್ರಚಲಿತ ವೈಜ್ಞಾನಿಕ ಹಾಗೂ ತಾಂತ್ರಿಕ ಸಾಹಿತ್ಯ ಸಂಗ್ರಹದ ವಿಶೇಷ ಸಂದರ್ಭ ಸೇವೆಯನ್ನು ಪ್ರಾರಂಭಿಸುವುದು ಸಾಧ್ಯವಾಯಿತು.

**ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದಲ್ಲಿಯ ಪ್ರಮುಖ ಸೂಚಿಗಳು ಇಂತಿವೆ :**

**1. ಪ್ರಾಚ್ಯ ಹಸ್ತಪ್ರತಿಗಳ ಸೂಚಿ :** ಇವನ್ನು ಹಲವು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. 2. ವಿಷಯಸೂಚಿಗಳು (ಸಬ್ಜೆಕ್ಟ್ ಕಾಟಲಾಗ್) 1885ರಿಂದ ಇಂದಿನವರೆಗೆ ಐದೈದು ವರ್ಷಗಳ ಸಂಪುಟಗಳಲ್ಲಿ ಹೊರಡಿಸಿದ್ದಾರೆ. 3. ವೃತ್ತಪತ್ರಿಕೆ, ಭೂಪಟ ಇತ್ಯಾದಿಗಳ ಸೂಚಿ: ಇವನ್ನು ಪ್ರತ್ಯೇಕವಾಗಿ ತಯಾರಿಸಿದ್ದಾರೆ. ಭೂಪಟಗಳ 15 ಸಂಪುಟಗಳ ಸೂಚಿಯನ್ನು 1967–68ರಲ್ಲಿ ಹೊರತಂದಿದ್ದಾರೆ. 4. ಪ್ರಾಚೀನ ಹಾಗೂ ವಿರಳ ಗ್ರಂಥಗಳ ಸೂಚಿ. 5. ಪಾಶ್ಚಾತ್ಯ ಭಾಷೆಗಳ ಮುದ್ರಿತ ಗ್ರಂಥಗಳ ಸೂಚಿ. 6. ಪಾಶ್ಚಾತ್ಯ ಭಾಷೆಗಳ ಹಸ್ತಪ್ರತಿಗಳ ಸಮಗ್ರ ಸೂಚಿ. 7. ಮುದ್ರಿತ ಗ್ರಂಥಗಳ ಸೂಚಿ. 8. ವಿಜ್ಞಾನ ವಿಭಾಗದ ಪ್ರತ್ಯೇಕ ಸೂಚಿ. 9. ಪ್ರಾಚ್ಯ ಗ್ರಂಥಗಳ ಹಾಗೂ ಹಸ್ತಪ್ರತಿಗಳ ಸೂಚಿ. ಇವುಗಳನ್ನು ಆಯಾ ಭಾಷೆಗಳಂತೆಯೇ ತಯಾರಿಸಿದ್ದು ಕ್ಯಾಟಲಾಗ್ ಆಫ್ ಜಾರ್ಜಿಯನ್ ಅಂಡ್ ಅದರ್ ಕಕೇಶಿಯನ್ ಪ್ರಿಂಟೆಡ್ ಬುಕ್ಸ್ 1962 ಅಂಡ್ ದಿ ಕ್ಯಾಟಲಾಗ್ ಆಫ್ ಪಾಷ್‌ಟೊ ಮ್ಯಾನುಸ್ಕ್ರಿಪ್ಟ್ಸ್ (1965)ಗಳನ್ನು ಹೆಸರಿಸಬಹುದು.

ಗೋವಿನ್ ನೈಟ್ ಈ ಗ್ರಂಥಾಲಯದ ಪ್ರಥಮ ಗ್ರಂಥಪಾಲ. ಅನಂತರ ಚಾರ್ಲ್‌ಸ್ ಮರ್ಟನ್, ಮ್ಯಾಥ್ಯೂ ಮ್ಯಾಟೀ, ಹೆನ್ರಿ ಎಲ್ಲಿಸ್, ಆಂಟೊನಿ ಪ್ಯಾನಿಜಿ, ಜಾನ್ ವಿಂಟರ್ ಜೋನ್ಸ್, ಎಡ್ವರ್ಡ್ ಅಗಸ್ಟಸ್ ಬಾಂಡ್, ಎಡ್ವರ್ಡ್ ಮೌಂಡೇ ಥಾಮ್‌ಸನ್ ಇವರು ಹೆಸರಾಂತ ಗ್ರಂಥಪಾಲರು.

ಬ್ರಿಟಿಷ್ ಮ್ಯೂಸಿಯಂ ಹಾಗೂ ಗ್ರಂಥಾಲಯದ ಕಾರ್ಯನಿರ್ವಹಣೆಗೆ ನಿರ್ದೇಶಕ ಹಾಗೂ ಗ್ರಂಥಪಾಲರೆಂದು ಉಭಯ ವಿಭಾಗಗಳ ಮುಖ್ಯಸ್ಥರೊಬ್ಬರ ನೇತೃತ್ವದಲ್ಲಿ ಮ್ಯೂಸಿಯಂ ಹಾಗೂ ಗ್ರಂಥಾಲಯದ ವಿವಿಧ ವಿಭಾಗಗಳ ಚಟುವಟಿಕೆಗಳು ನಡೆಯುತ್ತಿತ್ತು. ಒಟ್ಟು 13 ವಿಭಾಗಗಳಿದ್ದು, 8 ವಿಭಾಗಗಳು ಪ್ರಾಚೀನ ಅವಶೇಷಗಳಿಗೆ ಸಂಬಂಧಿಸಿವೆ; 4 ಗ್ರಂಥಾಲಯಕ್ಕೆ ಸಂಬಂಧಿಸಿವೆ. ಇನ್ನೊಂದು ಸಂಶೋಧನೆ ಪ್ರಯೋಗಾಲಯ ವಿಭಾಗ. ಇದು ಎಲ್ಲ ವಿಭಾಗಗಳಿಗೂ ನಿಕಟವಾಗಿ ಹೊಂದಿಕೊಂಡು ಕೆಲಸ ಮಾಡುತ್ತಿದೆ. ಪ್ರತಿಯೊಂದು ವಿಭಾಗಕ್ಕೂ ಒಬ್ಬ ಸಂರಕ್ಷಣಾಪಾಲ ಮತ್ತು ಸಹಾಯಕ ಪಾಲನಿರುತ್ತಾನೆ.

ಎರಡನೆಯ ಮಹಾಯುದ್ಧದ ಪರಿಣಾಮದಿಂದ ಸುಮಾರು 200,000 ಗ್ರಂಥಗಳನ್ನು ಹಾಗೂ ವೃತ್ತಪತ್ರಿಕೆಗಳ 30,000 ಸಂಪುಟಗಳನ್ನು ಗ್ರಂಥಾಲಯ ಕಳೆದುಕೊಂಡಿತು. ಇದಲ್ಲದೇ ವಸ್ತು ಸಂಗ್ರಹಾಲಯಕ್ಕೂ ಹಲವು ಬಗೆಯ ನಷ್ಟ ಸಂಭವಿಸಿತು. ಪ್ಯಾನಿಜ಼ಿಯವರು 1845ರಲ್ಲಿ ಬ್ರಿಟಿಷ್ ಗ್ರಂಥಾಲಯವನ್ನು ಪುನರ್ ವ್ಯವಸ್ಥೆಗೊಳಿಸಿದರು.

ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯ ಪ್ರಪಂಚದ ರಾಷ್ಟ್ರೀಯ ಗ್ರಂಥಾಲಯಗಳಲ್ಲಿ ಅತಿ ದೊಡ್ಡದು. ಪ್ರಪಂಚದ ಹಲವಾರು ಮೇಧಾವಿಗಳು ಇದರ ಸಹಾಯ ಪಡೆದು ಅಮೂಲ್ಯ ಸಿದ್ಧಾಂತಗಳ ಜಾಗತಿಕ ಕೊಡುಗೆಗಳನ್ನು ನೀಡಿದ್ದಾರೆ. **(ಸಿ.ವಿ.ಎಚ್.)**

**4. ಫ್ರಾನ್ಸಿನ ರಾಷ್ಟ್ರೀಯ ಗ್ರಂಥಾಲಯ :** ಫ್ರಾನ್ಸಿನ ರಾಜರುಗಳು ಕಾಲ ಕಾಲಕ್ಕೆ ಸಂಗ್ರಹಿಸಿಕೊಂಡು ಬಂದ ಗ್ರಂಥಗಳ ಸಮಾವೇಶದಿಂದ ಆರಂಭವಾದುದು. ಮೊದಲು ಕೇವಲ ಒಂದು ಮಿತಿಯಲ್ಲಿ ಗ್ರಂಥಾಲಯವಾಗಿದ್ದ ಇದಕ್ಕೆ ರಾಷ್ಟ್ರೀಯ ವ್ಯಾಪ್ತಿ ಬಂದದ್ದು 16 ನೆಯ ಶತಮಾನದ ಅನಂತರ. ಇದಕ್ಕೆ ಕಾರಣನಾದವ ರಾಜ ಫ್ರಾನ್‌ಸ್ವಾ. ಈತ 1537ರಲ್ಲಿ ಒಂದು ಆಜ್ಞೆ ಹೊರಡಿಸಿ, ದೇಶದಲ್ಲಿ ಪ್ರಕಟವಾಗುವ ಪ್ರತಿಯೊಂದು ಪುಸ್ತಕ ಮತ್ತು ಪತ್ರಿಕೆಯ ಒಂದೊಂದು ಪ್ರತಿಯನ್ನು ಗ್ರಂಥಾಲಯಕ್ಕೆ ಕಡ್ಡಾಯವಾಗಿ ಕಳುಹಿಸಬೇಕೆಂದು ಕೋರಿದ. ಇದರಿಂದಾಗಿ ಗ್ರಂಥಾಲಯ ಬೇಗ ಬೇಗನೆ ಅಭಿವೃದ್ಧಿಂಯಾಯಿತು. ಕ್ರಮೇಣ ಗ್ರಂಥಾಲಂಯುದ ಕಟ್ಟಡವನ್ನು ಅಧುನಾತನಗೊಳಿಸಲಾಯಿತಲ್ಲದೆ ಹೊಸ ಹೊಸ ಕಟ್ಟಡಗಳನ್ನು ಕಟ್ಟಿ ಅದಕ್ಕೆ ಜೋಡಿಸಲಾಯಿತು. ಫ್ರಾನ್ಸಿನ ಮಹಾಕ್ರಾಂತಿಯ ತರುವಾಯ ಗ್ರಂಥಾಲಯಕ್ಕೆ ಮುಕ್ತ ಪ್ರವೇಶವನ್ನು ಕಲ್ಪಿಸಲಾಯಿತು. ಈಗ ಗ್ರಂಥಾಲಯದಲ್ಲಿರುವ ಗ್ರಂಥಗಳ ಮತ್ತು ಹಸ್ತಪ್ರತಿಗಳ ಒಟ್ಟು ಸಂಖ್ಯೆ ಸುಮರು 3 ಲಕ್ಷ ಎಂದು ಅಂದಾಜು ಮಡಲಾಗಿದೆ. ಸರ್ಕಾರ ಕೊಡುವ ವಾರ್ಷಿಕ ಸಹಾಯ ಧನ ಮತ್ತು ಗ್ರಂಥಾಲಯದ ಪ್ರಕಟಣೆಗಳಿಂದ ಬರುವ ಆದಾಯ – ಇವು ಇದರ ಪ್ರಮುಖ ವರಮಾನ ಮೂಲಗಳು. ಇದರ ಸಿಬ್ಬಂದಿ ವರ್ಗ ಸುಮಾರು 800. ಮೇಲ್ವಿಚಾರಣೆ ಶಿಕ್ಷಣ ಇಲಾಖೆಗೆ ಸೇರಿದೆ.

**ಗ್ರಂಥಾಲಯದಲ್ಲಿರುವ ವಿಶಿಷ್ಟ ವಿಭಾಗಗಳಿವು :** 1. ಹಸ್ತಪ್ರತಿಗಳ ವಿಭಾಗ. 2. ನಕ್ಷೆಗಳ ವಿಭಾಗ. 3. ಪದಕಗಳ (ಮೆಡಲ್ಸ್) ವಿಭಾಗ. 4. ಸಂಗೀತ ವಿಭಾಗ. 5. ಪ್ರತೀಕರಣ ವಿಭಾಗ.

**ಗ್ರಂಥಾಲಯದ ಕಾರ್ಯಚಟುವಟಿಕೆಗಳಿವು :** 1. ಸಂಶೋಧಕರಿಗೆ ಆಕರ ಮತ್ತು ಪರಾಮರ್ಶನ ಗ್ರಂಥಗಳನ್ನು ಒದಗಿಸುವುದು. 2. ಅಂತರ ಗ್ರಂಥಾಲಯ ಎರವಲು ಸೇವೆ. ಇದನ್ನು 1922ರಲ್ಲಿ ಪ್ರಾರಂಭಿಸಲಾಯಿತು. ದೇಶ ಮತ್ತು ವಿದೇಶ ಗ್ರಂಥಾಲಯಗಳೊಂದಿಗೆ ಎರವಲು ಸೇವೆಯ ಸೌಕರ್ಯವಿದೆ. 3. ಸು. 97 ದೇಶಗಳಲ್ಲಿರುವ ಸು. 800 ಗ್ರಂಥಾಲಯಗಳೊಂದಿಗೆ ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಸೌಲಭ್ಯ ಉಂಟು. ಸರ್ಕಾರಿ ಪ್ರಕಟಣೆಗಳ ವಿನಿಮಯವೂ ಉಂಟು.

**ಗ್ರಂಥಾಲಯದ ಪ್ರಕಟಣೆಗಳಿವು :** ರಾಷ್ಟ್ರೀಯ ಗ್ರಂಥಸೂಚಿ. ವಾರಕ್ಕೊಮ್ಮೆ ಪ್ರಕಟವಾಗುವ ಇದರಲ್ಲಿ ಗ್ರಂಥಾಲಯಕ್ಕೆ ಬಂದ ಗ್ರಂಥ ಮತ್ತು ಪತ್ರಿಕೆಗಳ ಸೂಚಿ, ಪ್ರಕಟಣ ಕಾರ್ಯ ಕುರಿತು ಲೇಖನಗಳು ಮತ್ತು ಪ್ರಕಾಶಕ ಹಾಗೂ ಪುಸ್ತಕ ಮಾರಾಟಗಾರರ ಜಾಹಿರಾತುಗಳು ಪ್ರಕಟವಾಗುತ್ತವೆ. 2 ಇತಿಹಾಸ ಸೂಚಿ. ಫ್ರಾನ್ಸಿನ ಇತಿಹಾಸ ಗ್ರಂಥಗಳನ್ನು ಕುರಿತ ಸೂಚಿ ಇದು.

ಸಂಗೀತ ವಿಭಾಗಕ್ಕಾಗಿ 1964ರಲ್ಲಿ ಒಂದು ಹೊಸ ಭವನವನ್ನೇ ನಿರ್ಮಿಸಲಾಯಿತು.

ಹವಾನಿಯಂತ್ರಿತ ವಿಶಾಲವಾದ ಓದುಕೋಣೆಗಳಿರುವ ಈ ಗ್ರಂಥಾಲಯದಲ್ಲಿ ವಿದ್ಯುತ್ ಚಾಲಿತ ಪುಸ್ತಕ ತೊಟ್ಟಿಲು, ಗ್ರಂಥವಾಹಕ ಪಟ್ಟಿಗಳು ಮೊದಲಾದ ಆಧುನಿಕ ಯಂತ್ರೋಪಕರಣಗಳ ಬಳಕೆಯೂ ಉಂಟು. ಗ್ರಂಥಸೂಚಿ ಕಾರ್ಯದಲ್ಲಿ ಕಂಪ್ಯೂಟರ್‌ಗಳನ್ನು ಬಳಸಲಾಗುತ್ತಿದೆ. **(ಕೆ.ಎಸ್.ಆರ್‌ಎಜಿ.)**

**5. ಪೀಕಿಂಗ್ (ಬೀಜಿಂಗ್) ಗ್ರಂಥಾಲಯ :** ಚೀನದ ರಾಷ್ಟ್ರೀಯ ಗ್ರಂಥಾಲಯ. ಪ್ರಪಂಚದ ದೊಡ್ಡ ಗ್ರಂಥಾಲಯಗಳಲ್ಲಿ ಇದೂ ಒಂದು. ಇಲ್ಲಿರುವ ಗ್ರಂಥಗಳು ಮತ್ತು ಹಸ್ತಪ್ರತಿಗಳ ಒಟ್ಟು ಸಂಖ್ಯೆ ಸುಮಾರು ಏಳು ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ದೇಶದಲ್ಲಿ ಕಾಲಕಾಲಕ್ಕೆ ಆಡಳಿತ ನಡೆಸಿದ ವಿವಿಧ ರಾಜಮನೆತನಗಳ ಖಾಸಗಿ ಗ್ರಂಥಾಲಯಗಳೆಲ್ಲ ಇದರಲ್ಲಿ ಸಮಾವೇಶಗೊಂಡಿದೆ. ಹೀಗಾಗಿ ಹಲವು ಅಮೂಲ್ಯ ಬೌದ್ಧ ಹಸ್ತಪ್ರತಿಗಳು ಇಲ್ಲಿವೆ. ದೇಶದ ನಾನಾ ಭಾಗಗಳಲ್ಲಿ ಪ್ರಕಟವಾಗುವ ಪತ್ರಿಕೆಗಳು ಮತ್ತು ಪುಸ್ತಕಗಳ ಪ್ರತಿಗಳು ಇಲ್ಲಿಗೆ ಬರುತ್ತವೆ. ಗ್ರಂಥಾಲಯ ಸಾಕಷ್ಟು ವಿಸ್ತಾರವಾಗಿದ್ದು ಪ್ರತ್ಯೇಕ ಓದುಕೋಣೆಗಳನ್ನು ಹೊಂದಿದೆ. ಸಾರ್ವಜನಿಕರಿಗೆ ಇಲ್ಲಿ ಮುಕ್ತ ಅವಕಾಶ ಉಂಟು. ಮಕ್ಕಳಿಗಾಗಿ ಪ್ರತ್ಯೇಕ ವಿಭಾಗ ಇದೆ. ಪರಾಮರ್ಶನ ಸೇವೆಯೂ ಉಂಟು.

**ಗ್ರಂಥಾಲಯದ ಚಟುವಟಿಕೆಗಳು :** 1. ದೇಶದ ಸುಮಾರು 168 ಗ್ರಂಥಾಲಯಗಳಲ್ಲಿರುವ ವಿದೇಶಿ ಭಾಷೆಗಳ ಸು. 20,270 ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ (1959). 2. ಸು. 19,115 ನಿಯತಕಾಲಿಕೆಗಳ (1833– 1949 ರ ಅವಧಿಯಲ್ಲಿ ಪ್ರಕಟವಾದ) ಸಂಯುಕ್ತಸೂಚಿಯನ್ನು ಪ್ರಕಟಿಸಿದೆ (1961). 3. ವಿಶ್ವವಿದ್ಯಾಲಯದ ಗ್ರಂಥಾಲಯಗಳು ಮತ್ತು ಮುದ್ರಣಾಲಯಗಳ ಸಹಕಾರದಿಂದ ಮುದ್ರಿತ ಗ್ರಂಥಗಳ ಸೂಚೀ ಪತ್ರಗಳನ್ನು ಸಿದ್ಧಪಡಿಸಿ ಗ್ರಂಥಾಲಯಗಳಿಗೆ ವಿತರಣೆ ಮಾಡಲಾಗುತ್ತಿದೆ. 4. ಪ್ರಕಟವಾದ ಪ್ರತಿ ಪುಸ್ತಕಕ್ಕೂ ವಿವರಣಾತ್ಮಕ ಸೂಚೀಪತ್ರವನ್ನು ಪ್ರಕಟಿಸುವುದು ಇಲ್ಲಿನ ಒಂದು ವೈಶಿಷ್ಟ್ಯ. ದೇಶದಲ್ಲಿ ಪ್ರತಿ ತಿಂಗಳು ಪ್ರಕಟವಾಗುವ ಸು. 2,500 ಪುಸ್ತಕಗಳ ಪೈಕಿ ಸು. 2000 ಪುಸ್ತಕಗಳಿಗೆ ಇಂಥ ಸೂಚೀಪತ್ರಗಳನ್ನು ಸಿದ್ಧಪಡಿಸುತ್ತಿದೆ. ವಿದೇಶೀ ಪುಸ್ತಕಗಳಿಗೂ ಈ ಸೌಕರ್ಯ ಇದೆ. 5. ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಉಂಟು. ಹೀಗೆ ಸಂಗ್ರಹವಾದ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಹಂಚಲಾಗುತ್ತದೆ. ಅಂತರ ಗ್ರಂಥಾಲಯ ಎರವಲು ಸೇವೆಗೂ ಇದೇ ಕೇಂದ್ರ. 6. ಗ್ರಂಥಾಲಯ ವಿಜ್ಞಾನದಲ್ಲಿ ವಿವಿಧ ತರಬೇತಿಗಳಿಗೆ ಅವಕಾಶವಿದೆ.

ಗ್ರಂಥಾಲಯ ಮತ್ತು ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಪತ್ರಿಕೆಗಳನ್ನು ಇದು ಪ್ರಕಟಿಸುತ್ತದೆ. ಅವುಗಳಲ್ಲಿ ಮುಖ್ಯವಾದವು: ಗ್ರಂಥಾಲಯ ಕಾರ್ಯ ಮತ್ತು ಗ್ರಂಥಾಲಯ ವಿಜ್ಞಾನ ಪತ್ರಿಕೆ. ಇವುಗಳಲ್ಲಿ ಮೊದಲನೆಯದು ಗ್ರಾಮಾಂತರ ಗ್ರಂಥಾಲಯ ಮತ್ತು ಶಾಲಾ ಗ್ರಂಥಾಲಯಗಳ ಕೆಲಸಗಾರರಿಗಾಗಿ; ಎರಡನೆಯದು ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನ ಲೇಖನಗಳ ಪ್ರಕಟಣೆಗಾಗಿ. ಇದೊಂದು ದ್ವೈಮಾಸಿಕ. 1960ರಿಂದ ಈಚೆಗೆ ಈ ಎರಡು ಪತ್ರಿಕೆಗಳೂ ಸಂಯುಕ್ತವಾಗಿ ಗ್ರಂಥಾಲಯಗಳು ಎಂಬ ಹೆಸರಿನಿಂದ ಪ್ರಕಟವಾಗುತ್ತಿವೆ. ಗ್ರಂಥವಾಚನ ಮತ್ತು ಪ್ರಕಾಶನ ವಾರ್ತೆ ಎಂಬುವು ಉಳಿದ ನಿಯತಕಾಲಿಕೆಗಳು. **(ಕೆ.ಎಸ್.ಆರ್‌ಎಜಿ.)**

**6. ಭಾರತದ ರಾಷ್ಟ್ರೀಯ ಗ್ರಂಥಾಲಯ :** ಕೋಲ್ಕತದಲ್ಲಿರುವ ರಾಷ್ಟ್ರೀಯ ಗ್ರಂಥಾಲಯ. ಬ್ರಿಟಿಷರ ಕಾಲದಲ್ಲಿದ್ದ ಇಂಪೀರಿಯಲ್ ಗ್ರಂಥಾಲಯವನ್ನು ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ರಾಷ್ಟ್ರೀಯ ಗ್ರಂಥಾಲಯವನ್ನಾಗಿ ಪರಿವರ್ತಿಸಿತು. ಇದೀಗ ರಾಷ್ಟ್ರದ ಬೃಹದ್ ಗ್ರಂಥಾಲಯವಾಗಿದೆ.

ಕೋಲ್ಕತದ ಪ್ರಮುಖರಾದ ದ್ವಾರಕಾನಾಥ ಠಾಕೂರ್ ಮತ್ತು ಪ್ಯಾರಿ ಚಂದ್ರ ಮಿತ್ರ ಅವರು ಎಲ್ಲರಿಗೂ ಪ್ರವೇಶವುಳ್ಳ ಗ್ರಂಥಾಲಯವೊಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಅವರ ಪರಿಶ್ರಮದ ಫಲವಾಗಿ ಕಲ್ಕತ್ತ ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸಲ್ಪಟ್ಟಿತು (1835).

ಭಾರತದ ವೈಸ್‌ರಾಯ್ ಆಗಿದ್ದ ಕರ್ಜನ್ ಕಲ್ಕತ್ತಕ್ಕೆ ಭೇಟಿಯಿತ್ತಾಗ ಈ ಗ್ರಂಥಾಲಯವನ್ನು ಸಂದರ್ಶಿಸಿ (1899) ಅದರ ಅಂದಿನ ದುಃಸ್ಥಿತಿಯನ್ನು ಗಮನಿಸಿ ಅದರ ಸ್ವಾಮ್ಯವನ್ನು ಕೊಂಡುಕೊಂಡ. ಈಸ್ಟ್ ಇಂಡಿಯ ಕಾಲೇಜು ಗ್ರಂಥಾಲಯ ಮತ್ತು ಕಲ್ಕತ್ತದಲ್ಲಿರುವ ಭಾರತ ಸರ್ಕಾರದ ವಿವಿಧ ಶಾಖೆಗಳನ್ನು ಇದರೊಡನೆ ವಿಲೀನಗೊಳಿಸಿ ಮೆಟ್‌ಕಾಫ್ ಭವನಕ್ಕೆ ಇದನ್ನು ಸ್ಥಳಾಂತರಿಸಿದ. ಇವೆಲ್ಲವುಗಳ ವಿಲೀನದಿಂದ ಆದ ಗ್ರಂಥಾಲಯವನ್ನು ಇಂಪೀರಿಯಲ್ ಲೈಬ್ರರಿ ಎಂದು ಹೆಸರಿಸಿದ. 1902ರಲ್ಲಿ ಇಂಪೀರಿಯಲ್ ಗ್ರಂಥಾಲಯ ಕಾಯಿದೆ ಅಂಗೀಕೃತವಾಯಿತು. 1903ರ ಜನವರಿಯಲ್ಲಿ ಈ ಗ್ರಂಥಾಲಯವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲಾಯಿತು. ತಮ್ಮ ಜ್ಞಾನತೃಷೆಯನ್ನಾರಿಸಿಕೊಳ್ಳಲು ಜನ ಬ್ರಿಟಿಷ್ ಮ್ಯೂಸಿಯಂ ಲೈಬ್ರರಿಗೆ ಬರುವಂತೆ ಇಲ್ಲಿಯ ಗ್ರಂಥಾಲಯಕ್ಕೂ ಬರಬೇಕೆನ್ನುವುದು ಕರ್ಜನ್ನನ ಮನೀಷೆ. ಈತ ಭಾರತದ ಗ್ರಂಥಾಲಯಕ್ಕೆ ಬ್ರಿಟಿಷ್ ಮ್ಯೂಸಿಯಂನಲ್ಲಿ ಕೆಲಸ ಮಡುತ್ತಿದ್ದ ಜಾನ್ ಮ್ಯಾಕ್‌ಫರ್ಲೆಸ್ ಎಂಬಾತನನ್ನು ಗ್ರಂಥಪಾಲನಾಗಿ ನೇಮಿಸಿದ. ಇವನ ಬಳಿಕ ಕ್ರಮವಾಗಿ ಭಾಷಾವಿಜ್ಞಾನಿ ಹರಿನಾಥ ಡೇ, ಕವಿ ಜೆ. ಎ. ಚಾಪ್‌ಮನ್, ಶಿಕ್ಷಣ ತಜ್ಞ, ಕೆ. ಎಂ. ಅಸದುಲ್ಲ ಇವರು ಗ್ರಂಥಪಾಲರಾಗಿದ್ದರು.



ರಾಷ್ಟ್ರೀಯ ಗ್ರಂಥಾಲಯ, ಕೋಲ್ಕತ

ಈ ಗ್ರಂಥಾಲಯ ಕಾರ್ಯಾರಂಭ ಮಾಡಿದ್ದು ಒಂದು ಲಕ್ಷ ಗ್ರಂಥಗಳ ಸಂಗ್ರಹದಿಂದ. ದೇಶಕ್ಕೆ ಸ್ವಾತಂತ್ರ್ಯ ದೊರೆತ ಕೆಲದಿನಗಳಲ್ಲಿಯೇ ಇದರ ಹೆಸರನ್ನು ಭಾರತೀಯ ರಾಷ್ಟ್ರೀಯ ಗ್ರಂಥಾಲಯವೆಂದು ಬದಲಿಸಿದುದಲ್ಲದೆ ಅಂದಿಗೆ ಗವರ್ನರ್ ಜನರಲ್ಲರ ಅರಮನೆಯಾಗಿದ್ದ ಕಲ್ಕತ್ತದ ಬೆಲ್‌ವೆಡಿಯರ್ ಭವನಕ್ಕೆ ಇದನ್ನು ಸ್ಥಳಾಂತರಿಸಲಾಯಿತು. ಸು. 13 ಲಕ್ಷ ರೂ. ಗಳ ವೆಚ್ಚದಲ್ಲಿ ಈ ಭವನವನ್ನು ಪುನರ್ನವೀಕರಣಗೊಳಿಸಿದ್ದು 1963ರಲ್ಲಿ.

1953ರ ಫೆಬ್ರುವರಿ 1 ರಂದು ಈ ಗ್ರಂಥಾಲಯವನ್ನು ಸಾಂಪ್ರದಾಯಿಕವಾಗಿ ಸಾರ್ವಜನಿಕರಿಗೆ ತೆರೆದವರು ಅಂದಿನ ಶಿಕ್ಷಣ ಸಚಿವ, ಮೌಲಾನ ಅಬುಲ್ ಕಲಮ್ ಆಜ಼ಾದ್. ಇದರ ಮೊದಲ ಗ್ರಂಥಪಾಲರಾಗಿ ಅಧಿಕಾರ ವಹಿಸಿದವರು ಕನ್ನಡಿಗರಾದ ಬಿ. ಎಸ್. ಕೇಶವನ್ ಅವರು. 14 ವರ್ಷಗಳ ಅವರ ನಿರಂತರ ಶ್ರಮದಿಂದ ಈ ಗ್ರಂಥಾಲಯಕ್ಕೆ ಒಂದು ಭದ್ರ ಅಸ್ತಿತ್ವ ಬಂತು.

1954ರಲ್ಲಿ ಅಂಗೀಕೃತವಾದ ಡೆಲಿವರಿ ಆಫ್ ಬುಕ್ಸ್ ಕಾಯಿದೆಗೆ ಅನುಗುಣವಾಗಿ ಎಲ್ಲ ಪ್ರಕಾಶಕರೂ ತಾವು ಪ್ರಕಟಿಸಿದ ಪುಸ್ತಕಗಳ ಒಂದು ಪ್ರತಿಯನ್ನು ಈ ಗ್ರಂಥಾಲಯಕ್ಕೆ ಉಚಿತವಾಗಿ ಕಳುಹಿಸಬೇಕಾಗಿದೆ. 1956ರಲ್ಲಿ ಈ ಕಾಯಿದೆಗೆ ತಿದ್ದುಪಡಿ ತಂದದ್ದರಿಂದ ದಿನ ಪತ್ರಿಕೆ ಮತ್ತು ನಿಯತಕಾಲಿಕೆಗಳೂ ಈ ಗ್ರಂಥಾಲಯದಲ್ಲಿ ದೊರೆಯುವಂತಾಗಿದೆ. ಇದು ಭಾರತ ಸರ್ಕಾರದ ಶಿಕ್ಷಣ ಇಲಾಖೆಯ ಅಂಕಿತಕ್ಕೊಳಪಟ್ಟಿದೆ. ಆಡಳಿತ ನಡೆಸಲು ಒಂದು ಕಾರ್ಯಕಾರಿ ಮಂಡಳಿ ಇದೆ. ಶಿಕ್ಷಣ ಶಾಖೆಯ ಕಾರ್ಯದರ್ಶಿ ಈ ಮಂಡಳಿಯ ಸಭಾಧ್ಯಕ್ಷ. ಗ್ರಂಥಪಾಲ ಸದಸ್ಯ ಕಾರ್ಯದರ್ಶಿ.

ಈ ಗ್ರಂಥಾಲಯದಲ್ಲಿ ಒಟ್ಟಿಗೆ 50ಕ್ಕೂ ಹೆಚ್ಚು ಭಾಷೆಗಳಲ್ಲಿನ 12,299 ನಿಯತ ಕಾಲಿಕೆಗಳು ಬರುತ್ತಿವೆ. 1,640 ಅಮೂಲ್ಯ ಹಸ್ತಪ್ರತಿಗಳ ಸಂಗ್ರಹವಿದೆ. ಇಲ್ಲಿ ವೈಯಕ್ತಿಕ ಸಂಗ್ರಹಗಳೂ ಇವೆ. ಅವುಗಳಲ್ಲಿ ಮುಖ್ಯವಾಗಿ ಅಸುತೋಷ ಮುಖರ್ಜಿಯವರ 80 ಸಾವಿರಕ್ಕೂ ಮಿಕ್ಕ ಸಂಗ್ರಹ; ಥಿಬಾ ಅವರ ಸಂಸ್ಕೃತ ಸಂಗ್ರಹ; ಬುಹಾರ ಜಮೀನುದಾರರ ಅರಬ್ಬೀ, ಪಾರಸಿ ಮತ್ತು ಉರ್ದು ಸಂಗ್ರಹ; ರಾಮದಾಸ ಸೇನರ ಬಂಗಾಲಿ ಸಂಗ್ರಹ; ಜದುನಾಥ ಸರ್ಕಾರರ ಇತಿಹಾಸಸಂಗ್ರಹ; ವೈಯಾಪುರಿ ಪಿಳ್ಳೆಯವರ ಸಾಹಿತ್ಯ ಸಂಗ್ರಹ; ಬೋಲಾರಾಮ ಸಂಗ್ರಹ; 3,000ಕ್ಕೂ ಹೆಚ್ಚು ಚೀನಿ ಸಂಗ್ರಹ; ಅಮೆರಿಕಕ್ಕೆ ಸಂಬಂಧಪಟ್ಟ ಸಂಗ್ರಹ; ದೇಶದಲ್ಲಿಯ ಧುರೀಣರ ವೈಯಕ್ತಿಕ ಕಾಗದ ಪತ್ರಗಳ ಸಂಗ್ರಹ– ಇಂಥ ಇನ್ನೂ ಅನೇಕ ಶ್ರೇಷ್ಠ ಸಂಗ್ರಹಗಳು ಈ ಗ್ರಂಥಾಲಯದಲ್ಲಿವೆ.

ಭಾರತೀಯ ಭಾಷೆಗಳಲ್ಲಿ 1651ರಿಂದ 1880ರ ವರೆಗೆ ಮೊದಲು ಮುದ್ರಿತವಾದ ಗ್ರಂಥಗಳ ಅತ್ಯಮೂಲ್ಯ ಸಂಗ್ರಹ ಈ ಗ್ರಂಥಾಲಯದಲ್ಲಿದೆ. ಅವುಗಳಲ್ಲಿ ಮುಖ್ಯವಾದವು – ವರ್ಸಸ್ ಆಫ್ ಪೊಯೆಟ್ ಭರ್ತೃಹರಿ. ಸಂಸ್ಕೃತದಿಂದ ಡಚ್ ಭಾಷೆಗೆ ಇದನ್ನು ತಂದವ ಏಬ್ರಹಾಂ ರೋಜರ್ಸ್. ಇದು 1651ರಲ್ಲಿ ಪ್ರಕಟವಾದದ್ದು. ಚಾರ್ಲಸ್ ವಿಲ್‌ಕಿನ್ಸ್ 1785ರಲ್ಲಿ ಭಾಷಾಂತರಿಸಿದ ಭಗವದ್ಗೀತೆಯ ಇಂಗ್ಲಿಷ್ ಅನುವಾದ ಸಾಂಗ್ಸ್ ಆಫ್ ಅಡೋರಬಲ್ ವನ್, ಸರ್ ವಿಲಿಯಮ್ ಜೋನ್ಸ್‌ನ ಕಾಳಿದಾಸನ ಶಾಕುಂತಲಾ ನಾಟಕದ ಅನುವಾದ (1789) ಮತ್ತು 1792ರಲ್ಲಿ ಅನುವಾದವಾದ ಋತುಸಂಹಾರ, 1808ರಲ್ಲಿ ಚಾರ್ಲಸ್ ವಿಲ್‌ಕಿನ್ಸ್‌ನ ಸಂಸ್ಕೃತಗ್ರಾಮರ್ ಮುಂತಾದವು. ವಿಲಿಯಮ್ ರೀವ್‌ನ ಇಂಗ್ಲಿಷ್– ಕರ್ನಾಟಕ ಡಿಕ್ಷನರಿ (1824); ಕರ್ನಾಟಕ–ಇಂಗ್ಲಿಷ್ ಡಿಕ್ಷನರಿ (1832); ಜಾನ್ ಬನ್ಯನ್ನನ ಪಿಲ್‌ಗ್ರಿಮ್ಸ್ ಪ್ರೊಗ್ರೆಸಿನ ಭಾಷಾಂತರವಾದ ದೇಶಾಂತ್ರಿಯ ಪ್ರಯಾಣವು (1833) ಮೊದಲಾದ ಅನೇಕ ಕನ್ನಡ ಗ್ರಂಥಗಳು ಇಲ್ಲಿವೆ.

1954 ರಲ್ಲಿ ಡೆಲಿವರಿ ಆಫ್ ಬುಕ್ಸ್ ಕಾಯಿದೆ ಕಾರ್ಯಗತವಾದ ಮೇಲೆ ಈ ಗ್ರಂಥಾಲಯಕ್ಕೆ 3,93,826 ಗ್ರಂಥಗಳೂ ನಿಯತಕಾಲಿಕೆಗಳೂ ಉಚಿತವಾಗಿ ಬಂದಿವೆ. ಈ ಗ್ರಂಥಾಲಯದಲ್ಲಿ 500ಕ್ಕೂ ಹೆಚ್ಚು ನೌಕರರಿದ್ದಾರೆ. ಅವರಲ್ಲಿ 200ಕ್ಕೂ ಹೆಚ್ಚು ಜನ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತು ಪಡೆದವರು.

1970ರಲ್ಲಿ ಈ ಗ್ರಂಥಾಲಯದ ಸದಸ್ಯರ ಸಂಖ್ಯೆ 17,000ಇತ್ತು. ಆ ವರ್ಷ ಈ ಗ್ರಂಥಾಲಯ ಎರವಲು ಕೊಟ್ಟ ಗ್ರಂಥಗಳ ಸಂಖ್ಯೆ 74,000. 28 ವಿದೇಶೀ ಗ್ರಂಥಾಲಯಗಳಿಗೆ ಅಂತರ ಎರವಲು ಸೌಲಭ್ಯವನ್ನು ನೀಡಿತು. ಇದಲ್ಲದೆ 11,000 ಮೈಕ್ರೋ ಫಿಲ್ಮ್‌ಗಳನ್ನು ವಿವಿಧ ಸಂಘ– ಸಂಸ್ಥೆಗಳಿಗೆ ಒದಗಿಸಿದ್ದುಂಟು.

1960ರಲ್ಲಿ ಮಕ್ಕಳ ವಿಭಾಗವನ್ನು ಪ್ರಾರಂಭಿಸಲಾಯಿತು. ಮಕ್ಕಳ ಮನಸ್ಸನ್ನಾಕರ್ಷಿ ಸುವಂತೆ ಇಲ್ಲಿ ಆಸನ ಹಾಗೂ ಚಿತ್ರಗಳನ್ನು ಅಳವಡಿಸಲಾಗಿದೆ.

ಈ ಗ್ರಂಥಾಲಯ ಭಾರತದ ರಾಷ್ಟ್ರೀಯ ಗ್ರಂಥಸೂಚಿಯ (ಇಂಡಿಯನ್ ನ್ಯಾಷನಲ್ ಬಿಬ್ಲಿಯಾಗ್ರಫಿ) ಮೊದಲನೆಯ ಸಂಚಿಕೆಯನ್ನು 1958ರ ಆಗಸ್ಟ್ 15 ರಂದು ಪ್ರಕಟಿಸಿತು. 1965ರಿಂದ ಇದು ಮಾಸಿಕವಾಗಿ ಪ್ರಕಟವಾಗುತ್ತಿದೆ. ಈ ಗ್ರಂಥ ಸೂಚಿಯಲ್ಲಿ ಭಾರತದಲ್ಲಿ ಪ್ರಕಟವಾಗುವ ಪ್ರತಿಯೊಂದು ಗ್ರಂಥದ ವರ್ಗೀಕೃತ ವ್ಯವಸ್ಥೆಯಿದ್ದು ಅದನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಸಾಮಾನ್ಯ ಪ್ರಕಟಣೆಗಳನ್ನು ಮತ್ತು ಎರಡನೆಯ ಭಾಗದಲ್ಲಿ ಭಾರತ ಸರ್ಕಾರದ ಪ್ರಕಟಣೆಗಳನ್ನು ಸೇರಿಸಲಾಗಿದೆ. ಪ್ರತಿಭಾಗದಲ್ಲಿ ಎರಡು ಉಪಭಾಗಗಳಿದ್ದು ಮೊದಲನೆಯ ಭಾಗದಲ್ಲಿ ಪಟ್ಟಿಕೆಗಳನ್ನು ಡ್ಯೂಯಿ ದಾಶಮಿಕ ವರ್ಗೀಕರಣದ ಪ್ರಕಾರ ಜೋಡಿಸಲಾಗಿದೆ. ದ್ವಿಬಿಂದು ವರ್ಗೀಕರಣದ ಚಿಹ್ನೆಗಳನ್ನು ಪಟ್ಟಿಕೆಯ ಮುಂದೆ ಕೊಡಲಾಗಿದೆ. ಇದರಲ್ಲಿ ಲೇಖಕ ಶಿರೋನಾಮೆ ಮತ್ತು ವಿಷಯಗಳ ವರ್ಣಾನುಕ್ರಮ ವ್ಯವಸ್ಥೆ ಮಾಡಲಾಗಿದೆ.

ರಾಷ್ಟ್ರೀಯ ಗ್ರಂಥಾಲಯ ವಿಶೇಷ ಗ್ರಂಥಸೂಚಿಗಳನ್ನು ಸಂಕಲಿಸಿದೆ. ಭಾರತೀಯ ಶಾಸ್ತ್ರಕ್ಕೆ ಸಂಬಂಧಪಟ್ಟ 56 ಗ್ರಂಥಸೂಚಿಗಳನ್ನು ಹೊರತರುವ ಕಾರ್ಯಕ್ರಮವನ್ನು ಕೈಗೊಂಡಿತ್ತು. ಈಗಾಗಲೇ ಮಾನವಕುಲ ಮತ್ತು ಸಸ್ಯಶಾಸ್ತ್ರ ವಿಷಯಗಳ ಸೂಚಿಗಳು 1960 ಮತ್ತು 1962ರಲ್ಲಿ ಪ್ರಕಟವಾಗಿದೆ. ಬಂಗಾಲಿ ಭಾಷೆಯ ಸೂಚಿಯ ಮೊದಲನೆಯ ಭಾಗ ಪ್ರಕಟವಾಗಿದ್ದು 1964ರಲ್ಲಿ.

ಸಪ್ರು ಅವರ ಕಾಗದಗಳ ಸಂಪುಟಗಳು 1961ರಲ್ಲಿ ಬಿಡುಗಡೆ ಮಾಡಲ್ಪಟ್ಟವು.

ಅಸುತೋಷ್ ಸಂಗ್ರಹದ ಸೂಚಿಯ ಮೊದಲಿನ ಎರಡು ಸಂಪುಟಗಳು ಪ್ರಕಟಿಸಲ್ಪಟ್ಟಿದ್ದು ಲಲಿತಕಲೆಗಳ ಮೊದಲನೆಯ ಸಂಪುಟ 1957ರಲ್ಲಿ ಮತ್ತು ಸಾಹಿತ್ಯದ (ಅಮೆರಿಕನ್ ಮತ್ತು ಯುರೋಪಿಯನ್) ಎರಡನೆಯ ಸಂಪುಟ 1963ರಲ್ಲಿ ಪ್ರಕಟಗೊಂಡವು.

ಭಾರತ ಸರ್ಕಾರದ ಶಿಕ್ಷಣ ಇಲಾಖೆ ಡಾ. ವಿ.ಎಸ್. ಝಾ ಅವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಸಮೀಕ್ಷಣ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿ ತನ್ನ ವರದಿಯನ್ನು ಸಲ್ಲಿಸಿದ್ದು 1969ರ ಜುಲೈನಲ್ಲಿ. ಈ ವರದಿಯಲ್ಲಿನ ಶಿಫಾರಸುಗಳ ಆಧರದ ಮೇಲೆ ಇದರ ಆಡಳಿತವನ್ನು ಸ್ವತಂತ್ರವಾದ ಒಂದು ಮಂಡಳಿಗೆ ಒಪ್ಪಿಸಬೇಕೆಂದು ಸರ್ಕಾರ ನಿರ್ಧರಿಸಿದೆ. ಆ ಬಗ್ಗೆ ಕಾಯಿದೆಯೊಂದನ್ನು ಸಂಸತ್ತಿನಲ್ಲಿ ತರಲಿದೆ.

ಭಾರತ ಸರ್ಕಾರ ಈ ಗ್ರಂಥಾಲಯದಲ್ಲಿರುವ ಅಮೂಲ್ಯ ಸಾಮಗ್ರಿಗಳನ್ನು ಕಾಯ್ದಿಡುವುದರ ಸಲುವಾಗಿ ಧನ ಸಹಾಯ ನೀಡಿದ್ದು ಈಗಾಗಲೇ ಸಂಸ್ಕೃತ, ಅರಬ್ಬೀ, ಮತ್ತು ಪಾರಸಿ ಭಾಷೆಗಳಲ್ಲಿಯ ಅಮೂಲ್ಯ ಹಸ್ತಪ್ರತಿಗಳನ್ನು ಮೈಕ್ರೊಫಿಲ್ಮ್‌ಗೆ ರೂಪಾಂತರಿಸಲಾಗಿದೆ.

ಸಂಶೋಧಕ ಸಾಮಗ್ರಿಗಳ ರಾಷ್ಟ್ರೀಯ ಸಂಯುಕ್ತಸೂಚಿಯನ್ನು (ನ್ಯಾಷನಲ್ ಕ್ಯಾಟಲಾಗ್) ತಯಾರಿಸುವ ಯೋಜನೆಯನ್ನು ಕಾರ್ಯಗತ ಮಾಡುವ ಪ್ರಯತ್ನ ನಡೆದಿದೆ.

(ಟಿ.ಎಲ್.ಬಿ.)

**F. ಸಂಪರ್ಕ ಗ್ರಂಥಾಲಯಗಳು :** ಒಂದು ರಾಷ್ಟ್ರ ತನ್ನ ನಾಡಿಗೆ ಸಂಬಂಧಪಟ್ಟ ವಿವರಗಳನ್ನು, ಪುಸ್ತಕ, ವೃತ್ತಪತ್ರಿಕೆ, ಮಾರ್ಗದರ್ಶಿನಿ, ವರದಿ, ಚಲನಚಿತ್ರ, ಛಾಯಾಚಿತ್ರ ಮತ್ತಿತರ ಸಾಮಗ್ರಿಗಳ ಮೂಲಕ ಇತರ ರಾಷ್ಟ್ರದ ಜನರಿಗೆ ಒದಗಿಸಲು ಸ್ಥಾಪಿತವಾಗಿರುವ ಗ್ರಂಥಾಲಯಗಳಿವು (ಕಾಂಟ್ಯಾಕ್ಟ್ ಲೈಬ್ರರೀಸ್). ಇವು ಎರಡು ರಾಷ್ಟ್ರಗಳ ನಡುವೆ ಸಂಪರ್ಕ ಮಾಧ್ಯಮವಾಗಿಯೂ ಪರಿಣಮಿಸುತ್ತವೆ. ಎರಡನೆಯ ಮಹಾಯುದ್ಧದ ಅನಂತರ ಜಾಗತಿಕ

ಶಾಂತಿ ಮತ್ತು ಪರಸ್ಪರ ಅರಿವುಗಳಿಗಾಗಿ ಇಂಥ ಗ್ರಂಥಾಲಯಗಳನ್ನು ತೆರೆಯುವುದರಲ್ಲಿ ಅನೇಕ ರಾಷ್ಟ್ರಗಳು ಆಸಕ್ತಿ ವಹಿಸಿದವು. ತಮ್ಮ ರಾಷ್ಟ್ರದ ಜನಜೀವನ, ಆಡಳಿತ ನೀತಿ, ಮತ್ತು ವಿದೇಶಾಂಗ ನೀತಿಗಳನ್ನು ಇನ್ನೊಂದು ದೇಶಕ್ಕೆ ಸುಲಭವಾಗಿ ಪರಿಚಯಿಸಲು ಇವುಗಳಿಂದ ಸಾಧ್ಯವಾಯಿತು. ಭಾರತ ಸರ್ಕಾರ ನ್ಯೂಯಾರ್ಕ್ ಮತ್ತಿತರ ಪಟ್ಟಣಗಳಲ್ಲಿ ಭಾರತ ವಾರ್ತಾ ಗ್ರಂಥಾಲಯವನ್ನು ತೆರೆದಿದೆ. ಅಮೆರಿಕ ಸರ್ಕಾರ ಪ್ರಪಂಚಾದ್ಯಂತ ಯುನೈಟೆಡ್ ಸ್ಟೇಟ್ಸ್ ಇನ್‌ಫರ್‌ಮೇಷನ್ ಸರ್ವಿಸ್ ಗ್ರಂಥಾಲಯಗಳನ್ನು ಸ್ಥಾಪಿಸಿದೆ. ಭಾರತದಲ್ಲಿ ಇವನ್ನು ಅಮೆರಿಕನ್ ಗ್ರಂಥಾಲಯ ಗಳೆನ್ನುತ್ತಾರೆ. ಹಾಗೆಯೇ ಬ್ರಿಟಿಷ್ ಸರ್ಕಾರ ಬ್ರಿಟಿಷ್ ಇನ್‌ಫರ್‌ಮೇಷನ್ ಸರ್ವಿಸ್ ಹಾಗೂ ಬ್ರಿಟಿಷ್ ಕೌನ್ಸಿಲುಗಳನ್ನು ಸ್ಥಾಪಿಸಿದೆ. ಸ್ವದೇಶದ ಆಡಳಿತ ವ್ಯವಸ್ಥೆ, ವಿದೇಶಾಂಗದ ನೀತಿ, ಆರ್ಥಿಕ ಸಾಮಾಜಿಕ ಶೈಕ್ಷಣಿಕ ವ್ಯವಸ್ಥೆಗಳು, ವಿಜ್ಞಾನ ಮುನ್ನಡೆ, ಕಲೆ, ಸಾಹಿತ್ಯ, ಸಂಸ್ಕೃತಿಗಳ ವಿಚಾರ – ಇವನ್ನು ಕುರಿತು ತಿಳಿವಳಿಕೆ ಕೊಡುವುದು ಈ ಗ್ರಂಥಾಲಯಗಳ ಪ್ರಮುಖ ಉದ್ದೇಶ. ಇದರಿಂದ ಎರಡು ರಾಷ್ಟ್ರಗಳ ನಡುವೆ ಹೆಚ್ಚು ವ್ಯಾಪಕವೂ ಆಳವೂ ಆದ ಅರಿವು ಮೂಡುತ್ತದೆಂದು ನಂಬಲಾಗಿದೆ.

ಸಂಪರ್ಕ ಗ್ರಂಥಾಲಯಗಳಲ್ಲಿ ಎಲ್ಲರಿಗೂ ಪ್ರವೇಶ ಉಂಟು. ವ್ಯಕ್ತಿ ಮತ್ತು ಸಂಸ್ಥೆಗಳನ್ನು ಸದಸ್ಯರನ್ನಾಗಿ ಇವು ಅಂಗೀಕರಿಸುತ್ತವೆ ಮತ್ತು ಪುಸ್ತಕಗಳನ್ನು ಉಚಿತವಾಗಿ ಎರವಲು ಕೊಡುತ್ತವೆ. ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ವೃತ್ತಿ ಜೀವಿಗಳಿಗೆ ಈ ಗ್ರಂಥಾಲಯಗಳಿಂದ ಬಹಳ ಪ್ರಯೋಜನವಿದೆ. ತನ್ನ ಸದಸ್ಯರಿಗೆ ವಾರ್ತಾ ಸಾಹಿತ್ಯವನ್ನು ಇವು ಒದಗಿಸುತ್ತವೆ. ಕೆಲವು ಮುಖ್ಯ ಕೇಂದ್ರಗಳಲ್ಲಿ (ಉದಾಹರಣೆ: ಭಾರತದಲ್ಲಿ ದೆಹಲಿ) ಅಗತ್ಯವಿರುವ ಅಂಶಗಳಿಗೆ ವ್ಯವಸ್ಥಿತವಾದ ಪ್ರಲೇಖನ (ಡಾಕ್ಯುಮೆಂಟೇಷನ್) ಸೌಲಭ್ಯವೂ ಉಂಟು. ರಾಷ್ಟ್ರದ ವಿವಿಧ ಭಾಗಗಳಲ್ಲಿ ಪುಸ್ತಕ ಮತ್ತು ಚಿತ್ರಪ್ರದರ್ಶನಗಳನ್ನು ಏರ್ಪಡಿಸುತ್ತವೆ. ಪ್ರಮುಖ ವಿಚಾರಗಳನ್ನು ಕುರಿತು ವಿಚಾರ ಸಂಕಿರಣ ಮತ್ತು ಕಾರ್ಯ ಶಿಬಿರಗಳನ್ನು ನಡೆಸುತ್ತವೆ. ಆಗಾಗ್ಗೆ ಉಪಯುಕ್ತವಾದ ಗ್ರಂಥಗಳನ್ನು ಶಾಲಾ ಕಾಲೇಜುಗಳಿಗೆ ಉಚಿತವಾಗಿ ಹಂಚುತ್ತವೆ. ಒಂದು ಒಳ್ಳೆಯ ಗ್ರಂಥಾಲಯ ಜನತೆ ಮತ್ತು ದೇಶಕ್ಕೆ ಎಷ್ಟರಮಟ್ಟಿಗೆ ಸೇವೆಯನ್ನು ಸಲ್ಲಿಸಬಹುದೆಂಬುದಕ್ಕೆ ಈ ಗ್ರಂಥಾಲಯಗಳು ಮಾದರಿಯಾಗಿವೆ. (ಎಚ್.ಎ.ಕೆ.)

**G. ಕಾಪಿರೈಟ್ ಗ್ರಂಥಾಲಯಗಳು :** ರೂಢಿಯಲ್ಲಿ, ಒಂದು ರಾಷ್ಟ್ರದ ಕಾನೂನಿನ ಪ್ರಕಾರ ಯಾವ ಗ್ರಂಥಾಲಯಕ್ಕೆ ಆ ದೇಶದಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿಸತಕ್ಕದ್ದು ಎಂದು ನಿರ್ಣಯವಾಗಿರುತ್ತದೋ ಅಂಥದಕ್ಕೆ ಕಾಪಿರೈಟ್ ಗ್ರಂಥಾಲಯ ಎಂದು ಹೆಸರು. 1956ರ ಕಾಪಿರೈಟ್ ಶಾಸನ ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬ ಪ್ರಕಾಶಕನೂ ತಾನು ಪ್ರಕಟಿಸುವ ಪ್ರತಿಯೊಂದು ಪುಸ್ತಕದ ಒಂದು ಪ್ರತಿಯನ್ನು ಒಂದು ತಿಂಗಳ ಒಳಗಾಗಿ ತನ್ನ ವೆಚ್ಚದಲ್ಲಿ ಬ್ರಿಟಿಷ್ ಮ್ಯೂಸಿಯಮಿಗೆ ತಲುಪಿಸತಕ್ಕದ್ದು ಎಂದು ವಿಧಿಸುತ್ತದೆ. ಪ್ರಕಾಶಕನಿಗೆ ಲಿಖಿತ ಬೇಡಿಕೆ ಬಂದರೆ ಇನ್ನೂ ಕೆಲವು ನಿರ್ದಿಷ್ಟ ಗ್ರಂಥಾಲಯಗಳಿಗೆ ಪ್ರತಿಗಳನ್ನು ಒದಗಿಸತಕ್ಕದ್ದು. ಈ ನಿಯಮದ ಉಲ್ಲಂಘನೆ ಮಾಡಿರುವುದು ಸಾಬೀತಾದರೆ ಶಿಕ್ಷೆಯಾಗಿ ಪುಸ್ತಕದ ಬೆಲೆಯ ಜೊತೆಗೆ ಐದು ಪೌಂಡುಗಳ ಜುಲ್ಮಾನೆ ವಿಧಿಸಬಹುದು. ಸಂಶೋಧನೆ ಮತ್ತು ಅಧ್ಯಯನಗಳಿಗಾಗಿ ಕಾಪಿರೈಟ್ ಬರೆಹಗಳ ಉಪಯೋಗ, ವಿದ್ಯಾರ್ಥಿಗಳಿಗೆ ಮತ್ತು ಇತರ ಗ್ರಂಥಾಲಯಗಳಿಗೆ ಗ್ರಂಥಪಾಲ ಪ್ರತಿಗಳನ್ನು ಒದಗಿಸುವುದು–ಈ ವಿಚಾರಗಳನ್ನು 1956ರ ಕಾಪಿರೈಟ್ ಶಾಸನ ಕ್ರಮಗೊಳಿಸಿದೆ.

ಸಾಮಾನ್ಯವಾಗಿ ಕಾಪಿರೈಟ್ ನಿಯಮಗಳು ಒಂದು ದೇಶದ ರಾಷ್ಟ್ರೀಯ ಗ್ರಂಥಾಲಯಕ್ಕೆ ಆ ರಾಷ್ಟ್ರದಲ್ಲಿ ಪ್ರಕಟವಾದ ಪುಸ್ತಕಗಳನ್ನು ಕಾನೂನಿನ ಪ್ರಕಾರ ಪಡೆಯುವ ಅಧಿಕಾರ ನೀಡುತ್ತದೆ. ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್, ಕೋಲ್ಕತದಲ್ಲಿರುವ ಭಾರತದ ರಾಷ್ಟ್ರೀಯ ಗ್ರಂಥಾಲಯ ಇಂಥವು.

ಭಾರತದಲ್ಲಿ 1954ರ ಪುಸ್ತಕಗಳು ಮತ್ತು ವೃತ್ತಪತ್ರಿಕೆಗಳ ವಿತರಣೆ (ಸಾರ್ವಜನಿಕ ಗ್ರಂಥಾಲಯಗಳು) ಶಾಸನದ ಪ್ರಕಾರ, ಕೋಲ್ಕತ್ತದ ರಾಷ್ಟ್ರೀಯ ಗ್ರಂಥಾಲಯ, ಮುಂಬಯಿಯ ಕೇಂದ್ರ ಗ್ರಂಥಾಲಯ, ಮದ್ರಾಸಿನ ಕನ್ನೆಮಾರಾ ಸಾರ್ವಜನಿಕ ಗ್ರಂಥಾಲಯ–ಇವಕ್ಕೆ ಭಾರತದಲ್ಲಿ ಪ್ರಕಟವಾಗುವ ಪ್ರತಿಯೊಂದು ಪುಸ್ತಕ ಹಾಗೂ ವೃತ್ತಪತ್ರಿಕೆಯ ಪ್ರತಿಗಳನ್ನು ಪಡೆಯುವ ಅಧಿಕಾರ ಇದೆ. ಈ ಕಾನೂನಿನ ಉಲ್ಲಂಘನೆಗೆ ಶಿಕ್ಷೆಯೆಂದರೆ ಪುಸ್ತಕದ ಬೆಲೆಗೆ ಸಮನಾದ ದಂಡ. ಇದಲ್ಲದೆ ರಾಜ್ಯಸರ್ಕಾರಗಳು ಜಾರಿಗೆ ತಂದಿರುವ 1867ರ ಪ್ರೆಸ್ ಮತ್ತು ರಿಜಿಸ್ಟ್ರೇಷನ್ ಶಾಸನದ ಪ್ರಕಾರ ಮುದ್ರಕ ತಾನು ಮುದ್ರಿಸಿದ ಪುಸ್ತಕಗಳ ತಲಾ ಒಂದೊಂದು ಪ್ರತಿಯನ್ನು ಉಚಿತವಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಕೊಡ ಬೇಕಾಗುತ್ತದೆ. ಅಂಥ ಪುಸ್ತಕಗಳನ್ನು ರಾಜ್ಯಸರ್ಕಾರ ಕೇಂದ್ರ ಗ್ರಂಥಾಲಯಗಳಿಗೆ ನೀಡುತ್ತದೆ.

ಪುಸ್ತಕಗಳನ್ನು ಕಾನೂನಿನ ಪ್ರಕಾರ ಒಂದೆಡೆ ಸಂಗ್ರಹಿಸಿಡುವ ಪದ್ಧತಿಗೆ ಕಾರಣವಾದವ ಫ್ರೆಂಚ್‌ದೊರೆ ಒಂದನೆಯ ಫ್ರಾನ್ಸಿಸ್. ಆತ 1537ರಲ್ಲಿ ಆರ್ಡಿನೆನ್ಸ್ ಡಿ ಮಾಂಟ್ ಪೆಲಿಯಕ್ ಎಂಬ ಆಜ್ಞೆಯೊಂದನ್ನು ವಿಧಿಸಿ ರಾಷ್ಟ್ರದ ಪ್ರತಿಯೊಬ್ಬ ಮುದ್ರಕನೂ ಪ್ರಕಾಶಕನೂ ತಾನು ಮುದ್ರಿಸಿದ ಇಲ್ಲವೆ ಹೊರತಂದ ಪುಸ್ತಕದ ಒಂದು ಪ್ರತಿಯನ್ನು ಉಚಿತವಾಗಿ ರಾಯಲ್ ಲೈಬ್ರರಿಗೆ ಕಳುಹಿಸಬೇಕೆಂದು ಕಡ್ಡಾಯ ಮಾಡಿದ.

## V. ಪರಾಮರ್ಶನ ಮತ್ತು ಪ್ರಲೇಖನ ಸೇವೆಗಳು

ಪರಾಮರ್ಶನ ಸೇವೆ (ರೆಫರೆನ್ಸ್ ಸರ್ವಿಸ್) ಮತ್ತು ಪ್ರಲೇಖನ ಸೇವೆ (ಡ್ಯಾಕ್ಯುಮೆಂಟೇಷನ್ ಸರ್ವಿಸ್) ಆಧುನಿಕ ಗ್ರಂಥಾಲಯದ ಬಹುಮುಖ್ಯ ಕೆಲಸಗಳಲ್ಲಿ ಒಂದು. ಅದರ ಬಗ್ಗೆ ಇಲ್ಲಿ ವಿವರಗಳಿವೆ.

**1. ಪರಾಮರ್ಶನ ಸೇವೆ ಮತ್ತು ಪರಾಮರ್ಶನ ಗ್ರಂಥಗಳು :** ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅರಿವನ್ನು ಪಡೆದುಕೊಳ್ಳುವ ಸಲುವಾಗಿ ಗ್ರಂಥಾಲಯಕ್ಕೆ ಭೇಟಿನೀಡುವ ಸಂಶೋಧಕರ, ಶಿಕ್ಷಕರ ವಿದ್ಯಾರ್ಥಿಗಳ, ವಿವಿಧ ಉದ್ಯೋಗಸ್ಥರ, ಸಾರ್ವಜನಿಕರ ಅಗತ್ಯಗಳಿಗೆ ಅನುಗುಣವಾಗಿ ಅವರಿಗೆ ಬೇಕಾದ ದಾಖಲೆಗಳನ್ನು, ಆಧಾರಗ್ರಂಥಗಳನ್ನು, ಆಕರಗ್ರಂಥಗಳನ್ನು, ವಾರ್ಷಿಕ ಪುಸ್ತಕಗಳನ್ನು, ನಿಘಂಟುಗಳನ್ನು, ವಿಶ್ವಕೋಶಗಳನ್ನು, ಸರ್ಕಾರಿ ರಾಜ್ಯಪತ್ರಗಳನ್ನು ವಿವಿಧ ಸಂಘ–ಸಂಸ್ಥೆಗಳ ಚಟುವಟಿಕೆಗಳನ್ನು ವಿವರಿಸುವ ವಾರ್ಷಿಕ ಪ್ರಕಟಣೆಗಳನ್ನು, ವೃತ್ತಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು, ಭೂಪಟಗಳ ನಕ್ಷೆಗಳನ್ನು–ಹೀಗೆ ಹಲವಾರು ಉಪಯುಕ್ತ ಸಾಧನೆಗಳನ್ನು ಒದಗಿಸುವುದೇ ಪರಾಮರ್ಶನ ಸೇವೆ (ರೆಫರೆನ್ಸ್ ಸರ್ವಿಸ್). ಸದಸ್ಯರಿಗೆ ಸಾಮಾನ್ಯ ಗ್ರಂಥಗಳನ್ನು (ರೆಫರೆನ್ಸ್ ಬುಕ್ಸ್) ಸದಸ್ಯರಿಗಾಗಲಿ ಅಥವಾ ಸಾರ್ವಜನಿಕರಿಗಾಗಲಿ ಎರವಲು ಕೊಡುವುದು ಸಾಮಾನ್ಯವಾಗಿ ಯಾವ ಗ್ರಂಥಾಲಯದಲ್ಲೂ ಕಾಣಬಹುದು. ಆದರೆ ಸಂದರ್ಭವನ್ನು ಗಮನಿಸಿ, ಕೆಲವು ವಿಶೇಷ ಅನುಮತಿಗಳ ಮೇಲೆ, ಕೆಲವಾರು ಕಟ್ಟುಪಾಡುಗಳಿಗೆ ಒಳಪಟ್ಟು ಪರಾಮರ್ಶನ ಗ್ರಂಥಗಳನ್ನೂ ಸದಸ್ಯರಿಗೆ ಎರವಲು ಕೊಡುವುದು ಗ್ರಂಥಾಲಯದ ಅಧಿಕಾರಿಗಳ ತೀರ್ಮಾನಕ್ಕೆ ಬಿಟ್ಟದ್ದು. ಪರಾಮರ್ಶನ ಗ್ರಂಥಗಳನ್ನು ಗ್ರಂಥಾಲಯದ ಆವರಣದೊಳಗೆ ಮಾತ್ರ ಅವಲೋಕಿಸಲು ಯಾರಿಗಾದರೂ ಅವಕಾಶವಿರುತ್ತದೆ.

ಗ್ರಂಥಾಲಯದಲ್ಲಿ ಪರಾಮರ್ಶನ ಸೇವೆ ಒಂದು ನಿರ್ದಿಷ್ಟ ಕ್ರಮದಲ್ಲಿ ಒದಗುತ್ತದೆ. ಗ್ರಂಥಾಲಯಕ್ಕೆ ಹೊಸದಾಗಿ ಸದಸ್ಯರಾಗುವವರಿಗೆ ಮಾರ್ಗದರ್ಶನ ನೀಡುವುದರ ಬಗ್ಗೆ ಸಿದ್ಧಪಡಿಸುವ ವರ್ಗೀಕರಣ ಪಟ್ಟಿಗಳು, ಗ್ರಂಥಾಲಯದಲ್ಲಿರುವ ಪುಸ್ತಕಗಳ ಹೆಸರುಗಳನ್ನು ತಿಳಿಸುವ ಗ್ರಂಥಸೂಚಿಗಳು, ವಿಷಯ ಹಾಗೂ ಲೇಖಕರ ವರ್ಗೀಕರಣಕ್ಕೆ ಸಂಬಂಧಿಸಿದಂಥ ಕಾರ್ಡುಗಳು, ಗ್ರಂಥಾಲಯದ ವಾಚನಾಲಯಕ್ಕೆ ತರಿಸಲಾಗುವ ವೃತ್ತಪತ್ರಿಕೆ ಮತ್ತು ನಿಯತ ಕಾಲಿಕೆಗಳ ವಿವರಗಳನ್ನು ಕೊಡುವ ಸೂಚಿಪಟ್ಟಿಗಳು–ಇವೇ ಮುಂತಾದ ಉಪಯೋಗಿ ಸಾಧನೆಗಳನ್ನು ಒದಗಿಸಿರಲಾಗುತ್ತದೆ. ಒಂದು ವಿಷಯದ ಬಗ್ಗೆ ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆ ನಡೆಸುವಾತ ತನಗೆ ಬೇಕಾದ ಪರಾಮರ್ಶನ ಗ್ರಂಥವನ್ನು ಪಡೆಯುವ ಮೊದಲು ಸೂಚೀಕರಣ ಪಟ್ಟಿಯನ್ನೋ ವರ್ಗೀಕರಣ ಪಟ್ಟಿಯನ್ನೋ ಅವಲೋಕಿಸಿ ಅಗತ್ಯ ಗ್ರಂಥ ಯಾವ ವಿಭಾಗದಲ್ಲಿ ದೊರೆಯುತ್ತದೆ ಎಂಬುದನ್ನು ಖಚಿತಪಡಿಸಿ ಕೊಳ್ಳುತ್ತಾನೆ. ಪರಾಮರ್ಶನ ಗ್ರಂಥಗಳನ್ನಾಗಲೀ ಇನ್ನಿತರ ಪ್ರಮುಖ ಪುಸ್ತಕಗಳನ್ನಾಗಲೀ ಮನೆಗೆ ತೆಗೆದುಕೊಂಡು ಹೋಗಲು ಸದಸ್ಯರಿಗಾಗಲೀ ಇನ್ನಿತರರಿಗಾಗಲೀ ಅವಕಾಶವಿಲ್ಲ ದಿರುವುದರಿಂದ ಆ ಪುಸ್ತಕಗಳೂ ಅವಕ್ಕೆ ಮೀಸಲಾದ ಸ್ಥಳಗಳಲ್ಲಿ ಇದ್ದು ಅವಲೋಕನಕ್ಕೆ ಒದಗುತ್ತವೆ. ಪರಾಮರ್ಶನ ಗ್ರಂಥಗಳನ್ನು ಇತರ ಸಾಮಾನ್ಯ ಗ್ರಂಥಗಳಂತೆಯೇ ತೆರೆದ ಕಪಾಟುಗಳಲ್ಲಿಟ್ಟಿರುತ್ತಾರೆ.

ಒಂದು ವಿಷಯವನ್ನು ಕುರಿತು ಹೆಚ್ಚಿನ ಅಭ್ಯಾಸ ನಡೆಸುವಾತನ ಅಗತ್ಯಗಳನ್ನು ಕುರಿತಂತೆ ಅವನಿಗೆ ಮಾರ್ಗದರ್ಶನ ಮಾಡಲು ಗ್ರಂಥಾಲಯ ವ್ಯವಸ್ಥೆಯಲ್ಲಿ ತರಬೇತಿ ಪಡೆದ ನುರಿತ ಸಹಾಯಕರಿರುತ್ತಾರಗಿ ಅವರು ಆತನಿಗೆ ಪರಾಮರ್ಶನ ಸೇವೆಯ ಒಂದು ಭಾಗದ ಪ್ರಯೋಜನವನ್ನು ನೀಡುತ್ತಾರೆ. ಇದರಿಂದ ಗ್ರಂಥಾಲಯ ಸಿಬ್ಬಂದಿಯವರ ಹಾಗೂ ಓದುಗರ ವೇಳೆಯಲ್ಲಿ ಉಳಿತಾಯವಾಗಿ ಮತ್ತಷ್ಟು ಮಂದಿಗೆ ಗ್ರಂಥಾಲಯದ ಸೇವೆ ದೊರಕಿದಂತಾಗುತ್ತದೆ. ಕೇಳಿದ ಪ್ರಶ್ನೆಗಳಿಗೆ ತತ್‌ಕ್ಷಣದಲ್ಲಿ ಯೋಗ್ಯ ಉತ್ತರವನ್ನೊದಗಿಸುವ ಅಥವಾ ಬೇಕಾದ ಮಾಹಿತಿಯನ್ನು ಒದಗಿಸುವ ಸೇವೆಯನ್ನು ಸಾಮಾನ್ಯವಾಗಿ ಅಲ್ಪಾವಧಿ ಸೇವೆ ಅಥವಾ ಕ್ಷಿಪ್ರ ಪರಾಮರ್ಶನ ಸೇವೆ (ರೆಡಿ ರೆಫರೆನ್ಸ್ ಸರ್ವಿಸ್) ಎನ್ನುತ್ತಾರೆ.

ಪರಾಮರ್ಶನ ಸೇವೆಯ ಇನ್ನೊಂದು ಹಂತದಲ್ಲಿ ಓದುಗರಿಗೆ ಬೇಕಾದ ಮಾಹಿತಿ ತತ್‌ಕ್ಷಣ ದೊರೆಯದಿದ್ದಾಗ ಆ ಮಾಹಿತಿಯನ್ನು ದೊರಕಿಸಲು ಬೇರೆ ಬೇರೆ ಗ್ರಂಥಗಳು ನಿಯತಕಾಲಿಕೆಗಳಲ್ಲಿಯ ಲೇಖನಗಳು ಇತ್ಯಾದಿಗಳನ್ನು ಅವಲೋಕಿಸುವುದು ಅವಶ್ಯವಾಗುತ್ತದೆ. ಒಂದು ವೇಳೆ ಗ್ರಂಥಾಲಯದಲ್ಲಿ ಲಭ್ಯವಿದ್ದ ಸಾಮಗ್ರಿಗಳಲ್ಲಿ ಓದುಗರು ಕೇಳಿದ ಮಾಹಿತಿ ದೊರೆಯದಿದ್ದರೆ, ಅಂಥ ಮಾಹಿತಿಯನ್ನಾಗಲಿ ಅಥವಾ ಸಾಮಗ್ರಿಗಳನ್ನಾಗಲಿ ಬೇರೆ ಗ್ರಂಥಾಲಯಗಳಿಂದ ಎರವಲಾಗಿ ತರಿಸಿಕೊಡ ಬೇಕಾಗುತ್ತದೆ. ಕೆಲವೊಂದು ಸಲ ಓದುಗರಿಗೆ ಬೇಕಿದ್ದ ಮಾಹಿತಿಯನ್ನು ದೊರಕಿಸಲು ತಜ್ಞರ ಸಹಾಯವೂ ಬೇಕಾಗಬಹುದು. ಒಂದು ವಿಶಿಷ್ಟ ವಿಷಯವನ್ನು ಕುರಿತು ಪ್ರಕಟವಾಗಿರುವ ಗ್ರಂಥಗಳನ್ನು ತಿಳಿಸಿಕೊಡುವ ಗ್ರಂಥ ಸೂಚಿಯನ್ನು ತಯಾರಿಸುವುದೂ ಪರಾಮರ್ಶನ ಸೇವೆಯ ಒಂದು ರೂಪ. ಕೆಲವು

ಪ್ರಸಂಗಗಳಲ್ಲಿ ಇಂಥ ಸೂಚಿಗಳು ಓದುಗರಿಗೆ ಉಪಯೋಗವಾಗಬಹುದೆಂಬ ನಿರೀಕ್ಷೆಯಿಂದ ಗ್ರಂಥಾಲಯದಲ್ಲಿ ಅವನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಿಟ್ಟುಕೊಳ್ಳುವುದು ಉಂಟು. ವಿಶೇಷವಾಗಿ ಸಂಶೋಧಕರಿಗೆ ಮತ್ತು ಕೈಗಾರಿಕೆ ಹಾಗೂ ವೈಜ್ಞಾನಿಕ ಕೇಂದ್ರಗಳಲ್ಲಿರುವ ಗ್ರಂಥಾಲಯಗಳನ್ನು ಉಪಯೋಗಿಸುವವರಿಗೆ ಈ ಬಗೆಯ ಸೇವೆ ಹೆಚ್ಚು ಉಪಯುಕ್ತ. ಇಂಥ ಸೇವೆ ಸ್ವಲ್ಪ ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳುವುದರಿಂದ ಇದನ್ನು ಅಧಿಕ ಕಾಲಾವಧಿಯ ಪರಾಮರ್ಶನ ಸೇವೆ (ಲಾಂಗ್ ರೇಂಜ್ ರೆಫರೆನ್ಸ್ ಸರ್ವಿಸ್) ಎಂದು ಕರೆಯುತ್ತಾರೆ.

**ಪರಾಮರ್ಶನ ವಿಭಾಗದ ಸಂಘಟನೆ :** ತ್ವರಿತಗತಿಯಲ್ಲಿ ಪರಾಮರ್ಶನ ಸೇವೆಯನ್ನು ಒದಗಿಸಲು ಈ ವಿಭಾಗದ ಸಂಘಟನೆ ಅಗತ್ಯ. ಇಂಥ ಸಂಘಟನೆಯಲ್ಲಿ ಸೇವಾವಿಭಾಗ ಗ್ರಂಥಾಲಯದ ಇತರ ಸೇವಾವಿಭಾಗಗಳೊಡನೆ ಹತ್ತಿರದ ಸಂಪರ್ಕ ಪಡೆಯುವಂತೆ ಸ್ಥಳ ನಿರ್ದೇಶನ ಮಾಡುವುದು. ಗ್ರಂಥಾಲಯದಲ್ಲಿ ಲಭ್ಯವಿರುವ ಎಲ್ಲ ಪರಾಮರ್ಶನ ಗ್ರಂಥಗಳೂ ಈ ವಿಭಾಗದಲ್ಲಿ ದೊರೆಯುವಂತಾಗಿಸುವುದು ಅಗತ್ಯ. ಈ ವಿಭಾಗದಲ್ಲಿ ಗ್ರಂಥಾಲಯದ ನಿಯಮಗಳು, ಗ್ರಂಥಾಲಯದ ಕೈಪಿಡಿ, ಸ್ವರಾಜ್ಯ ಹಾಗೂ ಪರರಾಜ್ಯಗಳ ಹಾಗೂ ಬೇರೆ ಬೇರೆ ರಾಷ್ಟ್ರಗಳ ನಕಾಶೆಗಳೂ ಇರಬೇಕು. ಪರಾಮರ್ಶನ ಸೇವೆಯ ಗುಣಮಟ್ಟ ಹೆಚ್ಚಿಸಲು ಗ್ರಂಥಾಲಯದಲ್ಲಿನ ಮುಕ್ತದ್ವಾರ ಪದ್ಧತಿ (ಓಪನ್ ಆಕ್ಸೆಸ್ ಸಿಸ್ಟಮ್) ಹೆಚ್ಚು ಉಪಯುಕ್ತ. ಗ್ರಂಥಗಳ ವರ್ಗೀಕರಣಕ್ಕೆ ಹಾಗೂ ಸೂಚೀಕರಣಕ್ಕೆ ಪ್ರಚಲಿತ ಪದ್ಧತಿಗಳ ಬಳಕೆಯಿಂದ ಕಾಲದ ವ್ಯಯ ಕಡಿಮೆಯಾಗುತ್ತದೆ. ವರ್ಷೇವರ್ಷೆ ಪ್ರಕಟವಾಗುವ ಹೊಸ ಹೊಸ ಪರಾಮರ್ಶನ ಗ್ರಂಥಗಳನ್ನು ಕೊಂಡು ಒದಗಿಸುವುದಕ್ಕೂ ಪರಾಮರ್ಶನ ವಿಭಾಗದಲ್ಲಿ ಅವಕಾಶವಿರಬೇಕು.

ಪರಾಮರ್ಶನ ಗ್ರಂಥಗಳು : ಪರಾಮರ್ಶನ ಗ್ರಂಥವೆಂದರೆ–ಕೆಲವು ನಿರ್ದಿಷ್ಟ ವಿಷಯಗಳ ಅನ್ವೇಷಣೆಗೆ ಅನುಕೂಲವಾಗುವಂತೆ ಅಣಿಗೊಳಿಸಿದ, ಮೊದಲಿನಿಂದ ಕೊನೆಯವರೆಗೆ ಓದುವ ಅವಶ್ಯಕತೆ ಇಲ್ಲದಿರುವ, ಪದೇ ಪದೇ ಪರಾಮರ್ಶನ ಮಾಡಬೇಕಾಗಿರುವ ಹಾಗೂ ಗ್ರಂಥಾಲಯದಲ್ಲಿಯೇ ಉಪಯೋಗಿಸಬೇಕಾದ ಗ್ರಂಥ ಎಂದೆನ್ನುವ ವ್ಯಾಖ್ಯೆ ಅಮೆರಿಕದ ಗ್ರಂಥಾಲಯದ ಸಂಘದ ಗ್ಲಾಸರಿ ಆಫ್ ಲೈಬ್ರರಿ ಟರ್ಮ್ಸ್ ಪ್ರಕಟಣೆಯಲ್ಲಿ ಸಿಗುತ್ತದೆ. ಪರಾಮರ್ಶನ ಗ್ರಂಥದಲ್ಲಿ, ಗೊತ್ತಿದ್ದ ವಿಷಯಗಳನ್ನು ಕುರಿತು ಮಾಹಿತಿಯನ್ನು ಕಲೆಹಾಕಿ ನಮಗೆ ಬೇಕಾದಾಗ ಅತಿ ಶೀಘ್ರದಲ್ಲಿ ಆ ಮಾಹಿತಿಯನ್ನು ಉಪಯೋಗಿಸಲು ಬರುವಂತೆ ಅವನ್ನು ಅಣಿಗೊಳಿಸಲಾಗಿರುತ್ತದೆ ಎಂಬ ಅಭಿಪ್ರಾಯವನ್ನು ಎಸ್.ಆರ್. ರಂಗನಾಥನ್ ತಳೆದಿದ್ದರು.

**ಪರಾಮರ್ಶನ ಗ್ರಂಥಗಳ ವೈಶಿಷ್ಟ್ಯಗಳು :** ಪರಾಮರ್ಶನ ಗ್ರಂಥಗಳಲ್ಲಿ ಸಮಾವೇಶವಾದ ವಿಷಯಗಳನ್ನು ಸಾಮಾನ್ಯವಾಗಿ ಅಕಾರಾದಿಯಾಗಿ ಕೊಟ್ಟಿರುತ್ತಾರೆ. ಉದಾ: ವಿವಿಧ ಭಾಷೆಗಳಲ್ಲಿನ ವಿಶ್ವಕೋಶಗಳು. ಸಮಾವೇಶವಾದ ವಿಷಯಗಳನ್ನು ಶೀಘ್ರವಾಗಿ ಕಂಡುಹಿಡಿಯಲು ಓದುಗರಿಗೆ ಅನುಕೂಲವಾಗಲೆಂದು ಆ ಗ್ರಂಥಗಳ ಕೊನೆಯಲ್ಲಾಗಲಿ ಅಥವಾ ಆರಂಭದಲ್ಲಾಗಲಿ ವಿಷಯಸೂಚಿಯನ್ನು ಕೊಟ್ಟಿರುತ್ತಾರೆ. ಇಂಥ ವಿಷಯಸೂಚಿಯನ್ನು ಪ್ರತ್ಯೇಕವಾಗಿಯೂ ಪ್ರಸಿದ್ಧಿಸಿರಬಹುದು. ಇದಲ್ಲದೇ ಪರಾಮರ್ಶನ ಗ್ರಂಥಗಳ ಪರಿಚಯ ಮಾಡಿಕೊಡುವ ಮುನ್ನುಡಿ, ವಿವೇಚಿಸಿದ ವಿಷಯಗಳ ಬಗ್ಗೆ ದೀರ್ಘವಾದ ಪರಿವಿಡಿ, ಲೇಖಕರ ಪರಿಚಯ, ಗ್ರಂಥಗಳಲ್ಲಿ ಬಳಸಿದ ಸಂಕ್ಷಿಪ್ತ ರೂಪಗಳ ಪೂರ್ಣರೂಪಗಳು, ನೆರವು ಪಡೆದ ವ್ಯಕ್ತಿಗಳ ಮತ್ತು ಸಂಸ್ಥೆಗಳ ಉಪಕಾರ ಸ್ಮರಣೆ, ಇತ್ಯಾದಿ ವಿಷಯಗಳು ಸೇರಿರುತ್ತವೆ. ಇಂಥ ಗ್ರಂಥಗಳು ಒಂದು ಸಂಪುಟದಲ್ಲೊ ಇಲ್ಲವೆ ಹಲವಾರು ಸಂಪುಟಗಳಲ್ಲೊ ಇರಬಹುದು.

ಪರಾಮರ್ಶನ ಗ್ರಂಥಗಳ ಮೌಲ್ಯ ನಿರ್ಧರಣೆ : ಗ್ರಂಥಗಳ ಉಪಯುಕ್ತತೆಯನ್ನು ಅಳೆದು, ಅವುಗಳ ಮೌಲ್ಯ ನಿರ್ಧರಿಸಲು ಹಲವಾರು ಅಂಶಗಳು ಅಗತ್ಯ. ಅವು ಹೀಗಿವೆ: 1. ಗ್ರಂಥದ ಹೆಸರಿನಿಂದ ಸೂಚಿತವಾಗುವ ವಿಷಯ ಹಾಗೂ ಅದರ ವ್ಯಾಪ್ತಿ 2. ಸಂಪಾದಕ ಮತ್ತು ಲೇಖಕರ ಪೂರ್ವಪರಿಚಯ 3. ಪ್ರಕಾಶಕರು–ಹೊಸಬರೋ ಅಥವಾ ಈಗಾಗಲೇ ಇಂಥ ಕೃತಿಗಳನ್ನು ಅವರು ಪ್ರಕಟಿಸಿದ್ದರೋ ಎಂಬ ವಿಚಾರ, 4. ಪ್ರಕಾಶನ ವರ್ಷ ಮತ್ತು ಕಾಪಿರೈಟ್ ವರ್ಷ 5. ಮುನ್ನುಡಿ ಅಥವಾ ಉಪೋದ್ಘಾತದಿಂದ ವಿಷಯವ್ಯಾಪ್ತಿಯ ಬಗ್ಗೆ ತಿಳಿದುಬರುವ ಮಾಹಿತಿ 6. ಗ್ರಂಥದ ವಿಶೇಷ ಗುಣಾಂಶಗಳು ಮತ್ತು ಕೊರತೆಗಳು 7. ವಿಷಯ ಜೋಡಣೆಯಲ್ಲಿಯ ಏಕರೂಪತೆ 8. ವಿಷಯಗಳನ್ನು ನಿವೇದಿಸಿದ ರೀತಿ–ಮಕ್ಕಳಿಗಾಗಿಯೋ ವಿದ್ಯಾರ್ಥಿಗಳಿಗಾಗಿಯೋ ಪ್ರೌಢರಿಗಾಗಿಯೋ, ಸಂಶೋಧಕರಿಗಾಗಿಯೋ ಇತ್ಯಾದಿ. 9. ವಿವಾದಾತ್ಮಕ ವಿಷಯಗಳ ಪ್ರತಿಪಾದನೆಯಲ್ಲಿ ಸಂಪಾದಕರು ಅನುಸರಿಸಿದ ರೀತಿ 10. ಗ್ರಂಥ ಪುನರ್ ಮುದ್ರಿತವಾದಾಗ ಅದು ತಿದ್ದಿ ಬೆಳೆಯಿಸಿದ ಆವೃತ್ತಿಯೋ ಅಥವಾ ಕೇವಲ ಮೂಲ ಆವೃತ್ತಿಯ ಪುನರ್ ಮುದ್ರಣವೋ ಎಂಬ ವಿಷಯ, ತಿದ್ದಿ ಬೆಳೆಯಿಸಿದ ಆವೃತ್ತಿಯಾಗಿದ್ದರೆ ಯಾವ ಯಾವ ವಿಷಯಗಳನ್ನು ಯಾವಯಾವ ಹಂತದಲ್ಲಿ ತಿದ್ದಿ ಬೆಳೆಸಲಾಗಿವೆ ಎಂಬ ಅಂಶ 11. ಲೇಖನಗಳ ಕೊನೆಯಲ್ಲಿರುವ ಗ್ರಂಥಸೂಚಿ ಹಾಗೂ ವಿಷಯ ಸೂಚಿಗಳ ಬಗ್ಗೆ ವಿವರಗಳು 12. ಗ್ರಂಥದ ಪುಟವಿನ್ಯಾಸ ಮತ್ತು ಮುದ್ರಣ ಹಾಗೂ ಅದರ ರಟ್ಟುಕಟ್ಟುವಿಕೆ, 13. ಗ್ರಂಥದ ಬೆಲೆ 14. ವಿಮರ್ಶಾವಲೋಕನ.

**ಪರಾಮರ್ಶನ ಗ್ರಂಥಗಳ ಪ್ರಕಾರಗಳು :** ಪರಾಮರ್ಶನ ಗ್ರಂಥಗಳನ್ನು 1 ಸಾಮಾನ್ಯ ಪರಾಮರ್ಶನ ಗ್ರಂಥಗಳು, 2 ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳು ಎಂದು ಎರಡು ಬಗೆಯಲ್ಲಿ ವಿಂಗಡಿಸಬಹುದು. ಮೊದಲನೆಯ ವರ್ಗದ ಪರಾಮರ್ಶನ ಗ್ರಂಥಗಳಲ್ಲಿ ಎಲ್ಲ ವಿಷಯಗಳನ್ನು ಸಾಮಾನ್ಯ ರೀತಿಯಲ್ಲಿ ವಿವೇಚಿಸಿದರೆ ಎರಡನೆಯ ವರ್ಗದ ಗ್ರಂಥಗಳಲ್ಲಿ ಅವುಗಳಲ್ಲಿ ಪರಿಣತರಾದವರಿಗೆ ಉಪಯೋಗವಾಗುವಂಥ ವಿಶಿಷ್ಟ ವಿಷಯದ ವಿವೇಚನೆ ಇರುತ್ತದೆ. ಇದಲ್ಲದೆ ಈ ಗ್ರಂಥಗಳನ್ನು 1 ಗತಕಾಲಕ್ಕೆ ಸಂಬಂಧಪಟ್ಟವು, 2 ಅರ್ವಾಚೀನಕಾಲಕ್ಕೆ ಸಂಬಂಧಪಟ್ಟವು, 3 ಇವೆರಡರ ಮಿಶ್ರಣಗಳು–ಈ ರೀತಿಯಾಗಿಯೂ ವಿಭಾಗಿಸಬಹುದು. ಗ್ರಂಥಗಳು ಪ್ರಕಾರಗಳು ಯಾವುದೇ ಆಗಲಿ ಪ್ರತಿಯೊಂದು ಪ್ರಕಾರದಲ್ಲಿ ಈ ಮುಂದೆ ಹೇಳಿರುವ ಪರಾಮರ್ಶನ ಗ್ರಂಥಗಳು ಸಮಾವೇಶವಾಗುತ್ತವೆ. 1. ಕೋಶಗಳು (ನಿಘಂಟು ಮತ್ತು ವಿಶ್ವಕೋಶಗಳನ್ನೊಳಗೊಂಡಂತೆ), 2. ವಾರ್ಷಿಕ ಪುಸ್ತಕಗಳು, 3. ನಿಯತಕಾಲಿಕೆಗಳ ನಿರ್ದೇಶಿಕೆಗಳು ಮತ್ತು ಸಮಾಚಾರ ಸಾರಗಳು, 4. ನಿರ್ದೇಶಿಕೆಗಳು ಮತ್ತು ಕೈಪಿಡಿಗಳು, 5. ಗ್ರಂಥ ಮತ್ತು ವಿಷಯ ಸೂಚಿಗಳು, 6. ಜೀವನ ಚರಿತ್ರೆಯ ಕೋಶಗಳು, 7. ಸರ್ಕಾರಿ ಪ್ರಕಾಶನಗಳು, 8. ಪೇಟೆಂಟುಗಳು ಮತ್ತು ಸ್ಟ್ಯಾಂಡರ್ಡುಗಳು, 9. ಕೈಪಿಡಿಗಳು ಮತ್ತು ಇನ್ನಿತರ ಪುಸ್ತಿಕೆಗಳು, 10. ಗೆಜೆಟಿಯರ್‌ಗಳು, ಪ್ರವಾಸಿ ಕೈಪಿಡಿಗಳು ಮತ್ತು ಅಟ್ಲಾಸುಗಳು. ಇವಲ್ಲದೆ ಆಯಾ ವಿಷಯಗಳನ್ನು ಆಳವಾಗಿ ವಿವೇಚಿಸುವ ಗ್ರಂಥಗಳನ್ನೂ ಪರಾಮರ್ಶನ ಗ್ರಂಥಗಳ ಶ್ರೇಣಿಗೆ ಸೇರಿಸಬಹುದು.

ಗ್ರಂಥಾಲಯದಲ್ಲಿರುವ ಪರಾಮರ್ಶನ ಗ್ರಂಥಗಳ ಪೈಕಿ ಕೆಲವುದರ ಸೂಕ್ಷ್ಮ ಪರಿಚಯವನ್ನು ಕೆಳಗೆ ಕೊಟ್ಟಿದೆ.

**ಕೋಶಗಳು :** ಕೋಶಗಳಲ್ಲಿ ಶಬ್ದಗಳನ್ನು ಅಕಾರಾದಿಯಾಗಿ ಜೋಡಿಸಿ ಅವುಗಳ ಅರ್ಥವನ್ನು ತಿಳಿಸಲಾಗುತ್ತದೆ. ಒಂದು ಭಾಷೆಯಲ್ಲಿನ ಶಬ್ದಗಳಿಗೆ ಮತ್ತೊಂದು ಭಾಷೆಯಲ್ಲಿ ಅರ್ಥವನ್ನು ನೀಡುವಂಥ ಕೋಶಗಳೂ ಒಂದೇ ಭಾಷೆಯ ವಿವಿಧ ಶಬ್ದಗಳಿಗೆ ಅದೆ ಭಾಷೆಯಲ್ಲಿ ಅರ್ಥವನ್ನು ನೀಡುವಂಥ ಕೋಶಗಳೂ ಇರುತ್ತವೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು, ರೆವರೆಂಡ್ ಕಿಟ್ಟೆಲರ ಕನ್ನಡ ಇಂಗ್ಲಿಷ್ ನಿಘಂಟು ಮೊದಲನೆಯ ವರ್ಗಕ್ಕೆ ಉದಾಹರಣೆಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು, ಶಿವರಾಮ ಕಾರಂತರ ಸಿರಿಗನ್ನಡ ಕೋಶ, ಪಂಡಿತ ಕವಲಿಯವರ ಸಚಿತ್ರ ಕನ್ನಡ–ಕನ್ನಡ ಕಸ್ತೂರೀ ಕೋಶ, ಎಚ್.ವಿ. ರಮಾಕಾಂತರಾವ್ ಅವರ ಕನ್ನಡ–ಕನ್ನಡ ಶಬ್ದಕೋಶ ಮುಂತಾದ ಸ್ವಭಾಷಾ ಕೋಶಗಳು ಎರಡನೆಯ ವರ್ಗಕ್ಕೆ ಸೇರುತ್ತವೆ. ಇದಲ್ಲದೆ ಇಂಗ್ಲಿಷ್ ಭಾಷೆಯ ಪ್ರಮುಖ ಕೋಶಗಳಾದ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು, ವೆಬ್‌ಸ್ಟರ್ ಕೋಶ, ಚೇಂಬರ್ಸ್ ನಿಘಂಟು ಮುಂತಾದವನ್ನು ಈ ವರ್ಗಕ್ಕೆ ಸೇರಿಸಬಹುದು. ಇವಲ್ಲದೆ ವೇದ, ಪುರಾಣ, ಮಹಾಕಾವ್ಯಗಳು ಮುಂತಾದ ಗ್ರಂಥಗಳನ್ನು ಆಧರಿಸಿ ರಚಿಸಿದಂಥ ಕಾವ್ಯಗಳಲ್ಲಿ ಬರುವ ಕ್ಲಿಷ್ಟಪದಗಳನ್ನು ಸಂಗ್ರಹಿಸಿ ಅರ್ಥೈಸುವ ಪುಸ್ತಕ ಕೋಶ ಅಥವಾ ಗ್ರಂಥಸ್ಥ ಕೋಶಗಳೂ ಉಂಟು. ಕುಮಾರವ್ಯಾಸ ನಿಘಂಟು, ಕಾವ್ಯಪದಮಂಜರಿ ನಿಘಂಟು ಮೊದಲಾದವು ಈ ಗುಂಪಿಗೆ ಬರುತ್ತವೆ. ಕೋಶಗಳನ್ನು ಶಾಸ್ತ್ರೀಯವಾಗಿ ವಿರಣಾತ್ಮಕ ಕೋಶ, ಐತಿಹಾಸಿಕ ಕೋಶ ಮತ್ತು ತೌಲನಿಕ ಕೋಶ ಎಂದು ಮೂರು ವರ್ಗಗಳಾಗಿ ವಿಂಗಡಿಸುವುದುಂಟು. ಒಂದು ಪದದ ಉಗಮ ಮತ್ತು ವಿಕಾಸದ ಎಲ್ಲ ಹಂತಗಳ ವಿವರಗಳನ್ನೂ ಪದದ ರೂಪ, ಅರ್ಥಗಳಲ್ಲಿ ಆಗಿರುವ ವ್ಯತ್ಯಾಸಗಳನ್ನೂ ವಿವರಗಳನ್ನೂ ಐತಿಹಾಸಿಕ ಕೋಶದಲ್ಲಿ ಕಾಣಬಹುದು. ಇಂಗ್ಲಿಷಿನ ಆಕ್ಸ್‌ಫರ್ಡ್ ಕೋಶ ಈ ಜಾತಿಗೆ ಸೇರುತ್ತದೆ.

ಕೋಶ ಎಂಬ ಪದಕ್ಕೆ ಶಬ್ದಕೋಶ ಮತ್ತು ಜ್ಞಾನಕೋಶ ಎಂಬ ಎರಡು ಅರ್ಥಗಳಿವೆಯಾಗಿ ಕೋಶ ಪ್ರಪಂಚದಲ್ಲಿ ವಿಶ್ವಕೋಶ, ಪಾರಿಭಾಷಿಕ ಪದಕೋಶ, ವೃತ್ತಿಪದ ಕೋಶ, ಪರ್ಯಾಯಪದ ಕೋಶ, ಗಾದೆಗಳ ಕೋಶ, ಭಾಷೆಗಳ ಕೋಶ, ಜಾನಪದ ಮತ್ತು ವಸ್ತುಕೋಶ, ಉದ್ಧರಣ ಕೋಶ, ವ್ಯಕ್ತಿನಾಮಗಳ ಕೋಶ, ಸ್ಥಾನಗಳ ಕೋಶ, ವಿವಿಧ ವಿಷಯಗಳ ವಿಶ್ವಕೋಶ – ಹೀಗೆ ಅನೇಕ ಬಗೆಯ ಕೋಶಗಳೂ ಉಂಟು. ವಿಲಿಯಂ ರೀವ್ ತಯಾರಿಸಿದ ಅತ್ಯಂತ ಹಳೆಯ ಕೋಶವಾದ ಎ ಡಿಕ್ಷನರಿ, ಕರ್ನಾಟಕ ಅಂಡ್ ಇಂಗ್ಲಿಷ್ (1832), ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶ (1969–2004) ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದ ಕಿರಿಯರ ವಿಶ್ವಕೋಶ–ಜ್ಞಾನಗಂಗೋತ್ರಿ, ಆಕ್ಸ್‌ಫರ್ಡ್ ಜೂನಿಯರ್ ಎನ್‌ಸೈಕ್ಲೊಪೀಡಿಯ, ಬ್ರಿಟಾನಿಕ ವಿಶ್ವಕೋಶ, ಅಮೆರಿಕಾನ ವಿಶ್ವಕೋಶ, ನ್ಯೂ ಕ್ಯಾಕ್ಸ್‌ಟನ್ ವಿಶ್ವಕೋಶ, ಕಾಲಿಯರ್ಸ್ ವಿಶ್ವಕೋಶ, ಕೊಲಂಬಿಯ

ಎನ್‌ಸೈಕ್ಲೊಪೀಡಿಯ, ಆಸ್ಟ್ರೇಲಿಯನ್ ಎನ್‌ಸೈಕ್ಲೊಪೀಡಿಯ –ಹೀಗೆ ಹಲವಾರು ಸಾಮಾನ್ಯ ಕೋಶಗಳು ಉಂಟು. ಇವುಗಳ ಜೊತೆಗೆ ಒಂದು ವಿಷಯವನ್ನು ಕುರಿತಂತೆ ಹಲವಾರು ಭಾಷೆಗಳಲ್ಲಿ ವಿಶಿಷ್ಟ ವಿಶ್ವಕೋಶಗಳು ಇರುತ್ತವೆ. ಮೈಸೂರು ವಿಶ್ವವಿದ್ಯಾನಿಲಯದ ವಿಷಯ ವಿಶ್ವಕೋಶ ಯೋಜನೆಯಲ್ಲಿ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪ್ರತ್ಯೇಕ ಸಂಪುಟಗಳಿರುತ್ತವೆ. ಇದೇ ರೀತಿ ಇತರ ಪ್ರಾಂತೀಯ ಭಾಷೆಗಳಲ್ಲೂ ಇಂಥ ಕೆಲಸ ನಡೆದಿದೆ. ಇಂಗ್ಲಿಷ್ ಭಾಷೆಯಲ್ಲಿನ ಪ್ರಮುಖ ವಿಷಯ ವಿಶ್ವಕೋಶಗಳಲ್ಲಿ ದಿ ಇಂಟರ್ ನ್ಯಾಷನಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್, ಮೆಕ್‌ಗ್ರಾಹಿಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ, ಎನ್‌ಸೈಕ್ಲೊಪೀಡಿಯ ಆಫ್ ಸೋಷಿಯಲ್ ಸೈನ್ಸಸ್, ಎನ್‌ಸೈಕ್ಲೊಪೀಡಿಯ ಆಫ್ ರಿಲಿಜನ್ ಅಂಡ್ ಎಥಿಕ್ಸ್, ಮೆಡಿಕಲ್ ಎನ್‌ಸೈಕ್ಲೊಪೀಡಿಯ – ಹೀಗೆ ಹಲವಾರು ಕೋಶಗಳು ಬರುತ್ತವೆ.

ವೆಲ್ತ್ ಆಫ್ ಇಂಡಿಯ ಎಂಬುದು ಭಾರತದಲ್ಲಿ ಲಭ್ಯವಿರುವ ಕಚ್ಚಾಪದಾರ್ಥಗಳು, ಖನಿಜನಿಕ್ಷೇಪಗಳು, ಅರಣ್ಯಸಂಪತ್ತು ಹಾಗೂ ಕೈಗಾರಿಕಾವಸ್ತುಗಳ ಬಗ್ಗೆ ವಿವರಗಳನ್ನು ನೀಡುವ ಒಂದು ವಿಶಿಷ್ಟ ಪರಾಮರ್ಶನ ಗ್ರಂಥ. ಕಚ್ಚಾಪದಾರ್ಥಗಳ ಭಾಗವನ್ನು ಎ ಭಾಗವೆಂತಲೂ ಕೈಗಾರಿಕಾ ವಸ್ತುಗಳ ಭಾಗವನ್ನು ಬಿ ಭಾಗವೆಂತಲೂ ಕರೆದಿದ್ದಾರೆ. ದೆಹಲಿಯಲ್ಲಿರುವ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ಸಂಸ್ಥೆ ಈ ಗ್ರಂಥವನ್ನು ಪ್ರಕಟಿಸಿದೆ. ಕಚ್ಚಾ ಪದಾರ್ಥಗಳಿಗೆ ಸಂಬಂಧಿಸಿದ ಭಾಗದಲ್ಲಿ ಒಟ್ಟು 10 ಸಂಪುಟಗಳೂ ಕೈಗಾರಿಕಾ ವಸ್ತುಗಳಿಗೆ ಸಂಬಂಧಿಸಿದ ಭಾಗದಲ್ಲಿ 9 ಸಂಪುಟಗಳೂ ಇರುತ್ತವೆ. ಕೆಲವು ಸಂಪುಟಗಳು ಈಗಾಗಲೆ ಪ್ರಕಟವಾಗಿವೆ. ಈ ಎರಡೂ ಭಾಗಗಳಲ್ಲಿ ಸಮಾವೇಶವಾದ ವಿಷಯಗಳನ್ನು ಅಕಾರಾದಿಯಾಗಿ ವಿವರಿಸಲಾಗಿದೆ. ಅವಶ್ಯವಿದ್ದಲ್ಲಿ ಚಿತ್ರಗಳನ್ನೂ ಸೇರಿಸಲಾಗಿದೆ. ಎರಡೂ ಭಾಗಗಳಲ್ಲಿ ಸೇರ್ಪಡೆಯಾದ ವಿಷಯಗಳ ಬಗ್ಗೆ ಲೇಖನಗಳನ್ನು ಆಯಾ ವಿಷಯಗಳಲ್ಲಿ ಪರಿಣತರಾದವರಿಂದ ಬರೆಸಲಾಗಿದೆ.

ಎ ಭಾಗದಲ್ಲಿಯ ಲೇಖನಗಳು ಸಸ್ಯಾದಿಗಳು, ಪ್ರಾಣಿಗಳು ಮತ್ತು ಖನಿಜ ನಿಕ್ಷೇಪಗಳಿಗೆ ಸ್ಥೂಲವಾಗಿ ಸಂಬಂಧಿಸಿದ್ದು. ಬಿ ಭಾಗದಲ್ಲಿಯ ಲೇಖನಗಳು ರಾಸಾಯನಿಕ ಉದ್ಯಮಗಳು (ಉದಾ : ಆಮ್ಲಗಳು, ಕೃತಕ ಗೊಬ್ಬರಗಳು, ಉಕ್ಕು, ಔಷಧಿ ಇತ್ಯಾದಿ), ಎಂಜಿನಿಯರಿಂಗ್ ಉದ್ಯಮಗಳು (ಉದಾ: ಕಾರು ಮತ್ತು ಮೋಟಾರುಗಳು, ವಿದ್ಯುಚ್ಚಾಲಿತ ಎಂಜಿನುಗಳು, ಸೆಣಬಿನ ಗಿರಣಿಗಳು, ಹಡಗು ಕಟ್ಟುವುದು ಇತ್ಯಾದಿ), ಹಾಗೂ ಪರಂಪರಾಗತವಾಗಿ ನಡೆದುಬಂದ ಹಿತ್ತಾಳೆಯ ಕೆಲಸಗಳು, ಹೆಣಿಕೆ ಮತ್ತು ಕಸೂತಿ ಕಲೆಗಳು – ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿವೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಚ್ಚಾ ಪದಾರ್ಥಗಳ ಲಭ್ಯತೆ ಹಾಗೂ ಅವುಗಳ ಉಪಯೋಗ ಮತ್ತು ಬೇರೆ ಬೇರೆ ಉದ್ಯಮಗಳು ಸಾಧಿಸಲಾದ ಪ್ರಗತಿ – ಈ ಬಗ್ಗೆ ನಿರ್ದಿಷ್ಟವಾದ ಹಾಗೂ ದೃಢ ವಿವರಗಳನ್ನು ನೀಡುವ ಒಂದು ವಿಶಿಷ್ಟ ಗ್ರಂಥ ಇದು. ಈ ಗ್ರಂಥವನ್ನು ಹಿಂದಿ ಭಾಷೆಯಲ್ಲಿ ಭಾರತ್‌ಕೀ ಸಂಪದಾ ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಇಂಥವನ್ನು ವಿಶಿಷ್ಟ ವಿಶ್ವಕೋಶ ವೆಂದು ಕರೆದರೂ ಅಡ್ಡಿಯಿಲ್ಲ.

ಯಾವುದೇ ಕೋಶದಲ್ಲಾಗಲಿ ಸಂಗ್ರಹಿತವಾಗಿರುವ ವಸ್ತುಗಳ ಅಕಾರಾದಿಯಾಗಿ ಜೋಡಣೆ ನಡೆದಿರುತ್ತದೆ. ನಿಘಂಟುಗಳಲ್ಲಿ ಪದಗಳನ್ನು ಚಿತ್ರಸಹಿತ ವಿವರಿಸುವ ಪದ್ಧತಿ ಇತ್ತೀಚಿಗೆ ಹೆಚ್ಚಾಗುತ್ತಿದೆ. ಶೀರ್ಷಿಕೆಗಳನ್ನು ಸಚಿತ್ರವಾಗಿರಿಸುವ ವ್ಯವಸ್ಥೆ ಸಾಮಾನ್ಯವಾಗಿ ಎಲ್ಲ ವಿಶ್ವಕೋಶಗಳಲ್ಲೂ ಕಂಡುಬರುತ್ತದೆ.

**ವಾರ್ಷಿಕ ಪುಸ್ತಕ :** ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಸಂಭವಿಸಿದ ಮಹತ್ತ್ವದ ರಾಜಕೀಯ ಘಟನೆಗಳನ್ನೂ ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಸಾಧಿಸಲಾದ ಪ್ರಗತಿಗಳನ್ನೂ ಶಿಕ್ಷಣ, ಕಲೆ, ವ್ಯಾಪಾರ, ವಾಣಿಜ್ಯ ಮೊದಲಾದ ಕ್ಷೇತ್ರಗಳಲಿ ಆಗಿರುವ ಅಭಿವೃದ್ಧಿ ವಿಚಾರಗಳ ಬಗ್ಗೆ ಅಂಕಿಅಂಶಗಳನ್ನೂ ನಾನಾ ರಾಜ್ಯಗಳಿಗೆ ಸಂಬಂಧಿಸಿದಂತೆ ಅವುಗಳ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಮತ್ತು ಜನಸಂಖ್ಯೆಯ ವಿಚಾರವಾಗಿ ಅಂಕಿಅಂಶ ಸಮೇತ ವಿವರಗಳನ್ನೂ ಕ್ರೀಡಾ ವಿಭಾಗದಲ್ಲಿ ನಡೆದಿರುವ ಚಟುವಟಿಕೆಗಳ ಬಗ್ಗೆ ದೀರ್ಘ ಇಲ್ಲವೇ ಸಂಕ್ಷಿಪ್ತವಾದ ಮಾಹಿತಿಗಳನ್ನೂ ಸಾಧ್ಯವಾದಷ್ಟು ಮಟ್ಟಿಗೆ ಖಚಿತವಾಗಿ ಕ್ರೋಡೀಕರಿಸಿ ವರ್ಷಕ್ಕೊಮ್ಮೆ ಪ್ರಕಟಿಸುವ ಪುಸ್ತಕ (ಇಯರ್ ಬುಕ್). ಗತವರ್ಷಗಳಲ್ಲಿ ನಡೆದಿರಬಹುದಾದ ಘಟನೆಗಳನ್ನು ಅನುಕ್ರಮವಾಗಿ ಹೊಂದಿಸಿರುವುದರಿಂದ ಈ ಪುಸ್ತಕ ಆಸಕ್ತರಿಗೆ ಬಹಳಷ್ಟು ಉಪಯೋಗಕ್ಕೆ ಬರುತ್ತದೆ. ಇಡೀ ಪ್ರಪಂಚದ ಘಟನೆಗಳ ಬಗ್ಗೆ ಮಾತ್ರ ಮಾಹಿತಿ ಕೊಡುವ ವಾರ್ಷಿಕ ಪುಸ್ತಕಗಳೂ ಇರುತ್ತವೆ. ಒಂದು ರಾಷ್ಟ್ರದಲ್ಲಿರುವ ರಾಜ್ಯಗಳ ಮಾಹಿತಿಗಳನ್ನು ಮಾತ್ರ ತಿಳಿಸಿಕೊಡುವ ವಾರ್ಷಿಕ ಪುಸ್ತಕಗಳೂ ಉಂಟು. ಪ್ರಸಿದ್ಧ ವಿಶ್ವಕೋಶಗಳಾದ ಎನ್‌ಸೈಕ್ಲೊಪೀಡಿಯ ಬ್ರಿಟಾನಿಕ ಮತ್ತು ಎನ್‌ಸೈಕ್ಲೊಪೀಡಿಯ ಅಮೆರಿಕಾನಗಳನ್ನು ತಯಾರಿಸುವ ಸಂಸ್ಥೆಗಳು ಅನುಕ್ರಮವಾಗಿ ಬ್ರಿಟಾನಿಕ ಬುಕ್ ಆಫ್ ದಿ ಇಯರ್ ಮತ್ತು ಅಮೆರಿಕಾನ ಆನ್ಯುಯಲ್ ಎಂಬ ವಾರ್ಷಿಕ ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಬ್ರಿಟಾನಿಕ ಬುಕ್ ಆಫ್ ದಿ ಇಯರ್‌ನ ಜೊತೆಗೆ ಬ್ರಿಟಾನಿಕ ಇಯರ್ ಬುಕ್ ಆಫ್ ಸೈನ್ಸ್ ಅಂಡ್ ಫ್ಯೂಚರ್ ಎಂಬುದೂ ಪ್ರಕಟಗೊಳ್ಳುತ್ತಿದೆ. ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಮೆಕ್‌ಗ್ರಾಹಿಲ್ ಬುಕ್ ಕಂಪನಿಯವರು ಮೆಕ್‌ಗ್ರಾಹಿಲ್ ಇಯರ್ ಬುಕ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಎಂಬ ಹೆಸರಿನ ವಾರ್ಷಿಕ ಪುಸ್ತಕವನ್ನು ಪ್ರತಿವರ್ಷವೂ ಪ್ರಕಟಿಸುತ್ತಿದ್ದಾರೆ.

ವಾರ್ಷಿಕ ಪುಸ್ತಕದಲ್ಲಿ ಬರುವಂಥ ವಿಷಯಗಳಲ್ಲಿ ಲೇಖಕರಿಗೆ ಮತ್ತು ಸಂಶೋಧಕರಿಗೆ ಹೆಚ್ಚಿನ ಮಾಹಿತಿಗಳು ದೊರೆಯುತ್ತವೆ. ಒಂದು ವಿಷಯವನ್ನು ಕುರಿತಂತೆ ಸಮೀಕ್ಷೆಗಳು ವಾರ್ಷಿಕ ಪುಸ್ತಕಗಳಲ್ಲಿ ಇರಬಹುದು. ಆನ್ಯುಯಲ್ ರಿವ್ಯೂ ಆಫ್ ಲೈಬ್ರರಿ ಅಂಡ್ ಇನ್‌ಫರ್‌ಮೇಶನ್ ಎಂಬುದು ಈ ವರ್ಗಕ್ಕೆ ಸೇರುತ್ತದೆ. ಇಯರ್ಸ್ ವರ್ಕ್ ಇನ್ ಇಂಗ್ಲಿಷ್ ಎಂಬ ವಾರ್ಷಿಕ ಪುಸ್ತಕ ಇಂಗ್ಲಿಷ್ ಸಾಹಿತ್ಯ ಪ್ರಪಂಚದಲ್ಲಿ ನಡೆದಿರುವಂಥ ಘಟನೆಗಳನ್ನು ಕುರಿತದ್ದು. ಮಾನವೀಯ ಹಕ್ಕುಗಳನ್ನು ಕುರಿತಂಥ ಇಯರ್ ಬುಕ್ ಆಫ್ ಹ್ಯೂಮನ್ ರೈಟ್ಸ್ ಎಂಬುದು ಇಂಥ ವರ್ಗಕ್ಕೆ ಸೇರುವ ಮತ್ತೊಂದು ವಾರ್ಷಿಕ ಪುಸ್ತಕ.

ಬಹು ಹಿಂದಿನಿಂದಲೂ ಪ್ರಕಟವಾಗುತ್ತಿರುವ ವಾರ್ಷಿಕ ಪುಸ್ತಕಗಳಲ್ಲಿ ಕೆಲವನ್ನು ಹೆಸರಿಸುವುದಾದರೆ ಆನ್ಯುಯಲ್ ರಿಜಿಸ್ಟರ್ ಆಫ್ ವರ್ಲ್ಡ್ ಈವೆಂಟ್ಸ್ (ಪ್ರಾರಂಭ ವರ್ಷ; (1758), ಸ್ಟೇಟ್ಸ್‌ಮನ್ಸ್ ಇಯರ್ ಬುಕ್ (1864), ಇಯರ್ ಬುಕ್ ಆಫ್ ದಿ ಯುನೈಟೆಡ್ ನೇಷನ್ಸ್ (1945), ಯೂರೋಪಾ ಇಯರ್ ಬುಕ್, ದಿ ನ್ಯೂಯಾರ್ಕ್ ಟೈಮ್ಸ್ ಎನ್‌ಸೈಕ್ಲೊಪೀಡಿಯ ಆಲ್ಮನಾಕ್ ಮುಂತಾದವು ಪ್ರಪಂಚದ ಘಟನಾವಳಿಗಳನ್ನು ಕ್ರಮಾಗತ ರೀತಿಯಲ್ಲಿ ತಿಳಿಸಿಕೊಡುವ ವಾರ್ಷಿಕ ಪುಸ್ತಕಗಳಾಗಿವೆ.

ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನೊದಗಿಸುವ ವಾರ್ಷಿಕ ಪುಸ್ತಕಗಳು ಹಲವಿವೆ. ಮನೋರಮ ಇಯರ್ ಬುಕ್, ಹಿಂದೂಸ್ತಾನ್ ಇಯರ್ ಬುಕ್, ನಾಲಂದ ಇಯರ್ ಬುಕ್ ಅಂಡ್ ಹೂ ಈಸ್ ಹೂ ಇನ್ ಇಂಡಿಯ ಅಂಡ್ ಪಾಕಿಸ್ತಾನ್, ಟೈಮ್ಸ್ ಆಫ್ ಇಂಡಿಯ ಇಯರ್ ಬುಕ್ ಅಂಡ್ ಡೈರೆಕ್ಟರಿ ಮುಂತಾದುವು ಪ್ರಸಿದ್ಧವಾಗಿವೆ. ಭಾರತ ಸರ್ಕಾರ ಪ್ರಕಟಿಸುತ್ತಿರುವ ಇಂಡಿಯ – ಎ ರೆಫರೆನ್ಸ್ ಆನ್ಯುಯಲ್ ಎಂಬುದು ಒಂದು ವಾರ್ಷಿಕ ಪುಸ್ತಕವೇ. ಇದರಲ್ಲಿ ಸುಮಾರು 30 ವಿಭಾಗಗಳಿದ್ದು, ಒಂದೊಂದು ವಿಭಾಗವೂ ಭಾರತಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ಇರುತ್ತದೆ. ಹಿಂದೂಸ್ತಾನ್ ಇಯರ್ ಬುಕ್, ನಾಲಂದ ಇಯರ್ ಬುಕ್, ಮನೋರಮ ಇಯರ್ ಬುಕ್‌ಗಳಂಥ ವಾರ್ಷಿಕ ಪುಸ್ತಕಗಳಲ್ಲಿ ಪ್ರತಿಭಾನ್ವಿತ ವ್ಯಕ್ತಿಗಳ ಸಂಕ್ಷಿಪ್ತ ಪರಿಚಯವೂ ಇರುತ್ತದೆ. ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ, ಆಂಧ್ರ ಪ್ರದೇಶ, ಕರ್ನಾಟಕ ಮುಂತಾದ ರಾಜ್ಯಗಳು ತಮ್ಮ ಜನಜೀವನ, ಆರ್ಥಿಕ ಸಾಮಾಜಿಕ ರಾಜಕೀಯ ಸ್ಥಿತಿಗತಿಗಳನ್ನೂ ಶಿಕ್ಷಣ, ಯೋಜನೆಗಳ ವಿವರ ಮುಂತಾದುವನ್ನೂ ಅಂಕಿಅಂಶಗಳ ಸಮೇತ ತಿಳಿಸಿಕೊಡುವಂಥ ವಾರ್ಷಿಕ ಪುಸ್ತಕಗಳನ್ನು ಪ್ರಕಟಿಸುತ್ತವೆ.

ಕೆಲವೊಂದು ವಾರ್ಷಿಕ ಪುಸ್ತಕಗಳಲ್ಲಿ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅಂಕಿಅಂಶಗಳನ್ನು ಮಾತ್ರ ಕ್ರೋಡೀಕರಿಸಿರುವುದು ಕಾಣಬರುತ್ತದೆ. ಸ್ಟ್ಯಾಟಿಸ್ಟಿಕಲ್ ಆಬ್‌ಸ್ಟ್ರಾಕ್ಟ್ ಆಫ್ ದಿ ಇಂಡಿಯನ್ ಯೂನಿಯನ್ ಎಂಬುದನ್ನು ಭಾರತ ಸರ್ಕಾರ 1915 ರಿಂದಲೂ ಪ್ರಕಟಿಸುತ್ತಿದೆ. ಇದೇ ಮಾರ್ಗವನ್ನನುಸರಿಸಿ ಮೈಸೂರು ಸರ್ಕಾರವೂ ಸ್ಟ್ಯಾಟಿಸ್ಟಿಕಲ್ ಔಟ್‌ಲೈನ್ಸ್ ಆಫ್ ಮೈಸೂರ್ ಎಂಬ ಪುಸ್ತಕವನ್ನು ವರ್ಷೇ ವರ್ಷೇ ಪ್ರಕಟಿಸಿ ಈಗ ಸ್ಟ್ಯಾಟಿಸ್ಟಿಕಲ್ ಔಟ್‌ಲೈನ್ ಆಫ್ ಕರ್ನಾಟಕ ಎಂಬ ಶಿರೋನಾಮೆಯಲ್ಲಿ ಪ್ರಕಟಗೊಳ್ಳುತ್ತಿದೆ.

**ಜೀವನ ಚರಿತ್ರೆಯ ಕೋಶಗಳು :** ಪ್ರಸಿದ್ಧ ವಿದ್ವಾಂಸರ, ಮುತ್ಸದ್ದಿಗಳ, ಧರ್ಮೋಪದೇಶಕರ, ಸಾಹಿತಿಗಳ, ರಾಜಕಾರಣಿಗಳ, ವಿಜ್ಞಾನಿಗಳ ಜೀವನಚರಿತ್ರೆಗಳನ್ನು ತಿಳಿಸಿಕೊಡುವಂಥ ಕೋಶಗಳು. ತ್ವರಿತವಾಗಿ ಪರಾಮರ್ಶನ ಸೇವೆಯನ್ನು ಪಡೆದು ಕೊಳ್ಳುವವರಿಗೆ ಇಂಥ ಕೋಶಗಳ ಅಗತ್ಯ ಹೆಚ್ಚು. ಇಂಥ ಕೋಶಗಳು ಹಿಂದೆ ಆಗಿಹೋದ ವ್ಯಕ್ತಿಗಳ ಬಗ್ಗೆಯೂ ಜೀವಿತವಾಗಿರುವ ಪ್ರತಿಷ್ಠಿತ ವ್ಯಕ್ತಿಗಳ ಬಗ್ಗೆಯೂ ಉಪಯುಕ್ತ ವಿವರಗಳನ್ನು ಒದಗಿಸಿಕೊಡುತ್ತವೆ. ಇಂಗ್ಲಿಷ್ ಭಾಷೆಯಲ್ಲಿನ ಪ್ರಮುಖ ಜೀವನಚರಿತ್ರೆಯ ಕೋಶಗಳಲ್ಲಿ ಚೇಂಬರ್ಸ್ ಬಯೋಗ್ರಾಫಿಕಲ್ ಡಿಕ್ಷನರಿ, ವೆಬ್‌ಸ್ಟರ್ ಬಯೋಗ್ರಾಫಿಕಲ್ ಡಿಕ್ಷನರಿ ಇವು ಜಗತ್ಪ್ರಸಿದ್ಧ. ಲೆಸ್ಲಿಸ್ಟೀಫನ್ ಎಂಬುವವ ಸಂಪಾದಿಸಿದ ಡಿಕ್ಷನರಿ ಆಫ್ ನ್ಯಾಷನಲ್ ಬಯಾಗ್ರಫಿ ಎಂಬ ಕೋಶದ ಮೊದಲ (1900) ಆವೃತ್ತಿಯಲ್ಲಿ 63 ಸಂಪುಟಗಳಿದ್ದುವು. ಮುಂದಿನ ಆವೃತ್ತಿಯಲ್ಲಿ ಅದು 22 ಸಂಪುಟಗಳಷ್ಟಾಯಿತು. ಸುಮಾರು 30,000 ಪ್ರಸಿದ್ಧ ವ್ಯಕ್ತಿಗಳ ಜೀವನಚರಿತ್ರೆಯ ಸಂಕ್ಷಿಪ್ತ ವಿವರಗಳು ಇದರಲ್ಲಿದ್ದುವು. ಇದರ ಪ್ರತ್ಯೇಕ ಪ್ರತ್ಯೇಕ ಪುರವಣಿ ಸಂಪುಟಗಳೂ ಹೊರಬಿದ್ದಿವೆ. ಡಿಕ್ಷನರಿ ಆಫ್ ಅಮೆರಿಕನ್ ಬಯಾಗ್ರಫಿ, ಅಮೆರಿಕನ್ ಮೆನ್ ಆಫ್ ಸೈನ್ಸ್, ಡಿಕ್ಷನರಿ ಆಫ್ ಕೆನಡಿಯನ್ ಬಯಾಗ್ರಫಿ, ನ್ಯೂಯಾರ್ಕಿನಿಂದ ಪ್ರಕಟವಾಗುತ್ತಿರುವ ಎಚ್.ಡಬ್ಲ್ಯೂ. ವಿಲ್ಸನ್ ರವರ ಕರೆಂಟ್ ಬಯಾಗ್ರಫಿ ಮುಂತಾದ ಕೋಶಗಳು ತಮ್ಮ ತಮ್ಮ ದೇಶದ ಇಲ್ಲವೇ ಪ್ರಪಂಚದ ಬೇರೆ ಬೇರೆ

ದೇಶಗಳಲ್ಲಿ ಸಾಹಿತ್ಯ, ವಿಜ್ಞಾನ, ಲಲಿತಕಲೆ, ಪತ್ರಿಕೋದ್ಯಮ, ವ್ಯವಸಾಯ, ರಾಜಕಾರಣ, ಗ್ರಂಥಾಲಯವಿಜ್ಞಾನ, ಕಾಯದೆ–ಕಾನೂನು ಮುಂತಾದ ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆದ ಪ್ರತಿಷ್ಠಿತ ವ್ಯಕ್ತಿಗಳ ಜೀವನ ಪರಿಚಯಗಳನ್ನು ಸವಿಸ್ತಾರವಾಗಿ ತಿಳಿಸಿಕೊಡುತ್ತವೆ. ಭಾರತದಲ್ಲಿ ಕೋಲ್ಕತದ ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್ ಎಂಬ ಸಂಸ್ಥೆಯ ಡಿಕ್ಷನರಿ ಆಫ್ ನ್ಯಾಷನಲ್ ಬಯಾಗ್ರಫಿ ಎಂಬುದು ಭಾರತದ ಪ್ರಸಿದ್ಧ ವ್ಯಕ್ತಿಗಳ ಜೀವನ ಪರಿಚಯಕ್ಕೆ ಸಂಬಂಧಿಸಿದ ಕೋಶ. 1800–1947ರ ಅವಧಿಯಲ್ಲಿ ಜೀವಿಸಿದ್ದ ಸುಮಾರು 1400 ಅಗ್ರಗಣ್ಯ ಭಾರತೀಯರ ಬಗ್ಗೆ ಪರಿಚಯಗಳನ್ನು ಕೊಡುವಂಥ ಕೋಶವಿದು.

ಜೀವನಚರಿತ್ರೆಗೆ ಸಂಬಂಧಿಸಿದ ಗ್ರಂಥಗಳನ್ನು ಖಾಸಗೀ ಸಂಘ ಸಂಸ್ಥೆಗಳೂ ವ್ಯಕ್ತಿಗಳೂ ಪ್ರಕಟಿಸುವ ಪರಿಪಾಠ ಇದೆ. ಮೆಕ್‌ಗ್ರಾ ಹಿಲ್ ಕಂಪನಿಯ ಪ್ರಕಟಣೆ ಮಾಡರ್ನ್ ಮೆನ್ ಆಫ್ ಸೈನ್ಸ್ ಎಂಬ ಪುಸ್ತಕ ಈಚಿನ ವಿಜ್ಞಾನಿಗಳ ಜೀವನಚರಿತ್ರೆಯನ್ನು ಕುರಿತದ್ದು. ಐಸಾಕ್ ಅಸಿಮೋವ್ ಎಂಬುವನ ಬಯೋಗ್ರಾಫಿಕಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಇದೇ ಬಗೆಯದು. ಟೈಮ್ಸ್ ಆಫ್ ಇಂಡಿಯ ಡಿಕ್ಷನರಿ ಅಂಡ್ ಇಯರ್ ಬುಕ್ ಇನ್‌ಕ್ಲೂಡಿಂಗ್ ಹೂ ಈಸ್ ಹೂ ಎಂಬುದು ಜೀವನಚರಿತ್ರೆಯನ್ನೂ ಒಳಗೊಂಡಿರುತ್ತದೆ. ಆಂಗ್ಲ ವಿದ್ವಾಂಸ ಸಿ.ಇ.ಬೂಕ್‌ಲ್ಯಾಂಡ್ ಎಂಬಾತ ಸಂಪಾದಿಸಿರುವ ಡಿಕ್ಷನರಿ ಆಫ್ ಇಂಡಿಯನ್ ಬಯಾಗ್ರಫಿಯಲ್ಲಿ 1750–1905 ರ ಅವಧಿಯಲ್ಲಿ ಜೀವಿಸಿದ್ದ ಪ್ರಸಿದ್ಧ ಭಾರತೀಯ ವ್ಯಕ್ತಿಗಳ ಬಗ್ಗೆಯೂ ಭಾರತಕ್ಕೆ ಸೇವೆ ಸಲ್ಲಿಸಿದ ವಿದೇಶೀಯರ ಬಗ್ಗೆಯೂ ವಿವರಗಳು ದೊರೆಯುತ್ತವೆ.

ಭಾರತದ ವಿವಿಧ ಭಾಷೆಗಳಲ್ಲಿಯ ವಿಖ್ಯಾತ ಲೇಖಕರ ಕಿರುಪರಿಚಯವನ್ನು ನವದೆಹಲಿಯ ಸಾಹಿತ್ಯ ಅಕಾಡೆಮಿ ಸಿದ್ಧಪಡಿಸಿರುವ ಇಂಡಿಯನ್ ರೈಟರ್ಸ್– ಹೂ ಈಸ್ ಹೂ ಎಂಬ ಗ್ರಂಥದಲ್ಲಿ ಕಾಣಬಹುದು. ಭಾರತೀಯ ಭಾಷೆಗಳಲ್ಲಿ ಲಭ್ಯವಿರುವ ಇನ್ನಿತರ ಗ್ರಂಥಗಳೆಂದರೆ ಮರಾಠೀ ಭಾಷೆಯ ಚರಿತ್ರಕೋಶ. ಇದನ್ನು ಸಿದ್ಧೇಶ್ವರ ಶಾಸ್ತ್ರಿ ಚಿತ್ರಾವ ಅವರು ಸಿದ್ಧಪಡಿಸಿದ್ದಾರೆ. ಮೂರು ಸಂಪುಟಗಳಲ್ಲಿರುವ ಈ ಕೋಶದಲ್ಲಿ ಮೌರ್ಯ ಚಂದ್ರಗುಪ್ತನಿಂದ ಗಾಂಧಿಯುಗದವರೆಗಿನ ಅವಧಿಯ ಪ್ರಖ್ಯಾತ ಭಾರತೀಯರ ಬಗ್ಗೆ ವಿವರಗಳನ್ನು ಕೊಟ್ಟಿದೆ. ಮೊದಲ ಸಂಪುಟ ಪ್ರಾಚೀನ ಯುಗಕ್ಕೂ ಎರಡನೆಯ ಸಂಪುಟ ಮಧ್ಯಯುಗಕ್ಕೂ ಮೂರನೆಯ ಸಂಪುಟ ಅರ್ವಾಚೀನ ಯುಗಕ್ಕೂ ಮೀಸಲಾಗಿದೆ. ಬಂಗಾಲಿ ಭಾಷೆಯಲ್ಲಿ ಶಶಿಭೂಷಣ ವಿದ್ಯಾಲಂಕಾರ ಎಂಬುವರು ಸಿದ್ಧಪಡಿಸಿರುವ 5 ಸಂಪುಟಗಳ ಜೀವಕೋಶ, ಬ್ರಜೇಂದ್ರನಾಥ ಬಂದೋಪಾಧ್ಯಾಯ ನಿಂದ ಸಂಪಾದಿತವಾಗಿ ಬಂಗೀಯ ಸಾಹಿತ್ಯ ಪರಿಷತ್ತಿನಿಂದ 9 ಸಂಪುಟಗಳಲ್ಲಿ ಪ್ರಕಟವಾಗಿರುವ ಸಾಹಿತ್ಯ ಸಾಧಕ ಚರಿತ ಮಾಲಾ, ಕನ್ನಡದಲ್ಲಿ ಆರ್. ನರಸಿಂಹಾಚಾರ್ಯರಿಂದ ಸಂಪಾದಿತವಾಗಿ 3 ಸಂಪುಟಗಳಲ್ಲಿ ಪ್ರಕಟವಾಗಿರುವ ಕರ್ನಾಟಕ ಕವಿಚರಿತೆ, ವೆಂಕಟೇಶ ಸಾಂಗಲಿಯವರ ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ  ಹೀಗೆ ಹಲವಾರು ಜೀವನ ಚರಿತ್ರೆಯ ಕೋಶಗಳನ್ನು ಹೆಸರಿಸಬಹುದು.

**ಗೆಜೆಟಿಯರ್‌ಗಳು, ಪ್ರವಾಸೀ ಕೈಪಿಡಿಗಳು ಮತ್ತು ಭೂಪಟ ಪುಸ್ತಕಗಳು :** ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ಇಂಥ ಪ್ರಕಟನೆಗಳು ಅವಶ್ಯ ಇರುತ್ತವೆ. ಸ್ಥಳಗಳ, ಪ್ರದೇಶಗಳ, ದೇಶಗಳ ಹೆಸರುಗಳನ್ನೂ ಅವನ್ನು ಕುರಿತ ಕೆಲವಾರು ವಿವರಗಳನ್ನೂ ಒಳಗೊಂಡಿರುವ ಗೆಜೆಟಿಯರ್ ಒಂದು ಕೋಶದಂತೆಯೇ ಉಪಯೋಗಕ್ಕೆ ಬರುತ್ತದೆ. ಮೇಲಿನ ವಿವರಗಳನ್ನು ಒಳಗೊಂಡ ಕೋಶಸದೃಶ ಗ್ರಂಥಗಳನ್ನು ಭೌಗೋಳಿಕ ನಿಘಂಟು ಎಂದು ಕರೆಯುವುದು ವಾಡಿಕೆಯಾದರೂ ಗೆಜೆಟಿಯರ್ ಎಂಬ ಹೆಸರೇ ಹೆಚ್ಚು ವಾಡಿಕೆಯಲ್ಲಿದೆ. ಪ್ರಮುಖ ಗೆಜೆಟಿಯರುಗಳಲ್ಲಿ ಅಮೆರಿಕದ ಗ್ರಂಥಾಲಯ ಸಂಘ ಪ್ರಕಟಿಸುತ್ತಿರುವ ಅಮೆರಿನಕ್ ಲೈಬ್ರರಿ ಅಸೋಸಿಯೇಷನ್ ಗ್ಲಾಸರಿ ಆಫ್ ಲೈಬ್ರರಿ ಟರ್ಮ್ಸ್ ಎಂಬ ಗ್ರಂಥದಲ್ಲಿ ಭೌಗೋಳಿಕ ನಿಘಂಟೆಂಬ ಹೆಸರಿನಲ್ಲಿರುವ ಗೆಜೆಟಿಯರ್, ಗೆಜೆಟಿಯರ್ ಆಫ್ ಇಂಡಿಯ, ಮೈಸೂರು ಗೆಜೆಟಿಯರ್, ಕೊಲಂಬಿಯ ಲಿಪಿನ್‌ಕಾಟ್ ಗೆಜೆಟಿಯರ್ ಆಫ್ ದಿ ವರ್ಲ್ಡ್, ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯ, ಭಾರತದ ರಾಜ್ಯಗಳಲ್ಲಿನ ಜಿಲ್ಲೆಗಳಿಗೆ ಸಂಬಂಧಿಸಿದ ಜಿಲ್ಲಾ ಗೆಜೆಟಿಯರ್‌ಗಳು – ಈ ಮುಂತಾದವುಗಳನ್ನು ಹೆಸರಿಸಬಹುದು.

**ಪ್ರವಾಸೀ ಕೈಪಿಡಿಗಳು :** ಪ್ರವಾಸಿಗರ ಅನುಕೂಲಕ್ಕೆಂದೇ ವಿಶೇಷ ರೀತಿಯಲ್ಲಿ ರಚಿತವಾಗಿರುವ ಕೈಪಿಡಿಗಳೂ (ಹ್ಯಾಂಡ್ ಬುಕ್ಸ್) ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ದೊರೆಯುತ್ತವೆ. ಒಂದು ದೇಶದ, ರಾಜ್ಯದ, ಪ್ರಾಂತ್ಯದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಎಲ್ಲ ಮಾಹಿತಿಗಳನ್ನು – ಚಾರಿತ್ರಿಕ ಇತಿಹಾಸ, ಭೌಗೋಳಿಕ ಲಕ್ಷಣ, ಸಾರಿಗೆ ಸಂಪರ್ಕ, ಮನರಂಜನೆಯ ಸ್ಥಳಗಳು, ವಸತಿಸೌಲಭ್ಯ ಮುಂತಾದ ವಿವರಗಳನ್ನು – ನೀಡುವಂಥ ಪುಸ್ತಕಗಳು ಇದ್ದು ಅವು ಆಯಾ ವಿಭಾಗದಲ್ಲಿ ಅಧ್ಯಯನ ಮಾಡುವವರಿಗೂ ಪ್ರವಾಸಿಜನಗಳಿಗೂ ಹೆಚ್ಚು ಉಪಯೋಗಕ್ಕೆ ಬರುತ್ತವೆ. ಒಂದು ರಾಷ್ಟ್ರದ ಅಥವಾ ರಾಜ್ಯದ ಸಮಾಚಾರ ಇಲಾಖೆಯಾಗಲೀ ಇಲ್ಲವೇ ಪ್ರವಾಸೋದ್ಯಮ ವಿಭಾಗವಾಗಲೀ ಇಂಥ ಪ್ರವಾಸೀ ಕೈಪಿಡಿಗಳನ್ನು ಕಿರುಹೊತ್ತಿಗೆಯ ರೂಪದಲ್ಲೋ ಇಲ್ಲವೇ ಸಣ್ಣ ಪುಸ್ತಕಗಳ ರೂಪದಲ್ಲೋ ಹೊರತರಬಹುದು. ಅಮೆರಿಕದ ಗ್ರಂಥಾಲಯ ಸಂಘದ ಟ್ರಾವೆಲ್ ಗೈಡ್ಸ್ ಅಂಡ್ ಗೈಡ್ಸ್ ಬುಕ್ಸ್ ಎಂಬ ಪ್ರಕಟಣೆಯಲ್ಲಿ ಪ್ರದೇಶ, ಪಟ್ಟಣ, ಕಟ್ಟಡ, ಭೇಟಿ ಕೊಡಬೇಕಾದ ಸ್ಥಳಗಳು ಮುಂತಾದವುಗಳ ಬಗ್ಗೆ ವಿವರಗಳನ್ನು ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ಕೊಡಲಾಗಿದೆ. ಪ್ರವಾಸೀ ಕೈಪಿಡಿಗಳಲ್ಲಿ ಸ್ಥಳಸನ್ನಿವೇಶವನ್ನು ಸೂಚಿಸುವ ನಕ್ಷೆಗಳೂ ಛಾಯಾಚಿತ್ರಗಳೂ ಅಗತ್ಯವಾದಷ್ಟು ಅಂಕಿ–ಅಂಶಗಳೂ ಇರುತ್ತವೆ. ಪ್ರಪಂಚದ ಎಲ್ಲ ರಾಷ್ಟ್ರಗಳ ಸರ್ಕಾರಗಳೂ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಇಂಥ ಪ್ರವಾಸೀ ಕೈಪಿಡಿಗಳ ಪ್ರಕಟಣೆಯ ಕೆಲಸವನ್ನು ಮಾಡುತ್ತಿವೆ. ಪ್ರವಾಸಿಗಳ ಅನುಕೂಲಕ್ಕೋಸ್ಕರ ಇಂಥ ಕೈಪಿಡಿಗಳ ಆಕರದಲ್ಲೂ ವೈಶಿಷ್ಟ್ಯ ಎದ್ದುಕಾಣುತ್ತದೆ. ಕೈಪಿಡಿಗಳ ಬೆಲೆ ಸಾಮಾನ್ಯವಾಗಿ ಕಡಿಮೆಯಿರುತ್ತದೆ. ಬೇಡೇಕರ್ಸ್ ಗೈಡ್ಸ್, ಮೆಕ್‌ಗ್ರಾ ಹಿಲ್ ಕಂಪನಿಯ ಪಾಕೆಟ್ ಟ್ರಾವೆಲ್ಸ್ ಗೈಡ್ಸ್, ಫಾಡರ್ಸ್ ಗೈಡ್ಸ್ ಟು ಇಂಡಿಯ – ಇವೇ ಮುಂತಾದ ಪ್ರವಾಸಿ ಕೈಪಿಡಿಗಳು ಬಳಕೆಯಲ್ಲಿವೆ. ಇಂಡಿಯನ್ ಬ್ರಾಡ್‌ಷಾ ಎಂಬುದು ಪ್ರವಾಸಿಗರಿಗೆ ಅತ್ಯಂತ ಉಪಯುಕ್ತವಾದ ಕೈಪಿಡಿ ಹಾಗೂ ಪರಾಮರ್ಶನ ಗ್ರಂಥ. ಭಾರತದ ಎಲ್ಲ ರೈಲ್ವೆ ಹಾಗೂ ವಿಮಾನಸಾರಿಗೆಯ ವೇಳಾಪಟ್ಟಿಗಳನ್ನೂ ಟಿಕೇಟು ದರಗಳನ್ನೂ ಇದರಲ್ಲಿ ಕೊಟ್ಟಿದೆ. ಕಾಲಕಾಲಕ್ಕೆ ಆಗುವ ಬದಲಾವಣೆಗಳನ್ನೂ ಸಮಾವೇಶಗೊಳಿಸಿ ತಿಂಗಳಿಗೊಮ್ಮೆ ಪ್ರಕಟಣೆಗಳನ್ನು ತರಲಾಗುತ್ತದೆ. ಭಾರತದಲ್ಲಿಯ ಗಿರಿಧಾಮಗಳ ಮತ್ತು ಆರೋಗ್ಯಧಾಮಗಳ ಬಗ್ಗೆಯೂ ಪ್ರಮುಖ ಪ್ರವಾಸೀ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಸಾರಿಗೆ ವ್ಯವಸ್ಥೆಗಳ ವೇಳಾಪತ್ರಿಕೆಯನ್ನೂ  ಈ ಗ್ರಂಥದಲ್ಲಿ ಕಾಣಬಹುದು.

ಭೂಪಟ ಪುಸ್ತಕ : ಸಾಮಾನ್ಯವಾಗಿ ಒಂದು ದೇಶದ ಅಥವಾ ಪ್ರದೇಶದ ಸ್ವಾಭಾವಿಕ ಸನ್ನಿವೇಶಗಳನ್ನು– ಮೇರೆಗಳು, ನದಿ, ಬೆಟ್ಟ, ಪಟ್ಟಣ, ಅಕ್ಷಾಂಶ ರೇಖಾಂಶ – ಗುರುತಿಸಿರುವ ಭೂಪಟಗಳ ಪುಸ್ತಕ. ಇದರ ಜೊತೆಗೆ ಆಯಾ ದೇಶದಲ್ಲಿನ ರಸ್ತೆ, ರೈಲುಮಾರ್ಗಗಳು, ಬಂದರುಗಳು, ಕಾರ್ಖಾನೆಗಳಿರುವ ಸ್ಥಳಗಳು, ಜಿಲ್ಲಾಕೇಂದ್ರಗಳು, ರಾಜಧಾನಿಗಳು, ತಾಲ್ಲೂಕು ಕೇಂದ್ರಗಳು, ಶೈಕ್ಷಣಿಕ ಕೇಂದ್ರಗಳು – ಹೀಗೆ ಹಲವಾರು ವಿವರಗಳೂ ಇರುತ್ತವೆ. ಇವಲ್ಲದೆ ಒಂದು ಪ್ರದೇಶದ ಸ್ವಾಭಾವಿಕ ಸಸ್ಯವರ್ಗವನ್ನೂ ವಾಯುಗುಣವನ್ನೂ ಖನಿಜಸಂಪತ್ತನ್ನೂ ರಾಜಕೀಯ ವಿಭಾಗಗಳನ್ನೂ ವಾರ್ಷಿಕ ಮಳೆಬೆಳೆಗಳನ್ನೂ ನೀರಾವರಿ ಕೆಲಸಗಳನ್ನು ತೋರಿಸಿ ಕೊಡುವ ವಿವಿಧ ಭೂಪಟಗಳೂ ಇದರಲ್ಲಿ ಸೇರಿರುತ್ತವೆ. ಇವಲ್ಲದೆ ತಾಲ್ಲೂಕು ಎಲ್ಲೆ, ಜಿಲ್ಲಾ ಗಡಿ, ರಾಜ್ಯದ ಎಲ್ಲೆ, ರಾಷ್ಟ್ರದ ಗಡಿ, ಅಂತಾರಾಷ್ಟ್ರೀಯ ಎಲ್ಲೆ– ಇವೆಲ್ಲವನ್ನೂ ಅಟ್ಲಾಸು ಒಳಗೊಂಡಿರುತ್ತದೆ. ಐತಿಹಾಸಿಕ ಬದಲಾವಣೆಗಳಿಗೆ ಅನುಗುಣವಾಗಿ ಒಂದು ರಾಷ್ಟ್ರ ಅಥವಾ ರಾಜ್ಯ ಬೇರೆ ಬೇರೆ ಅವಧಿಯಲ್ಲಿ ತಾಳಿದ ರೂಪಗಳನ್ನು ವಿವರಿಸುವ ರಾಜಕೀಯ ಭೂಪಟಗಳು ಇರುತ್ತವೆ. ಈ ಎಲ್ಲ ಅಂಶಗಳನ್ನುಳ್ಳ ಭೂಪಟಗಳು ಭೂಪಟಶಾಸ್ತ್ರಾನುಸಾರ ಆ ವಿಭಾಗದ ಪರಿಣತರಿಂದ ತಯಾರುಗೊಂಡಿರುತ್ತದೆ. ಭೂಪಟಗಳನ್ನು ಒಂದು ನಿರ್ದಿಷ್ಟ ಅಳತೆಯ ಮಾನಕ್ಕೆ (ಸ್ಕೇಲ್) ಅನುಗುಣವಾಗಿ ಸಿದ್ಧಗೊಳಿಸಿರುತ್ತಾರೆ. ಅಟ್ಲಾಸುಗಳು ಭೂಪಟಗಳ ಕೋಶವೇ ಆಗಿರುವ ಕಾರಣ ಪರಾಮರ್ಶನೆಯ ಕೆಲಸ ತ್ವರಿತವಾಗಿ ನಡೆಯುತ್ತದೆ. ಪ್ರಮುಖ ಅಟ್ಲಾಸುಗಳಲ್ಲಿ ದಿ ಟೈಮ್ಸ್ ಅಟ್ಲಾಸ್ ಆಫ್ ದಿ ವರ್ಲ್ಡ್ (ಲಂಡನ್ ಪ್ರಕಟಣೆ), ದಿ ಆಕ್ಸ್‌ಫರ್ಡ್ ಅಟ್ಲಾಸ್, ಹ್ಯಾಮಂಡ್ಸ್ ಅಂಬಾಸೆಡರ್ ಅಟ್ಲಾಸ್ ಆಫ್ ದಿ ವರ್ಲ್ಡ್, ಎನ್‌ಸೈಕ್ಲೊಪೀಡಿಯ ಬ್ರಿಟಾನಿಕ ವರ್ಲ್ಡ್ ಅಟ್ಲಾಸ್ ಆಫ್ ದಿ ವರ್ಲ್ಡ್, ರ್‍ಯಾಂಡ್ ಮ್ಯಾಕ್‌ನಲಿ ಕಾಸ್ಮೋಪಾಲಿಟನ್ ವರ್ಲ್ಡ್ ಅಟ್ಲಾಸ್, ರೀಡರ್ಸ್ ಡೈಜೆಸ್ಟ್ ಪತ್ರಿಕೆಯವರ ದಿ ಗ್ರೇಟ್ ವರ್ಲ್ಡ್ ಅಟ್ಲಾಸ್, ಮೆಡಾಲಿಯನ್ ವರ್ಲ್ಡ್ ಅಟ್ಲಾಸ್, ನ್ಯೂ ವರ್ಲ್ಡ್ ಅಟ್ಲಾಸ್ – ಹೀಗೆ ಅನೇಕ ಬಗೆಯ ಭೂಪಟ ಪುಸ್ತಕಗಳಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತಕ್ಕೇ ಮೀಸಲಾದ ಪ್ರತ್ಯೇಕ ಅಟ್ಲಾಸುಗಳಿರಲಿಲ್ಲ. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಅಟ್ಲಾಸಿನ ಅಗತ್ಯಗಳನ್ನು ಮನಗಂಡು ನ್ಯಾಷನಲ್ ಅಟ್ಲಾಸ್ ಆರ್ಗನೈಸೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ಈ ಸಂಸ್ಥೆ ಕೇಂದ್ರ ಶಿಕ್ಷಣ ಶಾಖೆಯ ಆಡಳಿತಕ್ಕೊಳಪಟ್ಟಿತ್ತು. 1957 ರಲ್ಲಿ ಈ ಸಂಸ್ಥೆ ನ್ಯಾಷನಲ್ ಅಟ್ಲಾಸ್ ಆರ್ಗನೈಸೇಷನ್ ಎಂಬ ಪ್ರಾರಂಭಿಕ ಆವೃತ್ತಿಯನ್ನು ಪ್ರಕಟಿಸಿತು. ಸ್ವತಂತ್ರ ಭಾರತದ ರೂಪರೇಷೆಗಳು ಇದರ ಪ್ರಮುಖ ವಿಷಯ. ಶಿವಪ್ರಸಾದ್ ಚಟರ್ಜಿ ಎಂಬುವರಿಂದ ಸಂಪಾದಿಸಲ್ಪಟ್ಟ ಈ ಅಟ್ಲಾಸಿನಲ್ಲಿ 25" X 14" ಆಕಾರದ 26 ಭೂಪಟಗಳಿವೆ. ಅಟ್ಲಾಸಿನ ಪ್ರಾರಂಭದಲ್ಲಿ ಭೂಪಟಗಳು ಪ್ರತಿನಿಧಿಸುವ ಅಂಶಗಳನ್ನು ಸಾದ್ಯಂತವಾಗಿ ವಿವರಿಸುವ ಟಿಪ್ಪಣಿಗಳನ್ನು ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ಕೊಡಲಾಗಿದೆ. ಭಾರತ ಮತ್ತು ಪ್ರಪಂಚ, ಭೂರಚನೆ, ಜಲ ಪ್ರವಾಹಗಳು, ಮಳೆ, ಅರಣ್ಯ ಮತ್ತು ಭೂಸಂಪತ್ತು, ಪಶುಸಂಪತ್ತು, ವಿದ್ಯುಚ್ಛಕ್ತಿ, ರೈಲ್ವೆ ಮಾರ್ಗಗಳು, ಖನಿಜಗಳು, ಉದ್ಯಮಗಳು, ನೀರಾವರಿ ಸೌಕರ್ಯಗಳು, ಆಹಾರಧಾನ್ಯಗಳು,

ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನೆ, ಆರೋಗ್ಯ, ಪುರಾತತ್ತ್ವ ಮತ್ತು ಪ್ರವಾಸೋದ್ಯಮ – ಹೀಗೆ ಭಾರತಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಭೂಪಟಗಳು ಈ ಅಟ್ಲಾಸಿನಲ್ಲಿವೆ. ಇತ್ತೀಚೆಗೆ ಭಾರತದಲ್ಲಿ ಪ್ರಕಟವಾಗುತ್ತಿರುವ ಅಟ್ಲಾಸುಗಳಲ್ಲಿ ಬ್ರಿಜ್‌ಬಾಸಿ ವರ್ಲ್ಡ್ ಅಟ್ಲಾಸು, ಶಾರದಾ ಅಟ್ಲಾಸು ಮತ್ತು ಇತರ ಪ್ರಾಂತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಅಟ್ಲಾಸುಗಳೂ ಜನಪ್ರಿಯವಾಗುತ್ತಿವೆ. ಭಾರತ ಸರ್ಕಾರದ ಪ್ರಕಾಶನ ವಿಭಾಗದವರಿಂದ ಇಂಡಿಯ ಇನ್ ಮ್ಯಾಪ್ಸ್ ಎಂಬ ಅಟ್ಲಾಸು ಉಲ್ಲೇಖಾರ್ಹ.

ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ವಿವಿಧ ಅಟ್ಲಾಸುಗಳನ್ನು ಸಂಗ್ರಹಿಸಿಡಲಾಗಿದ್ದು ಅಧ್ಯಯನಾಸಕ್ತರಿಗೆ, ಸಂಶೋಧಕರಿಗೆ ವಿಶಿಷ್ಟ ಪರಾಮರ್ಶನ ಸೇವೆ ಒದಗುತ್ತಿದೆ.

ನಿಯತಕಾಲಿಕೆಗಳ ನಿರ್ದೇಶಿಕೆಗಳು ಮತ್ತು ಸಮಾಚಾರ ಸಾರಗಳು : ಒಂದು ನಿರ್ದಿಷ್ಟ ಕಾಲಾವಧಿಗೊಮ್ಮೆ ಪ್ರಕಟವಾಗುವ ನಿಯತಕಾಲಿಕೆಗಳನ್ನೂ (ಪೀರಿಯಾಡಿಕಲ್ಸ್) ಆ ನಿಯತಕಾಲಿಕೆಗಳಲ್ಲಡಗಿರುವ ವಿಷಯಗಳ ಸಮಾಚಾರ ಸಾರಗಳನ್ನೂ (ಇನ್ಫರ್‌ಮೇಷನ್ ಆಬ್‌ಸ್ಟ್ರ್ಯಾಕ್ಟ್ಸ್) ಗ್ರಂಥಾಲಯದ ಪರಾಮರ್ಶನ ವಿಭಾಗ ಒಳಗೊಂಡಿರುತ್ತದೆ. ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹಳೆಯ ಮತ್ತು ಹೊಸ ನಿಯತಕಾಲಿಕೆಗಳ ಪಟ್ಟಿಯನ್ನು ತಯಾರಿಸುವಾಗ ಅವುಗಳ ಸಂಪಾದಕರ, ಪ್ರಕಾಶಕರ ವಿಳಾಸಗಳು, ಪ್ರಕಟಣೆಯ ಕಾಲಾವಧಿ, ಅಚ್ಚಾಗುವ ಪ್ರತಿಗಳ ಸಂಖ್ಯೆ, ಪುಸ್ತಕ ವಿಮರ್ಶೆ, ಜಾಹೀರಾತು ಇತ್ಯಾದಿ ವಿಷಯಗಳ ಬಗ್ಗೆ ಬರುವ ಹಲವಾರು ಸಂದೇಹಗಳನ್ನು ನಿಯತಕಾಲಿಕೆಗಳ ನಿರ್ದೇಶಿಕೆಗಳು (ಡೈರೆಕ್ಟರಿಸ್) ನಿವಾರಿಸುತ್ತವೆ. ಪ್ರಪಂಚದಲ್ಲಿ ಪ್ರಕಟವಾಗುವ ನಿಯತಕಾಲಿಕೆಗಳ ಬಗ್ಗೆ ಮಾಹಿತಿಯನ್ನು ಕೊಡುವ ಹಲವಾರು ನಿರ್ದೇಶಿಕೆಗಳಿದ್ದರೆ, ಒಂದು ದೇಶಕ್ಕೇ ಸೀಮಿತವಾಗಿರುವ ನಿರ್ದೇಶಿಕೆಗಳೂ ಇರಬಹುದು. ಇವಲ್ಲದೆ ಒಂದೇ ವಿಷಯವನ್ನು ಕುರಿತ ನಿರ್ದೇಶಿಕೆಗಳೂ ಇರುತ್ತವೆ. ವರ್ಲ್ಡ್ ಲಿಸ್ಟ್ ಸೈಂಟಿಫಿಕ್ ಪೀರಿಯಾಡಿಕಲ್ಸ್ ನಂಥ ನಿರ್ದೇಶಿಕೆಗಳು ಬಹಳ ಉಪಯೋಗಕ್ಕೆ ಬರುತ್ತವೆ. ಉಲ್‌ರಿಚ್ಸ್ ಇಂಟರ್‌ನ್ಯಾಷನಲ್ ಪೀರಿಯಾಡಿಕಲ್ಸ್ ಡೈರೆಕ್ಟರಿ ಎಂಬುದರಲ್ಲಿ ಪ್ರಪಂಚದಲ್ಲಿ ವಿವಿಧ ವಿಷಯಗಳನ್ನು ಕುರಿತು ಪ್ರಕಟವಾಗುವ (ದೈನಿಕ ಪತ್ರಿಕೆಗಳನ್ನು ಬಿಟ್ಟು) ಸುಮಾರು 40,000 ನಿಯತಕಾಲಿಕೆಗಳ ಬಗ್ಗೆ ಮಾಹಿತಿ ಒದಗುತ್ತದೆ. ಸಮಾವೇಶಗೊಂಡ ನಿಯತಕಾಲಿಕೆಗಳನ್ನು ವಿಷಯಾನುಕ್ರಮದಲ್ಲಿ ಕೊಟ್ಟು, ವಿಷಯಗಳನ್ನು ಅಕಾರಾದಿ ಕ್ರಮದಲ್ಲೂ ಹೊಂದಿಸಲಾಗಿದೆ. ಈ ಅನುಬಂಧಕ್ಕೆ ಮೊದಲು ಹೊಸದಾಗಿ ಪ್ರಾರಂಭವಾದ ಮತ್ತು ನಿಲುಗಡೆಯಾದ ನಿಯತಕಾಲಿಕೆಗಳ ಶೀರ್ಷಿಕೆಗಳನ್ನು ಅಕಾರಾದಿಯಾಗಿ ಕೊಟ್ಟಿದೆ. ವಿಲ್ಲಿಂಗ್ಸ್ ಪ್ರೆಸ್ ಗೈಡ್, ಆಯರ್ಸ್ ಡೈರೆಕ್ಟರಿ ಆಫ್ ನ್ಯೂಸ್‌ಪೇಪರ್ಸ್ ಅಂಡ್ ಪೀರಿಯಾಡಿಕಲ್ಸ್, ಲಂಡನಿನಿಂದ ಪ್ರಕಟವಾಗುವ ನ್ಯೂಸ್‌ಪೇಪರ್ಸ್ ಪ್ರೆಸ್ ಡೈರೆಕ್ಟರಿ –ಇವು ಪ್ರಮುಖ ನಿರ್ದೇಶಿಕೆಗಳು.

ವಿವಿಧ ಭಾಷೆಗಳಲ್ಲಿ ಹಾಗೂ ಅನೇಕ ವಿಷಯಗಳ ಮೇಲಿನ ನಿಯತಕಾಲಿಕೆಗಳ ಬಗೆಗೆ ವಿವರಗಳನ್ನು ಕೊಡುವ ಪರಾಮರ್ಶನ ನಿರ್ದೇಶಿಕೆಗಳು ಭಾರತದಲ್ಲೂ ಪ್ರಕಟವಾಗುತ್ತಿವೆ. ಭಾರತದ ವೃತ್ತಪತ್ರಿಕೆಗಳ ರಿಜಿಸ್ಟ್ರಾರ್ ಜನರಲ್ ಪ್ರಕಟಿಸುವ ಆನ್ಯುಯಲ್ ರಿಪೋರ್ಟ್ ಎಂಬುದು ಒಂದು ನಿರ್ದೇಶಿಕೆಯೇ. 1965 ರಿಂದ ಇದನ್ನು ಪ್ರೆಸ್ ಇನ್ ಇಂಡಿಯ ಎಂಬ ಹೆಸರಿನಲ್ಲಿ ಪ್ರಕಟಿಸಲಾಗುತ್ತಿದೆ. ಭಾರತದಲ್ಲಿ ಪ್ರಕಟವಾಗುವ ಎಲ್ಲ ಭಾಷೆಗಳಲ್ಲಿನ ಎಲ್ಲ ವಿಷಯಗಳ ಮೇಲಿನ ನಿಯತಕಾಲಿಕೆಗಳ ಬಗ್ಗೆ ವಿವರಗಳು ಈ ಗ್ರಂಥದಲ್ಲಿ ಸಿಕ್ಕುತ್ತದೆ. ಇನ್ನಿತರ ನಿರ್ದೇಶಿಕೆಗಳಲ್ಲಿ ಪುಣೆಯಿಂದ ಪ್ರಕಟವಾದ (1955–56) ನಿಫಾರ್ ಗೈಡ್ ಟು ಇಂಡಿಯನ್ ಪೀರಿಯಾಡಿಕಲ್ಸ್, ಇಂಡಿಯನ್ ಪೀರಿಯಾಡಿಕಲ್ಸ್: ಆನ್ ಆನೋಟೇಟೆಡ್ ಗೈಡ್ 9 (ಪ್ರಕಟಣ ವರ್ಷ: 1969), ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ (ಐಎನ್‌ಎಸ್‌ಡಿಓಸಿ) ವಿಜ್ಞಾನ ವಿಷಯಗಳಿಗೆ ಮೀಸಲಾಗಿರುವ ನಿಯತಕಾಲಿಕೆಗಳ ಬಗ್ಗೆ ಮಾಹಿತಿ ಕೊಡುವ ಡೈರೆಕ್ಟರಿ ಆಫ್ ಇಂಡಿಯನ್ ಸೈಂಟಿಫಿಕ್ ಪೀರಿಯಾಡಿಕಲ್ಸ್ ಎಂಬ ನಿರ್ದೇಶಿಕೆ – ಇವು ಮುಖ್ಯವಾದುದು.

ಇಂಥ ನಿರ್ದೇಶಿಕೆಗಳು ಒಂದು ವಿಧದಲ್ಲಿ ಸಮಾಚಾರ ಸಾರವನ್ನು ಒದಗಿಸುವ ಪರಾಮರ್ಶನ ಗ್ರಂಥಗಳೂ ಆಗುತ್ತವೆ. ಪ್ರಪಂಚದಲ್ಲಿನ ಘಟನೆಗಳ ಬಗ್ಗೆ ಸಮಾಚಾರ ಸಾರವನ್ನು ಸಂಗ್ರಹಿಸಿ ಒಂದು ನಿಯತಕಾಲಾವಧಿಯಲ್ಲಿ ಹೊರಬೀಳುತ್ತಿರುವ ಪ್ರಕಟಣೆಗಳಲ್ಲಿ ಬ್ರಿಸ್ಟಲಿನ ಕೀಸಿಂಗ್ಸ್ ಕಂಟೆಂಪೊರರಿ ಆರ್ಕೈವ್ಸ್, ನ್ಯೂಯಾರ್ಕಿನ ಫ್ಯಾಕ್ಟ್ಸ್ ಆನ್ ಫೈಲ್ ಎಂಬ ಕಾಲಿಕೆಗಳು ಮುಖ್ಯವಾದವು. ಇವು ವಾರಕ್ಕೊಮ್ಮೆ ಹೊರಬೀಳುವ ಪ್ರಕಟಣೆಗಳು. ಪ್ರಪಂಚದ ನಿಯತಕಾಲಿಕೆಗಳ ಬಗ್ಗೆ ಮಾಹಿತಿಗಳಲ್ಲದೆ ರಾಜಕೀಯ, ವಿಜ್ಞಾನ, ಕ್ರೀಡೆ, ನಾಟಕ, ಚಲನಚಿತ್ರಗಳು, ಹೊಸ ಹೊಸ ಪ್ರಕಟಣೆಗಳು, ದೇಶಗಳ ನಡುವೆ ಆದ ಒಪ್ಪಂದಗಳು, ರಾಷ್ಟ್ರಪ್ರಮುಖರ ಭಾಷಣಗಳು, ಇತ್ಯಾದಿ ಈ ಪ್ರಕಟಣೆಗಳಲ್ಲಿ ದೊರೆಯುತ್ತವೆ. ಏಷ್ಯ ಮತ್ತು ಆಫ್ರಿಕ ಖಂಡಗಳಲ್ಲಿ ನಡೆಯುವ ಘಟನೆಗಳ ವಿವರಗಳನ್ನು ದೆಹಲಿಯಿಂದ ಪ್ರಕಟವಾಗುವ ಏಷ್ಯನ್ ರೆಕಾರ್ಡರ್ ಮತ್ತು ಆಫ್ರಿಕ ಡೈರಿ ಎಂಬ ಪ್ರಕಟಣೆಗಳಲ್ಲಿ ಕಾಣಬಹುದು. (ಬಿ.ಬಿ.ಎಚ್.)

**2. ಪ್ರಲೇಖನ :** ಒಂದೋ ಇಲ್ಲವೆ ಹಲವಾರು ವಿಷಯಗಳಿಗೋ ಸಂಬಂಧಿಸಿದಂತೆ ಅಂಕಿ ಅಂಶಗಳನ್ನೂ ಮಾಹಿತಿಗಳನ್ನೂ ಸಂಗ್ರಹಿಸಿಕೊಂಡು ನಡೆಸುವ ಸಂಶೋಧನೆಗಳಿಗೆ ಸಹಾಯವಾಗುವಂತೆ ದಾಖಲೆಗಳ ರುಜುವಾತನ್ನೂ ಪ್ರಮಾಣಪತ್ರಗಳನ್ನೂ ಒದಗಿಸಿಕೊಡುವ ಒಂದು ಕ್ರಮಬದ್ಧ ಕಾರ್ಯ (ಡಾಕ್ಯುಮೆಂಟೇಷನ್). ಇದು ಸುಸಜ್ಜಿತವಾದ ಗ್ರಂಥಾಲಯ ಮಾಡಬೇಕಾದ ಮುಖ್ಯ ಕೆಲಸಗಳಲ್ಲಿ ಒಂದು. ಜೀವನದ ಹಲವಾರು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವ ಸಲುವಾಗಿ ರೂಪಿಸಿಕೊಂಡಿರುವ ವಿವಿಧ ಪ್ರಕ್ರಮಗಳು, ಯಂತ್ರಸ್ಥಾವರಗಳು, ಶೈಕ್ಷಣಿಕ ಹಾಗೂ ವೈಜ್ಞಾನಿಕ ಸಂಸ್ಥೆಗಳು ಮುಂತಾದವುಗಳಲ್ಲಿ ನಡೆಯುವ ಭಿನ್ನ ಭಿನ್ನ ಸಂಶೋಧನೆಗಳಿಗೆ ಪೋಷಕವಾಗಿ ಆಯಾ ಕ್ಷೇತ್ರಗಳಲ್ಲಿನ ಸಂಶೋಧಕರಿಗೆ ಮಾರ್ಗದರ್ಶನವನ್ನು ಕ್ಷಿಪ್ರ ಅವಧಿಯಲ್ಲಿ ಒದಗಿಸುವುದು ಪ್ರಲೇಖನದಿಂದ ಸಾಧ್ಯ.



ಮೈಕ್ರೊಫಿಲ್ಮ್ ತಯಾರಿಕೆ

ಒಂದು ವಿಷಯವನ್ನು ಕುರಿತಂತೆ ನಡೆಯುವ ಸಂಶೋಧನೆಗೆ ಅತ್ಯಗತ್ಯವಾದ ಮಾಹಿತಿಗಳೂ ಅಂಕಿಅಂಶಗಳೂ ದಾಖಲಾತಿಗಳೂ ಪರಾಮರ್ಶನ ಗ್ರಂಥಗಳೂ ನಿಯತಕಾಲಿಕೆಗಳೂ ಇತರ ಸಂಶೋಧನ ಪ್ರಬಂಧಗಳೂ –ಇವೇ ಮುಂತಾದ ಸಾಮಗ್ರಿಗಳು ಗ್ರಂಥಾಲಯದಲ್ಲಿ ದೊರಕುತ್ತವೆ. ಈ ಎಲ್ಲ ವಿಭಾಗಗಳಲ್ಲಿ ಒಂದು ಕ್ರಮಬದ್ಧ ಪ್ರಲೇಖನ ಕಾರ್ಯದ ಆವಶ್ಯಕತೆ ಇತ್ತೀಚೆಗೆ ಹೆಚ್ಚಾಗಿ ಕಾಣಬರುತ್ತಿದೆ. ಪ್ರಲೇಖನ ಕಾರ್ಯಕ್ಕೆ ಗ್ರಂಥಾಲಯ ಒಂದು ವೇದಿಕೆಯನ್ನು ಒದಗಿಸುತ್ತದೆ. ಈಚೆಗೆ ವಿವಿಧ ಉದ್ಯಮಗಳು, ವಿಷಯ ಪ್ರಯೋಗಾಲಯಗಳು ಮತ್ತು ತಂತ್ರಜ್ಞಾನದ ಕಾರ್ಯಾಲಯಗಳು ವಿಪುಲವಾಗಿ ಬೆಳೆದು ಅವುಗಳ ಆವಶ್ಯಕತೆಗಳು ವಿಶಿಷ್ಟವಾಗಿ ಪರಿಣಮಿಸುವುದರಿಂದ ಅವು ತಮ್ಮದೇ ಆದ ಪ್ರಲೇಖನ ಸೇವೆಯನ್ನು ಸಂಘಟಿಸಿಕೊಳ್ಳುತ್ತಿವೆ. ಅಲ್ಲಿ ಕೂಡ ಕೆಲವು ಪುಸ್ತಿಕೆಗಳು ಆ ವಿಷಯಕ್ಕೆ ಸಂಬಂಧಿಸಿ ಸಂಗ್ರಹಿತವಾಗಿದ್ದರೂ ಅದು ಹಿನ್ನೆಲೆಯ ಮಾಹಿತಿಗೆ ಮಾತ್ರ. ಅಗ್ರ ಪ್ರಾಶಸ್ತ್ಯವಿರುವುದು ಪ್ರಲೇಖನಕ್ಕೆ.

ಇಂಥ ಪ್ರಲೇಖನ ಕೇಂದ್ರಗಳು ಅಥವಾ ಕಾರ್ಯಾಲಯಗಳು ಒಂದು ಸರ್ಕಾರದ ಆಡಳಿತದಲ್ಲಿಯಾಗಲಿ, ಒಂದು ಉದ್ಯಮದ ಅಥವಾ ಕಾರ್ಖಾನೆಗಳ ಅಧೀನವಾಗಿಯಾಗಲಿ ಇರಬಹುದು. ಸರ್ಕಾರೀ ಸಂಸ್ಥೆಗಳಲ್ಲಿ ಸಾಧಾರಣವಾಗಿ ಸಾರ್ವಜನಿಕರಿಗೆಲ್ಲ ಉಪಯೋಗವಾಗುವಂಥ ಪ್ರಲೇಖನ ಸೇವೆ ಜರುಗುತ್ತಿದ್ದು ಅದರಲ್ಲಿ ಅನೇಕ ವಿಷಯಗಳ ಸ್ಥೂಲವಾದ ಸಮಾಚಾರ ಮಾತ್ರ ಲಭ್ಯವಾಗಬಹುದು. ಜನಸಾಮಾನ್ಯರಿಗೆಲ್ಲ ಪ್ರಯೋಜನಕ್ಕೆ ಬರುವ ಗುಣವೊಂದು ಇದರಲ್ಲಿದ್ದರೂ ತಜ್ಞರಿಗೆ ಇಲ್ಲವೆ ಒಂದು ವಿಷಯದಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿಯ ಬಯಸುವವರಿಗೆ ಹೆಚ್ಚು ಗಹನ ವಿಚಾರಗಳು ದೊರೆಯದೆ ಹೋಗಬಹುದು. ವಿಷಯ ಪ್ರಧಾನ ಪ್ರಯೋಗಾಲಯದಲ್ಲಿ ಅಥವಾ ಒಂದು ಉದ್ಯಮದ ದೃಷ್ಟಿಯಿಂದ ಸ್ಥಾಪಿಸಿದ ವಿಶಿಷ್ಟ ಗ್ರಂಥಾಲಯದಲ್ಲಿ ನಡೆಯುವ ಪ್ರಲೇಖನ ಕಾರ್ಯದಲ್ಲಿ ತಮ್ಮ ಸಂಸ್ಥೆಯೊಂದರಲ್ಲಿಯೇ ಸಿದ್ಧವಾಗುವ ವಸ್ತುಗಳ ಬಗೆಯ ಸಮಾಚಾರವಷ್ಟೆ ಅಲ್ಲದೆ ಅದೇ ವಿಭಾಗದಲ್ಲಿ ತೊಡಗಿರುವ ಮತ್ತೊಂದು ಸಂಸ್ಥೆಯ ಕಾರ್ಯದ ಮಾಹಿತಿ ಕೂಡ ದೊರೆಯುವಂತಿರುತ್ತದೆ. ವಿಶಿಷ್ಟ ಕೇಂದ್ರಗಳಲ್ಲಿ ಜರುಗುವ ಪ್ರಲೇಖನ ಸೇವೆ ಉತ್ತಮ ಮಟ್ಟದಾಗಿರುತ್ತದೆ. ಇದಲ್ಲದೆ ಇಂಥ ಎರಡೂ ಸಂಸ್ಥೆಗಳ ಕಾರ್ಯವನ್ನೊಳಗೊಂಡ ಮಿಶ್ರ ಸಂಘಟನೆಗಳು ಕೂಡ ತಮ್ಮ ವ್ಯಾಪ್ತಿ, ಶಕ್ತಿ ಮತ್ತು ಸಲಕರಣೆಗಳಿಗೆ ಅನುರೂಪವಾಗಿ ಪ್ರಲೇಖನ ಕಾರ್ಯವನ್ನು ನಡೆಸುತ್ತಿವೆ.

ಪ್ರಲೇಖನ ಸೇವೆಯನ್ನು ಸಮರ್ಪಕವಾಗಿ ಯಾರು ಒದಗಿಸಬಲ್ಲರು, ಅವರ ಶಿಕ್ಷಣ ಎಂಥದಾಗಿರಬೇಕು, ಪೂರ್ವ ಸಿದ್ಧತೆಗಳೇನಿರಬೇಕು, ಪ್ರಲೇಖನ ಕಾರ್ಯ ನಡೆಸುವಾತ ಕೇವಲ ಗ್ರಂಥಾಲಯ ವಿಜ್ಞಾನದಲ್ಲಿ ಪರಿಣತಿ ಹೊಂದಿದ್ದರೆ ಸಾಕೆ, ಅಥವಾ ಅದಕ್ಕೆ ಅನುಗುಣವಾದ ವಿಜ್ಞಾನ ಅಥವಾ ತಂತ್ರಜ್ಞಾನದಲ್ಲಿ ಅವನು ಪ್ರಾವೀಣ್ಯಗಳಿಸಿದ್ದಿರಬೇಕೆ, ಗ್ರಂಥಗಳ ಸಂಗ್ರಹಣೆ, ವ್ಯವಸ್ಥೆ, ವರ್ಗೀಕರಣ ಮತ್ತು ವಿತರಣೆಗಳ ಶಿಕ್ಷಣ ಮತ್ತು ಅನುಭವಗಳಿದ್ದ ಪಕ್ಷಕ್ಕೆ ಮಾತ್ರ ಪ್ರಲೇಖನ ಕಾರ್ಯ ಸುಸೂತ್ರವಾಗಿ ನಡೆಯುತ್ತದೆಯೇ ಮುಂತಾದ ಪ್ರಶ್ನೆಗಳಿಗೆ ಇರುವ ಉತ್ತರಗಳು ಪ್ರಲೇಖನ ಕಾರ್ಯ ನಡೆಯುವ ವಿಧಾನವನ್ನು ವಿವರಿಸುವಂಥವು. ಪ್ರಲೇಖನ ಕಾರ್ಯವನ್ನು ನಿರ್ವಹಿಸುವಾತ ತನ್ನ ಸೇವೆಯನ್ನು ಸಲ್ಲಿಸುವುದರಲ್ಲಿ ಸಾರ್ಥಕತೆಯನ್ನು ಪಡೆಯುವಂಥವನಾಗಿರಬೇಕು. ಎಷ್ಟೋ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸ್ತ್ರದಲ್ಲಿ ಆಸಕ್ತಿ, ಅಭಿರುಚಿಯುಳ್ಳ ವ್ಯಕ್ತಿ ಗ್ರಂಥಾಲಯ ವಿಜ್ಞಾನದ ಶಿಕ್ಷಣವನ್ನು ಪಡೆದು ತನ್ನ ಕರ್ತವ್ಯವನ್ನು ತೃಪ್ತಿಕರವಾಗಿ ಈಡೇರಿಸಿದುದುಂಟು. ಆದರೂ ಪ್ರಲೇಖನ ಕಾರ್ಯಕ್ಕೆ ಯೋಗ್ಯನಾಗಬೇಕಾದರೆ ಮೂಲವಾಗಿ ಆತನಿಗೆ ಗ್ರಂಥಾಲಯ ವಿಜ್ಞಾನದ ಅರಿವು ಅಗತ್ಯ. ಜೊತೆಗೆ ಪ್ರಲೇಖನ ವಿಭಾಗದಲ್ಲಿ ಕೆಲಸ ಮಾಡುವ ವಿವಿಧ ತಜ್ಞರಿಗೆ ಯುಕ್ತ ಶಿಕ್ಷಣ ಮತ್ತು ತರಬೇತಿಗಳೂ ಅಗತ್ಯವಾಗುತ್ತವೆ. ಪ್ರಾದೇಶಿಕ ಭಾಷೆಗಳ ಮತ್ತು ಅಂತಾರಾಷ್ಟ್ರೀಯ ಭಾಷೆಗಳ ಪರಿಚಯವೂ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವ ಅರ್ಹತೆಗಳೂ ಇರುವುದು ಅನಿವಾರ್ಯವೆನಿಸುತ್ತದೆ.

ಮೈಕ್ರೊಫಿಲ್ಮ್ ಓದುತ್ತಿರುವುದು

ಪ್ರಲೇಖನ ಸೇವೆಯನ್ನು ಸಲ್ಲಿಸುವ ಯಾವುದೇ ಕೇಂದ್ರವಾಗಲಿ ಮೊದಲು ತನ್ನ ಸಾಮಗ್ರಿಗಳ ಸಂಗ್ರಹಕ್ಕಾಗಿ ಅತ್ಯಂತ ವ್ಯಾಪಕವಾದ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕು. ಯಾವ ಕಾರ್ಯವನ್ನು ಕೈಕೊಳ್ಳಬೇಕೋ ಆ ವಿಷಯದ ಬಗ್ಗೆ ಪ್ರಪಂಚದ ಯಾವುದೇ ಭಾಗದಲ್ಲಿ ಇಲ್ಲವೆ ಭಾಷೆಯಲ್ಲಿ ನಡೆದಿರಬಹುದಾದ ಪ್ರಸ್ತುತ ಪ್ರಗತಿಯ ಪರಿಜ್ಞಾನ ಆ ಸಂಸ್ಥೆಗಿರುವುದು ಅಗತ್ಯ. ಇಂಥ ಒಂದು ಪ್ರಲೇಖನ ಕೇಂದ್ರದ ಅಗತ್ಯಗಳನ್ನು ಪೂರೈಸಿಕೊಳ್ಳಲು ಇತರ ಪ್ರಲೇಖನ ಕೇಂದ್ರಗಳಿಂದ ವಿಜ್ಞಾಪನೆಯ ಮೂಲಕವಾಗಲಿ, ವಿಕ್ರಯದ ಮೂಲಕವಾಗಲಿ, ಎರವಲು ಪದ್ಧತಿಯನ್ನನುಸರಿಸುವುದರಿಂದಾಗಲಿ, ಇಲ್ಲವೆ ವಿನಿಮಯದ ಮೂಲಕವಾಗಲಿ ವ್ಯವಹಾರ ನಡೆಸಬಹುದು. ದಾಖಲೆಗಳನ್ನು ದೊರಕಿಸುವ ಕಾರ್ಯ ಕ್ಲಿಷ್ಟವಾದುದೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವಂಥದೂ ಆಗಿರುತ್ತದೆಯಾಗಿ ಗ್ರಂಥಾವಲೋಕನ, ವಿಷಯಾವಲೋಕನದಲ್ಲಿ ಹೆಚ್ಚಿನ ಶ್ರಮ ಇರುತ್ತದೆ. ಪ್ರಪಂಚದ ಯಾವ ಭಾಗದಲ್ಲಿ, ಯಾವ ಭಾಷೆಯಲ್ಲಿ, ಯಾವ ಮಾಧ್ಯಮದಲ್ಲಿ ಅಂಥ ಪ್ರಲೇಖನದ ವಿಷಯವಾಗಿ ಜಾಹೀರಾತುಗಳು ಅಥವಾ ಸಮಾಚಾರ ಪ್ರಕಟವಾಗಿರುವುದೋ ಅಂಥ ಮೂಲಗಳ ಪರಿಶೀಲನೆಯಲ್ಲಿ ಯಾವಾಗಲೂ ಆಸಕ್ತಿ ವಹಿಸಿ ಸಮಾಚಾರ ಸಂಗ್ರಹ ಮಾಡಿ, ಉಚಿತರೀತಿಯಲ್ಲಿ ಸಕಾಲದಲ್ಲಿ ಆ ಭಾಗದ ಕೇಂದ್ರಕ್ಕೆ ವಿನಂತಿ ಮಾಡಿಕೊಂಡು, ತಗಲುವ ವೆಚ್ಚವನ್ನು ಗೊತ್ತುಪಡಿಸಿ, ಎರವಲಿಗಾಗಿ ಪ್ರಾರ್ಥಿಸಿಯೊ ಇಲ್ಲವೆ ವಿನಿಮಯಕ್ಕಾಗಿ ಕೇಳಿಕೊಂಡೊ ಅಗತ್ಯವಿರುವ ಸಾಮಗ್ರಿಯನ್ನು ಪಡೆಯಬೇಕಾಗುತ್ತದೆ. ವಿದೇಶೀ ನಾಣ್ಯ ಪದ್ಧತಿಯ ಪರಿಚಯ, ಹಣದ ವಿನಿಮಯ ಕ್ರಮ ಮುಂತಾದ ವಿಚಾರಗಳನ್ನು ಕುರಿತು ಯುನೆಸ್ಕೊ ಒಂದು ವಿಶಿಷ್ಟ ಬಗೆಯ ಕೂಪನ್ನುಗಳನ್ನು ರಚಿಸಿದೆಯಾಗಿ ಅಂತಾರಾಷ್ಟ್ರೀಯ ಜ್ಞಾನ ಸಾಮಗ್ರಿಗಳ ವಿತರಣೆಯ ಕೆಲಸ ಸುಗಮವಾಗಿದೆ. ಇಂಥ ಕೂಪನ್ನುಗಳು ಪ್ರಲೇಖನ ಕಾರ್ಯಕ್ಕೆ ಬಲು ಸಹಾಯವೆಸಗುತ್ತವೆ. ಭಿನ್ನ ಭಿನ್ನ ವಿಷಯಗಳ ಅಧ್ಯಯನ, ಸಂಶೋಧನೆಗಳಲ್ಲಿ ಕಾರ್ಯೋನ್ಮುಖವಾಗಿರುವ ಸಂಘ-ಸಂಸ್ಥೆಗಳ ಪುಸ್ತಕ ಪಟ್ಟಿಗಳು. ಆ ಸ್ಥಳದ ವಿವಿಧ ಗ್ರಂಥ ವ್ಯಾಪಾರಿಗಳು ಹಂಚುವ ಅನೇಕ ಗ್ರಂಥಸೂಚಿಗಳು, ವಿಶ್ವವಿದ್ಯಾಲಯಗಳೇ ಮೊದಲಾದ ವಿದ್ಯಾಕೇಂದ್ರಗಳು ಪ್ರಕಟಿಸುವ ವಿವಿಧ ಸಾಧನಗಳ ಮಾಹಿತಿಗಳನ್ನೀಯುವ ಪ್ರಕಟನಾ ಕೈಪಿಡಿಗಳು ಪ್ರಲೇಖನ ಕಾರ್ಯಕ್ಕೆ ಉಪಯೋಗವಾಗುತ್ತವೆ.

ಪ್ರಪಂಚದಲ್ಲಿ ವಿವಿಧ ಶಾಸ್ತ್ರಗಳ ವಿಭಾಗಗಳಲ್ಲಿ ನಡೆಯುವ ಲಕ್ಷಗಟ್ಟಲೆಯ ಪ್ರಯೋಗಗಳ ಮತ್ತು ಪ್ರಾತ್ಯಕ್ಷಿಕೆಗಳ ವಿವರಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಬೇಡಿಕೆಯಿದ್ದಲ್ಲಿಗೆ ಒದಗಿಸಿಕೊಡುವಂಥ ಸಂಸ್ಥೆಗಳು ಭಾರತವೂ ಸೇರಿದಂತೆ ಪ್ರಪಂಚದ ಹಲವೆಡೆ ಕಾಣಬರುತ್ತವೆ. ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಟ್ರಿಗೊನೊಮೆಟ್ರಿಕ್ ಸರ್ವೆ, ಬೊಟ್ಯಾನಿಕಲ್ ಸರ್ವೆ, ಜಿಯೊಲಾಜಿಕಲ್ ಸರ್ವೆ, ಇಂಪೀರಿಯಲ್ (ಈಗ ಇಂಡಿಯನ್) ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್, ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್, ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್, ಡಿಫೆನ್ಸ್ ಸೈನ್ಸ್ ಆರ್ಗನೈಸೇಷನ್, ಅಟಾಮಿಕ್ ಎನರ್ಜಿ ಕಮಿಷನ್ ಈ ಮುಂತಾದವು ಭಾರತದಲ್ಲಿ ಹೆಸರಾಂತ ಸಂಸ್ಥೆಗಳು. ಇವಲ್ಲದೆ ಪ್ರತಿಯೊಂದು ರಾಜ್ಯದಲ್ಲಿ ತಮ್ಮ ತಮ್ಮ ಅನುಕೂಲತೆ ಆವಶ್ಯಕತೆಗಳಿಗೆ ತಕ್ಕಂತೆ ಇಂಥ ಸಂಸ್ಥೆಗಳೂ ಇವೆ. ಈ ಸಂಸ್ಥೆಗಳ ಕಾರ್ಯಕಲಾಪಗಳಿಗೆ ಸರ್ಕಾರದಿಂದಲೂ ಖಾಸಗೀ ಸಂಸ್ಥೆಗಳಿಂದಲೂ ಆಸಕ್ತ ವ್ಯಕ್ತಿಗಳಿಂದಲೂ ಅಪಾರ ಸಹಾಯ ಸಹಕಾರಗಳು ದೊರಕುತ್ತಿವೆ. ಇದರಿಂದಾಗಿ ಲಕ್ಷಗಟ್ಟಲೆ ವಿಜ್ಞಾನಿಗಳ ಸೇವೆ ಹಲವು ವಿಧಗಳಲ್ಲಿ ದೊರಕುತ್ತಿದೆಯಲ್ಲದೆ, ಪ್ರಲೇಖನ ಕಾರ್ಯ ಸುಗಮವಾಗಿ ಸಾಗಲು ದೊಡ್ಡ ಮೊತ್ತದಲ್ಲಿ ಹಣದ ವಿನಿಯೋಗವೂ ಆಗುತ್ತಿದೆ. ಈ ಬಗೆಯ ವಿಶಿಷ್ಟ ಸಂಸ್ಥೆ ಸಂಘಟನೆಗಳಲ್ಲದೆ, ವಿಶ್ವವಿದ್ಯಾಲಯಗಳು, ಪ್ರಯೋಗಶಾಲೆಗಳು, ವಿಜ್ಞಾನ ಮಂದಿರಗಳು ಕೂಡ ವಿಜ್ಞಾನ ಪ್ರಗತಿಯ ಅದ್ಭುತವಾದ ಪ್ರಯತ್ನಗಳಲ್ಲಿ ತೊಡಗಿವೆ.

ಕರ್ನಾಟಕ ರಾಜ್ಯದಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳು, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಹಿಂದೂಸ್ಥಾನ್ ಮಷೀನ್ ಟೂಲ್ಸ್‌ನಂಥ ಬೃಹದ್ ಉದ್ಯಮಗಳು – ಇವೇ ಮೊದಲಾದ ಸಂಸ್ಥೆಗಳು ಸಾಧಿಸಿರುವ ಪ್ರಗತಿಗಳನ್ನು ಕುರಿತಂಥ ವಿಷಯ ಪುಸ್ತಕಗಳೂ ಪತ್ರಿಕೆಗಳೂ ಇವೆ. ಮಾಹಿತಿಗಳನ್ನು ನೀಡುವಂಥ ಪುಸ್ತಕಗಳ ಸಂಗ್ರಹಣೆ ಕರ್ನಾಟಕದ ಪ್ರಮುಖ ಗ್ರಂಥಾಲಯಗಳಲ್ಲಿ ನಡೆದಿದೆ. ಈ ಸಂಸ್ಥೆಗಳಲ್ಲಿ ಅವರದೇ ಆದ ಪ್ರಲೇಖನ ಕಾರ್ಯ ನಡೆದಿರುತ್ತದೆ.

ಒಂದು ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಗಳನ್ನೋ ಅಂಕಿಅಂಶಗಳನ್ನೋ ಅರಸುತ್ತ ಗ್ರಂಥಾಲಯವನ್ನು ಪ್ರವೇಶಿಸುವಾತನಿಗೆ ಅವನ ಬೇಡಿಕೆಗಳೇನು ಎಂಬುದನ್ನು ಮನಗಂಡು ಅವನ ಅಗತ್ಯಗಳನ್ನು ಪೂರೈಸುವ ಸಲುವಾಗಿ ಗ್ರಂಥಾಲಯಗಳಲ್ಲಿ ವಿಶಿಷ್ಟ ಪ್ರಲೇಖನ ವಿಭಾಗಗಳಿರುತ್ತವೆ. ಇಂಥವಲ್ಲಿ ಮಾಹಿತಿ ನೀಡುವಂಥ ಪುಸ್ತಕಗಳ ಮತ್ತು ಇನ್ನಿತರ ಪ್ರಕಟನೆಗಳ ಸಂಗ್ರಹಣೆ, ವರ್ಗೀಕರಣ, ಸೂಚೀಕರಣ ಒಂದು ಕ್ರಮಬದ್ಧ ರೀತಿಯಲ್ಲಿ ನಡೆದಿರುತ್ತದೆ. ಇದಕ್ಕಾಗಿಯೇ ಪ್ರಲೇಖನದಲ್ಲಿ ತರಬೇತಿ ಪಡೆದವರೂ ಅಗತ್ಯಕ್ಕೆ ತಕ್ಕಂತೆ ಮಾಹಿತಿಗಳನ್ನು ಒದಗಿಸುವವರೂ ಗ್ರಂಥಾಲಯದಲ್ಲಿ ನೇಮಕಗೊಂಡಿರುತ್ತಾರೆ. ಇದಕ್ಕಾಗಿ ಗ್ರಂಥಪಾಲನಿಗೆ ವಿಶೇಷವಾಗಿ ತರಬೇತನ್ನು ನೀಡಿರಲಾಗುತ್ತದೆಯಲ್ಲದೆ ಪ್ರಲೇಖನಾಧಿಕಾರಿಗಳೂ ಇದ್ದು ಸಾರ್ವಜನಿಕರ ಬೇಡಿಕೆಯ ಪೂರೈಕೆ ನಡೆಯುತ್ತದೆ.

ಗ್ರಂಥಾಲಯಗಳಲ್ಲಿ ನಡೆಯುವ ಪ್ರಲೇಖನ ಕಾರ್ಯದಲ್ಲಿ ಲಿಖಿತ ವಸ್ತುಗಳ ಸಾರವನ್ನು (ಆಬ್‌ಸ್ಟ್ರಾಕ್ಟ್) ಸಿದ್ಧಗೊಳಿಸಿ ವಿಜ್ಞಾನಿಗಳಿಗೆ ಸಲ್ಲಿಸುವ ಕಾರ್ಯವೂ ಪ್ರಮುಖವಾದದ್ದೇ. ಇದರಲ್ಲಿ ವಿಜ್ಞಾನದ ವಿಷಯ ಲೇಖನದ ಭಾಷೆ ಮತ್ತು ಕಾಲಾವಕಾಶ – ಈ ಮೂರು ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮೂಲ ಲೇಖಕನ ವಿಚಾರಗಳನ್ನು ವಿದ್ರೂಪಗೊಳಿಸದೆ

ಅವನ್ನು ಸಂಗ್ರಹರೂಪವಾಗಿ ಅವನ ಮಾತಿನಲ್ಲಾಗಲಿ ಅದಕ್ಕಿಂತ ಹೆಚ್ಚು ಸುಲಭ ಮತ್ತು ಸಮರ್ಪಕವಾದ ಭಾಷೆಯಲ್ಲಿಯಾಗಲಿ ಅನ್ಯದೇಶಗಳ ವಿಜ್ಞಾನಿಗಳಿಗೆ ದೊರಕಿಸಿಕೊಡುವ ಪ್ರಕಟಣೆಗಳನ್ನು ಒದಗಿಸಿಕೊಡುವುದು ಪ್ರಲೇಖನ ಸೇವೆಯಲ್ಲಿ ಮುಖ್ಯ ಕೆಲಸ. ಪ್ರಮುಖ ಅಂತಾರಾಷ್ಟ್ರೀಯ ಪ್ರಕಟಣೆಗಳಲ್ಲಿ ಕೆಮಿಕಲ್ ಆಬ್‍ಸ್ಟ್ರ್ಯಾಕ್ಟ್ಸ್ ಮೊದಲಾದ ನಿಯತಕಾಲಿಕೆಗಳೂ ಭಾರತದಲ್ಲಿ ಪ್ರಚಲಿತವಾಗಿರುವ ಇಂಡಿಯನ್ ಸೈನ್ಸ್ ಅಬ್‍ಸ್ಟ್ರ್ಯಾಕ್ಟ್ಸ್ ಮೊದಲಾದವುಗಳೂ ಗಮನಾರ್ಹ. ಲೇಖನ ಸಾರವನ್ನೂ ಲೇಖಕರೇ ಸೂಚಿಸಿದ ಪಕ್ಷಕ್ಕೆ ಲೇಖನ ಸಾರ ಪ್ರಕಟಣೆಯ ಕೆಲಸ ಸುಗಮವಾಗುತ್ತದೆಯೆಂದು ಯುನೆಸ್ಕೊ ಕರೆಕೊಟ್ಟಿದೆ.

ಪ್ರಪಂಚದ ಉತ್ತಮ ಗ್ರಂಥಗಳನ್ನು ಮೇರುಕೃತಿಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡಿಸುವಲ್ಲಿ ಯುನೆಸ್ಕೊದಂಥ ಸಂಸ್ಥೆಗಳು ಕಾರ್ಯೋನ್ಮುಖವಾಗಿವೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ಯಾವ ಯಾವ ಭಾಷೆಗಳಲ್ಲಿ ಪುಸ್ತಕಗಳು ದೊರೆಯುತ್ತವೆಂಬುದನ್ನು ಪ್ರಲೇಖನ ವಿಭಾಗ ತಿಳಿಸುವುದಿದೆ. ಇದರ ಸಲುವಾಗಿಯೇ ಅನುವಾದ ಗ್ರಂಥಗಳ ವಿವರಗಳನ್ನು ತಿಳಿಸುವ ಸೂಚೀಕರಣ ವ್ಯವಸ್ಥೆಯೂ ಸೇರಿರುತ್ತದೆ.

ಲಿಖಿತ ಸಾಮಗ್ರಿಯ ಪ್ರತಿರೂಪವನ್ನು ದೊರಕಿಸಿಕೊಡುವುದು ಪ್ರಲೇಖನ ಸೇವೆಯ ಇನ್ನೊಂದು ಮುಖ. ಒಂದು ಗ್ರಂಥವನ್ನಾಗಲಿ, ಲೇಖನವನ್ನಾಗಲಿ, ಭೂಪಟವನ್ನಾಗಲಿ, ಆಲೇಖ್ಯವನ್ನಾಗಲಿ, ನಕ್ಷೆಯನ್ನಾಗಲಿ, ಸಾಮಾನ್ಯ ರೀತಿಯಲ್ಲೊ ಇಲ್ಲವೆ ಯಂತ್ರದ ಮೂಲಕವೊ ಅದರ ಪ್ರತಿಯನ್ನು ಮಾಡಿಸಿಕೊಡುವುದು ಪ್ರಲೇಖನದ ವಿಶಿಷ್ಟ ಕಾರ್ಯ. ಮೈಕ್ರೋಕಾರ್ಡುಗಳನ್ನಾಗಲೀ ಮೈಕ್ರೊಫಿಲ್ಮುಗಳನ್ನಾಗಲೀ ಒದಗಿಸಿಕೊಡುವುದು ಇಲ್ಲವೇ ಜೆರಾಕ್ಸ್ ಪದ್ಧತಿಯ ಮೂಲಕವಾಗಲಿ, ಹೇಲಿಯೋಗ್ರಾಫ್ ಮೂಲಕವಾಗಲಿ, ಕ್ಯಾಮರದ ಸಹಾಯದಿಂದಾಗಲಿ, ನಕಲೆತ್ತು ಯಂತ್ರದಿಂದಾಗಲಿ ಪ್ರತಿಗಳನ್ನು ತೆಗೆದುಕೊಡುವ ಸೌಲಭ್ಯ ಉಂಟು. ಈ ಬಗೆಯ ಕಾರ್ಯಲಿಖಿತ ವಸ್ತುವಿನ ಪ್ರತಿರೂಪವನ್ನು ಅಥವಾ ಪುನರ್ಮುದ್ರಣವನ್ನು ಅದೇ ಆಕಾರದಲ್ಲೊ ಅಥವಾ ಅದಕ್ಕಿಂತ ವಿಸ್ತೃತ ಇಲ್ಲವೆ ಸಂಕುಚಿತ ರೂಪದಲ್ಲೊ ಉಷ್ಣಲೇಖಿಯ ವಿಧಾನಗಳಿಂದಾಗಲೀ ವಿದ್ಯುಚ್ಛಾಯಾಚಿತ್ರಗ್ರಹಣ ವಿಧಾನಗಳಿಂದಾಗಲೀ ಸಿದ್ಧಗೊಳಿಸಬಹುದು. ಈ ಬಗೆಯ ಯಂತ್ರಸಾಮಗ್ರಿ ಮತ್ತು ಅದಕ್ಕೆ ಅನುಗುಣವಾದ ಉಪಕರಣಗಳು ಈಗ ಪ್ರಪಂಚದ ರಾಷ್ಟ್ರಗಳಲ್ಲಿ ಹೇರಳವಾಗಿ ಲಭ್ಯವಿವೆ.



ತುದಿ ಕಚ್ಚಿನ ಯಂತ್ರೀಕರಣ ವಿಧಾನ

ಯಂತ್ರಗಳ ಮೂಲಕ ಸಾಮಗ್ರಿಯನ್ನು ಮೂಲರೂಪದಲ್ಲಿಯಾಗಲಿ ಪುನರ್ಮುದ್ರಿತ ಪ್ರತಿಯಲ್ಲಾಗಲಿ ಒದಗಿಸಿಕೊಡುವಂತೆ, ಒಂದು ಪ್ರಲೇಖನ ಕೇಂದ್ರದಲ್ಲಿ ಸಂಗ್ರಹವಾಗಿರುವ ಸಾಮಗ್ರಿಯನ್ನು ವ್ಯವಸ್ಥಿತ ರೀತಿಯಲ್ಲಿ ವಿಂಗಡಿಸುವ ಕಾರ್ಯದಲ್ಲಿಯೂ ಈಗ ಅನೇಕ ಬಗೆಯ ಯಂತ್ರಗಳು ಪ್ರಚಾರದಲ್ಲಿವೆ. ವಿಷಯಸೂಚಿಗಳು, ಗ್ರಂಥಗಳ ಪಟ್ಟಿಗಳು, ಇಂಥ ಪಟ್ಟಿ ಮಾಡಿದ ಕಾರ್ಡುಗಳು –ಇವನ್ನು ವಿಶಿಷ್ಟ ರೀತಿಯಲ್ಲಿ ರಚಿಸುವುದು ಕೂಡ ಒಂದು ಸಾಹಸದ ಕೆಲಸವೇ. ಈ ಕಾರ್ಯದಲ್ಲಿ ರಂಧ್ರಿತ ಮೂಲೆಗಳನ್ನು ಅಲ್ಲಿ ಬರೆದ ಅಕ್ಷರಗಳಿಂದ ಎತ್ತಿ ತೋರಿಸುವ ಕಾರ್ಡುಗಳು, ಸ್ಲಾಟೆಡ್ ಕಾರ್ಡುಗಳು ಮುಂತಾದ ಸಾಮಾನ್ಯ ಬಗೆಯ ಕಾರ್ಡುಗಳಲ್ಲದೆ ಫೋಟೋ ಎಲೆಕ್ಟ್ರಿಕ್ ಯಂತ್ರಗಳ ಹಾಗೂ ಎಲೆಕ್ಟ್ರಾನಿಕ್ ಗಣಕ ಯಂತ್ರಗಳ ಮೂಲಕ ಅವನ್ನು ವಿಂಗಡಿಸುವ ಕ್ರಮ ಅನೇಕ ಪ್ರಲೇಖನ ಸಂಸ್ಥೆಗಳಲ್ಲಿ ಕಂಡುಬಂದಿದೆ. ಗಣಕ ಯಂತ್ರಗಳನ್ನು ಉಪಯೋಗಿಸಿ ಕ್ರಮ ವಿಧಾಯವನ್ನು (ಪ್ರೊಗ್ರಾಮಿಂಗ್) ಬಹುಮಟ್ಟಿಗೆ ಸುಧಾರಿಸಲಾಗಿದೆ. ಪ್ರಲೇಖನ ಕಾರ್ಯವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿಯಲ್ಲಿ ಕೈಗೊಂಡಿರುವ ಸಂಸ್ಥೆಗಳಲ್ಲಿ ಇಂಟರ್‍ನ್ಯಾಷನಲ್ ಫೆಡರೇಷನ್ ಫಾರ್ ಡಾಕ್ಯುಮೆಂಟೇಷನ್, ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ (ಇನ್ಸ್‍ಡಾಕ್) – ಎಂಬುವು ಪ್ರಮುಖವಾದವು. ಇಂಟರ್‍ನ್ಯಾಷನಲ್ ಫೆಡರೇಷನ್ ಫಾರ್ ಡಾಕ್ಯುಮೆಂಟೇಷನ್ ಎಂಬ ಸಂಸ್ಥೆ 1885 ರಲ್ಲಿ ಬ್ರಸಲ್ಸ್‍ನಲ್ಲಿ ಸ್ಥಾಪನೆಯಾಯಿತು. ಇಂಟರ್‍ನ್ಯಾಷನಲ್ ಇನ್‍ಸ್ಟಿಟ್ಯೂಟ್ ಆಫ್ ಬಿಬ್ಲಿಯಾಗ್ರಫಿ ಎಂಬುದು ಇದರ ಹಿಂದಿನ ಹೆಸರು. ವಿಶ್ವಸಂಸ್ಥೆ, ಯುನೆಸ್ಕೊ, ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಸೇಷನ್ ಮೊದಲಾದ ಸಂಸ್ಥೆಗಳ ಪ್ರಲೇಖನ ಕಾರ್ಯದ ಹೊಣೆಯನ್ನು ಈ ಸಂಸ್ಥೆ ಹೊತ್ತಿದೆ. ಇದರ ಜೊತೆಗೆ ವಿಜ್ಞಾನ ವಿಷಯಕ ಸಾಮಗ್ರಿಯನ್ನು ಸಂಗ್ರಹಿಸುವುದು, ವರ್ಗೀಕರಿಸುವುದು, ವಿಂಗಡಿಸುವುದು, ಸೂಚೀಕರಿಸುವುದು, ರೂಪಾಂತರಗೊಳಿಸುವುದು, ವಿತರಿಸುವುದು ಇವೇ ಮೊದಲಾದ ಅಂಶಗಳಲ್ಲಿ ಸರ್ವ ಸಾಮಾನ್ಯವಾದ ಪ್ರಮಾಣಗಳನ್ನು ಸಿದ್ಧಗೊಳಿಸಿದೆ.

ಮೊದಮೊದಲು ಈ ಸಂಸ್ಥೆಯ ಪ್ರವರ್ತಕರು ಡ್ಯೂಯಿಯ ದಾಶಮಿಕ ವರ್ಗೀಕರಣ ಪದ್ಧತಿಯನ್ನೇ ಅನುಸರಿಸಿ ಕೇವಲ ಸಮಾಜಶಾಸ್ತ್ರಗಳ ಲೇಖನ ಗ್ರಂಥಪತ್ರಕ ಮೊದಲಾದ ಪಠ್ಯ ಸಾಮಗ್ರಿಯನ್ನು ವಿತರಿಸುವುದಕ್ಕೆ ಮಾತ್ರ ತಮ್ಮ ಸೇವೆಯನ್ನು ಸೀಮಿತಗೊಳಿಸಿದ್ದರು. ಕ್ರಮೇಣ ಈ ಸಂಸ್ಥೆಯ ಕಾರ್ಯ ಬೆಳೆಯುತ್ತ ಪ್ರಪಂಚದ ವಿವಿಧ ಜ್ಞಾನದ ಸಂಗ್ರಹ ಮತ್ತು ವಿತರಣೆ ತನ್ನ ಹೊಣೆಯೆಂದು ತಿಳಿದುಕೊಂಡು ಮುಂದುವರಿಯಿತಾದ ಕಾರಣ ಮೊದಲು ಅನುಸರಿಸುತ್ತಿದ್ದ ವರ್ಗೀಕರಣ ಪದ್ಧತಿಯಲ್ಲಿನ ಅರೆಕೊರೆಗಳು ಗೊತ್ತಾದವಾಗಿ ಅದನ್ನು ಕೈಬಿಟ್ಟು ಅದನ್ನಾಧರಿಸಿರುವ ಯು. ಡಿ. ಸಿ. ಪದ್ಧತಿಯನ್ನು ಅನ್ವಯಿಸಿಕೊಂಡಿತು. ಆದರೆ ಒಂದನೆಯ ಮಹಾಯುದ್ಧ ತಲೆದೋರಿ ಸಂಸ್ಥೆಯ ಕಾರ್ಯಚಟುವಟಿಕೆಗಳು ತೃಪ್ತಿಕರವಾಗಿ ನಡೆಯದೆ ಅದರ ಕಾರ್ಯದಲ್ಲಿ ಸ್ಥಗಿತತೆ ಏರ್ಪಟ್ಟಿತ್ತು. ಪ್ರಲೇಖನ ಸೇವೆಯಲ್ಲಿ ಆಸಕ್ತಿ ವಹಿಸಿದ ಹಲವರ ಪ್ರಯತ್ನದಿಂದ ಸಂಸ್ಥೆ ಮತ್ತೆ 1924ರಲ್ಲಿ ಚೇತರಿಸಿಕೊಂಡಿತು. ಕೆಲವೇ ರಾಷ್ಟ್ರಗಳ ಸದಸ್ಯರನ್ನೊಳಗೊಂಡ ಇದು ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿತು. ಇಂಟರ್‍ನ್ಯಾಷನಲ್ ಇನ್‍ಸ್ಟಿಟ್ಯೂಟ್ ಆಫ್ ಡಾಕ್ಯುಮೆಂಟೇಷನ್ ಎಂದು ಸಂಸ್ಥೆಗೆ ನಾಮಕರಣವಾದದ್ದು 1931ರಲ್ಲಿ. ಮತ್ತೆ 1938ರಲ್ಲಿ ಸಂಸ್ಥೆಯ ಹೆಸರನ್ನು ಇಂಟರ್‍ನ್ಯಾಷನಲ್ ಫೆಡರೇಶನ್ ಫಾರ್ ಡಾಕ್ಯುಮೆಂಟೇಷನ್ ಎಂದು ಬದಲಿಸಿದಾಗಿನಿಂದ ಇದೇ ಹೆಸರೇ ಉಳಿದುಕೊಂಡು ಬಂದಿದೆ. ಸಂಸ್ಥೆಯ ಮುಖ್ಯ ಕಾರ್ಯಾಲಯವನ್ನು ಬ್ರಸಲ್ಸ್‍ನಿಂದ ದಿ ಹೇಗ್ ನಗರಕ್ಕೆ ವರ್ಗಾಯಿಸಲಾಗಿದೆ.

ಪ್ರಪಂಚದ ಎರಡನೆಯ ಮಹಾಯುದ್ಧ ಕಾಲದಲ್ಲಿ ವಿವಿಧ ರಾಷ್ಟ್ರಗಳಿಂದ ಸಮಾಚಾರ ಧನಸಹಾಯಗಳು ಈ ಸಂಸ್ಥೆಗೆ ದೊರೆಯದೆ ಹೋಗಿ ಅದರ ಕಾರ್ಯ ಮತ್ತೆ ಕೆಲದಿವಸಗಳ ಕಾಲ ಸ್ತಬ್ಧವಾಗಬೇಕಾಯಿತು. ಈಗ ಅದು ಬಹುಮಟ್ಟಿಗೆ ಸುಧಾರಿಸಿದ್ದು ಸಾರ ಸಂಗ್ರಹ ಮತ್ತು ವಿತರಣ ಪ್ರತಿರೂಪಗಳ ಪೂರೈಕೆ ಪ್ರಶಿಕ್ಷಣದ ವ್ಯವಸ್ಥೆಯನ್ನು ಒಳಗೊಂಡಿದೆ. ಪ್ರಾದೇಶಿಕ ಶಾಖೆಗಳು, ವಿಷಯಬದ್ಧ ಸೇವಾ ಕಾರ್ಯದ ವಿಕೇಂದ್ರೀಕರಣ ಮೊದಲಾದ ರೀತಿಗಳನ್ನು ಅದು ಈಗ ಪಾಲಿಸುತ್ತಿದೆ. 1952 ರಲ್ಲಿ ಭಾರತ ಈ ಸಂಸ್ಥೆಯ ಸದಸ್ಯ ರಾಷ್ಟ್ರವಾಯಿತು.

ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿಯೂ ಇಂಥ ಸೇವೆಯನ್ನು ಸಲ್ಲಿಸುವ ರಾಷ್ಟ್ರೀಯ ಸಂಸ್ಥೆಗಳಿವೆ. ಅವುಗಳಲ್ಲಿ 1952ರಲ್ಲಿ ಭಾರತ ಸ್ಥಾಪಿಸಿದ ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್ (ಈಗ ನಿಸ್ಕೇರ್ ನ್ಯಾಷನಲ್ ಇನ್‍ಸ್ಟಿಟ್ಯೂಟ್ ಫಾರ್ ಸೈನ್ಸ್ ಕಮ್ಯುನಿಕೇಷನ್ ಅಂಡ್ ಇನ್‍ಫರ್‍ಮೇಷನ್ ರಿಸರ್ಚ್ ಎಂಬುದಾಗಿ ಕರೆಯಲ್ಪಟ್ಟಿದೆ) ಮತ್ತು ಅದೇ ವರ್ಷ ರಷ್ಯದಲ್ಲಿ ಸ್ಥಾಪಿತಗೊಂಡ ಆಲ್ ಯೂನಿಯನ್ ಇನ್‍ಸ್ಟಿಟ್ಯೂಟ್ ಫಾರ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಇನ್‍ಫರ್ಮೇಶನ್ –ಇವನ್ನು ಹೆಸರಿಸಬಹುದು. ವಿನಿತಿ ಎಂಬ ಸಂಕ್ಷಿಪ್ತ ರೂಪದ ಹೆಸರನ್ನು ಪಡೆದ ರಷ್ಯದ ಸಂಸ್ಥೆ ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜಶಾಸ್ತ್ರಗಳನ್ನೊಳಗೊಂಡು ಸಮಾಚಾರ ಸಂಗ್ರಹ, ವರ್ಗೀಕರಣ, ಸೂಚೀಕರಣ, ಮತ್ತು ವಿತರಣೆಯ ಮೊದಲಾದ ಎಲ್ಲ ವಿಭಾಗಗಳಲ್ಲಿ ಅನುಕರಣೀಯವಾದ ಪ್ರಗತಿಯನ್ನು ಸಾಧಿಸುತ್ತ ಬಂದಿದೆ. ಅದರ ಭಾಷಾಂತರ ಸೇವೆ, ಪ್ರತೀಕರಣ ಸೇವೆ, ಸಂಪಾದನ ಕಾರ್ಯ, ಸಾರ ಸಂಗ್ರಹ ಕಾರ್ಯ – ಇವೆಲ್ಲ ವೈಶಿಷ್ಟ್ಯಪೂರ್ಣವಾಗಿದ್ದು ಹೊಸತಾಗಿ ಪ್ರಲೇಖನ ಕಾರ್ಯವನ್ನು ಕೈಕೊಳ್ಳುವ ರಾಷ್ಟ್ರಗಳಿಗೆ ಮಾರ್ಗದರ್ಶನ ನೀಡುವುದಾಗಿದೆ.

ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ ಸಂಸ್ಥೆ ಯುನೆಸ್ಕೊದ ಪ್ರೇರಣೆಯಿಂದ ಸ್ಥಾಪಿಸಲ್ಪಟ್ಟು ಇದೀಗ ಭಾರತದ ಪ್ರಮುಖ ಪ್ರಲೇಖನ ಕೇಂದ್ರವೆನಿಸಿದೆ. ಸಮಾಜ ವಿಜ್ಞಾನಗಳಿಗೆ

ಸಂಬಂಧಿಸಿದಂತೆ ಸೋಷಿಯಲ್ ಸೈನ್ಸ್ ಡಾಕ್ಯುಮೆಂಟೇಷನ್ ಸೆಂಟರ್ ಎಂಬ ಕೇಂದ್ರ ಆ ವಿಜ್ಞಾನದ ವಿವಿಧ ಶಾಖೆಗಳಲ್ಲಿ ಕಾರ್ಯಪ್ರವೃತ್ತರಾಗಿರುವವರ ಕಾರ್ಯಚಟುವಟಿಕೆಗಳನ್ನು ಕ್ರೋಡೀಕರಿಸಿ ಒಂದು ಸಂಯುಕ್ತ ಪಟ್ಟಿಯನ್ನು ತಯಾರಿಸಿದೆ.




ಕಾಂತ ಟೇಪು

ಪ್ರಲೇಖನ ಮತ್ತು ಗ್ರಂಥಾಲಯ ವಿಜ್ಞಾನಗಳಲ್ಲಿ ಸಂಶೋಧನೆ ನಡೆಸುವುದು, ಉನ್ನತಮಟ್ಟದ ಪ್ರಲೇಖನಕಾರರ ತರಬೇತಿ, ಪ್ರಲೇಖನ ಕ್ಷೇತ್ರದಲ್ಲಿ ಸಲಹೆ ನೀಡುವುದು ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು 1962ರಲ್ಲಿ ಸ್ಥಾಪಿತವಾದ ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರ ಪ್ರಲೇಖನ ಸೇವೆಯನ್ನು ಯಶಸ್ವಿಯಾಗಿ ನೆರವೇರಿಸುತ್ತಿದೆ.

(ಎಚ್.ಎಸ್.ಪಿ.)

ಪ್ರಲೇಖನ ವಿಷಯದಲ್ಲಿ ಹೆಚ್ಚಿನ ಕೆಲಸ ಮಾಡುತ್ತಿರುವ ಮೂರು ಕೇಂದ್ರಗಳ ಬಗ್ಗೆ ವಿವರಗಳನ್ನು ಇಲ್ಲಿ ಕೊಡಲಾಗಿದೆ.

(a) ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರ : ಪ್ರಲೇಖನ ಮತ್ತು ಗ್ರಂಥಾಲಯ ವಿಜ್ಞಾನಗಳಲ್ಲಿ ಸಂಶೋಧನೆ ನಡೆಸುವುದು, ಉನ್ನತಮಟ್ಟದ ಪ್ರಲೇಖನಕಾರರಿಗೆ ತರಬೇತಿ ಕೊಡುವುದು, ಪ್ರಲೇಖನ ಕ್ಷೇತ್ರದಲ್ಲಿ ಸಲಹೆ ನೀಡುವುದು – ಈ ಮುಖ್ಯ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಸ್ಥಾಪಿತವಾದ ಸಂಸ್ಥೆ. ಯೋಜನಾ ಆಯೋಗದ ಸದಸ್ಯರೂ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟಿನ ನಿರ್ದೇಶಕರೂ ಆಗಿದ್ದ ಪಿ. ಸಿ. ಮಹಲನೋಬಿಸ್‌ರವರ ಆದೇಶದ ಮೇರೆಗೆ 1962ರಲ್ಲಿ ಎಸ್.ಆರ್. ರಂಗನಾಥನ್ ಅವರ ನೇತೃತ್ವದಲ್ಲಿ ಈ ಕೇಂದ್ರ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟಿನ ಅಂಗ ಸಂಸ್ಥೆಯಾಗಿ ಇದು ಕೆಲಸ ಮಾಡುತ್ತಿದೆ.

ಪ್ರಲೇಖನಕ್ಕೆ ಸಂಬಂಧಿಸಿದಂತೆ ಇಲ್ಲಿ ನೀಡಲಾಗುವ ತರಬೇತಿಯ ಅವಧಿ 20 ತಿಂಗಳಿನದು. ಗ್ರಂಥಾಲಯ ವಿಜ್ಞಾನ ಪದವೀಧರರು ಈ ತರಬೇತಿಯನ್ನು ಪಡೆಯಲು ಅರ್ಹರು. ಯಶಸ್ವಿಯಾಗಿ ತರಬೇತಿಯನ್ನು ಪೂರ್ಣಗೊಳಿಸಿದವರಿಗೆ ಅಸೋಸಿಯೇಟ್ ಷಿಪ್ ಇನ್ ಡಾಕ್ಯುಮೆಂಟೇಷನ್ ಎಂಬ ಅರ್ಹತೆ ದೊರೆಯುತ್ತದೆ.

ಗ್ರಂಥಾಲಯ ವಿಜ್ಞಾನ ಹಾಗೂ ಪ್ರಲೇಖನ ಕ್ಷೇತ್ರದಲ್ಲಿ ಈ ಕೇಂದ್ರ ವಿಶೇಷವಾಗಿ ಸಂಶೋಧನೆ ನಡೆಸಿದೆ. ವರ್ಗೀಕರಣ, ಸೂಚೀಕರಣ, ಪ್ರಲೇಖನ ಹಾಗೂ ಗ್ರಂಥಾಲಯ ಆಡಳಿತದಲ್ಲಿ ಗಣಕದ ಬಳಕೆ ಮುಂತಾದ ವಿಷಯಗಳಲ್ಲಿ ಅಧ್ಯಯನಗಳನ್ನು ಮಾಡಿದೆ. ವರ್ಗೀಕರಣಕ್ಕೆ ಸಂಬಂಧಿಸಿದಂತೆ ಕೋಲನ್ ಕ್ಲಾಸಿಫಿಕೇಶನ್ ಎಂಬ ಪ್ರಕಟಣೆಯನ್ನು ಹೊರತಂದಿದೆ. 1965 ರಿಂದ ಸುಮಾರು 99 ವಿವಿಧ ಹಾಗೂ ವಿಶಿಷ್ಟ ವಿಷಯಗಳ ದೀರ್ಘಪಟ್ಟಿಯನ್ನು (ಡೆಪ್ತ್ ಷೆಡ್ಯೂಲ್ಸ್) ಈ ಕೇಂದ್ರ ಈಗಾಗಲೇ ಹೊರತಂದಿದೆ. ಕೇಂದ್ರದ ವತಿಯಿಂದ ಸೂಚೀಕರಣ ಮತ್ತು ಪ್ರಲೇಖನ ವಿಷಯಗಳಿಗೆ ಸಂಬಂಧಿಸಿದಂತೆ ಗ್ರಂಥಗಳೂ ವರದಿಗಳೂ 500 ಕ್ಕೂ ಹೆಚ್ಚು ಸಂಶೋಧನಾತ್ಮಕ ಪ್ರಬಂಧಗಳೂ ಪ್ರಕಟವಾಗಿವೆ.

1963 ರಿಂದ ಈ ಕೇಂದ್ರ ನಡೆಸುತ್ತಿರುವ ರಾಷ್ಟ್ರೀಯ ಸಮ್ಮೇಳನಗಳಲ್ಲಿ ನುರಿತ ಪ್ರಲೇಖನಕಾರರು ಸೇರಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರಲ್ಲದೆ ಹೊಸ ಹೊಸ ಸಂಶೋಧನೆಗಳಿಗೆ ಅನುವು ಮಾಡಿಕೊಳ್ಳುತ್ತಾರೆ.

ಗ್ರಂಥಾಲಯ ವಿಜ್ಞಾನಕ್ಕೆ ಮೀಸಲಾದ ಶಾರದಾ–ರಂಗನಾಥನ್ ದತ್ತಿಯ ಆರ್ಥಿಕ ಸಹಾಯದಿಂದ ಲೈಬ್ರರಿ ಸೈನ್ಸ್ ವಿತ್ ಎ ಸ್ಲ್ಯಾಂಟ್ ಟು ಡಾಕ್ಯುಮೆಂಟೇಷನ್ ಎಂಬ ತ್ರೈಮಾಸಿಕವೊಂದನ್ನು ಈ ಕೇಂದ್ರ ಪ್ರಕಟಿಸುತ್ತಿತ್ತು. ಕೇಂದ್ರದ ಆಶ್ರಯದಲ್ಲಿ ಆಗಾಗ ದತ್ತಿ ಉಪನ್ಯಾಸಗಳನ್ನು ನಡೆಸಲಾಗಿದೆ.

(ಎಂ.ಎ.ಜಿ.)

(b) ಭಾರತದ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ : ಈ ಕೇಂದ್ರ (ನಿಸ್ಡೇರ್) ಭಾರತದ ವೈಜ್ಞಾನಿಕಾ ಮತ್ತು ಕೈಗಾರಿಕಾ ಸಂಶೋಧನ ಮಂಡಳಿಯ ಅಂಗವಾಗಿ 1952ರಲ್ಲಿ ಯುನೆಸ್ಕೊ ನೆರವಿನಿಂದ ದೆಹಲಿಯಲ್ಲಿ ಸ್ಥಾಪಿತವಾಯಿತು. ಯುನೆಸ್ಕೊ ಈ ಸಂಸ್ಥೆಗೆ ಗ್ರಂಥ, ನಿಯತಕಾಲಿಕೆ, ಯಂತ್ರಸಾಮಗ್ರಿಗಳನ್ನು ಒದಗಿಸಿರುವುದಲ್ಲದೆ ತಾಂತ್ರಿಕ ತಜ್ಞರನ್ನೂ ನೀಡಿದೆ. ಪ್ರಾರಂಭದಲ್ಲಿ ರಾಷ್ಟ್ರೀಯ ಭೌತಶಾಸ್ತ್ರ ಪ್ರಯೋಗಾಲಯದ ನಿರ್ದೇಶಕ ಕೆ. ಎಸ್. ಕೃಷ್ಣನ್ ಅವರು ಇದರ ಆಡಳಿತ ನಿರ್ದೇಶಕರಾಗಿದ್ದರು. 1963 ರಲ್ಲಿ ಇದು ಸ್ವತಂತ್ರ ಸಂಸ್ಥೆಯಾಗಿ ತನ್ನದೇ ಆದ ಕಾರ್ಯನಿರ್ವಾಹಕ ಸಮಿತಿಯನ್ನು ಪಡೆಯಿತು.

ಉದ್ದೇಶಗಳು : 1. ಭಾರತಕ್ಕೆ ಬೇಕಾದ ವೈಜ್ಞಾನಿಕ ನಿಯತಕಾಲಿಕೆಗಳನ್ನು ಪಡೆದು ಅವನ್ನು ರಕ್ಷಿಸುವುದು. 2. ವಿಜ್ಞಾನಿಗಳಿಗೂ ತಾಂತ್ರಿಕರಿಗೂ ಬೇಕಾದ ಲೇಖನಗಳ ಸಾರಾಂಶವನ್ನು ನಿಯತಕಾಲಿಕೆಯ ಮೂಲಕ ಒದಗಿಸುವುದು. 3. ಪ್ರಶ್ನೆಗಳಿಗೆ ಪ್ರಲೇಖನಗಳ ಆಧಾರದ ಮೇಲೆ ವಿಷಯ ಮಾಹಿತಿಯನ್ನು ಒದಗಿಸುವುದು. 4. ವೈಜ್ಞಾನಿಕ ಲೇಖನಗಳ ಫೋಟೋ ಪ್ರತಿಗಳನ್ನು ಒದಗಿಸುವುದು. 5. ಲೇಖನಗಳನ್ನು ಭಾಷಾಂತರಿಸಿ ಒದಗಿಸುವುದು. 6. ಭಾರತದಲ್ಲಿ ಪ್ರಕಟವಾದ ಮತ್ತು ಪ್ರಕಟವಾಗದ ವೈಜ್ಞಾನಿಕ ವರದಿಗಳನ್ನು ಸಂಗ್ರಹಿಸಿಡುವುದು. 7. ಪ್ರಪಂಚದ ಇತರ ದೇಶಗಳಿಗೆ ಭಾರತದಲ್ಲಿ ನಡೆದ ವೈಜ್ಞಾನಿಕ ವಿಷಯಗಳನ್ನು ಒದಗಿಸುವುದು.

ತಾಂತ್ರಿಕ ಉಪಸಮಿತಿ, ವರ್ಗೀಕರಣ ಉಪಸಮಿತಿ, ಸಂಪಾದಕ ಉಪಸಮಿತಿ, ಆಯವ್ಯಯ ಉಪಸಮಿತಿ ಇವುಗಳ ಸಲಹೆಗಳನ್ನು ಪಡೆದು ಕೇಂದ್ರ ಸಲಹಾ ಸಮಿತಿ ಪ್ರಲೇಖನ ಕೇಂದ್ರದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತದೆ.

ಸರ್ಕಾರಿ ವಿಭಾಗಗಳು, ಸಂಶೋಧಕ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕೈಗಾರಿಕಾ ಸಂಸ್ಥೆಗಳು, ವಿಜ್ಞಾನಿಗಳು, ತಾಂತ್ರಿಕರು, ವೈದ್ಯರು, ಶಿಕ್ಷಣತಜ್ಞರು ಈ ಕೇಂದ್ರದ ಸಹಾಯವನ್ನು ಕೋರುತ್ತಾರೆ. ಪ್ರತಿ ವರ್ಷ ಇಂಥ ಸುಮಾರು 30,000 ಕೋರಿಕೆಗಳು ಬರುತ್ತವೆ. ಪ್ರತಿಯೊಂದು ಕೋರಿಕೆಯನ್ನೂ ಅತಿ ಶೀಘ್ರವಾಗಿ, ಕಡಿಮೆ ಖರ್ಚಿನಲ್ಲಿ ಈಡೇರಿಸುವ ವ್ಯವಸ್ಥೆ ಈ ಕೇಂದ್ರದಲ್ಲುಂಟು. ಈವರೆಗೆ ಸುಮಾರು 4,256 ಕ್ಕೂ ಹೆಚ್ಚು ವೈಜ್ಞಾನಿಕ ವಿಷಯ ಸಂಗ್ರಹಣ ಸೂಚಿಗಳನ್ನು ತಯಾರಿಸಲಾಗಿದೆ. ಸುಮಾರು 50,000ಕ್ಕೂ ಹೆಚ್ಚು ವೈಜ್ಞಾನಿಕ ಲೇಖನಗಳನ್ನು ಪತ್ತೆ ಮಾಡಿ ವಿಜ್ಞಾನಿಗಳಿಗೆ ಒದಗಿಸಲಾಗಿದೆ. 13,744ಕ್ಕೂ ಹೆಚ್ಚು ಲೇಖನಗಳನ್ನು ಭಾಷಾಂತರಿಸಲಾಗಿದೆ. ದಾಖಲೆಪತ್ರಗಳನ್ನು ಪತ್ತೆ ಮಾಡಿ ಒದಗಿಸುವ ಕಾರ್ಯ ಭಾರತಕ್ಕೆ ಮಾತ್ರ ಸೀಮಿತವಾಗಿರದೆ, ಇತರ ದೇಶಗಳಿಂದಲೂ ತರಿಸಿಕೊಡಲಾಗಿದೆ. ಅವನ್ನು ಮೈಕ್ರೊಫಿಲ್ಮ್ ರೂಪದಲ್ಲಿ ತರಿಸಿ ಕೇಂದ್ರದಲ್ಲಿ ದೊಡ್ಡದಾಗಿ ಚಿತ್ರಿಸಿ ಒದಗಿಸಲಾಗುತ್ತಿದೆ. ಈ ತನಕ 2,08,390 ಫೋಟೋಪ್ರತಿ ಮತ್ತು ಮೈಕ್ರೊಫಿಲಂಗಳನ್ನು ಒದಗಿಸಲಾಗಿದೆ.

ಈ ಕೇಂದ್ರ ಒದಗಿಸುತ್ತಿರುವ ಪ್ರಲೇಖನ ಸೇವೆಯನ್ನು ದಕ್ಷಿಣ ಮತ್ತು ಆಗ್ನೇಯ ಏಷ್ಯದ ರಾಷ್ಟ್ರಗಳು, ವೈಜ್ಞಾನಿಕ ಸಂಸ್ಥೆಗಳು ಉಪಯೋಗ ಮಾಡಿಕೊಳ್ಳುತ್ತಿವೆ. ಪ್ರತಿವರ್ಷವೂ ಈ ರೀತಿಯ ಕೋರಿಕೆಗಳು, ಬರ್ಮ, ಶ್ರೀಲಂಕ, ಚೀನ, ಹಾಂಕಾಂಗ್, ಇಂಡೊನೇಷ್ಯ, ಜಪಾನ್, ಮಲಯ, ಪಾಕಿಸ್ತಾನ, ಫಿಲಿಪೀನ್ಸ್ ಮುಂತಾದ ದೇಶಗಳಿಂದ ಬರುತ್ತವೆ. ಈ ಕೇಂದ್ರವೂ ಇತರ ದೇಶಗಳಿಂದ ಇಂಥದೇ ಉಪಯೋಗಗಳನ್ನು ಪಡೆಯುತ್ತದೆ. ಇದರಿಂದಾಗಿ ಪ್ರಾದೇಶಿಕ ಸಹಕಾರ ಮತ್ತು ಸಹೋದ್ಯಮ ವೃದ್ಧಿಯಾಗಲು ಹೆಚ್ಚು ಅನುಕೂಲವಾಗಿದೆ.

ಭಾರತದ ಪ್ರಲೇಖನ ಕೇಂದ್ರವೂ ಭಾರತದ ಅನೇಕ ವೈಜ್ಞಾನಿಕ ಗ್ರಂಥಾಲಯ ಗಳಲ್ಲಿರುವ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸುವ ಕಾರ್ಯವನ್ನು ಕೈಗೊಂಡಿತು. ಯುನೆಸ್ಕೊ ಸಹಕಾರದಿಂದ ಭಾರತ ಗ್ರಂಥಾಲಯ ಸಂಘ 1950ರಲ್ಲಿ ದಕ್ಷಿಣ ಏಷ್ಯ ಗ್ರಂಥಾಲಯಗಳಲ್ಲಿರುವ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸಲು ಆರಂಭಿಸಿತು. ಇದರ ಕೆಲಸ ಮತ್ತು ಕಾರ್ಯ ಯೋಜನೆಯನ್ನು ಎಸ್. ಆರ್. ರಂಗನಾಥನ್ ಅವರಿಗೆ ವಹಿಸಿ ಕೊಡಲಾಯಿತು. ಬರ್ಮ, ಶ್ರೀಲಂಕ, ಮಲಯ, ಇಂಡೊನೇಷ್ಯ ಮತ್ತು ಭಾರತದ ಗ್ರಂಥಾಲಯಗಳಿಂದ ವೈಜ್ಞಾನಿಕ ನಿಯತಕಾಲಿಕೆಗಳ ಪಟ್ಟಿ ಬಂದವು. ಈ ಕಾರ್ಯದಲ್ಲಿ ಸುಮಾರು 210 ಗ್ರಂಥಾಲಯಗಳು ಭಾಗವಹಿಸಿದವು. ಇವುಗಳಲ್ಲಿ 74 ಗ್ರಂಥಾಲಯಗಳು ಹೊರ ದೇಶಗಳವು. ಎಸ್.ಆರ್. ರಂಗನಾಥನ್ ಕ್ರೋಡೀಕರಿಸಿ ಸಂಪಾದಿಸಿರುವ ಈ ಸಂಯುಕ್ತಸೂಚಿ ದಕ್ಷಿಣ ಏಷ್ಯ ಗ್ರಂಥಾಲಯಗಳಲ್ಲಿರುವ ಭೌತ ವಿಜ್ಞಾನ ಮತ್ತು ಜೀವ ವಿಜ್ಞಾನ ನಿಯತಕಾಲಿಕೆಗಳ ಸೂಚಿ ಸಂಪುಟ 1 (ಲರ್ನೆಡ್ ಪೀರಿಯಾಡಿಕಲ್ ಪಬ್ಲಿಕೇಷನ್ಸ್ ಇನ್ ಸೌತ್ ಏಷ್ಯ ವಾಲ್ಯೂಮ್ 1, ಫಿಸಿಕಲ್ ಅಂಡ್ ಬಯಲಾಜಿಕಲ್ ಸೈನ್ಸಸ್) ಎಂಬ ಹೆಸರಿನಲ್ಲಿ

ಪ್ರಕಟವಾಯಿತು (1953). ದಕ್ಷಿಣ ಏಷ್ಯದ ಸು. 6,000 ನಿಯತಕಾಲಿಕೆಗಳ ಸೂಚಿ ಈ ಸಂಪುಟದಲ್ಲಿದೆ. ಈ ಪ್ರಕಟಣೆಯಿಂದ ನಮ್ಮ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರಕ್ಕೆ ನಿಯತಕಾಲಿಕೆ ಲೇಖನಗಳನ್ನು ಪತ್ತೆ ಹಚ್ಚುವ ಮತ್ತು ಅವುಗಳನ್ನು ತರಿಸುವ ಕೆಲಸಕ್ಕೆ ತುಂಬ ಅನುಕೂಲವಾಯಿತಲ್ಲದೆ ಈ ಕೇಂದ್ರದ ಸೇವೆಯನ್ನು ಚುರುಕುಗೊಳಿಸಲು ತುಂಬ ಸಹಾಯವಾಯಿತು. ಈ ದಿಸೆಯಲ್ಲಿ ಮುಂದುವರಿದು ಈ ಕೇಂದ್ರ ಭಾರತದ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯ ಪರಿಷ್ಕರಣ ಕಾರ್ಯವನ್ನು ಆರಂಭಿಸಿತು.

ಯುನೆಸ್ಕೊ ನೆರವು ಪಡೆದು ಈ ಕೇಂದ್ರ ದೆಹಲಿಯಲ್ಲಿ ದಕ್ಷಿಣ ಮತ್ತು ಆಗ್ನೇಯ ಏಷ್ಯದಲ್ಲಿ ಪ್ರಲೇಖನ ಕಾರ್ಯ ಎಂಬ ವಿಷಯದ ಮೇಲೆ ಒಂದು ವಿಚಾರ ಗೋಷ್ಠಿ ನಡೆಸಿತು (1960). ಈ ವಿಚಾರ ಗೋಷ್ಠಿಯಲ್ಲಿ ದಕ್ಷಿಣ ಮತ್ತು ಆಗ್ನೇಯ ಏಷ್ಯದ ರಾಷ್ಟ್ರಗಳನ್ನು ತಮ್ಮ ತಮ್ಮ ದೇಶಗಳ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸುವಂತೆ ಕೇಳಿಕೊಳ್ಳಲಾಯಿತು.

ಪ್ರಚಲಿತ ವೈಜ್ಞಾನಿಕ ಸಾಹಿತ್ಯ ಪ್ರಸರಣ : ದಕ್ಷಿಣ ಮತ್ತು ಆಗ್ನೇಯ ಏಷ್ಯ ರಾಷ್ಟ್ರಗಳಲ್ಲಿ ಪ್ರಕಟವಾಗಿ ಸಂಗ್ರಹವಾಗಿರುವ ಪ್ರಚಲಿತ ವೈಜ್ಞಾನಿಕ ವಿಷಯಗಳ ಪ್ರಸರಣ ಕಾರ್ಯ ಬಹುಮುಖ್ಯವಾದ ಸೇವಾ ಕಾರ್ಯವಾಗಿತ್ತು. ಭಾರತದಲ್ಲಿ ಪ್ರಕಟವಾಗಿರುವ ವೈಜ್ಞಾನಿಕ ವಿಷಯಗಳ ಸಾಹಿತ್ಯವನ್ನು ಕ್ರೋಡೀಕರಿಸುವ ಕಾರ್ಯವನ್ನು ದೆಹಲಿಯಲ್ಲಿರುವ ಯುನೆಸ್ಕೊದ ದಕ್ಷಿಣ ಏಷ್ಯ ವೈಜ್ಞಾನಿಕ ಸಹಕಾರ ಕಚೇರಿ ದಕ್ಷಿಣ ಏಷ್ಯ ಸಾಹಿತ್ಯ ಸೂಚಿಯ ಮೂಲಕ 1949ರಲ್ಲಿ ಪ್ರಾರಂಭಿಸಿತು.

ಈ ಸೂಚಿ ತಿಂಗಳಿಗೆ ಎರಡು ಬಾರಿ ಪ್ರಕಟವಾಗುತ್ತಿತ್ತು. ಬರ್ಮ, ಶ್ರೀಲಂಕ ಮತ್ತು ಭಾರತ ದೇಶಗಳಲ್ಲಿ ಪ್ರಕಟವಾದ ವೈಜ್ಞಾನಿಕ ನಿಯತಕಾಲಿಕೆಗಳಲ್ಲಿರುವ ಲೇಖನಗಳನ್ನು ಪಟ್ಟಿಮಾಡಿ, ಪ್ರತಿ ವರ್ಷವೂ ಸುಮಾರು 250 ವೈಜ್ಞಾನಿಕ ನಿಯತಕಾಲಿಕೆಗಳಿಂದ ಆಯ್ದ 4,000 ಲೇಖನಗಳನ್ನು ಈ ಸೂಚಿ ಪ್ರಕಟಿಸುತ್ತಿತ್ತು. ಇದರ ಪ್ರಕಟಣೆಯನ್ನು ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ 1955ರಲ್ಲಿ ತೆಗೆದುಕೊಂಡಿತು. ಅನಂತರ ಈ ಸೂಚಿ ಮಾಸಿಕ ನಿಯತಕಾಲಿಕೆ ಸೂಚಿಯಾಗಿ ಯುನೆಸ್ಕೊದ ವೈಜ್ಞಾನಿಕ ಸಹಕಾರ ಕಚೇರಿಯ ದೆಹಲಿ ಮತ್ತು ಜಕಾರ್ತ ಶಾಖೆಗಳಿಂದ ಸಂಗ್ರಹಿತವಾಗಿ ಏಷ್ಯ ಮತ್ತು ಆಗ್ನೇಯ ಏಷ್ಯ ವೈಜ್ಞಾನಿಕ ಪ್ರಕಟಣೆಗಳ ಸೂಚಿ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗುತ್ತಿತ್ತು.

ವೈಜ್ಞಾನಿಕ ನಿಯತಕಾಲಿಕೆಗಳು ವಿದೇಶಗಳಲ್ಲಿ ಪ್ರಕಟವಾದ ಮೇಲೆ ಭಾರತಕ್ಕೆ ಅವು ಬರಲು ತೆಗೆದುಕೊಳ್ಳುತ್ತಿದ್ದ ಕಾಲ ಬಹಳವಾದುದರಿಂದ ಸುಮಾರು 650 ಇಂಥ ವಿದೇಶೀ ನಿಯತಕಾಲಿಕೆಗಳ ವಿಷಯಾನುಕ್ರಮಣಿಕೆ ಪಟ್ಟಿಯನ್ನು ವಿಮಾನಯಾನ ಅಂಚೆ ಮೂಲಕ ಹೊರದೇಶದ ಪ್ರಲೇಖನ ಕೇಂದ್ರಗಳಿಂದ ಮೈಕ್ರೊಫಿಲ್ಮ್ ರೂಪದಲ್ಲಿ ತರಿಸಿ ಕ್ರೋಡೀಕರಿಸಿ ಒಂದು ಪಟ್ಟಿಯನ್ನು ತಯಾರಿಸಲಾಗುತ್ತಿತ್ತು. ಆದರೆ ಈಗ ಈ ಪಟ್ಟಿ ತಯಾರಾಗುತ್ತಿಲ್ಲ. ಪ್ರಕಟಣೆ ನಿಂತಿದೆ.

ಈಗ ಈ ಕೇಂದ್ರದಿಂದ ಪ್ರಕಟವಾಗುತ್ತಿರುವ 15 ಕ್ಕೂ ಹೆಚ್ಚಿನ ನಿಯತಕಾಲಿಕೆಗಳಲ್ಲಿ ಮುಖ್ಯವಾದವು ಇವು : 1. ಭಾರತ ವಿಜ್ಞಾನ ಸಾರಾಂಶ ಸೂಚಿ, 2. ಭಾರತ ಶಿಕ್ಷಣ ವಿಷಯಗಳು, 3. ಗ್ರಂಥಾಲಯ ವಿಜ್ಞಾನ ಮತ್ತು ಪ್ರಲೇಖನ ಕಾರ್ಯ ನಿಯತಕಾಲಿಕೆ.

**ಸಿಬ್ಬಂದಿ ತರಬೇತಿ :** ಪ್ರಲೇಖನ ಸೇವೆಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಲು ಸಾಕಷ್ಟು ಉನ್ನತವಾದ ತಾಂತ್ರಿಕ ತರಬೇತಿಯನ್ನು ಹೊಂದಿದ ಸಿಬ್ಬಂದಿ ಬೇಕಾಗುತ್ತದೆ. ಇಂಥ ತರಬೇತಿ ನೀಡಲು ಭಾರತದಲ್ಲಿ ಎರಡು ಕೇಂದ್ರಗಳಿವೆ. ಒಂದು ನವದೆಹಲಿಯ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರ, ಇನ್ನೊಂದು ಬೆಂಗಳೂರಿನ ಪ್ರಲೇಖನ ಸಂಶೋಧನ ತರಬೇತಿ ಕೇಂದ್ರ. ಇತ್ತೀಚೆಗೆ ದೆಹಲಿ, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳು ಮಾಸ್ಟರ್ ಆಫ್ ಲೈಬ್ರರಿ ಸೈನ್ಸ್ ತರಗತಿಗಳಲ್ಲಿ ಪ್ರಲೇಖನ ತರಬೇತಿಗೆ ಸಂಬಂಧಿಸಿದಂತೆ ಪ್ರಲೇಖನ ವಿಷಯಗಳನ್ನು ತಮ್ಮ ಪಠ್ಯಕ್ರಮಪಟ್ಟಿಯಲ್ಲಿ ಸೇರಿಸಿವೆ. ಆದರೆ ಪೂರ್ಣ ಪ್ರಮಾಣದಲ್ಲಿ ದೆಹಲಿಯ ಪ್ರಲೇಖನ ಕೇಂದ್ರ ಮಾತ್ರವೇ ತರಬೇತಿ ನೀಡುತ್ತಿರುವುದು. 1957ರಲ್ಲಿ ಥೈಲೆಂಡ್, ಬರ್ಮ, ಶ್ರೀಲಂಕ ಮತ್ತು ಭಾರತಗಳ 7 ಜನ ಗ್ರಂಥಪಾಲರಿಗೆ ಅಲ್ಪಾವಧಿಯ ಪ್ರಲೇಖನ ತರಬೇತಿಯನ್ನು ದೆಹಲಿಯ ಯುನೆಸ್ಕೊ ವೈಜ್ಞಾನಿಕ ಸಹಕಾರಿ ಕಚೇರಿ ಏರ್ಪಡಿಸಿತ್ತು.

1964ರಿಂದ ದೆಹಲಿಯ ಈ ಪ್ರಲೇಖನ ಕೇಂದ್ರ ಪೂರ್ಣ ಪ್ರಮಾಣದಲ್ಲಿ ಪ್ರಲೇಖ ಮತ್ತು ಲೇಖನ ಪ್ರತೀಕರಣದಲ್ಲಿ ಒಂದು ವರ್ಷ ಅವಧಿಯ ಶಿಕ್ಷಣ ನೀಡುತ್ತಿತ್ತು. ಈ ಶಿಕ್ಷಣ ಮಾಸ್ಟರ್ ಆಫ್ ಲೈಬ್ರರಿ ಸೈನ್ಸ್ ಮಟ್ಟದ್ದಾಗಿದ್ದು ಭಾರತ ಸರ್ಕಾರದಿಂದ ಮಾಸ್ಟರ್ ಡಾಕ್ಯುಮೆಂಟೇಷನ್ ಮತ್ತು ರೆಪ್ರೋಗ್ರಫಿ ಎಂಬುದಾಗಿ ಮನ್ನಣೆ ಪಡೆದಿದೆ. ಇದಲ್ಲದೆ ಭಾಷಾಂತರದಲ್ಲೂ ತಜ್ಞ ಶಿಕ್ಷಣವನ್ನು ಈ ಕೇಂದ್ರ ನೀಡುತ್ತಿತ್ತು.

ಭಾರತ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರ ಅಂತಾರಾಷ್ಟ್ರೀಯ ಪ್ರಲೇಖನ ಸಂಸ್ಥೆಯ (ಎಫ್.ಐ.ಡಿ.) ಕಾರ್ಯ ಚಟುವಟಿಕೆ ಮತ್ತು ವಿಚಾರ ಗೋಷ್ಠಿಗಳಲ್ಲಿ ಭಾರತದ ಪರವಾಗಿ ಪ್ರತಿನಿಧಿಸುತ್ತದೆ. ಈ ಕೇಂದ್ರದ ನಿರ್ದೇಶನಾಧಿಕಾರಿ ಯುನೆಸ್ಕೊವಿನಲ್ಲಿ ಭಾರತವನ್ನು ಪ್ರತಿನಿಧಿಸುತ್ತಾನೆ. ಯುನೆಸ್ಕೊವಿಗೆ ಈ ಕೇಂದ್ರ ಭಾರತದ ಕಾಯಂ ಪ್ರತಿನಿಧಿಯಾಗಿದೆ.

ದೂರದಿಂದ ಬರುವ ಕೋರಿಕೆಗಳನ್ನು ಶೀಘ್ರವಾಗಿ ಪೂರೈಸಲು ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಈಗ ಬೆಂಗಳೂರಿನಲ್ಲಿ ಇಂಥ ಒಂದು ಕೇಂದ್ರವಿದೆ. ಈ ಕೇಂದ್ರದಲ್ಲಿ ದ್ವಿಪ್ರತಿ ಮತ್ತು ಫೋಟೋ ಪ್ರತಿ ಮಾಡಲು ಬೇಕಾದ ಎಲ್ಲ ಯಂತ್ರಗಳೂ ಇವೆ. ಈ ಕೇಂದ್ರಕ್ಕೆ ಯುನೆಸ್ಕೊ ಸಹಾಯದಿಂದಾಗಿ ಸಲಕರಣೆಯನ್ನು ಒದಗಿಸಲಾಗಿದೆ. ಈ ಕೇಂದ್ರ ಲೇಖನಗಳನ್ನು ತರಿಸಿಕೊಡುವ ಸೇವೆ, ಸುದ್ದಿ ತಿಳಿಸುವ ಸೇವೆ, ಲೇಖನ ಪ್ರತೀಕರಣ ಸೇವೆ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಲೇಖನ ಸೇವೆಯ ಬಗ್ಗೆ ಸಲಹೆ ನೀಡುವ ಕಾರ್ಯವನ್ನು ಮಾಡುತ್ತಿದೆ. ಅಲ್ಲದೆ ಅನೇಕ ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸುತ್ತ ಬಂದಿದೆ: ಭಾರತ ರಾಷ್ಟ್ರೀಯ ವಿಜ್ಞಾನ ಗ್ರಂಥಭಂಡಾರವನ್ನು ಅಭಿವೃದ್ಧಿಪಡಿಸುವುದು; ದೇಶಕ್ಕೆ ಉಪಯೋಗವಾಗುವ ಸಂಯುಕ್ತ ಸೂಚಿಗಳ ಪ್ರಕಟಣೆ; ಲೇಖನ ಪ್ರತೀಕರಣ ವಿಷಯದ ಬಗ್ಗೆ ಹೆಚ್ಚು ತಾಂತ್ರಿಕತೆಯನ್ನು ಸಾಧಿಸುವುದು; ಫೋಟೋ ಪ್ರತಿಮಾಡುವ ಯೂನಿಟ್ ಕೇಂದ್ರಗಳನ್ನು ಮುಂಬಯಿ ಕೋಲ್ಕತ, ಕೊಚ್ಚಿನ್, ಚೆನ್ನೈ, ಹೈದರಾಬಾದು, ಚಂಡಿಗಡ, ಕಾನ್‌ಪುರ್, ಅಹಮದಾಬಾದ್, ಮತ್ತು ಡೆಹರಾಡೂನ್ ಮುಂತಾದ ನಗರಗಳಲ್ಲಿ ಸ್ಥಾಪಿಸುವುದು; ಯಾಂತ್ರಿಕವಾಗಿ ವಿಷಯಗಳನ್ನು ಪುನಃ ಸಂಪಾದನೆ ಮಾಡುವುದು. ಈ ದಿಸೆಯಲ್ಲಿ ಈಗಾಗಲೇ ಭಾರತದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಮಿತಿಯ (ಸಿಎಸ್‌ಐಆರ್) ಪ್ರಯೋಗಶಾಲೆಗಳು ಕಂಪ್ಯೂಟರ್‌ಗಳನ್ನು ಬಳಸುತ್ತಿವೆ; ವೈಜ್ಞಾನಿಕ ಸಂಸ್ಥೆಗಳಿಗೆ ಎಲ್ಲ ರೀತಿಯಲ್ಲೂ ಸಹಾಯವನ್ನು ಒದಗಿಸುವುದು; ಭಾಷಾಂತರ ಸೇವೆಯನ್ನು ಉತ್ತಮಪಡಿಸಲು ಇತರ ದೇಶಗಳ ಪ್ರಲೇಖನ ಕೇಂದ್ರಗಳ ಜೊತೆ ಸಹಕಾರದ ಒಪ್ಪಂದಗಳನ್ನು ಮಾಡಿಕೊಳ್ಳುವುದು.

**ಮಾದರಿ :** ಯುನೆಸ್ಕೊ ಮತ್ತು ಭಾರತ ತನ್ನ ಈ ವೈಜ್ಞಾನಿಕ ಪ್ರಲೇಖನ ಕೇಂದ್ರದ ಮೂಲಕ ತೋರಿಸಿರುವ ಮುಂದಾಳತ್ವ ಪಾಶ್ಚಾತ್ಯ ದೇಶಗಳ ಮೇಲೆ ತುಂಬ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದೆ. ಮೊದಲನೆಯದಾಗಿ ತನ್ನ ದೇಶದ ವಿಜ್ಞಾನಿಗಳಿಗೆ ಈ ಕೇಂದ್ರ ವೈಜ್ಞಾನಿಕ ಆಕರವಾಗಿರುವುದಲ್ಲದೆ ಇತರ ದೇಶಗಳು ಈ ರೀತಿಯ ವೈಜ್ಞಾನಿಕ ಪ್ರಲೇಖನ ಕೇಂದ್ರಗಳನ್ನು ಸ್ಥಾಪಿಸಲು ಮಾದರಿಯೂ ಆಗಿದೆ. (ಎಸ್.ಎನ್.ಎಲ್.)

(c) ಭಾರತೀಯ ಸಮಾಜ ವಿಜ್ಞಾನ ಸಂಶೋಧನ ಸಂಸ್ಥೆ: ಭಾರತ ಸರ್ಕಾರದ ಯೋಜನಾ ಆಯೋಗದ ಶಿಫಾರಸಿನ ಮೇಲೆ ದೆಹಲಿಯಲ್ಲಿ ಸ್ಥಾಪಿತವಾದ (1969) ಸಂಸ್ಥೆ (ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ಸೈನ್ಸ್ ರಿಸರ್ಚ್). ದೇಶದ ನಾನಾ ಭಾಗಗಳಲ್ಲಿ ನಡೆಯುವ ಸಮಾಜ ವಿಜ್ಞಾನ ಸಂಶೋಧನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಪರಿಶೀಲಿಸುವುದು ಈ ಸಂಸ್ಥೆಯ ಮುಖ್ಯ ಕೆಲಸಗಳಲ್ಲೊಂದು. ಸಂಸ್ಥೆಯ ಮುಖ್ಯ ಅಂಗವಾಗಿ ರಾಷ್ಟ್ರೀಯ ಸಮಾಜ ವಿಜ್ಞಾನಪ್ರಲೇಖನ ಕೇಂದ್ರವೊಂದಿದೆ. ಇದಿರುವುದು ದೆಹಲಿಯ ಜವಾಹರಲಾಲ ನೆಹರು ವಿಶ್ವವಿದ್ಯಾಲಯದ ಆವರಣದಲ್ಲಿ. ಸಮಾಜ ವಿಜ್ಞಾನಶಾಸ್ತ್ರ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅನುಕೂಲಗಳು ಇಲ್ಲಿವೆ. ಕೇಂದ್ರ ಕೈಗೊಂಡಿರುವ ಪ್ರಮುಖ ಚಟುವಟಿಕೆಗಳಿವು:

1. ಭಾರತದ ವಿಶ್ವವಿದ್ಯಾಲಯಗಳು ಸಮಾಜ ವಿಜ್ಞಾನದಲ್ಲಿ ಕೊಡುವ ಡಾಕ್ಟರೇಟ್ ಪದವಿ ಪ್ರಬಂಧಗಳ ಸೂಚಿಯನ್ನು ಸಿದ್ಧಪಡಿಸುವುದು. ಈ ದಾರಿಯಲ್ಲಿ 1969ರ ವರೆಗೆ ಮನ್ನಣೆ ಪಡೆದ ಪ್ರಬಂಧಗಳ ಸೂಚಿ ಪ್ರಕಟವಾಗಿದೆ (1970). 2. ಅಂಗೀಕೃತ ಡಾಕ್ಟರೇಟ್ ಪದವಿಗಳ ಒಂದೊಂದು ಪ್ರತಿಯನ್ನು ಕೇಂದ್ರದಲ್ಲಿಡುವುದು. ಇವನ್ನು ಗ್ರಂಥರೂಪದಲ್ಲಿ ಪ್ರಕಟಿಸುವ ಯೋಜನೆಯೂ ಇದೆ. 3. ಸಂಶೋಧಕರಿಗೆ ಸೂಚಿ ಮತ್ತು ಪ್ರಲೇಖನ ಸೇವೆಯನ್ನು ಒದಗಿಸುವುದು. 4. ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುವ ಮಾಹಿತಿ ಗ್ರಂಥಾಲಯಗಳನ್ನು (ಡೇಟ ಲೈಬ್ರರೀಸ್) ದೇಶದ ಆಯ್ದ ಸ್ಥಳಗಳಲ್ಲಿ ಸ್ಥಾಪಿಸುವುದು. 5. ಸಮಾಜ ವಿಜ್ಞಾನ ವಿಷಯದ ನಿಯತಕಾಲಿಕೆಗಳ ಸಂಯುಕ್ತ ಸೂಚಿಯನ್ನು ತಯಾರಿಸುವುದು. ಮೊದಲ ಹಂತವಾಗಿ 107 ಗ್ರಂಥಾಲಯಗಳಲ್ಲಿರುವ 4,074 ನಿಯತಕಾಲಿಕೆಗಳ ಸಂಯುಕ್ತ ಸೂಚಿಯನ್ನು ಪ್ರಕಟಿಸಲಾಗಿದೆ, (1970). ದೇಶದಲ್ಲಿ ಉಳಿದ ಗ್ರಂಥಾಲಯಗಳಲ್ಲಿರುವ ನಿಯತಕಾಲಿಕೆಗಳ ಸೂಚಿಯನ್ನು ಪ್ರಕಟಿಸುವ ಕಾರ್ಯ ಈಗ ನಡೆಯುತ್ತಿದೆ. 6. ಸಂಶೋಧನೆಯಲ್ಲಿ ದೇಶದ ಪ್ರಮುಖ ಗ್ರಂಥಾಲಯಗಳೊಂದಿಗೆ ಸಹಕರಿಸುವುದು. 7. ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಮುಖ್ಯ ಲೇಖನಗಳ ಫೋಟೋ ಪ್ರತಿಗಳನ್ನು ಮತ್ತು ಮೈಕ್ರೊಫಿಲ್ಮ್‌ಗಳನ್ನು ಸಂಗ್ರಹಿಸುವುದು. 8. ಮಹಾತ್ಮ ಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ ದೇಶದ ಎಲ್ಲ ಭಾಷೆಗಳಲ್ಲಿ ಗಾಂಧಿಯವರ ಬಗ್ಗೆ ಪ್ರಕಟವಾದ ಪುಸ್ತಕಗಳ ಸೂಚಿಯನ್ನು ತಯಾರಿಸುವುದು.

**ಕೇಂದ್ರದ ಪ್ರಕಟಣೆಗಳಿವು :** ಮನಃಶಾಸ್ತ್ರ ಮತ್ತು ಭೂಗೋಳಶಾಸ್ತ್ರದಲ್ಲಿ ನಡೆದಿರುವ ಸಂಶೋಧನೆಗಳನ್ನು ಕುರಿತು ಸಮೀಕ್ಷಾ ಗ್ರಂಥಗಳು. ಇದಲ್ಲದೆ ಎರಡು ನಿಯತಕಾಲಿಕೆಗಳು

ಪ್ರಕಟವಾಗುತ್ತಿವೆ. ಒಂದು–ಕೇಂದ್ರದ ಚಟುವಟಿಕೆಗಳ ಸಮಾಚಾರ ಪತ್ರ (ನ್ಯೂಸ್ ಲೆಟರ್). ಇನ್ನೊಂದು–ಭಾರತೀಯ ಪ್ರಬಂಧಸಾರ. ಸಮಾಜಶಾಸ್ತ್ರದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳು ಕೊಟ್ಟ ಡಾಕ್ಟರೇಟ್ ಪ್ರಬಂಧಗಳ ಸಾರಸಂಗ್ರಹ ಇದರಲ್ಲಿ ಪ್ರಕಟವಾಗುತ್ತದೆ. ಸಂಶೋಧನೆಗಳಲ್ಲಿನ ವಿಷಯ ಪುನರುಕ್ತಿಯನ್ನು (ಡೂಪ್ಲಿಕೇಷನ್) ತಪ್ಪಿಸಲು ಇದರಿಂದ ಸಾಧ್ಯ ಎನ್ನಲಾಗಿದೆ.

ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿರುವ, ಮುಖ್ಯವಾಗಿ ಅಮೇರಿಕ, ಆಫ್ರಿಕ ಮತ್ತು ಏಷ್ಯಗಳಲ್ಲಿರುವ, ಈ ಮಾದರಿಯ ಸಂಸ್ಥೆಗಳೊಂದಿಗೆ ಕೇಂದ್ರ ಸಂಬಂಧವನ್ನು ಹೊಂದಿದೆ.

(ಬಿ.ಎಸ್.ವೈ.)

## IV ಗ್ರಂಥಾಲಯ ಮತ್ತು ಸ್ವಯಂತ್ರೀಕರಣ

ಗ್ರಂಥಾಲಯದಲ್ಲಿ ಲಭಿಸುವ ವಿವಿಧ ಸೇವೆಗಳನ್ನು ಓದುಗರ ಅಗತ್ಯಗಳಿಗೆ ತಕ್ಕಂತೆ ಅತಿಶೀಘ್ರವಾಗಿ ಒದಗಿಸಲು ಯಂತ್ರಗಳನ್ನು ಹೇಗೆ ಬಳಸಲಾಗುತ್ತಿದೆ ಎಂಬ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಪ್ರಪಂಚದಲ್ಲಿ ಜ್ಞಾನಾರ್ಜನೆಯ ಮಹತ್ತ್ವ ಹೆಚ್ಚಿದಂತೆಲ್ಲ ಓದುಗರ ಹಾಗೂ ಪುಸ್ತಕಗಳ ಸಂಖ್ಯೆ ಭರದಿಂದ ಬೆಳೆಯತೊಡಗಿದೆ. ಬರಿಯ ಪುಸ್ತಕ, ಪತ್ರಿಕೆ, ಇತರ ಪ್ರಕಟಣೆಗಳು ಮಾತ್ರವಲ್ಲದೆ ಸ್ಟ್ಯಾಂಡರ್ಡ್ಸ್, ಪೇಟೆಂಟ್ಸ್, ಪ್ರಯೋಗ ವರದಿಗಳು ಪ್ರಕಟಣ ಪೂರ್ವಬರೆಹಗಳು ಮುಂತಾದ ಅಸಾಂಪ್ರದಾಯಿಕ ಪ್ರಕಟಣೆಗಳು ಬಹುಸಂಖ್ಯೆಯಲ್ಲಿ ಹೊರಬರುತ್ತಿವೆ. ಸಂಶೋಧನ ಲೇಖನಗಳಂತೂ ಪ್ರತಿ ವರ್ಷ ಲಕ್ಷಗಟ್ಟಲೆ ಬೆಳಕು ಕಾಣುತ್ತಲಿವೆ. ಮೂವತ್ತು ಸಾವಿರಕ್ಕೆ ಮೇಲ್ಪಟ್ಟ ಪತ್ರಿಕೆಗಳು ಸಂಶೋಧನ ಪ್ರಕಟಣೆಗೆಂದೇ ಮೀಸಲಾಗಿವೆ. ಈ ಬೃಹತ್ ಸೃಷ್ಟಿಯನ್ನು ವಾಚನ ಸಾಮಗ್ರಿಯ ಸ್ಫೋಟ ಎಂದು ಕರೆಯುವುದುಂಟು. ಇದರ ಬೆಳೆವಣಿಗೆ ಚಲಘಾತ ಸ್ವರೂಪದ್ದಾಗಿರುವುದರಿಂದ ಎಲ್ಲ ವಾಚನ ಸಾಮಗ್ರಿಗಳ ಪರಿಮಾಣ ಕೇವಲ ಏಳೆಂಟು ವರ್ಷಗಳಲ್ಲಿ ದ್ವಿಗುಣವಾಗುತ್ತದೆಂದು ತಿಳಿಯಲಾಗಿದೆ.

ವೈಜ್ಞಾನಿಕ ಶೋಧ ಹಾಗೂ ಕೈಗಾರಿಕೆಯ ಬೆಳೆವಣಿಗೆಗಳಿಗೆ ವಿಶೇಷ ಮಹತ್ತ್ವ ಪ್ರಾಪ್ತವಾದದ್ದೇ ಈ ಬಗೆಯ ಸಾಹಿತ್ಯ ನಿರ್ಮಾಣಕ್ಕೆ ಕಾರಣ. ಸಂಶೋಧನೆ ಮತ್ತು ಅಭಿವೃದ್ಧಿಕಾರ್ಯದ ಮುಂದುವರಿಕೆಗಾಗಿ ಓದುಗರ ಅಗತ್ಯಗಳಿಗೆ ತಕ್ಕಂತೆ ಈ ವಾಚನಸಾಮಗ್ರಿಯನ್ನು ಅಣಿಗೊಳಿಸಬೇಕಾಗುತ್ತದೆ. ಇದರ ಪ್ರಯೋಜನ ಪಡೆಯುವವರ ಬೇಡಿಕೆಯೂ ವಿಶಿಷ್ಟವಾದ್ದು. ಪುಸ್ತಕಗಳು ಮತ್ತು ಪತ್ರಿಕಾಸಂಪುಟಗಳ ಜೊತೆಗೆ ಒಂದು ನಿರ್ದಿಷ್ಟ ವಿಷಯವೊಂದರ ಎಲ್ಲ ಬಗೆಯ ಬರೆಹಗಳೂ ಓದುಗರಿಗೆ ಬೇಕಾಗಬಹುದು. ಉದಾಹರಣೆಗೆ, ರಸಾಯನಶಾಸ್ತ್ರದಲ್ಲಿ ಲಕ್ಷಾಂತರ ಸಂಯುಕ್ತವಸ್ತುಗಳಿದ್ದು ಅವುಗಳಲ್ಲಿ ಯಾವುದಾದರೊಂದನ್ನು ಕುರಿತು ಸಮಗ್ರ ವಾಚನಸಾಮಗ್ರಿಯ ಶೀಘ್ರಪೂರೈಕೆ. ಇಂಥವನ್ನು ಆಯ್ದ ವಾಚನ ಸಾಮಗ್ರಿಯ ವಿಸರಣ (ಸೆಲೆಕ್ಟಿವ್ ಡಿಸೆಮಿನೇಷನ್ ಆಫ್ ಇನ್‌ಫರ್ಮೇಷನ್) ಎಂದು ಕರೆಯುವುದುಂಟು. ಗ್ರಂಥಾಲಯಗಳಲ್ಲಿ ಅನುಸರಿಸುವ ಸಾಮಾನ್ಯ ವಿಧಾನಗಳಿಂದ ಇದು ತ್ವರಿತವಾಗಿ ಸಾಗುವುದು ಅಷ್ಟು ಸುಲಭವಲ್ಲ. ಗ್ರಂಥಾಲಯದಲ್ಲಿ ಲಕ್ಷಗಟ್ಟಲೆ ಪ್ರಕಟಣೆಗಳಿದ್ದರಂತೂ ಅದರ ವಾಚನಸಾಮಗ್ರಿಯನ್ನು ವ್ಯವಸ್ಥಿತವಾಗಿ ಮತ್ತು ಆದಷ್ಟು ಜಾಗ್ರತೆ ವಾಚಕರಿಗೆ ಒದಗಿಸುವುದು ಮತ್ತಷ್ಟೂ ದುಸ್ತರವಾಗುತ್ತದೆ. ಸಿಬ್ಬಂದಿಯ ಕೊರತೆ ಇದ್ದಲ್ಲಿ ಸಮಸ್ಯೆಗೆ ಪೋಷಣೆ ದೊರಕಿದಂತೆ. ಇದರಿಂದ ಗ್ರಂಥಾಲಯ ಸೇವೆಯ ಕಾರ್ಯದಕ್ಷತೆ ಕುಂಠಿತವಾಗುತ್ತದೆ. ದೊಡ್ಡ ದೊಡ್ಡ ಗ್ರಂಥಾಲಯಗಳಲ್ಲಿ ವಿಶಿಷ್ಟವಾಚನಸಾಮಗ್ರಿಯ ಬೇಡಿಕೆಯನ್ನು ಶೀಘ್ರವಾಗಿ, ಸಮರ್ಪಕವಾಗಿ ಹಾಗೂ ಒಂದು ಕ್ರಮಬದ್ಧ ರೀತಿಯಲ್ಲಿ ಪೂರೈಸುವ ಕಾರ್ಯದಲ್ಲಿ ಯಂತ್ರೀಕರಣದ ಅಗತ್ಯ ಕಂಡುಬರುತ್ತದೆ.

ಯಂತ್ರೀಕರಣದ ವಿವಿಧ ವಿಧಾನಗಳು ಪ್ರಪಂಚದ ಹಲವಾರು ಗ್ರಂಥಾಲಯಗಳಲ್ಲಿ ಬಳಕೆಯಲ್ಲಿವೆ. ಅವುಗಳಲ್ಲಿ ಹೆಚ್ಚು ಪ್ರಚಾರದಲ್ಲಿರುವ, ತುದಿ ಕಚ್ಚುಗಳುಳ್ಳ ಕಾರ್ಡುಗಳ (ಎಜ್ ನಾಚ್ಡ್ ಕಾರ್ಡ್ಸ್) ವಿಧಾನವನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದೆ. ಈ ಕಾರ್ಡುಗಳು ಸೂಚೀಕರಣದಲ್ಲಿ ಬಳಸುವ ಕಾರ್ಡುಗಳಿಗಿಂತಲೂ ಸ್ವಲ್ಪ ದೊಡ್ಡವಿದ್ದು ತುದಿಗಳಲ್ಲಿ ರಂಧ್ರಗಳಿರುತ್ತವೆ. ಯಾವುದಾದರೊಂದು ವಿಷಯದ ಹಲವು ಮುಖಗಳಲ್ಲಿ (ಫ್ಯಾಸೆಟ್ಸ್) ಒಂದನ್ನು ಸೂಚಿಸುವಂತೆ ನಿಶ್ಚಿತ ಸ್ಥಳವೊಂದರಲ್ಲಿ ಆ ಕಚ್ಚಿಗೆ ರಂಧ್ರ ಮಾಡುತ್ತಾರೆ. ಇಂಥ ನೂರಾರು ಕಾರ್ಡುಗಳಿಂದ ಬೇಕಾದ ವಿಷಯವೊಂದರ ಸಾಮಗ್ರಿಯನ್ನು ಆಯ್ದುಕೊಳ್ಳುವುದಿದ್ದಲ್ಲಿ ಒಂದು ಉದ್ದನೆಯ ಸೂಜಿಯನ್ನು ಅದರಲ್ಲಿ ಹಾಯಿಸಬೇಕು. ಆಗ ಆ ವಿಷಯದ ಮೇಲಿನ ಕಾರ್ಡುಗಳು ಕೂಡಲೇ ಪ್ರತ್ಯೇಕಗೊಳ್ಳುತ್ತವೆ. ಇಂಥ ಕಾರ್ಡುಗಳು ಸಾವಿರಾರು ಇದ್ದರೆ ಪ್ರತ್ಯೇಕಿಸುವ ಕಾರ್ಯ ಯಂತ್ರದ ಸಹಾಯದಿಂದ ನಡೆಯುತ್ತದೆ. ಸಾಂಪ್ರದಾಯಿಕ ಯಂತ್ರಗಳನ್ನುಪಯೋಗಿಸಿ ಈ ಕಾರ್ಯ ಮಾಡುವುದರಲ್ಲಿ ಸುಧಾರಣೆ ಕಂಡುಬಂದು ಗಣಕಗಳ (ಕಂಪ್ಯೂಟರ್ಸ್) ಬಳಕೆ ಇತ್ತೀಚೆಗೆ ನಡೆದಿದೆ. ಇದರಿಂದ ಯಂತ್ರೀಕರಣದಲ್ಲಿ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಸ್ವಯಂತ್ರೀಕರಣ ವಿಧಾನ ಬಳಕೆಗೆ ಬಂದಿರುವುದನ್ನು ಕಾಣಬಹುದು.

ಗಣಕಗಳ ಬಳಕೆ ಮೊದಲಿಗೆ ಅಮೆರಿಕದ ರಕ್ಷಣಾಪಡೆಗಳ ಪುಸ್ತಕಭಂಡಾರಗಳಲ್ಲಿ ಆಯಿತೆನ್ನಬಹುದು. ಗಣಕಗಳನ್ನು ತಯಾರಿಸುವ ಪ್ರಮುಖ ಸಂಸ್ಥೆಯಾದ ಐ.ಬಿ.ಎಂ.ನ ಗ್ರಂಥಾಲಯಗಳಲ್ಲಿ ಸಮಗ್ರ ಸೇವಾಸೌಲಭ್ಯವನ್ನು ಸಂಪೂರ್ಣವಾಗಿ ಸ್ವಯಂತ್ರೀಕರಿಸಲಾಗಿದೆ. ಬ್ರಿಟನ್, ರಷ್ಯ, ಕೆನಡ, ಫ್ರಾನ್ಸ್ ಮುಂತಾದ ದೇಶಗಳಲ್ಲಿಯ ವೈಜ್ಞಾನಿಕ ಗ್ರಂಥಾಲಯಗಳಲ್ಲಿ ಸ್ವಯಂತ್ರೀಕರಣದ ವಿವಿಧ ಪ್ರಯೋಗಗಳು ನಡೆದಿವೆ. 1967ರಲ್ಲಿ ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಯಂತ್ರವಾಚನ ಸೂಚಿಯ (ಮಷೀನ್ ರೀಡಬಲ್ ಕ್ಯಾಟಲಾಗ್) ಜಾಗತಿಕ ಯೋಜನೆ (ಮಾರ್ಕ್ ಪ್ರಾಜೆಕ್ಟ್) ರೂಪುಗೊಂಡಾಗಿನಿಂದ, ಗ್ರಂಥಾಲಯಗಳಲ್ಲಿ ಸ್ವಯಂತ್ರೀಕರಣದ ವ್ಯಾಪ್ತಿ ಹೆಚ್ಚಿದೆ. ಗ್ರಂಥಾಲಯಗಳಲ್ಲಿ ಅಂಕಗಣಕದ (ಡಿಜಿಟಲ್ ಕಂಪ್ಯೂಟರ್) ಬಳಕೆ ಈಗ ಹೆಚ್ಚುತ್ತಿದೆ.

ಓದುಗನ ಅಗತ್ಯಗಳನ್ನು ಗಣಕದ ಪರಿಭಾಷೆಯಲ್ಲಿ ಒದಗಿಸಿದರೆ ಅವನಿಗೆ ಅಗತ್ಯವಿದ್ದ ವಾಚನಸಾಮಗ್ರಿ ತಾನಾಗಿ ಅವನತ್ತ ಸಾಗಿಬರುತ್ತದೆ. ಗ್ರಂಥಾಲಯಗಳಲ್ಲಿ ಗಣಕದ ಸ್ಥಾಪನೆ, ಮೇಲ್ವಿಚಾರಣೆ ಇತ್ಯಾದಿಗಳು ಆಯಾ ಗ್ರಂಥಾಲಯಗಳ ಆರ್ಥಿಕ ಸ್ಥಿತಿ, ಅಗತ್ಯಗಳನ್ನವಲಂಬಿಸಿದೆ. ಪೂರ್ಣವಾಗಿ ಅಲ್ಲದಿದ್ದರೂ ಆಂಶಿಕವಾಗಿಯಾದರೂ ಗಣಕಗಳನ್ನು ಬಳಸಿ ಓದುಗರ ಅಗತ್ಯಗಳನ್ನು ಪೂರೈಸುವ ಕಾರ್ಯ ಪ್ರಪಂಚದ ಎಲ್ಲಾ ಪ್ರಮುಖ ಗ್ರಂಥಾಲಯಗಳಲ್ಲಿ ನಡೆದಿದೆ.

ಭಾರತದಲ್ಲಿ ಮೊಟ್ಟಮೊದಲಿಗೆ 1963–64ರಲ್ಲಿ ಕಾನ್ಪುರದ ಭಾರತೀಯ ತಾಂತ್ರಿಕ ಸಂಸ್ಥೆ (ಐ.ಐ.ಟಿ) ಮತ್ತು ಮುಂಬಯಿಯ ತಾತಾ ಮೂಲಭೂತ ಸಂಶೋಧನ ಸಂಸ್ಥೆಗಳ (ಟಿಐಎಫ್ಆರ್) ಗ್ರಂಥಾಲಯಗಳಲ್ಲಿ ಗಣಕಗಳನ್ನು ಬಳಸಲಾಯಿತು. ಅಲ್ಲದೆ ಟ್ರಾಂಬೆಯಲ್ಲಿಯ ಭಾಭಾ ಅಣುಸಂಶೋಧನ ಕೇಂದ್ರ (ಬಾರ್ಕ್), ಅಹಮದಾಬಾದಿನ ಭೌತಶಾಸ್ತ್ರ ಸಂಶೋಧನ ಪ್ರಯೋಗಾಲಯ (ಪಿಆರ್ಎಲ್), ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಮಂಡಲಿ (ಸಿಎಸ್ಐಆರ್)– ಮುಂತಾದ ವಿವಿಧ ಸಂಸ್ಥೆಗಳ ಗ್ರಂಥಾಲಯಗಳು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಸ್ವಯಂತ್ರೀಕರಣದ ಕಾರ್ಯವನ್ನು ಕೈಕೊಂಡಿವೆ. ನವದೆಹಲಿಯಲ್ಲಿರುವ ಭಾರತ ರಾಷ್ಟ್ರೀಯ ವಿಜ್ಞಾನ ಮತ್ತು ಪ್ರಲೇಖನ ಕೇಂದ್ರ ಮತ್ತು ಬೆಂಗಳೂರಿನಲ್ಲಿರುವ ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರಗಳಲ್ಲಿ (ಡಿಆರ್‌ಟಿಸಿ) ಗಣಕವನ್ನು ಬಳಸಿ ಸ್ವಯಂತ್ರೀಕರಣವನ್ನು ಹೇಗೆ ಸಾಧಿಸಬಹುದೆಂಬುದರ ಬಗ್ಗೆ ತರಬೇತಿಯನ್ನು ಕೊಡಲಾಗುತ್ತಿದೆ.

ಗ್ರಂಥಾಲಯದಲ್ಲಿ ಗಣಕದ ಅನ್ವಯ ಓದುಗರ ಬೇಡಿಕೆಯನ್ನೂ ಗ್ರಂಥಾಲಯದ ವಿವಿಧ ಸೇವೆಗಳ ಕಾರ್ಯದಕ್ಷತೆಯನ್ನು ಅಧಿಕಗೊಳಿಸುವುದನ್ನೂ ಕುರಿತಂತೆ ಇರುವ ವಿಚಾರ. ಸ್ವಯಂತ್ರೀಕರಣದಿಂದ ಓದುಗರ ಬೇಡಿಕೆಯ ಪೂರೈಕೆಯಲ್ಲಿ ಕಾಲದ ವಿಳಂಬ ಬಹಳಷ್ಟು ಕಡಿಮೆಯಾಗಿದೆ.

ವಿವಿಧ ವಿಷಯಗಳ ಸಂಬಂಧಿಸಿದಂತೆ ಮಾಹಿತಿಗಳ ಸಂಗ್ರಹಣೆ ಮತ್ತು ಪುನಸ್ಸಂಪಾದನೆಯಲ್ಲೂ (ಇನ್‌ಫರ್ಮೇಷನ್ ಸ್ಟೋರೇಜ್ ಅಂಡ್ ರಿಟ್ರೀವಲ್) ಗಣಕಗಳ ಉಪಯೋಗ ಬಹಳ. ಗ್ರಂಥಾಲಯದ ಪರಿಕರ್ಮಗಳಲ್ಲಿ ದಸ್ತಾವೇಜು ಸಂಸ್ಕರಣೆ, ಯಂತ್ರಾನುವಾದ, ಮಾಹಿತಿ ವಿಂಗಡನೆ ಹಾಗೂ ಶೋಧನ ಮತ್ತು ಸೂಚೀ ತಯಾರಿಕೆ–ಇವೆಲ್ಲವೂ ಸೇರುತ್ತವಾದ್ದರಿಂದ ಈ ಕೆಲಸಗಳ ನಿರ್ವಹಣೆಗೆ ಗಣಕದ ಬಳಕೆ ಹೆಚ್ಚು ಉಪಯುಕ್ತವೂ ಕಾಲವಿಳಂಬವನ್ನು ಕಡಿಮೆಮಾಡುವುದೂ ಆಗಿದೆ. ಈ ವಿಧಾನದ ಸೂಕ್ಷ್ಮ ಪರಿಚಯ ಇಲ್ಲಿ ಕೊಟ್ಟಿದೆ.




ಕಾಗದದ ಟೇಪು

ಪುಸ್ತಕ, ಪತ್ರಿಕಾಲೇಖನ ಹಾಗೂ ಇತರ ಕಡೆಗಳಲ್ಲಿಯ ವಾಚನಮಾಹಿತಿಯನ್ನು $8 \times 18.5$ ಸೆಂಮೀ ಆಕಾರದ ರಂಧ್ರಿತ ಕಾರ್ಡುಗಳ (ಪಂಚ್ಡ್ ಕಾರ್ಡ್ಸ್) ಮೇಲೆ ಮೊದಲು ಮೂಡಿಸಲಾಗುತ್ತದೆ. ಅನಂತರ ಅದನ್ನು ಕಾಗದದ ಅಥವಾ ಕಾಂತದ ಟೇಪುಗಳಲ್ಲಿ ಸಂಗ್ರಹಿಸಿಡಲಾಗುತ್ತದೆ. 2400 ಮೀ ಉದ್ದದ ಒಂದು ಟೇಪು ಒಂದು ಕೋಟಿಗಿಂತ ಹೆಚ್ಚು ಅಕ್ಷರಾದಿ ಸಂಜ್ಞೆಗಳನ್ನು ಒಳಗೊಳ್ಳಬಲ್ಲುದಾಗಿದೆ. ಸೂಕ್ತ ಕ್ರಮವಿಧಾಯಕದ (ಪ್ರೋಗ್ರಾಮ್) ಮೂಲಕ, ಬೇಕಾದ ವಿಷಯದ ಮೇಲಿನ ವಾಚನಸಾಮಗ್ರಿಯ ಪಟ್ಟಿಯನ್ನು ಗಣಕ ಪ್ರತ್ಯೇಕಿಸುತ್ತದೆ. ಬಳಿಕ ಅದರ ಮುದ್ರಿತರೂಪ ಕೆಲವೇ ಕ್ಷಣದಲ್ಲಿ ಓದುಗರಿಗೆ ಲಭಿಸುತ್ತದೆ. ಕಾಂತಟೇಪುಗಳಲ್ಲಿ

(ಮ್ಯಾಗ್ನೆಟಿಕ್ ಟೇಪ್ಸ್) ಆ ಮಾಹಿತಿಯನ್ನು ಸಮಗ್ರವಾಗಿ ಸಂಗ್ರಹಿಸಿಡುವ ಸಾಧ್ಯತೆ ಉಂಟು. ಗಣಕವಿರುವ ಸ್ಥಳ ಬಹುದೂರದಲ್ಲಿದ್ದರೂ ಗ್ರಂಥಾಲಯದಲ್ಲೇ ಕುಳಿತು ಅಗತ್ಯಗಳ ಬಗ್ಗೆ ಮಾಹಿತಿಯನ್ನು ಗಣಕಕ್ಕೆ ಒದಗಿಸುವ ಸಾಧ್ಯತೆ ಉಂಟು. ಓದುಗರಿಗೆ ಬೇಕಾದ ಮಾಹಿತಿಯನ್ನು ಟೆಲೆಕ್ಸ್ ಮಾದರಿಯ ವಿಶಿಷ್ಟ ಟೈಪ್‌ರೈಟರಿನ ಮೂಲಕ ಗಣಕಕ್ಕೆ ಉಣಿಸಿ, ಹೆಚ್ಚಿನ ಮಾಹಿತಿಯನ್ನು ನೇರವಾಗಿ ಮುದ್ರಿತ ರೂಪದಲ್ಲಾಗಲೀ ಟೆಲಿವಿಷನ್ ಮೂಲಕವಾಗಲೀ ಪಡೆಯುವ ಸೌಲಭ್ಯ ಕೆಲವು ಗ್ರಂಥಾಲಯಗಳಲ್ಲಿದೆ. ವಿತರಣೆ ಕಾರ್ಯವನ್ನು ಕೂಡ ಗಣಕದ ಸಹಾಯದಿಂದ ನಡೆಸಲು ಬರುತ್ತದೆ. ಗ್ರಂಥಾಲಯ ತರಿಸುವ ಪತ್ರಿಕೆಗಳ ದಾಖಲೆಯನ್ನು ಗಣಕಕ್ಕೆ ಒದಗಿಸಿದ್ದಾದರೆ, ಒಂದು ಪತ್ರಿಕೆಗೆ ಸಂಬಂಧಿಸಿದಂತೆ ಎಲ್ಲ ಮಾಹಿತಿಗಳೂ ತತ್‌ಕ್ಷಣದಲ್ಲೇ ಲಭ್ಯವಾಗುತ್ತದೆ. ಈ ಬಗೆಯ ಸ್ವಯಂತ್ರೀಕರಣದಿಂದ ಗ್ರಂಥಾಲಯದಲ್ಲಿನ ಸ್ಥಳಾಭಾವವೂ ಬಹುಮಟ್ಟಿಗೆ ನೀಗುತ್ತದೆ.

ಗ್ರಂಥಾಲಯಗಳಲ್ಲಿ ಸಹಕಾರಿ ಪದ್ಧತಿಯಿಂದ ಸ್ವಯಂತ್ರೀಕರಣದ ಹೆಚ್ಚಿನ ಪ್ರಯೋಜನ ಪಡೆಯುವುದು ಸಾಧ್ಯ. ಒಂದು ದೇಶದಲ್ಲಿಯ ಪ್ರತಿಯೊಂದು ಗ್ರಂಥಾಲಯದ ವಾಚನ ಸಂಪನ್ಮೂಲಗಳನ್ನು ಕೇಂದ್ರಿಯ ಗಣಕಯಂತ್ರಾಗಾರದಲ್ಲಿ ಶೇಖರಿಸಿ ಇಡಬೇಕು. ಈ

TATA INSTITUTE OF FUNDAMENTAL RESEARCH
LIBRARY
RECENT ADDITIONS DECEMBER, 1972

---------------------------------------------------------------------------

NOTE - x (NOT EQUAL TO) SIGN IS BEING USED IN PLACE OF INVERTED COMMAS

GENERAL

001,89135 (47056)
SPAEY, J. ET AL
SCIENCE FOR DEVELOPMENTS AN ESSAY ON THE ORIGIN AND ORGANIZATION OF NATIONAL SCIENCE POLICIES.
PARIS UNESCO 1971

058 YEARBOOKS, DIRECTORIES

058,7(54)R ( 47008)
SHAM LAL ( ED.)
TIMES OF INDIA DIRECTORY AND YEARBOOK INCLUDING WHOXS WHO. 1972
BOMBAY TIMES OF INDIA PR, 1972

**ಗಣಕದಿಂದ ಮುದ್ರಿತವಾದ ಗ್ರಂಥಸೂಚಿಯ ಮಾದರಿ**

ಕೇಂದ್ರ ಗಣಕಯಂತ್ರಾಗಾರ ಮತ್ತು ದೇಶದ ವಿವಿಧ ಗ್ರಂಥಾಲಯಗಳ ನಡುವೆ ಯಾಂತ್ರಿಕ ಸಂಪರ್ಕವಿದ್ದ ಪಕ್ಷಕ್ಕೆ ಯಾವುದೇ ಒಂದು ಮಾಹಿತಿ ಅಥವಾ ವಾಚನ ಸಾಮಗ್ರಿಯನ್ನು ಯಾವುದೇ ಪುಸ್ತಕ ಭಂಡಾರ ನೇರವಾಗಿ ಪಡೆಯಬಹುದು. ಯಂತ್ರವಾಚನ ಸೂಚಿ ಯೋಜನೆಯನ್ನು (MARC) ಸಹಕಾರಿ ತತ್ತ್ವದ ಮೇಲೆ ರೂಪಿಸಲಾಗಿದೆ. ಪ್ರಪಂಚದಲ್ಲಿ ಪ್ರಕಟವಾಗುವ ಹೊಸ ಪುಸ್ತಕಗಳ ಬಗ್ಗೆ ಮಾಹಿತಿಯನ್ನು ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಸಿದ್ಧಗೊಳಿಸಲಾಗುತ್ತಿದ್ದು ಅದರ ಪ್ರಯೋಜನವನ್ನು ಅಮೆರಿಕದ ಗ್ರಂಥಾಲಯಗಳಲ್ಲದೆ ಯುರೋಪ್, ಏಷ್ಯಗಳಲ್ಲಿನ ಗ್ರಂಥಾಲಯಗಳೂ ಪಡೆಯುವಂತಾಗಿದೆ. ಇದೇ ರೀತಿ ಹಳೆಯ ಪತ್ರಿಕಾಸಂಪುಟಗಳ ಬಗ್ಗೆ ಮಾಹಿತಿಗಳು ಯಾವುದೇ ಒಂದು ಗ್ರಂಥಾಲಯದಲ್ಲಿದ್ದರೂ ಇತರ ಗ್ರಂಥಾಲಯಗಳು ಅವುಗಳ ಉಪಯೋಗ ಪಡೆದುಕೊಳ್ಳಲು ಅವುಗಳ ಲಭ್ಯತಾ ವಿವರಗಳು ಕೇಂದ್ರ ಗಣಕ ಯಂತ್ರಾಗಾರದಿಂದ ದೊರಕುವಂತೆಯೂ ವ್ಯವಸ್ಥೆಯಾದಲ್ಲಿ ಸ್ವಯಂತ್ರೀಕರಣದ ಸೇವಾಮಹತ್ತ್ವ ಹೆಚ್ಚುತ್ತದೆ.

ಗ್ರಂಥಾಲಯದಲ್ಲಿನ ಯಂತ್ರೀಕರಣ ಎಷ್ಟರಮಟ್ಟಿಗೆ ಶಿಕ್ಷಕರ, ಸಂಶೋಧಕರ, ಸಾರ್ವಜನಿಕರ, ಇನ್ನಿತರ ಅಗತ್ಯಗಳನ್ನು-ಆಲೇಖ್ಯಗಳ, ನಕ್ಷೆಗಳ, ಪುಸ್ತಕದ ಯಾವುದೇ ಒಂದು ಭಾಗದ, ಒಂದು ವಿಶಿಷ್ಟ ವಿಷಯದ, ಭೂಪಟಗಳ, ಇವೇ ಮೊದಲಾದ ಹಲವಾರು ವಿಷಯಗಳ ಪ್ರತಿಗಳನ್ನು-ಪೂರೈಸಲು ನೆರವಾಗಿದೆ ಮತ್ತು ಗ್ರಂಥಾಲಯಗಳಲ್ಲಿ ಕಾಣುವ ವಿವಿಧ ಬಗೆಯ ಯಂತ್ರಸಾಮಗ್ರಿಗಳು ಯಾವುವು ಎಂಬ ವಿಷಯವನ್ನು ಈ ಕೆಳಗೆ ಪ್ರಸ್ತಾಪಿಸಲಾಗಿದೆ. (ಎಸ್.ಎಚ್.)

**ರಿಪ್ರೋಗ್ರಫಿ :** ಆಲೇಖ್ಯ, ನಕ್ಷೆ, ಭೂಪಟ, ರೇಖಾಚಿತ್ರ, ಛಾಯಾಚಿತ್ರ, ವ್ಯವಹಾರಪತ್ರ, ಒಂದು ಪುಸ್ತಕ ಇಲ್ಲವೇ ನಿಯತಕಾಲಿಕೆಯಿಂದ ಆಯ್ದ ಯಾವುದೇ ಅಂಶ, ದಾಖಲೆ-ಇವೇ ಮುಂತಾದವುಗಳ ಛಾಯಾಚಿತ್ರ ಗ್ರಹಿಸಿ ತನ್ಮೂಲಕ ಪ್ರತಿಗಳನ್ನು ತಯಾರಿಸುವ ತಂತ್ರ. ಇಂಗ್ಲಿಷ್ ಭಾಷೆಯ ರಿಪ್ರೊಡಕ್ಷನ್ ಮತ್ತು ಫೋಟೋಗ್ರಫಿ ಎನ್ನುವ ಪದಗಳಿಂದ ಅನುಕ್ರಮವಾಗಿ ಪೂರ್ವಾರ್ಧವನ್ನೂ ಉತ್ತರಾರ್ಧವನ್ನೂ ಆಯ್ದು ಸಂಯೋಜಿಸಿ ತಯಾರಿಸಿದ ಪದವಿದು. ರಿಪ್ರೋಗ್ರಫಿ ತಂತ್ರಕ್ಕೆ ಸಂಬಂಧಿಸಿದಂತೆ ಕರಡುಗಳ ತಯಾರಿಕೆ, ಆಲೇಖ್ಯರಚನೆ, ಯಂತ್ರನಿರ್ಮಾಣ, ಪ್ರತಿಗಳ ತಯಾರಿಕೆ ಮೊದಲಾದವುಗಳ ಶಾಸ್ತ್ರೀಯ ಅಭ್ಯಾಸಕ್ಕೆ ರಿಪ್ರೋಗ್ರಫಿಕ್ಸ್ ಎಂದು ಹೆಸರು. ದೊಡ್ಡ ಕಾರ್ಖಾನೆಗಳು, ಕಚೇರಿಗಳು, ವಿದ್ಯಾಸಂಸ್ಥೆಗಳು, ಗ್ರಂಥಭಂಡಾರಗಳು, ತಾಂತ್ರಿಕ ಸಂಸ್ಥೆಗಳು ಮುಂತಾದೆಡೆಗಳಲ್ಲಿ ರಿಪ್ರೋಗ್ರಫಿ ತಂತ್ರದ ಉಪಯುಕ್ತತೆ ಕಂಡುಬಂದಿದೆ.

ಲೋಹದ ಅಥವಾ ಮರದ ಒಂದು ಉರುಳೆಯ ಮೇಲೆ ವಿಪರ್ಯಯ ಅಕ್ಷರಗಳನ್ನು ಕೆತ್ತಿ, ಉರುಳೆಯನ್ನು ಮೆತ್ತಗಿನ ಜೇಡಿಮಣ್ಣಿನ ಹಲಗೆಯ ಮೇಲೆ ಹೊರಳಿಸಿದಾಗ ನೇರ ಅಕ್ಷರ ಮುದ್ರೆಗಳು ಹಲಗೆಯ ಮೇಲೆ ಮೂಡುತ್ತವೆ. ಬಳಿಕ ಜೇಡಿಮಣ್ಣಿನ ಹಲಗೆಯನ್ನು ಬಿಸಿಲಿನಲ್ಲಿ ಒಣಗಿಸಿ ಪ್ರತಿಯನ್ನು ಪಡೆಯಬಹುದು. ಎಷ್ಟೆಷ್ಟು ಪ್ರತಿಗಳು ಬೇಕೋ ಅಷ್ಟಷ್ಟು ಜೇಡಿಮಣ್ಣಿನ ಹಲಗೆಯನ್ನು ಮಾಡಿಕೊಳ್ಳುವುದು, ಉರುಳೆಯನ್ನು ಹೊರಳಿಸುವುದು, ಒಣಗಿಸುವುದು ಈ ಕ್ರಮ ಬಲು ಹಿಂದೆ ರೂಢಿಯಲ್ಲಿತ್ತು.

ಕಾರ್ಬನ್ ನಕಲೆತ್ತುವಿಕೆ : ಎರಡು ಬಿಳಿಯ ಹಾಳೆಗಳ ನಡುವೆ ಒಂದು ಕಾರ್ಬನ್ ಕಾಗದವನ್ನಿರಿಸಿ, ಮೇಲಿನ ಬಿಳಿಯ ಹಾಳೆಯ ಮೇಲೆ ಚಿತ್ರಗಳನ್ನೋ ಅಕ್ಷರಗಳನ್ನೋ ಬರೆದಾಗ ಅವುಗಳ ಪ್ರತಿಕೃತಿ ಕೆಳಗಿನ ಬಿಳಿಯ ಕಾಗದದ ಮೇಲೆ ಮೂಡುತ್ತದೆ. ಈ ಕ್ರಮದಲ್ಲಿ ದೊರೆಯುವ ಪ್ರತಿಗಳ ಸಂಖ್ಯೆಗೆ ಒಂದು ಮಿತಿ ಉಂಟು. ಬರೆಯುವವ ಮೇಲಿನ ಕಾಗದದ ಮೇಲೆ ಹಾಕುವ ಒತ್ತಡ, ಕೆಳಗಿರಬಹುದಾದ ಬಿಳಿಯ ಕಾಗದಗಳ ಸಂಖ್ಯೆ ಹಾಗೂ ದಪ್ಪ ಕಾರ್ಬನ್ ಕಾಗದದ ಯೋಗ್ಯತೆ-ಇವನ್ನು ಆಧರಿಸಿ ಈ ಸಂಖ್ಯೆ ವ್ಯತ್ಯಾಸವಾಗುತ್ತದೆ. ಬೆರಳಚ್ಚು ಯಂತ್ರದಿಂದ ಕಾರ್ಬನ್ ಪ್ರತಿಗಳನ್ನು ಪಡೆಯುವಲ್ಲಿಯೂ ಮೂಲಭೂತ ತತ್ತ್ವ ಇದೇ. ಇಲ್ಲಿಯೂ ದೊರೆಯುವ ಸ್ಫುಟಪ್ರತಿಗಳ ಸಂಖ್ಯೆಗೆ ಮಿತಿಯಿರುವ ಕಾರಣ ಹೆಚ್ಚು ಪ್ರತಿಗಳು ಬೇಕಾದಾಗ ಒಂದು ಪಾರದೀಪಕ ಹಾಳೆಯ ಮೇಲೆ ಬೆರಳಚ್ಚು ಯಂತ್ರದಿಂದ ವಿಷಯದ ಮಾದರಿ ಪ್ರತಿಯನ್ನು (ಮಾಸ್ಟರ್ ಕಾಪಿ) ತಯಾರಿಸಿಕೊಂಡು ನಕಲುಯಂತ್ರದ ಸಹಾಯದಿಂದ ಬೇಕಾದಷ್ಟು ಪ್ರತಿಗಳನ್ನು ಪಡೆಯಬಹುದು. ಪಾರದೀಪಕ ಹಾಳೆ ಎನ್ನುವುದೊಂದು ಕೊರೆಯಚ್ಚು ಕಾಗದ (ಸ್ಟೆನ್ಸಿಲ್ ಪೇಪರ್). ಇದರ ಮೇಲೆ ಕೊರೆಲೇಖನಿಯಿಂದ (ಸ್ಟೈಲಸ್) ಬರೆಯುವುದು ಸಾಧ್ಯ. ಈ ವಿಧಾನದಿಂದ ಸುಮಾರು 5,000ದಷ್ಟು ಸ್ಫುಟಪ್ರತಿಗಳನ್ನು ತೆಗೆಯಲು ಬರುತ್ತದೆ (**ನೋಡಿ – ಕಚೇರಿಯ ಯಂತ್ರೋಪಕರಣಗಳು; ಕೊರೆಯಚ್ಚು ಮುದ್ರಣ**).

ರಿಪ್ರೋಗ್ರಫಿಯ ಬೇರೆ ವಿಧಾನಗಳನ್ನು ಮುಂದೆ ಸಂಕ್ಷೇಪವಾಗಿ ತಿಳಿಸಿದೆ.

ಛಾಯಾಗ್ರಹಣ ತಂತ್ರಾಧಾರಿತ ವಿಧಾನಗಳು : ಒಂದು ಚಿತ್ರದ ಅಥವಾ ಒಂದು ವಿಷಯದ ಮೂಲಪ್ರತಿ ಛಾಯಾಚಿತ್ರಿಸಿಕೊಂಡರೆ ಸೂಕ್ಷ್ಮಗ್ರಾಹಿ ಹಾಳೆಯ (ಸೆನ್ಸಿಟಿವ್ ಫಿಲ್ಮ್) ಮೇಲೆ ಮೂಡಿದ ವಾಸ್ತವಿಕ ನಕಲು ದೊರೆಯುತ್ತದೆ. ಇದನ್ನು ಛಾಯಾಚಿತ್ರ ವಿಧಾನದ ವಿವಿಧ ಸಂಸ್ಕರಣೆಗಳಿಗೆ ಒಳಪಡಿಸಿ ಅಗತ್ಯವಿದ್ದಷ್ಟು ಮುದ್ರಿತ ಪ್ರತಿಗಳನ್ನು ಪಡೆಯಬಹುದು. ಈ ವಿಧಾನವನ್ನು ಐದು ವಿಧಗಳಾಗಿ ವಿಂಗಡಿಸಲಾಗಿದೆ. (i) ನೀಲನಕಾಶೆ (ಬ್ಲೂಪ್ರಿಂಟ್) ವಿಧಾನ, (ii) ಡೈಆಜ಼ೋ ವಿಧಾನ, (iii) ಪ್ರಸರಣೆ-ವರ್ಗಾವಣೆ ವಿಧಾನ, (iv) ಉಷ್ಣಲೇಖೀಯ ವಿಧಾನ, (v) ವಿದ್ಯುಚ್ಛಾಯಾಗ್ರಹಣ ವಿಧಾನ.

(i) ನೀಲನಕಾಶೆ ವಿಧಾನ : ನಕ್ಷೆ ಅಥವಾ ರೇಖಾಚಿತ್ರದ ಮೂಲಪ್ರತಿಯನ್ನು ಒಂದು ಟ್ರಾನ್ಸ್‌ಲ್ಯೂಸೆಂಟ್ ಹಾಳೆಯ ಮೇಲೆ ಮೊದಲು ನಮೂದಿಸಿಕೊಳ್ಳಲಾಗುತ್ತದೆ. ಇದು ಸಾಮಾನ್ಯವಾಗಿ ರೇಖಿಸುವ ಬಟ್ಟೆಯೋ ಇಲ್ಲವೇ ಕಾಗದವೋ ಅಥವಾ ನಾರಗಸೆಯ ಬಟ್ಟೆಯೋ ಆಗಿರಬಹುದು. ಇದನ್ನು ಫೆರ್ರೊಪ್ರಸ್ಸಿಯೇಟ್ ಎಂಬ ರಾಸಾಯನಿಕ ದ್ರಾವಣವನ್ನು ಲೇಪಿಸಿರುವ ಸೂಕ್ಷ್ಮಗ್ರಾಹಿ ಕಾಗದದ ಮೇಲೆ ಇಡಲಾಗುತ್ತದೆ. ಅನಂತರ ಬೆಳಕಿನ ಕಿರಣಗಳನ್ನು ಒಂದು ನಿರ್ದಿಷ್ಟ ಅವಧಿಗೆ ಹಾಳೆಯ ಮೇಲೆ ಹಾಯಿಸಲಾಗುತ್ತದೆ. ಸೂಕ್ಷ್ಮಗ್ರಾಹಿ ಕಾಗದದ ಕೆಲವು ಭಾಗಗಳು ಮಾತ್ರ ನಕ್ಷೆಯ ಪ್ರತಿರೂಪವನ್ನು ಬೆಳೆಸಿಕೊಳ್ಳುತ್ತವೆ. ಅನಂತರ ಈ ಸೂಕ್ಷ್ಮಗ್ರಾಹಿ ಕಾಗದವನ್ನು ಅಮೋನಿಯ ಅನಿಲದ ಆವಿಗೆ ಕೆಲವು ಮಿನಿಟುಗಳ ಕಾಲ ಒಡ್ಡಿದರೆ ನಕ್ಷೆ ಮೂಡಿದ ಭಾಗಗಳು ನೀಲಿ ಬಣ್ಣದಿಂದ ಗೋಚರಿಸುತ್ತವೆ. ಇದರಿಂದ ಮೂಡಿಬಂದ ಚಿತ್ರವನ್ನು ಬ್ಲೂಪ್ರಿಂಟ್ ಎಂದೂ ಕರೆಯುವುದಿದೆ. ಇದಕ್ಕೆ ಫೆರ್ರೋ ಪ್ರಸ್ಸಿಯೇಟ್ ವಿಧಾನ ಎಂದೂ ಹೆಸರಿದೆ.

(ii) ಬ್ಲೂಪ್ರಿಂಟ್ ವಿಧಾನವನ್ನೇ ಬಹುಮಟ್ಟಿಗೆ ಹೋಲುವ ಡೈಆಜೋ ವಿಧಾನದಲ್ಲಿ ಡೈಆಜ಼ೋ ರಸಾಯನಕ್ರಿಯೆಗೊಳಪಟ್ಟ ಸೂಕ್ಷ್ಮಗ್ರಾಹಿ ಕಾಗದದ ಉಪಯೋಗ ಉಂಟು. ಬಿಳಿಯ ಕಾಗದದ ಮೇಲೆ ಕಪ್ಪು ಮಿಶ್ರಿತ ನೀಲಿಬಣ್ಣದ ನಕಲು ಸಿದ್ಧಗೊಳ್ಳುತ್ತದೆ.

(iii) ಪ್ರಸರಣೆ-ವರ್ಗಾವಣೆ ವಿಧಾನ : ಜರ್ಮನಿಯ ಆಗ್ಫ ಮತ್ತು ಬೆಲ್ಜಿಯಮಿನ ಗೇವರ್ಟ್ ಸಂಸ್ಥೆಗಳು ಈ ವಿಧಾನವನ್ನು ಮೊಟ್ಟಮೊದಲಿಗೆ ಯುರೋಪಿನಲ್ಲಿ ಬಳಸಿದುವು.

ಯಾವುದೇ ಬಗೆಯ ಮೂಲಪ್ರತಿಯನ್ನಾದರೂ ಈ ವಿಧಾನದಿಂದ ನಕಲಿಸಬಹುದು. ಚಿನ್ನದ ಹಾಲೈಡನ್ನು ಲೇಪಿಸಿರುವ ಹಾಳೆಯನ್ನುಪಯೋಗಿಸಿ ಸೂಕ್ಷ್ಮಗ್ರಾಹಿ ವಿಷಮ ಪ್ರತಿಯ ನಕಲಚ್ಚನ್ನು ಮೊದಲು ತಯಾರಿಸಿಕೊಳ್ಳಲಾಗುತ್ತದೆ. ಈ ವಿಷಮಪ್ರತಿಯ ಒಂದು ಪಾರ್ಶ್ವದಲ್ಲಿ ಮೂಲಪ್ರತಿಯನ್ನು ಇಟ್ಟು ಮತ್ತೊಂದು ಪಾರ್ಶ್ವಕ್ಕೆ ಅಸೂಕ್ಷ್ಮಗ್ರಾಹಿ ಧನಕಾಗದದ ಹಾಳೆಯನ್ನು ಇಡಲಾಗುತ್ತದೆ. ಅನಂತರ ಬೆಳಕಿನ ಕಿರಣಗಳನ್ನು ವಿಷಮಹಾಳೆಯ ಮೂಲಕ ಹಾಯಿಸಿದಾಗ, ಕಿರಣಗಳು ಮೂಲಪ್ರತಿಯ ಮೇಲ್ಮೈಯಿಂದ ಪ್ರತಿಫಲಿತಗೊಳ್ಳುತ್ತವೆ. ವಿಷಮ ಪ್ರತಿಯ ಕೆಲವು ಅಂಶಗಳು ಮಾತ್ರ ಧನಕಾಗದಕ್ಕೆ ವರ್ಗಾವಣೆಯಾಗುತ್ತವಾಗಿ ಮೂಲ ಚಿತ್ರದ ಬಿಂಬ ಮೂಡುತ್ತದೆ. ಈ ವಿಧಾನವನ್ನನುಸರಿಸಿ ತಯಾರಿಸಿದ ಧನಪ್ರತಿಗಳನ್ನು ಬಹಳ ಕಾಲದವರೆಗೆ ಸಂಗ್ರಹಿಸಿಡಬಹುದು.

ಪಾರದೀಪಕ ಅಚ್ಚೊತ್ತಿಗೆಯನ್ನು (ಟ್ರಾನ್ಸ್‌ಲ್ಯೂಸೆಂಟ್ ಮ್ಯಾಟ್ರಿಕ್ಸ್) ತಯಾರಿಸಿ ಡೈಆಝೋ ವಿಧಾನವನ್ನು ಬಳಸಿಕೊಂಡು ಪ್ರತಿಗಳನ್ನು ತೆಗೆಯುವ ಆಝೋಫ್ಲೆಕ್ಸ್ ಎಂಬ ವಿಧಾನವೂ ಉಂಟು. ಇದನ್ನು ಮೊದಲಿಗೆ ವ್ಯಾನ್ ಡರ್ ಗ್ರಿಂಟನ್ ಎಂಬಾತ ಹಾಲೆಂಡಿನಲ್ಲಿ ಬಳಸಿದ.

ಆಗ್ಫ ಮತ್ತು ಗೇವರ್ಟ್ ಸಂಸ್ಥೆಗಳು ಬಳಕೆಗೆ ತಂದ ವೆರಿಫ್ಯಾಕ್ಸ್ ವಿಧಾನದಲ್ಲಿ ಅಚ್ಚೊತ್ತಿಕೆ ಸಿಲ್ವರ್ ಹಾಲೈಡಿನಿಂದ ಕೂಡಿರುವ ಬಣ್ಣದ ಎಮಲ್ಷನ್ನಿನಿಂದ ಲೇಪಿತವಾಗಿರುತ್ತದೆ. ಈ ಅಚ್ಚೊತ್ತಿಕೆಯಿಂದ ಸೂಕ್ಷ್ಮಗ್ರಾಹಕ ವಿಷಮಪ್ರತಿಯನ್ನು ತಯಾರಿಸುತ್ತಾರೆ. ಈ ಪ್ರತಿಯನ್ನು ಧನಕಾಗದದ ಸಂಪರ್ಕದಲ್ಲಿ ಇಟ್ಟಾಗ ಅಚ್ಚೊತ್ತಿಕೆಯ ಬಣ್ಣದ ಎಮಲ್ಷನ್ನಿನ ಭಾಗಗಳು ಮೂಲಪ್ರತಿಯ ಬಿಂಬವನ್ನು ಧನಕಾಗದಕ್ಕೆ ವರ್ಗಾಯಿಸುತ್ತವೆ. ಈ ವಿಧಾನದಿಂದ ಐದು ಪ್ರತಿಗಳನ್ನು ತೆಗೆಯಬಹುದು.

(iii) ಉಷ್ಣಲೇಖೀಯ ವಿಧಾನ : ಉಷ್ಣವನ್ನು ಹೀರಿಕೊಳ್ಳುವ ಒಂದು ವಿಶೇಷ ಕಾಗದದ (ಉಷ್ಣಗ್ರಾಹಿ) ಮೇಲೆ ಮೂಲಪ್ರತಿಯನ್ನು ಇಟ್ಟು, ಅದರ ಮೇಲೆ ಅತಿರಕ್ತ (ಇನ್‌ಫ್ರಾ ರೆಡ್) ಕಿರಣಗಳನ್ನು ಹಾಯಿಸಿದಾಗ ಉಷ್ಣಸಹಿತವಾಗಿರುವ ಈ ಕಿರಣಗಳು ಮೂಲಪ್ರತಿಯ ಮೂಲಕ ಹಾದು, ಉಷ್ಣಗ್ರಾಹಿ ಕಾಗದದ ಮೇಲೆ ಮೂಲದ ತದ್ವತ್ ಬಿಂಬ ಮೂಡುತ್ತದೆ. ಹೀಗಾಗಿ ಮೂಲದ ನಕಲು ತಯಾರಾಗುತ್ತದೆ. ಇದನ್ನು ಥರ್ಮೋಫ್ಯಾಕ್ಸ್ ವಿಧಾನವೆಂತಲೂ ಕರೆಯುವುದಿದೆ.

ವಿಷಮ-ಧನ ಪ್ರತಿಫಲನ ವಿಧಾನವನ್ನನುಸರಿಸಿ ನಕಲನ್ನು ತೆಗೆಯುವ ಸಿಲ್ವರ್ ನಕಲಿಸುವ ವಿಧಾನವೂ ಉಂಟು.

(iv) ವಿದ್ಯುಚ್ಛಾಯಾಗ್ರಹಣ ವಿಧಾನಗಳು: ಬೆಳಕಿಗೆ ಗ್ರಾಹ್ಯವಾದ ಕೆಲವಾರು ಧಾತುಗಳ ಎಮಲ್ಷನ್ನಿನ ಲೇಪನವುಳ್ಳ ಫಲಕದ್ದೊ ಅಥವಾ ಉರುಳೆಯದೊ ನಕಲಚ್ಚುಗಳನ್ನು (ಇಂಟರ್ ಮೀಡಿಯೇಟ್ ಮಾಸ್ಟರ್) ತಯಾರಿಸಿ ಅನಂತರ ಸಾಧಾರಣ ಇಲ್ಲವೇ ಸೂಕ್ಷ್ಮಗ್ರಾಹಿ ಕಾಗದದ ಮೇಲೆ ನಕಲನ್ನು ತೆಗೆಯುತ್ತಾರೆ. ಎಲೆಕ್ಟ್ರೋಫ್ಯಾಕ್ಸ್ ಎಂದೆನ್ನುವ ಒಂದು ವಿಧಾನದಲ್ಲಿ ನಕಲೆತ್ತುವ ಕಾಗದ ಸ್ಥಿರವಿದ್ಯುದಾವೇಶವನ್ನು ಹೊಂದಿರುತ್ತದೆ. ಫೋಟೋನಿಕ್ ರಿಪ್ರೊಡ್ಯೂಸರ್ ಎಂಬ ಮತ್ತೊಂದು ವಿಧಾನದಲ್ಲಿ ಲೋಹದ ತೆಳುಪೊರೆಯ ಮೇಲೆ ಮೂಲಪ್ರತಿಯ ಸ್ಥಿರವಿದ್ಯುತ್‌ಬಿಂಬವನ್ನು ಮೂಡಿಸಿ ಪ್ರತಿಯ ನಕಲನ್ನು ತೆಗೆಯುತ್ತಾರೆ.

ಫೋಟೋಸ್ಟ್ಯಾಟ್ ವಿಧಾನ : ಫೋಟೋಸ್ಟ್ಯಾಟ್ ಎಂಬ ಪದ ಒಂದು ನಿರ್ದಿಷ್ಟ ಉಪಕರಣದ ಮತ್ತು ಈ ವಿಧಾನವನ್ನನುಸರಿಸಿ ತಯಾರಾದ ಪ್ರತಿಗಳಿಗಿರುವ ಒಂದು ವ್ಯಾವಹಾರಿಕ ಹೆಸರು ಮಾತ್ರ. ದಸ್ತಾವೇಜು ಮುಂತಾದ ದಾಖಲೆಗಳ ಪ್ರತಿಗಳನ್ನು ತಯಾರಿಸುವಲ್ಲಿ ಈ ವಿಧಾನದ ಬಳಕೆ ಉಂಟು.

ಈ ವಿಧಾನದ ಯಂತ್ರಸಲಕರಣೆಯ ಭಾಗಗಳು ಹೀಗಿವೆ. ಒಂದು ದೊಡ್ಡ ಕ್ಯಾಮೆರ. ಇದರ ಮಸೂರಕ್ಕೆ ಒಂದು ಆಶ್ರಕೀಯ ಕನ್ನಡಿಯನ್ನು ಹೊಂದಿಸಿರಲಾಗುತ್ತದೆ. ಈ ಕ್ಯಾಮೆರದಲ್ಲಿ 350' ಉದ್ದದ ಸೂಕ್ಷ್ಮಗ್ರಾಹಿ ಕಾಗದದ ಸುರುಳಿ ಇರಲು ಅವಕಾಶವುಂಟು. ಮೂಲಪ್ರತಿಯನ್ನು ಕ್ಯಾಮರದ ಮಸೂರದ ಅಡಿಯಲ್ಲಿಟ್ಟು ಪ್ರತಿಯ ಮೇಲೆ ಪ್ರಕಾಶಮಾನವಾದ ಬೆಳಕನ್ನು ಹಾಯಿಸಿದಾಗ, ಮೂಲಚಿತ್ರದ ವಿಪರ್ಯಯ ಬಿಂಬ ಸೂಕ್ಷ್ಮಗ್ರಾಹಿ ಕಾಗದದ ಮೇಲೆ ಬೀಳುತ್ತದೆ. ಈ ಬಿಂಬವನ್ನು ಕನ್ನಡಿ ಅವಿಪರ್ಯಯಗೊಳಿಸುತ್ತದೆ. ಈ ಸೂಕ್ಷ್ಮಗ್ರಾಹಿ ಕಾಗದವನ್ನು ಹೊರತೆಗೆದು ಛಾಯಾಚಿತ್ರ ಗ್ರಹಣದ ಸಂಸ್ಕರಣೆಗಳಿಗೆ ಒಳಪಡಿಸುತ್ತಾರೆ. ಓದಲು ಸಾಧ್ಯವಾಗುವಂಥ ವಿಷಮಪ್ರತಿ ತಯಾರಾಗುತ್ತದೆ. ಇದನ್ನು ಫೋಟೋಸ್ಟ್ಯಾಟ್ ಯಂತ್ರಕ್ಕೆ ಕೊಟ್ಟು ಮೂಲಪ್ರತಿಯ ಪ್ರತಿಕೃತಿಯನ್ನು ಪಡೆಯಲಾಗುತ್ತದೆ. ಯಂತ್ರದ ಪರಿಮಿತಿಗಳಿಗೆ ಅನುಗುಣವಾಗಿ ವಿಸ್ತರಿತ ಪ್ರತಿಗಳನ್ನು ಪಡೆಯಲು ಸಾಧ್ಯವಿದೆ. ಪೆಡೆಸ್ಟಲ್ ಮತ್ತು ವಾಲ್ ಎಂಬ ಎರಡು ಬಗೆಯ ಫೋಟೋಸ್ಟ್ಯಾಟ್ ಯಂತ್ರಗಳು ಸಾಮಾನ್ಯವಾಗಿ ಬಳಕೆಯಲ್ಲಿವೆ. ಇವೆರಡರಲ್ಲೂ 18" ಅಗಲದ ಸುರುಳಿಗಳನ್ನು ಬಳಸಬಹುದು. 40×30 ಇಂಚು ಉದ್ದಗಲದ ದಾಖಲೆಗಳ 18×24 ಇಂಚು ಉದ್ದಗಲದ ಪ್ರತಿಗಳನ್ನು ಈ ಯಂತ್ರದಿಂದ ಪಡೆಯಬಹುದು.

ಜ಼ೀರೋಗ್ರಫಿ ವಿಧಾನ : ಬಿಂಬಪ್ರತೀಕರಣದ ವೈದ್ಯುತ ಮತ್ತು ಯಾಂತ್ರಿಕ ವಿಧಾನ ಇದು. ಈ ವಿಧಾನದಲ್ಲಿ ರಾಸಾಯನಿಕಗಳಾವುವೂ ಇರವು. ಆದ್ದರಿಂದಲೇ ಇದನ್ನು ಶುಷ್ಕ ವಿಧಾನವೆಂದೂ ಕರೆಯುವುದಿದೆ. ಛಾಯಾಗ್ರಾಹೀಪಟಲವೆಂದೆನಿಸುವ ಹಾಳೆಯ ಮೇಲ್ಮೈಗೆ ಧನವಿದ್ಯುದಾವೇಶವನ್ನು ಒದಗಿಸಲಾಗುತ್ತದೆ. ಕ್ಯಾಮರಾದಿಂದ ಛಾಯಾಗ್ರಹಿಸುವಂತೆಯೇ ಈ ಗ್ರಾಹೀಪಟಲವನ್ನು ಕ್ಯಾಮರದೊಳಗೆ ಅಳವಡಿಸಿ ಮೂಲಪ್ರತಿಯನ್ನು ಛಾಯಾಚಿತ್ರಿಸಿಕೊಳ್ಳಲಾಗುತ್ತದೆ. ಮೂಲಪ್ರತಿಯಿಂದ ಬೆಳಕಿನ ಕಿರಣಗಳು ಗ್ರಾಹಕಪಟಲವನ್ನು ಮುಟ್ಟಿದಾಗ ಬಿಂಬ ಬಿದ್ದ ಜಾಗದಲ್ಲಿ ಮಾತ್ರ ಧನ ಆವೇಶಗಳು ಅದೃಶ್ಯವಾಗಿ ಉಳಿದ ಜಾಗದಲ್ಲಿ ಇವು ಉಳಿಯುತ್ತವೆ. ಇದರಿಂದಾಗಿ ಮೂಲಪ್ರತಿಯ ತದ್ವತ್ ಗುಪ್ತಬಿಂಬಗ್ರಾಹೀ ಪಟಲದ ಮೇಲೆ ಮೂಡುತ್ತದೆ. ಋಣ ವಿದ್ಯುದಾವಿಷ್ಟ ಪುಡಿಯನ್ನು ಈ ಪಟಲದ ಮೇಲೆ ಲೇಪಿಸಿದರೆ ಮೂಡಿದ ಬಿಂಬಕ್ಕೆ ಆ ಪುಡಿ ಅಂಟಿಕೊಂಡು ಬಿಂಬ ಸ್ಫುಟವಾಗುತ್ತದೆ. ಪುಡಿಸಂಸ್ಕರಣೆಯನ್ನು ಮಾಡಿದ ಬಳಿಕ ಈ ಗ್ರಾಹೀಪಟಲದ ಮೇಲೆ ಒಂದು ಕಾಗದದ ಹಾಳೆಯನ್ನಿರಿಸಿದಾಗ ಧನವಿದ್ಯುದಾವೇಶಗಳನ್ನು ಅದು ಪಡೆಯುತ್ತದೆ. ಧನವಿದ್ಯುದಾವಿಷ್ಟ ಕಾಗದದ ಹಾಳೆ ಪುಡಿಯನ್ನು ಆಕರ್ಷಿಸಿಕೊಳ್ಳುವುದರಿಂದ ಕಾಗದದ ಮೇಲೆ ಧನಬಿಂಬ ಮೂಡುತ್ತದೆ. ಧನಬಿಂಬದ ಮುದ್ರಿತ ಹಾಳೆಯನ್ನು ಉಷ್ಣವಿಸರಣಕಾರಿಗೆ (ಹೀಟ್ ರೇಡಿಯೇಟರ್) ಒಡ್ಡಿದಾಗ ಪುಡಿ ಕಾಗದದ ಮೇಲೆ ಚೆನ್ನಾಗಿ ಅಂಟಿಕೊಂಡು ಶಾಶ್ವತಪ್ರತಿ ಲಭಿಸುತ್ತದೆ.

ಎಲೆಕ್ಟ್ರೊಫ್ಯಾಕ್ಸ್ ವಿಧಾನ, ಫೋಟ್ರೋನಿಕ್ ವಿಧಾನ, ಡೈಲೈನ್ ಕ್ರಮ, ಹೆಕ್ಟೊಗ್ರಾಫಿಕ್ ವಿಧಾನ, ಡೈರೆಕ್ಟ್ ಮತ್ತು ಆಫ್‌ಸೆಟ್ ಲಿಥೋಗ್ರಫಿ ಮುಂತಾದವು ಪ್ರತೀಕರಣದಲ್ಲಿ ಬಳಕೆಯಲ್ಲಿರುವ ಇನ್ನಿತರ ಪ್ರಕ್ರಮಗಳು. (ಎಸಿಎಚ್.)

## VII ಗ್ರಂಥಾಲಯದ ಸಂಘಗಳು

ಗ್ರಂಥಾಲಯಗಳ ಬೆಳವಣಿಗೆಯಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಘಗಳ ಪಾತ್ರ ಹಿರಿದು. ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ ಮೂಲಭೂತ ತೊಂದರೆಗಳನ್ನು ನಿವಾರಿಸುವಲ್ಲಿ, ರಾಷ್ಟ್ರೀಯವಾಗಿ ಹಾಗೂ ಅಂತಾರಾಷ್ಟ್ರೀಯವಾಗಿ ಗ್ರಂಥಾಲಯಗಳ ವ್ಯಹಾರಗಳಲ್ಲಿ ಏಕತೆಯನ್ನು ತರುವಲ್ಲಿ, ಗ್ರಂಥಾಲಯಗಳ ಮೂಲೋದ್ದೇಶಗಳನ್ನು ಶೀಘ್ರವಾಗಿ ನೆರವೇರಿಸುವಲ್ಲಿ ಈ ಸಂಘಗಳು ಸಾಕಷ್ಟು ಶ್ರಮಿಸಿವೆ. ವಿಶ್ವಸಂಸ್ಥೆಯ ಅಂಗವಾದ ಯುನೆಸ್ಕೊ ಇಂಥ ಸಂಸ್ಥೆಗಳಲ್ಲೊಂದು. ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಯುಕ್ತ ಮಹಾಸಂಘವೊಂದಿದೆ. ಇಂಥ ಸಂಘಗಳ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

**1. ಯುನೆಸ್ಕೊ ಮತ್ತು ಗ್ರಂಥಾಲಯಗಳ ಅಭಿವೃದ್ಧಿ :** ವಿಶ್ವಸಂಸ್ಥೆಯ 14 ಅಂಗಸಂಸ್ಥೆಗಳಲ್ಲಿ ಒಂದಾದ ಯುನೆಸ್ಕೊ 1946ರ ನವೆಂಬರ್ 4ರಂದು ಅಸ್ತಿತ್ವಕ್ಕೆ ಬಂತು. ಶಿಕ್ಷಣ, ವಿಜ್ಞಾನ, ಸಂಸ್ಕೃತಿಗಳ ಬೆಳವಣಿಗೆಗೆ ಹಾಗೂ ಜ್ಞಾನಪ್ರಸಾರಗಳಲ್ಲಿ ನೆರವಾಗಲು ಇದನ್ನು ರೂಪಿಸಲಾಯಿತು. ಇದರ ಕಾರ್ಯವ್ಯಾಪ್ತಿ ನಾನಾ ರಾಷ್ಟ್ರಗಳನ್ನು ಒಳಗೊಂಡಿದೆ. ಅಂತಾರಾಷ್ಟ್ರೀಯ ಸಹಕಾರದಿಂದ ನಾನಾ ಭಾಷೆಗಳ ಮಾಧ್ಯಮದಲ್ಲಿ ಇದರ ಕಾರ್ಯ ನಡೆಯುತ್ತ ಬಂದಿದೆ. ಪರಸ್ಪರ ಅರಿವು, ಅಭಿವೃದ್ಧಿಯನ್ನು ಸಾಧಿಸಲು ಸಾಕ್ಷರತೆ ಅವಶ್ಯವೆಂದು ಭಾವಿಸಿದ ಈ ಸಂಸ್ಥೆ ಗ್ರಂಥ ಹಾಗೂ ಗ್ರಂಥಾಲಯಗಳ ಪಾತ್ರವನ್ನು ಮನಗಂಡು ಗ್ರಂಥಾಲಯಗಳ ಅಭಿವೃದ್ಧಿಗಾಗಿ ವಿಶೇಷ ಗಮನವನ್ನು ಹರಿಸಿದೆ.

**ಗ್ರಂಥಗಳ ಅಂತಾರಾಷ್ಟ್ರೀಯ ವಿನಿಮಯ :** ಗ್ರಂಥಾಲಯ ಕ್ಷೇತ್ರದಲ್ಲಿ ಯುನೆಸ್ಕೊದ ಕಾರ್ಯತತ್ಪರತೆ, ಸಾಧನೆ, ಅದರ ನೀತಿನಿಯಮಗಳು ಮತ್ತು ಅನುಷ್ಠಾನ ಮಾದರಿಯನ್ನು ಮೂರು ನಿಟ್ಟುಗಳಲ್ಲಿ ಗುರುತಿಸಬಹುದು: 1. ಗ್ರಂಥಾಲಯಗಳ ಅಂತಾರಾಷ್ಟ್ರೀಯ ಸಂಘಗಳ ಸಂಘಟನೆ ಮತ್ತು ಅವುಗಳ ಪ್ರಕಟಣೆಗಳ ವಿನಿಮಯದಲ್ಲಿ ನೆರವಾಗುವುದು; 2. ಸಾರ್ವಜನಿಕ ಮತ್ತು ರಾಷ್ಟ್ರೀಯ ಗ್ರಂಥಾಲಯಗಳ ಅಭಿವೃದ್ಧಿಗೆ ಸಹಾಯ ಮಾಡುವುದು ಮತ್ತು 3. ಗ್ರಂಥ ಮಾಹಿತಿ ಸೂಚೀಕರಣ ಮತ್ತು ಪ್ರಲೇಖನ ಕಾರ್ಯಗಳಲ್ಲಿ ನೆರವಾಗುವುದು. ಈ ಮೂರು ಬಗೆಯ ಕಾರ್ಯಗಳು ಪೂರಕವಾಗಿವೆ.

ಎರಡನೆಯ ಮಹಾಯುದ್ಧಾನಂತರ ದಿನಗಳಲ್ಲಿ ಪ್ರಪಂಚದ ಅನೇಕ ಗ್ರಂಥಾಲಯಗಳು ಬಹು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದವು. ಯುದ್ಧದ ನೇರ ಪೆಟ್ಟಿನಿಂದ ಗಾಸಿಗೊಂಡ ಅನೇಕ ರಾಷ್ಟ್ರಗಳ ಪ್ರಮುಖ ಗ್ರಂಥಾಲಯಗಳು ತಮ್ಮ ಪುನರುಜ್ಜೀವನಕ್ಕೆ ದಾರಿಗಾಣದೆ ಇದ್ದವು. ಈ ಸಮಸ್ಯೆಯ ನಿವಾರಣೆಗೆ ಯುನೆಸ್ಕೊ ನೀಡಿದ ಪರಿಹಾರ ಸ್ತುತ್ಯಾರ್ಹವಾದುದ್ದು. ಗ್ರಂಥಗಳ ಹೆಚ್ಚುವರಿ ಪ್ರತಿಗಳನ್ನು ಇಂಥಿಂಥ ಗ್ರಂಥಾಲಯಗಳಿಗೆ ಉಚಿತವಾಗಿ ಕೊಡಬೇಕೆಂದು ಯುನೆಸ್ಕೊ ಮಾಡಿಕೊಂಡ ಮನವಿಯನ್ನು ಮನ್ನಿಸಿ ಅನೇಕ ಗ್ರಂಥಾಲಯಗಳು ತಮ್ಮ ಆವಶ್ಯಕತೆಗಿಂತ ಹೆಚ್ಚಾದ ಪ್ರತಿಗಳನ್ನು ಉಡುಗೊರೆಯಾಗಿ ನೀಡಿದವು. ಇಲ್ಲವೆ ಬೇರೆ ಬೇರೆ ಗ್ರಂಥಗಳಿಗೆ ವಿನಿಮಯ ಮಾಡಿಕೊಂಡವು. ವಿವಿಧ ರಾಷ್ಟ್ರಗಳು ತಮ್ಮ ಅಧಿಕೃತ ಪ್ರಕಟಣೆಗಳನ್ನು ಬೇರೆಯವುಗಳೊಡನೆ ವಿನಿಮಯ ಮಾಡಿಕೊಳ್ಳುವ ಯೋಜನೆಯೂ ಜಾರಿಗೆ ಬಂತು. ಪ್ರಕಟನೆಗಳ ಅಂತಾರಾಷ್ಟ್ರೀಯ ವಿನಿಮಯ ಕೈಪಿಡಿ ಎಂಬ ಗ್ರಂಥವನ್ನು

ಈ ಸಂಸ್ಥೆ ಪ್ರಕಟಿಸಿ, ಅದನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಿದೆ. ಇಂಥ ವಿನಿಮಯ ಕಾರ್ಯದಲ್ಲಿ ಸಂಭವಿಸಬಹುದಾದ ಅನೇಕ ಕುಂದುಕೊರತೆಗಳನ್ನು ನಿವಾರಿಸಿ ಅದನ್ನು ಸುಗಮಗೊಳಿಸುವ ವಿಧಾನಗಳನ್ನು ಕಂಡುಹಿಡಿಯಲು ಅನೇಕ ವಿಚಾರಗೋಷ್ಠಿಗಳನ್ನು ಏರ್ಪಡಿಸಿದೆ. ಯುನೆಸ್ಕೊ ಬುಲೆಟಿನ್ ಫಾರ್ ಲೈಬ್ರರೀಸ್ ಎಂಬ ಪತ್ರಿಕೆ ಸತತವಾಗಿ ಈ ಬಗ್ಗೆ ಮಾಹಿತಿ ಪ್ರಕಟಿಸುತ್ತದೆ.

ಅಭಿವೃದ್ಧಿ ಯೋಜನೆಗಳು ಪ್ರಾರಂಭದಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ಮಾತ್ರ ಸೀಮಿತವಾಗಿದ್ದವು. ಅವು ಇತ್ತೀಚೆಗೆ ಹೆಚ್ಚು ವ್ಯಾಪಕಗೊಂಡು ಎಲ್ಲ ಬಗೆಯ ಗ್ರಂಥಗಳನ್ನೂ ಒಳಗೊಂಡಿವೆ. ಇಂಥ ಯೋಜನೆಗಳಲ್ಲಿ ಯುನೆಸ್ಕೊ ಸಂಸ್ಥೆ ಅನೇಕ ಪರಿಣತರನ್ನು ನೇಮಿಸಿಕೊಂಡು ಅವರ ಸೇವೆಯನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೊಸ ಗ್ರಂಥಾಲಯಗಳನ್ನು ನಿರ್ಮಿಸುವುದಕ್ಕೂ ಆಗಲೇ ಅಸ್ತಿತ್ವದಲ್ಲಿದ್ದ ಗ್ರಂಥಾಲಯಗಳ ಜೀರ್ಣೋದ್ಧಾರಕ್ಕೂ ಉಪಯೋಗಿಸಿಕೊಳ್ಳುತ್ತಿದೆ. ಈ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳು ವಿಶೇಷವಾಗಿ ಲ್ಯಾಟಿನ್ ಅಮೆರಿಕ, ಏಷ್ಯ ಮತ್ತು ಆಫ್ರಿಕ ರಾಷ್ಟ್ರಗಳಲ್ಲಿ ನಡೆಯುತ್ತಿವೆ.

ಪ್ರಪಂಚದ ಅನೇಕ ಗ್ರಂಥಾಲಯಗಳು ಹಾಗೂ ಪ್ರಲೇಖನ ಕೇಂದ್ರಗಳಿಗೆ ನೀಡುತ್ತಿರುವ ಸಹಾಯವಲ್ಲದೆ ತಜ್ಞರ ಸಲಹೆ, ಮಾರ್ಗದರ್ಶನ ನೀಡಲು ಅಂತಾರಾಷ್ಟ್ರೀಯ ಪ್ರಲೇಖನ ಸಂಘ (ಎಫ್‍ಐಡಿ) ಮತ್ತು ಅಂತಾರಾಷ್ಟ್ರೀಯ ಗ್ರಂಥಾಲಯ ಮಹಾ ಸಂಘಗಳು (ಐಎಫ್‍ಎಲ್‍ಎ) ಯುನೆಸ್ಕೊದ ಗ್ರಂಥಾಲಯ ಕಾರ್ಯಕ್ರಮಗಳಲ್ಲಿ ಸಲಹಾ ಸಮಿತಿಗಳಾಗಿ ಕೆಲಸ ಮಾಡುತ್ತಿವೆ.

ಗ್ರಂಥಾಲಯಗಳಿಗೆ ಯುನೆಸ್ಕೊ ನೀಡುತ್ತಿರುವ ತಾಂತ್ರಿಕಸಹಾಯ ಮತ್ತು ತಜ್ಞರ ಸಲಹೆಗಳು ಬಹುಮಟ್ಟಿಗೆ ಪ್ಯಾರಿಸಿನಲ್ಲಿ ಜರುಗಿದ 1949 ಮತ್ತು 1950ರ ಎರಡು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳಿಗೆ ಅನುಸಾರವಾಗಿದೆ. ಯುನೆಸ್ಕೊದ ಪ್ರಧಾನ ನಿರ್ದೇಶಕರಿಗೆ ಈ ವಿಷಯದಲ್ಲಿ ಕಾಲಕಾಲಕ್ಕೆ ಸಲಹೆಗಳನ್ನು ನೀಡಲು ತಜ್ಞರ ವಿಶೇಷ ಸಮಿತಿಗಳನ್ನು ನೇಮಿಸಲಾಗಿದೆ.

ಗ್ರಂಥಾಲಯಗಳಲ್ಲಿ ಅನುಸರಿಸಬೇಕಾದ ಸೂಚೀಕರಣ ನಿಯಮಗಳನ್ನು ರೂಪಿಸಲು 1961ರಲ್ಲಿ ಪ್ಯಾರಿಸ್ ನಗರದಲ್ಲಿ ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಘ ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನವೊಂದನ್ನು ಏರ್ಪಡಿಸಿತ್ತು. ಸೂಚೀಕರಣ ನಿಯಮಗಳನ್ನು ಬಹುಮಟ್ಟಿಗೆ ಸರ್ವಸಾಮಾನ್ಯವಾಗುವಂತೆ ಮಾಡುವುದರಲ್ಲಿ ಈ ಸಮ್ಮೇಳನ ಯಶಸ್ವಿಯಾಯಿತು. 1962ರಲ್ಲಿ ಪ್ರಕಟವಾದ ಆಂಗ್ಲೊ ಅಮೆರಿಕನ್ ಸೂಚೀಕರಣ ನಿಯಮಗಳು ಎಂಬ ಗ್ರಂಥ ಈ ಸಮ್ಮೇಳನದ ಫಲಶ್ರುತಿಯನ್ನು ಸಾರುತ್ತದೆ.

ಗ್ರಂಥಸೂಚಿಗಳನ್ನು ತಯಾರಿಸುವಾಗ, ಅದರಲ್ಲೂ ಮಾಹಿತಿಸೂಚಿಗಳನ್ನು ತಯಾರಿಸುವಾಗ ಸೂಚೀಕಾರ ಸರ್ವಮಾನ್ಯ ಪದಗಳನ್ನು ಉಪಯೋಗಿಸಬೇಕಾಗುತ್ತದೆ. ಒಂದೇ ವಸ್ತು ಅಥವಾ ಒಂದೇ ವಿಷಯದ ಬಗ್ಗೆ ಹಲವಾರು ಪದಗಳು ಬಳಕೆಯಲ್ಲಿರಬಹುದು. ಅಲ್ಲದೆ ಒಂದೇ ಪದಕ್ಕೆ ಹಲವಾರು ಅರ್ಥ ವಿವರಣೆಗಳಿರಬಹುದು. ಇಂಥ ಸಂದರ್ಭಗಳಲ್ಲಿ ಸೂಚೀಕರಣದ ಕೆಲಸ ಮತ್ತಷ್ಟು ಕ್ಲಿಷ್ಟವಾಗುತ್ತದೆ. ವಿಜ್ಞಾನಗಳಲ್ಲಿ ಬಳಕೆಯಾಗುತ್ತಿರುವ ಪದಗಳು ಸರ್ವಸಾಮಾನ್ಯವಾಗಿರುವುದು ಇನ್ನೂ ಆವಶ್ಯಕ. ಯುನೆಸ್ಕೊ ಸಂಸ್ಥೆ ಈ ದಿಶೆಯಲ್ಲಿಯೂ ಶ್ಲಾಘನೀಯ ಕೆಲಸ ಮಾಡಿದೆ. ಸೂಚಿಗಳಲ್ಲಿ ಬಳಸಲಾಗುವ ಪದಗಳ ಗುಣಮಟ್ಟ ಮತ್ತು ಏಕರೂಪತೆಗಳನ್ನು ಕಾಪಾಡಿಕೊಂಡು ಬರಲು ಸಹಾಯವಾಗುವಂತೆ ವೊಕ್ಯಾಬುಲೇರಿಯಂ ಬಿಬ್ಲಿಯೊಥಕರಿ ಎಂಬ ಸೂಚೀಪದಗಳ ವಿವರಣ ಪಟ್ಟಿಯೊಂದನ್ನು ಪ್ರಕಟಿಸಿದೆ.

ಗ್ರಂಥಸೂಚಿಯ ವಿಷಯದಲ್ಲಿ ಯುನೆಸ್ಕೊದ ಕೊಡುಗೆ ಅದ್ವಿತೀಯವಾದುದು. ಉದಾಹರಣೆಗೆ ಅದು ಪ್ರಕಟಿಸುತ್ತಿರುವ ಭಾಷಾಂತರ ಸೂಚಿ (ಇಂಡಕ್ಸ್ ಟ್ರಾನ್ಸ್‍ಲೇಷನಂ) ಒಂದು ವಾರ್ಷಿಕ ಸೂಚಿಗ್ರಂಥ. 1969ರ ವರೆಗೆ ಇದರ 22 ಸಂಪುಟಗಳು ಹೊರಬಂದಿದ್ದವು. 22ನೆಯ ಸಂಪುಟ 65 ರಾಷ್ಟ್ರಗಳಲ್ಲಿ ಪ್ರಕಟವಾದ 38 ಸಾವಿರಕ್ಕೂ ಮಿಕ್ಕ ಭಾಷಾಂತರಿತ ಗ್ರಂಥಗಳನ್ನು ಸೂಚಿಸುತ್ತದೆ.

**ಸೂಕ್ಷ್ಮ ಛಾಯಾಚಿತ್ರಗಳು :** ಭಾವೀ ಜನಾಂಗದ ಉಪಯೋಗಕ್ಕಾಗಿ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಮೌಲ್ಯವುಳ್ಳ ಅಪರೂಪದ ಗ್ರಂಥಗಳನ್ನು ರಕ್ಷಿಸಿಡುವ ಸಲುವಾಗಿ ಯುನೆಸ್ಕೊ ಸಂಸ್ಥೆ 1954ರಲ್ಲಿ ಒಂದು ಸಂಚಾರಿ ಸೂಕ್ಷ್ಮಛಾಯಾಗ್ರಾಹಕ ಯಂತ್ರವನ್ನು ಬಳಸಲು ಪ್ರಾರಂಭಿಸಿತು. ಐದು ವರ್ಷಗಳ ಅವಧಿಯಲ್ಲಿ ಈ ಯಂತ್ರ ಲ್ಯಾಟಿನ್ ಅಮೆರಿಕದ ಎಂಟು ದೇಶಗಳಲ್ಲಿ ಕೆಲಸಮಾಡಿ ಎರಡು ದಶಲಕ್ಷ ಪುಟಗಳ ಛಾಯಾಗ್ರಹಣ ಮಾಡಿತು. 1962ರಿಂದೀಚೆಗೆ ಈ ಯಂತ್ರ ಅರಬ್‍ರಾಷ್ಟ್ರಗಳಲ್ಲಿ ಕೆಲಸಮಾಡಿದೆ. 1964ರಲ್ಲಿ ಇನ್ನೊಂದು ಯಂತ್ರ ಏಷ್ಯದ ಇತರ ಭಾಗಗಳಲ್ಲಿ ಕೆಲಸಮಾಡಲು ಪ್ರಾರಂಭಿಸಿತು. ಹೀಗೆ ತಯಾರಿಸಿದ ಛಾಯಾಚಿತ್ರಗಳ ಋಣಪ್ರತಿಗಳನ್ನು ಆಯಾ ಗ್ರಂಥಾಲಯಗಳಿಗೇ ಕೊಡುವ ವ್ಯವಸ್ಥೆ ಮಾಡಲಾಗಿದೆ.

**ಗ್ರಂಥಪಾಲರ ತರಬೇತಿ :** ತರಬೇತಿ ಪಡೆದ ಗ್ರಂಥಪಾಲರ ಅಭಾವ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಕಾಣಬರುತ್ತಿದೆ. ಇಂಥ ಕೊರತೆಯನ್ನು ನಿವಾರಿಸಲು ಯುನೆಸ್ಕೊ ಅನೇಕ ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳು ಬಹುಮಟ್ಟಿಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಾರ್ಯರೂಪಕ್ಕೆ ಬಂದಿವೆ. ಆಫ್ರಿಕ ಖಂಡದಲ್ಲಿ ಎರಡು ಪ್ರಾದೇಶಿಕ ಗ್ರಂಥಾಲಯಶಾಸ್ತ್ರ ತರಬೇತಿ ಕೇಂದ್ರಗಳ ಸ್ಥಾಪನೆಗೆ ಯುನೆಸ್ಕೊ ನೆರವು ನೀಡಿದೆ. ಇಂಗ್ಲಿಷ್ ಭಾಷೆಯನ್ನಾಡುವ ಜನರಿಗಾಗಿ ಉಗಾಂಡದಲ್ಲಿ ಒಂದು ಕೇಂದ್ರವನ್ನೂ ಫ್ರೆಂಚ್ ಮಾತನಾಡುವ ಜನರಿಗಾಗಿ ಸೆರ್ಗೆಲ್‍ನಲ್ಲಿ ಮತ್ತೊಂದು ಕೇಂದ್ರವನ್ನೂ ಸ್ಥಾಪಿಸಿದೆ. ಅರ್ಜೆಂಟೀನ ಸರ್ಕಾರದ ಸಹಕಾರದೊಂದಿಗೆ ಬ್ಯೂನಸ್ ಐರಿಸ್ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯಶಾಸ್ತ್ರ ಸಂಶೋಧನಾಕೇಂದ್ರ ಏರ್ಪಟ್ಟಿದೆ. ಧ್ವನಿಮುದ್ರಿತ ಪಾಠಗಳು, ಪೂರಕವಾಗಿ ನೂರಾರು ಬಣ್ಣದ ಸ್ಲೈಡುಗಳು, ಚಲನಚಿತ್ರಗಳು ಈ ಕೇಂದ್ರದಲ್ಲಿ ಬಳಕೆಯಲ್ಲಿವೆ. ಜೆ. ಇ. ಸೇಬರ್ ಅವರ ಗ್ರಂಥಾಲಯ ಶಾಸ್ತ್ರ ಶಿಕ್ಷಣ ಕೈಪಿಡಿ ಎಂಬ ಪುಸ್ತಕವನ್ನು ಹಲವು ಭಾಷೆಗಳಲ್ಲಿ ಪ್ರಕಟಿಸುವ ಕೆಲಸವೂ ಕಾರ್ಯರೂಪಕ್ಕೆ ಬಂದಿದೆ. ಈ ರೀತಿ ನೀಡುತ್ತಿರುವ ತರಬೇತಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಬ್ಯೂನಸ್‍ಐರಿಸ್‍ನಲ್ಲಿರುವ ಗ್ರಂಥಾಲಯ ಸಂಶೋಧನ ಕೇಂದ್ರ ಆಗಾಗ್ಗೆ ಸಮೀಕ್ಷೆಗಳನ್ನೂ ಸಂಶೋಧನೆಗಳನ್ನೂ ನಡೆಸುತ್ತದೆ. ಇಂಥ ಸಮೀಕ್ಷೆಗಳ ವ್ಯಾಪ್ತಿಗೆ ಅರ್ಜೆಂಟೀನ, ಬ್ರೆಜಿಲ್, ಚಿಲಿ, ಪೆರು ಮತ್ತು ಉರುಗ್ವೇ ಪ್ರದೇಶಗಳು ಒಳಪಡುತ್ತವೆ. ಬದಲಾಗುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿಗಳಿಗನುಗುಣವಾಗಿ ಗ್ರಂಥಾಲಯಗಳ ಸೇವೆಯೂ ಪರಿವರ್ತನೆ ಹೊಂದಲು ಇಂಥ ಸಮೀಕ್ಷೆ ಮತ್ತು ಸಂಶೋಧನೆಗಳು ಸಹಾಯಕವಾಗುತ್ತವೆ. ಈ ಎಲ್ಲ ಯೋಜನೆಗಳನ್ನೂ ಅವುಗಳಿಗೆ ಸಂಬಂಧಿಸಿದ ಲೇಖನಗಳನ್ನೂ ಯುನೆಸ್ಕೊ ಗ್ರಂಥಾಲಯಗಳ ಪತ್ರಿಕೆಯಲ್ಲಿ (ಮಾಸಿಕ) ಪ್ರಕಟಿಸಲಾಗುತ್ತಿದೆ.

**ಸಾಕ್ಷರತಾ ಚಳವಳಿ :** ತಾನು ಕೈಗೊಳ್ಳುವ ಪ್ರತಿಯೊಂದು ಯೋಜನೆಯನ್ನು ನೇರವಾಗಿ ಯಾವುದೇ ರಾಷ್ಟ್ರದ ಜನತೆಗೆ ಯುನೆಸ್ಕೊ ನೀಡುವುದಿಲ್ಲ. ಆಯಾ ದೇಶಗಳಿಂದ ನಿಯೋಜಿತವಾದ ಅಧಿಕೃತ ರಾಷ್ಟ್ರೀಯ ಯುನೆಸ್ಕೊ ಆಯೋಗಗಳ ಮುಖಾಂತರವೇ ಅವನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಇಂಥ ರಾಷ್ಟ್ರೀಯ ಆಯೋಗಗಳು ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಯುನೆಸ್ಕೊ ಯೋಜನೆಯ ಅನುಷ್ಠಾನಕ್ಕೆ ಸಹಾಯಮಾಡುತ್ತವೆ. ನಿರಕ್ಷರತೆಯನ್ನು ತೊಡೆದುಹಾಕುವ ಬಗ್ಗೆ ಯುನೆಸ್ಕೊ ಕೈಗೊಂಡ ಚಳವಳಿಯ ಯಶಸ್ಸಿನಲ್ಲಿ ವಿವಿಧ ರಾಷ್ಟ್ರೀಯ ಆಯೋಗಗಳ ಪಾತ್ರ ಹಿರಿದಾಗಿದೆ. ಈ ಚಳವಳಿ ಫಲಪ್ರದವಾಗಲು ಗ್ರಂಥಾಲಯಗಳೂ ಅಪೂರ್ವ ಸೇವೆ ಸಲ್ಲಿಸುತ್ತಿವೆ. ಯುನೆಸ್ಕೊ ಸಂಸ್ಥೆ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗೆ ನೀಡುತ್ತಿರುವ ಸಹಾಯ ಸಾಕ್ಷರತಾ ಚಳವಳಿ ಯಶಸ್ವಿಯಾಗುವಂತೆ ಮಾಡುವುದರಲ್ಲಿ ಬಹಳ ಉಪಯುಕ್ತವಾಗಿದೆ.

ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಮತ್ತು ಅಭಿವೃದ್ಧಿಯ ವಿಷಯಗಳಲ್ಲಿ ಯುನೆಸ್ಕೊ 1948ರಿಂದಲೇ ಆಸಕ್ತಿ ತೋರಲಾರಂಭಿಸಿತು. ಈ ಮಹತ್ತರ ಅಭಿಲಾಷೆ ಕಾರ್ಯರೂಪಕ್ಕೆ ಬಂದದ್ದು 1951ರಲ್ಲಿ. ಯುನೆಸ್ಕೊ ಮತ್ತು ಭಾರತ ಸರ್ಕಾರಗಳ ಪರಸ್ಪರ ಸಹಕಾರದಿಂದ ಏಷ್ಯ ಖಂಡದ ಪ್ರಪ್ರಥಮ ಸುವ್ಯವಸ್ಥಿತ ಸಾರ್ವಜನಿಕ ಗ್ರಂಥಾಲಯವಾಗಿ ದೆಹಲಿಯ ಸಾರ್ವಜನಿಕ ಗ್ರಂಥಾಲಯ ಜನ್ಮ ತಳೆಯಿತು (1951). ಇದರ ಸ್ಥಾಪನೆಗೆ ಯುನೆಸ್ಕೊ ಸಂಸ್ಥೆ ಧನ ಸಹಾಯದ ಜೊತೆಗೆ ವಿದೇಶೀ ತಜ್ಞರ ನೆರವನ್ನೂ ಒದಗಿಸಿಕೊಟ್ಟಿತು. ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸೇವೆಯನ್ನು ಉತ್ತಮಗೊಳಿಸುವ ಸಲುವಾಗಿ ಇಲ್ಲಿಯ ಗ್ರಂಥಪಾಲರನ್ನು ವಿದೇಶಗಳಿಗೆ ಕಳುಹಿಸಿ ಅಲ್ಲಿಯ ಸಾರ್ವಜನಿಕ ಗ್ರಂಥಾಲಯಗಳು ಸಲ್ಲಿಸುತ್ತಿರುವ ಸೇವೆಯನ್ನು ಅವರು ಸ್ವತಃ ಅಭ್ಯಸಿಸಿ ಅರಿತುಕೊಂಡು ಬರುವಂತೆ ಮಾಡಲಾಯಿತು. ಹಾಗೆಯೇ ಅನೇಕ ನೆರೆರಾಷ್ಟ್ರಗಳಿಂದ ಹಲವಾರು ಗ್ರಂಥಪಾಲರನ್ನು ದೆಹಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ಕೆಲಸ ಮಾಡುವಂತೆ ಆಹ್ವಾನಿಸಿ ತರಬೇತಿ ಕೊಡಲಾಯಿತು. ಆಬದಾನ್, ಆಕ್ರಾ, ಅಂಕಾರಾ, ಬ್ಯಾಂಕಾಕ್, ಕೈರೋ, ಕೊಲಂಬೊ, ಢಾಕಾ, ಫ್ರೀಟೌನ್, ಕಾಬೂಲ್, ಕರಾಚಿ, ಕಠಮಂಡು, ಕೌಲಾಲಂಪುರ, ರಂಗೂನ್ (ಯಂಗನ್), ಸೈಗಾನ್, ಸಿಯೋಲ್, ಸಿಂಗಪುರ್, ಟೆಹರನ್ ಮತ್ತು ಟೋಕಿಯೊ ನಗರಗಳಿಂದ ಗ್ರಂಥಪಾಲರು ದೆಹಲಿಯ ಸಾರ್ವಜನಿಕ ಗ್ರಂಥಾಲಯವನ್ನು ವೀಕ್ಷಿಸಲು ಮತ್ತು ತರಬೇತಿ ಪಡೆಯಲು ಭೇಟಿ ನೀಡಿದ್ದರು.

ಕೊಲಂಬಿಯದಲ್ಲಿರುವ ಮೆಡಾಲಿನ್ ಸಾರ್ವಜನಿಕ ಗ್ರಂಥಾಲಯ, ನೈಜೀರಿಯದ ಎನಗು ಪ್ರಾದೇಶಿಕ ಗ್ರಂಥಾಲಯ ಮತ್ತು ಐವರಿ ತೀರಪ್ರದೇಶದ ಅಬಿಡ್ಜನ್ ಕೇಂದ್ರ ಗ್ರಂಥಾಲಯ ಇವೆಲ್ಲ ಯುನೆಸ್ಕೊದ ಧನ ಮತ್ತು ತಾಂತ್ರಿಕ ಸಹಾಯದಿಂದ ನಿರ್ಮಾಣಗೊಂಡುವು.

ವಿಜ್ಞಾನ, ಶಿಕ್ಷಣ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ವಿಷಯಗಳಲ್ಲಿ ಯುನೆಸ್ಕೊ ನಿರ್ವಹಿಸುತ್ತಿರುವ ಪಾತ್ರ ಎಷ್ಟು ಹಿರಿದೋ ಅಷ್ಟೇ ಸೂಕ್ಷ್ಮವಾದುದು. ಆಯಾರಾಷ್ಟ್ರಗಳು

ಕೈಗೊಳ್ಳುವ ಇಂಥ ಅಭಿವೃದ್ಧಿ ಕಾರ್ಯಗಳಲ್ಲಿ ಅದು ಕೇವಲ ಒಂದು ಪ್ರಚೋದಕ ಮಾಧ್ಯಮದಂತೆ ವರ್ತಿಸುತ್ತಿದೆ. ತಾನು ನೀಡುತ್ತಿರುವ ಸಹಾಯ ಸೌಲಭ್ಯಗಳ ವಿಷಯದಲ್ಲಿ ಯುನೆಸ್ಕೊ ಮೂಲಗುರಿಯೊಂದನ್ನು ಇಟ್ಟುಕೊಂಡಿದೆ. ಆಯಾ ಜನತೆಯ ದೃಷ್ಟಿಕೋನವನ್ನು ಅಭಿವೃದ್ಧಿ ಹಾಗೂ ನಾವೀನ್ಯದ ಕಡೆ ತಿರುಗಿಸುವುದೇ ಆ ಗುರಿ. ದೆಹಲಿಯ ಸಾರ್ವಜನಿಕ ಗ್ರಂಥಾಲಯವನ್ನೇ ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇದರ ಪ್ರಭಾವ ಏಷ್ಯದ ಗಡಿಗಳನ್ನು ದಾಟಿ ದಕ್ಷಿಣ ಅಮೆರಿಕದ ವರೆಗೆ ವ್ಯಾಪಿಸಿದೆ. ಈ ಯೋಜನೆಯ ಯಶಸ್ಸು ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ಯುನೆಸ್ಕೊ ತೋರಿಸುತ್ತಿರುವ ಆಸಕ್ತಿಗೆ ಮತ್ತಷ್ಟು ಉತ್ತೇಜನ ಕೊಟ್ಟಿದೆ. ಒಮ್ಮೆ ಸಾಮಾನ್ಯ ಪ್ರಜೆಗಳಿಗೆ ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಿ ಅವರಿಗೆ ಜ್ಞಾನಾರ್ಜನೆಯ ಸುಲಭದಾರಿಯನ್ನು ತೋರಿಸಿದರೆ ಸಾಕು. ಹೆಚ್ಚು ಹೆಚ್ಚಾಗಿ ಓದಿ ತಮ್ಮ ಜ್ಞಾನದಾಹವನ್ನು ನೀಗಿಸಿಕೊಳ್ಳುವ ಮಾರ್ಗಗಳನ್ನು ತಮಗೆ ತಾವೇ ಹುಡುಕಿಕೊಳ್ಳುತ್ತಾರೆ.

ದೆಹಲಿ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆಗೊಂಡ ಐದು ವರ್ಷಗಳ ಅನಂತರ ಅದರ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ವರದಿ ಮಾಡಲು ಯುನೆಸ್ಕೊ 1957ರಲ್ಲಿ ಫ್ರ್ಯಾಂಕ್ ಗಾರ್ಡ್ನರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿ ತಯಾರಿಸಿದ ವರದಿ ಇಡೀ ಏಷ್ಯ ಖಂಡದಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಕುರಿತ ಏಕೈಕ ತುಲನಾತ್ಮಕ ವರದಿಯಾಗಿದೆ.

ಶಾಲಾ ಗ್ರಂಥಾಲಯಗಳ ಅಭಿವೃದ್ಧಿಗಾಗಿಯೂ ಯುನೆಸ್ಕೊ ಸಾಕಷ್ಟು ಕೆಲಸ ಮಾಡುತ್ತಿದೆ. ಅಲ್ಲಿನ ಗ್ರಂಥಪಾಲರಿಗೆ ವಿಶೇಷ ತರಬೇತಿಯನ್ನು ಕೊಡುತ್ತಿರುವುದು ಗಮನಾರ್ಹ ಸಂಗತಿ.

ವಿಶ್ವವಿದ್ಯಾಲಯ ಗ್ರಂಥಾಲಯಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಯನ್ನು ಕುರಿತು ಚರ್ಚೆ ನಡೆಸಲು ಯುನೆಸ್ಕೊ ಒಂದು ಸಮ್ಮೇಳನವನ್ನು 1962ರಲ್ಲಿ ಅರ್ಜೆಂಟೀನದ ಮೆಂಡೋಜದಲ್ಲಿ ಏರ್ಪಡಿಸಿತ್ತು. ಇದರಲ್ಲಿ ಲ್ಯಾಟಿನ್ ಅಮೆರಿಕದ 19 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಇದೊಂದು ಪ್ರಾದೇಶಿಕ ಸಮ್ಮೇಳನವಾದರೂ ಇದರಲ್ಲಿ ಚರ್ಚಿಸಿದ ವಿಷಯಗಳೂ ಮಾಡಿದ ಶಿಫಾರಸ್ಸುಗಳೂ ಮಹತ್ತ್ವಪೂರ್ಣವಾಗಿವೆ. ಪ್ರತಿಯೊಂದು ವಿಶ್ವವಿದ್ಯಾಲಯವೂ ತನ್ನ ಒಟ್ಟು ವೆಚ್ಚದಲ್ಲಿ ಶೇಕಡ ಐದಕ್ಕೆ ಕಡಿಮೆ ಇಲ್ಲದಂತೆ ಹಣವನ್ನು ಗ್ರಂಥಾಲಯದ ಸಲುವಾಗಿ ನಿಗದಿ ಮಾಡಬೇಕೆಂಬ ಒಮ್ಮತದ ಸಲಹೆಯನ್ನು ಈ ಸಮ್ಮೇಳನ ಮಾಡಿತು. ಉಳಿದ ಸಲಹೆಗಳು ಈ ರೀತಿ ಇವೆ : 1. ಪ್ರತಿಯೊಂದು ವಿಶ್ವವಿದ್ಯಾಲಯ ಗ್ರಂಥಾಲಯವೂ ಕೇಂದ್ರೀಕೃತ ಗ್ರಂಥ ಸಂಗ್ರಹಣೆಗೆ ಯತ್ನಿಸಬೇಕು. 2. ಸಹಕಾರೀ ಹಾಗೂ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆ ಆಯಾ ದೇಶದ ಎಲ್ಲ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೂ ವ್ಯಾಪಿಸಿರಬೇಕು. 3. ರಾಷ್ಟ್ರೀಯ ಗ್ರಂಥಪಾಲರ ಸಂಘ ಸಂಸ್ಥೆಗಳಲ್ಲಿ ವಿಶ್ವವಿದ್ಯಾಲಯಗಳಿಗೆ ತಕ್ಕ ಪ್ರಾತಿನಿಧ್ಯಗಳೂ ವಿಭಾಗಗಳೂ ಇರಬೇಕು ಮತ್ತು 4. ದ್ವಿಪ್ರತಿಗಳ ಮತ್ತು ಪ್ರೌಢ ಪ್ರಬಂಧಗಳ ಪ್ರಕಟನೆಗಳನ್ನು ವಿವಿಧ ವಿಶ್ವವಿದ್ಯಾಲಯ ಗ್ರಂಥಾಲಯಗಳೊಂದಿಗೆ ಎರವಲು ಮತ್ತು ವಿನಿಮಯ ಮಾಡಿಕೊಳ್ಳುವ ವ್ಯವಸ್ಥೆಗೆ ಯುನೆಸ್ಕೊ ನೆರವು ನೀಡಬೇಕು.

ರಾಷ್ಟ್ರೀಯ ಗ್ರಂಥಾಲಯಗಳು : ರಾಷ್ಟ್ರೀಯ ಗ್ರಂಥಾಲಯಗಳ ಸ್ಥಿತಿಗಳಲ್ಲಿ ಅವುಗಳ ಇತಿಹಾಸ, ಬೆಳವಣಿಗೆ, ಕಾರ್ಯವ್ಯಾಪ್ತಿ ಇತ್ಯಾದಿ ವಿಷಯಗಳಲ್ಲಿ ವೈವಿಧ್ಯಗಳಿದ್ದರೂ ಅವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಸಾಮ್ಯ ಇದೆ. ಏಷ್ಯ ಮತ್ತು ಪೆಸಿಫಿಕ್ ವಲಯದಲ್ಲಿ ಗ್ರಂಥಾಲಯಗಳ ಅಭಿವೃದ್ಧಿ ಬಗ್ಗೆ ಮನಿಲದಲ್ಲಿ ಯುನೆಸ್ಕೊದ ಆಶ್ರಯದಲ್ಲಿ ಫೆಬ್ರುವರಿ 1964ರಲ್ಲಿ ನಡೆದ ಪ್ರಾದೇಶಿಕ ಸಮ್ಮೇಳನದಲ್ಲಿ ಇದು ಸ್ಪಷ್ಟವಾಯಿತು. ಇದರಲ್ಲಿ ಏಷ್ಯ ಮತ್ತು ಪೆಸಿಫಿಕ್ ವಲಯದ ರಾಷ್ಟ್ರಗಳ 24 ಪ್ರತಿನಿಧಿಗಳು ಭಾಗವಹಿಸಿದ್ದರು.

ಇಂಥದೇ ಒಂದು ಸಮ್ಮೇಳನ 1958ರಲ್ಲಿ ವಿಯನ್ನದಲ್ಲಿ ಜರುಗಿತು. ಈ ಎರಡು ಸಮ್ಮೇಳನಗಳು ರಾಷ್ಟ್ರೀಯ ಗ್ರಂಥಾಲಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಅವುಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸಿವೆ. ವಿವಿಧ ರಾಷ್ಟ್ರೀಯ ಗ್ರಂಥಾಲಯಗಳ ಗ್ರಂಥಪಾಲರು ಮತ್ತು ನಿರ್ದೇಶಕರನ್ನು ಒಂದೆಡೆ ಸೇರಿಸಿ ಗ್ರಂಥಗಳ ಅಂತಾರಾಷ್ಟ್ರೀಯ ಎರವಲು ಮತ್ತು ವಿನಿಮಯಗಳನ್ನು ಕುರಿತು ಚರ್ಚಿಸುವುದು ಮತ್ತು ಈ ವಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು–ಇವು ಈ ಸಮ್ಮೇಳನದ ಉದ್ದೇಶಗಳಾಗಿದ್ದವು; ಗ್ರಂಥ ಸಂಗ್ರಹಣೆ, ಗ್ರಂಥಸೂಚಿ, ಪರಾಮರ್ಶನ ಸೇವೆ, ಪ್ರಲೇಖನವಿಧಾನ, ಗ್ರಂಥಸ್ವಾಮ್ಯ, ಗ್ರಂಥಾಲಯ ಸಹಕಾರ, ಗ್ರಂಥಪಾಲರ ತರಬೇತಿ, ಗ್ರಂಥಾಲಯದ ಕಟ್ಟಡ, ಗ್ರಂಥ ಸಂರಕ್ಷಣೆ ಮತ್ತು ಗ್ರಂಥಪಾಲರ ಸಂಸ್ಥೆ ಸಂಘಗಳು–ಇವನ್ನು ಕುರಿತು ಚರ್ಚಿಸಲಾಯಿತು.

ಮನಿಲ ಸಮ್ಮೇಳನಕ್ಕೆ ಮೊದಲು ನಡೆಸಿದ ಸಮೀಕ್ಷೆಯಿಂದ ಈ ಕೆಳಗಿನ ಅಂಶಗಳು ಬೆಳಕಿಗೆ ಬಂದುವು. 1. ಕೇವಲ 20 ರಾಷ್ಟ್ರೀಯ ಗ್ರಂಥಾಲಯಗಳು ರಾಷ್ಟ್ರೀಯ ಗ್ರಂಥ ಸೂಚಿಗಳನ್ನು ಪ್ರಕಟಿಸುತ್ತಿವೆ. 2. ಬಹುಸಂಖ್ಯಾತ ರಾಷ್ಟ್ರೀಯ ಗ್ರಂಥಾಲಯಗಳು ಸಾರ್ವಜನಿಕ ಗ್ರಂಥಾಲಯಗಳ ಮಾದರಿಯಲ್ಲಿ ಸೇವೆ ಸಲ್ಲಿಸುತ್ತಿವೆ. 3. ಶೇ. 61ರಷ್ಟು ಗ್ರಂಥಾಲಯಗಳು ಮಾತ್ರ ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಕಾರ್ಯದಲ್ಲಿ ಭಾಗವಹಿಸುತ್ತಿವೆ: 4. ಕೇವಲ 50 ರಾಷ್ಟ್ರೀಯ ಗ್ರಂಥಾಲಯಗಳು ತಮ್ಮ ತಮ್ಮ ವಲಯದಲ್ಲಿ ಗ್ರಂಥಗಳ ಎರವಲು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ.

ಪ್ರಲೇಖನ ಕೇಂದ್ರಗಳ ಸ್ಥಾಪನೆಗೆ ನೆರವು ನೀಡುವುದನ್ನು ಯುನೆಸ್ಕೊ 1951ರಲ್ಲಿ ಪ್ರಾರಂಭಿಸಿತು. ಈವರೆಗೆ ಅಂಥ 12 ಕೇಂದ್ರಗಳು ಸ್ಥಾಪನೆಗೊಂಡಿವೆ. ಅಂಥ ಇನ್ನೂ 9 ಕೇಂದ್ರಗಳು ವಿವಿಧ ಹಂತದಲ್ಲಿ ರೂಪುಗೊಳ್ಳುತ್ತಿದೆ. ಇಂಥ ಕೇಂದ್ರಗಳಲ್ಲಿ ಭಾರತ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರವೂ (ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್) ಒಂದು. ಇದು ದೆಹಲಿಯಲ್ಲಿ 1952ರಲ್ಲಿ ಅಸ್ತಿತ್ವಕ್ಕೆ ಬಂತು. ಯುನೆಸ್ಕೊ ಮತ್ತು ಭಾರತ ಸರ್ಕಾರದಿಂದ ರೂಪಗೊಂಡ ಮಹಾನ್ ಸಂಸ್ಥೆಯಾಗಿ ಇದು ಬೆಳೆದು ನಿಂತಿದೆ. ಭಾರತದಲ್ಲಿರುವ ರಾಷ್ಟ್ರೀಯ ಪ್ರಯೋಗಶಾಲೆಗಳು, ವೈಜ್ಞಾನಿಕ ಸಂಶೋಧನ ಕೇಂದ್ರಗಳು–ಇವೇ ಮುಂತಾದವುಗಳಿಗೆ ಗ್ರಂಥಗಳನ್ನು, ಮಾಹಿತಿಗಳನ್ನು ಮತ್ತು ಲೇಖನಗಳ ನಕಲುಗಳನ್ನು ಒದಗಿಸುವುದರ ಮೂಲಕ ಸೇವೆ ಸಲ್ಲಿಸುತ್ತಿದೆ.

ಯುನೆಸ್ಕೊದ ಪ್ರಾದೇಶಿಕ ವಿಜ್ಞಾನ ಸಹಕಾರ ಕಚೇರಿಗಳು ಆಯಾ ವಲಯಗಳಲ್ಲಿ ವೈಜ್ಞಾನಿಕ ಮಾಹಿತಿ ಕೇಂದ್ರಗಳಾಗಿ ಕೆಲಸ ಮಾಡುತ್ತಿವೆ. ಬ್ಯಾಂಕಾಕ್, ಕೈರೊ, ಮಾಂಟೆವಿಡಿಯೋ, ನವದೆಹಲಿ ಮತ್ತು ನೈರೋಬಿಗಳಲ್ಲಿ ಸ್ಥಾಪಿತವಾಗಿರುವ ಕೇಂದ್ರಗಳು ಕ್ರಮವಾಗಿ ಆಗ್ನೇಯ ಏಷ್ಯ, ಮಧ್ಯಪ್ರಾಚ್ಯ, ಲ್ಯಾಟಿನ್ ಅಮೆರಿಕ, ದಕ್ಷಿಣ ಏಷ್ಯ ಮತ್ತು ಪೂರ್ವ ಆಫ್ರಿಕ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಲೇಖನ ಕೇಂದ್ರಗಳು ; ಅವುಗಳ ಅಭಿವೃದ್ಧಿಗೆ ಯುನೆಸ್ಕೊ ನೆರವು ಎಂಬ ಪುಸ್ತಕ 1965ರಲ್ಲಿ ಪ್ರಕಟವಾಗಿದೆ.

**ಗ್ರಂಥ ಮತ್ತು ಇತರ ವೈಜ್ಞಾನಿಕ ಸಲಕರಣೆಗಳ ಮೇಲಿನ ಸುಂಕ ಮತ್ತು ಅಂಚೆ ರಿಯಾಯಿತಿ :** ಯುದ್ಧಾನಂತರ ದಿವಸಗಳಲ್ಲಿ ಸಾಮಾನ್ಯವಾಗಿ ಎಲ್ಲ ಗ್ರಂಥಾಲಯಗಳೂ ಎದುರಿಸುತ್ತಿದ್ದ ಬಹು ದೊಡ್ಡ ಸಮಸ್ಯೆಯೆಂದರೆ ವಿದೇಶಗಳಿಂದ ತರಿಸಿದ ಗ್ರಂಥಗಳ ಮೇಲೆ ತೆರಬೇಕಾಗಿದ್ದ ಸುಂಕ. ಈ ಸಮಸ್ಯೆಯನ್ನು ನಿವಾರಿಸಲು ಯುನೆಸ್ಕೊ ಯತ್ನಿಸಿತು. ವಿಜ್ಞಾನ, ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯಾವಶ್ಯಕವಾದ ಸಲಕರಣೆಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕ ವಿನಾಯಿತಿಯ ಬಗ್ಗೆ ಒಂದು ಅಂತಾರಾಷ್ಟ್ರೀಯ ಒಡಂಬಡಿಕೆ ಏರ್ಪಡಿಸಿತ್ತು. ಈ ಒಡಂಬಡಿಕೆಗೆ 1952ರ ಮೇ 21ರಂದು ಒಟ್ಟು 45 ರಾಷ್ಟ್ರಗಳು ಸಹಿ ಹಾಕಿದವು. ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಪ್ರಯೋಗಶಾಲೆಗಳು, ಮತ್ತು ವಿದ್ಯಾಸಂಸ್ಥೆಗಳು ತಮಗೆ ಬೇಕಾದ ಸಲಕರಣೆಗಳನ್ನು ವಿದೇಶಗಳಿಂದ ತರಿಸಿಕೊಂಡಾಗ ಅವುಗಳ ಮೇಲೆ ಆಮದು ಸುಂಕವನ್ನು ಮೊದಲಿನಂತೆ ತೆರಬೇಕಾಗಿಲ್ಲ. ಕೆಲವಕ್ಕೆ ರಿಯಾಯಿತಿ ದೊರೆತರೆ ಮತ್ತೆ ಕೆಲವು ಸಂಪೂರ್ಣ ಸುಂಕ ವಿಮೋಚನೆ ಪಡೆಯುತ್ತವೆ.

ಯುನೆಸ್ಕೊದ ಸಲಹೆಯನ್ನು ಪುರಸ್ಕರಿಸಿ ವಿಶ್ವ ಅಂಚೆ ಸಂಸ್ಥೆ 1957 ರಲ್ಲಿ ಆಟ್ಟವದಲ್ಲಿ ನಡೆದ 14ನೆಯ ಸಮ್ಮೇಳನದಲ್ಲಿ ಅನೇಕ ಹೊಸ ರಿಯಾಯಿತಿಗಳನ್ನು ಪ್ರಕಟಿಸಿತು. ಅದರ ಪ್ರಕಾರ ಗ್ರಂಥಗಳು, ವರ್ತಮಾನ ಪತ್ರಿಕೆಗಳು ಇಲ್ಲವೇ ಮತ್ತಾವುದೇ ಮುದ್ರಿತವಾದ ವಾಚನ ಸಾಮಗ್ರಿಗಳ ಮೇಲೆ ತೆರಬೇಕಾಗಿದ್ದ ಅಂಚೆವೆಚ್ಚ ಬಹಳ ಮಟ್ಟಿಗೆ ತಗ್ಗಿದೆ. ಈ ಹೊಸ ಸೌಲಭ್ಯಗಳು 1958ರಲ್ಲಿ ಜಾರಿಗೆ ಬಂದು ಪ್ರಪಂಚದ ಮೂಲೆಮೂಲೆಗೂ ಯಾವ ಅಡೆತಡೆಯೂ ಇಲ್ಲದಂತೆ ಜ್ಞಾನ ಪ್ರವಹಿಸಲು ಸಾಧ್ಯವಾಗಿದೆ.

**ಗ್ರಂಥ ಕೂಪನ್ನುಗಳು :** ವಿದೇಶಗಳಿಂದ ನೇರವಾಗಿ ಗ್ರಂಥಗಳನ್ನು ಕೊಳ್ಳುವಾಗ ಇದ್ದ ವಿದೇಶೀ ವಿನಿಮಯದ ಆರ್ಥಿಕ ಸಮಸ್ಯೆಗಳನ್ನು ಈ ವ್ಯವಸ್ಥೆ ನಿವಾರಿಸುತ್ತದೆ. ಇದು 1948ರಲ್ಲಿ ಜಾರಿಗೆ ಬಂತು. ಅಂತಾರಾಷ್ಟ್ರೀಯ ಮೌಲ್ಯವುಳ್ಳ ಈ ಕೂಪನ್ನುಗಳನ್ನು ಗ್ರಂಥಾಲಯಗಳು ತಮ್ಮ ರಾಷ್ಟ್ರೀಯ ನಾಣ್ಯಗಳಿಗೇ ವಿನಿಮಯ ಮಾಡಿಕೊಂಡು ಅವನ್ನು ವಿದೇಶಗಳಲ್ಲಿ ಪ್ರಕಟವಾದ ಗ್ರಂಥಗಳನ್ನು ಕೊಳ್ಳಲು ಉಪಯೋಗಿಸಲಾಗುತ್ತಿದೆ. ಇತ್ತೀಚೆಗೆ ಮೈಕ್ರೊಫಿಲ್ಮ್, ವೈಜ್ಞಾನಿಕ ಸಲಕರಣೆ ಹಾಗೂ ಇತರ ಶೈಕ್ಷಣಿಕ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಯುನೆಸ್ಕೊ ಅನುಮತಿ ನೀಡಿದೆ.

**ಪ್ರಕಟಣೆಗಳು, ನಿಯತಕಾಲಿಕೆಗಳು :** ಹಲವಾರು ಗ್ರಂಥಗಳನ್ನು ಮತ್ತು ನಿಯತಕಾಲಿಕೆಗಳನ್ನು ಪ್ರಕಟಿಸುವುದರ ಜೊತೆಗೆ ಯುನೆಸ್ಕೊ ವಿವಿಧ ಸಂಘಸಂಸ್ಥೆಗಳಿಗೆ ಅಂಥ ಪ್ರಕಟನ ಕಾರ್ಯದಲ್ಲಿ ನೆರವನ್ನು ನೀಡುತ್ತಿದೆ. ಈ ಗ್ರಂಥಗಳ ಪಟ್ಟಿ ಈವರೆಗೆ ಯುನೆಸ್ಕೊ ಹೊರತಂದಿರುವ ಗ್ರಂಥಗಳ ಬೃಹತ್ ಸಂಖ್ಯೆಯನ್ನಷ್ಟೇ ಅಲ್ಲ, ಅವು ಎಂಥ ಅಮೂಲ್ಯ ಜ್ಞಾನಸಂಪತ್ತು, ಎಷ್ಟು ವೈವಿಧ್ಯಮಯ ಎಂಬುದನ್ನು ತೋರಿಸುತ್ತದೆ. ಯುನೆಸ್ಕೊ ಪ್ರಕಟಿಸಿದ ಹಲವಾರು ಗ್ರಂಥಗಳು ಅನೇಕ ಭಾಷೆಗಳಿಗೆ ತರ್ಜುಮೆಗೊಂಡಿವೆ.

ಯುನೆಸ್ಕೊ ಬುಲೆಟಿನ್ ಫಾರ್ ಲೈಬ್ರರೀಸ್ ಎಂಬ ದ್ವೈಮಾಸಿಕ ಪತ್ರಿಕೆ 1947ರಲ್ಲಿ ಜನ್ಮ ತಳೆಯಿತು. ಇದು ಇಂಗ್ಲಿಷ್, ಫ್ರೆಂಚ್, ರಷ್ಯನ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಇದರ ವ್ಯಾಪ್ತಿ ವಿಸ್ತಾರಗೊಂಡಿದೆ. ವಿಶ್ವದ ಗ್ರಂಥಸೂಚಿ ವರದಿಗಳಿಗೆ ಮೀಸಲಾಗಿದ್ದು ಈ ಪತ್ರಿಕೆ ಈಗ ಗ್ರಂಥಪಾಲನೆ ಮತ್ತು ಪ್ರಲೇಖನ ಕ್ಷೇತ್ರಗಳಿಗೆ ಸಂಬಂಧಿಸಿದ ಸಾರ್ವತ್ರಿಕ ಅಭಿಪ್ರಾಯಗಳ ಕೈಗನ್ನಡಿಯಾಗಿದೆ. ಯುನೆಸ್ಕೊದಿಂದ ನಿಯೋಜಿತವಾದ ಸಮಿತಿಗಳ ವರದಿಗಳನ್ನೂ ಸಮೀಕ್ಷೆಗಳನ್ನೂ ಮೊದಲು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಅನಂತರ ಅವನ್ನು ಪ್ರತ್ಯೇಕವಾಗಿ ಪುನರ್ಮುದ್ರಿಸಿ ಹಂಚಲಾಗುವುದು.

ಬಿಬ್ಲಿಯಾಗ್ರಫಿ, ಡಾಕ್ಯುಮೆಂಟೇಷನ್, ಟರ್ಮಿನಾಲಜಿ–ಎಂಬುದೂ ಒಂದು ದ್ವೈಮಾಸಿಕ ಪತ್ರಿಕೆ. ನಾಲ್ಕು ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ಇದನ್ನು ಗ್ರಂಥಾಲಯಗಳಿಗೆ ಉಚಿತವಾಗಿ ಹಂಚಲಾಗುತ್ತಿದೆ. 1961ರಲ್ಲಿ ಬೆಳಕಿಗೆ ಬಂದ ಈ ಪತ್ರಿಕೆ ಯುನೆಸ್ಕೊದ ಅಂತಾರಾಷ್ಟ್ರೀಯ ಸಲಹಾ ಸಮಿತಿ ಮತ್ತು ಇತರ ತಾಂತ್ರಿಕ ಸಮಿತಿಗಳ ಸಹಾಯದಿಂದ ಪ್ರಕಟವಾಗುತ್ತಿದೆ. ಇದರಲ್ಲಿ ಯುನೆಸ್ಕೊ ವಾರ್ತೆ, ಮಾನವೀಯ, ಸಾಮಾಜಿಕ ಹಾಗೂ ಸಾಮಾನ್ಯ ಸಂಗತಿ ಮತ್ತು ವಿಜ್ಞಾನ ಎಂಬ ಮೂರು ವಿಭಾಗಗಳಿವೆ.

ಕಳೆದ 60 ವರ್ಷಗಳಿಂದ ವಿವಿಧ ರಾಷ್ಟ್ರಗಳಿಗೆ ಯುನೆಸ್ಕೊ ಗ್ರಂಥಾಲಯ ಅಭಿವೃದ್ಧಿಗಾಗಿ ನೀಡಿದ ನೆರವು ಹಲವು ಹಿಂದುಳಿದ ರಾಷ್ಟ್ರಗಳ ದೃಷ್ಟಿಯಿಂದ ಗಮನಾರ್ಹವಾದುದಾಗಿದೆ.

(ಬಿ.ಎನ್.ಎಜಿ.)

ಯುನೆಸ್ಕೊದ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ (i) ಅಂತಾರಾಷ್ಟ್ರೀಯ ಗ್ರಂಥವರ್ಷ, (ii) ಗ್ರಂಥ ಪ್ರಣಾಳಿಕೆ ಮತ್ತು (iii) ಜಾಗತಿಕ ಗ್ರಂಥ ಪ್ರದರ್ಶನ–ಎಂಬ ವಿಷಯಗಳನ್ನಿಲ್ಲಿ ಪ್ರಸ್ತಾವಿಸಲಾಗಿದೆ.

**(i) ಅಂತಾರಾಷ್ಟ್ರೀಯ ಗ್ರಂಥವರ್ಷ 1972 :** 'ಎಲ್ಲರಿಗೂ ಪುಸ್ತಕ' ಎಂಬ ಘೋಷಣೆಯೊಂದಿಗೆ 1972ರಲ್ಲಿ ಪ್ರಪಂಚಾದ್ಯಂತ ಆಚರಿಸಲಾದ ಗ್ರಂಥೋತ್ಸವ. ಇದನ್ನು ಆಚರಿಸಲು ಚಾಲನೆ ನೀಡಿದ್ದು ಯುನೆಸ್ಕೊ.

1971ರ ಅಕ್ಟೋಬರ್ ತಿಂಗಳಿನಲ್ಲಿ ಬ್ರಸಲ್ಸಿನಲ್ಲಿ ಸೇರಿದ ಅಂತಾರಾಷ್ಟ್ರೀಯ ಗ್ರಂಥವರ್ಷದ ಪ್ರೋತ್ಸಾಹ ಸಮಿತಿ ಹತ್ತು ಕವಲುಗಳ ಮಾರ್ಗದರ್ಶಿ ತತ್ತ್ವಗಳನ್ನು ವಿವರಿಸುವ ಪುಸ್ತಕ ಪ್ರಣಾಳಿಕೆಗೆ (ಚಾರ್ಟರ್ ಆಫ್ ದಿ ಬುಕ್) ಒಪ್ಪಿಗೆಯನ್ನಿತ್ತಿತು. ಈ ಪ್ರಣಾಳಿಕೆಯ ಮುಖ್ಯ ಉದ್ದೇಶಗಳು ಹೀಗಿವೆ: ಗ್ರಂಥಗಳ ಮುಕ್ತ ಓಡಾಟ, ಓದುವಿಕೆಗೆ ಪ್ರೋತ್ಸಾಹ, ಭಾಷಾಂತರಗಾರರಿಗೆ ಮತ್ತು ಬರೆಹಗಾರರಿಗೆ ಪ್ರೋತ್ಸಾಹ, ಗ್ರಂಥಗಳ ವಿಸ್ತೃತ ಉತ್ಪಾದನೆ ಮತ್ತು ವಿತರಣೆ, ಶಿಕ್ಷಣಕ್ಕಾಗಿ ಗ್ರಂಥಗಳ ಉಪಯೋಗ ಮತ್ತು ಅಂತಾರಾಷ್ಟ್ರೀಯ ತಿಳಿವಳಿಕೆ ಹೆಚ್ಚಲು ಅವುಗಳ ಬಳಕೆ–ಮುಂತಾದವು.

ಪ್ರಪಂಚದ ವಿವಿಧ ಭಾಗಗಳಲ್ಲಿನ ಬರೆಹಗಾರರನ್ನು ಪುಸ್ತಕ ವ್ಯವಸಾಯದವರನ್ನು ಹಾಗೂ ಅಭಿರುಚಿ ಹೊಂದಿದ ಓದುಗರನ್ನು ಒಂದೆಡೆ ತರುವುದೇ ಈ ಗ್ರಂಥವರ್ಷದ ಗುರಿಯಾಗಿತ್ತು. ಇದಲ್ಲದೆ ಬರೆಹಗಾರನ ಸೃಜನಶೀಲತೆಗೆ ಸುಗಮ ಮಾರ್ಗವನ್ನೊದಗಿಸುವುದು, ಪ್ರಕಾಶೋದ್ಯಮದ ವಿಕಾಸಕ್ಕೆ ಮತ್ತು ಗ್ರಂಥೋತ್ಪಾದನೆಗೆ ಸೌಲಭ್ಯವನ್ನೊದಗಿಸುವುದು, ಕೃತಿಸ್ವಾಮ್ಯವಿರುವ ಉತ್ತಮ ಗ್ರಂಥಗಳನ್ನು ಅಂತಾರಾಷ್ಟ್ರೀಯ ಬಳಕೆಗಾಗಿ ಪಡೆದುಕೊಳ್ಳುವುದು, ಭಾಷೆಗಳಿಗೆ ತರ್ಜುಮೆ ಮಾಡುವುದು–ಇವು ಅದು ಇಟ್ಟುಕೊಂಡಿದ್ದ ಕೆಲವು ಉದ್ದೇಶಗಳು. ಈ ಗ್ರಂಥಗಳಿಗೆ ಬೇಡಿಕೆಯನ್ನೊದಗಿಸುವುದರೊಂದಿಗೆ ಅವು ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಗ್ರಂಥವರ್ಷದ ಆಚರಣೆಯ ಮುಖ್ಯೋದ್ದೇಶವಾಗಿತ್ತು. ಪ್ರಪಂಚದಾದ್ಯಂತ ಅಂತಾರಾಷ್ಟ್ರೀಯ ಗ್ರಂಥ ವರ್ಷವನ್ನು ತುಂಬ ಉತ್ಸಾಹದಿಂದ ಆಚರಿಸಲಾಯಿತು. ಈ ಸಂಬಂಧವಾಗಿ ಕೆಲವು ದೇಶಗಳು ವಿಶೇಷ ಅಂಚೆಚೀಟಿಗಳನ್ನು ಹೊರಡಿಸಿದವು. ಬಹಳ ರಾಷ್ಟ್ರಗಳಲ್ಲಿ ಪುಸ್ತಕ ಪ್ರದರ್ಶನ, ರಾಷ್ಟ್ರೀಯ ಅಂತಾರಾಷ್ಟ್ರೀಯ ಗ್ರಂಥ ಸಮ್ಮೇಳನ, ಚಲನಚಿತ್ರಗಳ ಪ್ರದರ್ಶನ, ಟೆಲಿವಿಷನ್‌ಗಳ ಮೂಲಕ ಪ್ರಸಾರ–ಮೊದಲಾದ ಆಕರ್ಷಕ ಕಾರ್ಯಕ್ರಮಗಳೇರ್ಪಟ್ಟುವು. 1972ರ ಸೆಪ್ಟೆಂಬರ್ ತಿಂಗಳಿನಲ್ಲಿ ಮಾಸ್ಕೋದಲ್ಲಿ ಜರುಗಿದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಮಹತ್ತ್ವದ್ದು. (ಸಿ.ವಿ.ಎಚ್.)

**ಕನ್ನಡ ಸಾಹಿತ್ಯ ಪರಿಷತ್ತು ಆಚರಿಸಿದ ಅಂತಾರಾಷ್ಟ್ರೀಯ ಪುಸ್ತಕ ವರ್ಷ :** ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಂತಾರಾಷ್ಟ್ರೀಯ ಪುಸ್ತಕ ವರ್ಷವನ್ನು ಭಾರತದ ಸ್ವಾತಂತ್ರ್ಯದ ಬೆಳ್ಳಿಹಬ್ಬದೊಡನೆ ಸಮನ್ವಯಿಸಿ ತುಂಬ ಯಶಸ್ವಿಯಾಗಿ ಆಚರಿಸಿತು. ಪುಸ್ತಕ ವರ್ಷ ಎಂಬ ಹೆಸರು ಖಚಿತವಾಗಿ ಕನ್ನಡಿಗರಿಗೆ ಪುಸ್ತಕದ ವರ್ಷವೇ ಆಯಿತು. ಕನ್ನಡ ಸಾಹಿತ್ಯ ಪರಿಷತ್ತು ಅಂತಾರಾಷ್ಟ್ರೀಯ ಪುಸ್ತಕ ವರ್ಷವನ್ನು ಆಚರಿಸುವ ಸಲುವಾಗಿ ಹಾಕಿಕೊಂಡ ಕಾರ್ಯಕ್ರಮವೆಂದರೆ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪುಸ್ತಕ ಪ್ರದರ್ಶನ ಮೂಲಕ ಮತ್ತು ಅಲ್ಲಿಂದ ಸುತ್ತಮುತ್ತಲಿನ ತಾಲ್ಲೂಕು ಗ್ರಾಮ ಪ್ರದೇಶಗಳಲ್ಲಿ ವಾಹನದ ಮೂಲಕ ಪುಸ್ತಕ ಪ್ರದರ್ಶನವನ್ನು ಏರ್ಪಾಡು ಮಾಡುವುದು ಮತ್ತು ಸಾಧ್ಯವಾದಷ್ಟು ಮಾರಾಟ ಮಾಡುವುದು. ಜೊತೆಗೆ ಆ ಪ್ರದರ್ಶನ ಸಂದರ್ಭದಲ್ಲಿಯೇ ಆಯಾ ಪ್ರದೇಶದ ಶಾಲಾ ಕಾಲೇಜುಗಳಲ್ಲಿ ಪುಸ್ತಕದ ಬಗ್ಗೆ ಚರ್ಚೆಗಳನ್ನೂ ಪ್ರಬಂಧಸ್ಪರ್ಧೆಗಳನ್ನೂ ನಡೆಸುವುದು. ಮೊದಲ ಪುಸ್ತಕ ಪ್ರದರ್ಶನ ಬೆಂಗಳೂರಿನಲ್ಲಿ 1972ರ ಆಗಸ್ಟ್ 13ರಂದು ಮೈಸೂರು ರಾಜ್ಯಪಾಲರಿಂದ ಆರಂಭಗೊಂಡಿತು.

ಪುಸ್ತಕ ಪ್ರದರ್ಶನದಲ್ಲಿ ಐದು ಸಾವಿರಕ್ಕೂ ಮಿಕ್ಕ ಪುಸ್ತಕಗಳಿರುತ್ತಿದ್ದುವು. ಪುಸ್ತಕಗಳನ್ನು ವಿಷಯಕ್ಕನುಗುಣವಾಗಿ ವಿಂಗಡಿಸಿ ಪ್ರತ್ಯೇಕವಾದ ನಿಲುವುಗಳಲ್ಲಿ (ಸ್ಟ್ಯಾಂಡ್ಸ್) ಜೋಡಿಸಲಾಗುತ್ತಿತ್ತು. ಯಾವ ಪುಸ್ತಕವೂ ಸಂದರ್ಶಕರ ಕಣ್ಣನ್ನು ತಪ್ಪಿಸಿಕೊಳ್ಳುವಂತಿರಲಿಲ್ಲ. ಪ್ರದರ್ಶನದ ಜೊತೆಗೇ ಮಾರಾಟದ ಏರ್ಪಾಡೂ ಸುಸಜ್ಜಿತವಾಗಿ ನಡೆಯಲು ಎಚ್ಚರಿಕೆ ವಹಿಸಲಾಗುತ್ತಿತ್ತು. ಜಿಲ್ಲಾ ಸಮಿತಿಗಳು ಪ್ರದರ್ಶನಕ್ಕೆ ಸುಮಾರು ಒಂದು ತಿಂಗಳಿಗೆ ಮುಂಚೆಯೇ ಅಲ್ಲಲ್ಲಿಯ ಸಾರ್ವಜನಿಕರಿಗೆ, ಶಾಲಾಕಾಲೇಜುಗಳಿಗೆ ಪುಸ್ತಕದ ಕೂಪನ್ನುಗಳನ್ನು ಮಾರಾಟ ಮಾಡಿ ಪ್ರದರ್ಶನದ ಆರಂಭದ ವೇಳೆಗೆ ಪುಸ್ತಕಗಳನ್ನು ಪಡೆಯುವ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದವು.

ಪುಸ್ತಕ ಪ್ರದರ್ಶನ ಕರ್ನಾಟಕದ ಹದಿನಾಲ್ಕು ಜಿಲ್ಲೆಗಳಲ್ಲಿ ಯಶಸ್ವಿಯಾಗಿ ನಡೆದವು. ಬರಗಾಲದ ಇಕ್ಕಟ್ಟಿನ ಪರಿಸ್ಥಿತಿಯಿಂದ ಉಳಿದ ಜಿಲ್ಲೆಗಳಲ್ಲಿ ಪ್ರದರ್ಶನ ನಡೆಯಲಿಲ್ಲ. ಮೈಸೂರಿನ ದಸರಾ ವಸ್ತುಪ್ರದರ್ಶನಾಲಯದಲ್ಲಿ ಪುಸ್ತಕ ಭಾಗ್ಯದ ಮಳಿಗೆ ಇಪ್ಪತ್ತೆಂಟು ದಿನಗಳ ಪರ್ಯಂತ ಸಂದರ್ಶಕರಿಗೆ ಒಂದು ಹಬ್ಬವಾಗಿತ್ತು. ಬೆಂಗಳೂರಿನಲ್ಲಂತೂ ಹೆಚ್ಚುಕಡಿಮೆ ಪ್ರತಿ ಬಡಾವಣೆಯಲ್ಲಿ ಮತ್ತು ಕಾಲೇಜಿನ ಆವರಣಗಳಲ್ಲಿ ಪ್ರದರ್ಶನಗಳು ನಡೆದವು.

ಮನೆಗೊಂದು ಪುಸ್ತಕ ಭಂಡಾರ ಎಂಬ ಒಂದು ಚಳವಳಿಯನ್ನು ಪರಿಷತ್ತು ಘೋಷಿಸಿತು. ಆ ಯೋಜನೆಯ ಪ್ರಕಾರ ಮೊದಲ ಚಳವಳಿಯನ್ನು ಪರಿಷತ್ತೇ ಪ್ರಾರಂಭಿಸಿತು. 1973ರ ಫೆಬ್ರುವರಿ 11ರಿಂದ ಮೂರು ದಿನಗಳವರೆಗೆ ಕನ್ನಡದ ಕಾರ್ಯಕರ್ತರು ನಗರದ ವಿವಿಧ ಹರಹುಗಳಲ್ಲಿ ಪಾದಯಾತ್ರೆ ನಡೆಸಿ ಕೈಚೀಲಗಳಲ್ಲಿ ಪುಸ್ತಕಗಳನ್ನು ಹೊತ್ತು ಮನೆಮನೆಗೆ ಭೇಟಿಕೊಟ್ಟು ಪುಸ್ತಕಗಳನ್ನು ಮಾರಿದರು. ಯಜಮಾನರಿಗೆ, ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ, ಮಕ್ಕಳಿಗೆ ಬೇಕಾದ ಹೊತ್ತಗೆಗಳನ್ನು ಅವರವರ ಅಭಿರುಚಿಗೆ ತಕ್ಕಂತೆ ಒದಗಿಸಿದರು. ಈ ಕಾರ್ಯಕ್ರಮಕ್ಕೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಆಶೀರ್ವಾದದ ಮೂಲಕ ಚಾಲನೆ ಕೊಟ್ಟರು. ಕೇಂದ್ರ ಯುವಜನ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವೆ ಸರೋಜಿನಿ ಮಹಿಷಿಯವರು ಸ್ತ್ರೀ ಕಾರ್ಯಕರ್ತರ ನೇತಾರರಾಗಿ ಒಂದು ದಿನದ ಪಾದಯಾತ್ರೆ ಕಾರ್ಯಕ್ರಮವನ್ನು ದಿನಾಂಕ 1973ರ ಮೇ 27 ರಂದು ಆಗುಮಾಡಿಸಿಕೊಟ್ಟರು. ಪ್ರಸಿದ್ಧ ಲೇಖಕಿಯರು ಈ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

**(ii) ಗ್ರಂಥ ಪ್ರಣಾಳಿಕೆ :** 'ಎಲ್ಲರಿಗೂ ಪುಸ್ತಕ' ಎಂಬ ಘೋಷಣೆಯನ್ನು ಕಾರ್ಯಗತಗೊಳಿಸುವಲ್ಲಿ 1970ನೆಯ ನವೆಂಬರಿನಲ್ಲಿ ಪ್ಯಾರಿಸ್ಸಿನಲ್ಲಿ ಜರುಗಿದ ಯುನೆಸ್ಕೊದ 16ನೆಯ ಅಧಿವೇಶನ ಮತ್ತು 1971ನೆಯ ಅಕ್ಟೋಬರಿನಲ್ಲಿ ಬ್ರಸಲ್ಸಿನಲ್ಲಿ ನಡೆದ ಯುನೆಸ್ಕೊದ ಅಂತಾರಾಷ್ಟ್ರೀಯ ಗ್ರಂಥವರ್ಷದ ಪ್ರೋತ್ಸಾಹೀ ಸಮಿತಿ ಸಭೆ–ಇವುಗಳ ಪ್ರಯತ್ನ ಬಹುಮಟ್ಟಿಗೆ ಯಶಸ್ಸುಗಳಿಸಿತು. ಬ್ರಸಲ್ಸ್‌ನ ಸಭೆಯಲ್ಲಿ ಪ್ರಪಂಚದ ಪ್ರಮುಖ ರಾಷ್ಟ್ರಗಳ ಲೇಖಕರೂ ಪ್ರಕಾಶಕರೂ ಪುಸ್ತಕ ಮಾರಾಟಗಾರರೂ ಭಾಗವಹಿಸಿದ್ದರು. ರಾಷ್ಟ್ರೀಯ ಇಲ್ಲವೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಗಳ ಬಳಕೆ, ವಿತರಣಾ ನಿರ್ವಹಣೆಯನ್ನು ಕುರಿತಂತೆ ಮಾರ್ಗದರ್ಶನವನ್ನೀಡುವ ನಿರ್ದೇಶನಾ ತತ್ತ್ವಗಳನ್ನೊಳಗೊಂಡ ಪ್ರಣಾಳಿಕೆಯೊಂದನ್ನು ರಚಿಸುವ ಸಂಬಂಧದಲ್ಲಿ ಗ್ರಂಥ ಮಾರಾಟಗಾರರ ಸಂಘಗಳ ಅಂತಾರಾಷ್ಟ್ರೀಯ ಸಂಸ್ಥೆ, ಗ್ರಂಥಕರ್ತ ಸಂಘಗಳ ಅಂತಾರಾಷ್ಟ್ರೀಯ ಒಕ್ಕೂಟ, ಅಂತಾರಾಷ್ಟ್ರೀಯ ಪ್ರಲೇಖನ ಸಂಸ್ಥೆ, ಗ್ರಂಥಾಲಯ ಸಂಘಗಳ ಅಂತಾರಾಷ್ಟ್ರೀಯ ಮಹಾಮಂಡಳ, ಭಾಷಾಂತರಕಾರರ ಅಂತಾರಾಷ್ಟ್ರೀಯ ಮಹಾಮಂಡಳ, ಅಂತಾರಾಷ್ಟ್ರೀಯ ಬರೆಹಗಾರರ ಸಂಘ ಮತ್ತು ಅಂತಾರಾಷ್ಟ್ರೀಯ ಪ್ರಕಾಶಕರ ಸಂಘ–ಇವು ಒಂದು ನಿರ್ಧಾರಕ್ಕೆ ಬಂದವು. ಈ ನಿರ್ಧಾರದ ಫಲವೇ, ಗ್ರಂಥ ಪ್ರಣಾಳಿಕೆಯ (ಚಾರ್ಟರ್ ಆಫ್ ದಿ ಬುಕ್) ಉಗಮಕ್ಕೆ ದಾರಿ ಮಾಡಿಕೊಟ್ಟಿತು. ಅಂಗೀಕೃತವಾದ ಗ್ರಂಥ ಪ್ರಣಾಳಿಕೆಯಲ್ಲಿ ಹತ್ತು ಕಲಮುಗಳಿವೆ.

1. ಪ್ರತಿಯೊಬ್ಬನಿಗೂ ಓದುವ ಹಕ್ಕು ಇದೆ.

ವಾಚನಾಭಿರುಚಿಯ ಅವಕಾಶ ಪ್ರತಿಯೊಬ್ಬನಿಗೂ ಲಭಿಸುವಂತೆ ನೋಡಿಕೊಳ್ಳುವುದು ಸಮಾಜದ ಆದ್ಯ ಕರ್ತವ್ಯ. ನಿರಕ್ಷರತೆಯಿಂದ ಪ್ರಪಂಚದ ಬಹು ಭಾಗಗಳಲ್ಲಿಯ ಜನ ಗ್ರಂಥಗಳಿಂದ ವಿಮುಖರಾಗಿರುವುದರಿಂದ ನಿರಕ್ಷರತೆಯನ್ನು ನಿರ್ಮೂಲಗೊಳಿಸುವುದು ಸರ್ಕಾರದ ಹೊಣೆ. ಗ್ರಂಥಗಳು ಓದುಗರ ಹಾಗೂ ಬದಲಾಗುತ್ತಿರುವ ಸಮಾಜದ ಆವಶ್ಯಕತೆಗಳನ್ನು ಪೂರೈಸಬಲ್ಲದು ಎಂಬ ಕಲ್ಪನೆಯ ಹೊಣೆಯನ್ನು ಹೊತ್ತ ಪ್ರಕಾಶಕರು ಮತ್ತು ಹಂಚಿಕೆದಾರರು, ಸಮಾಜ ಹಾಗೂ ಸರ್ಕಾರ, ವಾಚನಾಭಿರುಚಿಗಳನ್ನು ಹುಟ್ಟಿಸಲು ಹಾಗೂ ಅದನ್ನು ವೃದ್ಧಿಗೊಳಿಸಲು ಬಹುಮುಖ ಸಹಾಯವನ್ನು ನೀಡಬೇಕು.

2. ಶಿಕ್ಷಣಕ್ಕೆ ಗ್ರಂಥಗಳು ಅತ್ಯಾವಶ್ಯಕ.

ಕ್ರಾಂತಿಕಾರಿ ಬದಲಾವಣೆಗಳಿಗೊಳಗಾಗುವ ಶೈಕ್ಷಣಿಕ ಕ್ಷೇತ್ರದಲ್ಲಿ, ದೂರಗಾಮಿ ವಿಸ್ತೃತ ಕಾರ್ಯಕ್ರಮಗಳಿಗನುಗುಣವಾಗಿ ಯೋಗ್ಯ ಪಠ್ಯಪುಸ್ತಕಗಳ ಯೋಜನೆ ಅವಶ್ಯ. ಅಂತೆಯೇ ಶೈಕ್ಷಣಿಕ ಗ್ರಂಥಗಳ ವಿಷಯ ಹಾಗೂ ಗುಣಮಟ್ಟದಲ್ಲಿಯೂ ಎಲ್ಲ ರಾಷ್ಟ್ರಗಳಲ್ಲಿ ನಿರಂತರ ಸುಧಾರಣೆಯಾಗುವುದೂ ಅವಶ್ಯ.

ಶಾಲಾ ಗ್ರಂಥಾಲಯಗಳಿಗೆ ಪಠ್ಯಪುಸ್ತಕಗಳ ಹಾಗೂ ಸಾಕ್ಷರತಾ ಪ್ರಸಾರ ಯೋಜನೆಗಳಿಗೆ ಅವಶ್ಯವಿರುವ ಸಾಮಾನ್ಯ ಗ್ರಂಥಗಳ ಬೇಡಿಕೆಯನ್ನೊದಗಿಸಲು ರಾಷ್ಟ್ರೀಯ ಪ್ರಕಾಶಕರು ಪ್ರಾದೇಶಿಕ ಗ್ರಂಥೋತ್ಪಾದನೆಯನ್ನು ಅವಲೋಕಿಸಬೇಕಾಗುತ್ತದೆ.

3. ಲೇಖಕರು ರಚನಾತ್ಮಕವಾಗಿ ಪಾತ್ರವಹಿಸಲು ಅವರಿಗೆ ಅನುಕೂಲ ಪರಿಸ್ಥಿತಿಯನ್ನೊದಗಿಸುವುದು ಸಮಾಜದ ವಿಶಿಷ್ಟ ಕರ್ತವ್ಯ.

ಯಾವುದೇ ವೈಜ್ಞಾನಿಕ, ಸಾಹಿತ್ಯಕ ಅಥವಾ ಕಲಾತ್ಮಕ ಕೃತಿಯಿಂದ ಉಂಟಾಗುವ ನೈತಿಕ ಮತ್ತು ಭೌತಿಕ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬನ ಹಕ್ಕು ಎಂದು ಪ್ರತಿಪಾದಿಸುವ ಮಾನವಹಕ್ಕುಗಳ ಜಾಗತಿಕ ಘೋಷಣೆಯ ರಕ್ಷೆಯನ್ನು, ಭಾಷೆಯ ಮೇರೆಯಾಚೆಗೆ ಇರುವ ಕ್ಷಿತಿಜಗಳತ್ತ ಒಯ್ಯಬಲ್ಲ, ಜನತೆ ಹಾಗೂ ಗ್ರಂಥಕರ್ತರ ನಡುವೆ ಅವಶ್ಯವಿರುವ ಸೇತುವೆಯನ್ನು ನಿರ್ಮಿಸುವ ಭಾಷಾಂತರಕಾರರಿಗೂ ಒದಗಿಸಬೇಕು. ಹೀಗೆ ಲೇಖಕರನ್ನು ಅವರ ರಚನಾತ್ಮಕ ಪಾತ್ರದಲ್ಲಿ ಪ್ರೋತ್ಸಾಹಿಸಬೇಕು ಮತ್ತು ಅನುವಾದಗಳ ಮುಖಾಂತರ ಇತರ ಭಾಷೆಗಳ ಸಾಹಿತ್ಯದಲ್ಲಡಗಿರುವ ಸಿರಿವಂತಿಕೆಯನ್ನು ಒದಗಿಸಬೇಕು.

4. ರಾಷ್ಟ್ರೀಯ ಅಭಿವೃದ್ಧಿಗಾಗಿ ಯೋಗ್ಯ ಪ್ರಕಾಶನ ವೃತ್ತಿ ಅವಶ್ಯ. ಗ್ರಂಥ ಪ್ರಕಟಣೆಯಲ್ಲಿ ಹಲವಾರು ಏರುಪೇರುಗಳಿರುವುದರಿಂದ ಕೆಲವು ರಾಷ್ಟ್ರಗಳು ಸಾಕಷ್ಟು ಓದುವ ಸಾಮಗ್ರಿಯನ್ನೊದಗಿಸುವಲ್ಲಿ ಹಿಂದುಳಿದಿವೆ. ಅದಕ್ಕಾಗಿ ರಾಷ್ಟ್ರೀಯ ಪ್ರಜ್ಞೆ ಮತ್ತು ಅಂತಾರಾಷ್ಟ್ರೀಯ ಸಹಕಾರ ಬೇಕು. ಪ್ರಕಾಶನ ವೃತ್ತಿಯ ಅಭಿವೃದ್ಧಿ ಶಿಕ್ಷಣದೊಡನೆ ಒಂದಾಗುವುದೂ ಆರ್ಥಿಕ ಹಾಗೂ ಸಾಮಾಜಿಕ ಯೋಜನೆಗಳನ್ನು ರಾಷ್ಟ್ರೀಯ ಗ್ರಂಥಾಭಿವೃದ್ಧಿ ಸಮಿತಿಗಳ ಮುಖಾಂತರ ವಿಸ್ತರಿಸುವುದೂ ಬಹುಮುಖ ತಳಹದಿಯ ಆರ್ಥಿಕ ನೀತಿಯನ್ನವಲಂಬಿಸಿದೆ.

5. ಪುಸ್ತಕ ತಯಾರಿಕೆಯ ಅನುಕೂಲತೆಗಳು ಪ್ರಕಾಶನಾಭಿವೃದ್ಧಿಗೆ ಅವಶ್ಯ. ಪುಸ್ತಕ ತಯಾರಿಕೆಯ ಅಭಿವೃದ್ಧಿಗೆ ಅವಶ್ಯವಿರುವ ಕಾಗದ, ಮುದ್ರಣ ಮತ್ತು ರಟ್ಟುಕಟ್ಟುವ ಉಪಕರಣಗಳಿತ್ಯಾದಿಗಳನ್ನೊದಗಿಸುವ ಏರ್ಪಾಡನ್ನು ತಮ್ಮ ಆರ್ಥಿಕ ಯೋಜನೆಯಲ್ಲಿ ಆಯಾ ಸರ್ಕಾರಗಳು ಮಾಡಿಕೊಳ್ಳಬೇಕು. ತಮ್ಮ ರಾಷ್ಟ್ರೀಯ ಸಂಪನ್ಮೂಲಗಳಿಂದ ಹಾಗೂ ಸುಲಭತರ ಉಪಕರಣಗಳ ಆಮದಿನೊಂದಿಗೆ, ಕಡಿಮೆ ಬೆಲೆಯಲ್ಲಿ ಆಕರ್ಷಕವಾಗಿರುವ ಓದುವ ಸಾಮಗ್ರಿಯನ್ನು ಒದಗಿಸಬಹುದಾಗಿದೆ. ಅಲ್ಲದೆ ಪುಸ್ತಕ ತಯಾರಕರು ಪ್ರಕಟಣೆಯಲ್ಲಿ ಉನ್ನತಮಟ್ಟವನ್ನು ಕಾಯ್ದುಕೊಳ್ಳಬೇಕು.

6. ಪ್ರಕಾಶಕರು ಹಾಗೂ ಓದುಗರ ನಡುವೆ ಗ್ರಂಥ ಮಾರಾಟಗಾರರು ಸೇತುವೆಯಂತೆ ಮಹತ್ತ್ವಪೂರ್ಣ ಸೇವೆಯನ್ನು ಒದಗಿಸುವರು. ವಾಚನಾಭಿರುಚಿಯನ್ನು ಬೆಳೆಸುವ ಪ್ರಯತ್ನದಲ್ಲಿ ಗ್ರಂಥ ಮಾರಾಟಗಾರರ ಮೇಲೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹೊಣೆಯಿರುತ್ತದೆ. ಓದುಗರಿಗೆ ಸಾಕಷ್ಟು ಹಾಗೂ ಯೋಗ್ಯ ಗ್ರಂಥಗಳು ನಿಲುಕುವಂತೆ ನೋಡಿಕೊಳ್ಳುವಲ್ಲಿ ಗ್ರಂಥ ಮಾರಾಟಗಾರರು ಮಹತ್ತ್ವದ ಪಾತ್ರವನ್ನು ವಹಿಸಬಲ್ಲರು. ಅಂಚೆ ರಿಯಾಯತಿಯಿಂದಾಗಿ ಈ ಕರ್ತವ್ಯವನ್ನು ನಿರ್ವಹಿಸುವುದು ಸಾಧ್ಯವಾಗಬಹುದಾಗಿದೆ.

7. ಬೌದ್ಧಿಕ ವಿಕಾಸ ಹಾಗೂ ಸಮಾಚಾರ ವಿತರಣೆ ಮತ್ತು ಜ್ಞಾನ ಸಂವರ್ಧನೆ ಹಾಗೂ ಸೌಂದರ್ಯಾನುಭೂತಿಗಳಿಗೆ ಗ್ರಂಥಾಲಯಗಳು ರಾಷ್ಟ್ರೀಯ ಸಂಪನ್ಮೂಲಗಳಾಗಿವೆ. ಗ್ರಂಥಾಲಯಗಳು ಗ್ರಂಥ ವಿತರಣೆಯ ಕೇಂದ್ರಗಳಷ್ಟೇ ಆಗಿರದೆ ಓದುಗನ ಬೇಡಿಕೆಯನ್ನು ಪೂರೈಸುವ ಪರಿಣಾಮಕಾರಿ ಸಾಧನಗಳೂ ಆಗಿವೆ. ಸಾರ್ವಜನಿಕ ಸೇವೆಯಲ್ಲಿ ಅವು ವ್ಯಕ್ತಿಯ ಉನ್ನತಿಗೂ ಜೀವಾವಧಿ ಶೈಕ್ಷಣಿಕ ಪ್ರಗತಿಗೂ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೂ ಬೇಕಾದ ತಿಳಿವಳಿಕೆಯನ್ನೊದಗಿಸುತ್ತವೆ. ಗ್ರಂಥಾಲಯಗಳ ಸೇವೆ ರಾಷ್ಟ್ರದ ಅಂತಃಶಕ್ತಿಗಳಿಗೆ ಹಾಗೂ ಆವಶ್ಯಕತೆಗಳಿಗನುಗುಣವಾಗಿರಬೇಕಾಗುತ್ತದೆ. ನಗರಗಳಲ್ಲಿ ಮಾತ್ರವಲ್ಲದೆ ಗ್ರಂಥಪೂರೈಕೆಗಳಿಲ್ಲದ ಬಹುಸಂಖ್ಯಾತ ಹಳ್ಳಿಗಳಲ್ಲಿ ಮತ್ತು ಪ್ರತಿ ಶಾಲೆಯಲ್ಲಿ ನಿಪುಣಗ್ರಂಥಪಾಲರು ಇರುವುದರ ಜೊತೆಗೆ ಗ್ರಂಥಾಲಯದ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತಾಗಬೇಕು.

8. ಪ್ರಲೇಖನ ವ್ಯವಸ್ಥೆ ಗ್ರಂಥಗಳನ್ನು ಸಂರಕ್ಷಿಸುವುದರೊಂದಿಗೆ ಅವುಗಳಲ್ಲಿ ಅಡಕವಾಗಿರುವ ಜ್ಞಾನವನ್ನು ಪ್ರತಿಕೃತಿಯಲ್ಲೊದಗಿಸುವ ಮಹತ್ತ್ವದ ಸೇವೆಯನ್ನೀಯುತ್ತಿದೆ. ವೈಜ್ಞಾನಿಕ ತಾಂತ್ರಿಕ ಮತ್ತು ಇತರ ವಿಶಿಷ್ಟ ಗ್ರಂಥಗಳಿಗಂತೂ ಪ್ರಲೇಖನ ಸೇವೆ ಅತ್ಯಾವಶ್ಯಕವೆನಿಸಿದೆ. ಕಾರಣ ಇಂಥ ಸೇವೆಯನ್ನು ಸರ್ಕಾರ ಹಾಗೂ ಗ್ರಂಥ ಪ್ರಪಂಚಕ್ಕೆ ಸಂಬಂಧಿಸಿದ ಸಕಲರ ನೆರವಿನಿಂದ ಅಭಿವೃದ್ಧಿಗೊಳಿಸಬೇಕು. ಎಲ್ಲ ಕಾಲದಲ್ಲಿಯೂ ಗರಿಷ್ಠ ಮಾಹಿತಿ ಲಭ್ಯವಾಗುವುದಕ್ಕೋಸ್ಕರ ಆವಶ್ಯಕ ಸಾಧನಗಳ ಉಚಿತ ಸೇವಾವ್ಯವಸ್ಥೆಗೆ ಪರಮಾವಧಿ ಉತ್ತೇಜನವೀಯಬೇಕು.

9. ರಾಷ್ಟ್ರ ರಾಷ್ಟ್ರಗಳಲ್ಲಿಯ ಗ್ರಂಥಗಳ ಮುಕ್ತ ವಿತರಣೆ ಆಯಾ ರಾಷ್ಟ್ರದ ಗ್ರಂಥ ಪೂರೈಕೆಗೆ ಸಹಾಯಕವಾಗುವುದಲ್ಲದೆ ಅಂತಾರಾಷ್ಟ್ರೀಯ ತಿಳಿವಳಿಕೆಯನ್ನು ಹೆಚ್ಚಿಸುತ್ತದೆ. ಜಾಗತಿಕ ರಚನಾತ್ಮಕ ಶಕ್ತಿಯಲ್ಲಿ ಎಲ್ಲರೂ ಭಾಗಿಗಳಾಗಲು ಶಕ್ತರಾಗಬೇಕಾದರೆ ಗ್ರಂಥಗಳ ಅನಿರ್ಬಂಧಿತ ಸಾಗಾಣಿಕೆ ಅವಶ್ಯ. ಸುಂಕ ಹಾಗೂ ಇತರ ಕರಪಟ್ಟಿಗಳಂಥ ತೊಡಕುಗಳನ್ನು ಯುನೆಸ್ಕೊದ ಕರಾರುಗಳು ಉಳಿದ ಅಂತಾರಾಷ್ಟ್ರೀಯ ಶಿಫಾರಸುಗಳು ಒಪ್ಪಂದಗಳ ವಿಸ್ತೃತ ಕಾರ್ಯಾಚರಣೆಯ ಮುಖಾಂತರ ನಿವಾರಿಸಬಹುದು. ಗ್ರಂಥಗಳನ್ನು ಮತ್ತು ಗ್ರಂಥಗಳ ರಚನೆಗೆ ಅವಶ್ಯವಿರುವ ಕಚ್ಚಾಸಾಮಗ್ರಿಯನ್ನು ಕೊಳ್ಳುವುದಕ್ಕೆ ಬೇಕಾಗಿರುವ ರಹದಾರಿಗಳನ್ನು ಮತ್ತು ವಿದೇಶೀ ಹಣ ವಿನಿಮಯವನ್ನು ಇದಕ್ಕಾಗಿ ಧಾರಾಳವಾಗಿ ಕೊಡಬೇಕು. ಮತ್ತು ಒಳಾಡಳಿತ ಕರ ಹಾಗೂ ಗ್ರಂಥ ವ್ಯಾಪಾರದಲ್ಲಿರುವ ಇತರ ಆತಂಕಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡಬೇಕು.

10. ಗ್ರಂಥಗಳು ಅಂತಾರಾಷ್ಟ್ರೀಯ ತಿಳಿವಳಿಕೆ ಮತ್ತು ಶಾಂತಿ ಸಹಕಾರಕ್ಕೆ ಸಹಾಯಕಾರಿಯಾಗುವುವು. ಮಾನವನ ಮನಸ್ಸಿನಲ್ಲಿ ಯುದ್ಧಗಳ ವಿಚಾರಗಳು ಉದ್ಭವವಾಗುವಂತೆಯೇ ಶಾಂತಿ ಸಂರಕ್ಷಣೆಯ ಅಗತ್ಯ ಅಲ್ಲಿಯೇ ಅಂಕುರಿಸುವಂತೆ ಮಾಡಬೇಕೆಂದು ಯುನೆಸ್ಕೊ ಸಭೆ ಪ್ರತಿಪಾದಿಸುತ್ತದೆ. ಸ್ನೇಹ, ಶಾಂತಿ, ಸಂರಕ್ಷಣೆ ಮತ್ತು ಪರಸ್ಪರ ತಿಳಿವಳಿಕೆಯ ವಿವೇಕಯುತವಾದ ವಾತಾವರಣವನ್ನು ನಿರ್ಮಿಸುವಲ್ಲಿ ಗ್ರಂಥಗಳು ಅತ್ಯಂತ ಪ್ರಭಾವಶಾಲಿಗಳಾಗಿರುತ್ತವೆ. ಗ್ರಂಥಗಳಲ್ಲಿರುವ ಜ್ಞಾನ ಆತ್ಮೋನ್ನತಿ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ತಿಳಿವಳಿಕೆ ಮತ್ತು ಶಾಂತತೆಯನ್ನು ಸಾಧಿಸಲು ಸಹಾಯಕಾರಿಯಾಗುವಂತೆ ನೋಡಿಕೊಳ್ಳುವುದು ಪ್ರತಿ ರಾಷ್ಟ್ರದ ಕರ್ತವ್ಯವಾಗಿದೆ. (ಸಿ.ವಿ.ಎಚ್.)

**(iii) ಜಾಗತಿಕ ಗ್ರಂಥ ಪ್ರದರ್ಶನ (1972):** 1970ನೆಯ ನವೆಂಬರ್‌ನಲ್ಲಿ ಪ್ಯಾರಿಸ್ಸಿನಲ್ಲಿ ಜರುಗಿದ ಯುನೆಸ್ಕೊದ 16ನೆಯ ಅಧಿವೇಶನದಲ್ಲಿ 1972ನೆಯ ವರ್ಷವನ್ನು ಅಂತಾರಾಷ್ಟ್ರೀಯ ಗ್ರಂಥ ವರ್ಷವೆಂದು ಪ್ರಪಂಚದಾದ್ಯಂತ ಆಚರಿಸಲಾಯಿತಷ್ಟೆ 'ಎಲ್ಲರಿಗೂ ಪುಸ್ತಕ' ಎಂಬ ಘೋಷಣೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಅಗತ್ಯವೆನಿಸುವ ಹಲವಾರು ಚಟುವಟಿಕೆಗಳನ್ನು ಆ ಅಧಿವೇಶನದಲ್ಲಿ ಕೈಕೊಳ್ಳಲಾಯಿತು. ಅವುಗಳಲ್ಲಿ ಮುಕುಟಪ್ರಾಯವೆನಿಸಿದ ಜಾಗತಿಕ ಗ್ರಂಥಪ್ರದರ್ಶನವನ್ನು ದೆಹಲಿಯಲ್ಲಿ 1972ರಲ್ಲಿ ಮಾರ್ಚ್ 18ರಿಂದ ಏಪ್ರಿಲ್ 2ರ ವರೆಗೆ ಎರಡು ವಾರಗಳ ಕಾಲ ಜರುಗಿಸಲಾಯಿತು.

ಓದುಗರಲ್ಲಿ ಗ್ರಂಥಗಳ ಬಗೆಗೆ ಅಭಿರುಚಿ ಹಾಗೂ ಆದರವನ್ನು ಉಂಟು ಮಾಡುವುದು, ಬರೆಹಗಾರರನ್ನೂ ಭಾಷಾಂತರಕಾರರನ್ನೂ ಪ್ರಕಾಶಕರನ್ನೂ ಪ್ರೋತ್ಸಾಹಿಸುವುದು, ಓದುಗರಿಗೆ ವಿವಿಧ ಗ್ರಂಥಗಳ ಅಸ್ತಿತ್ವದ ಬಗೆಗೆ ತಿಳಿವಳಿಕೆಯನ್ನುಂಟು ಮಾಡುವ ಅವಕಾಶವನ್ನು ಕಲ್ಪಿಸುವುದು, ಗ್ರಂಥೋತ್ಪಾದನೆಯಲ್ಲಿ ಸ್ವಾತಂತ್ರ್ಯೋತ್ತರ ಭಾರತದ ರಚನಾತ್ಮಕ ಪ್ರಯತ್ನವನ್ನು ವಿವಿಧ ದೇಶಗಳ ಪ್ರಕಾಶಕರ ಹಾಗೂ ಹಂಚಿಕೆದಾರರ ಗಮನಕ್ಕೆ ತರುವುದು–ಇವು ಈ ಪ್ರದರ್ಶನದ ಮಹೋದ್ದೇಶಗಳಲ್ಲಿ ಮುಖ್ಯವಾದವು.

ಗ್ರಂಥ ಪ್ರಕಾಶನವೃತ್ತಿ ಶಿಖರಕ್ಕೇರಿದ ದೇಶಗಳಲ್ಲಿ ಉತ್ಪಾದಿತ ಗ್ರಂಥಗಳಿಗೆ ಓದುಗರನ್ನು ಹೇಗೆ ದೊರಕಿಸಬೇಕೆಂಬ ಸಮಸ್ಯೆಯಿದ್ದರೆ ಅಭಿವೃದ್ಧಿ ಹೊಂದುತ್ತಿರುವ ಇತರ ದೇಶಗಳಲ್ಲಿ ಗ್ರಂಥಗಳ ಉತ್ಪಾದನೆ ಹಾಗೂ ಬೆಳೆಯುತ್ತಿರುವ ಜನಸಂಖ್ಯೆಗಳ ನಡುವಣ ಅತೀವ ಅಂತರದಿಂದಾಗಿ ಗ್ರಂಥಗಳ ಅಭಾವ ಕಂಡುಬರುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಪ್ರಪಂಚದ ಒಟ್ಟು ಉತ್ಪಾದಿತ ಗ್ರಂಥಗಳ $^1/_5$ ರಷ್ಟು ಗ್ರಂಥಗಳನ್ನು ಮಾತ್ರ ಉತ್ಪಾದಿಸುತ್ತವೆಯೆಂದು ಅಂದಾಜು ಮಾಡಲಾಗಿದೆ. 1972ರ ಜಾಗತಿಕ ಗ್ರಂಥಪ್ರದರ್ಶನ ಮಾಡಿದ ದೊಡ್ಡ ಕೆಲಸವೆಂದರೆ ಗ್ರಂಥೋತ್ಪಾದನೆ ಹಾಗೂ ವಿತರಣೆಗಳಲ್ಲಿ ಪ್ರತಿಯೊಂದು ರಾಷ್ಟ್ರವೂ ಕೈಕೊಂಡ ಪರಿಶ್ರಮದ ನೈಜಕಲ್ಪನೆಯನ್ನು ಜನತೆಯ ಮುಂದೆ ಇಟ್ಟದ್ದು.

ಭಾರತದ ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆಯವರು ಏರ್ಪಡಿಸಿದ ಈ ಪ್ರದರ್ಶನವನ್ನು ಭಾರತದ ರಾಷ್ಟ್ರಪತಿ ವಿ.ವಿ. ಗಿರಿಯವರು 1972ರ ಮಾರ್ಚ್ 18ರಂದು ಉದ್ಘಾಟಿಸಿದರು. 48 ರಾಷ್ಟ್ರಗಳನ್ನು ಪ್ರತಿನಿಧಿಸಿದ ಸುಮಾರು 500 ಪ್ರಕಾಶಕರು ಹಾಗೂ ಹಂಚಿಕೆದಾರರು ಇದರಲ್ಲಿ ಭಾಗವಹಿಸಿದ್ದರು. ಭಾರತೀಯ ಭಾಷೆಗಳಲ್ಲಿ ಇತ್ತೀಚೆಗೆ ಪ್ರಕಟಗೊಂಡ ಚಿಕ್ಕ ಮಕ್ಕಳ 1,000 ಗ್ರಂಥಗಳನ್ನೊಳಗೊಂಡಂತೆ ಒಟ್ಟು 10,000ಕ್ಕೂ ಮಿಕ್ಕಿದ ವಿವಿಧ ಗ್ರಂಥಗಳನ್ನು ಪ್ರದರ್ಶಿಸಲಾಗಿತ್ತು. ಸುಮಾರು 20,000ಕ್ಕೂ ಹೆಚ್ಚಿನ ಜನ ಪ್ರತಿದಿನ ಪ್ರದರ್ಶನಕ್ಕೆ ಬರುತ್ತಿದ್ದರೆನ್ನಲಾಗಿದೆ. ಪ್ರದರ್ಶನದ ಅವಧಿಯಲ್ಲಿ ವೈಯಕ್ತಿಕವಾಗಿ ಪುಸ್ತಕ ಕೊಳ್ಳುವ ಓದುಗರನ್ನು ಪ್ರೋತ್ಸಾಹಿಸಲೋಸುಗ ಬೆಲೆಯ ಮೇಲೆ ವಿಶೇಷ ರಿಯಾಯತಿಯನ್ನೂ ಕೊಡಲಾಯಿತು.

ಪ್ರಪಂಚದಲ್ಲೇ ಅತಿ ದೊಡ್ಡದಾದ ಹಾಗೂ 306 ವರ್ಷಗಳಷ್ಟು ಹಳೆಯದಾದ ಅಟ್ಲಾಸ್ ಆಫ್ ದಿ ಗ್ರೇಟ್ ಎಲೆಕ್ಟರ್ ಎಂಬ ಗ್ರಂಥವನ್ನು ಈ ಸಮಯದಲ್ಲಿ ಜರ್ಮನ್ ಗಣರಾಜ್ಯ ಪ್ರದರ್ಶಿಸಿದ್ದು ವೈಶಿಷ್ಟ್ಯಪೂರ್ಣವಾಗಿತ್ತು.

ಜಾಗತಿಕ ಗ್ರಂಥ ಪ್ರದರ್ಶನದ ಚಟುವಟಿಕೆಗಳ ಅಂಗವಾಗಿ ಭಾರತದ ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆಯವರ ಮನವಿಯ ಮೇರೆಗೆ ಅಖಿಲ ಭಾರತ ಗ್ರಂಥಾಲಯ ಸಂಘದವರು ಮಾರ್ಚ್ 24–27ರ ವರೆಗೆ 19ನೆಯ ಅಖಿಲ ಭಾರತ ರಾಷ್ಟ್ರೀಯ ಗ್ರಂಥ ಸಮ್ಮೇಳನವನ್ನು ಏರ್ಪಡಿಸಿದ್ದರು. ಈ ಸಮ್ಮೇಳನಕ್ಕೆ ಭಾರತದ ಹೆಸರಾಂತ ಗ್ರಂಥಪಾಲರು ಆಗಮಿಸಿ ಎಲ್ಲರಿಗೂ ಪುಸ್ತಕ ಚಳವಳಿಯನ್ನು ಅನುಮೋದಿಸಿದರು. ಮಾರ್ಚ್ 27–30ರ ವರೆಗೆ ಸೇರಿದ ರಾಷ್ಟ್ರೀಯ ಬರೆಹಗಾರರ ಬಳಗದ (ನ್ಯಾಷನಲ್ ರೈಟರ್ಸ್ ಕ್ಯಾಂಪ್) ಸಭೆಯಲ್ಲಿ ಬರೆಹಗಾರರ ಹಾಗೂ ಪ್ರಕಾಶಕರ ಸಮಸ್ಯೆಗಳ ಬಗೆಗೆ ದೇಶದ ಹೆಸರಾಂತ ಸುಮಾರು 100 ಲೇಖಕರು ಸಾದರಪಡಿಸಿದ ವಿವಿಧ ಪ್ರಬಂಧಗಳನ್ನು ಓದಲಾಯಿತು.

1972ನೆಯ ವರ್ಷ ದೆಹಲಿಯಲ್ಲಿ ಮಾತ್ರವಲ್ಲದೆ ಭಾರತದ ಎಲ್ಲ ಕಡೆಯೂ ಎಲ್ಲರಿಗೂ ಪುಸ್ತಕ ಚಳವಳಿಯೂ ಗ್ರಂಥ ಪ್ರದರ್ಶನ, ಮಾರಾಟಗಳೂ ನಡೆದುವು. (ಸಿ.ವಿ.ಎಚ್.)

**2. ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಯುಕ್ತ ಮಹಾಸಂಘ :** ಹೆಸರೇ ತಿಳಿಸುವಂತೆ ಇದು ಪ್ರಪಂಚದ ಪ್ರಮುಖ ಗ್ರಂಥಾಲಯಗಳನ್ನು ಪ್ರತಿನಿಧಿಸುವ ಒಂದು ಮಹಾಸಂಘ. ಸಂಕ್ಷೇಪವಾಗಿ ಇದನ್ನು ಇಫ್ಲ ಎನ್ನುತ್ತಾರೆ. ಈ ಸಂಘ 1928ರಲ್ಲಿ ಒಂದು ಸಣ್ಣ ಅಂತಾರಾಷ್ಟ್ರೀಯ ಸಮಿತಿಯಾಗಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. 1953ರ ಹೊತ್ತಿಗೆ ಈ ಪುಟ್ಟ ಸಮಿತಿಗೆ ಎಂದಿನ ಸ್ಥಾನಮಾನಗಳು ದೊರೆತವು. ಸದ್ಯಕ್ಕೆ ಇದರಲ್ಲಿ ಹನ್ನೊಂದು ಉಪಸಮಿತಿಗಳಿದ್ದು ಅವು ಸಂಯುಕ್ತ ಸೂಚಿ (ಯೂನಿಯನ್ ಕ್ಯಾಟಲಾಗ್), ಅಂತಾರಾಷ್ಟ್ರೀಯ ಎರವಲುಗಳು (ಇಂಟರ್ ನ್ಯಾಷನಲ್ ಲೋನ್ಸ್), ಏಕರೀತಿಯ ಸೂಚೀಕರಣ ಸೂತ್ರಗಳು (ಯೂನಿಫಾರಂ ಕ್ಯಾಟಲಾಗಿಂಗ್ ರೂಲ್ಸ್) ಮೊದಲಾದ ಅನೇಕ ವಿಷಯಗಳ ಮೇಲೆ ಕೆಲಸಮಾಡುತ್ತಲಿವೆ. ಇಫ್ಲದ ಮುಖ್ಯ ಕಚೇರಿ ಜಿನೀವದಲ್ಲಿನ ವಿಶ್ವ ಸಂಸ್ಥೆಯ ಗ್ರಂಥಾಲಯದಲ್ಲಿದೆ. ಇದು ಮೊದಲು ಐದು ವರ್ಷಗಳಿಗೊಮ್ಮೆ ಗ್ರಂಥಪಾಲರ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಜಿನೀವದಲ್ಲೇ ಕರೆಯುತ್ತಿತ್ತು. 1964ರಿಂದೀಚೆಗೆ ಈ ಸಮ್ಮೇಳನಗಳನ್ನು ಬೇರೆ ಬೇರೆ ದೇಶಗಳಲ್ಲಿ ನಡೆಸುತ್ತಿದೆ. 1970ರ ಸಮ್ಮೇಳನ ಮಾಸ್ಕೊದಲ್ಲೂ 1971ರ ಸಮ್ಮೇಳನ ಲಿವರ್‌ಪೂಲ್‌ನಲ್ಲೂ ಜರುಗಿತ್ತು.

ಗ್ರಂಥಾಲಯಶಾಸ್ತ್ರಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವುದೇ ಇಫ್ಲದ ಗುರಿಯಾಗಿದ್ದು ಅದರಲ್ಲಿಯೂ ಮುಖ್ಯವಾಗಿ ಗ್ರಂಥಪಾಲರಲ್ಲಿ, ಗ್ರಂಥಾಲಯ ಸಂಘಗಳಲ್ಲಿ, ಗ್ರಂಥಸೂಚಿಗಳ ತಯಾರಕರಲ್ಲಿ (ಬಿಬ್ಲಿಯೋಗ್ರಫರ್ಸ್) ಅಂತಾರಾಷ್ಟ್ರೀಯ ಸಂಬಂಧವೇರ್ಪಡಲು ಸಹಾಯ ಮಾಡುವಲ್ಲಿ ಇದು ಹೆಚ್ಚಿನ ಕೆಲಸ ಮಾಡುತ್ತಿದೆ. ಈ ದೃಷ್ಟಿಯಲ್ಲಿ ಇದು ಅಂತಾರಾಷ್ಟ್ರೀಯ ಮಾನಕ ಸಂಸ್ಥೆಯ (ಇಂಟರ್‌ನ್ಯಾಷನಲ್ ಆರ್ಗನೈಸೇಷನ್ ಫಾರ್ ಸ್ಟ್ಯಾಂಡರ್ಡೈಷೇನ್) ನಿಕಟವರ್ತಿಯಾಗಿ ಕೆಲಸಮಾಡುತ್ತಿದೆ. ಇಫ್ಲ ಈ ಕೆಲವು ವಿಷಯಗಳಲ್ಲಿ ಆಸ್ಥೆವಹಿಸುತ್ತಿದೆ; 1. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಗಳ ಅದಲು–ಬದಲು ವಿತರಣೆ ಮತ್ತು ಎರವಲುಗಳನ್ನು ಹೆಚ್ಚಿಸುವುದು. 2. ಸೂಚೀಕರಣ ಸೂತ್ರಗಳಲ್ಲಿ ಅಂತಾರಾಷ್ಟ್ರೀಯ ಏಕತೆಯನ್ನು ಕಾಯ್ದುಕೊಳ್ಳುವುದು. 3. ಸಂಯುಕ್ತಸೂಚಿ ಮತ್ತು ಎರವಲು ಕೇಂದ್ರಗಳ ವ್ಯವಸ್ಥೆ. 4. ಆಯಾ ದೇಶಗಳ ಗ್ರಂಥ ಪ್ರಕಾಶನಕ್ಕೆ ಸಂಬಂಧಿಸಿ ಅಂಕಿ–ಸಂಖ್ಯೆಗಳನ್ನು ಸಂಗ್ರಹಿಸುವುದು. ಗ್ರಂಥಗಳ ಮಟ್ಟ ಉತ್ತಮಗೊಳ್ಳಲು ಅಗತ್ಯವಾದ ಸಲಹೆ ನೀಡುವುದು. 5. ವಾರ್ಷಿಕೆ, ಗ್ರಂಥಸೂಚಿಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಿಡಿಸುವುದು. 6. ಇದರ ಎಲ್ಲ ಸಮ್ಮೇಳನಗಳಲ್ಲಿ ಚರ್ಚಿಸಿದ ವಿಷಯಗಳ ಪ್ರಕಟಣೆಗೆ ಸಂಬಂಧಿಸಿದ ಸಮಾಚಾರಕೇಂದ್ರವನ್ನು ಸ್ಥಾಪಿಸುವುದು.

**ಇತಿಹಾಸ :** ಎಲ್ಲ ರಾಷ್ಟ್ರೀಯ ಗ್ರಂಥಾಲಯ ಸಂಘಗಳನ್ನು ಪ್ರತಿನಿಧಿಸುವ ಒಂದು ಅಂತಾರಾಷ್ಟ್ರೀಯ ಸಮಿತಿಯನ್ನು ಸ್ಥಾಪಿಸಬೇಕೆನ್ನುವ ಸಲಹೆ ಬಂದದ್ದು ಪ್ರಾಗ್‌ನಲ್ಲಿ 1926ರಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಗ್ರಂಥಪಾಲರ ಮತ್ತು ಗ್ರಂಥಪ್ರೇಮಿಗಳ ಸಮ್ಮೇಳನದಲ್ಲಿ. ಫ್ರಾನ್ಸಿನ ಪ್ರತಿನಿಧಿಯಿಂದ ಬಂದ ಈ ಸೂಚನೆಯನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಅಮೆರಿಕದ ಗ್ರಂಥಾಲಯ ಸಂಘದ (ಎಎಲ್ಎ) 50ನೆಯ ವಾರ್ಷಿಕ ಸಮ್ಮೇಳನ ಅಟ್ಲಾಂಟಿಕ್ ನಗರದಲ್ಲಿ ಜರುಗಿತು. ಆಗ ಪ್ರಾಗ್ ಸಮ್ಮೇಳನದ ಸಮಿತಿ ಅಂತಾರಾಷ್ಟ್ರೀಯ ಗ್ರಂಥಾಲಯವನ್ನು ಸ್ಥಾಪಿಸುವಲ್ಲಿ ಅಮೆರಿಕದ ಗ್ರಂಥಾಲಯ ಸಂಘ ಮುಂದಾಗಬೇಕೆಂದು ಕೇಳಿಕೊಂಡಿತು. ಮುಂದಿನ ವರ್ಷ ಅಂದರೆ 1927ರಲ್ಲಿ ಬ್ರಿಟಿಷ್ ಗ್ರಂಥಾಲಯ ಸಂಘದ ಸುವರ್ಣ ಮಹೋತ್ಸವ ಸಮ್ಮೇಳನ ಎಡಿನ್‌ಬರೊದಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ಅಮೆರಿಕದ ಗ್ರಂಥಾಲಯ ಸಂಘದ ಪ್ರತಿನಿಧಿಗಳು ಮತ್ತು ಉಳಿದ ರಾಷ್ಟ್ರೀಯ ಸಂಘಗಳು ಭಾಗವಹಿಸಿದ್ದವು. ಆ ಸಭೆಯಲ್ಲಿ ಅಂತಾರಾಷ್ಟ್ರೀಯ ಗ್ರಂಥಾಲಯ ಮತ್ತು ಗ್ರಂಥಸೂಚಿ ಸಮಿತಿ ರೂಪುಗೊಂಡಿತು(1927). ಇದರ ಮೊದಲ ಸಭೆ ರೋಮಿನಲ್ಲಿ ಕೂಡಿದಾಗ (1928) 14 ರಾಷ್ಟ್ರಗಳು ಇದರ ಸದಸ್ಯರಾದುವಲ್ಲದೆ ಸಮಿತಿ ಕಾನೂನುಬದ್ಧವಾಗಿ ಸ್ಥಾಪಿಸಲ್ಪಟ್ಟಿತು. ಇದಕ್ಕೆ ಕಾಯಂ ಕಾರ್ಯದರ್ಶಿಯೊಬ್ಬರ ನೇಮಕವಾದ್ದು 1929ರಲ್ಲಿ.

ಇದರ ಶಾಸನದ ಕರಡು ಪ್ರತಿ 1929ರ ವೆನಿಸ್ ಗೋಷ್ಠಿಯಲ್ಲಿ ಮಂಜೂರಾಗಿ ಪಡೆದು ಪರಿಷ್ಕೃತ ಪೂರ್ಣ ಶಾಸನ 1964ರಲ್ಲಿ ರೋಮಿನಲ್ಲಿ ಅಂಗೀಕರಿಸಲ್ಪಟ್ಟಿತು.

**ಇಫ್ಲದ ಶಾಖೆಗಳು ಹೀಗಿವೆ :** 1. ಶಾಸನ ಸಭೆಯ ಮತ್ತು ಆಡಳಿತ ಗ್ರಂಥಾಲಯಗಳು. 2. ತಾಂತ್ರಿಕ ವಿಶ್ವವಿದ್ಯಾಲಯ ಗ್ರಂಥಾಲಯಗಳು. 3. ವಿಶಿಷ್ಟ ಗ್ರಂಥಾಲಯಗಳು. 4. ನಾಟಕ ಮಂದಿರ ಗ್ರಂಥಾಲಯಗಳು ಮತ್ತು ಸಂಗ್ರಹಾಲಯಗಳು. 5. ಜುಡೈಕಾ ಮತ್ತು ಹೈಬ್ರೈಕಾ ಇನ್ ಯುರೋಪ್. 6. ಕೃಷಿ ಗ್ರಂಥಪಾಲರು ಮತ್ತು ಆಲೇಖನಕಾರರು. 7. ಕಾಯಿದೆ ಗ್ರಂಥಾಲಯಗಳು. 8. ಆಸ್ಪತ್ರೆ ಗ್ರಂಥಾಲಯಗಳು 9. ಸಾರ್ವಜನಿಕ ಗ್ರಂಥಾಲಯಗಳು. 10. ರಾಷ್ಟ್ರೀಯ ಮತ್ತು ವಿಶ್ವವಿದ್ಯಾಲಯ ಗ್ರಂಥಾಲಯಗಳು. 11. ಅಂತಾರಾಷ್ಟ್ರೀಯ ಗ್ರಂಥಾಲಯಗಳು. 12. ಮಕ್ಕಳಿಗಾಗಿ ಗ್ರಂಥಾಲಯ ಸೇವೆ.

**ಇಫ್ಲದಲ್ಲಿ ಒಂದೊಂದು ವಿಷಯಕ್ಕೂ ಒಂದೊಂದು ಸಮಿತಿ ಇದೆ :** 1. ಸಮನಾದ ಸೂಚೀಕರಣ ಸೂತ್ರಗಳು (ನಿಯಮಗಳು), 2. ಸಂಯುಕ್ತಸೂಚಿಗಳು ಮತ್ತು ಅಂತಾರಾಷ್ಟ್ರೀಯ ಎರವಲುಗಳು 3. ಪ್ರಕಟಣೆಗಳ ಅದಲು–ಬದಲು ವಿತರಣೆ, 4. ನಿಯತಕಾಲಿಕೆಗಳು ಮತ್ತು ವಾರ್ಷಿಕೆಗಳು, 5. ಅಂಕಿ–ಸಂಖ್ಯೆ, 6. ದುರ್ಲಭ ಮತ್ತು ಅಮೂಲ್ಯ ಗ್ರಂಥಗಳು ಮತ್ತು ದಾಖಲೆಗಳು, 7. ಗ್ರಂಥಾಲಯ ಶಿಕ್ಷಣ, 8 ಗ್ರಂಥಾಲಯ ಕಟ್ಟಡಗಳು, 9. ರಿಪ್ರೋಗ್ರಫಿ, 10. ಯಂತ್ರೀಕರಣ.

**ಈ ಕೆಲವು ವಿಷಯಗಳಲ್ಲಿ ಇಫ್ಲ ಸಾಕಷ್ಟು ಕೆಲಸಮಾಡಿದೆ :** 1. ದೇಶಗಳ ಹೆಸರಿನೊಂದಿಗೆ ಪ್ರಾಚೀನ ಗ್ರಂಥಗಳ ಸೂಚಿ ಉಲ್ಲೇಖ, 2. ಲೀಗಲ್ ಡೆಪೊಸಿಟ್ ಕೈಪಿಡಿ, 3. ಗ್ರಂಥಾಲಯಗಳಲ್ಲಿ ದುರ್ಲಭ ಗ್ರಂಥ ವಿಭಾಗಗಳ ವ್ಯವಸ್ಥೆ, 4. ಸಂಯುಕ್ತಸೂಚಿಗಳು, 5. ಟೆಲಿಕೋಡ್ ಮತ್ತು ವಿಳಾಸ ಗ್ರಂಥ, 6. ನಾಟಕ ಮಂದಿರ ಸಂಗ್ರಹಗಳ ಕೈಪಿಡಿ, 7 ಪ್ರಾಚ್ಯದೇಶಗಳಿಗೆ ಸಂಬಂಧಿಸಿದ ಗ್ರಂಥಗಳ ಸೂಚಿಗಳು.

ಇಫ್ಲ ಮುಖ್ಯವಾಗಿ ಯುನೆಸ್ಕೊದೊಂದಿಗೆ ಸಹಕರಿಸಿ ಅದರ ಸಾಮಾನ್ಯಸಭೆಯ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದೆ. ರಾಷ್ಟ್ರೀಯ ಗ್ರಂಥಾಲಯಗಳ ಅಭ್ಯಾಸ ಮತ್ತು ವರದಿ, ಕಾಯಿದೆ ಠೇವಣಿಗಳ ಅಭ್ಯಾಸ ಮತ್ತು ವರದಿ, ಅಂತಾರಾಷ್ಟ್ರೀಯ ಮಾನಕಗಳ ರಚನೆ ಮತ್ತು ಅಂಗೀಕಾರ ಈ ಮುಂತಾದ ವಿಷಯಗಳಲ್ಲಿ ಇಫ್ಲ ವಿಶೇಷ ಕೆಲಸಮಾಡಿದೆ.

**ಇಫ್ಲದ ಕೆಲವು ಮುಖ್ಯ ಪ್ರಕಟಣೆಗಳು ಹೀಗಿವೆ :** 1. ಸದಸ್ಯ ವರದಿ. 2. ಇಫ್ಲ ಸುದ್ದಿ: ಮೂರು ತಿಂಗಳಿಗೊಮ್ಮೆ ಪ್ರಕಟವಾಗುವುದು. ಇದು ಇಂಗ್ಲಿಷ್‌ನಲ್ಲಿ 1962ರಲ್ಲಿ ಪ್ರಕಟಿಸಲ್ಪಟ್ಟಿತು. ಫ್ರೆಂಚ್ ಆವೃತ್ತಿ ಡಿಸೆಂಬರ್ 1962ರಲ್ಲೂ ರಷ್ಯನ್ ಆವೃತ್ತಿ ಜನವರಿ 1964ರಲ್ಲೂ ಪ್ರಕಟವಾದುವು. 3. ಇಫ್ಲದ ಚಟುವಟಿಕೆಗಳು 1953ರಲ್ಲಿ ಲಿಬ್ರಿಯಲ್ಲಿ ಪ್ರಕಟಗೊಳ್ಳಲು ಆರಂಭವಾದವು. 4. ಜಾಗತಿಕ ಗ್ರಂಥಾಲಯಗಳ ಕೈಪಿಡಿ 1963ರಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಆವೃತ್ತಿಗಳಲ್ಲಿ ಪ್ರಕಟಗೊಂಡಿತು. 5. ಇನ್ಸ್‌ಪೆಲ್ ಎಂಬುದು ವಿಶಿಷ್ಟ ಗ್ರಂಥಾಲಯಗಳ ವಿಷಯವಾಗಿ ಅಂತಾರಾಷ್ಟ್ರೀಯ ಪತ್ರಿಕೆ. 6. ಯುದ್ಧದ ಅವಧಿಯನ್ನು ಬಿಟ್ಟು ಮಿಕ್ಕಂತೆ ಇಫ್ಲ ವಾರ್ಷಿಕ ಸಮ್ಮೇಳನಗಳನ್ನು ತಪ್ಪದೇ ನಡೆಸುವುದಲ್ಲದೆ ಅವುಗಳ ಕಾರ್ಯಕಲಾಪಗಳನ್ನು 28 ಸಂಪುಟಗಳಲ್ಲಿ ಪ್ರಕಟಿಸಿದೆ.

ಲ್ಯಾಟಿನ್ ಅಮೆರಿಕದಲ್ಲಿ ಸದಸ್ಯಸಂಘಗಳ ಪ್ರಾದೇಶಿಕ ಶಾಖೆಯನ್ನು ಅಕ್ಟೋಬರ್ 1962ರಲ್ಲಿ ಸ್ಥಾಪಿಸಲಾಯಿತು.

ಇಫ್ಲ ಪ್ರತಿವರ್ಷ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಿ ಅತ್ಯುತ್ತಮ ಪ್ರಬಂಧಕ್ಕೆ 1,000 ಸ್ವಿಸ್ ಫ್ರಾಂಕ್‌ಗಳ ಸವೆನ್ಸ್‌ಮನ ಬಹುಮಾನವನ್ನು ನೀಡುತ್ತದೆ. ಈ ಬಹುಮಾನ ವನ್ನು 1939ರಲ್ಲಿ ಇಫ್ಲದ ಆಗಿನ ಮಹಾಕಾರ್ಯದರ್ಶಿಯಾಗಿದ್ದ ಸೆವೆನ್ಸ್‌ಮನ 60ನೆಯ ಹುಟ್ಟುಹಬ್ಬದ ನೆನಪಿಗಾಗಿ ಏರ್ಪಡಿಸಲಾಗಿದೆ. 1970ರ ಈ ಬಹುಮಾನ ಎಸ್.ಆರ್. ರಂಗನಾಥನ್ ಅವರಿಗೆ ಬಂತೆಂಬುದನ್ನು ಇಲ್ಲಿ ನೆನೆಯಬಹುದು. (ಕೆ.ಎಸ್.ಡಿಇ.; ಟಿ.ಎಲ್.ಬಿ.)

**3. ಅಂತಾರಾಷ್ಟ್ರೀಯ ಸಂಗೀತ ಗ್ರಂಥಾಲಯಗಳ ಸಂಘ :** ಯುನೆಸ್ಕೊದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಸಂಗೀತ ಗ್ರಂಥಾಲಯಗಳ ಮೂರನೆಯ ಸಭೆ 1951ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಸಂದರ್ಭದಲ್ಲಿ ಈ ಸಂಘ ಔಪಚಾರಿಕ ಪ್ರಾರಂಭೋತ್ಸವದೊಂದಿಗೆ ಸ್ಥಾಪನೆಗೊಂಡಿತು. ಸಂಗೀತ ಗ್ರಂಥಾಲಯಗಳ ಮೊದಲ ಸಭೆ 1949ರಲ್ಲಿ ಫ್ಲಾರೆನ್ಸ್‌ನಲ್ಲಿ, ಎರಡನೆಯ ಸಭೆ 1950ರಲ್ಲಿ ಲ್ಯುನಬರ್ಗ್‌ದಲ್ಲಿ ಸೇರಿದ್ದವು. 1951ರ ಪ್ಯಾರಿಸ್ ಪ್ರಾರಂಭೋತ್ಸವದಲ್ಲಿ 23 ದೇಶಗಳ ಪ್ರತಿನಿಧಿಗಳು ಹಾಜರಿದ್ದರು. ಸಂಗೀತ ಗ್ರಂಥಾಲಯಗಳ ಚಟುವಟಿಕೆಗಳನ್ನು ಸುಸಂಘಟಿತಗೊಳಿಸುವುದು ಮತ್ತು ಸಂಗೀತ ಸೂಚಿ (ಬಿಬ್ಲಿಯಾಗ್ರಫಿ)

ತಯಾರಿಸುವಲ್ಲಿ ಉತ್ತೇಜನ ಕೊಡುವುದು ಇದರ ಮುಖ್ಯ ಉದ್ದೇಶ. ಈ ಸಂಘದಲ್ಲಿ 40 ದೇಶಗಳ 1,000ಕ್ಕೂ ಹೆಚ್ಚು ಸದಸ್ಯರಿದ್ದರು. ಸಂಘದಲ್ಲಿ 1. ರೆಕಾರ್ಡ್ ಗ್ರಂಥಾಲಯಗಳು 2. ಸಾರ್ವಜನಿಕ ಸಂಗೀತ ಗ್ರಂಥಾಲಯಗಳು 3. ಪ್ರಸಾರ ಮಾಡುವ ಸಂಗೀತ ಗ್ರಂಥಾಲಯಗಳು ಮತ್ತು 4. ಸಂಗೀತ ಸೂಚೀಕರಣ ಸೂತ್ರಗಳು ಎಂಬ ನಾಲ್ಕು ಶಾಖೆಗಳಿವೆ. ಈ ಸಂಘ ಆರು ತಿಂಗಳಿಗೊಮ್ಮೆ ಫಿಂಟೆಸ್ ಆರ್ಟಿಸ್ ಮ್ಯೂಸಿಕೆ ಎಂಬ ಪತ್ರಿಕೆಯೊಂದನ್ನು ಪ್ರಕಟಿಸುವುದು. ಇದರ ಇಂಗ್ಲೆಂಡ್ ಶಾಖೆ 200ಕ್ಕೂ ಹೆಚ್ಚಿನ ಸದಸ್ಯತ್ವವನ್ನು ಹೊಂದಿದ್ದು ಕಾಲಕಾಲಕ್ಕೆ ಸಭೆಗಳನ್ನು ಕರೆಯುವುದಲ್ಲದೆ ಲಘುಪ್ರಕಟನೆಗಳನ್ನೂ ಹೊರಡಿಸುವುದು. ಈ ಸಂಘ ಸಂಗೀತಸೂಚಿ ಮತ್ತು ಗ್ರಾಮೊಫೋನ್ ರೆಕಾರ್ಡ್ ಗ್ರಂಥಾಲಯಗಳ ಬಗೆಗೆ ಸಾಕಷ್ಟು ಕೆಲಸ ಮಾಡುತ್ತಿದೆ.

ಸಂಗೀತ ಗ್ರಂಥಾಲಯಗಳಲ್ಲಿ ಸಾಧ್ಯವಾದಷ್ಟು ಸಹಕಾರವನ್ನು ತರುವುದು, ಸಂಗೀತ ಗ್ರಂಥ ಸೂಚಿಗಳ ಸಹಕಾರೀ ಸಂಕಲನ, ಸಾಮಗ್ರಿಗಳ ಅದಲು-ಬದಲಾವಣೆ, ಸಂಗೀತ ಗ್ರಂಥಪಾಲರ ಶಿಕ್ಷಣ-ಈ ಬಾಬುಗಳಲ್ಲಿ ಸಂಘ ಸಾಕಷ್ಟು ಕೆಲಸ ಮಾಡುತ್ತಿದೆ.

**ಸಂಘದ ಮುಖ್ಯ ಪ್ರಕಟಣೆಗಳು ಹೀಗಿವೆ.**

1. ಇಂಟರ್‌ನ್ಯಾಷನಲ್ ಇನ್‌ವೆಂಟರಿ ಆಫ್ ಮ್ಯೂಸಿಕಲ್ ಸೋರ್ಸಸ್ (1950) ಇದರಲ್ಲಿ 16 ಮತ್ತು 17ನೆಯ ಶತಮಾನಗಳಲ್ಲಿ ಅಚ್ಚಾದ ಸಂಗೀತ ಸಂಗ್ರಹಗಳ ವಿವರಗಳಿವೆ.

2. ಫ್ರಾನ್ಸ್ ಗ್ರಾಸ್‌ಬರ್ಗರ್, ಮೂರು ಸಂಪುಟಗಳು-ಇದು ಪ್ರಕಟಿತ ಸಂಗೀತ ಲೇಖಕ ಸೂಚಿ.

3. ದುರ್ಲಭ ಇಲ್ಲವೆ ಅಪೂರ್ವ ಸಾಮಗ್ರಿಗಳ ಸೂಚಿ ಮತ್ತು ಪುರವಣಿಗಳು; ಪೋಕ್ ಲಿಂಡ್‌ಬರ್ಗ್ (1959).

4. ಬ್ರಿಟಿಷ್ ಕ್ಯಾಟಲಾಗ್ ಆಫ್ ಮ್ಯೂಸಿಕ್. ಇದನ್ನು ಇಂಗ್ಲೆಂಡಿನ ಶಾಖೆ ತಯಾರಿಸಿದೆ. ಈ ಸೂಚಿ 1957ರಲ್ಲಿ ಮೊದಲಿಗೆ ನಾಲ್ಕು ತಿಂಗಳಿಗೊಮ್ಮೆ ಹೊರಡುತ್ತಿತ್ತು. ಇದರಲ್ಲಿ ಬ್ರಿಟಿಷ್ ಮ್ಯೂಸಿಯಮ್‌ನಲ್ಲಿ ದಾಖಲಾಗಿರುವ ಸಂಗೀತ ಸಾಮಗ್ರಿಯನ್ನೆಲ್ಲ ಕೂಡಿಸಿಕೊಳ್ಳಲಾಗುವುದು.

5. ಬ್ರಿಯೊ ಎಂಬುದು ಇಂಗ್ಲೆಂಡ್ ಶಾಖೆಯ ನಿಯತಕಾಲಿಕ (1964).

6. ಆರ್‌ಐಎಲ್ಎಮ್ ಅಬ್ಸ್‌ಟ್ರ್ಯಾಕ್ಟ್ಸ್ ಆಫ್ ಮ್ಯೂಸಿಕ್ ಲಿಟರೆಚರ್ (1968). ಇದು ಸಂಗೀತ ಸಾಮಗ್ರಿಯ ಸಂಕ್ಷಿಪ್ತಸಾರವನ್ನೊದಗಿಸುವ ನಿಯತಕಾಲಿಕೆ. (ಕೆ.ಎಸ್.ಡಿಇ.; ಟಿ.ಎಲ್.ಬಿ.)

**4. ಅಮೆರಿಕದ ಗ್ರಂಥಾಲಯ ಸಂಘ :** ಅಮೆರಿಕದ ರಾಷ್ಟ್ರೀಯ ಗ್ರಂಥಾಲಯ ಸಂಘವಾಗಿರುವ ಈ ಸಂಸ್ಥೆ ವ್ಯಾಪಕವಾದ ಕಾರ್ಯಕ್ರಮಗಳಿಂದೊಡಗೂಡಿ ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸುತ್ತಿದೆ. ಈ ಸಂಘ 1876ರಲ್ಲಿ ಫಿಲಡೆಲ್ಫಿಯದಲ್ಲಿ ಪೆನ್‌ಸಿಲ್ವೇನಿಯ ಹಿಸ್ಟಾರಿಕಲ್ ಸೊಸೈಟಿಯಲ್ಲಿ ನಡೆದ ಮೂರು ದಿನಗಳ ಗ್ರಂಥಪಾಲರ ಸಮ್ಮೇಳನದಲ್ಲಿ ರೂಪುಗೊಂಡಿತು. ಇದರ ಹುಟ್ಟಿನಿಂದಲೇ ಆಧುನಿಕ ಗ್ರಂಥಾಲಯ ವಿಜ್ಞಾನ ಪ್ರಾರಂಭವಾಯಿತೆನ್ನಲಾಗಿದೆ. ಇಂಥದೊಂದು ಸಂಘದ ಅಗತ್ಯವನ್ನು ಕುರಿತು 1853ರ ಹೊತ್ತಿಗಾಗಲೇ ನ್ಯೂಯಾರ್ಕಿನಲ್ಲಿ ಸೇರಿದ್ದ ಗ್ರಂಥಪಾಲರ ಸಮ್ಮೇಳನ ಒಂದು ನಿರ್ಣಯವನ್ನು ಕೈಗೊಂಡಿತ್ತಾದರೂ ಅದು ಕಾರ್ಯರೂಪಕ್ಕೆ ಬಂದುದು 23 ವರ್ಷಗಳ ಅನಂತರ.

1876ರ ಸಮ್ಮೇಳನ ಮೂಲಪ್ರೇರಕ ಅಂದಿಗೆ ಆಮ್‌ಹರ್ಸ್ಟ್ ಕಾಲೇಜು ಗ್ರಂಥಾಲಯದ ತರುಣ ಗ್ರಂಥಪಾಲನಾಗಿದ್ದ, ಮುಂದೆ ಗ್ರಂಥಾಲಯದ ಕ್ಷೇತ್ರದಲ್ಲಿ ಖ್ಯಾತನಾಮನಾದ ಮೆಲ್‌ವಿಲ್ ಡ್ಯೂಯಿ. ಅಮೆರಿಕದ ಗ್ರಂಥಾಲಯ ಸಂಘದ ಮೊದಲ ಅಧ್ಯಕ್ಷ ಬಾಸ್ಟನ್, ಸಾರ್ವಜನಿಕ ಗ್ರಂಥಾಲಯದ ಗ್ರಂಥಪಾಲ ಜಸ್ಟಿನ್‌ವಿನ್ಸರ್, ಕಾರ್ಯದರ್ಶಿ, ಮೆಲ್‌ವಲ್ ಡ್ಯೂಯಿ.

ಅತಿ ಕಡಿಮೆ ಖರ್ಚಿನಲ್ಲಿ ಎಲ್ಲರಿಗೂ ಉತ್ತಮ ಓದಿನ ಸೌಲಭ್ಯವನ್ನು ಏರ್ಪಡಿಸುವುದೇ ಈ ಸಂಘದ ಮುಖ್ಯ ಉದ್ದೇಶ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವ್ಯಾಪ್ತಿಯಲ್ಲಿ ಇದನ್ನು ಸಾಧಿಸುವುದು ಹೇಗೆ ಎಂಬ ಬಗ್ಗೆ ಸಂಘ ಹೆಚ್ಚಿನ ಕೆಲಸ ಮಾಡಿದೆ.

**ಸದಸ್ಯತ್ವ :** ಈ ಸಂಘದ ಸದಸ್ಯತ್ವ ಗ್ರಂಥಪಾಲರಿಗಷ್ಟೇ ಸೀಮಿತವಾಗಿರದೆ ಗ್ರಂಥಾಲಯ ಸೇವೆಯಲ್ಲಿ ಅಭಿರುಚಿಯುಳ್ಳ ಯಾವುದೇ ವ್ಯಕ್ತಿ ಅಥವಾ ಗ್ರಂಥಾಲಯ ಸೇವೆಯಲ್ಲಿ ಆಸಕ್ತಿ ಮತ್ತು ಹಿತಾರ್ಥವುಳ್ಳ ಪ್ರತಿಯೊಬ್ಬನೂ ಇದರ ಸದಸ್ಯನಾಗಬಹುದು. ಅಂತೆಯೇ 1876ರಲ್ಲಿ 103 ಇದ್ದ ಸದಸ್ಯ ಸಂಖ್ಯೆ 1969ರ ಹೊತ್ತಿಗೆ 39,115ಕ್ಕೆ ಏರಿತು.

ಸಂಘದ ಕಾರ್ಯ ಆಡಳಿತ ಮಂಡಳಿಯ ಮುಖಾಂತರ ನಡೆಯುತ್ತದೆ. ಮಂಡಳದಲ್ಲಿನ 220 ಸದಸ್ಯರಲ್ಲಿ 104 ಮಂದಿ ಚುನಾಯಿತರು. ಆಡಳಿತದ ಎಲ್ಲ ಜವಾಬ್ದಾರಿಯೂ ಈ ಮಂಡಳಿಗೆ ಸೇರಿರುತ್ತದೆ. ಆಡಳಿತ ಮಂಡಳಿಯ ಕೇಂದ್ರವಾಗಿ ಒಂದು ಕಾರ್ಯನಿರ್ವಾಹಕ ಸಮಿತಿ ಇದೆ. ಸಂಘ ತನ್ನ ಹಿರಿದಾದ ಉದ್ದೇಶವನ್ನು ಸಫಲವಾಗಿ ಪೂರೈಸಲು ಅನುಕೂಲವಾಗುವಂತೆ ತನ್ನ ಕಾರ್ಯಕ್ಷೇತ್ರವನ್ನು 14 ಭಾಗಗಳಾಗಿ ವಿಂಗಡಿಸಿಕೊಂಡಿದೆ. ಅವುಗಳಲ್ಲಿ ಮುಖ್ಯವಾದುವು ಅಮೆರಿಕದ ಶಾಲಾ ಗ್ರಂಥಪಾಲರ ಸಂಘ, ಕಾಲೇಜು ಮತ್ತು ವಿಶಿಷ್ಟ ಗ್ರಂಥಾಲಯಗಳ ಸಂಘ, ಪ್ರಾದೇಶಿಕ ಗ್ರಂಥಾಲಯ ಸಂಘಗಳು, ತರುಣ ಸೇವಾ ವಿಭಾಗ, ಮಕ್ಕಳ ಸೇವಾ ವಿಭಾಗ, ಗ್ರಂಥಾಲಯ ಆಡಳಿತ ವಿಭಾಗ, ಗ್ರಂಥಾಲಯ ಶಿಕ್ಷಣ ವಿಭಾಗ, ಪರಾಮರ್ಶನ ಸೇವಾ ವಿಭಾಗ, ಸಾಮಗ್ರಿ ಮತ್ತು ತಾಂತ್ರಿಕ ಸೇವಾ ವಿಭಾಗ, ಸಮಾಚಾರ ಮತ್ತು ಯಂತ್ರೀಕರಣ ವಿಭಾಗ, ನವತರುಣ ಸೇವಾ ವಿಭಾಗ, ಅಮೆರಿಕದ ಗ್ರಂಥಾಲಯ ಕಾರ್ಯನಿರ್ವಾಹಕ ಸಮಿತಿಗಳ ಸಂಘ.

ಈ ಸಂಘದ ಮುಖ್ಯ ಕಚೇರಿ ಶಿಕಾಗೋದಲ್ಲಿದ್ದು ಆಡಳಿತ ಕಚೇರಿ ವಾಷಿಂಗ್‌ಟನ್ನಿನಲ್ಲಿದೆ. ಈ ಸಂಘಕ್ಕೆ ಹಣಕಾಸು ಮೂರು ರೀತಿಯಿಂದ ಒದಗುತ್ತಿದೆ. 1. ಸದಸ್ಯ ಶುಲ್ಕ ಮತ್ತು ದತ್ತಿ ವರಮಾನ, 2. ಪ್ರಕಟಣೆಗಳ ಮಾರಾಟ ಮತ್ತು 3. ದಾನಧನ.

**ಕಾರ್ಯಕ್ಷೇತ್ರ :** ಇಂದು ಅಮೆರಿಕ ಗ್ರಂಥಾಲಯಗಳ ನಾಡೆಂದೆನಿಸಿಕೊಂಡಿದ್ದರೆ ಅದರ ಕೀರ್ತಿಯೆಲ್ಲ ಅಮೆರಿಕದ ಗ್ರಂಥಾಲಯ ಸಂಘಕ್ಕೆ ಸಲ್ಲತಕ್ಕದ್ದು. 1876ರಿಂದ ಇಲ್ಲಿಯವರೆಗೆ ಸಂಘ ಸಾಕಷ್ಟು ಉಪಯುಕ್ತವಾದ ಕೆಲಸ ಮಾಡಿದೆ. ಸೂಚೀಕರಣ ಮತ್ತು ವರ್ಗೀಕರಣದಿಂದ ಪ್ರಾರಂಭಿಸಿ ಟೇಪು ಮತ್ತು ಮೈಕ್ರೊಫಿಲ್ಮ್‌ಗಳವರೆಗೆ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿರುವ ಈ ಸಂಘ ಅಮೆರಿಕದ ಅದೇಕೆ ಪ್ರಪಂಚದ ಗ್ರಂಥಾಲಯ ಮತ್ತು ಗ್ರಂಥಾಲಯ ಸೇವೆಗಳಿಗೆ ದಾರಿದೀಪವಾಗಿದೆ. ಅದರ ವಿವಿಧ ಕಾರ್ಯಕ್ರಮಗಳಲ್ಲಿ ಕೆಳಗಿನವುಗಳು ಮುಖ್ಯವಾಗಿದೆ:

**ಗ್ರಂಥಾಲಯ ಶಿಕ್ಷಣ :** ಸಂಘ ಸ್ಥಾಪನೆಯಾದ ಕೆಲವೇ ವರ್ಷಗಳಲ್ಲಿ ಪ್ರಪಂಚದಲ್ಲಿಯೇ ಮೊದಲನೆಯದಾದ ಗ್ರಂಥಾಲಯ ಶಾಲೆ ಡ್ಯೂಯಿಯವರ ನೇತೃತ್ವದಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ತೆರೆಯಲ್ಪಟ್ಟಿತು (1887). ಇಂದು 40 ಕ್ಕೂ ಹೆಚ್ಚು ಶಾಲೆಗಳು ಗ್ರಂಥಾಲಯ ವಿಜ್ಞಾನದಲ್ಲಿ ಮುಂದುವರಿದ ತರಬೇತಿಯನ್ನು ಕೊಡುತ್ತಲಿರುವುವು. ತರಬೇತಿ ಪಡೆದ ಗ್ರಂಥಪಾಲರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವಲ್ಲಿ ಸಂಘ ವ್ಯಾಪಕ ಕಾರ್ಯಕ್ರಮವನ್ನು ಕೈಗೊಂಡಿದೆ. ಅಮೆರಿಕದ ಪ್ರತಿಯೊಂದು ಗ್ರಂಥಾಲಯದ ಆವಶ್ಯಕತೆಯನ್ನೂ ಸಂಪೂರ್ಣವಾಗಿ ಪೂರೈಸುವಲ್ಲಿ ರೇಡಿಯೋ, ಟೆಲಿವಿಷನ್ ಮತ್ತು ಸಮಾಚಾರ ಪತ್ರಗಳ ಮುಖಾಂತರ ಪ್ರಯತ್ನಿಸುತ್ತಿದೆ.

**ಪ್ರಮಾಣಗಳು :** ಶಾಲೆ, ಕಾಲೇಜು, ರಾಜ್ಯ, ಸಾರ್ವಜನಿಕ ಮತ್ತು ಆಸ್ಪತ್ರೆ ಗ್ರಂಥಾಲಯಗಳ ಗ್ರಂಥಾಲಯ ಸೇವೆಯ ಪ್ರಮಾಣಗಳನ್ನು ಸಂಘ ನಿಗದಿಮಾಡಿದೆ. ಗ್ರಂಥಾಲಯ ಸೇವೆಯ ಗುಣಮಟ್ಟಗಳನ್ನು ಕಾಯ್ದುಕೊಳ್ಳುವಲ್ಲಿ ಸಂಘ ಶ್ರಮಿಸುತ್ತಲಿದೆ. ಅಂತೆಯೇ ಇಂದು ಅಮೆರಿಕದ ಗ್ರಂಥಾಲಯಗಳಲ್ಲಿ ಸೇವೆ ಉನ್ನತಮಟ್ಟದಲ್ಲಿದ್ದು ಗ್ರಂಥಾಲಯ ಸೇವೆಯಲ್ಲಿ ನಿಖರವಾದ ಏಕರೂಪತೆ ಮತ್ತು ಹೊಂದಾಣಿಕೆಗಳನ್ನು ಕಾಣುತ್ತೇವೆ.

**ಗ್ರಂಥಾಲಯ ಕಾಯದೆ :** ಈ ಸಂಘ ಅಮೆರಿಕದ ಪ್ರತಿಯೊಂದು ರಾಜ್ಯದಲ್ಲೂ ಗ್ರಂಥಾಲಯ ಕಾಯದೆ ಆಚರಣೆಗೆ ಬರುವಂತೆ ಸಕ್ರಿಯವಾಗಿ ಶ್ರಮಿಸುತ್ತಿದೆ. ಈ ಪರಿಶ್ರಮದಿಂದಾಗಿ ಸಾರ್ವಜನಿಕ ಗ್ರಂಥಾಲಯ ಸೇವೆಯಂತೂ ಪ್ರತಿಯೊಬ್ಬ ನಾಗರಿಕನಿಗೂ ಮುಟ್ಟುವಂತಾಗಿದೆ. ಈ ದಿಶೆಯಲ್ಲಿ ಪ್ರಯತ್ನಿಸಲು 1909ರಲ್ಲಿಯೇ ಸಂಘ ಒಂದು ಸಮಿತಿಯನ್ನು ನೇಮಿಸಿತು. 1956ರಲ್ಲಿ ಗ್ರಂಥಾಲಯ ಸೇವೆಯ ಕಾಯದೆ ಅಂಗೀಕೃತವಾಯಿತು. ಸಂಘಕ್ಕೆ ಫೆಡರಲ್ ಮತ್ತು ರಾಜ್ಯ ಸರ್ಕಾರಗಳ ಪೂರ್ಣ ಬೆಂಬಲವಿದೆ.

**ಬೌದ್ಧಿಕ ಸ್ವಾತಂತ್ರ್ಯ :** ಒಂದನೆಯ ಮಹಾಯುದ್ಧದ ಅನಂತರ ಅಮೆರಿಕದಲ್ಲಿ ಬೌದ್ಧಿಕ ಸ್ವಾತಂತ್ರ್ಯಕ್ಕೆ ಕೆಲವು ಕಟ್ಟುಪಾಡುಗಳಿತ್ತಾಗಿ ಕೆಲವೊಂದು ಗ್ರಂಥಗಳು ಗ್ರಂಥಾಲಯದ ವ್ಯಾಪ್ತಿಗೆ ಬರುತ್ತಿರಲಿಲ್ಲ. ಇಂಥ ಪರಿಸ್ಥಿಯಲ್ಲಿ ಸಂಘದ ಆಗಿನ ಕಾರ್ಯನಿರ್ವಾಹಕ ಕಾರ್ಯದರ್ಶಿಯಾಗಿದ್ದ ಕಾರ್ಲ್ ಮಿಲಮ್ ಎಂಬಾತ 1939ರಲ್ಲಿ ಇಂಥ ದಿಗ್ಬಂಧನಗಳ ವಿರುದ್ಧ ಪ್ರತಿಭಟನೆಗೆ ಕರೆಕೊಟ್ಟ. ಎರಡನೆಯ ಮಹಾಯುದ್ಧ ಅನಂತರ ಈ ಪ್ರತಿಭಟನೆ ಪ್ರಬಲಗೊಂಡಿತಲ್ಲದೆ ಈ ಸಂಘದ ಮಂಡಳ ಮೊದಲನೆಯ ಗ್ರಂಥಾಲಯ ಹಕ್ಕಿನ ಮಸೂದೆಯನ್ನು (ಲೈಬ್ರರಿ ಬಿಲ್ ಆಫ್ ರೈಟ್ಸ್) ಸ್ವೀಕರಿಸಿತು. ಈ ಮಸೂದೆ 1961ರಲ್ಲಿ ಅಂಗೀಕೃತವಾಗಿ ಮತ್ತೆ 1967ರಲ್ಲಿ ಪರಿಷ್ಕೃತಗೊಂಡಿತು. ಇದರಿಂದ ಗ್ರಂಥಗಳ ಮೇಲಿನ ದಿಗ್ಬಂಧನ ಸಂಪೂರ್ಣವಾಗಿ ಹೋಗಿ ಓದುಗನ ಅಭಿರುಚಿಗೆ ತಕ್ಕಂತೆ ಗ್ರಂಥಸಾಮಗ್ರಿಗಳನ್ನು ಸಜ್ಜುಗೊಳಿಸಲು ಗ್ರಂಥಪಾಲರಿಗೆ ಸಾಧ್ಯವಾಯಿತು.

ಈ ಸಂಘ 1876ರಿಂದಲೂ ವಾರ್ಷಿಕ ಸಮ್ಮೇಳನಗಳನ್ನೂ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನೂ ನಡೆಸಿದೆ. ಈ ಎಲ್ಲ ಸಮ್ಮೇಳನಗಳ ಕಾರ್ಯಕಲಾಪಗಳು ಲೈಬ್ರರಿ ಜರ್ನಲ್ ಮುಂತಾದ ಪತ್ರಿಕೆಗಳಲ್ಲೋ ಇಲ್ಲವೆ ಪ್ರತ್ಯೇಕವಾಗಿಯೋ ಪ್ರಕಟವಾಗಿವೆ.

ಗ್ರಂಥಾಲಯ ಸೇವೆಯಲ್ಲಿ ಉದಾತ್ತಸೇವೆ ಸಲ್ಲಿಸಿದವರಿಗೆ, ಉನ್ನತ ಮಟ್ಟದ ಪ್ರಕಟನೆಗಳಿಗೆ ಇಲ್ಲವೆ ಸಂಶೋಧನೆಗಳಿಗೆ ಸಂಘ ಪಾರಿತೋಷಕಗಳನ್ನು ಮತ್ತು ವಿದ್ಯಾರ್ಥಿ ವೇತನಗಳನ್ನು ನೀಡುತ್ತದೆ.

ಅಮೆರಿಕದ ಗ್ರಂಥಾಲಯ ಸಂಘದ ವತಿಯಲ್ಲಿ ಅನೇಕ ಉಪವಿಭಾಗಗಳು ಕೆಲಸ ಮಾಡುತ್ತಿದ್ದು, ಅಂಥವುಗಳಿಂದ ಗ್ರಂಥಾಲಯ ಸೇವೆಯ ಔಚಿತ್ಯ ಹೆಚ್ಚಿದೆ.

**ಕಾಲೇಜು ಮತ್ತು ವಿಶಿಷ್ಟ ಗ್ರಂಥಾಲಯಗಳ ಸಂಘ :** ಸಂಘದ ಈ ವಿಭಾಗ ಕಾಲೇಜು ಮತ್ತು ವಿಶಿಷ್ಟ ಗ್ರಂಥಾಲಯಗಳ ಸಮಸ್ಯೆಗಳಲ್ಲಿ ಆಸ್ಥೆವಹಿಸಿ, ಅವುಗಳ ಅಭ್ಯಾಸ ಮತ್ತು ಉಪಾಯಗಳನ್ನು ಕುರಿತು ವಿಶ್ಲೇಷಣೆ ನಡೆಸುತ್ತದೆ. ಕಾಲೇಜ್ ಅಂಡ್ ರಿಸರ್ಚ್ ಲೈಬ್ರರೀಸ್ ಎನ್ನುವ ಒಂದ ಪ್ರೌಢ ನಿಯತಕಾಲಿಕೆಯನ್ನು ಇದು ಪ್ರಕಟಿಸುತ್ತಿದೆ.

**ಅಮೆರಿಕದ ಶಾಲಾ ಗ್ರಂಥಪಾಲರ ಸಂಘ :** ಇದು ಶಾಲಾ ಗ್ರಂಥಾಲಯ ಕಾರ್ಯ ಕಲಾಪಗಳ ಪ್ರಮಾಣಗಳನ್ನು ಪರಿಷ್ಕರಿಸಿ 1960ರಲ್ಲಿ ಪ್ರಕಟಿಸಿತಲ್ಲದೆ ಶಾಲಾ ಗ್ರಂಥಾಲಯಗಳ ಸೇವಾ ಮಟ್ಟವನ್ನು ಸುಧಾರಿಸುವಲ್ಲಿ 5 ವರ್ಷಗಳ ಅವಧಿಯ ನ್ಯಾಪ್ ಶಾಲಾ ಗ್ರಂಥಾಲಯಗಳ ಯೋಜನೆಯ (ನ್ಯಾಪ್ ಸ್ಕೂಲ್ ಲೈಬ್ರರೀಸ್ ಪ್ರಾಜೆಕ್ಟ್) ಕಾರ್ಯನಿರ್ವಹಣೆಯನ್ನೂ ನೆರವೇರಿಸಿತು. ಈ ವಿಭಾಗದಲ್ಲಿ ಸ್ಕೂಲ್ ಲೈಬ್ರರೀಸ್ ಎನ್ನುವ ತ್ರೈಮಾಸಿಕವೊಂದು ಪ್ರಕಟವಾಗುತ್ತಿದೆ.

**ಆಸ್ಪತ್ರೆ ಮತ್ತು ಸಂಸ್ಥೆಗಳ ಗ್ರಂಥಾಲಯ ಸಂಘ :** ಈ ವಿಭಾಗ 1944ರಲ್ಲಿ ಸ್ಥಾಪನೆ ಯಾಯಿತು. ರೋಗಿಗಳು, ವೈದ್ಯರು ಮತ್ತು ದಾದಿಗಳು–ಇವರಿಗೆ ಅಗತ್ಯವಾದ ಗ್ರಂಥಾಲಯ ಸೇವೆಯ ಕಾರ್ಯದಲ್ಲಿ ಈ ವಿಭಾಗ ಆಸ್ಥೆ ವಹಿಸಿದೆ. ಅಸೋಸಿಯೇಷನ್ ಆಫ್ ಹಾಸ್ಪಿಟಲ್ ಅಂಡ್ ಇನ್ಸ್ಟಿಟ್ಯೂಷನ್ ಲೈಬ್ರರೀಸ್ ಎಂಬ ಹೆಸರಿನ ತ್ರೈಮಾಸಿಕವನ್ನು ಈ ವಿಭಾಗ ಪ್ರಕಟಿಸುತ್ತಿದೆ.

**ಸಾರ್ವಜನಿಕ ಗ್ರಂಥಾಲಯಗಳ ಸಂಘ :** ಇದು ಸಾರ್ವಜನಿಕ ಗ್ರಂಥಾಲಯಗಳ ಕನಿಷ್ಠ ಪ್ರಮಾಣಗಳನ್ನು ಪರಿಷ್ಕರಿಸಿತು (1966). ಸಾರ್ವಜನಿಕ ಗ್ರಂಥಾಲಯ ಪದ್ಧತಿಗಳ ಅಭ್ಯಾಸವೂ ಇದರ ವ್ಯಾಪ್ತಿಗೆ ಈಗ ಬಂದಿದೆ. ಬಿಟ್‌ವೀನ್ ಅವರ್‌ಸೆಲ್ವ್ಸ್ ಮತ್ತು ನ್ಯೂಸ್ ಲೆಟರ್ ಆಫ್ ದಿ ಆರ್ಮ್ಡ್ ಫೋರ್ಸಸ್ ಲೈಬ್ರರೀಸ್ ಸೆಕ್ಷನ್–ಎಂಬ ಎರಡು ಸುದ್ದಿಪತ್ರಗಳನ್ನು ಇದು ಪ್ರಕಟಿಸುತ್ತಿದೆ.

**ತರುಣ ಸೇವಾ ವಿಭಾಗ :** 1924ರಿಂದಲೂ ತರುಣರ ಶಿಕ್ಷಣದಲ್ಲಿ ಈ ವಿಭಾಗ ಆಸ್ಥೆ ವಹಿಸಿತ್ತು. ವಿಭಾಗದ ಆದೇಶದಂತೆ ಜಡ್‌ಸನ್ ಟಿ. ಜೆನ್ನಿಂಗ್ಸ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಗೊಂಡು 1926ರಲ್ಲಿ ಗ್ರಂಥಾಲಯಗಳು ಮತ್ತು ತರುಣರ ಶಿಕ್ಷಣ ಎನ್ನುವ ವರದಿ ತಯಾರಾಯಿತು. ಈ ವರದಿಯ ಆದೇಶದಂತೆ ಅಡಲ್ಟ್ ಎಜುಕೇಷನ್ ಬೋರ್ಡಿನ ರಚನೆ ಸಾಧ್ಯವಾಯಿತು. ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸಾಕ್ಷರ ಕಾರ್ಯಕ್ರಮಗಳು ಎನ್ನುವ ವರದಿಯನ್ನು ಈ ಬೋರ್ಡು ಪ್ರಕಟಿಸಿದೆ. ತರುಣ ಸೇವಾ ವಿಭಾಗ ಒಂದು ಸುದ್ದಿ ಪತ್ರವನ್ನು ಪ್ರಕಟಿಸುವುದರ ಜೊತೆಗೆ ಉತ್ತಮ ಗ್ರಂಥಗಳ ವಾರ್ಷಿಕ ಯಾದಿಯನ್ನೂ ತಯಾರಿಸಿದೆ.

**ಮಕ್ಕಳ ಸೇವಾ ವಿಭಾಗ :** ಮಕ್ಕಳಿಗಾಗಿ ಉತ್ತಮ ಮತ್ತು ಯೋಗ್ಯವಾದ ಓದುವ ಸಾಮಗ್ರಿಗಳನ್ನು ಪೂರೈಸುವಲ್ಲಿ ಈ ವಿಭಾಗದ ಪ್ರಯತ್ನ ನಡೆದಿದೆ. ಮಕ್ಕಳಿಗೆ ಅವಶ್ಯವಿರುವ ವಿಶೇಷ ಸಂಗ್ರಹಗಳನ್ನು ಕೂಡಿಸುವಲ್ಲಿ ರಾಷ್ಟ್ರೀಯ ಯೋಜನೆಯೊಂದನ್ನು ಹಾಕಿಕೊಂಡಿತಲ್ಲದೆ 1964ರಲ್ಲಿ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಕ್ಕಳ ಸೇವೆಯ ಪ್ರಮಾಣಗಳನ್ನೂ ಇದು ಪ್ರಕಟಿಸಿತು. ಈ ವಿಭಾಗದ ಇತರ ಪ್ರಕಟನೆಗಳಲ್ಲಿ ಮಕ್ಕಳಿಗಾಗಿ ಉತ್ತಮ ಗ್ರಂಥಗಳು ಎನ್ನುವ ವಾರ್ಷಿಕಪಟ್ಟಿ, 1940ರಿಂದ 1959ರ ವರೆಗಿನ ವಾರ್ಷಿಕ ಪಟ್ಟಿಯ ಸಂಚಿತ ಗ್ರಂಥ, ಟಾಪ್ ಆಫ್ ದಿ ನ್ಯೂಸ್ ಎಂಬ ತ್ರೈಮಾಸಿಕ–ಇವು ಸೇರಿಕೊಂಡಿವೆ.

**ಸಮಾಚಾರ ವಿಜ್ಞಾನ ಮತ್ತು ಪ್ರಲೇಖನ ವಿಭಾಗ :** ಈ ವಿಭಾಗ 1966ರಲ್ಲಿ ಅಸ್ತಿತ್ವಕ್ಕೆ ಬಂದು ಗ್ರಂಥಾಲಯ ಕಾರ್ಯದಲ್ಲಿ ಯಂತ್ರೀಕರಣವನ್ನು ಅನ್ವಯಿಸುವಲ್ಲಿ ಅಭ್ಯಾಸ ನಡೆಸಿದೆ. ಜರ್ನಲ್ ಆಫ್ ಇನ್‌ಫರ್‌ಮೇಷನ್ ಸೈನ್ಸ್ ಅಂಡ್ ಆಟೋಮೇಷನ್ ಎಂಬ ನಿಯತಕಾಲಿಕೆಯೊಂದನ್ನು 1968 ರಿಂದಲೂ ಈ ವಿಭಾಗ ಪ್ರಕಟಿಸುತ್ತಿದೆ.

**ಗ್ರಂಥಾಲಯ ಆಡಳಿತ ವಿಭಾಗ :** ಗ್ರಂಥಾಲಯದ ಸಾಮಾನ್ಯ ಆಡಳಿತದಲ್ಲಿ ಸುಧಾರಣೆಗಳನ್ನು ತರುವಲ್ಲಿ ಈ ವಿಭಾಗ ಶ್ರಮಿಸಿದೆಯಲ್ಲದೆ ಗ್ರಂಥಾಲಯ ಆಡಳಿತದ ಪ್ರಚಲಿತ ವಿಧಾನಗಳ ವಿಶೇಷಾಭ್ಯಾಸವನ್ನೂ ನಡೆಸಿದೆ. 1966ರಲ್ಲಿ ಲೈಬ್ರರಿ ಸ್ಟ್ಯಾಟಿಸ್ಟಿಕ್ಸ್ ಎಂಬ ಗ್ರಂಥವನ್ನೂ ಲೈಬ್ರರಿ ಸ್ಟ್ಯಾಟಿಸ್ಟಿಕ್ಸ್ ಫಾರ್ ಕಾಲೇಜ್ ಅಂಡ್ ಯೂನಿವರ್ಸಿಟಿ ಲೈಬ್ರರೀಸ್ ಎಂಬ ವಾರ್ಷಿಕವನ್ನೂ ಪ್ರಕಟಿಸಿದೆ.

**ಪರಾಮರ್ಶನ ಸೇವಾ ವಿಭಾಗ :** ಪರಾಮರ್ಶನ ಸೇವೆಗೆ ಸಂಬಂಧಿಸಿದಂತೆ ಹೊಸ ಹೊಸ ಆಯಾಮಗಳನ್ನು ಶೋಧಿಸಲು 1889ರಿಂದಲೂ ಈ ವಿಭಾಗ ಹೆಚ್ಚಿನ ಶ್ರಮವಹಿಸಿದೆ. ಎಚ್.ಡಬ್ಲ್ಯು. ವಿಲ್ಸನ್ ಕಂಪನಿಯವರು ತಯಾರಿಸುವ ಎಲ್ಲ ಅಕಾರಾದಿ ಸೂಚಿಗಳಿಗೆ ನಿಯತಕಾಲಿಕೆಗಳನ್ನು ಆರಿಸುವಲ್ಲಿ ಸಹಕರಿಸುವುದು, ಸಾರ್ವಜನಿಕ ಅಥವಾ ಕಾಲೇಜು ಗ್ರಂಥಾಲಯಗಳಿಗೆ ಬೇಕಾಗುವ ಸಂದರ್ಭ ಗ್ರಂಥಗಳ ಪಟ್ಟಿಯನ್ನು ಗ್ರಂಥಾಲಯ ನಿಯತಕಾಲಿಕೆಯಲ್ಲಿ ಪ್ರಕಟಿಸುವುದು, ಸಣ್ಣ ಸಾರ್ವಜನಿಕ ಗ್ರಂಥಾಲಯಗಳೇ ಅಲ್ಲದೆ ಮಧ್ಯಮ ಸಾರ್ವಜನಿಕ ಗ್ರಂಥಾಲಯಗಳಿಗೂ ಬೇಕಾಗುವ ಮೂಲ ಸಂದರ್ಭಗ್ರಂಥಗಳ ಪಟ್ಟಿಯನ್ನು ತಯಾರಿಸುವುದು, ಇಂಥ ಪರಾಮರ್ಶನ ಗ್ರಂಥಸೂಚಿಗಳ ಪರಿಶೀಲನೆ–ಹೀಗೆ ಈ ವಿಭಾಗದ ಕಾರ್ಯನಿರ್ವಹಣೆ ನಡೆದಿದೆ. ಪರಾಮರ್ಶನ ಸೇವೆಯಲ್ಲಿ ಸಹಕಾರ ವೃದ್ಧಿಸಲು ಅನುಕೂಲವಾಗುವಂತೆ ಒಂದು ಸಮಿತಿಯನ್ನು ಈ ವಿಭಾಗ ಸ್ಥಾಪಿಸಿದೆ. ಹೊಸ ಓದುಗರಿಗಾಗಿ ಗ್ರಂಥಾಲಯ ತರಬೇತಿಯನ್ನು ಕೊಡುವಲ್ಲಿಯ ಹೊಸ ಹೊಸ ವಿಧಾನಗಳನ್ನು ಶೋಧಿಸುವುದರಲ್ಲಿ ಈ ಸಮಿತಿ ಆಸ್ಥೆ ವಹಿಸಿದೆ. ಈ ವಿಭಾಗದ ವತಿಯಿಂದ ಒಂದು ದ್ವೈಮಾಸಿಕ ಹೊರಬರುತ್ತಿದೆ.

**ತಾಂತ್ರಿಕ ಸೇವಾ ವಿಭಾಗ :** ಇದರ ಕಾರ್ಯಾಚರಣೆ 1900ರಿಂದಲೂ ನಡೆಯುತ್ತಿದ್ದು ಸೂಚೀಕರಣದ ಸೂತ್ರಗಳನ್ನು ರೂಪಿಸುವಲ್ಲಿ ಈ ವಿಭಾಗ ವಿಶೇಷ ಪಾತ್ರ ವಹಿಸಿತು. ಇದರ ಸೂಚೀಕರಣ ಸೂತ್ರಗಳನ್ನು ಅಮೆರಿಕದ ಪ್ರತಿಯೊಂದು ಗ್ರಂಥಾಲಯವೂ ಹೆಚ್ಚು ಕಡಿಮೆ ಎಲ್ಲ ಐರೋಪ್ಯ ಗ್ರಂಥಾಲಯಗಳೂ ಬಳಸುತ್ತಿವೆ. ಲೈಬ್ರರಿ ಆಫ್ ಕಾಂಗ್ರೆಸ್ ವರ್ಗೀಕರಣ ಮತ್ತು ದಾಶಮಿಕ ವರ್ಗೀಕರಣ ಪದ್ಧತಿಗಳ ಯುಕ್ತಾಯುಕ್ತತೆಯ ವಿವೇಚನೆಯನ್ನು ಈ ವಿಭಾಗ ನಡೆಸಿದೆ. ಮೆಲ್‌ವಿಲ್ ಡ್ಯೂಯಿ 1876ರಲ್ಲಿ ಗ್ರಂಥಪಾಲರ ಸಮ್ಮೇಳನದಲ್ಲಿ ತಿಳಿಸಿದ ಸಹಕಾರೀ ಸೂಚೀಕರಣದ ಮಹತ್ತ್ವವನ್ನು ಈ ವಿಭಾಗ ಮನಗಂಡು ಅದರಂತೆ ರಾಷ್ಟ್ರೀಯ ಸಂಯುಕ್ತಸೂಚಿಯನ್ನು ತಯಾರಿಸುವ ಮತ್ತು ಪ್ರಕಟಿಸುವ ಕಾರ್ಯದಲ್ಲಿ ಅಭ್ಯಾಸ ನಡೆಸಿತು. ಈಗ ಈ ಸಂಯುಕ್ತಸೂಚಿ ಕಾರ್ಯವನ್ನು ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ವ್ಯವಸ್ಥೆಗೊಳಿಸಲಾಗಿದೆ. ಈ ಸಂಯುಕ್ತಸೂಚಿಯಲ್ಲಿ ಸುಮಾರು 16 ಕೋಟಿ ಪತ್ರಿಕಗಳಿವೆಯಲ್ಲದೆ ಅಮೆರಿಕ ಮತ್ತು ಕೆನಡ ರಾಷ್ಟ್ರಗಳಲ್ಲಿನ 2,000 ಗ್ರಂಥಾಲಯಗಳ ಗ್ರಂಥಸಂಗ್ರಹದ ಸಂಪೂರ್ಣ ಮಾಹಿತಿಯೂ ದೊರಕುತ್ತದೆ. ಈ ಸಂಯುಕ್ತ ಸೂಚಿಯನ್ನು 610 ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಲೈಬ್ರರಿ ರಿಸೋರ್ಸಸ್ ಅಂಡ್ ಟೆಕ್ನಿಕಲ್ ಸರ್ವಿಸಸ್ ಎಂಬ ತ್ರೈಮಾಸಿಕವನ್ನು ಈ ವಿಭಾಗ ಪ್ರಕಟಿಸುತ್ತಿದೆ.

**ಪ್ರಕಾಶನಕಾರ್ಯ ಮತ್ತು ಪ್ರಕಟಣೆಗಳು :** 19ನೆಯ ಶತಮಾನದ ಮಧ್ಯದ ವರೆಗೆ ಕುಂಠಿತಗೊಂಡಿದ್ದ ಅಮೆರಿಕ ಗ್ರಂಥಾಲಯ ಸಂಘದ ಪ್ರಕಾಶನ ಕಾರ್ಯ 1902ರಿಂದ ತ್ವರಿತ ಪ್ರಗತಿಯನ್ನು ಸಾಧಿಸಿತು. 1902ರಲ್ಲಿ ಆಂಡ್ರ್ಯೂ ಕಾರ್ನೇಗಿ (1835–1919) ಎಂಬ ಅಮೆರಿಕದ ಕೈಗಾರಿಕೋದ್ಯಮಿ 1 ಲಕ್ಷ ಡಾಲರಿನ ಕೊಡುಗೆಯನ್ನು ಸಂಘಕ್ಕೆ ಸಲ್ಲಿಸಿದ ಕಾರಣ ಪ್ರಕಾಶನ ಕಾರ್ಯ ಸಚೇತನಗೊಂಡಿತು.

ಸಂಘ 2000ಕ್ಕೂ ಹೆಚ್ಚಿನ ಪ್ರಕಟಣೆಗಳನ್ನು ಹೊರತಂದಿದೆಯಲ್ಲದೆ, 175 ಪ್ರಕಟಣೆಗಳ ಪುನರ್ ಮುದ್ರಣಕಾರ್ಯವನ್ನು ಕೈಗೊಂಡಿದೆ. ಸಂಘದ ಪ್ರಕಟಣೆ ಪ್ರಪಂಚದ ಬೇರೆ ಬೇರೆ ಭಾಷೆಗಳಲ್ಲೂ ಭಾಷಾಂತರಗೊಂಡಿವೆ.

**ನಿಯತಕಾಲಿಕೆಗಳು :** ಸಂಘ 28 ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದ್ದು ಇದರ ವಿಭಾಗಗಳು ಅನೇಕ ನಿಯತಕಾಲಿಕೆಗಳನ್ನು ಪ್ರತ್ಯೇಕವಾಗಿ ಪ್ರಕಟಿಸುತ್ತಿವೆ.

**ಸಂಘ ಪ್ರಕಟಿಸುವ ದಿ ಬುಕ್ ಲಿಸ್ಟ್ (ಆರಂಭ ವರ್ಷ : 1905)** ಎಂಬುದು ಗ್ರಂಥಪಾಲರಿಗೆ ಗ್ರಂಥ ಆರಿಸುವ ಸಾಧನವಾಗಿದೆ. ಇಂಥದೇ ಮತ್ತೊಂದು ಸಾಧನ ಸಬ್‌ಸ್ಕ್ರಿಪ್‌ಷನ್ ಬುಕ್ಸ್ ಬುಲೆಟಿನ್ ಎಂಬುದು 1930ರಲ್ಲಿ ಪ್ರಕಟವಾಗತೊಡಗಿತು. ಇವೆರಡೂ ನಿಯಕಾಲಿಕೆಗಳನ್ನು ಕೂಡಿಸಿ ದಿ ಬುಕ್ ಲಿಸ್ಟ್ ಅಂಡ್ ಸಬ್‌ಸ್ಕ್ರಿಪ್‌ಷನ್ ಬುಕ್ಸ್ ಬುಲೆಟಿನ್ ಎಂಬ ಪ್ರಕಟಣೆಯನ್ನು 1956ರಲ್ಲಿ ಹೊರ ತರಲಾಯಿತು. (ಕೆ.ಎಚ್.ಬಿ.;ಟಿ.ಎಲ್.ಬಿ.)

**5. ಭಾರತೀಯ ಗ್ರಂಥಾಲಯಗಳ ಸಂಘ :** ಭಾರತೀಯ ಗ್ರಂಥಾಲಯಗಳ ಅಭಿವೃದ್ಧಿಗೆ ಮೀಸಲಾಗಿರುವ ಸಂಘ. ಮೊದಲನೆಯ ಅಖಿಲ ಭಾರತ ಗ್ರಂಥಾಲಯ ಪರಿಷತ್ತು ಆಗಿನ ಕೇಂದ್ರ ಸರ್ಕಾರದ ಶಿಕ್ಷಣಾಧಿಕಾರಿಯಾಗಿದ್ದ ಹೆನ್ರಿ ಷಾರ್ಪನ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ಸೇರಿತ್ತು (1918). ಈ ಸಂದರ್ಭದಲ್ಲಿ ಕೆ.ಎಂ. ಅಸದುಲ್ಲ, ಎ.ಸಿ.ಉಲ್ನರ್. ರೀಚಿ ಮೊದಲಾದವರ ಪರಿಶ್ರಮದ ಫಲವಾಗಿ ಈ ಸಂಘ ಸ್ಥಾಪಿತವಾಯಿತು. ಆದರೆ ಇದು ಬಹು ಬೇಗ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. 1920ರಲ್ಲಿ ಈ ಸಂಘವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ನಡೆಯಿತು.

1933ರ ಸೆಪ್ಟೆಂಬರ್ ತಿಂಗಳಲ್ಲಿ ಎಂ.ಓ. ಥಾಮಸ್‌ರ ನೇತೃತ್ವದಲ್ಲಿ ಅದೇ ವರ್ಷ ಅಖಿಲ ಭಾರತ ಗ್ರಂಥಾಲಯ ಷರಿಷತ್ತು ಕಲ್ಕತ್ತದಲ್ಲಿ ಸೇರಿದಾಗ (1933) ಭಾರತೀಯ ಗ್ರಂಥಾಲಯ ಸಂಘದ ಪುನರ್ ಉಗಮವಾಯಿತು. ಈ ಸಂಘದ ಮುಖ್ಯಕಾರ್ಯಾಲಯ ದೆಹಲಿಯ ಸಾರ್ವಜನಿಕ ಗ್ರಂಥಾಲಯದಲ್ಲಿದೆ. ಸಂಘಕ್ಕೆ ಕೇಂದ್ರ ಹಾಗೂ ಕೆಲವು ರಾಜ್ಯ ಸರ್ಕಾರಗಳು ಧನಸಹಾಯವನ್ನು ನೀಡುತ್ತಿವೆ. ಸದಸ್ಯ ಸಂಖ್ಯೆ ಸುಮಾರು 2,000. ಸಂಘದ ಕೆಲವು ಪ್ರಭಾವೀ ಅಧ್ಯಕ್ಷರಲ್ಲಿ ಎಸ್.ಆರ್. ರಂಗನಾಥನ್, ಬಿ.ಎಸ್. ಕೇಶವನ್, ನಿಹಾರರಂಜನ ರಾಯ್–ಇವರನ್ನು ಹೆಸರಿಸಬಹುದಾಗಿದೆ. ಮೊದಲನೆಯ ಗ್ರಂಥಾಲಯ ತರಬೇತಿ ತರಗತಿ ಪ್ರಾರಂಭವಾದ್ದು 1935ರಲ್ಲಿ. ಗ್ರಂಥಗಳ ಎರವಲು ವಿಷಯದಲ್ಲಿ ನಿಯಮಗಳನ್ನು ಮತ್ತು ಏಕರೂಪ ಸೂಚೀಕರಣ ಸಿದ್ಧಪಡಿಸಿದ್ದು, ಭಾರತೀಯರಿಗೆ ಬ್ರಿಟನಿನಲ್ಲಿ ಗ್ರಂಥಾಲಯಶಾಸ್ತ್ರದಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದು–ಇವು ಈ ಸಂಘದ ಕೆಲವು ಸಾಧನೆಗಳು.

ಎರಡು ವರ್ಷಕ್ಕೊಮ್ಮೆ ದೇಶದ ಹಲವಾರು ಸ್ಥಳಗಳಲ್ಲಿ ಸಂಘ ರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸುತ್ತದೆ. ಇದರ 15ನೆಯ ಸಮ್ಮೇಳನ ಮೈಸೂರಿನಲ್ಲಿ ಜರುಗಿತು (1965). ಈ ಸಮ್ಮೇಳನದಲ್ಲಿ ಚರ್ಚಿಸಿದ ವಿಷಯ–ನಾಲ್ಕನೆಯ ಪಂಚವಾರ್ಷಿಕ

ಯೋಜನೆಯಲ್ಲಿ ಗ್ರಂಥಾಲಯಗಳ ಬೆಳೆವಣಿಗೆ. 19ನೆಯ ಸಮ್ಮೇಳನ ಅಂತಾರಾಷ್ಟ್ರೀಯ ಗ್ರಂಥ ವರ್ಷ ಹಾಗೂ ಜಾಗತಿಕ ಗ್ರಂಥ ಪ್ರದರ್ಶನಗಳ ಕಾಲದಲ್ಲಿ ಜರುಗಿತು (1972). ಆಗ ಗ್ರಂಥಗಳು ಹಾಗೂ ಇತರ ಪಠಣ ಸಾಮಗ್ರಿಗಳ ಸಂಗ್ರಹಣೆ ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು. 20ನೆಯ ಸಮ್ಮೇಳನ ನಡೆದದ್ದು ಹೈದರಾಬಾದಿನಲ್ಲಿ (1973). ಭಾರತಿಯ ಗ್ರಂಥಾಲಯಗಳಲ್ಲಿನ ಗ್ರಂಥ ಸಂಗ್ರಹದ ಅತಿ ಹೆಚ್ಚಿನ ಉಪಯೋಗ ಹೇಗೆ ಎಂಬ ವಿಷಯದ ಬಗ್ಗೆ ಈ ಸಮ್ಮೇಳನ ಚರ್ಚೆ ನಡೆಸಿತು.

ಈ ಸಂಘ ಒಂದು ತ್ರೈಮಾಸಿಕವನ್ನು ಪ್ರಕಟಿಸುತ್ತದೆ. 1942–46ರ ವರೆಗೆ ಲೈಬ್ರರಿ ಬುಲೆಟಿನ್, 1949–53ರ ವರೆಗೆ ಅಬ್ಗಿಲಾ, 1953ರ ಬಳಿಕ ಜರ್ನಲ್ ಆಫ್ ದಿ ಇಂಡಿಯನ್ ಲೈಬ್ರರಿ ಅಸೋಸಿಯೇಷನ್ ಎಂಬ ಹೆಸರುಗಳಲ್ಲಿ ಬಂದ ಈ ಪತ್ರಿಕೆ ಸದ್ಯಕ್ಕೆ ಐಲಾ ಬುಲೆಟಿನ್ ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿದೆ. ಈ ಸಂಘ ಗ್ರಂಥಾಲಯಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ಪ್ರಕಟಿಸಿದೆ. ಡೈರೆಕ್ಟರಿ ಆಫ್ ಲೈಬ್ರರಿಸ್ ಇನ್ ಇಂಡಿಯ ಎಂಬ ಆಕರ ಗ್ರಂಥ ಪ್ರಕಟಣೆಗೊಂಡದ್ದು 1938ರಲ್ಲಿ. ಇದಲ್ಲದೆ ದಕ್ಷಿಣ ಏಷ್ಯದ ಗ್ರಂಥಾಲಯಗಳಲ್ಲಿ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು 1950ರಲ್ಲೂ ವೈಜ್ಞಾನಿಕ ನಿಯತಕಾಲಿಕೆಗಳ ಸಂಪುಟವನ್ನು 1952ರಲ್ಲೂ ಪ್ರಕಟಿಸಿತು. ಯುನೆಸ್ಕೊದ ಸಹಕಾರದೊಂದಿಗೆ ಏಷ್ಯದ ಹೆಸರುಗಳ ಉಲ್ಲೇಖದ ಸೂತ್ರಗಳನ್ನು ರೂಪಿಸುವ ಕಾರ್ಯವನ್ನು ರಂಗನಾಥನ್ ನೇತೃತ್ವದಲ್ಲಿ ನೆರವೇರಿಸಲಾಯಿತು.

ಗ್ರಂಥಪಾಲರಿಗೆ ಸಮಾನ ವೇತನ, ಶ್ರೇಣಿ, ಸಂಶೋಧಕರಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸುವುದು, ಶೈಕ್ಷಣಿಕ ಮತ್ತು ತಾಂತ್ರಿಕ ಗ್ರಂಥಾಲಯಗಳಿಗೆ ಸಲಹೆ ನೀಡುವುದು, ಗ್ರಂಥ ಉತ್ಪಾದನೆ ಹಾಗೂ ಮಾರಾಟ ಕಾರ್ಯದಲ್ಲಿ ಸೂಚನೆಗಳನ್ನು ಕೊಡುವುದು, ರಾಜ್ಯ ಮತ್ತು ಕೇಂದ್ರ ಸರ್ಕಾರದೊಂದಿಗೆ ಸಂಪರ್ಕ ಬೆಳೆಸಿ ಆರ್ಥಿಕ ಸಹಾಯವನ್ನು ಕೋರುವುದು ಇತ್ಯಾದಿ ಹಲವಾರು ಚಟುವಟಿಕೆಗಳಲ್ಲಿ ಈ ಸಂಘ ಆಸ್ಥೆ ವಹಿಸಿದೆ. ಇದು ಅನೇಕ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನಿರಿಸಿಕೊಂಡಿದೆ. (ಬಿ.ಎಂ.ಕೆ.)

**6. ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಮತ್ತು ಸಮಾಚಾರ ಕೇಂದ್ರಗಳ ಸಂಘ :** ವಿಶಿಷ್ಟ ಗ್ರಂಥಾಲಯಗಳು ಮತ್ತು ಸಮಾಚಾರ ಕೇಂದ್ರಗಳಲ್ಲಿ ಪರಸ್ಪರ ನಿಕಟವಾದ ಸಂಬಂಧಗಳನ್ನು ಏರ್ಪಡಿಸಲು ಹಾಗೂ ಅವುಗಳ ಮುಖಾಂತರ ಸಂಶೋಧನಕ್ಷೇತ್ರದಲ್ಲಿ ಯೋಗ್ಯ ಸೇವೆ ಸಲ್ಲಿಸಲು ನೆರವಾಗಲು ಕಲ್ಕತ್ತದಲ್ಲಿ ಸ್ಥಾಪಿತವಾದ ಸಂಘ (ಐಎಸ್‍ಎಲ್‍ಐಸಿ– ಸೆಪ್ಟೆಂಬರ್ 3, 1955). ಇದರ ಪ್ರಥಮ ಅಧ್ಯಕ್ಷ ಎಸ್.ಎಲ್.ಹೋರಾ. ಎಸ್.ಎಲ್.ಹೋರಾ, ಜೆ.ಶಹಾ, ಎ.ಕೆ.ಮುಖರ್ಜಿ, ಜಿ.ಬಿ.ಘೋಷ್ ಮುಂತಾದ ಮಹನೀಯರು ಈ ಸಂಘವನ್ನು ಸ್ಥಾಪಿಸುವಲ್ಲಿ ಅವಿರತವಾಗಿ ಶ್ರಮಿಸಿದರು. ಸಂಘಕ್ಕೆ ಖ್ಯಾತಿವೆತ್ತ ವಿಜ್ಞಾನಿಗಳಾದ ಪಿ.ಸಿ.ಮಹಲನೋಬಿಸ್, ಡಿ.ಎಂ.ಬೋಸ್, ಟಿ.ಸೇನ್, ಜೆ.ಸಿ.ಘೋಷ್, ಎಚ್.ಜೆ.ಭಾಭಾ ಮೊದಲಾದವರ ಪ್ರೋತ್ಸಾಹ ದೊರೆಯಿತು. ಇದಲ್ಲದೆ ಅನೇಕ ಗ್ರಂಥಪಾಲರೂ ಪ್ರಲೇಖನಕಾರರೂ ಸಂಶೋಧನಕಾರರೂ ನೆರವಾದರು.

ಜ್ಞಾನ ವಿಷಯಗಳನ್ನು ಕಲೆಹಾಕುವಲ್ಲಿ, ಅದನ್ನು ವ್ಯವಸ್ಥಿತಗೊಳಿಸುವಲ್ಲಿ ಸಹಕಾರ, ಹಾಗೂ ಅದನ್ನು ತಿಳಿಯಪಡಿಸುವಲ್ಲಿ ಪ್ರೋತ್ಸಾಹ ನೀಡುವುದು: ಗ್ರಂಥಾಲಯಸೇವೆ, ಸಮಾಚಾರ ಸೇವೆ ಹಾಗೂ ಪ್ರಲೇಖನಕಾರ್ಯಗಳಲ್ಲಿ ಗುಣಮಟ್ಟವನ್ನು ಸುಧಾರಿಸುವುದು: ವಿಶಿಷ್ಟ ಗ್ರಂಥಾಲಯಗಳಲ್ಲಿ ವೈಜ್ಞಾನಿಕ, ತಾಂತ್ರಿಕ ಹಾಗೂ ಸಂಶೋಧನ ಸಂಸ್ಥೆಗಳಲ್ಲಿ, ವ್ಯಾಪಾರೀ ಸಂಸ್ಥೆಗಳಲ್ಲಿ, ಕೈಗಾರಿಕಾ ಸಂಶೋಧನ ಕೇಂದ್ರಗಳಲ್ಲಿ ಹಾಗೂ ಇನ್ನುಳಿದ ಸಮಾಚಾರ ಮತ್ತು ಪ್ರಲೇಖನ ಕೇಂದ್ರಗಳಲ್ಲಿ ಸಹಕಾರ ಭಾವವನ್ನು ಹೆಚ್ಚಿಸುವುದು; ಅವುಗಳ ಚಟುವಟಿಕೆಗಳನ್ನು ಕ್ರೋಡೀಕರಿಸುವುದು ಹಾಗೂ ಅವುಗಳಿಗೆ ಸಹಾಯ ಸಲ್ಲಿಸುವುದು; ವಿಶಿಷ್ಟ ಗ್ರಂಥಾಲಯೋದ್ಯಮ ಹಾಗೂ ಪ್ರಲೇಖನ ಕ್ಷೇತ್ರಗಳಲ್ಲಿ ನಡೆಯುವ ಸಂಶೋಧನೆಗಳಿಗೆ ಕೇಂದ್ರ ಬಿಂದುವಾಗಿರುವುದು ಇವು ಸಂಘದ ಕೆಲವು ಉದ್ದೇಶಗಳು.

ಗ್ರಂಥಾಲಯ ವಿಜ್ಞಾನದ ವಿವಿಧ ವಿಷಯಗಳ ಮೇಲೆ ಸಭೆ, ಸಮ್ಮೇಳನ ಹಾಗೂ ವಿಚಾರ ಸಂಕಿರಣಗಳನ್ನು ಸಂಘ ಏರ್ಪಡಿಸುತ್ತದೆ. ಅವುಗಳಲ್ಲಿ ಮುಖ್ಯವಾದವು–ಗ್ರಂಥಾಲಯ ಸೇವೆಯನ್ನು ಯಂತ್ರೀಕರಿಸುವುದು; ಗ್ರಂಥಸೂಚಿಗಳನ್ನು ಸಿದ್ಧಪಡಿಸುವುದು; ಭಾರತದಲ್ಲಿ ವಿಶಿಷ್ಟ ಗ್ರಂಥಾಲಯೋದ್ಯಮದಲ್ಲಿ ತರಬೇತಿ; ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಂಥಾಲಯಗಳ ಬೆಳೆವಣಿಗೆ; ವಿಶಿಷ್ಟ ಗ್ರಂಥಾಲಯಗಳ ಗ್ರಂಥಸೂಚಿಗಳನ್ನು ನಿಯಂತ್ರಿಸುವುದು; ಗ್ರಂಥಾಲಯ ವಿಜ್ಞಾನದಲ್ಲಿ ಶಿಕ್ಷಣ; ಭಾರತಕ್ಕೆ ರಾಷ್ಟ್ರೀಯ ವಿಜ್ಞಾನ ಗ್ರಂಥಾಲಯ; ಕೋಲನ್ ವರ್ಗೀಕರಣ ಹಾಗೂ ಭಾರತ ಮತ್ತು ವಿದೇಶಗಳಲ್ಲಿ ಅದರ ಉಪಯೋಗ, ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನೆ ಇತ್ಯಾದಿ.

ಸಂಘದ 6ನೆಯ ವಿಚಾರ ಗೋಷ್ಠಿ ಬೆಂಗಳೂರಿನಲ್ಲಿ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಗ್ರಂಥಾಲಯದಲ್ಲಿ ಮೂರು ದಿನ ನಡೆಯಿತು (1970). ಇಲ್ಲಿ ವ್ಯಾವಹಾರಿಕವಾಗಿ ಪರಾಮರ್ಶನ ಸೇವೆಯ ವಿಚಾರ, ವಿಶೇಷ ವಿಷಯಗಳ ಸಂಸ್ಕರಣ ಹಾಗೂ ಸೇವಾವಿಚಾರ–ಇವುಗಳ ಬಗ್ಗೆ ಚರ್ಚೆ ನಡೆಯಿತು.

**ಶೈಕ್ಷಣಿಕ ವಿಭಾಗ :** ಪ್ರಕಾಶನ ಹಾಗೂ ಪ್ರಚಾರ ವಿಭಾಗ; ವಾಚನ ಸಾಮಗ್ರಿಗಳ ಪುನರ್ ಮುದ್ರಣ ಹಾಗೂ ಭಾಷಾಂತರ ವಿಭಾಗ; ವಾಚನ ಸಾಮಗ್ರಿ ಸಂಗ್ರಹ ವಿಭಾಗ; ಗ್ರಂಥಾಲಯ ಹಾಗೂ ಸಮಾಚಾರ ಸೇವೆಯ ವಿಭಾಗ, ಗ್ರಂಥಾಲಯ ಸಹಕಾರ ವಿಭಾಗ– ಇವು ಈ ಸಂಘದ ಕಾರ್ಯನಿರ್ವಹಿಸಲು ಇರುವ ಆರು ವಿಭಾಗಗಳು.

ಶೈಕ್ಷಣಿಕ ವಿಭಾಗ ಪ್ರತಿವರ್ಷ ಜರ್ಮನ್ ಮತ್ತು ರಷ್ಯನ್ ಭಾಷೆಗಳಲ್ಲಿ ತರಬೇತಿ ವರ್ಗಗಳನ್ನು ನಡೆಸುತ್ತದೆ.

ಸಂಘ ತ್ರೈಮಾಸಿಕ ಸಮಾಚಾರ ಪತ್ರಿಕೆಯನ್ನಲ್ಲದೆ ಅನೇಕ ಗ್ರಂಥಗಳನ್ನೂ ಪ್ರಕಟಿಸಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದ ವಾಚನ ಸಾಮಗ್ರಿಯ ಫೋಟೊ ಪ್ರತಿ ಇಲ್ಲವೆ ಮೈಕ್ರೊಫಿಲ್ಮ್ ಅನ್ನು ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ. ಭಾಷಾಂತರ ಕಾರ್ಯವನ್ನು ಕೈಗೊಂಡು, ಸಂಶೋಧಕರಿಗೆ ಸಹಾಯ ಸಲ್ಲಿಸುತ್ತದೆ. ಗ್ರಂಥಾಲಯ ವಿಜ್ಞಾನದ ನಿಯತಕಾಲಿಕೆಗಳ ಸಂಯುಕ್ತ ಗ್ರಂಥಸೂಚಿಯನ್ನು ಪ್ರಕಟಿಸಿದೆ.

ವಿಶಿಷ್ಟ ಗ್ರಂಥಾಲಯಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳು ಮತ್ತು ನಿಯತಕಾಲಿಕೆಗಳು ಇಲ್ಲಿವೆ. ಗ್ರಂಥಾಲಯ ಹಾಗೂ ಸಮಾಚಾರ ಸೇವೆಯ ವಿಭಾಗ ಸಂಶೋಧಕರಿಗೆ ಅವಶ್ಯವಿದ್ದ ಪ್ರಕಟಿತ ಮತ್ತು ಅಪ್ರಕಟಿತ ವಾಚನ ಸಮಗ್ರಿಗಳನ್ನು ಒದಗಿಸುತ್ತದೆ. ಹೊಸದಾಗಿ ಸ್ಥಾಪಿಸಲ್ಪಟ್ಟ ವಿಶಿಷ್ಟ ಗ್ರಂಥಾಲಯಗಳಿಗೆ ಹಾಗೂ ಸಂಸ್ಥೆಗಳಿಗೆ ಸೇವೆ ತುಂಬ ಉಪಯುಕ್ತವಾಗಿದೆ.

ಗ್ರಂಥಾಲಯ ಸಹಕಾರ ವಿಭಾಗ ಭಾರತದಲ್ಲಿಯ ವಿಶಿಷ್ಟ ಗ್ರಂಥಾಲಯ ಸಮಸ್ಯೆಯನ್ನು ಅವಲೋಕಿಸಿ ಅವುಗಳಿಗೆ ಪರಿಹಾರನ್ನು ಕಂಡುಹಿಡಿಯುವ ಜವಾಬ್ದಾರಿಯನ್ನು ಹೊತ್ತಿದೆ.

ಇಂಡಿಯನ್ ಲೈಬ್ರರಿ ಸೈನ್ಸ್ ಅಬ್‍ಸ್ಟ್ರಾಕ್ಟ್ಸ್ ಅನ್ನು ಪ್ರಕಟಿಸುವ ಹಾಗೂ ಪ್ರತಿವರ್ಷ ಉತ್ತಮ ಲೇಖಕರಿಗೆ ಪದಕವನ್ನೀಯುವ ಎರಡು ಮುಖ್ಯ ಕೆಲಸಗಳನ್ನು ಸಂಘ ನಿರ್ವಹಿಸುತ್ತಿದೆ. (ಬಿ.ಎಂ.ಕೆ.)

## VIII ಗ್ರಂಥಾಲಯ ಸಹಕಾರ

ಎರಡು ಅಥವಾ ಹೆಚ್ಚು ಗ್ರಂಥಾಲಯಗಳು ಸೇರಿ ಒಟ್ಟಿಗೆ ತಮ್ಮ ಆಯವ್ಯಯಗಳಿಗನು ಗುಣವಾಗಿ, ಹೆಚ್ಚಿನ ವೆಚ್ಚವಿಲ್ಲದೆ ಓದುಗರಿಗೆ ಸುಲಭದಲ್ಲಿ ಎಲ್ಲ ಸೇವಾ ಸೌಕರ್ಯಗಳನ್ನೂ ಒದಗಿಸುವುದೇ ಗ್ರಂಥಾಲಯ ಸಹಕಾರದ ಪರಮೋದ್ದೇಶ. ಎಲ್ಲ ಗ್ರಂಥಗಳ, ಗ್ರಂಥಪಾಲರ ವಿವಿಧ ಅನುಭವಗಳ, ಸಾಮೂಹಿಕ ಉಪಯೋಗ ಪಡೆಯುವುದೇ ಇಲ್ಲಿನ ಮಹತ್ತ್ವದ ಗುರಿ.

ಜನಸಂಖ್ಯೆಯ ಹೆಚ್ಚಳವೊಂದೆಡೆಯಿದ್ದರೆ ಇನ್ನೊಂದೆಡೆ ಸಾಹಿತ್ಯ, ವಿಜ್ಞಾನ ಹಾಗೂ ನವೀನ ವಿಷಯಗಳ ಸಂಶೋಧನೆ ಬಹುತ್ವರಿತಗತಿಯಲ್ಲಿ ಸಾಗುತ್ತಿರುವುದನ್ನು ಕಾಣಬಹುದು. ಗ್ರಂಥ ಹಾಗೂ ಜ್ಞಾನಸ್ಫೋಟದ ಸಮಸ್ಯೆಯನ್ನು ವಿವರಿಸುತ್ತ ವಾಲ್ಟರ್ ಬ್ರಾಮ್ ಹೀಗೆ ಹೇಳುತ್ತಾರೆ ; ಪ್ರತಿ ವರ್ಷ ವಿಜ್ಞಾನ ಹಾಗೂ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಸುಮಾರು 75,000 ನಿಯತಕಾಲಿಕೆಗಳು ಪ್ರಪಂಚದ 65 ವಿವಿಧ ಭಾಷೆಗಳಲ್ಲಿ ಹೊರಬರುತ್ತಿವೆ. ಈ ಎಲ್ಲ ಜ್ಞಾನವನ್ನೂ ವಿಜ್ಞಾನಿಗಳಿಗೂ ಪಂಡಿತರಿಗೂ ಶೀಘ್ರವಾಗಿ ಒದಗಿಸಿಕೊಡಲು ಸುಮಾರು 2,000 ಸಾರಾಂಶ ನಿಯತಕಾಲಿಕೆಗಳು ಉಗಮವಾಗಿವೆ. ವೈದ್ಯಕೀಯ ವಿಷಯದ ಮೇಲೆಯೇ ಸುಮಾರು 8,200 ನಿಯತಕಾಲಿಕೆಗಳಲ್ಲಿ ಮೂರು ಲಕ್ಷಕ್ಕೂ ಮೇಲ್ಪಟ್ಟು ಲೇಖನಗಳು ಪ್ರಕಟಗೊಳ್ಳುತ್ತಿವೆ. ಇವೆಲ್ಲವನ್ನೂ 400 ವಿಮರ್ಶಕ ಪತ್ರಿಕೆಗಳು ತರ್ಕಬದ್ಧವಾಗಿ ವಿಶ್ಲೇಷಿಸುತ್ತಿವೆ. ಹೊಸ ಹೊಸ ಜ್ಞಾನ ಮತ್ತು ವಿಶೇಷ ವಿಚಾರಸರಣಿಯಿಂದೊಡಗೂಡಿದ ಸುಮಾರು 2,000ಕ್ಕೂ ಹೆಚ್ಚಿನ ಮುದ್ರಿತಪುಟಗಳು ಪ್ರತಿ ನಿಮಿಷವೂ ಹೊರಬರುತ್ತಿವೆ.

ವಿಜ್ಞಾನ ಮತ್ತು ಕಲಾಸಾಹಿತ್ಯದ ಬೆಳೆವಣಿಗೆ ಪ್ರತಿ ದಶಕದಲ್ಲಿ ದ್ವಿಗುಣಿತವಾಗುತ್ತ ನಡೆದಿದೆಯೆಂದು ಪಂಡಿತರ ತರ್ಕ. ಪ್ರಪಂಚದಲ್ಲಿಯೇ ಬೃಹದಾಕಾರದ ಗ್ರಂಥಾಲಯವೆಂದು ಖ್ಯಾತವಾದ ಅಮೆರಿಕ ಕಾಂಗ್ರೆಸ್ ರಾಷ್ಟ್ರೀಯ ಗ್ರಂಥಾಲಯ, ಹಾರ್ವರ್ಡ್ ಮತ್ತು ಯೇಲ್ ವಿಶ್ವವಿದ್ಯಾಲಯಗಳು ಓದುಗನಿಗೆ ಬೇಕಾಗುವ ಎಲ್ಲ ಗ್ರಂಥಗಳನ್ನೂ ಪೂರೈಸಲು ಅಸಮರ್ಥವಾಗಿವೆ. ಪ್ರಪಂಚದ ಯಾವ ಗ್ರಂಥಾಲಯವೂ ಪರಿಪೂರ್ಣವಾಗಿ ಸ್ವಾವಲಂಬಿಯಾಗಿದೆ ಎಂದು ಹೇಳುವಂತಿಲ್ಲ.

ಜ್ಞಾನ ಮತ್ತು ವಿಜ್ಞಾನ ಸಂಶೋಧನೆಗಳ ಕಾರ್ಯಗಳಲ್ಲಿ ಬೇಕಾಗುವ ವಿದೇಶೀ ಗ್ರಂಥಗಳು ಮತ್ತು ವಿವಿಧ ಲೇಖನಗಳ ಸೂಚಿಗಳು ವಾಚಕರ ಕೈಸೇರುವ ಮೊದಲು ಕೆಲವು ವಿಶಿಷ್ಟ ಸಂಸ್ಕಾರಗಳನ್ನು ಪಡೆಯಬೇಕಾಗುತ್ತದೆ. ಇದಕ್ಕೆ ತಗಲುವ ವೆಚ್ಚ ಅಪಾರ. ವೈಜ್ಞಾನಿಕ ಸಂಶೋಧಕರಿಗೆ ಸರಿಯಾದ ಸಮಯದಲ್ಲಿ ಸರಿಯಾದ ಹೊತ್ತಿಗೆ ಇವು ದೊರಕದ್ದರಿಂದ ಅವರ ಸಂಶೋಧನೆಗಳಲ್ಲಿ ಅನಾವಶ್ಯಕವಾದ ಕಾಲವಿಳಂಬವೂ ಚರ್ವಿತ ಚರ್ವಣವೂ ಆಗುತ್ತಿದೆ. ಭಾರಿ ಪ್ರಮಾಣದಲ್ಲಿ ಹೊರಬೀಳುತ್ತಿರುವ ವಿಶಿಷ್ಟ ಸಂಶೋಧನ ಪ್ರಬಂಧಗಳನ್ನು ವಿದೇಶೀ ಗ್ರಂಥಗಳನ್ನು ಪಡೆಯುವಲ್ಲಿ ಎದುರಿಸಬೇಕಾದ ವಿದೇಶಿ ವಿನಿಮಯದ

ಸಮಸ್ಯೆಗಳು, ಹಣದ ಕೊರತೆ ಮತ್ತು ಗ್ರಂಥಗಳ ಆಯ್ಕೆಯ ಜಟಿಲ ಪ್ರಸಂಗಗಳು ಹಾಗೂ ವಿವಿಧ ಭಾಷೆಗಳಲ್ಲಿ ಪ್ರಕಾಶವಾಗುತ್ತಿರುವ ಗ್ರಂಥಗಳನ್ನು ಶೇಖರಿಸುವ ಸಮಸ್ಯೆಗಳು ಹಿತವಾಗಿ ಮಿತವಾಗಿ ಪರಿಹಾರಗೊಳ್ಳಲು ಗ್ರಂಥಾಲಯ ಸಹಕಾರ ಪರಿಣಾಮಕಾರಿ.

1876ರಲ್ಲಿ ಸೇರಿದ ಅಮೆರಿಕದ ಗ್ರಂಥಪಾಲರ ಸಮ್ಮೇಳನದ ಫಲವಾಗಿ ಜನ್ಮತಳೆದ ಅಮೆರಿಕದ ಗ್ರಂಥಾಲಯ ಸಂಘ (ಎಎಲ್ಎ) ಗ್ರಂಥಾಲಯ ಸಹಕಾರಕ್ಕೆ ನಾಂದಿ ಹಾಡಿತೆನ್ನಬಹುದು. ಅಮೆರಿಕದ ಕಾಂಗ್ರೆಸ್ ಗ್ರಂಥಾಲಯದ ಸುಪ್ರಸಿದ್ಧ ಗ್ರಂಥಪಾಲ ಹರ್ಬರ್ಟ್ ಪುಟ್‌ನಮ್ ಗ್ರಂಥಾಲಯ ಸಹಕಾರದ ವಿಷಯವಾಗಿ ಮನನೀಯ ವಿಚಾರಗಳನ್ನು ಮಂಡಿಸಿದ್ದಾನೆ. ಅಂತಾರಾಷ್ಟ್ರೀಯ ತಿಳಿವಳಿಕೆ ಹಾಗೂ ಸಹಕಾರ ಮುಂಬರುವ ಗ್ರಂಥಾಲಯಗಳಿಗೆ ಅವಶ್ಯವೆಂಬ ಮಾತನ್ನು ಒತ್ತಿಹೇಳಿದ್ದಾನೆ. 20ನೆಯ ಶತಮಾನದ ಪ್ರಾರಂಭದಲ್ಲಿಯೇ ಬ್ರಿಟನ್ ಕೂಡ ಗ್ರಂಥಾಲಯ ಸಹಕಾರದಲ್ಲಿ ಆಸಕ್ತಿ ತಳೆದಿತ್ತೆಂದು ಕೆನಿಯನ್ (1927), ಮೆಕಾಲ್ವಿನ್ (1942), ರಾಬರ್ಟ್ ಕಮಿಟಿ (1957) ವರದಿಗಳಿಂದ ತಿಳಿದುಬರುತ್ತದೆ. ಗ್ರಂಥಾಲಯಗಳು ಓದುಗರ ಸೌಲಭ್ಯಕ್ಕಾಗಿ ಗ್ರಂಥಗಳನ್ನು ಪರಸ್ಪರ ಎರವಲು ಪಡೆಯಬೇಕೆಂದು ಅಮೆರಿಕದ ಗ್ರಂಥಪಾಲರು ಹೇಳಿದ್ದುಂಟು (1924). ಗ್ರಂಥಾಲಯ ಸಹಕಾರದ ಇತಿಹಾಸ ಹಾಗೂ ವೈವಿಧ್ಯತೆ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಅದು ನಿರ್ವಹಿಸುವ ಕಾರ್ಯ–ಇವನ್ನು ರಾಬರ್ಟ್ ಡೌನ್ಸ್ ಎಂಬ ವಿಖ್ಯಾತ ಗ್ರಂಥಪಾಲ ತನ್ನ ಒನ್ ಫಾರ್ ಆಲ್; ಎ ಹಿಸ್ಟಾರಿಕಲ್ ಸ್ಕೆಚ್ ಆಫ್ ಲೈಬ್ರರಿ ಕೊ–ಆಪರೇಷನ್ ಇನ್ ದಿ ಲೈಬ್ರರೀಸ್ ಆಫ್ ಟುಮಾರೊ ಎಂಬ ವಿಚಾರಭರಿತ ಲೇಖನದಲ್ಲಿ ಚೆನ್ನಾಗಿ ಬಣ್ಣಿಸಿದ್ದಾನೆ.

ಪ್ರಾಚೀನ ಭಾರತದಲ್ಲಿ ಗ್ರಂಥಾಲಯ ಸಹಕಾರವಿದ್ದುದರ ಕುರುಹುಗಳನ್ನು ಕಾಣಬಹುದು. ಯುವಾನ್ ಚಾಂಗ್ ತನ್ನ ದೇಶಕ್ಕೆ ಮರಳುವಾಗ ನಾಲಂದ ಹಾಗೂ ತಕ್ಷಶಿಲೆಯ ವಿಶ್ವವಿದ್ಯಾಲಯ ಗ್ರಂಥಾಲಯಗಳ ಸಹಕಾರದಿಂದ ಸಹಸ್ರಾರು ಹಸ್ತಪ್ರತಿಗಳನ್ನು ಪ್ರತಿಮಾಡಿಸಿ ಕೊಂಡೊಯ್ದುದ್ದನ್ನು ಇಲ್ಲಿ ಸ್ಮರಿಸಬಹುದು. ಭೌಗೋಳಿಕ ವಿಸ್ತಾರ, ಸಾಂಸ್ಕೃತಿಕ ಬೆಳವಣಿಗೆ, ಶೈಕ್ಷಣಿಕ ಪ್ರಸಾರ, ಸಾಮಾಜಿಕ ಪ್ರಜ್ಞೆ ಹಾಗೂ ಆರ್ಥಿಕ ಪರಿಸ್ಥಿತಿಗಳ ಮೇಲೆ ಗ್ರಂಥಾಲಯ ಸಹಕಾರದ ವಿವಿಧ ಪ್ರಕಾರಗಳು ನಿಂತಿವೆ.

**ಪ್ರಚಲಿತವಿರುವ ಹತ್ತಾರು ಗ್ರಂಥಾಲಯ ಸಹಕಾರಗಳಲ್ಲಿ ಮುಖ್ಯವಾದವು ಇವು :** 1. ಅಂತರ ಗ್ರಂಥಾಲಯ ಎರವಲು, 2. ಸಹಕಾರಿ ಕೇಂದ್ರೀಕೃತ ಸೂಚೀಕರಣ, 3. ಸಂಯುಕ್ತಸೂಚಿ ರಚನೆ, 4. ಗ್ರಂಥಗಳ ವಿನಿಮಯ, 5. ಸಹಕಾರಿ ಗ್ರಂಥಸಂಗ್ರಹಣೆ, 6. ಗೊತ್ತಾದ ವಿಷಯದಲ್ಲಿ ವಿಶೇಷ ಪರಿಶ್ರಮ, 7. ಸಹಕಾರಿ ಗ್ರಂಥಾಗಾರ ರಚನೆ, 8. ಗ್ರಂಥಸೂಚಿ ಸೇವೆ, 9. ಸಹಕಾರಿ ಛಾಯಾಚಿತ್ರ ಪ್ರತಿಕರಣ ಸೇವೆ, 10. ಸಹಕಾರಿ ವಾರ್ತಾ ಸೇವೆ.

**1. ಅಂತರ ಗ್ರಂಥಾಲಯ ಎರವಲು :** ಗ್ರಂಥಾಲಯ ಸಹಕಾರದ ಪ್ರಥಮ ಸೋಪಾನವೆಂದರೆ ಅಂತರ ಗ್ರಂಥಾಲಯ ಎರವಲು ಪದ್ಧತಿ. ವಿವಿಧ ಓದುಗರ ಭಿನ್ನ ಭಿನ್ನ ಬೇಡಿಕೆಗಳನ್ನು ಪೂರೈಸುವುದು ಯಾವ ಗ್ರಂಥಾಲಯಕ್ಕೂ ಸಾಧ್ಯವಿಲ್ಲ. ಗ್ರಂಥಗಳನ್ನು ಬೇರೆಡೆಯಿಂದ ಎರವಲು ತೆಗೆದುಕೊಂಡು ಓದುಗರಿಗೆ ಪೂರೈಸುವುದು ಶತಮಾನದಿಂದಲೂ ಬೆಳೆದು ಬಂದ ಪದ್ಧತಿ. ಇದು 17ನೆಯ ಶತಮಾನದಿಂದಲೂ ಯುರೋಪಿನಲ್ಲಿ ರೂಢಿಯಲ್ಲಿದೆಯೆಂದು ಸಿ.ಸಿ. ಕೊಲ್ಲನ್ ಉಲ್ಲೇಖಿಸಿದ್ದಾನೆ.

ಈ ಪದ್ಧತಿಯ ನಿಯಮಾವಳಿಗಳು ಮೊಟ್ಟಮೊದಲಿಗೆ 1938ರಲ್ಲಿ ಇಫ್ಲ ಸಮ್ಮೇಳನದಲ್ಲಿ ರೂಪುಗೊಂಡವು. 1942ರ ಮೆಕಾಲ್ವಿನ್ ವರದಿ ಇಂಗ್ಲೆಂಡಿನಲ್ಲಿ ಈ ಪದ್ಧತಿಗೆ ಸಾಕಷ್ಟು ಬೆಂಬಲ ಕೊಟ್ಟಿತು.

ಇವೆಲ್ಲವನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಅಮೆರಿಕದ ಗ್ರಂಥಾಲಯ ಸಂಘ ಈ ದಿಶೆಯಲ್ಲಿ ನಿಯಮಗಳನ್ನು ರೂಪಿಸಿ ದೇಶದ ಎಲ್ಲ ಗ್ರಂಥಾಲಯಗಳಿಗೂ ಅನ್ವಯಿಸುವಂತೆ ಒಂದು ಸಾಮಾನ್ಯ ಪದ್ಧತಿಯನ್ನು ಹಾಕಿಕೊಟ್ಟಿತು. 1952ರಲ್ಲಿ ಈ ನಿಯಮಗಳನ್ನು ಎಲ್ಲ ಗ್ರಂಥಾಲಯಗಳಿಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸಲಾಯಿತು.

ಅಂಚೆಯ ವೆಚ್ಚ, ಪ್ಯಾಕಿಂಗ್, ಎರವಲು ಅವಧಿ ಮತ್ತು ವಿಸ್ತಾರ–ಇವು ಈ ಸಹಕಾರದ ಮುಖ್ಯ ಅಂಗಗಳು. ಪಠ್ಯಗ್ರಂಥಗಳು, ಕಥಾಸಾಹಿತ್ಯ, ಸಂಶೋಧನ ಪ್ರಬಂಧಗಳು ಹಾಗೂ ಕಡಿಮೆ ಕ್ರಯದ ಗ್ರಂಥಗಳು ಹಾಗೂ ವಿರಳ ಗ್ರಂಥಗಳು ಈ ನಿಯಮದ ಕಕ್ಷೆಯಲ್ಲಿ ಬರುವುದಿಲ್ಲ.

ಇತ್ತೀಚೆಗೆ ಗ್ರಂಥ ಎರವಲು ಪಡೆಯುವುದರಲ್ಲಿ ಆಗುವ ಸಮಯ ವಿಳಂಬವನ್ನು ತಡೆಯಲು ಟೆಲಿಫೋನ್, ಟೆಲೆಕ್ಸ್, ಟೆಲಿಕೋಡ್, ಟೆಲಿವಿಷನ್ ಹಾಗೂ ಗಣಕಗಳ ಸಹಾಯ ಪಡೆಯಲಾಗುತ್ತಿದೆ.

**2. ಸಹಕಾರಿ ಕೇಂದ್ರೀಕೃತ ಸೂಚೀಕರಣ :** ಎರಡು ಅಥವಾ ಎರಡಕ್ಕಿಂತಲೂ ಹೆಚ್ಚು ಗ್ರಂಥಾಲಯಗಳು ಒಟ್ಟಿಗೆ ಸೇರಿ ತಮ್ಮ ಎಲ್ಲ ಗ್ರಂಥಗಳ ಸೂಚಿಗಳನ್ನು ಸಿದ್ಧಪಡಿಸುವುದು ತುಂಬ ಲಾಭದಾಯಕ. ಇದರಿಂದ ಸೂಚೀಕರಣ ತಂತ್ರದ ಅನುಭವ ಹಾಗೂ ಪಾಂಡಿತ್ಯ ಭಾಗವಹಿಸುವ ಎಲ್ಲ ಗ್ರಂಥಾಲಯಗಳಿಗೂ ದೊರೆಯುವುದಲ್ಲದೇ ವೆಚ್ಚ ಕಡಿಮೆ ಆಗುತ್ತದೆ. ಅಲ್ಲದೆ ಸೂಚಿಗಳಲ್ಲಿ ಏಕರೂಪತೆ ಬರುತ್ತದೆ. ಅಮೆರಿಕ ಹಾಗೂ ಇಂಗ್ಲೆಂಡಿನಲ್ಲಿ ಈ ಪದ್ಧತಿ ಬಳಕೆಯಲ್ಲಿದೆ. ಸಹಕಾರಿ ಸೂಚಿಯನ್ನು ತಯಾರಿಸುವ ವಿಧಾನವನ್ನು ಪ್ರಥಮವಾಗಿ ಬಳಕೆಗೆ ತಂದವ ಚಾರಲ್ಸ್ ಜ್ಯೂಯಟ್ (1851). 1902ರಿಂದ ಅಮೆರಿಕದ ರಾಷ್ಟ್ರೀಯ ಕಾಂಗ್ರೆಸ್ ಗ್ರಂಥಾಲಯ ಮುದ್ರಿತ ಸೂಚೀಪತ್ರಗಳನ್ನು ಪ್ರಪಂಚದ ಸುಮಾರು 2,000 ಗ್ರಂಥಾಲಯಗಳಿಗೆ ಪೂರೈಸುತ್ತಿದೆ.

ಇಂಗ್ಲೆಂಡಿನಲ್ಲಿ 1858ರಲ್ಲಿ ರಾಯಲ್ ಸೊಸೈಟಿ ಸಹಕಾರಿ ಕ್ರಮದಿಂದ ಮ್ಯಾನುಸ್ಕ್ರಿಪ್ಟ್ ಕ್ಯಾಟಲಾಗ್ ಆಫ್ ದಿ ಟೈಟಲ್ಸ್ ಆಫ್ ಸೈಂಟಿಫಿಕ್ ಪೀರಿಯಾಡಿಕಲ್ಸ್ ಇನ್ ಆಲ್ ಲ್ಯಾಂಗ್ವೇಜಸ್ ಎಂಬ ಸೂಚಿಯನ್ನು ಸಿದ್ಧಪಡಿಸಿದನು. ಅದೇ ರೀತಿಯಲ್ಲಿ 1898ರಲ್ಲಿ ವಿಜ್ಞಾನಿಗಳ ಸಹಕಾರದಿಂದ ಪ್ರಪಂಚದ ಎಲ್ಲ ವಿಜ್ಞಾನ ಪ್ರಪಂಚದ ಸಾಹಿತ್ಯವನ್ನೂ ಸೂಚೀಕರಿಸಲು ಪ್ರಯತ್ನ ನಡೆಸಿತು.

ಕೆ.ಡಿ. ಮೆಟ್‌ಕಾಫ್ ಸಮಿತಿಯ ವರದಿಯಂತೆ (1927) ಸಹಕಾರಿ ಸೂಚೀಕರಣ ಅಮೆರಿಕದ ರಾಷ್ಟ್ರೀಯ ಗ್ರಂಥಾಲಯದ ಪ್ರಧಾನ ಕಾರ್ಯವಾಯಿತು. ಹಾಗೂ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆ ರೂಢಿಗೆ ಬಂತು. 1966ರಲ್ಲಿ ಏರ್ಪಟ್ಟ ಮಾರ್ಕ್ 1 ಎಂಬ ಇನ್ನೊಂದು ರಾಷ್ಟ್ರೀಯ ಸಹಕಾರಿ ಸೂಚೀ ಯೋಜನೆಯಲ್ಲಿ ಸುಮಾರು 24 ಸದಸ್ಯ ಗ್ರಂಥಾಲಯಗಳು ಭಾಗವಹಿಸಿದವು. ಮುಂದೆ ಮಾರ್ಕ್ 2 ಎಂಬ ಪರಿಷ್ಕೃತ ಯೋಜನೆ ಬಳಕೆಗೆ ಬಂತು. ಈ ಯೋಜನೆಯನ್ವಯ ಸದಸ್ಯ ಗ್ರಂಥಾಲಯಗಳು ಗ್ರಂಥಸೂಚಿ ಮಾಹಿತಿಯನ್ನು ಮ್ಯಾಗ್ನೆಟಿಕ್ ಟೇಪ್ ರೂಪದಲ್ಲಿ ಪಡೆಯುವುವು. ಭಾರತದಲ್ಲಿ ರಂಗನಾಥನ್ ಅವರು ಇಂಥದೇ ಒಂದು ಯೋಜನೆಯನ್ನು ಮಂಡಿಸಿದರಾದರೂ ಕಾರ್ಯಗತಗೊಳ್ಳಲಿಲ್ಲ.

**3. ಸಂಯುಕ್ತಸೂಚಿ ರಚನೆ :** ಹಲವಾರು ಗ್ರಂಥಾಲಯಗಳ ಸಂಯುಕ್ತ ಸೂಚಿಯ ಸಹಾಯದಿಂದ ಓದುಗರ ಬೇಡಿಕೆಗಳನ್ನು ಬಹುಮಟ್ಟಿಗೆ ಪೂರೈಸಬಹುದು. ಇಂಥವನ್ನು ಸ್ಥಾನಿಕ, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ರಚಿಸಬಹುದು. ಇದು ಗ್ರಂಥ ಎರವಲು ಪಡೆಯುವುದರಲ್ಲಿ ಓದುಗನ ಹಾಗೂ ಗ್ರಂಥಾಲಯ ಸಿಬ್ಬಂದಿಯ ಸಮಯವನ್ನು ಉಳಿಸುವುದರಲ್ಲಿ ತುಂಬ ಸಹಾಯಕವಾಗುವುದು. ಈ ಸೂಚಿಗಳನ್ನು ಎಲ್ಲ ಪ್ರಗತಿಶೀಲ ರಾಷ್ಟ್ರಗಳೂ ಸಂಶೋಧನೆಯ ಮೂಲ ಸಾಮಗ್ರಿಯೆಂದು ಭಾವಿಸುತ್ತವೆ.

ಸಂಯುಕ್ತಸೂಚಿಯ ರಚನೆಯಲ್ಲಿ ಭಾಗವಹಿಸುವ ಗ್ರಂಥಾಲಯಗಳು ತಾವು ಪಡೆದ ಎಲ್ಲ ಗ್ರಂಥಗಳಿಗೂ ಒಂದು ಹೆಚ್ಚಿನ ಸೂಚೀಪತ್ರವನ್ನು ಸಿದ್ಧಪಡಿಸಿ ಸಂಯುಕ್ತ ಸೂಚಿ ರಚನೆ ಕಾರ್ಯದಲ್ಲಿ ತೊಡಗಿರುವ ನಿರ್ದಿಷ್ಟ ಗ್ರಂಥಾಲಯಕ್ಕೆ ಕಳಿಸಿಕೊಡುತ್ತವೆ. ಅಲ್ಲಿ ಇವೆಲ್ಲವನ್ನೂ ಒಟ್ಟುಗೂಡಿಸಿ ಒಂದು ಮೂಲ ಪತ್ರವನ್ನು ತಯಾರಿಸಲಾಗುತ್ತದೆ. ಈ ಸೂಚೀಪತ್ರದಲ್ಲಿ ಗ್ರಂಥಾಲಯಗಳ ಹೆಸರನ್ನೂ ಕ್ರಮದಲ್ಲಿ ನಮೂದಿಸಲಾಗುತ್ತದೆ. ಅಮೆರಿಕ ಕಾಂಗ್ರೆಸ್ ಗ್ರಂಥಾಲಯ 1901ರಲ್ಲಿ ಅಮೆರಿಕ ಹಾಗೂ ಕೆನಡಗಳಲ್ಲಿಯ ಮಹತ್ತ್ವದ ಸುಮಾರು 700 ಗ್ರಂಥಾಲಯಗಳಲ್ಲಿನ ಗ್ರಂಥಗಳ ರಾಷ್ಟ್ರೀಯ ಸಂಯುಕ್ತಸೂಚಿ ತಯಾರಿಸುವ ಕಾರ್ಯ ಪ್ರಾರಂಭಿಸಿತು. 1967ರ ಹೊತ್ತಿಗೆ ಈ ಸೂಚಿಯಲ್ಲಿ 3 ಕೋಟಿಗೂ ಹೆಚ್ಚಿನ ಗ್ರಂಥಗಳ ಮಾಹಿತಿಯನ್ನು ಪತ್ರಗಳ ರೂಪದಲ್ಲಿ ಕಲೆಹಾಕಲಾಯಿತು. ಅದೇ ವರ್ಷದಿಂದ ಈ ಸೂಚಿಯನ್ನು 610 ಸಂಪುಟಗಳಲ್ಲಿ ಮುದ್ರಿಸುವ ಯೋಜನೆಯನ್ನು ಹಾಕಿಕೊಂಡಿತು.

ಭಾರತದಲ್ಲಿ ಸಂಯುಕ್ತಸೂಚಿ ತಯಾರಿಸುವ ಸಹಕಾರಿ ಯೋಜನೆ ಇಲ್ಲಿಯವರೆಗೂ ಆಗಿಲ್ಲ. ಆದರೆ ಈ ದಿಶೆಯಲ್ಲಿ ನಿಯತಕಾಲಿಕೆಗಳ ಸಂಯುಕ್ತಸೂಚಿ ತಯಾರಿಸುವಲ್ಲಿ ಕೆಲ ಪ್ರಯತ್ನಗಳಾಗಿವೆ. 1953ರಲ್ಲಿ ರಂಗನಾಥನ್ ದಕ್ಷಿಣ ಏಷ್ಯದ ಪ್ರೌಢ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ಹೊರತಂದರು. 1966ರಲ್ಲಿ ಭಾರತದ ಗ್ರಂಥಾಲಯ ಅಭಿವೃದ್ಧಿ ಸಲಹಾ ಮಂಡಳಿ ಭಾರತದ ಗ್ರಂಥಾಲಯಗಳಲ್ಲಿನ ಅಮೆರಿಕನ್ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸಿತು. ಭಾರತದ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ ಈಗಾಗಲೇ 13 ಗ್ರಂಥಾಲಯಗಳಲ್ಲಿನ ವೈಜ್ಞಾನಿಕ ನಿಯತಕಾಲಿಕೆಗಳ ಪ್ರಾದೇಶಿಕ ಸಂಯುಕ್ತಸೂಚಿಗಳನ್ನು ತಯಾರಿಸಿದೆ. ಅಲ್ಲದೆ ಸಾಮಾಜಿಕ ವಿಜ್ಞಾನ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನ ಮಂಡಳಿ ಪ್ರಕಟಿಸಿದೆ.

**4. ಗ್ರಂಥಗಳ ವಿನಿಮಯ :** ಈ ಪದ್ಧತಿ ಯುರೋಪಿನಲ್ಲಿ 18ನೆಯ ಶತಮಾನದ ಕೊನೆ ಹಾಗೂ 19ನೆಯ ಶತಮಾನದ ಆದಿಯಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆಯ ಅನಂತರ ಪ್ರಚಾರಕ್ಕೆ ಬಂತು. ಇದರ ಶ್ರೇಯಸ್ಸು ಅಲೆಗ್ಸಾಂಡರ್ ವಟ್ಟೆಮರ್‌ಗೆ ಸಲ್ಲುತ್ತದೆ. 1840ರಲ್ಲಿ ಈತ ಅಮೆರಿಕಕ್ಕೆ ತೆರಳಿ ಸ್ಮಿತ್‌ಸೋನಿಯನ್ ಎಕ್ಸ್‌ಚೇಂಜ್ ಸಂಸ್ಥೆಯನ್ನು ಸ್ಥಾಪಿಸಿದ. ಐರೋಪ್ಯ ದೇಶಗಳ ಅನುಕೂಲತೆಗಾಗಿ ಪ್ಯಾರಿಸಿನಲ್ಲಿಯೂ ಅಂಥ ಒಂದು ಸಂಸ್ಥೆಯನ್ನು ಸ್ಥಾಪಿಸಿದ. ಈ ಕಾರ್ಯಕ್ಕೆ ಇಂಗ್ಲೆಂಡ್ ಹಾಗೂ ವಿದ್ಯಾಸಂಸ್ಥೆಗಳು ಪ್ರಕಟಿಸಿದ ಸುಮಾರು ಮೂರು ಲಕ್ಷ ಗ್ರಂಥಗಳ ವಿನಿಮಯವಾಯಿತು. 1947ರಲ್ಲಿ ಅಮೆರಿಕದಲ್ಲಿ

ಜನ್ಮತಾಳಿದ ಯುನೈಟೆಡ್ ಸ್ಟೇಟ್ಸ್ ಬುಕ್ ಎಕ್ಸ್‌ಚೇಂಜ್ ಸಂಸ್ಥೆ ಇಲ್ಲಿಯವರೆಗೆ ಸುಮಾರು 2,000 ವಿದೇಶೀ ಗ್ರಂಥಾಲಯಗಳೊಡನೆ ಗ್ರಂಥಗಳ ಅದಲು ಬದಲು ಮಾಡಿಕೊಂಡಿದೆ. ಅಮೆರಿಕದ ಅನೇಕ ವಿಶ್ವವಿದ್ಯಾಲಯಗಳು ಈ ಆಂತರಿಕ ವ್ಯವಸ್ಥೆಗೆ ಪ್ರೋತ್ಸಾಹ ಕೊಟ್ಟಿವೆ.

ಹಲವಾರು ಅಂತಾರಾಷ್ಟ್ರೀಯ ಸಭೆ ಸಮ್ಮೇಳನಗಳಲ್ಲಿ ಈ ವಿಷಯದ ಮೇಲೆ ವೈಚಾರಿಕ ಚರ್ಚೆಗಳಾದವು. ಗ್ರಂಥವಿನಿಮಯ ವಿಚಾರವಾಗಿ ಆದ ಬ್ರಸಲ್ಸ್ ಒಪ್ಪಂದಕ್ಕೆ (1886) ಸಹಿ ಹಾಕಿದ ರಾಷ್ಟ್ರಗಳು ಈ ವಿಷಯವಾಗಿ ಸಾಕಷ್ಟು ಪ್ರಚಾರ ಕಾರ್ಯ ಕೈಗೊಂಡವು. ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಆ ಒಪ್ಪಂದಕ್ಕೆ ಸಾಕಷ್ಟು ಯಶಸ್ಸು ದೊರೆಯಲಿಲ್ಲ.

1958ರಲ್ಲಿ ಯುನೆಸ್ಕೊ ಮುಖಾಂತರ ಎಲ್ಲ ಗ್ರಂಥಾಲಯಗಳು ಗ್ರಂಥಗಳ ವಿನಿಮಯ ಕರಾರಿಗೆ ಒಪ್ಪಿಗೆಯಿತ್ತುವಲ್ಲದೆ 1961ರಲ್ಲಿ ಅದು ಜಾರಿಗೆ ಬಂತು. ಇದಲ್ಲದೇ ಹಲವಾರು ಸರ್ಕಾರಗಳ ನಡುವೆ ಬಿಚ್ಚು ಮನಸ್ಸಿನ ದ್ವಿಪಕ್ಷೀಯ ಕರಾರುಗಳಾದವು.

1883ರಿಂದ ಬ್ರಿಟಿಷ್ ಸರ್ಕಾರ ಈ ಗ್ರಂಥ ವಿನಿಮಯ ಕಾರ್ಯವನ್ನು ಪ್ರಾರಂಭಿಸಿತು. 1960ರಲ್ಲಿ ಬ್ರಿಟಿಷ್ ನ್ಯಾಷನಲ್ ಬುಕ್ ಸೆಂಟರ್ ಸ್ಥಾಪನೆಯಾಗಿ ಅದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗ್ರಂಥವಿನಿಮಯ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ.

ಯುನೆಸ್ಕೊ ಆಗಾಗ್ಗೆ ಸಭೆಸಮ್ಮೇಳನಗಳನ್ನು ಏರ್ಪಡಿಸಿ ಈ ತರಹದ ಸಹಕಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲನುಕೂಲವಾಗುವಂತೆ ಪ್ರಚಾರ ನಡೆಸುತ್ತಿದೆ. ಹ್ಯಾಂಡ್‌ಬುಕ್ ಆಫ್ ಇಂಟರ್‌ನ್ಯಾಷನಲ್ ಎಕ್ಸ್‌ಚೇಂಜ್ ಆಫ್ ಪಬ್ಲಿಕೇಷನ್ಸ್ ಮತ್ತು ಯುನೆಸ್ಕೊ ಬುಲೆಟಿನ್ ಫಾರ್ ಲೈಬ್ರರೀಸ್ ಎಂಬ ದ್ವೈಮಾಸಿಕ ಪತ್ರಿಕೆ ವಿನಿಮಯ ಮಾಡುವ ಗ್ರಂಥಾಲಯಗಳ ಹಾಗೂ ಗ್ರಂಥಗಳ ಪಟ್ಟಿಯನ್ನು ಪ್ರಸಿದ್ಧಿಸುತ್ತದೆ.

**5. ಸಹಕಾರಿ ಗ್ರಂಥಸಂಗ್ರಹಣೆ :** ಸಾಮೂಹಿಕವಾಗಿ ಗ್ರಂಥಗಳನ್ನು ಖರೀದಿಸುವುದರಿಂದ ಕಡಿಮೆ ಉಪಯೋಗಿಸಲಾಗುವ ಮತ್ತು ಪ್ರಸ್ತುತ ಪ್ರಸಂಗದಲ್ಲಿ ಅನಾವಶ್ಯಕವೆಂದೆನಿಸುವ ಗ್ರಂಥಗಳನ್ನು ಕೊಳ್ಳುವುದನ್ನು, ವಿದೇಶಗಳಲ್ಲಿ ಪ್ರಕಟವಾಗುವ ಗ್ರಂಥಗಳ ಆಯಾತ, ವಿದೇಶಿ ಹಣದ ವಿನಿಮಯದ ನಿರ್ಬಂಧ ಮುಂತಾದ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದು. ಇಂಥ ಸಹಕಾರಿ ಯೋಜನೆಯ ಮಾದರಿಗೆ ಉದಾಹರಣೆ ಎಂದರೆ ಫಾರ್ಮಿಂಗ್‌ಟನ್ ಯೋಜನೆ.

1942ರಲ್ಲಿ ಕನೆಕ್ಟಿಕಟ್ ರಾಜ್ಯದ ಫಾರ್ಮಿಂಗ್‌ಟನ್ ಹಳ್ಳಿಯಲ್ಲಿ ಅಮೆರಿಕದ ಹಲವು ಪ್ರಮುಖ ಗ್ರಂಥಪಾಲರು ಸಭೆ ಸೇರಿ ಒಂದು ಯೋಜನೆಯನ್ನು ರೂಪಿಸಿದರು. ಅದು ಕಾರ್ಯರೂಪಕ್ಕೆ ಬಂದದ್ದು 1948ರಲ್ಲಿ. ವಿದೇಶಗಳಲ್ಲಿ ಪ್ರಕಟವಾಗುವ ಗ್ರಂಥಗಳನ್ನು ಒಟ್ಟಾರೆ ಕೊಂಡು ಅಮೆರಿಕದ ಸದಸ್ಯಗ್ರಂಥಾಲಯಗಳಿಗೆ ಪೂರೈಸುವುದೇ ಈ ಯೋಜನೆಯ ಗುರಿ. ಇದರ ಪ್ರಕಾರ ವಾರ್ಷಿಕ ವರದಿಗಳು, ಪಠ್ಯಗ್ರಂಥಗಳು, ಅನುವಾದಿತ ಗ್ರಂಥಗಳು (ತಾತ್ಪೂರ್ತಿಕ ಉಪಯೋಗ ಬೀಳುವ ವಿಷಯಗಳನ್ನೊಳಗೊಂಡ ಗ್ರಂಥಗಳನ್ನು ಹೊರತುಪಡಿಸಿ) ವರ್ಷಕ್ಕೆ ಸುಮಾರು 25,000ಕ್ಕೂ ಹೆಚ್ಚಿನ ವಿದೇಶೀ ಗ್ರಂಥಗಳನ್ನು ಅವುಗಳ ಭಾಷೆ ಹಾಗೂ ಆವಶ್ಯಕತೆಗಳನ್ನು ಪರಿಶೀಲಿಸಿ ಸದಸ್ಯ ಗ್ರಂಥಾಲಯಗಳಿಗೆ ಪೂರೈಸಲಾಗುತ್ತಿದೆ. ಈ ಯೋಜನೆಯಲ್ಲಿ ಸುಮಾರು 82 ಗ್ರಂಥಾಲಯಗಳು ಸಕ್ರಿಯವಾಗಿ ಭಾಗವಹಿಸಿವೆಯಲ್ಲದೆ ಅಮೆರಿಕದ ಗ್ರಂಥಾಲಯಗಳು ಸಾಕಷ್ಟು ವಿದೇಶೀ ಗ್ರಂಥಗಳನ್ನು ಪಡೆಯಲು ಅನುಕೂಲವಾಗಿದೆ. ಅಮೆರಿಕದ ಸಂಶೋಧನ ಗ್ರಂಥಾಲಯಗಳ ಸಂಘ ಈ ಯೋಜನೆಯ ಆಡಳಿತ ಸೂತ್ರವನ್ನು ಬಹುಮಟ್ಟಿಗೆ ತನ್ನ ಕೈಯಲ್ಲಿಟ್ಟುಕೊಂಡಿದೆ.

ಇಂಥ ಇನ್ನೊಂದು ಬೃಹತ್ ಯೋಜನೆಯೆಂದರೆ ಅಮೆರಿಕದ ಕಾಂಗ್ರೆಸ್ ಗ್ರಂಥಾಲಯ ಕೈಗೊಂಡ ಯುದ್ಧಕಾಲೀನ ಗ್ರಂಥಸಂಗ್ರಹಣೆ. ಇದು ಲೈಬ್ರರಿ ಆಫ್ ಕಾಂಗ್ರೆಸ್ ವಾರ್ ಟೈಮ್ ಅಕ್ವಿಸಿಷನ್ ಪ್ರೋಗ್ರಾಮ್ ಎಂದು ಹೆಸರುವಾಸಿಯಾಯಿತು. ಎರಡನೆಯ ಮಹಾಯುದ್ಧದಲ್ಲಿ ಅಮೆರಿಕ ಯುರೋಪಿನ ಗ್ರಂಥ ಮಾರುಕಟ್ಟೆಯಿಂದ ದೂರವಿರ ಬೇಕಾಯಿತು. ಆದುದರಿಂದ ಹಲವಾರು ಸಂಶೋಧನ ಗ್ರಂಥಾಲಯಗಳು ತಮ್ಮ ಅವಶ್ಯಕತೆಗಾಗಿ ಕಾಂಗ್ರೆಸ್ ಗ್ರಂಥಾಲಯಕ್ಕೆ ಒತ್ತಾದ ಬೇಡಿಕೆಗಳನ್ನು ಮಂಡಿಸಬೇಕಾಯಿತು. ಇದರ ಪರಿಣಾಮವಾಗಿ ಈ ಮಹಾಗ್ರಂಥಾಲಯ ಒಂದು ಯೋಜನೆಯನ್ನು ಸಿದ್ಧಪಡಿಸಿ 1945–48ರ ಅವಧಿಯಲ್ಲಿ ಸುಮಾರು ಎಂಟು ಲಕ್ಷ ವಿದೇಶೀ ಗ್ರಂಥಗಳನ್ನು ಅಮೆರಿಕದ ವಿವಿಧ ಗ್ರಂಥಾಲಯಗಳಿಗೆ ಪೂರೈಸಿತು. ಅಮೆರಿಕದ ಗ್ರಂಥಾಲಯದ ಇತಿಹಾಸದಲ್ಲಿಯೇ ಈ ಯೋಜನೆ ತುಂಬ ಮಹತ್ತ್ವದ್ದೆನಿಸಿತು.

1962ರಲ್ಲಿ ದೆಹಲಿಯಲ್ಲಿ ಸ್ಥಾಪಿಸಲ್ಪಟ್ಟ ಅಮೆರಿಕನ್ ಪ್ರೊಕ್ಯೂರ್‌ಮೆಂಟ್ ಸೆಂಟರ್ ಎಂಬ ಸಂಸ್ಥೆ ಭಾರತದಲ್ಲಿ ಎಲ್ಲ ಭಾಷೆಗಳಲ್ಲಿ ಪ್ರಕಟವಾಗುವ ಉತ್ತಮ ಗ್ರಂಥಗಳ ಸು.20 ಪ್ರತಿಗಳನ್ನು ಕೊಂಡು ಅಮೆರಿಕದ 19 ವಿಶ್ವವಿದ್ಯಾಲಯಗಳಿಗೆ ಕಳುಹಿಸಿ ಕೊಡುತ್ತದೆ. ಇದರಿಂದ ಭಾರತೀಯ ಗ್ರಂಥಗಳು ಇಂದು ಅಮೆರಿಕದ ಗ್ರಂಥಾಲಯಗಳಲ್ಲಿ ಸುಲಭವಾಗಿ ಲಭ್ಯವಾಗುತ್ತಲಿವೆ.

ಸ್ಕ್ಯಾಂಡಿನೇವಿಯನ್ ದೇಶಗಳು ತಮ್ಮದೇ ಆದ ಯೋಜನೆಯನ್ನು ಹಾಕಿಕೊಂಡು ಸದಸ್ಯ ದೇಶಗಳಲ್ಲಿಯ ಸರ್ಕಾರಿ ಹಾಗೂ ಇನ್ನಿತರ ಗ್ರಂಥಾಲಯಗಳಿಗೆ ಬೇಕಾಗುವ ವಿದೇಶೀ ಗ್ರಂಥಗಳನ್ನು ಪೂರೈಸುತ್ತಿವೆ.

ಪಶ್ಚಿಮ ಜರ್ಮನಿಯಲ್ಲಿ ಇರುವ ಇನ್ನೊಂದು ಯೋಜನೆ ಕೇವಲ ಸರ್ಕಾರಿ ಗ್ರಂಥಾಲಯಗಳಿಗೆ ಮೀಸಲಾಗಿದೆ.

**6. ಗೊತ್ತಾದ ವಿಷಯದಲ್ಲಿ ವಿಶೇಷ ಪರಿಶ್ರಮ :** ಸ್ಥಳ ಹಾಗೂ ಹಣದ ಅಭಾವವನ್ನು ಹೋಗಲಾಡಿಸುವುದರಲ್ಲಿ ಈ ರೀತಿಯ ಗ್ರಂಥಾಲಯ ಸಹಕಾರ ತುಂಬ ಸಹಾಯವಾಗುತ್ತದೆ. ಇಂಥ ಯೋಜನೆಗಳು ಇಂಗ್ಲೆಂಡಿನಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿವೆ. 1912ರಲ್ಲಿ ಸೇರಿದ ಗ್ರೇಟ್ ಬ್ರಿಟನ್ ಗ್ರಂಥಾಲಯ ಸಂಘದ ಸಭೆಯಲ್ಲಿ ಒಂದು ಯೋಜನೆ ಮಂಡಿಸಲ್ಪಟ್ಟು 35 ವರ್ಷಗಳ ಅನಂತರ ಕಾರ್ಯರೂಪಕ್ಕೆ ಬಂತು. 1948ರಲ್ಲಿ ಈ ಯೋಜನೆಗನುಸಾರವಾಗಿ 29 ಗ್ರಂಥಾಲಯಗಳು ಒಟ್ಟಿಗೆ ಸೇರಿ, ಪ್ರತಿಯೊಂದು ಗ್ರಂಥಾಲಯವೂ ವರ್ಷಕ್ಕೆ ಸುಮಾರು ರೂ. 5,000 ಬೆಲೆಬಾಳುವ ಗ್ರಂಥಗಳನ್ನು (ವಾಚಕರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು) ಮತ್ತು ವಿಷಯದ ವೈಶಿಷ್ಟ್ಯವುಳ್ಳ ಗ್ರಂಥಗಳನ್ನು ಕೊಳ್ಳಬೇಕೆಂದು ನಿರ್ಧರಿಸಿದವು.

ಇದಲ್ಲದೆ 1946ರಲ್ಲಿ, ಲಂಡನ್ ಮಹಾನಗರಕ್ಕೆ ಸೀಮಿತವಾಗಿರುವ ಫಿಕ್ಷನ್ ರಿಸರ್ವ್ ಯೋಜನೆಯ ಪ್ರಕಾರ ಇಡೀ ಕಥಾಸಾಹಿತ್ಯವನ್ನು ಎಲ್ಲ ಗ್ರಂಥಾಲಯಗಳೂ ಹಂಚಿಕೊಂಡು ಕೊಳ್ಳುವ ವ್ಯವಸ್ಥೆ ರೂಢಿಗೆ ಬಂದಿದೆ. ಇದರಿಂದ ಎಲ್ಲ ಗ್ರಂಥಾಲಯಗಳೂ ಎಲ್ಲ ಗ್ರಂಥಗಳನ್ನು ಕೊಳ್ಳುವ ಪರಿಪಾಟಿ ತಪ್ಪಿದೆ.

**7. ಸಹಕಾರಿ ಗ್ರಂಥಾಗಾರ ರಚನೆ :** ಗ್ರಂಥ ಮುದ್ರಣದ ಕಾರ್ಯ ತುಂಬ ಸುಲಭವಾಗಿರುವುದರಿಂದ, ಗ್ರಂಥಾಲಯಗಳ ಬೆಳೆವಣಿಗೆಯೂ ಭರದಿಂದ ಸಾಗಿದೆ. ವಿವಿಧ ತರಹದ ಗ್ರಂಥಗಳು, ಮಿತಿಮೀರಿದ ಸಂಖ್ಯೆಯಲ್ಲಿ ಅಚ್ಚಾಗಿ, ಮುದ್ರಣಾಲಯದಿಂದ ಹೊರಬರುವಷ್ಟರಲ್ಲಿಯೇ ತಮ್ಮ ನಾವೀನ್ಯವನ್ನು ಕಳೆದುಕೊಳ್ಳುತ್ತವೆ. ಇಂಥ ಗ್ರಂಥಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾದಿಡುವುದು ಒಂದು ದೊಡ್ಡ ಸಮಸ್ಯೆ. ಹೆಚ್ಚು ಉಪಯೋಗವಿರದ ಮತ್ತು ಹಳೆಯ ಗ್ರಂಥಗಳನ್ನು ಕಾಯ್ದಿಡುವುದಕ್ಕೋಸ್ಕರ ಅಮೆರಿಕದ ದೊಡ್ಡ ಗ್ರಂಥಾಲಯಗಳು ಸುಮಾರು 50 ವರ್ಷಗಳ ಹಿಂದೆಯೇ ಒಂದು ರಾಷ್ಟ್ರೀಯ ಗ್ರಂಥಾಗಾರವನ್ನು ಪ್ರಾರಂಭಿಸಬೇಕೆಂಬ ಯೋಜನೆಯನ್ನು ಮಂಡಿಸಿದ್ದವು. ಆದರೆ ಪ್ರಾದೇಶಿಕ ಗ್ರಂಥಾಗಾರಗಳು ಅಮೆರಿಕದಲ್ಲಿ ಸಾಕಷ್ಟು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಲಿವೆ. 1951ರಲ್ಲಿ ಅಮೆರಿಕ ಗ್ರಂಥಾಲಯ ಸಂಘದ ಸಭೆಯಲ್ಲಿ ಈ ತರಹದ ಉಗ್ರಾಣಗಳನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು.

1959ರ ಸುಮಾರಿಗೆ ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್‌ಗಳಲ್ಲಿ ಪ್ರಾದೇಶಿಕ ಉಗ್ರಾಣಗಳು ಸ್ಥಾಪಿಸಲ್ಪಟ್ಟವು. ರಾಷ್ಟ್ರೀಯ ವಿಜ್ಞಾನ ಹಾಗೂ ತಾಂತ್ರಿಕ ಗ್ರಂಥಾಲಯ ಈ ಉಗ್ರಾಣಗಳಲ್ಲಿ ವಿದೇಶೀ ಗ್ರಂಥಗಳಲ್ಲದೇ ನಿಯತಕಾಲಿಕೆಗಳನ್ನೂ ಕಾಯ್ದಿಡುತ್ತದೆ.

1942ರಲ್ಲಿ ಪ್ರಪ್ರಥಮವಾಗಿ ಬಾಸ್ಟನ್‌ನಲ್ಲಿ ನ್ಯೂ ಇಂಗ್ಲೆಂಡ್ ಡೆಪಾಸಿಟರಿ ಲೈಬ್ರರಿ ಎಂಬ ಸಂಸ್ಥೆ ಸ್ಥಾಪನೆಯಾಯಿತು. ನಗರದ ಸುತ್ತಮುತ್ತಲಿನ 14 ದೊಡ್ಡ ಗ್ರಂಥಾಲಯಗಳು ಈ ಸಹಕಾರಿ ಉಗ್ರಾಣದಲ್ಲಿ ಗ್ರಂಥಗಳನ್ನು ಸುವ್ಯವಸ್ಥಿತವಾಗಿ ಶೇಖರಿಸಿಡುವುದಲ್ಲದೇ ಅದಕ್ಕಾಗಿ ತಗಲುವ ವೆಚ್ಚವನ್ನು ಸಮನಾಗಿ ಹಂಚಿಕೊಂಡಿವೆ.

ಶಿಕಾಗೊ ಪಟ್ಟಣದಲ್ಲಿನ ಮಿಡ್‌ವೆಸ್ಟ್ ಇಂಟರ್ ಲೈಬ್ರರಿ ಸೆಂಟರ್ ಗ್ರಂಥಾಗಾರ ಅಮೆರಿಕದ ಉಳಿದೆಲ್ಲ ಗ್ರಂಥಾಗಾರಗಳಲ್ಲಿ ಶ್ರೇಷ್ಠವೆನಿಸಿದೆ. ಈ ಉಗ್ರಾಣ ಮಧ್ಯ ಹಾಗೂ ಪಶ್ಚಿಮ ಅಮೆರಿಕದ ಪ್ರದೇಶಗಳಲ್ಲಿನ ಗ್ರಂಥಾಲಯಗಳ ಸೇವೆ ಸಲ್ಲಿಸುತ್ತಿದೆ. 16 ವಿಶ್ವವಿದ್ಯಾಲಯಗಳು, ಜಾನ್ ಕ್ರ್ಯಾರರ್ ಲೈಬ್ರರಿ ಮತ್ತು ಇಲಿನಾಯ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬ ಸಂಸ್ಥೆಗಳು ಒಟ್ಟಾಗಿ ಈ ಕೇಂದ್ರವನ್ನು ಸ್ಥಾಪಿಸಿವೆ. ವಿಜ್ಞಾನಿಗಳಿಗೆ ಬೇಕಾಗುವ ವಿಶಿಷ್ಟ ಸಾಹಿತ್ಯವನ್ನು ಸುಲಭವಾಗಿಯೂ ಮತ್ತು ಕಡಿಮೆ ವೆಚ್ಚದಲ್ಲಿ ಒದಗಿಸುವುದು ಹಾಗೂ ಅನಾವಶ್ಯಕವಾದ ಗ್ರಂಥಗಳನ್ನು ಬೇರೆಡೆಗೆ ಸ್ಥಳಾಂತರಿಸುವುದು ಈ ಗ್ರಂಥಾಗಾರದ ಉದ್ದೇಶ. ಈ ಭಂಡಾರ ನಾಲ್ಕು ಬಗೆಯ ಗ್ರಂಥಗಳನ್ನು ಶೇಖರಿಸುತ್ತದೆ.

(i) ಗ್ರಂಥಗಳ ಮೇಲಿನ ಸಂಪೂರ್ಣ ಅಧಿಕಾರವನ್ನು ಶಾಶ್ವತವಾಗಿ ಬಿಟ್ಟುಕೊಟ್ಟ ಸಂಸ್ಥೆಗಳ ಗ್ರಂಥಗಳು.

(ii) ಗ್ರಂಥಗಳನ್ನು ಶಾಶ್ವತವಾಗಿ ಬಿಟ್ಟುಕೊಟ್ಟರೂ ಅವುಗಳ ಮೇಲಿನ ಹಕ್ಕನ್ನು ಬಿಡದಿರುವ ಸಂಸ್ಥೆಗಳ ಗ್ರಂಥಗಳು.

(iii) ಗ್ರಂಥಗಳನ್ನು ಶಾಶ್ವತವಾಗಿ ಶೇಖರಿಸಲು ಕೊಟ್ಟರೂ ಮರಳಿ ಪಡೆಯುವ ಹಕ್ಕನ್ನುಳ್ಳ ಸಂಸ್ಥೆಗಳ ಗ್ರಂಥಗಳು.

(iv) ಶೇಖರಣೆಗೆ ಬಾಡಿಗೆ ಕೊಡುವ ಸಂಸ್ಥೆಗಳ ಗ್ರಂಥಗಳು. ಈ ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ ದೊಡ್ಡ ಗ್ರಂಥಾಲಯಗಳು ನಿರುಪಯುಕ್ತ ಗ್ರಂಥಗಳನ್ನು ಈ

ಕೇಂದ್ರಕ್ಕೆ ಕಳಿಸಿಕೊಡುತ್ತವೆ. 55 ಸದಸ್ಯರಿರುವ ಈ ಗ್ರಂಥಾಗಾರ ಮತ್ತೊಂದು ವಿಶಿಷ್ಟ ಯೋಜನೆಯ ಮೇರೆಗೆ ತನ್ನ ಕಕ್ಷೆಯಲ್ಲಿರುವ ಗ್ರಂಥಾಲಯಗಳಿಗೆ ಬೇಕಾಗುವ ಅತಿ ವೆಚ್ಚದ ಪುಸ್ತಕಗಳನ್ನೂ ನಿಯತಕಾಲಿಕೆ ಹಾಗೂ ದಿನಪತ್ರಿಕೆಗಳನ್ನೂ ಕೊಳ್ಳುತ್ತದೆ. ಸದಸ್ಯ ಗ್ರಂಥಾಲಯಗಳಲ್ಲಿ ಇರದ 832 ನಿಯತಕಾಲಿಕೆಗಳನ್ನು ಮತ್ತು 142 ವಿದೇಶಿ ದಿನಪತ್ರಿಕೆಗಳನ್ನು ಸೂಕ್ಷ್ಮಛಾಯಾಪ್ರತಿಗಳನ್ನು ಪಡೆದು ವಾಚಕರಿಗೆ ಉಪಯೋಗಿಸಲು ಬರುವಂತೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತದೆ. ಕೇಂದ್ರ ಗ್ರಂಥಾಗಾರದಲ್ಲಿ ಸುಮಾರು 30 ಲಕ್ಷ ಗ್ರಂಥಗಳನ್ನು ಸಂಗ್ರಹಿಸಲಾಗಿದೆ. ಈಗ ಈ ಕೇಂದ್ರವನ್ನು ಸೆಂಟರ್ ಫಾರ್ ರಿಸರ್ಚ್ ಲೈಬ್ರರೀಸ್ ಎಂದು ಕರೆಯುತ್ತಿದ್ದಾರೆ.

ಹ್ಯಾಂಪ್‌ಷಿರ್ ಇಂಟರ್ ರಿಸರ್ಚ್ ಲೈಬ್ರರಿ ಸೆಂಟರ್ ಎಂಬ ಸಂಸ್ಥೆ ಮೆಸಾಚುಸೆಟ್ಸ್ ವಿಶ್ವವಿದ್ಯಾಲಯ, ಆಮ್‌ಹರ್ಸ್ಟ್, ಸ್ಮಿತ್ ಮತ್ತು ಮೌಂಟ್ ಹೋಲಿಯೋಕ್ ಮಹಾವಿದ್ಯಾಲಯಗಳ ಸಹಕಾರದಿಂದ ಪ್ರಾರಂಭವಾದುದು (1951). ಈ ಗ್ರಂಥಾಗಾರದಲ್ಲಿ ನಿರುಪಯುಕ್ತ ಹಾಗೂ ಅಲ್ಪೋಪಯೋಗಿ ಗ್ರಂಥಗಳ ಸಂಗ್ರಹವಿದೆ. ಮೇಲೆ ಹೇಳಿದ ನಾಲ್ಕೂ ಶೈಕ್ಷಣಿಕ ಗ್ರಂಥಾಲಯಗಳ ಸಂಸ್ಥೆಗಳ ಸ್ಥಳ ಸಮಸ್ಯೆ ಮತ್ತು ಗ್ರಂಥಗಳನ್ನು ಕಾಯ್ದಿಡಲು ತಗಲುವ ವೆಚ್ಚವನ್ನು ಕಡಿಮೆ ಮಾಡುವುದರಲ್ಲಿ ಈ ಸಂಸ್ಥೆ ಸಹಾಯಕವಾಗಿದೆಯಲ್ಲದೆ ಸುಮಾರು 400 ನಿಯತಕಾಲಿಕೆಗಳಿಗಾಗಿ ಚಂದಾಹಣವನ್ನು ಪೂರೈಸುತ್ತಿದೆ.

8. ಗ್ರಂಥಸೂಚಿ ಸೇವೆ ಗ್ರಂಥಾಲಯ ಸಹಕಾರದ ಇನ್ನೊಂದು ಬಗೆಯನ್ನು ತೋರುತ್ತದೆ. ಈ ತರಹದ ಸಹಕಾರ ರಾಷ್ಟ್ರೀಯ ಮಟ್ಟದಲ್ಲಿ ಪ್ರಪಂಚದಾದ್ಯಂತ ಕಂಡುಬರುತ್ತದೆ. ರಾಷ್ಟ್ರೀಯ ಗ್ರಂಥಾಲಯಗಳ ಮುಖ್ಯ ಸೇವೆಗಳಲ್ಲಿ ಇದೊಂದು. ಯಾವುದೇ ದೇಶದ ರಾಷ್ಟ್ರೀಯ ಗ್ರಂಥಾಲಯ ತನ್ನ ದೇಶದ ಪಾಂಡಿತ್ಯ ಮತ್ತು ಬೌದ್ಧಿಕ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. ಕಾರಣ ಇತ್ತೀಚೆಗೆ ಪ್ರಪಂಚದ ಹಲವಾರು ರಾಷ್ಟ್ರಗಳು ಹಳೆಯ ಹಾಗೂ ಹೊಸ ಗ್ರಂಥಗಳ ಸೂಚಿ ರಚನೆಯಲ್ಲಿ ಕಾರ್ಯನಿರತವಾಗಿವೆ.

ಇಂಗ್ಲೆಂಡಿನಲ್ಲಿ ಪ್ರಪ್ರಥಮವಾಗಿ 1950ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಸೂಚಿಯನ್ನು ಪ್ರಸಿದ್ಧಿಸಲಾಯಿತು. ಇತ್ತೀಚೆಗೆ ಈ ಯೋಜನೆಯಲ್ಲಿ ಹಲವಾರು ತಾಂತ್ರಿಕ ಮಾರ್ಪಾಡುಗಳು ಕಂಡುಬಂದಿವೆ. ಅಮೆರಿಕದ ಪ್ರಸಿದ್ಧ ಮಾರ್ಕ್ ಪ್ರಾಜೆಕ್ಟ್ ಮಾದರಿಯ ಮೇಲೆ ಮಾರ್ಕ್ ಪೈಲಟ್ ಯೋಜನೆಯನ್ನು ರೂಪಿಸಿ ಸೂಚಿಸೇವೆಯನ್ನು ಇಂಗ್ಲೆಂಡಿನ ಹಾಗೂ ಯುರೋಪಿನ ಹಲವಾರು ಗ್ರಂಥಾಲಯಗಳಿಗೆ ಒದಗಿಸಲಾಗುತ್ತದೆ.

ಅಮೆರಿಕದ ವಿವಿಧ ಸಂಘಸಂಸ್ಥೆಗಳು ಹಲವಾರು ಪ್ರಾದೇಶಿಕ ಹಾಗೂ ವಿಶಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸೂಚಿಗಳನ್ನು ರಚಿಸಿವೆ. ಅಮೆರಿಕ ವಿಶ್ವವಿದ್ಯಾಲಯಗಳ ಸಾಮೂಹಿಕ ಸಂಶೋಧನ ಪ್ರಬಂಧಗಳ ಸೂಚಿ ಎಲ್ಲರ ಹೊಗಳಿಕೆಗೆ ಪಾತ್ರವಾಗಿದೆ.

ಭಾರತದಲ್ಲಿಯೂ ಇದೇ ರೀತಿಯಾಗಿ 1958ರಲ್ಲಿ ಮೊಟ್ಟಮೊದಲಿಗೆ ಕೋಲ್ಕತದ ರಾಷ್ಟ್ರೀಯ ಗ್ರಂಥಾಲಯ ರಾಷ್ಟ್ರೀಯ ಗ್ರಂಥಸೂಚಿಯನ್ನು ಪ್ರಕಟಿಸಿತು. ಇದಕ್ಕೆ ಪೂರ್ವಭಾವಿಯಾಗಿ 1954ರಲ್ಲಿ ಭಾರತ ಸರ್ಕಾರ ಡೆಲಿವರಿ ಆಫ್ ಬುಕ್ಸ್ ಕಾಯದೆಯನ್ನು ಜಾರಿಗೆ ತಂದಿತು. 1956ರ ತಿದ್ದುಪಡಿಯಂತೆ ಪುಸ್ತಕಗಳ ಜೊತೆಗೆ ನಿಯತಕಾಲಿಕೆಗಳೂ ಸೇರಿದವು. ಬಿ.ಎಸ್. ಕೇಶವನ್ ಅವರು ಸಂಪಾದಿಸಿರುವ ಈ ಭಾರತೀಯ ಗ್ರಂಥಸೂಚಿಯನ್ನು ಪ್ರಪಂಚದಲ್ಲಿನ ಇತರ ರಾಷ್ಟ್ರಗಳಲ್ಲಿಯ ಗ್ರಂಥಸೂಚಿಯ ಪಂಕ್ತಿಯಲ್ಲಿ ಸೇರಿಸಬಹುದಾಗಿದೆ.

**9. ಸಹಕಾರಿ ಛಾಯಾಚಿತ್ರ ಪ್ರತೀಕರಣ ಸೇವೆ :** ವಿಶಿಷ್ಟ ಸಂದರ್ಭಗಳಲ್ಲಿ ಕೆಲವು ಪ್ರಬಂಧಗಳು, ಸರ್ಕಾರಿ ದಾಖಲೆಗಳು, ಹಸ್ತಲಿಖಿತ ಪ್ರತಿಗಳು, ವಿರಳ ಗ್ರಂಥಗಳು ಮುಂತಾದವುಗಳನ್ನು ಬೇರೊಂದು ಗ್ರಂಥಾಲಯಕ್ಕೆ ಎರವಲು ಕೊಡಲು ಬರುವುದಿಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಛಾಯಾಚಿತ್ರ ಪ್ರತಿಗಳ ಮತ್ತು ಸೂಕ್ಷ್ಮ ಛಾಯಾಚಿತ್ರದ ಪ್ರತಿಗಳ ಸೇವೆ ಸಹಾಯಕವಾಗುತ್ತದೆ.

ಇಂಥ ಸೇವೆ ಶೈಕ್ಷಣಿಕ ಮತ್ತು ಸಂಶೋಧನ ಸಂಸ್ಥೆಗಳಿಗೆ ಅತ್ಯಂತ ಲಾಭದಾಯಕವೆಂದು ಎರಡನೆಯ ಮಹಾಯುದ್ಧಕಾಲದಲ್ಲಿ ಕಂಡುಬಂತು. ಯುದ್ಧದ ಭೀಕರ ಪರಿಣಾಮವಾಗಿ ಯುರೋಪಿನ ಹಲವಾರು ಗ್ರಂಥಸಂಗ್ರಹಗಳು ಬಾಂಬಿನ ದಾಳಿಗೆ ಸಿಲುಕಿ ನಾಶವಾದವು. ಅಂತೆಯೇ ಅಮೆರಿಕದ ರಾಷ್ಟ್ರೀಯ ಗ್ರಂಥಾಲಯ, ಇಂಗ್ಲೆಂಡಿನ ಬ್ರಿಟಿಷ್ ಮ್ಯೂಸಿಯಂ ಮತ್ತು ರಾಷ್ಟ್ರೀಯ ವಿಜ್ಞಾನ ಗ್ರಂಥಾಲಯಗಳು ತಮ್ಮ ಮತ್ತು ನಿಯತಕಾಲಿಕೆಗಳ ಸೂಕ್ಷ್ಮ ಛಾಯಾಚಿತ್ರವನ್ನು ತಯಾರಿಸಿದವು. ಇತ್ತೀಚೆಗೆ ಈ ತರಹದ ಸೇವೆ ಯುರೋಪ್ ಮತ್ತು ಅಮೆರಿಕ ಮತ್ತು ಕೆನಡ ದೇಶಗಳಲ್ಲಿ ತುಂಬ ಬಳಕೆಯಲ್ಲಿದೆ. ಇದು ಆಯಾ ದೇಶಗಳ ಸಂಯುಕ್ತ ಗ್ರಂಥಸೂಚಿ ರಚನೆಯಲ್ಲಿ ತುಂಬ ಸಹಾಯಕವಾಗಿ ಪರಿಣಮಿಸಿದೆ. ಗ್ರಂಥ ಎರವಲು ಕೊಡುವುದರ ಬದಲು ಸೂಕ್ಷ್ಮ ಛಾಯಾಚಿತ್ರದ ಪ್ರತಿಯನ್ನು ಕಳಿಸುವುದು ಮಿತವ್ಯಯಕಾರಿಯಾದ್ದರಿಂದ ಅಮೆರಿಕದ ಗ್ರಂಥಾಲಯಗಳು ಈ ವಿಧಾನವನ್ನು ಅನುಸರಿಸುತ್ತಿವೆ. ಜಾನ್ ಕ್ರೆರರ್ ಗ್ರಂಥಾಲಯ ಈ ಸೇವೆಯನ್ನು 1912ರಲ್ಲಿ ಪ್ರಾರಂಭಿಸಿತು. ಮಿಷಿಗನ್ ಮತ್ತು ಇತರ ಪ್ರದೇಶಗಳ ಗ್ರಂಥಾಲಯಗಳಿಗೆ ವರ್ಷಕ್ಕೆ ಸುಮಾರು 50,000 ಪ್ರತಿಗಳನ್ನು ಪೂರೈಸಿತಲ್ಲದೇ ಸೆಲೆಕ್ಟಿವ್ ಡಿಸಿಮಿನೇಷನ್ ಆಫ್ ನಾಲೆಜ್ಡ್ ಯೋಜನೆಯಲ್ಲಿಯೂ ಸಹಾಯಕವಾಗಿದೆ.

ನೆದರ್ಲೆಂಡಿನ ಡೆಲ್ಫ್ಟ್ ಟೆಕ್ನಲಾಜಿಕಲ್ ವಿಶ್ವವಿದ್ಯಾಲಯ ಗ್ರಂಥಾಲಯವೂ ಇಂಥ ಸೇವೆಯನ್ನು ಪ್ರಾರಂಭಿಸಿದೆ. ಯುರೋಪಿಯನ್ ಟ್ರಾನ್ಸ್‌ಲೇಷನ್ ಸೆಂಟರ್ ಮತ್ತು ಇಂಟರ್‌ನ್ಯಾಷನಲ್ ಲಿಟರೇಚರ್ ಸರ್ವಿಸ್ ಸಂಸ್ಥೆಗಳ ಸೇವೆಯನ್ನು ಬಹುಮಟ್ಟಿಗೆ ಪಡೆದು ಪ್ರಪಂಚದ ಯಾವುದೇ ಮೂಲೆಯಿಂದ ಬಂದ ಬೇಡಿಕೆಯನ್ನೂ ಯಾವ ಬಂಧನವಿಲ್ಲದೆ ಮತ್ತು ಪುಕ್ಕಟೆಯಾಗಿ ಈ ಸಂಸ್ಥೆ ಒದಗಿಸುತ್ತದೆ. ಈ ತರಹದ ಸೇವೆ ಪ್ರಪಂಚದ ಬೇರೆ ಬೇರೆ ಗ್ರಂಥಾಲಯಗಳಿಗೆ ವಿಳಂಬವಾಗದೆ ತಲುಪಲೆಂಬ ಉದ್ದೇಶದಿಂದ ತ್ರೈಮಾಸಿಕ ವಾರ್ತಾಪತ್ರಗಳನ್ನು ಹೊರಡಿಸುತ್ತದೆ.

ಭಾರತದಲ್ಲಿಯೂ ಇತ್ತೀಚೆಗೆ ಇನ್ಸ್‌ಡಾಕ್ ಸಂಸ್ಥೆ ಛಾಯಾಚಿತ್ರ, ಸೂಕ್ಷ್ಮ ಛಾಯಾಚಿತ್ರ ಸೇವೆಗಳನ್ನು ವಿಜ್ಞಾನಿಗಳಿಗೆ ವಿಶ್ವವಿದ್ಯಾಲಯ ಹಾಗೂ ಸಂಶೋಧನ ಕೇಂದ್ರಗಳಿಗೆ ಬೇಗನೆ ಒದಗಿಸಿ ಅವರ ಮೆಚ್ಚುಗೆಗೆ ಪಾತ್ರವಾಗಿದೆ.

**10. ಸಹಕಾರಿ ವಾರ್ತಾಸೇವೆ :** ಯಾವುದೇ ವಿಜ್ಞಾನಿಗೆ ತನ್ನ ವಿಷಯಕ್ಕೆ ಸಂಬಂಧಿಸಿದ ವಿವಿಧ ನಿಯತಕಾಲಿಕೆಗಳಲ್ಲಿ ಬರುವ ಉಪಯುಕ್ತ ಮಾಹಿತಿಯನ್ನು ಕೂಡಲೆ ಒದಗಿಸುವುದು ಇಂದು ಸಾಧ್ಯವಾಗಿದೆ. ಗಣಕಯಂತ್ರಗಳು ಹಾಗೂ ಟೆಲಿವಿಷನ್ ವ್ಯವಸ್ಥೆಗಳಿಂದ ಬಹುಬೇಗ ಓದುಗರಿಗೆ ಅಗತ್ಯವಾದ ವಿಷಯಗಳನ್ನೂ ಒದಗಿಸಲಾಗುತ್ತಿದೆ. ವಿಜ್ಞಾನ ಪ್ರಪಂಚದಲ್ಲಿ ಪ್ರಸಿದ್ಧ ಸಾರಾಂಶ ನಿಯತಕಾಲಿಕೆಗಳಾದ ಕೆಮಿಕಲ್ ಅಬ್‌ಸ್ಟ್ರಾಕ್ಟ್ಸ್, ಬಯಲಾಜಿಕಲ್ ಅಬ್‌ಸ್ಟ್ರಾಕ್ಟ್ಸ್ ಮತ್ತು ಫಿಸಿಕ್ಸ್ ಆಬ್‌ಸ್ಟ್ರಾಕ್ಟ್ಸ್ ಇವನ್ನು ಪ್ರಕಟಿಸಿರುವ ಸಂಸ್ಥೆಗಳು ಇಂಥ ಸೇವೆಯ ತಮ್ಮದೇ ಆದ ಶಾಖೆಗಳನ್ನು ಅಮೆರಿಕದ ವಿವಿಧ ಭಾಗಗಳಲ್ಲಿ ಸ್ಥಾಪಿಸಿವೆ.

ಸೋವಿಯತ್ ದೇಶದಲ್ಲಿಯೂ ಇಂಥ ಕೇಂದ್ರ ಸಂಸ್ಥೆಯೊಂದು (ವಿನಿಟಿ) ಗಮನಾರ್ಹ ಸೇವೆ ಸಲ್ಲಿಸುತ್ತಿದೆ. 1952ರಲ್ಲಿ ಪ್ರಾರಂಭವಾದ ಇದು ರಾಷ್ಟ್ರೀಯ ಮಟ್ಟದ ಸಹಕಾರಿ ವಾರ್ತಾಸಂಸ್ಥೆಯೆಂದು ಹೆಸರುವಾಸಿಯಾಗಿದೆ. ಈ ಕೇಂದ್ರದ ಸೇವೆಯನ್ನು ಸುಮಾರು 16,000 ಇತರ ಗ್ರಂಥಾಲಯಗಳು ಪಡೆಯುತ್ತಿದ್ದವು. ವಿದೇಶೀ ಗ್ರಂಥಗಳು, ವಿಜ್ಞಾನ ಪ್ರಪಂಚದ ನಿಯತಕಾಲಿಕೆಗಳು ಮತ್ತು ಅನುವಾದಿತ ಲೇಖನಗಳು, ಗ್ರಂಥಸೂಚಿಗಳು ಮತ್ತು ಇತರ ಸಾಹಿತ್ಯವನ್ನು ಓದುಗರಿಗೆ ಈ ಸಂಸ್ಥೆ ಪೂರೈಸಿದೆ.

ಗ್ರೇಟ್ ಬ್ರಿಟನಿನ ಅಸ್ಲಿಬ್ (ಅಸೋಸಿಯೇಷನ್ ಆಫ್ ಸ್ಪೆಷಲ್ ಲೈಬ್ರರೀಸ್ ಅಂಡ್ ಇನ್ಫರ್ಮೇಷನ್ ಬ್ಯೂರೋ, 1924) ಸಂಸ್ಥೆ ಸಹಕಾರಿ ಪರಾಮರ್ಶನ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದೆ. ಈ ಸಂಘ ಅನೇಕ ದೇಶಗಳಲ್ಲಿ ಸ್ಥಾಪಿಸಿದ ಕೇಂದ್ರಗಳ ಮುಖಾಂತರ ದುರ್ಲಭ ಲೇಖನಗಳ ಛಾಯಾಪ್ರತಿಗಳನ್ನು ಪಡೆಯಬಹುದು. ಇದರ ಸಂಶೋಧನ ವಿಭಾಗ ಪರಾಮರ್ಶನ ಸೇವೆ ಹಾಗೂ ಸಮಾಚಾರ ಸೇವೆಯ ವಿವಿಧ ಸಮಸ್ಯೆಗಳಿಗೆ ಪರಿಹಾರಗಳನ್ನು ಶೋಧಿಸುತ್ತಿದೆ.

ಭಾರತದಲ್ಲಿ ಇನ್ಸ್‌ಡಾಕ್ (ನಿಸ್ಕೇರ್) ಸಂಸ್ಥೆ ಪರಾಮರ್ಶನ ಸೇವೆಯಲ್ಲಿ ರಾಷ್ಟ್ರೀಯ ಸಂಸ್ಥೆಯಾಗಿದ್ದು ಭಾಷಾಂತರ, ಛಾಯಾಪ್ರತಿಗಳ ಪೂರೈಕೆ ಮುಂತಾದ ವಿಶಿಷ್ಟ ಸೇವೆಗಳನ್ನು ಸಲ್ಲಿಸುತ್ತಿದೆ.

ಅಮೆರಿಕದ ಮೆಡ್ಲರ್ಸ್ ಸಂಸ್ಥೆ ಮೆಡಿಕಲ್ ಲಿಟರೇಚರ್ ಅನಾಲಿಸಿಸ್ ಅಂಡ್ ರಿಟ್ರೀವಲ್ ಸಿಸ್ಟಮ್ 1948ರಲ್ಲಿ ತನ್ನ ಕಾರ್ಯಪ್ರಾರಂಭಿಸಿತು. ಯುನೆಸ್ಕೊದ ನೆರವಿನಿಂದ ಇತ್ತೀಚೆಗೆ (1964) ಐರೋಪ್ಯ ದೇಶಗಳಿಗೂ ವಿಸ್ತರಿಸಿದೆ. ಯುರೋಪಿಯನ್ ರಿಸರ್ಚ್ ಸೆಂಟರ್ ಎಂಬ ಮತ್ತೊಂದು ವಾರ್ತಾಕೇಂದ್ರವನ್ನು ಸ್ಥಾಪಿಸಲಾಗಿದೆ. 1969ರಿಂದ ಜಪಾನ್ ಮತ್ತು ಜರ್ಮನಿಗಳೂ ಇದರ ಲಾಭವನ್ನು ಪಡೆಯುತ್ತಿವೆ.

ಯುನೆಸ್ಕೊ ಹಾಗೂ ಇಕ್‌ಸು (ಇಂಟರ್‌ನ್ಯಾಷನಲ್ ಕೌನ್ಸಿಲ್ ಸೈಂಟಿಫಿಕ್ ಯೂನಿಯನ್ಸ್) ಸಭೆ 1966ರಲ್ಲಿ ಮುಂಬಯಿಯಲ್ಲಿ ಸೇರಿ ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನ ವಾರ್ತಾಕೇಂದ್ರವೊಂದನ್ನು ಸ್ಥಾಪಿಸಲು ಸಲಹೆಗಳನ್ನು ಕೊಟ್ಟಿತು.

ಗ್ರಂಥಾಲಯ ಸಹಕಾರವನ್ನು ಅಂತಾರಾಷ್ಟ್ರೀಯ, ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಕೈಗೊಳ್ಳಬಹುದಾಗಿದೆ. ಈ ನಾಲ್ಕೂ ಹಂತಗಳಲ್ಲಿ ಈಗ ಸಾಕಷ್ಟು ಪ್ರಗತಿಯಾಗಿದೆ. (ಬಿ.ಸಿ.ಜೆ.)

## IX ಪುಸ್ತಕಶಾಸ್ತ್ರ ; ಪುಸ್ತಕ ವಿಕಸನ

ಗ್ರಂಥ ಎಂಬ ಮಾತು ಪುಸ್ತಕದ ತಿರುಳನ್ನು ಸೂಚಿಸುತ್ತದಾಗಿ ಗ್ರಂಥದ ಬಾಹ್ಯಸ್ವರೂಪವನ್ನು ಪುಸ್ತಕ ಎಂದು ಕರೆಯಬಹುದು. ಇಲ್ಲಿ ಪುಸ್ತಕದ ಬಾಹ್ಯಸ್ವರೂಪ ಹೇಗಿರಬೇಕು, ಅದರ ಬಾಹ್ಯವಿವರಣೆಗಳೇನು ಎಂಬುದನ್ನು ಶಿಲೆಯಿಂದ ಮುದ್ರಿತ ಪುಸ್ತಕದವರೆಗಿನ ಅದರ ವಿಕಸನದ ವಿಷಯವನ್ನು ಕೊಡಲಾಗಿದೆ.

**1. ಪುಸ್ತಕಶಾಸ್ತ್ರ :** ಪುಸ್ತಕದ ಬಾಹ್ಯಸ್ವರೂಪ ಹೇಗಿರಬೇಕು ಎಂಬುದನ್ನು ವಿವರಿಸುವ ಶಾಸ್ತ್ರಕ್ಕೆ ಈ ಹೆಸರಿದೆ (ಫಿಸಿಕಲ್ ಬಿಬ್ಲಿಯಾಗ್ರಫಿ). ಇಂಗ್ಲಿಷಿನ ಬಿಬ್ಲಿಯಾಗ್ರಫಿ ಎಂಬುದನ್ನು ಗ್ರಂಥಸೂಚಿ ಅಥವಾ ವಾಙ್ಮಯಸೂಚಿ ಎಂಬ ಅರ್ಥದಲ್ಲೂ ಬಳಸಲಾಗಿದೆ.

ಪುಸ್ತಕಶಾಸ್ತ್ರದ ಅಭ್ಯಾಸ ಮೊದಲನೆಯದಾಗಿ ವಾಙ್ಮಯಸೂಚಿಗಳನ್ನು ತಯಾರಿಸುವಲ್ಲಿ ಉಪಯೋಗಕ್ಕೆ ಬರುತ್ತದೆ. ಎರಡನೆಯದಾಗಿ ಗ್ರಂಥಪಾಲರು ಅಪೂರ್ವ ಇಲ್ಲವೆ ಪ್ರಾಚೀನ ಪುಸ್ತಗಳನ್ನು ಕೊಳ್ಳುವ ಪ್ರಸಂಗ ಬಂದಾಗ, ಅವು ಮಾಸದವಲ್ಲ, ನಿಜವಾದ ಮೂಲಕೃತಿಗಳು-ಎಂದು ಕಂಡುಹಿಡಿಯಲಿಕ್ಕಾಗುವುದು. ಮೂರನೆಯದಾಗಿ ಗ್ರಂಥ ಸಂಪಾದಕಕಾರ್ಯದಲ್ಲಿ ಅದು ಭಾಷಾ ಪಂಡಿತನಿಗೆ ಶಾಸ್ತ್ರೀಯ ಹಿನ್ನೆಲೆಯನ್ನು ಒದಗಿಸುತ್ತದೆ.

ಆಧುನಿಕ ಪುಸ್ತಕವೊಂದನ್ನು ಕೈಗೆತ್ತಿಕೊಂಡಾಗ ಸಾಮಾನ್ಯವಾಗಿ ಕಂಡುಬರುವ ಅದರ ಬಾಹ್ಯಾಂಗಗಳಿವು:

**1. ಮೇಲು ಹೊದಿಕೆ :** ಇದನ್ನು ಮರೆಹಾಳೆ ಎಂದೂ ಕರೆಯುತ್ತಾರೆ (ಬುಕ್‌ಜಾಕೆಟ್). ಪುಸ್ತಕದ ಹೊರ ಮೈಗೆ ಹೊದ್ದಿಸಿರುವ ಈ ಕಾಗದ ಆಕರ್ಷಕವಾಗಿರುತ್ತದೆ. ಅದರ ಮಡಿಸಿದ ಒಳಬದಿಗಳಲ್ಲಿ ಆ ಪುಸ್ತಕದ ಬಗ್ಗೆ ಹಾಗೂ ಲೇಖಕನ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ.

**2. ರಟ್ಟಿನ ಮುಖಪುಟ :** ಇದರಲ್ಲಿ ಪುಸ್ತಕದ ಶೀರ್ಷಿಕೆ, ಲೇಖಿನ, ಪ್ರಕಾಶಕರ ಹೆಸರು ಇರುತ್ತದೆ. ಅದನ್ನೇ ಸಂಕ್ಷಿಪ್ತವಾಗಿ ರಟ್ಟಿನ ಬೆನ್ನಿನಲ್ಲಿ ಕೊಟ್ಟಿರುತ್ತಾರೆ. ಮುಖಪುಟದ ಮೇಲೆ ಚಿತ್ರವೂ ಇರಬಹುದು. ಗ್ರಂಥಾಲಯಗಳು ಯಾವಾಗಲೂ ದಪ್ಪ ರಟ್ಟಿನ (ಕ್ಯಾಲಿಕೊ ಆದರೆ ಉತ್ತಮ) ಸೆಕ್ಷನ್ ಹೊಲಿಗೆ ಹಾಕಿದ ಪುಸ್ತಕಗಳನ್ನೇ ಕೊಳ್ಳುವುದು ಒಳ್ಳೆಯದು. ಪಿನ್ನು ಹೊಲಿಗೆಯ ತೆಳುರಟ್ಟಿನ ಪುಸ್ತಕಗಳು ಹೆಚ್ಚು ಬಾಳಿಕೆ ಬರುವುದಿಲ್ಲ.

**3. ಜೋಡಣೆಯ ಕಾಗದ (ಫ್ಲೈಲೀಫ್) :** ಮುಖಪುಟವನ್ನು ತೆರೆದೊಡನೆ ಅದರ ರಟ್ಟಿಗೆ ಒಂದು ಕಾಗದ ಅಂಟಿಸಿ, ಅದರ ಇನ್ನೊಂದು ಪದರನ್ನು ಪುಸ್ತಕದ ಮುದ್ರಿತ ಪುಟಗಳಿಗೆ ಜೋಡಿಸಿರುತ್ತಾರೆ. ರಟ್ಟು ಪುಸ್ತಕದಿಂದ ಬಿಚ್ಚಿ ಅಥವಾ ಹರಿದು ಹೋಗದಂತೆ ಈ ಕಾಗದ ರಕ್ಷಿಸುತ್ತದೆ. ಇದು ಸಾಮಾನ್ಯವಾಗಿ ಒಂದೇ ಬಣ್ಣದ ದಪ್ಪ ಕಾಗದ. ಒಮ್ಮೊಮ್ಮೆ ಚಿತ್ರವನ್ನೋ ಭೂಪಟವನ್ನೋ ಇದರ ಮೇಲೆ ಮುದ್ರಿಸಿರುವುದೂ ಉಂಟು.

**4. ಹ್ರಸ್ವ ಶೀರ್ಷಿಕೆಯ ಪುಟ (ಹಾರ್ಟ್ ಟೈಟಲ್ ಪೇಜ್) :** ಪುಸ್ತಕದ ಶೀರ್ಷಿಕೆಯೊಂದನ್ನೇ ಇಲ್ಲಿ ಮುದ್ರಿಸಲಾಗುತ್ತದೆ. ಗ್ರಂಥಮಾಲೆಯ ಹೆಸರನ್ನೂ ಒಮ್ಮೊಮ್ಮೆ ಕೊಡುವುದುಂಟು.

**5. ಶೀರ್ಷಿಕೆಯ ಪುಟ (ಟೈಟಲ್ ಪೇಜ್) :** ಇದರಲ್ಲಿ ಗ್ರಂಥದ ಶೀರ್ಷಿಕೆ, ಲೇಖಕನ ಹೆಸರು, ಅವನ ಹುದ್ದೆ, ಪ್ರಕಾಶಕರ ಹೆಸರು, ಪ್ರಕಾಶನ ವರ್ಷ-ಇವುಗಳಿರುತ್ತವೆ.

ಈ ಪುಟದ ಹಿಂದೆ ಗ್ರಂಥಸ್ವಾಮ್ಯದ ವಿಚಾರ ಹಾಗೂ ಪ್ರಕಾಶಕರ, ಮುದ್ರಕರ ವಿಳಾಸಗಳನ್ನು ಕೊಡಲಾಗುತ್ತದೆ. ದೇಶೀ ಭಾಷಾ-ಪುಸ್ತಕಗಳಿದ್ದರೆ, ಇಂಗ್ಲಿಷಿನಲ್ಲಿ ಅದರ ಶೀರ್ಷಿಕೆ, ಲೇಖಕನ ಹೆಸರು, ಜಿಲ್ಲೆ ಮುಂತಾದ್ದನ್ನು ಕೊಡುವ ಕ್ರಮ ಈಚೆಗೆ ಬಂದಿದೆ. ಗ್ರಂಥಗಳ ಆಯ್ಕೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದಂಶವಿದೆ. ಶಾಸ್ತ್ರಗ್ರಂಥಗಳನ್ನು ಮುಖ್ಯವಾಗಿ ವಿಜ್ಞಾನಗ್ರಂಥಗಳನ್ನು ಆಯುವಾಗ ಇತ್ತೀಚಿನ ಪರಿಷ್ಕೃತ ಆವೃತ್ತಿಗಳನ್ನೇ ಕೊಳ್ಳುವುದು ಮೇಲು. ಪುಸ್ತಕ ಹಳೆಯದಾದಷ್ಟು ವಿಷಯವೂ ಹಳೆಯದಾಗಿ ಬಿಡುತ್ತದೆ. ಹೀಗೆಂದ ಮಾತ್ರಕ್ಕೆ ಹಳೆಯ ಆವೃತ್ತಿಗಳಿಗೆ ಬೆಲೆ ಇಲ್ಲವೆಂದಲ್ಲ. ತೀರ ಹಳೆಯ ಗ್ರಂಥಗಳಿಗೆ ಐತಿಹಾಸಿಕ ಮೌಲ್ಯವಿರುತ್ತದೆ. ಅಂಥವನ್ನು ಹೆಚ್ಚಿನ ಬೆಲೆ ಕೊಟ್ಟು ಕೊಳ್ಳುವ ಗ್ರಂಥಾಲಯವೂ ಉಂಟು.

**6. ಅರ್ಪಣೆಯ ಪುಟ :** ಗ್ರಂಥ ಯಾರಿಗಾದರೂ ಅರ್ಪಿತವಾಗಿದ್ದರೆ, ಅದನ್ನಿಲ್ಲಿ ನಮೂದಿಸಿರುತ್ತಾರೆ.

**7. ಉಪಕಾರ ಸ್ಮರಣೆ :** ವಿವಿಧ ಲೇಖಕರ ಬರೆಹಗಳ ಸಂಗ್ರಹವಿದ್ದರೆ ಆಯಾ ಲೇಖಕರ, ಪ್ರಕಾಶಕರ ಉಪಕಾರ ಸ್ಮರಣೆ ಇರುವ ಪುಟವಿದು.

**8. ಮುನ್ನುಡಿ:** ಹಿರಿಯರಿಂದ, ತಜ್ಞರಿಂದ ಬರೆಯಿಸಲಾದ ಪ್ರಸ್ತಾವನೆ ಇಲ್ಲಿ ಬರುತ್ತದೆ. ಲೇಖಕನೇ ಮುನ್ನುಡಿ ಬರೆಯುವುದೂ ಉಂಟು.

**9. ಪೀಠಿಕೆ:** ಲೇಖಕನ ನಿವೇದನೆ ಇಲ್ಲಿ ಬರುತ್ತದೆ.

**10. ಒಳಪಿಡಿ:** ಅಧ್ಯಾಯಗಳ ಶೀರ್ಷಿಕೆಗಳು ಮತ್ತು ಅವು ಮೊದಲಾಗುವ ಪುಟ ಸಂಖ್ಯೆಗಳನ್ನು ಇಲ್ಲಿ ಕೊಟ್ಟಿರುತ್ತದೆ. ವಿಷಯದ ವಿಸ್ತಾರ ಪ್ರತಿಪಾದನೆಯಿದ್ದರೆ ಒಂದೊಂದು ಅಧ್ಯಾಯದ ಉಪ ಶೀರ್ಷಿಕೆಗಳನ್ನೂ ಕೊಡುವ ಕ್ರಮವಿದೆ.

**11. ಚಿತ್ರ ಹಾಗೂ ನಕ್ಷೆಗಳ ಪಟ್ಟಿ :** ಮುಖ್ಯ ಚಿತ್ರಗಳೋ ನಕ್ಷೆಗಳ ಪಟ್ಟಿ, ಅವು ಇರುವ ಪುಟಸಂಖ್ಯೆ ಇವು ಇಲ್ಲಿ ಬರುತ್ತವೆ.

**12. ಮುಖಚಿತ್ರ ಪುಟ :** ಇಲ್ಲಿ ಮೊದಲ ಮುಖ್ಯ ಚಿತ್ರ ಇರುತ್ತವೆ. ಗ್ರಂಥ ವಿಷಯಕ್ಕೆ ಸಂಬಂಧಿಸಿದ ಮುಖ್ಯ ಚಿತ್ರವನ್ನಿಲ್ಲಿ ಹಾಲು ಬಿಳುಪಿನ ಆರ್ಟ್ ಕಾಗದದ ಮೇಲೆ ಕೊಡುವುದು ವಾಡಿಕೆ.

**13. ಪಾಠ :** ಇದು ಪುಸ್ತಕದ ಮುಖ್ಯ ಅಂಗ; ಲೇಖಕ ಹೇಳಬೇಕೆಂದಿರುವ ವಿಷಯದ ಪ್ರತಿಪಾದನೆ ಇಲ್ಲಿರುತ್ತದೆ. ಪ್ರತಿಯೊಂದು ಪುಟದ ಮೇಲ್ಗಡೆ ಸಣ್ಣ ಅಕ್ಷರದಲ್ಲಿ ಅಧ್ಯಾಯದ ಶೀರ್ಷಿಕೆಯನ್ನೂ ಮುದ್ರಿಸಿರುತ್ತಾರೆ.

**14. ಆಧಾರ ಗ್ರಂಥಗಳ ಪಟ್ಟಿ :** ಗ್ರಂಥಕರ್ತ ಉಪಯೋಗಿಸಿದ ಅಥವಾ ನೆರವು ಪಡೆದ ಗ್ರಂಥಗಳ ಯಾದಿ. ಇದು ಪುಸ್ತಕದ ಕೊನೆಯಲ್ಲಿ ಇಲ್ಲವೆ ಆಯಾ ಅಧ್ಯಾಯಗಳ ಕೊನೆಯಲ್ಲಿ ಬರುತ್ತದೆ.

**15. ಪಾರಿಭಾಷಿಕ ಶಬ್ದಗಳ ಪಟ್ಟಿ :** ಅಕಾರಾದಿಯಾಗಿರುತ್ತದೆ. ದೇಶೀ ಭಾಷೆಯ ಪದವಾದರೆ ಅದರ ಗ್ರೀಕ್ ಅಥವಾ ಲ್ಯಾಟಿನ್ ಮೂಲ, ಅದು ಮೊದಲ ಬಾರಿಗೆ ಬಂದಿರುವ ಪುಟ ಸಂಖ್ಯೆ ಇಲ್ಲಿ ಸಿಗುತ್ತದೆ.

**16. ಅನುಬಂಧಗಳು:** ಮುಖ್ಯ ವಿಷಯಕ್ಕೆ ಪೂರಕವಾಗಿರುವ ಅಂಶಗಳ ಉಲ್ಲೇಖ ಇಲ್ಲಿರುತ್ತದೆ.

**17. ಅಕಾರಾದಿ ಸೂಚಿ :** ಇದು ಪಾಠದಲ್ಲಿ ಬಂದಿರುವ ಹೆಸರುಗಳ, ವಿಷಯಗಳ ಅಕಾರಾದಿಯಾದ ಸೂಚಿ. ಶಾಸ್ತ್ರಗ್ರಂಥಗಳಲ್ಲಿ ಇದು ಅವಶ್ಯ ಇರತಕ್ಕದ್ದು.

ಯಾವುದೊಂದು ಪುಸ್ತಕದಲ್ಲಿ ಮೇಲೆ ಕಾಣಿಸಿದ ಎಲ್ಲ ಅಂಗಗಳೂ ಇರಬೇಕೆಂದಿಲ್ಲ. ಯುದ್ಧಕಾಲದ ಅಥವಾ ಇನ್ನಾವುದೇ ಮಿತವ್ಯಯ ಧೋರಣೆಯ ಮಾತು ಬಂದಾಗ ಪುಸ್ತಕದ ಬಾಹ್ಯಸ್ವರೂಪ ವಿವರಗಳನ್ನು ಮೊಟಕು ಮಾಡುವುದುಂಟು. ಅದಾವ ನಿರ್ಬಂಧವೂ ಇಲ್ಲದೆ ಇರುವ ಕಾಲದಲ್ಲಿ ಸಾಲಂಕೃತವಾದ ಪುಸ್ತಕಗಳು ಬಂದಿರುವುದೂ ಉಂಟು. ಡಿ.ವಿ.ಜಿ. ಅವರ ಅಂತಃಪುರ ಗೀತೆ, ಎ.ಆರ್.ಕೃ ಅವರ ವಚನಭಾರತ, ಶಿವರಾಮ ಕಾರಂತರಿಗೆ ಅರ್ಪಿಸಿದ ಕಾರಂತ ಪ್ರಪಂಚ ಎಂಬ ಗೌರವ ಗ್ರಂಥ-ಇವು ಉತ್ತಮ ಮುದ್ರಣ ಹಾಗೂ ವಿನ್ಯಾಸಕ್ಕೆ ಹೆಸರಾದ ಕೆಲವು ಪುಸ್ತಕಗಳು.

ಪುಸ್ತಕದ ಬಾಹ್ಯಸ್ವರೂಪಕ್ಕೆ ಸಂಬಂಧಿಸಿದ ಪುಟ ಸಂಖ್ಯೆ, ಆಕಾರ, ನಕ್ಷೆಗಳು ಮೊದಲಾದ ಕೆಲವನ್ನು, ಸೂಚಿಯನ್ನು ತಯಾರಿಸುವಾಗ ಕಾಣಿಸುವುದುಂಟು. (ಎಸ್.ಎಚ್.)

**2. ಪುಸ್ತಕ ವಿಕಸನ :** ಪುಸ್ತಕ ಎಂಬ ಪದಕ್ಕೆ ಸಂವಾದಿಯಾಗಿ ಇಂದು ಗ್ರಂಥ, ಹೊತ್ತಗೆ (ಪುಸ್ತಕ ಎಂಬ ಸಂಸ್ಕೃತ ರೂಪದ ತದ್ಭವ) ಎಂಬ ಶಬ್ದಗಳು ಬಳಕೆಯಲ್ಲಿವೆ.



ರೊಸೆಟ್ಟ ಶಾಸನ. ಡಿಮೊಟಿಕ್, ಇಜಿಪ್ಷಿಯನ್ ಮತ್ತು ಗ್ರೀಕ್ ಭಾಷೆಗಳನ್ನೊಳಗೊಂಡಿದೆ. ಈ ಶಾಸನದ ಆಧಾರದಿಂದಲೇ ಇಜಿಪ್ಷಿಯನ್ ಲಿಪಿಯ ರಹಸ್ಯವನ್ನು ಭೇದಿಸಲಾಯಿತು

ಇಂಗ್ಲಿಷಿನಲ್ಲಿ ಪುಸ್ತಕವನ್ನು ಬುಕ್ ಎನ್ನುತ್ತಾರೆ. ಚಿಕ್ಕ ಪುಸ್ತಕಕ್ಕೆ ಬುಕ್‌ಲೆಟ್-ಪುಸ್ತಿಕೆ ಎಂಬ ಮಾತುಗಳು ಬಳಕೆಯಲ್ಲಿವೆ. ಪುಸ್ತಕ, ಗ್ರಂಥ ಎಂಬ ಮಾತುಗಳು ಹೊಲಿಗೆ ಇನ್ನೂ ಬಳಕೆಗೆ ಬಾರದಂದಿನ ಪುಸ್ತಕ ಸ್ವರೂಪವನ್ನು ಸೂಚಿಸುತ್ತವೆ. ಹಿಂದೆ ಹಾಳೆಗಳನ್ನು

ಕ್ರಮವಾಗಿ ಜೋಡಿಸಿ ಒಂದು ಕಟ್ಟಾಗಿ, ಗಂಟಾಗಿ ಹುರಿ ಸುತ್ತಿ ಇಡುತ್ತಿದ್ದರು. ಪೋಥಿ ಮತ್ತು ಗ್ರಂಥಿ (ಗಂಟು) ಎಂಬ ಪದಗಳಲ್ಲಿ ಮೂಲಾರ್ಥ ಉಳಿದು ಬಂದಿದೆ. ಈಗಲೂ ರಿಕಾರ್ಡುಗಳು, ದಫ್ತರ ಕಟ್ಟು ಎಂಬುದನ್ನು ಕಂಥಾ, ಕಂತೆ ಎಂದೂ ಕರೆವುದಿದೆ. ಬುಕ್ ಎಂಬ ಇಂಗ್ಲಿಷ್ ಪದ ಬೈಗೆನ್ ಎಂಬ ಜರ್ಮನ್ ಪದದಿಂದ ಬಂದಿದೆಯೆಂದು ಕೆಲವರ ವಾದ. ಆದರೆ ಜನಸಾಮಾನ್ಯರ ತಿಳಿವಳಿಕೆ ಮತ್ತು ರೂಢಿಯನ್ನು ನೋಡಿದರೆ ಬುಕ್ ಶಬ್ದಕ್ಕೆ ಮೂಲತಃ ಬೀಚ್ ವೃಕ್ಷದ ತೊಗಟೆ ಅಥವಾ ಫಲಕ ಎಂಬ ಅರ್ಥ ಇರುವಂತೆ ಕಾಣುತ್ತದೆ. ಜನಪದ ಸಾಹಿತ್ಯವೂ ಇದನ್ನು ಪುಷ್ಟೀಕರಿಸುತ್ತದೆ. ಗ್ರೀಕರ ಬಿಬ್ಲೋಸ್ ಎಂಬುದು ಜಂಬುಕಾಗದವನ್ನೂ ರೋಮನ್ನರ ಕೋಡೆಕ್ಸ್ ಎಂಬುದು ಗಿಡದ ಬೊಡ್ಡೆಯನ್ನೂ ಸೂಚಿಸುವುದನ್ನು ಇಲ್ಲಿ ನೆನೆಯಬಹುದು.

ಲಿಪಿ ಬಳಕೆಗೆ ಬಂದಿದ್ದರೂ ಮಸಿ, ಜಂಬುಕಾಗದ, ಕಾಗದ ಮೊದಲಾದವುಗಳ ಉಪಯೋಗ ಗೊತ್ತಿರದಿದ್ದ ಪ್ರಾಚೀನ ಕಾಲದಲ್ಲಿ ಮನುಷ್ಯ ಕಲ್ಲು ಫಲಕಗಳ ಮೇಲೆ ಇಟ್ಟಿಗೆಗಳ ಮೇಲೆ ಬರೆಯುತ್ತಿದ್ದುದಕ್ಕೆ ದಾಖಲೆಗಳಿವೆ. ಇತಿಹಾಸಕರ ಯೋಸೆಫಸ್ ಪ್ರ.ಶ.ಪೂ. ಒಂದನೆಯ ದಶಕದಲ್ಲಿ ಇಂಥವು ಇದ್ದುವೆಂದು ಹೇಳಿದ್ದಾನೆ. ಈ ಲೇಖನ ವಿಧಾನ ಬರೆವಣಿಗೆಯ ಸಾಧನಗಳ ಅಭಾವದಿಂದ ಬಂದುದಾದರೂ ಬರೆದುದನ್ನು ಶಾಶ್ವತವಾಗಿಸಿತು ಎಂಬುದನ್ನು ಮರೆಯಲಾಗದು.

ಆದಿಮಾನವ ತನ್ನ ಭಾವನೆಗಳನ್ನು ವ್ಯಕ್ತಪಡಿಸುವ ಸಲುವಾಗಿ ಮೊದಲು ನಿಸರ್ಗದತ್ತವಾದ ಕಲ್ಲನ್ನೇ ಬಳಸಿದ. ಒಂದು ದೊಡ್ಡ ಬಂಡೆಗಲ್ಲಿನ ಮೇಲೆ ಕಲ್ಲಿನಿಂದಾಗಲಿ ಇಲ್ಲವೇ ಚಾಣ ದಿಂದಾಗಲಿ ಚಿತ್ರಗಳನ್ನು ತೆಗೆದ. ಅವುಗಳಿಗೆ ಬಣ್ಣ ಹಚ್ಚಿದ. ಇವೇ ಶಿಲಾ ಚಿತ್ರಗಳು. ಸ್ಪೇನಿನ ಅನೇಕ ಗುಹೆಗಳಲ್ಲಿ ಇಂಥ ಚಿತ್ರಗಳು ಕಾಣಸಿಗುತ್ತವೆ. ತನ್ನ ಸಂದೇಶವನ್ನು ಮಾತಲ್ಲಿ ತಿಳಿಸಲು ಆತ ನಡೆಸಿದ ಪ್ರಯತ್ನಗಳಿಗೆ ವಿಪುಲವಾಗಿ ದೊರೆಯುವ ಶಿಲಾಶಾಸನಗಳೇ ಸಾಕ್ಷಿಯಾಗಿವೆ.

ಕಲ್ಲು ಬರೆಯುವ ಸಾಧನವಾದರೂ ಅದನ್ನು ಸ್ಥಳಾಂತರಿಸಲಿಕ್ಕಾಗಲಿಲ್ಲವಾಗಿ ಹಗುರ ಸಾಧನಗಳು ಬಳಕೆಗೆ ಬಂದವೆನ್ನಬಹುದು. ಜೇಡಿಮಣ್ಣಿನ ಫಲಕಗಳನ್ನು ಬ್ಯಾಬಿಲೋನಿಯದ ಪುರಾತನ ನಿವಾಸಿಗಳು ಹೇರಳವಾಗಿ ಬಳಸುತ್ತಿದ್ದರು.

ನಿಸರ್ಗದತ್ತ ಬರೆವಣಿಗೆ ಸಾಮಗ್ರಿಯಾದ ಕಲ್ಲನ್ನು ಬಿಟ್ಟರೆ ಜಂಬುಕಾಗದದ (ಭೂರ್ಜಪತ್ರ) ಸುರಳಿಯಿಂದ ಮಾನವನ ಬರೆಯುವ ಸಾಧನಗಳ ಮೊದಲನೆಯ ಅಧ್ಯಾಯ ಪ್ರಾರಂಭವಾಗಿದೆ. ಇದೂ ನಿಸರ್ಗದತ್ತವಾದುದಾದರೂ ಇಟ್ಟಿಗೆಗಳಿಗಿಂತ ಉತ್ತಮ ಎನಿಸಿತು. ಈ ಕಾಗದದ ಒಂದೇ ಮಗ್ಗುಲಿಗೆ ಬರೆಯುತ್ತಿದ್ದರು. ಬರೆಯುವ ಈ ಸಾಧನ ಸಂಪೂರ್ಣವಾಗಿ ಪುರಾತನ ಈಜಿಪ್ಟ್ ನಾಗರಿಕರ ಸ್ವತ್ತಾಗಿತ್ತು. ಭೂರ್ಜವೃಕ್ಷ ನೈಲ್ ನದಿಯ ಕಣಿವೆಯಲ್ಲಿ ಹೇರಳವಾಗಿ ಬೆಳೆಯುತ್ತಿತ್ತು. ಈ ಸಸ್ಯದ ದೇಟುಗಳನ್ನು ಕತ್ತರಿಸಿ, ತೆಳುವಾದ ಪಟ್ಟಿಗಳಿಂದ ಕಾಗದವನ್ನು ತಯಾರಿಸುತ್ತಿದ್ದರು. ಇಂಥ ಪದರುಗಳನ್ನು ಒಂದಕ್ಕೊಂದು ಕೂಡಿಸಿ ಬಹಳ ಉದ್ದನೆಯ ಕಾಗದದ ಸುರುಳಿಯನ್ನು ಮಾಡುತ್ತಿದ್ದುದೂ ಉಂಟು. ಪುರಾತನ ಕಾಲದಲ್ಲಿ ಎಲ್ಲ ಗ್ರಂಥಗಳಿಗಾಗಿ ಬಹುಶಃ ಇದನ್ನೇ ಹೇರಳವಾಗಿ ಬಳಸಲಾಗಿದೆ. ಸುಮಾರು ಪ್ರ.ಶ.ಪೂ.ಸು. 3500ರಲ್ಲೇ ಇಜಿಪ್ಷಿಯನ್ನರು ಈ ಸಾಧನವನ್ನು ಬಳಸಲಾರಂಭಿಸಿದರು. ಅನಂತರ ರೋಮನ್ನರೂ ಗ್ರೀಕರೂ ಇದನ್ನು ಹೇರಳವಾಗಿ ಬಳಸಿದರು.

ಜಂಬುಕಾಗದದ ಸುರಳಿಯ ಎರಡು ದಂಡೆಗೂ ಕಟ್ಟಿಗೆಯ ಹಿಡಿಕೆಗಳನ್ನು ಕೂಡಿಸಿ ಒಯ್ಯಲು ಅನುಕೂಲವಾಗುವಂತೆ ಮಾಡುತ್ತಿದ್ದರು. ಹಿಡಿಕೆಗೆ ಅಂಟಿಸಿದ ಚೀಟಿ ಅವನ್ನು ಗುರುತಿಸಲು ಸಹಾಯಕವಾಗುತ್ತಿತ್ತು. ಸಾಮಾನ್ಯವಾಗಿ 2–3 ಇಂಚು ಅಂಕಣದಲ್ಲಿ ಬರೆವಣಿಗೆ ಇರುತ್ತಿತ್ತು. ಗ್ರಂಥದಲ್ಲಿ ಬೇಕಾದ ಭಾಗವನ್ನೋದಲು ಸುರುಳಿಯನ್ನು ಬಿಚ್ಚಬೇಕಾಗುತ್ತಿತ್ತು. ಇಲ್ಲವೆ ಸುತ್ತಬೇಕಾಗುತ್ತಿತ್ತು. ಕ್ರಮೇಣ ಹಾಳೆಗಳನ್ನು ಒಂದು ಮಗ್ಗಲು ಹೊಲಿದು ಉಪಯೋಗಿಸಲು ಪ್ರಾರಂಭವಾಯಿತು. ಅದರಿಂದಾಗಿ ಪುಸ್ತಕದ ರೂಪ ಬದಲಿಸಿತು.

ತರುವಾಯ ಬರೆಯಲು ಬಳಕೆಗೆ ಬಂದ ವಸ್ತುವೆಂದರೆ ಪ್ರಾಣಿಗಳ ತೊಗಲು (ಪಾರ್ಚ್‌ಮೆಂಟ್ ಮತ್ತು ವೆಲಮ್–ಈ ಎರಡೂ ಶಬ್ದಗಳನ್ನು ಚರ್ಮಪತ್ರ ಎಂಬ ಒಂದೇ ಅರ್ಥದಲ್ಲಿ ಬಳಸುವುದಿದೆ). ಇತಿಹಾಸ ಪ್ರಪಿತಾಮಹ ಹೀರಡಾಟಸ್ ತನ್ನ ಕಾಲದಲ್ಲಿ ತೊಗಲಿನ ಮೇಲೆ ಬರೆಯುವ ಪರಿಪಾಠವಿತ್ತೆಂದು ತಿಳಿಸುತ್ತಾನೆ. ಮೊದಲಿನಿಂದಲೂ ಪರ್ಷಿಯದಲ್ಲಿ ಮಹತ್ತ್ವದ ಕಾಗದಪತ್ರಗಳು ಚರ್ಮದ ಮೇಲೆಯೇ ಬರೆಯಲ್ಪಡುತ್ತಿದ್ದುವು. ಪ್ರಾರಂಭದಲ್ಲಿ ತೊಗಲಿನ ಒಂದೇ ಮಗ್ಗಲಿಗೆ ಬರೆಯುತ್ತಿದ್ದರು. ಆದರೆ ಚರ್ಮದ ಮೇಲಿನ ಬರೆವಣಿಗೆ ಹೆಚ್ಚುಕಾಲ ನಿಲ್ಲುವಂತಿರಲಿಲ್ಲವಾಗಿ ಎಷ್ಟೋ ಮಹಾಕಾವ್ಯಗಳು ನಶಿಸಿ ಹೋಗಿರುವುದರಲ್ಲಿ ಆಶ್ಚರ್ಯವಿಲ್ಲ.

ಪ್ರ.ಶ.ಪೂ. 1500ರ ವರೆಗೂ ಹೇರಳವಾಗಿ ಬಳಕೆಯಲ್ಲಿದ್ದ ಚರ್ಮಪತ್ರ ಅನಂತರ ಪ್ರಶ. ಪ್ರಾರಂಭದವರೆಗೂ ಸುದಿನಗಳನ್ನು ಕಾಣಲಿಲ್ಲ. ಆಮೇಲೆ ಅದರ ಬಳಕೆ ಬಹುವಾಯಿತು.

ಪ್ರಾಣಿಚರ್ಮವನ್ನು ಸ್ವಚ್ಛಮಾಡಿದ ಬಳಿಕ ಬಿಸಿಲಲ್ಲಿ ಒಣಗಿಸಿ, ಚಾಕುವಿನಿಂದ ಹೆರೆದು ಹದ ಮಾಡುತ್ತಿದ್ದರು. ಆಮೇಲೆ ಅದರ ಮೇಲೆ ಸುಣ್ಣದ ಪುಡಿಯನ್ನು ಉದುರಿಸಿ ಕಲ್ಲಿನಿಂದ ಉಜ್ಜಿ ನುಣುಪು ಮಾಡಿ ಬರೆಯಲು ಪ್ರಾರಂಭಿಸುತ್ತಿದ್ದರು. ನಸುಗೆಂಪು ಬಣ್ಣದ ಚರ್ಮಪತ್ರದಿಂದ ಬರೆವಣಿಗೆಗೆ ಮೆರಗು ಬರುತ್ತಿತ್ತು. ಈ ಸಾಮಗ್ರಿಯ ಮೇಲೆ ಬರೆದ ಪುಸ್ತಕಗಳು ಈಗ ಕಾಣಸಿಗುವುದು ಅಪೂರ್ವ.

3ನೆಯ ಶತಮಾನದ ಹೊತ್ತಿಗೆ ಹೊಲೆದ ಚರ್ಮಪತ್ರ ಪುಸ್ತಕಗಳು ಮೈದಳೆದವು.

ಬ್ಯಾಬಿಲೋನಿಯ ಮತ್ತು ಅಸ್ಸೀರಿಯ ನಿವಾಸಿಗಳು ಜೇಡಿಮಣ್ಣಿನ ಫಲಕಗಳನ್ನು ಉಪಯೋಗಿಸಿದರೆ ಮಧ್ಯಯುಗದ ಪಾದ್ರಿಗಳು ಕಟ್ಟಿಗೆಯ ಚೌಕಾಕೃತಿಯ ಫಲಕಗಳನ್ನು ಉಪಯೋಗಿಸಿದ್ದಾರೆ. ಇದಲ್ಲದೆ ಗ್ರೀಕರು ಮತ್ತು ರೋಮನ್ನರು ಹಸ್ತಿದಂತದ ಫಲಕಗಳನ್ನು ಬರೆಯುವ ಸಾಧನಗಳನ್ನಾಗಿ ಬಳಸಿದ್ದಾರೆ. ಕಟ್ಟಿಗೆಯ ಫಲಕಗಳ ಒಳಮೈಯನ್ನು ಕೆತ್ತಿ, ಮೇಣವನ್ನು ತುಂಬಿ ಮೊನೆಯಾದ ಸಾಧನದಿಂದ ಅಕ್ಷರಗಳನ್ನು ಬರೆಯುತ್ತಿದ್ದರು. ಇಂಥ ಫಲಕಗಳ ಹಿಮ್ಮಗ್ಗಲಿನಲ್ಲಿ ತಂತಿಯನ್ನು ಪೋಣಿಸಿ ಕಟ್ಟುತ್ತಿದ್ದರು.

ಭಾರತೀಯ ಲೇಖನ ಸಾಮಗ್ರಿಗಳು: ಪುರಾತನ ಭಾರತೀಯ ಬರೆಹದ ಸಾಮಗ್ರಿಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು. (1) ಶಾಶ್ವತವಾದುವು. (2) ನಶಿಸಿ ಹೋಗುವಂಥವು. ಕಲ್ಲು, ತಾಮ್ರ, ಕಬ್ಬಿಣ, ಬೆಳ್ಳಿ, ಬಂಗಾರ ಇತ್ಯಾದಿ ಮೊದಲ ಗುಂಪಿನಲ್ಲಿ ಬಂದರೆ ಎರಡನೆಯ ಗುಂಪಿನಲ್ಲಿ ಭೂರ್ಜಪತ್ರ, ತಾಡೋಲೆಗಳು, ಅರಿವೆ (ರೇಷ್ಮೆಯನ್ನು ಗಣನೆಗೆ ತೆಗೆದುಕೊಂಡರೆ) ಬರುವುವು. ರಾಜಾಜ್ಞೆ, ದತ್ತಿ, ಶಾಸನ ಹಾಗೂ ಕಾಯದೆ ಕಾಗದ ಪತ್ರಗಳನ್ನು ಬರೆಯಲು ಶಾಶ್ವತ ಸಾಧನಗಳನ್ನು ಬಳಸುತ್ತಿದ್ದರು. ಜನಸಾಮಾನ್ಯರು ಎರಡನೆಯ ಭಾಗದ ಸಾಧನ ಸಾಮಗ್ರಿಗಳನ್ನು ಉಪಯೋಗಿಸುತ್ತಿದ್ದರು.

ಕಲ್ಲುಬಂಡೆಯ ಮೇಲಿನ ಬರೆಹಕ್ಕೆ ಅಶೋಕನ ಕಾಲದಿಂದ ಉಳಿದು ಬಂದಿರುವ ಶಾಸನಗಳು ಸಾಕ್ಷಿಯಾಗಿವೆ. ಭಾರತೀಯರು ಮಣ್ಣಿನ ಫಲಕಗಳನ್ನು ಹೇರಳವಾಗಿ ಬಳಸಿದಂತಿಲ್ಲ. ಭಾರತೀಯ ಪ್ರಾಚ್ಯ ಸಂಶೋಧನ ಇಲಾಖೆಯ ನಿರ್ದೇಶಕ ಜನರಲ್ ಕನ್ನಿಂಗ್‌ಹ್ಯಾಮ್ ಮೊದಲಾದ ವಿದ್ವಾಂಸರು ಬಳಕೆಯಲ್ಲಿದ್ದ ಇಂಥ ಸಾಧನಗಳನ್ನು ಶೋಧಿಸಿದ್ದಾರೆ. ಬುದ್ಧಸೂತ್ರದ ಅವತರಣಿಕೆಗಳನ್ನು ಬರೆದ ಕೆಲವು ಫಲಕಗಳನ್ನು ಉತ್ತರ ಪ್ರದೇಶದಲ್ಲಿ ಹೋ ಎಂಬ ವಿದ್ವಾಂಸ ಶೋಧಿಸಿದ್ದಾನೆ. ಕಟ್ಟಿಗೆಯ ಹಲಗೆಗಳನ್ನು ಭಾರತೀಯರು ಸುಮಾರು ಬುದ್ಧನ ಕಾಲದಿಂದಲೂ ಬಳಸಿದ್ದಾಗಿ ಕಂಡುಬರುತ್ತದೆ.



ತಾಮ್ರಶಾಸನದ ಗುಚ್ಛ, ರಾಜಮುದ್ರೆಯೊಡನೆ

ಬೌದ್ಧ ಗ್ರಂಥಗಳಾದ ವಿನಯಪಿಟಕ ಮತ್ತು ಜಾತಕಗಳಲ್ಲಿ ಇದರ ಬಗ್ಗೆ ಅನೇಕ ಉಲ್ಲೇಖಗಳಿವೆ. ಅಕ್ಷರಾಭ್ಯಾಸಗಳಿಗೆ ಇಂಥ ಹಲಗೆಗಳ ಮೇಲೆ ಮೊದಲು ಪಾಠ ಕೊಡುತ್ತಿದ್ದರು. ಓಲೆಗಳನ್ನು ಬರೆಯಲು ಈ ಹಲಗೆಗಳನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಆಕ್ಸ್‌ಫರ್ಡ್‌ನಲ್ಲಿರುವ ಬೋಡ್ಲೀಯನ್ ಗ್ರಂಥಾಲಯದಲ್ಲಿ ಒಂದು ನಿದರ್ಶನ ದೊರೆಯುತ್ತದೆ. ಬೆಳ್ಳಿ ಮತ್ತು ಬಂಗಾರ ವಿಪುಲವಾಗಿ ಸಿಕ್ಕುತ್ತಿದ್ದರೂ ಭಾರತೀಯರು ಬರೆಯಲು ಅವನ್ನು ಹೇರಳವಾಗಿ ಬಳಸಿಲ್ಲ. ತಾಮ್ರ, ಹಿತ್ತಾಳೆ, ಕಂಚು, ಕಬ್ಬಿಣ ಮುಂತಾದ ಲೋಹಗಳನ್ನು ಹೇರಳವಾಗಿ ಬಳಸಿದ್ದಾರೆ. ಅರಸರ ಪ್ರಮುಖ ಪತ್ರವ್ಯವಹಾರ ಮತ್ತು ದತ್ತಿಗಳನ್ನು ಬರೆಯಲು ಮಾತ್ರ ಬಂಗಾರ ಮೀಸಲಾಯಿತು. ಬುದ್ಧನ ಜಾತಕ ಕಥೆಗಳಲ್ಲಿಯೂ ಇದರ ಉಲ್ಲೇಖವಿದೆ. ಬೆಳ್ಳಿಯನ್ನು ಬರೆಯಲು ಅಷ್ಟಾಗಿ ಬಳಸಿದಂತಿಲ್ಲ. ದತ್ತಿ, ದಾನಧರ್ಮ, ರಾಜಾಜ್ಞೆ ಹಾಗೂ ರಾಜನ ಮುಖ್ಯ ವ್ಯವಹಾರಗಳನ್ನು ನಮೂದಿಸಲು ತಾಮ್ರವನ್ನು ಹೇರಳವಾಗಿ ಉಪಯೋಗಿಸಲಾಗಿದೆ. ತಾಮ್ರಶಾಸನಗಳು ಇಂದಿಗೂ ನೋಡಲು ಸಿಗುತ್ತವೆ. ಯುವಾನ್ ಚಾಂಗ್ ಮೊದಲಾದ ಚೀನಿ ಯಾತ್ರಿಕರು ಇವುಗಳ ಬಗ್ಗೆ ಬರೆದಿದ್ದಾರೆ. ತಾಡೋಲೆಗಳಂತೆ

ಹಗುರಾಗಿ ತಾಮ್ರಶಾಸನಗಳನ್ನು ತಯಾರಿಸುತ್ತಿದ್ದರು. ಮಹಮ್ಮದೀಯರ ಆಳಿಕೆ ಪ್ರಾರಂಭವಾದಮೇಲೆ ಅಂದರೆ ಪ್ರ.ಶ. ಸುಮಾರು 12ನೆಯ ಶತಮಾನದ ಅನಂತರ ತಾಮ್ರಶಾಸನಗಳ ಬಳಕೆ ವಿರಳವಾಯಿತು.

ಸ್ವತಂತ್ರವಾದ ಬೇರೆ ಬೇರೆ ಶಾಸನಗಳನ್ನು ಬರೆಯಲು ಕಂಚು ಮತ್ತು ಹಿತ್ತಾಳೆಗಳನ್ನು ಬಳಸಿದಂತಿಲ್ಲ. ಅಬುವಿನ ಪಕ್ಕದಲ್ಲಿರುವ ಅಚಲಗಡ ಜೈನ ದೇವಾಲಯದಲ್ಲಿ ಕಂಚಿನ ಘಂಟೆಗಳ ಮೇಲೆ ಕೆಲ ಮಾತುಗಳನ್ನು ಬರೆಯಲಾಗಿದೆ, ಅಷ್ಟೇ. ತುಕ್ಕು ಹಿಡಿಯುವುದರಿಂದ ಬರೆಯಲು ಕಬ್ಬಿಣವನ್ನು ಬಹಳಷ್ಟು ಉಪಯೋಗಿಸಿಲ್ಲ. ದೆಹಲಿಯ ಕುತುಬ್ ಮಿನಾರದ ಹತ್ತಿರವಿದ್ದ ಕಬ್ಬಿಣದ ಕಂಬವೇ ಇದಕ್ಕೆ ಸಾಕ್ಷಿ. ಪುರಾತನ ಭಾರತೀಯರು ತಾಡೋಲೆಗಳನ್ನು ವಿಪುಲವಾಗಿ ಬಳಸಿದ್ದಾರೆ. ದಕ್ಷಿಣ ಭಾರತದಲ್ಲಿ ತಾಡ ವೃಕ್ಷಗಳು ಬಹಳವಿರುವುದರಿಂದ ಬಹುಶಃ ತಾಡೋಲೆಗಳ ಮೇಲೆ ಬರೆಯುವುದು ಅಲ್ಲಿಯೇ ಪ್ರಾರಂಭವಾಗಿರಬೇಕು. ಬಹು ಪ್ರಾಚೀನ ತಾಡೋಲೆಗಳು ಉಳಿದು ಬಂದಿಲ್ಲ. ಭಾರತದ ಹವೆ ಅವನ್ನು ಉಳಿಯಗೊಟ್ಟಿಲ್ಲ. ಅಳಿದುಳಿದ ಕೆಲ ತಾಡೋಲೆಗಳಲ್ಲಿ 6ನೆಯ ಶತಮಾನದ ಪ್ರಾಜ್ಞಪರಿಮಿತ ಹೃದಯಸೂತ್ರವೆಂಬ ಗ್ರಂಥವನ್ನು ಉದಾಹರಿಸಬಹುದು. 7ನೆಯ ಶತಮಾನದಲ್ಲಿ ಬರೆದಿರಬಹುದಾದ ಸ್ಕಂದಪುರಾಣದ ಒಂದು ಪ್ರತಿ ಇಂದಿಗೂ ನೇಪಾಳದ ದರ್ಬಾರ್ ಗ್ರಂಥಾಲಯದಲ್ಲಿವೆ. ಸುಮಾರು 3 ಅಡಿ ಉದ್ದ 4 ಇಂಚು ಅಗಲದ ಅನೇಕ ತಾಡೋಲೆಗಳು



ಕಡತ

ಸಿಕ್ಕಿವೆ. ಕಾಗದದ ಬಳಕೆ ಬಂದ ಮೇಲೆ ತಾಡೋಲೆಗಳ ಬಳಕೆ ಕಡಿಮೆಯಾಯಿತು. ಹಳ್ಳಿಯ ಕೆಲವರು ಇಂದಿಗೂ ತಾಡೋಲೆಗಳನ್ನು ಬಳಸುವುದುಂಟು. ಬರೆಯಲು ಉಪಯೋಗಿಸುವ ಬಟ್ಟೆಗೆ ಪಾಟ ಇಲ್ಲವೆ ಪಾಟಕಾ ಎಂದು ಹೆಸರು. ಈಗ ದೊರೆತಿರುವ ಕೆಲವು ಲೇಖಗಳು 17ನೆಯ ಶತಮಾನದ ಉತ್ತರಾರ್ಧದವು. ಅದಕ್ಕೂ ಹಿಂದಿನ ದಾಖಲೆಗಳು ಸಿಕ್ಕಿಲ್ಲ. ಶಾಶ್ವತವಾದ ಶಬ್ದಸಂಪತ್ತನ್ನು ತೊಗಲಿನ ಮೇಲೆ ಮೂಡಿಸಲು ಧಾರ್ಮಿಕ ಮನೋಭಾವದ ಭಾರತೀಯರು ಒಪ್ಪಲಿಲ್ಲವೆಂದು ತೋರುತ್ತದೆ. ಎಲೆ, ಅರಿವೆ, ಗಿಡದ ತೊಗಟೆ ಮೊದಲಾದವು ವಿಪುಲವಾಗಿ ಸಿಕ್ಕಿದ್ದರಿಂದ ತೊಗಲಿನ ಆವಶ್ಯಕತೆ ಬೀಳಲಿಲ್ಲವೆಂದೂ ಹೇಳಬಹುದು. ಆದರೆ ಹುಲಿಯ ಚರ್ಮ ಮತ್ತು ಕೃಷ್ಣಾಜಿನದ ಮೇಲೆ ಬರೆದ ಕೆಲವು ಉದಾಹರಣೆಗಳು ದೊರೆತಿವೆ.

ಭಾರತೀಯರು ಬಹು ಹಿಂದಿನಿಂದ ಕಾಗದವನ್ನು ಬಳಸುತ್ತಿದ್ದಾರೆ. 13ನೆಯ ಶತಮಾನಕ್ಕಿಂತ ಮೊದಲಿನ ಯಾವ ತಾಡೋಲೆ ಕೃತಿಗಳು ಇಂದಿಗೂ ಉಳಿದಿಲ್ಲ. ಅಲೆಗ್ಸಾಂಡರನೊಂದಿಗೆ ಭಾರತಕ್ಕೆ ಬಂದಿದ್ದ ಲೇಖಕನೊಬ್ಬ ಭಾರತೀಯರು ಹತ್ತಿಯಿಂದ ಕಾಗದವನ್ನು ತಯಾರಿಸುತ್ತಿದ್ದ ವಿಧಾನವನ್ನು ಬಣ್ಣಿಸಿದ್ದಾನೆ. ಕಾಗದ ಪರದೇಶದಿಂದ ಆಮದಾಗಿ ಬಂದ ವಸ್ತುವಾಗಿ ತೋರುವುದಿಲ್ಲ. ಕಾಗದಕ್ಕಿಂತ ಸುಲಭವಾಗಿ ಇತರ ನೈಸರ್ಗಿಕ ವಸ್ತುಗಳು ಸಿಗುತ್ತಿದ್ದುವಾಗಿ ಭಾರತೀಯರು ಕಾಗದವನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸಿಲ್ಲವೆಂಬುದೇನೋ ನಿಜ. ಬಂಗಾಲದ ಒಂದು ಜಿಲ್ಲೆ ಹತ್ತಿಯಿಂದ ಕಾಗದ ತಯಾರು ಮಾಡುವ ಉದ್ಯಮದಲ್ಲಿ ಹಿಂದೆ ಬಹುಪ್ರಸಿದ್ಧವಾಗಿತ್ತೆನ್ನಲಾಗಿದೆ. ಭಾರತದಲ್ಲಿ ತಯಾರಾದ ಕಾಗದ ಪರದೇಶದಲ್ಲಿ ಬಹು ಜನಪ್ರಿಯವಾಗಿತ್ತೆನ್ನಲಾಗಿದೆ. ಹೀಗಾಗಿ ಭಾರತದಿಂದ ಕಾಗದ ಚೀನವನ್ನು ಮುಟ್ಟಿರಬಹುದೆಂದು ಒಂದು ವಾದ.

**ಪುಸ್ತಕಕ್ಕೆ ಹೊಸ ರೂಪ :** ಕೊಂಡೊಯ್ಯಲು ಹಗುರಾದ ಜಂಬುಕಾಗದ ಬಳಕೆಗೆ ಬಂದಾಗ ಪುಸ್ತಕ ಸುರುಳಿಯ ರೂಪ ತಾಳಿತಷ್ಟೆ. ಲೇಖಕ ತನ್ನ ಗ್ರಂಥವನ್ನು ವಿಭಾಗಗಳಾಗಿ ವಿಂಗಡಿಸಿದಾಗ, ಪ್ರತಿಯೊಂದು ಭಾಗವೂ ಒಂದೊಂದು ಗ್ರಂಥವೇ ಆಗುತ್ತಿತ್ತು. ಒಂದೇ ದುಂಡು ಕೋಲಿಗೆ ಎಲ್ಲ ಸುರುಳಿಯನ್ನೂ ಸುತ್ತಲು ಅಸಾಧ್ಯವಾದಾಗ ಈ ರೀತಿ ವಿಂಗಡಿಸುವುದು ಅನಿವಾರ್ಯವಾಯಿತು. ಸುತ್ತಿದ ಕಟ್ಟಿಗೆಯ ತುಂಡಿಗೆ ಲೇಖಕನ ಪುಟ್ಟ ಪ್ರತಿಮೆಯನ್ನು ಕಟ್ಟುತ್ತಿದ್ದರು. ಈ ಪ್ರತಿಮೆ ಕಟ್ಟಿಗೆ ಇಲ್ಲವೇ ಹಸ್ತಿದಂತದ್ದಾಗಿರುತ್ತಿತ್ತು. ಇದು ಲೇಖಕನನ್ನು ಗುರುತಿಸುವ ಇಲ್ಲವೆ ಸೂಚಿಸುವ ಸುಲಭ ಮಾರ್ಗವಾಗಿತ್ತು. ಇಂಥ ಜಂಬು ಕಾಗದ ಸುರುಳಿಗಳ ಮೇಲೆ ತೊಗಲಿನ ಆವರಣವಿರುತ್ತಿತ್ತು. ಜಂಬು ಕಾಗದದ ಸುರುಳಿ ಗ್ರಂಥಗಳನ್ನು ಉರುಳೆಯಾಕಾರದ ಪಾತ್ರೆಗಳಲ್ಲಿ ಶೇಖರಿಸುತ್ತಿದ್ದರು. ಈ ವಿಧಾನದಿಂದ ಸಹಸ್ರಾರು ಗ್ರಂಥಗಳನ್ನು ಚೆನ್ನಾಗಿ ನಯನಮನೋಹರವಾಗಿ ಸ್ವಲ್ಪವೇ ಸ್ಥಳದಲ್ಲಿ ಇಡಲು ಸಾಧ್ಯವಾಗುತ್ತಿತ್ತು. ಮೈಕ್ರೊಫಿಲ್ಮ್ ಸುರುಳಿಗಳನ್ನು ಈಗ ಇದೇ ಮಾದರಿಯಲ್ಲಿ ಸಂಗ್ರಹಿಸುತ್ತಾರೆ. ಕಾಗದ ಬಂದ ಮೇಲೆ ಗ್ರಂಥಕ್ಕೆ ಈಗಿನ ಹೊಸರೂಪ ಬಂತು.

**ಬರೆಯುವ ರೀತಿ :** ಪೂರ್ವ ರಾಷ್ಟ್ರಗಳಲ್ಲಿ ಮೊದಲಿಗೆ ಬರೆಯುವ ಪರಂಪರೆ ಬಲದಿಂದ ಎಡಕ್ಕೆ ಇತ್ತು; ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎಡದಿಂದ ಬಲಕ್ಕೆ ಇತ್ತು. ಗ್ರೀಕರು ಎರಡೂ ಬಗೆಯಲ್ಲಿ ಬರೆಯುತ್ತಿದ್ದರು. ಅಂದರೆ ನೇಗಿಲು ಒಮ್ಮೆ ಎಡದಿಂದ ಬಲಕ್ಕೂ ಆಮೇಲೆ ಬಲದಿಂದ ಎಡಕ್ಕೂ ಸರಿಯುವ ರೀತಿಯಲ್ಲಿ ಅಂದಿನ ಬರವಣಿಗೆಯ ಕ್ರಮವಿತ್ತು. ಬಹುತೇಕ ಎಲ್ಲ ದೇಶಗಳಲ್ಲಿ ಬರವಣಿಗೆ ಎಡದಿಂದ ಬಲಕ್ಕೆ ಇಲ್ಲವೇ ಬಲದಿಂದ ಎಡಕ್ಕೆ ಸಾಗುತ್ತಿದ್ದರೆ ಚೀನ, ಜಪಾನ್ ಮುಂತಾದ ದೇಶಗಳಲ್ಲಿ ಲಂಬರೂಪದ ಬರವಣಿಗೆ ಕಂಡುಬರುತ್ತವೆ. ಗ್ರೀಕರು ಪ್ರ.ಶ.ಪೂ. 6 ನೆಯ ಶತಮಾನದಲ್ಲಿ ಬಲದಿಂದ ಎಡಕ್ಕೆ ಬರೆಯುವ ರೂಢಿಯನ್ನು ದೃಢೀಕರಿಸಿದರು.

**ಚೌಕಾಕೃತಿಯ (ಕೋಡೆಕ್ಸ್) ಗ್ರಂಥಗಳು :** ರೋಮನ್ ಸಾಮ್ರಾಟ ಕಾನ್ಸ್ಟೆಂಟಿನ್ (ಪ್ರ.ಶ. 332) ಧರ್ಮಪ್ರಚಾರಕ್ಕಾಗಿ ಮಾಡಿಸಿದ ಬೈಬಲ್ಲಿನ ಸುಮಾರು 50 ಪ್ರತಿಗಳು ಚೌಕಾಕೃತಿಯ ಚರ್ಮ ಕಾಗದದ ಮೇಲಿವೆ. ಅಲ್ಲಿಯವರೆಗೆ ಜಂಬುಕಾಗದದ ಸುರುಳಿಯಾಗಿದ್ದ ಗ್ರಂಥ ಅಂದಿನಿಂದ ಚೌಕಾಕೃತಿಯನ್ನು ತಾಳಲಾರಂಭಿಸಿತು. ಪ್ರ.ಶ. 4ನೆಯ ಶತಮಾನದಲ್ಲಿ ನಕಲು ಮಾಡಿದ ಬೈಬಲ್ಲಿನ ಎರಡು ಚೌಕಾಕೃತಿಯ ಪ್ರತಿಗಳು ದೊರೆತಿವೆ. ಇವುಗಳಲ್ಲಿ ಒಂದಕ್ಕೆ ಕೋಡೆಕ್ಸ್ ಹೈಟಿಕಾನಸ್ ಎಂದೂ ಎರಡನೆಯದಕ್ಕೆ ಕೋಡೆಕ್ಸ್ ಸಿನೈಟಿಕಸ್ ಎಂದೂ ಹೆಸರು. ಕೋಡೆಕ್ಸ್ ಹೈಟಿಕಾನಸ್ ಆಡಿನ ಚರ್ಮದ ಮೇಲೆ ಬರೆಯಲ್ಪಟ್ಟಿದೆ. ಸಮಗ್ರ ಗ್ರೀಕ್ ಬೈಬಲ್ ಇದರಲ್ಲಡಗಿದೆ. ರೋಮಿನ ವ್ಯಾಟಿಕನ್ ಗ್ರಂಥಭಂಡಾರದ ಗ್ರಂಥಸೂಚಿಯನ್ನು ತಯಾರಿಸುವಾಗ (1875) ಇದು ಬೆಳಕಿಗೆ ಬಂತು. ಸಾಮ್ರಾಟ ನೆಪೋಲಿಯನ್ ಇದನ್ನು ಪ್ಯಾರಿಸಿಗೆ ಒಯ್ದ. ಸುಮಾರು 1809 ರಲ್ಲಿ ಇದರ ಫೋಟೊ ನಕಲು ತೆಗೆಯಲಾಯಿತು. ಚೌಕಾಕೃತಿಯ ಕೋಡೆಕ್ಸ್ ಸಿನೈಟಿಕಸ್ ಸಿನಾಯ್ ಪರ್ವತದಲ್ಲಿ ಸಿಕ್ಕಿದ್ದರಿಂದ ಅದಕ್ಕೆ ಆ ಹೆಸರು ಬಂದಿದೆ. ಲೆನಿನ್‌ಗ್ರಾಡಿನ ಗ್ರಂಥಾಲಯದಲ್ಲಿದ್ದ ಇದನ್ನು ಬ್ರಿಟಿಷ್ ವಸ್ತುಸಂಗ್ರಹಾಲಯ ಸೋವಿಯತ್ ಸರ್ಕಾರದಿಂದ 5 ಲಕ್ಷ ಪೌಂಡ್ ಬೆಲೆ ಕೊಟ್ಟು ಕೊಂಡಿತು (1933). ಇದನ್ನೀಗ ಎರಡು ಬೇರೆ ಬೇರೆ ವಿಭಾಗ ಮಾಡಿ ರಟ್ಟುಕಟ್ಟಿಸಲಾಗಿದೆ. ಮೂವರು ಇದನ್ನು ಬರೆದಂತೆ ಕಾಣುತ್ತದೆ. ಒಂದೊಂದು ಪುಟದಲ್ಲಿ ನಾಲ್ಕು ಅಂಕಣಗಳಿವೆ. ಶಬ್ದದ ನಡುವೆ ಸ್ಥಳಾವಕಾಶ ಬಿಟ್ಟಿಲ್ಲ. ಶಬ್ದಗಳನ್ನು ಬಿಡಿಸಿ ಬೇರೆ ಬೇರೆಯಾಗಿ ಬರೆಯುವ ಪರಿಪಾಠ 4 ನೆಯ ಶತಮಾನದಿಂದ ಪ್ರಚಲಿತವಾಗಿತ್ತೆನ್ನಬಹುದು.

ಈ ನಡುವೆ ಪ್ರಾಚೀನ ಗ್ರಂಥಾಲಯಗಳಾದ ಪರ್ಗಮಮ್ ಮತ್ತು ಅಲೆಗ್ಸಾಂಡ್ರಿಯ ಗ್ರಂಥಾಲಯಗಳ ನಡುವೆ ಸ್ಪರ್ಧೆ ಹೆಚ್ಚಿತು. ದೇಶವಿದೇಶಗಳಿಂದ ಗ್ರಂಥಗಳನ್ನು ಕಲೆಹಾಕುವಲ್ಲಿ ನಾ ಮುಂದೆ ತಾ ಮುಂದೆ ಎಂದು ಇವು ಪೈಪೋಟಿ ನಡೆಸಿದುವು. ಇದಲ್ಲದೆ ಪ್ರತಿಭಾವಂತ ಗ್ರಂಥಪಾಲ ತಮ್ಮಲ್ಲಿರಬೇಕೆಂದು ಭಾವನೆ ಅವರಲ್ಲಿ ಮೆಲ್ಲಮೆಲ್ಲನೆ ಮೂಡತೊಡಗಿತು. ಅಲೆಗ್ಸಾಂಡ್ರಿಯ ಗ್ರಂಥಪಾಲನಾದ ಅರಿಸ್ಟೋಫೆನೀಸನಿಗೆ ಪರ್ಗಮಮ್‌ಗೆ ಬರಲು ಆಮಂತ್ರಣ ಕಳುಹಿಸಲಾಯಿತು. ಇವನು ಅಲ್ಲಿಗೆ ಹೋಗುವುದು ಅಲೆಗ್ಸಾಂಡ್ರಿಯದವರಿಗೆ ಹಿಡಿಸಲಿಲ್ಲ. ಅಲ್ಲದೆ ಈತ ತನಗೆ ಬಂದ ಹೊಸ ಆಮಂತ್ರಣವನ್ನು ಒಪ್ಪಬಹುದೆಂಬ ಶಂಕೆಯೂ ಅವರ ಮನಸ್ಸಿನಲ್ಲಿ ಬೇರೂರಿತು. ಹೀಗಾಗಿ ತತ್‌ಕ್ಷಣ ಅರಿಸ್ಟೋಫೆನೀಸನನ್ನು ಕಾರಾಗೃಹಕ್ಕೆ ಕಳುಹಿಸಲಾಯಿತು. ಇದಲ್ಲದೆ ಪರ್ಗಮಮ್‌ಗೆ ರಫ್ತಾಗುತ್ತಿದ್ದ ಜಂಬುಕಾಗದದ ಮೇಲೆ ನಿರ್ಬಂಧ ಹೇರಲಾಯಿತು. ಹೀಗೆ ಬರೆಯುವ ಸಾಧನಗಳ ಅಭಾವ ಹೆಚ್ಚಾಗಲಾಗಿ ಚರ್ಮಪತ್ರಗಳ ಬಳಕೆ ಹೆಚ್ಚಿತು. ಪರ್ಗಮಮ್ ಅಲ್ಲದೆ ಬೇರೆ ಕಡೆಗೂ ಇದನ್ನು ಬಳಸಿದ ಉದಾಹರಣೆಗಳಿವೆ. ವ್ಯಾಪಾರಸ್ಥರ ಮುಖಾಂತರ ಚರ್ಮಪತ್ರ ಯುರೋಪ್ ಖಂಡವನ್ನು ಸೇರತೊಡಗಿತು.

ಹತ್ತಿ ಮೊದಲಾದುವುಗಳಿಂದ ಕೈಯಲ್ಲಿ ಮಾಡಿದ ಕಾಗದ 105 ರಲ್ಲೇ ಚೀನದಲ್ಲಿ ಕಂಡುಬಂದಿದೆ. 14ನೆಯ ಶತಮಾನದಲ್ಲಿ ಕಾಗದ ಯುರೋಪ್ ಖಂಡವನ್ನು ಮುಟ್ಟಿತು. ಮುದ್ರಣಯಂತ್ರ ಬಂದು ಕಾಗದದ, ಮಸಿಯ ತಯಾರಿಕೆ ಮಾರ್ಪಟ್ಟಂತೆ ಪುಸ್ತಕ ಸ್ಫೋಟ ಉಂಟಾಗಲಾರಂಭಿಸಿತು.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪುಸ್ತಕ ತಯಾರಿಕೆಯ ಉದ್ಯಮ ಅದ್ಭುತವಾಗಿ ಬೆಳೆಯಿತು; 21ನೆಯ ಶತಮಾನದಲ್ಲಿ ಅದು ಇನ್ನೂ ವಿಸ್ತರಿಸಿದೆ. ಆಧುನಿಕ ತಂತ್ರಜ್ಞಾನದಿಂದಾಗಿ ಪುಸ್ತಕ ಮುದ್ರಣದ ಇಡೀ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಬರೆಹವನ್ನು ಮೈಕ್ರೊಫಿಲ್ಮ್ ಆಗಿ ಪರಿವರ್ತಿಸುವುದು ಇಂದು ಸುಲಭ. ಒಂದು ಕಡೆ ಘನವಾದ, ಗಟ್ಟಿಮುಟ್ಟಾದ, ನೂರು ವರ್ಷ ಬಾಳಬಲ್ಲ ಪುಸ್ತಕ ತಯಾರಾಗುತ್ತಿರುವಂತೆ, ಒಮ್ಮೆ ಓದಿ ಬಿಸಾಡಬಹುದಾದ, ಅಲ್ಪ ಬೆಲೆಯ ಆದರೂ ಅಮೂಲ್ಯವಾದ ಪುಸ್ತಕಗಳೂ ಲಕ್ಷಸಂಖ್ಯೆಯಲ್ಲಿ ಹೊರಬರುತ್ತವೆ. ಇದು ಪುಸ್ತಕದ ವಿಕಸನ ಕಥೆ. (ಆರ್.ಆರ್.ಎ.)

## X ಗ್ರಂಥಾಲಯ ವಿಜ್ಞಾನಿಗಳು

ಗ್ರಂಥಾಲಯ ವಿಕಾಸದ ಚರಿತ್ರೆಯನ್ನು ನೋಡಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಪ್ರಾರಂಭದ ದಿನಗಳಲ್ಲಿ ಆಸಕ್ತರಾದ ಖಾಸಗಿ ಮಹನೀಯರು ತಮ್ಮ ಮತ್ತು ತಮ್ಮ ಜನರ ಉಪಯೋಗಕ್ಕಾಗಿ ಗ್ರಂಥಸಂಗ್ರಹ ಮಾಡುತ್ತ ಬಂದಿದ್ದಾರೆ. ಕ್ರಮೇಣ ಆಯಾ ದೇಶಗಳ ರಾಜ ಮಹಾರಾಜರುಗಳು ಕವಿಗಳಿಗೂ ವಿದ್ವಾಂಸರಿಗೂ ಆಶ್ರಯ, ಪ್ರೋತ್ಸಾಹ, ಧನಸಹಾಯಗಳನ್ನು ಕೊಟ್ಟುದಲ್ಲದೆ ತಮ್ಮ ಅರಮನೆಯ ಒಂದು ಭಾಗದಲ್ಲಿ ಗ್ರಂಥ ಸಂಗ್ರಹಣ ಮಾಡತೊಡಗಿದರು. ಇವರಲ್ಲನೇಕರು ಗ್ರಂಥ ಪ್ರತೀಕರಣ, ಗ್ರಂಥ ವಿಂಗಡಣೆ, ಗ್ರಂಥಸೂಚೀ ರಚನೆ ಮೊದಲಾದ ವಿಷಯಗಳಿಗೆ ಗಮನ ಕೊಟ್ಟರು. ಕ್ರಮೇಣ ಸರ್ಕಾರ ಹಾಗೂ ಸಾರ್ವಜನಿಕ ಸಂಸ್ಥೆಗಳು, ವಿದ್ಯಾಪೀಠಗಳು ಗ್ರಂಥಾಲಯಗಳ ಜವಾಬ್ದಾರಿಯನ್ನು ಹೊರತೊಡಗಿದುವು. ವಿವಿಧೋದ್ದೇಶಗಳಿಗಾಗಿ ವಿವಿಧ ಮಾದರಿಯ ಗ್ರಂಥಾಲಯಗಳು ರೂಪುಗೊಳ್ಳತೊಡಗಿದುವು. ಈ ಸಂದರ್ಭದಲ್ಲಿ ಗ್ರಂಥಾಲಯಗಳ ನಿರ್ಮಾಣ ಹಾಗೂ ಸಕ್ರಮ ವಿಕಾಸಕ್ಕೆ ಕಾರಣರಾದ ಕೆಲವು ಮಹನೀಯರ ಪರಿಚಯವನ್ನಿಲ್ಲಿ ಕೊಡಲಾಗಿದೆ.

**1. ಕಾರ್ನೇಗಿ, ಆಂಡ್ರ್ಯೂ :** 1835–1919. ವಿವಿಧ ಬಗೆಯ ಗ್ರಂಥಾಲಯಗಳ ಸ್ಥಾಪಕ. ಅಮೆರಿಕದ ಕೈಗಾರಿಕೋದ್ಯಮಿ ಮತ್ತು ದಾನಿಯಾದ ಈತ ಗ್ರಂಥಾಲಯಗಳಿಗಾಗಿ ಆರು ಕೋಟಿಗೂ ಹೆಚ್ಚು ಡಾಲರುಗಳನ್ನು ದಾನ ಮಾಡಿದ. ಈತನ ದಾನದತ್ತಿಗಳ ಲೆಕ್ಕದಲ್ಲಿ 1919 ರ ಹೊತ್ತಿಗೆ 2,811 ಸಾರ್ವಜನಿಕ ಗ್ರಂಥಾಲಯಗಳನ್ನು ತೆರೆದಿರುವುದಾಗಿ ತಿಳಿಯುತ್ತದೆ. ಗ್ರಂಥಾಲಯಗಳಿಂದಾಗುವ ಮುಖ್ಯ ಲಾಭ ಜ್ಞಾನಾರ್ಜನೆ. ನಾವೇನಾದರೂ ಕೊಡದಿದ್ದರೆ ಅವು ನಮಗೇನೂ ಕೊಡಲಾರವು ಎಂಬುದು ಈತನ ಅಭಿಪ್ರಾಯ **(ನೋಡಿ- ಕಾರ್ನೇಗಿ, ಆಂಡ್ರ್ಯೂ).** (ಎಸ್.ಆರ್.ಜಿಯು.)

**2. ಕಟ್ಟರ್, ಚಾರ್ಲ್ಸ್ ಅಮ್ಮಿ :** 1837–1903. ಗ್ರಂಥಾಲಯ ವಿಜ್ಞಾನದಲ್ಲಿ ಜನಪ್ರಿಯವಾಗಿರುವ ವ್ಯಾಪಕ ವರ್ಗೀಕರಣ ಪದ್ಧತಿಯ (ಎಕ್ಸ್‌ಪ್ಯಾನ್ಸಿವ್ ಕ್ಲ್ಯಾಸಿಫಿಕೇಶನ್) ಕರ್ತೃ. ಈತ ಹುಟ್ಟಿದ್ದು ಅಮೆರಿಕದ ಬಾಸ್ಟನ್ ನಗರದಲ್ಲಿ. ಹಾರ್ವರ್ಡ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಪದವೀಧರನಾದ (1855). ಕ್ರೈಸ್ತ ಧರ್ಮೋಪದೇಶಕನಾಗಲು ಆಶಿಸಿ ಹಾರ್ವರ್ಡಿನ ದೇವಜ್ಞಾನ ಶಾಲೆಯಲ್ಲಿ ಕಲಿಯುತ್ತಿದ್ದಾಗ, ಆ ಶಾಲೆಯ ಗ್ರಂಥಾಲಯದ ಸೂಚಿಯನ್ನು ತಯಾರಿಸುವ ಕೆಲಸ ಈತನ ಪಾಲಿಗೆ ಬಂತು. ಇದರಿಂದಾಗಿ ಗ್ರಂಥಾಲಯ ವಿಜ್ಞಾನದಲ್ಲಿ ಆಸಕ್ತಿ ಮೂಡಿತು. ಮುಂದೆ ಹಾರ್ವರ್ಡ್ ಕಾಲೇಜಿನ ಗ್ರಂಥಪಾಲನ ಸಹಾಯಕನಾಗಿ ನೇಮಕಗೊಂಡ (1860). ಬಿಡುವಿನ ವೇಳೆಯಲ್ಲಿ ಬಾಸ್ಟನ್ ಸಾರ್ವಜನಿಕ ಗ್ರಂಥಾಲಯ ಮತ್ತು ಅದರ ಅಂಗಸಂಸ್ಥೆಗಳ ಗ್ರಂಥಾಲಯಗಳಲ್ಲಿ ಕೆಲಸಮಾಡಿ, ಅಲ್ಲಿನ ಗ್ರಂಥ ಸೂಚಿಗಳನ್ನು ಪರಿಷ್ಕರಿಸಿದ. ಅನಂತರ ಅಥೀನಿಯಮ್ ಗ್ರಂಥಾಲಯದ ಪ್ರಧಾನ ಗ್ರಂಥಪಾಲನಾಗಿ ನೇಮಕಗೊಂಡ. ಗ್ರಂಥಸೂಚಿ ಕಾರ್ಯದಲ್ಲಿ ವಿಶೇಷ ಪರಿಶ್ರಮ ಪಡೆದಿದ್ದ ಈತ ದರಮೂಲ ತತ್ತ್ವಗಳನ್ನು ಕುರಿತ ರೂಲ್ಸ್ ಫಾರ್ ಎ ಡಿಕ್ಷನರಿ ಕ್ಯಾಟಲಾಗ್ ಎಂಬ ಗ್ರಂಥವನ್ನು ರಚಿಸಿದ (1875). ಪ್ರಪಂಚದ ಅನೇಕ ಗ್ರಂಥಾಲಯಗಳಲ್ಲಿ ಇಂದಿಗೂ ಇದು ಬಳಕೆಯಲ್ಲಿದೆ.

ಅಮೆರಿಕ ಗ್ರಂಥಾಲಯ ಸಂಘದ ಸ್ಥಾಪನೆಗೆ ಪ್ರಯತ್ನಿಸಿದ ಈತ ಅದರ ಅಭಿವೃದ್ಧಿಗಾಗಿಯೂ ಶ್ರಮಿಸಿದ. ಈತನ ಸೋದರಳಿಯ ಡಬ್ಲ್ಯೂ. ಪಿ. ಕಟ್ಟರ್ ಎಂಬಾತ ಈತನ ಜೀವನ ಚರಿತ್ರೆಯನ್ನು ಬರೆದು ಪ್ರಕಟ ಮಾಡಿದ್ದಾನೆ (1931). (ಎಸ್.ಆರ್.ಜಿಯು.)

**3. ಖುದಾಭಕ್ಷ್ ಖಾನ್ :** 1842–1908. ಪಾಟ್ನಾದ ಪ್ರಸಿದ್ಧ ವಕೀಲ, ಹೈದರಾಬಾದ್ ಸಂಸ್ಥಾನದ ಮುಖ್ಯ ನ್ಯಾಯಾಧೀಶ ಮತ್ತು ಖುದಾ ಭಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯದ ಸ್ಥಾಪಕ. ಬಿಹಾರ್ ಜಿಲ್ಲೆಯ ಛಾಪ್ರಾದಲ್ಲಿ ಜನಿಸಿದ. ತಂದೆ ಮಹಮದ್ ಭಕ್ಷ್ ಪುಸ್ತಕ ಪ್ರೇಮಿ ಮತ್ತು ಹಸ್ತಪ್ರತಿಗಳ ಸಂಗ್ರಾಹಕ. ಅರಬ್ಬಿ ಮತ್ತು ಫಾರಸಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ ಖುದಾ ಭಕ್ಷ್ ಇಂಗ್ಲಿಷ್ ಭಾಷೆಯನ್ನು ಕಲಿತ. ಇಸ್ಲಾಂ ಗ್ರಂಥಾಲಯಗಳನ್ನು ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿದ. ತಂದೆಯ ಸಂಗ್ರಹದಿಂದ ದೊರೆತ ಸು. 1400 ಹಸ್ತಪ್ರತಿಗಳೊಂದಿಗೆ ಒಂದು ಸಾರ್ವಜನಿಕ ಗ್ರಂಥಾಲಯವನ್ನು ತೆರೆದ. ಮೊಗಲರು ಸಂಗ್ರಹಿಸಿದ್ದ ಅಮೂಲ್ಯ ಹಸ್ತಪ್ರತಿಗಳು ಪರದೇಶಗಳಿಗೆ ಹೋಗುವುದನ್ನು ತಡೆಯಲು ಹಾಗೂ ನಾಶವಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಿದ. ಹಸ್ತಪ್ರತಿಗಳ ಸಂಗ್ರಹಕ್ಕಾಗಿಯೇ ಮಹಮದ್ ಮಾಕಿ ಎಂಬ ಪ್ರಸಿದ್ಧ ಅರಬ್ಬೀ ಗ್ರಂಥ ಸಂಗ್ರಹಕಾರನ ನೆರವನ್ನು ಪಡೆದ. ಅಪೂರ್ವ ಹಸ್ತಪ್ರತಿಗಳ ಸಂಗ್ರಹಕ್ಕಾಗಿ ಈತನನ್ನು ಅರೇಬಿಯ, ಪರ್ಷಿಯ, ಈಜಿಪ್ಟ್, ಸಿರಿಯ ಮೊದಲಾದ ದೇಶಗಳಿಗೆ ಕಳುಹಿಸಿಕೊಟ್ಟ. ಕಮಿಷನ್ ಜೊತೆಗೆ ತಿಂಗಳ ವೇತನವನ್ನೂ ಕೊಟ್ಟು 18 ವರ್ಷಗಳ ಕಾಲ ಈತನಿಂದ ಗ್ರಂಥ ಸಂಗ್ರಹ ಮಾಡಿದ. ಹಸ್ತಪ್ರತಿ ಗಳನ್ನು ಮಾರಲು ಬಂದವರಿಗೆ ಯೋಗ್ಯ ಬೆಲೆಯನ್ನು ಕೊಡುತ್ತಿದ್ದ ನಲ್ಲದೇ ಅವರ ಪ್ರಯಾಣ ವೆಚ್ಚದ ಎರಡರಷ್ಟು ಮೊತ್ತವನ್ನೂ ಕೊಡುತ್ತಿದ್ದ. ಹಸ್ತಪ್ರತಿಗಳ ಬೆಲೆ ಕಟ್ಟುವುದರಲ್ಲಿಯೂ ಈತ ನಿಷ್ಣಾತನಾಗಿದ್ದ. ಈತ ಸ್ಥಾಪಿಸಿದ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯ ಬಹುಬೇಗ ಬೆಳೆದು, ಖುದಾ ಭಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯ ಎಂದು ಪ್ರಸಿದ್ಧವಾಯಿತು. ಮುಂದೆ ಅದನ್ನು ಬಂಗಾಳ ಸರ್ಕಾರ ವಹಿಸಿ ಕೊಂಡಿತು. ಖುದಾಭಕ್ಷನ ಸಾಮಾಜಿಕ ಸೇವೆಯನ್ನು ಗಮನಿಸಿ ಆಗಿನ ಬ್ರಿಟಿಷ್ ಸರ್ಕಾರ ಖಾನ್ ಬಹಾದೂರ್ (1881) ಮತ್ತು ಸಿ.ಐ.ಇ. (1903) ಬಿರುದುಗಳನ್ನು ನೀಡಿ ಗೌರವಿಸಿತು. (ಎಲ್.ವಿ.ಜಿ.)



**4. ಡ್ಯೂಯಿ, ಮೆಲ್‌ವಿಲ್ :** 1851–1931. ಗ್ರಂಥ ವರ್ಗೀಕರಣಕ್ಕೆ ಸಂಬಂಧಿಸಿದಂತೆ ದಾಶಮಿಕ ವರ್ಗೀಕರಣ (ಡೆಸಿಮಲ್ ಕ್ಲ್ಯಾಸಿಫಿಕೇಶನ್) ಪದ್ಧತಿಯನ್ನು ರೂಪಿಸಿದ ವ್ಯಕ್ತಿ. ಗ್ರಂಥಾಲಯವನ್ನು ಓರಣವಾಗಿಟ್ಟುಕೊಳ್ಳುವುದರಲ್ಲಿ ಎಷ್ಟರಮಟ್ಟಿಗೆ ಕ್ರಮಬದ್ಧ ವಿಧಾನವನ್ನು ಅನುಸರಿಸಬಹುದೆಂಬುದನ್ನು ಮೊಟ್ಟಮೊದಲಿಗೆ ತೋರಿಸಿಕೊಟ್ಟವ. ಹುಟ್ಟಿದ್ದು ಅಮೆರಿಕದ ಸಂಯುಕ್ತ ಸಂಸ್ಥಾನಗಳ ನ್ಯೂಯಾರ್ಕ್ ರಾಜ್ಯದ ಆಡಮ್ಸ್ ಸೆಂಟರ್ ಎಂಬಲ್ಲಿ. ತಂದೆ ಜ್ಯೋಯೆಲ್ ಡ್ಯೂಯಿ; ತಾಯಿ ಎಲಿಜ್ಹಾ ಗ್ರೀನ್. ಓದುವುದೆಂದರೆ ಮೆಲ್‌ವಿಲ್‌ಗೆ ಮೊದಲಿನಿಂದಲೂ ಬಹಳ ಆಸಕ್ತಿ. ದುಡಿದು ತಿನ್ನಬೇಕೆಂಬ ಭಾವನೆ ಯಂತೂ ತೀರ ಉತ್ಕಟವಾಗಿತ್ತು. ಕೇವಲ 13 ವರ್ಷದವನಿದ್ದಾಗಲೇ ಅಲ್ಲಷ್ಟು ಇಲ್ಲಷ್ಟು ಕೂಲಿ ಕಂಬಳಿ ಮಾಡಿ ಕೆಲವಾರು ಡಾಲರ್‌ಗಳನ್ನು ಸಂಪಾದನೆ ಮಾಡುತ್ತಿದ್ದ. ಸೇರಿಸಿಟ್ಟ ಹಣದಲ್ಲಿ ಒಂದು ವೆಬ್‌ಸ್ಟರ್ ನಿಘಂಟನ್ನು ಕೊಂಡು ಅದರಲ್ಲಿನ ಶಬ್ದಾರ್ಥಗಳನ್ನು ಹೆಚ್ಚಿನ ಆಸಕ್ತಿಯಿಂದ ಗ್ರಹಿಸಿದ. ಧಾರ್ಮಿಕ ಮನೋಭಾವವೂ ಇದ್ದ ಕಾರಣ ಒಂದು ಕ್ರೈಸ್ತಶಾಲೆಯಲ್ಲಿ ಕೆಲವು ಕಾಲ ಅಭ್ಯಾಸ ನಡೆಸಿದನಲ್ಲದೆ ಕೆಲಕಾಲ ಬೋಧಕನಾಗಿಯೂ ಕೆಲಸ ಮಾಡಿದ. ಶಿಕ್ಷಕ ವೃತ್ತಿಯಲ್ಲಿ ಬೇಸರ ತಲೆದೋರಿದ ಕಾರಣ ಅದನ್ನು ತ್ಯಜಿಸಿ ಮೆಸಾಚುಸೆಟ್ಸ್‌ನ



ಆಮ್‌ಹರ್ಸ್ಟ್ ಕಾಲೇಜಿಗೆ ಸೇರಿ, ವಿದ್ಯಾಭ್ಯಾಸ ನಡೆಸಿ ಪದವೀಧರನಾದ (1874.) ಅದೇ ಕಾಲೇಜಿನ ಗ್ರಂಥಾಲಯದ ಗ್ರಂಥಪಾಲನಾದ. ಗ್ರಂಥಗಳ ಜೋಡಣೆಗೆ ಹಾಗೂ ವ್ಯವಸ್ಥಿತ ವರ್ಗೀಕರಣಗಳ ಬಗ್ಗೆ ಆಲೋಚಿಸತೊಡಗಿದ. ಇವನ ಸತತ ಸಂಶೋಧನೆಯಿಂದಾಗಿ ಗ್ರಂಥ ವರ್ಗೀಕರಣದಲ್ಲಿ ದಾಶಮಿಕ ವರ್ಗೀಕರಣ ಪದ್ಧತಿ ರಾಷ್ಟ್ರದ ಎಲ್ಲೆಡೆ ಬಳಕೆಗೆ ಬಂತು. ಗ್ರಂಥಗಳು, ಚಲನಚಿತ್ರಗಳು, ಮೈಕ್ರೊಫಿಲ್ಮ್‌ಗಳು ಮುಂತಾದ ಗ್ರಂಥಾಲಯ ಪದಾರ್ಥಗಳನ್ನು ವಿಷಯಾನುಗುಣವಾಗಿ 1,2,3,4,5,6,7,8,9, – ಈ ಹತ್ತು ವಿಭಾಗಗಳಲ್ಲಿ ವರ್ಗೀಕರಿಸುವ ನೂತನ ಪದ್ಧತಿಯನ್ನು ಈತ ಜಾರಿಗೆ ತಂದ. ವರ್ಗೀಕರಣವನ್ನಷ್ಟೆ ಅಲ್ಲದೆ ಗ್ರಂಥಗಳ ವಿಷಯ ಸೂಚಿಯನ್ನೂ ರೂಪಿಸಿದ. ಅಮೆರಿಕದ ಫಿಲಿಡೆಲ್ಫಿಯದಲ್ಲಿ ನಡೆದ (1876) ಗ್ರಂಥಪಾಲರ ಸಮ್ಮೇಳನದ ಫಲವಾಗಿ ಅಮೆರಿಕದ ಗ್ರಂಥಾಲಯ ಸಂಘ ಸ್ಥಾಪನೆಯಾಯಿತು. ಇದರ ಸ್ಥಾಪನೆಗೆ ಶ್ರಮಿಸಿದ ಡ್ಯೂಯಿ ಬಹು ಮುಖ್ಯ. ಸಂಘದ ತತ್ತ್ವೋದ್ದೇಶಗಳ ಪ್ರಣಾಳಿಕೆಯನ್ನು ದೇಶವಿದೇಶಗಳಲ್ಲಿ ಪ್ರಚುರಪಡಿಸುವ ಸಲುವಾಗಿ 1877 ರಲ್ಲಿ ಈತ ಬಾಸ್ಟನಿಗೆ ತೆರಳಿದ. ಅಲ್ಲಿ ಗ್ರಂಥಾಲಯ ವಿಭಾಗಕ್ಕೆ ಸಂಬಂಧಿಸಿದ ಪ್ರಮುಖರಾದ ಆರ್.ಆರ್.ಬೌಕರ್ ಮತ್ತು ಫ್ರೆಡರಿಕ್ ಲೀಪೋಲ್ಡ್‌ರ ಪರಿಚಯವಾಯಿತು. ಅವರ ಸಹಾಯದಿಂದ ಗ್ರಂಥಾಲಯ ವಿಜ್ಞಾನದ ತಾತ್ತ್ವಿಕ ವಿವೇಚನೆಗೆ ಮೀಸಲಾಗಿದ್ದ ಲೈಬ್ರರಿ ಜರ್ನಲ್ ಎಂಬ ಪತ್ರಿಕೆಯನ್ನು ಸ್ಥಾಪಿಸಿ ಅದರ ಸಂಪಾದಕನಾಗಿ ಕೆಲಸಮಾಡಿದ. ಗ್ರಂಥಾಲಯಗಳ ನಿತ್ಯೋಪಯೋಗಕ್ಕೆ ಬೇಕಾಗುವ ಕುರ್ಚಿ, ಮೇಜು ಮುಂತಾದ ಅಣಿಕಟ್ಟುಗಳು ಮತ್ತು ಕಪಾಟು ಮುಂತಾದ ಸಾಮಾನುಗಳನ್ನು ಕೊಂಡುಕೊಳ್ಳುವಲ್ಲಿ ಗ್ರಂಥಪಾಲರು ಲಕ್ಷ್ಯದಲ್ಲಿಡಬೇಕಾದ ವಿಷಯಗಳನ್ನು ಕುರಿತಾದ ಲೈಬ್ರರಿ ನೋಟ್ಸ್ ಎಂಬ ಮತ್ತೊಂದು ಪತ್ರಿಕೆ ಈತನ ಸಂಪಾದಕತ್ವದಲ್ಲಿ ಹೊರಬಿತ್ತು. ಈತನ ಸಲಹೆಯಂತೆ ಗ್ರಂಥಾಲಯಕ್ಕೆ ಅಗತ್ಯವಿರುವ ಸಾಮಾನುಗಳನ್ನು ತಯಾರಿಸುವಂಥ ಲೈಬ್ರರಿ ಬ್ಯೂರೋ ಎಂಬ ಶಾಖೆಯೊಂದು ಆರಂಭವಾಯಿತು (1878). ಈತ ನ್ಯೂಯಾರ್ಕ್ ನಗರದ ಕೊಲಂಬಿಯ ಕಾಲೇಜಿನ ಗ್ರಂಥಪಾಲನಾಗಿ ಸೇವೆ ಸಲ್ಲಿಸಿ (1883) ಗ್ರಂಥಾಲಯಗಳ ಸುಸಂಬದ್ಧ ಆಡಳಿತಕ್ಕಾಗಿ ಗ್ರಂಥಪಾಲರ ತರಬೇತಿ ಶಾಲೆಯನ್ನು ತೆರೆದ. (1887). ಈ ಶಾಲೆಯ ಚಟುವಟಿಕೆಗಳು ಬಹಳ ಯಶಸ್ವಿಯಾಯಿತಾಗಿ ಇವನ ಮಾರ್ಗದರ್ಶನದಲ್ಲಿ ನ್ಯೂಯಾರ್ಕಿನ ಅಲ್ಬನಿ ಎಂಬಲ್ಲಿ ಸ್ಟೇಟ್ ಲೈಬ್ರರಿ ಸ್ಕೂಲ್ ಎಂಬ ಹೆಸರಿನಿಂದ ಅದನ್ನು ಮನಃ ಸ್ಥಾಪಿಸಲಾಯಿತು. ನ್ಯೂಯಾರ್ಕ್ ಸ್ಟೇಟ್ ಗ್ರಂಥಾಲಯದ ನಿರ್ದೇಶಕನಾಗಿ (1889–1906), ಯೂನಿವರ್ಸಿಟಿ ಆಫ್ ದಿ ಸ್ಟೇಟ್ ಆಫ್ ನ್ಯೂಯಾರ್ಕಿನ ಕಾರ್ಯದರ್ಶಿಯಾಗಿ (1989–1900), ಗ್ರಂಥಾಲಯಗಳ ಸ್ಟೇಟ್ ನಿರ್ದೇಶಕನಾಗಿ (1904–06) – ಹೀಗೆ ಈತ ಕೆಲಸ ಮಾಡಿದ. ಸ್ಟೇಟ್ ಗ್ರಂಥಾಲಯವನ್ನು ಸಂಪೂರ್ಣವಾಗಿ ಪುನರ್ ವ್ಯವಸ್ಥೆಗೊಳಿಸಿ ಅದನ್ನು ಅಮೆರಿಕದಲ್ಲೇ ಅತ್ಯಂತ ಸುವ್ಯವಸ್ಥಿತ ಗ್ರಂಥಾಲಯವನ್ನಾಗಿ ಮಾಡಿದ ಖ್ಯಾತಿ ಇವನದು. ಸಂಚಾರೀ ಗ್ರಂಥಾಲಯಗಳನ್ನು ಸ್ಥಾಪಿಸುವುದರಲ್ಲಿ ಮತ್ತು ಚಿತ್ರಸಂಗ್ರಹಣೆಗೆ ಸಂಬಂಧಿಸಿದ ವ್ಯವಸ್ಥೆಯನ್ನು ಏರ್ಪಡಿಸುವಲ್ಲಿ ಈತ ಹೆಚ್ಚಿನ ಶ್ರಮವಹಿಸಿದ.

**5. ಬ್ಲಿಸ್, ಹೆನ್ರಿ ಎವ್ಲಿನ್ :** 1870–1955. ಗ್ರಂಥಾಲಯ ವಿಜ್ಞಾನದಲ್ಲಿ ಹೊಸದೊಂದು ವರ್ಗೀಕರಣ ಪದ್ಧತಿಯನ್ನು ರೂಪಿಸಿ ಪ್ರಚಾರಕ್ಕೆ ತಂದವ. ಹುಟ್ಟಿದ್ದು ನ್ಯೂಯಾರ್ಕಿನಲ್ಲಿ. ಅಲ್ಲಿನ ಸಿಟಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವೀಧರನಾದ. ಅನಂತರ ಇದೇ ಕಾಲೇಜಿನ ಗ್ರಂಥಪಾಲನಾಗಿ ನೇಮಕಗೊಂಡ. ಬಹುಶ್ರುತನಾದ ಈತ ಆಗ್ಗೆ ಗ್ರಂಥಾಲಯ ವಿಜ್ಞಾನದಲ್ಲಿ ಆಗಲೇ ಪ್ರಚಾರದಲ್ಲಿದ್ದ ದಶಾಂಶ ಮತ್ತು ವ್ಯಾಪಕ ವರ್ಗೀಕರಣ ಪದ್ಧತಿಯನ್ನು ಪರಿಷ್ಕರಿಸಿ ವರ್ಗೀಕರಣದ 32 ಮೂಲಸೂತ್ರಗಳನ್ನನುಸರಿಸಿ ಹೊಸತೊಂದು ಪದ್ಧತಿಯನ್ನು ಬಳಕೆಗೆ ತಂದ. ಗ್ರಂಥಾಲಯ ವಿಜ್ಞಾನದಲ್ಲಿದ್ದ ಹಲವಾರು ತಾಂತ್ರಿಕ ದೋಷಗಳನ್ನು ನಿವಾರಿಸಿ, ಅವುಗಳಿಗೆ ಪರಿಹಾರ ಸೂಚಿಸಬೇಕೆಂಬ ಉದ್ದೇಶದಿಂದ ಕ್ಲಾಸಿಫಿಕೇಷನ್ ಬುಲೆಟಿನ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ.

ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಈತ ರಚಿಸಿರುವ ಕೃತಿಗಳಿವು: ದಿ ಆರ್ಗನೈಸೇಷನ್ ಆಫ್ ನಾಲೆಜ್ ಅಂಡ್ ಸಿಸ್ಟಂ ಆಫ್ ಸೈನ್ಸಸ್ (1929) ಮತ್ತು ದಿ ಆರ್ಗನೈಸೇಷನ್ ಆಫ್ ನಾಲೆಜ್ ಇನ್ ಲೈಬ್ರರೀಸ್ ಅಂಡ್ ಸಬ್‌ಜೆಕ್ಟ್ ಅಪ್ರೋಚ್ ಟು ಬುಕ್ಸ್ (1952) .

**6. ಬರ್ವಿಕ್ ಸೇಯರ್ಸ್, ಡಬ್ಲ್ಯೂ. ಸಿ. :** 1881–1960. ಇಂಗ್ಲೆಂಡ್‌ನ ಗ್ರಂಥಾಲಯ ಚಳವಳಿಯ ನೇತಾರ. ಗ್ರಂಥಾಲಯ ವಿಜ್ಞಾನ ಪ್ರಸಾರಕ್ಕಾಗಿ ವಿಶೇಷವಾಗಿ ಶ್ರಮಿಸಿದವ. ಈತನನ್ನು ಗ್ರಂಥಾಲಯ ವಿಜ್ಞಾನದ ಪಾಣಿನಿ ಎಂದು ಎಸ್.ಆರ್.ರಂಗನಾಥನ್ ಕರೆದಿದ್ದಾರೆ. ಚಿಕ್ಕಂದಿನಿಂದಲೂ ಮಸ್ತಕ ಪ್ರೇಮಿಯಾಗಿದ್ದ ಈತ ಗ್ರಂಥಾಲಯ ವಿಜ್ಞಾನದತ್ತ ತಿರುಗಿದ್ದು ಆಕಸ್ಮಿಕವಾಗಿ. ಈ ಶಾಸ್ತ್ರಕ್ಕೆ ಸಂಬಂಧಿಸಿದ ಯಾವ ಪದವಿಯನ್ನೂ ಈತ ಪಡೆದಿರಲಿಲ್ಲ ವಾದರೂ ಜೀವನೋಪಾಯಕ್ಕಾಗಿ ಬೌರ್ನ್‌ಮತ್ ಗ್ರಂಥಪಾಲನಾದ (1900). ಅನಂತರ ಕ್ರಾಯ್‌ಡನ್ ನಗರದ ಸಾರ್ವಜನಿಕ ಗ್ರಂಥಾಲಯದ ಸಹಗ್ರಂಥಪಾಲನ ಸ್ಥಾನ ಈತನಿಗೆ ಅನಿರೀಕ್ಷಿತವಾಗಿ ದೊರೆಯಿತು (1904). ಕ್ರಮೇಣ ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮ ಪಡೆದು ಕ್ರಾಯ್‌ಡನ್ ನಗರಗ್ರಂಥಾಲಯದ ಪ್ರಧಾನ ಗ್ರಂಥಪಾಲನಾಗಿ ನೇಮಕಗೊಂಡು (1915) 1947ರ ವರೆಗೂ ಸೇವೆಸಲ್ಲಿಸಿ ಅನಂತರ ನಿವೃತ್ತನಾದ.

ಇಂಗ್ಲೆಂಡ್ ಗ್ರಂಥಾಲಯ ಸಂಘದ ಸದಸ್ಯನಾಗಿ, ಅಧ್ಯಕ್ಷನಾಗಿ ಮತ್ತು ಅದರ ಫೆಲೋ ಆಗಿ ಈತ ಸಲ್ಲಿಸಿದ ಸೇವೆ ಸ್ಮರಣೀಯ. ಇಂಗ್ಲೆಂಡ್‌ನ ರಾಷ್ಟ್ರೀಯ ಕೇಂದ್ರ ಗ್ರಂಥಾಲಯದ ಸ್ಥಾಪನೆಗಾಗಿ ಈತ ವಿಶೇಷವಾಗಿ ಶ್ರಮಿಸಿದ.

ಗ್ರಂಥಾಲಯ ವಿಜ್ಞಾನವನ್ನು ಕುರಿತು ಈತ ಬರೆದಿರುವ ಪ್ರಮುಖ ಕೃತಿಗಳಿವು: ಗ್ರಂಥಾಲಯ ವರ್ಗೀಕರಣ ಶಾಸ್ತ್ರ ಪರಿಚಯ; ಗ್ರಂಥಾಲಯ ವರ್ಗೀಕರಣ ಶಾಸ್ತ್ರದ ಕೈಪಿಡಿ ಹಾಗೂ ಮಕ್ಕಳ ಗ್ರಂಥಾಲಯ ಕೈಪಿಡಿ.

ಇಷ್ಟೇ ಅಲ್ಲದೆ ಈತ ಕ್ರಾಯ್‌ಡನ್ನಿನ ಇತಿಹಾಸ ಮತ್ತು ಸ್ಯಾಮ್ಯುಯೆಲ್ ಕೋಲ್‌ರಿಜ್ – ಟೇಲರನ ಗೇಯತೆಯನ್ನು ಕುರಿತೂ ಬರೆದಿದ್ದಾನೆ. (ಎಸ್.ಆರ್.ಜಿಯು.)

**7. ಅಸದುಲ್ಲ, ಕಲೀಫ್ ಮಹಮ್ಮದ್ :** 1890–1949. ಭಾರತದ ಗ್ರಂಥಾಲಯ ಚಳವಳಿಯ ನೇತಾರನೆನಿಸಿದ ಕೆಲವೇ ಪ್ರಮುಖ ಗ್ರಂಥಪಾಲರಲ್ಲಿ ಒಬ್ಬರು. ಮೆಲ್‌ವಿಲ್ ಡ್ಯೂಯಿಯ ಶಿಷ್ಯನಾದ ಡಾನ್ ಡಿಕಿನ್‌ಸನ್ ಲಾಹೋರಿನ ಪಂಜಾಬ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಮೊಟ್ಟಮೊದಲು ಗ್ರಂಥಪಾಲರ ತರಬೇತಿ ತರಗತಿಯನ್ನು ತೆರೆದಾಗ (1915) ಅಸದುಲ್ಲ ವಿದ್ಯಾರ್ಥಿಯಾಗಿ ಸೇರಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಬ್ರಿಟಿಷ್

ಗ್ರಂಥಾಲಯ ಸಂಘದ ಗ್ರಂಥಾಲಯ ವಿಜ್ಞಾನದ ಡಿಪ್ಲೊಮ ಪದವಿ ಪಡೆದ ಪ್ರಥಮ ಭಾರತೀಯರಿವರು. ಜೊತೆಗೆ ಇವರಿಗೆ ಆ ಸಂಘದ ಸದಸ್ಯತ್ವವೂ (ಫೆಲೊಷಿಪ್) ಲಭಿಸಿತು. ಗ್ರಂಥಾಲಯ ಕ್ಷೇತ್ರದಲ್ಲಿ ಅಸದುಲ್ಲ ವಿವಿಧ ಹುದ್ದೆಗಳನ್ನು ವಹಿಸಿ ಉತ್ತಮ ಕೃಷಿ ಮಾಡಿದ್ದಾರೆ. ಲಾಹೋರಿನ ಸರ್ಕಾರಿ ಕಾಲೇಜು, ಅಲೀಗಡ ಮುಸ್ಲಿಮ್ ವಿಶ್ವವಿದ್ಯಾಲಯ, ದೆಹಲಿಯ ಸೆಕ್ರೆಟೇರಿಯಟ್ ಗ್ರಂಥಾಲಯ, ಕೋಲ್ಕತದ ರಾಷ್ಟ್ರೀಯ ಗ್ರಂಥಾಲಯ – ಇವುಗಳಲ್ಲಿ ಇವರು ಗ್ರಂಥಪಾಲರಾಗಿ ಸೇವೆ ಸಲ್ಲಿಸಿದ್ದಾರೆ. 20ನೆಯ ಶತಮಾನದ ಪ್ರಾರಂಭ ವರ್ಷಗಳಲ್ಲಿ ಗ್ರಂಥಪಾಲರ ತರಬೇತಿ ಮತ್ತು ಹೊಸ ಗ್ರಂಥಾಲಯಗಳ ಬೆಳವಣಿಗೆಗಾಗಿ ಇವರು ಬಹಳ ಕೆಲಸ ಮಾಡಿದ್ದಾರೆ. ರಾಷ್ಟ್ರೀಯ ಗ್ರಂಥಾಲಯದಲ್ಲಿರುವ ಗ್ರಂಥಪಾಲರ ತರಬೇತಿ ವರ್ಗವನ್ನು ಪ್ರಾರಂಭಿಸಿದರಲ್ಲದೆ ಭಾರತೀಯ ಗ್ರಂಥಾಲಯ ಸಂಘದ ಸ್ಥಾಪಕರಲ್ಲೊಬ್ಬರಾಗಿಯೂ 13 ವರ್ಷ ಅದರ ಗೌರವ ಕಾರ್ಯದರ್ಶಿಯಾಗಿಯೂ ಕೆಲಸಮಾಡಿದ್ದಾರೆ. ಭಾರತೀಯ ಗ್ರಂಥಾಲಯ ಸಂಘದ ಸಮ್ಮೇಳನವನ್ನು ಕೋಲ್ಕತದಲ್ಲಿ ಜರುಗಿಸಿದ (1933) ಕೀರ್ತಿ ಇವರಿಗೆ ಸಲ್ಲುತ್ತದೆ. ಸಂಘದ ಜೀವಾಳವಾಗಿದ್ದ ಇವರ ಸೇವೆಯ ಸಾರ್ಥಕ್ಯದ ಸ್ಮರಣೆಗಾಗಿ 1935 ರಲ್ಲಿ ಇವರಿಗೆ ಖಾನ್‌ಬಹಾದೂರ್ ಎಂಬ ಬಿರುದನ್ನಿತ್ತು ಗೌರವಿಸಲಾಯಿತು. (ಎಸ್.ಆರ್.ಜಿ ಯು.)

**8. ರಂಗನಾಥನ್, ಎಸ್. ಆರ್. :** 1892–1972. ಭಾರತದ ಶ್ರೇಷ್ಠ ಗ್ರಂಥಪಾಲರು. ಭಾರತದಲ್ಲಿ ಗ್ರಂಥಾಲಯವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಓರಣಗೊಳಿಸಿದ ಮೇಧಾವಿ. ಪೂರ್ಣ ಹೆಸರು ಶಿಯಾಳಿ ರಾಮಾಮೃತ ರಂಗನಾಥನ್. ಜನನ ತಮಿಳುನಾಡಿನ ಶಿಯಾಳಿ ಎಂಬ ಊರಿನಲ್ಲಿ. ಒಂದು ಸಾಮಾನ್ಯ ಬಡ ಕುಟುಂಬಕ್ಕೆ ಸೇರಿದವರು. ತಂದೆ, ಎನ್. ರಾಮಾಮೃತ ರಂಗನಾಥನ್. ತಾಯಿ, ಸೀತಾಲಕ್ಷ್ಮಿ. ಶಿಯಾಳಿಯಲ್ಲೇ ಮ್ಯಾಟ್ರಿಕ್ ವರೆಗಿನ ವಿದ್ಯಾಭ್ಯಾಸವಾಯಿತು (1908). ಅನಂತರ ಮದ್ರಾಸಿನ ಕ್ರಿಶ್ಚನ್ ಕಾಲೇಜನ್ನು ಸೇರಿದರು. ಗಣಿತಶಾಸ್ತ್ರದಲ್ಲಿ ಇವರಿಗೆ ಅಪಾರ ಆಸಕ್ತಿ ಇತ್ತು. ವಿವಾಹವಾದದ್ದು 1907 ರಲ್ಲಿ. ಆಗಿನ್ನೂ ಇವರು ಪದವೀಧರರಾಗಿರಲಿಲ್ಲ. 1928 ರಲ್ಲಿ ಹೆಂಡತಿ ತೀರಿಕೊಂಡಳಾಗಿ 1929 ರಲ್ಲಿ ಮತ್ತೆ ಮದುವೆಯಾದರು. ವ್ಯಾಸಂಗವನ್ನು ಮುಂದುವರಿಸಿ 1913 ರಲ್ಲಿ ಬಿ.ಎ. ಪದವಿಯನ್ನು ಗಳಿಸಿ ಬಳಿಕ ಗಣಿತಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡು ಅದರಲ್ಲೆ ಎಂ.ಎ. ಪದವಿಯನ್ನೂ ಪಡೆದರು. ಇವರ ಪ್ರತಿಭೆ ಮತ್ತು ಪಾಂಡಿತ್ಯವನ್ನು ಮೆಚ್ಚಿದ ಕ್ರಿಶ್ಚನ್ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಎಡ್ವರ್ಡ್ ಬಿ. ರಾಸ್ ಇವರಿಗೆ ವ್ಯಾಸಂಗಕಾಲದಲ್ಲಿ ಅಪಾರ ಸಹಾಯ ಮಾಡಿದರು. ರಂಗನಾಥನ್ ತಮಗೆ ರಾಸ್ ಅವರಲ್ಲಿದ್ದ ವಿಶ್ವಾಸ,

ಕೃತಜ್ಞತೆಗಳ ಪ್ರತೀಕವಾಗಿ ಆ ಕಾಲೇಜಿನಲ್ಲಿ ಅವರ ಹೆಸರಿನಲ್ಲಿ ಗಣಿತ ವಿಭಾಗದಲ್ಲಿ ಒಂದು ದತ್ತಿಯನ್ನು ಸ್ಥಾಪಿಸಿದರು (1925). ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ (1917–19) ಮತ್ತು ಕೊಯಮತ್ತೂರಿನ ಸರ್ಕಾರಿ ಕಾಲೇಜಿನಲ್ಲಿ (1921 – 23) ರಂಗನಾಥನ್ ಗಣಿತಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಮದ್ರಾಸ್ ವಿಶ್ವವಿದ್ಯಾಲಯದ ಗ್ರಂಥಪಾಲನ ಹುದ್ದೆಗೆ ಕರೆಬಂದಾಗ (1924) ಆ ಕೆಲಸವನ್ನು ಬಹಳ ಆಸ್ಥೆಯಿಂದ ವಹಿಸಿಕೊಂಡರು.



ಗ್ರಂಥಾಲಯ ವಿಜ್ಞಾನದಲ್ಲಿ ಹೆಚ್ಚಿನ ತರಬೇತಿಗಾಗಿ ವಿಶ್ವವಿದ್ಯಾಲಯ ಇವರನ್ನು ಲಂಡನ್ನಿನ ಮ್ಯೂಸಿಯಂಗೆ ಕಳುಹಿಸಿಕೊಟ್ಟಿತು. ಅಲ್ಲಿ ಲಂಡನ್ ವಿಶ್ವವಿದ್ಯಾಲಯದ ಗ್ರಂಥಪಾಲ ಮತ್ತು ಡಬ್ಲ್ಯೂ. ಸಿ. ಬರ್‌ವಿಕ್ ಸೇಯರ್ಸ್ ಮುಂತಾದ ಶ್ರೇಷ್ಠ ವ್ಯಕ್ತಿಗಳ ಸಂಪರ್ಕ ರಂಗನಾಥನ್ ಅವರಿಗೆ ಆಯಿತು. ವರಿಷ್ಠ ವ್ಯಕ್ತಿಗಳ ಪರಿಚಯದಿಂದಾಗಿ ಗ್ರಂಥಾಲಯ ವಿಜ್ಞಾನದಲ್ಲಿ ಅದರಲ್ಲೂ ಗ್ರಂಥಗಳ ವರ್ಗೀಕರಣದಲ್ಲಿ ವಿಶೇಷ ಪರಿಶ್ರಮ ಲಭಿಸಿತು. ಗ್ರಂಥಗಳ ದಾಶಮಿಕ ವರ್ಗೀಕರಣ ಕ್ರಮದಲ್ಲಿ ಕಂಡುಬಂದ ಲೋಪದೋಷಗಳನ್ನೂ ಅರೆಕೊರೆಗಳನ್ನೂ ಇವರು ತೋರಿಸಿಕೊಟ್ಟರಲ್ಲದೇ ಅವುಗಳ ನಿವಾರಣೆಗಾಗಿ ಬೇರೊಂದು ವರ್ಗೀಕರಣ ಪದ್ಧತಿಯನ್ನು (ದ್ವಿಬಿಂದು ವರ್ಗೀಕರಣ – ಕೋಲನ್ ಕ್ಲಾಸಿಫಿಕೇಷನ್) ಅನುಷ್ಠಾನಕ್ಕೆ ತಂದರು. 1925 ರಲ್ಲಿ ಲಂಡನ್ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನ ಶಾಲೆ ಇವರಿಗೆ ಪ್ರಶಸ್ತಿಪತ್ರ ನೀಡಿ ಗೌರವಿಸಿತು. ಅದೇ ವರ್ಷ ರಂಗನಾಥನ್ ಭಾರತಕ್ಕೆ ಹಿಂತಿರುಗಿದರು. ಲಂಡನ್ನಿನಲ್ಲಿ ಗಳಿಸಿಕೊಂಡ ವಿಶಿಷ್ಟ ಅನುಭವಗಳಿಂದ ಮದ್ರಾಸು ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ರಂಗನಾಥನ್ ತುಂಬ ಓರಣವಾಗಿಸಿದರು. ಮುಕ್ತದ್ವಾರ (ಓಪನ್ ಆಕ್ಸೆಸ್) ಪದ್ಧತಿಯನ್ನು ಜಾರಿಗೆ ತಂದರು. ಅಲ್ಲಿನ ಆಗಿನ ಸುಮಾರು 60,000 ಗ್ರಂಥಗಳ ವೈಜ್ಞಾನಿಕ ವರ್ಗೀಕರಣ ಇವರ ಹೊಸ ಕ್ರಮದಂತೆ (ಕೋಲನ್ ಪದ್ಧತಿ) ಇವರ ನೇತೃತ್ವದಲ್ಲೇ ನಡೆಯಿತು. ಗ್ರಂಥಗಳ ಸುವ್ಯವಸ್ಥಿತ ಸೂಚಿಯನ್ನು ಇವರು ತಯಾರಿಸಿದರು. ಇವರ ವರ್ಗೀಕರಣ ಪದ್ಧತಿಯ ವಿವರಗಳು ಪುಸ್ತಕಗಳ ರೂಪದಲ್ಲಿ ಪ್ರಕಟವಾದ್ದು 1933 ರಲ್ಲಿ. ಅಲ್ಲಿಂದೀಚೆಗೆ ಈ ಪುಸ್ತಕದ ಪರಿಷ್ಕೃತ ಆವೃತ್ತಿ ಪ್ರಕಟವಾದುದು 1961 ರಲ್ಲಿ. ಗ್ರಂಥವರ್ಗೀಕರಣಕ್ಕೆ ಸಂಬಂಧಿಸಿದಂತೆ ಅಂಕನ ಪದ್ಧತಿಯನ್ನು (ನೊಟೇಷನ್ ಸಿಸ್ಟಮ್) ಬಳಸುವಲ್ಲಿ ಇವರ ವರ್ಗೀಕರಣ ಸಹಕಾರಿಯಾಯಿತು. ಇವರ ವಿಧಾನವನ್ನು ಅಳವಡಿಸಿಕೊಂಡ ಹಲವಾರು ಸಂಶೋಧನ ಗ್ರಂಥಾಲಯಗಳಲ್ಲಿ ಬ್ರಿಟಿಷ್ ನ್ಯಾಷನಲ್ ಬಯೋಗ್ರಫಿ ಸಂಸ್ಥೆಯೂ ಒಂದು. ಇದು ಅನುಸರಿಸಿದ್ದು ಈ ವಿಧಾನದ ಸರಪಳಿ ಕ್ರಮವನ್ನು (ಚೇನ್ ಪ್ರೊಸೀಜರ್). ರಂಗನಾಥನ್ 1934 ರಲ್ಲಿ ತಮ್ಮ ವರ್ಗೀಕೃತ ಸೂಚೀಸಂಹಿತೆಯನ್ನು ಪ್ರಕಟಿಸಿದರು.

ಗ್ರಂಥಪಾಲರಿಗೆ ಸುವ್ಯವಸ್ಥಿತ ತರಬೇತಿಯನ್ನೂ ಮಾರ್ಗದರ್ಶನವನ್ನೂ ನೀಡುವುದರಲ್ಲಿ ರಂಗನಾಥನ್ ಹೆಚ್ಚಿನ ಶ್ರಮವಹಿಸಿದರು. ಮದ್ರಾಸ್ ಗ್ರಂಥಾಲಯ ಸಂಘದ ಆಶ್ರಯದಲ್ಲಿ ಗ್ರಂಥಾಲಯ ತರಬೇತಿ ತರಗತಿಯನ್ನು ತೆರೆದರು (1929). ಮುಂದೆ ಈ ವಿಭಾಗ ಮದ್ರಾಸ್ ವಿಶ್ವವಿದ್ಯಾಲಯದೊಂದಿಗೆ ಸೇರ್ಪಡೆಗೊಂಡಿತು (1931). ರಂಗನಾಥನ್ 1944 ರ ವರೆಗೆ ಮದ್ರಾಸ್ ವಿಶ್ವವಿದ್ಯಾಲಯದ ಗ್ರಂಥಪಾಲರಾಗಿಯೂ ಪ್ರೆಸಿಡೆನ್ಸಿ ಕಾಲೇಜಿನ ಗ್ರಂಥಾಲಯ ವಿಭಾಗದ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದರು. ಅನಂತರ ಭಾರತದ ಪ್ರಥಮ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಮಾರಿಸ್ ಗ್ವಯರ್ ಅವರ ಆಹ್ವಾನದ ಮೇರೆಗೆ ಇವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಗ್ರಂಥಪಾಲಕರಾಗಿಯೂ ಗ್ರಂಥಾಲಯ ವಿಜ್ಞಾನ ಮುಖ್ಯಸ್ಥರಾಗಿಯೂ ಕೆಲಸಮಾಡಿದರು. (1945–47). ಆಮೇಲೆ ಇವರ ಸೇವೆ ಕ್ರಮವಾಗಿ ದಿಲ್ಲಿ ವಿಶ್ವವಿದ್ಯಾಲಯ (1947–55), ವಿಕ್ರಮ ವಿಶ್ವವಿದ್ಯಾಲಯಗಳಿಗೆ (1957–59) ಲಭಿಸಿತು. ಸೇವೆಯಿಂದ ನಿವೃತ್ತಿಹೊಂದಿದ ಬಳಿಕವೂ ಬೆಂಗಳೂರಿನಲ್ಲಿದ್ದ ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರದ ಮುಖ್ಯಸ್ಥರಾಗಿ ಇವರು ಕೆಲಸ ಮಾಡಿದರು. ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದಿಂದ ಕರೆ ಬರಲಾಗಿ (1964) ಅಲ್ಲಿಗೆ ಹೋಗಿ ಅಲ್ಲಿನ ಗ್ರಂಥಾಲಯದಲ್ಲಿ ಮತ್ತು ಸಮಾಚಾರ ವಿಜ್ಞಾನಗಳ ಶಾಲೆಯಲ್ಲಿ ವೀಕ್ಷಕ (ವಿಸಿಟಿಂಗ್) ಪ್ರಾಧ್ಯಾಪಕರಾಗಿ ಕೆಲಕಾಲ ಇದ್ದರು. ಅದೇ ವರ್ಷದಲ್ಲಿ ರಜರ್ಸ್ ವಿಶ್ವವಿದ್ಯಾಲಯದ ಒಂದು ಸಮ್ಮೇಳನದಲ್ಲಿ ಇವರು ಭಾಗವಹಿಸಿ ತಮ್ಮ ನೂತನ ವರ್ಗೀಕರಣ ಪದ್ಧತಿಯ ಬಗ್ಗೆ ವಿವರ ನೀಡಿದರು. ಇದರ ಪರಿಣಾಮವಾಗಿ ಡಿಸ್ಕ್ರಿಪ್ಟಿವ್ ಅಕೌಂಟ್ ಆಫ್ ಕೋಲನ್ ಕ್ಲಾಸಿಫಿಕೇಷನ್ ಎಂಬ ಗ್ರಂಥದ ಬಿಡುಗಡೆ (1967) ಸಾಧ್ಯವಾಯಿತು.

ಇವರ ತಾತ್ತ್ವಿಕ ಚಿಂತನೆ ಬಹುಮುಖವಾಗಿ ಹರಿದಿತ್ತು. ಸುಮಾರು 2,500 ಲೇಖನಗಳನ್ನೂ 60 ಗ್ರಂಥಗಳನ್ನೂ ಇವರು ಪ್ರಕಟಿಸಿದರು. ಇವರ ಪ್ರಕಟನೆಗಳಲ್ಲಿ ಮುಖ್ಯವಾಗಿ ಫೈವ್ ಲಾಸ್ ಆಫ್ ಲೈಬ್ರರಿ ಸೈನ್ಸ್ (1931), ಲೈಬ್ರರಿ ಅಡ್ಮಿನಿಸ್ಟ್ರೇಷನ್ (1935) ಪ್ರೋಲೆಗಾಮಿನ ಟು ಲೈಬ್ರರಿ ಕ್ಲಾಸಿಫಿಕೇಷನ್ (1933), ಥಿಯರಿ ಆಫ್ ಲೈಬ್ರರಿ ಕ್ಯಾಟಲಾಗ್ (1938). ರೆಫರೆನ್ಸ್ ಸರ್ವಿಸ್ (1940), ಕ್ಲಾಸಿಫಿಕೇಶನ್ ಅಂಡ್ ಇಂಟರ್‌ನ್ಯಾಷನಲ್ ಡಾಕ್ಯುಮೆಂಟೇಷನ್ (1948), ಲೈಬ್ರರಿ ಡೆವಲಪ್‌ಮೆಂಟ್ ಪ್ಲಾನ್ ಫಾರ್ ಇಂಡಿಯ (1950) ಕ್ಲಾಸಿಫಿಕೇಷನ್ ಅಂಡ್ ಕಮ್ಯೂನಿಕೇಷನ್ (1951) ಲೈಬ್ರರಿ ಲೆಜಿಸ್ಲೇಷನ್ (1953) ಎಲಿಮೆಂಟ್ಸ್ ಆಫ್ ಲೈಬ್ರರಿ ಕ್ಲಾಸಿಫಿಕೇಷನ್ (1962), ಹೆಡಿಂಗ್ಸ್ ಅಂಡ್ ಕ್ಯಾನನ್ಸ್ (1955), ಸೋಷಿಯಲ್ ಸೈನ್ಸ್ ರಿಸರ್ಚ್ ಅಂಡ್ ಲೈಬ್ರರೀಸ್ (1962) – ಮುಂತಾದವು ಸೇರಿವೆ.

ರಂಗನಾಥನ್ ಅನೇಕ ನಿಯತಕಾಲಿಕೆಗಳ ಸಂಪಾದಕರಾಗಿಯೂ ಅನೇಕ ಗ್ರಂಥಾಲಯ ಸಂಘ–ಸಂಸ್ಥೆಗಳ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದುಂಟು. ಇವರ ಸಂಪಾದಕತ್ವ ಪಡೆದ ಕಾಲಿಕೆಗಳಲ್ಲಿ ಆನಲ್ಸ್ ಆಫ್ ಲೈಬ್ರರಿ ಸೈನ್ಸ್ (1956– 1963), ಅಬ್ಗಿಲ (1949–1953), ಲೈಬ್ರರಿ ಸೈನ್ಸ್ ವಿತ್ ಎ ಸ್ಲ್ಯಾಂಟ್ ಟು ಡಾಕ್ಯುಮೆಂಟೇಷನ್ (1964–1972) – ಇವನ್ನು ಹೆಸರಿಸಬಹುದು. ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗ್ರಂಥಾಲಯ ಸಂಘ–ಸಂಸ್ಥೆಗಳಲ್ಲಿ ಇವರ ಸೇವೆ ಹೀಗಿದೆ; 1928 ರಲ್ಲಿ ಸ್ಥಾಪನೆಗೊಂಡ ಮದ್ರಾಸಿನ ಗ್ರಂಥಾಲಯ ಸಂಘದ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷ ಹಾಗೂ ಅಧ್ಯಕ್ಷರಾಗಿ 30 ಕ್ಕೂ ಹೆಚ್ಚು ವರ್ಷಗಳು ಇವರು ಕೆಲಸ ಮಾಡಿದ್ದಾರೆ. ಇಂಡಿಯನ್ ಲೈಬ್ರರಿ ಅಸೋಸಿಯೇಷನ್ನಿನ ಅಧ್ಯಕ್ಷರಾಗಿ (1954–1963), ಇಂಡಿಯನ್ ಸ್ಟ್ಯಾಂಡರ್ಡ್ ಇನ್‌ಸ್ಟಿಟ್ಯೂಟ್‌ನ ಅನೇಕ ಉಪಸಮಿತಿಗಳ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯ ಧನ ಆಯೋಗದ ಗ್ರಂಥಾಲಯ ಸಮಿತಿಯ ಅಧ್ಯಕ್ಷರಾಗಿ, ಭಾರತೀಯ ವೈಜ್ಞಾನಿಕ ಪ್ರಲೇಖನ ಸಂಸ್ಥೆಯ ತಾಂತ್ರಿಕ ಅಧ್ಯಕ್ಷರಾಗಿ ಆ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯರಾಗಿ, ಇಂಪೀರಿಯಲ್ ಗ್ರಂಥಾಲಯ ಸಮಿತಿಯ ಸದಸ್ಯರಾಗಿ (1948–1950) ಇವರು ಹೆಚ್ಚಿನ ಸೇವೆ ಮಾಡಿದ್ದಾರೆ. ಅನೇಕ ರಾಜ್ಯ ಸರ್ಕಾರಗಳಿಗೆ ಗ್ರಂಥಾಲಯ ಮಸೂದೆಗಳನ್ನು ತಯಾರಿಸಿಕೊಟ್ಟಿದ್ದಾರೆ. ಯುನೆಸ್ಕೊದೊಂದಿಗಿನ ಭಾರತದ ರಾಷ್ಟ್ರೀಯ ಸಹಕಾರ ಸಮಿತಿಯ ಸದಸ್ಯರಾಗಿಯೂ (1948–58) ಸಾರ್ವಜನಿಕ ಗ್ರಂಥಪಾಲರ ಯುನೆಸ್ಕೊ ಶಾಲೆಯ ಸದಸ್ಯರಾಗಿಯೂ (1948) ಯುನೆಸ್ಕೊದ ಅಂತರರಾಷ್ಟ್ರೀಯ ಗ್ರಂಥಸೂಚಿ ಸಮಿತಿಯ ಸದಸ್ಯರಾಗಿಯೂ (1950 –53) ಅಂತರರಾಷ್ಟ್ರೀಯ ಪ್ರಲೇಖನ ಸಂಯುಕ್ತ ಮಂಡಳದ ವರ್ಗೀಕರಣ ವಿಭಾಗದ ಪ್ರಧಾನ ವರದಿಗಾರರಾಗಿಯೂ ಆ ಮಂಡಳದ ಉಪಾಧ್ಯಕ್ಷರಾಗಿಯೂ (1955–56 ಮತ್ತು 1958–61) ಇವರು ಕೆಲಸ ಮಾಡಿದ್ದಾರೆ. 1957 ರಲ್ಲಿ ಇಂಗ್ಲೆಂಡಿನ ಡೋರ್ಕಿಂಗ್‌ನಲ್ಲಿ ಜರುಗಿದ ಅಂತರರಾಷ್ಟ್ರೀಯ ವರ್ಗೀಕರಣ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು.

ರಂಗನಾಥನ್ ಅವರ ಜೀವನ ಬಹು ಸರಳತೆಯಿಂದಲೂ ಮಿತವ್ಯಯದಿಂದಲೂ ಕೂಡಿತ್ತು. ತಾವು ದುಡಿಮೆಯಿಂದ ಸಂಪಾದಿಸಿ ಉಳಿಸಿದ ಹಣವನ್ನು ಇವರು ತಮ್ಮ ಎರಡನೆಯ ಪತ್ನಿಯ ಗೌರವಾರ್ಥ ಗ್ರಂಥಾಲಯ ವಿಜ್ಞಾನಕ್ಕೆ ಮೀಸಲಾದ ಶಾರದಾ–ರಂಗನಾಥನ್ ದತ್ತಿಯನ್ನು ಸ್ಥಾಪಿಸಲು (1962) ಮದ್ರಾಸ್ ವಿಶ್ವವಿದ್ಯಾಲಯಕ್ಕೆ ನೀಡಿದರು. ದತ್ತಿಯ ಹಣದಿಂದ ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಉದ್ದಾಮ ಪಂಡಿತರಿಂದ ವಿಶೇಷೋಪನ್ಯಾಸಗಳು ಅಲ್ಲಿ ಜರುಗುತ್ತವಲ್ಲದೆ ಅದನ್ನು ಗ್ರಂಥರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ರಂಗನಾಥನ್ ಅವರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ಗೌರವಗಳು ಲಭಿಸಿವೆ. ದೆಹಲಿ ವಿಶ್ವವಿದ್ಯಾಲಯ 1964ರಲ್ಲೂ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯ 1964ರಲ್ಲೂ ಇವರಿಗೆ ಡಿ.ಲಿಟ್ ಪದವಿಯನ್ನಿತ್ತು ಗೌರವಿಸಿದೆ. 1935ರಲ್ಲಿ ಇವರಿಗೆ ಅಂದಿನ ಭಾರತ ಸರ್ಕಾರ ರಾವ್‌ಸಾಹೇಬ ಎಂಬ ಬಿರುದನ್ನಿತ್ತುದಲ್ಲದೆ 1952ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ನೀಡಿತು. ಅಮೆರಿಕದ ಮಾರ್ಗರೇಟ್ ಮಾನ್ ಪಾರಿತೋಷಕವನ್ನು ಪಡೆದ (1970) ಪ್ರಥಮ ಭಾರತೀಯರಿವರು. ಅಮೆರಿಕದ ಮಾರ್ಕ್‌ಟ್ವೇನ್ ಸೊಸೈಟಿ ಇವರಿಗೆ ಗ್ರ್ಯಾಂಡ್ ನೈಟ್ ಆಫ್ ದಿ ಪೀಸ್ ಎಂಬ ಗೌರವ ಪ್ರಶಸ್ತಿಯನ್ನಿತ್ತು ಗೌರವಿಸಿತು.

(ಎಸ್.ಆರ್.ಜಿಯು.; ಟಿ.ಎಲ್.ಬಿ.)

**9. ಮಾರ್ಷಲ್ ಡಿ. ಎನ್. :** 1906– . ಆಧುನಿಕ ಭಾರತದ ಪ್ರಮುಖ ಗ್ರಂಥಾಲಯ ವಿಜ್ಞಾನಿಗಳಲ್ಲೊಬ್ಬರು. 25 ಏಪ್ರಿಲ್ 1906 ರಂದು ಹುಟ್ಟಿದರು. ಬಾಲ್ಯದಿಂದಲೇ ಪ್ರತಿಭಾವಂತ ವಿದ್ಯಾರ್ಥಿಯೆನಿಸಿಕೊಂಡಿದ್ದು ಮುಂಬಯಿ ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲೂ (1927) ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪ್ರಥಮರಾಗಿಯೂ (1930) ತೇರ್ಗಡೆ ಯಾದರು. ಆಗಿನ ಮುಂಬಯಿ ಪ್ರಾಂತ್ಯದಿಂದ ಐ.ಸಿ.ಎಸ್. ಪರೀಕ್ಷೆಗೆ

ಕಟ್ಟಿ ಮುಂಬಯಿ ಪ್ರಾಂತ್ಯಕ್ಕೆ ಪ್ರಥಮಸ್ಥಾನ ಪಡೆದು ಅಪೂರ್ವ ಯಶಸ್ಸು ಗಳಿಸಿದರು. ರಾಜಕೀಯ ಕಾರಣಗಳಿಂದಾಗಿ ಐ.ಸಿ.ಎಸ್. ಸೇವೆಯನ್ನು ಸೇರುವುದು ಇವರಿಗೆ ಸಾಧ್ಯವಾಗಲಿಲ್ಲ. ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಹಾಗೂ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದರು. ಬಳಿಕ ಇವರ ಒಲವು ಗ್ರಂಥಾಲಯ ಆಡಳಿತ ಹಾಗೂ ವಿಜ್ಞಾನದ ಪಾಠ ಹೇಳುವುದರ ಕಡೆಗೆ ತಿರುಗಿತು. ಅದೇ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ವಿಜ್ಞಾನದ ಪರೀಕ್ಷೆಗೆ ಕಟ್ಟಿ ಅದರಲ್ಲೂ ಪ್ರಥಮ ವರ್ಗದಲ್ಲಿ ಪ್ರಥಮರಾಗಿ ತೇರ್ಗಡೆಯಾದರು. ಅನಂತರ ಮುಂಬಯಿ ವಿಶ್ವವಿದ್ಯಾಲಯದ ಗ್ರಂಥಪಾಲ ಮತ್ತು ಗ್ರಂಥಾಲಯ ವಿಜ್ಞಾನದ ಪ್ರಮುಖ ಪ್ರಾಧ್ಯಾಪಕರಾಗಿ ನೇಮಕಗೊಂಡು (1947) 1971 ರ ವರೆಗೂ ಸೇವೆ ಸಲ್ಲಿಸಿದರು. ಅಲ್ಲಿಯೇ ಗ್ರಂಥಾಲಯ ವಿಜ್ಞಾನದ ಗೌರವ ಪ್ರಾಧ್ಯಾಪಕ ರಾಗಿಯೂ ಕೆಲಸ ಮಾಡಿದರು.



ಮಾರ್ಷಲ್ ಪ್ರಸಿದ್ಧ ಸೂಚಿಕಾರರಲೊಬ್ಬರು. ಈ ಕ್ಷೇತ್ರದಲ್ಲಿ ಅವರಿತ್ತ ಎರಡು ಅತ್ಯಮೂಲ್ಯ ಕೊಡುಗೆಗಳಿವು : ಮೊಗಲ್ ಬಿಬ್ಲಿಯಾಗ್ರಫಿ ಸೆಲೆಕ್ಟ್ ಪರ್ಷಿಯನ್ ಸೋರ್ಸಸ್ ಫಾರ್ ದಿ ಸ್ಟಡಿ ಆಫ್ ಮೊಗಲ್ಸ್ ಇನ್ ಇಂಡಿಯ; ಮೊಗಲ್ಸ್ ಇನ್ ಇಂಡಿಯ: ಎ ಬಿಬ್ಲಿಯಾಗ್ರಫಿಕಲ್ ಸರ್ವೆ – ಇವು ಮೊಗಲರ ಆಳ್ವಿಕೆ ಕುರಿತ ಅಭ್ಯಾಸ ಹಾಗೂ ಸಂಶೋಧನೆಗೆ ತುಂಬ ಪ್ರಯೋಜನಕಾರಿಯಾಗಿವೆ.

1953ರಲ್ಲಿ ವಿಯೆನ್ನದಲ್ಲಿ ಜರುಗಿದ ಗ್ರಂಥಾಲಯ ಸಂಘಗಳ ಅಂತಾರಾಷ್ಟ್ರೀಯ ಸಂಯುಕ್ತ ಸಂಘಕ್ಕೆ ಇವರು ಭಾರತದ ಪ್ರತಿನಿಧಿಯಾಗಿದ್ದರು. ಇಫ್ಲದ ಸಹಕಾರದೊಂದಿಗೆ ರಚಿತವಾದ ಭಾರತದ ರಾಷ್ಟ್ರೀಯ ಸಂಘದ ಗ್ರಂಥಸೂಚಿ ಸಲಹಾ ಸಮಿತಿಯ ಸದಸ್ಯರಾಗಿದ್ದರು. ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಹಾಗೂ ಸಮಾಚಾರ ವಿತರಣ ಕೇಂದ್ರಗಳ ಸಂಘದ ಉಪಾಧ್ಯಕ್ಷರಾಗಿದ್ದರು. ಪಾಟ್ನದಲ್ಲಿ ಸೇರಿದ 14ನೆಯ ಅಖಿಲ ಭಾರತ ಗ್ರಂಥಾಲಯ ಪರಿಷತ್ತಿನ ಅಧ್ಯಕ್ಷರಾಗಿದ್ದರು (1964). 1960ರಲ್ಲಿ ಮುಂಬಯಿಯಲ್ಲಿ ಸೇರಿದ 8ನೆಯ ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಮಹಾ ಸಂಘದ ಅಧಿವೇಶನದ ಅಧ್ಯಕ್ಷರಾಗಿದ್ದರು. ಇದಲ್ಲದೆ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಮೀಕ್ಷಾ ಸಮಿತಿಯ ಸದಸ್ಯರಾಗಿಯೂ ಇವರು ಸೇವೆಸಲ್ಲಿಸಿದ್ದಾರೆ.

ಇವರು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವು ಲೇಖನಗಳನ್ನು ಬರೆದಿದ್ದಾರೆ.

(ಕೆ.ಎಸ್.ಡಿ.ಇ.)

**10. ಕೇಶವನ್, ಬಿ.ಎಸ್.** : 1909–2000. ಭಾರತ ಗ್ರಂಥಾಲಯ ವಿಜ್ಞಾನಿಗಳಲ್ಲಿ ಒಬ್ಬರು. ಭಾರತದಲ್ಲಿ ಗ್ರಂಥಾಲಯೋದ್ಯಮವನ್ನು ಒಂದು ಉದಾತ್ತ ಉದ್ಯಮವನ್ನಾಗಿ ಪರಿವರ್ತಿಸುವಲ್ಲಿ ಸತತವಾಗಿ ಪರಿಶ್ರಮಿಸಿದರು. ಶಿಕ್ಷಕನಾಗಿ, ಗ್ರಂಥಪಾಲಕನಾಗಿ, ಹಿರಿಯ ಯೋಜಕನಾಗಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕ್ಷೇತ್ರಗಳಲ್ಲಿ ಹೆಚ್ಚಿನ ಕೆಲಸ ಮಾಡಿದ್ದಾರೆ (**ನೋಡಿ– ಕೇಶವನ್, ಬಿ.ಎಸ್.**).

ಇವರಿಗೆ ದೆಹಲಿಯಲ್ಲಿರುವ ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನ ಮಂಡಳದ ಆರ್ಥಿಕ ಸಂಪನ್ಮೂಲಗಳ ಹಾಗೂ ಔದ್ಯೋಗಿಕ ನಿಘಂಟು ಕಚೇರಿಯಲ್ಲಿ ಸಹಕಾರ್ಯದರ್ಶಿಯಾಗಿ ಹುದ್ದೆಗಾಗಿ ಕರೆಬಂತು (1944). ಭಾರತದ ಸಂಪತ್ತು (ದಿ ವೆಲ್ತ್ ಆಫ್ ಇಂಡಿಯ) ಎಂಬ ಗ್ರಂಥಪ್ರಕಟನೆಯಲ್ಲಿ ಕೇಶವನ್ ಪ್ರಮುಖವಾಗಿ ಭಾಗವಹಿಸಿದ್ದು ಇಲ್ಲಿದ್ದಾಗಲೇ. ಮುಂದೆ ಎರಡು ವರ್ಷಗಳ ತರುವಾಯ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಲ್ಲಿ ಇವರು ಅಧಿಕಾರಿಗಳಾದರು. ಕಲ್ಕತ್ತೆಯಲ್ಲಿ ರಾಷ್ಟ್ರೀಯ ಗ್ರಂಥಾಲಯದ ಪ್ರಥಮ ಗ್ರಂಥಪಾಲಕರಾಗಿ ನೇಮಕ ಗೊಂಡಿದ್ದು 1948ರಲ್ಲಿ. ಇವರು ಹಾಗೆ ನೇಮಕಗೊಂಡಾಗ ಅದಕ್ಕೊಂದು ಸುಸಜ್ಜಿತ ಕಟ್ಟಡವಿರಲಿಲ್ಲ. ವೈಸರಾಯ್ ನಿವಾಸವಾಗಿದ್ದ ಬೆಲ್ವಡೇರ್ ಅರಮನೆಯನ್ನು ಗ್ರಂಥಾಲಯಕ್ಕೆ ದೊರಕಿಸಿಕೊಡುವುದರಲ್ಲಿ ಇವರು ಯಶಸ್ವಿಯಾದರು. ಈ ಗ್ರಂಥಾಲಯವನ್ನು ಬೆಳೆಸಿದ ಮತ್ತು ಅಧುನಾತನಗೊಳಿಸಿದ ಕೀರ್ತಿ ಇವರದು. ಇವರು ಮಾಡಿದ ಇನ್ನೊಂದು ಕೆಲಸವೆಂದರೆ ಅಲ್ಲಿ ಭಾಷಾ ವಿಭಾಗವನ್ನಾರಂಭಿಸಿದ್ದು. ರಾಷ್ಟ್ರೀಯ ಗ್ರಂಥಸೂಚಿಗಾಗಿ ಇವರು ಪ್ರಾರಂಭಿಸಿದ ಯೋಜನೆ 1958ರಲ್ಲಿ ಕಾರ್ಯಗತವಾಯಿತು.

ಇವರು ರಾಷ್ಟ್ರೀಯ ಗ್ರಂಥಾಲಯದ ಗ್ರಂಥಸಂಗ್ರಹವನ್ನು ಗಣನೀಯವಾಗಿ ಹೆಚ್ಚಿಸಿದರು. ಅಪೂರ್ವ ವೈಯಕ್ತಿಕ ಸಂಗ್ರಹಗಳನ್ನು ಕಲೆಹಾಕಿದರು. ಕೇಂದ್ರೀಯ ಸಂದರ್ಭ ಗ್ರಂಥಾಲಯವನ್ನು ಪ್ರಾರಂಭಿಸಿದರು.

ಕೇಂದ್ರ ರಾಷ್ಟ್ರೀಯ ಫಿಸಿಕಲ್ ಲ್ಯಾಬೊರೇಟರಿಯ ಒಂದು ಅಂಶವಾಗಿದ್ದ ಭಾರತದ ರಾಷ್ಟ್ರೀಯ ವೈಜ್ಞಾನಿಕ ಕೇಂದ್ರವನ್ನು ಪ್ರತ್ಯೇಕಿಸಿ ಅದಕ್ಕೆ ಪ್ರಥಮ ನಿರ್ದೇಶಕರೆಂದು ಕೇಶವನ್ ಅವರನ್ನು ಆಹ್ವಾನಿಸಲಾಯಿತು. ಅನಂತರ ಭಾರತ ಸರ್ಕಾರ ಇವರನ್ನು ಗ್ರಂಥಾಲಯ ಸಲಹೆಗಾರರೆಂದು ನಿಯಮಿಸಿತು. ಗ್ರಂಥಾಲಯ ವಿಜ್ಞಾನದಲ್ಲಿ ವೀಕ್ಷಕ ಪ್ರಾಧ್ಯಾಪಕರೆಂದು ದೆಹಲಿ ವಿಶ್ವವಿದ್ಯಾಲಯ ಇವರನ್ನು ನೇಮಿಸಿಕೊಂಡಿತು. ಯುನೆಸ್ಕೊ ಇವರನ್ನು ಮನಿಲಾದಲ್ಲಿ ನಡೆದ ಏಷ್ಯದ ರಾಷ್ಟ್ರೀಯ ಗ್ರಂಥಾಲಯಗಳ ಸಮ್ಮೇಳನಕ್ಕೆ ಮುಖ್ಯ ಕಾರ್ಯಕರ್ತರನ್ನಾಗಿ ಆಮಂತ್ರಿಸಿತು (1964). ಭಾರತ ಸರ್ಕಾರದಿಂದ ಇವರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತದ್ದು 1960ರಲ್ಲಿ.

ಕೇಶವನ್ ಭಾರತೀಯ ಗ್ರಂಥಾಲಯ ಸಂಘದ ಅಧ್ಯಕ್ಷರಾಗಿ ಒಂದು ದಶಕದವರಗೆ ಸೇವೆ ಸಲ್ಲಿಸಿದ್ದಾರೆ. ಇವರು ಗ್ರಂಥಸೂಚಿಯ ಮೇಲಿನ ಅಂತಾರಾಷ್ಟ್ರೀಯ ಸಮಿತಿ, ಯುನೆಸ್ಕೊದ ಪ್ರಲೇಖನ ಹಾಗೂ ಪರಿಭಾಷೆ ಸಮಿತಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಗ್ರಂಥಪಾಲಕರ ಸಮಿತಿ ಹಾಗೂ ವಿಶ್ವವಿದ್ಯಾಲಯಗಳ ಪಠ್ಯಕ್ರಮ ಮಂಡಳಿಗಳ ಸದಸ್ಯರಾಗಿದ್ದರು. ಅಂತಾರಾಷ್ಟ್ರೀಯ ಪ್ರಲೇಖನ ಮಂಡಳದ ಆಫ್ರೋ ಏಷ್ಯನ್ ವಿಭಾಗಕ್ಕೆ ಉಪಾಧ್ಯಕ್ಷರಾಗಿದ್ದರು. ಪ್ರಲೇಖನ ವಿಷಯದಲ್ಲಿ ಯುನೆಸ್ಕೊದ ಸಲಹಾಗಾರರಾಗಿದ್ದರು. ಭಾರತೀಯ ಮಾನಕ ಸಂಸ್ಥೆಯ ಪ್ರಲೇಖನ ವಿಭಾಗ ಸಮಿತಿಯ ಅಧ್ಯಕ್ಷರಾಗಿದ್ದರು. ಇವರು ಭಾರತದ ರಾಷ್ಟ್ರೀಯ ಗ್ರಂಥ ಸಂಸ್ಥೆಯ ಸದಸ್ಯರಾಗಿದ್ದರಲ್ಲದೆ ಇರಾನಿನ ಪ್ರಲೇಖನ ಕೇಂದ್ರ ಸ್ಥಾಪನೆ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಯುನೆಸ್ಕೊದ ತಜ್ಞರಾಗಿ ಸೇವೆ ಸಲ್ಲಿಸಿದರು. ರಾಷ್ಟ್ರೀಯ ಗ್ರಂಥಾಲಯವನ್ನು ಕುರಿತು ಇವರು ಬರೆದ ಪುಸ್ತಕ, ಇಂಡಿಯಾಸ್ ನ್ಯಾಷನಲ್ ಲೈಬ್ರರಿ– ಎಂಬುದು ಬಹು ಉಪಯುಕ್ತವಾಗಿದೆ.

(ಟಿ.ಎಲ್.ಬಿ.)

## XI ಗ್ರಂಥಾಲಯ – ಒಂದು ಮುನ್ನೋಟ

ಶಿಕ್ಷಣ ಹಾಗೂ ಸಂಶೋಧನ ಕ್ಷೇತ್ರಗಳಲ್ಲಿ ಇದುವರೆಗೂ ಪ್ರಚಲಿತವಿದ್ದ ಸಾಂಪ್ರದಾಯಿಕ ವಿಧಾನಗಳು ಸಹಜವಾಗಿ ಬದಲಾಗುತ್ತಿವೆ. ಇದರಿಂದಾಗಿ ಹೊಸ ಸಂದರ್ಭಗಳಿಗೆ ತಕ್ಕಂತೆ ಗ್ರಂಥಾಲಯಗಳು ಮತ್ತು ವಿದ್ವಾಂಸರೂ ಹೊಸ ಹೊಸ ಮಾರ್ಗಗಳನ್ನು ಹುಡುಕಬೇಕಾಗಿದೆ.. ಸರ್ಕಾರ ಮತ್ತು ಜನತೆ ಜನಸಂಖ್ಯೆಯ ಸ್ಫೋಟವನ್ನು ಕುರಿತು ಭಯಗ್ರಸ್ತರಾಗಿರುವಂತೆ ಸಂಶೋಧಕರಿಗೆ ಮತ್ತು ವಿದ್ವಾಂಸರಿಗೆ ತೀವ್ರಗತಿಯ ಜ್ಞಾನಸ್ಫೋಟ ಕಾತರತೆಯನ್ನುಂಟು ಮಾಡಿದೆ. ಪುಸ್ತಕಗಳ ಮಾತು ಹಾಗಿರಲಿ. ಹಿಂದಿನ ಮೂರು ಶತಮಾನಗಳಲ್ಲಿ ಪ್ರಕಟವಾಗಿರುವ ನಿಯತಕಾಲಿಕೆಗಳನ್ನು ನೋಡಿದಾಗ, ಅವುಗಳಲ್ಲಿ ಮಹತ್ತರವಾದ ಬೆಳವಣಿಗೆ ಕಂಡುಬರುತ್ತದೆ. 17ನೆಯ ಶತಮಾನದ ಉತ್ತರಾರ್ಧದಲ್ಲಿ ಒಂದೇ ಒಂದು ನಿಯತಕಾಲಿಕೆ ಪ್ರಕಟವಾಗುತ್ತಿತ್ತೆಂದು ಹೇಳುತ್ತಾರೆ. ಇಂದು ಇವುಗಳ ಸಂಖ್ಯೆ ಒಂದು ಲಕ್ಷವನ್ನೂ ಮೀರಿದೆ. ಭಾರತ ಒಂದರಲ್ಲಿಯೇ ಪ್ರಕಟವಾಗುತ್ತಿರುವ ಸಮಾಚಾರ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳ ಸಂಖ್ಯೆ ಅನೇಕ ಸಾವಿರಗಳಿಗೂ ಹೆಚ್ಚಿದೆ. ಈ ಸನ್ನಿವೇಶಕ್ಕೆ ಹೊಂದಿಕೊಳ್ಳಲು ಗ್ರಂಥಾಲಯಗಳ ಗಾತ್ರವೂ ಬೆಳೆಯಬೇಕೆಂಬುದು ಸ್ಪಷ್ಟವೇ ಆಗಿದೆ. ಒಂದೇ ಒಂದು ವಿಷಯದ ಮೇಲೆ ಪ್ರಕಟವಾಗುವ ನಿಯತಕಾಲಿಕೆಗಳನ್ನು ಪರೀಕ್ಷಿಸುವುದರಿಂದ ಈ ವಿಷಯ ಇನ್ನೂ ಸ್ಪಷ್ಟವಾಗುತ್ತದೆ. ಉದಾ: ರಸಾಯನಶಾಸ್ತ್ರವನ್ನು ತೆಗೆದುಕೊಳ್ಳೋಣ. ಈ ವಿಭಾಗದ ಸಾರಸಂಗ್ರಹವನ್ನು ಪ್ರಕಟಿಸುವ ನಿಯತಕಾಲಿಕೆ ರಸಾಯನಶಾಸ್ತ್ರ ವಿದ್ಯಾರ್ಥಿಗೆ ತುಂಬ ಪರಿಚಿತವಾದದು. ಇತ್ತೀಚಿನ ಒಂದೇ ಒಂದು ವರ್ಷದಲ್ಲಿ 100 ದೇಶಗಳಲ್ಲಿ 54 ಭಾಷೆಗಳಲ್ಲಿ ಪ್ರಕಟವಾದ 11,500 ಪತ್ರಿಕೆಗಳಲ್ಲಿನ 2,15,000 ಲೇಖನಗಳ ಸಂಗ್ರಹವನ್ನು ಈ ಪತ್ರಿಕೆ ಒಳಗೊಂಡಿತ್ತು. ಹೀಗಾಗಿ ಒಂದು ವರ್ಷದಲ್ಲಿ ಪ್ರಕಟಿತವಾದ ಸಾರಸಂಗ್ರಹಗಳಲ್ಲಿನ ಪ್ರತಿಯೊಂದು ಲೇಖನವನ್ನೂ ಓದಲು ಪ್ರಯತ್ನಿಸುವ ರಸಾಯನಶಾಸ್ತ್ರಜ್ಞ ಸೋತುಹೋಗುತ್ತಾನಲ್ಲದೆ ಹಿಂದೆ ಬೀಳುವ ಸಂಭವವೂ ಉಂಟು.

ಇನ್ನೊಂದು ಗಮನಾರ್ಹ ವಿಷಯ ಎಂದರೆ ಬೆಳೆಯುತ್ತಿರುವ ಗ್ರಂಥಾಲಯಗಳ ಗಾತ್ರ. ಗ್ರಂಥಾಲಯ ಪ್ರಪಂಚದಲ್ಲಿ ಬೃಹತ್ ಗ್ರಂಥಾಲಯಗಳ ಪೈಕಿ ಮಧ್ಯಮ ಪ್ರಮಾಣದ್ದೆಂದು ಪರಿಗಣಿತವಾದ ಏಲ್ ವಿಶ್ವವಿದ್ಯಾಲಯ 60 ಲಕ್ಷ ಗ್ರಂಥಗಳನ್ನು ಹೊಂದಿದೆ. ಕಳೆದ ಶತಮಾನದ ಮೊದಲಿನಲ್ಲಿ ಅಲ್ಲಿ ಕೇವಲ 3,61,000 ಗ್ರಂಥಗಳು ಮಾತ್ರ ಇದ್ದವು. ಇದೇ ರೀತಿಯಲ್ಲೆ ಬೆಳೆಯುತ್ತ ಹೋದರೆ ಆ ಗ್ರಂಥಾಲಯದ ಗಾತ್ರ 2040ರ ಹೊತ್ತಿಗೆ 6,000 ಮೈಲಿ ಉದ್ದದ ಬೀರುಗಳನ್ನು ಆಕ್ರಮಿಸುವ 200 ಕೋಟಿ ಗ್ರಂಥಗಳಷ್ಟಾಗಿ ಬೆಳೆಯಬಹುದು. ಅಷ್ಟು ಹೊತ್ತಿಗೆ ಅದರ ಪತ್ರಿಕಸೂಚಿ ಹತ್ತು ಲಕ್ಷ ವಿಷಯಪಟ್ಟಿ ಸೆಳೆಖಾನೆಗಳನ್ನು ಹೊಂದಿದ್ದು ಅವುಗಳಿಗೇ ಸುಮಾರು 80 ಎಕರೆ ಜಾಗ ಬೇಕಾಗುತ್ತದೆ. ಜಾಗತಿಕವಾಗಿ ಒಂದು ವರ್ಷದಲ್ಲಿ 12 ಲಕ್ಷ ಗ್ರಂಥಗಳ ಮೂಲಕ ಹೊಸ ಹೊಸ ವಿಷಯಗಳು ಹೊರಬರುತ್ತಿವೆ. ಈ ಗ್ರಂಥಗಳನ್ನು ಗ್ರಂಥಪಟ್ಟಿಗೆ ಸೇರಿಸಲು 6,000 ಕ್ಕೂ ಮಿಗಿಲಾಗಿ ಸಿಬ್ಬಂದಿ ಬೇಕಾಗುತ್ತದೆ. ಈ ಸ್ಫೋಟ ಭವಿಷ್ಯದಲ್ಲಿ ಗ್ರಂಥಾಲಯದ ನಾಶಕ್ಕೆ ಕಾರಣವಾಗಬಹುದೆಂಬ ಶಂಕೆ ನಮ್ಮನ್ನು ಕಾಡಬಹುದು. ಆದರೆ ಈಗ ಚಾಲ್ತಿಯಲ್ಲಿರುವ ಸಿಡಿ, ಮೈಕ್ರೊಚಿಪ್ ಇತ್ಯಾದಿ ತಂತ್ರಜ್ಞಾನದಿಂದಾಗಿ ಇಡೀ ಗ್ರಂಥಾಲಯವನ್ನು ಕೇವಲ ಒಂದು ಕೋಣೆಯೊಳಗೆ ಅಡಕ ಮಾಡಿಬಿಡಬಹುದಾಗಿದೆ.

ಈ ಲೇಖನದಲ್ಲಿ ಸಾಂಪ್ರದಾಯಿಕ ಪುಸ್ತಕಗಳನ್ನೊಳಗೊಂಡ ಗ್ರಂಥಾಲಯಗಳ ಹುಟ್ಟು, ಬೆಳವಣಿಗೆ ಮತ್ತು ಸೇವಾ ಸೌಲಭ್ಯಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಇತ್ತೀಚಿನ ಬೆಳವಣಿಗೆಗಳಾದ ವಿದ್ಯುನ್ಮಾನ ಮಾಹಿತಿ ಆಕರಗಳು, ಡಿಜಿಟಲ್ ಗ್ರಂಥಾಲಯಗಳು ಹಾಗೂ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದತ್ತಾಂಶ ಕೋಶಿಗಳನ್ನು ಈ ಲೇಖನ ಒಳಗೊಂಡಿರುವುದಿಲ್ಲ. ಆಧುನಿಕ ಗ್ರಂಥಾಲಯಗಳಲ್ಲಿ ತಂತ್ರಾಂಶ ಬಳಸಿ ನೆರವೇರಿಸುವ ವಿವಿಧ ಕಾರ್ಯಚಟುವಟಿಕೆಗಳು ಹಾಗೂ ವಿದ್ಯುನ್ಮಾನ ಮಾಹಿತಿ ಆಕರಗಳಾದ: ಗ್ರಂಥಗಳು, ನಿಯತಕಾಲಿಕೆಗಳು, ಮಹಾಪ್ರಬಂಧಗಳು, ದತ್ತಾಂಶ ಕೋಶಿಗಳು (Databases) ಮತ್ತು ಸಂಸ್ಥೆಗಳ ವಿಶೇಷ/ಅಪರೂಪದ ಸಂಗ್ರಹಗಳನ್ನು (Institutional Repositories) ಕುರಿತಾದ ಪ್ರತ್ಯೇಕವಾದ ಲೇಖನದ ಅಗತ್ಯವಿರುವುದರಿಂದ ಇಲ್ಲಿ ವಿವರಿಸಿರುವುದಿಲ್ಲ. (ಎಸ್.ಆರ್.ಆರ್.)

**ಗ್ರಂಥಾಲಯ ವಿಜ್ಞಾನ :** ಗ್ರಂಥಾಲಯಗಳಲ್ಲಿನ ವಿವಿಧ ಗ್ರಂಥಗಳ ಪಾಲನೆ, ಸಂಗ್ರಹಣೆ, ಯುಕ್ತ ವಿತರಣೆ; ಗ್ರಂಥಗಳಿಗೆ ಮತ್ತು ಇತರ ಜ್ಞಾನ ಸಾಧನೆಗಳಿಗೆ ಸಂಬಂಧಿಸಿದಂತೆ ಬೇರೆಬೇರೆ ಸೂಚಿಗಳ ತಯಾರಿಕೆ; ಗ್ರಂಥಾಲಯದ ಹಣಕಾಸಿನ ವ್ಯವಹಾರದ ಸಮರ್ಪಕ ನಿರ್ವಹಣೆ, ಯಂತ್ರ ಹಾಗೂ ಆಧುನಿಕ ತಂತ್ರಗಳಿಂದ ಗ್ರಂಥಾಲಯ ವ್ಯವಸ್ಥೆಯನ್ನು ನವೀಕರಿಸುವ ಕೆಲಸ-ಮುಂತಾದ ಎಲ್ಲ ವಿಷಯಗಳನ್ನೂ ಒಳಗೊಂಡ ಗ್ರಂಥಾಲಯ ಶಾಸ್ತ್ರವನ್ನು ಈ ಹೆಸರಿನಿಂದ ಕರೆಯಲಾಗಿದೆ (ಲೈಬ್ರರಿ ಸೈನ್ಸ್). ಇದು ಒಂದು ಶಾಸ್ತ್ರವಾಗಿ ರೂಪುಗೊಂಡು ಬೆಳೆದದ್ದು ಇಪ್ಪತ್ತನೆಯ ಶತಮಾನದಲ್ಲಿ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮೊದಲಾದ ಮುಂದುವರಿದ ರಾಷ್ಟ್ರಗಳಲ್ಲಿ ಇದು ಬಹುಬೇಗ, ಬಹು ಚೆನ್ನಾಗಿ ಅಭಿವೃದ್ಧಿ ಹೊಂದಿತು. ಈ ವಿಷಯದಲ್ಲಿ ಗ್ರಂಥಾಲಯ ಸಿಬ್ಬಂದಿ ವರ್ಗಕ್ಕೆ ತರಬೇತಿ ಕೊಡಲು ಅನೇಕಾನೇಕ ಶಿಕ್ಷಣಶಾಲೆಗಳು ಹುಟ್ಟಿಕೊಂಡವು. ಅಭಿವೃದ್ಧಿ ಹೊಂದುತ್ತಿರುವ ಇತರ ರಾಷ್ಟ್ರಗಳಲ್ಲಿ ಇಂಥ ಪ್ರಯತ್ನ ನಡೆದದ್ದು ಸ್ವಲ್ಪ ತಡವಾಗಿಯೇ. ಆದರೂ ಭಾರತ, ಆಫ್ರಿಕ, ಲ್ಯಾಟಿನ್ ಅಮೆರಿಕ ಮೊದಲಾದ ರಾಷ್ಟ್ರಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಗ್ರಂಥಾಲಯ ವಿಜ್ಞಾನಕ್ಕೆ ಶಾಶ್ವತವಾದ ನೆಲೆ ಮತ್ತು ಬೆಲೆ ಬಂದಿರುವುದು ಮುಖ್ಯವಾಗಿ ವಿಶ್ವಸಂಸ್ಥೆಯ ಅಂಗವಾದ ಯುನೆಸ್ಕೊದ ಸಹಾಯ ಹಾಗೂ ಪ್ರೋತ್ಸಾಹದಿಂದ. ಅಲ್ಲದೆ ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಯುಕ್ತ ಮಹಾಸಂಘ, ಅಮೆರಿಕದ ಗ್ರಂಥಾಲಯ ಸಂಘ, ಭಾರತ ಗ್ರಂಥಾಲಯ ಸಂಘ, ಪ್ರಲೇಖನಕ್ಕೆ ಸಂಬಂಧಪಟ್ಟ ಅನೇಕ ಸಂಘಗಳು- ಈ ಮೊದಲಾದ ಸಂಸ್ಥೆಗಳು ಗ್ರಂಥಾಲಯಗಳ ಅಭಿವೃದ್ಧಿಯ ಬಗ್ಗೆ ಹೇಗೋ ಹಾಗೆ ಗ್ರಂಥಾಲಯ ಶಿಕ್ಷಣದ ಬಗ್ಗೆಯೂ ಹೆಚ್ಚಿನ ಕೆಲಸ ಮಾಡಿವೆ, ಮಾಡುತ್ತಿವೆ.

ಗ್ರಂಥಾಲಯ ವಿಜ್ಞಾನ ಹಾಗೂ ಶಿಕ್ಷಣ ಪದ್ಧತಿಗಳು ಬೆಳೆದು ಬಂದ ರೀತಿಯನ್ನು ಸಿಂಹಾವಲೋಕನ ಕ್ರಮದಿಂದ ಇಲ್ಲಿ ರೂಪಿಸಲಾಗಿದೆ.

ಪ್ರಾಚೀನ ಭಾರತದಲ್ಲಾಗಲೀ ಗ್ರೀಸ್, ರೋಮ್ ಹಾಗೂ ಮಧ್ಯಯುಗೀನ ಯುರೋಪಿನಲ್ಲಾಗಲೀ ಪ್ರಸಿದ್ಧ ಗ್ರಂಥಾಲಯಗಳು ಇದ್ದುವೆನ್ನಲು ಆಧಾರಗಳು ಇವೆಯಾದರೂ ಅವುಗಳ ವ್ಯವಸ್ಥೆ ಹೇಗಿತ್ತು, ಗ್ರಂಥವಿಂಗಡಣೆ ಹೇಗಿದ್ದವು, ಆಗಿದ್ದ ಸೂಚಿಗಳು ಹೇಗಿದ್ದವು ಎಂಬ ಬಗ್ಗೆ ವಿವರಗಳು ಹೆಚ್ಚಾಗಿ ಉಳಿದು ಬಂದಿಲ್ಲ. ಆದರೆ ಅನೇಕ ಗ್ರಂಥಾಲಯಗಳಲ್ಲಿ ಒಳ್ಳೆಯ ವ್ಯವಸ್ಥೆ ಇತ್ತು ಎಂದು ತಿಳಿಯಲು ಅಲ್ಪಸ್ವಲ್ಪ ಆಧಾರ ದೊರೆಯುತ್ತದೆ (**ನೋಡಿ- ಗ್ರಂಥಾಲಯ**).

ಮುದ್ರಣ ಯಂತ್ರದ ಆವಿರ್ಭಾವದಿಂದಾಗಿ (15ನೆಯ ಶತಮಾನ) ಪ್ರಪಂಚದ ನಾನಾ ಭಾಗಗಳಿಗೆ ವಿದ್ಯಾಭ್ಯಾಸ ಹರಡಿ ಜನ ಹೆಚ್ಚುಹೆಚ್ಚಾಗಿ ಓದುಬರೆಹವನ್ನು ಕಲಿಯಲು ತೊಡಗಿದಾಗ ಗ್ರಂಥಾಲಯಗಳು ಬೆಳೆದುವಲ್ಲದೆ ಅವನ್ನು ಶಾಸ್ತ್ರೀಯವಾಗಿ ವ್ಯವಸ್ಥಿತಗೊಳಿಸಲು ಗ್ರಂಥಾಲಯ ಸಿಬ್ಬಂದಿಗೆ ಆ ಬಗ್ಗೆ ಶಿಕ್ಷಣ ಕೊಡಲು ಪ್ರಯತ್ನಗಳು ಪ್ರಾರಂಭವಾದುವು.

ಈ ಕೆಲಸ ಭಾರತದಲ್ಲಿ ಹೇಗೆ ಮೊದಲಾಯಿತೆಂಬುದನ್ನು ನೋಡಬಹುದು.

ವಿಲಿಯಮ್ ಅಲಸನ್ ಬೋರ್‌ಡೆನ್ ಬರೋಡ ಸಂಸ್ಥಾನದಲ್ಲಿ ಒಂದು ಉಚಿತ ಸಾರ್ವಜನಿಕ ವಾಚನಾಲಯವನ್ನು ವ್ಯವಸ್ಥೆಗೊಳಿಸಿದಾಗ (1911) ಮೊತ್ತಮೊದಲಿಗೆ ಗ್ರಂಥಪಾಲ ಶಿಕ್ಷಣ ಕಾರ್ಯ ಪ್ರಾರಂಭವಾಯಿತೆನ್ನಬಹುದು. ಬೋರ್‌ಡೆನ್ ಇಂಥ ಶಿಕ್ಷಣವನ್ನು ಪ್ರಾರಂಭಿಸಲು ರಾಜ್ಯಸರ್ಕಾರದಿಂದ 1911ರ ಮಾರ್ಚಿಯಲ್ಲಿ ಅನುಮತಿ ಪಡೆದ. ಬೊಂಬಾಯಿ ವಿಶ್ವವಿದ್ಯಾಲಯದ 6 ಜನ ಪದವೀಧರರನ್ನು, 6 ಜನ ಸ್ನಾತಕಪೂರ್ವ ಪದವೀಧರರನ್ನು ತಲಾ ರೂ. 25 ವಿದ್ಯಾರ್ಥಿವೇತನವನ್ನು ಕೊಟ್ಟು ವ್ಯಾಸಂಗಕ್ಕೆ ಸೇರಿಸಿಕೊಳ್ಳುವುದು ಎಂದು ತೀರ್ಮಾನಿಸಲಾಯಿತು. ತರಬೇತಿಯ ಜೊತೆಗೆ ಹೆಚ್ಚಿನ ವಿದ್ಯಾರ್ಹತೆ ಪಡೆದಿರುವವರನ್ನು ಮೇಲ್ದರಗತಿಯ ಗ್ರಂಥಪಾಲರೆಂದು ಪರಿಗಣಿಸಿ ರೂ. 60 ರಿಂದ ರೂ. 100ರ ವರೆಗೆ ಮತ್ತು ಕಡಿಮೆ ವಿದ್ಯಾರ್ಹತೆ ಪಡೆದವರನ್ನು ಕೆಳದರ್ಜೆಯ ಗ್ರಂಥಪಾಲಕರೆಂದು ಪರಿಗಣಿಸಿ ರೂ. 30 ರಿಂದ ರೂ. 50ರ ವರೆಗೆ ಸಂಬಳ ಕೊಡಬೇಕೆಂದೂ ತೀರ್ಮಾನವಾಯಿತು. ಈ ಶಿಕ್ಷಣಕ್ಕೆ ಬ್ರಿಟಿಷ್ ಇಂಡಿಯದ ಗ್ರಂಥಪಾಲರಿಗೆ ಸಹ ಪ್ರವೇಶವಿತ್ತಾದರೂ ಶಿಕ್ಷಣಕ್ಕಾಗಿ ಬಂದವರು ಹೆಚ್ಚಾಗಿ ದೇಶೀಯ ಸಂಸ್ಥಾನಗಳವರೇ. ಬ್ರಿಟಿಷ್ ಇಂಡಿಯದಿಂದ ಬಂದವ ಒಬ್ಬನೇ. ಈ ಶಿಕ್ಷಣ 1924ರಿಂದ ಆಚೆಗೂ ಮುಂದುವರಿಯಿತೆಂದು ಹೇಳಲು ಯಾವ ಆಧಾರವೂ ಇಲ್ಲ.

ಈ ಶಿಕ್ಷಣಶಾಲೆಯಲ್ಲಿ ಮುಖ್ಯವಾಗಿ ಗ್ರಂಥಾಲಯದ ನಾನಾ ದಾಖಲೆಗಳನ್ನು ದುಂಡಾದ ಅಕ್ಷರಗಳಲ್ಲಿ ಬರೆದಿಡುವುದು, ಪುಸ್ತಕದ ಆಕಾರವನ್ನು ಅಳತೆ ಮಾಡುವುದು, ಹೊಸ ಪುಸ್ತಕಗಳು ಬಂದ ತತ್‌ಕ್ಷಣ ಪುಟಗಳು ಸರಿಯಾಗಿವೆಯೇ ಎಂದು ನೋಡುವುದು, ಕಾಗದವನ್ನು ಪರೀಕ್ಷಿಸುವುದು, ಪುಸ್ತಕಗಳನ್ನು ರಿಪೇರಿ ಮಾಡುವುದು ಮತ್ತು ಅವುಗಳಿಗೆ ರಟ್ಟುಕಟ್ಟುವುದು, ಸೂಚೀಕಾರ್ಡುಗಳನ್ನು ಬರೆಯುವುದು, ಪುಸ್ತಕದಲ್ಲಿರುವ ಅಪೂರ್ವ ಚಿತ್ರಪಟಗಳ ಬಗ್ಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆ, ಪುಸ್ತಕಗಳಿಗೆ ಕ್ರಮಾಂಕ ಮತ್ತು ಸೂಚೀಕರಣ ಚಿಹ್ನೆಗಳ ಅಳವಡಿಕೆ, ಪುಸ್ತಕ ವಿತರಣೆ, ಪ್ರತಿದಿನದ ಕೆಲಸದ ದಾಖಲೆಯ ಪುಸ್ತಕಗಳನ್ನು ನೋಡಿಕೊಳ್ಳುವುದು-ಮುಂತಾದವನ್ನು ಹೇಳಿಕೊಡುತ್ತಿದ್ದರು. ಹೆಚ್ಚಿನ ವೇಳೆ ಈ ಕಾರ್ಯದಲ್ಲೇ ಕಳೆದುಹೋಗುತ್ತಿದ್ದುದರಿಂದ ಪುಸ್ತಕಗಳ ವರ್ಗೀಕರಣ ಮತ್ತು ಸೂಚೀಕರಣಗಳ ಬಗ್ಗೆ ತಿಳಿಯಲು ಹೆಚ್ಚು ಸಮಯ ಇರುತ್ತಿರಲಿಲ್ಲ.

ಬರೋಡದಲ್ಲಿ 2 ವರ್ಷ ಅವಧಿಯ ಗ್ರಂಥಾಲಯ ವಿಜ್ಞಾನದ ಸ್ನಾತಕೋತ್ತರ ಶಿಕ್ಷಣಕ್ಕೆ ಪ್ರಯತ್ನ ನಡೆದರೂ (1912) ಅದು ಊರ್ಜಿತವಾಗಲಿಲ್ಲ.

ಲಾಹೋರಿನ ಪಂಜಾಬ್ ವಿಶ್ವವಿದ್ಯಾಲಯ ಗ್ರಂಥಾಲಯ ವಿಜ್ಞಾನದಲ್ಲಿ ಶಿಕ್ಷಣ ನೀಡುವುದರಲ್ಲಿ ಮತ್ತೊಂದು ಪ್ರಯತ್ನ ಮಾಡಿತು. ವಿಶ್ವವಿದ್ಯಾಲಯದ ಗ್ರಂಥಾಲಯ ಸ್ಥಾಪಿತವಾದ್ದು 1908ರಲ್ಲಿ. ಈ ಗ್ರಂಥಾಲಯವನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳಿಸಲು ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಬಂದ (1915) ಅಮೆರಿಕನ್ ತಜ್ಞ ಅಸ್‌ಡಾನ್ ಡಿಕನ್‌ಸನ್ ಗ್ರಂಥಾಲಯ ವಿಜ್ಞಾನವನ್ನು ಕಲಿಸಲು ತರಗತಿಯನ್ನು ಪ್ರಾರಂಭಿಸಿದ. ಭಾರತದ ವಿಶ್ವವಿದ್ಯಾಲಯಗಳಲ್ಲಿ ಇದೇ ಮೊತ್ತಮೊದಲ ಗ್ರಂಥಾಲಯ ಶಿಕ್ಷಣ ತರಬೇತಿ ಕೇಂದ್ರ. ಇದಕ್ಕಾಗಿ ಪಂಜಾಬ್ ವಿಶ್ವವಿದ್ಯಾಲಯ ಹೊಸ ರೀತಿಯ ಪಠ್ಯವಿಷಯಗಳ ಪಟ್ಟಿಯೊಂದನ್ನು ತಯಾರಿಸಿತು. 1 ವರ್ಗೀಕರಣ, 2 ಸೂಚೀಕರಣ, 3 ಗ್ರಂಥವಿತರಣೆ ಮತ್ತು ಪುಸ್ತಕ ಕೊಳ್ಳುವಿಕೆ, 4 ಗ್ರಂಥಾಲಯ ಆಡಳಿತ, 5 ಮೌಖಿಕ ಪರೀಕ್ಷೆ-ಇವು ಮುಖ್ಯ ಪಠ್ಯ ವಿಷಯಗಳಾಗಿದ್ದವು. ಮೊದಲ ವರ್ಷದಲ್ಲಿ ವಿಶ್ವವಿದ್ಯಾಲಯದ ಗ್ರಂಥಾಲಯದಿಂದ ಮತ್ತು ಸ್ಥಳೀಯ ಕಾಲೇಜಿನಿಂದ ಆಯ್ದ 30 ಜನ ವಿದ್ಯಾರ್ಥಿಗಳು ಇದ್ದರು.

1921ರಲ್ಲಿ ಡಿಕನ್‌ಸನ್ನನ ಶಿಷ್ಯ ಹಾಗೂ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಸಹಾಯಕ ಗ್ರಂಥಪಾಲರಾಗಿದ್ದ ಲಾಲಾ ಲಬ್ಭೂರಾಮ್ ಎಂಬುವವರು ಪಠ್ಯವಿಷಯಗಳನ್ನು 25 ಜನರಿಂದ 75 ಉಪನ್ಯಾಸ ಗಂಟೆಗಳಿಗೆ ವಿಸ್ತರಿಸಿದರು. ಈ ಕ್ರಮಬದ್ಧವಾದ ಶಿಕ್ಷಣದೊಂದಿಗೆ, ಗ್ರಂಥಾಲಯ ವೃತ್ತಿಗೆ ಉಪಯುಕ್ತವಾಗುವ ಇತರ ವಿಷಯಗಳ ಬಗ್ಗೆ ಉಪನ್ಯಾಸ ಕೊಡಲು ಗ್ರಂಥಾಲಯದವರಲ್ಲದೆ ಇತರ ವಿಷಯ ವಿಭಾಗದ ಸಂಶೋಧಕರನ್ನೂ ನೇಮಿಸಿಕೊಳ್ಳುತ್ತಿದ್ದರು. 1 ಪಾಶ್ಚಾತ್ಯಭಾಷೆಗಳು, 2 ಭಾರತದ ನಾನಾಭಾಷೆಗಳ ಸಮೀಕ್ಷೆ, 3 ಪುಸ್ತಕಗಳ ಆಯ್ಕೆ, 4 ಇಂಗ್ಲೆಂಡ್ ಮತ್ತು ಭಾರತದ ಗ್ರಂಥಸ್ವಾಮ್ಯದ ಕಾನೂನು, 5 ಭಾರತದ ಪ್ರಾಂತೀಯ ಚರಿತ್ರೆಯ ಮೂಲ ಗ್ರಂಥಗಳು, 6 ಸಾಹಿತ್ಯ ಚರಿತ್ರೆ, 7 ಪ್ರಾಚ್ಯಗ್ರಂಥಸೂಚಿಗಳು, 8 ಗ್ರಂಥಾಲಯದ ಕಟ್ಟಡ, ಅವುಗಳ ವಿನ್ಯಾಸ ಮತ್ತು ಉಪಕರಣಗಳು, 9 ಭಾರತೀಯರು ಬರೆದ ಇಂಗ್ಲಿಷ್ ಸಾಹಿತ್ಯ ಮತ್ತು 10 ಗ್ರಂಥಗಳನ್ನು ಜೋಡಿಸುವ ಕ್ರಮ, ಮುಕ್ತದ್ವಾರ ಪದ್ಧತಿ, ವಿಶಿಷ್ಟ ಗ್ರಂಥಾಲಯಗಳ ಕಾರ್ಯವಿಧಾನ-ಇವುಗಳ ಬಗ್ಗೆ ಪಾಠಗಳನ್ನು ಹೇಳಿಕೊಡುತ್ತಿದ್ದರು. 1928ರಿಂದ ವಿಶ್ವವಿದ್ಯಾಲಯದ ಪದವೀಧರರನ್ನು

ಮಾತ್ರ ಈ ಶಿಕ್ಷಣಕ್ಕೆ ಸೇರಿಸಿಕೊಳ್ಳಲಾಯಿತು. 1930ರಲ್ಲಿ ಜರ್ಮನ್ ಅಥವಾ ಫ್ರೆಂಚ್ ಭಾಷೆಗಳ ಕಲಿಕೆ ಕಡ್ಡಾಯವಾಯಿತು. ಡಿಕನ್‌ಸನ್ನನ ಪಂಜಾಬ್ ಗ್ರಂಥಾಲಯ ಪ್ರವೇಶ ಎಂಬ ಕಿರುಹೊತ್ತಗೆಯನ್ನು ಪಂಜಾಬ್ ವಿಶ್ವವಿದ್ಯಾಲಯ ಪ್ರಕಟಿಸಿತು. ಇದು ಭಾರತದಲ್ಲೇ ಗ್ರಂಥಾಲಯದ ಶಿಕ್ಷಣದ ಬಗ್ಗೆ ಬಂದ ಮೊತ್ತಮೊದಲನೆಯ ಪುಸ್ತಕ. ಈ ಪುಸ್ತಕ 1939ರವರೆಗೂ ಈ ಶಿಕ್ಷಣಕ್ಕೆ ಆಧಾರ ಗ್ರಂಥವಾಗಿತ್ತು.

1920ರಲ್ಲಿ ವಿಜಯವಾಡದ ರಾಮಮೋಹನ ಗ್ರಂಥಾಲಯದಲ್ಲಿ ಆಂಧ್ರಪ್ರದೇಶ ಗ್ರಂಥಾಲಯ ಸಂಘ ಒಂದು ಗ್ರಂಥಾಲಯ ಶಿಕ್ಷಣ ಶಾಲೆಯನ್ನು ತೆರೆಯಿತು. ಇಲ್ಲಿನ ಶಿಕ್ಷಣ ಅವಧಿ ಒಂದು ತಿಂಗಳಿನದಾಗಿದ್ದು ಪ್ರವೇಶ ಕೋರುವ ಅಭ್ಯರ್ಥಿಗಳಿಗೆ ನಿರ್ದಿಷ್ಟ ವಿದ್ಯಾರ್ಹತೆಗಳನ್ನು ವಿಧಿಸಿರಲಿಲ್ಲ. ಪಠ್ಯವಿಷಯಗಳೂ ನೇರ ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದವಾಗಿರಲಿಲ್ಲ. 1934ರಲ್ಲಿ ಪಠ್ಯಪಟ್ಟಿಯನ್ನು ಉದ್ದೇಶಕ್ಕನುಗುಣವಾಗಿ ಪರಿಷ್ಕರಿಸಲಾಯಿತು.

ಮದ್ರಾಸ್ ವಿಶ್ವವಿದ್ಯಾಲಯದ ಗ್ರಂಥಪಾಲರಾಗಿ ನೇಮಕಗೊಂಡ (1924) ಎಸ್.ಆರ್. ರಂಗನಾಥನ್ ಅವರು ತಮ್ಮ ಗ್ರಂಥಾಲಯದ ಪಂಚಸೂತ್ರಗಳು ಮತ್ತು ಕೋಲನ್ ವರ್ಗೀಕರಣ ವಿಧಾನಗಳಿಂದಾಗಿ ಗ್ರಂಥಾಲಯ ಹಾಗೂ ಗ್ರಂಥಾಲಯ ವಿಜ್ಞಾನಗಳಿಗೆ ಹೊಸ ತಿರುವನ್ನು ಕೊಟ್ಟರಲ್ಲದೆ ಶಿಕ್ಷಣದ ಸಮಸ್ಯೆಗಳನ್ನು ಬಿಡಿಸುವಲ್ಲಿ ಮುಂದಾದರು. ಅವರ ಸಲಹೆಯಂತೆ ಮದ್ರಾಸ್ ಗ್ರಂಥಾಲಯ ಸಂಘದ ಆಶ್ರಯದಲ್ಲಿ ಗ್ರಂಥಾಲಯ ವಿಜ್ಞಾನದಲ್ಲಿ ಸರ್ಟಿಫಿಕೇಟ್ ತರಗತಿಗಳು 1929ರಲ್ಲಿ ಪ್ರಾರಂಭವಾದವು. ಮೊದಲ 3 ವರ್ಷಗಳಲ್ಲಿ ಅಲ್ಲಿಗೆ ಕಲಿಯಲು ಬಂದವರಲ್ಲಿ ಹೆಚ್ಚಿನವರು ಶಾಲೆಕಾಲೇಜುಗಳ ಉಪಾಧ್ಯಾಯರು ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರು. ಪಠ್ಯವಿಷಯದಲ್ಲಿ ಗ್ರಂಥಾಲಯ ವಿಜ್ಞಾನದ ತತ್ತ್ವಬೋಧನೆಗಿಂತ ಆಧುನಿಕ ಗ್ರಂಥಾಲಯದ ಕಾರ್ಯಪ್ರವೃತ್ತಿಯ ಪರಿಚಯಕ್ಕೇ ಹೆಚ್ಚು ಗಮನವನ್ನು ಕೊಡಲಾಗುತ್ತಿತ್ತು. ಇಲ್ಲಿ ಉಪನ್ಯಾಸಗಳನ್ನು ಕೊಡುವಾಗಲೇ ರಂಗನಾಥನ್ ತಾವೇ ರೂಪಿಸಿದ ಗ್ರಂಥಾಲಯ ಪಂಚಸೂತ್ರಗಳನ್ನು ಘೋಷಿಸಿದರು. 1931ರಲ್ಲಿ ಅವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು.

1932ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಈ ತರಗತಿಯನ್ನು ನಡೆಸುವ ಜವಾಬ್ದಾರಿ ತೆಗೆದುಕೊಂಡಿತಲ್ಲದೆ 1937ರಲ್ಲಿ ಅದನ್ನು ಒಂದು ವರ್ಷದ ಗ್ರಂಥಾಲಯ ಶಿಕ್ಷಣದ ಡಿಪ್ಲೊಮ ಶಿಕ್ಷಣವನ್ನಾಗಿ ಪರಿವರ್ತಿಸಿತು.

1918ರಲ್ಲಿ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನದ ಫಲವಾಗಿ ಕೆಲವು ಪ್ರಾಂತ ಗ್ರಂಥಾಲಯ ಸಂಘಗಳು ಹುಟ್ಟಿದವು. ಆಂಧ್ರ (1924), ಬಂಗಾಲ (1927), ಮದ್ರಾಸು (1928) ಮತ್ತು ಪಂಜಾಬಿನಲ್ಲಿ (1929) ಒಂದೊಂದು ಸಂಘ ಅಸ್ತಿತ್ವಕ್ಕೆ ಬಂತು. ಇಷ್ಟಾದರೂ ಪ್ರಾಂತೀಯ ಗ್ರಂಥಾಲಯ ಸಂಸ್ಥೆಗಳ ಚಟುವಟಿಕೆಗಳನ್ನು ಒಂದುಗೂಡಿಸಲು ಗ್ರಂಥಾಲಯ ಉದ್ಯಮಕ್ಕೆ ಒಗ್ಗಟ್ಟಿನಿಂದ ಬೆಂಬಲ ನೀಡಲು ಅಖಿಲ ಭಾರತೀಯ ಸಂಘವೊಂದರ ಅಗತ್ಯ ಇದ್ದೇ ಇತ್ತು. 1933ರ ಸೆಪ್ಟೆಂಬರ್‌ನಲ್ಲಿ ನಡೆದ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನದಲ್ಲಿ ಈಗಿನ ಭಾರತೀಯ ಗ್ರಂಥಾಲಯ ಸಂಸ್ಥೆ ಹುಟ್ಟಿತು. ಭಾರತದಲ್ಲಿ ಗ್ರಂಥಾಲಯ ಚಳವಳಿಯನ್ನು ವ್ಯಾಪಕ ರೀತಿಯಲ್ಲಿ ವಿಸ್ತರಿಸುವುದು, ಗ್ರಂಥಪಾಲರ ತರಬೇತಿ ಶಾಲೆಗಳನ್ನು, ಮಟ್ಟವನ್ನು ಹೆಚ್ಚಿಸುವುದು, ಗ್ರಂಥಪಾಲರ ಸ್ಥಾನಮಾನಗಳನ್ನು ಉತ್ತಮಗೊಳಿಸುವುದು–ಈ ಸಂಸ್ಥೆಯ ಉದ್ದೇಶವಾಗಿತ್ತು. ಇಷ್ಟಾದರೂ ಗ್ರಂಥಾಲಯ ಶಿಕ್ಷಣದಲ್ಲಿ ಸಾಕಷ್ಟು ಪ್ರಗತಿ ಆಗಲಿಲ್ಲ. ಕಲ್ಕತ್ತದ ಇಂಪೀರಿಯಲ್ ಗ್ರಂಥಾಲಯದ ಗ್ರಂಥಪಾಲರಾದ ಕೆ. ಎಂ. ಅಸದುಲ್ಲ ಅವರು 1934ರ ಮಾರ್ಚ್ ತಿಂಗಳಲ್ಲಿ ನಡೆದ ಕಲ್ಕತ್ತ ಗ್ರಂಥಾಲಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ, ಗ್ರಂಥಾಲಯ ಶಿಕ್ಷಣವನ್ನು ಉತ್ತಮಪಡಿಸಲು ಕರೆಯಿತ್ತದ್ದಲ್ಲದೆ ಸುವ್ಯವಸ್ಥಿತವಾದ ಬಂಗಾಲ ಗ್ರಂಥಾಲಯ ಸಂಘ ಗ್ರಂಥಪಾಲರ ತರಬೇತಿಯನ್ನು ತನ್ನ ಮೊದಲನೆಯ ಕಾರ್ಯಕ್ರಮವಾಗಿ ಇಟ್ಟುಕೊಳ್ಳಬೇಕೆಂದು ಸೂಚಿಸಿದರು. ಅಸದುಲ್ಲರ ಪ್ರಯತ್ನ ಫಲಿಸಿತು. ಭಾರತ ಸರ್ಕಾರದ ಬೆಂಬಲದಿಂದ ಇಂಪೀರಿಯಲ್ ಗ್ರಂಥಾಲಯ 1935ರಲ್ಲಿ ಗ್ರಂಥಾಲಯ ಶಿಕ್ಷಣದ ತರಗತಿಯನ್ನು ಪ್ರಾರಂಭಿಸಿತು. ಈ ತರಗತಿಗಳು ಎರಡು ವರ್ಷಕ್ಕೆ ಒಮ್ಮೆ ನಡೆಯುತ್ತಿದ್ದವು. ಪ್ರತಿಯೊಂದು ತರಗತಿಗೂ ಇಪ್ಪತ್ತು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಶಿಕ್ಷಣಕ್ಕೆ ಸೇರಲು ಕನಿಷ್ಠ ವಿದ್ಯಾರ್ಹತೆ ವಿಶ್ವವಿದ್ಯಾಲಯದ ಪದವಿಯೆಂದಿದ್ದರೂ ಕೆಲಸ ಮಾಡುತ್ತಿರುವವರಿಗೆ ಧಾರಾಳ ಅವಕಾಶವಿತ್ತು. ವರ್ಗೀಕರಣ, ಸೂಚೀಕರಣ, ಪುಸ್ತಕಗಳ ಆಯ್ಕೆ, ಪರಾಮರ್ಶನ ಕಾರ್ಯ, ದಿನವಹಿ ಕೆಲಸ ನಿರ್ವಹಣೆ ಮತ್ತು ಗ್ರಂಥಾಲಯ ವ್ಯವಸ್ಥೆ, ಗ್ರಂಥಸೂಚಿ, ಲೇಖನಕಲೆ– ಮುಂತಾದವುಗಳ ಶಿಕ್ಷಣ ನೀಡಲಾಗುತ್ತಿತ್ತು. 1945ರ ವರೆಗೂ ಈ ವ್ಯವಸ್ಥೆ ಮುಂದುವರಿದು ಹಠಾತ್ತನೆ ನಿಂತು ಹೋಯಿತು.

ಬಂಗಾಲದಲ್ಲಿ ಕುಮಾರ ಮನೀಂದ್ರ ದೇವರಾಯ್ ಮಹಾಶಯ ಅವರು ಸ್ಥಾಪಿಸಿದ ಬಂಗಾಲ ಗ್ರಂಥಾಲಯ ಸಂಘ ಬನಸ್‌ಬೆರಿಯಾದಲ್ಲಿ ಗ್ರಂಥಾಲಯ ಶಿಕ್ಷಣ ಶಾಲೆಯನ್ನು ಸ್ಥಾಪಿಸಿ (1936) ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿತು (1937). ಮದ್ರಾಸಿನ ಮೇಲ್ಪಂಕ್ತಿಯನ್ನನುಸರಿಸಿ ಆಂಧ್ರ ವಿಶ್ವವಿದ್ಯಾಲಯ ಸಹ ಒಂದು ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿತು (1935).

1941ರ ವರೆಗೂ ಮದ್ರಾಸ್ ವಿಶ್ವವಿದ್ಯಾಲಯ ಮಾತ್ರ ಸ್ನಾತಕೋತ್ತರ ಡಿಪ್ಲೊಮಾ ತರಗತಿಯನ್ನು ನಡೆಸುತ್ತಿತ್ತು. ಆಂಧ್ರ ವಿಶ್ವವಿದ್ಯಾಲಯ ಈ ತರಗತಿಯನ್ನು 1935ರಲ್ಲಿ ಪ್ರಾರಂಭಿಸಿದರೂ ಕ್ರಮೇಣ 1947ರ ಹೊತ್ತಿಗೆ ಅದನ್ನು ಕೈ ಬಿಟ್ಟಿತು. ಡಿಪ್ಲೊಮ ಶಿಕ್ಷಣವನ್ನು ಆರಂಭಿಸಿದ ಇತರ ವಿಶ್ವವಿದ್ಯಾಲಯಗಳೆಂದರೆ ಬನಾರಸ್ (1941), ಬೊಂಬಾಯಿ (1943) ಮತ್ತು ಕಲ್ಕತ್ತ (1945). ಕೆಲವು ವಿಶ್ವವಿದ್ಯಾಲಯಗಳು ಸಂಜೆ ತರಗತಿಗಳನ್ನು ಪ್ರಾರಂಭಿಸಿ ಕಚೇರಿಗಳಲ್ಲಿ ಕೆಲಸ ಮಾಡುತ್ತಿರುವ ಗುಮಾಸ್ತರಿಗೂ ವಿದ್ಯಾವಂತ ನಿರುದ್ಯೋಗಿಗಳಿಗೂ ಗ್ರಂಥಾಲಯಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟವು. ಇಷ್ಟಾದರೂ ತರಬೇತಿ ಹೊಂದಿದ ಗ್ರಂಥಪಾಲರ ಅಭಾವ ಪರಿಹಾರವಾಗುವಂತಿರಲಿಲ್ಲ. ಅಂದಿಗೆ ಜರೂರಾಗಿ ಆಗಬೇಕಾದ ಕೆಲಸ ಒಂದಿತ್ತು–ಇರುವ ಗ್ರಂಥಾಲಯ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪತೆ ಬರಬೇಕಿತ್ತು.

ಜಯಪುರದಲ್ಲಿ 1944ರ ಏಪ್ರಿಲ್‌ನಲ್ಲಿ ಸಮಾವೇಶಗೊಂಡ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನ ಶಿಕ್ಷಣ ಕ್ರಮ, ಅವಧಿ, ಪಠ್ಯವಿಷಯ–ಮೊದಲಾದುವುಗಳಲ್ಲಿ ಏಕರೂಪತೆಯನ್ನು ತರಬೇಕೆಂದು ಸಲಹೆ ನೀಡಿತು.

1947ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಮಾರಿಸ್ ಗ್ವಯರ್ ಅವರು ರಂಗನಾಥನ್ ಅವರನ್ನು ಬರಮಾಡಿಕೊಂಡು ಅವರ ನೇತೃತ್ವದಲ್ಲಿ ತಮ್ಮ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ಶಿಕ್ಷಣ ವಿಭಾಗವನ್ನು ತೆರೆದರು. ಗ್ರಂಥಾಲಯ ಶಿಕ್ಷಣದಲ್ಲಿ ಡಿಗ್ರಿ ತರಗತಿಯನ್ನು ಪ್ರಾರಂಭಿಸುವಲ್ಲಿ ದೆಹಲಿ ವಿಶ್ವವಿದ್ಯಾಲಯ ಮೊದಲನೆಯದಾಯಿತು. ಕ್ರಮೇಣ ಈ ವಿಭಾಗದಲ್ಲಿ ಪಿ.ಎಚ್‌ಡಿ. ಪದವಿಗೆ ಓದುವ ಅವಕಾಶವನ್ನೂ ಒದಗಿಸಲಾಯಿತು. ಇದಕ್ಕಿಂತ ಮೊದಲು ಅಮೆರಿಕದಲ್ಲಿ ಮಾತ್ರ ಇಂಥ ಸೌಲಭ್ಯವಿತ್ತು. ರಂಗನಾಥನ್ ಅವರಿಂದ ರೂಪುಗೊಂಡ ಗ್ರಂಥಾಲಯ ವಿಜ್ಞಾನ ಶಿಕ್ಷಣ ಮೂರು ಹಂತಗಳಲ್ಲಿತ್ತು. 1. ಡಿಪ್ಲೊಮ ನೀಡುವ ಒಂದು ವರ್ಷದ ಸ್ನಾತಕೋತ್ತರ ಶಿಕ್ಷಣ, 2. ಮಾಸ್ಟರ್ ಪದವಿ ನೀಡುವ ಒಂದು ವರ್ಷದ ಸ್ನಾತಕೋತ್ತರ, 3. ಪಿ.ಎಚ್‌ಡಿ. ಪದವಿ ನೀಡುವ ಎರಡು ಅಥವಾ ಮೂರು ವರ್ಷಗಳ ಶಿಕ್ಷಣ. ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಪ್ರವೇಶ ಕುಶಾಗ್ರಮತಿಗಳಿಗೆ ಮಾತ್ರ ಸೀಮಿತವಾಗಿತ್ತು. 1948ರಲ್ಲಿ ಡಿಪ್ಲೊಮ ಪಡೆದವರು ಕೇವಲ ನಾಲ್ಕು ಮಂದಿ ಮಾತ್ರ.

ತರಬೇತಿ ಪಡೆದ ಗ್ರಂಥಪಾಲರ ಅಭಾವವನ್ನು ಕಂಡುಕೊಂಡು ಭಾರತ ಸರ್ಕಾರದ ಸಚಿವಾಲಯ ಗ್ರಂಥಾಲಯ ವಿಜ್ಞಾನ ಸಂಸ್ಥೆಯೊಂದನ್ನು ರಚಿಸುವಂತೆ ದೆಹಲಿ ವಿಶ್ವವಿದ್ಯಾಲಯವನ್ನು ಕೇಳಿಕೊಂಡಿತಾಗಿ ಅದೇ ವರ್ಷ ಆ ಹೆಸರಿನ ಒಂದು ಸಂಸ್ಥೆ ಜನ್ಮತಾಳಿತು (1958).

ಭಾರತದಲ್ಲಿ ಈಗ ನಾಲ್ಕು ಹಂತಗಳಲ್ಲಿ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಕೊಡಲಾಗುತ್ತಿದೆ. ಅ) ಸರ್ಟಿಫಿಕೇಟ್ ತರಗತಿ, ಆ) ಡಿಪ್ಲೊಮ ಅಥವಾ ಪದವಿ, ಇ) ಮಾಸ್ಟರ್ ಪದವಿ ಮತ್ತು ಈ) ಡಾಕ್ಟೊರೇಟ್ ಪದವಿ.

ಅ) ಸರ್ಟಿಫಿಕೇಟ್ ತರಬೇತಿ : ಇದರ ಮುಖ್ಯ ಉದ್ದೇಶಗಳು ಇವು : 1. ಗ್ರಂಥಾಲಯ ವಿಜ್ಞಾನದಲ್ಲಿ ಸ್ಥೂಲವಾದ ತಿಳಿವಳಿಕೆಯನ್ನೀಯುವುದು. 2. ಗ್ರಂಥಾಲಯದ ದೈನಂದಿನ ಕ್ರಿಯೆಗಳಲ್ಲಿ ತರಬೇತಿ ನೀಡುವುದು. 3. ಪದವಿಪೂರ್ವ ವಿದ್ಯಾರ್ಥಿಗಳಿಗೆ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ನೀಡಿ ಗ್ರಂಥಾಲಯಗಳಲ್ಲಿ ಸೇವಾವಕಾಶ ಕಲ್ಪಿಸುವುದು. 4. ಶಾಲಾ ಗ್ರಂಥಾಲಯಗಳ ಗ್ರಂಥಪಾಲರಿಗೆ ತರಬೇತಿ ನೀಡುವುದು. ಗ್ರಂಥಾಲಯಗಳಲ್ಲಿ ಅಷ್ಟೇನೂ ಕ್ಲಿಷ್ಟವಲ್ಲದ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಎಸ್.ಎಸ್.ಎಲ್.ಸಿ. ಅಥವಾ ಮೆಟ್ರಿಕ್ ಪರೀಕ್ಷೆ ಮುಗಿಸಿದವರಿಗಾಗಿ ಮೂರು ಅಥವಾ ನಾಲ್ಕು ತಿಂಗಳ ಅವಧಿಯ ಶಿಕ್ಷಣ ನೀಡುವ ಸರ್ಟಿಫಿಕೇಟ್ ತರಬೇತಿಯನ್ನು ಅಲಿಗಡ, ಆಂಧ್ರ, ಮದ್ರಾಸ್, ಉಸ್ಮಾನಿಯ ಮತ್ತು ರಾಜಸ್ತಾನ್ ವಿಶ್ವವಿದ್ಯಾಲಯಗಳು ಪ್ರಾರಂಭಿಸಿದವು. ಈ ತರಬೇತಿಯನ್ನು ಈಗ ಗ್ರಂಥಾಲಯ ವಿಜ್ಞಾನ ಸಂಸ್ಥೆಗಳು (ಮುಖ್ಯವಾಗಿ ಹೈದರಾಬಾದ್ ಮತ್ತು ವಿಜಯವಾಡ), ಕೆಲವು ರಾಜ್ಯಸರ್ಕಾರಗಳು ಮತ್ತು ಗ್ರಂಥಾಲಯ ಸಂಘಗಳು ನಡೆಸುತ್ತಿವೆ. ಪಠ್ಯವಿಷಯಗಳು ಮುಖ್ಯವಾಗಿ ನಾಲ್ಕು. 1. ವರ್ಗೀಕರಣಶಾಸ್ತ್ರ (ತತ್ತ್ವ ಹಾಗೂ ಅಭ್ಯಾಸ), 2. ಸೂಚೀಕರಣಶಾಸ್ತ್ರ (ತತ್ತ್ವ ಹಾಗೂ ಅಭ್ಯಾಸ), 3. ಗ್ರಂಥಾಲಯಗಳ ಆಡಳಿತ ವಿಧಾನ ಮತ್ತು ಮೇಲ್ವಿಚಾರಣೆ ಮತ್ತು 4. ಗ್ರಂಥಸೂಚಿ ಮತ್ತು ಪರಾಮರ್ಶನ ಸೇವೆ. ಕೆಲವೊಂದು ಶಾಲೆಗಳು ಗ್ರಂಥಾಲಯಗಳ ದೈನಂದಿನ ಕೆಲಸಗಳು ಹಾಗೂ ವಾಸ್ತವಿಕ ವಿಷಯಗಳ ಕುರಿತು ವಿಶೇಷ ತರಬೇತಿ ನೀಡುತ್ತವೆ.

ಈ ಹಂತದ ಶಿಕ್ಷಣ ಮುಖ್ಯವಾಗಿ ಗ್ರಂಥಾಲಯಗಳ ತುರ್ತು ಅಗತ್ಯಗಳನ್ನು ಗಮನಿಸಿ ಅದಕ್ಕೆ ಪೂರಕವಾಗುವ ರೀತಿಯಲ್ಲಿ ನಡೆಸಲ್ಪಡುತ್ತಿದೆಯಷ್ಟೆ.

ಆ) ಡಿಪ್ಲೊಮ ಅಥವಾ ಪದವಿ ಶಿಕ್ಷಣ: ಭಾರತದಲ್ಲಿ ಈಗ ಬಹುಸಂಖ್ಯೆಯ ವಿದ್ಯಾಲಯಗಳು ವಿವಿಧ ಹಂತಗಳಲ್ಲಿ ಗ್ರಂಥಾಲಯ ವಿಜ್ಞಾನ ಶಿಕ್ಷಣವನ್ನೀಯುತ್ತಿವೆ. ಅಲಿಗಡ, ಗೌಹಾತಿ, ಕೇರಳ, ಲಖನೌ, ಮೈಸೂರು ಮತ್ತು ರಾಜಸ್ತಾನ್ ವಿಶ್ವವಿದ್ಯಾಲಯಗಳ ಹೊರತು ಮಿಕ್ಕ ವಿಶ್ವವಿದ್ಯಾಲಯಗಳು ಪ್ರಥಮತಃ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಡಿಪ್ಲೊಮ ತರಗತಿಗಳನ್ನು ಪ್ರಾರಂಭಿಸಿ ಕ್ರಮೇಣ ಸ್ನಾತಕೋತ್ತರ ಪದವಿ ಶಿಕ್ಷಣ ಕೊಡತೊಡಗಿವೆ. ಕಲ್ಕತ್ತ ವಿಶ್ವವಿದ್ಯಾಲಯ 1969ರ ವರೆಗೆ ಡಿಪ್ಲೊಮ ನೀಡುತ್ತಿದ್ದು ಡಿಗ್ರಿಗೆ ಬದಲಾಯಿಸಿಕೊಂಡಿದೆ. ಭಾರತ ಸರ್ಕಾರದ ವಿಶ್ವವಿದ್ಯಾಲಯ ಧನಸಹಾಯ ಆಯೋಗ ನೇಮಿಸಿದ ಸಮೀಕ್ಷಣ ಸಮಿತಿ, ವಿಶ್ವವಿದ್ಯಾಲಯಗಳು ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮ ಶಿಕ್ಷಣ ನೀಡಬೇಕೆಂದು ಶಿಫಾರಸುಮಾಡಿದಂದಿನಿಂದ ಈ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯುಂಟಾಗಿದೆ.

ಶಿಕ್ಷಣಕ್ಕೆ ಪ್ರವೇಶ ಬಯಸುವ ಪ್ರತಿಯೊಬ್ಬನೂ ಕನಿಷ್ಠ ಪಕ್ಷ ಯಾವುದಾದರೊಂದು ವಿಷಯದಲ್ಲಿ ಬ್ಯಾಚುಲರ್ ಪದವಿ ಗಳಿಸಿರಲೇಬೇಕೆಂದು ಎಲ್ಲ ವಿಶ್ವವಿದ್ಯಾಲಯಗಳೂ ನಿಯಮಿಸಿವೆ. ಹೀಗಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ವಿಶೇಷ ಅರ್ಹತೆಯುಳ್ಳ ವಿದ್ಯಾರ್ಥಿಗಳು ಪ್ರವೇಶ ಕೋರಿ ಅರ್ಜಿ ಸಲ್ಲಿಸುತ್ತಿರುವುದರಿಂದ ಅಂಥ ಅಭ್ಯರ್ಥಿಗಳಿಗೆ ಹೆಚ್ಚಿನ ಅವಕಾಶ ನೀಡಲಾಗುತ್ತಿದೆ. ಕೆಲವೆಡೆ ಅಭ್ಯರ್ಥಿಗಳು ಕನಿಷ್ಠ ಪದವಿ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿರಬೇಕೆಂಬ ನಿಯಮವಿದೆ. ಇನ್ನು ಕೆಲವು ವಿಶ್ವವಿದ್ಯಾಲಯಗಳಲ್ಲಿ ಕನಿಷ್ಠ ಪಕ್ಷ ಕೆಲವು ವರ್ಷ ಗ್ರಂಥಾಲಯಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿರಬೇಕೆಂಬ ನಿಯಮವಿದೆ. ಕೆಲವು ವಿಶ್ವವಿದ್ಯಾಲಯಗಳು ಗ್ರಂಥಾಲಯ ವಿಜ್ಞಾನದಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನವನ್ನು ತಿಳಿಯಲು ಪರೀಕ್ಷೆ ನಡೆಸುತ್ತವೆ; ಅನಂತರ ಸಂದರ್ಶನ ಪರೀಕ್ಷೆಯೂ ನಡೆಯುತ್ತದೆ.

ಗ್ರಂಥಾಲಯದಲ್ಲಿ ಶಿಕ್ಷಣಕ್ರಮ ಯಶಸ್ವಿಯಾಗಬೇಕಾದರೆ ಅದರ ಬೋಧನ ವಿಷಯಗಳು ದೇಶ, ಕಾಲ, ಪರಿಸ್ಥಿತಿಯ ಆವಶ್ಯಕತೆಗಳಿಗನುಗುಣವಾಗಿ ಯೋಜಿಸಲ್ಪಡಬೇಕು; ಉದ್ದೇಶ ಹಾಗೂ ಭಾವನೆಗಳು ಶಿಕ್ಷಣಕ್ರಮದಲ್ಲಿ ಫಲಕಾರಿಯಾಗಿ ಮೂಡಿ ಬರಬೇಕು. ವಿಶ್ವವಿದ್ಯಾಲಯ ಧನ ಆಯೋಗ ನೇಮಿಸಿದ ಸಮೀಕ್ಷಣ ಸಮಿತಿ ಗ್ರಂಥಾಲಯ ವಿಜ್ಞಾನದಲ್ಲಿ ಪದವಿ ಶಿಕ್ಷಣದ ಮುಖ್ಯ ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಿದೆ.

1. ಗ್ರಂಥಾಲಯ ವಿಜ್ಞಾನದ ಮೂಲಭೂತ ತತ್ತ್ವಗಳ ಸಮಗ್ರ ತಿಳಿವಳಿಕೆಯನ್ನು ವಿದ್ಯಾರ್ಥಿಗೆ ಕೊಡುವುದು. 2. ಬದಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿಯಲ್ಲಿ ಗ್ರಂಥಾಲಯಗಳ ಕಾರ್ಯವ್ಯಾಪ್ತಿ ಮತ್ತು ಉದ್ದೇಶಗಳ ಬಗ್ಗೆ ಸರಿಯಾದ ತಿಳಿವಳಿಕೆಯುಂಟಾಗುವಂತೆ ಮಾಡುವುದು. 3. ಗ್ರಂಥಾಲಯಗಳ ಆಡಳಿತ ವ್ಯವಸ್ಥೆ ಗ್ರಂಥಪಾಲನ ವೃತ್ತಿಕುಶಲತೆಗಳಲ್ಲಿ ವಿದ್ಯಾರ್ಥಿಗೆ ಸಾಕಷ್ಟು ಪರಿಜ್ಞಾನ ಮತ್ತು ತರಬೇತಿಯನ್ನೀಯುವುದು. ವಿಶ್ವವಿದ್ಯಾಲಯಗಳು ಆಯಾ ಪ್ರಾದೇಶಿಕ ಅಗತ್ಯಗಳು ಮತ್ತು ಅನುಕೂಲತೆಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯವಿಷಯಗಳಲ್ಲಿ ಬದಲಾವಣೆಗಳನ್ನಾಗಲೀ ಹೊಂದಾಣಿಕೆಯನ್ನಾಗಲೀ ಮಾಡಿಕೊಳ್ಳಲು ಅವಕಾಶವಿದೆ.

ಇ) ಮಾಸ್ಟರ್ ಪದವಿ ಶಿಕ್ಷಣ : ಭಾರತದಲ್ಲಿ ಮೊತ್ತಮೊದಲಿಗೆ ಮಾಸ್ಟರ್ ಪದವಿ ಶಿಕ್ಷಣವನ್ನು ಪ್ರಾರಂಭಿಸಿದ (1949) ಕೀರ್ತಿ ದೆಹಲಿ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ. ಈ ಶಿಕ್ಷಣದ ರೂಪರೇಖೆ, ಉದ್ದೇಶ, ಪಠ್ಯಕ್ರಮವನ್ನು ಸ್ವತಃ ರಂಗನಾಥನ್ ಅವರೇ ಯೋಜಿಸಿದ್ದರು. ಅದರ ಉದ್ದೇಶಗಳು ಹೀಗಿವೆ:

(1) ವಿದ್ಯಾರ್ಥಿಗಳಿಗೆ ಜ್ಞಾನಪ್ರಪಂಚ, ಅದರ ವ್ಯವಸ್ಥೆ ಮತ್ತು ಬೆಳವಣಿಗೆ, ಸಂಶೋಧನೆಗಳನ್ನು ಸಂಘಟಿಸುವ ಬಗೆ ಹಾಗೂ ಸಂಶೋಧನ ವಿಧಾನಗಳು–ಇವನ್ನು ಪರಿಚಯಿಸುವುದು. (2) ಓದುವ ಹಾಗೂ ಸಂಬಂಧಪಟ್ಟ ಇತರ ವಸ್ತುರೂಪಗಳು ಮತ್ತು ಪ್ರಲೇಖನ ಪಟ್ಟಿಗಳ ವಿಷಯವಾಗಿ ಇಲ್ಲವೆ ವಿವಿಧ ಬಗೆಯ ಗ್ರಂಥಾಲಯಗಳ ಬಗ್ಗೆ ವಿಶಿಷ್ಟ ಪರಿಣತಿಯನ್ನೊದಗಿಸುವುದು. (3) (ಅ) ಪ್ರಲೇಖನ ವಿಧಾನದಲ್ಲಿ ಗ್ರಂಥಾಲಯಗಳ ನವೀನ ತಂತ್ರಗಳು ಹಾಗೂ (ಆ) ಕೆಲವು ಜಾತಿಯ ಗ್ರಂಥಾಲಯಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ಕ್ರಮಗಳ ಬಗ್ಗೆ ಪ್ರಾವೀಣ್ಯ ಬರುವಂತೆ ಮಾಡುವುದು.

ಗ್ರಂಥಾಲಯ ವಿಜ್ಞಾನದ ಎಲ್ಲ ಸ್ತರಗಳಲ್ಲಿ ನಡೆಯುತ್ತಿರುವ ಸಂಶೋಧನೆ ಹಾಗೂ ವಿಶ್ಲೇಷಣೆಗಳ ಫಲವಾಗಿ ಈ ವಿಜ್ಞಾನ ಅನೇಕ ಹೊಸ ಆವಿಷ್ಕಾರಗಳನ್ನು ಪಡೆದು ತಾಂತ್ರಿಕ ಹಾಗೂ ವೈಜ್ಞಾನಿಕ ರಂಗಗಳಲ್ಲಿ ನಡೆಯುತ್ತಿರುವ ಬೆಳವಣಿಗೆಗೆ ಸಹಕಾರಿಯಾಗಿದೆ. ಪ್ರಲೇಖನ ಹಾಗೂ ಮಾಹಿತಿ ವಿಜ್ಞಾನಗಳಲ್ಲಿ ಇಂದು ವಿಶ್ವಾದ್ಯಂತ ಮುಖ್ಯವಾಗಿ ಅಮೆರಿಕ, ಇಂಗ್ಲೆಂಡ್, ರಷ್ಯ, ಜಪಾನ್, ಆಸ್ಟ್ರೇಲಿಯಗಳಲ್ಲಿ ಶೋಧನೆಗಳು ಅವಿರತವಾಗಿ ನಡೆದು ಆ ಬಗ್ಗೆ ಸಾಹಿತ್ಯ ನಿರ್ಮಾಣವಾಗಿದೆ. ಗ್ರಂಥಾಲಯ ಶಿಕ್ಷಣ ವಿಭಾಗ ಈ ಬದಲಾವಣೆಗಳನ್ನು ಹಾಗೂ ಸಂಶೋಧನೆಗಳನ್ನು ಕಾಲಕಾಲಕ್ಕೆ ತನ್ನ ಪಠ್ಯವಿಷಯಗಳಲ್ಲಿ ಸೇರಿಸಿಕೊಳ್ಳುತ್ತಿರಬೇಕು. ಭಾರತದಲ್ಲಿನ ಗ್ರಂಥಾಲಯಗಳು ಈ ಬಗ್ಗೆ ಗಮನ ಹರಿಸುತ್ತಿವೆ. ಗ್ರಂಥಾಲಯ ವಿಜ್ಞಾನಗಳಲ್ಲಿ ಪ್ರಲೇಖನ ಮತ್ತು ಮಾಹಿತಿ ವಿಜ್ಞಾನಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿವಳಿಕೆ ನೀಡುವ ಆವಶ್ಯಕತೆ ಕಂಡುಬರುತ್ತಿದೆ. ಈ ದಿಸೆಯಲ್ಲಿ ದೆಹಲಿ ವಿಶ್ವವಿದ್ಯಾಲಯ ಹೊಸ ಹೆಜ್ಜೆಯನ್ನಿಟ್ಟಿದೆ. ಮೇಲಿನ ವಿಷಯಗಳನ್ನು ಮನಗಂಡು 1972 ರ ವಿದ್ಯಾವರ್ಷದಿಂದ ಅದು ತನ್ನ ಪಠ್ಯಕ್ರಮವನ್ನು ಪರಿಷ್ಕರಿಸಿದೆಯಲ್ಲದೆ ಶಿಕ್ಷಣಾವಧಿ ಪೂರ್ತಿಗೊಂಡು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಮಾಸ್ಟರ್ ಪದವಿ ನೀಡುತ್ತಿದೆ.

ಪರಿಷ್ಕೃತ ಪಠ್ಯವಿಷಯದಲ್ಲಿ ಮುಖ್ಯವಾಗಿ ಗ್ರಂಥಾಲಯ ವ್ಯವಸ್ಥಾ ವಿಶ್ಲೇಷಣೆ ಮತ್ತು ಸಂಖ್ಯಾಸಂಗ್ರಹಣ ವಿಧಾನ, ಗ್ರಂಥಾಲಯ ಮಾಹಿತಿ ವಿಜ್ಞಾನಗಳ ಪ್ರಚಲಿತ ಸಮಸ್ಯೆಗಳು, ಮಾಹಿತಿ ಸಂಗ್ರಹಣ ಮತ್ತು ಪರಿಶೋಧನ ಪದ್ಧತಿ, ಲೇಖನ ಪ್ರತೀಕರಣ (ರಿಪ್ರೋಗ್ರಫಿ) ಮತ್ತು ಐಚ್ಛಿಕ ವಿಷಯಗಳಾಗಿ ವೈದ್ಯಕೀಯ, ಕೃಷಿ ಮತ್ತು ಯಂತ್ರವಿಜ್ಞಾನಗಳ ಗ್ರಂಥಾಲಯ ಪದ್ಧತಿಗಳು, ಅವುಗಳ ಸಾಹಿತ್ಯ ಹಾಗೂ ಗ್ರಂಥಸೂಚಿಗಳು–ಮುಂತಾದ ನೂತನ ವಿಷಯಗಳು ಸೇರಿವೆ. ಇವಲ್ಲದೆ ವಿದ್ಯಾರ್ಥಿ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನಗಳಲ್ಲಿನ ಪ್ರಚಲಿತ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಬೇಕಾಗುತ್ತದೆ.

ದೆಹಲಿಯ ವಿಶ್ವವಿದ್ಯಾಲಯದ ಮಾದರಿಯಲ್ಲಿಯೇ ಬನಾರಸ್ (1963), ಪಂಜಾಬ್ (1970), ಮೈಸೂರು (1971), ಕರ್ನಾಟಕ (1971), ಅಲಿಗಡ (1971), ವಿಕ್ರಮ್ (1971) ವಿಶ್ವವಿದ್ಯಾಲಯಗಳು ಮಾಸ್ಟರ್ ಪದವಿ ಶಿಕ್ಷಣವನ್ನೀಯಲು ಪ್ರಾರಂಭಿಸಿವೆ. ಗ್ರಂಥಾಲಯಗಳಲ್ಲಿ ವಿಶೇಷತಃ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವರ್ಷಗಳ ಸೇವಾನುಭವವಿದ್ದ ಗ್ರಂಥಪಾಲರಿಗೆ ಹೆಚ್ಚಿನ ವಿದ್ಯಾರ್ಹತೆಯನ್ನು ಕಲ್ಪಿಸಿ, ಪ್ರಚಲಿತ ವಿಷಯಗಳ ಬಗ್ಗೆ ಪರಿಜ್ಞಾನವೀಯುವ ಸಲುವಾಗಿ ಮುಂಬಯಿ ವಿಶ್ವವಿದ್ಯಾಲಯ 1967 ರಿಂದ ಮಾಸ್ಟರ್ ಪದವಿಯಲ್ಲಿ ತೆರಪಿನ ಶಿಕ್ಷಣವನ್ನೀಯುತ್ತಿದೆ.

ಮೇಲೆ ಹೇಳಿದ ಎಲ್ಲ ವಿಶ್ವವಿದ್ಯಾಲಯಗಳು ತಮ್ಮ ಶಿಕ್ಷಣ ಕ್ರಮ, ಪಠ್ಯವಿಷಯಗಳು, ಪ್ರವೇಶ ನೀಡಿಕೆ ಮುಂತಾದವುಗಳಲ್ಲಿ ದೆಹಲಿ ವಿಶ್ವವಿದ್ಯಾಲಯದ ಮಾದರಿಯನ್ನೇ ಹೆಚ್ಚು ಕಡಿಮೆ ಅನುಸರಿಸಿದೆ. ಇವು ಗ್ರಂಥಾಲಯ ವಿಜ್ಞಾನದಲ್ಲಿ ವಿಶೇಷತಃ ಪ್ರಲೇಖನ ಶಾಸ್ತ್ರದಲ್ಲಿ ಉನ್ನತ ಮಟ್ಟದ ಶಿಕ್ಷಣವನ್ನೀಯುತ್ತಿವೆ. ದೆಹಲಿ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನ ಭಾಗವನ್ನು ಯುನೆಸ್ಕೊ ತನ್ನ ಯೋಜನೆಗಳ ಒಂದು ಅಂಗವನ್ನಾಗಿ ಅಂಗೀಕರಿಸಿದೆ.

ಈ) ಡಾಕ್ಟೊರೇಟ್ ಪದವಿ : ದೆಹಲಿ ವಿಶ್ವವಿದ್ಯಾಲಯ ಈ ಶಿಕ್ಷಣವನ್ನು ಪ್ರಥಮತಃ 1948 ರಲ್ಲಿ ಪ್ರಾರಂಭಿಸಿತು. ಸಂಶೋಧನ ವಿಧಾನಗಳಲ್ಲಿ ತರಬೇತಿ ನೀಡುವುದು ಇದರ ಮುಖ್ಯ ಉದ್ದೇಶ. ಅನಂತರ ಭಾರತದ ಅನೇಕ ವಿಶ್ವವಿದ್ಯಾನಿಲಯಗಳು ಇಂಥ ಪ್ರೌಢ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟಿವೆ.

ಭಾರತೀಯ ಗ್ರಂಥಾಲಯ ವಿಜ್ಞಾನ ಶಿಕ್ಷಕರ ಸಂಘ : 1969 ರ ಡಿಸೆಂಬರ್ 19 ರಂದು ಬೆಂಗಳೂರಿನ ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರದಲ್ಲಿ ವಾರ್ಷಿಕ ವಿಚಾರ ಸಂಕೀರ್ಣದಲ್ಲಿ ಭಾಗವಹಿಸಲು ಸಮಾವೇಶಗೊಂಡಿದ್ದ ಗ್ರಂಥಾಲಯ ವಿಜ್ಞಾನ ಶಿಕ್ಷಕರು ಈ ಸಂಸ್ಥೆಯನ್ನು ಸ್ಥಾಪಿಸಿದರು. ಗ್ರಂಥಾಲಯ ವಿಜ್ಞಾನದಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣಕ್ರಮ, ಅಧ್ಯಾಪಕರ ಸಮಸ್ಯೆ, ಶಿಕ್ಷಣೋಪಕರಣಗಳು, ಸಂಶೋಧನೆ ಮೊದಲಾದ ವಿಷಯಗಳಲ್ಲಿ ಈ ಸಂಘ ಪ್ರತಿವರ್ಷ ವಿಚಾರಸಂಕಿರಣವನ್ನು ಏರ್ಪಡಿಸುತ್ತದೆ.

ಪ್ರಲೇಖನಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ನೀಡುವ ಸಂಸ್ಥೆಗಳು : ಭಾರತದಲ್ಲಿ ಪ್ರಲೇಖನಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ನೀಡುವ ಸಂಸ್ಥೆಗಳು ಎರಡು (1) ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ, ಹೊಸ ದೆಹಲಿ ಮತ್ತು (2) ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರ, ಬೆಂಗಳೂರು. ಈ ಎರಡು ಕೇಂದ್ರಗಳೂ ಪ್ರಲೇಖನ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುತ್ತಿವೆ.

1. ದೆಹಲಿಯ ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ 1952 ರಲ್ಲಿ ಯುನೆಸ್ಕೊದ ನೆರವಿನಿಂದ ಪ್ರಾರಂಭಗೊಂಡು ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಮಂಡಳಿಯ ಒಂದು ಅಂಗವಾಗಿ ಕಾರ್ಯಾರಂಭ ಮಾಡಿತು. ತನ್ನಿತರ ಉದ್ದೇಶದೊಂದಿಗೆ ಪ್ರಲೇಖನ ಶಾಸ್ತ್ರದಲ್ಲಿ ತರಬೇತಿ ನೀಡುವ ಕಾರ್ಯಕ್ರಮವನ್ನಿದು ರೂಪಿಸಿಕೊಂಡಿದೆ.

ಈ ಶಿಕ್ಷಣಾವಧಿಯಲ್ಲಿ ಮುಖ್ಯವಾಗಿ ಗ್ರಂಥಾಲಯ ವಿಜ್ಞಾನದ ಮೂಲತತ್ತ್ವಗಳು, ವಿಶಿಷ್ಟ ಗ್ರಂಥಾಲಯ ಸೇವಾಕ್ರಮ, ವರ್ಗೀಕರಣ, ಸೂಚೀಕರಣ, ಪರಾಮರ್ಶನಸೇವೆ, ಗ್ರಂಥಸೂಚಿ, ಆಡಳಿತ ನಿರ್ವಹಣೆ, ಸಂಘಟನೆ–ಮೊದಲಾದವುಗಳಲ್ಲಿ ತಿಳಿವಳಿಕೆ ಹಾಗೂ ಅಭ್ಯಾಸವನ್ನೀಯಲಾಗುತ್ತದೆ. ಮಾತ್ರವಲ್ಲದೆ ಜ್ಞಾನಪ್ರಪಂಚ, ಅದರ ಬೆಳವಣಿಗೆ, ಪ್ರಲೇಖನ ವಿಜ್ಞಾನ, ಭಾಷಾಂತರ ಕ್ರಮಗಳು, ರೇಖನ ಪ್ರತಿಕರಣ, ಮಾಹಿತಿ ಸಂಗ್ರಹಣೆ ಹಾಗೂ ಪರಿಶೋಧನೆ ಮೊದಲಾದ ತಂತ್ರಗಳಲ್ಲಿ ವಿಶೇಷ ಪರಿಣತಿಯನ್ನೊದಗಿಸಲಾಗುತ್ತದೆ.

ಪ್ರಪಂಚದ ನಾನಾ ಭಾಷೆಗಳಲ್ಲಿ ವೈಜ್ಞಾನಿಕ ಗ್ರಂಥಗಳು, ಲೇಖನಗಳು, ಸಂಶೋಧನ ಪ್ರಬಂಧಗಳು ನಿರಂತರವಾಗಿ ಪ್ರಕಟವಾಗುತ್ತಿರುವ ಕಾಲದಲ್ಲಿ ಯಾವ ಭಾಷೆಯನ್ನೂ ಕಡಿಮೆ ಯೆಂದು ಪರಿಗಣಿಸಬಾರದು. ಸಂಶೋಧನ ಕಾರ್ಯಗಳಿಗೆ ಭಾಷೆ ತೊಡಕಾಗಿ ನಿಲ್ಲಬಾರದು. ಇದನ್ನ ಮನಗಂಡ ಈ ಸಂಸ್ಥೆ ರಷ್ಯನ್ ಭಾಷೆಯಲ್ಲಿ ಭಾಷಾಂತರ ಶಿಕ್ಷಣವನ್ನು ಒದಗಿಸುತ್ತದೆ.

2. ಬೆಂಗಳೂರಿನ ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರ : 1962 ರ ಜನವರಿಯಲ್ಲಿ ಪ್ರಾರಂಭವಾದ ಈ ಸಂಸ್ಥೆ ಎಸ್.ಆರ್. ರಂಗನಾಥನ್ ಅವರ ನಿರ್ದೇಶನದಲ್ಲಿ ತನ್ನ ಕೆಲಸವನ್ನಾರಂಭಿಸಿತು. ಪ್ರಲೇಖನ ವಿಷಯಗಳಲ್ಲಿ ಸಂಶೋಧನೆ ನಡೆಸುವುದು, ಪ್ರಲೇಖನ ಕುಶಲಿಗಳನ್ನು ತಯಾರುಮಾಡುವುದು, ಪ್ರಲೇಖನ ವಿಷಯಕವಾದ ಸಮಸ್ಯೆಗಳನ್ನು ಬಿಡಿಸುವುದು–ಈ ಸಂಸ್ಥೆಯ ಮುಖ್ಯ ಉದ್ದೇಶಗಳು. ಅಸೋಸಿಯೇಟ್, ಅಸೋಸಿಯೇಟ್ ಫೆಲೋಷಿಪ್, ಫೆಲೋಷಿಪ್ ಎಂಬ ಮೂರು ಪದವಿಗಳನ್ನು ಈ ಸಂಸ್ಥೆ ನೀಡುತ್ತಿದೆ. ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ನೀಡುವ ಈ ಅಸೋಸಿಯೇಟ್ ಪದವಿಯನ್ನು (ಗ್ರಂಥಾಲಯಗಳಲ್ಲಿ ಹುದ್ದೆಗಳಿಗೆ ನೇಮಕ ಮಾಡುವ ವಿಷಯದಲ್ಲಿ) ಭಾರತದ ಇತರ ವಿಶ್ವವಿದ್ಯಾಲಯಗಳು ನೀಡುವ ಮಾಸ್ಟರ್ ಪದವಿಗೆ ಸಮವೆಂದು ಪರಿಗಣಿಸಿತು (1968). **(ನೋಡಿ– ಗ್ರಂಥಾಲಯ)**

ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ : ಗ್ರಂಥಾಲಯ ಶಿಕ್ಷಣ ವಿಭಾಗವನ್ನು ವಿಶ್ವವಿದ್ಯಾಲಯಕ್ಕೆ ಸೇರಿಸಬೇಕು ಹಾಗೂ ಗ್ರಂಥಾಲಯ ವಿಜ್ಞಾನದಲ್ಲಿ ಆಳವಾದ ಅಧ್ಯಯನ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಬೇಕು–ಎಂಬ ವಿಲಿಯಂಸನ್ನರ ವರದಿಯಲ್ಲಿನ ಎರಡು ಪ್ರಮುಖ ಸಲಹೆಗಳು ವಿದ್ಯಾಸಂಸ್ಥೆಗಳಲ್ಲಿನ ಗ್ರಂಥಪಾಲನ ವೃತ್ತಿಯ ಮುನ್ನಡೆಗೆ ಅಸ್ತಿಭಾರದಂತಿವೆ. 1924 ರಲ್ಲಿ ಸ್ಥಾಪನೆಗೊಂಡ ಗ್ರಂಥಾಲಯ ವೃತ್ತಿ ಶಿಕ್ಷಣ ಮಂಡಳಿ ಮತ್ತು 1928 ರಲ್ಲಿ ಸ್ಥಾಪನೆಗೊಂಡ ಶಿಕಾಗೊ ವಿಶ್ವವಿದ್ಯಾಲಯದ ಸ್ನಾತಕೋತ್ತರ ಗ್ರಂಥಾಲಯ ವಿಜ್ಞಾನ ಶಾಲೆ–ಇವು ವಿಲಿಯಂಸನ್ನರ ವರದಿಯ ಅನುಷ್ಠಾನಕ್ಕೆ ಇಟ್ಟ ಪ್ರಮುಖ ಹೆಜ್ಜೆಗಳಾಗಿವೆ.

1946 ರಲ್ಲಿ ಏಕಕಾಲಕ್ಕೆ ಎರಡು ಗ್ರಂಥಗಳು ಪ್ರಕಟವಾದವು. ಅವೆರಡೂ ವಿಲಿಯಂಸನ್ನರ ವರದಿಯಂತೆಯೇ ಪ್ರಾಧಾನ್ಯ ಪಡೆದಿದ್ದು ಆಗಬಹುದಾದ ವ್ಯಾಪಕ ಬದಲಾವಣೆಗಳಿಗೆ ಮುನ್‌ಸೂಚನೆಗಳಾದವು. ಅವುಗಳೆಂದರೆ–ಡಂಟನ್ನನ ಎಜುಕೇಷನ್ ಫಾರ್ ಲೈಬ್ರೇರಿಯನ್‌ಷಿಪ್, ಕ್ರಿಟಿಸಿಸಂ ಡಿಪ್ಲೊಮಾಸ್ ಅಂಡ್ ಪ್ರಪೋಸಲ್ಸ್ ಮತ್ತು ಷ್ವೀಲರರ ಪ್ರಾಗ್ರೆಸ್ ಅಂಡ್ ಪ್ರಾಬ್ಲಂಸ್ ಇನ್ ಎಜುಕೇಷನ್ ಫಾರ್ ಲೈಬ್ರೇರಿಯನ್‌ಷಿಪ್, ಇವೆರಡೂ ಉದ್ಗ್ರಂಥಗಳು ಗ್ರಂಥಾಲಯ ವೃತ್ತಿ ಶಿಕ್ಷಣದ ಮೂಲಭೂತ ಸಮಸ್ಯೆಗಳನ್ನು ಗುರುತಿಸಿ ಮುಂದೆ ಆಗಬೇಕಾದ ಮಹತ್ತರ ಬದಲಾವಣೆಗಳ ಕುರಿತು ವಿವೇಚನೆ ನಡೆಸಿವೆ. ಕಳೆದ ಕಾಲುಶತಮಾನದಿಂದ ವೀಕ್ಷಕರು ಮಾಡಿರುವ ಖಚಿತವಾದ ಟೀಕೆಗಳು ವಿದ್ಯಾ ಸಂಸ್ಥೆಗಳ ಗ್ರಂಥಪಾಲನ ವೃತ್ತಿಯ ದೃಷ್ಟಿಯಿಂದ ಪ್ರಾಮುಖ್ಯ ಪಡೆದಿವೆ.

ಗ್ರಂಥಾಲಯ ಶಿಕ್ಷಣದಲ್ಲಿ ಸಂಶೋಧನೆ: ಗ್ರಂಥಾಲಯ ಶಿಕ್ಷಣದಲ್ಲಿ ಸಂಶೋಧನೆಗಳು ನಡೆದಿದ್ದು ಇತ್ತೀಚಿನ ವರ್ಷಗಳಲ್ಲಿ. ಅದೂ ಎರಡನೆಯ ಮಹಾಯುದ್ಧದಿಂದೀಚೆಗೆ. ಆ ಮೊದಲು ಪ್ರಕಟವಾದ ಗ್ರಂಥಗಳು ಮತ್ತು ನಿಯತಕಾಲಿಕೆ ಲೇಖನಗಳು ಬಹುಮಟ್ಟಿಗೆ ಗ್ರಂಥಾಲಯ ಕಾರ್ಯ ಸ್ವರೂಪದ ವಿವರಣೆ, ಗ್ರಂಥ ಸೂಚಿಗಳ ರಚನೆ ಮತ್ತು ಗ್ರಂಥಪಾಲರ ವೈಯಕ್ತಿಕ ಅನುಭವಗಳನ್ನೊಳಗೊಂಡಿರುತ್ತಿದ್ದುವು. ಸಂಶೋಧನ ಸ್ವರೂಪದ ಮಾಹಿತಿಗಳು ಇವುಗಳಲ್ಲಿ ವಿರಳವಾಗಿದ್ದುವೆಂದೇ ಹೇಳಬೇಕು. ಇಂಥ ಸಾಹಿತ್ಯವನ್ನು ಯಾವ ರೀತಿಯ ಮೌಲ್ಯ ಮಾಪನೆಗಾಗಲೀ ತೌಲನಿಕ ವಿಶ್ಲೇಷಣೆಗಾಗಲೀ ಒಳಪಡಿಸುವುದು ಪ್ರಯೋಜನಕಾರಿಯಾಗಿರಲಿಲ್ಲ.

ಕಳೆದ ದಶಕದ ಪೂರ್ವಾರ್ಧದಲ್ಲಿ ಈ ವಾತಾವರಣ ಉತ್ತಮಗೊಂಡಿತು. ಗ್ರಂಥಾಲಯ ಮತ್ತು ಪ್ರಲೇಖನ ಕೇಂದ್ರಗಳ ಪ್ರಸ್ತುತ ಪರಿಸ್ಥಿತಿಯಲ್ಲಿ ಸುಧಾರಣೆಯಾಗದ ಹೊರತು ಓದುಗರ ಆವಶ್ಯಕತೆಗಳನ್ನು ಪೂರೈಸುವುದು ದುಸ್ಸಾಧ್ಯವೆಂಬುದು ಮನದಟ್ಟಾಯಿತು. ಈ ಸುಧಾರಣೆಗಳಿಗೆ ಆಳವಾದ ಸಂಶೋಧನೆ ಮತ್ತು ವ್ಯಾಪಕವಾದ ಸಮೀಕ್ಷೆಗಳ ಗಟ್ಟಿ ತಳಹದಿ ಅಗತ್ಯವಾಯಿತು. ಗ್ರಂಥಾಲಯದ ಹಲವಾರು ಕ್ಷೇತ್ರಗಳಲ್ಲಿ ಅದರಲ್ಲೂ ಮಾಹಿತಿ ಸಂಗ್ರಹಣೆ ಮತ್ತು ವಿತರಣೆಯಲ್ಲಿ ಈ ಸುಧಾರಣೆಗಳು ಆಗಬೇಕಾಯಿತು. ನವೀನ ಸಂಪರ್ಕಸಾಧನಗಳು ಲಭ್ಯವಿರುವಾಗ ಗ್ರಂಥಾಲಯ ಸೇವಾ ವಿಧಾನಗಳಲ್ಲಿ ಮಾರ್ಪಾಟುಗಳು ಅನಿವಾರ್ಯವಾದುವು. ಇಂಥ ಒಂದು ವಿಶಿಷ್ಟ ಸನ್ನಿವೇಶದಲ್ಲಿ ಗ್ರಂಥಾಲಯ ಶಿಕ್ಷಣ ಮತ್ತು ಸೇವೆಯಲ್ಲಿ ಹೊಸ ಹೊಸ ವಿಧಾನ ಮತ್ತು ಸಂಶೋಧನೆಗಳಿಗೆ ಸಾಕಷ್ಟು ಅವಕಾಶವಿದೆ. ಅಷ್ಟೇ ಅಲ್ಲದೆ, ಈ ಸನ್ನಿವೇಶ ಹೊಸ ಸವಾಲನ್ನು ತಂದೊಡ್ಡಿದೆ. ಇಂಗ್ಲೆಂಡ್ ಮತ್ತು ಅಮೆರಿಕದ ಅನೇಕ ಗ್ರಂಥಾಲಯ ಶಿಕ್ಷಣ ಸಂಸ್ಥೆಗಳು ಈ ಸವಾಲನ್ನು ಬಹುಮಟ್ಟಿಗೆ ಎದುರಿಸಿವೆ.

ಸಂಶೋಧನೆ ಎನಿಸಿಕೊಳ್ಳುವ ಯಾವ ಒಂದು ಯೋಜನೆಯೇ ಇರಲಿ ಯಾವ ರಾಷ್ಟ್ರದಲ್ಲಿಯೇ ಆಗಲಿ ಅದು ಬಹು ಕ್ಲಿಷ್ಟವಾದದ್ದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯಂತೂ ಇದು ಬಹು ಜಟಿಲವಾದದ್ದು. ಈ ದೇಶಗಳಲ್ಲಿ ಅಸಂಖ್ಯಾತ ಸಮಸ್ಯೆಗಳು ಇದ್ದು ಅವನ್ನು ಬಿಡಿಸುವಾಗ ಹಲವಾರು ತೊಡಕುಗಳು ಕಂಡುಬರುತ್ತವೆ. ಗ್ರಂಥಾಲಯ ಕ್ಷೇತ್ರದಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವಾಗ ಗ್ರಂಥಾಲಯಗಳ ಮಾನ್ಯತೆಯ ಪ್ರಶ್ನೆ ವ್ಯಾಪಕವಾಗಿರುವ ನಿರಕ್ಷರತೆ, ಗ್ರಂಥಾಲಯಗಳ ಬೆಳೆವಣಿಗೆಯಲ್ಲಿ ಯೋಜನೆಯಿಲ್ಲದಿರುವುದು, ಇಂಥ ಯೋಜನೆಗಳನ್ನು ತಯಾರಿಸುವಾಗ ಬೇಕಾಗುವ ಸಮಂಜಸ ಅಂಕಿಸಂಖ್ಯೆಗಳ ಅಭಾವ, ಕಟ್ಟಡ, ಗ್ರಂಥಸಂರಕ್ಷಣೆ ಮೊದಲಾದವುಗಳಿಗೆ ಬೇಕಾದ ತಾಂತ್ರಿಕ ಜ್ಞಾನದ ಅಭಾವ–ಇವೇ ಮೊದಲಾದ ಸಮಸ್ಯೆಗಳು ಎದುರಾಗುತ್ತವೆ.

ಗ್ರಂಥಾಲಯ ವಿಷಯಗಳನ್ನು ಕುರಿತ ಸಂಶೋಧನೆಗಳು ಮುಂದುವರಿಯುತ್ತಿರುವ ದೇಶಗಳಲ್ಲಿಯೇ ಆಗಲಿ ಮುಂದುವರಿದ ದೇಶಗಳಲ್ಲಿಯೇ ಆಗಲಿ–ಒಂದು ಸರ್ವ ಸಾಮಾನ್ಯ ವಿಷಯವನ್ನು ಅಲಕ್ಷಿಸಲಿಕ್ಕಾಗದು. ಗ್ರಂಥಾಲಯ ವಿಜ್ಞಾನಕ್ಕೂ ಉಳಿದ ಹಲವಾರು ಶಾಸ್ತ್ರಾದಿವಿಷಯಗಳಿಗೂ ನಿಕಟವಾದ ಸಂಬಂಧವಿದೆ. ಗ್ರಂಥಾಲಯ ವಿಷಯದಲ್ಲಿರುವ ಪರಿಣತಿಯೊಂದಿಗೆ ಸಂಶೋಧಕ ಬೇರೆ ವಿಷಯಗಳಲ್ಲೂ ವಿಶಿಷ್ಟ ಜ್ಞಾನ ಮತ್ತು ಪರಿಣತಿ ಪಡೆದಿರಬೇಕಾಗುತ್ತದೆ. ಈಚೆಗೆ ಪ್ರಲೇಖನ, ಸ್ವಯಂತ್ರೀಕರಣ, ಯಂತ್ರೀಕೃತ ಸೂಚೀಕರಣ ವ್ಯವಸ್ಥೆ ಮೊದಲಾದವು ಬಳಕೆಗೆ ಬರುತ್ತಿವೆಯಾಗಿ ಗ್ರಂಥಾಲಯ ವಿಜ್ಞಾನದಲ್ಲಿ ತೀವ್ರವಾಗಿ ಹೊಸ ಹೊಸ ಸಂಶೋಧನೆಗಳು ನಡೆಯುತ್ತಿವೆ.

ಗ್ರೇಟ್ ಬ್ರಿಟನಿನಲ್ಲಿ : 1880 ರಷ್ಟು ಹಿಂದೆ, ಬ್ರಿಟನಿನ ಗ್ರಂಥಾಲಯ ಸಂಘ, ಅದು ಸ್ಥಾಪನೆಯಾದ ಮೂರು ವರ್ಷಗಳಲ್ಲಿಯೇ ಗ್ರಂಥಾಲಯ ಶಿಕ್ಷಣವನ್ನು ಕುರಿತು ಚಿಂತಿಸತೊಡಗಿತು. ಗ್ರಂಥಾಲಯ ವಿಜ್ಞಾನದಲ್ಲಿ 1885ರಲ್ಲಿ ಲಂಡನ್ ಮತ್ತು ನಾಟಿಂಗ್‌ಹ್ಯಾಮ್‌ಗಳಲ್ಲಿ ಪರೀಕ್ಷೆಗಳು ನಡೆದುವು. ಬ್ರಿಟನ್ನಿನ ಮೊದಲ ಗ್ರಂಥಾಲಯ ಶಿಕ್ಷಣ ಕೇಂದ್ರ ಲಂಡನ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ 1919ರಲ್ಲಿ ಪ್ರಾರಂಭವಾಯಿತು. ಆಗಿನ ಬ್ರಿಟಿಷ್ ಶಿಕ್ಷಣ ಪದ್ಧತಿಯಂತೆ ಗ್ರಂಥಾಲಯ ಶಿಕ್ಷಣ ಪದ್ಧತಿಯಲ್ಲಿಯೂ ಪರೀಕ್ಷೆಗಳ ಮೇಲೆ ಹೆಚ್ಚಿನ ಹತೋಟಿಯನ್ನು ಗ್ರಂಥಾಲಯ ಸಂಘವೇ ಹೊಂದಿತ್ತು. ತರಬೇತಿಯಲ್ಲಿ ಅಭ್ಯರ್ಥಿಗಳಿಗೆ ಬೇಕಾಗಿದ್ದ ಸಾಧನ ಸಲಕರಣೆಗಳ ಹಾಗೂ ಇತರ ಸವಲತ್ತುಗಳ ಕಡೆಗೆ ಅಷ್ಟೊಂದು ಗಮನ ಕೊಟ್ಟಿರಲಿಲ್ಲ. ಕೆಲಸದಲ್ಲಿರುವವರಿಗೆ (ಉದ್ಯೋಗಸ್ಥರಿಗೆ) ಆಯಾಯ ವೃತ್ತಿಗಳಲ್ಲಿ ತರಬೇತಿ ನೀಡುವ ವಿಧಾನ ಬ್ರಿಟನಿನಲ್ಲಿ ಆಳವಾಗಿ ನೆಲೆಯೂರಿ ನಿಂತಿದೆ. ಈ ಪದ್ಧತಿಗೆ 1898 ರ ರಾಯಲ್ ಚಾರ್ಟರಿನ ರಕ್ಷಣೆಯೂ ಇದೆ. ಈ ಶಾಸನ ಬ್ರಿಟನಿನ ಗ್ರಂಥಾಲಯ ಸಂಘವನ್ನು ವೃತ್ತಿಸಂಘವೆಂದು ಪರಿಗಣಿಸಿ ಮಾನ್ಯ ಮಾಡಿದೆ. ಶಾಸನದ ಮೂರನೆಯ ಮತ್ತು ಹತ್ತನೆಯ ನಿಬಂಧನೆಗಳು ಗ್ರಂಥಾಲಯ ವೃತ್ತಿಯ ಸುಧಾರಣೆ, ವೃತ್ತಿಯಲ್ಲಿ ಬೇಕಾಗುವ ಅರ್ಹತೆ, ಪರೀಕ್ಷೆಗಳ ಮೇಲೆ ನಿಯಂತ್ರಣ ಮತ್ತು ಪ್ರಶಸ್ತಿ ಪತ್ರಗಳ ವಿತರಣೆ–ಇವುಗಳ ಬಗ್ಗೆ ಗ್ರಂಥಾಲಯ ಸಂಘಕ್ಕೆ ಇರುವ ಜವಾಬ್ದಾರಿಯನ್ನು ಒತ್ತಿ ಹೇಳುತ್ತವೆ. ಗ್ರಂಥಾಲಯ ಶಿಕ್ಷಣ ಕ್ಷೇತ್ರದಲ್ಲಿ ಗ್ರಂಥಾಲಯ ಸಂಘವನ್ನು ಬಿಟ್ಟರೆ ಬೇರಾವ ಸಂಘಕ್ಕಾಗಲೀ ಶಿಕ್ಷಣ ಸಂಸ್ಥೆಗಾಗಲೀ ಇಷ್ಟೊಂದು ಅಧಿಕಾರವಿರುವುದಿಲ್ಲ.

ಬ್ರಿಟನಿನ ದೊಡ್ಡ ದೊಡ್ಡ ನಗರಗಳಲ್ಲಿ ಗ್ರಂಥಾಲಯ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ವೃತ್ತಿನಿರತ ಗ್ರಂಥಪಾಲರಿಗೆ ಗ್ರಂಥಾಲಯ ಸಂಘ ನಡೆಸುವ ಪರೀಕ್ಷೆಗೆ ಕೂಡುವ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಹಲವಾರು ಪ್ರಯತ್ನಗಳು ಕಳೆದ ಶತಕದ ಕೊನೆಯಲ್ಲಿ ನಡೆದುವು. ಇಂಥವುಗಳಲ್ಲಿ ಲಂಡನ್ (1998) ಮತ್ತು ಮ್ಯಾಂಚೆಸ್ಟರ್ (1899) ಮುಖ್ಯವಾದುವುಗಳು. ಮೊದಲು ಐವತ್ತು ವರ್ಷಗಳಲ್ಲಿ ತೆರಪಿನ ಶಿಕ್ಷಣವನ್ನು ನೀಡುವ ಕೆಲಸವನ್ನು ಹಲವಾರು ವಾಣಿಜ್ಯ ಹಾಗೂ ತಾಂತ್ರಿಕ ಕಾಲೇಜುಗಳು ಮುಂದುವರಿಸಿಕೊಂಡು ಬಂದುವು. ಸೆಪ್ಟೆಂಬರ್‌ನಿಂದ ಜೂನ್ ವರೆಗೆ ವಾರಕ್ಕೆ ಒಂದು, ಎರಡು ತರಗತಿಗಳನ್ನು ಸ್ಥಳೀಯ ಶಿಕ್ಷಣ ಸಂಸ್ಥೆಗಳು ನಡೆಸುತ್ತಿದ್ದ ಉದಾಹರಣೆಗಳು ಕಾಣಸಿಗುತ್ತವೆ. ಈ ರೀತಿಯ ವಾರಿಕ ತರಬೇತಿ ಕೇಂದ್ರಗಳು ಬ್ರಿಟನ್ನಿನಾದ್ಯಂತ ಹರಡಿದ್ದು, ಬಹು ಮುಖ್ಯ ವೃತ್ತಿ ಶಿಕ್ಷಣ ಕೇಂದ್ರಗಳಾಗಿದ್ದುವು. ಈ ಅವಧಿಯಲ್ಲಿ ವಿಶ್ವವಿದ್ಯಾಲಯಗಳು ಈ ಬಗ್ಗೆ ಮೌನವಾಗೇ ಇದ್ದುವು. 1919ರಲ್ಲಿ ಲಂಡನ್ ವಿಶ್ವವಿದ್ಯಾಲಯ ಗ್ರಂಥಾಲಯ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವುದರಲ್ಲಿ ಮೊದಲನೆಯದಾಯಿತು. ಗ್ರಂಥಾಲಯ ಶಿಕ್ಷಣದಲ್ಲಿ ಡಿಪ್ಲೊಮ ಪದವಿಯನ್ನು ನೀಡುವುದರಲ್ಲಿ ಲಂಡನ್ ವಿಶ್ವವಿದ್ಯಾಲಯವೇ ಮೊದಲನೆಯದು. ಎರಡನೆಯದಾಗಿ ಈ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನ ಪದವೀಧರರಿಗೆ ಬ್ರಿಟಿಷ್ ಗ್ರಂಥಾಲಯದಲ್ಲಿ ಕೆಲವು ವಿಶೇಷ ಸವಲತ್ತು ಮತ್ತು ವಿನಾಯಿತಿಗಳನ್ನು ನೀಡಲಾಯಿತು. ಬ್ರಿಟನ್ನಿನ ಗ್ರಂಥಪಾಲನ ವೃತ್ತಿಯ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ಗ್ರಂಥಾಲಯ ಶಿಕ್ಷಣ ಕೇಂದ್ರ ಒಬ್ಬ ಪ್ರತ್ಯೇಕ ಹಾಗೂ ಪೂರ್ಣಾವಧಿಯ ನಿರ್ದೇಶಕನ ಆಡಳಿತಕ್ಕೆ ಒಳಪಟ್ಟದ್ದು ಬಹು ಮುಖ್ಯವಾದ ಅಂಶ.

ಬ್ರಿಟಿಷ್ ಗ್ರಂಥಾಲಯ ಪದ್ಧತಿಯಲ್ಲಿನ ಮುಖ್ಯ ಅಂಶ ಇದು : ಸ್ಥಾಪಿತವಾಗುವ ಪ್ರತಿ ಗ್ರಂಥಾಲಯ ಶಿಕ್ಷಣ ಸಂಸ್ಥೆಗೂ ಬ್ರಿಟಿಷ್ ಗ್ರಂಥಾಲಯ ಸಂಘದ ಪರವಾನಗಿ ಅಗತ್ಯವಾದರೂ ಸ್ಥಾಪನೆಯಾದ ಅನಂತರ ಆ ಶಿಕ್ಷಣ ಸಂಸ್ಥೆ ಗ್ರಂಥಾಲಯ ಸಂಘದ ಯಾವ ನಿಯಂತ್ರಣಕ್ಕೂ ಒಳಪಡದೆ ಮುಂದುವರಿಯಬಹುದು.

ಬ್ರಿಟನ್ನಿನ ಉನ್ನತ ಶಿಕ್ಷಣ ಪದ್ಧತಿ ಅಮೆರಿಕ ಮತ್ತು ಆಸ್ಟ್ರೇಲಿಯದ ಶಿಕ್ಷಣ ವಿಧಾನಕ್ಕಿಂತ ತೀರ ಭಿನ್ನವಾಗಿದೆ. ಹೇಗೆಂದರೆ–ಬ್ರಿಟನ್ನಿನಲ್ಲಿ ಗ್ರಂಥಾಲಯಶಾಸ್ತ್ರದ ಉನ್ನತ ಶಿಕ್ಷಣ ವಿಶ್ವವಿದ್ಯಾಲಯಗಳ ಸಾಂಪ್ರದಾಯಿಕ ಹಿಡಿತದಿಂದ ದೂರವಿರಲು ಪ್ರಯತ್ನಿಸಿದೆ. ಗ್ರಂಥಪಾಲರ ಆವಶ್ಯಕತೆಗಳು ಬ್ರಿಟನ್ನಿನಲ್ಲಿ ಬಹುಮಟ್ಟಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ಮತ್ತು ವಿಶಿಷ್ಟ ಗ್ರಂಥಾಲಯ ಸಂಸ್ಥೆಗಳಿಗಿಂತ ಸಾರ್ವಜನಿಕ ಗ್ರಂಥಾಲಯಗಳಲ್ಲೇ ಇರುವುದನ್ನು ಕಾಣಬಹುದು. ಯುದ್ಧೋತ್ತರ ಬೆಳೆವಣಿಗೆಗಳು ಹೆಚ್ಚು ಹೆಚ್ಚಾಗಿ ಸಾರ್ವಜನಿಕ ಗ್ರಂಥಾಲಯಗಳ ಸಿಬ್ಬಂದಿಯ ತರಬೇತಿ ಮತ್ತು ಪೂರೈಕೆಯ ಕಡೆಗೇ ವಾಲುತ್ತದೆ. ಹೀಗಾಗಿ ಗ್ರಂಥಾಲಯಗಳಲ್ಲಿರುವ ವೈವಿಧ್ಯಗಳಿಗನುಸಾರವಾಗಿ ವಿವಿಧ ಬಗೆಯ ಮತ್ತು ವಿವಿಧ ಮಟ್ಟಗಳ ಗ್ರಂಥಾಲಯವಿಜ್ಞಾನ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾಗಿವೆ.

ಸ್ನಾತಕೋತ್ತರ ಗ್ರಂಥಾಲಯ ವಿಜ್ಞಾನದ ಪದವಿಗಳಲ್ಲಿ ಈ ಕೆಳಗಿನ ಅವಧಿ ಮತ್ತು ಶಿಕ್ಷಣ ವಿಧಾನಗಳು ಪ್ರಚುರವಾಗಿವೆ. ಗ್ರಂಥಾಲಯ ಸಂಘದ ಒಂದು ವರ್ಷ ಅವಧಿಯ ಸ್ನಾತಕೋತ್ತರ ಪರೀಕ್ಷೆ; ಒಂದು ವರ್ಷ ಅವಧಿಯ ಸ್ನಾತಕೋತ್ತರ ಡಿಪ್ಲೊಮ ಮಟ್ಟದ ವಿಶ್ವವಿದ್ಯಾಲಯ ಪರೀಕ್ಷೆ; ವಿಶ್ವವಿದ್ಯಾಲಯದ ಪದವಿಯಿಲ್ಲದೆ ನಡೆಸುವವರಿಗೆ ಎರಡು ವರ್ಷದ ಪರೀಕ್ಷೆ ಮತ್ತು ಒಂದು ವರ್ಷ ಅವಧಿಯ ಎಂ.ಎ. ಅಥವಾ ಎಂ.ಎಸ್‍ಸಿ. ಪರೀಕ್ಷೆ.

ಈ ರೀತಿಯ ಶಿಕ್ಷಣ ವಿಧಾನಗಳು ಲಂಡನ್ ವಿಶ್ವವಿದ್ಯಾಲಯದಲ್ಲಿ ಪ್ರಚುರದಲ್ಲಿವೆ. ಗ್ರಂಥಾಲಯ ವಿಜ್ಞಾನದ ವಿವಿಧ ವಿಭಾಗಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರುವ ತರಬೇತಿಗಳನ್ನು ಷಫೀಲ್ಡ್, ಸ್ಟ್ರಾಚ್‍ಲೈಡ್ ಮತ್ತು ಕ್ವೀನ್ಸ್ ವಿಶ್ವವಿದ್ಯಾಲಯಗಳು ನಡೆಸುತ್ತಿವೆ. ಷಫೀಲ್ಡ್ ವಿಶ್ವವಿದ್ಯಾಲಯ ವೈಜ್ಞಾನಿಕ ಹಾಗೂ ಕೈಗಾರಿಕಾ ಕ್ಷೇತ್ರಗಳ ಗ್ರಂಥಪಾಲರಿಗೆ ವಿಶಿಷ್ಟ ರೀತಿಯ ಪಠ್ಯಕ್ರಮವನ್ನು ಹೊಂದಿದೆ. ಇದು ಗ್ರಂಥಾಲಯ ವಿಜ್ಞಾನದ ಜೊತೆಗೆ ಮಾಹಿತಿ ಶಾಸ್ತ್ರದಲ್ಲಿಯೂ ತರಬೇತಿ ನೀಡುತ್ತದೆ. ಇಲ್ಲಿನ ವಿದ್ಯಾರ್ಥಿಗಳು ಗ್ರಂಥಾಲಯ ಹಾಗೂ ಮಾಹಿತಿ ಶಾಸ್ತ್ರದ ಯಾವುದಾದರೊಂದು ವಿಶಿಷ್ಟ ಅಂಗದಲ್ಲಿ ಆಳವಾದ ಅಧ್ಯಯನ ನಡೆಸಿ ಪರಿಣತಿಯನ್ನು ಪಡೆಯಬೇಕಾಗುತ್ತದೆ. ಲಂಡನ್ ವಿಶ್ವವಿದ್ಯಾಲಯ ಕೂಡ ಇದೇ ರೀತಿಯ ಶಿಕ್ಷಣ ಪದ್ಧತಿಯನ್ನು ಹೊಂದಿದ್ದು ಜೊತೆಗೆ ಅಧ್ಯಾಪಕ ಗ್ರಂಥಪಾಲರಿಗೆ ವಿಶಿಷ್ಟ ತರಬೇತಿ ನೀಡುತ್ತಿದೆ. ಈ ಎಲ್ಲ ನಾಲ್ಕು ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮವನ್ನೂ ಗ್ರಂಥಾಲಯ ಸಂಘ ಪುರಸ್ಕರಿಸಿದೆ. ವಿಶ್ವವಿದ್ಯಾಲಯದ ಒಂದು ಶಿಕ್ಷಣ ಕೇಂದ್ರವಿದ್ದರೆ, ಅದು ಪದವಿಪೂರ್ವದ ಅಭ್ಯರ್ಥಿಗಳ ಆಶೋತ್ತರ ಮತ್ತು ಅಭಿರುಚಿಗಳ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಬಲ್ಲದು. ಆಸಕ್ತಿಯುಳ್ಳ ಅಭ್ಯರ್ಥಿಗಳನ್ನೂ ಪ್ರತಿಭಾವಂತ ಶಿಕ್ಷಕರನ್ನೂ ಆಕರ್ಷಿಸಬಲ್ಲುದು.

ಗ್ರಂಥಾಲಯ ವಿಜ್ಞಾನದ ಯಾವುದಾದರೊಂದು ವಿಷಯದ ಮೇಲೆ ಪ್ರೌಢ ಪ್ರಬಂಧವೊಂದನ್ನು ಬರೆದು ಗ್ರಂಥಾಲಯ ಸಂಘದ ಸದಸ್ಯತ್ವವನ್ನು ಪಡೆಯಬಹುದು. ಪ್ರತಿವರ್ಷ ಐವತ್ತಕ್ಕಿಂತ ಹೆಚ್ಚಿನವರು ಅಂಗೀಕಾರ ಪಡೆಯುತ್ತಾರೆ.

ಸೋವಿಯತ್ ದೇಶದಲ್ಲಿ ಇಪ್ಪತ್ತನೆಯ ಶತಕದ ಪ್ರಾರಂಭದಲ್ಲಿ ಒಂದೇ ಒಂದು ಗ್ರಂಥಾಲಯ ವಿಜ್ಞಾನ ಶಿಕ್ಷಣ ಕೇಂದ್ರವಾಗಲೀ ಆ ವಿಷಯವನ್ನು ಕುರಿತ ನಿಯತಕಾಲಿಕೆಯಾಗಲೀ ಸಂಘ ಸಂಸ್ಥೆಯಾಗಲೀ ಇರಲಿಲ್ಲ. 1913 ರಲ್ಲಿ ಶಾನಿವ್‍ಸ್ಕಿ ಸಾರ್ವಜನಿಕ ವಿಶ್ವವಿದ್ಯಾಲಯ ಸಾರ್ವಜನಿಕ ಮತ್ತು ಸಾಮಾಜಿಕ ಗ್ರಂಥಾಲಯಗಳ ಸಿಬ್ಬಂದಿಗೆ ತರಬೇತಿ ನೀಡುವ ಮೂರು ವಾರದ ತರಬೇತಿಯನ್ನು ಪ್ರಾರಂಭಿಸಿತು. ಎಲ್.ಬಿ. ಖವ್ಕೀನಾ ಈ ಯೋಜನೆಯ ನಿರ್ದೇಶಕರಾಗಿದ್ದರು. ಈಕೆ ಗ್ರಂಥಾಲಯ ವಿಜ್ಞಾನದಲ್ಲಿ ಒಳ್ಳೆಯ ಪರಿಣತಿ ಪಡೆದವರಲ್ಲದೆ ರಷ್ಯದಲ್ಲಿ ಗ್ರಂಥಾಲಯಶಾಸ್ತ್ರ ಶಿಕ್ಷಣದ ಸಂಸ್ಥಾಪಕಳೂ ಆಗಿದ್ದಳು. 1918ರ ಅಂತರ್ಯುದ್ಧ ಮತ್ತು ಸೈನಿಕ ಕಾರ್ಯಾಚರಣೆಗಳ ಗೊಂದಲಮಯ ವಾತಾವರಣದಲ್ಲಿಯೇ ಪೀಪಲ್ಸ್ ಕಮಿಷನ್ ಆಫ್ ಎಜುಕೇಷನ್ ಸಂಸ್ಥೆ ವಯಸ್ಕರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿತು. ಇದು ಈಗ ಲೆನಿನ್‍ಗ್ರಾಡಿನಲ್ಲಿ ಕೃಪ್ಸ್‍ಕಾಯಯಾ ಗ್ರಂಥಾಲಯ ಸಂಸ್ಥೆಯಾಗಿ ಮುಂದುವರಿಯುತ್ತಿದೆ. ರಷ್ಯದ ಸಾಂಸ್ಕೃತಿಕ ಕ್ರಾಂತಿಯಲ್ಲಿ ಇದು ಮಹತ್ತ್ವದ ಪಾತ್ರ ವಹಿಸಿದೆ. ರಷ್ಯದ ಮಹಾನಾಯಕ ಲೆನಿನ್ನನ ತೀವ್ರ ಆಸಕ್ತಿಯೂ ಗ್ರಂಥಾಲಯಗಳ ಅಭಿವೃದ್ಧಿಯ ಕಡೆಗೆ ಹೋಯಿತು. ಆಧುನಿಕ ರಷ್ಯದ ಮಹಾಶಿಲ್ಪಿಯೆನಿಸಿದ ಈತ ಗ್ರಂಥಾಲಯಗಳ ಸುವ್ಯವಸ್ಥಿತ ಬೆಳೆವಣಿಗೆಯಲ್ಲಿ ತೀವ್ರ ಆಸಕ್ತಿ ಹೊಂದಿದ್ದ. ವಿಶೇಷ ಹಾಗೂ ಏಕೈಕ ಗ್ರಂಥಾಲಯ ಪದ್ಧತಿಯ ನಿರ್ಮಾಣದೊಡನೆ ಲಭ್ಯವಿರುವ ಗ್ರಂಥಾಲಯ ಸಾಧನ–ಸಲಕರಣೆಗಳ ಪರಿಣಾಮಕಾರೀ ಉಪಯೋಗಗಳನ್ನು ಪಡೆದು ರಾಷ್ಟ್ರದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೆಳೆವಣಿಗೆಗೆ ದಾರಿ ಮಾಡಿಕೊಡುವುದರಲ್ಲಿ ಲೆನಿನ್ ಕೃತಕೃತ್ಯನಾದ.

ಮಾಸ್ಕೊ, ಲೆನಿನ್‍ಗ್ರಾಡ್, ಖೆಂಖೋಫ್ ಮತ್ತು ಉಲಾನ್–ಉಡೆ ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ನಾಲ್ಕು ಗ್ರಂಥಾಲಯ ಶಿಕ್ಷಣ ವಿಭಾಗಗಳು ಅಸ್ತಿತ್ವದಲ್ಲಿದೆ. ಇವುಗಳ ಜೊತೆಗೆ ದೇಶದ ಹಲವೆಡೆ ಅನೇಕ ಶಿಕ್ಷಕ ತರಬೇತಿ ಕೇಂದ್ರಗಳು ಗ್ರಂಥಾಲಯ ವಿಜ್ಞಾನದಲ್ಲಿ ಅಧ್ಯಯನ ಸೌಲಭ್ಯಗಳನ್ನು ಹೊಂದಿವೆ. ಮಾಸ್ಕೊ ಹಾಗೂ ಲೆನಿನ್‍ಗ್ರಾಡ್ ವಿಶ್ವವಿದ್ಯಾಲಯಗಳು ಮತ್ತು ವಿಜ್ಞಾನ ಅಕಾಡೆಮಿ–ಈ ಮೂರು ಸಂಸ್ಥೆಗಳು ಸ್ನಾತಕೋತ್ತರ ಗ್ರಂಥಾಲಯ ಅಧ್ಯಯನ ಯೋಜನೆಗಳನ್ನು ಹೊಂದಿವೆ. ಈ ಯೋಜನೆಗಳು ಪರಿಣತರಿಗೆ ಗ್ರಂಥಾಲಯ ಶಾಸ್ತ್ರದಲ್ಲಿ ತರಬೇತಿ ನೀಡುವುದಲ್ಲದೆ, ಗ್ರಂಥಾಲಯ ಕೇಂದ್ರಗಳಿಗೆ ಶಿಕ್ಷಕರನ್ನು ಒದಗಿಸುತ್ತವೆ. ಇಲ್ಲಿ ವಿದ್ಯಾರ್ಥಿಗಳು ಗ್ರಂಥಾಲಯ ವಿಜ್ಞಾನದಲ್ಲಿ ಪರಿಣತಿಯನ್ನು ಪಡೆಯುವುದರ ಜೊತೆಗೆ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲೂ ಶಕ್ತರಾಗಿರುತ್ತಾರೆ. ಸ್ನಾತಕೋತ್ತರ ಶಿಕ್ಷಣ ಮೂರು ವರ್ಷದ ಪೂರ್ಣ ಅವಧಿಯದಾಗಿರುತ್ತದೆ. ಈ ಅವಧಿಯ ಕೊನೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯೂ ಒಂದೊಂದು ಪ್ರೌಢ ಪ್ರಬಂಧವನ್ನು ಬರೆದು ಸಲ್ಲಿಸಿ ತಾನು ಬರೆದದ್ದನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಈ ಪದವಿ ಗಳಿಸಿದವ ಗ್ರಂಥಾಲಯ ವಿಜ್ಞಾನದಲ್ಲಿ ಶಿಕ್ಷಣ ನೀಡುವ ಅರ್ಹತೆಯನ್ನು ಪಡೆಯುತ್ತಾನೆ. ತರಬೇತಿ ಪಡೆಯುವ ಪ್ರತಿಯೊಬ್ಬ ಅಭ್ಯರ್ಥಿಗೂ ತರಬೇತಿ ಅವಧಿಯಲ್ಲಿ ವಿದ್ಯಾರ್ಥಿವೇತನ ಉಂಟು.

ಪ್ರೌಢ ಶಾಲೆಗಳಲ್ಲಿ ಉತ್ತೀರ್ಣರಾದ ಮತ್ತು ಪ್ರವೇಶ ಪರೀಕ್ಷೆಗಳನ್ನು ಮುಗಿಸಿದ ಗ್ರಂಥಪಾಲರಿಗೆ ರಷ್ಯದಲ್ಲಿ 100 ಕ್ಕೂ ಹೆಚ್ಚು ತರಬೇತಿ ಕೇಂದ್ರಗಳಿವೆ. ಇಂಥ ಕೇಂದ್ರಗಳು ಸಾಂಸ್ಕೃತಿಕ ಕೇಂದ್ರಗಳ ವಿಭಾಗಗಳಾಗಿ ಇಲ್ಲವೆ ಅವುಗಳ ಅಧೀನದಲ್ಲಿ ನಡೆಯುತ್ತವೆ. ಇಲ್ಲಿ ತರಬೇತಿ ಪಡೆದ ಗ್ರಂಥಪಾಲರು ಸಾಮಾನ್ಯವಾಗಿ ಗ್ರಾಮೀಣ ಗ್ರಂಥಾಲಯಗಳು, ನಗರ ಗ್ರಂಥಾಲಯಗಳ ಮಕ್ಕಳ ವಿಭಾಗಗಳು ಮತ್ತು ಪ್ರೌಢಶಾಲಾ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಾರೆ. ತರಬೇತಿಯ ಅವಧಿ ಎರಡು ವರ್ಷ.

ಡಿಸೆಂಬರ್ 1970 ರಿಂದ ಕೆಲಸ ಮಾಡುತ್ತಿರುವ ಮತ್ತೊಂದು ಬೃಹತ್ ಸಂಸ್ಥೆಯೆಂದರೆ ಪೂರ್ವ ಸೈಬೀರಿಯದಲ್ಲಿ ಸ್ಥಾಪಿತವಾದ ಗ್ರಂಥಾಲಯ ಶಿಕ್ಷಣ ಕೇಂದ್ರ. ಸೈಬೀರಿಯದ 15 ವಿಭಾಗಗಳಿಂದ ಮತ್ತು ದೂರಪ್ರಾಚ್ಯ ವಿಭಾಗಗಳಿಂದ ಯುವಕರು ಬಂದು ಇಲ್ಲಿ ಶಿಕ್ಷಣ ಪಡೆಯುತ್ತಾರೆ. ಉಲಾನ್–ಉಡೆಯಲ್ಲಿರುವ ಮುಖ್ಯ ಗ್ರಂಥಾಲಯದಲ್ಲಿ 1 ಲಕ್ಷಕ್ಕೂ ಹೆಚ್ಚು ಗ್ರಂಥಗಳಿವೆ. ಈ ಗ್ರಂಥಾಲಯ ಕೇಂದ್ರದ ಸುತ್ತಮುತ್ತ ಹೊಸದೊಂದು ನಗರವೇ ನಿರ್ಮಾಣವಾಗಿದೆ. ಇಲ್ಲಿ 5 ಲಕ್ಷ ಗ್ರಂಥಗಳ ಸ್ವಾಸ್ಥ್ಯಕ್ಕೆ ಅವಕಾಶವಿರುವ ಒಂದು ಕಟ್ಟಡ, ತರಗತಿ ಕೊಠಡಿಗಳು, ವಿದ್ಯಾರ್ಥಿ ಭವನಗಳು, ಅಧ್ಯಾಪಕರ ಮನೆಗಳು ಮತ್ತು ಸ್ಟೇಡಿಯಂ– ಅಸ್ತಿತ್ವದಲ್ಲಿವೆ.

ತಾಂತ್ರಿಕ ಹಾಗೂ ಸಂಶೋಧನ ಕೇಂದ್ರಗಳಲ್ಲಿರುವ ಗ್ರಂಥಾಲಯಗಳ ಸಿಬ್ಬಂದಿಗೆ ಪ್ರಲೇಖನ ಹಾಗೂ ಮಾಹಿತಿ ಶಾಸ್ತ್ರದಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ರಷ್ಯದಲ್ಲಿದೆ. ಆಲ್ ಯೂನಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಇನ್‍ಫರ್ಮೇಷನ್ ಎಂಬುದು ಹಲವಾರು ವಿಶಿಷ್ಟ ವಿಭಾಗಗಳಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುತ್ತಿದೆ. ಇಷ್ಟೇ ಅಲ್ಲದೆ ಮಾಸ್ಕೊದಲ್ಲಿರುವ ಎಂ. ವಿ. ಲೊಮೊನೊಸೊಫ್ ಸ್ಟೇಟ್ ವಿಶ್ವವಿದ್ಯಾಲಯ ವಿಜ್ಞಾನ ಮಾಹಿತಿಯ ವಿಭಾಗವನ್ನು ಸ್ಥಾಪಿಸಿದೆ. (ಪಿ.ಕೆ.ಪಿ.)

**ಗ್ರಂಥಿ :** ನಿರ್ದಿಷ್ಟವಾದ ಸ್ರಾವವನ್ನು (ಸೆಕ್ರಿಷನ್) ಇಲ್ಲವೇ ರಸವನ್ನು ಉತ್ಪಾದಿಸುವ ಅಂಗಭಾಗ (ಗ್ಲ್ಯಾಂಡ್). ಜೀವಿಯ ಬಾಳ್ವೆಗೆ ಈ ಸ್ರವಣ ಅವಶ್ಯ. ದೇಹದಲ್ಲಿನ ಹಲವಾರು ನಿಶ್ಚಿತ ಕೆಲಸಗಳನ್ನು ನಡೆಸಬಲ್ಲ ವಿಶಿಷ್ಟ ರಸಗಳನ್ನು ವಿಶಿಷ್ಟ ಗ್ರಂಥಿಗಳು ಉತ್ಪಾದಿಸುತ್ತವೆ. ರಸವನ್ನು ಸ್ರವಿಸುವ ಬಗೆ, ರಸದ ಗುಣ, ಗ್ರಂಥಿಯೊಳಗಿನ ಕೋಶದ ವರ್ತನೆ ಮತ್ತು ಗ್ರಂಥಿಯ ರಚನೆ ಇವುಗಳಿಗೆ ತಕ್ಕಂತೆ ಗ್ರಂಥಿಗಳನ್ನು ವಿಂಗಡಿಸಲಾಗಿದೆ. ಕೆಲವು ಗ್ರಂಥಿಗಳು ದೇಹಕ್ಕೆ ಬೇಡವಾದ ಮಲಿನ ಮತ್ತು ಹಾನಿಕರ ವಸ್ತುಗಳನ್ನು ರಕ್ತದಿಂದ ಬೇರ್ಪಡಿಸಿ ಹೊರದೂಡುತ್ತವೆ. ಇವು ವಿಸರ್ಜಕ (ಎಕ್ಸ್‌ಕ್ರೀಟರಿ) ಗ್ರಂಥಿಗಳು. ಮೂತ್ರ ಪಿಂಡಗಳು ಮತ್ತು ಸ್ವೇದ ಗ್ರಂಥಿಗಳು ಈ ರೀತಿಯವು. ಮತ್ತೆ ಕೆಲವು ಗ್ರಂಥಿಗಳು ದೇಹಸೌಖ್ಯದ ವಿಷಯದಲ್ಲಿ ಮುಖ್ಯಪಾತ್ರ ವಹಿಸುವುವು. ಇವುಗಳಲ್ಲಿ ಮುಖ್ಯವಾದವು ಜೀರ್ಣಕಾರಿ ಗ್ರಂಥಿಗಳು. ಜೀರ್ಣಪಥದಲ್ಲಿರುವ (ಡೈಜೆಸ್ಟಿವ್ ಟ್ರ್ಯಾಕ್ಟ್) ಜಠರ ಹಾಗೂ ಕರುಳು ಗ್ರಂಥಿಗಳು, ತಮ್ಮ ಸ್ರಾವವನ್ನು ನಾಳಗಳ ಮೂಲಕ ಜೀರ್ಣಪಥಕ್ಕೆ ಸೇರಿಸುವ ಲಾಲಾಗ್ರಂಥಿಗಳು, ಯಕೃತ್ತು ಮತ್ತು ಮೇದೋಜೀರಕಾಂಗಗಳು ಈ ಗುಂಪಿಗೆ ಸೇರಿ ಆಹಾರ ವಸ್ತುಗಳು ರಕ್ತಗತವಾಗುವಂತೆ ಅವನ್ನು ಅರಗಿಸುವ ಕ್ರಿಯೆಯಲ್ಲಿ ನಿರತವಾಗಿವೆ. ಇನ್ನು ಕೆಲವು ಗ್ರಂಥಿಗಳು ದೇಹದ ನಾನಾ ಕ್ರಿಯೆಗಳು ಕ್ಲುಪ್ತವಾಗಿ ನಡೆಯುವಂತೆ ನಿಯಂತ್ರಿಸುತ್ತವೆ. ಪಿಟ್ಯುಯಿಟರಿ, ಅಡ್ರಿನಲ್ ಮುಂತಾದ ಗ್ರಂಥಿಗಳು ಈ ಗುಂಪಿಗೆ ಸೇರಿವೆ. ಹೀಗೆ ಅನೇಕ ವಿಧಗಳಲ್ಲಿ ಗ್ರಂಥಿಗಳು ದೇಹದ ಆರ್ಥಿಕತೆಗೆ (ಬಾಡಿ ಎಕಾನಮಿ) ಮುಖ್ಯವಾಗಿವೆ. ಪುರುಷರಲ್ಲಿ ಗುದನಾಳದ ಮುಂದುಗಡೆ ಮೂತ್ರಕೋಶದ ಕೆಳಗಿರುವ ಶುಕ್ಲಗ್ರಂಥಿ (ಪ್ರಾಸ್ಟೇಟ್) ಸಂಭೋಗ ಕಾಲದಲ್ಲಿ ಒಂದು ಬಗೆಯ ರಸವನ್ನು ಸ್ರವಿಸಿ ಮೂತ್ರನಾಳಕ್ಕೆ ಸೇರಿಸುತ್ತದೆ. ಈ ಸ್ರಾವ ದೇಹದ ಆರ್ಥಿಕತೆಗೆ ಮುಖ್ಯವಲ್ಲವಾದರೂ ವೀರ್ಯಾಣುಗಳ ಬಾಳ್ವೆಗೆ ಅಗತ್ಯ.

ರಸವನ್ನು ಗ್ರಂಥಿಯಿಂದ ಹೊರಕ್ಕೆ ನಾಳಗಳ ಮೂಲಕ ಸಾಗಿಸುವವು ಸನಾಳ ಗ್ರಂಥಿಗಳು. ಇವುಗಳಿಗೆ ಬಾಹ್ಯಸ್ರಾವಿಗಳು ಎಂದು ಹೆಸರು (ಎಕ್ಸೋಕ್ರೈನ್ಸ್). ನಾಳಗಳ

ಮೂಲಕ ರಸ ಹೊರಬರದೆ ನೇರವಾಗಿ ರಕ್ತಕ್ಕೋ ದುಗ್ಧರಸಕ್ಕೋ ಸೇರುವಂತಿರುವ ಗ್ರಂಥಿಗಳು ನಿರ್ನಾಳ ಗ್ರಂಥಿಗಳು. ಇವುಗಳಿಗೆ ಅಂತಃಸ್ರಾವಿಗಳು (ಎಂಡೋಕ್ರೈನ್ಸ್) ಎಂದು ಹೆಸರು. ಪಿಟ್ಯುಯಿಟರಿ, ಗುರಾಣಿಕ ಗ್ರಂಥಿ ಮುಂತಾದವು ಇಂಥವು. ಇವು ಉತ್ಪಾದಿಸುವ




**ಚಿತ್ರ 1. ವಿವಿಧ ಬಗೆಯ ಸರಳ ಗ್ರಂಥಿಗಳು : 1. ಸಣ್ಣ ಕರುಳಿನ ಗ್ರಂಥಿ, 2. ಜಠರದ ಫಂಡಿಕ್ ಗ್ರಂಥಿ, 3. ಜಠರದ ಪೈಲೋರಿಕ್ ಗ್ರಂಥಿ, 4. ಸ್ವೇದ ಗ್ರಂಥಿ, 5. ಮೈ ಜಿಡ್ಡಿನ ಗ್ರಂಥಿ, 6. ಕಣ್ಣು ರೆಪ್ಪೆಯೊಳಗಿನ ಗ್ರಂಥಿ. ಈ ಚಿತ್ರದಲ್ಲಿ A ನಾಳ ಭಾಗವನ್ನೂ B ಸ್ರವಿಸುವ ಭಾಗವನ್ನೂ ಸೂಚಿಸುತ್ತವೆ**

ಅಂತಃಸ್ರಾವಗಳಿಗೆ ಹಾರ್ಮೋನುಗಳು (**ನೋಡಿ**) ಎಂದು ಹೆಸರು. ಕೆಲವು ಗ್ರಂಥಿಗಳು ಮಿಶ್ರ ಗ್ರಂಥಿಗಳಾಗಿ ಬಾಹ್ಯಸ್ರಾವ ಅಂತಃಸ್ರಾವಗಳೆರಡನ್ನೂ ಉತ್ಪಾದಿಸುತ್ತವೆ. ಮೇದೋಜೀರಕಾಂಗ (ಪ್ಯಾಂಕ್ರಿಯಾಸ್) ಇಂಥ ಒಂದು ಗ್ರಂಥಿ. ಇದರ ಬಾಹ್ಯಸ್ರಾವವಾದ ಮೇದೋಜೀರಕರಸ ನಾಳದ ಮೂಲಕ ಸಣ್ಣಕರುಳೊಳಕ್ಕೆ ಪ್ರವಹಿಸಿ ತಿಂದ ಆಹಾರದಲ್ಲಿರುವ ಹಿಟ್ಟು ಸಕ್ಕರೆಗಳು ಮತ್ತು ಪ್ರೋಟೀನು ಕೊಬ್ಬುಗಳನ್ನು ಅರಗಿಸುವುದಕ್ಕೆ ಸಹಾಯ ಮಾಡುತ್ತದೆ. ಅಂತಃಸ್ರಾವವಾದ ಇನ್ಸುಲಿನ್ ನೇರವಾಗಿ ರಕ್ತಗತವಾಗಿ ವ್ಯಕ್ತಿ ಮಧುಮೇಹ ರೋಗದಿಂದ (ಡಯಾಬೆಟಿಸ್ ಮೆಲ್ಲೈಟಸ್) ನರಳದಂತೆ ಕಾಪಾಡುವುದು. ಪುರುಷರ




**ಚಿತ್ರ 2. ಜಟಿಲಗ್ರಂಥಿಯೊಂದರ ಅಡ್ಡಸೀಳಿಕೆ : 1. ಪ್ರಧಾನ ನಾಳ, 2. ನಾಳದ ಶಾಖೆ, 3. ಸ್ರವಿಸುವ ಭಾಗ**

ವೃಷಣಗಳೂ ಸ್ತ್ರೀಯರ ಅಂಡಾಶಯಗಳೂ ಒಂದು ರೀತಿಯ ಮಿಶ್ರ ಗ್ರಂಥಿಗಳು. ಇವು ವ್ಯಕ್ತಿಯ ಪ್ರಜನನಶೀಲ ಅವಧಿಯಲ್ಲಿ ಕಾರ್ಯ ಸಾಫಲ್ಯಕ್ಕೆ ಅಗತ್ಯವಾದ ವಿಶೇಷ ಅಂತಃಸ್ರಾವಗಳನ್ನು ಉತ್ಪಾದಿಸುತ್ತವೆ. ಮತ್ತು ಅದೇ ವೇಳೆ ಕೋಟಿಗಟ್ಟಲೆ ಪುರುಷಾಣುಗಳನ್ನೂ ಅಂಡಾಶಯ ನಿರ್ದಿಷ್ಟ ಕಾಲಕ್ಕೆ ಒಂದೊಂದು ಅಂಡಾಣುವನ್ನೂ ತಯಾರಿಸಿ ಅವನ್ನು ಬಾಹ್ಯಸ್ರಾವದಂತೆ ನಾಳಗಳ ಮೂಲಕ ಹೊರಹಾಕುತ್ತವೆ ಕೂಡ.

ಬಾಹ್ಯಸ್ರಾವಿ ಗ್ರಂಥಿಗಳು ಒಂದೇ ಕೋಶದಿಂದಾಗಿರಬಹುದು. ಜಠರ ಕರುಳಿನ ನಾಳ ಮತ್ತು ಶ್ವಾಸನಾಳಗಳಲ್ಲಿ ಇವು ಕಾಣಬರುತ್ತವೆ. ಇವುಗಳಿಗೆ ಗಾಬ್ಲೆಟ್ (ಲೋಟಾಕೃತಿ) ಕಣಗಳೆಂದು ಹೆಸರು. ಇವು ನಿರಂತರವಾಗಿ ಲೋಳೆಯನ್ನು ಸ್ರವಿಸಿ ಹೊರಹಾಕುತ್ತವೆ. ಅದು ಸುತ್ತಲೂ ಹರಡಿ ಆ ಭಾಗವನ್ನು ಒದ್ದೆಯಾಗಿ ಜಾರುವಂತೆ ಇಟ್ಟಿರುತ್ತದೆ. ಸಾವಿರ, ಲಕ್ಷ, ಕೋಟಿಗಟ್ಟಲೆ ಕೋಶಗಳು ನಿರ್ದಿಷ್ಟ ರಚನೆಗೆ ಒಳಪಟ್ಟು ಆಗಿರುವುದು ಗ್ರಂಥಿಗಳ ಸಾಮಾನ್ಯ ಲಕ್ಷಣ. ಗ್ರಂಥಿಗಳು ಕಣ್ಣಿಗೆ ಕಾಣದಷ್ಟು ಸಣ್ಣವಿರಬಹುದು ಇಲ್ಲವೇ ಯಕೃತ್ತು, ಮೂತ್ರಪಿಂಡಗಳಂತೆ ಬಹುಗಾತ್ರದ ಗ್ರಂಥಿಗಳಾಗಿರಬಹುದು. ಮಿದುಳಿನ ಕೋರಾಯ್ಡ್ ಪ್ಲೆಕ್ಸಸಿನಲ್ಲಿ ಕೋಶಗಳು ಮಡಿಸಿದ ಹಾಳೆಯಂತೆ ಜೋಡಿಕೊಂಡಿವೆ. ಇವುಗಳಿಗೆ ಮಿಕ್ಕಗ್ರಂಥಿಗಳಂತೆಯೇ ಸ್ರಾವಸಾಮರ್ಥ್ಯ ಉಂಟು. ಕರುಳಿನಲ್ಲಿರುವ ಗ್ರಂಥಿಗಳು ಪ್ರಯೋಗನಳಿಕೆ (ಟೆಸ್ಟ್ ಟ್ಯೂಬ್) ಆಕಾರದಲ್ಲಿವೆ. ಜಠರದ ಗ್ರಂಥಿಗಳು ಕೂಡ ನಳಿಕೆಯಾಕಾರದಲ್ಲಿವೆ. ಆದರೆ ಅವುಗಳಲ್ಲಿ ಸ್ರವಿಸುವ ಭಾಗ ಮತ್ತು ಸ್ರಾವವನ್ನು ಹೊರಕ್ಕೊಯ್ಯುವ ನಾಳಭಾಗವೆಂದು ಗುರುತಿಸಬಹುದು. ಸ್ವೇದಗ್ರಂಥಿಗಳಲ್ಲಿ ಸ್ರವಿಸುವ ಭಾಗ ಸುರುಳಿ ಸುತ್ತಿಕೊಂಡಿರುವ ನಾಳದಂತೆಯೂ ಸ್ರಾವವನ್ನು ಹೊರಕ್ಕೊಯ್ಯುವ ಮತ್ತು ಸ್ವತಃ ಸ್ರಾವಸಾಮರ್ಥ್ಯ ಇಲ್ಲದ ನಾಳಭಾಗ ಸುಮಾರಾಗಿ ನೇರವಾಗಿಯೂ ಇವೆ.

ಮೈಜಿಡ್ಡಿನ ಗ್ರಂಥಿಗಳಲ್ಲಿ (ಸೆಬೇಶಿಯಸ್ ಗ್ಲ್ಯಾಂಡ್ಸ್) ಸ್ರವಿಸುವ ಭಾಗ ಕುಡಿಕೆಯಂತಿದೆ. ಇಲ್ಲಿ ಸಹ ಸ್ರಾವವನ್ನು ಹೊರಕ್ಕೆ ಒಯ್ಯುವ ಭಾಗವನ್ನು ನಾಳವಾಗಿ ಗುರುತಿಸಬಹುದು. ಇಂಥ ಗ್ರಂಥಿಗಳೆಲ್ಲ ಸರಳ ಗ್ರಂಥಿಗಳು ಮತ್ತು ಕಣ್ಣಿಗೆ ಕಾಣಿಸದವು. ಹೀಗಲ್ಲದೇ ನಾಳ ಕವಲೊಡೆದು ಪ್ರತಿ ಕವಲೂ ನಳಿಕೆಯಾಕಾರದ ಇಲ್ಲವೇ ಕುಡಿಕೆಯಾಕಾರದ ಸ್ರವಿಸುವ ಭಾಗಗಳಲ್ಲಿ ಕೊನೆಗೊಂಡಿದ್ದರೆ ಅಂಥ ಗ್ರಂಥಿಗಳಿಗೆ ಜಟಿಲ ರಚನೆಯ ಗ್ರಂಥಿಗಳೆಂದು ಹೆಸರು. ಇವು ಸಾಮಾನ್ಯವಾಗಿ ದ್ರಾಕ್ಷಿ ಗೊಂಚಲಿನಂತಿವೆ. ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣಬಹುದು. ಅನೇಕ ಗ್ರಂಥಿಗಳಲ್ಲದೇ ದೊಡ್ಡ ಗ್ರಂಥಿಗಳಾದ ಲಾಲಾಗ್ರಂಥಿಗಳು, ಮೇದೋಜೀರಕಾಂಗಗಳು ಕೂಡ ಈ ಬಗೆಯವು. ಮುಖ್ಯ ನಾಳದ ಬೇರೆ ಬೇರೆ ಪ್ರಾಥಮಿಕ ಮತ್ತು ದ್ವಿತೀಯಕ ಕವಲುಗಳಿಗೆ ಅಂಟಿದಂತೆ ಗ್ರಂಥಿಭಾಗಗಳನ್ನು ಗುರುತಿಸಬಹುದು. ಈ ಗ್ರಂಥಿ ಭಾಗಗಳನ್ನೆಲ್ಲ ಅಥವಾ ಹಾಲೆಗಳನ್ನೆಲ್ಲ ಜೋಡಿಸಿ ಗ್ರಂಥಿಯನ್ನು ಒಂದು ಅಂಗವಾಗಿ ಪ್ರತ್ಯೇಕಿಸುವ ಹೊರಕವಚ ಉಂಟು. ಗ್ರಂಥಿಯ ಸ್ರವಣ ಭಾಗಗಳು, ಸಾಗುನಾಳಗಳು, ಗ್ರಂಥಿಗೆ ಪೂರೈಕೆಯಾಗುವ ರಕ್ತ ಮತ್ತು ದುಗ್ಧರಸನಾಳಗಳು, ನರಗಳು– ಇವನ್ನು ಯುಕ್ತಸ್ಥಾನಗಳಲ್ಲಿ ಹೊಂದಿಸಿ ಇಡಲು ಗ್ರಂಥಿಯ ಮಿಕ್ಕ ಭಾಗವನ್ನೆಲ್ಲ ತುಂಬಿಕೊಂಡಿರುವ ಬಂಧನಾಂಗಾಂಶ (ಕನೆಕ್ಟಿವ್ ಟಿಶ್ಯೂ) ಉಂಟು. ಗ್ರಂಥಿಯ ಸ್ರವಿಸುವ ಭಾಗದ ಕೋಶಗಳು ರಕ್ತದಿಂದ ಬೇಕಾದ ವಸ್ತುಗಳನ್ನು ಹೀರಿಕೊಂಡು ನಿರ್ದಿಷ್ಟವಾದ ಸ್ರಾವವನ್ನು ಉತ್ಪಾದಿಸುತ್ತವೆ. ಇದು ಕೋಶಗಳಿಂದ ಊರಿ (ಊಜ್) ಹೊರಬಂದು ನಾಳವನ್ನು ಸೇರಬಹುದು. ಲಾಲಾಗ್ರಂಥಿಗಳು, ಯಕೃತ್ತು ಮುಂತಾದವುಗಳಲ್ಲಿ ಈ ರೀತಿಯ ಸ್ರಾವವನ್ನು ನೋಡಬಹುದು. ಸ್ರಾವ ತುಂಬಿದ ಕೋಶವೇ ಕಳಚಿಕೊಂಡು ದ್ರವವಾಗಿ ನಾಳವನ್ನು ಸೇರಬಹುದು. ಮೈಜಿಡ್ಡಿನ ಗ್ರಂಥಿಗಳು ಈ ಬಗೆಯವು. ಇವೆರಡಕ್ಕೂ ಮಧ್ಯಸ್ಥವಾಗಿ ಸ್ರಾವ ತುಂಬಿದ ಕೋಶದ ತುದಿ ಭಾಗ ವಿಸರ್ಜಿಸಲ್ಪಟ್ಟು ದ್ರವವಾಗಿ ನಾಳದೊಳಕ್ಕೆ ಸೇರಬಹುದು. ಕರುಳಿನ ವಿಶೇಷ ಸ್ವೇದಗ್ರಂಥಿಗಳು ಮತ್ತು ಸ್ತನಗ್ರಂಥಿಗಳು ಈ ಗುಂಪಿಗೆ ಸೇರಿದುವು. ಗ್ರಂಥಿಗಳ ನಾಳ ಭಾಗಗಳು ಸ್ರಾವವನ್ನು ಹೊರಕ್ಕೆ ಒಯ್ಯುತ್ತವೆ. ಮಾತ್ರವಲ್ಲ ಕೆಲವು ಗ್ರಂಥಿಗಳಲ್ಲಿ ಸ್ರವಿಸುವ ಮತ್ತು/ಅಥವಾ ಇಂಗಿಸುವ ಸಾಮರ್ಥ್ಯವೂ ಇವುಗಳಿಗುಂಟು. ಲಾಲಾಗ್ರಂಥಿಗಳಲ್ಲಿಯೂ ಯಕೃತ್ತಿನಲ್ಲಿಯೂ ಈ ಕ್ರಿಯೆ ಕಾಣಬರುತ್ತದೆ. ಒಂದು ಗ್ರಂಥಿಗೆ ಒಂದೇ ನಾಳವಿರುವುದು ಸಾಮಾನ್ಯ. ಆದರೆ ಕೆಲವೆಡೆ ಒಂದೇ ಗ್ರಂಥಿಗೆ ಅನೇಕ ನಾಳಗಳಿರುವುದೂ ಉಂಟು. ಅಶ್ರು ಗ್ರಂಥಿಗಳು, ಸ್ತನ, ನಾಲಿಗೆ ತಳದಲ್ಲಿರುವ ಲಾಲಾಗ್ರಂಥಿ, ಪುರುಷರಲ್ಲಿರುವ ಶುಕ್ಲ ಗ್ರಂಥಿ ಇವು ಈ ಗುಂಪಿಗೆ ಸೇರಿದುವು.

ಅಂತಃಸ್ರಾವೀ ಗ್ರಂಥಿಗಳು ನಿರ್ನಾಳ ಗ್ರಂಥಿಗಳು. ಇವುಗಳ ಸ್ರಾವ ಬಾಹ್ಯ ಸ್ರಾವಗಳಿಗಿಂತ ಬಹುಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಾಗಿ ನೇರವಾಗಿ ರಕ್ತಗತವಾಗಿ ದೇಹಕ್ರಿಯಾನಿಯಂತ್ರಣದಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಇವುಗಳಿಗೆ ರಾಸಾಯನಿಕ ದೂತಗಳೆಂದೂ ಅಂತಃಸ್ರಾವಗಳೆಂದೂ ಹಾರ್ಮೋನುಗಳೆಂದೂ ಹೆಸರುಂಟು. ಇವು ರಕ್ತದಲ್ಲಿ ಕಲೆತು ದೇಹದ ಎಲ್ಲ ಭಾಗಗಳಿಗೂ ಒಯ್ಯಲ್ಪಟ್ಟರೂ ನಿರ್ದಿಷ್ಟ ಅಂಗಗಳ ಮೇಲೆ

ಮಾತ್ರ ತಮ್ಮ ಪ್ರಭಾವ ಬೀರಿ ಅವುಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಈ ಗ್ರಂಥಿಗಳ ಪೈಕಿ ತಲೆಚಿಪ್ಪಿನೊಳಗೆ ಮಿದುಳಿನ ಕೆಳಭಾಗದಲ್ಲಿ ಸ್ಥಾಪಿತವಾಗಿರುವ ಬಟಾಣಿಕಾಳಿನ ಗಾತ್ರದ ಪಿಟ್ಯುಯಿಟರಿ ಗ್ರಂಥಿ ಬಹುಮುಖ್ಯವಾದದ್ದು. ಇದರ ಸ್ರಾವಗಳು ಗುರಾಣಿಕ ಗ್ರಂಥಿ, ಅಡ್ರಿನಲ್ ಗ್ರಂಥಿ, ಲೈಂಗಿಕ ಗ್ರಂಥಿಗಳು ಮುಂತಾದವುಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಅಂತಃಸ್ರಾವಗಳ ಪ್ರಭಾವ ರಾಸಾಯನಿಕ ದೂತಕ್ರಿಯೆಯಿಂದಾಗುತ್ತದೆ. ಆದ್ದರಿಂದ ಕುರಿ, ದನ, ಹಂದಿ ಮುಂತಾದವುಗಳಿಂದ ವಿಶೇಷ ರೀತಿಯಲ್ಲಿ ಅಂತಃಸ್ರಾವಗಳು ಸಂಗ್ರಹಿಸಲ್ಪಟ್ಟು ವೈದ್ಯದಲ್ಲಿ ಬಳಕೆಯಲ್ಲಿವೆ. ಕೆಲವು ಅಂತಃಸ್ರಾವಗಳ ರಾಸಾಯನಿಕ ರಚನೆ ಗೊತ್ತಿರುವುದರಿಂದ ಅವನ್ನು ಸಂಯೋಗಿಸಿ ಕೃತಕ ಅಂತಃಸ್ರಾವವಾಗಿ ಉಪಯೋಗಿಸಲಾಗುತ್ತದೆ. ದೇಹದಲ್ಲಿ ಅಂತಃಸ್ರಾವಗಳ ಪರಿಮಾಣದ ಏರುಪೇರಿನಿಂದ ಅನೇಕ ರೋಗಸ್ಥಿತಿಗಳು ಉಂಟಾಗುವುದರಿಂದ ಮತ್ತು ಕೆಲವು ವೇಳೆ ಇವು ಮಾರಕಗಳಾಗುವುದರಿಂದ ಚಿಕಿತ್ಸೆಯಲ್ಲಿ ಅಂತಃಸ್ರಾವಗಳ ಪ್ರಾಮುಖ್ಯ ಎಷ್ಟೆಂಬುದನ್ನು ಅರಿಯಬಹುದು. ಎಲ್ಲ ರೀತಿಯ ಗ್ರಂಥಿಗಳ ಕೋಶಗಳಲ್ಲೂ ಮಿಕ್ಕ ಕೋಶಗಳಲ್ಲಿರುವಂತೆಯೇ ಕೋಶದ ಎಲ್ಲ ಭಾಗಗಳೂ ಇರುತ್ತವೆ. ವಿಶೇಷವಾಗಿ ಸ್ರಾವವೋ ಸ್ರಾವಜನಕವೋ ಆದ ಕಿರುಕಣಗಳೂ (ಗ್ರಾನ್ಯೂಲ್ಸ್), ಮೈಟೋಕಾಂಡ್ರಿಯ ಮತ್ತು ಗಾಲ್ಜಿ ವಸ್ತುವೂ ಕಂಡುಬಂದು ಅವುಗಳ ಆಕಾರ, ಗಾತ್ರಗಳಲ್ಲಿ ಸ್ರಾವಚಟುವಟಿಕೆಗೆ ಅನುಗುಣವಾದ ಬದಲಾವಣೆಗಳಾಗುತ್ತವೆ. (ಕೆ.ಕೆ.ಎಸ್‌ಡಬ್ಲ್ಯೂ.; ಡಿ.ಎಸ್.ಎಸ್.)

**ಸಸ್ಯಗಳಲ್ಲಿ :** ಪ್ರಾಣಿಗಳಲ್ಲಿರುವಂತೆಯೆ ಸಸ್ಯಗಳ ಗ್ರಂಥಿಗಳು ಕೂಡ ನಿರ್ದಿಷ್ಟ ಬಗೆಯ ರಸವನ್ನು ಉತ್ಪಾದಿಸುವ ಅಂಗ ಭಾಗಗಳು. ಅಂತೆಯೇ ಇವುಗಳಲ್ಲಿ ಸ್ರಾವ ಇಲ್ಲವೇ ವಿಸರ್ಜಿತ ಪದಾರ್ಥ ಸಂಗ್ರಹವಾಗಿರುತ್ತದೆ. ಗ್ರಂಥಿಗಳು ಬಿಡಿಕೋಶಗಳ ಇಲ್ಲವೆ ಅನೇಕ ಚಿಕ್ಕಕೋಶಗಳ ಸಮೂಹದ ರೂಪದಲ್ಲಿರಬಹುದು. ಗ್ರಂಥಿಗಳ ರೂಪರಚನೆ ಯಾವ ಬಗೆಯೇ ಇರಲಿ ಸಸ್ಯಗಳಲ್ಲಿ ಮಾತ್ರ ನಾಳ ವ್ಯವಸ್ಥೆ ಇರುವುದಿಲ್ಲ. ಪ್ರಾಣಿಗಳಲ್ಲಿ ಉಂಟು. ಆದ್ದರಿಂದ ಸಸ್ಯಗ್ರಂಥಿಗಳಲ್ಲಿ ಉತ್ಪತ್ತಿಯಾಗುವ ರಸ ಫ್ಲೋಯೆಮ್ ನಾಳ ವ್ಯವಸ್ಥೆಯ ಮೂಲಕ ಸಸ್ಯ ದೇಹದಲ್ಲಿ ವ್ಯಾಪಿಸುತ್ತದೆ. ಸಸ್ಯಗಳಲ್ಲಿ ಗ್ರಂಥಿಗಳು ದೇಹದ ಹೊರಪದರವಾದ ಎಪಿಡರ್ಮಿಸಿನ ಮೇಲಿರಬಹುದು ಅಥವಾ ದೇಹದ ಒಳಗಿನ ಇತರ ಬಗೆಯ ಅಂಗಾಂಶಗಳ ಮಧ್ಯೆ ಇರಬಹುದು. ಮೊದಲನೆಯ ಬಗೆಗೆ ಬಹಿರ್‌ಗ್ರಂಥಿಗಳೆಂದೂ ಎರಡನೆಯವಕ್ಕೆ ಅಂತರ್‌ಗ್ರಂಥಿಗಳೆಂದೂ ಹೆಸರು.




ಚಿತ್ರ 3. ಸಸ್ಯಗ್ರಂಥಿಗಳ ವಿವಿಧ ಭಾಗಗಳು : 1. ಲ್ಯಾವೆಂಡರ್, 2. ಪೆಲಾರ್ಗೋನಿಯಮ್, 3. ಚುರುಚುರುಕೆ ಗಿಡ, 4ನೆಯ ಗುಂಪಿನ ಚಿತ್ರಗಳಲ್ಲಿ a, b ಮತ್ತು cಗಳು ಯೂಫೋರ್ಬಿಯ ಪಲ್ಚೆರಿಮ ಗಿಡದ ಮಧುಗ್ರಂಥಿಯ ಹೊರನೋಟ, ಹಾಲೆಗಳು ಮತ್ತು ಉದ್ದಸೀಳಿಕೆಯನ್ನು ಅನುಕ್ರಮವಾಗಿ ಸೂಚಿಸುತ್ತವೆ.

ಬಹಿರ್ ಗ್ರಂಥಿಗಳು : ಇವುಗಳಲ್ಲಿ ಹಲವು ಬಗೆಗಳಿವೆ. 1. ರೋಮಗಳಂತಹ ಗ್ರಂಥಿಗಳು : ಇವು ಕೂದಲುಗಳಂತೆ ಕಾಣುವ ಗ್ರಂಥಿಗಳು. ಇವಕ್ಕೆ ಬಹುಕೋಶಿ ಇಲ್ಲವೆ ಏಕಕೋಶಿ ಅಗ್ರಭಾಗವೂ ತೊಟ್ಟಿನಂಥ ಬುಡವೂ ಇವೆ. ಅಗ್ರಭಾಗಕ್ಕೆ ಮಾತ್ರ ಸ್ರಾವಕಸಾಮರ್ಥ್ಯವಿರುತ್ತದೆ. ಉದಾಹರಣೆಗೆ ಚುರುಚುರುಕೆ ಗಿಡದ ಕುಟುಕು ರೋಮಗಳು, ಲ್ಯಾವೆಂಡರ್, ಪಚ್ಚೆತೆನೆ, ತುಳಸಿ ಮುಂತಾದವುಗಳ ಸುವಾಸನಾ ಗ್ರಂಥಿಗಳು, ಹೊಗೆಸೊಪ್ಪು, ಸೇಬು, ಭೂರ್ಜಪತ್ರ ಮುಂತಾದ ಸಸ್ಯಗಳಲ್ಲಿ ಜಿಗುಟು ವಸ್ತುಗಳನ್ನು ಉತ್ಪಾದಿಸುವ ಗ್ರಂಥಿಗಳು.

2. ಮಧು ಗ್ರಂಥಿಗಳು : ಅನೇಕ ಬಗೆಯ ಹೂಗಳ ಅಂಡಾಶಯದ ಕೆಳಗೆ ಅಥವಾ ಸುತ್ತುವರಿದಂತೆ ಇರುವ ಗ್ರಂಥಿಗಳಿವು. ಉದಾಹರಣೆಗೆ ಯೂಫೋರ್ಬಿಯ, ತುಂಬೆ, ಗುಲಾಬಿ, ದಾಸವಾಳ ಇತ್ಯಾದಿ. ಕೆಲವೊಮ್ಮೆ ಎಲೆ, ಕಾಂಡ, ವೃಂತಪತ್ರ ಮುಂತಾದವುಗಳ ಮೇಲೂ ಮಧು ಗ್ರಂಥಿಗಳಿರಬಹುದು. ಈ ಗ್ರಂಥಿಗಳೆಲ್ಲೆಲ್ಲ ಸಿಹಿಯಾದ ದ್ರವ ಉತ್ಪತ್ತಿಯಾಗುತ್ತಿದ್ದು ಕೀಟಗಳನ್ನು ಆಕರ್ಷಿಸಲು ಅದು ಸಹಾಯಕವಾಗುತ್ತದೆ.

3. ಹೈಡತೋಡುಗಳು : ಟೊಮ್ಯಾಟೊ, ನಾಸ್ಟರ್ಷಿಯಮ್, ಟ್ರೋಪಿಯೋಲಮ್, ಹುಲ್ಲು, ತೆರ್ಮೆ (ಫರ್ನ್) ಮುಂತಾದ ಗಿಡಗಳ ಎಲೆಗಳ ತುದಿ ಮತ್ತು ಅಂಚುಗಳಲ್ಲಿ ಇರುವ ಗ್ರಂಥಿಗಳಿವು. ಇವುಗಳ ಮುಖಾಂತರ ವಿಲೀನವಾದ ಲವಣಗಳುಳ್ಳ ನೀರು ವಿಸರ್ಜಿತವಾಗುತ್ತದೆ. ಈ ಕಾರ್ಯಕ್ಕೆ ಗಟೇಷನ್ ಎಂದು ಹೆಸರು.

4. ಪಾಚಕ ಗ್ರಂಥಿಗಳು : ಇವನ್ನು ಕೀಟಭಕ್ಷಕ ಸಸ್ಯಗಳಾದ ಡ್ರಾಸಿರ, ನೆಪೆಂತೆಸ್, ಯುಟ್ರಿಕ್ಯುಲೇರಿಯ ಇತ್ಯಾದಿಗಳಲ್ಲಿ ಕಾಣಬಹುದು. ಇವು ಎಲೆಗಳ ಮೈಮೇಲೆ ಇದು ಒಂದು ರೀತಿಯ ಪಾಚಕರಸವನ್ನು ಉತ್ಪಾದಿಸುತ್ತವೆ. ಇದರಿಂದ ಗಿಡ ಸೆರೆ ಹಿಡಿಯುವ ಕೀಟಗಳನ್ನು ಜೀರ್ಣಿಸಲು ಅನುಕೂಲವಾಗುತ್ತದೆ.

5. ಅಂತರ್‌ಗ್ರಂಥಿಗಳು : ಇವುಗಳಲ್ಲಿ ಸ್ರಾವಕ ಕೋಶಗಳು (ಸೆಕ್ರೀಟರಿ ಸೆಲ್ಸ್), ಸ್ರಾವಕ ನಾಳಗಳು (ಸೆಕ್ರೀಟರಿ ಕೆನಾಲ್ಸ್) ಮತ್ತು ಲೇಟಿಸಿಫರ್ಸ್ ಎಂಬ ಮೂರು ಮುಖ್ಯ ಬಗೆಗಳಿವೆ.

1. ಸ್ರಾವಕ ಕೋಶಗಳು : ಇವು ಬೇರೆ ಬೇರೆ ರೀತಿಯ ಕೋಶಗಳ ನಡುವೆ ಹರಡಿಕೊಂಡಿರುತ್ತವೆ. ಇವುಗಳಲ್ಲಿ ಸಂಗ್ರಹವಾಗುವ ಪದಾರ್ಥದ ಆಧಾರದ ಮೇಲೆ ಇವಕ್ಕೆ ಹಲವಾರು ಹೆಸರುಗಳನ್ನು ಕೊಡಲಾಗಿದೆ. ಇವುಗಳ ಸ್ರಾವ ತೈಲವಾಗಿರಬಹುದು (ಉದಾಹರಣೆಗೆ ಕೊತ್ತುಂಬರಿ, ಜೀರಿಗೆ, ದಾಲ್ಚಿನ್ನಿ, ಸಂಪಿಗೆ ಇತ್ಯಾದಿ), ರಾಳ (ರೆಸಿನ್) ಆಗಿರಬಹುದು (ಉದಾಹರಣೆಗೆ ಸೂರ್ಯಕಾಂತಿ, ಪೈನ್ ಇತ್ಯಾದಿ), ಲೋಳೆಯಂಥ ವಸ್ತುವಾಗಿರಬಹುದು (ಉದಾಹರಣೆಗೆ ಕಳ್ಳಿ, ಗೊಡ್ಡು ಈಚಲು, ದಾಸವಾಳ ಮುಂತಾದವು) ಅಥವಾ ಟ್ಯಾನಿನ್ ಆಗಿರಬಹುದು (ಉದಾಹರಣೆಗೆ ತಂಗಡಿ, ಕ್ಯಾಸ್ಯುಲ, ರೂಬಸ್ ಮುಂತಾದವು).

2. ಸ್ರಾವಕನಾಳಗಳು : ಇವು ಹಲವಾರು ಕೋಶಗಳು ಕ್ಷಯಿಸುವುದರಿಂದ ಇಲ್ಲವೆ ಬೇರೆ ಬೇರೆಯಾಗುವುದರಿಂದ ಉಂಟಾಗುತ್ತವೆ. ಇವು ಕೂಡ ತೈಲ, ರಾಳ, ಟ್ಯಾನಿನ್ ಅಥವಾ ಲೋಳೆಯಿಂದ ಕೂಡಿರಬಹುದು. ಉದಾಹರಣೆಗೆ ಪೈನ್, ನಿಂಬೆ, ಹತ್ತಿ ಇತ್ಯಾದಿ.

3. ಲೇಟಿಸಿಫರ್ಸ್ : ಹಾಲ್ನೊರೆಯ (ಲೇಟೆಕ್ಸ್) ಉತ್ಪಾದನೆಯಲ್ಲಿ ತೊಡಗಿರುವ ಗ್ರಂಥಿಗಳಿವು. ಇವು ಒಂದೇ ಜೀವಕೋಶದಿಂದ ಕೂಡಿದ ಸರಳ ರೀತಿಯವಾಗಿರಬಹುದು, ಇಲ್ಲವೆ ಹಲವಾರು ಜೀವಕೋಶಗಳಿಂದ ಕೂಡಿದ ಸಂಕೀರ್ಣ ರೀತಿಯವಾಗಿರಬಹುದು. ಇವುಗಳಲ್ಲಿ ತಯಾರಾಗುವ ಹಾಲ್ನೊರೆ ಬಣ್ಣರಹಿತವಾಗಿರಬಹುದು. ಇಲ್ಲವೆ ಬಿಳಿ, ಕಿತ್ತಳೆ, ಕಂದು ಬಣ್ಣಗಳಿಂದ ಕೂಡಿರಬಹುದು. ಉದಾಹರಣೆಗೆ ಹೀವಿಯ ಬ್ರಸಿಲಿಯನ್ಸಿಸ್ (ರಬ್ಬರ್‌ಮರ), ಪಪ್ಪಾವರ್ ಸಾಮ್ನಿಫೆರಮ್ (ಅಫೀಮು ಗಿಡ), ಕೇರಿಕ ಪಪಾಯ (ಪಪ್ಪಾಯಿ), ಡ್ಯಾಂಡೆಲಿಯನ್, ಲ್ಯಾಕ್ಟುಕ ಇತ್ಯಾದಿ. (ಎಂ.ಎಸ್.ಎಸ್.ಆರ್.)

**ಗ್ರನಾಡ :** ದಕ್ಷಿಣ ಸ್ಪೇನಿನ ಪ್ರದೇಶದ ಒಂದು ನಗರ. ಅದೇ ಹೆಸರಿನ ಪ್ರಾಂತ್ಯದ ಮುಖ್ಯ ಪಟ್ಟಣ. ಮ್ಯಾಡ್ರಿಡ್ ನಗರದ ದಕ್ಷಿಣಕ್ಕೆ 360 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,37,929 (2007). ನಗರ ಸಮುದ್ರಮಟ್ಟದಿಂದ 738 ಮೀ ಎತ್ತರದಲ್ಲಿದೆ. ಸೈರಾ ನೆವೇಡ ಪರ್ವತಶ್ರೇಣಿಯ ವಾಯವ್ಯಭಾಗದಲ್ಲಿ ಹೆನಿಲ್ ಮತ್ತು ದರೋ ನದಿಗಳ ಸಂಗಮಸ್ಥಾನವಿದು. ಗ್ರನಾಡದ ಮೂಲಕ ಹರಿಯುವ ದರೋ ನದಿಯ ಬಲಗಡೆ ಹಳೆಯ ನಗರ ಇದೆ. ಇಲ್ಲಿ ಮೋರ್ ಜನಾಂಗದವರ ಹಳೆಯ ಕಟ್ಟಡಗಳೂ ಕಿರಿದಾದ ತಿರುವುಮುರುವಿರುವ ಬೀದಿಗಳೂ ಸಣ್ಣಸಣ್ಣ ಚೌಕಗಳೂ ಇವೆ. ಗ್ರನಾಡ ಉತ್ತರದ ಕಡೆಯಲ್ಲಿ ವಿಸ್ತರಿಸಿದೆ. ಆಧುನಿಕ ಕಟ್ಟಡಗಳು ತಲೆಯೆತ್ತಿವೆ. ಆಹಾರ ಪದಾರ್ಥಗಳ ತಯಾರಿಕೆ, ಸಕ್ಕರೆ ಪರಿಷ್ಕರಣ– ಇವು ಇಲ್ಲಿಯ ಮುಖ್ಯ ಉದ್ಯಮಗಳು.



ಅಲ್‌ಹಾಂಬ್ರದ ಸಿಂಹಗಳ ಮೊಗಸಾಲೆ

ಗ್ರನಾಡ ನಗರದಲ್ಲಿ ಅನೇಕ ಭವ್ಯ ಕಟ್ಟಡಗಳುಂಟು. ಇವುಗಳಲ್ಲಿ ಬಹಳ ಮುಖ್ಯವಾದ್ದು ಕತೀಡ್ರಲ್ ಕಟ್ಟಡ. ಇದು 1529–1703 ರಲ್ಲಿ ಪುನರುಜ್ಜೀವನ ಶೈಲಿಯಲ್ಲಿ ನಿರ್ಮಿತವಾಯಿತು. ಸ್ಪೇನಿನ ಖ್ಯಾತ ಕಲಾವಿದರ ಚಿತ್ರಕೃತಿಗಳು ಈ ಕಟ್ಟಡದಲ್ಲಿವೆ. ಕತೀಡ್ರಲ್ ಬಳಿಯಲ್ಲೇ ಇರುವ ಚಾಪೆಲ್‌ನಲ್ಲಿ ಅರಸರ ಗೋರಿಗಳಿವೆ. ಅಪೂರ್ಣವಾಗಿರುವ 5 ನೆಯ ಚಾರ್ಲ್ಸ್ ಅರಮನೆ, ವಿಶ್ವವಿದ್ಯಾಲಯ, ಇಂಪೀರಿಯಲ್ ಕಾಲೇಜು, ಸೇಂಟ್ ಆನ್ ಮತು ಸ್ಯಾನ್ ಸಾಲ್ವಡಾರ್ ಚರ್ಚುಗಳು, ಸೇಂಟ್ ಎಲಿಜಬೆತ್ ಕಾನ್ವೆಂಟ್ – ಇವು ಇತರ ಭವ್ಯಕಟ್ಟಡಗಳ ಪೈಕಿ ಕೆಲವು. ಐತಿಹಾಸಿಕ ಮಹತ್ತ್ವದ್ದೂ ಬಹು ಪ್ರಮುಖವೂ ಆದ ಸ್ಮಾರಕ ಅಲ್‌ಹಾಂಬ್ರ. ಕೆಂಪಿಟ್ಟಿಗೆಗಳನ್ನು ಉಪಯೋಗಿಸಿ ಮೋರ್ ವಾಸ್ತು ಶೈಲಿಯಲ್ಲಿ ನಿರ್ಮಿಸಲಾದ ಕಟ್ಟಡಗಳ ಸಮೂಹ ಇದು. ಈ ಕಟ್ಟಡಗಳ ನಿರ್ಮಾಣ 1 ನೆಯ ಮಹಮ್ಮದನ ಕಾಲದಲ್ಲಿ ಆರಂಭಗೊಂಡು, 1 ನೆಯ ಯೂಸಫನ ಕಾಲದಲ್ಲಿ ಪೂರ್ಣಗೊಂಡುವು. ಅಲಂಕಾರ ಪಟ್ಟಿಕೆಗಳೂ ಚಿತ್ರವಿಚಿತ್ರ ಅಲಂಕಾರಗಳೂ ಬರೆಹಗಳೂ ಇಲ್ಲಿ ಕಂಡುಬರುತ್ತವೆ. ಅಲ್‌ಹಾಂಬ್ರದ ಎರಡು ವಿಭಾಗಗಳಲ್ಲಿ ಒಂದು ರಾಜರ ಮತ್ತು ರಾಜವಂಶದವರ ವಾಸಕ್ಕೂ ಮತ್ತೊಂದು ಅಧಿಕಾರಿಗಳಿಗೂ ಸಭಾಸದರಿಗೂ ಮೀಸಲಾಗಿದ್ದುವು. ಅಲ್‌ಹಾಂಬ್ರದ ಪೊಮಿಗ್ರೇನೇಟ್ಸ್ ದ್ವಾರ, ರಾಯಭಾರಿಗಳ ಹಜಾರ, ಸಿಂಹಗಳ ಮೊಗಸಾಲೆ, ಮರ್ಟಲ್ ಮೊದಲು ಸಸ್ಯಗಳ ಮೊಗಸಾಲೆ – ಇವೂ ಆಕರ್ಷಕವಾಗಿವೆ. ಅಲ್‌ಹಾಂಬ್ರವನ್ನು ವಿಶ್ವ ಪರಂಪರೆಯ ನೆಲೆಯೆಂದು ಪರಿಗಣಿಸಲಾಗಿದೆ.

ಪ್ರಾಚೀನ ನಗರವಾದ ಇಲಿಬೆರೀಸಿನ ಪಾಳು ಪ್ರದೇಶದ ಬಳಿ ಗ್ರನಾಡವನ್ನು 7 ನೆಯ ಶತಮಾನದಲ್ಲಿ ಸ್ಥಾಪಿಸಲಾಯಿತು. 8ನೆಯ ಶತಮಾನದಲ್ಲಿ ಈ ಪ್ರದೇಶ ಮೋರರ ವಶವಾಯಿತು. 1015ರವರೆಗೂ ಇದು ಉಮಾಯದ್ ಖಲೀಫರ ಆಳಿಕೆಗೊಳಪಟ್ಟಿತ್ತು. ಅನಂತರ ಆಲ್ಮೊರಾವಿಡರ ವಶಕ್ಕೆ ಬಂತು (1157). ಆಮೇಲೆ ನಾಸ್ರಿಡ್‌ಗಳ ಕೈಗೆ ಬಂದು (1238) ಸ್ವತಂತ್ರ ರಾಜ್ಯವೊಂದರ ರಾಜಧಾನಿಯಾಯಿತು. ಮುಸ್ಲಿಮರ ಆಳಿಕೆಯ ಕಾಲದಲ್ಲಿ ಇದು ಅವರ ಸಂಸ್ಕೃತಿ ಮತ್ತು ನಾಗರಿಕತೆಗಳ ಕೇಂದ್ರಸ್ಥಾನವಾಗಿತ್ತು. ಇಬ್ನ್ ಖಾಲ್ದೂನ್ (1332 –1406), ಇಬ್ನ್ ಬತೂತ (1304– 68) ಮುಂತಾದ ಖ್ಯಾತ ಇತಿಹಾಸಕಾರರು ಗ್ರನಾಡದ ಸಂಸ್ಕೃತಿಗಳಿಂದ ಆಕರ್ಷಿತರಾಗಿದ್ದರು. 1492 ರಲ್ಲಿ ಫರ್ಡಿನೆಂಡ್ ದೊರೆ ಇದನ್ನು ಗೆದ್ದು ಮೋರರ ಆಳಿಕೆಯನ್ನು ಕೊನೆಗಾಣಿಸಿ, ಗ್ರನಾಡವನ್ನು ಸ್ಪೇನಿನೊಡನೆ ಸೇರಿಸಿದ. ಆಗ ಗ್ರನಾಡದ ಅವನತಿ ಆರಂಭವಾಯಿತು. ಸ್ಪೇನಿನವರ ದಾಳಿಯ ಫಲವಾಗಿ ಅಲ್‌ಹಾಂಬ್ರದ ಸೌಂದರ್ಯ ಕುಂಠಿತವಾಯಿತು. 1812 ರ ಫ್ರೆಂಚ್ ದಾಳಿಯೂ 1821 ರಲ್ಲಿ ಸಂಭವಿಸಿದ ಒಂದು ಭೂಕಂಪವೂ ಇದರ ಹಲವು ಭಾಗಗಳನ್ನು ನಾಶಗೊಳಿಸಿದುವು. ಅಲ್‌ಹಾಂಬ್ರದ ಪುನರ್‌ನಿರ್ಮಾಣ ಕಾರ್ಯ 1828 ರಲ್ಲಿ ಪ್ರಾರಂಭವಾಯಿತು. ಅದರ ಹಿಂದಿನ ಮೌಲ್ಯಗಳ ಪುನಃಸ್ಥಾಪನೆಯ ಪ್ರಯತ್ನಗಳು ನಡೆದಿವೆ.

ಗ್ರನಾಡ ಪ್ರಾಂತ: ಆಂಡಾಲೂಸಿಯಕ್ಕೆ ಸೇರಿದ ಜಿಲ್ಲೆಗಳನ್ನು ಒಟ್ಟುಗೂಡಿಸಿ 1833ರಲ್ಲಿ ಗ್ರನಾಡ ಪ್ರಾಂತವನ್ನು ರಚಿಸಲಾಯಿತು. ವಿಸ್ತೀರ್ಣ 12,531 ಚ. ಕಿಮೀ. ಜನಸಂಖ್ಯೆ 9,18,072 (2010). ಈ ಪ್ರಾಂತದ ಉತ್ತರಕ್ಕೆ ಕಾರ್ಡೊಬ, ಹಾಯೇನ್ ಮತ್ತು ಅಲ್ಬಾಥೇಟಗಳೂ ಪೂರ್ವಕ್ಕೆ ಮರ್ಸಿಯ ಮತ್ತು ಆಲ್ಮೇರಿಯಗಳೂ ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರವೂ ಪಶ್ಚಿಮಕ್ಕೆ ಮ್ಯಾಲಗವೂ ಇವೆ. ಪಶ್ಚಿಮ ಹಾಗೂ ವಾಯವ್ಯ ಭಾಗಗಳಲ್ಲಿ ಸೈರಾ ನೆವೇಡ ಪರ್ವತಶ್ರೇಣಿ ಇದೆ. ಈ ಪ್ರಾಂತ ಪ್ರಮುಖ ಪ್ರವಾಸೀ ಕೇಂದ್ರಗಳಲ್ಲೊಂದು. (ಕೆ.ವಿ.ಎಸ್‌ಯು.)

**ಗ್ರನೈಕಸ್ ಕದನ :** ಗ್ರನೈಕಸ್ ನದಿಯ ದಂಡೆಯ ಮೇಲೆ ಮ್ಯಾಸಿಡೋನಿಯದ ಅಲೆಗ್ಸಾಂಡರ್ ಮಹಾಶಯನಿಗೂ ಪರ್ಷಿಯದ ಸೇನೆಗೂ ನಡುವೆ ಪ್ರ.ಶ.ಪೂ. 334 ರಲ್ಲಿ ನಡೆದ ಕದನ. ಇದರಲ್ಲಿ ಪರ್ಷಿಯನ್ ಸೇನೆಗೆ ಸೋಲುಂಟಾಯಿತು.

ಅಲೆಗ್ಸಾಂಡರ್ ತನ್ನ ಪರ್ಷಿಯದ ದಂಡಯಾತ್ರೆಗಾಗಿ ಭಾರಿ ಸೈನ್ಯವನ್ನು ಸಜ್ಜುಗೊಳಿಸಿದ್ದ. ಇವನ ಸೇನೆಯಲ್ಲಿ ರಾವುತರು, ಭಲ್ಲೆಯವರು ಮತ್ತು ಬಿಲ್ಲಾಳುಗಳಿದ್ದರು. ಪರ್ಷಿಯನ್ ಸೇನೆ 20,000 ಗ್ರೀಕ್ ಕಾಲಾಳುಗಳು, 20,000 ಅಶ್ವಸೈನಿಕರಿಂದ ಕೂಡಿತ್ತೆಂದು ಏರಿಯನ್ ಎಂಬ ಗ್ರೀಕ್ ಇತಿಹಾಸಕಾರ ಹೇಳಿದ್ದಾನೆ. ಅವರ ಸೇನೆ ಗ್ರನೈಕಸ್ ನದಿಯ ಬಲದಂಡೆಯಲ್ಲಿ ಬಿಡಾರ ಹೂಡಿತ್ತು. ಅಲೆಗ್ಸಾಂಡರನ ಭಾರಿ ಸೈನ್ಯವನ್ನು ನೋಡಿದ ಪರ್ಷಿಯನರು ತಮ್ಮ ಎಡಕಕ್ಷೆಯನ್ನು ಬಲಪಡಿಸಿಕೊಂಡು ಸಜ್ಜಾದರು. ಉಗ್ರವಾದ ಹೋರಾಟ ಪ್ರಾರಂಭವಾಯಿತು. ಮ್ಯಾಸಿಡೋನಿಯನರು ಭಲ್ಲೆಯ ಮಳೆಯನ್ನು ಎದುರಿಸಿ ಪ್ರಯಾಸದಿಂದ ನದಿದಂಡೆಯನ್ನು ಏರಿದರು. ಅಲೆಗ್ಸಾಂಡರ್ ತನ್ನ ಸೇನಾಬಲವನ್ನು ಹೆಚ್ಚಿಸಿಕೊಂಡು ಪರ್ಷಿಯನ್ ಸೇನಾಧಿಕಾರಿಗಳಿದ್ದ ಭಾಗದ ಮೇಲೆ ಆಕ್ರಮಣವನ್ನು ಪ್ರಾರಂಭಿಸಿದ. ಪರ್ಷಿಯನ್ ದೊರೆ ಡೇರಿಯಸನ ಅಳಿಯನೂ ಅವನ ಸಂಬಂಧಿಯೊಬ್ಬನೂ ಅಲೆಗ್ಸಾಂಡರ್‌ನಿಂದ ಹತರಾದರು. ಸಾವಿನ ದವಡೆಯಲ್ಲಿ ಸಿಕ್ಕಿದ್ದ ಅಲೆಗ್ಸಾಂಡರ್‌ನನ್ನು ಅಶ್ವಸೇನೆಯ ನಾಯಕ ಕ್ಲೈಟಸ್ ರಕ್ಷಿಸಿದ.

ಆದರೆ ಕೊನೆಗೂ ಪರ್ಷಿಯನರು ಹಿಮ್ಮೆಟ್ಟಬೇಕಾಯಿತು. ಪಾರ್ಶ್ವಗಳಲ್ಲಿದ್ದ ಸೈನಿಕರು ಪಲಾಯನ ಮಾಡಿದರು. ಅಲೆಗ್ಸಾಂಡರ್‌ನ ಉಳಿದ ಸೇನೆ ಸುಲಭವಾಗಿ ನದಿಯನ್ನು ದಾಟಿ ಪರ್ಷಿಯನರ ಕೂಲಿ ಭಟರನ್ನು ಸುತ್ತುವರಿಯಿತು. ಕೈಸೆರೆಯಾದ ಗ್ರೀಕ್ ಕೂಲಿ ಭಟರನ್ನು ಅವನು ಮ್ಯಾಸಿಡೋನಿಯಕ್ಕೆ ಕಠಿಣ ದುಡಿಮೆಗೆ ಕಳುಹಿಸಿದ. ಥೀಬ್ಸಿನ ಸೈನಿಕರನ್ನು ಬಿಡುಗಡೆ ಮಾಡಿದ. ಮ್ಯಾಸಿಡೋನಿಯನರು ಈ ಯುದ್ಧದಲ್ಲಿ ಹೆಚ್ಚಿನ ಕಷ್ಟ ನಷ್ಟಗಳನ್ನು ಅನುಭವಿಸಲಿಲ್ಲವೆಂದೂ ಅವರು ಕೇವಲ 115 ಜನರನ್ನು ಕಳೆದುಕೊಂಡರೆಂದೂ ಏರಿಯನ್ ಹೇಳಿದ್ದಾನೆ. ಈ ಗೆಲುವಿಗಾಗಿ ದೇವತೆಗಳಿಗೆ, ಮುಖ್ಯವಾಗಿ ಅಥೆನ ದೇವತೆಗೆ ಧನ್ಯವಾದಗಳನ್ನು ಅರ್ಪಿಸುವ ಸಲುವಾಗಿ ಅಲೆಗ್ಸಾಂಡರ್ ಅಥೆನ್ಸಿಗೆ 300 ಜೊತೆ ಯುದ್ಧಕವಚಗಳನ್ನು ಕಳುಹಿಸಿಕೊಟ್ಟ. (ಎಚ್.ವಿ.ಎಸ್.ಎಂ.)

**ಗ್ರನ್‌ವಾಲ್ಡ್ ಕದನ :** ಟ್ಯುಟಾನಿಕ್ ಸೇನೆಗೂ ಪೋಲರಿಗೂ 1410 ರ ಜುಲೈ 15 ರಂದು ನಡೆದ ಕದನ. ಇದು ಸ್ಟೆಬಾರ್ಕ್ (ಟ್ಯಾನನ್‌ಬರ್ಗ್) ಮತ್ತು ಗ್ರನ್‌ವಾಲ್ಡ್ ಹಳ್ಳಿಗಳ ನಡುವೆ ನಡೆಯಿತಾದ್ದರಿಂದ ಇದಕ್ಕೆ ಗ್ರನ್‌ವಾಲ್ಡ್ ಕದನವೆಂಬ ಹೆಸರು ಬಂದಿದೆ. ಟ್ಯಾನನ್‌ಬರ್ಗ್ ಕದನವೆಂದೂ ಇದನ್ನು ಕರೆಯುವುದುಂಟು. ಈ ಕದನದಿಂದಾಗಿ ಬಾಲ್ಟಿಕ್ ಸಮುದ್ರದ ಆಗ್ನೇಯ ಕರಾವಳಿಯಲ್ಲಿ ಜರ್ಮನರ ವಸಾಹತು ಕೊನೆಗೊಂಡಿತು.

1385ರಲ್ಲೇ ಪೋಲೆಂಡ್ ಮತ್ತು ಲಿಥುವೇನಿಯ ಒಂದಾದಾಗ ಪೋಲೆಂಡಿನ ಶಕ್ತಿ ಹೆಚ್ಚಿತ್ತು. ಇದು ಆದದ್ದು 2 ನೆಯ ವ್ಲಾಡಿಸ್ಲಾಫನಿಂದ. ಈತ 1386 ರಿಂದ 1434 ರವರೆಗೆ ಪೋಲೆಂಡ್‌ನ ದೊರೆಯಾಗಿದ್ದ. ಟ್ಯುಟಾನಿಕ್ ಪಂಥದ ಕೇಂದ್ರ ಇದ್ದದ್ದು ಮ್ಯಾಲ್ಬಾರ್ಕ್‌ನಲ್ಲಿ. ಅದರ ಮೇಲೆ ಏರಿ ಹೋಗಲು ವ್ಲಾಡಿಸ್ಲಾಫ್ ತನ್ನ ಸೇನೆಯನ್ನು ಶತ್ರುಗಳು ನಿರೀಕ್ಷಿಸಿದ್ದಕ್ಕಿಂತ ದೂರದಲ್ಲಿ ನಿಲ್ಲಿಸಿದ. ಅಲ್ರಿಖ್ ಫಾನ್ ಜಂಗಿಂಜೆನನ ನಾಯಕತ್ವದಲ್ಲಿ ಪಂಥದ ಶಸ್ತ್ರಸಜ್ಜಿತ ರಾವುತದಳ ಮುಂದೆ ನುಗ್ಗಿ, ವೈಟಾಟಸನ ಲಿಥುವೇನಿಯನ್ ಸೇನೆಯನ್ನು ಸೋಲಿಸಿತು. ಆದರೆ ವ್ಲಾಡಿಸ್ಲಾಫ್ ನಿರ್ದೇಶಿಸುತ್ತಿದ್ದ ಪೋಲಿಸ್ ಸೇನೆ ಸುರಕ್ಷಿತವಾಗಿತ್ತು. ಅದು ಜಂಗಿಂಜೆನನ ಸೇನೆಯ ಮೇಲೆ ಬಿತ್ತು. ಜಂಗಿಂಜೆನ್ ಸಾವಿಗೆ ಈಡಾದ. ಅವನ ವೀರರ ಪೈಕಿ 205 ಮಂದಿ ಸತ್ತರು. ಉಳಿದವರು ದಿಕ್ಕಾಪಾಲಾಗಿ ಓಡಿಹೋದರು.

ಈ ಕದನದಿಂದಾಗಿ ಟ್ಯುಟಾನಿಕ್ ಪಂಥದ ನೈತಿಕ ಸ್ಥೈರ್ಯ ನಷ್ಟವಾಯಿತು. ಅನೇಕ ಕೋಟೆಗಳು ಶರಣಾದುವು. ಆದರೆ ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಹೆನ್ರಿಕ್ ರ್ಯೂಸ್‌ವಾನ್ ಫ್ಲೂನ್ ಎಂಬುವನು ಮ್ಯಾಲ್‌ಬ್ರಾಕಿನ ರಕ್ಷಣೆಯ ನೇತೃತ್ವ ವಹಿಸಿದ್ದ, ಸ್ವಲ್ಪ ಕಾಲ ಪೋಲಿಸರ ಕೈಕಟ್ಟಿದಂತಾಗಿತ್ತು. ಆದರೂ ಟ್ಯುಟಾನಿಕ್ ಪಂಥೀಯರು ಮತ್ತೆ ತಮ್ಮ ಪ್ರತಿಷ್ಠೆ ಬೆಳೆಸಿಕೊಳ್ಳಲಾಗಲಿಲ್ಲ. ಮೊದಲಿನ ಒಗ್ಗಟ್ಟೂ ಇರಲಿಲ್ಲ. ಬಾಲ್ಟಿಕ್ ಪ್ರದೇಶದ ಮೇಲೆ 1466 ರಲ್ಲಿ ಟ್ಯುಟಾನಿಕ್ ಪಂಥೀಯರ ಹತೋಟಿ ಸಂಪೂರ್ಣವಾಗಿ ಕುಸಿಯಿತು. (ಎಂ.ಆರ್.ಎ‌ಎನ್.)

**ಗ್ರಸ್ :** ಆಕಾಶದಲ್ಲಿರುವ 88 ನಕ್ಷತ್ರಪುಂಜಗಳಲ್ಲಿ (ಕಾನ್ಸ್‌ಟಲೇಷನ್ಸ್) ಒಂದು. ಇದು ದಕ್ಷಿಣಾರ್ಧಗೋಳದಲ್ಲಿದೆ. 16ನೆಯ ಶತಮಾನದ ಕೊನೆಯ ದಶಕಗಳಲ್ಲಿ ಇದನ್ನು ಗುರುತಿಸಲಾಯಿತು. ವಿಷುವದಂಶ (ರೈಟ್ ಅಸೆನ್ಷನ್) 22 ಗಂಟೆ, ಘಂಟಾವೃತ್ತಾಂಶ (ಡೆಕ್ಲಿನೇಷನ್) – $47^{0}$. ಇದನ್ನು ಬಕ (ಲ್ಯಾಟಿನ್ ಭಾಷೆಯಲ್ಲಿ ಗ್ರಸ್ ಎಂದರೆ ಬಕ) ಎಂದು ಹೆಸರಿಸಲಾಗಿದೆ. *

**ಗ್ರಹ :** ಒಂದು ನಕ್ಷತ್ರದ ಸುತ್ತ ಪರಿಭ್ರಮಿಸುತ್ತಿರುವ ಚಿಕ್ಕದಾದ ಘನ ಆಕಾಶಕಾಯ (ಪ್ಲ್ಯಾನೆಟ್). ರೂಢಿಯಲ್ಲಿ ಸೂರ್ಯನಕ್ಷತ್ರವನ್ನು ಪರಿಭ್ರಮಿಸುತ್ತಿರುವ ಬುಧಾದಿಯಾಗಿ ಒಂಬತ್ತು ಕಾಯಗಳಿಗೆ ಗ್ರಹಗಳೆಂದು ಹೆಸರುಂಟು. ಸೂರ್ಯನಿಂದ ಏರುತ್ತಿರುವ ದೂರಗಳಲ್ಲಿ ಇವುಗಳ ಹೆಸರು ಅನುಕ್ರಮವಾಗಿ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್, ನೆಪ್ಚೂನ್ ಮತ್ತು ಪ್ಲೂಟೋ. ಇವಲ್ಲದೇ ಮಂಗಳ ಮತ್ತು ಗುರುಕಕ್ಷೆಗಳ ನಡುವೆ ಕ್ಷುದ್ರಗ್ರಹಗಳ ಹೊನಲೇ ಉಂಟು (**ನೋಡಿ– ಕ್ಷುದ್ರಗ್ರಹಗಳು**).

**ಲಕ್ಷಣಗಳು :** ಎಲ್ಲ ಗ್ರಹಗಳಿಗೂ ಸಾಮಾನ್ಯವಾದ ಕೆಲವು ಲಕ್ಷಣಗಳಿವೆ.

1. ಅವು ಸೂರ್ಯನ ಸುತ್ತ ಭಿನ್ನ ಕಕ್ಷೆಗಳಲ್ಲಿ ಆದರೆ ಒಂದೇ ದಿಶೆಯಲ್ಲಿ ಪರಿಭ್ರಮಿಸುತ್ತಿವೆ.

2. ಈ ಕಕ್ಷೆಗಳೆಲ್ಲವೂ ದೀರ್ಘವೃತ್ತಗಳು. ಸೂರ್ಯನ ಸ್ಥಾನ ಆಯಾ ದೀರ್ಘವೃತ್ತದ ಒಂದು ನಾಭಿಯಲ್ಲಿ ಉಂಟು (ಇದೇ ಕೆಪ್ಲರನ ಮೊದಲ ನಿಯಮ). ಆದ್ದರಿಂದ ಎಲ್ಲ ಗ್ರಹಕಕ್ಷೆಗಳಿಗೂ ಸೂರ್ಯನಿರುವ ನಾಭಿ ಸಾಮಾನ್ಯವಾದದ್ದು.

3. ಗ್ರಹಗಳ ಕಕ್ಷಾವೇಗ ಸಮಕಾಲಗಳಲ್ಲಿ ಸಮ ಸಲೆಗಳು ಎಂಬ ಸೂತ್ರಾನುಸಾರ ಉಂಟು (ಕೆಪ್ಲರನ ಎರಡನೆಯ ನಿಯಮ). ಅಂದರೆ ಸೂರ್ಯ–ಗ್ರಹ ರೇಖೆ ಸೂರ್ಯನನ್ನು ಕುರಿತಂತೆ ಸಲೆಯನ್ನು ರೇಖಿಸುವ ದರ ಸ್ಥಿರವಾಗಿದೆ. ಇದರ ಪರಿಣಾಮವಾಗಿ ಸೂರ್ಯನೀಚ (ಪೆರಿಹೀಲಿಯನ್) ಬಿಂದುವಿನಲ್ಲಿ ಗ್ರಹಕ್ಕೆ ಗರಿಷ್ಠ ವೇಗವೂ ಸೂರ್ಯೋಚ್ಚ ಬಿಂದುವಿನಲ್ಲಿ (ಅಪ್‌ಹೀಲಿಯನ್) ಕನಿಷ್ಠ ವೇಗವೂ ಪ್ರಾಪ್ತವಾಗುತ್ತವೆ.

4. ಸೂರ್ಯನನ್ನು ಪರಿಭ್ರಮಿಸಲು ಗ್ರಹ ತೆಗೆದುಕೊಳ್ಳುವ ಅವಧಿಕಾಲದ ವರ್ಗ ಸೂರ್ಯ–ಗ್ರಹ ಸರಾಸರಿ ದೂರದ ಘನದ ಅನುಪಾತದಲ್ಲಿದೆ. ಈ ಅನುಪಾತದ ಸ್ಥಿರಾಂಕ ಪ್ರತಿಯೊಂದು ಗ್ರಹಕ್ಕೂ ಒಂದೇ (ಕೆಪ್ಲರನ ಮೂರನೆಯ ನಿಯಮ).




**ಚಿತ್ರ 1.** ಎಡ : ಭೂಮಿಯಿಂದ ತೊಡಗಿ ಪ್ಲೂಟೋ ವರೆಗೆ ಸೌರವ್ಯೂಹದ ಗ್ರಹಗಳ ಕಕ್ಷೆಗಳನ್ನೂ ಉತ್ಕೇಂದ್ರತೆಗಳನ್ನೂ ಇಲ್ಲಿ ಗಮನಿಸಬಹುದು.
ಬಲ : ಬುಧದಿಂದ ಗುರು ವರೆಗೆ. ಬುಧ ಮತ್ತು ಮಂಗಳ ಕಕ್ಷೆಗಳ ತೀವ್ರ ಉತ್ಕೇಂದ್ರತೆಗಳನ್ನೂ ಗಮನಿಸಬಹುದು.

5. ಸೂರ್ಯ–ಗ್ರಹ ನಡುವಿನ ಬಲಸಂಬಂಧ ವ್ಯಸ್ತವರ್ಗನಿಯಮಾನುಸಾರ (ಇನ್ವರ್ಸ್ ಸ್ಕ್ವೇರ್ ಲಾ) ಇರುವುದರಿಂದ ಗ್ರಹಗಳ ಚಲನೆ ಈ ಮೇಲೆ (2), (3), (4) ರಲ್ಲಿ ವಿವರಿಸಿದಂತೆ ಉಂಟು (ಈ ನಿಯಮವನ್ನು ಆವಿಷ್ಕರಿಸಿದವ ಐಸಾಕ್ ನ್ಯೂಟನ್, 1642–1727).

6. ಎಲ್ಲ ಗ್ರಹಗಳಿಗೂ ಬೆಳಕು, ಉಷ್ಣ ಮುಂತಾದ ಶಕ್ತಿಗಳ ಆಕರ ಸೂರ್ಯನೇ. ಸೂರ್ಯನಿಂದ ತಮ್ಮ ಮೇಲೆ ಪಾತವಾಗುವ ಬೆಳಕನ್ನು ಪ್ರತಿಫಲಿಸಿ ಅವು ಆಕಾಶದಲ್ಲಿ ಬೆಳಗುತ್ತವೆ, ಅಷ್ಟೆ.




**ಚಿತ್ರ 2.** ಗ್ರಹಗಳ ಸಾಪೇಕ್ಷ ಕಕ್ಷಾವೇಗಗಳು

7. ಗ್ರಹಗಳಿಗೆ ಉಪಗ್ರಹಗಳು ಇರಬಹುದು, ಇಲ್ಲದೆಯೂ ಇರಬಹುದು. ಉಪಗ್ರಹಗಳ ಹಾಗೂ ಬೇರೆ ವಿವರಗಳನ್ನು ಲೇಖನದ ಕೊನೆಯಲ್ಲಿರುವ ಯಾದಿಗಳಲ್ಲಿ ಕೊಟ್ಟಿದೆ.

8. ಭೂಮಿಯನ್ನುಳಿದು ಮಿಕ್ಕ ಯಾವ ಗ್ರಹದಲ್ಲೂ ಜೀವಿಗಳಿರುವುದಕ್ಕೆ ಪುರಾವೆಗಳು ಲಭಿಸಿಲ್ಲ. ಮಂಗಳದಲ್ಲಿ ಏನಾದರೂ ಇದ್ದರೆ ಅದು ತೀರ ಆದಿಮ ಸ್ಥಿತಿಯಲ್ಲಿ ಇರಬಹುದೆಂದು ಅಂದಾಜು ಮಾಡಲಾಗಿದೆ.

**ವರ್ಗೀಕರಣ :** ಗಾತ್ರಾನುಸಾರ ಎರಡು ಪ್ರಧಾನ ವರ್ಗಗಳಿವೆ. ಬುಧ, ಶುಕ್ರ, ಭೂಮಿ, ಮಂಗಳ ಮತ್ತು ಪ್ಲೂಟೋ–ಇವು ಕಿರಿಯ ಗ್ರಹಗಳು; ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್–ಇವು ಹಿರಿಯ ಗ್ರಹಗಳು. ಸೂರ್ಯ ಮತ್ತು ಗ್ರಹಗಳನ್ನು ನಾವು ವೀಕ್ಷಿಸುವುದು ಭೂಮಿಯ ಮೇಲಿನಿಂದಾದ್ದರಿಂದ ಬುಧ ಹಾಗೂ ಶುಕ್ರ ಗ್ರಹಗಳನ್ನು ಒಳಗ್ರಹಗಳೆಂದೂ ಮಂಗಳದಿಂದ ಪ್ಲೂಟೋದ ವರೆಗಿನ ಗ್ರಹಗಳನ್ನು ಹೊರಗ್ರಹಗಳೆಂದೂ ಕರೆಯುವುದುಂಟು.

ಸೂರ್ಯನಿಂದ ಗ್ರಹಗಳ ದೂರಗಳು ಮೇಲುನೋಟಕ್ಕೆ ಯಾದೃಚ್ಛಿಕವಾಗಿರುವಂತೆ ತೋರುತ್ತವೆ. ಇವುಗಳಲ್ಲಿ ಒಂದು ಕ್ರಮ ಇರಲಾರದೇ ಎಂಬುದನ್ನು ವಿಜ್ಞಾನಿಗಳು ಪರಿಶೀಲಿಸಿದ್ದಾರೆ. ಇಂಥ ಚಿಂತನೆಯ ಫಲಿತಾಂಶವಾಗಿ ಟೆಶಿಯಸ್–ಬೋಡ್ ನಿಯಮ (ರೂಢಿಯಲ್ಲಿ ಬೋಡ್ ನಿಯಮ ಎಂದೇ ಇದನ್ನು ಕರೆಯುತ್ತಾರೆ) ಪ್ರಸಿದ್ಧಿಗೆ ಬಂದಿದೆ (1772). ಈ ನಿಯಮದ ವಿವರಗಳನ್ನೂ ಇದರ ಅನ್ವಯದಿಂದ ಹೇಗೆ ಕ್ಷುದ್ರಗ್ರಹಗಳ ಆವಿಷ್ಕಾರ ಆಯಿತೆಂಬ ವಿಷಯವನ್ನೂ ತಿಳಿಯಲು **ನೋಡಿ– ಕ್ಷುದ್ರಗ್ರಹಗಳು**. ಸೂರ್ಯನಿಂದ ಗ್ರಹಗಳ ದೂರಗಳು ಬೋಡ್ ನಿಯಮಾನುಸಾರವೇ ಏಕೆ ಇರಬೇಕು ಎನ್ನುವುದಕ್ಕೆ ಸಾಕ್ಷ್ಯಾಧಾರಗಳನ್ನು ಪ್ರಾಯಶಃ ಸೌರವ್ಯೂಹದ ಉಗಮ, ಸಮಗ್ರ ವ್ಯವಸ್ಥೆಯ ಗತಿವಿಜ್ಞಾನ ಮುಂತಾದ ಹಲವಾರು ಪ್ರಾಚಲಗಳನ್ನು ಆಧರಿಸಿ ಒದಗಿಸಬೇಕಾಗುತ್ತದೆ.

**ದ್ರವ್ಯರಾಶಿ, ಗುರುತ್ವ ಮತ್ತು ಸಾಂದ್ರತೆ :** ಒಂದು ಅಥವಾ ಹೆಚ್ಚು ಉಪಗ್ರಹಗಳಿರುವ ಗ್ರಹದ ದ್ರವ್ಯರಾಶಿಯನ್ನು ನ್ಯೂಟನನ ಗುರುತ್ವಾಕರ್ಷಣ ನಿಯಮದ ಅನ್ವಯದಿಂದ ಸುಲಭವಾಗಿ ಕಂಡುಹಿಡಿಯಬಹುದು. ಉಪಗ್ರಹದ ಕಕ್ಷೆಯ ಅರ್ಧದೀರ್ಘಾಕ್ಷ $a$ ಖಗೋಳಮಾನ ಮತ್ತು ಅದರ ಪರಿಭ್ರಮಣೆಯ ಅವಧಿ ಕಾಲ $T$ ನಾಕ್ಷತ್ರಿಕ ವರ್ಷ ಆಗಿದ್ದರೆ ಆಗ ಗ್ರಹದ ದ್ರವ್ಯರಾಶಿ $m = a^3/T^2$ . ಇಲ್ಲಿ ಸೂರ್ಯನ ದ್ರವ್ಯರಾಶಿ ಏಕಮಾನ. ಈ ಗಣನೆ ಮಾಡುವಾಗ ಗ್ರಹಕ್ಕೆ ಸಾಪೇಕ್ಷವಾಗಿ ಉಪಗ್ರಹದ ದ್ರವ್ಯರಾಶಿಯನ್ನೂ ಸೂರ್ಯನಿಗೆ ಸಾಪೇಕ್ಷವಾಗಿ ಭೂಮಿಯ ದ್ರವ್ಯರಾಶಿಯನ್ನೂ ಉಪೇಕ್ಷಿಸಬಹುದೆಂದು ಭಾವಿಸಲಾಗಿದೆ. ಭೂಮಿ ($m_e$) ಹಾಗೂ ಸೂರ್ಯ ($m_s$) ದ್ರವ್ಯರಾಶಿಗಳ ನಿಷ್ಪತ್ತಿ $m_e$: $m_s$ ನ್ನು ಇದೇ ಪ್ರಕಾರ ಶೋಧಿಸಬಹುದಾದ್ದರಿಂದ $m_e$ ಪದಗಳಲ್ಲಿ ಕೂಡ ಗ್ರಹದ್ರವ್ಯರಾಶಿಗಳನ್ನು ಪಡೆಯಬಹುದು. ಗ್ರಹಕ್ಕೆ ಒಂದು ಉಪಗ್ರಹ ಕೂಡ ಇಲ್ಲದಾಗ (ಉದಾಹರಣೆಗೆ ಬುಧ, ಶುಕ್ರ) ಆ ಗ್ರಹದ ದ್ರವ್ಯರಾಶಿಯನ್ನು ಅದು ನೆರೆಗ್ರಹಗಳ ಕಕ್ಷೆಗಳ ಮೇಲೋ ಅಪರೂಪವಾಗಿ ಅದರ ಸಮೀಪ ಹಾಯುವ ಧೂಮಕೇತುವಿನ ಕಕ್ಷೆಯ ಮೇಲೋ ಪ್ರಯುಕ್ತಿಸುವ ಕ್ಷೋಭೆಗಳನ್ನು (ಪರ್ಟರ್ಬೇಷನ್ಸ್) ಅಳೆದು ಪಡೆಯಬಹುದು. ಈ ಕ್ರಮದಿಂದ ಅಷ್ಟೇನೂ ನಿಖರವಾದ ಮಾಪನ ದೊರೆಯುವುದಿಲ್ಲ. ಏಕೆಂದರೆ ಕಕ್ಷೆಗಳಲ್ಲಿ ಗ್ರಹದಿಂದ ಉಂಟಾಗುವ ಕ್ಷೋಭೆಗಳು ಅಲ್ಪ ಪ್ರಮಾಣದವು. ಈಚೆಗೆ ಕೃತಕ ಉಪಗ್ರಹಗಳ ನೆರವಿನಿಂದ ಮತ್ತು ರಾಡಾರ್ ವೀಕ್ಷಣೆಗಳಿಂದ ಬುಧ, ಶುಕ್ರ ಮತ್ತು ಮಂಗಳ ಗ್ರಹಗಳ ದ್ರವ್ಯರಾಶಿಗಳನ್ನು ಹೆಚ್ಚು ನಿಷ್ಕೃಷ್ಟವಾಗಿ ಪಡೆಯಲಾಗಿದೆ. ಗ್ರಹದ ದ್ರವ್ಯರಾಶಿ $m$ ಮತ್ತು ತ್ರಿಜ್ಯ $r$ ಭೂಮಿಯ ದ್ರವ್ಯರಾಶಿ

ಮತ್ತು ತ್ರಿಜ್ಯ ಪದಗಳಲ್ಲಿ ಒಮ್ಮೆ ನಿರ್ಧರಿತವಾಯಿತೋ ಬಳಿಕ ಭೂಮಿಗೆ ಸಾಪೇಕ್ಷವಾಗಿ ಆ ಗ್ರಹದ ಮೇಲ್ಮೈ ಗುರುತ್ವ ಮತ್ತು ಸರಾಸರಿ ಸಾಂದ್ರತೆಗಳನ್ನು ಅನುಕ್ರಮವಾಗಿ $g = m/r^2$ ಮತ್ತು $\rho = m/r^3$ ಸಮೀಕರಣಗಳು ಕೊಡುತ್ತವೆ. 981 ಮತ್ತು 5.552 ರಿಂದ ಗುಣಿಸಿದಾಗ cgs ಏಕಮಾನಗಳಲ್ಲಿ ಅನುರೂಪ ಮಾಪನಗಳನ್ನು ಪಡೆಯಬಹುದು. $r$ ಮತ್ತು $m$ ತಿಳಿದ ತರುವಾಯ ಗ್ರಹವನ್ನು ಒಂದು ವಿಕ್ಷೇಪಿತವೋ (ಪ್ರೊಜೆಕ್ಟೈಲ್) ಅಣುವೋ ತೊರೆದು ಪರವಲಯ ಪಥದಲ್ಲಿ ಹೋಗಲು ಬೇಕಾಗುವ ವಿಮೋಚನ ವೇಗ $v_1$ನ್ನು ಗಣಿಸಬಹುದು:

$$v1 = \sqrt{2Gm/r}$$




**ಚಿತ್ರ 3. ಗ್ರಹಗಳ ತೌಲನಿಕ ಗಾತ್ರಗಳು**

**ಆವರ್ತನೆ ಮತ್ತು ಪರಿಭ್ರಮಣೆ :** ಪ್ರತಿಯೊಂದು ಗ್ರಹವೂ ತನ್ನ ಅಕ್ಷದ ಮೇಲೆ ಸುತ್ತುತ್ತ ಜೊತೆಯಲ್ಲೇ ಸೂರ್ಯನ ಸುತ್ತ ಸಹ ಸುತ್ತುತ್ತಿರುವುದು. ಮೊದಲನೆಯ ಚಲನೆಗೆ ಆವರ್ತನೆ (ರೊಟೇಷನ್) ಎಂದೂ ಎರಡನೆಯ ಚಲನೆಗೆ ಪರಿಭ್ರಮಣೆ (ರಿವೊಲ್ಯೂಷನ್) ಎಂದೂ ಹೆಸರು. ಇವು ದೇವಾಲಯಗಳ ಸುತ್ತ ಹೊರಳಿಕೊಂಡೇ ಪ್ರದಕ್ಷಿಣೆ ಮಾಡುವ ಭಕ್ತರ ಉರುಳು ಸೇವೆಯ ಏಕಕಾಲೀನ ದ್ವಿವಿಧ ಚಲನೆಗಳಂತಿವೆ. ಉಪಗ್ರಹಗಳಿಗೆ ಆಯಾ ಮಾತೃಗ್ರಹಗಳನ್ನು ಕುರಿತಂತೆ ಇವೆರಡು ವಿಧದ ಚಲನೆಗಳಿವೆ.



**ಚಿತ್ರ 4. ಭೂಕಕ್ಷೆಯ ಒಳಭಾಗದಲ್ಲಿ ಸೂರ್ಯನ ಸುತ್ತ ಸಾಗುವ ಬುಧ ಮತ್ತು ಶುಕ್ರ ಗ್ರಹಗಳು ಭೂಮಿಗೆ ಪ್ರದರ್ಶಿಸುವ ದೃಶ್ಯ**

ಪರಿಭ್ರಮಣೆಯ ದಿಶೆಯಲ್ಲಿಯೇ ಆವರ್ತನೆಯ ದಿಶೆಯೂ ಇದ್ದರೆ ಅದಕ್ಕೆ ಮುನ್ನಡೆ (ಡೈರೆಕ್ಟ್ ಮೋಷನ್) ಎಂದೂ ವಿರುದ್ಧ ದಿಶೆಯಲ್ಲಿ ಇದ್ದರೆ ಅದಕ್ಕೆ ಹಿನ್ನಡೆ (ರಿಟ್ರೊಗ್ರೇಡ್ ಮೋಷನ್) ಎಂದೂ ಹೆಸರು. ಯುರೇನಸ್ ಗ್ರಹದ ಚಲನೆ ಹಿನ್ನಡೆ. ಬಾಕಿ ಎಲ್ಲ ಗ್ರಹಗಳ ಚಲನೆಗಳೂ ಮುನ್ನಡೆಗಳೇ. ಉಪಗ್ರಹಗಳ ಪೈಕಿ ಗುರುವಿನ ನಾಲ್ಕು ಉಪಗ್ರಹಗಳಿಗೆ (VIII, IX, XI, XII), ಶನಿಯ ಒಂದು ಉಪಗ್ರಹಕ್ಕೆ (IX ಫೀಬಿ), ಯುರೇನಸಿನ ನಾಲ್ಕು ಉಪಗ್ರಹಗಳಿಗೆ (I ಏರಿಯಲ್, II ಅಂಬ್ರಿಯೇಲ್, III ಟೈಟಾನಿಯ ಮತ್ತು IV ಓಬರಾನ್) ಮತ್ತು ನೆಪ್ಚೂನಿನ ಒಂದು ಉಪಗ್ರಹಕ್ಕೆ (I ಟ್ರೈಟಾನ್) ಹಿನ್ನಡೆಗಳಿವೆ. ಸೂರ್ಯನನ್ನು ಕುರಿತಂತೆ ಒಂದು ಗ್ರಹದ ಆವರ್ತನಾವಧಿಯೂ ಪರಿಭ್ರಮಣಾವಧಿಯೂ ಸಮವಾಗಿದ್ದರೆ ಅಂಥ ಗ್ರಹದ ಒಂದು ಅರ್ಧ ಸದಾ ಸೂರ್ಯಮುಖವಾಗಿಯೂ ಇನ್ನೊಂದು ಅರ್ಧ ಸದಾ ಸೂರ್ಯವಿಮುಖವಾಗಿಯೂ ಇರುತ್ತದೆ. ಮೊದಲಿನ ಅರ್ಧಕ್ಕೆ ಸದಾ ಹಗಲು, ಎರಡನೆಯ ಅರ್ಧಕ್ಕೆ ಸದಾ ರಾತ್ರಿ ಕವಿದಿರುವವು. ಬುಧ ಮತ್ತು ಶುಕ್ರಗ್ರಹಗಳ ಪರಿಸ್ಥಿತಿ ಇದು. ಭೂಮಿಯ ಉಪಗ್ರಹವಾದ ಚಂದ್ರನ ಆವರ್ತನಾವಧಿಯೂ (ಭೂಮಿಯನ್ನು ಕುರಿತಂತೆ) ಪರಿಭ್ರಮಣಾವಧಿಯೂ ಒಂದೇ ಆಗಿರುವುದರಿಂದ ಭೂನಿವಾಸಿಗಳಿಗೆ ಚಂದ್ರನ ಒಂದು ಪಾರ್ಶ್ವ ಮಾತ್ರ ಗೋಚರಿಸುತ್ತದೆ. ಆವರ್ತನಾವಧಿಗೆ ಆಯಾ ಗ್ರಹದ ಇಲ್ಲವೆ ಉಪಗ್ರಹದ ದಿವಸವೆಂದೂ ಪರಿಭ್ರಮಣಾವಧಿಗೆ ಆಯಾ ಗ್ರಹದ ಇಲ್ಲವೆ ಉಪಗ್ರಹದ ವರ್ಷವೆಂದೂ ಸಾಮಾನ್ಯ ನಾಮಗಳಿವೆ. ಆದರೆ ರೂಢಿಯಲ್ಲಿ ಭೂಮಿಯನ್ನು ಕುರಿತು ಮಾತ್ರ ಈ ಪದಗಳನ್ನು ಉಪಯೋಗಿಸಿಕೊಂಡು ಇವನ್ನು ಏಕಮಾನಗಳಾಗಿ ಬಳಸಿ ಇತರ ಗ್ರಹೋಪಗ್ರಹಗಳ ಆವರ್ತನಾವಧಿ ಹಾಗೂ ಪರಿಭ್ರಮಣಾವಧಿಗಳನ್ನು ಅಳೆಯುವುದು ವಾಡಿಕೆ.

ಒಂದು ಗ್ರಹದ ಆವರ್ತನೆಯ ಅವಧಿಕಾಲವನ್ನು ಈ ಕೆಳಗಿನ ನಾಲ್ಕು ಭಿನ್ನ ವಿಧಗಳಿಂದ ಪಡೆಯುವುದು ಸಾಧ್ಯ:

1. ಗ್ರಹ ತಲದಲ್ಲಿರುವ ಶಾಶ್ವತ ಇಲ್ಲವೆ ಅರೆ ಶಾಶ್ವತ ಗುರುತುಗಳನ್ನು ದೂರದರ್ಶಕಗಳ ಸಹಾಯದಿಂದ ನೇರವಾಗಿ ವೀಕ್ಷಿಸಿ ಆವರ್ತನಾವಧಿಯ ನಿರ್ಧರಣೆ.

2. ಸಮಭಾಜಕೀಯ ವಿರುದ್ಧ ಅಂಚುಗಳ ವೇಗಗಳಲ್ಲಿನ ವ್ಯತ್ಯಾಸವನ್ನು ರೋಹಿತವೀಕ್ಷಣೆಯಿಂದ ಗಣಿಸಿ ಗ್ರಹದ ರೇಖೀಯವ್ಯಾಸದ ನೆರವಿನಿಂದ ಆವರ್ತನಾವಧಿಯ ನಿರ್ಧರಣೆ.

3. ರಾಡಾರ್ ವೀಕ್ಷಣೆಯಿಂದ ಆವರ್ತನಾವಧಿಯ ನಿರ್ಧರಣೆ.

4. ಗ್ರಹ ಪ್ರತಿಫಲಿಸುವ ಬೆಳಕಿನಲ್ಲಿ ತಲೆದೋರುವ ಕಲಾ ವ್ಯತ್ಯಾಸಗಳನ್ನು (ಫೇಸ್ ಡಿಫರೆನ್ಸಸ್) ಹಾಗೂ ಏರಿಳಿತಗಳನ್ನು ಅಳೆದು ಆವರ್ತನಾವಧಿಯ ನಿರ್ಧರಣೆ.

**ಗ್ರಹವೀಕ್ಷಣೆ:** ಸ್ವತಃ ಆವರ್ತನೆ ಮತ್ತು ಪರಿಭ್ರಮಣೆಗಳಿರುವ ಗ್ರಹವಾದ ಭೂಮಿಯ ಮೇಲೆ ನಿಂತು ಇತರ ಗ್ರಹಗಳನ್ನು ಸ್ಥಿರನಕ್ಷತ್ರಗಳ ಹಿನ್ನೆಲೆಯಲ್ಲಿ ವೀಕ್ಷಿಸಿ ಗುರುತಿಸುವ ಮನುಷ್ಯನಿಗೆ ಗ್ರಹಗಳ ನಿರಪೇಕ್ಷ ಚಲನೆ ತಿಳಿಯುವುದು ಸಾಧ್ಯವಿಲ್ಲ. ಇವನ ಪ್ರತಿಯೊಂದು ವೀಕ್ಷಣೆಯ ಮೇಲೂ ಭೂಮಿಯ ಚಲನೆಗಳ ಪರಿಣಾಮಗಳಿದ್ದೇ ಇರುತ್ತವೆ. ಎಲ್ಲ ಗ್ರಹಗಳೂ ಸೂರ್ಯನ ಸುತ್ತ ಒಂದೇ ದಿಶೆಯಲ್ಲಿ ಸುತ್ತುತ್ತಿದ್ದರೂ ಇವುಗಳ ಕಕ್ಷಾತಲಗಳು ಪರಸ್ಪರ ಬಾಗಿಕೊಂಡಿವೆ. ಭೂಮಿ ಕಕ್ಷಾತಲವನ್ನು (ಇದಕ್ಕೆ ಕ್ರಾಂತಿವೃತ್ತತಲವೆಂದು ಹೆಸರು) ಆಧಾರತಲವಾಗಿ ಆಯ್ದು ಇತರ ಗ್ರಹಕಕ್ಷಾತಲಗಳ ಬಾಗುಗಳನ್ನು (ಅಬ್‍ಲೀಕ್ವಿಟೀಸ್) ಇದಕ್ಕೆ ಸಾಪೇಕ್ಷವಾಗಿ ಅಳೆಯಲಾಗಿದೆ (**ನೋಡಿ– ಕಕ್ಷೆ**). ಗ್ರಹಗಳ ಕಕ್ಷಾವೇಗಗಳು ಭಿನ್ನವಾಗಿವೆ–ಸೂರ್ಯಸಮೀಪ ಗ್ರಹವಾದ ಬುಧದ ಕಕ್ಷಾವೇಗ ಗರಿಷ್ಠ. ಸೂರ್ಯ ದೂರ ಗ್ರಹವಾದ ಪ್ಲೂಟೋದ ಕಕ್ಷಾವೇಗ ಕನಿಷ್ಠ; ಇತರ ಗ್ರಹಗಳ ಕಕ್ಷಾವೇಗಗಳು ಇವುಗಳ ನಡುವೆ ಅವರೋಹೀ ಕ್ರಮದಲ್ಲಿವೆ. ಯಾವುದೋ ಒಂದು ಮುಹೂರ್ತದಲ್ಲಿ ಸಕಲ ಗ್ರಹಗಳೂ ಸೂರ್ಯನ ಒಂದೇ ಮಗ್ಗುಲಿಗೆ ಸಾಲಾಗಿ ನಿಲ್ಲಿಸಲ್ಪಟ್ಟಿವೆಯೆಂದೂ ಆ ಕ್ಷಣದಲ್ಲಿ ಅವನ್ನು ಆಯಾ ಕಕ್ಷೆಗಳ ಮೇಲೆ ಆಯಾ ವೇಗಗಳಿಂದ ಚಲಿಸಲು ಬಿಡಲಾಗಿದೆಯೆಂದೂ ಭಾವಿಸಿದರೆ ಮುಂದೆ ಯಾವುದೇ ಮೂಹರ್ತದಲ್ಲಿ ಅವುಗಳ ಸಾಪೇಕ್ಷ ಸ್ಥಾನಗಳು ಯದ್ವತದ್ವಾ ಇರುವುವೆನ್ನುವುದು ಸ್ಪಷ್ಟ. ಆದ್ದರಿಂದಲೇ ಭೂಮಿಯಿಂದ ನೋಡುವ ವೀಕ್ಷಕನಿಗೆ ಗ್ರಹಗಳ ಸ್ಥಾನಗಳಲ್ಲಿ ಯಾವ ಕ್ರಮವೂ ಇರುವಂತೆ ತೋರುವುದಿಲ್ಲ. ಇದು ಪೂರ್ಣಸತ್ಯವೆಂದು ಹೇಳಲುಬಾರದು. ಈ ವೀಕ್ಷಕ ಕೆಲವು ಸಾಮಾನ್ಯ ನಿಯಮಗಳನ್ನು ಕ್ರಮೇಣ ಗಮನಿಸದಿರಲಾರ.

1. ಸಾಮಾನ್ಯವಾಗಿ ಎಲ್ಲ ಗ್ರಹಗಳೂ ಆಕಾಶದಲ್ಲಿ ಅಗಲ ಕಿರಿದಾದ ಒಂದು ಪಟ್ಟಿಗೆ ಮಾತ್ರ ಸೀಮಿತವಾಗಿವೆ. ಇದರ ಹೆಸರು ರಾಶಿಚಕ್ರ (ಝೋಡಿಯಕ್); ಕ್ರಾಂತಿ ವೃತ್ತದ ಉಭಯ ಪಾರ್ಶ್ವಗಳಲ್ಲೂ ಸಮಾಂಗವಾಗಿ $8^0$ ಗಳಷ್ಟು ಅಗಲಕ್ಕೆ ಈ ಪಟ್ಟಿ ವ್ಯಾಪಿಸಿದೆ. ಭೂಮಿಯಿಂದ ಕಾಣುವಂತೆ ಸೂರ್ಯ ಕೂಡ ರಾಶಿಚಕ್ರದ ಒಳಗೇ ಸಂಚರಿಸುವುದು. ಆದರೆ ಬುಧ (ಬಾಗು $7^0$), ಪ್ಲೂಟೋ (ಬಾಗು $17^0\ 9'$) ಮತ್ತು ಕ್ಷುದ್ರಗ್ರಹಗಳು ಈ ನಿಯಮಕ್ಕೆ ಅಪವಾದ.

2. ಗ್ರಹಗಳಿಗೆ ಮುನ್ನಡೆ, ಹಿನ್ನಡೆ ಚಲನೆಗಳೆರಡೂ ಉಂಟು. ಅಲ್ಲದೆ ಒಂದು ಗ್ರಹದ ಚಲನೆಯಲ್ಲಿ ಮುನ್ನಡೆಯಿಂದ ಹಿನ್ನಡೆಗೆ ಇಲ್ಲವೇ ಹಿನ್ನಡೆಯಿಂದ ಮುನ್ನಡೆಗೆ ಸ್ಥಿತಿ ಬದಲಾವಣೆ ಆಗುತ್ತಿರುವ ಮಧ್ಯಾಂತರದಲ್ಲಿ ಒಂದಷ್ಟು ಕಾಲ ಅದು ಸ್ತಬ್ಧ ಸ್ಥಿತಿಯಲ್ಲಿ (ಸ್ಟೇಷನರಿ ಸ್ಟೇಟ್) ಇರುವುದು.

3. ವೀಕ್ಷಕನಲ್ಲಿ (ಅಂದರೆ ಭೂಮಿಯಲ್ಲಿ) ಸೂರ್ಯ ಹಾಗೂ ಗ್ರಹ ರಚಿಸುವ ಕೋನಕ್ಕೆ ಗ್ರಹದ ಕೋನಾಂತರ (ಇಲಾಂಗೇಷನ್) ಎಂದು ಹೆಸರು. ಬುಧ ಹಾಗೂ ಶುಕ್ರ ಗ್ರಹಗಳಿಗೆ ಕೋನಾಂತರದ ಗರಿಷ್ಠ ಮೌಲ್ಯಗಳು ಅನುಕ್ರಮವಾಗಿ $28^0$ ಮತ್ತು $48^0$. ಆಕಾಶದಲ್ಲಿ ಈ ಗ್ರಹಗಳು ಸೂರ್ಯನಿಂದ ಅತಿಹೆಚ್ಚು ಮುಂದೆ (ಪಶ್ಚಿಮ–ಪೂರ್ವ ದಿಶೆ) ಅಥವಾ ಅತಿ ಹೆಚ್ಚು ಹಿಂದೆ (ಪೂರ್ವ–ಪಶ್ಚಿಮ ದಿಶೆ) ಸಾಗಬಹುದಾದ ಮಿತಿಗಳಿವು ಎಂದರ್ಥ. ಹೊರಗ್ರಹಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಇದನ್ನು ಅರ್ಥಮಾಡಿಕೊಳ್ಳಲು ಚಿತ್ರ (5) ನ್ನು ಪರಿಶೀಲಿಸಬೇಕು. ಅಲ್ಲಿ $S$ ಸೂರ್ಯ, $V$ ಒಳ ಗ್ರಹ, $E$ ಭೂಮಿ. $\sigma$'$p$ ಗಳು $V$ ಮತ್ತು $E$ ಗಳ ಕಕ್ಷೆಗಳು. ಅಪ್ರದಕ್ಷಿಣ ದಿಶೆಯನ್ನು ಮುನ್ನಡೆಯ ದಿಶೆ ಎಂದು ಭಾವಿಸುತ್ತೇವೆ. ಒಂದು ನಿರ್ದಿಷ್ಟ ಮುಹೂರ್ತದಲ್ಲಿ $S$, $V$, $E$ ಗಳು ಒಂದೇ ರೇಖೆಯ ಮೇಲಿವೆ ಎಂದು



ಚಿತ್ರ 5

ಭಾವಿಸೋಣ. ಆಗ $V$ ಯ ಕೋನಾಂತರ $0^0$. ಈ ಸ್ಥಿತಿಯನ್ನು $E$ ಯೊಡನೆ $V$ ನೀಚಯುತಿಯಲ್ಲಿ (ಇನ್ಫೀರಿಯರ್ ಕಂಜಂಕ್ಷನ್) ಇದೆ ಎನ್ನುತ್ತೇವೆ. $E$ ನಿಶ್ಚಲವಾಗಿದೆಯೆಂದೂ $V$ ಸಾಪೇಕ್ಷ ವೇಗದಿಂದ ಚಲಿಸುತ್ತಿದೆಯೆಂದೂ ಭಾವಿಸಿ $V$ ಯ ಚಲನೆಯನ್ನು ಪರಿಶೀಲಿಸಬಹುದು. ಆಗ $E$ ಯನ್ನು ಕುರಿತಂತೆ $V$ ಗೆ ಮುಂದಿಶೆಯಲ್ಲಿ (ಅಪ್ರದಕ್ಷಿಣೆ) ನಿವ್ವಳ ವೇಗವಿರುವುದರಿಂದ ಆ ದಿಶೆಯಲ್ಲೇ ಚಲಿಸಲು ತೊಡಗುತ್ತದೆ. ಅದು $V_1$ ಕ್ಕೆ ಬಂದಾಗ $V$ ಯ ಕೋನಾಂತರ ($\angle SEV_1$) ಗರಿಷ್ಠ. ಅಲ್ಲಿಂದ ಅದು ಕಡಿಮೆ ಆಗುತ್ತ ಸಾಗಿ $V_2$ ಕ್ಕೆ ಬಂದಾಗ ಶೂನ್ಯವಾಗುತ್ತದೆ. ಈ ಸ್ಥಿತಿಗೆ $V$ ಯ ಉಚ್ಚಯುತಿ (ಸುಪೀರಿಯರ್ ಕಂಜಂಕ್ಷನ್) ಎಂದು ಹೆಸರು. ಮುಂದೆ ಕೋನಾಂತರ ಕ್ರಮೇಣ ಏರಿ $V_3$ ಕ್ಕೆ ಬಂದಾಗ ಅದು ಪುನಃ ಗರಿಷ್ಠವಾಗುತ್ತದೆ. ಮತ್ತು $V$ ಗೆ ಮರಳಿದಾಗ ಅದು ಪುನಃ ಶೂನ್ಯವಾಗುವುದು. $V$-$V_1$-$V_2$ ಅಂತರದಲ್ಲಿ ಗ್ರಹವಿರುವಾಗ ಭೂಮಿಯ ಮೇಲಿನ ಓರ್ವ ವೀಕ್ಷಕನಿಗೆ ಗ್ರಹೋದಯ ಮೊದಲೂ ಸೂರ್ಯೋದಯ ತರುವಾಯವೂ ಆಗುತ್ತದೆ. ಅಂದರೆ ಆಗ ಗ್ರಹ ಮುಂಜಾನೆ ಪೂರ್ವ ದಿಗಂತದಲ್ಲಿ ಸೂರ್ಯ ಮೂಡುವ ಬಿಂದುವಿಗಿಂತ ಎತ್ತರದಲ್ಲಿ ಹೊಳೆಯುತ್ತಿರುತ್ತದೆ. ಈ ದೃಶ್ಯವನ್ನು ರೂಢಿಯಲ್ಲಿ ಮುಂಜಾನೆಯ ತಾರೆ (ಮಾರ್ನಿಂಗ್ ಸ್ಟಾರ್) ಎಂದು ಕರೆಯುವುದುಂಟು. $V_2$ ಮತ್ತು ಅದರ ಆಸುಪಾಸಿನಲ್ಲಿ ಗ್ರಹವಿರುವಾಗ ಅದು ಕಣ್ಮರೆಯಾಗಿರುತ್ತದೆ. $V_2$-$V_3$-$V$ ಅಂತರದಲ್ಲಿ ಗ್ರಹವಿರುವಾಗ ಮೊದಲಿನ ವೀಕ್ಷಕನಿಗೆ ಸೂರ್ಯೋದಯ ಮೊದಲೂ ಗ್ರಹೋದಯ ತರುವಾಯವೂ ಆಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಸೂರ್ಯಾಸ್ತಮಾನವಾದ ಬಳಿಕ ಪಶ್ಚಿಮ ದಿಗಂತದಲ್ಲಿ ಗ್ರಹ ಹೊಳೆಯುತ್ತಿರುವುದನ್ನು ನೋಡಬಹುದು. ಈ ದೃಶ್ಯವನ್ನು ರೂಢಿಯಲ್ಲಿ ಸಾಯಂಕಾಲದ ತಾರೆ (ಈವ್ನಿಂಗ್ ಸ್ಟಾರ್) ಎಂದು ಕರೆಯುವರು. $V$ ಮತ್ತು ಅದರ ಆಸುಪಾಸಿನಲ್ಲಿ ಗ್ರಹ ಇರುವಾಗ ಅದು ಕಣ್ಮರೆಯಾಗಿರುತ್ತದೆ.

ಚಿತ್ರ (6)ರಲ್ಲಿ $M$ ಒಂದು ಹೊರಗ್ರಹ, $E$ ಭೂಮಿ, $S$ ಸೂರ್ಯ. ಒಂದು ನಿರ್ದಿಷ್ಟ ಮುಹೂರ್ತದಲ್ಲಿ $S, E, M$ ಏಕರೇಖಸ್ಥವಾಗಿವೆ ಎಂದು ಭಾವಿಸೋಣ. $M$ ನ ಕಕ್ಷಾವೇಗ $E$ ಯ ಕಕ್ಷಾವೇಗಕ್ಕಿಂತ ಕಡಿಮೆ ಇರುವುದರಿಂದ $E$ ನಿಶ್ಚಲವಾಗಿದೆಯೆಂದು ಭಾವಿಸಿದರೆ ಆಗ $M$ ಸಾಪೇಕ್ಷ ವೇಗದಿಂದ ಪ್ರದಕ್ಷಿಣ ದಿಶೆಯಲ್ಲಿ ಸಂಚರಿಸಲು ಆರಂಭಿಸುತ್ತದೆ. ಅಂದರೆ $E$ಯಲ್ಲಿ ಇರುವ ವೀಕ್ಷಕನಿಗೆ ಹೊರಗ್ರಹ $M$ ನಿಂದ $M_1$ ರ ಕಡೆಗೆ ಸಾಗುತ್ತಿರುವಂತೆ ಕಾಣುವುದು. ಗ್ರಹ $M$ ನಲ್ಲಿರುವಾಗ ಅದರ ಕೋನಾಂತರ ($\angle SEM$) $180^0$. ಈ ಸ್ಥಿತಿಗೆ ವಿಯುತಿ (ಅಪೊಸಿಷನ್) ಎಂದು ಹೆಸರು. ಇದು ನೀಚ ವಿಯುತಿ ಎಂಬುದನ್ನು ಗಮನಿಸಬೇಕು. ಆ ದಿವಸಗಳಲ್ಲಿ ಸೂರ್ಯ ಮುಳುಗುವ ವೇಳೆ $M$ ಮೂಡುತ್ತಿರುವುದು. ಮುಂದಿನ ದಿವಸಗಳಲ್ಲಿ ಅದು



ಚಿತ್ರ 6

$M_1$ ನ್ನು ತಲುಪಿದಾಗ ಅದರ ಕೋನಾಂತರ $90^0$ ಆಗಿರುತ್ತದೆ. ಆ ದಿವಸಗಳಲ್ಲಿ ವೀಕ್ಷಕನಿಗೆ ಸೂರ್ಯ ಮೊದಲೂ ಗ್ರಹ ತರುವಾಯವೂ ಮೂಡುವುದರಿಂದ ಸೂರ್ಯಾಸ್ತಮಾನದ ಬಳಿಕ ಬಹಳ ಹೊತ್ತು ಆಕಾಶದಲ್ಲಿ ಅದನ್ನು ಕಾಣಬಹುದು. ಗ್ರಹ–ಸೂರ್ಯ ಅಂತರ ಕ್ರಮೇಣ ಕಡಿಮೆ ಆಗಿ ಗ್ರಹ $M_2$ ಕ್ಕೆ ಬಂದಾಗ ಅದು ಶೂನ್ಯವೇ ಆಗುತ್ತದೆ. ಈ ಸ್ಥಿತಿಗೆ ಯುತಿ ಎಂದು ಹೆಸರು. ಇದು ಉಚ್ಚಯುತಿ ಎಂಬುದನ್ನು ಗಮನಿಸಬೇಕು. ಗ್ರಹ $M_2$ ಕ್ಕೆ ಬರುವ ಕೆಲವು ದಿವಸಗಳ ಮೊದಲು ಅದು ರೂಢಿಯ


ಚಿತ್ರ 7. ಬುಧದ ಕಲೆಯನ್ನು ಅನುಸರಿಸಿ ಅದರ ದೃಗ್ವ್ಯಾಸದಲ್ಲಿ ಆಗುವ ಬದಲಾವಣೆಗಳು

ಮಾತಿನಲ್ಲಿ ಸಾಯಂಕಾಲದ ತಾರೆ ಆಗಿರುತ್ತದೆ. $M_2$ ರಿಂದ ಮುಂದಕ್ಕೆ ಗ್ರಹದ ಕೋನಾಂತರ ಏರುತ್ತ ಹೋಗುವುದು. ಆ ದಿವಸಗಳಲ್ಲಿ ವೀಕ್ಷಕನಿಗೆ ಅದು ಮೊದಲೂ ಸೂರ್ಯ ತರುವಾಯವೂ ಮೂಡುತ್ತದೆ. ಅಂದರೆ ಗ್ರಹ ಆಗ ರೂಢಿಯ ಮಾತಿನಲ್ಲಿ ಮುಂಜಾನೆಯ ತಾರೆ ಆಗಿರುವುದು. ಹೀಗೆ ಗ್ರಹ $M_3$ ಕ್ಕೆ ಬಂದಾಗ ಅದರ ಕೋನಾಂತರ $90^0$. ಮುಂದೆ $M$ ಗೆ ಬಂದಾಗ ಪ್ರಾರಂಭದ ವಿಯುತಿಸ್ಥಿತಿ ಪುನರಾವರ್ತಿಸುತ್ತದೆ. ಒಂದು ಒಳಗ್ರಹ ಎಂದೂ ವಿಯುತಿಸ್ಥಿತಿಯನ್ನು ಪಡೆಯಲಾರದು. ಒಂದು ಹೊರಗ್ರಹ ಎಂದೂ ನೀಚಯುತಿ ಸ್ಥಿತಿಯನ್ನಾಗಲೀ ಉಚ್ಚವಿಯುತಿ ಸ್ಥಿತಿಯನ್ನಾಗಲೀ ಪಡೆಯಲಾರದು.

4. ಭೂಮಿಗೆ ಗ್ರಹ ಪ್ರದರ್ಶಿಸುವ ಬಿಂಬಕ್ಕೆ (ಅಂದರೆ ಹೊಳೆಯುವ ಭಾಗ) ಗ್ರಹದ ಕಲೆ (ಫೇಸ್) ಎಂದು ಹೆಸರು. ಹೊಳೆಯುವ ಭಾಗದ ಸಲೆ ಮತ್ತು ಗ್ರಹ ತಲದ ಸಲೆ ಇವುಗಳ ನಿಷ್ಪತ್ತಿಯೇ ಕಲೆ. ಆದ್ದರಿಂದ ಅಮಾವಾಸ್ಯೆ ಚಂದ್ರನ ಕಲೆ ಸೊನ್ನೆ; ಹುಣ್ಣಿಮೆ



ಚಿತ್ರ 8. ಶುಕ್ರದ ಕಲೆಯನ್ನು ಅನುಸರಿಸಿ ಅದರ ದೃಗ್ವ್ಯಾಸದಲ್ಲಿ ಆಗುವ ಬದಲಾವಣೆಗಳು

ಚಂದ್ರನ ಕಲೆ ಒಂದು; ಉಳಿದ ದಿವಸಗಳಲ್ಲಿ ಚಂದ್ರನ ಕಲೆ ಈ ಎರಡು ಪರಿಮಿತಿಗಳ ನಡುವೆ ಆಂದೋಲಿಸುತ್ತಿರುವುದು. ಕಲೆ ಸರಿಸುಮಾರು 0.75 ಆಗಿರುವಾಗ (ಶುಕ್ಲಪಕ್ಷದ ನವಮಿ ಇಲ್ಲವೇ ದಶಮಿ ಚಂದ್ರ) ಆ ಸ್ಥಿತಿಗೆ ಅರ್ಧಾಧಿಕ (ಜಿಬ್ಬಸ್) ಎಂದು ಹೆಸರು. ಒಳಗ್ರಹದ ಕಲೆ 0 ಮತ್ತು 1 ರ ನಡುವೆ ಸಮಸ್ತ ಬೆಲೆಗಳನ್ನೂ ತಾತ್ತ್ವಿಕವಾಗಿ ಪಡೆಯಬಲ್ಲುದು. ಆದರೆ ಕಲೆಯ ಬೆಲೆ 1 ಆದಾಗ ಅಂದರೆ ಪೂರ್ಣಗ್ರಹ ನಮಗೆ ಎದುರಾಗಿರುವಾಗ (ಹುಣ್ಣಿಮೆಗೆ ಸಂವಾದಿಯಾದ ಸ್ಥಿತಿ) ಸೂರ್ಯನಿಂದ ಆಚೆಗೆ ಅದು ಇರುವುದರಿಂದ ಬರಿಗಣ್ಣಿಗೆ ಗ್ರಹ ಕಾಣಿಸಲಾರದು. ಆದ್ದರಿಂದ ವಾಸ್ತವಿಕವಾಗಿ ಒಂದು ಒಳಗ್ರಹದ ಕಲೆ 0 ಮತ್ತು ಅರ್ಧಾಧಿಕ ಸ್ಥಿತಿಗಳ ನಡುವೆ ಆಂದೋಲಿಸುತ್ತಿರುವುದು. ಹೊರ ಗ್ರಹದ ಕಲೆ ಎಂದೂ 0 ಆಗುವುದಿಲ್ಲ. ಅದು ಅರ್ಧಾಧಿಕ ಹಾಗೂ ಪೂರ್ಣಸ್ಥಿತಿಗಳ ನಡುವೆ ಆಂದೋಲಿಸುತ್ತಿರುತ್ತದೆ.

**5. ದೃಗ್ಗೋಚರ ಚಲನೆಗಳು :** ಗ್ರಹಗಳೂ ಭೂಮಿಯೂ ಸ್ವಂತಾಕ್ಷಗಳ ಸುತ್ತ ಆವರ್ತಿಸುತ್ತ ಸೂರ್ಯನ ಸುತ್ತ ಪರಿಭ್ರಮಿಸುತ್ತ ಇರುವುದರಿಂದ ಭೂಮಿಯಿಂದ



ಚಿತ್ರ 9. ಮೇಲೆ : ಭೂಮಿ ಮತ್ತು ಒಂದು ಉಚ್ಚಗ್ರಹದ ಚಲನೆಗಳ ಸಂಯುಕ್ತ ಫಲ. ಉಚ್ಚಗ್ರಹದ ಮುನ್ನಡೆಯನ್ನೂ ಸ್ತಬ್ಧಸ್ಥಿತಿಯನ್ನೂ ಹಿನ್ನಡೆಯನ್ನೂ ಪುನಃ ಸ್ತಬ್ಧಸ್ಥಿತಿಯನ್ನೂ ಮುನ್ನಡೆಯನ್ನೂ ನೋಡಬಹುದು. ಕೆಳಗೆ : ಭೂಮಿಯಿಂದ ಕಾಣುವಂತೆ ಉಚ್ಚಗ್ರಹದ ಪಥ.

ನೋಡುವಾತನಿಗೆ ಗ್ರಹ ಚಲನೆಗಳು ಸಂಕೀರ್ಣವಾಗಿ ಕಾಣುತ್ತವೆ. ಸ್ಥಿರ ನಕ್ಷತ್ರ ಚಿತ್ರಗಳ ಹಿನ್ನೆಲೆಯಲ್ಲಿ ಒಂದು ಗ್ರಹದ ಚಲನೆ ವೀಕ್ಷಕನಿಗೆ ಹೇಗೆ ಕಾಣುವುದು ಎನ್ನುವುದನ್ನು ಚಿತ್ರ (9)ರಲ್ಲಿ ತೋರಿಸಿದೆ. ಗ್ರಹದ ದೃಗ್ಗೋಚರ ಚಲನೆಗಳು ಎರಡು–ಮುನ್ನಡೆ ಮತ್ತು ಹಿನ್ನಡೆ. ಇವೆರಡರ ನಡುವಿನ ಸ್ಥಿತಿ ಸ್ತಬ್ಧತೆ. ಮುನ್ನಡೆಯಲ್ಲಿ ಗ್ರಹ ಪಶ್ಚಿಮ–ಪೂರ್ವ ದಿಶೆಯಲ್ಲಿ ಚಲಿಸಿದಂತೆಯೂ ಹಿನ್ನಡೆಯಲ್ಲಿ (ಇದನ್ನು ವಕ್ರನಡೆ ಎಂದೂ ಕರೆಯುವುದಿದೆ) ಪೂರ್ವ–ಪಶ್ಚಿಮ ದಿಶೆಯಲ್ಲಿ ಚಲಿಸಿದಂತೆಯೂ ಕಾಣುವುದು. ಸ್ತಬ್ಧ ಸ್ಥಿತಿಯಲ್ಲಿ (ಸ್ಟೇಷನರಿ ಸ್ಟೇಟ್) ಗ್ರಹ ಚಲನರಹಿತ ವಾಗಿರುವಂತೆ ತೋರುತ್ತದೆ. ಆ ವೇಳೆಯಲ್ಲಿ ಭೂಮಿ–ಗ್ರಹರೇಖೆ ಸಮಾಂತರವಾಗಿ ಚಲಿಸುತ್ತಿರುವುದೇ ಇದರ ಕಾರಣ. ಯಾವುದೋ ಒಂದು ಮುಹೂರ್ತದಲ್ಲಿ ಭೂಮಿ $E_1$ ಮತ್ತು ಗ್ರಹ $M_1$ ಸೂರ್ಯ $S$ ನ್ನು ಕುರಿತಂತೆ

ಅಧಿಕವಾಗಿರುವುದರಿಂದ ಕಂಸ $E_1E_2$ ಕಂಸ $M_1M_2$ ಕ್ಕಿಂತ ಉದ್ದವಾಗಿರುತ್ತದೆ. ಈಗ $E_2$ ರಿಂದ ನೋಡುವಾತನಿಗೆ $M_2$ ಹಿಂದೆ ಬಿದ್ದಿರುವಂತೆ (ಪೂರ್ವ–ಪಶ್ಚಿಮ ದಿಶೆ)




ಚಿತ್ರ 10. ಮೇಲೆ : ಭೂಮಿಯನ್ನು ಕುರಿತು ಒಂದು ಉಚ್ಚಗ್ರಹ ಯುತಿಕಾಲದಲ್ಲಿ ಪ್ರದರ್ಶಿಸುವ ವಿವಿಧ ಸ್ಥಾನಗಳು.
ಕೆಳಗೆ : ಭೂಮಿಯನ್ನು ಕುರಿತಂತೆ ಒಂದು ನೀಚ ಗ್ರಹ ಯುತಿಕಾಲದಲ್ಲಿ ಪ್ರದರ್ಶಿಸುವ ಸ್ಥಾನಗಳು

ಅಂದರೆ ಹಿನ್ನಡೆದಿರುವಂತೆ ತೋರುವುದು. ಮುಂದಿನ ಒಂದಿಷ್ಟು ವೇಳೆಯಲ್ಲಿ ಈ ಎರಡು ಗ್ರಹಗಳು $E_3 M_3$ ಸ್ಥಾನಗಳಿಗೆ ಬಂದರೆ ಅವುಗಳ ವೇಗಗಳ ಹಾಗೂ ಕಕ್ಷಾವಿನ್ಯಾಸಗಳ




ಚಿತ್ರ 11. ಎಡ : ಶುಕ್ರದ ದೃಕ್ಪಥದಲ್ಲಿ ಕಾಣುವ ಒಂದು ಕುಣಿಕೆ. ಭೂಮಿ ಮತ್ತು ಶುಕ್ರ ಗ್ರಹಗಳ ಚಲನೆಗಳ ಸಂಯುಕ್ತ ಫಲವಿದು. ಬಲ : ಭೂಮಿಯಿಂದ ಕಾಣುವಂತೆ ನೀಚ ಗ್ರಹದ ಪಥ.

ಏಕರೇಖಸ್ಥವಾಗಿವೆ ಎಂದು ಭಾವಿಸೋಣ. ನಿರ್ದಿಷ್ಟ ಕಾಲಾನಂತರ ಅವು $E_2 M_2$ ಸ್ಥಾನಗಳಲ್ಲಿ ಇರುವುವೆಂದು ಭಾವಿಸಿದರೆ $E$ ಯ ಕಕ್ಷಾವೇಗ $M$ ನ ಕಕ್ಷಾವೇಗಕ್ಕಿಂತ

ಫಲವಾಗಿ $E_3, M_3$ ರೇಖೆ $E_2 M_2$ ರೇಖೆಗೆ ಸಮಾಂತರವಾಗಿಯೇ ಇರುತ್ತದೆ. ಆದ್ದರಿಂದ $E_3$ ರಿಂದ ನೋಡುವಾತನಿಗೆ ಈ ಅವಧಿಯಲ್ಲಿ $M$ಗೆ ಚಲನೆಯೇ ಇಲ್ಲವೆಂಬ ಭಾವನೆ

ಮೂಡುತ್ತದೆ. ಅಂದರೆ ಆಗ $M$ ಸ್ತಬ್ಧಸ್ಥಿತಿಯಲ್ಲಿ ಇರುವಂತೆ ಭಾಸವಾಗುತ್ತದೆ. ಮುಂದೆ ನಿರ್ದಿಷ್ಟ ಅವಧಿಯ ಬಳಿಕ ಗ್ರಹಗಳು $E_4, M_4$ ಗಳಲ್ಲಿದ್ದರೆ $E_4$ ರಿಂದ ನೋಡುವಾತನಿಗೆ $M$ ಮುನ್ನಡೆದಿರುವಂತೆ (ಪಶ್ಚಿಮ–ಪೂರ್ವ ದಿಶೆ) ಕಾಣುವುದು. ಆದ್ದರಿಂದ ಸ್ತಬ್ಧಸ್ಥಿತಿ ಎನ್ನುವುದು ಹಿನ್ನಡೆಗೂ ಮುನ್ನಡೆಗೂ ನಡುವಿನ ಸ್ಥಿತ್ಯಂತರ ಕಾಲ.




ಚಿತ್ರ 12

**ಇತರ ನಕ್ಷತ್ರಗಳಲ್ಲಿ ಗ್ರಹವ್ಯವಸ್ಥೆ :** ಸೌರವ್ಯೂಹದಲ್ಲಿರುವ ಗ್ರಹೋಪಗ್ರಹಗಳ ಅಸ್ತಿತ್ವ ನಮಗೆ ತಿಳಿಯುವುದು ಮುಖ್ಯವಾಗಿ ಎರಡು ಪ್ರಧಾನ ಕಾರಣಗಳಿಂದ– 1. ನೇರವಾಗಿ ಅವು ನಮಗೆ ಕಾಣುತ್ತವೆ. 2. ಅವು ನೆರೆ ಗ್ರಹ ಇಲ್ಲವೆ ಉಪಗ್ರಹದ ಮೇಲೆ ಗುರುತ್ವಾಕರ್ಷಣ ಪ್ರಭಾವವನ್ನು–ಅಂದರೆ ಕಕ್ಷೀಯ ಕ್ಷೋಭೆಯನ್ನು– ಬೀರುತ್ತವೆ. ಇತರ ನಕ್ಷತ್ರಗಳಲ್ಲಿ ಗ್ರಹವ್ಯವಸ್ಥೆ ಇರಬಾರದೆಂದೇನೂ ಇಲ್ಲ. ಅಲ್ಲಿಗೆ ಸೌರವ್ಯೂಹ ವಿಶ್ವದ ಆಕಸ್ಮಿಕವೇನೂ ಆಗಿರಬೇಕಾಗಿಲ್ಲ ಎಂದು ಒಪ್ಪಿಕೊಂಡಂತಾಯಿತು. ಹಾಗೆ ನೆರೆಯ ಒಂದು ನಕ್ಷತ್ರಕ್ಕೆ ಗ್ರಹವ್ಯವಸ್ಥೆ ಇರುವುದಾದರೆ ಅದರ ಇರವಿನ ಅರಿವು ನಮಗೆ ಮೂಡುವುದು ಪರೋಕ್ಷವಾಗಿ ಮಾತ್ರ, ಗುರುವಿನಂತಹ ದೊಡ್ಡ ಗ್ರಹ ಸೂರ್ಯನ ಮೇಲೆ ಪರಿಣಾಮ ಬೀರಿ ಅದು ಓಲಾಡುವಂತೆ ಮಾಡಬಲ್ಲುದು. ಈ ಪ್ರಮಾಣ ಅತ್ಯಲ್ಪ. ಇಂದು ದೊಡ್ಡ ದೊಡ್ಡ ದೂರದರ್ಶಕ ಗಳನ್ನು ಬಳಸಿ ನಕ್ಷತ್ರಗಳ ಈ ಬಗೆಯ ಓಲಾಟವನ್ನು ಅಳೆಯುವುದು ಸಾಧ್ಯವಾಗಿದೆ. ತತ್ಪರಿಣಾಮವಾಗಿ ಸುಮಾರು 100 ನಕ್ಷತ್ರಗಳಿಗೆ ಗ್ರಹಗಳಿರುವುದನ್ನು ಪತ್ತೆ ಮಾಡಲಾಗಿದೆ.

ಭೂಮಿಯಂತಹ ಗ್ರಹಗಳನ್ನು ಪತ್ತೆಮಾಡುವುದು ಬಹಳ ಕಷ್ಟ ಸಾಧ್ಯ. ಕಾರಣಗಳು ಸುಸ್ಪಷ್ಟ. ಭೂಮಿಯ ಪ್ರಭಾವ ಸೂರ್ಯನ ಮೇಲೆ ವ್ಯಕ್ತಪಡುವಂತೆಯೇ ಇಲ್ಲ.

ಈ ಹೊಸ ಸೌರಮಂಡಲಗಳಲ್ಲಿ ಜೀವಿಗಳಿರಬಹುದೇ ಎಂಬುದನ್ನು ಪತ್ತೆಮಾಡಲು ಜೀವವಿಜ್ಞಾನಿಗಳೂ ಖಗೋಳ ವಿಜ್ಞಾನದ ಮಿತಿಯೊಳಗೆ ಬಂದು ಸೇರಿದ್ದಾರೆ. ಆಸ್ಟ್ರೋ ಬಯಾಲಜಿ–ಖಗೋಳ ಜೀವವಿಜ್ಞಾನ ಎಂಬ ಹೊಸ ಶಾಖೆ ಜನ್ಮ ತಳೆದಿದೆ. (ಸಿ.ಎನ್.ಎಸ್.)

**ಗ್ರಹಗಳನ್ನು ಕುರಿತ ಕೆಲವು ಅಂಕಿಅಂಶಗಳನ್ನು ಮುಂದಿನ ಯಾದಿಗಳಲ್ಲಿ ಬರೆದಿದೆ**

ಯಾದಿ 1. ಕೆಲವು ಉಪಯುಕ್ತ ಮಾಹಿತಿಗಳು

| ಗ್ರಹದ ಹೆಸರು | ಕಕ್ಷೆಯ ಅರ್ಧ ದೀರ್ಘಾಕ್ಷ[1] ಭೂಮಿ=1 | ಉತ್ಕೇಂದ್ರತೆ[2] | ಸೂರ್ಯ ನೀಚ ಬಿಂದುವಿನ ರೇಖಾಂಶ[5] ° ' | ಬಾಗು[4] ° ' | ಆರೋಹಿ ಪಾತದ ರೇಖಾಂಶ[5] ° ' | ನಾಕ್ಷತ್ರಿಕ ಅವಧಿಕಾಲ[6] | ಸಂಯುಕ್ತ ಆವಧಿಕಾಲ[7] | ಅವರ್ತನ ಅವಧಿ ಕಾಲ[8] | ದೃಶ್ಯ ಅಲ್ಬೆಡೊ[9] |
|---|---|---|---|---|---|---|---|---|---|
| | | | | | | ದಿವಸಗಳು | ದಿವಸಗಳು | | |
| ಬುಧ | 0.3871 | 0.2056 | 76 41 | 7 00 | 47 44 | 87.96 | 115.88 | 56 ದಿ | 0.06 |
| ಶುಕ್ರ | 0.7233 | 0.0068 | 130 52 | 3 24 | 76 14 | 224 .70 | 583.92 | 224.70 ದಿ | 0.64 |
| ಭೂಮಿ | 1.0000 | 0.0167 | 102 05 | 0 00 | – | 365.26 | – | 23 ಗಂ.56 ಮಿ. 4 ಸೆ | 0.40 |
| ಮಂಗಳ | 1.5237 | 0.0933 | 335 08 | 1 51 | 49 10 | 686.98 | 779.94 | 23 ಗಂ.37 ಮಿ 23ಸೆ | 0.13 |
| ಗುರು | 5.2026 | 0.0484 | 13 32 | 1.18 | 99 57 | 4332.60 | 398.88 | 9ಗಂ.50.ಮಿ–9ಗಂ.55ಮಿ. | 0.37 |
| ಶನಿ | 9.5547 | 0.0557 | 92 05 | 2 29 | 113 14 | 10,759.00 | 378.09 | 16 ಗಂ. 14 ಮಿ. | 0.40 |
| ಯುರೇನಸ್ | 19.2181 | 0.0463 | 172 17 | 0 46 | 73 43 | 30,688.00 | 369.66 | 16 ಗಂ. 45 ಮಿ. | 0.43 |
| ನೆಪ್ಚೂನ್ | 30.1096 | 0.0090 | 47 26 | 1 46 | 131 14 | 60,181.00 | 367.49 | 15 ಗಂ. 29 ಮಿ. | 0.48 |
| ಪ್ಲೂಟೊ | 39.5177 | 0.2486 | 222 29 | 17 09 | 108 78 | 90,737.00 | 366.73 | 6 ದಿ. 9 ಮಿ. | |

ಸೂಚನೆ: [1] ಸೆಮಿ ಮೇಜರ್ ಆಕ್ಸಿಸ್. [2] ಎಕ್ಸೆಂಟ್ರಿಸಿಟಿ [3] ಲಾಂಜಿಟ್ಯೂಡ್ ಆಫ್ ಪೆರಿಹೀಲಿಯನ್ [4] ಇನ್‌ಕ್ಲಿನೇಷನ್ [5] ಲಾಂಜಿಟ್ಯೂಡ್ ಆಫ್ ಅಸೆಂಡಿಂಗ್ ನೋಡ್ [6] ಸೈಡೀರಿಯಲ್ ಪೀರಿಯಡ್ [7] ಸಿನಾಡಿಕ್ ಪೀರಿಯಡ್ [8] ರೊಟೇಷನ್ ಪೀರಿಯಡ್ [9] ವಿಸಿಬಲ್ ಆಲ್ಬೆಡೊ. ಭೂ ಕಕ್ಷೆಯ ಅರ್ಧದೀರ್ಘಾಕ್ಷದ ಉದ್ದ 149,600,000 ಕಿಮೀ.

ಯಾದಿ 2. ಭೌತ ಮೌಲ್ಯಗಳು

| ಗ್ರಹದ ಹೆಸರು | ಸರಾಸರಿ ವ್ಯಾಸ ಭೂಮಿ =1 | ದ್ರವ್ಯರಾಶಿ ಭೂಮಿ =1 | ಸರಾಸರಿ ಸಾಂದ್ರತೆ ಗ್ರಾಮ್ / ಘ.ಸೆಂಮೀ | ಅತ್ಯಧಿಕ ಪ್ರಕಾಶ ವಿರುವಾಗ ನಾಕ್ಷತ್ರಿಕ ಕಾಂತಿಮಾನ | ಸರಾಸರಿ ಕಕ್ಷಾವೇಗ ಕಿಮೀ / ಸೆ | ವಿಮೋಚನ ವೇಗ ಕಿಮೀ / ಸೆ. |
|---|---|---|---|---|---|---|
| ಬುಧ | 0.380 | 0.0543 | 5.46 | –1.9 | 47.90 | 4.2 |
| ಶುಕ್ರ | 0.961 | 0.8136 | 5.06 | –4.4 | 35.05 | 10.4 |
| ಭೂಮಿ | 1.000 | 1.0000 | 5.52 | –– | 29.80 | 11.2 |
| ಮಂಗಳ | 0.523 | 0.1069 | 4.12 | –2.8 | 24.14 | 5.0 |
| ಗುರು | 10.970 | 318.3500 | 1.35 | –2.5 | 13.06 | 61.0 |
| ಶನಿ | 9.030 | 95.3000 | 0.71 | –0.4 | 9.65 | 37.0 |
| ಯುರೇನಸ್ | 3.720 | 14.5400 | 1.56 | +5.7 | 6.80 | 22.0 |
| ನೆಪ್ಚೂನ್ | 3.380 | 17.2000 | 2.47 | +7.6 | 5.43 | 25.0 |
| ಪ್ಲೂಟೋ | 0.178 | 0.002 | 2.1 | 13 | 4.74 | 5.0 |

ಸೂಚನೆ : ಭೂಮಿಯ ಸರಾಸರಿ ತ್ರಿಜ್ಯ $6.37123 x 10^{8}$ ಸೆಂಮೀ. ಭೂಮಿಯ ದ್ರವ್ಯರಾಶಿ $5.975 x 10^{27}$ ಗ್ರಾಮ್.

**ಯಾದಿ 3. ಕೆಲವು ಪ್ರಕಾಶಮಾನವಾದ ಉಪಗ್ರಹಗಳು**

| ಉಪಗ್ರಹದ ಹೆಸರು | ಕಾಂತಿಮಾನ ಮಾಧ್ಯ (ವಿಯುತಿಯಲ್ಲಿ) | ವ್ಯಾಸ ಕಿಮೀ. | ಮೂಲಗ್ರಹದಿಂದ ದೂರ ಗ್ರಹತ್ರಿಜ್ಯ= 1 | ನಾಕ್ಷತ್ರಿಕ ಅವಧಿಕಾಲ | ಆವಿಷ್ಕರಣ |
|---|---|---|---|---|---|
| ಚಂದ್ರ | ---12 | 1736.7 | ಭೂಮಿ 60.26659 | 27 ದಿ. 7 ಗಂ. 43 ಮಿ. 11.5 ಸೆ. | --- |
| | | | ಮಂಗಳ | | |
| I ಫೋಬಸ್ | 11.5 | 15 | 2.70 | 0 ದಿ. 7 ಗಂ. 39 ಮೀ. 14 ಸೆ. | 1877 ಎ. ಹಾಲ್ |
| II ಡೈಮಾಸ್ | 12.0 | 8 | 6.95 | 1 ದಿ. 6 ಗಂ. 17 ಮಿ. 55 ಸೆ. | “ |
| | | | ಗುರು | | |
| V ಆಮಲ್ತೀಯ | 13.0 | 190 | 2.53 | 0 ದಿ. 11 ಗಂ. 57 ಮಿ. 23 ಸೆ. | 1892 ಬಾರ್ನರ್ಡ್ |
| I ಅಯೊ | 5.5 | 3735 | 5.91 | 1 ದಿ 18 ಗಂ. 27 ಮಿ. 34 ಸೆ. | 1892 ಬಾರ್ನರ್ಡ್ |
| II ಯೂರೋಪ | 5.7 | 3150 | 9.40 | 3 ದಿ 13 ಗಂ. 13 ಮಿ. 42 ಸೆ. | “ |
| III ಗನಿಮೀಡ್ | 5.0 | 5150 | 14.99 | 7. ದಿ 3 ಗಂ. 42 ಮಿ. 31 ಸೆ. | “ |
| IV ಕಲಿಸ್ಟೊ | 6.3 | 5180 | 26.36 | 16 ದಿ. 16 ಗಂ. 32 ಮಿ. 9 ಸೆ. | “ |
| VI | 14.0 | 140 | 160.00 | 250 ದಿ. 15 ಗಂ. | 1904 ಪಿರೈನ್ |
| VII | 17.0 | 40 | 164.00 | 260 ದಿ. 1 ಗಂ. | 1905 “ |
| X | 19.0 | 20 | 165.00 | 260 ದಿ. | 1938 ನಿಕಲ್ಸನ್ |
| VII | 19.0 | 20 | 293.00 | 600 ದಿ. | 1951 “ |
| XI | 19.0 | 25 | 317.00 | 692 ದಿ. | 1938 “ |
| VIII | 18.0 | 30 | 329.00 | 739 ದಿ. | 1908 ಮೆಲೋಟ್ |
| IX | 19.0 | 20 | 338.00 | 745 ದಿ. | 1914 ನಿಕಲ್ಸನ್ |
| | | | ಶನಿ | | |
| ಬಳೆಗಳು | --- | --- | 1.16 ರಿಂದ 2.26 | --- | 1659 ಹೈಗೆನ್ಸ್ |
| I ಮೈಮ್ಯಾಸ್ | 12.0 | 600 | 3.07 | 0 ದಿ. 22 ಗಂ. 37 ಮಿ. 5 ಸೆ. | 1789 ಡಬ್ಲ್ಯು. ಹರ್ಷೆಲ್ |
| II ಎನ್‌ಸಲಾಡೆಸ್ | 12.0 | 600 | 3.94 | 1 ದಿ. 8 ಗಂ. 53 ಮಿ. 7 ಸೆ. | “ |
| III ಟೆತಿಸ್ | 10.5 | 1200 | 4.88 | 1 ದಿ 21 ಗಂ. 18ಮಿ. 26 ಸೆ. | 1684 ಕ್ಯಾಸಿನಿ |
| IV ಡೈಯೋನಿ | 11.0 | 1200 | 6.24 | 2 ದಿ. 17 ಗಂ 41 ಮಿ. 9 ಸೆ. | “ |
| V ರೀಯ | 10.0 | 1800 | 8.72 | 4 ದಿ. 12 ಗ. 25 ಮೊ. | 1672 “ |
| VI ಟೈಟ್ಯಾನ್ | 8.3 | 4200 | 20.20 | 12 ಸೆ. 15 ದೊ. 22 ಗಂ. | 1655 ಹೈಗೆನ್ಸ್ |
| VII ಹೈಪರಿಯನ್ | --- | --- | 24.20 | 41 ಮೊ. 25 ಸೆ. 20 ದಿ. 20 ಗಂ. | 1900 ಡಬ್ಲ್ಯು. ಪಿಕ್ವರಿಂಗ್ |
| VIII ಐಯಾಪಿಟಸ್ | 13.0 | 500 | 24.50 | 21 ದಿ. 6 ಗಂ. 38 ಮಿ. 20 ಸೆ. | 1848 ಬಾಂಡ್ |
| IX ಫೀಬಿ | 10–12 | 1800 | 58.90 | 79 ದಿ. 7 ಗ 55 ಮಿ. 25 ಸೆ. | 1671 ಕ್ಯಾಸಿನಿ |
| X ತೀಮಿಸ್ | 14.0 | 200 | 214.40 | 550 ದಿ. 11 ಗಂ. | 1898 ಡಬ್ಲ್ಯು. ಪಿಕ್ವರಿಂಗ್ |
| | | | ಯುರೇನಸ್ | | |
| ಮಿರಾಂಡ | 19 | 200 | 5.21 | ದಿ. 9 ಗಂ. 56 ಮಿ. | 1948 ಕುಯ್‌ಪರ್ |
| I ಏರಿಯಲ್ | 15 | 900 | 7.7 | 2 ದಿ. 12 ಗಂ. 29 ಮೊ. | 1851 ಲ್ಯಾಸೆಲ್ |
| II ಅಂಬ್ರಿಯೆಲ್ | 16 | 700 | 10.7 | 4 ದಿ. 3 ಗಂ. 28 ಮೊ. | “ |
| III ಟೈಟಾನ್‌ನಿಯ | 14 | 1700 | 17.6 | 8 ದಿ. 16 ಗಂ. 57 ಮಿ. | 1787 ಡಬ್ಲ್ಯು. ಹರ್ಷೆಲ್ |
| IV ಓಬರಾನ್ | 14 | 1600 | 23.6 | 13 ದಿ. 11 ಗ. 7 ಮಿ. | “ |
| | | | ನೆಪ್ಚೂನ್ | | |
| I ಟ್ರೈಟಾನ್ | 14 | 5000 | 13.3 | 5 ದಿ. 21 ಗಂ. 3 ಮಿ. | 1846 ಲ್ಯಾಸೆಲ್ |
| II ನೀಯರಿಯಿಡ್ | 19 | 300 | 211.0 | 359 ದಿ. 9 ಗಂ. 36 ಮಿ. | 1849 ಕುಯ್‌ಪರ್ |

**ಗ್ರಹಕುಂಡಲಿ :** ಭೂಮಂಡಲದಲ್ಲಿ ಸಂಚರಿಸುವ ಗ್ರಹಗಳ ಸ್ಥಾನಗಳನ್ನು ಸುಲಭವಾಗಿ ತಿಳಿಯುವಂತೆ ಬರೆದು ಸೂಚಿಸುವ ವಿಧಾನ. ಕುಂಡಲಿಗೆ ಚಕ್ರವೆಂದೂ ಹೆಸರಿದೆ. ಕುಂಡಲಿಯನ್ನು ಒಂದೊಂದು ದೇಶದವರು ಒಂದೊಂದು ಕ್ರಮದಲ್ಲಿ ಬರೆಯುತ್ತಾರೆ. ಓಂದು ಕುಂಡಲಿಯಲ್ಲಿ ಹನ್ನೆರಡು ಮನೆಗಳಿರುತ್ತವೆ. ಇದನ್ನು ಕುಂಡಲಾಕಾರದಲ್ಲಿ ಬರೆಯುತ್ತಿದ್ದುದರಿಂದ ಇದಕ್ಕೆ ಕುಂಡಲಿ ಎಂಬ ಹೆಸರು ಪ್ರಚಲಿತವಾಗಿದೆ. ದಕ್ಷಿಣ ಭಾರತದಲ್ಲಿ ಇದನ್ನು ಚಚ್ಚೌಕವಾಗಿ ಬರೆಯುತ್ತಾರೆ. ಇದರಲ್ಲಿರುವ ಮನೆಗಳಲ್ಲಿ ಮೇಷಾದಿ ಹನ್ನೆರಡು ರಾಶಿಗಳ ಸ್ಥಾನ ನಿಯತವಾಗಿರುತ್ತದೆ. ಭಮಂಡಲದಲ್ಲಿ ಗ್ರಹ ಯಾವ ರಾಶಿವಿಭಾಗದಲ್ಲಿ ಇರುವುದೊ ಅದನ್ನು ತಿಳಿದುಕೊಂಡು ಕುಂಡಲಿಯ ಆ ರಾಶಿಯ ಮನೆಯಲ್ಲಿ ಆ ಗ್ರಹದ ಹೆಸರನ್ನು ಬರೆಯಬೇಕು. ಹೀಗೆ ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು ಈ ಒಂಬತ್ತು ಗ್ರಹಗಳ ಹೆಸರುಗಳೂ ಕುಂಡಲಿಯಲ್ಲಿ ಇರುತ್ತವೆ. ಇದರಿಂದ ಏಕಕಾಲದಲ್ಲಿ ನವಗ್ರಹಗಳು ಯಾವಯಾವ ರಾಶಿಗಳಲ್ಲಿ ಇವೆ ಎಂಬುದು ತಿಳಿಯುತ್ತದೆ. ಜನನ ಲಗ್ನರಾಶಿಯನ್ನು ಲೆಕ್ಕಮಾಡಿ ತಿಳಿದು ಅದನ್ನು

ಕುಂಡಲಿಯಲ್ಲಿ ಆ ರಾಶಿಯ ಮನೆಯಲ್ಲಿ ಲಗ್ನ ಎಂದು ಗುರ್ತಿಸಬೇಕು. ಹೀಗೆ ಬರೆದು ಸಿದ್ಧಪಡಿಸಿರುವ ಕುಂಡಲಿಯ ಸಹಾಯದಿಂದ ಜಾತಕನಿಗೆ ಗ್ರಹಗಳಿಂದ ಉಂಟಾಗುವ

| | | | |
|---|---|---|---|
| ಮೀನ | ಮೇಷ | ವೃಷಭ | ಮಿಥುನ |
| ಕುಂಭ | | | ಕರ್ಕಾಟಕ |
| ಮಕರ | | | ಸಿಂಹ |
| ಧನುಸ್ಸು | ವೃಶ್ಚಿಕ | ತುಲಾ | ಕನ್ಯಾ |

ಚಿತ್ರ 1

ಫಲಗಳನ್ನು ತಿಳಿಯಲು ಅನುಕೂಲವಾಗುತ್ತದೆ. ಜನನಕಾಲ, ವಿವಾಹ ಮೊದಲಾದ ಶುಭಕಾರ್ಯಗಳನ್ನು ಮಾಡುವ ಕಾಲ ಮತ್ತು ಪ್ರಶ್ನಕಾಲ, ಈ ಕಾಲಗಳಲ್ಲಿ ಕುಂಡಲಿಯನ್ನು ಸಿದ್ಧಪಡಿಸಿ ಅದರ ಸಹಾಯದಿಂದ ಗ್ರಹಫಲವನ್ನು ತಿಳಿಯಬೇಕಾಗುತ್ತದೆ.




ಚಿತ್ರ 2

ಕುಂಡಲಿಯನ್ನು ಬರೆಯುವುದರಲ್ಲಿ ಪ್ರಚಲಿತವಾಗಿರುವ ಕೆಲವು ವಿಧಾನಗಳನ್ನು ಈ ಕೆಳಗೆ ಚಿತ್ರರೂಪದಲ್ಲಿ ಕೊಟ್ಟಿದೆ.




ಚಿತ್ರ 3

1, 2, 4 ನೆಯ ವಿಧಾನಗಳಲ್ಲಿ ಮೇಷಾದಿ 12 ರಾಶಿಗಳಿಗೆ ಗೊತ್ತಾದ ಮನೆಗಳಿವೆ. ಮೂರನೆಯ ವಿಧಾನದಲ್ಲಿ ರಾಶಿಗಳಿಗೆ ನಿಯತವಾದ ಸ್ಥಾನವಿಲ್ಲ. ಎಲ್ಲಮನೆಗಳಲ್ಲೂ ಮೇಷಾದಿ ಹನ್ನೆರಡು ರಾಶಿಗಳು ಬರಬಹುದು. ಇದರಲ್ಲಿ ಲಗ್ನ ಮೊದಲಾದ ಹನ್ನೆರಡು ಸ್ಥಾನಗಳಿಗೆ ನಿಯತಸ್ಥಾನ ಲಗ್ನಾನುಗುಣವಾಗಿ ರಾಶಿಗಳು ಬದಲಾಗುತ್ತವೆ. ಇಷ್ಟಕಾಲದಲ್ಲಿ ಮೇಷ ಲಗ್ನವಾದರೆ ಲಗ್ನದಲ್ಲಿ ಮೇಷರಾಶಿ ಇದ್ದು, ಸಂಖ್ಯಾ ಕ್ರಮದಲ್ಲಿ ಉಳಿದ ರಾಶಿಗಳಿರುತ್ತವೆ. ಲಗ್ನ ವೃಷಭವಾದರೆ ಲಗ್ನ ಸ್ಥಾನದಲ್ಲಿ ವೃಷಭ ರಾಶಿ ಇರುತ್ತದೆ. ಹೀಗೆಯೇ ಲಗ್ನಸ್ಥಾನದಲ್ಲಿದ್ದು ಉಳಿದ ರಾಶಿಗಳು ಕ್ರಮವಾಗಿ ಆಯಾ ಸ್ಥಾನಗಳಲ್ಲಿರುತ್ತವೆ. ಬಳಿಕ ಗ್ರಹಗಳನ್ನು ಆಯಾರಾಶಿಗಳಲ್ಲಿ ಬರೆಯಬೇಕು. ಮೊದಲಿನ ಕುಂಡಲಿ ವಿಧಾನದಲ್ಲಿ ರಾಶಿಯ ಗಣನೆ ಪ್ರದಕ್ಷಿಣಾಕಾರದಲ್ಲಿದ್ದರೆ ಉಳಿದ ಮೂರು ವಿಧಾನಗಳಲ್ಲೂ ಅಪ್ರದಕ್ಷಿಣಾಕಾರದಲ್ಲಿರುತ್ತದೆ.

ಕುಂಡಲಿಗಳಲ್ಲಿ ರಾಶಿಕುಂಡಲಿ ಭಾವಕುಂಡಲಿ ದ್ರೇಕ್ಕಾಣಕುಂಡಲಿ ಅಂಶಕುಂಡಲಿ ಇವು ಮುಖ್ಯವಾದುವು. ಇವಲ್ಲದೆ ಇನ್ನೂ ಕೆಲವು ಕುಂಡಲಿಗಳುಂಟು. ಗ್ರಹಗಳಿರುವ ರಾಶಿಯನ್ನು ರಾಶಿಕುಂಡಲಿ ತಿಳಿಸುತ್ತದೆ. ಭಾವಕುಂಡಲಿ ತನು ಮೊದಲಾದ ಹನ್ನೆರಡು ಭಾವಗಳಲ್ಲಿ ಗ್ರಹಸ್ಥಿತಿಯನ್ನು ಸೂಚಿಸುತ್ತದೆ. ರಾಶಿ, ಭಾವಕುಂಡಲಿಗಳಲ್ಲಿ ಗ್ರಹಸ್ಥಿತಿ ಬಹುಪಾಲು ಒಂದೇ ವಿಧವಾಗಿದ್ದರೂ ಕೆಲವು ವೇಳೆ ಒಂದೆರಡು ಗ್ರಹಗಳು ಮಾತ್ರ ವ್ಯತ್ಯಾಸವಾಗುತ್ತವೆ. ಗ್ರಹವಿರುವ ದ್ರೇಕ್ಕಾಣ ವಿಭಾಗವನ್ನು ದ್ರೇಕ್ಕಾಣ ಕುಂಡಲಿ ತಿಳಿಸುತ್ತದೆ. ಅಂತೆಯೇ ನವಾಂಶಕುಂಡಲಿ ಗ್ರಹವಿರುವ ನವಾಂಶವನ್ನು ಸೂಚಿಸುತ್ತದೆ. ಈ ಕುಂಡಲಿಗಳಿಂದ ಪ್ರತ್ಯೇಕವಾದ ಫಲಗಳನ್ನು ತಿಳಿಯಲು ಅನುಕೂಲವಾಗುತ್ತದೆ.




ಚಿತ್ರ 4

ಪಕ್ಷ ಮತ್ತು ಮಾಸಗಳ ಕೊನೆಯ ದಿನದ ಗ್ರಹಸ್ಥಿತಿಯನ್ನು ಕುಂಡಲಿಯ ಮೂಲಕ ಪಂಚಾಂಗಗಳಲ್ಲಿ ಸೂಚಿಸುತ್ತಾರೆ. (ಎಸ್.ಎನ್.ಕೆ.)

**ಗ್ರಹಣಕಾರಕ ಯಮಳ ನಕ್ಷತ್ರಗಳು :** ಪರಸ್ಪರ ಒಂದರ ಸುತ್ತ ಇನ್ನೊಂದು ಪರಿಭ್ರಮಿಸುತ್ತಿರುವ ಒಂದು ಜೊತೆ ನಕ್ಷತ್ರಗಳಲ್ಲಿ ಒಂದು ಇನ್ನೊಂದನ್ನು ತಾತ್ಕಾಲಿಕವಾಗಿ ಮರೆಮಾಡುವ ವ್ಯವಸ್ಥೆ (ಎಕ್ಲಿಪ್ಸಿಂಗ್ ಬೈನರಿ ಸ್ಟಾರ್ಸ್). ವಿಶ್ವದಲ್ಲಿ ಯಮಳ ನಕ್ಷತ್ರಗಳು(**ನೋಡಿ**)




**ಪೂರ್ಣ ಗ್ರಹಣಗಳನ್ನು ಪ್ರದರ್ಶಿಸುವ ಕಾಲ್ಪನಿಕ ಗ್ರಹಣಕಾರಕ ಯಮಳ ನಕ್ಷತ್ರ ಮತ್ತು ಅದರ ಬೆಳಕಿನ ರೇಖಾಚಿತ್ರ**

ಸಾಕಷ್ಟು ಸಂಖ್ಯೆಯಲ್ಲಿವೆ. ಇಂಥ ಒಂದೊಂದು ವ್ಯವಸ್ಥೆಯಲ್ಲೂ ಒಂದು ನಕ್ಷತ್ರ ಇನ್ನೊಂದು ನಕ್ಷತ್ರವನ್ನು ತನ್ನೆಡೆಗೆ ಆಕರ್ಷಿಸುತ್ತ ಒಟ್ಟಾಗಿ ಒಂದರ ಸುತ್ತ ಇನ್ನೊಂದು ಪರಿಭ್ರಮಿಸುತ್ತಿರುವುವು. ಸಮಬಲವಿರುವ ಇಬ್ಬರು ವ್ಯಕ್ತಿಗಳ ಅಪ್ಪಾಲೆತಿಪ್ಪಾಲೆ ಆಟದಂತೆ ಈ ಪರಸ್ಪರ ಪರಿಭ್ರಮಣೆ ಉಂಟು. ಯಮಳ ನಕ್ಷತ್ರಗಳ ಕಕ್ಷಾತಲ ಭೂಮಿಯ ಮೂಲಕ ಹಾಯುವಂತಿದ್ದರೆ ಆಗ ಒಂದು ನಕ್ಷತ್ರ ಇನ್ನೊಂದು ನಕ್ಷತ್ರದ ಹಿಂದಕ್ಕೆ ಸರಿದು ವೀಕ್ಷಕನ ದೃಷ್ಟಿಯಿಂದ ತಾತ್ಕಾಲಿಕವಾಗಿ ಮರೆಯಾಗಿರುವ ವಿದ್ಯಮಾನ ಘಟಿಸುತ್ತಲೇ ಇರುತ್ತದೆ. ಅಂಥಲ್ಲಿ ಮೊದಲಿನ ನಕ್ಷತ್ರದಿಂದ ಎರಡನೆಯ ನಕ್ಷತ್ರ ಗ್ರಹಣಗೊಂಡಿತು ಎನ್ನುತ್ತೇವೆ. [ಇಲ್ಲಿ ಗ್ರಹಣ ಪದದ ಅರ್ಥ ಕಣ್ಮರೆಯಾಯಿತು ಎಂದು, ಸೌರವ್ಯೂಹದಲ್ಲಿನ ಗ್ರಹಣಗಳನ್ನು ಕುರಿತು ನೀಡಿದ ಅರ್ಥ, ನೆರಳಿನಿಂದ ಅಸ್ಫುಟವಾಗುವಿಕೆ, ಅಲ್ಲ (**ನೋಡಿ– ಗ್ರಹಣ, ಖಗೋಳೀಯ**). ಆದ್ದರಿಂದ, ಭೂಮಿಯನ್ನು ಕುರಿತಂತೆ ಯಮಳನಕ್ಷತ್ರ ವ್ಯವಸ್ಥೆಯೊಂದರ ವಿನ್ಯಾಸವನ್ನು ಅವಲಂಬಿಸಿ ಗ್ರಹಣಕಾರಕ ಯಮಳನಕ್ಷತ್ರ ವ್ಯವಸ್ಥೆ ಉಂಟು. ಪರ್ಸಿಯಸ್ ನಕ್ಷತ್ರಪುಂಜದಲ್ಲಿರುವ

(ವಿಷುವದಂಶ 1 ಗಂ. 25ಮಿ.–4ಗಂ. 45 ಮಿ. ಮತ್ತು ಘಂಟಾವೃತ್ತಾಂಶ $31^0$–$59^0$) ಆಲ್ಗಾಲ್ ಎನ್ನುವ ನಕ್ಷತ್ರ ಸುಪ್ರಸಿದ್ಧ ಉದಾಹರಣೆ. ಒಂದು ಪ್ರಕಾಶಮಾನ ನಕ್ಷತ್ರ ಮತ್ತು ಒಂದು ಮಸಕು ನಕ್ಷತ್ರ ಇವುಗಳ ವ್ಯವಸ್ಥೆ ಆಲ್ಗಾಲ್. ಸುಮಾರಾಗಿ ಪ್ರತಿ ಎರಡು ದಿವಸಗಳು



ಗ್ರಹಣಕಾರಕ ಯಮಳ ನಕ್ಷತ್ರಗಳ ಮೂರು ಪ್ರರೂಪಗಳು. ಎಡಗಡೆಯ ಚಿತ್ರದಲ್ಲಿ ಈ ನಕ್ಷತ್ರಗಳ ಬೆಳಕಿನ ಏರಿಳಿತಗಳನ್ನು ಗುರುತಿಸುವ ವಕ್ರರೇಖೆಗಳನ್ನು ನೋಡಬಹುದು. ಬಲಗಡೆಯ ಚಿತ್ರದಲ್ಲಿ ಮೇಲಿನದು ಕಂಕಣ ಗ್ರಹಣವನ್ನೂ ನಡುವಿನದು ಪಾರ್ಶ್ವ ಗ್ರಹಣವನ್ನೂ ಪ್ರದರ್ಶಿಸುತ್ತವೆ. ಕೆಳಗಡೆಯದು ಸರಿಸುಮಾರು ಸಮಾನ ಗಾತ್ರದ ಆದರೆ ಭಿನ್ನಕಾಂತಿಗಳ ನಕ್ಷತ್ರಗಳಾಗಿರುವುದರಿಂದ ಪರಸ್ಪರ ಆಂದೋಳನಗಳನ್ನೇ ಎಬ್ಬಿಸುತ್ತವೆ.

ಮತ್ತು ಇಪ್ಪತ್ತೊಂದು ಗಂಟೆಗಳಲ್ಲಿ ಪ್ರಕಾಶಮಾನ ಘಟಕ ಮಸಕು ಘಟಕದ ಹಿಂದಕ್ಕೆ ಹೋಗುತ್ತದೆ. ಮತ್ತು ಆಗ ಆಲ್ಗಾಲಿನ ದೃಗ್ಗೋಚರ ಪ್ರಕಾಶ ಗಣನೀಯವಾಗಿ ಅಂದರೆ ಸಾಮಾನ್ಯ ಪ್ರಕಾಶದ ಅರ್ಧಕ್ಕಿಂತಲೂ ಕಡಿಮೆ ಮಟ್ಟಕ್ಕೆ ತಗ್ಗುತ್ತದೆ. ಇದನ್ನು ಬರಿಗಣ್ಣಿನಿಂದ ನೋಡಿ ಗುರುತಿಸಬಹುದು. ಗ್ರಹಣಕಾರಕ ಯಮಳ ನಕ್ಷತ್ರಗಳ ಪ್ರಕಾಶದ ಏರಿಳಿತಗಳ ಅಧ್ಯಯನದಿಂದ ವ್ಯವಸ್ಥೆಯ ಘಟಕಗಳ ಗಾತ್ರಗಳನ್ನೂ ದ್ರವ್ಯರಾಶಿಗಳನ್ನೂ ಗಣನೆ ಮಾಡುವುದು ಸಾಧ್ಯ. *

**ಗ್ರಹಣ, ಖಗೋಳೀಯ :** ಒಂದು ಆಕಾಶಕಾಯ ಇನ್ನೊಂದು ಆಕಾಶಕಾಯದ ನೆರಳಿನಿಂದ ಆಂಶಿಕವಾಗಿ ಇಲ್ಲವೇ ಪೂರ್ಣವಾಗಿ ಅಸ್ಫುಟವಾಗುವಿಕೆ (ಎಕ್ಲಿಪ್ಸ್, ಸೆಲೆಸ್ಟಿಯಲ್). ಗ್ರಹಣಕ್ಕೆ ಒಳಗಾಗುವ ಕಾಯ ಸ್ವಯಂಪ್ರಭಾಯುತವಾಗಿದ್ದು ಅಪಾರ ದರ್ಶಕ ಕಾಯವೊಂದರ ನೆರಳಿನಿಂದ ಅಸ್ಫುಟವಾಗುವುದು ಒಂದು ಬಗೆಯ ಗ್ರಹಣ; ಬದಲು ಅದು ಪ್ರತಿಫಲಿತ ಬೆಳಕಿನಿಂದ ಹೊಳೆಯುವುದಾಗಿದ್ದು ಅಪಾರ ದರ್ಶಕ ಕಾಯವೊಂದು ಇದಕ್ಕೂ ಇದರ ಬೆಳಕಿನ ಆಕರಕ್ಕೂ ನಡುವೆ ಸರಿಯುವಾಗ ಅಸ್ಫುಟವಾಗುವುದು ಇನ್ನೊಂದು ಬಗೆಯ ಗ್ರಹಣ. ಮೊದಲನೆಯ ಪ್ರರೂಪದ ಗ್ರಹಣಕ್ಕೆ ಆಚ್ಛಾದನೆ (ಅಕಲ್ಟೇಷನ್) ಎಂದು ಹೆಸರು. ಇದಕ್ಕೆ ಸೂರ್ಯಗ್ರಹಣ ಮತ್ತು ನಕ್ಷತ್ರಗ್ರಹಣ ನಿದರ್ಶನಗಳು. ಸೂರ್ಯಗ್ರಹಣದಲ್ಲಿ ವೀಕ್ಷಕನಿಗೂ ಸೂರ್ಯನಿಗೂ ನಡುವೆ ಚಂದ್ರ ಸರಿಯುತ್ತದೆ. ನಕ್ಷತ್ರಗ್ರಹಣದಲ್ಲಾದರೋ ವೀಕ್ಷಕನಿಗೂ ನಕ್ಷತ್ರಕ್ಕೂ ನಡುವೆ ಚಂದ್ರ ಇಲ್ಲವೇ ಒಂದು ಗ್ರಹ ಸರಿಯುತ್ತದೆ. ಗ್ರಹಣಕಾರಕ ಯಮಳ ನಕ್ಷತ್ರಗಳು (ಎಕ್ಲಿಪ್ಸಿಂಗ್ ಬೈನರಿ ಸ್ಟಾರ್ಸ್) ಕೂಡ ಈ ಬಗೆಯ ಗ್ರಹಣಕ್ಕೆ ನಿದರ್ಶನಗಳು. ಎರಡನೆಯ ಪ್ರರೂಪದ ಗ್ರಹಣಕ್ಕೆ ಚಂದ್ರಗ್ರಹಣ ಅದರಂತೆಯೇ ಗ್ರಹಗಳ ಉಪಗ್ರಹಗಳ ಗ್ರಹಣಗಳು ಕೂಡ ಉದಾಹರಣೆಗಳು. ರೂಢಿಯಲ್ಲಿ ಗ್ರಹಣ ಎನ್ನುವ




ಚಿತ್ರ 1. ಸೂರ್ಯ ಮತ್ತು ಚಂದ್ರ ಗ್ರಹಣಗಳ ಕ್ರಿಯಾವಿನ್ಯಾಸ

ಪದದ ಬಳಕೆ ಭೂಮಿಯಿಂದ ಕಾಣುವಂತೆ ಸೂರ್ಯ ಮತ್ತು ಚಂದ್ರಗ್ರಹಣಗಳನ್ನು ಕುರಿತು ಉಂಟು. ಪ್ರಸಕ್ತ ಲೇಖನದಲ್ಲಿ ಇವೆರಡು ಗ್ರಹಣಗಳ ಸವಿವರ ನಿರೂಪಣೆ ಇದೆ. ಗ್ರಹಣಕಾರಕ ಯಮಳ ನಕ್ಷತ್ರಗಳನ್ನು ಕುರಿತ ವಿವರಣೆಗೆ **ನೋಡಿ– ಗ್ರಹಣಕಾರಕ ಯಮಳ ನಕ್ಷತ್ರಗಳು**. ಇದಲ್ಲದೆ ಶುಕ್ರ ಮತ್ತು ಬುಧ, ಸೂರ್ಯನ ಮುಂದೆ ಹಾದುಹೋಗುವ ಅಪೂರ್ವ ಘಟನೆಗಳನ್ನು ಸಂಕ್ರಮ (ಟ್ರಾನ್ಸಿಟ್) ಎಂದು ಕರೆಯಲಾಗಿದೆ.

**ಸೂರ್ಯ ಮತ್ತು ಚಂದ್ರಗ್ರಹಣಗಳು :** ಭೂಮಿ ತನ್ನ ಅಕ್ಷದ ಸುತ್ತ ಆವರ್ತಿಸುತ್ತ ಮತ್ತು ಸೂರ್ಯನ ಸುತ್ತ ಪರಿಭ್ರಮಿಸುತ್ತ ಇರುವ ಒಂದು ಅಪಾರಕ ಕಾಯ; ಚಂದ್ರ ಸ್ವಂತಾಕ್ಷದ ಸುತ್ತ ಆವರ್ತಿಸುತ್ತ ಮತ್ತು ಭೂಮಿಯ ಸುತ್ತ ಪರಿಭ್ರಮಿಸುತ್ತ ಇರುವ




ಚಿತ್ರ 2. ಪಾತರೇಖೆಯ ನೇರ ಇಲ್ಲವೆ ಸರಿಸುಮಾರು ಆ ನೇರ ಸೂರ್ಯ ಇದ್ದಾಗ ಮಾತ್ರ ಗ್ರಹಣಗಳು ಸಂಭವಿಸುತ್ತವೆ

ಇನ್ನೊಂದು ಅಪಾರದರ್ಶಕ ಕಾಯ. ಭೂಮಿ ಸಾಗುವ ಕಕ್ಷಾತಲ ಖಗೋಳವನ್ನು ಛೇದಿಸುವ ಮಹಾವೃತ್ತಕ್ಕೆ ಕ್ರಾಂತಿವೃತ್ತ (**ನೋಡಿ**) ಎಂದು ಹೆಸರು. ಈ ಮಹಾವೃತ್ತದ ಮೇಲೆ ಭೂಮಿಯ ಸುತ್ತ ಸೂರ್ಯ ಪರಿಭ್ರಮಿಸುತ್ತಿರುವಂತೆ ಭೂಮಿಯ ಮೇಲಿನ ವೀಕ್ಷಕನಿಗೆ ಭಾಸವಾಗುವುದು. ಚಂದ್ರನ ಕಕ್ಷಾತಲ ಖಗೋಳವನ್ನು ಇನ್ನೊಂದು ಮಹಾವೃತ್ತದಲ್ಲಿ ಛೇದಿಸುತ್ತದೆ. ಈ ಮಹಾವೃತ್ತದ ಮೇಲೆ ಭೂಮಿಯ ಸುತ್ತ ಚಂದ್ರ ಪರಿಭ್ರಮಿಸುತ್ತಿರುವಂತೆ ಭೂಮಿಯ ಮೇಲಿನ ವೀಕ್ಷಕನಿಗೆ ಭಾಸವಾಗುವುದು. ಕ್ರಾಂತಿವೃತ್ತತಲವೂ ಚಂದ್ರಕಕ್ಷಾವೃತ್ತತಲವೂ ಎರಡು ಬಿಂದುಗಳಲ್ಲಿ (N, N') ಪರಸ್ಪರ ಸಂಧಿಸುತ್ತವೆ; ಇವೆರಡು ತಲಗಳೂ ಪರಸ್ಪರ $5^0$ 8' ಗಳಷ್ಟು ಬಾಗಿಕೊಂಡಿವೆ. N ಮತ್ತು N' ಬಿಂದುಗಳಿಗೆ ಪಾತ ಬಿಂದುಗಳು ಅಥವಾ ಸರಳವಾಗಿ ಪಾತಗಳು (ನೋಡ್ಸ್) ಎಂದು ಹೆಸರು. ಚಿತ್ರ(3)ರಲ್ಲಿ E ಭೂಮಿ; NMN'MM' ಚಂದ್ರಕಕ್ಷೆ; NSN'S' ಕ್ರಾಂತಿವೃತ್ತ (ಸೂರ್ಯ ಕಕ್ಷೆ). ಚಂದ್ರ ಮತ್ತು ಸೂರ್ಯರು ಆಯಾ ಕಕ್ಷೆಯ ಮೇಲೆ ಅನುರೂಪ ಕಕ್ಷಾವೇಗಗಳಿಂದ ಸಂಚರಿಸುತ್ತಿರುವಾಗ ಭೂಮಿಯ ಮತ್ತು ಚಂದ್ರನ ನೆರಳುಗಳು ನಿರಂತರ ಚಲನೆಯಲ್ಲಿರುತ್ತವೆ. ಮಾತ್ರವಲ್ಲ, ವಾಸ್ತವಿಕವಾಗಿ ಈ ಮೂರು ಕಾಯಗಳ ವಿನ್ಯಾಸಗಳೂ ನಡುವಿನ ಅಂತರಗಳೂ ಬದಲಾಗುತ್ತಲೇ ಇರುವುದರಿಂದ ನೆರಳುಗಳ ಗಾತ್ರಗಳು ಕೂಡ ಬದಲಾಗುತ್ತಲೇ ಇರುತ್ತವೆ. ನಿರಂತರವಾಗಿ ನಡೆಯುತ್ತಿರುವ ಈ ವಿದ್ಯಮಾನದಲ್ಲಿ ಚಂದ್ರನ ನೆರಳು ಭೂಮಿಯ ಮೇಲೆ ಪತನವಾದಾಗ ಸೂರ್ಯ ಗ್ರಹಣ ಸಂಭವಿಸುವುದು; ಹಾಗೆಯೇ ಭೂಮಿಯ ನೆರಳು ಚಂದ್ರನ ಮೇಲೆ ಪತನವಾದಾಗ ಚಂದ್ರಗ್ರಹಣ ಸಂಭವಿಸುತ್ತದೆ. ಚಂದ್ರಕಕ್ಷೆ ಕ್ರಾಂತಿ ವೃತ್ತಕ್ಕಿಂತ ಭಿನ್ನವಾಗಿರುವುದರಿಂದ ಹಾಗೂ ಚಂದ್ರ ಮತ್ತು ಸೂರ್ಯರ ಕಕ್ಷಾವೇಗಗಳು ಭಿನ್ನವಾಗಿರುವುದ ರಿಂದ ಗ್ರಹಣಗಳು ಪದೇ ಪದೇ ಸಂಭವಿಸುವ ಘಟನೆಗಳಲ್ಲ, ವಿರಳ ಘಟನೆಗಳು. ಚಿತ್ರ (1)ನ್ನು ಇಲ್ಲವೇ ಚಿತ್ರ(2)ನ್ನು ಗಮನಿಸಿ ಒಂದು ಅಂಶವನ್ನು ಖಾತ್ರಿ ಮಾಡಿಕೊಳ್ಳ ಬಹುದು: ಸೂರ್ಯ ಮತ್ತು ಚಂದ್ರ ಎರಡೂ ಪಾತಬಿಂದುಗಳ ಸನಿಹದಲ್ಲಿರುವಾಗ ಮಾತ್ರ ಗ್ರಹಣ ಸಂಭಾವ್ಯ. ಸೂರ್ಯಗ್ರಹಣವಾದರೆ ಚಂದ್ರ ಮತ್ತು




ಚಿತ್ರ 3

ಸೂರ್ಯ ಭೂಮಿಯಿಂದ ಒಂದೇ ದಿಶೆಯಲ್ಲಿ ಇರುವುದರಿಂದ ಅವುಗಳ ರೇಖಾಂಶಗಳು ಸಮ. ಆದ್ದರಿಂದ ಅಂದು ಅಮಾವಾಸ್ಯೆಯೂ ಹೌದು. ಚಂದ್ರಗ್ರಹಣವಾದರೆ ಚಂದ್ರ ಮತ್ತು ಸೂರ್ಯ ಭೂಮಿಯಿಂದ ವಿರುದ್ಧ ದಿಶೆಗಳಲ್ಲಿ ಇರುವುದರಿಂದ ಅವುಗಳ ರೇಖಾಂಶ ವ್ಯತ್ಯಾಸ $180^0$. ಆದ್ದರಿಂದ ಅಂದು ಹುಣ್ಣಿಮೆಯೂ ಹೌದು. ಹೀಗೆ ಗ್ರಹಣಗಳು ಚಂದ್ರ ಮತ್ತು ಸೂರ್ಯರು ಪಾತಬಿಂದುಗಳ ಸಮೀಪವಿರುವ ಅಮಾವಾಸ್ಯೆ ಇಲ್ಲವೇ ಹುಣ್ಣಿಮೆ ದಿವಸಗಳಂದು ಮಾತ್ರ ಸಂಭವಿಸುತ್ತವೆ. ಈ ಷರತ್ತುಗಳ ಪೈಕಿ ಯಾವುದೇ ಒಂದು ಪೂರೈಕೆ ಆಗದಿದ್ದರೆ ಗ್ರಹಣ ಸಂಭವಿಸುವುದಿಲ್ಲ.




**ಚಿತ್ರ 4. ಚಂದ್ರಗ್ರಹಣದ ಕ್ರಿಯಾವಿನ್ಯಾಸ dಯಲ್ಲಿ ಚಂದ್ರಬಿಂಬ ಅರೆನೆರಳಿನ ಪ್ರದೇಶವನ್ನು ಪ್ರವೇಶಿಸುತ್ತದೆ. ಬಳಿಕ ದಟ್ಟನೆರಳನ್ನು ಪ್ರವೇಶಿಸುತ್ತದೆ (M). ಇಲ್ಲಿಂದ ಪುನಃ ಅರೆನೆರಳಿನ ಪ್ರದೇಶವನ್ನು ಪ್ರವೇಶಿಸಿ ಮತ್ತೆ cಯಲ್ಲಿ ಪೂರ್ಣ ಮುಕ್ತಿಯನ್ನು ಪಡೆಯುತ್ತದೆ.**

ಕ್ರಾಂತಿವೃತ್ತತಲದ ಮೇಲೆಯೇ ಚಂದ್ರಕಕ್ಷೆಯೂ ಇದ್ದಿದ್ದರೆ ಪ್ರತಿ ಅಮಾವಾಸ್ಯೆಯಂದು ಸೂರ್ಯಗ್ರಹಣವೂ ಪ್ರತಿ ಹುಣ್ಣಿಮೆಯಂದು ಚಂದ್ರಗ್ರಹಣವೂ ಆಗುತ್ತಿದ್ದುವು. ಹೀಗಾಗದಿರುವುದಕ್ಕೆ ಮುಖ್ಯಕಾರಣಗಳು ಎರಡು : ಒಂದು, ಚಂದ್ರಕಕ್ಷಾತಲ ಕ್ರಾಂತಿವೃತ್ತತಲಕ್ಕೆ ಬಾಗಿಕೊಂಡಿರುವುದು; ಎರಡು, ಪಾತಬಿಂದುಗಳ ಹಿನ್ನಡೆ (ರಿಟ್ರೋಗ್ರೇಡ್ ಮೋಷನ್). ಇವು ವಾರ್ಷಿಕವಾಗಿ $20^0$ ಗಳಷ್ಟು ಪ್ರದಕ್ಷಿಣ ದಿಶೆಯಲ್ಲಿ ಸಂಚರಿಸುತ್ತ ಸುಮಾರು 18




**ಚಿತ್ರ 5. 18–11–1956ರಲ್ಲಿ ಸಂಭವಿಸಿದ ಪೂರ್ಣ ಚಂದ್ರಗ್ರಹಣದ ಚಿತ್ರ. ಕಾಲವನ್ನು ವಿಶ್ವಕಾಲದಲ್ಲಿ ಸೂಚಿಸಿದೆ.**

ವರ್ಷಗಳಿಗೊಮ್ಮೆ ಮೊದಲಿನ ಸ್ಥಾನಗಳನ್ನು ಹೊಂದುತ್ತವೆ. ಈ ಕಾರಣಗಳಿಂದಲೆ ಪ್ರತಿ ಅಮಾವಾಸ್ಯೆ (ಚಂದ್ರ ಮತ್ತು ಸೂರ್ಯರ ರೇಖಾಂಶ ವ್ಯತ್ಯಾಸ ಶೂನ್ಯವಾಗುವ ಘಟನೆ) ಮತ್ತು ಹುಣ್ಣಿಮೆಗಳಂದು (ರೇಖಾಂಶ ವ್ಯತ್ಯಾಸ $180^0$ ಆಗುವ ಘಟನೆ) ಚಂದ್ರನ ನೆರಳು ಹೆಚ್ಚಾಗಿರುವುದಿಲ್ಲ ಮತ್ತು ಎರಡೇ ಎರಡರಷ್ಟು ಕಡಿಮೆಯಾಗಿರಬಹುದು. ಗರಿಷ್ಠ ಸಂಖ್ಯೆಯಾದ ಏಳರಲ್ಲಿ ಐದು ಸೂರ್ಯಗ್ರಹಣಗಳು ಮತ್ತು ಎರಡು ಚಂದ್ರಗ್ರಹಣಗಳು; ಇಲ್ಲವೇ ನಾಲ್ಕು ಸೂರ್ಯಗ್ರಹಣಗಳು ಮತ್ತು ಮೂರು ಚಂದ್ರಗ್ರಹಣಗಳು ಇವೆ. ಕನಿಷ್ಠ ಸಂಖ್ಯೆಯಾದ ಎರಡರಲ್ಲಿ ಎರಡೂ ಸೂರ್ಯಗ್ರಹಣಗಳೇ. ಅಂದಮಾತ್ರಕ್ಕೆ ಯಾವುದೇ ಒಂದು ಸ್ಥಳದಲ್ಲಿರುವ ವೀಕ್ಷಕನಿಗೆ ಇವೆಲ್ಲವೂ ಕಾಣಲೇಬೇಕೆಂದೇನೂ ಇಲ್ಲ. ಭೂಮಿಯ ಮೇಲಿನ ಒಂದು ಸ್ಥಳದಿಂದ ಕಾಣಬಹುದಾದ ಗ್ರಹಣ ಮತ್ತು ಅದರ ವಿನ್ಯಾಸ (ಆಂಶಿಕವೋ ಪೂರ್ಣವೋ ಎಂಬ ಅಂಶ) ಗ್ರಹಣ ಸಂಭವಿಸುವಾಗ ಆ ಸ್ಥಳದ ಸ್ಥಾನವನ್ನು (ಅಂದರೆ ಅಕ್ಷಾಂಶ ರೇಖಾಂಶಗಳನ್ನು) ಅವಲಂಬಿಸಿ ಇವೆ.

**ಚಂದ್ರಗ್ರಹಣ :** ಭೂಮಿಯ ಸೂರ್ಯವಿಮುಖ ಪಾರ್ಶ್ವದಲ್ಲಿ ಶಂಕುವಿನಾಕಾರದ ನೆರಳು ಉಂಟಾಗಿರುತ್ತದೆ. ಚಿತ್ರ(4)ರಲ್ಲಿ ಈ ದೃಶ್ಯದ ಅಡ್ಡಕೊಯ್ತವನ್ನು ಕಾಣಿಸಿದೆ. ಇಲ್ಲಿ S, E, M ಅನುಕ್ರಮವಾಗಿ ಸೂರ್ಯಕೇಂದ್ರ, ಭೂಮಿಕೇಂದ್ರ ಮತ್ತು ಚಂದ್ರಕೇಂದ್ರ. AD, BC ಸೂರ್ಯ ಮತ್ತು ಚಂದ್ರಬಿಂಬಗಳಿಗೆ ಎಳೆದ ನೇರ ಸಾಮಾನ್ಯ ಸ್ಪರ್ಶರೇಖೆಗಳು.




**ಚಿತ್ರ 6. ಚಂದ್ರಗ್ರಹಣದ ಭಿನ್ನ ಪ್ರರೂಪಗಳು. A ರೇಖೆಯ ಮೇಲೆ ಚಂದ್ರಬಿಂಬ ಸಾಗುವಾಗ ಪೂರ್ಣಗ್ರಹಣ ಸಂಭವಿಸುತ್ತದೆ. B ರೇಖೆಯ ಮೇಲೆ ಸಾಗುವಾಗ ಪಾರ್ಶ್ವ ಗ್ರಹಣ ಸಂಭವಿಸುತ್ತದೆ. C ರೇಖೆಯ ಮೇಲೆ ಸಾಗುವಾಗ ಚಂದ್ರಬಿಂಬದ ಬೆಳಕು ಸ್ವಲ್ಪ ಕುಂದಬಹುದಷ್ಟೆ. D ರೇಖೆಯ ಮೇಲೆ ಸಾಗುವಾಗ ಯಾವ ಬದಲಾವಣೆಯೂ ತಿಳಿಯುವುದಿಲ್ಲ.**

ಅವು Gಯಲ್ಲಿ ಸಂಧಿಸುತ್ತವೆ. ACK, BDL ಈ ಬಿಂಬಗಳಿಗೆ ಎಳೆದ ಅಡ್ಡ ಸಾಮಾನ್ಯ ಸ್ಪರ್ಶರೇಖೆಗಳು. ಅವು Fನಲ್ಲಿ ಸಂಧಿಸುತ್ತವೆ. CGD ಸೂರ್ಯನ ಬೆಳಕಿನಿಂದಾದ ಭೂಮಿಯ ನೆರಳಿನ ಶಂಕು. ಈ ಭಾಗದಲ್ಲಿ ಸೂರ್ಯನ ಬೆಳಕು ಸ್ವಲ್ಪವೂ ಕಾಣಿಸುವುದಿಲ್ಲ. ಇದಕ್ಕೆ ಭೂಮಿಯ ನೆರಳಿನ ಶಂಕು ಅಥವಾ ದಟ್ಟ ನೆರಳಿನ ಶಂಕು (ಅಂಬ್ರ) ಎಂದು ಹೆಸರು. KCG ಮತ್ತು LDG ವಲಯದಲ್ಲಿ ಭಾಗಶಃ ನೆರಳಿರುತ್ತದೆ. ಇದಕ್ಕೆ ಅರೆನೆರಳಿನ ಶಂಕು (ಪಿನಂಬ್ರ) ಎಂದು ಹೆಸರು. ಈ ವಲಯದಿಂದ ನೋಡುವಾತನಿಗೆ ಸೂರ್ಯನ ಕೆಲವು ಭಾಗ ಮಾತ್ರ ಕಾಣುವುದಷ್ಟೆ. ಉಳಿದ ಭಾಗವನ್ನು ಭೂಮಿ ಮರೆ ಮಾಡಿರುತ್ತದೆ. adcb ವೃತ್ತ ಭೂಮಿಯ ಸುತ್ತ ಇರುವ ಚಂದ್ರನ ಕಕ್ಷೆಯನ್ನು ಸೂಚಿಸುವುದು.

ಸೂರ್ಯ, ಭೂಮಿ ವ್ಯಾಸಗಳನ್ನೂ ಅವುಗಳ ಕೇಂದ್ರಗಳ ನಡುವಿನ ಸರಾಸರಿ ಅಂತರವನ್ನೂ ತೆಗೆದುಕೊಂಡು ಲೆಕ್ಕ ಹಾಕಿದರೆ ಶಂಕುವಿನಾಕಾರದ ದಟ್ಟ ನೆರಳಿನ ಉದ್ದ ಭೂವ್ಯಾಸದ ಸುಮಾರು 108 ಪಾಲು ದೊಡ್ಡದು ಎಂದು ತಿಳಿಯುವುದು. ಅಂದರೆ ದಟ್ಟ ನೆರಳಿನ ಶೃಂಗ G ಭೂಕೇಂದ್ರದಿಂದ ಸರಾಸರಿ ಸುಮಾರು 13,80,522 ಕಿಮೀಗಳಷ್ಟು

**ಚಿತ್ರ 7. ಚಂದ್ರಗ್ರಹಣದ ಕ್ರಮಾಗತ ಚಿತ್ರಗಳು**

ಭೂಮಿಯ ಮೇಲೆ ಬೀಳುವುದಿಲ್ಲ ಅಥವಾ ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದಿಲ್ಲ ಮತ್ತು ಗ್ರಹಣಗಳು ಸಂಭವಿಸುವುದಿಲ್ಲ. ಇದರ ಪರಿಣಾಮವೆಂದರೆ ಯಾವುದಾದರೂ ಒಂದು ವರ್ಷದಲ್ಲಿ ಆಗಬಹುದಾದ ಗ್ರಹಣಗಳ ಒಟ್ಟು ಸಂಖ್ಯೆ ಏಳಕ್ಕಿಂತ ದೂರದಲ್ಲಿರುತ್ತದೆ. ಚಂದ್ರ ಮತ್ತು ಭೂ ಕೇಂದ್ರಗಳ ನಡುವಿನ ಅಂತರ ಭೂವ್ಯಾಸದ ಸುಮಾರು 30 ರಷ್ಟು ಉಂಟು. ಇದು ಸರಾಸರಿ ಸುಮಾರು 3,84,551 ಕಿಮೀಗಳೆನ್ನಬಹುದು. ಆದ್ದರಿಂದ ಭೂಮಿಯ ಉಪಗ್ರಹವಾದ ಚಂದ್ರ ಭೂಮಿ ತನ್ನ ಹಿಂದೆ ಕೆಡೆಯುವ ದಟ್ಟ

ನೆರಳಿನ ಶಂಕುವಿನ ಮೂಲಕ ಹಾದುಹೋಗುವ ಸಂಭಾವ್ಯತೆ ಉಂಟು. ದಟ್ಟ ನೆರಳಿನ ಭಾಗದ ಒತ್ತಿಗೆ ಅರೆನೆರಳಿನ ಭಾಗಗಳು ಇವೆ. ಆದ್ದರಿಂದ ಚಂದ್ರ ದಟ್ಟ ನೆರಳಿನ ಭಾಗವನ್ನು ಪ್ರವೇಶಿಸುವ ಮುನ್ನ ಮತ್ತು ಅದನ್ನು ಹಾದುಹೋದ ತರುವಾಯ ಅರೆನೆರಳಿನ ಭಾಗದ ಮೂಲಕ ಹೋಗಲೇಬೇಕು.



**ಚಿತ್ರ 8. ಒಂದು ಸೂರ್ಯಗ್ರಹಣ ಕಾಲದಲ್ಲಿ ಸೂರ್ಯ, ಚಂದ್ರ ಮತ್ತು ಭೂಮಿಗಳ ಸಾಪೇಕ್ಷ ಸ್ಥಾನಗಳು (ಮಾನಕ್ಕೆ ಅನುಸಾರವಾಗಿ ಚಿತ್ರಿಸಿಲ್ಲ)**

ಚಂದ್ರ ತನ್ನ ಕಕ್ಷೆಯಲ್ಲಿ ಭೂಮಿಯ ಸುತ್ತ ಸಂಚರಿಸುವಾಗ ಭೂಮಿಯ ನೆರಳಿನೊಳಕ್ಕೆ ಬಂದರೆ ಆಗ ಚಂದ್ರಗ್ರಹಣವಾಗುತ್ತದೆ. ಈ ಗ್ರಹಣವಾಗಬೇಕಾದರೆ ಸೂರ್ಯ, ಭೂಮಿ ಮತ್ತು ಚಂದ್ರ ಇವು ಮೂರೂ ಸುಮಾರಾಗಿ ಒಂದೇ ಸರಳರೇಖೆಯಲ್ಲಿರಬೇಕು. ಚಂದ್ರ ತನ್ನ ಪಥದ ಒಂದು ಪಾತಬಿಂದುವಿನಲ್ಲೋ (ರಾಹು ಇಲ್ಲವೆ ಕೇತು) ಇಲ್ಲವೇ ಅದರ ಹತ್ತಿರವೋ ಇದ್ದು ಸೂರ್ಯನೊಂದಿಗೆ ವಿಯುತಿಯಲ್ಲಿದ್ದರೆ (ಅಪೊಸಿಷನ್) ಅಂದರೆ ಹುಣ್ಣಿಮೆಯಾಗಿದ್ದರೆ ಆಗ ಚಂದ್ರ ಗ್ರಹಣವಾಗುತ್ತದೆ. ಚಂದ್ರಪಥ ನೇರವಾಗಿ ದಟ್ಟ ನೆರಳಿನ ಮಧ್ಯೆ ಹಾದುಹೋಗಬಹುದು ಇಲ್ಲವೇ ಸ್ವಲ್ಪ ಮೇಲೆ ಅಥವಾ ಕೆಳಗೆ ಹೋಗಬಹುದು. ಇವು ಪಾತರೇಖೆಯ ವಿನ್ಯಾಸವನ್ನು ಅವಲಂಬಿಸಿರುತ್ತವೆ. ಚಿತ್ರ (4)ರಲ್ಲಿ ಚಂದ್ರನು ಭೂಮಿಯ ದಟ್ಟ ನೆರಳಿನೊಳಗಿದ್ದು ಪೂರ್ಣಚಂದ್ರಗ್ರಹಣವಾಗಿರುವುದನ್ನು ತೋರಿಸಲಾಗಿದೆ. ಅರೆನೆರಳಿನ ಮೂಲಕ ಚಂದ್ರ ಹಾದುಹೋಗುವಾಗ ಚಂದ್ರ ಬಿಂಬಿಸುವ ಬೆಳಕು ಸ್ವಲ್ಪ ಮಂಕಾಗಬಹುದು. ದಟ್ಟ ನೆರಳಿನ ಹತ್ತಿರ ಹೋದಹಾಗೆಲ್ಲ ಈ ಬೆಳಕು ಕಡಿಮೆಯಾಗುತ್ತ ಹೋಗಿ ಆ ಭಾಗವನ್ನು ಪ್ರವೇಶಿಸುತ್ತಿರುವಾಗ ಚಂದ್ರನ ಸ್ವಲ್ಪ ಭಾಗಕ್ಕೆ ಬೆಳಕು ಕಡಿದುಹೋದ ಹಾಗಾಗುತ್ತದೆ. ಇದಕ್ಕೆ ಚಂದ್ರನ ಪಾರ್ಶ್ವಗ್ರಹಣ ಎಂದು ಹೆಸರು. ದಟ್ಟ ನೆರಳಿನ ಭಾಗದಲ್ಲಿ ಪೂರ್ತ ಮುಳುಗಿದರೆ ಚಂದ್ರನ ಪೂರ್ಣಗ್ರಹಣವಾಗುತ್ತದೆ. ಚಂದ್ರ ತನ್ನ ಪಥದಲ್ಲಿ ಮುಂದುವರಿದಂತೆ ಪೂರ್ಣಗ್ರಹಣವು ಪಾರ್ಶ್ವಗ್ರಹಣವಾಗಿ ಮೋಕ್ಷಗೊಂಡು ಅರೆನೆರಳಿನ ಭಾಗದಲ್ಲಿ ಮುಳುಗಿ ಹೊರಬರುತ್ತದೆ. ಪೂರ್ಣಗ್ರಹಣವಾಗುವುದಕ್ಕೆ ಮುಂಚೆ ಮತ್ತು ಆದ ಮೇಲೆ ಪಾರ್ಶ್ವಗ್ರಹಣವಾಗುತ್ತದೆ ಎಂಬುದನ್ನು ಗಮನಿಸಬೇಕು. ಭೂಮಿಯ ದಟ್ಟ ನೆರಳಿನ ಭಾಗವನ್ನು ಚಂದ್ರ ಸ್ಪರ್ಶಿಸಿ ಮುಂದಕ್ಕೆ ಸರಿದಾಗ ಮಾತ್ರ ಚಂದ್ರಗ್ರಹಣವಾಗಿದೆ ಎನ್ನುತ್ತಾರೆ. ಅರೆನೆರಳಿನ ಭಾಗದಲ್ಲಿದ್ದಾಗ ಆಗುವ ಗ್ರಹಣಕ್ಕೆ ಜನರು ಅಷ್ಟೇನೂ ಪ್ರಾಮುಖ್ಯ ನೀಡುವುದಿಲ್ಲ. ಅದನ್ನು ಆಸಕ್ತಿಯಿಂದ ವೀಕ್ಷಿಸುವುದೂ ಇಲ್ಲ. ಭೂಮಿಯನ್ನು ಚಂದ್ರ ಪಶ್ಚಿಮದಿಂದ ಪೂರ್ವಕ್ಕೆ ಸುತ್ತುತ್ತಿರುವುದರಿಂದ ಗ್ರಹಣವಾಗುವಾಗ ಚಂದ್ರನ ಪೂರ್ವಭಾಗದಲ್ಲಿ ಸ್ಪರ್ಶವೂ ಪಶ್ಚಿಮ ಭಾಗದಲ್ಲಿ ಮೋಕ್ಷವೂ ಆಗುತ್ತವೆ. ಭೂಮಿಯಿಂದಾದ ನೆರಳಿನ ಸೀಳ್ನೋಟವನ್ನು ಮತ್ತು ಗ್ರಹಣವಾಗುವಾಗ ಚಂದ್ರ ವಿವಿಧ ಭಾಗಗಳಲ್ಲಿರುವುದನ್ನು ಚಿತ್ರ (5)ರಲ್ಲಿ ತೋರಿಸಿದೆ. ಚಂದ್ರ ಕ್ಷಿತಿಜಕ್ಕಿಂತ ಮೇಲಿದ್ದಾಗ ಗ್ರಹಣವಾದರೆ ಅದನ್ನು ನೋಡಲು ಸಾಧ್ಯವಾಗುವ ಭೂಮಿಯ ಮೇಲಿನ ಭಾಗ ಹೆಚ್ಚು. ಇದು ಭೂಮಿಯ ಮೇಲ್ಮೈಯ ಸುಮಾರು ಅರ್ಧಕ್ಕಿಂತ ಹೆಚ್ಚು ಭಾಗಗಳಿಂದ ಕಾಣಿಸುತ್ತದೆ. ಅದೂ ಅಲ್ಲದೆ ಎಲ್ಲ ಕಡೆಗಳಿಂದಲೂ ಒಂದೇ ತರಹ ಗ್ರಹಣ ಕಾಣಿಸುತ್ತದೆ.




**ಚಿತ್ರ 9**

ಪಾತರೇಖೆಯ ವಿನ್ಯಾಸವನ್ನು ಅನುಸರಿಸಿ ಗ್ರಹಣವನ್ನು ವಿಭಾಗಿಸಬಹುದು.

1) ಅರೆನೆರಳಿನ ಗ್ರಹಣ : ಭೂಮಿಯ ದಟ್ಟ ನೆರಳಿನ ಭಾಗವನ್ನು ಮುಟ್ಟದೆಯೇ ಚಂದ್ರ ಹೊರಗೆ ಬರುವುದು.

2) ಪಾರ್ಶ್ವಗ್ರಹಣ : ಅರೆ ನೆರಳಿನ ಮೂಲಕ ಹೋಗಿ ದಟ್ಟ ನೆರಳಿನ ಕೆಲ ಭಾಗವನ್ನು ಹಾದು ಹೊರಕ್ಕೆ ಬರುವುದು.

3) ಪೂರ್ಣಗ್ರಹಣ : ದಟ್ಟ ನೆರಳಿನ ಮಧ್ಯೆ ಅಥವಾ ಅಂಚಿನಲ್ಲಿ ಪೂರ್ತಿ ಮುಳುಗಿ ಹೊರಗೆ ಬರುವುದು.

ದಟ್ಟ ನೆರಳಿನ ಮಧ್ಯೆ ನೇರ ಹಾದುಹೋಗುವಾಗ ಚಂದ್ರಗ್ರಹಣ ಕಾಣಿಸುವ ಗರಿಷ್ಠ ಕಾಲಾವಧಿ ಸುಮಾರು 2 ಗಂಟೆಗಳು. ದಟ್ಟ ನೆರಳಿನ ಸುತ್ತ ಆವರಿಸಿರುವ ಅರೆ ನೆರಳಿನ ಭಾಗವನ್ನೂ ಗಣನೆಗೆ ತೆಗೆದುಕೊಂಡರೆ ಗ್ರಹಣದ ಗರಿಷ್ಠ ಕಾಲಾವಧಿ ಸುಮಾರು 4 ಗಂಟೆಗಳು. ಆದ್ದರಿಂದ ಚಂದ್ರಗ್ರಹಣವನ್ನು ಬಹಳ ಹೊತ್ತು ನೋಡುವುದಕ್ಕಾಗುತ್ತದೆ. ಯಾವುದಾದರೂ ಒಂದು ವರ್ಷದಲ್ಲಾಗುವ ಒಟ್ಟು ಚಂದ್ರಗ್ರಹಣಗಳ ಸಂಖ್ಯೆ ಕಡಿಮೆಯಾಗಿದ್ದರೂ ಅದರಲ್ಲಿ ಪೂರ್ಣ ಚಂದ್ರಗ್ರಹಣಗಳೇ ಹೆಚ್ಚಾಗಿ ಆಗುತ್ತವೆ. ಪೂರ್ಣ ಚಂದ್ರಗ್ರಹಣವಾದ ಕೆಲವು ಸಂದರ್ಭಗಳಲ್ಲಿ ಗ್ರಹಣವಾದ ಚಂದ್ರನ ಮೇಲ್ಮೈ ಹೊಳಪಿನಿಂದ ಇರಬೇಕಾಗಿದ್ದುದು ಭೂಮಿಯ ಮೇಲಾದ ವಿಪ್ಲವದಿಂದ ಮಂಕಾಗಿ ಕಂಡುದೂ ಉಂಟು.



**ಚಿತ್ರ 10. ಚಂದ್ರನ ನೆರಳು ಭೂಮಿಯವರೆಗೆ ಮಾತ್ರ ಬಂದಾಗ ಕಾಣುವ ಸೂರ್ಯಗ್ರಹಣ. ಸಂಪೂರ್ಣ ಗ್ರಹಣ ಕಾಣುವ ಪ್ರದೇಶದ ಅಕ್ಕಪಕ್ಕದಲ್ಲಿ ಪಾರ್ಶ್ವಗ್ರಹಣ ಕಾಣಿಸುತ್ತದೆ**

1884ರ ಅಕ್ಟೋಬರ್ 4ರಲ್ಲಿ ಚಂದ್ರಗ್ರಹಣವಾದಾಗ ಜ್ವಾಲಾಮುಖಿ ಒಗೆದ ದೂಳು ಮತ್ತು ಬೂದಿಯಿಂದ ಭೂಮಿಯ ವಾತಾವರಣ ಆವರಿಸಲ್ಪಟ್ಟಿದ್ದರಿಂದ ಚಂದ್ರನ ಮೇಲೆ ಗ್ರಹಣಕಾಲದಲ್ಲಿ ಬಹಳ ಕತ್ತಲು ಮೂಡಿತ್ತು. ಇದೇ ರೀತಿಯಲ್ಲಿ 1902, 1913 ಮತ್ತು 1950 ರಲ್ಲೂ ಆಯಿತು.

**ಸೂರ್ಯಗ್ರಹಣ :** ಚಂದ್ರ ತನ್ನ ಕಕ್ಷೆಯಲ್ಲಿ ಭೂಮಿಯ ಸುತ್ತ ಪರಿಭ್ರಮಿಸುತ್ತಿರುವಾಗ ಭೂಮಿಗೂ ಸೂರ್ಯನಿಗೂ ನಡುವೆ ಬಂದರೆ ಆಗ ಸೂರ್ಯಗ್ರಹಣವಾಗುತ್ತದೆ. ಇದು ಸಂಭವಿಸಬೇಕಾದರೆ ಸೂರ್ಯ, ಚಂದ್ರ, ಭೂಮಿ ಇವು ಮೂರು ಸುಮಾರಾಗಿ ಒಂದೇ ಸರಳರೇಖೆಯಲ್ಲಿರಬೇಕು. ಚಂದ್ರ ತನ್ನ ಕಕ್ಷೆಯ ಪಾತಬಿಂದುವಿನಲ್ಲೋ ಇಲ್ಲವೆ ಅದರ ಹತ್ತಿರವೋ ಇದ್ದು ಸೂರ್ಯನೊಂದಿಗೆ ಯುತಿಯಲ್ಲಿದ್ದರೆ (ಕಂಜಂಕ್ಷನ್) ಅಂದರೆ ಅಮಾವಾಸ್ಯೆಯಾಗಿದ್ದರೆ ಆಗ ಸೂರ್ಯಗ್ರಹಣವಾಗುತ್ತದೆ. ಸೂರ್ಯ ಮತ್ತು ಭೂಮಿಗಳಿಂದಾದ ಶಂಕುವಿನ (ಚಿತ್ರ 9) ಅಂಚಾದ bcಯನ್ನೂ ಪಾತ ಬಿಂದುವಿನ ಹತ್ತಿರವಿರುವ ಅಮಾವಾಸ್ಯೆಯ ಚಂದ್ರ ಸ್ಪರ್ಶಿಸಿ ತನ್ನ ಕಕ್ಷೆಯಲ್ಲಿ ಮುಂದಕ್ಕೆ ಸರಿಯುವುದಕ್ಕೆ ಆರಂಭಿಸಿದರೆ ಸೂರ್ಯನಿಂದ ಬರುವ ಬೆಳಕಿಗೆ ಅಡ್ಡಿ ಬಂದು ಚಂದ್ರನ ನೆರಳು ಭೂಮಿಯ ಮೇಲೆ ಬಿದ್ದು ಸೂರ್ಯಗ್ರಹಣವಾಗುತ್ತದೆ. b ಯಿಂದ aಯ ವರೆಗಿರುವ ಕಕ್ಷಾಭಾಗದಲ್ಲಿ ಚಂದ್ರ ಪಶ್ಚಿಮದಿಂದ ಪೂರ್ವಕ್ಕೆ ಚಲಿಸುವಾಗ ಸೂರ್ಯನ ಕಡೆಗಿರುವ ಭೂಮಿಯ ಮೇಲೆ ಕೆಲವು ಭಾಗಗಳಲ್ಲಿ ಒಂದಲ್ಲ ಒಂದು ವಿಧವಾದ ಸೂರ್ಯಗ್ರಹಣ ಕಾಣಿಸುತ್ತದೆ.




**ಚಿತ್ರ 11. ಪಾರ್ಶ್ವ ಮತ್ತು ಸಂಪೂರ್ಣ ಸೂರ್ಯಗ್ರಹಣಗಳ ತತ್ತ್ವ. Aಯಲ್ಲಿ ಸಂಪೂರ್ಣ ಸೂರ್ಯಗ್ರಹಣವೂ Bಯಲ್ಲಿ ಪಾರ್ಶ್ವ ಸೂರ್ಯಗ್ರಹಣವೂ ತೋರುತ್ತವೆ. Cಯಲ್ಲಿ ಯಾವ ಗ್ರಹಣವೂ ಕಾಣುವುದಿಲ್ಲ**

ಸೂರ್ಯಗ್ರಹಣವಾಗುವಾಗ ಸೂರ್ಯನನ್ನು ಚಂದ್ರ ಪಶ್ಚಿಮ ಭಾಗದಿಂದ ಮುಚ್ಚಿ ಪೂರ್ವ ಭಾಗದಿಂದ ದೂರ ಸರಿಯುತ್ತದೆ. ಈಗ ಭೂಮಿ–ಸೂರ್ಯ ದೂರ (150,000,000 ಕಿಮೀ) ಭೂಮಿ–ಚಂದ್ರ ದೂರದ (384,000 ಕಿಮೀ) ಸುಮಾರು 390 ಪಟ್ಟು ದೊಡ್ಡದು. ಹೀಗಾಗಿ, ಗಾತ್ರದಲ್ಲಿ ಚಂದ್ರನಿಗಿಂತ ಅದೆಷ್ಟೋ ಪಟ್ಟು ದೊಡ್ಡದಾದ ಸೂರ್ಯ (ಸೂರ್ಯ ಚಂದ್ರರ ವ್ಯಾಸಗಳ ನಿಷ್ಪತ್ತಿ 400:1) ಸರಿಸುಮಾರಾಗಿ ಚಂದ್ರಬಿಂಬದಷ್ಟೇ ಗಾತ್ರದ ಬಿಂಬವಾಗಿ ತೋರುವುದು. ಸೂರ್ಯನ ಬೆಳಕನ್ನು ತಡೆಯುವ ಚಂದ್ರನ ಛಾಯಾ ಶಂಕು ಚಿತ್ರ(8)ರಲ್ಲಿ ತೋರಿಸುವಂತೆ ಬಲು ಕಿರಿದಾದದ್ದು. ಸೂರ್ಯ ಮತ್ತು ಚಂದ್ರರನ್ನು ಸೂಚಿಸುವ AB ಮತ್ತು PQ ಗಳಿಗೆ ಎಳೆದಿರುವ ಸ್ಪರ್ಶರೇಖೆಗಳು ದಟ್ಟ ನೆರಳಿನ ಶಂಕು ಮತ್ತು ಅರೆನೆರಳಿನ ಭಾಗಗಳನ್ನು ರಚಿಸುತ್ತವೆ (ಚಿತ್ರ 10). ಭೂಮಿಯ ಮೇಲಿರುವ ದಟ್ಟ ನೆರಳಿನ ಶೃಂಗವಾದ T ಬಿಂದುವಿನಲ್ಲಿ ಚಂದ್ರನ ದೃಗ್ವ್ಯಾಸ (ಸುಮಾರು $0.5^0$) ಸೂರ್ಯನ ದೃಗ್ವ್ಯಾಸದಷ್ಟೇ ಇರುವ ಹಾಗೆ ಕಾಣಿಸುತ್ತದೆ. ಆದ್ದರಿಂದ ಸೂರ್ಯನನ್ನು ಚಂದ್ರ ಪೂರ್ತಿ ಮುಚ್ಚಿ ಆ ಜಾಗಕ್ಕೆ ಸೂರ್ಯ ಕಾಣಿಸುವುದೇ ಇಲ್ಲ. ಅಲ್ಲಿ ಸೂರ್ಯನ ಪೂರ್ಣ ಗ್ರಹಣವಾಗಿರುತ್ತದೆ. ಆದರೆ ಅದೇ ಸಂದರ್ಭದಲ್ಲಿ ಚಂದ್ರನ ಅರೆನೆರಳಿನಲ್ಲಿರುವ ಭೂಮಿಯ ಮೇಲಿರುವ R




**ಚಿತ್ರ 12. ಸೂರ್ಯನ ಕಂಕಣ ಗ್ರಹಣದ ತತ್ತ್ವ**

ಎಂಬ ಸ್ಥಳದಲ್ಲಿ ಸೂರ್ಯನನ್ನು ಚಂದ್ರ ಪಾರ್ಶ್ವವಾಗಿ ಮುಚ್ಚಿರುತ್ತದೆ. ಆದ್ದರಿಂದ ಅಂಥ ಸ್ಥಳಗಳಲ್ಲಿ ಸೂರ್ಯನ ಪಾರ್ಶ್ವಗ್ರಹಣವಾಗುವುದು. ಭೂಮಿಯ ಮೇಲಿರುವ L ಮತ್ತು M ಅಥವಾ ಅವುಗಳಾಚೆ ಇರುವ ಸ್ಥಳಗಳಿಂದ ನೋಡಿದರೆ ಸೂರ್ಯನ ಯಾವ ಭಾಗವೂ ಚಂದ್ರನಿಂದ ಅಡ್ಡಿಯಾಗುವುದಿಲ್ಲ. ಅಲ್ಲಿ ಗ್ರಹಣವೇ ಇಲ್ಲ. ಈ ಚಿತ್ರದಿಂದ ಒಂದು ವಿಷಯ ವ್ಯಕ್ತವಾಗುತ್ತದೆ. ಯಾವುದಾದರೂ ಒಂದು ಕಾಲದಲ್ಲಿ ಭೂಮಿಯ ವಿವಿಧ ಭಾಗಗಳಿಂದ ಚಂದ್ರ ಒಂದೇ ದೂರದಲ್ಲಿರುವುದಿಲ್ಲ. ಇದರಿಂದ ಚಂದ್ರನ ದೃಗ್ವ್ಯಾಸ ಒಂದೊಂದು ಕಡೆ ಒಂದೊಂದು ರೀತಿ ಇರುವುದು. ಪರಿಣಾಮವಾಗಿ ಗ್ರಹಣವಾಗುವ ರೀತಿಯಲ್ಲೂ ವ್ಯತ್ಯಾಸವಾಗುತ್ತದೆ. ಗ್ರಹಣವಾಗುವ ದಿಕ್ಕಿಗಿರುವ ಭೂಮಿಯ ಎಲ್ಲ ಸ್ಥಳಗಳಲ್ಲೂ ಗ್ರಹಣ ಕಾಣಿಸುವುದಿಲ್ಲ ಮತ್ತು ಕಂಡರೆ ಒಂದೇ ರೀತಿಯಾಗೂ ಕಾಣಿಸುವುದಿಲ್ಲ.

ಸೂರ್ಯಗ್ರಹಣವಾಗುವಾಗ ಚಂದ್ರ ತನ್ನ ಕಕ್ಷೆಯಲ್ಲಿ ಭೂಮಿಗೆ ಅತ್ಯಂತ ದೂರದಲ್ಲಿದ್ದು ಭೂಮಿಗೆ ಸೂರ್ಯ ಅತ್ಯಂತ ಹತ್ತಿರದಲ್ಲಿದ್ದರೆ, ಆಗ ಚಂದ್ರನ ದಟ್ಟ ನೆರಳಿನ ಶಂಕುವಿನ ಶೃಂಗ ಭೂಮಿಯಿಂದ ಸುಮಾರು 32,180 ಕಿಮೀ ಗಳ ದೂರದಲ್ಲಿದ್ದು ಭೂಮಿಯನ್ನು ಮುಟ್ಟುವುದೇ ಇಲ್ಲ. ಆ ಸಂದರ್ಭದಲ್ಲಿ ಚಂದ್ರನ ದೃಗ್ವ್ಯಾಸ ಸೂರ್ಯನಿಗಿಂತ ಸುಮಾರು 2' 40" ಗಳಷ್ಟು ಕಡಿಮೆಯಾಗಿರುತ್ತದೆ. ಚಿತ್ರ (12)ರಲ್ಲಿ ದಟ್ಟ ನೆರಳಿನ ಶಂಕುವಿನ ಶೃಂಗ ಭೂಮಿಯಿಂದ ಹೊರಕ್ಕೆ ಇರುವ ದೃಶ್ಯವನ್ನು ಕಾಣಿಸಿದೆ. ಆಗ ಸೂರ್ಯ–ಚಂದ್ರ ರೇಖೆಯ ಮೇಲಿರುವ ಭೂಮಿಯ ಭಾಗದಿಂದ ನೋಡುವವರಿಗೆ ಸೂರ್ಯನ ಮಧ್ಯಗ್ರಹಣ ಕಾಲದಲ್ಲಿ ಸೂರ್ಯನ ಅಂಚಿನಲ್ಲಿರುವ ಭಾಗವನ್ನು ಚಂದ್ರನಿಗೆ ಮುಚ್ಚುವುದಕ್ಕಾಗದೆ ಮಧ್ಯ ಭಾಗವನ್ನೆಲ್ಲ ಮರೆಮಾಡಿ ಅಂಚಿನಲ್ಲಿ ಕಂಕಣ ಅಥವಾ ಉಂಗುರಾಕಾರದ ಬೆಳಕು ಪ್ರಕಾಶಿಸುತ್ತಿರುವುದು ಕಾಣುತ್ತದೆ. ಈ ವಿದ್ಯಮಾನಕ್ಕೆ ಸೂರ್ಯನ ಕಂಕಣ ಗ್ರಹಣ ಎಂದು ಹೆಸರು. ಕಂಕಣದ ಗಾತ್ರ ಭೂಮಿಯಿಂದ ಚಂದ್ರನಿಗಿರುವ ದೂರವನ್ನು ಅವಲಂಬಿಸಿ ಉಂಟು. ಭೂಮಿಯ ಮೇಲಿನ ಈ ಭಾಗವನ್ನು ಬಿಟ್ಟು ಉಳಿದ ಅರೆ ನೆರಳಿನ ಭಾಗದಿಂದ ನೋಡುವವರಿಗೆ ಸೂರ್ಯನ ಪಾರ್ಶ್ವಗ್ರಹಣ ಕಾಣಿಸುತ್ತದೆ. ಸೂರ್ಯಗ್ರಹಣವಾಗುವಾಗ ಚಂದ್ರ ತನ್ನ ಕಕ್ಷೆಯಲ್ಲಿ ಭೂಮಿಗೆ ಅತ್ಯಂತ ಹತ್ತಿರದಲ್ಲಿದ್ದು ಅದೇ ಸಂದರ್ಭದಲ್ಲಿ ಸೂರ್ಯ ಭೂಮಿಗೆ ಅತ್ಯಂತ ದೂರದಲ್ಲಿದ್ದರೆ ಚಂದ್ರನ ದೃಗ್ವ್ಯಾಸ ಸೂರ್ಯನಿಗಿಂತ ಸುಮಾರು 2' 38"ಗಳಷ್ಟು ಹೆಚ್ಚಿರುತ್ತದೆ. ಇದು ಸೂರ್ಯನ ಪೂರ್ಣಗ್ರಹಣಕ್ಕೆ ಬಹಳ ಅನುಕೂಲ ಸಂದರ್ಭ. ಆಗ ಚಂದ್ರನ ದಟ್ಟ ನೆರಳಿನ ಶಂಕು ಭೂಮಿಯನ್ನು ವರ್ತುಳಾಕಾರವಾಗಿ



**ಚಿತ್ರ 13. ಸೂರ್ಯಗ್ರಹಣದ ಕ್ರಮಾಗತ ಪ್ರಾವಸ್ಥೆಗಳು.**
**ಎಡ : ಸಂಪೂರ್ಣಗ್ರಹಣ; ನಡು : ಕಂಕಣಗ್ರಹಣ; ಬಲ : ಪಾರ್ಶ್ವಗ್ರಹಣ**

ಭೇದಿಸುತ್ತದೆ. ಇದರೊಳಗಿರುವ ಭೂಮಿಯ ಮೇಲಿರುವ ಭಾಗಗಳಿಂದ ಸೂರ್ಯನ ಪೂರ್ಣ ಗ್ರಹಣವನ್ನು ನೋಡಬಹುದು (ಚಿತ್ರ 8). ಈ ಸಂದರ್ಭದಲ್ಲಿ ಸೂರ್ಯನಿಗಿಂತ ಚಂದ್ರ ದೊಡ್ಡದಾಗಿ ಕಂಡು ಅದು ಸೂರ್ಯನ ಬೆಳಕಿಗೆ ಪೂರ್ತಿ ಅಡ್ಡಿಮಾಡುತ್ತದೆ. ಈ ಜಾಗವನ್ನು ಬಿಟ್ಟು ಭೂಮಿಯ ಉಳಿದ ಭಾಗಗಳಲ್ಲಿ ಪಾರ್ಶ್ವಗ್ರಹಣ ಕಾಣಿಸುತ್ತದೆ. ಹಿಂದೆ ವಿವರಿಸಿರುವ ವಿಪರೀತ ಪಕ್ಷಗಳನ್ನು ಬಿಟ್ಟರೆ ಸಾಮಾನ್ಯವಾಗಿ ಸೂರ್ಯನ ಪಾರ್ಶ್ವಗ್ರಹಣವನ್ನು ಭೂಮಿಯ ಅನೇಕ ಭಾಗಗಳಿಂದ ನೋಡಬಹುದು. ಸೂರ್ಯನ ಪೂರ್ಣ ಗ್ರಹಣ ಅಥವಾ ಕಂಕಣ ಗ್ರಹಣವಾಗುವುದಕ್ಕಿಂತ ಹೆಚ್ಚಾಗಿ ಭೂಮಿಯ ಅನೇಕ ಭಾಗಗಳಲ್ಲಿ ಕಾಣಿಸುವಂತೆ ಪಾರ್ಶ್ವಗ್ರಹಣಗಳು ಆಗುತ್ತವೆ. ಪ್ರತಿ ಕ್ಷಣದಲ್ಲಿಯೂ ವ್ಯತ್ಯಾಸವಾಗುತ್ತಿರುವ ಚಂದ್ರ ಮತ್ತು ಭೂಮಿ ಸ್ಥಾನಗಳಿಂದಾಗಿ ಸೂರ್ಯನಿಗೆ ಸಂಬಂಧಿಸಿದಂತೆ ಎಲ್ಲವೂ ಬದಲಾವಣೆಯಾಗುತ್ತಿರುತ್ತವೆ. ಹೀಗಾಗಿ ಪೂರ್ಣ ಸೂರ್ಯಗ್ರಹಣವನ್ನು ಎಲ್ಲ ಸ್ಥಳಗಳಿಂದಲೂ ನೋಡಲು ಸಾಧ್ಯವಾಗುವುದಿಲ್ಲ; ಅಲ್ಲದೆ ಹೆಚ್ಚು ಹೊತ್ತು ನೋಡುವುದಕ್ಕೂ ಆಗುವುದಿಲ್ಲ.

ಭೂಮಿಯನ್ನು ಚಂದ್ರ ಪಶ್ಚಿಮದಿಂದ ಪೂರ್ವಕ್ಕೆ ಪರಿಭ್ರಮಿಸುತ್ತಿರುವುದರಿಂದ ಸೂರ್ಯಗ್ರಹಣವಾಗುವಾಗ ಸೂರ್ಯನನ್ನು ಚಂದ್ರ ಪಶ್ಚಿಮ ಭಾಗದಿಂದ ಮುಚ್ಚಲು ತೊಡಗುತ್ತದೆ. ಗ್ರಹಣ ಮುಂದುವರಿದು ಸೂರ್ಯನ ಮುಕ್ಕಾಲು ಭಾಗಕ್ಕಿಂತ ಹೆಚ್ಚು ಮುಚ್ಚಿರುವಾಗ ಸೂರ್ಯನ ಅಂಚಿನಿಂದ ಕುಡುಗೋಲಿನಾಕಾರದಲ್ಲಿ ಪ್ರಕಾಶಮಾನವಾದ ಬೆಳಕು ಕಾಣಿಸುತ್ತದೆ. ಈ ತರಹ ಬೇರೆ ಬೇರೆ ಆಕೃತಿಗಳನ್ನು, ಒಂದು ಮರದ ಎಲೆಗಳ

ನಡುವೆ ತೂರಿಬರುವ ಸೂರ್ಯರಶ್ಮಿ ನೆಲದ ಮೇಲೆ ಕೆಡೆಯುವ ಬಿಂಬದಿಂದ, ನೋಡಬಹುದು. ಚಂದ್ರನ ಮೇಲ್ಮೈ ಬಹಳ ಹಳ್ಳಕೊಳ್ಳಗಳಿಂದ ಕೂಡಿರುವುರಿಂದ, ಅದರ ಬಿಂಬದ ಅಂಚು ನುಣುಪಾಗಿರದೆ ಏರುಪೇರುಗಳಿಂದ ಕೂಡಿರುತ್ತದೆ. ಪೂರ್ಣ ಸೂರ್ಯಗ್ರಹಣವಾಗುವುದಕ್ಕೆ ಮುಂಚೆ ಏರುಪೇರು ಅಂಚಿನಿಂದ ಸೂರ್ಯನ ಬೆಳಕು ತೂರಿಬಂದು ಮಣಿಗಳನ್ನು ಜೋಡಿಸಿಟ್ಟ ಹಾಗೆ ಕಾಣಿಸುತ್ತದೆ. ಇದನ್ನು ಬೈಲಿಯ ಮಣಿಗಳು ಎನ್ನುತ್ತಾರೆ (ಚಿತ್ರ 15). ತತ್‌ಕ್ಷಣವೇ ಮಣಿಗಳು ಮಾಯವಾಗಿ ಪೂರ್ಣಗ್ರಹಣವಾಗುತ್ತದೆ. ಅತ್ಯಂತ ಹೆಚ್ಚೆಂದರೆ ಐದಾರು ನಿಮಿಷಗಳ ಕಾಲ ಪೂರ್ಣ ಸೂರ್ಯ ಗ್ರಹಣವಿದ್ದು ಪುನಃ ಚಂದ್ರ ಪೂರ್ವಭಾಗಕ್ಕೆ ತನ್ನ ಪಥದಲ್ಲಿ ಸರಿಯುತ್ತ ಗ್ರಹಣ ಮೋಕ್ಷವಾಗುತ್ತದೆ. ಹಾಗೆ ಆಗುವಾಗ ಮೇಲೆ ವಿವರಿಸಿರುವ ಎಲ್ಲ ಸನ್ನಿವೇಶಗಳೂ ಕೊನೆಯಿಂದ ಮೊದಲಿಗೆ ಪುನರಾವರ್ತಿಸುತ್ತವೆ. ಪಾರ್ಶ್ವಗ್ರಹಣದಿಂದ ಆರಂಭವಾಗಿ ಪೂರ್ಣಗ್ರಹಣವಾಗಿ ಪುನಃ ಪಾರ್ಶ್ವಗ್ರಹಣದಿಂದ ಕೊನೆಗೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಸೂರ್ಯನ ಬಿಂಬವನ್ನು ಚಂದ್ರ ಪೂರ್ತಿಯಾಗಿ ಮುಚ್ಚದೆ ಅಂಚಿನಲ್ಲಿ ಬೈಲಿಯ ಮಣಿಗಳು ಕಾಣಿಸಿಕೊಳ್ಳಬಹುದು. ಯಾವ ತರಹ ಸೂರ್ಯಗ್ರಹಣವೇ ಆಗಲಿ ಬರಿಗಣ್ಣಿನಿಂದ ನೋಡಿದರೆ ಕಣ್ಣುಗಳಿಗೆ ಬಹಳ ಹಾನಿಯಾಗುತ್ತದೆ. ದಟ್ಟವಾಗಿ ಮಸಿ ಬಳಿದ ಗಾಜಿನ ಮೂಲಕ ಗ್ರಹಣದ ಪ್ರಗತಿಯನ್ನು ನೋಡಬೇಕು.

ಚಂದ್ರ ತನ್ನ ಕಕ್ಷೆಯಲ್ಲಿ ಚಲಿಸುವಾಗ ಅದರ ನೆರಳಿನ ಶಂಕು ಅಥವಾ ಕಂಕಣ ಶಂಕುವಿನ ಭಾಗ ಭೂಮಿಯ ಮೇಲ್ಮೈಯ ಮೇಲೆ ಹಾಯುವ ಕ್ಷೇತ್ರಕ್ಕೆ ಗ್ರಹಣದ ಪಥ



ಸೂರ್ಯಗ್ರಹಣದ ಕ್ರಮಾಗತ ಚಿತ್ರದ ಒಂದು ದೃಶ್ಯ

ಎಂದು ಹೆಸರು. ಇದರ ಅಕ್ಕಪಕ್ಕದಲ್ಲಿರುವ ಭೂಭಾಗದಿಂದ ಗ್ರಹಣವನ್ನು ನೋಡಿದರೆ ಸೂರ್ಯನ ಪಾರ್ಶ್ವಗ್ರಹಣ ಕಾಣಿಸುತ್ತದೆ. ಈ ಪಥದ ಪ್ರಾರಂಭದಲ್ಲಿ ಕಂಕಣಗ್ರಹಣವಾಗಿದ್ದು, ಮಧ್ಯೆ ಪೂರ್ಣ ಗ್ರಹಣದ್ದಾಗಿ ಮತ್ತೆ ಕಂಕಣಗ್ರಹಣದ್ದಾಗಿ ಕೊನೆಗೊಳ್ಳಬಹುದು. ಸೂರ್ಯನ ಪೂರ್ಣ ಗ್ರಹಣವಾದಾಗ ಭೂಮಿಯ ಮೇಲೆ ಹಗಲಲ್ಲಿ ಕತ್ತಲು ಕವಿಯುತ್ತದೆ. ಈ ಘಟನೆ ಬಹಳ ಅಪರೂಪವಾಗಿ ಆಗುವುದರಿಂದ ಮೂಢ ನಂಬಿಕೆ ಇರುವ ಜನಗಳಿಗೆ ಸ್ವಲ್ಪ ಗಾಬರಿ ಹುಟ್ಟಿಸುವುದುಂಟು. ಸೂರ್ಯನ ಬೆಳಕಿಲ್ಲವಾಗುವುದರಿಂದ ಸಂಜೆಗತ್ತಲು ಆದ ಹಾಗೆ ಪಕ್ಷಿಗಳೂ ಪ್ರಾಣಿಗಳೂ ತಮ್ಮ ವಾಸಸ್ಥಾನಗಳಿಗೆ ಧಾವಿಸುತ್ತವೆ. ಹಲವು ದೊಡ್ಡ ಪ್ರಾಣಿಗಳು ಗಾಬರಿಗೊಳ್ಳುತ್ತವೆ ಮತ್ತು ಸೂರ್ಯ ಸಾಮಾನ್ಯವಾಗಿ ಮುಳುಗಿದಾಗ ವರ್ತಿಸುವಂತೆ ಗಿಡಗಳು ವರ್ತಿಸುತ್ತವೆ. ಗೂಬೆ ಮುಂತಾದ ನಿಶಾಚರ ಪಕ್ಷಿಗಳು ಸಂಚಾರ ಹೊರಡುತ್ತವೆ. ಭೂಮಿಯ ಮೇಲೆ ಉಷ್ಣತೆಯಲ್ಲಿ ವ್ಯತ್ಯಾಸವಾಗಿ ಮಂಜು ಕೂಡ



**ಚಿತ್ರ 15. ಬೈಲಿಯ ಮಣಿಗಳನ್ನು ಪ್ರದರ್ಶಿಸುವ ಎರಡು ಸೂರ್ಯಗ್ರಹಣಗಳು. ಎಡಗಡೆಯದು 27–4–1912ರಲ್ಲಿಯೂ ಬಲಗಡೆಯದು 9–5–1948ರಲ್ಲಿಯೂ ಸಂಭವಿಸಿದುವು (ಕಾಲಾಂತರ 36 ವರ್ಷ 22 ದಿವಸ ಅಥವಾ 2 ಸಾರೋಸುಗಳು)**

ಕವಿಯಬಹುದು. ಆಕಾಶದಲ್ಲಿರುವ ಪ್ರಕಾಶಮಾನವಾದ ನಕ್ಷತ್ರಗಳೂ ಗ್ರಹಗಳೂ ಕಾಣಿಸಿಕೊಳ್ಳುತ್ತವೆ. ಇಷ್ಟೆಲ್ಲ ನಡೆಯುವುದು ಕೇವಲ ಐದಾರು ನಿಮಿಷಗಳ ಕಾಲದಲ್ಲಿ. ಇದು ರೇಡಿಯೋ ಅಲೆಗಳ ಪ್ರಸಾರದ ಮೇಲೆ ಪರಿಣಾಮವನ್ನು ಬೀರುತ್ತದೆ.



**ಚಿತ್ರ 16. 10–7–1972ರಲ್ಲಿ ಸಂಭವಿಸಿದ ಸಂಪೂರ್ಣ ಸೂರ್ಯಗ್ರಹಣ ವೇಳೆಯಲ್ಲಿ ನೆಲದಿಂದ 39,100 ಅಡಿ ಎತ್ತರದಲ್ಲಿ ಹಾರುತ್ತಿದ್ದ ಆಕಾಶನೌಕೆಯಿಂದ ತೆಗೆದ ಕರೋನದ ಚಿತ್ರ**

ಪೂರ್ಣ ಸೂರ್ಯಗ್ರಹಣವಾದಾಗ ಸೂರ್ಯನ ಸ್ಪರ್ಶ ಮತ್ತು ಮೋಕ್ಷ ಕಾಲಗಳನ್ನು ಸರಿಯಾಗಿ ಗುರುತು ಹಾಕಿಕೊಂಡು ಚಂದ್ರನ ಚಲನೆಯ ವಿಚಾರವಾಗಿ ಖಚಿತಪಡಿಸಿ ಕೊಳ್ಳಲಾಗಿದೆ. ಕ್ರಮವಿಲ್ಲದ ಭೂಮಿಯ ಪರಿಭ್ರಮಣೆಯ ವಿಚಾರವಾಗಿಯೂ ತಿಳಿಯಬಹುದು. ಸೂರ್ಯನ ಪ್ರಭಾಗೋಲವನ್ನು ಚಂದ್ರನ ಬಿಲ್ಲೆ ಮುಚ್ಚುವುದರಿಂದ ಸೂರ್ಯನ ಹತ್ತಿರವಿರುವ ಹೆಚ್ಚು ಪ್ರಕಾಶವಿಲ್ಲದ ಆಕಾಶಕಾಯಗಳನ್ನು ನೋಡಬಹುದು. ಅಲ್ಲದೆ ಹತ್ತಿರವಿರುವ ಹೆಚ್ಚು ಗ್ರಹಗಳ ಉಪಗ್ರಹಗಳ ಶೋಧನೆ ಮೊದಲು ಇದರಿಂದ ನೆರವಾಗುತ್ತದೆ. ಸೂರ್ಯನ ವಾತಾವರಣದ ರಾಸಾಯನಿಕ ಸಂಯೋಜನೆ, ಉಷ್ಣತೆ ಮತ್ತು ಒತ್ತಡ ಇವುಗಳ ವಿಚಾರವಾಗಿ ತಿಳಿಯಲು ಸಾಧ್ಯ. ಸೂರ್ಯನ ಹೊರವಲಯದಲ್ಲಿರುವ ಪ್ರಭಾವಲಯವನ್ನು (ಕರೋನ) ನೋಡಬಹುದು. ಬೇರೆ ಸಂದರ್ಭಗಳಲ್ಲಿ ಸಾಧಾರಣವಾಗಿ ಇದನ್ನು ನೋಡುವುದು ಕಷ್ಟ. ಈ ವಲಯಕ್ಕೆ ಮುತ್ತಿನ ಬೆಳಕಿದೆ. ಇದು ಸೂರ್ಯನ ವ್ಯಾಸದ ಎರಡರಿಂದ ನಾಲ್ಕರಷ್ಟು ಕ್ಷೇತ್ರಕ್ಕೆ ಹರಡಿಕೊಂಡು ಪ್ರಕಾಶಿಸುತ್ತದೆ. ಇದರ ಆಕಾರವೂ ವ್ಯತ್ಯಾಸವಾಗುತ್ತದೆ. ಈ ಹಿಂದೆ ಹೊರವಲಯದ ಈ ಭಾಗವನ್ನು ಸೂರ್ಯನ ಪೂರ್ಣ ಗ್ರಹಣವಾದಾಗ ಮಾತ್ರ ನೋಡಲು ಸಾಧ್ಯವಾಗುತ್ತಿತ್ತು. ಆದರೆ ಈಗ ಕರೋನಲೇಖ ಎಂಬ ಉಪಕರಣದ ಸಹಾಯದಿಂದ ಗ್ರಹಣವಿಲ್ಲದಾಗಲೂ ಹೊರವಲಯದ ವೀಕ್ಷಣೆ ಮತ್ತು ವಿಶ್ಲೇಷಣೆಗೆ ಅವಕಾಶ ಒದಗಿದೆ. ಪೂರ್ಣ ಸೂರ್ಯಗ್ರಹಣ ಕಾಲದಲ್ಲಿ ಸೂರ್ಯನ ಹೊರವಲಯವನ್ನು ನೋಡಿದರೆ ಲಕ್ಷಾಂತರ ಕಿಮೀಗಳಷ್ಟು ಮೇಲಕ್ಕೆ ಚಿಮ್ಮಿ ಬೀಳುವ ಜ್ವಾಲೋನ್ನತಿಗಳು ತೋರುವುವು. ಇವುಗಳಿಗೆ ಪ್ರಾಮಿನೆನ್ಸಸ್ ಎಂದು ಹೆಸರು. ಇವುಗಳ ಬಣ್ಣ ಗುಲಾಬಿ ಕೆಂಪು. ಪೂರ್ಣ ಸೂರ್ಯಗ್ರಹಣ ಕಾಲದಲ್ಲಿ ಸೂರ್ಯನ ಅಂಚಿನಲ್ಲಿ ಕಾಣಿಸುವ ಯಾವುದಾದರೂ ಒಂದು ನಕ್ಷತ್ರದ ಸ್ಥಾನವನ್ನು ಆಕಾಶದಲ್ಲಿ ಗುರ್ತಿಸಿ ಸೂರ್ಯನಿಲ್ಲದಾಗ ಅದೇ ನಕ್ಷತ್ರದ ಸ್ಥಾನವನ್ನು ನೋಡಿ ಅವುಗಳಲ್ಲಾಗುವ ಬದಲಾವಣೆಗೆ ನಕ್ಷತ್ರರಶ್ಮಿಯ

ಮೇಲೆ ಸೂರ್ಯನ ಗುರುತ್ವಾಕರ್ಷಣೆ ಕಾರಣ ಎಂದು ಹೇಳಲು ಸಾಧ್ಯವಾಗುತ್ತದೆ. ಇದರಿಂದ ಬೆಳಕಿನ ಕಿರಣಗಳು ಕೂಡ ಗುರುತ್ವಾಕರ್ಷಣೆಗೆ ಒಳಪಡುತ್ತವೆ ಎಂಬ ಐನ್‌ಸ್ಟೈನನ ಹೇಳಿಕೆಯ ಸಮರ್ಥನೆ ಆಗುತ್ತದೆ.



**ಚಿತ್ರ 17. 1973ನೆಯ ಜೂನ್ 30ರಂದು ಸಂಭವಿಸಿದ ಪೂರ್ಣ ಸೂರ್ಯಗ್ರಹಣ. ಈ ಚಿತ್ರವನ್ನು ಸಹರ ಮರುಭೂಮಿಯ ಮೇಲೆ ವಿಶೇಷ ವಿಮಾನವೊಂದರಿಂದ ತೆಗೆಯಲಾಯಿತು.**

**ಗ್ರಹಣಗಳ ವಿಚಾರವಾಗಿ ಮುನ್ಸೂಚನೆ :** ಮುಂದೆ ಆಗಲಿರುವ ಗ್ರಹಣಗಳ ವಿಚಾರವಾಗಿ ಕರಾರುವಾಕ್ಕಾಗಿ ಮುನ್ನುಡಿಯಬಹುದು. ಭೂಕೇಂದ್ರದಿಂದ ಸೂರ್ಯ ಮತ್ತು ಚಂದ್ರರ ಸ್ಥಾನಗಳು ಸರಿಯಾಗಿ ಗೊತ್ತಿದ್ದರೆ ಗ್ರಹಣಗಳಾಗುವುದನ್ನು ಲೆಕ್ಕ ಹಾಕಿ ಹೇಳಲು ಸಾಧ್ಯವಾಗುತ್ತದೆ. ಈಗಲೂ ಖಗೋಳಶಾಸ್ತ್ರಜ್ಞರು ಆಕಾಶಕಾಯಗಳ ಚಲನೆಗಳನ್ನು ಸರಿಯಾಗಿ ತಿಳಿದು ಯಾವ ಯಾವ ವಿಧವಾದ ಗ್ರಹಣಗಳು ಎಲ್ಲೆಲ್ಲಿ ಮತ್ತು ಯಾವ ಯಾವ ದಿವಸ ಎಷ್ಟು ಹೊತ್ತಿನಲ್ಲಿ ಆಗುತ್ತವೆ ಎಂದು ಪಟ್ಟಿಮಾಡಿ ಪ್ರಕಟಿಸಿದ್ದಾರೆ. ಗ್ರಹಣಗಳ ಸ್ಪರ್ಶ ಮತ್ತು ಮೋಕ್ಷ ಕಾಲಗಳು, ಮಧ್ಯಗ್ರಹಣ ಕಾಲ ಮುಂತಾದ ಎಲ್ಲ ವಿವರಗಳನ್ನು ಕೊಡುತ್ತಾರೆ. ಸೂರ್ಯ, ಭೂಮಿ ಮತ್ತು ಚಂದ್ರ ಇವುಗಳ ಅಸ್ಥಿರ ಮತ್ತು ಜಟಿಲ ಚಲನೆಗಳಿಂದಾಗಿ ಗ್ರಹಣಗಳಾಗುವ ಅಂತರಗಳು ಅಷ್ಟೇನೂ ಕ್ರಮಬದ್ಧವಾಗಿಲ್ಲ. ಅಲ್ಲದೆ ಗ್ರಹಣಗಳ ಬಗೆಗಳಲ್ಲೂ ವ್ಯತ್ಯಾಸವಾಗುತ್ತದೆ. ಮುಖ್ಯವಾಗಿ ಪಾತಬಿಂದುಗಳ ವಕ್ರಗತಿಯಿಂದ ಅಕ್ರಮತೆ ತಲೆದೋರುತ್ತದೆ. ಸರಿಸುಮಾರು 18 ವರ್ಷ $11\frac{1}{3}$ ದಿವಸಗಳಿಗೊಮ್ಮೆ ಗ್ರಹಣಗಳಾಗುವ ಚಕ್ರ ಪುನರಾವರ್ತನೆಯಾಗುವುದು. ಇದು ಚಾಲ್ಡಿಯಾದ ಖಗೋಳವಿಜ್ಞಾನಿಗಳಿಗೆ ತಿಳಿದಿತ್ತು. ಈ ಪುನರಾವರ್ತನೆಯ ಕಾಲಾವಧಿಗೆ ಸಾರೋಸ್ ಎಂದು ಹೆಸರು. ಈ ಅವಧಿಯಲ್ಲಿ 223 ಚಾಂದ್ರಮಾಸಗಳಿವೆ. ಇದೇ ಅವಧಿಯಲ್ಲಿ ಸರಾಸರಿ 71 ಗ್ರಹಣಗಳಾಗುತ್ತವೆ. ಅವುಗಳಲ್ಲಿ ಸಾರೋಸ್ ಕಾಲಾವಧಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ವ್ಯತ್ಯಾಸಗಳಿಗೆ ಅವಕಾಶವಿಟ್ಟುಕೊಂಡರೆ 18 ವರ್ಷ $11\frac{1}{3}$ ದಿವಸಗಳಾದ ಬಳಿಕ ಗ್ರಹಣಗಳ ಕ್ರಮ ಮರುಕಳಿಸುತ್ತದೆ ಎನ್ನಬಹುದು. ಉದಾಹರಣೆಗೆ ಯಾವುದಾದರೂ ಒಂದು ದಿವಸದಲ್ಲಾಗುವ ಪಾರ್ಶ್ವ ಅಥವಾ ಪೂರ್ಣಗ್ರಹಣವನ್ನು ಗಣನೆಗೆ ತೆಗೆದುಕೊಂಡರೆ ಅಂದಿನಿಂದ 18 ವರ್ಷ $11\frac{1}{3}$ ದಿವಸಗಳಾದ ತರುವಾಯ ಸ್ವಲ್ಪ ಹೆಚ್ಚು ಕಡಿಮೆ ಅದೇ ಹೊತ್ತಿಗೆ ಅದೇ ತರಹದ ಗ್ರಹಣವಾಗಬಹುದು; ಇಲ್ಲವೇ ಒಂದು ವಿಧವಾದ ಗ್ರಹಣವಂತೂ ಆಗುವುದು ಖರೆ. ಭೂಮಿಯ ಪರಿಭ್ರಮಣೆಯಿಂದ ಗ್ರಹಣವಾಗುವ ಸ್ಥಳದಲ್ಲೂ ವ್ಯತ್ಯಾಸವಾಗಬಹುದು. ಇವೆಲ್ಲಕ್ಕೂ ಅವಕಾಶವಿಟ್ಟುಕೊಂಡರೆ ಸಾರೋಸ್ ಸರಿಸುಮಾರಾಗಿ ಗ್ರಹಣದ ವಿಚಾರವಾಗಿ ಹೇಳಬಹುದಾದ ಒಂದು ಕಾಲಾವಧಿ. ಭೂಮಿಯ ಮೇಲೆ ಯಾವುದಾರೂ ಒಂದು ಸ್ಥಳದಲ್ಲಿ ಐವತ್ತು ವರ್ಷಗಳ ಕಾಲದಲ್ಲಿ ಸರಾಸರಿ 40 ಚಂದ್ರಗ್ರಹಣಗಳು, 20 ಪಾರ್ಶ್ವ ಸೂರ್ಯಗ್ರಹಣಗಳು ಕಾಣಿಸಬಹುದು. ಆದರೆ ಸುಮಾರು 350ರಿಂದ 400 ವರ್ಷಗಳಲ್ಲಿ ಒಂದು ಪೂರ್ಣ ಸೂರ್ಯಗ್ರಹಣ ಆ ಸ್ಥಳದಲ್ಲಿ ಕಾಣಿಸುತ್ತದೆ. ಭೂಮಿಯ ಮೇಲಿನ ಒಂದು ಸ್ಥಳವನ್ನು ತೆಗೆದುಕೊಳ್ಳದೆ ಒಂದು ಕಾಲಾವಧಿಯಲ್ಲಾಗಬಹುದಾದ ಗ್ರಹಣಗಳನ್ನು ಗಣಿಸಿದರೆ ಚಂದ್ರಗ್ರಹಣಗಳಿಗಿಂತ ಸೂರ್ಯಗ್ರಹಣಗಳೇ ಹೆಚ್ಚು.

**ಗ್ರಹಣ ಪರಿಮಿತಿಗಳು :** ಕ್ರಾಂತಿವೃತ್ತದ ಮೇಲೆ ಸೂರ್ಯ ನಿಧಾನವಾಗಿ (ದಿವಸಕ್ಕೆ ಸುಮಾರು ಒಂದು ಡಿಗ್ರಿಗಿಂತ ಕಡಿಮೆಯಷ್ಟು) ಚಲಿಸುತ್ತ ಒಂದು ವರ್ಷದಲ್ಲಿ ಭೂಮಿಯ ಸುತ್ತ ಪರಿಭ್ರಮಿಸುವ ಹಾಗೆ ಕ್ರಾಂತಿವೃತ್ತಕ್ಕೆ ಸುಮಾರು $5^{0}\ 8^{1}$ ಗಳಷ್ಟು ಓರೆಯಾಗಿರುವ ಕಕ್ಷೆಯಲ್ಲಿ ಚಂದ್ರ ವೇಗವಾಗಿ ಚಲಿಸುತ್ತ ಒಂದು ತಿಂಗಳಲ್ಲಿ ಭೂಮಿಯ ಸುತ್ತ ಪರಿಭ್ರಮಣೆ ಮುಗಿಸುತ್ತದೆ. ಚಂದ್ರ ಹೀಗೆ ಸುತ್ತುತ್ತಿರುವಾಗ ನಿಧಾನವಾಗಿ ಚಲಿಸುತ್ತಿರುವ ಸೂರ್ಯನನ್ನು ಮರೆಮಾಡದೆ ಅದನ್ನು ಹಾದು ಮುಂದಕ್ಕೆ ಹೋಗುತ್ತದೆ. ಹಾಗೆ ಹಾಯುವಾಗ ಸೂರ್ಯ ಮತ್ತು ಚಂದ್ರರು ಯುತಿಯಲ್ಲಿದ್ದು ಅಮಾವಾಸ್ಯೆಯಾಗುತ್ತದೆ. ಇದಾದ ಸುಮಾರು 14 ಅಥವಾ 15 ದಿವಸಗಳಲ್ಲಿ ತನ್ನ ಕಕ್ಷೆಯಲ್ಲಿ ಮುಂದೆ ಹೋಗುತ್ತಿರುವ ಚಂದ್ರ ಸೂರ್ಯನಿಗೆ ಎದುರಾಗಿ ಬಂದು ಅಲ್ಲಿ ಕಾಣಿಸುವ (ಎದುರಿಗಿರುವ ಸೂರ್ಯನ ಬೆಳಕಿನಿಂದಾದ) ಭೂಮಿಯ ನೆರಳಿನ ಮೂಲಕ ಹೋಗದೆ ಅದರಿಂದ ಸ್ವಲ್ಪ ಮೇಲಕ್ಕೋ ಕೆಳಕ್ಕೋ ಇರುವ ತನ್ನ ಕಕ್ಷೆಯಲ್ಲಿ ಅದನ್ನು ಹಾದು ಚಲನೆಯನ್ನು ಮುಂದುವರಿಸುತ್ತದೆ. ಹೀಗೆ ಹಾಯುವಾಗ ಸೂರ್ಯ ಮತ್ತು ಚಂದ್ರರು ವಿಯುತಿಯಲ್ಲಿರುವುದರಿಂದ ಹುಣ್ಣಿಮೆಯಾಗುತ್ತದೆ. ಚಂದ್ರನ ಪ್ರತಿಯೊಂದು ತಿಂಗಳ ಚಲನೆಯಲ್ಲೂ ಇದೇ ರೀತಿ ಪುನರಾವರ್ತನೆಯಾಗುತ್ತದೆ. ಒಂದೊಂದು ಸಲ ಸೂರ್ಯ ತನ್ನ ಕಕ್ಷೆಗೂ ಚಂದ್ರಕಕ್ಷೆಗೂ



**ಚಿತ್ರ 18. ಗುರುವಿನ ಗೆಲಿಲಿಯನ್ ಉಪಗ್ರಹಗಳ ಪರಸ್ಪರ ಗ್ರಹಣಗಳನ್ನೂ ಸಂಕ್ರಮಣಗಳನ್ನೂ ಕಾಣಿಸುವ ಕಾಲ್ಪನಿಕ ಚಿತ್ರ**

ಸಾಮಾನ್ಯ ಬಿಂದುವಾದ ಒಂದು ಪಾತ ಬಿಂದು N ನ ಹತ್ತಿರ ಇದ್ದಾಗ ಚಂದ್ರ ತನ್ನ ಕಕ್ಷೆಯಲ್ಲಿ ಅದೇ ಪಾತಬಿಂದುವಿನ ಹತ್ತಿರ ಬಂದು ಸೂರ್ಯನನ್ನು ಹಾಯುವ ಸಮಯದಲ್ಲಿ ಅಮಾವಾಸ್ಯೆಯಾಗಿ ಸೂರ್ಯನಿಂದ ಭೂಮಿಯ ಕಡೆಗೆ ಬರುವ ಬೆಳಕನ್ನು ಅಡ್ಡಿ ಮಾಡುವ ಸಾಧ್ಯತೆ ಉಂಟು. ಆಗ ಸೂರ್ಯಗ್ರಹಣ ಸಂಭವಿಸುವುದು. ಆದ್ದರಿಂದ ಚಂದ್ರ ಒಂದು ಪಾತಬಿಂದುವಿನ ಹತ್ತಿರ ಬಂದಾಗ ಸೂರ್ಯ ಕ್ರಾಂತಿವೃತ್ತದ ಮೇಲೆ ಅದೇ ಪಾತಬಿಂದುವಿನ ಎಷ್ಟು ದೂರ ಇದ್ದರೆ ಸೂರ್ಯಗ್ರಹಣ ಸಾಧ್ಯ ಎಂಬುದನ್ನು ಲೆಕ್ಕಹಾಕಿದ್ದಾರೆ. ಈ ದೂರ ಮಿತಿಗೆ ಸೂರ್ಯಗ್ರಹಣ ಪರಿಮಿತಿ ಎಂದು ಹೆಸರು. ಇದನ್ನು ಡಿಗ್ರಿ ಅಳತೆಯಲ್ಲಿ ಸೂಚಿಸುತ್ತಾರೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಸೂರ್ಯ ಒಂದು ಪಾತಬಿಂದುವಿನ ಹತ್ತಿರವಿದ್ದಾಗ ಚಂದ್ರ ತನ್ನ ಕಕ್ಷೆಯಲ್ಲಿ ಈ ಪಾತಬಿಂದುವಿಗೆ ನೇರ ಎದುರಾಗಿರುವ ಮತ್ತೊಂದು ಪಾತಬಿಂದುವಿನ ಹತ್ತಿರ ಬಂದು ಅಲ್ಲಿರುವ ಭೂಮಿಯ ನೆರಳನ್ನು ಹಾಯುವಾಗ ಹುಣ್ಣಿಮೆಯಾಗಿ ಭೂಮಿಯ ನೆರಳಿನ ಮೂಲಕ ಹೋಗುವ ಸಾಧ್ಯತೆ ಇರುತ್ತದೆ. ಆಗ ಚಂದ್ರಗ್ರಹಣವಾಗುವುದು. ಚಂದ್ರ ಒಂದು ಪಾತಬಿಂದುವಿನ ಹತ್ತಿರ ಬಂದಾಗ, ಕ್ರಾಂತಿವೃತ್ತದ ಮೇಲೆ ಸೂರ್ಯ ಮತ್ತೊಂದು ಪಾತಬಿಂದುವಿನಿಂದ ಎಷ್ಟು ದೂರವಿದ್ದರೆ (ಅಥವಾ ಸೂರ್ಯನಿಂದಾದ ಭೂಮಿಯ ನೆರಳು ಮೊದಲನೆಯ ಪಾತಬಿಂದುವಿನಿಂದ ಎಷ್ಟು ದೂರ ಇದ್ದರೆ) ಚಂದ್ರಗ್ರಹಣವಾಗುವುದು ಸಾಧ್ಯ ಎಂಬುದನ್ನು ಲೆಕ್ಕಹಾಕಿದ್ದಾರೆ. ಈ ದೂರಮಿತಿಗೆ ಚಂದ್ರಗ್ರಹಣ ಪರಿಮಿತಿ ಎಂದು ಹೆಸರು. ಗ್ರಹಣ ಪರಿಮಿತಿಗಳ ಬೆಲೆಗಳು ಈ ರೀತಿ ಇವೆ:

ಸೂರ್ಯಗ್ರಹಣ – ಪ್ರಧಾನ ಪರಿಮಿತಿ $18^0\ 31^1$, ಲಘು ಪರಿಮಿತಿ $15^0\ 21^1$

ಚಂದ್ರಗ್ರಹಣ – ಪ್ರಧಾನ ಪರಿಮಿತಿ $12^0\ 5^1$ ಲಘು ಪರಿಮಿತಿ $9^0\ 39^1$

ಇವುಗಳ ಅರ್ಥವಿಷ್ಟು: ಅಮಾವಾಸ್ಯೆಯಾದಾಗ ಸೂರ್ಯ ಒಂದು ಪಾತಬಿಂದುವಿನಿಂದ $18^0\ 31^1$ ಕ್ಕಿಂತ ಹೆಚ್ಚು ದೂರದಲ್ಲಿದ್ದರೆ ಸೂರ್ಯಗ್ರಹಣ ಸಾಧ್ಯವಿಲ್ಲ; $15^0\ 21^1$ ಮತ್ತು $18^0\ 31^1$ ಇವುಗಳ ನಡುವೆ ಸೂರ್ಯಗ್ರಹಣವಾಗಬಹುದು; $15^0$ ಮತ್ತು $21^1$ ಕ್ಕಿಂತ ಕಡಿಮೆ ಇದ್ದರೆ ಸೂರ್ಯಗ್ರಹಣ ಆಗಿಯೇ ಆಗುತ್ತದೆ. ಇದೇ ರೀತಿಯಲ್ಲಿ ಹುಣ್ಣಿಮೆಯಾದಾಗ ಸೂರ್ಯ ಒಂದು ಪಾತಬಿಂದುವಿನಿಂದ $12^0\ 5^1$ ಕ್ಕಿಂತ ಹೆಚ್ಚು ದೂರದಲ್ಲಿದ್ದರೆ ಚಂದ್ರಗ್ರಹಣ ಸಾಧ್ಯವಿಲ್ಲ. $12^0\ 5^1$ ಮತ್ತು $9^0\ 39^1$ ಇವುಗಳ ನಡುವೆ ಇದ್ದರೆ ಚಂದ್ರಗ್ರಹಣವಾಗಬಹುದು; $9^0\ 39^1$ ಕ್ಕಿಂತ ಕಡಿಮೆ ಇದ್ದರೆ ಚಂದ್ರಗ್ರಹಣ ಆಗಿಯೇ ಆಗುತ್ತದೆ.




**ಚಿತ್ರ 19. ಗುರು ಮತ್ತು ಅದರ ಉಪಗ್ರಹ ವ್ಯವಸ್ಥೆ ಭೂಮಿಗೆ ಪ್ರದರ್ಶಿಸುವ ವಿವಿಧ ವಿನ್ಯಾಸಗಳು. E ಭೂಮಿ, J ಗುರು**

ಚಂದ್ರನ ಪಾತಬಿಂದುಗಳು ಅಚಲ ಬಿಂದುಗಳಲ್ಲ. ಅವುಗಳಿಗೆ ಹಿನ್ನಡೆ ಉಂಟು. ಅವು ಕ್ರಾಂತಿವೃತ್ತದ ಮೇಲೆ ಸುಮಾರು 18 ವರ್ಷಗಳಲ್ಲಿ ಒಂದು ಸುತ್ತನ್ನು ಮುಗಿಸುತ್ತವೆ. ಕ್ರಾಂತಿವೃತ್ತದ ಮೇಲೆ ಚಲಿಸುವ ಸೂರ್ಯ, ಹಿನ್ನಡೆಯುತ್ತಿರುವ ಈ ಪಾತಬಿಂದುಗಳನ್ನು ಅವು ಅಚಲವಾಗಿದ್ದಿದ್ದರೆ ಹಾದು ಹೋಗುವ ಅವಧಿಗಿಂತ ಕಡಿಮೆ ಅವಧಿಯಲ್ಲಿ ಹಾಯುತ್ತದೆ. ಒಂದು ಪಾತಬಿಂದುವನ್ನು ಗಣನೆಗೆ ತೆಗೆದುಕೊಂಡರೆ, ಮೊದಲು ಯುತಿಯಾದ ತರುವಾಯ ಪುನಃ ಅದೇ ಪಾತಬಿಂದುವಿನಲ್ಲಿ ಯುತಿಯಾಗಲು ಸೂರ್ಯನಿಗೆ ಬೇಕಾದ ಅವಧಿಯ ಕಾಲ 346.62 ದಿವಸಗಳು. ಇದಕ್ಕೆ ಗ್ರಹಣ ವರ್ಷ ಎಂದು ಹೆಸರು. ಪಾತಬಿಂದುಗಳ ಹಿನ್ನಡೆಯನ್ನೂ ಗ್ರಹಣಪರಿಮಿತಿಗಳನ್ನೂ ಉಪಯೋಗಿಸಿ ಯಾವುದಾದರೂ ಒಂದು ವರ್ಷದಲ್ಲಿ ಆಗಬಹುದಾದ ಗರಿಷ್ಠ ಸಂಖ್ಯೆಯ ಗ್ರಹಣಗಳು ಏಳೆಂದೂ ಅವುಗಳಲ್ಲಿ ಐದು ಸೂರ್ಯಗ್ರಹಣ ಮತ್ತು ಎರಡು ಚಂದ್ರಗ್ರಹಣ ಇಲ್ಲವೇ ನಾಲ್ಕು ಸೂರ್ಯಗ್ರಹಣ ಮತ್ತು ಮೂರು ಚಂದ್ರಗ್ರಹಣ ಎಂದೂ ಸಮರ್ಥಿಸಬಹುದು.

**ಗುರುಗ್ರಹದ ಉಪಗ್ರಹಗಳ ಗ್ರಹಣಗಳು :** ಸೌರವ್ಯೂಹದ ಒಂದು ಗ್ರಹವಾದ ಗುರುವಿಗೆ ಹನ್ನೆರಡು ಉಪಗ್ರಹಗಳಿವೆ. ಅವುಗಳಲ್ಲಿ ನಾಲ್ಕು ಉಪಗ್ರಹಗಳನ್ನು 1610ನೆಯ ಇಸವಿಯಲ್ಲಿ ಗೆಲಿಲಿಯೋ ಕಂಡುಹಿಡಿದ. ಆದ್ದರಿಂದ ಅವುಗಳಿಗೆ ಗೆಲಿಲಿಯೋ ಉಪಗ್ರಹಗಳೆಂದೇ ಹೆಸರಾಗಿದೆ. ಗೆಲಿಲಿಯೋ ಉಪಗ್ರಹಗಳು ಗುರುಗ್ರಹವನ್ನು ಸರಿಸುಮಾರಾಗಿ ಅದರ ಸಮಭಾಜಕ ರೇಖೆಯ ಸಮತಲದಲ್ಲಿಯೇ ಇರುವ ತಮ್ಮ ತಮ್ಮ ಕಕ್ಷೆಗಳಲ್ಲಿ ಪರಿಭ್ರಮಿಸುತ್ತಿವೆ. ಗುರೂಪಗ್ರಹಗಳನ್ನು ಬರಿ ಕಣ್ಣಿನಿಂದ ನೋಡಲು ಕಷ್ಟವಾಗುತ್ತದೆ. ಒಂದು ಸಾಧಾರಣ ದೂರದರ್ಶಕದಿಂದ ಅವುಗಳ ಚಲನೆಯನ್ನು ನೋಡಬಹುದು. ಇವು ಮಾತೃಗ್ರಹವನ್ನು ತಮ್ಮ ಕಕ್ಷೆಗಳಲ್ಲಿ ಸುತ್ತಿಬರುವ ಅವಧಿಕಾಲ 1¾ ದಿವಸದಿಂದ 16¾ ದಿವಸಗಳಷ್ಟಿದೆ. ಹೀಗೆ ಇವು ಬೇಗ ಬೇಗ ಪರಿಭ್ರಮಿಸುತ್ತಿರುವುದರಿಂದ ಗ್ರಹಣಗಳು ಪ್ರತಿ ದಿವಸವೂ ಆಗುತ್ತಿರುತ್ತವೆ. ಸೂರ್ಯನ ಬೆಳಕಿನಿಂದಾದ ಗುರುಗ್ರಹದ ಮಹಾಗಾತ್ರದ ನೆರಳಿನೊಳಕ್ಕೆ ಈ ಉಪಗ್ರಹಗಳು ಬಂದಾಗ ಅವು ಬೆಳಕನ್ನು ಕಳೆದುಕೊಂಡು ಗ್ರಹಣವಾಗುತ್ತವೆ. ಸೂರ್ಯನಿಗೂ ಗುರುಗ್ರಹಕ್ಕೂ ನಡುವೆ ಉಪಗ್ರಹಗಳು ಬಂದಾಗ ಅವುಗಳ ನೆರಳು ಗುರುಗ್ರಹದ ಮೇಲೆ ಸರಿಯುತ್ತಿರುವುದನ್ನು ಭೂಮಿಯ ಮೇಲಿಂದ ನೋಡಬಹುದು. ಆ ಸಮಯದಲ್ಲಿ ನೆರಳು ಬಿದ್ದ ಜಾಗಗಳಲ್ಲಿ ಗುರುಗ್ರಹದ ಮೇಲೆ ಸೂರ್ಯಗ್ರಹಣವಾಗುತ್ತದೆ. ಡೆನ್ಮಾರ್ಕ್ ದೇಶದ ಖಗೋಳ ವಿಜ್ಞಾನಿ ರೋಮರ್ ಎಂಬಾತ 1675 ರಲ್ಲಿ ಗುರೂಪಗ್ರಹಗಳ ಗ್ರಹಣವನ್ನು ವೀಕ್ಷಿಸಿ ಗಣನೆಗಳಿಂದ ತಿಳಿದಿದ್ದ ಗ್ರಹಣಸಂಭವ ಕಾಲಕ್ಕೂ ಭೂಮಿಯಲ್ಲಿ ಗ್ರಹಣ ಕಂಡ ಕಾಲಕ್ಕೂ ಇದ್ದ ವ್ಯತ್ಯಾಸದಿಂದ ನಡುವಿನ ಅಂತರವನ್ನು ಭಾಗಿಸಿ ಬೆಳಕಿನ ವೇಗವನ್ನು ಸರಿಸುಮಾರಾಗಿ ಗಣಿಸಿದ. (ಬಿ.ವಿ.ಎಸ್‌ಆರ್.)

**ಗ್ರಹವರ್ಮನ್ :** ಕನೌಜಿನ ಮೌಖರಿ ಸಂತತಿಯ ಅವಂತಿವರ್ಮನ ಮಗ ಮತ್ತು ಉತ್ತರಾಧಿಕಾರಿ (6–7ನೆಯ ಶತಮಾನ). ಗ್ರಹವರ್ಮನಿಗೆ ಸಂಬಂಧಿಸಿದ ಮಾಹಿತಿ ಬಾಣನ ಹರ್ಷಚರಿತ ಗ್ರಂಥದಿಂದ ಮಾತ್ರ ಲಭ್ಯವಾಗಿದೆ. ಇವನು ಸಿಂಹಾಸನವನ್ನೇರಿದ ತರುವಾಯ ಆಗ ತಾನೆ ಪ್ರಾಬಲ್ಯಕ್ಕೆ ಬಂದಿದ್ದ ಸ್ಥಾಣೇಶ್ವರದ ವರ್ಧನ ಸಂತತಿಯ ರಾಜ ಪ್ರಭಾಕರವರ್ಧನನ ಏಕಮಾತ್ರ ಪುತ್ರಿಯಾದ ರಾಜ್ಯಶ್ರೀಯನ್ನು ವರಿಸಲು ಇಚ್ಛಿಸಿದ. ತನ್ನ ಇಂಗಿತವನ್ನು ಪ್ರಭಾಕರವರ್ಧನನಿಗೆ ದೂತರ ಮುಖಾಂತರ ತಿಳಿಸಿದ. ಪ್ರಭಾಕರವರ್ಧನ ಈ ಸಂಬಂಧಕ್ಕೆ ಒಪ್ಪಿ ತನ್ನ ಕುಮಾರಿಯನ್ನು ಗ್ರಹವರ್ಮನಿಗೆ ಕೊಟ್ಟು, ವಿವಾಹ ಮಾಡಿಕೊಟ್ಟ. ಇದು 604 ರಲ್ಲಿ ನಡೆದಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಮೌಖರಿ ಮತ್ತು ವರ್ಧನ ಸಂತತಿಗಳು ಒಂದುಗೂಡಿದ್ದನ್ನು ಕಂಡು ಬಂಗಾಳದ ಶಶಾಂಕನೂ ಮಾಳವದ ದೇವಗುಪ್ತನೂ ಒಟ್ಟಾಗಿ ಸಂಚು ನಡೆಸಿದರು. 606ರಲ್ಲಿ ಪ್ರಭಾಕರವರ್ಧನ ಗತಿಸಿದ. ಈತನ ರಾಣಿ ಯಶೋಮತಿ ಅಗ್ನಿಪ್ರವೇಶ ಮಾಡಿದಳು. ಆ ಸಮಯದಲ್ಲಿ ಶಶಾಂಕನ ನೆರವಿನಿಂದ ದೇವಗುಪ್ತ ಕನೌಜನ್ನು ಮುತ್ತಿದ. ಈ ಮುತ್ತಿಗೆ ಬಹುಶಃ 606 ರಲ್ಲಿ ನಡೆದಿರಬೇಕು. ಗ್ರಹವರ್ಮ ಯುದ್ಧದಲ್ಲಿ ಸೋತು ಮರಣ ಹೊಂದಿದ. ಅವನ ರಾಣಿಯಾದ ರಾಜ್ಯಶ್ರೀ ಕನೌಜಿನಲ್ಲೇ ಬಂಧನಕ್ಕೊಳಗಾದಳು. ಪ್ರಭಾಕರವರ್ಧನನ ಮಗ ರಾಜ್ಯವರ್ಧನ ಅನಂತರ ಗ್ರಹವರ್ಮನ ವೈರಿಗಳನ್ನು ಸೋಲಿಸಿದನಾದರೂ ಅವರ ಸಂಚಿನಿಂದ ಕೊಲೆಯಾದ. ಗ್ರಹವರ್ಮನ ಅಂತ್ಯದೊಂದಿಗೆ ಮೌಖರಿ ಮನೆತನ ಕೊನೆಗೊಂಡಿತು. (ಜಿ.ಆರ್.ಆರ್.)

**ಗ್ರಹಾಂ ಕ್ಲಾರ್ಕ್ :** 1907–95. ಬ್ರಿಟಿಷ್ ಪುರಾತತ್ತ್ವಜ್ಞ. ಪೂರ್ಣ ಹೆಸರು ಸರ್ ಜಾನ್ ಗ್ರಹಾಂ ಡಗ್ಲಸ್ ಕ್ಲಾರ್ಕ್. ಲಂಡನ್ನಿನ ಬ್ರೋಮ್ಲೆಯಲ್ಲಿ 1907 ಜುಲೈ 28ರಂದು ಜನಿಸಿದ. ಕೇಂಬ್ರಿಜ್‌ನ ಮಾರ್ಲ್‌ಬರೊ ಮತ್ತು ಪೀಟರ್‌ಹೌಸ್‌ನಲ್ಲಿ ಶಿಕ್ಷಣ ಪೂರೈಸಿದ. 2ನೆಯ ಮಹಾಯುದ್ಧದ ಅವಧಿಯಲ್ಲಿ ಸ್ಕ್ವಾಡ್ರನ್ ಲೀಡರ್ ಆಗಿದ್ದ ಇವನು ತನ್ನ ವೃತ್ತಿಜೀವನವನ್ನು ರೂಪಿಸಿಕೊಂಡದ್ದು ಪೀಟರ್‌ಹೌಸ್‌ನಲ್ಲಿ. 1950ರಲ್ಲಿ ಬ್ರಿಟಿಷ್ ಅಕಾಡೆಮಿಯ ಫೆಲೊ ಆಗಿ ನೇಮಕಗೊಂಡು ಎರಡು ವರ್ಷಗಳ ಅನಂತರ ಡಿಸ್ನೆ ಪ್ರಾಧ್ಯಾಪಕ ಹುದ್ದೆಗೇರಿದ. 1956ರಲ್ಲಿ ಪುರಾತತ್ತ್ವ–ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥನಾದ. 1973–80ರವರೆಗೆ ಪೀಟರ್‌ಹೌಸ್‌ನ ಮಾಸ್ಟರ್ ಆಗಿ ಕಾರ್ಯ ನಿರ್ವಹಿಸಿದ. ಜೊತೆಗೆ ಪ್ರೊಸೀಡಿಂಗ್ಸ್ ಆಫ್ ದಿ ಪ್ರೀ ಹಿಸ್ಟಾರಿಕ್ ಸೊಸೈಟಿಯ ಸಂಪಾದಕನಾಗಿಯೂ ಅಧ್ಯಕ್ಷನಾಗಿಯೂ (1958–62) ಕೆಲಸ ಮಾಡಿದ.

ಸೂಕ್ಷ್ಮಶಿಲಾಯುಗ ಹಾಗೂ ಪುರಾ ಆರ್ಥಿಕತೆಯ (ಪೇಲಿಯೊ ಎಕಾನಮಿ) ವಿಷಯಗಳಲ್ಲಿ ಇವನಿಗೆ ಹೆಚ್ಚಿನ ಪರಿಶ್ರಮವಿತ್ತು. ಉತ್ತರ ಯುರೋಪಿನ ಸೂಕ್ಷ್ಮಶಿಲಾಯುಗದ ಬಗೆಗಿನ ಇವನ ಅಧ್ಯಯನ ಗಮನಾರ್ಹ. ಪ್ರಸಿದ್ಧ ನೆಲೆಯಾದ ಸ್ಟಾರ್‌ಕಾರ್‌ನಲ್ಲಿ 1949–51ರವರೆಗೆ ಉತ್ಖನನ ನಡೆಸಿ ಮಹತ್ತ್ವಪೂರ್ಣ ಮಾಹಿತಿಗಳನ್ನು ಬೆಳಕಿಗೆ ತಂದ. ಪ್ರೀ ಹಿಸ್ಟಾರಿಕ್ ಯುರೋಪ್: ದಿ ಎಕನಾಮಿಕ್ ಬೇಸಿಸ್ (1952) ಎಂಬ ಕೃತಿಯಲ್ಲಿ ಪ್ರಾಚೀನ ಸಮುದಾಯಗಳ ಆರ್ಥಿಕ ತಳಪಾಯವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾದ ಅಗತ್ಯವನ್ನು ಕುರಿತು ಚರ್ಚಿಸಿದ್ದಾನೆ. ಪ್ರಪಂಚ ಪ್ರಾಗಿತಿಹಾಸವನ್ನು ನಿರೂಪಿಸುವ ಇವನ ಅನೇಕ ಬರೆಹಗಳಿವೆ.

ಬ್ರಿಟಿಷ್ ಸರ್ಕಾರ ಇವನಿಗೆ 1971ರಲ್ಲಿ ಸಿಬಿಇ ಹಾಗೂ 1992ರಲ್ಲಿ ನೈಟ್‌ಹುಡ್ ಪದವಿಯನ್ನು ನೀಡಿ ಗೌರವಿಸಿತು. ಪ್ರಾಗಿತಿಹಾಸಕ್ಕೆ ಇವನು ನೀಡಿದ ಕೊಡುಗೆಗಾಗಿ 1990ರಲ್ಲಿ ಎರಾಸ್‌ಮಸ್ ಪ್ರಶಸ್ತಿ ದೊರೆಯಿತು. (ವಿ.ಎಸ್.)

**ಗ್ರಾಂಟ್, ಚಾರ್ಲ್ಸ್ :** 1746–1823. ರಾಜಕಾರಣಿ ಹಾಗೂ ಸಮಾಜ ಸುಧಾರಕ. ಏಪ್ರಿಲ್ 16, 1746 ರಂದು ಸ್ಕಾಟ್‌ಲೆಂಡಿನಲ್ಲಿ ಜನಿಸಿದ ಇವನು ಜನಿಸಿದ ದಿನದಂದೇ ಇವನ ತಂದೆ ಅಲೆಗ್ಸಾಂಡರ್ ಗ್ರಾಂಟ್ ಬ್ರಿಟಿಷ್ ಅರಸೊತ್ತಿಗೆಯ ವಿರುದ್ಧ ಜಾಕೊಬೈಟರು ನಡೆಸಿದ ಹೋರಾಟದಲ್ಲಿ ಪಾಲ್ಗೊಂಡು ಮರಣವಪ್ಪಿದ. 1767ರಲ್ಲಿ ತನ್ನ ಚಿಕ್ಕಪ್ಪನೊಡನೆ ಭಾರತಕ್ಕೆ ಬಂದು ಈಸ್ಟ್ ಇಂಡಿಯ ಕಂಪನಿಯಲ್ಲಿ ಉನ್ನತ ಹುದ್ದೆಯನ್ನು ಗಳಿಸಿದ. ಭಾರತದಲ್ಲಿರುವವರೆಗೂ ದೇಶೀಯ ಸಮಾಜ ಸುಧಾರಣೆಯಲ್ಲಿ ತುಂಬ ಆಸಕ್ತಿ ವಹಿಸಿದ. 1790ರಲ್ಲಿ ಸ್ವದೇಶಕ್ಕೆ ಮರಳಿದ ಮೇಲೆ ಚರ್ಚ್ ಮಿಷನರಿ ಸೊಸೈಟಿ (1799), ಆಂಗ್ಲ ಮತ್ತು ವಿದೇಶೀಯ ಬೈಬಲ್ ಸಂಸ್ಥೆಗಳನ್ನು (1804) ತೆರೆದ. ಭಾರತಕ್ಕೆ ವಿಶೇಷ ಸಂಖ್ಯೆಯಲ್ಲಿ ಮಿಷನರಿಗಳನ್ನು ಕಳುಹಿಸಬೇಕೆಂದು ಬ್ರಿಟಿಷ್ ಸರ್ಕಾರವನ್ನು ಒತ್ತಾಯಪಡಿಸಿದ. ಏಷ್ಯದ ವಸಾಹತುಗಳಲ್ಲಿರುವ ಜನರ ನೈತಿಕತೆಯನ್ನು ಉತ್ತಮಪಡಿಸುವ ಪ್ರಬಂಧವೊಂದನ್ನು (ಅಬ್ಸರ್ವೇಷನ್ಸ್ ಆನ್ ದಿ ಸ್ಟೇಟ್ ಆಫ್ ಸೊಸೈಟಿ ಅಮಾಂಗ್ ದಿ ಏಷ್ಯಾಟಿಕ್ ಸಬ್ಜೆಕ್ಟ್ಸ್ ಆಫ್ ಗ್ರೇಟ್ ಬ್ರಿಟನ್) (1792) ಪ್ರಕಟಿಸಿದ. ತತ್ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಒಬ್ಬ ಬಿಷಪನನ್ನು ನೇಮಿಸಿದ್ದಲ್ಲದೆ ಭಾರತದ ವಿದ್ಯಾಭಿವೃದ್ಧಿಗಾಗಿ 50,000 ಪೌಂಡುಗಳನ್ನು ಮಂಜೂರು ಮಾಡಿತು. ಆಮೇಲೆ ಗ್ರಾಂಟ್ ದೇಶೀಯರಿಗೆ ಕೈಗಾರಿಕಾ ತರಬೇತಿಯನ್ನು ಕೊಡಬೇಕೆಂಬ ಸಲಹೆಯನ್ನು ಮಾಡಿ ಈಸ್ಟ್ ಇಂಡಿಯ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಸೂಕ್ತ ಶಿಕ್ಷಣವನ್ನು ಒದಗಿಸಬೇಕೆಂದು ಶಿಫಾರಸು ಮಾಡಿದ. ಈತ 1803–18ರ ವರೆಗೆ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯನಾಗಿದ್ದ.

ಭಾರತೀಯರಿಗೆ ಇಂಗ್ಲಿಷ್ ಭಾಷೆಯನ್ನು ಬೋಧಿಸಬೇಕು. ತನ್ಮೂಲಕ ಇಂಗ್ಲಿಷ್ ಸಾಹಿತ್ಯದ ವಿಶಿಷ್ಟತೆಯ ಪರಿಚಯ ಮಾಡಿಕೊಡಬೇಕು. ಕ್ರಮೇಣ ಭಾರತೀಯರಿಗೆ ಆಂಗ್ಲರ ಸಂಸ್ಕೃತಿ ಮತ್ತು ಧಾರ್ಮಿಕ ಜ್ಞಾನವನ್ನು ಪರಿಚಯಿಸಬೇಕು –ಎನ್ನುವುದೇ ಗ್ರಾಂಟನ ಶೈಕ್ಷಣಿಕ ಧೋರಣೆಗಳ ಮುಖ್ಯತತ್ತ್ವಗಳು. ಇವು ಮುಂದೆ ಮಕಾಲೆಯ (1800–59) ನಾಯಕತ್ವದಲ್ಲಿ ಕಾರ್ಯಗತಗೊಂಡವು. ಈತ ಅಕ್ಟೋಬರ್ 31, 1823ರಂದು ಲಂಡನ್‌ನಲ್ಲಿ ನಿಧನನಾದ. (ಕೆ.ಎಸ್.ಎಸ್.ಎಸ್.ಎಚ್.)

**ಗ್ರಾಂಟ್, ಜೇಮ್ಸ್ :** 1822–87. ಸ್ಕಾಟ್ಲೆಂಡಿನ ಒಬ್ಬ ಕಾದಂಬರಿಕಾರ. ತಾಯಿಯ ಕಡೆಯಿಂದ ವಾಲ್ಟರ್ ಸ್ಕಾಟನಿಗೆ ಸಂಬಂಧಿ. ಹುಟ್ಟಿದ್ದು ಎಡಿನ್‌ಬರದಲ್ಲಿ. ತಂದೆ ಬ್ರಿಟಿಷ್ ಸೈನ್ಯದಲ್ಲಿ ಒಬ್ಬ ಚಾಪ್ಲೆನ್ ಆಗಿದ್ದ. ತಂದೆಯೊಂದಿಗೆ ಈತ 6 ವರ್ಷ ಕಾಲ ನ್ಯೂಫೌಂಡ್‌ಲೆಂಡಿನಲ್ಲಿದ್ದು 1839 ರಲ್ಲಿ ಸ್ವದೇಶಕ್ಕೆ ಹಿಂತಿರುಗಿದ. ಸೈನ್ಯದಲ್ಲಿ ಬಾವುಟದ ಸಿಪಾಯಿಯಾಗಿ ಸ್ವಲ್ಪ ಕಾಲ ಕೆಲಸ ಮಾಡಿ, ಕೆಲಸಕ್ಕೆ ರಾಜೀನಾಮೆ ಇತ್ತು ಲೇಖನವೃತ್ತಿಯನ್ನು ಅವಲಂಬಿಸಿದ. ಈತ ಸುಮಾರು 50 ಕಾದಂಬರಿಗಳನ್ನು ಬರೆದಿದ್ದಾನೆ. ಅವುಗಳ ಕಥಾವಸ್ತು ಬಹುಮಟ್ಟಿಗೆ ಸೈನಿಕ ಜೀವನವನ್ನು ಕುರಿತದ್ದು. ಅನೇಕ ಕಡೆ ಉಲ್ಲಾಸ ಮತ್ತು ಘಟನೆಗಳ ಶ್ರೀಮಂತಿಕೆಯನ್ನು ಕಾಣಬಹುದು. ಇವನ ಕಾದಂಬರಿಗಳಲ್ಲಿ ಉತ್ತಮವಾದವೆಂದರೆ ಅಡ್ವೆಂಚರ್ಸ್ ಆಫ್ ಎನ್ ಏಡ್–ಡ–ಕ್ಯಾಂಪ್ (1848), ಬಾತ್‌ವೆಲ್ (1854), ಫ್ರಾಂಕ್ ಹಿಲ್ಟನ್ (1855), ದಿ ಯೆಲ್ಲೊ ಫ್ರಿಗೇಟ್ (1855), ಹ್ಯಾರಿ ಆಗಿಲ್ವಿ (1856). ಮೂರು ಸಂಪುಟಗಳ ಓಲ್ಡ್ ಅಂಡ್ ನ್ಯೂ ಎಡಿನ್‌ಬರ (1880), ದಿ ರೊಮ್ಯಾನ್ಸ್ ಆಫ್ ವಾರ್ (1845) ಕೂಡ ಚೆನ್ನಾಗಿವೆ. ಕಿರ್ಕಾಲ್ಡಿ ಆಫ್ ಗ್ರಾಂಜ್ (1849), ಮಾಂಟ್ರೋಸ್ (1858) ಎಂಬವು ಜೀವನಚರಿತ್ರೆಗಳು. ಬ್ರಿಟಿಷ್ ಬ್ಯಾಟಲ್ಸ್ ಆನ್ ಲ್ಯಾಂಡ್ ಅಂಡ್ ಸೀ (1873–75) ಎಂಬುದು ಚಾರಿತ್ರಿಕ ಪ್ರಾಮುಖ್ಯವನ್ನುಳ್ಳ ಕೃತಿ. (ಎಸ್.ಎನ್.ಎಸ್.ವಿ.)

**ಗ್ರಾಟ್ಸ್ :** ಆಸ್ಟ್ರಿಯ ದೇಶದ ಎರಡನೆಯ ದೊಡ್ಡ ನಗರ. ಸ್ಟಿರಿಯ ಒಕ್ಕೂಟ ರಾಜ್ಯದ ರಾಜಧಾನಿ. ವಿಯೆನ್ನದ ನೈರುತ್ಯಕ್ಕೆ 179 ಕಿಮೀ ದೂರದಲ್ಲಿ, ಮೂರ್ ನದಿಯ ಎರಡೂ ದಂಡೆಗಳ ಮೇಲಿದೆ. ಜನಸಂಖ್ಯೆ 2,91,890 (2010). ದಟ್ಟ ಕಾಡಿನಿಂದ ಕೂಡಿದ ಸ್ಟಿರಿಯನ್ ಆಲ್ಪ್ಸ್ ಶ್ರೇಣಿಯ ದಕ್ಷಿಣಕ್ಕೆ ಮೂರ್ ಕಣಿವೆಯ ಮುಖದ ಬಳಿ ಇರುವ ಈ ಪಟ್ಟಣದ್ದು ಮಹತ್ತ್ವದ ಸನ್ನಿವೇಶ. ಇದರ ಮುಂದೆ ವಿಶಾಲವೂ ಫಲವತ್ತೂ ಆದ ಗ್ರೇಸರ್‌ಫೆಲ್ಟ್ ಮೈದಾನ ಹಬ್ಬಿದೆ. ಪಟ್ಟಣದ ಉನ್ನತ ಸ್ಥಳ ಷ್ಲಾಸ್‌ಬರ್ಗ್ (1552" 473 ಮೀ). ಇದು ಸ್ಟಿರಿಯನ್ ಆಲ್ಪ್ಸ್‌ನ ಒಂದು ಹೊರ ಕವಲು. ಇಲ್ಲಿ ಹಲವು ಸುಂದರ ಉದ್ಯಾನಗಳುಂಟು. ಷ್ಲಾಸ್‌ಬರ್ಗಿನ ದಕ್ಷಿಣ ಇಳಿಜಾರಿನಲ್ಲಿ 1561 ರಲ್ಲಿ ನಿರ್ಮಿತವಾದ ಒಂದು ಗಡಿಯಾರಗೋಪುರವೂ ಅದರ ಶಿಖರದ ಮೇಲೆ 1588 ರಲ್ಲಿ ಕಟ್ಟಲಾದ ಒಂದು ಘಂಟಾಗೋಪುರವೂ ಇವೆ. ಇದರ ಗಂಟೆಯ ತೂಕ 4 ಟನ್. ಷ್ಲಾಸ್‌ಬರ್ಗಿನ ಪಶ್ಚಿಮದಲ್ಲಿ ಮೂರ್ ನದಿಯೂ ಪೂರ್ವದಲ್ಲಿ ಉದ್ಯಾನವೂ ಇವೆ. ನಗರದಲ್ಲಿ ಇತಿಹಾಸ ಪ್ರಸಿದ್ಧವಾದ ಅನೇಕ ಕಟ್ಟಡಗಳಿವೆ. 16 ನೆಯ ಶತಮಾನದಲ್ಲಿ ಪುನರುಜ್ಜೀವನ ಶೈಲಿಯಲ್ಲಿ ಕಟ್ಟಲಾದ ಲ್ಯಾಂಡ್ ಹೌಸ್, 15–17 ನೆಯ ಶತಮಾನಗಳ ಆಯುಧ ಶಾಲೆ, ಜರ್ಮನ್ ಪುನರುಜ್ಜೀವನ ಶೈಲಿಯಲ್ಲಿ 19 ನೆಯ ಶತಮಾನದಲ್ಲಿ ಕಟ್ಟಲಾದ ಪುರಭವನ, 11 ನೆಯ ಶತಮಾನದಲ್ಲಿ ನಿರ್ಮಿಸಲಾದ, ಈಗ ಸರ್ಕಾರಿ ಕಚೇರಿಯಾಗಿರುವ, ಕೋಟೆಮನೆ, 15 ನೆಯ ಶತಮಾನದ ಸೇಂಟ್ ಎಜೀಡಿಯಸ್ ಕತೀಡ್ರಲ್ – ಇವು ಮುಖ್ಯವಾದವು. ಗ್ರಾಟ್ಸ್‌ನಲ್ಲಿ ಒಂದು ವಿಶ್ವವಿದ್ಯಾಲಯವೂ ಅನೇಕ ಶಾಲಾ ಕಾಲೇಜುಗಳೂ ಉಂಟು. ವಿಶ್ವವಿದ್ಯಾಲಯ 1586 ರಷ್ಟು ಹಳೆಯದು. ನಾಟ್ಯಶಾಲೆ, ಚಿತ್ರಶಾಲೆಗಳು ಇವೆ. ಗ್ರಾಟ್ಸ್ ನಗರದ ಪ್ರಾಚೀನ ಭಾಗವನ್ನು (ಓಲ್ಡ್ ಟೌನ್) 1999ರಲ್ಲಿ ಯುನೆಸ್ಕೊದ ವಿಶ್ವಪಾರಂಪರಿಕ ಪಟ್ಟಿಗೆ ಸೇರಿಸಲಾಗಿದೆ.

ಗ್ರಾಟ್ಸ್ ನಗರ ವಿಯೆನ್ನ – ಮಾರಿಬೊರ್ ರೈಲು ಮಾರ್ಗದಲ್ಲಿ ಒಂದು ಮುಖ್ಯ ನಿಲ್ದಾಣ. ಇಲ್ಲಿಂದ ಯೂಗೊಸ್ಲಾವಿಯದ ಲ್ಯೂಬ್ಲಿಯಾನ, ಟ್ರಿಯೆಸ್ಟ್ ಮತ್ತು ಹಂಗರಿಯ ಸೊಂಬಾಟ್‌ಹೇಗಳಿಗೆ ರೈಲ್ವೆ ಸಂಪರ್ಕವುಂಟು. ವಿಮಾನ ನಿಲ್ದಾಣ ಇರುವುದು ಗ್ರಾಟ್ಸ್‌ನ ದಕ್ಷಿಣಕ್ಕೆ 9 ಕಿಮೀ ದೂರದಲ್ಲಿ.

ಕಬ್ಬಿಣ – ಉಕ್ಕು, ಸೂಕ್ಷ್ಮ ಸಲಕರಣೆ, ಭಟ್ಟಿ, ಚರ್ಮ, ಕಾಗದ, ಬಟ್ಟೆ – ಇವು ಇಲ್ಲಿಯ ಮುಖ್ಯ ಉದ್ಯಮಗಳು. ರೈಲ್ವೆ ಕಾರ್ಯಾಗಾರಗಳೂ ಇವೆ. ಮದ್ಯ, ಹಣ್ಣು ಇವುಗಳಿಗೆ ವ್ಯಾಪಾರಕೇಂದ್ರ.

9ನೆಯ ಶತಮಾನದಲ್ಲಿ ಬಹುಶಃ ಇಲ್ಲೊಂದು ಕೋಟೆಯಿತ್ತು. ಆ ಶತಮಾನದಲ್ಲಿ ಇದರ ಹೆಸರು ಮೊಟ್ಟಮೊದಲಿಗೆ ಕಾಣಬರುತ್ತದೆ. ಇದು ಪಟ್ಟಣದ ಹಕ್ಕು ಗಳಿಸಿದ್ದು 1240 ರಲ್ಲಿ.

ಇದು ಅನೇಕ ವರ್ಷಗಳ ಕಾಲ ಸ್ಟಿರಿಯದ ಕೇಂದ್ರವಾಗಿತ್ತು. 16 ನೆಯ ಶತಮಾನದಲ್ಲಿ ಇಲ್ಲಿ ಕೋಟೆಕೊತ್ತಲಗಳು ನಿರ್ಮಿತವಾದವು. ಪ್ರಸಿದ್ಧ ಜರ್ಮನ್ ಖಗೋಳವಿಜ್ಞಾನಿ ಯೋಹಾನ್ ಕೆಪ್ಲರ್ ಈ ಪಟ್ಟಣದಲ್ಲಿ ಕೆಲಸ ಮಾಡುತ್ತಿದ್ದ. ನೆಪೋಲಿಯಾನಿಕ್ ಯುದ್ಧಗಳ ಕಾಲದಲ್ಲಿ 1797 ಮತ್ತು 1805 ರಲ್ಲಿ ಗ್ರಾಟ್ಸ್ ಫ್ರೆಂಚರಿಗೆ ವಶವಾಗಿತ್ತು. 19ನೆಯ ಶತಮಾನದಲ್ಲಿ ಈ ನಗರ ತುಂಬ ಬೆಳೆಯಿತು. ಇದಕ್ಕೆ ನಗರದ ಸ್ಥಾನ ಲಭ್ಯವಾದ್ದು 1850ರಲ್ಲಿ. (ಎಂಎಚ್)

**ಗ್ರಾನೈಟ್ :** ಸಾಮಾನ್ಯವಾಗಿ ಎಲ್ಲೆಲ್ಲೂ ದೊರೆಯುವ ಅಗ್ನಿಶಿಲೆ, ನಮ್ಮ ಸುತ್ತಮುತ್ತ ಕಾಣುವ ಬಿಳುಪು ಅಥವಾ ಕೆಂಪು ಛಾಯೆಯ ಬಂಡೆಗಳಾಕಾರದಲ್ಲಿ ನೆಲದ ಮೇಲೆ ಎದ್ದು ನಿಂತಿರುವ ಕಲ್ಲು. ಇದರ ಚಪ್ಪಡಿಗಳನ್ನು ಎಬ್ಬಿಸುವುದಕ್ಕೆ ಬೆಂಕಿಯನ್ನು ಉಪಯೋಗಿಸುವುದರಿಂದ ಇದಕ್ಕೆ ಸುಟ್ಟುಗಲ್ಲು ಎಂಬ ಹೆಸರು ವಾಡಿಕೆಯಲ್ಲಿದೆ. ಈ ಬಗೆಯ ಕಲ್ಲು ಭೂಮಿಯ ಒಳಗೆ ಅತಿ ಉಷ್ಣದ ಫಲವಾಗಿ ರೂಪುಗೊಳ್ಳುವುದರಿಂದ ಹರಳು ಹರಳಾಗಿರುವುದು. ಸಾಮಾನ್ಯವಾಗಿ ಆರ್ಥೋಕ್ಲೇಸ್, ಪ್ಲೇಜಿಯೋಕ್ಲೇಸ್, ಕ್ವಾರ್ಟ್ಸ್, ಹಾರ್ನ್‌ಬ್ಲೆಂಡ್ ಮತ್ತು ಬಯೊಟೈಟ್ ಖನಿಜಗಳು ಗ್ರಾನೈಟಿನಲ್ಲಿ ಮುಖ್ಯವಾಗಿ ಸೇರಿರುತ್ತವೆ. ಅದಕ್ಕೂ ಕಡಿಮೆ ಪ್ರಮಾಣದಲ್ಲಿ ಮ್ಯಾಗ್ನಟೈಟ್, ಅಪಟೈಟ್, ಗಾರ್ನೆಟ್‌ಗಳೂ ಇರಬಹುದು. ಕಪ್ಪುಬಣ್ಣದ ಖನಿಜಗಳಾದ ಹಾರ್ನ್‌ಬ್ಲೆಂಡ್ ಬಯೋಟೈಟ್ (ಕರಿ ಅಭ್ರಕ) ಇವು ಹೆಚ್ಚಿದ್ದರೆ ಕಲ್ಲು ಕಪ್ಪು ಛಾಯೆ ಪಡೆಯುತ್ತದೆ. ಫೆಲ್ಡ್‌ಸ್ಪಾರ್ ಖನಿಜ ಕೆಂಪುಬಣ್ಣದ್ದಾಗಿದ್ದರೆ ಕಲ್ಲಿಗೆ ಕೆಂಪು ಛಾಯೆ ಬರುವುದು. ರಾಮನಗರ ಬಳಿ ದೊರೆಯುವ ಗ್ರಾನೈಟ್ ಕಲ್ಲು ತಿಳಿ ಬೂದುಬಣ್ಣದ್ದು.

ಗ್ರಾನೈಟ್ ಪದದ ಮೂಲ ಲ್ಯಾಟಿನ್ನಿನ ಗ್ರಾನಮ್. ಅಲ್ಲಿ ಇದರ ಅರ್ಥ ಕಣ. ಕಣಕಣ ಒಟ್ಟುಗೂಡಿ ಹರಳು ಹರಳುಗಳಾಗಿ ಕಲ್ಲು ರೂಪುಗೊಂಡಿರುವುದರಿಂದ ಈ ಕಲ್ಲಿಗೆ ಗ್ರಾನೈಟ್ ಎಂದು ಹೆಸರು ಬಂದಿದೆ. ಇದನ್ನು ಕಣಶಿಲೆ ಎಂದೂ ಕರೆಯುವುದುಂಟು. ಗ್ರಾನೈಟ್ ಬೃಹದಾಕಾರದ ಶಿಲಾ ಸಮೂಹಗಳಾಗಿ ಕಂಗೊಳಿಸುತ್ತದೆ. ನಂದಿಬೆಟ್ಟ, ಸಾವನದುರ್ಗ, ಶಿವಗಂಗೆ, ಚಾಮುಂಡಿ – ಈ ಬೆಟ್ಟಗಳೆಲ್ಲ ಪೂರ್ತಿ ಗ್ರಾನೈಟಿನಿಂದ ರೂಪಿತವಾದವು. ಭೂಚರಿತ್ರೆಯ ಎಲ್ಲ ಕಾಲಗಳಲ್ಲಿಯೂ ಭೂಮಿಯ ಹೊರಪದರವನ್ನು ಭೇದಿಸಿ ಗ್ರಾನೈಟ್ ಹೊರಬಂದಿರುವುದು ಕಾಣುತ್ತದೆ. ಆದರೆ ವಿಶೇಷವಾಗಿ ಕಾಣುವುದು ಅತಿ ಪ್ರಾಚೀನವಾದ ಪ್ರೀಕೇಂಬ್ರಿಯನ್ ಯುಗದ ಶಿಲೆಗಳಲ್ಲಿ ಮಾತ್ರ. ಬೆಂಗಳೂರು ಸುತ್ತಮುತ್ತ ಕಾಣುವ ಗ್ರಾನೈಟ್ ಕಲ್ಲು ಸುಮಾರು ಮೂರು ಸಾವಿರ ಮಿಲಿಯನ್ ವರ್ಷಗಳಷ್ಟು ಹಳೆಯದು. ಕರ್ನಾಟಕ ರಾಜ್ಯದ ಬಹುಭಾಗ ಗ್ರಾನೈಟ್ ಸಂಬಂಧವಾದ ಶಿಲೆಗಳಿಂದ ಆವೃತವಾಗಿದೆ. ಈ ಕಲ್ಲನ್ನು ಕಟ್ಟಡಕ್ಕಾಗಿ ನಾನಾ ರೀತಿಯಲ್ಲಿ ಉಪಯೋಗಿಸುತ್ತಾರೆ. ಸೈಜುಕಲ್ಲಾಗಿ, ಚಪ್ಪಡಿಗಳಾಗಿ, ಕಲ್ಲುಕಂಬಗಳಾಗಿ, ಜಲ್ಲಿಯಾಗಿ ಇದರ ಉಪಯೋಗ ಉಂಟು.

ಗ್ರಾನೈಟ್ ಅತ್ಯುತ್ತಮವಾದ ಕಟ್ಟಡ ಕಲ್ಲು. ಬಹುಕಾಲ ಬಾಳುವಂಥದ್ದು. ಸಾವಿರ ವರ್ಷ ಕಳೆದರೂ ಈಗಲೂ ಹೊಚ್ಚ ಹೊಸದಾಗಿ ಕಾಣಿಸುವ ಗೊಮ್ಮಟನ ಮಹಾಮೂರ್ತಿ ಗ್ರಾನೈಟ್ ಕಲ್ಲಿನಿಂದ ಕಡೆದದ್ದು. ಹಂಪೆಯ ದೇವಸ್ಥಾನಗಳು ಕಲಾಕೃತಿಗಳು ಗ್ರಾನೈಟ್‌ನಿಂದ ರೂಪಿತವಾದವು. ಬೆಂಗಳೂರಿನ ವಿಧಾನಸೌಧ ರಚಿತವಾಗಿರುವುದು ಮಲ್ಲಸಂದ್ರ ಮತ್ತು ದೊಡ್ಡಬಳ್ಳಾಪುರದ ಬಳಿ ದೊರೆಯುವ ಗ್ರಾನೈಟ್ ಕಲ್ಲಿನಿಂದ. (ಬಿ.ಪಿ.ಆರ್.)

**ಗ್ರಾನೈಟ್ ನಗರ :** ಅಮೆರಿಕ ಸಂಯುಕ್ತ ಸಂಸ್ಥಾನಗಳ ಇಲಿನಾಯ್ ರಾಜ್ಯದ ಮ್ಯಾಡಿಸನ್ ಕೌಂಟಿಯಲ್ಲಿ ಮಿಸಿಸಿಪಿ ನದಿಯ ದಂಡೆಯ ಮೇಲಿರುವ ಒಂದು ಕೈಗಾರಿಕಾ ನಗರ. ಸೇಂಟ್ ಲೂಯಿಗೆ ಈಶಾನ್ಯದಲ್ಲಿ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 29,849 (2010). ಹಿಂದೆ ಇದು ಗ್ರಾಮ ಪ್ರದೇಶವಾಗಿತ್ತು. 1891 ರಲ್ಲಿ ಸೇಂಟ್ ಲೂಯಿಯ ಫ್ರೆಡರಿಕ್ ಜಿ. ಮತ್ತು ವಿಲಿಯಂ ಎಫ್. ನೀಡ್ರಿಂಗ್‌ಹೌಸ್ ಎಂಬಿಬ್ಬರು ತಮ್ಮ ಗ್ರಾನೈಟ್ ಉಪಕರಣ ಕೈಗಾರಿಕೆಯನ್ನು ವಿಸ್ತರಿಸಲು ಈ ಸ್ಥಳವನ್ನು ಪಡೆದುಕೊಂಡರು. ಕ್ರಮೇಣ ಇದು ಬೆಳೆಯಿತು. ಉಕ್ಕಿನ ಕೈಗಾರಿಕೆ ಪ್ರಾಮುಖ್ಯ ಗಳಿಸಿತು. ಈಗ ಗ್ರಾನೈಟ್ ಉಪಕರಣ ಕೈಗಾರಿಕೆ ಅಲ್ಲಿ ಇಲ್ಲ. ನಗರಕ್ಕೆ ಅದರ ಹೆಸರು ಬಂದದ್ದು ಈ ಕೈಗಾರಿಕೆಯಿಂದಾಗಿ. ಲೋಹದ ಧಾರಕಗಳು, ರೈಲ್ವೆ ಸಲಕರಣೆ, ರಸಾಯನ ವಸ್ತು, ಸ್ಟೋವ್ ಮುಂತಾದ ಪದಾರ್ಥಗಳೂ ತಯಾರಾಗುತ್ತವೆ. ಹಲವು ರೈಲು ಮಾರ್ಗಗಳೂ ರಸ್ತೆಗಳೂ ಇಲ್ಲಿ ಸಂಧಿಸುತ್ತವೆ. (ಎಸ್.ಎನ್.ಎಲ್.)

**ಗ್ರಾನ್ಯುಲೋಮ ಇಂಗ್ವೈನಲಿ :** ಡೊನೊವಾನಿಯ ಗ್ರಾನ್ಯುಲೋಮೇಟಿಸ್ ಕ್ರಿಮಿಯಿಂದ ಉಂಟಾಗುವ, ಮುಖ್ಯವಾಗಿ ಚರ್ಮದ ಅಂಟುರೋಗ. ಲೈಂಗಿಕ ರೋಗವೂ ಹೌದು. ಜನನೇಂದ್ರಿಯದ ಮತ್ತು ಆಸುಪಾಸಿನ ಚರ್ಮದ ಮೇಲೆ ಬಹುಕಾಲ ಉಳಿದಿರುವುದು ಈ ರೋಗದ ಸ್ವಭಾವ. ಇದರ ವ್ರಣ ತಾನಾಗಿಯೇ ಮಾಯುವುದಿಲ್ಲ. ಸಾಮಾನ್ಯವಾಗಿ ವ್ರಣ ದೇಹದ ಒಂದೇ ಭಾಗದಲ್ಲಿ ಇರುವುದಾದರೂ ರಕ್ತಚಲನೆಯಿಂದಾಗಿ ರೋಗ ದೇಹದ ಇತರ ಕಡೆಗಳಿಗೂ ಪ್ರಸರಿಸಬಹುದು.

ಈ ರೋಗವನ್ನು ಮೊದಲು ಗುರುತಿಸಿದವ (1882) ವೈದ್ಯ ಮೆಕ್ಲಿಯೋಡ್. ವಿಶಿಷ್ಟ ರೀತಿಯ ಸೂಕ್ಷ್ಮಜೀವಿಗಳು ಈ ರೋಗದ ವ್ರಣಗಳಲ್ಲಿವೆಯೆಂದು ಪ್ರಕಟಿಸಿದವ (1903) ಐರಿಶ್ ವೈದ್ಯನೂ ಆಗ ಮದ್ರಾಸು ಸರ್ಕಾರದ ವೈದ್ಯಸೇವೆಯಲ್ಲಿದ್ದವನೂ ಆದ ಚಾರಲ್ಸ್ ಡೊನೊವಾನ್. ವೈದ್ಯ ಆಂಡರ್ಸನ್ ಈ ಸೂಕ್ಷ್ಮಜೀವಿಗಳನ್ನು ತತ್ತಿಯ ಹಳದಿ ಲೋಳೆ ಚೀಲದಲ್ಲಿ ಬೆಳೆಸಲು (1903) ಸಮರ್ಥನಾದ. ರಕ್ತಚಲನೆಯಿಂದ ಕ್ರಿಮಿಗಳ ವ್ಯಾಪನಶೀಲತೆಯನ್ನು ರಾಜಮ್ ಮತ್ತು ಸಂಗಡಿಗ ವೈದ್ಯರು 1954 ರಲ್ಲಿ ಬೆಳಕಿಗೆ ತಂದರು. ಯುರೋಪನ್ನು ಬಿಟ್ಟು ಪ್ರಪಂಚದ ಎಲ್ಲೆಡೆಗಳಲ್ಲಿಯೂ ಈ ರೋಗ ಉಂಟು. ಭಾರತದ ದಕ್ಷಿಣ ಪ್ರಾಂತಗಳಲ್ಲಿ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಹೆಚ್ಚಾಗಿ ಇದೆ. ಅಮೆರಿಕದ ನೀಗ್ರೋ ಮತ್ತು ದಕ್ಷಿಣ ಭಾರತದ ದ್ರಾವಿಡರಲ್ಲಿ ಹೆಚ್ಚು.

ಡೊನೊವಾನಿಯ ಗ್ರಾನ್ಯುಲೋಮೇಟಸ್ ಎಂಬ ಕ್ರಿಮಿ ಅನೇಕ ಆಕಾರಗಳಲ್ಲಿ ಕಾಣುತ್ತದೆ. ಲೀಷ್ಮನನ ಇಲ್ಲವೇ ಗೀಯಂಸನ ವರ್ಣಕ್ರಮದಿಂದ ಬಣ್ಣಕಟ್ಟಿ ಪರೀಕ್ಷಿಸಿದಾಗ ಇದು ಚೆನ್ನಾಗಿ ವ್ಯಕ್ತವಾಗುತ್ತದೆ. ಇವು ಕೋಶರಹಿತ. ಆದ್ದರಿಂದ ಇವುಗಳಿಗೆ ಬಣ್ಣರಹಿತ ಪರಿಧಿ ಉಂಟು. ಗುಲಾಬಿ ಬಣ್ಣದ ಕ್ರಿಮಿಗಳು ಪಿನ್ನಿನಾಕಾರದಂತೆ, ಚುಕ್ಕಿಯಂತೆ ಇಲ್ಲವೆ ಕಡ್ಡಿಯಂತೆ ಇರುತ್ತವೆ. ಅಲ್ಲದೆ ದುಂಡನೆಯ ಅಥವಾ ಅಂಡಾಕೃತಿಯ ಗುಲಾಬಿ ಬಣ್ಣದ 0.0015 ಮಿಮೀ ಗಾತ್ರವಿರುವ ಕೋಶವುಳ್ಳ ಕ್ರಿಮಿಗಳನ್ನು ಕೂಡ ನೋಡಬಹುದು. ಕ್ರಿಮಿಗಳು ಸಾಮಾನ್ಯವಾಗಿ ಚರ್ಮವನ್ನು ಆಕ್ರಮಿಸಿ ಅಲ್ಲೆ ವೃದ್ಧಿಯಾಗುತ್ತವೆ. ಸೋಂಕುಂಟಾದ ಮೇಲೆ ರೋಗ ಗೋಚರಿಸುವ ವೇಳೆ ದಿವಸಗಳಿಂದ 5 ಮಾಸಗಳ ವರೆಗೂ ಇರಬಹುದು. ಸಾಧಾರಣವಾಗಿ ಇದು ಹದಿನೈದು ದಿವಸಗಳಷ್ಟಿರುತ್ತದೆ.

ರೋಗಲಕ್ಷಣಗಳು: ಜನನೇಂದ್ರಿಯಗಳ ಮೇಲೆ ಮತ್ತು ತೊಡೆಸಂದುಗಳಲ್ಲಿ 1.5 – 4 ಸೆಂಮೀ ಅಗಲದ ನೋವಿಲ್ಲದ ಬೊಕ್ಕೆ ಗಂಟು ಅಥವಾ ಮಿಂಚುವ ಗುಲಾಬಿ ಬಣ್ಣದ ವ್ರಣಗಳು ಏಳುತ್ತವೆ. ಸ್ವಲ್ಪ ಕಾಲಾನಂತರ ಬೊಕ್ಕೆಗಂಟುಗಳ ಮೇಲಿನ ಪೊರೆ ಹರಿದು ವ್ರಣಗಳಾಗುವುವು. ವ್ರಣಕ್ಕೆ ವ್ಯವಸ್ಥಿತವಾದ ಮೇರೆ ಇಲ್ಲ. ಅಲ್ಲದೆ ಅದು ನೋವನ್ನುಂಟುಮಾಡುವುದಿಲ್ಲ, ಅದು ರಕ್ತರಸವನ್ನು ಹೊರಸೂಸುತ್ತ ಗೆದ್ದಲುಗೂಡಿನಂತೆ ಹರಳು ಹರಳಾಗಿ ಗಡ್ಡೆ ಕಟ್ಟಿಕೊಂಡಿರಬಹುದು. ಸುತ್ತಲಿನ ಚರ್ಮದ ಮೇಲೆ ಹರಡುತ್ತ ದೊಡ್ಡದಾಗುವುದು ಸಾಮಾನ್ಯ. ಆದರೆ ಆ ಸ್ಥಳಕ್ಕೆ ಸಂಬಂಧಪಟ್ಟ ದುಗ್ಧರಸ ಗ್ರಂಥಿಗಳು ದೊಡ್ಡವಾಗದೆ ಇರುವುದು ಇದರ ವೈಶಿಷ್ಟ್ಯ. ದೇಹದ ಬೇರೆ ಕಡೆಗಳಲ್ಲಿಯೂ ಆಗಾಗ್ಗೆ ಗ್ರಾನ್ಯುಲೋಮ ಇಂಗ್ವೈನಲಿ ಕಂಡುಬರಬಹುದು. ಇಂಥವನ್ನು ಬಹುವಾಗಿ ಗುದದ್ವಾರ, ಕುತ್ತಿಗೆ ಮತ್ತು ಕಾಲುಗಳಲ್ಲಿ ಕಾಣಬಹುದು. ರೋಗಾಣುಗಳು ರಕ್ತದ ಮೂಲಕ ಹಬ್ಬಿ ಎಲುಬು, ಯಕೃತ್ತು ಮತ್ತು ಪ್ಲೀಹಗಳಲ್ಲಿ ಗಾಯಗಳು ಕಾಣುವುವು. ಎಲುಬು ಊತಗೊಂಡು ನೋವನ್ನು ಉಂಟುಮಾಡುತ್ತದೆ. ಯಕೃತ್ತು ರೋಗಗ್ರಸ್ತವಾಗಿ ಜಲೋದರ (ಅಸೈಟಿಸ್) ಬರುತ್ತದೆ. ವ್ರಣ ಮಾಯುತ್ತ ದಪ್ಪ ಮತ್ತು ಬಿಗಿಯುವ ಕಲೆಯಾಗಿ ಉಳಿಯುತ್ತದೆ. ಇದು ದುಗ್ಧನಾಳಗಳ ಮೇಲೆ ಒತ್ತಡವನ್ನು ಉಂಟುಮಾಡುವುದರಿಂದ ಜನನೇಂದ್ರಿಯಗಳ ಆನೆ ಬೆಳೆಯುವುದು. ಬಿಗಿ ಕಲೆಗಳಿಂದ ಯೋನಿದ್ವಾರ ಮತ್ತು ಗುದದ್ವಾರಗಳು ಸಂಕುಚಿತವಾಗ ಬಹುದು. ಬಾಯಿಯ ಸುತ್ತ ವ್ರಣ ಇದ್ದು ಅದು ವಾಸಿಯಾಗದಂತೆ ಬಾಯಿ ಚಿಕ್ಕದಾಗುವುದು. ಲಿಂಗ ಅಂಡಕೋಶದಲ್ಲಿ ಹುಗಿದು ಬಿಡಬಹುದು. ಭಗೋಷ್ಠಗಳು ನಾಶವಾಗಿ ಯೋನಿ ಮತ್ತು ಗುದದ್ವಾರಗಳೆರಡೂ ಕಲೆತು ಹೋಗಬಹುದು.

ಚಿಕಿತ್ಸೆ: ಟೆಟ್ರಸೈಕ್ಲಿನನ್ನು ದಿವಸಕ್ಕೆ ಎರಡು ಗ್ರಾಮಿನಂತೆ ಬಾಯಿಂದ 21 ದಿನಗಳ ಕಾಲ ಕೊಡಬೇಕು. ಚಿಕಿತ್ಸೆಯಲ್ಲಿ ಬಳಸುವ ಇತರ ಜೀವಾಣು ರೋಧಕಗಳೆಂದರೆ ಅಜಿತ್ರೊಮೈಸಿನ್ ಪ್ರತಿವಾರ ಒಂದು ಗ್ರಾಂ, ಅಥವಾ 500 ಮಿಗ್ರಾಂ ಪ್ರತಿವಾರ, ಇಲ್ಲವೆ ಡೊಕ್ಸಿಸೈಕ್ಲಿನ್ 100 ಮಿಗ್ರಾಂ ದಿನಕ್ಕೆ ಎರಡು ಬಾರಿ, ಇಲ್ಲವೆ ಎರಿತ್ರೊಮೈಸಿನ್ 500 ಮಿ.ಗ್ರಾಂ ದಿನಕ್ಕೆ ನಾಲ್ಕು ಬಾರಿ. ಈ ಎಲ್ಲ ಔಷಧಿಗಳನ್ನು ಬಾಯಿಂದ ಕನಿಷ್ಠ ಮೂರುವಾರಗಳ ಕಾಲ ಕೊಡಬೇಕು. ಜನನೇಂದ್ರಿಯಗಳ ವಿಕಾರವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದು ಹೊಸ ಆಕಾರವನ್ನು ಕಲ್ಪಿಸಿ ಹೊಲಿಯಬೇಕು. ಶೇ. 10 ರೋಗಿಗಳಲ್ಲಿ ರೋಗ ಮರುಕಳಿಸುವುದು. ಬಿಗಿ ಕಲೆಗೆ ಗಾಯವಾದಲ್ಲಿ ವ್ರಣ ಮರಳಿ ಬರುವುದು. ಇಂಥವರಿಗೆ ಮತ್ತೊಮ್ಮೆ ಮೇಲೆ ವಿವರಿಸಿದಂತೆ ಔಷಧಿ ಕೊಡಬೇಕು. ಜಗ್ಗದಿದ್ದರೆ ಶೇ. 1 ಆಂಟಿಮೊನಿಯನ್ನು ರಕ್ತನಾಳಗಳಲ್ಲಿ 2 ಘನ ಸೆಂಮೀನಿಂದ ಮೊದಲು ಮಾಡಿ ಪ್ರತಿದಿವಸ ಇಲ್ಲವೆ 2, 3 ದಿವಸಗಳಿಗೊಮ್ಮೆ ದಿವಸವೊಂದರ 10 ಘನ ಸೆಂಮೀವರೆಗೂ ಕೊಡಬೇಕು. ಸಂಪೂರ್ಣ ಗುಣವಾಗಿದೆ ಎಂದು ಹೇಳಲು ಚಿಕಿತ್ಸಾನಂತರ ರೋಗಿಯನ್ನು ಎರಡು ವರ್ಷ ನಜರಿನಲ್ಲಿಡಬೇಕಾಗುತ್ತದೆ. ಆದರೂ ಸಂಪೂರ್ಣ ಗುಣವಾಗುವುದೆಂಬ ಭರವಸೆ ಏನೂ ಇಲ್ಲ. ರೋಗಿಗಳು ರಕ್ತಹೀನತೆ, ಕ್ಷಯ, ಇಲ್ಲವೆ ಏಡಿಗ್ರಂಥಿ ರೋಗದಿಂದ ಸಾಯುವುದುಂಟು. (ಎನ್.ಕೆ.ಎಂ.)

**ಗ್ರಾಫ್, ಆರ್ಟುರೊ :** 1848–1913. ಇಟಾಲಿಯನ್ ಕವಿ. ಅಥೆನ್ಸ್‌ನಲ್ಲಿ ಹುಟ್ಟಿದನಾದರೂ ಈತನ ಪೂರ್ವಜರು ಜರ್ಮನರು. ನೇಪಲ್ಸ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿ 1882 ರಲ್ಲಿ ರೋಮಿನಲ್ಲಿ ಇಟಾಲಿಯನ್ ಸಾಹಿತ್ಯದ ಉಪನ್ಯಾಸಕನಾಗಿ ನಿಂತ. ಅನಂತರ ಟ್ಯೂರಿನಿನಲ್ಲಿ ಪ್ರಾಧ್ಯಾಪಕನಾಗಿ ನೇಮಕಗೊಂಡ (1876–1913). ಕವಿ ಲೇಯಪಾರ್ಡೀಯಂತೆ ಈತನೂ ತೀವ್ರ ನಿರಾಶಾವಾದಿ. ಆತನನ್ನು ಕುರಿತು ಈತ ಕೆಲವು ಉತ್ತಮ ಲೇಖನಗಳನ್ನು ಬರೆದಿದ್ದಾನೆ.

ಈತನ ಕಾವ್ಯಗಳು ಅನೇಕ ಸಂಪುಟಗಳಲ್ಲಿ ಪ್ರಕಟವಾಗಿವೆ. ಈತ ಹಲಕೆಲವು ನಾಟಕಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಕಾವ್ಯಾಂಶವೇ ಪ್ರಧಾನವಾಗಿದೆ. ಈತನ ಕೃತಿಗಳು ಆ ಶತಮಾನದ ಭಾವಗೀತ ಸಾಹಿತ್ಯದಲ್ಲಿ ಉನ್ನತಸ್ಥಾನ ಪಡೆದಿವೆ. 1915ರಲ್ಲಿ ಪೊಯೆಸಿ ಎಂಬ ಹೆಸರಿನ ಈತನ ಆಯ್ದ ಕವನಗಳು ಪ್ರಕಟಗೊಂಡಿವೆ. ಟ್ಯೂರಿನಿನಲ್ಲಿ ಈತ ಕಾಲವಾದ. (ಪಿ.ಆರ್.ಎಂ.)

**ಗ್ರಾಫ್, ರೇನ್ಯೇಡೆ :** 1641–73. ಡಚ್ ವೈದ್ಯ ಮತ್ತು ಜೀವವಿಜ್ಞಾನಿ, ಅಂಗರಚನಾಪರಿಣತ. ಶ್ಚೂನ್‌ಹೋವೆನಿನಲ್ಲಿ 1641ರ ಜುಲೈ 30ರಂದು ಜನನ. ಲೊವೈನ್, ಉಟ್ರೆಕ್ಟ್, ಲೈಡನ್ ಮತ್ತು ಆಂಜಿಯರ್ಸುಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಸ್ವಲ್ಪ ಕಾಲ ಪ್ಯಾರಿಸಿನಲ್ಲಿ ವೈದ್ಯ ವೃತ್ತಿ ನಡೆಸಿ 1667ರಲ್ಲಿ ಡೆಲ್ಫ್‌ಗೆ ಹಿಂತಿರುಗಿ ಬಂದು ಸಂಶೋಧನೆಗಳಲ್ಲಿ ನಿರತನಾದ. ಎಲ್ಲ ಪ್ರಾಣಿಗಳೂ ತತ್ತಿಗಳಿಂದ ಬೆಳೆಯುತ್ತವೆಂಬುದು ಅಂದಿನ ನಂಬಿಕೆಯಾಗಿತ್ತು. ಇದರ ನೈಜತೆಯನ್ನು ಗ್ರಾಫ್ ಶೋಧಿಸಿದ. ಸಸ್ತನಿಗಳ ಅಂಡಾಶಯದಲ್ಲಿ ಅಂಡಾಣುವಿನ ಸುತ್ತ ಇರುವ ಜೀವಕೋಶ ಪದರಗಳ ಸಂಪುಟವನ್ನು ಇವನು ತತ್ತಿ ಎಂದು ವಿವರಿಸಿದ (1672). ಇದು ತಪ್ಪು ಎಂದು ಅನಂತರದ ಶೋಧನೆಗಳಿಂದ ತಿಳಿದುಬಂದರೂ ಗ್ರಾಫ್‌ನ ಈ ಶೋಧನೆಯ ಪ್ರಾಮುಖ್ಯವನ್ನು ಅಲ್ಲಗಳೆಯುವಂತಿಲ್ಲ. ಹೆಣ್ಣು ಸ್ತನಿಯ ಅಂಡಾಶಯ ಕೋಶಿಕೆಗಳಿಗೆ (ಫಾಲಿಕಲ್ಸ್) ಈತನ ಹೆಸರನ್ನೇ ಇಡಲಾಗಿದೆ (ಗ್ರಾಫಿಯನ್ ಫಾಲಿಕಲ್ಸ್). ಈ ಅಂಡಾಶಯ ಕೋಶಿಕೆಗಳಿಂದ ಅಂಡಾಣು ಬಲಿತು ಹೊರಬೀಳುವುದನ್ನೂ ಇವನು ವಿವರಿಸಿದ್ದಾನೆ. ಗಂಡು ಸಸ್ತನಿಗಳಲ್ಲಿರುವ ವೃಷಣಗಳ ಸೂಕ್ಷ್ಮರಚನೆಯನ್ನು ಕೂಡ ಆ ಮೊದಲೇ ಇವನು ವಿವರಿಸಿದ್ದ (1668). ಪ್ರಯೋಗದ ಸಲುವಾಗಿ ನಾಯಿಯಲ್ಲಿ ಮೇದೋಜೀರಕಾಂಗ ಮತ್ತು ಪಿತ್ತಕೋಶಗಳಿಂದ ರಸಗಳನ್ನು ಹೊರತೆಗೆದು ಸಂಗ್ರಹಿಸುವ ವಿಧಾನಗಳನ್ನು 1664 ರಲ್ಲಿ ಆವಿಷ್ಕರಿಸಿದ. ಅಲ್ಲದೇ ಪ್ರಾಣಿಗಳನ್ನು ಸಂಗ್ರಹಾಲಯಗಳಲ್ಲಿ ಸಂರಕ್ಷಿಸಿಡುವ ವಿಧಾನಗಳನ್ನು ಕಂಡುಹಿಡಿದು ಉತ್ತಮಗೊಳಿಸಿದ. 1673ರ ಆಗಸ್ಟ್ 17ರಂದು ಈತ ನಿಧನನಾದ. (ಎಚ್.ಬಿ.ಡಿ.;ಡಿ.ಎಸ್.ಎಸ್.)

**ಗ್ರಾಫ್ ಸಿದ್ಧಾಂತ :** ಗಣಿತಶಾಸ್ತ್ರದಲ್ಲಿ ಬರುವ ಒಂದು ಮುಖ್ಯ ಪರಿಕಲ್ಪನೆ. ವಿಭಿನ್ನ ಮತ್ತು ಮೇಲುನೋಟಕ್ಕೆ ಪರಸ್ಪರ ಸಾಮಾನ್ಯವಾದದ್ದು ಏನೂ ಇಲ್ಲವೆಂದು ತೋರುವಂಥ, ಅನೇಕ ಕ್ಷೇತ್ರಗಳಲ್ಲಿ ಗ್ರಾಫ್ ಸಿದ್ಧಾಂತದ ಅನ್ವಯ ಇರುವುದು ಅದರ ಆಧುನಿಕತೆಗೆ ಹೇಗೋ ಪಟುತೆಗೂ ಹಾಗೆಯೇ ನಿದರ್ಶನ. ಅರ್ಥಶಾಸ್ತ್ರ, ಮನೋವಿಜ್ಞಾನ, ಜೀವವಿಜ್ಞಾನ, ಸಾಗಣೆಯ ಸಮಸ್ಯೆಗಳು, ವೈದ್ಯುತ ಸಂಪರ್ಕ, ಎಂಜಿನಿಯರಿಂಗ್ ಇವೇ ಮುಂತಾದವು ಈ ವಿಭಿನ್ನ ಕ್ಷೇತ್ರಗಳು. ಗ್ರಾಫ್ ಸಿದ್ಧಾಂತದ ಮೂಲಪುರುಷ ಸ್ವಿಟ್ಜರ್ಲೆಂಡಿನ ಪ್ರಸಿದ್ಧ ಗಣಿತ ವಿಜ್ಞಾನಿ ಲಿಯೊನಾರ್ಡ್ ಆಯ್ಲರ್ (1707–83) **(ನೋಡಿ– ಆಯ್ಲರ್, ಲಿಯೊನಾರ್ಡ್)**. ಕ್ಯೊನಿಷ್‌ಬರ್ಗ್ ಸೇತುವೆಗಳ ಸಮಸ್ಯೆಯನ್ನು ಬಿಡಿಸುವ ಹಾದಿಯಲ್ಲಿ ಗ್ರಾಫ್ ಸಿದ್ಧಾಂತ ಮೈದಳೆಯಿತು. ಇದನ್ನು ಕುರಿತ ಈತನ ಮೊದಲ ಪ್ರಬಂಧ 1736 ರಲ್ಲಿ ಪ್ರಕಟವಾಯಿತು. ಆದರೆ ಪ್ರಾರಂಭದ ದಿವಸಗಳಲ್ಲಿ ಗ್ರಾಫ್ ಸಿದ್ಧಾಂತವನ್ನು ಗಣಿತಶಾಸ್ತ್ರದ ಒಂದು ಅಂಗವೆಂದು ಯಾರೂ ಪರಿಗಣಿಸಿರಲಿಲ್ಲ. ಕಾರಣ, ಇದು ಅನೇಕ ಮನೋರಂಜಕ,

ಚಮತ್ಕಾರಿಕ, ನಿಗೂಢ ಸಮಸ್ಯೆ ಹಾಗೂ ಒಗಟುಗಳನ್ನು ಬಿಡಿಸುವ ಸಾಧನವಾಗಿತ್ತು. ಆದರೆ ಈಗ ಇತರ ಹಲವಾರು ಜ್ಞಾನಶಾಖೆಗಳೊಡನೆ ಗ್ರಾಫ್ ಸಿದ್ಧಾಂತಕ್ಕೆ ಸಂಬಂಧವೇರ್ಪಟ್ಟು ಇತರ ಬೆಳೆವಣಿಗೆಗೆ ಅಸಾಧಾರಣವಾದ ಕುಮ್ಮಕ್ಕು ಲಭಿಸಿದೆ.

ಗ್ರಾಫ್ ಸಿದ್ಧಾಂತದಲ್ಲಿ ಬಳಸುವ ಪದ ಗ್ರಾಫ್‌ಗೂ (ಆಲೇಖ) ವಿಶ್ಲೇಷಣ ಜ್ಯಾಮಿತಿಯಲ್ಲಿ ನಾವು ಅರ್ಥವಿಸುವ ಅದೇ ಪದಕ್ಕೂ ಸಂಬಂಧವಿಲ್ಲ. ಗ್ರಾಫ್ ಸಿದ್ಧಾಂತದ ಗ್ರಾಫ್ ಎಂದರೆ ಕೇವಲ ಬಿಂದು ಮತ್ತು ರೇಖೆಗಳ ಸಮುದಾಯ ಹಾಗೂ ಅವುಗಳಿಂದ ಅನುಗತವಾಗುವ ಜ್ಯಾಮಿತೀಯ ಆಕೃತಿಗಳು ಮಾತ್ರ ಹಾಗಿದ್ದರೂ ಐತಿಹಾಸಿಕ ಕಾರಣಗಳಿಂದ ಗ್ರಾಫ್ ಪದವೇ ಬಳಕೆಯಲ್ಲಿ ಉಳಿದುಕೊಂಡಿದೆ.

ಗ್ರಾಫ್ ಪದದ ಅರ್ಥವನ್ನು ಸ್ಪಷ್ಟಪಡಿಸಲು ಈ ಕೆಳಗಿನ ಉದಾಹರಣೆಯನ್ನು ಪರಿಶೀಲಿಸಬಹುದು. ಕಬ್ಬಡಿ ಆಟ ನಡೆಯುತ್ತಿದೆಯೆಂದು ಭಾವಿಸೋಣ. ಇದರಲ್ಲಿ *A, B, C, D, E, F* ಹಾಗೂ *G* ತಂಡಗಳು ಭಾಗವಹಿಸಿರಲಿ. ಪಂದ್ಯಗಳು ಪ್ರಾರಂಭವಾದ ಕೆಲವು ದಿವಸಗಳ ಬಳಿಕ ಈ ಕೆಳಗಿನ ಪರಿಸ್ಥಿತಿ ಇರಲಿ.

*A* ತಂಡ *B* ತಂಡದೊಂದಿಗೆ ಆಟವಾಡಿದೆ.

*B* ತಂಡ *C, D, E* ತಂಡಗಳೊಂದಿಗೆ ಆಟವಾಡಿದೆ.

*C* ತಂಡ *B, D* ತಂಡಗಳೊಂದಿಗೆ ಆಟವಾಡಿದೆ.

*D* ತಂಡ *B, C, E, F* ತಂಡಗಳೊಂದಿಗೆ ಆಟವಾಡಿದೆ.

*E* ತಂಡ *A, D, F* ತಂಡಗಳೊಂದಿಗೆ ಆಟವಾಡಿದೆ.

*F* ತಂಡ *D, E* ತಂಡಗಳೊಂದಿಗೆ ಆಟವಾಡಿದೆ.

*G* ತಂಡ ಯಾವ ತಂಡದೊಂದಿಗೂ ಆಟವಾಡಿಲ್ಲ.

ಈ ಸನ್ನಿವೇಶವನ್ನು ಚಿತ್ರದಲ್ಲಿ ಸೂಕ್ತ ರೇಖೆಗಳನ್ನು ಎಳೆದು ಕಾಣಿಸಿದೆ.

ಎರಡು ತಂಡಗಳನ್ನು ಕೂಡಿಸುವ ಒಂದು ರೇಖೆ ಅವೆರಡೂ ಪರಸ್ಪರ ಆಟವಾಡಿವೆ ಎಂಬುದನ್ನು ಸೂಚಿಸುತ್ತದೆ. ಉದಾಹರಣೆಗೆ *A* ತಂಡ *B* ತಂಡಗಳೊಂದಿಗೆ, *B* ತಂಡ *C, D, E, A* ತಂಡದೊಂದಿಗೆ ಆಟವಾಡಿವೆ ಎಂದೂ *G* ತಂಡ ಯಾವ ತಂಡದೊಡನೆಯೂ ಆಟವಾಡಿಲ್ಲ ಎಂದೂ ಚಿತ್ರದಿಂದ ಸ್ಪಷ್ಟವಾಗಿ ತಿಳಿಯಬಹುದು. ಇಂಥ ಆಕೃತಿಯೇ ಇಲ್ಲಿ




ಚಿತ್ರ 1

ಬಳಸುವ ಗ್ರಾಫ್. ಇದು ಕೆಲವು ಬಿಂದುಗಳು ಮತ್ತು ಅವನ್ನು ಕೂಡಿಸುವ ರೇಖೆಗಳ ಸಮುದಾಯ ಎಂಬುದು ಸ್ಪಷ್ಟ. ಮೇಲಿನ ಆಕೃತಿಯಲ್ಲಿ A, B, C, D, E, F, G ಗಳಿಗೆ ಗ್ರಾಫಿನ ಶೃಂಗಗಳೆಂದೂ AB, BC, CD, DE, EF, BD ಗಳಿಗೆ ಗ್ರಾಫಿನ ಅಂಚುಗಳೆಂದೂ ಹೆಸರು. ಗ್ರಾಫಿನ ಅಂಚುಗಳು ಸರಳವಾಗಿರಬೇಕೆಂದಿಲ್ಲ. ಅವು ವಕ್ರರೇಖೆಗಳೂ ಆಗಿರಬಹುದು. ಇಲ್ಲಿ ಕಾಣುವ ವೈಶಿಷ್ಟ್ಯವೆಂದರೆ ಎರಡು ಅಂಚುಗಳು ಒಂದನ್ನೊಂದು ಒಂದು ಬಿಂದುವಿನಲ್ಲಿ ಛೇದಿಸಬಹುದು. ಆದರೆ ಅಂಥ ಛೇದಕ ಬಿಂದು ಶೃಂಗವಲ್ಲ. AB ಅಂಚಿನ A ಮತ್ತು B ಬಿಂದುಗಳಿಗೆ ಆ ಅಂಚಿನ ಕೊನೆ ಶೃಂಗಗಳು (ಎಂಡ್ ವರ್ಟಿಸಸ್) ಎಂದು ಹೆಸರು. AB ಅಂಚಿನಲ್ಲಿ A ಶೃಂಗ ಸಂಲಗ್ನವಾಗಿದೆ (ಇನ್ಸಿಡೆಂಟ್) ಎಂದೂ AB ಅಂಚು A ಬಿಂದುವಿನಲ್ಲಿ ಸಂಲಗ್ನವಾಗಿದೆ ಎಂದೂ ಹೇಳುತ್ತೇವೆ. ಒಂದು ಶೃಂಗದಲ್ಲಿ ಸಂಲಗ್ನವಾಗಿರುವ ಅಂಚುಗಳ ಸಂಖ್ಯೆಗೆ ಆ ಶೃಂಗದ ಸ್ತರ (ಡಿಗ್ರಿ) ಎಂದು ಹೆಸರು. ಉದಾಹರಣೆಗೆ ಚಿತ್ರ 1ರಲ್ಲಿ D ಶೃಂಗದ ಸ್ತರ 4, F ಶೃಂಗದ ಸ್ತರ 2. ಒಂದು ಶೃಂಗದ ಸ್ತರ ಶೂನ್ಯವಾಗಿದ್ದರೆ ಅದಕ್ಕೆ ಏಕಾಂತ (ಐಸೊಲೇಟೆಡ್) ಶೃಂಗ ಎಂದು ಹೆಸರು. ಉದಾಹರಣೆಗೆ ಚಿತ್ರ 1ರ G ಒಂದು ಏಕಾಂತ ಶೃಂಗ.



ಚಿತ್ರ 2

ಶೂನ್ಯ ಗ್ರಾಫುಗಳು ಮತ್ತು ಪರಿಪೂರ್ಣ ಗ್ರಾಫುಗಳು (ನಲ್ ಗ್ರಾಫ್ಸ್ ಅಂಡ್ ಕಂಪ್ಲೀಟ್ ಗ್ರಾಫ್ಸ್): ಅಂಚುಗಳಿಲ್ಲದ ಗ್ರಾಫಿಗೆ ಅಂದರೆ ಗ್ರಾಫಿನ ಪ್ರತಿಯೊಂದು ಶೃಂಗವೂ ಏಕಾಂತ ಶೃಂಗವಾಗಿರುವ ಗ್ರಾಫಿಗೆ, ಶೂನ್ಯ ಗ್ರಾಫ್ ಎಂದು ಹೆಸರು. ಹೀಗಲ್ಲದೆ ಪ್ರತಿ ಒಂದು ಜೊತೆ ಶೃಂಗಗಳನ್ನೂ ಕೂಡಿಸುವ ಅಂಚುಗಳಿರುವ ಗ್ರಾಫ್‌ಗೆ ಪರಿಪೂರ್ಣ ಗ್ರಾಫ್ ಎಂದು ಹೆಸರು. ಚಿತ್ರ 2ರಲ್ಲಿ 1, 2, 3, 4, ಮತ್ತು 5 ಶೃಂಗಗಳಿರುವ ಪರಿಪೂರ್ಣ ಗ್ರಾಫುಗಳನ್ನು ಕಾಣಿಸಿದೆ.

ಗ್ರಾಫಿನಲ್ಲಿರುವ ಅಂಚುಗಳ ಸಂಖ್ಯೆ : $V_1, V_2, ,..........V_n$ ಗಳು ಒಂದು ಗ್ರಾಫಿನ ಶೃಂಗಗಳಾಗಿರಲಿ; ಮತ್ತು $V_i$ ಬಿಂದುವಿನ ಸ್ತರ $d_i$ ಆಗಿರಲಿ. ಇಲ್ಲಿ $i = 1, 2 ........, n$ ಈಗ

$d_1 + d_2 + ...... + d_n$ ...(1)

ಮೊತ್ತವನ್ನು ಪರಿಶೀಲಿಸೋಣ. ಇದರಲ್ಲಿ ಗ್ರಾಫಿನ ಪ್ರತಿಯೊಂದು ಅಂಚಿನ ಎಣಿಕೆ ಎರಡು ಸಲವಾಗಿರುತ್ತದೆ. (ಆ ಅಂಚಿನ ಪ್ರತಿಯೊಂದು ಕೊನೆ ಶೃಂಗದಲ್ಲಿ ಒಂದೊಂದು ಸಲ). ಹೀಗೆ ಪ್ರತಿಯೊಂದು ಅಂಚು ಕೂಡ ಎರಡು ಸಲ ಎಣಿಕೆಗೆ ಬರುವುದರಿಂದ

$d_1 + d_2 + ...... + d_n = 2q$ ...(2)

ಆಗುತ್ತದೆ. ಇಲ್ಲಿ q ಗ್ರಾಫಿನಲ್ಲಿರುವ ಅಂಚುಗಳು ಒಟ್ಟು ಸಂಖ್ಯೆ.

ಈ ಕೆಳಗಿನದು ಗ್ರಾಫ್ ಸಿದ್ಧಾಂತದ ಮೊದಲನೆಯ ಪ್ರಮೇಯ.

ಪ್ರಮೇಯ 1: ಒಂದು ಗ್ರಾಫಿನ ಎಲ್ಲ ಶೃಂಗಗಳ ಸ್ತರಗಳ ಮೊತ್ತ ಆ ಗ್ರಾಫಿನಲ್ಲಿರುವ ಅಂಚುಗಳ ಸಂಖ್ಯೆಯ ಎರಡರಷ್ಟು.

ಈಗ ಸಮೀಕರಣ (2) ರ ಎಡದಲ್ಲಿರುವ ಎಲ್ಲ ಸಮ (ಈವನ್) ಸ್ತರಗಳನ್ನು ತೆಗೆದರೆ ಉಳಿಯುವ ಎಲ್ಲ ವಿಷಮ ಸ್ತರಗಳ ಮೊತ್ತ ಸಮಸಂಖ್ಯೆ ಆಗಿರುತ್ತದೆ. ಆದ್ದರಿಂದ (2) ರಲ್ಲಿ ವಿಷಮ ಸ್ತರಗಳ ಸಂಖ್ಯೆ ಒಂದು ಸಮಸಂಖ್ಯೆಯಾಗಿರುತ್ತದೆ.

ಪ್ರಮೇಯ 2: ಒಂದು ಗ್ರಾಫಿನಲ್ಲಿ ವಿಷಮ ಸ್ತರದ ಶೃಂಗಗಳ ಸಂಖ್ಯೆ ಸಮ.

ಸಂಯೋಜಿತ ಗ್ರಾಫುಗಳು (ಕನೆಕ್ಟೆಡ್ ಗ್ರಾಫ್ಸ್): ಒಂದು ಗ್ರಾಫಿನ ಶೃಂಗಗಳು $V_1, V_2, ,..........V_n$ ಆಗಿರಲಿ. ಪ್ರತಿಯೊಂದು $i = 1, 2 ........, n - 1$ ಸಂಖ್ಯೆಗೂ Vi $V_i + 1$ ಒಂದು ಅಂಚು ಆಗಿರಲಿ. ಆಗ $V_1, V_2, ,..........V_n$ UÉ $V_1 - V_n$ ನಡೆ (ವಾಕ್) ಎಂದು ಹೆಸರು. ಇಂಥ ಒಂದು ನಡೆಯಲ್ಲಿ ಕೆಲವೊಂದು ಬಿಂದುಗಳು ಮತ್ತು ಅಂಚುಗಳು ಒಂದೇ ಆಗಿರಬಹುದು.




ಚಿತ್ರ 3

ಒಂದು ನಡೆಯಲ್ಲಿ ಎಲ್ಲ ಅಂಚುಗಳು ಭಿನ್ನವಾಗಿದ್ದರೆ ಅದಕ್ಕೆ ತುಣುಕು ನಡೆ (ಟ್ರೇಲ್) ಎಂದು ಹೆಸರು. ಒಂದು ನಡೆಯಲ್ಲಿ ಎಲ್ಲ ಬಿಂದುಗಳೂ ಅಂಚುಗಳೂ ಭಿನ್ನವಾಗಿದ್ದರೆ ಅದಕ್ಕೆ ದಾರಿ (ಪಾತ್) ಎಂದು ಹೆಸರು. $V_1, V_2, ,..........V_n$ ದಾರಿಯಲ್ಲಿ $V_1 = V_n$ ಆಗಿದ್ದರೆ ಅದಕ್ಕೆ ಒಂದು ಚಕ್ರ (ಸೈಕಲ್) ಎಂದು ಹೆಸರು. ಉದಾಹರಣೆಗೆ ಚಿತ್ರ (3)ರಲ್ಲಿ $V_1 V_2 V_3 V_4$ ಒಂದು $V_1 - V_4$. ನಡೆ.ಇದು ತುಣುಕು

ನಡೆ ಅಲ್ಲ. $V_1 V_2\ V_3 V_4 V_2$ ಆದರೂ $V_1, V_2$ ತುಣುಕು ನಡೆ; ಆದರೆ ಇದು $V_1 V_2$ ದಾರಿಯಲ್ಲ. ಈಗ $V_1 V_2\ V_3 V_4 V_5 V_6$ ಎಂಬುದು $V_1 - V_6$ ದಾರಿ ಮತ್ತು $V_1 V_2\ V_3 V_4 V_2$ ಒಂದು ಚಕ್ರ ಈಗ $V_1 V_2\ V_3 V_4 V_5 V_6$ ಎಂಬುದು $V_2 - V_6$ ದಾರಿ ಮತ್ತು, $V_2\ V_3 V_4 V_2$ ಒಂದು ಚಕ್ರ.

ಒಂದು ಗ್ರಾಫಿನಲ್ಲಿ ಪ್ರತಿ ಒಂದು ಜೊತೆ ಶೃಂಗಗಳಿಗೂ ಅವನ್ನು ಸೇರಿಸುವ ಒಂದು ದಾರಿ ಇದ್ದರೆ ಆ ಗ್ರಾಫಿಗೆ ಸಂಯೋಜಿತ ಗ್ರಾಫ್ ಎಂದು ಹೆಸರು.

ಕ್ಯೋನಿಷ್‌ಬರ್ಗ್ ಸೇತುವೆಗಳ ಸಮಸ್ಯೆ: ಪ್ರಕೃತ ಕ್ಯಾಲಿನಿನ್‌ಗ್ರ್ಯಾಡ್ ಎಂದು ಹೆಸರಿರುವ ಕ್ಯೋನಿಷ್‌ಬರ್ಗ್ ಪೂರ್ವ ಪ್ರಷ್ಯದಲ್ಲಿನ ಒಂದು ನಗರ. ಇದು ನಡುಗಡ್ಡೆಗಳನ್ನೊಳಗೊಂಡಿರುವ ಪ್ರೆಗಲ್ ಎಂಬ ಹೆಸರಿನ ನದಿಯ ದಂಡೆಯಲ್ಲಿದೆ. ಈ ಪಟ್ಟಣದ ನಡುಗಡ್ಡೆಗಳನ್ನೂ ಉಳಿದ ಭಾಗಗಳನ್ನೂ ಚಿತ್ರ(4)ರಲ್ಲಿ ತೋರಿಸಿರುವಂತೆ P, Q, R, S, T, U, V ಎಂಬ ಏಳು ಸೇತುವೆಗಳಿಂದ ಜೋಡಿಸಲಾಗಿದೆ. ಕ್ಯೋನಿಷ್‌ಬರ್ಗ್ ಸೇತುವೆಗಳ ಸಮಸ್ಯೆಯ ನಿರೂಪಣೆ ಹೀಗಿದೆ:

ಯಾವುದಾದರೊಂದು ಸ್ಥಳದಿಂದ ಹೊರಟು ಏಳು ಸೇತುವೆಗಳನ್ನೂ, ಪ್ರತಿಯೊಂದನ್ನು ಒಮ್ಮೆ ಮಾತ್ರ, ದಾಟಿ ಮತ್ತೆ ಅದೇ ಸ್ಥಳಕ್ಕೆ ತಿರುಗಿಬರುವ ಕ್ರಮ ಏನು? ಹಿಂದೆ ಹೇಳಿರುವಂತೆ




ಚಿತ್ರ 4

ಆಯ್ಲರ್‌ನ 1736 ರ ಸುಪ್ರಸಿದ್ಧ ನಾಂದೀ ಪ್ರಬಂಧ ಈ ಸಮಸ್ಯೆಯ ಪರಿಹಾರ. ಆಯ್ಲರನ ಉತ್ತರ ಬಲು ಸ್ವಾರಸ್ಯಕರವಾಗಿದೆ. ಇದನ್ನು ಚಿತ್ರ 5ರಲ್ಲಿ ಗ್ರಾಫ್ ರೂಪದಲ್ಲಿ ಬಿಡಿಸಿ ತೋರಿಸಿದೆ.

ಪಟ್ಟಣದ ನಾಲ್ಕು ಭಾಗಗಳನ್ನು A, B, C, D ಶೃಂಗಗಳಿಂದ ಗುರುತಿಸಲಾಗಿದೆ.; (ಚಿತ್ರ 4 ನ್ನು ಸಹ ನೋಡಬಹುದು); ಪಟ್ಟಣದ ಏಳು ಸೇತುವೆಗಳನ್ನು ಈ ಗ್ರಾಫಿನ ಏಳು ಅಂಚುಗಳಿಂದ ಗುರುತಿಸಲಾಗಿದೆ. ಅಂದರೆ ಚಿತ್ರ(4)ರಲ್ಲಿ ಸಮಸ್ಯೆಯನ್ನು ಚಿತ್ರ (5)ರಲ್ಲಿರುವ ಗ್ರಾಫ್ ಪ್ರತೀಕೀಕರಿಸುತ್ತದೆ. ಈ ಮೇಲಿನ ಸಮಸ್ಯೆಯನ್ನು ಚಿತ್ರ(4) ರಲ್ಲಿರುವ ಒಂದು ಗ್ರಾಫಿನ ಸಮಸ್ಯೆಯಾಗಿ ಹೀಗೆ ಹೇಳಬಹುದು. ಈ ಗ್ರಾಫಿನಲ್ಲಿ ಯಾವುದಾದರೂ ಒಂದು ಶೃಂಗದಿಂದ ಪ್ರಾರಂಭ ಮಾಡಿ, ಎಲ್ಲ ಅಂಚುಗಳನ್ನು ಒಮ್ಮೆ ಮಾತ್ರ ಹಾಯ್ದು ಮತ್ತೆ ಅದೇ ಶೃಂಗಕ್ಕೆ ಮರಳಿ ಬರುವುದು ಸಾಧ್ಯವೇ? ಇದು ಅಸಾಧ್ಯ ಎಂದು ಆಯ್ಲರ್ ಸಾಧಿಸಿದ್ದಾನೆ. ಈ ಸಾಧನೆಯ ವಿವರಣೆಯನ್ನು ಈಗ ನೋಡೋಣ.




ಚಿತ್ರ 5

ಆಯ್ಲರ್‌ನ ಗ್ರಾಫುಗಳು: ಯಾವ ಗ್ರಾಫಿನಲ್ಲಿ ಯಾವುದೇ ಒಂದು ಶೃಂಗದಿಂದ ಹೊರಟು ಎಲ್ಲ ಅಂಚುಗಳನ್ನೂ ಒಮ್ಮೆ ಮಾತ್ರ ಹಾಯ್ದು ಮತ್ತೆ ಅದೇ ಶೃಂಗಕ್ಕೆ ಮರಳಿ ಬರುವುದು ಸಾಧ್ಯವೋ ಅಂಥ ಗ್ರಾಫಿಗೆ ಆಯ್ಲರನ ಗ್ರಾಫ್ ಎಂದು ಹೆಸರು. ಒಂದು ಗ್ರಾಫ್ ಆಯ್ಲರನ ಗ್ರಾಫ್ ಆಗಿರಬೇಕಾದರೆ ಬೇಕಾದ ಮತ್ತು ಸಾಕಾದ (ನೆಸಸರಿ ಅಂಡ್ ಸಫಿಷಿಯಂಟ್) ನಿರ್ಬಂಧಗಳನ್ನು ಆಯ್ಲರ್ ಈ ಕೆಳಗಿನ ಪ್ರಮೇಯದಲ್ಲಿ ಹೇಳಿದ್ದಾನೆ.

ಪ್ರಮೇಯ 3: ಒಂದು ಸಂಯೋಜಕ ಗ್ರಾಫಿನ ಪ್ರತಿಯೊಂದು ಶೃಂಗದ ಸ್ತರ ಒಂದು ಸಮಸಂಖ್ಯೆ ಆಗಿದ್ದರೆ ಮತ್ತು ಆಗಿದ್ದರೆ ಮಾತ್ರ ಆ ಗ್ರಾಫ್ ಆಯ್ಲರನ ಗ್ರಾಫ್ ಆಗುತ್ತದೆ.

ಈ ಪ್ರಮೇಯದ ಮೂಲದ ಚಿತ್ರ(5) ರಲ್ಲಿರುವ ಗ್ರಾಫ್ ಆಯ್ಲರನ ಗ್ರಾಫ್ ಅಲ್ಲ ಎಂದು ತಿಳಿದುಬರುತ್ತದೆ; ಮತ್ತು ಈ ಮೇಲಿನ ಸಮಸ್ಯೆಗೆ ಪರಿಹಾರ ದೊರೆಯುತ್ತದೆ.

ಹ್ಯಾಮಿಲ್ಟನ್ ಗ್ರಾಫುಗಳು : ಸುಪ್ರಸಿದ್ಧ ಐರಿಷ್ ಗಣಿತಶಾಸ್ತ್ರಜ್ಞ ವಿಲಿಯಮ್ ಹ್ಯಾಮಿಲ್ಟನ್ (1805–65) ಒಂದು ವಿಶೇಷವಾದ ಒಗಟನ್ನು 1859 ರಲ್ಲಿ ಬಹಿರಂಗಪಡಿಸಿದ. ಚಿತ್ರ (6)ರಲ್ಲಿನ ಗ್ರಾಫಿನಲ್ಲಿ 20 ಶೃಂಗಗಳಿವೆ. ಪ್ರತಿಯೊಂದು ಶೃಂಗವೂ ಪ್ರಪಂಚದ ಒಂದು ದೊಡ್ಡ ಪಟ್ಟಣವನ್ನು ಪ್ರತಿನಿಧಿಸುತ್ತದೆ. ಈಗ ಸಮಸ್ಯೆ ಹೀಗಿದೆ: ಈ ಗ್ರಾಫಿನಲ್ಲಿ ಯಾವುದಾದರೂ ಒಂದು ಶೃಂಗದಿಂದ ಪ್ರಾರಂಭಮಾಡಿ ಪ್ರತಿಯೊಂದು ಶೃಂಗವನ್ನೂ ಒಂದೇ ಒಂದು




ಚಿತ್ರ 6

ಸಲ ಹಾದು ಹೋಗುವ ಒಂದು ಚಕ್ರೀಯ ದಾರಿಯನ್ನು ಕಂಡುಹಿಡಿಯಬೇಕು. ಇಂಥ ಒಂದು ಚಕ್ರೀಯ ದಾರಿ ಇದ್ದರೆ ಅದಕ್ಕೆ ಹ್ಯಾಮಿಲ್ಟೋನಿಯನ್ ಗ್ರಾಫ್ ಎಂಬ ಹೆಸರುಂಟು. ಚಿತ್ರ(6)ರಲ್ಲಿರುವ ಗ್ರಾಫ್ ಒಂದು ಹ್ಯಾಮಿಲ್ಟೋನಿಯನ್ ಗ್ರಾಫ್. ಕಾರಣ 1, 2, 3, ..... 20, 1 ಇದರಲ್ಲಿ ಒಂದು ಹ್ಯಾಮಿಲ್ಟೋನಿಯನ್ ಚಕ್ರ. ಸಾಮಾನ್ಯವಾಗಿ ಒಂದು ದತ್ತ ಗ್ರಾಫ್ ಹ್ಯಾಮಿಲ್ಟೋನಿಯನ್ ಗ್ರಾಫ್ ಹೌದೇ ಅಲ್ಲವೇ ಎಂದು ನಿರ್ಧರಿಸುವುದು ಅಷ್ಟು ಸುಲಭವಲ್ಲ.

ಒಗಟುಗಳು ಮತ್ತು ಗ್ರಾಫುಗಳು: ಗ್ರಾಫ್ ಸಿದ್ಧಾಂತದ ಆರಂಭದ ದಿವಸಗಳಲ್ಲಿ ಒಗಟುಗಳ ಒಡಮು ಈ ಸಿದ್ಧಾಂತದ ಒಂದು ಪ್ರಧಾನ ಅಂಗವೇ ಆಗಿತ್ತು. ಇಂದಿಗೂ ಒಗಟುಗಳ ಪರಿಶೀಲನೆ ಈ ಸಿದ್ಧಾಂತದ ಮೂಲಕ ನಡೆದಿದೆ. ಕೆಲವನ್ನು ಇಲ್ಲಿ ಬರೆದಿದೆ.

ಅಂಬಿಗನ ಒಗಟು: ಒಬ್ಬ ಅಂಬಿಗ (A) ತನ್ನೊಂದಿಗಿರುವ ಒಂದು ನಾಯಿ (B), ಒಂದು ಕುರಿ (C) ಮತ್ತು ಕೋಸುಗಡ್ಡೆ (D) ಇವನ್ನು ಹೊಳೆಯ ಒಂದು ದಡದಿಂದ ಇನ್ನೊಂದು ದಡಕ್ಕೆ ಸಾಗಿಸಬೇಕಾಗಿದೆ. ಅವನ ದೋಣಿ ಚಿಕ್ಕದು.




ಚಿತ್ರ 7

ಅದು ಅಂಬಿಗನೊಂದಿಗೆ ಒಂದು ಸಲಕ್ಕೆ ಒಂದು ವಸ್ತುವನ್ನು ಮಾತ್ರ ಒಯ್ಯಬಲ್ಲದ್ದಾಗಿದೆ. ಅಂಬಿಗನ ಸಮಸ್ಯೆ ಏನೆಂದರೆ ಅವನು ಮೊದಲು ಬುಟ್ಟಿಯನ್ನು ತೆಗೆದುಕೊಂಡು ಹೋದರೆ ಆಗ ಕುರಿಯನ್ನು ನಾಯಿ ಕಬಳಿಸಬಹುದು. ನಾಯಿಯನ್ನು ಒಯ್ದರೆ ಕೋಸುಗಡ್ಡೆಗಳನ್ನು ಕುರಿ ತಿನ್ನಬಹುದು. ಹಾಗಾದರೆ ಅವನು ನಾಯಿ, ಕುರಿ ಮತ್ತು ಬುಟ್ಟಿಗಳನ್ನು ಹೇಗೆ ಸುರಕ್ಷಿತವಾಗಿ ಸಾಗಿಸಬಹುದು? ಈ ಸಮಸ್ಯೆಗೆ ಎರಡು ವಿಧವಾದ ಉತ್ತರಗಳಿವೆ. ಮೊದಲನೆಯದಾಗಿ ಅಂಬಿಗ (A) ಕುರಿಯನ್ನು (C) ಒಯ್ಯಬಹುದು. ಆಗ ಮೊದಲನೆಯ ದಡದಲ್ಲಿ A, B, C, D ಗುಂಪು B D ಆಗುವುದು. ತರುವಾಯ A ಒಬ್ಬನೇ ಮರಳಿ ಬರುತ್ತಾನೆ. ಆಗ ಮತ್ತೆ B D ಗುಂಪು A, B, D ಆಗುವುದು. ಬಳಿಕ A ತನ್ನೊಂದಿಗೆ B ಅಥವಾ D ಯನ್ನು ಒಯ್ದು B ಅಥವಾ D ಯನ್ನು ಎದುರು ದಡದಲ್ಲಿ ಬಿಡಬಹುದು. ಆದರೆ ಯಾವುದನ್ನು ಅಲ್ಲಿ ಬಿಟ್ಟರೂ C ಯನ್ನು ಹಿಂದಕ್ಕೆ ಸಾಗಿಸಲೇಬೇಕು. ಮರಳಿ ಬಂದಾಗ ಮೊದಲನೆಯ ದಡದ ಗುಂಪಿನಲ್ಲಿ ಎರಡು ಸಾಧ್ಯತೆಗಳಿವೆ. ಒಂದು A, C, B ಅಥವಾ A, C, D. ಮುಂದಿನ ಸರದಿಯಲ್ಲಿ B ಅಥವಾ D ಯನ್ನು A ಒಯ್ಯುತ್ತಾನೆ. A ಮರಳಿಬಂದು C ಯನ್ನು ಒಯ್ಯುತ್ತಾನೆ. ಈ ಎಲ್ಲ ಸಾಧ್ಯತೆಗಳನ್ನೂ ಚಿತ್ರದಲ್ಲಿ ಕಾಣಿಸಿದೆ.

ಮೂವರು ಹೊಟ್ಟೆಕಿಚ್ಚಿನ ಗಂಡಂದಿರ ಪೇಚು: ಮೂರು ಗಂಡ ಹೆಂಡಂದಿರ ಜೋಡಿಗಳು ತಮ್ಮ ಪ್ರವಾಸದಲ್ಲಿ ಒಂದು ನದಿಯನ್ನು ದಾಟುವ ಪ್ರಸಂಗ ಬರುತ್ತದೆ. ಅಲ್ಲಿ ಇದ್ದ ಸಣ್ಣ ನಾವೆ ಒಂದು ಸಲಕ್ಕೆ ಇಬ್ಬರನ್ನು ಮಾತ್ರ ಒಯ್ಯಬಲ್ಲದು. ಪ್ರತಿಯೊಂದು ವ್ಯಕ್ತಿಗೂ ದೋಣಿ ನಡೆಸಲು ಬರುತ್ತದೆ. ಎಲ್ಲ ಗಂಡಂದಿರೂ ಬಲು ಹೊಟ್ಟೆಕಿಚ್ಚಿನವರು ಮತ್ತು ಸಂಶಯಪ್ರಕೃತಿಯವರು. ತಾವಿಲ್ಲದಿರುವಾಗ ತಮ್ಮ ಹೆಂಡಂದಿರನ್ನು ಪರಪುರುಷ ಇರುವಲ್ಲಿ ಬಿಡಲು ಒಲ್ಲದವರು. ಹಾಗಾದರೆ ಆ ದಂಪತಿಗಳು ನದಿಯನ್ನು ಹೇಗೆ ದಾಟುತ್ತಾರೆ? ಈ ಸಮಸ್ಯೆಗೆ ಯುಕ್ತ ಪರಿಹಾರವನ್ನು ಗ್ರಾಫಿನ ಮೂಲಕ ಪಡೆಯಬಹುದು.

ಆಟಗಳು ಮತ್ತು ಗ್ರಾಫುಗಳು : ಈ ಮೊದಲೇ ಹೇಳಿರುವಂತೆ ಗ್ರಾಫುಗಳನ್ನು ಆಟಗಳಿಗೂ ಸಂಯೋಜಿಸಲಾಗಿದೆ; ಹೀಗೆ ಮಾಡುವಾಗ ಸಾಮಾನ್ಯವಾಗಿ ಗ್ರಾಫಿನ ಶೃಂಗಗಳು ಆಟದಲ್ಲಿಯ ಸ್ಥಾನಗಳನ್ನು ಗುರುತಿಸುತ್ತವೆ; ಮತ್ತು ಅಂಚುಗಳು ಆಟದಲ್ಲಿಯ ನಿಯಮಗಳಿಗೆ ಅನುಸಾರವಾದ ಚಲನಗಳನ್ನು ಗುರುತಿಸುತ್ತವೆ. ಒಂದು ಸ್ಥಾನದಿಂದ ಮತ್ತೊಂದು ನಿರ್ದಿಷ್ಟ ಸ್ಥಾನಕ್ಕೆ ಹೋಗಲು ಸಾಧ್ಯವೇ ಎಂಬುದು ಆಟಗಳಲ್ಲಿನ ಒಂದು ಸಾಮಾನ್ಯ ಸಮಸ್ಯೆ. ಈ ಸಮಸ್ಯೆಯನ್ನು ಗ್ರಾಫಿನ ಭಾಷೆಯಲ್ಲಿ ಹೀಗೆನ್ನಬಹುದು; ಆಟವನ್ನು ಗ್ರಾಫಿನ ಮೂಲಕ ನಿರೂಪಿಸಿದಾಗ ಎರಡು ದತ್ತ ಶೃಂಗಗಳು ಗ್ರಾಫಿನ ಒಂದೇ ಸಂಯೋಜಿತ ಘಟಕದಲ್ಲಿ (ಕನೆಕ್ಟೆಡ್ ಕಾಂಪೊನೆಂಟ್) ಇರುತ್ತವೆಯೊ ಇಲ್ಲವೊ ಎಂಬುದನ್ನು ಕಂಡುಹಿಡಿಯುವಿಕೆ. ಉದಾಹರಣೆಗಾಗಿ ಚದುರಂಗದ ಆಟವನ್ನು ತೆಗೆದುಕೊಳ್ಳೋಣ. ಇದರಲ್ಲಿರುವ 64 ಚೌಕಗಳನ್ನು 64 ಶೃಂಗಗಳಿಂದ ಗುರುತಿಸೋಣ. ಈ ಆಟದಲ್ಲಿ ಮಂತ್ರಿಯ ನಡೆಯನ್ನು ಗಮನಿಸೋಣ. ಇದು ಅಷ್ಟೊಂದು ಕಠಿಣವಾಗಲಾರದು. ಕಾರಣ ಮಂತ್ರಿ ಒಂದು ಚೌಕದಿಂದ ಯಾವ ಮತ್ತೊಂದು ಚೌಕಕ್ಕಾದರೂ ಹೋಗಬಲ್ಲವನಾಗಿದ್ದಾನೆ. ಈ 64 ಶೃಂಗಗಳ ಮೇಲೆ ಮಂತ್ರಿಯ ನಡೆಯನ್ನು ನಿರೂಪಿಸುವ ಗ್ರಾಫನ್ನು ಎಳೆಯೋಣ. ಗ್ರಾಫಿನಲ್ಲಿ ಮಂತ್ರಿ ಒಂದು ಶೃಂಗದಿಂದ ಮತ್ತೊಂದು ಶೃಂಗಕ್ಕೆ ಒಂದು ನಡೆಯಲ್ಲಿ ಹೋಗುವುದಕ್ಕಾದರೆ ಅವೆರಡು ಬಿಂದುಗಳನ್ನು ಒಂದು ಅಂಚಿನಿಂದ ಸೇರಿಸುತ್ತೇವೆ. ಮಂತ್ರಿ ಒಂದು ಚೌಕದಿಂದ ಹೊರಟು ಪ್ರತಿಯೊಂದು ಚೌಕಕ್ಕೂ ಒಮ್ಮೆ ಮಾತ್ರ ಹೋಗಿ 64 ಚೌಕಗಳನ್ನೂ ಸುತ್ತಿ ತನ್ನ ಮೊದಲಿನ ಸ್ಥಾನಕ್ಕೆ ಬರಬಹುದೇ ಎಂಬುದು ಇಲ್ಲಿನ ಒಂದು ಸುಪ್ರಸಿದ್ಧ ಸಮಸ್ಯೆ. ಇದನ್ನೇ ಗ್ರಾಫಿನ ಒಂದು ಸಮಸ್ಯೆಯನ್ನಾಗಿ ಹೀಗೆ ಹೇಳಬಹುದು: ಈ ಆಟದ ಒಂದು ಗ್ರಾಫಿನಲ್ಲಿ ಹ್ಯಾಮಿಲ್ಟನ್ನನ ಒಂದು ಚಕ್ರವಿದೆಯೇ? ಇದಕ್ಕೆ ಅನೇಕ ಉತ್ತರಗಳಿವೆ.

| | | | | | | | |
|---|---|---|---|---|---|---|---|
| 63 | 22 | 15 | 40 | 1 | 42 | 58 | 18 |
| 14 | 39 | 64 | 21 | 60 | 17 | 2 | 43 |
| 37 | 62 | 23 | 16 | 41 | 4 | 19 | 58 |
| 24 | 13 | 36 | 61 | 20 | 57 | 44 | 3 |
| 11 | 36 | 25 | 52 | 29 | 46 | 5 | 56 |
| 26 | 51 | 12 | 33 | 8 | 55 | 30 | 45 |
| 35 | 10 | 49 | 28 | 53 | 32 | 47 | 6 |
| 50 | 27 | 34 | 9 | 48 | 7 | 54 | 31 |

ವೃಕ್ಷ: ಚಕ್ರಗಳಿಲ್ಲದ ಸಂಯೋಜಕ ಗ್ರಾಫಿಗೆ ವೃಕ್ಷ (ಟ್ರೀ) ಎಂದು ಹೆಸರು. ಉದಾಹರಣೆಗೆ ಚಿತ್ರ(9)ನ್ನು ನೋಡಬಹುದು. ಇಂಥ ಒಂದು ವೃಕ್ಷದಲ್ಲಿ v ಶೃಂಗಗಳೂ e ಅಂಚುಗಳೂ ಇದ್ದರೆ ಅವುಗಳ ನಡುವೆ $v = e + 1$ ಎಂಬ ಸುಲಭ ಸಂಬಂಧವಿರುವುದು ಕಾಣುತ್ತದೆ.



ಚಿತ್ರ 8

ಸಾಮ್ಯಗಳು (ಮ್ಯಾಚಿಂಗ್ಸ್) : ಉದ್ಯೋಗಾವಕಾಶಗಳು ಮತ್ತು ಅಭ್ಯರ್ಥಿಗಳು: ಒಂದು ಕಾರ್ಖಾನೆಯಲ್ಲಿ ಕೆಲವು ಖಾಲಿ ಹುದ್ದೆಗಳು ಮತ್ತು ಅವಕ್ಕೆ ಕೆಲವು ಅಭ್ಯರ್ಥಿಗಳು ಇರಲಿ. ಆಗ ಈ ಕೆಳಗಿನ ಸಮಸ್ಯೆ ಉದ್ಭವಿಸುತ್ತದೆ: ಪ್ರತಿಯೊಂದು ಅಭ್ಯರ್ಥಿಗೂ ಅವನ ಅರ್ಹತೆಗೆ ಸರಿಯಾದ ಒಂದು ಹುದ್ದೆಯನ್ನು ಕೊಡಲು ಸಾಧ್ಯವೇ? ಈ ಸಂದರ್ಭವನ್ನು ಒಂದು ಗ್ರಾಫಿನ ಮೂಲಕ ವಿವರಿಸಬಹುದು. ಉದಾಹರಣೆಗಾಗಿ ಚಿತ್ರ(9) ನೋಡಬಹುದು. ಇದರಲ್ಲಿ M ಹುದ್ದೆಗಳ ಗುಂಪನ್ನೂ P ಅಭ್ಯರ್ಥಿಗಳ ಗುಂಪನ್ನೂ ಗುರುತಿಸಲಿ. $m_1$, $m_2$, $m_3$, $m_4$ ಬೇರೆ ಬೇರೆ ಖಾಲಿ ಹುದ್ದೆಗಳನ್ನೂ $p_1$, $p_2$, $p_3$, $p_4$, $p_5$ ಈ ಹುದ್ದೆಗಳಿಗೆ ಅಭ್ಯರ್ಥಿಗಳನ್ನೂ ಸೂಚಿಸಲಿ. ಈ ಶೃಂಗಗಳ ಮೇಲೆ ಒಂದು ಗ್ರಾಫನ್ನು ಹೀಗೆ ರಚಿಸಬಹುದು.




ಚಿತ್ರ 9

p ಅಭ್ಯರ್ಥಿ m ಹುದ್ದೆಗೆ ಅರ್ಹನಾಗಿದ್ದರೆ PM ಅಂಚನ್ನು ಎಳೆಯುತ್ತೇವೆ. ಉದಾಹರಣೆಗಾಗಿ ಚಿತ್ರ (9)ರಲ್ಲಿ $p_1$ ಅಭ್ಯರ್ಥಿ $m_2$ ಮತ್ತು $m_3$ ಹುದ್ದೆಗಳಿಗೆ ಅರ್ಹ ಎಂದು ಕಾಣಬಹುದು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಅಭ್ಯರ್ಥಿಗಳ ಗುಂಪಿನಲ್ಲಿ ಅಭ್ಯರ್ಥಿಗಳನ್ನು ಕೂಡಿಸುವ ಅಂಚುಗಳು ಹಾಗೂ ಹುದ್ದೆಗಳ ಗುಂಪಿನಲ್ಲಿ ಹುದ್ದೆಗಳನ್ನು ಕೂಡಿಸುವ ಅಂಚುಗಳು ಇಲ್ಲ. ಅಂದರೆ ಒಂದೇ ಗಣದಲ್ಲಿರುವ (ಸೆಟ್) ಬಿಂದುಗಳನ್ನು ಸೇರಿಸುವ ಅಂಚುಗಳು ಇಲ್ಲ. ಇಂಥ ಒಂದು ಗ್ರಾಫಿನ ಶೃಂಗಗಣವನ್ನು p ಮತ್ತು m ಎಂಬ ಎರಡು ವಿಘಟಿತ ಗಣಗಳನ್ನಾಗಿ ವಿಂಗಡಿಸಿ, P ಮತ್ತು M ಶೃಂಗಗಳನ್ನು ಮಾತ್ರ ಜೋಡಿಸಿ ಪಡೆಯುವ ಗ್ರಾಫಿಗೆ ದ್ವಿಭಾಜಿತ ಗ್ರಾಫ್ (ಬೈಪಾರ್ಟೈಟ್ ಗ್ರಾಫ್) ಎಂದು ಹೆಸರು. ಚಿತ್ರ(9) ಒಂದು ದ್ವಿಭಾಜಿತ ಗ್ರಾಫ್. ಅಭ್ಯರ್ಥಿಗಳೆಲ್ಲರಿಗೂ ಹುದ್ದೆಗಳನ್ನು ಕೊಡಬೇಕಾದರೆ ಮೊದಲು ಎಷ್ಟು ಅಭ್ಯರ್ಥಿಗಳಿರುವರೋ ಅಷ್ಟು ಹುದ್ದೆಗಳಿರಬೇಕು. ಆದರೆ ಇಷ್ಟೇ ಸಾಲದು. ಉದಾಹರಣೆಗೆ ಅಭ್ಯರ್ಥಿಗಳಲ್ಲಿ ಇಬ್ಬರು ಮರಗೆಲಸ (ಬಡಗಿತನ) ಬಲ್ಲವರು ಮತ್ತು ಒಬ್ಬ ಬಡಗಿತನ ಹಾಗೂ ಕೊಳಾಯಿ ಕೆಲಸ ಬಲ್ಲವ ಇರಲಿ. ಹುದ್ದೆಗಳಲ್ಲಿ ಒಂದು ಬಡಗಿತನದ ಹುದ್ದೆ ಮತ್ತು ಮೂರು ಕೊಳಾಯಿಗಾರ ಹುದ್ದೆಗಳು ಖಾಲಿ ಇರಲಿ. ಈ ಸಂದರ್ಭದಲ್ಲಿ ಒಂದು ಬಡಗಿತನದ ಹುದ್ದೆಯನ್ನು ಮೂವರಲ್ಲಿ ಯಾರಿಗಾದರೂ ಕೊಡಬಹುದು. ಮೂರು ಕೊಳಾಯಿಗಾರ ಹುದ್ದೆಗಳಲ್ಲಿ ಒಂದನ್ನು ಆ ಕೆಲಸ ಬಲ್ಲವನಿಗೆ ಕೊಡಬಹುದು. ಹೀಗಾದಲ್ಲಿ ಬಡಗಿಯೊಬ್ಬನಿಗೆ ಹುದ್ದೆ ಇಲ್ಲದಂತೆ ಆಗುತ್ತದೆ.

ಈಗ n ಅಭ್ಯರ್ಥಿಗಳು j ಹುದ್ದೆಗಳಿಗೆ ಅರ್ಜಿ ಹಾಕಿದ್ದಾರೆಂದು ಭಾವಿಸೋಣ. ಆಗ ಪ್ರತಿಯೊಬ್ಬ ಅಭ್ಯರ್ಥಿಗೂ ಅವನ ಅರ್ಹತೆಗೆ ಸರಿಯಾದ ಒಂದು ಹುದ್ದೆಯನ್ನು ಈ ಕೆಳಗಿನ ನಿಯಮ ನಿಜ, ಮತ್ತು ನಿಜವಾದರೆ ಮಾತ್ರ ಕೊಡಬಹುದು.



ಚಿತ್ರ 10

ಪ್ರತಿಯೊಂದು ಸಂಖ್ಯೆ $k = 1,2.......n$ ಗೂ k ಅಭ್ಯರ್ಥಿಗಳು ಸಮಗ್ರವಾಗಿ ಅರ್ಹತೆ ಪಡೆದಿರುವ ಕನಿಷ್ಠ k ಹುದ್ದೆಗಳು ಇರಲೇಬೇಕು.

ಆಯ್ಲರನ ಸೂತ್ರ: ಒಂದು ಬಹುಫಲಕದಲ್ಲಿ (ಪಾಲಿಹೆಡ್ರ) v ಶೃಂಗಗಳು, E ಅಂಚುಗಳು ಹಾಗೂ F ಫಲಕಗಳು ಇರಲಿ. ಆಯ್ಲರನ ಸೂತ್ರದ ಮೇರೆಗೆ ಯಾವಾಗಲೂ $V - E + F = 2$ ಆಗಿರುತ್ತದೆ.

ಉದಾಹರಣೆಗೆ ಘನ ತ್ರಿಕೋನದಲ್ಲಿ $V = 4, E = 6, F = 4$

ಘನಚೌಕದಲ್ಲಿ $V = 8, E = 12, F = 6$

ನಕ್ಷೆಗಳಿಗೆ ಬಣ್ಣ ಬಳಿಯುವಿಕೆ: ಒಂದು ದೇಶದ ನಕ್ಷೆಯಲ್ಲಿರುವ (ಮ್ಯಾಪ್) ಎರಡು ಅಥವಾ ಹೆಚ್ಚಿನ ರಾಜ್ಯಗಳಿಗೆ ಉಭಯಸಾಮಾನ್ಯವಾದ ಒಂದು ಸರಹದ್ದು ಇದ್ದರೆ ಅವುಗಳಿಗೆ ಅಕ್ಕಪಕ್ಕದ ರಾಜ್ಯಗಳು ಎಂದು ಹೆಸರು. ಒಂದು ನಕ್ಷೆಗೆ ಬಣ್ಣ ಬಳಿಯುವಿಕೆ ಎಂದರೆ

ಅಕ್ಕಪಕ್ಕದ ರಾಜ್ಯಗಳಿಗೆ ಒಂದೇ ಬಣ್ಣ ಇಲ್ಲದ ಹಾಗೆ ಬಣ್ಣ ಬಳಿಯುವುದು ಎಂದರ್ಥ. ಸಾಕಷ್ಟು ಬಣ್ಣಗಳಿದ್ದಾಗ ಒಂದು ನಕ್ಷೆಗೆ ಬಣ್ಣ ಬಳಿಯುವುದು ಸುಲಭದ ಕೆಲಸ. ಆದರೆ ಕಡಿಮೆ ಬಣ್ಣಗಳಿದ್ದಾಗ ಇದು ಅಷ್ಟು ಸುಲಭವಲ್ಲ.

ನಾಲ್ಕು ಬಣ್ಣಗಳ ಊಹೆ: ನಾಲ್ಕು ಬಣ್ಣಗಳಿಂದ ಯಾವ ನಕ್ಷೆಗೆ ಬೇಕಾದರೂ ಬಣ್ಣ ಬಳಿಯಬಹುದು. ಅಂದರೆ ಒಂದು ನಕ್ಷೆಯಲ್ಲಿನ ರಾಜ್ಯಗಳ ಸಂಖ್ಯೆ ಎಷ್ಟೇ ಇದ್ದರೂ ಮೇಲೆ ಹೇಳಿದ ಷರತ್ತಿನ ಅನುಸಾರ ಬಣ್ಣ ಬಳಿಯಲು ಕೇವಲ ನಾಲ್ಕು ಭಿನ್ನ ಬಣ್ಣಗಳಿದ್ದರೆ ಸಾಕು. ಕೆಲವೊಂದು ನಕ್ಷೆಗಳಿಗೆ ಬಣ್ಣ ಬಳಿಯಲು ನಾಲ್ಕು ಬಣ್ಣಗಳು ಬೇಕೇ ಬೇಕು.



ಚಿತ್ರ 11

ಉದಾಹರಣೆಗೆ ಚಿತ್ರ(11)ಲ್ಲಿ ನೀಲಿ, ಕೆಂಪು, ಹಸುರು, ಹಳದಿ ಬಣ್ಣಗಳನ್ನು ಬಳಸಿದೆ. ಚಿತ್ರದಲ್ಲಿ ಖಾಲಿ ಇರುವ 5ನೆಯ ರಾಜ್ಯಕ್ಕೆ ನೀಲಿ ಬಣ್ಣವನ್ನೂ 7ನೆಯ ರಾಜ್ಯಕ್ಕೆ ಹಸುರು ಬಣ್ಣವನ್ನೂ ಬಳಿಯ ಬಹುದು; ಆಗ ಷರತ್ತು ಪೂರೈಕೆ ಆಗುತ್ತದೆ ಎಂಬುದು ಸ್ಪಷ್ಟ. ಬ್ರಿಟಿಷ್ ಭೌತವಿಜ್ಞಾನಿ ಫೆಡರಿಕ್ ಗುಥ್ರಿ ಈ ಊಹೆಯನ್ನು 1850ರಲ್ಲಿ ಮಂಡಿಸಿದ. ಇಂದಿಗೂ ಇದು ಒಂದು ಪರಿಹಾರ ಸಿಗದ ಮತ್ತು ಗಣಿತಶಾಸ್ತ್ರದ ಅತ್ಯಂತ ಕಠಿಣ ಹಾಗೂ ಪ್ರಖ್ಯಾತವಾದ ಸಮಸ್ಯೆಯಾಗಿ ಉಳಿದಿದೆ. ಪ್ರಾರಂಭದಲ್ಲಿ ಇದಕ್ಕೆ ಅಷ್ಟೊಂದು ಮಹತ್ತ್ವ ಕೊಟ್ಟಿರಲಿಲ್ಲ. ಕಾರಣ, ಗಣಿತಶಾಸ್ತ್ರಜ್ಞರು ಈ ಊಹೆಯನ್ನು ಸಾಕಷ್ಟು ಸುಸ್ಪಷ್ಟವಾಗಿದೆ ಎಂದು ಭಾವಿಸಿದ್ದರು. ಅನಂತರ ಈ ಊಹೆಗೆ ಕೆಲವು ತಪ್ಪು ಸಾಧನೆಗಳು ಪ್ರಕಟಿತವಾದುವು. ಈ ಊಹೆಯ ವೈಶಿಷ್ಟ್ಯವೇನೆಂದರೆ ಇದು ಅಷ್ಟು ಕಠಿಣವಾಗಿದ್ದರೂ ಒಬ್ಬ ಸಾಮಾನ್ಯ ಮನುಷ್ಯನಿಗೂ ಅರ್ಥವಾಗುತ್ತದೆ. ಈ ಊಹೆ ಗ್ರಾಫ್ ಸಿದ್ಧಾಂತದ ಬೆಳೆವಣಿಗೆಗೆ ಮುಖ್ಯ ಕಾರಣವಾಗಿದೆ. ಇದು ಸಾಧಿತವಾಗದಿದ್ದರೂ ಈ ಕೆಳಗಿನ ಪ್ರಮೇಯವನ್ನು ಸಾಧಿಸಲಾಗಿದೆ. ಯಾವ ನಕ್ಷೆಗೆ ಬಣ್ಣ ಬಳಿಯಬೇಕಾದರೂ ಐದಕ್ಕಿಂತ ಜಾಸ್ತಿ ಬಣ್ಣಗಳು ಬೇಕಾಗಿಲ್ಲ. (ಇ.ಎಸ್.ಕೆ.)

**ಗ್ರಾಫೆ :** ಕಾರ್ಲ್ ಫರ್ಡಿನಾಂಡ್ ಫಾನ್ ಗ್ರಾಫೆ (1787–1840) ಮತ್ತು ಆತನ ಮಗ ಆಲ್‌ಬ್ರೆಕ್ಟ್ ಡಬ್ಲ್ಯು.ಇ. ಫಾನ್ ಗ್ರಾಫೆ (1828–70). ಜರ್ಮನಿಯ ಪ್ರಸಿದ್ಧ ವೈದ್ಯರು. ಕಾರ್ಲ್ ಫರ್ಡಿನಾಂಡ್ ಪೋಲೆಂಡಿನ ವಾರ್ಸದಲ್ಲಿ ಹುಟ್ಟಿ ಜರ್ಮನಿಯಲ್ಲಿ ಶಿಕ್ಷಣ ಪಡೆದು ಬರ್ಲಿನಿನಲ್ಲಿ ಶಸ್ತ್ರವೈದ್ಯ ಪ್ರಾಧ್ಯಾಪಕನಾಗಿ ಕೆಲಸಮಾಡಿದ. ಅಂಗವಿಕಾರಗಳನ್ನು ಸರಿಪಡಿಸಿ ಸುರೂಪಕ್ಕೆ ತರಲು ಬಳಸುವ ಪ್ಲಾಸ್ಟಿಕ್ ಶಸ್ತ್ರವೈದ್ಯವಿಧಾನವನ್ನು ಜರ್ಮನಿಯಲ್ಲಿ ಮೊತ್ತಮೊದಲು ಪ್ರಾರಂಭಿಸಿ ಅದರಲ್ಲಿ ಪರಿಣತಿಯನ್ನು ಪಡೆದು ಪ್ಲಾಸ್ಟಿಕ್ ಶಸ್ತ್ರವೈದ್ಯದ ಅಧ್ವರ್ಯುವೆಂದು ಹೆಸರು ಪಡೆದ. ಜೊತೆಗೆ ದೇಹದಲ್ಲಿನ ರಕ್ತ ಪೂರೈಕೆ, ಸಿಸೇರಿಯನ್ ಹೆರಿಗೆ, ಮೂಗನ್ನು ಸುರೂಪಗೊಳಿಸುವಿಕೆ, ಬಾಯಿಯ ಹರಿದ ಅಟ್ಟವನ್ನು ಸರಿಪಡಿಸುವಿಕೆ ಮುಂತಾದ ವಿಧಾನಗಳಲ್ಲಿ ವಿನೂತನ ಬದಲಾವಣೆಗಳನ್ನು ಮಾಡಿ ಗಣನೀಯ ಪ್ರಗತಿ ಸಾಧಿಸಿದ. ಮಗ ಆಲ್‌ಬ್ರೆಕ್ಟ್ ಜೀವಿಸಿದ್ದು ಕೇವಲ 42 ವರ್ಷಗಳವರೆಗೆ. ಈತ ಕಣ್ಣುರೋಗಗಳಲ್ಲಿ ಅನೇಕ ಶೋಧನೆಗಳನ್ನು ಮಾಡಿ 19ನೆಯ ಶತಮಾನದ ಪ್ರಮುಖ ನೇತ್ರ ವೈದ್ಯನೆನಿಸಿಕೊಂಡ. ಈತನನ್ನು ನೇತ್ರರೋಗ ಪ್ರಾಧ್ಯಾಪಕನಾಗಿ 1878ರಲ್ಲಿ ನೇಮಕ ಮಾಡಲಾಯಿತು. ದೃಷ್ಟಿ ಮಾಂದ್ಯಗೊಳಿಸುವ ಮೋತಿಬಿಂದುವನ್ನು ಕೊಯ್ದು ಹೊರತೆಗೆಯುವ ಶಸ್ತ್ರಚಿಕಿತ್ಸೆಯನ್ನು ಇವನು ಯಶಸ್ವಿಯಾಗಿ ಜಾರಿಗೆ ತಂದ (1867). ಗುರಾಣಿಕ ಗ್ರಂಥಿಯ ಅಂತಃಸ್ರಾವದ ಹೆಚ್ಚುವರಿಯಾಗಿರುವ ರೋಗಸ್ಥಿತಿಯಲ್ಲಿ ಕಣ್ಣಿನ ರೆಪ್ಪೆಯಲ್ಲಿ ತೋರುವ ವಿಶಿಷ್ಟ ಲಕ್ಷಣಕ್ಕೆ ಈತನ ಹೆಸರನ್ನೇ ಕೊಡಲಾಗಿದೆ (1864). ಕಣ್ಣುಗುಡ್ಡೆಯಲ್ಲಿ ಏರಿದ ಒತ್ತಡಸ್ಥಿತಿಗೆ (ಗ್ಲೂಕೊಮ) ಪಾಪೆಕೊಯ್ತದ (ಐರಿಡೆಕ್ಟೊಮಿ) ವಿಧಾನವನ್ನು ಕಂಡುಹಿಡಿದ (1857). ಒಂದು ಕಣ್ಣಿನ ರೋಗಸ್ಥಿತಿಯಿಂದಾಗಿ ಇನ್ನೊಂದು ಕಣ್ಣು ವಿನಾಕಾರಣ ಸಹಭಾಗಿಗೊಳ್ಳುವ ಸ್ಥಿತಿಯನ್ನು (ಸಿಂಪಥೆಟಿಕ್ ಆಪ್‌ಥಾಲ್ಮಿಯ) ವಿವರಿಸಿದ (1866). ಮಿದುಳಿನ ರೋಗಗಳಲ್ಲಿ ಮತ್ತು ಹೆಚ್ಚುವರಿ ರಕ್ತ ಒತ್ತಡ ರೋಗದಲ್ಲಿ ಕೆಲವು ವೇಳೆ ಕುರುಡೂ ದೃಷ್ಟಿಮಾಂದ್ಯವೂ ಉಂಟಾಗುವುದರಿಂದ ಆ ಘಟ್ಟಕ್ಕೆ ಪೂರ್ವವೇ ನೇತ್ರದರ್ಶಕದಿಂದ (ಆಪ್ಥಾಲ್ಮಾಸ್ಕೋಪ್) ಕಣ್ಣುಪರೀಕ್ಷೆ ಮಾಡಿ ರೋಗಗಳನ್ನು ಗುರುತಿಸುವ ವಿಧಾನವನ್ನು ಸಾರ್ವತ್ರಿಕವಾಗಿ ಬಳಕೆಗೆ ತಂದದ್ದು ಆಲ್‌ಬ್ರೆಕ್ಟನೇ. ಕ್ಷಯರೋಗ ಪೀಡಿತನಾಗಿ ತೀರ ತರುಣಪ್ರಾಯದಲ್ಲೇ ಮರಣ ಹೊಂದಿದ. (ಡಿ.ಎಸ್.ಎಸ್.; ಪಿ.ಎಸ್.ಎಸ್.)

**ಗ್ರಾಬ್, ಕ್ರಿಸ್‌ಟ್ಯಾನ್ ಡೀಟ್ರಿಕ್ :** 1801–36. ಜರ್ಮನ್ ನಾಟಕಕಾರ. ಜೈಲಿನ ಅಧಿಕಾರಿಯೊಬ್ಬನ ಮಗ. ನ್ಯಾಯಶಾಸ್ತ್ರವನ್ನು ಅಭ್ಯಸಿಸಿದ್ದರೂ ನಾಟಕಕಾರನಾಗಿಯೇ ಉಳಿದ. ಈತ ಜರ್ಮನ್ ಭಾಷೆಯಲ್ಲಿ ಕೆಲವು ನಾಟಕಗಳನ್ನು ರಚಿಸಿದ್ದಾನೆ. ತುಂಬ ಅವ್ಯವಸ್ಥಿತ ಜೀವನವನ್ನು ನಡೆಸಿದ ಈತನನ್ನು ತಿದ್ದಲು ಆಪ್ತಸ್ನೇಹಿತರು ಮಾಡಿದ ಪ್ರಯತ್ನವೆಲ್ಲ ವಿಫಲವಾಯಿತು. ತನ್ನ ದುರಾಚಾರಗಳಿಂದಾಗಿ ಈತ ಅಕಾಲ ಮರಣಕ್ಕೆ ತುತ್ತಾದ. ಜರ್ಮನ್ ಭಾಷೆಯಲ್ಲಿ ಈತನ ದುರಂತಮಯ ಜೀವನವನ್ನು ಆಧರಿಸಿ ಒಂದು ನಾಟಕ ಮತ್ತು ಒಂದು ಕಾದಂಬರಿ ರಚಿತವಾಗಿವೆ. ಈತನ ಹಲವಾರು ನಾಟಕಗಳಲ್ಲಿ ಸ್ವತಂತ್ರ ವಿಚಾರಸಂಪತ್ತು ಮತ್ತು ಸೊಗಸಾದ ಭಾವಗಳನ್ನು ಕಾಣಬಹುದು. ಆದರೆ ಅವು ರಂಗಮಂದಿರದ ಅವಶ್ಯಕತೆಗಳಿಗೆ ತಕ್ಕವಾಗಿಲ್ಲ. 1829ರಲ್ಲಿ ರಚಿತವಾದ ಡಾನ್ ಜುವಾನ್ ಉಂಟ್ ಫೌಸ್ಟ್ ಮತ್ತು ಐತಿಹಾಸಿಕ ಕಾದಂಬರಿಗಳಾದ ಫ್ರೀಡ್ರಿಕ್ ಬಾರ್ಬರೋಸ (1829), ಹೈನ್ರಿಕ್ VI (1830) ಮತ್ತು ನೆಪೋಲಿಯನ್ ಓಡರ್ ಡೀ ಹುಂಡರ್ಟ್ ಟಾಗೆ (1831)– ಇವು ಈತನ ಉತ್ತಮ ಕೃತಿಗಳು. ಡಾನ್ ಜುವಾನ್ ಉಂಟ್ ಫೌಸ್ಟನಲ್ಲಿ ಗ್ರಾಬ್‌ನ ಧೀರಕಲ್ಪನೆಯನ್ನು ಕಾಣಬಹುದು. ಹೈನ್ರಿಕ್ VI, ನೆಪೋಲಿಯನ್ ಓಡರ್ ಡೀ ಹುಂಡರ್ಟ್ ಟಾಗೆಯಲ್ಲಿ ವಾಟರ್‌ಲೂ ಕದನವನ್ನು ರಂಗಭೂಮಿಯ ಮೇಲೆ ತೋರಿಸುವ ಒಂದು ಯತ್ನ ನಡೆದಿದೆ. ಈತನ ಪ್ರತಿಭೆ ಮತ್ತು ವಿಲಕ್ಷಣಗಳಿಗೆ ನಿದರ್ಶನಗಳಾಗಿರುವ ಇವೆರಡೂ ಈತನ ಯಶಸ್ವೀ ನಾಟಕಗಳು. (ಎಸ್.ಎನ್.ಎಸ್.ವಿ.)

**ಗ್ರಾಮ್ ಅಣುತೂಕ :** ಶುದ್ಧ ಪದಾರ್ಥ ಒಂದರ ಅಣುತೂಕ ಎಷ್ಟೋ ಅಷ್ಟು ಗ್ರಾಮ್ ಆ ಪದಾರ್ಥ (ಗ್ರಾಮ್ ಮಾಲಿಕ್ಯುಲರ್ ವೇಟ್). ಇಲ್ಲಿ ಅಣುತೂಕ ಎಂದರೆ ಅಣುವಿನ ನಿರಪೇಕ್ಷ ತೂಕವಲ್ಲ ಎಂಬುದನ್ನು ಒತ್ತಿ ಹೇಳುವುದು ಅಗತ್ಯ. ಅಣುಗಳು ಅತ್ಯಂತ ಚಿಕ್ಕ ಚಿಕ್ಕ ಕಣಗಳಾದ್ದರಿಂದ ಅವುಗಳ ನಿರಪೇಕ್ಷ ತೂಕಗಳು, ಎಂದರೆ ಗ್ರಾಮ್ ಅಥವಾ ಔನ್ಸುಗಳಲ್ಲಿ ನಿರ್ದೇಶಿಸಬಹುದಾದ ಅವುಗಳ ನಿಜ ತೂಕಗಳು, ಅತ್ಯಂತ ಕಡಿಮೆ ಇರುತ್ತವೆ. ಸರಳ ಅಣುಗಳ ತೂಕಗಳು ಸಾಮಾನ್ಯವಾಗಿ $10^{-23}$ ಗ್ರಾಮಿನಿಂದ $10^{-20}$ ಗ್ರಾಮ್‌ವರೆಗೆ ಇರುತ್ತವೆ. ಈ ಕಾರಣದಿಂದ ನಾವು ವ್ಯವಹಾರದಲ್ಲಿ ಅಣುವಿನ ಸಾಪೇಕ್ಷ ತೂಕಗಳನ್ನು ಬಳಸುತ್ತೇವೆ ಮತ್ತು ಅವನ್ನೇ ಅಣುತೂಕಗಳೆಂದು ಕರೆಯುತ್ತೇವೆ. ಹಿಂದೆ ಈ ಸಾಪೇಕ್ಷ ತೂಕಗಳ ನಿರ್ಧಾರಕ್ಕೆ ಹೈಡ್ರೊಜನ್ ಪರಮಾಣುವಿನ ನಿರಪೇಕ್ಷ ತೂಕವನ್ನು ಪ್ರಮಾಣಕವಾಗಿ ತೆಗೆದುಕೊಳ್ಳುತ್ತಿದ್ದರು. ಅಂದರೆ, ಯಾವುದೇ ಪದಾರ್ಥದ ಒಂದು ಅಣುವಿನ ತೂಕ ಹೈಡ್ರೊಜನ್ ಪರಮಾಣುವಿನ ತೂಕದ ಎಷ್ಟರಷ್ಟಿರುವುದೋ ಆ ಸಂಖ್ಯೆಯನ್ನು ಆ ಪದಾರ್ಥದ ಅಣುತೂಕ ಎಂದು ಪರಿಗಣಿಸಲಾಗುತ್ತಿತ್ತು. ಕಾಲಕ್ರಮದಲ್ಲಿ ಹೈಡ್ರೊಜನ್ ಪರಮಾಣುವಿನ ತೂಕಕ್ಕೆ ಬದಲಾಗಿ ಆಕ್ಸಿಜನ್ ಪರಮಾಣುವಿನ ತೂಕದ 1/16 ಭಾಗವನ್ನು ಆಧಾರವಾಗಿ ತೆಗೆದುಕೊಳ್ಳಲಾಯಿತು. ಈಗ ಅಂಗೀಕರಿಸಲಾಗಿರುವ ಪ್ರಮಾಣಕ C–12 ಐಸೊಟೋಪಿನ 1/12 ಭಾಗ. ಸಾಪೇಕ್ಷ ತೂಕ ಕೇವಲ ಒಂದು ಸಂಖ್ಯೆಯಷ್ಟೆ. ಆ ಸಂಖ್ಯೆ ಎಷ್ಟೋ ಅಷ್ಟು ಗ್ರಾಮ್ ಆ ಪದಾರ್ಥಕ್ಕೆ ಅದರ ಗ್ರಾಮ್ ಅಣುತೂಕ ಎಂದು ಹೆಸರು. ಇದನ್ನು ಗ್ರಾಮ್‌ಅಣು (ಗ್ರಾಮ್ ಮಾಲಿಕ್ಯೂಲ್) ಎಂದೂ ಮೋಲ್ ಎಂದೂ ಕೆಲವು ವೇಳೆ ಕರೆಯುತ್ತಾರೆ.

ಒಂದು ಮೋಲ್ ಯಾವ ಪದಾರ್ಥವನ್ನು ತೆಗೆದುಕೊಂಡರೂ ಅದರಲ್ಲಿರುವ ಅಣುಗಳ ಸಂಖ್ಯೆ ಸ್ಥಿರ; $6.023 \times 10^{23}$. ಇದಕ್ಕೆ ಅವೊಗ್ಯಾಡ್ರೊ ಸಂಖ್ಯೆ ಎಂದು ಹೆಸರು. ಆದ್ದರಿಂದ ರಾಸಾಯನಿಕ ಕ್ರಿಯೆಗಳಲ್ಲಿ ಅಥವಾ ಇನ್ನಾವುದೇ ಪ್ರಯೋಗಗಳಲ್ಲಿ ವಿವಿಧ ಪದಾರ್ಥಗಳನ್ನು (ಧಾತುಗಳೇ ಆಗಲಿ, ಸಂಯುಕ್ತಗಳೇ ಆಗಲಿ) ಮೋಲುಗಳ ನಿರ್ದಿಷ್ಟ ಪ್ರಮಾಣಗಳಲ್ಲಿ ತೆಗೆದುಕೊಂಡರೆ, ಆ ಪದಾರ್ಥಗಳ ಅಣುಗಳ ಸಂಖ್ಯೆಗಳೂ ಅದೇ ಪ್ರಮಾಣಗಳಲ್ಲಿರುತ್ತವೆ. ಮೋಲುಗಳ ಬಳಕೆಯಲ್ಲಿರುವ ಮುಖ್ಯ ಅನುಕೂಲ್ಯವೆಂದರೆ ಇದೇ. (ಜೆ.ಆರ್.ಎಲ್.)

**ಗ್ರಾಮ್-ಋಣ ಡಿಪ್ಲೊಕಾಕೈ :** ನೈಸೀರಿಯೇಸೀ ಕುಟುಂಬದ ಮೂರು ಬ್ಯಾಕ್ಟೀರಿಯ ಜಾತಿಗಳ ವಿವರಣಾತ್ಮಕ ಹೆಸರು. ಇವುಗಳ ಪೈಕಿ ಜಮೆಲ್ಲ ಮತ್ತು ವೈಲೊನೆಲ್ಲ ಎಂಬ ಎರಡು ಜಾತಿಗಳು ಮನುಷ್ಯ ಮತ್ತು ಇತರ ಪ್ರಾಣಿಗಳಲ್ಲಿ ವಾಸಿಸುತ್ತವೆ. ಇವು ಕೊಳೆತಿನಿಗಳು (ಮೃತೋಪಜೀವಿಗಳು, ಸ್ಯಾಪ್ರೊಫೈಟ್ಸ್). 3ನೆಯ ಜಾತಿಯಾದ ನೈಸೀರಿಯದಲ್ಲಿ ಎರಡು ಪ್ರಭೇದಗಳಿವೆ: ನೈ.ಗಾನನೇರಿಯೆ, ನೈ. ಮೆನಿಂಜೈಟಿಡಿಸ್. ಇವುಗಳ ಸಾಮಾನ್ಯ ನಾಮಗಳು ಗಾನೊಕಾಕಸ್ ಮತ್ತು ಮೆನಿಂಗೊಕಾಕಸ್. ಇವೆಲ್ಲ ಬ್ಯಾಕ್ಟೀರಿಯಗಳು ಗೋಳಾಕಾರವಾಗಿಯೂ (ಕಾಕ್ಕೈ) ಜೊತೆ ಜೊತೆಯಾಗಿಯೂ (ಡಿಪ್ಲೊ) ಇರುವುದರಿಂದ ಡಿಪ್ಲೊಕಾಕೈ ಎಂಬ ಹೆಸರಿನಿಂದ ಕರೆಯಲ್ಪಡುತ್ತವೆ.

ಜಮೆಲ್ಲವನ್ನು ಮೊದಲಿಗೆ ನೈಸೀರಿಯದೊಡನೆ ಸೇರಿಸಿ ಇದಕ್ಕೆ ನೈ.ಹಿಮೊಲೈಸಾನ್ಸ್ ಎಂದು ಹೆಸರಿಟ್ಟಿದ್ದರು. ಜಮೆಲ್ಲ ಉಪದ್ರವಕಾರಿಯಲ್ಲದ ಜೀವಿ. ಸಾಧಾರಣವಾಗಿ ಮನುಷ್ಯನ

ಗಂಟಲಿನ ಭಾಗದಲ್ಲಿ ವಾಸಿಸುತ್ತದೆ. ಜೀವರಸಾಯನ ಕ್ರಿಯಾವಿಧಾನಗಳಲ್ಲಿ ಈ ಜೀವಿಗೂ ನೈಸೀರಿಯ ಜೀವಿಗಳಿಗೂ ವ್ಯತ್ಯಾಸವಿದೆಯಾದ್ದರಿಂದ ಇದನ್ನು ಬೇರೆ ಜಾತಿಯ ಸೂಕ್ಷ್ಮಜೀವಿ ಎಂದು ಗುರುತಿಸಬೇಕಾಯಿತು.

ವೈಲೊನೆಲ್ಲ ಜಾತಿಯ ಬ್ಯಾಕ್ಟೀರಿಯಗಳು ಚಿಕ್ಕ ಜೋಡಿಯ ಜೀವಿಗಳು. ಇವು ಇತರ ಡಿಪ್ಲೊಕಾಕೈಗಳಿಗಿಂತ ವಿಭಿನ್ನವಾಗಿವೆ. ಇವು ಅವಾಯುಶ್ವಸನ (ಅನೇರೋಬಿಕ್) ಉಸಿರಾಟವನ್ನು ಮಾಡಬಲ್ಲವು. ಮನುಷ್ಯ ಹಾಗೂ ಪ್ರಾಣಿಗಳ ಬಾಯಿ, ಕರುಳು ಮತ್ತು ಶುದ್ಧೀಕರಣಾಂಗಗಳ ಮತ್ತು ಜನನೇಂದ್ರಿಯಗಳ ನಾಳಗಳಲ್ಲಿ ಇವು ವಾಸಿಸುತ್ತವೆ. ಈ ಜಾತಿಯ ಸುಮಾರು ಮೂವತ್ತು ಪ್ರಭೇದಗಳನ್ನು ಗುರುತಿಸಿ ವಿವರಿಸಲಾಗಿದೆ. ಇವುಗಳ ಬಾಹ್ಯಲಕ್ಷಣಗಳಲ್ಲಿಯೂ ಶರೀರ ಕ್ರಿಯಾವಿಧಾನ ಲಕ್ಷಣಗಳಲ್ಲಿಯೂ ಬಹಳ ವ್ಯತ್ಯಾಸಗಳು ಇವೆ.

ನೈಸೀರಿಯ ಜಾತಿಗೆ ಸೇರಿದ ಎಲ್ಲ ಜೀವಿಗಳೂ ಪೂರ್ಣ ಪರಾವಲಂಬಿಗಳು. ಮನುಷ್ಯ ಮತ್ತು ಪ್ರಾಣಿಗಳು ಇವುಗಳ ಆಶ್ರಯದಾತ ಜೀವಿಗಳು. ಇವು ವಾಯುಶ್ವಸನ (ಏರೋಬಿಕ್) ಉಸಿರಾಟವನ್ನು ನಡೆಸುತ್ತವೆ. ಕೆಲವು ಬಾರಿ ಸನ್ನಿವೇಶಕ್ಕೆ ಅನುಗುಣವಾಗಿ ಅವಾಯುಶ್ವಸನ ಉಸಿರಾಟವನ್ನೂ ಮಾಡಬಲ್ಲವು. ಇವುಗಳ ಕೃಷಿ ಅಷ್ಟೊಂದು ಸುಲಭವಲ್ಲ. ಆದ್ದರಿಂದ ಇವುಗಳ ಬೆಳವಣಿಗೆ ಸಾಮಾನ್ಯ ಆಹಾರವಸ್ತುಗಳಿರುವ ಕೃಷಿ ತಟ್ಟೆಗಳಲ್ಲಿ ಸಾಧ್ಯವಿಲ್ಲ. ಸಾಧಾರಣವಾಗಿ ಇವುಗಳ ಎಲ್ಲ ಪ್ರಭೇದಗಳಿಗೂ ಆಕ್ಸಿಡೇಸ್ ಧನಾತ್ಮಕ ಮತ್ತು ಇಂಡೋಲ್ ಋಣಾತ್ಮಕ ಗುಣಗಳಿವೆ. ಬಹು ಉಪದ್ರವಕಾರಿಗಳಲ್ಲದ ಪ್ರಭೇದಗಳಿವು. ಒಂದು ರೀತಿಯ ಹಳದಿ ಬಣ್ಣದ ವರ್ಣದ್ರವ್ಯವನ್ನು (ಪಿಗ್ಮೆಂಟ್) ಉತ್ಪಾದಿಸುತ್ತವೆ. ಸ್ವಾಭಾವಿಕವಾಗಿ ಸಕ್ಕರೆಯ ಹುದುಗುಕ್ರಿಯೆಯ (ಫರ್ಮೆಂಟೇಷನ್) ಆಧಾರದ ಮೇಲೆ ಇವುಗಳ ವಿವಿಧ ಬಗೆಗಳನ್ನು ವರ್ಗೀಕರಿಸಲಾಗಿದೆ. ಮನುಷ್ಯನಿಂದ ಬೇರ್ಪಡಿಸಿದ ಕೆಲವು ಮುಖ್ಯ ಪ್ರಭೇದಗಳು ನಿರ್ದಿಷ್ಟ ರೀತಿಯ ಹುದುಗು ಕ್ರಿಯಾ ವಿಧಾನಗಳನ್ನು ತೋರಿಸುತ್ತವೆ. ಗಾನೊಕಾಕಸುಗಳು ಕೇವಲ ಗ್ಲೂಕೋಸನ್ನು ಮಾತ್ರ ಹುದುಗಿಸಿದರೆ ಮೆನಿಂಗೊಕಾಕಸುಗಳು ಗ್ಲೂಕೋಸ್ ಮತ್ತು ಮಾಲ್ಟೋಸುಗಳೆರಡನ್ನೂ ಹುದುಗಿಸುವುವು. ನೈಸೀರಿಯ ಕ್ಯಾಟರಾಲಿಸ್ ಗ್ಲೂಕೋಸನ್ನಾಗಲಿ, ಮಾಲ್ಟೋಸನ್ನಾಗಲಿ ಹುದುಗಿಸಲಾರದು.

ಹೊಸ ಸ್ರಾವಕಗಳಲ್ಲಿ ದೊರೆಯುವ ಈ ಬ್ಯಾಕ್ಟೀರಿಯಗಳಲ್ಲಿ ಮಾದರಿ ಡಿಪ್ಲೊಕಾಕೈನಲ್ಲಿರುವ ಜೋಡಿ ರಚನೆಯನ್ನೂ ಚಪ್ಪಟೆಯಾದ ಅಥವಾ ಸ್ವಲ್ಪ ಒಳಬಾಗುಳ್ಳ (ಕಾನ್‌ಕೇವ್) ಅಂಚುಗಳುಳ್ಳ ಬಾಹ್ಯಲಕ್ಷಣಗಳನ್ನೂ ಗ್ರಾಮ್ ವರ್ಣೀಕರಿಸಿದ ಒರಸುಗಳಲ್ಲಿ (ಸ್ಮಿಯರ್ಸ್) ಕಾಣಬಹುದು. ಆದರೆ ಈ ರೀತಿಯ ರಚನೆಗಳು ಸಾಮಾನ್ಯವಾಗಿ ಕೃಷಿಮಾಡಿದ ಬ್ಯಾಕ್ಟೀರಿಯಗಳಲ್ಲಿ ಕಾಣಬರುವುದಿಲ್ಲ. ಆದರೆ ಇಲ್ಲಿ ಇವು ಜೊತೆಯಾಗಿ ಅಥವಾ ನಾಲ್ಕರ ಗುಂಪುಗಳಂತೆ ಅಥವಾ ಅಂಡಾಕಾರದ ಅಥವಾ ದುಂಡಗಿರುವ ಗುಂಪುಗಳಂತೆ ಕಂಡುಬರುತ್ತವೆ.

ಗಾನೊಕಾಕಸ್ ಒಂದನ್ನು ಬಿಟ್ಟು ಇನ್ನುಳಿದ ನೈಸೀರಿಯಗಳು ಮೂಗು ಗಂಟಲಿನಲ್ಲಿ ವಾಸಿಸುವುವು. ನೈಸೀರಿಯ ಕ್ಯಾವಿಯೆ ಮತ್ತು ನೈ. ಅನಿಮ್ಯಾಲಿಸ್ ಎಂಬ ಎರಡು ಪ್ರಭೇದಗಳನ್ನು ಗಿನಿಹಂದಿಯಿಂದ ಬೇರ್ಪಡಿಸಲಾಗಿದೆ. ನೈ. ಓವಿಸ್ ಎಂಬುದನ್ನು ಕೆರಾಟೊಕಂಜಂಕ್ಟಿವೈಟಿಸ್ ರೋಗದಿಂದ ನರಳುವ ಕುರಿಗಳ ಕಣ್ಣಿನಿಂದ ಪ್ರತ್ಯೇಕಿಸಲಾಗಿದೆ. ನೈ. ಕ್ಯಾಟರ್ಯಾಲಿಸ್, ನೈ. ಫ್ಲಾವೆಸೆನ್ಸ್ ಮತ್ತು ನೈ. ಸಬ್‌ಫ್ಲಾವಗಳನ್ನು ಮೆನಿಂಜೈಟಿಸ್ ರೋಗಿಯ ಮಿದುಳುಬಳ್ಳಿಯ ರಸದಿಂದ ಪ್ರತ್ಯೇಕಿಸಲಾಗಿದೆ. ಆದರೆ ಇವುಗಳ ಇರುವಿಕೆ ಬಹಳ ಅಪರೂಪ.

ನೈಸೀರಿಯ ಜಾತಿಯಲ್ಲಿ ಪ್ರಪ್ರಥಮವಾಗಿ ಕಂಡುಹಿಡಿದ ಜೀವಿ ಎಂದರೆ ಗಾನೊಕಾಕಸ್. ಆಲ್ಬರ್ಟ್ ನೈಸರ್ ಎಂಬಾತ ಗಾನರೀಯ ರೋಗಿಗಳಿಂದ ಗಾನೊಕಾಕೈಗಳನ್ನು ಪ್ರಥಮವಾಗಿ ಪ್ರತ್ಯೇಕಿಸಿದ (1879). ಈ ಬ್ಯಾಕ್ಟೀರಿಯ ಆಫ್ತಾಲ್ಮಿಯ ನಿಯೋನೇಟೋರಮ್ ಎಂಬ ರೋಗವನ್ನು ಉಂಟುಮಾಡುವುದು. ಆಂಟನ್ ವೈಶಲ್ ಬಾಮ್ ಎಂಬಾತ ಆರು ಜನ ಮೆನಿಂಜೈಟಿಸ್ ರೋಗಿಗಳ ಮಿದುಳುಬಳ್ಳಿ ರಸದಿಂದ ಮೆನಿಂಗೊಕಾಕಸ್ ಬ್ಯಾಕ್ಟೀರಿಯಗಳನ್ನು ಪ್ರತ್ಯೇಕಿಸಿದ (1887).

ನೈಸೀರಿಯ ಮೆನಿಂಜೈಟಿಡಿಸ್ ಬ್ಯಾಕ್ಟೀರಿಯ ಕೇವಲ ಮನುಷ್ಯನಲ್ಲಿ ಮಾತ್ರ ಜೀವಿಸಬಲ್ಲದು. ಸುಮಾರು ಶೇ. 5 ರಷ್ಟು ಜನರಲ್ಲಿ ಇವು ಮೂಗು ಗಂಟಲುಗಳಲ್ಲಿ ಇರುವುದು ಕಂಡುಬಂದಿದೆ. ಮೆನಿಂಗೊಕಾಕಸ್ ಆಗಾಗ ಸಾಂಕ್ರಾಮಿಕ ಮೆನಿಂಜೈಟಿಸ್ ರೋಗವನ್ನು ಉಂಟುಮಾಡುತ್ತದೆ. ಇದು ಬಹುಮಟ್ಟಿಗೆ ನಿರ್ಬಂಧಿತ ಜನಸಂದಣಿಗಳಲ್ಲಿ ಕಂಡುಬರುವುದುಂಟು. ಉದಾಹರಣೆಗೆ ಸೈನಿಕ ಶಿಬಿರಗಳಲ್ಲಿ ಇಂಥ ತೀವ್ರತರವಾದ ರೋಗ ಶೀಘ್ರವಾಗಿ ಹರಡುವುದು ತಿಳಿದಿದೆ. ಮೆನಿಂಗೊಕಾಕೈನಲ್ಲಿ 4 ವಿವಿಧ ಬಗೆಯ ಆಂಟಿಜೆನಿಕ್ ಗುಣಲಕ್ಷಣಗಳುಳ್ಳ ಪ್ರಭೇದಗಳನ್ನು ಗುರುತಿಸಲಾಗಿದೆ. ಇವುಗಳಿಗೆ A, B, C ಮತ್ತು Dಗಳೆಂದು ಹೆಸರು. ಸಾಂಕ್ರಾಮಿಕ ರೋಗಗಳಲ್ಲಿ ಸಾಮಾನ್ಯವಾಗಿ B ಬಗೆಯ ಮೆನಿಂಗೊಕಾಕೈಗಳಿರುವುವು. ಆದರೆ ಅಲ್ಲಲ್ಲಿ ಒಂಟೊಂಟಿಯಾಗಿ ಸೋಂಕು ತಗಲಿದ ರೋಗಿಗಳಲ್ಲಿ ಇಂಥ ವಿಭೇದಗಳನ್ನು ಗುರುತಿಸುವುದು ಸಾಧ್ಯವಿಲ್ಲ. ಈ ಮುಂಚೆ ನಿರುಪದ್ರವಿಗಳಾಗಿಯೇ ಇದ್ದ ಜೀವಿಗಳು ಬಹುಶಃ ಉಸಿರಾಡುವ ಹಾದಿಯ ದುಗ್ಧನಾಳಗಳಿಗೆ ಪ್ರವೇಶಿಸಿ ಅಲ್ಲಿ ಬ್ಯಾಕ್ಟೀರಿಮಿಯವನ್ನು ಉಂಟುಮಾಡುತ್ತವೆ. ಜೀವಿಗಳು ರೋಗಿಯ ಮೆನಿಂಜಸ್, ಚರ್ಮ, ಕೀಲುಗಳು, ಕಣ್ಣು ಮತ್ತು ಇತರ ಅಂಗಗಳಲ್ಲಿ ಆಶ್ರಯ ಪಡೆಯಬಹುದು. ಈ ರೋಗಗಳಲ್ಲಿ ತೀವ್ರತರವಾದ ತಲೆನೋವು, ಜ್ವರ, ಚಳಿ, ಮೈಕೈ ನೋವು ಮುಂತಾದವು ಕಂಡುಬರುತ್ತವೆ. ಇದರಿಂದ ರೋಗಿಯ ಮೇಲೆ ಅತಿತೀವ್ರವಾದ ಆಘಾತವಾಗುವುದು. ಚರ್ಮದ ರಕ್ತನಾಳಗಳಲ್ಲಿ ವಾಸಿಸುವ ಈ ಬ್ಯಾಕ್ಟೀರಿಯಗಳಿಂದ ರಕ್ತಕರಣೆ (ತ್ರಾಂಬೋಸಿಸ್), ರಕ್ತೋದ್ರೇಕ (ಹೆಮೊರೇಜು)ಗಳಾಗಿ ಚರ್ಮದಲ್ಲಿ ಬೊಕ್ಕೆಗಳಂಥ ರಚನೆಗಳು ಹುಟ್ಟಿಕೊಳ್ಳುತ್ತವೆ.

ಜೀವಿಪ್ರತಿರೋಧಕಗಳ ಸಂಶೋಧನೆಯಾದ ಮೇಲೆ ಇವುಗಳ ಹಾವಳಿ ಕಡಿಮೆಯಾಗಿದೆ. ಹಿಂದೆ ಮೆನಿಂಗೊಕಾಕೈಗಳಿಂದಾದ ರೋಗಗಳಿಗೆ ಸಲ್ಫೊನಮೈಡುಗಳು ಮತ್ತು ಪೆನ್‌ಸಿಲಿನುಗಳಿಂದ ಚಿಕಿತ್ಸೆ ಮಾಡಲಾಗುತ್ತಿತ್ತು. ಆದರೆ ಇತ್ತೀಚೆಗೆ ಬಹಳ ಮೆನಿಂಗೊಕಾಕೈಗಳು ಪೂರ್ಣವಾಗಿ ಸಲ್ಫೊನಮೈಡುಗಳನ್ನು ನಿರೋಧಿಸಬಲ್ಲ ಸಾಮರ್ಥ್ಯವನ್ನು ಗಳಿಸಿಕೊಂಡಿವೆ. ಇವನ್ನು ಕೊಲ್ಲಲು ಪೆನ್‌ಸಿಲಿನ್ ಅತಿ ಹೆಚ್ಚಿನ ಮೊತ್ತದಲ್ಲಿ ಬೇಕು. ಇಲ್ಲವೆ ಬೇರೆ ಜೀವಿಪ್ರತಿರೋಧಕಗಳನ್ನು ಚಿಕಿತ್ಸೆಗೆ ಉಪಯೋಗಿಸಬೇಕು. (ಎಸ್.ಎ.ಎ.)

ನೈಸೀರಿಯ ಗಾನೊರೀಯೇ ಎಂಬ ಬ್ಯಾಕ್ಟೀರಿಯ ಮಾನವನಲ್ಲಿ ಗಾನರೀಯ ಎಂಬ ಲೈಂಗಿಕ ರೋಗವನ್ನು ಉಂಟುಮಾಡುತ್ತದೆ. ಮಾನವನ ಮೂಗು ಗಂಟಲಿನಲ್ಲಿ ಇಲ್ಲದಿರುವ ಗ್ರಾಮ್-ಋಣ ಡಿಪ್ಲೋಕಾಕಸ್ ಇದೊಂದೇ. ಪೂರ್ಣ ಪರಾವಲಂಬಿ. ಸಾಮಾನ್ಯವಾಗಿ ಮಾನವರ ದೇಹದಲ್ಲಿ ಮಾತ್ರ ಜೀವಿಸಬಲ್ಲುದು ಮತ್ತು ಹಾಗೆ ಇದ್ದಾಗ ರೋಗವನ್ನು ಉಂಟುಮಾಡಿಯೇ ತೀರುತ್ತದೆ. ಲೈಂಗಿಕ ಸಂಪರ್ಕದಿಂದ ವ್ಯಕ್ತಿಯಿಂದ ವ್ಯಕ್ತಿಗೆ ಇದು ಹಬ್ಬುತ್ತದೆ. ಅಪರೂಪವಾಗಿ ರೋಗಿಯ ಕೀವಿನಿಂದ ಸೋಂಕು ಉಂಟಾಗಬಹುದು. ಈ ರೋಗದಿಂದ ಪೀಡಿತಳಾದ ಗರ್ಭಿಣಿ ಪ್ರಸವಿಸುವಾಗ ಹುಟ್ಟುವ ಮಗುವಿನ ಕಣ್ಣುಗಳಿಗೆ ಸೋಂಕು ತಗುಲಿ ಜನನಕಾಲದ ಕಣ್ಣುನೋವು (ಆಫ್ತಾಲ್ಮಿಯ ನಿಯೋನೇಟೋರಮ್) ಉಂಟಾಗುವುದು ಸಾಮಾನ್ಯ (**ನೋಡಿ-ಲೈಂಗಿಕ ರೋಗಗಳು**). ಮಿಲಿಮೀಟರಿನ ಸಾವಿರದಲ್ಲಿ ಒಂದು ಭಾಗಕ್ಕಿಂತಲೂ ಸಣ್ಣದಾಗಿರುವ ನೈಸೀರಿಯ ಗಾನೊಕಾಕೈಗಳು ಜೊತೆ ಜೊತೆಯಾಗಿಯೇ ಒಂದಕ್ಕೊಂದು ಒತ್ತಿಕೊಂಡು ಇರುವುದರಿಂದ ಇವುಗಳ ಆಕಾರ ಹೆಚ್ಚು ಕಡಿಮೆ ಅವರೆಕಾಳಿನಂತಿರುತ್ತದೆ. ಅನೇಕ ವೇಳೆ ಇವು ನ್ಯೂಟ್ರೊಫಿಲ್ ಎಂಬ ರೀತಿಯ ಬಿಳಿಯ ರಕ್ತಕಣಗಳೊಳಗೆ ಇರುವುವು. ಒಂದೊಂದು ಬಿಳಿರಕ್ತಕಣದಲ್ಲೂ ಸುಮಾರು 20ರಿಂದ 50 ಜೊತೆ ಕಾಕೈಗಳು ಕಂಡುಬರಬಹುದು. ಆದರೆ ಬಿಳಿರಕ್ತಕಣಗಳು ಒಳಗೇ ಇರಬೇಕೆಂಬ ನಿಯಮವಿಲ್ಲ. ಸೂಕ್ಷ್ಮಜೀವಿಗಳಿಗೆ ಆಮ್ಲಜನಕ ಅವಶ್ಯ. ಇವನ್ನು ಸಾಮಾನ್ಯ ಕೃಷಿ ತಟ್ಟೆಗಳಲ್ಲಿ ಬೆಳೆಸಲಾಗುವುದಿಲ್ಲ. ಪೌಷ್ಟಿಕ ಮಾಧ್ಯಮ ರಕ್ತ ಅಥವಾ ರಕ್ತದಿಂದ ಉತ್ಪನ್ನವಾದ ದ್ರವವಾಗಿದ್ದರೆ ಮಾತ್ರ ಇವನ್ನು ಕೃಷಿ ಮಾಡಬಹುದು. ಇಲ್ಲವೇ ಚಾಕೊಲೇಟ್ ಅಗಾರ್ ಎಂಬ ವಿಶೇಷ ಮಾಧ್ಯಮವನ್ನು ಉಪಯೋಗಿಸಬೇಕು. ಇವು $55^0$ ಸೆಂ. ನಷ್ಟು ಉಷ್ಣತೆಯನ್ನು 5 ಮಿನಿಟುಗಳ ಕಾಲ ಕೂಡ ತಡೆಯಲಾಗದೆ ನಾಶವಾಗಿ ಹೋಗುತ್ತವೆ; ಹಾಗೆಯೇ ನಿರ್ಜಲೀಕರಿಸಿದರೂ 2 ಗಂಟೆಗಳ ಕಾಲದಲ್ಲಿ ನಾಶವಾಗಿ ಹೋಗುತ್ತವೆ; ಆದರೂ ಕೀವು ಸೋಕಿದ ರೋಗಿಗಳ ಬಟ್ಟೆಬರೆಗಳಲ್ಲಿ ಕೆಲವು ದಿವಸ ಪರ್ಯಂತ ಬದುಕಿರಬಲ್ಲವು. ಆದ್ದರಿಂದ ಇವುಗಳ ಸಂಪರ್ಕದ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ಗಾನೊಕಾಕೈಗಳಲ್ಲಿ ಎರಡು ಪಂಗಡಗಳನ್ನು ಗುರುತಿಸಬಹುದು. ಮೊದಲನೆಯದು ಸಾಮಾನ್ಯವಾಗಿ ರೋಗದ ತಾರುಣ್ಯದಲ್ಲೂ ಎರಡನೆಯದು ಬಹುಕಾಲಿಕ ರೋಗಿಗಳಲ್ಲೂ ಕಂಡುಬರುತ್ತವೆ. ರಾಸಾಯನಿಕ ಚಿಕಿತ್ಸೆಯ (ಕೀಮೋಥೆರಪಿ) ಯುಗಕ್ಕೆ ಮುಂಚೆ ಈ ಜೀವಿಗಳ ಉಷ್ಣಸೂಕ್ಷ್ಮತೆಯನ್ನು ಉಪಯೋಗಿಸಿಕೊಂಡು ರೋಗಿಗಳಿಗೆ ಕೃತಕವಾಗಿ ತೀವ್ರಜ್ವರವನ್ನು ಉಂಟುಮಾಡಲಾಗುತ್ತಿತ್ತು. ಆದರೆ ಸುಮಾರು 1930ರಿಂದೀಚೆಗೆ ಸಲ್ಫೊನಮೈಡುಗಳಿಂದ ಇವುಗಳ ಸೋಂಕಿಗೆ ಚಿಕಿತ್ಸೆ ನಡೆಯುತ್ತಿತ್ತು. 1942-43ರಲ್ಲಿ ಪೆನ್‌ಸಿಲಿನ್ ಬಳಕೆ ಬಂದ ಬಳಿಕ ಗಾನೊಕಾಕೈಗಳ ಸೋಂಕಿಗೆ ಅದೇ ಎತ್ತಿದ ಮದ್ದಾಗಿದೆ. ಒಂದೇ ಪೆನ್‌ಸಿಲಿನ್ ಚುಚ್ಚುಮದ್ದು ಗಾನರೀಯ ಚಿಕಿತ್ಸೆಗೆ ಸಾಕಾದರೂ ಅದೇ ರೋಗಿಯಲ್ಲಿ ಅದೇ ಕಾಲದಲ್ಲಿರಬಹುದಾದ ಇನ್ನೊಂದು ಲೈಂಗಿಕರೋಗವಾದ ಸಿಫಿಲಿಸಿಗೆ ಸಾಲದಾದ್ದರಿಂದ ಮತ್ತು ಈ ಚುಚ್ಚುಮದ್ದು ತಾತ್ಕಾಲಿಕವಾಗಿ ಶಮನ ಮಾಡಿ ರೋಗ ಗುಣವಾಯಿತೆಂಬ ಭ್ರಾಂತಿಯನ್ನು ಉಂಟುಮಾಡುವುದರಿಂದ ಈಚೆಗೆ ಗಾನೊಕಾಕೈಗಳ ಸೋಂಕಿಗೆ ಸಿಪ್ರೊಫ್ಲಾಕ್ಸಿನನ್ನು ಓಫ್ಲಾಕ್ಸಿಸಿನ್, ಆಂಪಿಸಿಲಿನ್ ಉಪಯುಕ್ತವೆನಿಸಿವೆ.

ಗ್ರಾಮ್-ಋಣ ಬ್ಯಾಸಿಲೈಗಳು : ಆಕಾರದಲ್ಲಿ ಕಡ್ಡಿಯ ಚೂರಿನಂತೆ ಇರುವುದರಿಂದ ಇವನ್ನು ಬ್ಯಾಸಿಲೈಗಳೆಂದು ಕರೆಯಲಾಗಿದೆ. ಇಂಥ ಬ್ಯಾಸಿಲೈಗಳಲ್ಲಿ ಮುಖ್ಯವಾದವು ಮಾನವರಲ್ಲಿ ತೀವ್ರವಾದ ರೋಗಗಳನ್ನು ಉಂಟುಮಾಡುವ ಟೈಫಾಯಿಡ್, ಕಾಲರ,

ಆಮಶಂಕೆಗಳ ಕಾರಕಗಳಾದ ಬ್ಯಾಕ್ಟೀರಿಯಗಳ ಗುಂಪು, ಇನ್‌ಫ್ಲೂಯೆಂಜ಼ ಕಾರಕ ಬ್ಯಾಕ್ಟೀರಿಯ, ಪ್ಲೇಗ್ ವಿಷಾಣು ಇತ್ಯಾದಿ. ಕಾಲರ, ಟೈಫಾಯಿಡ್ ಆಮಶಂಕೆಗಳ ಬ್ಯಾಕ್ಟೀರಿಯಗಳನ್ನು ಅವುಗಳ ಕೃಷಿವಿಧಾನ ವೈವಿಧ್ಯ, ಹುದುಗು ಕ್ರಿಯೆಯ ವ್ಯತ್ಯಾಸ, ಅಂಟುಜನಕ ಸ್ವಭಾವ ಇತ್ಯಾದಿಗಳಿಂದ ಗುರುತಿಸಿ ವಿಂಗಡಿಸಲಾಗುತ್ತದೆ. ಪ್ಲೇಗ್ ವಿಷಾಣು, ಇನ್‌ಫ್ಲೂಯೆಂಜ಼ ವಿಷಾಣುಗಳನ್ನೂ ಇದೇ ರೀತಿ ಗುರುತಿಸಲಾಗುತ್ತದೆ.

ಗ್ರಾಮ್–ಧನಕಾಕೈಗಳು : ಇವು ಮಾನವರಲ್ಲಿ ಬಹುವಿಧವಾದ ರೋಗಗಳನ್ನು ಉಂಟುಮಾಡುತ್ತವೆ. ಬ್ಯಾಕ್ಟೀರಿಯಗಳು ಗುಂಡಗಿರುವುದರಿಂದ ಕಾಕೈಗಳೆಂದು ಕರೆಯಲಾಗಿದೆ. ಇವು ಒಂದಕ್ಕೊಂದು ಅಂಟಿಕೊಂಡು ಸರಮಣಿ ಪೋಣಿಸಿದಂತಿದ್ದರೆ ಸ್ಟ್ರೆಪ್ಟೊಕಾಕೈಗಳೆಂದೂ ದ್ರಾಕ್ಷಿಗೊಂಚಲಿನಂತೆ ಗುಂಪಾಗಿದ್ದರೆ ಸ್ಟಾಫಿಲೊಕಾಕೈಗಳೆಂದೂ ಹೆಸರು. ಸಾಮಾನ್ಯ ಗಂಟಲು ನೋವಿನಿಂದ ಹಿಡಿದು ತೀವ್ರಮಾರಕ ರೋಗಗಳವರೆಗೂ ಸ್ಟ್ರೆಪ್ಟೊಕಾಕೈಗಳು ಉಂಟುಮಾಡುವ ರೋಗಗಳ ಪ್ರಾಬಲ್ಯ ಹರಡಿರುತ್ತದೆ. ಪ್ರಸವಾನಂತರ ಜ್ವರ ಮತ್ತು ಬಾಲ್ಯಾವಸ್ಥೆಯ ಸಂಧಿವಾತರೋಗಗಳನ್ನು ಸ್ಟ್ರೆಪ್ಟೊಕಾಕೈಗಳಿಂದ ಉಂಟಾದ ರೋಗಗಳೆಂದು ಉದಾಹರಿಸಬಹುದು. ಸುಮಾರು 1930ರ ತನಕ ಇಂಥ ರೋಗಗಳಿಗೆ ಮದ್ದೇ ಇರುತ್ತಿರಲಿಲ್ಲ. ಅಂದಿಗೆ ಇವು ಸಾಮಾನ್ಯವಾಗಿ ಮಾರಕಗಳು ಆಗಿದ್ದುವು. ಸಲ್ಫೊನಮೈಡುಗಳು ಇಂಥ ರೋಗಗಳಿಗೆ ಮದ್ದಾಗಬಲ್ಲವು ಎಂಬುದನ್ನು ತಿಳಿದ ಬಳಿಕ ಸ್ಟ್ರೆಪ್ಟೊಕಾಕೈಜನಿತ ರೋಗಗಳ ಚಿಕಿತ್ಸೆ ತಕ್ಕಮಟ್ಟಿಗೆ ಹಿಡಿತಕ್ಕೆ ಬಂದಿತು. ಜೀವಿಪ್ರತಿರೋಧಕಗಳ ಉಪಯೋಗ ಪ್ರಾರಂಭವಾದ ತರುವಾಯ ಸ್ಥಿತಿ ಇನ್ನೂ ಅನುಕೂಲವಾಯಿತು. ಸ್ಟಾಫಿಲೊಕಾಕೈಗಳು ಬೆನ್ನುಫಣಿ ಮುಂತಾದ ರೋಗಗಳನ್ನು ಉಂಟುಮಾಡುತ್ತವೆ. ಇವು ಸಾಮಾನ್ಯವಾಗಿ ಸಲ್ಫೊನಮೈಡುಗಳ ಚಿಕಿತ್ಸೆಗೆ ಮಣಿಯದಿದ್ದುದರಿಂದ ಸ್ಟಾಫಿಲೊಕಾಕೈಗಳು ಬೆನ್ನುಫಣಿ ಮುಂತಾದ ರೋಗಗಳನ್ನು ಉಂಟುಮಾಡುತ್ತವೆ. ಇವು ಸಾಮಾನ್ಯವಾಗಿ ಸಲ್ಫೊನಮೈಡುಗಳ ಚಿಕಿತ್ಸೆಗೆ ಮಣಿಯದಿದ್ದುದರಿಂದ ಸ್ಟಾಫಿಲೊಕಾಕೈಗಳ ಸೋಂಕಿನ ಭಯ ಜೀವಿಪ್ರತಿರೋಧಕಗಳು ಬರುವವರೆಗೂ ಇದ್ದೇ ಇತ್ತು. ಸ್ಟ್ರೆಪ್ಟೊಕಾಕೈಗಳು, ಅವಕ್ಕಿಂತಲೂ ಸ್ಟಾಫಿಲೊಕಾಕೈಗಳು, ಎಲ್ಲವೂ ರೋಗಕಾರಕಗಳಲ್ಲದೆ ನಿರುಪದ್ರವಿಗಳಾಗಿಯೂ ಇರುವ ವಿಧಗಳು ಅನೇಕವಿವೆ. ನ್ಯೂಮೊಕಾಕೈಗಳು ಒಂದು ರೀತಿ ಡಿಪ್ಲೊಕಾಕೈಗಳಂತೆ ಇರುತ್ತವೆ. ಆದರೆ ಗ್ರಾಮ್‌ಧನ ಗುಣವುಳ್ಳವು. ಇವುಗಳಲ್ಲಿ ಮುಖ್ಯವಾಗಿ ಮೂರುವಿಧಗಳನ್ನು ಗುರುತಿಸಬಹುದಾಗಿದೆ. ನ್ಯೂಮೊಕಾಕೈಗಳಿಂದ ನ್ಯೂಮೋನಿಯ ರೋಗ ಉಂಟಾಗುತ್ತದೆ. ಕೆಲವು ಸಲ್ಫೊನಮೈಡುಗಳು ಇವಕ್ಕೆ ಮದ್ದಾಗಿವೆ.

ಗ್ರಾಮ್–ಧನ ಬ್ಯಾಸಿಲೈಗಳು ಡಿಫ್ತೀರಿಯ, ಟಿಟನಸ್, ಗ್ಯಾಸ್‌ಗ್ಯಾಂಗ್ರೀನ್ (ದೇಹ ಭಾಗಗಳು ಕೊಳೆತುಕೊಂಡು ಬರುವ ರೋಗ), ಬಾಟ್ಯುಲಿಸಮ್ ರೋಗ ಇವೇ ಮುಂತಾದ ತೀವ್ರರೋಗಗಳನ್ನು ಉಂಟುಮಾಡುತ್ತವೆ. ಕೆಲವಕ್ಕೆ ಆಮ್ಲಜನಕ ಅಭಾವ ಆವಶ್ಯಕವಾಗಿದ್ದು ಅವು ದೇಹದ ಒಳಗಡೆ ಅವ್ಯಕ್ತವಾಗಿ ಸೋಂಕುಂಟು ಮಾಡಿ ಪ್ರವರ್ಧಿಸುತ್ತವೆ. (ಎಸ್.ಆರ್.ಆರ್.)

**ಗ್ರಾಮ್ ವರ್ಣ :** ಸೂಕ್ಷ್ಮಜೀವಿಗಳಿಗೆ ಬಣ್ಣಹಾಕಿ (ಸ್ಟೇನ್) ಅದರ ಆಧಾರದ ಮೇಲೆ ಅವನ್ನು ವರ್ಗೀಕರಿಸುವ ಒಂದು ವಿಧಾನ (ಗ್ರಾಮ್ಸ್ ಸ್ಟೇನ್). ವರ್ಣೀಕರಣಗೊಂಡ ಬ್ಯಾಕ್ಟೀರಿಯಗಳಲ್ಲಿ ಬಣ್ಣವನ್ನು ಉಳಿಸಿಕೊಳ್ಳುವಂಥವನ್ನು ಗ್ರಾಮ್–ಧನ ಬ್ಯಾಕ್ಟೀರಿಯಗಳೆಂದೂ ಕಳೆದುಕೊಳ್ಳುವಂಥವನ್ನು ಗ್ರಾಮ್–ಋಣ ಬ್ಯಾಕ್ಟೀರಿಯಗಳೆಂದೂ ವಿಭೇದೀಕರಿಸುವುದು ವಾಡಿಕೆ. ಈ ವಿಭೇದೀಕರಣ ವಿಧಾನದ ಆವಿಷ್ಕರಣವಾದದ್ದು 1884ರಲ್ಲಿ, ಹ್ಯಾನ್ಸ್ ಕ್ರಿಶ್ಚಿಯನ್ ಯೋಕಿಮ್ ಗ್ರಾಮ್ (1853–1938) ಎಂಬ ಡೇನಿಷ್ ಬ್ಯಾಕ್ಟೀರಿಯ ವಿಜ್ಞಾನಿಯಿಂದ.

ವರ್ಣೀಕರಿಸಿದ ಬ್ಯಾಕ್ಟೀರಿಯಗಳನ್ನು ಆಲ್ಕೊಹಾಲ್ ಅಥವಾ ಅಸಿಟೋನಿನಂಥ ತಟಸ್ಥ ದ್ರಾವಕಗಳಿಂದ (ನ್ಯೂಟ್ರಲ್ ಸಾಲ್ವೆಂಟ್ಸ್) ವಿವರ್ಣೀಕರಿಸುವಾಗ (ಡೀಕಲರೈಸ್) ಬ್ಯಾಕ್ಟೀರಿಯಗಳು ಪ್ರದರ್ಶಿಸುವ ನಿರೋಧ ಸಾಮರ್ಥ್ಯದ ವ್ಯತ್ಯಾಸವನ್ನು ಅವಲಂಬಿಸಿ ಗ್ರಾಮ್ ವರ್ಣೀಕರಣ ವಿಧಾನ ಉಂಟು. ಬ್ಯಾಕ್ಟೀರಿಯಗಳ ಸ್ಥಿರ ಒರಸುಗಳನ್ನು (ಫಿಕ್ಸೆಡ್ ಸ್ಮಿಯರ್ಸ್) ಅಮೋನಿಯಮ್ ಆಕ್ಸಲೇಟ್ ಕ್ರಿಸ್ಟಲ್ ವಯೋಲೆಟ್ ಎಂಬ ಮೂಲವರ್ಣದಿಂದ ವರ್ಣೀಕರಿಸುವುದು ಮೊದಲ ಹಂತ. ಅಮೋನಿಯಮ್ ಆಕ್ಸಲೇಟ್ ಇಲ್ಲಿ ಬಣ್ಣಗಚ್ಚಾಗಿ (ಮಾರ್ಡೆಂಟ್) ವರ್ತಿಸುವುದು. ಬಳಿಕ ಅದನ್ನು ನೀರಿನಿಂದ ತೊಳೆದು ಗ್ರಾಮನ ಅಯೊಡೀನಿನಿಂದ ಸಂಸ್ಕರಿಸುವುದು ಎರಡನೆಯ ಹಂತ. ಮೂರನೆಯ ಹಂತದಲ್ಲಿ ಇದನ್ನು ಪುನಃ ನೀರಿನಲ್ಲಿ ತೊಳೆದು ಶೇ. 95 ಆಲ್ಕೊಹಾಲಿನಿಂದ ವರ್ಣೀಕರಿಸಿದ ಬ್ಯಾಕ್ಟೀರಿಯಗಳನ್ನು ವಿವರ್ಣೀಕರಿಸಿ ತರುವಾಯ ಪ್ರತಿವರ್ಣದಿಂದ (ಕೌಂಟರ್‌ಸ್ಟೇನ್) ವರ್ಣೀಕರಿಸುತ್ತಾರೆ. ಅನಂತರ ನೀರಿನಿಂದ ತೊಳೆದು ಒಣಗಿಸಿ ದೊರೆವ ಒರಸನ್ನು ಪರೀಕ್ಷಿಸುತ್ತಾರೆ. ಈ ಪ್ರಯೋಗದಲ್ಲಿ ಉಪಯೋಗಿಸುವ ಮೂಲವರ್ಣವನ್ನು ಬ್ಯಾಕ್ಟೀರಿಯಗಳು ವಿವರ್ಣೀಕರಿಸಿದಾಗ ಕಳೆದುಕೊಳ್ಳದಿದ್ದರೆ ಅವನ್ನು ಗ್ರಾಮ್–ಧನ ಬ್ಯಾಕ್ಟೀರಿಯ ಎಂದೂ ಮೂಲವರ್ಣವನ್ನು ತ್ಯಜಿಸಿ ಪ್ರತಿವರ್ಣವನ್ನು ಮಾತ್ರ ಗ್ರಹಿಸಿದರೆ ಅವನ್ನು ಗ್ರಾಮ್–ಋಣ ಬ್ಯಾಕ್ಟೀರಿಯಗಳೆಂದೂ ಕರೆಯುತ್ತಾರೆ. ಗ್ರಾಮ್–ಋಣ ಬ್ಯಾಕ್ಟೀರಿಯಗಳಲ್ಲಿ ಆ ಗುಣ ಸ್ಥಿರವಾಗಿರುತ್ತದೆ. ಗ್ರಾಮ್–ಧನ ಬ್ಯಾಕ್ಟೀರಿಯಗಳಾದರೋ ಕೆಲವು ವೇಳೆ ಗ್ರಾಮ್–ಋಣದ ಗುಣವನ್ನೂ ಪ್ರದರ್ಶಿಸುವುದುಂಟು. ಬೆಳೆಯುವಾಗ ಅಥವಾ ಮುಪ್ಪಿನಿಂದ ಶಿಥಿಲವಾಗುತ್ತಿರುವಾಗ ಇಂಥ ವ್ಯತ್ಯಾಸ ಕಂಡುಬರುತ್ತದೆ. ಬಹುಶಃ ಬ್ಯಾಕ್ಟೀರಿಯ ಕೋಶಗಳ ಭಿತ್ತಿಯ ಮೇಲೆ ಆಲ್ಕೊಹಾಲ್ ಅಥವಾ ಅಸಿಟೋನ್ ಕ್ರಿಯೆ ತೋರಿಸುವುದರಿಂದ ಈ ರೀತಿ ಗ್ರಾಮ್–ಧನ ಅಥವಾ ಋಣ ಗುಣ ಉಂಟಾಗುವುದೆಂದು ತೋರುತ್ತದೆ. ಗ್ರಾಮ್–ಧನ ಬ್ಯಾಕ್ಟೀರಿಯಗಳಲ್ಲಿ ಆಲ್ಕೊಹಾಲ್ ಅಥವಾ ಅಸಿಟೋನಿನಿಂದ ಭಿತ್ತಿಯು ಒಳಗಿನ ಪದಾರ್ಥಗಳು ಹೊರ ಹೋಗದಂತೆ ತಡೆಯುವ ಸಾಮರ್ಥ್ಯವನ್ನು ಪಡೆದು ಮೂಲವರ್ಣ ವಿವರ್ಣಗೊಳ್ಳದಂತೆ ಮಾಡುತ್ತದೆ. ಗ್ರಾಮ್–ಋಣ ಬ್ಯಾಕ್ಟೀರಿಯಗಳಲ್ಲಿ ಹೀಗಾಗದೆ ಮೂಲವರ್ಣ ಭಿತ್ತಿಯ ಮೂಲಕ ಹೊರಬಂದು ಬ್ಯಾಕ್ಟೀರಿಯ ವಿವರ್ಣಗೊಳ್ಳುತ್ತದೆ. ಬಹುಶಃ ಈ ಬ್ಯಾಕ್ಟೀರಿಯಗಳ ಭಿತ್ತಿಯಲ್ಲಿ ಮೇದಸ್ಸಿನ ಅಂಶ ಹೆಚ್ಚಾಗಿದ್ದು ಅವು ಆಲ್ಕೊಹಾಲ್ ಅಥವಾ ಅಸಿಟೋನಿನಲ್ಲಿ ಸ್ವಲ್ಪಮಟ್ಟಿಗೆ ಕರಗಿ ಹೋಗುವುದರಿಂದ ಮೂಲವರ್ಣ ಹೊರಬರುವುದೆಂದು ತೋರುತ್ತದೆ. ಆದರೆ ಖಚಿತವಾಗಿ ಹೀಗೆಯೇ ಸರಿ ಎಂದು ಹೇಳುವಂತಿಲ್ಲ.

ಗ್ರಾಮ್–ಧನ ಬ್ಯಾಕ್ಟೀರಿಯಗಳಿಗೆ ಜೀವಿಪ್ರತಿರೋಧಕಗಳನ್ನೂ ಬ್ಯಾಕ್ಟೀರಿಯೋಸ್ಟ್ಯಾಟಿಕ್ ವರ್ಣಗಳನ್ನೂ ಹ್ಯಾಲೊಜೆನುಗಳನ್ನೂ ಪ್ರತಿರೋಧಿಸುವ ಸಾಮರ್ಥ್ಯವಿಲ್ಲ. ಗ್ರಾಮ್–ಋಣ ಬ್ಯಾಕ್ಟೀರಿಯಗಳು ವಿಶಿಷ್ಟ ಅಮೈನೋಆಮ್ಲಗಳನ್ನು ತಯಾರಿಸಿಕೊಳ್ಳಬಲ್ಲುವು. ಆ ಗುಣ ಗ್ರಾಮ್–ಧನ ಬ್ಯಾಕ್ಟೀರಿಯಗಳಿಗಿಲ್ಲ. ಟ್ರಿಪ್ಸಿನ್, ಪೆಪ್ಸಿನ್ ಮುಂತಾದ ಎಂಜೈಮುಗಳನ್ನು ಪ್ರತಿರೋಧಿಸುವ ಸಾಮರ್ಥ್ಯ ಗ್ರಾಮ್–ಋಣ ಬ್ಯಾಕ್ಟೀರಿಯಗಳಿಗೆ ಕಡಿಮೆ. ಜೀವ ಪ್ರತಿರೋಧಕಗಳನ್ನು ಇವು ನಿರೋಧಿಸಬಲ್ಲುವು. ಅಲ್ಲದೆ ಈ ಬ್ಯಾಕ್ಟೀರಿಯಗಳ ಐಸೊ ಎಲೆಕ್ಟ್ರಿಕ್ ಸ್ಥಾನ ಗ್ರಾಮ್–ಧನ ಬ್ಯಾಕ್ಟೀರಿಯಗಳಿಗಿಂತ ಹೆಚ್ಚಿನ ಮಟ್ಟದಲ್ಲಿದೆ. (ಎನ್.ವಿ.ಎ.)

ಗ್ರಾಮ್–ಧನ ಬ್ಯಾಕ್ಟೀರಿಯಗಳಿಗೆ ಈ ಕೆಳಗಿನವು ಕೆಲವು ಉದಾಹರಣೆಗಳು– ಸ್ಟಾಫಿಲೊಕಾಕೈ, ಸ್ಟ್ರೆಪ್ಟೊಕಾಕೈ, ನ್ಯೂಮೊಕಾಕೈ; ಡಿಫ್ತೀರಿಯ, ಟಿಟನಸುಗಳನ್ನು ಉಂಟುಮಾಡುವ ಬ್ಯಾಕ್ಟೀರಿಯಗಳು; ಕ್ಷಯ ಜೀವಾಣುಗಳು, ದನಗಳ ಕಾಲುಬಾಯಿ ಜ್ವರವನ್ನು ಉಂಟುಮಾಡುವ ಜೀವಾಣುಗಳು, ಇತ್ಯಾದಿ.

ಗ್ರಾಮ್–ಋಣ ಬ್ಯಾಕ್ಟೀರಿಯಗಳಿಗೆ ಈ ಕೆಳಗಿನವು ಕೆಲವು ಉದಾಹರಣೆಗಳು. ಗಾನೊಕಾಕಸ್, ಮೆನಿಂಗೊಕಾಕಸ್; ನೆಗಡಿಯನ್ನು ಉಂಟುಮಾಡುವ ಜೀವಾಣು ಇನ್‌ಫ್ಲೂಯೆಂಜ, ಕಾಲರ, ಟೈಫಾಯಿಡ್, ಆಮಶಂಕೆ, ಪ್ಲೇಗ್ ಮುಂತಾದ ರೋಗಗಳನ್ನು ಉಂಟುಮಾಡುವ ಜೀವಾಣುಗಳು.

ಆರಂಭದಲ್ಲಿ ಬ್ಯಾಕ್ಟೀರಿಯಗಳನ್ನು ಅಧ್ಯಯನ ಮಾಡುವಾಗ ಅವನ್ನು ಗ್ರಾಮ್ ವರ್ಣೀಕರಿಸಿ ವಿಂಗಡಿಸುವುದು ಅಪೇಕ್ಷಣೀಯವಾಗಿತ್ತು. ಆದರೆ ಬ್ಯಾಕ್ಟೀರಿಯಗಳ ಸೂಕ್ಷ್ಮಾಧ್ಯಯನದ ಇತರ ವಿಧಾನಗಳು ಬೆಳೆದಂತೆ ಗ್ರಾಮ್ ವರ್ಣೀಕರಣ ವಿಭೇದೀಕರಣ ಅದರ ಪ್ರಾಮುಖ್ಯವನ್ನು ಕಳೆದುಕೊಂಡಂತಿದೆ. ಅಲ್ಲದೇ ಸನ್ನಿವೇಶ ವ್ಯತ್ಯಾಸಗಳಿಂದಾಗಿ ಒಂದೇ ಬ್ಯಾಕ್ಟೀರಿಯ ಗ್ರಾಮ್–ಧನ ಗುಣದ್ದಾಗಿಯೂ ಗ್ರಾಮ್–ಋಣ ಗುಣದ್ದಾಗಿಯೂ ಇರಬಹುದಾದ್ದರಿಂದ ಗ್ರಾಮ್ ವರ್ಣೀಕರಣದ ಉಪಯುಕ್ತತೆ ಬಲು ಕಡಿಮೆ ಆಗಿದೆ. (ಎಸ್.ಆರ್.ಆರ್.)

**ಗ್ರಾಮ್ ಸಮಾನತೂಕ :** ಶುದ್ಧ ಪದಾರ್ಥ ಒಂದರ ಸಮಾನ ತೂಕ ಎಷ್ಟೋ, ಅಷ್ಟು ಗ್ರಾಮ್ ಆ ಪದಾರ್ಥ (ಗ್ರಾಮ್ ಈಕ್ವಿವಲೆಂಟ್ ವೇಟ್). ಧಾತುಗಳೇ ಆಗಲಿ, ಸಂಯುಕ್ತಗಳೇ ಆಗಲಿ, ಅವು ರಾಸಾಯನಿಕ ಕ್ರಿಯೆಗಳಲ್ಲಿ ಭಾಗವಹಿಸುವಾಗ ನಿರ್ದಿಷ್ಟ ತೂಕ ಪ್ರಮಾಣಗಳಲ್ಲಿ ಭಾಗವಹಿಸುತ್ತವೆ. ಉದಾಹರಣೆಗೆ 9 ತೂಕ ಅಲ್ಯೂಮಿನಿಯಮ್ ಸೂಕ್ತ ಆಮ್ಲದಲ್ಲಿ ಕರಗಿದಾಗ 1,008 ತೂಕ ಹೈಡ್ರೊಜನನ್ನು ಪಲ್ಲಟಿಸುತ್ತದೆ. ಅದೇ 9 ತೂಕ ಅಲ್ಯೂಮಿನಿಯಮ್ 8 ತೂಕ ಆಕ್ಸಿಜನಿನೊಂದಿಗೆ ಸಂಯೋಗ ಹೊಂದುತ್ತದೆ. ಹೈಡ್ರೊಜನ್ ಆಕ್ಸಿಜನುಗಳ ಸಂಯೋಗದಿಂದ ನೀರು ಉತ್ಪತ್ತಿಯಾಗುವಾಗಲೂ ಇದೇ 1.008:8.00 ಪ್ರಮಾಣದಲ್ಲಿ ಅವು ಸಂಯೋಗ ಹೊಂದುವುವೆಂಬುದನ್ನು ಗಮನಿಸಬಹುದು. ಈ ತೂಕ ಪ್ರಮಾಣಗಳನ್ನು ನಿರ್ಧರಿಸಲು 8 ತೂಕ ಆಕ್ಸಿಜನನ್ನು ಪ್ರಮಾಣಕವಾಗಿ ಇಟ್ಟುಕೊಂಡು ಇತರ ಧಾತುಗಳ ತೂಕಗಳನ್ನು ನಿರ್ಣಯಿಸುತ್ತಾರೆ. ಇದೇ ಧಾತುಗಳ ಸಮಾನ ತೂಕಗಳು. ಇದೇ ರೀತಿ ಸಂಯುಕ್ತಗಳ ಸಮಾನ ತೂಕಗಳನ್ನೂ ನಿರ್ಧರಿಸುತ್ತಾರೆ. **(ನೋಡಿ– ಸಮಾನ ತೂಕ)** ಕೆಲವು ವೇಳೆ ಒಂದೇ ಧಾತುವಿಗೆ ಬೇರೆ ಬೇರೆ ವೇಲೆನ್ಸಿ ಇರುವುದರಿಂದ, ಸಂಯುಕ್ತಗಳು ಕ್ರಿಯೆಗಳಲ್ಲಿ ಬೇರೆ ಬೇರೆ ಪಾತ್ರ ವಹಿಸುವ ಸಾಧ್ಯತೆ ಇರುವುದರಿಂದ (ಒಂದೇ ಸಂಯುಕ್ತ ಒಂದು ಕ್ರಿಯೆಯಲ್ಲಿ ಆಮ್ಲವಾಗಿ ಭಾಗವಹಿಸಬಹುದು, ಇನ್ನೊಂದರಲ್ಲಿ ಉತ್ಕರ್ಷಣಕಾರಿಯಾಗಿ ಭಾಗವಹಿಸಬಹುದು) ಸಂದರ್ಭಾನುಸಾರ ಒಂದೇ ಪದಾರ್ಥದ ಸಮಾನ ತೂಕ ವ್ಯತ್ಯಾಸವಾಗುತ್ತ ಹೋಗಬಹುದು. ಆದ್ದರಿಂದ ಸಮಾನ ತೂಕದ ಬಗ್ಗೆ ಮಾತನಾಡುವಾಗ ಸಂದರ್ಭವನ್ನು ಸೂಚಿಸುವುದು ಅಗತ್ಯ.

ಈ ಸಮಾನ ತೂಕಗಳು ಕೇವಲ ಸಂಖ್ಯೆಗಳು. ರಾಸಾಯನಿಕ ಕ್ರಿಯೆಗಳಲ್ಲಿ ಪದಾರ್ಥಗಳು ಭಾಗವಹಿಸುವಾಗ ಅವುಗಳ ಸಮಾನ ತೂಕಗಳ ಪ್ರಮಾಣಗಳಲ್ಲಿ ಭಾಗವಹಿಸುವುವು ಎಂದಾಗ ಗ್ರಾಮುಗಳಲ್ಲಿ ಬೇಕಾದರೂ ತೆಗೆದುಕೊಳ್ಳಬಹುದು. ಪೌಂಡುಗಳಲ್ಲಿ ಬೇಕಾದರೂ ತೆಗೆದುಕೊಳ್ಳಬಹುದು. ಅಥವಾ ಇನ್ನಾವುದೇ ಮಾನಗಳಲ್ಲಿ ಬೇಕಾದರೂ ತೆಗೆದುಕೊಳ್ಳಬಹುದು. ಸಮಾನ ತೂಕ ಎಷ್ಟೋ ಅಷ್ಟು ಗ್ರಾಮ್ ಪದಾರ್ಥವನ್ನು ತೆಗೆದುಕೊಂಡಾಗ ಅದನ್ನು ಗ್ರಾಮ್ ಸಮಾನ ತೂಕ ಎಂದು ಕರೆಯುವುದು ರೂಢಿ. (ಜೆ.ಆರ್.ಎಲ್.)

**ಗ್ರಾಮ :** ಹಳ್ಳಿ, ಪಳ್ಳಿ, ಊರು, ಗುಡಾ, ಗಾಂವ್, ಕಸಬಾ, ಖೇಡಾ ಎಂದು ಭಾರತದ ಬೇರೆ ಬೇರೆ ಕಡೆಗಳಲ್ಲಿ ಪರಿಚಿತವಾಗಿರುವ ಸಮುದಾಯ. ಭರತ ಇವನ್ನು ಬ್ರಾಹ್ಮಣಾದಿ ವರ್ಣಗಳಿಂದ ಕೂಡಿದ, ಪ್ರಾಕಾರ ಕಂದಕಗಳಿಲ್ಲದ, ಬಹುಜನವಸತಿಗಳೆಂದು ಹೇಳಿದ್ದಾನೆ. ಇವನ್ನು ಸಾಮಾನ್ಯವಾಗಿ ಶಾಶ್ವತವಾದ, ಗಾತ್ರದಲ್ಲಿ ಚಿಕ್ಕದಾದ, ಮುಖ್ಯವಾಗಿ ಭೂವ್ಯವಸಾಯವುಳ್ಳ, ಹತ್ತಿರ ಹತ್ತಿರ ವಾಸಿಸುವ ಕೆಲವು ಕುಟುಂಬಗಳಿರುವ, ಪ್ರಾಥಮಿಕ ಸಂಬಂಧಗಳು ಪ್ರಧಾನವಾಗಿರುವ ನೆಲೆಗಳೆಂದು ಕರೆಯಬಹುದು. ಈ ಭೌತಿಕ ಹಾಗೂ ಸಾಮಾಜಿಕ ಆಧಾರಗಳ ಮೇಲೆ ಗ್ರಾಮಗಳನ್ನು ಅಲೆಮಾರಿಗಳ ತಂಡಗಳಿಂದ, ಚದರಿದ ಕೊಪ್ಪಲು ಅಥವಾ ಪಾಳೆಯಗಳಿಂದ, ಉಪನಗರ ಹಾಗೂ ಮಹಾನಗರಗಳಿಂದ ವಿಂಗಡಿಸುವುದು ಸಾಧ್ಯ.

ಬೇಟೆಯಾಡುವುದು, ಗಡ್ಡೆಗೆಣಸು ಸಂಗ್ರಹಿಸುವುದು, ಮೀನು ಹಿಡಿಯುವುದು ಮುಂತಾದ ಆಹಾರ ಸಂಪಾದನೆಯ ಮಾರ್ಗಗಳನ್ನು ಅನುಸರಿಸುತ್ತಿದ್ದ ಪ್ರಾಚೀನರು ಆಹಾರಾನ್ವೇಷನೆಯಲ್ಲಿ ದೂರದೂರ ಅಲೆಯುತ್ತಿದ್ದರು. ಪ್ರಾಣಿಗಳನ್ನು ಪಳಗಿಸಲು ಕಲಿತ ಅವರು ಮುಂದೆ ಕೃಷಿಯನ್ನು ಅವಲಂಬಿಸಿದಾಗ ಮಾನವವಿಕಾಸದಲ್ಲಿ ಒಂದು ದೊಡ್ಡ ಹೆಜ್ಜೆ ಇಟ್ಟಂತಾಯಿತು. ಈ ಕ್ರಾಂತಿ ನವಶಿಲಾಯುಗದಲ್ಲಿ, ಅಂದರೆ ಪ್ರ.ಶ.ಪೂ. 10,000 ದ ಸುಮಾರಿಗೆ, ಆದಂತೆ ಕಾಣುತ್ತದೆ. ಮಣ್ಣನ್ನು ಅಗೆಯುವ ಕೋಲನ್ನೂ ಅನಂತರ ನೇಗಿಲನ್ನೂ ಬಳಸಿದಾಗ ಉಳುಮೆ ಪ್ರಾರಂಭವಾಯಿತೆನ್ನಬಹುದು. ಇದರಿಂದಾಗಿ ಒಂದೇ ಕಡೆ ನೆಲೆ ನಿಲ್ಲುವುದು ಸಾಧ್ಯವಾಯಿತು. ಸಾಗುವಳಿಯನ್ನು ನೋಡಿಕೊಳ್ಳಲು ಅದು ಅವಶ್ಯವೂ ಆಯಿತು. ಸುಮಾರು 2000 ವರ್ಷಗಳ ಅನಂತರ, ಅಂದರೆ ಪ್ರ.ಶ.ಪೂ. 8000ರ ಸುಮಾರಿಗೆ, ಇರಾಕಿನಲ್ಲಿ ಸ್ಥಾಪಿತವಾದ ಗ್ರಾಮಗಳು ಸದ್ಯಕ್ಕೆ ನಮಗೆ ದೊರೆತಿರುವ ಪ್ರಾಚೀನ ಗ್ರಾಮಗಳು. ಭಾರತದಲ್ಲೂ ಆ ಸುಮಾರಿಗೇ ಗ್ರಾಮಗಳ ಉದಯವಾಗಿರಬೇಕು. ಋಗ್ವೇದದ ಕಾಲಕ್ಕಾಗಲೇ ಗ್ರಾಮಗಳು ಪೂರ್ಣವಾಗಿ ವಿಕಸಿತಗೊಂಡಿದ್ದವು. ಈ ಗ್ರಾಮದ ಹೊಸ್ತಿಲನ್ನು ಈಜಿಪ್ಟ್ ಪ್ರ.ಶ.ಪೂ. ಸುಮಾರು 5000ದಲ್ಲೂ ಯುರೋಪಿನ ಕೆಲವು ದೇಶಗಳು ಪ್ರ.ಶ.ಪೂ. ಸುಮಾರು 4000ದಲ್ಲೂ ಚೀನ ಪ್ರ.ಶ.ಪೂ. ಸುಮಾರು 2500–3000ರಲ್ಲೂ ದಾಟಿದಂತೆ ಕಾಣುತ್ತದೆ.

ಇತಿಹಾಸಕಾರರೂ ಸಮಾಜಶಾಸ್ತ್ರಜ್ಞರೂ ಗ್ರಾಮಗಳಲ್ಲಿ ಮೂರು ಪ್ರಕಾರಗಳನ್ನು ಗುರುತಿಸಿದ್ದಾರೆ. ಕೆಲವೇ ಕೆಲವು ತಿಂಗಳ ಕಾಲ ಕೃಷಿ ಮಾಡಲು ನೆಲೆ ನಿಲ್ಲುವ ತಾತ್ಕಾಲಿಕ ಹಾಗೂ ಸಂಚಾರಿ ಸಮುದಾಯಗಳು ಕೆಲವಿವೆ. ಇವನ್ನು ಗ್ರಾಮವೆನ್ನುವುದು ತಪ್ಪಾದೀತು. ಮತ್ತೆ ಕೆಲವು ಐದು ಹತ್ತು ವರ್ಷಗಳ ಕಾಲ ಒಂದೆಡೆ ನಿಂತು ಕೃಷಿ ಮಾಡುವ ಅರೆ ಶಾಶ್ವತ ಸಮುದಾಯಗಳು. ಈಗಲೂ ಇಂಥ ಸಮುದಾಯಗಳು ಹಲವು ಇವೆ. ಮೂರನೆಯ ಪ್ರಕಾರವೆಂದರೆ ಶಾಶ್ವತವಾದ ಕೃಷಿಕ ಸಮುದಾಯಗಳು. ಇವೇ ನಿಜವಾದ ಗ್ರಾಮಗಳು. ಜಗತ್ತಿನ ಬಹುತೇಕ ಗ್ರಾಮವಾಸಿಗಳ ಮುಖ್ಯ ಉದ್ಯೋಗ ಕೃಷಿಯಾದರೂ ಬೆಸ್ತರಹಳ್ಳಿಗಳೂ ಗಣಿಗ್ರಾಮಗಳೂ ನೇಕಾರರ, ಬಡಿಗರ ಮತ್ತಿತರ ಕಸಬಿನವರ ಗ್ರಾಮಗಳೂ ಇವೆ.

ಗ್ರಾಮಗಳ ವೈಜ್ಞಾನಿಕ ಅಭ್ಯಾಸ ಪ್ರಾರಂಭವಾದುದು ಕಳೆದ ಶತಮಾನದ ಮಧ್ಯಭಾಗದಲ್ಲಿ ಎನ್ನಬಹುದು. ಒಲುಫ್‌ಸೆನ್ ಡೆನ್ಮಾರ್ಕಿನ ಗ್ರಾಮಗಳ ಬಗೆಗೂ ಮೌರರ್ ಜರ್ಮನಿಯ ಮಾರ್ಕುಗಳ ಬಗೆಗೂ ಹೆನ್ರಿ ಮೇನ್ ಪೌರಸ್ತ್ಯ ಮತ್ತು ಪಾಶ್ಚಾತ್ಯ ಗ್ರಾಮಸಮುದಾಯಗಳ ಬಗೆಗೂ ಬರೆದು ಸಮಾಜ ಶಾಸ್ತ್ರಜ್ಞರ ಕುತೂಹಲವನ್ನು ಕೆರಳಿಸಿದರು. ರಾಬರ್ಟ್ ರೆಡ್‌ಫೀಲ್ಡ್ 1930ರಲ್ಲಿ ಮೆಕ್ಸಿಕೊದ ಟಿಪೋಜ್ಟ್‌ಲಾನ್ ಗ್ರಾಮವನ್ನು ವರ್ಣಿಸಿ ಅತ್ಯಮೂಲ್ಯವಾದ ಗ್ರಂಥವೊಂದನ್ನು ಪ್ರಕಟಿಸಿದ ಅನಂತರ ವಿಶ್ವದ ಬೇರೆ ಬೇರೆ ಭಾಗಗಳ ಗ್ರಾಮಸಮುದಾಯಗಳ ಬಗ್ಗೆ ನೂರಾರು ಅಭ್ಯಾಸಗಳು ನಡೆದಿವೆ. ಭಾರತದ ಗ್ರಾಮ, ರಷ್ಯದ ಮಿರ್, ಜರ್ಮನಿಯ ಮಾರ್ಕ್, ಇಂಗ್ಲೆಂಡಿನ ವಿಲೇಜ್, ಡೆನ್ಮಾರ್ಕಿನ ಹಳ್ಳಿ, ಮೆಕ್ಸಿಕೊದ ಗ್ರಾಮ – ಇವುಗಳ ಹೋಲಿಕೆಗಳನ್ನೂ ಭೇದಗಳನ್ನೂ ಇಂದು ಗುರುತಿಸಬಹುದಾಗಿದೆ.

ಗ್ರಾಮದ ಉದಯ ಸಾಮಾಜಿಕ ವಿಕಾಸದ ಒಂದು ಮಹತ್ತ್ವದ ಹಂತ. ಸಂಸ್ಕೃತಿಯ ವೃದ್ಧಿಯೂ ಪೋಷಣೆಯೂ ಗ್ರಾಮವ್ಯವಸ್ಥೆಯಿಂದ ಸಾಧ್ಯವಾಯಿತೆನ್ನಬಹುದು. ಭಾರತ, ಚೀನ ದೇಶಗಳ ಸಂಸ್ಕೃತಿ ಗ್ರಾಮಗಳಲ್ಲಿ ಪಾಲನೆ, ಪೋಷಣೆ ಪಡೆಯಿತು. ಇಂದಿಗೂ ಪ್ರಪಂಚದ ಮುಕ್ಕಾಲುಪಾಲು ಜನರನ್ನು ಗ್ರಾಮಗಳು ಪೋಷಿಸುತ್ತಿವೆ. ಅಲ್ಲದೆ, ಉಳಿದ ಮತ್ತೊಂದು ಪಾಲಿನವರಿಗೆ ಆಹಾರವನ್ನೂ ಕಚ್ಚಾಸಾಮಗ್ರಿಯನ್ನೂ ಒದಗಿಸುತ್ತವೆ. ಇತ್ತೀಚಿನ ಮಾಹಿತಿಯಂತೆ ಭಾರತದಲ್ಲಿನ ಗ್ರಾಮಗಳ ಸಂಖ್ಯೆ ಆರು ಲಕ್ಷ (2001). ಅಂದರೆ ದೇಶದ ಜನಸಂಖ್ಯೆಯ ಶೇ.68.8 ಭಾಗ ಗ್ರಾಮಗಳಲ್ಲಿ ವಾಸವಾಗಿದ್ದಾರೆ (2011). ಇದಕ್ಕೆಂದೇ ಭಾರತವನ್ನು ಹಳ್ಳಿಗಳ ದೇಶವೆಂದು ವರ್ಣಿಸಲಾಗುತ್ತದೆ. ಭಾರತದ ಗ್ರಾಮವ್ಯವಸ್ಥೆಗೆ ಜಾತಿಪದ್ಧತಿ, ಕುಟುಂಬ ವ್ಯವಸ್ಥೆಗಳಷ್ಟೇ ಮಹತ್ತ್ವ ಉಂಟು. ಗ್ರಾಮಗಳು ಪರಸ್ಪರ ಸಹಕಾರ ಹಾಗೂ ಸ್ವಯಂಪೂರ್ಣತೆಯ ಪಾಠವನ್ನು ಕಲಿಸಿದವು. ಯುದ್ಧ ಮತ್ತು ಆಕ್ರಮಣಗಳ ಹೊಡೆತಗಳಿಂದ ಉಳಿಸಿದವು. ಚಾರ್ಲ್ಸ್ ಮೆಟ್‌ಕಾಫ್ ಎಂಬಾತ ಗ್ರಾಮೀಣ ಸಮುದಾಯಗಳನ್ನು ಇತರರಿಂದ ಪೂರ್ಣವಾಗಿ ಸ್ವತಂತ್ರವಾದ, ತಮಗೆ ಬೇಕಾದ ಎಲ್ಲವನ್ನೂ ಪಡೆದುಕೊಂಡಿರುವ, ಪುಟ್ಟ ಗಣರಾಜ್ಯಗಳೆಂದು ಕರೆದಿದ್ದಾನೆ. ಯಾವುದೂ ಶಾಶ್ವತವಲ್ಲದ ಕಡೆಯಲ್ಲಿ ಅವು ಶಾಶ್ವತವೆನಿಸಿವೆ. ಅರಸೊತ್ತಿಗೆಗಳು ಉರುಳುವುವು. ಕ್ರಾಂತಿಗಳು ಸಂಭವಿಸುವುವು. ಹಿಂದೂ, ಪಠಾಣ, ಮೊಗಲ, ಮರಾಠ, ಸಿಕ್ಖ್, ಇಂಗ್ಲಿಷರಾದಿಯಾಗಿ ಎಲ್ಲರಿಗೂ ಅಳಿವು ಇದೆ; ಆದರೆ ಈ ಗ್ರಾಮಗಳು ಮಾತ್ರ ಉಳಿಯುವುವು. ಅವು ಭಾರತೀಯರನ್ನೂ ಅವರ ಸಂಸ್ಕೃತಿಯನ್ನೂ ಉಳಿಸಿದ ಬಗೆ ಪ್ರಶಂಸನೀಯ. ರಾಧಾಕಮಲ ಮುಖರ್ಜಿಯವರು ಗ್ರಾಮಗಳನ್ನು ಪೌರಸ್ತ್ಯರ ಪ್ರಜಾಸತ್ತೆಗಳೆಂದು ವರ್ಣಿಸಿದ್ದಾರೆ. ಈ ಉದ್ಗಾರಗಳಲ್ಲಿ ಹಳೆಯದರ ಬಗ್ಗೆ ಇರುವ ಭಕ್ತಿಯ ಮನೋಭಾವ ಕಾಣುವುದು ನಿಜವಾದರೂ ಗ್ರಾಮ ಭಾರತೀಯ ಸಮಾಜದ ಬೆನ್ನೆಲುಬು ಎಂಬುದನ್ನು ಅಲ್ಲಗಳೆಯಲಾಗದು.

**ಭಾರತದಲ್ಲಿ ಗ್ರಾಮ :** ವೈದಿಕ ವಾಙ್ಮಯದಲ್ಲಿ ಗ್ರಾಮ ಶಬ್ದದ ಬಳಕೆ ಹೇರಳವಾಗಿ ಬಂದಿದೆ. ರಾಮಾಯಣ ಮಹಾಭಾರತಗಳಲ್ಲಿ ಘೋಷ ಮತ್ತು ಗ್ರಾಮಗಳ ಉಲ್ಲೇಖಗಳಿವೆ. ಮನುಸ್ಮೃತಿ, ಅರ್ಥಶಾಸ್ತ್ರ, ಬೌಧಾಯನನ ಗೃಹ್ಯ ಸೂತ್ರ, ಶುಕ್ರನೀತಿಸಾರ ಮೊದಲಾದ ಶಾಸ್ತ್ರಗ್ರಂಥಗಳಲ್ಲಿ ಗ್ರಾಮಗಳ ವಿವಿಧ ಪ್ರಕಾರಗಳು ಹಾಗೂ ಲಕ್ಷಣಗಳು, ಗ್ರಾಮಣಿ ಮೊದಲಾದ ಗ್ರಾಮಾಧಿಕಾರಿಗಳ ಕರ್ತವ್ಯಗಳು, ಕರಸಂಗ್ರಹ ಮುಂತಾದ ವಿಷಯಗಳ ಬಗ್ಗೆ ಹೇಳಲಾಗಿದೆ. ಪ್ರ.ಶ.ಪೂ. 5ನೆಯ ಶತಮಾನದ ಈಚೆಗಿನ ಜೈನ, ಬೌದ್ಧಗ್ರಂಥಗಳಲ್ಲಿ ವಿವಿಧ ಗ್ರಾಮ ಪ್ರಕಾರಗಳ ವರ್ಣನೆ ಉಂಟು. ಈ ಎಲ್ಲ ಮೂಲಗಳಿಂದ ಭಾರತೀಯ ಗ್ರಾಮಗಳ ಸಾಮಾನ್ಯ ಲಕ್ಷಣಗಳನ್ನು ಹೇಳುವುದು ಸಾಧ್ಯವಾದೀತು. ಆದರೆ ಈ ಲಕ್ಷಣಗಳು ಪ್ರಾಚೀನ ಕಾಲಕ್ಕೆ ಹೆಚ್ಚಾಗಿ ಅನ್ವಯಿಸುತ್ತವೆ ಎಂಬುದನ್ನೂ ಕಾಲಕಾಲಕ್ಕೆ ಅನೇಕ ಪ್ರಭಾವಗಳಿಗೆ ಸಿಲುಕಿ ಗ್ರಾಮಗಳು ಅಷ್ಟಿಷ್ಟಾದರೂ ಬದಲಾಗುತ್ತಿದ್ದವೆಂಬುದನ್ನೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಪ್ರಾದೇಶಿಕ ವಿಭೇದಗಳೂ ಇದ್ದುವೆಂಬುದನ್ನು ಮರೆಯಬಾರದು.

ಗ್ರಾಮಗಳು ಸಾಮಾನ್ಯವಾಗಿ 100 ಕುಟುಂಬಗಳಿಂದ 1000 ಕುಟುಂಬಗಳನ್ನು ಒಳಗೊಂಡಿದ್ದುವು. ಒಮ್ಮೊಮ್ಮೆ ಮಲೆನಾಡಿನಲ್ಲಿರುವಂತೆ ಒಂದೇ ಮನೆಯ ಹಳ್ಳಿಗಳೂ ನಾಲ್ಕೆಂಟು ಕುಟುಂಬಗಳೂ ಒತ್ತೊತ್ತಿಗೆ ಇರುವ ಆದಿವಾಸಿ ಗ್ರಾಮಗಳೂ ಒಂದೇ ಜಾತಿಗೆ ಅಥವಾ ವಂಶಕ್ಕೆ ಸೇರಿದ ಜನರೇ ತುಂಬಿರುವ ಅಥವಾ ಒಂದೇ ಕಸಬಿನವರು ನೆಲೆಸಿರುವ ವಿಶಿಷ್ಟ ಪ್ರಕಾರದ ಗ್ರಾಮಗಳೂ ಕಾಣಸಿಗುತ್ತವೆ. ಆದರೆ ಹೆಚ್ಚಾಗಿ ಅವು ಅನೇಕ ಜಾತಿಗಳೂ ಕಸಬುಗಳೂ ಇರುವ ನೆಲೆಗಳು. ಗ್ರಾಮದವರ ಮುಖ್ಯವಾದ ಉದ್ಯೋಗ ಒಕ್ಕಲುತನ. ಭೂಮಿ ರಾಜನಿಗೆ ಸೇರಿದ್ದು. ಕೆಲವೊಮ್ಮೆ ಅದನ್ನು ರಾಜ ಸ್ವಸಂತೋಷದಿಂದ ಬೇರೆಯವರಿಗೆ ಉಪಭೋಗಕ್ಕೆಂದು ಕೊಡಬಹುದು. ಸಾಗುವಳಿಯ ಭೂಮಿಯನ್ನು ಕುಟುಂಬದ ಆವಶ್ಯಕತೆಯನ್ನು ನೋಡಿ ಹಂಚಲಾಗುತ್ತಿತ್ತು. ಸಾಮಾನ್ಯವಾಗಿ ಮನೆಗಳು ಹೊಲದ ಮಧ್ಯದಲ್ಲಿ ಇರುತ್ತಿದ್ದವು. ಗಡಿಯಲ್ಲಿ ಮಾವು, ನಟ, ಶಿರೀಷ ಮೊದಲಾದ ಮರಗಳು, ಹಳ್ಳಗಳು, ಕೆರೆ ಒಡ್ಡು, ಗುಡ್ಡಗಳು ಸೀಮೆಯನ್ನು ಗುರುತಿಸುತ್ತಿದ್ದವು. ಹೊಸ ಗ್ರಾಮಗಳನ್ನು ರಾಜನ ಅನುಮತಿ ಪಡೆದು ಯೋಜನಾಬದ್ಧವಾಗಿ ಕಟ್ಟಲಾಗುತ್ತಿತ್ತು. ದಂಡಕ, ಸರ್ವತೋಭದ್ರ, ಪದ್ಮಕ, ಸ್ವಸ್ತಿಕ ಮುಂತಾದ ಎಂಟು ಆಕಾರಗಳ ನಿವೇಶನಗಳನ್ನು ಶಾಸ್ತ್ರಗ್ರಂಥಗಳು ಹೇಳಿವೆ. ಮಹಾರಾಷ್ಟ್ರದಲ್ಲಿ ಮುಖ್ಯವಾಗಿ ಮೂರು ಪ್ರಕಾರದ ಹಳ್ಳಿಗಳಿವೆ ಎಂದು ಇರಾವತಿ ಕರ್ವೆ ತಿಳಿಸಿದ್ದಾರೆ. ದಕ್ಷಿಣ ಮೈದಾನದಲ್ಲಿ ಹೊಲಗಳ ಮಧ್ಯೆ ಕೇಂದ್ರೀಕೃತವಾದ ಮನೆಗಳಿರುವ ಹಳ್ಳಿಗಳಿವೆ. ಕೊಂಕಣದ ಗ್ರಾಮಗಳಲ್ಲಿ ರಸ್ತೆಯ ಇಕ್ಕೆಲದಲ್ಲಿ ಮನೆಗಳಿದ್ದು ಅವುಗಳಿಗೆ ಹೊಂದಿದಂತೆ ಹಿಂಬದಿಯಲ್ಲಿ ತೆಂಗು ಅಡಕೆ ತೋಟಗಳಿವೆ. ಬೆಟ್ಟ ಪ್ರದೇಶದ ಗ್ರಾಮಗಳಲ್ಲಿ ವಸತಿಗಳು ಚದರಿದಂತೆ ಇದ್ದು ಸುತ್ತ ಹೊಲಗಳಿವೆ. ಮೊನ್ನೆ ಮೊನ್ನೆಯವರೆಗೆ ಅಸ್ಪೃಶ್ಯರೆನಿಸಿಕೊಳ್ಳುತ್ತಿದ್ದ ಜನ ಊರ ಗಡಿಯಿಂದಾಚೆ ಇರುತ್ತಿದ್ದರು. ಬೇರೆ ಬೇರೆ ಜಾತಿಗಳ ವಸತಿಗೆ ಬೇರೆ ಬೇರೆ ಕೇರಿಗಳೂ ದೇವಾಲಯಗಳೂ ಇರುವುದು ವಾಡಿಕೆ.

ಗ್ರಾಮ ಪ್ರಾಚೀನ ಭಾರತದಲ್ಲಿ ಸಮಾಜದ ಮೂಲಘಟಕವಾಗಿತ್ತು. ರಾಜಕೀಯ ಮತ್ತು ಕಾನೂನಿನ ದೃಷ್ಟಿಯಿಂದ ರಾಜನೇ ಪ್ರಭು ಹಾಗೂ ಶಾಸಕ. ಗ್ರಾಮಣಿ ಮೊದಲಾದ ಅಧಿಕಾರಿಗಳು ಗ್ರಾಮಗಳ ವಿವಿಧ ಸಂಚಯಗಳಿಗೆ ರಾಜನಿಂದ ನೇಮಕಗೊಳ್ಳುತ್ತಿದ್ದರು. ಬೇರೆ ಬೇರೆ ವರ್ಣಗಳಿಗೆ ಸೇರಿದ ಅಧಿಕಾರಿಗಳು ವಿವಿಧ ಹುದ್ದೆಗಳಲ್ಲಿ ಇರುತ್ತಿದ್ದರು. ಸಹಕಾರ ಮತ್ತು ಸ್ವಯಂಪೂರ್ಣತೆ ಗ್ರಾಮದ ವಿಶಿಷ್ಟ ಲಕ್ಷಣ. ಆದರೆ ಈ ಎಲ್ಲ ಲಕ್ಷಣಗಳೂ

ಪಾಶ್ಚಾತ್ಯ ಪ್ರಭಾವಗಳು, ಯಂತ್ರತಂತ್ರದ ಆಗಮನ, ಬ್ರಿಟಿಷ್ ಆಡಳಿತ, ಅಂತಾರಾಷ್ಟ್ರೀಯ ಮಾರುಕಟ್ಟೆ, ನಗರೀಕರಣ ಮೊದಲಾದ ಪ್ರಭಾವಗಳಿಗೆ ಸಿಕ್ಕು ಬದಲಾಗಿವೆ (**ನೋಡಿ– ಗ್ರಾಮ ಸಮಾಜ**). (ಎಚ್.ವಿ.ಎನ್.)

**ಗ್ರಾಮಕೈಗಾರಿಕೆಗಳು :** ಕೃಷಿಪ್ರಧಾನವಾದ ಗ್ರಾಮಗಳಲ್ಲಿ ರೈತರ ನಿತ್ಯಜೀವನಕ್ಕೆ ಪೂರಕವಾಗಿರುವ ಉಪಕಸಬುಗಳು ಮತ್ತು ಸಣ್ಣ ಕೈಗಾರಿಕೆಗಳು. ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳ ಅನೇಕ ಕ್ಲಿಷ್ಟ ಸಮಸ್ಯೆಗಳಿಗೆ ಗ್ರಾಮ ಕೈಗಾರಿಕೆಗಳು ಉತ್ತಮ ಪರಿಹಾರಮಾರ್ಗಗಳಾಗಿವೆ. ಅಭಿವೃದ್ಧಿಶೀಲ ರಾಷ್ಟ್ರಗಳ ಬಹುಪಾಲು ಜನರು ಜೀವನೋಪಾಯಕ್ಕಾಗಿ ವ್ಯವಸಾಯವನ್ನೇ ಆಶ್ರಯಿಸಿರುತ್ತಾರೆ. ಜನಸಂಖ್ಯೆ ಹೆಚ್ಚಿದಂತೆ

ಮಡಕೆ ತಯಾರಿಕೆ

ವ್ಯವಸಾಯದ ಮೇಲೆ ಜನರ ಒತ್ತಡವೂ ಹೆಚ್ಚುತ್ತದೆ. ಹೆಚ್ಚಿನ ಜನಕ್ಕೆ ಬೇರೆ ಯಾವ ಕಸಬೂ ಲಭ್ಯವಿಲ್ಲದ್ದರಿಂದ ಈ ಒತ್ತಡ ಅನಿವಾರ್ಯವಾಗುತ್ತದೆ. ಇದನ್ನು ಕಡಿಮೆ ಮಾಡಲು ಗ್ರಾಮಕೈಗಾರಿಕೆಗಳನ್ನು ಸ್ಥಾಪಿಸುವುದು ಆವಶ್ಯಕವಾಗುತ್ತದೆ. ಅಲ್ಲದೆ, ಒಂದು ಆರ್ಥಿಕತೆಯಲ್ಲಿ ಸಮತೋಲ ಆರ್ಥಿಕ ಅಭಿವೃದ್ಧಿಯನ್ನೂ ರಾಷ್ಟ್ರೀಯ ಆದಾಯದ ಸಮಾನ ಹಂಚಿಕೆಯನ್ನೂ ಸಾಧಿಸಲು, ನಗರಗಳಲ್ಲಿ ಕೈಗಾರಿಕೆಗಳ ಕೇಂದ್ರೀಕರಣವಾಗುವುದನ್ನು ತಪ್ಪಿಸಲು ಗ್ರಾಮಕೈಗಾರಿಕೆಗಳು ಸಹಕಾರಿಯಾಗಿವೆ. ಗ್ರಾಮಗಳಲ್ಲಿ ನಿರುಪಯೋಗಿಯೆನಿಸಿದ ಕಾರ್ಮಿಕ ಶಕ್ತಿಯನ್ನು ರೂಢಿಸಲು, ಗ್ರಾಮದ ಸುಪ್ತ ಬಂಡವಾಳವನ್ನು ಹೊರಕ್ಕೆ ತರಲು, ನಿರುದ್ಯೋಗಿಗಳಾದ ಜನಕ್ಕೆ ಉದ್ಯೋಗ ದೊರಕಿಸಿಕೊಡಲು, ಪ್ರಾದೇಶಿಕ ಅಸಮತೆಯನ್ನು ಹೋಗಲಾಡಿಸಲು ಗ್ರಾಮ ಕೈಗಾರಿಕೆಗಳು ನೆರವಾಗುತ್ತವೆ. ಗ್ರಾಮಗಳಲ್ಲಿ ಕೈಗಾರಿಕೆಗಳ ಹಾಗೂ ಇತರ ಉಪಕಸಬುಗಳ ಅಭಾವದಿಂದಾಗಿ ಗ್ರಾಮವಾಸಿಗಳು ನೆರೆಯ ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು, ವಸತಿ, ಆರೋಗ್ಯ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ಗ್ರಾಮ ಕೈಗಾರಿಕೆಗಳ ಸ್ಥಾಪನೆ ನೆರವಾಗುತ್ತದೆ. ಕೈಗಾರಿಕೆಗಳನ್ನು ಗ್ರಾಮಗಳಲ್ಲಿ ಸ್ಥಾಪಿಸುವುದರಿಂದ ಕಾರ್ಮಿಕ ಶಕ್ತಿಯ ಹಾಗೂ ಬಂಡವಾಳ ಸಂಘಟನೆಯ ಜೊತೆಗೆ ಗ್ರಾಮವಾಸಿಗಳಲ್ಲಿ ಸುಪ್ತವಾಗಿರುವ ಪ್ರತಿಭೆಯ ಪ್ರಕಾಶಕ್ಕೆ ಅತ್ಯುತ್ತಮ ಅವಕಾಶ ಒದಗುತ್ತದೆ. ವ್ಯವಸಾಯಕ್ಷೇತ್ರ ಎಷ್ಟೇ ಅಭಿವೃದ್ಧಿಯಾದರೂ ಅದು ಒದಗಿಸುವ ಉದ್ಯೋಗಾವಕಾಶಗಳ ವ್ಯಾಪ್ತಿ ಗಣನೀಯವಾಗಿರುವುದಿಲ್ಲ. ಆದ್ದರಿಂದ ಗ್ರಾಮಾಂತರ ನಿರುದ್ಯೋಗ ಮತ್ತು ಅಪೂರ್ಣ ಉದ್ಯೋಗಗಳಿಗೆ ಶಾಶ್ವತವಾದ ಪರಿಹಾರ ಒದಗಿಸಬೇಕಾದರೆ, ಗ್ರಾಮಾಂತರ ಕೈಗಾರಿಕೆಗಳನ್ನು ಸ್ಥಾಪಿಸಬೇಕಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸಲ್ಪಡುವ ಕೈಗಾರಿಕೆಗಳಿಂದ ವ್ಯವಸಾಯಕ್ಕೆ ತೊಡಕಾಗುವಂತಿರಬಾರದು. ಈ ಕೈಗಾರಿಕೆಗಳು ಸುಲಭವಾಗಿಯೂ ಸರಳವಾಗಿಯೂ ಇದ್ದು, ಕುಟುಂಬಕ್ಕೆ ಸೇರಿದ ವ್ಯಕ್ತಿಗಳು ನಡೆಸುವಂತಿರಬೇಕು. ಕಡಿಮೆ ಬಂಡವಾಳದಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪಿಸುವಂತಿರಬೇಕು. ಪ್ರಾದೇಶಿಕ ಸೌಲಭ್ಯಗಳು, ಕಚ್ಚಾಸಾಮಗ್ರಿಯ ಲಭ್ಯತೆ, ಮಾರುಕಟ್ಟೆಯ ಸಾಮೀಪ್ಯ ಮುಂತಾದವುಗಳ ಆಧಾರದ ಮೇಲೆ ಗ್ರಾಮ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು. ಈ ಕೈಗಾರಿಕೆಗಳು ವ್ಯವಸಾಯಕ್ಕೆ ಪೂರಕವಾಗಿರಬೇಕಾದ್ದು ಅತ್ಯಾವಶ್ಯಕ. ಅಲ್ಲಿ ಕೆಲಸವಿಲ್ಲದಾಗ ಇವು ಕೆಲಸ ಒದಗಿಸುವಂತಿರಬೇಕು.

ಗ್ರಾಮಕೈಗಾರಿಕೆಗಳನ್ನು ಕೃಷಿ ಕೈಗಾರಿಕೆ, ಗುಡಿಸಿಲು ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳೆಂದು ವಿಂಗಡಿಸಬಹುದಾಗಿದೆ. ಆಹಾರದ ಕೈಗಾರಿಕೆ, ಹಣ್ಣು, ತರಕಾರಿ, ಮಾಂಸ, ಮೀನು ಮುಂತಾದವುಗಳನ್ನು ಹದಗೊಳಿಸುವಿಕೆ ಮತ್ತು ಡಬ್ಬೀಕರಣ, ಉಪಾಹಾರ ತಯಾರಿಕೆ, ರೊಟ್ಟಿ ತಯಾರಿಕೆ, ಪಶು ಮತ್ತು ಕೋಳಿಗಳ ಆಹಾರ ತಯಾರಿಕೆ, ವ್ಯವಸಾಯ ಮತ್ತು ಇತರ ಕೃಷಿ ಕೈಗಾರಿಕೆಗಳಿಗೆ ಬೇಕಾದ ವಸ್ತುಗಳ ಉತ್ಪಾದನೆ, ಕೃಷಿಯಂತ್ರೋಪಕರಣಗಳ ಮತ್ತು ಕೋಳಿ ಸಾಕಣೆಗೆ ಬೇಕಾದ ಯಂತ್ರೋಪಕರಣಗಳ ತಯಾರಿಕೆ, ಕೀಟನಾಶಕಗಳ ತಯಾರಿಕೆ, ರಾಸಾಯನಿಕ ಗೊಬ್ಬರದ ತಯಾರಿಕೆ ಮುಂತಾದವು ವ್ಯವಸಾಯಕ್ಕೆ ಪೂರಕವಾದ ಹಾಗೂ ಗ್ರಾಮಪ್ರದೇಶಗಳಲ್ಲಿ ಸ್ಥಾಪಿಸಬಹುದಾದ ಕೈಗಾರಿಕೆಗಳಾಗಿವೆ. ಕೃಷಿ ಕೈಗಾರಿಕೆಗಳಲ್ಲಿ ಎರಡು ವಿಧಗಳನ್ನು ಕಾಣಬಹುದು. ಕೃಷಿಮೂಲ ವಸ್ತುಗಳನ್ನು ಕಚ್ಚಾಸಾಮಗ್ರಿಯಾಗಿ ಉಪಯೋಗಿಸುವ ಕೈಗಾರಿಕೆಗಳು (ಉದಾ: ಹಣ್ಣು ಮತ್ತು ತರಕಾರಿಗಳ ಸಂಸ್ಕರಣ, ಅಕ್ಕಿ ಮತ್ತು ಬೇಳೆ ಗಿರಣಿಗಳು), ಕೃಷಿಗೆ ಬಳಸಲಾಗುವ ಯಂತ್ರೋಪಕರಣಗಳು, ರಾಸಾಯನಿಕ ಗೊಬ್ಬರದ ಮಿಶ್ರಣ, ಟ್ರ್ಯಾಕ್ಟರುಗಳ ರಿಪೇರಿ, ಕೋಳಿ ಆಹಾರ ತಯಾರಿಕೆ–ಇವು ಮತ್ತೊಂದು ವಿಧದ ಕೃಷಿ ಕೈಗಾರಿಕೆಗಳಾಗಿವೆ.

ಗ್ರಾಮಕೈಗಾರಿಕೆಗಳಲ್ಲಿ ಕುಟುಂಬದ ಜನರೇ ನಡೆಸುವ ಕೈಗಾರಿಕೆಗಳನ್ನು ಗುಡಿಸಿಲು ಕೈಗಾರಿಕೆಗಳೆಂದು ಕರೆಯಲಾಗಿದೆ (**ನೋಡಿ– ಗುಡಿಸಿಲು ಕೈಗಾರಿಕೆಗಳು**). ಇವು ಪೂರ್ಣ ವೇಳೆಯ ಕೈಗಾರಿಕೆಗಳಾಗಿರಬಹುದು ಅಥವಾ ಒಪ್ಪೊತ್ತಿನ ಕೈಗಾರಿಕೆಗಳಾಗಿರಬಹುದು. ಗುಡಿಸಿಲು ಕೈಗಾರಿಕೆಗೂ ಸಣ್ಣ ಕೈಗಾರಿಕೆಗೂ ಇರುವ ವ್ಯತ್ಯಾಸವೆಂದರೆ ಸಣ್ಣ ಕೈಗಾರಿಕೆಗಳಲ್ಲಿ ಕೂಲಿಗಾಗಿ ದುಡಿಯುವ ಕಾರ್ಮಿಕರಿರುತ್ತಾರೆ. ಅವುಗಳಲ್ಲಿ ಯಂತ್ರ ಮತ್ತು ವಿದ್ಯುಚ್ಛಕ್ತಿಗಳನ್ನು ಮಿತಪ್ರಮಾಣದಲ್ಲಿ ಉಪಯೋಗಿಸಲು ಅವಕಾಶವಿದೆ. ಆದರೆ ಗುಡಿಸಿಲು ಕೈಗಾರಿಕೆಗೆ ಸಾಮಾನ್ಯವಾಗಿ ಯಂತ್ರ ಮತ್ತು ವಿದ್ಯುತ್ತಿನ ಸಹಾಯ ಇರುವುದಿಲ್ಲ (ಉದಾ: ಗೊಂಬೆಗಳ ತಯಾರಿಕೆ, ಕಸೂತಿ ಕೆಲಸ, ಬುಟ್ಟಿ ಹೆಣೆಯುವುದು).

ಬುಟ್ಟಿ ಹೆಣಿಗೆಯಲ್ಲಿ ನಿರತರಾಗಿರುವ ಮಹಿಳೆಯರು

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಗ್ರಾಮಕೈಗಾರಿಕೆಗಳ ಸ್ಥಾಪನೆಗೆ ಅವಕಾಶಗಳು ಹೇರಳವಾಗಿವೆ. ಗ್ರಾಮಪ್ರದೇಶಗಳ ಸೌಲಭ್ಯಗಳಿಗೆ ಇವು ಅತ್ಯುತ್ತಮವಾಗಿ ಹೊಂದಿಕೊಳ್ಳುತ್ತವೆ. ಇವುಗಳಲ್ಲಿ ಕಡಿಮೆ ಬಂಡವಾಳದಲ್ಲೇ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸಬಹುದು. ಏಕೆಂದರೆ ಇಲ್ಲಿ ಬಂಡವಾಳಕ್ಕಿಂತ ಶ್ರಮಕ್ಕೆ ಹೆಚ್ಚಿನ ಪ್ರಾಧಾನ್ಯ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ಬಂಡವಾಳದ ಕೊರತೆಯನ್ನೂ ನಿರುದ್ಯೋಗ ಸಮಸ್ಯೆಯನ್ನೂ ಪರಿಹರಿಸಬಹುದು. ಕೃಷಿಕ್ಷೇತ್ರದಲ್ಲಿ ಕಡಿಮೆ ಕೆಲಸವಿರುವ ಕಾಲದಲ್ಲಿ ಹಾಗೂ ಸಂಪೂರ್ಣವಾಗಿ ಕೆಲಸವಿಲ್ಲದಿರುವ ಕಾಲದಲ್ಲಿ ರೈತರನ್ನು ಉತ್ಪಾದಕ ಕಾರ್ಯಗಳಲ್ಲಿ ತೊಡಗಿಸಲೂ ಆ ಮೂಲಕ ರೈತ ಜನ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲೂ ಗ್ರಾಮಕೈಗಾರಿಕೆಗಳು ನೆರವಾಗುತ್ತವೆ.

ಸಣ್ಣ ಕೈಗಾರಿಕೆಗಳಿಗೆ ಕಡಿಮೆ ಬಂಡವಾಳ ಬೇಕಾಗಿರುವುದರಿಂದ ಬಂಡವಾಳವನ್ನು ಭಾರಿ ಉದ್ಯಮಗಳ ಸ್ಥಾಪನೆಗೆ ಹೆಚ್ಚು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬಂಡವಾಳದ ಕೊರತೆಯಿರುವುದರಿಂದಲೂ ತೀರ ಆವಶ್ಯಕವಾದ ಭಾರಿ ಉದ್ಯಮಗಳ ಸ್ಥಾಪನೆಗೆ ಬಂಡವಾಳ ಅಧಿಕ ಗಾತ್ರದಲ್ಲಿ ಬೇಕಾಗುವುದರಿಂದಲೂ ಸಣ್ಣ ಕೈಗಾರಿಕೆಗೆ ಹೆಚ್ಚಿನ ಪ್ರಾಮುಖ್ಯ ಉಂಟಾಗಿದೆ. ಗ್ರಾಮಕೈಗಾರಿಕೆಗಳಿಂದ ಗ್ರಾಮವಾಸಿಗಳಲ್ಲಿ ಉಳಿತಾಯಕ್ಕೆ ಪ್ರೋತ್ಸಾಹ ಲಭ್ಯವಾಗುತ್ತದೆ. ಗ್ರಾಮಗಳಲ್ಲಿ ಅಡಗಿರುವ ಬಂಡವಾಳ ಹೊರಕ್ಕೆ ಬರಲು ಅವಕಾಶ ದೊರೆಯುತ್ತದೆ.

ಈ ಕೈಗಾರಿಕೆಗಳಿಗೆ ಹೆಚ್ಚು ನೈಪುಣ್ಯದ ಆವಶ್ಯಕತೆಯಿಲ್ಲ. ಭಾರಿ ಉದ್ಯಮಗಳಲ್ಲಿ ಮೇಲ್ವಿಚಾರಣೆಯ ಹಾಗೂ ಆಡಳಿತ ನಿರ್ವಹಣೆಯ ನೈಪುಣ್ಯ ಅತ್ಯಾವಶ್ಯಕ.

ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬಂಡವಾಳದಂತೆ ನೈಪುಣ್ಯಕ್ಕೂ ಕೊರತೆಯಿರುವುದರಿಂದ ಅದರ ಆವಶ್ಯಕತೆ ಹೆಚ್ಚಾಗಿರದ ಸಣ್ಣ ಕೈಗಾರಿಕೆಗಳ ಸ್ಥಾಪನೆಯಿಂದ, ವಿದೇಶಿ ನೈಪುಣ್ಯವನ್ನು ದುಬಾರಿ ಬೆಲೆ ತೆತ್ತು ಆಮದು ಮಾಡಿಕೊಳ್ಳುವುದು ತಪ್ಪುತ್ತದೆ.

ಗ್ರಾಮಕೈಗಾರಿಕೆಗಳಿಗಾಗಿ ವಿದೇಶಿ ಉಪಕರಣಗಳನ್ನಾಗಲಿ, ಯಂತ್ರಗಳನ್ನಾಗಲಿ, ಬಿಡಿಭಾಗಗಳನ್ನಾಗಲಿ ಆಮದು ಮಾಡಿಕೊಳ್ಳುವ ಆವಶ್ಯಕತೆಯಿರುವುದಿಲ್ಲ. ಇದರಿಂದ ವಿದೇಶಿ ವಿನಿಮಯದ ಕೊರತೆಯಾಗಲಿ, ಪ್ರತಿಕೂಲ ಪಾವತಿ ಶಿಲ್ಕಿನ ಸಮಸ್ಯೆಯಾಗಲಿ ತೀವ್ರವಾಗುವುದಿಲ್ಲ. ಈ ಕೈಗಾರಿಕೆಗಳು ಶೀಘ್ರವಾಗಿ ಫಲ ಕೊಡುತ್ತವೆ. ಬಂಡವಾಳ ಹೂಡಿಕೆಗೂ ಉತ್ಪಾದಿತ ವಸ್ತುಗಳು ಮಾರಾಟಕ್ಕೆ ಬರುವುದಕ್ಕೂ ನಡುವಣ ಕಾಲ ತುಂಬ ಕಡಿಮೆ. ಆದ್ದರಿಂದ ಬೆಲೆ ಏರಿಕೆಯನ್ನು ತಡೆಗಟ್ಟಲು ಇವು ಸಹಾಯಕವಾಗಿವೆ.

ಖಾದಿ ಕಾರ್ಖಾನೆ, ಮಹಾರಾಷ್ಟ್ರ

ಈ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ಪ್ರಾದೇಶಿಕ ಅಸಮತೆಗಳನ್ನು ಹೋಗಲಾಡಿಸಬಹುದಾಗಿದೆ. ಬೃಹತ್ ಕೈಗಾರಿಕೆಗಳು ಒಂದೆಡೆಯಲ್ಲೇ ಕೇಂದ್ರೀಕೃತವಾಗಿ, ಅವುಗಳ ಸುತ್ತಮುತ್ತಲಿನ ಪ್ರದೇಶಗಳು ಮಾತ್ರ ಬೆಳೆಯಬಲ್ಲವು. ಇದರಿಂದ ಇತರ ಪ್ರದೇಶಗಳು ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದುಳಿದು, ಪ್ರಾದೇಶಿಕ ಅಸಮತೆಯುಂಟಾಗುತ್ತದೆ. ಇಂಥ ಅಸಮತೆಯನ್ನು ನಿವಾರಿಸಲು ಈ ಕೈಗಾರಿಕೆಗಳು ನೆರವಾಗುತ್ತವೆ. ಹಣ ಮತ್ತು ಅಧಿಕಾರ ಕೆಲವರಲ್ಲೇ ಕೇಂದ್ರೀಕೃತವಾಗದಂತೆ ವರಮಾನ ಮತ್ತು ಸಂಪತ್ತಿನ ಹಂಚಿಕೆಯಲ್ಲಿ ಇವು ಸಮಾನತೆಯನ್ನು ತರಬಲ್ಲವು. ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದುಂಟಾಗುವ ವಸತಿ ಮತ್ತು ಆಹಾರ ಸಮಸ್ಯೆ, ಕೊಳಚೆ ಪ್ರದೇಶಗಳ ನಿರ್ಮಾಣ, ರೋಗರುಜಿನಗಳು ಈ ಕೈಗಾರಿಕೆಗಳ ಸ್ಥಾಪನೆಯಿಂದುಂಟಾಗುವುದಿಲ್ಲ. ಅಲ್ಲದೆ, ಇವು ಉದ್ಯೋಗವನ್ನು ಕಾರ್ಮಿಕನಿರುವಲ್ಲಿಗೆ ಕೊಂಡೊಯ್ಯುವುದರಿಂದ, ಕಾರ್ಮಿಕರು ಒಂದೆಡೆಯಿಂದ ಮತ್ತೊಂದೆಡೆಗೆ ಚಲಿಸುವ ಸಮಸ್ಯೆ ಏಳುವುದಿಲ್ಲ.

ವಾಸ್ತು ಮಾದರಿಗಳ ತಯಾರಿಕೆ

ಭಾರತದಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಗ್ರಾಮಕೈಗಾರಿಕಾ ಯೋಜನೆಗಳನ್ನು ರೂಪಿಸಲಾಗಿದೆ. ಈ ಕೈಗಾರಿಕಾ ಯೋಜನೆಯಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪಿತವಾಗಿವೆ. ಜೊತೆಗೆ ಆಯಾ ಪ್ರದೇಶಗಳಲ್ಲಿ ಪ್ರಸಿದ್ಧವಾಗಿರುವ ಕಲೆ ಮತ್ತು ಕೈಗಾರಿಕೆಗಳನ್ನು ಈ ಯೋಜನೆಯ ಮೂಲಕ ಪುನರುಜ್ಜೀವನಗೊಳಿಸಲಾಗಿದೆ. ಭಾರತದ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಮಗ್ಗದ ಕೈಗಾರಿಕೆಗಳು, ಖಾದಿ, ಗುಡಿಕೈಗಾರಿಕೆಗಳು, ತೆಂಗಿನನಾರಿನ ಕೈಗಾರಿಕೆಗಳು ಮುಂತಾದವುಗಳ ಅಭಿವೃದ್ಧಿಯ ಬಗ್ಗೆ ಸಲಹೆ ಮತ್ತು ಸಹಾಯ ನೀಡಲು ಅಖಿಲ ಭಾರತ ಮಂಡಳಿಗಳನ್ನು ಸ್ಥಾಪಿಸಲಾಯಿತು. ಎರಡನೆಯ ಯೋಜನೆಯಲ್ಲಿ ಗ್ರಾಮಕೈಗಾರಿಕೆಗಳ ಯೋಜನೆಗಾಗಿ 180 ಕೋಟಿ ರೂ. ಗಳನ್ನೂ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 264 ಕೋಟಿ ರೂ. ಗಳನ್ನೂ ವಿನಿಯೋಗಿಸಲಾಯಿತು. ಗ್ರಾಮಕೈಗಾರಿಕೆಗಳು ಶೀಘ್ರ ಪ್ರಗತಿ ಹೊಂದುವಂತೆ ನೋಡಿಕೊಳ್ಳಲು ಉನ್ನತಮಟ್ಟದ ಗ್ರಾಮ ಕೈಗಾರಿಕಾ ಯೋಜನಾಮಂಡಳಿಯನ್ನು ಸ್ಥಾಪಿಸಲಾಗಿದೆ. ಕೈಮಗ್ಗದ ಕೈಗಾರಿಕೆ ಭಾರತದ ಗ್ರಾಮ ಕೈಗಾರಿಕೆಗಳಲ್ಲಿ ಪ್ರಮುಖವಾದ್ದು. ಈ ಕೈಗಾರಿಕೆ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಒದಗಿಸಿದೆ. ರೇಷ್ಮೆ ಹುಳುಗಳ ಸಾಕಣೆಯಿಂದ ಉದ್ಯೋಗದ ಜೊತೆಗೆ ರೇಷ್ಮೆ ಕೈಗಾರಿಕೆಗೆ ಬೇಕಾದ ಕಚ್ಚಾಸಾಮಗ್ರಿಯೂ ಒದಗುತ್ತದೆ. ಕುಂಬಾರಿಕೆ, ಮರಗೆಲಸ, ಬಿದಿರು ಹೆಣಿಗೆ, ಜೇನು ಸಾಕಣೆ ಮುಂತಾದವು ಇತರೆ ಮುಖ್ಯ ಗ್ರಾಮಕೈಗಾರಿಕೆಗಳು. ಭಾರತದ ವಿವಿಧ ಪ್ರದೇಶಗಳ ವಾಯುಗುಣಗಳಿಗೆ ಅನುಗುಣವಾಗಿ ಗ್ರಾಮಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ನಿರುದ್ಯೋಗ ನಿವಾರಣೆಯ ಜೊತೆಗೆ, ಭೂಮಿಯ ಉತ್ಪಾದನ ಶಕ್ತಿಯನ್ನು ಹೆಚ್ಚಿಸಬಹುದು. ಇದರಿಂದ ಗ್ರಾಮಸ್ಥರ ಜೀವನಮಟ್ಟ ಸುಧಾರಿಸುತ್ತದೆ.

ಭಾರತದಲ್ಲಿ ವ್ಯವಸಾಯ ಪೂರ್ಣಕಾಲದ ಉದ್ಯೋಗವಲ್ಲ. ವರ್ಷದ ಕೆಲವು ತಿಂಗಳುಗಳಲ್ಲಿ ಮಾತ್ರ ಹೆಚ್ಚು ಕೆಲಸವಿದ್ದು ಉಳಿದ ಸಮಯದಲ್ಲಿ ಬಿಡುವು ಇರುತ್ತದೆ. ಆದ್ದರಿಂದ ಗ್ರಾಮಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳು ವ್ಯವಸಾಯಕ್ಕೆ ಪೂರಕವಾಗಿರಬೇಕು. ಅಂದರೆ ವ್ಯವಸಾಯ ಕ್ಷೇತ್ರದಲ್ಲಿ ಬಿಡುವು ದೊರೆತಾಗ, ಆ ಕ್ಷೇತ್ರದಿಂದ ಬಿಡುಗಡೆ ಹೊಂದುವ ಕಾರ್ಮಿಕ ಶಕ್ತಿಯನ್ನು ಮತ್ತೆ ಆ ಕೆಲಸದಲ್ಲಿ ಉದ್ಯುಕ್ತಗೊಳಿಸುವ ಸಮಯೋಚಿತ ರೀತಿಯಲ್ಲಿ ಗ್ರಾಮಕೈಗಾರಿಕೆಗಳು ಕೆಲಸ ನಿರ್ವಹಿಸಬೇಕು. ಮರದ ಕೆತ್ತನೆ ಕೆಲಸ, ಹಿತ್ತಾಳೆ ಸಾಮಾನಿನ ಕುಸುರಿ ಕೆಲಸ, ಲೋಹ ಕೈಗಾರಿಕೆ, ಬಟ್ಟೆಗಳಿಗೆ ಬಣ್ಣ ಹಾಕುವುದು, ಕಂಬಳಿ ನೇಯುವುದು, ಕಾಗದ ಮತ್ತು ಸಾಬೂನಿನ ತಯಾರಿಕೆ, ಚರ್ಮ ಹದ ಮಾಡುವುದು, ಪಾದರಕ್ಷೆಯ ತಯಾರಿಕೆ ಮುಂತಾದ ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಅಲ್ಪಾವಧಿಯ ತರಬೇತು ಮತ್ತು ನೈಪುಣ್ಯ ಅಗತ್ಯ. ಗ್ರಾಮ ಪ್ರದೇಶಗಳನ್ನು ವೃದ್ಧಿಗೊಳಿಸಲು ಈ ಕೈಗಾರಿಕೆಗಳು ಅತ್ಯಾವಶ್ಯಕವಾಗಿವೆ. (ಎನ್.ಎಸ್.)

**ಗ್ರಾಮದಾನ :** ಸರ್ವೋದಯ ಸಮಾಜದ ಸ್ಥಾಪನೆಗಾಗಿ ವಿನೋಬಾ ಭಾವೆಯವರು ಭಾರತದಲ್ಲಿ ಆರಂಭಿಸಿದ ಭೂದಾನ ಚಳವಳಿಯ ವಿಕಾಸದ ಘಟ್ಟ. ಒಂದು ಗ್ರಾಮದ ಪ್ರತಿಯೊಬ್ಬರೂ ತಮ್ಮತಮ್ಮ ಭೂಹಿಡುವಳಿಯ ಮಾಲೀಕತ್ವದ ಹಕ್ಕನ್ನು ತ್ಯಜಿಸಿ, ಗ್ರಾಮದ ಭೂಸಂಪತ್ತನ್ನು ಗ್ರಾಮೀಕರಣ ಮಾಡುವ ಕ್ರಮ. ಅಹಿಂಸಾತ್ಮಕ ಕ್ರಾಂತಿಯ ಕಾರ್ಯವಿಧಾನ. ಭೂದಾನ ಚಳವಳಿ ಆರಂಭವಾದ ಒಂದು ವರ್ಷದಲ್ಲಿ (1952) ಗ್ರಾಮದಾನ ಆರಂಭವಾಯಿತು. ಉತ್ತರ ಪ್ರದೇಶ ರಾಜ್ಯದ ಮಂಗರೋಠ್ ಎಂಬುದು ಮೊಟ್ಟಮೊದಲಿಗೆ ದಾನವಾಗಿ ಬಂದ ಗ್ರಾಮ. ಅನಂತರ ಒಂದೆರಡು ವರ್ಷಗಳಾದ ಮೇಲೆ ಇತರ ರಾಜ್ಯಗಳಲ್ಲೂ ನೂರಾರು ಗ್ರಾಮಗಳು ದಾನವಾಗಿ ಬಂದುವು. ಒರಿಸ್ಸ ರಾಜ್ಯದಲ್ಲಿ ಎರಡುಮೂರು ಸಾವಿರ ಗ್ರಾಮಗಳು ದಾನವಾಗಿ ಕೊಡಲ್ಪಟ್ಟವು. ಹೀಗೆ ಭೂದಾನ – ಗ್ರಾಮದಾನ ಚಳವಳಿಯ ಮೊದಲ ದಶಕದಲ್ಲಿ ಸುಮಾರು ಐದು ಸಾವಿರ ಗ್ರಾಮಗಳು ಭಾರತದಲ್ಲಿ ದಾನವಾಗಿ ದೊರೆತವು.

ಭೂದಾನಕ್ಕಿಂತ ವಿಶಿಷ್ಟವೂ ವ್ಯಾಪಕವೂ ಆದ್ದು ಗ್ರಾಮದಾನ. ಭೂದಾನದಲ್ಲಿ ಭೂಮಾಲೀಕ ಆಂಶಿಕದಾನ ಕೊಡುತ್ತಾನೆ. ಸಾಮಾನ್ಯವಾಗಿ ತನ್ನ ಒಡೆತನದಲ್ಲಿರುವ ಭೂಮಿಯ ಆರನೆಯ ಒಂದು ಭಾಗವನ್ನು ಆತ ಭೂದಾನವಾಗಿ ಕೊಡುತ್ತಾನೆ. ಹಾಗೆ ಕೊಡಲ್ಪಟ್ಟ ಭೂಮಿಯನ್ನು ಭೂಹೀನ ಕೃಷಿಕಾರ್ಮಿಕನಿಗೆ ಹಂಚತಕ್ಕದ್ದಾಗಿದೆ. ಆದರೆ ಗ್ರಾಮದಾನದಲ್ಲಿ ಗ್ರಾಮದಲ್ಲಿರುವ ಸಮಸ್ತರೂ ತಮ್ಮ ಎಲ್ಲ ಭೂಮಿಯನ್ನೂ ದಾನವಾಗಿ ಕೊಡುತ್ತಾರೆ. ಗ್ರಾಮದ ಪ್ರತಿಯೊಬ್ಬ ಮಾಲೀಕನೂ ತನ್ನ ಭೂ ಹಿಡುವಳಿಯ ಮಾಲೀಕತ್ವದ ಹಕ್ಕನ್ನು ತ್ಯಾಗ ಮಾಡುತ್ತಾನೆ. ಇಡೀ ಗ್ರಾಮಸಮುದಾಯದ ಸಲುವಾಗಿ ಈ ಸಮರ್ಪಣೆಯಾಗುತ್ತದೆ. ಅಂಥ ಗ್ರಾಮದಲ್ಲಿ ವೈಯಕ್ತಿಕ ಒಡೆತನ ಹೋಗಿ ಗ್ರಾಮಸಮುದಾಯದ ಒಡೆತನ ಉಂಟಾಗುತ್ತದೆ.

ಗ್ರಾಮದಾನವಾದ ಮೇಲೆ ಗ್ರಾಮದ ಭೂಮಿ ಮತ್ತು ಇತರ ಸಾಧನ ಸೌಲಭ್ಯಗಳನ್ನು ಯುಕ್ತವಾಗಿ ರೂಢಿಸಿಕೊಳ್ಳುವುದು ಗ್ರಾಮಸಮುದಾಯದ ಹೊಣೆಯಾಗುತ್ತದೆ. ಗ್ರಾಮದ ಎಲ್ಲ ಸಾಧನ ಸಂಪತ್ತನ್ನೂ ಇಡೀ ಗ್ರಾಮಸಮಾಜದ ಉನ್ನತಿಗಾಗಿ ಬಳಸಿಕೊಳ್ಳಲು ಗ್ರಾಮಸ್ಥರು ವ್ಯವಸ್ಥಿತವಾಗಿ ಉಪಕ್ರಮಿಸುತ್ತಾರೆ. ದಾನವಾದ ಪ್ರತಿ ಹಳ್ಳಿಯಲ್ಲೂ ಸ್ಥಳೀಯ ಸ್ಥಿತಿಗತಿಗಳಿಗನುಗುಣವಾಗಿ ಮತ್ತು ಅಲ್ಲಿಯ ಜನರ ಮನೋಭಿಪ್ರಾಯಕ್ಕೆ ಅನುಗುಣವಾಗಿ ಕೃಷಿವ್ಯವಸ್ಥೆ ಆಗುತ್ತದೆ. ಜನರೆಲ್ಲ ಇಷ್ಟಪಟ್ಟರೆ ಸಾಮೂಹಿಕ ಅಥವಾ ಸಹಕಾರಿ ಬೇಸಾಯವನ್ನವಲಂಬಿಸಬಹುದು. ಹಾಗಿಲ್ಲದೆ ಕೌಟುಂಬಿಕ ಬೇಸಾಯವನ್ನವಲಂಬಿಸುವುದಾದರೆ ಎಲ್ಲ ಕುಟುಂಬಗಳಿಗೂ ಪ್ರತಿಯೊಂದು ಕುಟುಂಬದ ಜನಸಂಖ್ಯೆ ಹಾಗೂ ಅಗತ್ಯಕ್ಕೆ ಅನುಗುಣವಾಗಿ ಗ್ರಾಮದ ಭೂಮಿಯನ್ನು ಹಂಚಿಕೊಡಬಹುದು. ಭೂಮಾಲೀಕತ್ವ ಮಾತ್ರ ಗ್ರಾಮಸಮುದಾಯದಲ್ಲೇ ಉಳಿದಿರುತ್ತದೆ. ಪ್ರತಿ ಕುಟುಂಬವೂ

ತನಗೆ ಕೊಡಲಾಗುವ ಭೂ ಹಿಡುವಳಿಯನ್ನು ಕೃಷಿ ಮಾಡಿ, ಗಳಿಸಿದ ಉತ್ಪಾದನೆಯನ್ನು ಭೋಗಿಸಬಹುದು. ಆದರೆ ಹಿಡುವಳಿಯನ್ನು ಮಾರಾಟ ಮಾಡುವ ಅಥವಾ ಇನ್ನಾವ ರೀತಿಯಲ್ಲಾದರೂ ಪರಭಾರೆ ಮಾಡುವ ಅವಕಾಶ ಇರುವುದಿಲ್ಲ. ವ್ಯವಸಾಯದ ಮತ್ತು ಇತರ ಉದ್ಯಮಗಳ ಪ್ರಗತಿಯ ಕಾರ್ಯದಲ್ಲಿ ಅಂಥ ಹಳ್ಳಿಯಲ್ಲಿ ಸಹಕಾರ ಸಂಸ್ಥೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಸಾಲದ ಪೂರೈಕೆ, ಮಾರಾಟ, ಇಂಥ ಎಲ್ಲ ಕಾರ್ಯಗಳೂ ಸಹಕಾರ ಸಂಸ್ಥೆಗಳಿಂದ ಆಗುತ್ತವೆ. ಗ್ರಾಮಸಮುದಾಯದ ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಲೂ ಗ್ರಾಮದ ಅನುದಿನದ ಆಡಳಿತವನ್ನು ನಿರ್ವಹಿಸಲೂ ಗ್ರಾಮಸಭೆ ಇರುತ್ತದೆ. ಗ್ರಾಮಸಭೆಯ ನಿರ್ಣಯಗಳೆಲ್ಲ ಆದಷ್ಟು ಮಟ್ಟಿಗೆ ಸರ್ವಾನುಮತದಿಂದಾಗುತ್ತದೆ. ಸರ್ಕಾರದೊಡನೆ ಗ್ರಾಮದ ವ್ಯವಹಾರ ಗ್ರಾಮಸಭೆಯ ಮೂಲಕ ನಡೆಯುತ್ತದೆ. ಭೂಮಿಯ ವಿತರಣೆ ಮತ್ತು ಅಭಿವೃದ್ಧಿ, ವಿದ್ಯಾಭ್ಯಾಸ, ಗೃಹಕೈಗಾರಿಕೆಗಳ ಬೆಳೆವಣಿಗೆ, ಗ್ರಾಮನೈರ್ಮಲ್ಯ ಸಾಧನೆ, ಗ್ರಾಮಾಡಳಿತ – ಇವೆಲ್ಲ ಗ್ರಾಮಸಭೆಯ ಜವಾಬ್ದಾರಿಯಾಗುತ್ತದೆ.

ಪರಸ್ಪರ ಪ್ರೇಮ, ಸಹಕಾರ, ಹಂಚಿಕೊಂಡು ಬಾಳಬೇಕೆಂಬ ಭಾವನೆ – ಇವೇ ಮುಂತಾದ ಕೌಟುಂಬಿಕ ಭಾವನೆಗಳನ್ನು ಗ್ರಾಮಸಮುದಾಯಕ್ಕೆ ವಿಸ್ತರಿಸಿ ಶಾಂತಿ, ಸಮತೆ ಹಾಗೂ ಸ್ವಾವಲಂಬನೆಯ ಆಧಾರದ ಮೇಲೆ ಗ್ರಾಮಸಮುದಾಯಗಳನ್ನು ನಿರ್ಮಿಸಿ, ತನ್ಮೂಲಕ ಸರ್ವೋದಯ ಸಮಾಜವನ್ನು ರೂಪಿಸುವುದೇ ಗ್ರಾಮದಾನ ಚಳವಳಿಯ ಉದ್ದೇಶ.

ಭಾರತದ ಗ್ರಾಮಸಮಾಜದ ಜಟಿಲವಾದ ಸಮಸ್ಯೆಗಳ ನಿವಾರಣೆಗೆ ಹಾಗೂ ಅದರ ಪುನಾರಚನೆಗೆ ಗ್ರಾಮದಾನ ಅಹಿಂಸಾತ್ಮಕ ಹಾಗೂ ಪ್ರಭಾವಯುತ ವಿಧಾನವೊಂದೆಂದು ಮನವರಿಕೆಯಾಗಿದೆ. 1957ರ ಸೆಪ್ಟೆಂಬರಿನಲ್ಲಿ ಮೈಸೂರಿನ ಬಳಿ ಇಲವಾಲದಲ್ಲಿ ಸೇರಿದ್ದ ಅಖಿಲ ಭಾರತ ರಾಜಕೀಯ ಪರಿಷತ್ತಿನಲ್ಲಿ ಗ್ರಾಮದಾನ ಚಳವಳಿಗೆ ಸರ್ವಾನುಮತ ಬೆಂಬಲ ದೊರಕಿತು. ಪಂಚವಾರ್ಷಿಕ ಯೋಜನೆಯಲ್ಲಿ ಭೂದಾನ ಮತ್ತು ಗ್ರಾಮದಾನಗಳಿಗೆ ಮನ್ನಣೆ ಕೊಡಲಾಗಿದೆ. ಈ ಕಾರ್ಯಕ್ರಮಗಳಿಗೆ ಸೂಕ್ತ ನೆರವನ್ನು ನೀಡುವ ವ್ಯವಸ್ಥೆಯಿದೆ. ಸರ್ಕಾರದ ಸಮುದಾಯ ಅಭಿವೃದ್ಧಿ ಯೋಜನೆ ಮತ್ತು ಗ್ರಾಮದಾನ ಚಳವಳಿಗಳನ್ನು ಸಮನ್ವಯಗೊಳಿಸಿ ಗ್ರಾಮಭಾರತದ ಪುನರ್ನಿರ್ಮಾಣಕ್ಕೆ ಮಹಾಪ್ರಯತ್ನ ಮಾಡಲಾಗುತ್ತಿದೆ.

(ಬಿ.ಆರ್.ಪಿ.)

**ಗ್ರಾಮದೇವತೆ :** ಗ್ರಾಮದ ಅಧಿಷ್ಠಾತ್ರಿ ದೈವ. ಈ ದೈವವನ್ನು ಪ್ರತಿಯೊಂದು ಗ್ರಾಮದವರು ತಮ್ಮ ಗ್ರಾಮಕ್ಕಾಗಿ ಸೃಷ್ಟಿಸಿ ಸ್ಥಾಪಿಸಿ ಪೂಜಿಸಲು ಪ್ರಾರಂಭ ಮಾಡಿದುದರಿಂದ ಇದಕ್ಕೆ ಗ್ರಾಮದೇವತೆಯೆಂದು ಹೆಸರಾಯಿತು. ಭಾರತದಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮಕ್ಕೂ ಒಂದು ಗ್ರಾಮ ದೇವತೆಯೂ ದೇವಸ್ಥಾನವೂ ಇವೆ. ಹಳ್ಳಿಗಳು ಅತಿ ಚಿಕ್ಕವೂ ಹತ್ತಿರದಲ್ಲಿರುವವೂ ಆದಾಗ, ಎರಡು ಮೂರು ಹಳ್ಳಿಗಳಿಗೆ ಮಧ್ಯಸ್ಥವಾಗಿ ಎಲ್ಲರಿಗೂ ಹತ್ತಿರವಾಗುವ ಸ್ಥಳದಲ್ಲಿ ಒಂದು ಗ್ರಾಮದೇವತೆಯ ದೇವಾಲಯ ಸ್ಥಾಪಿತವಾಗಿರುತ್ತದೆ. ಬಹುಮಟ್ಟಿಗೆ ದೇವಾಲಯಗಳು ಊರ ಹೊರಗಿರುತ್ತವೆ.

ಈ ದೇವಾಲಯಗಳು ಸ್ಥಾಪಿತವಾದ ಕಾಲ ಯಾವುದು ಎಂಬುದಕ್ಕೆ ಐತಿಹಾಸಿಕ ಆಧಾರಗಳು ದೊರೆತಿರುವುದು ಅತಿ ಸ್ವಲ್ಪ. ಆದರೆ ಜನಪದದಲ್ಲಿ ರೂಢಿಯಲ್ಲಿರುವ ಮತ್ತು ಕೆಲವು ಗ್ರಾಮದೇವತೆಗಳ ದೇವಾಲಯಗಳನ್ನು ಕುರಿತ ಐತಿಹ್ಯಗಳಿಂದ ಸಂಗ್ರಹಿತವಾದ ಅಂಶಗಳು ಹೀಗಿವೆ: ಆದಿಮಾನವನಿಗೆ ತಾನು ಕಂಡ ಜಗತ್ತಿನ ಬಗ್ಗೆ ಒಂದು ಬಗೆಯ ವಿಸ್ಮಯವೂ ಭಯವೂ ಮೊದಲು ಉಂಟಾಗಿರಬೇಕು. ಕ್ರಮೇಣ ಅವನು ಅಂಥ ಸೃಷ್ಟಿವೈಚಿತ್ರ್ಯಕ್ಕೆ ಕಾರಣಕರ್ತನಾದ ದೈವ ಒಂದಿರಬೇಕು ಎಂಬ ಭಾವನೆಯನ್ನು ಬೆಳೆಸಿಕೊಂಡನೆಂದು ಕಾಣುತ್ತದೆ. ಗ್ರಾಮದೇವತೆ ಮತ್ತು ಇತರ ಉಪದೇವತೆಗಳ ಕಲ್ಪನೆ ಅನಂತರ ಮೂಡಿದ್ದು. ದೇವರು ಪ್ರಪಂಚಕ್ಕೆಲ್ಲ ಹೊಣೆಗಾರ; ಅವನಿಗೆ ಕೈತುಂಬ ಕೆಲಸವಾದ್ದರಿಂದ ಆತ ಯಾವ ಕಡೆ ಅಂತ ನೋಡುತ್ತಾನೆ? ತಮ್ಮ ಕಡೆ ಗಮನಿಸುವುದಕ್ಕೆ ಅವನಿಗೆ ಹೊತ್ತು ಎಲ್ಲಿದೆ?

ಆದ್ದರಿಂದ ತಾವು ದೇವರಿಗೂ ತಮಗೂ ನಡುವೆ ಒಬ್ಬ ಮಧ್ಯಸ್ಥನನ್ನು (ಸಣ್ಣ ದೇವರನ್ನು) ಏರ್ಪಡಿಸಿಕೊಂಡು ಅವನನ್ನು ತೃಪ್ತಿಪಡಿಸಿ, ಅವನ ಮೂಲಕ ಜಗತ್ಕರ್ತನನ್ನು ಒಲಿಸಿಕೊಳ್ಳುವುದು ಸುಲಭ ಎಂಬ ಭಾವನೆ ಬಲಿತಂತೆಲ್ಲ ಊರಿಗೊಂದು ಗ್ರಾಮದೇವತೆ ಸೃಷ್ಟಿಯಾಗಿರಬೇಕು. ಗ್ರಾಮಘಟಕಗಳು ಪ್ರಾರಂಭವಾದಂದಿನಿಂದಲೇ ಗ್ರಾಮದೇವತೆಯೂ ಅಸ್ತಿತ್ವಕ್ಕೆ ಬಂತು ಎಂದು ಹೇಳಬಹುದು. ಆದ್ದರಿಂದ ಗ್ರಾಮದೇವತೆಯ ಕಲ್ಪನೆ ಅತ್ಯಂತ ಪ್ರಾಚೀನವಾದುದೆಂದು ಹೇಳಬಹುದು. ರಾಮಾಯಣ ಕಾಲಕ್ಕೂ ಹಿಂದಿನಿಂದಲೇ ಈ ದೇವತೆ ಇದ್ದಿರಬೇಕು. ಸೀತೆ ಗಂಗೆಯನ್ನು ದಾಟುವಾಗ ಗಂಗೆಯನ್ನು ಹೀಗೆ ಪ್ರಾರ್ಥಿಸುತ್ತಾಳೆ: 'ನಿನ್ನ ತೀರದಲ್ಲಿರುವ ದೇವತೆಗಳಿಗೆ ಅನೇಕ ನೈವೇದ್ಯಗಳನ್ನು ಮಾಡಿಸುವೆನು. ನಿನಗೆ ಸಂತೋಷವಾಗುವ ಮರ್ಯಾದೆಯಲ್ಲಿ ಸಾವಿರ ಸುರಾಘಟಗಳನ್ನೂ ಅನೇಕ ಮಾಂಸೋಪಹಾರಗಳನ್ನೂ ಬಲಿಯಾಗಿ ಕೊಡುವೆನು'. ಸೀತೆ ಹೇಳಿರುವ ದೇವತೆಗಳು ಗಂಗಾತೀರದ ಗ್ರಾಮದೇವತೆಗಳೆಂದು ಊಹಿಸಲು ಅವಕಾಶವಿದೆ.

ಹಳ್ಳಿಯ ರೈತರು ವಿವಾಹಗಳಲ್ಲಿ ಗ್ರಾಮದೇವತೆಗಳಿಗೆ ಮೊದಲ ವೀಳ್ಯ ಎತ್ತುತ್ತಾರೆ. ಆರ್ಯರು ದ್ರಾವಿಡರಿಂದ ವೀಳ್ಯ ಅಂಗೀಕರಿಸಿದುದರ ಉಲ್ಲೇಖಗಳಿವೆ. ಚಾರಿತ್ರಿಕ ಕಾಲದಲ್ಲಿ ಇದು ಎಷ್ಟರಮಟ್ಟಿಗೆ ಗ್ರಾಮದ ಅವಿಭಾಜ್ಯ ಅಂಗವಾಯಿತೆಂದರೆ, ಸರ್ಕಾರದವರು ಪ್ರತಿಯೊಂದು ಗ್ರಾಮಕ್ಕೂ ಗ್ರಾಮದೇವತೆಗೂ ಉಂಬಳಿ ಜಮೀನನ್ನು ಕಡ್ಡಾಯವಾಗಿ ಬಿಟ್ಟು ಅದನ್ನು ಗ್ರಾಮದ ಬಾರಾಬಲೂತಿ ಲೆಕ್ಕದಲ್ಲಿ ಸೇರಿಸಿದ್ದಾರೆ. ಹೀಗೆ ಪ್ರಾಚೀನ ಕಾಲದಿಂದ ಹಿಡಿದು ಅರ್ವಾಚೀನ ಕಾಲದವರೆಗೆ ಗ್ರಾಮದೇವತೆ ಜನಪದ ಜೀವನದಲ್ಲಿ ಅವಿಭಾಜ್ಯವಾಗಿ ಸೇರಿಕೊಂಡು ಬಂದಿದೆ.

ಜನತೆಯ ದೃಷ್ಟಿಯಲ್ಲಿ ಗ್ರಾಮದೇವತೆಯ ಮಟ್ಟ ಅತಿ ಹೆಚ್ಚಿನದೂ ಅಲ್ಲ, ಅತಿ ಕಡಿಮೆಯದೂ ಅಲ್ಲ. ಅದರ ಕಾರ್ಯ, ಪ್ರಭಾವ, ದೃಷ್ಟಿ ಒಂದು ಗ್ರಾಮಕ್ಕೆ ಮಾತ್ರ ಸೀಮಿತವಾದ್ದು.

ಅಂದರೆ ಆ ಗ್ರಾಮದ ಹಿತರಕ್ಷಣೆಗಂತೂ ಗ್ರಾಮ ದೇವತೆಯೇ ಸಾರ್ವಭೌಮ. ಗ್ರಾಮದಲ್ಲಿ ಯಾರೊಬ್ಬರೂ ಅದರ ಪ್ರಭಾವದಿಂದ ಹೊರಗಾಗಲು ಸಾಧ್ಯವೂ ಇಲ್ಲ, ಅವಕಾಶವೂ ಇಲ್ಲ. ಗ್ರಾಮಕ್ಕೆ ಯಾವ ಶುಭ ದೊರಕಬೇಕಾದರೂ ಅದನ್ನು ಉಂಟುಮಾಡುವುದು, ಯಾವ ಅಪಾಯ ಒದಗಿದರೂ ಅದನ್ನು ತಪ್ಪಿಸುವುದು ಗ್ರಾಮದೇವತೆಯ ಹೊಣೆಗಾರಿಕೆ. ರೈತನ ಮನೆಯಲ್ಲಿ ಯಾರಿಗೋ ರೋಗ ಬರುತ್ತದೆ, ಎಮ್ಮೆ ಉಚ್ಚುತ್ತದೆ, ಹಾಲು

ಕೊಡುವುದಿಲ್ಲ, ಗೊಬ್ಬರ ಎಷ್ಟೇ ಹಾಕಿದರೂ ಹೊಲಗದ್ದೆಗಳಲ್ಲಿ ಪೈರು ನೆರೆಯ ಜಮೀನಿನಲ್ಲಿರುವಷ್ಟು ಫಲವತ್ತಾಗುವುದಿಲ್ಲ. ಆಗ ರೈತ, ಗ್ರಾಮದೇವತೆಗೆ ಒಂದು ಹರಕೆ ಹೊರುತ್ತಾನೆ. ಕಾರ್ಯ ದೊಡ್ಡದಾಗಿದ್ದರೆ, ಅಂದರೆ ಮನೆಯ ಯಜಮಾನನಿಗೆ ಗುಣವಾಗದ ರೋಗ ಬಂದಿದ್ದರೆ, ಇಲ್ಲವೆ ದೊಡ್ಡ ಜಮೀನಿನ ವ್ಯಾಪಾರ ಕುದುರಬೇಕಾದರೆ, ಇಲ್ಲವೆ ಕೋರ್ಟು ವ್ಯಾಜ್ಯ ಗೆಲ್ಲಬೇಕಾದರೆ, ಆತ ಗ್ರಾಮದೇವತೆಗೆ ತೋರಿಸುವ ಬಲಿಯ ಆಸೆ ಕೋಳಿಯಿಂದ ಕುರಿಯ ವರೆಗೆ ಹೋಗುತ್ತದೆ. ಹೀಗೆ ಪ್ರತಿಯೊಬ್ಬರೂ ತಮ್ಮ ಕಷ್ಟಗಳಿಗಾಗಿ ಗ್ರಾಮದೇವತೆಯನ್ನು ಮೊರೆಹೋಗಲೇಬೇಕು. ಗ್ರಾಮದೇವತೆ ಸರಿಯಾಗಿ ತನ್ನ ಕರ್ತವ್ಯವನ್ನು ಮಾಡಿ, ರೈತನಿಗೆ ಸಂತೃಪ್ತಿಯನ್ನುಂಟುಮಾಡದಿದ್ದರೆ ರೈತ ದೇವತೆಯನ್ನು ಸುಮ್ಮನೆ ಬಿಡುವುದಿಲ್ಲ. ಸಾಧಾರಣವಾಗಿ ಪ್ರತಿಗ್ರಾಮದವರೂ ತಮ್ಮ ಗ್ರಾಮದೇವತೆಗೇ ಹರಕೆ ಮಾಡಿಕೊಳ್ಳುವುದು ವಾಡಿಕೆ. ಆ ವಿಷಯದಲ್ಲಿ ಗ್ರಾಮದವರದು ಬಹುಮಟ್ಟಿಗೆ ಕಟ್ಟುನಿಟ್ಟು. ಗ್ರಾಮದೇವತೆ, ಒಂದು ಗ್ರಾಮಕ್ಕೆ ಸೇರಿದ್ದರಿಂದ, ಅದರ ಅನುಗ್ರಹ ಆ ಗ್ರಾಮದವರಿಗೇ ಮೀಸಲು. ಗ್ರಾಮದವರೂ, ಅವಳನ್ನೇ ನಂಬಿ ಸರ್ವಕ್ಕೂ ಅವಳನ್ನೇ ಯಾಚಿಸಿ ಪಡೆಯಬೇಕೆಂಬುದು ಸಾಮಾನ್ಯ ನಿಯಮ. ಆದರೆ ಹಳ್ಳಿಗಾಡಿನ ಮನುಷ್ಯ, ತುಂಬ ವ್ಯವಹಾರಸ್ಥನಾಗಿರುವುದರಿಂದ ಆತ ತನ್ನ ದೇವರನ್ನೂ ಪರೀಕ್ಷಿಸುತ್ತಾನೆ. ತನ್ನೂರ ಗ್ರಾಮದೇವತೆಗೆ ಮಾಡಿಕೊಂಡ ಹರಕೆ ಒಂದು ಸಲ ಎರಡು ಸಲ ವಿಫಲವಾದರೆ, ಆತ ದೇವತೆಯ ಮುಂದೆ ನಿಂತು, ಸಾರ್ವಜನಿಕ ಹೇಳಿಕೆಯನ್ನು ಕೊಡುವವನಂತೆ ಗಟ್ಟಿಯಾಗಿ, 'ನಾನು ನಿನಗೆ ಇಂಥಿಂಥ ಹರಕೆಗಳನ್ನು ಮಾಡಿಕೊಂಡೆ. ಯಾವುದೂ ಫಲಿಸಲಿಲ್ಲ. ಎಲ್ಲದರಲ್ಲಿಯೂ ನನಗೆ ಕೆಡುಕೇ ಉಂಟಾಯಿತು. ನನ್ನ ಹರಕೆಯನ್ನೆಲ್ಲ ನೀನು ತಿಂದು ನನ್ನ ಕೈಬಿಟ್ಟುಬಿಟ್ಟೆ. ನಿನ್ನಲ್ಲಿ ಶಕ್ತಿಯೇ ಇಲ್ಲ. ನಾನು ಬೇರೆ ಅಮ್ಮನಿಗೆ ಹೋಗುತ್ತೇನೆ. ಹಟ್ಟಿಕಲ್ಲಮ್ಮನಿಗೆ ಹೋಗುತ್ತೇನೆ. ಹೊನ್ನಾಲ್ದಮ್ಮ, ಬಾಚಳ್ಳಿ ಅಮ್ಮ, ಕಿಕ್ಕೇರಿ ಅಮ್ಮ – ಇವರಿಗೆ ಹೋಗುತ್ತೇನೆ. ನನ್ನ ಮೇಲೆ ತಪ್ಪಿಲ್ಲ. ನೀನೇ ಒದ್ದು ನೂಕಿದೆ' ಎಂದು ಸಾರಿ ಹೇಳಿ, ಬೇರೆ ಊರಿನ, ಅವನ ದೃಷ್ಟಿಯಲ್ಲಿ ಪ್ರಬಲವೆಂದು ತೋರಿದ ಮತ್ತೊಂದು ದೇವತೆಗೆ ಹರಕೆ ಹೊರುತ್ತಾನೆ. ಕೆಲವು ವೇಳೆ ಮೂಗೂರು ತಿಬ್ಬಾದೇವಿ, ಉತ್ತನಹಳ್ಳಿ ಉರುಕಾಡಿ, ಗೊಂಡನಹಳ್ಳಿ ಗೊತ್ತುಕಾಡಿ, ಎಲ್ಲಕ್ಕಿಂತ ಹೆಚ್ಚಾಗಿ ಏಳುನಾಲಗೆ ದುರಗಿ– ಇವರೆಡೆ ಧಾವಿಸುತ್ತಾನೆ. ಹೀಗೆ ಮಾಡುವುದು ಕೇವಲ ಅಪರೂಪವಾದ ಮತ್ತು ವಿಶೇಷವಾದ ಸಂದರ್ಭದಲ್ಲಿ ಮಾತ್ರ. ಸಾಮಾನ್ಯ ಕಾಲದಲ್ಲಿ ರೈತ ತನ್ನ ಊರ ದೇವರನ್ನು ಬಿಟ್ಟು ಇತರ ದೇವರಿಗೆ ಹರಕೆ ಹೊತ್ತರೆ ಊರಿನವರು ಸುಮ್ಮನಿರುವುದಿಲ್ಲ. ಹಾಗೆಯೇ ಬೇರೆ ಊರಿನವರೂ ತಮ್ಮೂರ ದೇವರಿಗೆ ಬಂದು ಹರಕೆ ಹೊತ್ತರೆ ಸಾಧಾರಣವಾಗಿ ಸುಮ್ಮನಿರುವುದಿಲ್ಲ. ಆದರೆ ಒಂದೂರಿನ ದೇವರಿಗಿಂತ ಮತ್ತೊಂದೂರಿನ ದೇವರು ಹೆಚ್ಚು ಪ್ರಬಲ, ಫಲದಾಯಕ ಎಂದು ತೋರಿದರೆ, ಪ್ರಾಪಂಚಿಕ ವಿಷಯದಲ್ಲಿ ಜಾಣರಾದ ರೈತರು ಆ ದೇವರಿಗೆ ಹೋಗುವವರನ್ನು ತಪ್ಪಿಸುವುದಿಲ್ಲ. ಈ ವಿಷಯದಲ್ಲಿ ಹಳ್ಳಿಯ ನಿಯಮ ಹಿಂದಲ ಕಾಲದ ಗ್ರಾಮ ಘಟಕ ಪದ್ಧತಿಯಂತೆ. ಒಂದು ವಿಶೇಷ ಸಂದರ್ಭಕ್ಕಾಗಿ ರೈತ ಬೇರೆ ಊರಿನ ದೇವರಿಗೆ ಹರಕೆ ಹೊತ್ತರೂ ಅದು ಆ ಸಂದರ್ಭವಷ್ಟಕ್ಕೆ ಮಾತ್ರ, ಉಳಿದ ಅವನ ಎಲ್ಲ ಆಗುಹೋಗುಗಳಿಗೂ ಅವನು ತನ್ನ ಗ್ರಾಮದೇವತೆಯನ್ನು ಮಾತ್ರವೇ ಶರಣು ಹೋಗಬೇಕೆಂಬುದು ನಿಯಮ.



ಗ್ರಾಮದೇವತೆಯಷ್ಟೇ ಅದರ ಪೂಜಾರಿಯೂ ಆರ್ಷೇಯ. ಈ ದೇವತೆ ಪ್ರಾಣಿಬಲಿಯನ್ನು ಅಪೇಕ್ಷಿಸುವ ದೇವರಾದರೂ ಇದರ ಪೂಜಾರಿ ಸಾಧಾರಣವಾಗಿ ವೀರಶೈವ ತಮಡಿ (ಅರ್ಚಕ) ಆಗಿರುತ್ತಾನೆ. ಆ ತಮಡಿ ಸಿಕ್ಕದಿದ್ದಲ್ಲಿ ದೇವರಿಗೆ ಹರಕೆಯನ್ನಾಗಲಿ, ಬಲಿಯನ್ನಾಗಲಿ ಒಪ್ಪಿಸಬೇಕಾದ ಭಕ್ತ, ಅಂಥ ತಮಡಿ ಬೇರೆ ಗ್ರಾಮದಲ್ಲಿದ್ದರೂ ಹೋಗಿ ಕರೆದುಕೊಂಡು ಬಂದು, ಅವನ ಹಸ್ತದಿಂದಲೇ ಪೂಜೆ ನೆರವೇರಿಸುತ್ತಾನೆ. ಪೂಜಾರಿಗೆ ಕೆಲಸವೂ ಹೆಚ್ಚಿಗೆ ಇಲ್ಲ. ಭಕ್ತ ತಂದಿರುವ ಬಲಿಗೆ ಕೋಳಿ, ಕುರಿ ಅಥವಾ ಆಡು ಪೂಜೆ ಮಾಡಿದ ದೇವರ ತೀರ್ಥವನ್ನು ಪ್ರೋಕ್ಷಿಸುವುದಷ್ಟೇ ಅವನ ಕೆಲಸ. ಮುಂದಲ ಕ್ಷಣದಲ್ಲಿಯೇ ಭಕ್ತರು ಪ್ರಾಣಿಯ ಕತ್ತನ್ನು ಕತ್ತರಿಸಿಹಾಕುತ್ತಾರೆ. ಮೊಸರನ್ನ ನೆನೆಯಕ್ಕಿ ನೆನಗಡಲೆ ಪನಿವಾರ ಮುಂತಾದ ತಳಿಗೆಗಳನ್ನು ಸುಮಂಗಲಿಯರು ತಂದು ಒಪ್ಪಿಸುವಾಗ ಪೂಜಾರಿ ಇಲ್ಲದಿದ್ದರೂ ನಡೆಯುತ್ತದೆ.

ಗ್ರಾಮದೇವತೆ ಒಂದು ವಿಗ್ರಹವೇ ಆಗಿರಬೇಕೆಂಬ ನಿಯಮವಿಲ್ಲ. ಅನೇಕ ವೇಳೆ ಅದೊಂದು ಬರಿಯ ಕಲ್ಲು ಆಗಿರಬಹುದು; ಇನ್ನೂ ಕೆಲವು ವೇಳೆ ನಾಲ್ಕಾರು ಗುಂಡುಕಲ್ಲುಗಳನ್ನು ಒಂದರ ಮೇಲೆ ಒಂದನ್ನು ಜೋಡಿಸುತ್ತಾರೆ. ಕಲ್ಲಿನ ಮೇಲೆ ಏನಾದರೂ ಮೂಗು ಬಾಯಿ ಕಣ್ಣುಗಳನ್ನು ಕೊರೆದಿದ್ದರೂ ಗೊತ್ತಾಗುವುದಿಲ್ಲ. ಕಲ್ಲೆಲ್ಲ ಪೂರ್ತ ಎಣ್ಣೆ ಅರಸಿನ ಕುಂಕುಮದಿಂದ ಮೆತ್ತಿ ಹೋಗಿರುತ್ತದೆ. ಹೀಗೆ ಸಹಸ್ರಾರು ವರ್ಷಗಳಿಂದ ದೇವತೆ ಎಣ್ಣೆ ಕುಡಿದು ಎಣ್ಣೆಯಲ್ಲಿ ಮಜ್ಜನ ಮಾಡಿರುತ್ತದೆ.

ಪ್ರಾಚೀನ ಆದಿಮಾನವ ಪೂಜಿಸಿದ ಶಕ್ತಿದೇವತೆಯೇ ಇಂದಿನ ಗ್ರಾಮದೇವತೆ ಎಂದು ಭಾವಿಸಬಹುದು. ಕರ್ನಾಟಕದ ಕೆಲವು ಊರುಗಳಲ್ಲಿ ಈ ದೇವತೆಯನ್ನು ಉಡಿಸಲಮ್ಮ ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಎಲ್ಲ ಗ್ರಾಮಗಳಲ್ಲಿಯೂ ಸಾಧಾರಣವಾಗಿ ಗ್ರಾಮದೇವತೆ ಇರುವುದು ಮಾಮೂಲು ಆದರೂ ಗ್ರಾಮದೇವತೆಗಳು ಇಲ್ಲದ ಗ್ರಾಮಗಳೂ ಉಂಟು. ಅಲ್ಲಿ ಮಾರಿಯಮ್ಮನೇ

ಗ್ರಾಮದೇವತೆಯಾಗುತ್ತಾಳೆ. ಆಕೆ ಗ್ರಾಮದೇವತೆಗಿಂತ ಸ್ವಲ್ಪ ಹೆಚ್ಚಿನ ಮಟ್ಟದ ಶಕ್ತಿದೇವತೆಯೇ ಹೊರತು ಚಂಡಿ ಚಾಮುಂಡಿ ಕಾಳಿಕಾ ದುರ್ಗಿ ಮುಂತಾದ ದೇವತೆಗಳಿಗೂ ಮಾರಿಯಮ್ಮನಿಗೂ ಸಂಬಂಧವಿಲ್ಲ.

ಹಳ್ಳಿ ದೊಡ್ಡದಾಗಿದ್ದರೆ, ಗ್ರಾಮದೇವತೆಗೆ ವರ್ಷಕ್ಕೆ ಒಂದು ಬಾರಿ ಬಂಡಿ ಹಬ್ಬ ಅಥವಾ ರಥೋತ್ಸವ ನಡೆಯುತ್ತದೆ. ಈ ಹಬ್ಬವನ್ನು ಹಸುರು ಬಂಡಿ ಎಂದೂ ಕರೆಯುತ್ತಾರೆ. ಹಸುರು ಎಲೆ ಚಿಗುರುಗಳ ತೋರಣ, ತೆಂಗಿನ ಗರಿ, ಅಡಕೆ ಹೊಂಬಾಳೆ ಇವುಗಳಿಂದ ಬಂಡಿಯನ್ನು ಅಲಂಕರಿಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಈ ಹಬ್ಬ ನಡೆಯುವುದು ಸಾಧಾರಣವಾಗಿ ಮಂಗಳವಾರ. ಹಬ್ಬವನ್ನು ಬಹಳ ವೈಭವದಿಂದ ಆಚರಿಸುತ್ತಾರೆ. ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲ ಮೊದಲೇ ಸಾರಿಸುತ್ತಾರೆಯಾದ್ದರಿಂದ ಬಾಳೆ ಕಂಬಗಳು ಲೆಕ್ಕವಿಲ್ಲದಷ್ಟು ಬಂದು ಬೀಳುತ್ತವೆ. ಗ್ರಾಮದೇವತೆಯ ವಿಗ್ರಹವನ್ನು ತಾತ್ಕಾಲಿಕವಾಗಿ ಮಣ್ಣಿನಲ್ಲಿ ಬಹು ಸುಂದರವಾಗಿ ನಿರ್ಮಿಸಿರುತ್ತಾರೆ. ಅಕ್ಕಿ, ತೆಂಗಿನಕಾಯಿ ರಾಸಿರಾಸಿ ಬಿದ್ದಿರಲಾಗಿ ಗ್ರಾಮದೇವತೆ 'ಒಕ್ಲೂನ ಹಾಸ್ಕೊಂಡು ಒಕ್ಲೂನ ಹೊದ್ದು, ಕಿವಿಯಲ್ಲಿ ಮುತ್ತಿಕ್ಕಿದ ಓಲೆ ತೊಟ್ಟು ಕಿಡಗಣ್ಣಿಯಾಗಿ' ಮೆರೆಯುತ್ತಾಳೆ. ಭಕ್ತರು ಬಾಗಿಲಿಗೆ ಛತ್ರಿ ಏರಿಸುತ್ತಾರೆ. ಏಳೂರು ಸಿಡಿಗಳು ಬರುತ್ತವೆ. ಹೆಡಗೇಲಿ ಹಣ್ಣು, ಗಡಿಗೇಲಿ ತುಪ್ಪ, ಇಡಗಾಯಿಗಳು, ಕುರಿಗಳ ಸಾಲು, ಮಡಲಕ್ಕಿ–ಎಲ್ಲ ಬರುತ್ತವೆ. ಕೆಲವರು ಊರುಗಳಲ್ಲಿ ಕೊಂಡವನ್ನು ಸಹ ಹಾಯುತ್ತಾರೆ. ಮೆರೆವಣಿಗೆಯಲ್ಲಿ ದೊಡ್ಡದೊಡ್ಡ ಪಂಜುಗಳು ಉರಿಯುತ್ತವೆ. ಭಕ್ತರು ಭಕ್ತಿಯಿಂದ ದೇವತೆಯ ಹಾಡನ್ನು ಹಾಡುತ್ತಾರೆ. ದೇವತೆಯ ಮಹಿಮೆಯನ್ನು ಬಣ್ಣಿಸಲು ಅಸದಳ. 'ಸಾಸಿವೆ ಕಾಳಷ್ಟು ರೇಸಿಮೆ ಉಟುಕೊಂಡು ಏಸೊಂದುಯ್ದುವಳೆ ನೆರಿಗೇಯ, ತಾಯವ್ವ ಕೋಟೆಗೆ ಬೀಸವ್ಳೆ ಕುಡಿಸೆರಗ' (ಅಮ್ಮ ಧರಿಸಿರುವುದು ಸಾಸಿವೆಕಾಳಿನಷ್ಟು ರೇಸಿಮೆ. ಆದರೆ ತನ್ನ ಮಹಿಮೆಯಿಂದ ಅದರಿಂದಲೇ ವಿಶಾಲವಾದ ನೆರಿಗೆಯನ್ನು ರಚಿಸಿಕೊಂಡು ಕೋಟೆವರೆಗೆ ಸೆರಗನ್ನು ಬೀಸುತ್ತಾಳೆ). ಬಂಡಿಯ ಮೇಲೆ ಮೆರೆವಣಿಗೆ ಹೋಗುತ್ತಿರಬೇಕಾದರೆ, ಬಿಸಿಲಿನಲ್ಲಿ ದೇವತೆಯ ಓಲೆ, ಹೊಳೆಯುತ್ತದೆ. ಆಚೆ ಈಚೆ ದಾಸ ಮತ್ತು ಪುರುಷ (ಧಾರ್ಮಿಕ ಪೂಜಕರು) ಇರುತ್ತಾರೆ. ದಾಸ, ಹೆಗಲಮೇಲೆ ಕಿರುಗಂಟೆ ಕಟ್ಟಿದ ಒಂದು ಒನಕೆ, ಎಡಕಂಕುಳಲ್ಲಿ ಕಡಾಸು, ಬವನಾಸಿ, ಬಲ ಕಂಕುಳಲ್ಲಿ ತುತ್ತೂರಿ ಭಾಂಕಿ ಶಂಖ, ಎದೆಯ ಮೇಲೆ ಆನೆಯ ವಿಗ್ರಹ, ಬಲಗೈಯಲ್ಲಿ ಜಾಗಟೆ ಹಿಡಿದಿರುತ್ತಾನೆ. ಪುರುಷ, ಭೈರವನ ಶಿಷ್ಯ. ಆತ ಕಬ್ಬಿಣದ ದೊಡ್ಡ ತ್ರಿಶೂಲ, ಬೆಳ್ಳಿಯ ಸಣ್ಣ ತ್ರಿಶೂಲಗಳನ್ನು ಸೇರಿದ ನವಿಲುಗರಿ ಕಂತೆಯನ್ನು ಹೆಗಲ ಮೇಲೆ ಇಟ್ಟುಕೊಂಡು ಕಂಕುಳಲ್ಲಿ ವಿಭೂತಿ ಚೀಲ ಕೈಯಲ್ಲಿ ಜಿಂಕೆಯ ಕೊಂಬಿನ ವಾದ್ಯ, ತೀರ್ಥದ ಬಟ್ಟಲು–ಇವನ್ನು ಹಿಡಿದಿರುತ್ತಾನೆ. ಸುಮಂಗಲಿಯರು ಐರಣಿ (ಪಂಚಕಲಶ) ಹೊತ್ತು ನಡೆಯುವರು. ಒಬ್ಬ ಆಚಾರಿ ಬಣ್ಣ ಹಾಕಿದ ಮರದ ಕುದುರೆಯ ಒಂದು ಕತ್ತನ್ನು ಕಂಕುಳಲ್ಲಿ ಹಿಡಿದುಕೊಂಡು ಕುಣಿಯುತ್ತಾನೆ (ಹಿಂದೆ ಒಂದು ಸಲ ಬಸವ, ಈಶ್ವರನ ಸನ್ನಿಧಿಗೆ ಹೋಗಿ ಹಿಂದಿರುಗದೆ ಇದ್ದುದರಿಂದ ಭೂಲೋಕದ ಆಚಾರಿಗಳು (ಬಡಗಿ) ಒಂದು ಕೀಲುಕುದುರೆ ಮಾಡಿ, ಈಶ್ವರನ ಬಳಿಗೆ ಕೊಂಡುಹೋಗಿ ಅದರಿಂದಲೇ ಬೇಸಾಯ ಮಾಡುವುದಾಗಿ ಹೇಳಿದರಂತೆ. ಸೃಷ್ಟಿ ಒಮ್ಮುಖವಾಗಿರಲಿ ಎಂದು ಯೋಚಿಸಿ ಈಶ್ವರ ಬಸವನನ್ನು ಭೂಲೋಕಕ್ಕೆ ಕಳುಹಿಸಿದನೆಂದು ಒಂದು ಜಾನಪದ ಕಥೆ ಇದೆ).

ಗ್ರಾಮದೇವತೆಗೆ ಅಪಾರ ಹರಕೆಗಳು ಬರುತ್ತವೆ. ಹರಕೆ ಹೊತ್ತವರೆಲ್ಲ ತಮ್ಮ ತಮ್ಮ ಮತಿಗನುಗುಣವಾಗಿ ಹರಕೆ ತಂದು ಒಪ್ಪಿಸುತ್ತಾರೆ. ಆಡು, ಕುರಿ, ಅಸಂಖ್ಯಾತ ಕೋಳಿಗಳು ಬಲಿಯಾಗುತ್ತವೆ. ಭಕ್ತರು ಮಾಲೆ, ಕಣ್ಕಪ್ಪು ಎಲ್ಲವನ್ನೂ ತಂದು ಅಮ್ಮನಿಗೆ ಒಪ್ಪಿಸುತ್ತಾರೆ; ತಾಯಿಯರು ಮಗುವಿಗೆ ಹೆಸರಿಡು ಎಂದು ಬೇಡುತ್ತಾರೆ. ಕೋಲಾಟ, ದೊಣ್ಣೆವರಸೆ, ಪಟ್ಟಾವರಸೆ, ರಮಡೋಲು, ವಾದ್ಯ, ಬಾಣಬಿರುಸು– ಎಲ್ಲ ನಡೆಯುತ್ತದೆ. ಬಂಡಿಹಬ್ಬಕ್ಕೂ ಹಂದಿ ಮಾಂಸಕ್ಕೂ ಗಂಟು. ಸೋನೆಮಳೆ ಆಗ ತಾನೇ ಪ್ರಾರಂಭವಾಗುತ್ತಿರುವುದರಿಂದ ಅದರ ಪ್ರಭಾವದಿಂದ ಹಂದಿ ಮಾಂಸಕ್ಕೆ ಒಂದು ಸೊಗಡೂ ರುಚಿಯೂ ಬರುತ್ತದೆಂದು ರೈತರ ನಂಬಿಕೆ. ಆದ್ದರಿಂದಲೇ ಬಂಡಿಹಬ್ಬದಂದು ಊರಿನ ಜನಸಂಖ್ಯೆಗನುಗುಣವಾಗಿ ನಾಲ್ಕು ಆರು ಎಂಟು ಹಂದಿಗಳನ್ನು ಕೊಂದು ಊಟವೇರ್ಪಡಿಸುತ್ತಾರೆ. ಅನಂತರ ತಮಟೆಗಳ ರಣವಾದ್ಯದ ಗತ್ತಿಗನುಗುಣವಾಗಿ ಕೈಯಲ್ಲಿ ಕೆಂಪು ವಸ್ತ್ರದ ಚೌಕಗಳನ್ನು ಹಿಡಿದುಕೊಂಡು ಆಯಾಸವಾಗುವ ವರೆಗೆ ವೀರಕುಣಿತವನ್ನು ಕುಣಿಯುತ್ತಾರೆ. ಕೊಂಬು ಕಹಳೆ ತುತ್ತೂರಿ ಭಾಂಕಿ ಕುಣಿಮಿಣಿ ತಾಳ ತಮಟೆ ಮೋರಿಗಳ ಕೋಲಾಹಲದೊಂದಿಗೆ ಕುಣಿತ ಕೊನೆಯಾಗುತ್ತದೆ.

ಹೀಗೆ ಮಾನವನ ಊಹನೆಯ, ಆವಶ್ಯಕತೆಯ, ಅತ್ಯಂತ ಪ್ರಾಚೀನ ಶಕ್ತಿದೇವತೆಯಾದ ಗ್ರಾಮದೇವತೆ, ಜನರ ಬಾಳಿಗೆ ಪೌರುಷ ಸಾಹಸ ಕಷ್ಟ ಸಹಿಷ್ಣುತೆ ದುಷ್ಟ ನಿಗ್ರಹ ಶಿಷ್ಟಪರಿಪಾಲನ ಶಕ್ತಿಗಳನ್ನು ನೀಡಿ ಜನತೆಯನ್ನು ರಕ್ಷಿಸಿಕೊಂಡು ಬರುತ್ತಿದೆ. (ಜಿ.ಆರ್.ಎ.)

**ಗ್ರಾಮ ನೈರ್ಮಲ್ಯ ಶಿಲ್ಪ :** ಗ್ರಾಮಗಳಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಹಿತ ದೃಷ್ಟಿಯಿಂದ ನೈರ್ಮಲ್ಯವನ್ನು ಕಾಪಾಡಿಕೊಂಡು ಬರಲು ಅನುಸರಿಸುವ ತಂತ್ರಗಳು (ರೂರಲ್ ಸ್ಯಾನಿಟೇಷನ್ ಎಂಜಿನಿಯರಿಂಗ್). ನಗರಗಳಲ್ಲಿ ಸುಯೋಜಿತ ಹಾಗೂ ಸುರಕ್ಷಿತ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ (**ನೋಡಿ– ಕಚರಾ ವಿಲೇವಾರಿ**), ಕಸದ ವಿಲೇವಾರಿ (**ನೋಡಿ**), ನಗರಸಭೆ ಮುಂತಾದವು ಇರುವುದರಿಂದ ಅಲ್ಲಿನ ನೈರ್ಮಲ್ಯ ಶಿಲ್ಪದ ಹರವು ಬೇರೆಯೇ ಉಂಟು (**ನೋಡಿ ನಗರ ನೈರ್ಮಲ್ಯ ಶಿಲ್ಪ**).

**ನೀರು :** ಜೀವನದ ಮೂರು ಪ್ರಮುಖ ಆವಶ್ಯಕತೆಗಳು ನೀರು, ಆಹಾರ, ವಾಯು. ಆಹಾರದ ಉತ್ಪಾದನೆಗಾದರೂ ನೀರು ಅಗತ್ಯ. ಆದ್ದರಿಂದಲೇ ಪ್ರಾಚೀನ ಮಾನವ ಬಲು ಸುಲಭವಾಗಿ ನೀರು ದೊರೆವ ತಾಣಗಳಲ್ಲೇ ತನ್ನ ನೆಲೆಗಳನ್ನು ಕಟ್ಟಿಕೊಂಡ. ಕುಡಿವ ನೀರಿನ ಆಕರವಾಗಿದ್ದ ಹೊಳೆಯೋ ಕೆರೆಯೋ ಕಚರಾ ನೀರನ್ನು ಪಡೆಯುವ ತೊಟ್ಟಿಯೂ ಆಯಿತು. ಈ ಅನಿರ್ಮಲ ಪ್ರವೃತ್ತಿ ಮನುಷ್ಯನ ಬೆನ್ನನ್ನು ಬಿಡಲೇ ಇಲ್ಲ. ಜನಸಂಖ್ಯೆ ಬೆಳೆದು ಒಳನಾಡಿಗೆ ಮನುಷ್ಯ ಸಾಗಿ ಹಳ್ಳಿಗಳೂ ಕೇರಿಗಳೂ ಬೆಳೆದಂತೆ ನೀರಿನ ನೈರ್ಮಲ್ಯದ ವಿಚಾರ ರೂಢಮೂಲವಾಗಿದ್ದ ಅಸಡ್ಡೆಯ ಪ್ರವೃತ್ತಿ ಮನುಷ್ಯನಿಗೆ ಕಾಯಿಲೆ ಮತ್ತು ಅಪಮೃತ್ಯು ತರುವ ಪಿಡುಗೇ ಆಯಿತು. ಆದ್ದರಿಂದ ಗ್ರಾಮ ನೈರ್ಮಲ್ಯ ಶಿಲ್ಪದಲ್ಲಿ ಪ್ರಥಮಸ್ಥಾನ ನೀರಿನ ವೈಜ್ಞಾನಿಕ ಉಪಯೋಗ ಮತ್ತು ವಿಲೇವಾರಿಗೆ ಸಲ್ಲುತ್ತದೆ.

ಗ್ರಾಮಸ್ಥರಿಗೆ ನೀರಿನ ಪೂರೈಕೆ ಆಗುವುದು ಬಾವಿ, ಕೆರೆ ಇಲ್ಲವೇ ಗ್ರಾಮದ ನೆರೆಯಲ್ಲೇ ಹರಿಯುವ ಕಾಲುವೆ, ತೋಡು, ಹೊಳೆಗಳಿಂದ. ಇವುಗಳ ಪರಿಸರ ಸದಾ ಶುಚಿಯಾಗಿರುವಂತೆ ಕಾಪಾಡುವುದು ಪ್ರತಿಯೊಬ್ಬ ಗ್ರಾಮವಾಸಿಯ ಕರ್ತವ್ಯ. ಈ ದಿಶೆಯಲ್ಲಿ ಮುಂದಿನ ಕೆಲವು ಸಂಗತಿಗಳನ್ನು ಪ್ರತಿಯೊಬ್ಬ ಗ್ರಾಮನಿವಾಸಿಯೂ ಅರಿತಿರಬೇಕು.

1. ಇರುವ ನೀರಿನ ಪ್ರಮಾಣವನ್ನು ಅನುಸರಿಸಿ ಅದರ ಉಪಯೋಗ ನಿಯಂತ್ರಿತವಾಗಬೇಕು. ನೀರಿನ ದುರುಪಯೋಗವನ್ನು ಸಾಧ್ಯವಾದಷ್ಟು ತಡೆಗಟ್ಟಬೇಕು.

2. ನೀರ್ದಾಣದ ಆಸುಪಾಸುಗಳನ್ನು ಶುಚಿಯಾಗಿಡಬೇಕು. ಅಂದರೆ ತಾಣದ ಹತ್ತಿರ ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು, ಶೌಚಕಾರ್ಯ ಮುಂತಾದವು ಕೂಡದು.

3. ಕುಡಿಯುವ ನೀರನ್ನು ಜಾನುವಾರು ತೊಳೆಯಲು ಉಪಯೋಗಿಸಬಾರದು. ಹಾಗೆ ಉಪಯೋಗಿಸಿದರೂ ತಾಣದಿಂದ ಬಲು ದೂರದಲ್ಲಿ ತೊಳೆಯಬೇಕು. ಉಪಯೋಗಿಸಿದ ನೀರು ಕುಡಿವ ನೀರಿನ ತಾಣವನ್ನು ಸೇರದಂತೆ ಎಚ್ಚರವಹಿಸಬೇಕು.

4. ನದಿಯ ನೀರನ್ನು ಕುಡಿಯಲು ಉಪಯೋಗಿಸಿದರೆ ನದೀಪಾತ್ರದ ಮೇಲ್ದಂಡೆಯಲ್ಲಿ ಯಾವುದೇ ಶೌಚಕಾರ್ಯ ನಡೆಸಲೇಕೂಡದು. ಕೆಳದಂಡೆಯ ನೀರನ್ನು ಇದಕ್ಕೆ ಉಪಯೋಗಿಸಬಹುದು.

5. ಅಂಟುಜಾಡ್ಯದ ಬೆದರಿಕೆ ಇರುವ ಕಡೆ ಕುಡಿಯುವ ನೀರಿನಲ್ಲಿರುವ ರೋಗಾಣುಗಳನ್ನು ನಾಶಮಾಡಲು ಪೊಟ್ಯಾಸಿಯಮ್ ಪರಮ್ಯಾಂಗನೇಟ್ ಅಥವಾ ಬ್ಲೀಚಿಂಗ್ ಪೌಡರನ್ನು (ಚಲುವೆ ಪುಡಿ) ಉಪಯೋಗಿಸಬೇಕು.

6. ವಾಸ ಮಾಡುವ ಮನೆಗಳನ್ನು ಕುಡಿಯುವ ನೀರಿನ ತಾಣದ ಹತ್ತಿರ ಕಟ್ಟಬಾರದು. ಮನೆಗಳಿಂದ ಹರಿದು ಹೋಗುವ ಕೊಳಕುನೀರು ಮಣ್ಣಿನೊಳಗಿಂದ ಇಂಗಿ ಕುಡಿಯುವ ನೀರಿನೊಡನೆ ಬೆರೆತು ಅದನ್ನು ಕೊಳಕು ಮಾಡುತ್ತದೆ.

7. ಬಾವಿ ತೋಡುವಾಗ ಶುದ್ಧವಾದ ನೀರು ಎಲ್ಲಿ ಅತಿ ಕಡಿಮೆ ಆಳದಲ್ಲಿ ಸಿಕ್ಕುತ್ತದೆ ಎಂಬುದನ್ನು ಪತ್ತೆಮಾಡಬೇಕು. ಸಾಧಾರಣವಾಗಿ ನೀರಿನ ಖರ್ಚು ಪಟ್ಟಣಗಳಿಗಿಂತ

ಹಳ್ಳಿಗಳಲ್ಲಿ ಕಡಿಮೆ. ಕೊಳೆಯನ್ನು ಸಾಗಿಸಲು ನೀರಿನ ಮಾಧ್ಯಮವನ್ನು ಉಪಯೋಗಿಸಿದಾಗ ಮಾತ್ರ ಹಳ್ಳಿಯಲ್ಲಿ ನೀರಿನ ಖರ್ಚು ಸ್ವಲ್ಪ ಜಾಸ್ತಿ ಆಗುತ್ತದೆ. ಗ್ರಾಮದ ಹವೆ, ಸಾಮಾಜಿಕ ಚಟುವಟಿಕೆಗಳು ಹಾಗೂ ಜೀವನಕ್ರಮ ನೀರಿನ ಉಪಯೋಗದ ಮಟ್ಟವನ್ನು ನಿರ್ಧರಿಸುತ್ತವೆ.

ಭಾರತದಲ್ಲಿ ಶೇ. 80 ಗ್ರಾಮಗಳು ಕುಡಿಯುವ ನೀರಿಗಾಗಿ ಬಾವಿ ಮತ್ತು ಕೊಳವೆ ಬಾವಿಯನ್ನು ಅವಲಂಬಿಸಿವೆ. ಆದ್ದರಿಂದ ಬಾವಿಗಳ ರಕ್ಷಣೆ ಶುದ್ಧ ನೀರನ್ನು ಪಡೆಯುವ ದಿಶೆಯಲ್ಲಿ ಅನಿವಾರ್ಯವಾದ ಹೆಜ್ಜೆ.

ಸಾಧಾರಣ ಬಾವಿ : ಇದರ ವ್ಯಾಸ ಸಾಧಾರಣವಾಗಿ 2.4–7.2 ಮೀ ನಷ್ಟು, ಆಳ ಸಾಧಾರಣವಾಗಿ ನೆಲದಲ್ಲಿ ನೀರು ಸಿಕ್ಕುವ ಮಟ್ಟದವರೆಗೆ.

ಒತ್ತಡದ ಬಾವಿ ಅಥವಾ ಆಳದ ಬಾವಿ: ಇದರಲ್ಲಿ ನೆಲದೊಳಗಿರುವ ಅಭೇದ್ಯವಾದ ಬಂಡೆಕಲ್ಲುಗಳ ಅಡಿಯಲ್ಲಿರುವ ನೀರನ್ನು ನೆಲದ ಮೇಲಕ್ಕೆ ಬರುವಂತೆ ಮಾಡಲಾಗುವುದು. ನೆಲದ ಅಡಿಯಲ್ಲಿನ ಒತ್ತಡ ಹೊರಗಿನ ವಾತಾವರಣದ ಒತ್ತಡಕ್ಕಿಂತ ಜಾಸ್ತಿ. ಬಾವಿಯನ್ನು ಈ ಆಳದ ವರೆಗೆ ತೋಡಿದರೆ ನೀರು ತನ್ನಷ್ಟಕ್ಕೆ ಮೇಲೆ ಬರುವುದು. ಇಂಥ ಬಾವಿಯ ವ್ಯಾಸ 15–16 ಸೆಂಮೀನಷ್ಟು. ನೀರನ್ನು ಇಂಥ ಬಾವಿಗಳಿಂದ ಕೊಳವೆಗಳ ಮೂಲಕವೂ ಮೇಲೆತ್ತಬಹುದು.

ಒಳಕ್ಕೆ ಸೋಸಿಕೊಂಡು ಹೋಗುವ ಬಾವಿ : ನದಿಯ ದಡದ ಮರಳಿನಲ್ಲಿ ಕೆಲವು ಬಾವಿಗಳನ್ನು ತೋಡಿ ಅವನ್ನೆಲ್ಲ ನಳಿಗೆಗಳ ಮೂಲಕ ಒಂದು ಮುಖ್ಯ ಬಾವಿಗೆ ಹಾಯಿಸಬೇಕು. ಅಲ್ಲಿಂದ ಪೂರಕ ಯಂತ್ರಗಳ ಮೂಲಕ ಮೇಲಕ್ಕೆ ಹಾಯಿಸಿ ಶುದ್ಧೀಕರಿಸಿ ಕುಡಿಯುವುದಕ್ಕೆ ಉಪಯೋಗಿಸಬಹುದು. ಬಾವಿಯ ನೀರನ್ನು ಪೂರಕ ಯಂತ್ರಗಳಿಂದ ಸುಲಭವಾಗಿ ಕಡಿಮೆ ಶ್ರಮದಿಂದ ಎತ್ತಬಹುದು. ಈ ಬಾವಿಗಳ ಮೇಲ್ಭಾಗವನ್ನು ಕಾಂಕ್ರೀಟ್ ಅಥವಾ ಇನ್ನಾವುದಾದರೂ ಹಲಗೆಗಳಿಂದ ಮುಚ್ಚಬೇಕು.

ಗ್ರಾಮಕಸದ ವಿಲೇವಾರಿ : ಗ್ರಾಮಗಳಲ್ಲಿ ಪ್ರತಿಯೊಂದು ಮನೆಯಿಂದ ಬರುವ ಕೊಳಕು ನೀರು, ಮಳೆ ನೀರು ಮುಂತಾದವನ್ನು ಮನೆಯ ಹಿಂದಿನ ತೋಟಕ್ಕೆ ಹಾಯಿಸಬೇಕು. ಇಲ್ಲವೇ ಎಲ್ಲ ಮನೆಗಳ ನೀರನ್ನು ಚರಂಡಿಗಳಿಗೆ ಹಾಯಿಸಿ ಸೂಕ್ತವಾಗಿ ವಿಲೇವಾರಿ ಮಾಡಬೇಕು. ಯಾವ ಕಾರಣಕ್ಕೂ ಹರಿವ ನೀರಿಗಾಗಲೀ ಕೆರೆ ಕುಂಟೆಗಳಿಗಾಗಲೀ ಈ ನೀರನ್ನು ಬಿಡತಕ್ಕದ್ದಲ್ಲ. ಗ್ರಾಮಕಸವನ್ನು ವ್ಯವಸಾಯಕ್ಕೆ ಬಳಕೆ ಮಾಡುವುದು ಸರ್ವೋತ್ಕೃಷ್ಟ ಜಾನುವಾರುಗಳ ವಿಸರ್ಜನೆಗಳನ್ನು ಕೂಡ ಇದೇ ರೀತಿ ಬಳಸಬೇಕು.

ಶೌಚಾಲಯಗಳ ನಿರ್ಮಾಣ: ಗ್ರಾಮಗಳಲ್ಲಿ ನೀರಿನ ಸರಬರಾಜು ವ್ಯವಸ್ಥಿತವಾಗಿ ಇರುವುದಿಲ್ಲ; ಅಲ್ಲದೆ ಒಳಚರಂಡಿ ಏರ್ಪಾಡು ಕೂಡ ಇರುವುದು ಅಪರೂಪ. ಆದ್ದರಿಂದ ಪ್ರತಿಯೊಂದು ಮನೆಗೂ ಮಲಮೂತ್ರಗಳ ವಿಲೇವಾರಿಗೆ ಬೇರೆ ಬೇರೆ ಏರ್ಪಾಡಿರುವುದು. ಕೆಲವನ್ನು ಇಲ್ಲಿ ವಿವರಿಸಿದೆ.

ಗುಂಡಿ ಕಕ್ಕಸುಗಳು : ಇವು ಸಾಧಾರಣವಾಗಿ ನೆಲದಲ್ಲೇ ತೋಡಿದ ಗುಂಡಿಗಳು. 1.5–1.8 ಮೀ ಆಳ ಮತ್ತು ಸುಮಾರು 1.65 ಚ.ಮೀ ಸಲೆ ಇರುವ ಇಂಥ ಒಂದು ಗುಂಡಿಯನ್ನು ಕಲ್ಲಿನಿಂದ ಅಥವಾ ಇಟ್ಟಿಗೆಯಿಂದ ಮೇಲ್ಗಡೆ ಮುಚ್ಚಿ ಉಪಯೋಗಿಸಲು ಒಂದು ರಂಧ್ರವನ್ನು ಬಿಡಲಾಗುವುದು. ಗುಂಡಿಯೊಳಗೆ ಉತ್ಪನ್ನವಾಗುವ ಅನಿಲಗಳನ್ನು ಹೊರಹಾಕಲು ಒಂದು ನಳಿಗೆಯನ್ನು ಗುಂಡಿಗೆ ಜೋಡಿಸಲಾಗುವುದು. ಉಪಯೋಗಿಸಿದ ಮೇಲೆ ಪ್ರತಿಸಲವೂ ಒಂದು ಹಿಡಿ ಒಣಮಣ್ಣನ್ನು ಮಲದ ಮೇಲೆ ಹಾಕಬೇಕು. ಸಾಧ್ಯವಾದಷ್ಟು ಮಟ್ಟಿಗೆ ನೀರು ಗುಂಡಿಯನ್ನು ಸೇರದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಮಲ ರಾಸಾಯನಿಕ ಕ್ರಿಯೆಗೆ ಒಳಗಾಗಿ ಕೆಟ್ಟವಾಸನೆ ಬರಲು ಪ್ರಾರಂಭವಾಗುತ್ತದೆ. ಗುಂಡಿ ಪೂರ್ತಿ ತುಂಬಿದ ಬಳಿಕ ಮೇಲ್ಗಡೆ ಒಣಮಣ್ಣು ಹಾಕಿ ಮುಚ್ಚಬೇಕು. ಆ ಬಳಿಕ ಆ ಗುಂಡಿಯನ್ನು ಉಪಯೋಗಿಸಬಾರದು. ಮುಂದಿನ ಕೆಲವು ತಿಂಗಳುಗಳಲ್ಲೇ ಮಲ ರಾಸಾಯನಿಕ ಕ್ರಿಯೆಗೆ ಒಳಗಾಗಿ ಒಳ್ಳೆಯ ಗೊಬ್ಬರವಾಗಿ ಪರಿವರ್ತನೆಗೊಳ್ಳುವುದು. ಆಗ ಇದನ್ನು ಹೊರತೆಗೆದು ತೋಟಕ್ಕೆ ಉಪಯೋಗಿಸಬಹುದು.

ಆಳದ ಗುಂಡಿಯ ಕಕ್ಕಸು : ಈ ಮೇಲಿನದನ್ನೇ ಸ್ವಲ್ಪ ಪರಿಷ್ಕರಿಸಿ ಇನ್ನೂ ಆಳವಾದ ಗುಂಡಿಯನ್ನು ತೋಡುವುದರಿಂದ ಪ್ರತಿಸಲ ಉಪಯೋಗಿಸಿದಾಗ ಒಣ ಮಣ್ಣು ಹಾಕುವ ಕೆಲಸ ತಪ್ಪುತ್ತದೆ. ಗುಂಡಿಯ ವ್ಯಾಸ 25 –40 ಸೆಂಮೀ ಮತ್ತು ಆಳ 3–5 ಮೀ. ನೆಲದೊಳಗಿನ ನೀರಿನ ತಾಣ ಗುಂಡಿಯ ತಳಕ್ಕಿಂತ ಕೆಳಗಿರಬೇಕು. ಮೇಲ್ಗಡೆಯ ಕೆಲವು ಆಳದಷ್ಟು ಭಾಗವನ್ನು ಕಲ್ಲಿನ ಕಟ್ಟಡದಿಂದ ಭದ್ರಗೊಳಿಸಬೇಕು. ಗುಂಡಿಯ ಮೇಲ್ಭಾಗವನ್ನು ಕಡಪ ಕಲ್ಲು ಅಥವಾ ಕಾಂಕ್ರೀಟ್ ಹಲಗೆಯಿಂದ ಮುಚ್ಚಬೇಕು. ಮರದ ಹಲಗೆಯನ್ನೋ ಬಿದಿರು ತಟ್ಟಿಗಳನ್ನೋ ಬಳಸುವುದು ಉಂಟು. ಉಪಯೋಗಕ್ಕಾಗಿ ಇದರ ಮಧ್ಯದಲ್ಲಿ ಒಂದು ರಂಧ್ರವನ್ನು ಬಿಡಬೇಕು. ಉಪಯೋಗಿಸಿದ ಮೇಲೆ ಮರದ ಹಲಗೆಯಿಂದ ರಂಧ್ರವನ್ನು ಮುಚ್ಚಬೇಕು. ಸೌಕರ್ಯಕ್ಕೋಸ್ಕರ ಒಂದು ಕೋಣೆಯನ್ನು ಕಟ್ಟಿಸಬಹುದು. ಇಂಥ ಗುಂಡಿಯಲ್ಲಿ ಕೆಲವು ಸಮಯದಲ್ಲಿಯೇ ರಾಸಾಯನಿಕ ಕ್ರಿಯೆಯಿಂದ ಉದ್ಭವಿಸುವ ಅನಿಲಗಳು ಸುತ್ತಲಿನ ವಾತಾವರಣದಲ್ಲಿ ದುರ್ವಾಸನೆಯನ್ನು ಪಸರಿಸುತ್ತವೆ. ಎಣ್ಣೆಯಲ್ಲಿ ಅದ್ದಿ ತೆಗೆದ ಚಿಂದಿಗೆ ಬೆಂಕಿ ತಾಗಿಸಿ ಗುಂಡಿಯೊಳಕ್ಕೆ ಎಸೆದರೆ ಅಲ್ಲಿ ಸಾಕಷ್ಟು ಹೊಗೆ ಮುಸುಕಿ ದುರ್ವಾಸನೆಯನ್ನು ನಿವಾರಿಸುತ್ತದೆ. ಡಿಡಿಟಿ ಪುಡಿಯನ್ನು ಕೂಡ ಗುಂಡಿಯ ಒಳಕ್ಕೆ ಸಿಂಪಡಿಸಬಹುದು.

ಚಿಕ್ಕ ತೊಟ್ಟಿಯ ಕಕ್ಕಸು : ಕುಳಿತುಕೊಳ್ಳುವ ಸ್ಥಳ ಎತ್ತರದಲ್ಲಿ ಇರುತ್ತದೆ. ಅದರ ಕೆಳಗೆ ಒಂದು ಚಿಕ್ಕ ಮರದ ಅಥವಾ ಟಿನ್ನಿನ ತೊಟ್ಟಿಯನ್ನು ಇಡಲಾಗುವುದು. ಈ ಸ್ಥಳದ ಹಿಂಭಾಗದಲ್ಲಿ ಒಂದು ಸಣ್ಣ ಬಾಗಿಲು ಇರುವುದು. ಈ ಬಾಗಿಲಿನಿಂದ ದಿವಸಕ್ಕೆ ಒಂದು ಸಲ ತೊಟ್ಟಿಯನ್ನು ಹೊರತೆಗೆದು ಶುಚಿ ಮಾಡಬೇಕು. ಮಲ ತುಂಬಿದ ತೊಟ್ಟಿಗಳನ್ನು ತಲೆಯ ಮೇಲೆ ಹೊತ್ತು ಸಾಗಿಸುವ ಪದ್ಧತಿಯನ್ನು 1973ರ ಆಗಸ್ಟ್ 15ರಿಂದ ಕರ್ನಾಟಕದಲ್ಲಿ ನಿಷೇಧಿಸಲಾಗಿದೆ. ಗುಂಡಿ ಕಕ್ಕಸುಗಳೋ ಸೆಪ್ಟಿಕ್ ಕಕ್ಕಸುಗಳೋ ಈಗ ರಾಜ್ಯಾದ್ಯಂತ ಗ್ರಾಮಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವತ್ರಿಕವಾಗಿ ಬಳಕೆಗೆ ಬರುತ್ತಿವೆ.

ಸೆಪ್ಟಿಕ್ ಬಾವಿ ಕಕ್ಕಸು: ಕಕ್ಕಸು ತೊಟ್ಟಿಯಿಂದ ಸಾಕಷ್ಟು ದೂರದ ತಗ್ಗಿನಲ್ಲಿ ಒಂದು ಬಾವಿಯನ್ನು ತಯಾರಿಸಬೇಕು. ಇದರ ಒಳಭಾಗವನ್ನು ಬರೀ ಕಲ್ಲಿನಿಂದ ಕಟ್ಟಬೇಕು. ಮೇಲುಭಾಗವನ್ನು ಕಾಂಕ್ರೀಟಿನ ಹಲಗೆಯಿಂದ ಭದ್ರವಾಗಿ ಮುಚ್ಚಬೇಕು. ಇದೇ ಸೆಪ್ಟಿಕ್ ಬಾವಿ. ತೊಟ್ಟಿಯ ತಳದಿಂದ ಈ ಬಾವಿಗೆ ಕೊಳವೆ ಜೋಡಣೆ ಉಂಟು. ಮಲವಿಸರ್ಜನೆ ಆದ ಬಳಿಕ ತೊಟ್ಟಿಗೆ ನೀರು ಸುರಿದರೆ ಮಲವೂ ನೀರೂ ಸೆಪ್ಟಿಕ್ ಬಾವಿಗೆ ಬಂದು ಬೀಳುತ್ತವೆ. ಅಲ್ಲಿ ಕಲ್ಲುಗಳ ಸೆರೆಯಿಂದ ನೀರು ಭೂಮಿಗೆ ಹಿಂಗಿಹೋಗುತ್ತದೆ; ಮಲಮೂತ್ರ ಉಳಿದುಕೊಂಡಿರುತ್ತದೆ. ಬಾವಿಯ ಗಾತ್ರ ಹಾಗೂ ಮಣ್ಣಿನ ಗುಣವನ್ನು ಅನುಸರಿಸಿ ಹಲವಾರು ವರ್ಷಗಳಿಗೊಮ್ಮೆ ಈ ಬಾವಿಯನ್ನು ಖಾಲಿಮಾಡಿದರೆ ಸಾಕು. ಒಳಚರಂಡಿ ವ್ಯವಸ್ಥೆ ಇಲ್ಲದ ಎಲ್ಲ ಪ್ರದೇಶಗಳಲ್ಲೂ ಸೆಪ್ಟಿಕ್ ಬಾವಿ ಕಕ್ಕಸೇ ಇಂದು ಹೆಚ್ಚು ಜನಪ್ರಿಯವಾಗಿದೆ.

**ಆಹಾರ** : ದೇಶದ ಆಹಾರದ ಹೆಚ್ಚಿನ ಉತ್ಪಾದನೆ ಗ್ರಾಮಾಂತರ ಪ್ರದೇಶಗಳಲ್ಲಿ ಆಗುವುದಾದರೂ ಈ ಪದಾರ್ಥಗಳ ವೈಜ್ಞಾನಿಕ ಸಂಗ್ರಹ, ಶೇಖರಣೆ ಹಾಗೂ ಉಪಯೋಗ ತೀರ ಅವೈಜ್ಞಾನಿಕವಾಗಿಯೇ ಇಂದಿಗೂ ಗ್ರಾಮಗಳಲ್ಲಿ ನಡೆಯುತ್ತಿದೆ. ಇದರಿಂದ ಆಹಾರ ಪದಾರ್ಥಗಳ ನಿವಾರಣೀಯ ನಷ್ಟ ಒಂದು ಕಡೆ, ಗ್ರಾಮನೈರ್ಮಲ್ಯದ ಮೇಲೆ ಆಗುವ ದುಷ್ಪರಿಣಾಮ ಇನ್ನೊಂದು ಕಡೆ – ಹೀಗೆ ದ್ವಿವಿಧ ತೊಂದರೆಗಳಿವೆ. ಸುಧಾರಿತ ಪತ್ತಾಯಗಳು, ಸಹಕಾರೀ ದವಸ ಬ್ಯಾಂಕುಗಳು, ಮಾರುಕಟ್ಟೆಗಳು, ಶುಚಿಯಾದ ವ್ಯವಸ್ಥೆಗೊಳಿಸಿದ ಅಂಗಡಿಗಳಲ್ಲಿ ಮಾರಾಟದ ಏರ್ಪಾಡುಗಳು, ಅನುಪಯುಕ್ತ ವಸ್ತುಗಳ ಸಮರ್ಪಕ ವಿಲೇವಾರಿ ಇವೆಲ್ಲವೂ ಕ್ರಮಬದ್ಧವಾಗಿ ನಡೆಯಬೇಕಾದದ್ದು ತೀರ ಅವಶ್ಯ.

**ವಾಯು** : ಕಾರ್ಖಾನೆಗಳೂ ಸ್ವಯಂಚಾಲಿತ ವಾಹನಗಳೂ ಗ್ರಾಮಗಳನ್ನು ಆಕ್ರಮಿಸದಿರುವುದರಿಂದ ವಾಯುವಿನ ಮಲಿನತೆಯ ಸಮಸ್ಯೆ ಅಲ್ಲಿ ಇರುವುದಿಲ್ಲ. ಆದರೆ ಹೊಲಸು ನೀರು, ಕೊಳವೆ ಗುಂಡಿಗಳು, ಸರಿಯಾಗಿ ವಿಲೇವಾರಿಯಾಗದ ವಿಸರ್ಜಿತ ವಸ್ತುಗಳು ಇವೇ ಮುಂತಾದವು ಗ್ರಾಮದ ವಾತಾವರಣವನ್ನು ಸಾಕಷ್ಟು ಕಲುಷಿತಗೊಳಿಸಿ ಗ್ರಾಮಸ್ಥರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಲ್ಲವು. ಅಲ್ಲದೆ ಮನೆ ಗುಡಿಸಲುಗಳನ್ನು ಕಟ್ಟಿಕೊಳ್ಳುವಲ್ಲಿ ವಾಯುಸಂಚಾರಕ್ಕೆ ತಕ್ಕ ಏರ್ಪಾಡನ್ನು ಬಹುತೇಕವಾಗಿ ಅಜ್ಞಾನದಿಂದ ಮಾಡದೇ ಹೋಗುವುದುಂಟು. ಹೀಗಾದಲ್ಲಿ ಸಮೃದ್ಧವಾಗಿದ್ದರೂ ಶುದ್ಧವಾಯು ಗ್ರಾಮಸ್ಥರಿಗೆ ದೊರೆಯದೇ ಇರಬಹುದು. ದುಬಾರಿ ಖರ್ಚಿಲ್ಲದೇ ಆದರೆ ವೈಜ್ಞಾನಿಕವಾಗಿ ಉಪಯುಕ್ತವಾದ ಮನೆಗಳನ್ನು ಕಟ್ಟಿಕೊಳ್ಳುವ ದಿಶೆಯಲ್ಲಿ ಗ್ರಾಮಸ್ಥರಿಗೆ ನೆರವು ನೀಡುವುದು ಕೂಡ ಗ್ರಾಮ ನೈರ್ಮಲ್ಯ ಶಿಲ್ಪದ ಹೊಣೆ. (ಕೆ.ಎ.ಆರ್.)

**ಗ್ರಾಮ ಪಂಚಾಯತಿ :** ಗ್ರಾಮಗಳ ಸುವ್ಯವಸ್ಥೆಯನ್ನು ನಿರ್ವಹಿಸುವ ಪ್ರಜಾಸತ್ತಾತ್ಮಕ ಸಂಸ್ಥೆ. ಪೌರಸ್ತ್ಯ ದೇಶಗಳದು ಗ್ರಾಮೀಣ ಸಂಸ್ಕೃತಿ, ಪಾಶ್ಚಾತ್ಯ ದೇಶಗಳದು ನಾಗರಿಕ ಸಂಸ್ಕೃತಿ ಎಂಬ ಮಾತಿನಲ್ಲಿ ವಿಶೇಷ ಅರ್ಥವಿದೆ. ಭಾರತ, ಚೀನ ಮುಂತಾದ ಪೌರಸ್ತ್ಯ ದೇಶಗಳಲ್ಲಿ ನೂರಕ್ಕೆ ಸು. 70 ಜನ ಗ್ರಾಮಗಳಲ್ಲಿ ವಾಸಿಸುತ್ತಾರೆ. ಮನುಷ್ಯ ವನ್ಯಜೀವನದಿಂದ ಬೇರೆಯಾಗಿ ಸಂಘಜೀವಿಯಾಗಿ ಬಾಳಲು ಪ್ರಾರಂಭಿಸಿದ ಕಾಲದಲ್ಲಿ ಉದಿಸಿದ ಸಾಮಾಜಿಕ ಸಂಘಟನೆಯ ಪ್ರಥಮ ಘಟಕಗಳಾದ ಗ್ರಾಮಗಳು, ಸಂಪರ್ಕಾನುಕೂಲವಿಲ್ಲದ ಕಾಲದಲ್ಲಿ ಸ್ವಾವಲಂಬನ ಅಗತ್ಯವೂ ಅನಿವಾರ್ಯವೂ ಆಗಿ ಈ ಗ್ರಾಮಘಟಕಗಳು ಸ್ವತಂತ್ರವಾಗಿ ಬೆಳೆದು ಬಂದುವು. ಗ್ರಾಮದ ಅಗತ್ಯಗಳನ್ನು ಪೂರೈಸುವ ಬಡಿಗ (ರಥಕಾರ), ಕಂಬಾರ, ಕುಂಬಾರ, ಹಜಾಮ, ಅಗಸ, ಅಂಬಿಗ, ಪುರೋಹಿತ, ಶಿಕ್ಷಕ, ಕಾವಲುಗಾರ, ವೈದ್ಯ, ಪಟವಾರಿ, ಗಾಣಿಗ ಮೊದಲಾದವರು ಗ್ರಾಮದ ಪ್ರಧಾನ ಕುಲವಾದ ಕೃಷಿಕ ವರ್ಗದ ಆಶ್ರಿತರೂ ಸಹಾಯಕರೂ ಆಗಿ ಗ್ರಾಮಜೀವನದ ಅಂಗವಾಗಿ ಬೆಳೆದುಬಂದರು.

ಪ್ರಾಚೀನ ಕಾಲದಿಂದಲೂ ಗ್ರಾಮಸಭೆಗೆ ಶಾಸನ ವ್ಯವಸ್ಥೆಯಲ್ಲಿ ಬಹಳ ಮಹತ್ತ್ವವುಂಟು. ಪ್ರಬುದ್ಧರಾದ ಸದ್ಗೃಹಸ್ಥರೆಲ್ಲ ಗ್ರಾಮಸಭೆಯ ಸದಸ್ಯರಾಗಿರುತ್ತಿದ್ದರು. ಈ ಸಭೆಯ ಪ್ರಮುಖನಿಗೆ ಗ್ರಾಮಣಿ ಎಂಬ ಹೆಸರಿರುತ್ತಿತ್ತು. ಗ್ರಾಮಸಭೆಯಿಂದ ಆರಿಸಲ್ಪಟ್ಟ ಚಿಕ್ಕದೊಂದು ಕಾರ್ಯಕಾರಿ

ಸಮಿತಿ ಗ್ರಾಮದ ಕಾರ್ಯಭಾರವನ್ನೆಲ್ಲ ನಡೆಸುತ್ತಿತ್ತು. ಈ ಸಮಿತಿಯಲ್ಲಿ ಸಾಮಾನ್ಯವಾಗಿ ಐದು ಜನ ಸದಸ್ಯರಿರುತ್ತಿದ್ದ ಕಾರಣ ಇದಕ್ಕೆ ಪಂಚಾಯತಿ ಎಂಬ ಹೆಸರು ಬಂದಿದೆ. ಪ್ರತಿಯೊಂದು ಗ್ರಾಮಕ್ಕೆ ಪ್ರತ್ಯೇಕವಾದ ಗ್ರಾಮಸಭೆ ಮತ್ತು ಗ್ರಾಮ ಪಂಚಾಯತಿ ಇರುತ್ತಿದ್ದವು. ಇದೊಂದು ಸ್ವಯಂಪೂರ್ಣವಾದ ಶಾಸನ ವ್ಯವಸ್ಥೆಯಾಗಿತ್ತು.

ಸಮಾನೋಮಂತ್ರಃ ಸಮಿತಿಃ ಸಮಾನೋ (ಋಗ್ವೇದ)– ಧ್ರುವಾಯತೇ ಸಮಿತಿಃ ಕಲ್ಪಿತಮಿಹ (ಅಥರ್ವಣವೇದ) – ಈ ಮಂತ್ರಗಳಲ್ಲಿ ಬರುವ ಸಮಿತಿ ಶಬ್ದವನ್ನು ಗಮನಿಸಬಹುದು. ಸಮಿತಿ = ಸಮ್ ಇತಿ, ಒಂದೆಡೆ ಸೇರುವುದು – ಎಂದು ಇದರ ಅರ್ಥ. ಸಮಿತಿಗಳಲ್ಲಿ ಅನೇಕ ಸಲ ರಾಜನೂ ಭಾಗವಹಿಸುತ್ತಿದ್ದನೆಂದು ಗೊತ್ತಾಗುತ್ತದೆ (ರಾಜಾನಃ ಸಮಿತಾವಿವ). ಸಮಿತಿಗಳಲ್ಲಿ ಮಾತನಾಡುವ ರೀತಿ, ಸಭ್ಯತೆ ಇವುಗಳ ಬಗ್ಗೆಯೂ ಅಥರ್ವಣವೇದದಲ್ಲಿ ಉಲ್ಲೇಖವಿದೆ; ಮನೋರಂಜಕವಾಗಿ ಮಾತನಾಡಬೇಕು (ಏ ಸಂಗ್ರಾಮಾಃ ಸಮಿತಯಃ ತೇಷು ಚಾರುವದೇಮತೆ) ಎಂಬ ನಿಯಮವಿತ್ತು. ಸಭಾಗೌರವಕ್ಕೆ ಮಹತ್ತ್ವವಿತ್ತು.

ಋಗ್ವೇದದ ಕೊನೆಯ ಕಾಲದಲ್ಲಿ ಸಮಿತಿ ರೂಪುಗೊಂಡಿರಬೇಕೆಂದು ಹೇಳಲಾಗಿದೆ. ಸಾಮ್ರಾಜ್ಯ ಪದ್ಧತಿ ಬೆಳೆದಂತೆ ಸಮಿತಿಗಳು ಮಾಯವಾಗುತ್ತ ಬಂದು ಬೇರೆ ಸಂಸ್ಥೆಗಳು ಬೆಳೆದುಕೊಂಡವು. ವೇದೋತ್ತರ ಕಾಲದಲ್ಲಿ ಸಭಾ ಎಂಬ ಸಂಸ್ಥೆಗೆ ಪ್ರಾಮುಖ್ಯ ಬಂತು. ಸಭೆ ಸಮಿತಿಗಳು ನಮ್ಮನ್ನು ರಕ್ಷಿಸಲಿ (ಸಭಾಚ ಮಾಂ ಸಮಿತಿಶ್ಚ ಅವತಾಂ) ಎಂಬುದು ಒಂದು ಪ್ರಾರ್ಥನೆ. ಸಭಾಸದರೆಲ್ಲ ನನ್ನೊಂದಿಗೆ ಒಳ್ಳೆಯ ಮಾತನಾಡಲಿ (ಯೇತೇಕ್ಯೆಚ ಸಭಾಸದಸ್ತೇ ಮೇ ಸಂತು ಸವಾಚಸಃ) ಎಂದು ಇನ್ನೊಂದು ಪ್ರಾರ್ಥನೆ ಇದೆ. ಸಹಧರ್ಮಿಗಳಿಂದ, ಸಜ್ಜನರಿಂದ ಕೂಡಿದ್ದೇ ಸಭಾ ಎಂಬುದು ಪಾರಸ್ಕರ ಗೃಹ್ಯಸೂತ್ರದ ವ್ಯಾಖ್ಯೆ. ಸಮಿತಿ, ಸಭೆ, ಸೇನಾ – ಇವೆಲ್ಲ ವಿದಥ ಎಂಬ ಮೂಲ ಜನಸಂಸ್ಥೆಯ ಶಾಖೆಗಳು, ಕಾರ್ಯವ್ಯತ್ಯಾಸದಿಂದ ಬೇರೆಯಾಗಿ ಬೆಳೆದಿರಬಹುದು ಎಂದು ಜಯಸ್ವಾಲ್ ಹೇಳುತ್ತಾರೆ.

ವೇದಕಾಲದ ಸ್ವತಂತ್ರ, ಸ್ವಾಯತ್ತ ಗ್ರಾಮಸಂಸ್ಥೆಗಳು ಕರಗಿಹೋಗಿ ಸಾಮ್ರಾಜ್ಯಗಳು ಉದಿಸಿ ಮತ್ತೆ ಅವೂ ಜನಪ್ರಿಯತೆಯನ್ನು ಕಳೆದುಕೊಂಡು ಚಿಕ್ಕ ಚಿಕ್ಕ ಗಣರಾಜ್ಯಗಳು ಮತ್ತೆ ಪ್ರಜಾಸತ್ತಾತ್ಮಕ ಪದ್ಧತಿಯ ಮೇಲೆ ರೂಪುಗೊಂಡು ಗ್ರಾಮ ಗಣರಾಜ್ಯಗಳಾಗಿ ಬೆಳೆದುದನ್ನು ಭಾರತದ ಇತಿಹಾಸದಲ್ಲಿ ಬುದ್ಧನ ಕಾಲದ ಹೊತ್ತಿಗೆ ಕಾಣಬಹುದು (ಕೇಚಿದ್ದೇಶಾಃ ಗಣಾಧೀನಾಃ ಕೇಚಿದ್ದೇಶಾಃ ರಾಜಾಧೀನಾ ಇತಿ). ಈ ಗಣ ಅಥವಾ ಸಂಘದಲ್ಲಿ ಚುನಾವಣೆ ನಡೆಯುತ್ತಿತ್ತು, ಮತದಾನವಾಗುತ್ತಿತ್ತು. ಮತಕ್ಕೆ ಶಲಾಕಾ ಎಂದು ಹೆಸರಿತ್ತು. ಚುನಾವಣಾಧಿಕಾರಿಗೆ ಗಣಪೂರಕ ಎಂದು ಕರೆಯಲಾಗುತ್ತಿತ್ತು.

ಈ ಮೊದಲು ವಿವರಿಸಿದ ಸಮಿತಿ, ಗಣಗಳು ಪ್ರಧಾನವಾಗಿ ರಾಜಕೀಯ, ಆರ್ಥಿಕ ವ್ಯವಸ್ಥೆಯ ಹೊಣೆಗಾರಿಕೆಯನ್ನು ಹೊರುವ ಸಂಸ್ಥೆಗಳಾದರೂ ಮತ, ಧರ್ಮ ಮತ್ತು ಜಾತಿ ಕುರಿತ ವಿವಾದಗಳನ್ನು ಬಗೆಹರಿಸುವಲ್ಲಿಯೂ ಈ ಸಂಸ್ಥೆಗಳನ್ನಾಶ್ರಯಿಸಲಾಗುತ್ತಿತ್ತು. ಕಾಲಕ್ರಮದಲ್ಲಿ ಈ ಸಂಸ್ಥೆಗಳು ರಾಜಕೀಯ ಮತ್ತು ಆರ್ಥಿಕ ಅಧಿಕಾರಗಳನ್ನು ಕಳೆದುಕೊಂಡರೂ ಜನರು ಮತೀಯ ಹಾಗೂ ಜಾತೀಯ ವಿಷಯಗಳಲ್ಲಿ ಇಂಥ ಸಂಸ್ಥೆಗಳ ಉಪಯುಕ್ತತೆಯನ್ನು ಕಂಡುಕೊಂಡು ಅವನ್ನು ಪೋಷಿಸುತ್ತ ಬಂದರು. ತತ್ಪರಿಣಾಮವಾಗಿಯೇ ಅನೇಕ ಜಾತಿಗಳಲ್ಲಿ ಜಾತಿಪಂಚಾಯತಿಗಳು ಆಯಾಯಾ ಗ್ರಾಮಗಳಿಗೊಂದರಂತೆಯೋ ಹಲವು ಗ್ರಾಮಗಳಿಗೊಂದರಂತೆಯೋ ಬೆಳೆದುಬಂದುದನ್ನು ಗಮನಿಸಬಹುದು. ವಿವಿಧ ಜಾತಿಗಳ ಜನವರ್ಗಗಳಲ್ಲಿ ತಲೆದೋರುವ ಅಂತಃಕಲಹಗಳನ್ನೂ ಕೊಲೆ, ಸುಲಿಗೆ, ವ್ಯಭಿಚಾರಗಳಂಥ ಗಂಭೀರ ಅಪರಾಧಗಳಿಂದ ಉಂಟಾಗುವ ಜಗಳಗಳನ್ನೂ ಬಗೆಹರಿಸುವಲ್ಲಿ ರಾಜಸತ್ತೆಗಿಂತಲೂ ಈ ಜಾತಿ ಪಂಚಾಯತಿಗಳು ಹೆಚ್ಚು ಪರಿಣಾಮಕಾರಿ ಯೆಂದು ಅನೇಕ ಸಾರಿ ಎನಿಸಿದೆ. ಪಂಚರಿಗೆ ಪಂಚಪರಮೇಶ್ವರ ಎಂಬ ಗೌರವವಿತ್ತು.

ಅಶೋಕ, ಚಂದ್ರಗುಪ್ತರಿಂದಾರಂಭಿಸಿ, ಅಕ್ಬರ್, ಕೃಷ್ಣದೇವರಾಯ, ಶಿವಾಜಿಯ ವರೆಗೂ ಸಾಮ್ರಾಟರು ಪ್ರಜಾಸತ್ತಾತ್ಮಕ ಸೂತ್ರಾಧಾರಿತವಾಗಿ ಬೆಳೆದು ಬಂದ ಸಮಿತಿ, ಸಭಾ, ಗಣ, ಸಂಘ, ಗ್ರಾಮ ಪಂಚಾಯತಿ, ಜಾತಿ ಪಂಚಾಯತಿಗಳ ಆಂತರಿಕ ವ್ಯವಸ್ಥೆಯನ್ನು ಬೆದಕದೆ ಇವನ್ನು ತಮ್ಮ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತ ಬಂದಿರುವುದನ್ನು ಗಮನಿಸಿದಾಗ ಈ ಸಂಸ್ಥೆ ಭಾರತದ ಜನಜೀವನದಲ್ಲಿ ಎಷ್ಟು ಬೇರೂರಿದೆಯೆಂಬುದನ್ನು ಅರ್ಥಮಾಡಿಕೊಳ್ಳಬಹುದು.

ಹೀಗೆ ಇಂದಿನ ಗ್ರಾಮ ಪಂಚಾಯತಿಯ ಬೀಜ, ಮೊಳಕೆ, ಚಿಗುರು, ಫಲ, ಪುಷ್ಪಗಳನ್ನು ಸಮಿತಿ, ಸಭಾ, ಜನಪದ, ಸಂಘ, ಗಣಗಳಲ್ಲಿ ಕಾಣಬಹುದು. ಹಿಂದೂ ಸಂಯುಕ್ತ ಕುಟುಂಬ ಪದ್ಧತಿಯ ವಿಕಸಿತ ರೂಪವೇ ಗ್ರಾಮ ಪಂಚಾಯತಿಯೆನ್ನಬಹುದು. ಕುಟುಂಬದಲ್ಲಿ ಪ್ರಾಮಾಣಿಕ ಭಿನ್ನಾಭಿಪ್ರಾಯಗಳಿರಬಹುದು. ಸಶಕ್ತರೂ ದುರ್ಬಲರೂ ಇರಬಹುದು. ಆದರೆ ಪರಸ್ಪರ ವಿಚಾರ ವಿನಿಮಯದಿಂದ ಎಲ್ಲರ ಹಿತ ಸಾಧಿಸುವುದೇ ಕುಟುಂಬದ ಉದ್ದೇಶ. ಗ್ರಾಮ ಪಂಚಾಯತಿಯ ಧ್ಯೇಯಧೋರಣೆಗಳು ಕೂಡ ಅಂಥವೇ. ಗ್ರಾಮವಾಸಿಗಳ ಅಗತ್ಯಗಳು ಕೆಲವೇ ಇದ್ದಾಗ, ನಾಗರಿಕತೆಯ ಗಾಳಿ ಸೋಕಿ ಮೋಸ, ಮೈಗಳ್ಳತನ, ಆಸೆ, ಆಮಿಷಗಳು ಇನ್ನೂ ಹೆಚ್ಚಾಗದಿದ್ದಾಗ ಗ್ರಾಮಪಂಚಾಯತಿ ಗ್ರಾಮವಾಸಿಗಳ ಆಹಾರ, ವಿಹಾರ, ಆರೋಗ್ಯ, ಶಿಕ್ಷಣ, ರಕ್ಷಣೆ, ಶಾಂತಿಗಳ ವ್ಯವಸ್ಥೆಯನ್ನು ಯಶಸ್ವಿಯಾಗಿಯೇ ಮಾಡಿತು. ಈಶಾನ್ಯ ಭಾರತದಲ್ಲಿ, ಮಧ್ಯಪ್ರದೇಶದ ಆದಿವಾಸಿ ಸಮುದಾಯಗಳಲ್ಲಿ ಈಗಲೂ ಪರಿಪೂರ್ಣತೆಯಿಂದ ಕೆಲಸ ನಿರ್ವಹಿಸುವ ಪಂಚಾಯತಿಗಳಿವೆ. ಆ ಸಮಾಜದಲ್ಲಿ ಖಾಸಗಿ ಆಸ್ತಿ ಇಲ್ಲವೆಂಬಷ್ಟು ಕಡಿಮೆ. ಆದರೂ ಸಮಾಜದ ಯಾವ ವ್ಯಕ್ತಿಯೂ ಕುಟುಂಬವೂ ಅನ್ನ, ಶಿಕ್ಷಣ, ಆರೋಗ್ಯಗಳ ಕೊರತೆಯಿಂದ ಬಳಲದಂತೆ ಪಂಚಾಯತಿ ನೋಡಿಕೊಳ್ಳುತ್ತದೆ. ಪಂಚಾಯತಿಯಲ್ಲಿ ಏಕಾಭಿಪ್ರಾಯವಿಲ್ಲದಾಗ ಊರಿನ ಹಿರಿಯ ಮಹಿಳೆ ಮಧ್ಯಸ್ಥಿಕೆ ವಹಿಸುತ್ತಾಳೆ. ಆಕೆಯ ವಾಕ್ಯ ದೇವರಿಗೂ ಮಾನ್ಯ. ಹಿಮಾಲಯದ ತಪ್ಪಲಿನ ಅನೇಕ ಪ್ರದೇಶಗಳಲ್ಲಿ ಈ ತೆರನ ಸ್ವಯಂಪೂರ್ಣ ವ್ಯವಸ್ಥೆ ನಿರ್ವಹಿಸುವ ಪಂಚಾಯತಿಗಳು ಇಂದಿಗೂ ಇವೆ.

ಆದರೆ ರಸ್ತೆ, ಸಾರಿಗೆ–ಸಂಪರ್ಕ, ಶಿಕ್ಷಣ, ರಾಜಕಾರಣ, ವಿದೇಶೀ ಆಡಳಿತ ಹೆಚ್ಚಿದಂತೆ ಭಾರತದ ಗ್ರಾಮದ ಸರಳಜೀವನ ಕಲುಷಿತವಾಗತೊಡಗಿತು. ವಿಭಿನ್ನ ಸ್ವಭಾವ, ಹಿನ್ನೆಲೆ, ಶಿಕ್ಷಣ, ಆಶೋತ್ತರಗಳುಳ್ಳ ಜನರ ವಿನಿಮಯಗಳಿಂದ ಲಾಭವಾದುದರ ಜೊತೆಗೆ ಜನಜೀವನದಲ್ಲಿ ಒಡಕು, ತೊಡಕು, ನಾಗರಿಕತೆಯ ಮೋಹ, ಸಮಯಸಾಧಕತೆ ಬೆಳೆದವು. ಬ್ರಿಟಿಷ್ ಅಧಿಕಾರಿಗಳಲ್ಲಿ ಕೆಲವರು ಸದುದ್ದೇಶದಿಂದಲೇ ಗ್ರಾಮಪಂಚಾಯತಿ ಮತ್ತು ಇತರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಬೆಂಬಲಿಸಿದರಾದರೂ ಇನ್ನು ಕೆಲವರು ಅವುಗಳ ಮೂಲಸತ್ತ್ವವಾದ ಲೋಕಸತ್ತಾಸೂತ್ರವನ್ನು ನಿರ್ಜೀವಗೊಳಿಸಿ, ತಹಸಿಲ್ದಾರನೋ ಕಲೆಕ್ಟರನೋ ಅಧ್ಯಕ್ಷನಾಗಿ ನಿಯಂತ್ರಿಸುವಂತೆ ಮಾಡಿ ಬ್ರಿಟಿಷ್ ದರ್ಬಾರಿನ ಬಡ ಬಂಧುಗಳ ದರ್ಜೆಗೆ ಪಂಚಾಯತಿಗಳನ್ನು ಇಳಿಸಿದರು. ಆಗಿನ ಸ್ಥಾನಿಕ ಸರ್ಕಾರದ ಕಾನೂನುಗಳು ಇದಕ್ಕೆ ನಿದರ್ಶನ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಈ ರೀತಿಯ ನಿಶ್ಶಕ್ತವಾದ, ಆದಾಯವೂ ಇಲ್ಲದ ನಾಮಕಾರ್ಥ ಪಂಚಾಯತಿ ಸಂಸ್ಥೆಗಳಿದ್ದವು. ಬ್ರಿಟಿಷ್ ಅಧಿಕಾರಿಗಳ ಬದಲಾಗಿ ಭಾರತೀಯ ಅಧಿಕಾರಿಗಳು ಆಗ ಇವುಗಳ ಅಧಿಕಾರ ವಹಿಸಿದರು. ಆಗಲೂ ಪಂಚಾಯತಿಯ ಸದಸ್ಯರು ಅಧಿಕಾರಾರೂಢರ ಹೆಗ್ಗಳಿಕೆಯಲ್ಲಿ ಹೆಮ್ಮೆ ಪಟ್ಟುಕೊಳ್ಳುವಲ್ಲಿಯೇ ತೃಪ್ತಿಪಡೆದರು. ಸರ್ಕಾರ ನೀಡಿದ ಹಣವೇ ಇವರ ವರಮಾನವಾಯಿತು. ಕೆಲವು ಕಡೆಗೆ ಪ್ರಚಲಿತವಿದ್ದ ನ್ಯಾಯ ಪಂಚಾಯತಿಗೆ ಶಾಂತಿ ಸುವ್ಯವಸ್ಥೆಯ ಅಧಿಕಾರವಿದ್ದ ಕಾರಣ ಅವುಗಳಲ್ಲಿ ಸ್ವಲ್ಪ ಬಲವಿತ್ತು. ವಿಕಾಸ ಪಂಚಾಯತಿಗಳು ಹಣವಿಲ್ಲದೆ ಬಾಡಿದವು. ಆ ಸಮಯದ ಪಂಚಾಯತಿಗಳಲ್ಲಿದ್ದ ಒಂದೇ ಒಂದು ವಿಶೇಷವೆಂದರೆ, ಚುನಾವಣೆಗಳಲ್ಲಿ ಜಾತಿ ಮತ್ತು ಹಣ ಗಣನೆಗೆ ಬರುತ್ತಿದ್ದುವೇ ವಿನಾ ರಾಜಕೀಯ ಪಕ್ಷಗಳು ಅವುಗಳಲ್ಲಿ ಕೈ ಹಾಕಿರಲಿಲ್ಲ.

ಆಡಳಿತ ಸುಧಾರಣೆಯ ಮಾತು ಬಂದಾಗಲೆಲ್ಲ ಭಾರತದ ಮುಖಂಡರು ಗಾಂಧೀಜಿ ಹೇಳುತ್ತಿದ್ದ ಗ್ರಾಮರಾಜ್ಯ ರಾಮರಾಜ್ಯಗಳ ಬಗ್ಗೆ ಯೋಚಿಸುತ್ತಿದ್ದರು. ಭಾರತದಂಥ ಗ್ರಾಮಪ್ರಧಾನ ದೇಶಗಳಲ್ಲಿ ಅಧಿಕಾರ, ಯೋಜನೆ, ಅಭಿವೃದ್ಧಿಗಳು ಗ್ರಾಮದಿಂದ ರಾಜಧಾನಿಯತ್ತ ಹರಿಯುವುದು ಅಗತ್ಯವೆಂಬುದನ್ನು ಮನಗಂಡರು. ಈ ಬಗ್ಗೆ ಪರ್ಯಾಲೋಚಿಸಲು ಅನೇಕ ಸಮ್ಮೇಳನ ಸಮಿತಿಗಳು ರಚಿತವಾದವು. ಅವುಗಳಲ್ಲಿ ಪ್ರಸಿದ್ಧವಾದ ಬಲವಂತರಾಯ್ ಮೆಹತಾ ಕಮಿಟಿಯ ವರದಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಸಿದ್ಧಾಂತವನ್ನು ಪ್ರತಿಪಾದಿಸಿ ಪ್ರಖ್ಯಾತವಾಗಿದೆ. ಗ್ರಾಮ ಪಂಚಾಯತಿಯೇ ರಾಷ್ಟ್ರದ ಸಂವಿಧಾನಾತ್ಮಕವಾದ ಪ್ರಾಥಮಿಕ ಘಟಕವೆಂದೂ ಅದಕ್ಕೆ ತಕ್ಕ ಸ್ವಾಯತ್ತತೆಯನ್ನು ಕೊಟ್ಟು ಭದ್ರಪಡಿಸಬೇಕೆಂದೂ ಆ ಸಮಿತಿ ಸೂಚಿಸಿದೆ. ಪಂಚಾಯತಿಯ ಸಮರ್ಥ ಕಾರ್ಯನಿರ್ವಹಣೆಗಾಗಿ ಅನೇಕ ಉಪಸಮಿತಿಗಳನ್ನೂ ಆರ್ಥಿಕವಾಗಿ ನೆರವಾಗಲು ಸಹಕಾರಿ ಸಂಘಗಳನ್ನೂ ನಿರ್ಮಿಸಲು ಅವಕಾಶ ಮಾಡಲಾಯಿತು. ಸ್ಥಾನಿಕ ಕರಗಳನ್ನು ಹೇರಿ ಆದಾಯ ಹೆಚ್ಚಿಸಲು ಅಧಿಕಾರ ಕೊಡಬೇಕೆಂಬ ಸೂಚನೆಯನ್ನು ಒಪ್ಪಲಾಯಿತು. ಒಂದು ಪ್ರಜಾಸತ್ತಾತ್ಮಕ ಸಂಸ್ಥೆಯ ಕಾರ್ಯನಿರೀಕ್ಷೆಯನ್ನು ಇನ್ನೊಂದು ಅಂಥದೇ ಸಂಸ್ಥೆ ಮಾಡಬಲ್ಲದೆಂಬುದನ್ನು ಒಪ್ಪಿ ಗ್ರಾಮ ಪಂಚಾಯತಿಯ ಪ್ರತಿನಿಧಿಗಳನ್ನೂ ಒಳಗೊಂಡಂಥ ಬ್ಲಾಕ್ ಸಮಿತಿ ಅಥವಾ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಸ್ಥಾಪನೆಯ ತತ್ತ್ವವನ್ನು ಒಪ್ಪಿಕೊಳ್ಳಲಾಗಿದೆ. ಸಾರ್ವಭೌಮ ಸತ್ತೆ ಜನತೆಯದು. ಆಡಳಿತ ಜನಸಂಪರ್ಕವನ್ನು ಪಡೆದಿರಬೇಕೆಂಬ ಸಿದ್ಧಾಂತವೇ ಈ ಬಗೆಯ ಮೂರು ಮೆಟ್ಟಿಲುಗಳ ಆಡಳಿತದ ತತ್ತ್ವದ ಹಿನ್ನೆಲೆ.

ಈ ಸೂತ್ರಗಳನ್ನು ಆಧರಿಸಿದ ಗ್ರಾಮ ಪಂಚಾಯತಿಯ ಕಾನೂನುಗಳನ್ನು ಭಾರತಾದ್ಯಂತ ಎಲ್ಲ ರಾಜ್ಯಗಳಲ್ಲೂ ಜಾರಿಗೆ ತರಲಾಯಿತು. ಸಾಮಾನ್ಯವಾಗಿ 5,000 ಜನಸಂಖ್ಯೆಯುಳ್ಳ ಗ್ರಾಮ ಅಥವಾ ಗ್ರಾಮಗಳಿಗೆ ಒಂದು ಗ್ರಾಮ ಪಂಚಾಯತಿಯ ನಿರ್ಮಾಣವಾಗುತ್ತದೆ. ಇದಕ್ಕೂ ಹೆಚ್ಚಿನ ಜನಸಂಖ್ಯೆಯಿರುವ ಊರುಗಳಿಗೆ ನಗರ

ಪಂಚಾಯತಿಯನ್ನು ರಚಿಸುತ್ತಾರೆ. ಅವುಗಳ ಅಧಿಕಾರಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಗ್ರಾಮ ಪಂಚಾಯತಿಗಳಿಗೆ ವಯಸ್ಕ ಮತದಾನ ಪದ್ಧತಿಯ ಮೇಲೆ ಐದು ವರ್ಷಗಳಿಗೊಮ್ಮೆ ಚುನಾವಣೆಗಳಾಗುತ್ತವೆ. ಸ್ತ್ರೀಯರಿಗೂ ಅನುಸೂಚಿತ ವರ್ಗದವರಿಗೂ ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಕರ್ನಾಟಕದಲ್ಲಿ 7,452 ಗ್ರಾಮ ಪಂಚಾಯತಿಗಳಿವೆ (1967). ಇವಕ್ಕೆ ಒಬ್ಬೊಬ್ಬ ಕಾರ್ಯದರ್ಶಿಯನ್ನು ಸರ್ಕಾರ ನೇಮಿಸುತ್ತದೆ. ಚುನಾಯಿತ ಪ್ರತಿನಿಧಿಗಳು ಅಧ್ಯಕ್ಷನನ್ನು ಆರಿಸುತ್ತಾರೆ. ಆತನಿಗೆ ಸರಪಂಚನೆಂದು ಹೆಸರು. ಉಪಾಧ್ಯಕ್ಷನೂ ಚುನಾಯಿತನೇ. ವರ್ಷಕ್ಕೊಮ್ಮೆ ಇವುಗಳ ಮುಂಗಡಪತ್ರವನ್ನು ಸಿದ್ಧಪಡಿಸಲಾಗುತ್ತದೆ. ಮುಂಗಡಪತ್ರವನ್ನು ಒಪ್ಪುವ ಅಧಿಕಾರ ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಇದೆ. ಆ ಮಂಡಳಿಯ ನಿರ್ವಾಹಕ ಅಧಿಕಾರಿ ಮತ್ತು ಅಸಿಸ್ಟೆಂಟ್ ಕಮಿಷನರ್ ಪಂಚಾಯತಿಗಳ ಹಣಕಾಸು ಮತ್ತು ಕಾರ್ಯಗಳ ನಿರೀಕ್ಷಣೆ, ನಿಯಂತ್ರಣ ಮಾಡುತ್ತಾರೆ.

ಪಂಚಾಯತಿಗೆ ಕೆಲವು ಸ್ಥಾನಿಕ ತೆರಿಗೆಗಳನ್ನು – ಮನೆ, ಸ್ಥಳ, ಉದ್ಯೋಗ, ಮನರಂಜನೆ, ಜಾನುವಾರು, ಜಾತ್ರೆ, ವಾಹನ, ಸಂತೆ, ಅಂಗಡಿ ಮುಂತಾದವುಗಳ ಮೇಲೆ – ವಿಧಿಸಿ, ವಸೂಲಿ ಮಾಡುವ ಅಧಿಕಾರವಿದೆ. ಮನೆಗಳನ್ನು ಕಟ್ಟಲು ಅಪ್ಪಣೆ ಕೊಡುವ, ನಿರಾಕರಿಸುವ, ಸ್ವತ್ತು ವರ್ಗಾವಣೆಯನ್ನು ಕ್ರಮಗೊಳಿಸುವ ಅಧಿಕಾರವಿದೆ. ರಸ್ತೆ, ದೀಪ, ನೈರ್ಮಲ್ಯ, ನೀರಿನ ವ್ಯವಸ್ಥೆ ಮುಂತಾದವುಗಳ ಸ್ಥಾಪನೆ, ನಿರ್ವಹಣೆಗಳು ಕಡ್ಡಾಯವಾದ ಕರ್ತವ್ಯಗಳು. ಆದಾಯ ಹೆಚ್ಚಿಸುವಂಥ ಕೆರೆ ಬಾವಿಗಳ ನಿರ್ಮಾಣ, ಅರಣ್ಯ ಬೆಳೆವಣಿಗೆ ಮೊದಲಾದ ಕಾರ್ಯಕ್ರಮಗಳನ್ನೂ ಶಿಕ್ಷಣ, ವಸತಿ, ವಾಚನಾಲಯ, ಕ್ರೀಡಾಂಗಣ, ತೋಟಗಳು ಮುಂತಾದ ಸೌಕರ್ಯಗಳನ್ನೂ ಒದಗಿಸುವಂಥ ಯೋಜನೆಗಳನ್ನೂ ಪಂಚಾಯತಿಗಳು ಕೈಗೊಳ್ಳಬಹುದು. ಆ ಗ್ರಾಮದ ಭೂಕಂದಾಯದ ಶೇ. 35 ರಷ್ಟು ಹಣವನ್ನಲ್ಲದೆ ಇತರ ಅಭಿವೃದ್ಧಿ ಅನುದಾನಗಳನ್ನೂ ಸಾಲಗಳನ್ನೂ ಸರ್ಕಾರ ಒದಗಿಸುತ್ತದೆ.

ಇಷ್ಟೆಲ್ಲ ಇದ್ದರೂ ಅನೇಕ ಪಂಚಾಯತಿಗಳು ಸರಿಯಾಗಿ ಕೆಲಸಮಾಡುತ್ತಿಲ್ಲ. ಅಧಿಕಾರದ ದುರುಪಯೋಗದಿಂದ ಜಾತಿ, ಹಣ, ಪಕ್ಷಗಳ ರಾಜಕೀಯ ತೊಡಕುಗಳಿಂದ ಕೆಲವು ಸಂಸ್ಥೆಗಳು ಬಳಲುತ್ತವೆ. ಉತ್ಸಾಹಿ ಕಾರ್ಯಕರ್ತರಿದ್ದರೂ ಹಣದ ಕೊರತೆ, ಕಾನೂನಿನ ಅಡಚಣೆ, ಅಸಮರ್ಪಕ ಅಧಿಕಾರ ವಿಕೇಂದ್ರೀಕರಣ ಇವುಗಳಿಂದಾಗಿ ಇನ್ನು ಕೆಲವು ಸಂಸ್ಥೆಗಳ ಕಾರ್ಯ ತೃಪ್ತಿಕರವಾಗಿಲ್ಲ. ತೆರಿಗೆ ವಿಧಿಸುವುದು ಮತ್ತು ವಸೂಲಿ ಜನಪ್ರಿಯವಲ್ಲದ ಕಾರ್ಯವೆಂದು ಬಗೆದು ಆ ದಿಶೆಯಲ್ಲಿ ಅನೇಕ ಪಂಚಾಯತಿಗಳು ನಿಷ್ಕ್ರಿಯವಾಗಿ ತಮ್ಮ ದುರ್ಗತಿಯನ್ನು ತಾವೇ ತಂದುಕೊಂಡಿವೆ. ಇರುವ ಪರಿಮಿತಿಯಲ್ಲೇ, ಒಳ್ಳೆಯ ಸಂಘಟನೆಯಿಂದ, ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಿ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯತ್ತ ಸಾಗಿದ ಗ್ರಾಮ ಪಂಚಾಯತಿಗಳೂ ಕೆಲವಾದರೂ ಉಂಟು. ಇವು ಪಂಚಾಯತಿ ರಾಜ್ಯ ಸಿದ್ಧಾಂತದಲ್ಲಿ ನಂಬಿಕೆಯನ್ನು ಹುಟ್ಟಿಸಿ ಬೆಳೆಸಬಲ್ಲವು. (ಜಿ.ಆರ್.ಪಿ.)

**ಗ್ರಾಮ ಪುನರ್ರಚನೆ :** ಹಳ್ಳಿಗಳಲ್ಲಿರುವ ಎಲ್ಲ ಉತ್ತಮಾಂಶಗಳನ್ನೂ ಉಪಯೋಗಿಸಿಕೊಂಡು ಅಲ್ಲಿಯ ಜನ ಸಮೃದ್ಧ ಜೀವನ ನಡೆಸಲು ಅನುಕೂಲವಾಗುವಂತೆ ಮಾಡುವ ಕಾರ್ಯ. ಹಳ್ಳಿಗರ ಆರ್ಥಿಕ, ಬೌದ್ಧಿಕ, ನೈತಿಕ – ಈ ಮೂರು ಬಗೆಯ ಅಭಿವೃದ್ಧಿ ಸಾಧಿಸುವುದು ಇದರ ಉದ್ದೇಶ.

ವೈದ್ಯಕೀಯ ಸಹಾಯ ಒದಗಿಸುವುದು, ಗ್ರಾಮ ನೈರ್ಮಲ್ಯ ಸಾಧಿಸುವುದು, ಶುದ್ಧವಾದ ಕುಡಿಯುವ ನೀರನ್ನು ಒದಗಿಸುವುದು ಇವು ಗ್ರಾಮಸ್ಥರ ಆರೋಗ್ಯಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮ. ಜೀವನಮಟ್ಟವನ್ನು ಹೆಚ್ಚಿಸಬೇಕಾದರೆ ಮುಖ್ಯವಾಗಿ ವ್ಯವಸಾಯದ ಅಭಿವೃದ್ಧಿ, ವ್ಯವಸಾಯಕ್ಕೆ ಪೂರಕವಾದ ಗೃಹ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಇವು ತ್ವರಿತವಾಗಿ ಸಾಧಿಸುವಂತೆ ಮಾಡುವುದು ಆವಶ್ಯಕ. ಹೆಚ್ಚು ಇಳುವರಿ ಕೊಡುವ ಬೀಜಗಳ, ಗೊಬ್ಬರದ ಸರಬರಾಜು, ವ್ಯವಸಾಯ ಸಾಲ, ನೀರಾವರಿ ಸೌಲಭ್ಯಗಳು ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದು, ಗೃಹ ಮತ್ತು ಸಣ್ಣ ಕೈಗಾರಿಕೆಗಳಿಗೆ ಬೇಕಾದ ಸಾಲವನ್ನೂ ಕಚ್ಚಾ ಸಾಮಗ್ರಿಗಳನ್ನೂ ಉಪಕರಣಗಳನ್ನೂ ಮಾರುಕಟ್ಟೆ ಸಹಾಯವನ್ನೂ ಒದಗಿಸುವುದು – ಇವೂ ಇದರಲ್ಲಿ ಸೇರುತ್ತವೆ. ಇವೆಲ್ಲ ಆರ್ಥಿಕಾಭಿವೃದ್ಧಿಯ ಕಾರ್ಯಕ್ರಮಗಳು.

ಹಳ್ಳಿಯ ಎಲ್ಲ ಬಾಲಕ ಬಾಲಕಿಯರಿಗೂ ವಯಸ್ಕರಿಗೂ ವಿದ್ಯಾಭ್ಯಾಸಸೌಕರ್ಯಗಳನ್ನು ಒದಗಿಸುವುದು, ರೇಡಿಯೋ, ಚಲನಚಿತ್ರ, ಭಾಷಣ ಮತ್ತು ಪ್ರದರ್ಶನಗಳ ಮೂಲಕ ಸಮಾಚಾರ ಮತ್ತು ಸಲಹೆಗಳನ್ನು ಒದಗಿಸುವುದು – ಇವೆಲ್ಲ ಬೌದ್ಧಿಕ ವಿಕಾಸ ಕಾರ್ಯಕ್ರಮಗಳು.

ಹಳ್ಳಿಗರು ಹತಾಶ ಮನೋಭಾವ, ಮೂಢನಂಬಿಕೆಗಳು, ಶತಮಾನಗಳ ಶೋಷಣೆಯಿಂದ ಉಂಟಾಗಿರುವ ನಿರುತ್ಸಾಹ ಮತ್ತು ಭೀತಿ ಇವೆಲ್ಲವನ್ನೂ ಹೋಗಲಾಡಿಸಿಕೊಂಡು ಸರ್ಕಾರದಿಂದ ಪಡೆಯಬಹುದಾದ ಎಲ್ಲ ಸೌಕರ್ಯಗಳನ್ನೂ ಉಪಯೋಗಿಸಿಕೊಂಡು ಸಂಘಟಿತರಾಗಿ ಸ್ವಾವಲಂಬಿಗಳಾಗಿ ತಮ್ಮ ಆರ್ಥಿಕ ಮತ್ತು ಬೌದ್ಧಿಕ ಸಂಪತ್ತನ್ನು ಬೆಳೆಸಿಕೊಳ್ಳಬೇಕೆಂಬ ಉತ್ಸಾಹವನ್ನು ಅವರಲ್ಲಿ ಉಂಟುಮಾಡುವುದು ನೈತಿಕ ಕಾರ್ಯಕ್ರಮದ ಗುರಿ.

ಸ್ವಾತಂತ್ರ್ಯಗಳಿಸುವ ಮುನ್ನ ಗ್ರಾಮ ಪುನರ್ರಚನೆಯ ಅನೇಕ ಪ್ರಯೋಗಗಳು ನಡೆದಿವೆ. ರವೀಂದ್ರನಾಥ ಠಾಕೂರರು ಶ್ರೀನಿಕೇತನದಲ್ಲಿ ಮಾಡಿದ ಪ್ರಯೋಗ, ದಕ್ಷಿಣ ತಿರುವಾಂಕೂರಿನಲ್ಲಿ 1921ರಲ್ಲಿ ಮಾಡಲಾದ ಮಾರ್ತಾಂಡಂ ಯೋಜನೆ, ಗುರಗಾಂವ್ ಪ್ರಯೋಗ (1920), 1932ರಲ್ಲಿ ಬರೋಡದಲ್ಲಿ ಕೈಗೊಂಡ ಗ್ರಾಮ ಪುನರ್ರಚನಾ ಕಾರ್ಯ, 1942ರಲ್ಲಿ ಆರಂಭಿಸಿದ ಸರ್ವೋದಯ ಕಾರ್ಯಕ್ರಮ, ಮದರಾಸಿನ ಫಿರ್ಕಾ ಯೋಜನೆ (1919) ಇವು ಮುಖ್ಯವಾದವು.

1942ರಲ್ಲಿ ಗಾಂಧಿಯವರು ಸರ್ವೋದಯ ಕಾರ್ಯಕ್ರಮದ ಬಗ್ಗೆ ಹರಿಜನ ಪತ್ರಿಕೆಯಲ್ಲಿ ಬರೆಯುತ್ತ, ತಮ್ಮ ಕಲ್ಪನೆಯ ಹಳ್ಳಿಗಳ ಸ್ವರಾಜ್ಯದಲ್ಲಿ ಹಳ್ಳಿಗಳು ತಮಗೆ ಆವಶ್ಯಕವಾದ ವಸ್ತುಗಳನ್ನು ತಾವೇ ಉತ್ಪಾದಿಸಿ ಸ್ವಯಂಪೂರ್ಣತೆ ಹೊಂದಿ, ಹೊರಗಿನಿಂದ ತರಿಸಲೇಬೇಕಾದ ಪದಾರ್ಥಗಳಿಗೆ ಮಾತ್ರ ಹೊರಗಿನವರನ್ನು ಅವಲಂಬಿಸಬೇಕು ಎಂದು ಹೇಳಿದ್ದರು. ಇದರಂತೆ ಪ್ರತಿ ಗ್ರಾಮವೂ ತನಗೆ ಬೇಕಾದ ಆಹಾರಧಾನ್ಯಗಳನ್ನೂ ಬಟ್ಟೆಗೆ ಬೇಕಾದ ಹತ್ತಿಯನ್ನೂ ಬೆಳೆಯಬೇಕು. ದನಕರುಗಳಿಗೆ ಬೇಕಾದ ಮೇವೂ ಸಾಕಷ್ಟು ದಾಸ್ತಾನೂ ಇರಬೇಕು. ವಯಸ್ಕರಿಗೆ ಮತ್ತು ಮಕ್ಕಳಿಗೆ ಮನರಂಜನೆಯ ಆಟದ ಮೈದಾನದ ಸೌಲಭ್ಯವಿರಬೇಕು. ಪ್ರತಿ ಗ್ರಾಮದಲ್ಲೂ ನಾಟಕ ಮಂದಿರ, ಪಾಠಶಾಲೆ, ಸಾರ್ವಜನಿಕರು ಸೇರಲು ಒಂದು ಕಟ್ಟಡ – ಇವು ಇರಬೇಕು. ಕೆರೆ ಅಥವಾ ಬಾವಿಗಳಿಂದ ಶುದ್ಧವಾದ ನೀರು ಸರಬರಾಜು ಆಗಬೇಕು. ಎಲ್ಲ ಕಾರ್ಯಕ್ರಮಗಳೂ ಸಾಧ್ಯವಾದ ಮಟ್ಟಿಗೆ ಸಹಕಾರ ತತ್ತ್ವದ ಮೇಲೆ ನಡೆಯಬೇಕು. ಇದರಿಂದ ಗ್ರಾಮಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಅಡಿಪಾಯದ ಮೇಲೆ ಕಟ್ಟಲಾದ ಪರಿಪೂರ್ಣ ಪ್ರಜಾಪ್ರಭುತ್ವ ಏರ್ಪಡುತ್ತದೆ. ಇದು ಗಾಂಧೀಜಿಯವರ ಸರ್ವೋದಯ ಕಲ್ಪನೆಗೆ ಅನುಗುಣವಾದ ಗ್ರಾಮವ್ಯವಸ್ಥೆ. ಗ್ರಾಮಗಳ ಪುನರ್ರಚನೆಯನ್ನು ಗ್ರಾಮಗಳ ಜನರೇ ತಮ್ಮ ಸ್ವಂತ ಶಕ್ತಿಯಿಂದಲೇ ಸಾಧಿಸಬೇಕು. ಎಲ್ಲರಿಗೂ ಆವಶ್ಯಕವಾದ ಆಹಾರ, ಬಟ್ಟೆ, ವೈದ್ಯ ಸಹಾಯ, ಉಚಿತ ವಿದ್ಯಾಭ್ಯಾಸ, ಗೃಹ ಕೈಗಾರಿಕೆಗಳ ಮೂಲಕ ಸ್ವಂತ ಉದ್ಯೋಗ ಕಲ್ಪನೆ, ಪಂಚಾಯತಿಗಳ ರೂಪದಲ್ಲಿ ಗ್ರಾಮಸ್ವರಾಜ್ಯ – ಇವು ಸಾಧಿಸಬೇಕು. ಹಳ್ಳಿಗರ ಜೀವನ ಪೂರ್ಣವೂ ಶ್ರೀಮಂತವೂ ಆಗಿ ಅವರು ಪಟ್ಟಣಕ್ಕೆ ವಲಸೆ ಹೋಗುವುದು ತಪ್ಪಬೇಕು. ಇದು ಗಾಂಧಿಯವರ ಅಭಿಪ್ರಾಯ.

ಸ್ವಾತಂತ್ರ್ಯಪೂರ್ವದ ಈ ಪ್ರಯೋಗಗಳು ಸಾಮಾನ್ಯವಾಗಿ ಕೆಲವು ವ್ಯಕ್ತಿಗಳ ಸಾಹಸ ಮತ್ತು ಮಾನವೀಯತೆಯ ಪ್ರತೀಕಗಳಾಗಿದ್ದವು. ಇವಕ್ಕೆ ಸರ್ಕಾರದ ಉತ್ತೇಜನವಾಗಲಿ, ಹಣ ಸಹಾಯವಾಗಲಿ ಸಾಕಷ್ಟು ದೊರೆಯುತ್ತಿರಲಿಲ್ಲ. ಇವು ವ್ಯಾಪಕವಾಗಿರಲಿಲ್ಲ. ಈ ಕೆಲಸಕ್ಕೆ ಅಗತ್ಯವಾದ ಕಾರ್ಯಕರ್ತರೂ ಸಾಕಷ್ಟು ಸಂಖ್ಯೆಯಲ್ಲಿ ಇರಲಿಲ್ಲ. ಅನೇಕರಿಗೆ ತರಬೇತು ಇರಲಿಲ್ಲ. ಅವರಿಗೆ ಸ್ಥಳೀಯ ಸಮಸ್ಯೆಗಳ ಮತ್ತು ಸ್ಥಿತಿಗತಿಗಳ ಅರಿವು ಇಲ್ಲದಿದ್ದುದರಿಂದ ಅವರು ಅನೇಕ ವೇಳೆ ಹಳ್ಳಿಗರ ವಿಶ್ವಾಸವನ್ನು ಪಡೆಯಲಾಗಲಿಲ್ಲ. ಸರ್ಕಾರದ ಇಲಾಖೆಗಳು ಒಂದು ಸಮಗ್ರ ಯೋಜನೆ ಹೊಂದಿರಲಿಲ್ಲ. ಸರ್ಕಾರದ ನೆರವನ್ನು ಅವಲಂಬಿಸಿದ್ದ ಅನೇಕ ಕಾರ್ಯಕ್ರಮಗಳಿಗೆ ಸರ್ಕಾರದ ಹಣ ಸಹಾಯ ಸಾಕಷ್ಟು ಇರಲಿಲ್ಲ. ಒಟ್ಟಿನಲ್ಲಿ ಹಳ್ಳಿಗರ ಉತ್ಸಾಹವನ್ನು ಹೆಚ್ಚಿಸಿ ಹಳ್ಳಿಗರೇ ಮುಂದಾಗಿ ಬಂದು ಗ್ರಾಮ ಪುನರ್ರಚನೆಯ ಕಾರ್ಯ ಕೈಗೊಳ್ಳುವ ಉತ್ಸಾಹ ತಳೆಯುವಂತೆ ಮಾಡುವ ಒಂದು ನಿರ್ದಿಷ್ಟವಾದ ಆಕರ್ಷಕವಾದ ಗುರಿ ಇರಲಿಲ್ಲ.

ಸ್ವಾತಂತ್ರ್ಯದ ಅನಂತರ ಜಾರಿಗೆ ತರಲಾದ ಎಟಾವ ಗ್ರಾಮ ಪುನರ್ರಚನಾ ಯೋಜನೆ ಉಲ್ಲೇಖಾರ್ಹವಾದದ್ದು. ಇದು ಉತ್ತರ ಪ್ರದೇಶದಲ್ಲಿ 64 ಗ್ರಾಮಗಳಿಗೆ ಅನ್ವಯಿಸುವಂತೆ ಆರಂಭವಾಗಿ 3 ವರ್ಷಗಳಲ್ಲಿ 300 ಗ್ರಾಮಗಳಿಗೆ ಹಬ್ಬಿತು. ಮುಂದೆ ಭಾರತದ ಗ್ರಾಮಗಳ ಪುನರ್ರಚನೆಯ ವ್ಯಾಪಕ ಯೋಜನೆಯಾಗಿ ಜಾರಿಗೆ ಬಂದ ಸಾಮುದಾಯಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆಗೆ ಇದು ಮಾದರಿಯಾಯಿತು. ಜನರ ಮತ್ತು ಸರ್ಕಾರದ ಸಹಕಾರದಿಂದ ಒಂದು ಸಂಯೋಜಿತ ಗ್ರಾಮ ಪುನರ್ರಚನೆಯನ್ನು ಸಾಧಿಸುವುದು ಈ ಯೋಜನೆಯ ಮುಖ್ಯ ಗುರಿ. ಈ ಯೋಜನೆಯ ಮುಖ್ಯ ಅಂಶಗಳು: 1. ಸುಧಾರಿತ ಬೀಜಗಳ, ರಾಸಾಯನಿಕ ಮತ್ತು ಹಸುರು ಗೊಬ್ಬರದ ಬಳಕೆ, ಸಸ್ಯ ಸಂರಕ್ಷಣೆ, ನೀರಾವರಿ ಸೌಲಭ್ಯ, ಸುಧಾರಿತ ವ್ಯವಸಾಯ ಕ್ರಮವನ್ನು ಅನುಸರಿಸುವ ಮೂಲಕ ವ್ಯವಸಾಯ ಉತ್ಪನ್ನದ ಹೆಚ್ಚಳದ ಸಾಧನೆ, 2. ಪಶುಸಂಗೋಪನೆ, 3. ಸಹಕಾರದ ಮೂಲಕ ಉತ್ಪಾದನ ಸಾಲ ಮತ್ತು ಸೇವಾ ಸೌಲಭ್ಯ, ಮಾರುಕಟ್ಟೆಯ ಸೌಲಭ್ಯ ಮತ್ತು ವ್ಯವಸಾಯಗಾರರಿಗೆ ಬೇಕಾದ ಅವಶ್ಯ ಸಾಮಗ್ರಿಗಳ ಸರಬರಾಜು, 4. ವೈದ್ಯ ವಸತಿ ಸೌಕರ್ಯ, ಗ್ರಾಮ ನಿರ್ಮಲೀಕರಣ, ಅಂಟುರೋಗಗಳ ನಿಯಂತ್ರಣ ಮತ್ತು ನಿವಾರಣೆ, ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರಿನ ಪೂರೈಕೆ, ವಯಸ್ಕರ ಶಿಕ್ಷಣ, ಶೈಕ್ಷಣಿಕ ಪ್ರವಾಸ, ವಾಚನಾಲಯಗಳ ಸ್ಥಾಪನೆ, ಪ್ರಾತ್ಯಕ್ಷಿಕೆಗಳ ಮೂಲಕ ಸಾಮಾಜಿಕ ಶಿಕ್ಷಣ.

ಹಳ್ಳಿಗಳ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ಸಾಧಿಸಲು ಸಾಮುದಾಯಿಕ ಅಭಿವೃದ್ಧಿ ಯೋಜನೆ ಒಂದು ಸಾಧನ. ಇದನ್ನು ಕಾರ್ಯಗತಗೊಳಿಸಲು ರಾಷ್ಟ್ರೀಯ

ವಿಸ್ತರಣೆ ಮತ್ತು ಸಮಾಜ ವಿಕಾಸ ಸೇವೆಗಳ ಸ್ಥಾಪನೆಯಾಯಿತು. ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಭಾರತದ ಹಳ್ಳಿಗಳ ಪ್ರಕೃತ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಂಡು ರೂಪಿತವಾಗಿವೆ.

ಹಳ್ಳಿಯ ಜನಗಳಿಗೆ ಆವಶ್ಯಕವಾದ ಆಹಾರ, ಬಟ್ಟೆ, ವಸತಿ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಮುಖ್ಯವಾಗಿ ಹಳ್ಳಿಗರ ಮನೋಭಾವದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಉಂಟುಮಾಡುವುದು ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಉದ್ದೇಶ.

ಪ್ರತಿ ಸಾಮುದಾಯಿಕ ಅಭಿವೃದ್ಧಿ ಕೇಂದ್ರದಲ್ಲೂ ವ್ಯವಸಾಯ, ಪಶುಸಂಗೋಪನೆ, ಸಹಕಾರ ಮತ್ತು ಗೃಹಕೈಗಾರಿಕೆಗಳಲ್ಲಿ ನಿಪುಣರಾದ ಕೆಲಸಗಾರರು ಇರುವರು. ಇವರು ವ್ಯವಸಾಯ ಮತ್ತು ಗೃಹಕೈಗಾರಿಕೆಯ ಅಭಿವೃದ್ಧಿಗೆ ಸಲಹೆ ಮತ್ತು ಸಹಾಯ ನೀಡುವರು. ವ್ಯವಸಾಯಾಭಿವೃದ್ಧಿಯ ಮುಖ್ಯ ಕಾರ್ಯಕ್ರಮಗಳು ಇವು : 1. ನೀರಾವರಿ ಸೌಲಭ್ಯಗಳ ಪೂರ್ಣ ಪ್ರಯೋಜನ ಪಡೆಯುವುದು, ನೀರಾವರಿ ವ್ಯವಸ್ಥೆಯ ದುರಸ್ತಿ ಮತ್ತು ನೀರಿನ ಉಪಯೋಗದ ಉಳಿತಾಯ, ಒಂದಕ್ಕಿಂತ ಹೆಚ್ಚು ಬೆಳೆ ಬೆಳೆಯುವ ಕಾರ್ಯಕ್ರಮವನ್ನು ಅಧಿಕ ಜಮೀನಿಗೆ ವಿಸ್ತರಿಸುವುದು, ಹೆಚ್ಚು ಇಳುವರಿ ಕೊಡುವ ಬೀಜದ ಉತ್ಪಾದನೆಯನ್ನು ಹೆಚ್ಚಿಸಿ ಎಲ್ಲ ಬೇಸಾಯಗಾರರಿಗೂ ಸರಬರಾಜು ಮಾಡುವುದು, ಗೊಬ್ಬರವನ್ನು ಒದಗಿಸುವುದು, ಮಣ್ಣಿನ ಸಂರಕ್ಷಣೆ, ಜಮೀನನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡುವುದು, ಹಣ್ಣು ತರಕಾರಿ ಬೆಳೆಯುವುದು, ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಹೊಸದಾಗಿ ಸಣ್ಣ ನೀರಾವರಿ ಕಾರ್ಯಗಳ ಯೋಜನೆಯನ್ನು ರೂಪಿಸುವುದು. 2. ಹೊಸದಾಗಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು ಮತ್ತು ಈಗಿರುವ ಸಹಕಾರ ಸಂಘಗಳನ್ನು ಬಲಪಡಿಸಿ ಗ್ರಾಮದ ಪ್ರತಿ ಕುಟುಂಬವನ್ನೂ ಸಹಕಾರದ ವ್ಯಾಪ್ತಿಗೆ ಒಳಪಡಿಸುವುದು. 3. ಅನುಭೋಗಿ ಸರಕಿನ ಸರಬರಾಜು ಮತ್ತು ಆವಶ್ಯಕ ಸೇವೆಯನ್ನು ಅಧಿಕಗೊಳಿಸುವುದು. ಗೃಹಕೈಗಾರಿಕೆ ಮತ್ತು ಸಣ್ಣ ಮತ್ತು ಮಧ್ಯಮ ಗಾತ್ರಗಳ ಕೈಗಾರಿಕೆಗಳ ಅಭಿವೃದ್ಧಿಯ ಮೂಲಕ ಉದ್ಯೋಗ ಹೆಚ್ಚಿಸುವುದು. 4. ರಸ್ತೆ ನಿರ್ಮಾಣ ಮತ್ತು ಯಂತ್ರಚಾಲಿತ ಸಾಗಣೆಯ ಸೌಕರ್ಯಕ್ಕೆ ಉತ್ತೇಜನ ಕೊಡುವುದು. 5. ಕಡ್ಡಾಯವಾಗಿ ಪ್ರಾಥಮಿಕ ವಿದ್ಯಾಭ್ಯಾಸ ಒದಗಿಸುವುದು, ಮಾಧ್ಯಮಿಕ ಮತ್ತು ಪ್ರೌಢ ವಿದ್ಯಾಭ್ಯಾಸ, ವಾಚನಾಲಯ ಸೌಕರ್ಯಗಳನ್ನು ಏರ್ಪಡಿಸುವುದು. 6. ನಿರ್ಮಲೀಕರಣ ಮತ್ತು ಸಾರ್ವಜನಿಕ ಆರೋಗ್ಯ ಕ್ರಮಗಳು, ವೈದ್ಯಕೀಯ ಸೌಲಭ್ಯ ನೀಡಿಕೆ. 7. ಹೊಸ ನಮೂನೆಯ ಹಳ್ಳಿ ಮನೆ ನಿರ್ಮಾಣಕ್ಕೆ ಉತ್ತೇಜನ, ಹಳ್ಳಿಯವರಿಗೆ ಸಾಮೂಹಿಕ ಮನರಂಜನೆ ಕಾರ್ಯಕ್ರಮವನ್ನು ಒದಗಿಸುವುದು. ಸಾಮುದಾಯಿಕ ಯೋಜನೆ 1952ರ ಅಕ್ಟೋಬರ್ 2 ರಂದು ಪ್ರಾಯೋಗಿಕವಾಗಿ ಆರಂಭವಾಯಿತು. ಈಗ ಈ ಯೋಜನೆ ದೇಶಕ್ಕೆಲ್ಲ ವ್ಯಾಪಿಸಿದೆ. ಜನರ ಸ್ವಪ್ರಯತ್ನ ಮತ್ತು ಸ್ವಪ್ರೇರಣೆಯಿಂದ ಹಳ್ಳಿಗಳ ಅಭಿವೃದ್ಧಿಯನ್ನು ಸಾಧಿಸುವುದು ಇದರ ಗುರಿ. ಪ್ರತಿ ಸಾಮುದಾಯಿಕ ಅಭಿವೃದ್ಧಿ ಕೇಂದ್ರಕ್ಕೂ ಸರ್ಕಾರ ನಿರ್ದಿಷ್ಟ ಧನಸಹಾಯ ಮಾಡುತ್ತದೆ. ಪ್ರತಿ ಕೇಂದ್ರಕ್ಕೂ ಒಬ್ಬ ಕೇಂದ್ರಾಧಿಕಾರಿ ಇರುತ್ತಾನೆ ಮತ್ತು ಅವನ ಕೈಕೆಳಗೆ ಸೇವಾತಂಡ ಇರುತ್ತದೆ. ಕೇಂದ್ರಾಧಿಕಾರಿ ತನ್ನ ಕೇಂದ್ರದಲ್ಲಿ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ರೂಪಿಸಬೇಕು. ಈಗ ಸಾಮುದಾಯಿಕ ಅಭಿವೃದ್ಧಿಯನ್ನು ಪಂಚಾಯತ್ ರಾಜ್ಯ ಸಂಸ್ಥೆಗಳ ಜೊತೆಗೆ ಸೇರಿಸಿ ಹಳ್ಳಿಗಳ ಪುನರ್ರಚನೆಯನ್ನು ಸಾಧಿಸುವ ಯತ್ನ ನಡೆದಿವೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಯ ನಿರ್ವಹಣೆಯ ವ್ಯವಸ್ಥೆಯಲ್ಲಿ ಮೂರು ಹಂತಗಳ ಪಂಚಾಯತ್ ರಾಜ್ಯ ಸಂಸ್ಥೆಗಳು – ಗ್ರಾಮಹಂತ, ತಾಲ್ಲೂಕು ಹಂತ ಮತ್ತು ಜಿಲ್ಲಾ ಹಂತ – ಇವೆ.

ಸಾಮುದಾಯಿಕ ಅಭಿವೃದ್ಧಿಯ ಮೂಲಕ ಗ್ರಾಮ ಪುನರ್ರಚನೆಯ ಕಾರ್ಯದಲ್ಲಿ ಲಭ್ಯವಾಗಿರುವ ಅನುಭವಗಳು ಹಲವು. ಈ ಯೋಜನೆಗಳು ಆರಂಭವಾದಾಗ, 10 ವರ್ಷಗಳ ಅವಧಿಯ ಅಂತ್ಯದಲ್ಲಿ ಸ್ಥಳೀಯವಾಗಿ ಸಾಕಷ್ಟು ಸಾಧನ ಸಂಪತ್ತುಗಳು ಸಂಗ್ರಹವಾಗಿ, ಈ ಕೇಂದ್ರಗಳ ಅಭಿವೃದ್ಧಿಗೆ ಸರ್ಕಾರ ಪ್ರತ್ಯೇಕವಾಗಿ ಹಣ ನಿಗದಿ ಮಾಡಬೇಕಿಲ್ಲವೆಂಬ ಆಶಾಭಾವನೆ ಇತ್ತು. ಆದರೆ ವಾಸ್ತವವಾಗಿ ಈ ಯೋಜನೆ ಸರ್ಕಾರದ ಹಣ ಮತ್ತು ನೇತೃತ್ವವನ್ನೇ ಇನ್ನೂ ಅವಲಂಬಿಸಿದೆ. ಈ ಯೋಜನೆ ಸ್ವಯಂಪೂರ್ಣ ವಾಗದಿದ್ದರೂ ಸಾಮುದಾಯಿಕ ಯೋಜನೆ ಮತ್ತು ಪಂಚಾಯತ್ ರಾಜ್ಯ ಸಂಸ್ಥೆಗಳು ಹಳ್ಳಿಗಳ ಪುನರ್ರಚನೆಯಲ್ಲಿ ಗಣನೀಯವಾದ ಪಾತ್ರ ವಹಿಸಲು ಶಕ್ತವಾಗಿವೆ.

ವ್ಯವಸಾಯೋತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಸಣ್ಣರೈತರಿಗೂ ಭೂಮಿ ಇಲ್ಲದ ರೈತರಿಗೂ ಇತರ ದುರ್ಬಲ ವರ್ಗದವರ ಅಭಿವೃದ್ಧಿಗೂ ಆದ್ಯತೆ ಕೊಡಲಾಗುತ್ತದೆ. ಗ್ರಾಮ ಪುನರ್ರಚನೆಯಲ್ಲಿ ಸಣ್ಣ ಹಿಡುವಳಿದಾರರಿಗೆ, ವ್ಯವಸಾಯ ಕೂಲಿಕಾರರಿಗೆ ಮತ್ತು ನಿರುದ್ಯೋಗಿಗಳಿಗೆ ಹೆಚ್ಚು ಗಮನ ಕೊಡಬೇಕು. ಜಮೀನಿನ ಮೇಲೆ ಗರಿಷ್ಠ ಮಿತಿಯನ್ನು ವಿಧಿಸಿ ಸಿಗಬಹುದಾದ ಹೆಚ್ಚುವರಿ ಭೂಮಿಯನ್ನು ಭೂವಿಹೀನರಿಗೆ ಹಂಚಿಕೆ ಮಾಡಲಾಗುತ್ತದೆ. ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಯ ಮೂಲಕ ಸಣ್ಣ ರೈತರಿಗೆ ಅಗತ್ಯವಾದ, ಹೆಚ್ಚು ಇಳುವರಿಯ ಬೀಜ, ಗೊಬ್ಬರ, ಉದ್ದರಿ, ಮಾರುಕಟ್ಟೆ ಸೌಲಭ್ಯ – ಇವೆಲ್ಲವನ್ನೂ ಒದಗಿಸಲಾಗುತ್ತದೆ. ಮುಖ್ಯವಾಗಿ ವ್ಯವಸಾಯದ ಆಧುನೀಕರಣ, ಗೃಹ ಮತ್ತು ಸಣ್ಣ ಕೈಗಾರಿಕೆ ಇವುಗಳ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿ ಪಂಚಾಯತಿ ರಾಜ್ಯಗಳ ಮೂಲಕ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸುವುದು ಉದ್ದೇಶ. (ಎಸ್.ಎಂ.ವಿ.)

**ಗ್ರಾಮವೃತ್ತಿಗಳು :** ಗ್ರಾಮಜೀವನ ಪರಾವಲಂಬನೆಯಿಲ್ಲದಂತೆ ಸುಸೂತ್ರವಾಗಿ ನಡೆಯಲು ಅಲ್ಲಿಯ ಜನ ಕೈಗೊಂಡು ನಡೆಸಿಕೊಂಡು ಬರುತ್ತಿರುವ ವೃತ್ತಿಗಳು. ವ್ಯಕ್ತಿ ಜೀವನದಲ್ಲಿ ಕುಟುಂಬ ಹೇಗೋ ಹಾಗೆ ಸಮಾಜ ಜೀವನದಲ್ಲಿ ಗ್ರಾಮ ಒಂದು ಮೂಲ ಘಟಕ. ವ್ಯವಸಾಯವನ್ನೇ ತಮ್ಮ ಮುಖ್ಯ ಕಸಬನ್ನಾಗಿ ಉಳ್ಳ ಗ್ರಾಮದ ಜನ ತಮ್ಮ ಮುಖ್ಯ ಕಸಬಿಗೆ ಹಾಗೂ ಅದಕ್ಕೆ ಪೋಷಕವಾಗಿರುವ ಇತರ ಉಪಕಸಬುಗಳಿಗೆ ಗಮನ ಕೊಡುತ್ತ ಬಂದಿರುವುದು ಸಹಜವೇ.

ಊರು ಎಂಬ ಶಬ್ದದಿಂದ ಗ್ರಾಮ ರಚನೆಯ ಮೂಲವನ್ನು ಗುರುತಿಸಬಹುದಾಗಿದೆ. ಅಲೆದಾಟದಲ್ಲಿ ಜೀವಿಸುವ ಜನಾಂಗಗಳು ಅನುಕೂಲವಾದ ಸ್ಥಳವನ್ನು ಕಂಡು ತಳ ಊರಿದ್ದೇ ಊರು. ಅನುಕೂಲವಾದ ಸ್ಥಳವೆಂದರೆ ಎಂಥದು ? ತಾನು ಉತ್ತಿಬಿತ್ತಿ ಬೆಳೆದುಕೊಳ್ಳುವ ಹೊಲಕ್ಕೆ ಸಮೀಪವಾಗಿ, ಇಡಿಯ ವರ್ಷ ನೀರಿನ ಸೌಕರ್ಯವುಳ್ಳ ಹಳ್ಳದ ದಂಡೆಯಲ್ಲಿರುವ ಬೀಡು ವಸತಿಗೆ ಅತಿ ಅನುಕೂಲವಾದ ಸ್ಥಳವೆನ್ನಬಹುದು. ಹಲವು ಬೀಡುಗಳನ್ನು ಒಳಗೊಂಡಿದ್ದೇ ಹಳ್ಳಿ. ಹಳ್ಳದ ದಂಡೆಯಲ್ಲಿ ಹಳ್ಳಿ, ಹೊಳೆಯ ತೀರದಲ್ಲಿ ಹೊಳಲು, ನಗರವನ್ನಾಶ್ರಯಿಸಿ ನಗರ ಹುಟ್ಟಿಕೊಂಡವೆನ್ನಬಹುದು. ಊರು, ಹಳ್ಳಿ, ಗ್ರಾಮ ಇವೆಲ್ಲ ಹೆಚ್ಚುಕಡಿಮೆ ಒಂದೇ ಅರ್ಥ ಕೊಡುವ ಶಬ್ದಗಳಾಗಿವೆ.

ಕೃಷಿಯೇ ಗ್ರಾಮದ ಜನರ ಕೇಂದ್ರ ವೃತ್ತಿಯಾದಾಗ ಒಕ್ಕಲಿಗನ ಕೆಲಸಬೊಗಸೆಯೆಲ್ಲ ಹೊಲದಲ್ಲಿ. ಆತ ದುಡಿದು ಶ್ರಮಿಸುವುದು ದನಗಳೊಡನೆ. ಭೂಮಿಯೇ ತಾಯಿ, ಆಕಾಶವೇ ತಂದೆ ಎನ್ನುವುದು ಒಕ್ಕಲಿಗನ ಮಟ್ಟಿಗೆ ಸಂಪೂರ್ಣ ಸತ್ಯ. ಆದರೂ ಆತನ ಉದ್ಯೋಗಕ್ಕೆ ಬೇರೆ ಉಪಕರಣಗಳೂ ಅಷ್ಟೇ ಆವಶ್ಯಕ. ಭೂಮಿಯನ್ನು ಹದಗೊಳಿಸುವ ಕುಂಟೆ – ಕೂರಿಗೆ, ಗಳೇ – ಗಾಡಿ, ದನಗಳನ್ನು ಕಟ್ಟಲು ಗೂಟ–ಗುದಿಗೆ–ಎಲ್ಲ ಅವನಿಗೆ ಬೇಕು. ಆಗ ಅವನಿಗೆ ಬಡಗಿ ಬೇಕಾದ. ಒಕ್ಕಲಿಗ ಮಳೆಗಾಳಿ ಬಿಸಿಲುಗಳ ಬಾಧೆ ತಡೆದುಕೊಳ್ಳುವುದಕ್ಕೆ, ಬೆಚ್ಚಗೆ ಮಲಗುವುದಕ್ಕೆ ಎಂಥದಾದರೂ ಒಂದು ಆಸರೆ ಬೇಕು. ಅವುಗಳನ್ನೆಲ್ಲ ಒದಗಿಸಲು ಬಡಿಗ ಬೇಕಾದ. ಕುಳ – ಕೀಲು, ಹಾರೆ – ಕುಡುಗೋಲು ಇಲ್ಲದಿದ್ದರೆ ಒಕ್ಕಲಿಗನ ಕೆಲಸ ಸಾಗದು. ಕಂಬಾರ ಆ ಕೆಲಸವನ್ನು ವಹಿಸಿಕೊಂಡ. ಮಿಣಿ – ಬಾರಕೋಲು, ಕಾಲುಮರೆ – ಕೆರ ಒದಗಿಸಲು ಮಾದಿಗ, ಢೋರ, ಸಮಗಾರರು ಒಕ್ಕಲಿಗನ ಹತ್ತಿರವೇ ನೆಲೆಯೂರುವುದು ಅನಿವಾರ್ಯವಾಯಿತು. ಅದರಂತೆ ಗಡಿಗೆ – ಮಡಕೆಗಾಗಿ ಕುಂಬಾರ, ತಲೆ ಹಗುರಗೊಳಿಸಲು ಕ್ಷೌರಿಕ ಮುಂತಾದವರು ತಳವೂರಿ ಒಕ್ಕಲಿಗನನ್ನು ಆಶ್ರಯಿಸಿದರು. ಸಹಕಾರಿಗಳಾದ ಆ ಎಲ್ಲ ವೃತ್ತಿಯವರಿಗೆ ವರ್ಷದ ಪ್ರತಿಫಲವನ್ನು ಒಕ್ಕಲಿಗ ಧಾನ್ಯ ರೂಪದಿಂದಲೇ ಕೊಡಲುಪಕ್ರಮಿಸಿದ. ಹತ್ತೂರ ಹಲ್ಲುಕಡ್ಡಿ ಒಬ್ಬನ ತಲೆಭಾರ ಎನ್ನುವಂತೆ, ಹತ್ತೆಂಟು ಕೃಷಿಕ ಮನೆತನಗಳನ್ನು ಅವಲಂಬಿಸಿದ ಒಬ್ಬೊಬ್ಬ ಆಯಗಾರನಿಗೆ ವರ್ಷದ ಖರ್ಚು ಬಾಯಿಗೂಡಿ ಮಿಗುವಂತೆ ಬರತೊಡಗಿತು.

ಒಕ್ಕಲಿಗರನ್ನು ಆಶ್ರಯಿಸಿ ಅಥವಾ ಗ್ರಾಮವನ್ನೇ ಆಧರಿಸಿ ಇರುವ ಬಡಿಗ, ಕಂಬಾರ, ಕುಂಬಾರ, ಅಗಸ, ಕ್ಷೌರಿಕ, ಹೊಲೆಯ, ಸಮಗಾರ ಮೊದಲಾದ ಹನ್ನೆರಡು ಜನರನ್ನು ಆಯಗಾರರೆನ್ನುತ್ತಾರೆ. ಅವರಿಗೆ ಒಕ್ಕಲಿಗರಿಂದ ರಾಶಿಯ ಕಾಲಕ್ಕೆ ಧಾನ್ಯ ಸಿಕ್ಕುವುದಲ್ಲದೆ, ಅವರದೇ ಆದ ವತನೀಭೂಮಿಯ ಉತ್ಪನ್ನವೂ ಬರುತ್ತದೆ. ಅಷ್ಟರಲ್ಲಿ ಅವರು ಉಂಡುಟ್ಟು, ಸಾರ್ವಜನಿಕ ಕಾರ್ಯಗಳಲ್ಲಿ ತಂತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸುತ್ತಾರೆ. ಮಠದಯ್ಯ ಊರಲ್ಲಿ ದಿನಾಲೂ ಹಿಟ್ಟು ಬೇಡುತ್ತಾನೆ. ರೈತರಿಂದ ರಾಶಿಯ ಕಾಲಕ್ಕೆ ಧಾನ್ಯ ಪಡೆಯುತ್ತಾನೆ. ಮಠಕ್ಕೆ ಸೇರಿದ ಹೊಲವನ್ನೂ ಉಣ್ಣುತ್ತಾನೆ. ಆತನ ಕೆಲಸ ಊರ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವುದು. ಬೆಳ್ಳಿ ಬಂಗಾರಗಳಿಂದ ವಸ್ತು ಒಡವೆಗಳನ್ನು ಮಾಡಿಕೊಡುವ ಅಕ್ಕಸಾಲಿಗನೂ ಒಕ್ಕಲಿಗನಿಗೆ ಬೇಕು. ಒಕ್ಕಲಿಗನ ಹೊಲಗದ್ದೆಗಳನ್ನು ಕುರಿತ ಲೆಕ್ಕವನ್ನಿಡುವ ಕರಣಿಕ, ಊರೊಳಗಿನ ನ್ಯಾಯವನ್ನು ಕಾಪಾಡಿಕೊಂಡು ಹೋಗುವ ಗೌಡ ಮೊದಲಾದವರಿಗೆ ಸರ್ಕಾರದ ಹೊಲಗಳಿರುವುದುಂಟು. ಗೌಡ ಕರಣಿಕರ ವತನಿಯ ಹೊಲಗಳಿಗಾಗಲೀ ಆಯಗಾರರ ಹೊಲಗಳಿಗಾಗಲೀ ತೀರ್ವೆ ಇರುವುದಿಲ್ಲ. ಗೌಡ, ಕರಣಿಕರು ತಮ್ಮ ವೃತ್ತಿಯನ್ನು ನಡೆಸುವ ಸ್ಥಳಕ್ಕೆ ಚಾವಡಿಯೆನ್ನುತ್ತಾರೆ. ಅವರ ಕಾಗದ ಪತ್ರಗಳನ್ನು ಕೊಂಡೊಯ್ಯುವ ಕೆಲಸವನ್ನು ಓಲೆಕಾರರು ಮಾಡುತ್ತಾರೆ. ರಾತ್ರಿ ಕಾಲಕ್ಕೆ ಊರಲ್ಲಿ ಗಸ್ತಿ ತಿರುಗುವ ಗ್ರಾಮಸ್ಥರು ವಸೂಲು ಮಾಡಿದ ತೀರ್ವೆಯ ಹಣವನ್ನು ತಾಲ್ಲೂಕಿನ ಅಧಿಕಾರಿಗಳಿಗೆ ಮುಟ್ಟಿಸುವ ಸಲುವಾಗಿ ತಳವಾರ, ನಾಟಕಕಾರರೆಂಬ ವತನದಾರರಿರುತ್ತಾರೆ. ತಳವಾರರು ಖಡ್ಗಧಾರಿಗಳಾಗಿ ಆ ಹಣದ ಕಾವಲು ಮಾಡುತ್ತಾರೆ. ತೀರ್ವೆಯ ವಸೂಲಿಯ ಕಾಲಕ್ಕೆ ಗೌಡ ಕರಣಿಕರೊಡನೆ

ಅಕ್ಕಸಾಲಿಗ ಚಾವಡಿಯಲ್ಲಿ ಕುಳಿತು, ನಾಣ್ಯಗಳನ್ನು ಎಣಿಸುವ ಹಾಗೂ ಖೋಟ್ಟಿ ನಾಣ್ಯಗಳನ್ನು ಕಂಡುಹಿಡಿದು ಕತ್ತರಿಸಿ ಹಾಕುವ ಕೆಲಸವನ್ನು ನಿರ್ವಹಿಸುತ್ತಾನೆ. ಗ್ರಾಮದೇವತೆಯ ಪೂಜೆ – ಪುರಸ್ಕಾರಗಳನ್ನು ನಿರಂತರವಾಗಿ ನಡೆಸಿಕೊಂಡುಬರುವುದಕ್ಕೆ ಅನುಕೂಲವಾಗಲೆಂದು, ದೇವಾಲಯದ ಹೆಸರಿನಲ್ಲಿ ಹೊಲ ಬಿಟ್ಟಿರುತ್ತಾರೆ. ಇದೇ ದೇವರ ಭೂಮಿ. ಅವುಗಳ ಉತ್ಪನ್ನ ಪೂಜಾರಿಗೆ ಸೇರಿದ್ದು. ಪಲ್ಲಕ್ಕಿ ಹೊರುವ, ಆಪ್ತಾಗಿರಿ ಎತ್ತುವ, ದೀವಟಿಗೆ ಹಿಡಿಯುವ, ಚೌರಿ ಬೀಸುವ ಕೆಲಸಗಳನ್ನು ಬೇರೆಬೇರೆ ಬಾಬಿನವರು ಸಾಗಿಸುತ್ತಾರೆ. ಅವರಿಗೂ ತೀರ್ವೆಯಿಲ್ಲದ ಭೂಮಿಸೀಮೆಗಳಿರುವುದುಂಟು.

ಇದೆಲ್ಲ ಮೇಟಿಯ ವಿಸ್ತಾರ, ಅಂದರೆ ಹೊಟ್ಟೆಗೆ ಬೇಕಾಗುವ ಅನ್ನದ ವಿಷಯ ಆಯಿತು. ಮನುಷ್ಯನಿಗೆ ಹೊಟ್ಟೆಯಂತೆ ಮೈಯೂ ಒಂದಿರುತ್ತದೆ. ಹೊಟ್ಟೆಗೆ ಹಿಟ್ಟು ಅನಿವಾರ್ಯವಾದಂತೆ, ಮೈಗೆ ಬಟ್ಟೆ ಆವಶ್ಯಕ. ಗ್ರಾಮದೊಳಗಿನ ಬಹುತರ ಹೆಂಗಸರು ಸುಗ್ಗಿಯ ಕಾಲದಲ್ಲಿ ಹೊಲಕ್ಕೆ ಹೋಗಿ ಗಂಡಸರ ಕೆಲಸದಲ್ಲಿ ನೆರವಾಗುತ್ತಾರೆ. ಕೆಲವರಿಗೆ ಇಡೀ ವರ್ಷ ಹೊಲದ ದುಡಿಮೆ ತಪ್ಪಲಾರದು. ಆದರೆ ಬೇಸಗೆಯಲ್ಲಿ ಸಾಕಷ್ಟು ಬಿಡುವು ಸಿಗುತ್ತದೆ. ಇಳಿವಯಸ್ಸಿನ ಹೆಂಗಸರು ಮತ್ತು ಅಜ್ಜಿಯರು ಮೊಮ್ಮಕ್ಕಳನ್ನಾಡಿಸುತ್ತ ಮಾಡುವ ಕೆಲಸವೆಂದರೆ ನೂಲುವುದು. ಗಂಡ, ಹೆಂಡತಿಗೆ ಹಂಜಿ ಮಾಡಿಕೊಟ್ಟು ಸಹಕರಿಸುತ್ತಾನೆ. ವಾರಾನುವಾರ ಇಲ್ಲವೆ ವರ್ಷಾನುವರ್ಷ ನೂತ ನೂಲನ್ನು ಜನ ನೇಕಾರನಿಗೆ ಕೊಟ್ಟು ಮನೆಗೆ ಬೇಕಾಗುವ ಬಟ್ಟೆಗಳನ್ನು ನೇಯಿಸಿಕೊಳ್ಳುತ್ತಾರೆ. ಹೆಚ್ಚಾದ ನೂಲನ್ನು ಸಂತೆಗೊಯ್ದು ಮಾರುತ್ತಾರೆ.

ಸಂತೆಯಲ್ಲಿ ಮಾರಲಿಕ್ಕೆ ಬಂದ ನೂಲಿನ ತುಕ್ಕಡಿಗಳನ್ನು ಕೊಂಡುಕೊಂಡು ಸೀಳು ಹಾಕಿಸಿ, ಬಣ್ಣ ಕಟ್ಟಿ ನೇಕಾರರಿಗೆ ಮಾರುವ ವೃತ್ತಿಯವರಿಗೆ ಬಣಗಾರರೆನ್ನುತ್ತಾರೆ. ನೇಕಾರರು ಬಣ್ಣದ ನೂಲು ಕೊಂಡು ಸೀರೆಗಳನ್ನೂ ಬಿಳಿಯ ನೂಲಿನಿಂದ ಧೋತರ ಹಚ್ಚಡಗಳನ್ನೂ ನೆಯ್ದು ಸಿದ್ಧಪಡಿಸುತ್ತಾರೆ. ಅಂಥ ಬಟ್ಟೆಗಳನ್ನು ನೇಕಾರರಲ್ಲಿ ಕೊಂಡುಕೊಂಡು ಅಗತ್ಯವಿದ್ದವರಿಗೆ ಮಾರುವ ವೃತ್ತಿ ಚೆಟ್ಟಿಯರದು. ಅವರು ಕುದುರೆಯ ಮೇಲೆ ಗಂಟು ಹೇರಿಕೊಂಡು ಸಂತೆ ತಿರುಗಿ ಬಟ್ಟೆಯ ವ್ಯಾಪಾರ ಮಾಡುತ್ತಾರೆ. ನಿತ್ಯಜೀವನಕ್ಕೆ ಬೇಕಾದ ಬೆಲ್ಲ, ಎಣ್ಣೆ, ಉಪ್ಪು, ಮಸಾಲೆಗಳನ್ನು ಮಾರುವ ಚಿಕ್ಕ ತಕ್ಕಡಿಯ ಅಂಗಡಿಯನ್ನು ಇಟ್ಟುಕೊಂಡವರು ಬಣಜಿಗರೆನಿಸುತ್ತಾರೆ. ಊರ ಶೆಟ್ಟರಾದ ಅವರು ಒಕ್ಕಲಿಗರಿಗೂ ಉಳಿದ ಉದ್ದಿಮೆದಾರರಿಗೂ ಅಡಚಣೆಯುಂಟಾದಾಗ ಹಣದ ರೂಪದಿಂದಾಗಲೀ ದಿನಸಿಯ ರೂಪದಿಂದಾಗಲೀ ನೆರವು ನೀಡುವ ಸಹಕಾರಿಗಳೂ ಹೌದು. ಈ ಸಹಕಾರಿಗಳೇ ಕಾಲಕ್ರಮೇಣ ಸಾಹುಕಾರರೆನಿಸಿದರು. ವಿವಿಧ ಉದ್ದಿಮೆದಾರರು ತಂತಮ್ಮ ಬದುಕನ್ನು ಅಗತ್ಯವಿದ್ದವರಿಗೆ ಕೊಟ್ಟು, ಅವರ ಬದುಕನ್ನು ತಾವು ತೆಗೆದುಕೊಳ್ಳುವ ವಿನಿಮಯ ವ್ಯವಹಾರವನ್ನು ಸುಗಮಗೊಳಿಸುವ ಸಂಸ್ಥೆಯೇ ಸಂತೆಯ ಸ್ವರೂಪ ತಳೆಯಿತು.

ಕೊಂಡುಕೊಳ್ಳುವ ವ್ಯವಹಾರದಲ್ಲಿ ತಕರಾರು ಉಂಟಾದರೆ, ಇಲ್ಲವೆ ಇನ್ನಾವುದೇ ವಿಧದ ವಿರಸವುಂಟಾದರೆ ಅದನ್ನು ಸರಿಪಡಿಸುವ ಹಿರಿಯರು ಕೆಲವರಿರುತ್ತಾರೆ. ಅವರು ಇಂಥ ಜಾತಿಯವರೇ ಇರಬೇಕೆಂದಾಗಲಿ, ಶ್ರೀಮಂತರೇ ಇರಬೇಕೆಂದಾಗಲಿ ನಿಯಮವಿಲ್ಲ. ಕಲಿತವರೇ ಬೇಕೆಂಬ ಕಟ್ಟಳೆಯೂ ಇಲ್ಲ. ಮನೆಯ, ಜಂಜಾಟವಿಲ್ಲದ ಅನುಭವದಿಂದ ಪರಿಪಕ್ವಗೊಂಡ ಜನ ನ್ಯಾಯ ಪಂಚಾಯತಿಯ ವೃತ್ತಿಯನ್ನು ಕೈಕೊಂಡಿರುತ್ತಾರೆ. ವೃತ್ತಿಯೆಂದರೆ ಗಳಿಸುವ ದಾರಿಯಲ್ಲ. ಗ್ರಾಮದ ಪಂಚರು ನಿಷ್ಪಕ್ಷಪಾತ ಬುದ್ಧಿಯವರಿರುತ್ತಾರೆ. ಪೂಜಾರಿ ಪ್ರಭಣ್ಣ, ಸಮಗಾರ ನೀಲಪ್ಪ, ಹಿರೇಮುದ್ರದ ಶರಣಯ್ಯ, ಕರಣಿಕರ ವಸುದೇವ ಮುತ್ತಯ್ಯ, ಸಾತವೀರಗೌಡ – ಇವರೇ ಪಂಚರು. ಪಂಚರಿಗೆ ಪಗಾರವಿಲ್ಲ ಎನ್ನುವ ಲೋಕೋಕ್ತಿಯೇ ಇದೆ. ಅವರು ಸಾರ್ವಜನಿಕರಿಗೆ ಮಾರ್ಗದರ್ಶನ ಮಾಡುವ ರೀತಿಯೇ ಪಂಚಾಯತಿ. ಪಂಚೇತಿ ಬಂತಲ್ಲ ಎಂದು ಸಾರ್ವಜನಿಕರು ಮಿಡುಕುವಂತೆ ಬೇಟ ಮಾಡುವವರು ಅವರಲ್ಲ. ಹಲವು ಸಾರೆ ತಪ್ಪುಗಾರರಿಂದ ತಪ್ಪು ದಂಡ ವಸೂಲಿ ಮಾಡಬೇಕಾಗುವುದು. ತೀರ್ಪು ಹೇಳುವುದು ಸುಲಭ, ಅದರಂತೆ ಎರಡೂ ಪಕ್ಷಗಳು ನಡೆದುಕೊಂಡರೆ, ಮುಂದಿನದೆಲ್ಲ ಸುಗಮಗೊಳ್ಳುತ್ತದೆ. ಹೇಳಿದ ತೀರ್ಪು ಒಂದು ಪಕ್ಷದವರಿಗೆ ಸಮ್ಮತವಾಗದಿದ್ದರೆ, ಅವನನ್ನು ಒತ್ತಾಯದಿಂದ ತೀರ್ಪಿಗೆ ಬಾಗಹಚ್ಚುವ ಸಾಮರ್ಥ್ಯವೋ ನೈತಿಕ ಬಲವೋ ಪಂಚರಿಗೆ ಇರಬೇಕಾದುದು ಅತ್ಯಾವಶ್ಯಕ. ಅಂಥ ಪ್ರಸಂಗದಲ್ಲಿ ದಂಡ ಕಟ್ಟಿ ಹಣ ವಸೂಲಿ ಮಾಡಬಹುದು. ಇಲ್ಲವೆ ಅಗಸ, ಕ್ಷೌರಿಕ, ಜಂಗಮ, ಉಪಾಧ್ಯ ಮೊದಲಾದವರ ಸಹಕಾರವನ್ನು ತಡೆಹಿಡಿದು ಬಹಿಷ್ಕಾರ ಹಾಕಬಹುದು. ಅದರಿಂದ ಸಮಾಜಬಾಹಿರನಾದವನು ಮೆತ್ತಗಾಗಿ ದಾರಿಗೆ ಬರುತ್ತಾನೆ. ಬಹಿಷ್ಕಾರಕ್ಕೂ ಹಣಿಯದೆ, ಊರನ್ನೇ ಬಿಟ್ಟುಹೋದರೂ ಮುಂದಿನೂರಲ್ಲಿ ಸಹ ಆತ ಕಾಲೂರಿ ನಿಲ್ಲದಂತೆ ಅವನ ಹಿಂದಿನಿಂದೇ 'ವಾಳಿ ಚೀಟಿ' ಕಳಿಸುವುದುಂಟು. ಇಂಥ ನ್ಯಾಯನಿಷ್ಠುರ ವೃತ್ತಿಯನ್ನು ವಹಿಸಿದರೂ ಪ್ರತಿಫಲವನ್ನು ಅಪೇಕ್ಷಿಸದ ಪಂಚರ ಆ ಮನಸ್ಸು ಪವಿತ್ರವಾಗಿಯೇ ಉಳಿಯುತ್ತದೆ.

ತಪ್ಪುದಂಡದ ಹಣ, ಇನ್ನಾವುದೋ ವಿಧದ ಕೊಡುಗೆ ಮೊದಲಾದವುಗಳಿಂದ ಗ್ರಾಮದೇವತೆಯ ಜಾತ್ರೆ, ಸಪ್ತಾಹ, ಪುರಾಣ ಪ್ರವಚನಗಳ ಕಾರ್ಯಕ್ರಮವನ್ನು ಹಾಕಿಕೊಂಡು ಜನರಲ್ಲಿ ಧಾರ್ಮಿಕ ಭಾವನೆಯನ್ನು ಕುದುರಿಸುವ ವೃತ್ತಿಗಾಗಿಯೇ ಹೇಳಿ ಮಾಡಿಸಿದಂಥ ಕೆಲವು ಉತ್ಸಾಹಿಗಳು ಗ್ರಾಮದಲ್ಲಿ ಇರುವುದುಂಟು. ಅವರು ಉದರನಿರ್ವಾಹದ ವೃತ್ತಿಯೊಂದನ್ನು ನಿರ್ವಹಿಸಿಕೊಂಡೂ ಸಮಯಾನುಸಾರ ಸಾರ್ವಜನಿಕ ಕಾರ್ಯದಲ್ಲಿ ಪ್ರವೃತ್ತರಾಗುವವರು. ಊರ ಹಿರಿಯರಿಂದ ಅವರಿಗೆ ಮಾರ್ಗದರ್ಶನವಾಗಲಿ, ಮೇಲ್ವಿಚಾರಣೆಯಾಗಲಿ ಸಿಗುವುದು. ಹನ್ನೆರಡು ಜನ ಆಯಗಾರರು ಬಹುತರವಾಗಿ ಊರಲ್ಲಿಯೇ ಹನ್ನೆರಡೂ ತಿಂಗಳಿದ್ದು ನಡೆಸುವ ವೃತ್ತಿಯನ್ನು ವಹಿಸಿಕೊಂಡಿದ್ದರಿಂದ ಮನಸ್ಸಿಗಾಗುವ ಬೇಸರ ಕಳೆಯುವುದಕ್ಕೆ ಕೆಲವರು ಸಾಯಂಕಾಲದಲ್ಲಿ ಭಜನೆಯ ಕಾರ್ಯಕ್ರಮ ಇರಿಸಿಕೊಂಡರೆ, ಕೆಲವರು ಬಯಲಾಟವನ್ನು ಕಲಿತು ಸಾರ್ವಜನಿಕರಿಗೆ ಮನರಂಜನೆಯನ್ನು ಒದಗಿಸುವರು. ಅದರಿಂದ ಉಭಯರಿಗೂ ಸಂತೋಷ ದೊರೆಯುವುದು. ಆಟನೋಟ, ಹಾಡು ಬಾರಿಸುವಿಕೆಗಳನ್ನು ಉಪವೃತ್ತಿಯನ್ನಾಗಿ ಮಾಡಿಕೊಂಡ ಕೆಲವು ಮನೆತನಗಳೇ ಗ್ರಾಮದಲ್ಲಿ ಇರುವುದುಂಟು. ವೃತ್ತಿಯೆಂದರೆ ಆರ್ಥಿಕ ವ್ಯಾಪ್ತಿಯ ದಾರಿಯೊಂದೇ ಎಂದು ತಿಳಿಯದೆ, ಅದು ಮನಸ್ಸಿಗೆ ಆನಂದ, ಸಮಾಧಾನಗಳನ್ನು ಒದಗಿಸುವ ಉಪಾಯವೆಂದೂ ಬಗೆಯಬೇಕು. ಜಾತ್ರೆಯ ಕಾಲಕ್ಕೆ, ಕೆಲವೊಂದು ಹಬ್ಬಹರಿದಿನಗಳ ಸಂದರ್ಭದಲ್ಲಿ ಕುಸ್ತಿ, ದೈಹಿಕ ಸ್ಪರ್ಧೆಗಳನ್ನು ಇಟ್ಟುಕೊಳ್ಳುವುದರಿಂದ ಶರೀರಬಲ ಸಂವರ್ಧನೆಗೆ ಸಹಾಯವೂ ಉತ್ತೇಜನವೂ ಪ್ರಾಪ್ತವಾಗುತ್ತದೆ.

ಗ್ರಾಮವೃತ್ತಿಗಳಿಂದ ಬದುಕು ಸುಗಮವಾಗುವುದರ ಜೊತೆಗೆ ಸಮಷ್ಟಿ ಪುರುಷನಿಗೆ ಶಾರೀರಿಕ, ಮಾನಸಿಕ, ಪ್ರಾಣಿಕ, ಧಾರ್ಮಿಕ ಸಂಸ್ಕಾರಗಳು ಅಂದರೆ ಚತುರ್ವಿಧ ಶಿಕ್ಷಣಗಳು ದೊರೆಯುವುದರಿಂದ ಪುರುಷಾರ್ಥಸಾಧನೆಗೆ ದಾರಿಯಾಗುತ್ತದೆ.

ಸ್ವಾವಲಂಬನೆ ಪ್ರತಿ ಗ್ರಾಮದ ಗುರಿಯಾದರೂ ಎಲ್ಲ ಗ್ರಾಮಗಳೂ ಅದನ್ನು ಸಾಧಿಸಲಾರವು. ಅಂದರೆ ಎಲ್ಲ ಬಾಬುಗಳಲ್ಲೂ ಪ್ರತಿಯೊಂದು ಗ್ರಾಮವೂ ಪಕ್ಕಾ ಕೆಲಸ ಮಾಡುವುದು ಸಾಧ್ಯವಾಗದಿರಬಹುದು. ಆಗ ಸುತ್ತಮುತ್ತಣ ಹತ್ತು ಗ್ರಾಮದವರಲ್ಲಿ ಉದ್ಯೋಗದ ಹಂಚಿಕೆಯಾಗಿ ಹತ್ತೂ ಗ್ರಾಮಗಳು ಒಂದು ಮನೆಯವರಂತೆ ಬಾಳುವುದನ್ನು ಕಲಿತುಬಿಡುತ್ತಾರೆ. ಒಂದು ಹಳ್ಳಿಯ ಕುಂಬಾರ, ಮತ್ತೊಂದು ಹಳ್ಳಿಯ ಬಡಗಿ, ಮಗದೊಂದು ಹಳ್ಳಿಯ ನೇಕಾರರು ಪ್ರಸಿದ್ಧರಾಗಿ ತಮ್ಮ ಕಡೆಗೆ ಹತ್ತೂ ಹಳ್ಳಿಯವರನ್ನು ಆಕರ್ಷಿಸುತ್ತಾರೆ. ಒಂದು ಹಳ್ಳಿಯ ಓಜ ಮತ್ತೊಂದು ಹಳ್ಳಿಯ ಕಥೆದಾಸ (ಕೀರ್ತನಕಾರ), ಬೇರೊಂದು ಹಳ್ಳಿಯ ಬಯಲಾಟದ ತಂಡ ತಮ್ಮ ತಮ್ಮ ಪ್ರೌಢಿಮೆಯಿಂದಾಗಿ ಅನಿವಾರ್ಯವೆನಿಸಿಬಿಡುತ್ತವೆ. ಹತ್ತೂ ಹಳ್ಳಿಯವರು ಅವರ ಹತ್ತಿರಕ್ಕೆ ಹೋಗುತ್ತಾರೆ. ಅವರನ್ನೇ ಆಹ್ವಾನಿಸುತ್ತಾರೆ. ಹೀಗಾಗಿ ಕಾಲಕ್ರಮದಲ್ಲಿ ಗ್ರಾಮವೃತ್ತಿಗಳಲ್ಲಿ ವಿಂಗಡಣೆ ವೈಶಿಷ್ಟ್ಯಗಳು ಹುಟ್ಟಿದುವೆನ್ನಲಾಗಿದೆ.

(ಎಸ್.ಎಲ್.)

**ಗ್ರಾಮಸಮಾಜ :** ಮೇಲುನೋಟಕ್ಕೆ ಗ್ರಾಮಸಮಾಜ ಅತಿ ಪರಿಚಿತವೆಂದು ಕಂಡರೂ ಅದಕ್ಕೊಂದು ತೃಪ್ತಿಕರವಾದ ವ್ಯಾಖ್ಯೆಯನ್ನು ಕೊಡುವುದು ಕಷ್ಟ. 1929ರ ಸುಮಾರಿಗೆ ಬರೆಯುತ್ತ ಕಾರ್ಲ್ ಜಿಮ್ಮರ್‌ಮನ್ ಗ್ರಾಮಸಮಾಜವೆಂದರೆ ನಿಸರ್ಗದ ಮಡಿಲಲ್ಲಿ ಬಾಳುವ ಜನರೆಂದೂ ಇಲ್ಲವೆ ಮುಖ್ಯವಾಗಿ ಕೃಷಿಯನ್ನೇ ಉದ್ಯೋಗವಾಗಿಟ್ಟುಕೊಂಡ ಜನರ ಗುಂಪೆಂದೂ ಇಲ್ಲವೆ ಚಿಕ್ಕ ಗಾತ್ರದ ಸಮಾಜಗಳೆಂದೂ ಹೇಳಿದ್ದಾನೆ. ಕೃಷಿ ಉದ್ಯೋಗಗಳು ಪ್ರಾಧಾನ್ಯ ಪಡೆದಿರುವುದು, ಮಾನವ ಪರಿಸರಕ್ಕಿಂತ ನೈಸರ್ಗಿಕ ಪರಿಸರಕ್ಕೆ ಜನ ಹೆಚ್ಚು ನಿಕಟವಾಗಿರುವುದು, ಸಮುದಾಯಗಳ ಗಾತ್ರ ಚಿಕ್ಕದಾಗಿರುವುದು, ಜನಸಾಂದ್ರತೆ ವಿರಳವಾಗಿರುವುದು, ಸಾಮಾಜಿಕ ಸಮೈಕ್ಯ ಹೆಚ್ಚಾಗಿರುವುದು, ಸ್ತರೀಕರಣ ಹಾಗೂ ಭಿನ್ನತೆಗಳು ಕಡಿಮೆಯಾಗಿರುವುದು, ಸಾಮಾಜಿಕ ಸಂಚರಣೆ ಕನಿಷ್ಠವಾಗಿರುವುದು – ಇವು ಗ್ರಾಮಸಮಾಜದ ಲಕ್ಷಣಗಳೆಂದು ಆತನ ಅಭಿಪ್ರಾಯ. ಲೂಯಿ ವರ್ತ್ ಎಂಬಾತ ಗ್ರಾಮಸಮಾಜಗಳೆಂದರೆ ಚಿಕ್ಕ ಗಾತ್ರದ, ಕಡಿಮೆ ಜನಸಾಂದ್ರತೆಯ ಮತ್ತು ಸಮೈಕ್ಯವುಳ್ಳ ಸಮಾಜಗಳೆಂದು ವರ್ಣಿಸಿದ್ದಾನೆ. ರೆಡ್‌ಫೀಲ್ಡ್ ಎಂಬಾತ ಗ್ರಾಮಸಮಾಜ ಚಿಕ್ಕ ಗಾತ್ರದ, ಪ್ರತ್ಯೇಕವಾಗಿ ಬಾಳುವ ಅನಕ್ಷರಸ್ಥ ಮತ್ತು ಏಕರೂಪತೆಯುಳ್ಳ ಹಾಗೂ ತೀವ್ರವಾದ ಏಕತೆಯ ಭಾವನೆಯನ್ನು ತಾಳಿದ ಜನರ ಸಮಾಜವೆಂದು ಹೇಳಿದ್ದಾನೆ.

ಗ್ರಾಮಸಮಾಜಕ್ಕೆ ಇನ್ನೂ ಕೆಲವು ಲಕ್ಷಣಗಳನ್ನು ಗುರುತಿಸಿದವರಿದ್ದಾರೆ. ಸ್ವಯಂಪರಿಪೂರ್ಣತೆ, ಸಂಪ್ರದಾಯಗಳ ಮೇಲುಗೈ, ಸಹಕಾರ ಭಾವನೆ, ನೆಲದ ಮೇಲಿರುವ ಅಪಾರಪ್ರೇಮ, ವೈಯಕ್ತಿಕ ಸಂಬಂಧಗಳ ಆಧಿಕ್ಯ, ಸರಳ ಹಾಗೂ ಮಿತವ್ಯಯಜೀವನ, ಧಾರ್ಮಿಕ ಭಾವನೆ, ಕಳ್ಳುಬಳ್ಳಿಗಳಿಗೆ ಅಥವಾ ರಕ್ತಸಂಬಂಧಿಗಳಿಗೆ ಸಿಗುವ ಮಹತ್ತ್ವ, ಸ್ತ್ರೀಗೆ ಸಿಗುವ ಅಲ್ಪಸ್ಥಾನಮಾನ, ಗ್ರಾಮೀಣ ಮೂಢನಂಬಿಕೆಗಳು, ರೋಗರುಜಿನಗಳು, ಅಜ್ಞಾನ – ಹೀಗೆ ಇನ್ನೂ ಕೆಲವಿವೆ. ಇವುಗಳಲ್ಲಿ ಕೆಲವು ಆವಶ್ಯಕ ಲಕ್ಷಣಗಳಾದರೆ ಮತ್ತೆ ಕೆಲವು ಆಕಸ್ಮಿಕ ಅಥವಾ ಆನುಷಂಗಿಕ.

ಸಮಾಜಶಾಸ್ತ್ರಜ್ಞ ಸೊರೊಕಿನನೂ ಜಿಮ್ಮರಮನನೂ ಗ್ರಾಮಸಮಾಜದ ಪ್ರಧಾನ ಮಾನದಂಡ ಉದ್ಯೋಗ ಎಂದಿದ್ದಾರೆ. ಕೃಷಿಯೇ ಅದರ ಮೂಲಾಧಾರ. ಗ್ರಾಮೀಣ ಹಾಗೂ ಕೃಷಿಕ ಶಬ್ದಗಳು ಪರ್ಯಾಯವಾಚಕ ಎಂದರೂ ತಪ್ಪಲ್ಲ. ಕೃಷಿ ಕೇವಲ ಉದ್ಯೋಗವಲ್ಲ. ಅದು ಒಂದು ಜೀವನಮಾರ್ಗ. ಭೂಮಿತಾಯಿ ನೆಲದ ತುಣುಕೊಂದನ್ನು ಮಾರುವ ಪ್ರಸಂಗ ಬಂದಾಗ ಒಕ್ಕಲಿಗನ ಮನೆಯ ಜನರೆಲ್ಲ ಅನೇಕ ದಿನಗಳ ವರೆಗೆ ಗೋಳಿಡುವುದನ್ನು ನೋಡಿದಾಗ ಈ ಮಾತಿನ ಅರ್ಥವಾದೀತು. ಬೇಸಾಯಗಾರನ ಜೀವನ ನೆಲದ ಸುತ್ತ ಹೆಣೆದುಕೊಂಡಿದೆ. ಇದೇ ಕಾರಣಕ್ಕಾಗಿಯೇ ಇಲ್ಲಿ ನಿಸರ್ಗಕ್ಕೆ ಮೇಲುಗೈ. ಗ್ರಾಮಸಮಾಜದಲ್ಲಿ ಕೆಲವೇ ಕೆಲವರು ಒತ್ತೊಟ್ಟಿಗೆ ಇರುವುದರಿಂದ ವೈಯಕ್ತಿಕ ಸಂಬಂಧಗಳು ಬೆಳೆಯುವುದು ಸಹಜ. ಹೀಗೆ ಗ್ರಾಮಸಮಾಜ ಕೃಷಿ ಪ್ರಧಾನವಾದುದು.

ಹೀಗಿದ್ದರೂ ಕೃಷಿಯಲ್ಲದ ಇತರ ಉದ್ಯೋಗಗಳಿರುವ ಸಮುದಾಯಗಳನ್ನೂ ಗ್ರಾಮಸಮಾಜದಲ್ಲಿ ಸೇರಿಸುವುದಿದೆ. ಆದಿವಾಸಿಗಳ ನೆಲೆಗಳೂ ಹೊಲಗಳ ಮಧ್ಯ ಇರುವ ಒಂದೆರಡು ಮನೆಗಳಿರುವ ಕೃಷಿ ಗ್ರಾಮಗಳೂ ಕೃಷಿಕರೇ ತುಂಬಿರುವ ಜನನಿಬಿಡ ಗ್ರಾಮಗಳೂ ಗಣಿಗ್ರಾಮಗಳೂ ಬೆಸ್ತರ ಹಳ್ಳಿಗಳೂ ವಿವಿಧ ಕಸಬಿನವರ ಹಳ್ಳಿಗಳೂ ವಿವಿಧ ಜಾತಿಗಳೂ ವೃತ್ತಿಗಳೂ ನೆಲೆಸಿರುವ ಭಾರತದ ವಿಶಿಷ್ಟ ಗ್ರಾಮಗಳೂ ಮರುಭೂಮಿಯ ಅರಬರ ವಿಶಿಷ್ಟ ಆಶ್ರಯಗಳೂ ಹಿಮಸಾರಂಗದೊಡನೆ ಸಂಚರಿಸುವ ಜನರ ನೆಲೆಗಳೂ ಕುರುಬರ ಅಥವಾ ಗೋಪಾಲಕರ ಹಳ್ಳಿಗಾಡುಗಳೂ ಗ್ರಾಮಸಮಾಜದ ವಿವಿಧ ಉದಾಹರಣೆಗಳು.

ಇತ್ತೀಚೆಗೆ ಗ್ರಾಮೀಣ ಸಮಾಜಗಳನ್ನು ಗುರುತಿಸುವಲ್ಲಿ ಹೆಚ್ಚಾಗಿ ಜನಸಂಖ್ಯೆಯ ಮಾನದಂಡವನ್ನು ಬಳಸುತ್ತಿದ್ದಾರೆ. ಪ್ರತಿಯೊಂದು ದೇಶವೂ ತನ್ನದೇ ಆದ ಸೂಚ್ಯಂಕವನ್ನು ಬಳಸುತ್ತದೆ. ಭಾರತದ ಜನಗಣತಿಯ ಪ್ರಕಾರ 5,000ಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದು, ಚದರ ಮೈಲಿಗೆ 1,000ಕ್ಕಿಂತ ಹೆಚ್ಚು ಜನಸಾಂದ್ರತೆ ಇರುವ ಹಾಗೂ ಶೇ.75ಕ್ಕಿಂತ ಹೆಚ್ಚು ಪುರುಷರು ಕೃಷಿಯಲ್ಲದ ಇತರ ಉದ್ಯೋಗಗಳಲ್ಲಿ ತೊಡಗಿರುವ ಸಮುದಾಯಗಳೇ ನಗರಗಳು. ಈ ಲಕ್ಷಣಗಳನ್ನು ಪಡೆಯದಿರುವ ಚಿಕ್ಕ ಸಮಾಜಗಳು ಗ್ರಾಮೀಣ ಸಮಾಜಗಳು. ಬೇರೆ ದೇಶಗಳಲ್ಲೂ ಹೀಗೆಯೇ 25,000, 10,000, 20,000 ಜನರಿಗಿಂತ ಕಡಿಮೆ ಇರುವ ಸಮುದಾಯಗಳನ್ನು ಗ್ರಾಮೀಣ ಎಂದು ಕರೆಯುತ್ತಾರೆ. ಕೆಲವೊಮ್ಮೆ ಜನಸಾಂದ್ರತೆಯನ್ನೂ ಗಮನಕ್ಕೆ ತೆಗೆದುಕೊಳ್ಳುತ್ತಾರೆ. ಆದರೆ ಇಂಥ ಮಾನದಂಡಗಳು ಗ್ರಾಮಸಮಾಜದ ಸ್ವರೂಪವನ್ನು ಸರಿಯಾಗಿ ಕೊಡಲಾರವು. ಹಾಗೆಯೇ ಗ್ರಾಮ ಮತ್ತು ನಗರ ಸಮಾಜಗಳ ಭೇದಗಳನ್ನು ಸರಿಯಾಗಿ ತಿಳಿಸಲಾರವು. ಗ್ರಾಮದ ವ್ಯಾಖ್ಯೆಗೆ **ನೋಡಿ– ಗ್ರಾಮ**.

ಗ್ರಾಮಸ್ಥನ ಪ್ರಪಂಚ ನಗರವಾಸಿಯ ಪ್ರಪಂಚಕ್ಕಿಂತ ಹಲವು ರೀತಿಗಳಲ್ಲಿ ಭಿನ್ನವಾಗಿದೆ. ಅನೇಕ ಸಮಾಜವಿಜ್ಞಾನಿಗಳು ಈ ಅಂತರಗಳನ್ನು ಮೊದಲಿನಿಂದಲೂ ಗುರುತಿಸುತ್ತ ಬಂದಿದ್ದಾರೆ. ಆದರೆ ಹೆಚ್ಚು ವ್ಯವಸ್ಥಿತವಾದ ವರ್ಗೀಕರಣವನ್ನು ಸೊರೊಕಿನ್ ಮತ್ತು ಜಿಮ್ಮರ್‌ಮನ್ 1929ರಲ್ಲಿ ಕೊಟ್ಟರು. ಅವರ ಪ್ರಕಾರ ಅನೇಕ ಭೌತಿಕ ಮತ್ತು ಸಾಮಾಜಿಕ ಆಧಾರಗಳ ಮೇಲಿಂದ ಈ ಎರಡು ಪ್ರಪಂಚಗಳನ್ನು ಪ್ರತ್ಯೇಕಿಸುವುದು ಸಾಧ್ಯ. ಕೃಷಿ ಗ್ರಾಮಸಮಾಜದ ಮುಖ್ಯ ಉದ್ಯೋಗವಾದರೆ ವಾಣಿಜ್ಯ ಯಾಂತ್ರಿಕ ಕಸಬುಗಳು, ಆಡಳಿತ ಮುಂತಾದವು ನಗರಸಮಾಜದ ಉದ್ಯೋಗಗಳು. ಗ್ರಾಮ ಸಮಾಜದ್ದು ನಿಸರ್ಗದ ಆವರಣ. ನಗರ ಸಮಾಜದ್ದು ಮಾನವ ಆವರಣ. ಗ್ರಾಮ ಸಮುದಾಯಗಳು ಗಾತ್ರದಲ್ಲಿ ಚಿಕ್ಕವು; ನಗರದವು ದೊಡ್ಡವು. ಗ್ರಾಮಸಮಾಜದ ಜನಸಾಂದ್ರತೆ ವಿರಳ ; ನಗರದಲ್ಲಿ ಅಧಿಕ. ಗ್ರಾಮೀಣ ಜನ ಹೆಚ್ಚಾಗಿ ಒಂದೇ ಜನಾಂಗೀಯ ಹಾಗೂ ಮಾನಸಿಕ ಲಕ್ಷಣಗಳನ್ನು ಹೊಂದಿರುತ್ತಾರೆ. ನಗರವಾಸಿಗಳಲ್ಲಿ ವೈವಿಧ್ಯ ಬಹಳ. ಭಿನ್ನತೆಗಳು ನಗರಗಳಲ್ಲಿ ಅತಿ ಹೆಚ್ಚು. ಒಂದು ಪ್ರದೇಶದಿಂದ ಇನ್ನೊಂದಕ್ಕೆ, ಒಂದು ಉದ್ಯೋಗದಿಂದ ಇನ್ನೊಂದಕ್ಕೆ ಸಂಚರಿಸುವುದು ಗ್ರಾಮಸಮಾಜದಲ್ಲಿ ಎಷ್ಟು ಅಸಾಧ್ಯವೋ ನಗರಸಮಾಜದಲ್ಲಿ ಅಷ್ಟು ಸಹಜ. ಗ್ರಾಮೀಣ ತನ್ನ ಕೆಲವೇ ಕೆಲವು ಒಡನಾಡಿಗಳೊಡನೆ ಸಂಬಂಧಗಳನ್ನು ಹೊಂದಿರುತ್ತಾನೆ. ಈ ಸಂಬಂಧಗಳು ಮುಖಾಮುಖಿಯೂ ವೈಯಕ್ತಿಕವೂ ಗಾಢವೂ ಇರುತ್ತವೆ. ನಗರವಾಸಿಯ ವಲಯ ವಿಶಾಲವಾದುದು. ಅಲ್ಲದೆ ಅವನ ಸಂಬಂಧಗಳು ಹೆಚ್ಚಾಗಿ ಔಪಚಾರಿಕವಾದವು, ತಾತ್ಕಾಲಿಕವಾದವು.

ಈ ವಿಭೇದಗಳನ್ನು ಪೂರ್ಣವಾಗಿ ಒಪ್ಪಲಾಗದು. ಅಲ್ಲದೆ, ಆಧುನಿಕ ಸಮಾಜ ವಿಜ್ಞಾನಿಗಳು ಸೂಚಿಸಿದಂತೆ ಇವು ಅಂಶಗಳಲ್ಲಿನ ಅಂತರಗಳೇ ಹೊರತು ಪ್ರಕಾರಗಳಲ್ಲಿನ ಮೂಲಭೂತ ಅಂತರಗಳಲ್ಲ. ನಗರಸಮಾಜದಲ್ಲೂ ಪ್ರಾಥಮಿಕ ಸಂಬಂಧಗಳ ಜಾಲಗಳನ್ನು ಈಗ ಹೆಚ್ಚುಹೆಚ್ಚಾಗಿ ಗುರುತಿಸಲಾಗುತ್ತಿದೆ. ಗ್ರಾಮ ಮತ್ತು ನಗರಗಳ ಜನಗಳಲ್ಲಿ ಪರಸ್ಪರ ವಿನಿಮಯ ಹೆಚ್ಚುತ್ತಿದೆ ಎಂಬುದೂ ಸತ್ಯ. ಸಾಂಪ್ರದಾಯಿಕ ಗ್ರಾಮಗಳಲ್ಲಿಯೂ ಕೃಷಿಯಲ್ಲದೆ ಇತರ ಉದ್ಯೋಗಗಳು ಹೆಚ್ಚಿವೆ. ನಗರಗಳಲ್ಲಿ ದುಡಿಯುವ ಜನ ಗ್ರಾಮಗಳಲ್ಲಿ ಮನೆಮಾಡಿಕೊಳ್ಳುವುದೂ ಕೆಲವು ದೇಶಗಳಲ್ಲಿ ಇತ್ತೀಚೆಗೆ ಹೆಚ್ಚುತ್ತಿದೆ. ಈ ಎಲ್ಲ ಕಾರಣಗಳಿಗಾಗಿ ಗ್ರಾಮ ನಗರ ವಿಭೇದಗಳನ್ನು ಹಿಂದಿನಷ್ಟು ನಿಚ್ಚಳವಾಗಿ ಗುರುತಿಸುವುದು ಅಸಾಧ್ಯವಾಗಿದೆ. ಗ್ರಾಮವೆಲ್ಲಿ ಮುಗಿಯಿತು, ನಗರವೆಲ್ಲಿ ಪ್ರಾರಂಭವಾಯಿತು ಎಂದು ಹೇಳುವುದು ಕಷ್ಟ. ಇದಕ್ಕಾಗಿಯೇ ಗ್ರಾಮ ನಗರ ಸಾಂತತ್ಯ ಎಂಬ ಕಲ್ಪನೆ ಈಗ ಬಳಕೆಗೆ ಬಂದಿದೆ. ಮುಖ್ಯ ನಗರ, ನಗರ, ಪಟ್ಟಣ, ಕಸಬ, ಗ್ರಾಮ, ಕೊಪ್ಪಲು, ಬಸ್ತಿ – ಇವೆಲ್ಲ ಸಾಮಾಜಿಕ ರೋಹಿತದಲ್ಲಿ ಒಂದರಲ್ಲೊಂದು ವ್ಯಾಪಿಸಿಕೊಂಡಿವೆ ಎಂದು ಸಮಾಜವಿಜ್ಞಾನಿಗಳ ಅಭಿಪ್ರಾಯ.

ಸು. 1800ರಿಂದ ಪ್ರಪಂಚದಾದ್ಯಂತ ನಗರಗಳು ಬೆಳೆಯುತ್ತಿದ್ದರೂ ಇಂದಿಗೂ ಜನಸಂಖ್ಯೆಯ ಬಹುಪಾಲು ಗ್ರಾಮಸಮಾಜಕ್ಕೆ ಸೇರಿದೆ. 20,000ಕ್ಕಿಂತ ಕಡಿಮೆ ಜನರಿರುವ ಪ್ರದೇಶಗಳಲ್ಲಿ ವಾಸಿಸುವ ಜನಸಂಖ್ಯೆ 1800ರಲ್ಲಿ ಶೇ. 97 ಇತ್ತು. ಅದು 1850ರಲ್ಲಿ ಶೇ. 95, 1900 ರಲ್ಲಿ ಶೇ. 90.8 ಹಾಗೂ 1950 ರಲ್ಲಿ ಶೇ. 79 ಆಯಿತು. ಈ ಪ್ರಮಾಣ ಈಗ ಆಫ್ರಿಕದಲ್ಲಿ ಶೇ. 91, ಏಷ್ಯದಲ್ಲಿ ಶೇ. 87, ಮಧ್ಯ ಅಮೆರಿಕದಲ್ಲಿ ಶೇ. 79 ಯುರೋಪಿನಲ್ಲಿ ಶೇ. 65 ಎಂದು ಅಂದಾಜಾಗಿದೆ. ಭಾರತದಲ್ಲಿ 5,000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಹಳ್ಳಿಗಳಲ್ಲಿ ಶೇ. 68.8 (2011) ಜನ ವಾಸಿಸುತ್ತಾರೆ. ಒಟ್ಟಿನಲ್ಲಿ ನಗರೀಕರಣ ಹೆಚ್ಚುತ್ತಿದ್ದರೂ ಗ್ರಾಮಸಮಾಜದ ಪ್ರಾಮುಖ್ಯ ಕುಗ್ಗಿಲ್ಲ. ಅಲ್ಲದೆ, ಗ್ರಾಮೀಣ ಜನತೆ ಹೆಚ್ಚಾಗಿ ಅಭಿವೃದ್ಧಿಶೀಲ ದೇಶಗಳಲ್ಲಿರುವುದರಿಂದ ಸಾಮಾಜಿಕ ಹಾಗೂ ಆರ್ಥಿಕ ಬೆಳೆವಣಿಗೆಯ ದೃಷ್ಟಿಯಿಂದಲೂ ಗ್ರಾಮಸಮಾಜವನ್ನು ಸರಿಯಾಗಿ ತಿಳಿದುಕೊಳ್ಳುವುದು ಅವಶ್ಯ. ಬದಲಾಗುತ್ತಿರುವ ಭಾರತೀಯ ಗ್ರಾಮಸಮಾಜವನ್ನು ಅನುಲಕ್ಷಿಸಿ ಹೇಳುವುದಾದರೆ ಈ ತಿಳಿವಳಿಕೆ ಈಗ ಎಂದಿಲ್ಲದ ಮಹತ್ತ್ವ ಪಡೆದಿದೆ.

ಐತಿಹಾಸಿಕವಾಗಿ ನೋಡಿದರೆ, ಗ್ರಾಮಸಮಾಜ ಮಾನವರ ಅತ್ಯಂತ ಮುಖ್ಯವಾದ ವಾಸಸ್ಥಾನ. ಮಾನವ ಸಮಾಜ ಗ್ರಾಮೀಣ ಸಮಾಜವೆಂಬ ತೊಟ್ಟಿಲಲ್ಲಿ ಆಡಿ ಬೆಳೆಯಿತೆಂದು ಹೇಳಿದರೆ ತಪ್ಪಲ್ಲ. ಎಂದಿನಿಂದಲೂ ಅದು ನಮಗೆ ಆಹಾರ ಹಾಗೂ ಕಚ್ಚಾವಸ್ತುಗಳನ್ನು, ಆಹಾರ ಸಾಮಗ್ರಿಗಳನ್ನು ಕೊಟ್ಟು ಪೋಷಿಸುತ್ತಿದೆ. ಇಂದಿನ ನಗರಗಳೂ ಈ ಭರವಸೆಯಿಂದಲೇ ಉಳಿದುಕೊಂಡಿವೆ. ಹಿಂದಿನಿಂದಲೂ ಗ್ರಾಮಸಮಾಜ ನಗರಗಳಿಗೆ ಆಹಾರವನ್ನು ಮಾತ್ರವಲ್ಲ, ಜನಸಂಖ್ಯೆಯನ್ನೂ ಕೊಡುತ್ತ ಬಂದು ಅವನ್ನು ವೃದ್ಧಿಸಿದೆ. ಪ್ರಪಂಚದ ನೈಸರ್ಗಿಕ ಸಂಪತ್ತನ್ನು ಕಾಪಾಡುವುದು ಗ್ರಾಮಸಮಾಜದ ವಿಶಿಷ್ಟ ಹೊಣೆ. ಸಾಮಾಜಿಕ ಸಂಕ್ರಾಂತಿ ಕಾಲಗಳಲ್ಲಿ ಗ್ರಾಮಸಮಾಜ ಎಲ್ಲರಿಗೂ ರಕ್ಷಣೆ ನೀಡಿದೆ. ಈಗಿನ ದಿನಗಳಲ್ಲಿ ನಗರವಾಸಿಗಳಿಗೂ ಆಶ್ರಯನೀಡಿ ತನ್ನ ಉಪಯುಕ್ತತೆಯನ್ನು ಹೆಚ್ಚಿಸಿಕೊಂಡಿದೆ. ಕೊನೆಯದಾಗಿ, ಮಾನವ ಸಂಸ್ಕೃತಿಯ ತಿರುಳನ್ನು ರಕ್ಷಿಸಿ ಮುಂದುವರಿಸಿಕೊಂಡು ಹೋಗುವುದರಲ್ಲಿ ಇದು ಮಹತ್ತ್ವದ ಪಾತ್ರವಹಿಸಿದೆ.

ಗ್ರಾಮಸಮಾಜದ ಲಕ್ಷಣಗಳೂ ಕಾರ್ಯಗಳೂ ಕಳೆದ ಒಂದು ಶತಮಾನದಿಂದ ತೀವ್ರವಾಗಿ ಬದಲಾಗುತ್ತಿವೆಯೆಂದು ಹೇಳಬಹುದು. ಒಬ್ಬ ಸಮಾಜವಿಜ್ಞಾನಿ ಈ ಪರಿವರ್ತನೆಯನ್ನು ಗ್ರಾಮೀಣ ಕ್ರಾಂತಿ ಎಂದು ಕರೆದಿದ್ದಾನೆ. ಈ ಕ್ರಾಂತಿ ನವಶಿಲಾಯುಗದಲ್ಲಿ ಆದ ಕೃಷಿಯ ಆವಿಷ್ಕಾರದಂತೆಯೇ ಇಲ್ಲವೆ ನಗರ, ಬರೆವಣಿಗೆ ಹಾಗೂ ಲೋಹಗಳ ಆವಿಷ್ಕಾರದಂತೆಯೇ ಇಲ್ಲವೆ ವಿಜ್ಞಾನ ಹಾಗೂ ತಂತ್ರಜ್ಞಾನದ ಕ್ರಾಂತಿಯಂತೆಯೇ ಮಹತ್ತ್ವಪಡೆದಿದೆಯೆಂದು ಅವನ ಅಭಿಪ್ರಾಯ. ಸಾಂಪ್ರದಾಯಿಕ ಗ್ರಾಮಸಮಾಜಗಳು ಆಧುನೀಕರಣಕ್ಕೆ ಗುರಿಯಾಗುತ್ತಿವೆ. ಹಿಂದೆ ಉತ್ತರ ಅಮೆರಿಕ, ಇಂಗ್ಲೆಂಡ್, ಪಶ್ಚಿಮ ಯುರೋಪಿನಲ್ಲಿ ಆದ ಬದಲಾವಣೆಗಳಿಗಿಂತ ತ್ವರಿತವಾಗಿ ಬೇರೆ ಕಡೆಗಳಲ್ಲೂ ಈ ಪ್ರಕ್ರಿಯೆ ನಡೆಯುತ್ತಿದೆ. ನಗರಸಮಾಜದ ಕೆಲವು ಲಕ್ಷಣಗಳನ್ನೂ ಆಕರ್ಷಣೆಗಳನ್ನೂ ಗ್ರಾಮಸಮಾಜ ಸ್ವೀಕರಿಸುತ್ತಿದೆ ಎಂಬುದು, ಇಲ್ಲವೆ ನಗರೀಕರಣವಾಗುತ್ತಿದೆ ಎಂಬುದು ಪರಿವರ್ತನೆಯ ಒಂದು ಅಂಶ ಮಾತ್ರ. ಇದಕ್ಕಿಂತ ಮುಖ್ಯವಾದ ಅಂಶವೆಂದರೆ ಗ್ರಾಮ ನಗರ ಪ್ರಭೇದಗಳೇ ಮಾಯವಾಗುತ್ತಿರುವುದು. ವಿಜ್ಞಾನ ಮತ್ತು ತಾಂತ್ರಿಕತೆಯ ಬೆಳೆವಣಿಗೆಯೂ ಉಪಯೋಗವೂ ಸಾರ್ವತ್ರಿಕವಾದ ಮತ್ತೊಂದು ಬದಲಾವಣೆ. ಕ್ರಮೇಣ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ ಮಾರ್ಪಾಟುಗೊಂಡು ಹಣ ಮತ್ತು ಮಾರುಕಟ್ಟೆಗಳಿಗೆ ಪ್ರಾಮುಖ್ಯವಿರುವ ಆರ್ಥಿಕ ವ್ಯವಸ್ಥೆ ರೂಪುಗೊಳ್ಳುತ್ತಿದೆ. ಎಲ್ಲೆಲ್ಲೂ ಗ್ರಾಮೀಣ ಸಮುದಾಯಗಳು ಸಾಮಾಜಿಕ ಕ್ರಾಂತಿಗೆ ಸನ್ನದ್ಧವಾಗಿ ನಿಂತಂತಿವೆ.

ಈ ಶತಮಾನದಲ್ಲಿ ಸಾಧಿಸಿದ ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಗತಿಯೂ ಗ್ರಾಮಸಮಾಜದ ಮೇಲೆ ತನ್ನ ಪ್ರಭಾವವನ್ನು ಬೀರಿದೆ ಎಂಬುದು ನಿಸ್ಸಂಶಯದ ಮಾತು. ಈ ಪ್ರಭಾವದ ಪ್ರಮಾಣ ವಿವಿಧ ದೇಶಗಳಲ್ಲಿ ಬೇರೆಬೇರೆಯಾಗಿದೆ. ಭಾರತದಲ್ಲಿ ಯಾಂತ್ರೀಕೃತ ಕೃಷಿ ಇನ್ನೂ ಪೂರ್ಣಪ್ರಮಾಣದಲ್ಲಿ ಸಾಧ್ಯವಾಗಿಲ್ಲ. ಏಷ್ಯ ಮತ್ತು ಆಫ್ರಿಕದ ಅನೇಕ ಭಾಗಗಳಲ್ಲಿ ಅಗೆಯುವ ಕೋಲು ಅಥವಾ ಪ್ರಾಚೀನ ನೇಗಿಲನ್ನು ಬಿಟ್ಟರೆ ಬೇರೆ ಯಂತ್ರಗಳು ಇಲ್ಲ. ಒಂದು ಅಂದಾಜಿನ ಪ್ರಕಾರ ಪ್ರಪಂಚದ ವ್ಯವಸಾಯದಲ್ಲಿ ಉಪಯೋಗಿಸುವ ಶಕ್ತಿಯ ಹತ್ತರಲ್ಲಿ ಒಂಬತ್ತು ಪಾಲು ಮಾನವ ಹಾಗೂ ಪ್ರಾಣಿವರ್ಗದಿಂದ ಬರುತ್ತದೆ. ಸಾಂಪ್ರದಾಯಿಕ ಸಮಾಜಗಳು ಇಂದಿಗೂ ನಮ್ಮ ಜನಸಂಖ್ಯೆಯ ಶೇ. 80 ಭಾಗವನ್ನು ಕೃಷಿಯಲ್ಲೇ ತೊಡಗಿಸುತ್ತಿವೆ. ಹೀಗಿದ್ದರೂ ಇಂಗ್ಲೆಂಡಿನಂಥ ಕೆಲವು ದೇಶಗಳು ತಮ್ಮ ಕೆಲಸಗಾರರಲ್ಲಿ

ನೂರರಲ್ಲೈದು ಭಾಗವನ್ನು ಮಾತ್ರ ಕೃಷಿಯಲ್ಲಿ ತೊಡಗಿಸಿವೆ. ಒಟ್ಟಿನಲ್ಲಿ ಕೃಷಿಯಲ್ಲಿ ತೊಡಗಿದ ಶ್ರಮಿಕರ ಸಂಖ್ಯೆ ಕ್ರಮೇಣ ಇಳಿಯುತ್ತ ಬಂದಿದೆ. ಕೃಷಿಯಿಂದ ಬಿಡುಗಡೆ ಹೊಂದಿದ ಜನರು ಬೇರೆ ಉದ್ಯೋಗಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಅಥವಾ ಕೆಲವೊಮ್ಮೆ ನಿರುದ್ಯೋಗಿಗಳಾಗುತ್ತಿದ್ದಾರೆ. ಇದೊಂದು ಸಾರ್ವತ್ರಿಕವಾದ ಒಲವು – ಯಾಂತ್ರಿಕ ಪ್ರಗತಿಯ ಇನ್ನೊಂದು ಪರಿಣಾಮವೆಂದರೆ ಕೃಷಿ ಉತ್ಪಾದನೆ ಹೆಚ್ಚಿದುದು. ಇದರಿಂದಾಗಿ ಮತ್ತಿಷ್ಟು ಜನ ಭೂಮಿಯಿಂದ ಬಿಡುಗಡೆಗೊಂಡು ನಗರವಾಸಿಗಳಾಗುವ ಸಂಭವ ಹೆಚ್ಚಿತು. ಆಧುನಿಕ ಸಂಚಾರ ಮತ್ತು ಸಂಪರ್ಕ ವ್ಯವಸ್ಥೆಗಳು ಗ್ರಾಮ-ನಗರ ವಿನಿಮಯವನ್ನು ಹೆಚ್ಚಿಸಿದುವು. ಹೊಸ ದೃಷ್ಟಿಕೋನಗಳನ್ನು ಬೆಳೆಸಲು ಸಹಕಾರಿಯಾದುವು. ಹೀಗಾಗಿ ಸಾಂಪ್ರದಾಯಿಕ ಗ್ರಾಮಸಮಾಜಗಳು ಹೊಸ ರೂಪವನ್ನು ತಳೆಯುವ, ಸ್ಥಿತ್ಯಂತರಗೊಳ್ಳುವ ದಿಕ್ಕಿನಲ್ಲಿ ದಾಪುಗಾಲಿಕ್ಕಿವೆ.

ಸಾಂಪ್ರದಾಯಿಕ ಗ್ರಾಮೀಣ ಸಮಾಜದಲ್ಲಿ ಆರ್ಥಿಕ, ರಾಜಕೀಯ, ಧಾರ್ಮಿಕ ಇತ್ಯಾದಿ ವಿಭಾಗಗಳನ್ನು ಮಾಡಿ ಹೇಳುವುದು ಕಷ್ಟ. ಒಕ್ಕಲಿಗನೇ ಧಾರ್ಮಿಕ ಮುಖಂಡನೂ ರಾಜಕೀಯ ಮುಂದಾಳೂ ವೈದ್ಯನೂ ಬಡಿಗನೂ ಇರುವುದು ಸಾಮಾನ್ಯ. ಸ್ವಯಂಪೂರ್ಣತೆಯೂ ಸಹಕಾರವೂ ಇಲ್ಲಿನ ಲಕ್ಷಣ. ಜನ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವಷ್ಟು ಕೃಷಿಮಾಡುವುದು ವಾಡಿಕೆ. ಐದರಲ್ಲಿ ನಾಲ್ಕು ಪಾಲು ಜನರು ಇಂಥ ಸಾಗುವಳಿ ಮಾಡುತ್ತಾರೆ. ಆದರೆ ಅನೇಕ ಪ್ರಭಾವಗಳಿಂದಾಗಿ, ಮುಖ್ಯವಾಗಿ ತಾಂತ್ರಿಕತೆ ಮತು ವೈಜ್ಞಾನಿಕ ಬೆಳವಣಿಗೆಯ ಪ್ರಭಾವಗಳಿಂದಾಗಿ, ಹಣ ಮತ್ತು ಪೇಟೆಗಳು ಮುಖ್ಯವಾಗಿರುವ ಹೊಸ ಅರ್ಥವ್ಯವಸ್ಥೆ ಎಲ್ಲೆಡೆಗಳಲ್ಲಿ ರೂಪುಗೊಂಡಿದೆ. ಹಳೆಯ ಕಟ್ಟುಪಾಡುಗಳು, ಶ್ರಮವಿಭಜನೆಗಳು ಮಾಯವಾಗುತ್ತಿವೆ. ಕಾರ್ಯಕ್ಷಮತೆ, ಲಾಭ, ವಿಶೇಷ ಪರಿಣತಿಗಳಿಗೆ ಮಹತ್ತ್ವ ದೊರಕುತ್ತಿವೆ. ಮುಂದುವರಿದ ದೇಶಗಳಲ್ಲಿ ಕೃಷಿ ಲಾಭದಾಯಕವಾಗಿದ್ದು ಕೃಷಿಕನ ವರಮಾನ ಏರುತ್ತಿದೆ. ಬೇರೆ ಉದ್ದಿಮೆಗಳಂತೆ ಕೃಷಿಯೂ ಒಂದು ಲಾಭಪ್ರದ ಉದ್ದಿಮೆಯಾಗಿ ಬೆಳೆಯುತ್ತಿದೆ.

ಈ ಬೆಳವಣಿಗೆಗಳು ಭಾರತದ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿಯೂ ಪ್ರಭಾವ ಬೀರುತ್ತಿವೆ. ಅನ್ಯರಿಂದ ಆದ ಶೋಷಣೆ, ಗ್ರಾಮಕೈಗಾರಿಕೆಗಳು ನಾಶವಾದದ್ದು, ಒಕ್ಕಲುತನ ಪದ್ಧತಿಗಳಲ್ಲಿ ಹೊಸತನ್ನು ಅಳವಡಿಸಿಕೊಳ್ಳದೇ ಇದ್ದುದು ಮುಂತಾದ ಕಾರಣಗಳಿಂದ ಭಾರತದ ಆರ್ಥಿಕ ವ್ಯವಸ್ಥೆ ಇನ್ನೂ ಹೀನಾವಸ್ಥೆಯಲ್ಲಿ ಇದೆ. ಕೃಷಿಯೇ ಮುಖ್ಯ ಉದ್ಯೋಗವಾಗಿದ್ದರೂ ರಾಷ್ಟ್ರೀಯ ಉತ್ಪನ್ನದ ಅರ್ಧದಷ್ಟನ್ನು ಮಾತ್ರ ಅದು ಗಳಿಸುತ್ತಿದೆ. ಗ್ರಾಮೀಣ ಋಣಗ್ರಸ್ತತೆಯೂ ವಿಪರೀತವಾಗಿದೆ.

ಭಾರತೀಯ ಗ್ರಾಮಸಮಾಜ ಸಾಕಷ್ಟು ಪುರಾತನವಾದ್ದು. ಅವಿಭಕ್ತಕುಟುಂಬ, ಜಾತಿಪದ್ಧತಿ, ಗ್ರಾಮಪಂಚಾಯತಿ, ಜಾಜಮಾನಿ ಮೊದಲಾದ ವ್ಯವಸ್ಥೆಗಳು ಅದರ ಅವಿಭಾಜ್ಯ ಅಂಗಗಳಾಗಿದ್ದವು. ಸಮಾಜಜೀವನ ಸಹಕಾರ ಮತ್ತು ಸ್ವಯಂಪರಿಪೂರ್ಣತೆಯಿಂದ ಕೂಡಿತ್ತು. ಕೆಲವರು ಹೇಳುವಂತೆ ಗ್ರಾಮಗಳು ಗಣರಾಜ್ಯಗಳಾಗಿರಲಿ ಬಿಡಲಿ, ಅವು ಸುಮಾರು 8,000 ವರ್ಷಗಳಿಂದಲೂ ರಾಷ್ಟ್ರವನ್ನು ರಕ್ಷಿಸಿವೆ, ಸಂಸ್ಕೃತಿಯನ್ನು ಉಳಿಸಿವೆ. ಪರಕೀಯ ಆಕ್ರಮಣಗಳು ಸಂಭವಿಸಿದಾಗಲೆಲ್ಲ ರಕ್ಷಣೆ ಒದಗಿಸಿವೆ. ಮೊಗಲರ ಕಾಲದವರೆಗೂ ಗ್ರಾಮಸಮಾಜ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿತ್ತು. ಆದರೆ ಬ್ರಿಟಿಷ್ ಪ್ರಭುತ್ವ ಮತ್ತು ಅದರೊಂದಿಗೆ ಬಂದ ವಿಜ್ಞಾನ ಮತು ತಾಂತ್ರಿಕತೆ ಭಾರತದ ಗ್ರಾಮಸಮಾಜದ ಬುನಾದಿಯನ್ನು ಅಲುಗಿಸಿದುವು. ಔದ್ಯೋಗೀಕರಣದಿಂದಾಗಿ ಹಿಂದಿನ ಗೃಹಕೈಗಾರಿಕೆಗಳು ನಶಿಸತೊಡಗಿದವು. ಗ್ರಾಮಸ್ಥ ತನಗೆ ಬೇಕಾದ ಬಟ್ಟೆಬರೆ, ವಿದ್ಯೆ, ಸಲಕರಣೆಗಳಿಗಾಗಿ ನಗರಗಳನ್ನು ಅವಲಂಬಿಸಿಕೊಳ್ಳುವಂತಾಯಿತು. ನಗರೀಕರಣದ ಪ್ರಭಾವದಿಂದ ಹಳ್ಳಿಯ ಹೊಲಗಳು ದುಡ್ಡಿದ್ದವರ, ಪಟ್ಟಣದ ವ್ಯಾಪಾರಸ್ಥರ ಸ್ವತ್ತಾದವು. ಗ್ರಾಮೀಣ ಕಾರ್ಮಿಕರು ಪಟ್ಟಣದವರಂತೆ ವರ್ತಿಸತೊಡಗಿದರು. ಒಂದು ನೆರೆಹೊರೆ ಎಂಬುದನ್ನು ಬಿಟ್ಟರೆ ಇಂದಿನ ಗ್ರಾಮ ಹಿಂದಿನ ಗ್ರಾಮವಾಗಿ ಉಳಿದಿಲ್ಲ. ಸಮಾಜದ ಭದ್ರ ತಳಹದಿಯಾಗಿದ್ದ ಕುಟುಂಬವೂ ಪಾಶ್ಚಾತ್ಯ ನಾಗರಿಕತೆಯ ಪ್ರಭಾವದಿಂದ ಬದಲಾಗುತ್ತಿದೆ. ಭೂಮಿ ಇಡೀ ಸಮುದಾಯದ್ದಲ್ಲ, ವ್ಯಕ್ತಿಯ ಖಾಸಗಿ ಆಸ್ತಿ ಎಂದು ಬ್ರಿಟಿಷರು ಮಾನ್ಯಮಾಡುತ್ತಲೇ ಗ್ರಾಮಸಮಾಜದ ತಳಹದಿಗೆ ಧಕ್ಕೆ ಬಂತು. ಭೂಮಾಲೀಕರು ಅನ್ಯತ್ರ ವಾಸಿಸುವುದೂ ಶೋಷಣೆ ನಡೆಸುವುದೂ ಸಾಮಾನ್ಯವಾಯಿತು.

ಹೊಸ ಅರ್ಥವ್ಯವಸ್ಥೆಯಿಂದ ಹಿಂದಿನ ಪರಸ್ಪರಾಶ್ರಯ ತಪ್ಪಿದೆ. ಹಿಂದೆ ಉತ್ತರ ಭಾರತದ ಜಾಜಮಾನಿ ಪದ್ಧತಿಯಂತೆ ಕೃಷಿಕ ತನಗೆ ಬೇಕಾದ ಅನೇಕ ಸೇವೆಗಳಿಗಾಗಿ ಬ್ರಾಹ್ಮಣ, ಕಮ್ಮಾರ, ಬಡಗಿ, ಕ್ಷೌರಿಕ ಮುಂತಾದವರ ಸಹಾಯ ಕೋರುತ್ತಿದ್ದ. ಬ್ರಾಹ್ಮಣ, ಕಮ್ಮಾರ ಮತ್ತಿತರು ಯಜಮಾನನಾದ ಕೃಷಿಕನಿಂದ ಗೊತ್ತುಮಾಡಿದ ಪ್ರತಿಫಲ ಪಡೆಯುತ್ತಿದ್ದರು. ಬಡಗ ಆದಿವಾಸಿಗಳು ಅನ್ನ ಉತ್ಪಾದಿಸಿ ಕೊತ ಜನರಿಗೆ ಆಹಾರ ಒದಗಿಸಿದರೆ, ಪ್ರತಿಫಲವೆಂದು ಕೊತರು ಬಡಗರಿಗೆ ಕೃಷಿ ಉಪಕರಣಗಳನ್ನೂ ಅಡಿಗೆಯ ಪಾತ್ರೆಗಳನ್ನೂ ಉತ್ಸವ ಸಮಾರಂಭಗಳಲ್ಲಿ ಸಂಗೀತವನ್ನೂ ಒದಗಿಸುತ್ತಿದ್ದರು. ಪರಸ್ಪರ ಸಹಕಾರ ಅಥವಾ ಅಸಹಕಾರ ದೊಡ್ಡ ಶಕ್ತಿಯೆನಿಸಿತ್ತು. ಆದರೆ ಈಗಿನ ಹಣ ಮತ್ತು ಮಾರುಕಟ್ಟೆಗಳು ಇವರನ್ನೆಲ್ಲ ಸ್ವತಂತ್ರರನ್ನಾಗಿಸಿವೆ. ಕರ್ನಾಟಕದ ಹಳೇಮಗ ಪದ್ಧತಿಯಾಗಲಿ, ಬಿಟ್ಟಿ ಮುಯ್ಯಿ ಮೊದಲಾದ ಆರ್ಥಿಕ ಸಾಮಾಜಿಕ ಪದ್ಧತಿಗಳಾಗಲಿ ಇಂದು ಉಳಿದಿಲ್ಲ. ಇವೆಲ್ಲ ಹಿಂದೆ ಗ್ರಾಮಸಮಾಜಕ್ಕೆ ಆಂತರಿಕ ಶಕ್ತಿಯನ್ನು ಒದಗಿಸುತ್ತಿದ್ದವು. ಅದೀಗ ಮಾಯವಾಗಿವೆ.

ಹೊಸ ಕಾನೂನುಗಳೂ ಈ ಪ್ರಕ್ರಿಯೆಯಲ್ಲಿ ಪರಿಣಾಮ ಬೀರಿವೆ. ಜಮೀನುದಾರಿ ನಿರ್ಮೂಲನ ಕಾನೂನು, ಉಳುವವನೇ ನೆಲದೊಡೆಯ ಎಂಬ ಕಾನೂನು, ಮತ್ತಿತರ ಭೂಕಾಯಿದೆಗಳು ಬರುತ್ತಲೇ ಚಿಕ್ಕವರೂ ಭೂಮಿಯ ಒಡೆಯರಾದರು. ಭೂಮಿ ಚೂರಾಗುತ್ತ ಬಂತು; ಸ್ತ್ರೀ ಮಾಲೀಕಳಾದಳು. ಹೀಗೆ ಅನೇಕ ಏರುಪೇರುಗಳಾದವು. ಗುಂಪಿನ ರಾಜಕೀಯ, ಗ್ರಾಮ ಪಂಚಾಯತಿ ಚುನಾವಣೆಗಳು ಹೊಸ ಸಮಸ್ಯೆಗಳನ್ನು ತಂದುವು. ಒಟ್ಟಿನಲ್ಲಿ ಗ್ರಾಮ ಜೀವನ ಕಲಕಿದಂತಾಗಿದೆ, ನಿಜ. ಹಾಗೆಯೇ ದಶಕಗಳಿಂದ ಗ್ರಾಮವನ್ನು ಪುನಾರಚಿಸುವ ಯತ್ನ ಭರದಿಂದ ನಡೆದಿದೆ. **ನೋಡಿ– ಗ್ರಾಮಪುನರ್ರಚನೆ.** (ಎಚ್.ವಿ.ಎಸ್.)

**ಗ್ರಾಮಾಧಿಕಾರಿಗಳು :** ಗ್ರಾಮಸ್ಥರಿಂದ ಕಂದಾಯದ ವಸೂಲಿ, ಗ್ರಾಮದ ಸುವ್ಯವಸ್ಥೆಯ ಪಾಲನೆ ಮುಂತಾದ ಕರ್ತವ್ಯಗಳ ನಿರ್ವಹಣೆಗಾಗಿ ಸರ್ಕಾರದಿಂದ ನಿಯುಕ್ತರಾದ ಅಧಿಕಾರಿಗಳು. ಭಾರತದ ಪುರಾತನ ಆಡಳಿತ ವ್ಯವಸ್ಥೆಯ ಒಂದು ಅಂಗ. ಪ್ರಸಕ್ತಶಕದ ಪ್ರಾರಂಭದ ವೇಳೆಗೇ ಇವರು ಅಸ್ತಿತ್ವದಲ್ಲಿದ್ದಂತೆ ಕಾಣುತ್ತದೆ. ಮೊದಲು ಭೂಕಂದಾಯವನ್ನು ಧಾನ್ಯರೂಪದಲ್ಲಿ ಶೇಖರಿಸುವ ಪರಿಪಾಠ ಇತ್ತು. ಉತ್ಪನ್ನದ ಒಂದಾರಂಶವನ್ನು (ಷಷ್ಠತಮೋಭಾಗಃ) ಅರಸನಿಗೆ ತೆರಿಗೆಯಾಗಿ (ಭಾಗದೇಯ, ಕರ, ಬಲಿ) ಕೊಡಬೇಕಾಗುತ್ತಿತ್ತು. ಇದನ್ನು ರೈತರಿಂದ ಶೇಖರಿಸುವ ವ್ಯವಸ್ಥೆಯಲ್ಲಿ ಗ್ರಾಮಾಧಿಕಾರಿಯದು ಪ್ರಮುಖವಾದ ಪಾತ್ರವಾಗಿತ್ತು. ಗ್ರಾಮಾಧಿಕಾರಿ ಹುದ್ದೆ ಇಬ್ಭಾಗವಾಗಿ ಗಾವುಂಡರ್, ಗೌಡ, ಪಟೇಲ ಎಂಬ ಹೆಸರಿನ ಮತ್ತು ಕುಲಕರ್ಣಿ, ಶಾನುಭೋಗ, ಪಟವಾರಿ, ಕರ್ಣಂ ಎಂಬ ಹೆಸರಿನ ಎರಡು ಪ್ರತ್ಯೇಕ ಹುದ್ದೆಗಳಾದ್ದು ಪ್ರಾಯಶಃ ಅನಂತರದ ಶತಕಗಳಲ್ಲಿ. ಷೇರ್‌ಷಹ, ಅಕ್ಬರ್, ರಾಜಾ ತೋದರಮಲ್ ಮೊದಲಾದವರೂ ಅನಂತರ ಬ್ರಿಟಿಷರೂ ಕಾರ್ಯರೂಪಕ್ಕೆ ತಂದ ಭೂಕಂದಾಯ, ಭೂಮಾಪನಗಳ ವ್ಯವಸ್ಥೆಯ ಅಂಗವಾಗಿ ಹಣದ ರೂಪದಲ್ಲಿ ಕಂದಾಯದ ವಸೂಲಿ ಪ್ರಾರಂಭವಾದಾಗ ಗ್ರಾಮ ಲೆಕ್ಕಿಗರ ಅಗತ್ಯ ಹೆಚ್ಚಾಗಿ, ಈ ಇಬ್ಭಾಗವಾಗಿರಬೇಕು. ರಾಜಸ್ವ ಅಥವಾ ಕಂದಾಯ ಆಡಳಿತದ ಮೂಲಾಧಾರ. ಗ್ರಾಮಾಧಿಕಾರಿಯ ಆಡಳಿತದ ಯಶಸ್ಸು ಬಹುಮಟ್ಟಿಗೆ ಅವನ ದಕ್ಷತೆಯನ್ನವಲಂಬಿಸಿರುತ್ತದೆ. ಕುಲಕರ್ಣಿ ಕಂದಾಯದ ಲೆಕ್ಕಪತ್ರ ಮತ್ತು ಭೂದಾಖಲೆಗಳನ್ನು ನೋಡಿಕೊಂಡರೆ ಗೌಡ ಗ್ರಾಮದ ಶಾಂತಿ, ಸುವ್ಯವಸ್ಥೆಗಳನ್ನು ನೋಡಿಕೊಂಡು ಕುಲಕರ್ಣಿಗೆ ತೆರಿಗೆ ಶೇಖರಣೆಯಲ್ಲಿ ನೆರವು ನೀಡುತ್ತಾನೆ. ಇವರಿಗೆ ಆವಶ್ಯಕ ಸಹಾಯಕ್ಕಾಗಿ ತೋಟಿ, ತಳವಾರ, ನೀರಗಂಟಿ, ಓಲೇಕಾರ, ಮಹಾರ ಎಂಬ ಹೆಸರಿನ ಕಿರಿಯ ಸೇವಕ ಹುದ್ದೆಗಳೂ ಪ್ರತಿಗ್ರಾಮದಲ್ಲೂ ನೆಲೆಗೊಂಡಿವೆ. ಈ ಎಲ್ಲ ಹುದ್ದೆಗಳೂ ಆನುವಂಶಿಕವಾದವು. ಮೈಸೂರು, ಮದರಾಸು, ಮುಂಬಯಿ, ಹೈದರಾಬಾದು ಆಡಳಿತಗಳಿಗೆ ಸೇರಿದ್ದ ಕರ್ನಾಟಕ ವಿಭಾಗಗಳಲ್ಲಿ ಈ ಹುದ್ದೆಗಳಿಗೆ ಸಂಬಂಧಿಸಿದಂತೆ ಮೇಲೆ ಹೇಳಿದಂತೆ ಬೇರೆಬೇರೆ ಹೆಸರುಗಳಿದ್ದುವು; ಬೇರೆಬೇರೆ ಕಾನೂನುಗಳೂ ನಿಯಮಾವಳಿಗಳೂ ನೂರಾರು ವರ್ಷಗಳಿಂದ ಜಾರಿಯಲ್ಲಿದ್ದುವು.

ಗ್ರಾಮಾಧಿಕಾರಿಗಳು ಸಲ್ಲಿಸುವ ಸೇವೆಗೆ ಕೊಡುವ ಪ್ರತಿಫಲಕ್ಕೆ ಪೋಟಗಿ ಎಂಬ ಹೆಸರಿದೆ. ಗೌಡ, ಕುಲಕರ್ಣಿಗಳಿಗೆ ಆಯಾ ಗ್ರಾಮದ ಕಂದಾಯದ ಶೇಕಡ ಮೂರು ಮತ್ತು ನಾಲ್ಕು ರೂಪಾಯಿಗಳನ್ನು ಅನುಕ್ರಮವಾಗಿ ಪೋಟಗಿ ಎಂದು ಲೆಕ್ಕ ಮಾಡಲಾಗುತ್ತಿತ್ತು. ಕಂದಾಯ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಈ ದರ ಕ್ರಮೇಣ ಕಡಿಮೆಯಾಗುತ್ತಿತ್ತು. ಕೆಲವು ಗ್ರಾಮಾಧಿಕಾರಿಗಳಿಗೆ ಭಾಗಶಃ ಕಂದಾಯಮಾಫಿಯುಳ್ಳ ಇನಾಂ ಜಮೀನುಗಳು ಸೇವೆಯ ಪ್ರತಿಫಲವಾಗಿ ಕೊಡಲ್ಪಟ್ಟಿದ್ದವು. ಗ್ರಾಮದ ಕಿರಿಯ ಸೇವಕರಿಗೆ ಇನಾಂ ಭೂಮಿ ಇರುತ್ತಿತ್ತೇ ಹೊರತು ಪೋಟಗಿ ಇರುತ್ತಿರಲಿಲ್ಲ. ಗ್ರಾಮಾಧಿಕಾರಿಗಳ ಪೋಟಗಿಯನ್ನು ಹತ್ತು ವರ್ಷಗಳಿಗೊಮ್ಮೆ ಪುನರ್ವಿಮರ್ಶಿಸಿ ನಿಗದಿ ಮಾಡಲಾಗುತ್ತಿತ್ತು.

ಕಿರಿಯ ನೌಕರರಾದ ತಳವಾರ, ತೋಟಿ ಮುಂತಾದವರಿಗೆ ರೈತರಿಂದ ವಾರ್ಷಿಕವಾಗಿ ಧಾನ್ಯದ ಮಾಮೂಲು ಪಡೆಯುವ ಅಧಿಕಾರವೂ ಇತ್ತು. ಇದಕ್ಕೆ ಬಲೂತ, ಮಿರಾಸ್ – ಎನ್ನುತ್ತಿದ್ದರು. ಇವರಿಗೆ ಬಲೂತದಾರ, ಮಿರಾಸ್‌ದಾರ, ಬಾಬುದಾರ – ಎಂದೂ ಹೆಸರುಗಳಿದ್ದುವು. ಅಸಲು ವತನ್‌ದಾರ ಅಥವಾ ಅಸಲ್ದಾರ ಗೌಡ, ಕುಲಕರ್ಣಿಗಳು ಕೆಲಸದಲ್ಲಿ ಇರದಿದ್ದಾಗ ವೇತನದ ಮೇಲೆ ಗುಮಾಸ್ತರನ್ನು ನೇಮಿಸುವ ಅಧಿಕಾರ ಅವರಿಗೂ ಇತ್ತು, ಸರ್ಕಾರಕ್ಕೂ ಇತ್ತು.

1953ರಲ್ಲಿ ಬೊಂಬಾಯಿ ಪ್ರಾಂತ್ಯದ ಬೆಳಗಾವಿ ವಿಭಾಗದಲ್ಲಿ ಆನುವಂಶಿಕ ಕುಲಕರ್ಣಿ ಹುದ್ದೆಯನ್ನು ಮೊದಲು ರದ್ದುಪಡಿಸಲಾಯಿತು. ಅವರ ಸ್ಥಾನದಲ್ಲಿ ಬಂದ ಹೊಸಬರಿಗೆ ತಲಾಟಿ ಎಂದು ಕರೆದರು. ಹಳೆಯ ಕುಲಕರ್ಣಿಗಳಿಗೆ ಇದ್ದ ಇನಾಂ ಜಮೀನುಗಳ ಕಂದಾಯದ ಆರು ಪಟ್ಟು ಹಣವನ್ನು ನಜರಾನಾ ಎಂದು ಸರ್ಕಾರ ಅವರಿಂದ ಪಡೆದು ಆ ಜಮೀನುಗಳು ಅವರ ಭೋಗದಲ್ಲಿಯೇ ಉಳಿಯುವಂತೆ ವ್ಯವಸ್ಥೆಯಾಯಿತು. ಕಳೆದುಕೊಂಡ ಪೋಟಗಿಗೆ ಪರ್ಯಾಯ ಹಣವನ್ನು ಸರ್ಕಾರ ಕೊಡಮಾಡಿತು.

ಭಾಷಾನುಗುಣ ರಾಜ್ಯ ಪುನರ್ವಿಂಗಡಣೆಯಾಗಿ, ವಿಶಾಲ ಮೈಸೂರು ರಾಜ್ಯ (ಆಗಿನ ಕರ್ನಾಟಕ) ಆದ ಮೇಲೆ, ಅದರ ಐದು ಕನ್ನಡ ಘಟಕಗಳಲ್ಲೂ ಗ್ರಾಮಾಧಿಕಾರಿಗಳ ಬಗ್ಗೆ ಬೇರೆಬೇರೆ ಕಾಯಿದೆಗಳು, ವ್ಯವಸ್ಥೆಗಳು ಇದ್ದದ್ದನ್ನು ಗಮನಿಸಿ ಆನುವಂಶಿಕ ಹುದ್ದೆಗಳನ್ನು ನಿರ್ಮೂಲಮಾಡುವ ನಿರ್ಣಯವನ್ನು ಹೊಸ ಸರ್ಕಾರ ಕೈಗೊಂಡಿತು. 1961ರ ಮೈಸೂರು ಗ್ರಾಮಾಧಿಕಾರಿ ಹುದ್ದೆ ನಿರ್ಮೂಲ ಕಾಯಿದೆಯ 1ನೆಯ ಕಲಮಿನ ಪ್ರಕಾರ 1963ರ ಫೆಬ್ರುವರಿಯ ಪ್ರಾರಂಭದಿಂದ ಗ್ರಾಮಾಧಿಕಾರಿ ಹುದ್ದೆಗಳು ರದ್ದಾದವು. ಅದರೊಂದಿಗೆ ಪೋಟಗಿ, ಇನಾಂ ಜಮೀನುಗಳು, ಬಾಬು, ಬಲೂತ್ ಅಧಿಕಾರಗಳೆಲ್ಲ ನಿರ್ಮೂಲವಾದವು. ಆದರೆ ಜಮೀನುಗಳನ್ನು ಪುನಃ ಹಳೆಯ ಮಾಲೀಕರಿಗೆ ಕೆಲವು ಕರಾರುಗಳ ಮೇಲೆ ಬಿಟ್ಟುಕೊಡಲು ಮತ್ತು ಆ ವತನದಾರರಿಂದ ಪಡೆದುಕೊಂಡ ಹಕ್ಕಿಗೆ ಅವರಿಗೆ ಪ್ರತಿಫಲ ಕೊಡಲು ಕಾನೂನಿನಲ್ಲಿ ಅವಕಾಶ ಮಾಡಲಾಗಿದೆ. ಹೊಸ ವ್ಯವಸ್ಥೆ ನೆಲೆಗೊಳ್ಳುವವರೆಗೆ ಹಳಬರ ಸೇವೆಯನ್ನೂ ಆಗಿಂದಾಗ್ಗೆ ಮುಂದುವರಿಸಲಾಗಿದೆ.

ಇನಾಂ ಭೂಮಿಯ ಹಕ್ಕನ್ನು ಸಂಪೂರ್ಣ ಪಟ್ಟಾ ಒಡೆತನಕ್ಕೆ ಪಡೆಯುವುದಕ್ಕಾಗಿ ಗೌಡ, ಕುಲಕರ್ಣಿಗಳು ಆ ಭೂಮಿಯ ಕಂದಾಯದ ಆರು ಪಟ್ಟು, ಕಿರಿಯ ಸೇವಕರು ಮೂರು ಪಟ್ಟು ಹಣವನ್ನು ಸರ್ಕಾರಕ್ಕೆ ಸಲ್ಲಿಸಿ ತಮ್ಮತಮ್ಮ ಜಮೀನುಗಳ ಮೇಲೆ ಪೂರ್ಣ ಸ್ವಾಮ್ಯ ಪಡೆದದ್ದುಂಟು. ಈ ಹಣ ಸಲ್ಲಿಸದಿದ್ದರೆ ಅವರು ಜಮೀನು ಹಕ್ಕನ್ನು ಕಳೆದುಕೊಳ್ಳುತ್ತಿದ್ದರು. ಸರ್ಕಾರ ವತನದಾರರ ಆನುವಂಶಿಕ ಹಕ್ಕನ್ನು ಕಸಿದುಕೊಂಡಿದ್ದಕ್ಕಾಗಿ ಅವರಿಗೆ ಪೋಟಗಿಯ ಆರು ಪಟ್ಟು ಪ್ರತಿಫಲ ನೀಡುತ್ತದೆ. ಭಾಗಶಃ ಮಾಫಿ ಕಂದಾಯದ ಇನಾಂ ಜಮೀನು ಇದ್ದಲ್ಲಿ ಆದಾಯಾಂಶದ ಮತ್ತು ಪೂರ್ಣ ಕಂದಾಯದ ನಡುವಣ ವ್ಯತ್ಯಾಸದ ಆರು ಪಟ್ಟು ಹಣವನ್ನು ಪ್ರತಿಫಲವಾಗಿ ಕೊಡುತ್ತದೆ. ಕಿರಿಯ ನೌಕರರಿಗೆ ಅವರ ಪಾರಂಪರಿಕ ವರಮಾನದ ಧನರೂಪದ ಆರು ಪಟ್ಟು ದೊರೆಯುತ್ತದೆ.

ಹೀಗೆ, ಒಂದು ಕಡೆ ಭೂಮಿಯ ಮೇಲೆ ಸರ್ಕಾರದ ಪರಮಾಧಿಕಾರವನ್ನು ಸ್ಥಾಪಿಸುವ, ಇನ್ನೊಂದೆಡೆ ಆನುವಂಶಿಕ ಅಧಿಕಾರವನ್ನೂ ಒಪ್ಪಿಕೊಳ್ಳುವ ತತ್ತ್ವಗಳು ಸರ್ಕಾರದ ಈ ಕ್ರಮದಲ್ಲಿ ಅಡಗಿವೆ. ಪರಿಮಾರ್ಜನ ಹಣ ಮುಂತಾದ ವಿಷಯಗಳ ನಿರ್ಣಯದ ಅಧಿಕಾರವನ್ನೂ ಅಸಿಸ್ಟೆಂಟ್ ಕಮಿಷನರಿಗೆ ಕೊಡಲಾಗಿದೆ.

ಹಳೆಯ ಗ್ರಾಮಾಧಿಕಾರಿಗಳ ಸ್ಥಾನದಲ್ಲಿ ಹೊಸಬರನ್ನು ನೇಮಿಸಿಕೊಳ್ಳಲು ಮೈಸೂರು ಸಾಮಾನ್ಯ ಸೇವಾ ಗ್ರಾಮಲೆಕ್ಕಿಗರ (ನೇಮಕ) ನಿಯಮಗಳು (1970) ಜಾರಿಯಲ್ಲಿ ಬಂದಿವೆ. ಇವುಗಳ ಪ್ರಕಾರ, ನಲವತ್ತು ವರ್ಷಕ್ಕೆ ಮೀರದ, ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಹಳೆಯ ವತನದಾರರೂ ಹೊಸ ಹುದ್ದೆಗಳನ್ನು ಪಡೆಯಲರ್ಹರು. ಇತರ ಸರ್ಕಾರಿ ನೌಕರರಿಗೆ ಸಂಬಂಧಿಸಿದ ಸೇವಾನಿಯಮಗಳೇ ಇವರಿಗೂ ಅನ್ವಯವಾಗುತ್ತವೆ. ಅನುಸೂಚಿತ ಜಾತಿಗಳ ಮತ್ತು ಗಿರಿಜನ ಅಭ್ಯರ್ಥಿಗಳಿಗೆ ಈ ಸ್ಥಳಗಳಲ್ಲಿ ಹಲವನ್ನು ಕಾದಿರಿಸಲಾಗುತ್ತದೆ. ಹನ್ನೆರಡು ಸಾವಿರ ರೂಪಾಯಿ ಕಂದಾಯದ ಪ್ರತಿಯೊಂದು ಗ್ರಾಮಪಂಚಾಯತಿಯ ಕ್ಷೇತ್ರಕ್ಕೂ ಒಬ್ಬ ಗ್ರಾಮಲೆಕ್ಕಿಗನನ್ನು ನೇಮಿಸಲಾಗುತ್ತದೆ. ಕಂದಾಯ ಅದಕ್ಕೆ ಮೀರಿದಲ್ಲಿ ಒಬ್ಬ ಸಹಾಯಕನನ್ನು ಕೊಡಲಾಗುವುದು. ಈ ಹೊಸ ಲೆಕ್ಕಿಗರಿಗೆ ತರಬೇತು ನೀಡುವ ವ್ಯವಸ್ಥೆಯನ್ನು ಕಾಯಿದೆಯಲ್ಲಿ ಮಾಡಲಾಗಿದೆ. ಇವರು ಪಂಚಾಯತಿಗಳಿಗೆ ಕಾರ್ಯದರ್ಶಿಗಳಾಗಿಯೂ ಕೆಲಸ ಮಾಡಬೇಕಾಗುತ್ತದೆ. ಹಳೆಯ ಗ್ರಾಮಾಧಿಕಾರಿ ಕುಲಕರ್ಣಿಯ ಎಲ್ಲ ಜವಾಬ್ದಾರಿಗಳೊಂದಿಗೆ ಹೊಸದಾಗಿ ಬಂದ ಎಲ್ಲ ಭೂಸಂಬಂಧಿ ಕಾಯಿದೆ ಕಾರ್ಯಗಳಿಗೂ ಲೆಕ್ಕಿಗ ಹೊಣೆಯಾಗಿರುತ್ತಾನೆ.

ಮೈಸೂರು ಭೂಕಂದಾಯ ಕಾಯಿದೆಯಲ್ಲಿ (1964) ಪಟೇಲ ಅಥವಾ ಗೌಡರನ್ನೂ ಗ್ರಾಮದ ಕಿರಿಯ ಸೇವಕರನ್ನೂ ನೇಮಿಸಿಕೊಳ್ಳಲು ಅವಕಾಶಮಾಡಿಲ್ಲ. ಪಟೇಲರನ್ನು ಬೇರೆಯ ಕಾಯಿದೆಯ (ಪೊಲೀಸ್) ಪ್ರಕಾರ ಮತ್ತು ಆಡಳಿತಾತ್ಮಕ ಆಜ್ಞೆಗಳ ಪ್ರಕಾರ ಮುಂದುವರಿಸಲಾಗುತ್ತಿದೆ. (ಜೆ.ಆರ್.ಪಿ.)

**ಗ್ರಾಮೀಣ ಉನ್ನತ ಶಿಕ್ಷಣ : ನೋಡಿ – ಗ್ರಾಮೀಣ ಶಿಕ್ಷಣ**

**ಗ್ರಾಮೀಣ ಋಣಗ್ರಸ್ತತೆ :** ಭಾರತೀಯ ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲೇ ಸಾಯುತ್ತಾನೆ ಎನ್ನುವುದು ಪ್ರಸಿದ್ಧವಾದ ನಾಣ್ನುಡಿಯಾಗಿದೆ. ಸಾಲ ಬಡತನಕ್ಕೆ ಅಂಟಿಕೊಂಡು ಬರುವ ವ್ಯಾಧಿ. ಭಾರತೀಯ ರೈತರಲ್ಲಿ ಬಹುಸಂಖ್ಯಾತರು ಬಡವರು. ಇವರ ಸರಾಸರಿ ಸಾಗುವಳಿ ಭೂಮಿಯ ವಿಸ್ತಾರ ಅತ್ಯಲ್ಪ. ಅದರ ಹುಟ್ಟುವಳಿಯಿಂದ ಅಹನ್ಯಹನಿ ಕಾಲಕ್ಷೇಪವಾಗುವುದೂ ಕಷ್ಟ. ವರ್ಷಪೂರ್ತಿ ಹೊಟ್ಟೆ ಹೊರೆಯುವುದರಿಂದ ಹಿಡಿದು ಹಲವಾರು ಕೌಟುಂಬಿಕ ಬಾಧ್ಯತೆಗಳನ್ನು ಪೂರೈಸುವವರೆಗೆ ಅವನು ಸಾಲ ಮಾಡಬೇಕಾಗುತ್ತದೆ. ಇವಲ್ಲದೆ ನಿತ್ಯದ ಸಾಗುವಳಿ ಖರ್ಚು ಬೇರೆ. ಬೀಜ, ಗೊಬ್ಬರ, ಉಪಕರಣ ಇವೆಲ್ಲ ಖರ್ಚಿನ ಬಾಬ್ತುಗಳೇ. ಇವಕ್ಕಾಗಿ ವಿಧಿಯಿಲ್ಲದೆ ಸಾಲಮಾಡಬೇಕಾಗುತ್ತದೆ. ಹೀಗೆ ರೈತರು ವ್ಯವಸಾಯೋದ್ಯಮಕ್ಕೂ ಸಂಸಾರನಿರ್ವಹಣೆಗೂ ಅತಿಯಾಗಿ ಸಾಲ ಮಾಡುವ ಶೋಚನೀಯ ಪರಿಸ್ಥಿತಿಯಿದೆ.

ಭಾರತದಲ್ಲಿ ರೈತರು ಪ್ರತಿವರ್ಷವೂ ಮಾಡುವ ಸಾಲದ ಪರಿಮಾಣವೆಷ್ಟು ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟ. ಆದರೂ ಈ ಬಗ್ಗೆ ಅಂದಾಜು ಮಾಡಲು ಆಗಿಂದಾಗ್ಗೆ ಪ್ರಯತ್ನಗಳು ನಡೆದಿವೆ. 1911ರ ಮ್ಯಾಕ್ಲಗನ್ ಸಮೀಕ್ಷೆಯ ಪ್ರಕಾರ ಆ ವರ್ಷ ರೈತರು ಪಡೆದಿದ್ದ ಸಾಲದ ಒಟ್ಟು ಮೊಬಲಗು ಸುಮಾರು 300 ಕೋಟಿ ರೂಪಾಯಿಗಳಷ್ಟು. 1925ರ ಎಂ.ಎಲ್.ಡಾರ್ಲಿಂಗ್ ಅಂದಾಜಿನ ಪ್ರಕಾರ ರೈತರ ಒಟ್ಟು ಸಾಲದ ಮೊತ್ತ 600 ಕೋಟಿ ರೂಪಾಯಿಗಳು. ಕೇಂದ್ರೀಯ ಬ್ಯಾಂಕಿಂಗ್ ವಿಚಾರಣಾ ಸಮಿತಿ 1929ರಲ್ಲಿ ರೈತರ ಋಣಭಾರ ಒಟ್ಟು 900 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಿತು. 1937ರಲ್ಲಿ ರಿಸರ್ವ್ ಬ್ಯಾಂಕಿನವರು ನಡೆಸಿದ ಸಮೀಕ್ಷೆಯಂತೆ 1,800 ಕೋಟಿ ರೂಪಾಯಿಗಳು.

ಎರಡನೆಯ ಮಹಾಯುದ್ಧ ಕಾಲದಲ್ಲೂ ಅನಂತರದ ವರ್ಷಗಳಲ್ಲೂ ಆಹಾರಧಾನ್ಯ ಮತ್ತು ಇತರ ವ್ಯವಸಾಯೋತ್ಪನ್ನಗಳ ಬೆಲೆ ಏಕಪ್ರಕಾರವಾಗಿ ಏರುತ್ತ ಬಂದದ್ದರಿಂದ ರೈತರು ಲಾಭ ಗಳಿಸುತ್ತಿದ್ದಾರೆ; ಅವರ ಸಾಲದ ಹೊರೆ ಗಮನೀಯವಾಗಿ ಇಳಿದಿದೆ ಎಂದು ಕೆಲವರ ಅಭಿಪ್ರಾಯ. ಬೆಲೆಯ ಏರಿಕೆಯಿಂದ ಶ್ರೀಮಂತ ಜಮೀನ್ದಾರರಿಗೂ ದಳ್ಳಾಳಿ ವರ್ತಕರಿಗೂ ಫಾಯಿದೆ ಆಗಿದೆಯೇ ಹೊರತು ನಿಜವಾಗಿ ಬಹುಸಂಖ್ಯಾತರಾದ ಬಡರೈತರ ಸ್ಥಿತಿ ಸುಧಾರಿಸಿಲ್ಲವೆಂದೂ ಅವರಿನ್ನೂ ಸಾಲದ ಸುಳಿಯಲ್ಲೇ ಸಿಕ್ಕಿಬಿದ್ದಿದ್ದಾರೆಂದೂ ಮತ್ತೆ ಕೆಲವರ ಮತ. ಈ ಎರಡನೆಯ ವಾದದಲ್ಲಿ ಬಹುಮಟ್ಟಿಗೆ ಸತ್ಯವಿದೆಯೆಂಬುದನ್ನು ಒಪ್ಪಬೇಕು. ರಿಸರ್ವ್ ಬ್ಯಾಂಕಿನ ಅಖಿಲ ಭಾರತ ಗ್ರಾಮೀಣ ಉದ್ದರಿ ಸರ್ವೇಕ್ಷಣ ಸಮಿತಿಯ ಅಂದಾಜಿನ ಪ್ರಕಾರ 1951–52ರಲ್ಲಿ ಗ್ರಾಮೀಣ ಜನರ ಸಾಲದ ಮೊತ್ತ ಸುಮಾರು 750 ಕೋಟಿ ರೂಪಾಯಿಗಳು. ರಿಸರ್ವ್‌ಬ್ಯಾಂಕ್ 1961–62ರಲ್ಲಿ ನಡೆಸಿದ ಮತ್ತೊಂದು ಸರ್ವೇಕ್ಷಣೆಯ ಪ್ರಕಾರ ಒಟ್ಟು ಗ್ರಾಮೀಣ ಸಾಲ 3,000 ಕೋಟಿ ರೂಪಾಯಿಗಳು. ಅದೇ ವರ್ಷದಲ್ಲಿ 7.4 ಲಕ್ಷ ಗ್ರಾಮೀಣ ಕುಟುಂಬಗಳ ಸರಾಸರಿ ಸಾಲದ ಹೊರೆ 406 ರೂಪಾಯಿಗಳು. ಶೇ.70ರಷ್ಟು ಗ್ರಾಮೀಣ ಕುಟುಂಬಗಳು ಸಾಲದಲ್ಲಿ ಸಿಲುಕಿದ್ದುವು.

ಜನರು ಯಾವುದೇ ಉದ್ಯಮದಲ್ಲಿ ತೊಡಗಿರಲಿ, ಆ ಉದ್ಯಮದ ಚಾಲನೆ ಅಥವಾ ವಿಸ್ತರಣೆಗೆ ಹಣದ ಆವಶ್ಯಕತೆ ಇದ್ದೇ ಇರುತ್ತದೆ. ಅದಕ್ಕಾಗಿ ಸಾಲಮಾಡುವುದು ಅಸಹಜವೇನಲ್ಲ. ಭಾರತದ ರೈತರು ಪಡೆದ ಸಾಲದ ಮೊತ್ತದಲ್ಲಿ ಶೇ. ಐವತ್ತಕ್ಕಿಂತ ಹೆಚ್ಚು ಭಾಗವನ್ನು ಉತ್ಪಾದನ ಕಾರ್ಯಗಳಿಗೆ ತೊಡಗಿಸದೆ ಸಂಸಾರದ ಖರ್ಚಿಗೋ ಇತರ ಅನುತ್ಪಾದಕ ಉದ್ದೇಶಗಳಿಗೋ ಉಪಯೋಗಿಸುತ್ತಾರೆ. ಇದರಿಂದ ಸಾಲ ಬಡ್ಡಿಗಳ ಹೊರೆ ಅತಿಯಾಗಿ ಅದನ್ನು ತೀರಿಸುವ ಸಾಮರ್ಥ್ಯ ಕಳೆದುಕೊಂಡಿದ್ದಾರೆ.

ರೈತರ ಅನಾರ್ಥಿಕ ಹಿಡುವಳಿ, ಅವರಿಗೆ ಪೂರ್ಣಕಾಲದ ಉದ್ಯೋಗ ಇಲ್ಲದಿರುವುದು, ಉಪಕಸುಬುಗಳ ಕ್ಷೀಣಸ್ಥಿತಿ, ಉಚಿತ ವೈದ್ಯಸೌಕರ್ಯದ ಅಭಾವ, ಅನಿಶ್ಚಿತ ಮಳೆಯಿಂದಾಗಿ ವರಮಾನದ ಅಸ್ಥಿರತೆ, ಸಾಗುವಳಿ ಮಾಡಲು ಅಗತ್ಯವಾದ ಉಪಕರಣಗಳನ್ನೂ ಎತ್ತುಗಳನ್ನೂ ಕೊಳ್ಳುವ ಮತ್ತು ಕಂದಾಯ ಪಾವತಿಯ ಸಾಮರ್ಥ್ಯ ಇಲ್ಲದಿರುವುದು, ನ್ಯಾಯಾಲಯಗಳಲ್ಲಿ ವ್ಯಾಜ್ಯಗಳನ್ನು ಬೆಳೆಸುವ ಹವ್ಯಾಸ, ಮದುವೆಯೇ ಮುಂತಾದ ಸಂದರ್ಭಗಳಲ್ಲಿ ದುಂದು ವೆಚ್ಚ, ವಂಶಪಾರಂಪರ್ಯವಾಗಿ ಬಂದ ಸಾಲ ತೀರಿಸಲು ಮಾಡಬೇಕಾದ ಹೊಸ ಸಾಲ– ಇವು ರೈತನ ಋಣಭಾರಕ್ಕೆ ಮುಖ್ಯಕಾರಣಗಳು. ಈ ಋಣಬಾಧೆಯಿಂದಾಗಿ ರೈತರು ಆರ್ಥಿಕ ಹಾಗೂ ಸಾಮಾಜಿಕ ಪತನವನ್ನು ಅನುಭವಿಸುತ್ತಾರೆ. ಅಸಲು ಮತ್ತು ಅಧಿಕ ಬಡ್ಡಿಯ ತೀರ್ವೆಗಾಗಿ ತಮ್ಮ ಫಸಲಿನಲ್ಲಿ ಬಹುಭಾಗವನ್ನು ಸಾಹುಕಾರರಿಗೆ ಕೊಟ್ಟು ಬಡತನದಲ್ಲಿ ತೊಳಲುತ್ತಾರೆ. ಸಾಲ ತೀರಿಸಲಾರದೆ ತಮ್ಮ ಭೂಮಿ ಹಾಗೂ ಇತರ ಆಸ್ತಿಗಳನ್ನು ಕಳೆದುಕೊಂಡವರು ಅಸಂಖ್ಯಾತ ಮಂದಿ ಉಂಟು. ಕಳೆದ ದಶಕದಿಂದೀಚೆಗೆ ಸಾಲದ ಹೊರೆಯನ್ನು ತಾಳಲಾರದೆ ರೈತರು ಸಾವಿಗೆ ಶರಣಾಗುವ ಪ್ರಸಂಗಗಳೂ ಅಧಿಕವಾಗಿದೆ. ಎಷ್ಟೋ ಸಂದರ್ಭಗಳಲ್ಲಿ ಸಾಲಗಾರರು ಸಾಹುಕಾರರ ಮನೆಯಲ್ಲಿ ಅಥವಾ ಜಮೀನುಗಳಲ್ಲಿ ಉಚಿತವಾಗಿ ಜೀತಮಾಡುವ ಪ್ರಸಂಗಗಳುಂಟು. ಇದು ಸಾಮಾಜಿಕ ವಿಷಮತೆಯನ್ನು ಉಲ್ಬಣಗೊಳಿಸುತ್ತದೆ.

ಗ್ರಾಮೀಣ ಸಾಲದಲ್ಲಿ ಸಾಹುಕಾರರ ಪಾತ್ರ ಪ್ರಮುಖವಾದ್ದು. 1954ರ ಗ್ರಾಮೀಣ ಸಾಲ ಸರ್ವೇಕ್ಷಣೆಯ ವರದಿಯ ಪ್ರಕಾರ ಗ್ರಾಮೀಣ ಸಾಲದಲ್ಲಿ ಶೇ.ಸು. 70ರಷ್ಟನ್ನು ಸಾಹುಕಾರರೇ ಒದಗಿಸುತ್ತಿದ್ದರು. ಗ್ರಾಮಜೀವನದಲ್ಲಿ ಸಾಹುಕಾರರು ಶತಮಾನಗಳಿಂದ

ತಮ್ಮ ಪ್ರಭಾವವನ್ನು ಬೀರುತ್ತ ಬಂದಿದ್ದಾರೆ. ಬ್ರಿಟಿಷರ ಆಳ್ವಿಕೆ ಬಲವಾಗುವುದಕ್ಕೆ ಮುನ್ನ ಗ್ರಾಮಪಂಚಾಯತಿಗಳು ಸಾಹುಕಾರರ ಮೇಲೆ ಒಂದು ರೀತಿಯ ನೈತಿಕ ಹಾಗೂ ಸಾಮಾಜಿಕ ನಿಯಂತ್ರಣ ಹೊಂದಿದ್ದುವು. ಸಾಲಗಾರ – ಸಾಹುಕಾರರ ವ್ಯವಹಾರಗಳೆಲ್ಲವೂ ಪಂಚಾಯತರಿಗೆ ಸಾಮಾನ್ಯವಾಗಿ ಗೊತ್ತಿರುತ್ತಿದ್ದದ್ದರಿಂದ ಯಾರಿಗೂ ವಂಚನೆ ಮಾಡುವುದು ಕಷ್ಟವಾಗಿತ್ತು. ಆದರೆ ಬ್ರಿಟಿಷರ ಆಳ್ವಿಕೆ ಆರಂಭವಾದ ಅನಂತರ ಸಿವಿಲ್ ನ್ಯಾಯಾಲಯಗಳು ಪಟ್ಟಣದಲ್ಲಿ ಏರ್ಪಟ್ಟ ಮೇಲೆ ಸಾಲಗಾರ – ಸಾಹುಕಾರ ವಿವಾದಗಳು ಕೋರ್ಟುಗಳಿಗೆ ಒಯ್ಯಲ್ಪಡಲು ಆರಂಭವಾಯಿತು. ಇದರಿಂದ ಹಣ, ವಿದ್ಯೆ, ವ್ಯವಹಾರಜ್ಞಾನಗಳಲ್ಲಿ ಪ್ರಬಲವಾದ ಸಾಹುಕಾರ ಲೇವಾದೇವಿ ವಿವಾದಗಳಲ್ಲಿ ತನ್ನ ಮೇಲ್ಮೈಯನ್ನು ತೋರಿಸಲು ಸಾಧ್ಯವಾಯಿತು. ಸಾಲಪತ್ರಗಳಲ್ಲಿ ಸಾಲದ ಮೊಬಲಗು, ಬಡ್ಡಿ ಇತ್ಯಾದಿ ವಿಷಯಗಳ ನಮೂದನೆಯ ಬಗ್ಗೆ ವಂಚನೆಗಳಾಗುತ್ತಿದ್ದದ್ದುಂಟು. ಕೇವಲ ಲಿಖಿತಪತ್ರವನ್ನವಲಂಬಿಸಿ ಕೋರ್ಟುಗಳು ಕೊಡುತ್ತಿದ್ದ ತೀರ್ಪುಗಳು ರೈತನಿಗೆ ವಿರುದ್ಧವಾಗಿರುತ್ತಿದ್ದದ್ದುಂಟು.

ಲೇವಾದೇವಿದಾರರ ಮೇಲೆ ಹತೋಟಿ ಇಟ್ಟುಕೊಳ್ಳಲು ಮತ್ತು ಅವರ ವ್ಯವಹಾರವನ್ನು ನಿಯಂತ್ರಿಸಲು ರಾಜ್ಯಸರ್ಕಾರಗಳು ಅನೇಕ ಕಾನೂನುಗಳನ್ನು ಜಾರಿಗೆ ತಂದಿವೆ. ಅವುಗಳ ಮುಖ್ಯಾಂಶಗಳಿವು: 1. ಲೇವಾದೇವಿದಾರರು ಲೈಸೆನ್ಸ್ ತೆಗೆದುಕೊಳ್ಳಬೇಕು. 2. ಲೇವಾದೇವಿ ವ್ಯವಹಾರದ ಬಗ್ಗೆ ಲೆಕ್ಕಪತ್ರಗಳನ್ನು ಕರಾರುವಾಕ್ಕಾಗಿ ಇಡಬೇಕು. 3. ಸಾಲಗಾರರು ಅಸಲು ಅಥವಾ ಬಡ್ಡಿಯನ್ನು ಪಾವತಿ ಮಾಡಿದಾಗ ಅವರಿಗೆ ರಸೀತಿ ಕೊಡಬೇಕು. 4. ಸರ್ಕಾರ ಗೊತ್ತು ಮಾಡುವ ಬಡ್ಡಿಯ ದರಕ್ಕಿಂತ ಹೆಚ್ಚು ದರವನ್ನು ವಿಧಿಸಬಾರದು. 5. ಸಾಲಗಾರರಿಗೆ ಕಿರುಕುಳ ಕೊಡಕೂಡದು. 6. ಕೆಲವು ಬಗೆಯ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಕೂಡದು.

ತೀವ್ರ ಋಣಬಾಧೆಗೆ ಒಳಗಾದ ರೈತರಿಗೆ ಪರಿಹಾರ ಒದಗಿಸಲೂ ಕ್ರಮಗಳನ್ನು ಕೈಗೊಳ್ಳಲಾಗಿದೆ. 1930ರ ಆರ್ಥಿಕ ದುಃಸ್ಥಿತಿಯ ಕಾಲದಲ್ಲಿ ಸಾಲಗಾರರ ಉತ್ಕಟ ಸಮಸ್ಯೆಯನ್ನು ಬಗೆಹರಿಸಲು ಪ್ರಾಂತೀಯ ಸರ್ಕಾರಗಳು ಕೆಲವು ಕ್ರಮಗಳನ್ನು ಕೈಗೊಂಡವು. ಅವುಗಳ ಪ್ರಕಾರ ಕೆಲವು ಪ್ರಾಂತ್ಯಗಳಲ್ಲಿ ಸಾಲದ ಮೊತ್ತವನ್ನು ಇಳಿಸಲು ಸಂಧಾನ ನಡೆಸುವುದಕ್ಕಾಗಿ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಯವರು ಸಾಲಗಾರರು ಪಡೆದಿರುವ ಸಾಲ ಮತ್ತು ಅವರು ಸಂದಾಯ ಮಾಡಿದ್ದ ಬಡ್ಡಿ ಇವುಗಳ ಪ್ರಮಾಣವನ್ನು ಪರಿಗಣಿಸಿ ಸಾಲಹಗಾರರಿಗೆ ಸಾಲದ ಮೊಬಲಗಿನಲ್ಲಿ ರಿಯಾಯತಿಯನ್ನು ಒದಗಿಸಲು ಪ್ರಯತ್ನಿಸಿದವು. ಕೆಲವು ಪ್ರಾಂತಗಳಲ್ಲಿ ಕಡ್ಡಾಯವಾಗಿ ಸಾಲದ ಗಾತ್ರವನ್ನು ಇಳಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಸಾಲಗಾರರು ಕೊಡುವ ಒಟ್ಟು ಬಡ್ಡಿ ಸಾಲದ ಮೊತ್ತಕ್ಕೆ ಮೀರಿರಬಾರದೆಂಬ ನಿಯಮವನ್ನು ಕೆಲವು ಕಡೆ ಜಾರಿಗೆ ತರಲಾಯಿತು.

ಹೀಗೆ ಸಾಹುಕಾರರ ಲೇವಾದೇವಿಯ ನಿಯಂತ್ರಣ ಹಾಗೂ ಋಣಬಾಧೆಯ ಪರಿಹಾರದ ಬಗ್ಗೆ ರಾಜ್ಯ ಸರ್ಕಾರಗಳು ಕಾನೂನುಗಳನ್ನು ಮಾಡಿದ್ದರೂ ಅವುಗಳ ಕಾರ್ಯಾನ್ವಯ ಯಶಸ್ವಿಯಾಗಿಲ್ಲ. ಈ ಬಗ್ಗೆ ಇರುವ ಕಾನೂನುಗಳು ಎಲ್ಲ ರಾಜ್ಯಗಳಲ್ಲೂ ಒಂದೇ ಸಮನಾಗಿಲ್ಲ. ಸರ್ಕಾರದ ಕಾನೂನುಗಳನ್ನು ನಿರ್ಲಕ್ಷಿಸುವ ಪ್ರಸಂಗಗಳೂ ಅಧಿಕ. ಲೇವಾದೇವಿ ಮಾಡಲು ರಹದಾರಿ ತೆಗೆದುಕೊಳ್ಳಬೇಕೆಂಬ ಕಟ್ಟಳೆ ಇದ್ದರೂ ಅದಿಲ್ಲದೆ ಸಾಲ ಕೊಡುತ್ತಿರುವವರ ಸಂಖ್ಯೆ ವಿಪರೀತವಾಗಿದೆ. ಬಡ್ಡಿಯ ದರದ ಬಗ್ಗೆ ಇರುವ ಕಾನೂನು ಕಾಗದದ ಮೇಲಿದೆ ಅಷ್ಟೆ. ಸಾಹುಕಾರರು ವಿಧಿಸುವ ಬಡ್ಡಿ ದರ ದುಬಾರಿಯಾಗಿಯೇ ಇದೆ. ಅಖಿಲ ಭಾರತಗ್ರಾಮೀಣ ಸಾಲ ಸರ್ವೇಕ್ಷಣೆಯ (1954) ಪ್ರಕಾರ ಶೇ. 25ಕ್ಕಿಂತ ಹೆಚ್ಚು ಬಡ್ಡಿ ತೆರುತ್ತಿರುವ ಸಾಲಗಾರರು ಒರಿಸ್ಸದಲ್ಲಿ ಶೇ. 70, ಬಂಗಾಳದಲ್ಲಿ ಶೇ. 40, ಉತ್ತರ ಪ್ರದೇಶದಲ್ಲಿ ಶೇ. 29 ಮತ್ತು ಬಿಹಾರದಲ್ಲಿ ಶೇ. 27 ಇದ್ದರು. ಇನ್ನು ಹಲವು ಕಡೆಗಳಲ್ಲಿ ಬಡ್ಡಿಯ ದರ ಶೇ. 50 ರಿಂದ 100ರ ವರೆಗೆ ಇದ್ದದ್ದುಂಟು.

ಸಾಲ ನೀಡುವವರ ಬಗ್ಗೆ ಹಲವು ಕಾನೂನುಗಳಿದ್ದರೂ ಅವರ ಲೇವಾದೇವಿ ವ್ಯವಹಾರ ಅವ್ಯಾಹತವಾಗಿ ಯಶಸ್ವಿಯಾಗಿ ಮುಂದುವರಿಯುತ್ತಿರುವುದಕ್ಕೆ ಅನೇಕ ಕಾರಣಗಳುಂಟು. ಸರ್ಕಾರದ ಕಾನೂನುಗಳನ್ನು ಕಾರ್ಯಗತ ಮಾಡಲು ಸರಿಯಾದ ಆಡಳಿತ ವ್ಯವಸ್ಥೆ ಇದ್ದರೂ ನಿಷ್ಠಾಪೂರ್ಣ ಕಾರ್ಯಾನ್ವಯದ ಅಭಾವವಿದೆ. ರೈತರಿಗೆ ಆವಶ್ಯಕತೆ ತೋರಿದಾಗ ಸಕಾಲದಲ್ಲಿ ಹಣವನ್ನು ಒದಗಿಸಲು ಸಂಘ ಸಂಸ್ಥೆಗಳಿಲ್ಲ. ಆದ್ದರಿಂದ ಆವಶ್ಯಕತೆ ಒದಗಿದಾಗಲೆಲ್ಲ ಸಾಹುಕಾರರನ್ನೇ ಮೊರೆಹೋಗಬೇಕು. ಕಾಲಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಜಾಣ್ಮೆ ಸಾಹುಕಾರರ ಯಶಸ್ಸಿಗೆ ಮುಖ್ಯ ಕಾರಣ. ಸಾಮಾನ್ಯವಾಗಿ ಯಾವ ಆಧಾರವಾಗಲಿ, ಭೋಗ್ಯವಾಗಲಿ ಇಲ್ಲದೆ ವೈಯಕ್ತಿಕ ಜವಾಬ್ದಾರಿಯ ಮೇಲೆ ಸಾಹುಕಾರರಿಗೆ ಸಾಲಗಾರರಿಗೆ ಅತಿ ಅಗತ್ಯವಾದ ಸಮಯದಲ್ಲಿ ಹಣವನ್ನು ಒದಗಿಸುತ್ತಾರೆ. ಸಹಕಾರಿ ಸಂಘಸಂಸ್ಥೆಗಳು ಆಸ್ತಿಯ ಆಧಾರವನ್ನವಲಂಬಿಸಿ ಅನೇಕ ಕಟ್ಟುಪಾಡುಗಳನ್ನಿಟ್ಟುಕೊಂಡಿದ್ದು ವಿಳಂಬ ಮಾಡುವುದರಿಂದ ಅವುಗಳ ಉಪಯೋಗ ರೈತರಿಗೆ ಸಕಾಲದಲ್ಲಿ ಆಗುವುದಿಲ್ಲ. ಸಾಹುಕಾರರು ಕೊಡುವ ಸಾಲಗಳಲ್ಲಿ ಶೇ. 80 ರಷ್ಟು ಸಾಲಗಳಿಗೆ ಯಾವ ಆಧಾರವೂ ಇರುವುದಿಲ್ಲವೆಂಬುದು ರಿಸರ್ವ್ ಬ್ಯಾಂಕಿನ ಸರ್ವೇಕ್ಷಣೆಯಿಂದ ವ್ಯಕ್ತವಾಗಿದೆ. ಹೀಗೆ ಲೇವಾದೇವಿಗಾರರು ಈಗಲೂ ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಬಲರಾಗಿದ್ದಾರೆ.

ಈಚಿನ ವರ್ಷಗಳಲ್ಲಿ ಗ್ರಾಮಾಂತರ ಸಾಲ ವ್ಯವಸ್ಥೆಯಲ್ಲಿ ಸಹಕಾರಿ ಸಾಲದ ಸಂಘಗಳ ಪಾತ್ರ ಹೆಚ್ಚುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳು ಗ್ರಾಮಾಂತರ ಕ್ಷೇತ್ರ ಪ್ರವೇಶ ಮಾಡುತ್ತಿವೆ. ಆದರೂ ಗ್ರಾಮೀಣ ಸಾಲದ ಮೊತ್ತದಲ್ಲಿ ಲೇವಾದೇವಿಗಾರರು ಒದಗಿಸುತ್ತಿರುವ ಹಣದ ಪ್ರಮಾಣ ಅರ್ಧಕ್ಕಿಂತ ಹೆಚ್ಚಾಗಿಯೇ ಇದೆ. (ಬಿ.ಆರ್.ಪಿ.)

**ಗ್ರಾಮೀಣ ವಿಶ್ವವಿದ್ಯಾಲಯ : ನೋಡಿ – ಗ್ರಾಮೀಣ ಶಿಕ್ಷಣ**

**ಗ್ರಾಮೀಣ ವಿಶ್ವವಿದ್ಯಾ ಸಂಸ್ಥೆ : ನೋಡಿ – ಗ್ರಾಮೀಣ ಶಿಕ್ಷಣ**

**ಗ್ರಾಮೀಣ ಶಿಕ್ಷಣ :** ಪ್ರಪಂಚದ ಜನಸಂಖ್ಯೆಯ 2/3 ಕ್ಕಿಂತ ಹೆಚ್ಚು ಪಾಲು ಗ್ರಾಮಗಳಲ್ಲಿ ಅಥವಾ ಸಣ್ಣಪುಟ್ಟ ನಗರಗಳಲ್ಲಿ ವಾಸಿಸುವುದರಿಂದ, ಶಿಕ್ಷಣ ಬಹುಮಟ್ಟಿಗೆ ಗ್ರಾಮೀಣ ಶಿಕ್ಷಣವೇ ಆಗುತ್ತದೆಂದು ಹೇಳುವುದುಂಟು. ಆದರೂ ಸಮಾಜವಿಜ್ಞಾನಿಗಳು ನಗರ ಮತ್ತು ಗ್ರಾಮೀಣ ಶಿಕ್ಷಣಗಳಲ್ಲಿ ವ್ಯತ್ಯಾಸ ಕಲ್ಪಿಸಿರುವರು. ವ್ಯವಸಾಯವನ್ನು ಮುಖ್ಯ ಕಸಬನ್ನಾಗಿ ಅವಲಂಬಿಸಿರುವ ಗ್ರಾಮವಾಸಿಗಳು ನಗರದವರೊಡನೆ ಹೋಲಿಸಿದರೆ ಬಡವರು; ಅವರಲ್ಲಿ ಅರ್ಧದಷ್ಟು ಮಂದಿ ಬಡತನದ ರೇಖೆಗಿಂತ ಕೆಳಗಿರುವಂತಹವರು. ಅಂಥವರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ ಶಿಕ್ಷಣವೀಯುವ ಶಕ್ತಿ ಇರುವುದಿಲ್ಲ. ಅಂಥ ಅನೇಕ ದೇಶಗಳು ಬಹುಮಟ್ಟಿಗೆ ತಮ್ಮ ಆರ್ಥಿಕಾಭಿವೃದ್ಧಿಗೆ ವ್ಯವಸಾಯವನ್ನೇ ಅವಲಂಬಿಸಿರುವುದರಿಂದ ಶಿಕ್ಷಣಕ್ಕಾಗಿ ಹೆಚ್ಚು ಹಣ ವ್ಯಯಮಾಡುವ ಶಕ್ತಿ ಹೊಂದಿರುವುದಿಲ್ಲ. ಈ ಕಾರಣಗಳಿಂದಾಗಿ ಅಲ್ಲಿನವರು ಸಾಮಾಜಿಕವಾಗಿ ಹಿಂದುಳಿದಿದ್ದು ಅವರ ಜೀವನಮಟ್ಟ ಅಸಮರ್ಪಕವಾಗಿರುತ್ತದೆ. ಒಟ್ಟಿನಲ್ಲಿ ಗ್ರಾಮೀಣ ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿಗೆ ಶಿಕ್ಷಣ ಸೌಲಭ್ಯವೇ ಇರುವುದಿಲ್ಲ. ಶಿಕ್ಷಣ ಅವರನ್ನು ಪ್ರಥಮತಃ ಅಕ್ಷರಸ್ಥರನ್ನಾಗಿ ಮಾಡಬೇಕು. ಜೊತೆಗೆ ಅವರು ಉದ್ಯೋಗನಿರತರಾಗಿ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಂಡು ಜೀವನ ಮಟ್ಟವನ್ನು ಉತ್ತಮಪಡಿಸಿಕೊಳ್ಳುವಂತೆಯೂ ಮಾಡಬೇಕು.

ಕೈಗಾರಿಕಾ ಪ್ರಗತಿಯ ಮುಂಚೂಣಿಯಲ್ಲಿರುವ ರಾಷ್ಟ್ರಗಳಲ್ಲಿ ಗ್ರಾಮೀಣ ಜೀವನ ಈಗ ಒಂದು ಸಾಂಸ್ಕೃತಿಕ ಸಮಸ್ಯೆಯಾಗಿ ಉಳಿದಿಲ್ಲ. ಅಲ್ಲಿ ಬಳಕೆಗೆ ಬಂದಿರುವ ಸಾಮೂಹಿಕ ಪ್ರಸಾರ ಮಾಧ್ಯಮಗಳು, ತೀವ್ರವೇಗದ ಸಾರಿಗೆ ಸೌಕರ್ಯ, ವ್ಯಾಪಕವಾದ ಸಂಪರ್ಕ ಸಾಧನ, ಉದ್ಯೋಗಾವಕಾಶಕ್ಕಾಗಿ ನಿರಂತರವಾಗಿ ಸಾಗುತ್ತಿರುವ ವಲಸೆ, ಆಹಾರಾದಿ ಪೂರೈಕೆಯಲ್ಲಿ ಏಕರೀತಿಯ ಜೀವನ ವಿಧಾನ–ಇವೇ ಮುಂತಾದ ಅಂಶಗಳ ಫಲವಾಗಿ ನಗರ ಜೀವನಕ್ಕೂ ಗ್ರಾಮ ಜೀವನಕ್ಕೂ ವ್ಯತ್ಯಾಸ ಕರಗಿ ಹೋಗುತ್ತಿದೆ. ಆದ್ದರಿಂದ ಗ್ರಾಮೀಣ ಶಿಕ್ಷಣದ ವೈಶಿಷ್ಟ್ಯವನ್ನು ಗುರುತಿಸುವುದು ಕಷ್ಟ. ನಿರಕ್ಷರತೆಯ ಪ್ರಮಾಣವನ್ನು ಆಧಾರಮಾಡಿ ಅದನ್ನು ನಿರ್ಧರಿಸಲು ಯತ್ನಿಸಿದರೂ ಅವೆರಡಕ್ಕೂ ವ್ಯತ್ಯಾಸ ಕಲ್ಪಿಸುವ ಪ್ರಮಾಣ ರೇಖೆಯನ್ನು ಗುರುತಿಸಲಾಗಿಲ್ಲ. ಮೇಲಾಗಿ ಆ ಪ್ರಮಾಣ ಉತ್ತರ ಮತ್ತು ಪಶ್ಚಿಮ ಯುರೋಪಿನಲ್ಲಿ ಶೇ. 1–2 ಇದ್ದರೆ ಮಧ್ಯ ಏಷ್ಯದ ಕೆಲವು ದೇಶಗಳಲ್ಲಿ ಶೇ. 80 ರಷ್ಟಿದೆ. ಈ ಅಂತರ ಅದನ್ನು ಆಧಾರವಾಗಿ ಬಳಸುವ ಕಾರ್ಯವನ್ನು ಇನ್ನೂ ಜಟಿಲವಾಗಿಸಿದೆ.

ಅಭಿವೃದ್ಧಿಮುಖಿ ರಾಷ್ಟ್ರಗಳಲ್ಲಿ ಗ್ರಾಮೀಣ ಶಿಕ್ಷಣ : ಗ್ರಾಮೀಣ ಶಿಕ್ಷಣ, ಪ್ರಧಾನವಾಗಿ ಗ್ರಾಮೀಣ ಪ್ರದೇಶವನ್ನೊಳಗೊಂಡ, ಅಭಿವೃದ್ಧಿ ಮುಖದಲ್ಲಿರುವ ರಾಷ್ಟ್ರಗಳಲ್ಲಿ ಮಾತ್ರ ತೀವ್ರ ರೀತಿಯ ಸಮಸ್ಯೆಯಾಗಿದೆ. ಅಕ್ಷರ ಪ್ರಚಾರ ಅಲ್ಲಿನ ಶಿಕ್ಷಣದ ಮೂಲಗುರಿಯಾಗಿದ್ದರೂ ನಿತ್ಯ ಜೀವನಕ್ಕೆ ಉಪಯುಕ್ತವೆನಿಸುವ ಜ್ಞಾನ, ಅನುಭವ ಮತ್ತು ಕೌಶಲಾದಿಗಳನ್ನು ದೊರಕಿಸುವ ಕಡೆಯೂ ಗಮನ ಕೊಡಬೇಕಾಗುತ್ತದೆ. ಆ ಕಾರ್ಯವನ್ನು ಸಾಧಿಸಲು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ವಿಧವಾದ ಶಾಲೆಗಳು ಅಸ್ತಿತ್ವಕ್ಕೆ ಬಂದಿವೆ. ಬೊಲಿವಿಯದಲ್ಲಿ ನ್ಯೂಕ್ಲಿಯಸುಗಳೂ ಫಿಲಿಪೀನ್ಸಿನಲ್ಲಿ ಸಮುದಾಯ ಶಾಲೆಗಳೂ ಇರಾನಿನಲ್ಲಿ ಬುಡಕಟ್ಟಿನ ಶಾಲೆಗಳೂ ಪೋರ್ಟರೀಕದಲ್ಲಿ ಎರಡನೆಯ ಘಟಕ ಗ್ರಾಮೀಣ ಶಾಲೆಗಳೂ ಇಥಿಯೋಪಿಯದಲ್ಲಿ ಅಲೆಮಾರಿ ಜನರ ಗೂಡಾರದ ಶಾಲೆಗಳೂ ಕಾರ್ಯವನ್ನು ನಿರ್ವಹಿಸುತ್ತಿವೆ. ಇವೆಲ್ಲ ಆಯಾ ದೇಶದ ಗ್ರಾಮಾಂತರ ಸಮಾಜಕ್ಕೂ ಸನ್ನಿವೇಶಕ್ಕೂ ಒಪ್ಪುವ ರೀತಿಯಲ್ಲಿ ಮೂಲ ಕೌಶಲಗಳನ್ನು ಪ್ರಸಾರ ಮಾಡುತ್ತವೆ.

ಗ್ರಾಮೀಣ ಪಾಠಶಾಲೆಗಳು ಸಾಂಪ್ರದಾಯಿಕ ಶಿಕ್ಷಣವನ್ನು ನೀಡುತ್ತಿರುವ ದೇಶಗಳಲ್ಲಿ ಅಲ್ಲಿನ ಜನತೆಯ ಶಿಕ್ಷಣಕ್ಕಾಗಿ ಇತರ ಸಂಸ್ಥೆಗಳು ಹುಟ್ಟಿಕೊಂಡಿವೆ. ವಯಸ್ಕರ ಶಿಕ್ಷಣ ಸಮಿತಿ, ಅಕ್ಷರ ಪ್ರಚಾರ ಸಮಿತಿ, ಸಮುದಾಯಾಭಿವೃದ್ಧಿ ಕೇಂದ್ರ– ಮುಂತಾದವು ಅಂಥ ಸಂಸ್ಥೆಗಳು. ಇನ್ನು ಕೆಲವು ದೇಶಗಳಲ್ಲಿ ಸಾಂಪ್ರದಾಯಿಕ ಶಾಲೆಗಳು ವಯಸ್ಕರ ಶಿಕ್ಷಣಕ್ಕೂ

ಅನುಕೂಲಿಸುವಂತೆ ಪಠ್ಯಕ್ರಮ ಮತ್ತು ಕಾರ್ಯಯೋಜನೆಗಳನ್ನು ಮಾರ್ಪಡಿಸಿಕೊಂಡಿವೆ. ಅಲ್ಲಿನ ಜನಸಾಮಾನ್ಯರ (ಸಮುದಾಯದ) ಜೀವನಕ್ಕೂ ಶಾಲೆಗೂ ಪರಸ್ಪರ ಸಹಕಾರ ಏರ್ಪಟ್ಟು ಸಮಾಜದ ಸೌಲಭ್ಯಗಳನ್ನು ಈ ಕಾರ್ಯಕ್ಕೆ ಬಳಸಿಕೊಳ್ಳುತ್ತಿವೆ. ಶಾಲೆಯ ಸಾಂಪ್ರದಾಯಿಕ ಶಿಕ್ಷಣವೊಂದರಿಂದಲೇ ಜನರು ಸಮಾಜ ಜೀವನದಲ್ಲಿ ನಾಯಕತನ ವಹಿಸುವ ಶಕ್ತಿ ಸಾಧಿಸಲಾರರು, ಸಮಾಜಾಭಿವೃದ್ಧಿ ಕಾರ್ಯ ಕೈಗೊಳ್ಳಲಾರರು. ಮೂಲ ಕೌಶಲಗಳ ಜೊತೆಗೆ ಅಭಿವೃದ್ಧಿಕಾರ್ಯಗಳಲ್ಲಿ ಅನುಭವ, ಅದಕ್ಕೆ ಹಿತಕರವಾದ ಹಿನ್ನೆಲೆಯಂಥ ಮಾನವೀಯ ಸಂಬಂಧ, ಸಮಾಜವನ್ನು ತನ್ನ ದೃಷ್ಟಿಪಥಕ್ಕೆ ಆಕರ್ಷಿಸುವ ಜಾಣ್ಮೆ ಮತ್ತು ಕೌಶಲ–ಇವೆಲ್ಲ ಅಗತ್ಯ. ಶಾಲೆಯೊಡನೆ ಅಲ್ಲಿನ ಜನತೆ ಸಹಕರಿಸಿದಾಗ ಈ ಸೌಲಭ್ಯಗಳು ಅವರಿಗೆ ಲಭಿಸುವುವಲ್ಲದೆ ಅಲ್ಲಿನ ಶಾಲಾ ಮಕ್ಕಳಿಗೂ ಆ ಫಲಗಳು ಲಭಿಸುತ್ತವೆ.

ಏಷ್ಯದ ರಾಷ್ಟ್ರಗಳಲ್ಲಿ ವಿದ್ಯಾವಂತ ಯುವಜನರು ದೈಹಿಕ ದುಡಿಮೆಯ ಕಾರ್ಯಗಳಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿರುವರೆಂದು ಹೇಳುವುದುಂಟು. ಆ ದೇಶಗಳು ಆರ್ಥಿಕವಾಗಿ ಹಿಂದುಳಿದಿರುವುದಕ್ಕೆ ಇದು ಒಂದು ಕಾರಣವೆಂದು ಹೇಳಲಾಗುತ್ತಿದೆ. ಅಲ್ಲದೆ ಆಧುನಿಕ ರೀತಿಯ ಶಾಲೆಗಳು ಊರಿನಲ್ಲಿ ಅಸ್ತಿತ್ವದಲ್ಲಿದ್ದರೂ ಅಲ್ಲಿನ ಜನ ಹಳೆಯ ಪದ್ಧತಿಯಲ್ಲೇ ವ್ಯವಸಾಯ ಮಾಡುತ್ತಿರುವರು. ಫಿಲಿಪೀನ್ಸಿನಲ್ಲಿ ಈ ಪರಿಸ್ಥಿತಿಯನ್ನು ಸುಧಾರಿಸಲು ಅಲ್ಲಿನ ರೈತರಿಗೆ ಆಧುನಿಕ ರೀತಿಯ ವ್ಯವಸಾಯಾದಿ ವಿಷಯಗಳನ್ನು ಬೋಧಿಸುವುದಕ್ಕೂ ಪ್ರದರ್ಶನಾದಿಗಳಿಂದ ಪ್ರಚಾರ ಮಾಡುವುದಕ್ಕೂ ಅನುಕೂಲಿಸುವಂತೆ ಶಾಲೆಗಳು ಮಾರ್ಪಟ್ಟಿವೆ. ಎಂದರೆ ಅಲ್ಲಿನ ಗ್ರಾಮೀಣ ಪ್ರಾಥಮಿಕ ಶಾಲೆಗಳು ಮಕ್ಕಳ ಶಿಕ್ಷಣದ ಜೊತೆಗೆ ಜನತೆಯ (ವಯಸ್ಕರ) ಶಿಕ್ಷಣದ ಹೊಣೆಯನ್ನೂ ಹೊತ್ತಿವೆ. ಪ್ರೌಢಶಾಲೆಗಳೂ ಆ ಕಾರ್ಯದಲ್ಲಿ ಭಾಗವಹಿಸುತ್ತಿವೆ. ಯಾವ ಹಂತದ ಶಾಲೆಯೇ ಆಗಲಿ ಮೂಲ ಕೌಶಲಾದಿ ಜ್ಞಾನದ ಜೊತೆಗೆ ಉಪಯುಕ್ತ ಜ್ಞಾನ, ಅನುಭವ, ಋಜುಮನೋಭಾವಗಳು, ಮುಂದೆ ಜೀವನದಲ್ಲಿ ಬಳಕೆಗೆ ಬರುವ ಕಸಬು ಕಲೆಗಳು ಮುಂತಾದವನ್ನೂ ಕಲಿಸುತ್ತವೆ. ಆರೋಗ್ಯ ಜೀವನಕ್ಕೆ ಅಗತ್ಯವೆನಿಸುವ ಆಧುನಿಕ ರೀತಿಯ ಕಕ್ಕಸುಗಳ ನಿರ್ಮಾಣ, ಶುದ್ಧ ನೀರಿನ ಬಳಕೆ, ಹಣ್ಣು ತರಕಾರಿಗಳ ಬೇಸಾಯ–ಇವೇ ಮುಂತಾದವುಗಳಲ್ಲೂ ಶಿಕ್ಷಣವೀಯುತ್ತವೆ. ಆ ಮೂಲಕ ಅಲ್ಲಿನ ಜನರ ಮೂಲ ಸಮಸ್ಯೆಗಳಿಗೆ ಪರಿಹಾರ ದೊರಕಿಸುವಂತೆ ತಮ್ಮ ಕಾರ್ಯವನ್ನು ವಿಸ್ತರಿಸಿಕೊಂಡಿವೆ.

ಕೆಲವು ವಿಶಿಷ್ಟ ಸಂಸ್ಥೆಗಳೂ ಗ್ರಾಮಾಂತರ ಪ್ರದೇಶದ ಜನತೆಯ ಶಿಕ್ಷಣದಲ್ಲಿ ಆಸಕ್ತಿ ವಹಿಸಿ ಪ್ರಚಾರಕಾರ್ಯ ಕೈಗೊಂಡಿವೆ. ಆಫ್ರಿಕದಲ್ಲಿ ಎನ್ಯೋರ ಸಮಾಜ ಕ್ಷೇಮಾಭಿವೃದ್ಧಿ ಸಂಸ್ಥೆ, ಭಾರತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಮಾಜ ಕಲ್ಯಾಣ ಇಲಾಖೆಗಳು, ಹೈದರಾಬಾದಿನ ಹಿಮಾಯತ್ಸಾಗರದ ವಿಸ್ತರಣ ಕೇಂದ್ರ, ಶ್ರೀಲಂಕಾದ ಸರ್ಕಾರಿ ಮೂಲಭೂತ ಶಿಕ್ಷಣ ಯೋಜನೆ, ಯುನೆಸ್ಕೊದವರ ಮೆಕ್ಸಿಕೋದಲ್ಲಿನ ಕ್ರೆಫಾಲ್ ಕೇಂದ್ರ ಇತ್ಯಾದಿಗಳು ಆ ರೀತಿಯ ಪ್ರಚಾರ ಸಂಸ್ಥೆಗಳು. ಯುರೋಪ್ ಮತ್ತು ಉತ್ತರ ಅಮೆರಿಕದ ಕ್ರೈಸ್ತ ಧರ್ಮ ಪ್ರಚಾರ ಸಂಸ್ಥೆಗಳೂ ಏಷ್ಯದ ಬೌದ್ಧ ಸಂಸ್ಥೆಗಳೂ ಈಜಿಪ್ಟಿನ ಮಹಮ್ಮದೀಯ ಸಂಸ್ಥೆಗಳೂ ಆ ಕಾರ್ಯ ಮಾಡುತ್ತಿವೆ. ಚೀನದಲ್ಲಿ ಜೇಮ್ಸ್ ಯೆನ್ ಆರಂಭಿಸಿದ ಸಾರ್ವಜನಿಕ ಶಿಕ್ಷಣ ಪ್ರಚಾರವೂ ಫಿಲಿಪೀನ್ಸಿನಲ್ಲಿ ಫ್ರಾಂಕ್ ಲಬಕ್ ಕೈಗೊಂಡ ಕಾರ್ಯವೂ ಪ್ರಪಂಚಾದ್ಯಂತ ಪರಿಣಾಮ ಬೀರಿವೆ ಹಾಗೂ ಗ್ರಾಮೀಣ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಪ್ರಚಾರ ಮಾಡಿವೆ.

ಪೋರ್ಟರೀಕ, ಈಜಿಪ್ಟ್, ಕೊರಿಯ, ಫಿಲಿಪೀನ್ಸ್ ದೇಶಗಳಲ್ಲಿ ಪ್ರಚಾರಕ್ಕೆ ಬಂದಿರುವ ಗ್ರಾಮೀಣ ಶಾಲಾ ಸಮುದಾಯ ಕೇಂದ್ರಗಳು ಈ ಕ್ಷೇತ್ರದಲ್ಲಾಗಿರುವ ಪ್ರಮುಖ ಬೆಳವಣಿಗೆಯೆಂದು ಹಲವರು ಪರಿಗಣಿಸುವರು. ಮಕ್ಕಳ ಮತ್ತು ದೊಡ್ಡವರ ಶಿಕ್ಷಣವನ್ನು ವಹಿಸಿಕೊಂಡಿರುವ ಈ ಶಾಲಾ ಕೇಂದ್ರಗಳು ಅಲ್ಲಿನ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಕಡೆ ಗಮನವಿತ್ತು ಅವರ ಜೀವನವನ್ನು ಉತ್ತಮಪಡಿಸುವಂತೆ ಶಿಕ್ಷಣವೀಯುತ್ತಿವೆ. ಆಧುನಿಕ ರೀತಿಯ ಬೇಸಾಯ ವಿಧಾನಗಳು, ನೈರ್ಮಲ್ಯ ವಿಧಾನಗಳು, ಆರೋಗ್ಯಕರವಾದ ಅಭ್ಯಾಸಗಳು ಕುಟುಂಬ ಮತ್ತು ಸಮಾಜ ಜೀವನದಲ್ಲಿ ಯಶಸ್ವಿಯಾಗಿ ಬಾಳಲು ನೆರವಾಗುವ ಕೌಶಲ ಮತ್ತು ಮನೋಭಾವಗಳು ಇತ್ಯಾದಿಗಳನ್ನು ಅಕ್ಷರ ಪ್ರಚಾರದ ಜೊತೆಗೆ ಬೋಧಿಸುತ್ತಿವೆ.

ಕೈಗಾರಿಕಾ ರಾಷ್ಟ್ರಗಳಲ್ಲಿ ಗ್ರಾಮೀಣ ಶಿಕ್ಷಣ : ಕೈಗಾರಿಕೆಯಲ್ಲಿ ತೀರ ಮುಂದುವರಿದಿರುವ ಅಮೆರಿಕ ಸಂಯುಕ್ತಸಂಸ್ಥಾನ, ಬ್ರಿಟನ್, ಜರ್ಮನಿ, ಜಪಾನ್ ಮುಂತಾದ ದೇಶಗಳಲ್ಲೂ ಗ್ರಾಮೀಣ ಶಿಕ್ಷಣದ ಸಮಸ್ಯೆ ಇದ್ದೇ ಇದೆ. ಅಲ್ಲಿನ ನಗರಗಳಿಗೂ ಗ್ರಾಮಗಳಿಗೂ ಅಷ್ಟಾಗಿ ವ್ಯತ್ಯಾಸವಿಲ್ಲದ ಪ್ರಯುಕ್ತ ಅಲ್ಲಿನ ಶಾಲೆಗಳಲ್ಲೂ ವ್ಯತ್ಯಾಸ ಕಲ್ಪಿಸಿಲ್ಲ. ಆದರೆ ಶಾಲೆಗಳ ಸ್ಥಾಪನೆ, ಆಡಳಿತ, ಹಣಕಾಸು ಮುಂತಾದವಕ್ಕೆ ಸಂಬಂಧಿಸಿದ ವ್ಯತ್ಯಾಸಗಳು ಕಂಡುಬರುತ್ತವೆ. ಪಠ್ಯಕ್ರಮದಲ್ಲಿ ಸರ್ಕಾರ ಅನುಮತಿ ನೀಡಿರುವ ಅಥವಾ ಅಂಗೀಕರಿಸಿರುವ ಆದರೆ ಗ್ರಾಮೀಣ ಜೀವನಕ್ಕೆ ಮುಖ್ಯವಾಗಿ ನೆರವಾಗಬಲ್ಲ ತೋಟಗಾರಿಕೆ, ಬೇಸಾಯ, ಗೃಹ ಕೈಗಾರಿಕೆ, ಗೃಹ ಕಾರ್ಯನಿರ್ವಹಣೆ ಮುಂತಾದ ವಿಷಯಗಳ ಬೋಧನೆಗೆ ಅವಕಾಶ ಕಲ್ಪಿಸಿಕೊಳ್ಳಲಾಗಿದೆ. ಅಧ್ಯಾಪಕರ ನೇಮಕವೇ ಮುಂತಾದ ಆಡಳಿತಾಂಶಗಳಲ್ಲಿ ಸ್ವಾತಂತ್ರ್ಯವಿದ್ದರೂ ಶೈಕ್ಷಣಿಕ ಅಂಶಗಳಲ್ಲಿ ಅಷ್ಟಾಗಿ ಸ್ವಾತಂತ್ರ್ಯವಿರುವುದಿಲ್ಲ. ಶಾಲೆಯ ವೆಚ್ಚದಲ್ಲಿ ಶೇ. 70 ರಿಂದ ಶೇ. 80ರ ವರೆಗೂ ಸರ್ಕಾರದಿಂದ ಸಹಾಯ ಧನ ಪಡೆಯುವ ಖಾಸಗಿ ಅಥವಾ ಸ್ಥಳೀಯ ಸರ್ಕಾರದ ಶಾಲೆಗಳೇ ಅಲ್ಲಿ ಹೆಚ್ಚು. ಅಲ್ಲಿನ ಎಲ್ಲಮಟ್ಟದ ಶಿಕ್ಷಣ ಸಂಸ್ಥೆಗಳಲ್ಲೂ ಶಿಕ್ಷಣ ಅಂತಿಮ ಸ್ವರೂಪದ್ದಾಗಿರುತ್ತದೆ. ಎಲ್ಲೋ ಅಪರೂಪವಾಗಿರುವ ಕೆಲವು ಪ್ರೌಢಶಾಲೆಗಳಲ್ಲಿ ಮಾತ್ರ ಕಾಲೇಜಿಗೆ ಸಿದ್ಧತೆ ಮಾಡಿಸುತ್ತಾರೆ.

ಸಣ್ಣಪುಟ್ಟ ಆಡಳಿತ ಸಂಸ್ಥೆಗಳನ್ನು ಕಡಿಮೆ ಮಾಡುವ ಪ್ರವೃತ್ತಿ ವ್ಯಕ್ತಪಡುತ್ತಿರುವ ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಆಡಳಿತ, ಬೋಧನೆ, ಸರಬರಾಜು ಮುಂತಾದ ಅಂಶಗಳು ಕೇಂದ್ರೀಕೃತವಾಗುತ್ತಿವೆ. ಈ ಪ್ರವೃತ್ತಿಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾಗಿ ವ್ಯವಸ್ಥೆಗೊಂಡಿರುವ ವಾಹನ ಸೌಕರ್ಯ, ಸಾರಿಗೆ ಸಂಪರ್ಕ ಮುಂತಾದವು ಸಹಾಯಕವಾಗಿವೆ. ಅಲ್ಲಿನ ಶಾಲೆಗಳಲ್ಲಿ ಮಕ್ಕಳ ಸೇರ್ಪಡೆ ಮತ್ತು ಹಾಜರಾತಿ ನಗರದ ಶಾಲೆಗಳಷ್ಟು ಸಮರ್ಪಕವಾಗಿಲ್ಲ. ಕಟ್ಟಡಗಳು ಅಲ್ಲಿನವಕ್ಕೆ ಸರಿಗಟ್ಟಲಾರವು. ಅಧ್ಯಾಪಕರ ಸಂಬಳ ಸಾರಿಗೆಗಳೂ ಕಡಿಮೆ. 1914ರಿಂದ ಆರಂಭವಾಗಿರುವ ಕೃಷಿ ವಿಸ್ತರಣ ಸೇವಾ ವ್ಯವಸ್ಥೆ ಅಲ್ಲಿನ ರೈತರಿಗೆ ಒಳ್ಳೆಯ ಶಿಕ್ಷಣವೀಯುತ್ತಿದೆ. 'ಫೋರ್ ಎಚ್' ಕ್ಲಬ್ ದೇಶಾದ್ಯಂತ ವ್ಯವಸ್ಥೆಗೊಳಿಸಿರುವ ತನ್ನ ಶಾಖೆಗಳಲ್ಲಿ ಗ್ರಾಮೀಣ ಬಾಲಕ ಬಾಲಕಿಯರಿಗೆ ಪೌರಜೀವನ, ಗೃಹ ಕಾರ್ಯನಿರ್ವಹಣೆ, ಕುಟುಂಬ ಜೀವನ ಮತ್ತು ಬೇಸಾಯಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿಯಾಗಿ ಶಿಕ್ಷಣವೀಯುತ್ತಿವೆ. ಕ್ರೈಸ್ತಮತ ಪೀಠಗಳೂ ಅಲ್ಲಿನ ಜನತೆಯ ಜೀವನವನ್ನು ಉತ್ತಮ ಪಡಿಸಲು ಶಿಕ್ಷಣವೀಯುತ್ತವೆ. ರೈತರು ತಮ್ಮವೇ ಆದ ಶಿಕ್ಷಣ ಸಂಘಗಳನ್ನು ಏರ್ಪಡಿಸಿಕೊಂಡು ಅವುಗಳ ಮೂಲಕವೂ ತಮಗೆ ಬೇಕಾದ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿಕೊಳ್ಳುತ್ತಾರೆ.

ಇಂಗ್ಲೆಂಡು ಮತ್ತು ವೇಲ್ಸಿನ ಶಾಲೆಗಳಲ್ಲಿ ಗ್ರಾಮೀಣ ಜೀವನಕ್ಕೆ ಸಂಬಂಧಿಸಿದ ವಿಷಯಗಳಿಗೆ ಪ್ರಾಧಾನ್ಯವುಂಟು. ವೆಲ್ಷ್ ಭಾಷೆಯನ್ನು ಪ್ರಾಥಮಿಕ ಶಾಲೆಯಲ್ಲಿ ಕಲಿಸುತ್ತಾರೆ. ಪ್ರೌಢಶಾಲೆಗಳಲ್ಲಿ ವೃತ್ತಿಶಿಕ್ಷಣಕ್ಕೆ ಅವಕಾಶವುಂಟು. ಕಾಲೇಜಿಗೆ ಸಿದ್ಧತೆ ನೀಡುವ ಗ್ರಾಮರ್ ಶಾಲೆಗಳು ಅಲ್ಲಿ ಕಡಿಮೆ. ಮರಗೆಲಸ, ಇಟ್ಟಿಗೆ ಕೆಲಸ, ಲೋಹದ ಕೆಲಸ, ವ್ಯವಸಾಯದ ಕೆಲಸ–ಇವನ್ನು ಅಲ್ಲಿನ ಪ್ರೌಢಶಾಲೆಗಳಲ್ಲಿ ಕಲಿಸುತ್ತಾರೆ. ದೂರದಿಂದ ಬರುವ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರವನ್ನು ಒದಗಿಸುವರಲ್ಲದೆ ಹೋಗಿಬರಲು ವಾಹನ ಸೌಕರ್ಯವನ್ನೂ ಏರ್ಪಡಿಸಿರುತ್ತಾರೆ.

ಮುಂದುವರಿದ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಗ್ರಾಮಾಂತರ ಶಿಕ್ಷಣಕ್ಕೆ ಬೇಕಾದ ತಾಂತ್ರಿಕ ಮತ್ತು ಆರ್ಥಿಕ ನೆರವನ್ನು ನೀಡುವುದರ ಮೂಲಕ ಜನಜನಾಂಗಗಳಲ್ಲಿರುವ ಅಂತರವನ್ನು ಕಡಿಮೆ ಮಾಡಲು ಯತ್ನಿಸುತ್ತಿವೆ. ಪ್ರಪಂಚದ ಬಹುಪಾಲು ಜನತೆ ಅಭಿವೃದ್ಧಿಶೀಲ ರಾಷ್ಟ್ರಗಳ ಗ್ರಾಮಾಂತರ ಪ್ರದೇಶಗಳಲ್ಲಿರುವುದರಿಂದ ಗ್ರಾಮೀಣ ಶಿಕ್ಷಣದ ಸಮಸ್ಯೆ ಪ್ರಪಂಚದ ಪ್ರಮುಖ ಶಿಕ್ಷಣ ಸಮಸ್ಯೆಯಾಗಿದೆ.

ಭಾರತದಲ್ಲಿ ಗ್ರಾಮೀಣ ಶಿಕ್ಷಣ : ಕಳೆದ ಶತಮಾನದ ಉತ್ತರಾರ್ಧದಿಂದ ವಿವಿಧ ಉದ್ಯೋಗಗಳನ್ನು ಅಧಿಕ ಸಂಖ್ಯೆಯಲ್ಲಿ ಕಲ್ಪಿಸುತ್ತಿದ್ದರೂ ಭಾರತ ಇಂದಿಗೂ ಮುಖ್ಯವಾಗಿ ವ್ಯವಸಾಯದ ದೇಶವಾಗಿದ್ದು, ಜನತೆಯ ಮುಕ್ಕಾಲು ಪಾಲು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತ ವ್ಯವಸಾಯದಿಂದ ಜೀವಿಸುತ್ತಿದೆ. ದೇಶದಲ್ಲಿ ಅಕ್ಷರಸ್ಥರ ಸರಾಸರಿ ಸಂಖ್ಯೆ ಶೇ. 29.34. ಗಂಡಸರಲ್ಲಿ ಶೇ. 39.5 ರಷ್ಟೂ ಹೆಂಗಸರಲ್ಲಿ ಶೇ. 18.4 ರಷ್ಟೂ ಅಕ್ಷರತೆ ಇದೆ. ನಗರಗಳ ಮಹಿಳೆಯರಲ್ಲಿ ಶೇ. 42 ರಷ್ಟು ಗ್ರಾಮಾಂತರ ಪ್ರದೇಶದ ಮಹಿಳೆಯರಲ್ಲಿ ಕೇವಲ ಶೇ. 3 ರಷ್ಟೂ ಇದೆ. ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಅನಕ್ಷರಸ್ಥರ ಪ್ರಮಾಣ ಅಧಿಕವಾಗಿದೆ; ಮಹಿಳೆಯರಲ್ಲಂತೂ ಅಕ್ಷರಸ್ಥರೇ ಅಪರೂಪ. ಈಚೆಗೆ ಪ್ರಾಥಮಿಕ ಶಿಕ್ಷಣವನ್ನು 6 ರಿಂದ 11ರ ವಯೋಮಾನದ ಮಕ್ಕಳಿಗೆ ಕಡ್ಡಾಯ ಮಾಡಿದ್ದರ ಫಲವಾಗಿ ಅಕ್ಷರಸ್ಥರ ಶೇಕಡ ಪ್ರಮಾಣ ಸ್ವಲ್ಪಮಟ್ಟಿಗೆ ಸುಧಾರಿಸುತ್ತಿದೆ. ಜೊತೆಗೆ ವಯಸ್ಕರ ಶಿಕ್ಷಣ ಪ್ರಚಾರ, ಸಮಾಜಾಭಿವೃದ್ಧಿ ಕೇಂದ್ರಗಳಲ್ಲಿ ಅಕ್ಷರಪ್ರಚಾರ ಇವುಗಳ ಫಲವಾಗಿ ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ. ಆದರೆ ಜನಸಂಖ್ಯೆ ತೀವ್ರವೇಗದಲ್ಲಿ ಹೆಚ್ಚುತ್ತಿರುವುದರ ಫಲವಾಗಿ ಅಕ್ಷರಸ್ಥರ ಸಂಖ್ಯೆ ಹೆಚ್ಚಿದರೂ ಅವರ ಶೇಕಡಾ ಪ್ರಮಾಣ ಮಾತ್ರ ಅಷ್ಟಾಗಿ ಹೆಚ್ಚುತ್ತಿಲ್ಲ. ಪ್ರಾಥಮಿಕ ಶಾಲೆಗೆ ಆ ವಯೋಮಾನದ ಮಕ್ಕಳಲ್ಲಿ ಶೇ. 59 ರಷ್ಟೂ ಮಾಧ್ಯಮಿಕ ಮತ್ತು ಪ್ರೌಢ ಶಾಲೆಯ ವಯೋಮಾನದ ಮಕ್ಕಳಲ್ಲಿ ಶೇ. 20 ರಷ್ಟೂ ಉನ್ನತ ಪ್ರೌಢಶಾಲೆಗೆ ಆ ವಯೋಮಾನದ ಮಕ್ಕಳಲ್ಲಿ ಕೇವಲ ಶೇ. 10 ರಷ್ಟೂ ಸೇರಿರುತ್ತಾರೆ. ಪರಿಗಣಿತ ಕೋಮಿನವರಲ್ಲೂ ಬುಡಕಟ್ಟಿನವರಲ್ಲೂ ಈ ಪ್ರಮಾಣ ತೀರ ಕಡಿಮೆಯಾಗಿದೆ (ಶೇ. 1 ಮಾತ್ರ). ಪೋಷಕರ ಬಡತನ, ಅಜ್ಞಾನ, ನಿರಾಸಕ್ತಿ, ಮಕ್ಕಳ ದುಡಿಮೆಯನ್ನು ಅವಲಂಬಿಸಿರುವ ಅವರ ಕಸಬು, ಮೂಢ ಸಂಪ್ರದಾಯಗಳು ಇವೆಲ್ಲ ಕಾರಣಗಳಿಂದ ಮಕ್ಕಳು ಶಾಲೆಗೆ ಸೇರುವುದಾಗಲೀ ಸೇರಿ ಹಾಜರಾಗುವುದಾಗಲೀ ತೃಪ್ತಿಕರವಾಗಿ ಉತ್ತಮಗೊಂಡಿಲ್ಲ. ಶಾಲೆಗೆ ಸೇರದ ಹಾಗೂ

ಹಾಜರಾಗದ ಮಕ್ಕಳ ಪೋಷಕರು ಕಾನೂನು ರೀತ್ಯ ಶಿಕ್ಷಾರ್ಹರೆನಿಸುವಂತಿದ್ದರೂ ಹಲವಾರು ಕಾರಣಗಳಿಂದ ಅದನ್ನು ಅಷ್ಟಾಗಿ ಆಚರಣೆಗೆ ತರುತ್ತಿಲ್ಲ. ಅಲ್ಲದೆ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ಕಟ್ಟಡದ ಅಭಾವ, ಅಧ್ಯಾಪಕರ ಕೊರತೆ, ಉಪಕರಣಾದಿಗಳಿಲ್ಲದಿರುವುದು, ನಿರುತ್ಸಾಹ ರೀತಿಯ ಪಠ್ಯವಸ್ತು, ಬೋಧನ ವಿಧಾನ ಮತ್ತು ಕಾರ್ಯಕ್ರಮ–ಇವುಗಳೂ ಪರಿಸ್ಥಿತಿಗೆ ಕಾರಣವೆನಿಸಿವೆ. ಇಡೀ ದೇಶದ 352 ಜಿಲ್ಲೆಗಳಲ್ಲಿ ಕೇವಲ 32 ಜಿಲ್ಲೆಗಳಲ್ಲಿ ಮಾತ್ರ ಅಕ್ಷರತೆ ಶೇ. 25 ರಷ್ಟಿದೆ. ಆ ಜಿಲ್ಲೆಗಳಲ್ಲಿ ಅಧಿಕ ಪ್ರಮಾಣದಲ್ಲಿ ನಗರದ ಜನತೆ ಸೇರಿರುವುದೇ ಇದಕ್ಕೆ ಕಾರಣವೆನ್ನಬಹುದು. ಮಿಕ್ಕ ಜಿಲ್ಲೆಗಳಲ್ಲಿ ಆ ಪ್ರಮಾಣ ತೀರ ಕಡಿಮೆಯಾಗಿದೆ. ಒರಿಸ್ಸ, ಮಧ್ಯಪ್ರದೇಶ, ಆಂಧ್ರ, ಮೈಸೂರಿನ ಕೆಲವು ಜಿಲ್ಲೆಗಳು ಇದಕ್ಕೆ ಉದಾಹರಣೆಯೆನ್ನಬಹುದು. ಗ್ರಾಮೀಣ ಶಿಕ್ಷಣವೆಂದರೆ ಅಲ್ಲಿನ ಮಹಿಳೆಯರಲ್ಲಿ ಪ್ರಥಮತಃ ಅಕ್ಷರ ಪ್ರಚಾರವೇ ಆಗುತ್ತದೆ. ಈ ದೃಷ್ಟಿಯಲ್ಲಿ ನೋಡಿದರೆ, ಗ್ರಾಮಗಳಲ್ಲಿ ಮಹಿಳೆಯರಲ್ಲಿ ಅಕ್ಷರ ಪ್ರಚಾರ ಹೆಚ್ಚಿದರೆ ಭಾರತದಲ್ಲಿ ಅನಕ್ಷರಸ್ಥರ ಪ್ರಮಾಣ ಕಡಿಮೆಯಾಗುತ್ತದೆ.

1961 – 62ರಿಂದ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಮಕ್ಕಳ ಸೇರ್ಪಡೆ ಗಣನೀಯವಾಗಿ ಹೆಚ್ಚುತ್ತಿದೆ. ಸಾಮಾನ್ಯ ಶಾಲೆಗಳ ಜೊತೆಗೆ ವಯಸ್ಕರಲ್ಲಿ ಅಕ್ಷರ ಪ್ರಚಾರವನ್ನು ಮಾಡುತ್ತಿರುವ ವಯಸ್ಕರ ಶಿಕ್ಷಣ ಸಮಿತಿ, ಸಮಾಜಾಭಿವೃದ್ಧಿ ಯೋಜನೆಯ ಘಟಕಗಳು ಇವೆಲ್ಲ ಅನಕ್ಷರಸ್ಥರ ಪ್ರಮಾಣವನ್ನು ತಗ್ಗಿಸಲು ನೆರವಾಗುತ್ತಿವೆ. ವಿಶ್ವವಿದ್ಯಾಲಯಗಳ ಪ್ರಕಟಣೆ ಮತ್ತು ಪ್ರಚಾರೋಪನ್ಯಾಸ ವಿಭಾಗವೂ ಸರ್ಕಾರದ ವ್ಯವಸಾಯ, ಆರೋಗ್ಯ ಮುಂತಾದ ಶಾಖೆಗಳೂ ಸಮಾಜ ಕಲ್ಯಾಣ ಮಂಡಳಿಯೂ ಅಲ್ಲಿನ ವಯಸ್ಕರಲ್ಲಿ ಶಿಕ್ಷಣ ಪ್ರಸಾರ ಕಾರ್ಯವನ್ನು ಕೈಗೊಂಡಿವೆ. ಈಚೆಗೆ ಅಸ್ತಿತ್ವಕ್ಕೆ ಬಂದಿರುವ ಕೃಷಿ ವಿದ್ಯಾಲಯಗಳು ದೇಶಾದ್ಯಂತ ಬೇಸಾಯಕ್ಕೆ ಸಂಬಂಧಿಸಿದ ವಿಸ್ತರಣ ಸೇವಾ ಕಾರ್ಯವನ್ನು ನಿರ್ವಹಿಸುತ್ತಿವೆ. ಇವುಗಳ ಜೊತೆಗೆ ಹಿಂದಿನಿಂದಲೂ ಅಸ್ತಿತ್ವದಲ್ಲಿರುವ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘ ಸಂಸ್ಥೆಗಳು ಜನತೆಯ ಜೀವನವನ್ನು ಹಸನು ಮಾಡಲು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಯಸ್ಕರ ಶಿಕ್ಷಣವನ್ನು ಸಾಧಿಸುತ್ತಿವೆ.

ಗ್ರಾಮಾಂತರ ಪ್ರದೇಶಗಳ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು ನಗರದವುಗಳಿಗಿಂತ ಭಿನ್ನವಾಗಿಲ್ಲ. ಪ್ರಾಥಮಿಕ ಶಿಕ್ಷಣ 6–7 ವರ್ಷಗಳ ಕಾಲಾವಧಿಯದಾಗಿದ್ದು ಮೂಲ ಕೌಶಲಗಳನ್ನು ಬೋಧಿಸತಕ್ಕವಾಗಿವೆಯೇ ಹೊರತು ಅಂತಿಮ ಸ್ವರೂಪದ ಶಿಕ್ಷಣವನ್ನು ನೀಡತಕ್ಕವಾಗಿಲ್ಲ. ಪ್ರೌಢಶಾಲೆಗಳ ಸಂಖ್ಯೆ ಅಲ್ಲಿ ಇನ್ನೂ ಹೆಚ್ಚಬೇಕಾಗಿದೆ. ಗ್ರಾಮೀಣ ಶಿಕ್ಷಣವನ್ನು ಪರಿಣಾಮಕಾರಿಯಾಗಿಸಲು ಕೇಂದ್ರ ಸರ್ಕಾರ ಅನೇಕ ಯೋಜನೆಗಳನ್ನು ತಯಾರಿಸಿದ್ದರೂ ಅವು ಪೂರ್ಣ ಯಶಸ್ವಿಯಾಗಿಲ್ಲ. 1966 ರಲ್ಲಿ ನೇಮಕವಾಗಿದ್ದ ಕೊಠಾರಿ ಶಿಕ್ಷಣ ಆಯೋಗ ಗ್ರಾಮೀಣ ಶಿಕ್ಷಣವನ್ನು ಪ್ರತ್ಯೇಕವಾಗಿ ಪರಿಶೀಲಿಸಿಲ್ಲ. ಆದರೆ ಅಲ್ಲಿನ ಶಾಲೆಗಳಲ್ಲಿ ವ್ಯವಸಾಯವನ್ನು ಬೋಧಿಸುವ ಬಗ್ಗೆ ಟೀಕಿಸುತ್ತ ಮಕ್ಕಳ ಆ ವಯಸ್ಸು ವೃತ್ತಿಶಿಕ್ಷಣಕ್ಕೆ ಅನುಕೂಲವಲ್ಲವೆಂದೂ ಅದರ ಬದಲು ವಿಜ್ಞಾನ ಮತ್ತು ಗಣಿತವನ್ನು ಬೋಧಿಸುವುದರಿಂದ ಮುಂದೆ ಆ ರೀತಿಯ ಶಿಕ್ಷಣಕ್ಕೆ ಸಹಾಯವಾಗುವುದೆಂದೂ ಸಲಹೆ ಮಾಡಿದೆ. ಬಹುಶಃ ಇಂಗ್ಲೆಂಡಿನ ಟೆಕ್ನಿಕಲ್ ಸೆಕೆಂಡರಿ ಶಾಲೆಗಳಂಥ ಪ್ರೌಢಶಾಲೆಗಳನ್ನು ಆರಂಭಿಸಿ, ಅಲ್ಲಿ ಗ್ರಾಮ ಜೀವನಕ್ಕೂ ವ್ಯವಸಾಯಕ್ಕೂ ನೆರವಾಗತಕ್ಕ ಮರಗೆಲಸ, ಲೋಹದ ಕೆಲಸ, ಕಟ್ಟಡದ ಕೆಲಸ, ಗೃಹ ಕಾರ್ಯನಿರ್ವಹಣೆ ಮುಂತಾದ ವೃತ್ತಿಪರಶಿಕ್ಷಣದ ಬೋಧನೆಗೆ ವ್ಯವಸ್ಥೆಮಾಡಿ, ಅದನ್ನು ಬಹುಮಟ್ಟಿಗೆ ಅಂತಿಮ ಸ್ವರೂಪದ ಶಿಕ್ಷಣವನ್ನಾಗಿ ಮಾಡುವುದರಿಂದ ಹೆಚ್ಚು ಪ್ರಯೋಜನವಾಗಬಹುದು.

**ಗ್ರಾಮೀಣ ಉನ್ನತ ಶಿಕ್ಷಣ :** ಗ್ರಾಮಾಂತರ ಪ್ರದೇಶದ ಯುವಕ ಯುವತಿಯರಿಗೆ ಪ್ರೌಢ ಅಥವಾ ಪ್ರಿಯೂನಿವರ್ಸಿಟಿ ಶಿಕ್ಷಣದ ಅನಂತರ ಅಲ್ಲಿನ ಜೀವನಕ್ಕೆ ಅನುಕೂಲಿಸುವಂಥ ಶಿಕ್ಷಣ ಕಾರ್ಯಕ್ರಮಗಳನ್ನೇ ಪ್ರಧಾನವಾಗಿ ಏರ್ಪಡಿಸಿಕೊಂಡಿರುವ ವಿಶಿಷ್ಟ ರೀತಿಯ ಒಂದು ವ್ಯವಸ್ಥೆ. ಸಾಂಪ್ರದಾಯಿಕ ವಿಶ್ವವಿದ್ಯಾಲಯದ ಶಿಕ್ಷಣಕ್ಕಿಂತ ಭಿನ್ನವಾಗಿರುವ ಈ ಶಿಕ್ಷಣ ತನ್ನದೇ ಆದ ಉದ್ದೇಶ, ಗೊತ್ತುಗುರಿಗಳು, ಕರ್ತವ್ಯ, ಆಡಳಿತ ವ್ಯವಸ್ಥೆ, ವಿದ್ಯಾಲಯಗಳು, ಕಾರ್ಯಕ್ರಮಗಳು ಮುಂತಾದವನ್ನು ರೂಪಿಸಿಕೊಂಡಿರುತ್ತದೆ. ಗ್ರಾಮಾಂತರ ಪ್ರದೇಶದ ಯುವಜನರು ನಗರದ ವಿಶ್ವವಿದ್ಯಾಲಯದ ಉನ್ನತ ಶಿಕ್ಷಣ ಪಡೆದು ನಗರ ಜೀವನಕ್ಕೆ ಹೊಂದಿಕೊಂಡು ಅಲ್ಲೇ ನೆಲೆಸುವುದರಿಂದ ಗ್ರಾಮಜೀವನದ ಪ್ರತಿಭೆ ಮತ್ತು ಜನಸಾಮರ್ಥ್ಯದಲ್ಲಿ ತಲೆದೋರುವ ಕೊರತೆಯನ್ನು (ಸೋರುವಿಕೆ) ತಪ್ಪಿಸಿ, ಗ್ರಾಮಜೀವನದಲ್ಲಿ ಆಸಕ್ತಿ ಮೂಡಿಸಿ ಅಲ್ಲಿನ ಯುವಕರು ಅಲ್ಲೇ ನೆಲೆಸಿ ಅಲ್ಲಿನ ಜೀವನವನ್ನು ಸಮೃದ್ಧಗೊಳಿಸಲು ನೆರವಾಗುವಂಥ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು ಅವಶ್ಯ. ಮುಖ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ವಿಶಿಷ್ಟ ಶಿಕ್ಷಣ ಅಸ್ತಿತ್ವಕ್ಕೆ ಬರುತ್ತಿದೆ.

ವ್ಯವಸಾಯವೇ ಮುಖ್ಯ ಕಸಬಾಗುಳ್ಳ ರಾಷ್ಟ್ರಗಳಲ್ಲಿ ಜನತೆಯ ಬಹುಭಾಗ ದೇಶಾದ್ಯಂತ ಹರಡಿರುವ ಸಣ್ಣಪುಟ್ಟ ಗ್ರಾಮಗಳಲ್ಲಿ ನೆಲೆಸಿರುತ್ತದೆ. ಪ್ರಾಥಮಿಕ ಶಿಕ್ಷಣದ ಸೌಲಭ್ಯ ಅಲ್ಲಿಗೆ ಪೂರ್ಣವಾಗಿ ವಿಸ್ತರಿಸಿದೆಯೆಂದು ಒಪ್ಪಿದರೂ ಪ್ರೌಢ ಮತ್ತು ಉನ್ನತ ಶಿಕ್ಷಣದ ಸೌಲಭ್ಯಗಳು ಬಹುಮಟ್ಟಿಗೆ ನಗರಗಳಲ್ಲಿ ವ್ಯವಸ್ಥೆಗೊಂಡಿವೆ. ಗ್ರಾಮಾಂತರ ಪ್ರದೇಶಗಳವರು ಅಲ್ಲಿಗೆ ಹೋಗಿ ಶಿಕ್ಷಣ ಪಡೆಯುವುದೆಂದರೆ ಅದು ಕೇವಲ ಕೆಲವು ಶ್ರೀಮಂತರಿಗೆ ಮಾತ್ರ ಸಾಧ್ಯವೆನಿಸಿದ್ದು ಮಿಕ್ಕ ಬಹುಪಾಲು ಜನತೆಗೆ ಎಟುಕದಾಗಿದೆ. ಈಗ ಪ್ರೌಢ ಮತ್ತು ಪ್ರಿಯೂನಿವರ್ಸಿಟಿ ಮಟ್ಟದ ಶಿಕ್ಷಣವನ್ನು ಗ್ರಾಮಗಳಲ್ಲೂ ಆರಂಭಿಸಲಾಗಿದೆ. ನಗರಗಳಿಗೆ ಬಂದು ಅಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಪಡೆದು ಅಲ್ಲಿನ ಜೀವನಕ್ಕೆ ಹೊಂದಿಕೊಳ್ಳುವವರಿಗೆ ಗ್ರಾಮಜೀವನ ಆಕರ್ಷಕವಾಗಿರದ ಪ್ರಯುಕ್ತ ನಗರಜೀವನಕ್ಕೆ ಮನಸೋತು ಅಲ್ಲೇ ನೆಲೆಸುವ ಹವ್ಯಾಸ ಹೆಚ್ಚುತ್ತಿದೆ. ಅಲ್ಲದೆ ಸಾಂಪ್ರದಾಯಿಕ ರೀತಿಯ ಉನ್ನತ ಶಿಕ್ಷಣ ಗ್ರಾಮ ಜೀವನವನ್ನು ಸಮೃದ್ಧಗೊಳಿಸುವ ಉದ್ದೇಶದಿಂದ ಏರ್ಪಟ್ಟಿಲ್ಲ. ಅಂಥ ಶಿಕ್ಷಣವನ್ನು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸಿದರೂ ಅಲ್ಲಿನ ಜೀವನವನ್ನು ಆಕರ್ಷಕವಾಗಿಸಲಾರದೆಂಬ ಅಂಶವನ್ನು ಅರಿತಂತೆ, ಅಲ್ಲಿನ ಜೀವನವನ್ನು ಸಮೃದ್ಧಗೊಳಿಸಿ, ಶಿಕ್ಷಣ ಪಡೆದ ಯುವಕ ಯುವತಿಯರು ಅಲ್ಲೇ ಉದ್ಯೋಗನಿರತರಾಗುವ ಅವಕಾಶವನ್ನು ಕಲ್ಪಿಸಬಲ್ಲ ವಿಶಿಷ್ಟ ರೀತಿಯ ಉನ್ನತ ಶಿಕ್ಷಣದ ವ್ಯವಸ್ಥೆಯನ್ನು ರೂಪಿಸುವ ಕಾರ್ಯದಲ್ಲಿ ಮುಖ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ನಿರತವಾಗಿರುವುದು ಕಂಡುಬರುತ್ತಿದೆ.

ಗ್ರಾಮಾಂತರ ಪ್ರದೇಶದ ಜನಜೀವನಕ್ಕೊಪ್ಪುವ ಉನ್ನತ ಶಿಕ್ಷಣ ವ್ಯವಸ್ಥೆ ಏರ್ಪಡುವುದು ನಿಧಾನವಾದಷ್ಟೂ ಅಲ್ಲಿನ ಜನಜೀವನ ಬರಡಾಗುತ್ತ ಬರುತ್ತದೆ. ಅಲ್ಲಿನವರು ಏಕ ಪ್ರಕಾರವಾಗಿ ನಗರಗಳಿಗೆ ವಲಸೆ ಬರುವುದು ಸಾಗಿದಂತೆ ಅಲ್ಲಿನ ವ್ಯವಸಾಯೋದ್ಯಮಕ್ಕೆ ತಕ್ಕಷ್ಟು ಜನಶಕ್ತಿ ದೊರಕದೆ ರಾಷ್ಟ್ರದಲ್ಲಿ ಆಹಾರ ಸಮಸ್ಯೆ ತಲೆದೋರುತ್ತದೆ. ನಗರಗಳಲ್ಲಿ ಜನಸಂಖ್ಯೆ ಅಧಿಕಗೊಂಡು ಅಲ್ಲಿನ ಜೀವನ ವಿವಿಧ ಸಮಸ್ಯೆಗಳಿಗೆ ಎಡೆಗೊಡುತ್ತವೆ. ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಸಾಮರ್ಥ್ಯ ಬಹು ಮಟ್ಟಿಗೆ ವ್ಯವಸಾಯೋದ್ಯಮವನ್ನು ಅವಲಂಬಿಸಿರುವುದರಿಂದ ಸ್ವಾಭಾವಿಕವಾಗಿ ಆರ್ಥಿಕ ಮುಗ್ಗಟ್ಟು ಹೆಚ್ಚುತ್ತ ಹೋಗುತ್ತದೆ. ಹಾಗೂ ಪ್ರಾಚೀನ ನಾಗರಿಕತೆ ಸಂಸ್ಕೃತಿ ಸಂಪ್ರದಾಯಗಳು ಇಂದಿಗೂ ಉಳಿದುಕೊಂಡು ಬಂದಿರುವುದು ಹಳ್ಳಿಗಳಲ್ಲಿ. ಅವು ಬರಿದಾಗುತ್ತ ಹೋದಂತೆ ಆ ರಾಷ್ಟ್ರದ ಸಂಸ್ಕೃತಿ ನಾಗರಿಕತೆಗಳೂ ಬಡವಾಗುತ್ತ ಹೋಗುತ್ತವೆ. ಅಧಿಕ ಸಂಖ್ಯೆಯಲ್ಲಿ ಜನ ನೆಲೆಸಿರುವ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಆಗಲು ಅಲ್ಲಿನ ಜೀವನ ಆಕರ್ಷಣೀಯವೂ ಅಭಿವೃದ್ಧಿಶೀಲವೂ ಆಗಬೇಕು. ಅಲ್ಲಿನ ಯುವಜನ ವಿವಿಧ ಉದ್ಯಮಗಳಲ್ಲೂ ಸಾಹಸ ಕಾರ್ಯಗಳಲ್ಲೂ ತೊಡಗಲು ಅಲ್ಲಿ ಅವಕಾಶ ಕಲ್ಪಿಸಬೇಕು; ಸಾಂಸ್ಕೃತಿಕ ಮತ್ತು ಮನೋರಂಜನ ಸೌಲಭ್ಯಗಳೂ ಏರ್ಪಡಬೇಕು. ಮುಂದುವರಿದ ಅನೇಕ ರಾಷ್ಟ್ರಗಳಲ್ಲಿ ಜನ ಗಣಿ, ಕಾರ್ಖಾನೆ, ಕಾರ್ಯಾಲಯ, ಶಿಕ್ಷಣ ಸಂಸ್ಥೆ ಮುಂತಾದವುಗಳಲ್ಲಿ ಕೆಲಸಕ್ಕೆ ಸೇರಿ ಜೀವಿಸುತ್ತಿದ್ದರೂ ಇತರ ಜೀವನ ಸೌಲಭ್ಯಗಳು ನಗರಗಳಂತೆ ಗ್ರಾಮಾಂತರ ಪ್ರದೇಶಗಳಲ್ಲೂ ಹರಡಿರುವುದರಿಂದ ಅವೆರಡು ಜೀವನಗಳಲ್ಲಿ ಅಷ್ಟಾಗಿ ವ್ಯತ್ಯಾಸ ಕಂಡುಬರುತ್ತಿಲ್ಲ. ಹಳ್ಳಿಗಳಲ್ಲಿ ವ್ಯವಸಾಯದಿಂದ ಜೀವಿಸತಕ್ಕವರೂ ವರ್ಷದ ಬಿಡುವಿನ ಕಾಲದಲ್ಲಿ ಇತರ ಉಪಕಸಬುಗಳನ್ನು ಮಾಡಿ ಬದುಕಬಹುದು. ಅಂಥ ದೇಶಗಳಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಶಿಕ್ಷಣ ಸೌಲಭ್ಯಗಳಲ್ಲಿ ಅಷ್ಟಾಗಿ ವ್ಯತ್ಯಾಸ ಕಂಡುಬರುವುದಿಲ್ಲ.

ಭಾರತದಲ್ಲಿ ಗ್ರಾಮೀಣ ಉನ್ನತ ಶಿಕ್ಷಣ : ರಾಷ್ಟ್ರದ ಒಟ್ಟು ಜನಸಂಖ್ಯೆಯ ಶೇ. 70 ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಭಾರತ ಹಸುರು ಕ್ರಾಂತಿಯನ್ನು ಸಾಧಿಸಿ ಆಹಾರದ ಬಗ್ಗೆ ಸ್ವಾವಲಂಬನೆಯನ್ನು ಸಾಧಿಸುವ ಹಾದಿಯಲ್ಲಿತ್ತು. ಆದರೆ 70ರ ದಶಕದಿಂದೀಚೆಗೆ ಗ್ರಾಮೀಣ ಜನತೆ ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಬರುತ್ತಿರುವುದು ಹೆಚ್ಚುತ್ತಿದೆ. ಗ್ರಾಮಗಳಲ್ಲಿ ವ್ಯವಸಾಯೇತರ ಕಸಬುಗಳು ವೃದ್ಧಿಯಾಗದಿರುವುದೇ ಇದಕ್ಕೆ ಮುಖ್ಯ ಕಾರಣ. ನಗರಗಳಲ್ಲಿ ಅರ್ಧಕುಶಲವೃತ್ತಿಗಳಿಂದ ಹಿಡಿದು ವೈದ್ಯ, ನ್ಯಾಯ ಶಿಲ್ಪ ಇತ್ಯಾದಿ ಶಾಸ್ತ್ರೀಯ ವೃತ್ತಿಗಳವರೆಗಿನ ಎಲ್ಲ ಮಟ್ಟದ ಎಲ್ಲ ವಿಧದ ವೃತ್ತಿ ಶಿಕ್ಷಣ ಸೌಲಭ್ಯ ಏರ್ಪಟ್ಟಿದ್ದರೂ ಗ್ರಾಮಗಳಲ್ಲಿ ಜನರು ಅಕ್ಷರಸ್ಥರಾಗುವಷ್ಟು ಮಾತ್ರ ಶಿಕ್ಷಣ ಸೌಲಭ್ಯವುಂಟು. ಪ್ರತಿ ರಾಜ್ಯದಲ್ಲೂ ಕೃಷಿ ವಿದ್ಯಾಲಯಗಳು ಏರ್ಪಟ್ಟಿದ್ದರೂ ಅಲ್ಲಿ ಶಿಕ್ಷಣ ಪಡೆದವರು ಗ್ರಾಮಗಳಲ್ಲಿರದೆ ಉದ್ಯೋಗ ಹುಡುಕಿಕೊಂಡು ನಗರಕ್ಕೆ ಬರತಕ್ಕವರೇ. ಹಾಗೂ ಆ ವಿಶ್ವವಿದ್ಯಾಲಯಗಳು ಕೆಲವರಿಗೆ ಮಾತ್ರ ಶಿಕ್ಷಣವೀಯಬಲ್ಲವು. ಗ್ರಾಮಗಳಲ್ಲೆ ನಿತ್ಯಜೀವನಕ್ಕೂ ಕೃಷಿ ಆಧರಿತ ಉದ್ಯೋಗಗಳಿಗೂ ಅರ್ಧ ಮತ್ತು ಮಧ್ಯಮ ಮಟ್ಟದ ಕುಶಲಿ ಕಾರ್ಮಿಕರಿಗೆ ಶಿಕ್ಷಣವೀಯುವ ಸೌಲಭ್ಯ ಏರ್ಪಟ್ಟರೆ ಅಲ್ಲಿನವರು ಶಿಕ್ಷಣ ಪಡೆದು ಅಲ್ಲೇ ನೆಲೆಸಿ ಜೀವನದಲ್ಲಿ ಆಸಕ್ತಿ ವಹಿಸಿ ಅದನ್ನು ಸಮೃದ್ಧಗೊಳಿಸುವುದು ಸಾಧ್ಯ. ಭೂಹಿಡುವಳಿಗೆ ಮಿತಿ ಆಚರಣೆಗೆ ಬಂದಂತೆ, ಪ್ರತಿ ಕುಟುಂಬವೂ ಮುಂದೆ ವಿಭಾಗವಾಗುತ್ತ ಹೋದಂತೆ ವ್ಯವಸಾಯ ಅಲ್ಲಿನ ಜನತೆಗೆ ತಕ್ಕಷ್ಟು ಉದ್ಯೋಗವೊದಗಿಸಲಾರದ ಸನ್ನಿವೇಶ ಬರುತ್ತದೆ. ಅಲ್ಲಿನವರು ಇತರ ವೃತ್ತಿಗಳಲ್ಲಿ ಶಿಕ್ಷಣ ಪಡೆದಿದ್ದು ಇತರ ಕಸಬುಗಳನ್ನೂ

ಅನುಸರಿಸುವುದಾದರೆ ಪರಿಸ್ಥಿತಿ ಆಶಾದಾಯಕವಾದೀತು. ಗ್ರಾಮಾಂತರ ಪ್ರದೇಶ ಪರಿಸ್ಥಿತಿಯಲ್ಲಿ ಇಂಥ ಪರಿವರ್ತನೆಯನ್ನು ಕೃಷಿ ವಿಶ್ವವಿದ್ಯಾಲಯಗಳು ಉಂಟುಮಾಡಲಾರವು. ವ್ಯವಸಾಯೋದ್ಯಮವನ್ನು ಆಧಾರ ಮಾಡಿಕೊಂಡು ವಿವಿಧ ಉದ್ಯೋಗಗಳಿಗೆ ಶಿಕ್ಷಣವೀಯಬಲ್ಲ ಕೃಷಿ ಪಾಲಿಟೆಕ್ನಿಕ್ಕುಗಳು ಮಾತ್ರ ಆ ಕಾರ್ಯವನ್ನು ಸಾಧಿಸಬಲ್ಲವು.

ರಾಷ್ಟ್ರದಲ್ಲಿ ಗ್ರಾಮೋದ್ಧಾರದ ಬಗ್ಗೆ ಬೇಕಾದಷ್ಟು ಪ್ರಚಾರ ನಡೆದಿದೆ. ಸಮುದಾಯ ಅಭಿವೃದ್ಧಿ ಯೋಜನೆಯೂ ಅಸ್ತಿತ್ವಕ್ಕೆ ಬಂದಿದೆ. ಆದರೆ ಅಲ್ಲಿನವರ ಪ್ರಯತ್ನವಿಲ್ಲದೆ ಆ ಕಾರ್ಯ ಸಿದ್ಧಿಸಲಾರದು. ಕೇವಲ ಕಾಳುಕಡ್ಡಿಗಳನ್ನು ಬೆಳೆದುಕೊಂಡು ಹೊಟ್ಟೆಹೊರೆದುಕೊಳ್ಳುವ ವಿದ್ಯೆಯಲ್ಲಿ ಮಾತ್ರ ತಿಳಿವಳಿಕೆ ನೀಡುವುದರಿಂದ ಅವರು ತಮ್ಮ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲಾರರು. ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾದ ಕಾರ್ಯಬೇಕಾದ ಹಾಗಿದೆ. ಕಟ್ಟಡದ ಕೆಲಸ, ರಸ್ತೆ ಸೇತುವೆಗಳ ಕೆಲಸ, ವ್ಯವಸಾಯೋಪಕರಣಗಳ ದುರಸ್ತು, ಹೊಲಗದ್ದೆಗಳ ಮಣ್ಣಿನ ರಕ್ಷಣೆ, ಕಾಲುವೆಗಳ ನಿರ್ಮಾಣ, ಕೆರೆಗಳ ಜೀರ್ಣೋದ್ಧಾರ, ಬಾವಿ ತೋಡುವುದು, ಮರಗೆಲಸ, ಕಬ್ಬಿಣದ ಕೆಲಸ, ರೇಡಿಯೊ, ಬೀಸುವ ಯಂತ್ರ ಮುಂತಾದವುಗಳ ದುರಸ್ತು, ವಿದ್ಯುಚ್ಛಕ್ತಿಯ ತಂತಿ ಮುಂತಾದವನ್ನು ಅಳವಡಿಸುವುದು –ಇವೇ ಮುಂತಾದ ಕಸಬುಗಳಿಗೆ ಪ್ರಾತ್ಯಕ್ಷಿಕ ಶಿಕ್ಷಣ ದೊರೆತರೆ ಅವರು ಅಲ್ಲೇ ಉದ್ಯೋಗನಿರತರಾಗಬಹುದು. ಆಗ ಗ್ರಾಮಗಳ ಪುನರುಜ್ಜೀವನವಾಗಿ ಅಲ್ಲಿನ ಜೀವನ ಆಕರ್ಷಣೀಯ ಎನಿಸಬಲ್ಲದು. ಅಂಥ ಶಿಕ್ಷಣವನ್ನು ಪಾಲಿಟೆಕ್ನಿಕ್ಕುಗಳು ಮಾತ್ರ ಒದಗಿಸಬಲ್ಲವು. ಅಂಥ ಸಂಸ್ಥೆಗಳನ್ನು ಪ್ರಧಾನವಾಗಿ ತನ್ನ ಅಂಗಸಂಸ್ಥೆಗಳಾಗಿಯೋ ಅಂಗೀಕೃತ ಸಂಸ್ಥೆಗಳಾಗಿಯೋ ಹೊಂದಿರುವ ಗ್ರಾಮೀಣ ವಿಶ್ವವಿದ್ಯಾಲಯಗಳ ಸ್ಥಾಪನೆಯನ್ನು 1949ರಲ್ಲಿ ರಾಧಾಕೃಷ್ಣನ್ ಶಿಕ್ಷಣ ಆಯೋಗ ಸಲಹೆ ಮಾಡಿತು. ಅವುಗಳ ಸ್ಥಾಪನೆಯ ಅಗತ್ಯವನ್ನು ಕುರಿತು ಪ್ರಸ್ತಾಪಿಸುತ್ತ 'ಅದರಿಂದ ಗ್ರಾಮಜೀವನ ಚೈತನ್ಯದಿಂದ ಮಿಡಿಯುವಂತಾಗಿ ಆಕರ್ಷಣೀಯವೂ ಶ್ರೀಮಂತವೂ ಆಗಬಲ್ಲದು; ಆಗ ಅದು ನಗರ ಜೀವನಕ್ಕೆ ಸರಿಸಮವಾಗಿ ನಿಂತು ಆ ಮೂಲಕ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಸಾಧನೆಯಾಗಬಲ್ಲದು' ಎಂದು ಒತ್ತಿಹೇಳಿತು. ಅಂಥ ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಬೆಂಬಲವಾಗಿರುವಂತೆ ಶಾಲಾಮಟ್ಟದ ಶಿಕ್ಷಣವನ್ನೂ ಸೂಕ್ತರೀತಿಯಲ್ಲಿ ಪುನರ್ವ್ಯವಸ್ಥೆಗೊಳಿಸಬೇಕೆಂದೂ ಸಲಹೆ ಮಾಡಿತು. ಭಾರತ ಸರ್ಕಾರ ಗ್ರಾಮೀಣ ವಿಶ್ವವಿದ್ಯಾಲಯಗಳನ್ನು ಇನ್ನೂ ಸ್ಥಾಪನೆ ಮಾಡದಿದ್ದರೂ ಆ ಮುಖವಾದ ಪ್ರಯತ್ನವನ್ನೇನೂ ನಡೆಸಿದೆ. ರಾಧಾಕೃಷ್ಣನ್ ಶಿಕ್ಷಣ ಆಯೋಗದ ಸಲಹೆಯನ್ನನುಸರಿಸಿ ಭಾರತ ಸರ್ಕಾರ 1954 ರಲ್ಲಿ ತಜ್ಞರ ಸಮಿತಿಯನ್ನು ರಚಿಸಿ ಖಾಸಗಿಯವರು ಸ್ವಪ್ರೇರಣೆಯಿಂದ ನಡೆಸುತ್ತಿರುವ ಗ್ರಾಮೀಣ ಉನ್ನತ ಶಿಕ್ಷಣದ ಪ್ರಮಾಣವನ್ನು ಪರಿಶೀಲಿಸಿ ಆ ಮುಖವಾಗಿ ಮುಂದೆ ಕೈಕೊಳ್ಳಬೇಕಾದ ಕಾರ್ಯವನ್ನು ಸ್ಪಷ್ಟವಾಗಿ ಸೂಚಿಸಬೇಕೆಂದು ಕೇಳಿತು. ಅದು ನೀಡಿದ ಸಲಹೆಯಂತೆ 1956ರಲ್ಲಿ ರಾಷ್ಟ್ರೀಯ ಗ್ರಾಮೀಣ ಉನ್ನತ ಶಿಕ್ಷಣ ಸಲಹಾ ಮಂಡಳಿಯನ್ನು ರಚಿಸಿ ಅದರ ಮುಖ್ಯ ಕಾರ್ಯಾಲಯವನ್ನು ದೆಹಲಿಯಲ್ಲಿ ಸ್ಥಾಪಿಸಿತು. ಮಂಡಲಿಗೆ ಕೇಂದ್ರದ ಶಿಕ್ಷಣ ಸಚಿವರು ಅಧ್ಯಕ್ಷರು ಶಿಕ್ಷಣದ ಉಪಸಲಹೆಗಾರರು, ಕಾರ್ಯದರ್ಶಿಗಳು; ಜೊತೆಗೆ ಮಂಡಲಿಯಲ್ಲಿ ರಾಜ್ಯಗಳಿಂದ ಹನ್ನೊಂದು ಮಂದಿ ನಾಮಕರಣ ಮಾಡಿದ ಪ್ರತಿನಿಧಿಗಳೂ ಕೇಂದ್ರದ ಆರೋಗ್ಯ, ವ್ಯವಸಾಯ, ಗುಡಿಸಿಲು ಕೈಗಾರಿಕೆ, ಸಮುದಾಯಾಭಿವೃದ್ಧಿ ಯೋಜನೆ, ಹಣಕಾಸು ಈ ಸಚಿವಾಲಯಗಳಿಂದ ಒಬ್ಬೊಬ್ಬ ಪ್ರತಿನಿಧಿಯೂ ಅಂತರ ವಿಶ್ವವಿದ್ಯಾಲಯ ಮಂಡಲಿ, ವಿಶ್ವವಿದ್ಯಾಲಯದ ಧನ ಆಯೋಗ ಇವುಗಳಿಂದ ಒಬ್ಬೊಬ್ಬ ಪ್ರತಿನಿಧಿಯೂ ಸದಸ್ಯರಾಗಿರುವರು. ಸರ್ಕಾರ ಮಂಡಲಿಗೆ ಈ ಮುಂದಿನ ಕರ್ತವ್ಯಗಳನ್ನು ವಿಧಿಸಿತು : 1. ಗ್ರಾಮೀಣ ಶಿಕ್ಷಣವನ್ನು ಉತ್ತಮಪಡಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ಸಲಹೆ ನೀಡುವುದು; 2. ಗ್ರಾಮೀಣ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅಗತ್ಯವೆನಿಸುವ ಸಲಹೆ ನೀಡುತ್ತ ಅವುಗಳ ಕಾರ್ಯದಲ್ಲಿ ಯೋಜನೆಯನ್ನು ಸಾಧಿಸುವುದು; 3. ನಿಯೋಜಿತ ಯೋಜನೆಗಳನ್ನು ಕಾರ್ಯಗತ ಮಾಡುವಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಕ್ತ ರೀತಿಯ ಸಲಹೆ ನೀಡುವುದು; 4. ಗ್ರಾಮೀಣ ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಅಗತ್ಯವಾದ ಕಾರ್ಯಕ್ರಮಗಳನ್ನು ಆರಂಭಿಸುವುದು; ಮತ್ತು ಅಗತ್ಯವೆನಿಸುವ ಸಂಶೋಧನೆಗಳನ್ನು ನಡೆಸುವುದು; 5. ಗ್ರಾಮೀಣ ಉನ್ನತ ಶಿಕ್ಷಣದಲ್ಲಿ ತೊಡಗಿರುವ ಸಂಸ್ಥೆಗಳಿಗೆ ಸಹಾಯ ಧನ ನೀಡಲು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು; 6. ಗ್ರಾಮೀಣ ಶಿಕ್ಷಣದ ಉದ್ದೇಶ ಸಾಧನೆಗಾಗಿ ಸಮಸ್ಯೆಗಳನ್ನು ಪರಿಶೀಲಿಸಿ ಸಲಹೆ ನೀಡಲು ತಜ್ಞರ ಸಮಿತಿಗಳನ್ನು ನೇಮಿಸುವುದು; 7. ತನಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವೆನಿಸುವ ಕಾನೂನುಗಳನ್ನು ರಚಿಸುವುದು.

ಮೇಲಿನ ಮಂಡಲಿಯ ಸಲಹೆಯಂತೆ ಭಾರತ ಸರ್ಕಾರ 28 ಗ್ರಾಮೀಣ ವಿದ್ಯಾಸಂಸ್ಥೆಗಳನ್ನು (ರೂರಲ್ ಇನ್‌ಸ್ಟಿಟ್ಯೂಟ್) ಸ್ಥಾಪಿಸಿದೆ. ಕೆಲವು ಗ್ರಾಮೀಣ ವಿದ್ಯಾಸಂಸ್ಥೆಗಳನ್ನು ಮುಂದೆ ಸೂಚಿಸಿದೆ :

1. ಗಾಂಧಿಗ್ರಾಮ ರೂರಲ್ ಇನ್‌ಸ್ಟಿಟ್ಯೂಟ್, ಮಧುರೆ (ತಮಿಳುನಾಡು).
2. ರಾಮಕೃಷ್ಣ ಶಾರದ ರೂರಲ್ ಇನ್‌ಸ್ಟಿಟ್ಯೂಟ್, ಕೊಯಮತ್ತೂರು (ತಮಿಳುನಾಡು).
3. ಲೋಕ ಭಾರತಿ ರೂರಲ್ ಇನ್‌ಸ್ಟಿಟ್ಯೂಟ್, ಸನೋಸರ (ಗುಜರಾತ್).
4. ಅಮರಾವತಿ ರೂರಲ್ ಇನ್‌ಸ್ಟಿಟ್ಯೂಟ್, ಅಮರಾವತಿ (ಮಹಾರಾಷ್ಟ್ರ).
5. ಕರ್ಮವೀರ ಹೀರೆ ರೂರಲ್ ಇನ್‌ಸ್ಟಿಟ್ಯೂಟ್, ಗರ್ಗೋಟಿ (ಮಹಾರಾಷ್ಟ್ರ).
6. ವಿದ್ಯಾಭವನ ರೂರಲ್ ಇನ್‌ಸ್ಟಿಟ್ಯೂಟ್, ಉದಯಪುರ (ರಾಜಸ್ತಾನ).
7. ಬಲವಂತ್ ವಿದ್ಯಾಪೀಠ ರೂರಲ್ ಇನ್‌ಸ್ಟಿಟ್ಯೂಟ್, ಬಿಚ್ಪುರಿ (ಆಗ್ರ).
8. ಜಾಮಿಯಮಿಲಿಯ ರೂರಲ್ ಇನ್‌ಸ್ಟಿಟ್ಯೂಟ್, ನವದೆಹಲಿ.
9. ರೂರಲ್ ಇನ್‌ಸ್ಟಿಟ್ಯೂಟ್, ಬಿರೌಲಿ (ಬಿಹಾರ್).
10. ಕಸ್ತೂರಿ ಬಾ ರೂರಲ್ ಇನ್‌ಸ್ಟಿಟ್ಯೂಟ್, ರಾಜಪುರ (ಪಂಜಾಬ್).
11. ರೂರಲ್ ಇನ್‌ಸ್ಟಿಟ್ಯೂಟ್, ವಾರ್ಧಾ (ಮಹಾರಾಷ್ಟ್ರ).
12. ರೂರಲ್ ಇನ್‌ಸ್ಟಿಟ್ಯೂಟ್, ಹನುಮನಮಟ್ಟಿ (ಕರ್ನಾಟಕ).
13. ಕಸ್ತೂರಿ ಬಾ ಗ್ರಾಮ ರೂರಲ್ ಇನ್‌ಸ್ಟಿಟ್ಯೂಟ್, ಇಂದೂರು (ಮಧ್ಯಪ್ರದೇಶ).
14. ರೂರಲ್ ಇನ್‌ಸ್ಟಿಟ್ಯೂಟ್, ತವನೂರು (ಕೇರಳ).
15. ರೂರಲ್ ಇನ್‌ಸ್ಟಿಟ್ಯೂಟ್, ಶ್ರೀನಿಕೇತನ (ಪಶ್ಚಿಮ ಬಂಗಾಲ).

ಮೇಲೆ ಸೂಚಿಸಿದ ಗ್ರಾಮೀಣ ಉನ್ನತ ವಿದ್ಯಾಸಂಸ್ಥೆಗಳು ಒಂದೊಂದು ರಾಜ್ಯ ಸರ್ಕಾರದ ಶಿಕ್ಷಣವ್ಯವಸ್ಥೆಗೆ ಒಳಪಟ್ಟಿದ್ದರೂ ಯಾವೊಂದು ವಿಶ್ವವಿದ್ಯಾಲಯಕ್ಕೂ ಅಂಗಸಂಸ್ಥೆಯಾಗಿರದೆ ತನ್ನವೇ ಆದ ಡಿಪ್ಲೊಮ ಸರ್ಟಿಫಿಕೇಟ್ ಮುಂತಾದ ಪದವಿಗಳನ್ನು ನೀಡುವ ಅಧಿಕಾರವನ್ನು ಪಡೆದಿದ್ದವು. ಈ ವಿದ್ಯಾಸಂಸ್ಥೆಗಳು ಆರಂಭಿಕ ವರ್ಷಗಳಲ್ಲಿ ಯಶಸ್ಸು ಕಾಣಲಿಲ್ಲ. ಈ ಕುರಿತು ವರದಿ ನೀಡುವಂತೆ 1967ರಲ್ಲಿ ಜಿ. ರಾಮಚಂದ್ರನ್ ಸಮಿತಿಯನ್ನು ಸ್ಥಾಪಿಸಲಾಯಿತು. 1970ರಲ್ಲಿ ರಾಷ್ಟ್ರೀಯ ಗ್ರಾಮೀಣ ಉನ್ನತ ಶಿಕ್ಷಣ ಮಂಡಳಿ ಈ ವಿದ್ಯಾಸಂಸ್ಥೆಗಳನ್ನು ಸ್ಥಳೀಯ ವಿಶ್ವವಿದ್ಯಾಲಯಗಳ ವ್ಯಾಪ್ತಿಯೊಳಗೆ ತರಬೇಕಾಗಿ ಸಲಹೆ ನೀಡಿತು. ಆದರೆ ಇದು ಫಲಿಸಲಿಲ್ಲ. 1986ರಲ್ಲಿ ಮಾನವ ಸಂಪನ್ಮೂಲ ಸಚಿವಾಲಯ ಗ್ರಾಮೀಣ ಉನ್ನತ ಶಿಕ್ಷಣವನ್ನು ಪುನರುಜ್ಜೀವನಗೊಳಿಸಿ ರಾಷ್ಟ್ರೀಯ ಶೈಕ್ಷಣಿಕ ಯೋಜನೆಯೊಳಗೆ ಇದನ್ನು ಸೇರಿಸಿತು. ಅಂತಿಮವಾಗಿ 1995ರಲ್ಲಿ ಇದೇ ಸಚಿವಾಲಯ ಹೈದರಾಬಾದಿನಲ್ಲಿ ರಾಷ್ಟ್ರೀಯ ಮಂಡಳಿಯನ್ನು (ನ್ಯಾಷನಲ್ ಕೌನ್ಸಿಲ್ ಆಫ್ ರೂರಲ್ ಇನ್‌ಸ್ಟಿಟ್ಯೂಟ್) ಸ್ಥಾಪಿಸಿ ಗ್ರಾಮೀಣ ವಿದ್ಯಾಸಂಸ್ಥೆಗಳ ಉಸ್ತುವಾರಿಯನ್ನು ಅದಕ್ಕೆ ವಹಿಸಿತು. ಮಧುರೈ ಸಮೀಪದ ಗಾಂಧಿಗ್ರಾಮ ಗ್ರಾಮೀಣ ವಿದ್ಯಾಸಂಸ್ಥೆಯನ್ನು 1976ರಿಂದ ಡೀಮ್ಡ್ ಯೂನಿವರ್ಸಿಟಿಯಾಗಿ ಮಾನ್ಯಗೊಳಿಸಲಾಗಿದೆ.

**ಗ್ರಾಮೀಣ ವಿದ್ಯಾಸಂಸ್ಥೆಗಳ ಆಶಯಗಳು ಇಂತಿವೆ :** ಶಿಕ್ಷಣ ಹಾಗೂ ತರಬೇತಿ, ಕೃಷಿ, ಆರೋಗ್ಯ, ಸೂಕ್ಷ್ಮ ಯೋಜನೆ (ಮೈಕ್ರೊ ಪ್ಲಾನಿಂಗ್); ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಗ್ರಾಮೀಣ ಕೈಗಾರಿಕೆ, ಸಹಕಾರಿ ಸಂಘಗಳ ಪ್ರಗತಿ. ಕಳೆದ ನಾಲ್ಕು ವರ್ಷಗಳಿಂದ ಗ್ರಾಮೀಣ ವಿದ್ಯಾಸಂಸ್ಥೆಗಳ ವಾರ್ಷಿಕ ಸಮ್ಮೇಳನಗಳೂ ಜರಗುತ್ತಿವೆ (2011).

ಗ್ರಾಮೀಣ ಉನ್ನತ ಶಿಕ್ಷಣಕ್ಕೆ ಹಣಕಾಸು : ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳ ಉನ್ನತ ಶಿಕ್ಷಣದಂತೆ ಗ್ರಾಮೀಣ ಉನ್ನತ ಶಿಕ್ಷಣವೂ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರವನ್ನು ಹಣದ ಸಹಾಯಕ್ಕಾಗಿ ಅವಲಂಬಿಸಬೇಕಾಗುತ್ತದೆ. ಜೊತೆಗೆ ಗ್ರಾಮಾಂತರ ಪ್ರದೇಶಗಳ ದಾನಿಗಳು ನೀಡುವ ಪುದುವಟ್ಟುಗಳಿಂದ ಬರುವ ಆದಾಯ, ವಿದ್ಯಾರ್ಥಿಗಳು ಕೊಡುವ ಬೋಧನೆಯ ಶುಲ್ಕ ಮುಂತಾದ ಮೂಲಗಳಿಂದಲೂ ಹಣ ಪಡೆದುಕೊಳ್ಳಬಹುದು. ಅಗತ್ಯಬಿದ್ದರೆ ಭೂ ಕಂದಾಯದ ಹಾಗೂ ವ್ಯವಸಾಯದ ಆದಾಯ ತೆರಿಗೆಯ ಸ್ವಲ್ಪ ಭಾಗವನ್ನು ಅದಕ್ಕಾಗಿ ಸರ್ಕಾರ ವಿನಿಯೋಗಿಸಬಹುದು.

**ಕೃಷಿ ಪಾಲಿಟೆಕ್ನಿಕ್ಕುಗಳು :** ಸಾಂಪ್ರದಾಯಿಕ ಉನ್ನತ ಶಿಕ್ಷಣದ ಪುನರ್ವ್ಯವಸ್ಥೆ ಮತ್ತು ಅಭಿವೃದ್ಧಿ ಕಾರ್ಯಗಳ ಬಗ್ಗೆ ವ್ಯಾಪಕವಾದ ಪರಿಶೀಲನೆ ನಡೆಸಿ ಮಹತ್ತ್ವದ ಸಲಹೆಗಳನ್ನು ಮಂಡಿಸಿರುವ ಕೊಠಾರಿ ಶಿಕ್ಷಣ ಆಯೋಗ ಗ್ರಾಮೀಣ ಉನ್ನತ ಶಿಕ್ಷಣವನ್ನು ಕೈಬಿಟ್ಟಿದ್ದರೂ ಅದಕ್ಕೆ ಸಂಬಂಧಿಸಿದಂಥ ಕೃಷಿ ಪಾಲಿಟೆಕ್ನಿಕ್ಕುಗಳ (ಅಗ್ರಿಕಲ್ಚರಲ್ ಪಾಲಿಟೆಕ್ನಿಕ್) ಸ್ಥಾಪನೆಯ ಬಗ್ಗೆ ಪರಿಶೀಲನೆ ನಡೆಸಿ ಸೂಕ್ತ ಸಲಹೆಗಳನ್ನು ನೀಡಿರುವುದು. ಅಲ್ಲಿ ಗ್ರಾಮವಾಸಿಗಳಿಗೆ ನಿತ್ಯ ಜೀವನಕ್ಕೂ ಅವರ ಮುಖ್ಯ ಕಸಬಾದ ವ್ಯವಸಾಯಕ್ಕೂ ಸಂಬಂಧಿಸಿದ ಕಸಬುಗಳಲ್ಲಿ ಅರ್ಧ ಮತ್ತು ಮಧ್ಯ ಮಟ್ಟದ ಕುಶಲ ಕಾರ್ಮಿಕರಿಗೂ ತಂತ್ರಜ್ಞರಿಗೂ ಗ್ರಾಮವಾಸಿಗಳಲ್ಲಿ ಜ್ಞಾನ ಪ್ರಸಾರ ಕಾರ್ಯವನ್ನು ಕೈಕೊಳ್ಳುವ ಗ್ರಾಮ ಸೇವಕರಿಗೂ ವ್ಯವಸಾಯೋತ್ಪನ್ನ ವಸ್ತುಗಳಿಗೆ ಸಂಬಂಧಿಸಿದ ಉದ್ಯೋಗ ಮತ್ತು ವ್ಯಾಪಾರಗಳಲ್ಲಿ ತೊಡಗುವವರಿಗೂ ಶಿಕ್ಷಣವೀಯಬೇಕೆಂದು ಸೂಚಿಸಿ ಅಲ್ಲಿಗೆ ಮೆಟ್ರಿಕ್ಯುಲೇಶನ್ ಶಿಕ್ಷಣ ಮುಗಿಸಿದವರನ್ನು ಸೇರಿಸಿಕೊಳ್ಳಬೇಕೆಂದು ಸಲಹೆ ಮಾಡಿದೆ. ಅಲ್ಲದೆ ವ್ಯವಸಾಯೋದ್ಯಮಕ್ಕೆ ಸಂಬಂಧಿಸಿದ ಕಸಬುಗಳಲ್ಲಿ ತರಬೇತು ನೀಡುವ ಆ ಪಾಲಿಟೆಕ್ನಿಕ್ಕುಗಳನ್ನು ಅಲ್ಲಿ ಕೃಷಿ ವಿಶ್ವವಿದ್ಯಾಲಯಕ್ಕೆ

ಲಗತ್ತಿಸಬಹುದೆಂದೂ ಸೂಚಿಸಿದೆ. ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಪಾಲಿಟೆಕ್ನಿಕ್ಕುಗಳಲ್ಲಿ ಮೇಲೆ ಸೂಚಿಸಿದ ವೃತ್ತಿ ಶಿಕ್ಷಣದ ತರಗತಿಗಳನ್ನು ಆರಂಭಿಸಬಹುದೆಂದು ಅಭಿಪ್ರಾಯ ಪಡುತ್ತ ಒಂದೊಂದು ಪಾಲಿಟೆಕ್ನಿಕ್ಕೂ ಅನೇಕ ವೃತ್ತಿಗಳಲ್ಲಿ ತರಗತಿಗಳನ್ನು ವ್ಯವಸ್ಥೆಗೊಳಿಸಿಕೊಂಡು ಸಹಸ್ರಾರು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಒದಗಿಸುವಂತಾಗಬೇಕೆಂದು ಆಶಿಸಿದೆ. ಬೇಸಾಯಕ್ಕೆ ಸಂಬಂಧಿಸಿದ ಫಾರ್ಮ್ ಮೆಕ್ಯಾನಿಕ್, ಪ್ರಯೋಗಾಲಯದ ಸಹಾಯಕರು, ಮರಗೆಲಸದವರು, ಕಬ್ಬಿಣದ ಕೆಲಸದವರು, ರೇಡಿಯೊ, ಬೀಸುವ ಯಂತ್ರ, ನೀರೆತ್ತುವ ಪಂಪು ಮುಂತಾದವನ್ನು ದುರಸ್ತು ಮಾಡುವವರು, ವಿದ್ಯುತ್ ತಂತಿಗಳನ್ನು ಮನೆ, ಅಂಗಡಿ, ಕಾರ್ಖಾನೆ ಮುಂತಾದವುಗಳಿಗೆ ಅಳವಡಿಸುವವರು, ವ್ಯವಸಾಯದ ಸಹಕಾರ ಸಂಘ ನಡೆಸುವವರು, ಕ್ರಿಮಿನಾಶಕಗಳನ್ನು ತಯಾರಿಸುವವರು, ಅವನ್ನು ಪ್ರಯೋಗಿಸುವವರು, ಕೃಷಿ ಬ್ಯಾಂಕಿಂಗ್ ಕೆಲಸಗಾರರು, ಗೊಬ್ಬರ ತಯಾರಿಸುವವರು ಹಾಗೂ ಹಣ್ಣು ರಕ್ಷಿಸುವವರು, ಪಶು ಸಂಗೋಪನ, ಫಲಪುಷ್ಪಗಳ ಬೇಸಾಯ, ಅರಣ್ಯ ರಕ್ಷಣೆ, ಅರಣ್ಯದ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟಕ್ಕೆ ಸಿದ್ಧಪಡಿಸುವವರು–ಇವರೇ ಮುಂತಾದ ಕೆಲಸಗಾರರಿಗೆ ಶಿಕ್ಷಣವೀಯುವುದರಿಂದ ಅವರೆಲ್ಲ ಬಹುಮಟ್ಟಿಗೆ ಗ್ರಾಮಗಳಲ್ಲೆ ಉದ್ಯೋಗಗಳನ್ನು ಹುಡುಕಿಕೊಂಡು ಅಲ್ಲೆ ನೆಲೆಸಬಲ್ಲರು. ಕೊಠಾರಿ ಶಿಕ್ಷಣ ಆಯೋಗ ಆ ಪಾಲಿಟೆಕ್ನಿಕ್ಕುಗಳನ್ನು ಕೃಷಿ ವಿಶ್ವವಿದ್ಯಾಲಯಗಳಿಗೆ ಲಗತ್ತಿಸಬೇಕೆಂದು ಯೋಚಿಸಿದ್ದರಿಂದ ಗ್ರಾಮಜೀವನಕ್ಕೆ ಅಗತ್ಯವೆನಿಸುವ ಇತರ ಅನೇಕ ವೃತ್ತಿ ಶಿಕ್ಷಣಕ್ಕೆ ಅಲ್ಲಿ ಅವಕಾಶ ಕಲ್ಪಿಸಬೇಕೆಂದು ಸೂಚಿಸಿಲ್ಲ. ಹೇಗೆ ಆಗಲಿ ಸಣ್ಣಮಟ್ಟ ಉದ್ಯೋಗಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹರಡುವುದಾದರೆ, ಪಾಲಿಟೆಕ್ನಿಕ್ಕಿನಲ್ಲಿ ವೃತ್ತಿಶಿಕ್ಷಣ ಪಡೆದ ವಿದ್ಯಾರ್ಥಿಗಳು ಅಲ್ಲಿ ಉದ್ಯೋಗ ನಿರತರಾಗಿ ಅವರು ನಗರಗಳಿಗೆ ವಲಸೆ ಹೋಗುವುದು ತಪ್ಪುತ್ತದೆ. ಆ ಮೂಲಕ ಗ್ರಾಮ ಜೀವನ ಆಕರ್ಷಕವಾಗಿ ಸಮೃದ್ಧವಾಗುತ್ತದೆ. ಸದ್ಯದಲ್ಲಿ ಭಾರತ ಸರ್ಕಾರ ಇಂಥ ಆರು ಪಾಲಿಟೆಕ್ನಿಕ್ಕುಗಳನ್ನು ಸ್ಥಾಪಿಸಲು ಆಲೋಚಿಸಿದೆ.

ಕೊಠಾರಿ ಶಿಕ್ಷಣ ಆಯೋಗ ಸೂಚಿಸಿರುವ ಕೃಷಿ ಪಾಲಿಟೆಕ್ನಿಕ್ಕುಗಳು ಪೂರ್ಣವಾಗಿ ವೃತ್ತಿಮುಖವಾದ ಗ್ರಾಮೀಣ ಶಿಕ್ಷಣಕ್ಕೆ ಮೀಸಲಾಗುವುದಾದರೆ ಸಾಹಿತ್ಯ, ಲಲಿತ ಕಲೆ, ಸಂಸ್ಕೃತಿ, ಇತಿಹಾಸ ಮುಂತಾದ ವಿಷಯಗಳಲ್ಲಿ ಉನ್ನತ ಶಿಕ್ಷಣವೀಯಲು ಈಗಾಗಲೇ ಆರಂಭವಾಗಿರುವ ಗ್ರಾಮೀಣ ವಿದ್ಯಾಸಂಸ್ಥೆಗಳು ವೃದ್ಧಿಪಡಿಸಿಕೊಳ್ಳಬಹುದು. ಪಾಲಿಟೆಕ್ನಿಕ್ಕುಗಳು ಅಲ್ಲಿನ ಆರ್ಥಿಕ ಜೀವನವನ್ನು ಉತ್ತಮಪಡಿಸಲು ನೆರವಾದರೆ ಗ್ರಾಮೀಣ ವಿದ್ಯಾಸಂಸ್ಥೆಗಳು ಅಲ್ಲಿನ ಸಾಂಸ್ಕೃತಿಕ ಜೀವನವನ್ನು ಉತ್ತಮಪಡಿಸಲು ನೆರವಾಗಬೇಕು. ಆದ್ದರಿಂದ ಸದ್ಯದಲ್ಲಿ ಅಷ್ಟಾಗಿ ಜನಪ್ರಿಯತೆಗಳಿಸದಿರುವ ಆ ವಿದ್ಯಾಸಂಸ್ಥೆಗಳನ್ನು ಕೈ ಬಿಡುವ ಬದಲು ಸೂಕ್ತರೀತಿಯಲ್ಲಿ ಮಾರ್ಪಡಿಸಿ ಅಭಿವೃದ್ಧಿಪಡಿಸುವುದು ಅಗತ್ಯ. ಅವು ಮಿಕ್ಕ ಉನ್ನತ ಶಿಕ್ಷಣ ಸಂಸ್ಥೆಗಳಿಗಿರುವ ಗೌರವವನ್ನು ಪಡೆಯಬೇಕಾದರೆ ಗ್ರಾಮೀಣ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಅವುಗಳಿಗೆ ಅಂಗಸಂಸ್ಥೆಗಳನ್ನಾಗಿ ಮಾಡುವುದು ಅಗತ್ಯ. ಅದರಿಂದ ಇತರ ವಿಶ್ವವಿದ್ಯಾಲಯಗಳು ಅವು ಕೊಡುವ ಡಿಪ್ಲೊಮ, ಸರ್ಟಿಫಿಕೇಟ್ ಮುಂತಾದ ಪದವಿಗಳನ್ನು ಅಂಗೀಕರಿಸುವುದಕ್ಕೂ ಅನುಕೂಲವಾಗುತ್ತದೆ. ಈ ಸಲಹೆ ಕಾರ್ಯರೂಪಕ್ಕೆ ಬಂದಾಗ ಸಾಂಪ್ರದಾಯಿಕ ಉನ್ನತ ಶಿಕ್ಷಣದಂತೆ ಗ್ರಾಮೀಣ ಉನ್ನತ ಶಿಕ್ಷಣ ಸಾಂಸ್ಕೃತಿಕ ಮತ್ತು ವೃತ್ತಿ ಅಥವಾ ತಾಂತ್ರಿಕ–ಈ ಎರಡು ಮುಖಗಳಲ್ಲೂ ತನ್ನದೇ ಆದ ರೀತಿಯ ಶಿಕ್ಷಣವನ್ನು ವ್ಯವಸ್ಥೆ ಮಾಡಿಕೊಂಡಂತಾಗುತ್ತದೆ.

ವಿಶ್ವವಿದ್ಯಾಲಯದ ಪೂರ್ವದ ಶಿಕ್ಷಣದ ಪುನರ್ವ್ಯವಸ್ಥೆ : ಸದ್ಯದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣದ ಮಟ್ಟದಲ್ಲಿ ಭಾರತದಲ್ಲಿ ಗ್ರಾಮ ಮತ್ತು ನಗರಗಳ ಶಾಲೆಗಳ ಪಠ್ಯಕ್ರಮದಲ್ಲಿ ಅಂಥ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಹಾಗೆಯೇ ಎರಡು ಕಡೆಯೂ ಒಂದೇ ಪಠ್ಯಪುಸ್ತಕಗಳೂ ಬಳಕೆಯಲ್ಲಿವೆ. ಅಲ್ಲಿನ ಪಠ್ಯಕ್ರಮದಲ್ಲಿ ಗ್ರಾಮ ಜೀವನಕ್ಕೆ ಸಂಬಂಧಿಸಿದ ಜ್ಞಾನ, ಅನುಭವ, ಕೌಶಲ, ಮನೋಭಾವ ಇತ್ಯಾದಿ ಅಂಶಗಳನ್ನು ಪ್ರಧಾನವಾಗಿ ದೊರಕಿಸುವ ಅವಕಾಶವಿರಬೇಕು. ಪಠ್ಯಪುಸ್ತಕಗಳು ನಮ್ಮ ಜನತೆಯ ಸಂಸ್ಕೃತಿ, ಸಂಪ್ರದಾಯ, ಇತಿಹಾಸ, ಸಾಹಿತ್ಯ ಮುಂತಾದ ಅಂಶಗಳನ್ನು ಪ್ರಧಾನವಾಗಿ ಕುರಿತವಾಗಿರಬೇಕು. ಎಂದರೆ ಆಧುನಿಕ ಜೀವನಕ್ಕೆ ಪೋಷಕವಾಗಿರುವ ಇತರ ಅಂಶಗಳನ್ನು ಕಡೆಗಣಿಸಬೇಕೆಂದು ಹೇಳುವ ಮಾತಿದಲ್ಲ. ಅಲ್ಲಿ ಶಿಕ್ಷಣ ಪಡೆದ ಮಕ್ಕಳು ಗ್ರಾಮ ಜೀವನದಲ್ಲಿ ಆಸಕ್ತಿ ವಹಿಸುವಂತೆಯೂ ಅದರ ಪುರೋಭಿವೃದ್ಧಿಗೆ ದುಡಿಯಬೇಕೆಂಬ ಆಕಾಂಕ್ಷೆಯನ್ನು ಮೂಡಿಸುವಂತೆಯೂ ಅವು ರಚನೆಯಾಗಬೇಕು.

ಸಾಮಾನ್ಯವಾಗಿ ಕೆಳಗಿನ ಮತ್ತು ಮೇಲಿನ ಹಂತಗಳ ಶಿಕ್ಷಣ ಸಂಸ್ಥೆಗಳ ಪಠ್ಯಕ್ರಮಗಳಲ್ಲಿ ಸೂಕ್ತರೀತಿಯ ಸಂಬಂಧವಿರುವುದು ಅಗತ್ಯ. ಗ್ರಾಮೀಣ ಉನ್ನತ ಶಿಕ್ಷಣದ ಯಶಸ್ಸಿಗೆ ಅಲ್ಲಿನ ಶಾಲಾಪಠ್ಯಕ್ರಮದಲ್ಲಿ ಮುಂದೆ ಉನ್ನತ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡತಕ್ಕ ವಿಷಯಗಳಿಗೆ ಸಂಬಂಧಿಸಿದ ವಿಷಯಗಳು ಸೇರಿರಬೇಕು. ಈ ತತ್ತ್ವವನ್ನು ಆಧಾರ ಮಾಡಿಕೊಂಡು ಗ್ರಾಮಾಂತರ ಪ್ರದೇಶಗಳ ಪಠ್ಯಕ್ರಮ, ಪಠ್ಯಪುಸ್ತಕ, ತರಗತಿಯ ಮತ್ತು ಇತರ ಕಾರ್ಯಕ್ರಮಗಳು ಪುನರ್ವ್ಯವಸ್ಥೆಯಾಗಬೇಕು. ಆಗ ಮಾತ್ರ ನೂತನವಾಗಿ ರೂಪುಗೊಳ್ಳುತ್ತಿರುವ ಗ್ರಾಮೀಣ ವಿದ್ಯಾಸಂಸ್ಥೆಗಳಲ್ಲೂ ಕೃಷಿ ಪಾಲಿಟೆಕ್ನಿಕ್ಕುಗಳಲ್ಲೂ ವ್ಯಾಸಂಗ ಮಾಡಲು ಮುಂದೆ ಬರುವಂತಾಗುತ್ತದೆ. ಆ ಮೂಲಕ ಅವನ್ನು ರೂಪಿಸಿರುವ ಉದ್ದೇಶ ಈಡೇರಲು ಅವಕಾಶ ಕಲ್ಪನೆಯಾಗುತ್ತದೆ. ಗ್ರಾಮೀಣ ಶಿಕ್ಷಣದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕ್ರಮಗಳೂ ಸಾಕಷ್ಟು ಕೆಲಸ ಮಾಡಿರುವುದನ್ನೂ ಈ ಸಂದರ್ಭದಲ್ಲಿ ಸ್ಮರಿಸಬಹುದು. (ಎನ್.ಎಸ್.ವಿ.)

**ಗ್ರಾಮೀಣ ಸಂಪ್ರದಾಯ :** ಪಟ್ಟಣ ಸಂಸ್ಕೃತಿಗೂ ಗ್ರಾಮೀಣ ಸಂಸ್ಕೃತಿಗೂ ಇರುವ ಭೇದವನ್ನು ಸ್ಫುಟವಾಗಿ ನಿರೂಪಿಸುವುದು ಗ್ರಾಮೀಣ ಸಂಪ್ರದಾಯದ (ಪ್ಯಾಸ್ಟುರಲ್ ಕನ್‌ವೆನ್ಷನ್) ಮೇಲೆ ವಿರಚಿಸಿದ ಸಾಹಿತ್ಯದ ಮುಖ್ಯ ಕುರುಹು: ಮೊದಲಿನಿಂದಲೂ ಬದಲಾಯಿಸದೇ ಬಂದಿರುವ ಕುರುಹು. ಆದರೂ ಆ ಸಾಹಿತ್ಯ ಜನಪದ ಸಾಹಿತ್ಯವಲ್ಲ. ಹಳ್ಳಿಗಾಡಿನ ಕವಿ ಹಳ್ಳಿಯವರ ಬಾಳನ್ನು ಯಥಾಮತಿ ಚಿತ್ರಿಸಿದ ಕವನವಲ್ಲ. ನಗರವಾಸಿಯಾದ ವಿದ್ಯಾವಂತ ಲೇಖಕ ನಗರೇತರ ಮಂದಿಯ, ಮುಖ್ಯವಾಗಿ ಕುರಿಗಾಹಿಗಳ ಜೀವನ ಹೇಗೆ ಸರಳ ನಿಷ್ಕಪಟ ಸುಂದರ ಮತ್ತು ಹರ್ಷಕರ ಎಂಬುದನ್ನು ಭಾವಿಸಿಕೊಂಡು ಅದನ್ನು ಆದರ್ಶವೋ ಎಂದು ಕಾಣಿಸುವ ರೀತಿಯಲ್ಲಿ ಕಥನಗೈದಲ್ಲಿ ಗ್ರಾಮೀಣ ಸಂಪ್ರದಾಯವೆನಿಸಿಕೊಳ್ಳುತ್ತದೆ. ಅದರ ಜನಕ ಪ್ರ.ಶ.ಪೂ. 270ರಲ್ಲಿ ಉಚ್ಛ್ರಾಯದಲ್ಲಿದ್ದ ಪ್ರಾಚೀನ ಗ್ರೀಕ್ ಕವಿ ಥಿಯೋಕ್ರಿಟಸ್. ಅಲೆಗ್ಸಾಂಡರನ ಉತ್ತರಾಧಿಕಾರಿಗಳಾದ ಟಾಲಮಿ ರಾಜವಂಶಕ್ಕೆ ರಾಜಧಾನಿಯಾದ ಅಲೆಗ್ಸಾಂಡ್ರಿಯ ಮಹಾಪಟ್ಟಣ ಥಿಯೋಕ್ರಿಟಸನ ವಾಸಕ್ಷೇತ್ರ. ಅವನು ತನ್ನ ಬಾಲ್ಯವನ್ನು ಸಿಸಿಲಿಯ ಕಾಸ್ ದ್ವೀಪದಲ್ಲಿ ಕಳೆದಿದ್ದ. ಅಲ್ಲಿನ ಕುರಿಹಿಂಡುಗಳೂ ಕುರುಬರೂ ಅವನ ನೆನಪಿನಿಂದ ಎಂದೂ ಕಳಚಿಹೋಗಲಿಲ್ಲ. ಪ್ರಕೃತಿಯ ರಮ್ಯತೆಯಂತೂ ತಿರುತಿರುಗಿ ಅವನಿಗೆ ಸಂತಸವನ್ನೂ ಪುನಃಪರಿಚಯದ ಆಶೆಯನ್ನೂ ತರುತ್ತಿತ್ತು. ನಗರವಾಸದಲ್ಲಿದ್ದ ಅವನು ದೂರದ ಸಿಸಿಲಿ ಹಳ್ಳಿಗಾಡಿನ ಬದುಕನ್ನು ಸುವರ್ಣಯುಗದ ಬದುಕೆಂದು ಬಗೆದ. ಅದರ ಮೇಲಣ ಗೀಳಿಗೆ ಪಕ್ಕಾದ. ಉಳಿದುಬಂದಿರುವ ಅವನ ಹತ್ತು ಚಿಕ್ಕ ಕಾವ್ಯಗಳಲ್ಲಿ ಆರು ಆ ಗೀಳನ್ನು ಪ್ರದರ್ಶಿಸುತ್ತ ದುಗುಡವನ್ನು ತೋಡಿಕೊಳ್ಳುವ ಕೃತಿಗಳು. ಅವುಗಳ ಹಿರಿಯ ಲಕ್ಷಣ ಯಥಾರ್ಥತೆಯನ್ನೂ ಆದರ್ಶತ್ವವನ್ನೂ ಸಮಂಜಸವಾಗಿ ಸಮನ್ವಯಗೊಳಿಸಿರುವುದು. ಅವನಲ್ಲಿರುವಷ್ಟು ನೇರ ಸಹಜತೆ ಅವನ ತರುವಾಯ ಬಂದವರಲ್ಲಿ ಗೋಚರಿಸುವುದಿಲ್ಲ. ಅವರ ರಚನೆಯಲ್ಲಿ ರಮಣೀಯತೆ ಹೆಚ್ಚಾಗಿರಬಹುದು, ಆದರೆ ಕೃತಕತೆಯೂ ಹೆಚ್ಚು.

ಥಿಯೋಕ್ರಿಟಸ್ ನಾಲ್ಕು ಬಗೆಯ ಕಾವ್ಯಪ್ರಕಾರಗಳನ್ನು ಸತ್ತ್ವಯುಕ್ತವಾಗಿ ಕಟ್ಟಿ ರೂಢಿಗೆ ತಂದ.

1. ಹಾಡಿನ ಸ್ಪರ್ಧೆ : ಇಬ್ಬರು ಕುರುಬರು ಸಂಧಿಸುತ್ತಾರೆ. ಅದೂ ಇದೂ ಮಾತುಕಥೆ ನಡೆದು ತಮ್ಮಿಬ್ಬರಲ್ಲಿ ಕವನಕೌಶಲ ಯಾರಿಗೆ ಅಧಿಕ ಎಂಬ ಚರ್ಚೆ ಏಳುತ್ತದೆ. ಮೂರನೆಯ ಗೆಳೆಯನೊಬ್ಬನನ್ನು ಹುಡುಕಿ ತಂದು, ಅವನೆದುರಿಗೆ ತಮ್ಮ ತಮ್ಮ ಆಶುಕವಿತೆಯನ್ನು ವಾಚನ ಮಾಡುತ್ತಾರೆ. ಅವನು ಮೇಲೋ ಇವನು ಮೇಲೋ ನಿರ್ಧರಿಸಲಾರದೆ ನಿಲ್ಲುತ್ತಾನೆ. ನ್ಯಾಯಮೂರ್ತಿ ಕುರಿಗಾಹಿ ಸ್ಪರ್ಧಿಗಳು ತಾವಿಟ್ಟಿದ್ದ ಪಣಗಳನ್ನು ಅದಲುಬದಲು ಮಾಡಿಕೊಂಡು ಮಿತ್ರನನ್ನು ವಂದಿಸಿ ತೃಪ್ತಿಯಿಂದ ತೆರಳುತ್ತಾರೆ.

2. ಕುರಿಗಾಹಿಯೊಬ್ಬ ನಿರ್ಜನ ಪ್ರದೇಶದಲ್ಲಿ ಕುಳಿತು ತನ್ನ ಪ್ರೇಯಸಿಯ ಲಾವಣ್ಯವನ್ನೂ ಆಕರ್ಷಕತೆಯನ್ನೂ ಹೊಗಳಿ, ಅವಳ ಔದಾಸೀನ್ಯದಿಂದ ತನಗಾಗಿರುವ ದುಃಖವನ್ನು ವಿಧವಿಧವಾಗಿ ನಿವೇದಿಸುತ್ತಾನೆ. ಸಹಾನುಭೂತಿ ಕೋರುತ್ತಾನೆ. ಇಷ್ಟೇ ಆ ಕಿರುಕಾವ್ಯವಾಗಬಹುದು. ಅಥವಾ ಅದನ್ನು ತಾನು ಮರೆಯಲ್ಲಿ ನಿಂತು ಆಲಿಸಿದಂತೆ ಇನ್ನೊಬ್ಬ ವರದಿಗೈಯಬಹುದು.

3. ಗ್ರಾಮೀಣ ಶೋಕಗೀತ: ಇದು ಗ್ರಾಮೀಣ ಸಂಪ್ರದಾಯದ ಸಾಹಿತ್ಯದಲ್ಲೆಲ್ಲ ಬಹಳ ಬಳಕೆಯ ಕಾವ್ಯಭೇದ. ಹೆಚ್ಚು ಪುರಸ್ಕಾರವನ್ನು ಗಳಿಸಿದ ಕೃತಿರಚನೆ. ಥಿಯೋಕ್ರಿಟಸನ ಅಮರ ಕೀರ್ತಿಗೆ ಅದೊಂದೇ ಸಾಕು. ಅವನು ಬರೆದ ಡ್ಯಾಫ್ನಿಸ್ಸಿಗಾಗಿ ರೋದನ ಎಂಬುದು ಯುರೋಪಿನ ಕವಿಗಳಿಗೆ ವಿಪರೀತ ಮೋಹಕವಾಯಿತು, ಮಾದರಿಯಾಯಿತು. ಡ್ಯಾಫ್ನಿಸ್ ದೇವದೂತ ಹರ್ಮಿಸನ ಕುಮಾರ. ಸಿಸಿಲಿಯಲ್ಲಿ ಆಡುಕುರಿ ಕಾಯುತ್ತಿದ್ದ. ಅಪ್ಸರೆಯೊಬ್ಬಳಿಗೆ ಅವನ ಮೇಲೆ ಮನಸ್ಸಾಯಿತು. ಅವನಾದರೂ ಪ್ರೇಮದ ವೈರಿ. ಅವನ ಅಲಕ್ಷ್ಯವನ್ನು ಕಂಡು ಪ್ರೇಮ ದೇವಿ ಆಫ್ರೊಡೈಟಿ ಕ್ರುದ್ಧಳಾಗಿ, ಅವನ ಕಣ್ಣನ್ನು ಇಂಗಿಸಿಬಿಟ್ಟಳು. ಅಲ್ಲದೆ ಯಾವುದೊ ಕೈಗೆ ಎಟುಕದ ಮಬ್ಬು ಪದಾರ್ಥಕ್ಕಾಗಿ ಅವನು ತೊಳಲಿ ಪರದಾಡುವಂತೆ ಶಾಪಕೊಟ್ಟಳು. ಪರಿತಪಿಸಿ ಬಳಲಿ ಬೆಂಡಾಗಿ ಡ್ಯಾಫ್ನಿಸ್ ಸತ್ತುಹೋದ. ಅವನೇ ಶೋಕಗೀತದ ಪೌರಾಣಿಕ ಮೂಲವೆಂದು ಪ್ರಾಚೀನರ ನಂಬಿಕೆ. ಅಂತೂ ಥಿಯೋಕ್ರಿಟಸನ ಡ್ಯಾಫ್ನಿಸ್ ಕವನ ಕಥಾವಸ್ತು, ಕಥನಮಾರ್ಗ, ಸಂವಾದಕ್ರಮ, ಉಪದೇವಿಯರಿಗೆ ಆಹ್ವಾನ, ನದಿ

ಮರ ಗಾಳಿ ಮುಂತಾದವಕ್ಕೆ ಜೀವ ತುಂಬುವ ರಾಗಮಿಥ್ಯೆ (ಪೊಯೆಟಿಕ್ ಫ್ಯಾಲಸಿ), ಕಾವ್ಯ ಭಾಷೆ, ಪಂಕ್ತಿಗಳ ಪುನರುಕ್ತಿ ಎಲ್ಲದರಲ್ಲೂ ಅನುಲ್ಲಂಘನೀಯ ಸೂತ್ರವಾಯಿತು, ಮೇಲ್ಪಂಕ್ತಿಯಾಯಿತು. ಬಯನ್, ಮಾಸ್ಕಸ್, ವರ್ಜಿಲ್, ಪೆಟ್ರಾರ್ಕ್, ಮಿಲ್ಟನ್, ಷೆಲ್ಲಿ, ಆರ್ನಾಲ್ಡ್ ಇತ್ಯಾದಿ ಅನೇಕ ಪ್ರಖ್ಯಾತ ಕವಿಗಳು ಆ ಸಂಪ್ರದಾಯದ ಅನುಯಾಯಿಗಳು.

4. ಅನ್ಯಾರ್ಥ ಕವನ: ಸಮಕಾಲೀನ ಸಾಹಿತಿಗಳಲ್ಲಿ ಕೆಲವರಿಗೆ ಗುಪ್ತನಾಮವನ್ನಿಟ್ಟು ತನ್ನೊಂದು ಕಿರುಕಾವ್ಯದಲ್ಲಿ ಥಿಯೋಕ್ರಿಟಸ್ ಅವರು ವ್ಯವಹರಿಸುವಂತೆ ಅನ್ಯಾರ್ಥ ನೇಮವನ್ನೂ ಗ್ರಾಮೀಣ ಸಂಪ್ರದಾಯಕ್ಕೆ ತಂದು ಸೇರಿಸಿದ. ಕುರಿಗಾಹಿ=ಕವಿ, ಕೊಳಲು ದನಿ=ಕವಿತ್ವ, ಕಾಡುಮೇಡಿನಲ್ಲಿ ಸಂಚಾರ = ಕವಿ ವೃತ್ತಿ, ಬುಗ್ಗೆಯಿಂದ ನೀರುಕ್ಕುವಿಕೆ=ಕಾವ್ಯಸ್ಫೂರ್ತಿ–ಹೀಗೆ ಒಂದು ಬಗೆಯ ಸಂಕೇತ ಭಾಷೆ ಬೆಳೆದು ಕ್ರಮೇಣ ವಿಶ್ವಗ್ರಾಹ್ಯವಾಯಿತು.

ಗ್ರಾಮೀಣ ಸಂಪ್ರದಾಯದ ಗ್ರಾಮೀಣತೆಯನ್ನು ಹಿಂಬದಿಯಲ್ಲಿ ಇಟ್ಟು, ಕಲಾಗುಣವನ್ನು ಪುಟಕ್ಕೆ ಹಾಕಿ ಕಮನೀಯವಾಗಿಸಿ, ಅತ್ಯುತ್ಕೃಷ್ಟ ಕಾವ್ಯಮರ್ಯಾದೆಯ ಗೌರವವನ್ನಿತ್ತು, ಹೆಚ್ಚು ಮಾಡಿದ ಯಶಸ್ಸು ಭವ್ಯಕವಿ ವರ್ಜಿಲನಿಗೆ ಸಲ್ಲತಕ್ಕದ್ದು. ವರ್ಜಿಲ್ ಹಳ್ಳಿಗರೊಂದಿಗೆ ಬೆಳೆದವನಲ್ಲ; ಹಳ್ಳಿಗಾಡು ಜೀವನದ ವಾಸ್ತವಿಕ ಆಗುಹೋಗುಗಳಿಂದ ಅಚ್ಚರಿಗೊಂಡವನಲ್ಲ. ಆದರೂ ಥಿಯೋಕ್ರಿಟಸನಲ್ಲಿ ಸೂಚಿತವಾದ ಆದರ್ಶ ಗ್ರಾಮಾಂತರ ಜೀವನ ಅವನ ಕವಿಚಿತ್ತವನ್ನು ಅಪಹರಿಸಿತು. ಅವನ ಎಕ್ಲೊಗ್‍ಗಳಲ್ಲಿ (ಆಯ್ದ ಕವನ) ಅಂದಚಂದದ ಸುವರ್ಣಯುಗವೂ ಸ್ವರ್ಗಸಮಾನವಾದ ಸೌಖ್ಯದ ಬೀಡೂ ಅನುಪಮ ಕಲಾವಂತಿಕೆಯಿಂದ ಚಿತ್ರಿತವಾಗಿವೆ. ಸೂಕ್ತ ಶಬ್ದ, ಗಾಢಾರ್ಥ, ತುಂಬು ಧ್ವನಿ, ನಾದ ಮಾಧುರ್ಯ, ಛಂದೋವೈವಿಧ್ಯ ಎಲ್ಲದರಲ್ಲೂ ವರ್ಜಿಲ್ ಎತ್ತಿದ ಕೈ. ಮಧ್ಯಯುಗದ ಪೂರ್ತವೂ ಹೊಸಹುಟ್ಟಿನ ಪ್ರಾರಂಭಕಾಲದಲ್ಲೂ ಗ್ರಾಮೀಣ ಸಂಪ್ರದಾಯಕ್ಕೆ ವರ್ಜಿಲನೇ ಮಾದರಿ.

ಮಧ್ಯಯುಗದ ಫ್ರಾನ್ಸಿನಲ್ಲಿ ಪ್ಯಾಸ್ಟುರಲ್ ಎಂಬ ಕೊಂಚ ನಾಟಕೀಯ ಭಾವಗೀತೆ ಪ್ರಕಾಶಗೊಂಡಿತು. ಅದರಲ್ಲಿ ಎರಡು ಪಾತ್ರಗಳ ಸಮಾಗಮವೂ ಘರ್ಷಣೆಯೂ ಕಥಾವಸ್ತು. ಒಬ್ಬ ಸಂಚಾರಿ ವೀರ ಅಕಸ್ಮಾತ್ ಒಬ್ಬ ಕುರುಬಿತಿಯನ್ನು ಸಂಧಿಸುತ್ತಾನೆ. ಅವಳ ತಾರುಣ್ಯ ರೂಪ ಬೆಡಗುಗಳಿಗೆ ಮನಸೋತು ಪ್ರಣಯಭಿಕ್ಷೆ ಬೇಡುತ್ತಾನೆ. ಪರಿಣಾಮ ಬೇರೆ ಬೇರೆ ತರವಾಗಿದೆ. ಬೇರೆ ಬೇರೆ ಪ್ಯಾಸ್ಚುರಲ್‍ಗಳಲ್ಲಿ ಅವನ ಪುರುಷಗಾಡಿಗೂ ಪರಿಷ್ಕೃತ ಮಾತುಗಾರಿಕೆಗೂ ಹಳ್ಳಿಯ ಹುಡುಗಿ ಬೆರಗಾಗಿ ಅಭೀಷ್ಟವನ್ನು ಆಮೋದದಿಂದ ಸಲ್ಲಿಸುತ್ತಾಳೆ. ಅಥವಾ ವೀರ ದುರುಳನಾಗಿ ಅವಳ ನಿರೋಧವನ್ನು ಮುರಿದಿಕ್ಕಿ ಅವಳನ್ನು ಬಲಾತ್ಕರಿಸುತ್ತಾನೆ. ಅಥವಾ ಹಾಗೆ ಅವನ ದಬ್ಬಾಳಿಕೆ ನಡೆಸಲಿರುವಾಗ ದನಗಾಹಿ ಕುರಿಗಾಹಿಗಳು ಓಡಿಬಂದು ಮೇಲೆರಗಿ ಅವನನ್ನು ಆಚೆ ದೂಡುತ್ತಾರೆ. ಕುರುಬಿತಿಯ ಶೀಲ ಉಳಿಯುತ್ತದೆ. ಅಥವಾ ಅವಳು ತನ್ನ ವಿಶೇಷ ಜಾಣ್ಮೆಯಿಂದ ಪ್ರಶ್ನೋತ್ತರ ಉಪಾಖ್ಯಾನ ಮುಂತಾದ ಉಪಾಯ ಹೂಡಿ ಆತ ಸೋತುಹೋಗಿ ನಾಚಿಕೆಯಿಂದ ತನ್ನ ಗೊಡವೆಗೆ ಬಾರದೆ ಕಣ್ಮರೆಯಾಗುವಂತೆ ಎಸಗಿ ಗೆಲ್ಲುತ್ತಾಳೆ.

ದಶಕಗಳು ಕಳೆದ ಮೇಲೆ ಕಥಾನಾಯಕಿಯ ಜಾತಿಕಸಬನ್ನು ಪ್ಯಾಸ್ಚುರಲ್ ಬದಲಾಯಿಸುತ್ತ ನಡೆಯಿತು. ಕುರಿಕಾಯುವ ಯುವತಿಯೇ ಪ್ರಧಾನವಾಗಿದ್ದರೂ ಕೆಲವೊಮ್ಮೆ ಆಡು ಕಾಯುವವಳೂ ವರಟೆ ಕಾಯುವವಳೂ ಹಂದಿ ಕಾಯುವವಳೂ ತೋಟಗಾತಿಯೂ ಗೋಪಾಲಕಳೂ ನಾಯಕಿಯರಾಗುತ್ತಾರೆ. ಆದರೆ ಇವಾವುವೂ ಹೆಚ್ಚಾಗಿ ಪ್ರಚಾರಗೊಳ್ಳಲಿಲ್ಲ. ಗ್ರಾಮೀಣ ಸಂಪ್ರದಾಯಕ್ಕೂ ಕುರುಬವೃತ್ತಿಗೂ ನಿಕಟ ಬಾಂಧವ್ಯ ಅಚ್ಚಳಿಯದೇ ನಿಂತುಬಿಟ್ಟಿತು.

ಹೊಸಹುಟ್ಟಿನ ಅವಧಿಯಲ್ಲಿ ಸಂಪ್ರದಾಯ ದೇಶದೇಶದ ದೊಡ್ಡ ಕವಿಗಳಿಗೆ ಅತ್ಯಾಕರ್ಷಕವಾದದ್ದೇ ಅಲ್ಲದೆ ಹೊಸ ಆಕಾರಗಳನ್ನೂ ಪಡೆಯಿತು. 1504ರಲ್ಲಿ ಇಟಲಿಯ ಸ್ಯಾನ್ನಸಾರೊ ಎಂಬ ಕವಿ ಗದ್ಯ ಪದ್ಯ ಮಿಶ್ರಿತವಾದ ಒಂದು ಗ್ರಾಮೀಣ ಅಚ್ಚರಿಕಥೆಯನ್ನು ಬರೆದು ಆರ್ಕೇಡಿಯ ಎಂಬ ಅಂಕಿತವಿಟ್ಟು ಅದನ್ನು ಪ್ರಕಟಿಸಿದ. ಆರ್ಕೇಡಿಯ ಪುರಾತನ ಗ್ರೀಸಿನ ಒಂದು ಗುಡ್ಡಗಾಡು. ಅದರ ವಿಚಾರವಾಗಿ ರೋಮನರೂ ಇತರ ಆಧುನಿಕರೂ ಕೆಲವು ಕಾಲ್ಪನಿಕ ಅಭಿಪ್ರಾಯಗಳನ್ನು ಬೆಳೆಸಿಕೊಂಡು, ಅದೊಂದು ಸರಳತೆ ಸಮಾಧಾನ ಸೌಖ್ಯಗಳ ಮಾದರಿನಾಡೆಂದು ನಂಬುತ್ತ ಬಂದರು. ಅದ್ಭುತ ಕಥೆಯ ಸುರಿಮಳೆ ಪ್ರಾರಂಭವಾಯಿತು. ಪೋರ್ಚುಗಲ್ಲಿನ ಮಾಂಟ್‍ಮೇಯರನ ಡಯನಾ, ಇಂಗ್ಲೆಂಡಿನ ಫಿಲಿಪ್ ಸಿಡ್ನಿಯ ಆರ್ಕೇಡಿಯ, ಫ್ರಾನ್ಸಿನ ಡ ಅರ್ಫೆಯ ಆಸ್ಟ್ರೆ ಮೊದಲಾದವು ಸ್ಯಾನ್ನಸಾರೊವನ್ನು ಅನುಕರಿಸಿ ರಚಿಸಿದ ಕೃತಿಗಳು. ಸ್ಯಾನ್ನಸಾರೊ ಮಾಡಿದ ಇನ್ನೊಂದು ಗ್ರಾಮೀಣ ಪ್ರಯೋಗ ಅಷ್ಟೇನೂ ಪ್ರಖ್ಯಾತಿ ಪಡೆಯಲಿಲ್ಲ. ಅದು ಮೀಂಗುಲಿಗರಿಗೆ ಸಂಬಂಧ ಪಟ್ಟ ಆಖ್ಯಾನಕ. ಎಲ್ಲೋ ಅಲ್ಲೊಂದು ಇಲ್ಲೊಂದು ಕೃತಿಗೆ ಅದರ ಪ್ರಚೋದನೆ ಒದಗಿತು, ಅಷ್ಟೆ.

ಅಚ್ಚರಿಕಥೆಯಿಂದ ಗ್ರಾಮೀಣ ಸಂಪ್ರದಾಯದ ರೂಪಕವೂ ಒಡೆದುಮೂಡಿದ್ದು ಸಹಜವೆ. 1554ರಲ್ಲಿ ಬೆಕ್ಕರಿ ಎಂಬ ಇಟಲಿಯ ಕವಿಯ ಇಲ್ ಸ್ಯಾಗ್ರಿಫಿಸಿಸಿಯೊ ಎಂಬ ಗ್ರಾಮೀಣ ರೂಪಕ ಪ್ರದರ್ಶನಕ್ಕೆ ಬಂತು. ಬೆಕ್ಕರಿ ಸಾಧಾರಣ ಲೇಖಕ. ಮಹಾಕವಿಯಾದ ಟ್ಯಾಸೊ 1573ರಲ್ಲಿ ತನ್ನ ಅಮಿಂಟಾ ನಾಟಕವನ್ನು ಆಡಿಸಿದ. ಆ ನಾಟಕಪ್ರಚಾರಕ್ಕೆ ಅವನಿಂದ ಪ್ರೋತ್ಸಾಹವೂ ಪ್ರಶಸ್ತಿಯೂ ಅಷ್ಟಿಷ್ಟಲ್ಲ. ಸ್ಯಾನ್ನಸಾರೊ ಗ್ರಾಮೀಣ ಅಚ್ಚರಿಕಥೆಗೂ ಟ್ಯಾಸೊ ಗ್ರಾಮೀಣ ರೂಪಕಕ್ಕೂ ಮಾರ್ಗದರ್ಶಿಗಳೂ ಮೇಲ್ಪಂಕ್ತಿಗಳೂ ಆಗಿ ಹೆಸರಾಂತರು. 16ನೆಯ ಶತಮಾನದ ಕಡೆಯ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ಇಟಲಿಯಲ್ಲಿ ಪ್ರಮುಖವಾಗಿದ್ದ ಕಾವ್ಯ ಪ್ರಭೇದವೆಂದರೆ ಗ್ರಾಮೀಣ ರೂಪಕ. ಅತ್ಯುತ್ತಮ ಕವಿಗಳ ಅತ್ಯುತ್ಕೃಷ್ಟ ಕವಿತ್ವ ಮೀಸಲಾಗಿದ್ದದ್ದು ಅದಕ್ಕೇ. ಕ್ರಮೇಣ ಸಂಗೀತವೂ ಅದರ ಒಂದು ಅಂಶವಾದದ್ದರಿಂದ ಅದರ ಕಳೆ ವೃದ್ಧಿಯಾಯಿತು.

ಕಿರುಕಾವ್ಯ, ಗದ್ಯಪದ್ಯಮಿಶ್ರಿತ ನೀಳ್ಗಥೆ, ನಾಟಕ ಮೂರೂ ಗ್ರಾಮೀಣ ಸಂಪ್ರದಾಯವನ್ನು ಎಲ್ಲೆಲ್ಲೂ ಹರಡಿ ಕಾವ್ಯಾಹ್ಲಾದವನ್ನು ಹರಿಸಿದುವು. ಇಂಗ್ಲೆಂಡಿನ ಎಡ್ಮಂಡ್ ಸ್ಪೆನ್ಸರ್ ಮಹಾಕವಿಗಳಲ್ಲಿ ಉನ್ನತ ಮಟ್ಟದವ. ಅವನ ಗ್ರಾಮೀಣ ಸಂಪ್ರದಾಯದ ಕವಿತೆ ಕುರುಬನ ಪಂಚಾಂಗ ಎಂಬುದು ಈಗಲೂ ಅನ್ಯಾದೃಶ ವೈಭವದಿಂದ ಮೆರೆಯುತ್ತಿದೆ. ಅದರಲ್ಲಿ ವರ್ಷದ ಹನ್ನೆರಡು ಮಾಸಗಳಿಗೂ ಅನ್ವಯಿಸುವ ಹನ್ನೆರಡು ಕಿರುಕಾವ್ಯಗಳಿವೆ. ಸ್ಪೆನ್ಸರ್ ವರ್ಜಿಲನ ಕೃತಕ ಮಾರ್ಗವನ್ನು ತ್ಯಜಿಸಿ ಥಿಯೋಕ್ರಿಟಸನ ನೈಜ ಗ್ರಾಮೀಣತೆಯನ್ನು ಅನುಸರಿಸಿದ. ಡೇಮನ್ ಡ್ಯಾಫ್ನಿಸ್, ಅಮಿಂಟಾಸ್ ಮೊದಲಾದ ಗ್ರಾಂಥಿಕ ವ್ಯಕ್ತಿಗಳ ಬದಲು ವಿಲ್ಲೀ, ಕಾಲಿನ್, ಕಡ್ಡೀ ಮುಂತಾದ ವಾಸ್ತವಿಕ ಹಳ್ಳಿಗರನ್ನು ಹೆಸರಿಸಿ, ಅವರ ಕಷ್ಟನಷ್ಟ ಅಳಲು ವಿನೋದ ಆಶೆಪಾಶೆಗಳನ್ನು ವಿವರಿಸಿದ. ಅಷ್ಟೇ ಅಲ್ಲದೆ ಒಂದು ಬಗೆಯ ಗ್ರಾಮಾಂತರ ಭಾಷಾವೈಖರಿಯನ್ನೂ ಕಲ್ಪಿಸಿಕೊಂಡು ಅದರಲ್ಲೇ ಪದ್ಯದ ಸೊಬಗನ್ನು ಸಾಧಿಸಿದ. ಅನಂತರ ಬಂದ ಕವಿಗಳಿಗೆ ಇದೆಲ್ಲವೂ ಏನೊ ವೈಪರೀತ್ಯದಂತೆ ತೋರಿತಾಗಿ, ಸ್ಪೆನ್ಸರ್ ಅನುಕರಣೀಯನಾಗಲಿಲ್ಲ. ಫಿಲಿಪ್ ಸಿಡ್ನಿಯ ಸ್ಥಾನ ಗೌರವವೂ ಉದಾತ್ತ ವ್ಯಕ್ತಿ ತೇಜಸ್ಸೂ ಕವಿಲೋಕದ ಆಂತರ್ಯವನ್ನು ಸೂರೆಗೊಂಡವು. ಅವನ ಆರ್ಕೇಡಿಯ ಹಲವಾರು ಗ್ರಾಮೀಣ ಅಚ್ಚರಿಕಥೆಗಳಿಗೆ ಆಧಾರವಾಯಿತು. ಹಾಗೆಯೇ ಕೆಲವು ಗ್ರಾಮೀಣ ರೂಪಕಗಳೂ ಹೊರಬಂದುವು. 17ನೆಯ ಶತಮಾನದ ಭಾವಗೀತೆಯ ಕವಿಗಳಿಗೆ ಹಳ್ಳಿಗಾಡಿನ ಪ್ರಸಂಗ ಕುತೂಹಲಕರವೆನಿಸಿತು. ಅನೇಕ ಕಿರುಕವನಗಳು ಹುಟ್ಟಿದವು. ಹೆರಿಕ್ ಅಂಥ ಕವಿತೆಯಲ್ಲಿ ಮಹಿಮೋನ್ನತನಾದ.

ಗ್ರಾಮೀಣ ಸಂಪ್ರದಾಯಕ್ಕೆ ಅಂಟಿಕೊಂಡಿದ್ದ ಲೌಕಿಕ ಮನೋವೃತ್ತಿ, ಭೋಗಾಪೇಕ್ಷೆ, ಗ್ರಾಮ್ಯತೆ ಮೊದಲಾದ ಲಕ್ಷಣಗಳು ಕೆಲವು ಸಾಹಿತಿಗಳಿಗೆ ಕವಿಶಕ್ತಿಯ ಅಪವ್ಯಯದಂತೆ ಭಾಸವಾಯಿತು. ಕ್ರಮಬದ್ಧ ಕಾವ್ಯವನ್ನು ಬರೆಯುವ ಅಭಿಲಾಷೆಯಿಂದ 17ನೆಯ ಶತಮಾನದಲ್ಲಿ ಕೇಮಸ್ ಡ ಪಾಂತ್ಕರೆ ಎಂಬ ಫ್ರೆಂಚ್ ಪಾದ್ರಿ ಕ್ರಿಸ್ತಮತೀಯ ಗ್ರಾಮೀಣ ಕಿರುಕವಿತೆಗಳನ್ನು ಹೊರತಂದ. 18ನೆಯ ಶತಮಾನದಲ್ಲಿ ಸ್ವಿಟ್ಜರ್ಲೆಂಡಿನ ದೊಡ್ಡ ಸಾಹಿತಿ ಗೆಸ್ನರ್ ಕೂಡ ಮತೀಯ ಗ್ರಾಮೀಣ ಪದ್ಯಗಳನ್ನು ಬರೆದ. ಆದರೆ ಹರ್ಡರ್ ಮುಂತಾದ ಪ್ರಬಲ ಪಂಡಿತರ ಅವಹೇಳನಕ್ಕೆ ಸಿಕ್ಕಿ, ಗ್ರಾಮೀಣ ಸಂಪ್ರದಾಯ ತನ್ನ ಪ್ರಭಾವವನ್ನು ಬೇಗ ಬೇಗ ಕಳೆದುಕೊಳ್ಳುತ್ತ ಹೋಯಿತು. ಅದು ಅಷ್ಟಿಷ್ಟು ರುಚಿವತ್ತಾಗಬೇಕಾದರೆ ರಸಿಕತೆಗೆ ಸರಳತೆಯೂ ಔದಾರ್ಯವೂ ಅತ್ಯಗತ್ಯ. ಸ್ಪಷ್ಟ ವಿಡಂಬನೆಯೆದುರು ಅದು ತಲೆಯೆತ್ತಿ ನಿಲ್ಲಲಾರದು. ಹೀಗಿದ್ದರೂ ಅದನ್ನು ಒಂದು ಕವಿಸಮಯ ಅಥವಾ ಕಾವ್ಯಾಲಂಕಾರದಂತೆ ಉಪಯೋಗಿಸಿಕೊಳ್ಳುವ ಕವಿಗಳು 19ನೆಯ ಶತಮಾನದಲ್ಲಿ ಹಲವರಾಗಿ ಬಂದರು. 20ನೆಯ ಶತಮಾನದಲ್ಲೂ ಅಂಥವರಿದ್ದಾರೆ. ಹಳೆಯ ಸಂಪ್ರದಾಯವಾದರೂ ಹೊಸತನಕ್ಕೆ ಅದರಲ್ಲಿ ಎಡೆಯುಂಟು. ತನ್ನೊಳಗೆ ಉಕ್ಕಿ ಹೊರಹೊಮ್ಮಲಾಶಿಸುವ ತೀವ್ರಭಾವ ಭಾವನೆಗಳಿಗೆ ತಮ್ಮ ಹೆಸರಿನಲ್ಲೇ ಆಸ್ಪದ ಕೊಡುವುದಕ್ಕೆ ಕೆಲವು ಕವಿಗಳಿಗೆ ಏನೊ ಹಿಂಜರಿಕೆ. ತಮ್ಮ ಸ್ಥಳ ಸನ್ನಿವೇಶದಿಂದ ದೂರವಾದ ವ್ಯಕ್ತಿಯ ಸೋಗು ಅವರಿಗೆ ಬೇಕಾಗಬಹುದು. ನಿಸರ್ಗದ ಮಡಿಲಲ್ಲೇ ಇರುವ ಗ್ರಾಮಾಂತರ ನಿವಾಸಿಯನ್ನು ಕಲ್ಪಿಸಿಕೊಂಡು ಅವನ ಮೂಲಕ ತಮ್ಮ ಅಭಿಪ್ರಾಯಗಳಿಗೆ ಮೂರ್ತತ್ವ ಕೊಡುವುದು ಅಸಹಜವಲ್ಲ. ಬಹುಶಃ ಕಾವ್ಯತತ್ತ್ವರೀತ್ಯ ಅತಾರ್ಕಿಕವೂ ಅಲ್ಲ. ರಾಗಮಿಥ್ಯೆ ಮನುಷ್ಯರಿಗೆ ಒಗ್ಗಿ ಬಂದಿರುವ ರಮ್ಯ ವರ್ತನೆ. ಅಂದಚಂದದ ರಾಗಮಿಥ್ಯೆಯನ್ನು ಗ್ರಾಮೀಣ ಸಂಪ್ರದಾಯದಲ್ಲಲ್ಲದೆ ಮತ್ತೆಲ್ಲೂ ಕಾಣಲು ಸಾಧ್ಯವಿಲ್ಲ. (ಎಸ್.ವಿ.ಆರ್.)

**ಗ್ರಾಮೋಫೋನ್ :** ಫೋನೊಗ್ರಾಫಿನ ವ್ಯಾಪಾರ ನಾಮ **ನೋಡಿ– ಫೋನೊಗ್ರಾಫ್**.

**ಗ್ರಾವೆಟ್ಟಿಯನ್ :** ಯುರೋಪಿನ ಅಂತ್ಯ ಹಳೆಶಿಲಾಯುಗಕ್ಕೆ ಸೇರುವ ಹಂತಗಳಲ್ಲೊಂದು. ಕಾಲಮಾನ ಪ್ರ.ಶ.ಪೂ. 28,000–22,000. ಫ್ರಾನ್ಸಿನ ಡಾರ್ಡಾನಿ ಪ್ರದೇಶದಲ್ಲಿ, ಕೌಜ್ ನದಿ ಕಣಿವೆಯಲ್ಲಿರುವ ಲಾ ಗ್ರಾವೆಟ್ ಎಂಬಲ್ಲಿ ಈ ಸಾಂಸ್ಕೃತಿಕ ಹಂತಕ್ಕೆ ವಿಶಿಷ್ಟವಾದ ಶಿಲೋಪಕರಣಗಳು ಮೊದಲಿಗೆ ಪತ್ತೆಯಾದವು. ಆದ್ದರಿಂದಲೇ ಈ ಹೆಸರು. ಇದು ವಾಸ್ತವವಾಗಿ ಒಂದು ಸಂಸ್ಕೃತಿಯೆನಿಸಿಕೊಳ್ಳುವಷ್ಟು ವ್ಯಾಪಕವಲ್ಲವಾದರೂ, ಪ್ರಾಗಿತಿಹಾಸ ಕಾಲದ ಒಂದು ಜನಸಮುದಾಯದ ಉತ್ಪನ್ನವೆಂದು ಊಹಿಸಲು ಸಾಧ್ಯವಾಗುವ

ಮಟ್ಟಿಗೆ ಒಂದೇ ಬಗೆಯ ಉಪಕರಣಗಳನ್ನು ಈ ಜನ ತಯಾರಿಸುತ್ತಿದ್ದರು. ಕಿರಿದಾದ ಚೂಪಾದ ಮೊನೆಯಿರುವ ಬೆಣಚುಕಲ್ಲಿನ ಚಾಕುವಿನಾಕಾರದ ಉಪಕರಣಗಳು (ಬ್ಯೂರಿನ್) ಇವರ ವಿಶಿಷ್ಟ ಉಪಕರಣ. ಇವು ಇದೇ ಯುಗದ ಚಾಟುಲ್‌ಪೆರೋನಿಯನ್ ಹಂತಕ್ಕೆ ಸೇರಿದ ಉಪಕರಣಗಳಿಗಿಂತ ಸೊಗಸಾದವೂ ವ್ಯವಸ್ಥಿತ ಆಕಾರವುಳ್ಳವೂ ಮೊಂಡಾದ ಹಿಡಿಗಳಿಂದ ಕೂಡಿದವೂ ಆಗಿವೆ.

ಇದಕ್ಕೆ ಸಮಕಾಲೀನವಾದ ಪೂರ್ವ ಗ್ರಾವೆಟ್ಟಿಯನ್ ಎಂದು ಕರೆಯಬಹುದಾದ ಸಂಸ್ಕೃತಿಯೊಂದು ಇದೇ ಕಾಲದಲ್ಲಿ ರಷ್ಯದ ದಕ್ಷಿಣ ಭಾಗದ ಮೈದಾನಗಳಲ್ಲಿ ನೆಲೆಗೊಂಡು ಅಭಿವೃದ್ಧಿಹೊಂದುತ್ತಿತ್ತು. ಪೂರ್ವ ಗ್ರಾವೆಟ್ಟಿಯನ್ ಬೇಟೆಗಾರರು ಪಶ್ಚಿಮಾಭಿಮುಖವಾಗಿ ಆಲ್ಪ್ಸ್ ಹಾಗೂ ಕಾರ್ಪೇತಿಯನ್ ಪ್ರದೇಶಗಳತ್ತ ವಲಸೆ ಹೋಗಲು ಪ್ರಾರಂಭಿಸಿದರು. ಇವರು ರಷ್ಯದ ದಕ್ಷಿಣ ಭಾಗದಲ್ಲಿ ಹಾಗೂ ಮೊರೇವಿಯದಲ್ಲಿ (ಚೆಕೊಸ್ಲೊವಾಕಿಯ) ಬೃಹದ್ಗಜಗಳನ್ನು (ಮ್ಯಾಮತ್) ಬೇಟೆಯಾಡುವುದರಲ್ಲಿ ವಿಶೇಷ ಪರಿಶ್ರಮ ಪಡೆದಿದ್ದರು. ಆದರೆ ಫ್ರಾನ್ಸಿನ ಗ್ರಾವೆಟ್ಟಿಯನರು ಕಾಡುಕುದುರೆಗಳನ್ನು ಬೇಟೆಯಾಡುವುದರಲ್ಲಿ ನಿಸ್ಸೀಮರಾಗಿದ್ದರು. ಇವರು ಕಲಾಕುಶಲಿಗಳೂ ಉತ್ತಮ ಅಭಿರುಚಿಯುಳ್ಳವರೂ ಆಗಿದ್ದರು. ದಂತದಿಂದ ವಿಶಿಷ್ಟ ಆಕಾರದ ಬಳೆ, ಕಡಗ ಮೊದಲಾದವನ್ನು ಕೊರೆಯುತ್ತಿದ್ದರು. ಕಲ್ಲು ಮತ್ತು ದಂತಗಳಲ್ಲಿ ವಿಕಟಾಕಾರದ, ಆದರೆ ರಮಣೀಯವಾದ ಕುಬ್ಜ ಸ್ತ್ರೀವಿಗ್ರಹಗಳನ್ನು (ವೀನಸ್) ಬಿಡಿಸುತ್ತಿದ್ದರು. ಇವರ ವಾಸ ಹೆಚ್ಚಾಗಿ ಗುಹೆಗಳಲ್ಲಿ.




1. ಬೆನ್ನುಳ್ಳ ಗ್ರಾವೆಟ್ ಅಲಗು,
2. ಮೊನಚು ಕೊನೆ

ಕ್ರೊ–ಮ್ಯಾಗ್ನನ್ ಹಾಗೂ ಮ್ಯಾಗ್ಡಲೀನಿಯನರಂತೆ ಗ್ರಾವೆಟ್ಟಿಯನರು ಕೆಂಪುಬಣ್ಣವನ್ನು ಬಹಳವಾಗಿ ಬಳಸುತ್ತಿದ್ದರು. ಆಫ್ರಿಕನ್ ಹಾಗೂ ಆಸ್ಟ್ರೇಲಿಯನ್ ಮೂಲನಿವಾಸಿಗಳಂತೆ ಶರೀರಕ್ಕೆ ಬಣ್ಣ ಹಚ್ಚಿಕೊಳ್ಳುತ್ತಿದ್ದರು. ಕೊರೆದ ರಂಧ್ರಗಳಿರುವ ಚಿಪ್ಪು, ಪಳೆಯುಳಿಕೆ, ಪ್ರಾಣಿಗಳ ದಂತಗಳು–ಇವುಗಳಿಂದ ಕಂಠಾಭರಣಗಳನ್ನೂ ಕೇಶಾಭರಣಗಳನ್ನೂ ಧರಿಸುತ್ತಿದ್ದರು. ಇವರು ಫ್ರಾನ್ಸಿನ ಗುಹೆಗಳಲ್ಲಿ ವರ್ಣರಂಜಿತ ಚಿತ್ರಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಚಿತ್ರಗಳನ್ನು ಷೋವೆ ಮುಂತಾದ ಗುಹೆಗಳಲ್ಲಿ ಕಾಣಬಹುದು.

(ಎಸ್.ವಿ.ಎಸ್.ಬಿ.)

**ಗ್ರಿನಿಜ್ :** ಅಮೆರಿಕ ಸಂಯುಕ್ತ ಸಂಸ್ಥಾನಗಳ ಕಾನೆಕ್ಟಿಕಟ್‌ನ ನೈರುತ್ಯ ಭಾಗದಲ್ಲಿರುವ ಒಂದು ಪಟ್ಟಣ. ನ್ಯೂಯಾರ್ಕಿನ ಒಂದು ಉಪನಗರ. ಇದು ನ್ಯೂ ಇಂಗ್ಲೆಂಡಿನ ಮಹಾದ್ವಾರ ಎಂದು ಪ್ರಸಿದ್ಧವಾಗಿದೆ. ಇದನ್ನು ನ್ಯೂ ಹೇವನ್ ವಸಾಹತಿನ ಪ್ರತಿನಿಧಿಗಳಾದ ರಾಬರ್ಟ್ ಫೀಕ್ಸ್ ಮತ್ತು ಡ್ಯಾನಿಯೆಲ್ ಪ್ಯಾಟ್ರಿಕ್ ಎಂಬವರು ಲಾಂಗ್ ಐಲೆಂಡ್ ಖಾರಿಯ ಮೇಲೆ 1640ರಲ್ಲಿ ಸ್ಥಾಪಿಸಿದರು. ಅನಂತರ ಸ್ವಲ್ಪ ಕಾಲ ಇದು ಡಚ್ಚರ ವಶದಲ್ಲಿತ್ತು. 1650ರಲ್ಲಿ ಇದು ಕಾನೆಕ್ಟಿಕಟ್‌ನ ಅಧಿಕಾರಕ್ಕೆ ಒಳಪಟ್ಟಿತು. ಅಮೆರಿಕನ್ ಕ್ರಾಂತಿಯ ಕಾಲದಲ್ಲಿ ಬ್ರಿಟಿಷ್ ಪಡೆಗಳು ಇದನ್ನು ಲೂಟಿ ಮಾಡಿದುವು. ಅಮೆರಿಕನ್ ಸ್ವಾತಂತ್ರ್ಯ ಯುದ್ಧಾನಂತರ ಇದು ಬೆಳೆಯಲಾರಂಭಿಸಿತು.

ನ್ಯೂಯಾರ್ಕ್ ನಗರದಲ್ಲಿ ಉದ್ಯೋಗನಿರತರಾದವರು ಇಲ್ಲಿ ವಾಸವಿದ್ದು ಪ್ರತಿ ದಿನವೂ ಆ ನಗರಕ್ಕೆ ಹೋಗಿಬರಲು ಅನುಕೂಲವಾಗಿರುವುದರಿಂದ ಈ ಸ್ಥಳ ಪ್ರಾಮುಖ್ಯ ಗಳಿಸಿತು. ಸಾಮುದ್ರ ಎಂಜಿನ್, ವಿದ್ಯುಜ್ಜನಕ, ಪಂಪ್, ದೋಣಿ, ನಾವೆಯ ಪಟ, ಕೈಗಾರಿಕಾ ಫೆಲ್ಟು, ಸೂಕ್ಷ್ಮ ಉಪಕರಣಗಳು, ಸಣ್ಣ ಎರಕ ವಸ್ತುಗಳು, ಮಷೀನ್ ಟೂಲ್, ನಿಯತಕಾಲಿಕೆಗಳ ಮುದ್ರಣ ಮುಂತಾದವು ಇಲ್ಲಿಯ ಕೈಗಾರಿಕೆಗಳು. ಸಾರ್ವಜನಿಕ ಹಾಗೂ ಖಾಸಗಿ ಶಾಲೆಗಳೂ ಸಾರ್ವಜನಿಕ ಗ್ರಂಥಾಲಯಗಳೂ ವಸ್ತು ಸಂಗ್ರಹಾಲಯವೂ ಹಲವಾರು ಸಾರ್ವಜನಿಕ ಉದ್ಯಾನ ಬೀಚುಗಳೂ ಇಲ್ಲಿವೆ. ಸುಂದರ ವಸತಿ ಗೃಹಗಳಿಂದ ಕೂಡಿದ ಪಟ್ಟಣವಿದು.

(ಎಂಎಚ್.)

**ಗ್ರಿಫಿತ್, ಆರ್ಥರ್ :** 1872–1922. ಐರ್ಲೆಂಡಿನ ಕ್ರಾಂತಿನಾಯಕ. ಅಸಾಧಾರಣ ಹೋರಾಟಗಾರ, ಪತ್ರಕರ್ತ, ಸಮರ್ಥ ರಾಜನೀತಿಜ್ಞ. 1872ರ ಮಾರ್ಚ್ 31ರಂದು ಡಬ್ಲಿನ್‌ನಲ್ಲಿ ಜನಿಸಿದ. ಈತ ಮುದ್ರಣಕಾರನಾಗಿ ಜೀವನ ಪ್ರಾರಂಭಿಸಿದ. ಐರಿಷ್ ಭಾಷೆಯ ರಕ್ಷಣೆ ಅಭಿವೃದ್ಧಿಗಳಿಗಾಗಿ 1893ರಲ್ಲಿ ಸ್ಥಾಪಿತವಾದ ಗೇಲಿಕ್ ಲೀಗನ್ನು ಇವನು ಸೇರಿದ. ಕೆಲ್ಟಿಕ್ ಸಾಹಿತ್ಯ ಸಂಘ, ಐರಿಷ್ ರಿಪಬ್ಲಿಕನ್ ಬ್ರದರ್‌ಹುಡ್– ಈ ಸಂಸ್ಥೆಗಳ ಸದಸ್ಯನೂ ಆಗಿದ್ದ. ಪ್ರಾರಂಭದಲ್ಲಿ ಯುನೈಟೆಡ್ ಐರಿಷ್‌ಮನ್ ಎಂಬ ವಾರಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದ. 1901ರಿಂದ ಅದರ ಸಂಪಾದಕನಾದ. ಐರ್ಲೆಂಡಿನ ಪ್ರಸಿದ್ಧ ಬರೆಹಗಾರರಿಂದ ಲೇಖನಗಳನ್ನು ಬರೆಸಿ ತನ್ನ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದ. ತೀವ್ರ ರಾಜಕೀಯ ವಿಚಾರಗಳಿಗೆ ಪತ್ರಿಕೆ ಪ್ರಸಿದ್ಧವಾಗಿತ್ತಾದರೂ ಮಾನಸಿಕ ವಿಚಾರಗಳಿಗೂ ಅದು ವಿಶೇಷ ಗಮನ ನೀಡುತ್ತಿತ್ತು.

ಐರ್ಲೆಂಡಿನ ಸ್ವಾತಂತ್ರ್ಯ ಚಳವಳಿಯಲ್ಲಿ ಗ್ರಿಫಿತ್ ವಿಶೇಷ ಆಸಕ್ತಿ ವಹಿಸಿದ್ದ. ಸಂವೈಧಾನಿಕ ಮಾರ್ಗಗಳಿಂದ ತನ್ನ ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾದೀತೆಂದು ಈತ ಆಶಿಸಿದ್ದ. ಆ ಆಶೆ ವಿಫಲವಾಯಿತು. ಐರಿಷ್ ಜನ ಒಗ್ಗಟ್ಟಾಗಿ ಇಂಗ್ಲೆಂಡಿನ ಪರಮಾಧಿಕಾರವನ್ನು ಕಿತ್ತೊಗೆದು ಸ್ವಾತಂತ್ರ್ಯ ಘೋಷಿಸಿಕೊಳ್ಳಬೇಕೆಂದು ಗ್ರಿಫಿತ್ ವಾದಿಸತೊಡಗಿದ. ರಾಜತ್ವದ ವಿನಾ ಉಳಿದ ವಿಚಾರಗಳಲ್ಲಿ ಐರ್ಲೆಂಡು ಬ್ರಿಟನಿನಿಂದ ಸ್ವತಂತ್ರವಾಗಿರಬೇಕೆಂಬುದು ಇವನ ಇಚ್ಛೆಯಾಗಿತ್ತು. ಬ್ರಿಟಿಷ್ ಸರ್ಕಾರಕ್ಕೆ ತೆರಿಗೆಗಳನ್ನು ಸಲ್ಲಿಸಕೂಡದೆಂದೂ ಚುನಾಯಿತ ಪ್ರತಿನಿಧಿಗಳು ವೆಸ್ಟ್‌ಮಿನಿಸ್ಟರ್‌ಗೆ ಹೋಗದೆ ಐರ್ಲೆಂಡಿನಲ್ಲೆ ಸಭೆ ಸೇರಿ ತಮ್ಮ ದೇಶದ ಇಚ್ಛೆಯ ಮೇರೆಗೆ ರಾಜ್ಯವಾಳಬೇಕೆಂದೂ ಈತ ಘೋಷಿಸಿದ. ಈ ಧೋರಣೆಗೆ ಷಿನ್ ಫೇನ್ ಎಂದು ಹೆಸರು ಬಂತು. ನಾವೇ ಎಂದು ಅರ್ಥವಿರುವ ಈ ಶಬ್ದಕ್ಕೆ ಒಗ್ಗಟ್ಟಾಗಿ ನಿಲ್ಲಿ ಎಂಬುದು ರೂಢಿಯ ಅರ್ಥ. ಈ ನೀತಿಯನ್ನನುಸರಿಸುವವರು ಷಿನ್ ಫೇನ್ ಎಂದೇ ಹೆಸರಾದರು. ಇವನ ನಿಕಟ ಅನುಯಾಯಿಗಳು ಹಲವರು ಫೇನಿಯನರೇ ಆಗಿದ್ದಾಗ್ಯೂ ಐರಿಷ್ ರಾಷ್ಟ್ರೀಯವಾದಿಗಳಲ್ಲಿ ಹಲವರು ಐರ್ಲೆಂಡು ಬ್ರಿಟನಿನಿಂದ ಪ್ರತ್ಯೇಕಗೊಳ್ಳುವುದು ಸಾಧ್ಯವೆಂದು ನಂಬಿರಲಿಲ್ಲ. ಆದ್ದರಿಂದ ಈತ ಐರಿಷ್ ರಿಪಬ್ಲಿಕನ್ ಬ್ರದರ್‌ಹುಡ್‌ಗೆ ರಾಜೀನಾಮೆ ನೀಡಿ ತನ್ನಂತೆಯೇ ಅಭಿಪ್ರಾಯ ಹೊಂದಿದ್ದವರ ಪ್ರತ್ಯೇಕ ಸಂಸ್ಥೆಯೊಂದನ್ನು ಸ್ಥಾಪಿಸಲು ಯತ್ನಿಸಿದ.

1906ರಲ್ಲಿ ಗ್ರಿಫಿತನ ಯುನೈಟೆಡ್ ಐರಿಷ್‌ಮನ್ ಪತ್ರಿಕೆ ಮಾನನಷ್ಟಕ್ಕಾಗಿ ದಂಡ ತೆರಬೇಕಾಗಿ ಬಂದಾಗ ಈತ ಪತ್ರಿಕೆಯ ಹೆಸರನ್ನು ಷಿನ್ ಫೇನ್ ಎಂದೇ ಬದಲಿಸಿದ. 1907ರಲ್ಲಿ ಇದು ದಿನಪತ್ರಿಕೆಯಾಯಿತು. ಆದರೆ ಇದನ್ನು ನಡೆಸಲಾಗಲಿಲ್ಲ. ಅನಂತರ ಇದರ ಹೆಸರನ್ನು ಐರಿ ಎಂದು ಬದಲಾಯಿಸಲಾಯಿತು. 1912ರ ಮೂರನೆಯ ಹೋಂರೂಲ್ ವಿಧೇಯಕವನ್ನು ಈತ ತೀವ್ರವಾಗಿ ವಿರೋಧಿಸಿದ. ಐರ್ಲೆಂಡಿನ ವಿಭಜನೆಗೆ ಈತನ ಉಗ್ರ ವಿರೋಧವಿತ್ತು. 1916ರಲ್ಲಿ ಸಂಭವಿಸಿದ ಈಸ್ಟರ್ ದಂಗೆಯಲ್ಲಿ ಈತ ಭಾಗವಹಿಸಲಿಲ್ಲ. ಆದ್ದರಿಂದ ಉಗ್ರವಾದಿಗಳ ಮೇಲೆ ಈತನ ಪ್ರಭಾವ ತಗ್ಗಿತು. ಆದರೂ ಬ್ರಿಟಿಷ್ ಸರ್ಕಾರ ಇವನನ್ನು ಸ್ಥಾನಬದ್ಧತೆಯಲ್ಲಿಟ್ಟಿತು. ಷಿನ್ ಫೇನ್ ಪ್ರಬಲವಾಯಿತು. ಬಂಧಿತರು ಬಿಡುಗಡೆಯಾದಾಗ ಈಮನ್ ಡೆ ವಲೇರ ಅವರ ನಾಯಕನಾಗಿ ಆಯ್ಕೆ ಹೊಂದಿದ. ಗ್ರಿಫಿತನೇ ಈತನ ಹೆಸರನ್ನು ಸೂಚಿಸಿದ್ದು. ಅನಂತರ ಗ್ರಿಫಿತ್ ಮತ್ತೆ ಪತ್ರಿಕಾ ಪ್ರಕಟಣೆಯಲ್ಲಿ ತೊಡಗಿದ. ಆಗ ಇವನು ಹೊರಡಿಸಿದ ಪತ್ರಿಕೆಯ ಹೆಸರು ನ್ಯಾಷನಾಲಿಟಿ. ಇದಕ್ಕೂ ಪ್ರತಿಬಂಧಕಾಜ್ಞೆ ಬಂತು. ಗ್ರಿಫಿತ್ ಮತ್ತೆ ಬಂಧನಕ್ಕೊಳಗಾದ (1918). 1918ರ ಡಿಸೆಂಬರಿನಲ್ಲಿ ನಡೆದ ಚುನಾವಣೆಗಳಲ್ಲಿ ಷಿನ್ ಫೇನ್ ಜಯಗಳಿಸಿತು. ಚುನಾಯಿತ ಪ್ರತಿನಿಧಿಗಳು ಸಭೆ ಸೇರಿ ಐರಿಷ್ ಗಣರಾಜ್ಯವನ್ನು ಘೋಷಿಸಿದರು. ಡೆ ವಲೇರ ಅಧ್ಯಕ್ಷನಾಗಿಯೂ ಗ್ರಿಫಿತ್ ಉಪಾಧ್ಯಕ್ಷನಾಗಿಯೂ ಆಯ್ಕೆಯಾದರು.

1919–20ರಲ್ಲಿ ಡೆ ವಲೇರ ಅಮೆರಿಕಕ್ಕೆ ಹೋಗಿದ್ದಾಗ ಗ್ರಿಫಿತ್ ಐರಿಷ್ ಗಣರಾಜ್ಯದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ. ಈತನ ಸೂತ್ರಗಳನ್ನು ಜಾರಿಗೆ ತರಲು ತಕ್ಕ ಸಂದರ್ಭ ಒದಗಿಬಂತು. ಚುನಾಯಿತ ಸ್ಥಳೀಯ ನಿಕಾಯಗಳು ಬ್ರಿಟಿಷರ ಆದೇಶವನ್ನು ತಿರಸ್ಕರಿಸಿದುವು. ಷಿನ್ ಫೇನ್ ನ್ಯಾಯಾಲಯಗಳು ಜಾರಿಗೆ ಬಂದುವು. ಜನರು ವರಮಾನ ತೆರಿಗೆ ಕೊಡಲು ನಿರಾಕರಿಸಿದರು. ಉಗ್ರ ಚಳವಳಿಗಾರರೂ ಆಗ ಬಿರುಸಾಗಿದ್ದರಿಂದ ಈ ಶಾಂತಿಯುತ ಪ್ರತಿಭಟನೆಯ ಮಾರ್ಗಗಳು ಯಶಸ್ವಿಯಾದುವು. ಯುವಕರೂ ಉಗ್ರ ಮಾರ್ಗ ತಳೆದಿದ್ದರು. 1921ರಲ್ಲಿ ಬ್ರಿಟಿಷರು ಲಂಡನಿನಲ್ಲಿ ಸಂಧಾನಕ್ಕೆ ಐರಿಷರನ್ನು ಆಹ್ವಾನಿಸಿದರು. ಐರಿಷ್ ನಿಯೋಗಕ್ಕೆ ಗ್ರಿಫಿತ್ ನಾಯಕನಾದ. ಬ್ರಿಟಿಷರ ಷರತ್ತುಗಳಿಗೆ ಗ್ರಿಫಿತ್ ಒಪ್ಪಿಗೆ ನೀಡಿದ. ಒಪ್ಪಂದವೊಂದಕ್ಕೆ ಸಹಿಯಾಯಿತು. ಆದರೆ ಇದಕ್ಕೆ ಅನೇಕರು ವಿರೋಧ ಸೂಚಿಸಿದರು. ಇದರಿಂದ ಐರ್ಲೆಂಡಿಗೆ ಪೂರ್ಣ ಸ್ವಾತಂತ್ರ್ಯ ಲಭಿಸದಿದ್ದರೂ ಅದರತ್ತ ಶಾಂತಿಯುತವಾಗಿ ನಡೆಯಲು ಇದೊಂದು ಸಾಧನವೆಂದು ಗ್ರಿಫಿತ್ ವಾದಿಸಿದ. ವಿಧಾನಸಭೆ ಅಲ್ಪ ಬಹುಮತದಿಂದ ಈ ಒಪ್ಪಂದಕ್ಕೆ ಒಪ್ಪಿಗೆ ನೀಡಿತು. ಡೆ ವಲೇರ ರಾಜೀನಾಮೆ ನೀಡಿದ. ಗ್ರಿಫಿತ್ ಅಧ್ಯಕ್ಷನಾಗಿ ಆಯ್ಕೆಯಾದ. ಆದರೆ ಒಪ್ಪಂದದ ಪ್ರಕಾರ ವಿಧಾನಸಭೆಯ ಮಂತ್ರಿಮಂಡಲದ ಜೊತೆಗೆ ಇನ್ನೊಂದು ತಾತ್ಕಾಲಿಕ ಸರ್ಕಾರ ಸ್ಥಾಪಿತವಾಗಿತ್ತು. ಅದಕ್ಕೆ ಕಾಲಿನ್ಸ್ ಅಧ್ಯಕ್ಷ. ಹಲವು ವೇಳೆ ಗ್ರಿಫಿತನ ಹೇಳಿಕೆಯನ್ನು ಈ ಸರ್ಕಾರ ನಿರಾಕರಿಸುತ್ತಿತ್ತು ಹಾಗೂ ಅಲಕ್ಷಿಸುತ್ತಿತ್ತು. ಇದರಿಂದ ಅನಿಶ್ಚಿತ ಪರಿಸ್ಥಿತಿ ಉಂಟಾಗಿತ್ತು. 1922ರ ಆಗಸ್ಟ್ 12ರಂದು ಗ್ರಿಫಿತ್ ಹಠಾತ್ತನೆ ನಿಧನನಾದ.

(ಜಿ.ಆರ್.ಆರ್.)

**ಗ್ರಿಫಿತ್, ಡೇವಿಡ್ ವಾರ್ಕ್ :** 1875–1948. ಅಮೆರಿಕದ ಚಲನಚಿತ್ರ ನಿರ್ಮಾಪಕ ಮತ್ತು ನಿರ್ದೇಶಕ. ಹುಟ್ಟಿದ್ದು ಕೆಂಟುಕಿಯ ಓಲ್ಡ್‌ಹ್ಯಾಮಿನಲ್ಲಿ. ರೆಸ್ಕ್ಯೂಡ್ ಫ್ರಮ್ ಎನ್ ಈಗಲ್ಸ್ ನೆಸ್ಟ್ (1907) ಎಂಬ ಚಿತ್ರದಲ್ಲಿ ಚಿಕ್ಕ ಪಾತ್ರ ವಹಿಸುವುದರ ಮೂಲಕ ಚಿತ್ರರಂಗ

ಪ್ರವೇಶಿಸಿದ. ಅನಂತರ ಬಯೋಗ್ರಾಫ್ ಎಂಬ ಚಲನಚಿತ್ರ ನಿರ್ಮಾಣ ಸಂಸ್ಥೆಯಲ್ಲಿ ಚಿತ್ರಕಥಾ ಲೇಖಕ ಮತ್ತು ದಿಗ್ದರ್ಶಕನಾಗಿ ಸೇರಿದ. ಅಲ್ಲಿ ಈತ ತಯಾರಿಸಿದ ಪ್ರಥಮ ಚಿತ್ರ ದಿ ಅಡ್ವೆಂಚರ್ಸ್ ಆಫ್ ಡಾಲೀ. ಬಳಿಕ ಈತ ಚಿತ್ರರಂಗದಲ್ಲಿ ಅವಿಶ್ರಾಂತವಾಗಿ ದುಡಿಯಲಾರಂಭಿಸಿದ. ಲೆಕ್ಕವಿಲ್ಲದಷ್ಟು ಚಿಕ್ಕ ಚಿತ್ರಗಳನ್ನು ತಯಾರಿಸಿದ. ಅಮೆರಿಕದ ಚಲನಚಿತ್ರ ಉದ್ಯಮಕ್ಕೆ ಈತನಿಂದ ಒಳ್ಳೆಯ ಚಾಲನೆ ಸಿಕ್ಕಿತು. ಈತ ಬಳಸಿದ ವಿಧಾನ ಮತ್ತು ತಂತ್ರಗಳು ಚಲನಚಿತ್ರದ ಮೇಲೆ ಹೆಚ್ಚಿನ ಪ್ರಭಾವ ಬೀರಿದುವು.

1913ರಲ್ಲಿ ಗ್ರಿಫಿತ್ ಬೈಬಲಿನ ಕಥೆಯೊಂದನ್ನು ಆಧರಿಸಿ ಜೂಡಿತ್ ಬೆತೂಲಿಯ ಎಂಬ ಚಿತ್ರ ತಯಾರಿಸಿದ. ಅದೇ ವರ್ಷ ಬಯೋಗ್ರಾಫ್ ಸಂಸ್ಥೆಯನ್ನು ತ್ಯಜಿಸಿ ಸ್ವತಂತ್ರವಾಗಿ ಚಿತ್ರ ತಯಾರಿಸಲು ನಿರ್ಧರಿಸಿದ. ಥಾಮಸ್ ಡಿಕ್ಸನ್ ಎಂಬಾತ ಅಮೆರಿಕದ ಅಂತರ್‌ಯುದ್ಧವನ್ನಾಧರಿಸಿ ಬರೆದ ಕಾದಂಬರಿ ದಿ ಕ್ಲ್ಯಾನ್ಸ್‌ಮನ್ ಆಧರಿಸಿ ಚಿತ್ರವೊಂದನ್ನು ತಯಾರಿಸಲು ಉದ್ಯುಕ್ತನಾದ. ಇದು 1915ರಲ್ಲಿ ದಿ ಬರ್ತ್ ಆಫ್ ಎ ನೇಷನ್ ಎಂಬ ಹೆಸರಿನಿಂದ ನ್ಯೂಯಾರ್ಕಿನಲ್ಲಿ ಬಿಡುಗಡೆಯಾಯಿತು. ಮನರಂಜನೆಯೊಡನೆ ಉತ್ತಮ ಕಲೆಯನ್ನೂ ಚಲನಚಿತ್ರ ಒದಗಿಸಬಲ್ಲದೆಂಬುದನ್ನು ಈ ಚಿತ್ರ ತೋರಿಸಿಕೊಟ್ಟಿತು. ಜೊತೆಗೆ ಈ ಚಿತ್ರದಲ್ಲಿ ಜನಾಂಗಕ್ಕೆ ಸಂಬಂಧಿಸಿದ ವಿಷಯ ಹೆಚ್ಚು ಚರ್ಚೆಗೆ ಆಸ್ಪದ ನೀಡಿತು. ಈ ಚಿತ್ರದಿಂದ ಬಂದ ಅಪಾರ ಲಾಭ ಮತ್ತು ಯಶಸ್ಸಿನಿಂದ ಪ್ರೋತ್ಸಾಹಿತನಾದ ಗ್ರಿಫಿತ್ ಇನ್ನೂ ಹೆಚ್ಚಿನ ಅದ್ದೂರಿಯ ಇಂಟಾಲರೆನ್ಸ್ ಎಂಬ ಚಿತ್ರವನ್ನು ನಿರ್ಮಿಸಿದ (1916). 3.5 ಗಂಟೆ ಅವಧಿಯ ಈ ಚಿತ್ರ ಇತಿಹಾಸದಲ್ಲಿನ ನಾಲ್ಕು ಅಸಹಿಷ್ಣುತೆಯ ದೃಶ್ಯಗಳನ್ನು ನಾಲ್ಕು ಘಟನೆಗಳಾಗಿ ರೂಪಿಸುತ್ತದೆ: ಬ್ಯಾಬಿಲಾನ್ ಪತನ, ಕ್ರಿಸ್ತನ ಜೀವನ, ಬಾರ್ತಲೋಮ್ಯೂದಲ್ಲಿ ನಡೆದ ಕಗ್ಗೊಲೆ, ಸಮಕಾಲೀನವೆನ್ನಬಹುದಾದ 'ತಾಯಿ ಮತ್ತು ನ್ಯಾಯ' –ಹೀಗೆ ಈ ಚಿತ್ರ ಅನೇಕ ವಿಮರ್ಶಕ ಮತ್ತು ಪ್ರೇಕ್ಷಕರ ಪ್ರಶಂಸೆಯನ್ನು ಗಳಿಸಿತು. ಆದರೆ ಇದರಿಂದ ಸಾಕಷ್ಟು ಹಣ ಬರಲಿಲ್ಲವಾಗಿ ಗ್ರಿಫಿತ್ ಸ್ವತಂತ್ರವಾಗಿ ಚಿತ್ರಗಳನ್ನು ತಯಾರಿಸುವ ಹಂಬಲವನ್ನು ಬಿಡಬೇಕಾಯಿತು.

ಚಾರ್ಲಿ ಚಾಪ್ಲಿನ್, ಡಗ್ಲಾಸ್ ಫೇರ್‌ಬ್ಯಾಂಕ್ಸ್ ಮತ್ತು ಮೇರಿ ಪಿಕ್‌ಫರ್ಡ್ ಇವರೊಂದಿಗೆ ಸೇರಿ ಗ್ರಿಫಿತ್ 1919ರಲ್ಲಿ ಯುನೈಟೆಡ್ ಆರ್ಟಿಸ್ಟ್ಸ್ ಕಾರ್ಪೊರೇಷನ್ ಸಂಸ್ಥೆಯನ್ನು ಕೂಡಿಸಿದ. ಗ್ರಿಫಿತನ ಇತರ ಪ್ರಸಿದ್ಧ ಚಿತ್ರಗಳಿವು: ಬ್ರೋಕನ್ ಬ್ಲಾಸಮ್ಸ್ (1919), ವೇ ಡೌನ್ ಈಸ್ಟ್ (1920), ಆರ್ಫನ್ಸ್ ಆಫ್ ದಿ ಸ್ಟಾರ್ಮ್ (1922). ಈತನ ಎರಡು ವಾಕ್‌ಚಿತ್ರಗಳು ಅಷ್ಟು ಪ್ರಸಿದ್ಧವಾಗಲಿಲ್ಲ. ಈತನ ಕೊನೆಯ ಚಿತ್ರ ದಿ ಸ್ಟ್ರಗಲ್ ಎಂಬುದಂತೂ ಬಿಡುಗಡೆಯಾಗಲೇ ಇಲ್ಲ. ಚಿತ್ರ ನಿರ್ದೇಶನದಿಂದ ಈತ ನಿವೃತ್ತನಾದ್ದು 1932ರಲ್ಲಿ.

ಗ್ರಿಫಿತ್ ಮೇಧಾವಿ ದಿಗ್ದರ್ಶಕ. ಚಿತ್ರಸಂಪಾದನೆ ಹಾಗೂ ಛಾಯಾಗ್ರಹಣ ಕ್ಷೇತ್ರಕ್ಕೆ ಈತನ ಕೊಡುಗೆ ಮಹತ್ತರವಾದ್ದು. ಚಿತ್ರಗ್ರಹಣಕ್ಕೆ ಸಂಬಂಧಿಸಿದಂತೆ ಲಾಂಗ್ ಷಾಟ್, ಕ್ಲೋಸ್ ಅಪ್, ಪ್ಯಾನ್ ಷಾಟ್, ಹೈ ಮತ್ತು ಲೋ ಆಂಗಲ್ ಷಾಟುಗಳು, ಮೂವಿಂಗ್ ಷಾಟ್, ಡಿಸಾಲ್ವ್, ಸಾಫ್ಟ್ ಫೋಕಸ್, ಕ್ರಾಸ್ ಕಟಿಂಗ್, ಫ್ಲ್ಯಾಷ್‌ಬ್ಯಾಕ್, ಬ್ಯಾಕ್ ಲೈಟಿಂಗ್ ಮತ್ತು ನೈಟ್ ಫೊಟಾಗ್ರಫಿ –ಮೊದಲಾದ ಬಾಬುಗಳನ್ನು ಈತ ಪರಿಷ್ಕರಿಸಿದ ಇಲ್ಲವೆ ಮೊಟ್ಟಮೊದಲಿಗೆ ಬಳಕೆಗೆ ತಂದ.

ಚತುರ ಸಂಪಾದನೆಯಲ್ಲಿ ಹಾಗೂ ಚಲನಚಿತ್ರದ ಭಾವತೀವ್ರತೆ, ದೃಶ್ಯರಚನೆ, ಜನಜಂಗುಳಿಯನ್ನು ತೆರೆಯ ಮೇಲೆ ತರುವ ವರಸೆ–ಇವುಗಳ ನಿರ್ವಹಣೆಯಲ್ಲಿ ಈತ ನಿಷ್ಣಾತನೆನಿಸಿದ್ದ. *

**ಗ್ರಿಫಿತ್, ರಾಲ್ಫ್ ಥಾಮಸ್ ಹಾಚ್‌ಕಿನ್ :** 1826–1906. ಸಂಸ್ಕೃತ ಹಾಗೂ ಭಾರತೀಯ ಸಂಸ್ಕೃತಿಯ ಅಧ್ಯಯನ ಅಧ್ಯಾಪನಗಳಿಗೆ ತನ್ನ ಆಯುರ್ದಾಯವನ್ನು ವ್ಯಯಿಸಿದ ಸುಪ್ರಸಿದ್ಧ ವಿದ್ವಾಂಸ. ಕ್ರೈಸ್ತ ಪಾದ್ರಿಯೊಬ್ಬನ ಮಗನಾದ ಈತ 1846ರಲ್ಲಿ ಆಕ್ಸ್‌ಫರ್ಡಿನ ಕ್ವೀನ್ಸ್ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದ. ಆಗಿನ ಕಾಲಕ್ಕೆ ಪ್ರಸಿದ್ಧ ಸಂಸ್ಕೃತ ವಿದ್ವಾಂಸನೆಂದು ಖ್ಯಾತಿಪಡೆದಿದ್ದ ಎಚ್.ಎಚ್. ವಿಲ್ಸನನ ಶಿಷ್ಯನಾಗಿ 1849ರಲ್ಲಿ ಎಂ.ಎ. ಪದವೀಧರನಾದ. ಆಗ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಬೋಡೆನ್ ಸಂಸ್ಕೃತ ವಿದ್ಯಾರ್ಥಿವೇತನ ಈತನಿಗೆ ಲಭಿಸಿತು. ಅಲ್ಲಿಂದ ಮುಂದೆ ಐವತ್ತೇಳು ವರ್ಷಗಳ ಕಾಲ ನಿರಂತರವಾಗಿ (1906ರವರೆಗೆ) ಸಂಸ್ಕೃತ ಗ್ರಂಥಗಳ ಭಾಷಾಂತರ, ಅಧ್ಯಾಪನಗಳಲ್ಲಿ ನಿರತನಾದ.

ಎಂ.ಎ. ಪದವಿ ಪಡೆದ ಅನಂತರ ಮೂರು ವರ್ಷಗಳ ಕಾಲ ಗ್ರಿಫಿತ್ ಇಂಗ್ಲೆಂಡಿನ ಮಾರ್ಲ್‌ಬರೋವಿನ ಕಾಲೇಜಿನಲ್ಲಿ ಸಹೋಪಾಧ್ಯಾಯನಾಗಿದ್ದ. 1853ರಲ್ಲಿ ಭಾರತೀಯ ವಿದ್ಯಾ ಇಲಾಖೆಯನ್ನು ಸೇರಿ ಬನಾರಸ್ ಕಾಲೇಜಿನಲ್ಲಿ 1863ರ ತನಕ ಇಂಗ್ಲಿಷ್ ಪ್ರಾಧ್ಯಾಪಕನಾಗಿದ್ದನಲ್ಲದೆ ಮುಂದೆ ಹದಿನೈದು ವರ್ಷಗಳ ಕಾಲ ಅಲ್ಲಿಯೇ ಪ್ರಾಂಶುಪಾಲನಾಗಿ ಸೇವೆ ಸಲ್ಲಿಸಿದ. 1878ರಲ್ಲಿ ಆಗಿನ ಅವಧ್ ಮತ್ತು ವಾಯವ್ಯ ಪ್ರಾಂತಗಳ ವಿದ್ಯಾ ಇಲಾಖಾ ನಿರ್ದೇಶಕನಾಗಿ ಸೇವೆ ಸಲ್ಲಿಸಿ ತನ್ನ ಅರವತ್ತನೆಯ ವಯಸ್ಸಿನಲ್ಲಿ (1885) ನಿವೃತ್ತಿ ಪಡೆದ.

ಎಂಬತ್ತು ವರ್ಷಗಳ ಸಾರ್ಥಕ ಜೀವನ ನಡೆಸಿದ ಈತ ತನ್ನ ಇಪ್ಪತ್ತಾರನೆಯ ವಯಸ್ಸಿನಿಂದಲೇ ಸಂಸ್ಕೃತ ಗ್ರಂಥಗಳ ಸಂಪಾದನೆ ಮತ್ತು ಭಾಷಾಂತರದಲ್ಲಿ ತೊಡಗಿಕೊಂಡ. ಸ್ಪೆಸಿಮನ್ಸ್ ಆಫ್ ಓಲ್ಡ್ ಇಂಡಿಯನ್ ಪೋಯೆಟ್ರಿ 1852 (ಪ್ರಾಚೀನ ಭಾರತೀಯ ಕಾವ್ಯ ಮಾದರಿಗಳು): ದಿ ಬರ್ತ್ ಆಫ್ ದಿ ವಾರ್ ಗಾಡ್ 1853 (ಕುಮಾರ ಸಂಭವ): ಇಡಿಲ್ಸ್ ಫ್ರಂ ಸ್ಯಾನ್ಸ್‌ಕ್ರಿಟ್ 1866 (ಸಂಸ್ಕೃತ ಸಾಹಿತ್ಯದ ಮನಮೋಹಕ ದೃಶ್ಯಗಳು): ಸೀನ್ಸ್ ಫ್ರಂ ದಿ ರಾಮಾಯಣ 1868 (ರಾಮಾಯಣದ ಚಿತ್ರಗಳು), ರಾಮಾಯಣದ ಪದ್ಯಾನುವಾದ ಐದು ಸಂಪುಟಗಳು (1870–75): ಋಗ್ವೇದ, ನಾಲ್ಕು ಸಂಪುಟಗಳು (1889–92); ಸಾಮವೇದ (1893); ಅಥರ್ವವೇದ, ಎರಡು ಸಂಪುಟಗಳು (1895–96): ಶುಕ್ಲ ಯಜುರ್ವೇದ (1899) ಮೊದಲಾದ ಗ್ರಂಥಗಳನ್ನು ಇಂಗ್ಲಿಷಿಗೆ ಸಂಪೂರ್ಣವಾಗಿ ಭಾಷಾಂತರಿಸಿದ ಕೀರ್ತಿ ಈತನದು.

ಇಂಗ್ಲಿಷ್, ಸಂಸ್ಕೃತ, ಹಿಂದಿ ಮತ್ತು ಪರ್ಷಿಯನ್ ಭಾಷೆಗಳನ್ನು ಅಭ್ಯಸಿಸಿ ಪಾಂಡಿತ್ಯ ಗಳಿಸಿದ ಈತನಿಗೆ ಆಗಿನ ಬ್ರಿಟಿಷ್ ಸರ್ಕಾರ ಸಿ.ಐ.ಇ. ಪ್ರಶಸ್ತಿಯನ್ನು ನೀಡಿತು. ಕಲ್ಕತ್ತ ವಿಶ್ವವಿದ್ಯಾಲಯ ತನ್ನ ಸದಸ್ಯತ್ವವನ್ನು (ಫೆಲೋಷಿಪ್) ಕೊಟ್ಟು ಗೌರವಿಸಿತು. ಭಾಷಾಭಿವೃದ್ಧಿಗಾಗಿಯೇ ಮೀಸಲಾಗಿದ್ದು ವಾರಾಣಸಿಯಿಂದ ಪ್ರಕಟವಾಗುತ್ತಿದ್ದ ಪಂಡಿತ ಎಂಬ ಸಂಸ್ಕೃತ ನಿಯತಕಾಲಿಕವೊಂದಕ್ಕೆ ಗ್ರಿಫಿತ್ ಸಂಪಾದಕನಾಗಿ ಕೆಲಸ ಮಾಡಿದ. ಯಾವ ಐಹಿಕ ಜೀವನದ ಆಕರ್ಷಣೆಗಳಿಗೂ ಪಕ್ಕಾಗದ ಈತ ವಿಶ್ರಾಂತನಾದ ಮೇಲೂ ನೀಲಗಿರಿಯ ಕೋಟಗಿರಿಯಲ್ಲಿ ನೆಲೆಸಿ ನಾಲ್ಕು ವೇದಗಳನ್ನೂ ಇಂಗ್ಲಿಷಿಗೆ ಭಾಷಾಂತರ ಮಾಡುವ ಮಹಾಕಾರ್ಯವನ್ನು ಸಾಧಿಸಿದ.

ಗ್ರಿಫಿತ್‌ನ ಸಮಾಧಿ ಕೋಟಗಿರಿಯಲ್ಲಿಯೇ ಇದೆ. (ಸಿ.ಜಿ.ಪಿ.)

**ಗ್ರಿಫಿನ್, ಜೆರಾಲ್ಡ್ :** 1803–40. ಐರಿಷ್ ಕವಿ ಮತ್ತು ನಾಟಕಕಾರ. ಲಿಮರಿಕ್‌ನಲ್ಲಿ ಹುಟ್ಟಿ ಕೆಲಕಾಲ ಲಂಡನ್ ಮತ್ತು ಲಿಮರಿಕ್ ನಗರಗಳಲ್ಲಿ ಪತ್ರಿಕೋದ್ಯಮಿಯಾಗಿ ಕೆಲಸ ಮಾಡಿದ. ಮೊದಲಿಗೆ ಅಗ್ಯೂಯಿರ್ ಎಂಬ ಗಂಭೀರ ನಾಟಕವನ್ನು ಬರೆದು ಸ್ನೇಹಿತರ ಹೊಗಳಿಕೆಗೆ ಪಾತ್ರನಾದ. ಅಂದಿನ ನಾಟಕಗಳಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಿ ಜನರ ಅಭಿರುಚಿಯನ್ನೇ ಬದಲಿಸುವಂಥ ನಾಟಕಗಳನ್ನು ಸೃಷ್ಟಿಮಾಡಲು ನಿರ್ಧರಿಸಿ 1823ರಿಂದ ಲಂಡನಿನಲ್ಲಿ ನಿಂತ. ಕವಿ ಮತ್ತು ನಾಟಕಕಾರನಾದ ಜಾನ್ ಬನೀಮ್‌ನ ಶಿಫಾರಸ್ಸು ಇದ್ದರೂ ಗ್ರಿಫಿನ್ ಅನೇಕ ತೊಂದರೆಗಳಿಗೆ ಸಿಲುಕಿದ. 1826ರಲ್ಲಿ ನಯಡೀಸ್ ಎಂಬ ಆಪೆರಾವನ್ನು ಬರೆದು ಪ್ರಖ್ಯಾತನಾದ. ಈತನ ಜನಪ್ರಿಯ ಕೃತಿ ಎನಿಸಿದ ಹಾಲೆಂಡ್ ಟೈಡ್ ಟೇಲ್ಸ್ 1827ರಲ್ಲಿ ಪ್ರಕಟವಾಯಿತು. ಇದನ್ನು ಮನ್ಸ್‌ಟರ್ ಪಾಪ್ಯುಲರ್ ಟೇಲ್ಸ್ ಎಂದೂ ಕರೆಯುತ್ತಾರೆ. ಇದರ ಅನಂತರ 3 ಸಂಪುಟಗಳ ಟೇಲ್ಸ್ ಆಫ್ ದಿ ಮನ್ಸ್‌ಟರ್ ಫೆಸ್ಟಿವಲ್ಸ್ (1827) ಪ್ರಕಟವಾಯಿತು. 1829ರಲ್ಲಿ ಪ್ರಕಟವಾದ ಈತನ ದಿ ಕಲೀಜಿಯನ್ಸ್ ಎಂಬ ಕಾದಂಬರಿ ತುಂಬ ಪ್ರಖ್ಯಾತವಾಯಿತು. ಇದು ಮುಂದೆ ಡಯಾನ್ ಬೂಯಸ್ಸಿಕೊನಿಂದ ರಂಗಭೂಮಿಗೆ ಅಳವಟ್ಟ ನಾಟಕವೊಂದಕ್ಕೆ ಆಧಾರವಾಗಿ ಇನ್ನೂ ಹೆಚ್ಚಿನ ಖ್ಯಾತಿ ಗಳಿಸಿತು.

ಅನಂತರ ಗ್ರಿಫಿನ್ ಅನೇಕ ಕಾದಂಬರಿಗಳನ್ನು ಬರೆದು ಖ್ಯಾತನಾದುದಲ್ಲದೆ ದೇಶೀಯ ಸೊಬಗನ್ನು ಸೂಸುವ ಭಾವಗೀತೆಗಳನ್ನು ರಚಿಸಿದ. 1838ರಲ್ಲಿ ಈತ ಡಬ್ಲಿನ್‌ನಲ್ಲಿ ಸೊಸೈಟಿ ಆಫ್ ಕ್ರಿಶ್ಚಿಯನ್ ಬ್ರದರ್ಸ್ ಎಂಬ ಧರ್ಮಸಂಸ್ಥೆಗೆ ಸೇರಿದ. ಅನಂತರ ನಾರ್ತ್ ಮೊನಾಸ್ಟರಿಗೆ ಬಂದು ಅಲ್ಲಿ ಟೈಫಸ್ ಎಂಬ ಕಾಯಿಲೆಗೆ ತುತ್ತಾಗಿ ಸತ್ತ. ಸನ್ಯಾಸಾಶ್ರಮವನ್ನು ಸ್ವೀಕರಿಸುವ ಮುನ್ನ ತನ್ನಲ್ಲಿದ್ದ ಹಸ್ತಪ್ರತಿಗಳನ್ನೆಲ್ಲ ಸುಟ್ಟುಹಾಕಿದ. ಆದರೆ ತನ್ನ 20ನೆಯ ವಯಸ್ಸಿಗಿಂತ ಮುಂಚೆ ಬರೆದಿದ್ದ ಗಿಸಿಪಸ್ ಎಂಬ ನಾಟಕ ಅಕಸ್ಮಾತ್ತಾಗಿ ಅಗ್ನಿಗೆ ಆಹುತಿಯಾಗಿರಲಿಲ್ಲ. ಅದು 1842ರಲ್ಲಿ ಪ್ರಕಟವಾಗಿ ರಂಗಭೂಮಿಯನ್ನು ಕಂಡುದಲ್ಲದೆ ಅತ್ಯಂತ ಯಶಸ್ವೀನಾಟಕ ಎನಿಸಿತು. 1842–43ರಲ್ಲಿ ಈತನ ಎಲ್ಲ ಕೃತಿಗಳನ್ನು ಎಂಟು ಸಂಪುಟಗಳಲ್ಲಿ ಹೊರತರಲಾಯಿತು.

ಈತನ ಇತರ ಕೃತಿಗಳು : ದಿ ಕ್ರಿಶ್ಚಿಯನ್ ಫಿಸಿಯಾಲಜಿಸ್ಟ್ (1830); ದಿ ಇಲಸ್ಟ್ರೇಷನ್ ಆಫ್ ಫೈವ್ ಸೆನ್ಸಸ್ (1830); ದಿ ಇನ್‌ವೇಷನ್ (1830; 4 ಸಂಪುಟಗಳು); ದಿ ಟೇಲ್ಸ್ ಆಫ್ ಮೈ ನೈಬರ್‌ಹುಡ್; ದಿ ಡ್ಯೂಕ್ ಆಫ್ ಮಾನ್‌ಮತ್ (1836); ದಿ ಕೆಲ್ಟ್ ಗ್ಯಾದರರ್ (1854), ದಿ ಡೇ ಆಫ್ ಟ್ರಯಲ್ (1854); ದಿ ಕಾಯಿನರ್ (1854). (ಪಿ.ಆರ್.ಎಂ.)

**ಗ್ರಿಬಯೆಡಫ್, ಅಲೆಕ್ಸಾಂಡರ್ ಸೆರ್ಗೆಯ್‌ವಿಚ್ :** 1795–1829. ರಷ್ಯನ್ ನಾಟಕಕಾರ ಹಾಗೂ ರಾಯಭಾರ ನಿರ್ವಾಹಕ. ಮಾಸ್ಕೊದಲ್ಲಿ ಹುಟ್ಟಿದ ಈತ ಅದೇ ವಿಶ್ವವಿದ್ಯಾಲಯದ ವಿಜ್ಞಾನ ಸಾಹಿತ್ಯ ಮತ್ತು ನ್ಯಾಯಶಾಸ್ತ್ರಗಳಲ್ಲಿ ಪದವಿಗಳನ್ನು ಪಡೆದ. ಅನಂತರ ರಷ್ಯದ ಅಶ್ವದಳವನ್ನು ಸೇರಿ 1816ರಲ್ಲಿ ಅದನ್ನು ತ್ಯಜಿಸಿ, ಪರರಾಜ್ಯ ಕಚೇರಿಯಲ್ಲಿ ಗುಮಾಸ್ತನಾದ. ಈ ಅವಧಿಯಲ್ಲಿ ರಾಜಧಾನಿಯ ರಂಗಭೂಮಿ ಈತನ ನಾಟಕಾಸಕ್ತಿಗೆ ಪೋಷಣೆ ಒದಗಿಸಿತು. ಹೀಗಾಗಿ ಈತ ಕೆಲವು ಹರ್ಷನಾಟಕಗಳನ್ನು ಬರೆದು ಪ್ರದರ್ಶಿಸಿದ.

ಆದರೆ ಅವು ಅಷ್ಟೇನೂ ಖ್ಯಾತಿ ಗಳಿಸಲಿಲ್ಲ. ಅಲ್ಲದೆ ರಾಜಧಾನಿಯ ಕ್ರಾಂತಿಕಾರಕ ವರ್ತುಲಗಳೊಡನೆಯೂ ಸಂಪರ್ಕವನ್ನಿಟ್ಟುಕೊಂಡಿದ್ದುದರಿಂದ ದೇಶದ ಗಣ್ಯರ ದೃಷ್ಟಿಗೆ ಬೀಳುವಂತಾದ. ಪರರಾಜ್ಯ ಕಚೇರಿಯಲ್ಲಿ ಅತ್ಯಂತ ದಕ್ಷತೆಯಿಂದ ದುಡಿಯುತ್ತಿದ್ದುದರ ಫಲವಾಗಿ ಈತನನ್ನು ಪರ್ಷಿಯದ ರಾಜಧಾನಿಯಾದ ಟೆಹರಾನಿಗೆ ರಷ್ಯನ್ ನಿಯೋಗದ ಕಾರ್ಯದರ್ಶಿಯಾಗಿ (1822) ನೇಮಿಸಲಾಯಿತು. ಈ ಅವಧಿಯಲ್ಲಿ (1822–23) ಈತ ಗೋರೆ ಒಟ್ ಉಮ ಅಥವಾ ದಿ ಮಿಸ್ಚೀಫ್ ಆಫ್ ಬೀಯಿಂಗ್ ಕ್ಲೆವರ್ (ಇಂಗ್ಲಿಷ್ ಭಾಷಾಂತರ 1925) ಎಂಬ ಹರ್ಷನಾಟಕದ ಬಹು ಭಾಗವನ್ನು ಬರೆದ. ಅನಂತರ 1823–25ರ ಅವಧಿಯಲ್ಲಿ ರಜೆ ಪಡೆದು ಟೆಹರಾನಿನಿಂದ ಸ್ವದೇಶಕ್ಕೆ ಮರಳಿ, ಅಲ್ಲಿ ಆ ನಾಟಕವನ್ನು ಪೂರ್ತಿಗೊಳಿಸಿದ. ಸರ್ಕಾರದ ಪರಾಮರ್ಶಕರು (ಸೆನ್ಸಾರ್) ಇದನ್ನು ರಂಗಭೂಮಿ ಯಲ್ಲಿ ಪ್ರದರ್ಶಿಸಲು ಅನುಮತಿ ನೀಡಲಿಲ್ಲ. ಆದರೆ ಇದರ ಎಷ್ಟೋ ಸಾವಿರ ಹಸ್ತಪ್ರತಿಗಳು ದೇಶದಲ್ಲಿ ಕೈಯಿಂದ ಕೈಗೆ ಸಾಗಿ ಜನಮನ ವನ್ನು ಸೂರೆಗೊಂಡಿತು. ಆದುದ ರಿಂದ ಇದು ಅನಧಿಕೃತವಾಗಿ 1825 ರಲ್ಲಿಯೇ ಪ್ರಕಟವಾಯಿತೆನ್ನ ಬಹುದು. ಅದೇ ವರ್ಷ ಒಂದನೆಯ ನಿಕಲಸ್ ದೊರೆಯ ವಿರುದ್ಧ ಸಿಡಿದೆದ್ದ ಕ್ರಾಂತಿಯಲ್ಲಿ ಪಾಲುಗೊಂಡನೆಂಬ ಆರೋಪ ಕ್ಕೊಳಗಾಗಿ ಈತ ಬಂಧನಕ್ಕೀಡಾದ. ಆದರೂ ತಾನು ನಿರಪರಾಧಿ ಯೆಂದು ಸರ್ಕಾರವನ್ನು ಹೇಗೋ ನಂಬಿಸಿ, ತೊಂದರೆಯಿಂದ ಪಾರಾದ. ಅನಂತರ 1828ರಲ್ಲಿ ಟೆಹರಾನಿಗೆ ರಷ್ಯದ ರಾಯಭಾರಿಯಾಗಿ ನೇಮಕಗೊಂಡ. 1829ರಲ್ಲಿ ಟೆಹರಾನಿನಲ್ಲಿದ್ದ ರಷ್ಯನ್ ದೂತಾವಾಸಕ್ಕೆ ಕೆಲವು ಸ್ಥಳೀಯ ನಾಗರಿಕರು ದಾಳಿಯಿಟ್ಟಾಗ ಈತ ಉದ್ರಿಕ್ತ ಜನರಿಂದ ಕೊಲೆಯಾದ. ಈತನ ಗೋರೆ ಒಟ್ ಉಮ ನಾಟಕ ಪ್ರಪ್ರಥಮವಾಗಿ ಮುದ್ರಿತವಾದುದು ಈತ ಮಡಿದ ನಾಲ್ಕು ವರ್ಷಗಳ ಮೇಲೆ (1833). ತಾನು ಬದುಕಿದ್ದಾಗ ಒಮ್ಮೆ ಮಾತ್ರ ಈತ ಈ ನಾಟಕವನ್ನು ರಂಗಭೂಮಿಯ ಮೇಲೆ ನೋಡಿದ್ದ.

ಈತನ ಖ್ಯಾತಿ ಇಂದಿಗೂ ಉಳಿದಿರುವುದು ಈ ನಾಟಕದಿಂದಾಗಿ. ಈತನ ಇತರ ನಾಟಕಗಳು ನಿರ್ಲಕ್ಷಿಸಬಹುದಾದಂಥವು. ಪ್ರಾಸಬದ್ಧವಾದ ಪದ್ಯಗಳಿಂದ ರಚಿಸಿರುವ ಈ ನಾಟಕ ಅಂದಿನ ರಷ್ಯದಲ್ಲಿ ವ್ಯಾಪಕವಾಗಿದ್ದ ಲಂಚಗುಳಿತನ, ಅಧಿಕಾರ ಸ್ಥಾನಗಳಲ್ಲಿ ತಾಂಡವವಾಡುತ್ತಿದ್ದ ಸ್ವಾರ್ಥ ಮತ್ತು ಆಡಂಬರ ಇವುಗಳ ವಿಡಂಬನೆಯಾಗಿದೆ. ಇದರಲ್ಲಿ ಕಥಾವಸ್ತುವಿನ ರಚನೆಗಿಂತ ಸಂಭಾಷಣೆಗೂ ಪಾತ್ರನಿರೂಪಣೆಗೂ ಹೆಚ್ಚಿನ ಪ್ರಾಮುಖ್ಯ ಕೊಡಲಾಗಿದೆ. ಇದರಲ್ಲಿರುವ ಸಂಭಾಷಣೆಯ ಎಷ್ಟೋ ಮಾತುಗಳು ರಷ್ಯನ್ ಭಾಷೆಯ ಮೇಲೆ ಮಹತ್ತ್ವವಾದ ಪ್ರಭಾವವನ್ನು ಬೀರಿ ಅವು ಈಗ ಗಾದೆ ಮಾತುಗಳಾಗಿವೆ. ನಾಟುನುಡಿಗಳ ಮತ್ತು ಪ್ರತ್ಯುಕ್ತಿಗಳ ಮಟ್ಟಿಗೆ ಹೇಳುವುದಾದರೆ ಈ ನಾಟಕಕ್ಕೆ ಸರಿಸಾಟಿಯಾದ ಕೃತಿ ಸಮಗ್ರ ರಷ್ಯನ್ ಸಾಹಿತ್ಯದಲ್ಲಿಯೇ ಇನ್ನೊಂದಿಲ್ಲ. (ಪಿ.ಎನ್.ಆರ್.)

**ಗ್ರಿಮ್, ಯಾಕಾಪ್ ಲೂಡ್‌ವಿಗ್ ಕಾರ್ಲ್ ಮತ್ತು ಗ್ರಿಮ್, ವಿಲ್‌ಹೆಲ್ಮ್ ಕಾರ್ಲ್ :** 1785–1863; 1786–1859. ಈ ಇಬ್ಬರು ಸಹೋದರರು ಸಾಹಿತ್ಯ ಪ್ರಪಂಚದಲ್ಲಿ ಗ್ರಿಮ್ ಸಹೋದರರು ಎಂದೇ ಪ್ರಖ್ಯಾತರಾಗಿದ್ದಾರೆ. ಇಬ್ಬರೂ ಪ್ರಕಾಂಡ ಪಂಡಿತರು. ಯಾಕಾಪ್ ಭಾಷಾಶಾಸ್ತ್ರ ಪಂಡಿತನಾದರೆ, ವಿಲ್‌ಹೆಲ್ಮ್ ಸಾಹಿತ್ಯ ಪಂಡಿತ. ಜಾನಪದ ಕ್ಷೇತ್ರದಲ್ಲಿ ಹಲವು ಮೊದಲುಗಳನ್ನು ಸ್ಥಾಪಿಸಿದ ಕೀರ್ತಿ ಈ ಇಬ್ಬರು ಸಹೋದರರಿಗೂ ಸೇರುತ್ತದೆ. ಇಬ್ಬರೂ ಕೂಡಿ ಜರ್ಮನಿಯ ಕಿನ್ನರ, ವೀರ ಹಾಗೂ ಮಕ್ಕಳ ಕತೆಗಳನ್ನೂ ಗಂಧರ್ವ ಕವನಗಳು ಹಾಗೂ ಹಿಲ್ಡರ್‌ಬ್ಯಾಂಡ್‌ನ ಹಾಡು ಎಂಬ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಇಬ್ಬರಿಗೂ ಹುಟ್ಟಿನಲ್ಲಿ ಒಂದೇ ವರ್ಷ ಅಂತರ. ಇಬ್ಬರೂ ಬಾಲ್ಯದಿಂದಲೂ ಜೊತೆಯಾಗಿದ್ದುಕೊಂಡು ಸಾಹಿತ್ಯ ಸೇವೆ ಮಾಡಿದರು. ಇವರ ಸಮಾಧಿಗಳು ಬರ್ಲಿನಿನಲ್ಲಿ ಅಕ್ಕಪಕ್ಕದಲ್ಲೇ ಇವೆ.

ಗ್ರಿಮ್ ಯಾಕಾಪ್ 1785ರ ಜನವರಿ 4ರಂದು ಜನಿಸಿದ. ವಿಲ್‌ಹೆಲ್ಮ್ 1786ರ ಫೆಬ್ರುವರಿ 24ರಂದು ಜನಿಸಿದ. ಇಬ್ಬರೂ ತಮ್ಮ ವಿದ್ಯಾಭ್ಯಾಸವನ್ನು ಕ್ಯಾಸಲ್‌ನ ಶಾಲೆಯೊಂದರಲ್ಲಿ ಒಟ್ಟಿಗೇ ಆರಂಭಿಸಿದರು. ಅನಂತರದ ವಿದ್ಯಾಭ್ಯಾಸ ಮಾರ್‌ಬರ್ಗಿನಲ್ಲಿ ಮುಂದುವರಿಯಿತು. ಇವರ ಮುಂದಿನ ಎಲ್ಲ ಸಾಹಿತ್ಯಕ, ಭಾಷಿಕ ಸಂಶೋಧನೆಗಳಿಗೆಲ್ಲ ಅನುಕೂಲವಾಗುವಂತೆ ಫ್ರೆಡ್ರಿಕ್ ವೋನ್ ಸೇವಿಗ್‌ನಿ ಎಂಬುವನಿಂದ ಪ್ರೇರಣೆ ದೊರೆತದ್ದೂ ಇಲ್ಲಿಯೇ. ವಿದ್ಯಾರ್ಥಿಗಳಾಗಿದ್ದಾಗಲೇ ಇಬ್ಬರೂ ಜೊತೆಯಾಗಿ ಮಧ್ಯಕಾಲದ ಜರ್ಮನ್ ಸಾಹಿತ್ಯವನ್ನು ಕುರಿತ ಅಧ್ಯಯನ ನಡೆಸುವ ಯೋಜನೆಯನ್ನು ಇವರು ಹಾಕಿಕೊಂಡಿದ್ದರು. ಅದೃಷ್ಟ ಹಾಗೂ ಪ್ರಾರಂಭದಲ್ಲಿಯೇ ದೊರೆತ ಉತ್ತೇಜನ, ಎಲ್ಲಕ್ಕಿಂತ ಮಿಗಿಲಾಗಿ ಅವರಲ್ಲಿದ್ದ ಅದ್ಭುತ ಪ್ರತಿಭೆ ಇವುಗಳಿಂದಾಗಿ ಅವರು ಬಹುಕಾಲ ಜೊತೆಯಲ್ಲಿಯೇ ಇದ್ದುಕೊಂಡು ಜರ್ಮನಿಯ ರೊಮ್ಯಾಂಟಿಕ್ ಯುಗದ ಶ್ರೇಷ್ಠ ವಿದ್ವಾಂಸರೆನಿಸಿಕೊಂಡು ಲೋಕವಿಖ್ಯಾತರಾದರು.

ಕ್ಯಾಸಲ್‌ನ ಗ್ರಂಥಾಲಯದಲ್ಲಿ ಇಬ್ಬರೂ ಕೆಲವು ಕಾಲ ದುಡಿದ ಮೇಲೆ, 1830ರ ವೇಳೆಗೆ ಯಾಕಾಪ್‌ಗೆ ಗಾಟಿಂಗೆನ್‌ನಲ್ಲಿ ಗ್ರಂಥಪಾಲ ಮತ್ತು ಪ್ರಾಧ್ಯಾಪಕ ಹುದ್ದೆಯೂ ಮತ್ತು ವಿಲ್‌ಹೆಲ್ಮ್‌ಗೆ ಉಪ–ಗ್ರಂಥಪಾಲ ಹುದ್ದೆಯೂ ದೊರೆತು ಇಬ್ಬರೂ ಅಲ್ಲಿಗೆ ತೆರಳಿದರು. ಆದರೆ, ಕಾರಣಾಂತರಗಳಿಂದ ಎರಡು ವರ್ಷಗಳ ಅನಂತರ ಅಲ್ಲಿಂದ ಹಿಂತಿರುಗಿದರು. 1841 ರ ವೇಳೆಗೆ ಇಬ್ಬರಿಗೂ ಪ್ರಾಧ್ಯಾಪಕ ಹುದ್ದೆ ದೊರೆತದ್ದರಿಂದ ಬರ್ಲಿನ್‌ಗೆ ತೆರಳಿ, ಅಲ್ಲಿ ಇತರ ಚಟುವಟಿಕೆಗಳ ಜೊತೆಯಲ್ಲಿಯೇ ಜರ್ಮನ್ ಭಾಷಾನಿಘಂಟು ಸಿದ್ಧತೆಯಲ್ಲಿ ತೊಡಗಿದರು. ಈ ಸೋದರರಿಬ್ಬರೂ ಜರ್ಮನ್ ಭಾಷೆ, ಸಾಹಿತ್ಯ, ವ್ಯಾಕರಣ ಹಾಗೂ ನಿಘಂಟು ಕ್ಷೇತ್ರಗಳಲ್ಲಿ ಗಣನೀಯ ಹಾಗೂ ಸ್ಮರಣೀಯ ಕೆಲಸ ಮಾಡಿದ್ದಾರೆ. ಜನಪದ ಕಥೆಗಳ ಮೂಲವನ್ನು ಕುರಿತ ಸಿದ್ಧಾಂತದ ಬಗೆಗೆ, ಗ್ರಿಮ್ ಸಹೋದರರ ಸಿದ್ಧಾಂತ ಸಂಪೂರ್ಣ ಸತ್ಯವಲ್ಲದಿದ್ದರೂ ತೌಲನಿಕ ಭಾಷಾವಿಜ್ಞಾನದ ಫಲವಾಗಿ ಮೂಡಿಬಂದದ್ದಾಗಿದೆ. ಒಂದೇ ಭಾಷೆಯನ್ನಾಡುವ ಜನಾಂಗದಿಂದ ಈ ಎಲ್ಲ ಜನಪದ ಕಥೆಗಳೂ ಹುಟ್ಟಿಕೊಂಡಿರಬಹುದು ಎಂಬ ಇವರ ಅಭಿಪ್ರಾಯ ಯುರೋಪಿಯನ್ ಭಾಷೆಗಳ ಸಾದೃಶ್ಯದ ಮೂಲಕ ಜನಪದ ಕಥೆಗಳ ಸಾದೃಶ್ಯವನ್ನು ಗಮನಿಸಿ ಬಂದದ್ದು ಎಂಬುದು ಇಲ್ಲಿ ಮುಖ್ಯ ವಿಷಯ. ಜನಾಂಗದ ಮೂಲವನ್ನೂ ಭಾಷೆಗಳ ಮೂಲವನ್ನೂ ಪತ್ತೆಹಚ್ಚಿದರೆ ಜನಪದ ಕಥೆಗಳ ಮೂಲವನ್ನು ಪತ್ತೆ ಹಚ್ಚಿದಂತಾಗುತ್ತದೆ ಎಂಬ ಇವರ ಸಿದ್ಧಾಂತ ಗಮನಾರ್ಹವಾದದ್ದು. ಆದರೆ ಇದನ್ನು ವಿರೋಧಿಸುವವರೂ ಇದ್ದಾರೆ. ಆದರೂ ಈ ಸೋದರರಿಬ್ಬರೂ ಜರ್ಮನ್ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ಸಲ್ಲಿಸಿರುವ ಬಹುಮುಖ ಸೇವೆ ಅಪಾರವಾದುದು.



ಗ್ರಿಮ್ ಸಹೋದರರ ಒಂದು ಚಿತ್ರ

ಪ್ರಾಧ್ಯಾಪಕ, ವೈಯಾಕರಣ, ಭಾಷಾಶಾಸ್ತ್ರಜ್ಞನಾದ ಯಾಕಾಪನ ಮನಸ್ಸು ಜರ್ಮನ್ ವ್ಯಾಕರಣ, ಭಾಷಾ ಚರಿತ್ರೆ ಹಾಗೂ ನಿಘಂಟು ರಚನೆಯಲ್ಲಿ ಹೆಚ್ಚು ಹರಿದಿತ್ತು. ಶಬ್ದವ್ಯುತ್ಪತ್ತಿಯ ಸುಸಂಬದ್ಧ ಅಭ್ಯಾಸದ ಆವಶ್ಯಕತೆಯನ್ನು ಅರಿತು ಡಾಯಿಟ್ಶೆ ಗ್ರಮಾಟಿಕ್ ಎಂಬ ಜರ್ಮನ್ ವ್ಯಾಕರಣ ಗ್ರಂಥವನ್ನು ಈತ ಪ್ರಕಟಿಸಿದ. ಆಮೇಲೆ 1811ರಲ್ಲಿ ಪ್ರಾಚೀನ ಜರ್ಮನ್ ನಾಯಕನ ಹಾಡನ್ನು ಕುರಿತು ಲೂಬೆರ್‌ಡೆನ್ ಆಲ್ಟ್‌ಡಾಯಿಟ್ಶೆನ್ ಮೈಸ್ಟೆರ್ ಗೆಸಾಂಗ್ ಎಂಬ ಸಾಹಿತ್ಯಕ ಗ್ರಂಥ ಪ್ರಕಟಿಸಿದ. ಜರ್ಮನ್ ಭಾಷಾಭ್ಯಾಸದ ಮೊದಲ ಭಾಗ 1819ರಲ್ಲೂ ವ್ಯಂಜನೋಚ್ಚಾರಕ್ಕೆ ಮಹತ್ತ್ವ ನೀಡಿದ ಎರಡನೆಯ ಪರಿಷ್ಕೃತ ಆವೃತ್ತಿ 1822ರಲ್ಲೂ ಬೆಳಕು ಕಂಡಿತು. ಇದೇ ಗ್ರಿಮ್‌ನ ನಿಯಮ ಎಂದು ಭಾಷಾಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ಮೂಲೋತ್ಪತ್ತಿಯಿಂದ ಸಂಬಂಧ ಹೊಂದಿದ ಭಾಷೆಗಳೆಲ್ಲ ಒಂದೇ ತರಹದ ವ್ಯಂಜನೋಚ್ಚಾರ ಹೊಂದಿವೆ ಎಂದು ರಾಸ್ಮಸ್ ರಾಸ್ಕ ಕಂಡುಹಿಡಿದನಾದರೂ ಈ ತತ್ತ್ವದ ಉಪಯುಕ್ತತೆಯನ್ನು ದೃಷ್ಟಾಂತದೊಡನೆ ತೋರಿಸಿಕೊಟ್ಟ ಶ್ರೇಯಸ್ಸು ಗ್ರಿಮ್‌ಗೆ ಸಲ್ಲುತ್ತದೆ (ಉದಾ: ಫಾದರ್ ಎಂಬ ಶಬ್ದದ ಎಫ್ ಹಾಗೂ ಲ್ಯಾಟಿನ್ನಿಗೆ ಪೇತರ್‌ದಲ್ಲಿಯ ಪ್ರಿಗಳಲ್ಲಿ ಹೋಲಿಕೆ). ಒಟ್ಟಾರೆ ಗ್ರಿಮ್‌ನ ನಿಯಮ, ಭಾಷೆಭಾಷೆಗಳಲ್ಲಿಯ ಕ್ರಮಬದ್ಧತೆಯನ್ನು ಸಹಜವಾಗಿ ವಿಚಲಿಸುವ ವ್ಯಂಜನೋಚ್ಚಾರದ ಕಾರಣದಿಂದಾಗಿ ಗುರುತಿಸಬಹುದೆಂದು ಸಿದ್ಧಪಡಿಸುತ್ತದೆ. (ಡಿ.ಕೆ.ಆರ್.; ಪಿ.ಎಂ.ಎಚ್.)

**ಗ್ರಿಮಲ್‌ಶೌಸನ್, ಹ್ಯಾನ್ಸ್ ಯಾಕಾಪ್ ಕ್ರಿಸ್ಟೊಫಲ್ ಫಾನ್ :** 1622–76. ಜರ್ಮನ್ ಸಾಹಿತಿ ಹಾಗೂ ಕಾದಂಬರಿಕಾರ. ಜರ್ಮನ್ ಸಾಹಿತ್ಯದ ಉತ್ತಮ ಕಾದಂಬರಿ ಎನಿಸಿದ ಸಿಂಪ್ಲಿಸಿಸಿಮಸ್‌ನ ಕರ್ತೃ. ತನ್ನ 10ನೆಯ ವಯಸ್ಸಿನಲ್ಲಿ ಸೈನಿಕರಿಂದ ಅಪಹೃತನಾದ ಈತ ಬಹುಕಾಲ ಸೈನಿಕನಾಗಿಯೇ ಉಳಿಯಬೇಕಾಯಿತು. ಮುಂದೆ ವಿದ್ಯಾಪಾರಂಗತನಾಗಿ ನ್ಯಾಯಾಧೀಶ ಹುದ್ದೆಯನ್ನು ಪಡೆದುದಲ್ಲದೆ ಉತ್ತಮ ಸಾಹಿತಿ ಎನಿಸಿಕೊಂಡ. ಜರ್ಮನಿಯ ಸಾಮಾಜಿಕ ಜೀವನವನ್ನು ಅಸ್ತವ್ಯಸ್ತಗೊಳಿಸಿದ ಮೂವತ್ತು ವರ್ಷಗಳ ಯುದ್ಧದಲ್ಲಿ ಭಾಗವಹಿಸಿದ ಈತ ಅಲ್ಲಿನ ಅನುಭವಗಳನ್ನೇ ತನ್ನ ಸಾಹಿತ್ಯ ಕೃತಿಗಳಲ್ಲಿ ಪಡಿಮೂಡಿಸಿದ. 1669ರಲ್ಲಿ ಈತನ ಪ್ರಸಿದ್ಧ ಕೃತಿ ಸಿಂಪ್ಲಿಸಿಸಿಮಸ್ ಕಾದಂಬರಿ ಪ್ರಕಟವಾಯಿತು. ಸಾಹಸಿ ಹುಡುಗನೊಬ್ಬ ಯುದ್ಧ ಪರಿಸ್ಥಿತಿಯಲ್ಲಿ ಜೀವನ ಪರಿಚಯ ಮಾಡಿಕೊಳ್ಳುವ ಘಟನೆಗಳನ್ನು ಕಾದಂಬರಿ ಚಿತ್ರಿಸುತ್ತದೆ. ಇದರಲ್ಲಿ ಕ್ರಿಸ್ಟೊಫಲ್‌ನ ಕಲಾ ನಿರೂಪಣಾಚಾತುರ್ಯ, ವಾಸ್ತವಿಕಾಂಶಗಳ ವಿವರಣೆ, ಪಾತ್ರಗಳ ಯಶಸ್ವೀ ಚಿತ್ರಣ, ಹಾಸ್ಯ, ಜೀವನ ದರ್ಶನ–ಇವುಗಳನ್ನು ಕಾಣಬಹುದು. ಹದಿನೇಳನೆಯ ಶತಮಾನದ ಜರ್ಮನಿಯ ಸಾಮಾಜಿಕ ಜೀವನದ ಹಾಗೂ ಮೂವತ್ತು ವರ್ಷಗಳ ಯುದ್ಧದ ಅಮಾನುಷತೆ, ಅನಾಹುತಗಳ ಸ್ಪಷ್ಟ ಚಿತ್ರಣವಿದೆ. (ಎನ್.ಎನ್.ಎಸ್.)

**ಗ್ರಿಮಾಲ್ಡಿ ಫಾಸಿಲುಗಳು :** ಇಟಲಿ ದೇಶದ ಮೆಂಟೋನಿನ ಪೂರ್ವ ಭಾಗದಲ್ಲಿನ ಗ್ರಿಮಾಲ್ಡಿ ಎಂಬಲ್ಲಿರುವ ನಾಲ್ಕು ಗುಹೆಗಳಲ್ಲಿ ದೊರೆತ ಮಾನವ ಅವಶೇಷಗಳು. ಹದಿನಾರು ವ್ಯಕ್ತಿಗಳ ಪಳೆಯುಳಿಕೆಗಳು ಇಲ್ಲಿ ದೊರೆತಿವೆ. ಅಂತ್ಯ ಹಳೆ ಶಿಲಾಯುಗಕ್ಕೆ ಸೇರುವ ಪದರಗಳಲ್ಲಿ ಇವನ್ನು ಕಾಣಲಾಗಿದೆ. ಈ ಫಾಸಿಲುಗಳ ಸಂವಾದೀ ಮಾನವರು ಹಿಮಕಾಲದ (ಗ್ಲೇಶಿಯಲ್) ಉತ್ತರಾರ್ಧದಲ್ಲಿದ್ದರೆಂದು ಹೇಳಲಾಗಿದೆ. ಅಂದರೆ ಈಗ್ಗೆ ಸುಮಾರು 30,000–40,000 ವರ್ಷಗಳ ಹಿಂದೆ ಗ್ರಿಮಾಲ್ಡಿ ಗವಿಗಳಲ್ಲಿ ಅವರು ವಾಸವಾಗಿದ್ದರೆಂದು ತರ್ಕಿಸಬಹುದು. ಅಲ್ಲಿ ಒಲೆ, ಹತ್ಯಾರುಗಳ ಮುಂತಾದವುಗಳ ಕುರುಹುಗಳು ಸಹ ಇವೆ. ಇವೆಲ್ಲವೂ ಪ್ಲೀಸ್ಟೊಸೀನ್ ಕಾಲದವು. ಈ ಫಾಸಿಲುಗಳ ಜೊತೆಯ ವಸ್ತುಗಳು ಆರಿಗ್ನೇಷಿಯನ್ ಸಂಸ್ಕೃತಿಯವು. ಇಲ್ಲಿ ಸಿಕ್ಕಿರುವ ಫಾಸಿಲುಗಳಲ್ಲಿ ಕ್ರೋಮ್ಯಾಗ್ನನ್ ಬುಡಕಟ್ಟಿನ ಮಾನವರ ಕಂಕಾಲಗಳು ಹೆಚ್ಚಾಗಿವೆ **(ನೋಡಿ– ಕ್ರೋಮ್ಯಾಗ್ನನ್ ಮಾನವ)**. ಇದೇ ತರಹದ ಫಾಸಿಲುಗಳು ಯುರೋಪಿನಲ್ಲಿ ಸಹ ದೊರೆತಿವೆ. ಆ ಮಾನವರು ಈಗಿನ ಕೆಲವು ಯುರೋಪಿಯನ್ನರ ಪೂರ್ವಜರು. ಅವುಗಳ ತಲೆಬುರುಡೆಗಳ ಉದ್ದ, ಹಣೆಯ ಭಾಗ ತಗ್ಗು, ಮುಖ ಚಿಕ್ಕದ್ದು; ಪುಷ್ಟವಾದ ಎಲುಬುಗಳು ಇದ್ದವು. ಗೊಟ್ಟೆ ಡಿ ಎನ್ ಪ್ಯಾಂಟ್ ಗವಿಯ ಅತಿ ಕೆಳಭಾಗದಲ್ಲಿ ಸಿಕ್ಕಿದ ಎರಡು ಕಂಕಾಲುಗಳು ಮಾತ್ರ ಬೇರೆಯಾಗಿದ್ದವು. ಇವು ಕುಳ್ಳ ಗಾತ್ರದವು. ಮುಖದಲ್ಲಿ ಚಾಚುದವಡೆಗಳಿದ್ದವು. ಗ್ರಿಮಾಲ್ಡಿ ಬುಡಕಟ್ಟಿನ ಮಾನವರು ನೀಗ್ರೋ ಬುಡಕಟ್ಟಿನವರೆಂದೂ ಅವರು ಕ್ರೋಮ್ಯಾಗ್ನನ್ ಮಾನವರಿಗಿಂತ ಹಿಂದಿನವರೆಂದೂ ವರ್ನ್ ಎಂಬ ವಿದ್ವಾಂಸನ ಅಭಿಪ್ರಾಯ. ಆದರೆ ಬೇರಾವ ನೀಗ್ರೊ ಫಾಸಿಲುಗಳು ಯುರೋಪಿನಲ್ಲಿ ದೊರೆಯದಿದ್ದರಿಂದ ಈ ಅಭಿಪ್ರಾಯ ಸಾಕಷ್ಟು ವಿವಾದವನ್ನು ಎಬ್ಬಿಸಿತು (1960). ನೀಗ್ರೊ ರೀತಿಯದು ಎನ್ನುವ ಫಾಸಿಲುಗಳಲ್ಲಿನ ಚಾಚುದವಡೆಗಳು ಮುಖ್ಯವಾಗಿ ಆ ಮಾನವರ ಮರಣೋತ್ತರ ವಿಕೃತಿಗಳಿರಬಹುದೆಂದೂ ಹಾಗಿಲ್ಲದೇ ಇದ್ದರೆ ಅವು ಪ್ರಾಚೀನ ಕ್ರೋಮ್ಯಾಗ್ನನ್ ಮಾನವರದೇ ಆಗಿರಬಹುದೆಂದೂ ಪರಿಗಣಿಸಬಹುದು. (ಎಸ್.ಎ.ಎ.)

**ಗ್ರಿಯರ್‌ಸನ್, ಜಾರ್ಜ್ ಏಬ್ರಹಾಂ :** 1851–1941. ಐರ್ಲೆಂಡಿನ ಭಾಷಾವಿಜ್ಞಾನಿ. ಭಾರತದ ಭಾಷೆಗಳ ಸರ್ವೇಕ್ಷಣೆ (ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯ) ಮಹಾ ಸಂಪುಟಗಳ ಕರ್ತೃ. ಡಬ್ಲಿನಿನ ಸಮೀಪದ ಗ್ಲೆನಗಿಯೆರಿ ಎಂಬಲ್ಲಿ ಹುಟ್ಟಿದ. ಡಬ್ಲಿನಿನ ಟ್ರಿನಿಟಿ ಕಾಲೇಜು ಹಾಗೂ ಕೇಂಬ್ರಿಜ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ನಡೆಸಿದ. ಕಾಲೇಜು ವ್ಯಾಸಂಗದ ಸಮಯದಲ್ಲೇ ಸಂಸ್ಕೃತ ಹಾಗೂ ಹಿಂದೂಸ್ತಾನಿ ತೌಲನಿಕ ಅಧ್ಯಯನ ನಡೆಸಿದ. 1873 ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಹುದ್ದೆಗೆ ನೇಮಕಗೊಂಡು ಭಾರತದಲ್ಲಿ ಆಡಳಿತದ ಹೊಣೆಗಾರಿಕೆಯನ್ನು ಹೊತ್ತ. ಅಧಿಕಾರದಲ್ಲಿದ್ದುಕೊಂಡು ತನ್ನ ಆಸಕ್ತಿಯ ವಿಷಯವಾದ ಇಂಡೋ–ಆರ್ಯನ್ ಭಾಷೆಗಳ ಅಧ್ಯಯನವನ್ನು ಮುಂದುವರಿಸಿದ.

1877ರಲ್ಲಿ ಜರ್ನಲ್ ಆಫ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಂಬ ಪತ್ರಿಕೆಯಲ್ಲಿ ಬಂಗಾಳಿ ಉಪಭಾಷೆಗಳನ್ನು ಕುರಿತು ಈತನ ಒಂದು ಲೇಖನ ಪ್ರಕಟವಾಯಿತು. ತರುವಾಯ ಬಿಹಾರಿ ಉಪಭಾಷೆಗಳು, ಮೈಥಿಲಿ, ಭೋಜಪುರಿ ಮುಂತಾದ ಆರ್ಯವರ್ಗದ ಉಪಭಾಷೆಗಳ ಅಧ್ಯಯನ ನಡೆಸಿ ಬಿಹಾರಿನ ಏಳು ಭಾಷೆಗಳು ಹಾಗೂ ಉಪಭಾಷೆಗಳ ವ್ಯಾಕರಣ ಎಂಬ ಗ್ರಂಥವನ್ನು ಪ್ರಕಟಿಸಿದ. ಅನಂತರ 1888 ರಲ್ಲಿ ಬಿಹಾರದ ರೈತರ ಜೀವನ (ದಿ ಬಿಹಾರ್ ಪೆಸೆಂಟ್ ಲೈಫ್) ಎಂಬ ಪುಸ್ತಕವನ್ನು ಬರೆದ. ಅಲ್ಲದೆ ಮೈಥಿಲಿ ಹಾಗೂ ಕಾಶ್ಮೀರೀ ಭಾಷೆಗಳ ವ್ಯಾಕರಣವನ್ನು ಬರೆದ. ಎಲ್ಲಕ್ಕೂ ಮಿಗಿಲಾಗಿ ಈತ 19 ಸಂಪುಟಗಳಲ್ಲಿ ಅಣಿಗೊಳಿಸಿದ ಭಾರತದ ಭಾಷೆಗಳ ಸರ್ವೇಕ್ಷಣೆ ಎಂಬ ಕೃತಿ (1888–1927) ಪ್ರಪಂಚಾದ್ಯಂತ ಮನ್ನಣೆ ಪಡೆಯಿತು. ಇದರಲ್ಲಿ 179 ಭಾಷೆಗಳನ್ನೂ 544 ಉಪಭಾಷೆಗಳನ್ನೂ ಸರ್ವೇಕ್ಷಿಸಲಾಗಿದೆ. ಇಂದಿಗೂ ಈ ಕೃತಿಯ ಸಂಪುಟಗಳು ಭಾರತದ ಎಲ್ಲ ಭಾಷೆಗಳ ಮಾಹಿತಿಗಳನ್ನು ಒಳಗೊಂಡ ಏಕಮಾತ್ರ ಆಧಾರ ಗ್ರಂಥಗಳಾಗಿವೆ. ಈ ಗ್ರಂಥವನ್ನು ಸಿದ್ಧಪಡಿಸಲು ಗ್ರಿಯರ್‌ಸನ್ ತುಂಬ ನಿಷ್ಠೆಯಿಂದ ದುಡಿದ. 1886ರಲ್ಲಿ



ವಿಯೆನ್ನದಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರಾಚ್ಯ ವಿದ್ವಾಂಸರ ಸಮ್ಮೇಳನ ಭಾರತದ ಭಾಷೆಗಳ ಸರ್ವೇಕ್ಷಣೆಯ ಯೋಜನೆಯನ್ನು ಕಾರ್ಯಗತಮಾಡಬೇಕೆಂದು ಅಂದಿನ ಭಾರತ ಸರ್ಕಾರವನ್ನು ಪ್ರಾರ್ಥಿಸಿತು. ಭಾರತ ಸರ್ಕಾರ ಯೋಜನೆಯ ಮಹತ್ತ್ವವನ್ನರಿತು ಇದಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿದ್ದಲ್ಲದೆ ಗ್ರಿಯರ್‌ಸನ್ನನನ್ನು ಈ ಮಹಾಯೋಜನೆಯ ಸಂಚಾಲಕನನ್ನಾಗಿ (1888) ನೇಮಿಸಿತು. ಕಸ್ಟ್, ಗ್ರಿಯರ್‌ಸನ್ ಮತ್ತು ಇತರ ಹಲವಾರು ವಿದ್ವಾಂಸರು ಸಭೆ ಸೇರಿ ಈ ಯೋಜನೆಯ ರೂಪುರೇಖೆಗಳನ್ನು ಹಾಕಿಕೊಂಡರು. ಆಗಿನ ಪ್ರಾಂತೀಯ ಸರ್ಕಾರಗಳೊಂದಿಗೆ ಪರ್ಯಾಲೋಚಿಸಿದ ಮೇಲೆ ಮೊದಲಲ್ಲಿ ಮದರಾಸು, ಬರ್ಮ, ಹೈದರಾಬಾದ್ ಮತ್ತು ಮೈಸೂರು ಭಾಗಗಳನ್ನು ಬಿಟ್ಟು ಮಿಕ್ಕಂತೆ ಬಲೂಚಿಸ್ತಾನ, ವಾಯವ್ಯ ಪ್ರಾಂತ, ಕಾಶ್ಮೀರ, ಪಂಜಾಬ್, ಬೊಂಬಾಯಿ, ರಾಜಪುತಾನ, ಮಧ್ಯ ಭಾರತ ಪ್ರದೇಶಗಳಲ್ಲದೆ ಸಂಯುಕ್ತ ಪ್ರದೇಶಗಳಾದ ಆಗ್ರ, ಅವಧ್, ಬಿಹಾರ, ಒರಿಸ್ಸ, ಬಂಗಾಲ ಹಾಗೂ ಅಸ್ಸಾಂ ಪ್ರದೇಶಗಳನ್ನು ಸರ್ವೇಕ್ಷಣೆಯ ಪ್ರದೇಶಗಳನ್ನಾಗಿ ಆರಿಸಲಾಯಿತು.

ಈ ಸರ್ವೇಕ್ಷಣೆಯಲ್ಲಿ ಮೂರು ಅಂಶಗಳಿಗೆ ಹೆಚ್ಚು ಗಮನ ಕೊಡಲಾಯಿತು. 1. ಗದ್ಯದ ಒಂದು ಮಾದರಿಯನ್ನು ಆರಿಸಿಕೊಂಡು ಅದನ್ನು ಇತರ ಭಾಷೆ ಹಾಗೂ ಉಪಭಾಷೆಗಳಿಗೆ ಭಾಷಾಂತರ ಮಾಡಿ ಪರಸ್ಪರವಾಗಿ ಹೋಲಿಸುವುದು, 2. ಪ್ರತಿಯೊಂದು ಭಾಷೆಯಲ್ಲೂ ದೊರೆಯುವ ಜನಪದ ಗೀತೆ ಮತ್ತು ಕಥೆಗಳನ್ನು ಸಂಗ್ರಹಿಸುವುದು. 3. ಆಯಾ ಭಾಷೆಗಳ ಕೆಲವು ಶಬ್ದಗಳ ಮತ್ತು ವಾಕ್ಯಗಳ ಪ್ರಯೋಗಗಳನ್ನು ನೋಡುವುದು.

ಈ ಬೃಹತ್ ಕಾರ್ಯ 1888 ರಿಂದ 1903 ರ ವರೆಗೆ ನಡೆಯಿತು.

ಇಂಥ ಮಹತ್ತ್ವದ ಕಾರ್ಯವನ್ನು ನೆರವೇರಿಸುವಲ್ಲಿ ಗ್ರಿಯರ್‌ಸನ್ನನಿಗೆ ಅನೇಕ ತೊಡಕುಗಳು ಎದುರಾದವು. ಉದಾಹರಣೆಗೆ: ಉತ್ತರ ಪಂಜಾಬಿನಲ್ಲಿ ಜಂಗಲಿ ಎಂಬ ಭಾಷೆ ಬಳಕೆಯಲ್ಲಿದೆ. ಬಿಕನೇರಿನ ಅರಣ್ಯದಲ್ಲಿ ಇದನ್ನು ಮಾತನಾಡುವುದರಿಂದ ಇದಕ್ಕೆ ಜಂಗಲಿ ಎಂಬ ಹೆಸರು ಬಂದಿದೆ. ಸರ್ವೇಕ್ಷಣೆ ಮಾಡುವ ಸಂದರ್ಭದಲ್ಲಿ ಇದರ ವಾಸ್ತವಿಕತೆಯ ಬಗ್ಗೆ ಪ್ರಶ್ನಿಸಿದಾಗ ಅಲ್ಲಿಯವರು ಕೊಟ್ಟ ಉತ್ತರ 'ಹೌದು ನಾವು ಜಂಗಲಿಗಳನ್ನು ಚೆನ್ನಾಗಿ ಬಲ್ಲೆವು. ಹೆಚ್ಚಿನ ಮಾಹಿತಿಗಾಗಿ ಇನ್ನೂ ಸ್ವಲ್ಪ ಮುಂದೆ ಹೋಗಿ' ಎಂದು. ಮುಂದೆ ಹೋಗಿ ಕೇಳಿದಾಗ ಇನ್ನೂ ಮುಂದೆ ಹೋಗಿ ಎನ್ನತೊಡಗಿದರು. ಇದರಂತೆ ರಾಜಪುತಾನ ಮರುಭೂಮಿಯನ್ನು ಸಮೀಪಿಸಿದರೂ ಆ ಜನ ಮುಂದೆ ಇದ್ದಾರೆ ಎನ್ನುವವರೇ ಆದರು. ಮುಂದೆ ಇದ್ದುದು ಜನಸಂಚಾರವಿಲ್ಲದ ಮರುಭೂಮಿ. ಎರಡನೆಯದಾಗಿ ಎಷ್ಟೋ ಭಾಷೆಗಳು ಕಲೆತಾಗ ಅವನ್ನು ಆಯಾ ಭಾಷಾವರ್ಗಕ್ಕೆ ಸೇರಿಸುವುದು ಕಷ್ಟದ ಕಾರ್ಯವಾಯಿತು. ಗ್ರಿಯರ್‌ಸನ್ ಈ ಸಮಸ್ಯೆಗಳನ್ನೆಲ್ಲ ಯಶಸ್ವಿಯಾಗಿ ಎದುರಿಸಿದ.

1903 ರಿಂದ ಗ್ರಿಯರ್‌ಸನ್ನನ ಬೃಹದ್ ಗ್ರಂಥದ ಪ್ರಕಟಣಕಾರ್ಯ ಪ್ರಾರಂಭವಾಗಿ 1927ರ ವರೆಗೂ ನಡೆಯಿತು. ಈ ಸಂಪುಟಗಳು ಭಾರತದ ಭಾಷೆಗಳ ಐತಿಹಾಸಿಕ ತೌಲನಿಕ ವ್ಯಾಕರಣದ ಬಗ್ಗೆ ಮಾಹಿತಿಯನ್ನು ಕೊಡುವುವಲ್ಲದೆ ಭಾರತದ ಸಾಂಸ್ಕೃತಿಕ ಸಾಮಾಜಿಕ ಜ್ಞಾನವನ್ನೂ ಕೊಡುತ್ತವೆ.

ಅಲ್ಲದೆ ಗ್ರಿಯರ್‌ಸನ್ ತನ್ನ ಸಹೋದ್ಯೋಗಿಗಳ ಸಹಾಯದಿಂದ ಸಿನೊಟಿಬೆಟನ್ ಭಾಷೆಗಳನ್ನು ಕುರಿತೂ ದಾರ್ದಿಕ್ ಭಾಷೆಗಳನ್ನು ಕುರಿತೂ ಕೆಲಸ ಮಾಡಿದ್ದಾನೆ. ಈತನ ಸಹೋದ್ಯೋಗಿಗಳಲ್ಲಿ ಸ್ಟೆನ್‌ಕೊನೊ ಮುಖ್ಯನಾದವ.

ಗ್ರಿಯರ್‌ಸನ್ ಆಸ್ಟ್ರಿಕ್ ಭಾಷೆಗಳ ಅಧ್ಯಯನವನ್ನೂ ಮಾಡಿದ್ದಾನೆ.

ಗ್ರಿಯರ್‌ಸನ್ ಮಾಡಿದ ಮಹಾಕಾರ್ಯವನ್ನು ಮೆಚ್ಚಿ ಅಂದಿನ ಭಾರತ ಸರ್ಕಾರ ಈತನಿಗೆ 1928 ರಲ್ಲಿ ಸರ್ ಪದವಿಯನ್ನು ಕೊಟ್ಟು ಸನ್ಮಾನಿಸಿತು. ಈತನ ಬೃಹತ್ಕಾರ್ಯ ಭಾರತದ ಭಾಷೆಗಳ ಸರ್ವೇಕ್ಷಣಾ ಸಂಸ್ಥೆಗೆ ತಳಹದಿಯನ್ನೊದಗಿಸಿದೆ. ಇತ್ತೀಚೆಗೆ ಮತ್ತೊಮ್ಮೆ

ಭಾರತೀಯ ಭಾಷೆಗಳ ಸರ್ವೇಕ್ಷಣೆ ನಡೆಸಲು ಭಾರತೀಯ ಭಾಷಾಸಂಸ್ಥಾನಕ್ಕೆ (ಸಿಐಐಎಲ್) ಭಾರತ ಸರ್ಕಾರ ನೆರವು ನೀಡಿದೆ. ಸರ್ವೇಕ್ಷಣೆಯ ಪ್ರಾಥಮಿಕ ರೂಪುರೇಷೆಗಳು ತಯಾರಾಗುತ್ತಿವೆ (2012). (ಕೆ.ಪಿ.ಎನ್.)

**ಗ್ರಿಲ್‌ಪಾರ್ಟ್ಸರ್, ಫ್ರಾಂಜ್ :** 1791-1872. ಆಸ್ಟ್ರಿಯದ ಶ್ರೇಷ್ಠ ನಾಟಕಕಾರ, ಕವಿ, ವಿಮರ್ಶಕ. 19ನೆಯ ಶತಮಾನದ ಜರ್ಮನ್ ಸಾಹಿತ್ಯದಲ್ಲಿ ಈತನದು ಉನ್ನತಸ್ಥಾನ. ಶ್ರೇಷ್ಠ ನ್ಯಾಯವಾದಿಯಾಗಿದ್ದ ಈತನ ತಂದೆ, ಎರಡನೆಯ ಜೋಸೆಫ್ ದೊರೆಯ ಆಳ್ವಿಕೆಯ ಕಾಲದ ಲಿಬರಲ್ ತತ್ತ್ವಗಳಲ್ಲಿ ಅಪಾರ ನಂಬಿಕೆಯುಳ್ಳವನಾಗಿದ್ದರೂ ಕಠಿಣ ಸಂಪ್ರದಾಯವಾದಿಯಾಗಿದ್ದ. ಈತನ ತಾಯಿ ಸಾನ್‌ಲೀತ್‌ನರ್ಸ್ ಎಂಬ ಪ್ರಸಿದ್ಧ ಸಂಗೀತಗಾರರ ಕುಟುಂಬಕ್ಕೆ ಸೇರಿದ ಪ್ರತಿಭಾವಂತ ಹೆಣ್ಣು ಮಗಳು. ತಂದೆಯ ಅನಾನುಕೂಲ ಪರಿಸ್ಥಿತಿಯಿಂದಾಗಿ ಈತನಿಗೆ ಸರಿಯಾದ ಶಿಕ್ಷಣ ದೊರೆಯದಾಯಿತು. 1807 ರಲ್ಲಿ ವಿಯೆನ್ನ ವಿಶ್ವವಿದ್ಯಾಲಯ ಸೇರಿ ನ್ಯಾಯಶಾಸ್ತ್ರವನ್ನು ಅಭ್ಯಸಿಸಿದ. ತಂದೆಯ ಅಕಾಲ ಮರಣದಿಂದಾಗಿ ಸಂಸಾರದ ಸ್ಥಿತಿ ಹದಗೆಟ್ಟಾಗ ಆಸ್ಟ್ರಿಯ ಸರ್ಕಾರದ ಹಣಕಾಸಿನ ಖಾತೆಯಲ್ಲಿ ಕೆಳದರ್ಜೆಯ ಕಾರಕೂನನಾಗಿ ಸೇರಿದ. ಹಲವು ವರ್ಷಗಳ ನಿರಂತರ ದುಡಿಮೆಯಿಂದ ಆಸ್ಟ್ರಿಯ ಸರ್ಕಾರದ ಸಾರ್ವಜನಿಕ ಪತ್ರಾಗಾರದ ಮುಖ್ಯಾಧಿಕಾರಿಯ ಪದವಿಗೇರಿ 1856 ರಲ್ಲಿ ವಿಶ್ರಾಂತಿ ಪಡೆದ.

1817 ರಲ್ಲಿ ಈತನ ಡೀ ಆನ್‌ಫೌ ಎಂಬ ಗಂಭೀರ ನಾಟಕ ಪ್ರಥಮವಾಗಿ ಪ್ರದರ್ಶಿತವಾದ ಮೇಲೆ ಈತನಿಗೆ ವಿಶೇಷ ಮನ್ನಣೆ ದೊರೆಯಿತು. ಅದಕ್ಕೆ ಮುಂಚೆ ಈತ ಸರಳ ರಗಳೆಯಲ್ಲಿ ಬ್ಲಾಂಕ ಫಾನ್ ಕಾಸ್ಟಿಲಿಯೆನ್ (1807-9) ಎಂಬ ನಾಟಕವನ್ನೂ (ಷಿಲ್ಲರ್ ಕವಿಯ ಡಾನ್ ಕಾರ್ಲೋಸ್ ನಾಟಕದ ರೂಪಾಂತರ) ಸ್ಪಾರ್ಟಕಸ್ ಮತ್ತು ಆಲ್‌ಫ್ರೆಡ್ ದಿ ಗ್ರೇಟ್ (1809) ಎಂಬ ಕೃತಿಗಳನ್ನೂ ರಚಿಸಿದ್ದ. ಡೀ ಆನ್‌ಫೌ ಆ ಕಾಲದಲ್ಲಿ ಬಹು ಜನಪ್ರಿಯವಾಗಿದ್ದ ವಿಧಿಯ ಪ್ರಭಾವವೇ ಪ್ರಧಾನವಾಗಿರುವ ಫೇಟ್ ಟ್ರ್ಯಾಜಿಡಿ ಎಂಬ ಪ್ರಕಾರಕ್ಕೆ ಸೇರಿದ್ದರೂ ಒಂದು ಮಹತ್ತ್ವದ ಕೃತಿಯಾಗಿದೆ. ಇದರಲ್ಲಿ ಸ್ಪೇನಿನ ನಾಟಕಗಳ ಪ್ರಭಾವವಿದ್ದರೂ ನವುರಾದ ಕಾವ್ಯ ಗುಣಗಳಿವೆ. ವಸ್ತು ಹಾಗೂ ಪಾತ್ರ ವಿನ್ಯಾಸದಲ್ಲಿ ಸೂಕ್ಷ್ಮ ಮನೋವಿಶ್ಲೇಷಣೆ ಯಿದೆ. ಆ ಕಾಲದ ಉಳಿದ ಫೇಟ್ ಟ್ರ್ಯಾಜಿಡಿಗಳಿದ್ದಂತೆ ಇಲ್ಲಿ ಕೇವಲ ಕೋಲಾಹಲವನ್ನುಂಟು ಮಾಡಿ ಮುಖಕ್ಕೆ ರಾಚುವಂಥ ಅತಿರೇಕದ ಅಂಶಗಳಿಲ್ಲ. ರಂಗಭೂಮಿಯ ಮೇಲೆ ಕೇವಲ ರೋಮಾಂಚಕ ಪರಿಣಾಮ ಸಾಧಿಸುವುದು ನಾಟಕಕಾರನ ಗುರಿಯಲ್ಲವೆಂದು ಈ ನಾಟಕ ತೋರಿಸುತ್ತದೆ. ಇದಾದ ಮೇಲೆ ಮಹಾಕವಿ ಗಯಟೆಯ ಅಭಿಜಾತಕೃತಿ ಟ್ಯಾಸೊ ನಾಟಕದ ಆಧಾರದ ಮೇಲೆ ಸ್ಯಾಫೋ (1818) ಎಂಬ ಕೃತಿ ರಚಿಸಿದ. ಈತನಿಗೆ ಸಾರ್ವಕಾಲಿಕವಾದ ಲೋಕವಿಖ್ಯಾತಿ ಗಳಿಸಿಕೊಟ್ಟ ನಾಟಕಗಳೆಂದರೆ ಡಾಸ್ ಗೋಲ್ಡನ್ ಫ್ಲೀಸ್ (1822). ಗ್ರೀಕ್ ಪುರಾಣದಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಜೇಸನ್ ಹಾಗೂ ಮೀಡಿಯ ಕಥೆಯೇ ಈ ನಾಟಕಗಳ ವಸ್ತು. ನಾಟಕಚಕ್ರದ ಮೊದಲ ಭಾಗವನ್ನು ನೋಡುವಾಗ ಅದರಲ್ಲಿ ಗಂಭೀರ ನಾಟಕದ ಒತ್ತಡ, ಸಾಂದ್ರತೆಗಳಿಗಿಂತ ಹೆಚ್ಚಾಗಿ ಭಾವಗೀತೆಯ ನಿರರ್ಗಳ ಲಹರಿಯೇ ಪ್ರಧಾನವಾಗಿದೆ ಅನಿಸುತ್ತದೆ. ಈ ನಾಟಕಚಕ್ರದ ಎಲ್ಲ ನಾಟಕಗಳನ್ನೂ ಕವಿ ಒಮ್ಮೆಲೇ ರಚಿಸಲಿಲ್ಲ. ಹಲವು ವರ್ಷಗಳ ಅವಧಿಯಲ್ಲಿ ಆಗಾಗ ಬರೆದ ನಾಟಕಗಳಾಗಿರುವುದರಿಂದ ಇವುಗಳ ಕಥಾವಸ್ತುವಿನ ಒಟ್ಟಂದದಲ್ಲಿ ಸಮಗ್ರತೆ ಕಾಣಿಸುವುದಿಲ್ಲ. ನಾಟಕ ಚಕ್ರದ ಮೂರು ನಾಟಕಗಳೂ ಸ್ವಸಂಪೂರ್ಣ ಕೃತಿಗಳಂತಿವೆ. ಡರ್ ಗಾಸ್ಟ್ ಫ್ರಾಯಿಂಡ್ ಎನ್ನುವುದು ನಾಟಕಚಕ್ರದ ಪೀಠಿಕೆಯಂತಿದೆ. ಚಿನ್ನದ ತುಪ್ಪಟವನ್ನು ತೆಗೆದುಕೊಂಡು ಪ್ರಿಕ್ಸಿಸ್ ವೀರ ಕಾಲ್ಷಿಸ್‌ಗೆ ಬರುವುದು, ಅಲ್ಲಿ ಮೀಡಿಯಳ ತಂದೆಯಿಂದ ಹತನಾಗುವುದು ಈ ನಾಟಕದ ವಸ್ತು. ಡೀ ಆರ್ಗೊನಾಟ್ಸ್ ಎಂಬ ಎರಡನೆಯ ನಾಟಕದಲ್ಲಿ ಚಿನ್ನದ ತುಪ್ಪಟವನ್ನರಸಿ ಬರುವ ಗ್ರೀಕ್‌ವೀರ ಜೇಸನ್ ಹಾಗೂ ಮೀಡಿಯರ ದುರಂತ ಪ್ರೇಮ, ಮೀಡಿಯಳ ಅಂತರಂಗದ ತುಡಿತ – ಇವು ರೂಪುಗೊಂಡಿವೆ. ಆದರೆ ಕವಿಯ ಪ್ರತಿಭೆ ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿರುವುದು ನಾಟಕಚಕ್ರದ ಕೊನೆಯ ಭಾಗವಾದ ಮೀಡಿಯದಲ್ಲಿ. ಮೀಡಿಯಳೊಂದಿಗೆ ಜೇಸನ್ ತನ್ನ ಊರಿಗೆ ಹಿಂದಿರುಗಿದ ಮೇಲೆ ಉದ್ಭವಿಸುವ ದುರಂತ ಘಟನೆಗಳು, ಜೇಸನ್ ಕಾರಿಂತಿಗೆ ಓಡಿಹೋಗುವುದು, ಮೀಡಿಯ ಜೇಸನ್ನರ ಮನಸ್ತಾಪ, ಜೇಸನ್ ಕ್ರೂಸಾಳನ್ನು ಪ್ರೀತಿಸಿ, ಮೀಡಿಯಳ ದ್ವೇಷಕ್ಕೆ ಗುರಿಯಾಗುವುದು, ಮೀಡಿಯ ತನ್ನ ಗಂಡನ ಮೇಲಿನ ದ್ವೇಷದಿಂದ ಮಕ್ಕಳನ್ನು ಕೈಯಾರೆ ಕೊಂದು ಕಾರಿಂತಿನ ದೊರೆಯ ಅರಮನೆಗೆ ಬೆಂಕಿ ಹಚ್ಚುವುದು – ಇವು ಈ ನಾಟಕದಲ್ಲಿ ಬರುವ ಘಟನಾವಳಿಗಳು. ಇದೇ ನಾಟಕವಸ್ತುವನ್ನು ಯೂರಿಪಿಡೀಸ್, ಸಿನೆಕ, ಕೋರ್ನಿಲ್, ಕ್ಲಿಂಗರ್ ಮುಂತಾದ ಕವಿಗಳು ಬಳಸಿಕೊಂಡಿದ್ದರೂ ವಿಮರ್ಶಕರು ಗ್ರಿಲ್‌ಪಾರ್ಟ್ಸರನ ನಾಟಕವೇ ಅತ್ಯಂತ ಆಧುನಿಕವೂ ಕಲಾತ್ಮಕವೂ ಆದ ಕೃತಿಯೆನ್ನುತ್ತಾರೆ. ಷಿಲ್ಲರನ ನಾಟಕಗಳಲ್ಲಿರುವಂತೆ ಇಲ್ಲಿಯ ಪಾತ್ರಗಳು ಕೇವಲ ವಿಧಿಯ ಕೈವಾಡಕ್ಕೆ ಸಿಕ್ಕಿದ ಗೊಂಬೆಗಳಲ್ಲ. ಕವಿ ಚಿನ್ನದ ತುಪ್ಪಟವನ್ನು ದುರಂತ ಶಕ್ತಿಯ ಸಂಕೇತವಾಗಿ ಮಾರ್ಪಡಿಸಿರುವುದರ ಜೊತೆಗೆ, ರೊಮ್ಯಾಂಟಿಕ್ ಯುಗದ ನಿರಾಶೆ, ದುಗುಡ, ಬದುಕನ್ನು ಕುರಿತ ವಾಸ್ತವಿಕ ದೃಷ್ಟಿ – ಇವನ್ನು ಇಲ್ಲಿ ಸ್ಪಷ್ಟವಾಗಿ ಪ್ರತಿರೂಪಿಸಿದ್ದಾನೆ. ಅನಾದಿ ಕಾಲದ ಅನಾಗರಿಕ ಸಮಾಜದ ಪರಿಸರವನ್ನು ತುಂಬ ಸಹಜವಾಗಿ ಚಿತ್ರಿಸಿದ್ದಾನೆ. ಪಾತ್ರಗಳ ರೂಪರೇಖೆ ಚಿತ್ರಿಸಲು, ಮನುಷ್ಯನ ಅಂತರಂಗದ ರಾಗದ್ವೇಷಗಳನ್ನು ಯಥಾವತ್ತಾಗಿ ಪಡಿಮೂಡಿಸಲು ಕಾವ್ಯಶೈಲಿಯನ್ನು ಸಮರ್ಥವಾಗಿ ಉಪಯೋಗಿಸಿದ್ದಾನೆ.

1819 ರಿಂದ 1822 ರ ವರೆಗಿನ ಅವಧಿ ಗ್ರಿಲ್‌ಪಾರ್ಟ್ಸರನ ಜೀವನದಲ್ಲಿ ಬಹಳ ಚಟುವಟಿಕೆಯಿಂದ ತುಂಬಿತ್ತು. ಈತ ರೋಮನ್ ಚರಿತ್ರೆಯ ಕಥಾವಸ್ತುವನ್ನು ಆಧರಿಸಿ ಆರು ನಾಟಕಗಳುಳ್ಳ ಒಂದು ಚಕ್ರವನ್ನು ರಚಿಸಬೇಕೆಂದು ನಿರ್ಧರಿಸಿದ. ಆದರೆ ಅವು ಅಸಂಪೂರ್ಣ ಕೃತಿಗಳಾಗಿಯೇ ಉಳಿದುವು. ಕಟ್ಟಕಡೆಯಲ್ಲಿ ಕವಿ ತನ್ನ ದೇಶದ ಚರಿತ್ರೆಯಿಂದಲೇ ಸ್ಫೂರ್ತಿ ಪಡೆದು ಕೋನಿಕ್ ಆಟೋಕಾರ್ಸ್ ಗ್ಲುಕ್ ಉಂಟ್ ಎಂಡೆ (ಆಟೋಕರ್ ದೊರೆಯ ಅದೃಷ್ಟ ಮತ್ತು ಅಂತ್ಯ) ಎಂಬ ನಾಟಕ ಬರೆದ. ಈ ಐತಿಹಾಸಿಕ ದುರಂತ ನಾಟಕದ ಪ್ರದರ್ಶನಕ್ಕೆ ಆಸ್ಟ್ರಿಯದ ಸೆನ್ಸಾರ್ ಅಧಿಕಾರಿಗಳು ಬಹಳ ಕಾಲ ಅನುಮತಿ ನೀಡಲಿಲ್ಲ. ಅದು ಮೊಟ್ಟಮೊದಲು ಪ್ರದರ್ಶಿತವಾದುದು 1825 ರಲ್ಲಿ. ಕಥಾನಾಯಕನಾದ ಬೊಹಿಮಿಯದ ದೊರೆ ಆಟೋಕರ್ ಮತ್ತು ಹ್ಯಾಪ್ಸ್‌ಬರ್ಗ್‌ನ ರುಡೋಲ್ಫ್ ಇವರ ನಡುವಣ ಘರ್ಷಣೆಯೇ ನಾಟಕದ ವಸ್ತು. ಹಲವು ರಸಭರಿತ ಐತಿಹಾಸಿಕ ಘಟನೆಗಳು, ಯಥಾರ್ಥ ವಿವರಣೆಗಳು, ವೈವಿಧ್ಯಮಯ ದೃಶ್ಯಗಳು, ಪಾತ್ರಗಳು ಕಿಕ್ಕಿರಿದು ತುಂಬಿರುವ ಈ ನಾಟಕವನ್ನು ಆಸ್ಟ್ರಿಯದ ಪ್ರಪ್ರಥಮ ರಾಷ್ಟ್ರೀಯ ರೂಪಕವೆನ್ನುವುದುಂಟು. ನೆಪೋಲಿಯನ್ನನ ಪ್ರತಿರೂಪದಂತೆ ಕಾಣುವ ಕಥಾನಾಯಕ ಆಟೋಕರ್ ಜರ್ಮನ್ ನಾಟಕ ಸಾಹಿತ್ಯದ ಒಂದು ಚಿರಸ್ಮರಣೀಯ ಪಾತ್ರ. ಅನಂತರ ಬರೆದ ಐನ್ ಟ್ರಾಯಿರ್ ಡೀನೆರ್ ಸೈನೆಸ್ ಹೆರ್ನ್ (1828) ಎಂಬ ಇನ್ನೊಂದು ಐತಿಹಾಸಿಕ ನಾಟಕದಲ್ಲಿ ಗ್ರಿಲ್‌ಪಾರ್ಟ್ಸರನಿಗೆ ಪ್ರಿಯವಾಗಿದ್ದ ಕ್ಯಾಂಟನ ಕ್ಯಾಟಗಾರಿಕಲ್ ಇಂಪರೇಟಿವ್ (ನಿರುಪಾಧಿಕ ಕರ್ತವ್ಯ) ತತ್ತ್ವವನ್ನು ಅಳವಡಿಸಲಾಗಿದೆ. ವಿಚಾರಗಳ ಗೊಂದಲದಲ್ಲಿ ಅಂತರಂಗದ ತಾಕಲಾಟದಲ್ಲಿ ವ್ಯಕ್ತಿ ತನ್ನ ಆತ್ಮಸಾಕ್ಷಿಗನುಸಾರವಾಗಿ ನಡೆವುದೇ ಉದಾತ್ತ ನೈತಿಕ ಸಿದ್ಧಾಂತ – ಎಂಬ ಕ್ಯಾಂಟನ ಈ ತತ್ತ್ವವೇ ಗ್ರಿಲ್‌ಪಾರ್ಟ್ಸರನ ನಾಟಕಗಳಲ್ಲಿ ಮತ್ತೆಮತ್ತೆ ರೂಪ ತಾಳುತ್ತದೆ. ಈತ ಬರೆದ ಉಳಿದ ಕೃತಿಗಳಲ್ಲಿ ಡೆಸ್ ಮೇರೆಸ್ ಉಂಟ್ ಡರ್ ಲೀಬೆ ವೆಲೆನ್ (ಸಮುದ್ರದ ಹಾಗೂ ಪ್ರೇಮದ ಅಲೆಗಳು – 1831) ಎಂಬ ನಾಟಕ ಆಧುನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಇದರಲ್ಲಿ ಗ್ರೀಕ್ ಪುರಾಣದ ಹೀರೋ ಮತ್ತು ಲಿಯಾಂಡರ್ ಎಂಬ ಪ್ರಣಯಿಗಳ ದುರಂತ ಕಥೆ ಇದೆ. 1835 ರಲ್ಲಿ ಪ್ರಕಟವಾದ ಟ್ರಿಸ್ಟಿಯ ಎಕ್ಸ್‌ಪೊಂಟೊ ಎಂಬ ಕಾವ್ಯಸಂಕಲನದಲ್ಲಿ ಕವಿಯ ಆಂತರಿಕ ತೊಳಲಾಟವನ್ನು ಚಿತ್ರಿಸುವ ಗಂಭೀರ ಕವನಗಳಿವೆ.

1828ರಿಂದ ಸುಮಾರು ಹತ್ತು ವರ್ಷ ಕವಿಯ ಜೀವನದಲ್ಲಿ ಹಲವು ಸಂಕಷ್ಟಗಳು ಒದಗಿದವು. ಆಸ್ಟ್ರಿಯ ದೇಶ ರಾಜಕೀಯ ವಾತಾವರಣದಲ್ಲಿ ಸುಶಿಕ್ಷಿತರು, ಕ್ರಿಯಾತ್ಮಕ ಪ್ರತಿಭೆಯುಳ್ಳ ಸಾಹಿತಿಗಳು ಗುಲಾಮರಂತೆ ನರಳುತ್ತಿದ್ದ ಕಾಲ ಅದು. ಇಂಥ ಪರಿಸರದಲ್ಲಿ ಈತನ ನಾಟಕಗಳು ಮತ್ತೆಮತ್ತೆ ಸೆನ್ಸಾರ್ ಅಧಿಕಾರಿಗಳ ಕೋಪಕ್ಕೆ ತುತ್ತಾಗಿ ಹಲಕಾಲ ಮೂಲೆಗುಂಪಾಗಿ ಉಳಿಯಬೇಕಾಯಿತು. ಕ್ಯಾಥರೀನ್ ಫ್ರಾಲಿಕ್ ಎಂಬಾಕೆಯನ್ನು ಪ್ರೀತಿಸಿ ದಾರುಣವಾದ ನಿರಾಶೆಗೆ ಗುರಿಯಾಗಿದ್ದ ಈ ಕವಿ ಅನುಭವಿಸಿದ ಮಾನಸಿಕ ವೇದನೆಯನ್ನು ಈತನ ಕವನಗಳಲ್ಲಿ ಕಾಣಬಹುದು. 1835ರಲ್ಲಿ ಈತ ಬರೆದ ಒಂದೇ ಒಂದು ವಿನೋದ ನಾಟಕ –ವೇ ಡೆಮ್, ಡರ್ ಲ್ಯೂಗ್ಟ್ ಮೂರು ವರ್ಷದ ಅನಂತರ ವಿಯನ್ನದಲ್ಲಿ ಪ್ರದರ್ಶಿತವಾದಾಗ ಅದು ಸ್ವಲ್ಪವೂ ಯಶಸ್ವಿಯಾಗಲಿಲ್ಲ. ಇದರಿಂದ ಬಹಳ ನಿರಾಶೆ ಹೊಂದಿದ ಈತ ರಂಗಭೂಮಿಗೆ ಶರಣು ಹೊಡೆದು ನಾಟಕ ರಚನೆಯನ್ನೇ ಕೈಬಿಟ್ಟ.

ಗ್ರಿಲ್‌ಪಾರ್ಟ್ಸರ್ ಪ್ರಮುಖವಾಗಿ ಕವಿ–ನಾಟಕಕಾರನೆಂದು ಖ್ಯಾತಿ ಪಡೆದರೂ ತನ್ನ ಕೆಲವು ವಿಮರ್ಶಾತ್ಮಕ ಪ್ರಬಂಧಗಳಲ್ಲಿ ಸೂಕ್ಷ್ಮವಾದ ಸಂವೇದನೆಯನ್ನೂ ವಿಶ್ಲೇಷಣಾ ಸಾಮರ್ಥ್ಯವನ್ನೂ ತೋರಿದ್ದಾನೆ. ಈತನ ಎಲ್ಲ ಪ್ರಬಂಧಗಳೂ ಸ್ಪೇನ್ ರಂಗಭೂಮಿಯ ಅಧ್ಯಯನಕ್ಕೆ ಸಂಬಂಧಿಸಿದವು. ಸ್ಟಡೀಸ್ ಇನ್ ಸ್ಪ್ಯಾನಿಷ್ ಥಿಯೇಟರ್ ಎಂಬ ಉದ್ಗ್ರಂಥ ಈತನ ವಿಮರ್ಶನ ಶಕ್ತಿಗೆ ಸಾಕ್ಷಿಯಾಗಿದೆ. ರೊಮ್ಯಾಂಟಿಕ್ ವಿಮರ್ಶಕರು ಸ್ಪೇನಿನ ಮಹಾ ಸಾಹಿತಿ ಲೋಪ್ ಡಿ ವೇಗನನ್ನು ಮರೆತು, ಆ ದೇಶದ ಕಾಲ್ಡೆರಾನ್ ಕವಿಗೆ ಅತಿಯಾದ ಪ್ರಶಂಸೆ ಸಲ್ಲಿಸುತ್ತಿದ್ದರು. ಲೋಪ್ ಡಿ ವೇಗನ ಕೃತಿಗಳನ್ನು ಬೆಳಕಿಗೆ ತಂದು ಅವುಗಳಿಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಸ್ಥಾನ ಗಳಿಸಿಕೊಡಲು ನೆರವಾದ. ಈತನ ನಾಟಕಗಳ ಮೇಲೆ ಲೋಪ್ ಡಿ ವೇಗನ ಪ್ರಭಾವ ತುಂಬ ದಟ್ಟವಾಗಿರುವುದನ್ನು ಗುರುತಿಸಬಹುದು. 1872ರಲ್ಲಿ ಈತ ಕಾಲವಾದಾಗ ಈತ ಬಿಟ್ಟುಹೋಗಿದ್ದ ಮೂರು ಶ್ರೇಷ್ಠ ಕೃತಿಗಳು ಸಿಕ್ಕಿದುವು. ಲಿಬುಸ, ಡೀ ಯೂಡಿನ್ ಫಾನ್ ಟೋಲೀಡೊ ಮತ್ತು ಎಸ್ತರ್ – ಇವು ಜರ್ಮನ್ ನಾಟಕ ಸಾಹಿತ್ಯದಲ್ಲಿ ಸುಂದರ ಕಾವ್ಯನಾಟಕಗಳೆನಿಸಿಕೊಂಡಿವೆ.

ತನ್ನ ಜೀವಿತದ ಬಹುಪಾಲನ್ನು ನಿರಾಶೆಯಲ್ಲಿ ಕಳೆಯಬೇಕಾಗಿ ಬಂದ ಈ ಕವಿಗೆ ಆಸ್ಟ್ರಿಯದ ಸ್ವಾತಂತ್ರ್ಯಾನಂತರದ ದಿನಗಳು ಅತ್ಯಂತ ಹರ್ಷೋತ್ಕರ್ಷಗಳಿಂದ ತುಂಬಿದ್ದುವು. ಆಗ ಈತನಿಗೆ ಹಲವಾರು ಉನ್ನತ ಪ್ರಶಸ್ತಿಗಳು ದೊರೆತವು. 1861ರಲ್ಲಿ ಈತ ಆಸ್ಟ್ರಿಯದ ವಿಜ್ಞಾನ ಅಕಾಡೆಮಿಯ ಗೌರವ ಸದಸ್ಯನಾದ. ಅನಂತರ ಆಸ್ಟ್ರಿಯದ ಹೆರನ್‌ಹೌಸ್ ಸಭೆಗೆ ಚುನಾಯಿತನಾದ. ಈತನ ಎಲ್ಲ ನಾಟಕಗಳನ್ನೂ ಬರ್ಗ್ ಥಿಯೇಟರ್‌ನಲ್ಲಿ ಹಲವು ವರ್ಷಗಳ ಕಾಲ ಪ್ರದರ್ಶಿಸಲಾಯಿತು. ಕವಿಯ ಎಂಬತ್ತನೆಯ ಹುಟ್ಟುಹಬ್ಬವನ್ನು ಆಸ್ಟ್ರಿಯದ ಜನ ರಾಷ್ಟ್ರೀಯ ಉತ್ಸವವಾಗಿ ಆಚರಿಸಿದರು.

ಗ್ರಿಲ್‌ಪಾರ್ಟ್ಸರ್ ತನ್ನ ಕೃತಿಗಳಲ್ಲಿ ಪುರಾತನ ಅಭಿಜಾತ ಗ್ರೀಕರ ಕಾವ್ಯತೇಜಸ್ಸು, ಜರ್ಮನ್ ಅಭಿಜಾತ ಯುಗದ ಕಲ್ಪನಾ ಸಾಮರ್ಥ್ಯ, ಸ್ಪೇನ್ ಕವಿಗಳ ಸೂಕ್ಷ್ಮ ಕಲೆಗಾರಿಕೆ ಇವನ್ನು ಸಮನ್ವಯಗೊಳಿಸಿದ್ದಾನೆ. ಈತ ಯುರೋಪಿನ ಕಾವ್ಯನಾಟಕಕ್ಕೆ ಹೊಸ ಆಯಾಮ ತಂದನೆಂಬುದು ವಿಮರ್ಶಕರ ಅಭಿಮತ. (ಎಚ್.ಕೆ.ಆರ್.)

**ಗ್ರೀಕ್ ಕಲೆ, ವಾಸ್ತು, ಶಿಲ್ಪ :** ಪಾಶ್ಚಾತ್ಯ ಕಲೆ, ವಾಸ್ತು, ಶಿಲ್ಪ ಬಹುಮಟ್ಟಿಗೆ ಗ್ರೀಕ್ ಶೈಲಿಯಿಂದ ಪ್ರೇರಿತವಾಗಿವೆ. ಗ್ರೀಕ್ ಎಂಬುದು ಹಲವಾರು ಜನಾಂಗಗಳ ಸಮುದಾಯಕ್ಕೆ ಅನ್ವಯಿಸಬಹುದಾದ ಪದ. ಗ್ರೀಸಿನ ದ್ವೀಪಗಳಲ್ಲಿ ವಾಸಿಸುತ್ತಿದ್ದ ಮೂಲನಿವಾಸಿಗಳು ಮೂರು ಸಲ ಹೊರಗಿನಿಂದ ವಲಸೆ ಬಂದ ಜನರೊಂದಿಗೆ ಬೆರೆತು ಕೊಂಡರು. ಹೀಗೆ ವಲಸೆ ಬಂದ ಒಂದೊಂದು ಜನಾಂಗಕ್ಕೂ ನಡುವೆ ಕೆಲವು ಶತಮಾನಗಳ ಅಂತರವೇ ಇತ್ತು.

ಚಿತ್ರ 1. ಪ್ರ.ಶ.ಪೂ.ಸು. 3000ದ ಒಂದು ಶಿಲ್ಪ. ಎತ್ತರ 13 1/2"

ಗ್ರೀಕ್ ಮೂಲನಿವಾಸಿಗಳು ಇದ್ದುದ್ದು ಸಿಕ್ಲಡೀಸ್ ದ್ವೀಪಗಳಲ್ಲಿ. ಅಥೆನ್ಸ್ ಸಮೀಪದ ಸಮುದ್ರ ತೀರದಿಂದ ಆಗ್ನೇಯಕ್ಕೆ ಸರಪಳಿ ಯಂತೆ ಈ ದ್ವೀಪಗಳು ಹಬ್ಬಿವೆ. ಇವರ ವಿಷಯ ತಿಳಿದಿರುವುದೆಲ್ಲ ಹೆಚ್ಚಿನ ಮಟ್ಟಿಗೆ ಇವರು ಬಿಟ್ಟುಹೋದ ಅವಶೇಷಗಳಿಂದ. ಪ್ರ.ಶ.ಪೂ.2000ದ ಸುಮಾರಿಗೆ ಕ್ರೀಟ್ ದ್ವೀಪದಲ್ಲಿ ನಾಸಸ್ ನಗರದ ಪರಿಸರದಲ್ಲಿ ಅಪೂರ್ವ ನಾಗರಿಕತೆಯೊಂದು ಅಸ್ತಿತ್ವದಲ್ಲಿತ್ತು. ಇದನ್ನು ಸಾಮಾನ್ಯವಾಗಿ ಮಿನೋವನ್ ನಾಗರಿಕತೆ ಎಂದು ಕರೆಯಲಾಗಿದೆ. ಮೈನಾಸ್ ಎಂಬ ಒಬ್ಬ ಪೌರಾಣಿಕ ಅರಸ ಈ ದ್ವೀಪದಲ್ಲಿ ವಾಸಿಸುತ್ತಿದ್ದ ನೆಂದೂ ಇವನ ಬಳಿ ಅತ್ಯಂತ ಬಲಿಷ್ಠವಾದ ಮಿನಟಾರ್ ಎಂಬ ಗೂಳಿ ಯಿತ್ತೆಂದೂ ಕಥೆಗಳಲ್ಲಿ ಹೇಳಿದೆ. ಆ ಕಾಲದಲ್ಲಿ ಗೂಳಿಗಳ ಕದನ ಬಹಳ ಮೆಚ್ಚಿನ ಆಟವಾಗಿತ್ತು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಇದು ಅಂದಿನ ವರ್ಣಚಿತ್ರಗಳಲ್ಲೂ ಭಿತ್ತಿಚಿತ್ರ ಗಳಲ್ಲೂ ಕಂಡುಬಂದಿದೆ. ಈ ನಾಗರಿಕತೆಗೆ ಸೇರಿದ ಜನರಿಗೆ ಜೀವನದಲ್ಲಿ ಹೆಚ್ಚಿನ ಅಭಿರುಚಿಯೂ ತಮ್ಮ ಸಂಸ್ಕೃತಿಯನ್ನು ಕುರಿತ ಜ್ಞಾನವೂ ತೀವ್ರವಾಗಿತ್ತು. ರಾಜಧಾನಿಗೆ ಕೋಟೆ ಇಲ್ಲದಿರುವುದನ್ನು ಗಮನಿಸಿದರೆ ಇವರು ತಮ್ಮ ರಕ್ಷಣೆಗೆ ಬಹಳ ಮಟ್ಟಿಗೆ ನೌಕಾಬಲವನ್ನೇ ಅವಲಂಬಿಸಿದ್ದರೆಂಬುದು ಸ್ಪಷ್ಟವಾಗುತ್ತದೆ.

ಪ್ರ.ಶ.ಪೂ. 1400ರ ವೇಳೆಗೆ ಕ್ರೀಟ್ ದ್ವೀಪ ಶತ್ರುವಿನ ದಾಳಿಗೆ ತುತ್ತಾಯಿತು. ನಾಸಸ್ ನಗರ ಭಸ್ಮವಾಯಿತು. ಇದಕ್ಕೆ ಕಾರಣರು ಅಕೀಯನರು. ಇವರು ಆರ್ಗಲಿಸ್ ಖಾರಿಯ ಸಮೀಪದ ಮೈಸೀನೀ ಮತ್ತು ಟಿರಿನ್ಸ್ ನಗರಗಳಲ್ಲಿದ್ದ ಜನಗಳ ಸಾಂಸ್ಕೃತಿಕವಾಗಿ ಮಿನೋವನರಿಗಿಂತ ಹೆಚ್ಚು ಒರಟರಾದ ಈ ಜನ ಆ ಸಂಸ್ಕೃತಿಯ ಅನೇಕ ಅಂಶಗಳನ್ನು ಆತ್ಮೀಕರಿಸುವುದರಲ್ಲಿ ಯಶಸ್ವಿಯಾದರು.

ಪ್ರ.ಶ.ಪೂ. 1100 ರ ವೇಳೆಗೆ ಇವರ ಸ್ಥಾನವನ್ನು ಡೋರಿಯನರು ಆಕ್ರಮಿಸಿದರು. ಇವರಿಗೆ ಕಬ್ಬಿಣದ ಉಪಯೋಗ ತಿಳಿದಿತ್ತು. ಉಳಿವು ಹಾಗೂ ಸ್ವಾಮಿತ್ವಗಳಿಗೆ ಬೇಕಾದ ಲಕ್ಷಣಗಳು ಈ ಜನರಲ್ಲಿದ್ದುವು. ಆದರೂ ಇವರದು ಇವರ ಪೂರ್ವಜರಿಗಿಂತ ಕೀಳ್ಮಟ್ಟದ ಅಭಿರುಚಿಯಾಗಿತ್ತು. ಅಲ್ಲಿಂದ ನಾಲ್ಕು ಶತಮಾನಗಳ ಕಾಲದ ಗ್ರೀಕ್ ಇತಿಹಾಸವನ್ನು ಕಪ್ಪುಯುಗವೆನ್ನಲಾಗಿದೆ. ಆ ಶತಮಾನಗಳಿಗೆ ಸಂಬಂಧಿಸಿದ ವಿಷಯಗಳು ಯಾವುವೂ ತಿಳಿದಿಲ್ಲ. ಆದರೆ ಅದರಲ್ಲಿ ಕೆಲವಾದರೂ ಒಳ್ಳೆಯ ಗುಣಗಳಿದ್ದಿರಬೇಕು. ಏಕೆಂದರೆ ಅನಂತರದ ಗ್ರೀಕ್ ಇತಿಹಾಸ ತೇಜಸ್ವಿಯಾದ್ದೂ, ಉತ್ಕೃಷ್ಟವಾದುದೂ ಆಗಿದೆ. ಗ್ರೀಕರ ಕಪ್ಪುಯುಗಕ್ಕೆ ಸೇರಿದವನು ಹೋಮರ್ ಕವಿ. ಈತನ ಹಿಂದಿನ ಕಾಲದ ವೈಭವದ ವರ್ಣನೆಯೇ ಈತನದೆನ್ನಲಾದ ಕೃತಿಗಳಲ್ಲಿ ಕಂಡುಬರುತ್ತದೆ.



ಚಿತ್ರ 2. ಚಿನ್ನದ ಬಟ್ಟಲ ಮೇಲಿನ ಕುಸುರಿ

ಗ್ರೀಕರ ಕಲೆ, ವಾಸ್ತು, ಶಿಲ್ಪಗಳನ್ನು ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಕಾಣಬೇಕು.

ಕಲೆ : ಪ್ರ.ಶ.ಪೂ. 3000ಕ್ಕೂ ಪ್ರಾಚೀನವಾದ ಕಲ್ಲಿನ ಪ್ರತಿಮೆಗಳು ದೊರೆತಿವೆ. ಇವನ್ನು ಸಿಕ್ಲಾಡಿಕ್ ವಿಗ್ರಹಗಳೆಂದೇ ಕರೆಯಲಾಗಿದೆ. ಲೂವ್ರ್ ಮತ್ತು ಬ್ರಿಟಿಷ್ ವಸ್ತುಸಂಗ್ರಹಾಲಯಗಳಲ್ಲಿ ಈ ವಿಗ್ರಹಗಳನ್ನು ಇಡಲಾಗಿದೆ. ಮೂರ್ಖತೆಯ ಒರಟು ವಿಗ್ರಹಗಳೆಂದು ಹಿಂದೆ ಇವನ್ನು ವಿಮರ್ಶಕರು ಬದಿಗೊತ್ತಿದ್ದರು. ಆದರೆ ಇಂದು ಇವನ್ನು ಹೆಚ್ಚು ಸೂಕ್ಷ್ಮವಾಗಿ ಅಭ್ಯಾಸ ಮಾಡಲಾಗಿದೆ. ಇವುಗಳಲ್ಲಿ ಹಲವಾರು ಗಣನೀಯ ಅಂಶಗಳಿವೆ. ಮೂಲತಃ ಈ ವಿಗ್ರಹಗಳಿಗೆ ವರ್ಣಲೇಪನ ಮಾಡಲಾಗಿತ್ತು. ಆದರೆ ಇಂದು ಆ ಬಣ್ಣಗಳು ಅಳಿಸಿಹೋಗಿವೆ. ಇವಕ್ಕೆ ಯಾವ ವರ್ಣದ್ರವ್ಯಗಳನ್ನು ಉಪಯೋಗಿಸಲಾಗಿತ್ತೆಂದು ಹೇಳುವುದೂ ಕಷ್ಟ ಇವುಗಳ ನಿರ್ಮಾಣದಲ್ಲಿ ಅಮೂರ್ತ ವಿಧಾನವನ್ನು ಅನುಸರಿಸಲಾಗಿದೆ. ಒಬ್ಬ ಮನುಷ್ಯನನ್ನು, ಒಂದು ದೃಶ್ಯವನ್ನು, ಒಂದು ವಸ್ತುವನ್ನು ಸಾಂಕೇತಿಕವಾಗಿ ಅಭಿವ್ಯಕ್ತಿಸುವ ಯತ್ನವನ್ನು ಈ ಅಮೂರ್ತ ಭಾವನಾತ್ಮಕ ವಿಗ್ರಹಗಳಲ್ಲಿ ಕಾಣಬಹುದು.

ಚಿತ್ರ 1ರ ವಿಗ್ರಹದಲ್ಲಿ ಕೈಕಟ್ಟಿ ನೆಟ್ಟಗೆ ನಿಂತ ಒಬ್ಬಾತ ಯಾವುದೋ ಒಂದು ಸಮಾರಂಭದಲ್ಲಿ ಭಾಗವಹಿಸುತ್ತಿರುವಂತೆ ತೋರುತ್ತದೆ. ಅವನ ದೇಹ ಸತ್ತ್ವಯುಕ್ತವಾದ್ದೆಂಬುದು ಮುಂಡ, ತೊಡೆಗಳು ಹಾಗೂ ಭುಜಗಳಿಂದ ಗೊತ್ತಾಗುತ್ತದೆ. ರುಂಡದಲ್ಲಿ ಕಾಣುವುದೆಲ್ಲ ಮೂಗೊಂದೇ. ಆ ವಿಗ್ರಹದಲ್ಲಿ ಶ್ರೀಮಂತಿಕೆಯ ಗಾಂಭೀರ್ಯವನ್ನೂ ಸ್ವಲ್ಪಮಟ್ಟಿನ ದುರಭಿಮಾನವನ್ನೂ ಕಾಣಬಹುದು.

ಮಿನೋವನರ ಕಲೆಯಲ್ಲಿ ಅಮೂರ್ತಭಾವನೆಗಳಿದ್ದರೂ ಪ್ರಾಣಿಗಳು, ಸಸ್ಯಗಳು, ಮೀನುಗಳು, ಪುಷ್ಪಗಳು ಹಾಗೂ ಮನುಷ್ಯರ ಚಿತ್ರಣದಲ್ಲಿ ಉಲ್ಲಾಸ ಎದ್ದು ತೋರುತ್ತದೆ. ಚಿನ್ನದ ಬಟ್ಟಲುಗಳ ಮೇಲೆ (ಚಿತ್ರ 2) ಹುಲ್ಲುಗಾವಲಿನಲ್ಲಿ ಮೇಯುತ್ತಿರುವ ಪಳಗಿಸಿದ ಗೂಳಿಗಳಲ್ಲಿಯ ಆಮೋದ ಚಿತ್ರಿತವಾಗಿರುವುದು ಕಾಣುತ್ತದೆ. ಇನ್ನೊಂದರಲ್ಲಿ ಮಿನೋವನರು ಜೀವದ ಹಂಗು ತೊರೆದು ಕಾಡು ಗೂಳಿಗಳನ್ನು ಹಿಡಿಯುತ್ತಿರುವ ಚಿತ್ರವಿದೆ.

ಡೋರಿಯನರದು (ಪ್ರ.ಶ.ಪೂ. 1100–700) ರೇಖಾವಿನ್ಯಾಸ ಶೈಲಿ ಎನ್ನಬಹುದು. ಅವರ ಕಾಲಕ್ಕೆ ಸೇರಿದ ಕಂಚಿನ ವಿಗ್ರಹಗಳ ಮತ್ತು ಪಾತ್ರೆಗಳ ಮೇಲೆ ಬಿಡಿಸಲಾದ ಚಿತ್ರಗಳಿಂದ ಇದು ಸ್ಪಷ್ಟವಾಗಿದೆ. ಮಾನವ ಹಾಗೂ ಪ್ರಾಣಿ ದೇಹಗಳ ಸಹಜ ವಕ್ರತೆಗಳನ್ನು ಇಲ್ಲಿ ಕಮಾನುಗಳಂತೆ ಅಥವಾ ಕೋನಗಳಂತೆ ತೋರಿಸಲಾಗಿದೆ (ಚಿತ್ರ 3). ಇವು

ಡೊಂಕಾದ ಗೆರೆಗಳು, ಸಮಾಂತರ ಗೆರೆಗಳು ಮುಂತಾದ ಜ್ಯಾಮಿತೀಯ ರೂಪಗಳನ್ನು ತಾಳಿವೆ. ಶವಯಾತ್ರೆ, ನೌಕಾಯುದ್ಧ ಇತ್ಯಾದಿಗಳ ಚಿತ್ರಗಳನ್ನು ಸಾಮಾನ್ಯವಾಗಿ ಈ ಕಾಲದ ಬಟ್ಟಲುಗಳ ಮೇಲೆ (ಪಾನಪಾತ್ರೆಗಳ ಮೇಲೆ) ಬಿಡಿಸಲಾಗಿದೆ.

ಪ್ರ.ಶ.ಪೂ. 7ನೆಯ ಶತಮಾನದಲ್ಲಿ ಗ್ರೀಕರ ಕಲೆ ಪೌರಸ್ತ್ಯರ, ಹೆಚ್ಚಾಗಿ ಪರ್ಷಿಯನ್ನರ ಪ್ರಭಾವಕ್ಕೊಳಗಾಯಿತು. ವಿಕಟಾಲಂಕಾರದ ಭೀಭತ್ಸಗಳು, ಗುಲಾಬಿಯ ಆಕಾರದ ಅಲಂಕಾರಗಳು, ಪಕ್ಷಿಗಳು– ಇವು ಕಲೆಗೆ ಸಾಮಗ್ರಿಗಳು. ರಂಗುರಂಗಿನ ಚಿತ್ರಮಯ ಬಟ್ಟೆಗಳನ್ನು ನೇಯುವ ಕಲೆಯಲ್ಲಿ ಪರ್ಷಿಯ ಪರಿಣತಿ ಪಡೆದಿತ್ತು. ಆದ್ದರಿಂದ ಅಲ್ಲಿ ನಿಶ್ಚಲ ಚಿತ್ರಗಳಿಗೆ ಪ್ರಾಧಾನ್ಯವಿತ್ತು. ಗ್ರೀಕರು ಪರ್ಷಿಯನರಿಂದ ಈ ವಿನ್ಯಾಸವನ್ನು ಎರವಲು ಪಡೆದು ಪಾನಪಾತ್ರೆಗಳ ಮೇಲೆ ರೂಪಿಸಿದಾಗ ಅವು ನೀರಸವೂ ನಿಸ್ಸತ್ವವೂ ಆದುವು.

**ಚಿತ್ರ 3. ಕುದುರೆ, ಕಂಚಿನ ವಿಗ್ರಹ. ಪ್ರ.ಶ.ಪೂ. 8ನೆಯ ಶತಮಾನ**

ಗ್ರೀಕ್ ಕಲೆಯ ಶ್ರೇಷ್ಠ ಕಾಲ ಉದಯವಾದ್ದು ಇಂಥ ಹಿನ್ನೆಲೆಯಲ್ಲಿ. ಇಲ್ಲಿ ಸಾಮಾನ್ಯವಾಗಿ ಐದು ಘಟ್ಟಗಳನ್ನು ಗುರುತಿಸಬಹುದು. ಮೊದಲನೆಯದು ಆರ್ಷೇಯ. ಈ ಕಾಲದಲ್ಲಿ ರೂಪಿತವಾದ ಮನುಷ್ಯಾಕೃತಿಗಳಲ್ಲಿ ಸಾಮಾನ್ಯವಾದ ಅಂಗ ರಚನೆಯ ದೋಷಗಳನ್ನು, ಭಾವಪ್ರದರ್ಶನದಲ್ಲಿ ಅನೌಚಿತ್ಯವನ್ನು, ಭೀರುವಾದ ತಂತ್ರಗಳನ್ನು ನೋಡಬಹುದು. ಈ ಕೊರತೆಗಳನ್ನು ಪರಿವರ್ತನ ಕಾಲದಲ್ಲಿ ಸ್ವಲ್ಪಮಟ್ಟಿಗೆ ನಿವಾರಿಸಿಕೊಳ್ಳಲಾಯಿತು. ಆದರೆ ಭಂಗಿಯಲ್ಲಿ ಇನ್ನೂ ಸ್ವಲ್ಪ ಗಡುಸು ತುಂಬಿಕೊಂಡಿತ್ತು. ಇದೂ ಆ ಕಾಲದ ಕೊನೆಯ ವರ್ಷಗಳಲ್ಲಿ ಪರಿವರ್ತಿತವಾಯಿತು.

ಪ್ರ.ಶ.ಪೂ. 450 ರಿಂದ 323 ರ ವರೆಗಿನ ಕಾಲವನ್ನು ಪೆರಿಕ್ಲೀಸ್ ಯುಗವೆಂದೂ ಮಹಾಯುಗವೆಂದೂ ಕರೆಯಲಾಗಿದೆ. ಈ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪ ಸರ್ವತೋಮುಖ ಪ್ರಗತಿ ಸಾಧಿಸಿತು. ಬೃಹತ್ತಾದ ಪೌರಕಟ್ಟಡಗಳ ನಿರ್ಮಾಣವಾದ್ದೂ ಗ್ರೀಕ್ ದೇವತೆಗಳ ದೊಡ್ಡ ವಿಗ್ರಹಗಳನ್ನು ಕೆತ್ತಿದ್ದೂ ಈ ಕಾಲದಲ್ಲಿಯೇ.

ವರ್ಗೀಕರಿಸಲಾದ ವಿಗ್ರಹಗಳು, ಕುಳಿತ ಭಂಗಿಯ ವಿಗ್ರಹಗಳು, ಹಾರುವ ಆಕೃತಿಗಳು, ನಿಂತಿರುವ ಪುರುಷ ಮತ್ತು ಸ್ತ್ರೀ ವಿಗ್ರಹಗಳು ಎಂದು ಆರ್ಷೇಯ ಕಾಲದ ವಿಗ್ರಹಗಳನ್ನು ನಾಲ್ಕು ತೆರನಾಗಿ ವಿಂಗಡಿಸಬಹುದು. ಚಿತ್ರ 4ರಲ್ಲಿ ತೋರುವ, ಅಮೃತಶಿಲೆಯಲ್ಲಿ ಕೆತ್ತಿದ, ನಿಂತ ಸ್ತ್ರೀ ವಿಗ್ರಹವನ್ನು ನೋಡಿದಾಗ ಅದು ಈಜಿಪ್ಟ್ ವಿಗ್ರಹಗಳಿಂದ ಪ್ರಭಾವಿತವಾದುದೆಂಬುದು ಸ್ಪಷ್ಟವಾಗುತ್ತದೆ. ಇದನ್ನು ನಿಕಾಂದ್ರ ಎಂಬವನು ಆರ್ಟೆಮಿಸನ ಗೌರವಾರ್ಥವಾಗಿ ಮುಡಿಪಿಟ್ಟನೆಂದು ಅಲ್ಲಿಯ ಶಾಸನವೊಂದು ತಿಳಿಸುತ್ತದೆ. ಈ ಹೆಣ್ಣಿನ ತಲೆಯ ಕೂದಲು ಎರಡು ಭಾಗಗಳಾಗಿ ಎರಡು ಭುಜಗಳ ಮುಂದೆಯೂ ಚೆಲ್ಲಾಡಿದೆ. ಕುತ್ತಿಗೆ ದೃಢವಾಗುವಂತೆ ಈಜಿಪ್ಟ್ ವಿಗ್ರಹಗಳ ಶಿಲ್ಪದಲ್ಲಿ ಅನುಸರಿಸುತ್ತಿದ್ದ ತಂತ್ರವಿದು. ಅಂತೆಯೇ ಇದೂ ಮುಮ್ಮುಖವಾಗಿದೆ.

ಅನಂತರದ ಕಾಲದ ಒಂದು ವಿಗ್ರಹ ವರ್ತುಲಾಕೃತಿಯಲ್ಲಿದೆ. ಮರದಲ್ಲಿ ಕೆತ್ತಿದ ವಿಗ್ರಹಗಳಂತೆ ಪೆಡಸಾಗಿ ಕಾಣುವ ಈ ವಿಗ್ರಹದ ಕೆಳಭಾಗ ಮರದ ಕಾಂಡದಂತಿದೆ. ಕಾಲಿನ ಬೆರಳುಗಳನ್ನು ಮಾತ್ರ ಬಿಡಿಸಲಾಗಿದೆ. ಸಾಂಪ್ರದಾಯಿಕವಾಗಿ ಬಂದ ಅಮೂರ್ತ ಶೈಲಿಯ ಪ್ರತೀಕವಿದು. ಈ ಕಾಲದಲ್ಲಿ ಈಜಿಪ್ಟ್ ಶೈಲಿಯ ಅನುಕರಣೆಯಾಯಿತೆನ್ನಲು ಇನ್ನೊಂದು ಆಧಾರವೆಂದರೆ, ಅಪೋಲೊ ದೇವತೆಗಳದೆಂದು ಮೊದಲು ಪರಿಗಣಿತವಾಗಿದ್ದು ಅನಂತರ ನವಯುವಕರದೆಂದು ನಾಮಕರಣ ಮಾಡಲಾದ ವಿಗ್ರಹಗಳಲ್ಲಿಯ ಮುಂಚಾಚಿರುವ (ಚಿತ್ರ 6) ಎಡಗಾಲುಗಳು.

**ಚಿತ್ರ 4. ನಿಕಾಂದ್ರ ಶಿಲ್ಪ.**

**ಚಿತ್ರ 5. ಹೀರ ದೇವತೆಯ ವಿಗ್ರಹ**

ಆದರೂ ಗ್ರೀಕ್ ವಿಗ್ರಹಗಳಲ್ಲಿ ಎದ್ದು ಕಾಣುವ ವಿಶಿಷ್ಟತೆಯೆಂದರೆ ನಗ್ನತೆ. ಒಲಂಪಿಕ್ ಸ್ಪರ್ಧೆಯ (**ನೋಡಿ– ಒಲಂಪಿಕ್ ಕ್ರೀಡೆಗಳು**) ಸ್ಪರ್ಧಿಗಳಿಗೆ ಉಡುಗೆ ಚಲನೆಗೆ ಅಡ್ಡಿಯಾಗುವುದೆಂಬ ಭಾವನೆಯಿತ್ತು. ಇದೇ ಭಾವನೆ ಕಲೆಯಲ್ಲೂ ವ್ಯಕ್ತವಾಗಿದೆ. ತೃಪ್ತ ಮನೋಭಾವವನ್ನು ಚಿತ್ರಿಸಲು ನಗ್ನತೆ ಹೆಚ್ಚು ಪೋಷಕ. ದೇಹದ ಎಲ್ಲ ಅಂಗಗಳಲ್ಲಿ, ಮಾಂಸಖಂಡಗಳಲ್ಲಿ ಚಲನೆಯನ್ನು ಮೂಡಿಸುವುದು ನಗ್ನತೆಯ ಚಿತ್ರಣದಿಂದ ಹೆಚ್ಚು ಸಾಧ್ಯ. ದೇಹವನ್ನು ವಸ್ತ್ರಗಳಿಂದ ಮುಚ್ಚಿದಾಗ, ಇವನ್ನು ಮೂಡಿಸುವ ಅವಕಾಶ ಬಹಳವಾಗಿ ಮುಖಕ್ಕೆ ಸೀಮಿತವಾಗಿರುತ್ತದೆ. ನಗ್ನತೆಗೂ ಶೃಂಗಾರಕ್ಕೂ ಸಂಬಂಧವಿದ್ದರೂ ಶೃಂಗಾರ ಪ್ರಣಯವನ್ನು ಪ್ರಚೋದಿಸಲು ಮಾತ್ರವೇ ನಗ್ನತೆಯನ್ನು ಮಾಧ್ಯಮವಾಗಿ ಅವರು ಬಳಸಲಿಲ್ಲ.

ಪರ್ಷಿಯನ್ ಕದನ ಪ್ರ.ಶ.ಪೂ. ಸು. 480 ರ ವೇಳೆಗೆ ಮುಗಿದಿತ್ತು. ಈ ಕದನಗಳು ಗ್ರೀಕರನ್ನು ವಿನಾಶಕ್ಕೆ ಒಯ್ಯಬಹುದಿತ್ತು. ಆದರೆ ಗ್ರೀಕರ ಆದರ್ಶವಾದ ಅವರನ್ನು ಅಳಿವಿನ ವಿರುದ್ಧ ಹೋರಾಡಲು ಪ್ರೇರೇಪಿಸಿತು. ಇದರ ಪರಿಣಾಮವಾಗಿ ಅವರಿಗೆ ವಿಜಯ ಲಭ್ಯವಾಯಿತು. ಜೀವನದಲ್ಲಿ ಅವರು ಹೊಸ ಮೌಲ್ಯಗಳನ್ನು ಕಾಣುವಂತೆ ಮಾಡಿತು. ಶತ್ರುವಿನ ದಾಳಿಗೆ ಸಿಕ್ಕಿ ಹಾಳಾಗಿದ್ದ ನಗರಗಳಲ್ಲಿ ನವ ಚೇತನ ಉಕ್ಕಿ ಹರಿಯಿತು. ಗ್ರೀಕ್ ಕಲೆ ಪೂರ್ಣವಾಗಿ ಅರಳಿತು.

ಈ ನವಯುಗದ ಆರಂಭಕಾಲಕ್ಕೆ ಸೇರಿದ್ದು ಆಫ್ರೋಡೈಟಿ ದೇವತೆಯ ಜನನವನ್ನು ಸೂಚಿಸುವ ವಿಗ್ರಹ ಫಲಕ. ಈ ದೇವತೆ ಈಜಿಯನ್ ಸಮುದ್ರದ ನೊರೆಗಳಲ್ಲಿ ನವಯುವತಿಯಾಗಿ ಜನಿಸಿದಳೆಂಬ ಪ್ರಚಲಿತ ಕಥೆಯನ್ನು ಇಲ್ಲಿ ರೂಪಿಸಲಾಗಿದೆ. ಚಿತ್ರ

7ರಲ್ಲಿ ಆಕೆಯನ್ನು ನೀರಿನಿಂದ ಮೇಲಕ್ಕೆ ಎಳೆಯುತ್ತಿರುವ ದೃಶ್ಯವಿದೆ. ಈ ಶಿಲ್ಪದಲ್ಲಿ ಕೊರತೆಗಳಿಲ್ಲದಿಲ್ಲ. ಅಂಗರಚನೆ ಯಲ್ಲಿಯೇ ಕುಂದಿದೆ. ಸ್ತನಗಳೆರಡೂ ಎರಡು ಬದಿಗಳಲ್ಲಿವೆ. ತಲೆಯನ್ನು ಬಲಭಾಗಕ್ಕೆ ಹೊರಳಿಸಿದಾಗ ಆಗಬಹುದಾದ ಸ್ನಾಯುಗಳ ಸೆಳೆತಗಳಾವುವೂ ಇಲ್ಲಿ ಕಾಣುವುದಿಲ್ಲ. ಇವು ಮುಖ್ಯ ತಪ್ಪುಗಳು. ಆದರೂ ಈ ಶಿಲ್ಪ ಅನಂತರ ಬರಲಿದ್ದ ಭವ್ಯ ಕಲಾಕೃತಿಗಳ ಮುನ್ಸೂಚಿಯಂತಿದೆ.

ಈ ದೃಷ್ಟಿಯಿಂದ ಒಲಿಂಪಿಯದ ಜ್ಯೂಸ್ ದೇವಾಲಯದಲ್ಲಿ ಅಳವಡಿಸಿದ, ಹೆರ್ಕ್ಲೀಸ್ ಗೂಳಿಯನ್ನು ಪಳಗಿಸುತ್ತಿರುವ ಚಿತ್ರ ಭವ್ಯವಾದ್ದು (ಚಿತ್ರ 8). ಇಲ್ಲಿ ಕಾಣುವುದು ಗೂಳಿಯ ಹಾಗೂ ಹೆರ್ಕ್ಲೀಸನ ನಡುವಣ ಘರ್ಷಣೆಯ ಒಂದು ಕ್ಷಣದ ಸ್ತಬ್ಧ ದೃಶ್ಯ. ಒಂದು ಕ್ಷಣದ ಹಿಂದೆ ಚಲನೆ ಇತ್ತು; ಒಂದು ಕ್ಷಣದ ಬಳಿಕ ಪುನಃ ಚಲನೆ ಇರುತ್ತದೆ. ಇವುಗಳ ನಡುವಣ ಕ್ಷಣದ ಸ್ತಬ್ಧಚಲನೆ ಇಲ್ಲಿ ರೂಪಿತವಾಗಿದೆ. ಗ್ರೀಕ್ ಕಲೆಯಲ್ಲಿ ಇದೂ ಒಂದು ಪದ್ಧತಿಯಾಗಿ ಉಳಿಯಿತು.



ಚಿತ್ರ 6. ನವಯುವಕ

ಗ್ರೀಕ್ ಶಿಲ್ಪಕಾರರಲ್ಲಿ ಪ್ರಸಿದ್ಧರಾದ ಆರು ಜನರ ಹೆಸರುಗಳು ತಿಳಿದುಬಂದಿವೆ. ಅವರು ಮೈರಾನ್, ಫಿಡಿಯಸ್, ಪಾಲಿಕ್ಲೈಟಸ್, ಪ್ರಾಕ್ಸಿಟೆಲೀಸ್, ಸ್ಕೋಪಸ್ ಮತ್ತು ಲೈಸಿಪ್ಪಸ್. ಇವರಲ್ಲಿ ಕೊನೆಯವನು ಅಲೆಗ್ಸಾಂಡರನ ಆಶ್ರಯ ಪಡೆದಿದ್ದ. ಗ್ರೀಕ್ ಸಾಹಿತ್ಯದಲ್ಲಿ ಇವರ ಉಲ್ಲೇಖವಿದೆ. ಆದರೆ ಇವರು ಕೆತ್ತಿದ ವಿಗ್ರಹಗಳು ನಮಗೆ ದೊರೆತಿರುವುದು ಬಹಳ ಕಡಿಮೆ. ಸಿಕ್ಕಿರುವವೂ ಆ ಕಲಾವಿದರವೇ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿಲ್ಲದಿಲ್ಲ. ಮೈರಾನನದೆನ್ನಲಾದ, ಚಕ್ರ ಎಸೆಯುವವನ (ಡಿಸ್ಕಸ್) ವಿಗ್ರಹ ಉತ್ಕೃಷ್ಟವಾದ್ದು (ಚಿತ್ರ 9). ಚಕ್ರವನ್ನು ದೂರಕ್ಕೆ ಎಸೆಯುವ ಕ್ಷಣಗಳಲ್ಲಿ ತಲೆಯನ್ನು ಹಿಂಚಾಚಿ, ಎಸೆಯುವ ಕೈಯನ್ನು ದೃಷ್ಟಿಸಿ ನೋಡುವ, ಒಂದು ಕಾಲನ್ನು ತುಸು ಬಾಗಿಸಿ, ಮರುಕ್ಷಣದಲ್ಲಿ ಚಕ್ರವನ್ನು ಎಸೆಯುವಂತೆ ತೋರುವ ಈ ಸ್ಪರ್ಧಿಯ ವಿಗ್ರಹ ಗ್ರೀಕ್ ಶೈಲಿಯ ಒಂದು ಉತ್ತಮ ಮಾದರಿ.

ಫಿಡಿಯಸ್ ಗ್ರೀಕ್ ಮಹಾಯುಗಕ್ಕೆ ಸೇರಿದ ಶಿಲ್ಪಿ. ಗ್ರೀಕ್ ದೇವತೆಗಳ ಅತ್ಯುತ್ತಮ ಶಿಲ್ಪಗಳನ್ನು ಕಡೆದ ಖ್ಯಾತಿ ಈತನದು. ಅಥಿನ ಪಾರ್ಥಿನಾನ್ 38' ಎತ್ತರದ ಭವ್ಯ ಮೂರ್ತಿ. ಜ್ಞಾನ ಹಾಗೂ ಪಾತಿವ್ರತ್ಯವನ್ನು ಪ್ರತಿನಿಧಿಸುವ ಈ ದೇವತೆಯನ್ನು ಪಾರ್ಥಿನಾನ್ ದೇವಾಲಯದಲ್ಲಿ ಸ್ಥಾಪಿಸಲಾಗಿತ್ತು. ಈ ವಿಗ್ರಹವನ್ನು ದಂತ, ಚಿನ್ನ ಹಾಗೂ ಇತರ ಅಮೂಲ್ಯ ಲೋಹಗಳಿಂದ ಮಾಡಲಾಗಿತ್ತು. ಫಿಡಿಯಸ್‌ನ ಇನ್ನೊಂದು ವಿಗ್ರಹ 60' ಎತ್ತರದ ಜ್ಯೂಸ್‌ನ ಮೂರ್ತಿ. ಕುಳಿತಂತೆ ಇದನ್ನು ತೋರಿಸಲಾಗಿದೆ. ಇದನ್ನು ಒಲಂಪಿಯದ ದೇವಾಲಯದಲ್ಲಿ

ಚಿತ್ರ 7. ಆಫ್ರೊಡೈಟಿ ದೇವತೆಯ ಜನನ

ಸ್ಥಾಪಿಸಲಾಗಿತ್ತು. ಪಾರ್ಥಿನಾನ್ ದೇವಾಲಯ ಈ ಶಿಲ್ಪಿಯ ಮೇಲ್ವಿಚಾರಣೆಯಲ್ಲೇ ನಿರ್ಮಾಣವಾಯಿತು. ಪೆರಿಕ್ಲೀಸನ ಒಲವನ್ನು ಸಂಪಾದಿಸಿದ ಈ ಶಿಲ್ಪಿಯ ಮೂಲಕೃತಿಗಳು ಮಾತ್ರ ದೊರೆತಿಲ್ಲ. ದೊರೆತಿರುವುದೆಲ್ಲ ಅವುಗಳ ಪ್ರತಿಕೃತಿಗಳು.

ಪಾಲಿಕ್ಲೈಟಸ್ ಈತನ ಸಮಕಾಲೀನ. ಎಪಿಡಾರಸ್ ಗ್ರಾಮದಲ್ಲಿ ಗ್ರೀಕರ ವೈದ್ಯ ದೇವತೆಯಾದ ಆಸ್ಕ್ಲೀಪಿಯಸನಿಗಾಗಿ ದೊಡ್ಡ ದೇವಾಲಯವನ್ನು ಕಟ್ಟಿಸಿದವನೀತ. ಶಿಲ್ಪಕಲೆಯಲ್ಲಿ ಅನುಪಾತ ಸಿದ್ಧಾಂತವನ್ನು ರೂಪಿಸಿದ ಈತ ತನ್ನ ಸಿದ್ಧಾಂತವನ್ನು



ಚಿತ್ರ 8. ಹೆರ್ಕ್ಲೀಸ್ ಗೂಳಿಯನ್ನು ಪಳಗಿಸುತ್ತಿರುವ ಶಿಲ್ಪ

ಮೂರ್ತೀಕರಿಸಲು 2' ಎತ್ತರದ ಡೊರಿಫೊರಸ್ ಮೂರ್ತಿಯನ್ನು ಕಡೆದ. ಇದರ ಮೂಲವೂ ದೊರೆತಿಲ್ಲ. ಪ್ರಾಕ್ಸಿಟೆಲೀಸನೂ ಒಲಂಪಿಯ ನಗರದವನೇ. ಪ್ರ.ಶ.ಪೂ. 340 ಈತನ ಕಾಲ. ಹರ್ಮೀಸ್ ವಿಗ್ರಹದ (ಚಿತ್ರ 10) ಶಿಲ್ಪಿಯೀತ. ಇದನ್ನು ಅಮೃತಶಿಲೆಯಲ್ಲಿ ಕಡೆಯಲಾಗಿತ್ತು. ಹರ್ಮೀಸ್ ದೇವತೆ ಡಯೊನೈಸಸನನ್ನು ಎಡಗೈಯಲ್ಲಿ ಎತ್ತಿಕೊಂಡಂತೆ





ಚಿತ್ರ 9. ಚಕ್ರ ಎಸೆತದ ಒಂದು ಭಂಗಿ, ಚಿತ್ರ 10. ಹರ್ಮೀಸ್ ಮತ್ತು ಶಿಶು ಡಯೊನೈಸಸ್

ರೂಪಿಸಲಾದ 7' ಎತ್ತರದ ಈ ದೇವತೆಯನ್ನು ಹೀರ ದೇವಾಲಯದಲ್ಲಿ ಸ್ಥಾಪಿಸಲಾಗಿತ್ತು. 6ನೆಯ ಶತಮಾನದಲ್ಲಿ ಸಂಭವಿಸಿದ ಭೂಕಂಪದಿಂದಾಗಿ ಈ ವಿಗ್ರಹ ಮಣ್ಣಿನಲ್ಲಿ ಹುದುಗಿತ್ತು. 1877ರಲ್ಲಿ ಈ ವಿಗ್ರಹ ಬಹಳಮಟ್ಟಿಗೆ ಪೂರ್ವ ರೂಪದಲ್ಲೇ ದೊರೆಯಿತು.

**ವಾಸ್ತು :** ಯುರೋಪಿನ ವಾಸ್ತು ಬಹಳಮಟ್ಟಿಗೆ ಪ್ರಭಾವಿತವಾಗಿರುವುದು ಗ್ರೀಕ್ ವಾಸ್ತುವಿನಿಂದಲೇ. ಗ್ರೀಸಿನ ಪ್ರಾಚೀನ ನಾಗರಿಕ ಜೀವನಕ್ಕೆ ಸಂಬಂಧಿಸಿದ ಕಟ್ಟಡಗಳು – ವಾಸದ ಮನೆಗಳು, ಅರಮನೆಗಳು ಇತ್ಯಾದಿ – ಹೆಚ್ಚಿಗೆ ಉಳಿದಿಲ್ಲ. ಉಳಿದಿರುವುವೆಲ್ಲ ದೇವಾಲಯದ ಅವಶೇಷಗಳೇ. ದೇವಾಲಯದ ವಿನ್ಯಾಸ, ಅವುಗಳಲ್ಲಿಯ ಸ್ತಂಭ ಶೈಲಿಗಳು ಪ್ರ.ಶ.ಪೂ. 1600ರಷ್ಟು ಪ್ರಾಚೀನ. ಪ್ರ.ಶ.ಪೂ. 1000ದಿಂದ ಪ್ರ.ಶ. 150ರ ವರೆಗಿನ ಕಾಲದ ಸುಮಾರು 150 ದೇವಾಲಯಗಳ ಅವಶೇಷಗಳು ಗೋಚರವಾಗಿವೆ.

ಆದರೆ ಕ್ರೀಟನರ ರಾಜಧಾನಿಯಾಗಿದ್ದ ನಾಸಸ್‌ನ ಭವ್ಯ ಅರಮನೆಯ ಅವಶೇಷಗಳನ್ನು ಬ್ರಿಟಿಷ್ ಪುರಾತತ್ತ್ವಜ್ಞ ಆರ್ಥರ್ ಎವಾನ್ಸ್ 20ನೆಯ ಶತಮಾನದ ಆರಂಭದಲ್ಲಿ ಶೋಧಿಸಿದ. ಗ್ರೀಕ್ ಇತಿಹಾಸವನ್ನರಿಯುವಲ್ಲಿ ಇದೊಂದು ಮಹತ್ತ್ವಪೂರ್ಣ ಸಾಧನೆ. ಇಲ್ಲಿಯ ಅರಮನೆಯನ್ನು ಮೊದಲು ಕಟ್ಟಿದ್ದು ಪ್ರ.ಶ.ಪೂ. ಸು. 2100 ರಲ್ಲಿ. ಒಂದು ಶತಮಾನದೊಳಗೆ ಇದು ನಾಶಹೊಂದಿತು. ಪ್ರ.ಶ.ಪೂ. 17 ನೆಯ ಶತಮಾನದಲ್ಲಿ ಇದನ್ನು ಮತ್ತೆ ಕಟ್ಟಲಾಯಿತು. ಆಗ ಇದರೊಂದಿಗೆ ಇನ್ನೂ ನೂರಾರು ಕಟ್ಟಡಗಳು ಈ ದ್ವೀಪದ ಬೇರೆ ಬೇರೆ ನಗರಗಳಲ್ಲಿ ತಲೆ ಎತ್ತಿದ್ದುವು. 24,000 ಚ.ಮೀ ವಿಸ್ತಾರವಾದ ಅಂಗಳದ ಸುತ್ತಲೂ ಮೂರು ನಾಲ್ಕು ಅಂತಸ್ತುಗಳಲ್ಲಿ ಕಟ್ಟಲಾದ ನಾಸಸ್ ಅರಮನೆ ಅಂದಿನ ವಾಸ್ತುವಿನ ಒಂದು ಚಮತ್ಕಾರ. ಲೋಹಗಳು ಮತ್ತು ಅಮೃತಶಿಲೆಯೂ ಕಲ್ಲುಗಳೂ ಹೆಚ್ಚು ದೊರಕದಿದ್ದುದರಿಂದ ಕಟ್ಟಡಕ್ಕೆ ಸುಣ್ಣಕಲ್ಲು ಮತ್ತು ಜಿಪ್ಸಮ್ ಉಪಯೋಗಿಸಲಾಗಿತ್ತು. ತಳಪಾಯದಲ್ಲಿ ಮತ್ತು ನೆಲದ ಅಂತಸ್ತಿನಲ್ಲಿ ಚೌಕಾಕಾರದ ಕಲ್ಲುಕಂಬಗಳನ್ನು ನಿಲ್ಲಿಸಿ ಅದರ ಮೇಲೆ ಸೈಪ್ರಸ್ ಮತ್ತು ಸಿಡಾರ್ ಮರದ ಕಂಬಗಳನ್ನೂ ಬೋದಿಗೆಗಳನ್ನೂ ಹೊದಿಸಿ ಕಲ್ಲಿನ ಕೊರತೆಯನ್ನು ತುಂಬಿಕೊಳ್ಳಲಾಗಿತ್ತು. ಅರಮನೆಯ ಕೊಠಡಿಗಳಲ್ಲಿ ವರ್ಣಚಿತ್ರಗಳನ್ನೂ ಪ್ರತಿಮೆಗಳನ್ನೂ ಕಲಾತ್ಮಕ ಪಾನಪಾತ್ರೆಗಳನ್ನೂ ಇರಿಸಿ ಅವನ್ನು ಸಣ್ಣ ಕಲಾಶಾಲೆಗಳನ್ನಾಗಿ ಮಾರ್ಪಡಿಸಲಾಗಿತ್ತು. ಇವುಗಳನ್ನು ನೋಡಿದಾಗ ಅಂದಿನ ಜನಾಂಗದ ಭೋಗಜೀವನ, ಕಲಾಭಿಜ್ಞತೆ, ಅಭಿರುಚಿಗಳ ಪರಿಚಯವಾಗುತ್ತದೆ. ಭೂಕಂಪ, ಪರಕೀಯರ ದಾಳಿ, ಅಂತಃಕಲಹ ಮುಂತಾದ ಕಾರಣಗಳಿಂದಾಗಿ ಇಂಥ ಭವ್ಯ ನಾಗರಿಕತೆಯೂ ಕುಸಿಯಿತು. ಅದರೊಂದಿಗೆ ಕಟ್ಟಡಗಳೂ ಅಳಿದುವು. ಕಪ್ಪುಯುಗದಲ್ಲಿ ಗ್ರೀಕ್ ದೇವಾಲಯಗಳಿದ್ದರೂ ಅವು ಮರದಿಂದ ಕಟ್ಟಲ್ಪಟ್ಟವು. ಪ್ರ.ಶ.ಪೂ. 6ನೆಯ ಶತಮಾನದ ಅನಂತರ ಕಲ್ಲಿನ ಕಟ್ಟಡಗಳು ಬಂದುವು. ಕಟ್ಟಡಗಳ ಕೆಳಗಿನ ತಳಪಾಯದಿಂದ ಚಾವಣಿಯ ವರೆಗೆ ಎಲ್ಲವೂ ಕ್ರಮೇಣ ಶಿಲಾಮಯವಾದುವು. ಪ್ರ.ಶ.ಪೂ. 479ರಲ್ಲಿ ಪರ್ಷಿಯನ್ ಕದನಗಳು ಮುಗಿದಾಗ ಅಥೆನ್ಸ್ ನಗರ ನೆಲಸಮವಾಗಿತ್ತು. ಯುದ್ಧದಿಂದ ಹಿಂದಿರುಗಿದ ಪ್ರಜೆಗಳು ಮೊದಲು ತಮ್ಮ ವಾಸಗೃಹಗಳನ್ನೂ ಅನಂತರ ಸೈನ್ಯ ಸಂಬಂಧವಾದ ಕಟ್ಟಡಗಳನ್ನೂ ಕಟ್ಟಿದರು. ಪ್ರ.ಶ.ಪೂ. 461ರಲ್ಲಿ ಪ್ರಜಾನಾಯಕನಾಗಿ ಬಂದ ಪೆರಿಕ್ಲೀಸ್ ನೂತನ ಯುಗವೊಂದರ ಪ್ರವರ್ತಕನಾದ. ಗ್ರೀಕ್ ಸಂಸ್ಕೃತಿ ವೈಭವದ ಶಿಖರವನ್ನೇರಿದ್ದು ಇವನ ಕಾಲದಲ್ಲಿ. ದೇಶದಲ್ಲಿ ಸ್ಥಿರತೆ, ಶಾಂತಿಗಳನ್ನು ನೆಲೆಗೊಳಿಸಿದ ಬಳಿಕ ಈತ ತನ್ನ ಗಮನವನ್ನೆಲ್ಲ ಅಲ್ಲಿ ದೇವಾಲಯ ಗಳನ್ನು ಕಟ್ಟಿಸುವುದರತ್ತ ಹರಿಸಿದ. ಅಥೆನ್ಸ್ ನಗರದ ದುರ್ಗ ಕಡಿದಾದ ಗುಡ್ಡವೊಂದರ ಮೇಲಿದೆ. 46,451 ಚ.ಮೀ ಪ್ರದೇಶವನ್ನು ಸಮತಲ ಮಾಡಿಸಿ ಅಲ್ಲಿ ಈತ ಪಾರ್ಥಿನಾನ್, ಪ್ರಾಪಿಲೀಯ ಅಥಿನ, ನೈಕ್ ಮತ್ತು ಎರೆಕ್ತಿಯಮ್ ಗುಡಿಗಳನ್ನು ಕಟ್ಟಿಸಿದ. ಈ ನಾಲ್ಕು ಕಟ್ಟಡಗಳ ವಿನ್ಯಾಸ, ಅಲಂಕರಣ ಮುಂತಾದುವುಗಳ ಹೊಣೆಯನ್ನು ಹೊತ್ತವನು ಪೆರಿಕ್ಲೀಸನ ಮಿತ್ರನಾದ ಶಿಲ್ಪಿ ಫಿಡಿಯಸ್. ಈ ಶಿಲ್ಪಿ ಕಡೆದ ಅಥಿನ ವಿಗ್ರಹವನ್ನು ಸ್ಥಾಪಿಸಲೆಂದೇ ಪಾರ್ಥಿನಾನ್ ದೇವಾಲಯವನ್ನು ಕಟ್ಟಿದ್ದು.


ಚಿತ್ರ 11. ಡೋರಿಕ್ ಶೈಲಿಯ ಕಂಬ


ಚಿತ್ರ 12. ಡೋರಿಕ್ ಶೈಲಿಯ ಗ್ರೀಕ್ ದೇವಾಲಯ


ಚಿತ್ರ 13. ಅಯೋನಿಕ್ ಶೈಲಿಯ ಕಂಬ

ಕಲ್ಲುಗಳನ್ನು ನಾಜೂಕಾಗಿ ಕತ್ತರಿಸಿ, ಗಾರೆಯನ್ನು ಬಳಸದೆ ಅವನ್ನು ಒಂದರ ಮೇಲೊಂದು ಜೋಡಿಸಿದಾಗ ಅವು ದೂರಕ್ಕೆ ಒಂದೇ ಕಲ್ಲಾಗಿರುವಂತೆ ಭಾಸವಾಗುತ್ತಿತ್ತು. ಈ ತುಂಡುಗಳ ನಡುವೆ ವರ್ತುಲನಾಳಿಯನ್ನು ಕೊರೆದು ಅದರಲ್ಲಿ ಅದರಲ್ಲಿ ಆಲಿವ್ ಮರದ ನಳಿಕೆಯನ್ನಿಟ್ಟು ತಿರುಗಿಸಿದಾಗ ಎರಡು ಕಲ್ಲುಗಳು ಒಂದಕ್ಕೊಂದು ನಯವಾಗಿ ಕೊರೆದುಕೊಂಡು ಭದ್ರವಾಗಿ ಸೇರಿಕೊಳ್ಳುತ್ತಿದ್ದುವು. ಗ್ರೀಕರ ವಾಸ್ತುವಿನ ವೈಶಿಷ್ಟ್ಯ ಇರುವುದು ಅದರ ಕಂಬಗಳಲ್ಲಿ. ಅವುಗಳಲ್ಲಿ ಡೋರಿಕ್, ಅಯೋನಿಕ್ ಮತ್ತು ಕಾರಿಂತಿಯನ್ ಎಂಬ ಮೂರು ಪ್ರತ್ಯೇಕ ಶೈಲಿಗಳನ್ನು ಗುರುತಿಸಬಹುದು. ದೇವಾಲಯದಲ್ಲಿ ದೇವತೆಯ ಒಂದು ದೊಡ್ಡ ಪ್ರತಿಮೆ ಪ್ರಮುಖ ಆಕರ್ಷಣೆ. ದೀರ್ಘ ಚತುರಸ್ರಾಕಾರದ ಕಟ್ಟಡವನ್ನು ಕಟ್ಟುತ್ತಿದ್ದರು. ಇದು ಮೊದಲು ಉದ್ದವಾಗಿ ಇಕ್ಕಟ್ಟಾಗಿತ್ತು. ಒಳಗಿನ ಮೂರ್ತಿ ಚೆನ್ನಾಗಿ ಕಾಣುವಂತೆ ಕ್ರಮೇಣ ಇದರ ಅಗಲವನ್ನು ಹೆಚ್ಚಿಸಲಾಯಿತು. ತಗ್ಗಾದ ಸಮತಲ ಜಗುಲಿಯ ಮೇಲೆ ಆಲಯದ ಕಂಬಗಳನ್ನು ನಿಲ್ಲಿಸಲಾಗುತ್ತಿತ್ತು. ಈ ಜಗುಲಿಗೆ ಮೂರು ಮೆಟ್ಟಿಲುಗಳಿದ್ದುವು. ಈ ಮೆಟ್ಟಿಲುಗಳು ಸಮತಲ ಸಿದ್ಧಾಂತವನ್ನನುಸರಿಸಿ ಕಟ್ಟಿದುವು. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವಿತ್ತು. ಇದರ ಎರಡೂ ಕಡೆ ಕಂಬಗಳ ಸಾಲು. ಕಟ್ಟಡದ ಚಾವಣಿ ತ್ರಿಕೋನಾಕಾರದಲ್ಲಿ ಚಂದಾಯದಲ್ಲಿತ್ತು. ಗ್ರೀಕ್ ವಾಸ್ತುಶಿಲ್ಪದಲ್ಲಿ ಕಮಾನಿನ ಬಳಕೆಯೇ ಇರಲಿಲ್ಲ. ಕಂಬಗಳು ಮಧ್ಯಭಾಗದಲ್ಲಿ ತುಸು ಉಬ್ಬಿದ್ದು ಮೇಲಕ್ಕೆ ಹೋದಂತೆಲ್ಲ ಕ್ರಮೇಣ ಸಣ್ಣದಾಗುತ್ತಿತ್ತು. ಸ್ತಂಭಗಳು ಹಾಸುಗಲ್ಲು ಗಳನ್ನವಲಂಬಿಸಿದ್ದುವು. ಕಟ್ಟಡದ ಶೈಲಿಯನ್ನು ಇವುಗಳಿಂದ ಗುರುತಿಸಬಹುದು. ಕಂಬದ ಬೋದಿಗೆಯಂತೂ ಒಂದೊಂದು ಶೈಲಿಯಲ್ಲೂ ಭಿನ್ನವಾಗಿದ್ದು ನಿರ್ಣಯಾತ್ಮಕ ಅಂಶವಾಗಿತ್ತು. ಡೋರಿಕ್ ಶೈಲಿಯ ಕಂಬದ ಉದ್ದ ಅದರ ವ್ಯಾಸದ ನಾಲ್ಕರಷ್ಟು ಇರುತ್ತಿತ್ತು. ಅಯೋನಿಕ್ ಕಂಬಗಳಿಗೆ ಸಣ್ಣಪಾದ ಇದ್ದು, ಕಂಬಗಳಲ್ಲಿ ಅರೆಗೊಳವಿಗಳು ಡೋರಿಕ್ ಕಂಬಗಳದವಕ್ಕಿಂತ ಭಿನ್ನವಾಗಿದ್ದುವು. ಕಂಬದ ಬೋದಿಗೆಯಲ್ಲಿ ಸುರುಳಿಯ ಅಲಂಕಾರವಿತ್ತು. ಕಾರಿಂತಿಯನ್ ಶೈಲಿ ಗ್ರೀಕರ ಕೊಡುಗೆಯಾದರೂ ಅವರು ಅದನ್ನು ಬಹಳವಾಗಿ ಉಪಯೋಗಿಸಲಿಲ್ಲ. ಆದರೆ ಅನಂತರದ ರೋಮನರ ಕಾಲದಲ್ಲಿ ಈ ಶೈಲಿ ಬಹಳ ಪ್ರಿಯವಾಯಿತು. ಈ ಶೈಲಿಯಲ್ಲಿ ಕಂಬದ ಬೋದಿಗೆಯ ಮಧ್ಯಭಾಗ ಘಂಟೆಯ ಆಕಾರದಲ್ಲಿತ್ತು. ಅದರ ಮೇಲೆ ಒಂದು ಮಣಿ ಚೌಕಟ್ಟನ್ನು ಕೂಡಿಸಲಾಗಿತ್ತು. ಈ ಘಂಟೆಯ ಕೆಳಭಾಗದಲ್ಲಿ ಪತ್ರಾಕೃತಿಯ ಅಲಂಕಾರವಿರುತ್ತಿತ್ತು (ಚಿತ್ರ 14).


ಚಿತ್ರ 14. ಕಾರಿಂತಿಯನ್ ಶೈಲಿ ಕಂಬದ ಬೋದಿಗೆ

(ಜಿ.ಬಿ.ಆರ್.)

**ಗ್ರೀಕ್ ಕಾವ್ಯ :** ಸಾಧನೆಯ ದೃಷ್ಟಿಯಿಂದಾಗಲೀ ಪ್ರಭಾವದ ದೃಷ್ಟಿಯಿಂದಾಗಲೀ ಪ್ರಾಚೀನ ಗ್ರೀಸಿನ ಕಾವ್ಯ ಹಿರಿದಾದುದು. ಇಡೀ ಯುರೋಪಿನ ಸಾಹಿತ್ಯದ ಮೇಲೆ ಗ್ರೀಕ್ ಕಾವ್ಯ ಪರಿಣಾಮಕಾರಿ ಪ್ರಭಾವ ಬೀರಿತು; ಅಲ್ಲದೆ ವಿಶ್ವಸಾಹಿತ್ಯಕ್ಕೆ ಸಾಧನೆಯ ಉತ್ತುಂಗ ಶಿಖರಗಳನ್ನು ನಿರ್ಮಿಸಿಕೊಟ್ಟಿತು. ಇಂದು ಉಳಿದುಬಂದಿರುವುದು ಗ್ರೀಕ್ ಕಾವ್ಯದ ಒಂದು ಭಾಗ, ಅಷ್ಟೆ. ಬೈಜಾಂಟಿಯಂನ ವಿದ್ವಾಂಸರ ಶ್ರಮ ಮತ್ತು ಶ್ರದ್ಧೆಗಳಿಂದ ಇಷ್ಟಾದರೂ ಉಪಲಬ್ಧವಾಗಿದೆ. ಅಳಿದುಳಿದಿರುವುದು ಅದೆಷ್ಟೆ ಸ್ವಲ್ಪವಾದರೂ ಅದರ ಗುಣಮಟ್ಟ ಮಾತ್ರ ಎಂಥವರನ್ನೂ ಬೆರಗುಗೊಳಿಸುವಂತಿದೆ.

ಗ್ರೀಕ್ ಸಾಹಿತ್ಯ ಹೇಗೆ ಪ್ರಾರಂಭವಾಯಿತು ಎನ್ನುವುದು ತಿಳಿದಿಲ್ಲ. ಹೋಮರನ ಇಲಿಯಡ್ ಮತ್ತು ಒಡಿಸ್ಸಿಗಳು ನಮಗೆ ದೊರೆತಿರುವ ಅತಿ ಪ್ರಾಚೀನ ಕೃತಿಗಳು. ಇವನ ನಿಜವಾದ ಹೆಸರು, ಕಾಲ, ದೇಶ, ಕೃತಿಗಳು ಎಲ್ಲ ವಾದಗ್ರಸ್ತ ವಿಷಯಗಳು. ಈತ ಪ್ರ.ಶ.ಪೂ. ಎಂಟನೆಯ ಅಥವಾ ಒಂಬತ್ತನೆಯ ಶತಮಾನಕ್ಕೆ ಸೇರಿದ್ದಿರಬೇಕು. ಹೋಮರನ ಮಹಾಕಾವ್ಯಗಳಂಥ ಶ್ರೇಷ್ಠ ಕೃತಿಗಳು ಹಿಂದಣ ಒಂದು ಪರಂಪರೆ ಮತ್ತು ಹಲವು ಕವಿಗಳ ಸಿದ್ಧತೆ ಇಲ್ಲದೆ ಉದ್ಭವಿಸಲಾರವು (ಆರ್ಫ್ಯೂಸ್ ಮತ್ತು ಮ್ಯೂಸಿಯಸ್ ಎಂಬ ಕವಿಗಳ ಹೆಸರು ಕೇಳಿಬರುತ್ತದೆ. ವಿವರಗಳಾಗಲೀ ಕೃತಿಗಳಾಗಲೀ ದೊರೆತಿಲ್ಲ). ತನ್ನ ಹಿಂದಿನ ಲಾವಣಿಕಾರರ ಹಾಡುಗಳ ಸಾಮಗ್ರಿಯನ್ನೂ ವರ್ಣನೆಯ ವಿಧಾನವನ್ನೂ ಛಂದಸ್ಸನ್ನೂ ಬಳಸಿಕೊಂಡು ಹೋಮರ್ ಜಗತ್ತಿನ ಅತಿಶ್ರೇಷ್ಠ ಕಾವ್ಯಗಳಲ್ಲಿ ಎರಡನ್ನು ರಚಿಸಿದ. ಯುರೋಪಿನಲ್ಲಿ ಮಹಾಕಾವ್ಯ ಉದಿಸಿತು. ಹೋಮರ್ ಕಾಲಮಾನದಲ್ಲಿ ಮಾತ್ರ ಆದಿಕವಿಯಲ್ಲ. ಮಹಾಕಾವ್ಯ, ಗಂಭೀರನಾಟಕ, ವಿನೋದ ನಾಟಕ ಇವೆಲ್ಲದರ ಚರಿತ್ರೆಗಳೂ ಅವನ ಕಾವ್ಯಗಳಲ್ಲಿ ಪ್ರಾರಂಭವಾದುವು. ಪ್ರಾಯಶಃ ಇವನ ಸಮಕಾಲೀನ ಹೆಸಿಯಡ್. ಇವನ ಮಹಾಕೃತಿ ವರ್ಕ್ಸ್ ಅಂಡ್ ಡೇಸ್ (ಇವನ ಕೃತಿ ಮೂಲದಲ್ಲಿದ್ದಂತೆ ಉಳಿದು ಬಂದಿದೆ ಎನ್ನುವಂತಿಲ್ಲ). ಈತ ಕಳೆದುಹೋದ ಭವ್ಯ ವೀರಯುಗವನ್ನು ಬಿತ್ತರಿಸುವುದಿಲ್ಲ. ಸಮಸ್ಯೆಗಳಿಂದ ಮತ್ತು ಕಷ್ಟಗಳಿಂದ ತುಂಬಿದ ಸಮಕಾಲೀನ ಸಮಾಜವನ್ನು ಚಿತ್ರಿಸುತ್ತಾನೆ. ಹೋಮರನ ಕಾವ್ಯಗಳಲ್ಲಿ ಬಡವರು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ. ಹೆಸಿಯಡ್ ಬಡವರ ವಿಷಯವಾಗಿಯೆ ಬರೆಯುತ್ತಾನೆ. ಇವನದು ಕಹಿ ನಿರಾಶೆಯ ಮನೋಭಾವ. ಪ್ರಕೃತಿಯಲ್ಲಿ ಆಸಕ್ತಿ ತೋರುವ ಯುರೋಪಿನ ಮೊದಲ ಕವಿ ಈತ. ಶ್ರಮಪಟ್ಟು ಕೆಲಸ ಮಾಡು, ನ್ಯಾಯವಾಗಿ ನಡೆದುಕೊ –ಇದು ಇವನ ಉಪದೇಶದ ಸಾರ. ಈತನೋ ಈತನ ಶಿಷ್ಯನೋ ಬರೆದ ಥಿಯೋಜನಿ ಗ್ರೀಕ್ ದೇವತೆಗಳನ್ನು ಕುರಿತ ಕಾವ್ಯ. ಈತನ ಅನಂತರ ಅನೇಕ ಕವಿಗಳು ಈತನನ್ನು ಅನುಕರಿಸಿದರಾದರೂ, ಅವರ ಕೃತಿಗಳಲ್ಲಿ ಕಾವ್ಯಗುಣ ಕಡಿಮೆ.

ಹೋಮರನನ್ನು ಅನುಸರಿಸಿ ಹಲವರು ಟ್ರಾಯ್ ಮತ್ತು ತೀಬ್ಸ್ ಸಮಸ್ಯೆಗಳನ್ನು ಕುರಿತು ಬರೆದರು. ಇವು ಉಳಿದುಬಂದಿಲ್ಲ. ಪ್ರ.ಶ.ಪೂ. ನಾಲ್ಕು ಐದನೆಯ ಶತಮಾನಗಳಲ್ಲಿ ಅವನ ಮಹಾಕಾವ್ಯದ ಅಣಕ ಬ್ಯಾಟ್ರಕೊಮೈಯೊ ಮ್ಯಾಕಿಯ (ಕಪ್ಪೆಗಳ ಮತ್ತು ಇಲಿಗಳ ಯುದ್ಧ) ದೊರೆತಿದೆ. ಹೋಮರನ ಭಜನಗೀತೆಗಳೆನ್ನಿಸಿಕೊಂಡ ಮೂವತ್ತಮೂರು ಕೃತಿಗಳು ಉಪಲಬ್ಧವಾಗಿವೆ. ಇವನ್ನು ಹೋಮರ್ ರಚಿಸಲಿಲ್ಲ. ಹಲವು ದೇವತೆಗಳ ಮಹಿಮೆಗಳನ್ನು ವರ್ಣಿಸುವ ಗೀತೆಗಳು ಇವು. ಹೋಮರ್, ಹೆಸಿಯಡ್ ಮತ್ತು ಮೇಲೆ ಸೂಚಿಸಿದ ಅವರನ್ನು ಅನುಕರಿಸಿದ ಕವಿಗಳು ಹೆಕ್ಸಾಮೀಟರ್ ಎಂಬ ಛಂದಸ್ಸನ್ನು ಬಳಸಿದರು.

ಕಾವ್ಯದಲ್ಲಿ ವೈಯಕ್ತಿಕ ಅಂಶ ತಕ್ಕಮಟ್ಟಿನ ಪ್ರಾಧಾನ್ಯ ಪಡೆಯುವುದನ್ನು ಹೆಸಿಯಡ್‌ನ ಕಾವ್ಯಗಳಲ್ಲಿಯೆ ಕಾಣುತ್ತೇವೆ. ಮಹಾಕಾವ್ಯದ ಯುಗ ಮುಗಿಯುತ್ತ ಬಂದಂತೆ ಈ ವೈಯಕ್ತಿಕ ಅಂಶ ಬೆಳೆಯಿತು. ಇದರೊಂದಿಗೆ ಹೆಕ್ಸಾಮೀಟರಿನ ಬದಲು ಬೇರೆ ಛಂದಸ್ಸುಗಳನ್ನು ಕವಿಗಳು ಆರಿಸಿಕೊಂಡರು (ಪ್ರ.ಶ.ಪೂ.ಸು. 8 ನೆಯ ಶತಮಾನದಲ್ಲಿ ಸಂಗೀತದಲ್ಲಿ ಹೊಸ ಆಸಕ್ತಿ ಪ್ರಾರಂಭವಾಯಿತು; ಇದೂ ಕಾವ್ಯದ ಚರಿತ್ರೆಯನ್ನು ಪ್ರಭಾವಿಸಿದಂತೆ ತೋರುತ್ತದೆ). ಕೊಳಲಿನ ವಾದನಕ್ಕೆ ಹೊಂದಿಕೊಂಡ ಎಲಿಜಿಯಕ್ ಕಾವ್ಯ ಪ್ರಾರಂಭದಲ್ಲಿ ಪ್ರಣಯ ಮತ್ತು ಶೌರ್ಯಗಳನ್ನು ಹಾಡಿ ಹೊಗಳಿತೆಂದು ಕಾಣುತ್ತದೆ. ಎಫೀಸಸಿನ ಕ್ಯಾಲಿನಸ್‌ನ (ಪ್ರ.ಶ.ಪೂ.ಸು. 660) ಕವನ ಈ ಪ್ರಕಾರದಲ್ಲಿ ನಮಗೆ ದೊರೆತಿರುವ ಅತಿ ಪ್ರಾಚೀನ ರಚನೆ. ಕೊಲೊಫಾನನ ಮಿಮ್ನೆರ್‌ಮಸ್ (ಪ್ರ.ಶ.ಪೂ.ಸು. 630) ಇಂದ್ರಿಯ ಸುಖವನ್ನು ನಿಸ್ಸಂಕೋಚವಾಗಿ ಹೊಗಳಿದ ಮೊದಲ ಕವಿ. ಆರ್ಕಿಲೋಕಸ್ (ಪ್ರ.ಶ.ಪೂ. 7 ನೆಯ ಶತಮಾನ) ಎಲಿಜಿಯಕ್ ಕಾವ್ಯದ ವಸ್ತುಗಳ ವ್ಯಾಪ್ತಿಯನ್ನು ಹಿಗ್ಗಿಸಿದ; ಐಯಾಂಬಿಕ್ ಮತ್ತು ಟ್ರೊಕೇಯಿಕ್ ಛಂದಸ್ಸುಗಳಿಗೆ ಪರಿಪೂರ್ಣತೆಯನ್ನು ತಂದುಕೊಟ್ಟ. ತನ್ನ ಟೀಕೆಯ ತೀಕ್ಷ್ಣತೆಯಿಂದ ಈತ ಚೇಳು ಎಂಬ ಹೆಸರನ್ನು ಪಡೆದ. ಇವನ ಬರೆಹದಲ್ಲಿ ಯಾವ ಆದರ್ಶವೂ ಕಾಣದು.

ದೇವತೆಗಳ ಪೂಜೆಯಲ್ಲಿ ಸಂಗೀತ ಮತ್ತು ನೃತ್ಯವನ್ನು ಬಳಸುವ ಸಂಪ್ರದಾಯ ಗ್ರೀಕರಲ್ಲಿತ್ತು. ನಾಯಕನೊಬ್ಬನ ಮಾರ್ಗದರ್ಶನದಲ್ಲಿ ಲಯಬದ್ಧ ಚಲನೆಗಳೊಂದಿಗೆ ಮೇಳದವರು ಹಾಡುಗಳನ್ನು ಹಾಡುತ್ತಿದ್ದರು. ಈ ಸಂಪ್ರದಾಯದಿಂದ ಮೇಳ ಕಾವ್ಯ ಉದಿಸಿತು. ಸಾಮಾನ್ಯವಾಗಿ ಇದು ಒಬ್ಬ ದೇವತೆಯನ್ನು ಅಥವಾ ದೇವತಾ ಸದೃಶ ಶೂರನನ್ನು ಕುರಿತದ್ದು. ಇದರಲ್ಲಿ ನೀತಿವಾಕ್ಯಗಳೂ ಸಮೃದ್ಧವಾಗಿರುತ್ತಿದ್ದುವು. ಸ್ಪಾರ್ಟದ ಆಲ್ಕ್‌ಮನ್ ಬರೆದ ಕವನಗಳ ಭಾಗಗಳು ಮಾತ್ರ ದೊರೆತಿದ್ದರೂ ಆತ ಪ್ರತಿಭಾವಂತ ಎನ್ನುವುದಕ್ಕೆ ತಕ್ಕಷ್ಟು ಸಾಕ್ಷ್ಯ ಇಲ್ಲಿದೆ.

ಪ್ರ.ಶ.ಪೂ.ಸು. 600 ರ ಹೊತ್ತಿಗೆ ಪ್ರಪಂಚದಲ್ಲಿ ಮೊಟ್ಟಮೊದಲ ಬಾರಿಗೆ ಹೊಸದೊಂದು ಕಾವ್ಯಪ್ರಕಾರ ಲೆಸ್ಬಾಸಿನಲ್ಲಿ ಉದಯವಾಯಿತು. ಇದೇ ಲಿರಿಕ್ (ಭಾವಗೀತೆ). ಲೈರ್ ಎಂಬ ವಾದ್ಯಕ್ಕೆ ಹೊಂದಿಕೊಂಡ ಹಾಡು ಲಿರಿಕ್. ಈಗ ಗ್ರೀಸಿನ ಲಿರಿಕ್‌ಗಳು ಉಳಿದುಬಂದಿದ್ದರೂ ಅವುಗಳ ಸಂಗೀತಭಾಗ ಸಂಪೂರ್ಣವಾಗಿ ನಷ್ಟವಾಗಿದೆ. ಭಾವಗೀತೆಯ ಚರಿತ್ರೆಯಲ್ಲಿ ಮೊದಲಿನ ಹೆಸರು ಟರ್‌ಪ್ಯಾಂಡರನದು (ಪ್ರ.ಶ.ಪೂ.7 ನೆಯ ಶತಮಾನ). ಬಹು ಪ್ರಸಿದ್ಧ ಕವಿಗಳು ಆಲ್‌ಸೇಯಿಯಸ್ (7 ನೆಯ ಶತಮಾನದ ಉತ್ತರಾರ್ಧ) ಮತ್ತು ಸ್ಯಾಫೊ (7 ನೆಯ ಶತಮಾನ). ಆಲ್‌ಸೇಯಿಯಸ್‌ನ ಕವನಗಳಲ್ಲಿ ಸೂಕ್ಷ್ಮತೆ ಇಲ್ಲ. ಆದರೆ ಭಾವದ ತೀವ್ರತೆ, ಭಾಷೆಯ ಮಿತವ್ಯಯ ಉಂಟು. ವಿವರಗಳನ್ನು ಕಾಣುವ ಕಣ್ಣುಂಟು. ಚಟುವಟಿಕೆಯ, ತೀಕ್ಷ್ಣ ಭಾವನೆಗಳ ಮನುಷ್ಯ ಬರೆದ ಕವನಗಳು ಇವು. ಸ್ಯಾಫೊ ನಮಗೆ ತಿಳಿದಿರುವ ಮಟ್ಟಿಗೆ ಪ್ರಪಂಚದ ಮೊದಲ ಕವಯಿತ್ರಿ. ಹಲವು ದಂತಕಥೆಗಳ ಕೇಂದ್ರ ಇವಳು. ಪ್ಲೇಟೊ ಇವಳನ್ನು ಕಾವ್ಯದೇವತೆಗಳ ಸಾಲಿನಲ್ಲಿ ನಿಲ್ಲಿಸಿದ. ಭಾವೋದ್ವೇಗಕ್ಕೆ ಇನ್ನೊಂದು ಹೆಸರೇ ಸ್ಯಾಫೊ ಎನ್ನುವಂತಿವೆ, ಇವಳ ಪ್ರಣಯಗೀತೆಗಳು. ಇವಳದು ನೇರವಾದ, ಸರಳವಾದ, ಉದ್ವೇಗಪೂರ್ಣ ಭಾಷೆ. ಗ್ರೀಕ್ ಕಾವ್ಯದಲ್ಲಿ ವಿರಳವಾದ ಪ್ರಕೃತಿವರ್ಣನೆ ಇವಳ ಕವನಗಳಲ್ಲಿ ಸಾಕಷ್ಟಿದ್ದು ಇವಳ ಆಳವಾದ ನಿಸರ್ಗ ಪ್ರೇಮಕ್ಕೆ ಸಾಕ್ಷಿಯಾಗಿದೆ. ಇವಳ ಪ್ರಣಯ ಗೀತೆಗಳಲ್ಲಿ ಬಹು ಸಂಖ್ಯೆಯವು ಬಾಲಕಿಯರನ್ನು ಕುರಿತವು ಎಂಬುದು ಕುತೂಹಲಕರ ಅಂಶ. ನಿತ್ಯದ ಭಾಷೆಗೆ ಇವಳ ಕವನಗಳಲ್ಲಿ ಅಭೂತಪೂರ್ವ ನಯ ಮತ್ತು ಶಕ್ತಿ ಲಭ್ಯವಾಗಿವೆ. ಬೆಂಕಿಯಂತೆ, ಪ್ರವಾಹದಂತೆ ತನ್ನ ಚೇತನ ನಮ್ಮ ಸುತ್ತುಗಟ್ಟಿದ ಪ್ರಣಯವನ್ನು ವರ್ಣಿಸುವಾಗಲೂ ಸುಸಂಸ್ಕೃತ ಮನೋಧರ್ಮವನ್ನು ಈಕೆ ಪ್ರಕಟಿಸುತ್ತಾಳೆ. ಜಗತ್ತಿನ ಸಾಹಿತ್ಯದಲ್ಲಿಯೇ ಕುತೂಹಲಕರವಾದ ವ್ಯಕ್ತಿತ್ವವನ್ನು ಪಡೆದ ಕವಯಿತ್ರಿಗಳಲ್ಲಿ ಒಬ್ಬಳು, ಸ್ಯಾಫೊ.

ಆಲ್‌ಸೇಯಿಯಸ್ ಮತ್ತು ಸ್ಯಾಫೊಳ ಭಾವಗೀತೆಗಳು ತುಂಬ ಜನಪ್ರಿಯವಾಗಿ ಏಷ್ಯ ಮೈನರ್ ಪ್ರದೇಶಕ್ಕೆ ಹಬ್ಬಿದುವು. ಭಾವಗೀತೆಯ ಚರಿತ್ರೆಯಲ್ಲಿ ಮುಂದಿನ ದೊಡ್ಡ ಹೆಸರು ಈ ಪ್ರದೇಶದ (ಟೀ ಆಸ್‌ನ) ಅನಾಕ್ರಿಯಾನನದು (ಪ್ರ.ಶ.ಪೂ.572?–485?). ಈತ ಭೋಗಪ್ರಿಯನಾದರೂ ಇಂದ್ರಿಯಲೋಲುಪ ಎನ್ನುವುದು ಉತ್ಪ್ರೇಕ್ಷೆಯಾದೀತು. ಪ್ರಣಯ ಮತ್ತು ಮದ್ಯಪಾನಗಳನ್ನು ಹೊಗಳುವ, ಲಘುಹೃದಯದಿಂದ ಹೊರಹೊಮ್ಮಿದ ಲವಲವಿಕೆಯ ಕವನಗಳು ಇವನವು. ಪುರಾಣ ಪ್ರತಿಮೆಗಳನ್ನು ಈತ ವಿಶೇಷವಾಗಿ ಬಳಸುತ್ತಾನೆ. ಇವನನ್ನು ಅನುಕರಿಸಿದವರು ಬಹುಮಂದಿ. ಆದರೆ ಅವರಲ್ಲಿ ಯಾರೂ ಇವನನ್ನು ಸರಿಗಟ್ಟಲಿಲ್ಲ.

ಪ್ರ.ಶ.ಪೂ. ಆರನೆಯ ಶತಮಾನದಲ್ಲಿ ಕವಿಗಳು ಆಶ್ರಯದಾತರನ್ನು ಹೆಚ್ಚಾಗಿ ಅವಲಂಬಿಸಬೇಕಾಗಿ ಬಂದಿತು. ತಮ್ಮ ಕಲೆಯಲ್ಲಿ ವೈವಿಧ್ಯವನ್ನು ಅರಸಬೇಕಾಯಿತು. ಇದರಿಂದ ಮೇಳಗೀತ ಮತ್ತೆ ಪ್ರಾಧಾನ್ಯ ಪಡೆಯಿತು. ಈ ಕಾಲಕ್ಕೆ ಸೇರಿದ ಹಿಮೆರದ ಸ್ಟೆಸಿಕೊರಸನ (ಪ್ರ.ಶ.ಪೂ. 630–553) ಕವನಗಳಲ್ಲಿ ಕೆಲವು ತುಂಡುಗಳು ಮಾತ್ರ ಲಬ್ಧವಾಗಿವೆ. ಮೇಳದ ಪ್ರಗಾಥಕ್ಕೆ ಹೊಸ ರೂಪ ಕೊಟ್ಟು ಭಾವಗೀತೆ ಮತ್ತು ಕಥನಗಳ ಅಂಶವನ್ನು ಈತ ಬೆಳೆಸಿದನೆಂದು ಕಾಣುತ್ತದೆ. ರೀಜಿಯಮ್ಮಿನ ಇಬಿಕಸ್ (ಪ್ರ.ಶ.ಪೂ. ಆರನೆಯ ಶತಮಾನ) ಪ್ರಣಯ ಕವನಗಳನ್ನು ಬರೆದ. ಈ ಕಾವ್ಯ ಪ್ರಕಾರವನ್ನು ಪ್ರತಿಭೆಯಿಂದ ಬೆಳಗಿಸಿದವರು ಸಿಮೊನೈಡೀಸ್ (ಪ್ರ.ಶ.ಪೂ. 556–467), ಪಿಂಡಾರ್ (ಪ್ರ.ಶ.ಪೂ. 512–448) ಮತ್ತು ಬ್ಯಾಕಿಲಿಡೀಸ್ (ಪ್ರ.ಶ.ಪೂ. 505–450). ಮೇಳಗೀತವೆಲ್ಲ ಸಾಮಾನ್ಯವಾಗಿ ದೇವತೆಗಳನ್ನು ಕುರಿತವು. ಅವು ಅವರ ಮಹಿಮೆಯನ್ನು ಬಿತ್ತರಿಸುತ್ತವೆ. ಅವರಿಗೆ ಪ್ರಾರ್ಥನೆಗಳನ್ನು ಸಲ್ಲಿಸುತ್ತವೆ. ಕೆಲವು ಮೇಳಗೀತಗಳು ಆಳುವ ಪ್ರಭುಗಳನ್ನು ಕುರಿತವು. ಎಲಿಜಿ, ಮೇಳಗೀತ ಎರಡು ಪ್ರಕಾರಗಳಲ್ಲಿಯೂ ಖ್ಯಾತಿ ಗಳಿಸಿದ ಸಿಮೊನೈಡೀಸನ ಕವನಗಳಲ್ಲಿ ಲಭ್ಯವಾಗಿರುವುದು ಕೆಲವೇ. ಮ್ಯಾರಥಾನ್ ಕದನದ ಅನಂತರ ಅಲ್ಲಿ ಮಡಿದ ವೀರಶ್ರೇಷ್ಠರಿಗೆ ಚರಮ ಗೀತೆಗಳನ್ನು ಬರೆಯುವ ಸ್ಪರ್ಧೆಯಲ್ಲಿ ಸಿಮೊನೈಡೀಸ್ ಈಸ್ಕಿಲಸನನ್ನು ಸೋಲಿಸಿದ ಎಂದು ಐತಿಹ್ಯ ಉಂಟು. ಕಾವ್ಯ ಮಾತನಾಡುವ ಚಿತ್ರ, ಚಿತ್ರ ಮೌನವಾದ ಕಾವ್ಯ ಎಂಬುದು ಇವನ ಸೂತ್ರಗಳಲ್ಲಿ ಒಂದು. ಇವನ ಕವನಗಳಲ್ಲಿ ದೃಶ್ಯಗಳು ವಿವರಗಳಿಂದ ತುಂಬಿಕೊಂಡು ಕಣ್ಣಿಗೆ ಕಟ್ಟುತ್ತವೆ. ಬಾಳಿನ ಅನಿಶ್ಚಯತೆಯ ಗಾಢ ಅರಿವು ಇವನ ಕಾವ್ಯದಲ್ಲಿ ಸಂಯಮದ ವಿಷಾದವನ್ನು ಮೂಡಿಸುತ್ತದೆ. ಚರಮಗೀತೆಗಳ ಎರಡು ಪಂಕ್ತಿಗಳಲ್ಲಿ ಅಥವಾ ನಾಲ್ಕು ಪಂಕ್ತಿಗಳಲ್ಲಿ ಒಬ್ಬ ವ್ಯಕ್ತಿಯ ಇಡೀ ಜೀವನವನ್ನು ಅಥವಾ ಸಾಧನೆಯನ್ನು

ಈತ ಅಡಕ ಮಾಡಬಲ್ಲ. ಆಳವಾದ ಭಾವ ಇವನ ಕಾವ್ಯಗಳ ಸರಳ ಭಾಷೆಯಲ್ಲಿ ಅಡಗಿದೆ. ಇವನ ಸೋದರಳಿಯ ಬ್ಯಾಕಿಲಿಡೀಸ್ ಇವನಿಂದ ಪ್ರಭಾವಿತನಾದವ. ಕಥನ ಕವನದಲ್ಲಿ ಬ್ಯಾಕಿಲಿಡೀಸನದು ಎತ್ತಿದ ಕೈ. ಓದುಗರನ್ನು ಈತ ರೋಮಾಂಚನಗೊಳಿಸಬಲ್ಲ. ಮೇಳಕಾವ್ಯದಲ್ಲಿ ಪೌರಾಣಿಕ ಕಥೆಗಳನ್ನು ಸಮೃದ್ಧವಾಗಿ ಬಳಸಿಕೊಂಡ ಇವನದು ತಿಳಿಯಾದ ಶೈಲಿ. ಪಿಂಡಾರ್ ಗ್ರೀಸಿನ ಮಹಾಕವಿಗಳಲ್ಲಿ ಒಬ್ಬ. ನಾಡಿನ ಮಹಾ ಸಾಧನೆಗಳನ್ನು ಬರಲಿರುವ ಪೀಳಿಗೆಗಳಿಗೆ ಉಳಿಸಿಡುವುದು ಕಾವ್ಯದ ಮೊದಲ ಕರ್ತವ್ಯ ಎಂದು ಈತ ನಂಬಿದ್ದ. ಕಾವ್ಯ ಮನುಷ್ಯನ ಶೌರ್ಯ ಹಿರಿಮೆಗಳ ಮೇಲೆ ಅಮರವಾದ ಪ್ರಭೆಯನ್ನು ಚೆಲ್ಲುತ್ತದೆ, ಸತ್ತವರ ಚೇತನಗಳೂ ಕಾವ್ಯವನ್ನು ಆಲಿಸುತ್ತವೆ, ಆಸ್ವಾದಿಸುತ್ತವೆ ಎಂಬುದು ಇವನ ನಂಬಿಕೆ. ಉದ್ದೇಶಿತ, ಚಾತುರ್ಯದ ಜಟಿಲ ಕಲೆ ಇವನದು. ಇವನ ಕವನಗಳಲ್ಲಿ ಉಳಿದು ಬಂದಿರುವುವು ಬಹುಮಟ್ಟಿಗೆ ಗ್ರೀಸಿನ ಕ್ರೀಡಾ ಮಹೋತ್ಸವಗಳಿಗಾಗಿ ಬರೆದ ಮೇಳಗೀತಗಳು. ಇವನ ಕವನಗಳು ಕ್ಲಿಷ್ಟ. ಪದಗಳ ಹೊಸ ಜೋಡಣೆಯಿಂದ ದೃಶ್ಯ ಕಣ್ಣಿಗೆ ಕಟ್ಟುವಂತೆ ಮಾಡಬಲ್ಲ, ಸಂತೋಷವನ್ನು ನೀಡಬಲ್ಲ ಶಕ್ತಿ ಇವಕ್ಕಿದೆ.

ಈ ಮೂವರು ಪ್ರಖ್ಯಾತ ಕವಿಗಳ ಅನಂತರ ಮೇಳಗೀತ ಇಳಿಮುಖವಾಯಿತು. ನಾಟಕ ಪ್ರಾಧಾನ್ಯ ಗಳಿಸಿತು. ಇವರ ಅನಂತರ ಬಂದ ಕವಿಗಳಲ್ಲಿ ಸಾಮಾನ್ಯವಾಗಿ ಸಂಗೀತದ ಅಂಶವೇ ಹೆಚ್ಚು. ಶೈಲಿಯಲ್ಲಿ ಕೃತಕತೆ ತಲೆದೋರುತ್ತದೆ. ಪ್ರ.ಶ.ಪೂ. 404 ರಲ್ಲಿ ಆದ ಅಥೆನ್ಸ್ ನಗರದ ಪತನ ಗ್ರೀಕ್ ಸಾಹಿತ್ಯಕ್ಕೇ ಒದಗಿದ ಮಹಾ ವಿಪತ್ತಾಯಿತು. ಪ್ರ.ಶ.ಪೂ. ಮೂರನೆಯ ಶತಮಾನದಲ್ಲಿ ಗ್ರೀಕ್ ಕಾವ್ಯ ಸ್ವಲ್ಪಮಟ್ಟಿಗೆ ಅಲೆಗ್ಸಾಂಡ್ರಿಯದಲ್ಲಿ ತಲೆ ಎತ್ತಿತು. ಕ್ಯಾಲಿಮಾಕಸ್ (ಪ್ರ.ಶ.ಪೂ. 310–240) ಮತ್ತು ಇನ್ನು ಕೆಲವರು ಕವನಗಳನ್ನು ಬರೆದರು. ಇವರು ಬಹು ಶ್ರೇಷ್ಠವೆನ್ನಬಹುದಾದ ಕಾವ್ಯವನ್ನು ಬರೆಯಲಿಲ್ಲ. ಆದರೆ ಗಮನಿಸಬೇಕಾದ ಸಾಧನೆ ಇವರದು. ರೊಮ್ಯಾಂಟಿಸಿಸಂ ಮೊದಲು ಕಾಣಿಸಿಕೊಳ್ಳುವುದು ಇವರ ಕಾವ್ಯದಲ್ಲಿ. ಸಂತೃಪ್ತ ಜೀವನದ ಗ್ರಾಮಾಂತರ ಕಾವ್ಯ ಪ್ರಾರಂಭವಾದುದು ಇವರಿಂದ. ಕ್ಯಾಲಿಮಾಕಸ್ ಭಜನ ಗೀತಗಳನ್ನೂ ನಾಟುನುಡಿಗಳನ್ನೂ ಬರೆದ. ಇವನ ಸಮಕಾಲೀನ ರೋಡ್ಸಿನ ಅಪೊಲೋನಿಯಸ್ (ಪ್ರ.ಶ.ಪೂ. 295–215) ಮಹಾಕಾವ್ಯವನ್ನು ಆರಿಸಿಕೊಂಡು ಮಧುರಪ್ರಣಯವನ್ನು ಸುಂದರವಾಗಿ ಚಿತ್ರಿಸಿದ್ದಾನೆ. ಕಥೆ ಹೇಳುವಾಗ ಈತ ದೃಶ್ಯಗಳು ಕಣ್ಣಿಗೆ ಕಟ್ಟುವಂತೆ ಮಾಡಬಲ್ಲ. ಥಿಯೋಕ್ರಟಿಸ್ (ಪ್ರ.ಶ.ಪೂ. 316–260) ಮುಂದಿನ ಕಾವ್ಯದ ಮೇಲೆ ತುಂಬ ಪ್ರಭಾವ ಬೀರಿದವ. ಸಿಸಿಲಿಯ ಕುರುಬರ ಜೀವನವನ್ನು ನೆಪಮಾಡಿಕೊಂಡು ಸಂತೃಪ್ತ ಜೀವನವನ್ನು ವರ್ಣಿಸಿ ಸುಂದರವಾದ ಕವನಗಳನ್ನು ಬರೆದು ಪ್ಯಾಸ್ಟೊರಲ್ ಸಂಪ್ರದಾಯವನ್ನು ಈತ ಪ್ರಾರಂಭಿಸಿದ. ನಿಸರ್ಗವನ್ನು ಪ್ರೀತಿಸಿ ಅದರ ನೂರು ವಿವರಗಳನ್ನು ಆಸಕ್ತಿಯಿಂದ ಗುರುತಿಸಿದ ಕವಿಯ ಕೃತಿಗಳು ಇವು. ಶಬ್ದಗಳನ್ನು ಈತ ಬಹು ಎಚ್ಚರಿಕೆಯಿಂದ ಆರಿಸಿದ್ದಾನೆ. ಮಾಸ್ಕಸ್ (ಪ್ರ.ಶ.ಪೂ. 120) ಮತ್ತು ಬಿಯಾನ್ (ಪ್ರ.ಶ.ಪೂ. 120) ಇವನನ್ನು ಅನುಕರಿಸಿದರು.

ಕ್ಯಾಲಿಮಾಕಸ್ ಮತ್ತೆ ಜನಪ್ರಿಯಗೊಳಿಸಿದ ನಾಟುನುಡಿ ಶತಮಾನಗಳ ಕಾಲ ಉಳಿದು ಬಂತು. ಟಾರೆಂಟಮಿನ ಲಿಯೊನಿಡಾಸ್ (ಪ್ರ.ಶ.ಪೂ. 274), ಆಸ್ಕ್ಲೆ ಪಿಯಡೀಸ್ (ಪ್ರ.ಶ.ಪೂ. 290), ಮಿಲಿಯೇಜರ್ (ಪ್ರ.ಶ.ಪೂ. 90) ಮೊದಲಾದವರು ಈ ಮಾಧ್ಯಮವನ್ನು ಬಳಸಿದರು.

ಯುರೋಪಿನ ಕಾವ್ಯಕ್ಕೆ ಮಾತ್ರವಲ್ಲ, ಇಡೀ ಜಗತ್ತಿನ ಕಾವ್ಯಕ್ಕೆ ಗ್ರೀಸಿನ ಕೊಡುಗೆ ಅಮೂಲ್ಯವಾದುದು. ಮಹಾಕಾವ್ಯ, ಮೇಳಗೀತ, ಭಾವಗೀತೆ, ನಾಟುನುಡಿ, ಪ್ರಗಾಥ, ಗ್ರಾಮಾಂತರಕಾವ್ಯ– ಈ ಎಲ್ಲ ಕಾವ್ಯಪ್ರಕಾರಗಳ ತೊಟ್ಟಿಲು ಪ್ರಾಚೀನ ಗ್ರೀಸ್. ಈ ಎಲ್ಲ ಪ್ರಕಾರಗಳಲ್ಲಿ ಕವಿದಿಗ್ಗಜಗಳನ್ನು ಈ ಪುಟ್ಟದೇಶ ಕೊಟ್ಟಿತು. ಹೋಮರ್, ಹೆಸಿಯಡ್, ಆಲ್‌ಸೇಯಿಯಸ್, ಸ್ಯಾಫೊ, ಅನಾಕ್ರಿಯಾನ್, ಸಿಮೊನ್ಯೆಡೀಸ್, ಪಿಂಡಾರ್, ಬ್ಯಾಕಿಲಿಡೀಸ್ – ಯಾವ ನಾಡಾದರೂ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಹೆಸರುಗಳು ಇವು. ಹಲವು ಬಗೆಯ ಅಪೂರ್ವ ಪ್ರಯೋಗಗಳ ತವರು ಗ್ರೀಸ್ ಕಾವ್ಯ. ವಿಭಾವನೆ ಹಾಗೂ ಬೌದ್ಧಿಕ ಶಕ್ತಿಗಳ ಅಪೂರ್ವ ಸಮ್ಮಿಲನವನ್ನು ಪ್ರಾಚೀನ ಗ್ರೀಕ್ ಕಾವ್ಯದಲ್ಲಿ ಕಾಣುತ್ತೇವೆ. ಗ್ರೀಕ್ ಕವಿಗಳು ಧೀಮಂತರು. ಅಲ್ಲದೆ ಇವರ ಕಾವ್ಯದಲ್ಲಿ ಅಮೂರ್ತತೆಗೆ ಅವಕಾಶವೇ ಇಲ್ಲ. ಪಲಾಯನದ ಮನೋಧರ್ಮ ಇವರ ಬಳಿ ಸುಳಿಯದು. ಯಾವ ಭ್ರಾಂತಿಗಳಿಗೂ ವಶರಾಗದೆ ಜೀವನದ ವಾಸ್ತವಿಕತೆಯನ್ನು ಎದುರಿಸುವ ಕವಿಗಳು, ಈ ನಾಡಿನವರು. ಮನುಷ್ಯನೇ ಈ ಕಾವ್ಯದ ಕೇಂದ್ರ. ಮನುಷ್ಯನ ದೇಹ, ಮನುಷ್ಯನ ರಾಗಭಾವಗಳು, ಅವನ ಬಯಕೆಗಳು, ಅವನ ವಿಧಿ ಇವುಗಳಲ್ಲಿ ಗ್ರೀಕ್ ಕವಿಯ ಆಸಕ್ತಿ. ದೇವತೆಗಳೂ ಮುಖ್ಯರಾಗುವುದು ಮನುಷ್ಯನ ಜೀವನದಲ್ಲಿ ಅವರ ಪಾತ್ರದಿಂದ. ಭೂಮಿಯ ಮೇಲಿನ ಬಾಳಿನ ಚಟುವಟಿಕೆ, ಸೊಗಸು, ಸೌಂದರ್ಯಗಳಿಗೆ ಮಾರುಹೋಗುತ್ತಾನೆ, ಗ್ರೀಕ್ ಕವಿ. ಆದರೆ ಈ ಜೀವನವನ್ನು ವಿಶಾಲವಾದ ಹಿನ್ನೆಲೆಯಲ್ಲಿ ಕಾಣುತ್ತಾನೆ; ಅದು ಎಷ್ಟು ಹ್ರಸ್ವ, ಅದರಲ್ಲಿ ಎಷ್ಟು ನೋವಿದೆ ಎಂಬುದನ್ನು ಗುರುತಿಸುತ್ತಾನೆ. ಆದರೆ ಅತಿಭಾವುಕತೆಗೆ ವಶನಾಗುವುದಿಲ್ಲ. ಧೀಮಂತ, ಗಂಭೀರ ಚಿಂತನೆ ಭಾವುಕತೆಗೆ ಕಡಿವಾಣ ಹಾಕುತ್ತದೆ. ಬಾಳನ್ನು ಸಮಗ್ರವಾಗಿ ಕಾಣುವ ವಿಶಿಷ್ಟ ದೃಷ್ಟಿ, ಇಲ್ಲಿಯ ಮಹಾಕವಿಗಳದು. ವಿಶ್ವಕಾವ್ಯದ ಚರಿತ್ರೆಯ ಪ್ರಾರಂಭದ ಅಧ್ಯಾಯಗಳಲ್ಲಿ, ಬಹು ಉಜ್ವಲವಾದ ಅಧ್ಯಾಯಗಳಲ್ಲಿ ಒಂದು, ಗ್ರೀಕ್ ಕಾವ್ಯದ ಚರಿತ್ರೆ. (ಎಲ್.ಎಸ್.ಎಸ್.)

**ಗ್ರೀಕ್ ಛಂದಸ್ಸು :** ಗ್ರೀಕ್ ಕಾವ್ಯಗಳಲ್ಲಿ ಸ್ಥೂಲವಾಗಿ ಎರಡು ಬಗೆಯ ಪದಸರಣಿ ಕಾಣಬರುತ್ತದೆ. ಒಂದೇ ತೆರನ ಸಾಲು ಉದ್ದಕ್ಕೂ ತಿರುತಿರುಗಿ ಬರುವ ಪಂಕ್ತಿಧಾಟಿ (ಸ್ಟಿಕ್ಕಿಕ್ ವರ್ಸ್); ಹಲವು ಸಾಲುಗಳು ಕೂಡಿ ಆದ ವೃತ್ತ ಧಾಟಿ (ಲಿರಿಕ್ ಅಥವಾ ಸ್ಟ್ಯಾಂಜಾಯಿಕ್ ವರ್ಸ್). ಮೊದಲನೆಯದು ವಾಚನಕ್ಕೂ ಎರಡನೆಯದು ಗಾಯನಕ್ಕೂ ಅನುರೂಪ ಸಾಧನವಾಗಿದ್ದುವು. ಪಂಕ್ತಿಗಳನ್ನೂ ವೃತ್ತಿಗಳನ್ನೂ ವಿಶ್ಲೇಷಿಸಿ ಅಂಶಗಳಿಗೆ ಹೆಸರು ಕೊಟ್ಟು ಛಂದಸ್ಸಿನ ಸಿದ್ಧಾಂತ ನಿಶ್ಚಯಿಸಿ ಒಂದು ಶಾಸ್ತ್ರ ಎದ್ದುಬಂದದ್ದು ಪ್ರ.ಶ. 7ನೆಯ ಶತಮಾನದಲ್ಲಿ; ಹೆಫೀಸ್ಟಿಯನ್ ಎಂಬ ಘನ ವಿದ್ವಾಂಸ ಛಂದಸ್ಸನ್ನು ಕುರಿತು 48 ಸಂಪುಟಗಳ ಉದ್ಗ್ರಂಥ ಬರೆದಿದ್ದನಂತೆ. ಅವನ ಮತ್ತು ಇತರರ ಗ್ರಂಥಗಳ ಚೂರುಪಾರು ಅವಶೇಷವೇ ಗ್ರೀಕ್ ಛಂದೋವ್ಯಾಸಂಗಿಗಳಿಗೆ ಆಧಾರ. ನಾಲ್ಕಾರು ಶತಮಾನಗಳ ಹಿಂದಣ ಕವಿತ್ವವ್ಯವಹಾರ ಹೆಫೀಸ್ಟಿಯನ್ ಮೊದಲಾದ ಪಂಡಿತರಿಗೆ ಎಷ್ಟರಮಟ್ಟಿಗೆ ಗೊತ್ತಿದ್ದಿತೋ ಹೇಳಲಾಗದು. ಆದರೂ ಅವರ ಮಾರ್ಗದರ್ಶನಕ್ಕೆ ಈಚಿನವರು ಒಪ್ಪದೆ ಹೋದರೆ ಪೂರ್ಣ ಅಜ್ಞಾನವೇ ಇನ್ನೊಂದು ದಾರಿ. ಆದ್ದರಿಂದ ನಿಜವೋ ಸುಳ್ಳೋ ಅರ್ಧ ನಿಜವೋ ಅಂತೂ ಗ್ರೀಕ್ ಛಂದಸ್ಸಿನ ಈ ವಿವರವನ್ನು ಎಲ್ಲರೂ ಬಳಸುತ್ತ ಬಂದಿದ್ದಾರೆ.

ಗ್ರೀಕ್ ಛಂದಸ್ಸಿನ ಮೂಲಾಂಶ ಮಾತ್ರೆ (ಕ್ವಾಂಟಿಟಿ) ಅರ್ಥಾತ್ ಉಚ್ಚಾರಾಂಶ ತೆಗೆದುಕೊಳ್ಳುವ ಕಾಲ. ಆ ಮಾನದಿಂದ ಹ್ರಸ್ವ ದೀರ್ಘ ಎಂಬ ಭೇದ ಉಚ್ಚಾರಾಂಶಗಳಿಗೆ ಉಂಟಾಯಿತು. ದೀರ್ಘ ತೆಗೆದುಕೊಳ್ಳುವ ಕಾಲ ಹ್ರಸ್ವದ ಎರಡರಷ್ಟು ಎಂದು ಎಣಿಕೆ (ಸಂಸ್ಕೃತದ ಲಘು ಗುರುಗಳನ್ನು ನೆನೆಯಬಹುದು). ಹ್ರಸ್ವ ದೀರ್ಘ ಉಚ್ಚಾರಾಂಶಗಳು ಕೂಡಿ ಗುಂಪು ಅಥವಾ ಗಣ (ಪೌಸ್ ಅಥವಾ ಫುಟ್) ಆಗುತ್ತದೆ. ಹಲವು ಗಣಗಳ ಕಿರು ಸರಪಣಿಯೇ ಪಂಕ್ತಿ ಅಥವಾ ಪಾದ (ಸ್ಟೈಕೋಸ್; ವರ್ಸ್). ಗಣಗಳಲ್ಲಿ ಹನ್ನೆರಡು ವಿಧದವು ಮುಖ್ಯ. ಹ್ರಸ್ವಕ್ಕೆ ∪ ಎಂಬುದೂ ದೀರ್ಘಕ್ಕೆ – ಎಂಬುದೂ ಲೇಖನ ಸಂಕೇತ:

| | | |
|---|---|---|
| 1. | ಅಯಾಂಬ್ | ∪ – |
| 2. | ಟ್ರೋಕಿ | – ∪ |
| 3. | ಸ್ಪಾಂಡಿ | – – |
| 4. | ಡ್ಯಾಕ್ಟಿಲ್ | – ∪ ∪ |
| 5. | ಆನಪೀಸ್ಟ್ | ∪ ∪ – ∪ ∪ – |
| 6. | ಟ್ರೈಬ್ರಾಕ್ | ∪ ∪ ∪ ∪ ∪ ∪ |
| 7. | ಕ್ರೆಟಿಕ್ | – ∪ – – ∪ – |
| 8. | ಬಾಕ್ಕಿಯಾಕ್ | ∪ – – |
| 9. | ಕೋರಿಯಾಂಬ್ | – ∪ ∪ – |
| 10. | ಪಿಯನ್ | – ∪ ∪ ∪ ಅಥವಾ ∪ ∪ ∪ – |
| 11. | ಎಪಿಟ್ರೈಟ್ – | ∪– – |
| 12. | ಡಾಕ್ಮಿಯಾಕ್ | ∪ – – ∪ – |

ಗಣದಲ್ಲಿ ಬರುವ ಹ್ರಸ್ವ ದೀರ್ಘ ಉಚ್ಚಾರಾಂಶಗಳ ಪರಸ್ಪರ ಪ್ರಮಾಣದ ಮೇಲೆ ಗಣಗಳು ವಿಂಗಡವಾಗುತ್ತಿದ್ದುವು. ಒಂದು ದೀರ್ಘ ಎರಡು ಹ್ರಸ್ವಗಳಿಗೆ ಸಮ ಎಂಬ ಸೂತ್ರದಿಂದ, ಡ್ಯಾಕ್ಟಿಲ್ ಸ್ಪಾಂಡಿ ಆನಪೀಸ್ಟ್ ಮೂರೂ ಐಸಾನ್ ಅಥವಾ ಸಮಪ್ರಮಾಣ ಗಣ. ಅಯಾಂಬ್ ಟ್ರೋಕಿ ಟ್ರೈಬ್ರಾಕ್ ಮೂರೂ ಡಿಪ್ಲಾಸಿಯಾನ್ ಅಥವಾ ದುಪ್ಪಟ್ಟು ಪ್ರಮಾಣ ಗಣ. ಕ್ರೆಟಿಕ್ ಪಿಯನ್ ಬಾಕ್ಕಿಯಾಕ್ ಮೂರೂ ಮೂರು : ಎರಡು ಅಥವಾ ಎರಡು : ಮೂರು ಪ್ರಮಾಣದ ಗಣ. ಎಮಿಯೊಸಿಯಾನ್ ಎಪಿಟ್ರೈಟ್ ಡಾಕ್ಮಿಯಾಕ್‌ಗಳಿಗೆ ಸಂಯುಕ್ತ ಗಣ ಎಂಬ ಅಂಕಿತವಿದೆ.

ಒಂದು ಗಣಕ್ಕೆ ಬದಲಾಗಿ ಇನ್ನೊಂದು ಗಣವನ್ನು ಇಡುವುದು ನಿಯಮಬದ್ಧವಾಗಿತ್ತು; ಎಂದರೆ ಅದರ ಕಾಲ ಇದರ ಕಾಲದಿಂದ ಹೆಚ್ಚು ಕಡಿಮೆ ಆಗಕೂಡದು. ಡ್ಯಾಕ್ಟಿಲ್ಲಿಗೆ ಬದಲು ಸ್ಪಾಂಡಿ ಬರಬಹುದು, ಕ್ರೆಟಿಕ್ಕಿಗೆ ಬದಲು ಪಿಯನ್, ಅಯಾಂಬಿಗೂ ಟ್ರೋಕಿಗೂ ಬದಲು ಟ್ರೈಬ್ರಾಕ್– ಹೀಗೆ.

ಪಂಕ್ತಿಗಳ ವಿಚಾರದಲ್ಲಿ ಗ್ರೀಕರ ಲೆಕ್ಕಚಾರ ಹೀಗಿತ್ತು : ಅಯಾಂಬ್ ಟ್ರೋಕಿ ಆನಪೀಸ್ಟ್ ಇವು ಎರಡೆರಡು ಬಂದರೆ ಅದೊಂದು ಮೆಟ್ರಾನ್ ಎಂದರೆ ಏಕಾಂಶ ಅಥವಾ ಏಕಮಾನ; ಅದಕ್ಕೆ ಡೈಪೊಡಿ ಎಂಬುದು ಛಂದೋನಾಮ. ಡ್ಯಾಕ್ಟಿಲ್ ಸ್ಪಾಂಡಿ ಒಂದೊಂದೇ ಒಂದು ಏಕಾಂಶ. ಆದ್ದರಿಂದ ಅಯಾಂಬಿಕ್ ಟೆಟ್ರಾಮೀಟರ್ ಎಂಬುದು ಎಂಟು ಅಯಾಂಬುಗಳ ಪಾದ. ಡ್ಯಾಕ್ಟಿಲಿಕ್ ಹೆಕ್ಸಾಮೀಟರ್ ಎಂಬುದಾದರೂ ಆರೇ ಡ್ಯಾಕ್ಟಿಲಿಕ್ಕುಗಳ ಪಾದ.

ತನಗೆ ಉಚಿತವೆಂದು ತೋರಿಬಂದ ಯಾವ ಲಕ್ಷಣದ ಪಂಕ್ತಿಯನ್ನಾದರೂ ಬಳಸಿಕೊಳ್ಳುವ ಸ್ವಾತಂತ್ರ್ಯ ಕವಿಗೆ ಇದ್ದರೂ ಒಂದೊಂದು ಕಾವ್ಯಪ್ರಕಾರಕ್ಕೆ ಒಂದೊಂದು ತೆರನ ಪಂಕ್ತಿ ಅಚ್ಚುಕಟ್ಟಾಗಿ ಹೊಂದಿಕೊಂಡು ಅದಕ್ಕೆ ಮೀಸಲಿಟ್ಟಂತೆ ನಡೆದುಬಂತು. ಭವ್ಯಕಾವ್ಯ (ಎಪಿಕ್) ಉಪಯೋಗಿಸಿಕೊಂಡದ್ದು ಡ್ಯಾಕ್ಟಿಲಿಕ್ ಹೆಕ್ಸಾಮೀಟರ್ – ಆರು ಡ್ಯಾಕ್ಟಿಲ್‌ಗಳ ಪಾದ. ಅಲ್ಲೊ ಇಲ್ಲೊ ಒಂದು ಸ್ಪಾಂಡಿ ಡ್ಯಾಕ್ಟಿಲ್ಲಿಗೆ ಬದಲಾಗಿ ಬರುತ್ತಿತ್ತು. ಕೊನೆಯ ಗಣ ಸ್ಪಾಂಡಿ ಎಂದೇ ಪರಿಗಣನೆ. ಪಾದದ ಮಧ್ಯೆ ಬಹುತೇಕ ಮೂರನೆಯ ಅಥವಾ ನಾಲ್ಕನೆಯ ಗಣದೊಳಗೆ ಒಂದು ಉಸಿರ್ದಾಣ ಅಥವಾ ವಿರಾಮ (ಸೀಸುರಾ) ಕಡ್ಡಾಯವಾಗಿತ್ತು. ಅಲ್ಲದೆ ಉಪವಿರಾಮ ಬರಬಹುದಾಗಿಯೂ ಇತ್ತು. ಬೇಕೆನ್ನಿಸಿದಾಗ ಮುಖ್ಯವಿರಾಮದಿಂದ ಪಂಕ್ತಿಗೆ ಎರಡು ಅಸಮ ಭಾಗ (ಕಮಾ) ಲಭಿಸುತ್ತಿತ್ತು.

ಆರು ಡ್ಯಾಕ್ಟಿಲ್‌ಗಳ ಒಂದನೆಯ ಪಂಕ್ತಿ, ಐದು ಡ್ಯಾಕ್ಟಿಲ್‌ಗಳ ಎರಡನೆಯ ಪಂಕ್ತಿ ಕೂಡಿ ಒಂದು ದ್ವಿಪದಿ ಆಗುತ್ತಿತ್ತು. ಅದು ಶೋಕಗೀತಗಳಿಗೆ ಬಳಸಲ್ಪಟ್ಟಿತಾಗಿ ಅದಕ್ಕೆ ಶೋಕಗೀತದ ದ್ವಿಪದಿ (ಎಲಿಜೆಯಿಕ್ ಕಪ್ಲೆಟ್) ಎಂದೇ ಹೆಸರು.

ನಾಟಕಗಳಲ್ಲಿ ಸಂಭಾಷಣಾ ಭಾಗಕ್ಕೆ ಸಮಂಜಸವೆಂದು ಕಂಡುಬಂದ ಪಂಕ್ತಿ ಅಯಾಂಬಿಕ್ ಟ್ರಿಮೀಟರ್– ಆರು ಅಯಾಂಬುಗಳ ಪಾದ. ಅದರ ರಚನಾಕ್ರಮ ಇದು:

∪ – ∪– ׀ ∪ – ∪ – ׀ ∪ – ∪ –

ಐದನೆಯ ಉಚ್ಚಾರಾಂಶದ ಅನಂತರ ಒಂದು ವಿರಾಮ ಸಾಮಾನ್ಯವಾಗಿ ಇರುತ್ತಿತ್ತು. ಕಾಮೆಡಿಗಳಲ್ಲಿ ಗಣಪಲ್ಲಟಕ್ಕೆ ಹೆಚ್ಚು ಅವಕಾಶ ಸಿಗುತ್ತಿತ್ತು. ಅಯಾಂಬಿನ ಬದಲು ಆನಪೀಸ್ಟ್ ಧಾರಾಳವಾಗಿ ಬರಬಹುದಾಗಿತ್ತು, ಕೊಟ್ಟಕೊನೆಯ ಅಯಾಂಬ್ ವಿನಾ. ಗಂಭೀರನಾಟಕದಲ್ಲಿ ಟ್ರೋಕೈಯಿಕ್ ಟೆಟ್ರಾಮೀಟರ್ ಎಂಟು ಟ್ರೋಕಿಗಳ ಕೂಟ ಪಂಕ್ತಿಯಾಗುತ್ತಿತ್ತು, ಹಲವುವೇಳೆ. ಅದರ ರಚನೆ ಹೀಗಿರುತ್ತಿತ್ತು :

– ∪– ∪̲ ׀ – ∪ ∪̲ ‖ – ∩ – ∪̲ ׀ – ∪ ∩

ಆನಪೀಸ್ಟೂ ಟ್ರೈಬ್ರಾಕೂ ಬದಲಾಗಿ ಬರುವ ರಿಯಾಯತಿಗೆ ಮಿತಿ ಇರಲಿಲ್ಲ.

ಯುದ್ಧ ಪ್ರಚೋದನೆಗೂ ಸೈನಿಕರ ನಡಿಗೆಗೂ ಆನಪೀಸ್ಟ್ ಪ್ರಮುಖವಾದ ಪಂಕ್ತಿ ಒಪ್ಪಾಗಿತ್ತು. ಹ್ರಸ್ವ ಉಚ್ಚಾರಾಂಶ ಹೆಜ್ಜೆ ಎತ್ತುವಾಗ, ದೀರ್ಘ ಉಚ್ಚಾರಾಂಶ ಹೆಜ್ಜೆ ಇಳಿಸಿ ನೆಲ ಘಟ್ಟಿಸುವಾಗ, ತಾಳದ ಹುಸಿ ಏಟುಗಳಂತೆ ಮೋಪಾಗಿ ಹೊಂದಿಕೊಳ್ಳುತ್ತಿದ್ದುವು. ಕದನಗೀತದಲ್ಲಿ ರೋದನದ ಭಾಗ ಇದ್ದಾಗ ಸ್ಪಾಂಡಿಗಳು ಹೆಚ್ಚಾಗಿ ಬಂದು ವಿಲಂಬ ಗಾಂಭೀರ್ಯದ ಅಭಿವ್ಯಕ್ತಿಗೆ ನೆರವಾಗುತ್ತಿದ್ದುವು.

ಭಾವಗೀತದಲ್ಲೂ ನೃತ್ಯಗೀತದಲ್ಲೂ ನಾನಾಬಗೆಯ ಪಂಕ್ತಿ ಬೇಕಾಗುತ್ತಿತ್ತು ಎಂದು ಹೇಳಬೇಕಾಗಿಲ್ಲ. ಒಂದೇ ವೃತ್ತದಲ್ಲಿ ಹಲವು ತೆರನ ಪಂಕ್ತಿಗಳನ್ನು ಜೋಡಿಸುವುದಕ್ಕೆ ಅಭ್ಯಂತರವಿರಲಿಲ್ಲ. ಸ್ಯಾಫೊ, ಆಲ್ಕಿಯಸ್ ತಮ್ಮದೇ ಆದ ವೃತ್ತಕ್ಕೆ ಹೆಸರಾದರು.

ಸ್ಯಾಫೊ ವೃತ್ತ :

– ∪ ׀ – ∪̲ ׀ – ∪ ∪ ׀ – ∪ ׀ – ∪̲

ಇಂಥ ಮೂರು ಪಂಕ್ತಿ, ಕೊನೆಗೆ ಅಡಾನಿಕ್ ಎಂಬ ಈ ಪಂಕ್ತಿ :

– ∪ ∪ ׀ – ∪̲ .

ಆಲ್ಕಿಯಸ್ ವೃತ್ತ :

∪̲ – ׀ – ∪ ׀ – ∪̲ ׀ – ∪ ∪ ׀ – ∪ ׀ –

ಇಂಥ ಪಂಕ್ತಿ ಮತ್ತೆರಡು, ತದನಂತರ

∪̲ ׀ – ∪ ׀ – ∪̲ ׀ – ∪ ׀ – ∪̲

– ∪ ∪ ׀ – ∪ ∪ ׀ – ∪ ׀ – ∪̲

ಪಿಂಡಾರ್ ಬಳಸಿಕೊಂಡ ಪಂಕ್ತಿಗಳಿಗೆ ಬಲು ವೈವಿಧ್ಯವಿತ್ತಲ್ಲದೆ ಎಪಿಟ್ರೈಟ್ ಗಣ ಅಧಿಕವಾಗಿತ್ತು. (ಎಸ್.ವಿ.ಆರ್.; ಎಲ್.ಎಸ್.ಎಸ್.)

**ಗ್ರೀಕ್ ಧರ್ಮ :** ಐರೋಪ್ಯ ನಾಗರಿಕತೆ, ಸಂಸ್ಕೃತಿಗಳ ಮೇಲೆ ಗ್ರೀಕರ ಪ್ರಭಾವ ಬಹಳ ತೀಕ್ಷ್ಣವಾದುದು; ಬಹಳ ಕಾಲ ನಡೆದುಬಂದಂಥದು. ರಾಜಕೀಯವಾಗಿ ಅಲ್ಲದೆ ಸಾಮಾಜಿಕವಾಗಿ, ಧಾರ್ಮಿಕವಾಗಿ ಕೂಡ ಅವರು ಇತರ ದೇಶಗಳ ಮೇಲೆ ತಮ್ಮ ಪ್ರಖರವಾದ ಪ್ರಭಾವವನ್ನು ಬೀರಿದರು. ಪ್ರಾರಂಭಕಾಲದಿಂದ ಕ್ರಿಸ್ತಮತ ಗ್ರೀಸಿನಲ್ಲಿ ಬೇರೂರಿದ ವರೆಗಿನ ಗ್ರೀಕ್ ಧರ್ಮದ ಪರಿಚಯವನ್ನು ಇಲ್ಲಿ ಕೊಡಲಾಗಿದೆ. ಮೊದಲ ಭಾಗದಲ್ಲಿ ಆ ಧರ್ಮದ ಒಟ್ಟಾರೆ ತಾತ್ತ್ವಿಕ ಚಿಂತನೆ ಎಂಥದು ಎಂಬುದನ್ನೂ ಎರಡನೆಯ ಭಾಗದಲ್ಲಿ ಧರ್ಮದ ಇತಿಹಾಸವನ್ನೂ ನೋಡಬಹುದು.

*

**ಗ್ರೀಕ್ ತತ್ತ್ವಜಿಜ್ಞಾಸೆಯ ಸಾರಸಂಗ್ರಹ :** ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಕುರಿತು ಚಿಂತಿಸುವುದು ತತ್ತ್ವಜಿಜ್ಞಾಸೆಯ ಮೂಲ. ಈ ರೀತಿಯ ಪಾಶ್ಚಾತ್ಯ ತತ್ತ್ವಜಿಜ್ಞಾಸೆ ಗ್ರೀಸಿನಲ್ಲಿ ಪ್ರ.ಶ.ಪೂ. ಏಳನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಇದಕ್ಕೆ ಸ್ಫೂರ್ತಿ ಒದಗಿದ್ದು ಈಜಿಪ್ಟ್, ಬ್ಯಾಬಿಲಾನುಗಳಿಂದ ಎಂದು ಕೆಲವರೂ ಪ್ರಾಚ್ಯದೇಶಗಳಿಂದ ಎಂದು ಕೆಲವರೂ ಅಭಿಪ್ರಾಯಪಡುತ್ತಾರೆ. ಇದರ ಸತ್ಯಾಸತ್ಯತೆಗಳನ್ನು ನಿರ್ಧರಿಸುವುದು ಕಷ್ಟ. ಈ ದೇಶಗಳ ಪ್ರಭಾವ ಅಲ್ಪಸ್ವಲ್ಪ ಇದ್ದಿರಬಹುದು; ಆದರೆ ಗ್ರೀಕರ ತತ್ತ್ವಚಿಂತನೆ ತನ್ನದೇ ಆದ ಆಧಾರದ ಮೇಲೆ ಬೆಳೆಯಿತೆಂಬುದರಲ್ಲಿ ಸಂಶಯವಿಲ್ಲ.

ಗ್ರೀಕರ ತತ್ತ್ವಚಿಂತನೆಯಲ್ಲಿ ಆ ಜನರ ರೀತಿನೀತಿಗಳನ್ನು ಹೊಂದಿಕೊಂಡ ಒಂದು ವೈಶಿಷ್ಟ್ಯವಿದೆ. ಈ ವೈಶಿಷ್ಟ್ಯಕ್ಕೆ ಭೌಗೋಳಿಕ, ಮಾನಸಿಕ ಮತ್ತು ಸಾಮಾಜಿಕ ಕಾರಣಗಳಿವೆ. ಗ್ರೀಕರಲ್ಲಿ ವಿಶ್ವವನ್ನು ಕುರಿತು ಅದಮ್ಯ ಕುತೂಹಲವಿದ್ದುದು ಕಂಡುಬರುತ್ತದೆ. ಜೀವನದ ವೈವಿಧ್ಯ, ಯುಕ್ತಾಯುಕ್ತತೆಗಳಲ್ಲಿ, ಸೌಂದರ್ಯೋಪಾಸನೆಯಲ್ಲಿ ಒಂದು ಸಹಜ ಉತ್ಸಾಹ ಅವರಲ್ಲಿತ್ತು. ವಿಶ್ವರಹಸ್ಯವನ್ನು ಭೇದಿಸುವ ಮೊಟ್ಟಮೊದಲ ಐರೋಪ್ಯ ಪ್ರಯತ್ನ ಗ್ರೀಕ್ ಚಿಂತಕರಲ್ಲಿ ಕಾಣುತ್ತದೆ. ಗ್ರೀಕರು ಸ್ವಾತಂತ್ರ್ಯಪ್ರಿಯರೂ ನೈಸರ್ಗಿಕ ಸೌಂದರ್ಯಕ್ಕೆ ಮಾರುಹೋದವರೂ ಆಗಿದ್ದರು. ಸಮುದ್ರದಿಂದ ಸುತ್ತುವರಿಯಲ್ಪಟ್ಟಿದ್ದರಿಂದ ಗ್ರೀಸಿನ ಜನ ಸಾಹಸಿಗಳಾಗಲು ಅವಕಾಶವಾಯಿತು. ಅವರಿಗೆ ಹೊರದೇಶಗಳ ಪರಿಚಯ ಮಾಡಿಕೊಳ್ಳಬೇಕಾದ ಅಗತ್ಯವಿತ್ತು; ಇತರ ದೇಶಗಳೊಡನೆ ವಾಣಿಜ್ಯ ವ್ಯಾಪಾರಗಳಲ್ಲಿ ಅವರು ತೊಡಗಿದ್ದರು. ಹತ್ತಿರದ ಇತರ ದೇಶಗಳಲ್ಲಿ ವಸಾಹತುಗಳನ್ನು ನಿರ್ಮಿಸುವ ಅವಕಾಶ ಅವರದಾಯಿತು. ಇದರಿಂದಾಗಿ ಅವರಿಗೆ ಇತರರೊಡನೆ ಸಂಪರ್ಕ ಬೆಳೆಯಿತು. ಹೊರಪ್ರಪಂಚದ ಪರಿಚಯ ಅವರಿಗೆ ಸ್ಫೂರ್ತಿ ನೀಡಿದ್ದರಲ್ಲಿ ಆಶ್ಚರ್ಯವಿಲ್ಲ. ಅವರ ದೃಷ್ಟಿ ವಿಶಾಲವಾಗಲು ಇದೂ ಒಂದು ಕಾರಣವಾಯಿತು.

ಅವರು ಬೆಳೆಸಿದ ತತ್ತ್ವಜ್ಞಾನ ಅವರ ನಗರರಾಜ್ಯವಾದ ಅಥೆನ್ಸಿನಲ್ಲಿಯೇ ಅಲ್ಲದೆ ವಸಾಹತುಗಳಲ್ಲಿಯೂ ಬೆಳೆದು ಬೆಳಗಿತು. ಪರ್ಷಿಯದೊಡನೆ ಯುದ್ಧ ಮುಗಿದ ಮೇಲೆ ಅಥೆನ್ಸ್ ಗ್ರೀಕ್ ಸಂಸ್ಕೃತಿಯ ಕೇಂದ್ರವಾಯಿತು; ಐಷ್ಯನ್ಯನರಿನಲ್ಲಿ ಗ್ರೀಸಿನ ತತ್ತ್ವಜ್ಞಾನ ರೂಪುಗೊಂಡಿತು. ದೇವರೆಂದರೆ ಏನು, ಈ ಜಗತ್ತಿನ ಸ್ವರೂಪವೆಂಥದು, ನಾವು ಯಾರು, ನಮ್ಮ ಸ್ವರೂಪವೇನು ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸ ಪ್ರಾರಂಭವಾಯಿತು. ಹೀಗೆ ಹೊಸ ಜಿಜ್ಞಾಸೆ ಆರಂಭವಾದಾಗ, ಪುರಾಣಪ್ರಕ್ರಿಯೆ ಮಸುಕಾಯಿತು.

ಅತಿ ಪ್ರಾಚೀನ ಗ್ರೀಸಿನಲ್ಲಿ ಈ ರೀತಿಯ ಪ್ರಶ್ನೆಗಳು ಎದ್ದಿದ್ದವೇ, ಅವುಗಳಿಗೆ ದೊರೆತ ಉತ್ತರಗಳೇನು ಎನ್ನುವುದರ ಮೇಲೆ ಬೆಳಕು ಚೆಲ್ಲುವಷ್ಟು ಸಂಗತಿಗಳು ದೊರೆತಿಲ್ಲ. ಎಷ್ಟೋ ಕಟ್ಟುಕಥೆಗಳು ಪ್ರಚಾರದಲ್ಲಿದ್ದಿರಬಹುದೆಂದು ಮಾತ್ರ ಊಹಿಸಬಹುದಾಗಿದೆ. ಆದರೆ ಅನಂತರ ನಡೆದ ಜಿಜ್ಞಾಸೆಗೆ ಅಲ್ಲಿ ಅವಕಾಶವಾದಂತಿಲ್ಲ. ಈ ಪೌರಾಣಿಕ ಮನೋಭಾವ ಕ್ರಮೇಣ ಜಾರಿಹೋಗಿ ನೂತನ ತಾತ್ತ್ವಿಕ ಪ್ರಶ್ನೆಗಳು ಎದ್ದಿರಬೇಕು ಎನ್ನಿಸುತ್ತದೆ. ಗ್ರೀಸಿನ ಪ್ರಾಚೀನ ಕವಿಗಳಾದ ಹೋಮರ್ ಮತ್ತು ಹೆಸಿಯಡ್ಡರ ಕಾವ್ಯಗಳಲ್ಲಿ ಧರ್ಮಕ್ಕೆ ಪ್ರಾಧಾನ್ಯವಿದ್ದರೂ ತತ್ತ್ವಚಿಂತನೆಯ ಕುರುಹುಗಳೂ ಅಲ್ಲಲ್ಲಿ ಕಂಡುಬರುತ್ತವೆ. ನಿಸರ್ಗದಲ್ಲಿನ ಸಂಗತಿಗಳಿಗೆ ನೈಸರ್ಗಿಕ ಕಾರಣಗಳನ್ನು ಹುಡುಕುವ ಪ್ರವೃತ್ತಿಯನ್ನು ಹೆಸಿಯಡ್ಡನಲ್ಲಿ ಕಾಣಬಹುದು. ಜ್ಯೂಸ್ ಸೃಷ್ಟಿಕರ್ತ ಎಂಬ ಅಭಿಪ್ರಾಯ, ಜಗತ್ತಿನ ಉಗಮ ಏಕತತ್ತ್ವವೊಂದರಿಂದ ಆಯಿತು ಎನ್ನುವ ಅರಿವು ಇಲ್ಲಾಗಲೇ ಮೂಡಿದೆ.

ಅಯೋನಿಯದ ತತ್ತ್ವಜ್ಞಾನಿಗಳು ಮೊದಮೊದಲಿಗೆ ಈ ರೀತಿಯ ಚಿಂತನೆಯನ್ನು ವ್ಯವಸ್ಥಿತವಾಗಿ ಮಾಡಲು ಆರಂಭಿಸಿದರು. ಬರ್ನೆಟ್ ಎಂಬ ವಿದ್ವಾಂಸ ಹೇಳುವಂತೆ, ಇವರು ಪುರಾಣಕಥೆಗಳನ್ನು ಹೇಳುವುದನ್ನು ಕೈಬಿಟ್ಟರು; ಕಥೆಯ ಸ್ಥಾನದಲ್ಲಿ ವಿಚಾರ ಆರಂಭವಾಯಿತು. ಅರಿಸ್ಟಾಟಲ್ ಇವರನ್ನು ಭೌತತತ್ತ್ವಜ್ಞಾನಿಗಳು ಎಂದು ಕರೆಯುತ್ತಾನೆ. ಜಗತ್ತಿನ ಘಟನೆಗಳೆಲ್ಲ ದೇವದೇವತೆಗಳಿಂದ ಆಗುತ್ತವೆ ಎಂಬ ನಂಬಿಕೆಯನ್ನು ತೊರೆದು ಇವಕ್ಕೆ ಕಾರಣವಾದ ಕೆಲವು ತತ್ತ್ವಗಳನ್ನು ಹುಡುಕಲು ಇವರು ತೊಡಗಿದರು.

ಮೊದಮೊದಲಿಗೆ ಗ್ರೀಕ್ ತತ್ತ್ವಜ್ಞಾನ ನಿಸರ್ಗದ ಸಮಸ್ಯೆಗಳನ್ನು ಎದುರಿಸಿತು. ಈ ವಿಶ್ವದಲ್ಲಿರುವ ಎಲ್ಲ ವಿವಿಧ ವಸ್ತುಗಳಿಗೂ ಮೂಲಭೂತವಾದ ದ್ರವ್ಯವಾವುದು ಎಂಬ ಪ್ರಶ್ನೆ ಮುಖ್ಯವಾಯಿತು. ಗ್ರೀಕ್ ತತ್ತ್ವಜ್ಞಾನದ ಚರಿತ್ರೆಯಲ್ಲಿ ಏಳು ಪ್ರಾಜ್ಞರ ಉಲ್ಲೇಖವಿದೆ. ಈ ಪ್ರಾಜ್ಞರಲ್ಲಿ ಥೇಲ್ಸ್, ಬಯಾಸ್ ಮತ್ತು ಸೋಲನರು ಸೇರಿದ್ದಾರೆ. ಇವರ ವಚನಗಳಲ್ಲಿ ಜೀವನವನ್ನು ನಡೆಸಿಕೊಳ್ಳಬೇಕಾದ ರೀತಿನೀತಿಗಳ ಸೂಚನೆಗಳಿವೆ. ಇಲ್ಲಿ ದರ್ಶನಕ್ಕಿಂತಲೂ ಧರ್ಮದ ಅಂಶವೇ ಹೆಚ್ಚಾಗಿದೆ.

ಗ್ರೀಕರ ಚಿಂತನೆ ಕ್ರಮೇಣ ಬಹಿರಂಗದಿಂದ ಅಂತರಂಗದೆಡೆಗೆ ಒಲಿಯಿತು. ಮಾನವನ ಅಂತರಂಗವನ್ನು ಕುರಿತ ಚಿಂತನೆ ಸಾಕ್ರಟೀಸ್, ಪ್ಲೇಟೊ ಮತ್ತು ಅರಿಸ್ಟಾಟಲರ ತತ್ತ್ವಜ್ಞಾನದಲ್ಲಿ ಪರಾಕಾಷ್ಠೆ ಮುಟ್ಟಿತು.

ಗ್ರೀಕ್ ತತ್ತ್ವಜ್ಞಾನದ ಚರಿತ್ರೆಯಲ್ಲಿ ಮೂರು ಘಟ್ಟಗಳನ್ನು ವಿಂಗಡಿಸಬಹುದು. ಪ್ರ.ಶ.ಪೂ. 600ರಿಂದ ಪ್ರ.ಶ.ಪೂ. 450ರ ವರೆಗೆ ಇದ್ದುದು ಎಂದು ಗ್ರೀಕ್ ಇತಿಹಾಸಜ್ಞರು ಎಣಿಸುವ ಮೊದಲನೆಯ ಘಟ್ಟವನ್ನು ಭೌತಿಕ ಚಿಂತನೆಯ ಘಟ್ಟವೆಂದು ಕರೆಯಬಹುದು. ಎರಡನೆಯದನ್ನು ಮಾನವತೆಯ ಯುಗವೆಂದು ಕರೆಯಬಹುದು. ಮಾನವ ಮತ್ತು

ಜಗತ್ತಿನಲ್ಲಿ ಅವನ ನಡೆನುಡಿಗಳು, ನೀತಿನಿಯಮಗಳು ಪ್ರಧಾನವಾಗಿ ಈ ಕಾಲದಲ್ಲಿ ಚಿಂತ್ಯವಾದವು. ಮೂರನೆಯದಾದ ಸಿದ್ಧಾಂತಿಗಳ ಯುಗದಲ್ಲಿ ಜಗತ್ತಿನ ಒಟ್ಟು ಸ್ವರೂಪವನ್ನು ನಿರ್ಣಯಿಸುವ ಪ್ರಯತ್ನ ನಡೆಯಿತು. ಇದನ್ನು ವಿಶ್ವದರ್ಶನದ ಯುಗವೆಂದು ಕರೆಯಬಹುದು.

ಮೊದಲ ಘಟ್ಟಕ್ಕೆ ಸೇರಿದ ತಾತ್ತ್ವಿಕರು ಥೇಲ್ಸ್, ಅನಾಕ್ಸಿಮೇಂಡರ್, ಅನಾಕ್ಸಿಮೆನಿಸ್, ಪೈಥಾಗೊರಸ್, ಕ್ಸೆನೋಫೆನಿಸ್, ಪಾರ್ಮೆನಿಡಿಸ್, ಜೀನೋ, ಮೊದಲಾದವರು. ಹೆರಾಕ್ಲಿಟಸ್, ಎಂಪಿಡಾಕ್ಲಿಸ್, ಲೂಸಿಪಸ್, ಡೆಮೊಕ್ರಿಟಸ್ ಮತ್ತು ಅನಾಕ್ಸೊರಾಸರೂ ಇದೇ ಘಟ್ಟಕ್ಕೆ ಸೇರಿದವರು. ಎರಡನೆಯ ಮತ್ತು ಮೂರನೆಯ ಘಟ್ಟಗಳಿಗೆ ಸೇರಿದವರು ಸಾಫಿಸ್ಟರು, ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್, ಸ್ಟೋಯಿಕ್ ಪಂಥದವರು, ಎಪಿಕ್ಯೂರಸ್, ಸಿನೆಕ, ಎಪಿಕ್ಟೆಟಸ್, ಮಾರ್ಕಸ್ ಆರಿಲಿಯಸ್, ಫೈಲೋ, ಪ್ಲೋಟೈನಸ್, ಪ್ರಾಕ್ಲಸ್ ಮೊದಲಾದವರು. ಒಟ್ಟಿನಲ್ಲಿ ಇವರ ಆಲೋಚನೆಗಳನ್ನು ಹೀಗೆ ಕ್ರೋಡೀಕರಿಸಿ ಹೇಳಬಹುದು. ಮೊದಮೊದಲು ಗ್ರೀಕ್ ದಾರ್ಶನಿಕರಲ್ಲಿ ಜಡ– ಚೇತನಗಳಿಗಿರುವ ವ್ಯತ್ಯಾಸ ಗಣನೆಗೆ ಬರಲಿಲ್ಲ. ಇವರ ಮುಖ್ಯಪ್ರಶ್ನೆ ಪ್ರಥಮ ದ್ರವ್ಯ ಯಾವುದು ಎಂಬುದು. ಪಂಚಭೂತಗಳಿಂದ ನಿರ್ಮಿತವಾದ ಈ ಜಗತ್ತಿನ ಮೂಲದ್ರವ್ಯ ಪೃಥ್ವೀ, ಅಪ್ಪು, ತೇಜಸ್ಸು, ವಾಯು– ಇವುಗಳಲ್ಲಿ ಒಂದಾಗಿರಬೇಕೆಂದು ಈ ತತ್ತ್ವಜ್ಞಾನಿಗಳು ಊಹಿಸಿದರು. ಆತ್ಮವೊಂದು ಇದೆಯೇ ಈಶ್ವರನೆಂಬುವನು ಇದ್ದಾನೆಯೇ ಎಂಬ ಪ್ರಶ್ನೆಗಳ ಗೋಜಿಗೆ ಹೋಗಲಿಲ್ಲ. ಈ ಮೂಲದ್ರವ್ಯದ ಅನ್ವೇಷಣೆಯಲ್ಲಿ ಪ್ರಾಸಂಗಿಕವಾಗಿ ಈ ಜಗತ್ತು ಸಂತತ ಪರಿವರ್ತನೆಗೆ ಒಳಗಾಗಿದೆ ಎಂಬ ಅಂಶ ಇವರಿಗೆ ಸ್ಪಷ್ಟವಾಯಿತು. ಹಾಗೂ ಪರಿವರ್ತನೆಯನ್ನು ಹೊಂದದ ವಸ್ತು ಜಗತ್ತಿನಲ್ಲಿದೆಯೇ ಎಂಬ ಪ್ರಶ್ನೆಯೂ ಎದ್ದುನಿಂತಿತು. ಕೆಲವರು ಪರಿಣಾಮವೇ ಸತ್ಯವೆಂದರು, ಮತ್ತೆ ಕೆಲವರು ಮಿಥ್ಯೆಯೆಂದರು. ಮತ್ತೆ ಕೆಲವು ದಾರ್ಶನಿಕರು ಈ ಜಗತ್ತು ಪರಮಾಣುಗಳ ಸಂಯೋಗದಿಂದ ಆಯಿತೆಂದರು. ಕ್ರಮೇಣ ಭೌತಿಕವೂ ಅಭೌತಿಕವೂ ಆದ ವಸ್ತುಗಳಲ್ಲಿನ ವ್ಯತ್ಯಾಸ ಮನವರಿಕೆಯಾಗತೊಡಗಿತು. ಆತ್ಮ– ಶರೀರ ಎನ್ನುವ ಭೇದ ಕ್ರಮೇಣ ಸ್ಪಷ್ಟವಾಯಿತು. ಬುದ್ಧಿ ನಿಯಾಮಕಶಕ್ತಿ ಎಂಬ ಭಾವ ಉದಯವಾಯಿತು. ಮನುಷ್ಯನ ಜ್ಞಾನ ವಸ್ತುತಃ ನಿಜವೇ ಭ್ರಮೆಯೇ ಎಂಬ ಪ್ರಶ್ನೆ ಎದ್ದು ನಿಂತಿತು. ಮನುಷ್ಯನ ಜ್ಞಾನ ಎಲ್ಲಿಯ ವರೆಗೆ ನಮ್ಮನ್ನು ಕೊಂಡೊಯ್ಯಬಲ್ಲದು ಎನ್ನುವ ವಿಮರ್ಶೆ ಆರಂಭವಾಯಿತು. ಕೆಲವು ದಾರ್ಶನಿಕರು ಮೂಲತತ್ತ್ವದ ಅನ್ವೇಷಣೆ ವ್ಯರ್ಥವೆಂದೂ ಈ ತರ್ಕವನ್ನು ಬಿಟ್ಟುಕೊಟ್ಟು ಜೀವನದಲ್ಲಿ ಶಾಂತಿ ಮತ್ತು ಸುಖವನ್ನು ಏರ್ಪಡಿಸುವ ಪ್ರಯತ್ನ ಮಾಡುವುದೇ ಒಳ್ಳೆಯದೆಂದರು. ಸಾಕ್ರಟೀಸ್ ಸಹ ಶುಷ್ಕವಾದವನ್ನು ಖಂಡಿಸಿದ. ಮನುಷ್ಯನ ಸಾಮಾನ್ಯರೂಪವಾದ ವಸ್ತುಜ್ಞಾನವೇ ಪಾರಮಾರ್ಥಿಕ ಜ್ಞಾನವೆಂದು ಆತ ಹೇಳಿದ; ಹಾಗೂ ಪಾರಮಾರ್ಥಿಕ ಜ್ಞಾನವನ್ನು ಸಂಪಾದಿಸಿದ ಮನುಷ್ಯ ಶ್ರೇಯೋವಂತನಾಗುತ್ತಾನೆಂದು ಸಾರಿದ. ಜೀವನವನ್ನು ಯಾವ ರೀತಿ ನಡೆಸಿಕೊಂಡರೆ ಪರಮಪುರುಷಾರ್ಥದ ಸಾಧನೆಯಾಗಬಹುದೆಂಬುದನ್ನೂ ವಿವರಿಸಿದ. ಇದರಿಂದ ಆಚಾರಶಾಸ್ತ್ರ ವೈಜ್ಞಾನಿಕರೂಪದಲ್ಲಿ ಪ್ರಾರಂಭವಾಯಿತು. ಇದರಿಂದ ಗ್ರೀಸಿನ ತತ್ತ್ವಜ್ಞಾನದಲ್ಲಿ ನಾಲ್ಕು ಮುಖ್ಯ ಪಂಥಗಳು ಹುಟ್ಟಿದುವು: ಪ್ಲೇಟೊ ಮತ, ಅರಿಸ್ಟಾಟಲನ ಮತ, ಸ್ಟೋಯಿಕರ ಮತ ಮತ್ತು ಎಪಿಕ್ಯೂರಸ್ ಮತ. ಸಂಶಯವಾದಿಗಳ ಐದನೆಯ ಮತವೂ ಅಲ್ಲಿ ಬೆಳೆಯಿತು. ಹೀಗೆ ಜಡವಾದ, ಸಂಶಯವಾದ, ಅಧ್ಯಾತ್ಮವಾದಗಳು ಘಟ್ಟಘಟ್ಟವಾಗಿ ಗ್ರೀಕ್‌ದರ್ಶನದಲ್ಲಿ ತಲೆಯೆತ್ತುತ್ತ ಬಂದವು.

ಪ್ಲೇಟೊವಿನ ಮತ ಬಾಹ್ಯಪದಾರ್ಥಗಳು ಅಸತ್ತೆಂದೂ ಶುದ್ಧಜ್ಞಾನ ಸತ್ತಿನ ಅರಿವನ್ನು ತಂದುಕೊಡುವುದೆಂದೂ ಬೋಧಿಸುತ್ತದೆ. ಗ್ರೀಕ್‌ದರ್ಶನದ ಅಂತಿಮ ಕಾಲದಲ್ಲಿ ಪ್ಲೇಟೊವಿನ ಪ್ರಭಾವದಿಂದ ಸಮಾಧಿವಾದ (ಡಾಕ್ಟ್ರಿನ್ ಆಫ್ ಎಕ್ಸ್‌ಟಸಿ) ಹುಟ್ಟಿತು. ಇದಕ್ಕೆ ನಿಯೋ ಪ್ಲೇಟೋನಿಸಂ ಎಂದು ಹೆಸರು. ಇದನ್ನು ಪ್ರತಿಪಾದಿಸಿದವ ಪ್ಲೋಟೈನಸ್. ಗ್ರೀಸ್ ದೇಶದ ಅವನತಿಯಾದರೂ ಈ ದರ್ಶನಗಳ ಪ್ರಭಾವ ರೋಮ್, ಅಲೆಗ್ಸಾಂಡ್ರಿಯ ಮೊದಲಾದ ನಗರಗಳಲ್ಲಿ ಸುರಕ್ಷಿತವಾಗಿ ಉಳಿಯಿತು. (ಎಂ.ವೈ.)

**ಗ್ರೀಕ್ ಧರ್ಮದ ಇತಿಹಾಸ :** ಪ್ರಾಚೀನ ಧರ್ಮಗಳಲ್ಲಿ ಗ್ರೀಕ್ ಧರ್ಮ ತುಂಬ ಮುಖ್ಯವಾದದ್ದು. ಅದರ ಬೆಳವಣಿಗೆ ಪ್ರ.ಶ.ಪೂ. ಎರಡು ಸಾವಿರದಿಂದ ಪ್ರ.ಶ. ಒಂದನೆಯ ಶತಮಾನದ ವರೆಗೆ ದೀರ್ಘವಾದದ್ದು. ಅದರ ಬೆಳವಣಿಗೆಯ ಅವಧಿಯನ್ನು ಸ್ಥೂಲವಾಗಿ ನಾಲ್ಕು ಘಟ್ಟಗಳಾಗಿ ವಿಭಾಗಿಸಬಹುದು. ಮೊದಲನೆಯದು ಪ್ರ.ಶ.ಪೂ. 2000ದಿಂದ ಹೋಮರನ ವರೆಗೆ, ಎರಡನೆಯದು ಪ್ರ.ಶ.ಪೂ. 900 ರಿಂದ ಪ್ರ.ಶ.ಪೂ. 500ರ ವರೆಗಿನದು, ಅಂದರೆ ಗ್ರೀಕ್ ವಸಾಹತುಗಳ ವಿಸ್ತರಣ ಕಾಲದಿಂದ ಪಾರಸಿಕರ ದಂಡಯಾತ್ರೆಯ ವರೆಗೆ, ಮೂರನೆಯದು ಪ್ರ.ಶ.ಪೂ. 500ರಿಂದ ಪ್ರ.ಶ.ಪೂ. 338ರ ವರೆಗಿನದು. ಈ ಕಾಲದಲ್ಲಿ ಗ್ರೀಸ್ ಮ್ಯಾಸಿಡೋನಿಯದ ಆಳಿಕೆಗೆ ಒಳಪಟ್ಟಿತು. ನಾಲ್ಕನೆಯದು ಪ್ರ.ಶ.ಪೂ. 228 ರಿಂದ ಪ್ರ.ಶ. ಒಂದನೆಯ ಶತಮಾನದ ಕೊನೆಯವರೆಗಿನದು. ಈ ಕಾಲದಲ್ಲಿ ಗ್ರೀಸ್ ರೋಮನರ ಆಳಿಕೆಗೆ ಒಳಪಟ್ಟು ಗ್ರೀಕ್ ಸಂಸ್ಕೃತಿ ರೋಮನ್ ರಾಜ್ಯದಲ್ಲಿ ಹರಡಿತು. ಕೊನೆಯಲ್ಲಿ ಗ್ರೀಕ್‌ಮತ ಕ್ರೈಸ್ತಮತದ ಪ್ರಭಾವಕ್ಕೆ ಒಳಗಾಗಿ ಅಲ್ಲಿಂದ ಮುಂದೆ ನಾಮಾವಶೇಷವಾಯಿತು. ಎರಡು ಸಾವಿರ ವರ್ಷಗಳ ಹಿಂದೆಯೇ ಇದು ಕ್ಷಯಿಸಿದುದರಿಂದ ಇದರ ವಿಚಾರವಾಗಿ ಯಥಾವತ್ತಾದ ವಿವರಣೆ ಇತ್ತೀಚಿನವರೆಗೂ ದೊರೆತಿರಲಿಲ್ಲ. ಇತ್ತೀಚೆಗೆ ಗ್ರೀಕ್ ಸಂಸ್ಕೃತಿಯ ವಿಚಾರವಾಗಿ ನಡೆಸಿದ ಸಂಶೋಧನೆಗಳಿಂದ ಅದರ ನಿಜಸ್ವರೂಪವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಲು ಸಾಧ್ಯವಾಗಿದೆ. ಗ್ರೀಕ್ ಧರ್ಮದ ತತ್ತ್ವಜಿಜ್ಞಾಸೆಯ ತಿರುಳು ಏನು ಎನ್ನುವುದನ್ನು ಮೇಲೆ ನೋಡಲಾಯಿತು. ಈಗ ಗ್ರೀಕ್ ಮತಾಚರಣೆಗಳ ಸ್ಥೂಲ ರೂಪರೇಖೆಯನ್ನು ಗುರುತಿಸಲಾಗುತ್ತದೆ.

ಗ್ರೀಕ್ ಮತ ಚರಿತ್ರೆಯ ಸಂಶೋಧನೆಗೆ ಆಧಾರಸಾಮಗ್ರಿ ಬಹು ಮುಖ್ಯವಾಗಿದೆ. ಪ್ರಾಚೀನ ಗ್ರೀಕ್ ಸಾಹಿತ್ಯದಲ್ಲಿ ಮತವಿಚಾರ ಬಹುಮುಖ್ಯವಾದದ್ದು. ಕಾವ್ಯಗಳಲ್ಲಿ ಹೋಮರನ ಒಡಿಸ್ಸಿ ಮತ್ತು ಇಲಿಯಡ್ (ಪ್ರ.ಶ.ಪೂ. 9 ಮತ್ತು 10ನೆಯ ಶತಮಾನಗಳು), ಹೆಸಿಯಡ್ಡನ ಕವನಗಳು (ಪ್ರ.ಶ.ಪೂ. 7ನೆಯ ಶತಮಾನ), ಥಿಯೋಗ್ನಿಸನ ಮತ್ತು ಸೋಲನನ (ಪ್ರ.ಶ.ಪೂ. 6ನೆಯ ಶತಮಾನ) ಶೋಕದ್ವಿಪದಿಗಳು ಸಾಫೊಕ್ಲೀಸನ ರುದ್ರನಾಟಕಗಳು, ಲೈಕೋಪ್ರಾನಿನ ಕ್ಯಾಸಾಂಡ್ರ, ಕ್ಯಾಲಿಮಾಕಸ್ಸಿನ ಸ್ತೋತ್ರಗೀತೆಗಳು, ಅಪೊಲೋನಿಯಸ್ಸನ ಮಹಾಕಾವ್ಯ ರೋಡಿಯಸ್ ಮೊದಲಾದವೂ ಗದ್ಯಸಾಹಿತ್ಯದಲ್ಲಿ ಪ್ಲೇಟೊವಿನ ಸಂವಾದಗಳು, ಹೀರಡಾಟಸಿನ ಚರಿತ್ರೆ, ಡೆಮಾಸ್ಥನೀಸನ ಮಹಾಭಾಷಣಗಳು ಇವುಗಳಲ್ಲದೆ ಮತವಿಚಾರಕ್ಕೆ ಮೀಸಲಾದ ಗ್ರಂಥಗಳು ಬಹುಮುಖ್ಯವಾದವು. ಯಜ್ಞಗಳನ್ನು ಕುರಿತು ಥಿಯೋಫ್ರಾಸ್ಟಸ್ ಬರೆದ ಒಂದು ಅಧ್ಯಾಯ, ಹಬ್ಬಗಳು ಮತ್ತು ಹರಿದಿನಗಳನ್ನೂ ಆಟಿಕ ಹಾಸ್ಯವಿಧಿ ವಿಧಾನಗಳನ್ನೂ ಕುರಿತು ಫೈಲೋಕೊರಸನು ಬರೆದಿರುವ ಗ್ರಂಥಗಳು, ಅಪೊಲೊವಿನ ಪ್ರೇತಗಳನ್ನೂ ಕ್ರೀಟನ್ ದೇಶದ ಯಜ್ಞಗಳನ್ನೂ ಕುರಿತು ಕ್ಯಾಲಿಮಾಕಸ್ ಬರೆದಿರುವ ಗ್ರಂಥಗಳು, ದೇವಸ್ಥಾನದ ತಳಹದಿ ಮತ್ತು ದೈವವಾಣಿಗಳನ್ನು ಕುರಿತು ಹೆರಾಕ್ಲಿಡೀಸ್ ಬರೆದಿರುವ ಗ್ರಂಥಗಳು ಸ್ತೋತ್ರಗಳನ್ನು ಕುರಿತು ಕೋಸ್ ಪಟ್ಟಣದ ಸಾಕ್ರಟೀಸ್ ಬರೆದಿರುವ ಗ್ರಂಥ, ನಾಡಜನರ ಮತವನ್ನು ಕುರಿತು ಅಪೊಲೋಡೋರಸ್ ಬರೆದ ಗ್ರಂಥ– ಇವು ಮತ, ವಿಚಾರಗಳಿಗೇ ಮೀಸಲಾದ ಗ್ರಂಥಗಳು. ಸ್ಟ್ರಾಬೋವಿನ ಭೌಗೋಳಿಕ ಗ್ರಂಥಗಳಲ್ಲೂ ದೈವವಾಣಿಯನ್ನು ಕುರಿತು ಬರೆದಿದೆ. ಪ್ಲೂಟಾರ್ಕನ ಗ್ರಂಥಗಳಲ್ಲೂ ಅಮೂಲ್ಯ ಮತವಿಚಾರಗಳು ಅಡಕವಾಗಿವೆ. ಇವೆಲ್ಲಕ್ಕಿಂತಲೂ ಅಮೂಲ್ಯವಾದದ್ದು ಹಳ್ಳಿಯ ಜನರ ಮತವನ್ನು ಕುರಿತು ಪಾಸೋನೀಯಸ್ ಬರೆದಿರುವ ಆಧಾರಗ್ರಂಥ. ಗ್ರೀಕರು ಕ್ರೈಸ್ತಮತಕ್ಕೆ ಪರಿವರ್ತನೆಯಾದ ಅನಂತರ ಕ್ರೈಸ್ತರು ಗ್ರೀಕರ ಮತವನ್ನು ಕುರಿತು ಹಲವು ಗ್ರಂಥಗಳನ್ನು ಬರೆದಿರುತ್ತಾರೆ. ಇವು ಕ್ರೈಸ್ತಮತ ಪಕ್ಷಪಾತದಿಂದ ಕೂಡಿವೆಯಾದುದರಿಂದ ಇವುಗಳಲ್ಲಿ ದೊರೆಯುವ ವಿವರಣೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅತಿಶಯೋಕ್ತಿಗಳನ್ನು ತೂರಿ ನಿಜಾಂಶಗಳನ್ನು ಆಯ್ದುಕೊಳ್ಳಬೇಕು. ಪ್ರಾಚೀನ ಕ್ರೈಸ್ತರು ಗ್ರೀಕರ ಮತವಿಚಾರವಾಗಿ ಬರೆದಿರುವ ಗ್ರಂಥಗಳಲ್ಲಿ ಕ್ಲೆಮೆಂಟಿನ ಪ್ರೊಟ್ರೆಪ್ಟಿಕಾ, ಅರ್ನೋಬಿಯಸ್ಸಿನ ಅಡ್ವರ್ಸಸ್ ಜೆಂಟೀಸ್, ಯುಸೇಬಿಯಸ್‌ನ ಪ್ರಿಪರೇಸಿಯೋ ಇವ್ಯಾಂಜೆಲಿಕಾ, ಅಗಸ್ಟೈನಿನ ಡಿ ಸಿವಿಟೇಟ್‌ಡಿಯಿ– ಇವು ಮುಖ್ಯ.

ಸಾರ್ವಜನಿಕ ಮತ್ತು ಖಾಸಗಿ ಶಾಸನಗಳಿಂದ ಸಾಹಿತ್ಯವಲ್ಲದೆ ಗ್ರೀಕ್ ಮತಾಚರಣೆಗಳ ವಿವರಗಳು ಕೂಡ ದೊರೆಯುತ್ತವೆ. ಸಾರ್ವಜನಿಕ ಶಾಸನಗಳು, ರಾಜಕೀಯ ಸಂಸ್ಥೆಗಳು ಮತವಿಚಾರದಲ್ಲಿ ತೋರಿಸಿದ ಶ್ರದ್ಧೆಯನ್ನು ಸೂಚಿಸುತ್ತವೆ. ಖಾಸಗಿಯ ಶಾಸನಗಳು ಅನೇಕ ವ್ಯಕ್ತಿಗಳ ಮತಶ್ರದ್ಧೆಯನ್ನು ಸೂಚಿಸುತ್ತವೆ. ಈ ಶಾಸನಗಳು 1920–70ರ ಅವಧಿಯಲ್ಲಿ ಬೆಳಕಿಗೆ ಬಂದವು. ಖಾಸಗಿಯ ಶಾಸನಗಳಲ್ಲಿ ಡಯೊನೈಸಸ್ ದೇವರ ಪ್ರಾರ್ಥನೆಗಳೂ ಡೆಲ್ಫೈ ಕ್ಷೇತ್ರದ ಪ್ರಾರ್ಥನೆಗಳೂ ಕಂಡುಬರುತ್ತವೆ. ಇವನ್ನು ಗ್ರೀಕ್ ಮಹಿಳೆಯರು ಪೂಜಾ ಕಾಲದಲ್ಲಿ ಹಾಡುತ್ತಿದ್ದರು.

ಗ್ರೀಕ್ ಮತದ ಮೇಲೆ ವಿಶೇಷವಾದ ಬೆಳಕನ್ನು ಹರಿಸುವಂಥವುಗಳೆಂದರೆ ಗ್ರೀಕರ ದೇವಾಲಯಗಳು, ದೇವತಾ ವಿಗ್ರಹಗಳು ಮತ್ತು ಚಿತ್ರಗಳು. ಸಾಹಿತ್ಯ ಮತ್ತು ಶಾಸನಗಳಿಂದಲೂ ಇವು ಗ್ರೀಕರ ಮತ ಭಾವನೆಗಳನ್ನು ವಿಶೇಷ ರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತವೆ.

ಈ ಎಲ್ಲ ಆಧಾರಗಳ ಮೇಲೆ ಪುನಾರಚಿಸಿದ ಗ್ರೀಕ್ ಮತ ಭಾವನೆಗಳು ಮೇಲೆ ಹೇಳಿದ ನಾಲ್ಕು ಅವಧಿಗಳಲ್ಲಿ ಹೇಗೆ ಬೆಳೆದುವೆಂಬುದನ್ನು ಇನ್ನು ಮುಂದೆ ತಿಳಿಸಲಾಗುವುದು.

ಚರಿತ್ರಪೂರ್ವ ಗ್ರೀಕ್ ಮತದ ಅವಧಿ (ಪ್ರ.ಶ.ಪೂ. 2000ದಿಂದ ಪ್ರ.ಶ.ಪೂ. 1000ದ ವರೆಗೆ): ಇದಕ್ಕೆ ಮುಖ್ಯವಾದ ಆಧಾರ ಮೈಸೀನೀಯ ಅವಶೇಷಗಳು ಮತ್ತು ಹೋಮರನ ಮಹಾಕಾವ್ಯಗಳು. ಗ್ರೀಕರ ಮೊಟ್ಟಮೊದಲಿನ ಮತ ಭಾವನೆಗಳು ವಿಶೇಷವಾಗಿ ಮೈಸೀನೀಯ ಸಂಸ್ಕೃತಿಯಿಂದ ಪ್ರಚೋದನೆಗೊಂಡಿವೆ. ಮೈಸೀನೀಯ ಸಂಸ್ಕೃತಿಯಲ್ಲಿ ಮಾತೃದೇವತೆಗೆ ಪ್ರಾಶಸ್ತ್ಯ. ಮಾತೃದೇವತೆಯ ಭಾವನೆ ಗ್ರೀಸಿನಲ್ಲಿ ಹರಡಲು ಈ ಸಂಸ್ಕೃತಿ ಮುಖ್ಯ ಕಾರಣ. ಆರ್ಕೇಡಿಯ ಮತ್ತು ಆಟಿಕದ ಆರ್ಟಿಮೀಸ್, ಅಥೆನ್ಸಿನ ಅಥಿನ, ಆರ್ಗಾಸ್, ಸಾಮೋವಾದ ಹೀರ ದೇವತೆಗಳು ಮೈಸೀನೀಯ ಮಾತೃದೇವತೆಯ ಪ್ರತಿರೂಪಗಳು.

1) ಚರಿತ್ರಪೂರ್ವ ಅವಧಿಯ ಗ್ರೀಕ್ ಮತ ಉತ್ತರದಿಂದ ಮೆಡಿಟರೇನಿಯನ್ ಪ್ರದೇಶಕ್ಕೆ ಬಂದ ಆರ್ಯರಿಂದಲೂ ಪ್ರಚೋದನೆಗೊಂಡಿತು. ಆರ್ಯರ ದೇವತೆಗಳು ಗ್ರೀಸಿಗೆ ಪ್ರವೇಶಿಸುವುದಕ್ಕೆ ಪರ್ಷಿಯ ವಿಶೇಷವಾಗಿ ಕಾರಣವಾಗಿತ್ತು. ಆಗಿನ ಪರ್ಷಿಯದ ಮತದಿಂದ ಬಹುಶಃ ವೇದದ ಮತ ಇನ್ನೂ ಪ್ರತ್ಯೇಕಗೊಂಡಿರಲಿಲ್ಲ. ಗ್ರೀಕರ ದೇವತೆಗಳಿಗೂ ವೇದದ ದೇವತೆಗಳಿಗೂ ಅನೇಕ ಅಂಶಗಳಲ್ಲಿ ಸಾಮ್ಯವಿರುವುದಕ್ಕೆ ಪಾರಸಿ ಮತ ಕಾರಣ. ಗ್ರೀಕರ ಕೃಷಿದೇವತೆ ಡೆಮಿಟರ್ ಆರ್ಯರ ಕುಲದೇವತೆ. ಅಗ್ನಿಷ್ಟಿಕೆ ದೇವತೆಯಾದ ಹೆಸ್ಟಿಯಾ ಕೂಡ ಆರ್ಯ ಸಂಸ್ಕೃತಿಯಿಂದ ಬೆಳೆದು ಬಂದವಳು. ಗ್ರೀಕರ ಜ್ಯೂಸಿಗೂ ಆರ್ಯರ ಆಕಾಶದ ದೇವತೆಯಾದ ದ್ಯೌಸಿಗೂ ನಿಕಟಸಂಬಂಧವಿದೆ. ಆ ಕಾಲದಲ್ಲಿ ಸಮಾಜ ಮನೆತನಗಳ ತಂಡಗಳಿಂದ ಕೂಡಿದ್ದರೂ ಪಟ್ಟಣದ ರಾಜ್ಯವಾಗಿ ರೂಪುಗೊಳ್ಳುವುದರಲ್ಲಿತ್ತು. ಅಥೆನ್ಸಿನಲ್ಲಿ ಅಥಿನ ಮತ್ತು ಜ್ಯೂಸ್ ರಾಜಕೀಯ ವಿವೇಕವನ್ನು ಪ್ರಚೋದಿಸುವ ದೇವತೆಗಳಾಗಿ ಬೆಳೆದರು. ಆಗ ಜ್ಯೂಸ್ ದೇವತೆಯನ್ನು ಜ್ಯೂಸ್ ಪೊಲಿಕಸ್ ಎಂದು ಕರೆಯುತ್ತಿದ್ದರು. ದಾರಿಗಳ ದೇವತೆಯಾದ ಹರ್ಮೀಸ್ ದೇವತೆಗೂ ವೇದಗಳ ಪೂಷನ್ ದೇವತೆಗೂ ತುಂಬ ಹೋಲಿಕೆಯಿದೆ. ಚರಿತ್ರಪೂರ್ವ ಅವಧಿಯಲ್ಲಿ ಹರ್ಮೀಸ್, ದಾರಿಗಳು ಕೂಡುವ ಸಂತೆಯ ಮಾಳದ ದೇವತೆಯಾಗಿ ಬೆಳೆದಿರುತ್ತಾನೆ. ಈ ಕಾಲದ ಕಲಾಭಿಮಾನಿ ಸ್ತ್ರೀದೇವತೆಗಳನ್ನು ಗೀತ ಮತ್ತು ಶಿಲ್ಪದ ಪೋಷಕರಾಗಿ ಭಾವಿಸಲಾಗಿತ್ತು.

2) ಈ ಕಾಲದಲ್ಲಿ ಗುಹೆಗಳು ಅರಣ್ಯಪ್ರದೇಶಗಳು ಪೂಜಾಸ್ಥಾನಗಳಾಗಿದ್ದವು. ಮೈಸೀನೀ ಸಂಶೋಧನೆಗಳಿಂದ ತಿಳಿದುಬರುವಂತೆ ರಾಜನ ಅರಮನೆಯ ಒಳಾಂಗಣದಲ್ಲಿ ದೇವಸ್ಥಾನಗಳಿದ್ದವು. ಆರ್ಗಾಸ್ ಒಲಿಂಪಿಯದಲ್ಲಿ ಹೀರ ದೇವತೆಯ ದೇವಸ್ಥಾನಗಳು ಈ ದೃಷ್ಟಿಯಿಂದ ಮುಖ್ಯವಾದವು. ದೇವಸ್ಥಾನಗಳು ಎಂದಾಗ ಅವುಗಳೊಂದಿಗೆ ಅರ್ಚಕವೃಂದವೂ ಬಂದೇ ಬರುತ್ತದೆ. ಹೋಮರನ ಕಾವ್ಯಗಳಲ್ಲಿ ಇಡಾ ಶಿಖರದ ಜ್ಯೂಸ್ ಮತ್ತು ಸ್ಕಮನ್‌ಡ್ರಾಸ್ ನದಿಯ ಪೂಜಾರಿಗಳ ವಿವರಗಳು ದೊರೆಯುತ್ತವೆ. ಮತವಿಚಾರಗಳಲ್ಲಿ ರಾಜನಿಗೆ ರಾಜಪುರೋಹಿತ ನೆರವಾಗುತ್ತಿದ್ದ. ಪುರೋಹಿತರಲ್ಲದೆ ಆ ಕಾಲದಲ್ಲಿ ಕಣಿ ಹೇಳುವವರೂ ಇದ್ದರು.

3) ಆಗಿನ ಪೂಜಾವಿಧಾನದಲ್ಲಿ ಬಲಿಪೀಠದ ಮೇಲೆ ಬಲಿ ಅರ್ಪಿಸುವುದು ಬಹು ಮುಖ್ಯವಾದದ್ದು. ಬಲಿಪೀಠದ ಮುಂದೆ ಸಾಮಾನ್ಯವಾಗಿ ಒಂದು ಪ್ರಾಣಿಯನ್ನು ಅರ್ಪಿಸುತ್ತಿದ್ದರು. ಪ್ರಾಣಿವಧೆ ಇಲ್ಲದೆ ಹಣ್ಣುಕಾಳುಗಳ ಸೌಮ್ಯ ಅರ್ಪಣೆಯೂ ಆಚರಣೆಯಲ್ಲಿತ್ತು. ಪಾತಾಳದ ದೇವತೆಗಳಿಗೆ ಬಲಿ ಅರ್ಪಿಸಿದಾಗ ಬಲಿಕೊಟ್ಟ ಪ್ರಾಣಿಯ ರುಂಡವನ್ನು ಒಂದು ಕುಳಿಯ ಕಡೆಗೆ ಬಗ್ಗಿಸುತ್ತಿದ್ದರು. ಸ್ವರ್ಗದ ದೇವತೆಗಳಿಗೆ ಬಲಿ ಅರ್ಪಿಸಿದಾಗ ರುಂಡವನ್ನು ಆಕಾಶದ ಕಡೆ ತೋರಿಸುತ್ತಿದ್ದರು. ಅರ್ಘ್ಯ ಸಾಮಾನ್ಯವಾಗಿ ನೀರು, ಜೇನುತುಪ್ಪ ಮತ್ತು ಮದ್ಯದ ಮಿಶ್ರಣರೂಪದಲ್ಲಿರುತ್ತಿತ್ತು.

4) ಮೈಸೀನೀ ಮತ್ತು ಟಿಯೂರ್ಸ್ ಪ್ರದೇಶಗಳಲ್ಲಿ ದೊರೆತಿರುವ ಗೋರಿಗಳು ಆ ಕಾಲದಲ್ಲಿ ಪಿತೃಪೂಜೆ ಆಚರಣೆಯಲ್ಲಿತ್ತೆಂದು ಹೇಳಲು ಪ್ರಬಲ ಆಧಾರಗಳಾಗಿವೆ. ಆ ಕಾಲದವರು ಪಿತೃಗಳ ಪ್ರೇತಗಳಲ್ಲಿ ದೈವಾಂಶವಿದೆಯೆಂದು ನಂಬಿದ್ದರು. ಸತ್ತ ವೀರರಿಗೆ ಪೂಜೆ ಸಲ್ಲಿಸುತ್ತಿದ್ದರೆಂಬುದಕ್ಕೆ ಹೆರಾಕ್ಲೀಸಿನ ಪೂಜೆಯೇ ಸಾಕ್ಷಿ. ಸತ್ತವರ ವಂಶದವರು ಶವಸಂಸ್ಕಾರ ನಡೆಸಿದ ಅನಂತರ ಶುದ್ಧಿ ಸ್ನಾನವನ್ನು ಆಚರಿಸುತ್ತಿದ್ದರು. ಆದರೆ ಶುದ್ಧೀಕರಣ ಕರ್ಮ ಹೋಮರನ ಅನಂತರದ ಕಾಲದಲ್ಲಿದ್ದಷ್ಟು ಅತಿಯಾಗಿರಲಿಲ್ಲ.

ಸೌಮ್ಯ ದೇವತೆಗಳನ್ನಲ್ಲದೆ ಕ್ರೂರ ದೇವತೆಗಳ ಕುರುಹೂ ಅಲ್ಲಲ್ಲಿ ಕಂಡುಬರುತ್ತದೆ. ಫಿಗೇಲಿಯಾದ ಭೂದೇವತೆ ಭಯಂಕರ ದೇವತೆ. ಇವಳಿಗೆ ಕುದುರೆಯ ತಲೆಯೂ ಹಾವಿನ ಕಣ್ಣೂ ಇದ್ದಂತೆ ಚಿತ್ರಿಸಿದೆ. ಪಾತಾಳದೇವತೆಗಳನ್ನು ಇವರು ಕೆಡಕಿನ ದೇವತೆಗಳೆಂದು ಭಾವಿಸಿರಲಿಲ್ಲ. ಇವರನ್ನು ಸೌಮ್ಯದೇವತೆಗಳಾಗಿ ಭಾವಿಸಿ ಪ್ಲೂಟಾನ್ ಎಂದು ಕರೆಯುತ್ತಿದ್ದರು. ಡೆಮಿಟರ್ ದೇವತೆ ಭಯಂಕರ ದೇವತೆಯಲ್ಲ. ಕೆಡಕಿನ ದೇವತೆಗಳು ಕೇವಲ ಕೆಳಮಟ್ಟದ ಜನರಲ್ಲಿ ಪ್ರಚಾರದಲ್ಲಿದ್ದುವು. ಮೇಲ್ಮಟ್ಟದ ಸಂಸ್ಕೃತಿಯ ಜನರಲ್ಲಿ ವಿಶೇಷವಾಗಿ ಸೌಮ್ಯ ದೇವತೆಗಳೇ ಹೆಚ್ಚು. ಈ ಕಾಲದಲ್ಲಿ ಹರ್ಮೀಸ್ ದೇವತೆಯನ್ನು ಆತ್ಮಗಳನ್ನು ಕರೆದೊಯ್ಯುವ ದೇವತೆಯಾಗಿ ಭಾವಿಸಿದ್ದರು. ಆದರೂ ಎಲೂಸಿನಿಯಾ ಸ್ವರ್ಗದಲ್ಲಿ ಗತಿಸಿದವರಿಗೆ ಸುಖ ದೊರೆಯುತ್ತದೆಯೆಂಬ ಭಾವನೆ ಇನ್ನೂ ಬೆಳೆದಿರಲಿಲ್ಲ.

5) ಮೇಲ್ಮಟ್ಟದ ದೇವತೆಗಳನ್ನು ಇವರು ಮಾನವ ಗುಣಗಳನ್ನು ಹೊಂದಿದಂತೆ ಬಗೆದಿದ್ದರೂ ಅವರ ಮಾನವ ಗುಣಗಳಿನ್ನೂ ಪರಿಪೂರ್ಣವಾಗಿರಲಿಲ್ಲ. ತುಂಬ ಪ್ರಾಚೀನ ಗ್ರೀಕ್ ತಂಡದವರು ಕೆಲವು ಪ್ರಾಣಿಗಳು ದೈವಿಕ ಸ್ವರೂಪ ಪಡೆದಂತೆ ಭಾವಿಸುತ್ತಿದ್ದುದುಂಟು. ಉದಾಹರಣೆಗೆ ಅಪೊಲೊವಿಗೂ ತೋಳಗಳಿಗೂ ನಿಕಟಸಂಬಂಧ ಕಂಡುಬರುತ್ತದೆ. ಹಿಂದೂಗಳು ಕೂರ್ಮ, ವರಾಹ, ಮತ್ಸ್ಯಗಳಲ್ಲಿ ದೈವ ಅವತರಿಸಿದುದಾಗಿ ಭಾವಿಸಿದ್ದಂತೆಯೇ ಗ್ರೀಕರು ತೋಳದಲ್ಲಿ ಅಪೊಲೊ ದೇವತೆ ಅವತರಿಸಿದಂತೆ ಭಾವಿಸಿದ್ದರು. ಡೆಲ್ಫೈ, ಮ್ಯಾಸಿಡೋನಿಯ ಮತ್ತು ಎಪಿರಸ್ ಪ್ರದೇಶಗಳಲ್ಲಿ ದೈವ ಹಾವಿನ ಅವತಾರವೆಂಬ ಭಾವನೆ ಪ್ರಚಾರದಲ್ಲಿತ್ತು. ಆರ್ಕೇಡಿಯ ಮತ್ತು ಆಟಿಕ ಪ್ರದೇಶಗಳಲ್ಲಿ ಆರ್ಟೆಮಿಸ್ ದೇವತೆಯನ್ನು ಕರಡಿಯ ಅವತಾರವಾಗಿ ಭಾವಿಸಲಾಗಿತ್ತು. ಫಿಗೇಲಿಯದಲ್ಲಿ ಕುದುರೆಯ ತಲೆಯುಳ್ಳ ಡೆಮಿಟರನ್ನೂ, ಅರ್ಧ ಭಾಗ ಹೆಂಗಸಿನ ಶರೀರವನ್ನೂ ಇನ್ನರ್ಧ ಮೀನಿನ ಶರೀರವನ್ನೂ ಉಳ್ಳ ಯುರಿನೊಮಿ ಎಂಬ ದೇವತೆಯನ್ನೂ ಪೂಜಿಸುತ್ತಿದ್ದರು.

6) ದೇವತೆಗಳು ಪೂರ್ಣ ಮಾನವ ಸ್ವರೂಪವನ್ನು ಪಡೆಯುವುದಕ್ಕೆ ಮುಂಚೆ, ಕೆಲವು ದೇವತೆಗಳ ಸ್ವರೂಪ ಕೇವಲ ಒಂದು ಕ್ರಿಯೆಗೆ ಮಾತ್ರ ಕ್ಲುಪ್ತವಾಗಿತ್ತು. ಅವರ ಹೆಸರು ಜ್ಯೂಸ್‌ನಂತೆ ಅಂಕಿತನಾಮವಾಗಿರಲಿಲ್ಲ. ಇಂಥ ದೇವತೆಗಳಿಗೆ ಮ್ಯಾರಥಾನಿನ ಗುಳದ ದೇವತೆ, ಟನಗ್ರಾದ ಕಾಳಿನ ದೇವತೆ, ಆರ್ಕೇಡಿಯದ ನೊಣವನ್ನೋಡಿಸುವ ದೇವತೆ, ಆಟಿಕದ ಹೆರಿಗೆಯ ದೇವತೆಗಳು ಉದಾಹರಣೆಗಳು.

7) ಪ್ರಾಣಿಗಳ ರೂಪದಲ್ಲಲ್ಲದ ಪ್ರಕೃತಿಯ ಶಕ್ತಿಗಳಲ್ಲೂ ದೈವ ಅಡಗಿದ್ದಂತೆ ಪ್ರಾಚೀನ ಗ್ರೀಕರು ಭಾವಿಸಿದ್ದರು. ತುಂಬ ಹಿಂದುಳಿದ ಆರ್ಕೇಡಿಯ ಪ್ರದೇಶದವರು ತುಂಬ ಹಿಂದಿನ ಕಾಲದಲ್ಲಿ ಜ್ಯೂಸ್ ದೇವತೆ ಗುಡುಗಿನಲ್ಲಿ ಅಡಗಿರುವುದಾಗಿ ಭಾವಿಸಿದ್ದರು. ಅವರು ಮಿಂಚು, ಗುಡುಗು, ಬಿರುಗಾಳಿಗಳಿಗೆ ಪೂಜೆ ಸಲ್ಲಿಸುತ್ತಿದ್ದರು. ಮ್ಯಾಸಿಡೋನಿಯ ದವರು ಜಲದೇವತೆಯನ್ನು ಆರಾಧಿಸುತ್ತಿದ್ದರು. ಗ್ರೀಕರ ಹೆಸ್ಟಿಯಾ ಮೊದಲಿನಿಂದ ಕೊನೆಯ ವರೆಗೂ ಕೇವಲ ಅಗ್ನಿಷ್ಟಿಕೆಯ ದೇವತೆಯಾಗಿಯೇ ಉಳಿದಳು.

8) ಪ್ರಕೃತಿ ಶಕ್ತಿಗಳ ಆರಾಧನೆಯೊಂದಿಗೆ ಮಂತ್ರಮಾಟಗಳು ಮಿಳನವಾಗಿರುವುದು ಸ್ವಾಭಾವಿಕ. ಗ್ರೀಕರ ಥಸ್ಮೋಫೋರಿಯಾ ಎಂಬ ಅತ್ಯಂತ ಪ್ರಾಚೀನ ಆಚರಣೆಯಲ್ಲಿ ಮಾಟವನ್ನು ಗುರುತಿಸಬಹುದು. ಭೂಮಾತೆಗೆ ಬಲಿಕೊಟ್ಟ ಹಂದಿಯ ಅವಶೇಷಗಳನ್ನು ಹೊಲಗಳಲ್ಲಿ ಎರಚುವುದು ಈ ಆಚರಣೆಯ ಒಂದು ಅಂಗವಾಗಿತ್ತು. ಚರಗ ಚೆಲ್ಲುವುದು, ಹಾಗೆ ಎರಚಿದುದರಿಂದ ಹೊಲಗಳಲ್ಲಿ ಬೆಳೆ ಹುಲುಸಾಗಿ ಬೆಳೆಯುತ್ತದೆ ಎಂದು ಇವರು ನಂಬಿದ್ದರು. ಆಟಿಕದ ಥರ್ಗೇಲಿಯಾ ಎಂಬ ಪಾಪನಿವಾರಣೆಯ ಆಚರಣೆಯೂ ಮಾಟಕ್ಕೆ ಒಂದು ಉದಾಹರಣೆ. ಜನರ ಪಾಪಗಳನ್ನು ಒಂದು ಆಡಿನ ತಲೆಯ ಮೇಲೆ ಹೊರಿಸಿ ಕಾಡಿಗೆ ಅಟ್ಟುವುದು ಈ ಆಚರಣೆಯ ಒಂದು ಅಂಗವಾಗಿತ್ತು.

9) ಹೋಮರನ ಮಹಾಕಾವ್ಯಗಳಲ್ಲಿ ನರಬಲಿಯ ಪ್ರಸ್ತಾಪವಿಲ್ಲದ್ದರಿಂದ ಪ್ರಾಚೀನ ಗ್ರೀಕರಲ್ಲಿ ನರಬಲಿ ಪದ್ಧತಿ ಇರಲಿಲ್ಲವೆಂದು ಕೆಲವರು ವಾದಿಸುತ್ತಾರೆ. ಅದು ಪ್ರಾಚೀನರಲ್ಲಿ ಆಚರಣೆಯಲ್ಲಿತ್ತೆಂಬುದಕ್ಕೆ ಬೇರೆ ಕಡೆಗಳಿಂದ ರುಜುವಾತು ದೊರೆತಿದೆ. ಆರ್ಕೇಡಿಯದ ಲೈಕ ಆನ್ ದೊರೆ ಜ್ಯೂಸ್‌ಗೆ ತನ್ನ ಮಗನನ್ನು ಬಲಿಕೊಟ್ಟಂತೆಯೂ ಪೆಗಸೈ ಪ್ರದೇಶದಲ್ಲಿ ಕೈನೋಸ್ ಯಾತ್ರಿಕರನ್ನು ಜ್ಯೂಸಿಗೆ ಬಲಿಯಾಗಿ ಅರ್ಪಿಸಿ ಅವರ ತಲೆಬುರುಡೆಗಳನ್ನು ಅಪೊಲೊವಿಗೆ ಅರ್ಪಿಸಿದಂತೆಯೂ ಕಾರಿಂತ್ ಕೊಲ್ಲಿಯ ಬಳಿ ಅಯೋನಿಯದವರು ಆರ್ಟಿಮಿಸ್ ದೇವತೆಗೆ ಒಬ್ಬ ವಟುವನ್ನೂ ಈ ಕನ್ಯೆಯನ್ನೂ ಬಲಿಯಾಗಿ ಅರ್ಪಿಸಿದಂತೆಯೂ ಪುರಾಣ ಕಥೆಗಳಿವೆ.

10) ಚರಿತ್ರಪೂರ್ವ ಅವಧಿಯ ಅಂತ್ಯದಲ್ಲಿ (ಬಹುಶಃ ಪ್ರ.ಶ.ಪೂ. 10 ನೆಯ ಶತಮಾನದಲ್ಲಿ) ಥ್ರೇಸ್ ಮತ್ತು ಮ್ಯಾಸಿಡೋನಿಯ ಪ್ರದೇಶಗಳಿಂದ ಒಂದು ಹೊಸಮತ ಗ್ರೀಸಿಗೆ ಪ್ರವೇಶಿಸಿತು. ಆ ಮತದ ದೇವತೆ ಡಯೊನೈಸಸ್. ಮೊದಮೊದಲಲ್ಲಿ ಈ ಮತಕ್ಕೆ ತಡೆಗಳಿದ್ದರೂ ಅದು ಥೀಬ್ಸಿನಲ್ಲಿ ಭದ್ರವಾಗಿ ಬೇರೂರಿ ಕಾಲಕ್ರಮದಲ್ಲಿ ಡೆಲ್ಫಿಗೂ ಹಬ್ಬಿತು. ಇದು ಗ್ರೀಸಿನಲ್ಲಿ ಹೇಗೆ ಪ್ರಬಲವಾಯಿತೆಂಬುದನ್ನು ಮುಂದೆ ತಿಳಿಸಲಾಗುವುದು.

**II** ಗ್ರೀಕರ ಮತದ ಎರಡನೆಯ ಅವಧಿ (ಪ್ರ.ಶ.ಪೂ. 900 ರಿಂದ ಪ್ರ.ಶ.ಪೂ. 500 ರವರೆಗೆ). 9ನೆಯ ಶತಮಾನದ ವೇಳೆಗೆ ಉತ್ತರದ ಮತ್ತು ಮೆಡಿಟರೇನಿಯನ್ ಪ್ರದೇಶದ ಜನರ ಮಿಳನ ಪೂರ್ಣವಾಗಿ ತಾವೆಲ್ಲ ಒಂದೇ ಸಂಸ್ಕೃತಿಗೆ ಸೇರಿದವರೆಂಬ ಭಾವನೆ ಗ್ರೀಕರಲ್ಲಿ ಮೂಡಿತ್ತು. ಪ್ರಾಚೀನ ಹಾಗೂ ನವೀನ ಮತಭಾವನೆಗಳ ಮತ್ತು ಸಂಸ್ಕಾರಗಳ ಮಿಳನದಿಂದ ಗ್ರೀಕ್ ಮತ ಒಂದು ನಿರ್ದಿಷ್ಟ ರೂಪ ಪಡೆದಿತ್ತು. ಒಂಬತ್ತನೆಯ ಮತ್ತು ಎಂಟನೆಯ ಶತಮಾನದಲ್ಲಿ ಬೆಳೆದ ಮಹಾಕಾವ್ಯಗಳೂ ಹೊಸದಾಗಿ ಹುಟ್ಟಿದ ಭಾವಗೀತೆಗಳೂ ವಿಗ್ರಹರಚನೆಯ ಶಿಲ್ಪದ ಹುಟ್ಟೂ ನಗರ ರಾಜ್ಯಗಳ ಬೆಳವಣಿಗೆಯೂ ಇದಕ್ಕೆ ಮುಖ್ಯ ಕಾರಣಗಳು.

1. ಹೋಮರನ ಮಹಾಕಾವ್ಯಗಳು ಗ್ರೀಕ್ ಮತದ ಬೆಳವಣಿಗೆಗೆ ಸಹಾಯ ಮಾಡಿದರೂ ಅವು ಗ್ರೀಕರ ವೇದಗಳೆಂದು ಗಣಿಸಲಾಗುವುದಿಲ್ಲ. ಆತನ ಮಹಾಕಾವ್ಯಗಳಲ್ಲಿ ಗ್ರೀಕ್ ದೇವತೆಗಳಿಗೆ ಮನುಷ್ಯತ್ವಾರೋಪಣೆ ಆಗಿದೆಯಾಗಿ ಸ್ತ್ರೀ ಮತ್ತು ಪುರುಷ ದೇವತೆಗಳು ನಿರ್ದಿಷ್ಟ ವ್ಯಕ್ತಿತ್ವವನ್ನು ಪಡೆದಿರುತ್ತಾರೆ. ಒಂದೊಂದು ದೇವತೆಗೆ ಸಂಬಂಧಪಟ್ಟ ಸ್ಥಳಪುರಾಣಗಳಲ್ಲೂ ಆಚರಣೆಗಳಲ್ಲೂ ವ್ಯತ್ಯಾಸಗಳಿದ್ದರೂ ಆ ದೇವತೆ ಒಂದೇ ಎಂಬ ಭಾವನೆ ಬೆಳೆದಿರುತ್ತದೆ. ಹೋಮರನ ಕಾವ್ಯಪ್ರಚಾರದಿಂದ ಆರ್ಗಾಸಿನ ಅಪೊಲೊ ಮತ್ತು ಅಥೆನ್ಸಿನ ಅಪೊಲೊ ಒಂದೇ ನಿರ್ದಿಷ್ಟ ದೇವತೆ ಎಂಬ ಭಾವನೆ ಸ್ಥಾಪನೆಯಾಯಿತು. ಆರ್ಟಿಮಿಸ್ ಮತ್ತು ಅಥಿನ ಇಬ್ಬರೂ ಕನ್ನಿಕಾಪರಮೇಶ್ವರಿಯರೆಂಬ ಭಾವನೆಯೂ

ನೆಲೆಗೊಂಡಿತು. ಜ್ಯೂಸ್ ದೇವತೆ ಸಾರ್ವಭೌಮ ಪದವಿಯನ್ನು ಪಡೆದರೂ ಪ್ರಮಾಣ ಮಾಡುವ ಕಾಲದಲ್ಲಿ ಜ್ಯೂಸ್, ಅಥಿನ ಮತ್ತು ಅಪೋಲೊ ಈ ಮೂವರನ್ನೂ ಒಟ್ಟಿಗೆ ಹೆಸರಿಸುವುದು ರೂಢಿಯಲ್ಲಿತ್ತು. ಒಡಿಸ್ಸಿ ಕಾವ್ಯದಲ್ಲಿ ಸಾರ್ವಭೌಮ ದೇವತೆಯ ಭಾವನೆಯ ಜೊತೆಯಲ್ಲಿ ವಿಶ್ವೇ ದೇವತೆಗಳ ಭಾವನೆಯೂ ಕಂಡುಬರುತ್ತದೆ. ಆ ಕಾವ್ಯದಲ್ಲಿ ಅನೇಕ ವೇಳೆ ಯಾವ ಒಂದು ದೇವತೆಯನ್ನೂ ಹೆಸರಿಟ್ಟು ಸಂಬೋಧಿಸದೆ ಸಾಮೂಹಿಕವಾಗಿ ದೇವತೆಗಳೆಲ್ಲರನ್ನೂ ಒಟ್ಟಿಗೆ ಸಂಬೋಧಿಸುವುದನ್ನು ಕಾಣಬಹುದು.

ಹೋಮರನ ದೇವತೆಗಳೆಲ್ಲರಲ್ಲೂ ಕೆಲವು ಸಾಮಾನ್ಯ ಗುಣಗಳಿವೆ: 1. ಅವರೆಲ್ಲರೂ ಅಮರ್ತ್ಯರು ಅಥವಾ ಅಮೃತತ್ವ ಪಡೆದವರು. 2. ಯಾವುದೊಂದು ವ್ಯಸನವೂ ಇಲ್ಲದೆ ಸರ್ವದಾ ಸಂತೋಷದಿಂದ ಕೂಡಿರುತ್ತಾರೆ. 3. ಅವರ ಆಹಾರ ಅಮೃತ. ಸಾಮಾನ್ಯವಾಗಿ ಅವರು ಅದೃಶ್ಯರು, ಆದರೆ ಅವರು ಅನೇಕ ವೇಷಗಳನ್ನು ತಾಳಿ (ಉದಾಹರಣೆಗೆ ಪಕ್ಷಿರೂಪ) ಮಾನವರಿಗೆ ಕಾಣಿಸಿಕೊಳ್ಳಬಹುದು. 4. ಅವರು ಸರ್ವಮಂಗಳದಾತರಾದರೂ ಭಾಷೆಗೆ ತಪ್ಪಿ ನಡೆದವರನ್ನು ತಪ್ಪದೆ ಶಿಕ್ಷಿಸುತ್ತಾರೆ. ತಮ್ಮನ್ನು ಪ್ರತಿಭಟಿಸಿದ ಮಾನವರನ್ನು ನಿರ್ಮೂಲ ಮಾಡುತ್ತಾರೆ. 5. ಮಾನವರ ನೀತಿ ಅನೀತಿಗಳನ್ನು ಪರೀಕ್ಷಿಸಲು ಆಗಾಗ ವೇಷ ಬದಲಾಯಿಸಿಕೊಂಡು ನಗರಗಳಲ್ಲಿ ಸಂಚರಿಸುತ್ತಾರೆ.

2. ಪ್ರ.ಶ.ಪೂ. ಒಂಬತ್ತನೆಯ ಮತ್ತು ಎಂಟನೆಯ ಶತಮಾನದ ಮತಭಾವನೆಗಳನ್ನು ತಿಳಿಯಲು ಹೋಮರನ ಕಾವ್ಯಗಳನ್ನಲ್ಲದೆ ಹೆಸಿಯಡ್ಡನ ಕವನಗಳ ಅಧ್ಯಯನವೂ ಅಗತ್ಯ. ಇವನ ಕವನಗಳಲ್ಲಿ ಹೆಲಿಕಾನಿನ ಕಾವ್ಯಾಭಿಮಾನಿ ಸ್ತ್ರೀ ದೇವತೆಗಳ ವಿಶೇಷ ಪಾತ್ರ ವರ್ಣಿತವಾಗಿದೆ. ಇವರು ಭಕ್ತರಿಗೆ ದೇವಲೋಕದ ರಹಸ್ಯಗಳನ್ನು ತಿಳಿಸುತ್ತಾರೆ. ಈ ಕವನಗಳಲ್ಲಿ ನ್ಯಾಯ, ದಯೆ, ಪ್ರೀತಿ, ಸ್ನೇಹ, ಶಾಂತಿ ಮುಂತಾದ ಗುಣಗಳನ್ನು ದೈವಿಕ ವ್ಯಕ್ತಿತ್ವ ಪಡೆದಂತೆ ವರ್ಣಿಸಿದೆ. ಹೆಸಿಯಡ್ಡನ ಪದ್ಯಗಳು ಪ್ರಧಾನ ದೇವತೆಗಳಿಗೂ ಉಪದೇವತೆಗಳಿಗೂ ದೈವಾಂಶಭೂತ ಮಾನವರಿಗೂ ಇರುವ ತಾರತಮ್ಯಗಳನ್ನು ಸ್ಪಷ್ಟ ಪಡಿಸುತ್ತವೆ.

3. ಈ ಕಾಲದಲ್ಲಿ ಮತಭಾವಗಳು ಭಾವಗೀತೆಗಳ ಮೂಲಕ ಅಭಿವ್ಯಕ್ತಗೊಂಡಿವೆ. ಜ್ಯೂಸ್ ದೇವತೆಯ ಪ್ರಾರ್ಥನೆಗಳು ಸಾಮಾನ್ಯವಾಗಿ ಸ್ಪಾಂಡಿ ಎಂಬ ಗಂಭೀರವಾದ ಛಂದಸ್ಸಿನಲ್ಲಿ ರಚಿತವಾಗಿದ್ದುವು. ಡಯೊನೈಸಸ್ ದೇವತೆಯನ್ನು ಕುರಿತ ಪ್ರಾರ್ಥನಾಗೀತಗಳಿಗೆ ಡಿಥರಿಂಬೋಸ್ ಎಂದು ಹೆಸರು. ದೇವತೆಗಳ ಪದವಾದ ಭಾವಗೀತಗಳನ್ನು ಬಾಲಕರಿಗೆ ಕಲಿಸುವುದು ಆರ್ಕೇಡಿಯ ವಿದ್ಯಾಭ್ಯಾಸದ ಒಂದು ಮುಖ್ಯ ಅಂಗವಾಗಿತ್ತು. ಎಲ್ಲ ಸಾರ್ವಜನಿಕ ಮತ್ತು ಖಾಸಗಿ ಮತಾಚರಣೆಗಳ ಕಾಲದಲ್ಲೂ ಭಾವಗೀತೆಗಳನ್ನು ಹಾಡುವುದು ವಾಡಿಕೆಯಾಗಿತ್ತು.

4. ಹಿಂದಿನ ಅವಧಿಯಲ್ಲಿ ಒಂದು ಕಲ್ಲುಬಂಡೆಯನ್ನೋ ಒಂದು ಗಿಡದ ಮೋಟನ್ನೋ ದೈವವೆಂದು ಪೂಜಿಸುತ್ತಿದ್ದರು. ಪ್ರ.ಶ.ಪೂ. 10 ನೆಯ ಶತಮಾನದಲ್ಲಿ ಮೊಟ್ಟಮೊದಲಿಗೆ ದೇವತೆಗಳನ್ನು ವಿಗ್ರಹರೂಪದಲ್ಲಿ ಪೂಜಿಸುವುದು ಪ್ರಾರಂಭವಾಯಿತು. ವಿಗ್ರಹಾರಾಧನೆಯ ಒಂದು ನಿದರ್ಶನ ಹೋಮರನ ಕಾವ್ಯಗಳಲ್ಲಿ ದೊರೆಯುತ್ತದೆ. ಕ್ನೊಸ್ಸೋಸ್ ಹತ್ತಿರ ನಡೆಸಿದ ಭೂಸಂಶೋಧನೆಯಲ್ಲಿ ಸಿಕ್ಕ ಆಯುಧಪಾಣಿಗಳಾದ ಪುರುಷ ಮತ್ತು ಸ್ತ್ರೀದೇವತೆಗಳ ಚಿತ್ರಗಳುಳ್ಳ ಕಲಶ ಇದಕ್ಕೆ ನಿದರ್ಶನ. ಒಂಬತ್ತನೆಯ ಶತಮಾನದ ಅನಂತರ ಗ್ರೀಸಿನಲ್ಲಿ ವಿಗ್ರಹಗಳ ಪೂಜೆ ಸಾಮಾನ್ಯವಾಯಿತು. ಅಲ್ಲಿಂದೀಚೆಗೆ ಗ್ರೀಸಿನ ಶಿಲ್ಪಕಲೆ ಬೆಳೆದು ಲೋಕಪ್ರಖ್ಯಾತವಾದ ದೇವತೆಗಳ ಸುಂದರ ಪ್ರತಿಮೆಗಳು ಗ್ರೀಸಿನ ಅನೇಕ ಮುಖ್ಯ ನಗರಗಳಲ್ಲಿ ಪ್ರತಿಷ್ಠಿತವಾದುವು. ವಿಗ್ರಹಪೂಜೆಯಿಂದ ದೈವ ಮಾನವನ ಸಂಪೂರ್ಣರೂಪವೆಂಬ ಭಾವನೆ ಬಲಿಯಿತಲ್ಲದೆ ಪ್ರತಿಮೆಗಳಲ್ಲಿ ದೈವ ಸಾಕ್ಷಾತ್ಕಾರವಾದಂತೆ ಜನರಿಗೆ ಭಾಸವಾಯಿತು. ಗ್ರೀಕರ ವಿಗ್ರಹಗಳಲ್ಲಿ ಸೌಂದರ್ಯ, ವೀರ್ಯ, ಗಾಂಭೀರ್ಯ ಘನೀಭೂತವಾಗಿವೆ. ವಿಗ್ರಹಾರಾಧನೆಯ ಪರಿಣಾಮವಾಗಿ ದೈವದ ಅಸ್ತಿತ್ವದಲ್ಲಿನ ನಂಬಿಕೆ ವಾಸ್ತವಿಕವಾದರೂ ಗ್ರೀಕರಲ್ಲಿ ದೈವವು ಚೇತನರೂಪವಾದ ಅಂತರಾತ್ಮವೆಂಬ ಭಾವನೆ ಬೆಳೆಯಲು ತಡೆಯಾಯಿತು.

5. ಈ ಕಾಲದಲ್ಲಿ ಗ್ರೀಕ್ ಮತ ರಾಜಕೀಯವನ್ನು ಆವರಿಸಿತು. ದೇವತೆಗಳು ನಗರರಾಜ್ಯಗಳ ವಿಧಾಯಕರಾದರು. ತೋಳದ ದೇವತೆ ಅಪೋಲೊ ಈಗ ಆರ್ಗಾಸ್ ರಾಜ್ಯದ ರಕ್ಷಕ. ಮನೆತನದ ದೇವತೆಯಾದ ಜ್ಯೂಸ್ ರಾಜ್ಯದ ದೇವರಾದ. ಹೀಗೆ ಗ್ರೀಕರು ಜ್ಯೂಸ್ ದೇವತೆಯ ಭಕ್ತರಾದುದರಿಂದ ತಾವೆಲ್ಲರೂ ಒಂದು ದೊಡ್ಡ ಸಂಸಾರಕ್ಕೆ ಸೇರಿದವರು ಎಂಬ ಭಾವನೆ ಬೆಳೆಯಿತು. ವರ್ಷಕ್ಕೊಮ್ಮೆ ಕುಟುಂಬಗಳ ಮಿಳನದ ಹಬ್ಬವನ್ನು ಆಚರಿಸಲು ಪ್ರಾರಂಭಿಸಿದರು. ಈ ಆಚರಣೆಯ ಪರಿಣಾಮವಾಗಿ ಒಂದೊಂದು ನಗರರಾಜ್ಯದ ಜನರೆಲ್ಲರಿಗೂ ಒಂದೇ ದೇವತೆ ಮೂಲಪುರುಷನಾದ. ಕೆಲವು ಕಾಲದ ಅನಂತರ ಅಯೋನಿಯದ ಹೊರಗಿನ ಜನರೂ ಅಪೊಲೊ ತಮ್ಮ ಮೂಲಪುರುಷನೆಂದು ಸಾರತೊಡಗಿದರು. ಡಿಲಾಸ್‌ನಲ್ಲಿ ಜ್ಯೂಸ್ ದೇವತೆಯನ್ನು ತಂದೆ ದೇವತೆ ಎಂದು ಸಂಬೋಧಿಸುವುದು ವಾಡಿಕೆಯಾಯಿತು.

6. ಪ್ರ.ಶ.ಪೂ. ಎಂಟನೆಯ ಶತಮಾನದಲ್ಲಿ ಒಂದೊಂದು ರಾಜ್ಯದವರೂ ತಮ್ಮ ಪುರಾತನ ವೀರನೊಬ್ಬನನ್ನು ದೇವರ ಪ್ರತಿನಿಧಿ ಎಂದು ಭಾವಿಸತೊಡಗಿದರು. ಪ್ರ.ಶ.ಪೂ. ಆರನೆಯ ಶತಮಾನದ ವೇಳೆಗೆ ಪುರಾತನರಿಗಲ್ಲದೆ ಈಚಿನ ವೀರರಿಗೂ ದೈವತ್ವವನ್ನು ಆರೋಪಿಸುವುದು ಸಾಮಾನ್ಯವಾಯಿತು. ಇಂಥ ಈಚಿನ ವೀರರು ದೈವತ್ವ ಪಡೆದುದಕ್ಕೆ ಸ್ಪಾರ್ಟದ ಲೈಕರ್ಗಸ್ ಒಂದು ಉತ್ತಮ ಉದಾಹರಣೆ. ಗ್ರೀಕರು ಹೊಸ ವಸಾಹತುಗಳನ್ನು ಏರ್ಪಡಿಸಿದಾಗ ತಮ್ಮ ಮುಖಂಡರಲ್ಲಿ ಪ್ರಧಾನವಾದೊಬ್ಬನನ್ನು ದೈವವಾಗಿ ಮಾಡಿಕೊಳ್ಳುತ್ತಿದ್ದರು. ಅವರ ಸಮಾಧಿಗಳು ಪವಿತ್ರ ಸ್ಥಾನಗಳಾದವು. ವರ್ಷಕ್ಕೊಮ್ಮೆ ಈ ಸಮಾಧಿಯ ಸ್ಥಳದಲ್ಲಿ ಉತ್ಸವವನ್ನು ಏರ್ಪಡಿಸಿ ಬಲಿ ಅರ್ಪಿಸುತ್ತಿದ್ದರು. ವೀರರ ಪೂಜೆಯ ಜೊತೆಯಲ್ಲಿ ಪಿತೃಗಳ ಪೂಜೆಯೂ ಬೆಳೆಯಿತು. ಪ್ರ.ಶ. 7 ನೆಯ ಶತಮಾನದಲ್ಲಿ ಸರ್ವಪಿತೃಗಳ ಹಬ್ಬವನ್ನು (ಆಲ್ ಸೋಲ್ಸ್ ಡೇ) ನಗರದ ಹಬ್ಬವಾಗಿ ಆಚರಿಸುವುದು ಪ್ರಾರಂಭವಾಯಿತು.

7. ರಾಜ್ಯದ ಪ್ರಜೆಗಳೆಲ್ಲರೂ ಒಂದೇ ಸಂಸಾರದವರು, ವಿಸ್ತರಿಸಿದ ಕುಟುಂಬವೇ ರಾಜ್ಯವೆಂಬ ಭಾವನೆ ಬಲಿತಾಗ ರಾಜ್ಯದ ಕಾನೂನಿನಲ್ಲೂ ಬದಲಾವಣೆಯಾಯಿತು. ಮೊದಲಲ್ಲಿ ಒಂದು ಕುಟುಂಬದವನು ಅದಕ್ಕೆ ಸೇರಿದವನೊಬ್ಬನನ್ನು ಕೊಂದಾಗ ಮಾತ್ರ ಅದು ಮಹಾಪಾತಕವೆಂದು ಎಣಿಸಲಾಗುತ್ತಿತ್ತು. ರಾಜ್ಯವೆಂಬುದು ವಿಸ್ತರಿಸಿದ ಕುಟುಂಬವೆಂಬ ಭಾವನೆ ಬೆಳೆದಮೇಲೆ ಒಂದು ರಾಜ್ಯದ ಪೌರ ಆ ರಾಜ್ಯದ ಯಾವ ಪೌರನನ್ನು ಕೊಂದರೂ ಅದು ಮಹಾಪಾತಕವೆಂಬ ಭಾವನೆ ಹುಟ್ಟಿತು. ರಾಜ್ಯದ ಪೌರನ ಕೊಲೆಯಾದರೂ ಜ್ಯೂಸ್ ದೇವತೆ ಕೋಪಗೊಳ್ಳುತ್ತಾನಾದ್ದರಿಂದ ಕೊಲೆಮಾಡಿದವನು ಆ ಪಾಪದ ಪರಿಹಾರಾರ್ಥವಾಗಿ ಶುದ್ಧೀಕರಣ, ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ವಿಧಾಯಕವಾಯಿತು. ಎಂಟನೆಯ ಶತಮಾನದ ಮೈಲಿಟಾಸಿನ ಕವಿಯೊಬ್ಬ ಅಕಿಲಿಸ್ ತನ್ನ ರಕ್ತಸಂಬಂಧಿಯಲ್ಲದ ಥರ್ಸಿಟೀಸನನ್ನು ಕೊಂದದ್ದಕ್ಕಾಗಿ ಅವನು ಲೆಸ್‌ಬಾಸಿಗೆ ಹೋಗಿ ಅಪೊಲೊ ಮತ್ತು ಆರ್ಟಿಮಿಸ್ ದೇವತೆಗಳ ಸಮ್ಮುಖದಲ್ಲಿ ಶುದ್ಧೀಕರಣ ಪ್ರಾಯಶ್ಚಿತ್ತ ಮಾಡಿಕೊಂಡದ್ದನ್ನು ವರ್ಣಿಸಿರುತ್ತಾನೆ.

8. ಈ ಅವಧಿಯಲ್ಲಿ ಡೆಲ್ಫೈ ಕ್ಷೇತ್ರ ತುಂಬ ಪ್ರಬಲಗೊಂಡಿತು. ಯಾವ ಒಂದು ಗ್ರೀಕ್ ನಗರರಾಜ್ಯವಾಗಲಿ, ಹೊಸ ವಸಾಹತಾಗಲಿ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಡೆಲ್ಫೈಯ ಪುರೋಹಿತರನ್ನು ಆಶ್ರಯಿಸುತ್ತಿದ್ದವು. ಡೆಲ್ಫೈಯ ಪ್ರಚೋದನೆಯಿಂದ ಗ್ರೀಕರಲ್ಲಿ ಐಕಮತ್ಯ ಕುದುರಿತು. ಅದು ಶುದ್ಧೀಕರಣಕ್ಕೆ ಕೇಂದ್ರಕ್ಷೇತ್ರವಾಯಿತು. ಸಾಮಾನ್ಯವಾಗಿ ಅದರ ನ್ಯಾಯ ನಿಷ್ಠೆ ಮತ್ತು ಧಾರ್ಮಿಕ ನೀತಿ ಮೇಲ್ಮಟ್ಟದ್ದಾಗಿತ್ತು. ಪ್ರ.ಶ.ಪೂ. ಎಂಟನೆಯ ಶತಮಾನದಿಂದ ಪ್ರ.ಶ.ಪೂ. ಐದನೆಯ ಶತಮಾನದ ವರೆಗೆ ಧಾರ್ಮಿಕ ವಿಚಾರಗಳಲ್ಲಿ ಏಕೈಕ ವಿಧಾಯಕತ್ವ ಪಡೆದಿತ್ತು. ಅಲ್ಲಿಂದಾಚಿನ ಕಾಲದಲ್ಲಿ ಅದರ ಪ್ರಾಬಲ್ಯ ಕ್ಷೀಣಗೊಂಡಿತು.

9. ದೈವವೃಂದದ ಪ್ರಸಿದ್ಧ ಕೇಂದ್ರವಾದ ಒಲಿಂಪಿಯದಲ್ಲಿ ಈ ಕಾಲದಲ್ಲಿ ಗ್ರೀಕರು ಪಂದ್ಯಗಳನ್ನು ಏರ್ಪಡಿಸಲು ಪ್ರಾರಂಭಿಸಿದರು. ಪ್ರ.ಶ.ಪೂ. 6 ನೆಯ ಶತಮಾನದ ವೇಳೆಗೆ ಪೂರ್ವ ಪಶ್ಚಿಮ ದೇಶಗಳ ಜನ ತಮ್ಮ ರಾಜಕೀಯ ವೈಮನಸ್ಯವನ್ನು ಮರೆತು ಈ ಪಂದ್ಯಗಳಲ್ಲಿ ಭಾಗವಹಿಸುತ್ತಿದ್ದರು. ನಾಲ್ಕು ವರ್ಷಗಳಿಗೊಮ್ಮೆ ಗ್ರೀಸಿನ ಎಲ್ಲ ಕಡೆಯ ವೀರರೂ ಇಲ್ಲಿಗೆ ಬಂದು ತಂದೆ ದೇವತೆಗೆ ಪೂಜೆಯನ್ನು ಸಲ್ಲಿಸಿ ಈ ಪಂದ್ಯಗಳಲ್ಲಿ ಪೈಪೋಟಿ ನಡೆಸುತ್ತಿದ್ದರು. ಆಟಗಳ ಜೊತೆಯಲ್ಲಿ ಕಲಾವಿದರ ಸ್ಪರ್ಧೆಯೂ ಏರ್ಪಡುತ್ತಿತ್ತು. ಈ ಸ್ಪರ್ಧೆಗಳಿಂದ ಹೆಲೆನರಲ್ಲಿ ಒಗ್ಗಟ್ಟು ಕುದುರಿದುದಲ್ಲದೆ ಅವರ ಮತೀಯ ಭಾವನೆಗಳಲ್ಲೂ ಏಕತೆ ಬೆಳೆಯಿತು. ಈ ಪಂದ್ಯಗಳಲ್ಲದೆ ವರ್ಷೇ ವರ್ಷೇ ನಡೆಯುತ್ತಿದ್ದ ಅಖಿಲ ಅಯೋನಿಯ ಅಪೊಲೊ ಉತ್ಸವವೂ ಗ್ರೀಕ್ ಮತದ ಏಕತೆಯನ್ನು ಬಲಗೊಳಿಸಿತು.

10. ಬೊಯೀಷಿಯದಿಂದ ಮೊಟ್ಟಮೊದಲಿಗೆ ಹತ್ತನೆಯ ಶತಮಾನದಲ್ಲಿ ಆಟಿಕಕ್ಕೆ ಪ್ರವೇಶಿಸಿದ ಡಯೊನೈಸಸ್ ಆರಾಧನೆ ಈ ಕಾಲದಲ್ಲಿ ಇತರ ಗ್ರೀಕ್ ರಾಜ್ಯಗಳಿಗೂ ಹರಡಿತು. ಹೀಗೆ ಹಬ್ಬಿದಾಗ ಅದು ತನ್ನ ಮೊದಲಿನ ಕರಾಳ ರೂಪವನ್ನು ತ್ಯಜಿಸಿ ಬಹುಮಟ್ಟಿಗೆ ಸೌಮ್ಯರೂಪ ತಾಳಿ ಸಾರ್ವಜನಿಕ ಮತವಾಯಿತು. ಈ ದೇವತೆಯನ್ನು ಕುರಿತು ಡಿಥಿರ್‍ಯಾಂಬ್ ಎಂಬ ಆ ದೇಶದ ಸ್ತೋತ್ರಗೀತೆ ಬೆಳೆಯಿತು. ಈ ಗೀತೆಗಳು ಮುಂದೆ ಆಟಿಕದ ರುದ್ರನಾಟಕಕ್ಕೆ ಮಾತೃಕೆಗಳಾದವು. ಈ ದೇವತೆಯ ಆರಾಧನೆ ದೈವದೊಡನೆ ಭಾವೈಕ್ಯ ಬೆಳೆಸಿತಲ್ಲದೆ, ಮರಣಾಂತರದ ಆತ್ಮದ ದಿಶೆಯಲ್ಲಿ ನಂಬಿಕೆಯನ್ನು ಭದ್ರಗೊಳಿಸಿತು.

11. ಡಯೊನೈಸಸ್ ಮತ ಸಾರ್ವಜನಿಕವಾದರೂ ಅದರಲ್ಲಿ ಸತ್ತ್ವವಿರುವುದು ಅದರ ಗುಹ್ಯ ಅಥವಾ ಗೂಢ ಭಾವನೆಯಲ್ಲಿ. ಈ ದೇವತೆಯ ಆರಾಧಕರು ಗೂಢ ಭ್ರಾತೃವರ್ಗವನ್ನು ಏರ್ಪಡಿಸಿಕೊಂಡು ಆರ್ಫಿಸಂ ಎಂಬ ಹೆಸರಿನಲ್ಲಿ, ಬುಡಕಟ್ಟುಗಳ ಮತ್ತು ಜನಾಂಗಗಳ ಭೇದವನ್ನು ಎಣಿಸದೆ, ಜನರನ್ನು ತಮ್ಮ ಭ್ರಾತೃವರ್ಗಕ್ಕೆ ಸೇರಿಸಿಕೊಂಡು ಆ ದೇವತೆಯ ಸಂದೇಶವನ್ನು ಉಪದೇಶಿಸಿದರು. ಆರ್ಫಿಯಸ್ ಮತಭಾವನೆಗಳು ಗ್ರೀಕ್ ಪೌರಾಣಿಕ

ಮತದಿಂದ ಭಿನ್ನವಾದವು. 1. ಪ್ರತಿಯೊಬ್ಬನ ಆತ್ಮವೂ ದೈವಿಕವಾದದ್ದು. 2. ಆ ಆತ್ಮ ಶರೀರವೆಂಬ ಕೊಳೆ ತುಂಬಿದ ಕಾರಾಗೃಹದಲ್ಲಿ ಬಂಧಿತವಾಗಿದೆ. 3. ಯೋಗ್ಯವಾದ ಸಂಸ್ಕಾರಗಳಿಂದ ಆ ಆತ್ಮನನ್ನು ಶುಚಿರ್ಭೂತವಾಗಿ ಮಾಡಬಹುದು. 4. ಹಾಗೆ ಈ ಜನ್ಮದಲ್ಲಿ ಶುಚಿಯಾಗದ ಆತ್ಮಗಳು ಶುದ್ಧಿಲೋಕದಲ್ಲಿ (ಪರ್ಗಟೂರಿ) ಪಾಪಪರಿಹಾರ ದಂಡನೆಗೆ ಒಳಪಟ್ಟು ಶುಚಿಯಾಗುತ್ತವೆ. 5. ಸತ್ತವರಿಗೆ ಪುನರ್ಜನ್ಮ ಉಂಟು. ಇವು ಆರ್ಫಿಯಸ್ ಮತದ ಮುಖ್ಯಾಂಶಗಳು. ಪುನರ್ಜನ್ಮದ ಭಾವನೆ ಬಹುಶಃ ಬೌದ್ಧರಿಂದ ಗ್ರೀಸಿಗೆ ಬಂದಿರಬಹುದೆಂದು ಕೆಲವರ ಊಹೆ. ಪ್ರ.ಶ.ಪೂ. ಐದನೆಯ ಶತಮಾನದಷ್ಟು ಹಿಂದೆ, ಅಂದರೆ ಬೌದ್ಧಮತ ಹುಟ್ಟಿದ ಸ್ವಲ್ಪ ಕಾಲದಲ್ಲಿಯೇ ಈ ಭಾವನೆ ಗ್ರೀಸಿಗೆ ಹಬ್ಬಲು ಸಾಧ್ಯವೇ ಎಂಬ ಸಂದೇಹಕ್ಕೆ ಅವಕಾಶವುಂಟು. ಆತ್ಮಕ್ಕೆ ಸಾವಿಲ್ಲ ಎಂಬ ಆರ್ಫಿಯಸ್ ಮತಭಾವನೆ ಪ್ಲೇಟೊವಿನ ಮೇಲೆ ಪ್ರಭಾವ ಬೀರಿರಬಹುದೆಂದು ಊಹಿಸಲು ಅವಕಾಶವಿದೆ.

12. ಎಲೂಸಿಸ್‌ನ ಗುಹ್ಯ ತತ್ತ್ವಗಳು ಆರ್ಫಿಯಸ್ ತತ್ತ್ವಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಅವು ಇಹಲೋಕವನ್ನು ಬಿಟ್ಟ ಆತ್ಮಗಳಿಗೆ ಸುಖಪ್ರದ ಜೀವನದ ಭರವಸೆಯನ್ನು ನೀಡುತ್ತವೆ. ಎಲೂಸಿಸ್ ಸಂಘದ ವ್ಯಾಪ್ತಿ ತುಂಬ ವಿಶಾಲವಾದದ್ದು. ಈ ಮತದವರು ಹೆಂಗಸರಿಗೂ ಗುಲಾಮರಿಗೂ ತಮ್ಮ ಸಂಘಕ್ಕೆ ಸೇರಲು ಅವಕಾಶ ಕೊಟ್ಟರು. ಪವಿತ್ರ ಬಟ್ಟಲಿನಿಂದ ಒಂದು ವಿಧವಾದ ಮಿಶ್ರಪಾನೀಯವನ್ನು ಕುಡಿಸುವುದು ಈ ಸಂಘದ ಸಂಸ್ಕಾರಗಳಲ್ಲಿ ಒಂದು. ಕ್ರೈಸ್ತರ ಪ್ಯಾಷನ್ ಪ್ಲೇ ಮಾದರಿಯ ಪವಿತ್ರ ವಸ್ತುಗಳ ದೃಶ್ಯನಾಟಕ ಪ್ರದರ್ಶನ – ಇನ್ನೊಂದು. ಈ ಸಂಸ್ಕಾರಗಳ ಮೂಲಕ ಈ ಸಂಘದ ಸದಸ್ಯರಲ್ಲಿ ತಾವು ದೈವದೊಂದಿಗೆ ಸಂಸರ್ಗ ಪಡೆದೆವೆಂಬ ಭಾವನೆ ಹುಟ್ಟುತ್ತಿತ್ತು.

13. ಪ್ರ.ಶ.ಪೂ. 6 ನೆಯ ಶತಮಾನದಲ್ಲಿ ಗ್ರೀಕರಲ್ಲಿ ತತ್ತ್ವಚಿಂತನೆ ಮೊಟ್ಟಮೊದಲಿಗೆ ಕಾಣಿಸಿಕೊಂಡಿತು. ಇದು ಮುಖ್ಯವಾಗಿ ವಿಶ್ವದ ಹುಟ್ಟಿಗೆ ಕಾರಣ ಯಾವುದು ಎಂಬ ಪ್ರಶ್ನೆಗೆ ಸಂಬಂಧಪಟ್ಟಿದ್ದು. ಥಾಲೀಸ್ ಮುಂತಾದ ತಾತ್ತ್ವಿಕರು ವಿಶ್ವದ ಸೃಷ್ಟಿಗೆ ಜಾತ ತತ್ತ್ವಗಳು ಕಾರಣವೆಂದು ವಾದಿಸಿದರು. ಇವರ ವಾದ ಗ್ರೀಕರ ದೈವಿಕ ಭಾವನೆಗೆ ವಿರುದ್ಧವಾದುದು. ಹೆರಾಕ್ಲಿಟಸ್ ಎಂಬ ತಾತ್ತ್ವಿಕ, ವಿಶ್ವದ ಸೃಷ್ಟಿಗೆ ದೇವತೆಗಳಾಗಲೀ ಮಾನವರಾಗಲೀ ಕಾರಣವಲ್ಲವೆಂದು ಘೋಷಿಸಿದ. ಎಂಪಿಡೋಕ್ಲಿಸ್ ವಿಶ್ವದಲ್ಲಿ ಕಾಣುವ ಕ್ರಿಯೆಗಳಿಗೆ ಆಕರ್ಷಣ ಮತ್ತು ವಿಕರ್ಷಣ ಶಕ್ತಿಗಳು ಕಾರಣವೆಂದು ವಾದಿಸಿದ. ವಿಶ್ವದ ರಚನೆಗೆ ಸಂಖ್ಯಾ ತತ್ತ್ವವೇ ಆಧಾರವೆಂಬುದು ಪೈಥಾಗೊರಸನ ಮೂಲಭಾವನೆ. ಜೆನೋಫೆನೀಸ್, ದೈವ ಮಾನವನಂತೆ ವ್ಯಕ್ತಿಯಲ್ಲ, ಅದು ಸತ್ ತತ್ತ್ವವೆಂದು ಸಾರಿದ. ಇತರ ತತ್ತ್ವ ಕೇವಲ ಕೆಲವರನ್ನು ಆಕರ್ಷಿಸಿತೇ ಹೊರತು ಅನೇಕ ದೇವತೆಗಳ ಭಕ್ತರಾದ ಸಾಮಾನ್ಯ ಗ್ರೀಕ್ ಪ್ರಜೆಗಳ ಮೇಲೆ ಗಮನಾರ್ಹವಾದ ಪರಿಣಾಮವನ್ನು ಉಂಟುಮಾಡಲಿಲ್ಲ. ಈ ಭಾವನೆಗಳು ರಾಷ್ಟ್ರದ ಮತಕ್ಕೆ ಹಾನಿ ಎಂದು ರಾಜಕೀಯ ಮುಖಂಡರು ಎಣಿಸಿದ್ದು ಪ್ರ.ಶ.ಪೂ. 5 ನೆಯ ಶತಮಾನದಲ್ಲಿ.

**III** ಗ್ರೀಕ್ ಮತದ ಮೂರನೆಯ ಅವಧಿ (ಪ್ರ.ಶ.ಪೂ. 500 ರಿಂದ ಪ್ರ.ಶ.ಪೂ. 338 ರವರೆಗೆ). ಇದು ಗ್ರೀಕರ ಪ್ರಸಿದ್ಧ ಸ್ಮಾರಕಗಳ ಮತ್ತು ಸಾಹಿತ್ಯದ ಕಾಲ. ಈ ಕಾಲದಲ್ಲಿ ಅಥೆನ್ಸ್ ಗ್ರೀಕ್ ರಾಜ್ಯಗಳಲ್ಲಿ ಪ್ರಮುಖ ರಾಜ್ಯವಾಗಿತ್ತಲ್ಲದೆ ಅದು ಗ್ರೀಕರ ಕಲೆ ಮತ್ತು ಸಾಹಿತ್ಯದ ನೆಲೆವೀಡಾಯಿತು. ಈ ಕಾಲದಲ್ಲಿ ಗ್ರೀಕರ ದೇವವೃಂದ ಬೆಳೆದು ಪರಿಪೂರ್ಣಗೊಂಡಿತು. ಈ ಕಾಲದಲ್ಲಿ ದೇವವೃಂದಕ್ಕೆ ಪ್ಯಾನ್ ಮತ್ತು ಆಸ್ಕ್ಲಿಪಿಯೊಸ್ ದೇವತೆಗಳು ಸೇರಿದರು.

1. ಈ ಅವಧಿಯಲ್ಲಿ ಗ್ರೀಕರಿಗೂ ಪಾರಸಿಕರಿಗೂ ನಡೆದ ಯುದ್ಧದಿಂದ ಗ್ರೀಕರಲ್ಲಿ ತಾವು ಒಂದು ಸಂಘಟಿತ ಜನಾಂಗವೆಂಬ ಭಾವನೆ ಏರ್ಪಟ್ಟಿತಲ್ಲದೆ ಅತಿಶಯವಾದ ಬಿಕ್ಕಟ್ಟು ಕುದುರಿತು. ಈ ಯುದ್ಧ ಕೇವಲ ಜನಾಂಗಗಳ ಯುದ್ಧವಲ್ಲ. ಅದು ಸಾಂಸ್ಕೃತಿಕ ಮತ್ತು ಮತೀಯ ಯುದ್ಧ. ಅಂತಿಮವಾಗಿ ಗ್ರೀಕರಿಗೆ ದೊರೆತ ಜಯ ಕೇವಲ ಗ್ರೀಕ್ ಜನಾಂಗದ ವಿಜಯವಲ್ಲ. ಅದು ಜ್ಯೂಸ್ ದೇವತೆಯ ವಿಜಯ. ಈ ಕಾಲದ ಪ್ರಸಿದ್ಧ ಇತಿಹಾಸಕಾರ ಹೀರಡಾಟಸ್ ಜ್ಯೂಸ್ ಹೆಲಿನೋಸ್ ಭಾವನೆಯನ್ನು ಎತ್ತಿ ತೋರಿಸಿರುತ್ತಾನೆ. ಜ್ಯೂಸ್ ದೇವತೆ ಗ್ರೀಕರ ಸ್ವಾತಂತ್ರ್ಯದ ರಕ್ಷಕ (ಜ್ಯೂಸ್ ಎಲಿಯುಥೆರೋಸ್) ಎಂಬ ಭಾವನೆಯೂ ರೂಪುಗೊಂಡಿತು. ಗ್ರೀಕರ ಬಿಡುಗಡೆಯ ದೇವತೆಯಾದ ಜ್ಯೂಸಿನ ಹೆಸರಿನಲ್ಲಿ ಒಂದು ಪವಿತ್ರ ಸ್ಮಾರಕ ಸ್ಥಾಪನೆಯಾಯಿತು. ಗ್ರೀಕರು ಪಾರಸಿಕರನ್ನು ಸೋಲಿಸಿದ ಮೇಲೆ ಅದಕ್ಕೆ ತಮ್ಮ ದೇವತೆಗಳೇ ಕಾರಣರಾದುದರಿಂದ ದೇವತೆಗಳಲ್ಲಿ ಹಿಂದೆಂದೂ ಇಲ್ಲದಿದ್ದಷ್ಟು ಅತಿಶಯವಾದ ಪ್ರೀತಿ ಮತ್ತು ಭಕ್ತಿ ಬೆಳೆಯಿತು. ಗ್ರೀಕರು ಜಯ ಗಳಿಸಿದ ಮೇಲೆ ಯುದ್ಧದಲ್ಲಿ ವಶಪಡಿಸಿಕೊಂಡ ಸಂಪತ್ತಿನಲ್ಲಿ ಬಹುಭಾಗವನ್ನು ಡೆಲ್ಫಿಯ ಅಪೊಲೊವಿಗೂ ಒಲಿಂಪಿಯದ ಜ್ಯೂಸ್ ಮಹಾದೇವತೆಗೂ ಅರ್ಪಿಸಿದರು. ಅಕ್ರಾಸಿನಲ್ಲಿ ಜ್ಯೂಸ್ ದೇವತೆಗೆ ಅತಿ ದೊಡ್ಡ ದೇವಸ್ಥಾನವನ್ನು ಕಟ್ಟಿದರು. ಪ್ಲೇಟಿಯಾದಲ್ಲಿ ಜ್ಯೂಸ್ ದೇವತಾಪ್ರೀತ್ಯರ್ಥವಾಗಿ ಸ್ವಾತಂತ್ರ್ಯದ ಸಂತರ್ಪಣೆ ಏರ್ಪಟ್ಟಿತು. ಅದೇ ಕಾಲದಲ್ಲಿ ವಿಜಯದ ಸ್ಮಾರಕಗಳಾಗಿ ಅಥೆನ್ಸಿನಲ್ಲಿ ಅಥಿನ ದೇವತೆಯ ಎರಡು ವಿಗ್ರಹಗಳು ಸ್ಥಾಪನೆಯಾದವು. ಗ್ರೀಕರ ಹಡಗುಗಳ ಚಲನಕ್ಕೆ ನೆರವಾದ ಮರುತ್ತುಗಳಿಗೂ ಪ್ಲೇಟಿಯಾ ಯುದ್ಧದಲ್ಲಿ ಗ್ರೀಕರನ್ನು ಹುರಿದುಂಬಿಸಿದ ವನದೇವತೆಗಳಿಗೂ ಉತ್ಸವಗಳು ನಡೆದವು. ಮ್ಯಾರಥಾನ್ ಯುದ್ಧದಲ್ಲಿ ಜಯಕ್ಕೆ ಕಾರಣನಾದ ಆಡಿನ ಆಕಾರದ ಆರ್ಕೇಡಿಯ ಪ್ಯಾನ್ ದೇವತೆಯನ್ನು ಅಥೆನ್ಸಿನಲ್ಲಿ ಸ್ಥಾಪಿಸಿದರು. ಯುದ್ಧದಲ್ಲಿ ಮಡಿದ ವೀರರ ಹೆಸರಿನಲ್ಲೂ ಸ್ಮಾರಕಗಳು ಸ್ಥಾಪನೆಯಾದುವು. ಯುದ್ಧದಲ್ಲಿ ಜಯಗಳಿಸಲು ಸಹಾಯಕರಾದ ಎಲೂಸಿಯ ದೇವತೆಗಳಿಗೆ ತಮ್ಮ ಕೃತಜ್ಞತೆಯನ್ನು ತೋರಿಸಲು ಎಲೂಸಿಯದ ಮಹಲನ್ನು ಹೆಲನ್ನರು ಸಾರ್ವತ್ರಿಕ ಮತಕೇಂದ್ರವಾಗಿ ಮಾಡಿಕೊಂಡರು.

2. ಎರಡನೆಯ ಅವಧಿಯಲ್ಲಿ ಪ್ರಾರಂಭವಾದ ವಿಗ್ರಹಾರಾಧನೆ ಮೂರನೆಯ ಅವಧಿಯಲ್ಲಿ ಮುಗಿಲು ಮುಟ್ಟಿತು. ಇದಕ್ಕೆ ಮುಖ್ಯವಾಗಿ ಗ್ರೀಕರ ಅತ್ಯಂತ ಶ್ರೇಷ್ಠ ಶಿಲ್ಪಿ ಫೀಡಿಯಾಸ್‌ನ ಅಮರ ಕಲೆ ಕಾರಣವಾಯಿತು. ಇವನ ಲೋಕ ಪ್ರಖ್ಯಾತ ದೇವತೆಗಳ ವಿಗ್ರಹಗಳು ಗ್ರೀಕರಲ್ಲಿ ಅನುಪಮ ಭಕ್ತಿಭಾವನೆಯನ್ನು ಬೆಳೆಸಿದುವು. ಕಾವ್ಯದ ಮಾತಿನಲ್ಲಿ ದೈವಿಕ ಭಾವನೆಯನ್ನು ಈ ವಿಗ್ರಹಗಳು ಪ್ರಕಾಶಪಡಿಸುತ್ತವೆ. ಗ್ರೀಕರ ಪಾರ್ಥೆನಾನಿನಲ್ಲಿ ಸ್ಥಾಪಿಸಿದ ವಿಗ್ರಹಗಳು ಶರೀರ ಸೌಂದರ್ಯವನ್ನೂ ಬಲವನ್ನೂ ತೋರಿಸುತ್ತವೆಯಲ್ಲದೆ, ದೈವದ ಘನತೆಯನ್ನೂ ದಯಾಮಯುತೆಯನ್ನೂ ಸುಖಶಾಂತಿಯನ್ನೂ ಅಭಿವ್ಯಕ್ತಗೊಳಿಸುತ್ತವೆ. ಎಲೂಸಿಯ ಮತದ ಸೌಮ್ಯ ಮತ್ತು ಶಾಂತಭಾವನೆಗಳು ಎಲೂಸಿಯದ ಮಾತೃ ದೇವತೆಯ ಉಬ್ಬುಚಿತ್ರದಲ್ಲಿ ಎದ್ದು ಕಾಣುತ್ತವೆ. ಕವಿಗಳು ವರ್ಣಿಸಿರುವ ಅಥಿನ ದೇವತೆಗಿಂತ ಚೆನ್ನಾಗಿ ಪಾರ್ಥೆನಾನಿನಲ್ಲಿರುವ ಫಿಡಿಯಾಸನ ವಿಗ್ರಹ (ಕ್ರೈಸ್ತರ ಮೇರಿ ಕನ್ನಿಕೆಯ ಚಿತ್ರದಂತೆ) ಕನ್ಯಕಾಭಾವನೆಯನ್ನು ಸ್ಫುಟಗೊಳಿಸುತ್ತದೆ. ಫಿಡಿಯಾಸನ ಜ್ಯೂಸ್ ಒಲಿಂಪಿಯೋಸ್ ವಿಗ್ರಹ ಆ ದೇವತೆಯ ಘನತೆಯನ್ನು ಹೋಮರ್ ಮತ್ತು ಈಸ್ಕಿಲಸರಿಗಿಂತ ಚೆನ್ನಾಗಿ ಪ್ರಕಟಿಸುತ್ತದೆ. ಫಿಡಿಯಾಸನ ಆಫ್ರೊಡೈಟಿಯ ವಿಗ್ರಹ ಈಸ್ಕಿಲಸ್ ವರ್ಣಿಸಿರುವ ಘನತೆಯೊಂದಿಗೆ ಅವನ ವರ್ಣನೆಯಲ್ಲಿ ಕಾಣದ ಪ್ರೇಮವನ್ನು ಪ್ರಕಾಶಿಸುತ್ತದೆ.

ಈ ಕಾಲದಲ್ಲಿ ಹೂದಾನಿಗಳ ಮೇಲೆ ದೇವತೆಗಳ ವಿವಿಧ ಭಾವಭಂಗಿಗಳನ್ನು ಚಿತ್ರಿಸುವುದು ರೂಢಿಗೆ ಬಂತು. ಪ್ರ.ಶ.ಪೂ. ಐದನೆಯ ಶತಮಾನದಲ್ಲಿ ಹೂದಾನಿಗಳ ಮೇಲೆ ಚಿತ್ರಿಸಿರುವ ಡಯೊನೈಸಸ್ ದೇವತೆಯ ವರ್ಣಚಿತ್ರ ಯೂರಿಪಿಡೀಸನ ವರ್ಣನೆಗಿಂತ ತುಂಬ ಭಾವಪ್ರದವಾಗಿದೆ.

ಭೌತವಾದಿಗಳು ಮತ್ತು ತಾತ್ತ್ವಿಕರು ಗ್ರೀಕರ ಬಹು ದೇವತೆಗಳ ಆರಾಧನೆಯನ್ನು ಅಲ್ಲಗಳೆದರೂ ಪ್ರ.ಶ.ಪೂ. 5 ನೆಯ ಶತಮಾನದಲ್ಲಿ ಗ್ರೀಕ್ ಮತ ಅವರ ಕಟುಟೀಕೆಗಳನ್ನು ಮೆಟ್ಟಿ ನಿಂತುದಕ್ಕೆ ಗ್ರೀಕ್ ಕಲೆ ಒಂದು ಮುಖ್ಯ ಕಾರಣ. ಈ ಕಲೆ ಅವರ ಮತವನ್ನು ಪುಷ್ಟಿಗೊಳಿಸದಿದ್ದರೆ ಬಹುಶಃ ಗ್ರೀಕ್ ಮತ ಇನ್ನೂ ಮುಂಚೆಯೇ ಕ್ಷೀಣದೆಶೆಗೆ ಇಳಿಯುತ್ತಿತ್ತು. ಅದು ರೋಮನರ ಮೇಲೆ ತನ್ನ ಪ್ರಭಾವ ಬೀರಿ ಅದನ್ನು ರೂಪಾಂತರಗೊಳಿಸಿದ್ದಕ್ಕೂ ಗ್ರೀಕರ ವಿಗ್ರಹಶಿಲ್ಪವೇ ಕಾರಣ.

3. ಐದನೆಯ ಶತಮಾನದ ಮತ್ತು ನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ಗ್ರೀಕ್ ಮತದ ಉನ್ನತಿಗೆ ಸಾಹಿತ್ಯವೂ ಬೇರೆ ರೀತಿಯಲ್ಲಿ ನೆರವಾಯಿತು. ಮತ ಭಾವನೆಗಳಿಗೆ ಪುಷ್ಟಿಕೊಟ್ಟ ಈ ಕಾಲದ ಸಾಹಿತಿಗಳಲ್ಲಿ ಪ್ರಧಾನರಾದವರು ಪಿಂಡಾರ್, ಈಸ್ಕಿಲಸ್ ಮತ್ತು ಸಾಫೊಕ್ಲೀಸ್. ಆ ಕಾಲದ ಮೇಲ್ಮಟ್ಟದ ಮತೀಯ ಭಾವನೆಗಳನ್ನು ಇವರ ಕಾವ್ಯಗಳು ಪ್ರತಿಬಿಂಬಿಸುತ್ತವೆ. ಪಿಂಡಾರನ ಪ್ರಗಾಥಗಳು ಆರ್ಫಿಯಸ್ಸನ ಮತದ ಉಚ್ಚ ಭಾವನೆಗಳನ್ನು ಪ್ರತಿಪಾದಿಸುತ್ತವೆ. ಮರಣಾನಂತರದಲ್ಲಿ ಆತ್ಮ ಸ್ವರ್ಗದಲ್ಲಿ ಅನುಭವಿಸುವ ಸುಖವನ್ನು ದಿವ್ಯವಾಗಿ ಚಿತ್ರಿಸುತ್ತದೆ. ಅವನ ಒಲಿಂಪಿಯ ಪ್ರಗಾಥ ಯುರೋಪಿನ ಮೊಟ್ಟಮೊದಲ ಸ್ವರ್ಗದ ಅತಿಶಯ ಚಿತ್ರ. ಆತ್ಮ ಸ್ವಭಾವತಃ ದೈವಿಕವಾದದ್ದು ಎಂಬ ಭಾವನೆ ಈ ಪ್ರಗಾಥದಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಪಿಂಡಾರ್, ಈಸ್ಕಿಲಸ್ ಮತ್ತು ಸಾಫೊಕ್ಲೀಸ್ ಈ ಮೂವರು ಸಾಂಪ್ರದಾಯಿಕ ಗ್ರೀಕ್‌ಮತದ ಘನತೆಯನ್ನು ಎತ್ತಿ ಹಿಡಿದಿರುತ್ತಾರೆ. ಒಬ್ಬೊಬ್ಬನೂ ತನಗೆ ವಿಶಿಷ್ಟವಾದ ರೀತಿಯಲ್ಲಿ ಜ್ಯೂಸ್ ದೇವತೆ ಸರ್ವಶಕ್ತನೂ ನ್ಯಾಯಪರನೂ ಎಂಬ ಭಾವನೆಯನ್ನು ಒತ್ತಿ ಹೇಳಿರುತ್ತಾನೆ. ಈ ಮೂವರಲ್ಲಿ ಸಾಫೊಕ್ಲೀಸ್ ಜ್ಯೂಸ್ ದೇವತೆ ಕರುಣಾಳು ಕೂಡ ಎಂಬ ಭಾವನೆಯನ್ನು ಒತ್ತಿ ಹೇಳಿರುತ್ತಾನೆ. ಈ ಮೂವರು ವಿಧಿಯ ವಿಚಾರವಾಗಿ ಒಂದು ಹೊಸ ಭಾವನೆಯನ್ನು ರೂಢಿಸಿರುತ್ತಾರೆ. ವಿಧಿ ಗ್ರೀಕರಲ್ಲಿ ಮೊಯಿರಾ ಎಂಬ ಒಂದು ಸಣ್ಣ ದೇವತೆಯಾಗಿ ಮೊದಲಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ ಮೂವರ ಕಾವ್ಯಗಳಲ್ಲಿ ವಿಧಿ ಬೇರೆ ದೇವತೆಯಾಗಿ ನಿಲ್ಲುವುದಿಲ್ಲ. ಮೊಯಿರಾ ಜ್ಯೂಸ್ ದೇವನ ವಾಣಿ ಅಥವಾ ನಿಯೋಗಿಯಾಗಿ ಪರಿವರ್ತನೆಯಾಗಿರುತ್ತಾಳೆ. ವಿಧಿ ಕುರುಡಲ್ಲ; ಅದರ ಹಿಂದೆ ದೈವಸಂಕಲ್ಪವಿದೆ. ವಿಧಿಯನ್ನು ದೈವಾನುಗ್ರಹದಿಂದ ಗೆಲ್ಲಬಹುದು ಎಂಬ ಸೂಚನೆ ಈ ಮೂವರ ಕಾವ್ಯಗಳಲ್ಲೂ ಕಂಡುಬರುತ್ತದೆ. ಅಜಾಗರೂಕತೆಯಿಂದ ಒಬ್ಬನಿಗೆ ಕೇಡು

ಸಂಭವಿಸಿದರೂ ಅವನು ತನ್ನ ಅಜ್ಞಾನ ಮತ್ತು ಅಜಾಗರೂಕತೆಗಳಿಗೆ ಮರುಗಿ ದೈವವನ್ನು ಧ್ಯಾನಿಸುವುದರಿಂದ ಆ ಕೇಡು ಕೊನೆಯಲ್ಲಿ ಸತ್ಪರಿಣಾಮವನ್ನುಂಟುಮಾಡುತ್ತದೆ. ಈ ಭಾವನೆ ಸಾಫೊಕ್ಲೀಸನ ರುದ್ರನಾಟಕಗಳಲ್ಲಿ ಚೆನ್ನಾಗಿ ಅಭಿವ್ಯಕ್ತವಾಗಿದೆ. ಈ ಮೂವರೂ ದೇವತೆಯ ಭಾವನೆಯನ್ನು ಶುಭ್ರಗೊಳಿಸಿದರು. ಈಸ್ಕಿಲಸನ ನಾಟಕಗಳಲ್ಲಿ ವಿಶ್ವ ದೇವೈಕ್ಯಭಾವನೆ ಹೊಸದಾಗಿ ಕಾಣಿಸಿಕೊಳ್ಳುತ್ತದೆ. ಈ ವಿಶ್ವದಲ್ಲಿರುವುದೆಲ್ಲವನ್ನೂ ಅವುಗಳಿಗಿಂತ ಮೇಲಿನವನ್ನೂ ಜ್ಯೂಸ್ ದೇವತೆ ವ್ಯಾಪಿಸಿರುತ್ತಾನೆ ಎಂಬ ಅವನ ಮಾತಿನಲ್ಲಿ ವಿಶ್ವದೇವೈಕ್ಯಭಾವನೆ ಚೆನ್ನಾಗಿ ಮೂಡಿಬಂದಿದೆ. ಇದಲ್ಲದೆ ಜ್ಯೂಸ್ ಕೇವಲ ಪ್ರಭುವಲ್ಲ, ಧರ್ಮಾಧ್ಯಕ್ಷ – ಎಂಬ ಭಾವನೆಯೂ ಈ ಮೂವರಲ್ಲೂ ಹೊಸದಾಗಿ ಕಾಣಿಸಿಕೊಳ್ಳುತ್ತದೆ. ಪಿಂಡಾರ್ ಈಸ್ಕಿಲಸರು ತಮ್ಮ ಕಾವ್ಯಗಳಲ್ಲಿ ನ್ಯಾಯಕನ್ನಿಕೆ ಜ್ಯೂಸ್ ದೇವತೆಯ ಮಗಳೆಂದು ಹೇಳಿದ್ದಾರೆ. ಆ ನ್ಯಾಯದೇವತೆ ಹೊಗೆಯಿಂದ ಕಪ್ಪಾದ ಬಡವನ ಮನೆಯಲ್ಲೂ ಬೆಳಗುತ್ತಾಳೆ. ಕ್ಷಮಾದೇವತೆ ಜ್ಯೂಸ್‌ನೊಡನೆ ಅವನ ಸಿಂಹಾಸನದಲ್ಲಿ ಕುಳಿತು ಜೀವರುಗಳಿಗೆ ಕ್ಷೇಮಭಿಕ್ಷೆ ಕೊಡುತ್ತಾಳೆ. ಸಾಫೊಕ್ಲೀಸನ ನಾಟಕಗಳಲ್ಲಿ ಆಫ್ರೊಡೈಟಿ ದೇವತೆ ಕೇವಲ ವ್ಯಕ್ತಿಯಲ್ಲ. ಅವಳು ವಿಶ್ವಶಕ್ತಿ. ಪ್ರ.ಶ.ಪೂ. ಐದನೆಯ ಶತಮಾನದ ಕವಿಗಳೆಲ್ಲ ನೀತಿಬೋಧಕರಾದರೂ ನೀತಿಬೋಧೆ ವಿಶೇಷವಾಗಿ ಕಂಡುಬರುವುದು ಪಿಂಡಾರನ ಪದ್ಯಗಳಲ್ಲಿ. ದೇವತೆಗಳು ಒಬ್ಬರೊಡನೆ ಒಬ್ಬರು ಕಾದಾಡುವುದನ್ನು ಅವನು ಕಟುವಾಗಿ ಟೀಕಿಸಿರುತ್ತಾನೆ. ಅಮರ್ತ್ಯರಾದ ದೇವತೆಗಳಿಂದ ಯುದ್ಧ ಸರಿದು ನಿಲ್ಲಲಿ ಎಂದು ಘೋಷಿಸಿರುತ್ತಾನೆ. ಆದರೂ ಈ ಕವಿಗಳು ದೇವತೆಗಳ ನೀತಿಕೆಟ್ಟ ಪ್ರಣಯವನ್ನು ಮಾತ್ರ ಖಂಡಿಸಿಲ್ಲ.

ಗ್ರೀಕ್ ಮತದ ವಿಚಾರದಲ್ಲಿಯೂ ಯೂರಿಪಿಡೀಸನ ನಿಲುವು ಬೇರೆ. ಇವನು ಸಾಫೊಕ್ಲೀಸನ ಅನಂತರ ಬಂದವ. ಈತ ಸಾಂಪ್ರದಾಯಿಕ ಮತವನ್ನು ತಾತ್ತ್ವಿಕ ವಿಮರ್ಶೆಗೆ ಒಳಪಡಿಸಿರುತ್ತಾನೆ. ದೇವತೆಗಳಿಗೆ ಮಾನವರ ದುಷ್ಟ ಮತ್ತು ಅಶ್ಲೀಲ ಗುಣಗಳನ್ನು ಆರೋಪಿಸುವುದನ್ನು ಕಟುವಾಗಿ ಟೀಕಿಸುತ್ತಾನೆ. ಕೆಲವು ವೇಳೆ ಅಪೊಲೊ ಮತ್ತು ಆಫ್ರೊಡೈಟಿ ದೇವತೆಗಳ ಮೇಲೆ ದ್ವೇಷ ಕಾರಿರುತ್ತಾನೆ. ಡೆಲ್ಫಿಯ ಭವಿಷ್ಯವಾದಿಗಳನ್ನು ಹಳಿದಿರುತ್ತಾನೆ. ನರಬಲಿ ಹೇಯಪದ್ಧತಿ ಎಂದು ಖಂಡಿಸಿರುತ್ತಾನೆ. ಮಾನವರು ಕೊಟ್ಟ ಆಹಾರದಿಂದ ಬಾಳುವ ಹಂಗಿನ ಜೀವನವಲ್ಲ, ದೇವರದು – ಎಂದು ಸಮರ್ಥಿಸಿರುತ್ತಾನೆ; ಎಲ್ಲವನ್ನೂ ಕೊಡಬಲ್ಲವಾದಂಥ ಶಕ್ತಿ ಪಡೆದ ದೈವ ಮಾನವನನ್ನು ಆಶ್ರಯಿಸಬೇಕಾಗಿಲ್ಲ; ಮಾನವರು ಆಡಂಬರದ ಬಲಿ ಅರ್ಪಿಸಿದುದರಿಂದ ದೇವರು ತೃಪ್ತಿಗೊಳ್ಳುವುದಿಲ್ಲ; ತಮ್ಮ ಕೃತಜ್ಞತೆಯನ್ನು ಸೂಚಿಸಲು ನಿಷ್ಠೆಯಿಂದ ಅರ್ಘ್ಯವನ್ನು ಅರ್ಪಿಸಿದರೂ ಅವರು ಸಂತೃಪ್ತರಾಗುತ್ತಾರೆ ಎಂದು ಅವನು ಹೇಳಿರುತ್ತಾನೆ. ಈ ಅರ್ಪಣೆಯ ಭಾವನೆ ಉದಾತ್ತವಾದದ್ದು. ಈ ವಿಶ್ವವೆಲ್ಲ ದೈವದ ವಾಸಸ್ಥಾನ, ದೇವರಿಗೆ ಈ ದೇಶ ತನ್ನ ನಾಡು, ಈ ಜನ ತನ್ನ ಜನವೆಂಬ ಸಂಕುಚಿತ ಭಾವನೆ ಇಲ್ಲ ಎಂಬ ಅವನ ಭಾವನೆಯೂ ಉದಾತ್ತವಾದದ್ದು. ಇವುಗಳ ಮೂಲಕ ಅವನು ಮೇಲ್ಪಟ್ಟವರ ಸಂಸ್ಕೃತರಲ್ಲಿ ಉಚ್ಚಭಾವನೆಗಳನ್ನು ಬಿತ್ತಿದ.

4. ಈ ಹೊಸ ಭಾವನೆಗಳಿಗೆ ಯೂರಿಪಿಡೀಸ್ ಮಾತ್ರ ಕಾರಣನಲ್ಲ. ಪ್ರ.ಶ.ಪೂ. 5 ನೆಯ ಶತಮಾನದ ಕೊನೆಯಲ್ಲಿ, ಮತಭಾವ ಆಂತರಿಕವಾದದ್ದು, ಬಾಹ್ಯಾಚರಣೆಗಳಿಗಿಂತ ಅಂತರಂಗ ಭಾವಶುದ್ಧಿ ಶ್ರೇಷ್ಠವಾದದ್ದು ಎಂಬ ಭಾವನೆಗಳು ತಾತ್ತ್ವಿಕರಲ್ಲಿ ಪ್ರಚಾರದಲ್ಲಿದ್ದುವು. ನೀನು ಅಂತರಂಗದಲ್ಲಿ ಶುದ್ಧನಾಗಿದ್ದರೆ ದೇಹಾದ್ಯಂತ ಶುದ್ಧನಾಗಿರುತ್ತೀಯೆ ಎಂದು ಎಪಿಚಾರ್ಮೋಸ್ ಘೋಷಿಸಿದ್ದ. ಈ ಹೊಸ ಭಾವನೆಗಳು ಹುಟ್ಟಿದ ಮೇಲೆ ನರಮೇಧ ಪದ್ಧತಿಯನ್ನು ಗ್ರೀಸಿನ ಅನೇಕ ಸ್ಥಳಗಳಲ್ಲಿ ನಿಷೇಧಿಸಲಾಯಿತು.

5. ಆದರೆ ಈ ಹೊಸ ಭಾವನೆಗಳು ಸಾಮಾನ್ಯ ಗ್ರೀಕರಲ್ಲಿ ಲೈಂಗಿಕ ಪರಿಶುದ್ಧತೆಯನ್ನು ಬೆಳೆಸಲಿಲ್ಲ. ಅನೇಕ ಗ್ರೀಕ್ ದೇವಾಲಯಗಳಲ್ಲಿ ದೇವದಾಸಿಯರ ಪದ್ಧತಿ ಕ್ರೈಸ್ತಮತ ಗ್ರೀಸಿನಲ್ಲಿ ನೆಲೆಸಿದ ಮೇಲೂ ಪ್ರಚಾರದಲ್ಲಿತ್ತು. ಲಿಂಗಸಂಕೇತಗಳುಳ್ಳ ಧ್ವಜಗಳ ಮೆರವಣಿಗೆ ಉತ್ಸವಗಳ ಒಂದು ಅಂಗವಾಗಿತ್ತು. ಪ್ರಖ್ಯಾತ ವೇಶ್ಯೆಯರ ವಿಗ್ರಹಗಳು ಕೂಡ ಸ್ಥಾಪನೆಗೊಂಡಿದ್ದುವು. ಲೈಂಗಿಕ ಕ್ರಿಯೆ ದೈವಿಕವಾದದ್ದು. ಅದರ ಮೂಲಕ ದೇವರ ಸೃಷ್ಟಿಶಕ್ತಿ ಅಭಿವ್ಯಕ್ತವಾಗುತ್ತದೆ ಎಂಬ ಗ್ರೀಕರ ನಂಬಿಕೆ ಇದಕ್ಕೆ ಮುಖ್ಯ ಕಾರಣ.

6. ಪ್ರ.ಶ.ಪೂ. 4 ನೆಯ ಶತಮಾನದಲ್ಲಿ ಹುಟ್ಟಿದ ಪ್ರಹಸನಗಳು, ಮುಖ್ಯವಾಗಿ ಅರಿಸ್ಟಾಫನೀಸನ ಪ್ರಹಸನಗಳು ದೇವತೆಗಳನ್ನು, ರುದ್ರದೇವತೆಯಾದ ಡಯೊನೈಸಸನನ್ನು ಹಾಸ್ಯಮಾಡಿವೆ. ಹೀಗೆ ಆ ದೇವತೆಯನ್ನು ನಗೆಗೆ ಈಡು ಮಾಡಿದಾಗ ಅದನ್ನು ಕೇವಲ ಒಂದು ವಿನೋದವಾಗಿ ಭಾವಿಸಿದರು. ಅವರಿಗೆ ಆ ದೇವತೆಯಲ್ಲಿ ಪ್ರೀತಿ ಕುಗ್ಗಲಿಲ್ಲ. ದೇವತೆಗಳನ್ನು ಕೆಲವು ವೇಳೆ ಹಾಸ್ಯ ಮಾಡುವುದು ಈ ಮುಂಚೆಯೇ ಹೋಮರನಲ್ಲೂ ಕಾಣಬಹುದು. ಅದಕ್ಕೆ ಹರ್ಮೀಸ್ ದೇವತೆಯನ್ನು ಕುರಿತ ಹೋಮರನ ಪ್ರಾರ್ಥನೆ ಒಂದು ನಿದರ್ಶನ. ಅರಿಸ್ಟಾಫನೀಸಿಗಿಂತ ಮುಂಚೆ ಎಪಿಚಾರ್ಮೋಸ್ ದೇವತೆಗಳನ್ನು ಕುರಿತು ಹಾಸ್ಯ ಮಾಡಿರುತ್ತಾನೆ. ದೇವತೆಗಳಲ್ಲಿ ಒಂದು ವಿಧವಾದ ಸಲುಗೆಯನ್ನು ತೋರ್ಪಡಿಸುವುದು ಗ್ರೀಕರ ಜಾಯಮಾನ. ಹೀಗೆ ದೇವತೆಗಳನ್ನು ಹಾಸ್ಯಮಾಡಿರುವುದರಿಂದ ಅವರು ದೇವತೆಗಳನ್ನು ತಿರಸ್ಕರಿಸಿದರೆಂದು ಭಾವಿಸಕೂಡದು. ಎಲ್ಲ ಪ್ರಹಸನಕಾರರೂ ಈ ರೀತಿ ದೇವತೆಗಳನ್ನು ಹಾಸ್ಯಕ್ಕೆ ಒಳಪಡಿಸಿಲ್ಲ. ಮಿನಾಂಡರ್ ತನ್ನ ಪ್ರಹಸನಗಳಲ್ಲಿ ಉದಾತ್ತ ಭಾವನೆಗಳು ಹುಟ್ಟುವಂತೆ ದೇವತೆಗಳನ್ನು ಚಿತ್ರಿಸಿರುತ್ತಾನೆ.

7. ಪ್ರ.ಶ.ಪೂ. 4 ನೆಯ ಶತಮಾನದ ಉತ್ತರಾರ್ಧದ ವೇಳೆಗೆ ಡೆಲ್ಫಿಯ ರಾಜಕೀಯ ಪ್ರಾಮುಖ್ಯ ಕುಗ್ಗಿತು. ಪಾರಸಿಕರೊಡನೆ ಯುದ್ಧಮಾಡಿದ ಕಾಲದಲ್ಲಿ ಡೆಲ್ಫಿಯ ಪುರೋಹಿತರ ವಂಚನೆಯ ಭವಿಷ್ಯವಾಣಿ ರಾಜಕೀಯ ಮುಖಂಡರಿಗೆ ಡೆಲ್ಫಿಯ ವಾಣಿಯಲ್ಲಿದ್ದ ನಂಬಿಕೆಯನ್ನು ಸಡಿಲಿಸಿತು. ಡೆಮಾಸ್ತೆನೀಸ್ ತನ್ನ ಭಾಷಣಗಳಲ್ಲಿ ಡೆಲ್ಫಿಯನ್ನು ಕುರಿತು ತಿರಸ್ಕಾರದ ಮಾತುಗಳನ್ನಾಡಿದ್ದಾನೆ.

8. ಈ ಕಾಲದಲ್ಲಿ ಆಸ್ಕ್ಲಿಪಿಯಸ್ ದೇವತೆಯ ಆರಾಧನೆ ಗ್ರೀಸಿನಲ್ಲಿ ಹರಡಿತು. ನಾಲ್ಕನೆಯ ಶತಮಾನದ ಕೊನೆಯಲ್ಲಿ ಈ ದೇವತೆ ಮತ್ತು ಅವನ ಮೂರು ಹೆಣ್ಣುಮಕ್ಕಳ ಆರಾಧನೆ ಎಪಿಡಾರಸ್ಸಿನಿಂದ ಅಥೆನ್ಸನ್ನು ಪ್ರವೇಶಿಸಿತು. ಆ ದೇವತೆಯ ಪೂಜೆಗೆ ರಾಜಕೀಯ ಮುದ್ರೆ ಬಿತ್ತು. ಅಲ್ಲಿಂದ ಮುಂದೆ ಈ ದೇವತೆಯ ಆರಾಧನೆ ಇಡೀ ಗ್ರೀಸನ್ನು ಆವರಿಸಿತು.

9. ಈ ಕಾಲದಲ್ಲಿ ಕೆಲವು ಖಾಸಗಿ ಮತಗಳು ಕಾಣಿಸಿಕೊಂಡವು. ಇವುಗಳ ದೇವತೆ ಪರಕೀಯ ದೇವತೆ. ಕೊಟಿಟ್ಟೋ ದೇವತೆ ಇದಕ್ಕೆ ಒಂದು ಉತ್ತಮ ಉದಾಹರಣೆ. ಈ ಮತಗಳು ಗ್ರೀಸಿಗೆ ದೀಕ್ಷಾಸ್ನಾನಸಂಸ್ಕಾರವನ್ನು ತಂದವು. ಪ್ರ.ಶ.ಪೂ. ಆರನೆಯ ಶತಮಾನದಲ್ಲಿ ಹುಟ್ಟಿಕೊಂಡ ಇಂತಹ ಒಂದು ಮತವಾದ ಅರ್ಫಿಯಸ್ ಮತ ಅಲೆಗ್ಸಾಂಡರನ ಕಾಲಕ್ಕೆ ಸ್ವಲ್ಪ ಮುಂಚೆ ಪೂರ್ವ ಗ್ರೀಸಿನಲ್ಲಿ ವಿಶೇಷವಾಗಿ ಹರಡಿತು. ಡೆಮಾಸ್ತನೀಸ್ ತನ್ನ ಭಾಷಣಗಳಲ್ಲಿ ಅರ್ಫಿಯಸನ್ನು ಹೆಲನರ ಉದಾತ್ತ ಮತಪ್ರಚಾರಾಚಾರ್ಯನೆಂದು ಪ್ರಶಂಸಿಸಿರುತ್ತಾನೆ.

10. ಹೀಗೆ ಖಾಸಗಿ ಮತಗಳು ಬೆಳೆದುವಾದರೂ ಪ್ರ.ಶ.ಪೂ. 4 ನೆಯ ಶತಮಾನದ ಪೂರ್ವಾರ್ಧದಲ್ಲಿ ಸಾರ್ವಜನಿಕ ರಾಷ್ಟ್ರೀಯ ಮತ ಕ್ಷೀಣಗೊಂಡಿತೆಂದು ಭಾವಿಸಲಾಗುವುದಿಲ್ಲ. ಪುನರುತ್ಥಾನಗೊಂಡ ಪ್ರಜಾಪ್ರಭುತ್ವ ರಾಷ್ಟ್ರೀಯ ಮತವನ್ನು ಖಂಡಿಸಿದ ಪಾಷಂಡಿಗಳನ್ನು ಬಲವಾಗಿ ಶಿಕ್ಷಿಸಿತು. ಸಾಕ್ರಟೀಸನಿಗೆ ಮರಣದಂಡನೆಯನ್ನು ವಿಧಿಸಿದುದ್ದಕ್ಕೆ ಅವನು ಪಾಷಂಡಿ ಎಂಬುದು ಒಂದು ಮುಖ್ಯ ಕಾರಣ.

ಈ ಕಾಲದಲ್ಲಿ ಫೀಡಿಯಸ್ಸನ ಅನುಯಾಯಿಗಳು ಹೊಸ ಸಾರ್ವಜನಿಕ ದೇವತೆಗಳ ವಿಗ್ರಹಗಳನ್ನು ಸೃಷ್ಟಿಸಿದರು. ಸಾಕ್ಸಿಟಿಲೀಸ್ ಸೃಷ್ಟಿಸಿದ ಡೆಮಿಟರ್ ದೇವತೆಯ ವಿಗ್ರಹ ಅತ್ಯಂತ ಪರಿಪೂರ್ಣವಾದದ್ದು. ಈ ಕಾಲದಲ್ಲಿ ಅಥೆನ್ಸಿನ ಪ್ರಜೆಗಳು ಶಾಂತಿಗಾಗಿ ಹಾತೊರೆಯುತ್ತಿದ್ದರು. ಶಾಂತಿದೇವತೆಯ ವಿಗ್ರಹ ಬಹು ಜನಪ್ರಿಯವಾಯಿತು.

11. ಈ ಕಾಲದ ಮಹಾವ್ಯಕ್ತಿಗಳಲ್ಲಿ ಸಾಕ್ರಟೀಸನನ್ನು ಬಿಟ್ಟರೆ ಪ್ಲೇಟೋ ಲೋಕಪ್ರಸಿದ್ಧನಾದವ. ಇವನ ಸಂವಾದಗಳಲ್ಲಿ ಗ್ರೀಕ್ ತತ್ತ್ವ ಮುಗಿಲನ್ನು ಮುಟ್ಟಿದೆ. ಪ್ಲೇಟೊ ಸಾಕ್ರಟೀಸನ ಶಿಷ್ಯ. ಸಾಕ್ರಟೀಸನ ಉದಾತ್ತ ಭಾವನೆಗಳನ್ನು ಮನಮುಟ್ಟುವಂತೆ ಚಿತ್ರಿಸಿರುತ್ತಾರೆ. ಪ್ಲೋಟೊ ತನ್ನ ಮೊದಲ ಸಂವಾದಗಳಲ್ಲಿ, ದೇವತೆಗಳ ಅಶ್ಲೀಲ ವರ್ತನೆಯನ್ನು ಖಂಡಿಸಿರುತ್ತಾನಾದರೂ ಗ್ರೀಕ್ ಜನತೆಯ ಶ್ರೇಯಸ್ಸಿಗೆ ಅವರ ಸಾಂಪ್ರದಾಯಿಕ ಮತ ತುಂಬ ಅಗತ್ಯವೆಂದು ಈತ ಮನಗಂಡಿದ್ದ. ಆ ಸಾಂಪ್ರದಾಯಿಕ ಮತ ಸುಧಾರಣೆ ಹೊಂದಬೇಕೆಂದು ಅಷ್ಟೇ ಬಲವಾಗಿ ನಂಬಿದ್ದ. ತನ್ನ ಕೊನೆಯ ಸಂವಾದಗಳಲ್ಲಿ ಅತಿ ದೊಡ್ಡದಾದ ಲಾಸ್ ಎಂಬ ಸಂವಾದದಲ್ಲಿ ಸುಧಾರಣೆ ಹೊಂದಿದ ರಾಷ್ಟ್ರೀಯ ಮತಕ್ಕೆ ಈತ ಬೆಂಬಲ ಕೊಟ್ಟಿರುತ್ತಾನೆ. ಆದರೆ ಪ್ಲೇಟೊ ಮುಖ್ಯವಾಗಿ ತಾತ್ತ್ವಿಕನೆಂಬುದನ್ನು ಮರೆಯಕೂಡದು. ದೈವ ಅಮಾನುಷ ಚೇತನಾ ರೂಪವಾದದ್ದು ಎಂಬುದು ಅವನ ನಿಶ್ಚಲ ಭಾವನೆ ದೈವ ಮತ್ತು ಅಮೃತತ್ವಗಳನ್ನು ಕುರಿತ ಅವನ ಟಮಿಯಸ್ ಎಂಬ ಸಂವಾದದಲ್ಲಿ ಇಂಥ ಚೇತನರೂಪವಾದ ಅಮೂರ್ತ ದೈವವನ್ನೇ ಪರಮವಾಗಿ ಗಣಿಸಿರುತ್ತಾನೆ. ಅದಕ್ಕೆ ಪ್ರಥಮಸ್ಥಾನ. ಅದಕ್ಕಿಂತ ಕೆಳಮಟ್ಟದವು, ಸೂರ್ಯ ಮುಂತಾದ ಗ್ರಹಗಳು. ಗ್ರೀಕರ ಸಾಂಪ್ರದಾಯಿಕ ದೇವವೃಂದಕ್ಕೆ ಪ್ಲೇಟೊ ಮೂರನೆಯ ಅಥವಾ ಕೆಳಗಿನ ಸ್ಥಾನವನ್ನು ಕೊಟ್ಟಿರುತ್ತಾನೆ. ಹುಟ್ಟಿಲ್ಲದ ಪರಮಚೇತನವೇ ಪರಿಪೂರ್ಣವಾದ ದೈವ. ಅಂಥ ಪರಿಪೂರ್ಣ ದೈವವೊಂದೇ ಅಮೃತವಾದದ್ದು. ಮಾನವನಲ್ಲಿ ಆ ಚೇತನಾಂಶವಿರುವುದರಿಂದ ಮಾನವನ ಆತ್ಮ ಈ ದೇಹ ಬಿದ್ದುಹೋದಮೇಲೆ ಅಳಿಯದೆ ಉಳಿಯುತ್ತದೆ. ಪ್ಲೇಟೊವಿನ ಪರಮಚೇತನ ಭಾವನೆ ಮತ್ತು ಅಮೃತತ್ವ ಭಾವನೆ ಉಪನಿಷತ್ತಿನ ಭಾವನೆಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಪ್ಲೇಟೊನ ಪ್ಲೋಟೈನಸ್‌ನ ತತ್ತ್ವ ಉಪನಿಷತ್ ತತ್ತ್ವವನ್ನು ಇನ್ನೂ ಚೆನ್ನಾಗಿ ಪ್ರತಿಬಿಂಬಿಸುತ್ತದೆ. ಅನುಯಾಯಿಯಾದ ಪ್ಲೇಟೊಗೆ ಭಾರತದ ತತ್ತ್ವ ಜಿಜ್ಞಾಸೆಯ ಪರಿಚಯವಿತ್ತೆಂದು ಹೇಳಲಾಗುವುದಿಲ್ಲ. ಆದರೆ ಅವನಿಗಿಂತ ಹಿರಿಯನಾದ ಪೈಥಾಗೊರಸಿಗೆ ಬ್ರಾಹ್ಮಣರ ಮತದ ಪರಿಚಯವಿತ್ತೆಂದು ಆತನ ಜೀವನ ಚರಿತ್ರೆಯನ್ನು ಬರೆದ ಐಯಾಂಬಿಕಸ್ ಹೇಳಿರುತ್ತಾನೆ.

**IV** ಗ್ರೀಕ್ ಮತದ ನಾಲ್ಕನೆಯ ಅವಧಿ; ಪ್ರ.ಶ.ಪೂ. 350 ರಲ್ಲಿ ಮ್ಯಾಸಿಡೋನಿಯ ಸಾಮ್ರಾಜ್ಯ ಸ್ಥಾಪನೆಯಾದಾಗ ಗ್ರೀಕ್ ಮತದಲ್ಲಿ ಮಹತ್ತರ ಬದಲಾವಣೆಗಳು ಉಂಟಾದವು. ಗ್ರೀಕರ ಸಾಂಪ್ರದಾಯಿಕ ಮತ ಕ್ಷೀಣಗೊಂಡಿತು. ಅಥೆನ್ಸಿನಲ್ಲಿ ಅಥಿನಳ ಪ್ರಾಬಲ್ಯ ಕುಗ್ಗಿತು. ಪರಕೀಯರ ಮತಭಾವನೆಗಳು ಗ್ರೀಸಿಗೆ ಪ್ರವೇಶಿಸಿದವು. ಈ ಕಾಲದಲ್ಲಿ ಮತಭಾವನೆ ರಾಜಕೀಯ ಎಲ್ಲೆಗಳನ್ನು ಮೀರಿ ವಿಶ್ವವ್ಯಾಪಕವಾದ ದೈವದೊಡನೆ ಆಂತರಿಕವಾಗಿ ಮಿಳನವಾಗಬೇಕೆಂಬ ಆಕಾಂಕ್ಷೆ ಬಲವಾಯಿತು. ಗ್ರೀಕರ ಮೇಲೆ ಪೂರ್ವದೇಶಗಳ ಮತಗಳು ಪ್ರಭಾವ ಬೀರಿದುವು. ಪೂರ್ವಪಶ್ಚಿಮಗಳ ಮಿಳನವನ್ನೇರ್ಪಡಿಸಬೇಕೆಂಬುದು ಅಲೆಗ್ಸಾಂಡರನ ಮಹದಾಶಯವಾಗಿತ್ತು. ಪರಕೀಯರನ್ನು ಆಹ್ವಾನಿಸಿ ಅವರ ನೇತೃತ್ವದಲ್ಲಿ ದೈವದೊಡನೆ ಆತ್ಮೀಯ ಸಂಪರ್ಕ ಬೆಳೆಸಿಕೊಳ್ಳಲು ಗೂಢ ಭ್ರಾತೃ ವೃಂದಗಳು ಹುಟ್ಟಿಕೊಂಡುವು.

1. ಮಿನಾಂಡರನ ಕವಿತೆಗಳ ಸಂಪುಟದಲ್ಲಿ ಮಾನವನ ವಿಚಾರವಾಗಿ ಉದಾರ ಭಾವನೆ ಕಂಡುಬರುತ್ತದೆ. ಒಳ್ಳೆಯವನಾದ ಮನುಷ್ಯ ಎಲ್ಲಿಯವನಾಗಲಿ ಅವನು ಪರಕೀಯನೆಂಬ ಭಾವನೆ ನನಗೆ ಇಲ್ಲ; ಎಲ್ಲರ ನೈಜಸ್ವಭಾವ ಒಂದೇ ಎಂಬುದು ಅವನ ವಾಕ್ಯಗಳಲ್ಲಿ ಒಂದು. ಅವನ ಕವಿತೆಗಳಲ್ಲಿ ಕ್ರೈಸ್ತರ ಹೊಸ ಒಡಂಬಡಿಕೆಯ ಕೆಲವು ಭಾವನೆಗಳು ಕ್ರೈಸ್ತಮತ ಹುಟ್ಟುವುದಕ್ಕೆ ಮುಂಚೆಯೇ ಮೂಡಿಬಂದಿವೆ. ಅರ್ಪಣೆ ನಾವು ದೇವರ ಅನುಗ್ರಹ ಪಡೆಯಲು ಕೊಟ್ಟ ಲಂಚವಲ್ಲ, ಅದು ನಮ್ಮ ಪ್ರೀತಿಯ ಕಾಣಿಕೆ ಎಂಬುದು ಅವನ ಇನ್ನೊಂದು ವಾಕ್ಯ. ದೈವ ಚೇತನ ಸ್ವರೂಪ ಅದನ್ನು ಧ್ಯಾನದಿಂದ ಸಾಕ್ಷಾತ್ಕಾರಮಾಡಿಕೊಳ್ಳಬೇಕಾದ ವಿಷಯ; ದೈವ ಪ್ರತಿಯೊಬ್ಬನ ಅಂತರಂಗದಲ್ಲೂ ಅವನು ಹುಟ್ಟಿದಂದಿನಿಂದ ಅವನ ಮಾರ್ಗದರ್ಶಕನಾಗಿ ಇರುತ್ತದೆ ಎಂಬುದು ಅವನ ಕೃತಿಗಳ ಉಳಿಕೆಯಲ್ಲಿ ಕಂಡುಬರುವ ಭಾವನೆಗಳು.

2. ವಿವಿಧ ಮತಗಳ ಸಮನ್ವಯ ಈ ಕಾಲದ ಮತದ ಒಂದು ಅಂಶ. ಈಜಿಪ್ಟ್, ಸಿರಿಯ ಮತ್ತು ಗ್ರೀಕ್ ದೇವತೆಗಳು ಒಂದೇ ಎಂದು ಭಾವಿಸಿ ಅವರೆಲ್ಲರ ಹೆಸರಿನಲ್ಲೂ ಪೂಜೆಯನ್ನು ಅರ್ಪಿಸುವುದು ಮೊದಲಾಯಿತು. ಪೂರ್ವ ದೇಶಗಳ ದೇವತೆಗಳನ್ನು ಝ್ಯೂಸ್ ಎಂದು ಕರೆಯುವುದು ವಾಡಿಕೆಯಾಯಿತು. ಝ್ಯೂಸ್ ಎಂಬ ಪದವನ್ನು ಆಂಶಿಕ ನಾಮವಾಗಿ ಬಳಸುವುದು ತಪ್ಪಿ ಸರ್ವನಾಮವಾಗಿ ಬಳಸುವುದು ಸಾಮಾನ್ಯವಾಯಿತು. ದೈವದ ಸ್ವರೂಪ ಒಂದೇ ಆದುದರಿಂದ ನಾಮಭೇದಗಳಿಗೆ ಎಡೆ ಇಲ್ಲ ಎಂಬುದು ವಾರ್ರೊ ಎಂಬುವನ ಮುಖ್ಯ ಭಾವನೆ. ಪ್ರ.ಶ.ಪೂ. 3 ನೆಯ ಶತಮಾನದ ಅರೋಟಾಸಿನ ಈ ವಾಕ್ಯ ಗಮನಾರ್ಹವಾದದ್ದು – ಎಲ್ಲ ಪಂಥಗಳೂ ದೈವಭಾವನೆಯಿಂದ ತುಂಬಿವೆ. ಜನ ಸೇರುವ ಎಲ್ಲ ಸ್ಥಳಗಳಲ್ಲೂ ಬಂದರುಗಳಲ್ಲೂ ನಮಗೆ ದೇವರ ಕೃಪೆ ಅಗತ್ಯ. ಎಲ್ಲ ಕಾಲಗಳಲ್ಲೂ ನಾವೆಲ್ಲರೂ ದೈವದ ಬಳಗ.

3. ಮುಕ್ತಾತ್ಮ ದೈವಿಕವಾದದ್ದು ಎಂಬ ಭಾವನೆ ಮಾತ್ರ ಮೊದಲಿಗೆ ಗ್ರೀಕ್ ಮತದ ನಾಲ್ಕನೆಯ ಅವಧಿಯಲ್ಲಿ ಕಾಣಿಸಿಕೊಂಡಿತು. ಅಥೆನ್ಸಿನ ಜನ ಅಲೆಗ್ಸಾಂಡರನನ್ನು ದೈವದ ಅಂತಸ್ತಿಗೆ ಏರಿಸಿದರು. ಟಾಲಮಿ ವಂಶದ ದೊರೆಗಳಿಗೆ ಅವರ ಮರಣಾನಂತರ ಪೂಜೆ ಸಲ್ಲುತ್ತಿತ್ತು. ರೊಸೆಟ್ಟ ಶಿಲಾಶಾಸನ ಟಾಲಮಿ ಸಶರೀರ ದೇವರು ಎಂದು ಘೋಷಿಸುತ್ತದೆ.

4. ಗ್ರೀಕ್ ದೇವತೆಗಳನ್ನು ರಾಷ್ಟ್ರ ಗೌರವಿಸಬೇಕೆಂದು ಅರಿಸ್ಟಾಟಲ್ ಹೇಳಿರುತ್ತಾನಾದರೂ ತಾತ್ತ್ವಿಕ ನಿಟ್ಟಿನಿಂದ ಅವನು ಅವರಿಗೆ ಬೆಲೆ ಕೊಡಲಿಲ್ಲ. ತಾತ್ತ್ವಿಕ ದೃಷ್ಟಿಯಿಂದ ಪರಿಪೂರ್ಣವಾದ ದೈವ ಒಂದೇ. ಅದು ಆರಾಧನೆಯ ವಿಷಯವಲ್ಲ; ತತ್ತ್ವಾವಲೋಕನ ವಿಷಯ. ಇವನ ಏಕೇಶ್ವರ ಭಾವನೆ ಗ್ರೀಕರ ಮೇಲೆ ಪ್ರಭಾವ ಬೀರಲಿಲ್ಲ. ಆದರೆ ಯುರೋಪಿನ ಮಧ್ಯಯುಗದಲ್ಲಿ ಸೇಂಟ್ ಥಾಮ್ಸನ್ ಅರಿಸ್ಟಾಟಲನ ತತ್ತ್ವವನ್ನು ಕ್ರೈಸ್ತಮತತತ್ತ್ವಕ್ಕೆ ಒಂದು ಪ್ರಬಲ ಆಧಾರವಾಗಿ ಮಾಡಿಕೊಂಡ.

5. ಗ್ರೀಕ್ ಮತ ಕ್ಷೀಣಗೊಳ್ಳುವುದಕ್ಕೆ ಕಾರಣರಾದ ತಾತ್ತ್ವಿಕರಲ್ಲಿ ಸಿನಿಕರು ಮುಖ್ಯರು. ಇವರು ಗ್ರೀಕ್ ಮತದ ತೀವ್ರ ವಿರೋಧಿಗಳು. ಇವರ ಮುಖಂಡರಾದ ಡಯೋಜನೀಸ್ ಮತ್ತು ಆಂಟಿಸ್‌ಥೆನೀಸರು ಗ್ರೀಕ್ ದೇವತೆಗಳನ್ನು ಕುರಿತು ತಿರಸ್ಕಾರದ ಮಾತುಗಳನ್ನಾಡಿರುತ್ತಾರೆ. ಪ್ರ.ಶ.ಪೂ. 3 ನೆಯ ಶತಮಾನದ ಸಿನಿಕ್ ತಾತ್ತ್ವಿಕ ಕೆರ್ಕಿಡಾಸ್ ದೇವತೆಗಳನ್ನು ವಿಧಿಯ ಕೈಗೊಂಬೆಗಳೆಂದು ಕರೆದಿರುತ್ತಾನೆ.

ಎಪಿಕ್ಯೂರಸ್ ಮತ್ತು ಅವನ ಅನುಯಾಯಿಗಳು ನಿರೀಶ್ವರವಾದಿಗಳು. ಅದಕ್ಕಿಂತ ಹೆಚ್ಚಾಗಿ ಇವರು ಇಂದ್ರಿಯಸುಖವೇ ಜೀವನದ ಪರಮಗುರಿಯೆಂದು ವಾದಿಸಿದವರು. ದೇವತೆಗಳು ಮಾನವರ ಸುಖದುಃಖಗಳ ಕಡೆಗೆ ಬೆನ್ನು ತಿರುಗಿಸಿ ಉದಾಸೀನರಾಗಿರುತ್ತಾರೆಂದು ಅವರನ್ನು ಇವರು ಆಕ್ಷೇಪಿಸಿರುತ್ತಾರೆ.

ಮತದೃಷ್ಟಿಯಿಂದ ಗ್ರೀಕರ ಮತ್ತು ರೋಮನರ ಮೇಲೆ ಸ್ಟೋಯಿಕ್ಕರ ಪ್ರಭಾವ ಅತಿಶಯವಾದದ್ದು. ಈ ಪಂಥದ ಮೂಲಪುರುಷ ಜೀನೊ (ಪ್ರ.ಶ.ಪೂ. 366–264). ತರುವಾಯ ಅದನ್ನು ಬೆಳೆಸಿದವ ಕ್ರಿಸಿಪಸ್. ಅಥೆನ್ಸಿನಲ್ಲಿ ಇವರ ಪ್ರಚಾರ ಕೇಂದ್ರಕ್ಕೆ ಸ್ಟೋವಾ ಎಂದು ಹೆಸರು. ಹುಟ್ಟಿದ ಪ್ರಥಮ ಅವಧಿಯಲ್ಲಿ ಆ ಪಂಥ ವಿಶ್ವದೇವೈಕ್ಯ ವಾದವಾಗಿತ್ತು. ಅನಂತರ ಅದು ಏಕೇಶ್ವರ ಭಾವನೆಯಲ್ಲಿ ಕೊನೆಗೊಂಡಿತು. ದೈವ ಅಂತರ್ಯಾಮಿ ಮತ್ತು ಅತೀತ ಎಂಬ ಭಾವನೆ ಕ್ಲಿಯಾಂಥೀಸನ (331–232) ಸ್ತೋತ್ರದಲ್ಲಿ ಎದ್ದು ಕಾಣುತ್ತದೆ. ಸ್ಟೋಯಿಕ್ ಮತದಲ್ಲಿ ಮೊಟ್ಟಮೊದಲಿಗೆ ವಿಶ್ವ ಮತ ಭಾವನೆ ಸ್ಪಷ್ಟವಾಗಿ ಕಾಣಿಸಿಕೊಂಡಿತು. ಮಾನವರೆಲ್ಲ ಸೋದರರು ಎಂಬುದು ಈ ಮತದ ಮೂಲಭಾವನೆ. ಮಾನವನಲ್ಲಿ ದೈವಾಂಶವಿದೆಯಾದ್ದರಿಂದ ಆತ್ಮಕ್ಕೆ ಮರಣವಿಲ್ಲ. ಇಂದ್ರಿಯಗಳ ಮೋಹಪಾಶದಿಂದ ಬಿಡುಗಡೆ ಹೊಂದಿ ಸಹಜಪ್ರಜ್ಞೆಯ ನಿಯಮಾನುಸಾರವಾಗಿ ಬಾಳುವುದೇ ವಿವೇಕದ ದಾರಿ.

ಸ್ಟೋಯಿಕ್ ಮತತತ್ತ್ವ ಸ್ವಲ್ಪ ಕಾಲದಲ್ಲಿ ಗ್ರೀಸಿನಿಂದ ರೋಮಿಗೆ ಹಬ್ಬಿತು. ಅದರ ಮುಖ್ಯತತ್ತ್ವಗಳಲ್ಲಿ ಕೆಲವನ್ನು ಕ್ರೈಸ್ತರು ಒಪ್ಪಿಕೊಂಡರು. ಪ್ರ.ಶ. ನಾಲ್ಕನೆಯ ಮತ್ತು ಐದನೆಯ ಶತಮಾನಗಳಲ್ಲಿ ಕ್ರೈಸ್ತಸಂತರು ಸ್ಟೋಯಿಕ್ ತತ್ತ್ವವನ್ನು ತಮ್ಮ ಮತಬೋಧೆಗೂ ಉಪಯೋಗಿಸಿಕೊಂಡರು. ಸಿಸಿರೋ ಎಂಬ ರೋಮನ್ ತಾತ್ತ್ವಿಕ ಸ್ಟೋಯಿಕ್ ಮತವನ್ನು ಡಿ ಅಫಿಸ್ಯೆಸ್ ಎಂಬ ಗ್ರಂಥದಲ್ಲಿ ಸಾರವತ್ತಾಗಿ ವರ್ಣಿಸಿರುತ್ತಾನೆ. ಸೇಂಟ್ ಆಂಬ್ರೋಸ್ ಅದೇ ಹೆಸರಿನ ಗ್ರಂಥದಲ್ಲಿ ಸ್ಟೋಯಿಕ್ ಮತದ ಅಂಶಗಳನ್ನು ಕ್ರೈಸ್ತಮತ ಪ್ರಚಾರಕ್ಕೆ ಬಳಸಿಕೊಂಡಿರುತ್ತಾನೆ. ಸ್ಟೋಯಿಕ್ ತತ್ತ್ವ ಪ್ರತಿಪಾದಕರಲ್ಲಿ ಮಾರ್ಕಸ್ ಆರಿಲಿಯಸ್ ಸುಪ್ರಸಿದ್ಧನಾದವ. ಸ್ಟೋಯಿಕ್ ಮತಕ್ಕೂ ಕ್ರೈಸ್ತಮತಕ್ಕೂ ಇರುವ ಸಾಮ್ಯವನ್ನು ಪ್ರ.ಶ. 65 ರಲ್ಲಿ ಸಿನೆಕ ಬರೆದ ಈ ವಾಕ್ಯಗಳು ಸ್ಪಷ್ಟಪಡಿಸುತ್ತವೆ.

ದೈವಿಕ ಭಾವನೆ ಇಲ್ಲದ ಜೀವನ ಮಂಗಳಕರವಾಗಲಾರದು. ದೇವರು ಮಂಗಳಕರನಾದವನಾದುದರಿಂದ ಈ ವಿಶ್ವವನ್ನು ಸೃಷ್ಟಿಸಿದ. ಮಂಗಳಕರವಾದ ದೈವ ಒಳ್ಳೆಯವರಿಗೆ ಹಿತವಾದುದನ್ನು ಕೊಡಲು ಹಿಂಜರಿಯುವುದಿಲ್ಲ. ಆದ್ದರಿಂದ ಎಲ್ಲವನ್ನೂ ಅತ್ಯುತ್ತಮವಾಗಿ ಮಾಡಿದ ದೇವರು ಒಳ್ಳೆಯವರನ್ನು ತಂದೆಯಂತೆ ಪ್ರೀತಿಸುತ್ತಾನೆ. ಅವರಿಗೆ ಕಷ್ಟ ಸನ್ನಿವೇಶಗಳನ್ನು ಅವನು ಕಲ್ಪಿಸುವುದು ಅವರ ಬಲ ಬೆಳೆಯಲೆಂದು. ನಮ್ಮೆಲ್ಲರೊಳಗೆ ನಮ್ಮ ಹೃದಯಭಾವನೆಗಳ ಪ್ರೇಕ್ಷಕನಾಗಿ ರಕ್ಷಕ ಅಂತರ್ಯಾಮಿಯಾಗಿ ಪವಿತ್ರಾತ್ಮನಿರುತ್ತಾನೆ.

ಪ್ರ.ಶ. 75 ರಲ್ಲಿ ಎಪಿಕ್ಟಿಟಸ್ ಆಡಿದ ಮಾತುಗಳೂ ಕ್ರೈಸ್ತರ ಹೊಸ ಒಡಂಬಡಿಕೆಯ ಮಾತುಗಳಂತಿವೆ. ಒಬ್ಬ ದೇವರಿದ್ದಾನೆ. ಅವನ ಚೇತನ ಈ ವಿಶ್ವವನ್ನು ವ್ಯಾಪಿಸಿದೆ. ಅದು ನಮ್ಮ ಕಾರ್ಯಗಳಲ್ಲಲ್ಲದೆ ನಮ್ಮ ಆಲೋಚನೆಗಳಲ್ಲೂ ಭಾವಗಳಲ್ಲೂ ವಿಕಾಸವಾಗುತ್ತದೆ. ದೇವರು ನಮ್ಮ ಸೃಷ್ಟಿಕರ್ತನೂ ರಕ್ಷಕನೂ ಆಗಿರುವುದರಿಂದ ಅವನು ನಮ್ಮನ್ನು ಭಯದಿಂದ ವ್ಯಸನದಿಂದ ಬಿಡುಗಡೆ ಮಾಡುವುದಿಲ್ಲವೇ? ನೀನು ನಿನ್ನ ಕೋಣೆಯ ಬಾಗಿಲನ್ನು ಮುಚ್ಚಿ ಕತ್ತಲೆಯಲ್ಲಿ ಕುಳಿತಿರುವಾಗ ನೀನೊಬ್ಬನೇ ಏಕಾಕಿಯಾಗಿರುವುದಾಗಿ ಭಾವಿಸಬೇಡ. ದೇವರು ನಿನ್ನ ಕೋಣೆಯಲ್ಲಿರುತ್ತಾನೆ. ನಿನ್ನ ರಕ್ಷಕನಾಗಿ ಕಾದಿರುತ್ತಾನೆ. ನೀನು ಏನು ಮಾಡುತ್ತಿರುವೆಯೆಂಬುದನ್ನು ನೋಡಲು ಅವನಿಗೆ ದೀವಟಿಗೆಯ ಅಗತ್ಯವಿಲ್ಲ.

ಹೀಗೆ ಕ್ರೈಸ್ತಧರ್ಮಕ್ಕೂ ಸ್ಟೋಯಿಕ್ ಮತಕ್ಕೂ ಸಾಮ್ಯವಿದ್ದರೂ ಕ್ರೈಸ್ತರು ಪ್ರಶಂಸಿಸುವ ಸದ್ಗುಣಗಳಿಗೂ ಸ್ಟೋಯಿಕ್ ಮತದವರು ಪ್ರಶಂಸಿಸುವ ಸದ್ಗುಣಗಳಿಗೂ ಭೇದವಿದೆ. ಕಾರುಣ್ಯ, ನಮ್ರತೆಗಳಿಗೆ ಕ್ರೈಸ್ತರು ಹೆಚ್ಚು ಪ್ರಾಧಾನ್ಯ ಕೊಡುತ್ತಾರೆ. ಸ್ಟೋಯಿಕರು ಕಾರುಣ್ಯವನ್ನೂ ನಮ್ರತೆಯನ್ನೂ ಹೃದಯ ದೌರ್ಬಲ್ಯವೆಂದು ಪರಿಗಣಿಸಿರುತ್ತಾರೆ. ಸ್ಟೋಯಿಕರು ಕಷ್ಟಸಹಿಷ್ಣುತೆಗೂ ಧೃತಿಗೂ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುತ್ತಾರೆ. ಆಧುನಿಕ ತಾತ್ತ್ವಿಕರಲ್ಲಿ ಡಾ. ಲಿಪ್‌ಮನ್ ಸ್ಟೋಯಿಕರ ತತ್ತ್ವವನ್ನು ಎತ್ತಿ ಹಿಡಿದಿರುತ್ತಾನೆ.

ಕ್ರೈಸ್ತಮತ ಹುಟ್ಟಿದ ಹೊತ್ತಿಗೆ ಗ್ರೀಕರ ಸಾಂಪ್ರದಾಯಿಕ ಮತ ನಾಮಾವಶೇಷವಾಯಿತು. ಅವರ ಸ್ಟೋಯಿಕ್ ಮತ ಕ್ರೈಸ್ತಮತದಲ್ಲಿ ಲೀನವಾಯಿತು. ಕ್ರೈಸ್ತ ಮತದ ಆರಂಭ ಕಾಲದಲ್ಲಿ ಅದು ವಿಶೇಷವಾಗಿ ಹರಡಿದ್ದು ಗ್ರೀಕರಲ್ಲಿ. ಕ್ರೈಸ್ತರ ಹೊಸ ಒಡಂಬಡಿಕೆಯನ್ನು ಗ್ರೀಕ್ ಭಾಷೆಯಲ್ಲಿ ಬರೆದಿಟ್ಟರು. ಕ್ರೈಸ್ತ ಮೂರ್ತಿಗಳಲ್ಲಿ ಎರಡನೆಯವನಾದ ಯೇಸುಕ್ರಿಸ್ತನನ್ನು ಗ್ರೀಕರು ಲಾಗಸ್ ಎಂದು ಕರೆದರು. ನಾಲ್ಕನೆಯ ಶತಮಾನದಲ್ಲಿ ಕ್ರೈಸ್ತಮತವನ್ನು ಗ್ರೀಕರು ರಾಷ್ಟ್ರ ಮತವಾಗಿ ಅಂಗೀಕರಿಸಿದರು. ಆದಿಯಲ್ಲಿ ಗ್ರೀಸಿನಲ್ಲಿ ಸ್ಥಾಪನೆಯಾದ ಕ್ರೈಸ್ತ ಮಂಡಲವೇ ಸಾಂಪ್ರದಾಯಿಕವಾದದ್ದು. ಪಾಶ್ಚಾತ್ಯ ಸುಧಾರಿತ ಕ್ರೈಸ್ತಮಂಡಲಿ ಈ ಸಂಪ್ರದಾಯಕ್ಕೆ ವಿರುದ್ಧವಾದದ್ದು ಎಂಬ ಭಾವನೆ 9ನೆಯ ಶತಮಾನದಲ್ಲಿ ಪ್ರಬಲಗೊಂಡು ಗ್ರೀಕರ ಕ್ರೈಸ್ತ ಮಂಡಲಿ ಪಾಶ್ಚಾತ್ಯ ಕ್ರೈಸ್ತ ಮಂಡಲಿಯಿಂದ ಬೇರ್ಪಟ್ಟಿತು. ಅದರ ಮುಂದಿನ ಮತಚರಿತ್ರೆ ಸಂಪೂರ್ಣವಾಗಿ ಕ್ರೈಸ್ತರ ಮತ ಚರಿತ್ರೆಗೆ ಸೇರಿದುದಾಗಿದೆ. (ಜಿ.ಎಚ್.)

**ಗ್ರೀಕ್ ನಾಟಕಗಳು (ಪ್ರಾಚೀನ) :** ಪ್ರಾಚೀನ ಗ್ರೀಕ್ ನಾಟಕಾಲಯದ ಮತ್ತು ನಾಟಕಗಳ ಅಭಿಮಾನದೇವತೆ ಡಯೊನೈಸಸ್. ಕೆಲವು ಮುಖ್ಯ ಗ್ರಾಮಗಳಲ್ಲೂ ಅಥೆನ್ಸ್ ಮುಂತಾದ ನಗರಗಳಲ್ಲೂ ಆತನ ಹೆಸರಿನಲ್ಲಿ ಚಳಿಗಾಲದಿಂದ ವಸಂತ ಸಮಯದ ತನಕ ಹಲವು ಸಣ್ಣ ದೊಡ್ಡ ಉತ್ಸವಗಳು ಜರುಗುತ್ತಿದ್ದವು. ಆರಾಧನಾ ಪ್ರಕ್ರಿಯೆಯ ಜೊತೆಗೆ ನರ್ತನಸಹಿತ ಗೀತ ಹಾಡುವುದೇ ಉತ್ಸವಕ್ಕೆ ಸಾರ್ವಜನಿಕರ ಕಾಣಿಕೆ. ನೃತ್ಯಮೇಳಕ್ಕೆ

ಡಿಥಿರ್ಯಾಂಬ್ (ಆವೇಶಕುಣಿತ) ಎಂದು ಅಂಕಿತ. ಅದರ ವಿಷಯ ಡಯೊನೈಸಸ್ಸನ ಕಷ್ಟಸುಖಮಿಶ್ರಿತ ಜೀವನದ ಘಟನಾವಳಿ. ನೃತ್ಯಮೇಳದಲ್ಲಿ ಐವತ್ತು ಮಂದಿ, ಡಯೊನೈಸಸ್ಸನ ಪರಿವಾರದವರಾದ ಸ್ಯಾಟಿರ್ರೈ ಮತ್ತು ಸೈಲಿನೈಗಳಂತೆ ವೇಷ ಧರಿಸಿ ಭಾಗವಹಿಸುತ್ತಿದ್ದರು. ಒಳ್ಳೆಯ ಗೀತಗಳನ್ನು ಕಟ್ಟಿಕೊಟ್ಟು ಹೆಸರುಗೊಂಡ ಏರಿಯನ್ ನಾಟ್ಯದ ಮಧ್ಯೆ ಮಧ್ಯೆ ಬಳಸುವುದಕ್ಕಾಗಿ ಸಂಭಾಷಣಾ ಪದ್ಯಪಂಕ್ತಿಗಳನ್ನು ತಂದು ಸೇರಿಸಿದ. ಅದನ್ನು ನಾಟಕತೆಯ ಪ್ರಥಮ ಪ್ರವೇಶ ಎನ್ನಬಹುದು. ಆಮೇಲೆ ಬಂದ ಥೆಸ್ಪಿಸ್ ಐವತ್ತು ನರ್ತಕರ ಎದುರಿಗೆ ಒಬ್ಬ ನಟನನ್ನು (ಹೈಪೊಕ್ರಿಟೀಸ್ – ಉತ್ತರ ಹೇಳುವವ) ತಂದಿರಿಸಿ, ಕಥನಮಯವಾಗಿದ್ದ ನೃತ್ಯಗೀತವನ್ನು ಕಥಾಭಿನಯಕ್ಕೆ ತಿರುಗಿಸಿ, ನಾಟಕದ ನಿಜಸ್ಥಾಪಕನಾದ. ಸಂವಾದಕ್ಕೆ ಸ್ವಲ್ಪ ಗಮನವೂ ಪ್ರಶಸ್ತಿಯೂ ದೊರಕಿದರೂ ನೃತ್ಯಗೀತ (ಕೋರಸ್, ಮೇಳಗೀತ) ತನ್ನ ಮುಖ್ಯಪ್ರಭಾವವನ್ನು ಉಳಿಸಿಕೊಂಡೇ ಇತ್ತು. ಈಸ್ಕಿಲಸ್ **(ನೋಡಿ)** ಎರಡನೆಯ ನಟನನ್ನು ತಂದು ಸೇರಿಸಿದ ಅನಂತರವೂ ಅದು ಕುಗ್ಗಲಿಲ್ಲ. ಗಂಭೀರವಾಗಲೀ ವಿನೋದವಾಗಲೀ ಲೇವಡಿಯಾಗಲೀ ಎಲ್ಲ ಬಗೆಯ ನಾಟಕಕ್ಕೂ ಕೋರಸ್ ಎಂಬ ನಾಮಧೇಯವೇ ಬಹುಕಾಲ ಸಲ್ಲುತ್ತಿತ್ತು. ಟ್ರ್ಯಾಜಡಿ ಕಾಮೆಡಿ ಸ್ಯಾಟಿರ್ ನಾಟಕಗಳ ಉಚ್ಛ್ರಾಯ ಸಮಯದಲ್ಲೂ ಕವಿಗೆ ತನ್ನ ರೂಪಕಗಳನ್ನು ಪ್ರದರ್ಶಿಸಲು ಅಪ್ಪಣೆಯೀಯುವ ರಹದಾರಿಗೆ 'ಅವನಿಗೊಂದು ಕೋರಸ್ ಕೊಟ್ಟರು' (ಹಿ ವಾಸ್ ಗಿವನ್ ಎ ಕೋರಸ್) ಎಂಬ ನಿರೂಪಣೆ ಇರುತ್ತಿತ್ತು. ಪ್ರದರ್ಶನಾಧಿಕಾರಿ ಕವಿಗೆ ನಿನ್ನ ಟ್ರ್ಯಾಜಡಿ ಅಥವಾ ಕಾಮೆಡಿ ಶುರುವಾಗಲಿ ಎನ್ನುವುದರ ಬದಲು ನಿನ್ನ ಕೋರಸ್ ಪ್ರವೇಶಿಸಲಿ ಎನ್ನುತ್ತಿದ್ದ. ಈಸ್ಕಿಲಸನ ಸುಧಾರಣೆಯನ್ನು ಮುಂದುವರಿಸಿ ಸಾಫೊಕ್ಲೀಸ್ ಮೂರನೆಯ ನಟನನ್ನು ತಂದು ಕೂಡಿಸಿದ ಮೇಲೂ ನೃತ್ಯಗೀತವಿಲ್ಲದೆ ನಾಟಕ ನಡೆಯುವಂತಿರಲಿಲ್ಲ.

ಡಯೊನೈಸಸ್ ನಾಟಕ ಮಂದಿರ, ಅಥೆನ್ಸ್ (ಮರದ ಕೆತ್ತನೆ ಚಿತ್ರ)

ಡಯೊನೈಸಸ್ ಪೂಜೆಯ ಅಂಗವಾದ ನೃತ್ಯಗೀತ ಬಹುಶಃ ಒಂದೇ ಬಗೆಯದಾಗಿರದೆ ಹಲವು ವಿಧದ ಭಾವ ಭಾವನೆಗಳನ್ನು ಪ್ರಕಟಿಸುವ ಸಾಮೂಹಿಕ ಸಾಧನವಾಗಿತ್ತು. ಕೆಲವು ವೇಳೆ ಕೋಪ, ಮರುಕ, ಭಯ, ವಿಸ್ಮಯ ಮೊದಲಾದ ಗಂಭೀರರಾಗವೂ ಮತ್ತೆ ಕೆಲವು ವೇಳೆ ಪರಿಹಾಸ ಸಮ್ಮೋದ ವಿಡಂಬನ ನಗು ಗೇಲಿ ಮುಂತಾದ ಹಗುರ ರಾಗವೂ ಅದರಲ್ಲಿ ತುಂಬಿರುತ್ತಿತ್ತು. ಭಾವಗಳ ಮಿಶ್ರಣ ತೋರಿಬರುತ್ತಿದ್ದದ್ದೂ ಉಂಟು. ಕ್ರಮೇಣ ನೃತ್ಯಗೀತ ಕವಲೊಡೆದು ಮೂರು ಮುಖ್ಯ ಪ್ರಕಾರದ ನಾಟಕಗಳ ಉತ್ಪತ್ತಿಗೆ ಕಾರಣವಾಯಿತು; ಗಂಭೀರ ನಾಟಕ (ಟ್ರ್ಯಾಜಡಿ), ಹರ್ಷನಾಟಕ (ಕಾಮೆಡಿ), ಮಿಶ್ರನಾಟಕ (ಸ್ಯಾಟಿರ್ ಪ್ಲೇ). ಅವು ಮೂರಕ್ಕೂ ತಮ್ಮತಮ್ಮದೇ ಆದ ವಿಕಾಸ, ಚರಿತ್ರೆ, ಸಾರ್ಥಕತೆ ಒದಗಿ ಬಂದದ್ದು ನ್ಯಾಯವೇ.



ಈಸ್ಕಿಲಸ್

1) ಗಂಭೀರನಾಟಕ: ಟ್ರ್ಯಾಜಡಿ ಅರ್ಥಾತ್ ಗ್ರೀಕ್ ಭಾಷೆಯ 'ಟ್ರ್ಯಾಜಡಿಯ' ಬಂದದ್ದು ಅದೇ ಭಾಷೆಯ ಟ್ರ್ಯಾಗಡಾಯ್ ಎಂಬ ಪದದಿಂದ. ಟ್ರ್ಯಾಗಡಾಯ್ ಎಂದರೆ ಪ್ರಾಯಶಃ ಹೋತನಂತೆ ವೇಷ ಹಾಕಿಕೊಂಡು ಡಯೊನೈಸಸ್ಸನ ಹಿಂಬಾಲಕರಾದ ಸ್ಯಾಟಿರ್ ತಂಡ ತಾವೆಂದು ನಟಿಸುತ್ತ, ನೃತ್ಯಗೀತದಲ್ಲಿ ಭಾಗವಹಿಸುತ್ತಿದ್ದವರು; ಅಥವಾ ಒಂದು ಹೋತದ ಬಹುಮಾನಕ್ಕಾಗಿ ನರ್ತಿಸುತ್ತಿದ್ದ ಗುಂಪು; ಅಥವಾ ಡಯೊನೈಸಸ್ಸನ ಬಲಿಪೀಠದಲ್ಲಿ ಹೊಯ್ದು ಕೆಡವಿದ ಹೋತನ ಸುತ್ತ ಭಯಭಕ್ತಿಯಿಂದ ನರ್ತಿಸುತ್ತಿದ್ದವರು. ಹೀಗೆ ಎಂದು ಹೇಳುವುದು ಸಾಧ್ಯವಿಲ್ಲ. ಒಬ್ಬಿಬ್ಬರು ವಿದ್ವಾಂಸರಂತೂ ಗಂಭೀರನಾಟಕಕ್ಕೂ ಹೋತಕ್ಕೂ ಏನೇನೂ ಸಂಬಂಧ ಇಲ್ಲವೆಂದು ಹೇಳಿದ್ದಾರೆ; ಏತಕ್ಕೆಂದರೆ, ಟ್ರ್ಯಾಜಡಿ ಎಂಬ ಪದ ಅರ್ಥವತ್ತಾಗಿ ಪ್ರಭಾವಯುಕ್ತವಾಗಿ ಬಳಕೆಗೆ ಬರುವ ಹೊತ್ತಿಗಾಗಲೆ ಏರಿಯನ್, ಥೆಸಿಸ್ಪ್ ಅಳಿದು ಹಲವು ದಶಕ ಕಳೆದು ಹೋಗಿದ್ದುವು; ನಾಟಕದ ಸ್ವರೂಪವೂ ನೃತ್ಯಗೀತದ ಸ್ವರೂಪವೂ ಬಹುಮಟ್ಟಿಗೆ ಬದಲಾಗಿ ಹೋಗಿತ್ತು. ಆ ಪದ ಪಾರಿಭಾಷಿಕ ಪದವಾಗಿಯೇ ಉಪಯೋಗ.

ಬೆಟ್ಟದ ತಪ್ಪಲಿನ ಬಯಲು ಪ್ರದೇಶವೇ ನಾಟಕಾಲಯದ ಜಾಗ. ಅಲ್ಲಿ ಕುದುರೆಲಾಳದ ಆಕಾರದ ಸ್ಥಳವನ್ನು ಅಣಿಮಾಡಿ, ಮಧ್ಯದಲ್ಲಿ ನೃತ್ಯಮೇಳದ ವರ್ತುಳವನ್ನು ಗುರುತಿಸಿ, ಅದರ ನಡುವೆ ಡಯೊನೈಸಸ್ಸನ ವೇದಿಕೆಯನ್ನು ನಿರ್ಮಿಸಲಾಗುತ್ತಿತ್ತು. ಮೇಳದವರ ಸಂಖ್ಯೆಯನ್ನು ಐವತ್ತರಿಂದ ಹನ್ನೆರಡಕ್ಕೆ ಈಸ್ಕಿಲಸ್ ಇಳಿಸಿದ. ಸಾಫೊಕ್ಲೀಸ್ ಹದಿನೈದಕ್ಕೆ ಏರಿಸಿದ. ಅವರನ್ನು ಚಚ್ಚೌಕ ಕ್ರಮದಲ್ಲಿ ನಿಲ್ಲಿಸುವ ಏರ್ಪಾಡಿತ್ತು. ಅವರು ನರ್ತಿಸುತ್ತ ಪ್ರವೇಶಿಸಿದೊಡನೆ ನಾಟಕದ ಪ್ರಾರಂಭ; ಕೊನೆಯಲ್ಲಿ ಅವರು ನರ್ತಿಸುತ್ತ ಕಣ್ಮರೆ ಯಾಗುವುದೇ ನಾಟಕದ ಅಂತ್ಯ. ಅವರ ಗೀತನಾಟ್ಯ ಆಮೇಲೆ ಚಿಕ್ಕ ನೇಪಥ್ಯದ ಮೇಲೆ ಪಾತ್ರಗಳ ಸಂವಾದ, ಪುನಃ ಗೀತನಾಟ್ಯ, ಅನಂತರ ಸಂವಾದ–ಹೀಗಿರುತ್ತಿತ್ತು ನಾಟಕದ ಬೆಳವಣಿಗೆ. ಗೀತವೂ ನೃತ್ಯವೂ ನಾನಾ ಭೇದಗಳಿಂದ ಕೂಡಿರುತ್ತಿತ್ತು.



ಎಪಿಡಾರಸ್‌ನಲ್ಲಿಯ ಬಯಲು ನಾಟಕ ಮಂದಿರ

ಸುಮಾರು ಹತ್ತು ಹದಿನೈದುಸಾವಿರ ಮಂದಿ ಪ್ರೇಕ್ಷಕರಾಗಿ ಕುಳ್ಳಿರುತ್ತಿದ್ದರು; ಯಾವ ಶುಲ್ಕವನ್ನೂ ಅವರು ಕೊಡಬೇಕಾದ್ದಿರಲಿಲ್ಲ. ಮೇಳದವರಿಗೂ ನಟರಿಗೂ ತಕ್ಕ ತರಬೇತು ಕೊಡುವುದು ಕವಿಯ ಜವಾಬ್ದಾರಿ; ಆಗೊಮ್ಮೆ ಈಗೊಮ್ಮೆ ಕವಿ ತನ್ನ ನಾಟಕದಲ್ಲಿ ತಾನೇ ಒಂದು ಪಾತ್ರವಹಿಸುತ್ತಿದ್ದ. ನಟರಿಗೆ ಗೊತ್ತಾದ ವೇತನ ಆಡಳಿತವರ್ಗದವರಿಂದ ಬಟವಾಡೆಯಾಗುತ್ತಿತ್ತು. ರಂಗಸಜ್ಜು, ನಟರ ವೇಷಭೂಷಣ ಮುಂತಾದ ಪರಿಕರದ ಖರ್ಚನ್ನು ಚುನಾಯಿತ ಧನವಂತ ಹೊರುತ್ತಿದ್ದ. ನಾಟಕಕಾರರಲ್ಲಿ ಮೂವರನ್ನು ಆರಿಸಿಕೊಂಡು, ಅವರಲ್ಲಿ ಒಬ್ಬೊಬ್ಬನಿಂದಲೂ ಮೂರು ಗಂಭೀರನಾಟಕ ಮತ್ತು ಒಂದು ಮಿಶ್ರನಾಟಕ, ಹೀಗೆ ಒಟ್ಟು ನಾಲ್ಕರ ಕಟ್ಟು (ಟೆಟ್ರಾಲಜಿ) ಸಿದ್ಧವಾಗುವಂತೆ ಮಾಡಿ ಅಧಿಕಾರ ಸಂಪುಟ ಒಂದು ಸ್ಪರ್ಧೆ ಹೂಡುತ್ತಿತ್ತು. ಗೆದ್ದವನಿಗೂ ಧನವಂತನಿಗೂ ಕಿರೀಟದ ಬಹುಮಾನ. ನಟರು ಮೊಗವಾಡ, ರಜಾಯಿನಂಥ ಬಟ್ಟೆಯ ನಿಲುವಂಗಿ, ತಲೆಯ ಮೇಲೆ ಒಂದು ಕಿರೀಟ, ಕಾಲಿಗೆ ಮರದ ದಪ್ಪ ಅಟ್ಟೆಯ ದೊಡ್ಡ ಬೂಟು–ಇವುಗಳಿಂದ ಅಲಂಕೃತರಾಗಿ ಸುಮಾರು ಆರೂವರೆ ಏಳು ಅಡಿ ಎತ್ತರದವರಾಗಿ ಸೌಮ್ಯ ವೈಭವದ ನಿಧಾನ ಹೆಜ್ಜೆಯಿಂದ ಪರಿಣಾಮ ಬೀರುತ್ತಿದ್ದರು. ಸ್ತ್ರೀಪಾತ್ರಗಳಲ್ಲೂ ಗಂಡಸರೇ. ಪರಿಚಿತವಾದ ಪುರಾಣ ಕಥಾವಳಿಯಿಂದಲೇ ನಾಟಕಕ್ಕೆ ವಿಷಯವನ್ನು ಕವಿ ತೆಗೆದುಕೊಳ್ಳಬೇಕಾಗಿತ್ತು. ಒಂದೇ ಮುಖ್ಯ ಘಟನಾವಳಿ, ಕ್ಲುಪ್ತಕಾಲದಲ್ಲೂ ಹೆಚ್ಚು ಕಡಿಮೆ ಒಂದೇ ಸ್ಥಳದಲ್ಲೂ ಅದು ಜರುಗಬೇಕು. ಕೆಲವೇ ಪಾತ್ರಗಳ ಸಂಭಾಷಣೆ ಇರಬೇಕು. ಘೋರ ಘಟನೆ ರಂಗದ ಮೇಲೆ ನಡೆಯಕೂಡದು. ವಾದವಿವಾದವೇ ಕೃತ್ಯ. ಭಾಷೆ ಛಂದಸ್ಸುಗಳು ನಿಯಮಬದ್ಧ– ಹೀಗೆ ಕಟ್ಟುಕಟ್ಟಳೆ ಇದ್ದಿತಾಗಿ ಕವಿಯ ಸ್ವಾತಂತ್ರ್ಯಕ್ಕೆ ಸಾಕಷ್ಟು ಆಸ್ಪದವಿರಲಿಲ್ಲ. ಆದರೂ ಗ್ರೀಕ್ ಗಂಭೀರನಾಟಕ ಮಾನವ ಸ್ವಭಾವದ ಮೂಲ ಚಲನವಲನಗಳ ನಿಕಟ ಪರಿಚಯವನ್ನು ನಮಗೆ ಮೂಡಿಸುತ್ತದೆ. ಅದನ್ನು ಸರಿಗಟ್ಟುವ ಮಹಾಸಾಹಿತ್ಯ ಈಚಿನ ಯುಗಗಳಲ್ಲಿ ದಿಟವಾಗಿ ಅಪರೂಪ.

ಪ್ರ.ಶ.ಪೂ. 5ನೆಯ ಶತಮಾನ ಗ್ರೀಕ್ ಗಂಭೀರನಾಟಕದ ಸುವರ್ಣಯುಗ. ಪ್ರ.ಶ.ಪೂ. ಸು. 499 ರಿಂದ 403 ಅವಧಿಯಲ್ಲಿ ಆಗಿಬಂದ ಮೂವರು ಮಹಾ ಕವಿಗಳೇ ಅದನ್ನು ನಡೆಸಿಕೊಂಡವರು, ಗಂಭೀರನಾಟಕಕಾರತ್ರಯ ಎಂಬ ಘನಮರ್ಯಾದೆಯನ್ನು ಪಡೆದುಕೊಂಡವರು; ಅವರಾರೆಂದರೆ ಈಸ್ಕಿಲಸ್, ಸಾಫೊಕ್ಲೀಸ್ ಮತ್ತು ಯೂರಿಪಿಡೀಸ್. ಅವರಿಗೆ ಕೊಂಚ ಪೂರ್ವದಲ್ಲಿ ಇದ್ದು ನಾಟಕ ರಚಿಸಿದ ಫ್ರೀನಿಕಸ್, ಪ್ರಾಟಿನಸ್, ಕೀರಿಲಸ್ಸರು ಕೇವಲ ನಾಮಾವಶೇಷರಾಗಿದ್ದಾರೆ. ಸಮಕಾಲೀನರಾಗಿದ್ದ ಇಯಾನ್, ಆಕಿಯಸ್, ಆಗಥಾನರೂ ಕೆಲವು ಚೂರುಪಾರುಗಳಿಂದ ಉಳಿದಿದ್ದಾರೆಯೇ ವಿನಾ ಪೂರ್ಣ ಗ್ರಂಥಗಳಿಂದ ಅಲ್ಲ. ಮೋರಿಕಸ್, ನೊತಿಪ್ಪಸ್, ಅಕೆಸ್ಟರ್, ಥಿಯಾಗ್ನಿಸ್ ಮುಂತಾದ ಇತರ ಕೆಲವು ನಾಮಾಂಕಿತಗಳು ಅರಿಸ್ಟಾಫನೀಸ್ ಅವಹೇಳನದಿಂದ ತಿಳಿದುಬರುತ್ತವೆಯೇ ಹೊರತು ಅವರ ಒಂದು ಚೂರು ಕೃತಿ ಕೂಡ ಉಳಿದುಬಂದಿಲ್ಲ.


ಸಾಫೊಕ್ಲೀಸ್

ಪ್ರ.ಶ.ಪೂ. 4ನೇಯ ಶತಮಾನದಲ್ಲಿ ಗಂಭೀರನಾಟಕದ ವಾರ್ಷಿಕ ಪ್ರದರ್ಶನ ಏನೂ ಕಡಿಮೆಯಾಗಲಿಲ್ಲ. ನಾಟಕಕಾರತ್ರಯರ ಕೃತಿಗಳು ಮತ್ತೆಮತ್ತೆ ಅಪೇಕ್ಷಿತವಾದುವು, ಹಿತವಾದುವು. ಅಲ್ಲದೆ ಹೊಸ ನಾಟಕಗಳ ರಚನೆಗೂ ವಿಶೇಷ ಪ್ರೋತ್ಸಾಹ ಸಿಕ್ಕಿತು. ಹಾಗಾಗಿ ನಾಟಕಕಾರರು ಅತಿ ಚುರುಕಿನಿಂದ ರೂಪಕ ಕಟ್ಟಿ ಹೊರ ತರಬೇಕಾಗಿ ಬಂತು. ಹೇರಳ ವಾಗಿಯೂ ಕಟ್ಟಬೇಕಾಯಿತು. ಥಿಯೊಡೆಕ್ಟೀಸ್ 50, ಕಾರ್ಸಿನಸ್ 160, ಆಸ್ಟಿಡಾಮಸ್ 240–ಈ ರೀತಿ ಅವರ ಬರೆಹ ಪಟ್ಟಿಯಾಗಿದೆ. ಗುಣ ದಲ್ಲಾದರೂ ಅವಾವುದಕ್ಕೂ ರವೆಯಷ್ಟು ಮೆಚ್ಚಿಕೆಯೂ ಲಭಿಸಲಾಗದು. ನೂರಾರು ಕೃತಿಗಳಲ್ಲಿ ಒಂದೂ ಉಳಿದುಬಂದಿಲ್ಲ. ಈಸ್ಕಿಲಸ್ ಸಾಫೊಕ್ಲೀಸ್ ಯೂರಿಪಿಡೀಸರು ಬರೆದವೆಂದು ನಮೂದಿತವಾಗಿರುವ ಕೃತಿಗಳ ಸಂಖ್ಯೆ ಕ್ರಮವಾಗಿ 90, 123, 92; ಅಲೆಗ್ಸಾಂಡ್ರಿಯನ್ ಅವಧಿಯಲ್ಲಿ ಪ್ರಚುರದಲ್ಲಿದ್ದ ಅವರ ಕೃತಿಗಳು ಕ್ರಮವಾಗಿ 72, ದೊಡ್ಡಸಂಖ್ಯೆ 78. ಒಟ್ಟು 305ರಲ್ಲಿ ಈಗ ಲಭ್ಯವಾಗಿರುವುವು 33; ಕ್ರಮವಾಗಿ 7, 7, 19–ಅಷ್ಟೆ. ಆ ಶ್ರೇಷ್ಠತ್ರಯ ಹೊರ ತಂದ ಅಲೆಗ್ಸಾಂಡ್ರಿಯನ್ ಅವಧಿಯಲ್ಲಿ ಸುಮಾರು 240 ಆದರೂ ಇದ್ದಿರಬೇಕು. ಆಗಿರುವ ನಷ್ಟ ಅಗಾಧವೆಂದೇ ಹೇಳಬೇಕು.


ಯೂರಿಪಿಡೀಸ್

ಇರುವ ಅವರ ರೂಪಕಗಳಿಂದ ಅವರ ಬೇರೆ ಬೇರೆ ಶಕ್ತಿಯನ್ನೂ ಸ್ವಂತ ಲಕ್ಷಣಗಳನ್ನೂ ಅರಿಯುವುದು ಸಾಧ್ಯ. ಒಬ್ಬನಿಂದ ಇನ್ನೊಬ್ಬನಿಗೆ ಗಂಭೀರ ನಾಟಕ ಸರಿಯುವಾಗ ಅದಕ್ಕಾದ ವಿಕಾಸ ಸಹಜವೂ ತರ್ಕಸಮ್ಮತವೂ ಸಮರ್ಪಕವೂ ಆಗಿತ್ತು. ಅದರ ಎರಡು ಭಾಗಗಳಾದ ಸಂಭಾಷಣೆ ಮತ್ತು ಸಂಗೀತಗಳಲ್ಲಿ ಎರಡನೆಯದಕ್ಕೆ ಸ್ವಾಭಾವಿಕವಾಗಿಯೇ ಇಳಿಮುಖ. ಈಸ್ಕಿಲಸ್ನಲ್ಲಿ ಕೋರಸ್ ಭಾಗ 3/5 ರಿಂದ 2/5 ಕ್ಕೂ ಸಾಫೊಕ್ಲೀಸನಲ್ಲಿ 1/3 ರಿಂದ 1/6 ಕ್ಕೂ ಯೂರಿಪಿಡೀಸನಲ್ಲಿ 1/7 ರಿಂದ 1/10 ಕ್ಕೂ ಇಳಿದು ಕಡಿಮೆಯಾದದ್ದು ಎಷ್ಟೊಂದು ಯುಕ್ತ ಬದಲಾವಣೆ. ಮೂವರಿಗೂ ಮನುಜವರ್ಗಕ್ಕೂ ದೇವವರ್ಗಕ್ಕೂ ಇರುವ ಸಂಬಂಧ ಮುಖ್ಯ ವಿಚಾರವಾಗಿದ್ದರೂ ಅದರ ಪ್ರತಿಪಾದನೆಯಲ್ಲಿ ಮಾನವಾಂಶಕ್ಕೆ ಕವಿಯ ಲಕ್ಷ್ಯ ಹೆಚ್ಚುಹೆಚ್ಚಾದದ್ದನ್ನೂ ಅವನ ದೃಷ್ಟಿ ಸ್ಥೂಲದಿಂದ ಸೂಕ್ಷ್ಮವಾದದ್ದನ್ನೂ ಕಾಣುತ್ತೇವೆ. ಈಸ್ಕಿಲಸನ ಪಾತ್ರಗಡಣ ದೇವತೆಗಳು ಉಪದೇವತೆಗಳು ಅತಿಮಾನವರು. ಸಾಫೊಕ್ಲೀಸನದು ಆದರ್ಶ ಮಾನವರು, ಯೂರಿಪಿಡೀಸನದು ಮಾನವರು. ಮೂವರ ಗಂಭೀರ ಸಿದ್ಧಾಂತಗಳಲ್ಲೂ ಅದೇ ಬಗೆಗೆ ವ್ಯತ್ಯಾಸವಿದೆ. ಮಾಡುವವ ಮನುಷ್ಯ; ಮಾಡಿದ್ದನ್ನು ಉಣ್ಣುವವ ಮನುಷ್ಯ; ದೇವತೆಗಳನ್ನು ಬಯ್ಯುವುದೇಕೆ? ಅತಿಗೆ ಹೋಗದೆ ಮಿತದಲ್ಲಿರುವ ನರನಿಗೆ ಸದಾ ನೆಮ್ಮದಿ–ಎಂದು ಈಸ್ಕಿಲಸ್ ಮನಗಂಡು, ಮನಸ್ಸಿಟ್ಟು ಉಪದೇಶಿಸಿದ. ಸಾಫೊಕ್ಲೀಸ್ ಮುಂದೆ ನಡೆದು, ನಿರಪರಾಧಿಗೂ ಸಂಕಟ ಬರಬಹುದು. ಅದು ವಿಧಿಯ ಲೀಲೆ; ಬಂದದ್ದನ್ನು ಸ್ಥೈರ್ಯದಿಂದ ತಾಳಿ ಮನುಷ್ಯ ಉದಾತ್ತನಾಗಬೇಕು ಎಂದು ಹೇಳಿದ. ಯೂರಿಪಿಡೀಸ್, ಎರಡೂ ನೋವೂ ಬರುವುದರಲ್ಲಿ ದೇವತೆಗಳ ಕೈವಾಡ ಇದ್ದೇ ಇದೆ; ಮನುಷ್ಯನ ಸ್ಥಿತಿಯನ್ನು ಕುರಿತು ಎಷ್ಟು ಕನಿಕರಪಟ್ಟರೂ ಸಾಲದು ಎಂದು ಒತ್ತಿನುಡಿದ. ಈಸ್ಕಿಲಸನ ಹಿರಿಯ ಗುಣ ಮಹಾಘನತೆ; ಅವನ ಮಹೋನ್ನತ ಶೈಲಿಯ ವಾಗ್ವೈಭವ ಅವನಿಗೇ ಮೀಸಲು. ಮಿತಿ, ಸಂಕ್ಷಿಪ್ತತೆ, ಅರ್ಥಪೂರ್ಣ ಸರಳತೆ, ತುಂಬಿಸೂಸುವ ಧ್ವನಿ, ಮಾಧುರ್ಯ–ಇವು ಸಾಫೊಕ್ಲೀಸನ ಲೇಖನವಿಧಾನ; ಶಿಷ್ಟತೆಗೆ ಅತ್ಯುತ್ಕೃಷ್ಟ ಉದಾಹರಣೆ. ಯೂರಿಪಿಡೀಸನ ಧೋರಣೆ ಮನುಜ ಸಮಾಜಕ್ಕೆ ಹತ್ತಿರ ಹತ್ತಿರ. ಗೊಂದಲದಲ್ಲಿ ಸಿಕ್ಕಿಬಿದ್ದು ರಾಗಗ್ರಸ್ತರಾದ ಹೆಣ್ಣುಗಂಡುಗಳ ಮಾತುಕತೆಯನ್ನು ಕಾವ್ಯಮಯವಾಗಿ ಪರಿಷ್ಕರಿಸುವ ಜಾಣ್ಮೆ ಅವನಿಗೆ ದೈವದತ್ತವಾಗಿತ್ತು; ಮನಮೋಹಕವಾದ ಇಂಪನ್ನು ಪದಸರಣಿಗೆ ಕೂಡಿಸುವ ಕೌಶಲವೂ ಅವನಿಗಿತ್ತು. ಮುಂದಣ ಶತಮಾನಗಳಲ್ಲಿ ಅವನಿಗೇ ಅತ್ಯಧಿಕ ಪ್ರತೀತಿ.

2) ಮಿಶ್ರನಾಟಕ: ಅನುಬಂಧವಾಗಿ ಅಥವಾ ಮುಕ್ತಾಯವಾಗಿ ಪ್ರತಿಯೊಬ್ಬ ಕವಿಸ್ಪರ್ಧಿಯೂ ಬರೆಯಲೇಬೇಕಾಗಿದ್ದ ಮಿಶ್ರನಾಟಕ ಒಂದು ಸಮಸ್ಯೆಯಾಗಿದೆ. ಕಾರಣ, ನಮಗೆ ಲಭ್ಯವಾಗಿರುವ ಮಿಶ್ರನಾಟಕ ಒಂದೇ ಒಂದು– ಯೂರಿಪಿಡೀಸನ ಸೈಕ್ಲಾಪ್ಸ್. ಅದರ ಕಥಾವಸ್ತು, ಟ್ರಾಯ್‌ನಿಂದ ಹಿಂದಿರುಗುವಾಗ ಒಡಿಸಿಯಸ್ ತನ್ನ ಜೊತೆಯವರೊಂದಿಗೆ ಒಂದೇ ಕಣ್ಣಿನ ದೈತ್ಯ ಪಾಲಿಫೀಮನಿಗೆ ಸಿಕ್ಕಿಬಿದ್ದು, ಅವನಿಗೆ ದ್ರಾಕ್ಷಾಮದ್ಯ ಕುಡಿಸಿ ನಿದ್ರಿಸುವಂತೆ ಮಾಡಿ, ದಪ್ಪ ಕೋಲನ್ನು ಚೂಪು ಮಾಡಿ ಬೆಂಕಿಯಲ್ಲಿ ಕಾಸಿ, ಅದನ್ನು ದೈತ್ಯನ ಕಣ್ಣಿನೊಳಕ್ಕೆ ಚುಚ್ಚಿ ಕುರುಡಾಗಿಸಿ ಅವನ ಹಿಡಿತದಿಂದ ತಪ್ಪಿಸಿಕೊಂಡು ಯಾನ ಕೈಗೊಂಡ ಆಖ್ಯಾಯಿಕೆ. ನಾಟಕಕ್ಕೆ ನೃತ್ಯಮೇಳ, ಪಾನದೇವತೆ ಬಾಕಸ್ಸನ ಅನುಯಾಯಿಗಳಾದ ಸ್ಯಾಟಿರ್ ಮಂದಿ. ಅವರಲ್ಲಿ ಮುದುಕನಾದ ಸೈಲಿನಸ್ ಇನ್ನೊಂದು ಪಾತ್ರ. ಒಬ್ಬ ವಿದೂಷಕನಂತೆ ಅವನ ಚಿತ್ರಣವಾಗಿದೆ. ಅವನನ್ನೂ ಸ್ಯಾಟಿರರನ್ನೂ ಬಲಾತ್ಕಾರದಿಂದ ಹಿಡಿದುತಂದು ಪಾಲಿಫೀಮ್ ತನ್ನ ಗುಲಾಮರನ್ನಾಗಿಸಿಕೊಂಡಿದ್ದಾನೆ. ಒಡಿಸಿಯಸ್ಸಿಗೆ ಅವನು ಕೊಟ್ಟ ಮದ್ಯಕ್ಕೆ ಪ್ರತಿಯಾಗಿ ದೈತ್ಯನ ಹಾಲು, ಚೀಸು, ಮಾಂಸ ಮೊದಲಾದವನ್ನು ಕೊಟ್ಟು, ದೈತ್ಯ ಬಂದೊಡನೆ ಅವನ್ನು ಆಗಂತುಕರೇ ಅಪಹರಿಸಿದರೆಂದು ಸುಳ್ಳಾಡಿ ತಲೆತಪ್ಪಿಸಿಕೊಳ್ಳುತ್ತಾನೆ; ದೈತ್ಯನಿಗೆ ಕಾಣದಂತೆ ಮದ್ಯಕ್ಕೆ ಕೈಹಾಕುವ ಅವನ ಪ್ರಯತ್ನ ಹುಡುಗಾಟದಂತೆ ಹಾಸ್ಯಾಸ್ಪದ. ಸ್ಯಾಟಿರರು ವಿನೋದಕ್ಕಿಂತ ಹೆಚ್ಚಾಗಿ ವಿಲಾಸಿಗಳು; ಅವರದ್ದು ಕುಡಿತ ಕುಣಿತ ಸಂಭೋಗಗಳ ಮಾತೇ ಮಾತು. ಕೋರಸ್ಸಿನ ನರ್ತನ ರಭಸ ಆವೇಶದಿಂದ ಕೂಡಿದ್ದಾಗಿರಬೇಕು; ಆ ಸೂಚನೆ ಇದೆ. ಪಾಲಿಫೀಮ್ ಒಡಿಸಿಯಸ್ಸಿನ ಜನರಲ್ಲಿ ಮೈತುಂಬಿಕೊಂಡ, ಇಬ್ಬರನ್ನು ಬಡಿದು ಕೊಂದು ಅವರ ಮಾಂಸವನ್ನು ಸುಟ್ಟು ಬೇಯಿಸಿ ಭಕ್ಷಿಸುವ ವೃತ್ತಾಂತ ಕಥಿತವಾಗುತ್ತದೆ. ಕುರುಡನಾದ ಪಾಲಿಫೀಮ್ ಒಡಿಸಿಯಸ್ ಮತ್ತು ಇತರರನ್ನು ಹಿಡಿಯಲು ತಡಕಾಡುವುದು, ಬಲಗಡೆ ಇದ್ದಾರೆ, ಹಿಂದೆ ಇದ್ದಾರೆ ಎಂದು ಸ್ಯಾಟಿರರು ಹುಸಿಮಾತು ಹೇಳುವುದು, ಅವನು ಹಾಗೆ ನುಗ್ಗಿ ಗವಿಯ ಕಲ್ಲಿಗೆ ತಲೆ ಚಚ್ಚಿಕೊಳ್ಳುವುದು–ಇಂಥ ವಿನೋದವೂ ಉಂಟು. ಏರಿಯನ್ ರಚಿಸಿದ ಒಂದು ನೃತ್ಯಗೀತಕ್ಕೆ ಹೆಸರು ಟಿರ್ಬ್ಯಾಸಿಯ; ಅದು ಸ್ಯಾಟಿರರು ಸೈಲಿನೈಗಳ ಅತ್ಯಾಮೋದದ ದಾಂಧಲೆ ಕುಣಿತ. ಅದರಿಂದ ಈ ಮಿಶ್ರನಾಟಕ ಪ್ರಾಯಶಃ ಬೆಳೆದುಬಂತು. ಗಂಭೀರನಾಟಕವನ್ನು ಹಲವು ಘಂಟೆ ನೋಡಿ ನಲುಗಿದ ಪ್ರೇಕ್ಷಕರಿಗೆ ಕೇವಲ 700 ಪಂಕ್ತಿಗಳ ಕಿರುನಾಟಕ ಹಾಸ್ಯ ಗಲಭೆ ಭಾವಾವೇಶಗಳನ್ನು ತುಸು ಹೊತ್ತು ಒದಗಿಸಿ ಚಿತ್ತಸ್ವಾಸ್ಥ್ಯ ಪಡೆಯುವುದಕ್ಕೆ ಸಹಾಯಕವಾಗುತ್ತಿತ್ತೊ ಏನೊ.

3) ಹರ್ಷನಾಟಕ: ಪ್ರಾಚೀನ ಗ್ರೀಕ್ ಹರ್ಷನಾಟಕ ಗಂಭೀರನಾಟಕದಂತೆ ಏಕರೂಪದ್ದಾಗಿರಲಿಲ್ಲ. ಹಳೆಯದು, ನಡುವಣದು, ಹೊಸದು ಎಂಬ ಮೂರು ರೂಪಗಳನ್ನು ಅದು ತಾಳಿತು. ಪ್ರ.ಶ.ಪೂ. ಸು. 520 ರಿಂದ ಪ್ರ.ಶ.ಪೂ. 400ರ ವರೆಗೆ ಹಳೆಯದರ ಅವಧಿ; ಪ್ರ.ಶ.ಪೂ 400ರಿಂದ ಪ್ರ.ಶ.ಪೂ. ಸು. 336ರ ತನಕ ನಡುವಣದರ ಅವಧಿ; ಅಲ್ಲಿಂದ ಸುಮಾರು ನೂರು ವರ್ಷ, ಎಂದರೆ ಪ್ರಾಚೀನ ರೋಮನರು ಗ್ರೀಕರ ಸಾಹಿತ್ಯವನ್ನು ಅನುಕರಣ ಮಾಡತೊಡಗುವವರೆಗೆ, ಹೊಸದರ ಅವಧಿ. ಅನೇಕರು ಹರ್ಷನಾಟಕವನ್ನು ವಿಪುಲವಾಗಿ ರಚಿಸಿ ಪ್ರದರ್ಶಿಸಿದ್ದರೂ ಅರಿಸ್ಟಾಫನೀಸನ ಕೃತಿಗಳಲ್ಲಿ ಹನ್ನೊಂದನ್ನು ಬಿಟ್ಟರೆ ಮತ್ತಾವ ಕೃತಿಯೂ ಲಭ್ಯವಾಗಿಲ್ಲ. ಅಷ್ಟೇ ಅಲ್ಲ. ನಡುವಣ ಹರ್ಷನಾಟಕ ಹೇಗಿತ್ತೆಂದು

ವೇಲ್ಸ್ ಮತ್ತು ಇಂಗ್ಲೆಂಡ್‌ಗಳ ಒಕ್ಕೂಟದ ಇತಿಹಾಸ 1301ರಲ್ಲಿ ಆರಂಭವಾಗುತ್ತದೆ. ಆ ವರ್ಷ ಇಂಗ್ಲೆಂಡಿನ ದೊರೆ 1ನೆಯ ಎಡ್ವರ್ಡನ ಮಗನನ್ನು ವೇಲ್ಸ್ ರಾಜಕುಮಾರನೆಂದು ಕರೆಯಲಾಯಿತು. ವೇಲ್ಸಿಗೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯವನ್ನು ನೀಡಿದ್ದು ಎಂಟನೆಯ ಹೆನ್ರಿಯ ಕಾಲದಲ್ಲಿ.

ಸಂಯುಕ್ತ ರಾಜ್ಯ ಎಂಬ ಹೆಸರನ್ನು ಮೊದಲ ಬಾರಿಗೆ ಬಳಸಿದ್ದು 1604 ರಲ್ಲಿ – ಸ್ಕಾಟ್ಲೆಂಡಿನ 6ನೆಯ ಜೇಮ್ಸ್ ದೊರೆ ಇಂಗ್ಲೆಂಡಿನ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ ಮೇಲೆ. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡುಗಳ ಪಾರ್ಲಿಮೆಂಟುಗಳು ಒಂದಾದಾಗ, 1707ರಲ್ಲಿ, ಸಂಯುಕ್ತ ರಾಜ್ಯ ಎಂಬ ಹೆಸರನ್ನು ಅಧಿಕೃತವಾಗಿ ಬಳಸಲಾಯಿತು.

ಐರ್ಲೆಂಡನ್ನು ಗ್ರೇಟ್ ಬ್ರಿಟನಿಗೆ ಸೇರಿಸಿದ್ದು 1801ರಲ್ಲಿ. ಆಗ ಈ ಒಕ್ಕೂಟದ ಅಧಿಕೃತ ಹೆಸರು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಸಂಯುಕ್ತ ರಾಜ್ಯ ಎಂದಾಯಿತು. 1922ರಲ್ಲಿ ಐರ್ಲೆಂಡಿನ 26 ಕೌಂಟಿಗಳು ಸಂಯುಕ್ತ ರಾಜ್ಯದಿಂದ ಬೇರ್ಪಟ್ಟು ಆ ಭಾಗ ಸ್ವತಂತ್ರ ರಾಜ್ಯವಾಯಿತು, ಮುಂದೆ ಗಣರಾಜ್ಯವಾಯಿತು. ಆ ಭಾಗ ಪ್ರತ್ಯೇಕವಾದಂದಿನಿಂದ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯ ಎಂದಾಯಿತು. ಪಾರ್ಲಿಮೆಂಟು ಈ ಹೆಸರನ್ನು ಅಧಿಕೃತವಾಗಿ ಬಳಸಲಾರಂಭಿಸಿದ್ದು 1927ರಲ್ಲಿ, ಆ ಬಗ್ಗೆ ಅಧಿನಿಯಮವೊಂದರ ಮೂಲಕ. ರಾಜಮನೆತನಕ್ಕೆ ಸಂಬಂಧಿಸಿದಂತೆ ಈ ಹೆಸರನ್ನು ಬಳಸಲಾರಂಭಿಸಿದ್ದು 1953ರಲ್ಲಿ. ಎರಡನೆಯ ಎಲಿಜ಼ಬೆತಳನ್ನು ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯದ, ಆಕೆಯ ಇತರ ರಾಜ್ಯಗಳ ಮತ್ತು ಪ್ರದೇಶಗಳ ರಾಣಿಯೆಂದು ಆಗ ಘೋಷಿಸಲಾಯಿತು. ಇಡೀ ಸಂಯುಕ್ತ ರಾಜ್ಯಕ್ಕೆ ಒಂದೇ ಪಾರ್ಲಿಮೆಂಟ್ ಇದೆ. ಆದರೆ ಅದರ ಅಂಗಭೂತ ರಾಜ್ಯಗಳಲ್ಲಿ ಹೆಚ್ಚು ಕಡಿಮೆ ಸ್ವಯಮಾಧಿಕಾರವುಂಟು. ಸ್ಕಾಟ್ಲೆಂಡಿಗೆ ಅದರದೇ ಆದ ನ್ಯಾಯ ವ್ಯವಸ್ಥೆಯುಂಟು. ಸ್ಕಾಟ್ಲೆಂಡಿಗೂ ವೇಲ್ಸಿಗೂ ಪ್ರತ್ಯೇಕ ಸ್ಟೇಟ್ ಸೆಕ್ರೆಟರಿಗಳಿದ್ದಾರೆ. ಪಾರ್ಲಿಮೆಂಟಿನಲ್ಲಿ ಉತ್ತರ ಐರ್ಲೆಂಡಿಗೂ ಪ್ರಾತಿನಿಧ್ಯವಿರುವುದಾದರೂ ಗೃಹ ವ್ಯವಹಾರಗಳನ್ನು ನಿರ್ವಹಿಸಲು ಅದರದೇ ವಿಧಾನಮಂಡಲವೂ ಕಾರ್ಯಾಂಗವೂ ಉಂಟು.

ಸಂಯುಕ್ತ ರಾಜ್ಯದ ವಿವಿಧ ಭಾಗಗಳ ವಿಸ್ತೀರ್ಣ ಮತ್ತು ಜನಸಂಖ್ಯೆಗಳನ್ನು ಕೆಳಗೆ ಕೊಟ್ಟಿದೆ :

| | ವಿಸ್ತೀರ್ಣ (ಚ.ಕಿಮೀ) | ಜನಸಂಖ್ಯೆ (2012) |
|---|---|---|
| ಇಂಗ್ಲೆಂಡ್ | 130,395 | 53,013,000 |
| ವೇಲ್ಸ್ | 20,779 | 30,64,000 |
| ಸ್ಕಾಟ್ಲೆಂಡ್ | 78,387 | 52,54,800 |
| ಉತ್ತರ ಐರ್ಲೆಂಡ್ | 13,843 | 18,10,900 |
| ಐಲ್ ಆಫ್ ಮ್ಯಾನ್ | 572 | 84,665 |
| ಚ್ಯಾನಲ್ ದ್ವೀಪಗಳು | 194 | 1,68,000 |

ಸಂಯುಕ್ತ ರಾಜ್ಯದ ದ್ವೀಪಗಳಲ್ಲಿ ಅತ್ಯಂತ ದೊಡ್ಡದು ಗ್ರೇಟ್ ಬ್ರಿಟನ್. ಇಂಗ್ಲೆಂಡ್, ಉತ್ತರದಲ್ಲಿರುವ ಸ್ಕಾಟ್ಲೆಂಡ್, ಪಶ್ಚಿಮಕ್ಕಿರುವ ವೇಲ್ಸ್ ಇವು ಇದರಲ್ಲಿ ಸೇರಿವೆ. ಪಶ್ಚಿಮ ಯುರೋಪಿನಿಂದ ಇದನ್ನು ದಕ್ಷಿಣದಲ್ಲಿ ಇಂಗ್ಲಿಷ್ ಕಡಲ್ಗಾಲುವೆಯೂ ಪೂರ್ವದಲ್ಲಿ ಉತ್ತರ ಸಾಗರವೂ ಪ್ರತ್ಯೇಕಿಸುತ್ತವೆ. ಇದರ ಉತ್ತರ ಪಶ್ಚಿಮಗಳಲ್ಲಿ ಅಟ್ಲಾಂಟಿಕ್ ಸಾಗರವಿದೆ. ಐರ್ಲೆಂಡ್ ಇರುವುದು ಪಶ್ಚಿಮಕ್ಕೆ. ಗ್ರೇಟ್ ಬ್ರಿಟನಿಗೂ ಐರ್ಲೆಂಡಿಗೂ ನಡುವೆ ಐರಿಷ್ ಸಮುದ್ರವಿದೆ.

ಗ್ರೇಟ್ ಬ್ರಿಟನಿನ ವಾಯುಗುಣ ಸಮಶೀತೋಷ್ಣದ್ದು. ಇಲ್ಲಿಯ ಭಾಷೆ ಇಂಗ್ಲಿಷ್. ವೇಲ್ಸಿನಲ್ಲಿ ವೆಲ್ಷ್ ಭಾಷೆ ಹೆಚ್ಚಾಗಿ ಬಳಕೆಯಲ್ಲಿದೆ. ಇಲ್ಲಿಯ ಜನ ವಿಶೇಷವಾಗಿ ಚರ್ಚ್ ಆಫ್ ಇಂಗ್ಲೆಂಡಿಗೆ ನಡೆದುಕೊಳ್ಳುತ್ತಾರೆ. ರೋಮನ್ ಕೆಥೊಲಿಕ್, ಮೆಥಾಡಿಸ್ಟ್, ಪ್ರೆಸ್ಬಿಟೀರಿಯನ್, ಕಾಂಗ್ರಿಗೇಷನಲ್ ಮತ್ತು ಬ್ಯಾಪ್ಟಿಸ್ಟ್ ಧರ್ಮಗಳನ್ನು ಅನುಸರಿಸುವವರೂ ತಕ್ಕಮಟ್ಟಿನ ಸಂಖ್ಯೆಗಳಲ್ಲಿದ್ದಾರೆ. ಇಲ್ಲಿ 3 ಲಕ್ಷ ಯೆಹೂದ್ಯರುಂಟು (2010). ಮುಖ್ಯ ಪಟ್ಟಣ ಲಂಡನ್.

ಐರ್ಲೆಂಡಿನ ಈಶಾನ್ಯದಲ್ಲಿರುವ ಪ್ರದೇಶ ಉತ್ತರ ಐರ್ಲೆಂಡ್. ಇದು ಸಂಯುಕ್ತ ರಾಜ್ಯದ ಭಾಗ. ಅಲ್ಸ್ಟರಿನ ಆರು ಕೌಂಟಿಗಳಾದ ಆಂಟ್ರಿಂ, ಆರ್ಮಾ, ಡೌನ್, ಫರ್ಮ್ಯಾನ, ಲಂಡನ್‌ಡೆರಿ, ಟಿರೋನ್ – ಇವು ಉತ್ತರ ಐರ್ಲೆಂಡಿಗೆ ಸೇರಿವೆ.

ಉತ್ತರ ಐರ್ಲೆಂಡಿನದು ಸಮಶೀತೋಷ್ಣ ವಾಯುಗುಣ. ಭಾಷೆ ಇಂಗ್ಲಿಷ್. ಜನಸಂಖ್ಯೆಯ ಮೂರನೆಯ ಎರಡು ಭಾಗ ಪ್ರಾಟೆಸ್ಟಂಟರು. ಉಳಿದವರು ಬಹುತೇಕ ರೋಮನ್ ಕೆಥೊಲಿಕರು. ಮುಖ್ಯ ಪಟ್ಟಣ ಬೆಲ್ಫಾಸ್ಟ್.

ಐರ್ಲೆಂಡಿನ ಶಾಸನಾಧಿಕಾರವನ್ನು ಪಾರ್ಲಿಮೆಂಟು ಚಲಾಯಿಸುತ್ತದೆ. ಇದು ಸೆನೇಟ್ ಮತ್ತು ಕಾಮನ್ಸ್ ಸಭೆಗಳನ್ನೊಳಗೊಂಡಿದೆ. ಐರ್ಲೆಂಡಿನ ಪ್ರದೇಶಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಶಾಸನ ರಚಿಸಲು ಪಾರ್ಲಿಮೆಂಟಿಗೆ ಅಧಿಕಾರವಿದೆ. ವಿದೇಶ ನೀತಿ, ರಕ್ಷಣೆ ಮುಂತಾದ ಇತರ ವಿಚಾರಗಳನ್ನು ಸಂಯುಕ್ತ ರಾಜ್ಯ ಪಾರ್ಲಿಮೆಂಟು ಕಾದಿರಿಸಿಕೊಂಡಿದೆ. ಸೆನೇಟ್ ಸದಸ್ಯರನ್ನು ಕಾಮನ್ಸ್ ಸಭಾ ಸದಸ್ಯರು ಆಯ್ಕೆ ಮಾಡುತ್ತಾರೆ. ಕಾಮನ್ಸ್ ಸಭೆಯ ಸದಸ್ಯರ ಚುನಾವಣೆ ಐದು ವರ್ಷಗಳಿಗೊಮ್ಮೆ. 21 ವರ್ಷಗಳಿಗೆ ಮೇಲ್ಪಟ್ಟ ಎಲ್ಲರಿಗೂ ಮತಾಧಿಕಾರವುಂಟು. ಉತ್ತರ ಐರ್ಲೆಂಡಿನಿಂದ 12 ಮಂದಿ ಸದಸ್ಯರು ಸಂಯುಕ್ತ ರಾಜ್ಯದ ಪಾರ್ಲಿಮೆಂಟಿಗೆ ಚುನಾಯಿತರಾಗುತ್ತಾರೆ. ಐರ್ಲೆಂಡಿನ ಆಡಳಿತಾಧಿಕಾರವನ್ನು ಗವರ್ನರ್ ಚಲಾಯಿಸುತ್ತಾನೆ. ಇಂಗ್ಲೆಂಡಿನ ಕಂಬರ್ಲ್ಯಾಂಡ್ ತೀರಕ್ಕೂ ಉತ್ತರ ಐರ್ಲೆಂಡಿಗೂ ಮಧ್ಯೆ, ಐರಿಷ್ ಸಮುದ್ರದಲ್ಲಿ, ಐಲ್ ಆಫ್ ಮ್ಯಾನ್ ಇದೆ. ಅದರ ಆಡಳಿತಕ್ಕೆ ಪ್ರತ್ಯೇಕ




ಕಾನೂನುಗಳಿವೆ. ಅದರ ವಿಧಾನಮಂಡಲದಲ್ಲಿ (ಟಿನ್ವಾಲ್ಡ್) ಲೆಜಿಸ್ಲೆಟಿವ್ ಕೌನ್ಸಿಲ್ (ವಿಧಾನ ಪರಿಷತ್ತು) ಮತ್ತು ಹೌಸ್ ಆಫ್ ಕೀಸ್ ಎಂಬ ಎರಡು ಸದನಗಳಿವೆ. ಇವು ಸಂಯುಕ್ತವಾಗಿ ಅಧಿವೇಶನ ನಡೆಸುವುವುದಾದರೂ ಕೆಲವು ವಿನಾ ಉಳಿದೆಲ್ಲ ವಿಷಯಗಳನ್ನು ಕುರಿತು ಪ್ರತ್ಯೇಕವಾಗಿ ಮತ ನೀಡುತ್ತವೆ. ಹೌಸ್ ಆಫ್ ಕೀಸ್‌ನಲ್ಲಿ ವಯಸ್ಕ ಮತದಾನದ ಮೇಲೆ ಐದು ವರ್ಷಗಳ ಅವಧಿಗೆ ಆಯ್ಕೆಯಾದ 24 ಸದಸ್ಯರು ಇರುತ್ತಾರೆ. ಲೆಜಿಸ್ಲೆಟಿವ್ ಕೌನ್ಸಿಲ್‌ನಲ್ಲಿ ಗವರ್ನರ್, ಲಾರ್ಡ್ ಬಿಷಪ್, ಪ್ರಥಮ ಡೀಮ್ಸ್ಟರ್ (ನ್ಯಾಯಾಧೀಶ), ಅಟಾರ್ನಿ ಜನರಲ್, ಗವರ್ನರನಿಂದ ಆಯ್ಕೆಯಾದ ಇಬ್ಬರು, ಹೌಸ್ ಆಫ್ ಕೀಸ್‌ನಿಂದ ಆಯ್ಕೆಯಾದ ಐವರು – ಇವರು ಸದಸ್ಯರು. ಸುಂಕ, ವರಮಾನ ತೆರಿಗೆ ಇವು ಟಿನ್ವಾಲ್ಡ್ ಅಧಿಕಾರವ್ಯಾಪ್ತಿಗೆ ಒಳಪಟ್ಟಿವೆ. ಕೀಸ್ ಸಭೆಗೆ ಗವರ್ನರ್ ಆಯವ್ಯಯವನ್ನೊಪ್ಪಿಸುತ್ತಾನೆ. 1958ರ ಅಧಿನಿಯಮದ ಪ್ರಕಾರ ವಿತ್ತೀಯ ವ್ಯವಹಾರಗಳಲ್ಲಿ ಟಿನ್ವಾಲ್ಡ್‌ಗೆ ಹೆಚ್ಚಿನ ಅಧಿಕಾರಗಳು ದತ್ತವಾಗಿವೆ. ಕೀಸ್ ಸಭೆಯ ಐವರು ಮತ್ತು ಲೆಜಿಸ್ಲೆಟಿವ್ ಕೌನ್ಸಿಲಿನ ಇಬ್ಬರು ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿಯೊಂದು ಗವರ್ನರನೊಂದಿಗೆ ಕಾರ್ಯ ನಿರ್ವಹಿಸಲು ರಚಿತವಾಗಿದೆ. ಐಲ್ ಆಫ್ ಮ್ಯಾನ್‌ಗೆ ಅದರದೇ ಆದ ನ್ಯಾಯ ವ್ಯವಸ್ಥೆಯಿದೆ.

ಚ್ಯಾನಲ್ ದ್ವೀಪಗಳು ಫ್ರಾನ್ಸಿನ ವಾಯವ್ಯತೀರದಾಚೆಗೆ ಇವೆ. ನಾರ್ಮಂಡಿಯ ಡಚಿಯ ಭಾಗ ಮಾತ್ರ ಈಗ ಇಂಗ್ಲೆಂಡ್ ಪ್ರಭುತ್ವಕ್ಕೆ ಸೇರಿದೆ. ನಾರ್ಮನ್ ವಿಜಯದ ಕಾಲದಿಂದಲೂ ಇವು ಈ ಪ್ರಭುತ್ವದ ಅಡಿಯಲ್ಲಿವೆ. ಈ ದ್ವೀಪಸ್ತೋಮದಲ್ಲಿರುವ ಜರ್ಸಿ, ಗರ್ನ್‌ಸಿ, ಆಲ್ಡರ್ನಿ ಮತ್ತು ಸಾರ್ಕ್ ದ್ವೀಪಗಳಲ್ಲಿ ಜರ್ಸಿ ಅತ್ಯಂತ ದೊಡ್ಡ ದ್ವೀಪ. ಆಲ್ಡರ್ನಿ ಅತ್ಯಂತ ಉತ್ತರದಲ್ಲೂ ಜರ್ಸಿ ಅತ್ಯಂತ ದಕ್ಷಿಣದಲ್ಲೂ ಇವೆ. ಜರ್ಸಿಯ ಲೆಫ್ಟಿನಂಟ್ ಗವರ್ನರ್ ಹಾಗೂ ಮಹಾ ದಂಡಾಧಿಕಾರಿಯೇ ಅಲ್ಲಿಯ ಆಡಳಿತಮುಖ್ಯಸ್ಥ. ಈತ ಇಂಗ್ಲೆಂಡಿನ ದೊರೆ ಅಥವಾ ರಾಣಿಯಿಂದ ನೇಮಕವಾಗುತ್ತಾನೆ. ಸ್ಟೇಟ್ಸ್ ಸಭೆಯಲ್ಲಿ ಪೀಠಸ್ಥನಾಗಲೂ ಮಾತಾಡಲೂ ಇವನಿಗೆ ಅಧಿಕಾರವುಂಟು. ಆದರೆ ಮತಾಧಿಕಾರವಿಲ್ಲ. ಸ್ಟೇಟ್ಸ್ ಸಭೆಯ ಹಾಗೂ ಜರ್ಸಿಯ ರಾಯಲ್ ಕೋರ್ಟಿನ ಅಧ್ಯಕ್ಷನಾದ ಬೆಯ್ಲಿಫನೂ ದೊರೆ ಅಥವಾ ರಾಣಿಯಿಂದ ನೇಮಕವಾಗುತ್ತಾನೆ. ರಾಜ್ಯಗಳಿಂದ ನೇಮಕವಾದ ಸಮಿತಿಗಳು ಇಲ್ಲಿಯ ಆಡಳಿತ ನಡೆಸುತ್ತವೆ. ಇಲ್ಲಿಯ ಅಧಿಕೃತ ಭಾಷೆ ಫ್ರೆಂಚ್. ಆದರೆ ಇಂಗ್ಲಿಷ್ ದಿನಬಳಕೆಯ ಭಾಷೆ. (ಎಸ್.ಎನ್‌ವಿಆರ್‌ಇ.)

**ಸಂವಿಧಾನ :** ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯದ ಸಂವಿಧಾನ ವಿಶ್ವದ ಪ್ರಜಾಪ್ರಭುತ್ವ ಸಂವಿಧಾನಗಳಲ್ಲಿ ಅದ್ವಿತೀಯವಾದ್ದು. ಪುರಾತನತೆ, ಪ್ರೌಢಿಮೆ, ಸಮಯೋಚಿತವಾಗಿ ಹೊಂದಿಕೊಳ್ಳುವ ಸಾಮರ್ಥ್ಯ ಮತ್ತು ಬಾಳಿಕೆಗೆ ಇದು ಹೆಸರಾಗಿ ಸರಳವೂ ಅಲಿಖಿತವೂ ಆಗಿರುವುದು ಇದರ ವೈಶಿಷ್ಟ್ಯ. ಬ್ರಿಟನಿನ ಸಂವಿಧಾನ ಯಾವ ಒಂದು ಸಂಸ್ಥೆಯಿಂದಲೂ ಯಾವ ಒಂದು ನಿರ್ದಿಷ್ಟ ಕಾಲದಲ್ಲೂ ಪೂರ್ಣವಾಗಿ ತಯಾರಿಸಲ್ಪಟ್ಟದ್ದಲ್ಲ. ಅನೇಕ ಶತಮಾನಗಳ ಅವಧಿಯಲ್ಲಿ ದೈನಂದಿನ ರಾಜಕೀಯ ವ್ಯವಹಾರ ಸಂದರ್ಭಗಳಲ್ಲಿ ಉತ್ತಮ ಮಾರ್ಗದರ್ಶನ ನೀಡಲು ಬೆಳೆದು ಬಂದ ಮೂಲಭೂತ ನಿಯಮ ಸಂಯಮಗಳ ರಾಶಿಯಿದು. ಬ್ರಿಟನಿನ ಸಂವಿಧಾನದ ಮುಖ್ಯ ಮೂಲಗಳು ಇವು : 1 ಪಾರ್ಲಿಮೆಂಟಿನ ಶಾಸನಗಳು, 2 ನ್ಯಾಯಾಲಯಗಳ ತೀರ್ಪುಗಳು, 3 ರಾಜ್ಯಾಂಗದ ಸಂಪ್ರದಾಯಗಳು ಮತ್ತು 4 ರಾಜ್ಯಶಾಸ್ತ್ರ ಮತ್ತು ನ್ಯಾಯಶಾಸ್ತ್ರತಜ್ಞರ ಬರೆವಣಿಗೆಗಳು.

ಸಂಸದೀಯ ಪ್ರಜಾಪ್ರಭುತ್ವ, ಕಾನೂನುಬದ್ಧವಾದ ಆಡಳಿತ ಮತ್ತು ವ್ಯಕ್ತಿ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನೇ ಮುಖ್ಯ ಗುರಿಯಾಗಿ ಉಳ್ಳ ಈ ಸಂವಿಧಾನ ಪ್ರಧಾನಮಂತ್ರಿಯಿಂದ ಸಾಮಾನ್ಯ ನಾಗರಿಕನ ವರೆಗಿನ ಎಲ್ಲ ಅಧಿಕಾರಿಗಳು ಮತ್ತು ಪ್ರಜೆಗಳನ್ನೂ ಏಕರೂಪವಾದ ಕಾನೂನು ಮತ್ತು ನ್ಯಾಯಾಲಯಗಳಿಗೆ ಬದ್ಧರನ್ನಾಗಿ ಮಾಡುತ್ತದೆ. ಆದ್ದರಿಂದಲೇ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯದಲ್ಲಿ ಸ್ವೇಚ್ಛಾವರ್ತಿಯಲ್ಲದ, ಕಾನೂನುಬದ್ಧವಾದ, ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವ ಪ್ರಜಾಪ್ರಭುತ್ವ ಆಡಳಿತ ಶೋಭಿಸುತ್ತದೆ.



ರಾಣಿಯ ಮಗ ಚಾರ್ಲ್ಸ್‌ನಿಗೆ ವೇಲ್ಸ್ ರಾಜಕುಮಾರ ಪದವಿ ಪ್ರದಾನ–ವಾಯವ್ಯ ವೇಲ್ಸಿನ ಕಾರ್ನಾರ್ವನ್ ಕೋಟೆಯಲ್ಲಿ

ಏಕಾತ್ಮಕವಾದ ಮತ್ತು ವಿಭಿನ್ನಾಧಿಕಾರತತ್ತ್ವರಹಿತವಾದ ಬ್ರಿಟನಿನ ಸಂವಿಧಾನದಲ್ಲಿ ಕಂಡುಬರುವ ಮುಖ್ಯ ಸಂಸ್ಥೆಗಳು ನಾಲ್ಕು : ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪುರಾತನವಾದ ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ಚರ್ಚುಗಳು. ಈ ಸಂಸ್ಥೆಗಳು ಪರಸ್ಪರಾವಲಂಬಿಗಳೂ ಸಹಕಾರದಿಂದ ಕೆಲಸ ಮಾಡುವವೂ ಆದ ಸಂಸ್ಥೆಗಳಾಗಿವೆ.

ರಾಜಪ್ರಭುತ್ವ : ಬ್ರಿಟನಿನ ಪ್ರಜಾಪ್ರಭುತ್ವ ಚರಿತ್ರಾರ್ಹವಾದ್ದು. ಆದರೂ ಅಲ್ಲಿ ರಾಜಪ್ರಭುತ್ವ ಪ್ರಾಚೀನ ಕಾಲದಿಂದಲೂ ಇದೆ. ಇಂದು ಈ ರಾಜಪ್ರಭುತ್ವ ನಾಮಮಾತ್ರವಾದ್ದು ಮತ್ತು ಬಹುಪಾಲು ಸಾಂಕೇತಿಕವಾದ್ದು. ಬ್ರಿಟನಿನ ರಾಜಪೀಠ ರಾಜ್ಯದ ಎಲ್ಲ ಅಂಗಗಳಿಗೂ ಮುಖ್ಯವಾದ್ದು. ರಾಜ್ಯದ ಎಲ್ಲ ಅಧಿಕಾರಗಳೂ ಈ ಪೀಠದಲ್ಲಿ ಉದ್ಭವಿಸಿ ಮುಂದೆ ಹರಿಯುತ್ತವೆ. ಇವುಗಳ ನಿರ್ವಹಣೆಯಲ್ಲಿ ಈ ಪೀಠ ಸಾಂಕೇತಿಕವಾದ ಪಾತ್ರ ವಹಿಸುತ್ತದೆ. ಇದರ ಅಧಿಕಾರ ಸಾಂಕೇತಿಕವಾದರೂ ಆಡಳಿತದ ಮೇಲೆ ಇದರ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ಬ್ರಿಟನಿನ ರಾಜ ಅಥವಾ ರಾಣಿಗೆ ಆಡಳಿತದ ಸಕಲ ಆಗುಹೋಗುಗಳ ಮತ್ತು ನೀತಿಗಳ ಬಗ್ಗೆ ವಿಚಾರ ತಿಳಿಯುವ ಹಕ್ಕಿದೆ ಮತ್ತು ನಿರಂತರವಾದ, ತನ್ನ ಅನುಭವಾಧಾರಿತವಾದ ಸಲಹೆ ನೀಡುವ ಹಕ್ಕೂ ಇದೆ. ರಾಜನ ಸಲಹೆಗೆ ಬ್ರಿಟನಿನ ಸರ್ಕಾರ ಪದ್ಧತಿಯಲ್ಲಿ ಸೂಕ್ತ ಪುರಸ್ಕಾರ ನೀಡಲಾಗುತ್ತದೆ. 1701 ರ, 1936ರ ಅಧಿನಿಯಮಗಳಲ್ಲಿ ವಿವರಿಸಿ ನಿಯಂತ್ರಿಸಿರುವ ರೀತಿಯಲ್ಲಿ ರಾಜಪ್ರಭುತ್ವ ವಂಶಾನುಗತವಾದ ಒಂದು ಸ್ಥಾನವಾಗಿದೆ.

ಎಯ್‌ಸ್ಟೆಡ್‌ವೊಡ್ : ವೆಲ್ಷರ ಹಬ್ಬಗಳಲ್ಲೊಂದು. ಈ ಹಬ್ಬದಲ್ಲಿ ಜನರು ಪ್ರಾಚೀನ ಧಾರ್ಮಿಕ ಉಡುಪು ಧರಿಸಿ ತಮ್ಮ ರಾಷ್ಟ್ರದ ಹಿರಿಮೆಯನ್ನು ಕುರಿತು ಹಾಡುತ್ತಾರೆ

ನ್ಯಾಯಾಂಗ : ಬ್ರಿಟನಿನ ನ್ಯಾಯಾಂಗ ಭಾರತ ಅಥವಾ ಅಮೆರಿಕ ಸಂಯುಕ್ತ ಸಂಸ್ಥಾನಗಳ ನ್ಯಾಯಾಂಗಗಳಷ್ಟು ಅಧಿಕಾರಯುತವಲ್ಲ. ಸಂವಿಧಾನ ಅಲಿಖಿತವಾಗಿರುವುದ ರಿಂದಲೂ ಪಾರ್ಲಿಮೆಂಟು ಸಾರ್ವಭೌಮವಾದ್ದರಿಂದಲೂ ವಿಧಿಯುಕ್ತವಾಗಿ ತಯಾರಿಸಲಾದ ಸಂಸದೀಯ ಅಧಿನಿಯಮಗಳನ್ನು ತಿರಸ್ಕರಿಸುವ ಅಧಿಕಾರ ಬ್ರಿಟನಿನ ನ್ಯಾಯಾಂಗಕ್ಕಿಲ್ಲ. ಆದರೂ ಪಾರ್ಲಿಮೆಂಟಿನ ಹತೋಟಿ ಒಂದನ್ನು ಬಿಟ್ಟರೆ ಬ್ರಿಟನಿನ ನ್ಯಾಯಾಂಗ ಸ್ವತಂತ್ರವಾಗಿಯೂ ಸಮರ್ಥವಾಗಿಯೂ ಕಾನೂನುಬದ್ಧ ಆಡಳಿತವನ್ನು ರಕ್ಷಿಸುವುದರಲ್ಲಿ ಬಹು ಉಪಯುಕ್ತವಾಗಿದೆ.

ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್ ಮತ್ತು ಉತ್ತರ ಐರ್ಲೆಂಡಿನ ನ್ಯಾಯಾಲಯಗಳಿಗೆ ಏಕಸ್ವರೂಪವಿಲ್ಲದ್ದೇ ಬ್ರಿಟನಿನ ನ್ಯಾಯಾಂಗ ವ್ಯವಸ್ಥೆಯ ಒಂದು ವಿಶೇಷಗುಣ. ಮೂರು ಪ್ರತ್ಯೇಕ ನ್ಯಾಯಾಂಗ ವ್ಯವಸ್ಥೆಯಿದೆ. (1) ಇಂಗ್ಲೆಂಡ್ ಮತ್ತು ವೇಲ್ಸ್, (2) ಸ್ಕಾಟ್ಲೆಂಡ್, (3) ಉತ್ತರ ಐರ್ಲೆಂಡ್. ಇಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳಿಗೆ ಸಾಮಾನ್ಯವಾಗಿ ಬೇರೆ ಬೇರೆ ಪ್ರಾಥಮಿಕ ಮತ್ತು ಅಪೀಲು ಕೋರ್ಟುಗಳಿವೆ. ಉಚ್ಚ ನ್ಯಾಯಾಲಯದಲ್ಲಿ ಮೂರು ಮುಖ್ಯ ವಿಭಾಗಗಳಿವೆ : 1. ಚಾನ್ಸೆರಿ ವಿಭಾಗ, 2. ರಾಣಿಯ ಬೆಂಚಿನ ವಿಭಾಗ ಮತ್ತು 3. ಆಡ್ಮಿರಾಲ್ಟಿ ವಿಭಾಗಗಳು. ಇವುಗಳ ತೀರ್ಮಾನದ ವಿರುದ್ಧ ಕೋರ್ಟ್ ಆಫ್ ಅಪೀಲಿಗೆ ಮೇಲರ್ಜಿ ಹಾಕಲು ಅವಕಾಶವುಂಟು. ಸ್ಕಾಟ್ಲೆಂಡ್‌ನಲ್ಲಿ ಅಪರಾಧಿಗೆ ದಂಡನೆ ವಿಧಿಸಿದಾಗ ಮೊಕದ್ದಮೆಯನ್ನು ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬಹುದು. ಅದಕ್ಕೆ ಮುಂದೆ ಹೌಸ್ ಆಫ್ ಲಾರ್ಡ್ಸ್‌ಕ್ಕೆ ಮೇಲ್ಮನವಿ ಮಾಡುವ ಹಾಗಿಲ್ಲ. ಬ್ರಿಟನಿನ ಪರಮೋನ್ನತ ನ್ಯಾಯಾಲಯವೆಂದರೆ ಹೌಸ್ ಆಫ್ ಲಾರ್ಡ್ಸ್. ಹೌಸ್ ಆಫ್ ಲಾರ್ಡ್ಸ್ ನ್ಯಾಯಾಲಯವಾಗಿ ಕುಳಿತಾಗ ಸಾಮಾನ್ಯವಾಗಿ ಲಾರ್ಡ್ ಚಾನ್ಸಲರನ ಅಧ್ಯಕ್ಷತೆಯಲ್ಲಿ ಆ ಸದನದ ಲಾ ಲಾರ್ಡ್‌ಗಳು ಮತ್ತು ನ್ಯಾಯಶಾಸ್ತ್ರ ಪರಿಣತರಾದ ಇತರ ಲಾರ್ಡ್‌ಗಳು ಮಾತ್ರ ಭಾಗವಹಿಸುತ್ತಾರೆ.

ಕಾರ್ಯಾಂಗ : ಬ್ರಿಟನಿನ ಸರ್ಕಾರವನ್ನು ಸಂಪುಟ ಸರ್ಕಾರ ಎಂದು ಕರೆಯುವುದೂ ಉಂಟು. ಇದಕ್ಕೆ ಕಾರಣವೆಂದರೆ ಬ್ರಿಟನಿನ ಸರ್ಕಾರ ವ್ಯವಸ್ಥೆಯಲ್ಲಿ ಸಂಪುಟಕ್ಕಿರುವ ಪ್ರಧಾನ ಪಾತ್ರ. ಮಧ್ಯಯುಗದ ಕ್ಯೂರಿಯ ರೆಜಿಸ್, ಟ್ಯೂಡರ್ ಕಾಲದ ರಾಜ ಸಮಿತಿ ಮತ್ತು 17ನೆಯ ಶತಮಾನದ ಪ್ರಿವಿ ಕೌನ್ಸಿಲಿನ ಸಮಿತಿ – ಇವುಗಳಿಂದ ಉದ್ಭವಿಸಿದ ಸಚಿವ ಸಂಪುಟ ಇಂದಿನ ವಾಸ್ತವಿಕ ಕಾರ್ಯಾಂಗ. ರಾಜರ ಆಹ್ವಾನದ ಮೇಲೆ ಸಂಸತ್ತಿನ ಬಹುಮತ ಪಕ್ಷದ ನಾಯಕ ಪ್ರಧಾನ ಮಂತ್ರಿಯಾಗಿ ತನ್ನ ಇಚ್ಛೆಗನುಸಾರ ಇತರ ಸಚಿವರ ನೇಮಕವನ್ನು ಕುರಿತು ಸಲಹೆ ನೀಡಿ ರಾಜನಿಂದ ನೇಮಕ ಮಾಡಿಸಿಕೊಂಡು 100 ಜನರನ್ನು ಆರಿಸಿಕೊಂಡು ಸಂಪುಟವನ್ನು ರಚಿಸುತ್ತಾನೆ; ಸಾಮಾನ್ಯವಾಗಿ ಬ್ರಿಟಿಷ್ ಸರ್ಕಾರದಲ್ಲಿ 20 ಮಂದಿ ಸಂಪುಟ ಸಚಿವರಲ್ಲದೆ 20 ಸಂಪುಟೇತರ ಮಂತ್ರಿಗಳೂ 50 ಮಂದಿ ಕಿರಿಯ ಮಂತ್ರಿಗಳೂ ಇರುತ್ತಾರೆ. ಸಾಮಾನ್ಯವಾಗಿ ಸಂಪುಟದ ಸಚಿವರು ಮತ್ತು

ವಿಶೇಷವಾಗಿ ಇತರ ಸಚಿವರು ಇಲಾಖೆಗಳ ಮುಖ್ಯಸ್ಥರಾಗಿ ಕಿರಿಯ ಮಂತ್ರಿಗಳ ಸಹಾಯದಿಂದ ಆಡಳಿತ ನಡೆಸುತ್ತಾರೆ. ಸಚಿವ ಸಂಪುಟ ಇಡೀ ಆಡಳಿತಕ್ಕೆ ನಾಯಕತ್ವ ನೀಡುತ್ತದೆ. ರಾಜನ ಹೆಸರಿನಲ್ಲಿ ಎಲ್ಲ ಆಡಳಿತ ನಡೆದರೂ ಸರ್ಕಾರದ ಕೀಲಿಕೈ ಸಚಿವ ಸಂಪುಟದ ಕೈಯಲ್ಲಿದೆ. ಸಚಿವರು ವೈಯಕ್ತಿಕವಾಗಿಯೂ ಒಟ್ಟಾಗಿಯೂ ತಮ್ಮ ಆಡಳಿತದ ಬಗ್ಗೆ ಸಂಸತ್ತಿಗೆ ಉತ್ತರವಾದಿಗಳಾಗಿದ್ದು ಅದರ ಹತೋಟಿಗೆ ಒಳಗಾಗಬೇಕಾಗುತ್ತದೆ. ಸಚಿವ ಸಂಪುಟ ಮುಖ್ಯವಾದ್ದಾದರೂ ಅದರ ಅಳಿವು ಉಳಿವು ಸಂಸತ್ತಿನ ವಿಶ್ವಾಸವನ್ನು ಆಧರಿಸಿರುವುದರಿಂದಲೇ ಬ್ರಿಟಿಷ್ ಸರ್ಕಾರವನ್ನು ಸಂಸದೀಯ (ಪಾರ್ಲಿಮೆಂಟರಿ) ಪ್ರಭುತ್ವವೆಂದು ಕರೆಯಲಾಗುತ್ತದೆ.

ಸಂಸತ್ತು : ಬ್ರಿಟನಿನ ಶಾಸಕಾಂಗವಾದ ಪಾರ್ಲಿಮೆಂಟ್ (ಸಂಸತ್ತು) ಮಧ್ಯಯುಗದ ಕ್ಯೂರಿಯ ರೆಜಿಸ್‌ನಿಂದ ಉದ್ಭವಿಸಿದ್ದು. 1688ರ ಕ್ರಾಂತಿಕಾರಿ ಒಪ್ಪಂದದ ಪ್ರಕಾರ ರಾಜನಿಂದ ಸಾರ್ವಭೌಮತ್ವವನ್ನು ಸಂಸತ್ತು ಪಡೆದುಕೊಂಡ ಮೇಲೆ ಬ್ರಿಟನಿನ ಸರ್ಕಾರದಲ್ಲಿ ಅದರ ಪ್ರಭುತ್ವ ಮತ್ತು ಪ್ರಭಾವಗಳು ವೃದ್ಧಿಯಾದವು. ಬ್ರಿಟನಿನ ಸಂಸತ್ತಿ ನಲ್ಲಿ ಎರಡು ಶಾಸನ ಸಭೆಗಳಿವೆ : 1 ಹೌಸ್ ಆಫ್ ಲಾರ್ಡ್ಸ್ ಮತ್ತು 1 ಹೌಸ್ ಆಫ್ ಕಾಮನ್ಸ್. ಉತ್ತರ ಐರ್ಲೆಂಡಿಗೆ ಪ್ರತ್ಯೇಕವಾದ ಒಂದು ಸಂಸತ್ತು ಇದೆ. ಬ್ರಿಟನಿನ ಪಾರ್ಲಿಮೆಂಟು ರಾಜ್ಯದ ಎಲ್ಲ ಭಾಗಗಳನ್ನೂ ಪ್ರತಿನಿಧಿಸುವುದಲ್ಲದೆ ಇಡೀ ರಾಜ್ಯಕ್ಕೆ ಶಾಸನ ಮಾಡುವ ಹಕ್ಕು ಪಡೆದಿದೆ. ಉತ್ತರ ಐರ್ಲೆಂಡಿನ ಪಾರ್ಲಿಮೆಂಟು ಉತ್ತರ ಐರ್ಲೆಂಡಿಗೆ ಸಂಬಂಧಿಸಿದ ಆಂತರಿಕ ವಿಚಾರಗಳ ಮೇಲೆ ಶಾಸನ ಮಾಡುವ ಹಕ್ಕು ಹೊಂದಿದೆ.

ಪಾರ್ಲಿಮೆಂಟ್ ಸದನಗಳು, ಲಂಡನ್

ಹೌಸ್ ಆಫ್ ಲಾರ್ಡ್ಸ್ : ಸಮತಾವಾದವನ್ನು ಆಧರಿಸಿದ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅಸಮತೆಯ ಹೆಗ್ಗುರುತಾದ ಲಾರ್ಡ್‌ಗಳಿಗೆ ಪ್ರತ್ಯೇಕವಾದ ಒಂದು ಸಭೆ ಇರುವುದರ ಔಚಿತ್ಯದ ಬಗ್ಗೆ ಎಷ್ಟೇ ವಾದಗಳಿದ್ದರೂ ಬ್ರಿಟನಿನ ಸಂವಿಧಾನದಲ್ಲಿ ಹೌಸ್ ಆಫ್ ಲಾರ್ಡ್ಸನ್ನು ರದ್ದುಗೊಳಿಸುವ ಕಾರ್ಯಕ್ಕೆ ಯಾವಾಗಲೂ ಬ್ರಿಟನಿನಲ್ಲಿ ಬಹುಮತ ದೊರೆತಿಲ್ಲ. ಆದ್ದರಿಂದಲೇ ಸುಮಾರು 700 ಮಂದಿಯಷ್ಟು ಸದಸ್ಯರಿರುವ ಹೌಸ್ ಆಫ್ ಲಾರ್ಡ್ಸ್ ಸಭೆ ಇಂದಿಗೂ ಇದೆ. ಈ ಸಭೆಯಲ್ಲಿ 92 ವಂಶಾನುಗತ ಪೀರ್‌ಗಳು, ರಾಜರಿಂದ ನೇಮಿಸಲ್ಪಟ್ಟ ಪೀರ್‌ಗಳು ಮತ್ತು ಲಾ ಲಾರ್ಡ್‌ಗಳು, ಜೀವಾವಧಿ ಪೀರ್‌ಗಳು, ಪಾರಮಾರ್ಥಿಕ ಪೀರ್‌ಗಳು, ಸ್ಕಾಟ್ಲೆಂಡಿನ ಪ್ರತಿನಿಧಿ ಪೀರ್‌ಗಳು – ಇಂಗ್ಲೆಂಡಿನ ಚರ್ಚಿನ 2 ಮುಖ್ಯ ಧರ್ಮಾಧ್ಯಕ್ಷರು (ಆರ್ಚ್ ಬಿಶಪ್), 24 ಧರ್ಮಾಧಿಪತಿಗಳು (ಬಿಶಪ್) ಎಂಬ ಆರು ಬಗೆಯ ಲಾರ್ಡ್ ಸದಸ್ಯರಿದ್ದಾರೆ. ಪ್ರಜಾಪ್ರತಿನಿಧಿಗಳನ್ನು ಹೊಂದಿರದ ಈ ಸಭೆಗೆ ಪ್ರತಿನಿಧಿ ಸಭೆಗಿಂತ ಹೆಚ್ಚಿನ ಅಥವಾ ಸಮನಾದ ಹಕ್ಕೂ ಇರಬಾರದೆಂಬ ಕಾರಣದಿಂದ ಕ್ರಮೇಣ ಲಾರ್ಡ್ಸ್ ಸಭೆಯ ಅಧಿಕಾರಗಳು ಕಡಿಮೆಯಾಗುತ್ತ ಬಂದಿವೆ. ಹಣಕಾಸು ವಿಧೇಯಕಗಳ ಮೇಲೆ ಹೌಸ್ ಆಫ್ ಲಾರ್ಡ್ಸ್‌ಗೆ ಇದ್ದ ಅಧಿಕಾರವನ್ನು ಪಾರ್ಲಿಮೆಂಟ್ ಆಕ್ಟ್ ಎಂಬ ಅಧಿನಿಯಮ ಮೊಟಕು ಮಾಡಿತು. ಲಾರ್ಡ್ ಚಾನ್ಸಲರ್ ಈ ಸಭೆಯ ಅಧ್ಯಕ್ಷತೆ ವಹಿಸುತ್ತಾನೆ. ಅವನ ಗೈರುಹಾಜರಿಯಲ್ಲಿ ರಾಜರಿಂದ ನೇಮಿಸಲ್ಪಟ್ಟ ಉಪಾಧ್ಯಕ್ಷ ಅಧ್ಯಕ್ಷತೆ ವಹಿಸುತ್ತಾನೆ. ಸದಸ್ಯರಾದವರೆಲ್ಲರೂ ಸಾಮಾನ್ಯವಾಗಿ ಸಭೆಯಲ್ಲಿ ಭಾಗವಹಿಸದೆ, ರಾಜಕಾರಣದಲ್ಲಿ ವಿಶೇಷ ಆಸಕ್ತಿ ಮತ್ತು ಅನುಭವಗಳನ್ನುಳ್ಳ ಲಾರ್ಡ್‌ಗಳು ಮಾತ್ರ ಭಾಗವಹಿಸುವುದರಿಂದ ಇದರ ಕಾರ್ಯಾಚರಣೆ ಹೌಸ್ ಆಫ್ ಕಾಮನ್ಸಿನ ಕಾರ್ಯಕ್ಕೆ ಪೂರಕವಾಗಿದ್ದು ಫಲದಾಯಕವಾಗಿರುತ್ತದೆ. ತಜ್ಞರಲ್ಲದ, ವಂಶಗತ ಅಥವಾ ಸ್ಥಾನಗಳ ಲಾರ್ಡ್‌ಗಳು ಭಾಗವಹಿಸುವುದರಿಂದ ಉಂಟಾಗಬಹುದಾದ ಅಸಮಂಜಸತೆಯನ್ನು ಹೋಗಲಾಡಿಸಿ, ಲಾರ್ಡ್ಸ್ ಸಭೆಯ ಪ್ರತಿಭೆ ಮತ್ತು ಪ್ರಭಾವವನ್ನು ಹೆಚ್ಚಿಸುವ ಉದ್ದೇಶದಿಂದ ತಜ್ಞ ಅನುಭವಿಗಳನ್ನು ಜೀವಾವಧಿ ಲಾರ್ಡ್‌ಗಳಾಗಿ ನೇಮಿಸಲು 1958ರ ಲೈಫ್ ಪೀರೇಜಸ್ ಅಧಿನಿಯಮ ಅವಕಾಶ ಮಾಡಿಕೊಟ್ಟಿದೆ.

ಹೌಸ್ ಆಫ್ ಕಾಮನ್ಸ್ : ಬ್ರಿಟನಿನ ಸರ್ಕಾರದ ವ್ಯವಸ್ಥೆಯಲ್ಲಿ ಅತ್ಯಂತ ಮುಖ್ಯವಾದ ಮತ್ತು ಶಕ್ತವಾದ ಸಂಸ್ಥೆ ಎಂದರೆ ಹೌಸ್ ಆಫ್ ಕಾಮನ್ಸ್ (ಕಾಮನ್ಸ್ ಸಭೆ). ಏಕಸದಸ್ಯ ಪ್ರಾದೇಶಿಕ ಕ್ಷೇತ್ರಗಳಿಂದ ಚುನಾಯಿತರಾಗುವ 659 ಸದಸ್ಯರಿಂದ ಕೂಡಿದ ಈ ಸಭೆ ರಾಷ್ಟ್ರದ ಎಲ್ಲ ಪ್ರಜೆಗಳನ್ನೂ ಪ್ರತಿನಿಧಿಸುತ್ತದೆ. 1949ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಕಾರ ನಡೆಯುವ ಈ ಸಭೆಗೆ ಸಂಬಂಧಪಟ್ಟ ಸಾರ್ವತ್ರಿಕ ಅಥವಾ ಉಪ – ಚುನಾವಣೆಗಳಲ್ಲಿ ಬ್ರಿಟನಿನ 18 ಮತ್ತು ಅದಕ್ಕೂ ಹೆಚ್ಚಿನ ವಯಸ್ಕರಾದ, ಎಲ್ಲ ಪ್ರಜೆಗಳೂ ಗುಪ್ತವಾಗಿ ಮತ ನೀಡುವ 21 ಮತ್ತು ಅದಕ್ಕೂ ಹೆಚ್ಚಿನ ವಯಸ್ಕರಾದ ಯಾವ ಅರ್ಹ ಪ್ರಜೆಯಾಗಲಿ ಅಭ್ಯರ್ಥಿಯಾಗುವ ಹಕ್ಕು ಪಡೆದಿರುತ್ತಾರೆ. ಪೀರರು ಮತ್ತು ಮನೋರೋಗಿಗಳು ಮತ ನೀಡುವ ಹಾಗಿಲ್ಲ. ಇದರ ಸದಸ್ಯತ್ವ ಬಹಳ ಗೌರವಪ್ರಾಯವಾದ್ದು.

ಪಾರ್ಲಿಮೆಂಟ್ ಅಧಿವೇಶನಾರಂಭಕ್ಕಾಗಿ ಎರಡನೆಯ ಎಲಿಜಬೆತ್ ರಾಣಿಯ ಪ್ರಥಮಾಗಮನ, 4 ನವೆಂಬರ್ 1952

ವರ್ಷದಲ್ಲಿ ಸುಮಾರು 165 ದಿವಸಗಳ ಕಾಲ ಅಧಿವೇಶನ ನಡೆಸುವ ಈ ಸಭೆ ನಿಷ್ಪಕ್ಷಪಾತವಾದ ಸ್ಪೀಕರನ (ಸಭಾಪತಿ) ಅಧ್ಯಕ್ಷತೆಯಲ್ಲಿ, ಅನೇಕ ಸಮಿತಿಗಳ ಸಹಾಯದಿಂದ ದಕ್ಷತೆಯಿಂದ ಕೆಲಸ ನಿರ್ವಹಿಸುವುದು ಸಾಧ್ಯವಾಗಿದೆ. ಸರ್ಕಾರದ ಅಳಿವು ಉಳಿವು, ನೀತಿ ನಿಯಮಗಳು ಮತ್ತು ಹಣಕಾಸಿನ ಆಯವ್ಯಯಗಳನ್ನು ನಿಯಂತ್ರಿಸುವ ಹಕ್ಕು ಈ ಸಭೆಗೆ ಇದೆ. ಈ ಸಭೆ ದಕ್ಷತೆಯಿಂದ ಕಾರ್ಯನಿರ್ವಹಿಸಲು ಒಂದು ಮುಖ್ಯ ಕಾರಣವೆಂದರೆ ಮಾನ್ಯತೆ ಮತ್ತು ಕಾರ್ಯಾನುಕೂಲಗಳನ್ನು ಪಡೆದ ದಕ್ಷ, ಸಂಘಟಿತ ಮತ್ತು ಸೂಕ್ತಸಂಖ್ಯಾಬಲ ಇರುವಂಥ ವಿರೋಧ ಪಕ್ಷ. ವಿರೋಧವನ್ನು ಪ್ರಭಾವಯುತವೂ ಜವಾಬ್ದಾರಿಯುತವೂ ಪರಿಣತವೂ ಆದ್ದನ್ನಾಗಿ ಮಾಡಲು ವಿರೋಧ ಪಕ್ಷ ತನ್ನದೇ ಆದ ಸಂಪುಟವನ್ನು ರಚಿಸಿ ಸರ್ಕಾರವನ್ನು ನೆರಳಿನಂತೆ ಹಿಂಬಾಲಿಸುತ್ತದೆ. ಈ ವಿರೋಧಿ ಸಂಪುಟಕ್ಕೆ ಛಾಯಾ ಸಂಪುಟ (ಷ್ಯಾಡೋ ಕ್ಯಾಬಿನೆಟ್) ಎಂದು ಹೆಸರು. ಇಂಥ ಪ್ರಬಲ ವಿರೋಧ ಪಕ್ಷವೂ ಕೂಡಿದ ದ್ವಿಪಕ್ಷ ಪದ್ಧತಿ ಇರುವುದರಿಂದಲೇ ಬ್ರಿಟನಿನ ಸರ್ಕಾರ ಜವಾಬ್ದಾರಿಯುತವೂ ಜನಾಭಿಪ್ರಾಯಕ್ಕೆ ಮನ್ನಣೆ ನೀಡುವಂಥದೂ ಆಗಿರುತ್ತದೆ. ಸಂಸತ್ತಿನ ಒಳಗೂ ಹೊರಗೂ ಸಂವಿಧಾನವನ್ನು ನಡೆಸಲು ದ್ವಿಪಕ್ಷಪದ್ಧತಿ ಬಹಳ ಸಹಾಯಕವಾಗಿದೆ.

ಪೌರಸ್ವಾತಂತ್ರ್ಯ : ಪೌರಸ್ವಾತಂತ್ರ್ಯಕ್ಕೆ ಅನೇಕ ಶತಮಾನಗಳಿಂದಲೂ ಬ್ರಿಟನ್ ವಿಶೇಷ ಮಾನ್ಯತೆ ನೀಡಿದೆ. ಆದರೂ ಬ್ರಿಟಿಷ್ ಪೌರನ ಹಕ್ಕು ಸ್ವಾತಂತ್ರ್ಯಗಳಿಗೆ ಯಾವುದೇ ಒಂದು ಮೂಲವಿಲ್ಲ. 1679ರ ಆಸಾಮಿ ಹಾಜರಿ (ಹೇಬಿಯಸ್ ಕಾರ್ಪಸ್) ಅಧಿನಿಯಮ, 1689ರ ಬಿಲ್ ಆಫ್ ರೈಟ್ಸ್, ಸಂಪ್ರದಾಯ ನ್ಯಾಯ (ಕಾಮನ್ ಲಾ) – ಇವು ಬ್ರಿಟನಿನ ಪೌರಸ್ವಾತಂತ್ರ್ಯದ ಮೂಲಗಳು. ಇವುಗಳ ಆಧಾರದ ಮೇಲೆ ವಾಕ್‌ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ಸ್ವತ್ತಿನ ಸ್ವಾತಂತ್ರ್ಯ, ಮತೀಯ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ ಮುಂತಾದ, ಪ್ರಜಾಪ್ರಭುತ್ವದಲ್ಲಿ ದೊರೆಯುವ ಎಲ್ಲ ಸ್ವಾತಂತ್ರ್ಯಗಳೂ ಉದ್ಭವಿಸಿವೆ. ಕಾನೂನುಬದ್ಧ ಆಡಳಿತ ಪದ್ಧತಿಯನ್ನು ಅನುಸರಿಸಲು ಕಾರ್ಯಾಂಗಕ್ಕೆ, ಶಾಸಕಾಂಗಕ್ಕೆ ಮತ್ತು

ನ್ಯಾಯಾಲಯಕ್ಕಿರುವ ವಿಶೇಷ ಅಧಿಕಾರ, ಎಲ್ಲಕ್ಕಿಂತ ಹೆಚ್ಚಾಗಿ ಪೌರರಿಗೆ ತಮ್ಮ ಹಕ್ಕಿನ ಬಗ್ಗೆ ಇರುವ ಪ್ರೇಮ, ಏನೇ ಆದರೂ ಅದನ್ನು ರಕ್ಷಿಸಿಕೊಳ್ಳಲು ಅವರಿಗಿರುವ ಆಸೆ – ಇವು ಪ್ರಜಾಸ್ವಾತಂತ್ರ್ಯದ ಮುಖ್ಯ ರಕ್ಷಣೆಗಳು. ಆದರೂ ಯುದ್ಧವೇ ಮುಂತಾದ ತುರ್ತುಪರಿಸ್ಥಿತಿಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಪೌರ ಸ್ವಾತಂತ್ರ್ಯವನ್ನು ಪರಿಮಿತಗೊಳಿಸುವ ಅಧಿಕಾರ ಸರ್ಕಾರಕ್ಕೆ ಹಲವು ಅಧಿನಿಯಮಗಳಿಂದ ದತ್ತವಾಗಿದೆ.

ರಕ್ಷಣೆ : ರಕ್ಷಣಾ ನೀತಿಯನ್ನು ರೂಪಿಸಿ ನಿರ್ದೇಶಿಸುವ ಪರಮ ಜವಾಬ್ದಾರಿ ಪ್ರಧಾನ ಮಂತ್ರಿ ಮತ್ತು ಸಂಪುಟದ್ದು. ಸಹಾಯಕ್ಕೆ ರಕ್ಷಣಾ ಮತ್ತು ವಿದೇಶ ನೀತಿ ಕುರಿತ ಸಚಿವ ಸಂಪುಟ ಸಮಿತಿ ಉಂಟು. ಆದರೆ ರಕ್ಷಣಾ ನೀತಿಯ ವಾಸ್ತವಿಕ ನಿರೂಪಣೆ ರಕ್ಷಣಾ ಸಚಿವನದು (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಡಿಫೆನ್ಸ್). ಈತನಿಗೆ ನೆರವು ನೀಡಲು ಒಂದು ರಕ್ಷಣಾ ಸಮಿತಿ ಇದೆ. ರಕ್ಷಣಾ ಸಚಿವನನ್ನೇ ಅಧ್ಯಕ್ಷನನ್ನಾಗಿ ಉಳ್ಳ ಈ ಉನ್ನತ ಸಮಿತಿಯಲ್ಲಿ ರಕ್ಷಣಾ ಇಲಾಖೆಯ ರಾಜ್ಯ ಸಚಿವ, ನೌಕಾಬಲ, ಸೈನ್ಯಬಲ ಮತ್ತು ವಾಯುಬಲ ಇಲಾಖೆಗಳ ಉಪಸಚಿವರುಗಳು ಮತ್ತು ಈ ಬಲಗಳ ಮುಖ್ಯ ದಂಡನಾಯಕರು, ರಕ್ಷಣಾ ಬಲಗಳ ಶ್ರೇಷ್ಠ ದಂಡನಾಯಕ, ಸಂಶೋಧನೆ ಮತ್ತು ಯೋಜನೆಗಳ ಮುಖ್ಯ ಸಲಹೆಗಾರರು, ಸಿಬ್ಬಂದಿ ಮತ್ತು ಸಾಧನಗಳ ಮುಖ್ಯಾಧಿಕಾರಿ ಇವರು ಇರುತ್ತಾರೆ. ಈ ಸಮಿತಿಗೆ ತಾಂತ್ರಿಕ ಸಲಹೆ ನೀಡಲು ಮೂರು ಮುಖ್ಯ ದಂಡನಾಯಕರಿಂದ ಕೂಡಿದ, ರಕ್ಷಣಾ ಬಲಗಳ ಶ್ರೇಷ್ಠ ದಂಡನಾಯಕರ ಅಧ್ಯಕ್ಷತೆಯಲ್ಲಿ ಸೇರುವ ದಂಡನಾಯಕರ ಸಮಿತಿ ಇದೆ. ಈ ವ್ಯವಸ್ಥೆ ರಕ್ಷಣೆ ಕುರಿತ ನಿಯಮ ಮತ್ತು ಯೋಜನೆಗಳನ್ನು ರೂಪಿಸುತ್ತದೆ. ಈ ಸಂಬಂಧವಾದ ದೈನಂದಿನ ಆಡಳಿತವನ್ನು ನೌಕಾ, ಸೇನಾ ಮತ್ತು ವಾಯುಬಲ ಮಂಡಳಿಗಳು ನಡೆಸುತ್ತವೆ.

ಸೇನೆ : ಬ್ರಿಟನಿನ ಅಂತರ್ಯುದ್ಧದ ಕಾಲದಲ್ಲಿ ಆಲಿವರ್ ಕ್ರಾಮ್‌ವೆಲ್ ಆಧುನಿಕ ಸೇನೆಯ ತಳಹದಿಯನ್ನು ಹಾಕಿದಂದಿನಿಂದ ಬ್ರಿಟಿಷ್ ಸೇನೆ ಆಧುನಿಕ ತರಬೇತು ಮತ್ತು ಶಸ್ತ್ರಾಸ್ತ್ರಗಳನ್ನು ಪಡೆದ ಮಹಾಬಲವಾಗಿ ಬೆಳೆದುಬಂದಿದೆ. ಸುಮಾರು 30 ವಿವಿಧ ಅಂಗಗಳಾಗಿ ವ್ಯವಸ್ಥೆಗೊಂಡಿರುವ ಬ್ರಿಟಿಷ್ ಸೇನೆ ಬ್ರಿಟನಿನ ಒಳಗೂ ಹೊರಗೂ ಅನೇಕ ಕಮ್ಯಾಂಡ್‌ಗಳಾಗಿ ವ್ಯವಸ್ಥೆಗೊಂಡಿದೆ. ಇದರ ದೈನಂದಿನ ಆಡಳಿತವನ್ನು ಸೇನಾ ಮಂಡಳಿಯ ಸಹಾಯದಿಂದ ಸೇನಾಮುಖ್ಯ ದಂಡನಾಯಕ ನಡೆಸುತ್ತಾನೆ.

ನೌಕಾಬಲ : ಕ್ರಾಮ್‌ವೆಲ್‌ನಿಂದಲೇ ಆಧುನಿಕಗೊಂಡ ಬ್ರಿಟಿಷ್ ನೌಕಾಪಡೆ 18 ಮತ್ತು 19ನೆಯ ಶತಮಾನಗಳಲ್ಲಿ ಸಾಗರಗಳ ರಾಣಿಯಾಗಿ ಶೋಭಿಸಿ ಬ್ರಿಟಿಷ್ ಚಕ್ರಾಧಿಪತ್ಯವನ್ನು ರಚಿಸಿ ರಕ್ಷಿಸಿತು. ಆದರೆ ಬ್ರಿಟನಿನ ಇಂದಿನ ನೌಕಾಬಲ ಅಮೆರಿಕ, ರಷ್ಯ ಮತ್ತು ಸೋವಿಯೆತ್ ಒಕ್ಕೂಟದ ನೌಕಾ ಬಲಗಳಷ್ಟು ಬಲಿಷ್ಠವಾಗಿಲ್ಲ. ನಾಲ್ಕು ಮುಖ್ಯ ಅಂಗಗಳಿರುವ ನೌಕಾಬಲವನ್ನು ಹಲವು ತೀರ ಕಮ್ಯಾಂಡ್‌ಗಳು ಮತ್ತು ಸಮುದ್ರದ ಕಮ್ಯಾಂಡ್‌ಗಳಾಗಿ ವ್ಯವಸ್ಥಿಸಲಾಗಿದೆ. ಇದರ ದೈನಂದಿನ ಆಡಳಿತವನ್ನು ಆಡ್ಮಿರಾಲ್ಟಿ ಬೋರ್ಡು ಅಥವಾ ನೌಕಾಬಲದ ಮಂಡಳಿಯ ಸಹಾಯದಿಂದ ನೌಕಾಧಿಪತಿ ನಿರ್ವಹಿಸುತ್ತಾನೆ.

ವಾಯುಬಲ : ವಾಯುಪಡೆಯ ನಿರ್ಮಾಣದಲ್ಲಿ ಬ್ರಿಟನ್ ಇತರ ರಾಷ್ಟ್ರಗಳಿಗಿಂತ ಸ್ವಲ್ಪ ಹಿಂದಾಗಿತ್ತೆಂದು ಹೇಳಬೇಕು. 1880ರಲ್ಲಿ ಅದು ಒಂದು ಬಲೂನ್ ವಿಭಾಗವನ್ನು ಪಡೆದಿತ್ತು. ಒಂದನೆಯ ಮಹಾಯುದ್ಧದ ಅಂತ್ಯದಲ್ಲಿ, ಎಂದರೆ 1918ರ ಏಪ್ರಿಲ್ ಒಂದರಂದು, ರಾಯಲ್ ಏರ್ ಫೋರ್ಸ್ ಎಂಬ ಪೂರ್ಣರೂಪದ ವಾಯುಬಲವನ್ನು ಸ್ಥಾಪಿಸಿತು. ಎರಡನೆಯ ಮಹಾಯುದ್ಧದ ಪೂರ್ವದ ಕಾಲದಲ್ಲಿ ಮತ್ತು ಅನಂತರ ತ್ವರೆಯಾಗಿ ಅಭಿವೃದ್ಧಿಗೊಂಡ ಬ್ರಿಟಿಷ್ ವಾಯುಪಡೆ ನೂತನ ಯುದ್ಧ ವಿಮಾನಗಳೇ ಅಲ್ಲದೆ ಪರಮಾಣು ಬಾಂಬುಗಳು, ಕ್ಷಿಪಣಿಗಳು, ರೇಡಾರ್‌ಗಳು ಮುಂತಾದ ಎಲ್ಲ ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಒಂದು ಶ್ರೇಷ್ಠ ಬಲವಾಗಿದೆ. ವಾಯುಬಲದ ದಂಡನಾಯಕ ವಾಯುಮಂಡಲಿಯ ಸಹಾಯದಿಂದ ಇದರ ಆಡಳಿತ ನಡೆಸುತ್ತಾನೆ. ಈ ಬಲವನ್ನು ಆಂತರಿಕವಾಗಿ ಕಾರ್ಯಾಧಾರದ ಮೇಲೂ ವಿದೇಶಗಳಲ್ಲಿ ಭೌಗೋಳಿಕ ಆಧಾರದ ಮೇಲೂ ಅನೇಕ ಕಮ್ಯಾಂಡ್‌ಗಳಾಗಿ ವ್ಯವಸ್ಥೆಗೊಳಿಸಲಾಗಿದೆ.

ನಾಗರಿಕ ರಕ್ಷಣೆ : ಯುದ್ಧಪ್ರಯತ್ನಗಳಿಗೆ ಆಂತರಿಕವಾಗಿ ಪೂರಕವಾಗಿ ನಾಗರಿಕ ರಕ್ಷಣಾ ವ್ಯವಸ್ಥೆಯೊಂದು ಎರಡನೆಯ ಮಹಾಯುದ್ಧದ ಕಾಲದಲ್ಲಿ ಆರಂಭಗೊಂಡು, ಯುದ್ಧಾನಂತರ 1948ರ ನಾಗರಿಕ ರಕ್ಷಣಾ ಕಾನೂನಿನ ಆಧಾರದ ಮೇಲೆ ಪುನರ್ರಚಿತವಾದ ಮತ್ತು ಶಾಶ್ವತವಾದ ವ್ಯವಸ್ಥೆಯಾಯಿತು. ಈ ವ್ಯವಸ್ಥೆಯಲ್ಲಿ 1) ದಿ ಸಿವಿಲ್ ಡಿಫೆನ್ಸ್ ಕೋರ್, 2) ದಿ ಇಂಡಸ್ಟ್ರಿಯಲ್ ಸಿವಿಲ್ ಡಿಫೆನ್ಸ್ ಕೋರ್, 3) ದಿ ಆಕ್ಸಿಲಿಯರಿ ಫೈರ್ ಸರ್ವಿಸ್ ಮತ್ತು 4) ದಿ ನ್ಯಾಷನಲ್ ಹಾಸ್ಪಿಟಲ್ ಸರ್ವಿಸ್ ಎಂಬ ನಾಲ್ಕು ಸ್ವಯಂಸೇವಕ ದಳಗಳಲ್ಲದೆ, ತುರ್ತು ಪರಿಸ್ಥಿತಿಯ ಸಂಪರ್ಕ ನಿರ್ವಹಣ ವ್ಯವಸ್ಥೆ ಮತ್ತು ಸಂಯುಕ್ತರಾಜ್ಯ ವಾರ್ನಿಂಗ್ ಮತ್ತು ಮಾನಿಟಿಯರಿಂಗ್ ಸಂಸ್ಥೆಯೂ ಸೇರಿವೆ. 1968ರಿಂದ ಈಚೆಗೆ ಈ ಕ್ಷೇತ್ರದಲ್ಲಿಯ ವ್ಯವಸ್ಥೆಯನ್ನು ಆವಶ್ಯಕವೆನಿಸುವಷ್ಟಕ್ಕೆ ಮಾತ್ರ ಮಿತಿಗೊಳಿಸಲಾಗಿದೆ. ಆದರೂ ಹೊಸವಿಧಾನಗಳ ಜ್ಞಾನ ಮತ್ತು ತರಬೇತು ಪಡೆಯಲು ಪ್ರಯತ್ನಗಳು ಮುಂದುವರಿಯುತ್ತಿವೆ. (ಎಂ.ಯು.ಎಂ.)

**ಶಿಕ್ಷಣ ಪದ್ಧತಿ :** ಜ್ಞಾನ ಲಾಭ ಪಡೆದು ಬಲ್ಲ ಎಲ್ಲ ಪೌರರಿಗೂ ವ್ಯಾಪಕವಾದ ಶಿಕ್ಷಣ ಸೇವಾ ಸೌಲಭ್ಯವನ್ನೊದಗಿಸುವುದು ಸಂಯುಕ್ತ ರಾಜ್ಯದ ಶಿಕ್ಷಣ ನೀತಿಯಾಗಿದೆ. ಸರ್ಕಾರದಿಂದ ಹಾಗೂ ಸರ್ಕಾರದ ಧನಸಹಾಯದಿಂದ ನಡೆಯುವ ಶಾಲೆಗಳ ಸ್ಥಾಪನೆ ಅಧ್ಯಾಪಕರಿಗೆ ತಕ್ಕಷ್ಟು ಸ್ವಾತಂತ್ರ್ಯ, ಆಡಳಿತದ ವಿಕೇಂದ್ರೀಕರಣ, ಸ್ವಯಂ ಸೇವಾಕರ್ತರ ಪ್ರಮುಖ ಪಾತ್ರ, ವಿಶ್ವವಿದ್ಯಾಲಯಗಳ ವಿದ್ಯಾಸ್ವಾತಂತ್ರ್ಯ, ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ– ಇವು ಇಲ್ಲಿಯ ಶಿಕ್ಷಣವ್ಯವಸ್ಥೆಯ ಮುಖ್ಯ ಲಕ್ಷಣಗಳು. ವರ್ಷವರ್ಷಕ್ಕೂ ಇಲ್ಲಿಯ ಶಿಕ್ಷಣ ಸೌಲಭ್ಯ ಹೆಚ್ಚುತ್ತಿದೆ. ವಿದ್ಯಾರ್ಥಿಗಳು ಕಡ್ಡಾಯ ಶಿಕ್ಷಣದ ವಯೋಮಿತಿಯ ಅನಂತರವೂ ಎಂದರೆ 16 ವರ್ಷಗಳ ಅನಂತರವೂ ಶಿಕ್ಷಣ ಪಡೆಯಲಾಶಿಸುವುದೇ ಇದಕ್ಕೆ ಕಾರಣ.

ಸಂಯುಕ್ತ ರಾಜ್ಯದ ಎಲ್ಲ ರಾಜ್ಯಗಳಲ್ಲೂ ಮೇಲಿನ ಸಾಮಾನ್ಯ ಶಿಕ್ಷಣ ನೀತಿಯನ್ನು ಕಾಣಬಹುದಾದರೂ ಇಂಗ್ಲೆಂಡ್ ಮತ್ತು ವೇಲ್ಸ್, ಸ್ಕಾಟ್ಲೆಂಡ್, ಉತ್ತರ ಐರ್ಲೆಂಡ್–ಈ ಮೂರು ರಾಜ್ಯಗಳಲ್ಲಿ ಒಂದೊಂದೂ ತನ್ನದೇ ಆದ ರೀತಿಯಲ್ಲಿ ತನ್ನ ಶಿಕ್ಷಣ ಪದ್ಧತಿಯನ್ನು ರೂಪಿಸಿಕೊಂಡು ತನ್ನದೇ ಆದ ವೈಶಿಷ್ಟ್ಯಗಳನ್ನು ರೂಢಿಸಿಕೊಂಡಿದೆ; ಕೆಲಕೆಲವು ವೈಲಕ್ಷಣಗಳನ್ನೂ ಹೊಂದಿದೆ. ಆದ್ದರಿಂದ ಸ್ಪಷ್ಟತೆಯ ಉದ್ದೇಶಕ್ಕಾಗಿ ಈ ಮೂರು ರಾಜ್ಯಗಳ ಪದ್ಧತಿಗಳನ್ನು ಪ್ರತ್ಯೇಕವಾಗಿ ವಿವರಿಸಿದೆ.

ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಶಿಕ್ಷಣ : ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಬಹು ಹಿಂದಿನಿಂದಲೂ ವಿಶ್ವವಿದ್ಯಾಲಯದ ವರೆಗಿನ ಶಿಕ್ಷಣ ಸೌಲಭ್ಯದ ವ್ಯವಸ್ಥೆ ನಡೆದುಕೊಂಡೇ ಬಂದಿದೆ. ಆದರೆ ಎಲ್ಲರಿಗೂ ಆ ಸೌಲಭ್ಯವೊದಗಿಸುವ ಕಾರ್ಯ 19ನೆಯ ಶತಮಾನದಲ್ಲಿ ಆರಂಭವಾಯಿತೆನ್ನಬಹುದು. ಸರ್ಕಾರ 1833ರಲ್ಲಿ ಶಿಕ್ಷಣಕ್ಕಾಗಿ ಮೊಟ್ಟಮೊದಲು ಹಣ ಒದಗಿಸಿತು. 1870ರ ಶಿಕ್ಷಣ ಶಾಸನದ ಅನಂತರ ಸರ್ಕಾರದ ಹಣದಿಂದ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಆರಂಭವಾಗಿ ಕಡ್ಡಾಯ ಶಿಕ್ಷಣದ ತತ್ತ್ವ ಆಚರಣೆಗೆ ಬಂತು. ಪ್ರೌಢ ಶಿಕ್ಷಣಕ್ಕೆ ಸರ್ಕಾರದ ಹಣವನ್ನು ವಿನಿಯೋಗಿಸುವುದು ಇಂಗ್ಲೆಂಡಿನಲ್ಲಿ 1889 ರಿಂದಲೂ ವೇಲ್ಸಿನಲ್ಲಿ 1902 ರಿಂದಲೂ ಆರಂಭವಾಯಿತು. ಸದ್ಯದಲ್ಲಿ ಈ ಎರಡು ದೇಶಗಳಲ್ಲೂ ಇರತಕ್ಕ ಶಿಕ್ಷಣ ಪದ್ಧತಿ 1944ರ ಶಿಕ್ಷಣ ಶಾಸನದ ಆಧಾರದ ಮೇಲೆ ವ್ಯವಸ್ಥೆಗೊಂಡಿದೆ. ಈ ಎರಡು ದೇಶಗಳಲ್ಲೂ ಏಕರೀತಿಯ ಶಿಕ್ಷಣ ಸಂಸ್ಥೆಗಳನ್ನೂ ಕಾರ್ಯಕ್ರಮಗಳನ್ನೂ ಕಾಣಬಹುದು. ವಿಶ್ವವಿದ್ಯಾಲಯದ ಶಿಕ್ಷಣ 12ನೆಯ ಶತಮಾನದ ಅಂತ್ಯದಿಂದ ಆರಂಭವಾಯಿತು. ಇತ್ತೀಚಿನವರೆಗೂ ಇಂಗ್ಲೆಂಡ್ ಮತ್ತು ವೇಲ್ಸಿಗೆ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಇವೆರಡೇ ವಿಶ್ವವಿದ್ಯಾಲಯಗಳಿದ್ದು ಅನಂತರ 19ನೆಯ ಶತಮಾನದಲ್ಲಿ 13 ಹೊಸ ವಿಶ್ವವಿದ್ಯಾಲಯಗಳು ಸ್ಥಾಪನೆಯಾದುವು. ಸದ್ಯದಲ್ಲಿ ಒಟ್ಟು 34 ವಿಶ್ವವಿದ್ಯಾಲಯಗಳಿವೆ. ಒಂದು ಬಹಿರಂಗ ವಿಶ್ವವಿದ್ಯಾಲಯವೂ 1970ರಿಂದ ಕಾರ್ಯಾರಂಭ ಮಾಡಿದೆ. ಉನ್ನತ ಶಿಕ್ಷಣ ವಿಶ್ವವಿದ್ಯಾಲಯಗಳಲ್ಲೂ ಸ್ಥಳೀಯ ಸರ್ಕಾರದ ಕಾಲೇಜುಗಳಲ್ಲೂ ಪಾಲಿಟೆಕ್ನಿಕ್ ಮತ್ತು ಮುಂದುವರಿದ (ಮುನ್ನಡೆ) ಶಿಕ್ಷಣದ ಕಾಲೇಜುಗಳಲ್ಲೂ ತಾಂತ್ರಿಕ ಮತ್ತು ಇತರ ಕಾಲೇಜುಗಳಲ್ಲೂ ವ್ಯವಸ್ಥೆಗೊಂಡಿದೆ. ಹೆಚ್ಚಿನ ವಿವರಗಳಿಗೆ **ನೋಡಿ – ಇಂಗ್ಲೆಂಡಿನ ಶಿಕ್ಷಣ ವ್ಯವಸ್ಥೆ.**

**ಸ್ಕಾಟ್ಲೆಂಡಿನಲ್ಲಿ ಶಿಕ್ಷಣ :** ಸಂಯುಕ್ತ ರಾಜ್ಯದ ಇತರ ಭಾಗಗಳಿಗಿಂತ ಹಿಂದೆಯೇ ಸ್ಕಾಟ್ಲೆಂಡಿನಲ್ಲಿ ಎಲ್ಲರಿಗೂ ಶಿಕ್ಷಣ ಸೌಲಭ್ಯವೊದಗಿಸುವ ಅಗತ್ಯವನ್ನು ಒಪ್ಪಲಾಗಿತ್ತು. 1560ರ ಸುಮಾರಿನಲ್ಲಿ ಸ್ಕಾಟ್ಲೆಂಡಿನ ಸುಧಾರಕರು ಪ್ರತಿ ಗ್ರಾಮಕ್ಕೂ ಒಂದೊಂದು ಶಾಲೆಯೂ ಒಬ್ಬೊಬ್ಬ ಅಧ್ಯಾಪಕನೂ ಇರಬೇಕೆಂದು ಆಶಿಸಿದ್ದರು. 1969ರಲ್ಲಿ ಅಲ್ಲಿಯ ಪಾರ್ಲಿಮೆಂಟು ಎಲ್ಲ ಊರುಗಳೂ ಶಾಲೆಗಳಿಗೆ ಒಂದು ಮನೆಯನ್ನೂ ಅಧ್ಯಾಪಕರಿಗೆ ಸಂಬಳವನ್ನೂ ನೀಡಬೇಕೆಂದು ಶಾಸನ ಮಾಡಿತು. ಇದು ಪೂರ್ಣವಾಗಿ ಕಾರ್ಯರೂಪಕ್ಕೆ ಬರುವುದು ಸಾಧ್ಯವಾಗಲಿಲ್ಲ. 19ನೆಯ ಶತಮಾನದಲ್ಲಿ ಚರ್ಚುಗಳ ಯತ್ನದಿಂದಲೂ ಕೈಗಾರಿಕಾ ಕ್ರಾಂತಿ ಮೂಡಿಸಿದ ಒತ್ತಡದಿಂದಲೂ ಆ ಸೌಲಭ್ಯ ವಿಸ್ತರಿಸುವಂತಾಯಿತು. 1872ರ (ಸ್ಕಾಟ್ಲೆಂಡಿನ) ಶಾಸನದ ಮೂಲಕ ಶಿಕ್ಷಣದ ವ್ಯವಸ್ಥೆ ಮತ್ತು ಆಡಳಿತವನ್ನು ಚರ್ಚುಗಳಿಂದ ಸರ್ಕಾರ ವಹಿಸಿಕೊಂಡಿತು. ಅದಕ್ಕಾಗಿ 1,000 ಶಾಲಾಮಂಡಲಗಳನ್ನು ಸ್ಥಾಪಿಸಲಾಯಿತು. 5 ರಿಂದ 13 ವರೆಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವೂ ಆರಂಭವಾಯಿತು. ಶಾಲೆಯ ಮೇಲ್ವಿಚಾರಣೆಗೂ ಧನಸಹಾಯ ಹಂಚುವುದಕ್ಕೂ ಸ್ಕಾಟ್ಲೆಂಡಿನ ಶಿಕ್ಷಣ ಶಾಖೆ ಅಸ್ತಿತ್ವಕ್ಕೆ ಬಂತು. 1883ರ ಶಾಸನ ಕಡ್ಡಾಯ ಶಿಕ್ಷಣದ ವಯೋಮಿತಿಯನ್ನು 14ಕ್ಕೆ ಹೆಚ್ಚಿಸಿತು. 1918ರ ಶಾಸನ ಬಯಸತಕ್ಕವರಿಗೆಲ್ಲ ಪ್ರೌಢಶಿಕ್ಷಣದ ಸೌಲಭ್ಯವನ್ನು ಒದಗಿಸುವ ವ್ಯವಸ್ಥೆ ಮಾಡಲು 33 ಕೌಂಟಿಯ ಮತ್ತು 13 ನಗರದ ಶಿಕ್ಷಣವನ್ನು ಕೌಂಟಿ ಮತ್ತು ನಗರ ಕೌನ್ಸಿಲುಗಳಿಗೆ ವರ್ಗಾಯಿಸಿತು. 1936ರಲ್ಲಿ ಕಡ್ಡಾಯ ಶಿಕ್ಷಣದ ವಯೋಮಿತಿಯನ್ನು 15ಕ್ಕೆ ಹೆಚ್ಚಿಸಿತು. ಆದರೆ ಯುದ್ಧದ ದೆಸೆಯಿಂದ ಅದನ್ನು 1947ರ ವರೆಗೂ ಮುಂದೆಹಾಕಬೇಕಾಯಿತು. 1945ರ ಶಾಸನದ ಪ್ರಕಾರ 1963ರಲ್ಲಿ ಪರೀಕ್ಷಾ ಮಂಡಲಿ ಸ್ಥಾಪನೆಯಾಯಿತು. 1969ರ ಶಾಸನ ಎಲ್ಲ ಶಾಲೆಗಳಲ್ಲೂ ಶಿಕ್ಷಣವನ್ನೂ ಮನೋರಂಜನ

ಶಿಕ್ಷಣವನ್ನೂ ವ್ಯವಸ್ಥೆಗೊಳಿಸಬೇಕೆಂದು ಸೂಚಿಸಿತು. ಅದುತನಕ ಪಠ್ಯಕ್ರಮದ ಬದಲಾವಣೆಯೇ ಮುಂತಾದ ಕಾರ್ಯಗಳಿಗೆ ಸ್ಕಾಟ್ಲೆಂಡಿನ ಶಿಕ್ಷಣ ಕಾರ್ಯದರ್ಶಿಗಳ (ಸಚಿವರ) ಅನುಮತಿಯನ್ನು ಪಡೆಯಲೇಬೇಕಾಗಿದ್ದ ಅನಿವಾರ್ಯ ಇದರಿಂದ ಕಡಿಮೆಯಾಯಿತು.

ಪ್ರಾಥಮಿಕ ಶಿಕ್ಷಣ : ಇಂಗ್ಲೆಂಡು ಮತ್ತು ವೇಲ್ಸಿನಲ್ಲಿ ಪ್ರಾಥಮಿಕ ಶಿಕ್ಷಣ 5ರಿಂದ 12 ವರ್ಷದ ವರೆಗಿನ 7 ವರ್ಷ ಅವಧಿಉದ್ದಾಗಿರುತ್ತದೆ. ಸದ್ಯದಲ್ಲಿ ಅಲ್ಲಿ 2,553 ಪ್ರಾಥಮಿಕ ಶಾಲೆಗಳು 185 ಶಿಶುವಿಹಾರಗಳೂ ಇವೆ. ಸ್ಥಳೀಯ ಶಿಕ್ಷಣ ಪ್ರಾಧಿಕಾರದಿಂದ (ಲೋಕಲ್ ಎಜುಕೇಷನ್ ಅಥಾರಿಟಿ) ನಡೆಯುವ ಅಥವಾ ಅದರಿಂದ ಸಹಾಯಧನ ಪಡೆಯುವ ಶಾಲೆಗಳೆಲ್ಲ ಸರ್ಕಾರಿ ಶಾಲೆಗಳೆನಿಸಿವೆ. ಜನಸಂಖ್ಯೆ ವಿರಳವಾದ ಪ್ರದೇಶಗಳು ಹೆಚ್ಚಾಗಿರುವುದರಿಂದ ಅವುಗಳಲ್ಲಿ 15.2ರಷ್ಟು ಶಾಲೆಗಳು ಸಣ್ಣ ಏಕೋಪಾಧ್ಯಾಯ ಶಾಲೆಗಳು. ಧಾರ್ಮಿಕ ಶಿಕ್ಷಣವನ್ನು ಶಾಲೆಯ ಕಾರ್ಯಕ್ರಮಗಳಲ್ಲಿ ಸೇರಿಸಿದೆ. ಸ್ಕಾಟ್ಲೆಂಡಿನ ಸಚಿವರಿಂದ (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಸ್ಕಾಟ್ಲೆಂಡ್) ರೂಪಿತವಾದ ನಿಯಮಗಳನ್ನು ಅನುಸರಿಸಿ ಶಾಲೆಗಳು ಕೆಲಸ ಮಾಡುತ್ತವೆ. ತರಗತಿಯ ಸಂಖ್ಯಾಬಲ, ಸ್ಥಳ ಸೌಲಭ್ಯ, ಅಧ್ಯಾಪಕರ ಶಿಕ್ಷಣಾರ್ಹತೆ ಇಂಥ ವಿಷಯಗಳನ್ನು ಆ ನಿಯಮಗಳು ಗೊತ್ತುಮಾಡಿವೆ. ಒಳನಾಡಿನ ಗ್ರಾಮಗಳಲ್ಲೂ ಹತ್ತಿರದ ದ್ವೀಪಗಳಲ್ಲೂ ಗೇಲಿಕ್ ಮಾತೃಭಾಷೆ ಆದ್ದರಿಂದ ಅಲ್ಲಿಯ ಶಾಲೆಗಳಲ್ಲಿ ಗೇಲಿಕ್ ಮತ್ತು ಇಂಗ್ಲಿಷ್ ಈ ಎರಡು ಭಾಷೆಗಳನ್ನೂ ಬೋಧಿಸುವರು. ಮೇಲಿನ ತರಗತಿಗೆ ಹೋದಂತೆ ಪಾಠಗಳು ಇಂಗ್ಲಿಷ್ ಮಾಧ್ಯಮದಲ್ಲೆ ನಡೆಯುತ್ತವೆ. ಆದರೆ ಗೇಲಿಕ್ ಎಲ್ಲ ಶಾಲೆಗಳಲ್ಲೂ ಹಾಡುತ್ತಾರೆ.

ಪಾರ್ಲಿಮೆಂಟ್ ಅಧಿವೇಶನದ ಪ್ರಾರಂಭ ಸಮಾರಂಭ

ಪ್ರೌಢಶಿಕ್ಷಣ : ಕಳೆದ ಶತಮಾನದಲ್ಲಿ ಆರಂಭವಾದ ಕೆಲವು ನಗರಗಳ ಹಳೆಯ ಪ್ರೌಢಶಾಲೆಗಳನ್ನು ಬಿಟ್ಟರೆ ಮಿಕ್ಕೆಲ್ಲ ಸಹಶಿಕ್ಷಣದ ಪಾಠಶಾಲೆಗಳು. ಒಟ್ಟು 573 ಪ್ರೌಢಶಾಲೆಗಳಿದ್ದು ಅವುಗಳಲ್ಲಿ 110 ಸ್ವತಂತ್ರ (ವಸತಿ ವಿದ್ಯಾಲಯ) ಶಾಲೆಗಳು. ಪ್ರೌಢಶಿಕ್ಷಣ ಉಚಿತವಾಗಿದ್ದರೂ ಕೆಲವು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಶುಲ್ಕವನ್ನು ವಿಧಿಸುವುದುಂಟು. ಒಳನಾಡಿನಲ್ಲಿ ವಿದ್ಯಾರ್ಥಿಗಳಿಗೆ ಮನೆ ಹತ್ತಿರವಿರುವ ಕೆಲವೆಡೆ ವಸತಿ ಸೌಕರ್ಯವೇರ್ಪಡಿಸಿರುವರು. ಧಾರ್ಮಿಕ ಶಿಕ್ಷಣ 6 ವರ್ಷ ಕಾಲದ್ದಾಗಿದೆ. ಕೆಲವೆಡೆ ಅದನ್ನು 4 ವರ್ಷದ ಜೂನಿಯರ್ ಮತ್ತು 2 ವರ್ಷದ ಸೀನಿಯರ್ ಪ್ರೌಢಶಾಲೆಗಳಲ್ಲಿ ವ್ಯವಸ್ಥೆಗೊಳಿಸಿರುವರು. ಸಾಮಾನ್ಯವಾಗಿ ವ್ಯಾಪಕ (ಕಾಂಪ್ರಿಹೆನ್ಸಿವ್) ಮಾದರಿಯ ಪ್ರೌಢಶಾಲೆಗಳು ಅಸ್ತಿತ್ವದಲ್ಲಿವೆ. 16 ವರ್ಷಗಳ ಕಡ್ಡಾಯ ಶಿಕ್ಷಣ ಮುಗಿಸಿ ಶಾಲೆಯನ್ನು ಬಿಡುವವರಿಗೆ ಜೂನಿಯರ್ ಪ್ರೌಢಶಾಲೆಗಳು ಅಸ್ತಿತ್ವದಲ್ಲಿವೆ. ಆಯ್ಕೆಯ (12+) ಪರೀಕ್ಷೆಯಿರುವೆಡೆ ವಿದ್ಯಾರ್ಥಿಗಳನ್ನು ಅವರ ವಯಸ್ಸು, ಯೋಗ್ಯತೆ ಮತ್ತು ಆಸಕ್ತಿಗಳಿಗನುಗುಣವಾದ ಪ್ರೌಢಶಾಲೆಗೆ ವರ್ಗಾಯಿಸಲು ಆಯಾ ಪ್ರೌಢಶಾಲೆಯ ಮತ್ತು ವಿದ್ಯಾರ್ಥಿಗಳು ಬರುವ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರನ್ನೊಳಗೊಂಡ ಸಮಿತಿಗಳು ನಿರ್ಧರಿಸುತ್ತವೆ. ಪರೀಕ್ಷೆಗೆ ಕೂಡದ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಚರಿತ್ರೆ ಭೂಗೋಳ, ಅಂಕಗಣಿತ, ವಿಜ್ಞಾನ, ಕಲೆ, ಸಂಗೀತ, ಧಾರ್ಮಿಕ ಮತ್ತು ದೈಹಿಕ ಶಿಕ್ಷಣ ಇವನ್ನು ಬೋಧಿಸುವರು. ಗಂಡುಮಕ್ಕಳು ತಾಂತ್ರಿಕ ವಿಷಯಗಳನ್ನೂ ಹೆಣ್ಣುಮಕ್ಕಳು ಗೃಹವಿಜ್ಞಾನ ಅಥವಾ ವಾಣಿಜ್ಯ ವ್ಯವಹಾರದ ವಿಷಯಗಳನ್ನೂ ಅಭ್ಯಾಸಿಸುವರು. ಕೆಲವು ಕಡೆ ಸಮುದ್ರಯಾನ ವಿಜ್ಞಾನವನ್ನೂ ಗ್ರಾಮೀಣ ವಿಜ್ಞಾನವನ್ನೂ ಆಯ್ದುಕೊಳ್ಳುವರು. ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳು ಅನ್ಯಭಾಷೆ ಮತ್ತು ಗಣಿತಶಾಸ್ತ್ರವನ್ನೂ ವ್ಯಾಸಂಗ ಮಾಡುವರು. ಪ್ರೌಢಶಾಲಾ ವಿದ್ಯಾರ್ಥಿಗಳು, 5ನೆಯ ವರ್ಷ ಆರ್ಡರಿನ ಅಥವಾ 6ನೆಯ ವರ್ಷ ಹೈಯರ್ ಸ್ಕಾಟಿಷ್ ಸರ್ಟಿಫಿಕೇಟ್ ಆಫ್ ಎಜುಕೇಷನ್ ಪರೀಕ್ಷೆಗೆ ಕೂಡುವರು.

ಮುಂದುವರಿದ ಶಿಕ್ಷಣ (ಮುನ್ನಡೆಯ ಶಿಕ್ಷಣ, ಫರ್ದರ್ ಎಜುಕೇಷನ್) : 3–4 ವರ್ಷ ಪ್ರೌಢಶಾಲಾ ಶಿಕ್ಷಣದ ಅನಂತರ ಉದ್ಯೋಗನಿರತರಾದವರಿಗೆ ಶಿಕ್ಷಣವನ್ನು ಮುಂದುವರಿಸುವ ಅವಕಾಶವನ್ನೊದಗಿಸಲು 92 ಸ್ಥಳೀಯ ಕೇಂದ್ರಗಳಿವೆ. ಅವುಗಳಲ್ಲಿ 79 ಸ್ಥಳೀಯ ಮುನ್ನಡೆ ಶಿಕ್ಷಣದ ಕೇಂದ್ರಗಳು; 13 ಕೇಂದ್ರೀಯ ಪ್ರಾದೇಶಿಕ ಸಂಸ್ಥೆಗಳೂ, ಕೇಂದ್ರೀಯ ಸಂಸ್ಥೆಗಳೂ 5 ವರ್ಷ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿದವರನ್ನು ಮಾತ್ರ ಸೇರಿಸಿಕೊಂಡು, ಪೂರ್ಣಕಾಲದ ಶಿಕ್ಷಣವಿತ್ತು. ಡಿಪ್ಲೊಮ ಪರೀಕ್ಷೆಗಳಿಗೆ ಸಿದ್ಧಪಡಿಸುತ್ತವೆ. ಔದ್ಯೋಗಿಕ ತರಬೇತಿ ಮಂಡಲಿಗಳೂ ಮುನ್ನಡೆಯ ಶಿಕ್ಷಣದಲ್ಲಿ ಭಾಗವಹಿಸುತ್ತವೆ. ತಾಂತ್ರಿಕ ಮತ್ತು ವೃತ್ತಿವಿಷಯಗಳನ್ನೊ ವಾಣಿಜ್ಯ ವ್ಯವಹಾರಾದಿ ವಿಷಯಗಳನ್ನೊ ಕಾರ್ಯಾಲಯ ನಿರ್ವಹಣೆಯ ವಿಷಯಗಳನ್ನೊ ವಿದ್ಯಾರ್ಥಿಗಳೂ ವ್ಯಾಸಂಗ ಮಾಡುವರು. ಅವು ನೀಡುವ ಶಿಕ್ಷಣ ಉನ್ನತ ಶಿಕ್ಷಣದ ಮಟ್ಟದ್ದೆಂದು ಪರಿಗಣಿತವಾಗಿದೆ.

ವಯಸ್ಕರ ಶಿಕ್ಷಣ ಇಂಗ್ಲೆಂಡಿನಲ್ಲಿದ್ದಂತೆಯೇ. ಆದರೆ ವಿಶ್ವವಿದ್ಯಾಲಯಗಳ ವಿಸ್ತರಣ ವಿಭಾಗವಾಗಲಿ, ಕಾರ್ಮಿಕರ ಶಿಕ್ಷಣ ಸಂಸ್ಥೆಯಾಗಲಿ ಅದನ್ನು ನಿರ್ವಹಿಸುವ ಹೊಣೆ ಹೊತ್ತಿಲ್ಲ. ವಯಸ್ಕರಿಗೆಂದೇ ನ್ಯೂಬ್ಯಾಟಲ್ ಆಬೆಯಲ್ಲಿ ಒಂದು ದೀರ್ಘಾವಧಿ ಶಿಕ್ಷಣದ ವಿದ್ಯಾಲಯವಿದೆ. ಸ್ಕಾಟ್ಲೆಂಡಿನ ವಯಸ್ಕರ ಶಿಕ್ಷಣ ಸಂಸ್ಥೆ ಆ ಕ್ಷೇತ್ರದಲ್ಲಿ ಸಮನ್ವಯ ಕಾರ್ಯವನ್ನು ನಿರ್ವಹಿಸುವುದಲ್ಲದೆ ಅಗತ್ಯ ಸುದ್ದಿ ಪ್ರಸಾರವನ್ನೂ ಕೈಗೊಳ್ಳುತ್ತದೆ.

ಯುವಜನರ ಪ್ರಶಿಕ್ಷಣಕ್ಕಾಗಿ ಎರಡು ಮಟ್ಟದ ಕಾರ್ಯಕ್ರಮಗಳುಂಟು – ಮೂರು ವರ್ಷದ ಮೂಲ ಪ್ರಶಿಕ್ಷಣ ಮತ್ತು ಶಿಕ್ಷಿತ ಯುವಕರಿಗೆ ಒಂದು ವರ್ಷದ ಪ್ರಶಿಕ್ಷಣ. ಇವೆರಡೂ ಯುವಕರ ಮತ್ತು ಸಮುದಾಯ ಶಿಕ್ಷಣ ವ್ಯವಸ್ಥೆಯ ಅಂಗವಾಗಿ ನಡೆಯುತ್ತದೆ.

ಉನ್ನತ ಶಿಕ್ಷಣ : ಉನ್ನತ ಶಿಕ್ಷಣ ಇಂಗ್ಲೆಂಡಿನಂತೆ ಇಲ್ಲಿಯ ವಿಶ್ವವಿದ್ಯಾಲಯಗಳಲ್ಲೂ 10 ಶಿಕ್ಷಣಶಾಸ್ತ್ರದ ಮತ್ತು ಇತರ ಕಾಲೇಜುಗಳಲ್ಲೂ 13 ಮುನ್ನಡೆ ಶಿಕ್ಷಣದ ಕೇಂದ್ರಿಯ ಸಂಸ್ಥೆಗಳಲ್ಲೂ ಪಾಲಿಟೆಕ್ನಿಕ್ ಮತ್ತು ಟೆಕ್ನಾಲಜಿ ಸಂಸ್ಥೆಗಳಲ್ಲೂ ವ್ಯವಸ್ಥೆಗೊಂಡಿದೆ.

ಆಕ್ಸ್‌ಫರ್ಡ್ ಕೇಂಬ್ರಿಜ್ ವಿಶ್ವವಿದ್ಯಾಲಯಗಳಷ್ಟೇ ಪ್ರಾಚೀನವೆನ್ನಬಹುದಾದ ಸೇಂಟ್ ಆ್ಯಂಡ್ರೂಸ್ ವಿಶ್ವವಿದ್ಯಾಲಯವನ್ನೂ ಒಳಗೊಂಡಂತೆ ನಾಲ್ಕು ಹಿಂದಿನ ವಿಶ್ವವಿದ್ಯಾಲಯಗಳೂ (ಸೇಂಟ್ ಆ್ಯಂಡ್ರೂಸ್, ಗ್ಲಾಸ್ಗೋ, ಎಡಿನ್‌ಬರಾ, ಅಬರ್ಡೀನ್) ಈಚೆಗೆ ಆರಂಭವಾದ ನಾಲ್ಕು ವಿಶ್ವವಿದ್ಯಾಲಯಗಳೂ (ಡಂಡಿ, ಹೆರಿಯಟ್ ವಾಟ್, ಸ್ಟರ್ಲಿಂಗ್ ಮತ್ತು ಸ್ಟ್ರಾತ್‌ಕ್ಲೈಡ್) ಸೇರಿ ಒಟ್ಟು 8 ವಿಶ್ವವಿದ್ಯಾಲಯಗಳಿವೆ. ಈ ವಿಶ್ವವಿದ್ಯಾಲಯಗಳೂ ಬ್ರಿಟನಿನ ಇತರ ವಿಶ್ವವಿದ್ಯಾಲಯಗಳಂತೆ ವಿಶ್ವವಿದ್ಯಾಲಯದ ಅನುದಾನ ಸಮಿತಿಯ ಕಾರ್ಯಕ್ಷೇತ್ರಕ್ಕೆ ಒಳಪಟ್ಟಿದ್ದು, ಆದರಿಂದ ಸಹಾಯಧನ ಪಡೆದುಕೊಳ್ಳುತ್ತವೆ. ಸಾಮಾನ್ಯವಾಗಿ ಪ್ರಥಮ ಪದವಿ 3 ವರ್ಷದ್ದು; ವಾಸ್ತುಶಿಲ್ಪ, ವೈದ್ಯ, ಪಶುವೈದ್ಯ – ಇವು 5–6 ವರ್ಷಗಳವು.

ಅಧ್ಯಾಪಕರ ಕಾಲೇಜುಗಳು ಪದವೀಧರರಲ್ಲದವರಿಗೆ 3 ವರ್ಷದ, ಪದವೀಧರರಿಗೆ ಒಂದು ವರ್ಷದ ಪ್ರಶಿಕ್ಷಣ ನೀಡುತ್ತವೆ. ಕೆಲವು ಶಿಕ್ಷಕರ ಕಾಲೇಜುಗಳು ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿವೆ. ಅವು ನಾಲ್ಕು ವರ್ಷಗಳ ಪ್ರಶಿಕ್ಷಣವಿತ್ತು ಬಿ.ಎಡ್. ಪದವಿಗೆ ಸಿದ್ಧಪಡಿಸುವುವು.

ಆಡಳಿತ ಮತ್ತು ಹಣಕಾಸು : ವಿಶ್ವವಿದ್ಯಾಲಯಗಳನ್ನುಳಿದು ಮಿಕ್ಕ ಸಾರ್ವಜನಿಕ ಶಿಕ್ಷಣದ ಆಡಳಿತ ಸ್ಕಾಟ್ಲೆಂಡಿನ ರಾಜ್ಯ ಸಚಿವರಿಗೆ ಸೇರಿದೆ. ಆ ಕಾರ್ಯವನ್ನವರು ಸ್ಕಾಟ್ಲೆಂಡಿನ ಶಿಕ್ಷಣ ಶಾಖೆಯ ಮೂಲಕ ನಿರ್ವಹಿಸುವರು. ಶಾಲೆಯ ಆರೋಗ್ಯ ಕಾರ್ಯಕ್ರಮಗಳನ್ನು ಆರೋಗ್ಯ ಶಾಖೆಯ ಮೂಲಕ ನಿರ್ವಹಿಸುವರು. ಸ್ಥಳೀಯವಾಗಿ ಶಿಕ್ಷಣದ ಆಡಳಿತವನ್ನು 35 ಸ್ಥಳೀಯ ಶಿಕ್ಷಣ ಪ್ರಾಧಿಕಾರಗಳೂ ಅವು ನೇಮಿಸುವ ಶಾಸನದತ್ತ ಶಿಕ್ಷಣ ಸಮಿತಿಗಳೂ ನಿರ್ವಹಿಸುತ್ತವೆ. ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ಅಗತ್ಯವೆನಿಸುವಾಗ ಸಚಿವರು ತಮ್ಮ ಅಭಿಪ್ರಾಯ ಸೂಚಿಸುವರು. ಸಾಮಾಜಿಕ ಶಿಕ್ಷಣ, ಶಿಶುರಕ್ಷಣೆ, ಅಪ್ರೂವ್ಡ್ ಶಾಲೆಗಳ (ವಸತಿ ವಿದ್ಯಾಲಯ) ಆಡಳಿತ ಇವಿಷ್ಟೂ ಅವರಿಗೆ ಸೇರಿದೆ. ಸಾಮಾನ್ಯ ಶಿಕ್ಷಣ, ಪಠ್ಯಕ್ರಮ, ತಾಂತ್ರಿಕ ಶಿಕ್ಷಣ, ಯುವಜನ ಮತ್ತು ಸಮುದಾಯ ಸೇವೆ, ಅಧ್ಯಾಪಕರ ಶಿಕ್ಷಣ (ಬೋಧನೆ)– ಇವಕ್ಕೆ ಸಂಬಂಧಿಸಿದಂತೆ ರಚಿತವಾಗಿರುವ ಸಲಹಾಮಂಡಲಿಗಳು ಅವರಿಗೆ ಸಲಹೆ ನೀಡುತ್ತವೆ. ಅವರ ಮುಖ್ಯ ಕಾರ್ಯಾಲಯ ಎಡಿನ್‌ಬರಾದಲ್ಲಿದೆ.

ಸ್ಥಳೀಯ ಶಿಕ್ಷಣ ಪ್ರಾಧಿಕಾರಗಳು ಇಂಗ್ಲೆಂಡಿನಲ್ಲಿರುವಂತೆ ಕಾರ್ಯ ನಿರ್ವಹಿಸಿದರೂ ಅವುಗಳ ಅಧಿಕಾರವ್ಯಾಪ್ತಿ ಸ್ವಲ್ಪ ಕಡಿಮೆ; ಅವು ಮುನ್ನಡೆ ಶಿಕ್ಷಣದ ಕೇಂದ್ರಿಯ ಸಂಸ್ಥೆಗಳನ್ನಾಗಲಿ ಪ್ರಾದೇಶಿಕ ಮತ್ತು ರಾಷ್ಟ್ರೀಯ ತಾಂತ್ರಿಕ ಮತ್ತು ಕಲಾ ಕಾಲೇಜುಗಳನ್ನಾಗಲಿ ಅಧ್ಯಾಪಕರ ಕಾಲೇಜುಗಳನ್ನಾಗಲಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಹೊಂದಿಲ್ಲ. ಆದರೆ ಅವು ಸಾರ್ವಜನಿಕ (ಸರ್ಕಾರಿ) ಶಾಲೆಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತವೆ. ಧಾರ್ಮಿಕ ಸಂಸ್ಥೆಗಳ

ಖಾಸಗಿ ಶಾಲೆಗಳನ್ನೂ ನೋಡಿಕೊಳ್ಳುತ್ತವೆ. ಶಾಲೆಯ ಆರೋಗ್ಯ ಆಹಾರ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದರ ಜೊತೆಗೆ ವಿಶ್ವವಿದ್ಯಾಲಯ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳನ್ನುಳಿದು ಮಿಕ್ಕ ಸಂಸ್ಥೆಗಳಿಗೆ ಸಹಾಯಧನವನ್ನೂ ನೀಡುತ್ತವೆ. ಕೇಂದ್ರೀಯ ಸಂಸ್ಥೆಗಳೂ ಅಧ್ಯಾಪಕರ ಕಾಲೇಜುಗಳೂ ಸ್ವಯಂಸೇವಾ ಆಡಳಿತ ಮಂಡಲಿಗಳನ್ನು ಹೊಂದಿವೆ. 1965ರಿಂದ ಸ್ಕಾಟಿಷ್ ಸರ್ಟಿಫಿಕೇಟ್ ಆಫ್ ಎಜುಕೇಷನ್ ಪರೀಕ್ಷೆಯನ್ನು ಸ್ವಯಮಾಡಳಿತ ಸಂಸ್ಥೆಯೊಂದು ನಿರ್ವಹಿಸುತ್ತಿದೆ. ನ್ಯೂನ ಮಕ್ಕಳ ವಸತಿ ವಿಶ್ವವಿದ್ಯಾಲಯಗಳು ಬಹುಮಟ್ಟಿಗೆ ಸ್ವಯಂಸೇವಾ ಸಂಸ್ಥೆಗಳಿಗೆ ಸೇರಿವೆ.

ಶಿಕ್ಷಣದ ಆದಾಯವೆಚ್ಚಗಳು ಇಂಗ್ಲೆಂಡಿನಲ್ಲಿದ್ದಂತೆಯೇ. 1969–70ರಲ್ಲಿ ವಿದ್ಯಾಸೌಲಭ್ಯಗಳಿಗಾಗಿ ಸರ್ಕಾರ 26.65 ಕೋಟಿ ಪೌಂಡುಗಳನ್ನು ವೆಚ್ಚ ಮಾಡಿತು.

ಉತ್ತರ ಐರ್ಲೆಂಡಿನಲ್ಲಿ ಶಿಕ್ಷಣ : ಉತ್ತರ ಐರ್ಲೆಂಡ್ 1921ರಲ್ಲಿ ಸ್ವಯಮಾಡಳಿತ ಘಟಕವಾದೊಡನೆ ಆರಂಭವಾದ ಶಿಕ್ಷಣ ಸಚಿವಾಲಯ ಅದು ತನಕ ಮೂರು ಭಿನ್ನ ಶಾಖೆಗಳಿಗೊಳಪಟ್ಟಿದ್ದ ಶಿಕ್ಷಣ ಸೇವಾವ್ಯವಸ್ಥೆಯ ಎಲ್ಲ ಆಡಳಿತವನ್ನೂ ವಹಿಸಿಕೊಂಡಿತು.

1923ರ (ಐರ್ಲೆಂಡಿನ) ಶಾಸನದ ಪ್ರಕಾರ ಕೌಂಟಿ ಮತ್ತು ಕೌಂಟಿಬರೋ ಸ್ಥಳೀಯ ಸರ್ಕಾರಗಳ (ಸಂಸ್ಥೆ) ಸ್ಥಾಪನೆಯಾಗಿ ಅವುಗಳ ಶಿಕ್ಷಣ ಸಮಿತಿಗಳು ತಮ್ಮ ತಮ್ಮ ಕ್ಷೇತ್ರದ ಪ್ರಾಥಮಿಕ, ಪ್ರೌಢ ಮತ್ತು ತಾಂತ್ರಿಕ ಶಿಕ್ಷಣಗಳನ್ನು ವ್ಯವಸ್ಥೆಗೊಳಿಸಿ ನಡೆಸುವ ಅಧಿಕಾರ ಪಡೆದುವು. 5ರಿಂದ 14ರವರೆಗೆ ಶಿಕ್ಷಣ ಕಡ್ಡಾಯವಾಯಿತು. ಅದುತನಕ ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿದ್ದ ಪ್ರಾಥಮಿಕ ಶಾಲೆಗಳಲ್ಲಿ ಬಹುಪಾಲನ್ನು ಅವು ವಹಿಸಿಕೊಂಡು ಮಿಕ್ಕವಕ್ಕೆ ಸಹಾಯಧನ ನೀಡುತ್ತಿದ್ದುವು. ಪ್ರೌಢ ಶಾಲೆಗಳೆಲ್ಲ ಬಹುಮಟ್ಟಿಗೆ ಸ್ವಯಂಸೇವಾ ಸಂಸ್ಥೆಗಳ ಆಡಳಿತದಲ್ಲೆ ಉಳಿದುವು. ಆದರೆ ಅವಕ್ಕೆ ಸರ್ಕಾರದ ಬೊಕ್ಕಸದಿಂದ ಹಣಸಹಾಯ ದೊರಕುತ್ತಿತ್ತು. ತಾಂತ್ರಿಕ ಶಿಕ್ಷಣವನ್ನು ಪೂರ್ಣವಾಗಿ ಸ್ಥಳೀಯ ಪ್ರಾಧಿಕಾರವೇ ನಡೆಸುತ್ತಿತ್ತು. 1938ರ ಶಿಕ್ಷಣ ಶಾಸನ ಕಡ್ಡಾಯ ಶಿಕ್ಷಣದ ಮಯೋಮಿತಿಯನ್ನು 18ಕ್ಕೆ ಏರಿಸಿತು. ಆದರೆ ಯುದ್ಧದ ದೆಸೆಯಿಂದ ಅದು 1947ರಲ್ಲಿ ಮಾತ್ರ ಕಾರ್ಯರೂಪಕ್ಕೆ ಬಂತು.

ಸದ್ಯದ ಶಿಕ್ಷಣವ್ಯವಸ್ಥೆ 1947ರ ಶಿಕ್ಷಣ ಶಾಸನವನ್ನು ಅವಲಂಬಿಸಿ ಏರ್ಪಟ್ಟಿದೆ. ಇದು ಇಂಗ್ಲೆಂಡಿನ 1944ರ ಶಿಕ್ಷಣ ಶಾಸನದಂತೆಯೇ ಇದೆ. ಪ್ರಾಥಮಿಕ, ಪ್ರೌಢ ಮತ್ತು ಮುನ್ನಡೆ ಎಂಬ ಮೂರು ಅಂತಸ್ತುಗಳಲ್ಲಿ ಶಿಕ್ಷಣವನ್ನು ವ್ಯವಸ್ಥೆಗೊಳಿಸಿದೆ: 6 ವರ್ಷಗಳ ಪ್ರಾಥಮಿಕ ಶಿಕ್ಷಣ, 4 ವರ್ಷಗಳ ಇಂಟರ್‌ಮಿಡಿಯೆಟ್ ಪ್ರೌಢ ಶಾಲೆಯ ಶಿಕ್ಷಣ, ಅನಂತರ ಶಾಲೆಯನ್ನು ಬಿಡುವವರಿಗೆ ಮುನ್ನಡೆ ಶಿಕ್ಷಣ. 1968ರ ರಾಜ್ಯ ಶಾಸನದ ಪ್ರಕಾರ ಅನೇಕ ಖಾಸಗಿ ಪ್ರೌಢಶಾಲೆಗಳು 'ಮೇಂಟೇನ್ಡ್' ಶಾಲೆಗಳಾದವು. ಅವು ತಮ್ಮ ಆಡಳಿತ ಮಂಡಲಿಯಲ್ಲಿ 1/3 ಭಾಗದಷ್ಟು ಸರ್ಕಾರದ ನಾಮಕರಣ ಸದಸ್ಯರನ್ನು ಸೇರಿಸಿಕೊಳ್ಳುವುದಕ್ಕೂ ತಮ್ಮ ಶಾಲೆಯ ಕಟ್ಟಡಕ್ಕಾಗಿ ಸೇ. 80ರಷ್ಟು ಧನಸಹಾಯವನ್ನು ಸರ್ಕಾರದಿಂದ ಪಡೆದುಕೊಳ್ಳುವುದಕ್ಕೂ ಅನುಕೂಲವಾಯಿತು. ಜೊತೆಗೆ ಅವುಗಳ ಇತರ ವೆಚ್ಚವನ್ನು ಸರ್ಕಾರವೇ ನೀಡುವಂತಾಯಿತು.

ಪ್ರಾಥಮಿಕ ಶಿಕ್ಷಣ : 1970ರಲ್ಲಿ 22 ಶಿಶುವಿಹಾರಗಳೂ 1256 (643 ಸರ್ಕಾರಿ, 613 ಖಾಸಗಿ) ಪ್ರಾಥಮಿಕ ಶಾಲೆಗಳೂ ಗ್ರಾಮರ್ ಶಾಲೆಗೆ ಸಿದ್ಧತೆ ನೀಡುತ್ತಿದ್ದ 41 ಶಾಲೆಗಳೂ ಇದ್ದುವು. 16 ವರ್ಷಗಳ ತನಕ ಉಚಿತ ಕಡ್ಡಾಯ ಶಿಕ್ಷಣ ಆಚರಣೆಯಲ್ಲಿದೆ. ಧಾರ್ಮಿಕ ಶಿಕ್ಷಣ ಎಲ್ಲ ಶಾಲೆಗಳಲ್ಲೂ ಉಂಟು.

ಪ್ರೌಢ ಶಿಕ್ಷಣ : ಸಾಮಾನ್ಯವಾಗಿ ಪ್ರೌಢಶಿಕ್ಷಣ ಉಚಿತ. 1970ರಲ್ಲಿ ಒಟ್ಟು 266 ಪ್ರೌಢಶಾಲೆಗಳಿದ್ದವು. ಅವುಗಳಲ್ಲಿ ಮೂರು ವಿಧ : ಗ್ರಾಮರ್‌ಶಾಲೆಗಳು (81); ಇಂಟರ್ ಮಿಡಿಯೆಟ್ ಪ್ರೌಢಶಾಲೆಗಳು (168) ಮತ್ತು ತಾಂತ್ರಿಕ ಪ್ರೌಢಶಾಲೆಗಳು (17). ಗ್ರಾಮರ್ ಪ್ರೌಢಶಾಲೆಯಲ್ಲಿ ಶಿಕ್ಷಣ 6 ವರ್ಷಕಾಲಾವಧಿಯದು; ಅಲ್ಲಿ ಮಾತ್ರ ಶುಲ್ಕವನ್ನು ವಿಧಿಸುವರು. ಧಾರ್ಮಿಕ ಶಿಕ್ಷಣ ಪ್ರಾಥಮಿಕ ಮಟ್ಟದಲ್ಲಿರುವಂತೆಯೇ ಮಿಕ್ಕ ಅಂಶಗಳು ಇಂಗ್ಲೆಂಡಿನಲ್ಲಿರುವಂತೆ; ಉತ್ತರ ಐರ್ಲೆಂಡಿನ 'ಜನರಲ್ ಸರ್ಟಿಫಿಕೇಟ್ ಆಫ್ ಎಜುಕೇಷನ್ ಕೌನ್ಸಿಲ್' ತನ್ನ ಪರೀಕ್ಷಾಮಂಡಳಿಯ ಮೂಲಕ ಪರೀಕ್ಷೆ ನಡೆಸುತ್ತದೆ. ಗ್ರಾಮರ್ ಮತ್ತು ಇತರ ಪ್ರೌಢಶಾಲೆಗಳ, ಹಾಗೂ ವಿಶಿಷ್ಟ ಶಿಕ್ಷಣದ ಶಾಲೆಗಳ ವಿದ್ಯಾರ್ಥಿಗಳೂ ಪರೀಕ್ಷೆಗೆ ಕೂಡಬಹುದು.

1973ರಿಂದ 'ಸರ್ಟಿಫಿಕೇಟ್ ಆಫ್ ಸೆಕಂಡರಿ ಎಜುಕೇಷನ್' (ಸಿ.ಎಸ್.ಇ.) ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಇವೆಲ್ಲ ಇಂಗ್ಲೆಂಡಿನ (ಜಿ.ಸಿ.ಇ.) ಪರೀಕ್ಷೆಗಳ ಮಟ್ಟದವು. ಕೇವಲ 15ನೆಯ ವರ್ಷಕ್ಕೆ ಶಿಕ್ಷಣ ಮುಗಿಸುವವರಿಗಾಗಿ ಒಂದು ಜೂನಿಯರ್ ಪರೀಕ್ಷೆಯನ್ನು ಆರಂಭಿಸುವ ಯೋಜನೆಯಿದೆ.

ಮುನ್ನಡೆಯ ಶಿಕ್ಷಣ : 15–16ನೆಯ ವರ್ಷದವರೆಗೆ ಶಿಕ್ಷಣ ಪಡೆದ ಉದ್ಯೋಗ ನಿರತರಾದ ಯುವಜನಕ್ಕೆ ಮುನ್ನಡೆಯ ಶಿಕ್ಷಣವನ್ನೊದಗಿಸುವ ಶಾಸನದತ್ತ ಕರ್ತವ್ಯ ಸ್ಥಳೀಯ ಶಿಕ್ಷಣ ಪ್ರಾಧಿಕಾರಕ್ಕೆ ಸೇರಿದೆ. ಇತರ ಖಾಸಗಿ ಸಂಸ್ಥೆಗಳೂ ಕಾರ್ಯದಲ್ಲಿ ಸಹಕರಿಸುತ್ತವೆ. 1969–70ರಲ್ಲಿ ವಿವಿಧ ಪಠ್ಯಕ್ರಮಗಳನ್ನೊಳಗೊಂಡ 31 ಕಾಲೇಜುಗಳೂ ಭಾಗಶಃ ಅಥವಾ ಪೂರ್ಣಕಾಲದ ಮುನ್ನಡೆ ಶಿಕ್ಷಣವನ್ನೊದಗಿಸುತ್ತಿದ್ದವು. ಇವುಗಳಲ್ಲಿ ನಾಲ್ಕು ಕೇಂದ್ರೀಯ ಸಂಸ್ಥೆಗಳು (ಬೆಲ್ಫಾಸ್ಟ್‌ನ ಟೆಕ್ನಾಲಜಿ, ಕಲೆ, ನಮೂನೆ ಮತ್ತು ಗೃಹವಿಜ್ಞಾನ ಕಾಲೇಜುಗಳು); ಜೊತೆಗೆ 159 ಬಾಹ್ಯ ಕೇಂದ್ರಗಳಲ್ಲೂ ಆ ಶಿಕ್ಷಣವನ್ನೂ ವ್ಯವಸ್ಥೆಗೊಳಿಸಿದೆ. 18ನೆಯ ವಯಸ್ಸಿನವರೆಗೆ ಅಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಉಚಿತ ಪುಸ್ತಕ ಮತ್ತು ಬಂದುಹೋಗಲು ತಗಲುವ ಪ್ರಯಾಣದ ಭತ್ಯ ಅಥವಾ ಉಚಿತ ಊಟವಸತಿ – ಇವನ್ನೆಲ್ಲ ಕೊಡುವರು. ಅಲ್ಲಿ ವಿದ್ಯಾರ್ಥಿಗಳು ಲಂಡನ್ ಇನ್‌ಸ್ಟಿಟ್ಯೂಟಿನ ಸಿಟಿಅಂಡ್‌ಗಿಲ್ಡ್ಸ್ ಪರೀಕ್ಷಾ ಸಂಸ್ಥೆಯ ಪಠ್ಯಕ್ರಮದ ಸುಮಾರು 140 ವಿಷಯಗಳಲ್ಲಿ ವ್ಯಾಸಂಗಕ್ಕೆ ಸೇರಬಹುದು. ಅವರು ನ್ಯಾಷನಲ್ ಸರ್ಟಿಫಿಕೇಟ್ ಮತ್ತು ಡಿಪ್ಲೊಮ ಪರೀಕ್ಷೆಗಳಿಗೆ ಕೂಡುವರು, ಕೈಗಾರಿಕಾ ತರಬೇತು ಮಂಡಲಿಗಳನ್ನು ಆರಂಭಿಸಿ ಆ ವಿದ್ಯಾರ್ಥಿಗಳಿಗೆ ಅಗತ್ಯ ಅಭ್ಯಾಸಾರ್ಥ ತರಬೇತನ್ನು ದೊರಕಿಸಲಾಗುತ್ತಿದೆ. ನೂತನವಾಗಿ ಆರಂಭವಾಗಿರುವ ಅಲ್ಸ್ಟರ್ ಕಾಲೇಜಿಗೆ ಮೇಲೆ ಉಲ್ಲೇಖಿಸಿದ ಬೆಲ್ಫಾಸ್ಟಿನ ನಾಲ್ಕು ಕಾಲೇಜುಗಳನ್ನೂ ಸೇರಿಸಿ ಉನ್ನತ ಶಿಕ್ಷಣವೀಯುವ ವ್ಯವಸ್ಥೆ ಮಾಡಿದೆ.

ವಯಸ್ಕರ ಶಿಕ್ಷಣ : ವಯಸ್ಕರ ಶಿಕ್ಷಣ ಇಲ್ಲೂ ಇಂಗ್ಲೆಂಡಿನಲ್ಲಿರುವಂತೆ ವ್ಯವಸ್ಥೆಗೊಂಡಿದೆ. ಮನೋರಂಜಕ ಕಾರ್ಯಕ್ರಮಗಳನ್ನು ಸ್ಥಳೀಯ ಶಿಕ್ಷಣ ಪ್ರಾಧಿಕಾರವೇ ಒದಗಿಸುತ್ತದೆ. ಕ್ವೀನ್ಸ್ ವಿಶ್ವವಿದ್ಯಾಲಯದ ಹೊರಗಿನ ಶಾಖೆಯೂ ಅಲ್ಸ್ಟರ್ ವಿಶ್ವವಿದ್ಯಾಲಯದ ವಯಸ್ಕರ ಶಿಕ್ಷಣದ ವಿಭಾಗವೂ ಕಾರ್ಮಿಕರ ಶಿಕ್ಷಣ ಸಂಘವೂ ವಯಸ್ಕರಿಗೆ ಮೇಲ್ಮಟ್ಟದ ಶಿಕ್ಷಣದ ತರಗತಿಗಳನ್ನು ನಡೆಸುತ್ತಿವೆ. ಸುಮಾರು 6 ಸಾವಿರ ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವರು.

ಯುವಜನಾ ಸೇವಾ ವ್ಯವಸ್ಥೆ : ಕೇಂದ್ರಸರ್ಕಾರ, ಸ್ಥಳೀಯ ಸರ್ಕಾರ ಮತ್ತು ಖಾಸಗಿ ಸ್ವಯಂಸೇವಾಸಂಸ್ಥೆಗಳು ಸಹಕರಿಸಿ ಯುವಜನರಿಗೆ ಆಟಪಾಟಗಳಲ್ಲೂ ಅಂಗಸಾಧನೆ, ಮನೋರಂಜನೆ ಮುಂತಾದ ಶಿಕ್ಷಣವನ್ನು ವ್ಯವಸ್ಥೆಗೊಳಿಸುತ್ತಿವೆ. ಆ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಲು ಯುವಜನ ಕ್ರೀಡಾಮಂಡಲಿಯನ್ನು ಸ್ಥಾಪಿಸಿದೆ. ಯುವಜನ ಕಲ್ಯಾಣಕಾರ್ಯಕ್ರಮಗಳಿಗಾಗಿ ವರ್ಷಂಪ್ರತಿ 60 ಲಕ್ಷ ಪೌಂಡುಗಳಷ್ಟು ಹಣ ವಿನಿಯೋಗವಾಗುತ್ತಿದೆ.

**ಶೈಕ್ಷಣಿಕ ಅಂಕಿ ಅಂಶಗಳು**

| | ಇಂಗ್ಲೆಂಡ್ ಮತ್ತು ವೇಲ್ಸ್ | ಸ್ಕಾಟ್ಲೆಂಡ್ | ಉತ್ತರ ಐರ್ಲೆಂಡ್ | ಸಂಯುಕ್ತ ರಾಜ್ಯ |
|---|---|---|---|---|
| ಒಟ್ಟು ಪ್ರಾಥಮಿಕ ಪ್ರೌಢಶಾಲಾ ವಿದ್ಯಾರ್ಥಿ ಸಂಖ್ಯೆ | 85,97,451 | 9,90,925 | 3,43,610 | 99,31,98 |
| ಮುನ್ನಡೆ ಶಿಕ್ಷಣದ ವಿದ್ಯಾರ್ಥಿ ಸಂಖ್ಯೆ | 30,82,555 | 3,57,144 | 62,394 | 35,02,093 |
| ಅಧ್ಯಾಪಕರು ವೃತ್ತಿಶಿಕ್ಷಣದ ವಿದ್ಯಾರ್ಥಿ ಸಂಖ್ಯೆ | 1,19,890 | 12,715 | 2,804 | 135,409 |
| ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಖ್ಯೆ | | | | |
| ಪೂರ್ಣಕಾಲದವರು | 1,84,304 | 35,202 | 6,866 | 2,26,372 |
| ಅಲ್ಪಕಾಲದವರು | 19,150 | 4,533 | 908 | 24,611 |
| ಪೂರ್ಣಕಾಲದ ಶಾಲಾಧ್ಯಾಪಕರ ಸಂಖ್ಯೆ | 3,34,400 | 40,727 | 14,213 | 3,89,340 |
| ವಿಶ್ವವಿದ್ಯಾಲಯಗಳ ಸಂಖ್ಯೆ | 34 | 8 | 3 | 44+1 |

ಉನ್ನತ ಶಿಕ್ಷಣ : ಬೆಲ್‌ಫಾಸ್ಟ್ ವಿಶ್ವವಿದ್ಯಾಲಯವೊಂದೇ ಇತ್ತೀಚಿನ ವರೆಗೆ ಉತ್ತರ ಐರ್ಲೆಂಡಿನಲ್ಲಿದ್ದ ವಿಶ್ವವಿದ್ಯಾಲಯ. 1965ರ ಲಾರ್‌ವುಡ್ ಸಮಿತಿಯ ಸಲಹೆಯಂತೆ ಕೊಲೆರೈನಿನಲ್ಲಿ ಅಲ್ಸ್ಟರ್ ವಿಶ್ವವಿದ್ಯಾಲಯ ನೂತನವಾಗಿ ಆರಂಭವಾಗಿದೆ. ಅದರಲ್ಲಿ ಬೆಲ್‌ಫಾಸ್ಟಿನಲ್ಲಿದ್ದ 4 ಕಾಲೇಜುಗಳು ಸೇರಿಹೋಗಿವೆ. ಈ ವಿಶ್ವವಿದ್ಯಾಲಯಗಳ ಜೊತೆಗೆ ನೂತನವಾಗಿ ಸಂಘಟಿಸಿರುವ ಅಲ್ಸ್ಟರ್ ಕಾಲೇಜಿನಲ್ಲಿ ಟೆಕ್ನಾಲಜಿ, ವಾಣಿಜ್ಯವಿದ್ಯೆ, ವ್ಯವಹಾರವಿದ್ಯೆ, ಕಲೆ, ದೈಹಿಕಶಿಕ್ಷಣ – ಇವನ್ನು ಬೋಧಿಸಲಾಗುತ್ತಿದೆ.

ಅಧ್ಯಾಪಕರ ಶಿಕ್ಷಣವನ್ನು ಕ್ವೀನ್ಸ್ ವಿಶ್ವವಿದ್ಯಾಲಯದ ಶಿಕ್ಷಣಶಾಸ್ತ್ರದ ವಿಭಾಗದಲ್ಲೂ ಅಲ್ಸ್ಟರ್ ವಿಶ್ವವಿದ್ಯಾಲಯದ ಶಿಕ್ಷಣಶಾಸ್ತ್ರದ ವಿದ್ಯಾಲಯದಲ್ಲೂ ವ್ಯವಸ್ಥೆಗೊಳಿಸಿದೆ. ಜೊತೆಗೆ, 3 ಶಿಕ್ಷಣ ಕಾಲೇಜುಗಳಲ್ಲಿ ಕಲೆ ಮತ್ತು ನಮೂನೆ, ಗೃಹ ವಿಜ್ಞಾನ – ಇವುಗಳಲ್ಲಿ ವಿಶಿಷ್ಟ ಪ್ರಶಿಕ್ಷಣದ ವ್ಯವಸ್ಥೆಯೂ ಉಂಟು.

ಆಡಳಿತ ಮತ್ತು ಹಣಕಾಸು : ಉತ್ತರಐರ್ಲೆಂಡಿನ ಪಾರ್ಲಿಮೆಂಟ್ ಶಿಕ್ಷಣಕ್ಕೆ ನಿರ್ದಿಷ್ಟ ಮೊತ್ತದ ಹಣವನ್ನು ವೆಚ್ಚಮಾಡಲು ಅನುಮತಿ ನೀಡುತ್ತದೆ. ಶಿಕ್ಷಣ ಸಚಿವರು ಪಾರ್ಲಿಮೆಂಟು ಅಂಗೀಕರಿಸುರುವ ಶಿಕ್ಷಣ ಕಾರ್ಯಕ್ರಮಗಳಿಗೆ ಅದನ್ನು ವಿನಿಯೋಗಿಸುವರು. ಇಂಗ್ಲೆಂಡಿನಲ್ಲಿರುವಂತೆ ಕೇಂದ್ರ ಮಟ್ಟದಲ್ಲಿ ಶಿಕ್ಷಣ ಸಚಿವಾಲಯವೂ ಸ್ಥಳೀಯಮಟ್ಟದಲ್ಲಿ ಸ್ಥಳೀಯ ಶಿಕ್ಷಣಪ್ರಾಧಿಕಾರಗಳೂ ಅದನ್ನು ವಿನಿಯೋಗಿಸುವುವು. ಗ್ರೇಟ್‌ಬ್ರಿಟನಿನಲ್ಲಿರುವಂತೆ ವಿಶ್ವವಿದ್ಯಾಲಯದ ಅನುದಾನಸಮಿತಿ ಇಲ್ಲಿನ ವಿಶ್ವವಿದ್ಯಾಲಯಗಳೊಡನೆ ನೇರವಾಗಿ ಸಂಪರ್ಕವಿಟ್ಟುಕೊಂಡಿಲ್ಲ. ಅಲ್ಲಿನ ಸಚಿವಾಲಯದ ಮೂಲಕ ಅಗತ್ಯವೆನಿಸುವ ಸಲಹೆಗಳನ್ನು ನೀಡುವುದು. ಶಿಕ್ಷಣಕ್ಕಾಗಿ 1969–70ರಲ್ಲಿ 6.43ಕೋಟಿ ಪೌಂಡ್ ವೆಚ್ಚಮಾಡಲಾಯಿತು.

ಶೈಕ್ಷಣಿಕ ಅಂಕಿ ಅಂಶಗಳು : ಹಿಂದಿನ ಪುಟದಲ್ಲಿರುವ ಪಟ್ಟಿಯಲ್ಲಿ 1970ಕ್ಕೆ ಸಂಬಂಧಿಸಿದಂತೆ ಇಂಗ್ಲೆಂಡ್ ಮತ್ತು ವೇಲ್ಸಿನ, ಸ್ಕಾಟ್ಲೆಂಡಿನ ಐರ್ಲೆಂಡಿನ, ಮತ್ತು ಇಡೀ ಸಂಯುಕ್ತ ರಾಜ್ಯದ ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಕೊಟ್ಟಿದೆ. (ಎನ್.ಎಸ್.ಪಿ.)

**ಗ್ರೇಟ್ ಬ್ರಿಟನಿನ ಇತಿಹಾಸ :** ಗ್ರೇಟ್ ಬ್ರಿಟನ್ ಎಂಬ ಹೆಸರು ಅಧಿಕೃತವಾಗಿ ಬಳಕೆಗೆ ಬಂದದ್ದು 1604ರಿಂದ ಈಚೆಗೆ, ಸ್ಕಾಟ್ಲೆಂಡಿನ ಆರನೆಯ ಜೇಮ್ಸ್ ಇಂಗ್ಲೆಂಡ್ ಸ್ಕಾಟ್ಲೆಂಡ್‌ಗಳೆರಡಕ್ಕೂ ದೊರೆಯಾದ ಮೇಲೆ. ಆಗ ಅವನು ತನ್ನನ್ನು ಗ್ರೇಟ್ ಬ್ರಿಟನಿನ ದೊರೆಯೆಂದು ಕರೆದುಕೊಂಡ. ಆದರೆ ಈ ಹೆಸರು ಸಂವೈಧಾನಿಕವಾಗಿ ಬಳಕೆಗೆ ಬಂದದ್ದು 1707ರಲ್ಲಿ, ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳ ಪಾರ್ಲಿಮೆಂಟುಗಳನ್ನು ಒಂದುಗೂಳಿಸುವ ಅಧಿನಿಯಮ (ಆಕ್ಟ್ ಆಫ್ ಯೂನಿಯನ್) ಜಾರಿಗೆ ಬಂದಾಗ. ಇಂಗ್ಲೆಂಡಿನ ವಾಣಿಜ್ಯ ಸೌಲಭ್ಯಗಳು ಸ್ಕಾಟ್ಲೆಂಡಿಗೂ ದತ್ತವಾದವು. ಸ್ಕಾಟ್ಲೆಂಡಿನ ಚರ್ಚ್, ಸ್ಕಾಟಿಷ್ ಕಾನೂನುಗಳು ಮತ್ತು ನ್ಯಾಯ ಪ್ರಕ್ರಿಯೆಗಳನ್ನು ಪರಿಪಾಲಿಸುವ ಭರವಸೆ ನೀಡಲಾಯಿತು. ಸ್ಟ್ಯೂಯರ್ಟ್ ಮನೆತನದ ಆನಳ ಆಳಿಕೆಯೊಂದಿಗೆ ಗ್ರೇಟ್ ಬ್ರಿಟನಿನ ಇತಿಹಾಸ ವಾಸ್ತವವಾಗಿ ಆರಂಭವಾಗುತ್ತದೆ.

1ನೆಯ ಜಾರ್ಜ್ 1714ರಿಂದ 1727ರ ವರೆಗೂ ಅನಂತರ 2ನೆಯ ಜಾರ್ಜ್ 1727ರಿಂದ 1760ರ ವರೆಗೂ ಆಳಿದರು. ಇವರ ಕಾಲದಲ್ಲಿ ಪ್ರಧಾನ ಮಂತ್ರಿಯ ಹುದ್ದೆ ಪ್ರಾರಂಭವಾಯಿತು. 1ನೆಯ ಮತ್ತು 2ನೆಯ ಜಾರ್ಜರಿಗೆ ಇಂಗ್ಲಿಷ್ ಭಾಷೆಯ ಜ್ಞಾನವಿರಲಿಲ್ಲ. ಅವರಿಗೆ ಇಂಗ್ಲೆಂಡಿನ ರಾಜಕೀಯದಲ್ಲಿ ಆಸಕ್ತಿ ಇರಲಿಲ್ಲ. ಆದ್ದರಿಂದ ಅವರು ಹಿಂದಿನ ದೊರೆಗಳಂತೆ ಮಂತ್ರಿಮಂಡಲದ ಸಭೆಯ ಅಧ್ಯಕ್ಷತೆ ವಹಿಸುತ್ತಿರಲಿಲ್ಲ. ಆಗ ಮಂತ್ರಿಗಳಲ್ಲೊಬ್ಬ ಅಧ್ಯಕ್ಷತೆ ವಹಿಸಲಾರಂಭಿಸಿದ. ಆತನನ್ನು ಪ್ರಧಾನಮಂತ್ರಿ ಎಂದು ಕರೆಯಲಾರಂಭವಾಯಿತು. ಕಾಲಕ್ರಮದಲ್ಲಿ ಆತ ತನ್ನ ಸಹೋದ್ಯೋಗಿಗಳ ನೇಮಕದ ಮೇಲೆ ಹತೋಟಿ ಪಡೆದ. ಮಂತ್ರಿಮಂಡಲ ಮುಂದುವರಿಯಲು ಕಾಮನ್ಸ್ ಸಭೆಯ ಬಹುಮತದ ಬೆಂಬಲ ಆವಶ್ಯಕವಾಯಿತು. ಹೀಗೆ 1ನೆಯ ಮತ್ತು 2ನೆಯ ಜಾರ್ಜರ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಮಂತ್ರಿಮಂಡಲ ಮತ್ತು ಪಕ್ಷಸರ್ಕಾರದ ವಿಕಾಸವಾಯಿತು. 2ನೆಯ ಜಾರ್ಜನ ಕಾಲದಲ್ಲಿ 1740–1748ರಲ್ಲಿ ಆಸ್ಟ್ರಿಯ ಸಿಂಹಾಸನದ ಉತ್ತರಾಧಿಕಾರಕ್ಕಾಗಿ ಯುದ್ಧ ನಡೆಯಿತು. ಇದರಲ್ಲಿ ಬ್ರಿಟನ್ ಮತ್ತು ಆಸ್ಟ್ರಿಯ ಒಂದು ಕಡೆಗೂ ಫ್ರಾನ್ಸ್ ಮತ್ತು ಪ್ರಷ್ಯ ಇನ್ನೊಂದು ಕಡೆಗೂ ಇದ್ದುವು. ಅನಂತರ ಬ್ರಿಟನ್ ಮತ್ತು ಫ್ರಾನ್ಸ್‌ಗಳ ನಡುವೆ ಏಳು ವರ್ಷಗಳ ಯುದ್ಧ (1756–63) ನಡೆಯಿತು. ಈ ಯುದ್ಧ 3ನೆಯ ಜಾರ್ಜನ ಆಳಿಕೆಯ ಕಾಲದಲ್ಲಿ (1760–1820) ಬ್ರಿಟನಿನ ವಿಜಯದೊಂದಿಗೆ ಮುಕ್ತಾಯವಾಯಿತು. ಇದರ ಫಲವಾಗಿ ಬ್ರಿಟನಿನ ಹಲವು ಸಾಗರಾಂತರ ವಸಾಹತುಗಳ ಸಂಪಾದನೆಯಾಯಿತು. ಬ್ರಿಟನಿನ ವಿಶಾಲ ಚಕ್ರಾಧಿಪತ್ಯ ಬೆಳೆಯಲಾರಂಭಿಸಿತು. ಬ್ರಿಟನಿನ ಕೀರ್ತಿಯಲ್ಲಿ ಹೆಮ್ಮೆ ತಳೆದ ಪ್ರಥಮ ಹ್ಯಾನೋವರಿಯನ್ ದೊರೆ 3ನೆಯ ಜಾರ್ಜ್. ಈತನ ಆಳಿಕೆಯ ಕಾಲದಲ್ಲಿ 1775ರಲ್ಲಿ ಸಂಗ್ರಾಮ ಆರಂಭವಾಯಿತು. ಉತ್ತರ ಅಮೆರಿಕದ ಹದಿಮೂರು ಸಂಸ್ಥಾನಗಳು ಸ್ವತಂತ್ರವಾದುವು. ಇವು 1783ರಲ್ಲಿ ಸಂಯುಕ್ತ ಸಂಸ್ಥಾನಗಳಾದುವು. 1789ರಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿ ಸಂಭವಿಸಿತು. 1793ರಲ್ಲಿ ಫ್ರಾನ್ಸಿನೊಂದಿಗೆ ಬ್ರಿಟನಿನ ಯುದ್ಧ ಪ್ರಾರಂಭವಾಗಿ 1815ರಲ್ಲಿ ಫ್ರಾನ್ಸಿನ ನೆಪೋಲಿಯನನ ಸೋಲಿನೊಂದಿಗೆ ಕೊನೆಗೊಂಡಿತು. 1801ರಲ್ಲಿ ಜಾರಿಗೆ ಬಂದ ಒಕ್ಕೂಟ ಅಧಿನಿಯಮದಂತೆ ಐರ್ಲೆಂಡು ಗ್ರೇಟ್ ಬ್ರಿಟನಿನಲ್ಲಿ ಸಮಾವೇಶಗೊಂಡಿತು. ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡ್ ಸಂಯುಕ್ತ ರಾಜ್ಯ ಎಂಬುದು ಈ ದೇಶದ ಅಧಿಕೃತ ನಾಮವಾಯಿತು.

4ನೆಯ ಜಾರ್ಜ್ 1820 ರಿಂದ 1830ರ ವರೆಗೆ ಆಳಿದ. 4ನೆಯ ವಿಲಿಯಮನ ಆಳಿಕೆಯ ಕಾಲ 1830–1837. ಈತನ ಆಳಿಕೆಯಲ್ಲಿ 1832ರಲ್ಲಿ ಮೊದಲನೆಯ ಪಾರ್ಲಿಮೆಂಟ್ ಸುಧಾರಣಾ ಅಧಿನಿಯಮ ಜಾರಿಗೆ ಬಂತು. ಅದುವರೆಗೆ ಬ್ರಿಟನಿನಲ್ಲಿ ಶ್ರೀಮಂತರು ರಾಜಕೀಯ ಅಧಿಕಾರ ಹೊಂದಿದ್ದರು. ಕಾಮನ್ಸ್‌ಗೆ ನಡೆಯುತ್ತಿದ್ದ ಚುನಾವಣೆಗಳಲ್ಲಿ ಮತ ನೀಡುವ ಹಕ್ಕು ಭೂಮಾಲೀಕರಿಗೆ ಮಾತ್ರ ಇದ್ದದ್ದು ಇದಕ್ಕೆ ಕಾರಣ. ಈ ಸುಧಾರಣಾ ಅಧಿನಿಯಮದ ಪ್ರಕಾರ ಮಧ್ಯಮ ವರ್ಗದವರಿಗೂ ಮತ ನೀಡುವ ಹಕ್ಕು ಲಭ್ಯವಾಯಿತು. ಈ ವೇಳೆಗೆ ಗ್ರೇಟ್ ಬ್ರಿಟನಿನ ಆರ್ಥಿಕತೆಯಲ್ಲಿ ಮಹತ್ತ್ವದ ಬದಲಾವಣೆಗಳಾಗಲಾರಂಭ ವಾಗಿತ್ತು. ಕೃಷಿಪ್ರಧಾನವಾಗಿದ್ದ ಬ್ರಿಟನ್ ಕೈಗಾರಿಕಾ ದೇಶವಾಗಹತ್ತಿತ್ತು. ಈ ಬದಲಾವಣೆಗಳನ್ನು ಕೈಗಾರಿಕಾ ಕ್ರಾಂತಿ ಎಂದು ಕರೆಯಲಾಗಿದೆ. 1837 – 1901 ವಿಕ್ಟೋರಿಯ ರಾಣಿಯ ಆಳಿಕೆಯ ಕಾಲ. ಈ ಕಾಲದಲ್ಲಿ 1867ರಲ್ಲಿ ಎರಡನೆಯ ಪಾರ್ಲಿಮೆಂಟ್ ಸುಧಾರಣಾ ಅಧಿನಿಯಮ ಜಾರಿಗೆ ಬಂತು. ಕಸಬುದಾರರಿಗೆ ಮತಚಲಾವಣೆಯ ಹಕ್ಕು ಲಭ್ಯವಾಯಿತು. ಗುಪ್ತ ಮತದಾನ ಅಧಿನಿಯಮ ಬಂದದ್ದು 1878ರಲ್ಲಿ. 1884ರಲ್ಲಿ ಬಂದ ಮೂರನೆಯ ಪಾರ್ಲಿಮೆಂಟ್ ಸುಧಾರಣಾ ಅಧಿನಿಯಮದಂತೆ ರೈತರಿಗೆ ಮತದಾನದ ಹಕ್ಕು ದೊರೆಯಿತು. ಪ್ರಾಪ್ತ ವಯಸ್ಕ ಗಂಡಸರೆಲ್ಲರಿಗೂ ಮತ ಹಕ್ಕು ಲಭಿಸಿದಂತಾಯಿತು. ಪ್ರಜಾಪ್ರಭುತ್ವ ಸ್ಥಿರವಾಯಿತು. 1901ರಿಂದ 1910ರ ವರೆಗೆ 7ನೆಯ ಎಡ್ವರ್ಡನೂ 1910ರಿಂದ1936ರ ವರೆಗೆ 5ನೆಯ ಜಾರ್ಜನೂ ರಾಜರಾಗಿದ್ದರು. 5ನೆಯ ಜಾರ್ಜ್ ದೊರೆಯ ಆಳಿಕೆಯ ಕಾಲದಲ್ಲಿ ಒಂದನೆಯ ಮಹಾಯುದ್ಧ ನಡೆಯಿತು. 1918ರ ಮತ್ತು 1928ರ ಅಧಿನಿಯಮಗಳಿಂದ ಸ್ತ್ರೀಯರಿಗೂ ಹಕ್ಕು ದೊರೆಯಿತು. 1911ರಲ್ಲಿ ಜಾರಿಗೆ ಬಂದ ಪಾರ್ಲಿಮೆಂಟ್ ಅಧಿನಿಯಮ ಲಾರ್ಡ್ಸ್ ಸಭೆಯ ಅಧಿಕಾರವನ್ನು ಮೊಟಕುಮಾಡಿತು. 1922ರಲ್ಲಿ ಐರ್ಲೆಂಡಿನ 26 ಕೌಂಟಿಗಳು ಸ್ವತಂತ್ರವಾದುವು. ಉತ್ತರ ಐರ್ಲೆಂಡ್ ಒಕ್ಕೂಟದಲ್ಲಿ ಉಳಿದುಕೊಂಡಿತು. ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯ ಎಂಬುದು ದೇಶದ ಹೆಸರಾಯಿತು. ಕಾಮನ್ಸ್ ಸಭೆಯ ಸದಸ್ಯರಿಗೆ ಪ್ರಪ್ರಥಮವಾಗಿ ವೇತನ ಕೊಡುವ ಪದ್ಧತಿ ಪ್ರಾರಂಭವಾಯಿತು. ಕಾಮನ್ಸ್ ಸಭೆಯ ಅವಧಿ ಐದು ವರ್ಷಗಳೆಂದು ನಿಗದಿ ಮಾಡಲಾಯಿತು.

1936ರಲ್ಲಿ 8ನೆಯ ಎಡ್ವರ್ಡ್ ರಾಜನಾದ. ಎರಡು ಸಾರಿ ವಿವಾಹವಿಚ್ಛೇದನ ಮಾಡಿಕೊಂಡಿದ್ದ ಅಮೆರಿಕನ್ ಮಹಿಳೆ ಅರ್ನೆಸ್ಟ್ ಸಿಮ್ಸನಳನ್ನು ವಿವಾಹವಾಗಬಯಸಿದ ಎಡ್ವರ್ಡ್ ಆಕೆಗಾಗಿ ಸಿಂಹಾಸನತ್ಯಾಗ ಮಾಡಬೇಕಾಯಿತು. ಈತನ ಸಹೋದರ 6ನೆಯ ಜಾರ್ಜ್ 1936–1952ರಲ್ಲಿ ಗ್ರೇಟ್ ಬ್ರಿಟನಿನ ದೊರೆಯಾಗಿದ್ದ. ಈತನ ಆಳಿಕೆಯ ಕಾಲದಲ್ಲಿ ಎರಡನೆಯ ಮಹಾಯುದ್ಧ ಜರುಗಿತು. ಯುದ್ಧಾನಂತರದಲ್ಲಿ ಬ್ರಿಟನಿನ ಅನೇಕ ವಸಾಹತುಗಳು ಒಂದೊಂದಾಗಿ ಸ್ವತಂತ್ರಗೊಂಡುವು. 6ನೆಯ ಜಾರ್ಜ್ ದೊರೆ 1952ರಲ್ಲಿ ತೀರಿಕೊಂಡ. ಆತನ ಹಿರಿಯ ಮಗಳು 2ನೆಯ ಎಲಿಜಬೆತಳ ಆಳಿಕೆ ಆರಂಭವಾಯಿತು. ಈಕೆಯ ಆಳಿಕೆಯ ಕಾಲದಲ್ಲಿ ಮಹತ್ತರ ಬದಲಾವಣೆಗಳಾದುವು. ಬ್ರಿಟಿಷ್ ಕಾಮನ್‌ವೆಲ್ತ್ ಸ್ವರೂಪ ಬದಲಾವಣೆಗೊಂಡು ಅದು ಕಾಮನ್‌ವೆಲ್ತ್ ಬಂಧುಕೂಟವಾಗಿ ಪರಿಣಮಿಸಿತು. ಬ್ರಿಟನಿನ ಸಾಗರಾಂತರ ವಸಾಹತುಗಳೆಲ್ಲ ಕಳೆದುಹೋಗಿ ಅದರ ಪೂರ್ವದ ಪ್ರತಿಷ್ಠೆ ಬಹಳಮಟ್ಟಿಗೆ ನಷ್ಟವಾಯಿತು. (ಎ.ವಿ.ವಿ.;ಎಂ.ಎಸ್.ಬಿ.)

**ಗ್ರೇಟಿಯಸ್ ಫಾಲಿಸ್ಕಸ್ :** ರೋಮನ್ ಕವಿ. ಕಾಲ ಪ್ರ.ಶ.ಸು. 1ನೆಯ ಶತಮಾನ. ವರ್ಜಿಲ್ ಮತ್ತು ಓವಿಡ್ ಕವಿಗಳ ಸಮಕಾಲೀನ. ಈತನ ಜನ್ಮಸ್ಥಳ ಫಾಲಿರೀ ಎಂದು ಊಹಿಸಲಾಗಿದೆ. ಬೇಟೆಯಾಡುವುದರ ಬಗ್ಗೆ ಸೈನೆಜೆಟಿಕ ಎಂಬ ಕವನದಲ್ಲಿ ಬರುವ 536 ವಾಕ್ಯಗಳನ್ನು ಬಿಟ್ಟರೆ ಈತನ ಸಾಹಿತ್ಯ ಚಟುವಟಿಕೆಯ ಬಗ್ಗೆಯಾಗಲಿ ಅಥವಾ ವೈಯಕ್ತಿಕ ಜೀವನದ ಬಗ್ಗೆಯಾಗಲಿ ಯಾವ ಮಾಹಿತಿಯೂ ದೊರೆಯುವುದಿಲ್ಲ. ಓವಿಡ್ ತನ್ನ ಕೃತಿಯೊಂದರಲ್ಲಿ ಆಕಸ್ಮಿಕವಾಗಿ ಮಾಡಿರುವ ಉಲ್ಲೇಖವನ್ನು ಬಿಟ್ಟರೆ ಓದುಗರು ಈತನ ಕೃತಿಯನ್ನು ಮರೆತಿದ್ದರೆಂದೇ ತೋರುತ್ತದೆ. ಈ ಕೃತಿಯಲ್ಲಿ ಗ್ರೇಟಿಯಸ್ ಹೆಚ್ಚು ಕಡಿಮೆ ಜಿನೊಫನನ ರೀತಿಯಲ್ಲಿ ಬೇಟೆಯ ಆಟವನ್ನು, ಅದರ ರೀತಿನೀತಿಗಳನ್ನು, ಅದಕ್ಕೆ ಬಳಸುವ ಕುದುರೆ, ನಾಯಿಗಳನ್ನು ಮತ್ತು ಅವುಗಳ ತಳಿಗಳನ್ನು ಕುರಿತು ವಿವೇಚಿಸಿದ್ದಾನೆ. ಕವಿಯ ಮೇಲೆ ವರ್ಜಿಲನ ಪ್ರಭಾವವಿರುವುದಾದರೂ ವಿವರಣೆ ಅಲ್ಲಲ್ಲಿ ಮಂಕಾಗಿ ಶೈಲಿ ಭಾರವಾಗಿದೆ ಎನಿಸುತ್ತದೆ. ಆದರೆ ತನ್ನ ಸಾಮಗ್ರಿಗಳ ಜೋಡಣೆಯಲ್ಲಿ, ಅದನ್ನು ಬಳಸುವಲ್ಲಿ ತುಂಬ ಚತುರತೆಯನ್ನು ವ್ಯಕ್ತಪಡಿಸಿದ್ದಾನೆ. ಇಡೀ ಕವನ ಬೋಧಕನ ಶೈಲಿಯಲ್ಲಿದೆ. (ಎನ್.ಎಸ್.ಆರ್.ಎ.)

**ಗ್ರೇ, ಥಾಮಸ್ :** 1716–71. ಇಂಗ್ಲೆಂಡಿನ ನಿಯೋಕ್ಲಾಸಿಕಲ್ (ನವಅಭಿಜಾತ) ಕಾವ್ಯಸಂಪ್ರದಾಯದ ಇಳಿಗಾಲದಲ್ಲಿ ಅದೇ ಸಂಪ್ರದಾಯದವರಾದರೂ ತಮ್ಮ ಭಾವುಕತೆ ಹೃದಯವಂತಿಕೆಯ ಮೂಲಕ ರೊಮ್ಯಾಂಟಿಕ್ ಕಾವ್ಯಕ್ಕೆ ದಾರಿ ಮಾಡಿಕೊಟ್ಟ ಕವಿಗಳಲ್ಲಿ ಥಾಮಸ್ ಗ್ರೇನ ಹೆಸರು ಕಾಲಿನ್ಸ್ ಕವಿಯ ಜೊತೆಗೆ ಸೇರ್ಪಡೆಯಾಗಿದೆ. ಈತ ಅಭಿಜಾತ ಸಾಹಿತ್ಯ, ಮಧ್ಯಯುಗೀನ ಇತಿಹಾಸಗಳನ್ನು ಆಳವಾಗಿ ಅಭ್ಯಸಿಸಿದ ಕವಿ. ಇವೆರಡರ ಮೆರುಗು ಈತನ ಕಾವ್ಯದಲ್ಲಿದೆ.

ಬಂಧದ ಬಿಗುವು ಕ್ಲಾಸಿಕಲ್ ಸಂಪ್ರದಾಯದ್ದಾದರೂ ಇಂಗ್ಲಿಷ್ ಭಾಷೆಯ ಮಧ್ಯಯುಗೀನ ಕಾಲದ ಬಿರುಸು–ಓಜಸ್ಸು ಈತನ ವಿಚಾರಸರಣಿಯಲ್ಲಿ ಸೇರಿ ಕ್ಲಾಸಿಕಲ್ ಸಂಪ್ರದಾಯಬದ್ಧತೆಯನ್ನು ಮೂದಲಿಸಿತು. ಈತ ಹುಟ್ಟಿದ್ದು ಲಂಡನಿನಲ್ಲಿ. ತಂದೆ ಕೋರ್ಟಿನ ಕರಡು ಬರೆಯುವ ತಜ್ಞ; ಸಾಕಷ್ಟು ಹಣಗಳಿಸಿದ್ದ. ತಾಯಿ ಸ್ವತಂತ್ರವಾಗಿ ಹ್ಯಾಟ್ ಮಾಡುವ ಉದ್ಯೋಗ ನಡೆಸುತ್ತಿದ್ದಳು. ಒಡಹುಟ್ಟಿದವರನ್ನು ಚಿಕ್ಕಂದಿನಲ್ಲಿಯೇ ಕಳಕೊಂಡ ಗ್ರೇ ದುಃಖಿ; ಏಕಾಕಿ ಜೀವನಕ್ಕೆ ಮೊದಲಿನಿಂದಲೇ ಹೊಂದಿಕೊಂಡಿದ್ದ. ಸ್ಥಿತಿವಂತನಾಗಿದ್ದುದರಿಂದ ಈತನನ್ನು ಈಟನ್ ವಿದ್ಯಾಲಯಕ್ಕೆ ಕಳುಹಿಸಲಾಯಿತು. ಅಲ್ಲಿ ಹೊರೆಸ್ ವಾಲ್ ಪೋಲ್ ಲೇಖಕನ ಸಹಕಾರಿಯಾಗಿದ್ದುಕೊಂಡು ಆತನ ದೀರ್ಘಾವಧಿಯ ಗೆಳೆಯನಾದ. 18ನೆಯ ವಯಸ್ಸಿಗೆ ಕೇಂಬ್ರಿಜ್ ಸೇರಿದ ನಾದರೂ ಪದವಿ ಪಡೆಯುವುದರಲ್ಲಿ ವಿಫಲನಾದ. ಪುಸ್ತಕ–ಹೂದೋಟ ಗಳಿಗೆ ಮನಸೋತು ವಿವಿಧ ಜ್ಞಾನದಲ್ಲಿ ಮನಸ್ಸನ್ನು ಹರಿಸಿದ. ವಾಲ್‌ಪೋಲ್‌ನ ಜೊತೆಗೆ ಯುರೋಪಿನ ಪ್ರಯಾಣಕ್ಕೆ ಹೋದಾಗ ವಿರಸ ಮೂಡಿ ಇವರ ಸ್ನೇಹಸಂಬಂಧ ಮೂರು ನಾಲ್ಕು ವರ್ಷ ಮುರಿದರೂ ಮತ್ತೆ ಹೊಂದಿಕೆ ಯಾಯಿತು. ಅನಂತರ ಕೇಂಬ್ರಿಜ್ ನಲ್ಲಿ ನೆಲೆಸಿ ಗ್ರಂಥಾಲಯ, ತೋಟಗಳಲ್ಲಿ ಸುಖವಾಗಿ ಕಾಲ ಕಳೆದ. 1768ರಲ್ಲಿ ಆಧುನಿಕ ಇತಿಹಾಸದ ಪ್ರೊಫೆಸರ್ ಹುದ್ದೆ ಸ್ವೀಕರಿಸಿದರೂ ಪಾಠ ಹೇಳಿಕೊಡುವ ಗೋಜಿಗೇ ಹೋಗಲಿಲ್ಲ. ಸದಾ ಶಾಂತ–ಅಂತರ್ಮುಖಿ ಜೀವನ ನಡೆಸಿದ. 1742ರಲ್ಲಿ ಪ್ರಥಮ ಇಂಗ್ಲಿಷ್ ಕವನ (ವಸಂತ ಸ್ತೋತ್ರ) ರಚಿಸಿದ. ಲ್ಯಾಟಿನ್ ಭಾಷೆಯಲ್ಲಿ ರಚಿಸಿದ ಈತನ ಚಿಂತನಪರ ಕವನಗಳುಂಟು. ಭಾವುಕ ಚಿಂತನಪರತೆಯ ಪರಾಕಾಷ್ಠೆಯನ್ನು ಎನ್ ಎಲಿಜಿ ರಿಟನ್ ಇನ್ ಎ ಕಂಟ್ರಿ ಚರ್ಚ್ ಯಾರ್ಡ್ ಎಂಬ ಕವನದಲ್ಲಿ (ಹಳ್ಳಿಯ ಮಸಣದಲ್ಲಿ ಕುಳಿತು ರಚಿಸಿದ ಶೋಕಗೀತ) ಕಾಣುತ್ತೇವೆ. ಈ ಕವನ ಇಂಗ್ಲೆಂಡ್–ಅಮೆರಿಕಗಳ ಭಾವುಕರ ಪಠ್ಯವಾಯಿತು. ಗತಕಾಲದ ಚಿಂತನೆಯಿಂದ ಕೂಡಿದ ಹಿಮ್ ಟು ಅಡ್‌ವರ್ಸಿಟಿ, ಓಡ್ ಆನ್ ಎ ಡಿಸ್ಟೆಂಟ್ ಪ್ರಾಸ್ಪೆಕ್ಟ್ ಆಫ್ ಈಟನ್ ಕಾಲೇಜ್ ಇವು ಈತನ ನೆನೆ–ಕನಸುಗಳ ಶ್ರೇಷ್ಠ ಉದಾಹರಣೆಗಳು. ಇವನ ದಿ ಬಾರ್ಡ್ ಎಂಬ ಕವನದಲ್ಲಿ ಚಾರಿತ್ರಿಕ ದರ್ಶನವಿದೆ.

ಈತನಲ್ಲಿ ಹಾಸ್ಯಗುಣವೂ ಇತ್ತು. ಪತ್ರ ಸಾಹಿತ್ಯ ಸೃಷ್ಟಿಯಲ್ಲೂ ಈತ ಹೆಸರಾದವ.

(ಎಸ್.ಎಂ.ಪಿ.)

**ಗ್ರೇಪ್ ಹಣ್ಣು :** ರೂಟೇಸೀ (ಕಿತ್ತಳೆ) ಕುಟುಂಬಕ್ಕೆ ಸೇರಿದ ಒಂದು ಮರದ ಹಣ್ಣು. ವೃಕ್ಷದ ವೈಜ್ಞಾನಿಕ ಹೆಸರು ಸಿಟ್ರಸ್ ಪ್ಯಾರಡಿಸಿ. ಇದು ಚಕ್ಕೋತ ಹಣ್ಣಿನ ಮರಕ್ಕೆ (ಸಿಟ್ರಸ್ ಗ್ರ್ಯಾಂಡಿಸ್) ಬಲು ಹತ್ತಿರ ಸಂಬಂಧಿ. ಹಲವರ ಅಭಿಪ್ರಾಯದಂತೆ ಇದು ಚಕ್ಕೋತ ಮರದಿಂದ ವ್ಯತ್ಯಯದ (ಮ್ಯುಟೇಷನ್) ಮೂಲಕ ಉದ್ಭವಿಸಿದೆ. ಗ್ರೇಪ್ ಹಣ್ಣಿನ ಮರ ವೆಸ್ಟ್‌ಇಂಡೀಸಿನ ಮೂಲನಿವಾಸಿ. ಇದರ ರುಚಿಯಾದ ಹಣ್ಣುಗಳಿಗಾಗಿ ಇದನ್ನು ಬೇರೆ ದೇಶಗಳಲ್ಲಿ ಮುಖ್ಯವಾಗಿ ಅಮೆರಿಕ ಸಂಯುಕ್ತಸಂಸ್ಥಾನಗಳ ಫ್ಲಾರಿಡ, ಅರಿಜೋನ, ಕ್ಯಾಲಿಫೋರ್ನಿಯಗಳಲ್ಲೂ ಇಸ್ರೇಲಿನಲ್ಲೂ ದಕ್ಷಿಣ ಆಫ್ರಿಕದಲ್ಲೂ ಭಾರಿ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಅಮೆರಿಕದ ಫ್ಲಾರಿಡ ರಾಜ್ಯವೊಂದರಲ್ಲಿ ಇದರ ವಾರ್ಷಿಕ ಇಳುವರಿ ಒಂದು ಮಿಲಿಯನ್ ಟನ್ನುಗಳಷ್ಟಿದೆ. ಭಾರತದಲ್ಲಿ ಪಂಜಾಬ್, ಹರಿಯಾಣಗಳಲ್ಲಿ ದೊಡ್ಡ ಮೊತ್ತದಲ್ಲೂ ದಕ್ಷಿಣ ಭಾರತದಲ್ಲಿ ಲಘು ಮೊತ್ತದಲ್ಲೂ ಇದರ ಬೇಸಾಯ ಉಂಟು.

ಇದು 7–12 ಮೀ ಎತ್ತರಕ್ಕೆ ಬೆಳೆಯುವ ಮರ. ಎಲೆಗಳು ಚಕ್ಕೋತದ ಎಲೆಗಳಿಗಿಂತ ಸ್ವಲ್ಪ ಚಿಕ್ಕವು. ತೊಟ್ಟಿನ ಆಚೀಚೆಯ ಭಾಗ ರೆಕ್ಕೆಯಂತೆ ಅಗಲವಾಗಿ ಹರಡಿದೆ. ಹೂಗಳು ಎಲೆಗಳ ಕಂಕುಳಲ್ಲಿ ಒಂಟೊಂಟಿಯಾಗಿ ಇಲ್ಲವೆ ಗೊಂಚಲುಗಳಲ್ಲಿ ಹುಟ್ಟುತ್ತವೆ. ಹಣ್ಣು ಮೋಸಂಬಿ ಹಣ್ಣಿಗಿಂತ ಎರಡರಷ್ಟು ಗಾತ್ರದ್ದು. ಮಾಗಿದ ಹಣ್ಣಿನ ಬಣ್ಣ ಹಳದಿ. ತಿರುಳು ರಸಭರಿತವಾಗೂ ಮೃದುವಾಗೂ ಇದೆ. ಅದರ ಬಣ್ಣ ಕೆಲವು ಬಗೆಗಳಲ್ಲಿ ತಿಳಿಹಳದಿ; ಇನ್ನು ಕೆಲವು ಬಗೆಗಳಲ್ಲಿ ನಸುಗೆಂಪು ಅಥವಾ ಕೆಂಪು. ಹಣ್ಣಿಗೆ ಒಂದು ವಿಶೇಷ ರೀತಿಯ ಮಧುರವಾಸನೆಯೂ ಕೊಂಚ ಹುಳಿ ಮಿಶ್ರಿತ ಸಿಹಿರುಚಿಯೂ ಇದೆ.

ಗ್ರೇಪ್ ಹಣ್ಣಿನ ಮರದ ಬೇಸಾಯಕ್ಕೆ ಮರಳಿನ ಪ್ರಮಾಣ ಹೆಚ್ಚಾಗಿರುವ ನೆಲ ಉತ್ತಮ. ಬೆಳೆ ಹುಲುಸಾಗಿರಲು ಸಾಕಷ್ಟು ಪರಿಮಾಣದಲ್ಲಿ ನೈಟ್ರೋಜನ್, ರಂಜಕ ಮತ್ತು ಪೊಟ್ಯಾಷಿಯಮ್‌ಗಳಲ್ಲದೆ ಲಘು ಪ್ರಮಾಣದಲ್ಲಿ ತಾಮ್ರ, ಮ್ಯಾಂಗನೀಸ್, ಸತು, ಕಬ್ಬಿಣ ಮತ್ತು ಬೋರಾನುಗಳನ್ನೂ ಹಾಕಬೇಕು. ಮರಗಳನ್ನು ಬೀಜಗಳಿಂದ ವೃದ್ಧಿಸಬಹುದಾದರೂ

ಹೀಗೆ ಪಡೆದ ಗಿಡಗಳಲ್ಲಿ ಹಣ್ಣಿನ ಗುಣ ಮತ್ತು ಗಾತ್ರಗಳು ವ್ಯತ್ಯಾಸವನ್ನು ತೋರುವುದರಿಂದ ಉತ್ತಮ ದರ್ಜೆಯ ಮರವೊಂದನ್ನು ಆರಿಸಿಕೊಂಡು ಅದರಿಂದ ಕಣ್ಣುಕಸಿಯ ಮೂಲಕ ಸಸಿಗಳನ್ನು ಪಡೆದು ವೃದ್ಧಿಸುವುದೇ ಹೆಚ್ಚು ವಾಡಿಕೆಯಲ್ಲಿರುವ ಕ್ರಮ. ಮರ 4–6 ವರ್ಷ ವಯಸ್ಸಾದ ಅನಂತರ ಫಲ ಬಿಡಲು ಆರಂಭಿಸುತ್ತದೆ. ಗ್ರೇಪ್ ಹಣ್ಣಿನ ಇಳುವರಿಯ ಮೊತ್ತ ಅಧಿಕ. ಹುಲುಸಾಗಿ ಬೆಳೆದ ಒಂದು ಮರ ವರ್ಷಕ್ಕೆ 585–675 ಕೆಜಿಯಷ್ಟು ಹಣ್ಣನ್ನು ಕೊಡಬಲ್ಲದು.

ಗ್ರೇಪ್ ಹಣ್ಣಿನಲ್ಲಿ ಸುಮಾರು 25ಕ್ಕೂ ಹೆಚ್ಚು ಬಗೆಗಳಿವೆ. ಇವುಗಳಲ್ಲಿ ಬಹುಪಾಲು ಹಳದಿ ಬಣ್ಣದ ತೊಳೆಗಳುಳ್ಳವು. ಉದಾಹರಣೆಗೆ ಮಾರ್ಷ್, ಡಂಕನ್, ಟ್ರಯಂಫ್, ಹಾಲ್ (ಸಿಲ್ವರ್ ಕ್ಲಸ್ಟರ್) ಇತ್ಯಾದಿ. ಇನ್ನು ಕೆಲವು ರೀತಿಯವು ಕೆಂಪು ಅಥವಾ ನಸುಗೆಂಪು ಬಣ್ಣದ ತೊಳೆಗಳುಳ್ಳವು. ಉದಾಹರಣೆಗೆ ರೂಬಿ, ವೆಬ್, ಫಾಸ್ಟರ್ ಮುಂತಾದವು. ಗ್ರೇಪ್ ಹಣ್ಣಿನ ಮರವನ್ನು ಸಿಟ್ರಸ್ ಜಾತಿಯ ಇತರ ಪ್ರಭೇದಗಳೊಂದಿಗೆ ಅಡ್ಡತಳಿಯೆಬ್ಬಿಸಿ ಕೆಲವು ಮಿಶ್ರಬಗೆಯ ಹಣ್ಣಿನ ಮರಗಳನ್ನು ಪಡೆಯಲಾಗಿದೆ. ಉದಾಹರಣೆಗೆ ಸ್ವಿಂಗಲ್ ಎಂಬಾತ 1897ರಲ್ಲಿ ಗ್ರೇಪ್ ಹಣ್ಣಿನ ಮರವನ್ನೂ ಕಿತ್ತಳೆಯನ್ನೂ ಅಡ್ಡಹಾಯಿಸಿ ಟ್ಯಾಂಜಲೊ ಎಂಬ ಮಿಶ್ರತಳಿಯೊಂದನ್ನು ಉತ್ಪಾದಿಸಿದ.

ಗ್ರೇಪ್ ಹಣ್ಣು ಹಲವಾರು ಪೌಷ್ಟಿಕಾಂಶಗಳ ಆಗರ ಎನಿಸಿದೆ. ಇದರಲ್ಲಿ ಅಧಿಕ ಮೊತ್ತದಲ್ಲಿ ಸಿ ವಿಟಮಿನ್ (ಕಿತ್ತಳೆ ಮತ್ತು ನಿಂಬೆ ಹಣ್ಣುಗಳನ್ನು ಬಿಟ್ಟರೆ ಸಿ ವಿಟಮಿನ್ ಪರಿಮಾಣ ಇದರಲ್ಲಿ ಅತಿ ಹೆಚ್ಚು) ಮತ್ತು ಸಾಕಷ್ಟು ಪರಿಮಾಣದಲ್ಲಿ ಬಿ ವಿಟಮಿನ್ ಹಾಗೂ ಶೇ.5–ಶೇ.12 ಸಕ್ಕರೆಯ ಅಂಶ ಇವೆ. ಗ್ರೇಪ್ ಹಣ್ಣಿನ ರಸ ಒಂದು ಉತ್ತಮ ಬಗೆಯ ಕ್ಷುಧಾಕಾರಕವೆಂದು ಹೆಸರಾಗಿದೆ. ಇದನ್ನು ಕಿತ್ತಳೆಹಣ್ಣಿನ ರಸದಂತೆ ಬೆಳಗಿನ ಉಪಾಹಾರದ ಜೊತೆಗೆ ಬಳಸುವುದುಂಟು. ರಸವನ್ನು ಕೊಂಚ ಪರಿಮಾಣದಲ್ಲಿ ವೈನ್, ಬ್ರ್ಯಾಂಡಿ ಮುಂತಾದ ಪಾನೀಯಗಳಿಗೆ ರುಚಿಕೊಡಲು ಬಳಸುತ್ತಾರೆ. ಸಿಪ್ಪೆಯಿಂದ ಪೆಕ್ಟಿನ್ ಎಂಬ ವಸ್ತುವನ್ನು ಬೇರ್ಪಡಿಸಿ ಜೆಲ್ಲಿ ತಯಾರಿಕೆಯಲ್ಲಿ ಉಪಯೋಗಿಸುವುದಿದೆ. (ಎಂ.ಎಚ್.ಎಂ.)

**ಗ್ರೇಯಮ್ ಥಾಮಸ್ :** 1805–69. ಸ್ಕಾಟಿಷ್ ರಸಾಯನ ವಿಜ್ಞಾನಿ. ಭೌತ ರಸಾಯನ ವಿಜ್ಞಾನದ ಸ್ಥಾಪಕರಲ್ಲಿ ಒಬ್ಬನೆಂದೂ ಕಲಿಲ ರಸಾಯನ ವಿಜ್ಞಾನದ (ಕಲಾಯ್ಡ್ ಕೆಮಿಸ್ಟ್ರಿ) ಮೂಲಪುರುಷನೆಂದೂ ಹೆಸರುಗಳಿಸಿದ್ದಾನೆ. ಅನಿಲಗಳು ವ್ಯಾಪಿಸುವ ದರವನ್ನು

ಅಳೆದು ಗ್ರೇಯಮನ ಅನಿಲ ವಿಸರಣ ನಿಯಮ ಎಂದು ಈಗ ಪ್ರಸಿದ್ಧವಾಗಿರುವ ನಿಯಮವನ್ನು ಕಂಡುಹಿಡಿದ. ಕಲಿಲ ರಸಾಯನ ವಿಜ್ಞಾನದಲ್ಲಿ ಇಂದು ಬಳಕೆಯಲ್ಲಿರುವ, ಮುಖ್ಯವಾಗಿ ಪಾರಿಭಾಷಿಕ ಪದಗಳಲ್ಲಿ ಬಹುಪಾಲು ಪದಗಳು ಈತ ಸೃಷ್ಟಿಸಿದಂಥವೇ.

ಸ್ಕಾಟ್ಲೆಂಡಿನ ಗ್ಯಾಸ್ಗೋ ನಗರದಲ್ಲಿ 1805ರ ಡಿಸೆಂಬರ್ 20ರಂದು ಗ್ರೇಯಮ್ ಜನಿಸಿದ. ತಂದೆ ಐಶ್ವರ್ಯವಂತನಾಗಿದ್ದ ಒಬ್ಬ ವಾಣಿಜ್ಯೋದ್ಯಮಿ. ತಮ್ಮ ಮಗ ಇಗರ್ಜಿಯಲ್ಲಿ ಪಾದ್ರಿಯಾಗಬೇಕೆಂಬುದು ಆತನ ಆಶಯ. ಆದರೆ ಮಗ ವಿಜ್ಞಾನವನ್ನೇ ಅಭ್ಯಾಸ ಮಾಡುವುದಾಗಿ ಹಟ ಹಿಡಿದುದರಿಂದ ತಂದೆ ಆರ್ಥಿಕ ನೆರವು ನೀಡಲು ನಿರಾಕರಿಸಿದ. ಗ್ರೇಯಮ್ ಎದೆಗುಂದಲಿಲ್ಲ. ಉಪಾಧ್ಯಾಯನಾಗಿ ಮತ್ತು ಲೇಖಕನಾಗಿ ಜೀವನ ಸಾಗಿಸಿಕೊಂಡು ತನ್ನ ಅಧ್ಯಯನವನ್ನು ಮುಂದುವರಿಸಿದ. ಈಗ ರಾಯಲ್ ಟೆಕ್ನಿಕಲ್ ಕಾಲೇಜ್ ಎಂಬ ಹೆಸರು ಪಡೆದಿರುವ ಸಂಸ್ಥೆಯಲ್ಲಿ ಥಾಮಸ್ ಥಾಮ್ಸನ್ ಎಂಬಾತನಲ್ಲಿಯೂ ಅನಂತರ ಎಡಿನ್‌ಬರಾದಲ್ಲಿ ಥಾಮಸ್ ಹೋಪ್ ಎಂಬಾತನಲ್ಲಿಯೂ ವ್ಯಾಸಂಗ ಮಾಡಿ ಗ್ಲಾಸ್ಗೊ ವಿಶ್ವವಿದ್ಯಾಲಯದ ಪದವೀಧರನಾದ (1826). ಮುಂದೆ ಅದೇ ವಿಶ್ವವಿದ್ಯಾಲಯದಲ್ಲಿ, ಎಡಿನ್‌ಬರಾದಲ್ಲಿರುವ ಆಂಡರ್ಸನ್ ಇನ್ಸ್‌ಟಿಟ್ಯೂಷನ್ನಿನಲ್ಲಿ, ರಸಾಯನ ವಿಜ್ಞಾನದ ಪ್ರಾಧ್ಯಾಪಕನಾದ (1830). ಅಲ್ಲಿ ಏಳು ವರ್ಷ ಕೆಲಸ ಮಾಡಿ ಲಂಡನಿಗೆ ತೆರಳಿ (1837) ಯೂನಿವರ್ಸಿಟಿ ಕಾಲೇಜಿನಲ್ಲಿ ಪ್ರಾಧ್ಯಾಪಕನಾದ. ತರುವಾಯ ನ್ಯೂಟನ್ ಮತ್ತು ಸರ್ ಜಾನ್ ಹರ್ಷೆಲ್‌ರವರಂತೆ ಟಂಕಸಾಲೆಯ ಮುಖ್ಯಾಧಿಕಾರಿಯಾದ (1855). 1869ರ ಸೆಪ್ಟೆಂಬರ್ 11 ರಂದು ನಿಧನ ಹೊಂದುವವರೆಗೂ ಅದೇ ಹುದ್ದೆಯಲ್ಲಿ ಮುಂದುವರಿದ.



ಗ್ರೇಯಮನ ಆಸಕ್ತಿಯನ್ನು ಕೆರಳಿಸಿದ ಮೊತ್ತಮೊದಲ ವೈಜ್ಞಾನಿಕ ವಿಷಯವೆಂದರೆ ಅನಿಲಗಳ ವಿಸರಣಶೀಲತೆ (ಅಂದರೆ ವ್ಯಾಪನಶೀಲತೆ). ಒಂದು ಪಾತ್ರೆಯ ಕೆಳಗಿನ ಅರ್ಧ ಭಾಗದಲ್ಲಿ ಆಕ್ಸಿಜನ್ನನ್ನೂ (ಆಮ್ಲಜನಕ) ಮೇಲಿನ ಅರ್ಧ ಭಾಗದಲ್ಲಿ ಹೈಡ್ರೊಜನ್ನನ್ನೂ (ಜಲಜನಕ) ಇಟ್ಟು ಕೆಲಕಾಲ ಬಿಟ್ಟರೆ ಎರಡು ಅನಿಲಗಳೂ ಚೆನ್ನಾಗಿ ಬೆರೆತು ಒಂದೇ ಸಮವಾಗಿ ಪಾತ್ರೆಯಲ್ಲೆಲ್ಲ ವ್ಯಾಪಿಸುತ್ತವೆ. ಆಕ್ಸಿಜನ್ ಭಾರವಾದ ಅನಿಲವಾದರೂ ಅದು ಕೆಳಗಡೆಯೇ ಉಳಿಯದೆ ಸಮವಾಗಿ ಪಾತ್ರೆಯಲ್ಲೆಲ್ಲ ಹರಡಿ ಹೋಗುವುದಕ್ಕೂ ಅದೇ ರೀತಿ ಹಗುರವಾದ ಹೈಡ್ರೊಜನ್ ಪಾತ್ರೆಯಲ್ಲೆಲ್ಲ ಒಂದೇ ಸಮವಾಗಿ ಹರಡಿಕೊಳ್ಳುವುದಕ್ಕೂ ಅನಿಲ ಚಲನ ಸಿದ್ಧಾಂತ ಸೂಕ್ತ ವಿವರಣೆಯನ್ನು ನೀಡಬಲ್ಲುದು. ಆದರೆ ಗ್ರೇಯಮ್ ಅನಿಲಗಳ ವಿಸರಣಶೀಲತೆಯ ಬಗ್ಗೆ ಸಂಶೋಧನೆ ಕೈಗೊಂಡಾಗ ಅನಿಲ ಚಲನ ಸಿದ್ಧಾಂತ ಇನ್ನೂ ಜನ್ಮತಾಳಿರಲಿಲ್ಲ. ಅನಿಲಗಳು ಯಾವ ದರದಲ್ಲಿ ವಿಸರಿಸುವುವೆಂಬುದನ್ನು ಪರೀಕ್ಷಿಸುವುದಕ್ಕಾಗಿ ಗ್ರೇಯಮ್ ಪ್ಯಾರಿಸ್ ಪ್ಲಾಸ್ಟರಿನ ಬೆಣೆಯ ಮೂಲಕ, ಸಪುರವಾದ ನಾಳಗಳ ಮೂಲಕ, ಪ್ಲಾಟಿನಮ್ ತಗಡಿನಲ್ಲಿ ಕೊರೆದ ಒಂದು ಚಿಕ್ಕ ರಂಧ್ರದ ಮೂಲಕ ಅನಿಲಗಳು ಪಸರಿಸುವುದನ್ನು ಅಧ್ಯಯನ ಮಾಡಿ ಅನಿಲಗಳ ಈ ವಿಸರಣೆಯ ದರ ಅವುಗಳ ಸಾಂದ್ರತೆಯ ವರ್ಗಮೂಲಕ್ಕೆ ವ್ಯಸ್ತ ಅನುಪಾತದಲ್ಲಿರುವುದೆಂಬ ನಿಯಮವನ್ನು ಕಂಡುಹಿಡಿದ. ಇದೇ ಗ್ರೇಯಮನ ಅನಿಲ ವಿಸರಣೆಯ ನಿಯಮ (ಗ್ರೇಯಮ್ಸ್ ಲಾ ಆಫ್ ಡಿಫ್ಯೂಷನ್). ತರುವಾಯ ಈತ ದ್ರಾವ್ಯಪದಾರ್ಥಗಳ ಅಣುಗಳೂ ಅಯಾನುಗಳೂ ದ್ರಾವಣಗಳಲ್ಲಿ ವ್ಯಾಪಿಸಿಕೊಳ್ಳುವ ರೀತಿಯನ್ನು ಅಧ್ಯಯನ ಮಾಡತೊಡಗಿದ. ನೀರು ತುಂಬಿದ ಸಿಲಿಂಡರಿನ ತಳದಲ್ಲಿ ತಾಮ್ರದ ಸಲ್ಫೇಟಿನ ಒಂದು ಹರಳನ್ನು ಇಟ್ಟರೆ ಅದರ ಅಯಾನುಗಳು ಕಾಲಕ್ರಮದಲ್ಲಿ ಸಿಲಿಂಡರಿನ ಮೇಲ್ಭಾಗದಲ್ಲೆಲ್ಲ ಹರಡಿಕೊಂಡು ಬಣ್ಣ ಒಂದೇ ಸಮವಾಗಿರುವ ಒಂದು ದ್ರಾವಣ ಫಲಿಸುತ್ತದೆ. ಇಲ್ಲಿ ಸಹ ಕೆಲವು ಪದಾರ್ಥಗಳು ಇನ್ನು ಕೆಲವಕ್ಕಿಂತ ಬೇಗನೆ ವ್ಯಾಪಿಸುವುವೆಂಬುದು ಗ್ರೇಯಮನ ಗಮನಕ್ಕೆ ಬಂತು. ಈ ಪ್ರಯೋಗಗಳಲ್ಲಿ ತೊಡಗಿದ್ದಾಗ ಇವನು ಒಂದು ಸ್ವಾರಸ್ಯಕರ ವಿಷಯವನ್ನು ಕಂಡ; ದ್ರಾವ್ಯ ಪದಾರ್ಥಗಳು ವ್ಯಾಪಿಸಿಕೊಳ್ಳುವಾಗ ಅವಕ್ಕೆ ಅಡಚಣೆ ಮಾಡುವಂತೆ ಒಂದು ಪಾರ್ಚ್‌ಮೆಂಟ್ ಹಾಳೆಯನ್ನಿಟ್ಟರೆ ಸ್ವಭಾವತಃ ಬೇಗ ವ್ಯಾಪಿಸಿಕೊಳ್ಳಬಲ್ಲ ವಿವಿಧ ಲವಣಗಳು, ಸಕ್ಕರೆ ಮುಂತಾದವು ಆ ಹಾಳೆಯನ್ನು ತೂರಿಕೊಂಡು ಹೋಗುವುದನ್ನೂ ನಿಧಾನವಾಗಿ ವ್ಯಾಪಿಸುವ ಅಂಟು, ಜಿಲೆಟಿನ್ ಮುಂತಾದ ಪದಾರ್ಥಗಳು ಅದನ್ನು ತೂರಿಕೊಂಡು ಹೋಗಲಾರದೆ ಅದರ ಒಂದು ಪಕ್ಕದಲ್ಲೇ ಉಳಿದುಬಿಡುವುದನ್ನೂ ಗಮನಿಸಿದ. ಪಾರ್ಚ್‌ಮೆಂಟ್ ಹಾಳೆಯ ಮೂಲಕ ತೂರಿ ಹೋಗಬಲ್ಲ ಪದಾರ್ಥಗಳು ಸಾಮಾನ್ಯವಾಗಿ ಸ್ಫಟಿಕೀಕರಿಸುವಂಥವಾದ್ದರಿಂದ ಅವನ್ನು ಸ್ಫಟಿಕೀಯ ಪದಾರ್ಥಗಳೆಂದೂ (ಕ್ರಿಸ್ಟಲಾಯಿಡ್‌ಗಳು) ಇನ್ನೊಂದು ಗುಂಪಿನ ಪದಾರ್ಥಗಳನ್ನು ಕಲಿಲ ಪದಾರ್ಥಗಳೆಂದೂ (ಕಲಾಯಿಡ್‌ಗಳು) ಇವನು ಕರೆದ. ಸರಂಧ್ರ ಪೊರೆಯಿಂದ ತಯಾರಿಸಿದ ಧಾರಕ ಒಂದರಲ್ಲಿ ಕಲಿಲ ಪದಾರ್ಥವನ್ನಿಟ್ಟು ಆ ಧಾರಕವನ್ನು ಹರಿಯುವ ನೀರಿನಲ್ಲಿಟ್ಟರೆ ಕಲಿಲದ ಜೊತೆ ಇರಬಹುದಾದ ಸ್ಫಟಿಕೀಯ ಕಶ್ಮಲಗಳೆಲ್ಲ ನೀರಿನ ಹರಿವಿಗೆ ಸಿಕ್ಕು, ಪೊರೆಯ ಮೂಲಕ ತೂರಿಕೊಂಡು, ಹೊರಕ್ಕೆ ಬಂದು, ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಬಿಡುವುವೆಂದೂ ಕಲಿಲ ಪದಾರ್ಥಗಳ ಶುದ್ಧೀಕರಣಕ್ಕೆ ಇದೊಂದು ಒಳ್ಳೆಯ ವಿಧಾನವೆಂದೂ ಗ್ರೇಯಮ್ ತೋರಿಸಿದ. ಈ ವಿಧಾನಕ್ಕೆ ಅಪೋಹನ (ಡಯಾಲಿಸಿಸ್) ಎಂಬ ಹೆಸರು ಕೊಟ್ಟ. ಇಂದು ನಾವೆಲ್ಲ ಅರಿತಿರುವಂತೆ ಕಲಿಲ ಪದಾರ್ಥಗಳಿಗೂ ಸ್ಫಟಿಕೀಯ ಪದಾರ್ಥಗಳಿಗೂ ಇರುವ ವ್ಯತ್ಯಾಸವೇನಿದ್ದರೂ ಆ ಪದಾರ್ಥಗಳ ಅಣುಗಳ ಗಾತ್ರಗಳಲ್ಲಿ ಮಾತ್ರ. ಸ್ಫಟಿಕೀಯ ಪದಾರ್ಥಗಳ ಅಣುಗಳು ಪುಟ್ಟಪುಟ್ಟ ಅಣುಗಳು. ಕಲಿಲ ಪದಾರ್ಥಗಳಾದರೋ ದೊಡ್ಡ ದೊಡ್ಡ ಅಣುಗಳಿಂದ ಮಾಡಲ್ಪಟ್ಟವು; ಇಲ್ಲವೇ ಚಿಕ್ಕ ಅಣುಗಳ ದೊಡ್ಡ ದೊಡ್ಡ ಸಮೂಹಗಳಿಂದ ಮಾಡಲ್ಪಟ್ಟವು.

ಗ್ರೇಯಮ್ ತನ್ನ ಈ ಪ್ರಮುಖ ಸಂಶೋಧನೆಗಳನ್ನು ನಡೆಸುತ್ತಿರುವಾಗಲೇ ಮಧ್ಯೆ ಮಧ್ಯೆ ಇನ್ನೂ ಹಲವಾರು ವೈಜ್ಞಾನಿಕ ಸಮಸ್ಯೆಗಳತ್ತ ಗಮನ ಹರಿಸಿದ. ಆರ್ಥೊ, ಮೆಟ ಮತ್ತು ಪೈರೊ ಫಾಸ್ಫರಿಕ್ ಆಮ್ಲಗಳ ಅಧ್ಯಯನವನ್ನು ಕೈಗೊಂಡು ಬಹುಪ್ರತ್ಯಾಮ್ಲೀಯ (ಪಾಲಿಬೇಸಿಕ್) ಆಮ್ಲಗಳಿರುವುದು ಸಾಧ್ಯವೆಂದು ತೋರಿಸಿದ. ಸ್ಫಟಿಕೀಕರಣ ಜಲಯುಕ್ತ (ವಾಟರ್ ಆಫ್ ಕ್ರಿಸ್ಟಲೈಸೇಷನ್) ಲವಣ ಹೈಡ್ರೇಟುಗಳನ್ನೂ (ಕ್ರಿಸ್ಟಲ್ ಹೈಡ್ರೇಟುಗಳು) ನೀರಿನ ಅಣುಗಳ ಬದಲಿಗೆ ಆಲ್ಕೊಹಾಲ್ ಅಣುಗಳಿರುವ ಆಲ್ಕೊಹಾಲೇಟುಗಳನ್ನೂ ಅಧ್ಯಯನ ಮಾಡಿದ. ತನ್ನ ಕೊನೆಯ ಸಂಶೋಧನ ಪತ್ರದಲ್ಲಿ ಪೆಲೇಡಿಯಮ್ ಹೈಡ್ರೈಡನ್ನು ಕುರಿತು ವರದಿ ಮಾಡಿದ. ಒಂದು ಲೋಹ ಅನಿಲ ಧಾತು ಒಂದರ ಜೊತೆ ಸಂಯೋಗ ಹೊಂದಿ ಒಂದು ಘನ ಸಂಯುಕ್ತ ಉತ್ಪತ್ತಿ ಮಾಡುವ ಮೊತ್ತಮೊದಲ ನಿದರ್ಶನ ಅದು.

1836ರಲ್ಲಿ ಥಾಮಸ್ ಗ್ರೇಯಮ್ ಲಂಡನಿನ ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ. ಲಂಡನಿನ ಕೆಮಿಕಲ್ ಸೊಸೈಟಿ ಮತ್ತು ಕ್ಯಾವೆಂಡಿಷ್ ಸೊಸೈಟಿಗಳ ಸ್ಥಾಪಕರಲ್ಲೊಬ್ಬನಾಗಿದ್ದ ಗ್ರೇಯಮ್ 1841ರಲ್ಲಿ ಕೆಮಿಕಲ್ ಸೊಸೈಟಿಯ ಪ್ರಥಮ ಅಧ್ಯಕ್ಷನಾಗಿ ಆರಿಸಲ್ಪಟ್ಟ. 1846ರಲ್ಲಿ ಕ್ಯಾವೆಂಡಿಷ್ ಸೊಸೈಟಿಯ ಅಧ್ಯಕ್ಷನಾಗಿಯೂ ಆರಿಸಲ್ಪಟ್ಟ.

(ಜಿ.ಆರ್.ಎಲ್.)

**ಗ್ರೇಯಂ, ರಾಬರ್ಟ್ :** 1735–97. ಸ್ಕಾಟ್ ಕವಿ ಮತ್ತು ರಾಜಕಾರಣಿ. ಸ್ಟರ್ಲಿಂಗ್‌ಷೀರಿನ ಗಾರ್ಟ್‌ಮೋರಿನಲ್ಲಿ, ನಿಕೋಲ್ ಗ್ರೇಯಂ ಮತ್ತು ಮಾರ್ಗರೀಟರ ಮಗನಾಗಿ ಹುಟ್ಟಿದ. ಗ್ಯಾಸ್ಗೋ ವಿಶ್ವವಿದ್ಯಾಲಯದಲ್ಲಿ ಉಚ್ಚಶಿಕ್ಷಣ ಪಡೆದು ತರುವಾಯ ಜಮೇಕಕ್ಕೆ ತೆರಳಿ ತೋಟದೊಡೆಯನಾಗಿ ಶ್ರೀಮಂತ ಜೀವನವನ್ನಾರಂಭಿಸಿದ. ಕೆಲಕಾಲ ಆಸ್ತಿನಿರ್ವಾಹಕನಾಗಿಯೂ ಕೆಲಸಮಾಡಿದ. 1784ರಲ್ಲಿ ಗ್ಯಾಸ್ಗೋ ವಿಶ್ವವಿದ್ಯಾಲಯದ ಅಧ್ಯಕ್ಷನಾಗಿ ಚುನಾಯಿತನಾದ.

1794 ರಿಂದ 96 ರವರೆಗೆ ಸ್ಟರ್ಲಿಂಗ್‌ಷೀರಿನಿಂದ ಪಾರ್ಲಿಮೆಂಟಿಗೆ ಆಯ್ಕೆಯಾಗಿ ರಾಜಕೀಯದಲ್ಲಿ ವಿಶೇಷ ಆಸ್ಥೆ ವಹಿಸಿದ. ಈತ ಮಂಡಿಸಿದ ಪ್ರಜಾಧಿಕಾರ ಮಸೂದೆ 1832ರಲ್ಲಿ ಬರಲಿದ್ದ ಸುಧಾರಣಾಮಸೂದೆಗೆ ಮುನ್ಸೂಚನೆಯಂತಿದೆ. ಇದು ಈತನ ರಾಜಕೀಯ ದೂರದೃಷ್ಟಿಗೆ ನಿದರ್ಶನ. ಈತ 1796ರಲ್ಲಿ ತನ್ನ ಹೆಸರನ್ನು ರಾಬರ್ಟ್ ಕನಿಂಗ್‌ಹ್ಯಾಂ ಗ್ರೇಯಂ ಎಂಬುದಾಗಿ ಬದಲಾಯಿಸಿಕೊಂಡ. ಫ್ರೆಂಚ್ ಕ್ರಾಂತಿಯ ಆದರ್ಶತತ್ತ್ವಗಳ ಉಜ್ವಲಪ್ರತಿಪಾದಕನಾಗಿದ್ದ ಈತ ಬರೆದ ಭಾವಗೀತೆಗಳಲ್ಲಿ ಇಫ್ ಡೌಟಿ ಡೀಡ್ಸ್ ಮೈ ಲೇಡಿ ಪ್ಲೀಸ್–ತುಂಬ ಜನಪ್ರಿಯತೆಯನ್ನು ಗಳಿಸಿದುದಲ್ಲದೆ ಈತನ ಹೆಸರನ್ನೂ ಶಾಶ್ವತಗೊಳಿಸಿದೆ.

(ಎಂ.ಎಸ್.ಎಚ್.)

**ಗ್ರೇವಿಲ್, ಚಾರ್ಲ್ಸ್ ಕ್ಯಾವೆಂಡಿಷ್ ಫಲ್ಕ್ :** 1794–1865. ದಿನಚರಿ ಸಾಹಿತ್ಯದಲ್ಲಿ ಪ್ರಸಿದ್ಧನಾದ ಇಂಗ್ಲಿಷ್ ಲೇಖಕ. ಈಟನ್ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ ವ್ಯಾಸಂಗ ಮಾಡಿದ. ಲಾರ್ಡ್ ಬೇಥರ್ಸ್ಟ್‌ನ ಆಪ್ತ ಕಾರ್ಯದರ್ಶಿಯ ಕೆಲಸ ಸಿಕ್ಕಿದ್ದರಿಂದ ಪದವೀಧರನಾಗುವ ಮುನ್ನವೇ ವ್ಯಾಸಂಗಕ್ಕೆ ಶರಣು ಹೊಡೆದ. ಅನಂತರ ಜಮೈಕದ ಕಾರ್ಯದರ್ಶಿಯ ಕಚೇರಿಯಲ್ಲಿ ಕೆಲಕಾಲ ಕೆಲಸ ಮಾಡಿದ. 1821ರಲ್ಲಿ ಪ್ರಿವಿ ಕೌನ್ಸಿಲ್ ಕಾರ್ಯಾಲಯದಲ್ಲಿ ಗುಮಾಸ್ತನಾಗಿ 40 ವರ್ಷ ಸೇವೆ ಸಲ್ಲಿಸಿದ. ಈ ಅವಧಿಯಲ್ಲಿ ಈತನಿಗೆ ನಾಲ್ಕನೆಯ ಜಾರ್ಜ್, ನಾಲ್ಕನೆಯ ವಿಲಿಯಂ ಮತ್ತು ವಿಕ್ಟೋರಿಯ ರಾಣಿ ಈ ಮೂವರ ರಾಜ್ಯಭಾರವನ್ನು ಅವಲೋಕಿಸುವ ಅವಕಾಶ ಸಿಕ್ಕಿತು. ತನ್ನ ಅನುಭವಗಳನ್ನೆಲ್ಲ ತನ್ನ ದಿನಚರಿಯಲ್ಲಿ ಈತ

ಬರೆದಿಟ್ಟಿದ್ದಾನೆ. ಸೂಕ್ಷ್ಮಗ್ರಾಹಿಯಾಗಿದ್ದ ಈತ ಅಂತರ್ದೃಷ್ಟಿಯಿಂದ ಪರಿಭಾವಿಸಿದ ಜೀವನಾನುಭವಗಳೆಲ್ಲ ಎಂಟು ಸಂಪುಟಗಳಷ್ಟಿರುವ ದಿನಚರಿಯಲ್ಲಿ ಅಡಕವಾಗಿವೆ. ಈ ಮೂವರ ಆಳಿಕೆಯ ಕಾಲದ ರಾಜಕೀಯ ಜೀವನದ ಸಮಗ್ರ ಚಿತ್ರಣವೂ ಅಲ್ಲಿದೆ. 1875ರಲ್ಲಿ ಪ್ರಕಟವಾದ ಮೂರು ಸಂಪುಟಗಳ ಪ್ರಥಮ ಭಾಗದಲ್ಲಿ ಜಾರ್ಜ್ ಮತ್ತು ವಿಲಿಯಂ ದೊರೆಗಳ ಕಾಲವನ್ನೂ ಅನಂತರ ಬಂದ ಐದು ಸಂಪುಟಗಳ ದ್ವಿತೀಯ ಭಾಗದಲ್ಲಿ ವಿಕ್ಟೋರಿಯ ರಾಣಿಯ ಕಾಲದ ಚರಿತ್ರೆಯನ್ನೂ ನೋಡಬಹುದು. ಗ್ರೇವಿಲ್ ಮೆಮೊರೀಸ್: ಎ ಜರ್ನಲ್ ಆಫ್ ದಿ ರೇನ್ಸ್ ಆಫ್ ಜಾರ್ಜ್ IV ಅಂಡ್ ವಿಲಿಯಂ IV ಎಂಬುದು ಎಂಟು ಸಂಪುಟಗಳ ಆ ದಿನಚರಿಯ ಹೆಸರು. ಬ್ರಿಟಿಷ್ ಇತಿಹಾಸಕ್ಕೆ ಈ ಕೃತಿಯೊಂದು ಆಧಾರಗ್ರಂಥವೆನ್ನಲಾಗಿದೆ.

ಸ್ಯಾಮ್ಯುಯೆಲ್ ಪೀಪ್ಸ್‌ನ ದಿನಚರಿಯನ್ನು ಬಿಟ್ಟರೆ ಗ್ರೇವಿಲ್‌ನ ದಿನಚರಿಯಷ್ಟು ಪ್ರಸಿದ್ಧವಾದ ಮತ್ತು ಶ್ರೇಷ್ಠವಾದ ಕೃತಿ ಇಂಗ್ಲಿಷ್ ದಿನಚರಿ ಸಾಹಿತ್ಯದಲ್ಲಿ ಮತ್ತೊಂದು ಇಲ್ಲವೆಂದು ವಿಮರ್ಶಕರ ಅಭಿಪ್ರಾಯ. (ಕೆ.ಬಿ.ಪಿ.)

**ಗ್ರೇವೀ, ಫ್ರಾಂಕಾಯ್ ಪಾಲ್ ಜೂಲ್ಸ್ :** 1807–91. ಫ್ರೆಂಚ್ ರಾಜಕಾರಣಿ. 1807ರ ಆಗಸ್ಟ್ 15 ರಂದು ಮಾಂಟ್–ಸೌಸ್– ವಾಡ್ರೆ ಯಲ್ಲಿ ಜನಿಸಿದ. ಪ್ಯಾರಿಸಿನಲ್ಲಿ ನ್ಯಾಯಪದವಿ ಗಳಿಸಿ ಅಲ್ಲಿಯ ನ್ಯಾಯವಾದಿಯಾಗಿ ಜೀವನವನ್ನಾರಂಭಿಸಿದ. ಈತ ಲೂಯಿ ಫಿಲಿಪ್ಪನ ವಿರೋಧಿಯಾಗಿದ್ದ. 1848ರಲ್ಲಿ ಝರ ಕ್ಷೇತ್ರದಿಂದ ಸಂವಿಧಾನ ಸಭೆಗೆ ಆಯ್ಕೆಹೊಂದಿ ಅಲ್ಲಿ 3ನೆಯ ನೆಪೋಲಿಯನನ ನೀತಿಯನ್ನು ವಿರೋಧಿಸಿದ. ಅಲ್ಲದೆ 3ನೆಯ ನೆಪೋಲಿಯನನ ಆಧಿಪತ್ಯದಲ್ಲಿ ಆಗಲಿದ್ದ ಎರಡನೆಯ ರಿಪಬ್ಲಿಕ್ ರಚನೆಯನ್ನು ವಿರೋಧಿಸಿದ. ಈತ ಸಂವಿಧಾನ ಸಭೆಯಲ್ಲಿ ತೀವ್ರಸ್ವರೂಪದ ತಿದ್ದುಪಡಿಗಳನ್ನು ಸೂಚಿಸಿದ. ಎರಡನೆಯ ರಿಪಬ್ಲಿಕ್‌ಗೆ ಅಧ್ಯಕ್ಷನೇ ಇರಕೂಡದೆಂದು ಕೂಡ ಸೂಚಿಸಿದ. ಒಂದು ವೇಳೆ ಅಂಥ ಅಧ್ಯಕ್ಷನಿದ್ದರೆ ಅವನನ್ನು ಆಯ್ಕೆ ಮಾಡುವ ಮತ್ತು ಪದಚ್ಯುತಿಗೊಳಿಸುವ ಅಧಿಕಾರ ಸಭೆಗೇ ಇರಬೇಕೆಂದು ಇವನು ಸಲಹೆ ಮಾಡಿದ. ಆದರೆ ಈ ಸಲಹೆ ಸಂಪೂರ್ಣವಾಗಿ ಕಾರ್ಯಗತವಾಗಲಿಲ್ಲ. 1851 ರಲ್ಲಿ ಈತ ದಸ್ತಗಿರಿಯಾದ. ಅನಂತರ 1868 ರವರೆಗೂ ಇವನು ರಾಜಕೀಯವನ್ನು ಪ್ರವೇಶಿಸಲಿಲ್ಲ. ನ್ಯಾಯವಾದಿ ವೃತ್ತಿಯಲ್ಲೆ ಮುಂದುವರಿದ.

1868 ರಲ್ಲಿ ಚೇಂಬರಿಗೆ ಗ್ರೇವೀಯ ಆಯ್ಕೆಯಾಯಿತು. ಮಿತಗಾಮಿ ರಿಪಬ್ಲಿಕನನ್ನಾಗಿ ಈತ ಅದರಲ್ಲಿ ಭಾಗವಹಿಸಿದ. 1871 ರಲ್ಲಿ ಇವನು ರಾಷ್ಟ್ರೀಯ ಸಭೆಯ ಅಧ್ಯಕ್ಷನಾಗಿ ಆಯ್ಕೆಯಾದ. 1876 ರಿಂದ 79 ರವರೆಗೆ ಈತ ರಾಷ್ಟ್ರೀಯ ಸಭೆಯ ಅಧ್ಯಕ್ಷನಾಗಿದ್ದ.

1879ರ ಜನವರಿ 30 ರಂದು ಅಧ್ಯಕ್ಷ ಮಾರ್ಷಲ್ ಮೆಕ್‌ಮೋಹನ್ ರಾಜೀನಾಮೆ ನೀಡಿದಾಗ ಗಣರಾಜ್ಯದ ಅಧ್ಯಕ್ಷನಾಗಿ ಈತ ಚುನಾಯಿತನಾದ. ಈ ಕಾಲದಲ್ಲಿ ಇವನು ಒಳ್ಳೆಯ ಹೆಸರು ಸಂಪಾದಿಸಿದ. ಆದ್ದರಿಂದ 1885ರ ಡಿಸೆಂಬರಿನಲ್ಲಿ ಮತ್ತೆ ಏಳು ವರ್ಷಗಳ ಅವಧಿಗೆ ಅಧ್ಯಕ್ಷನಾಗಿ ಚುನಾಯಿತನಾದ. ಇವನ ಅಳಿಯ ಡೇನಿಯಲ್ ವಿಲ್ಸನ್ ಲೀಜಿಯನ್ ಆಫ್ ಆನರ್ ಎಂಬ ಗೌರವ ಪದವಿಗಳ ನೀಡಿಕೆಯ ದುರ್ವ್ಯಾಪಾರದಲ್ಲಿ ನಿರತನಾಗಿದ್ದನೆಂಬ ಕಾರಣದಿಂದಾಗಿ ಇವನಿಗೂ ಕಳಂಕ ಅಂಟಿಕೊಂಡಿತು. ಈತ ಅಳಿಯನನ್ನು ಸಮರ್ಥಿಸುವ ನಿಲುವು ತಳೆದ. ಇವನು ಮಂತ್ರಿಮಂಡಲ ರಚಿಸಲು ಯಾರೂ ಒಪ್ಪಲಿಲ್ಲ. ಚೇಂಬರ್ ಕೂಡ ಇವನ ಬಗ್ಗೆ ಸರಿಯಾದ ಧೋರಣೆ ತಳೆಯಲಿಲ್ಲ. ಆದ್ದರಿಂದ ಈತ ರಾಜೀನಾಮೆ ನೀಡಬೇಕಾಯಿತು. ಈತ ತನ್ನ ಅಧಿಕಾರವನ್ನು ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಂಡನೆಂದೂ ತನ್ನ ಕುಟುಂಬದ ಮೇಲೆ ಅಂಧಾಭಿಮಾನ ಹೊಂದಿದ್ದನೆಂದೂ ಆಪಾದನೆಗೆ ಗುರಿಯಾದ. 1891ರ ಸೆಪ್ಟೆಂಬರ್ 9 ರಂದು ತನ್ನ ಜನ್ಮಸ್ಥಳದಲ್ಲಿ ನಿಧನ ಹೊಂದಿದ. (ಎನ್.ಎ.ಎಚ್.ಎಂ.)

**ಗ್ರೇವ್ಸ್, ರಾಬರ್ಟ್ ರ್ಯಾಂಕ :** 1895–1985. ಇಂಗ್ಲಿಷ್ ಕವಿ, ಕಾದಂಬರಿಕಾರ, ವಿಮರ್ಶಕ ಮತ್ತು ಗ್ರೀಕ್ ವಿದ್ವಾಂಸ. ಪ್ರಸಿದ್ಧ ಜರ್ಮನ್ ಇತಿಹಾಸಕಾರ ಫನ್ ರ್ಯಾಂಕನ ವಂಶಕ್ಕೆ ಸೇರಿದವ. ವಿಂಬಲ್‌ಡನ್‌ನಲ್ಲಿ ಜುಲೈ 24ರಂದು ಹುಟ್ಟಿದ. ತಂದೆ ಎ. ಪಿ. ಗ್ರೇವ್ಸ್ (1864–1931). ರಾಯಲ್ ವೆಲ್ಷ್ ಫ್ಯುಸಿಲಿಯರ್ಸ್ ವಿಭಾಗಕ್ಕೆ ಸೇರಿ ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿದ. ಯುದ್ಧಾನಂತರ ಆಕ್ಸ್‌ಫರ್ಡಿಗೆ ತೆರಳಿ ಆಧುನಿಕ ಕಾವ್ಯದ ಮೇಲೆ ಪ್ರೌಢ ಪ್ರಬಂಧ ಬರೆದು ಪದವಿ ಪಡೆದ. ಪ್ರಪ್ರಥಮವಾಗಿ ಈತ ಜಾರ್ಜಿಯನ್ ಕವಿಗಳ ಧಾಟಿಯನ್ನು ಅನುಸರಿಸಿ ಕೆಲವು ಕವನಗಳನ್ನು ಬರೆದ. ಆದರೆ ಯುದ್ಧ ಕಾಲದಲ್ಲಿ ಪಟ್ಟ ಕಟು ಅನುಭವಗಳಿಂದ ಮಾನಸಿಕ ತೊಳಲಾಟಕ್ಕೆ ಒಳಗಾದುದರಿಂದ ಈತನ ಅನಂತರದ ಕಾವ್ಯ ಹೆಚ್ಚು ಅರ್ಥಪೂರ್ಣವಾಗಿ ಮೂಡಿಬಂತು. ಈತ ತನ್ನ ಕಾವ್ಯಶೈಲಿಯನ್ನು ನಿರಂತರವಾಗಿ ಪರಿಷ್ಕರಿಸುತ್ತ, ಆತ್ಮಪರಿಶೋಧನೆಗೆ ಒಳಪಡಿಸುತ್ತ, ಪ್ರಯೋಗಗಳ ಮೂಲಕ ಅತ್ಯಂತ ವೈಯಕ್ತಿಕವಾದ ಅಭಿವ್ಯಕ್ತಿಯನ್ನು ರೂಪಿಸಿಕೊಂಡ. ಆಧುನಿಕ ಪ್ರಜ್ಞೆಯನ್ನು ಈತ ಅನನ್ಯವಾದ ರೀತಿಯಲ್ಲಿ ಮೈಗೂಡಿಸಿಕೊಂಡಿದ್ದರೂ ಯಾವ ಕಾವ್ಯ ಪಂಥವನ್ನಾಗಲೀ ಯಾವನೊಬ್ಬ ಕವಿಯ ವಿಶಿಷ್ಟ ಮಾದರಿಯನ್ನಾಗಲೀ ಅನುಸರಿಸದೆ, ಸಾಂಪ್ರದಾಯಿಕವೆನ್ನಬಹುದಾದ ಮಾರ್ಗದಲ್ಲಿ ಬೆರಗುಗೊಳಿಸುವಂಥ ಹೊಸತನವನ್ನು ಪ್ರದರ್ಶಿಸಿದ್ದಾನೆ. ಕಾವ್ಯ ಸಂಗೀತಮಯವಾಗಿ ಹೊಸೆದ ಶಬ್ದಗಳನ್ನು ಮೀರಿದಂಥದು. ಕಾವ್ಯವೆಂದರೆ ಸಂವೇದನೆ, ವಿವೇಕ; ಅನೇಕ ವೇಳೆ ಹೃದಯ ಬಿರಿಯುವಂಥ ಸಂವೇದನೆ ಎಂಬ ಈತನ ಮಾತುಗಳು ಈತನ ಕಾವ್ಯಕ್ಕೂ ಔಚಿತ್ಯಮಯವಾಗಿ ಅನ್ವಯವಾಗುತ್ತವೆ. ಆಧುನಿಕ ಕವಿಗಳಲ್ಲಿ ಈತನದು ಗಣ್ಯ ಸ್ಥಾನ. ಈತ ಲಾವಣಿ (ಬ್ಯಾಲಡ್) ಮಾದರಿಯ ಸರಳ ಕಥನಕವನಗಳನ್ನೂ ಶಿಶುಗೀತೆಗಳನ್ನೂ ಬರೆದಿದ್ದಾನೆ. ಆಧ್ಯಾತ್ಮಿಕ ಕವನಗಳನ್ನೂ ವಿಲಿಯಂ ಬ್ಲೇಕನ ಪುರಾಣ ಕಥಾಶೈಲಿಯನ್ನೂ ನೆನಪು ಮಾಡುವಂಥ ಸಂಕೀರ್ಣ, ಕ್ಲಿಷ್ಟ, ವೈಚಾರಿಕ ಕವನಗಳನ್ನೂ ಬರೆದಿದ್ದಾನೆ. ಪ್ರಣಯದ ದುರಂತ ಅನುಭವಗಳು, ಬಾಲ್ಯದ ಮುಗ್ಧ ಹಂಬಲ, ಅದ್ಭುತ ಘಟನೆಗಳಿಂದ ಕೂಡಿದ ಅಲೌಕಿಕ ಸನ್ನಿವೇಶಗಳು – ಇವು ಇವನ ಕಾವ್ಯಕ್ಕೆ ವೈವಿಧ್ಯಮಯ ವಸ್ತುವನ್ನು ಒದಗಿಸಿವೆ.

ಗ್ರೇವ್ಸ್ ಮುಖ್ಯವಾಗಿ ಕವಿಯೆಂದು ಪ್ರಸಿದ್ಧನಾಗಿದ್ದರೂ ಈತನ ಐತಿಹಾಸಿಕ ಕಾದಂಬರಿಗಳು, ವೈಚಾರಿಕ ಗದ್ಯಗ್ರಂಥಗಳು ಈತನಿಗೆ ಅಪಾರ ಖ್ಯಾತಿ ತಂದಿವೆ. ಈತನ ಆತ್ಮಕಥೆ ಗುಡ್‌ಬೈ ಟು ಆಲ್ ದಟ್ (1929)– ಒಂದು ಶ್ರೇಷ್ಠ ಗ್ರಂಥ. ಇದರಲ್ಲಿ ಸಮಕಾಲೀನ ಸಾಹಿತಿಗಳನ್ನು ಕುರಿತ ನಿಷ್ಠುರ, ವ್ಯಂಗ್ಯ ಟೀಕೆ ಇದೆ. ಯುದ್ಧಕಾಲದಲ್ಲಿ ತಾನು ಕಂಡುಂಡ ವ್ಯಾಕುಲಗಳ ಪರಿಯನ್ನು ತುಂಬ ಸೊಗಸಾಗಿ ಇದರಲ್ಲಿ ವರ್ಣಿಸಿದ್ದಾನೆ. ಈ ಗ್ರಂಥಕ್ಕೆ ಉತ್ತರ ರೂಪವಾಗಿ ಟು ರಿಟರ್ನ್ ಟು ಆಲ್ ದಟ್ (1930) ಎಂಬ ಆತ್ಮಕಥಾನಕವನ್ನು ಈತನ ತಂದೆ ಎ.ಪಿ. ಗ್ರೇವ್ಸ್ ಬರೆದಿದ್ದಾನೆಂಬುದನ್ನು ಇಲ್ಲಿ ನೆನೆಯಬಹುದು.

ಕಾದಂಬರಿಗಳನ್ನು ಬರೆದದ್ದು ಕೇವಲ ಹಣ ಸಂಪಾದನೆಗಾಗಿಯೇ ವಿನಾ ಕೀರ್ತಿಗಾಗಿಯಲ್ಲ ಎಂದು ಹೇಳಿಕೊಂಡಿದ್ದರೂ ಗ್ರೇವ್ಸ್ ಅಮೂಲ್ಯ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾನೆ. ಚಿಕ್ಕಂದಿನಿಂದಲೂ ಈತ ಬೆಳೆಸಿಕೊಂಡ ಕುತೂಹಲ ದೃಷ್ಟಿ, ಅನಂತರ ಗಳಿಸಿದ ಅಭಿಜಾತ ಪಾಂಡಿತ್ಯ, ಐತಿಹಾಸಿಕ ಪ್ರಜ್ಞೆ – ಈತನ ಕಾದಂಬರೀ



ರಚನೆಗೆ ಸ್ಫೂರ್ತಿ ನೀಡಿವೆ. ಇತಿಹಾಸದ ಯಾವುದೋ ಕಾಲದೇಶಗಳಲ್ಲಿನ ಘಟನಾವಳಿಗಳು, ಪಾತ್ರಗಳು, ಪರಿಸರ – ಎಲ್ಲವನ್ನೂ ತನ್ನ ಕಾವ್ಯಾತ್ಮಕವಾದ ವಿಭಾವನೆಯ ಮೂಲಕ ಸಂಘಟಿಸಿ, ರಸಭರಿತ ಕಾದಂಬರಿಗಳನ್ನು ಈತ ನೇಯ್ದಿದ್ದಾನೆ. ಪುರಾತನ, ಸೀಜûರೋತ್ತರ ರೋಮನ್ ಇತಿಹಾಸವನ್ನು ಚಿತ್ರಿಸುವ ಐ, ಕ್ಲಾಡಿಯಸ್ (1934), ಕ್ಲಾಡಿಯಸ್ ದಿ ಗಾಡ್ ಇವುಗಳು ಒಟ್ಟಾಗಿ ಒಂದು ಕಲಾಪರಿಪೂರ್ಣವಾದ ಕಾದಂಬರೀ ಚಕ್ರವೆನಿಸಿಕೊಂಡಿವೆ. ಮೊದಲ ಕಾದಂಬರಿಗೆ ಹಾತಾರನ್‌ಡನ್ ಮತ್ತು ಜೇಟ್ ಬ್ಲ್ಯಾಕ್ ಬಹುಮಾನಗಳು ಬಂದಿವೆ (1934). ಇವಲ್ಲದೆ ಬೈಜಾಂಟಿಯಂನ ಚರಿತ್ರೆಯನ್ನು ಆಧರಿಸಿ ಬರೆದ ಕೌಂಟ್ ಬೆಲಿಸೇರಿಯಸ್, ಮಿಲ್ಟನ್ ಕವಿಯ ಜೀವನವನ್ನು ಕುರಿತ ವೈಫ್ ಟು ಮಿಲ್ಟನ್, ಹೋಮರನನ್ನು ಕುರಿತ ಹೋಮರ್ಸ್ ಡಾಟರ್ – ಮುಂತಾದ ಕಾದಂಬರಿಗಳನ್ನೂ ಬರೆದಿದ್ದಾನೆ. ಕಿಂಗ್ ಜೀಸಸ್ (1946), ಸೆವೆನ್ ಡೇಸ್ ಇನ್ ನ್ಯೂ ಕ್ರೀಟ್ (1949), ದಿ ವೈಟ್ ಗಾಡೆಸ್ (1947) ಮುಂತಾದ ಕೃತಿಗಳಲ್ಲಿ ಈತನ ಗ್ರೀಕ್ ಪಾಂಡಿತ್ಯ ವ್ಯಕ್ತವಾಗಿದೆ. ತನ್ನ ದಿ ವೈಟ್ ಗಾಡೆಸ್ ಎಂಬುದು ಕಾವ್ಯೈತಿಹ್ಯಕ್ಕೆ ಬರೆದ ಒಂದು ಐತಿಹಾಸಿಕ ವ್ಯಾಕರಣ – ಎಂದು ಗ್ರೇವ್ಸ್ ಹೇಳಿಕೊಂಡಿದ್ದಾನೆ. ಕ್ರೈಸ್ತ ಪುರಾಣೇತಿಹಾಸಗಳಿಗೆ ಸಂಬಂಧಿಸಿದ ಈತನ ವೈದುಷ್ಯಪೂರ್ಣ, ವೈಚಾರಿಕ ಗ್ರಂಥಗಳೂ ಉಜ್ವಲ ಗ್ರೀಕ್ ಭಾಷಾಂತರಗಳೂ ಇವನ ಬಹುಮುಖ ಪ್ರತಿಭೆಯ ಪ್ರತೀಕಗಳಾಗಿವೆ. ಪೊಯೆಟಿಕ್ ಅನ್‌ರೀಸನ್ (1925), ಕ್ರೌನಿಂಗ್ ಪ್ರಿವಿಲೆಜ್ (1955) – ಇವು ಈತನ ಪ್ರಸಿದ್ಧ ವಿಮರ್ಶನ ಗ್ರಂಥಗಳು. ಈತನ ಸಮಗ್ರ ಕವನಗಳ ಸಂಕಲನ 1959ರಲ್ಲಿ ಬೆಳಕು ಕಂಡಿತು.

ಡಬ್ಲ್ಯು. ಎಚ್. ಆಡೆನ್ನನ ಅನಂತರ ಈತ 1961ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಕಾವ್ಯ ಪ್ರಾಧ್ಯಾಪಕನಾದ. 1970ರ ದಶಕದಲ್ಲಿ ಇವನ ಪ್ರತಿಭಾಶಕ್ತಿ ಕುಂದಿತಲ್ಲದೆ ಜೀವಿತದ ಕಡೆಯ ಹತ್ತು ವರ್ಷಗಳ ಕಾಲ ಈತ ವಯೋ ಸಹಜವಾದ ಮನೋವ್ಯಾಧಿಯಿಂದ ಬಳಲಿದ. 1985ರ ಡಿಸೆಂಬರ್ 7 ರಂದು ಈತ ನಿಧನನಾದ. (ಎಚ್.ಕೆ.ಆರ್.)

**ಗ್ರೇಷಿಯನ್ :** 359–83. ರೋಮನ್ ಚಕ್ರವರ್ತಿ. ವ್ಯಾಲೆಂಟಿನಿಯನ್‌ನ ಮಗ. ಪೆನೋನಿಯದ (ಈಗಿನ ಹಂಗರಿ, ಯೂಗೋಸ್ಲಾವಿಯಗಳ ಭಾಗ) ಸಿರ್ಮಿಯಮಿನಲ್ಲಿ ಹುಟ್ಟಿದ. ವ್ಯಾಲೆಂಟಿನಿಯನ್‌ನಿಗೆ ಕಾನ್‌ಸ್ಟೆಂಟಿನ ಮತ್ತು ಜಸ್ಟಿನ ಎಂಬ ಇಬ್ಬರು ರಾಣಿಯರಿದ್ದರು. ಗ್ರೇಷಿಯನ್ ಕಾನ್‌ಸ್ಟೆಂಟಿನಳ ಮಗ. 2ನೆಯ ವ್ಯಾಲೆಂಟಿನಿಯನ್ ಜಸ್ಟಿನಳ ಮಗ. ಇವರಿಬ್ಬರೂ ಅನಂತರ ರೋಂ ಸಾಮ್ರಾಜ್ಯದ ಬೇರೆಬೇರೆ ಭಾಗಗಳಿಗೆ ಚಕ್ರವರ್ತಿಗಳಾದರು.

ವ್ಯಾಲೆಂಟಿನಿಯನ್ ಗ್ರೇಷಿಯನನನ್ನು 367ರಲ್ಲಿ ಆಗಸ್ಟಸ್ ಎಂದು ಘೋಷಿಸಿದ. ಆಸೋನಿಯಸನಿಂದ ಶಿಕ್ಷಣ ಕೊಡಿಸಿದ. ಗ್ರೇಷಿಯನ್ 374ರಲ್ಲಿ 2ನೆಯ ಕಾನ್‌ಸ್ಟಾಂಟಿಯಸನ ಮಗಳಾದ ಹನ್ನೆರಡು ವರ್ಷ ವಯಸ್ಸಿನ ಕಾನ್‌ಸ್ಟಾಂಷಿಯಳನ್ನು ವಿವಾಹವಾದ. ಮರುವರ್ಷ ವ್ಯಾಲೆಂಟಿನಿಯನ್ ಮರಣ ಹೊಂದಿದ. ಗ್ರೇಷಿಯನ್ ರೋಮನ್ ಸಾಮ್ರಾಜ್ಯದ ಇಡೀ ಪಶ್ಚಿಮ ಪ್ರದೇಶದ ಚಕ್ರವರ್ತಿಯಾದ. ಆದರೆ ಅದೇ ಸಮಯದಲ್ಲಿ ಅವನ ತಂದೆಯ ಸೈನ್ಯದ ಒಂದು ಭಾಗ ಬಂಡೆದ್ದು ಗ್ರೇಷಿಯನನ ನಾಲ್ಕು ವರ್ಷ ವಯಸ್ಸಿನ ಮಲತಮ್ಮ ವ್ಯಾಲೆಂಟಿನಿಯನನ್ನು ಚಕ್ರವರ್ತಿಯನ್ನಾಗಿ ಘೋಷಿಸಿತು. ಗ್ರೇಷಿಯನ್ ಅವನನ್ನೂ ಚಕ್ರವರ್ತಿಯೆಂದು ಪುರಸ್ಕರಿಸಿ ಯುದ್ಧ ತಪ್ಪಿಸಿದ. ಅವನು ತನ್ನ ತಾಯಿಯೊಂದಿಗೆ ಮಿಲಾನ್ ನಗರದಿಂದ ಆಡಳಿತವನ್ನು ನಡೆಸುವಂತೆ ಏರ್ಪಡಿಸಿದ. ಒಟ್ಟಿನಲ್ಲಿ ರೋಮನ್ ಸಾಮ್ರಾಜ್ಯ ಗ್ರೇಷಿಯನ್, ವ್ಯಾಲೆಂಟಿನಿಯನ್, ಇವರಿಬ್ಬರ ಚಿಕ್ಕಪ್ಪನಾದ ವ್ಯಾಲೆನ್ಸ್ – ಈ ಮೂವರು ಚಕ್ರವರ್ತಿಗಳ ಆಳಿಕೆಗೊಳಗಾಗಿತ್ತು.

ರೈನ್ ಗಡಿಯಾಚೆಯ ಅನೇಕ ಅನಾಗರಿಕ ತಂಡಗಳು ಆಗಾಗ್ಗೆ ರೋಮನ್ ಸಾಮ್ರಾಜ್ಯದೊಳಗೆ ನುಗ್ಗಿ ಕಿರುಕುಳ ಕೊಡುತ್ತಿದ್ದವು. ಗ್ರೇಷಿಯನ್ ಆ ತಂಡಗಳನ್ನು ತಡೆದು ಅವುಗಳ ಉಪದ್ರವವನ್ನು ನಿವಾರಿಸುವುದರಲ್ಲೆ ಹೆಚ್ಚು ಕಾಲ ಕಳೆದ. ಆಗಾಗ ಇಟಲಿಗೆ ಬಂದು ಹೋಗುತ್ತಿದ್ದರೂ ಅವನ ಗಮನ ಗಾಲ್ ಪ್ರದೇಶದಲ್ಲಿ ಕೇಂದ್ರೀಕೃತವಾಗಿತ್ತು. ಈ ಮಧ್ಯೆ ಗಾತಿಕ್ ಬಣಗಳಿಂದ ಸಾಮ್ರಾಜ್ಯದ ಪ್ರಾಚ್ಯ ಭಾಗಗಳಿಗೆ ಉಪದ್ರವ ತಲೆದೋರಿತು. 378ರಲ್ಲಿ ಗ್ರೇಷಿಯನನ ಚಿಕ್ಕಪ್ಪನಾದ ವ್ಯಾಲೆನ್ಸ್ ಏಡ್ರಿಯಾನೋಪಲ್ ಕದನದಲ್ಲಿ ಅಜಾಗರೂಕತೆಯಿಂದ ಶತ್ರುಶಿಬಿರದ ಬಳಿಗೆ ಮಿತ ಬೆಂಗಾವಲು ಪಡೆಯೊಡನೆ ಮುಂದುವರಿದು ಗಾಯಗೊಂಡು ನರಳುತ್ತಿದ್ದಾಗ ಶತ್ರುಗಳು ಅವನ ಸಮೇತ ಆ ಪ್ರದೇಶವನ್ನೆಲ್ಲ ಬೆಂಕಿಗೆ ಆಹುತಿ ಮಾಡಿದರು. ಈ ಘಟನೆ ರೋಮನ್ ಸಾಮ್ರಾಜ್ಯದ ಪತನ ಸನ್ನಿಹಿತವಾಯಿತೆಂಬುದರ ಸೂಚನೆಯಾಗಿತ್ತೆಂದು ಹಲವು ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ವಾರ್ತೆ ಗ್ರೇಷಿಯನನಿಗೆ ತಲುಪಿದರೂ ಅವನು ದೂರದಲ್ಲಿದ್ದುದರಿಂದ ವ್ಯಾಲೆನ್ಸನ ಸಹಾಯಕ್ಕೆ ತತ್‌ಕ್ಷಣ ಧಾವಿಸಲಾಗಲಿಲ್ಲ.

ಈ ದುರ್ಭರ ಸನ್ನಿವೇಶದಲ್ಲಿ ರೋಮನ್ ಸಾಮ್ರಾಜ್ಯದ ಪ್ರತಿಷ್ಠೆಯನ್ನು ಎತ್ತಿಹಿಡಿಯಲು ಗ್ರೇಷಿಯನ್ ನಿಶ್ಚಯಿಸಿದ. ಕ್ರೂರಿಗಳೂ ಯುದ್ಧಪ್ರಿಯರೂ ಆದ ಶತ್ರುಗಳನ್ನು ಅಡಗಿಸಲು ಸಾಹಸಿಯಾದ ನೇತಾರನ ಆವಶ್ಯಕತೆಯಿತ್ತು. ಗ್ರೇಷಿಯನನ ಆಳಿಕೆಯಲ್ಲಿದ್ದ ಪ್ರದೇಶಗಳು ಶತ್ರುಗಳ ದಾಳಿಗೆ ಒಳಗಾಗುತ್ತಿದ್ದುವಾದ್ದರಿಂದ ಈತ ಅಲ್ಲಿಂದ ಬಹುಕಾಲ ಕದಲುವಂತಿರಲಿಲ್ಲ. ಗಾತಿಕ್ ಯುದ್ಧವನ್ನು ಮುಂದುವರಿಸಲು ಹೆಚ್ಚು ಕಾಲವೂ ಅನಿರ್ಬಂಧಿತ ಅಧಿಕಾರವೂ ದೃಢಮನಸ್ಸೂ ಅನಿವಾರ್ಯವಾಗಿ ಆವಶ್ಯಕವಾಗಿದ್ದವು. ತನ್ನ ಅಧಿಕಾರ ಮತ್ತು ಪ್ರತಿಷ್ಠೆಗಿಂತ ರೋಮನ್ ಸಾಮ್ರಾಜ್ಯದ ಗೌರವವನ್ನು ಕಾಪಾಡುವುದು ಅತಿ ಮುಖ್ಯ ಕರ್ತವ್ಯವೆಂದು ಈತ ಬಗೆದು, ವೀರಯೋಧನೊಬ್ಬನನ್ನು ಆರಿಸಿ ಅವನಿಗೆ ವ್ಯಾಲೆನ್ಸ್‌ನ ಪದವಿಯನ್ನು ಕೊಡಲು ತೀರ್ಮಾನಿಸಿದ. ಮುಂದೆ ರೋಂ ಹಾಗೂ ಕೆಥೊಲಿಕ್ ಚರ್ಚ್ ಇತಿಹಾಸದ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬನಾದ ತೀಯೊಡೋಷಿಯಸನ ವ್ಯಕ್ತಿತ್ವ ಗ್ರೇಷಿಯನನ ಗಮನ ಸೆಳೆಯಿತು. 379ರಲ್ಲಿ ಗ್ರೇಷಿಯನ್ ಅವನನ್ನು ಸಿರ್ಮಿಯಮಿಗೆ ಬರಮಾಡಿಕೊಂಡು ಅವನಿಗೆ ಥ್ರೇಸ್, ಏಷ್ಯ, ಈಜಿಪ್ಟ್ ಮತ್ತು ಮ್ಯಾಸಿಡೋನಿಯಗಳ ಆಡಳಿತ ವಹಿಸಿ ಸಾಮ್ರಾಜ್ಯ ಪದವಿಯನ್ನು ಕೊಟ್ಟು ಗೌರವಿಸಿ ಶತ್ರುಗಳನ್ನು ನಿಗ್ರಹಿಸುವ ಕಾರ್ಯವನ್ನು ಅವನಿಗೆ ವಹಿಸಿದ. ತನಗೆ ವಹಿಸಿದ ಜವಾಬ್ದಾರಿಯ ಕಾರ್ಯವನ್ನು ತೀಯೊಡೋಷಿಯಸ್ ಯಶಸ್ವಿಯಾಗಿ ನಿರ್ವಹಿಸಿದ. ಅವನು ಅನೇಕ ವರ್ಷಗಳ ಕಾಲ ನಿರಂತರವಾಗಿ ಹೋರಾಡಿ ಕೊನೆಗೆ 380ರಲ್ಲಿ ಶತ್ರುಗಳನ್ನು ಸಂಪೂರ್ಣವಾಗಿ ಸೋಲಿಸಿದ.

ತನ್ನ ಆಳಿಕೆಯ ಉತ್ತರಾರ್ಧದಲ್ಲಿ ಗ್ರೇಷಿಯನನ ಜನಪ್ರಿಯತೆ ಕುಂದತೊಡಗಿತು. ಇವನು ಬಿಷಪ್ ಆಂಬ್ರೋಸನ ಪ್ರಭಾವಕ್ಕೊಳಗಾಗಿ ಅತ್ಯಂತ ಧಾರಾಳ ನೀತಿಯನ್ನನುಸರಿಸತೊಡಗಿದ. ಪಾಂಟಿಫೆಕ್ಸ್ ಮ್ಯಾಕ್ಸಿಮಸ್ ಎಂಬ ಬಿರುದನ್ನು ತ್ಯಜಿಸಿದ. ಅಲ್ಲದೆ ರೋಮನ್ ಸೆನೆಟ್ ಮುಂದಿದ್ದ ವಿಜಯ ಪ್ರತಿಮೆಯನ್ನು ತೆಗೆಯಲು ತೀರ್ಮಾನಿಸಿದ. ಇವನು ಈ ತೀರ್ಮಾನ ಬದಲಿಸುವಂತೆ ಸೆನೆಟ್ ಸದಸ್ಯರು ಮಾಡಿದ ಪ್ರಯತ್ನ ಫಲಕಾರಿಯಾಗಲಿಲ್ಲ. 383ರಲ್ಲಿ ಇವನ ರಾಣಿಯಾದ ಕಾನ್‌ಸ್ಟಾಂಷಿಯ ಮರಣ ಹೊಂದಿದಳು. ಗ್ರೇಷಿಯನ್ ಬೇಟೆ ಮತ್ತು ಇತರ ವಿನೋದಗಳಲ್ಲಿ ಹೆಚ್ಚು ಕಾಲ ಕಳೆಯತೊಡಗಿದ. ಇವನ ಆಮೋದಪ್ರಮೋದಗಳಿಗೆ ಆಪ್ತಮಿತ್ರರು ಉತ್ತೇಜನ ಕೊಡುತ್ತಿದ್ದರು. ಗ್ರೇಷಿಯನ್ ತನ್ನ ಆಳಿಕೆಯ ಪ್ರಾರಂಭದಲ್ಲಿ ಸೈನಿಕರ ಮೇಲ್ವಿಚಾರಣೆ ಮತ್ತು ಅದರ ಮೇಲ್ಮೆಗೆ ಹೆಚ್ಚು ಗಮನ ನೀಡುತ್ತಿದ್ದ. ಕ್ರಮೇಣ ಇದರಿಂದ ವಿಮುಖನಾದ್ದರಿಂದ ಇವನ ಸೈನಿಕರಲ್ಲಿ ಅತೃಪ್ತಿ ಮೂಡಿತು. ಅಲ್ಲದೆ ತಾನು ಸೋಲಿಸಿದ ಸಿಥಿಯನ್ ಪಂಗಡದ ಒಂದು ಗುಂಪಿನವರನ್ನು ತನ್ನ ಅಂಗರಕ್ಷಕ ದಳಕ್ಕೆ ನೇಮಿಸಿಕೊಂಡು ಅವರೊಡನೆ ಸಲುಗೆಯಿಂದ ವರ್ತಿಸಲು ಪ್ರಾರಂಭಿಸಿದ. ಮಿಗಿಲಾಗಿ ತಾನೂ ಸಿಥಿಯನರ ಉಡುಗೆ ತೊಡಲು ಪ್ರಾರಂಭಿಸಿದ. ಇದರಿಂದ ಇವನ ಸೈನಿಕರಲ್ಲೂ ಪ್ರಜೆಗಳಲ್ಲೂ ಅತೃಪ್ತಿ ಉಂಟಾಯಿತು.

ಅತೃಪ್ತ ಸೈನಿಕರು 383ರಲ್ಲಿ ಬ್ರಿಟನಿನಲ್ಲಿದ್ದ ಗ್ರೇಷಿಯನನ ದಳಪತಿ ಮ್ಯಾಕ್ಸಿಮಸನನ್ನು ಸಾಮ್ರಾಟನನ್ನಾಗಿ ಘೋಷಿಸಿದರು. ಮ್ಯಾಕ್ಸಿಮಸ್ ಸೈನ್ಯ ಗಾಲ್ ಪ್ರದೇಶಕ್ಕೆ ನುಗ್ಗಿತು. ಇದನ್ನು ಎದುರಿಸಲು ಗ್ರೇಷಿಯನ್ ಪ್ಯಾರಿಸಿನವರೆಗೆ ಹೋದ. ಇವನ ಸೈನ್ಯ ಇವನನ್ನು ತ್ಯಜಿಸಿ ಮ್ಯಾಕ್ಸಿಮಸನ ಕಡೆಗೆ ಸೇರಿಕೊಂಡಿತು. ಗ್ರೇಷಿಯನ್ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಕೊಲೆಗೆ ಈಡಾದ (383ರ ಆಗಸ್ಟ್ 25).

ಗ್ರೇಷಿಯನ್ ಒಳ್ಳೆಯ ವಾಗ್ಮಿ, ಸಾಹಿತ್ಯಪ್ರಿಯ. ಯುದ್ಧ ಮತ್ತು ಬೇಟೆಯಲ್ಲಿ ಇವನಿಗೆ ವಿಶೇಷ ಅಭಿರುಚಿ ಇತ್ತು. ಅಶ್ವಾರೋಹಣ, ಬಿಲ್ಲು ವಿದ್ಯೆ, ಭರ್ಜಿ ಎಸೆತ ಮೊದಲಾದವುಗಳಲ್ಲಿ ಈತ ಪ್ರವೀಣನಾಗಿದ್ದ. ಸುಂದರವಾದ ಅರಮನೆಯನ್ನೂ ವಿಶಾಲವಾದ ಉದ್ಯಾನಗಳನ್ನೂ ಇವನು ನಿರ್ಮಾಣ ಮಾಡಿಸಿದ್ದ. ಪ್ರಾಣಿಗಳನ್ನು ಸಂಗ್ರಹಿಸುವುದರಲ್ಲೂ ಇವನಿಗೆ ವಿಶೇಷ ಆಸಕ್ತಿ ಇತ್ತು. ಇವನ ಸಂಗ್ರಹಾಲಯದಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಮೃಗಪಕ್ಷಿಗಳಿದ್ದವು. ಈತ ಕೆಥೊಲಿಕ್ ಪಂಥದ ನಮ್ರ ಅನುಯಾಯಿಯಾಗಿದ್ದ. ಆಪ್ತವರ್ಗದವರು ಇವನಲ್ಲಿದ್ದ ಹಲವು ದೋಷಗಳನ್ನು ಪ್ರಚೋದಿಸದೆ ಯುಕ್ತ ಸಲಹೆಗಳನ್ನು ನೀಡಿದ್ದ ಪಕ್ಷದಲ್ಲಿ ಗ್ರೇಷಿಯನ್ ಚಕ್ರವರ್ತಿ ಸಮರ್ಥ ರೋಮನ್ ಸಾಮ್ರಾಟರಲ್ಲೊಬ್ಬನಾಗುತ್ತಿದ್ದನೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. (ಜಿ.ಆರ್.ಆರ್.)

**ಗ್ರೇಸ್, ವಿಲಿಯಂ ಗಿಲ್ಬರ್ಟ್ :** 1848–1945. ವಿಕ್ಟೋರಿಯ ಯುಗದ ಪ್ರಸಿದ್ಧ ಇಂಗ್ಲಿಷ್ ಕ್ರಿಕೆಟ್ ಕ್ರೀಡಾಪಟು. ತನ್ನ ಐವತ್ತು ವರ್ಷಗಳ ಚಟುವಟಿಕೆಗಳಿಂದ ಕ್ರಿಕೆಟ್ ಅನ್ನು ಇಂಗ್ಲೆಂಡಿನ ರಾಷ್ಟ್ರೀಯ ಕ್ರೀಡೆಯನ್ನಾಗಿ ಮಾಡಿದ ಪ್ರತಿಭಾವಂತ. ಹುಟ್ಟಿದ್ದು ಬ್ರಿಸ್ಟಲ್ ಹತ್ತಿರದ ಡೌನೆಂಡ್‌ನಲ್ಲಿ. ಲಂಡನಿನ ಸೇಂಟ್ ಬಾರ್ತಲೊಮೊದಲ್ಲಿ ವೈದ್ಯ ಶಿಕ್ಷಣ ಮುಗಿಸಿ ಬ್ರಿಸ್ಟಲಿನಲ್ಲಿ ಖಾಸಗಿ ವೈದ್ಯನಾಗಿ ಕೆಲಸ ಮಾಡತೊಡಗಿದ.

ಗ್ರೇಸನ ತಂದೆ ವೈದ್ಯನಾಗಿದ್ದುದರ ಜೊತೆಗೆ ಒಳ್ಳೆಯ ಕ್ರಿಕೆಟ್ ಆಟಗಾರನೂ ಆಗಿದ್ದ. ಅವನೇ ತನ್ನ ಮಗನನ್ನು ಕ್ರಿಕೆಟ್ ಕ್ರೀಡಾ ಜಗತ್ತಿಗೆ ತಂದ. ಗ್ಲಾಸ್ಟರ್‌ಷೈರ್ ಪರವಾಗಿ 1865ರಲ್ಲಿ ಮೊದಲಿಗೆ ಕ್ರಿಕೆಟ್ ದಾಂಡನ್ನು ಹಿಡಿದ ಗ್ರೇಸ್ 1908 ರವರೆಗೂ, ಸುಮಾರು

43 ವರ್ಷಗಳ ಕಾಲ, ವೈಭವದಿಂದ ಆಟವಾಡಿ ಅನೇಕ ದಾಖಲೆಗಳನ್ನು ಸ್ಥಾಪಿಸಿದ. ಪ್ರಸಿದ್ಧ ಕ್ರೀಡಾಪಟುವಾಗಿ ಗ್ರೇಸ್ ಕ್ರಿಕೆಟ್ ಜಗತ್ತಿನಲ್ಲಿ ಸಾಧಿಸಿದ್ದು ಅಂದರೆ 13 ಬಾರಿ ಇಂಗ್ಲೆಂಡ್ ಕ್ರಿಕೆಟ್ ಟೀಮಿನ ಕ್ಯಾಪ್ಟನ್ ಆಗಿದ್ದುದು, 22 ಮುಖ್ಯ ಕ್ರಿಕೆಟ್ ಟೆಸ್ಟುಗಳಲ್ಲಿ ಭಾಗವಹಿಸಿದ್ದುದು, 54,896 ರನ್ನುಗಳನ್ನು ಮಾಡಿ, 2,876 ವಿಕೆಟ್ ಗಳಿಸಿ, 871 ಕ್ಯಾಚುಗಳನ್ನು ಹಿಡಿದದ್ದು. ಒಂದೇ ಪಂದ್ಯದಲ್ಲಿ ಈತ ಎರಡು ಶತಕ ಗಳಿಸಿದ ಮೊದಲನೆ ಕ್ರಿಕೆಟ್ ಕ್ರೀಡಾಪಟುವೆಂದು ಹೆಸರು ಗಳಿಸಿದ. 1,000 ರನ್ನುಗಳನ್ನು ಎರಡು ಸಾರಿ ಮಾಡಿದ. ಆಟದ ಒಂದೇ ಸರಣಿಯಲ್ಲಿ (1873) 100 ವಿಕೆಟ್‌ಗಳಿಸಿ, ಮೊದಲನೆಯ ದರ್ಜೆಯ ಕ್ರಿಕೆಟ್‌ನಲ್ಲಿ 100 ಶತಕಗಳನ್ನು ಗಿಟ್ಟಿಸಿದ. 1880ರಲ್ಲಿ ಆಸ್ಟ್ರೇಲಿಯದೊಡನೆ ಆಡಿದ ಪ್ರಥಮ ಕ್ರಿಕೆಟ್ ಪಂದ್ಯದಲ್ಲಿ ಭಾಗವಹಿಸಿದ. *

**ಗ್ರೋಟ್, ಜಾರ್ಜ್ :** 1794–1871. ಗ್ರೀಸ್ ದೇಶದ ಇತಿಹಾಸವನ್ನು 12 ಸಂಪುಟಗಳಲ್ಲಿ ಬರೆದು ಪ್ರಕಟಿಸಿದ ಇಂಗ್ಲಿಷ್ ಇತಿಹಾಸಕಾರ. 1794ರ ನವೆಂಬರ್ 17ರಂದು ಜನಿಸಿದ. ಈತನ ಪೂರ್ವಿಕರು ಜರ್ಮನರು. ಇವನ ತಂದೆ ಖಾಸಗಿ ಬ್ಯಾಂಕ್ ಒಂದನ್ನು ನಡೆಸುತ್ತಿದ್ದ. ಹದಿನಾರನೆಯ ವಯಸ್ಸಿನಲ್ಲಿ ತನ್ನ ತಂದೆಯ ಸಂಸ್ಥೆಯೊಂದನ್ನು ಸೇರಿದ ಜಾರ್ಜ್ ಗ್ರೋಟ್‌ಗೆ ವಿಶ್ವವಿದ್ಯಾಲಯ ಶಿಕ್ಷಣ ದೊರೆಯಲಿಲ್ಲವಾದರೂ ಪ್ರಾಚೀನ ಗ್ರೀಕ್ ಸಾಹಿತ್ಯ, ಸಂಸ್ಕೃತಿ, ಕಲೆಗಳು, ಆಧ್ಯಾತ್ಮಶಾಸ್ತ್ರ, ರಾಜಕೀಯ ಅರ್ಥಶಾಸ್ತ್ರ–ಇವು ಈತನ ಒಲವಿನ ವಿಷಯಗಳಾಗಿದ್ದುವು. ಇವಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಈತ ಅಧ್ಯಯನ ಮಾಡಿದ. ತತ್ತ್ವಶಾಸ್ತ್ರಜ್ಞ ಜೇಮ್ಸ್ ಮಿಲ್ಲನ ಸ್ನೇಹ ಇವನಿಗೆ ಲಭಿಸಿತು. ಅವನನ್ನೂ ಜೆರೆಮಿ ಬೆಂಥಮ್‌ನನ್ನೂ ಈತ ಗುರುಗಳಂತೆ ಭಾವಿಸಿದ.

ಲಂಡನ್ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಯೋಜನೆಯಲ್ಲಿ ಈತ ಆಸಕ್ತಿವಹಿಸಿದ್ದ. 1827ರಿಂದ 1830ರವರೆಗೆ ಆ ಸಂಸ್ಥೆಯ ಮಂಡಲಿಯ ಸದಸ್ಯನಾಗಿದ್ದ. ಜೆ.ಎಸ್.ಮಿಲ್ಲನೊಂದಿಗೆ ಈತನಿಗೆ ಭಿನ್ನಾಭಿಪ್ರಾಯ ಬಂದದ್ದರಿಂದ ಆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ. 1832 ರಿಂದ 1841 ರವರೆಗೆ ಈತ ಲಂಡನ್ ನಗರದಿಂದ ಪಾರ್ಲಿಮೆಂಟ್ ಸದಸ್ಯನಾಗಿದ್ದ. 1841ರಲ್ಲಿ ರಾಜಕೀಯದಿಂದ ನಿವೃತ್ತನಾದ. ಮತ್ತೆ ಇತಿಹಾಸ ರಚನೆಯಲ್ಲಿ ನಿರತನಾದ. ಗ್ರೀಕ್ ಇತಿಹಾಸದ ಹನ್ನೆರಡು ಸಂಪುಟಗಳು 1846 ರಿಂದ 1856 ರವರೆಗಿನ ಕಾಲದಲ್ಲಿ ಪ್ರಕಟವಾದುವು. ಪ್ರ.ಶ.ಪೂ. 301ರ ವರೆಗಿನ ಇತಿಹಾಸವದು. ಈ ನಡುವೆ ಮತ್ತೆ ಈತ ವಿಶ್ವವಿದ್ಯಾಲಯದ ಕೋಶಾಧಿಕಾರಿಯೂ 1868ರಲ್ಲಿ ಅದರ ಅಧ್ಯಕ್ಷನೂ ಆದ. ಅಲ್ಲದೆ 1862ರಿಂದ ತನ್ನ ಜೀವನದ ಕೊನೆಯವರೆಗೂ ಕುಲಪತಿಯಾಗಿದ್ದ. ಈತನ ಮರಣಾನಂತರ ಇವನ ವೈಯಕ್ತಿಕ ಗ್ರಂಥಾಲಯ ಆ ವಿಶ್ವವಿದ್ಯಾಲಯಕ್ಕೆ ಬಳುವಳಿಯಾಗಿ ಸೇರಿತು. ಮಾನಸಿಕ ತತ್ತ್ವಶಾಸ್ತ್ರದ ಅಧ್ಯಯನಕ್ಕಾಗಿ ಈತ 6,000 ಪೌಂಡುಗಳ ದತ್ತಿ ಬಿಟ್ಟ. ಈತ ರಾಯಲ್ ಸೊಸೈಟಿಯ ಸದಸ್ಯನಾಗಿದ್ದ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಈತನಿಗೆ ಗೌರವ ಡಿ.ಸಿ.ಎಲ್. ಪದವಿಯನ್ನೂ ಕೇಂಬ್ರಿಜ್ ವಿಶ್ವವಿದ್ಯಾಲಯ ಎಲ್.ಎಲ್.ಡಿ. ಪದವಿಯನ್ನೂ ನೀಡಿ ಗೌರವಿಸಿದುವು. ಇವನಿಗೆ ಕೀರ್ತಿ ಬಂದದ್ದು ಗ್ರೀಸಿನ ಇತಿಹಾಸ ಕುರಿತ ಗ್ರಂಥದಿಂದ. ಮೂಲತಃ ರಾಜಕಾರಣಿಯೂ ವ್ಯವಹಾರಚತುರನೂ ಆದ ಈತ ಪ್ರಜಾಪ್ರಭುತ್ವವಾದಕ್ಕೆ ವಿರುದ್ಧವಾಗುವಂತೆ ಗ್ರೀಸ್ ದೇಶದ ಚರಿತ್ರೆಯನ್ನು ನಿರೂಪಿಸಿದ ಮಿಟ್‌ಫರ್ಡನ ಬರೆಹವನ್ನು ಖಂಡಿಸುವ ಸಲುವಾಗಿಯೇ ಎಂಬಂತೆ ಈ ಕಾರ್ಯವನ್ನು ಕೈಗೊಂಡ. ಗ್ರೀಸಿನ ಪೌರಾಣಿಕ ಕಥೆಗಳಿಂದ ಆರಂಭವಾಗಿ ಅಲೆಗ್ಸಾಂಡರನ ದಂಡಯಾತ್ರೆಯವರೆಗೂ, ಅಂದರೆ ಪ್ರ.ಶ.ಪೂ. 4ನೆಯ ಶತಮಾನದವರೆಗೂ, ಗ್ರೀಸಿನ ಇತಿಹಾಸವನ್ನು ಈತ ನಿರೂಪಿಸಿದ್ದಾನೆ. ಇದು ಇಂದು ಉತ್ಕೃಷ್ಟ ಇತಿಹಾಸಗ್ರಂಥವೆನಿಸದಿದ್ದರೂ ವಸ್ತು ಸಂಗ್ರಹಣೆ ಮುಂತಾದವುಗಳಲ್ಲಿ ಈತನ ನೈಪುಣ್ಯವನ್ನು ಇದರಲ್ಲಿ ಕಾಣಬಹುದು. ಪ್ಲೇಟೊ ಅಂಡ್ ಅದರ್ ಕಂಪ್ಯಾನಿಯನ್ಸ್ ಆಫ್ ಸಾಕ್ರಟೀಸ್ ಎಂಬ ಮೂರು ಸಂಪುಟಗಳ ಗ್ರಂಥ 1865ರಲ್ಲಿ ಹೊರಬಿತ್ತು. ಬಳಿಕ ಈತ ಅರಿಸ್ಟಾಟಲನ್ನು ಕುರಿತು ಬರೆಯತೊಡಗಿದ. ಆದರೆ ಈ ಕೃತಿ ಸಂಪೂರ್ಣವಾಗಲಿಲ್ಲ. 1871ರಲ್ಲಿ ಈತ ಮರಣಹೊಂದಿದ. 1872ರಲ್ಲಿ ಇದನ್ನು ಬೇನ್ ಮತ್ತು ರಾಬರ್ಟ್‌ಸನ್ ಸಂಪಾದಿಸಿ ಪ್ರಕಟಿಸಿದರು. ಸ್ಟೇಟ್‌ಮೆಂಟ್ ಆನ್ ದಿ ಕ್ವೆಶ್ಚನ್ ಆಫ್ ಪಾರ್ಲಿಮೆಂಟರಿ ರಿಫಾರ್ಮ್ (1821), ಎಸೆನ್ಷಿಯಲ್ ಆಫ್ ಪಾರ್ಲಿಮೆಂಟರಿ ರಿಫಾರ್ಮ್ (1831), ಸೆವೆನ್ ಲೆಟರ್ಸ್ ಆನ್ ದಿ ರೀಸೆಂಟ್ ಪಾಲಿಟಿಕ್ಸ್ ಆಫ್ ಸ್ವಿಟ್ಜರ್ಲೆಂಡ್ (1847) ಇವು ಈತನ ಇತರ ಕೆಲವು ಕೃತಿಗಳು. (ಜೆ.ಬಿ.ಆರ್.)

**ಗ್ರೋಷಿಯಸ್, ಹ್ಯೂಗೊ :** 1583–1645. ಡಚ್ ನ್ಯಾಯಶಾಸ್ತ್ರಜ್ಞ, ರಾಜತಂತ್ರ ನಿಪುಣ, ಭಾಷಾಶಾಸ್ತ್ರಜ್ಞ, ಕವಿ, ದೇವತಾಶಾಸ್ತ್ರವಿದ, ಇತಿಹಾಸಕಾರ, ಅಂತರರಾಷ್ಟ್ರೀಯ ನ್ಯಾಯವನ್ನು ರೂಪಿಸುವುದರಲ್ಲಿ ಈತನ ಬರೆಹಗಳು ಪ್ರಧಾನ ಪಾತ್ರ ವಹಿಸಿವೆ.

ಗ್ರೋಷಿಯಸ್ 1583ರ ಏಪ್ರಿಲ್ 10ರಂದು ಡೆಲ್ಫ್ಟ್‌ನಲ್ಲಿ ಹುಟ್ಟಿದ. ತಂದೆ ಸುಸಂಸ್ಕೃತ; ಡೆಲ್ಫ್ಟ್‌ನ ಪೌರಾಧ್ಯಕ್ಷ (ಬರ್ಗೋಮಾಸ್ಟರ್) ಮತ್ತು ಲೈಡನ್ ವಿಶ್ವವಿದ್ಯಾಲಯದ ಕ್ಯೂರೇಟರ್. ಅವನಿಗೆ ಮಗನ ವಿದ್ಯಾಭ್ಯಾಸದಲ್ಲಿ ವಿಶೇಷ ಆಸಕ್ತಿಯಿತ್ತು. ಡಂಭವಿಲ್ಲದ ವಿದ್ವತ್ತನ್ನೂ ಆಡಂಬರವಿಲ್ಲದ ಧರ್ಮದೃಷ್ಟಿಯನ್ನೂ ಗ್ರೋಷಿಯಸ್ ಸಂಪಾದಿಸಿಕೊಂಡ. 15ನೆಯ ವಯಸ್ಸಿನಲ್ಲಿ ಮಾರ್ಷಿಯಾನೆಸ್ ಕ್ಯಾಪೆಲನ ವಿಶ್ವಕೋಶವನ್ನು ಈತ ಸಂಪಾದಿಸಿದ. ರಾಯಭಾರಿ ಓಲ್ಡೆನ್ ಬಾರ್ನೆವೆಲ್ಟನೊಂದಿಗೆ ಫ್ರಾನ್ಸಿಗೆ ಹೋದ. ಫ್ರಾನ್ಸಿನ ದೊರೆ 4ನೆಯ ಹೆನ್ರಿ ಇವನನ್ನು ಹಾಲೆಂಡಿನ ಪವಾಡವೆಂದು ಹೊಗಳಿ ಸ್ವಾಗತಿಸಿದ. ಆ ಕಾಲದ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ಗ್ರೋಷಿಯಸ್ ಒಂದು ಪದ್ಯ ಬರೆದ. ಈತ ಹಾಲೆಂಡಿಗೆ ಮರಳುವಾಗ ಆರ್ಲಿಯನ್ಸಿನಲ್ಲಿ ಇವನಿಗೆ ಡಾಕ್ಟರ್ ಆಫ್ ಲಾ ಪದವಿ ಲಭ್ಯವಾಯಿತು. ಹೇಗಿನಲ್ಲಿ ಇವನು ಪ್ರಮುಖ ನ್ಯಾಯವಾದಿಯಾದ. ಸರ್ಕಾರದ ವರಿಷ್ಠರು ಇವನ ಗೆಳೆಯರಾದರು. 1601ರಲ್ಲಿ ಹಾಲೆಂಡ್ ರಾಜ್ಯಗಳ ಇತಿಹಾಸಲೇಖಕನಾಗಿ ಇವನ ನೇಮಕವಾಯಿತು. ಈತ ಲ್ಯಾಟಿನಿನಲ್ಲಿ ಎರಡು ನಾಟಕಗಳನ್ನು ರಚಿಸಿದನಲ್ಲದೆ ಸೋಲಿಯ ಆರಾಟಸನ ಸಾಹಿತ್ಯಕೃತಿಗಳನ್ನು ಸಂಪಾದಿಸಿದ.



1604ರಲ್ಲಿ ಡಚ್ ಈಸ್ಟ್ ಇಂಡಿಯ ಕಂಪನಿಯ ಅಧಿಕಾರಿಯೊಬ್ಬ ಪೋರ್ಚುಗೀಸ್ ನೌಕೆಯೊಂದನ್ನು ಹಿಡಿದುಕೊಂಡ. ವ್ಯಾಪಾರನೌಕೆಗಳನ್ನು ಹಿಡಿದುಕೊಳ್ಳುವುದರ ನ್ಯಾಯಬದ್ಧತೆಯನ್ನು ಕುರಿತು ಬರೆಯಬೇಕೆಂದು ಕಂಪನಿ ಗ್ರೋಷಿಯಸನನ್ನು ಕೇಳಿಕೊಂಡಿತು. 1608ರಲ್ಲಿ ಈತ ಈ ಬಗ್ಗೆ ಒಂದು ವಿದ್ವತ್ಪ್ರಬಂಧ ಬರೆದ. ದೈವೇಚ್ಛೆಯಿಂದ ನಿಸರ್ಗದತ್ತವಾಗಿ ಬಂದಿರುವ ನಿಯಮಗಳು ನಾಲ್ಕು : ರಾಷ್ಟ್ರವೇ ಆಗಲಿ, ವ್ಯಕ್ತಿಯೇ ಆಗಲಿ ಇನ್ನೊಂದು ರಾಷ್ಟ್ರ ಅಥವಾ ವ್ಯಕ್ತಿಯ ಮೇಲೆ ಆಕ್ರಮಣ ನಡೆಸಬಾರದು, ಇನ್ನೊಂದು ರಾಷ್ಟ್ರ ಅಥವಾ ವ್ಯಕ್ತಿಗೆ ಸೇರಿದ್ದನ್ನು ವಶಪಡಿಸಿಕೊಳ್ಳಬಾರದು, ಕೌಲುಗಳನ್ನೂ ಕರಾರುಗಳನ್ನೂ ಕಡೆಗಣಿಸಬಾರದು, ಅಪಕೃತ್ಯ ಮಾಡಬಾರದು. ಈ ನಾಲ್ಕು ನಿಯಮಗಳನ್ನೂ ನ್ಯಾಯಮೂರ್ತಿಗಳು ಎತ್ತಿ ಹಿಡಿಯಬೇಕು. ನ್ಯಾಯಮೂರ್ತಿಗಳಿಲ್ಲದಿದ್ದರೆ ರಾಷ್ಟ್ರಗಳೇ ಅಥವಾ ವ್ಯಕ್ತಿಗಳೇ ಯುದ್ಧ ಅಥವಾ ಖಾಸಗಿ ಮೊಕದ್ದಮೆಯ ಮೂಲಕ ಇವನ್ನು ಎತ್ತಿಹಿಡಿಯಬೇಕು. ಡಚ್ಚರು ವ್ಯಾಪಾರೋದ್ದೇಶದಿಂದ ವಿಶಾಲ ಸಾಗರದಲ್ಲಿ ಈಸ್ಟ್ ಇಂಡೀಸಿಗೆ ಯಾನ ಮಾಡುವುದಕ್ಕೆ ಪೋರ್ಚುಗೀಸರು ಅಡ್ಡಿಪಡಿಸಿದ್ದರಿಂದ ತಮಗೆ ಆದ ನಷ್ಟವನ್ನು ತುಂಬಿಕೊಳ್ಳಲು ಅವರು ಪೋರ್ಚುಗೀಸ್ ವ್ಯಾಪಾರ ನೌಕೆಗಳನ್ನು ಹಿಡಿದುಕೊಂಡಿದ್ದು ತಪ್ಪಲ್ಲ – ಎಂದು ಈತ ವಾದಿಸಿದ. ಮುಂದೆ ಈ ನಿಯಮಗಳನ್ನೆ ಆಧಾರವಾಗಿ ಇಟ್ಟುಕೊಂಡು ಇಡೀ ಮಾನವತೆಯ ನ್ಯಾಯವನ್ನು– ಖಾಸಗಿ, ದಂಡೀಯ, ಸಂವೈಧಾನಿಕ, ಅಂತರರಾಷ್ಟ್ರೀಯ – ಎಲ್ಲವನ್ನೂ ಕುರಿತ ಗ್ರಂಥವೊಂದನ್ನು ಬರೆದ. ಇದು ತುಂಬ ಪ್ರಸಿದ್ಧವಾಯಿತು. 1607ರಲ್ಲಿ ಈತ ಹಾಲೆಂಡ್ ಪ್ರಾಂತದ ಮಹಾನ್ಯಾಯವಾದಿಯಾಗಿ ನೇಮಕವಾದ. ಮರುವರ್ಷ ಇವನು ಮೇರಿಯ ವಾನ್ ರೀಜರ್ಸ್‌ಬರ್ಕಳನ್ನು ಮದುವೆಯಾದ. 1613ರಲ್ಲಿ ರಾಟರ್ಡಾಮಿನ ಅಧಿಕಾರಿಯಾದ.

ಆ ಸಮಯದಲ್ಲಿ ಹಾಲೆಂಡಿನಲ್ಲಿ ಮತೀಯ ಕಲಹಗಳು ಪ್ರಬಲವಾಗಿದ್ದವು. ಇವುಗಳಲ್ಲಿ ಓಲ್ಡೆನ್ ಬಾರ್ನೆವೆಲ್ಟ್ ಒಂದು ಪಕ್ಷದ ಪರವಾಗಿದ್ದ. ಗ್ರೋಷಿಯಸ್ ತನ್ನ ಲೇಖನಗಳ ಮೂಲಕ ಅವನಿಗೆ ಬೆಂಬಲ ನೀಡಿದ. ಈ ಕಲಹಗಳು ಕೇವಲ ಮತೀಯವಾಗಿಲ್ಲದೆ ರಾಜಕೀಯ ಬಣ್ಣವನ್ನೂ ತಳೆದಿದ್ದುದರಿಂದ 1618ರಲ್ಲಿ ಓಲ್ಡೆನ್ ಬಾರ್ನೆವೆಲ್ಟನೂ ಗ್ರೋಷಿಯಸನೂ ದಸ್ತಗಿರಿಯಾದರು. ಓಲ್ಡೆನ್ ಬಾರ್ನೆವೆಲ್ಟ್ ಮರಣ ದಂಡನೆಗೂ ಗ್ರೋಷಿಯಸ್ ಜೀವಾವಧಿ ಶಿಕ್ಷೆಗೂ ಗುರಿಯಾದರು. ಪುಸ್ತಕ ಹಾಗೂ ಬಟ್ಟೆ ತುಂಬುವ ಪೆಟ್ಟಿಗೆಯೊಂದರಲ್ಲಿ ಅಡಗಿ ಗ್ರೋಷಿಯಸ್ ತಪ್ಪಿಸಿಕೊಂಡ. ಇವನ ಬದಲು ಇವನ ಹೆಂಡತಿ ಸೆರೆಮನೆಯಲ್ಲಿ ಉಳಿದುಕೊಂಡಳು. ಗ್ರೋಷಿಯಸ್ ಪ್ಯಾರಿಸಿನಲ್ಲಿ ಆಶ್ರಯ ಪಡೆದ (1621). 13ನೆಯ ಲೂಯಿ ಇವನಿಗೆ ಪೆನ್ಷನ್ ನೀಡಿದ. ಹತ್ತು ವರ್ಷಗಳ ಅನಂತರ ಇದು ನಿಂತುಹೋಯಿತು. ಇವನು ಹಿಂದೆಯೇ ಬರೆದು ಮುಗಿಸಿ ಆಗ್ಗಿಂದಾಗ್ಗೆ ಪರಿಷ್ಕರಿಸಿದ ನ್ಯಾಯಗ್ರಂಥ 1625ರಲ್ಲಿ ಪ್ರಕಟವಾಯಿತು. ಇದರಿಂದ ಇವನ ಕೀರ್ತಿ ಬೆಳೆಯಿತು. ಸ್ವೀಡನಿನ ದೊರೆ ಹಾಗೂ ರಾಣಿ ಇವನನ್ನು ಫ್ರೆಂಚ್ ರಾಜಾಸ್ಥಾನದಲ್ಲಿ ರಾಯಭಾರಿಯಾಗಿ ನೇಮಿಸಿದರು (1634). ಗ್ರೋಷಿಯಸ್ 1645 ರವರೆಗೂ ಈ ಹುದ್ದೆಯಲ್ಲಿದ್ದು ಸ್ಟಾಕ್‌ಹೋಂಗೆ ಹಿಂದಿರುಗಿದ. ಅಲ್ಲಿಯ ರಾಜಾಸ್ಥಾನದ ವಾತಾವರಣ ಬದಲಾಗಿರಲಿಲ್ಲ. ಇವನಿಗೆ ಅಲ್ಲಿ ಸ್ವಾಗತ ದೊರಕಲಿಲ್ಲ. ಗ್ರೋಷಿಯಸ್ ಹಾಲೆಂಡಿಗೆ ಹಿಂದಿರುಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ರಾಸ್ಟಾಕ್‌ನಲ್ಲಿ 1645ರ ಆಗಸ್ಟ್ 29ರಂದು, ಇವನ ಹಡಗು ಬಂಡೆಗೆ ಬಡಿಯಿತು; ಗ್ರೋಷಿಯಸ್ ತೀರಿಕೊಂಡ. (ಬಿ.ಡಿ.ಎಚ್.)

**ಗ್ರೋಸ್ಸಿ, ಟಾಮಾಜ್ಜೊ :** 1790–1853. ಇಟಲಿಯ ಕವಿ ಮತ್ತು ಕಾದಂಬರಿಕಾರ. ಬೆಲಾನೊದಲ್ಲಿ ಹುಟ್ಟಿದ ಈತ ಪಾವಿಯಾದಲ್ಲಿ ನ್ಯಾಯಶಾಸ್ತ್ರದ ಅಧ್ಯಯನ ಮಾಡಿ, ಮಿಲಾನ್‌ನಲ್ಲಿ ವಕೀಲವೃತ್ತಿಯನ್ನು ಕೈಕೊಂಡ. ಈತನ ರಾಜನಿಷ್ಠೆಯನ್ನು ಶಂಕಿಸಿದ ಆಸ್ಟ್ರಿಯನ್ ಸರ್ಕಾರ ಈತನ ಪ್ರಗತಿಗೆ ಅಡ್ಡಬಂತು. ಪರಿಣಾಮವಾಗಿ ಈತ ತನ್ನ ಜೀವನಪರ್ಯಂತ ಕರಾರು ಪತ್ರಗಳನ್ನು ಬರೆಯುವ ಒಬ್ಬ ಸಾಧಾರಣ ಅಧಿಕಾರಿಯಾಗಿರ ಬೇಕಾಯಿತು. ಈತನ ಪ್ರಥಮ ಕವನವಾದ ಲಾ ಪ್ರಿನ್ಯೆಡಿ (1814), ಮಿಲಾನಿನ ಪ್ರಾಂತ್ಯಭಾಷೆಯಲ್ಲಿ ಬರೆದ ಯುದ್ಧಗೀತೆ. ಈತ ನಾಟಕಕಾರ ಮಾನ್‌ಜೋನಿಯ ಜತೆಯಲ್ಲಿ ಅನೇಕ ವರ್ಷಗಳನ್ನು ಮಿಲಾನಿನಲ್ಲಿ ಕಳೆದ. ಮಾನ್‌ಜೋನಿಯ ಪ್ರಭಾವದಿಂದಾಗಿ ಈತ ವಿಡಂಬನ ಸಾಹಿತ್ಯವನ್ನು ಕೈಬಿಟ್ಟು ಕವನಗಳಲ್ಲಿ ರಂಜಕ ಕಥೆಗಳನ್ನು ನಿರೂಪಿಸಿದ. ಅವುಗಳಲ್ಲಿ ಲಾ ಫ್ಯುಜಿಟಿವಿಯ (1816) ಮತ್ತು ಲಾ ಇಲ್ಡೆಗೊಂಡ (1820) ಮುಖ್ಯವಾದವು. ಈತ 1826ರಲ್ಲಿ ಐ ಲೊಂಬಾರ್ಡಿ ಅಲಾ ಪ್ರಿಮಾ ಕ್ರೋಸಿಯಾಟಾ ಎಂಬ ಮಹಾಕಾವ್ಯವನ್ನು ಬರೆದ. ಮಾರ್ಕೊ ವೈಕಾಂಟಿ (1834) ಎಂಬ ಐತಿಹಾಸಿಕ ಕಾದಂಬರಿಯನ್ನು ಈತನ ಅತ್ಯುತ್ತಮ ಕೃತಿಯೆಂದು ಪರಿಗಣಿಸಲಾಗಿದೆ. ಆದರೆ ಈ ಕಾದಂಬರಿಯಲ್ಲಿ ಕಥಾವಸ್ತು ಮತ್ತು ಐತಿಹಾಸಿಕ ಹಿನ್ನೆಲೆಗಳ ನಡುವೆ ಸರಿಯಾದ ಸಂಬಂಧ ಕಾಣುವುದಿಲ್ಲವೆಂದೂ ನಾಟಕೀಯ ಸಾಧ್ಯತೆಗಳ ಪೂರ್ಣ ಉಪಯೋಗವಾಗಿಲ್ಲವೆಂದೂ ಅನೇಕ ಪಾತ್ರಗಳು ಕಳೆಯಿಲ್ಲದ ಭಾವಶೀಲ ವ್ಯಕ್ತಿಗಳಾಗಿವೆಯೆಂದೂ ಹೇಳುವವರಿದ್ದಾರೆ. (ಎಸ್.ವಿ.ಎಸ್‌ಯು.)

**ಗ್ರೌಪರ್ :** ಸೆರಾನಿಡೀ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಮೀನುಗಳಿಗಿರುವ ಸಾಮಾನ್ಯ ಹೆಸರು. ಇವು ಸಮಶೀತೋಷ್ಣವಲಯದ ಕಡಲುಗಳಲ್ಲಿ ವಾಸಿಸುತ್ತವೆ; ವೆಸ್ಟ್ ಇಂಡೀಸ್, ಅಮೆರಿಕ ಸಂಯುಕ್ತ ಸಂಸ್ಥಾನಗಳ ದಕ್ಷಿಣಪ್ರದೇಶಗಳ ಕಡಲುಗಳು ಇವುಗಳ

ಮುಖ್ಯ ವಾಸಸ್ಥಳ. ಭಾರತದಲ್ಲೂ ಕೆಲವು ಪ್ರಭೇದಗಳಿವೆ. ಬಂಡೆಗಳಿರುವ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಬರುವುದರಿಂದ ಇವಕ್ಕೆ ರಾಕ್ ಬಾಸ್ ಎಂಬ ಹೆಸರೂ ಇದೆ. ಕಡಲ (ಸೀ) ಬಾಸ್ ಪರ್ಯಾಯನಾಮ. ಮಧ್ಯಮ ಗಾತ್ರದಿಂದ ದೈತ್ಯಾಕಾರದವರೆಗೂ ಬೆಳೆಯುವ ಮೀನುಗಳಿವು. ಕೋನಿ ಎಂಬುದು ಗ್ರೌಪರುಗಳಲ್ಲೆಲ್ಲ ಅತ್ಯಂತ ಚಿಕ್ಕ ಮೀನು; ಇದರ ಉದ್ದ ಕೇವಲ 23 ಸೆಂಮೀ. ಬಣ್ಣ ಕೆಂಪುಮಿಶ್ರಿತ ಬೂದು. ಮೈಮೇಲೆ ಅಲ್ಲಲ್ಲಿ ನೀಲಿವರ್ಣದ ಚುಕ್ಕೆಗಳಿವೆ. ಜ್ಯೂ ಮೀನುಗಳು ಗ್ರೌಪರುಗಳಲ್ಲೆಲ್ಲ ಅತ್ಯಂತ ದೊಡ್ಡವು. ಇವು 2.5 ಮೀ (7') ಉದ್ದವಿದ್ದು ಸುಮಾರು 225 ಕೆಜಿ ತೂಗುತ್ತವೆ. ಗ್ರೌಪರುಗಳಲ್ಲೆಲ್ಲ ಅತಿಮುಖ್ಯವಾದವು ಎಪಿನೆಫೆಲಸ್ ಮತ್ತು ಮಿಕ್ಟಿರೋಪರ್ಕ ಎಂಬ ಎರಡು ಜಾತಿಗಳಿಗೆ ಸೇರಿದ ವಿವಿಧ ಪ್ರಭೇದಗಳು. ಇವುಗಳ ಬಣ್ಣ ಮತ್ತು ಗಾತ್ರಗಳಲ್ಲಿ ಅನೇಕ ವ್ಯತ್ಯಾಸಗಳಿವೆ.



ಗ್ರೌಪರುಗಳ ವಿಶೇಷ ಲಕ್ಷಣವೆಂದರೆ ತಮ್ಮ ದೇಹದ ಬಣ್ಣವನ್ನು ಬದಲಿಸುತ್ತಿರುವುದು. ಚುಕ್ಕಿ ಜ್ಯೂ ಮೀನು ನಾಲ್ಕು ರೀತಿಯ ಬಣ್ಣಗಳನ್ನು – ದಟ್ಟ ಕಪ್ಪು, ಕಪ್ಪು ಮಚ್ಚೆಗಳಿಂದ ಕೂಡಿದ ಬೂದು, ಕಪ್ಪು ಮಚ್ಚೆಗಳಿಂದ ಕೂಡಿದ ಕೆನೆಬಣ್ಣ ಮತ್ತು ಸಂಪೂರ್ಣ ಕೆನೆಬಣ್ಣಗಳನ್ನು ಪ್ರದರ್ಶಿಸುತ್ತದೆ. ನಾಸ್ಸಾ ಗ್ರೌಪರ್ ಎಂಬುದು ತನ್ನ ಮೈಬಣ್ಣವನ್ನು ಕೆನೆಯಿಂದ ಕಪ್ಪುಬಣ್ಣಕ್ಕೆ ಕ್ಷಣಾರ್ಧದಲ್ಲಿ ಬದಲಿಸುತ್ತದೆ. ಈ ರೀತಿಯ ಬಣ್ಣ ಬದಲಾವಣೆಗೆ ಈ ಮೀನುಗಳ ಚರ್ಮದಲ್ಲಿರುವ ವರ್ಣ ದ್ರವ್ಯ ಜೀವಕೋಶಗಳು ಕಾರಣ. ಚರ್ಮದಲ್ಲಿ 4 ಅಥವಾ 5 ಬಗೆಯ ವಿಶೇಷ ಜೀವಕೋಶಗಳಿವೆ. ಇವುಗಳ ಒಂದುಗೂಡುವಿಕೆ ಹಾಗೂ ಇವುಗಳ ಸಂಕೋಚನ ಮತ್ತು ವಿಕಸನ ರೀತಿಗಳನ್ನು ಅನುಸರಿಸಿ ದೇಹದ ಬಣ್ಣ ಬದಲಾಗುತ್ತಿರುತ್ತದೆ. ವಿಶ್ರಾಂತಿ ಪಡೆಯುವಾಗ, ಜಲಸಸ್ಯಗಳ ಮಧ್ಯೆ ಅಡಗಿಕೊಂಡು ಶತ್ರುಗಳಿಂದ ತಪ್ಪಿಸಿಕೊಳ್ಳಲು ಈ ವರ್ಣ ಪರಿವರ್ತನೆ ಸಹಾಯಕ ಎಂದು ಕಾಣುತ್ತದೆ. ಗ್ರೌಪರುಗಳು ಮಾಂಸಾಹಾರಿಗಳು; ಇತರ ಬಗೆಯ ಮೀನುಗಳು ಮತ್ತು ಮುಳ್ಳು ಲಾಬ್‌ಸ್ಟರ್‌ಗಳು ಇವುಗಳ ಮೆಚ್ಚಿನ ಆಹಾರ.

ಗ್ರೌಪರ್ ಮೀನು ಮೇ– ಆಗಸ್ಟ್ ತಿಂಗಳ ಅವಧಿಯಲ್ಲಿ ಪ್ರಜನನ ಕ್ರಿಯೆಯಲ್ಲಿ ತೊಡಗುತ್ತದೆ. ಪ್ರೌಢಾವಸ್ಥೆಯನ್ನು ತಲಪುವವರೆಗೆ ಹೆಣ್ಣಾಗಿರುವ ಈ ಮೀನು ಅನಂತರದಲ್ಲಿ ಯಾವುದೇ ಸಂದರ್ಭದಲ್ಲಿ ಗಂಡಾಗಿ ಪರಿವರ್ತನೆಗೊಳ್ಳಬಹುದು. (ಬಿ.ಕೆ.ಜಿ.)

**ಗ್ರೌಬುಂಡೆನ್ :** ಸ್ವಿಟ್ಜರ್ಲೆಂಡಿನ ಪೂರ್ವದ ಅಂಚಿನಲ್ಲಿ ಇರುವ ಅತ್ಯಂತ ದೊಡ್ಡ ಮಂಡಲ (ಕ್ಯಾಂಟನ್). ವಿಸ್ತೀರ್ಣ 7,105 ಚ.ಕಿಮೀ. ಜನಸಂಖ್ಯೆ 1,92,621 (2010). ಗ್ರೌಬುಂಡೆನ್ ಮಂಡಲದ 359 ಚ.ಕಿಮೀ ಪ್ರದೇಶ ಹಿಮನದಿಗಳಿಂದ ಕೂಡಿದೆ. ಉತ್ತರದ ಟಡಿ, ನೈರುತ್ಯದ ಮೆಡೆಲ್ಸ್ ಆಡೂಲಾ ಗುಂಪು ಮತ್ತು ರೈನ್‌ವಾಲ್ಡ್ ಹಾರ್ನ್, ಆಗ್ನೇಯದ ಬೆರ್ನೀನಾ, ಪೂರ್ವದ ಪೀಟ್ಸ್‌ಕೆಷ್ ಮತ್ತು ಈಶಾನ್ಯದ ಪೀಟ್ಸ್ ಲಿನಾರ್ಡವನ್ನೊಳಗೊಂಡ ಸಿಲ್ವರೆಟ ಗುಂಪು–ಈ ಉನ್ನತ ಪ್ರದೇಶಗಳಲ್ಲಿ ಹಿಮನದಿಗಳಿವೆ.

ಸ್ವಿಟ್ಜರ್ಲೆಂಡಿನ ರೈನ್ ಮತ್ತು ಇನ್ ನದಿಗಳಿಗೂ ಪೋ ನದಿಯ ಉಪನದಿಗಳಿಗೂ ನೀರು ಒದಗಿಸುವುದು ಈ ಪ್ರದೇಶವೇ. ಇಲ್ಲಿಯ ಕಣಿವೆಗಳು ಕಿರಿದಾಗಿವೆ; ಸಾಗುವಳಿ, ಪಶುಪಾಲನೆಗಳಿಗೆ ಉಪಯುಕ್ತವಾದ ಫಲವತ್ತಾದ ಭೂಮಿಯಿಂದ ಕೂಡಿವೆ. ಪೂರ್ವಭಾಗದಲ್ಲಿರುವ ಮೇಲಿನ ಮತ್ತು ಕೆಳಗಿನ ಇಂಗಡೈನ್ ಕಣಿವೆಗಳು ಉಳಿದವಕ್ಕಿಂತ ಅಗಲವಾಗಿವೆ. ರೈನ್ ನದಿ ಹರಿಯುವುದು ಇಲ್ಲೇ. ಕಣಿವೆ ಪ್ರದೇಶಗಳಲ್ಲಿ ಬೆಚ್ಚನೆಯ ಹಿತಕರ ಹವೆ ಇರುತ್ತದೆ.

ಗ್ರೌಬುಂಡೆನಿನ ಕಣಿವೆಗಳಲ್ಲಿ ಆಲ್ಪ್ಸ್ ಪರ್ವತ ಪ್ರದೇಶದ ಅತ್ಯಂತ ಸುಂದರವಾದ ತಾಣಗಳಿವೆ. ಕಣಿವೆ ಪ್ರದೇಶಗಳಲ್ಲಿ ಒಳ್ಳೆಯ ರಸ್ತೆಗಳನ್ನು ನಿರ್ಮಿಸಿದ್ದಾರೆ. ಖನಿಜಾಂಶವಿರುವ ನೀರಿನ ಅನೇಕ ಚಿಲುಮೆಗಳು ಇಲ್ಲಿವೆ. ಒತ್ತಾದ ಅರಣ್ಯಗಳೂ ಉಂಟು. ಪಶುಪಾಲನೆ, ಕೃಷಿಗಳ ಜೊತೆಗೆ ಪ್ರವಾಸೋದ್ಯಮವೂ ಇಲ್ಲಿಯವರ ಒಂದು ಜೀವನೋಪಾಯ.

ಈ ಮಂಡಲದ ರಾಜಧಾನಿ ಕೂರ್. ಕೂರ್, ದಾವೋಸ್, ಸೇಂಟ್ ಮರಿಟ್ಸ್ ಮತ್ತು ಆರೋಸ ಪ್ರವಾಸ ಕೇಂದ್ರಗಳು. ಕೂರ್‌ನಿಂದ ಇಟಲಿಗೆ ರೈಲು ಸಂಪರ್ಕವುಂಟು.

ಕೂರ್, ಆರೋಸ ಮತ್ತು ದಾವೋಸ್‌ಗಳಲ್ಲಿ ಜನ ಮುಖ್ಯವಾಗಿ ಜರ್ಮನ್ ಭಾಷೆ ಆಡುತ್ತಾರೆ. ದಕ್ಷಿಣ ಭಾಗಗಳಲ್ಲಿ ಇಟಾಲಿಯನ್ ಭಾಷೆಯೂ ಪ್ರಚಾರದಲ್ಲಿದೆ. ಇಂಗಡೈನ್ ಮತ್ತು ಸುತ್ತಣ ಕಣಿವೆಯ ಜನ ರೊಮಾನ್ಸ್ ಭಾಷೆ ಆಡುತ್ತಾರೆ. ಆಧುನಿಕ ಗ್ರೌಬುಂಡೆನ್ ಮಂಡಲದ ಬಹುಭಾಗ ಹಿಂದೆ ರೇಟಿಯ ಪ್ರಾಂತ್ಯವಾಗಿತ್ತು. ರೋಮನರು ಪ್ರ.ಶ.ಪೂ. 15ರಲ್ಲಿ ಈ ಭಾಗವನ್ನು ಗೆದ್ದುಕೊಂಡಿದ್ದರು. ಬಹಳ ಕಾಲ ಜರ್ಮನಿಯ ಒಂದು ಭಾಗವಾಗಿದ್ದ ಗ್ರೌಬುಂಡೆನ್ 1803 ರಲ್ಲಿ ಸ್ವಿಟ್ಜರ್ಲೆಂಡಿಗೆ ಸೇರಿತು.

ಜರ್ಮನ್ ಭಾಷೆಯಲ್ಲಿ ಗ್ರೌ ಎಂದರೆ ಬೂದುಬಣ್ಣ. 14 ನೆಯ ಶತಮಾನದ ಅಂತ್ಯ ಮತ್ತು 15ನೆಯ ಶತಮಾನದ ಆರಂಭಕಾಲದಲ್ಲಿ ಈ ಪ್ರದೇಶದ ಆಳರಸರ ವಿರುದ್ಧ ಸಂಘಟಿತರಾದ ಜನರು ಮನೆಯಲ್ಲಿ ನೇದ, ಬೂದುಬಣ್ಣದ ಮೇಲುಡುಗೆ ತೊಡುತ್ತಿದ್ದುದರಿಂದ ಈ ಪ್ರದೇಶಕ್ಕೆ ಗ್ರೌಬುಂಡೆನ್ ಎಂದು ಹೆಸರು ಬಂತೆಂದು ಹೇಳಲಾಗಿದೆ.

(ಎಸ್.ಸಿ.ಜಿ.)

**ಗ್ರೌಸ್ :** ಗ್ಯಾಲಿಫಾರ್ಮೀಸ್ ಗಣದ ಟೆಟ್ರವೋನಿಡೀ ಕುಟುಂಬಕ್ಕೆ ಸೇರಿದ ಒಂದು ಹಕ್ಕಿ. ಸುಮಾರು 10 ಜಾತಿಗಳ 18 ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಎಲ್ಲ ಪ್ರಭೇದಗಳೂ ಪ್ರಪಂಚದ ಉತ್ತರಾರ್ಧಕ್ಕೆ ಸೀಮಿತವಾಗಿವೆ. ಕೋಳಿ, ಫೆಸೆಂಟ್, ನವಿಲು, ಟರ್ಕಿಕೋಳಿ ಮುಂತಾದ ಹಕ್ಕಿಗಳಿಗೆ ಹತ್ತಿರ ಸಂಬಂಧಿಗಳಾದ ಇವು ಹೆಚ್ಚು ಕಡಿಮೆ ಕೋಳಿಯಷ್ಟೇ ಗಾತ್ರದವಾಗಿವೆ. ಆದರೆ ಇವುಗಳ ಮೈಬಣ್ಣ ಮಾತ್ರ ಅತ್ಯಂತ ಸಾಧಾರಣ ಬಗೆಯದು. ನವಿಲು ಅಥವಾ ಫೆಸೆಂಟುಗಳ ಉಜ್ವಲ ವರ್ಣವಿನ್ಯಾಸ ಗ್ರೌಸುಗಳಲ್ಲಿ ಇಲ್ಲ. ಆದರೂ ತಾವಿರುವ ನೆಲೆಗಳಲ್ಲಿ ಶತ್ರುಗಳ ಕಣ್ಣಿಗೆ ಬೀಳದಂತೆ ಮರೆಮಾಡಿಕೊಂಡು ವಾಸಿಸಲು ಅನುಕೂಲವಾಗುವಂತೆ ಇವುಗಳ ಮೈ ಬಣ್ಣ ಇದೆ. ಕೆಲವು ಬಗೆಯ ಗ್ರೌಸುಗಳು ಋತುಮಾನಕ್ಕನುಗುಣವಾಗಿ ತಮ್ಮ ಮೈಬಣ್ಣವನ್ನು ಬದಲಿಸುತ್ತವೆ. ಉದಾಹರಣೆಗೆ ಉತ್ತರ ಧ್ರುವದಲ್ಲಿ ವಾಸಿಸುವ ವಿಲೊ ಗ್ರೌಸ್ (ವಿಲೊ ಟಾರ್ಮಿಗನ್) ಎಂಬ ಹಕ್ಕಿಗೆ ಬೇಸಗೆಯಲ್ಲಿ

ರಫ್ಡ್ ಗ್ರೌಸ್

ಕಪ್ಪು ಮತ್ತು ಕಂದುಬಣ್ಣವೂ ಚಳಿಗಾಲದಲ್ಲಿ ಅಚ್ಚ ಬಿಳಿಬಣ್ಣವೂ ಇರುತ್ತವೆ. ಇದರಿಂದ ಆಯಾಕಾಲದ ಪರಿಸರದ ಹಿನ್ನೆಲೆಗೆ ಹೊಂದಿಕೊಳ್ಳಲು ಅನುಕೂಲ. ದಷ್ಟಪುಷ್ಟವಾದ ದೇಹ, ಪುಕ್ಕಗಳಿಂದ ಸಂಪೂರ್ಣವಾಗಿ ಆವೃತವಾದ ಬಲವಾದ ಕಾಲುಗಳು (ಕೆಲವು ಸಲ ಪಾದಗಳು ಸಹ), ಮೋಟಾದ ಮತ್ತು ಕೆಳಮುಖವಾಗಿ ನಸುಬಾಗಿದ ಕೊಕ್ಕು, ಪುಕ್ಕಗಳಿಂದ ಆವೃತವಾದ ಮೂಗಿನ ಹೊಳ್ಳೆಗಳು, ಪಾದದ ಮುಂದಿನ ಬೆರಳುಗಳಿಗಿಂತ ಚಿಕ್ಕದಾದ ಹಾಗೂ ಕೊಂಚ ಮೇಲಕ್ಕೆತ್ತಿದಂತೆ ಇರುವ ಹಿಂಬೆರಳು ಮತ್ತು ನಿಮಿರಿ ನಿಲ್ಲುವಂಥ ಗರಿಗಳುಳ್ಳ ಇಲ್ಲವೆ ಗರಿಗಳೇ ಇಲ್ಲದೆ ಬೋಳು ಬೋಳಾದ ವರ್ಣರಂಜಿತ ಭಾಗವನ್ನುಳ್ಳ ಮೋಟು ಕತ್ತು – ಇವು ಗ್ರೌಸುಗಳ ಪ್ರಮುಖ ಲಕ್ಷಣಗಳು. ಕೆಲವು

ಬಗೆಗಳಲ್ಲಿ ಕಾಲ್ಬೆರಳುಗಳ ಎರಡು ಪಕ್ಕಗಳಲ್ಲೂ ಚಳಿಗಾಲದಲ್ಲಿ ಬಾಚಣಿಗೆಯ ಹಲ್ಲುಗಳಂಥ ರಚನೆಗಳು ಹುಟ್ಟಿಕೊಳ್ಳುತ್ತವೆ. ಹಿಮದಲ್ಲಿ ನಡೆಯುವಾಗ ಕಾಲಿಗೆ ಹಿಡಿತವನ್ನು ಕೊಡಲು ಈ ರಚನೆಗಳು ಸಹಕಾರಿಯಾಗಿವೆ. ಬೇಸಗೆಯಲ್ಲಿ ಈ ಹಲ್ಲುಗಳು ಬಿದ್ದುಹೋಗುತ್ತವೆ. ಗ್ರೌಸುಗಳು ಭೂವಾಸಿಗಳು. ದಟ್ಟವಾದ ಕಾಡುಗಳು ಇಲ್ಲವೆ ಕುರುಚಲು ಅಥವಾ ಹುಲ್ಲು ಬೆಳೆದ ಕಾಡುಗಳು ಇವುಗಳ ನೆಲೆ. ಇವು ಬೀಜ, ಸಣ್ಣ ಪುಟ್ಟ ಕಾಯಿ, ಗಿಡಗಳ ಚಿಗುರು ಮುಂತಾದವನ್ನು ತಿಂದು ಜೀವಿಸುತ್ತವೆ. ಚೆನ್ನಾಗಿ ಹಾರಲಾರವು. ಅಪಾಯವೊದಗಿದಾಗ ಮಾತ್ರ ಶೀಘ್ರಗತಿಯಲ್ಲಿ ಕೊಂಚದೂರ ಹಾರಿ ಪೊದೆಗಳಲ್ಲಿ ಅಡಗಿಕೊಂಡು ಬಿಡುತ್ತವೆ.

(ಕೆ.ಎಂ.ವಿ.)

ಬಹುಪಾಲು ಗ್ರೌಸುಗಳು ಬಹುಪತ್ನೀಕಗಳು. ಅಲ್ಲದೆ ಇವು ತಮ್ಮ ಪ್ರಣಯಾಚರಣೆಗೆ ಹೆಸರುವಾಸಿಯಾಗಿವೆ. ವಿಚಿತ್ರ ಬಗೆಯ ನೃತ್ಯ ವಿಲಾಸಗಳನ್ನೊಳಗೊಂಡ ಈ ಕೇಳಿಯನ್ನು ರಫ್ಡ್ ಗ್ರೌಸ್, ಬ್ಲ್ಯಾಕ್‌ಗ್ರೌಸ್, ಕೇಪರ್‌ಕೇಲಿ ಮುಂತಾದವುಗಳಲ್ಲಿ ಕಾಣಬಹುದು. ರಫ್ಡ್ ಗ್ರೌಸ್ ಹಕ್ಕಿಯ ಕತ್ತಿನಲ್ಲಿ ದೊಡ್ಡ ಗರಿಗಳ ಗುಚ್ಛವೊಂದಿದೆ. ಪ್ರಣಯಾಚರಣೆಯಲ್ಲಿ ತೊಡಗಿರುವಾಗ ಯಾವುದಾದರೂ ಒಂದು ಮರದಿಮ್ಮಿಯ ಮೇಲೆ ಓಡಾಡುತ್ತ ತನ್ನ ಕತ್ತಿನ ಗುಚ್ಛವನ್ನು ನಿಮಿರಿಸಿಕೊಂಡು, ರೆಕ್ಕೆಗಳನ್ನು ಅತ್ಯಂತ ತ್ವರಿತಗತಿಯಲ್ಲಿ ಚಲಿಸುತ್ತ ಗಾಳಿಯನ್ನು ಬಡಿಯುತ್ತದೆ. ಈ ಬಡಿತದಿಂದ ತಮಟೆ ಬಡಿದಂಥ ಶಬ್ದ ಉಂಟಾಗುತ್ತದೆ. ಕೇಪರ್‌ಕೇಲಿ ಎಂಬ ಹಕ್ಕಿ ತನ್ನದೇ ಆದ ಒಂದು ನೆಲೆಯನ್ನು ಸ್ಥಾಪಿಸಿಕೊಂಡು ಅಲ್ಲಿನ ಪೈನ್ ಮರವೊಂದನ್ನು ಆರಿಸಿಕೊಂಡು ಅದರ ರೆಂಬೆಯ ಮೇಲೆ ನಡೆದಾಡುತ್ತ ವಿಚಿತ್ರ ರೀತಿಯಲ್ಲಿ ಕೂಗುತ್ತ, ಕೆನೆಯುತ್ತ, ತನ್ನ ಬಾಲದ ಗರಿಗಳನ್ನು ಜಪಾನೀ ಬೀಸಣಿಗೆಯ ಆಕಾರದಲ್ಲಿ ಹರಡಿಕೊಂಡು ಪ್ರಣಯಕೇಳಿಯಲ್ಲಿ ತೊಡಗುತ್ತದೆ. ಬಹುಪತ್ನಿತ್ವಕ್ಕೆ ಹೆಸರಾದ ಈ ಹಕ್ಕಿ ಒಂದು ಋತುವಿನಲ್ಲಿ 3–12 ಕ್ಕೂ ಹೆಚ್ಚು ಹೆಣ್ಣುಗಳೊಂದಿಗೆ ಸಂಪರ್ಕವಿರಿಸಿಕೊಳ್ಳುತ್ತದೆ. ಇದೇ ರೀತಿ ಉತ್ತರ ಅಮೆರಿಕದ ಸೇಜ್‌ಗ್ರೌಸ್, ಪ್ರೈರಿ ಚಿಕನ್ ಮುಂತಾದವು ತಮ್ಮ ಕತ್ತಿನ ಆಚೀಚೆಯಿರುವ ಬೋಳಾದ ಭಾಗವನ್ನು ಗಾಳಿಯಿಂದ ಹಿಗ್ಗಿಸಿಕೊಂಡು ಆಗಿಂದಾಗ್ಗೆ ವಿಚಿತ್ರವಾಗಿ ಕೂಗುತ್ತ ಹೆಣ್ಣು ಹಕ್ಕಿಗಳನ್ನು ಆಕರ್ಷಿಸುತ್ತವೆ. ಕತ್ತಿನ ಬೋಳು ಚೀಲಗಳು ಕಿತ್ತಳೆ, ಹಳದಿ ಇತ್ಯಾದಿ ಬಣ್ಣಗಳಿಂದ ಕೂಡಿದ್ದು ಗಾಳಿ ತುಂಬಿ ಉಬ್ಬಿದಾಗ ವರ್ಣರಂಜಿತ ಫಲಗಳಂತೆ ಕಾಣುವುದರಿಂದ ಆಕರ್ಷಣೆ ಹೆಚ್ಚಾಗುತ್ತದೆ. ಪ್ರಣಯಕೇಳಿ ಸಂಭೋಗಕ್ರಿಯೆಯಲ್ಲಿ ಪರ್ಯವಸಾನವಾದ ಮೇಲೆ ಹೆಣ್ಣು ಹಕ್ಕಿಗಳು ಗಂಡಿನ ಅಧೀನ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಇಲ್ಲವೆ ಬೇರೆಡೆಯಲ್ಲಿ ನೆಲದಲ್ಲಿ ಗುಂಡಿಮಾಡಿ ಕಡ್ಡಿಗಳನ್ನು ಹರಡಿ ಗೂಡನ್ನು ನಿರ್ಮಿಸಿ ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಸಂಖ್ಯೆ ಒಂದು ಸೂಲಿಗೆ 5–16. ಸುಮಾರು 23–29 ದಿವಸಗಳ ಅನಂತರ ಮೊಟ್ಟೆಗಳೊಡೆದು ಮರಿಗಳಾಗುತ್ತವೆ. ಕಾವು ಕೊಟ್ಟು ಮರಿ ಮಾಡುವುದೂ ಮರಿಗಳ ಪಾಲನೆಯೂ ಸಂಪೂರ್ಣವಾಗಿ ಹೆಣ್ಣಿನ ಕೆಲಸ.

ಪ್ರಪಂಚದಲ್ಲಿ ಕಾಣಬರುವ ಗ್ರೌಸುಗಳಲ್ಲಿ ಮುಖ್ಯ ಪ್ರಭೇದಗಳಿವು :

1. ಬೊನಾಸ ಅಂಬೆಲಸ್ (ರಫ್ಡ್ ಗ್ರೌಸ್) : ಉತ್ತರ ಅಮೆರಿಕದ ಉತ್ತರದ ಭಾಗಗಳ ಪರ್ಣಪಾತಿ ಮತ್ತು ಕುರುಚಲು ಕಾಡುಗಳಲ್ಲಿ ವಾಸಿಸುತ್ತದೆ. ಇದರ ದೇಹದ ಬಣ್ಣ ಕಂದು; ಬಿಳಿ ಮತ್ತು ಕಪ್ಪು ಮಚ್ಚೆಗಳಿಂದ ಕೂಡಿದೆ. ಕೆಲವು ಬಗೆಗಳಲ್ಲಿ ಬಾಲ ಕಂದು ಬಣ್ಣದ್ದೂ ಇನ್ನು ಕೆಲವಲ್ಲಿ ಬೂದು ಬಣ್ಣದ್ದೂ ಆಗಿದೆ. ಉಳಿದ ಗ್ರೌಸುಗಳಂತಲ್ಲದೆ ಇದು ಏಕಪತ್ನೀಕ. 2. ಟೆಟ್ರಾವೊ ಯುರೋಗ್ಯಾಲಸ್ (ಕೇಪರ್‌ಕೇಲಿ) : ಯುರೋಪ್ ಹಾಗೂ ಮಧ್ಯ ಸೈಬೀರಿಯಗಳಲ್ಲಿ ಕಾಣಬರುತ್ತದೆ. ಗಂಡು ಹಕ್ಕಿ ಕಪ್ಪುಬಣ್ಣದ್ದೂ ಹೆಣ್ಣು ಕಂದುಬಣ್ಣದ್ದೂ ಆಗಿದೆ. 3. ಲೈರೂರಸ್ ಟೆಟ್ರಿಕ್ಸ್ (ಬ್ಲ್ಯಾಕ್ ಗ್ರೌಸ್) ಇದರ ವಿವರಗಳಿಗೆ (**ನೋಡಿ – ಕರಿಹುಂಜ**). 4. ಕ್ಯಾನಕೈಟಿಸ್ ಕೆನಡೆನ್ಸಿಸ್ (ಸ್ಪ್ರೂಸ್ ಗ್ರೌಸ್): ಅಲಾಸ್ಕದಿಂದ ಲ್ಯಾಬ್ರಡಾರ್‌ವರೆಗಿನ ಶಂಕುಪರ್ಣಿಗಳ ಕಾಡುಗಳಲ್ಲಿ ವಾಸಿಸುತ್ತದೆ. 5. ಸೆಂಟ್ರೊಸರ್ಕಸ್ ಯೂರೊಫೇಸಿಯಾನಸ್ (ಸೇಜ್ ಗ್ರೌಸ್): ಉತ್ತರ ಅಮೆರಿಕದ ಮಧ್ಯ ಹಾಗೂ ಪಶ್ಚಿಮ ಭಾಗಗಳಲ್ಲಿದೆ. 6. ಲಗೋಪಸ್ ಜಾತಿಯ ಹಲವಾರು ಪ್ರಭೇದಗಳು (ಟಾರ್ಮಿಗನ್ಸ್): ಉತ್ತರ ಧ್ರುವದಲ್ಲಿ ವಾಸಿಸುತ್ತವೆ. ಇವುಗಳಲ್ಲಿ ವಿಲೊ ಟಾರ್ಮಿಗನ್, ರಾಕ್ ಟಾರ್ಮಿಗನ್‌ಗಳು ಮುಖ್ಯವೆನಿಸಿವೆ.

(ಕೆ.ಎಸ್.ಎನ್)

**ಗ್ರಾಂಟ್, ಯುಲಿಸಿಸ್ ಸಿಂಪ್ಸನ್ :** 1822–85. ಅಮೆರಿಕ ಸಂಯುಕ್ತಸಂಸ್ಥಾನಗಳ ಒಬ್ಬ ಜನರಲ್ ಹಾಗೂ 18ನೆಯ ಅಧ್ಯಕ್ಷ. ಜನನ ಒಹಾಯೋದ ಪಾಯಿಂಟ್ ಪ್ಲೆಸೆಂಟಿನಲ್ಲಿ 1822ರ ಏಪ್ರಿಲ್ 27ರಂದು. ತಂದೆ ಜೆಸ್ಸಿ ಆರ್. ಗ್ರಾಂಟ್, ತಾಯಿ ಹ್ಯಾನ ಸಿಂಪ್ಸನ್. ಇವರ ಹಿರಿಯ ಮಗ ಗ್ರಾಂಟ್. ಚಿಕ್ಕಂದಿನಲ್ಲಿ ತಂದೆಗೆ ಹೊಲದ ಕೆಲಸದಲ್ಲಿ ನೆರವು ನೀಡುತ್ತಿದ್ದ. ಈತ 1839ರಲ್ಲಿ ವೆಸ್ಟ್ ಪಾಯಿಂಟಿನ ಮಿಲಿಟರಿ ಅಕಾಡೆಮಿ ಸೇರಿದ. ಇವನಿಗೆ ಪದವಿ ದೊರಕಿದ್ದು 1843ರಲ್ಲಿ. 1845ರಲ್ಲಿ ತನ್ನ ರೆಜಿಮೆಂಟಿನೊಂದಿಗೆ ಮೆಕ್ಸಿಕೋಗೆ ಹೋಗಿ ಅಲ್ಲಿಯ ಕದನಗಳಲ್ಲಿ ಪಾಲ್ಗೊಂಡ. 1847ರಲ್ಲಿ ಇವನಿಗೆ ಲೆಫ್ಟಿನೆಂಟ್ ಹುದ್ದೆ ದೊರಕಿತು. ಜೂಲಿಯ ಟಿ. ಡೆಂಟಳನ್ನು ಈತ ಮದುವೆಯಾದದ್ದು 1848ರಲ್ಲಿ. 1853ರಲ್ಲಿ ಇವನು ಕ್ಯಾಪ್ಟನ್ ಆದ. ಆದರೆ ಅತಿಯಾಗಿ ಕುಡಿಯುವವನೆಂಬ ಅಪಖ್ಯಾತಿಯಿಂದಾಗಿ ಮರುವರ್ಷ ತನ್ನ ಹುದ್ದೆಗೆ ಈತ ರಾಜೀನಾಮೆ ಕೊಡಬೇಕಾಯಿತು. ಮುಂದಿನ ಆರು ವರ್ಷಗಳಲ್ಲಿ ಈತ ತನ್ನ ಜಮೀನಿನ ಕೃಷಿ ಕಾರ್ಯ ನಡೆಸಿದ. 1860ರಲ್ಲಿ ಇಲಿನಾಯ್‌ನ ಗ್ಯಾಲಿನಕ್ಕೆ ಹೋಗಿ ತಂದೆಯ ಚರ್ಮದಂಗಡಿಯಲ್ಲಿ ಗುಮಾಸ್ತೆಯಾದ. ಆಗ ಇವನ ವರಮಾನ ಬಹಳ ಕಡಿಮೆಯಿತ್ತು. ಇವನ ಜೀವನ ವಿಫಲವೆಂದೇ ಭಾಸವಾಗುತ್ತಿತ್ತು.

1861ರಲ್ಲಿ ಅಮೆರಿಕದಲ್ಲಿ ಅಂತರ್ಯುದ್ಧ ಆರಂಭವಾಯಿತು. ಈತ ಬಹಳ ಶ್ರಮಪಟ್ಟು ಹುದ್ದೆ ಗಳಿಸಿಕೊಂಡ. ಈತನ ದಕ್ಷತೆ ಸಾಮರ್ಥ್ಯಗಳನ್ನು ಮನಗಂಡ ಲಿಂಕನ್ ಈತನಿಗೆ ಬ್ರಿಗೇಡಿಯರ್ ಹುದ್ದೆಗೆ ಬಡ್ತಿ ನೀಡಿದ. ಕ್ರಮಕ್ರಮವಾಗಿ ಇವನು ಉನ್ನತಿ ಹೊಂದಿದ.

ಯುದ್ಧಕೌಶಲವೂ ಕರಗತವಾಯಿತು. ಯಾವುದೇ ಪಕ್ಷದ ರಾಜಕೀಯ ಸುಳಿಯಲ್ಲಿ ಸಿಕ್ಕಿಕೊಳ್ಳದೆ ನಿಷ್ಠಾವಂತ ಸೈನಿಕನಾಗಿದ್ದುಕೊಂಡು ಗ್ರಾಂಟ್ ತೋರಿದ ಅಸಾಧಾರಣ ಧೈರ್ಯ, ಸಾಹಸ, ನಿಷ್ಠೆ ನಿರ್ಧಾರ ಇವು ಈತನ ಪ್ರತಿಷ್ಠೆಯನ್ನು ಹೆಚ್ಚಿಸಿದವು. ಲಿಂಕನ್ ಇವನನ್ನು ಮೆಚ್ಚಿಕೊಂಡಿದ್ದ. ಲಿಂಕನನ ಕೊಲೆಯಾದ ಮೇಲೆ ಅಧ್ಯಕ್ಷನಾದ ಆಂಡ್ರ್ಯೂ ಜಾನ್ಸನನೂ ಗ್ರಾಂಟನೂ ಪರಸ್ಪರ ಸೌಹಾರ್ದದಿಂದಿದ್ದರು. ಆದರೆ ಕ್ರಮೇಣ ಇವರಲ್ಲಿ ವಿರಸ ಬೆಳೆಯಿತು. ಅನೇಕ ಮಂದಿ ರಿಪಬ್ಲಿಕನರು ಗ್ರಾಂಟನನ್ನು ಅಧ್ಯಕ್ಷ ಸ್ಥಾನಕ್ಕೆ ನಿಲ್ಲಿಸಿದರು. ಚುನಾವಣೆಯಲ್ಲಿ ಗ್ರಾಂಟ್ ಜಯಗಳಿಸಿದ. 1869ರಲ್ಲಿ ಈತ ಅಮೆರಿಕ ಸಂಯುಕ್ತಸಂಸ್ಥಾನಗಳ ಅಧ್ಯಕ್ಷನಾದ. ಆರಂಭದಲ್ಲಿ ರಾಜಕೀಯವಾಗಿ ಗ್ರಾಂಟ್ ಅನೇಕ ತಪ್ಪುಗಳನ್ನು ಮಾಡಿದ. ಹಲವು ಸ್ಥಾನಗಳಿಗೆ ಸಚಿವರನ್ನು ನೇಮಿಸುವ ವಿಚಾರದಲ್ಲಿ ಇವನಿಗೂ ಪಕ್ಷದ ನಾಯಕರಿಗೂ ಘರ್ಷಣೆ ಉಂಟಾಯಿತು. ಜೇ ಗೌಲ್ಡ್ ಮತ್ತು ಜೇಮ್ಸ್ ಫಿಸ್ಕ್ ಎಂಬಿಬ್ಬರು ನ್ಯೂಯಾರ್ಕ್ ಚಿನ್ನದ ಪೇಟೆಯಲ್ಲಿ ನಡೆಸಲು ಯತ್ನಿಸಿದರೆನ್ನಲಾದ ದುರ್ವ್ಯವಹಾರಗಳಲ್ಲಿ ಗ್ರಾಂಟನೂ ಸೇರಿದ್ದನೆಂಬ ಆಪಾದನೆಗೆ ಒಳಗಾದ. ಗ್ರಾಂಟನ ಭಾವ ಮೈದುನನಿಗೂ ಇವಕ್ಕೂ ಸಂಬಂಧವಿತ್ತೆಂಬುದಂತೂ ವ್ಯಕ್ತಪಟ್ಟಿತು.

1872ರಲ್ಲಿ ಮತ್ತೆ ಅಧ್ಯಕ್ಷತೆಗೆ ಗ್ರಾಂಟ್ ಸ್ಪರ್ಧಿಸಿದ. ಡೆಮೊಕ್ರಾಟರು ಸೂಕ್ತ ವ್ಯಕ್ತಿಯನ್ನು ತಮ್ಮ ಅಭ್ಯರ್ಥಿಯಾಗಿ ಆರಿಸಲಿಲ್ಲವಾದ್ದರಿಂದ ಗ್ರಾಂಟ್ ಸುಲಭವಾಗಿ ವಿಜಯಗಳಿಸಿದ.

1873ರಲ್ಲಿ ಗ್ರಾಂಟನ ಅಧ್ಯಕ್ಷತೆಯ ಎರಡನೆಯ ಅವಧಿ ಆರಂಭವಾಯಿತು. ಆ ಕಾಲದಲ್ಲಿ ಹಲವಾರು ಭ್ರಷ್ಟಾಚಾರಗಳ ಬಗ್ಗೆ ನಾನಾ ಬಗೆಯ ವದಂತಿಗಳು ಹಬ್ಬಿದವು. ಕಾಂಗ್ರೆಸಿಗರು ಮತ್ತು ಸಚಿವರ ಲಂಚಕೋರತನಗಳು ಬಯಲಿಗೆ ಬಂದವು. ಕಾಂಗ್ರೆಸಿಗರು ತಮ್ಮ ಸಂಬಳ ಹೆಚ್ಚಿಸಿಕೊಂಡಿದ್ದನ್ನು ಸಂಬಳ ಬಡಕತನವೆಂದು ಪತ್ರಿಕೆಗಳು ಟೀಕಿಸಿದವು. ಅಧ್ಯಕ್ಷನ ಆಪ್ತಕಾರ್ಯದರ್ಶಿಯೇ ಮೋಸ ವ್ಯವಹಾರವೊಂದರಲ್ಲಿ ಸಿಕ್ಕಿಬಿದ್ದಿದ್ದ. ಚುನಾವಣೆಯ ಕಾಲದಲ್ಲಿ ನಡೆಯಿತೆನ್ನಲಾದ ಅಕ್ರಮಗಳು ಬಯಲಾದವು. ಈತನ ಅಧಿಕಾರಾವಧಿಯಲ್ಲಾದ ಒಂದು ಮುಖ್ಯ ಸಾಧನೆಯೆಂದರೆ ದಕ್ಷಿಣದ ರಾಜ್ಯಗಳ ಪುನರ್ರಚನೆ. ಅಲ್ಲಿಯ ಸರ್ಕಾರಗಳ ವರ್ಣಭೇದ ನೀತಿಯ ತೀವ್ರತೆ ಕಡಿಮೆಯಾಯಿತು. ವರ್ಣೀಯರಿಗೆ ಮತಹಕ್ಕು ನೀಡಬಾರದೆಂಬ ದೃಷ್ಟಿ ಕ್ರಮೇಣ ಕಡಿಮೆಯಾಯಿತು. ಅಂತರ್ಯುದ್ಧಕಾಲದಲ್ಲಿ ಒಕ್ಕೂಟ ಸರ್ಕಾರದ ವಿರುದ್ಧವಾಗಿದ್ದವರಿಗಾಗಿ ಡಿಸ್ಟ್ರಾಯರ್ ನೌಕೆಗಳನ್ನು ನಿರ್ಮಿಸಿಕೊಟ್ಟಿದ್ದ ಬ್ರಿಟಿಷ್ ಸರ್ಕಾರ ಅಮೆರಿಕಕ್ಕೆ ಪರಿಹಾರ ನೀಡಬೇಕೆಂಬ ಪ್ರಶ್ನೆಯನ್ನು ಪಂಚಾಯತಿ ನ್ಯಾಯಾಲಯಕ್ಕೆ ಒಪ್ಪುವ ವಾಷಿಂಗ್ಟನ್ ಕೌಲು (1871) ಆದದ್ದು ಗ್ರಾಂಟನ ಅಧ್ಯಕ್ಷತೆಯ ಕಾಲದಲ್ಲಿ.

1877ರಲ್ಲಿ ಗ್ರಾಂಟನ ಅಧ್ಯಕ್ಷಾಧಿಕಾರಾವಧಿ ಮುಗಿಯಿತು. ಗ್ರಾಂಟ್ ಲೋಕ ಪರ್ಯಟನ ಮಾಡಿದ. ಆ ಸಮಯದಲ್ಲಿ ಭಾರತ, ಚೀನ, ಜಪಾನ್‌ಗಳಿಗೂ ಭೇಟಿ ನೀಡಿದ. 1880ರಲ್ಲಿ ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಇವನ ಪಕ್ಷದ ಕೆಲವರು ಇವನನ್ನು ಮತ್ತೊಮ್ಮೆ ಅಧ್ಯಕ್ಷತೆಗೆ ನಿಲ್ಲಿಸಲು ಯತ್ನಿಸಿದರು. ಆದರೆ ಒಬ್ಬ ವ್ಯಕ್ತಿಯೇ ಮೂರನೆಯ ಬಾರಿ ಅಧ್ಯಕ್ಷನಾಗುವುದಕ್ಕೆ ವಿರೋಧವಿತ್ತಾದ್ದರಿಂದ ಇವನು ಬರಲಿಲ್ಲ. ಈತ ನ್ಯೂಯಾರ್ಕಿನಲ್ಲಿ ನೆಲೆಸಿದ. ಬ್ಯಾಂಕಿಂಗ್ ವ್ಯವಹಾರದಲ್ಲಿ ತನ್ನೆಲ್ಲ ಐಶ್ವರ್ಯವನ್ನೂ ತೊಡಗಿಸಿದ. ಈತ ಪಾಲುದಾರನಾಗಿದ್ದ ಬ್ಯಾಂಕು ಮುಳುಗಿಹೋಯಿತು. ಇವನ ಪಾಲುದಾರರು ಇವನಿಗೆ ಮೋಸ ಮಾಡಿದ್ದರು. ಗ್ರಾಂಟ್

ಕೊನೆಗಾಲದಲ್ಲಿ ಬಹಳ ಕಷ್ಟಪಡಬೇಕಾಯಿತು. ಕಾಯಿಲೆಯಿಂದ ನರಳುತ್ತಿದ್ದಾಗಲೂ ತನ್ನ ಅಭಿಮಾನವನ್ನು ಕಳೆದುಕೊಳ್ಳಲಿಲ್ಲ. ಪತ್ರಿಕೆಯೊಂದರ ಬೇಡಿಕೆಯಂತೆ ಅದರಲ್ಲಿ ಪ್ರಕಟಣೆಗಾಗಿ ತನ್ನ ಜೀವನದ ನೆನಪುಗಳನ್ನು ಕುರಿತು ಲೇಖನಗಳನ್ನು ಬರೆದ. ಇದರಿಂದ 5,00,000 ಡಾಲರುಗಳ ಸಂಪಾದನೆಯಾಯಿತು. ಸಾಯುವುದಕ್ಕೆ ನಾಲ್ಕು ದಿನಗಳ ಮುಂಚೆ ತಾನೇ ಅದು ಮುಗಿಯಿತು. 1885ರ ಜುಲೈ 23ರಂದು ಗ್ರಾಂಟ್ ನಿಧನನಾದ. (ಎಚ್.ಆರ್.ಆರ್.ಬಿ.)

**ಗ್ರ್ಯಾಂಡ್ ಐಲೆಂಡ್ :** ಅಮೆರಿಕ ಸಂಯುಕ್ತ ಸಂಸ್ಥಾನಗಳ ನಿಬ್ರ್ಯಾಸ್ಕ ರಾಜ್ಯದ ಆಗ್ನೇಯ ಭಾಗದಲ್ಲಿರುವ ಒಂದು ನಗರ. ಹಾಲ್ ಕೌಂಟಿಯ ಮುಖ್ಯ ಪಟ್ಟಣ. ಅದು ಲಿಂಗ್ಕನ್ ನಗರದ ಪಶ್ಚಿಮಕ್ಕೆ 136 ಕಿಮೀ ದೂರದಲ್ಲೂ ಓಮಹಾ ನಗರದ ನೈರುತ್ಯಕ್ಕೆ 224 ಕಿಮೀ ದೂರದಲ್ಲೂ ಇದೆ. ಪ್ಲ್ಯಾಟ್ ನದಿಯಲ್ಲಿರುವ ಮಹಾದ್ವೀಪದಿಂದಾಗಿ (ಗ್ರ್ಯಾಂಡ್ ಐಲೆಂಡ್) ಈ ನಗರಕ್ಕೆ ಈ ಹೆಸರು ಬಂತು. ಇಲ್ಲಿಗೆ ಬಂದ ಮೊದಲ ಪರಿಶೋಧಕರು ಈ ದ್ವೀಪವನ್ನು ಒಂದು ಹೆಗ್ಗುರುತಾಗಿ ಪರಿಗಣಿಸಿದ್ದರು. ಸಾರಿಗೆ ಸೌಲಭ್ಯಗಳಿದ್ದ ಈ ನಗರವನ್ನು ಸ್ಥಾಪಿಸಿದವರು ಜರ್ಮನಿಯ ವಲಸೆಗಾರರು (1857). ನಗರದ ಆಧುನಿಕ ಭಾಗವನ್ನು 1866ರಲ್ಲಿ ರಚಿಸಲಾಯಿತು.

ಯೂನಿಯನ್ ಪೆಸಿಫಿಕ್ ಮತ್ತು ಬರ್ಲಿಂಗ್ಟನ್ ರೈಲುಮಾರ್ಗಗಳು ಈ ನಗರದ ಮೂಲಕ ಹಾದುಹೋಗುತ್ತವೆ. ನಿಬ್ರ್ಯಾಸ್ಕ ರಾಜ್ಯದ ಹೆದ್ದಾರಿಯ ಕೇಂದ್ರವಾಗಿಯೂ ಈ ನಗರ ಅಭಿವೃದ್ಧಿ ಹೊಂದಿತ್ತು. 20ನೆಯ ಶತಮಾನದಲ್ಲಿ ಪ್ಲ್ಯಾಟ್ ನದಿಯನ್ನು ನೀರಾವರಿಗೆ ಬಳಸಿಕೊಳ್ಳಲಾರಂಭಿಸಿದ ಮೇಲೆ ಈ ನಗರ ನೀರಾವರಿಯ ಕೇಂದ್ರವಾಯಿತು. ಸಕ್ಕರೆ ಬೀಟ್ ಪರಿಷ್ಕರಣ, ಮಾಂಸದ ಡಬ್ಬೀಕರಣ, ಧಾನ್ಯಗಳ ದಾಸ್ತಾನು ಈ ನಗರದ ಮುಖ್ಯ ಉದ್ಯಮಗಳು. (ವಿ.ಜಿ.ಕೆ.)

**ಗ್ರ್ಯಾಂಡ್ ಕನೇರಿ :** ಸ್ಪೇನಿಗೆ ಸೇರಿದ ಲಾಸ್ ಪಾಲ್ಮಾಸ್ ಪ್ರಾಂತ್ಯದ ಕನೇರಿ ದ್ವೀಪಸ್ತೋಮದ ಒಂದು ದ್ವೀಪ; ಅತಿಹೆಚ್ಚು ಜನಸಾಂದ್ರತೆಯುಳ್ಳ ಎರಡನೆಯ ದ್ವೀಪ. ವಿಸ್ತೀರ್ಣ 1533 ಚ.ಕಿಮೀ. ಅಡ್ಡಳತೆ 32 ಕಿಮೀ. ಇದಕ್ಕೆ 193 ಕಿಮೀ ಗಳಷ್ಟು ಕಡಲ ತೀರ ಇದೆ. ಜನಸಂಖ್ಯೆ 8,38,397 (2010).

ಲಾಸ್ ಪೆಕೋಸ್ (1950 ಮೀ) ಇಲ್ಲಿಯ ಅತ್ಯುನ್ನತ ಶಿಖರ. ಗ್ರ್ಯಾಂಡ್ ಕನೇರಿ ದ್ವೀಪದ ಬೆಟ್ಟದ ತಪ್ಪಲುಗಳಲ್ಲಿ ಆಳವಾದ ಕಮರಿಗಳಿವೆ. ಉತ್ತರದ ಇಳಕಲು ಭೂಮಿಯಲ್ಲಿ ಆಲ್ಪ್ಸ್ ಪರ್ವತಗಳ ವಾಯುಗುಣವೂ ಸಸ್ಯಗಳೂ ಇವೆ. ದ್ವೀಪದ ದಕ್ಷಿಣ ಭಾಗ ಬೆಂಗಾಡು.

ಇಲ್ಲಿಯ ಜನರ ಮುಖ್ಯ ಕಸಬು ವ್ಯವಸಾಯ. ಬಾಳೆ, ಟೊಮೆಟೊ, ಹೊಗೆಸೊಪ್ಪು ಮುಖ್ಯ ಬೆಳೆಗಳು. ಇಲ್ಲಿ ಕಸೂತಿ, ಬುಟ್ಟಿ ಮತ್ತು ಮಡಕೆ ತಯಾರಾಗುತ್ತವೆ. ಹಲವಾರು ಖನಿಜಯುಕ್ತ ಜಲಬುಗ್ಗೆಗಳು ಇಲ್ಲುಂಟು. ಈ ದ್ವೀಪದ ಮುಖ್ಯ ಪಟ್ಟಣವಾದ ಲಾಸ್ ಪಾಲ್ಮಾಸ್ (3,83,308) ಒಂದು ಬಂದರು. ಈಚೆಗೆ ಈ ದ್ವೀಪ ಪ್ರವಾಸಿ ತಾಣವಾಗಿದ್ದು ಈ ಕಾರಣದಿಂದ ಸಾಕಷ್ಟು ಆರ್ಥಿಕ ಆದಾಯ ಪಡೆಯುತ್ತಿದೆ. (ವಿ.ಜಿ.ಕೆ.)

**ಗ್ರ್ಯಾಂಡ್ ಕ್ಯಾನ್ಯನ್ :** ಅಮೆರಿಕ ಸಂಯುಕ್ತಸಂಸ್ಥಾನದ ಅರಿಜೋನ ರಾಜ್ಯದ ಉತ್ತರ ಭಾಗದ ಪ್ರಸ್ಥಭೂಮಿಯಲ್ಲಿ ಕಾಲರಾಡೋ ನದಿಯ ಕೊರೆತದಿಂದ ಸಂಭವಿಸಿರುವ ಆಳವಾದ ಕಮರಿ. ಪ್ರಪಂಚದ ಏಳು ಪ್ರಾಕೃತಿಕ ವಿಸ್ಮಯಗಳಲ್ಲೊಂದು. ಇದರ ಹೊರಗೋಡೆಗಳ ನಡುವೆ ಹಲವು ವರ್ಣರಂಜಿತ ಶಿಖರಗಳಿವೆ. ಕಮರಿಯೊಳಗೆ ಕಮರಿಗಳು ಕವಲುಕವಲಾಗಿ ಸಾಲು ಸಾಲಾಗಿ ಗುಂಪು ಗುಂಪಾಗಿ ವಿಚಿತ್ರ ವಿನ್ಯಾಸ ಮೆರೆದಿವೆ. ಇದರ ಅಗಲ 6.5–29 ಕಿಮೀ. ಕೆಲವು ಕಡೆ ಒಂದೂವರೆ ಕಿಮೀಗೂ ಹೆಚ್ಚು ಆಳವಾಗಿದೆ. ಅರಿಜೋನ ರಾಜ್ಯದ ಉತ್ತರ ಅಂಚಿನಿಂದ ನೆವಾಡದ ಬಳಿಯ ಗ್ರ್ಯಾಂಡ್ ವಾಷ್ ಗುಡ್ಡಗಳ ಸಾಲಿನವರೆಗೆ ಸು. 450 ಕಿಮೀ ಸಾಗಿದೆ. ಕಾಲರಾಡೋ ನದಿ ಈ ಕಮರಿಯಲ್ಲಿ 170 ಕಿಮೀ ದೂರ ಸುತ್ತಿ ಬಳಸಿ ಹರಿಯುತ್ತದೆ. ಕಮರಿಯ ಗುಡ್ಡಗಳ ಬಣ್ಣ ಮಾಸಲು ಕೆಂಪು. ಆದರೆ ಒಂದೊಂದು ಪದರಕ್ಕೂ ಪದರಗಳ ಸಮೂಹಕ್ಕೂ ವಿಶಿಷ್ಟ ಬಣ್ಣವುಂಟು. ಮಾಸಲು ಹಳದಿ, ಸಾಧಾರಣ ಹಸುರು, ಎಳೆಗೆಂಪು – ಇಂಥ ಬಣ್ಣಗಳಿಂದ ಇದರ ಗುಡ್ಡಗಳು ಮನಮೋಹಕವಾಗಿವೆ. ಗ್ರ್ಯಾಂಡ್ ಕ್ಯಾನ್ಯನ್‌ಗೆ ಸಾಟಿಯಾದ ಕಮರಿ ವಿಶ್ವದಲ್ಲಿ ಮತ್ತೊಂದಿಲ್ಲ.

ಕ್ಯಾನ್ಯನ್ ಕಮರಿಯ ಗೋಡೆಗಳು ಸಮುದ್ರ ಸುಣ್ಣಗಲ್ಲು, ನದೀಜೇಡಿ ಪದರಗಲ್ಲು, ಆದಿಭೂಯುಗದ ಮರಳುಗಲ್ಲು, ಸುಣ್ಣದ ಮಣ್ಣು ಹಾಗೂ ಮರಳುಗಳ ಮಿಶ್ರಣದಿಂದ ಯುಗಯುಗಗಳಲ್ಲಿ ರೂಪುಗೊಂಡ ಬಂಡೆಗಳು – ಇವುಗಳಿಂದ ಕೂಡಿವೆ. ಕಮರಿಯ ಒಳಭಾಗದಲ್ಲಿ ತಿರುಚಿಕೊಂಡಿರುವ ಸ್ಫಟಿಕ ಶಿಲೆಗಳು ಆರ್ಕೇಯನ್ ಪ್ರಾಕ್ ಹಾಗೂ ಕೇಂಬ್ರಿಯನ್ ಯುಗದ ಶಿಲೆಗಳು; ಬೆಣಚುಕಲ್ಲು ಮತ್ತು ಪದರಗಲ್ಲುಗಳಿಂದ ಆಗಿವೆ. ಬಂಡೆಗಳ ಮೇಲೆ ಎರಡನೆಯ ಭೂಯುಗದ ಚಪ್ಪಟೆಯ ಗುಡ್ಡಗಳು ಕುಂಕುಮ, ಎಳೆಗೆಂಪು ಹಾಗೂ ಬಿಳಿಯ ಬಣ್ಣಗಳಿಂದ ಕೂಡಿದ ಪ್ರಪಾತಗಳು ಮತ್ತು ಇಳಿಮೇಡುಗಳು ಇವೆ. ಕ್ಯಾನ್ಯನ್ ಬಯಲಿನ ಕೆಲವು ಭಾಗಗಳಲ್ಲಿ ಅಗ್ನಿಪರ್ವತಗಳಿಂದ ಹೊರಬಿದ್ದ ಕರಿಯ ಶಿಲಾಪ್ರವಾಹ ಹರಡಿದೆ. ಈ ಅಗ್ನಿಪರ್ವತಗಳು 1,000 ವರ್ಷಗಳಿಂದ ಜೀವಂತವಾಗಿವೆ. ಕಾಲೊರಾಡೋ ನದಿ ಕ್ಯಾನ್ಯನ್ ಕಮರಿಯಲ್ಲಿ ಪ್ರತಿದಿನವೂ ಸರಾಸರಿ 5,00,000 ಟನ್ನುಗಳಷ್ಟು ಮಣ್ಣು, ಮರಳು ಮತ್ತು ಕಂಕರನ್ನು ಸಾಗಿಸುತ್ತದೆ. ಕ್ಯಾನ್ಯನ್ ಕಮರಿಯ ಆಳ ರಭಸವಾಗಿ ಹರಿಯುವ ನದಿಯ ಕೊರೆತದಿಂದಾದ್ದು. ಪ್ರವಾಹ, ಗಾಳಿ, ಉಷ್ಣತೆ, ರಾಸಾಯನಿಕ ಕ್ರಿಯೆ – ಇವೆಲ್ಲವುಗಳಿಂದ ಮೆತುಬಂಡೆಗಳು ಕರಗಿ ನದಿಯ ಅಗಲ ವಿಸ್ತರಿಸಿದೆ. ಕ್ಯಾನ್ಯನ್ ಕಮರಿಯ ಸೃಷ್ಟಿಗೆ ನದಿಯ ಹಿಂಪ್ರವಾಹ ಕಾರಣ. ನದಿಯ ಹರಿವಿಗೆ ಅಡಚಣೆಯಾಗಿ ಭೂಮಿ ಏಳಲಾರಂಭಿಸಿದಾಗ ನದಿ ಅದರ ಮೇಲೆ ಹರಿದು ಕಮರಿಯನ್ನು ಕೊರೆಯಿತು. ದಕ್ಷಿಣದ ಕಡೆಯ ಇಳಕಲು ಭೂಮಿಗೆ ಅಡ್ಡಲಾಗಿರುವ ಕಮರಿಯ ಪೂರ್ವ ಪಶ್ಚಿಮ ಭಾಗಗಳು ಈ ಪ್ರಕ್ರಿಯೆಗೆ ನಿದರ್ಶನವಾಗಿವೆ.

ಕಲ್ನಾರು, ತಾಮ್ರ, ಸೀಸ ಮತ್ತು ಯುರೇನಿಯಂ ಇಲ್ಲಿ ಸಿಗುವ ಖನಿಜಗಳು. ಇಲ್ಲಿ ಹಳೆಯ ಯುಗದ ಬಂಡೆಗಳೂ ಸಸ್ಯ ಮತ್ತು ಪ್ರಾಣಿಗಳ ಪಳೆಯುಳಿಕೆಗಳೂ ಹೇರಳವಾಗಿವೆ. ಕಮರಿಯ ಕೆಳಗಿನ ಸ್ತರಗಳಲ್ಲಿಯ ಪ್ರಾಚೀನಸಮುದ್ರ ಚಿಪ್ಪುಗಳು; ಟ್ರೈಲೋಬೈಟ್, ಸಮುದ್ರ ಸಂಧಿಪದಿಗಳು, ಒಂಟೆ, ಆನೆ, ಕುದುರೆ, ಡೈನೊಸಾರ್ (ಮೂಳೆ ಮತ್ತು ಹೆಜ್ಜೆ ಗುರುತು); ನೆಲದ ಸ್ಲಾತ್ ಮುಂತಾದ ವಿವಿಧ ಜೀವಿಗಳ ಪಳೆಯುಳಿಕೆಗಳು ಇಲ್ಲಿವೆ. ಇವುಗಳಿಂದ ಇಲ್ಲಿ ಹಿಂದೆ ಇದ್ದ ಜೀವಿಗಳ ಪರಿಚಯ ದೊರಕುತ್ತದೆ.

ಗ್ರ್ಯಾಂಡ್ ಕ್ಯಾನ್ಯನ್ ಕಮರಿಯನ್ನು 1554ರಲ್ಲಿ ಕೊರೊನಾಡೋ ಪರಿಶೋಧನ ತಂಡ ಕಂಡುಹಿಡಿಯಿತು. ಫ್ರಾನ್ಸಿಸ್ಕೊ ಗಾರ್ನಿಸ್, ಸಿಲ್ವೆಸ್ಟ್ರೆ ವೆಲೇಝ್‌ದ ಎಸ್ಕಲಾಂಟ ಎಂಬ ಇಬ್ಬರು ಸ್ಪ್ಯಾನಿಷ್ ಪಾದ್ರಿಗಳು ಇದರ ಇರವನ್ನು ಮತ್ತೆ ಕಂಡರು (1776). ಈ ಪ್ರದೇಶದ ಭೌಗೋಳಿಕ, ಭೂವೈಜ್ಞಾನಿಕ ಹಾಗೂ ಮಾನವಶಾಸ್ತ್ರೀಯ ಸಂಶೋಧನೆಗಳು 1869 ಮತ್ತು 1870 ರಲ್ಲಿ ನಡೆದಿವೆ.

**ಸಸ್ಯಪ್ರಾಣಿ ಜೀವನ :** ಭೂಗುಣ, ವಾಯುಗುಣ, ಭೂಮಿಯ ಮಟ್ಟ ಇವಕ್ಕೆ ಅನುಗುಣವಾಗಿ ಕ್ಯಾನ್ಯನ್ ಪ್ರದೇಶವನ್ನು ಐದು ಜೀವವಲಯಗಳನ್ನಾಗಿ ವಿಭಜಿಸಿದೆ. ಆದರೆ ಇಲ್ಲಿ ಉಷ್ಣವಲಯದ ಸಸ್ಯಗಳಿಲ್ಲ. ಕಮರಿಯ ಮಧ್ಯಭಾಗ ಸಸ್ಯರಹಿತವಾಗಿ ಮರುಭೂಮಿಯ ಲಕ್ಷಣ ಹೊಂದಿದೆ. ಪ್ರಸ್ಥಭೂಮಿಯ ಭಾಗಗಳಲ್ಲಿ ಪೈನ್, ಫರ್ ಮತ್ತು ಆಸ್ಪಿನ್ ಮರಗಳು ಬೆಳೆಯುತ್ತವೆ. ನೂರು ಬಗೆಯ ಪಕ್ಷಿಗಳೂ 60 ಬಗೆಯ ಸಸ್ತನಿ ಪ್ರಾಣಿಗಳೂ 25 ಬಗೆಯ ಸರ್ಪಗಳೂ ಇಲ್ಲಿವೆ. ಪ್ರಾಕೃತಿಕ ತಡೆಗಳಿಂದಾಗಿ ಕಮರಿಯ ವಿವಿಧ ಅಂಚುಗಳಲ್ಲಿಯ ಪ್ರಾಣಿಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಕಮರಿಯ ಕೆಲವು ಭಾಗಗಳಲ್ಲಿ ಪ್ರಾಗೈತಿಹಾಸಿಕ ಜನಜೀವನದ ಕುರುಹುಗಳುಂಟು.

1919 ರಲ್ಲಿ 12,17,262 ಎಕರೆ ವಿಸ್ತೀರ್ಣದ ಗ್ರ್ಯಾಂಡ್‌ಕ್ಯಾನ್ಯನ್ ನ್ಯಾಷನಲ್ ಪಾರ್ಕ್ ಪ್ರವಾಸ ಕ್ಷೇತ್ರ ಸ್ಥಾಪಿತವಾಯಿತು. ಇದನ್ನು 1979ರಲ್ಲಿ ವಿಶ್ವ ಪರಂಪರೆಯ ತಾಣವೆಂದು ಘೋಷಿಸಲಾಯಿತು. ಕ್ಯಾನ್ಯನಿನ ಉತ್ತರದ ಮತ್ತು ದಕ್ಷಿಣದ ಅಂಚುಗಳ ನಡುವೆ ಸಂಬಂಧ ಕಲ್ಪಿಸಲು 350 ಕಿಮೀ ರಸ್ತೆಯನ್ನೂ 34 ಕಿಮೀ ರೈಲು ಮಾರ್ಗವನ್ನೂ ಹಾಕಿದ್ದಾರೆ. ರಮ್ಯವಾದ ಈ ಭಾಗದ ಕಮರಿಯ ಎರಡು ಅಂಚುಗಳಲ್ಲೂ ಪ್ರವಾಸಿಗಳಿಗಾಗಿ ವಸತಿಗಳಿವೆ. ಪ್ರಪಾತದೊಳಗೆ ಹೇಸರಗತ್ತೆಯ ಸವಾರಿ ಮಾಡುವುದೂ ಹೆಲಿಕಾಪ್ಟರ್‌ನಲ್ಲಿ ಸುತ್ತಿಬರುವುದೂ ನದಿಯ ಮೇಲೆ ಮೋಟಾರ್ ದೋಣಿ ಅಥವಾ ಗಾಳಿ ತುಂಬಿದ ತೆಪ್ಪದ ಮೇಲೆ ಪ್ರಯಾಣ ಮಾಡುವುದೂ ಚಾರಣ ಮಾಡುವುದೂ ರೋಮಾಂಚಕಾರಿ ಅನುಭವಗಳು. ಕಮರಿಯ ದಕ್ಷಿಣದ ಅಂಚು ಇಡೀ ವರ್ಷ ಪ್ರವಾಸಿಗಳಿಗೆ ತೆರೆದಿರುತ್ತದೆ. ಉತ್ತರದ ಅಂಚಿನ ಪ್ರವಾಸಿಮಂದಿರಗಳನ್ನು ಚಳಿಗಾಲದಲ್ಲಿ ಮುಚ್ಚಿರುತ್ತಾರೆ. ಕ್ಯಾನ್ಯನ್ ಭಾಗಕ್ಕೆ ಪ್ರಯಾಣ ಮಾಡಲು ರೈಲು ಮತ್ತು ರಸ್ತೆ ಸೌಲಭ್ಯಗಳುಂಟು. (ವಿ.ಜಿ.ಕೆ.)

**ಗ್ರ್ಯಾಂಡ್ ಡ್ಯೂಕ್ :** ಯುರೋಪಿನಲ್ಲಿ ರಾಜರಿಗೂ ಡ್ಯೂಕರಿಗೂ ನಡುವೆ ಇದ್ದ ಒಂದು ಪದವಿ. ರಷ್ಯದಲ್ಲಿ ರಾಜಮನೆತನದ ಕೆಲವರಿಗೆ ಈ ಪದವಿ ಇತ್ತು. ಪಶ್ಚಿಮ ಯುರೋಪಿನಲ್ಲಿ ಮೊದಲನೆಯ ಗ್ರ್ಯಾಂಡ್ ಡ್ಯೂಕ್ ಪದವಿ ದತ್ತವಾದ್ದು 1567ರಲ್ಲಿ. ಟಸ್ಕನಿಯ ಕಾಸಿಮೊ ಡಿ ಮೆಡಿಚಿ ಐದನೆಯ ಪಯಸ್ ಪೋಪ್ ಈ ಪದವಿ ದಯಪಾಲಿಸಿದ. ಅವನ ಮಗನಾದ ಫ್ರಾನ್ಸಿಸ್ಕೋನನ್ನು ಗ್ರ್ಯಾಂಡ್ ಎಂದು ಹೋಲಿ ರೋಮನ್ ಸಾಮ್ರಾಟ 2ನೆಯ ಮಾಕ್ಸಿಮಿಲಿಯನ್ 1576ರಲ್ಲಿ ಮಾನ್ಯ ಮಾಡಿದ. ಈ ಬಿರುದು 18ನೆಯ ಶತಮಾನದಲ್ಲಿ ಟಸ್ಕನಿಯಿಂದ ಹಾಬ್ಸ್‌ಬರ್ಗ್ ಲೊರೈನ್ ಮನೆತನಕ್ಕೆ ಬಂತು.

ನೆಪೋಲಿಯಾನಿಕ್ ಯುದ್ಧಗಳ ಕಾಲದಲ್ಲಿ ಜರ್ಮನಿ ಹಾಗೂ ಪೂರ್ವ ಯುರೋಪ್ ರಾಷ್ಟ್ರಗಳ ಪುನರ್ವ್ಯವಸ್ಥೆಯ ವೇಳೆಯಲ್ಲಿ ಅನೇಕ ಗ್ರ್ಯಾಂಡ್ ಡ್ಯೂಕ್ ಪದವಿಗಳು ಹುಟ್ಟಿಕೊಂಡವು. ಈ ವ್ಯವಸ್ಥೆಯಂತೆ ಜೋಕಿಮ್ ಮುರಾತ್‌ಗೆ ಬೆರ್ಗ್, ಚಾರ್ಲ್ಸ್ ಫ್ರೆಡ್ರಿಕ್‌ಗೆ

ಬೇಡನ್, ಒಂದನೆಯ ಲೂಯಿಗೆ ಹೆಸ್ಸೆ ಮತ್ತು ಮೂರನೆಯ ಫರ್ಡಿನೆಂಡನಿಗೆ ವರ್ಜ್‌ಬರ್ಗ್ ಗ್ರ್ಯಾಂಡ್ ಡಚಿಗಳು 1806ರಲ್ಲಿ ಕೊಡಲ್ಪಟ್ಟವು. ಅಲ್ಲದೆ 1808ರಲ್ಲಿ ವಾರ್ಸಾ ಡಚಿಯನ್ನು ಸ್ಯಾಕ್ಸನಿ ರಾಜ ಫ್ರೆಡ್ರಿಕ್ ಆಗಸ್ಟಸನಿಗೂ 1810ರಲ್ಲಿ ಫ್ರಾಂಕ್‌ಫರ್ಟನ್ನು ಕಾರ್ಲ್ ತಿಯೊಡೋರ್ ಫಾನ್ ಡಾಲ್ಬರ್ಗನಿಗೂ ಅನುಗ್ರಹಿಸಲಾಯಿತು. 1815ರಲ್ಲಿ ನಡೆದ ವಿಯೆನ್ನ ಕಾಂಗ್ರೆಸಿನ ಫಲವಾಗಿ ಡಚಿಗಳ ಪುನರ್ವ್ಯವಸ್ಥೆಯಾಯಿತು.

ರಷ್ಯದ ವೆಲಿಕಿ ಕ್ನ್ಯಾಜ್ ಅಥವಾ ಗ್ರ್ಯಾಂಡ್ ಪ್ರಿನ್ಸ್ ಎಂಬ ಪದವಿಗೆ ಗ್ರ್ಯಾಂಡ್ ಡ್ಯೂಕ್ ಎಂಬ ಪದವನ್ನು ಪರ್ಯಾಯವಾಗಿ ಬಳಸಲಾಗಿದೆ. ರಾಜನನ್ನು ವೆಲಿಕಿ ಕ್ನ್ಯಾಜ್ ಎಂದು ಕರೆಯಲಾಗುತ್ತಿತ್ತು. ಕೀಯೆಫ್ ರಾಜಕುಮಾರನಿಗೆ ಈ ಬಿರುದು ಇತ್ತು. 12ನೆಯ ಶತಮಾನದ ಉತ್ತರಾರ್ಧದಲ್ಲಿ ವ್ಲಾಡಿಮಿರ್ ರಾಜರು, 14–15ನೆಯ ಶತಮಾನಗಳಲ್ಲಿ ಮಸ್ಕೊವಿ, ಟ್ವೆರ್, ರ್‍ಯಾಜಾನ್, ನಿಷ್ನಿ ನೊವ್‌ಗೊರಾಡ್ ಮತ್ತು ಸ್ಮೊಲೆನ್ಸ್ಕ ರಾಜರು ಈ ಬಿರುದನ್ನು ಧರಿಸುತ್ತಿದ್ದರು. ಕಾಲಕ್ರಮದಲ್ಲಿ ಈ ಬಿರುದು ಮಸ್ಕೊವಿ ರಾಜರ ಏಕಸ್ವಾಮ್ಯವಾಯಿತು. 1547ರಿಂದ ಅವರನ್ನು ಜಾರ್ ಎಂದು ಕರೆಯಲಾಯಿತು. ಪೀಟರ್ ಮಹಾಶಯ ಇಂಪಿರೇಟರ್ (ಸಾಮ್ರಾಟ) ಬಿರುದನ್ನು ಧರಿಸಿದ ಮೇಲೆ ರೋಮನೊವ್ ಸಂತತಿಯವರಿಗೆ 1886ರ ವರೆಗೆ ವೆಲಿಕಿ ಕ್ನ್ಯಾಜ್ ಬಿರುದು ಸಲ್ಲುತ್ತಿತ್ತು. ಅನಂತರ ಇದು ಸಾಮ್ರಾಟನ ಗಂಡುಮಕ್ಕಳು, ಹೆಣ್ಣುಮಕ್ಕಳು, ಸೋದರರು, ಸೋದರಿಯರು ಮತ್ತು ಮೊಮ್ಮಕ್ಕಳಿಗೆ ಮೀಸಲಾಯಿತು. ಗ್ರ್ಯಾಂಡ್ ಡ್ಯೂಕ್ ಬಿರುದು ಇಂಗ್ಲೆಂಡಿನಲ್ಲೂ ಬಳಕೆಯಲ್ಲಿತ್ತು.

(ಎಚ್.ವಿ.ಎಸ್.ಎಂ.)

**ಗ್ರ್ಯಾಂಡ್ ಬ್ಯಾಂಕ್ಸ್ :** ಅಟ್ಲಾಂಟಿಕ್ ಸಾಗರದ ಆಗ್ನೇಯ ಭಾಗದಲ್ಲಿರುವ ಉತ್ತರ ಅಮೆರಿಕ ಖಂಡಾಂತರ ಮುಳುಗುದಡದ (ನಾರ್ತ್ ಅಮೆರಿಕನ್ ಕಾಂಟಿನೆಂಟಲ್ ಶೆಲ್ಫ್) ಒಂದು ಭಾಗ. ನ್ಯೂಫೌಂಡ್‌ಲೆಂಡಿನ ಆಗ್ನೇಯದಲ್ಲಿ ಸು. 560 ಕಿಮೀ ದೂರ ಹರಡಿದೆ. ಇದೊಂದು ಅಂತಾರಾಷ್ಟ್ರೀಯ ಮೀನುಗಾರಿಕೆ ಕೇಂದ್ರ. ಗ್ರ್ಯಾಂಡ್ ಬ್ಯಾಂಕ್ಸ್‌ನಲ್ಲಿ ಹಲವು ಮುಳುಗುದಡಗಳಿವೆ. ಇವುಗಳಲ್ಲಿ ಮುಖ್ಯವಾದವು ಗ್ರ್ಯಾಂಡ್ ಬ್ಯಾಂಕ್, ಸೇಂಟ್ ಬ್ಯಾಂಕ್ ಮತ್ತು ಗ್ರೀನ್ ಬ್ಯಾಂಕ್. ಈ ದಡಗಳು 24–100 ಮೀ ಆಳದಲ್ಲಿವೆ. ಅನೇಕ ಕಡೆಗಳಲ್ಲಿ 100 ಫ್ಯಾದಮುಗಳಿಗಿಂತಲೂ ಹೆಚ್ಚು ಆಳವಾಗಿದೆ. ಇದರ ಸಮೀಪದಲ್ಲೆ ಲ್ಯಾಬ್ರಡಾರ್ ಶೀತೋದಕ ಪ್ರವಾಹವೂ ಗಲ್ಫ್ ಉಷ್ಣೋದಕ ಪ್ರವಾಹವೂ ಕೂಡುತ್ತವೆ. ಈ ಪರಸ್ಪರ ವಿರುದ್ಧ ಪ್ರವಾಹಗಳ ಕೂಡುವಿಕೆಯಿಂದಾಗಿ ಆಗಿಂದಾಗ್ಗೆ ದಟ್ಟವಾದ ಮಂಜು ಕವಿಯುತ್ತದೆ. ಹೀಗೆ ಶೈತ್ಯ ಉಷ್ಣ ಉದಕಗಳ ಸಮ್ಮಿಶ್ರಣದಲ್ಲಿ ಸೃಷ್ಟಿಯಾಗುವ ಜೀವರಾಶಿ ಮೀನುಗಳಿಗೆ ಒಳ್ಳೆಯ ಆಹಾರ. ಗ್ರ್ಯಾಂಡ್ ಬ್ಯಾಂಕಿನ ಮತ್ಸ್ಯಸಂಪತ್ತನ್ನು ಜಾನ್ ಕ್ಯಾಬಟ್ ನಾಲ್ಕು ಶತಮಾನಗಳ ಹಿಂದೆ ಕಂಡ (1497). ಇಲ್ಲಿ ಕಾಡ್, ಹ್ಯಾಡಕ್, ಗುಲಾಬಿ ಮೀನು, ಪೊಲಾಕ್, ಚಪ್ಪೆಮೀನು, ಹೆರಿಂಗ್, ಕಡಲಮೀನು ಹೇರಳವಾಗಿವೆ. ಇಲ್ಲಿ ಕೆನಡ, ಅಮೆರಿಕ, ಇಂಗ್ಲೆಂಡ್, ಪೋರ್ಚುಗಲ್, ಸ್ಪೇನ್ ಮತ್ತು ಫ್ರಾನ್ಸಿನಿಂದ ಮೀನು ಹಿಡಿಯಲು ಬಲೆದೋಣಿಗಳು ಬರುತ್ತವೆ. ಮೀನುಗಳ ನಿಬಿಡತೆಯನ್ನು ಅಧ್ಯಯನಮಾಡುವ, ಅವುಗಳ ಸಂಖ್ಯೆ ಕ್ಷೀಣಿಸದಂತೆ ರಕ್ಷಿಸುವ ಉದ್ದೇಶದಿಂದ ಅಂತರರಾಷ್ಟ್ರೀಯ ಆಯೋಗವೊಂದು 1949ರಲ್ಲಿ ಸ್ಥಾಪಿತವಾಯಿತು. ಮೀನುಗಾರಿಕೆಗೆ ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದಾಗಿಯೂ ಅಗಾಧ ಪ್ರಮಾಣದಲ್ಲಿ ಮೀನುಗಾರಿಕೆ ನಡೆಸುತ್ತಿರುವುದರಿಂದಲೂ 1990 ರಿಂದೀಚೆಗೆ ಇಲ್ಲಿನ ಮತ್ಸ್ಯ ಸಂಪತ್ತು ಗಣನೀಯವಾಗಿ ಕ್ಷೀಣಿಸಿದೆ. ಮತ್ಸ್ಯೋದ್ಯಮವನ್ನು ಅವಲಂಬಿಸಿರುವ ಲ್ಯಾಬ್ರಡಾರ್ ಹಾಗೂ ನ್ಯೂಫೌಂಡ್‌ಲೆಂಡ್‌ಗಳು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿವೆ.

ಗ್ರ್ಯಾಂಡ್ ಬ್ಯಾಂಕ್ಸ್‌ನಲ್ಲಿ ಇತ್ತೀಚೆಗೆ ಪೆಟ್ರೋಲಿಯಂ ಸಂಪನ್ಮೂಲಗಳು ಶೋಧಿಸಲ್ಪಟ್ಟಿವೆ. ಗ್ರ್ಯಾಂಡ್ ಬ್ಯಾಂಕ್ಸ್ ಸಮೀಪದಲ್ಲಿ ಸಾಗರದಲ್ಲಿ ಸ್ಥಾಪಿಸಿದ್ದ ಓಷನ್ ರೇಂಜರ್ ಎಂಬ ಡ್ರಿಲ್ಲಿಂಗ್ ಘಟಕವೊಂದು 1982ರ ಫೆಬ್ರವರಿ 15ರಂದು ಸಮುದ್ರ ಮಾರುತದ ಪ್ರಕೋಪಕ್ಕೆ ಸಿಕ್ಕು ಮುಳುಗಿ ಹೋಯಿತು. 84 ಜನ ಜಲಮರಣವಪ್ಪಿದ ಈ ಅಪಘಾತ ಪ್ರಪಂಚದ ದುರ್ಘಟನೆಗಳಲ್ಲೊಂದೆನಿಸಿದೆ.

(ಎಸ್.ಎನ್.ಎಲ್.ಎ.)

**ಗ್ರ್ಯಾಂಡ್ ರ್‍ಯಾಪಿಡ್ಸ್ :** ಅಮೆರಿಕ ಸಂಯುಕ್ತಸಂಸ್ಥಾನಗಳ ಮಿಷಿಗನ್ ರಾಜ್ಯದ ಒಂದು ನಗರ. ಜನಸಂಖ್ಯೆಯ ದೃಷ್ಟಿಯಿಂದ ಈ ರಾಜ್ಯದ ಎರಡನೆಯ ದೊಡ್ಡ ನಗರ. ಗ್ರ್ಯಾಂಡ್ ನದಿಯ ದಡದಲ್ಲಿದೆ. ಜನಸಂಖ್ಯೆ 7,74,361 (2010). 1838ರಲ್ಲಿ ಇದು ಒಂದು ಹಳ್ಳಿಯಾಗಿತ್ತು. 1850ರ ವೇಳೆಗೆ ನಗರವಾಗಿ ಬೆಳೆದಿತ್ತು. 1824ಕ್ಕಿಂತಲೂ ಮೊದಲೇ ಇಲ್ಲಿ ಅನೇಕ ಇಂಡಿಯನ್ ವಸತಿಗಳೂ ವ್ಯಾಪಾರ ಕೇಂದ್ರಗಳೂ ಇದ್ದವು. ಇಲ್ಲಿ ಪೀಠೋಪಕರಣ, ರೈಲ್ವೆ ಉಪಕರಣ ತಯಾರಿಸುವ ಬೃಹತ್ ಉದ್ಯಮಗಳಿವೆ. ಎರಕದ ಸರಕುಗಳು, ರೆಫ್ರಿಜಿರೇಟರ್ ಯಂತ್ರಗಳ ಬಿಡಿ ಭಾಗಗಳು, ರೇಡಿಯೊ ಫೋನೋಗ್ರಾಫ್, ಸೀಸದ ಸಾಮಾನು, ರಾಸಾಯನಿಕ ವಸ್ತು, ಗೊಬ್ಬರ, ಬಣ್ಣ, ಕಾಗದ ಮೊದಲಾದವನ್ನು ತಯಾರಿಸುವ ಕೈಗಾರಿಕೆಗಳು ಈ ನಗರದಲ್ಲಿವೆ. ಈ ಸುತ್ತಿನಲ್ಲಿ ಹಣ್ಣುಗಳನ್ನು ಹೇರಳವಾಗಿ ಬೆಳೆಯುತ್ತಾರೆ. ಜಲ್ಲಿಕಲ್ಲು ಧಾರಾಳವಾಗಿ ದೊರಕುತ್ತದೆ. ಈ ನಗರದಲ್ಲಿ ಕಲಾವಸ್ತು ಸಂಗ್ರಹಾಲಯ ಮತ್ತು ಪೀಠೋಪಕರಣ ವಸ್ತುಸಂಗ್ರಹಾಲಯಗಳೂ ರಂಗಮಂದಿರಗಳೂ ಇವೆ. ಕಾಲ್‌ವಿನ್ ಕಾಲೇಜೂ ಮಿಷಿಗನ್ ವಿಶ್ವವಿದ್ಯಾಲಯದ ಮತ್ತು ಮಿಷಿಗನ್ ಸ್ಟೇಟ್ ವಿಶ್ವವಿದ್ಯಾಲಯದ ವಿಸ್ತರಣ ಕೇಂದ್ರಗಳೂ ತೋಟಗಾರಿಕೆ ಪ್ರಯೋಗಾಲಯ ಕೇಂದ್ರವೂ ಇಲ್ಲಿವೆ.

ಅಮೆರಿಕದ ಮಿನ್ನೆಸೋಟದಲ್ಲಿ ಇದೇ ಹೆಸರಿನ ಒಂದು ಹಳ್ಳಿ ಇದೆ.

(ಎಸ್.ಎನ್.ಎಲ್.)

**ಗ್ರ್ಯಾಂಪಸ್ :** ಸಿಟೇಸಿಯ ಗಣದ ಡೆಲ್ಫಿನಿಡೀ ಕುಟುಂಬಕ್ಕೆ ಸೇರಿದ ಒಂದು ಜಲಚರ ಸ್ತನಿ. ಡಾಲ್ಫಿನಿನ ಹತ್ತಿರ ಸಂಬಂಧಿ. ಇದಕ್ಕೆ ರಿಸ್ಸೋನ ಡಾಲ್ಫಿನ್ ಎಂಬ ಹೆಸರೂ ಇದೆ. ಗ್ರ್ಯಾಂಪಸ್ ಗ್ರಿಸಿಯಸ್ ಇದರ ವೈಜ್ಞಾನಿಕ ಹೆಸರು. ಅಮೆರಿಕದ ಸಂಯುಕ್ತಸಂಸ್ಥಾನದ ಪೂರ್ವ ಹಾಗೂ ಪಶ್ಚಿಮ ತೀರ ಪ್ರದೇಶಗಳು, ಉತ್ತರ ಅಟ್ಲಾಂಟಿಕ್, ಮೆಡಿಟರೇನಿಯನ್, ಕೆಂಪು ಸಮುದ್ರ ಹಾಗೂ ಜಪಾನ್, ಚೀನ, ಆಸ್ಟ್ರೇಲಿಯಗಳ ಕರಾವಳಿಯಲ್ಲಿ ಇದು ವಾಸಿಸುತ್ತದೆ.



ಗ್ರ್ಯಾಂಪಸಿನ ಉದ್ದ ಸುಮಾರು 4 ಮೀ (13 ಅಡಿ). ಇದರ ದೇಹ ಜಲವಾಸಕ್ಕೆ ಅನುಕೂಲವಾಗುವಂತೆ ಕದಿರಿನಾಕಾರದ್ದಾಗಿದ್ದು ಬಲಿಷ್ಠವಾಗಿದೆ. ಬೆನ್ನುಭಾಗ ಹೊಳಪುಳ್ಳ ಕಪ್ಪುಬಣ್ಣದ್ದಾಗಿಯೂ ಉದರ ಭಾಗ ಬಿಳಿಬಣ್ಣದ್ದಾಗಿಯೂ ಇವೆ. ಬೆನ್ನಿನ ಮೇಲೆ ಒಂದೇ ಒಂದು ಈಜುರೆಕ್ಕೆ ಮತ್ತು ಭುಜದ ಬಳಿ ಆಚೀಚೆ ಎರಡು ಬಲವಾದ ಈಜುರೆಕ್ಕೆಗಳಿವೆ, ತಲೆ ಗುಂಡಗಿದೆ. ಇದರ ಹತ್ತಿರ ಸಂಬಂಧಿಯಾದ ಡಾಲ್ಫಿನಿನಲ್ಲಿ ಮೂತಿ ಚೂಪಾದ ಕೊಕ್ಕಿನಂತಿದೆಯಾದರೆ ಗ್ರ್ಯಾಂಪಸಿನಲ್ಲಿ ಮುಂಚಾಚಿದ ಮೂತಿಯಿಲ್ಲ. ದೇಹದ ಹಿಂತುದಿಯಲ್ಲಿ ಡಾಲ್ಫಿನುಗಳಲ್ಲಿರುವಂತೆ ಇಬ್ಭಾಗವಾದ ಬಾಲ ಇದೆ. ಕಣ್ಣುಗಳು ಬಲು ಚಿಕ್ಕವು. ಕೆಳದವಡೆಯಲ್ಲಿ ಮಾತ್ರ 3–7 ಜೊತೆ ಹಲ್ಲುಗಳಿವೆ. ಮೇಲ್ದವಡೆಯಲ್ಲಿ ಅಪರೂಪಕ್ಕೆ ಒಂದೆರಡು ಅವಶೇಷೀ ಹಲ್ಲುಗಳಿರುವುದುಂಟು. ಈ ಲಕ್ಷಣದಲ್ಲಿ ಗ್ರ್ಯಾಂಪಸ್ ಡಾಲ್ಫಿನುಗಳಿಂದ ಭಿನ್ನವೆನಿಸಿದೆ.

ಮೀನು ಮತ್ತು ಶಿರಪಾದಿಗಳು ಗ್ರ್ಯಾಂಪಸಿನ ಮುಖ್ಯ ಆಹಾರ. ಕೆಲವೊಮ್ಮೆ ಸಣ್ಣಗಾತ್ರದ ಡಾಲ್ಫಿನುಗಳನ್ನು, ಪಾರ್ಪಾಯಿಸ್ ಮತ್ತು ಸೀಲ್ ಪ್ರಾಣಿಗಳನ್ನು ಇದು ತಿನ್ನುವುದುಂಟು. ಎರೆಗಳನ್ನು ಹಿಡಿಯುವಾಗ ಬಲು ಉಗ್ರವಾಗಿ ವರ್ತಿಸುವುದರಿಂದ ಗ್ರ್ಯಾಂಪಸಿಗೆ ಕೊಲೆಗಡುಕ ಎಂಬ ಹೆಸರಿದೆ. ಬಲು ಹೊಟ್ಟೆಬಾಕ ಪ್ರಾಣಿಯಿದು. ಇದು 5–10 ಪ್ರಾಣಿಗಳನ್ನೊಳಗೊಂಡ ಗುಂಪುಗಳಲ್ಲಿ ವಾಸಿಸುತ್ತದೆ.

(ಕೆ.ಪಿ.ಆರ್.)

**ಗ್ರ್ಯಾಕಲ್ :** ಪ್ಯಾಸೆರಿಫಾರ್ಮೀಸ್ ಗಣದ ಇಕ್ಟೆರಿಡೀ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಹಕ್ಕಿಗಳ ಸಾಮಾನ್ಯ ಹೆಸರು. ಇವುಗಳಲ್ಲಿ ಮುಖ್ಯವಾದವು – ಉತ್ತರ ಅಮೆರಿಕದ ಕ್ವಿಸ್‌ಕೆಲಸ್ ಕ್ವಿಸ್‌ಕ್ಯುಲ (ಕಾಮನ್ ಗ್ರ್ಯಾಕಲ್), ವೆನಿಝುವೆಲ, ಪೆರು ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ ದಕ್ಷಿಣ ಭಾಗದ ಕ್ಯಾಸಿಡಿಕ್ಸ್ ಮೆಕ್ಸಿಕಾನಸ್ (ಬೋಟ್ ಟೇಲ್ಡ್ ಗ್ರ್ಯಾಕಲ್) ಮತ್ತು ಮಧ್ಯ ಹಾಗೂ ದಕ್ಷಿಣ ಅಮೆರಿಕಗಳ ಸ್ಕೇಫಿಡ್ಯೂರ ಒರೈಜಿವೋರ (ರೈಸ್ ಗ್ರ್ಯಾಕಲ್). ಭಾರತದ ಬೆಟ್ಟಗಾಡುಗಳಲ್ಲಿ ಕಾಣಬರುವ ಗ್ರ್ಯಾಕ್ಯುಲ ಅಥವಾ ಯೂಲೇಬಿಸ್ ರಿಲಿಜಿಯೋಸಕ್ಕೂ (ಹಿಲ್ ಮೈನ) ರೂಢಿಯಲ್ಲಿ ಗ್ರ್ಯಾಕಲ್ ಎಂಬ ಹೆಸರೇ ಇದೆ. ಇದರ ವಿವರಗಳಿಗೆ (**ನೋಡಿ– ಮೈನಾ**).

ಅಮೆರಿಕದಲ್ಲಿ ಕಾಣಸಿಗುವ ಗ್ರ್ಯಾಕಲ್ ಹಕ್ಕಿಗಳೆಲ್ಲ ಕಪ್ಪುಬಣ್ಣದ ಹೊಳೆಯುವ ದೇಹ, ಉದ್ದವಾದ ರೆಕ್ಕೆಗಳು, ದೃಢವಾದ ಕಾಲುಗಳು, ನಸುಬಾಗಿದ ಕೊಕ್ಕು – ಈ ಲಕ್ಷಣಗಳನ್ನು ತೋರುತ್ತವೆ. ಇವುಗಳ ವಾಸ ಸಾಮಾನ್ಯವಾಗಿ ಮರಗಳಲ್ಲಿ. ಗ್ರ್ಯಾಕಲುಗಳು ಸರ್ವಭಕ್ಷಿಗಳು. ಕೀಟ, ಕಾಳು ಮುಂತಾದವನ್ನು ಮಾತ್ರವಲ್ಲದೆ ಬೇರೆ ಹಕ್ಕಿಗಳ ಗೂಡನ್ನು ಕೂಡ ಕೊಳ್ಳೆ ಹೊಡೆದು ಮೊಟ್ಟೆಗಳನ್ನು ಕಬಳಿಸುವುದುಂಟು. ಸಣ್ಣಪುಟ್ಟ ಹಲ್ಲಿ, ಓತಿಕೇತ, ಕಪ್ಪೆ

ಮುಂತಾದವನ್ನೂ ತಿನ್ನುವುದಿದೆ. ಕೆಲವು ಬಗೆಯವು ಮೀನನ್ನೂ ತಿನ್ನುತ್ತವೆ. ಇವು ಸಾಮಾನ್ಯವಾಗಿ ಗುಂಪು ಗುಂಪಾಗಿದ್ದು ಒಂದು ನಿರ್ದಿಷ್ಟ ನೆಲೆಯಲ್ಲಿ ಒಟ್ಟಾಗಿ ಗೂಡುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತವೆ. ಗೂಡು ಕಟ್ಟುವ ಕೆಲಸ ಹೆಣ್ಣಿನದು. ಕ್ಯಾಸಿಡಿಕ್ಸ್ ಮೆಕ್ಸಿಕಾನಸ್ ಪ್ರಭೇದದ ಗ್ರ್ಯಾಕಲುಗಳಲ್ಲಿ ಒಂದು ಗಂಡು ಹಕ್ಕಿ ಹಲವಾರು ಹೆಣ್ಣುಗಳೊಂದಿಗೆ ಜೀವಿಸುತ್ತದೆ. ಬಹುಪಾಲು ಗ್ರ್ಯಾಕಲುಗಳು ತಾವು ನಿರ್ಮಿಸಿದ ಗೂಡುಗಳಲ್ಲಿ ಮೊಟ್ಟೆಯಿಡುವುವಾದರೂ ಸ್ಕೇಫಿಡ್ಯೂರ ಬಗೆಯದು ಮಾತ್ರ ಬೇರೆ ಹಕ್ಕಿಗಳ ಗೂಡಿನಲ್ಲಿ ಮೊಟ್ಟೆಯಿಡುತ್ತದೆ. (ಕೆ.ಎಂ.ವಿ.)

**ಗ್ರ್ಯಾಕಸ್ :** ಪ್ರಾಚೀನ ರೋಮಿನಲ್ಲಿ ಸೆಂಪ್ರೋನಿಯಸ್ ಕುಲಕ್ಕೆ ಸೇರಿದ ಒಂದು ಮನೆತನದ ಹೆಸರು. ಈ ಮನೆತನದ ಟೈಬೀರಿಯಸ್ ಮತ್ತು ಗೇಯಸ್ ಎಂಬ ಸೋದರರು ಪ್ರಸಿದ್ಧ ರಾಜಕಾರಣಿಗಳೂ ಸುಧಾರಕರೂ ಆಗಿದ್ದರು.

**ಟೈಬೀರಿಯಸ್ ಗ್ರ್ಯಾಕಸ್ :** ಪ್ರ.ಶ.ಪೂ. 163–133. ಇವನನ್ನೂ ಇವನ ಸೋದರ ಗೇಯಸ್‍ನನ್ನೂ ಇವರ ತಾಯಿ ಕಾರ್ನೀಲಿಯಳೇ ಬೆಳೆಸಿ ಮುಂದೆ ತಂದಳು. ಫಿನೀಷಿಯನರ ವಿರುದ್ಧ ನಡೆದ ಕೊನೆಯ ಪ್ಯೂನಿಕ್ ಯುದ್ಧದಲ್ಲಿ (ಪ್ರ.ಶ.ಪೂ. 147) ಈತ ಭಾಗವಹಿಸಿದ. ಕ್ರಮೇಣ ಅನೇಕ ಸರ್ಕಾರಿ ಹುದ್ದೆಗಳಲ್ಲಿದ್ದು ಕೊನೆಗೆ ಟ್ರಿಬ್ಯೂನ್ ಎಂಬ ಅಧಿಕಾರಿಯಾದ (ಪ್ರ.ಶ.ಪೂ. 133). ಇವನು ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಅನೇಕ ತೀವ್ರಗಾಮಿ ಯೋಜನೆಗಳನ್ನು ಪ್ರಚಾರದಲ್ಲಿ ತಂದ. ಶ್ರೀಮಂತರಿಗೆ ಸೇರಿದ ದೊಡ್ಡ ಜಮೀನುಗಳನ್ನು ರೈತರಿಗೆ ಹಂಚಿದ. ರೋಮನರನ್ನು ಮತ್ತೆ ಸಾಗುವಳಿಗೆ ಹಚ್ಚಿ ಅವರನ್ನು ಉತ್ತಮ ಸ್ಥಿತಿಗೆ ತರಬೇಕೆಂಬುದು ಇವನ ಒಂದು ಉದ್ದೇಶ. ರೋಮನರ ಪೌರುಷ ಕುಂದುತ್ತಿದ್ದುದ್ದು ಇವನನ್ನು ಚಿಂತೆಗೆ ಈಡುಮಾಡಿತ್ತು. ಇವನ ಕ್ರಮಗಳನ್ನು ಒಪ್ಪದಿದ್ದ ಬಲಿಷ್ಠ ಸೆನೇಟು ಇವನ ವಿರುದ್ಧ ಒಳಸಂಚು ನಡೆಸಿತು. ಮರುವರ್ಷ ಟ್ರಿಬ್ಯೂನನ ಆಯ್ಕೆಯ ಸಮಯದಲ್ಲಿ ಸಂಭವಿಸಿದ ದಂಗೆಯಲ್ಲಿ ಇವನ ಕೊಲೆಯಾಯಿತು.

**ಗೇಯಸ್ ಗ್ರ್ಯಾಕಸ್ :** ಪ್ರ.ಶ.ಪೂ. 153–121 . ಟೈಬೀರಿಯಸನ ಸೋದರ. ಶ್ರೇಷ್ಠ ರಾಜಕಾರಣಿ. ಉತ್ತಮ ವಾಗ್ಮಿ. ತನ್ನ ಸೋದರನಿಂದ ಪ್ರಾರಂಭವಾದ ಕಾರ್ಯವನ್ನು ಪೂರ್ಣಗೊಳಿಸುವ ಉದ್ದೇಶದಿಂದ ರಾಜಕೀಯವನ್ನು ಪ್ರವೇಶಿಸಿದ. ಪ್ರ.ಶ.ಪೂ. 123 ರಲ್ಲಿ ಟ್ರಿಬ್ಯೂನನಾಗಿ ಆಯ್ಕೆಹೊಂದಿದ. ಸರ್ಕಾರದ ಲೋಪದೋಷಗಳನ್ನು ತಿದ್ದುವ ಮತ್ತು ಜನತೆಯ ಕಲ್ಯಾಣದ ಸಲುವಾಗಿ ಅನೇಕ ಕ್ರಮಗಳನ್ನು ಕೈಗೊಂಡ. ಮರುವರ್ಷವೂ ಟ್ರಿಬ್ಯೂನನಾಗಿ ಆಯ್ಕೆಹೊಂದಿದಾಗ ರೋಮ್ ಪೌರತ್ವವನ್ನು ಇಟಲಿಯ ಮಿತ್ರಗುಂಪುಗಳ ಜನರಿಗೆ ಕೊಡುವ ಯೋಜನೆಯನ್ನು ತಯಾರಿಸಿದ. ಇದರಿಂದ ಸೆನೇಟಿನ ಕೋಪ ಅಧಿಕವಾಯಿತು. ಅದರ ಒಳಸಂಚಿನಿಂದಾಗಿ ಗೇಯಸ್ ಗ್ರ್ಯಾಕಸ್ ದಂಗೆಯೊಂದರಲ್ಲಿ ಸಿಕ್ಕಿ ಮರಣ ಹೊಂದಿದ. (ಕೆ.ವಿ.ಎಸ್‍ಯು.)

**ಗ್ರ್ಯಾಟನ್, ಹೆನ್ರಿ :** 1746–1820. ಐರ್ಲೆಂಡಿನ ಒಬ್ಬ ವಾಗ್ಮಿ, ರಾಜಕಾರಣಿ, ತನ್ನ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದವ. 1746ರ ಜುಲೈ 3ರಂದು ಡಬ್ಲಿನ್ ನಗರದಲ್ಲಿ ಜನಿಸಿದ. ಅಲ್ಲಿಯ ಟ್ರಿನಿಟಿ ಕಾಲೇಜಿನಲ್ಲಿ ಶಿಕ್ಷಣ ಪಡೆದ. ಈತನಿಗೆ ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಬೆಳೆಯಿತು. ವಿದ್ಯಾರ್ಥಿಯಾಗಿದ್ದಾಗ ಉನ್ನತ ವಾಗ್ಮಿಗಳಿಂದ ಸ್ಫೂರ್ತಿ ಹೊಂದಿದ. ಈತ ವಕೀಲನಾಗಿ ಜೀವನದಲ್ಲಿ ತೊಡಗಿದನಾದರೂ ಇವನಿಗೆ ಆ ವೃತ್ತಿಯಲ್ಲಿ ಹೆಚ್ಚು ಆಸಕ್ತಿ ಇರಲಿಲ್ಲವಾಗಿ ರಾಜಕೀಯವನ್ನು ಪ್ರವೇಶಿಸಿದ. ಐರಿಷ್ ಪಾರ್ಲಿಮೆಂಟಿನ ಸದಸ್ಯನಾಗಿ ಐರ್ಲೆಂಡಿನ ಸ್ವಾತಂತ್ರ್ಯ ಚಳವಳಿಯಲ್ಲಿ ಮಗ್ನನಾದ. ಐರಿಷ್ ಪಾರ್ಲಿಮೆಂಟನ್ನು ಇಂಗ್ಲಿಷ್ ಪಾರ್ಲಿಮೆಂಟಿನ ಅಧೀನತೆಯಿಂದ ತಪ್ಪಿಸುವುದು ಇವನ ಮುಖ್ಯ ಗುರಿಯಾಗಿತ್ತು.

ಅಮೆರಿಕನ್ ಕ್ರಾಂತಿಯಿಂದ ಗ್ರ್ಯಾಟನ್ ಸ್ಫೂರ್ತಿ ಪಡೆದ. ಐರಿಷ್ ಪಾರ್ಲಿಮೆಂಟು ಅನುಮೋದಿಸಿದ ವಿಧೇಯಕಗಳಿಗೆಲ್ಲ ಇಂಗ್ಲಿಷ್ ಪಾರ್ಲಿಮೆಂಟಿನ ಒಪ್ಪಿಗೆ ಅಗತ್ಯವೆಂಬ ಪಾಯ್ನಿಂಗ್ಸ್ ಅಧಿನಿಯಮವನ್ನು ರದ್ದು ಮಾಡಲು 1780ರಲ್ಲಿ ಚಳವಳಿ ಹೂಡಿದ. ಐರಿಷ್ ಕೆಥೊಲಿಕರ ವಿರುದ್ಧ ಜಾರಿಯಲ್ಲಿದ್ದ ಅಧಿನಿಯಮಗಳನ್ನು ಸಡಿಲಗೊಳಿಸಬೇಕೆಂದು ಈತ ವಾದಿಸಿದ.

ಆಗ ಇಂಗ್ಲೆಂಡ್ ಮತ್ತು ಫ್ರಾನ್ಸ್ ಪರಸ್ಪರವಾಗಿ ಯುದ್ಧದಲ್ಲಿ ತೊಡಗಿದ್ದುವು. ಆಗ ನಡೆಯುತ್ತಿದ್ದ ಅಮೆರಿಕನ್ ಸ್ವಾತಂತ್ರ್ಯ ಯುದ್ಧದಲ್ಲಿ ಫ್ರೆಂಚರು ಅಮೆರಿಕನರಿಗೆ ಬೆಂಬಲ ನೀಡಿದ್ದರು. ಫ್ರೆಂಚರು ಐರ್ಲೆಂಡಿನ ಮೇಲೆ ದಂಡಯಾತ್ರೆ ಕೈಗೊಳ್ಳುವ ಸಾಧ್ಯತೆ ಇದ್ದುದರಿಂದ ಅದನ್ನು ತಡೆಗಟ್ಟಲು ಐರ್ಲೆಂಡಿನಲ್ಲಿ ಸ್ವಯಂಸೇವಕ ದಳ ಅಸ್ತಿತ್ವಕ್ಕೆ ಬಂದಿತು. ಆದರೆ ಐರ್ಲೆಂಡಿನ ಸ್ವಾತಂತ್ರ್ಯವಾದಿಗಳಾಗಿದ್ದ ಕೆಥೊಲಿಕರು ಶಸ್ತ್ರಗಳನ್ನು ಹೊಂದಿರುವಂತಿರಲಿಲ್ಲ. 1782ರಲ್ಲಿ ಐರ್ಲೆಂಡಿನ ಆಲ್ಸ್‍ಟರ್ ಸ್ವಯಂಸೇವಕರು ಐರ್ಲೆಂಡಿನ ಸ್ವಾತಂತ್ರ್ಯ ಮತ್ತು ದಂಡನೆಯ ಕಾನೂನುಗಳ ರದ್ದನ್ನು ಕೋರಿ ನಿರ್ಣಯಗಳನ್ನು ಮಾಡಿದರು. ಏಪ್ರಿಲ್ 1782ರಲ್ಲಿ ಗ್ರ್ಯಾಟನ್ ಐರ್ಲೆಂಡಿನ ಪಾರ್ಲಿಮೆಂಟಿನಲ್ಲಿ ಮಂಡಿಸಿದ ಹಕ್ಕುಗಳ ಘೋಷಣೆಯ ವಿಧೇಯಕ ಒಮ್ಮತದಿಂದ ಅಂಗೀಕೃತವಾಯಿತು. ಅನಂತರ ಇಂಗ್ಲಿಷ್ ಪಾರ್ಲಿಮೆಂಟು ಪಾಯ್ನಿಂಗ್ಸ್ ಅಧಿನಿಯಮವನ್ನು ರದ್ದು ಮಾಡಿ, ಐರ್ಲೆಂಡಿನ ಪಾರ್ಲಿಮೆಂಟಿಗೆ ಅಧಿನಿಯಮ ರಚಿಸುವ ಹಕ್ಕನ್ನು ನೀಡಿತು.

ಆದರೂ ಐರ್ಲೆಂಡಿನ ಕಾರ್ಯಾಂಗ ಇಂಗ್ಲಿಷ್ ಸರ್ಕಾರದ ಹತೋಟಿಯಲ್ಲಿತ್ತು. 1799ರಲ್ಲಿ ಗ್ರ್ಯಾಟನ್ ಇದನ್ನೂ ವಿರೋಧಿಸಿದ. ಐರ್ಲೆಂಡಿನಲ್ಲಿ ಕೆಥೊಲಿಕರು ಹೆಚ್ಚು ಸಂಖ್ಯೆಯಲ್ಲಿದ್ದರೂ ಅವರಿಗೆ ಮತ ನೀಡುವ ಹಕ್ಕಿರಲಿಲ್ಲ. ಗ್ರ್ಯಾಟನ್ ಇದಕ್ಕಾಗಿ ಹೋರಾಟ ನಡೆಸಿದ. 1792ರಲ್ಲಿ ಕೆಥೊಲಿಕರ ಪರಿಹಾರ ಮಸೂದೆಗೆ ಐರಿಷ್ ಪಾರ್ಲಿಮೆಂಟಿನಲ್ಲಿ ಬೆಂಬಲ ನೀಡಿದನಾದರೂ ಅದು ಯಶಸ್ವಿಯಾಗಲಿಲ್ಲ. ಆಮೇಲೆ ಬಹುಕಾಲ ಐರ್ಲೆಂಡಿನ ಮೇಲೆ ದಬ್ಬಾಳಿಕೆ ನಡೆಯಿತು. ಗ್ರ್ಯಾಟನ್ ಅನಾರೋಗ್ಯದ ನಿಮಿತ್ತ ಹಲವು ವರ್ಷಗಳ ಕಾಲ ರಾಜಕೀಯದಿಂದ ದೂರವಾಗಿದ್ದ. ಆದರೆ 1797ರಲ್ಲಿ ಪಾರ್ಲಿಮೆಂಟಿನಿಂದ ನಿವೃತ್ತನಾದ ಇವನು ಇಂಗ್ಲೆಂಡಿಗೆ ಹೋದ.

1798ರಲ್ಲಿ ಐರ್ಲೆಂಡಿನಲ್ಲಿ ಸಂಭವಿಸಿದ ದಂಗೆಯನ್ನು ಇಂಗ್ಲಿಷರು ಅಡಗಿಸಿದರು. ಐರ್ಲೆಂಡ್ ಮತ್ತು ಇಂಗ್ಲೆಂಡ್ ಪಾರ್ಲಿಮೆಂಟುಗಳನ್ನು ಒಟ್ಟುಗೂಡಿಸಲು ಬ್ರಿಟಿಷ್ ಪ್ರಧಾನಿ ವಿಲಿಯಮ್ ಪಿಟ್ ಯೋಜನೆಯೊಂದನ್ನು ರೂಪಿಸಿದ. ಗ್ರ್ಯಾಟನ್ ಇದಕ್ಕೆ ವಿರೋಧ ವ್ಯಕ್ತಪಡಿಸಿದ. ಈತನನ್ನು ಐರಿಷ್ ಪ್ರಿವಿ ಕೌನ್ಸಿಲ್ ಮತ್ತು ಡಬ್ಲಿನ್ ವ್ಯಾಪಾರಿಗಳ ಶ್ರೇಣಿ ಹೊರಹಾಕಿದವು. ಐರಿಷ್ ಪಾರ್ಲಿಮೆಂಟಿನ ಸದಸ್ಯರಿಗೆ ಲಂಚ ಕೊಟ್ಟು ಅವರನ್ನು



ಕೊಳ್ಳಲು ಪಿಟ್ ಮಾಡಿದ ಪ್ರಯತ್ನವನ್ನು ಗ್ರ್ಯಾಟನ್ ತೀವ್ರವಾಗಿ ವಿರೋಧಿಸಿದ. ಪಾರ್ಲಿಮೆಂಟಿಗೆ ಆಯ್ಕೆಯಾಗಿ ಅಲ್ಲಿಂದ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದ. ಆಗ ಇವನು ಮಾಡಿದ ಭಾಷಣ ಪ್ರಸಿದ್ಧವಾಗಿದೆ. 1801ರಲ್ಲಿ ಒಕ್ಕೂಟ ಆಯಿತು. ಸ್ವಲ್ಪ ಕಾಲ ಪಾರ್ಲಿಮೆಂಟಿನ ಹೊರಗಿದ್ದ ಇವನು 1805ರಲ್ಲಿ ಮತ್ತೆ ಪಾರ್ಲಿಮೆಂಟ್ ಪ್ರವೇಶಿಸಿದ. ಆಳುವ ಪಕ್ಷದವರು ಇವನನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಯತ್ನಿಸಿದರು. ಆದರೆ ಗ್ರ್ಯಾಟನ್ ಅವರ ಬಲೆಗೆ ಬೀಳಲಿಲ್ಲ. ಇವನಿಗಿಂತ ತೀವ್ರವಾದಿಗಳಾದ ಯುವಕರ ಚಳವಳಿಯೊಂದು ಪ್ರಬಲವಾಯಿತು. ಕೆಥೊಲಿಕರ ಹಕ್ಕುಗಳ ರಕ್ಷಣೆಯೇ ಅದರ ಗುರಿಯಾಗಿತ್ತು. ಕೆಥೊಲಿಕರ ಕಷ್ಟ ಪರಿಹಾರಕ್ಕೆ 1813ರಲ್ಲಿ ಈತ ತಂದ ವಿಧೇಯಕವೊಂದು ಸ್ವಲ್ಪದರಲ್ಲಿ ಕಾಮನ್ಸ್ ಸಭೆಯಲ್ಲಿ ಪರಾಜಯ ಹೊಂದಿತ್ತು. ಅವರ ಹಕ್ಕುಗಳನ್ನು ಕುರಿತ ಚರ್ಚೆಯಲ್ಲಿ ಭಾಗವಹಿಸಲು ಇವನು ಅನಾರೋಗ್ಯವನ್ನೂ ಲೆಕ್ಕಿಸದೆ ಲಂಡನಿಗೆ ಪ್ರಯಾಣ ಮಾಡಿದ. ಆದರೆ ತನ್ನ ಉದ್ದೇಶವನ್ನು ಪೂರೈಸಲಾಗದೆಯೆ 1820ರ ಜೂನ್ 6ರಂದು ಲಂಡನಿನಲ್ಲಿ ತೀರಿಕೊಂಡ.

ಅದ್ಭುತವಾದ ವಾಗ್ಮಿತೆ, ರಾಷ್ಟ್ರನಿಷ್ಠೆ, ಸೇವಾಮನೋಭಾವ, ಪ್ರಾಮಾಣಿಕತೆ ಇವು ಗ್ರ್ಯಾಟನನ ಗುಣಗಳು. ಆದರೆ ಜಟಿಲ ಪ್ರಶ್ನೆಗಳನ್ನು ಪರಿಹರಿಸುವ ಸಾಮರ್ಥ್ಯ ಇವನಿಗೆ ಇರಲಿಲ್ಲ. ತೀವ್ರವಾಗಿ ಬದಲಾಗುತ್ತಿದ್ದ ಪರಿಸ್ಥಿತಿಗಳನ್ನು ಅರಿತು ಅವಕ್ಕೆ ತಕ್ಕಂತೆ ನಡೆಯುವ ಚಾಕಚಕ್ಯತೆ ಈತನಿಗಿರಲಿಲ್ಲ. (ಎ.ವಿ.ವಿ.)

**ಗ್ರ್ಯಾನ್ಯುಲೈಟ್ :** ಸಮಗಾತ್ರದ ಖನಿಜಕಣಗಳಿಂದ ರಚಿತವಾದ ರೂಪಾಂತರ ಶಿಲಾವಿಶೇಷ. ಅಗ್ನಿಶಿಲೆಗಳು, ಜಲಜಶಿಲೆಗಳು ಮತ್ತು ರೂಪಾಂತರ ಶಿಲೆಗಳು ಕೂಡ ಗ್ರ್ಯಾನ್ಯುಲೈಟುಗಳಾಗಿ ಮಾರ್ಪಡಬಹುದು. ಚದರ ಸೆಂಮೀ 8,000 ಕಿ.ಗ್ರಾಂ.ಗಳಿಗೂ ಮೀರಿದ ಒತ್ತಡ ಮತ್ತು $500^0$ ಸೆಂ ಗ್ರೂ ಮೀರಿದ ಉಷ್ಣತೆ ಒದಗಿದಾಗ ಉಂಟಾಗುವ ರೂಪಾಂತರ ಶಿಲಾಸಮುದಾಯಗಳಿವು. ನಿಸರ್ಗದಲ್ಲಿ ಸಾಮಾನ್ಯವಾಗಿ ಅತ್ಯಂತ ಕ್ಷಾರಶಿಲೆಗಳು ಬೃಹತ್ ಪ್ರಾದೇಶಿಕ ರೂಪಾಂತರಿತ ಗ್ರ್ಯಾನ್ಯುಲೈಟ್ ಶಿಲಾಪಂಕ್ತಿಗಳ ಗುಂಪಿನಲ್ಲಿ ದೊರೆಯುತ್ತವೆ. ಮೂಲಧಾತುಗಳನ್ನು ಅನುಸರಿಸಿ ಕ್ವಾರ್ಟ್ಸ್, ಸಿಲಿಮನೈಟ್, ಕಯನೈಟ್, ಆರ್ಥೋಕ್ಲೇಸ್, ಪ್ಲೇಜಿಯೊಕ್ಲೇಸ್, ಹೈಪರ್‌ಸ್ಥೀನ್, ಕ್ಯಾಲ್ಸೈಟ್, ಗಾರ್ನೆಟ್, ಎನ್‍ಸ್ಟೆಟೈಟ್, ಫಾರ್ಸ್ಟೆರೈಟ್, ಡಯಾಪ್ಸೈಡ್, ಹಾರ್ನ್‍ಬ್ಲೆಂಡ್, ಪೈರೋಪ್–ಆಮಂಡೈಟ್ ಗ್ರ್ಯಾನ್ಯುಲೈಟುಗಳು ಈ ಶಿಲೆಗಳಲ್ಲಿ ದೊರೆಯುವ ಪ್ರಮುಖ ಖನಿಜಕಣಗಳು. ಕರ್ನಾಟಕದ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿನ ರೂಪಾಂತರ ಶಿಲಾಪಂಕ್ತಿಗಳಲ್ಲಿ ಬಗೆಬಗೆಯ ಗ್ರ್ಯಾನ್ಯುಲೈಟುಗಳು ದೊರೆಯುತ್ತವೆ. ಇವು ಕಯನೈಟ್, ಕುರಂದ, ಬಳಪದಕಲ್ಲು, ಮ್ಯಾಗ್ನಸೈಟ್, ಕ್ರೋಮೈಟ್, ನಿಕ್ಕಲ್ ಮತ್ತು ಪ್ಲಾಟಿನಮ್ ಮುಂತಾದ ಲೋಹಾಲೋಹ ಗಣಿಗಳಿಗೆ ಆಧಾರವಾಗಿವೆ. ಅತಿಕ್ಷಾರ ಶಿಲೆಗಳು ಪರ್ವತಶ್ರೇಣಿಗಳ ಗರ್ಭವನ್ನು ಆಕ್ರಮಿಸಿರುವುದರಿಂದ ಗ್ರ್ಯಾನ್ಯುಲೈಟುಗಳಿಗೆ ಆಧುನಿಕ ಶಿಲಾಶಾಸ್ತ್ರದಲ್ಲಿ ಮಹತ್ತ್ವದ ಸ್ಥಾನ ಉಂಟು. (ಎಸ್.ಆರ್.ಎನ್.)

**ಗ್ರ್ಯಾನ್‌ವಿಲ್–ಬಾರ್ಕರ್ ಹಾರ್ಲೆ :** 1877–1946. ನಟ, ನಾಟಕಕಾರ, ವಿಮರ್ಶಕ. ಲಂಡನಿನಲ್ಲಿ ಹುಟ್ಟಿದ ಈತ ಹದಿಮೂರನೆಯ ವಯಸ್ಸಿಗೇ ರಂಗಶಿಕ್ಷಣವನ್ನು ಪಡೆದು ಹದಿನೈದರ ವೇಳೆಗೆ ನಟನಾಗಿ ರಂಗಪ್ರವೇಶ ಮಾಡಿದ. ಈತನಿಗೆ ವೃತ್ತಿರಂಗದಲ್ಲಿ ಯಶಸ್ಸು, ಹಣ ಎರಡನ್ನೂ ಗಳಿಸುವ ಅವಕಾಶವಿತ್ತು. ಆದರೆ ಈತನ ಪ್ರಯೋಗಶೀಲ ಮನಸ್ಸು ಬಯಸಿದ್ದೇ ಬೇರೆ. ವಿಲಿಯಮ್ ಪೋಯೆಲ್‌ನ ಎಲಿಜಬೆತನ್ ಸ್ಟೇಜ್ ಸೊಸೈಟಿಯಲ್ಲೂ ಬೆನ್ ಗ್ರೀಟ್‌ನ ಷೇಕ್ಸ್‌ಪಿಯರ್ ರೆಪರ್ಟರಿಯಲ್ಲೂ ಕೆಲಸಮಾಡಿದ ಅನಂತರ 1900ರಲ್ಲಿ ಪ್ರಯೋಗಾತ್ಮಕ ಸ್ಟೇಜ್ ಸೊಸೈಟಿಯಲ್ಲೂ 1904ರಲ್ಲಿ ಜೆ. ಇ. ವೆಡ್ರೆನ್‌ನೊಂದಿಗೆ ಸೇರಿ ಕೋರ್ಟ್‌ಥಿಯೇಟರಿನ ನಿರ್ವಾಹಕನಾಗಿಯೂ ಕೆಲಸ ಮಾಡಿದ. ಅನೇಕ ಹೊಸ ನಾಟಕಗಳನ್ನು ರಂಗದ ಮೇಲೆ ತಂದದ್ದಲ್ಲದೆ ಹಳೆಯುವನ್ನೂ ಹೊಸದೃಷ್ಟಿಯಿಂದ ಪ್ರದರ್ಶಿಸಿದ. ಒಂದನೆಯ ಮಹಾಯುದ್ಧ ಈತನ ಸಾಧನೆಗಳಿಗೆ ದೊಡ್ಡ ತಡೆಯಾಯಿತು. ಯುದ್ಧ ಕಾಲದಲ್ಲಿ ರೆಡ್‌ಕ್ರಾಸ್ ಸೇರಿ ಸೇವೆ ಸಲ್ಲಿಸಿದ. ಅನಂತರ ಬ್ರಿಟಿಷ್ ಡ್ರಾಮಾಲೀಗಿನ ಅಧ್ಯಕ್ಷನಾದ. ಪ್ಯಾರಿಸಿನಲ್ಲಿ ನೆಲೆಸಿ ಸ್ಪ್ಯಾನಿಷ್ ನಾಟಕಗಳನ್ನು ಅನುವಾದಿಸಿದ್ದಲ್ಲದೆ ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಬ್ರಿಟಿಷ್ ಇನ್‌ಸ್ಟಿಟ್ಯೂಟಿನ ನಿರ್ದೇಶಕನಾದ. ಅನಂತರ ಕೊಂಚಕಾಲ ಅಮೆರಿಕದಲ್ಲಿ ಬ್ರಿಟಿಷ್ ವೃತ್ತಾಂತ ಸಂಸ್ಥೆಯ ಪರವಾಗಿ ಕೆಲಸಮಾಡಿದ. 1946ರಲ್ಲಿ ಪುನಃ ಪ್ಯಾರಿಸಿಗೆ ಬಂದು, ಅದೇ ವರ್ಷ ಗತಿಸಿದ.

ಈತನ ಕೃತಿಗಳಲ್ಲಿ ಹೆಸರಾದವು – ವಾಯ್ಸೀ ಇನ್‌ಹೆರಿಟೆನ್ಸ್; ಮದ್ರಾಸ್ ಹೌಸ್ ಮತ್ತು ಮ್ಯಾರಿಯಿಂಗ್ ಆಫ್ ಆ್ಯನ್ ಲೀಟ್. ಇವು ಸಾಮಾಜಿಕ ಗದ್ಯನಾಟಕ ಪ್ರಕಾರಕ್ಕೆ ಸೇರಿದವಾಗಿ ಬರ್ನಾರ್ಡ್ ಷಾನ ಕೃತಿಗಳನ್ನು ನೆನಪಿಗೆ ತರುವಂಥವು. ಇವಲ್ಲದೆ ಇತರರೊಂದಿಗೆ ಸೇರಿ ಇನ್ನೂ ಹಲವು ಇದೇ ಪ್ರಕಾರದ ಕೃತಿಗಳನ್ನು ರಚಿಸಿದ್ದಾನೆ. ವ್ಯಕ್ತಿ ಮತ್ತು ಸಮಾಜದ ದೋಷಗಳನ್ನು ಯಶಸ್ವಿಯಾಗಿ ತನ್ನ ನಾಟಕಗಳಲ್ಲಿ ತಂದಿರುವನಾದರೂ ಈತನ ಕೀರ್ತಿ ನಿಂತಿರುವುದು ಈತ ಷೇಕ್ಸ್‌ಪಿಯರನ ಕೆಲವು ನಾಟಕಗಳಿಗೆ ಬರೆದಿರುವ ವಿಮರ್ಶಾತ್ಮಕ ಪ್ರಸ್ತಾವನೆಗಳಿಂದ.

ಪ್ರಯೋಗಶೀಲ ಹವ್ಯಾಸೀ ರಂಗಭೂಮಿಗೆ ಈತ ಸಲ್ಲಿಸಿದ ಸೇವೆ ಅಪಾರ. ಇಬ್ಸೆನ್, ಮೆಟರ್‌ಲಿಂಕ್, ಷಾ, ಗಾಲ್ಸ್‌ವರ್ದಿ ಮುಂತಾದ ಅನೇಕರ ಕೃತಿಗಳನ್ನೂ ಗ್ರೀಕ್ ನಾಟಕಗಳನ್ನೂ ಪ್ರದರ್ಶಿಸಿದ. ಮೊದಲ ಹೆಂಡತಿ ಲಿಲ ಮೆಕಾರ್ತಿಯೊಂದಿಗೆ ಎಷ್ಟೊ ನಾಟಕಗಳಲ್ಲಿ ಅಭಿನಯಿಸಿದ. ಕೋರ್ಟ್‌ಥಿಯೇಟರ್ ಒಂದು ಪ್ರಗತಿಶೀಲ ಲೇಖಕನ ರಂಗಭೂಮಿ ಎನಿಸಿದ್ದು ಈತನಿಂದಾಗಿ. ಇದಕ್ಕೂ ಮಿಗಿಲಾಗಿ ಈತ ಷೇಕ್ಸ್‌ಪಿಯರ್‌ಗೆ, ಎಲಿಜಬೆತನ್ ನಾಟಕಗಳಿಗೆ ಸಲ್ಲಿಸಿರುವ ಸೇವೆ ಅಪಾರ. 19ನೆಯ ಶತಮಾನದ ಚಿತ್ರಚೌಕಟ್ಟಿನ ರಂಗಮಂಚ, ಅದರ ದೃಶ್ಯ ವೈಭವ, ಸಜ್ಜಿಕೆಯ ಅತಿ ಸಮೃದ್ಧಿಗಳಿಂದಾಗಿ ಷೇಕ್ಸ್‌ಪಿಯರ್ ಉಸಿರುಗಟ್ಟಿ ಬಣ್ಣಗೆಟ್ಟು ವಿಕಾರ ಹೊಂದಿದ್ದ. ಆತನನ್ನು ಅದರಿಂದ ಪಾರುಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಈತ ಎಲಿಜಬೆತನ್ ರಂಗಮಂಚವನ್ನೇ ಅಳವಡಿಸಿಕೊಂಡದ್ದು ಮಾತ್ರವಲ್ಲ, ನಾಟಕದ ನಡೆಯ ವೇಗವನ್ನೂ ಹೆಚ್ಚಿಸಿದ. ಸಂಪೂರ್ಣ ಷೇಕ್ಸ್‌ಪಿಯರ್ ಕೃತಿಗಳನ್ನು ಮೂಲರೂಪದಲ್ಲಿಯೇ ಪ್ರದರ್ಶಿಸಿದ. ಅಭಿನಯ ಮತ್ತು ಮಾತುಗಾರಿಕೆಯಲ್ಲೂ ತುಂಬ ಯೋಗ್ಯ ಸುಧಾರಣೆಗಳನ್ನು ತಂದ. ನಿರ್ಮಾತೃಗಳು ತಮ್ಮ ಮನಸ್ಸಿಗೆ ಬಂದಂತೆ ಪಠ್ಯಭಾಗವನ್ನು ಪಲ್ಲಟಗೊಳಿಸಿ ವಿಕಾರಗೊಳಿಸುತ್ತಿದ್ದುದರಲ್ಲಿ ಎಂಥ ಹಾನಿ ಇದೆಯೆಂಬುದನ್ನು ಸ್ಪಷ್ಟಪಡಿಸಿದ. ಷೇಕ್ಸ್‌ಪಿಯರ್ ನಾಟಕಗಳ ಇಂದಿನ ಪ್ರದರ್ಶನ ವಿಧಾನ ಯಾವುದೇ ಇರಲಿ, ಅದು ಬಾರ್ಕರ್‌ಗೆ ಕೊಂಚಮಟ್ಟಿಗಾದರೂ ಋಣಿ ಎನ್ನಬೇಕು.

ಈತನ ರಂಗಸಾಧನೆಗಳಲ್ಲಿ ಮೊದಲ ಹೆಂಡತಿಯಂತೆ ಎರಡನೆಯ ಹೆಂಡತಿ ಹೆಲೆನ್ ಎಂಬ ಅಮೆರಿಕನ್ ಮಹಿಳೆಯೂ ಸಹಕರಿಸಿದಳು. ಸ್ಪ್ಯಾನಿಷ್ ಅನುವಾದಗಳಲ್ಲಿ ಆಕೆಯ ನೆರವು ಈತನಿಗೆ ಲಭಿಸಿತು. ತಾವು ಕಾರ್ಯವಾಹಿಯಾಗಿ ರಂಗಪ್ರಯೋಗಗಳನ್ನು ನಡೆಸಿದುದರ ಅನುಭವದ ಹಿನ್ನೆಲೆಯಲ್ಲಿ ಈತ ಷೇಕ್ಸ್‌ಪಿಯರ್‌ಗೆ ಪೀಠಿಕೆಗಳು ಎಂಬ ಒಂದು ವಿಮರ್ಶನ ಗ್ರಂಥವನ್ನು ಬರೆದಿದ್ದಾನೆ. ಲವ್ಸ್ ಲೇಬರ್ ಲಾಸ್ಟ್, ರೋಮಿಯೋ ಮತ್ತು ಜೂಲಿಯೆಟ್, ಟ್ವೆಲ್ಫ್ತ್ ನೈಟ್, ಹ್ಯಾಮ್ಲೆಟ್, ಒಥೆಲೋ, ಕಿಂಗ್ ಲಿಯರ್ ಮುಂತಾಗಿ ಹತ್ತು ನಾಟಕಗಳ ವಿಮರ್ಶಾತ್ಮಕ ಪ್ರಸ್ತಾವನೆಗಳನ್ನುಳ್ಳ ಈ ಗ್ರಂಥ ಈತನ ಇತರ ಎಲ್ಲ ಸಾಧನೆಗಳಿಗಿಂತಲೂ ಹಿರಿದಾದದ್ದು; ಶಾಶ್ವತ ಕೀರ್ತಿಯನ್ನು ತಂದುಕೊಡುವಂಥದ್ದು. ಇದನ್ನು ಓದುವುದೇ ನಾಟಕಾಸಕ್ತನಿಗೆ ಒಂದು ಹೊಸ ಅನುಭವ. ಜೀವಂತ ಷೇಕ್ಸ್‌ಪಿಯರನನ್ನು ಒಡಮೂಡಿಸುವುದು ಈತನ ಉದ್ದೇಶ. ಅದರಲ್ಲಿ ಈತ ಸಂಪೂರ್ಣ ಯಶಸ್ವಿಯಾಗಿದ್ದಾನೆ. (ಆರ್.ಎಸ್.ಎಜ.)

**ಗ್ರ್ಯಾನ್ಷಿಯ :** ಪ್ಯಾರಜೋವ (ಪೋರಿಫರ) ವಿಭಾಗದ ಕ್ಯಾಲ್ಕೇರಿಯ ವರ್ಗಕ್ಕೆ ಸೇರಿದ ಒಂದು ಸ್ಪಂಜುಪ್ರಾಣಿ. ಇದು ಸಮುದ್ರದಲ್ಲಿ ಯಾವುದಾದರೊಂದು ಗಟ್ಟಿ ಪದಾರ್ಥಕ್ಕೆ ಅಂಟಿಕೊಂಡು ತನ್ನ ಜೀವ ಕಾಲವನ್ನು ಕಳೆಯುತ್ತದೆ. ಇದರ ದೇಹದ ಆಕಾರ ಕಲಶದಂತೆ: ಗಾತ್ರ 1.2–2.5 ಸೆಂಮೀ. ದೇಹದ ಮೇಲೆ ಆಸ್ಟಿಯಗಳೆಂಬ ಅನೇಕ ರಂಧ್ರಗಳಿವೆ. ದೇಹದ ಮೇಲ್ತುದಿ ಯಲ್ಲಿ ಆಸ್ಕ್ಯುಲಮ್ ಎಂಬ ಒಂದು ದೊಡ್ಡ ದ್ವಾರವಿದೆ. ಆಸ್ಟಿಯಗಳ ಮೂಲಕ ನೀರು ದೇಹದೊಳಕ್ಕೆ ನುಗ್ಗಿ ಅಲ್ಲಿನ ಅಸಂಖ್ಯ ಕಾಲುವೆಗಳೊಳಗೆ ಪ್ರವಹಿಸಿ ಅಲ್ಲಿಂದ ಆಸ್ಕ್ಯುಲಮಿನ ಮೂಲಕ ಹೊರಬರುತ್ತದೆ. ಆಸ್ಕ್ಯುಲಮಿನ ಸುತ್ತ ಸೂಜಿಗಳಂತಿರುವ ಅನೇಕ ಮುಳ್ಳುಗಳಿವೆ (ಸ್ಪಿಕ್ಯೂಲ್ಸ್).



ಗ್ರ್ಯಾನ್ಷಿಯದ ಆಹಾರ ಸೇವನ ಕ್ರಮ, ಉಸಿರಾಡುವಿಕೆ ಮತ್ತು ಶುದ್ಧೀಕರಣಗಳೆಲ್ಲ ಉಳಿದ ಸ್ಪಂಜು ಪ್ರಾಣಿಗಳಲ್ಲಿದ್ದಂತೆಯೇ ಇವೆ. ಇದು ನಿರ್ಲಿಂಗ ಹಾಗೂ ಲೈಂಗಿಕ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ನಿರ್ಲಿಂಗವೃದ್ಧಿ ಅಂಕುರಣ (ಬಡಿಂಗ್) ರೀತಿಯಲ್ಲಿ ನಡೆಯುತ್ತದೆ. ಲೈಂಗಿಕ ರೀತಿಯ ಸಂತಾನಾಭಿವೃದ್ಧಿಯಲ್ಲಿ ರೇತ್ರಾಣು ಹಾಗೂ ಅಂಡಗಳು ಸಂಯೋಗವಾಗಿ ಯುಗ್ಮವಾಗಿ ರೂಪುಗೊಳ್ಳುತ್ತವೆ. ಯುಗ್ಮ ಕೆಲಕಾಲಾನಂತರ ಕಶಾಂಗವುಳ್ಳ ಡಿಂಭವಾಗಿ ಬೆಳೆದು ಕೊನೆಗೆ ಪ್ರೌಢಜೀವಿಯಾಗುತ್ತದೆ. ಡಿಂಭಕ್ಕೆ ಆಂಫಿಬ್ಲಾಸ್ಟುಲ ಎಂದು ಹೆಸರು. (ಎಸ್.ಬಿ.ಎಂ.)

**ಗ್ರ್ಯಾಪ್ಟೊಲೈಟುಗಳು :** ಗತವಂಶಿ ಪ್ರಾಣಿಗಳ ಒಂದು ವರ್ಗ. ಪ್ರಾಚೀನ ಜೀವಿಕಲ್ಪದ ಪೂರ್ವಾರ್ಧದಲ್ಲಿ, ಅದರಲ್ಲೂ ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಎಂಬೆರಡು ಯುಗಗಳಲ್ಲಿ ಮಾತ್ರ ಈ ಪ್ರಾಣಿಗಳು ಜೀವಿಸಿದ್ದುವು. ಆಗ ಅವು ಅಧಿಕ ಸಂಖ್ಯೆಯಲ್ಲಿ ವೃದ್ಧಿಸಿ ಭೌಗೋಳಿಕವಾಗಿ ವಿಶೇಷ ವ್ಯಾಪ್ತಿ ಪಡೆದಿದ್ದುವು. ಆದ್ದರಿಂದ ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಕಾಲಗಳ ಶಿಲಾಸ್ತೋಮಗಳ ವಿಸ್ತೃತ ವಿಭಜನೆ ಮತ್ತು ಪರಸ್ಪರ ಸಂಬಂಧ ನಿರ್ಣಯದಲ್ಲಿ ಗ್ರ್ಯಾಪ್ಟೊಲೈಟುಗಳೇ ಮುಖ್ಯವಾದ ಆಧಾರಗಳು. ಈ ಪ್ರಾಣಿಗಳು ಜೇಡು ನಿಕ್ಷೇಪ ಪ್ರದೇಶಗಳಲ್ಲಿ ಹೇರಳವಾಗಿಯೂ ಮರಳು ಅಥವಾ ಸುಣ್ಣ ನಿಕ್ಷೇಪ ಪ್ರದೇಶಗಳಲ್ಲಿ ವಿರಳವಾಗಿಯೂ ಇದ್ದಂತೆ ತೋರುವುದು.

ಗ್ರ್ಯಾಪ್ಟೊಲೈಟುಗಳು ಸಂಘಜೀವಿಗಳು. ಇವುಗಳಿಗೆ ಕಂಕಾಲಗಳಿದ್ದುವು. ಈ ಕಂಕಾಲಗಳಿಗೆ ಪಾಲಿಪೆರಿ ಎಂದು ಹೆಸರು. ಪಾಲಿಪೆರಿಯ ಮಧ್ಯದಲ್ಲಿ ದಾರ ಅಥವಾ ಕಡ್ಡಿಯ ಹಾಗಿರುವ ಎಲುಬು ಉಂಟು. ಇದಕ್ಕೆ ವಿರ್ಗುಲ ಎಂದು ಹೆಸರು. ಇದರ ಉದ್ದಕ್ಕೂ ಹಲ್ಲುಗಳ ಅಥವಾ ಬಟ್ಟಲುಗಳ ಆಕಾರದ ಎಲುಬುಗಳ ಸಾಲುಗಳಿವೆ. ಬಟ್ಟಲುಗಳಿಗೆ ಹೈಡ್ರೊತೀಕೆ ಎಂದು ಹೆಸರು. ಗ್ರ್ಯಾಪ್ಟೊಲೈಟ್ ಪ್ರಾಣಿಗಳೂ ಈ ಬಟ್ಟಲುಗಳಲ್ಲಿ ವಾಸಿಸುತ್ತಿದ್ದಿರಬೇಕು. ಪ್ರತಿ ಬಟ್ಟಲಿಗೂ ಎರಡು ದ್ವಾರಗಳಿವೆ. ಒಂದು ದ್ವಾರದಿಂದ ಪಕ್ಕದ ಬಟ್ಟಲಿನೊಡನೆ ಸಂಪರ್ಕ ಏರ್ಪಟ್ಟಿದೆ. ಮತ್ತೊಂದು ದ್ವಾರ ಹೊರ ಪ್ರಪಂಚದ ಸಂಪರ್ಕ ಇಟ್ಟುಕೊಳ್ಳಲು ಸಹಾಯಕವಾಗಿದೆ. ಮೊದಲನೆಯ ದ್ವಾರಗಳೆಲ್ಲ ಒಂದೇ ಸಾಲಿನಲ್ಲಿದ್ದು ಅವುಗಳಿಂದ ಒಂದು ಕಾಲುವೆ ಏರ್ಪಟ್ಟಿದೆ. ಇದಕ್ಕೆ ಸಾಮಾನ್ಯ ಕಾಲುವೆ ಎಂದು ಹೆಸರು. ವಿರ್ಗುಲದ ಕೆಳತುದಿಗೆ ಕೋನಾಕಾರಾದ ಎಲುಬೊಂದು ತಾಕು ಹಾಕಿದಂತಿದೆ. ಇದಕ್ಕೆ ಸಿಕ್ಯುಲ ಎಂದು ಹೆಸರು. ಮಾನೊಗ್ರ್ಯಾಪ್ಟಸಿನಲ್ಲಿ ಒಂದೇ ಒಂದು ಬಟ್ಟಲು ಸಾಲು ಉಂಟು. ಅಂಥ ಪ್ರಾಣಿ ಸಂಘಕ್ಕೆ ಏಕಪಂಕ್ತಿ ಸಂಘ ಎಂದು ಹೆಸರು. ಅನೇಕ ಗ್ರ್ಯಾಪ್ಟೊಲೈಟುಗಳಲ್ಲಿ ಎರಡು ಅಥವಾ ಹೆಚ್ಚು ಬಟ್ಟಲು ಸಾಲು ಗಳು ಇರುವುದುಂಟು. ಅವುಗಳಿಗೆ ಅನುಕ್ರಮ ವಾಗಿ ದ್ವಿಪಂಕ್ತಿ ಅಥವಾ ಬಹುಪಂಕ್ತಿ ಸಂಘಗಳು ಎಂದು ಹೆಸರು. ದ್ವಿಪಂಕ್ತಿ ಸಂಘಗಳಲ್ಲಿ ಎರಡು ಸಾಲುಗಳ ಮಧ್ಯೆ ಇರುವ ಕೋನಕ್ಕೆ ವಿಕೇಂದ್ರೀಕರಣ ಕೋನ ಎಂದು ಹೆಸರು. ಈ ಲಕ್ಷಣ ಗ್ರ್ಯಾಪ್ಟೊಲೈಟ್ ಪ್ರಾಣಿಗಳ ವರ್ಗೀಕರಣಕ್ಕೆ ಸಹಾಯಕವಾಗಿದೆ.

ಜಾತಿಜಾತಿಗೂ ಕೆಲವು ವೇಳೆ ಪ್ರಭೇದ ಪ್ರಭೇದಕ್ಕೂ ಬಟ್ಟಲು ಗಳು ಭಿನ್ನವಾಗಿರುತ್ತವೆ. ತುದಿಯಗಾತ್ರ ತುದಿಯ ಕಡೆಗೆ ಹೋದಂತೆಲ್ಲ ಹೆಚ್ಚಾಗುವುದು. ಬಟ್ಟಲುಗಳಿಗೆ ಕೊಳವೆ, ಕೋನ, ಪ್ರಿಸಮ್ ಆಕಾರಗಳು ಇರ ಬಹುದು. ಅವುಗಳಲ್ಲಿ ಪರಸ್ಪರ ಸಂಪರ್ಕ ಇರಬಹುದು



ಡೆಂಡ್ರಾಯ್ಡ್ ಗ್ರ್ಯಾಪ್ಟೊಲೈಟಿನ ರಚನೆ

ಇಲ್ಲವೆ ಇಲ್ಲದಿರಬಹುದು. ಸಿಕ್ಯುಲ ಒಂದು ಟೊಳ್ಳಾದ ಕೋನಾಕಾರದ ಕೊಳವೆ. ಅದರಲ್ಲಿ ಎರಡು ಭಾಗಗಳಿವೆ. ತೆಳು ಹೊದಿಕೆಯ ಮೇಲ್ಭಾಗ; ಬೆಳವಣಿಗೆಯ ಗೀರುಗಳಿಂದ ಕೂಡಿದ ದಪ್ಪ ಹೊದಿಕೆಯ ತಳಭಾಗ. ತಳಭಾಗದ ಕೆಳತುದಿಯಲ್ಲಿ ಒಂದು ಮುಳ್ಳು ಉಂಟು. ಮೇಲ್ಭಾಗ ವಿರ್ಗುಲವಾಗಿ ಮುಂದುವರಿಯುತ್ತದೆ. ಸಿಕ್ಯುಲ ಊರುಗೋಲಾಗಿ ಉಪಯುಕ್ತವಾಗಿರುವುದೇ ಅಲ್ಲದೆ ಪ್ರಜನನ ಕಾರ್ಯವನ್ನೂ ನಿರ್ವಹಿಸುವುದು.

ಪ್ರಜನನ ವಿಧಾನ : ಸಿಕ್ಯುಲದ ಮಗ್ಗುಲಲ್ಲಿ ಒಂದು ಕುಡಿ ಹೊರಡುತ್ತದೆ. ಇದು ಮೊದಲನೆಯ ಬಟ್ಟಲಾಗಿ ಪರಿವರ್ತಿಸುತ್ತದೆ. ಬಳಿಕ ಈ ಬಟ್ಟಲು ಇಬ್ಭಾಗವಾಗಿ ಎರಡು ಬಟ್ಟಲುಗಳಾಗುತ್ತವೆ. ಇದೇ ರೀತಿ ಬಟ್ಟಲುಗಳು ಪುನಃ ಪುನಃ ಇಬ್ಭಾಗವಾಗಿ ಅವುಗಳ ಒಂದು ಸಾಲೇ ಆಗುತ್ತದೆ. ದ್ವಿಪಂಕ್ತಿ ಸಂಘಗಳಲ್ಲಿ ಕುಡಿಯ ಜೊತೆಗೆ ಕೊಳವೆಯೊಂದು ಹೊರಡು ತ್ತದೆ. ಇದು ಬೇರೊಂದು ಮಗ್ಗುಲಿಗೆ ಹಾಯ್ದು ಅಲ್ಲಿ ಒಂದು ಬಟ್ಟಲಾಗಿ ಪರಿವರ್ತನೆಗೊಳ್ಳುತ್ತದೆ. ಇದು ಇಬ್ಭಾಗವಾಗಿ ಎರಡು ಬಟ್ಟಲು ಗಳಾಗುತ್ತದೆ. ಮೇಲೆ ವಿವರಿಸಿದಂತೆ ಈ ಬಟ್ಟಲುಗಳೂ ಎರಡನೆಯ ಬಟ್ಟಲು ಸಾಲಾಗುತ್ತವೆ. ಜಲಜ ಶಿಲೆಗಳಲ್ಲಿ ಮೆಡೂಸಗಳ ಅವಶೇಷ ಗಳು ದೊರೆತಿಲ್ಲ. ಆದರೆ ಅವುಗಳ ಜನನ ಗ್ರಂಥಿಗಳನ್ನು ಹೋಲುವ ಕೋಶಗಳು ಸಿಕ್ಕಿವೆ. ಇವುಗಳ ರಚನಾ ವಿಧಾನವನ್ನಾಗಲಿ, ಕ್ರಿಯಾತಂತ್ರವನ್ನಾಗಲಿ ನಿರ್ದಿಷ್ಟವಾಗಿ ಹೇಳುವಂತಿಲ್ಲ. ಗ್ರ್ಯಾಪ್ಟೊಲೈಟುಗಳ ಮೃದು ಭಾಗಗಳು ರಕ್ಷಿಸಲ್ಪಟ್ಟಿಲ್ಲ. ಆದ್ದರಿಂದ ಈ ಪ್ರಾಣಿಗಳು ಯಾವ ವರ್ಗದ ಪ್ರಾಣಿಗಳಿಗೆ ಹತ್ತಿರದ ಸಂಬಂಧಿಗಳೆಂದು ಹೇಳುವುದು ಸುಲಭವಲ್ಲ. ಅಂಗರಚನೆಯ ಸಾಮ್ಯ ಮತ್ತು ಪ್ರಜನನ ಗ್ರಂಥಿಗಳನ್ನು ಪಡೆದಿರುವುದರ ಆಧಾರದ ಮೇಲೆ ಈ ಪ್ರಾಣಿಗಳು ಹೈಡ್ರೋಜೋವ ವರ್ಗದ ಒಂದು ಶಾಖೆ ಎಂದು ಆಲ್‌ಮನ್ ಅಭಿಪ್ರಾಯಪಟ್ಟಿದ್ದಾನೆ. ಆದರೆ ಹೈಡ್ರೋಜೋವ ವರ್ಗದ ಪ್ರಾಣಿಗಳಲ್ಲಿ ವಿರ್ಗುಲ, ಸಿಕ್ಯುಲಗಳಿಲ್ಲ. ಗ್ರ್ಯಾಪ್ಟೊಲೈಟುಗಳು ಬೆನ್ನೆಲುಬಿಲ್ಲದ ಪ್ರಾಣಿಗಳ ಮೂಲಶಾಖೆಯೆಂದು ವಿಜ್ಞಾನಿಗಳ ಅಭಿಪ್ರಾಯ. (ಡಿ.ಆರ್.)



ಕ್ಲೈಮಕೊಗ್ರ್ಯಾಪ್ಟಸ್ ಟಿಪಿಕ್ಯಾಲಿಸ್ ಪ್ರಭೇದದ ಬೆಳವಣಿಗೆಯ ಮೂರು ಹಂತಗಳು

**ಗ್ರ್ಯಾಫೈಟ್ :** ಖನಿಜವಾಗಿ ದೊರೆಯುವ ಇಂಗಾಲದ ಒಂದು ರೂಪ. ವಜ್ರ ಮತ್ತು ಗ್ರ್ಯಾಫೈಟುಗಳು ಇಂಗಾಲದ ಸ್ಫಟಿಕರೂಪಗಳು. ಗ್ರ್ಯಾಫೈಟ್ ಷಣ್ಮುಖ ರೂಪದ್ದು (ಹೆಕ್ಸಗೊನಲ್). ಇದರ ಹರಳುಗಳು ಸಿಕ್ಕುವುದು ಅಪರೂಪ. ಆದರೆ ಗಮನಿಸಿ ನೋಡಿದಾಗ ಗ್ರ್ಯಾಫೈಟಿನಲ್ಲಿ ಷಣ್ಮುಖ ರೂಪದ ಸಣ್ಣ ಸಣ್ಣ ಕಣಗಳು ಕಂಡುಬರುತ್ತವೆ. ಗ್ರ್ಯಾಫೈಟ್ ಬಹಳ ಮೃದುವಾದ ಖನಿಜ. ಸ್ಪರ್ಶಕ್ಕೆ ಬಲು ನುಣುಪು. ಮುಟ್ಟಿದರೆ ಕೈಮಸಿಯಾಗುವುದು. ಇದರಿಂದ ಕಾಗದದ ಮೇಲೆ ಗುರುತು ಮಾಡಬಹುದು. ಇದರ ಸಾಪೇಕ್ಷ ಸಾಂದ್ರತೆ 2.09–2.23. ಬಣ್ಣ ಕಪ್ಪು ಇಲ್ಲವೇ ಉಕ್ಕಿನ ಬಣ್ಣ. ಇದು ವಿದ್ಯುದ್ವಾಹಕ. ಶ್ರೀಲಂಕ, ಭಾರತ, ಸೈಬೀರಿಯ, ಕೊರಿಯ, ಅಮೆರಿಕದ ಸಂಯುಕ್ತಸಂಸ್ಥಾನಗಳು ಮೊದಲಾದ ಸ್ಥಳಗಳಲ್ಲಿ ಗ್ರ್ಯಾಫೈಟ್ ದೊರೆಯುತ್ತದೆ. ಮೊದಲಿಗೆ ಮಾಲಿಬ್ಡಿನೈಟ್, ಗೆಲೆನಾ (ಸೀಸದ ಸಲ್ಫೈಡ್) ಎಂಬ ಅದಿರುಗಳು ಮತ್ತು ಗ್ರ್ಯಾಫೈಟ್ ಎಲ್ಲವೂ ಒಂದೇ ವಸ್ತು ಎಂದು ಭ್ರಮಿಸಿದ್ದರು. ಈ ಕಾರಣದಿಂದಲೇ ಪ್ಲಂಬೆಗೋ, ಬ್ಲ್ಯಾಕ್‌ಲೆಡ್ (ಕರೀ ಸೀಸ) ಎಂಬ ಹೆಸರುಗಳು ಪ್ರಚಲಿತವಾದುವು. ರಾಸಾಯನಿಕವಾಗಿ ಗ್ರ್ಯಾಫೈಟ್ ಪಟುವಾದ ವಸ್ತುವಲ್ಲ. ಕ್ರೋಮಿಕ್ ಆಮ್ಲ ಇದನ್ನು ಇಂಗಾಲದ ಡೈಆಕ್ಸೈಡಿಗೆ ಉತ್ಕರ್ಷಿಸುತ್ತದೆ. ನೈಟ್ರಿಕ್ ಆಮ್ಲ ಇದನ್ನು ಗ್ರ್ಯಾಫಿಟಿಕ್ ಆಮ್ಲವೆಂಬ ಒಂದು ಹಳದಿಯ ಪದಾರ್ಥಕ್ಕೆ ಪರಿವರ್ತನೆ ಮಾಡುತ್ತದೆ. ಗ್ರ್ಯಾಫಿಟಿಕ್ ಆಮ್ಲ ಮೆಲಿಟಿಕ್ ಆಮ್ಲವೆಂಬ ಪದಾರ್ಥಕ್ಕೆ ಪರಿವರ್ತನೆ ಆಗುತ್ತದೆ. ಈ ಕ್ರಿಯೆಯಿಂದ ಗ್ರ್ಯಾಫೈಟಿನ ಅಂತಾರಚನೆ ಅಂದರೆ ಅದರಲ್ಲಿ ಇಂಗಾಲದ ಪರಮಾಣುಗಳ ಜೋಡಣೆ ಹೇಗಿದೆ ಎಂಬುದರ ಸುಳಿವು ದೊರೆಯುತ್ತದೆ. ಇಂಗಾಲದ ಪರಮಾಣುಗಳು ಷಟ್ಕೋನಾಕೃತಿಯಲ್ಲಿ ಜೋಡಿಸಲ್ಪಟ್ಟಿವೆ. ಎಕ್ಸ್‌ಕಿರಣ ಪರೀಕ್ಷೆಯಿಂದ ಈ ರಚನೆ ಸ್ಪಷ್ಟಪಟ್ಟಿದೆ. ಇಂಥ ಷಟ್ಕೋನ ಜೋಡಣೆಗಳ ಪದರಗಳು ಒಂದರ ಮೇಲೊಂದಿವೆ. ಒಂದು ಷಟ್ಕೋನದಲ್ಲಿ ಇಂಗಾಲದ ಪರಮಾಣುಗಳ ಅಂತರ 1.4 Å . ಪದರಗಳ ಅಂತರ 3.4 Å ಪದರಗಳ ನಡುವಣ ಅಂತರ ಹೆಚ್ಚಾಗಿದ್ದು ಈ ಬಂಧ ಬಹಳ ದುರ್ಬಲವಾಗಿರುವುದರಿಂದ ಒಂದು ಪದರ ಇನ್ನೊಂದರ ಮೇಲೆ ಜಾರಲು ಅನುಕೂಲವಾಗಿರುತ್ತದೆ. ಇದು ಗ್ರ್ಯಾಫೈಟಿನ ಮೃದುತ್ವಕ್ಕೂ ಸ್ನೇಹಿ ಗುಣಕ್ಕೂ (ಲ್ಯೂಬ್ರಿಕೇಟಿಂಗ್ ಪ್ರಾಪರ್ಟಿ) ಕಾರಣವಾಗಿದೆ. ಅಲ್ಲದೆ ಇಂಗಾಲದ ಪರಮಾಣುಗಳ ಕೆಲವು ಎಲೆಕ್ಟ್ರಾನುಗಳು ಬಂಧಕ್ಕೊಳಪಡದೆ ಸ್ವತಂತ್ರವಾಗಿರುವುದರಿಂದ ಗ್ರ್ಯಾಫೈಟ್ ವಿದ್ಯುದ್ವಾಹಕವಾಗಿದೆ.







ಗ್ರ್ಯಾಫೈಟಿನ ರಚನೆ

ಗ್ರ್ಯಾಫೈಟಿಗೆ ವೈದ್ಯುತ, ರಾಸಾಯನಿಕ, ಲೋಹವಿದ್ಯೆ, ನ್ಯೂಕ್ಲಿಯರ್ ಮತ್ತು ರಾಕೆಟ್ ಕ್ಷೇತ್ರಗಳಲ್ಲಿ ಅನೇಕ ಉಪಯೋಗಗಳಿವೆ.

ವಿದ್ಯುತ್ ಕುಲುಮೆಗಳಲ್ಲಿ ಎಲೆಕ್ಟ್ರೋಡ್, ಕ್ಲೋರಿನ್, ಕಾಸ್ಟಿಕ್‌ಸೋಡ, ಸೋಡಿಯಮ್, ಮೆಗ್ನೀಷಿಯಂ ಇತ್ಯಾದಿ ವಸ್ತುಗಳ ತಯಾರಿಕೆಯಲ್ಲಿ ಆ್ಯನೋಡ್, ಎಲೆಕ್ಟ್ರಾನಿಕ್ ಕೊಳವೆಗಳಲ್ಲಿ ಆ್ಯನೋಡ್, ಮೋಟಾರ್‌ಬ್ರಷ್, ಉಷ್ಣನಿರೋಧಕ ಮೂಸೆಗಳು, ರಾಸಾಯನಿಕ ಕ್ರಿಯೆಯನ್ನು ನಡೆಸುವ ಪಾತ್ರೆಗಳಲ್ಲಿ ಅಸ್ತರ (ಲೈನಿಂಗ್), ನ್ಯೂಕ್ಲಿಯರ್ ರಿಯಾಕ್ಟರುಗಳಲ್ಲಿ ಮಂದಕಾರಿ (ಮಾಡರೇಟರ್), ರಾಕೆಟ್ ಮೋಟಾರುಗಳ ತುದಿ, ಯಂತ್ರೋಪಕರಣಗಳಲ್ಲಿ ಕೀಲೆಣ್ಣೆಯಾಗಿ ತುಕ್ಕುಹಿಡಿಯದಂತೆ ಮಾಡಲು ಕಬ್ಬಿಣದ ಸಲಕರಣೆಗಳಿಗೆ ಲೇಪನ ಇತ್ಯಾದಿಗಳಲ್ಲಿ ಇದರ ಬಳಕೆಯುಂಟು. ಹೀಗಾಗಿ ಗ್ರ್ಯಾಫೈಟಿನ ಕೃತಕ ತಯಾರಿಕೆಯ ಆವಶ್ಯಕತೆಯುಂಟು. ಆಂಥ್ರಸೈಟ್ ಎಂಬ ಬಗೆಯ ಕಲ್ಲಿದ್ದಲು ಮತ್ತು ಮರಳು, ಇಲ್ಲವೇ ಪೆಟ್ರೋಲಿಯಮ್ ಕೋಕ್, ಕಲ್ಲಿದ್ದಲಿನ ಟಾರ್ ಮತ್ತು ಮರಳುಗಳ ಮಿಶ್ರಣವನ್ನು ವಿದ್ಯುತ್ ಕುಲುಮೆಯಲ್ಲಿ 2,600°–3000° ಸೆಂ. ಉಷ್ಣತೆಗೆ ಕಾಯಿಸುವುದರಿಂದ ಗ್ರ್ಯಾಫೈಟ್ ಉತ್ಪನ್ನವಾಗುತ್ತದೆ. ಮೊದಲು ಸಿಲಿಕಾನ್ ಕಾರ್ಬೈಡ್ ಉತ್ಪನ್ನವಾಗಿ ಅನಂತರ ಇದರ ವಿಭಜನೆಯಿಂದ ಗ್ರ್ಯಾಫೈಟ್ ಉಂಟಾಗುತ್ತದೆಂದು ಊಹಿಸಲಾಗಿದೆ. (ಎನ್.ಎಸ್.ಕೆ.)

**ಗ್ರ್ಯಾವಿಟಾನ್ :** ಗುರುತ್ವಕ್ಷೇತ್ರದ ಕ್ವಾಂಟಮ್ ಎಂದು ಭಾವಿಸಲಾಗಿರುವ ಕಣ. ಗುರುತ್ವಕ್ಷೇತ್ರದ ಕ್ವಾಂಟಮ್ ಸಿದ್ಧಾಂತದಲ್ಲಿ ವಸ್ತುಗಳ ನಡುವಣ ಗುರುತ್ವಾತ್ಮಕ ಅಂತರ ಕ್ರಿಯೆಯ (ಗ್ರ್ಯಾವಿಟೇಷನಲ್ ಇಂಟರ್‌ಆ್ಯಕ್ಷನ್) ವಾಹಕವಾಗಿ ಈ ಕಣ ಪಾತ್ರ ವಹಿಸುತ್ತದೆ ಎನ್ನಬಹುದು. ಇತ್ತೀಚಿನ ವರ್ಷಗಳಲ್ಲಿ ಗುರುತ್ವಕ್ಷೇತ್ರದ (ಅಂದರೆ ಐನ್‌ಸ್ಟೈನ್ ಗುರುತ್ವ ಸಿದ್ಧಾಂತದ) ಕ್ವಾಂಟೀಕರಣದತ್ತ (ಕ್ವಾಂಟೈಸೇಷನ್) ಹೆಚ್ಚಿನ ಲಕ್ಷ್ಯ ಹರಿಸಲಾಗಿದೆ. ಆದರೆ ಗುರುತ್ವ ಕ್ಷೇತ್ರದ ಮೂಲಭೂತ ಅರೇಖೀಯತೆ (ನಾನ್ ಲೀನಿಯಾರಿಟಿ) ಮತ್ತು ಕ್ಷೇತ್ರ ಸಮೀಕರಣಗಳ ಸಾರ್ವತ್ರಿಕ ಸಹವಿಚರಣೆಗಳಿಂದಾಗಿ (ಕೋವೇರಿಯನ್ಸ್) ಗುರುತ್ವಕ್ಷೇತ್ರದ ಕ್ವಾಂಟೀಕರಣ ಇಂದಿಗೂ ಬಹು ತೊಡಕಿನ ಸಮಸ್ಯೆಯಾಗಿಯೇ ಉಳಿದಿದೆ. ಹೀಗಿದ್ದರೂ ದುರ್ಬಲ ಗುರುತ್ವ ಕ್ಷೇತ್ರಗಳಲ್ಲಿ ಅಂದರೆ ಐನ್‌ಸ್ಟೈನ್ ಸಮೀಕರಣಗಳ ದುರ್ಬಲ ಕ್ಷೇತ್ರ ಸನ್ನಿಹಿತತೆಯಲ್ಲಿ (ಅಪ್ರಾಕ್ಸಿಮೇಷನ್) ಕೆಲವು ಗುಣಾತ್ಮಕ ಪರಿಶೀಲನೆಗಳನ್ನು ಮಾಡಬಹುದು.

ಗುರುತ್ವಕ್ಷೇತ್ರವನ್ನು ಪ್ರತಿನಿಧಿಸುವ ಐನ್‌ಸ್ಟೈನ್ ಸಮೀಕರಣಗಳು ಆಕರರಹಿತ ಪ್ರದೇಶಗಳಲ್ಲಿ

$R_{\mu v} = 0$ ......(1)

ಎಂದಾಗುತ್ತವೆ. ಗುರುತ್ವ ಕ್ಷೇತ್ರ ಬಹಳ ದುರ್ಬಲವಾದಾಗ ಈ ಸಮೀಕರಣಗಳನ್ನು

$\phi_{\mu} v = 0,$ $\phi_{\mu} v_{, v} = 0$ ...(2)

ಎಂಬ ಸನ್ನಿಹಿತ ರೂಪದಲ್ಲಿ ಬರೆಯಬಹುದು. ಇಲ್ಲಿ $\phi_{\mu} v$ ಎಂಬುವು ಗುರುತ್ವ ವಿಭವ (ಅಥವಾ ಮೆಟ್ರಿಕ್ ಟೆನ್ಸರ್) $g_{\mu v}$ ಗೆ ಸಂಬಂಧಿಸಿದ ಕ್ಷೇತ್ರ ಚರಗಳು. ದುರ್ಬಲ ಗುರುತ್ವ ಕ್ಷೇತ್ರಗಳನ್ನು ಪ್ರತಿನಿಧಿಸುವ ಮೇಲಿನ ಸಮೀಕರಣಗಳು (2) ಸಾಪೇಕ್ಷಕವಾಗಿ ಸಹವಿಚರವಾದ (ಕೋವೇರಿಯಂಟ್) ಭ್ರಮಣೆ (ಸ್ಪಿನ್) ಇರುವ ಶೂನ್ಯ ವಿಶ್ರಾಂತಿ ದ್ರವ್ಯರಾಶಿಯ (ರೆಸ್ಟ್ ಮಾಸ್) ಅಲೆ ಸಮೀಕರಣಗಳೆಂಬ ಗಮನಾರ್ಹ ಸಂಗತಿಯನ್ನು ಪೌಲಿ ಮತ್ತು ಫಿಯರ್ಜ್ ಹೊರಗೆಡಹಿದರು (1939). ಇದೇ ಕಾರಣದಿಂದ ಗುರುತ್ವಕ್ಷೇತ್ರದ ಕ್ವಾಂಟಮಿನ, ಅಂದರೆ ಗ್ರ್ಯಾವಿಟಾನಿನ, ಭ್ರಮಣೆ ಇರಬೇಕೆಂದು ಊಹಿಸಲಾಗಿದೆ. ಗುರುತ್ವ ಬಲಗಳ ವ್ಯಾಪ್ತಿ ಅನಂತವಾದ್ದರಿಂದ ಗ್ರ್ಯಾವಿಟಾನಿನ ವಿಶ್ರಾಂತಿ ದ್ರವ್ಯರಾಶಿ ಶೂನ್ಯವಾಗಿರಬೇಕು. (ಗುರುತ್ವಬಲಗಳು $m_g$ ವಿಶ್ರಾಂತಿ ದ್ರವ್ಯರಾಶಿಯ ಗ್ರ್ಯಾವಿಟಾನುಗಳ ವಿನಿಮಯದಿಂದ ಜನಿಸುತ್ತವೆ ಎಂದಾದರೆ, ಗುರುತ್ವಕ್ಷೇತ್ರವನ್ನು ಸ್ಥೂಲವಾಗಿ, ಯುಕಾವ ರೀತಿಯ–ವಿಭವ

$$\phi \sim \frac{1}{\gamma} \exp\left(-m_g c\gamma / \hbar\right)$$

ಎಂಬುದರಿಂದ ಪ್ರತಿನಿಧಿಸಬಹುದು. ಈಗ $\phi$ ಯ ವ್ಯಾಪ್ತಿ ಅನಂತವಾಗಬೇಕಾದರೆ $m_g \sim 0$ ಆಗಬೇಕು).

ಲಭ್ಯವಿರುವ ಅಂದಾಜುಗಳ ಪ್ರಕಾರ $\overset{V}{mg} \sim 5 \times 10^{-62}\,gm$ ಎಂದು ತಿಳಿದುಬರುತ್ತವೆ. ವಿಶ್ರಾಂತಿ ದ್ರವ್ಯರಾಶಿ ಶೂನ್ಯವಾದ್ದರಿಂದ ಗ್ರ್ಯಾವಿಟಾನಿನ ವೇಗ ಬೆಳಕಿನ ವೇಗಕ್ಕೆ ಸಮವಾಗಿರುತ್ತದೆ. ಅಲ್ಲದೆ ಗ್ರ್ಯಾವಿಟಾನಿಗೆ ಚಲನೆಯ ನೇರ ಮತ್ತು ಅದರ ವಿರುದ್ಧ ನೇರಗಳಲ್ಲಿ ಮಾಲಿಕೊಂಡಿರುವ ಭ್ರಮಣ ಕೋನ ಸಂವೇಗವಿರುವ ಎರಡೇ ಭ್ರಮಣ ಸ್ಥಿತಿಗಳಿರುತ್ತವೆ. ಈ ಮೇಲಿನ ಪರಿಗಣನೆಗಳಿಂದ ಗ್ರ್ಯಾವಿಟಾನಿಗೂ ವಿದ್ಯುತ್ಕಾಂತ ಕ್ಷೇತ್ರದ ಕ್ವಾಂಟಮ್ ಆದ ಫೋಟಾನಿಗೂ ಬಹಳ ಹೋಲಿಕೆಯಿರುವುದು ಕಂಡುಬರುತ್ತದೆ. ಗ್ರ್ಯಾವಿಟಾನ್ ಮತ್ತು ಫೋಟಾನುಗಳೆರಡೂ ಶೂನ್ಯ ವಿಶ್ರಾಂತಿ ದ್ರವ್ಯರಾಶಿಯ ಬೋಸ್ ಕಣಗಳು. ಆದ್ದರಿಂದ ಇವು ಗುರುತ್ವಶಕ್ತಿಯ ಕಪ್ಪು–ವಸ್ತು–ವಿಸರಣ ಪ್ಲಾಂಕ್ ನಿಯಮವನ್ನು ಸಂಪೂರ್ಣವಾಗಿ ಪಾಲಿಸುತ್ತವೆ (**ನೋಡಿ– ಕ್ವಾಂಟಂ ಸಂಖ್ಯಾಕಲನಶಾಸ್ತ್ರ**). ಮೂಲ ಕಣಗಳ ನಡುವಿನ ಗುರುತ್ವಾತ್ಮಕ ಅಂತರಕ್ರಿಯೆ ಉಳಿದ ಅಂತರಕ್ರಿಯೆಗಳಿಗೆ ಹೋಲಿಸಿದಾಗ, ತೀರ ಅಗಣನೀಯವಾದ್ದರಿಂದ ಇಂದು ಲಭ್ಯವಿರುವ ಪ್ರಾಯೋಗಿಕ ಭೌತವಿಜ್ಞಾನ ವಿಧಾನಗಳಿಂದ ಸೂಚಿತವಾದ ಗ್ರ್ಯಾವಿಟಾನಿನ ಇರುವಿಕೆ ಹಾಗೂ ಇತರ ಗುಣಗಳ ಪ್ರಾಯೋಗಿಕ ಸಮರ್ಥನೆ ಅಸಾಧ್ಯವೆಂದು ತೋರುತ್ತದೆ. (ಎ.ವಿ.ಜಿ.)

**ಗ್ರ್ಯಾವಿಮೆಟ್ರಿಕ್ ವಿಶ್ಲೇಷಣೆ: ನೋಡಿ – ಭಾರಾತ್ಮಕ ವಿಶ್ಲೇಷಣೆ**

**ಗ್ಲಟನ್ :** ಕಾರ್ನಿವೊರ ಗಣದ ಮಸ್ಟೆಲಿಡೀ ಕುಟುಂಬಕ್ಕೆ ಸೇರಿದ ಒಂದು ಮಾಂಸಾಹಾರಿ ಸ್ತನಿ. ವಲ್ವರೈನ್ ಪರ್ಯಾಯನಾಮ. ಗ್ಯೂಲೊ ಗ್ಯೂಲೊ ಇದರ ಶಾಸ್ತ್ರೀಯ ನಾಮ. ಕೆನಡ, ಆರ್ಕ್‌ಟಿಕ್ ಪ್ರದೇಶದ ದ್ವೀಪಗಳು, ಅಮೆರಿಕ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯ, ಕಾಲರಾಡೋ ರಾಜ್ಯಗಳಲ್ಲಿ ಕಾಣಬರುತ್ತದೆ. ಗ್ಲಟನ್ ಚಿಕ್ಕ ಗಾತ್ರದ ಪ್ರಾಣಿಯಾದರೂ (ಇದರ ಉದ್ದ 0.75–1 ಮೀ. ಎತ್ತರ ಸುಮಾರು 45 ಸೆಂಮೀ) ಬಹಳ ಬಲಿಷ್ಠವಾದ್ದು. ಇದರ ಸರಾಸರಿ ತೂಕ ಸುಮಾರು 15–17.5 ಕಿಗ್ರಾಂ. ಕಾಲುಗಳು ಮೋಟು. ಪಾದಗಳು ಮಾತ್ರ ಅಗಲವಾಗಿವೆ. ಒಂದೊಂದರಲ್ಲೂ ಬಲು ಚೂಪಾದ ಮತ್ತು ಬಾಗಿದ ನಖಗಳುಳ್ಳ 5 ಬೆರಳುಗಳಿವೆ. ದೇಹವೆಲ್ಲ ಕಪ್ಪು ಮಿಶ್ರಿತ ಕಂದುಬಣ್ಣದ ದಟ್ಟ ತುಪ್ಪುಳಿನಿಂದ ಆವೃತವಾಗಿದೆ. ದೇಹದ ಅಕ್ಕಪಕ್ಕಗಳಲ್ಲಿ ಭುಜದಿಂದ ಪೃಷ್ಠದವರೆಗೆ ತಿಳಿ ಕಂದುಬಣ್ಣದ ಪಟ್ಟೆಗಳಿವೆ. ಗುದದ್ವಾರದ ಬಳಿ ದುರ್ಗಂಧಪೂರಿತವಾದ ಮತ್ತು ಹಳದಿ ಬಣ್ಣದ ದ್ರವವನ್ನು ಸ್ರವಿಸುವ ಗ್ರಂಥಿಗಳಿವೆ.

ಗ್ಲಟನ್ ಏಕಾಂತಜೀವಿ. ಪ್ರತಿ ಪ್ರಾಣಿಯೂ ತನ್ನದೇ ಆದ ಅಧೀನ ಪ್ರಾಂತ್ಯವೊಂದನ್ನು ಗುರುತಿಸಿಕೊಂಡು ಅದರೊಳಗೇ ಕಾಲ ಕಳೆಯುತ್ತದೆ. ಸಾಮಾನ್ಯವಾಗಿ ಇದರ ಚಟುವಟಿಕೆಯೆಲ್ಲ ಭೂಮಿಯ ಮೇಲೆಯೇ ಇದ್ದರೂ ಕೆಲವೊಮ್ಮೆ ಮರಗಳನ್ನೇರುವುದೂ ಉಂಟು. ಇದು ತನ್ನ ಹೊಟ್ಟೆಬಾಕತನಕ್ಕೆ ಹೆಸರುವಾಸಿ (ಇದರಿಂದಲೇ ಇದಕ್ಕೆ ಗ್ಲಟನ್ ಎಂಬ ಹೆಸರು ಬಂದಿದೆ). ಇದು ಸಣ್ಣಪುಟ್ಟ ಸ್ತನಿಗಳು, ಹಕ್ಕಿಗಳು ಮತ್ತು ಅವುಗಳ ಮೊಟ್ಟೆಗಳು, ಸತ್ತ ಪ್ರಾಣಿಗಳು ಮುಂತಾದವನ್ನೆಲ್ಲ ತಿನ್ನುತ್ತದೆ. ಕಾಯಿ, ಬೀಜಗಳನ್ನೂ ತಿನ್ನುವುದುಂಟು. ಕೆಲವು ಸಲ ಬೇಟೆಗಾರರು ಬೇರೆ ಪ್ರಾಣಿಗಳನ್ನು ಹಿಡಿಯಲೆಂದು ಒಡ್ಡಿದ ಬಲೆಗಳನ್ನು ಕೊಳ್ಳೆ ಹೊಡೆದು ಅದರಲ್ಲಿ ಸಿಕ್ಕಿಕೊಂಡಿರಬಹುದಾದ ಪ್ರಾಣಿಗಳನ್ನು ತಿನ್ನುತ್ತದೆ. ಇದು ಬಹಳ ಸೂಕ್ಷ್ಮ, ಜಾಗರೂಕ ಹಾಗೂ ಕಪಟಿ. ವಿವಿಧ ಬಗೆಯ ವಸ್ತುಗಳನ್ನು ಕದಿಯುವುದರ ಜೊತೆಗೆ ಅವನ್ನು ಬಚ್ಚಿಡುವ ಸ್ವಭಾವವೂ ಇದಕ್ಕಿದೆ. ತನ್ನ ಗಾತ್ರಕ್ಕಿಂತ ಹೆಚ್ಚು ದೊಡ್ಡದಾದ ಹಾಗೂ ಶಕ್ತಿಯುತವಾದ ಪ್ರಾಣಿಗಳನ್ನು ಎದುರಿಸಿ ಸೆಣಸುವುದುಂಟು.

ಇದರ ಸಂತಾನಾಭಿವೃದ್ಧಿಯ ಕಾಲ ಮಾರ್ಚ್ ತಿಂಗಳು. ಗರ್ಭಧರಿಸಿದ ಹೆಣ್ಣು ಗಂಡಿನಿಂದ ಬೇರೆ ಹೋಗಿ ಮರದ ಪೊಟರೆಯಲ್ಲಿ ಇಲ್ಲವೆ ಬಂಡೆಯ ಸಂದುಗಳಲ್ಲಿ ತನ್ನದೇ ಆದ ನೆಲೆಯನ್ನು ಸ್ಥಾಪಿಸಿಕೊಳ್ಳುತ್ತದೆ. ಸುಮಾರು 9 ವಾರಗಳ ಅನಂತರ 4 – 5 ಮರಿಗಳನ್ನು ಹಾಕುತ್ತದೆ. ಮರಿಗಳು ಸುಮಾರು 2 ವರ್ಷಗಳ ಕಾಲ ತಾಯೊಂದಿಗೇ ಇದ್ದು ಆಮೇಲೆ ಬೇರೆ ಹೋಗುತ್ತವೆ. ಗ್ಲಟನನ್ನು ಅದರ ತುಪ್ಪಳಕ್ಕಾಗಿ ಬೇಟೆಯಾಡುವುದಿದೆ. ಸೀಲ್, ವೀಸಲ್, ಮಿಂಕ್ ಮುಂತಾದವುಗಳ ತುಪ್ಪಳಕ್ಕಿರುವಷ್ಟು ಬೇಡಿಕೆ ಇದಕ್ಕಿಲ್ಲವಾದರೂ ಗ್ಲಟನಿನ ತುಪ್ಪುಳ ಎಂಥ ಕಡುಚಳಿಯಲ್ಲೂ ಗಡುಸಾಗದೆ ಕೆಡದೆ ಇರುವುದರಿಂದ ಉತ್ತರ ಮೇರು ಪ್ರದೇಶಗಳಲ್ಲಿ ಉಪಯುಕ್ತವೆನಿಸಿದೆ. (ಕೆ.ಪಿ.ಆರ್.)

**ಗ್ಲಾಕ್ಸಿನಿಯ :** ಜೆಸ್ನೇರಿಯೇಸೀ ಕುಟುಂಬಕ್ಕೆ ಸೇರಿದ ಸಿನಿಂಜಿಯ ಸ್ಪೀಶಿಯೋಸ ಪ್ರಭೇದದ ಹಲವಾರು ಅಲಂಕಾರ ಸಸ್ಯಗಳಿಗಿರುವ ಸಾಮಾನ್ಯ ಹೆಸರು. ಎಲ್ಲವೂ ಬ್ರೆಜಿಲಿನ ಮೂಲನಿವಾಸಿಗಳು. ಮೃದುವಾದ ಮಖಮಲಿನಂಥ ಎಲೆಗಳನ್ನೂ ಅಪಾರವಾದ ವರ್ಣ ವೈವಿಧ್ಯವುಳ್ಳ ಹೂಗಳನ್ನೂ ಪಡೆದಿರುವುದರಿಂದ ಇವನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಕುಂಡ ಸಸ್ಯಗಳನ್ನಾಗಿ ಬೆಳೆಸುತ್ತಾರೆ.

ಗ್ಲಾಕ್ಸಿನಿಯದಲ್ಲಿ ಸುಮಾರು 25 ಬಗೆಗಳಿವೆ. ಎಲ್ಲವೂ ಚಿಕ್ಕಗಾತ್ರದ ಬಹುವಾರ್ಷಿಕ ಮೂಲಿಕೆಗಳು. ಇವುಗಳಲ್ಲೆಲ್ಲ ನೆಲದೊಳಗೇ ಹುದುಗಿ ಬೆಳೆಯುವ ಟ್ಯೂಬರ್ ಮಾದರಿಯ ಪ್ರಕಂದವಿದೆ. ಇದರಿಂದ ಕವಲೊಡೆಯದ ಇಲ್ಲವೆ ಕವಲೊಡೆದ ಅನೇಕ ಕಾಂಡಗಳು ಹುಟ್ಟಿ ನೆಲದಿಂದ ಮೇಲಕ್ಕೆ ಬೆಳೆಯುತ್ತವೆ (ಕೆಲವು ಬಗೆಗಳಲ್ಲಿ ಈ ತೆರನ ಕಾಂಡವಿರುವುದಿಲ್ಲ). ಎಲೆಗಳು ಕಾಂಡಗಳ ಮೇಲೆ ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಎಲೆಗಳಿಗೆ ಉದ್ದನೆಯ ತೊಟ್ಟಿದೆ. ಹೂಗಳು ಒಂಟೊಂಟಿಯಾಗಿ ಇಲ್ಲವೆ ಹೂಗೊಂಚಲುಗಳಲ್ಲಿ ಅರಳುತ್ತವೆ. ಹೂಗಳ ಬಣ್ಣ ಬಿಳಿ, ನಸುಗೆಂಪು, ಕಡುಗೆಂಪು, ನೀಲಿ, ಊದಾ – ಹೀಗೆ ವೈವಿಧ್ಯಮಯ. ಜೊತೆಗೆ ದಳಸಮೂಹದ ಗಂಟಲಿನ ಬಳಿ ಚೆಲುವಾದ ಚುಕ್ಕಿಗಳಿದ್ದು ಹೂವಿನ ಅಂದವನ್ನು ಹೆಚ್ಚಿಸುತ್ತವೆ. ಪ್ರತಿ ಹೂವಿನಲ್ಲಿ 5 ದಳಗಳಿಂದ ಕೂಡಿದ ಸಂಯುಕ್ತ ಮಾದರಿಯ ಹಾಗೂ ಗಂಟೆಯಾಕಾರದ ದಳ ಸಮೂಹ, 4 ಕೇಸರಗಳು ಮತ್ತು ಎರಡು ಕಾರ್ಪೆಲುಗಳ ಉಚ್ಚಸ್ಥಾನದ ಅಂಡಾಶಯ ಇವೆ. ಕೇಸರಗಳ ಪರಾಗಕೋಶಗಳು ಜೊತೆ ಜೊತೆಯಾಗಿ ಸೇರಿಕೊಂಡುಬಿಟ್ಟಿದೆ. ಬಹುಪಾಲು ಬಗೆಗಳಲ್ಲಿ ದಳ ಸಮೂಹ ಒಂಟಿ ಸುತ್ತಿನದಾದರೂ ಕೆಲವಲ್ಲಿ ಎರಡು ಸುತ್ತಿನದಾಗಿರುವುದುಂಟು.

ಗ್ಲಾಕ್ಸಿನಿಯದ ವಿವಿಧ ಬಗೆಗಳಲ್ಲಿ ಸ್ಪೀಶಿಯೋಸ, ಡೈವರ್ಸಿಫೋಲಿಯ, ಜೆಸ್ನೆರಾಯ್ಡಿಸ್, ಗ್ಲಾಬ್ರ, ಮ್ಯಾಕ್ಯುಲೇಟ ಮತ್ತು ಮಲ್ಟಿಫ್ಲೋರಗಳು ಬಲು ಮುಖ್ಯವಾದವು.

ಗ್ಲಾಕ್ಸಿನಿಯದ ವೃದ್ಧಿಗೆ ಉಷ್ಣ ಹವಾಗುಣ ಉತ್ತಮ. ಎಲ್ಲ ಬಗೆಗಳನ್ನೂ ಬೀಜಗಳಿಂದ, ಪ್ರಕಂದದ ತುಂಡುಗಳಿಂದ ಇಲ್ಲವೆ ಎಲೆಗಳಿಂದ ವೃದ್ಧಿಸಬಹುದು. (ಎಂ.ಎಚ್.ಎಂ.)

**ಗ್ಲಾಬರ್ ಲವಣ :** ಸೋಡಿಯಮ್ ಸಲ್ಫೇಟ್ ಲವಣದ ಹರಳುಗಳು: ರಾಸಾಯನಿಕ ಅಣುಸೂತ್ರ $Na_2SO_4 10H_2O$. ಸೋಡಿಯಮ್ ಕ್ಲೋರೈಡಿನಿಂದ ಹೈಡ್ರೊಕ್ಲೋರಿಕ್ ಆಮ್ಲವನ್ನು ತಯಾರಿಸುವ ವಿಧಾನದಲ್ಲಿ ದೊರೆಯುವ ಉಪೋತ್ಪನ್ನವಿದು. ನೈಸರ್ಗಿಕವಾಗಿ ದೊರೆಯುವ ಇದೇ ಲವಣಕ್ಕೆ ಮಿರಾಬಲೈಟ್ ಎಂದು ಹೆಸರು. ಗ್ಲಾಬರ್ ಲವಣ ಪಾರದರ್ಶಕಗಳಾದ ದೊಡ್ಡ ಹರಳುಗಳ ರೂಪದಲ್ಲಿ ದೊರೆಯುತ್ತದೆ. ಸಣ್ಣ ಸಣ್ಣ ಸೂಜಿರೂಪದಲ್ಲಿ ಅಥವಾ ಚೂರ್ಣದ ರೂಪದಲ್ಲಿ ದೊರೆಯುವುದೂ ಉಂಟು. $33^0$ ಸೆ.ನಲ್ಲಿ ದ್ರವಿಸುತ್ತದೆ. $100^0$ ಸೆಂ.ನಲ್ಲಿ ಸ್ಫಟಿಕಜಲವನ್ನು (ವಾಟರ್ ಆಫ್ ಹೈಡ್ರೇಷನ್) ಕಳೆದುಕೊಳ್ಳುತ್ತದೆ. ನೀರು ಮತ್ತು ಗ್ಲಿಸರಿನ್ನಿನಲ್ಲಿ ವಿಲೀನವಾದರೂ ಆಲ್ಕೊಹಾಲಿನಲ್ಲಿ (ಈಥೈಲ್ ಆಲ್ಕೊಹಾಲ್) ವಿಲೀನವಾಗುವುದಿಲ್ಲ. ಸಾರ ಆಮ್ಲ ಮತ್ತು ಸಾರ ಪ್ರತ್ಯಾಮ್ಲಗಳ ಸಂಯೋಗದಿಂದ ಉತ್ಪತ್ತಿಯಾಗುವ ಲವಣವಾದ್ದರಿಂದ ಜಲೀಯ ದ್ರಾವಣ ಲಿಟ್ಮಸ್ಸಿಗೆ ತಟಸ್ಥವಾಗಿರುತ್ತದೆ. ಈ ಲವಣವನ್ನು ಮುಖ್ಯವಾಗಿ ಬಟ್ಟೆಗಳಿಗೆ ಬಣ್ಣಹಾಕುವ ಉದ್ಯಮದಲ್ಲಿ ಬಳಸುತ್ತಾರೆ. ಕ್ರಾಫ್ಟ್ ಕಾಗದ, ಕಾಗದದ ರಟ್ಟು ಮತ್ತು ಗಾಜಿನ ತಯಾರಿಕೆಯಲ್ಲಿ, ಚಲುವೆಕಾರಿಗಳ ಉತ್ಪಾದನೆಯಲ್ಲಿ ಸೆರಾಮಿಕ್ (ಮೃಣ್ಮಯ) ಪಾತ್ರೆಗಳಿಗೆ ಹೊಳಪು ಕೊಡುವುದರಲ್ಲಿ, ಚರ್ಮವನ್ನು ಹದಮಾಡುವುದರಲ್ಲಿ, ಔಷಧಿಗಳ ತಯಾರಿಕೆಯಲ್ಲಿ ಮತ್ತು ಘನೀಕರಣ ಮಿಶ್ರಣಗಳಲ್ಲಿ (ಫ್ರೀ ಜಿಂಗ್ ಮಿಕ್ಸ್ಚರ್ಸ್) ಈ ಲವಣದ ಬಳಕೆ ಉಂಟು.

(ಎಚ್.ಎಸ್.ಎಸ್.)

**ಗ್ಲಾಬ್ಯುಲಿನ್ :** ರಕ್ತದ ವಸೆಯಲ್ಲೂ ಹಾಲೊಡಕಿನಲ್ಲೂ (ಮಸ್ತು) ಇರುವ ಒಂದು ಬಗೆಯ ಪ್ರೋಟೀನು ಸಂಯುಕ್ತ. ಹಾಲಿನಲ್ಲಿರುವ ಗ್ಲಾಬ್ಯುಲಿನ್ನಿಗೆ ಲ್ಯಾಕ್ಟೊಗ್ಲಾಬ್ಯುಲಿನ್ ಎಂಬ ಹೆಸರೂ ಇದೆ. ಹಾಲೊಡಕಿನಲ್ಲಿ ಇದರ ಮೊತ್ತ ಶೇ. 0.1ನ್ನು ಮೀರುವುದಿಲ್ಲ. ಆದರೆ ಅದೇ ತಾನೆ ಕರುಹಾಕಿದ ಹಸುವಿನ ಹಾಲಿನಲ್ಲಿ ಮಾತ್ರ ಇದರ ಮೊತ್ತ ಗಣನೀಯವಾಗಿರುತ್ತದೆ (ಇನ್ನೊಂದು ಬಗೆಯ ಪ್ರೋಟೀನಾದ ಆಲ್ಬ್ಯುಮಿನ್ನೂ ಸೇರಿ ಇದರ ಮೊತ್ತ ಶೇ. 11–12 ರಷ್ಟಿರಬಹುದು). 24 ಗಂಟೆಗಳ ಅನಂತರ ಈ ಪರಿಮಾಣ ಶೀಘ್ರವಾಗಿ ಇಳಿದುಹೋಗುತ್ತದೆ. ಅನೇಕ ಬಗೆಯ ರೋಗಗಳ ವಿರುದ್ಧ ಪ್ರತಿವಸ್ತುಗಳ (ಆ್ಯಂಟಿಬಾಡೀಸ್) ತಯಾರಿಕೆಯಲ್ಲಿ ಗ್ಲಾಬ್ಯುಲಿನ್ ಪ್ರಮುಖ ಪಾತ್ರ ವಹಿಸುತ್ತದೆ. ಇಂಥ ಪ್ರತಿವಸ್ತುಗಳು ಹೆಚ್ಚು ಮೊತ್ತದಲ್ಲಿರುವ ತಾಯಿಯ ಹಾಲನ್ನು ಕರುಗಳು ಕುಡಿದಾಗ ಅವಕ್ಕೂ ತಾತ್ಕಾಲಿಕ ಬಗೆಯ ರೋಗನಿರೋಧಕಗಳ ಸಾಮರ್ಥ್ಯ ಬರುತ್ತದೆ.

ಗ್ಲಾಬ್ಯುಲಿನ್ನಿನಲ್ಲಿ ಆಲ್ಫ, ಬೀಟ, ಗ್ಯಾಮ ಎಂಬ ಮೂರು ಮುಖ್ಯ ಬಗೆಗಳಿವೆ. ಇವನ್ನು ವಿದ್ಯುತ್‌ಕ್ಷೇತ್ರ ಚಲನದಿಂದ (ಎಲೆಕ್ಟ್ರೊಫೋರೆಸಿಸ್) ಬೇರ್ಪಡಿಸಿ ಗುರುತಿಸಲಾಗಿದೆ. ಇವುಗಳ ಒಂದೊಂದು ಬಗೆಯಲ್ಲೂ ಅನೇಕ ರೀತಿಯ ಪ್ರೋಟೀನುಗಳಿವೆ. ಉದಾಹರಣೆಗೆ ಆಲ್ಫ ಬಗೆಯಲ್ಲಿ ಹ್ಯಾಪ್ಟೊಗ್ಲಾಬಿನ್, ಸೆರುಲೋಪ್ಲಾಸ್ಮಿನ್, $\alpha_2$ ಮ್ಯಾಕ್ರೊಗ್ಲಾಬ್ಯುಲಿನುಗಳೂ ಬೀಟ ಗ್ಲಾಬ್ಯುಲಿನುಗಳಲ್ಲಿ ಟ್ರಾನ್ಸ್‌ಫರಿನ್, ಬೀಟ ಲೈಪೋಪ್ರೋಟೀನುಗಳೂ ಗ್ಯಾಮ ಗ್ಲಾಬ್ಯುಲಿನುಗಳಲ್ಲಿ 5 ರೀತಿಯ ಇಮ್ಯೂನೋ ಗ್ಲಾಬ್ಯುಲಿನುಗಳೂ ಇವೆ. (ಪಿ.ಎಸ್.ಆರ್.ಎ.)

**ಗ್ಲಾಸಾಪ್ಟರಿಸ್ :** ಟೆರಿಡೋಸ್ಪರ್ಮ್ ಸಸ್ಯಕುಲಕ್ಕೆ ಸೇರಿದ ಅತಿ ಮುಖ್ಯವಾದ ಒಂದು ಗತವಂಶೀಯ ಸಸ್ಯಜಾತಿ. ಇದು ಪೇಲಿಯೋಜ಼ೋಯಿಕ್ ಯುಗದ ಉತ್ತರಾರ್ಧ ಮತ್ತು ಮಿಸೋಜ಼ೋಯಿಕ್ ಯುಗದ ಪೂರ್ವಾರ್ಧದಲ್ಲಿ ಗೋಂಡ್ವಾನ ಖಂಡದ ಸಸ್ಯ ವೈಶಿಷ್ಟ್ಯವಾಗಿತ್ತು. ಈ ಸಸ್ಯದೊಡನೆ ಕಂಡುಬರುವ ಗಂಗಮಾಪ್ಟರಿಸ್, ವರ್ಟಿಬ್ರೇರಿಯ ಮುಂತಾದ ಸಸ್ಯಜಾತಿಗಳನ್ನೆಲ್ಲ ಕೂಡಿಸಿ ಗ್ಲಾಸಾಪ್ಟರಿಸ್ ಸಸ್ಯ ಸಮೂಹ ಎಂದು ಕರೆಯಲಾಗಿದೆ. ಇದು ಗೋಂಡ್ವಾನ ಯುಗದ ಮೊದಲಲ್ಲಿ ಹಿಮಯುಗದ ಸನ್ನಿವೇಶಗಳಲ್ಲಿ ಕಾಣಿಸಿಕೊಂಡು ಪೂರ್ವಾರ್ಧದಲ್ಲಿ ವಿಶೇಷವಾಗಿತ್ತು. ಇದರ ಅವಶೇಷಗಳು ಭಾರತದಲ್ಲೇ ಅಲ್ಲದೆ ಗೋಂಡ್ವಾನ ಖಂಡದ ಭಾಗಗಳಾಗಿದ್ದ ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಆಸ್ಟ್ರೇಲಿಯಗಳಲ್ಲೂ ಕಂಡುಬಂದಿವೆ.



ಗ್ಲಾಸಾಪ್ಟರಿಸ್ ಸಸ್ಯದ ಎಲೆ

ಗ್ಲಾಸಾಪ್ಟರಿಸ್ ಸಸ್ಯದ ಎಲೆಗಳು ಸರಳ, ಅಂಚು ನೀಳ. ಪರ್ಣಭಾಗದಲ್ಲಿ ಮಧ್ಯನಾಳ ಉಂಟು. ಕಮಾನಿನಾಕಾರದ ಕಿರುನಾಳ ವಿನ್ಯಾಸವನ್ನು ಕಾಣಬಹುದು. ಗ್ಲಾಸಾಪ್ಟರಿಸ್ ಎಲೆಯಲ್ಲಿ ಪುನರುತ್ಪತ್ತಿ ಅಂಗಗಳ ಇರುವಿಕೆ ನಿರ್ದಿಷ್ಟವಾಗಿಲ್ಲ. ಗಂಗಮಾಪ್ಟರಿಸ್ ಎಲೆ ಗ್ಲಾಸಾಪ್ಟರಿಸ್ ಎಲೆಯಂತೆಯೇ ಇದೆ. ಆದರೆ ಅದರಲ್ಲಿ ಮಧ್ಯನಾಳ ಇಲ್ಲ. ಗ್ಲಾಸಾಪ್ಟರಿಸ್ ಸಸ್ಯದ ಅವಶೇಷಗಳು ಭಾರತದ ಗೋಂಡ್ವಾನ ಸ್ತರಗಳ ಕೆಳವಿಭಾಗಕ್ಕೆ ಸೇರಿದ ತಾಲಚೇರ್, ಬರಕಾರ್ ಮತ್ತು ರಾಣಿಗಂಜ್ ಹಂತಗಳಲ್ಲಿ ಕಂಡುಬಂದಿವೆ. (ಎಂ.ವಿ.ಎ.ಎಸ್.)

**ಗ್ಲಾಸಿನ ನೊಣ :** ಡಿಪ್ಟರ ಗಣದ ಮಸ್ಕಿಡೀ ಕುಟುಂಬಕ್ಕೆ ಸೇರಿದ ಒಂದು ನೊಣ. ಟ್ಸೆಟ್ಸೀನೊಣ ಪರ್ಯಾಯನಾಮ. ಇದರಲ್ಲಿ ಸುಮಾರು 21 ಪ್ರಭೇದಗಳು ಇವೆ. ಅರೇಬಿಯದ ನೈರುತ್ಯ ಭಾಗದಲ್ಲಿ ಕಾಣಸಿಗುವ ಒಂದು ಪ್ರಭೇದವನ್ನು ಬಿಟ್ಟರೆ ಉಳಿದೆಲ್ಲವೂ ಆಫ್ರಿಕದಲ್ಲಿ ಮಾತ್ರ ಜೀವಿಸುತ್ತವೆ. ಗ್ಯಾಂಬಿಯ, ನೈಜೀರಿಯ, ಅಬಿಸೀನಿಯ, ಕೀನ್ಯ, ಉಗಾಂಡ, ಕಾಂಗೊ, ಅಂಗೋಲ ಮುಂತಾದೆಡೆಗಳಲ್ಲಿ ದಟ್ಟ ಕಾಡುಗಳಲ್ಲಿ ನೀರಿನ ಆಸರೆಯಿರುವಂಥಲ್ಲಿ ಇವುಗಳ ವಾಸ. ಇವು ದನ, ಕುದುರೆ ಮುಂತಾದ ಪ್ರಾಣಿಗಳ ಹಾಗೂ ಮಾನವನ ರಕ್ತವನ್ನು ಹೀರಿ ಬದುಕುತ್ತವೆ. ಇವುಗಳಲ್ಲಿ ಕೆಲವು ಬಗೆಯವು ಮನುಷ್ಯನಲ್ಲೂ ಪ್ರಾಣಿಗಳಲ್ಲೂ ನಿದ್ರಾವಾತರೋಗವನ್ನು (ಸ್ಲೀಪಿಂಗ್ ಸಿಕ್‌ನೆಸ್) ಉಂಟುಮಾಡುವ ರೋಗಾಣುಗಳ ವಾಹಕಗಳು. ಇಂಥ ರೋಗವಾಹಕ ನೊಣಗಳಲ್ಲಿ ಮುಖ್ಯವಾದವು ಪಶ್ಚಿಮ ಮತ್ತು ಮಧ್ಯ ಆಫ್ರಿಕದಲ್ಲಿ ಕಾಣಸಿಗುವ ಗ್ಲಾ. ಪಾಲ್ಪಾಲಿಸ್ ಮತ್ತು ಪೂರ್ವ ಆಫ್ರಿಕದಲ್ಲಿ ಜೀವಿಸುವ ಗ್ಲಾ. ಮಾರ್ಸಿಟಾನ್ಸ್.

ಎಲ್ಲ ಬಗೆಯ ಗ್ಲಾಸಿನ ನೊಣಗಳೂ ದೃಢಕಾಯದ ಕೀಟಗಳು. ಇವುಗಳ ಗಾತ್ರ ಸಾಮಾನ್ಯ ನೊಣಕ್ಕಿಂತ ಹೆಚ್ಚು. ದೇಹದ ಬಣ್ಣ ಹಳದಿಯಿಂದ ಕಗ್ಗಂದಿನವರೆಗೆ ವ್ಯತ್ಯಾಸವಾಗುತ್ತದೆ. ಉದರ ಭಾಗದ ಮೇಲೆ ಪಟ್ಟಿಗಳಿವೆ. ಬಾಯ ವಿವಿಧ ಭಾಗಗಳು ಆತಿಥೇಯ ಪ್ರಾಣಿಯ ದೇಹವನ್ನು ಚುಚ್ಚಿ ರಕ್ತಹೀರಲು ಅನುಕೂಲವಾಗಿವೆ. ರಕ್ತ ಹೀರುವಾಗ

ಕೆಳಕ್ಕೆ ಬಾಗುವ ಇವು ಬೇರೆ ಸಮಯಗಳಲ್ಲಿ ಸಮತಳವಾಗಿ ಇರುತ್ತವೆ. ಆಂಟೆನದ ಮೇಲೆ ಒಂದು ಬಿರುಗೂದಲಿನಂಥ ಅಂಗವಿದೆ. ಇದರ ಮೇಲೆ ಒಂಟಿಸಾಲಿನಲ್ಲಿ ಉದ್ದನೆಯ ಮತ್ತು ಕವಲೊಡೆದ ಕೂದಲುಗಳಿವೆ.

ಗ್ಲಾಸಿನ ನೊಣಗಳ ಆಯಸ್ಸು 1 – 3 ತಿಂಗಳುಗಳು. ಇವುಗಳಲ್ಲಿನ ಸೋಜಿಗದ ಸಂಗತಿಯೆಂದರೆ ಇವು ಮೊಟ್ಟೆಗಳನ್ನಿಡದೆ ನೇರವಾಗಿ ಮರಿಗಳನ್ನೇ ಹಾಕುವುದು. ಸಾಮಾನ್ಯವಾಗಿ ನೀರಿನ ಆಸರೆಯಿರುವಂಥ ಸ್ಥಳಗಳಲ್ಲಿ ಹೆಣ್ಣು ನೊಣ 10 ದಿವಸಗಳಿಗೊಮ್ಮೆ ಮರಿ ಹಾಕುತ್ತದೆ. ಮರಿಗಳ ಭ್ರೂಣಾವಸ್ಥೆ ಮತ್ತು ಡಿಂಭಾವಸ್ಥೆಗಳ ಅವಧಿ ಸುಮಾರು 9 ದಿವಸಗಳು. ತಾಯಿಯ ಗರ್ಭಕೋಶದ ಭಿತ್ತಿಯ ಮೇಲಿರುವ ಒಂದು ಜೊತೆ ಕ್ಷೀರಗ್ರಂಥಿಗಳಿಂದ ಒಸರುವ ದ್ರವರೂಪದ ಆಹಾರವನ್ನು ಕುಡಿದು ಮರಿಗಳು ಬೆಳೆಯುತ್ತವೆ. ಡಿಂಭಗಳು ಅನಂತರ ಮಣ್ಣನ್ನು ಕೊರೆದುಕೊಂಡು ಒಳಸೇರಿ ಕೋಶಾವಸ್ಥೆಯನ್ನು ಕಳೆಯುತ್ತವೆ. ಅನೇಕ ವಾರಗಳ ಮೇಲೆ ಪ್ರೌಢಜೀವಿಗಳಾಗಿ ಹೊರಬರುತ್ತವೆ.

ಗ್ಲಾಸಿನ ನೊಣಗಳ ಚಟುವಟಿಕೆ ವಾತಾವರಣದ ಉಷ್ಣತೆ ಮತ್ತು ಆರ್ದ್ರತೆಗಳನ್ನು ಅವಲಂಬಿಸಿ ಹೆಚ್ಚು ಕಡಿಮೆಯಾಗುತ್ತದೆ. ಉಷ್ಣತೆ ಹೆಚ್ಚಾಗಿದ್ದಾಗ, ಅಲ್ಲದೆ ಬೆಳಗ್ಗೆ ಹಾಗೂ ಸಂಜೆ ಇವುಗಳ ಚಟುವಟಿಕೆ ಹೆಚ್ಚು. ಗ್ಲಾ. ಬ್ರೆವಿಪಾಲ್ಪಾಲಿಸ್ ಎಂಬುದಕ್ಕೆ ಮಾತ್ರ ರಾತ್ರಿ ಕಾಲದಲ್ಲಿ ಚಟುವಟಿಕೆ ಉಂಟು. ಇವು ಜೀವಿಸುವ ಪೊದೆಗಳನ್ನು ನಾಶಮಾಡುವುದರಿಂದ, ಕೀಟನಾಶಕಗಳನ್ನು ಬಳಸಿ ಗ್ಲಾಸಿನ ನೊಣಗಳನ್ನು ನಿವಾರಿಸುತ್ತಾರೆ. (ಜಿ.ಆರ್.ಆರ್.ಎಸ್.)

**ಗ್ಲಾಸಿ ಹೆನ್ರಿ :** 1941–. ಅಮೆರಿಕದ ಜಾನಪದ ತಜ್ಞ. ಈತ 1941ರ ಮಾರ್ಚ್ 24ರಂದು ಜನಿಸಿದ. ಈತ 1964ರಲ್ಲಿ ಬಿ.ಎ. ಪದವಿಯನ್ನು ತುಲನೆ ವಿಶ್ವವಿದ್ಯಾಲಯ ದಿಂದಲೂ 1965ರಲ್ಲಿ ಎಂ.ಎ. ಪದವಿಯನ್ನು ನ್ಯೂಯಾರ್ಕ್ ವಿಶ್ವವಿದ್ಯಾಲಯದಿಂದಲೂ ಪಡೆದ. 1969ರಲ್ಲಿ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದ. ಸಂಶೋಧನೆಯನ್ನು ಮಾಡುವ ಸಮಯದಲ್ಲಿ ಪೆನ್ಸಿಲ್ವೇನಿಯ ಪ್ರಾಂತದ ಜಾನಪದ ತಜ್ಞನಾಗಿ ಸೇವೆ ಸಲ್ಲಿಸಿದ. ಈತನಿಗೆ 1972ರಲ್ಲಿ ಗುಗ್ಗೆನ್‌ಹೈಮ್ ಫೆಲೋಶಿಪ್ ಲಭಿಸಿತು. ಈತ ಅಮೆರಿಕನ್ ಫೋಕ್‌ಲೋರ್ ಸೊಸೈಟಿಯ ಮತ್ತು ವರ್ನಾಕ್ಯುಲರ್ ಆರ್ಕಿಟೆಕ್ಚರ್ ಫೋರಮ್‌ನ ಹಿಂದಿನ ಅಧ್ಯಕ್ಷನೂ ಆಗಿದ್ದ. ಈತ ಜಾನಪದ ತಜ್ಞನಾಗಿ, ಇಂಡಿಯಾನ ವಿಶ್ವವಿದ್ಯಾಲಯದ ಬ್ಲೂಮಿಂಗ್‌ಟನ್ ಕಾಲೇಜ್‌ನ ನಿವೃತ್ತ ಪ್ರಾಧ್ಯಾಪಕನಾಗಿ ಬೋಧನೆ ಮತ್ತು ಸಂಶೋಧನೆ ಕಾರ್ಯವನ್ನು ನಿರ್ವಹಿಸುತ್ತಿದ್ದಾನೆ. ಜನಪದ ಕಲೆ, ಜನಪದ ಜೀವನ, ಪ್ರಾದೇಶಿಕ ವಾಸ್ತುಶಿಲ್ಪ ಮತ್ತು ಭೌತಿಕ ಸಂಸ್ಕೃತಿ ಮುಂತಾದ ವಿಷಯಗಳ ವಿಶೇಷಜ್ಞನಾಗಿ, ಅಮೆರಿಕ, ಐರ್ಲೆಂಡ್, ಟರ್ಕಿ ಮತ್ತು ಬಾಂಗ್ಲಾದೇಶಗಳ ಜಾನಪದವನ್ನು ಅರ್ಥೈಸಿ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಭೌತಿಕ ಜಾನಪದ ಈತನ ವಿಶೇಷ ಆಸಕ್ತಿಯ ಕ್ಷೇತ್ರ. ಈತ ಭೌತಿಕ ಜಾನಪದ ಕುರಿತು ಪ್ರಕಟಿಸುತ್ತಿರುವ ಕೃತಿಗಳು ವಿದ್ವಾಂಸರ ಗಮನ ಸೆಳೆದಿವೆ.



ಈತ ತನ್ನ ಸಂಗಾತಿ ಹಾಗೂ ಜಾನಪದ ತಜ್ಞೆ ಪ್ರವೀಣಶುಕ್ಲಳನ್ನು ವಿವಾಹವಾದ. ಈಕೆ ಉಡುಪು ಮತ್ತು ಪ್ರಸಾಧನ ಪ್ರವೀಣೆ. ಈ ದಂಪತಿಗೆ ನಾಲ್ಕು ಮಕ್ಕಳು ಮತ್ತು ನಾಲ್ಕು ಮೊಮ್ಮಕ್ಕಳು ಇದ್ದಾರೆ. 2000ರಲ್ಲಿ ಅಮೆರಿಕ ಅಧ್ಯಕ್ಷ ಬಿಲ್‌ಕ್ಲಿಂಟನ್ ಗ್ಲಾಸಿಯನ್ನು ನ್ಯಾಷನಲ್ ಕೌನ್ಸಿಲ್ ಆನ್ ದಿ ಹ್ಯೂಮ್ಯಾನಿಟೀಸ್‌ಗೆ ನೇಮಿಸಿದರು. ಈತ ಈಗಲೂ ತನ್ನನ್ನು ಜಾನಪದ ಕುರಿತ ಸಂಶೋಧನೆ ಹಾಗೂ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾನೆ. (ಎ.ಎಚ್.)

**ಗ್ಲಾಸೆಮ್ಯಾಟಿಕ್ಸ್ :** ಭಾಷಾಶಾಸ್ತ್ರದಲ್ಲಿ ಭಾಷಾವಿಶ್ಲೇಷಣ ವಿಧಾನವನ್ನು ಆಧರಿಸಿ ಮಾಡಿರುವ ಹಲವು ಶಾಖೆಗಳಲ್ಲಿ ಒಂದು. ಈ ಶಾಖೆಗಳಲ್ಲಿ ಮುಖ್ಯವಾದವೆಂದರೆ ಅಮೆರಿಕದಲ್ಲಿ ಬ್ಲೂಮ್‌ಫೀಲ್ಡನಿಂದ ಪೋಷಿತವಾದದ್ದೊಂದು, ಚೆಕೊಸ್ಲೊವಾಕಿಯದ ಪ್ರಾಗ್ ನಗರದಲ್ಲಿ ಟ್ರುಬೆಟ್ಸ್‌ಕೋಯ್, ಯಾಕಬ್‌ಸನ್ ಮೊದಲಾದವರಿಂದ ಪ್ರಾರಂಭಿಸಲ್ಪಟ್ಟ ಶಾಖೆಯೊಂದು, ಜಿನೀವ ನಗರದಲ್ಲಿ ಫರ್ಡಿನಾಂಡ್ ಸಸ್ಸೂರನಿಂದ ಬೆಳೆಸಲ್ಪಟ್ಟ ಶಾಖೆಯೊಂದು, ಹಾಗೆಯೇ ಡೆನ್ಮಾರ್ಕಿನ ಕೋಪೆನ್‌ಹೇಗನ್ ಪಟ್ಟಣದಲ್ಲಿ ಪ್ರಚಾರಕ್ಕೆ ಬಂದ ಎಲ್ಮ್‌ಸ್ಲೆವ್ ಮತ್ತು ಉಲ್ಡಾಲ್‌ರವರ ಸಿದ್ಧಾಂತವೊಂದು. ಕೊನೆಯ ಪ್ರಭೇದವೇ ಗ್ಲಾಸೆಮ್ಯಾಟಿಕ್ಸ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಗ್ಲಾಸ್ಸ ಎಂದರೆ ಗ್ರೀಕಿನಲ್ಲಿ ಭಾಷೆ ಎಂದರ್ಥ. ಈ ಸಿದ್ಧಾಂತದ ಪ್ರಕಾರ ನಿಶ್ಚಯಿಸಲ್ಪಡುವ ಭಾಷೆಯ ಅವಿಭಾಜ್ಯ ರೂಪಗಳನ್ನು ಗ್ಲಾಸ್ಸೀಮ್ ಎನ್ನುತ್ತಾರೆ. ಭಾಷೆಯ ಸರಿಯಾದ ತಿಳಿವಳಿಕೆಗೆ, ಅದರ ವಿವರಣೆಗೆ ಅನುಕೂಲವಾದೊಂದು ಬೀಜಗಣಿತೀಯ ವಿಧಾನವನ್ನು ರಚಿಸುವುದೇ ಈ ಸಿದ್ಧಾಂತದ ಲಕ್ಷ್ಯವೆನ್ನಬಹುದು.

ಅಮೆರಿಕದಲ್ಲಿ ಬ್ಲೂಮ್‌ಫೀಲ್ಡನ ಪ್ರಭಾವ ಬೆಳೆದಂತೆ ಯುರೋಪಿನಲ್ಲಿ ಫರ್ಡಿನಾಂಡ್ ಸಸ್ಸೂರನ ಪ್ರಭಾವ ಬೆಳೆದಿರುವುದನ್ನು ಗಮನಿಸಬಹುದು. ಬ್ಲೂಮ್‌ಫೀಲ್ಡನ ಲ್ಯಾಂಗ್ವೇಜ್ ಎಂಬ ಗ್ರಂಥವನ್ನು ಆತನೇ ಬರೆದ. ಸಸ್ಸೂರನ ಗ್ರಂಥವಾದರೋ ಆತನ ಮರಣಾನಂತರ ಆತನ ವಿದ್ಯಾರ್ಥಿಗಳು ತಮ್ಮ ಗುರುವಿನ ತರಗತಿಯ ಪಾಠಗಳನ್ನು ಸಂಗ್ರಹಿಸಿ ಮುದ್ರಿಸಿದ್ದಾಗಿದೆ. ಹಾಗಾಗಿ ಆ ಗ್ರಂಥದಲ್ಲಿ ಪರಸ್ಪರ ವಿರೋಧವೆನಿಸುವ ಅನೇಕ ಉಕ್ತಿಗಳಿವೆ. ಇಲ್ಲಿನ ಮಾತುಗಳನ್ನು ವಿದ್ವಾಂಸರು ತಮ ತಮಗೆ ತೋರಿದಂತೆ ವಿವರಿಸಿದ್ದಾರೆ. ಈ ವಿವರಣೆಗಳಲ್ಲಿ ಎಲ್ಮ್‌ಸ್ಲೆವ್‌ನಿಗೂ ಪ್ರಾಗ್ ಶಾಖೆಗೆ ಸಂಬಂಧಿಸಿದವರಿಗೂ ಭೇದವಿರುವುದನ್ನು ಗಮನಿಸಬಹುದು.

ಸಸ್ಸೂರ್ ಭಾಷೆಯನ್ನು ಸಂಕೇತಗಳ ಒಂದು ವಿಶಿಷ್ಟ ಪದ್ಧತಿ ಎಂದಿದ್ದಾನೆ. ಭಾಷೆಯನ್ನು ಕುರಿತಾದ ಈ ವ್ಯಾಖ್ಯೆಯನ್ನು ಎಲ್ಲರೂ ಒಪ್ಪಿಕೊಳ್ಳುವರಾದರೂ ಸಸ್ಸೂರನ ಸಂಕೇತ ಸ್ವರೂಪ ಕಲ್ಪನೆಯನ್ನು ಒಪ್ಪಿಕೊಂಡಿಲ್ಲ. ಭಾಷೆಯಲ್ಲಿನ ಸಂಕೇತಗಳಿಗೆ, ಉದಾ : ಭಾಷೆಯಲ್ಲಿನ ಯಾವುದೇ ಒಂದು ಪದಕ್ಕೆ, ಎರಡು ಮುಖಗಳಿವೆಯೆಂದೂ ಅದರಲ್ಲಿ ಒಂದನ್ನು ಅದರ ವಾಚ್ಯ ರೂಪವೆಂದೂ (ಸಿಗ್ನಿಫಿಯಂಟ್) ಇನ್ನೊಂದನ್ನು ಅದರ ಸೂಚಿತ ರೂಪವೆಂದೂ (ಸಿಗ್ನಿಫೈ) ಸಸ್ಸೂರ್ ಪರಿಗಣಿಸಿದ. ಈ ಬಗ್ಗೆ ಸಸ್ಸೂರನ ತರ್ಕವನ್ನು ಎಲ್ಮ್‌ಸ್ಲೆವ್ ಸ್ವೀಕರಿಸಲಿಲ್ಲವಾದರೂ ಭಾಷೆಯ ಸಂಕೇತಗಳಿಗಿರುವ ಮೇಲಿನ ಎರಡು ರೂಪಗಳನ್ನು ಒಪ್ಪಿಕೊಂಡ. ಎಲ್ಮ್‌ಸ್ಲೆವ್ ಇವನ್ನು ಕ್ರಮವಾಗಿ ಸಂಕೇತದ ಉಚ್ಚಾರಣಾರೂಪ (ಎಕ್ಸ್‌ಪ್ರೆಷನ್) ಮತ್ತು ಅಡಗಿರುವ ರೂಪ (ಕಂಟೆಂಟ್) ಎಂದು ಕರೆದ. ಈ ಸಿದ್ಧಾಂತರೀತ್ಯ ಇವೆರಡನ್ನೂ ಭಾಷೆಯ ಎರಡು ಸ್ತರಗಳೆನ್ನುತ್ತಾರೆ. ಸ್ಥೂಲವಾಗಿ ಹೇಳಬಹುದಾದರೆ, ಸಂಕೇತಗಳ ಉಚ್ಚಾರ ರೂಪ ಧ್ವನಿಶಾಸ್ತ್ರದ ವಸ್ತುವೆಂದೂ ಅವುಗಳ ಅಡಗಿರುವ ಅಥವಾ ಆಂತರಿಕ ರೂಪವನ್ನು ಅರ್ಥವಿಜ್ಞಾನ (ಸೆಮ್ಯಾಂಟಿಕ್ಸ್) ಮತ್ತು ವ್ಯಾಕರಣಕ್ಕೆ ಸೇರಿದ ವಸ್ತುವೆಂದೂ ಹೇಳಬಹುದು. ಉದಾಹರಣೆಗೆ ಮನೆಗಳು ಎಂಬ ಪದವನ್ನು ಮನೆ ಮತ್ತು ಗಳು ಎಂದು ವಿಭಾಗಿಸಬಹುದು. ಇಲ್ಲಿ ಮನೆ ಎಂಬಲ್ಲಿ ಮ್, ಅ, ನ್, ಎ, ಎಂಬುದಾಗಿ ನಾಲ್ಕು ಧ್ವನಿಮಾಗಳಿವೆ. ಹಾಗೆಯೇ ಗಳು ಎಂಬಲ್ಲಿ ಗ್, ಅ, ಳ್, ಉ. ಇವೆರಡರಲ್ಲಿ ಮೊದಲಿನ ಭಾಗಕ್ಕೊಂದು ನಿಶ್ಚಿತ ಅರ್ಥವೂ ಎರಡನೆಯ ಭಾಗಕ್ಕೆ ಬಹುವಚನ ಎಂಬ ಅರ್ಥವೂ ಇದೆಯೆನ್ನಬಹುದು. ಇದಲ್ಲದೆ, ಎಲ್ಮ್‌ಸ್ಲೆವ್ ಈ ಎರಡು ರೂಪಗಳನ್ನು ರಚನೆ (ಫಾರಮ್) ಹಾಗೂ ತಿರುಳು (ಸಬ್‌ಸ್ಟೆನ್ಸ್) ಎಂದು ಎರಡೆರಡು ಭಾಗಗಳಾಗಿ ವಿಂಗಡಿಸುತ್ತಾನೆ. ಉಚ್ಚಾರಣಾರೂಪ ಧ್ವನಿಗಳಿಂದ ಕೂಡಿದೆಯೆನ್ನಬಹುದು. ಅವನ್ನು ಭೌತಶಾಸ್ತ್ರ ಅಥವಾ ಶರೀರ ಕ್ರಿಯಾ ಶಾಸ್ತ್ರದ ಪ್ರಕಾರ ವಿವರಿಸಬಹುದು. ಹಾಗೆಯೇ ಆಂತರಿಕ ರೂಪವಾದ ಅರ್ಥವನ್ನು ಮನಶಾಸ್ತ್ರ ಇತ್ಯಾದಿಗಳ ಸಹಾಯದಿಂದ ವಿವರಿಸಬಹುದು.

ಭಾಷೆಯ ಸಂಕೇತಗಳ ಉಚ್ಚಾರಣೆಯನ್ನು ಇಲ್ಲವೆ ಬಾಹ್ಯ ಮತ್ತು ಆಂತರಿಕ ರೂಪಗಳ ನಡುವಣ ಸಂಬಂಧವನ್ನು ವಿವರಿಸುವುದೇ ಭಾಷಾ ವಿಶ್ಲೇಷಣದ ಮುಖ್ಯ ಭಾಗ. ಮನೆಯೆಂಬ ಸಂಕೇತದಲ್ಲಿ ಅದರ ಉಚ್ಚಾರಣಾರೂಪಕ್ಕೂ ಅದರಿಂದ ಸೂಚಿತವಾಗುವ ಆಂತರಿಕ ರೂಪವಾದ ಅರ್ಥಕ್ಕೂ ಒಂದು ವಿಶಿಷ್ಟ ರೀತಿಯ ಸಂಬಂಧವಿದೆ. ಈ ಸಂಬಂಧ ಎಷ್ಟೇ ಯಾದೃಚ್ಛಿಕವಾದರೂ (ಆರ್ಬಿಟ್ರರಿ) ಯಾವುದೇ ಒಂದು ಭಾಷೆಯಲ್ಲಿ ಅವುಗಳೆರಡರ ನಡುವೆ ಅವಿನಾಭಾವ ಸಂಬಂಧವಿದೆ ಎನ್ನಬಹುದು. ವಿಶ್ಲೇಷಣದ ಪ್ರತಿಸ್ತರಗಳಲ್ಲೂ ಈ ವಿಶಿಷ್ಟ ಸಂಬಂಧವನ್ನು ಅನುಸರಿಸಿ, ನಿಯಮಿತ ಸಂಖ್ಯೆಯ ಭಿನ್ನ ಭಿನ್ನ ಆಕಾರದ ಮೂಲವಸ್ತುಗಳನ್ನು (ಎಲಿಮೆಂಟ್ಸ್) ಗಮನಿಸಬಹುದು. ಭಾಷೆಯಲ್ಲಿ ಎಷ್ಟು ಭಿನ್ನ ಅರ್ಥಗಳನ್ನು ಗುರುತಿಸಬೇಕಾಗುವುದೋ ಅಷ್ಟು ಸಂಖ್ಯೆಯ ಉಚ್ಚಾರಣಾರೂಪಗಳೂ ಇವೆಯೆನ್ನಬೇಕಾಗುತ್ತದೆ. ಬೆಕ್ಕು ಎನ್ನುವ ಬದಲು ನಾಯಿ ಎನ್ನುವುದರಿಂದ ಅರ್ಥದಲ್ಲಿ ವ್ಯತ್ಯಾಸ ತೋರಿಬಂದರೆ ಆಗ ಅವೆರಡನ್ನೂ ಬೇರೆ ಬೇರೆ ಬಾಹ್ಯರೂಪವಿರುವ ಸಂಕೇತಗಳೆನ್ನಬೇಕು. ಭಾಷಾ ವಿಶ್ಲೇಷಣದ ಈ ವ್ಯಾಪಾರವನ್ನು ಆದೇಶ ಅಥವಾ ಒಂದರ ಸ್ಥಾನದಲ್ಲಿ ಇನ್ನೊಂದು ಬರುವಿಕೆ (ಕಾಮ್ಯುಟೇಷನ್) ಎನ್ನುತ್ತಾರೆ.

ಯಾವುದೇ ಒಂದು ಸಂಕೇತದ ಉಚ್ಚಾರಣಾರೂಪವನ್ನು ತೆಗೆದುಕೊಂಡು ಅದರ ರಚನೆಯಲ್ಲಿರುವ ಪ್ರತಿಯೊಂದು ಧ್ವನಿಯ ಸ್ಥಾನದಲ್ಲಿ ಆ ಭಾಷೆಯಲ್ಲಿನ ಇತರ ಧ್ವನಿಗಳನ್ನು ಉಪಯೋಗಿಸಿದಾಗ ಭಿನ್ನಾರ್ಥಕ ಸೂಚಕ ಸಂಕೇತಗಳಾಗುವುವೇ ಎಂದು ಪರೀಕ್ಷಿಸಬಹುದು. ಹಾಗೆಯೇ ಯಾವುದೇ ಸಂಕೇತಕ್ಕೆ ಸಂಬಂಧಿಸಿದ ಅರ್ಥವನ್ನು ಇದೇ ಕ್ರಮದಲ್ಲಿ ವಿಭಾಗಿಸಬಹುದು. ವಾಚಾ ಎಂಬ ಸಂಕೇತದ ಅರ್ಥವನ್ನು ತೃತೀಯಾ

ವಿಭಕ್ತಿ, ಏಕವಚನ, ಸ್ತ್ರೀಲಿಂಗವೆಂದು ಮೂರು ವಿಭಾಗಗಳಾಗಿ ಒಡೆಯಬಹುದು. ಇಲ್ಲಿ ತೃತೀಯಾ ವಿಭಕ್ತಿಗೆ ಬದಲಾಗಿ ಚತುರ್ಥೀ ರೂಪ ಬಂದರೆ ವಾಚೇ ಎಂದಾಗುತ್ತದೆ. ಏಕವಚನದ ಬದಲು ಬಹುವಚನ ಬಂದರೆ ವಾಗ್‌ಭಿಃ ಎಂದಾಗುತ್ತದೆ. ಹೀಗೆ ಭಾಷಾಸಂಕೇತಗಳ ಬಾಹ್ಯ ರೂಪ ಹಾಗೂ ಆಂತರಿಕ ರೂಪಗಳೆರಡರ ವಿಶ್ಲೇಷಣೆ ಸಾಧ್ಯವಾದರೂ ಈ ಎರಡೂ ವಿಶ್ಲೇಷಣೆಗಳ ನಡುವೆ ಪೂರ್ಣ ರೀತಿಯ ಸಾಮ್ಯವಿದೆಯೆನ್ನಲು ಸಾಧ್ಯವಿಲ್ಲ. ಅಂದರೆ, ತೃತೀಯಾ, ಏಕವಚನ ಮತ್ತು ಸ್ತ್ರೀಲಿಂಗವೆಂದು ಅರ್ಥದಲ್ಲಿ ಮೂರು ವಿಭಾಗ ಮಾಡಿ ತೋರಿಸುವಂತೆ ಈ ಸಂಕೇತದ ಉಚ್ಚಾರಣಾ ರೂಪದಲ್ಲಿ ಮೂರು ವಿಭಾಗ ಮಾಡಿ ಈ ಅರ್ಥ ವಿಭಾಗಕ್ಕೆ ಈ ಉಚ್ಚಾರಣಾ ರೂಪದ ವಿಭಾಗವೆಂದು ತೋರಿಸಲಾಗುವುದಿಲ್ಲ. ಉಚ್ಚಾರಣಾ ರೂಪ ಕೇವಲ ಒಂದೇ ಧ್ವನಿಮಾ ಆ –ಎಂದು. ಇದನ್ನು ಮೂರು ವಿಭಾಗಗಳಾಗಿ ಒಡೆಯಲು ಸಾಧ್ಯವಿಲ್ಲ. ಇದೊಂದು ಧ್ವನಿಮಾವುಳ್ಳ ರೂಪಕ್ಕೇ ಮೇಲಿನ ಮೂರೂ ಅರ್ಥಗಳು ಏಕಕಾಲದಲ್ಲಿ ತೋರಿಬರುತ್ತವೆ. ಹೀಗೆ ಇವೆರಡರ ಮಧ್ಯೆ ಸಾಮ್ಯವಿಲ್ಲದಿರುವುದರಿಂದ ಬಾಹ್ಯರೂಪದ ವಿಶ್ಲೇಷಣೆ ಮತ್ತು ಆಂತರಿಕ ರೂಪದ ವಿಶ್ಲೇಷಣೆ ಅಂದರೆ ಧ್ವನಿಮಾಗಳ ಮತ್ತು ಅರ್ಥಗಳ ವಿಶ್ಲೇಷಣೆ ಬೇರೆ ಬೇರೆಯಾಗಿ ನಡೆಯಬೇಕೆಂದಾಗುತ್ತದೆ. ಹೀಗೆ ಭಾಷಾ ಸಂಕೇತಗಳ ಅರ್ಥವನ್ನು ಅಧ್ಯಯನ ಮಾಡಬೇಕೆಂದೂ ಧ್ವನಿಮಾಗಳಂತೆಯೇ ಅವನ್ನೂ ವಿಶ್ಲೇಷಣೆಗೊಳಪಡಿಸಬೇಕೆಂದೂ ತೋರಿಸಿಕೊಟ್ಟವರಲ್ಲಿ ಎಲ್ಮ್‌ಸ್ಲೆವ್ ಮೊದಲಿಗ. ಅಲ್ಲದೆ ಗ್ಲಾಸೆಮ್ಯಾಟಿಕ್ಸ್ ಸಿದ್ಧಾಂತದಲ್ಲಿ ಇದೊಂದು ವಿಶೇಷ ಅಧ್ಯಯನದ ವಸ್ತು. ಬ್ಲೂಮ್‌ಫೀಲ್ಡ್ ಮೊದಲಾದ ಇತರ ಶಾಖೆಯವರು ಧ್ವನಿಮಾ ವಿಶ್ಲೇಷಣೆಯಂತೆಯೇ ಅರ್ಥವಿಶ್ಲೇಷಣೆ ಸಾಧ್ಯವಿಲ್ಲವೆಂದು ಕೈಬಿಟ್ಟಿದ್ದ ಕಾಲದಲ್ಲಿ ಇದನ್ನು ಸಮರ್ಪಕ ರೀತಿಯಲ್ಲಿ ಸಮರ್ಥಿಸಿದವರೆಂದರೆ ಗ್ಲಾಸೆಮ್ಯಾಟಿಕ್ಸ್ ಸಿದ್ಧಾಂತಿಗಳು.

ಸಂಕೇತಗಳ ಬಾಹ್ಯರೂಪ ರಚನೆಯಲ್ಲಿನ ಪ್ರತಿ ಧ್ವನಿಮಾದ ಸ್ಥಾನದಲ್ಲಿ ಅನ್ಯ ಧ್ವನಿಮಾದ ಆದೇಶ ಸಾಧ್ಯವಿದೆಯೆಂದೆವು. ಉದಾಹರಣೆಗೆ, ಮರ ಎಂಬ ಸಂಕೇತದಲ್ಲಿ ಮ್ ಸ್ಥಾನದಲ್ಲಿ ನ್ ಉಪಯೋಗವಾದರೆ ನರ ಎಂಬ ಭಿನ್ನಾರ್ಥಕ ಸಂಕೇತವಾಗುತ್ತದೆ. ಇಲ್ಲಿ ಮ್ ಮತ್ತು ನ್ ಧ್ವನಿಮಾಗಳ ನಡುವಣ ಸಂಬಂಧವನ್ನು ರೂಪತಾಲಿಕಾತ್ಮಕ ಸಂಬಂಧ (ಪ್ಯಾರಡಿಗ್ಮ್ಯಾಟಿಕ್ ರಿಲೇಷನ್) ಎನ್ನುತ್ತಾರೆ. ಆದರೆ, ಸಂಕೇತದ ವಾಚ್ಯ ರೂಪದಲ್ಲಿನ ಒಂದು ಧ್ವನಿಮಾಕ್ಕೂ ಅದರ ಅನಂತರದ ಧ್ವನಿಮಾಕ್ಕೂ ಮಧ್ಯೆ ಇರುವ ಸಂಬಂಧವನ್ನು ವಾಕ್ಯರಚನಾಕ್ರಮಾತ್ಮಕ (ಸಿಂಟಗ್ಮ್ಯಾಟಿಕ್ ರಿಲೇಷನ್) ಎನ್ನುತ್ತಾರೆ. ಉದಾಹರಣೆಗೆ, ಮೇಲಿನ ಸಂಕೇತದಲ್ಲಿ ಮ್ ಮತ್ತು ಅ ಗಳ ನಡುವಣ ಸಂಬಂಧ ಈ ರೀತಿಯದು.

ಇದು ಗ್ಲಾಸೆಮ್ಯಾಟಿಕ್ಸ್ ಸಿದ್ಧಾಂತದ ಸ್ಥೂಲ ಪರಿಚಯ. ಡೆನ್ಮಾರ್ಕಿನ ಹೊರಗೆ ಈ ಸಿದ್ಧಾಂತದ ಅನುಯಾಯಿಗಳು ಇಲ್ಲವೆಂದೇ ಹೇಳಬಹುದು. ಇದರ ಪ್ರವರ್ತಕರಾದ ಎಲ್ಮ್‌ಸ್ಲೆವ್ ಮತ್ತು ಉಲ್ಡಾವ್ ಇಬ್ಬರೂ ಕಣ್ಮರೆಯಾದ ಮೇಲಂತೂ ಇದರ ಪ್ರಭಾವ ಬಹಳ ಕಡಿಮೆಯಾಯಿತೆನ್ನಬಹುದು. (ಎಚ್.ಎಸ್.ಎ.)

**ಗ್ಲಾಸ್ಟರ್ :** ಈ ಹೆಸರಿನ ನಗರಗಳು ಮೂರಿವೆ. ಮೊದಲನೆಯದು, ಇಂಗ್ಲೆಂಡಿನಲ್ಲಿ ಗ್ಲಾಸ್ಟರ್‌ಷೈರಿನ ಕೌಂಟಿ ಪಟ್ಟಣ. ಇದು ಪಶ್ಚಿಮ ಇಂಗ್ಲೆಂಡಿನಲ್ಲಿದೆ. ಕೈಗಾರಿಕಾ ಕೇಂದ್ರ, ವಿಮಾನ, ವ್ಯವಸಾಯೋಪಕರಣ, ರೈಲ್ವೆ ಸಾಧನಸಾಮಗ್ರಿಗಳು, ಪೀಠೋಪಕರಣ, ಬೆಂಕಿಕಡ್ಡಿ,

ಗ್ಲಾಸ್ಟರಿನ ಚರ್ಚು, ಇಂಗ್ಲೆಂಡ್

ಚಲನಚಿತ್ರ ಕ್ಯಾಮೆರ ಮುಂತಾದವು ತಯಾರಾಗುತ್ತವೆ. ಮರ ಕೊಯ್ಯುವುದು ಒಂದು ಹಳೆಯ ಉದ್ಯಮ. ರೋಮನ್ ಆಕ್ರಮಣಕಾಲದಲ್ಲಿ ಗ್ಲಾಸ್ಟರ್ ಒಂದು ಪುರವಾಗಿತ್ತು. ಇದರ ಸನ್ನಿವೇಶದಿಂದಾಗಿ, ಇಲ್ಲಿ ಸ್ಥಾಪಿತವಾದ ಸೇಂಟ್ ಪೀಟರ್ ಅಬೆಯಿಂದಾಗಿ ಇದು ಬೆಳೆಯಿತು. ಇದು ಪ್ರಾಚೀನ ಆಂಗ್ಲಿಯನ್ ರಾಜ್ಯವಾದ ಮರ್ಷಿಯದ ರಾಜಧಾನಿಯಾಯಿತು. 1ನೆಯ ಜೇಮ್ಸ್ ದೊರೆ ಇದಕ್ಕೆ ನಗರದ ಸ್ಥಾನ ನೀಡಿದ (1605). 1885ರ ವರೆಗೂ ಈ ನಗರದಿಂದ ಪಾರ್ಲಿಮೆಂಟಿಗೆ ಇಬ್ಬರು ಆಯ್ಕೆಯಾಗುತ್ತಿದ್ದರು. ಈಗ ಒಬ್ಬನ ಆಯ್ಕೆಯಾಗುತ್ತದೆ. ಗ್ಲಾಸ್ಟರಿನ ಜನಸಂಖ್ಯೆ ಸು. 8,58,300 (2011).

ಅಮೆರಿಕ ಸಂಯುಕ್ತಸಂಸ್ಥಾನದ ಮೆಸಾಚುಸೆಟ್ಸ್ ರಾಜ್ಯದ ಈಶಾನ್ಯ ಭಾಗದಲ್ಲಿ ಈ ಹೆಸರಿನ ಒಂದು ನಗರವಿದೆ. ಜನಸಂಖ್ಯೆ 28,789 (2010). 1642ರಲ್ಲಿ ಇದು ಒಂದು ಸಣ್ಣ ಊರಾಗಿತ್ತು. ಸ್ಕೂನರ್ ಎಂಬ ಹಡಗನ್ನು ಮೊದಲು ಕಟ್ಟಿದ್ದು ಇಲ್ಲಿ ಎಂದು ಹೇಳಲಾಗಿದೆ. ಸಮುದ್ರದಲ್ಲಿ ಕಳೆದುಹೋದ ಮೀನುಗಾರರ ಸ್ಮಾರಕವಾಗಿ ಇಲ್ಲಿ ಬೆಸ್ತನ ಕಂಚಿನ ಪ್ರತಿಮೆಯೊಂದನ್ನು ಸ್ಥಾಪಿಸಿದೆ. 19ನೆಯ ಶತಮಾನದ ಕೊನೆಯ ವೇಳೆಗೆ ಇದು ಬೇಸಗೆಯ ವಿಹಾರಕೇಂದ್ರವಾಗಿಯೂ ಕಲಾವಿದರ ಕೇಂದ್ರವಾಗಿಯೂ ಅಭಿವೃದ್ಧಿಯಾಯಿತು. ಇಲ್ಲಿ ಸಾಹಿತಿಗಳಿಗೂ ಕಲಾವಿದರಿಗೂ ಅನುಕೂಲಕರವಾದ ವಾತಾವರಣವಿದೆ. ಇಲ್ಲಿರುವ ಹ್ಯಾಮಂಡ್ ವಸ್ತು ಸಂಗ್ರಹಾಲಯದಲ್ಲಿ ಅನೇಕ ಒಳ್ಳೆಯ ಕಲಾಕೃತಿಗಳಿವೆ. ಅನೇಕ ಲೇಖಕರ ಕೃತಿಗಳಲ್ಲಿ ಗ್ಲಾಸ್ಟರಿನ ವರ್ಣನೆಯಿದೆ.

ಅಮೆರಿಕ ಸಂಯುಕ್ತಸಂಸ್ಥಾನದ ನ್ಯೂಜರ್ಸಿ ರಾಜ್ಯದ ನೈರುತ್ಯ ಭಾಗದಲ್ಲಿರುವ ಗ್ಲಾಸ್ಟರ್ ನಗರದ ಜನಸಂಖ್ಯೆ 11,456 (2010). ಇದು ಡೆಲಾವೇರ್ ನದಿಯ ದಡದಲ್ಲಿದೆ. ಇಲ್ಲಿ 1623ರಲ್ಲಿ ವಸತಿ ಆರಂಭವಾಯಿತು. ಡಚ್ ನೆಲಸುಗಾರರಿಂದ ಇಂಗ್ಲಿಷರು ಇದನ್ನು 1664ರಲ್ಲಿ ವಶಪಡಿಸಿಕೊಂಡರು. ಇದರ ಬಳಿ 1899ರಲ್ಲಿ ಹಡಗು ನಿರ್ಮಾಣ ಉದ್ಯಮ ಆರಂಭವಾಯಿತು. 20ನೆಯ ಶತಮಾನದಲ್ಲಿ ಇದು ಕೈಗಾರಿಕಾ ಕೇಂದ್ರವಾಗಿ ಬೆಳೆಯಿತು. ಕಟ್ಟಡನಿರ್ಮಾಣ ಸಾಮಗ್ರಿ ಮತ್ತು ರಟ್ಟಿನ ಪೆಟ್ಟಿಗೆಗಳು, ಕಾರ್ಕ್ ಸರಕು, ಮಕ್ಕಳ ಉಡುಪು ಮತ್ತು ರಾಸಾಯನಿಕ ವಸ್ತುಗಳು ಇಲ್ಲಿ ತಯಾರಾಗುತ್ತವೆ. (ಎಸ್.ಎನ್.ಎಲ್.)

**ಗ್ಲಿನ್, ಎಡ್ಮಂಡ್ ಡೇನಿಯಲ್ :** 1914–86. ಯುರೋಪ್ ಖಂಡದ ನವ ಶಿಲಾಯುಗ ಸಂಸ್ಕೃತಿ ಅಧ್ಯಯನ ಕ್ಷೇತ್ರದಲ್ಲಿ ಹೆಸರಾಂತ ವೇಲ್ಸ್ ಪುರಾತತ್ತ್ವ ಶಾಸ್ತ್ರಜ್ಞ. ಆಕಾಶವಾಣಿ, ದೂರದರ್ಶನಗಳ ಮೂಲಕ ಪುರಾತತ್ತ್ವ ವಿಷಯವನ್ನು ಪ್ರಚುರಪಡಿಸಿದವನು. ದಕ್ಷಿಣ ವೇಲ್ಸ್‌ನ ಬ್ಯಾರಿಯಲ್ಲಿ 1914ರ ಏಪ್ರಿಲ್ 23ರಂದು ಜನಿಸಿದ. ಈತ ಕಾರ್ಡಿಫ್

ವಿಶ್ವವಿದ್ಯಾಲಯದಲ್ಲಿ ಭೂವಿಜ್ಞಾನವನ್ನೂ ಅನಂತರ ಕೇಂಬ್ರಿಜ್‌ನಲ್ಲಿ ಪುರಾತತ್ತ್ವ ಮತ್ತು ಮಾನವಶಾಸ್ತ್ರಗಳನ್ನೂ ಅಧ್ಯಯನ ಮಾಡಿದ. 2ನೆಯ ಮಹಾಯುದ್ಧ ಸಮಯದಲ್ಲಿ ಪುರಾತತ್ತ್ವ ನೆಲೆಗಳ ವ್ಯೋಮ ಛಾಯಾಚಿತ್ರಗಳನ್ನು ಅರ್ಥೈಸುವುದರಲ್ಲಿ ತನ್ನ ಕೌಶಲ್ಯ ತೋರಿಸಿದ. ರಾಯಲ್ ಏರ್‌ಫೋರ್ಸ್ ವಿಭಾಗದಲ್ಲಿ ಇವನ ಕೆಲಸವಾಗಿತ್ತು. ಅನಂತರ ಕೇಂಬ್ರಿಜ್‌ನಲ್ಲಿ ಪುರಾತತ್ತ್ವ ವಿಷಯದ ಡಿಸ್ನಿ ಪ್ರಾಧ್ಯಾಪಕನಾಗಿ ತನ್ನ ಅಧ್ಯಯನ ಮುಂದುವರಿಸಿದ. 1958–85ರ ವರೆಗೆ ಪ್ರತಿಷ್ಠಿತ ಆಂಟಿಕ್ವಿಟಿ ನಿಯತಕಾಲಿಕೆಗೆ ಕೆಲಸಮಾಡಿದ. ನವಶಿಲಾಯುಗ ಸಂಸ್ಕೃತಿ ಮತ್ತು ಬೃಹತ್ ಶಿಲಾಗೋರಿಗಳ ಅಧ್ಯಯನ ಇವನ ಪ್ರಧಾನ ವಿಷಯ. ಪುರಾತತ್ತ್ವ ಬೆಳೆವಣಿಗೆ, ಇತಿಹಾಸ ಮತ್ತು ಪುರಾತತ್ತ್ವ ಚಿಂತನೆ ಈ ವಿಷಯಗಳ ಮೇಲೆ ಗ್ರಂಥಗಳನ್ನು ಬರೆದಿದ್ದಾನೆ. ದಿ ಪ್ರೀ ಹಿಸ್ಟಾರಿಕ್ ಚೇಂಬರ್ ಟೂಂಬ್ಸ್ ಆಫ್ ಫ್ರಾನ್ಸ್ (1960), ದಿ ಮೆಗಲಿಥ್ ಬಿಲ್ಡರ್ಸ್ ಆಫ್ ವೆಸ್ಟರ್ನ್ ಯುರೋಪ್(1963), 150 ಇಯರ್ಸ್ ಆಫ್ ಆರ್ಕಿಯಾಲಜಿ – ಇವು ಇವನ ಪ್ರಮುಖ ಗ್ರಂಥಗಳು. ಕುತೂಹಲಕಾರಿ ವಿಷಯವೆಂದರೆ ಇವನು ದಿಲ್‌ವ್ಯನ್ ರೀಸ್ ಎಂಬ ಗುಪ್ತನಾಮದಲ್ಲಿ ದಿ ಕೇಂಬ್ರಿಜ್ ಮರ್ಡರರ್ಸ್, ವೆಲ್‌ಕಂ ಡೆತ್ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾನೆ. (ಎ.ಎಸ್.;ಎನ್.ಎಲ್)

**ಗ್ಲಿಪ್ಟೊಡಾನ್ :** ಈಡೆಂಟೇಟ ಗಣದ ಆರ್ಮಡಿಲೊ ಪ್ರಾಣಿಗಳ ಸಂಬಂಧಿಯಾದ ಮತ್ತು ಅವುಗಳ ಪೂರ್ವಜ ಪ್ರಾಣಿಯೆನಿಸಿದ ಒಂದು ಬೃಹತ್‌ಗಾತ್ರದ ಗತವಂಶಿ ಸ್ತನಿ. ಗ್ಲಿಪ್ಟೊಡಾಂಟಿಯ ಗಣಕ್ಕೆ ಸೇರಿದೆ. ಇದು ದಕ್ಷಿಣ ಮತ್ತು ಉತ್ತರ ಅಮೆರಿಕಗಳ ಮರಳುಗಾಡುಗಳಲ್ಲಿ ಟರ್ಷಿಯರಿ ಹಾಗೂ ಪ್ಲೀಸ್ಟೊಸೀನ್ ಅವಧಿಗಳಲ್ಲಿ ಜೀವಿಸಿತ್ತು. ಈಗ ಇದರ ಪಳೆಯುಳಿಕೆಗಳು ಮಾತ್ರ ಕಾಣಸಿಕ್ಕಿವೆ.

ಆಮೆಗಳಂತೆ ಇದಕ್ಕೂ ಬೆನ್ನ ಮೇಲೆ ಕೊಂಬಿನಿಂದ ರಚಿತವಾದ 6 ದೊಡ್ಡ ಫಲಕಗಳು ಮತ್ತು ಅಸಂಖ್ಯಾತ ಚಿಕ್ಕಫಲಕಗಳಿಂದ ಕೂಡಿದ ಗಟ್ಟಿಕವಚವಿತ್ತು. ತಲೆ

ಬುರುಡೆ ಚಿಕ್ಕದಾಗಿತ್ತು. ದೊಡ್ಡ ಬಾಯಿ ಮತ್ತು ಅರಗೋಳವಿಯಾಕಾರದ ಹಲ್ಲುಗಳಿದ್ದುವು. ತಲೆಬುರುಡೆಯ ಮೇಲೂ ಗಟ್ಟಿಯಾದ ಒಂದು ಅಸ್ಥಿಕವಚವಿತ್ತು. ಬಾಲ ಕೂಡ ಉಂಗುರಗಳಂಥ ಅನೇಕ ರಚನೆಗಳಿಂದ ಆವೃತವಾಗಿತ್ತು. ಕತ್ತು ದೇಹದೊಡನೆ ವಿಚಿತ್ರ ರೀತಿಯಲ್ಲಿ ಬಂಧಿತವಾಗಿದ್ದು ಆಮೆಗಳ ಕತ್ತಿನಂತೆ ಕವಚದೊಳಕ್ಕೆ ಎಳೆದುಕೊಳ್ಳಲು ಸಾಧ್ಯವಾಗುವಂತಿತ್ತು. ಕಾಲುಗಳು ಮೋಟಾಗಿಯೂ ದೃಢವಾಗಿಯೂ ಇದ್ದುವಲ್ಲದೆ ಕಾಲ್ಬೆರಳುಗಳಲ್ಲಿ ನಖಗಳಿಗೆ ಬದಲಾಗಿ ಗೊರಸುಗಳಿದ್ದವು.



ಗ್ಲಿಪ್ಟೊಡಾನ್ ಪ್ರಾಣಿಯ ಸ್ವರೂಪ

ಉತ್ತರ ಅಮೆರಿಕದಲ್ಲಿ ಜೀವಿಸಿದ್ದ ಗ್ಲಿಪ್ಟೊಡಾನ್ ಮತ್ತು ಗ್ಲಿಪ್ಟೊಥೀರಿಯಮ್ ಎಂಬ ಬಗೆಗಳಲ್ಲಿ ಮುಂಗಾಲಿನಲ್ಲಿ 4 ಬೆರಳುಗಳೂ ಹಿಂಗಾಲಿನಲ್ಲಿ 5 ಬೆರಳುಗಳೂ ಇದ್ದವು. ದಕ್ಷಿಣ ಅಮೆರಿಕದಲ್ಲಿದ್ದ ಡೇಡಿಕ್ಯೂರಸ್ ಎಂಬುದರಲ್ಲಿ ಮುಂಗಾಲಿನಲ್ಲಿ 3 ಮತ್ತು ಹಿಂಗಾಲಿನಲ್ಲಿ 4 ಬೆರಳುಗಳಿದ್ದವು. ಅಲ್ಲದೆ ಇದರ ಬಾಲದ ಮೇಲೆ ಕೊಂಬಿನಿಂದ ರಚಿತವಾದ ಮುಳ್ಳುಗಳಿದ್ದವು. (ಕೆ.ಎಂ.ವಿ.)

**ಗ್ಲಿಮ್, ಜೊಹಾನ್ ವಿಲ್‌ಹೆಲ್ಮ್ ಲೂಡ್‌ವಿಗ್ :** 1719–1803. ಜರ್ಮನ್ ಕವಿ. ಕಿರಿಯ ಕವಿಗಳಿಗೆ ಈತನು ನೀಡುತ್ತಿದ್ದ ಪ್ರೋತ್ಸಾಹ ಮತ್ತು ಸಹಾಯಗಳಿಂದಾಗಿ ಈತನನ್ನು ಫಾದರ್ ಗ್ಲಿಮ್ ಎಂದು ಕರೆಯಲಾಗುತ್ತಿತ್ತು. ಉಜ್ವಲವಾದ ದೇಶಾಭಿಮಾನದಿಂದ ಪ್ರೇರಿತವಾದ ಈತನ ಕವಿತೆಗಳು, ಫ್ರೆಡರಿಕ್ ಮಹಾಶಯನ ಕಾಲದ ವೀರರಸ ಪ್ರಧಾನವಾದ ಕವಿತೆಗಳ ಸಾಲಿನಲ್ಲಿ ಬಹಳ ಮೆಚ್ಚುಗೆಯನ್ನು ಪಡೆದವು. ಭಾವನೆಗಳ ಸಹಜತೆಯಿಂದ ಮತ್ತು ಪರಿಣಾಮಕಾರಿಯಾದ ಶೈಲಿಯಿಂದ ಇವುಗಳಲ್ಲಿ ಅನೇಕವು ಶ್ರೇಷ್ಠ ಕವಿತೆಗಳೆನ್ನಿಸಿವೆ. ಈತನ ಎಲ್ಲ ಕೃತಿಗಳನ್ನು ಎಂಟು ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಲಾಗಿದೆ (1811 – 14). ಈತನ ಪ್ರೂಸಿಷೆ ಕ್ರೀಗ್‌ಸ್ಲೀಡರ್ ಫಾನ್ ಈನೆಮ್ ಗ್ರೆನಾಡಿಯರ್ – ಎಂಬುದು ಬಹು ಉತ್ತಮವಾದ ಕೃತಿಯೆಂದು ಖ್ಯಾತವಾಗಿದೆ. (ಪಿ.ಎನ್.ಆರ್.)

**ಗ್ಲಿರಿಸಿಡಿಯ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪಕುಟುಂಬಕ್ಕೆ ಸೇರಿದ ಒಂದು ಉಪಯುಕ್ತ ಸಸ್ಯಜಾತಿ. ಇದನ್ನು ಅಲಂಕಾರಕ್ಕಾಗಿ,



ನೆರಳಿಗಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಹಸಿರುಗೊಬ್ಬರಕ್ಕಾಗಿ ಉಷ್ಣವಲಯ ದೇಶಗಳಲ್ಲೆಲ್ಲ ಬೆಳೆಸಲಾಗುತ್ತದೆ. ಅಮೆರಿಕದ ಉಷ್ಣಪ್ರದೇಶಗಳ ಮೂಲವಾಸಿ. ಇದರಲ್ಲಿ 10 ಪ್ರಭೇದಗಳಿವೆ. ಭಾರತದಲ್ಲಿ ಮ್ಯಾಕ್ಯುಲೇಟ ಅಥವಾ ಸೀಪಿಯಮ್ ಎಂಬ ಪ್ರಭೇದವನ್ನು ಬೆಳೆಸುತ್ತಾರೆ.

ಇದು ಸು. 10ಮೀ ಎತ್ತರಕ್ಕೆ ಬೆಳೆಯುವ ಮರ. ಮೋಟಾದ ಮುಖ್ಯ ಕಾಂಡವನ್ನು ಒಳಗೊಂಡಿದ್ದು ವಿಪುಲವಾಗಿ ಕವಲೊಡೆದಿರುತ್ತದೆ. ಎಲೆಗಳು ದೊಡ್ಡವು; ಗರಿರೂಪದ ಸಂಯುಕ್ತಮಾದರಿಯವು. ಅವುಗಳ ಜೋಡಣೆ ಪರ್ಯಾಯ ಮಾದರಿಯದು. ಒಂದೊಂದು ಎಲೆಯಲ್ಲೂ 7– 15 ಕಿರು ಎಲೆಗಳಿವೆ. ಹೂಗಳು ಬಿಳಿ ಇಲ್ಲವೆ ನಸುಗೆಂಪು ಬಣ್ಣದವು; ರೇಸೀಮ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಅವು ಅರಳುವಾಗ ಮರದಲ್ಲಿ ಎಲೆಗಳೇ ಇಲ್ಲದಿರುವುದು ಈ ಗಿಡದ ಒಂದು ವಿಶೇಷ ಲಕ್ಷಣ. ಕಾಯಿಗಳು ಪಾಡ್ ಮಾದರಿಯವು. ಒಂದೊಂದರಲ್ಲೂ 10–15 ಬೀಜಗಳಿವೆ.

ಗ್ಲಿರಿಸಿಡಿಯವನ್ನು ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ವಿಸ್ತಾರವಾಗಿ ಬೆಳೆಸಲಾಗುತ್ತದೆ. ತುಂಬ ಒಳ್ಳೆಯ ಹಸಿರೆಲೆ ಗೊಬ್ಬರವೆಂದು ಹೆಸರಾಗಿರುವ ಇದನ್ನು ತೋಟಗಳ ಬೇಲಿಗಳಲ್ಲಿ, ಕಾಲುವೆಗಳ ಇಕ್ಕೆಡೆಗಳಲ್ಲಿ, ಬತ್ತದ ಗದ್ದೆಗಳ ತೆವರಿನಲ್ಲಿ ಬೆಳೆಸಬಹುದು. ಮಣ್ಣು ಯಾವ ಬಗೆಯದಾದರೂ ಇದು ಚೆನ್ನಾಗಿ, ಶೀಘ್ರಗತಿಯಲ್ಲಿ ಬೆಳೆಯುತ್ತದೆ. ಇದನ್ನು ಬೀಜಗಳಿಂದ ಇಲ್ಲವೆ ಕಾಂಡ ತುಂಡುಗಳಿಂದ ವೃದ್ಧಿಸಬಹುದು. ಬೀಜಗಳಿಗೆ ಕೀಟಗಳ ಉಪದ್ರವ ಹೆಚ್ಚಾಗಿರುವುದರಿಂದ ಕಾಂಡತುಂಡುಗಳಿಂದ ಬೆಳೆಸುವುದೇ ಉತ್ತಮ.

ಚೆನ್ನಾಗಿ ಬಲಿತ ಕಾಂಡತುಂಡುಗಳನ್ನು ನೆಟ್ಟು ಅವುಗಳ ತುದಿಗೆ ಸಗಣಿ ಹಚ್ಚಬೇಕು. ಕೆಲವು ದಿನಗಳ ಅನಂತರ ಅವು ಚಿಗುರಲು ಪ್ರಾರಂಭಿಸುತ್ತವೆ. ಬೆಳೆಸಿದ ಅನಂತರ ಎರಡನೆಯ ವರ್ಷದಿಂದ ಸೊಪ್ಪನ್ನು ಕತ್ತರಿಸಲು ಆರಂಭಿಸಬಹುದು. ವರ್ಷಕ್ಕೆ 2–4 ಸಲ ಸೊಪ್ಪನ್ನು ಕತ್ತರಿಸಬಹುದು. ಪ್ರಾರಂಭದಲ್ಲಿ ಒಂದು ಮರದಿಂದ 10–15 ಕಿಗ್ರಾಂ ಸೊಪ್ಪನ್ನು ಪಡೆಯಬಹುದಾದರೂ 5 ವರ್ಷ ವಯಸ್ಸಾದ ಮರಗಳಿಂದ 80 – 100 ಕಿಗ್ರಾಂ ಸೊಪ್ಪನ್ನು ಪಡೆಯಬಹುದು. ಒಂದು ಮರದಿಂದ 20 ವರ್ಷಗಳವರೆಗೆ ಲಾಭದಾಯಕ ಮೊತ್ತದಲ್ಲಿ ಸೊಪ್ಪು ಕತ್ತರಿಸಬಹುದು. ಗ್ಲಿರಿಸಿಡಿಯದ ಸೊಪ್ಪು ನೈಟ್ರೊಜನ್ನಿನ ಒಳ್ಳೆಯ ಆಕರ ಅನ್ನಿಸಿಕೊಂಡಿದೆ. ಇದು ಬರಿಯ ಗೊಬ್ಬರವೊಂದೇ ಅಲ್ಲದೆ ದನಗಳಿಗೆ ಒಳ್ಳೆಯ ಮೇವೂ ಹೌದು. ಗ್ಲಿರಿಸಿಡಿಯದ ಚೌಬೀನೆಯನ್ನು ಆಸರೆಗಂಬ ಬೇಲಿಗಂಬ ಮುಂತಾದವುಗಳಾಗಿಯೂ ಉರುವಲಾಗಿಯೂ ಬಳಸುವುದಿದೆ. (ಬಿ.ಎ.ಸಿ)

**ಗ್ಲಿಸರಿನ್ :** ತ್ರಿಹೈಡ್ರಿಕ್ ಆಲ್ಕೊಹಾಲುಗಳಲ್ಲಿ (ಮೂರು ಹೈಡ್ರಾಕ್ಸಿಲ್ ಗುಂಪುಗಳಿರುವ ಆಲ್ಕೊಹಾಲುಗಳಲ್ಲಿ) ಅತ್ಯಂತ ಮುಖ್ಯವಾದ ಕಾರ್ಬನಿಕ ಸಂಯುಕ್ತ. ಪರ್ಯಾಯನಾಮ ಗ್ಲಿಸರಾಲ್. ಇದರ ರಾಸಾಯನಿಕ ಸೂತ್ರ $CH_2OH\ CHOH\,.\,CH_2OH$; ಕ್ರಮಬದ್ಧ ನಾಮ ಪ್ರೊಪೇನ್ – 1:2:3 – ಟ್ರೈಆಲ್. ಇದನ್ನು ಕಂಡುಹಿಡಿದಾತ ಖ್ಯಾತ ಸ್ವೀಡಿಷ್ ವಿಜ್ಞಾನಿ ಷೀಲೆ (1742–1786). ಆತ ಆಲಿವ್ ಎಣ್ಣೆಯನ್ನು ಸೀಸದ ಆಕ್ಸೈಡಿನೊಂದಿಗೆ ಕಾಯಿಸಿ ಈ ಸಂಯುಕ್ತವನ್ನು ತಯಾರಿಸಿದ (1779). ಬಂಧಿತ ತೈಲಗಳು (ಫಿಕ್ಸೆಡ್ ಆಯಿಲ್ಸ್) ಮತ್ತು ಸಾಮಾನ್ಯವಾಗಿ ಪ್ರಾಣಿಮೂಲಗಳಿಂದ ಬರುವ ಕೊಬ್ಬುಗಳ ಪ್ರಧಾನ ಭಾಗ ಗ್ಲಿಸರಾಲಿನ ವಿವಿಧ ಎಸ್ಟರುಗಳ ಮಿಶ್ರಣ. ಈ ಎಸ್ಟರುಗಳಿಗೆ ಗ್ಲಿಸರೈಡುಗಳೆಂದು ಹೆಸರು. ಇವುಗಳ ಸಂಯೋಜನೆಯಲ್ಲಿ ಕಂಡುಬರುವ ಆಮ್ಲ ಗಳೆಂದರೆ ಸ್ಟಿಯರಿಕ್, ಪಾಮಿಟಿಕ್, ಒಲೆಯಿಕ್, ಲಿನೊಲೆಯಿಕ್ ಆಮ್ಲಗಳು ಮತ್ತು ಅವುಗಳ ಬಳಗದ ಇನ್ನು ಕೆಲವು ವಿರಳ ಆಮ್ಲಗಳು. ಇವನ್ನು ಸಾಮಾನ್ಯವಾಗಿ ಮೇದಾಮ್ಲಗಳೆಂದು (ಫ್ಯಾಟಿ ಆಸಿಡ್ಸ್) ಕರೆಯುವುದು ವಾಡಿಕೆ.

ಎಣ್ಣೆ ಮತ್ತು ಕೊಬ್ಬುಗಳನ್ನು ಕ್ಷಾರಗಳು (ಆಲ್ಕಲೀಸ್), ಆಮ್ಲಗಳು, ಅತಿ ಕಾಯಿಸಿದ ಉಗಿ ಅಥವಾ ಎಂಜೈಮುಗಳ ಸಹಾಯದಿಂದ ಜಲವಿಭಜನೆಗೆ (ಹೈಡ್ರಾಲಿಸಿಸ್) ಒಳಪಡಿಸಿದರೆ ಗ್ಲಿಸರಾಲು ಮೇದಾಮ್ಲಗಳೆಂದು ಬಿಡುಗಡೆ ಹೊಂದುತ್ತವೆ.




ಆಮ್ಲಗಳನ್ನು ಪ್ರತ್ಯೇಕಿಸಿದ ತರುವಾಯ ಉಳಿಯುವ ಜಲೀಯದ್ರಾವಣವನ್ನು ಕಡಿಮೆ ಮಾಡಿದ ಒತ್ತಡದಲ್ಲಿ ಇಂಗಿಸಿ, ಪಟುಗೊಳಿಸಿದ ಕಾರ್ಬನಿನಿಂದ ಬಣ್ಣ ತೆಗೆದು ಶುದ್ಧೀಕರಿಸಬಹುದು. ಆಲ್ಕೊಹಾಲಿಕ ಕಿಣ್ವನದಲ್ಲಿ (ಆಲ್ಕೊಹಾಲಿಕ್ ಫರ್ಮೆಂಟೇಷನ್) ಉಪೋತ್ಪನ್ನವಾಗಿ ಬರುವ ಗ್ಲಿಸರಾಲಿನ ಪ್ರಮಾಣವನ್ನು ಸೋಡಿಯಮ್ ಸಲ್ಫೈಟಿನ ಸಹಾಯದಿಂದ ಹೆಚ್ಚಿಸಬಹುದು. ಈ ಎರಡು ವಿಧಾನಗಳಿಂದಲ್ಲದೆ ಸಂಶ್ಲೇಷಣ

ವಿಧಾನಗಳಿಂದಲೂ ಗ್ಲಿಸರಾಲನ್ನು ತಯಾರಿಸುತ್ತಾರೆ. ಅವುಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ ವಿಧಾನ ಪೆಟ್ರೋಲಿಯಮ್ ಉತ್ಪನ್ನವಾದ ಪ್ರೊಪೈಲೀನಿನಿಂದ ಪ್ರಾರಂಭವಾಗುತ್ತದೆ. ಪ್ರೊಪೈಲೀನನ್ನು ಸುಮಾರು $500^0$ ಸೆಂ. ಉಷ್ಣತೆಯಲ್ಲಿ ಕ್ಲೋರಿನೀಕರಿಸಿದಾಗ ಅಲ್ಲೈಲ್ ಕ್ಲೋರೈಡ್ ಉತ್ಪತ್ತಿಯಾಗುವುದು. ಅದನ್ನು ಈ ಕೆಳಗೆ ಕಾಣುವ ಹಂತಗಳಲ್ಲಿ ಗ್ಲಿಸರಾಲಾಗಿ ಪರಿವರ್ತಿಸುತ್ತಾರೆ.




ಈಚೆಗೆ ಬಳಕೆಗೆ ಬಂದಿರುವ ಇನ್ನೊಂದು ಸಂಶ್ಲೇಷಣ ವಿಧಾನದಲ್ಲಿ ಆಸ್ಮಿಯಮ್ ಟೆಟ್ರಾಕ್ಸೈಡ್ ಮತ್ತು ಹೈಡ್ರೋಜನ್ ಪರಾಕ್ಸೈಡುಗಳ ಸಹಾಯದಿಂದ ಆಕ್ರಾಲ್ಡಿಹೈಡನ್ನು ಗ್ಲಿಸರಾಲ್ಡಿಹೈಡಾಗಿ ಪರಿವರ್ತಿಸಿ ಅದನ್ನು ಕ್ರಿಯಾವರ್ಧಕದ ಸಮ್ಮುಖದಲ್ಲಿ ಹೈಡ್ರಾಜನೀಕರಿಸಿ ಗ್ಲಿಸರಾಲ್ ತಯಾರಿಸುತ್ತಾರೆ.

ಗ್ಲಿಸರಾಲ್ ಬಣ್ಣ ವಾಸನೆಗಳಿಲ್ಲದ ಸಿಹಿಯಾದ ಸ್ನಿಗ್ಧ ಜಲಾಕರ್ಷಕ ದ್ರವ. ಅದು ನೀರಿಗಿಂತಲೂ ಭಾರ. ಆದರೆ ಎಲ್ಲ ಪ್ರಮಾಣಗಳಲ್ಲೂ ನೀರಿನಲ್ಲಿ ದ್ರಾವ್ಯ. ಅದರ ಕುದಿಬಿಂದು $290^0$ ಸೆಂ. ಕುದಿಯುವಾಗ ಭಾಗಶಃ ವಿಭಜಿಸುತ್ತದೆ. ಆದ್ದರಿಂದ ಸಾಮಾನ್ಯವಾಗಿ ಕಡಿಮೆ ಒತ್ತಡದಲ್ಲಿ ಅದನ್ನು ಆಸವಿಸುತ್ತಾರೆ. 12 ಮಿಮೀ ಒತ್ತಡದಲ್ಲಿ ಅದು $170^0$ ಸೆಂ.ನಲ್ಲಿ ಕುದಿಯುತ್ತದೆ. $0^0$ ಸೆಂ. ಉಷ್ಣತೆಯಲ್ಲಿ ಅದು ಕ್ರಮೇಣ ಘನೀಭವಿಸುವುದು. ಘನ ಗ್ಲಿಸರಾಲಿನ ದ್ರವನಬಿಂದು $18^0$ ಸೆ.




ಎಲ್ಲ ಆಲ್ಕೊಹಾಲುಗಳಂತೆಯೇ ಗ್ಲಿಸರಾಲು ಸಹ ಸೂಕ್ತ ಸನ್ನಿವೇಶದಲ್ಲಿ ಆಮ್ಲಗಳೊಡನೆ ವರ್ತಿಸಿ ಎಸ್ಟರುಗಳನ್ನು ನೀಡುತ್ತದೆ. ಉದಾಹರಣೆಗೆ, ಅದರ ಟ್ರೈಅಸಿಟೇಟ್, ಟ್ರೈಸ್ಟಿಯರೇಟ್ ಇತ್ಯಾದಿ. ನೈಟ್ರಿಕ್ ಆಮ್ಲದೊಡನೆ ವರ್ತಿಸಿದಾಗ ಉತ್ಪತ್ತಿಯಾಗುವ ಗ್ಲಿಸರಾಲು ಟ್ರೈನೈಟ್ರೇಟ್ ಇವುಗಳಲ್ಲೆಲ್ಲ ಅತ್ಯಂತ ಮುಖ್ಯವಾದ ಎಸ್ಟರು. ಅದು ನೈಟ್ರೊಗ್ಲಿಸರಿನ್ ಎಂಬ ವಾಣಿಜ್ಯನಾಮದಿಂದ ಪ್ರಸಿದ್ಧವಾಗಿದೆ. ಡೈನಮೈಟ್, ಸ್ಫೋಟಕ ಜಿಲೆಟಿನ್, ಕಾರ್ಡೈಟ್ ಮುಂತಾದ ಸ್ಫೋಟಕಗಳ ಸಾಮಾನ್ಯ ಘಟಕವಾದ ನೈಟ್ರೊಗ್ಲಿಸರಿನನ್ನು ತಯಾರಿಸಲು ತಣಿಸಿದ ಸಲ್ಫ್ಯೂರಿಕ್– ನೈಟ್ರಿಕ್ ಆಮ್ಲಗಳ ಮಿಶ್ರಣದ ಮೇಲೆ ಗ್ಲಿಸರಿನನ್ನು ತುಂತುರು ತುಂತುರಾಗಿ ಚಿಮುಕಿಸುತ್ತಾರೆ. ನಸು ಹಳದಿ ಬಣ್ಣದ ನೈಟ್ರೊಗ್ಲಿಸರಿನ್ ಉತ್ಪತ್ತಿಯಾಗಿ ಎಣ್ಣೆಯಂತೆ ತೇಲುತ್ತದೆ.

$110^0$ ಸೆಂ. ಉಷ್ಣತೆಗೆ ಕಾಯಿಸಿದಾಗ ಗ್ಲಿಸರಾಲಿಗೆ ಶುಷ್ಕ ಹೈಡ್ರೋಜನ್ ಕ್ಲೋರೈಡ್ ಹಾಯಿಸಿದರೆ ಮೊದಲು ಒಂದು, ಅನಂತರ ಎರಡು ಹೈಡ್ರಾಕ್ಸಿಲ್ ಗುಂಪುಗಳು ಕ್ಲೋರಿನಿಂದ ಪಲ್ಲಟಗೊಳ್ಳುತ್ತವೆ. ಮೂರು ಹೈಡ್ರಾಕ್ಸಿಲ್ ಗುಂಪುಗಳನ್ನೂ ಪಲ್ಲಟಿಸಬೇಕಾದರೆ ರಂಜಕದ ಪೆಂಟಕ್ಲೋರೈಡನ್ನು ಉಪಯೋಗಿಸಬೇಕು. ನೈಟ್ರಿಕ್ ಆಮ್ಲದಂಥ ಉತ್ಕರ್ಷಣಕಾರಿಗಳು ಗ್ಲಿಸರಿನ್ ಜೊತೆ ವರ್ತಿಸಿದಾಗ ಅನುಕ್ರಮವಾಗಿ ಗ್ಲಿಸರಿಕ್ ಆಮ್ಲ ($CH_2OH.\ CHOH.\ COOH$), ಟಾರ್ಟ್ರೋನಿಕ್ ಆಮ್ಲ ($COOH.\ CHOH.\ COOH$) ಮತ್ತು ಮೆಸಾಕ್ಸಾಲಿಕ್ ಆಮ್ಲಗಳು ($COOH.\ CO.\ COOH$) ಉತ್ಪತ್ತಿಯಾಗುವವು. ರಂಜಕ ಮತ್ತು ಅಯೋಡೀನ್‌ಗಳು ಗ್ಲಿಸರಿನ್ ಜೊತೆ ವರ್ತಿಸಿದಾಗ ಅನುಕ್ರಮವಾಗಿ ಅಲೈಲ್ ಅಯೋಡೈಡ್ ($CH_2 : CH.\ CH_2I$), ಪ್ರೊಪೈಲೀನ್ ($CH_3 .\ CH : CH_2$) ಮತ್ತು ಐಸೊಪ್ರೊಪೈಲ್ ಅಯೊಡೈಡುಗಳು ($CH_3.\ CHI.\ CH_3$) ಉತ್ಪತ್ತಿಯಾಗುತ್ತವೆ. ಸೋಡಿಯಂ ಬೈಸಲ್ಫೇಟ್ ಅಥವಾ ರಂಜಕದ ಪೆಂಟಾಕ್ಸೈಡ್‌ನೊಂದಿಗೆ ಕಾಯಿಸಿದಾಗ ಗ್ಲಿಸರಾಲು ನೀರನ್ನು ಕಳೆದುಕೊಂಡು ಅಕ್ರೊಲೀನ್ ಅಥವಾ ಅಕ್ರಾಲ್ಡಿಹೈಡ್ ($CH_2 : CH .CHO$) ಎಂಬ ಅಪರ್ಯಾಪ್ತ ಆಲ್ಡಿಹೈಡನ್ನು ನೀಡುತ್ತದೆ. ಇದು ಅತ್ಯಂತ ತೀಕ್ಷ್ಣವಾದ ಘಾಟುವಾಸನೆ ಉಳ್ಳದ್ದಾದುದರಿಂದ ಗ್ಲಿಸರಾಲನ್ನು ಗುರುತಿಸಲು ಈ ಕ್ರಿಯೆಯನ್ನು ಉಪಯೋಗಿಸಬಹುದು.




ಫಾರ್ಮಿಕ್ ಅಥವಾ ಆಕ್ಸಾಲಿಕ್ ಆಮ್ಲದೊಡನೆ $260^0$ ಸೆಂ. ನಲ್ಲಿ ಕಾಯಿಸಿದರೆ ಗ್ಲಿಸರಾಲು ಅಲೈಲ್ ಆಲ್ಕೊಹಾಲನ್ನು ($CH_2 : CH.\ CH_2OH$) ನೀಡುತ್ತದೆ. ಎರಡು ಕಾರ್ಬಾಕ್ಸಿಲ್ ಗುಂಪುಗಳುಳ್ಳ ದ್ವಿಪ್ರತ್ಯಾಮ್ಲೀಯ ಆಮ್ಲಗಳು (ಡೈಬೇಸಿಕ್ ಆ್ಯಸಿಡ್ಸ್) ಗ್ಲಿಸರಿನಿನೊಂದಿಗೆ ವರ್ತಿಸಿದಾಗ ಆಲ್ಕಿಡ್ ರೆಸಿನುಗಳೆಂಬ ಸಾಂದ್ರೀಕರಣ ಪಾಲಿಮರುಗಳು ಉತ್ಪತ್ತಿಯಾಗುತ್ತವೆ. ಥ್ಯಾಲಿಕ್ ಆನ್‌ಹೈಡ್ರೈಡಿನ ವರ್ತನೆಯಿಂದ ಉತ್ಪತ್ತಿಯಾಗುವ ಗ್ಲಿಪ್ಟಾಲ್ ಎಂಬುದು ಅವುಗಳಲ್ಲಿ ಅತ್ಯಂತ ಸಾಮಾನ್ಯವಾದುದು.

ಗ್ಲಿಸರಿನ್ ಆವಿಶೀಲ (ವಾಲಟೈಲ್) ಅಲ್ಲದುದರಿಂದ ಅದರಿಂದ ತೇವಗೊಳಿಸಿದ ಪದಾರ್ಥಗಳು ಬೇಗ ಒಣಗುವುದಿಲ್ಲ. ಈ ಕಾರಣದಿಂದ ಅದನ್ನು ಕಾಂತಿವರ್ಧಕಗಳ (ಕಾಸ್ಮೆಟಿಕ್ಸ್) ತಯಾರಿಕೆಯಲ್ಲೂ ಹಣ್ಣುಗಳು ಮತ್ತು ತಂಬಾಕನ್ನು ತೇವಗೊಳಿಸಿ ಮೃದುವಾಗಿಡುವುದಕ್ಕೂ ಕ್ಷಾರದ ಸಾಬೂನು ಮತ್ತು ಟೂತ್‌ಪೇಸ್ಟುಗಳ ತಯಾರಿಕೆಗೂ ಬಳಸುತ್ತಾರೆ. ವಾಣಿಜ್ಯದಲ್ಲಿ ಗ್ಲಿಸರಿನಿನ ಅತ್ಯಧಿಕ ಭಾಗ ಸ್ಫೋಟಕಗಳ ತಯಾರಿಕೆಗೆ ವ್ಯಯವಾಗುತ್ತದೆ. ಇಷ್ಟೇ ಅಲ್ಲದೆ ಘನೀಕರಣರೋಧಕ ಮಿಶ್ರಣಗಳಲ್ಲಿ (ಆ್ಯಂಟಿ– ಫ್ರೀಜ್ ಮಿಕ್ಸ್‌ಚರ್ಸ್) ಗ್ಲಿಸರಾಲನ್ನು ವ್ಯಾಪಕವಾಗಿ ಬಳಸುತ್ತಾರೆ. ಅನೇಕ ಪ್ಲಾಸ್ಟಿಕ್ಕುಗಳ ತಯಾರಿಕೆಗೂ ಗ್ಲಿಸರಾಲ್ ಅಗತ್ಯ. (ಜಿ.ಆರ್.ಎಲ್. ; ಕೆ.ಎಸ್.ಎಲ್.)

**ಗ್ಲೂಕ್, ಕ್ರಿಸ್ಟೋಫ್ ವಿಲಿಬಾಲ್ಡ್ :** 1714–87. ಜರ್ಮನಿಯ ಒಬ್ಬ ಪ್ರಸಿದ್ಧ ವಾಗ್ಗೇಯಕಾರ. ಈತ ರಚಿಸಿದ ಹಲವಾರು ಗೇಯಕೃತಿಗಳು ಅದರಲ್ಲೂ ಮುಖ್ಯವಾಗಿ ಆಪೆರಗಳು, ಯುರೋಪಿನ ಸಂಗೀತ ಇತಿಹಾಸದಲ್ಲಿ ಹೊಸ ತಿರುವನ್ನು ಗುರುತಿಸಿದವೆನ್ನಲಾಗಿದೆ. ಗ್ಲೂಕ್ ಹುಟ್ಟಿದ್ದು ಜರ್ಮನಿಯ ವೈಡೆನ್‌ವ್ಯಾಂಗ್ ಎಂಬಲ್ಲಿ.

ಇವನ ತಂದೆ ರಾಜಕುಮಾರ ಲೊಬ್ಕೊವಿಟ್ಜ್‌ನ ಸೇವೆಯಲ್ಲಿ ಇದ್ದುಕೊಂಡು ಅವನ ಬೇಟೆಯಾಟಗಳಲ್ಲಿ ಸಹಕರಿಸುತ್ತಿದ್ದ. ಗ್ಲೂಕ್‌ಗೆ 12 ವರ್ಷವಾದಾಗ ಅವನನ್ನು ಕೊಮೊಟ ಎಂಬಲ್ಲಿನ ಜೆಸ್ಯೂಟ್ ಕಾಲೇಜಿಗೆ ಸೇರಿಸ ಲಾಯಿತು. ಈತ ಅಲ್ಲಿ ಪ್ರಪ್ರಥಮವಾಗಿ ಸಂಗೀತ ಪಾಠಗಳನ್ನು ಕಲಿತುಕೊಂಡ. ಅನಂತರ 1732ರಲ್ಲಿ ಪ್ರಾಗ್ ವಿಶ್ವವಿದ್ಯಾಲಯ ಸೇರಿದ. ಸುಮಾರು ನಾಲ್ಕು ವರ್ಷಗಳ ಕಾಲ ಜೀವನೋಪಾಯಕ್ಕಾಗಿ ಪಿಟೀಲು, ಸೆಲ್ಲೋ ಮುಂತಾದ ವಾದ್ಯಗಳನ್ನು ನುಡಿಸುತ್ತ ಸಂಗೀತಪಾಠ ಕಲಿಸುತ್ತ ಕಾಲ ಕಳೆದ. ಸರ್ನೊಹರ್‌ಸ್ಕಿ ಎಂಬ ಸಂಗೀತ ವಿದ್ವಾಂಸನೊಬ್ಬ ಇವನ ಗುರುವಾದ. 1736ರಲ್ಲಿ ರಾಜಕುಮಾರ ಲೊಬ್ಕೊವಿಟ್ಜ್‌ನ ಪರಿವಾರದಲ್ಲಿ, ಚೇಂಬರ್ ಸಂಗೀತಗಾರನಾಗಿ ವಿಯೆನ್ನಕ್ಕೆ ಹೋಗಿದ್ದಾಗ ಇವನಿಗೆ ಇಟಲಿಯ ಆಪೆರದಲ್ಲಿ ಹೆಚ್ಚಿನ ಅಭಿರುಚಿಯುಂಟಾಯಿತು. ಮರುವರ್ಷವೇ ಈತ ಅಲ್ಲಿನ ರಾಜಕುಮಾರ ಮೆಲ್‌ಜ಼ಿಯನ್ನು ಸಂದರ್ಶಿಸಿ ಅವನ ಆಶ್ರಯ ದೊರಕಿಸಿಕೊಂಡ. ರಾಜಕುಮಾರನ ನೆರವಿನಿಂದ ಮಿಲಾನಿಗೆ ಹೋಗಿ ಅಲ್ಲಿ

ಮೂರು ವರ್ಷಗಳ ಕಾಲ ಪ್ರಸಿದ್ಧ ಸಂಗೀತಶಾಸ್ತ್ರಜ್ಞ ಜಿಯೊವಾನಿ ಬ್ಯಾಟಿಸ್ಟ್ ಸ್ಯಾನ್ ಮಾರ್ಟಿನಿ ಎಂಬುವನ ಬಳಿ ತನ್ನ ವ್ಯಾಸಂಗವನ್ನು ಮುಂದುವರಿಸಿದ. 1741ರಲ್ಲಿ ಆರ್ಟಾಸರ್ಸೆಸ್ ಎಂಬ ತನ್ನ ಪ್ರಪ್ರಥಮ ಆಪೆರವನ್ನು ರೂಪಿಸಿ ಪ್ರದರ್ಶಿಸಿದ. ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ ಸುಮಾರು 8 ಇಟಾಲಿಯನ್ ಮಾದರಿಯ ಆಪೆರಗಳನ್ನು ಪ್ರದರ್ಶಿಸಿದ. 1745ರಲ್ಲಿ ರಾಜಕುಮಾರ ಲೊಬ್ಕೋವಿಟ್‌ಜನ ಜೊತೆಯಲ್ಲಿ ಲಂಡನಿಗೆ ಭೇಟಿಯಿತ್ತ. ಪ್ಯಾರಿಸಿನಲ್ಲಿ ತಂಗಿದ್ದಾಗ ಫ್ರೆಂಚ್ ಗೇಯಕಾರ ಜೀನ್ ಫಿಲಿಪ್ಪೆ ರಾಮೋ (1683–1764) ಎಂಬುವನ ಆಪೆರಗಳನ್ನು ನೋಡಿ ಮೆಚ್ಚಿಕೊಂಡ. ಸುಮಾರು ಒಂದು ವರ್ಷಕಾಲ ಲಂಡನಿನಲ್ಲಿದ್ದಾಗ ತನ್ನ 2 ಸಂಕೀರ್ಣಗೀತಗಳನ್ನೂ (ಪ್ಯಾಸ್ಟಿಚ್) 6 ತ್ರಿವಾದ್ಯಕೃತಿಗಳನ್ನೂ (ಟ್ರಯೋಸೊನಾಟಾಸ್) ಶ್ರುತಪಡಿಸಿದ. ಅಲ್ಲಿ ಇವನಿಗೆ ಹ್ಯಾಂಡಲ್ ಆರ್ನ್ ಮುಂತಾದ ಸಂಗೀತಗಾರರ ಪರಿಚಯವಾಯಿತು. ಲಂಡನಿನಲ್ಲಿ ಈತ ಪಿಎತ್ರೋ ಮಿನ್‌ಗೊಟ್ಟಿ ಎಂಬುವನ ಇಟಾಲಿಯನ್ ಆಪೆರ ಕಂಪೆನಿಗೆ ಸೇರಿ, ಅದರ ಸಂಗೀತ ನಿರ್ದೇಶಕನಾಗಿ, ಕಂಪೆನಿಯೊಂದಿಗೆ ಅಲ್ಲಲ್ಲೇ ಸಂಚರಿಸಿದ. ಅಷ್ಟು ಹೊತ್ತಿಗೆ ಇವನಿಗೆ ಸಾಕಷ್ಟು ಕೀರ್ತಿ ದೊರಕಿತ್ತು.

ಶ್ರೀಮಂತ ವ್ಯಾಪಾರಿಯೊಬ್ಬನ ಮಗಳಾದ ಮಾರಿಯಾನಿ ಪರ್ಗಿನ್ ಎಂಬುವವಳನ್ನು 1750ರಲ್ಲಿ ವಿವಾಹವಾಗಿ ವಿಯೆನ್ನದಲ್ಲಿ ನೆಲಸಿದ. ನೇಪಲ್ಸ್ ಮುಂತಾದ ಕಡೆ ಈತ ರೂಪಿಸಿದ ವಾದ್ಯಮೇಳ ಗೋಷ್ಠಿಗಳಿಂದಾಗಿ ಇವನ ಹೆಸರು ಇಟಲಿಯಲ್ಲೆಲ್ಲ ವ್ಯಾಪಿಸಿತು. 1754ರಲ್ಲಿ ಕೌಂಟ್ ಡುರಾಸ್ಸೋ ಎಂಬುವನ ಆಸ್ಥಾನದಲ್ಲಿ ಸಂಗೀತ ನಾಟ್ಯಗೃಹಗಳ ನಿರ್ದೇಶಕನಾಗಿ ನೇಮಿತನಾದ. 1760ರಿಂದಾಚೆಗೆ ಸೇವಾವೃತ್ತಿಯನ್ನು ತ್ಯಜಿಸಿ ಸ್ವತಂತ್ರ ಜೀವನ ನಡೆಸುವಂತಾದ.

1761 ರವರೆಗೆ ಈತ ರಚಿಸಿದ ಕೃತಿಗಳಲ್ಲಿ ಹೆಚ್ಚು ಸ್ವಂತಿಕೆ ಕಂಡುಬರದಿದ್ದರೂ ಆ ವರ್ಷ ರಚಿಸಿದ ಡಾಮ್‌ಜುಆನ್ ಮತ್ತು ಆರ್ಫಿಯಸ್ ಅಂಡ್ ಯೂರಿಡೀಸ್ ಎಂಬ ಬ್ಯಾಲೆಗಳಲ್ಲಿ ಈತನ ಪ್ರತಿಭೆ ಎದ್ದುಕಾಣುತ್ತದೆ. ಜರ್ಮನಿಯ ಅಭಿಜಾತವಾದಿ ವಿಂಕಲ್‌ಮನ್ನನನ್ನು ಸಂದರ್ಶಿಸಿದಾಗಿನಿಂದ ಗ್ಲೂಕ್‌ಗೆ ವಿಶೇಷ ಅನುಭವಗಳು ಲಭಿಸಿದವು. ವಿಶೇಷ ನಾಟ್ಯಪ್ರಜ್ಞೆಯುಳ್ಳ ಗ್ಲೂಕ್ ಹದಿನೆಂಟನೆಯ ಶತಮಾನದ ನವ ಅಭಿಜಾತ ಪಂಥದವರಂತೆ ತಾನೂ ಪುರಾತನ ಗ್ರೀಕರ ಸಾಹಿತ್ಯ ಹಾಗೂ ಕಲಾತತ್ತ್ವಗಳಿಗೆ ಮಾರುಹೋದನಾದರೂ ಕೆಲವು ಕಾಲ ಇಟಾಲಿಯನ್ ಮಾದರಿಯ ಆಪೆರಗಳ ರಚನೆಯನ್ನೇ ಮುಂದುವರಿಸಿದ. 1769ರಲ್ಲಿ ಆಲ್‌ಸೆಸ್ಟ್ ಎಂಬ ತನ್ನ ಆಪೆರಕ್ಕೆ ಬರೆದ ಮುನ್ನುಡಿಯಲ್ಲಿ ತನ್ನ ಸಂಗೀತಸೂತ್ರಗಳನ್ನೂ ಸಿದ್ಧಾಂತಗಳನ್ನೂ ಖಚಿತವಾಗಿ ವ್ಯಕ್ತಪಡಿಸಿದ. ಆಪೆರದ ರಚನೆಯಲ್ಲಿ ವಾಗ್ಗೇಯಕಾರನಿಗೆ ಆಯಾ ಸನ್ನಿವೇಶಗಳಲ್ಲಿನ ನಾಟ್ಯಪ್ರಜ್ಞೆಯ ಅರಿವಿರಬೇಕು. ಅವನು ಕಣ್ಣಿಗೆ ಹೊಡೆಯುವಂಥ ದೃಶ್ಯಾತ್ಮಕ ಅಂಶಗಳಿಗೆ ಹೆಚ್ಚು ಗಮನವೀಯಬಾರದು. ಗೇಯಕೃತಿಗಳು ಸರಳವೂ ಉದಾತ್ತವೂ ಆದ ಕಲಾವಂತಿಕೆಯಿಂದ ಕೂಡಿರಬೇಕು– ಎಂಬುದು ಗ್ಲೂಕನ ಅಭಿಮತ. ಇವನ್ನು ಎತ್ತಿತೋರಿಸಲೆಂದೇ ಆಲ್‌ಸೆಸ್ಟ್ ಎಂಬ ಕೃತಿಯನ್ನು ಈತ ಬರೆದದ್ದು. ಆದರೆ ಇವನ ಕಲಾಪ್ರತಿಭೆಗೆ ಸದವಕಾಶ ದೊರೆತದ್ದು ಈತ ಪ್ಯಾರಿಸಿನಲ್ಲಿದ್ದಾಗ. ಪ್ಯಾರಿಸಿನ ಆಪೆರ ಸಂಸ್ಥೆ ಇವನ ಪ್ರತಿಭೆಗೆ ಪುರಸ್ಕಾರವಿತ್ತು ಕೆಲವು ಕೃತಿಗಳನ್ನು ರಚಿಸುವಂತೆ ಆಹ್ವಾನಿಸಿತು. ಇದರ ಸಲುವಾಗಿ ಗ್ಲೂಕ್ 6 ಆಪೆರಗಳನ್ನು ಬರೆದು ತಾನೇ ಅವನ್ನು ನಿರ್ದೇಶಿಸಿ ಪ್ರದರ್ಶನಕ್ಕೆ ಅಣಿಮಾಡಿದ. ತನಗೆ ಮೆಚ್ಚುಗೆಯಾದ ಕಲಾಪಾತ್ರಗಳೆಲ್ಲವನ್ನೂ ಈ ಆಪೆರಗಳಲ್ಲಿ ಪ್ರಯೋಗಿಸಲು ಗ್ಲೂಕ್‌ಗೆ ಸಾಧ್ಯವಾಯಿತು. ಫ್ರೆಂಚ್ ರಸಿಕರನ್ನು ಮೆಚ್ಚಿಸಲು ಈತ ಹೆಚ್ಚಿನ ಸ್ವಾತಂತ್ರ್ಯ ವಹಿಸಿದ. ಆ ವೇಳೆಗೆ ಇಟಲಿಯ ಆಪೆರಗಳಲ್ಲಿದ್ದ ಕಠಿಣಸೂತ್ರಗಳನ್ನು ತ್ಯಜಿಸಿ ಲುಲ್ಲಿ, ರಾಮೋ ಮುಂತಾದವರು ಹೊಸ ಸೂತ್ರಗಳನ್ನು ತೋರಿಸಿಕೊಟ್ಟಿದ್ದರು. ಗ್ಲೂಕ್ ಕೂಡ ಅವರ ದಾರಿಯನ್ನೇ ಅನುಸರಿಸಿದ. ಆದರೆ ಫ್ರೆಂಚ್ ರಸಿಕಸಮುದಾಯ ಇವನ ಸ್ವಾತಂತ್ರ್ಯಪ್ರಿಯತೆ ಹಾಗೂ ಸ್ವೋಪಜ್ಞತೆಯನ್ನು ಅಷ್ಟು ಸುಲಭವಾಗಿ ಮೆಚ್ಚಲಿಲ್ಲ. ಬದಲು ಇವನನ್ನು ವಿರೋಧಿಸಿತು. ಫ್ರೆಂಚ್ ಸಂಗೀತಜ್ಞರ ಕ್ಷೇತ್ರದಲ್ಲಿ ಉಗ್ರ ವಿವಾದಗಳೇರ್ಪಟ್ಟವು. ಇಟಲಿಯ ಆಪೆರ ಸಂಪ್ರದಾಯವನ್ನು ಮೆಚ್ಚುವ ತಂಡದವರು ನಿಕೊಲಾ ಪಿಚೇನಿ (1728–1800) ಎಂಬುವನ ರಚನೆಗಳನ್ನು ಪ್ರಶಂಸಿಸಿ ಅವನ ಪಕ್ಷ ಹಿಡಿದರು. ಗ್ಲೂಕ್ ಪಂಥದವರಿಗೂ ಪಿಚೇನಿ ಪಂಥದವರಿಗೂ ದೊಡ್ಡ ಚರ್ಚೆ, ಸೆಣಸಾಟಗಳೇ ಪ್ರಾರಂಭವಾಗಿ, ಫ್ರೆಂಚ್ ಆಪೆರ ಮತ್ತು ಇಟಲಿ ಆಪೆರಗಳ ನಡುವೆ ವಿರೋಧಾಭಿಪ್ರಾಯಗಳು ತಲೆದೋರಿದವು. ಈ ಘೋರ ವಾಗ್ವಾದದಲ್ಲಿ ಗ್ಲೂಕ್ ಜಯಗಳಿಸಿದ. ಈತ ವಿಯೆನ್ನಗೆ ಹಿಂದಿರುಗಿದ ಕೂಡಲೆ ಪ್ಯಾರಿಸಿನ ಗ್ಲೂಕ್ ಪಂಥೀಯರು ಮತ್ತೆ ಇಟಲಿಯ ಅತಿಭಾವುಕ ಆಪೆರಗಳಿಗೆ ಮಾರುಹೋದರು. ಗ್ಲೂಕನ ಪ್ರಕಾಶ ಮತ್ತೆ ಮಸುಕಾಯಿತು.

ಗ್ಲೂಕ್ ಇಡೀ ಜೀವಿತಕಾಲದಲ್ಲಿ ತನ್ನ ಸೂತ್ರಗಳನ್ನು ಉಗ್ರವಾಗಿ ಸಮರ್ಥಿಸಿಕೊಳ್ಳುವುದು ಮಾತ್ರವಲ್ಲದೆ ತನಗೆ ಮೆಚ್ಚುಗೆಯಾದ ರೀತಿಯಲ್ಲಿ ಹೊಸಮಾರ್ಗವನ್ನು ತುಳಿಯಲು ಪ್ರಯತ್ನಿಸಿದ. ತಾನು ಜನ್ಮತಃ ಜರ್ಮನಿಯವನಾದರೂ ಫ್ರೆಂಚ್ ಜನತೆಯ ಆತ್ಮಾಭಿಮಾನವನ್ನು ಕೆರಳಿಸಿ, ಅವರಿಗೆ ತಮ್ಮ ಹಿರಿಮೆ ಗರಿಮೆಗಳ ಅರಿವಾಗುವಂತೆ ಮಾಡಿದ. ಇವನ ಆತ್ಮಪ್ರತ್ಯಯ ಪ್ಯಾರಿಸಿನ ಕಲಾವಂತರಿಗೆ ಸ್ವಲ್ಪಕಾಲವಾದರೂ ಪ್ರಬಲ ಪ್ರೇರಣೆ ನೀಡಿತು.

1779ರಲ್ಲಿ ಗ್ಲೂಕ್ ಪಾರ್ಶ್ವವಾಯುಗ್ರಸ್ತನಾಗಿ 8 ವರ್ಷ ದೀರ್ಘ ವಿಶ್ರಾಂತಿಯನ್ನು ಪಡೆದು 1787ರಲ್ಲಿ ನಿಧನ ಹೊಂದಿದ. ತನ್ನ ಕಾಲದಲ್ಲಿ ಗ್ಲೂಕ್ ಎಷ್ಟೇ ಕ್ರಾಂತಿಕಾರನೆನಿಸಿಕೊಂಡಿದ್ದರೂ ನವ ಅಭಿಜಾತ ಪಂಥದವನೇ ಆದ ಈತನ ಸಂಕುಚಿತ ಮನೋಧರ್ಮ ಅನಂತರ ಬಂದ ರಸಿಕರಿಗೆ ಮೆಚ್ಚುಗೆಯಾಗಲಿಲ್ಲ. ಗೇಯರಚನೆಗಳಲ್ಲಿ ಕಠಿಣವಾದ ಅಭಿಜಾತ ಕಲಾಸೂತ್ರಗಳನ್ನು ಅನುಸರಿಸಿ ಪ್ರಖರವಾದ ನಾಟ್ಯಪ್ರಜ್ಞೆಯನ್ನು ಅಳವಡಿಸಿದ್ದು ಇವನ ಶ್ರೇಷ್ಠಗುಣವನ್ನು ಎತ್ತಿತೋರಿಸುವಂತಾಯಿತು. ಇವನ ಗೇಯರಚನೆಗಳು ರಂಗಭೂಮಿಯ ಮೇಲೆ ಅತ್ಯದ್ಭುತ ಪರಿಣಾಮ ಬೀರಬಲ್ಲವಾದರೂ ಸಂಗೀತದ ದೃಷ್ಟಿಯಿಂದ ನೀರಸವೆನಿಸುತ್ತವೆ. ಈ ಸಂಬಂಧದಲ್ಲಿ ಹೆಚ್ಚಿನ ಸುಧಾರಣೆಗಳು ಕಂಡುಬಂದು ಅವು ಇತ್ತೀಚೆಗೆ ಜನಪ್ರಿಯವಾಗಿವೆ.

ಆಪೆರ ರಚನೆ ಹಾಗೂ ಪ್ರದರ್ಶನ ತಂತ್ರದಲ್ಲಿ ಗ್ಲೂಕ್ ಅಪೂರ್ವ ಅಂಶಗಳನ್ನು ಸಾಧಿಸಿದ. ಆಪೆರಗಳಲ್ಲಿನ ಗೀತ ನಿರೂಪಣೆಯ ಶೈಲಿಯನ್ನು ಈತ ಉಜ್ವಲಗೊಳಿಸಿದ. ಆರಂಭಮೇಳ (ಓವರ್ಚರ್) ಹಾಗೂ ವಾದ್ಯಮೇಳಗಳನ್ನು (ಆರ್ಕೆಸ್ಟ್ರ) ಈತ ನವೀನ ರೀತಿಯಲ್ಲಿ ಬಳಸಿಕೊಂಡು ವೇಗವಾದ ಗತಿಯನ್ನೂ ಪರಿಣಾಮವನ್ನೂ ಸಾಧಿಸಿದ. ಹಾರ್ಪ್ಸಿಕಾರ್ಡ್ ವಾದ್ಯದ ಬಳಕೆಯನ್ನು ಬಿಟ್ಟುಕೊಟ್ಟು, ಹಾರ್ಪ್, ಟ್ರೊಂಬೋನ್ ಮತ್ತು ಕ್ಲಾರಿನೆಟ್ ವಾದ್ಯಗಳನ್ನು ಸಂದರ್ಭೋಚಿತವಾಗಿ ಬಳಸಿದ. ನಾಟಕೀಯತೆಯ ಮೇಲೆ ಹೆಚ್ಚಿನ ಪರಿಣಾಮ ಬೀರಲು ಆರ್ಕೆಸ್ಟ್ರವನ್ನು ಸೊಗಸಾಗಿ ಅಳವಡಿಸಿಕೊಂಡ. ಗ್ಲೂಕ್ ಸಂಗೀತಗಾರನಾಗಿ ಕಾಲಕ್ಕೆ ತಕ್ಕಂತೆ ನಡೆದುಕೊಂಡು, ಅರ್ಥಾರ್ಥಿಯಾಗಿ ಬದುಕಬೇಕಾಗಿ ಬಂದರೂ ಇವನ ರಸವಂತಿಕೆ, ಕಲಾಭಿಜ್ಞತೆ ಅನನ್ಯವಾದವು. (ಎಚ್.ಕೆ.ಆರ್.)

**ಗ್ಲೂಕೊಸೈಡುಗಳು** : ಪ್ರಧಾನವಾಗಿ ಸಸ್ಯಜನ್ಯವಸ್ತುಗಳು. ಇವುಗಳಲ್ಲಿ ಚಕ್ರೀಯಾಕೃತಿಯ ಸಕ್ಕರೆಗಳ ಹೆಮಿಅಸಿಟಾಲ್ ಹೈಡ್ರಾಕ್ಸಿಲ್ ಗುಂಪಿನ ಹೈಡ್ರೊಜನ್ ಅಗ್ಲೈಕಾನ್ ಎಂಬ ಹೆಸರಿನ ಆಲ್ಕೈಲ್ ಅಥವಾ ಆರೈಲ್ ಪುಂಜದಿಂದ ಪಲ್ಲಟಗೊಂಡಿರುತ್ತದೆ. ಈಗ ಗ್ಲೂಕೊಸೈಡ್ ಬದಲು ಗ್ಲೈಕೊಸೈಡ್ ಎಂದೂ ಸಕ್ಕರೆಯ ಘಟಕ ಚಕ್ರೀಯ ಗ್ಲೂಕೋಸ್ ಆದಲ್ಲಿ ಮಾತ್ರ ಗ್ಲೂಕೊಸೈಡ್ ಎಂದೂ ಕರೆಯಲಾಗುವುದು. ಅನೇಕ ನೈಸರ್ಗಿಕ ಗ್ಲೈಕೊಸೈಡುಗಳು ಗ್ಲೂಕೊಸೈಡುಗಳೇ ಆಗಿವೆ. ಗ್ಲೂಕೊಸೈಡುಗಳಲ್ಲಿ α–D ಮತ್ತು β–D– ಗ್ಲೂಕೊಸೈಡ್ ಎಂದು ಎರಡು ವಿಧ. ಗ್ಲೂಕೊಸೈಡಿಕ್ ಗುಂಪಿನ ವಿನ್ಯಾಸದ ವ್ಯತ್ಯಾಸವೇ α– ಮತ್ತು β–D- ಗ್ಲೂಕೊಸೈಡುಗಳಿಗಿರುವ ವ್ಯತ್ಯಾಸ. ಆರು ಪರಮಾಣುಗಳಿಂದ ಚಕ್ರೀಯ (ಪೈರನೋಸ್) ಗ್ಲೂಕೊಸೈಡುಗಳನ್ನು ಗ್ಲೂಕೊಪೈರನೊಸೈಡುಗಳೆಂದೂ, ಐದು ಪರಮಾಣುಗಳನ್ನು ಒಳಗೊಂಡಿರುವ ಐಸೊಮೆರಿಕ್ ಚಕ್ರೀಯ (ಫ್ಯೂರನೋಸ್) ಗ್ಲೂಕೊಸೈಡುಗಳನ್ನು ಸುಲಭವಾಗಿ ಗ್ಲೂಕೊಫ್ಯೂರ್‌ನೊಸೈಡುಗಳೆಂದೂ ಕರೆಯಲಾಗುವುದು. ಫ್ಯೂರನೊಸೈಡುಗಳು ಜಲವಿಶ್ಲೇಷಣಗೊಳ್ಳುವುದರಿಂದ ಇವು ಪ್ರಕೃತಿಯಲ್ಲಿ ಅಪರೂಪ.




*β-D*–ಗ್ಲೂಕೊಸೈಡ್




*α-D*–ಗ್ಲೂಕೊಸೈಡ್

ಗ್ಲೂಕೊಸೈಡುಗಳು ಕಹಿಯಾದ, ಹರಳಿನ ಆಕೃತಿಯ ಘನವಸ್ತುಗಳು. ಗ್ಲೂಕೊಸೈಡುಗಳು ತೋರುವ ಎಲ್ಲ ರಸಾಯನ ಗುಣಗಳನ್ನೂ ಪ್ರದರ್ಶಿಸುತ್ತವೆ. ಆಮ್ಲಗಳಿಂದ ಜಲವಿಶ್ಲೇಷಣೆ ಹೊಂದಿ ಗ್ಲೂಕೋಸ್ ಮತ್ತು ಅಗ್ಲೈಕಾನ್ ಭಾಗವನ್ನು ಕೊಡುತ್ತವೆ. ಗ್ಲೂಕೊಸೈಡೇಸುಗಳೆನ್ನುವ (ಬಾದಾಮಿ ಎಮಲ್ಸಿನಿನಲ್ಲಿವೆ) ನಿರ್ದಿಷ್ಟ ಎಂಜೈಮುಗಳಿಂದಲೂ ಜಲವಿಶ್ಲೇಷಣೆಗೊಳ್ಳುತ್ತವೆ. ಗ್ಲೂಕೊಸೈಡುಗಳನ್ನು ಗ್ಲೈಕೊಸೈಡುಗಳಿಂದ ಗುರುತಿಸಲು ಇದೊಂದು ನಿರ್ದಿಷ್ಟ ಪರೀಕ್ಷೆ.

ಆರ್ಬುಟಿನ್ $\xrightarrow{\text{H.O.H.}}$ D – ಗ್ಲೂಕೊಸ್ + ಹೈಡ್ರೊಕ್ವಿನೋನ್

(ಗ್ಲೂಕೊಸೈಡ್) (ಬಾದಾಮಿ ಎಮಲ್ಸಿನ್) (ಸಕ್ಕರೆ) (ಅಗ್ಲೈಕಾನ್)

ಅಗ್ಲೈಕಾನುಗಳ ರಸಾಯನ ವಿನ್ಯಾಸ ಬಹುತೆರ. ಆದರೆ ಅವೆಲ್ಲವುಗಳಿಗೂ ಶರ್ಕರ ಅಣುವಿನೊಂದಿಗೆ ಸೇರಲು ಬೇಕಾದ ಒಂದು ಹೈಡ್ರಾಕ್ಸಿಲ್ ಗುಂಪು ಇರುವುದು.

ಸೆಲ್ಯೂಲೂಸ್ ಸ್ಟಾರ್ಚ್ ಮತ್ತು ಗ್ಲೈಕೊಜನ್ ಮುಂತಾದ ಅನೇಕ ನೈಸರ್ಗಿಕ ಬಹುಶರ್ಕರಗಳನ್ನು ರಾಸಾಯನಿಕವಾಗಿ ಗ್ಲೂಕೊಸೈಡುಗಳು ಎನ್ನಬಹುದು. ಏಕೆಂದರೆ ಇವೆಲ್ಲವು ಗ್ಲೂಕೊಸೈಡಿಕ್ ಬಂಧದಿಂದ ಸೇರಿಸಲ್ಪಟ್ಟ ಗ್ಲೂಕೋಸ್ ಘಟಕಗಳನ್ನು ಒಳಗೊಂಡಿವೆ.

ನೈಸರ್ಗಿಕ ಗ್ಲೂಕೊಸೈಡುಗಳು ಸಸ್ಯ ಚಯಾಪಚಯದಲ್ಲಿ ಅಲ್ಲದೆ ಔಷಧಿ, ವರ್ಣದ್ರವ್ಯ, ಸಂಬಾರ ಸಾಮಗ್ರಿ ಮತ್ತು ಸುಗಂಧಗಳ ರೂಪದಲ್ಲಿ ಪ್ರಾಮುಖ್ಯ ಪಡೆದಿವೆ. ಸಸ್ಯ ತನಗೆ ಮಾರಕ (ಟಾಕ್ಸಿಕ್) ವಸ್ತುಗಳನ್ನು ಗ್ಲೂಕೊಸೈಡ್ ರೂಪದಲ್ಲಿ ತೊಗಟೆಗೋ ಹಣ್ಣಿನ ಸಿಪ್ಪೆಗೋ ಬೀಜದ ಹೊದಿಕೆಗೋ ಹೂವಿನ ಬಣ್ಣಕ್ಕೋ ರವಾನಿಸುತ್ತದೆನ್ನುವ ವಾದಕ್ಕೆ ಆಧಾರಗಳಿವೆ. ಅಂದರೆ ಗ್ಲೂಕೊಸೈಡ್ ತಯಾರಿಕೆ ಸಸ್ಯದ ಒಂದು ವಿಷನಿವಾರಕತಂತ್ರ. ಬಹುಪಾಲು ಗ್ಲೂಕೊಸೈಡುಗಳು D– ರೂಪದಲ್ಲಿವೆ. ಅವುಗಳಿಗೆ B– ವಿನ್ಯಾಸ ಉಂಟು. ಆದ್ದರಿಂದ ಅವೆಲ್ಲವೂ ಲೇವೊರೊಟೇಟರಿ.

ವಿಲ್ಲೊ ತೊಗಟೆಯಲ್ಲಿ ದೊರೆಯುವ ಸ್ಯಾಲಿಸಿನ್ ಪೂರ್ವಕಾಲದಿಂದಲೂ ಜ್ವರ ಮತ್ತು ಕೀಲುನೋವುಗಳ ವಿರುದ್ಧ ಉಪಯೋಗಿಸಲ್ಪಡುತ್ತದೆ. ಜಲವಿಶ್ಲೇಷಣೆ ಹೊಂದಿದಾಗ ಸ್ಯಾಲಿಸಿನ್ D- ಗ್ಲೂಕೋಸ್ ಮತ್ತು ಸ್ಯಾಲಿಜೆನಿನುಗಳನ್ನು ಕೊಡುತ್ತವೆ.

ಸ್ಯಾಪೊನಿನುಗಳು ಆ್ಯಲಿಫ್ಯಾಟಿಕ್ ಆಲ್ಕೊಹಾಲುಗಳಿಂದಾದ ಗ್ಲೂಕೊಸೈಡುಗಳು. ಸಸ್ಯಗಳನ್ನು ಹೇರಳ ನೀರಿನೊಡನೆ ಕುಲುಕಿದಾಗ ನೊರೆಕೊಡುವುದು ಇವುಗಳ ವಿಶಿಷ್ಟಗುಣ. ಇವು ಮೀನುಗಳಿಗೆ ವಿಷ. ಆದ್ದರಿಂದ ಮೀನು ಹಿಡಿಯುವವರು ಇವನ್ನು ಉಪಯೋಗಿಸುವುದುಂಟು. ಇವುಗಳಿಂದ ಸಾಯುವ ಮೀನು ಜೀವಗಳಿಗೆ ಹಾನಿಯುಂಟುಮಾಡುವುದಿಲ್ಲ.

ಸ್ಟೆರಾಯ್ಡ್ ಗ್ಲೂಕೊಸೈಡುಗಳು : ಇವನ್ನು ಹೃತ್ಪ್ರಭಾವಿ (ಕಾರ್ಡಿಆ್ಯಕ್) ಗ್ಲೂಕೊಸೈಡುಗಳೆಂದು ಕರೆಯುವರು. ಜಲವಿಶ್ಲೇಷಣೆಯಿಂದ ಇವು ಅನೇಕ ಬಗೆಯ ಸಕ್ಕರೆಗಳನ್ನು ಮತ್ತು ಸ್ಟೆರಾಯ್ಡುಗಳನ್ನು ಕೊಡುತ್ತವೆ. ಇವು ಪ್ರಬಲ ಹೃದ್ವಿಷಗಳು. ಆದರೆ ಅಲ್ಪಪ್ರಮಾಣದಲ್ಲಿ ಹೃದಯೋದ್ದೀಪಕಗಳು. ಆಧುನಿಕ ವೈದ್ಯದಲ್ಲಿ ಡಿಜಿಟಾಲಿಸ್ ಎಲೆಗಳ ಸಾರದ ಉಪಯೋಗ ಸರ್ವವೇದ್ಯ.

ಸೈಯನೋಜನಕ (ಸಯನೊಜೆನಿಟಿಕ್) ಗ್ಲೂಕೊಸೈಡುಗಳು ಮತ್ತೊಂದು ಗುಂಪು. ಪೀಚ್, ಚೆರಿ ಮತ್ತು ಪ್ಲಮ್ ಬೀಜದ ತಿರುಳುಗಳಲ್ಲಿ ಈ ಗುಂಪನ್ನು ಕಾಣಬಹುದು. ಇವು ಮುಖ್ಯವಾಗಿ ಮ್ಯಾಂಡಿಲೊನೈಟ್ರೈಲ್ ಗ್ಲೂಕೊಸೈಡುಗಳು. ಆಮ್ಲ ಅಥವಾ ಎಂಜೈಮುಗಳಿಂದ ಜಲವಿಶ್ಲೇಷಣೆ ಹೊಂದಿ ವಿಷವಸ್ತು ಹೈಡ್ರೊಸಯನಿಕ್ ಆಮ್ಲ, ಬೆಂಜಾಲ್ಡಿಹೈಡ್ ಮತ್ತು ಮುಖ್ಯವಾಗಿ D– ಗ್ಲೂಕೋಸನ್ನು ಕೊಡುತ್ತವೆ. ಅಮಿಗ್ಡಲಿನ್ ಈ ಗುಂಪಿಗೆ ಸೇರಿದ್ದು. ಪೂರ್ವಕಾಲದಲ್ಲಿ ಬಹುವಾಗಿ ಉಪಯೋಗಿಸುತ್ತಿದ್ದ ಅನೇಕ ಸಸ್ಯಜನ್ಯ ಬಣ್ಣಗಳು ಗ್ಲೂಕೊಸೈಡುಗಳು. ಅವುಗಳಲ್ಲಿ ಮ್ಯಾಡರ್ ಮುಖ್ಯವಾದದು. ಮ್ಯಾಡರ್ ಬೇರು ಜಲವಿಶ್ಲೇಷಣೆಯಿಂದ D- ಕ್ಸೈಲೋಸ್ ಮತ್ತು ಅಲಿಜರಿನ ವರ್ಣಕ್ರಿಯೆಯನ್ನು ಕೊಡುತ್ತದೆ. ನೀಲಿ ಮತ್ತು ಕೆಂಪು ವರ್ಣದ ಅಸ್ತೊಸೈಯನಿನುಗಳು ಗ್ಲೂಕೊಸೈಡುಗಳು. ಇವುಗಳಲ್ಲಿ ಅಗ್ಲೈಕಾನ್ ಭಾಗಕ್ಕೆ ಆನ್ತೊಸೈಯನಿಡಿನ್ ಎಂದು ಹೆಸರು. ಫಲಪುಷ್ಪಗಳಲ್ಲಿ ಕಾಣುವ ಅನೇಕ ವರ್ಣಗಳು ಕ್ಯಾರೋಟಿನಾಯ್ಡ್ ಗ್ಲೂಕೊಸೈಡುಗಳು.

ಗ್ಲೂಕೊಸೈಡುಗಳ ತಯಾರಿಕೆ : ಸಕ್ಕರೆಯನ್ನು ವೇಗವರ್ಧಕದ ಸಮಕ್ಷಮ ಆಲ್ಕೊಹಾಲ್ ಅಥವಾ ಫೀನಾಲಿನೊಡನೆ ಸಾಂದ್ರೀಕರಿಸಿ ಗ್ಲೂಕೊಸೈಡುಗಳನ್ನು ತಯಾರಿಸಬಹುದು. 1% ರಿಂದ 0.5% ಹೈಡ್ರೊಜನ್ ಕ್ಲೋರೈಡ್ ಲೀನವಾಗಿರುವ ಜಲರಹಿತ ಆಲ್ಕೊಹಾಲಿನಲ್ಲಿ ಸಕ್ಕರೆಯನ್ನು ವಿಲೀನಮಾಡಿ ತರುವಾಯ ಮಿಶ್ರಣವನ್ನು ಕೆಲವು ಘಂಟೆಗಳ ಕಾಲ ಪುನರಭಿವಾಹ (ರಿಫ್ಲೆಕ್ಸ್) ಮಾಡುವುದು ಅಥವಾ ಒಂದೆರಡು ದಿವಸಗಳ ಕಾಲ ಪ್ರಯೋಗಶಾಲೆಯಲ್ಲಿ ಉಷ್ಣತೆಯಲ್ಲಿ ಬಿಡುವುದು ತಯಾರಿಕೆಯ ಒಂದು ಸರಳ ವಿಧಾನ. ಈ ವಿಧಾನದಲ್ಲಿ $\alpha$– ಮತ್ತು $\beta$– ಗ್ಲೂಕೊಸೈಡುಗಳ ಮಿಶ್ರಣ ದೊರೆಯುತ್ತದೆ. ಆದರೆ ಪರಿಶುದ್ಧ ಐಸೊಮರುಗಳ ಸಂಶ್ಲೇಷಣೆಗೂ ವಿಶಿಷ್ಟವಾದ ವಿಧಾನಗಳಿವೆ. (ಎಲ್.ಎ.ಆರ್.)

**ಗ್ಲೂಕೋಸ್ :** D- ಗ್ಲೂಕೋಸ್, D- ಗ್ಲೂಕೋಪೈರನೋಸ್, ದ್ರಾಕ್ಷಿ ಸಕ್ಕರೆ, ಧಾನ್ಯ ಸಕ್ಕರೆ, ಡೆಕ್ಸ್‌ಟ್ರೋಸ್, ಸೆರೆಲೋಸ್ ಎಂಬ ವಿವಿಧ ಹೆಸರುಗಳಿಂದ ಪರಿಚಿತವಾಗಿರುವ ಒಂದು ಏಕಶರ್ಕರ. ಇದರ ರಾಸಾಯನಿಕ ಅಣುಸೂತ್ರ $C_6H_{12}O_6$. ಪಿಷ್ಟಪದಾರ್ಥಗಳಲ್ಲಿ ಇದಕ್ಕೆ ಅತ್ಯಂತ ಪ್ರಮುಖ ಸ್ಥಾನ ಉಂಟು. ಬಹುಶಃ ಹೆಚ್ಚಿನ ಎಲ್ಲ ಹಣ್ಣು (ವಿಶೇಷತಃ ದ್ರಾಕ್ಷಿ, ಬಾಳೆಹಣ್ಣು, ಚೆರಿ) ಮತ್ತು ಜೇನಿನಲ್ಲಿ ತನ್ನದೇ ರೂಪದಲ್ಲಿಯೂ ಗ್ಲೂಕೋಸ್ ಇದೆ. ಆದ್ದರಿಂದ ಸಸ್ಯರಾಜ್ಯದಲ್ಲಿ ಇದು ಬಲು ವಿಪುಲ. ಹೂ, ಎಲೆಗಳಲ್ಲಿ ಕೂಡ ಇದು ಗ್ಲೂಕೊಸೈಡುಗಳ ಘಟಕವಾಗಿ ಉಂಟು. ಸರ್ವಸಾಮಾನ್ಯವಾಗಿ ಎಲ್ಲ ಪ್ರಾಣಿದೇಹಗಳಲ್ಲಿಯೂ ಇರುತ್ತದೆ. ಆದರೆ ಅತ್ಯಲ್ಪ ಗಾತ್ರದಲ್ಲಿ ಮಾತ್ರ ಪ್ರಾಣಿದೇಹದ ದ್ರವಗಳಲ್ಲಿ ಕೆಲವು ಸಂದರ್ಭಗಳಲ್ಲಿ ಸ್ವಾಭಾವಿಕ ಘಟಕವಾಗಿಯೂ ಕೆಲವೊಮ್ಮೆ ಯಾವುದಾದರೂ ರೋಗದ ಲಕ್ಷಣವಾಗಿಯೂ ಗ್ಲೂಕೋಸ್ ಕಂಡುಬರುತ್ತದೆ. ಆರೋಗ್ಯವಂತ ಮಾನವನ ರಕ್ತದಲ್ಲಿ 0.15 % ತೂಕದ ಗಾತ್ರದಲ್ಲಿಯೂ ಮಧುಮೇಹರೋಗಿಗಳ ರಕ್ತ ಮೂತ್ರಗಳಲ್ಲಿ 3% ವರೆಗೂ ಇರುವುದು.




$\alpha$–D–ಗ್ಲೂಕೋಸ್

ಸುಕ್ರೋಸನ್ನು (ಸಕ್ಕರೆ) ಮದ್ಯಾರ್ಕದಲ್ಲಿ ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ಸೇರಿಸಿ ಕುದಿಸಿ ಆರಿಸಿದರೆ ಗ್ಲೂಕೋಸ್ ಬಿಳಿ ಪುಡಿಯಾಗಿ ಹೊರಬರುತ್ತದೆ. ಅದನ್ನು ಸೋಸಿ ಕುದಿಯುವ ಮದ್ಯಾರ್ಕದಲ್ಲಿ ಕರಗಿಸಿ ಆ ದ್ರವಣವನ್ನು ಆರಿಸಿದರೆ ಶುದ್ಧ ಗ್ಲೂಕೋಸ್ ದೊರೆಯುತ್ತದೆ. ದೊಡ್ಡ ಗಾತ್ರದಲ್ಲಿ ಸ್ಟಾರ್ಚನ್ನು ಸಲ್ಫ್ಯೂರಿಕ್ ಆಮ್ಲದೊಂದಿಗೆ ಬೆರೆಸಿ ಹೆಚ್ಚು ಒತ್ತಡದಿಂದ ಕುದಿಸಿದ ಬಳಿಕ ತಯಾರಾಗುವ ದ್ರಾವಣದಲ್ಲಿಯ ಅಧಿಕಾಂಶ ನೀರನ್ನು ಆವಿಯಾಗಿ ಕಳೆಯುತ್ತಾರೆ. ಇದರಿಂದ ದೊರೆಯುವ ಸ್ನಿಗ್ಧ ದ್ರಾವಣವನ್ನು ಕಾರ್ನ್ ಸಿರಪ್ ಎಂದು ಮಾರುವುದುಂಟು. ಈ ಸಿರಪ್ಪನ್ನು ಇದ್ದಲು ಪುಡಿಯಲ್ಲಿ ಹಾಯಿಸಿ, ನೀರನ್ನು ಆವಿಯಾಗಿ ಕಳೆದಾಗ ದೊರೆಯುವ ಬಿಳಿ ಪುಡಿಯೇ ಗ್ಲೂಕೋಸ್. ಆರು ಭುಜಗಳ ಬಿಳಿ ಸ್ಫಟಿಕ ಇದಕ್ಕಿದೆ.

ಇದು ನೀರಿನಲ್ಲಿ ಅಧಿಕವಾಗಿಯೂ ಮದ್ಯಾರ್ಕದಲ್ಲಿ ಕಡಿಮೆ ಪ್ರಮಾಣದಲ್ಲಿಯೂ ವಿಲೀನವಾಗುವುದು. ರುಚಿಯಲ್ಲಿ ಸಕ್ಕರೆಗಿಂತ ಕಡಿಮೆ ಸಿಹಿ (ಸುಮಾರು ಅರ್ಧದಷ್ಟು). ಸ್ಫಟಿಕಜಲಸಹಿತವಾದ ಗ್ಲೂಕೋಸ್ ($C_6H_{12}O_6H_2O$) 86° ಸೆಂ. ನಲ್ಲೂ ಒಣ ಗ್ಲೂಕೋಸ್ 146° ಸೆಂ. ನಲ್ಲೂ ದ್ರವಿಸುತ್ತದೆ. ಗ್ಲೂಕೋಸಿನ ಪುಡಿಯನ್ನು 200° ಸೆಂ. ಉಷ್ಣತೆಯಲ್ಲಿ ಕಾಯಿಸಿದರೆ ಅನುಕ್ರಮವಾಗಿ ಹಳದಿ, ಕಂದು, ಚಾಕೊಲೇಟ್ ಬಣ್ಣಗಳನ್ನು ಪಡೆದು ಕ್ಯಾರಮೆಲ್ ತಯಾರಾಗುತ್ತದೆ. ಅದನ್ನು ಮಿಠಾಯಿ ತಯಾರಿಸುವುದಕ್ಕಾಗಿಯೂ ಮದ್ಯಕ್ಕೆ ಆಕರ್ಷಕ ಕಂದು ಬಣ್ಣವನ್ನು ಕೊಡುವುದಕ್ಕಾಗಿಯೂ ಉಪಯೋಗಿಸುತ್ತಾರೆ. ನಿಕೋಲ್ ಪ್ರಿಸ್ಮಿನೊಳಗಿಂದ ಹಾಯ್ದು ಬಂದ ಬೆಳಕಿನ ಕಿರಣಗಳನ್ನು (ಅಂದರೆ ಧ್ರುವೀಕೃತ ಕಿರಣಗಳನ್ನು) ಗ್ಲೂಕೋಸ್ ದ್ರಾವಣದಲ್ಲಿ ಹಾಯಿಸಿದಾಗ ಕಿರಣಗಳ ಕಂಪನಕಕ್ಷೆ ಬಲಕ್ಕೆ (ಅಂದರೆ ಪ್ರದಕ್ಷಿಣ ದಿಶೆ) ತಿರುಗಿಸಲ್ಪಡುತ್ತದೆ. ಅದೇ ತಯಾರಿಸಿದ ಗ್ಲೂಕೋಸ್ ದ್ರಾವಣದ ವಿಶಿಷ್ಟ ಕಿರಣಾವರ್ತನ ಸಾಮರ್ಥ್ಯ (ಸ್ಪೆಸಿಫಿಕ್ ರೊಟೇಷನ್) + 110°. ಇದು ಕ್ರಮೇಣ ಕಡಿಮೆಯಾಗುತ್ತ ಸುಮಾರು 24 ಗಂಟೆಗಳಲ್ಲಿ + 52.2° ಬಂದು ನಿಲ್ಲುತ್ತದೆ. ಈ ವ್ಯತ್ಯಯಾವರ್ತನೆಯ (ಮ್ಯೂಟರೊಟೇಷನ್) ಕಾರಣದ ಸಂಶೋಧನೆಯ ಪರಿಣಾಮವಾಗಿ ಗ್ಲೂಕೋಸಿನ ಎರಡು ರೂಪಗಳೂ ($\alpha$–ಮತ್ತು $\beta$–D ಗ್ಲೂಕೋಸ್) ಅವುಗಳ ರಚನೆಯ ಸೂಕ್ಷ್ಮ ವಿವರಗಳೂ ಕಂಡುಹಿಡಿಯಲ್ಪಟ್ಟವು. ಅಮೋನಿಯದಲ್ಲಿ ವಿಲೀನವಾಗಿಸಿದ ಸಿಲ್ವರ್ ನೈಟ್ರೇಟ್ ದ್ರಾವಣದಲ್ಲಿ ಗ್ಲೂಕೋಸನ್ನು ಬೆರೆಸಿ ಒಂದು ಪರೀಕ್ಷಾ ನಳಿಕೆಯಲ್ಲಿ ಕಾಯಿಸಿದರೆ ದ್ರಾವಣದೊಳಗಿಂದ ಬೆಳ್ಳಿ ಹೊರ ಬಂದು ಗಾಜಿನ ಮೇಲೆ ತೆಳುವಾಗಿ ಹರಡಿಕೊಂಡು ಗಾಜು ಕನ್ನಡಿಯಂತಾಗುತ್ತದೆ. ಅದೇ ಪ್ರಕಾರ ಫೆಹ್ಲಿಂಗನ ದ್ರಾವಣಗಳೆರಡನ್ನೂ (A ಮತ್ತು B) ಸಮಪ್ರಮಾಣದಲ್ಲಿ ಬೆರೆಸಿ ಆ ಮಿಶ್ರಣಕ್ಕೆ ಗ್ಲೂಕೋಸ್ ದ್ರಾವಣವನ್ನು ಕುದಿಸಿದರೆ ಕೆಂಪು ಪುಡಿ ಹೊರಬರುತ್ತದೆ. ಗ್ಲೂಕೋಸನ್ನು ಕಂಡುಹಿಡಿಯಲಿಕ್ಕೂ ಯಾವುದೇ ವಸ್ತುವಿನಲ್ಲಿ ಗ್ಲೂಕೋಸಿನ ತೂಕದ ಪ್ರಮಾಣವನ್ನು ಅಳೆಯಲಿಕ್ಕೂ ಈ ಪ್ರಯೋಗವನ್ನು ಉಪಯೋಗಿಸುತ್ತಾರೆ. ಇದಲ್ಲದೆ ಗ್ಲೂಕೋಸಿನ ಕಿರಣಾವರ್ತನ ಸಾಮರ್ಥ್ಯವೂ ಇದಕ್ಕಾಗಿ ಉಪಯೋಗಿಸಲ್ಪಡುತ್ತದೆ. ಮದ್ಯವೊಂದನ್ನು ಬಿಟ್ಟರೆ ಮಾನವನ ಜಠರದಲ್ಲಿ ಬದಲಾವಣೆಯನ್ನು ಹೊಂದದೆ ನೇರವಾಗಿ ರಕ್ತದಲ್ಲಿ ಆಕರ್ಷಿಸಲ್ಪಡುವ ಆಹಾರವೆಂದರೆ ಗ್ಲೂಕೋಸ್ ಒಂದೇ. ಆದ್ದರಿಂದ ಜಡ ಆಹಾರವನ್ನು ಪಚನ ಮಾಡಿಕೊಳ್ಳಲಾರದ ರೋಗಿಗಳಿಗೆ ಇದನ್ನು ಆಹಾರದಲ್ಲಾಗಲಿ ಎನಿಮಾದಿಂದಾಗಲಿ ಅಥವ ನೇರವಾಗಿ ರಕ್ತನಾಳಗಳಿಗೆ

ಚುಚ್ಚುಮದ್ದಿನಿಂದಾಗಲಿ ಕೊಡುತ್ತಾರೆ. ಮಾನವನ ದೇಹದಲ್ಲಿಯ ಸವಕಳಿಯ ಪೂರೈಕೆ ಮತ್ತು ಬೆಳವಣಿಗೆಗಳಿಗಾಗಿ ಗ್ಲೂಕೋಸ್ ಉಪಯೋಗವಾಗುತ್ತದೆ. ಗ್ಲೂಕೋಸಿನ ದ್ರಾವಣದಲ್ಲಿ ಈಸ್ಟನ್ನು ಬೆರೆಸಿ ಹುಳಿಯಗೊಟ್ಟರೆ ಮದ್ಯ ತಯಾರಾಗುತ್ತದೆ. (ವಿ.ಆರ್.ಡಿ.)

**ಗ್ಲೂಟತಯೋನ್ :** ಬದುಕಿರುವ ಬಹುಪಾಲು ಎಲ್ಲ ಕೋಶಗಳಲ್ಲೂ ಇರುವ ಗಂಧಕಯುಕ್ತ ರಾಸಾಯನಿಕ ಸಂಯುಕ್ತ. ವಿಕಿರಣತೆಯೊಂದಿಗೆ ಜೀವಿಗಳಿಗೆ ಹೆಚ್ಚಾಗಿ ಕೊಟ್ಟಲ್ಲಿ ಅದರ ಅಪಾಯ ತಟ್ಟದಂತೆ ಇದು ತಡೆಯಬಲ್ಲದು. ಊತಕಗಳ ವಿಕಿರಣತೆಯಿಂದ ಹುಟ್ಟುವ ಪರಾಕ್ಸೈಡುಗಳೊಂದಿಗೆ ಸುಲಭವಾಗಿ ಸೇರುವುದರಿಂದ ಹೀಗಾಗುವುದು. ಗ್ಲೂಟತಯೋನ್ ಹೇರಳವಾಗಿರುವ ಈಲಿಸ್ನಾಯು, ಹುದುಗುಗಳೇ ಇದರ ತಯಾರಿಕೆಗೆ ಮೂಲವಸ್ತುಗಳು. ಈ ಸಂಯುಕ್ತವನ್ನು ಹಾಪ್ಕಿನ್ಸ್ ಕಂಡುಹಿಡಿದಾಗಿನಿಂದ (1921), ಮೈಯಲ್ಲಿ ಇದರ ಪಾತ್ರದ ವಿಚಾರವಾಗಿ ಶೋಧನೆ ನಡೆದಿದೆ. ಯಾವ ಕೋಶ ಬದುಕಿ ಬಾಳಬೇಕಾದರೂ ಬೇಕಾಗುವ ಎಷ್ಟೊ ಎಂಜೈಮುಗಳ ಕೆಲಸಗಳಿಗೆ ಇದರ ನೆರವು ಬೇಕೇಬೇಕು. ಇಷ್ಟಕ್ಕೆಲ್ಲ ಇದರಲ್ಲಿರುವ ಗಂಧಕವೇ ಕಾರಣ. ಎಂಜೈಮುಗಳಲ್ಲೂ ಸಲ್ಫಹೈಡ್ರಿಲ್ (SH) ಗುಂಪುಗಳಿದ್ದರೂ ಅವಕ್ಕೆ ಆಕ್ಸಿಜನ್ ಕೂಡಿದಾಗ ಡೈಸಲ್ಫೈಡ್ ರೂಪಕ್ಕಿಳಿದು ಕೆಲಸಕ್ಕೆ ಬಾರದಾಗುತ್ತವೆ. ಈ ತಂಡಗಳನ್ನು ಮತ್ತೆ ಸಲ್ಫಹೈಡ್ರಿಲುಗಳಾಗಿ ಬದಲಿಸಿ ಚುರುಕುಗೊಳಿಸುವುದೇ ಗ್ಲೂಟತಯೋನಿನ ಹೆಚ್ಚಳಿಕೆ. ಇದು ಕೋಶಗಳಲ್ಲಿನ ಎಂಜೈಮುಗಳನ್ನು ಅಂಕೆಗೆ ಒಳಪಡಿಸುವುದು. ಗ್ಲೂಟಾಮಿಕ್ ಆಮ್ಲ, ಸಿಸ್ಟೀನ್ ಗ್ಲೈಸೀನ್ ಅಮೈನೊ ಆಮ್ಲಗಳು ಸೇರಿ ಗ್ಲೂಟತಯೋನ್ ಆಗಿರುವ ರೀತಿ ಸಹಸ್ರಾರು ಅಮೈನೋ ಆಮ್ಲಗಳು ಸೇರಿ ಆಗಿರುವ ಪ್ರೋಟೀನನ್ನು ಹೋಲುತ್ತದೆ. ಕೋಶಗಳ ಬೆಳವಣಿಗೆ, ವಿಕಾಸಗಳಲ್ಲಿ ಪ್ರೋಟೀನುಗಳು ಮುಖ್ಯ ಘಟಕಗಳಾದ್ದರಿಂದ ಇವುಗಳ ರೀತಿಯನ್ನು ಚೆನ್ನಾಗಿ ಅರಿಯಲು ಗ್ಲೂಟತಯೋನನ್ನು ಸುಲಭವಾಗಿ ಸರಳ ಮಾದರಿಯ ಮೂಲವಸ್ತುವಾಗಿ ವ್ಯಾಸಂಗಮಾಡಿದ್ದಾರೆ. (ಡಿ.ಎಸ್.ಎಸ್.)

**ಗ್ಲೂಟಾಮಿಕ್ ಆಮ್ಲ :** ಆಲ್ಫ ಅಮೈನೋ ಗ್ಲುಟಾರಿಕ್ ಆಮ್ಲ. ಪರಿಪೂರ್ಣವಾದ ಎಲ್ಲ ಪ್ರೋಟೀನುಗಳಲ್ಲಿಯೂ ಇರುವ ಅಮೈನೋ ಆಮ್ಲವಿದು. ನೈಸರ್ಗಿಕವಾಗಿ ದೊರೆಯುವ ರೂಪ L(+) ಗ್ಲೂಟಾಮಿಕ್ ಆಮ್ಲ. ಪ್ರಯೋಗ ಶಾಲೆಯಲ್ಲಿ ಸಂಶ್ಲೇಷಿಸಿದಾಗ D ಮತ್ತು L ರೂಪಗಳ ಮಿಶ್ರಣವಾದ ರೆಸೆಮಿಕ್ ರೂಪ ದೊರೆಯುತ್ತದೆ. ಈ ಮಿಶ್ರರೂಪ ಈಥರಿನಲ್ಲಿ ಸ್ವಲ್ಪ ಗಾತ್ರದಲ್ಲಿ ಮಾತ್ರ ವಿಲೀನವಾಗುತ್ತದೆ. D(-) ಗ್ಲೂಟಾಮಿಕ್ ಆಮ್ಲವನ್ನು ನೀರಿನಿಂದ ಪತ್ರ ಫಲಕಗಳಂತೆ ಪಡೆಯಬಹುದು. ಈಥರ್, ಅಸಿಟೋನ್, ಶೀತಲ ಗ್ಲೇಷಿಯಲ್ ಅಸಿಟಿಕ್ ಆಮ್ಲಗಳಲ್ಲಿ ಬಹಳ ಕಡಿಮೆ ಗಾತ್ರದಲ್ಲಿ L(+) ಗ್ಲೂಟಾಮಿಕ್ ಆಮ್ಲ ವಿಲೀನವಾಗುತ್ತದೆ. ಈಥೈಲ್ ಆಲ್ಕೊಹಾಲ್ ಮತ್ತು ಮೀಥೈಲ್ ಆಲ್ಕೊಹಾಲುಗಳಲ್ಲಿ ವಿಲೀನವೇ ಆಗುವುದಿಲ್ಲ.

ಔದ್ಯೋಗಿಕವಾಗಿ ಗ್ಲೂಟಾಮಿಕ್ ಆಮ್ಲವನ್ನು ಸಸ್ಯ ಪ್ರೋಟೀನುಗಳಿಂದ– ಉದಾಹರಣೆಗೆ ಗೋದಿಕಾಳಿನಲ್ಲಿರುವ ಗ್ಲೂಟೆನ್, ಬೀಟ್ ಸಕ್ಕರೆಯನ್ನು ತೆಗೆದ ಅನಂತರ ಉಳಿಯುವ ರದ್ದಿಪದಾರ್ಥ– ಜಲವಿಶ್ಲೇಷಣೆ ಮಾಡಿ ಪಡೆಯುತ್ತಾರೆ. ಅಕ್ರಿಲೋನೈಟ್ರಿಲಿನಿಂದ ಪ್ರಾರಂಭಿಸಿ ಗ್ಲೂಟಾಮಿಕ್ ಆಮ್ಲವನ್ನು ಆರ್ಗ್ಯಾನಿಕ್ ಸಂಶ್ಲೇಷಣೆಯಿಂದ ಪಡೆಯಬಹುದು. ಗ್ಲೂಟಾಮಿಕ್ ಆಮ್ಲ ಜೈವಿಕವಾಗಿ ಪ್ರಾಣಿಗಳ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಆದ್ದರಿಂದ ಇದು ಅನಾವಶ್ಯಕ ಅಮೈನೋ ಆಮ್ಲಗಳ ಗುಂಪಿಗೆ ಸೇರಿದೆ. ಗ್ಲೂಕೋಸಿನಿಂದ ಉತ್ಪತ್ತಿಯಾಗುವ ಪೈರೂವಿಕ್ ಆಮ್ಲ ಸಿಟ್ರಿಕ್ ಚಕ್ರದ ಮೂಲಕ ಉತ್ಕರ್ಷಣೆಯಾಗುವ ಆಲ್ಫಕೀಟೋ ಗ್ಲೂಟಾರಿಕ್ ಆಮ್ಲ ಒಂದು ಮಧ್ಯವರ್ತಿ ವಸ್ತುವಿನಂತೆ ಉತ್ಪತ್ತಿಯಾಗುತ್ತದೆ. ಇದು ಅಮೈನೊ ಪುಂಜವನ್ನು ದಾನಮಾಡಬಲ್ಲ ಅಮೈನೋ ಆಮ್ಲದೊಂದಿಗೆ ಟ್ರಾನ್ಸಾಮಿನೇಸ್ ಎಂಜೈಮಿನ ಇರವಿನಲ್ಲಿ ಗ್ಲೂಟಾಮಿಕ್ ಆಮ್ಲವಾಗಿ ಪರಿವರ್ತಿತವಾಗುತ್ತದೆ. ಈ ಕ್ರಿಯೆಗೆ ಉದಾಹರಣೆ :

$$HOOC\cdot(CH_2)_2\cdot CO\cdot COOH + CH_3CHNH_2\cdot COOH \xrightarrow{\text{ಎಂಜೈಮ್}}$$

ಆಲ್ಫ ಕೀಟೋ ಗ್ಲುಟಾರಿಕ್ ಆಮ್ಲ   ಅಲಾನಿನ್

$$HOOC\ (CH_2)_2\cdot CH\cdot NH_2\cdot COOH + CH_3\ CO\ COOH$$

ಗ್ಲೂಟಾಮಿಕ್ ಆಮ್ಲ   ಪೈರೂವಿಕ್ ಆಮ್ಲ

ಉಪ್ಪಿನ ಬದಲು ಆಹಾರಕ್ಕೆ ಒತ್ತಾಸೆಯಾಗುವಂತೆ ಗ್ಲೂಟಾಮಿಕ್ ಆಮ್ಲದ ಬಳಕೆ ಉಂಟು. ಅಲ್ಲದೆ ಔಷಧಿಯಾಗಿಯೂ ಇದನ್ನು ಉಪಯೋಗಿಸುತ್ತಾರೆ. ಜೀವರಸಾಯನ ವಿಜ್ಞಾನದ ಸಂಶೋಧನೆಗಳಲ್ಲಿ ಇದರ ಪಾತ್ರವಿದೆ. (ಎಚ್.ಎಸ್.ಎಸ್.)

**ಗ್ಲೈಕಾಲುಗಳು :** ಎರಡು ಹೈಡ್ರಾಕ್ಸಿಲ್ (-OH) ಗುಂಪುಗಳಿರುವ ಆಲ್ಕೊಹಾಲುಗಳು. ಎರಡು ಹೈಡ್ರಾಕ್ಸಿಲುಗಳೂ ಒಂದೇ ಕಾರ್ಬನ್ ಪರಮಾಣುವಿಗೆ ಬಂಧಿತವಾಗಿರುವುದು ಸಾಮಾನ್ಯವಾಗಿ ಸಾಧ್ಯವಿಲ್ಲ. ಏಕೆಂದರೆ ಅಂಥ ಸಂಯುಕ್ತ ಅಸ್ಥಿರ. ಹೈಡ್ರಾಕ್ಸಿಲುಗಳ ಪರಸ್ಪರ ಸ್ಥಾನಗಳನ್ನು ಅವಲಂಬಿಸಿ ಗ್ಲೈಕಾಲುಗಳನ್ನು α, β, γ ಗ್ಲೈಕಾಲುಗಳೆಂದು ಕರೆಯುವುದು ವಾಡಿಕೆ. ವೈಜ್ಞಾನಿಕ ಪರಿಶೀಲನೆಗಾಗಿ ನೂರಾರು ಬೇರೆ ಬೇರೆ ಗ್ಲೈಕಾಲುಗಳನ್ನು ಸಂಶ್ಲೇಷಿಸಲಾಗಿದೆ. ಕೀಟೋನುಗಳ ಅಪಕರ್ಷಣದಿಂದ ಲಭಿಸುವ ಪೈನಕಾಲುಗಳ (ದ್ವಿ–ತೃತೀಯಕ ಆಲ್ಕೊಹಾಲುಗಳ) ವಿಷಯದಲ್ಲಿ ಈ ಮಾತು ವಿಶೇಷವಾಗಿ ಸತ್ಯ. ಆದರೆ ವಾಣಿಜ್ಯ ದೃಷ್ಟಿಯಿಂದ ಈ ಯಾವ ಗ್ಲೈಕಾಲುಗಳಿಗೂ ಪ್ರಾಮುಖ್ಯವಿಲ್ಲ. ಕೆಲವು




ಕೀಟೋನ್   ಪೈನಕಾಲ್

ನಿಮ್ನ ಗ್ಲೈಕಾಲುಗಳಿಗೆ ಮಾತ್ರ ಪ್ರಾಮುಖ್ಯ ಉಂಟು. ಎಲ್ಲದಕ್ಕಿಂತ ಹೆಚ್ಚಾಗಿ ಎಥಿಲೀನ್ ಗ್ಲೈಕಾಲ್ ಬಹು ಮುಖ್ಯವಾದುದು. ಇದನ್ನು ಸಾಮಾನ್ಯವಾಗಿ ಗ್ಲೈಕಾಲ್ ಎಂದೇ ಕರೆಯುವುದುಂಟು. ಇದರ ಕ್ರಮಬದ್ಧ ರಾಸಾಯನಿಕ ನಾಮ 1,2 – ಈಥೇನ್ ಡೈಆಲ್.

ಎಥಿಲೀನ್ ಗ್ಲೈಕಾಲನ್ನು ತಯಾರಿಸುವುದು ಸಾಮಾನ್ಯವಾಗಿ ಎಥಿಲೀನಿನಿಂದ. ಕ್ಲೋರಿನಿನೊಂದಿಗೆ ಎಥಿಲೀನ್ ವರ್ತಿಸಿದಾಗ ಎಥಿಲೀನ್ ಡೈ ಕ್ಲೋರೈಡನ್ನೂ ಹೈಪೊಕ್ಲೋರಸ್ ಆಮ್ಲದೊಂದಿಗೆ ವರ್ತಿಸಿದಾಗ ಎಥಿಲೀನ್ ಕ್ಲೋರೊ ಹೈಡ್ರಿನನ್ನೂ ನೀಡುತ್ತದೆ. ಸೋಡಿಯಮ್ ಕಾರ್ಬೊನೇಟ್ ದ್ರಾವಣದೊಂದಿಗೆ ಕುದಿಸಿದರೆ ಇವೆರಡೂ ಎಥಿಲೀನ್ ಗ್ಲೈಕಾಲನ್ನು ಕೊಡುತ್ತವೆ.

$$CH_2 = CH_2 \rightarrow ClCH_2 - CH_2Cl \rightarrow HO\cdot CH_2 - CH_2OH..$$

$$CH_2 = CH_2 \rightarrow ClCH_2 - CH_2OH \rightarrow HO\cdot CH_2 - CH_2OH$$

ಆದರೆ ಈಚಿನ ವಿಧಾನಗಳಲ್ಲಿ ಸಾಮಾನ್ಯವಾಗಿ ಎಥಿಲೀನ್ ಕ್ಲೋರೊಹೈಡ್ರಿನನ್ನು ಎಥಿಲೀನ್ ಆಕ್ಸೈಡಾಗಿ ಪರಿವರ್ತಿಸಿ ಅದನ್ನು ಸಾರರಿಕ್ತ ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ಕಾಯಿಸಿ ಗ್ಲೈಕಾಲನ್ನು ತಯಾರಿಸುತ್ತಾರೆ.




ಎಥಿಲೀನ್ ಗ್ಲೈಕಾಲ್ ವರ್ಣರಹಿತವಾದ ತೈಲಸದೃಶ ದ್ರವ. ಅದರ ರುಚಿ ಸಿಹಿ. ಒಂದು ಬಗೆಯ ನಸುವಾಸನೆ ಉಂಟು. ಈ ದ್ರವ – $197^0$ ಸೆಂ. ನಲ್ಲಿ ಕುದಿಯುವುದು. ಇದು ನೀರಿಗಿಂತ ಭಾರ. ಆದರೆ ನೀರಿನಲ್ಲಿ ಎಲ್ಲ ಪ್ರಮಾಣಗಳಲ್ಲಿಯೂ ದ್ರಾವ್ಯ. ಇದರ ಜಲೀಯ ದ್ರಾವಣಗಳು ಬಹು ಕೆಳಗಿನ ಉಷ್ಣತೆಯಲ್ಲಿ ಘನೀಭವಿಸುವುವಾದ್ದರಿಂದ ಮೋಟಾರು ವಾಹನಗಳ ರೆಡಿಯೇಟರುಗಳಲ್ಲಿ ಘನೀಭವನ ನಿರೋಧಕವಾಗಿ ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ಇದರ ಇತರ ಪ್ರಮುಖ ಉಪಯೋಗಗಳೆಂದರೆ ಈಥರ್ ಮತ್ತು ಎಸ್ಟರುಗಳ ತಯಾರಿಕೆಯಲ್ಲಿ ಹಾಗೂ ಸಂಶ್ಲೇಷಿತ ನಾರುಗಳ ತಯಾರಿಕೆಯಲ್ಲಿ.

ರಾಸಾಯನಿಕ ಗುಣಲಕ್ಷಣಗಳಲ್ಲಿ ಎಥಿಲೀನ್ ಗ್ಲೈಕಾಲ್ ಪ್ರಾಥಮಿಕ ಆಲ್ಕೊಹಾಲುಗಳನ್ನು ವಿಶೇಷವಾಗಿ ಹೋಲುತ್ತವೆ. ಕ್ಷಾರಲೋಹಗಳು ಹೈಡ್ರಾಕ್ಸಿಲಿನ ಹೈಡ್ರೋಜನ್ ಪರಮಾಣುಗಳನ್ನು ಪಲ್ಲಟಿಸಬಲ್ಲುವು. ಹೈಡ್ರೋಹ್ಯಾಲಿಕ್ ಆಮ್ಲಗಳೊಡನೆ ವರ್ತಿಸಿದಾಗ ಒಂದು ಹೈಡ್ರಾಕ್ಸಿಲ್ ಹೋಗಿ ಅಲ್ಲಿ ಹ್ಯಾಲೊಜನ್ ಸ್ಥಾಪಿತವಾಗುತ್ತದೆ. ರಂಜಕದ ಪೆಂಟಕ್ಲೋರೈಡಾದರೋ ಎರಡು ಹೈಡ್ರಾಕ್ಸಿಲುಗಳನ್ನೂ ತೆಗೆದು ಕ್ಲೋರಿನ್ ಪರಮಾಣುಗಳನ್ನು ಪ್ರತಿ ಸ್ಥಾಪಿಸುತ್ತದೆ. ಉತ್ಕರ್ಷಿಸಿದಾಗ ಗ್ಲೈಕಾಲ್ ಗ್ಲೈಕಾಲಿಕ್ ಆಮ್ಲವಾಗಿಯೂ ಕೊನೆಗೆ ಆಕ್ಸಾಲಿಕ್ ಆಮ್ಲವಾಗಿಯೂ ಪರಿವರ್ತನೆಗೊಳ್ಳುತ್ತದೆ. ಎಥಿಲೀನ್‌ಗ್ಲೈಕಾಲನ್ನು ಬಿಟ್ಟರೆ ವಾಣಿಜ್ಯ ಪ್ರಾಮುಖ್ಯದ ಇತರ ಗ್ಲೈಕಾಲುಗಳೆಂದರೆ $CH_3\ .CHOH.CH_2OH$ ಪ್ರೊಪೈಲೀನ್ ಗ್ಲೈಕಾಲ್. $(CH_3)_2$ -C (OH)-$CH_2$-CHOH- $CH_3$ ಹೆಕ್ಸೈಲೀನ್ ಗ್ಲೈಕಾಲ್. ಇವುಗಳಲ್ಲಿ ಮೊದಲನೆಯದು ಗುಣಲಕ್ಷಣಗಳಲ್ಲಿಯೂ ಉಪಯೋಗಗಳಲ್ಲಿಯೂ ಎಥಿಲೀನ್ ಗ್ಲೈಕಾಲನ್ನು ಹೋಲುವುದು. ಎರಡನೆಯದಾಗಿ ಹೆಕ್ಸೈಲೀನ್ ಗ್ಲೈಕಾಲನ್ನು ಪೋರ್ಟ್‌ಲೆಂಡ್ ಸಿಮೆಂಟಿನ ತಯಾರಿಕೆಯಲ್ಲೂ, ಕೆಲವು ಸಂದರ್ಭಗಳಲ್ಲಿ ಪೆಟ್ರೋಲಿಯಮ್ ಕೈಗಾರಿಕೆಯಲ್ಲೂ ಉಪಯೋಗಿಸುವರು. ಅಲ್ಲದೆ ವರ್ಣದ್ರವ್ಯಗಳು ಮತ್ತು ಶಾಯಿಗಳಿಗೆ ದ್ರಾವಕವಾಗಿಯೂ ಇದರ ಉಪಯೋಗ ಉಂಟು. (ಜಿ.ಆರ್.ಎಲ್.)

**ಗ್ಲೈಡರ್ :** ಎಂಜಿನ್ ಚಾಲನೆ ಇಲ್ಲದ ವಾಯುವಿಮಾನ. ಇದರೊಳಗೆ ಒಬ್ಬ ಚಾಲಕ ಕುಳಿತಿರುತ್ತಾನೆ. ವಾಯುವಿಗಿಂತ ತೂಕವಾದ ವಸ್ತುವಿನಲ್ಲಿ ಕುಳಿತು ವಾಯುಮಂಡಲದಲ್ಲಿ ಹಾರಾಟ ಪ್ರಯೋಗಮಾಡುವ ದಿಶೆಯಲ್ಲಿ ಮನುಷ್ಯ ಮೊದಲು

ಬಳಸಿದ ಸಾಧನ ಗ್ಲೈಡರ್. ಇದಕ್ಕೆ ಎಂಜಿನ್ ಜೋಡಿಸಿ ಚಾಲನ ಸಾಮರ್ಥ್ಯವನ್ನು ಒದಗಿಸಿದಾಗ ಸಾಂಪ್ರದಾಯಿಕ ವಿಮಾನ (ಏರೋಪ್ಲೇನ್) ದೊರೆಯುತ್ತದೆ. ಬೀಸುವ ಗಾಳಿಯಲ್ಲಿನ ಶಕ್ತಿಯನ್ನು ಉಪಯೋಗಿಸಿಕೊಂಡು ಗ್ಲೈಡರ್ ವಾಯುಮಂಡಲದಲ್ಲಿ



**ರೈಟ್ ಸಹೋದರರ ಗ್ಲೈಡರ್ (1902)**

ತೇಲುತ್ತ ನಿಧಾನವಾಗಿ ಕೆಳಗಿಳಿಯಬಲ್ಲದು. ನೆಲದ ಮೇಲಿರುವ ಕೆಲವು ಯಾಂತ್ರಿಕ ಸಾಧನೆಗಳ ಮೂಲಕ ಇದನ್ನು ಗಾಳಿಪಟದಂತೆ ಭೂಮಿಯಿಂದ ಮೇಲಕ್ಕೆ ಏರಿಸಲೂಬಹುದು. ಇಂಥ ಮೇಲಕ್ಕೇರಬಲ್ಲ ಫಲಕಗಳನ್ನು ಸೇಯ್ಲ್‌ಪ್ಲೇನ್ ಎಂದೂ ಕರೆಯುವರು. ಗ್ಲೈಡರಿನ ವಿನ್ಯಾಸವನ್ನು ಈಚೆಗೆ ಬಹಳ ಅಭಿವೃದ್ಧಿ ಪಡಿಸಲಾಗಿದೆ. ಸೈನ್ಯಕಾರ್ಯಾಚರಣೆಯಲ್ಲಿ ಸೈನಿಕರನ್ನು ಯುದ್ಧ ಪ್ರದೇಶಗಳಲ್ಲಿ ಇಳಿಸುವುದರಲ್ಲಿಯೂ ವಾಯುಯಾನ ಶಾಸ್ತ್ರ ಮತ್ತು ವಾಯುಲಕ್ಷಣ ಶಾಸ್ತ್ರಗಳಿಗೆ ಸಂಬಂಧಿಸಿದ ಸಂಶೋಧನ ಕಾರ್ಯಗಳಲ್ಲಿಯೂ ಗ್ಲೈಡರುಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುವುದುಂಟು.

ಅಮೆರಿಕದ ಆಟೋ ಲೀಯೆಂಥಾಲ್ ಎಂಬ ವಿಜ್ಞಾನಿ 1867 ರಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ವಾಯುಯಾನವನ್ನು **(ನೋಡಿ)** ಸಾಧ್ಯಗೊಳಿಸಬಲ್ಲ ಕೆಲವು ಬಹುಮುಖ್ಯ ಭೌತ ಸಿದ್ಧಾಂತಗಳನ್ನು ನಿರೂಪಿಸಿದ. ತರುವಾಯ 1900 ರಲ್ಲಿ ರೈಟ್ ಸಹೋದರರು ಈ ಪ್ರಯೋಗಗಳನ್ನು ಇನ್ನೂ ತೀವ್ರವಾಗಿ ಮುಂದುವರಿಸಿ ವಾಯುಯಾನವನ್ನು ಅಪಾಯವಿಲ್ಲದಂತೆ ಮಾಡುವ ಕೆಲವು ನಿಯಂತ್ರಣ ವ್ಯವಸ್ಥೆಗಳನ್ನು ನಿರ್ಮಿಸಿದರು. ಇವುಗಳಲ್ಲಿ ಮುಖ್ಯವಾದವು ವಿಮಾನವನ್ನು ತಿರುಗಿಸುವುದಕ್ಕೆ ಚುಕ್ಕಾಣಿ (ರಡ್ಡರ್), ಸುತ್ತುವಂತೆ ಮಾಡುವುದಕ್ಕೆ ಏಲೆರಾನ್ಸ್, ಹತ್ತುವಾಗ ಇಳಿಯುವಾಗ ಉಪಯೋಗಿಸುವ ಎಲೆವೇಟರ್ಸ್ ಎಂಬವು. ಮುಂದೆ ಇವರೇ ನಿರ್ಮಿಸಿದ ಎಂಜಿನ್ ಚಾಲಿತ ವಿಮಾನ ರಚನೆಗೆ ಈ ಆವಿಷ್ಕರಣಗಳು ಪೀಠಿಕೆಯಾದುವು.

**ಗ್ಲೈಡರ್ ಹಾರಾಟ**

ಕೆಲವು ವಿಶಿಷ್ಟ ಪರಿಸ್ಥಿತಿಗಳಲ್ಲಿ ವಾಯುಮಂಡಲದೊಳಗೆ ಊರ್ಧ್ವಮುಖವಾಗಿ ಹರಿಯುವ ಗಾಳಿಯ ಪ್ರವಾಹಗಳು ಉತ್ಪನ್ನವಾಗುತ್ತವೆ. ಉದಾಹರಣೆಗೆ ವೇಗವಾಗಿ ಬೀಸುವ ಗಾಳಿಯನ್ನು ಬೆಟ್ಟಗುಡ್ಡಗಳು ವೇಗ ತಡೆದಾಗ ಅದು ತನ್ನ ದಿಕ್ಕನ್ನು ಬದಲಿಸಿ ಮೇಲ್ಮೊಗವಾಗಿ ಹರಿಯುತ್ತದೆ. ಬೇರೆ ಬೇರೆ ಉಷ್ಣ ವಿಭವಗಳಲ್ಲಿರುವ ಗಾಳಿಯ ಎರಡು ದೊಡ್ಡ ಭಾಗಗಳು ಪರಸ್ಪರ ಸಂಘಟ್ಟಿಸಿದಾಗ ಕೂಡ ಇಂಥ ಊರ್ಧ್ವಮುಖ ಪ್ರವಾಹ ಉಂಟಾಗುತ್ತದೆ. ಸೂರ್ಯನ ಬಿಸಿಲಿನಿಂದ ಕಾದ ಭೂಮಿ ಸುತ್ತಮುತ್ತಲಿನ ಗಾಳಿಯ ಉಷ್ಣತೆಯನ್ನು ಹೆಚ್ಚಿಸುವುದು. ಹೀಗೆ ಬಿಸಿಯಾದ ಗಾಳಿ ಹಗುರವಾಗಿ ಮೇಲೇರುವುದು. ಈ ಕಾರಣಗಳಿಂದ ಕೂಡ ಕೆಲವು ಪ್ರದೇಶಗಳಲ್ಲಿ ಊರ್ಧ್ವಾಭಿಮುಖವಾದ ವಾಯುವಿನ ಉಷ್ಣಪ್ರವಾಹಗಳು ಏರ್ಪಡುವುವು. ಬಿಸಿಯಾದ ಗಾಳಿ ಮೇಲಕ್ಕೆ ಹೋಗುತ್ತ ತಣ್ಣಗಾಗುವುದು. ಆಗ ಗಾಳಿಯಲ್ಲಿ ತೇವಾಂಶ ಘನಿಸಿ ಕ್ಯುಮುಲಸ್ ಮೋಡಗಳೆಂಬ ವಿಶಿಷ್ಟ ರೀತಿಯ ಮೋಡಗಳು ಉದ್ಭವವಾಗುವುವು. ಇಂಥ ಕ್ಯುಮುಲಸ್ ಮೋಡಗಳ ಕೆಳಭಾಗದಲ್ಲಿ ಗಾಳಿಯ ಸಂಚಲನೆ ಇರುತ್ತದೆ. ಗಾಳಿಯ ಈ ಊರ್ಧ್ವ ಪ್ರವಾಹಗಳನ್ನು ಬಳಸಿಕೊಂಡು ಗ್ಲೈಡರುಗಳಲ್ಲಿ ಮೇಲೇರಿ ಬಹಳ ಹೊತ್ತು ಆಕಾಶದಲ್ಲಿ ಮೋಡಗಳ ಸಮೀಪ ತೇಲುತ್ತಿರುವುದು ಸಾಧ್ಯ.

**ಗ್ಲೈಡರ್ ಪ್ಲೇನ್**

ಒಂದು ಪ್ರವಾಹದ ಸಹಾಯದಿಂದ ಮೇಲಕ್ಕೆ ಹತ್ತಿ ನಿಧಾನವಾಗಿ ವಾಯುಮಂಡಲದಲ್ಲೆ ಕೆಳಕ್ಕೆ ಜಾರುವುದು ಇಲ್ಲಿನ ತಂತ್ರ. ಆಗ ಗ್ಲೈಡರನ್ನು ಅತ್ತಲಿತ್ತ ತಿರುಗಿಸುತ್ತ ಚಾಲಕ ಇನ್ನೊಂದು ಪ್ರವಾಹವನ್ನು ಸಂಧಿಸುತ್ತಾನೆ. ಇದರ ಸಹಾಯದಿಂದ ಇನ್ನೂ ಮೇಲಕ್ಕೇರುತ್ತಾನೆ. ಇಂಥ ತಂತ್ರಗಳನ್ನು ಉಪಯೋಗಿಸಿ ಸಮುದ್ರಮಟ್ಟಕ್ಕಿಂತ ಮೇಲೆ 13.71 ಕಿಮೀ (45000 ಅಡಿ) ಗಳಷ್ಟು ಎತ್ತರಕ್ಕೆ ಹಾರಿದ್ದುದೂ ಉಂಟು; 72 ಘಂಟೆಗಳಿಗಿಂತಲೂ ಹೆಚ್ಚು ಕಾಲ ತೇಲುತ್ತಿದ್ದುದೂ ಉಂಟು.

**ಇಳಿಜಾರಿನಲ್ಲಿ ಓಡಿಬಂದು ಗ್ಲೈಡರ್ ಹಾರಾಟ – ಆರಂಭದ ಪ್ರಯತ್ನ**

ಗ್ಲೈಡರಿನಲ್ಲಿ ರೆಕ್ಕೆಗಳ ಆಕಾರ ಬಲು ಮುಖ್ಯ. ಗಾಳಿಯ ನೆಗಪು (ಲಿಫ್ಟ್) ಗರಿಷ್ಠವಾಗಿಯೂ ಕರ್ಷಣ (ಡ್ರ್ಯಾಗ್) ಕನಿಷ್ಠವಾಗಿಯೂ ಇರುವಂತೆ ವಾಯುಗತಿಶಾಸ್ತ್ರ ರೀತ್ಯ ರೆಕ್ಕೆಯ ಆಕಾರವನ್ನು ನಿರ್ಧರಿಸಲಾಗುವುದು. ಇಂದಿನ ಗ್ಲೈಡರಿನ ರೆಕ್ಕೆಗಳ ಗಾತ್ರ 15ಮೀ ಉದ್ದ 1.2ಮೀ ಅಗಲ ಇದೆ. ಹಿಂದಿನ ಕಾಲದಲ್ಲಿ ಪ್ಲೈವುಡ್, ದಪ್ಪ ಬಟ್ಟೆ ಮತ್ತು ಉಕ್ಕಿನ ಕೊಳವೆಗಳನ್ನು ಉಪಯೋಗಿಸಿ ಗ್ಲೈಡರ್‌ಗಳನ್ನು ಕಟ್ಟುತ್ತಿದ್ದರು. ಅಲ್ಯೂಮಿನಿಯಮ್

ಹಾಳೆಗಳು ಮತ್ತು ಗಾಜಿನ ಎಳೆಗಳಿಂದ ಬಲಪಡಿಸಿದ ಪ್ಲಾಸ್ಟಿಕ್ ರೀತಿಯ ವಸ್ತುಗಳಿಂದ ಎರಕ ಹೊಯ್ದ (ಮೋಲ್ಡೆಡ್ ಫೈಬರ್‌ಗ್ಲಾಸ್) ಗ್ಲೈಡರುಗಳನ್ನು ರೂಪಿಸುವ ವಿಧಾನಗಳು ಈಗ ಬಳಕೆಯಲ್ಲಿವೆ.

ಗ್ಲೈಡರ್ ಸೈಲ್ ಪ್ಲೇನ್

ಗ್ಲೈಡರುಗಳಲ್ಲಿ ಬಹಳ ಎತ್ತರ, ಬಹಳ ಹೊತ್ತು ಯಶಸ್ವಿಯಾಗಿ ಹಾರಬೇಕಾದರೆ ಕೆಲವು ಉಪಕರಣಗಳ ಸಹಾಯ ಬೇಕಾಗುತ್ತದೆ. ಇವುಗಳಲ್ಲಿ ಮುಖ್ಯವಾದವು ಎತ್ತರ ಮತ್ತು ವೇಗವನ್ನು ಸೂಚಿಸುವ ಮಾಪಕಗಳು, ಗ್ಲೈಡರಿನ ತಿರುವು ಮತ್ತು ಸುತ್ತುಗಳನ್ನು ಸೂಚಿಸುವ ಸಾಧನಗಳು, ಹತ್ತುವ ಇಳಿಯುವ ವೇಗ ಪ್ರಮಾಣ ಸೂಚಕಗಳು, ಜಿ.ಪಿ.ಎಸ್,

ಗ್ಲೈಡರ್ ಹಾರಾಟದ ಇನ್ನೊಂದು ಭಂಗಿ

ಮತ್ತು ವಾಯುಪ್ರವಾಹವನ್ನು ಗುರುತಿಸಿ ಅದರ ಲಕ್ಷಣಗಳನ್ನು ತಿಳಿಸುವ ಮಾಪಕಗಳು. ಇವೆಲ್ಲವನ್ನು ಈಗ ಕಾಕ್‌ಪಿಟ್‌ನಲ್ಲಿ ಅಳವಡಿಸಲಾಗುತ್ತದೆ. ಪ್ರಾರಂಭದಲ್ಲಿ ಗ್ಲೈಡರ್ ಮೇಲಕ್ಕೆ ಹತ್ತುವಂತೆ ಮಾಡಲು ನೆಲದ ಮೇಲೆ ಅದನ್ನು ಸ್ವಲ್ಪ ದೂರ ಬಹಳ ವೇಗವಾಗಿ ಓಡಿಸಬೇಕಾಗುತ್ತದೆ. ಇದಕ್ಕೋಸ್ಕರ ಹಿಂದೆ ಗ್ಲೈಡರಿಗೆ ನೈಲಾನ್ ಹಗ್ಗವನ್ನು ಕಟ್ಟಿ ಜೀಪುಗಳಿಂದ ವೇಗವಾಗಿ ಎಳೆಸುತ್ತಿದ್ದರು. ಈಗ ವಿಂಚ್ ಎಂಬ ದೊಡ್ಡರಾಟೆಯುಳ್ಳ ಯಂತ್ರದಿಂದಲೂ ಗ್ಲೈಡರುಗಳನ್ನು ಎಳೆಯಲಾಗುತ್ತದೆ. ಇದಲ್ಲದೆ ವಾಯುವಿಮಾನಗಳನ್ನು (ಏರೋಪ್ಲೇನ್ಸ್) ಉಪಯೋಗಿಸಿ ಗ್ಲೈಡರುಗಳನ್ನು ಆಕಾಶದಲ್ಲಿ ತೇಲಿಬಿಡುವ ಪದ್ಧತಿಯೂ ಬಹುವಾಗಿ ಬಳಕೆಯಲ್ಲಿದೆ. ಈಗ ಯಂತ್ರಚಾಲಿತ ಗ್ಲೈಡರ್‌ಗಳೂ ಲಭ್ಯವಿವೆ. ಪ್ಯಾರಾಗ್ಲೈಡರ್, ಹ್ಯಾಂಗ್ ಗ್ಲೈಡರ್ ಇವು ಗ್ಲೈಡರ್‌ನ ಇತರ ಪ್ರಕಾರಗಳು. (ಬಿ.ಪಿ.ಜಿ.)

**ಗ್ಲೈಡಿನ್ಲಿ :** ಕಚ್ಚಾನಾಗಾ ಜನರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆ. ಈಕೆ 1915ರಲ್ಲಿ ಜನಿಸಿದಳು. ಮಣಿಪುರ, ಕಾಚಾರ್ ಹಾಗೂ ನಾಗಾ ಜಿಲ್ಲೆಗಳಲ್ಲಿ ಹಂಚಿಹೋಗಿದ್ದ ಕಚ್ಚಾನಾಗಾ ಜನರನ್ನು ಸಂಘಟಿಸಿದಳು (1931–32). 1925ರ ವೇಳೆಗೆ ಕಚ್ಚಾನಾಗಾ ಜನರಲ್ಲಿ ಹರಿದು ಹಂಚಿಹೋಗಿದ್ದ ತಮ್ಮನ್ನೆಲ್ಲ ಒಂದುಗೂಡಿಸಲು ಹೊಸ ನಾಗರಾಜನೆಂಬ ದೈವ ಪುರುಷನೊಬ್ಬ ಬರುತ್ತಾನೆಂದೂ ಅವನು ಬ್ರಿಟಿಷರನ್ನು ಓಡಿಸುತ್ತಾನೆಂದೂ ನಂಬಿಕೆ ಮನೆಮಾಡಿತ್ತು. ಜಾಡೋನಾಂಗ್ ಎಂಬುವವನು ಕಚ್ಚಾನಾಗಾಗಳ ರಕ್ಷಕನೆಂದು ಹೇಳಿಕೊಂಡು ಅವರನ್ನು ಸಂಘಟಿಸಿದ (1929). ಅಲ್ಲದೆ ಅವರಲ್ಲಿದ್ದ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದುಹಾಕಿ ಎಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಿದ. ಹಾಗಾಗಿ ಕಚ್ಚಾನಾಗಾಗಳು ತಮ್ಮದೇ ಆದ ಸ್ವತಂತ್ರ ನಾಗಾರಾಜ್ಯವನ್ನು ರೂಪಿಸಿ ಕೊಂಡರು. ಇದರಿಂದ ಕಳವಳಗೊಂಡ ಬ್ರಿಟಿಷ್ ಸರ್ಕಾರ ಜಾಡೋನಾಂಗ್‌ನನ್ನು ಬಂಧಿಸಿ ನೇಣು ಹಾಕಿತ್ತು (1931). ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಜಾಡೋನಾಂಗ್‌ನ ದೂರದ ಸಂಬಂಧಿಯಾದ ಗ್ಲೈಡಿನ್ಲಿಯು ಕಚ್ಚಾನಾಗಾ ಜನರ ನೆರವಿಗೆ ಬಂದಳು. ಇವಳು ಕಚ್ಚಾನಾಗಾ ಜನ ವಾಸಮಾಡುತ್ತಿದ್ದ ಪ್ರದೇಶಗಳಲ್ಲೆಲ್ಲ ಸುತ್ತಾಡಿ, ಅವರನ್ನೆಲ್ಲ ಸಂಘಟಿಸಿ ಹೋರಾಟದ ಮನೋಭಾವನೆ ಮೂಡಿಸಿದಳು. ಈಕೆ ಅಸ್ಸಾಮಿನ ಕ್ರಾಂತಿಕಾರಿಗಳ ಸಂಪರ್ಕ ಪಡೆದು ಕ್ರಾಂತಿಕಾರಿ ಚಳವಳಿಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದಳು. ಅಂತಿಮವಾಗಿ ಸರ್ಕಾರದ ವಿರುದ್ಧ ದಂಗೆಯೇಳುವಂತೆ ಪ್ರಚೋದಿಸಿ, ಸರ್ಕಾರಕ್ಕೆ ಕಂದಾಯ ಸಲ್ಲಿಸದಂತೆ, ಬಲವಂತ ದುಡಿಮೆ ಮಾಡದಂತೆ ಕರೆನೀಡಿದಳು. ಬ್ರಿಟಿಷ್ ಸರ್ಕಾರ ಇವಳನ್ನು ಬಂಧಿಸಲು ಪ್ರಯತ್ನಿಸಿದಾಗ ತಪ್ಪಿಸಿಕೊಂಡಳು. ಆಗ ಇವಳ ಹೆಸರಿನ ಎಲ್ಲಾ ತರುಣಿಯರನ್ನು ಬಂಧಿಸಿ ಪ್ರಶ್ನಿಸಲಾರಂಭಿಸಿದರು. 1932ರ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಗ್ಲೈಡಿನ್ಲಿಯ ಅನುಯಾಯಿಗಳಿಗೂ ಬ್ರಿಟಿಷ್ ಸರ್ಕಾರಿ ಪಡೆಗಳಿಗೂ ನಡುವೆ ಕದನ ನಡೆಯಿತು. ಈಕೆಯ ಬೆಂಬಲಿಗರ ಹಳ್ಳಿಗಳಿಗೆ ಬೆಂಕಿ ಹಚ್ಚಲಾಯಿತು. ಈಕೆ ತನ್ನ ಬೆಂಬಲಿಗರ ರಕ್ಷಣೆಗಾಗಿ ಪುಲೋಮಿ ಎಂಬ ಗ್ರಾಮದಲ್ಲಿ ಬಿದಿರು ಕೋಟೆಯೊಂದನ್ನು ನಿರ್ಮಿಸಿದಳು. ಇದು 4,000 ಮಂದಿಗೆ ಆಶ್ರಯ ಕೊಡುವಂತಿತ್ತು. ಈ ನೆಲೆಯಿಂದ ಸರ್ಕಾರದ ವಿರುದ್ಧ ಕ್ರಾಂತಿಕಾರಕ ಚಟುವಟಿಕೆಗಳನ್ನು ರೂಪಿಸತೊಡಗಿದಳು. ಆದರೆ ಅನಿರೀಕ್ಷಿತವಾಗಿ ನಾಗಾ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ತನ್ನ ಸೈನಿಕ ಪಡೆಯೊಂದಿಗೆ ಧಾಳಿ ಮಾಡಿ ಗ್ಲೈಡಿನ್ಲಿಯನ್ನೂ ಇವಳ ಅನುಯಾಯಿಗಳನ್ನೂ ಬಂಧಿಸಿದ. ಈಕೆಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಆದರೆ 1947ರಲ್ಲಿ ಭಾರತ ಸ್ವತಂತ್ರವಾದ ಮೇಲೆ ಬಿಡುಗಡೆಯಾದಳು. ಜವಾಹರಲಾಲ್ ನೆಹರೂ ಈಕೆಯನ್ನು ನಾಗಾರಾಣಿ ಎಂದು ಕರೆದ ಕಾರಣ ಈಕೆ ರಾಣಿಗ್ಲೈಡಿನ್ಲಿ ಎಂದೇ ಪ್ರಸಿದ್ಧಳಾಗಿದ್ದಳು. (ಕೆ.ಎಸ್‌ಡಿ.)

**ಗ್ಲೋರಿಯೋಸ :** ಲಿಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಲಶುನ ಸಸ್ಯಜಾತಿ. ಇದರಲ್ಲಿ ಹಲವಾರು ಪ್ರಭೇದಗಳಿವೆ. ಭಾರತದಲ್ಲಿ ಸುಪರ್ಬ ಎಂಬ ಒಂದು ಪ್ರಭೇದ ಬೆಳೆಯುತ್ತದೆ. ಇದಕ್ಕೆ ಇಂಗ್ಲಿಷಿನಲ್ಲಿ ಗ್ಲೋರಿ ಲಿಲಿ, ಸರ್ಪೆಂಟ್ಸ್ ಟಂಗ್, ಮಲಬಾರ್ ಗ್ಲೋರಿ, ಟೈಗರ್ಸ್ ಕ್ಲಾ ಮುಂತಾದ ಹೆಸರುಗಳೂ ಕನ್ನಡದಲ್ಲಿ ಕರಡಿಕಣ್ಣಿನಗೆಡ್ಡೆ, ಕೋಳಿಕುಟುಮನ

ಗೆಡ್ಡೆ, ಅಗ್ನಿಶಿಖೆ, ಶಿವಶಕ್ತಿ ಬಳ್ಳಿ ಮುಂತಾದ ಹೆಸರುಗಳೂ ಇವೆ. ಕಾಡುಸಸ್ಯವಾಗಿ ಬೆಳೆಯುವ ಇದನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಬೆಳೆಸುವುದುಂಟು. ಅಲ್ಲದೆ ಇದಕ್ಕೆ ಔಷಧೀಯ ಪ್ರಾಮುಖ್ಯವೂ ಇದೆ. ಗ್ಲೋರಿಯೋಸ ಇತರ ಆಸರೆಗಳ ಮೇಲೆ ಹಬ್ಬಿಕೊಂಡು ಬೆಳೆಯುವ ದುರ್ಬಲಕಾಂಡದ ಒಂದು ಬಳ್ಳಿ. ಇದರಲ್ಲಿ ಭೂಗತವಾಗಿರುವ ಪ್ರಕಂದವಿದೆ. ಎಲೆಗಳು ಸರಳ; ಪರ್ಯಾಯ, ಅಭಿಮುಖ ಇಲ್ಲವೆ ವರ್ತುಲ ಮಾದರಿಗಳಲ್ಲಿ ಜೋಡಣೆಗೊಂಡಿವೆ. ಎಲೆಗಳಿಗೆ ತೊಟ್ಟು ಇಲ್ಲ. ಎಲೆಯ ತುದಿಗಳು ತುಂಬ ಉದ್ದವಾಗಿ ಸುರುಳಿ ಸುತ್ತಿಕೊಂಡಿರುವವು. ಇವು ಒಂದು ರೀತಿಯ ಕುಡಿತಂತುಗಳಾಗಿ (ಟೆಂಡ್ರಿಲ್ಸ್)

ಮಾರ್ಪಟ್ಟಿವೆ. ಇವುಗಳ ಸಹಾಯದಿಂದ ಗಿಡ ಆಸರೆಗಳ ಮೇಲೆ ಹಬ್ಬುತ್ತದೆ. ಹೂಗಳು ಎಲೆಗಳ ಕಂಕುಳಲ್ಲಿ ಒಂಟೊಂಟಿಯಾಗಿ ಅರಳುತ್ತವೆ. ಇವು ದೊಡ್ಡ ಗಾತ್ರದವು. ಮೊದಲು ಹಸುರು ಬಣ್ಣಕ್ಕಿದ್ದು, ಬರಬರುತ್ತ ಹಳದಿ, ಕಡುಗೆಂಪು ಬಣ್ಣವನ್ನು ತಳೆಯುವುದರಿಂದ ಬಹಳ ಆಕರ್ಷಕವಾಗಿರುತ್ತವೆ. ಪೆರಿಯಾಂತ್ ಹಾಲೆಗಳು ಹಿಮ್ಮುಖವಾಗಿ ಬಾಗಿರುವುದು ಹೂಗಳ ವಿಶಿಷ್ಟ ಲಕ್ಷಣ. ಕೇಸರಗಳ ಅಂಡಾಶಯ ಉಚ್ಚಸ್ಥಾನದ್ದು; 3 ಕಾರ್ಪೆಲುಗಳಿಂದ ಕೂಡಿದೆ. ಕಾಯಿ ಸಂಪುಟ ಮಾದರಿಯದು.

ಗ್ಲೋರಿಯೋಸವನ್ನು ಬೀಜಗಳಿಂದ ಮತ್ತು ಗೆಡ್ಡೆ ಅಥವಾ ಪ್ರಕಂದದ ತುಂಡುಗಳಿಂದ ವೃದ್ಧಿಮಾಡಬಹುದು. ಪ್ರಕಂದದ ತುಂಡುಗಳಿಂದ ವೃದ್ಧಿಮಾಡುವುದು ಬಹಳ ಸುಲಭ. ಇವನ್ನು ಮಾರ್ಚ್-ಏಪ್ರಿಲ್ ತಿಂಗಳಲ್ಲಿ ನೆಡಬೇಕು. ಕಾಲಕ್ಕನುಸಾರವಾಗಿ ನೀರನ್ನು ಹಾಕಬೇಕು. ಜುಲೈ-ಸೆಪ್ಟೆಂಬರ್ ವೇಳೆಗೆ ಹೂ ಅರಳಲು ಪ್ರಾರಂಭಿಸುತ್ತವೆ. ಗ್ಲೋರಿಯೋಸದ ಪ್ರಕಂದಕ್ಕೆ ಶಕ್ತಿವರ್ಧಕ, ಜಂತುನಾಶಕ ಗುಣಗಳಿವೆ. ಗಾನರೀಯ, ಕೆಲವು ಬಗೆಯ ಚರ್ಮವ್ಯಾಧಿಗಳು, ಹೊಟ್ಟೆ ನುಲಿತ ಮುಂತಾದವುಗಳ ಚಿಕಿತ್ಸೆಗೂ ಇದನ್ನು ಬಳಸಲಾಗುತ್ತದೆ. ಎಲೆಯ ರಸವನ್ನು ಹೇನು ನಿರ್ಮೂಲನಕ್ಕೆ ಉಪಯೋಗಿಸುವುದುಂಟು. (ಎಂ.ಎಚ್.ಎಂ.)

**ಗ್ಲ್ಯಾಡಿಯೋಲಸ್ :** ಇರಿಡೇಸೀ ಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಲಶುನ ಸಸ್ಯ ಜಾತಿ. ಬಲು ಸುಂದರವಾದ ಹೂಗಳನ್ನು ಬಿಡುವುದರಿಂದ ಇದನ್ನು ಅಲಂಕಾರಕ್ಕಾಗಿ ಬೆಳೆಸುತ್ತಾರೆ. ದಕ್ಷಿಣ ಅಮೆರಿಕ ಇದರ ತವರು. ಇದರಲ್ಲಿ ಸುಮಾರು 160 ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ಬಗೆಗಳು ದಕ್ಷಿಣ ಆಫ್ರಿಕದ ಮೂಲವಾಸಿಗಳು. ಉಳಿದವುಗಳ ತವರು ಮೆಡಿಟರೇನಿಯನ್ ಪ್ರದೇಶ ಇಲ್ಲವೆ ಏಷ್ಯದ ಪಶ್ಚಿಮ ಭಾಗ.

ಎಲ್ಲ ಪ್ರಭೇದಗಳೂ ಮೂಲಿಕೆ ಬಗೆಯವು. ಕಾಂಡ ಕಂದುಗಡ್ಡೆ (ಕಾರ್ಮ್) ರೀತಿಯದು. ಪ್ರತಿವರ್ಷ ಹಳೆಯ ಕಾಂಡ ಸತ್ತುಹೋಗಿ ಅದರ ಮೇಲ್ತುದಿಯಲ್ಲಿ ಹೊಸಕಾಂಡ ಹುಟ್ಟಿಕೊಳ್ಳುತ್ತದೆ. ಜೊತೆಗೆ ಕಾಂಡದ ಬುಡದಿಂದ ಕೆಲವು ಮರಿ ಗೆಡ್ಡೆಗಳೂ ಹುಟ್ಟುತ್ತವೆ. ಎಲೆಗಳು ಕತ್ತಿಯಾಕಾರದವು. ಹೂಗಳು ಸರಳವಾದ ಇಲ್ಲವೇ ಕವಲೊಡೆದ ಕದಿರುಗೊಂಚಲುಗಳಲ್ಲಿ ಜೋಡಣೆಗೊಂಡಿವೆ. ಹೂಗಳು ದೊಡ್ಡ ಗಾತ್ರದವು. ಇವುಗಳ ಆಕಾರ ಆಲಿಕೆಯಂತೆ. ಹೂಗಳು ಕೆಂಪು, ಕೆನ್ನೀಲಿ, ಹಳದಿ, ಬಿಳಿ ಮುಂತಾಗಿ ವರ್ಣವೈವಿಧ್ಯವನ್ನು ತೋರುವುದರಿಂದ ಬಲು ಸುಂದರವಾಗಿ ಕಾಣುತ್ತವೆ. ಪ್ರತಿಹೂವಿನಲ್ಲಿ 6 ಪೆರಿಯಾಂತ್ ಹಾಲೆಗಳು, 3 ಕೇಸರಗಳು, ಮೂರು ಕಾರ್ಪೆಲುಗಳನ್ನೊಳಗೊಂಡ ನೀಚಸ್ಥಾನದ ಅಂಡಾಶಯ ಇವೆ. ಕಾಯಿ ಸಂಪುಟ ಮಾದರಿಯದು. ಬೀಜಗಳು ಚಪ್ಪಟೆಯಾಗಿರಬಹುದು ಇಲ್ಲವೆ ಗುಂಡಗಿರಬಹುದು. ಉದ್ಯಾನಗಳಲ್ಲಿ ಬೆಳೆಸಲಾಗುವ ಪ್ರಭೇದಗಳಲ್ಲಿ ಏಲೆಟಸ್, ಗ್ರ್ಯಾಂಡಿಸ್, ಟ್ರಿಸ್ಟಿಸ್, ಬೈಫ್ಲೋರಸ್, ಕಾರ್ಡಿನ್ಯಾಲಿಸ್, ಪ್ರಿಮ್ಯುಲೈನಸ್, ಬ್ಲಾಂಡಸ್, ಫ್ಲಾರಿಬಂಡಸ್, ಕಾಲ್‌ವಿಲ್ಲೈ, ಗಾಂಡವೆನ್ಸಿಸ್, ಲೆಮಾಯನೈ, ನಾನ್‌ಸೈಯೆನಸ್‌ಗಳು ಬಹಳ ಮುಖ್ಯವಾದವು. ಇವುಗಳಲ್ಲಿ ಕೊನೆಯ ನಾಲ್ಕು ಬಗೆಗಳು ಮಿಶ್ರತಳಿಗಳು.

ಗ್ಲ್ಯಾಡಿಯೋಲಸನ್ನು ಮರಿಗೆಡ್ಡೆಗಳಿಂದ ಇಲ್ಲವೆ ಬೀಜಗಳಿಂದ ವೃದ್ಧಿಸಬಹುದು. ನೀರು ಸರಾಗವಾಗಿ ಬಸಿದು ಹೋಗುವಂಥ ಯಾವ ಬಗೆಯ ಮಣ್ಣಿನಲ್ಲಾದರೂ ಇದರ ಬೆಳೆವಣಿಗೆ ಹುಲುಸು. ಮೈದಾನ ಸೀಮೆಗಳಲ್ಲಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲೂ ಬೆಟ್ಟ ಪ್ರದೇಶಗಳಲ್ಲಿ ಮಾರ್ಚ್-ಏಪ್ರಿಲ್ ತಿಂಗಳುಗಳಲ್ಲೂ ಗೆಡ್ಡೆಗಳನ್ನು ನೆಡಲಾಗುತ್ತದೆ. ನೆಲದಲ್ಲಿ ನೆಡುವ ಮುನ್ನ ಗೆಡ್ಡೆಗಳ ಮೇಲಿನ ಕಂದುಬಣ್ಣದ ಹುರುಪೆ ಎಲೆಯನ್ನು ತೆಗೆದುಹಾಕಿ, ಅಗಲವಾದ ತಟ್ಟೆಗಳನ್ನಿಟ್ಟು ಬೆಚ್ಚಗಿನ, ಕತ್ತಲೆಕೋಣೆಗಳಲ್ಲಿ ಕೊಂಚದಿನ ಇಡಬೇಕು. ಇದರಿಂದ ಗೆಡ್ಡೆಗಳು ಮೊಳಕೆಯೊಡೆಯುತ್ತವೆ. ಅನಂತರ ಅಪೇಕ್ಷಿತ ಸ್ಥಳಕ್ಕೆ ವರ್ಗಾಯಿಸಬೇಕು. ಸಾಕಷ್ಟು ಪರಿಮಾಣದಲ್ಲಿ ಕುದುರೆ ಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಹೊಂಗೆ ಇಲ್ಲವೆ ಹುಚ್ಚೆಳ್ಳಿನ ಹಿಂಡಿಯನ್ನು ಹಾಕುತ್ತಿದ್ದು ಚೆನ್ನಾಗಿ ನೀರು ಹಾಯಿಸುತ್ತಿದ್ದರೆ ಗಿಡಗಳು ಹುಲುಸಾಗಿ ಬೆಳೆದು ಎರಡು ತಿಂಗಳ ಅನಂತರ ಹೂ ಬಿಡಲು ಆರಂಭಿಸುತ್ತವೆ. ಹೂ ಅರಳುವ ಅವಧಿಯೂ ಸುಮಾರು ಎರಡು ತಿಂಗಳುಗಳು. ಹೂ ಬಿಡುವ ಕಾಲ ಮುಗಿಯುತ್ತ ಬಂದಾಗ, ಗಿಡಗಳು ಬಾಗಿ ಕಂದುಬಣ್ಣಕ್ಕೆ ತಿರುಗುತ್ತವೆ. ಆಗ ಗಿಡಗಳಿಗೆ ನೀರು ಕಟ್ಟುವುದನ್ನು ನಿಲ್ಲಿಸಬೇಕು. ಎರಡು ವಾರಗಳ ಅನಂತರ ಮರಿಗೆಡ್ಡೆಗಳನ್ನು ಅಗೆದು ತಂಪಾದ ಮತ್ತು ಶುಷ್ಕವಾದ ಮರಳಿನ ಗೆಡ್ಡೆಗಳಲ್ಲಿ ಶೇಖರಿಸಿಡಬೇಕು. ಗೆಡ್ಡೆಗಳು ಹೆಚ್ಚು ಚಳಿಯನ್ನು ತಡೆಯುವುದಿಲ್ಲವಾದ್ದರಿಂದ ಅವು ಹೆಚ್ಚು ಚಳಿಗೆ ಸಿಗದಂತೆ ನೋಡಿಕೊಳ್ಳಬೇಕು. (ಎಂ.ಎಚ್.ಎಂ.;ಎನ್.ಎಸ್.ಐ.)

**ಗ್ಲ್ಯಾಡ್‌ಸ್ಟನ್, ವಿಲಿಯಂ ಇವಾರ್ಟ್ :** 1809-98. ಹತ್ತೊಂಬತ್ತನೆಯ ಶತಮಾನದ ಅತ್ಯಂತ ಪ್ರಸಿದ್ಧ ಬ್ರಿಟಿಷ್ ರಾಜತಂತ್ರಜ್ಞ, ವಾಗ್ಮಿ, ಗ್ರಂಥಕರ್ತ. ಈತ ಸುಮಾರು ನಲವತ್ತು ವರ್ಷಗಳ ಕಾಲ ತನ್ನ ದೇಶದ ರಾಜಕೀಯ ಕ್ಷೇತ್ರದಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ಪ್ರಮುಖನಾಗಿದ್ದ. ದೇಶದ ಹಣಕಾಸಿನ ವ್ಯವಹಾರಗಳಲ್ಲಿ ಈತ ಅತಿ ಚತುರನಾಗಿದ್ದ. ನಾಲ್ಕು ಸಾರಿ ಇಂಗ್ಲೆಂಡಿನ ಪ್ರಧಾನಿಯಾಗಿದ್ದ. ಲಿವರ್‌ಪೂಲಿನಲ್ಲಿ 1809ರ ಡಿಸೆಂಬರ್ 29 ರಂದು ಜನಿಸಿದ ಈತ ಸ್ಕಾಟಿಷ್ ವಂಶಸ್ಥ. ತಂದೆ ಜಾನ್ ಗ್ಲ್ಯಾಡ್‌ಸ್ಟನ್ ಲಿವರ್‌ಪೂಲಿನ ಶ್ರೀಮಂತ ವರ್ತಕ. ಈಟನ್ ಮತ್ತು ಆಕ್ಸ್‌ಫರ್ಡಿನ ಕ್ರೈಸ್ಟ್ ಚರ್ಚಿನಲ್ಲಿ ವಿಲಿಯಂ ಗ್ಲ್ಯಾಡ್‌ಸ್ಟನ್ ವಿದ್ಯಾಭ್ಯಾಸ ಪಡೆದ. ಈತ ಆಕ್ಸ್‌ಫರ್ಡ್ ಯೂನಿಯನ್ನಿನ ಅಧ್ಯಕ್ಷನಾಗಿ ಚುನಾಯಿತನಾಗಿದ್ದ.

ಗ್ಲ್ಯಾಡ್‌ಸ್ಟನನ ಸಾರ್ವಜನಿಕ ಜೀವನ ಚಿಕ್ಕವಯಸ್ಸಿನಲ್ಲೇ ಆರಂಭವಾಯಿತು. 1832 ರಲ್ಲಿ, 23ನೆಯ ವಯಸ್ಸಿನಲ್ಲಿ, ನೆವಾರ್ಕ್ ಕ್ಷೇತ್ರದಿಂದ ಕಾಮನ್ಸ್ ಸಭೆಗೆ ಆರಿಸಿ ಬಂದ. 1834 ರಲ್ಲಿ ಸರ್ ರಾಬರ್ಟ್ ಪೀಲನ ಮಂತ್ರಿಮಂಡಲದಲ್ಲಿ ಖಜಾನೆ ವ್ಯವಹಾರಗಳ ಕಿರಿಯ ಸದಸ್ಯನಾಗಿ ನೇಮಿಸಲ್ಪಟ್ಟನಲ್ಲದೆ 1835 ರಲ್ಲಿ ವಸಾಹತುಗಳ ಅಧೀನ ಕಾರ್ಯದರ್ಶಿಯಾದ. 1838ರಲ್ಲಿ ದಿ ಸ್ಟೇಟ್ ಇನ್ ರಿಲೇಷನ್ಸ್ ವಿತ್ ದಿ ಚರ್ಚ್ ಎಂಬ ಒಂದು ವಿವಾದಾಸ್ಪದ ಗ್ರಂಥವನ್ನು ಪ್ರಕಟಿಸಿದ. 1841ರಲ್ಲಿ ಈತ ಬೋರ್ಡ್ ಆಫ್ ಟ್ರೇಡಿನ ಉಪಾಧ್ಯಕ್ಷನೂ 1843ರಲ್ಲಿ ಅದರ ಅಧ್ಯಕ್ಷನೂ ಆದ. 1845ರ ಜನವರಿಯಲ್ಲಿ ಚರ್ಚ್ ನೀತಿಯ ಬಗ್ಗೆ ಭಿನ್ನಾಭಿಪ್ರಾಯ ಉಂಟಾಗಿ ರಾಜೀನಾಮೆ ಸಲ್ಲಿಸಿದ. ಆದರೆ ಅದೇ ವರ್ಷ ಡಿಸೆಂಬರಿನಲ್ಲಿ ಪುನಃ ಸರ್ಕಾರವನ್ನು ಸೇರಿದಾಗ ಇವನನ್ನು ವಸಾಹತು ವ್ಯವಹಾರಗಳ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಪೀಲ್ ಸರ್ಕಾರದ ಪತನವಾದಾಗ ಇವನ ಅಧಿಕಾರವೂ ಹೋಯಿತು. 1847 ರಲ್ಲಿ ಈತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಕಾಮನ್ಸ್ ಸಭೆಗೆ ಪುನ: ಆರಿಸಿ ಬಂದ. ಈತ 1849 ರಲ್ಲಿ ಇಟಲಿಗೆ ಭೇಟಿ ನೀಡಿ ನೇಪಲ್ಸಿನ ಸೆರೆಮನೆಗಳಲ್ಲಿದ್ದ ಪರಿಸ್ಥಿತಿಯನ್ನು ಕುರಿತು 1851ರಲ್ಲಿ ಲೇಖನಗಳನ್ನು ಪ್ರಕಟಿಸಿದ. ಈ ಲೇಖನಗಳು ಇಟಲಿಯಲ್ಲಿ ಅಲ್ಲೋಲ ಕಲ್ಲೋಲವನ್ನೆಬ್ಬಿಸಿದುವಲ್ಲದೆ ಅಲ್ಲಿಯ ಆಡಳಿತದಲ್ಲಿ ಬದಲಾವಣೆಗಳಾಗಲು ಸಹಾಯಕವಾದುವು.



1850ರಲ್ಲಿ ಸರ್ ರಾಬರ್ಟ್ ಪೀಲ್ ಗತಿಸಿದಾಗಿನಿಂದ ಇವನ ಪ್ರಾಮುಖ್ಯ ಹೆಚ್ಚುತ್ತ ಹೋಯಿತು. ಕಾಮನ್ಸ್ ಸಭೆಯಲ್ಲಿ ಈತ ಅತ್ಯುತ್ತಮ ವಾಗ್ಮಿ ಎಂದು ಹೆಸರಾದ. ಆರ್ಥಿಕ ವ್ಯವಹಾರಗಳ ಮಂತ್ರಿಯಾಗಿ ಈತ 1853ರಲ್ಲಿ ಮಂಡಿಸಿದ ಆಯವ್ಯಯ ದೇಶದ ಆರ್ಥಿಕ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿತು. 1868ರಲ್ಲಿ ಇವನು ಮೊದಲ ಬಾರಿಗೆ ಪ್ರಧಾನಿಯಾದ. 1878ರಲ್ಲಿ ರಾಜೀನಾಮೆ ಇತ್ತ. ಅನಂತರ ಕೆಲವು ವರ್ಷಗಳ ಕಾಲ ಅಧ್ಯಯನ ಮತ್ತು ಸಾಹಿತ್ಯ ಸೇವೆಯಲ್ಲಿ ನಿರತನಾದ. 1879-80ರಲ್ಲಿ ಈತ ಮಾಡಿದ ಭಾಷಣಗಳ ಪರಿಣಾಮವಾಗಿ ಡಿಸ್ರೇಲಿ ಮಂತ್ರಿಮಂಡಲದ ಪತನವಾಗಿ ಇವನು ಪ್ರಧಾನಿಯಾದ. ಆಗ ದೇಶ ಅಫ್ಘಾನಿಸ್ತಾನ, ದಕ್ಷಿಣ ಆಫ್ರಿಕ, ಐರ್ಲೆಂಡ್, ಈಜಿಪ್ಟ್, ಸೂಡಾನ್ ಮುಂತಾದ ಕಡೆಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಈ ಕಠಿಣ ಕಾಲದಲ್ಲಿ ತನ್ನ ನೀತಿಗಳಿಗೆ ಸಾಕಷ್ಟು ಬಹುಮತವಿಲ್ಲದ ಕಾರಣ ರಾಜೀನಾಮೆ ಇತ್ತು ಪುನಃ 1886ರಲ್ಲಿ ಮೂರನೆಯ ಬಾರಿ ಪ್ರಧಾನಮಂತ್ರಿಯಾದ. ಈ ಅವಧಿಯಲ್ಲಿ ಐರ್ಲೆಂಡಿನ ಬಗ್ಗೆ ಇವನು ಮಂಡಿಸಿದ ಹೋಮ್ ರೂಲ್ ಮಸೂದೆಗೆ ತನ್ನ ಪಕ್ಷದಲ್ಲೇ ಸಾಕಷ್ಟು

ಬೆಂಬಲ ದೊರೆಯದೆ ಹೋದ್ದರಿಂದ ಅದು ಬಿದ್ದುಹೋಯಿತು. ಇವನು ಪುನಃ ಪ್ರಧಾನಿ ಪದವಿಯನ್ನು ತ್ಯಜಿಸಬೇಕಾಯಿತು. 1892ರಲ್ಲಿ ನಾಲ್ಕನೆಯ ಮತ್ತು ಕೊನೆಯ ಬಾರಿ ಪ್ರಧಾನಿಯಾದ. ಹೋಮ್ ರೂಲ್ ಮಸೂದೆಯನ್ನು ಕಾಮನ್ಸ್ ಸಭೆ ಒಪ್ಪಿಕೊಂಡಿತಾದರೂ ಲಾರ್ಡ್ಸ್ ಸಭೆ ಅದನ್ನು ತಿರಸ್ಕರಿಸಿತು. ವೃದ್ಧಾಪ್ಯದ ಕಾರಣ 1894ರಲ್ಲಿ ಪ್ರಧಾನಮಂತ್ರಿ ಪದವಿಗೆ ಈತ ರಾಜೀನಾಮೆ ಇತ್ತ. ಅನಂತರವೂ ಈತ ದೇಶದ ಸಮಸ್ಯೆಗಳಲ್ಲಿ ಆಸಕ್ತಿ ತೋರಿಸುತ್ತಿದ್ದುದರ ಜೊತೆಗೆ ಹೋಮರ್, ಡಾಂಟೆ ಮತ್ತು ಇತರ ಬರೆಹಗಾರರ ವಿಷಯವಾಗಿ ಬರೆದ. ಈತ ಆದರ್ಶವಾದ ಮತ್ತು ವ್ಯವಹಾರ ಚತುರತೆಯ ಸಂಗಮವಾಗಿದ್ದ. ಹಲವು ಚಳವಳಿಗಳ ಪುರಸ್ಕರ್ತನಾಗಿ ಪ್ರಗತಿಪರ ವೈಚಾರಿಕನೆಂಬ ಹೆಸರು ಪಡೆದಿದ್ದ. ಲಾರ್ಡ್ ಸ್ಯಾಲಿಸ್‌ಬರಿ ಇವನನ್ನು ಒಬ್ಬ ಶ್ರೇಷ್ಠ ಕ್ರೈಸ್ತಧರ್ಮಿ ಎಂದು ವರ್ಣಿಸಿದ್ದಾನೆ. ಸಂಪ್ರದಾಯವಾದಿ ಟೋರಿಯಾಗಿ ರಾಜಕೀಯ ಜೀವನವನ್ನಾರಂಭಿಸಿದ ಗ್ಲ್ಯಾಡ್‌ಸ್ಟನ್ ಕ್ರಮಕ್ರಮವಾಗಿ ಉದಾರವಾದಿಯಾಗಿ ಕೀರ್ತಿಗಳಿಸಿದ. 1898ರ ಮೇ 19ರಂದು ಈತ ನಿಧನನಾದ. (ಎ.ಎಂ.ಆರ್.)

**ಗ್ಲ್ಯಾಸ್ಗೊ, ಎಲೆನ್ ಆಂಡರ್ಸರ್ನ್ ಘೋಲ್ಲಸ್ :** 1874– 1945. ಅಮೆರಿಕದ ಕಾದಂಬರಿಗಾರ್ತಿ. ವರ್ಜೀನಿಯದ ರಿಚ್‌ಮಂಡ್ ಎಂಬ ಸ್ಥಳದಲ್ಲಿ ಜನಿಸಿದಳು. ಹರೆಯದಲ್ಲಿ ಸದಾ ರೋಗಪೀಡಿತಳಾಗಿದ್ದುದರಿಂದ ಸಾಂಪ್ರದಾಯಿಕ ಶಾಲಾ ಶಿಕ್ಷಣ ಪಡೆಯಲಾಗಲಿಲ್ಲ. ಆದರೂ ಸ್ವಪ್ರಯತ್ನದಿಂದ ವಿಶೇಷಾಭ್ಯಾಸ ಮಾಡಿ ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಮೊದಲ ಕಾದಂಬರಿಯನ್ನು (ದಿ ಡಿಸೆಂಡೆಂಟ್) ರಚಿಸಿದಳು. ಇದು 1897ರಲ್ಲಿ ಪ್ರಕಟವಾಯಿತು. ಇವಳ ಮತ್ತೊಂದು ಕೃತಿ ದಿ ವಾಯ್ಸ್ ಆಫ್ ದಿ ಪೀಪಲ್ (1900) ಓದುಗರ ಲಕ್ಷ್ಯವನ್ನು ಸೆಳೆಯಿತು. ಈಕೆ ತನ್ನ ಜೀವನಾವಧಿಯಲ್ಲಿ 19 ಕಾದಂಬರಿಗಳಲ್ಲದೆ ಸಣ್ಣ ಕಥೆಗಳು, ಕವನಗಳು ಹಾಗೂ ಸಾಹಿತ್ಯಕ ಪ್ರಬಂಧಗಳನ್ನು ಬರೆದಿದ್ದಾಳೆ.

ಇವಳ ಕೃತಿಗಳು ಎಂದಿಗೂ ಪತ್ತೇದಾರಿ ಕಾದಂಬರಿಗಳಷ್ಟು ಜನಪ್ರಿಯವಾಗಲಿಲ್ಲವಾದರೂ ಈಕೆಯ ಪ್ರತಿಭೆಯನ್ನು ವಿಮರ್ಶಕರು ಬಹುವಾಗಿ ಮೆಚ್ಚಿದ್ದರು. ದಕ್ಷಿಣ ಅಮೆರಿಕದ ಬಗ್ಗೆ ಪ್ರಾಮಾಣಿಕವಾಗಿ ಬರೆದ ಮೊದಲ ಕಾದಂಬರಿಕಾರ್ತಿಯೆಂದು ಈಕೆಯನ್ನು ಪರಿಗಣಿಸಲಾಗಿದೆ. ಸಂತೋಷಕ್ಕಾಗಿ ಸೌಖ್ಯಕ್ಕಾಗಿ ಸ್ತ್ರೀಯರು ಕೆಲವೊಮ್ಮೆ ಮಾಡಬೇಕಾದ ಸಾಹಸದ ಹೋರಾಟವನ್ನು ಚಿತ್ರಿಸುವ ಘಟನೆಗಳು ಈಕೆಯ ಕಾದಂಬರಿಯಲ್ಲಿ ಕಾಣಬರುತ್ತವೆ. ಬ್ಯಾರನ್ ಗ್ರೌಂಡ್ (1925) ಎಂಬುದು ಇವಳ ಅತ್ಯುತ್ತಮ ಕಾದಂಬರಿ. ಒಬ್ಬ ಹೆಂಗಸಿನ ನಿರಾಶೆ ಮತ್ತು ಆಧ್ಯಾತ್ಮಿಕ ಗೆಲುವುಗಳ ಗಂಭೀರ ಚಿತ್ರಣವಿರುವ ಈ ಕೃತಿ ತುಂಬ ಮಾರ್ಮಿಕವಾಗಿದೆ. ವರ್ಜೀನಿಯ (1913) ಮತ್ತು ಲೈಫ್ ಅಂಡ್ ಗ್ರೇಬ್ರಿಲ (1916) ಎಂಬ ಕಾದಂಬರಿಗಳು ಸಮಸ್ಯಾತ್ಮಕವಾದವು. ದಿ ರೊಮ್ಯಾಂಟಿಕ್ ಕಾಮೆಡಿಯನ್ಸ್ (1926), ದೆ ಸ್ಟೂಪ್ಡ್ ಟು ಫಾಲಿ (1929), ದಿ ಷೆಲ್ಟರ್ಡ್ ಲೈಫ್ (1932) –ಎಂಬುವು ಶಿಷ್ಟಾಚಾರಕ್ಕೆ ಮೀಸಲಾದಂಥವು. ಮಿರುಗುವ ಶೈಲಿ, ಮಾರ್ಮಿಕ ವಿಡಂಬನೆ, ಜನರ ಆಂತರಿಕ ಜೀವನ ಚಿತ್ರಣ–ಇವನ್ನು ಈ ಕಾದಂಬರಿಯಲ್ಲಿ ಕಾಣಬಹುದು. ವೆಯಿನ್ ಆಫ್ ಐರನ್ (1935) ಎಂಬುದು ಓದುಗರ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವವನ್ನುಂಟುಮಾಡುವಂಥ ಮತ್ತೊಂದು ಉತ್ತಮ ಕಾದಂಬರಿ.

1941ರಲ್ಲಿ ಈಕೆ ರಚಿಸಿದ ಇನ್ ದಿಸ್ ಅವರ್ ಲೈಫ್ ಎಂಬ ಕಾದಂಬರಿಗೆ ಪುಲಿಟ್ಜರ್ ಬಹುಮಾನ ಬಂತು (1942). ಇದು ದಕ್ಷಿಣ ಅಮೆರಿಕದ ಸಂಪ್ರದಾಯಗಳನ್ನು ಕುರಿತು ಹೇಳುವಂಥದು. 1943ರಲ್ಲಿ ಈಕೆ ತನ್ನ ಕಾದಂಬರಿಗಳನ್ನು ಕುರಿತ ಒಂದು ವಿಮರ್ಶಾತ್ಮಕ ಮೌಲ್ಯ ನಿರ್ಧರಣೆಯನ್ನು ಎ ಸರ್ಟನ್ ಮೆಷರ್ ಎಂಬ ಹೆಸರಿನಲ್ಲಿ ಬರೆದಳು. ಈಕೆಯ ಆತ್ಮಚರಿತ್ರೆ ದಿ ವುಮನ್ ವಿದಿನ್ ಈಕೆಯ ಮರಣಾನಂತರ (1954) ಪ್ರಕಟವಾಯಿತು. (ಯು.ಎಸ್.ಎಚ್.)

**ಗ್ಲ್ಯಾಸ್ಗೋ :** ಸ್ಕಾಟ್ಲೆಂಡಿನ ಅತಿ ದೊಡ್ಡ ನಗರ, ರಾಯಲ್ ಮತ್ತು ಪಾರ್ಲಿಮೆಂಟರಿ ಬರೋ, ಬಂದರು, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ. ಕ್ಲೈಡ್ ನದಿಯ ಮುಖದಿಂದ 32 ಕಿಮೀ ಮೇಲಕ್ಕೆ, ಅದರ ಎರಡೂ ದಂಡೆಗಳ ಮೇಲೆ ಇದೆ. ಇಲ್ಲಿಂದ ಎಡಿನ್‌ಬರಾ ನಗರಕ್ಕೆ 70ಕಿಮೀ, ಲಂಡನಿಗೆ 633 ಕಿಮೀ. ಇದರ ವಿಸ್ತೀರ್ಣ 175, 5 ಚ.ಕಿಮೀ. ಜನಸಂಖ್ಯೆ 5,92,820 (2010). ನಗರದ ಮುಖ್ಯ ವಾಣಿಜ್ಯ ಮತ್ತು ಆಡಳಿತ ಕಟ್ಟಡಗಳು ಕ್ಲೈಡ್ ನದಿಯ ಉತ್ತರ ದಡದ ಮೇಲಿವೆ. ಗ್ಲ್ಯಾಸ್ಗೋದ ಸುತ್ತಲೂ ಹಲವು ಉಪನಗರಗಳಿವೆ.

ಗ್ಲ್ಯಾಸ್ಗೋದಲ್ಲಿ 19ನೆಯ ಶತಮಾನದಲ್ಲಿ ಕೈಗಾರಿಕೆಗಳು ಬೆಳೆದಂತೆ ಹಳೆಯ ಕಟ್ಟಡಗಳನ್ನು ಕೆಡವಿಹಾಕಲಾಯಿತು. 18ನೆಯ ಶತಮಾನಕ್ಕಿಂತ ಹಿಂದಿನ ಕಟ್ಟಡಗಳು ಹಲವಿಲ್ಲ. ದಿ ಕ್ರಾಸ್ ಅಥವಾ ಟಾಲ್ ಬೂತ್ ಗೋಪುರ (1627), ಕತೀಡ್ರಲ್, ಟ್ರಾನ್ಸ್ ಗೋಪುರ (1637), ಟ್ರೇಡ್ಸ್‌ಹಾಲ್ (1791), ಸ್ಟರ್ಲಿಂಗ್ ಗ್ರಂಥಾಲಯ, ಹಚಿಸನ್ ಆಸ್ಪತ್ರೆ, ಗೋರ್ಬಾಲ್ಸ್ ಪ್ಯಾರಿಷ್ ಚರ್ಚ್ (1803), ಅಂಚೆ ಕಛೇರಿ (1877), ಗ್ಲ್ಯಾಸ್ಗೋ ಕಲಾಶಾಲೆ ಇವು ಕೆಲವು ಹಳೆಯ ಕಟ್ಟಡಗಳು.

ಗ್ಲ್ಯಾಸ್ಗೋ ವಿಶ್ವವಿದ್ಯಾಲಯ 1451ರಲ್ಲಿ ಎರಡನೆಯ ಜೇಮ್ಸ್ ದೊರೆಯ ಕಾಲದಲ್ಲಿ ಸ್ಥಾಪಿತವಾಯಿತು. ಗ್ಲ್ಯಾಸ್ಗೋ ಬಿಷಪ್ ವಿಲಿಯಂ ಟರ್ನ್‌ಬುಲ್ ಇದರ ಪ್ರಥಮ ಕುಲಾಧಿಪತಿಯಾಗಿದ್ದ. 1632–1660ರಲ್ಲಿ ವಿಶ್ವವಿದ್ಯಾಲಯಕ್ಕೆ ಹೊಸ ಕಟ್ಟಡ ನಿರ್ಮಾಣವಾಯಿತು. ರಾಯಲ್ ವಿಜ್ಞಾನ ಮತ್ತು ತಾಂತ್ರಿಕ ಕಾಲೇಜು, ಸ್ಕಾಟಿಷ್ ವಾಣಿಜ್ಯ ಕಾಲೇಜು (1845), ಗ್ಲ್ಯಾಸ್ಗೋ ಕಲಾಶಾಲೆ, ರಾಯಲ್ ಸ್ಕಾಟಿಷ್ ಸಂಗೀತಶಾಲೆ (1874), ಸ್ಕಾಟ್ಲೆಂಡ್ ಕೃಷಿ ಕಾಲೇಜು (1899), ಟ್ರಿನಿಟಿ ಕಾಲೇಜು (1875), ಗ್ಲ್ಯಾಸ್ಗೋ ಮತ್ತು ಪಶ್ಚಿಮ ಸ್ಕಾಟ್ಲೆಂಡ್ ಗೃಹವಿಜ್ಞಾನ ಕಾಲೇಜು (1875), ಸೇಂಟ್ ಅಲೋಯ್ಸಿಯಸ್ ಬಾಲಕರ ಕಾಲೇಜು (1859), ನಾಟ್ರೆಡಾಂ ಬಾಲಕಿಯರ ಪ್ರೌಢಶಾಲೆ (1897), ಗ್ಲ್ಯಾಸ್ಗೋ ಪ್ರೌಢಶಾಲೆ (1450) ಇವು ಇಲ್ಲಿಯ ಮುಖ್ಯ ಶಾಲಾ ಕಾಲೇಜುಗಳು.

ಗ್ಲ್ಯಾಸ್ಗೋ ನಗರದ ಒಂದು ಭಾಗ

ಗ್ಲ್ಯಾಸ್ಗೋ ವಿಶ್ವವಿದ್ಯಾಲಯದ ಗ್ರಂಥಭಂಡಾರದ ಜೊತೆಗೆ ಗ್ಲ್ಯಾಸ್ಗೋ ಪೌರಸಭಾ ಸಾರ್ವಜನಿಕ ಗ್ರಂಥಾಲಯ ಪ್ರಸಿದ್ಧವಾದ್ದು. ಪ್ರತಿಶಾಲೆ ಅಥವಾ ಕಾಲೇಜಿನಲ್ಲೂ ಉಪಯುಕ್ತ ಗ್ರಂಥಭಂಡಾರಗಳಿವೆ. ನಗರದಲ್ಲಿ ವಸ್ತುಸಂಗ್ರಹಾಲಯ, ಪ್ರಾಣಿಸಂಗ್ರಹಾಲಯ, ಚಿತ್ರಸಂಗ್ರಹಾಲಯ ಮತ್ತು ಸುಂದರ ಉದ್ಯಾನಗಳು ಇವೆ. ಭೂಗರ್ಭ ರೈಲು, ಅಂತಾರಾಷ್ಟ್ರೀಯ ವಿಮಾನನಿಲ್ದಾಣ, ಸುವ್ಯವಸ್ಥಿತ ಹೆದ್ದಾರಿಗಳು– ಇವು ನಗರದ ಸಾರಿಗೆ ಸೌಲಭ್ಯಗಳು.

ಗ್ಲ್ಯಾಸ್ಗೋ ಪಶ್ಚಿಮ ಸ್ಕಾಟ್ಲೆಂಡಿನ ಮುಖ್ಯ ಮಾರುಕಟ್ಟೆ. ಇಲ್ಲಿಯ ವರ್ತಕರು ಇಂಗ್ಲೆಂಡ್, ಐರ್ಲೆಂಡ್, ಫ್ರಾನ್ಸ್ ಮತ್ತು ನಾರ್ವೆ ದೇಶಗಳೊಡನೆ 17 ನೆಯ ಶತಮಾನದಿಂದ ಸಂಬಂಧ ಪಡೆದಿದ್ದರು. ಹೊಗೆಸೊಪ್ಪಿನ ವ್ಯಾಪಾರದಿಂದ ಗ್ಲ್ಯಾಸ್ಗೋ ಸಮೃದ್ಧಿ ಪಡೆಯಿತು. ಅಮೆರಿಕ ಕ್ರಾಂತಿಯಿಂದಾಗಿ ಈ ವ್ಯಾಪಾರಕ್ಕೆ ಧಕ್ಕೆ ಒದಗಿತು. ಕೈಗಾರಿಕಾ ಕ್ರಾಂತಿ ಆರಂಭವಾದ ಮೇಲೆ 19 ನೆಯ ಶತಮಾನದಲ್ಲಿ ಗ್ಲ್ಯಾಸ್ಗೋ ಹೊಸ ಕೈಗಾರಿಕೆಗಳ ಬೀಡಾಯಿತು. ಹಡಗು ನಿರ್ಮಾಣ, ರಾಸಾಯನಿಕ ವಸ್ತು ತಯಾರಿಕೆ, ಇದ್ದಿಲು–ಕಬ್ಬಿಣ ಗಣಿಗಾರಿಕೆ, ಬಟ್ಟೆ, ಕಾಗದ, ಹೊಗೆಸೊಪ್ಪು, ಆಹಾರ ತಯಾರಿಕೆ ಮುಂತಾದವು ಬೆಳೆದವು.

ಗ್ಲ್ಯಾಸ್ಗೋ ನಗರದಲ್ಲೇ ಕ್ಲೈಡ್ ನದಿಗೆ ಹನ್ನೊಂದು ಸೇತುವೆಗಳಿವೆ. ಸರಕು ಸಾಗಿಸಲು ನದಿ ಉಪಯುಕ್ತವಾಗಿದೆ. ಹಡಗುಗಳು ನದಿಯಲ್ಲಿ ಸದಾ ಸಂಚರಿಸುತ್ತಿರುತ್ತವೆ.

ಗ್ಲ್ಯಾಸ್ಗೋ ನಗರದ ಸುತ್ತಲೂ ಶಿಲಾ ಮತ್ತು ಲೋಹಯುಗಗಳ ಅವಶೇಷಗಳು ದೊರಕಿವೆ. 6 ಮತ್ತು 7ನೆಯ ಶತಮಾನಗಳಿಂದಲೇ ಈ ನಗರದ ಉಲ್ಲೇಖವಿದೆ. ಸೇಂಟ್ ಕೆಂಟಿಜೆರ್ನ್ ಸು. 550ರಲ್ಲಿ ಇಲ್ಲಿಗೆ ಬಂದು ಈ ಜಿಲ್ಲೆಯ ಜನರನ್ನು ಮತಾಂತರಗೊಳಿಸಲು ಯತ್ನಿಸಿದ. ಗ್ಲ್ಯಾಸ್ಗೋದ ಪ್ರಥಮ ಕತೀಡ್ರಲನ್ನು ಕಟ್ಟಿಸಿದ ಸ್ಕಾಟ್ಲೆಂಡಿನ 1 ನೆಯ ಡೇವಿಡ್ ದೊರೆ ತನ್ನ ಗುರು ಜಾನ್ ಆಕಿಯಾಸನನ್ನು ಗ್ಲ್ಯಾಸ್ಗೋ ಚರ್ಚಿನ ಬಿಷಪ್ ಆಗಿ ನೇಮಿಸಿದ. ಸ್ಕಾಟ್ಲೆಂಡಿನ 2 ನೆಯ ಜೇಮ್ಸ್ 1450 ರಲ್ಲಿ ಈ ನಗರವನ್ನು ಬರೋ ಆಗಿ ಮಾನ್ಯಮಾಡಿದ. ಸ್ಕಾಟ್ಲೆಂಡಿನ 6ನೆಯ ಜೇಮ್ಸ್ ದೊರೆ (ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡಿನ 1ನೆಯ ಜೇಮ್ಸ್) ಮತ್ತು 1ನೆಯ ಚಾರ್ಲ್ಸ್ ದೊರೆ ಈ ನಗರವನ್ನು ರಾಯಲ್ ಬರೋ ಆಗಿ ಮಾಡಿದರು.

ಆಲಿವರ್ ಕ್ರಾಮ್ವೆಲ್ ಡನ್‌ಬಾರ್ ಬಳಿ ಸ್ಕಾಟರನ್ನು ಸೋಲಿಸಿದ ಅನಂತರ 1650ರಲ್ಲಿ ಗ್ಲ್ಯಾಸ್ಗೋ ನಗರಕ್ಕೆ ಭೇಟಿಕೊಟ್ಟ. 1689ರಲ್ಲಿ ಇವನು ಗ್ಲ್ಯಾಸ್ಗೋ ಬಿಷಪನ ಅಧಿಕಾರವನ್ನು ಕೊನೆಗೊಳಿಸಿ ಅದಕ್ಕೆ ಸ್ವತಂತ್ರ ನಗರ ಸಮಿತಿಯನ್ನು ಸ್ಥಾಪಿಸಿದ. ಸ್ಕಾಟ್ಲೆಂಡ್ ಚರ್ಚಿನ ಮೊದಲ ಮಹಾಸಭೆ ಗ್ಲ್ಯಾಸ್ಗೋದಲ್ಲಿ ಸೇರಿ (1638) ಪ್ರೆಸ್ಬಿಟೇರಿಯನಿಸಮ್ ಅನ್ನು ಸ್ಕಾಟಿಷ್ ಚರ್ಚ್ ಸರ್ಕಾರವ್ಯವಸ್ಥೆಯಾಗಿ ಘೋಷಿಸಿತು. ಗ್ಲ್ಯಾಸ್ಗೋದ ಪ್ರಥಮ ಪತ್ರಿಕೆ ಗ್ಲ್ಯಾಸ್ಗೋ ಕೂರ್‍ಯಾಂಟ್ 1715ರಲ್ಲಿ ಆರಂಭವಾಯಿತು. *

**ಗ್ವಾಂ :** ಅಮೆರಿಕ ಸಂಯುಕ್ತಸಂಸ್ಥಾನಗಳ ಅಧೀನದಲ್ಲಿರುವ ಒಂದು ದ್ವೀಪ. ಪಶ್ಚಿಮ ಪೆಸಿಫಿಕ್‌ಸಾಗರದಲ್ಲಿರುವ ಮಾರಿಯಾನ ದ್ವೀಪಗಳಲ್ಲಿ ಅತ್ಯಂತ ದೊಡ್ಡದು ಮತ್ತು ಜನಭರಿತವಾದದ್ದು. ವಿಶ್ವ ಜಲಾಂಬುಧಿಯಲ್ಲಿ ಅತ್ಯಂತ ಆಳ ತಾಣವಾಗಿರುವ ಮಾರಿಯಾನ ಟ್ರೆಂಚ್‌ಗೆ ಅತಿ ಸಮೀಪದಲ್ಲಿರುವ ದ್ವೀಪ. ಸ್ಯಾನ್‌ಫ್ರಾನ್ಸಿಸ್ಕೋದಿಂದ ಪಶ್ಚಿಮಕ್ಕೆ 960 ಕಿಮೀ ದೂರದಲ್ಲಿ, ಹೊನೊಲುಲುವಿಗೆ 5344 ಕಿಮೀ ಪಶ್ಚಿಮದಲ್ಲಿ, ಮನಿಲಕ್ಕೆ 2400 ಕಿಮೀ. ಪೂರ್ವದಲ್ಲಿ, ಉ.ಅ. $13.2^0$–$13.7^0$ ಮತ್ತು ಪೂ. ರೇ. 144. $6^0$–$145^0$ ಮೇಲೆ ಇದೆ. ವಿಸ್ತೀರ್ಣ 541.3 ಚ.ಕಿಮೀ. ಜನಸಂಖ್ಯೆ 1,59,436 (2010). ಈ ದ್ವೀಪದ ಉದ್ದ 48 ಕಿಮೀ, ಅಗಲ 6–19 ಕಿಮೀ. ರಾಜಧಾನಿ ಹಗಾತ್ನ.

ಗ್ವಾಂ ದ್ವೀಪದ ಉತ್ತರ ಭಾಗ ಸುಣ್ಣಕಲ್ಲಿನಿಂದ ಕೂಡಿದ ಪ್ರಸ್ಥಭೂಮಿ. ಈ ದ್ವೀಪದ ದಕ್ಷಿಣ ಭಾಗ ಎತ್ತರವಾಗಿದ್ದು ಅಗ್ನಿಪರ್ವತ ಪ್ರದೇಶಗಳಿಂದ ಕೂಡಿದೆ. ಪಶ್ಚಿಮ, ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ ಹೆಚ್ಚು ಎತ್ತರವಾದ ಬೆಟ್ಟಗಳಿವೆ. ಅವುಗಳಲ್ಲಿ ಮುಖ್ಯವಾದವು ಲಾಮ್‌ಲಾಮ್ (406 ಮೀ), ಜಮುಲಾಂಗ್ ಮಾಂಗ್ಲೋ (1,086 ಮೀ), ಬೊಲಾನೋಸ್ (1,220 ಮೀ) ಮತ್ತು ಸಸಲಾಗ್ವಾನ್ (1,109 ಮೀ).

ಇಲ್ಲಿಯದು ಉಷ್ಣವಲಯದ ಹಿತಕರ ವಾಯುಗುಣ. ಮೇ–ಜೂನ್ ಮಳೆಗಾಲ. ಗ್ವಾಂ ದ್ವೀಪದಲ್ಲಿ ಚಂಡಮಾರುತಗಳ ಹಾವಳಿ ಬಹಳ.

ಇಲ್ಲಿಯ ಜನ ಚಾಮಾರೊ ಬುಡಕಟ್ಟಿನವರು. ಇವರು ಪ್ರ.ಶ.ಪೂ.ಸು.2000 ದಲ್ಲಿ ಈ ದ್ವೀಪಕ್ಕೆ ಬಂದು ನೆಲೆಸಿರಬೇಕೆಂದು ತಿಳಿಯಲಾಗಿದೆ. ಇವರು ಇಂಡೊನೇಷ್ಯದ ಮೂಲ ಬುಡಕಟ್ಟಿಗೆ ಸೇರಿದವರು. ಇವರ ಭಾಷೆ ಚಾಮರೋ. ಇದು ಮೈಕ್ರೋನೇಷ್ಯನ್ ಉಪ–ಭಾಷೆಯಲ್ಲ. ಸ್ವಂತ ವ್ಯಾಕರಣ ಮತ್ತು ಶಬ್ದಕೋಶ ಇರುವ ಭಾಷೆಯಿದು. ರೋಮನ್ ಕೆಥೊಲಿಕರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಎರಡನೆಯ ಮಹಾಯುದ್ಧದ ಕೊನೆಯಲ್ಲಿ ಈ ದ್ವೀಪದ ಅನೇಕ ಭಾಗಗಳು ನಾಶವಾಗಿದ್ದವು. ಈಗ ಅವುಗಳ ಪುನರ್‌ನಿರ್ಮಾಣವಾಗಿದೆ.

ಪೋರ್ಚುಗೀಸ್ ನಾವಿಕನಾದ ಫರ್ಡಿನೆಂಡ್ ಮೆಗೆಲಾನ್ ಈ ದ್ವೀಪವನ್ನು 1521ರಲ್ಲಿ ಸ್ಪೇನಿನ ರಾಜನಿಗಾಗಿ ಕೈಗೊಂಡ ಸಾಗರಯಾನದ ಸಂದರ್ಭದಲ್ಲಿ ಕಂಡುಹಿಡಿದ. 1668ರಲ್ಲಿ ಇಲ್ಲಿ ಮೊದಲ ಸ್ಪ್ಯಾನಿಷ್ ವಸಾಹತು ತಲೆಯೆತ್ತಿತು. ಇಲ್ಲಿಯ ಜನಾಂಗ ಕ್ಷೀಣಿಸುವುದಕ್ಕೆ ಸಿಡುಬು, ಇನ್‌ಫ್ಲುಯೆಂಝ ರೋಗಗಳು ಮತ್ತು ಪದೇ ಪದೇ ಸಂಭವಿಸುತ್ತಿದ್ದ ಯುದ್ಧಗಳು ಮುಖ್ಯ ಕಾರಣಗಳು. ಈ ದ್ವೀಪ 1898 ರವರೆಗೆ ಸ್ಪೇನಿನ ಅಧೀನದಲ್ಲಿದ್ದು ಆಮೇಲೆ ಅಮೆರಿಕದ ವಶವಾಯಿತು. 1941–44ರ ನಡುವೆ ಜಪಾನರು ಇದನ್ನು ವಶಪಡಿಸಿಕೊಂಡಿದ್ದರು. ಆಮೇಲೆ ಇದು ಮತ್ತೆ ಅಮೆರಿಕದ ವಶವಾಯಿತು. 1668–1815ರವರೆಗೆ ಇದು ಮೆಕ್ಸಿಕೊ–ಮನಿಲ ಜಲವಾಣಿಜ್ಯ ಮಾರ್ಗದಲ್ಲಿ ಮುಖ್ಯ ತಂಗುದಾಣವೂ ಬಂದರೂ ಆಗಿತ್ತು.

ಗ್ವಾಂ ದ್ವೀಪಕ್ಕೆ ಅಮೆರಿಕದ ಅಧ್ಯಕ್ಷನಿಂದ ನೇಮಿಸಲ್ಪಟ್ಟ ರಾಜ್ಯಪಾಲನಿದ್ದಾನೆ. ಪ್ರಜೆಗಳಿಂದ ಚುನಾಯಿತವಾದ ವಿಧಾನಸಭೆಯಿದೆ. ಗ್ವಾಂ ದ್ವೀಪದಿಂದ ಹೊನೊಲುಲು, ಮನಿಲ, ಓಕಿನಾವಾಗಳಿಗೆ ವಾಯುಮಾರ್ಗಗಳಿವೆ. ದ್ವೀಪದ ಮುಖ್ಯ ಸ್ಥಳಗಳಿಗೆ ರಸ್ತೆಯೂ ಜಲಮಾರ್ಗಗಳೂ ಇವೆ. ಗ್ವಾಂ ದ್ವೀಪ ಅಮೆರಿಕದ ಮುಖ್ಯ ಸೇನಾ ಹಾಗೂ ನೌಕಾ ನೆಲೆ.

ಧಾನ್ಯ, ಬಾಳೆಹಣ್ಣು, ಕಿತ್ತಳೆ, ಕಲ್ಲಂಗಡಿ, ಕುಂಬಳ, ಮೊಟ್ಟೆ, ಪೈನಾಪಲ್, ಕೊಬ್ಬರಿ, ಬತ್ತ, ಕಾಫಿ ಇಲ್ಲಿಯ ಮುಖ್ಯ ಉತ್ಪನ್ನಗಳು. ದಟ್ಟವಾದ ಕಾಡಿನಲ್ಲಿ ಹಡಗು ನಿರ್ಮಾಣಕ್ಕೆ ಮರ ದೊರಕುತ್ತದೆ. ಹಂದಿ, ದನ, ಮೇಕೆಗಳನ್ನು ಸಾಕುತ್ತಾರೆ. ಅಮೆರಿಕದಿಂದ ಹಲವು ಸರಕುಗಳು ಆಮದಾಗುತ್ತವೆ. ಈಗ ಇದೊಂದು ಜನಪ್ರಿಯ ಪ್ರವಾಸೀ ತಾಣವಾಗಿದೆ. ಈ ದ್ವೀಪದ ಆರ್ಥಿಕ ವ್ಯವಸ್ಥೆ ಮುಖ್ಯವಾಗಿ ಪ್ರವಾಸೋದ್ಯಮವನ್ನು ಅವಲಂಬಿಸಿದೆ.

ಇಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯ. 1952ರಲ್ಲಿ ಆಗಾನ್ಯಾದಲ್ಲಿ (ಈಗ ಹಗಾತ್ನ) ಗ್ವಾಂ ಕಾಲೇಜು ಸ್ಥಾಪಿತವಾಯಿತು. ಈಗ ಇಲ್ಲಿ ಗ್ವಾಂ ವಿಶ್ವವಿದ್ಯಾಲಯ, ಗ್ವಾಂ ಕಮ್ಯೂನಿಟಿ ಕಾಲೇಜು ಹಾಗೂ ಪೆಸಿಫಿಕ್ ಐಲ್ಯಾಂಡ್ ವಿಶ್ವವಿದ್ಯಾಲಯಗಳಿವೆ. ಗ್ವಾಂಪೀಡಿಯ ಎಂಬ ಹೆಸರಿನ ಗಣಕೀಕೃತ ವಿಶ್ವಕೋಶ ಲಭ್ಯವಿದೆ. (ಎಂಎಚ್.)

**ಗ್ವಾಟಿಮಾಲ :** ಮಧ್ಯ ಅಮೆರಿಕದ ಅತ್ಯಂತ ಉತ್ತರದ ಗಣರಾಜ್ಯ. ಉ.ಅ.$13^0 42^1$–$17^0 49^1$ ಮತ್ತು ಪ.ರೇ $88^0 10^1$ – $92^0 30^1$ ನಡುವೆ ಇದೆ. ಮೆಕ್ಸಿಕೊ, ಬ್ರಿಟಿಷ್ ಹಾಂಡುರಸ್, ಹಾಂಡುರಸ್, ಕೆರಿಬಿಯನ್ ಸಮುದ್ರ, ಎಲ್‌ಸಾಲ್ವಡಾರ್, ಪೆಸಿಫಿಕ್ ಸಾಗರ–ಇವು ಇದರ ಮೇರೆಗಳು. ಪೂರ್ವದಲ್ಲಿ ಇದಕ್ಕೆ 88 ಕಿಮೀ ಕೆರಿಬಿಯನ್ ಸಮುದ್ರತೀರವೂ ದಕ್ಷಿಣದಲ್ಲಿ 241 ಕಿಮೀ ಪೆಸಿಫಿಕ್ ಸಾಗರತೀರವೂ ಇವೆ. ವಿಸ್ತೀರ್ಣ 1,08,890 ಚ.ಕಿಮೀ. ಜನಸಂಖ್ಯೆ ಸು. 1,38,24,463 (2011). ರಾಜಧಾನಿ ಗ್ವಾಟಿಮಾಲ ನಗರ.

ಭೌತಲಕ್ಷಣ : ಗ್ವಾಟಿಮಾಲವನ್ನು ಭೌಗೋಳಿಕವಾಗಿ ಐದು ಪ್ರದೇಶಗಳಾಗಿ ವಿಂಗಡಿಸಬಹುದು. 1. ಪೆಸಿಫಿಕ್ ಕರಾವಳಿಯ ತಗ್ಗು ನೆಲ, 2. ಸಿಯೆರ ಮಾದ್ರೆ ಪರ್ವತ ಶ್ರೇಣಿ, 3. ಈ ಶ್ರೇಣಿಗೆ ಉತ್ತರದಲ್ಲಿರುವ ಪ್ರಸ್ಥಭೂಮಿ, 4. ಅಟ್ಲಾಂಟಿಕ್ ಸಾಗರತೀರದ ಇಳಿಮೇಡಿನ ಪರ್ವತ ಪ್ರದೇಶ ಮತ್ತು ಪೆಟೇನ್ ಬಯಲು.

1. ಮೆಕ್ಸಿಕೊದ ಚ್ಯಾಪಾಸ್ ಕರಾವಳಿ ಗ್ವಾಟಿಮಾಲದಲ್ಲಿ ಸು. 241 ಕಿಮೀ ಸಾಗಿ ಎಲ್‌ಸಾಲ್ವಡಾರಿನಲ್ಲಿ ಮುಂದುವರಿಯುತ್ತದೆ. ಮೆಕ್ಸಿಕೊ– ಗ್ವಾಟಿಮಾಲ ಗಡಿಯ ಬಳಿ ಇದರ ಅಗಲ 40ಕಿಮೀ. ಕರಾವಳಿಯ ಅಂಚಿನಲ್ಲಿ ಉದ್ದಕ್ಕೂ ಮರಳ ಪಟ್ಟೆಗಳಿವೆ. ತೀರ ಹೆಚ್ಚು ಅಂಕುಡೊಂಕಾಗಿಲ್ಲ. ಅಲ್ಲಲ್ಲಿ ಲಗೂನುಗಳಿವೆ. ಇದರಿಂದಾಚೆಗೆ ನೆಲ ಕ್ರಮೇಣ ಏರುತ್ತ ಸಾಗುತ್ತದೆ.

2. ಪೆಸಿಫಿಕ್ ಸಾಗರದ ಅಂಚಿನಲ್ಲಿ ಸಾಗುವ ಸಿಯೆರ ಮಾದ್ರೆ ಪರ್ವತಶ್ರೇಣಿ ಅಕ್ಕಪಕ್ಕದ ಮೆಕ್ಸಿಕೊ ಮತ್ತು ಸಾಲ್ವಡಾರ್ ರಾಜ್ಯಗಳತ್ತ ಚಾಚಿಕೊಂಡಿದೆ. ಹದಿಮೂರು ಪ್ರಮುಖ ನದಿಗಳು ಇಲ್ಲಿ ಉಗಮಿಸುತ್ತವೆ. ಈ ಶ್ರೇಣಿಯ ದಕ್ಷಿಣ ತಪ್ಪಲಲ್ಲಿ ಅಗ್ನಿಪರ್ವತಗಳುಂಟು. ಇವುಗಳಲ್ಲಿ ಮುಖ್ಯವಾದದ್ದು ತಾಹೂಮೂಲ್ಕೊ (13,845$^1$, 4220ಮೀ). ಇದು ಮಧ್ಯ ಅಮೆರಿಕದ ಅತ್ಯಂತ ಎತ್ತರದ ಶಿಖರ. ಇತರ ಕೆಲವು ಪರ್ವತಗಳು ಅಕಾಟೆನಂಗೊ (13044$^1$, 3976ಮೀ), ಫ್ವೇಗೋ (12,346$^1$, 3763ಮೀ), ಸಾಂತ ಮರಿಯ ಕ್ವೆಜಾಲ್ಟಿನಂಗೊ (12,375$^1$, 3772 ಮೀ) ಮತ್ತು ಆಗುವ ಘುನಿಲ್ (12,336$^1$, 3760ಮೀ), ಅಟಿಲಾನ್ ಮತ್ತು ಪಕಾಯ (3535ಮೀ, 2552ಮೀ). ಒಟ್ಟು 30 ಅಗ್ನಿಪರ್ವತಗಳ ಪೈಕಿ ಎರಡು (ಪಕಾಯ ಮತ್ತು ಫ್ವೇಗೋ) ಈಗಲೂ ಜೀವಂತವಾಗಿವೆ. ಈ ರಾಜ್ಯದಲ್ಲಿ ಭೂಕಂಪಗಳು ಹೆಚ್ಚು.




3. ಸಿಯೆರ ಮಾದ್ರೆ ಪರ್ವತ ಶ್ರೇಣಿಯ ಉತ್ತರದಲ್ಲಿಯ ಎತ್ತರವಾದ ಪ್ರಸ್ಥಭೂಮಿ ಬೆಟ್ಟಗಳಿಂದ ಆವೃತವಾಗಿದೆ. ಪೆಸಿಫಿಕ್ ಸಾಗರಕ್ಕೆ ಬೀಳುವ ಕೆಲವು ನದಿಗಳು ಇಲ್ಲಿ ಉಗಮಿಸುತ್ತವೆ.

4. ಅಟ್ಲಾಂಟಿಕ್ ಸಾಗರ ತೀರದ ಪರ್ವತಗಳು ಪೂರ್ವಪಶ್ಚಿಮವಾಗಿ ಹಬ್ಬಿ ಮಧ್ಯೆ ದಕ್ಷಿಣಕ್ಕೆ ಚಾಚಿಕೊಂಡಿದೆ. ಸಿಯೆರ ಚಾಮ ಪರ್ವತ ಪೂರ್ವಾಭಿಮುಖವಾಗಿ ಬ್ರಿಟಿಷ್ ಹಾಂಡುರಸ್ ರಾಜ್ಯದ ಕಡೆ ಸಾಗಿ ಕಾಕ್ಸ್‌ಕೂಂಬ್ ಪರ್ವತವನ್ನು ಮುಟ್ಟುತ್ತದೆ. ಸಿಯೆರದ ಸಾಂತಕ್ರುಜ್ ಪರ್ವತಶ್ರೇಣಿ ಪೂರ್ವದತ್ತ ಪೋಲೊಚೀಕ್ ಮತ್ತು ಸಾರ್‌ಸ್ಟೂನ್ ನದಿಗಳ ನಡುವೆ ಸಾಗಿ ಕೊಕೋಲಿ ಭೂಶಿರವನ್ನು ಸೇರುತ್ತದೆ. ಮತ್ತೊಂದು ಪರ್ವತಶ್ರೇಣಿ ಸಿಯೆರದ ಲಾಸ್ ಮೀನಾಸ್, ಪೋಲೊಚೀಕ್ ಮತ್ತು ಮೊಟಾಗ್ವಾ ನದಿಗಳ ನಡುವಣ ಪ್ರದೇಶದಲ್ಲಿ ಹಬ್ಬಿದೆ.

5. ಪೆಟೇನ್ ಬಯಲು ಗ್ವಾಟಿಮಾಲ ರಾಜ್ಯದ 1/3 ನೆಯ ಭಾಗವನ್ನು ಆವರಿಸಿದೆ. ಇಲ್ಲಿ ಹುಲ್ಲುಗಾವಲು ಮತ್ತು ಅರಣ್ಯಗಳು ಹೆಚ್ಚು. ಭೂಮಿ ಫಲವತ್ತಾಗಿದೆ. ನೀರು ಸಮೃದ್ಧವಾಗಿದೆ. ಪ್ರಾಚೀನ ಮಾಯ ನಾಗರಿಕತೆ ಇಲ್ಲಿ ಹಬ್ಬಿತ್ತು.

ಗ್ವಾಟಿಮಾಲದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳು ಸಣ್ಣವು; ಪೂರ್ವಭಾಗದಲ್ಲಿ ದೊಡ್ಡವು. ಮೊಟಾಗ್ವಾ ನದಿ 400 ಕಿಮೀ ಹರಿದು ಕೆರಿಬಿಯನ್ ಸಮುದ್ರವನ್ನು ಸೇರುತ್ತದೆ. ಅದರ ಮೇಲೆ 145 ಕಿಮೀಗಳಷ್ಟು ದೂರ ಹಡಗುಗಳು ಸಂಚರಿಸುತ್ತವೆ. ಪೋಲೊಚೀಕ್ ನದಿಯ ಉದ್ದ 290 ಕಿಮೀ. ಇತರ ನದಿಗಳ ಪೈಕಿ ಊಸೂಮಾ ಸೀಂಟಾ, ಚಿಕ್ಸಾಯ್, ಮೊಟಾಗ್ವಾ ಮತ್ತು ಸಾರ್ಸ್ಟೂನ್ ಮುಖ್ಯವಾದವು. ಪೆಟೇನ್, ಗಾಲ್ಫೊ, ಡುಲ್ಸೆ, ಆಟಿನಾಳ್– ಇವು ಇಲ್ಲಿಯ ಸರೋವರಗಳು.

ವಾಯುಗುಣ : ಪರ್ವತಮಯವಾದ ಈ ರಾಜ್ಯದ ವಾಯುಗುಣ ಸಂಕೀರ್ಣವಾದದ್ದು. ಪೆಸಿಫಿಕ್ ತೀರದಲ್ಲೂ ಪರ್ವತ ಪ್ರದೇಶದಲ್ಲೂ ಮಾನ್ಸೂನ್ ವಾಯುಗುಣ; ಬೇಸಗೆಯಲ್ಲಿ (ಮೇ–ಅಕ್ಟೋಬರ್) ಹೆಚ್ಚು ಮಳೆ; ಚಳಿಗಾಲ ಶುಷ್ಕ. ಕೆರಿಬಿಯನ್ ತೀರದಲ್ಲಿ ವರ್ಷವೆಲ್ಲ ಮಳೆ. ಉಷ್ಣತೆ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಆದರೆ ಅತಿಯಾದ ಚಳಿ ಇಲ್ಲ. ಕರಾವಳಿಯಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $77^0$ ಫ್ಯಾ. ಚಳಿಗಾಲ–ಬೇಸಗೆ ಕಾಲಗಳ ನಡುವೆ ಹೆಚ್ಚು ವ್ಯತ್ಯಾಸವಿಲ್ಲ. ಪಶ್ಚಿಮ ಗ್ವಾಟಿಮಾಲದ ಎತ್ತರ ಪ್ರದೇಶಗಳಲ್ಲಿ ಉಷ್ಣತೆ $55.4^0$ ಫ್ಯಾ. – $66.4^0$ ಫ್ಯಾ.

ಸಸ್ಯಪ್ರಾಣಿ ಜೀವನ : ಎತ್ತರಕ್ಕೆ ಅನುಗುಣವಾಗಿ ಸಸ್ಯಗಳು ವ್ಯತ್ಯಾಸವಾಗುತ್ತವೆ. ಕೆರಿಬಿಯನ್ ಕರಾವಳಿಯಲ್ಲಿ ಉಷ್ಣವಲಯದ ನಿತ್ಯಹಸಿರು ಕಾಡೂ ಪಶ್ಚಿಮದಲ್ಲಿ ಉಷ್ಣವಲಯದ ಪರ್ಣಪಾತಿ ಕಾಡೂ ಇವೆ. ಅಲ್ಲಲ್ಲಿ ಸವನ್ನವಿದೆ. ಎತ್ತರ ಏರಿದಂತೆಲ್ಲ ಸಸ್ಯವರ್ಗ ಬದಲಾಗುತ್ತದೆ. ಅತ್ಯಂತ ಎತ್ತರದಲ್ಲಿ ಹಿಮದ ಮುಸುಕಿದೆ. ದನ, ಕುರಿ, ಹಂದಿಗಳು ಸಾಕುಪ್ರಾಣಿಗಳು. ಜಿಂಕೆ, ಕೋತಿ, ಪೆಕರಿ ಸಾಮಾನ್ಯವಾಗಿವೆ. ಜಾಗ್ವಾರ್, ಟಾಪಿರ್, ಪ್ಯೂಮ ಅಪರೂಪ. ಪೋಲೊಚೀಕ್ ನದಿಯಲ್ಲಿ ಮೊಸಳೆಗಳಿವೆ. ಪಕ್ಷಿಸಂಕುಲ ವೈವಿಧ್ಯಮಯವಾದದ್ದು. ಕಾಡು ಟರ್ಕಿ ಕೋಳಿ, ಬಾತು, ಪಾರಿವಾಳ, ಜೀವಂಜೀವ ವಿಪುಲವಾಗಿವೆ. ಆಕರ್ಷಕವಾದ ಪುಕ್ಕವುಳ್ಳ ಹಕ್ಕಿ ಕ್ವೆಟ್ಸಾಲ್ ಬಹುತೇಕ ಅಳಿದುಹೋಗಿದೆ. ಅದನ್ನು ರಾಷ್ಟ್ರದ ಲಾಂಛನವಾಗಿ ಆರಿಸಲಾಗಿದೆ.

ಇತಿಹಾಸ : ಗ್ವಾಟಿಮಾಲ ರಾಜ್ಯದ ಮೇಲೆ ಪ್ರಭಾವ ಬೀರಿದ ಇತಿಹಾಸದ ಹಂತಗಳು ಮೂರು : 1. ಸ್ಥಳೀಯ ಮಾಯ ಜನಾಂಗದ ಇತಿಹಾಸ. 2. ಸ್ಪೇನ್ ವಸಾಹತು ಇತಿಹಾಸ ಮತ್ತು 3. ಆಧುನಿಕ ಗಣರಾಜ್ಯದ ಇತಿಹಾಸ. ಈ ಮೂರು ಐತಿಹಾಸಿಕ ಹಂತಗಳ ಕುರುಹುಗಳನ್ನೂ ಗ್ವಾಟಿಮಾಲ ರಾಜ್ಯದ ನಾಗರಿಕ ಜೀವನದಲ್ಲಿ ಕಾಣಬಹುದು.

ಸೇಂಟ್ ಜೋಸೆಯಲ್ಲಿರುವ ಚರ್ಚು

ಕೊಲಂಬಸ್ ಅಮೆರಿಕ ಖಂಡವನ್ನು ಕಂಡುಹಿಡಿಯುವುದಕ್ಕೆ ಅನೇಕ ಶತಮಾನಗಳ ಹಿಂದೆಯೇ ಗ್ವಾಟಿಮಾಲ ರಾಜ್ಯವಿರುವ ಪ್ರದೇಶದಲ್ಲಿ ಮಾಯ ಇಂಡಿಯನ್ ಆದಿವಾಸಿಗಳು ಜೀವಿಸುತ್ತಿದ್ದರು. ಇವರ ಸಂಸ್ಕೃತಿ, ಕಲೆ, ಶಿಲ್ಪ, ಸಂಗೀತ, ಬರೆಹ, ಶೂನ್ಯದ ಬಳಕೆಯೂ ಸೇರಿದಂತೆ ಅವರ ಗಣಿತ, 365 ದಿನಗಳ ಪಂಚಾಂಗ–ಇವೆಲ್ಲ ಇವರ ಉನ್ನತ ನಾಗರಿಕತೆಯನ್ನು ವ್ಯಕ್ತಪಡಿಸುತ್ತವೆ. 12 ನೆಯ ಶತಮಾನದ ಹೊತ್ತಿಗೆ ಇದರ ವೈಭವ ಅವನತಿ ಹೊಂದಿತು. ಈ ಜನ ಅನೇಕ ಬಣಗಳಾಗಿ ಒಡೆದರು. 1524 ರಲ್ಲಿ ಸ್ಪೇನಿನಿಂದ ಇಲ್ಲಿಗೆ ಬಂದ ಪೇದ್ರೂ ದೆ ಆಲ್ವಾರಾದೊ ಎಂಬುವನ ದಾಳಿಗಳನ್ನು ಪ್ರಥಮತಃ ಎದುರಿಸಿದವರು ಈ ಜನ. 1550 ರ ಹೊತ್ತಿಗೆ ಸ್ಪೇನ್ ದೇಶ ಮಾಯ ಜನರ ಮೇಲೆ ಪೂರ್ಣ ಪ್ರಭುತ್ವ ಸ್ಥಾಪಿಸಿತು.

ಆಲ್ವಾರಾದೊ ಗ್ವಾಟಿಮಾಲ ನಗರವನ್ನು 1524 ರಲ್ಲಿ ಸ್ಥಾಪಿಸಿದ. 1524 ರಿಂದ 1821ರ ವರೆಗೆ ಗ್ವಾಟಿಮಾಲ ಸ್ಪೇನ್ ವಸಾಹತು ಸರ್ಕಾರದ ಕೇಂದ್ರವಾಯಿತು. ಅದರ ಅಧಿಕಾರವ್ಯಾಪ್ತಿಗೆ ಯಾಕುಟಾನ್‌ನಿಂದ ಪನಾಮಾ ವರೆಗಿನ ಪ್ರದೇಶವೆಲ್ಲ ಸೇರಿತ್ತು.

1821 ರಲ್ಲಿ ಮಧ್ಯಪ್ರದೇಶ ಸ್ಪೇನಿನಿಂದ ಸ್ವತಂತ್ರವಾಯಿತು. 1822 –23 ರಲ್ಲಿ ಮಧ್ಯ ಅಮೆರಿಕದ ಈಗಿನ ಗಣರಾಜ್ಯಗಳಾದ ಗ್ವಾಟಿಮಾಲ, ಹಾಂಡುರಸ್, ನಿಕರಾಗ್ವ, ಎಲ್‌ಸಾಲ್ವಡಾರ್, ಕೋಸ್ಟರೀಕ – ಇವು ಮೆಕ್ಸಿಕೊ ದೇಶದ ಅಡಿಗೆ ಬಂದುವು. ಮೆಕ್ಸಿಕೊ ಚಕ್ರವರ್ತಿ ಈ ಟೂರ್ಬಿದೆ ಅಧಿಕಾರ ಕಳೆದುಕೊಂಡಾಗ ಇವು ಪ್ರತ್ಯೇಕವಾದುವು. ಮಧ್ಯ ಅಮೆರಿಕ ಸಂಯುಕ್ತಸಂಸ್ಥಾನಗಳ ಗಣರಾಜ್ಯ ಸ್ಥಾಪಿತವಾಯಿತು.



ಮಾಯಾ ಇಂಡಿಯನ್ನರ ಜೀವನವನ್ನು ಚಿತ್ರಿಸುವ ಭಿತ್ತಿಚಿತ್ರಗಳು

ಇದಕ್ಕೆ ಗ್ವಾಟಿಮಾಲ ನಗರವೇ ಆಡಳಿತ ಕೇಂದ್ರ. ಪ್ರಥಮ ಅಧ್ಯಕ್ಷ 1829 ರಲ್ಲಿ ಬಂದ. ಕ್ಷಿಪ್ರಾಕ್ರಮಣದಿಂದ ಇವನಿಂದ ಅಧಿಕಾರ ಕಸಿದುಕೊಂಡು (1838) ಇನ್ನೊಬ್ಬ ಅಧ್ಯಕ್ಷನಾದ. ಆದರೆ ಶೀಘ್ರದಲ್ಲೆ ಅಲ್ಲಿ ಒಡಕುಗಳುಂಟಾಗಿ ಅಂತರ್ಯುದ್ಧ ಆರಂಭವಾಯಿತು. ಮರುವರ್ಷ ಗ್ವಾಟಿಮಾಲ ಪ್ರತ್ಯೇಕ ರಾಜಕೀಯ ಘಟಕವಾಯಿತು. ರಾಫೇಲ್ ಕಾರೆರಾ ಅಧ್ಯಕ್ಷನಾದ. ಅವನ ಅನಂತರ ಬಂದ (1872) ಮೇರಿಯ ರೀನ ಬ್ಯಾರಿಯೋ 1898 ರಲ್ಲಿ ಕೊಲೆಯಾದ. ಆಮೇಲೆ ಬಂದ ಕಾಪ್ರೇರಾನನ್ನು ವಿಧಾನಸಭೆ ಹುಚ್ಚನೆಂದು 1920 ರಲ್ಲಿ ಘೋಷಿಸಿ ಅಧಿಕಾರದಿಂದಿಳಿಸಿತು. ಅನಂತರ ಅನುಕ್ರಮವಾಗಿ ಹಲವರು ಅಧ್ಯಕ್ಷರಾಗಿದ್ದರು. 1970 ರಲ್ಲಿ ನಡೆದ ಚುನಾವಣೆಯಲ್ಲಿ ಕಾರ್ಲೊ ಅರಾನ ಒಸೋರಿಯೋ ಸಂಮಿಶ್ರ ಪಕ್ಷದ ಬೆಂಬಲದಿಂದ ಅಧ್ಯಕ್ಷನಾದ. ಇದೇ ದಶಕದಲ್ಲಿ ರೂಪುಗೊಂಡ ಎರಡು ಸ್ಥಳೀಯ ಗೆರಿಲ್ಲ ಸಂಘಗಳು ರಾಜ್ಯದ ಎಲ್ಲೆಡೆ ಸೈನಿಕ ದಳದ ಮೇಲೂ ಸೈನ್ಯಕ್ಕೆ ಬೆಂಬಲ ನೀಡುತ್ತಿದ್ದ ನಾಗರಿಕರ ಮೇಲೂ ಆಕ್ರಮಣವೆಸಗತೊಡಗಿದವು. ಇದೇ ಕಾರಣದಿಂದಾಗಿ 1979ರಲ್ಲಿ ಅಮೆರಿಕದ ಅಧ್ಯಕ್ಷ ಜಿಮ್ಮಿಕಾರ್ಟರ್ ಗ್ವಾಟಿಮಾಲ ಸೈನ್ಯಕ್ಕೆ ನೀಡಲಾಗುತ್ತಿದ್ದ ನೆರವನ್ನು ನಿಷೇಧಿಸಿದ. 1980ರಲ್ಲಿ ಸಂಭವಿಸಿದ ಒಂದು ಘಟನೆಯಲ್ಲಿ ಗ್ವಾಟಿಮಾಲ ಸರ್ಕಾರ ಗೆರಿಲ್ಲ ಕಾರ್ಯಕರ್ತರನ್ನು ಅಮಾನುಷವಾಗಿ ಕೊಂದಿತೆಂಬ ಕಾರಣಕ್ಕಾಗಿ ಸ್ಪೇನ್ ಗ್ವಾಟಿಮಾಲದೊಂದಿಗಿನ ಸಂಬಂಧವನ್ನು ಮುರಿಯಿತು. 1996ರಲ್ಲಿ ಸಂಯುಕ್ತಸಂಸ್ಥಾನದ (ಯುನೈಟೆಡ್ ನೇಷನ್ಸ್ ಆರ್ಗನೈಸೇಷನ್) ಮಧ್ಯ ಪ್ರವೇಶದಿಂದಾಗಿ ಗ್ವಾಟಿಮಾಲದ ಅಂತರ್ಯುದ್ಧ ಕೊನೆಗೊಂಡಿತು. ಗೆರಿಲ್ಲ ಹೋರಾಟಗಾರರು ಶರಣಾಗತರಾದರು. ಈ ಶಾಂತಿ ಸಂಧಾನದ ತರುವಾಯ ರಾಜ್ಯ ಆರ್ಥಿಕ ಪ್ರಗತಿ ಕಂಡಿದೆ.

ಸಂವಿಧಾನ, ಸರ್ಕಾರ : ಗ್ವಾಟಿಮಾಲ ಒಂದು ಗಣರಾಜ್ಯ. ಈಗಿನ ಸಂವಿಧಾನದಲ್ಲಿ (1966) ಹಿಂದಿನ ಸಂವಿಧಾನದ (1936) ಮೂಲ ನಿಯಮಗಳೇ ಇವೆ. ಅಧ್ಯಕ್ಷನ ಅಧಿಕಾರಾವಧಿ 6 ವರ್ಷ. ನ್ಯಾಷನಲ್ ಕಾಂಗ್ರೆಸ್ ಸದಸ್ಯರು ನಾಲ್ಕು ವರ್ಷಗಳಿಗೊಮ್ಮೆ ಆಯ್ಕೆಯಾಗುತ್ತಾರೆ. ನ್ಯಾಷನಲ್ ಕಾಂಗ್ರೆಸ್ ಏಕಸದನ ವಿಧಾನಮಂಡಲ.

ಆಡಳಿತಾಂಗ : ಗ್ವಾಟಿಮಾಲ 22 ವಿಭಾಗಗಳಾಗಿ ವಿಂಗಡವಾಗಿದೆ. ಪ್ರತಿಯೊಂದು ವಿಭಾಗಕ್ಕೂ ಒಬ್ಬೊಬ್ಬ ಗವರ್ನರ್ ರಾಷ್ಟ್ರಾಧ್ಯಕ್ಷನಿಂದ ನೇಮಕವಾಗುತ್ತಾನೆ. ಪ್ರತಿ ಜಿಲ್ಲೆಯೂ ಮುನಿಸಿಪಾಲಿಟಿಗಳಾಗಿ ವಿಭಜಿಸಲ್ಪಟ್ಟಿದೆ. ಒಟ್ಟು 324 ಮುನಿಸಿಪಾಲಿಟಿಗಳಿವೆ.

ಜನಜೀವನ : ಪ್ರಜೆಗಳು ಮುಖ್ಯವಾಗಿ ಇಂಡಿಯನ್ ಜನಾಂಗದವರು; ಮತ್ತು ಅಪ್ಪಟ ಸ್ಪೇನಿಗರು (ಶೇ.60). ಶೇ. 2 ನೀಗ್ರೋ ಮತ್ತು ಶೇ. 8 ಸಂಮಿಶ್ರ ಜನ. ಆಡಳಿತ ಭಾಷೆ ಸ್ಪ್ಯಾನಿಷ್. ಮಾಯ ಇಂಡಿಯನರಲ್ಲಿ 6 ಮುಖ್ಯ ಭಾಷೆಗಳೂ 21 ಪ್ರದೇಶ ಭಾಷೆಗಳೂ ಇವೆ. ಬಹುತೇಕ ಜನ ರೋಮನ್ ಕೆಥೊಲಿಕರು (ಶೇ. 50). ಶೇ. 40ರಷ್ಟು ಜನ ಪ್ರಾಟೆಸ್ಟಂಟರು.

ಪ್ರಾಥಮಿಕ ಶಿಕ್ಷಣ ಉಚಿತ ಮತ್ತು ಕಡ್ಡಾಯ. ಸ್ಯಾಂಗ್ ಕಾರ್ಲೊಸ್ ವಿಶ್ವವಿದ್ಯಾಲಯ 1676ರಲ್ಲಿ ಸ್ಥಾಪಿತವಾಯಿತು.

ವ್ಯವಸಾಯ, ಕೈಗಾರಿಕೆ : ಇಲ್ಲಿನ ಮುಖ್ಯ ಬೆಳೆಗಳು ಕಾಫಿ, ಬಾಳೆ, ಹತ್ತಿ, ಕೋಕೋ, ಸೆಣಬು. ಕಾಫಿಯನ್ನು ಮೇಲುನಾಡಿನ ಭಾಗಗಳಲ್ಲಿ ಬೆಳೆಯಲಾಗುತ್ತದೆ; ಬಾಳೆ ಬೆಳೆಯುವುದು ಪೆಸಿಫಿಕ್ ಸಾಗರ ತೀರಗಳಲ್ಲಿ. ಹೈನುಗಾರಿಕೆ ಅಭಿವೃದ್ಧಿಯಾಗುತ್ತಿದೆ. ಪಶ್ಚಿಮದ ಕುರಿ

ಸಾಕುವ ಕೇಂದ್ರಗಳಿಂದ ಗ್ವಾಟಿಮಾಲದ ಪ್ರಸಿದ್ಧ ನೇಕಾರರಿಗೆ ಉಣ್ಣೆ ಸರಬರಾಯಿ ಆಗುತ್ತದೆ. ಪೆಸಿಫಿಕ್ ಮತ್ತು ಕೆರಿಬಿಯನ್ ತೀರಗಳಲ್ಲಿ ಹಲವು ಜಾತಿಯ ಮೀನುಗಳಿವೆ. ಕರಾವಳಿಯಲ್ಲಿರುವ ಮೀನುಗಾರಿಕೆ ಸಂಸ್ಥೆಗಳು ಹೊರದೇಶಗಳಿಗೆ ಮೀನು ರಫ್ತು ಮಾಡುತ್ತವೆ.

ಗ್ವಾಟಿಮಾಲದಲ್ಲಿ ಸಿಮೆಂಟ್, ಮೇಣದ ಬತ್ತಿ, ರಾಸಾಯನಿಕ ವಸ್ತುಗಳು, ಸಿಗರೇಟ್, ಆಹಾರ ವಸ್ತುಗಳು, ಟೈರು, ಬಟ್ಟೆ ಕೈಗಾರಿಕೆಗಳಿವೆ. ಬಹುತೇಕ ಕೈಗಾರಿಕೆಗಳು ಸಣ್ಣ ಗಾತ್ರದವು. ಸೀಸ, ತವರ, ಕ್ರೋಮ್ ಮತ್ತು ಬೆಳ್ಳಿ ಇಲ್ಲಿಂದ ರಫ್ತಾಗುತ್ತದೆ. ಚಿನ್ನ ವಸಾಹತು ಕಾಲದಲ್ಲಿ ಹೇರಳವಾಗಿತ್ತು. ಈಗ ರಫ್ತಾಗುವಷ್ಟು ಪರಿಮಾಣದಲ್ಲಿ ಉತ್ಪನ್ನವಾಗುತ್ತಿಲ್ಲ.

ಸಾರಿಗೆ, ಸಂಪರ್ಕ : ಈಗ (2012) ಸು. 14000 ಕಿಮೀಗಳಷ್ಟು ಹೆದ್ದಾರಿಗಳಿವೆ. ರೂಸ್ವೆಲ್ಟ್ ಹೆದ್ದಾರಿ ಮತ್ತು ಪೆಸಿಫಿಕ್ ತೀರದ ಹೆದ್ದಾರಿ – ಈ ಎರಡು ಅಂತಾರಾಷ್ಟ್ರೀಯ ಹೆದ್ದಾರಿಗಳು ರಾಜ್ಯವನ್ನು ಹಾದುಹೋಗುತ್ತವೆ. ಗ್ವಾಟಿಮಾಲ ನಗರದಿಂದ ಪ್ವೇರ್ಟೊ ವಾರ್ಯೊಸ್ ಮತ್ತು ಮಾಟಿಯಾಸ್ ದ ಗಾಲ್ವೆಜ್ ರೇವುಗಳಿಗೂ ಸಂಪರ್ಕ ಕಲ್ಪಿಸುವ 290 ಕಿಮೀ ಅಟ್ಲಾಂಟಿಕ್ ಹೆದ್ದಾರಿ 1959 ರಲ್ಲಿ ಸಂಚಾರಕ್ಕೆ ತೆರೆಯಿತು. ಈ ದೇಶದಲ್ಲಿ 1290 ಕಿಮೀಗಳಷ್ಟು ರೈಲು ಮಾರ್ಗಗಳಿವೆ.

ಕೆಲವು ನದಿಗಳು ಮತ್ತು ಸರೋವರಗಳು ಜಲಸಂಚಾರಕ್ಕೆ ಹಾಗೂ ಸರಕುಗಳ ಸಾಗಣೆಗೆ ಅನುಕೂಲವಾಗಿವೆ. ಗ್ವಾಟಿಮಾಲದ ಮುಖ್ಯ ಬಂದರು ಕೆರಿಬಿಯನ್ ತೀರದಲ್ಲಿರುವ ಪ್ವೇರ್ಟೊ ವಾರ್ಯೊಸ್. ಸ್ಯಾಂಗ್ ಹೋಸೇ ಇನ್ನೊಂದು ಬಂದರು. ಇದು ಪೆಸಿಫಿಕ್ ತೀರದಲ್ಲಿದೆ. ಪ್ರಮುಖ ವಿಮಾನ ನಿಲ್ದಾಣ ಗ್ವಾಟಿಮಾಲ ನಗರದ ಬಳಿ ಇದೆ. ಇದಲ್ಲದೆ 46 ಸಣ್ಣ ವಿಮಾನ ನಿಲ್ದಾಣಗಳು ಗ್ವಾಟಿಮಾಲದ ಮುಖ್ಯ ನಗರಗಳಲ್ಲಿವೆ.

ಗ್ವಾಟಿಮಾಲದ ಮುಖ್ಯ ನಗರಗಳಿವು: ಗ್ವಾಟಿಮಾಲ ನಗರ (9,94,938), ಎಸ್ಕ್ವಿಂಟ್ಲಾ (1,03,165) ಕೆಸಾಲ್ಟೆನಾಂಗೊ (1,32,240), ವಿಟಾಲ್ಯೂಲು (34,300), ಕೊವಾನ್ (47,202), ಪ್ವೇರ್ಟೊ ವಾರ್ಯೊಸ್ (48,581) ಮತ್ತು ಸಾಕಾಪ (30,036).

ಗ್ವಾಟಿಮಾಲದ ಮುಖ್ಯ ಕ್ರೀಡೆಗಳು ಫುಟ್‌ಬಾಲ್, ಬೇಸ್‌ಬಾಲ್, ಈಜು, ಬ್ಯಾಸ್ಕೆಟ್‌ಬಾಲ್. ಇಲ್ಲಿಯ ನಾಣ್ಯ ಕೆಟ್ಸಾಲ್ (100 ಸೆಂಟಾವೋಗಳು). (ವಿ.ಜಿ.ಕೆ.)

**ಗ್ವಾಟಿಮಾಲ ನಗರ :** ಮಧ್ಯ ಅಮೆರಿಕದ ಅತ್ಯಂತ ದೊಡ್ಡ ನಗರ. ಗ್ವಾಟಿಮಾಲದ ರಾಜಧಾನಿ; ಆರ್ಥಿಕ ಸಾಂಸ್ಕೃತಿಕ ಕೇಂದ್ರ; ಗ್ವಾಟಿಮಾಲ ವಿಭಾಗದ ಆಡಳಿತ ಕೇಂದ್ರ ಕೂಡ. ಜನಸಂಖ್ಯೆ 41,00,000 (2011). ಗ್ವಾಟಿಮಾಲದ ಮಧ್ಯದಲ್ಲಿ ಪರ್ವತಗಳ ನಡುವಿನ ಕಣಿವೆಯಲ್ಲಿ ಸು. 5000' (1600 ಮೀ) ಎತ್ತರದಲ್ಲಿರುವ ಈ ನಗರ ಪ್ವೇರ್ಟೊ ವಾರ್ಯೊಸ್‌ಗೆ ನೈರುತ್ಯದಲ್ಲಿ 240 ಕಿಮೀ ದೂರದಲ್ಲಿದೆ. ಇದರ ಔನ್ನತ್ಯದಿಂದಾಗಿ ಇಲ್ಲಿಯ ವಾಯುಗುಣ ತಂಪಾಗಿದೆ. ಗ್ವಾಟಿಮಾಲದ ರಾಜಧಾನಿಯಾಗಿದ್ದ ಆಂಟೀಗ್ವಾ ನಗರ 1773 ರಲ್ಲಿ ಭೂಕಂಪದಿಂದ ನೆಲಸಮವಾದಾಗ ಅದರ ಬದಲು ಗ್ವಾಟಿಮಾಲ ನಗರ ಸ್ಥಾಪಿತವಾಯಿತು (1776). ಮಧ್ಯ ಅಮೆರಿಕ ಸ್ಪೇನಿನಿಂದ ಸ್ವತಂತ್ರಗೊಂಡ ಮೇಲೆ ಮೆಕ್ಸಿಕನ್ ಚಕ್ರಾಧಿಪತ್ಯದ ಅಡಿಯಲ್ಲಿ ಸ್ಥಾಪಿತವಾದ ಮಧ್ಯ ಅಮೆರಿಕ ಪ್ರಾಂತಕ್ಕೂ (1822–23) ಅನಂತರ ಸ್ಥಾಪಿತವಾದ ಮಧ್ಯ ಅಮೆರಿಕ ಒಕ್ಕೂಟಕ್ಕೂ (1823–33) ಆಮೇಲೆ ಗ್ವಾಟಿಮಾಲ ರಾಜ್ಯಕ್ಕೂ ಕೊನೆಗೆ ಗ್ವಾಟಿಮಾಲ ಗಣರಾಜ್ಯಕ್ಕೂ ರಾಜಧಾನಿಯಾಯಿತು.

1917–18 ರ ಭೀಕರ ಭೂಕಂಪದ ಅನಂತರ ನಗರವನ್ನು ಬಹಳಮಟ್ಟಿಗೆ ಪುನರ್ನಿರ್ಮಿಸಲಾಯಿತು. ಉಕ್ಕು ಮತ್ತು ಕಾಂಕ್ರೀಟಿನ ಹಲವು ಭಾರಿ ಕಟ್ಟಡಗಳು ನಿರ್ಮಾಣವಾದುವು. ನಗರದ ಅನೇಕ ಕಡೆಗಳಲ್ಲಿ ಅಲ್ಪವೆಚ್ಚದ ಮನೆಗಳನ್ನು ಕಟ್ಟಲಾಗಿದೆ. ನಗರದ ರಸ್ತೆಗಳು ದೀಪಾಲಂಕೃತವೂ ಶುಭ್ರವೂ ಆಗಿವೆ.

ಸರ್ಕಾರಿ ಕಚೇರಿಗಳ ಜೊತೆಗೆ ಗ್ವಾಟಿಮಾಲ ನಗರ ಕೈಗಾರಿಕಾ ವಾಣಿಜ್ಯ ಕಚೇರಿಗಳು ಮತ್ತು ಬ್ಯಾಂಕುಗಳಿಂದ ಕೂಡಿದೆ. ಇಡೀ ರಾಷ್ಟ್ರದ ಕೈಗಾರಿಕೆಗಳಲ್ಲಿ ಅರ್ಧದಷ್ಟು ಗ್ವಾಟಿಮಾಲದಲ್ಲೇ ಇವೆ. ಇದೊಂದು ಸಾರಿಗೆ ಕೇಂದ್ರ, ವಾಣಿಜ್ಯಕೇಂದ್ರ. ನಗರದ ದಕ್ಷಿಣದಲ್ಲಿ ಲ ಆರೋರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇದೊಂದು ಶಿಕ್ಷಣ ಕೇಂದ್ರ ಕೂಡ. ಪ್ರಾಚೀನ ಸ್ಯಾಂಗ್ ಕಾರ್ಲೋಸ್ ವಿಶ್ವವಿದ್ಯಾಲಯ ಸೇರಿದಂತೆ ಒಟ್ಟು 10 ವಿಶ್ವವಿದ್ಯಾಲಯಗಳು ಇವೆ. ಕಲಾ ಶಾಲೆಗಳೂ ವಾಣಿಜ್ಯ ತಾಂತ್ರಿಕ ಹಾಗೂ ಸೈನಿಕ ಶಿಕ್ಷಣ ಶಾಲೆಗಳೂ ಇವೆ. ಅನೇಕ ವಸ್ತುಸಂಗ್ರಹಾಲಯಗಳುಂಟು.

ಗ್ವಾಟಿಮಾಲ ನಗರದಲ್ಲಿಯ ರಾಷ್ಟ್ರೀಯ ಅರಮನೆ, ಅಂಚೆ ಕಚೇರಿ, ಪೋಲಿಸ್ ಕೇಂದ್ರ ಕಚೇರಿ, ರಾಷ್ಟ್ರೀಯ ಪತ್ರಾಗಾರ ಮತ್ತು ರಾಷ್ಟ್ರೀಯ ಗ್ರಂಥಾಲಯ ಕಟ್ಟಡಗಳೂ ಸಾನ್ ಫ್ರಾನ್ಸಿಸ್ಕೊ, ಸಾಂಟೊ ಡೊಮಿಂಗೊ, ಲ ಮರ್ಸೆದ್ ಚರ್ಚುಗಳೂ ಪ್ರೇಕ್ಷಣೀಯ. ಮಿನರ್ವ ಉದ್ಯಾನದಲ್ಲಿ ಗ್ವಾಟಿಮಾಲ ರಾಜ್ಯದ ಉಬ್ಬುತಗ್ಗು ಭೂಪಟವಿದೆ. ಪುರಾತತ್ತ್ವ ಮತ್ತು ಇತಿಹಾಸ ವಸ್ತುಸಂಗ್ರಹಾಲಯಗಳು, ಮೇಲು ಕಾಲುವೆ, ಕೇಂದ್ರೀಯ ಮಾರುಕಟ್ಟೆ, 1950ರ ಅಮೆರಿಕನ್ ಒಲಂಪಿಕ್ ಕ್ರೀಡೆಗಳಿಗಾಗಿ ಕಟ್ಟಲಾದ ಒಲಂಪಿಕ್ ನಗರ–ಇವೂ ಪ್ರಸಿದ್ಧವಾಗಿವೆ. *

**ಗ್ವಾದರ್ :** ಪಾಕಿಸ್ತಾನದ ಒಂದು ಬಂದರು. ಅರಬ್ಬೀ ಸಮುದ್ರದ ಮಕ್ರಾನ್ ತೀರದಲ್ಲಿ (ಬಲೂಚಿಸ್ತಾನ), ಕರಾಚಿಯಿಂದ ಪಶ್ಚಿಮಕ್ಕೆ 300 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 53,080 (2006). ಗ್ವಾದರ್ ಕೊಲ್ಲಿಯ ಪೂರ್ವಭಾಗದಲ್ಲಿ ರಾಸ್‌ನುಹ್ ಪರ್ಯಾಯದ್ವೀಪದ ಕಿರಿದಾದ ಪ್ರದೇಶದ ಬಂಡೆಯ ಪ್ರಪಾತದ ಕೆಳಗಿದೆ. ಇದು ಭಾರತ–ಪಾಕಿಸ್ತಾನಗಳಿಂದ ಪರ್ಷಿಯನ್ ಖಾರಿಗೂ ಯುರೋಪಿಗೂ ಹೋಗುವ ತಂತಿ ಮಾರ್ಗದ ಮಧ್ಯದಲ್ಲಿದೆ.

ಗ್ವಾಡರನ್ನೂ ಮಕ್ರಾನ್ ತೀರದ ಇತರ ಪಟ್ಟಣಗಳನ್ನೂ 1797 ರಲ್ಲಿ ಮಸ್ಕತ್ ಸುಲ್ತಾನ ಇಬು ಅಹಮ್ಮದ್ ಗ್ವಾಡರ್ ವಶಪಡಿಸಿಕೊಂಡಿದ್ದ. ಮುಂದೆ ಇವನ ರಾಜ್ಯ ಗ್ವಾಡರ್ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಿತ್ತು. 1958 ರಲ್ಲಿ ಇದು ಪಾಕಿಸ್ತಾನಕ್ಕೆ ಸೇರಿತು. ಗ್ವಾಡರಿನಿಂದ ಮೀನು, ಖರ್ಜೂರ, ಉಣ್ಣೆ ರಫ್ತಾಗುತ್ತದೆ. (ವಿ.ಎಸ್.ಬಿವಿ.)

**ಗ್ವಾಡ್ಲೂಪ್ :** ಪೂರ್ವ ಕೆರಿಬಿಯನ್ ಸಮುದ್ರದ ಲೀವರ್ಡ್ ದ್ವೀಪ ಸಮೂಹದಲ್ಲಿ ಫ್ರೆಂಚ್ ಆಂಟಿಲೀಸಿನ ಅತ್ಯಂತ ವಿಸ್ತಾರವಾದ ಪ್ರದೇಶ; ಎರಡು ದ್ವೀಪಗಳನ್ನೊಳಗೊಂಡಿದೆ. ಉ. ಅ. $16^0$ 15' ಮತ್ತು ಪ. ರೇ. $61^0$ 35' ಮೇಲಿದೆ. ಪಶ್ಚಿಮದ ಬಾಸ್ ಟೇರ್ ದ್ವೀಪಕ್ಕೂ ಪೂರ್ವದ ಗ್ರ್ಯಾಂಡ್ ಟೇರ್ ದ್ವೀಪಕ್ಕೂ ನಡುವೆ ಜವುಗೂ ರಿವ್ಯೇರ್ ಸಾಲೀ ಎಂಬ ಕಿರು ಜಲಸಂಧಿ ಇದೆ. ಈ ದ್ವೀಪಗಳ ಪೂರ್ವ ಮತ್ತು ದಕ್ಷಿಣಗಳಲ್ಲಿ ಸ್ವಲ್ಪ ದೂರದಲ್ಲಿ ಮೇರೀ ಗಲಾಂಟ್, ಲಾ ಡೆಸಿರೇಡ್, ಈಲ್ಸ್ ದ ಸೇಂಟ್ಸ್, ಈಲ್ಸ್ ದ ಲ ಪೆಟಿಲ್ ಟೇರ್ ಎಂಬ ದ್ವೀಪಗಳಿವೆ. ಇವುಗಳಲ್ಲಿ ಮೊದಲ ಎರಡು ಸಣ್ಣವು, ಉಳಿದವು ಪುಟ್ಟವು. ವಾಯವ್ಯದಲ್ಲಿ 208 ಕಿಮೀ ದೂರದಲ್ಲಿ ಸೇಂಟ್ ಬಾರ್ತೇಲ್ಮೀ ದ್ವೀಪವೂ 224 ಕಿಮೀ ದೂರದಲ್ಲಿ ಸೇಂಟ್ ಮಾರ್ಟಿನ್ ದ್ವೀಪವೂ ಇವೆ. ಸೇಂಟ್ ಮಾರ್ಟಿನ್ ದ್ವೀಪದ ಉತ್ತರ ಭಾಗವೂ ಉಳಿದೆಲ್ಲ ದ್ವೀಪಗಳೂ ಗ್ವಾಡ್ಲೂಪಿಗೆ ಅಧೀನವಾಗಿವೆ. ಒಟ್ಟು ವಿಸ್ತೀರ್ಣ 1,628 ಚ.ಕಿಮೀ.

ಗ್ವಾಡ್ಲೂಪ್‌ನ ಸಮುದ್ರದಂಡೆಯ ಒಂದು ದೃಶ್ಯ

ಪಶ್ಚಿಮ ಮತ್ತು ಪೂರ್ವ ದ್ವೀಪಗಳ ಮೇಲ್ಮೈಲಕ್ಷಣದಲ್ಲಿ ಬಹಳ ವ್ಯತ್ಯಾಸವಿದೆ. ಬಾಸ್ ಟೇರ್ ದ್ವೀಪದಲ್ಲಿ ದಿಣ್ಣೆಗಳೂ ಮಧ್ಯದಲ್ಲಿ ಜ್ವಾಲಾಮುಖಿಗಳ ಮೊನಚಾದ ಗುಡ್ಡಗಳೂ ಇವೆ. ದಕ್ಷಿಣಕ್ಕೆ ಹೋದಂತೆ ಈ ಗುಡ್ಡಗಳ ಎತ್ತರ ಹೆಚ್ಚಿ ಸೂಫ್ರೀಯೇರದಲ್ಲಿ ಪರ್ಯವಸಾನವಾಗುತ್ತದೆ. ಇದು ಲೆಸ್ಸರ್ ಆಂಟಿಲೀಸಿನಲ್ಲೇ ಅತ್ಯುನ್ನತ ಪರ್ವತ. ಇದೊಂದು ಅಗ್ನಿಪರ್ವತ; 1797 ಮತ್ತು 1836 ರಲ್ಲಿ ಸ್ಫೋಟಿಸಿತ್ತು. ಪೂರ್ವಕ್ಕಿಂತ ಪಶ್ಚಿಮ ಕರಾವಳಿಯ ಕಡೆಗೆ ಪರ್ವತದ ಇಳಿಜಾರು ಹೆಚ್ಚು ಕಡಿದು. ಗ್ರ್ಯಾಂಡ್ ಟೇರ್‌ನಲ್ಲಿ ಭೂಮಿ ಮಟ್ಟಸವಾಗಿದೆ. ಇಲ್ಲೆಲ್ಲೂ ಎತ್ತರದ ಗುಡ್ಡಬೆಟ್ಟಗಳಿಲ್ಲ. ಇಲ್ಲಿಯದು ಸುಣ್ಣಕಲ್ಲು ನೆಲ. ಮೇರೀ ಗಲಾಂಟ್, ಲಾ ಡೆಸಿರೇಡ್‌ಗಳ ನೆಲವೂ ಇದೇ ರೀತಿ ಇದೆ. ಬಾಸ್ ಟೇರ್ ಪರ್ವತದ ಇಳುಕಲಿನಲ್ಲಿ ಅನೇಕ ತೊರೆಗಳು ಹರಿಯುತ್ತವೆ. ಆದರೆ ಗ್ರ್ಯಾಂಡ್ ಟೇರ್‌ನಲ್ಲಿರುವ ತೊರೆಗಳು ಕೆಲವು ಮಾತ್ರ.

ಈ ದ್ವೀಪಗಳ ಕ್ಷೇತ್ರ ಚಿಕ್ಕದಾಗಿದ್ದರೂ ವಾಯುಗುಣದಲ್ಲಿ ವ್ಯತ್ಯಾಸಗಳುಂಟು. ಬೇಸಗೆಯ (ಜೂನ್) ಸರಾಸರಿ ಗರಿಷ್ಠ ಉಷ್ಣತೆ $82^0$ ಫ್ಯಾ. ($28^0$ ಸೆಂ.). ಆದರೆ ಚಳಿಗಾಲದ (ಜನವರಿ) ಸರಾಸರಿ ಕನಿಷ್ಠ ಉಷ್ಣತೆ $75^0$ ಫ್ಯಾ. ($24^0$ ಸೆಂ.).

ಗ್ರ್ಯಾಂಡ್ ಟೇರಿನಲ್ಲಿ ವರ್ಷಕ್ಕೆ 40" (100 ಸೆಂಮೀ) ಮಳೆಯಾಗುತ್ತದೆ. ಜನವರಿ – ಮೇ ಶುಷ್ಕ. ಆದರೆ ಬಾಸ್ ಟೇರಿನಲ್ಲಿ ವಾರ್ಷಿಕ ಮಳೆ 100" ಗಿಂತ (250 ಸೆಂಮೀ) ಅಧಿಕ. ಇದು ವಾಣಿಜ್ಯ ಮಾರುತಗಳ ಮಾರ್ಗದಲ್ಲಿದೆ. ಇಲ್ಲಿ ಜುಲೈ– ಸೆಪ್ಟೆಂಬರ್ ಮಳೆಗಾಲ.

ಸಸ್ಯಪ್ರಾಣಿ ಜೀವನ : ಈ ದ್ವೀಪಗಳ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಸಸ್ಯಪ್ರಾಣಿ ಜೀವನದಲ್ಲೂ ಹೆಚ್ಚಿನ ವ್ಯತ್ಯಾಸವುಂಟು. ಬಾಸ್ ಟೇರಿನ ಪರ್ವತಗಳಲ್ಲಿ ದಟ್ಟವಾದ ಕಾಡುಗಳುಂಟು. ಗ್ರ್ಯಾಂಡ್ ಟೇರಿನಲ್ಲಿ ಅಲ್ಲಲ್ಲಿ ಕುರುಚಲು ಕಾಡುಗಳುಂಟು. ರಿವ್ಯೇರ್ ಸಾಲೀಯ ಬಳಿ ಕ್ಷಾರಸಸ್ಯಗಳು (ಮ್ಯಾಂಗ್ರೋವ್) ಇವೆ.

ಐರೋಪ್ಯ ಜನವಸತಿ ಆರಂಭವಾದಂದಿನಿಂದ ಇಲ್ಲಿಯ ಪ್ರಾಣಿಜೀವನದಲ್ಲಿ ಹೆಚ್ಚು ಬದಲಾವಣೆಯಾಗಿದೆ. ಹಲವು ಹೊಸಜಾತಿಗಳನ್ನು ಇಲ್ಲಿಗೆ ತರಲಾಗಿದೆ. ಹಳೆಯವೆಷ್ಟೋ ನಶಿಸಿವೆ. ಇಲಿಗಳನ್ನು ನಿವಾರಿಸಲು ಇಂಡಿಯನ್ ಮುಂಗುಸಿಯನ್ನು ಇಲ್ಲಿಗೆ 1880 ರಲ್ಲಿ ತರಲಾಯಿತು. ಆದರೆ ಇದು ಹಕ್ಕಿ, ಹಲ್ಲಿ, ಹಾವು ಮುಂತಾದ ಹಲವು ಜಾತಿಯ ಸ್ಥಳೀಯ ಪ್ರಾಣಿಗಳನ್ನೂ ಸಸ್ತನಿಗಳನ್ನೂ ನಾಶಪಡಿಸಿದೆ. ಕಾಡುಗಳನ್ನು ಕಡಿಯುವುದರಿಂದಲೂ ಬೇಟೆಯಿಂದಲೂ ಹಲವು ಹಕ್ಕಿಗಳೂ ಪ್ರಾಣಿಗಳೂ ಕಣ್ಮರೆಯಾಗುತ್ತಿವೆ. 1970ರಲ್ಲಿ ಗ್ವಾಡ್ಲೂಪ್ ನ್ಯಾಷನಲ್ ಪಾರ್ಕ್ ಅನ್ನು ನಿರ್ಮಿಸಲಾಯಿತು. ರಕೂನ್, ಅಗೌಟಿ ಹಾಗೂ ಮುಂಗುಸಿಗಳನ್ನು ಈ ಉದ್ಯಾನದಲ್ಲಿ ಸಂರಕ್ಷಿಸಲಾಗಿದೆ.

ಇತಿಹಾಸ : ಕೊಲಂಬಸ್ ಬರುವುದಕ್ಕೆ (1493) ಪೂರ್ವದಲ್ಲಿ ಇಲ್ಲಿ ಕ್ಯಾರಿಬ್ ಜನ ವಾಸಿಸುತ್ತಿದ್ದರು. ಇವರು ದಕ್ಷಿಣ ಅಮೆರಿಕದಿಂದ ಬಂದವರು. ತಮಗಿಂತ ಹಿಂದೆ ಇದ್ದವರ ಸ್ಥಾನದಲ್ಲಿ ಇವರಿದ್ದರು. ಸ್ಪ್ಯಾನಿಷ್ ವಲಸೆಗಾರರು 1635 ರಿಂದ ಕ್ಯಾರಿಬರನ್ನು ಓಡಿಸಲಾರಂಭಿಸಿದರು. 1674 ರಲ್ಲಿ ಈ ದ್ವೀಪಗಳು ಫ್ರೆಂಚರಿಗೆ ಸೇರಿದುವು. 17 ನೆಯ 18 ನೆಯ ಶತಮಾನಗಳಲ್ಲಿ ಇಂಗ್ಲಿಷರು ಈ ದ್ವೀಪಗಳ ಮೇಲೆ ಹಲವು ಬಾರಿ ಧಾಳಿ ಮಾಡಿದರು. 1759 – 1763 ರಲ್ಲಿ ಮತ್ತು 1794 ರಲ್ಲಿ ಇದು ಅವರ ವಶವಾಗಿತ್ತು. ಅವರು ಇದನ್ನು 1810 ರಲ್ಲಿ ಮತ್ತೆ ವಶಪಡಿಸಿಕೊಂಡು, 1816 ರಲ್ಲಿ ಫ್ರೆಂಚರಿಗೆ ಹಿಂದಿರುಗಿಸಿದರು.

ಜನಜೀವನ : 17, 18ನೆಯ ಶತಮಾನದಲ್ಲಿ ವಲಸೆ ಬಂದ ಫ್ರೆಂಚರಿಂದಲೂ ಅವರು ತರಿಸಿಕೊಂಡ ನೀಗ್ರೋ ಗುಲಾಮರಿಂದಲೂ ಇಲ್ಲಿ ಜನಸಂಖ್ಯೆ ಬೆಳೆಯಿತು. ಗುಲಾಮಗಿರಿ ರದ್ದಾದ ಮೇಲೆ ಭಾರತ, ಸಿರಿಯ ಮತ್ತು ಇತರ ಎಡೆಗಳಿಂದ ಕಾರ್ಮಿಕರೂ ಕುಶಲಿಗಳೂ ವ್ಯಾಪಾರಿಗಳೂ ಇಲ್ಲಿಗೆ ಬಂದರು. ವಿವಿಧ ವರ್ಣಗಳ ಜನ ಇಲ್ಲಿದ್ದಾರೆ. ಬಿಳಿಯರ ಮತ್ತು ವರ್ಣೀಯರ ಸಂಮಿಶ್ರ ಜನಾಂಗವೊಂದು ಬೆಳೆಯುತ್ತಿದೆ. ಒಟ್ಟು ಜನಸಂಖ್ಯೆ 4,05,500 (2008) ರಾಜಧಾನಿ ಬಾಸ್ ಟೇರ್ (37, 455).

ಆಡಳಿತ : ಗ್ವಾಡ್ಲೂಪ್‌ಗೆ 1946 ರಲ್ಲಿ ಫ್ರಾನ್ಸಿನ ಸಾಗರಾಂತರ ವಿಭಾಗದ ಸ್ಥಾನ ಲಭ್ಯವಾಯಿತು. ಆಡಳಿತಾಂಗದ ಅಧಿಪತಿ ಹಿಂದೆ ಪ್ರಿಫೆಕ್ಟ್, ಈಗ ಅಧ್ಯಕ್ಷ. ಇವನ ಅಧೀನದಲ್ಲಿ ಅಧಿಕಾರಿಗಳಿದ್ದಾರೆ. ವಿಧಾನಾಧಿಕಾರ 43 ಸದಸ್ಯರ ಸಾಮಾನ್ಯ ಪರಿಷತ್ತಿನದು. ಇದಕ್ಕೆ ಚುನಾವಣೆ ನಡೆಯುತ್ತದೆ. ಇದಲ್ಲದೆ ಫ್ರೆಂಚ್ ನ್ಯಾಷನಲ್ ಅಸೆಂಬ್ಲಿಗೆ ನಾಲ್ಕು ಪ್ರತಿನಿಧಿಗಳನ್ನೂ ಫ್ರೆಂಚ್ ಸೆನೇಟಿಗೆ ಮೂರು ಸದಸ್ಯರನ್ನೂ ಚುನಾಯಿಸಲಾಗುತ್ತದೆ.

ಆರ್ಥಿಕತೆ : ಇದು ವ್ಯವಸಾಯಪ್ರಧಾನ ದೇಶ. ಕಬ್ಬು ಮುಖ್ಯ ಬೆಳೆ. ಈಗ ಬಾಳೆ ಮತ್ತು ಅನೇಕ ಸ್ಥಳೀಯ ಹಣ್ಣು ತರಕಾರಿಗಳನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಸಕ್ಕರೆ ಮತ್ತು ರಂ ಮುಖ್ಯ ನಿರ್ಯಾತಗಳು. ಗ್ರ್ಯಾಂಡ್ ಟೇರ್‌ನಲ್ಲಿ ವಿಶೇಷವಾಗಿ ಕಬ್ಬು ಬೆಳೆಯುತ್ತದೆ. ಪ್ವಾನ್–ಟ್ಯಾ–ಪೀಟರ್, ಲ ಮೂಲ್, ಸ್ಯಾನ್ ಆನ್– ಈ ಸ್ಥಳಗಳಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಬಾಸ್ ಟೇರ್ ದ್ವೀಪದಲ್ಲೂ ಮೇರೀ ಗಲಾಂಟಿನ ಗ್ರಾಂಡ್ ಆನ್ಸ್‌ನಲ್ಲೂ ಸಕ್ಕರೆ ಕಾರ್ಖಾನೆಗಳಿವೆ. ಬಾಳೆಹಣ್ಣು ಇನ್ನೊಂದು ನಿರ್ಯಾತ ವಸ್ತು. ಇಲ್ಲಿಯ ಇತರ ಬೆಳೆಗಳು ಕಾಫಿ, ಕೋಕೋ, ವೆನಿಲ, ಪೈನಾಪಲ್, ಸಿಟ್ರಸ್ ಹಣ್ಣು. ಜೀವನೋಪಾಯಕ್ಕಾಗಿ ಧಾನ್ಯ ಬೆಳೆಯುತ್ತಾರೆ; ದನ ಸಾಕುತ್ತಾರೆ. ಬಾಸ್ ಟೇರ್ ಕಾಡು ದುರ್ಗಮವಾಗಿರುವುದರಿಂದ ಅದನ್ನು ಕಡಿಯುವುದಾಗಿಲ್ಲ. ಮರ ಆಮದಾಗುತ್ತದೆ. ಉಪ್ಪು ಮತ್ತು ಗಂಧಕ ಅಲ್ಪ

ಮಾರ್ಕೆಟ್‌ನ ಒಂದು ದೃಶ್ಯ, ಗ್ವಾಡ್ಲೂಪ್

ಪರಿಮಾಣಗಳಲ್ಲಿ ಸಿಗುತ್ತದೆ. ಇಂಧನ ಹಾಗೂ ಆಹಾರ ವಸ್ತುಗಳು ಫ್ರಾನ್ಸ್‌ನಿಂದ ಆಮದಾಗುತ್ತವೆ. ಪ್ರವಾಸೋದ್ಯಮದಿಂದಾಗಿಯೂ ಈ ದ್ವೀಪ ಈಗ ಆರ್ಥಿಕ ಅಭಿವೃದ್ಧಿ ಸಾಧಿಸಿದೆ.

ಫ್ರಾನ್ಸ್ ಮತ್ತು ಉತ್ತರ ಅಮೆರಿಕದಿಂದ ಬರುವ ಹಡಗುಗಳು ಈ ದ್ವೀಪಗಳ ಬಂದರುಗಳಿಗೆ ಬಂದೇ ಹೋಗುತ್ತವೆ. ಫ್ರಾನ್ಸ್, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಬ್ರಿಟನ್ ಮತ್ತು ಹಾಲೆಂಡ್ ವಿಮಾನಗಳು ಇಲ್ಲಿಯ ವಿಮಾನ ನಿಲ್ದಾಣಗಳಿಗೆ ಬರುತ್ತವೆ. ಈ ದ್ವೀಪಗಳ ಬೇರೆ ಬೇರೆ ಭಾಗಗಳ ನಡುವೆ ಸಣ್ಣ ಹಡಗುಗಳು ಸಂಚರಿಸುತ್ತವೆ.

(ವಿ.ಎಸ್.ಬಿ.ಎ.)

| | |
|---|---|
| Abbevillian | – ಅಬೆವೀಲ್ ನೆಲೆಯಲ್ಲಿ ದೊರೆತ ಆದಿ ಹಳೆಶಿಲಾಯುಗದ ಉಪಕರಣ ಮಾದರಿ |
| Abortion | – ಗರ್ಭಪಾತ |
| Abrus Precatorius | – ಗುಲಗಂಜಿ |
| Acheulian | – ಸೇಂಟ್ ಅಶೂಲ್ ನೆಲೆಯಲ್ಲಿ ದೊರೆತ ಆದಿ ಹಳೆಶಿಲಾಯುಗದ ಉಪಕರಣ ಮಾದರಿ |
| Aestivation | – ಗ್ರೀಷ್ಮ ನಿದ್ರೆ |
| Agate | – ಅರೆ ಪ್ರಶಸ್ತ ಕಲ್ಲು |
| Amalak | – ದೇವಾಲಯದ ಶಿಖರ ತುದಿಯಲ್ಲಿರುವ ನೆಲ್ಲಿಕಾಯಿಯಾಕಾರದ ಭಾಗ |
| Ambacis | – ಗಾಜಿನ ಮೀನು |
| Ambassisnama | – ಗಾಜಿನ ಮೀನು |
| Amphora | – ಮಧುಪಾತ್ರೆ / ಮದ್ಯ ಜಾಡಿ |
| Anacardium | – ಗೋಡಂಬಿ |
| Anga | – ದೇವಾಲಯದ ಸಮಾನಂತರ ಅಥವಾ ಲಂಬಾಕಾರಾದ ಭಾಗಗಳು |
| Angler fish | – ಗಾಳದ ಮೀನು |
| Ant | – ಇರುವೆ |
| Antennae sword | – ಇಬ್ಬದಿ ಬಾಗಿದ ಹಿಡಿಕೆಯುಳ್ಳ ಉದ್ದ ಕತ್ತಿ |
| Anthropomorph | – ಮನುಷ್ಯಾಕೃತಿಯ ಕಲ್ಗೊಂಬೆ |
| Anus | – ಗುದ |
| Architecture | – ವಾಸ್ತು ಶಿಲ್ಪ |
| Armadillidium vulgare | – ಗೋಲಿ ಹೇನು |
| Arrow head | – ಬಾಣದ ಮೊನೆ |
| Artefact | – ಮಾನವನಿರ್ಮಿತ ಪ್ರಾಚ್ಯವಸ್ತು |
| Ash mound | – ಬೂದಿದಿಬ್ಬ |
| Assemblage | – ಸಮುಚ್ಚಯ/ ಸಂಚಯ |
| Asthma | – ಗೂರಲು |
| Aurex | – ಕಾಡೆತ್ತು |
| Ayudhapurusha | – ಶಂಖ, ಚಕ್ರಗಳ ಮನುಷ್ಯಾ ಕೃತಿ |
| Bachelor’s button | – ಗಾಂಫ್ರಿನ |
| Backed blade | – ಬದಿಮೊಂಡಾಗಿಸಿದ ಅಲಗು |
| Bagarius bagarius | – ಗೂಂಚ್ ಮೀನು |
| Bahama grass | – ಗರಿಕೆ ಹುಲ್ಲು |
| Balipeeta | – ದೇವಾಲಯದ ಧ್ವಜಸ್ತಂಭದ ಮುಂದೆ ರಚಿಸಿರುವ ಕಟ್ಟೆ |
| Balustra | – ಕೈಪಿಡಿ, ಕಟಾಂಜನ |
| Barbed arrow head | – ಮುಳ್ಳಿರುವ ಬಾಣದ ಮೊನೆ |
| Barbus Sp | – ಗೆಂಡೆ ಮೀನು |
| Barleria Spp | – ಗೊರಟೆ |
| Barringtonia racemosa | – ಗಣಿಗಲ ತೋರ |
| Basin | – ಬೋಗುಣಿ |
| Battle axe | – ಗಂಡುಗೊಡಲಿ |
| Belone | – ಗಾರ್ ಮೀನು |
| Biface | – ದ್ವಿಮುಖ ಉಪಕರಣ |
| Bind spot | – ಗಾಬಿ ಚುಕ್ಕೆ |
| Black and Red ware | – ಕಪ್ಪು – ಕೆಂಪು ದ್ವಿವರ್ಣ ಮಣ್ಪಾತ್ರೆ |
| Black ant | – ಗೊದ್ದ |
| Blade | – ಸಮಾನಾಂತರ ಅಂಚಿನ ನೀಳ ಚಕ್ಕೆ |
| Bond | – ಬಂಧ |
| Borer | – ಕೊರೆಯುಳಿ |
| Boswelia serrata | – ಗುಗ್ಗುಳದ ಮರ |
| Boulder beds | – ಗುಂಡು ಸ್ತರಗಳು |
| Brahmini Kite | – ಗರುಡ |
| Bronze Age | – ಕಂಚಿನಯುಗ |
| Bubble chamber | – ಗುಳ್ಳೆ ಮಂದಿರ |
| Bull | – ಗೂಳಿ |
| Bull fighting | – ಗೂಳಿ ಕಾಳಗ |
| Burin | – ಕೊರೆಯುಳಿ, ಕಲ್ಲುಳಿ |
| Burnished gray ware | – ಉಜ್ಜಿದ ಬೂದು ಬಣ್ಣದ ಮಣ್ಪಾತ್ರೆ |
| Burrow | – ಸಮಾಧಿ ದಿಬ್ಬ |
| Cairncircle | – ಕಲ್ಗುಪ್ಪೆ ವೃತ್ತ |
| Cannabis Sativa | – ಗಾಂಜಾ ಗೀಡ |
| Carbon-14-dating | – ಇಂಗಾಲ–14 ಕಾಲ ನಿರ್ಣಯ |
| Careya arborea | – ಗೌಜಲುಮರ |
| Carnelian | – ಮಂದ ಗೆಂಪಿನ ಅರೆ ಪ್ರಶಸ್ತ ಕಲ್ಲು |
| Cart | – ಗಾಡಿ |
| Cashewnut | – ಗೋಡಂಬಿ |
| Casuarina equisetifolia | – ಗಾಳಿಮರ |
| Caucus | – ಗುಪ್ತಕೂಟ |
| Cave | – ಗುಹೆ |
| Cave animals | – ಗುಹಾವಾಸಿ ಪ್ರಾಣಿಗಳು |
| Cave architecture and sculpture | – ಗುಹಾವಾಸ್ತು, ಶಿಲ್ಪ |
| Cave inscription | – ಗುಹಾಶಾಸನಗಳು |
| Ceramics | – ಕುಂಬಾರಿಕೆ, ಮಣ್ಪಾತ್ರ ಕಲೆ |
| Chalcedony | – ಅರೆಪ್ರಶಸ್ತ ಕಲ್ಲು |
| Chalcolithic | – ತಾಮ್ರ–ಶಿಲಾಯುಗ |
| Cheese | – ಗಿಣ್ಣು |
| Chert | – ಚಕಮಕಿ ಕಲ್ಲು |
| Chicken-pox | – ಗಣಜಿಲೆ, ದಡಾರ |
| Chopper | – ಮಚ್ಚು |

Cist – ನೆಲಕೋಣೆ
Citadel – ದುರ್ಗ / ಕೋಟೆ
Citrus paradisi – ಗ್ರೇಪ್ ಹಣ್ಣು
Clactonian – ಆದಿ ಹಳೆಶಿಲಾಯುಗದ ಉಪಕರಣ ಮಾದರಿ
Cleaver – ಸೀಳುಗತ್ತಿ / ಕಡಿಕತ್ತಿ
Cluster beans – ಗೋರಿಕಾಯಿ
Colonialism – ವಸಾಹತುಶಾಹಿ ನೀತಿ
Communal marriage – ಗುಂಪು ಮದುವೆ
Computer – ಗಣಕ
Convolvulaceae – ಗೆಣಸಿನ ಕುಟುಂಬ
Co-operative Housing Society – ಗೃಹ ನಿರ್ಮಾಣ ಸಹಕಾರ ಸಂಘ
Core – ತಿರುಳುಗಲ್ಲು, ಮೂಲಶಿಲೆ
Cottage industries – ಗುಡಿಸಲು ಕೈಗಾರಿಕೆಗಳು
Counter, Geiger-Muller – ಗುಣಕ, ಗೈಗರ್–ಮುಲ್ಲರ್
Crab's eye – ಗುಲಗಂಜಿ
Crusades – ಧಾರ್ಮಿಕ ಯುದ್ಧಗಳು
Cryptology – ಗುಪ್ತಲೇಖ ಶಾಸ್ತ್ರ
Cultural overlap – ಸಾಂಸ್ಕೃತಿಕ ಸಮ್ಮಿಶ್ರಣ
Cultural sequence – ಸಾಂಸ್ಕೃತಿಕ ಅನುಕ್ರಮ
Cyamopsis tetragonoloba – ಗೋರಿಕಾಯಿ
Cycas – ಗೊಡ್ಡು ಈಚಲು
Debitage – ತ್ಯಾಜ್ಯ ಚಕ್ಕೆಗಳು
Deposit – ಸಂಚಯ / ಶೇಖರಣೆ
Dictatorship – ನಿರಂಕುಶ ಪ್ರಭುತ್ವ
Discoid – ಚಕ್ರಾಕಾರದ ಕಲ್ಲಿನ ಉಪಕರಣ
Dockyard – ಬಂದರುಕಟ್ಟೆ / ಹಡಗುಕಟ್ಟೆ
Dolls – ಗೊಂಬೆಗಳು
Dolmen – ಕಲ್ಮನೆ
Dome – ಗುಮ್ಮಟ
Drill bits – ಬೈರಿಗೆ ಮೊಳೆ
Dvara bandha – ದೇವಾಲಯದ ಬಾಗಿಲು ಚೌಕಟ್ಟು
Dynamic economics – ಗತಿ ಅರ್ಥಶಾಸ್ತ್ರ
Dynamics – ಗತಿ ವಿಜ್ಞಾನ
Early Historical – ಆದಿಚಾರಿತ್ರಿಕ
Earned income – ಗಳಿಸಿದ ವರಮಾನ
Eclipse, celestial – ಗ್ರಹಣ, ಖಗೋಳಿಯ
Eclipsing binary stars – ಗ್ರಹಣಕಾರಕ ಯಮಳ ನಕ್ಷತ್ರಗಳು
Economics of mining – ಗಣಿಗಾರಿಕೆಯ ಅರ್ಥಶಾಸ್ತ್ರ
Electric wave filter – ಗಾಲಕ ವಿದ್ಯುತ್ ಅಲೆ
Enlargement of lymph nodes – ಗಳಲೆ
Environment – ಪರಿಸರ
Eolith – ಪ್ರಾಕೃತಿಕವಾಗಿ ದೊರೆತ, ಮಾನವ ಬಳಸಿದ ಕಲ್ಲು
Epipalaeolithic – ಅಂತ್ಯಹಳೆಶಿಲಾಯುಗೋತ್ತರ
Eretmochelys imbricata – ಗರುಡ ಮೂಗಿನ ಆಮೆ
Evolution theory – ವಿಕಾಸವಾದ
Excavation – ಉತ್ಖನನ
Exploration – ಪುರಾತತ್ತ್ವ ಪರಿಶೋಧನೆ, ಅನ್ವೇಷಣೆ/ ಸರ್ವೇಕ್ಷಣೆ
Falcon – ಗಿಡುಗ
Falcon Hawk – ಗಿಡುಗ
Falconry – ಗಿಡುಗ ಸಾಕಣೆ
Feather – ಗರಿ
Feather star – ಗರಿನಕ್ಷತ್ರ
Fertiliser – ಗೊಬ್ಬರ
Ficus mysorensis – ಗೋಣಿಮರ
Flaek-Blades – ಚಕ್ಕೆ ಅಲಗುಗಳು
Flint – ಚಕಮಕಿ ಕಲ್ಲು
Fossil wood – ವೃಕ್ಷ ಶಿಲೆ
Fossil – ಪಳೆಯುಳಿಕೆ, ಜೀವ್ಯವಶೇಷ, ಸಸ್ಯ ಅಥವಾ ಪ್ರಾಣಿ ಅವಶೇಷ
Francolinus Spp – ಗೌಜಲು ಹಕ್ಕಿ
Gabbro – ಗ್ಯಾಬ್ರೊ
Gadolinium – ಗ್ಯಾಡೊಲಿನಿಯಮ್
Gailardia – ಗೇಲಾರ್ಡಿಯ
Gaja prishta – ಹಿಂಬದಿಯಲ್ಲಿ ಆನೆಯ ಹಿಂಬದಿಯಂತೆ ಕಾಣುವ ಅರ್ಧವೃತ್ತಾಕಾರದ ವಿನ್ಯಾಸ
Galena – ಗಲೀನ
Galli formes – ಗ್ಯಾಲಿಫಾರ್ಮೀಸ್
Gallium – ಗಾಲಿಯಂ
Gallmidge – ಗಾಲ್‌ಮಿಡ್ಜ್
Gallup poll – ಗ್ಯಾಲಪ್ ಎಣಿಕೆ
Gamma decay – ಗ್ಯಾಮಕ್ಷಯ
Gama distribution – ಗ್ಯಾಮ ವಿತರಣೆ
Gama function – ಗ್ಯಾಮ ಉತ್ಪನ್ನ
Gamma-ray Astronomy – ಗ್ಯಾಮ ಕಿರಣ ಖಗೋಳವಿಜ್ಞಾನ
Gamma rays – ಗ್ಯಾಮ ಕಿರಣಗಳು
Gammexane – ಗ್ಯಾಮಕ್ಸೇನ್
Ganoidae – ಗನಾಯ್ ಡೀ
Gantt task and bonus plan – ಗ್ಯಾಂಟನ ಕಾರ್ಯ ಮತ್ತ ಬೋನಸ್ ಪದ್ಧತಿ
Gar fish – ಗಾರ್ ಮೀನು

Garnet – ಗಾರ್ನೆಟ್
Garpike – ಗಾರ್ ಪೈಕ್
Garuga pinnata – ಗೊದ್ದನಮರ
Gary system of education – ಗೇರಿ ಶಿಕ್ಷಣ ಪದ್ಧತಿ
Gasteria – ಗ್ಯಾಸ್ಟೀರಿಯ
Gastropoda – ಗ್ಯಾಸ್ಟ್ರಾಪೊಡ
Gastrotricha – ಗ್ಯಾಸ್ಟ್ರೊಟ್ರೈಕ
Gavialis – ಗೇವಿಯಾಲಿಸ್
Gayal – ಗೇಯಲ್
Gazelle – ಗೆಜ಼ೆಲ್
Gear – ಗಿಯರ್
Gecko – ಗೆಕ್ಕೊಹಲ್ಲಿ
Genocide – ಜನಾಂಗ ಹತ್ಯೆ
Geyser – ಗೀಸ಼ರ್
Gibbon – ಗಿಬನ್
Gid – ಗಿರಕಿ ರೋಗ
Gingko – ಗಿಂಗ್‌ಕೋ
Glacial period – ಹಿಮಘಟ್ಟ
Gladiolus – ಗ್ಲ್ಯಾಡಿಯೋಲಸ್
Gland – ಗ್ರಂಥಿ
Glass – ಗಾಜು
Glass cloth – ಗಾಜಿನ ಬಟ್ಟೆ
Glauber's salt – ಗ್ಲಾಬರ್ ಲವಣ
Glazed ware – ಮೆರುಗಿನ ಮಣ್ಪಾತ್ರೆ
Glider – ಗ್ಲೈಡರ್
Gliricidia – ಗ್ಲಿರಿಸಿಡಿಯ
Globulin – ಗ್ಲಾಬ್ಯುಲಿನ್
Gloriosa – ಗ್ಲೋರಿಯೋಸ
Glossematics – ಗ್ಲಾಸಿಮ್ಯಾಟಿಕ್ಸ್
Glossina – ಗ್ಲಾಸಿನ ನೊಣ
Glossopteris – ಗ್ಲಾಸಾಪ್ಟರಿಸ್
Gloxinia – ಗ್ಲಾಕ್ಸಿನಿಯ
Glucose – ಗ್ಲೂಕೋಸ್
Glucosides – ಗ್ಲೂಕೊಸೈಡುಗಳು
Glutamic acid – ಗ್ಲೂಟಾಮಿಕ್ ಆಮ್ಲ
Glutathione – ಗ್ಲೂಟತಯೋನ್
Glutton – ಗ್ಲಟನ್
Glycols – ಗ್ಲೈಕಾಲುಗಳು
Glyptodon – ಗ್ಲಿಪ್ಟೊಡಾನ್
Gobi fish – ಗೋಬಿ ಮೀನು
Goblet – ಪಾನ ಪಾತ್ರೆ
Godetia – ಗೊಡೀಷಿಯ
Golconda diamonds – ಗೋಲ್ಕೊಂಡ ವಜ್ರಗಳು
Golf – ಗಾಲ್ಫ್
Gomphrena – ಗಾಂಫ್ರಿನ
Gondite – ಗಾಂಡೈಟ್
Gondwana land – ಗೋಂಡ್ವಾನ ಖಂಡ
Gondwana system – ಗೋಂಡ್ವಾನ ವ್ಯವಸ್ಥೆ
Gonorrhoea – ಗಾನರೀಯ
Googol – ಗೂಗಾಲ್
Goonch – ಗೂಂಚ್ ಮೀನು
Gopher – ಗೋಫರ್
Gopura – ದೇವಾಲಯದ ಮಹಾದ್ವಾರದ ಮೇಲ್ಕಟ್ಟಡ
Gordiacea – ಗೋರ್ಡಿಯೇಸಿಯ
Gorilla – ಗೊರಿಲ
Gossan – ಗೋಸಾನ್
Grackle – ಗ್ರ್ಯಾಕಲ್
Graeco-latin square designs – ಗ್ರೀಕೋ–ಲ್ಯಾಟಿನ್ ಚೌಕಗಳು
Grampus – ಗ್ರ್ಯಾಂಪಸ್
Gram equivalent weight – ಗ್ರಾಮ್ ಸಮಾನ ತೂಕ
Gram molecular weight – ಗ್ರಾಮ್ ಅಣು ತೂಕ
Gram negative diplococci – ಗ್ರಾಮ್ ಋಣ ಡಿಪ್ಲೊಕಾಕೈ
Gram's stain – ಗ್ರಾಮ್ ವರ್ಣ
Grantia – ಗ್ರ್ಯಾನ್ಷಿಯ
Granulite – ಗ್ರ್ಯಾನಯಲೈಟ್
Granuloma inguinale – ಗ್ರಾನ್ಯು ಲೋಮ ಇಂಗ್ವೈನಲಿ
Grape fruit – ಗ್ರೇಪ್ ಹಣ್ಣು
Graphite – ಗ್ರ್ಯಾಫೈಟ್
Graph theory – ಗ್ರಾಫ್ ಸಿದ್ಧಾಂತ
Graptolites – ಗ್ರ್ಯಾಪ್ಟೊಲೈಟುಗಳು
Gravel – ಜಲ್ಲಿಕಲ್ಲು
Gravitation – ಗುರುತ್ವಾಕರ್ಷಣೆ
Gravitational collapse – ಗುರುತ್ವಾಕರ್ಷಣ ಕುಸಿತ
Graviton – ಗ್ರ್ಯಾವಿಟಾನ್
Grebe – ಗ್ರೀಬ್
Greenovia – ಗ್ರೀನೋವಿಯ
Green's theorem – ಗ್ರೀನನ ಪ್ರಮೇಯ
Greenwich mean time – ಗ್ರೀನಿಜ್ ಮಾಧ್ಯಕಾಲ
Gregarina – ಗ್ರಗರೈನ
Gregorian calendar – ಗ್ರೆಗೊರಿಯನ್ ತಾರೀಕು ಪಟ್ಟಿ
Gresham's law – ಗ್ರೆಶಾಮನ ನಿಯಮ
Grignard reaction – ಗ್ರೀನ್‌ಯಾರ್ಡ್ ಕ್ರಿಯೆ

Mathematical models – ಗಣಿತ ಪ್ರತಿರೂಪಗಳು
Mathematical physics – ಗಣಿತ ಭೌತವಿಜ್ಞಾನ
Mathematical societies – ಗಣಿತ ಸಂಘಗಳು
Mathematical symbols – ಗಣಿತ ಪ್ರತೀಕಗಳು
Mathematical tables – ಗಣಿತ ಕೋಷ್ಟಕಗಳು
Mathematics – ಗಣಿತ ಶಾಸ್ತ್ರ
Mathematics, methods of teaching – ಗಣಿತ ಬೋಧನ ಕ್ರಮ
Medieval – ಮಧ್ಯಯುಗೀನ ಕಾಲದ
Megalith – ಬೃಹತ್ ಶಿಲಾ ಸಮಾಧಿ
Megalithic culture – ಬೃಹತ್ ಶಿಲಾ ಸಂಸ್ಕೃತಿ
Menhir – ನಿಲಸಗಲ್ಲು ಗೋರಿ, ಸ್ಮಾರಕ ಶಿಲೆ
Mesolithic – ಸೂಕ್ಷ್ಮ ಶಿಲಾಯುಗ
Mesozoic era – ಮಧ್ಯಜೀವಯುಗ
Metallurgy – ಲೋಹವಿಜ್ಞಾನ
Microbiology – ಸೂಕ್ಷ್ಮ ಜೀವ ವಿಜ್ಞಾನ
Micrometer – ಸೂಕ್ಷ್ಮ ಮಾಪಕ
Microscope – ಸೂಕ್ಷ್ಮ ದರ್ಶಕ
Middle palaeolithic – ಮಧ್ಯ ಹಳೆಶಿಲಾಯುಗ
Mine – ಗಣಿ
Mining – ಗಣಿಗಾರಿಕೆ
Mining accidents – ಗಣಿ ಅಪಘಾತ
Mining engineering – ಗಣಿಗಾರಿಕೆ ಶಿಲ್ಪ
Mining in nation's economy – ಗಣಿಗಾರಿಕೆಯ ಪಾತ್ರ, ರಾಷ್ಟ್ರ ಆರ್ಥಿಕತೆಯಲ್ಲಿ
Mining laws – ಗಣಿಗಾರಿಕೆ ಕಾನೂನುಗಳು
Mining, non-metal – ಗಣಿಗಾರಿಕೆ, ಅಲೋಹ ಖನಿಜಗಳು
Mining workers (labourers) – ಗಣಿ ಕಾರ್ಮಿಕರು
Mining, under sea – ಗಣಿಗಾರಿಕೆ, ಸಮುದ್ರಗತ
Mobility – ಗತಿ ಶೀಲತೆ
Multiplier – ಗುಣಕ
Muntingia calabura – ಗಸಗಸೆ ಹಣ್ಣಿನ ಮರ
Nests – ಗೂಡುಗಳು
Neolithic age – ನವಶಿಲಾಯುಗ
Neolithic-chalcolithic – ನವಶಿಲಾ–ತಾಮ್ರಯುಗ
Niger – ಗುರೆಳ್ಳು
Noise and its effects – ಗದ್ದಲ ಮತ್ತು ಅದರ ಪರಿಣಾಮಗಳು
Obsession – ಗೀಳು
Ompokbimaculatus – ಗೊಡ್ಲೆಮೀನು
Opera – ಗೀತರೂಪಕ
Opium poppy – ಗಸಗಸೆ ಗಿಡ
Orchestra – ಗೋಷ್ಠಿಗಾನ
Osphronemus goramy – ಗೌರಾಮಿ
Owl – ಗೂಬೆ
Oxabat fly – ಗೂಳಿ ನೊಣ
Palaeontology – ಪ್ರಾಗ್ಜೀವ ವಿಜ್ಞಾನ, ಪಳೆಯುಳಿಕೆ ವಿಜ್ಞಾನ
Palaeo-economy – ಪುರಾ ಆರ್ಥಿಕತೆ
Palaeo-environment – ಪುರಾ ವಾತಾವರಣ
Palaeolithic – ಹಳೆ ಶಿಲಾಯುಗ
Panicum maximum – ಗಿನಿಹುಲ್ಲು
Papaver somniferum – ಗಸಗಸೆ ಗಿಡ
Parakeet – ಗಿಳಿ
Parrot – ಗಿಳಿ
Parrot fish – ಗಿಳಿ ಮೀನು
Partridge – ಗೌಜಲು ಹಕ್ಕಿ
Passage chamber – ಬೃಹತ್ ಶಿಲಾ ಸಂಸ್ಕೃತಿಯ ಹಾದಿ ಕೋಣೆ ಸಮಾಧಿ
Pastoral convention – ಗ್ರಾಮೀಣ ಸಂಪ್ರದಾಯ
Pawnbroker – ಗಿರಿವಿದಾರ
Pericardium, Diseases – ಗುಂಡಿಗೆ ಸುತ್ತು ಪೊರೆಯ ರೋಗ
Phase – ಉಪಹಂತ
Physalis, sp – ಗುಪ್ಪಟೆ ಗಿಡ
Pit burial – ಶವಕುಣಿ
Pit hearth – ಗುಳಿ ಒಲೆ
Pit silo – ಧಾನ್ಯ ಸಂಗ್ರಹಣ ಗುಂಡಿ
Pithika – ವಿಗ್ರಹದ ಪೀಠ
Planet – ಗ್ರಹ
Plant bugs – ಗಿಡ ತಿಗಣೆಗಳು
Pleistocene – ಹಿಮಯುಗ
Ploceus Sp – ಗೀಜಗನ ಹಕ್ಕಿ
Pneumo-thorax – ಗಾಳಿತುಂಬಿದೆದೆ
Point – ಮೊನೆ, ಚೂಪು
Pollen analysis – ಪರಾಗ ವಿಶ್ಲೇಷಣೆ, ಸಸ್ಯರೇಣು ವಿಶ್ಲೇಷಣೆ
Port-holed cist – ಕಂಡಿಕೋಣೆ ಗೋರಿ
Portulaca quadrifida – ಗೋಣಿ ಸೊಪ್ಪು
Pottery – ಮಣ್ಪಾತ್ರೆ
Pottery yard – ಮಣ್ಪಾತ್ರೆಗಳ ಅಂಕಣ
Pregnancy – ಗರ್ಭಾವಸ್ಥೆ
Pressure technique – ಒತ್ತಡ ತಂತ್ರ
Pristis – ಗರಗಸ ಮೀನು
Prose – ಗದ್ಯ
Prose literature – ಗದ್ಯಸಾಹಿತ್ಯ

Protohistoric – ಪೂರ್ವಭಾವಿ ಇತಿಹಾಸ
Proverbs – ಗಾದೆಗಳು
Punch marked coin – ಮುದ್ರಾಂಕಿತ ನಾಣ್ಯ
Puntius Sp – ಗೆಂಡೆ ಮೀನು
Quartz – ಬೆಣಚು ಕಲ್ಲು
Quinsy – ಗೋಣುಕುರು
Ranga mantapa – ತೆರೆದ ಸ್ತಂಭ ಸಭಾ ಮಂಟಪ
Relic casket – ಕರಂಡಿಕೆ
Rent, rent theory – ಗೇಣಿ, ಗೇಣಿ ಸಿದ್ಧಾಂತ
Republic – ಗಣರಾಜ್ಯ
Returns to scale – ಗಾತ್ರಾನುಗುಣ ಪ್ರತಿಫಲ
Rock-cut burial caves – ಗುಹಾ ಸಮಾಧಿಗಳು
Rose – ಗುಲಾಬಿ
Rural education – ಗ್ರಾಮೀಣ ಶಿಕ್ಷಣ
Rural indebtedness – ಗ್ರಾಮೀಣ ಋಣಗ್ರಸ್ತತೆ
Rural reconstruction – ಗ್ರಾಮಪುನರ್ರಚನೆ
Rural Sanitation engineering – ಗ್ರಾಮ ನೈರ್ಮಲ್ಯ ಶಿಲ್ಪ
Rural Society – ಗ್ರಾಮ ಸಮಾಜ
Sala-bhanjika – ಬಳ್ಳಿ ಅಥವಾ ಮರವನ್ನು ಹಿಡಿದು ನಿಂತ ಸ್ತ್ರೀ ವಿಗ್ರಹ
Samabhanga – ನೆಟ್ಟಗೆ ನಿಂತಿರುವ ಭಂಗಿ
Sarcophagus – ಶವ ಪೆಟ್ಟಿಗೆ
Saw fish – ಗರಗಸ ಮೀನು
Scraper – ಹೆರೆಚಕ್ಕೆ
Screw driver – ಬೈರಿಗೆ
Secret ballot – ಗುಪ್ತ ಮತದಾನ
Secret languages – ಗುಪ್ತ ಭಾಷೆಗಳು
Secret service – ಗೂಢಾ ಸೇವಾ ವ್ಯವಸ್ಥೆ
Secret societies – ಗುಪ್ತ ಸಂಘಗಳು
Section – ಉತ್ಖನನ ಗುಂಡಿಯ ಒಂದು ಪಾರ್ಶ್ವ
Semecarpus anacardium – ಗೊಡ್ಡು ಗೇರು ಮರ
Set theory – ಗಣ ಸಿದ್ಧಾಂತ
Shale – ಜೇಡಿ ಪದರಗಲ್ಲು
Slaves, slave trade – ಗುಲಾಮರು, ಗುಲಾಮರ ವ್ಯಾಪಾರ
Sling ball – ಕವಣೆ ಕಲ್ಲು
Sopana – ಮೆಟ್ಟಲು
Sorghum halepense – ಗಲಗು
Spear head – ಈಟಿ ಮೊನೆ
Sphere – ಗೋಳ
Spherical trigonometry – ಗೋಳ ತ್ರಿಕೋಣಮಿತಿ
Spheroid – ಗೋಳಕಲ್ಪ
Spindle whorl – ಕದಿರಣಿಗೆ/ ತಕಲಿ
Spleen – ಗುಲ್ಮ
Spleen, Diseases of – ಗುಲ್ಮ ರೋಗಗಳು
Split based point – ಸೀಳಿದ ತೊಟ್ಟಿನ ಮೊನೆ
Spying – ಗೂಢಚರ್ಯೆ
Statistical quality control – ಗುಣ ನಿಯಂತ್ರಣ, ಸಂಖ್ಯಾಕಲನೀಯ
Stone circle – ಕಲ್ಲು ವೃತ್ತ ಸಮಾಧಿ
Stone weight – ಕಲ್ಲಿನ ತೂಕದ ಬಟ್ಟು
Storage bin – ಕಣಜ
Stratigraphy – ಪದರಗಳ ಕ್ರಮ, ಸ್ತರ ವಿಜ್ಞಾನ
Strongylura – ಗಾರ್‌ಮೀನು
Stupi – ದೇವಾಲಯದ ಗರ್ಭಗುಡಿಯ ಶಿಖರದ ತುದಿಯಲ್ಲಿರುವ ಭಾಗ
Surgery of the heart and the lungs – ಗುಂಡಿಗೆ ಮತ್ತು ಪುಪ್ಪುಸಗಳ ಶಸ್ತ್ರ ಚಿಕಿತ್ಸೆ
Sweet potato – ಗೆಣಸು
Tadpole – ಗೊದ ಮೊಟ್ಟೆ
Tell – ಪ್ರಾಚೀನ ಅವಶೇಷಗಳಿಂದಾದ ಕೃತಕ ದಿಬ್ಬ
Tent – ಗುಡಾರ
Termite – ಗೆದ್ದಲು
Textual criticism – ಗ್ರಂಥ ಸಂಪಾದನೆ
Thyroid gland – ಗುರಾಣಿಕ ಗ್ರಂಥಿ
Thyroid gland, Diseases – ಗುರಾಣಿಕ ಗ್ರಂಥಿಯ ರೋಗಗಳು
Torch tree – ಗೊರವಿ
Treasure trove – ಗುಪ್ತನಿಧಿ
Triticum Spp – ಗೋದಿ
Tse Tse fly – ಗ್ಲಾಸಿನ ನೊಣ
Ungulata – ಗೊರಸಿಗಳು
Village – ಗ್ರಾಮ
Village Industries – ಗ್ರಾಮಕೈಗಾರಿಕೆಗಳು
Wattle and daub – ತಡಿಕೆ ಗೋಡೆ (ಮಣ್ಣು ಮೆತ್ತಿದ ಬಿದಿರಿನ ಗೋಡೆ)
Weaver bird – ಗೀಜಗನ ಹಕ್ಕಿ
Wheat – ಗೋದಿ
Wheel – ಗಾಲಿ
White ant – ಗೆದ್ದಲು
Wind – ಗಾಳಿ
Wood louse – ಗೋಲಿಹೇನು
Wound – ಗಾಯ
Zircon – ಗೋಮೇದಕ

| | |
|---|---|
| ಎ. | ಅನಂತರಾಮಯ್ಯ, ಎಂ.ವಿ.<br>ಸೂಪರಿಂಟೆಂಡೆಂಟ್ (ವಿ)<br>ಪ್ರಾಣಿ ಸಂಗ್ರಹಾಲಯ<br>ಮೈಸೂರು |
| ಎ.ಎ. | ಅಬ್ದುಲ್ ಅಜೀಜ಼್<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ<br>ಮೈಸೂರು |
| ಎ.ಬಿ.ಎಚ್. | ಅಮಾತಿ, ಬಿ.ಎಚ್.<br>ಸಮಾಜವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎಸಿಎಚ್. | ಅಚ್ಯುತರಾವ್<br>ಗ್ರಂಥಪಾಲ (ವಿ)<br>ಭಾರತೀಯ ವಿಜ್ಞಾನ ಸಂಶೋಧನ ಸಂಸ್ಥೆ<br>ಬೆಂಗಳೂರು |
| ಎ.ಜಿ.ಕೆ. | ಕುಲಕರ್ಣಿ, ಎ.ಜಿ.<br>ಗಾಜ಼ಿಪುರ, ಗುಲ್ಬರ್ಗ |
| ಎ.ಎಚ್. | ಅಂಬಳಿಕೆ ಹಿರಿಯಣ್ಣ<br>ಕುಲಪತಿಗಳು<br>ಕರ್ನಾಟಕ ಜಾನಪದ ವಿಶ್ವವಿದ್ಯಾಲಯ<br>ಶಿಗ್ಗಾಂವಿ |
| ಎ.ಐ. | ಆನಂದರಾವ್, ಐ.<br>ಗ್ರಂಥಪಾಲ (ವಿ)<br>ಕರ್ನಾಟಕ ರೀಜನಲ್ ಎಂಜಿನಿಯರಿಂಗ್ ಕಾಲೇಜು<br>ಸುರತ್ಕಲ್ಲು, ದಕ್ಷಿಣ ಕನ್ನಡ ಜಿಲ್ಲೆ |
| ಎ.ಕೆ.ಜಿ. | ಗೋಪಾಲರಾಜನ್, ಎ.ಕೆ.<br>ಗೌರವ ಸರ್ಜನ್ (ವಿ)<br>ಕೃಷ್ಣರಾಜೇಂದ್ರ ಆಸ್ಪತ್ರೆ<br>ಮೈಸೂರು |
| ಎ.ಕೆ.ಕೆ. | ಕಾರಂತ, ಎ.ಕೆ.<br>ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಎ.ಕೆ.ಎಸ್. | ಕೃಷ್ಣಸ್ವಾಮಿ, ಎ.ಕೆ.<br>ಜಿಲ್ಲಾ ಅರಣ್ಯಾಧಿಕಾರಿ (ವಿ)<br>ಕೋಲಾರ |
| ಎ.ಕೆ.ಎಸ್‌ಎಚ್. | ಅನಂತಕೃಷ್ಣಶರ್ಮ, ಎಂ.ಎಸ್.<br>ಕಾಸ್ಟ್ ಅಕೌಂಟೆಂಟ್ (ವಿ)<br>ಜಾವಾ ಮೋಟರ್ ಸೈಕಲ್ ಕಂಪನಿ<br>ಮೈಸೂರು |
| ಎ.ಎಲ್.ಎಸ್. | ಶಿವರುದ್ರಪ್ಪ, ಎ.ಎಲ್.<br>ಪ್ರಾಧ್ಯಾಪಕ (ವಿ), ತತ್ತ್ವಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎ.ಎಂ. | ಮೈಲಾರರಾವ್, ಎ. (ದಿ)<br>ಸಂಪಾದಕ, ಕನ್ನಡ ವಿಶ್ವಕೋಶ<br>ಮೈಸೂರು |
| ಎ.ಎಂ.ಆರ್. | ರಾಜಶೇಖರಯ್ಯ, ಎ.ಎಂ.<br>ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎ.ಎನ್.ಎಸ್. | ನಾಗಭೂಷಣರಾವ್ ಸಿಂಧೆ, ಎ.<br>ಪ್ರಾಧ್ಯಾಪಕ (ವಿ), ಜೈವಿಕವಿಜ್ಞಾನ ವಿಭಾಗ<br>ಮಂಗಳೂರು ವಿಶ್ವವಿದ್ಯಾಲಯ<br>ಮಂಗಳ ಗಂಗೋತ್ರಿ, ಮಂಗಳೂರು |
| ಎ.ಎನ್.ಎಸ್.ಐ. | ಶ್ರೀನಿವಾಸ ಅಯ್ಯಂಗಾರ್, ಎ.ಎನ್.<br>ಭೂ ವಿಜ್ಞಾನಿ (ವಿ)<br>ಗಣಿ ಮತ್ತು ಭೂವಿಜ್ಞಾನ ಇಲಾಖೆ<br>ಬೆಂಗಳೂರು |
| ಎ.ಎನ್.ಎಸ್‌ಯು. | ಸುಬ್ಬರಾವ್, ಎ.ಎನ್. (ದಿ)<br>ನಿರ್ದೇಶಕ, ಕಲಾಮಂದಿರ<br>ಬಸವನಗುಡಿ, ಬೆಂಗಳೂರು |
| ಎ.ಎನ್.ಯು. | ಉಪಾಧ್ಯೆ, ಎ.ಎನ್. (ದಿ)<br>ಪ್ರಾಧ್ಯಾಪಕ<br>ಜೈನಾಲಜಿ ಮತ್ತು ಪ್ರಾಕೃತ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎ.ಪಿ. | ಪ್ರೇಮಲತಾ ಶೆಟ್ಟಿ, ಎ.<br>ಅಧ್ಯಾಪಕಿ (ವಿ), ಇತಿಹಾಸ ವಿಭಾಗ<br>ಮಹಾರಾಣಿ ಕಲಾ ಕಾಲೇಜು, ಮೈಸೂರು |
| ಎ.ಪಿ.ಎಸ್. | ಶ್ರೀನಿವಾಸಮೂರ್ತಿ, ಎ.ಪಿ.<br>ಪ್ರವಾಚಕ (ವಿ), ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎ.ಎಸ್. | ಸುಂದರ, ಎ.<br>ಪ್ರಾಧ್ಯಾಪಕ (ವಿ)<br>ಪ್ರಾಚೀನ ಇತಿಹಾಸ ಮತ್ತು ಶಾಸನ ಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎ.ವಿ.ಜಿ. | ಗೋಪಾಲರಾವ್, ಎ.ವಿ.<br>ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎ.ವಿ.ಎನ್. | ನರಸಿಂಹಮೂರ್ತಿ, ಎ.ವಿ.<br>ಪ್ರಾಧ್ಯಾಪಕ (ವಿ)<br>ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎ.ವಿ.ವಿ. | ವೆಂಕಟರತ್ನಂ, ಎ.ವಿ. (ದಿ)<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಬಿ.ಎ.ಸಿ. | ಚನ್ನಪ್ಪಗೌಡ, ಬಿ.ಎ.<br>ತಾಂತ್ರಿಕ ಸಹಾಯಕ (ವಿ)<br>ತೋಟಗಾರಿಕೆ ಇಲಾಖೆ<br>ಲಾಲ್‌ಬಾಗ್, ಬೆಂಗಳೂರು |
| ಬಿ.ಎ.ಎಸ್. | ಸನದಿ, ಬಿ.ಎಸ್.<br>ಎಕ್ಸಟೆನ್ಷನ್ ಆಫೀಸರ್ (ವಿ)<br>ಆಲ್ ಇಂಡಿಯ ರೇಡಿಯೊ<br>ಮುಂಬಯಿ |
| ಬಿ.ಬಿ.ಬಿ. | ಬಾಗಿ, ಬಿ.ಬಿ.<br>ಪ್ರಾಧ್ಯಾಪಕ (ವಿ)<br>ಮಾಳಮಡ್ಡಿ, ಧಾರವಾಡ |
| ಬಿ.ಬಿ.ಎಚ್. | ಹುನಗುಂದ, ಬಿ.ಬಿ.<br>ಪ್ರಾಧ್ಯಾಪಕ (ವಿ), ಗ್ರಂಥಾಲಯ ವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |

ಬಿ.ಸಿ. ಚಂದ್ರಶೇಖರ, ಬಿ.
ಪ್ರವಾಚಕ (ವಿ), ಭೂಗೋಳವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ಸಿ.ಜೆ. ಜಕಾತಿ, ಬಿ.ಸಿ.
ಗ್ರಂಥಪಾಲ (ವಿ)
ಶಿವಾಜಿ ವಿಶ್ವವಿದ್ಯಾಲಯ
ಗ್ರಂಥಾಲಯ, ಕೊಲ್ಹಾಪುರ

ಬಿ.ಡಿ.ಎಚ್. ಹೆಗಡೆ, ಬಿ.ಡಿ.
ಅಡ್ವೊಕೇಟ್
ಶಿರಸಿ, ಉತ್ತರ ಕನ್ನಡ ಜಿಲ್ಲೆ

ಬಿ.ಜಿ. ಬ್ರಹ್ಮಪ್ಪ, ಜಿ.
ಪ್ರಾಂಶುಪಾಲ (ವಿ)
ಗೊಮ್ಮಟೇಶ್ವರ ಕಾಲೇಜು
ಶ್ರವಣಬೆಳಗೊಳ

ಬಿ.ಎಚ್.ಎಂ. ಮನೋಹರರಾವ್, ಬಿ.ಎಚ್.
ಪ್ರಾಧ್ಯಾಪಕ (ವಿ)
ಮತ್ಸ್ಯವಿಜ್ಞಾನ ಕಾಲೇಜು
ಮಂಗಳೂರು

ಬಿ.ಎಚ್.ಎಸ್. ಶ್ರೀಧರ್, ಬಿ.ಎಚ್. (ದಿ)
ಪ್ರಾಂಶುಪಾಲ
ಗಾಂಧಿ ಸೆಂಟಿನರಿ ಮೆಮೋರಿಯಲ್ ಕಾಲೇಜು
ಸಿದ್ಧಾಪುರ, ಉತ್ತರ ಕನ್ನಡ ಜಿಲ್ಲೆ

ಬಿ.ಜೆ.ಎಸ್. ಸಂದೇಸರ, ಬಿ.ಜೆ.
ಪ್ರಾಧ್ಯಾಪಕ (ವಿ)
ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯ
ಬರೋಡ

ಬಿ.ಕೆ.ಜಿ. ಗುರುರಾಜರಾವ್, ಬಿ.ಕೆ. (ದಿ)
ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ಕೆ.ಜೆ. ಜಗದೀಶ, ಬಿ.ಕೆ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಬಿ.ಕೆ.ಎಸ್. ಶಿವರಾಮಯ್ಯ, ಬಿ.ಕೆ.
ಪ್ರಾಧ್ಯಾಪಕ (ವಿ), ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ಕೆ.ಟಿ. ತಿಮ್ಮಪ್ಪ, ಬಿ.ಕೆ. (ದಿ)
ಪ್ರಾಧ್ಯಾಪಕ, ಕನ್ನಡ ವಿಭಾಗ
ಸರ್ಕಾರಿ ಕಾಲೇಜು, ಕಾಸರಗೋಡು

ಬಿ.ಎಂ. ಮುದ್ದಾಚಾರಿ, ಬಿ. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ಎಂ.ಕೆ. ಕಲ್ಯಾಣಶೆಟ್ಟಿ, ಬಿ.ಎಂ.
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಬಿ.ಎನ್. ಬಸವಯ್ಯ, ಎನ್. (ದಿ)
ವಿಶೇಷಾಧಿಕಾರಿ, ಮೀನುಗಾರಿಕೆ ಇಲಾಖೆ
ಬೆಂಗಳೂರು

ಬಿ.ಎನ್ಎಜಿ. ನಾಗಪ್ಪ, ಬಿ. (ದಿ)
ಪ್ರವಾಚಕ
ಗ್ರಂಥಾಲಯ ವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ಎನ್.ಬಿ. ಬೋಳೇಗೌಡ, ಬಿ.ಎನ್. (ದಿ)
ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ಎನ್.ಸಿ. ಚಂದ್ರಯ್ಯ, ಬಿ.ಎನ್.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಬಿ.ಪಿ. ಪಾಲಾಕ್ಷ, ಬಿ.
ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಬಿ.ಪಿ.ಜಿ. ಗೋಪಾಲಕೃಷ್ಣ, ಬಿ.ಪಿ.
ಪ್ರಾಂಶುಪಾಲ (ವಿ)
ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು

ಬಿ.ಪಿ.ಆರ್. ರಾಧಕೃಷ್ಣ, ಬಿ.ಪಿ. (ದಿ)
ನಿರ್ದೇಶಕ
ಗಣಿ ಮತ್ತು ಭೂ ವಿಜ್ಞಾನ ಇಲಾಖೆ
ಬೆಂಗಳೂರು

ಬಿ.ಆರ್.ಸಿ.ಆರ್. ರಮೇಶಚಂದ್ರರಾವ್, ಬಿ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಮೂಡಬಿದ್ರೆ

ಬಿ.ಆರ್.ಎಂ. ಮೇದಕ್, ಬಿ.ಆರ್.
ಪ್ರಾಧ್ಯಾಪಕ (ವಿ)
ಕರ್ನಾಟಕ ಕಾಲೇಜು, ಧಾರವಾಡ

ಬಿ.ಆರ್.ಪಿ. ಪ್ರಾಣೇಶರಾವ್, ಬಿ.ಆರ್. (ದಿ)
ಪ್ರಾಧ್ಯಾಪಕ, ಶಾರದಾ ವಿಲಾಸ ಕಾಲೇಜು
ಮೈಸೂರು

ಬಿ.ಎಸ್. ಶಿವಮೂರ್ತಿಶಾಸ್ತ್ರಿ, ಬಿ. (ದಿ)
ಸಂಪಾದಕ, ಶರಣ ಸಾಹಿತ್ಯ
ಬೆಂಗಳೂರು

ಬಿ.ಎಸ್.ಎ. ಷೇಕ್ ಅಲಿ, ಬಿ.
ಕುಲಪತಿಗಳು (ವಿ)
ಮಂಗಳೂರು ವಿಶ್ವವಿದ್ಯಾಲಯ
ಮೈಸೂರು

ಬಿ.ಎಸ್ಎಚ್. ಶಾಮಸುಂದರ, ಬಿ.
ಕಾರ್ಯನಿರ್ವಾಹಕ ಸಂಪಾದಕ (ವಿ)
ಕನ್ನಡ ವಿಶ್ವಕೋಶ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಬಿ.ಎಸ್.ಕೆ. ಕೃಷ್ಣಸ್ವಾಮಿ ಅಯ್ಯಂಗಾರ್, ಬಿ.ಎಸ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಬಿ.ಎಸ್.ಎನ್.ಪಿ. ಪ್ರಸಾದ್, ಬಿ.ಎಸ್.ಎನ್.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಕರ್ನಾಟಕ ರೀಜನಲ್ ಇಂಜನಿಯರಿಂಗ್
ಕಾಲೇಜು, ಸುರತ್ಕಲ್ಲು
ದಕ್ಷಿಣಕನ್ನಡ ಜಿಲ್ಲೆ

ಬಿ.ಎಸ್.ಎಸ್.ಎ. ಶ್ರೀಕಂಠಾರಾಧ್ಯ, ಬಿ.ಎಸ್.
ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ಎಸ್.ಎಸ್.ಆರ್. ಸುಬ್ಬರಾಯ, ಬಿ.ಎಸ್.
ಮಾಜಿ ಗೌರವ ಸಹಕಾರ್ಯದರ್ಶಿ
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬಸವನಗುಡಿ, ಬೆಂಗಳೂರು

ಬಿ.ಎಸ್.ವೈ. ಯಾವಗಲ್, ಬಿ.ಎಸ್.
ಸಹಾಯಕ ಗ್ರಂಥಪಾಲ (ವಿ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬಿ.ವಿ.ಜಿ. ಗೋವಿಂದರಾಜಲು, ಬಿ.ವಿ. (ದಿ)
ಪ್ರಾಧ್ಯಾಪಕ, ಭೂ ವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಬಿ.ವಿ.ಎಸ್. ಸುಬ್ಬರಾಯಪ್ಪ, ಬಿ.ವಿ.
ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ
ಬಹಾದ್ದೂರ್ ಷಾ ಜಾಫರ್ ಮಾರ್ಗ
ನವದೆಹಲಿ

ಬಿ.ವಿ.ಎಸ್ಆರ್. ಶ್ರೀನಾಥ, ಬಿ.ವಿ.
ಪ್ರವಾಚಕ, ಗಣಿತವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಬಿ.ವಿ.ವಿ.ಬಿ. ವೀರಭದ್ರಪ್ಪ, ಬಿ.ವಿ.
ಪ್ರವಾಚಕ (ವಿ), ಕನ್ನಡ ವಿಭಾಗ
ಡಿ.ಆರ್.ಎಂ. ಕಾಲೇಜು, ದಾವಣಗೆರೆ

ಬಿ.ವಿ.ವಿವೈ. ವೈಕುಂಠರಾಜು, ಬಿ.ವಿ. (ದಿ)
ಸಹಾಯಕ ಸಂಪಾದಕ
ಪ್ರಜಾವಾಣಿ, ಮಹಾತ್ಮಗಾಂಧಿ ರಸ್ತೆ
ಬೆಂಗಳೂರು

ಸಿ.ಜಿ.ಪಿ. ಪುರುಷೋತ್ತಮ ಸಿ.ಜಿ.
ಪ್ರಾಧ್ಯಾಪಕ (ವಿ)
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಸಿಎಚ್.ಡಿ. ಚಂದ್ರಭಾಗದೇವಿ
'ರುಕ್ಮಿಣಿ', 24, 2ನೆಯ ಕ್ರಾಸ್
ಶೇಷಾದ್ರಿಪುರಂ, ಬೆಂಗಳೂರು

ಸಿ.ಕೆ.ಎನ್. ನಾಗರಾಜರಾವ್, ಸಿ.ಕೆ.
ನಂ. 644, 11ನೆಯ ಮುಖ್ಯರಸ್ತೆ
ಜಯನಗರ 5ನೆಯ ಹಂತ, ಬೆಂಗಳೂರು

ಸಿ.ಕೆ.ಪಿ.ಎ. ಪಟ್ಟಣಶೆಟ್ಟಿ , ಸಿ.ಕೆ.
ಸಹಾಯಕ ಗ್ರಂಥಪಾಲ (ವಿ)
ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ
ಬೆಂಗಳೂರು

ಸಿ.ಕೆ.ಆರ್. ರೇಣುಕಾರ್ಯ, ಸಿ.ಕೆ.
ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಸಿ.ಕೆ.ವಿ. ವೆಂಕಟನರಸಿಂಹಯ್ಯ, ಸಿ.ಕೆ.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಸಿ.ಕೆ.ವಿ.ಆರ್. ವಾಸುದೇವರಾವ್, ಸಿ.ಕೆ.
ಹಿರಿಯ ಮನೋವಿಜ್ಞಾನಿ (ವಿ)
ಸರ್ಕಾರಿ ಮಾನಸಿಕ ಆಸ್ಪತ್ರೆ, ಧಾರವಾಡ

ಸಿ.ಕೆ.ವೈ.ಡಿ. ದೀಕ್ಷಿತ್, ಸಿ.ಕೆ.ವೈ.
ಪ್ರಾಧ್ಯಾಪಕ (ವಿ), ಡಿ.ಆರ್.ಎಂ. ಕಾಲೇಜು
ದಾವಣಗೆರೆ

ಸಿ.ಎಂ. ಮಹದೇವ್, ಸಿ.
ಪ್ರಾಧ್ಯಾಪಕ, ಪುರಾತತ್ತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ, ಹಂಪಿ

ಸಿ.ಎನ್. ನಾಗಣ್ಣ, ಸಿ.
ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

ಸಿ.ಎನ್.ಎಸ್. ಶ್ರೀನಿವಾಸ ಅಯ್ಯಂಗಾರ್, ಸಿ.ಎನ್. (ದಿ)
ಪ್ರಾಧ್ಯಾಪಕ, ಬೆಂಗಳೂರು

ಸಿ.ಪಿ.ಕೆ. ಕೃಷ್ಣಕುಮಾರ್, ಸಿ.ಪಿ.
ನಿರ್ದೇಶಕ ಮತ್ತು ಪ್ರಾಧ್ಯಾಪಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಸಿ.ಪಿಯು. ಪುಟ್ಟಮಾದಯ್ಯ, ಪಿ.
ಪ್ರಾಧ್ಯಾಪಕ (ವಿ), ಗಣಿತ ವಿಜ್ಞಾನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

ಸಿ.ಆರ್.ಎಸ್. ಸುಬ್ರಹ್ಮಣ್ಯ, ಸಿ.ಆರ್.
ರೇಡಿಯೊ ಆಸ್ಟ್ರಾನಮಿ ಗ್ರೂಪ್
ಟಿ.ಐ.ಎಫ್.ಆರ್., ಮುಂಬಯಿ

ಸಿ.ಆರ್.ಎಸ್ಯು. ಸುಲೋಚನ, ಸಿ.ಆರ್.
ಗ್ರಂಥಪಾಲಕಿ (ವಿ)
ಭಾರತೀಯ ಭಾಷೆಗಳ ಅಧ್ಯಯನ ಕೇಂದ್ರ
ಮಾನಸಗಂಗೋತ್ರಿ, ಮೈಸೂರು

ಸಿ.ಎಸ್.ಎನ್.ಆರ್. ಸೂರ್ಯನಾರಾಯಣರಾವ್, ಸಿ.
ಪರಮಾಣು ಖನಿಜ ವಿಭಾಗ
ಭಾರತ ಸರ್ಕಾರ, ಪಟಾನ್ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು

ಸಿ.ಟಿ.ಎಸ್. ಶಿವಪ್ಪಗೌಡ, ಸಿ.ಟಿ.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಸಿ.ವಿ.ಎಚ್. ಹಿರೇಮಠ, ಸಿ.ವಿ.
ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯ
ಧಾರವಾಡ

ಸಿ.ವಿ.ಕೆ. ಕೆರಿಮನಿ, ಸಿ.ವಿ.
ಅಧ್ಯಕ್ಷ
ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಲಕ್ಷ್ಮೇಶ್ವರ

ಸಿ.ವಿ.ಆರ್. ರಂಗಸ್ವಾಮಿ ಸಿ.ವಿ.
ಪ್ರಾಂಶುಪಾಲ (ವಿ)
ಜೆ. ಟಿ. ಕಾಲೇಜು, ಗದಗ

| | |
|---|---|
| ಡಿ.ಜಿ. | ಗಣೇಶ್, ಡಿ.<br>ಕ್ಯೂರೇಟರ್ (ವಿ), ಸಸ್ಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಡಿ.ಎಚ್.ಎಂ. | ಮಲ್ಲಿನಾಥಯ್ಯ ಡಿ.ಎಚ್.<br>ಪ್ರವಾಚಕ (ವಿ), ಸಮಾಜವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಹಾಸನ |
| ಡಿ.ಕೆ.ಆರ್. | ರಾಜೇಂದ್ರ, ಡಿ.ಕೆ.<br>ನಿರ್ದೇಶಕ ಮತ್ತು ಪ್ರಾಧ್ಯಾಪಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಡಿ.ಎಂ. | ಮುನಿಸ್ವಾಮಿ, ಡಿ.<br>ಪ್ರಾಧ್ಯಾಪಕ (ವಿ), ಪ್ರಕಟಣಾ ವಿಭಾಗ<br>ಕೃಷಿ ಕಾಲೇಜು, ಹೆಬ್ಬಾಳ<br>ಬೆಂಗಳೂರು |
| ಡಿ.ಎನ್.ಆರ್. | ರಾಯಕರ್, ಡಿ.ಎನ್.<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ವಿಜಯಾ ಕಾಲೇಜು, ಮುಲ್ಕಿ (ದ.ಕ.) |
| ಡಿ.ಎನ್.ಎಸ್.ಎಂ. | ಶ್ರೀನಿವಾಸಮೂರ್ತಿ, ಡಿ.ಎನ್.<br>ಪ್ರಾಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ<br>ಡಿ.ಆರ್.ಎಂ. ಕಾಲೇಜು, ದಾವಣಗೆರೆ |
| ಡಿ.ಆರ್. | ರಂಗಯ್ಯ, ಡಿ.<br>ಪ್ರವಾಚಕ (ವಿ), ಭೂವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಡಿ.ಆರ್.ಕೆ. | ಕೃಷ್ಣಮೂರ್ತಿ, ಡಿ.ಆರ್. (ದಿ)<br>ಪೀಪಲ್ಸ್ ಬುಕ್ ಹೌಸ್<br>ಜಗನ್ಮೋಹನ ಅರಮನೆ ರಸ್ತೆ, ಮೈಸೂರು |
| ಡಿ.ಆರ್.ವಿ. | ವೆಂಕಟರಮಣನ್, ಡಿ.ಆರ್.<br>ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ<br>ಬಸವನಗುಡಿ, ಬೆಂಗಳೂರು |
| ಡಿ.ಎಸ್.ಜೆ. | ಜಯಪ್ಪಗೌಡ ಡಿ.ಎಸ್.<br>ಸಹಾಯಕ ಸಂಶೋಧಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಡಿ.ಎಸ್.ಕೆ. | ಕರ್ಕಿ, ಡಿ.ಎಸ್. (ದಿ)<br>ಪ್ರಾಂಶುಪಾಲ, ಕಾಡುಸಿದ್ಧೇಶ್ವರ ಕಾಲೇಜು<br>ಹುಬ್ಬಳ್ಳಿ |
| ಡಿ.ಎಸ್.ಎಂ. | ಮಹದೇವಪ್ಪ, ಡಿ.ಎಸ್.<br>ಪ್ರಾಧ್ಯಾಪಕ, ಭೌತರಸಾಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಡಿ.ಎಸ್.ಎಸ್. | ಶಿವಪ್ಪ, ಡಿ.ಎಸ್. (ದಿ)<br>ಪ್ರಾಧ್ಯಾಪಕ, ಔಷಧಶಾಸ್ತ್ರ ವಿಭಾಗ<br>ಬೆಂಗಳೂರು ಮೆಡಿಕಲ್ ಕಾಲೇಜು<br>ಬೆಂಗಳೂರು |
| ಡಿ.ವಿ.ಆರ್. | ರಾಮಣ್ಣ ಡಿ.ವಿ.<br>ಅಧ್ಯಾಪಕ (ವಿ), ಗಣಿತವಿಜ್ಞಾನ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| ಡಿ.ವಿ.ಡಬ್ಲ್ಯು. | ಡಿಸೋಜ ವೆಲರಿನ್ ವಿಲಿಯಮ್<br>ಪ್ರಾಧ್ಯಾಪಕ, ಸೇಂಟ್ ಫಿಲೋಮಿನ ಕಾಲೇಜು<br>ಮೈಸೂರು |
| ಇ.ಎಸ್.ಕೆ. | ಸಂಪತ್‌ಕುಮಾರ್, ಇ.<br>ಪ್ರವಾಚಕ (ವಿ), ಗಣಿತವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಜಿ.ಬಿ.ಎನ್. | ನಾಡಿಗರ್, ಜಿ.ಬಿ.<br>ಸಹಾಯಕ ಗ್ರಂಥಪಾಲ (ವಿ)<br>ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್<br>ಬೆಂಗಳೂರು |
| ಜಿ.ಬಿ.ಆರ್. | ಗೋಪಾಲ್, ಬಿ.ಆರ್. (ದಿ)<br>ಪ್ರಾಧ್ಯಾಪಕ<br>ಕೃಷ್ಣದೇವರಾಯ ವಿಶ್ವವಿದ್ಯಾಲಯ<br>ಅನಂತಪುರ, ಆಂಧ್ರಪ್ರದೇಶ |
| ಜಿ.ಸಿ.ಎಂ. | ಮಹಾಶೆಟ್ಟಿ , ಜಿ.ಸಿ.<br>ಮುಖ್ಯ ಗ್ರಂಥಪಾಲ (ವಿ)<br>ನಗರ ಕೇಂದ್ರ ಗ್ರಂಥಾಲಯ, ಹುಬ್ಬಳ್ಳಿ |
| ಜಿ.ಎಚ್. | ಹನುಮಂತರಾವ್ ಜಿ. (ದಿ)<br>ಪ್ರವಾಚಕ, ತತ್ತ್ವಶಾಸ್ತ್ರ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ಜಿ.ಎಚ್.ಆರ್. | ರಾಮರಾವ್ ಜಿ.ಎಚ್. (ದಿ)<br>ಮುದ್ರಕ ಮತ್ತು ಪ್ರಕಾಶಕ<br>ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್<br>ಹೌಸ್, ಮೈಸೂರು |
| ಜಿ.ಎಚ್.ಎಸ್. | ಗೋಪಾಲರಾವ್, ಎಚ್.ಎಸ್.<br>'ಸ್ವಸ್ತಿ ಶ್ರೀಸ್ಕಂದ', 144, ಐ.ವೈ.ಡಿ. ರಸ್ತೆ<br>ಅರಶಿನ ಕುಂಟೆ, ಬೆಂಗಳೂರು ಜಿಲ್ಲೆ |
| ಜಿ.ಕೆ.ಎಚ್. | ಗುರುಪಾದ ಕೆ. ಹೆಗಡೆ<br>ಅಧ್ಯಾಪಕ (ವಿ), ಸಂಸ್ಕೃತ ವಿಭಾಗ<br>ಲಾಲ್‌ಬಹಾದ್ದೂರ್ ಕಾಲೇಜು, ಸಾಗರ |
| ಜಿ.ಎಂ. | ಗಂಗಾಧರ ಮೊದಲಿಯಾರ್<br>ಸಹಾಯಕ ಸಂಪಾದಕ, ಪ್ರಜಾವಾಣಿ<br>ಮಹಾತ್ಮಗಾಂಧಿ ರಸ್ತೆ, ಬೆಂಗಳೂರು |
| ಜಿ.ಎಂ.ಬಿ. | ಬಸವರಾಜ್ ಜಿ.ಎಂ.<br>ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಚಿತ್ರದುರ್ಗ |
| ಜಿ.ಎಂ.ಪಿ. | ಪಾಟೀಲ್, ಜಿ.ಎಂ.<br>ಪ್ರವಾಚಕ (ವಿ)<br>ಮಾಳಮಡ್ಡಿ, ಧಾರವಾಡ |
| ಜಿ.ಎನ್.ಎಂ.ಡಿ. | ಮಧುರಾನಾಥ್ ದೀಕ್ಷಿತ್, ಜಿ.ಎನ್.<br>ಕೇರ್ ಆಫ್ ಶ್ರೀ ಗುರುನಾಥ್ ದೀಕ್ಷಿತ್<br>ಎಂ.ಕೆ.ಟಿ. ಪ್ರೌಢಶಾಲೆ, ಹರಿಹರ<br>ದಾವಣಗೆರೆ ಜಿಲ್ಲೆ |
| ಜಿ.ಪಿ.ಸಿ. | ಚನ್ನಬಸವಣ್ಣ ಜಿ.ಪಿ.<br>ಪ್ರಾಧ್ಯಾಪಕ (ವಿ), ಕೀಟವಿಜ್ಞಾನ ವಿಭಾಗ<br>ಕೃಷಿ ವಿಶ್ವವಿದ್ಯಾಲಯ<br>ಹೆಬ್ಬಾಳ, ಬೆಂಗಳೂರು |
| ಜಿ.ಆರ್.ಎ. | ಗೊರೂರು ರಾಮಸ್ವಾಮಿ ಅಯ್ಯಂಗಾರ್ (ದಿ)<br>ಲೇಖಕ, ಗೊರೂರು<br>ಹಾಸನ ಜಿಲ್ಲೆ |
| ಜಿ.ಆರ್.ಕೆ. | ಕುಪ್ಪುಸ್ವಾಮಿ ಅಯ್ಯಂಗಾರ್, ಜಿ.ಆರ್.<br>ಕೆನರ ಕಾಲೇಜು, ಕುಮಟ |

ಜಿ.ಆರ್.ಆರ್. ರಂಗಸ್ವಾಮಯ್ಯ ಜಿ.ಆರ್. (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಜಿ.ಆರ್.ಆರ್.ಎಸ್. ರಾಜಶೇಖರಯ್ಯ, ಜಿ.ಆರ್.
ಪ್ರಾಧ್ಯಾಪಕ (ವಿ), ಉಪ ಜೀವಿವಿಜ್ಞಾನ ವಿಭಾಗ
ಪಶುವೈದ್ಯ ಕಾಲೇಜು, ಹೆಬ್ಬಾಳ
ಬೆಂಗಳೂರು

ಜಿ.ಎಸ್‌ಎಚ್‌ಐ. ಶಿವಾನಂದಪ್ಪ, ಜಿ.
ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ
ಕಲ್ಪತರು ಕಾಲೇಜು, ತಿಪಟೂರು

ಜಿ.ಎಸ್.ಆರ್. ಶ್ರೀರಾಮರೆಡ್ಡಿ, ಜಿ.
ಅಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಜಿ.ಟಿ.ಜಿ. ಗುಬ್ಬಣ್ಣ ಜಿ.ಟಿ.
ಪ್ರಾಂಶುಪಾಲ (ವಿ)
ಶ್ರೀ ಜಯಚಾಮರಾಜೇಂದ್ರ ಇಂಜನಿಯರಿಂಗ್ ಕಾಲೇಜು
ಮೈಸೂರು

ಜಿ.ವಿ.ಎ. ಅಜಪ್ಪ, ಜಿ.ವಿ.
ಪ್ರಾಂಶುಪಾಲ (ವಿ)
ವಿಶ್ವವಿದ್ಯಾಲಯ ಕಾಲೇಜು, ಧಾರವಾಡ

ಜಿ.ವಿ.ಎನ್. ನಾರಾಯಣಮೂರ್ತಿ, ಜಿ.ವಿ.
ಚಿಕ್ಕನಾಯಕನಹಳ್ಳಿ
ತುಮಕೂರು ಜಿಲ್ಲೆ

ಎಚ್.ಎ.ಕೆ. ಖಾನ್, ಎಚ್.ಎ.
ಪ್ರಾಧ್ಯಾಪಕ (ವಿ), ಗ್ರಂಥಾಲಯ ವಿಜ್ಞಾನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಎಚ್.ಬಿ.ಡಿ. ದೇವರಾಜ ಸರ್ಕಾರ್ ಎಚ್.ಬಿ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ಸಿ.ಕೆ. ಕಪಿನೀಪತಿಭಟ್ಟ, ಎಚ್.ಸಿ. (ದಿ)
ಪ್ರಿನ್ಸಿಪಾಲ್, ಎಸ್.ಜೆ. ಪಾಲಿಟೆಕ್ನಿಕ್
ಬೆಂಗಳೂರು

ಎಚ್.ಸಿ.ಆರ್. ರೇವಣ್ಣಸಿದ್ಧಪ್ಪ, ಎಚ್.ಸಿ.
ಸಹಾಯಕ ಗ್ರಂಥಪಾಲ (ವಿ)
ನ್ಯಾಷನಲ್ ಏರೊನಾಟಿಕಲ್ ಲೈಬ್ರರಿ
ಬೆಂಗಳೂರು

ಎಚ್.ಜಿ.ಎಂ. ಮುರಳೀಧರ, ಎಚ್.ಜಿ.
219/226, 3ನೆಯ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು

ಎಚ್.ಜಿ.ಆರ್. ರಂಗಸ್ವಾಮಿ ಅಯ್ಯಂಗಾರ್ ಎಚ್.ಜಿ.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಸರ್ಕಾರಿ ಕಾಲೇಜು, ಕೋಲಾರ

ಎಚ್.ಜಿ.ಎಸ್. ಸುಬ್ಬರಾವ್, ಎಚ್.ಜಿ.
ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎಚ್.ಜಿ.ಎಸ್.ಆರ್. ಸೂರ್ಯನಾರಾಯಣರಾವ್, ಎಚ್.ಜಿ. (ದಿ)
ಸಂಪಾದಕ, ಇಂಗ್ಲಿಷ್-ಕನ್ನಡ ನಿಘಂಟು
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

ಎಚ್.ಎಚ್. ಹನುಮಂತಯ್ಯ, ಎಚ್.
ಪ್ರಾಧ್ಯಾಪಕ (ವಿ), ಮನೋವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಚ್.ಎಚ್.ಎ. ಅಣ್ಣಯ್ಯಗೌಡ, ಎಚ್.ಎಚ್. (ದಿ)
ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ಕೆ.ಎನ್. ನರಸಿಂಹೇಗೌಡ, ಎಚ್.ಕೆ.
ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಎಚ್.ಕೆ.ಆರ್. ರಾಮಚಂದ್ರಮೂರ್ತಿ, ಎಚ್.ಕೆ.
ಸಂಪಾದಕ (ವಿ), ಇಂಗ್ಲಿಷ್-ಕನ್ನಡ ನಿಘಂಟು
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

ಎಚ್.ಕೆ.ಆರ್‌ಎನ್. ರಂಗನಾಥ್, ಎಚ್.ಕೆ. (ದಿ)
ಪ್ರಾಧ್ಯಾಪಕ, ಲಲಿತ ಕಲಾ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಚ್.ಕೆ.ಆರ್.ಜಿ. ರಾಜೇಗೌಡ, ಎಚ್.ಕೆ.
ಸಂಶೋಧನ ಸಹಾಯಕ (ವಿ)
ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಚ್.ಕೆ.ಆರ್.ಎಂ. ರಾಮಚಂದ್ರಮೂರ್ತಿ, ಎಚ್.ಕೆ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ನ್ಯಾಷನಲ್ ಕಾಲೇಜು, ಬೆಂಗಳೂರು

ಎಚ್.ಎಂ.ಎನ್.ಆರ್. ನಾಗರಾಜರಾವ್, ಎಚ್.ಎಂ.
ಸಹಾಯಕ ಶಾಸನತಜ್ಞ (ವಿ)
278, ನೆರಳು, 5ನೆಯ ಮುಖ್ಯರಸ್ತೆ
'ಎಚ್' ಬ್ಲಾಕ್, ರಾಮಕೃಷ್ಣನಗರ
ಮೈಸೂರು – 22

ಎಚ್.ಎಂ.ಎಸ್. ಸದಾಶಿವಯ್ಯ, ಎಚ್.ಎಂ. (ದಿ)
ಪ್ರಾಧ್ಯಾಪಕ, ಸಮಾಜವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ಎನ್.ವೈ. ಯಜುರ್ವೇದಿ, ಎಚ್.ಎನ್.
ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ಪಿ.ಜಿ. ಗುರುಶಂಕರ, ಎಚ್.ಪಿ.
ಅನ್ವಯಿಕ ಪ್ರಾಣಿವಿಜ್ಞಾನ ವಿಭಾಗ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ

ಎಚ್.ಪಿ.ಕೆ. ಕೇಶವನಾಯ್ಕ, ಎಚ್.ಪಿ. (ದಿ)
ನಂ. 37, 6ನೆಯ ಅಡ್ಡರಸ್ತೆ
ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತಿಪುರಂ, ಮೈಸೂರು

ಎಚ್.ಆರ್.ಡಿ. ದಾಸೇಗೌಡ, ಎಚ್.ಆರ್. (ದಿ)
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಎಚ್.ಆರ್.ಎಲ್. ಲೀಲಾವತಿ, ಎಚ್.ಆರ್.
ನಂ. 76, 1ನೆಯ ಅಡ್ಡರಸ್ತೆ
ವಿಶ್ವಮಾನವ ಜೋಡಿರಸ್ತೆ
ಸರಸ್ವತಿಪುರಂ, ಮೈಸೂರು

ಎಚ್.ಆರ್.ಆರ್. ರಾಮಚಂದ್ರ, ಎಚ್.ಆರ್.
ಗ್ರಂಥಪಾಲ (ವಿ)
ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು

ಎಚ್.ಆರ್.ಆರ್.ಬಿ. ರಘುನಾಥ ಭಟ್ಟ ಎಚ್.ಆರ್. (ದಿ)
ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರ
ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಚ್.ಎಸ್.ಎ. ಅನಂತನಾರಾಯಣ ಎಚ್.ಎಸ್.
ಪ್ರಾಧ್ಯಾಪಕ (ವಿ), ಭಾಷಾಶಾಸ್ತ್ರ ವಿಭಾಗ
ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಬಾದ್

ಎಚ್.ಎಸ್.ಎಚ್. ಹರಿಶಂಕರ್, ಎಚ್.ಎಸ್.
ಪ್ರಾಧ್ಯಾಪಕ (ವಿ), ಭಾಷಾಂತರ ವಿಭಾಗ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಚ್.ಎಸ್.ಐ. ಈಶ್ವರ, ಎಚ್.ಎಸ್.
ಪ್ರಾಧ್ಯಾಪಕ (ವಿ), ಮನೋವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ಎಸ್.ಕೆ. ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್. (ದಿ)
ಸಂಪಾದಕ, ಕನ್ನಡ ವಿಶ್ವಕೋಶ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಚ್.ಎಸ್.ಪಿ. ಪಾಟೀಲ, ಎಚ್.ಎಸ್.
ಗ್ರಂಥಪಾಲ (ವಿ), ಐ.ಸಿ.ಸಿ.ಆರ್.
ಆಜಾದ್ ಭವನ, ನವದೆಹಲಿ

ಎಚ್.ಎಸ್.ಎಸ್. ಶೇಷಾದ್ರಿ, ಎಚ್.ಎಸ್.
ಪ್ರವಾಚಕ (ವಿ)
ಜೀವರಸಾಯನವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಚ್.ಎಸ್.ಎಸ್.ಎನ್. ಸೂರ್ಯನಾರಾಯಣ, ಎಚ್.ಎಸ್.
ಸಂಪಾದಕ (ವಿ), ಕ್ರೀಡಾ ವಿಭಾಗ
ಸುಧಾ ವಾರಪತ್ರಿಕೆ, ಎಂ.ಜಿ. ರಸ್ತೆ
ಬೆಂಗಳೂರು

ಎಚ್.ಟಿ. ತಿಪ್ಪೇರುದ್ರಸ್ವಾಮಿ, ಎಚ್. (ದಿ)
ನಿರ್ದೇಶಕ ಹಾಗೂ ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಚ್.ವಿ.ಕೆ. ಕೃಷ್ಣ, ಎಚ್.ವಿ.
ಪ್ರವಾಚಕ (ವಿ), ಗಣಿತವಿಜ್ಞಾನ ವಿಭಾಗ
ಮಣಿಪಾಲ ಇಂಜಿನಿಯರಿಂಗ್ ಕಾಲೇಜು
ಮಣಿಪಾಲ (ದ.ಕ.)

ಎಚ್.ವಿ.ಎನ್. ನಾಗೇಶ್, ಎಚ್.ವಿ.
ಪ್ರಾಧ್ಯಾಪಕ (ವಿ), ಸಮಾಜವಿಜ್ಞಾನ ವಿಭಾಗ
ಜೆ.ಎಸ್.ಎಸ್. ಬನಶಂಕರಿ ಆರ್ಟ್ಸ್ ಕಾಲೇಜು
ವಿದ್ಯಾಗಿರಿ, ಧಾರವಾಡ

ಎಚ್.ವಿ.ಎಸ್. ಸಾವಿತ್ರಮ್ಮ, ಎಚ್.ವಿ.
ಮಲ್ಲೇಶ್ವರಂ, ಬೆಂಗಳೂರು

ಎಚ್.ವಿ.ಎಸ್.ಎಂ. ಶ್ರೀನಿವಾಸಮೂರ್ತಿ, ಎಚ್.ವಿ.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಐ.ಎ. ಇನಾಯತ್ ಅಹಮದ್
ಪ್ರಾಧ್ಯಾಪಕ (ವಿ)
ಭೂಗೋಳವಿಜ್ಞಾನ ವಿಭಾಗ, ಪಟ್ನಾ ಕಾಲೇಜು ಪಟ್ನಾ,
ಬಿಹಾರ್ ರಾಜ್ಯ

ಐ.ಕೆ. ಇಂದಿರಾ ಕೃಷ್ಣ
ಪ್ರಾಂಶುಪಾಲ (ವಿ)
ವಿ.ಎಚ್.ಡಿ. ಗೃಹವಿಜ್ಞಾನ ಕಾಲೇಜು
ಬೆಂಗಳೂರು

ಜೆ.ಇ.ಸಿ. ಜೇಮ್ಸ್, ಇ. ಕಾಲಿಯರ್
ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಸದರನ್ ಇಲ್ಲಿನಾಯ್ ವಿಶ್ವವಿದ್ಯಾಲಯ
ಇಲ್ಲಿನಾಯ್, ಯು.ಎಸ್.ಎ.

ಜೆ.ಇ.ಸಿ.ಎಚ್. ಚಂದ್ರಶೇಖರ್, ಜೆ.ಇ.
ಅಧ್ಯಾಪಕ (ವಿ), ಮೆಡಿಕಲ್ ಕಾಲೇಜು
ಮೈಸೂರು

ಜೆ.ಆರ್.ಎಲ್. ಲಕ್ಷ್ಮಣರಾವ್, ಜೆ.ಆರ್.
ಪ್ರಧಾನ ಸಂಪಾದಕ (ವಿ)
ಇಂಗ್ಲಿಷ್–ಕನ್ನಡ ನಿಘಂಟು, ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು

ಜೆ.ಆರ್.ಪಿ. ಜಯತೀರ್ಥ ರಾಜಪುರೋಹಿತ (ದಿ)
ವಿಶೇಷಾಧಿಕಾರಿ, ಕಪಿಲಾ ಮತ್ತು ಹಾರಂಗಿ
ಯೋಜನೆ, ಮೈಸೂರು

ಜೆ.ಎಸ್. ಶಶಿಧರ ಪ್ರಸಾದ್, ಜೆ.
ಕುಲಪತಿ (ವಿ)
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಜೆ.ಎಸ್.ಪಿ.ಎಂ. ಪರಶಿವಮೂರ್ತಿ, ಜೆ.ಎಸ್. (ದಿ)
ನಿರ್ದೇಶಕ
ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಜೆ.ಎಸ್.ಎಸ್. ಸಾಯಿನಾಥ್, ಜೆ.ಎಸ್.
ಸಹಾಯಕ ಗ್ರಂಥಪಾಲಕ (ವಿ)
ವಿಶ್ವವಿದ್ಯಾನಿಲಯ ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು

ಕೆ. ಕೃಷ್ಣಪ್ಪಗೌಡ
ಉಪನಿರ್ದೇಶಕ (ವಿ)
ತೋಟಗಾರಿಕೆ ಇಲಾಖೆ, ಮಡಿಕೇರಿ

ಕೆ.ಎ.ಆರ್. ರಾಘವೇಂದ್ರ, ಕೆ.ಎ.
ಪ್ರಾಧ್ಯಾಪಕ (ವಿ), ಶ್ರೀ ಜಯಚಾಮರಾಜೇಂದ್ರ
ಇಂಜಿನಿಯರಿಂಗ್ ಕಾಲೇಜು, ಮೈಸೂರು

ಕೆ.ಬಿ. ಬಸವಯ್ಯ, ಕೆ.
ಪ್ರಾಂಶುಪಾಲ (ವಿ)
ಸೇಂಟ್ ಜೋಸೆಫ್ ಟೀಚರ್ಸ್ ಕಾಲೇಜು
ಮೈಸೂರು

ಕೆ.ಬಿ.ಪಿ. ಪ್ರಭುಪ್ರಸಾದ್, ಕೆ.ಬಿ.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ

ಕೆ.ಬಿ.ಆರ್. ರಾಮಕೃಷ್ಣರಾವ್, ಕೆ.ಬಿ. (ದಿ)
ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

| | |
|---|---|
| ಕೆ.ಸಿ.ಜಿ. | ಚಿದಾನಂದಗೌಡ, ಕೆ.<br>ಕುಲಪತಿ (ವಿ)<br>ಕುವೆಂಪು ವಿಶ್ವವಿದ್ಯಾಲಯ<br>ಶಂಕರಘಟ್ಟ, ಶಿವಮೊಗ್ಗ |
| ಕೆ.ಜಿ. | ಗಾಯಿತ್ರಿ, ಕೆ.<br>ಪ್ರವಾಚಕಿ (ವಿ), ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಜಿ.ಬಿ. | ಗೋವಿಂದಭಟ್ಟ, ಕೆ.<br>ಅಡ್ವೋಕೇಟ್, ಹಂಪನಕಟ್ಟೆ<br>ಮಂಗಳೂರು |
| ಕೆ.ಜಿಒ. | ಕೃಷ್ಣೇಗೌಡ<br>ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಜಿ.ಎನ್. | ಗೋಪಿನಾಥ್, ಕೆ.<br>ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಎಚ್.ಬಿ. | ಬೆಂಡಿಗೇರಿ, ಕೆ.ಎಚ್.<br>ಗ್ರಂಥಪಾಲ (ವಿ), ಅಮೆರಿಕನ್ ಕಲ್ಚರಲ್<br>ಸೆಂಟರ್, ಹೈದರಾಬಾದ್ (ಎ.ಪಿ.) |
| ಕೆ.ಎಚ್.ಎಸ್. | ಕೃಷ್ಣಪ್ಪ, ಎಚ್.ಎಸ್.<br>ಅಧ್ಯಾಪಕ (ವಿ), ವಾಣಿಜ್ಯಶಾಸ್ತ್ರ ವಿಭಾಗ<br>ಪ್ರಥಮದರ್ಜೆ ಕಾಲೇಜು, ಕೆ.ಜಿ.ಎಫ್. |
| ಕೆ.ಜೆ. | ಜೀವಣ್ಣರಾವ್, ಕೆ.<br>ಪತ್ರಿಕೋದ್ಯಮಿ, ಬೆಂಗಳೂರು |
| ಕೆ.ಕೆ. | ಕೃಷ್ಣಮೂರ್ತಿ, ಕೆ. (ದಿ)<br>ಪ್ರಾಧ್ಯಾಪಕ, ಸಂಸ್ಕೃತ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ<br>ಧಾರವಾಡ |
| ಕೆ.ಕೆ.ಎ. | ಅಯ್ಯ, ಕೆ.ಕೆ.<br>ಡೈರಿ ಡೆವಲಪ್‌ಮೆಂಟ್ ಅಡ್ವೈಸರ್ (ವಿ)<br>ಆಹಾರ ಮತ್ತು ಕೃಷಿ ಸಚಿವ ಶಾಖೆ<br>ಭಾರತ ಸರ್ಕಾರ, ಕೃಷಿ ಭವನ<br>ನವದೆಹಲಿ |
| ಕೆ.ಕೆ.ಜಿ. | ಕೆಂಪೇಗೌಡ, ಕೆ.<br>ನಿರ್ದೇಶಕ ಹಾಗೂ ಪ್ರಾಧ್ಯಾಪಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಕೆ.ಐ. | ಕೃಷ್ಣಯ್ಯಂಗಾರ್, ಕೆ. (ದಿ)<br>ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| ಕೆ.ಕೆ.ಎಸ್‌ಡಬ್ಲ್ಯು | ಕೃಷ್ಣಸ್ವಾಮಿ, ಕೆ.<br>ಪ್ರಾಧ್ಯಾಪಕ (ವಿ), ಶರೀರಶಾಸ್ತ್ರ ವಿಭಾಗ<br>ಕಸ್ತೂರಿ ಬಾ ಮೆಡಿಕಲ್ ಕಾಲೇಜು<br>ಮಣಿಪಾಲ್ |
| ಕೆ.ಎಂ. | ಮಂಜುನಾಥಯ್ಯ, ಕೆ.<br>ಪ್ರಾಧ್ಯಾಪಕ (ವಿ), ಗಣಿತವಿಜ್ಞಾನ ವಿಭಾಗ<br>ಮಲೆನಾಡು ಇಂಜನಿಯರಿಂಗ್ ಕಾಲೇಜು<br>ಹಾಸನ |
| ಕೆ.ಎಂ.ವಿ. | ವೀರಪ್ಪ, ಕೆ.ಎಂ.<br>ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಎನ್.ಜಿ. | ಗೋದಾಮಣಿ, ಕೆ.ಎನ್.<br>ಸಸ್ಯವಿಜ್ಞಾನ ವಿಭಾಗ<br>ಸರ್ಕಾರಿ ಸೈನ್ಸ್ ಕಾಲೇಜು, ಬೆಂಗಳೂರು |
| ಕೆ.ಎನ್.ಎಂ. | ನರಸಿಂಹಮೂರ್ತಿ, ಕೆ.<br>ಪ್ರವಾಚಕ (ವಿ), ಅರ್ಥಶಾಸ್ತ್ರ ವಿಭಾಗ<br>ಸರ್ಕಾರಿ ಕಾಲೇಜು, ಹಾಸನ |
| ಕೆ.ಎನ್.ಪಿ. | ಪ್ರಸಾದ್, ಕೆ.ಎನ್.<br>ಗ್ರಂಥಾಲಯ, ಕೃಷಿ ವಿಶ್ವವಿದ್ಯಾಲಯ<br>ಹೆಬ್ಬಾಳ, ಬೆಂಗಳೂರು |
| ಕೆ.ಪಿ. | ಪಾಂಡುರಂಗಾಚಾರ್, ಕೆ.<br>ಸಹಾಯಕ ಸಂಶೋಧನಾಧಿಕಾರಿ (ವಿ)<br>ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಪಿ.ಆರ್. | ಪಾಂಡುರಂಗ, ಕೆ.<br>ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಆರ್. | ರಂಗನಾಥ್, ಕೆ.<br>ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |
| ಕೆ.ಆರ್.ಡಿ. | ರಾಮದಾಸ್, ಕೆ. (ದಿ)<br>ಪ್ರಾಧ್ಯಾಪಕ, ಕನ್ನಡ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಎಸ್. | ಸದಾಶಿವ, ಕೆ.<br>ಪ್ರಾಧ್ಯಾಪಕ, ಇತಿಹಾಸ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಎಸ್.ಎ. | ಆಮೂರ್, ಕೆ.ಎಸ್.<br>ಗಣಿತವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಕೆ.ಎಸ್.ಬಿ. | ಭಗವಾನ್, ಕೆ.ಎಸ್.<br>ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ವಿಶ್ವವಿದ್ಯಾನಿಲಯ ಸಂಜೆ ಕಾಲೇಜು<br>ಮೈಸೂರು |
| ಕೆ.ಎಸ್.ಡಿ. | ದೇಶಪಾಂಡೆ, ಕೆ.ಎಸ್.<br>ಗ್ರಂಥಪಾಲ (ವಿ)<br>ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯ<br>ಧಾರವಾಡ |
| ಕೆ.ಎಸ್.ಜಿ.ಆರ್. | ಸಂಪದ್ಗಿರಿರಾವ್, ಕೆ.<br>ಮಾಧವನಗರ, ಬೆಂಗಳೂರು |
| ಕೆ.ಎಸ್.ಜೆ. | ಜಗದೀಶಚಂದ್ರ, ಕೆ.ಎಸ್.<br>ಪ್ರವಾಚಕ (ವಿ), ಸಸ್ಯವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಎಸ್.ಕೆ. | ಕೃಷ್ಣಸ್ವಾಮಿ, ಕೆ.ಎಸ್.<br>ಪ್ರಾಂಶುಪಾಲ (ವಿ)<br>ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು<br>ಬೆಂಗಳೂರು |
| ಕೆ.ಎಸ್.ಎಲ್. | ಲಕ್ಷ್ಮಣರಾವ್, ಕೆ.ಎಸ್.<br>ಪ್ರವಾಚಕ (ವಿ), ರಸಾಯನವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಕೋಲಾರ |

| | |
|---|---|
| ಕೆ.ಎಸ್.ಎಂ. | ಮುನಿಸ್ವಾಮಿ, ಕೆ.ಎಸ್.<br>ಪ್ರಧಾನ ಕಾರ್ಯದರ್ಶಿ (ವಿ)<br>ರಾಜ್ಯ ವಯಸ್ಕರ ಶಿಕ್ಷಣ ಸಮಿತಿ<br>ಮೈಸೂರು |
| ಕೆ.ಎಸ್.ಎನ್. | ಸೂರ್ಯನಾರಾಯಣ, ಕೆ.<br>ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಎಸ್.ಎನ್.ಎಸ್. | ನಾರಾಯಣಸ್ವಾಮಿ, ಕೆ.ಎಸ್.<br>ಕಾರ್ಯದರ್ಶಿ (ವಿ), ಗಾಂಧಿ ಶಾಂತಿ ಪ್ರತಿಷ್ಠಾನ<br>ಗಾಂಧಿಭವನ, ಕುಮಾರ ಪಾರ್ಕ್ ಈಸ್ಟ್<br>ಬೆಂಗಳೂರು |
| ಕೆ.ಎಸ್.ಪಿ. | ಪ್ರಸನ್ನ, ಕೆ.ಎಸ್.<br>ಪ್ರಾಣಿವಿಜ್ಞಾನ ವಿಭಾಗ<br>ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು |
| ಕೆ.ಎಸ್.ಆರ್. | ರಾಘವನ್, ಕೆ.ಎಸ್.<br>ಅಧ್ಯಾಪಕ (ವಿ), ಗ್ರಂಥಾಲಯ ವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಎಸ್ಆರ್ಐ. | ಶ್ರೀನಿವಾಸನ್, ಕೆ.<br>ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಕೆ.ಎಸ್.ಎಸ್. | ಸದಾಶಿವಯ್ಯ, ಕೆ.ಎಸ್. (ದಿ)<br>ಪ್ರಾಧ್ಯಾಪಕ, ಶಿಕ್ಷಣ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಕೆ.ಟಿ.ಕೆ. | ಕೃಷ್ಣ, ಕೆ.ಟಿ.<br>ಅಡಿಕೆ ಅಭಿವೃದ್ಧಿ ಅಧಿಕಾರಿ (ವಿ)<br>ಲಾಲ್‌ಬಾಗ್, ಬೆಂಗಳೂರು |
| ಕೆ.ಟಿ.ಆರ್. | ರಾಮಸ್ವಾಮಿ, ಕೆ.ಟಿ.<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಕೆ.ಟಿ.ಆರ್.ಐ. | ರಾಮಸ್ವಾಮ್ಯೆಯಂಗಾರ್, ಕೆ.ಟಿ.<br>ಮುಖ್ಯೋಪಾಧ್ಯಾಯ (ವಿ)<br>ನಂ. 146, ಕಾಲೇಜು ರಸ್ತೆ<br>ಮೈಸೂರು |
| ಕೆ.ಟಿ.ಎಸ್. | ಶ್ಯಾಮಸುಂದರ್, ಕೆ.ಟಿ.<br>ಮ್ಯಾನೇಜರ್ (ವಿ)<br>ಪರಮಾಲಿ ವ್ಯಾಲೇಸ್, ಲಿ.<br>ಭೂಪಾಲ್, ಮಧ್ಯಪ್ರದೇಶ |
| ಕೆ.ವಿ. | ವೆಂಕಟರಾಮಪ್ಪ, ಕೆ. (ದಿ)<br>ಮಹಾರಾಜ ಕಾಲೇಜು<br>ಮೈಸೂರು |
| ಕೆ.ವಿ.ಆರ್. | ರಮೇಶ್, ಕೆ.ವಿ. (ದಿ)<br>ಮುಖ್ಯ ಶಾಸನತಜ್ಞ<br>ಮುಖ್ಯ ಶಾಸನತಜ್ಞರ ಕಚೇರಿ, ಮೈಸೂರು |
| ಕೆ.ವಿ.ಎಸ್. | ಸುಬ್ಬರಾಯ, ಕೆ.ವಿ.<br>ಅಧ್ಯಾಪಕ (ವಿ)<br>ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು<br>ಬೆಂಗಳೂರು |
| ಕೆ.ವಿ.ಎಸ್.ಟಿ. | ಶ್ರೀನಿವಾಸ ತಾತಾಚಾರ್, ಕೆ.ವಿ. (ದಿ)<br>ಸಂಪಾದಕ, ಇಂಗ್ಲಿಷ್–ಕನ್ನಡ ನಿಘಂಟು<br>ಪ್ರಸಾರಾಂಗ, ಮಾನಸಗಂಗೋತ್ರಿ<br>ಮೈಸೂರು |
| ಕೆ.ವಿ.ಎಸ್ಯು. | ಸುಬ್ಬರಾಯ, ಕೆ.ವಿ.<br>ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ<br>ಬಸವೇಶ್ವರ ಕಾಲೇಜು, ಬಾಗಲಕೋಟೆ |
| ಎಲ್.ಎ.ಆರ್. | ಅನಂತರೆಡ್ಡಿ, ಎಲ್.<br>ಅಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಎಲ್.ಎಂ.ಪಿ. | ಪಾಟೀಲ, ಎಲ್.ಎಂ.<br>ಗ್ರಂಥಪಾಲ (ವಿ), ರ್‍ಯಾಲ್ಲಿಸ್ ಗ್ರೂಪ್<br>21, ರೆವೆಲ್ಯೆನ್ ಸ್ಟ್ರೀಟ್, ಮುಂಬಯಿ |
| ಎಲ್.ಎನ್.ಸಿ. | ಚಕ್ರವರ್ತಿ, ಎಲ್.ಎನ್. (ದಿ)<br>ಪ್ರಾಧ್ಯಾಪಕ, ಗಣಿತವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಎಲ್.ಆರ್.ಎಚ್. | ಹೆಗಡೆ, ಎಲ್.ಆರ್.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಡಾ. ವಿ.ವಿ. ಬಾಳಿಗ ಕಾಲೇಜು<br>ಕುಮಟ (ಉ.ಕ.) |
| ಎಲ್.ಎಸ್.ಜಿ. | ಸಿದ್ಧವೀರೇಗೌಡ, ಎಲ್. (ದಿ)<br>ಪ್ರಾಧ್ಯಾಪಕ, ಪ್ರಾಣಿವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಎಲ್.ಎಸ್.ಜೆ. | ಜಾಗೀರ್‌ದಾರ್, ಎಲ್.ಎಸ್.<br>ವಿಭಾಗಾಧಿಕಾರಿ (ವಿ), ನ್ಯಾಯಾಂಗ ವಿಭಾಗ<br>ವಿಧಾನಸೌಧ, ಬೆಂಗಳೂರು |
| ಎಲ್.ಎಸ್.ಎಸ್. | ಶೇಷಗಿರಿರಾವ್, ಎಲ್.ಎಸ್.<br>ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| ಎಲ್.ವಿ.ಜಿ. | ಘಾರ್ಗಿ, ಎಲ್.ವಿ.<br>ಕನ್ನಡ ಸಂಶೋಧನ ಕೇಂದ್ರ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಎಂ. | ಮೆಣಸಿನಕಾಯಿ<br>ಪ್ರಾಧ್ಯಾಪಕ (ವಿ), ಕೃಷಿ ಕಾಲೇಜು<br>ಧಾರವಾಡ |
| ಎಂ.ಎ. | ಮಿರ್ಜಿ ಅಣ್ಣಾರಾಯ (ದಿ)<br>ಶೇಡಬಾಳ, ಬೆಳಗಾಂ ಜಿಲ್ಲೆ |
| ಎಂ.ಎ.ಜಿ. | ಗೋಪಿನಾಥ, ಎಂ.ಎ.<br>ಅಧ್ಯಾಪಕ (ವಿ), ಡಿ.ಆರ್.ಟಿ.ಸಿ.<br>ಬೆಂಗಳೂರು |
| ಎಂಎಎಚ್. | ಮಹದೇವಯ್ಯ<br>ಸಹಾಯಕ ಗ್ರಂಥಪಾಲ (ವಿ)<br>ವಿಶ್ವವಿದ್ಯಾನಿಲಯ ಗ್ರಂಥಾಲಯ<br>ಮೈಸೂರು |
| ಎಂ.ಎ.ಎಸ್. | ಶ್ರೀನಿವಾಸ್, ಎಂ.ಎ.<br>22–ಸಿ, ನಂದೀದುರ್ಗ ರಸ್ತೆ<br>ಜಯಮಹಲ್ ಬಡಾವಣೆ, ಬೆಂಗಳೂರು |
| ಎಂ.ಸಿ.ಆರ್. | ಚಿನ್ನಸ್ವಾಮಿರೆಡ್ಡಿ, ಎಂ.<br>ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಎಂ.ಸಿ.ವಿ. | ವಸಂತಕುಮಾರ್, ಎಂ.ಸಿ.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು |

ಎಂ.ಡಿ. ದಯಾಕರ, ಎಂ.
ಪ್ರಾಧ್ಯಾಪಕ (ವಿ), ಮೆಡಿಕಲ್ ಕಾಲೇಜು
ಬೆಂಗಳೂರು

ಎಂ.ಡಿ.ಪಿ. ಪಾರ್ಥಸಾರಥಿ, ಎಂ.ಡಿ.
ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಂ.ಡಿ.ವಿ. ವಸಂತರಾಜ್, ಎಂ.ಡಿ. (ದಿ)
ಪ್ರಾಧ್ಯಾಪಕ
ಜೈನಾಲಜಿ ಮತ್ತು ಪ್ರಾಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಜಿ.ಕೆ.ಎಂ. ಮೂರ್ತಿ, ಎಂ.ಜಿ.ಕೆ.
ಕ್ಯಾಪ್ಟನ್ (ವಿ), 36–ಇ
ಕರಣಿಕ್ ರಸ್ತೆ, ಶಂಕರಪುರಂ
ಬೆಂಗಳೂರು

ಎಂ.ಎಚ್. ಹನುಮಂತರಾವ್, ಎಂ. (ದಿ)
ಸಂಪಾದಕ, ಎಪಿಗ್ರಾಫಿಯ ಕರ್ನಾಟಿಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಂ.ಎಚ್.ಎಂ. ಮರಿಗೌಡ, ಎಂ.ಎಚ್.
ನಿರ್ದೇಶಕ (ವಿ), ತೋಟಗಾರಿಕೆ ಇಲಾಖೆ
ಬೆಂಗಳೂರು

ಎಂ.ಜೆ.ಬಿ. ಜಯಂತಿಬಾಯಿ, ಎಂ (ದಿ)
ಸಹಾಯಕ ಭಾಷಾಂತರಕಾರರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಂ.ಕೆ.ಐ. ಇಂದಿರಾದೇವಿ, ಎಂ.ಕೆ.
ಗಣಿತವಿಜ್ಞಾನ ವಿಭಾಗ
ಮಹಾರಾಣಿ ವಿಜ್ಞಾನ ಕಾಲೇಜು
ಬೆಂಗಳೂರು

ಎಂ.ಎಂ.ಎಚ್. ಮೀರ್ ಮೊಹಮ್ಮದ್ ಹುಸೇನ್
ಪ್ರವಾಚಕ (ವಿ), ಉರ್ದು ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎನ್.ಕೆ. ಕಟ್ಟಿ, ಎಂ.ಎನ್. (ದಿ)
ಮುಖ್ಯಶಾಸನತಜ್ಞ
ಮುಖ್ಯಶಾಸನತಜ್ಞರ ಕಚೇರಿ, ಮೈಸೂರು

ಎಂ.ಎನ್.ಎಂ. ಮಾಲೂರ್, ಎಂ.ಎನ್.
ಪ್ರಾಧ್ಯಾಪಕ (ವಿ), ಭೂವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎನ್.ಎಂಎ. ಮಹಿಷಿ, ಎಂ.ಎನ್.
ಪ್ರಧಾನ ಉಪಸಂಪಾದಕ (ವಿ)
ಕಸ್ತೂರಿ ಮಾಸಪತ್ರಿಕೆ, ಹುಬ್ಬಳ್ಳಿ

ಎಂ.ಆರ್.ಎ. ಆನವಟ್ಟಿ, ಎಂ.ಆರ್.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಹಾತ್ಮಗಾಂಧಿ ಶತಾಬ್ದಿ ಕಾಲೇಜು
ಸಿದ್ದಾಪುರ (ಉ.ಕ.)

ಎಂ.ಆರ್.ಜಿ. ಗವಿರಾಯಪ್ಪ, ಎಂ.ಆರ್.
ವರದಿಗಾರ (ವಿ), ಆಕಾಶವಾಣಿ
ಕೊಹಿಮ, ನಾಗಲ್ಯಾಂಡ್

ಎಂ.ಆರ್.ಕೆ. ರಾಮಕೃಷ್ಣ, ಎಂ.
ಪ್ರಾಧ್ಯಾಪಕ (ವಿ)
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಎಂ.ಆರ್.ಕೆಯು. ಕುಂಬಾರ, ಎಂ.ಆರ್.
ಪ್ರಾಧ್ಯಾಪಕ (ವಿ) ಗ್ರಂಥಾಲಯ
ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಂ.ಆರ್.ಎಸ್. ಶ್ರೀನಿವಾಸ ಅಯ್ಯಂಗಾರ್, ಎಂ.ಆರ್.
ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು

ಎಂ.ಎಸ್. ಶಿವಲಿಂಗಯ್ಯ, ಎಂ.
ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಂ.ಎಸ್.ಬಿ. ಮುತ್ತೇಗೌಡ, ಎಸ್.ಬಿ. (ದಿ)
ಆಡಳಿತಾಧಿಕಾರಿ, ಮಾನಸಗಂಗೋತ್ರಿ
ಮೈಸೂರು

ಎಂ.ಎಸ್ಎಚ್ಐ. ಶಿವರಾಮ್, ಎಂ.
ವೈದ್ಯ, ಸಿಟಿ ಡಿಸ್ಪೆನ್ಸರಿ
ಕೆಂಪೇಗೌಡ ಸರ್ಕಲ್, ಬೆಂಗಳೂರು

ಎಂ.ಎಸ್.ಎಚ್ಒ. ಹೊನರಾವ್, ಎಂ.ಎಸ್.
ಮುಖ್ಯಸ್ಥ (ವಿ), ಭೂಗೋಳವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಂ.ಎಸ್.ಕೆ. ಕೃಷ್ಣಮೂರ್ತಿ, ಎಂ.ಎಸ್.
ಪ್ರಾಧ್ಯಾಪಕ (ವಿ)
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎಸ್.ಎಂ. ಮಾಧವ, ಎಂ.ಎಸ್.
ಪ್ರಾಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ಎಸ್.ಎಸ್.ಎನ್. ಸ್ವಾಮಿನಾಥನ್, ಎಂ.ಎಸ್.
ಡೈರೆಕ್ಟರ್ ಜನರಲ್ (ವಿ)
ಭಾರತೀಯ ಕೃಷಿ ಸಂಶೋಧನ ಕೇಂದ್ರ
ನವದೆಹಲಿ

ಎಂ.ಎಸ್.ಎಸ್.ಆರ್. ರಾವ್, ಎಂ.ಎಸ್.ಎಸ್.
ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಬಸವೇಶ್ವರ ಸೈನ್ಸ್ ಕಾಲೇಜು, ಬಾಗಲಕೋಟೆ

ಎಂ.ಎಸ್.ಎಸ್ಯು. ಸುಂಕಾಪುರ, ಎಂ.ಎಸ್.
ಪ್ರವಾಚಕ (ವಿ), ಕನ್ನಡ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಂ.ಎಸ್.ಟಿ. ತಿರುಮಲೈ, ಎಂ.ಎಸ್.
ಪ್ರಾಂಶುಪಾಲ (ವಿ)
ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ
ಮೈಸೂರು

ಎಂ.ಎಸ್ಯು. ಸುಬ್ರಹ್ಮಣ್ಯಂ, ಎಂ.
ನಿರ್ದೇಶಕ (ವಿ), ಗಣಿರಕ್ಷಣಾ ವಿಭಾಗ
ಧನ್‌ಬಾದ್

ಎಂ.ಎಸ್.ವಿ.
ವೀರಪ್ಪಾಜಿ, ಎಂ.ಎಸ್.
ಅಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಸಹ್ಯಾದ್ರಿ ಕಾಲೇಜು, ಶಿವಮೊಗ್ಗ

ಎಂ.ಎಸ್.ವೈ.
ಯಾಬಣ್ಣನವರ್, ಎಂ.ಎಸ್.
ತಾಂತ್ರಿಕ ಸಹಾಯಕ (ವಿ)
ವಿಶ್ವವಿದ್ಯಾಲಯ ಗ್ರಂಥಾಲಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಂ.ಯು.
ಉಮಾಪತಿ, ಎಂ.
ಪ್ರಾಧ್ಯಾಪಕ (ವಿ), ರಾಜ್ಯಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಂ.ವಿ.ಎ.ಎಸ್.
ಅರುಣಾಚಲಶಾಸ್ತ್ರಿ, ಎಂ.ವಿ.
ಪೇಲಿಯೆಂಟಾಲಜಿಸ್ಟ್ (ವಿ)
ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯ
ಕೋಲ್ಕೊತ್ತ

ಎಂ.ವಿ.ಬಿ.
ವಿಠ್ಠಲಭಂಡಾರಿ, ಎಂ.
ಮುಖ್ಯಸ್ಥ (ವಿ), ರಸಾಯನವಿಜ್ಞಾನ ವಿಭಾಗ
ಸರ್ಕಾರಿ ಕಾಲೇಜು, ಮಡಿಕೇರಿ

ಎಂ.ವಿ.ಐ.
ಮಾಸ್ತಿ ವೆಂಕಟೇಶ ಐಯ್ಯಂಗಾರ್ (ದಿ)
11ನೆಯ ತಿರುವು, ಗವೀಪುರಂ ಬಡಾವಣೆ
ಬೆಂಗಳೂರು

ಎಂ.ವಿ.ಜೆ.
ಜಂಬುನಾಥನ್, ಎಂ.ವಿ.
ಪ್ರಾಧ್ಯಾಪಕ (ವಿ), ಮೈಸೂರು

ಎಂ.ವಿ.ಕೆ.
ಕೃಷ್ಣರಾವ್, ಎಂ.ವಿ. (ದಿ)
ಪ್ರಾಧ್ಯಾಪಕ, ಬೆಂಗಳೂರು

ಎಂ.ವೈ.
ಯಾಮುನಾಚಾರ್ಯ, ಎಂ. (ದಿ)
ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎನ್.
ನಾರಾಯಣಪ್ಪ
ತಾಂತ್ರಿಕ ಸಹಾಯಕ (ವಿ)
ತೋಟಗಾರಿಕೆ ಇಲಾಖೆ, ಬೆಂಗಳೂರು

ಎನ್.ಎ.
ಅಶ್ವತ್ಥಮ್ಮ, ಎನ್.
ಪ್ರಾಧ್ಯಾಪಕಿ, ಅರ್ಥಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು

ಎನ್.ಬಿ.
ಬಸವಾರಾಧ್ಯ, ಎನ್.
ಉಪನಿರ್ದೇಶಕ (ವಿ), ಸಂಪಾದನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎನ್.ಬಿ.ಕೆ.
ಕೃಷ್ಣಮೂರ್ತಿ, ಎನ್.ಬಿ.
ಪ್ರಾಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎನ್.ಬಿ.ಪಿ.
ಪಾಂಗಣ್ಣಾಯ, ಎನ್.ಬಿ.
ಪ್ರಾಧ್ಯಾಪಕ (ವಿ)
ಗ್ರಂಥಾಲಯ ವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎನ್.ಸಿ.ವಿ.
ವಿಜಯರಾಜ್, ಎನ್.ಸಿ.
ಅಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎನ್.ಡಿ.ಬಿ.
ಬಗರಿ, ಎನ್.ಡಿ.
ರಾಜ್ಯಗ್ರಂಥಪಾಲ (ವಿ)
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

ಎನ್.ಜಿ.ಪಿ.
ಪುಟ್ಟಸ್ವಾಮಿ, ಎನ್.ಜಿ.
ಪ್ರವಾಚಕ (ವಿ), ಭೌತವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎನ್.ಎಚ್.ಎಂ.
ನಾಗರಾಜು, ಎಚ್.ಎಂ.
ಸಂಶೋಧನ ಸಹಾಯಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎನ್.ಕೆ.ಎಂ.
ಕೃಷ್ಣಮೂರ್ತಿ, ಎನ್.
ಪ್ರಾಧ್ಯಾಪಕ (ವಿ), ಚರ್ಮರೋಗ ವಿಭಾಗ
ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ

ಎನ್.ಎಲ್.
ಲಲಿತ, ಎನ್.
232, ಇ.ಡಬ್ಲ್ಯು.ಎಸ್., 4ನೆಯ ಮುಖ್ಯರಸ್ತೆ
ಶಾರದದೇವಿನಗರ, 1ನೆಯ ಹಂತ
ಮೈಸೂರು–22

ಎನ್.ಎನ್.ಎಸ್.[1]
ಸಣ್ಣಕ್ಕಿ, ಎನ್.ಎನ್.
ಉಪಾಧ್ಯಾಯ (ವಿ), ನೀಲಕಂಠ ನಿವಾಸ
ಬಸವನಗರ, ಗೋಕಾಕ್

ಎನ್.ಎನ್.ಎಸ್.[2]
ಸಭಾಹಿತ, ಎನ್.ಎನ್.
ಮುಖ್ಯಸ್ಥ (ವಿ), ಇಂಗ್ಲಿಷ್ ವಿಭಾಗ
ಎಂ.ಎಂ. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು
ಶಿರಸಿ (ಉತ್ತರಕನ್ನಡ ಜಿಲ್ಲೆ)

ಎನ್.ಎನ್.ಎಸ್ಎ.
ನಂಜುಂಡಶಾಸ್ತ್ರಿ, ಎನ್.
ಪ್ರಾಂಶುಪಾಲ (ವಿ)
ಸರ್ಕಾರಿ ಕಾಲೇಜು, ಮಂಡ್ಯ

ಎನ್.ಪಿ.ಎಸ್.
ಪ್ರಭುಸ್ವಾಮಿ, ಎನ್.
ಅಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎನ್.ಆರ್.ಜಿ.
ಗಾಯಿತ್ರಿ, ಎನ್.ಆರ್.
ಅಧ್ಯಾಪಕಿ (ವಿ)
ಸರ್ಕಾರಿ ಆಯುರ್ವೇದ ಕಾಲೇಜು
ಬೆಂಗಳೂರು

ಎನ್.ಆರ್.ಎನ್.
ನೆಗಳೂರು ರಂಗನಾಥ (ದಿ)
ಸಾಧನಕೇರಿ, ಧಾರವಾಡ

ಎನ್.ಎಸ್.
ಶೇಷಗಿರಿ, ಎನ್.
ಗಣಕ ವಿಭಾಗ
ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್
ಮುಂಬಯಿ

ಎನ್.ಎಸ್.ಐ.
ಅಯ್ಯಂಗಾರ್, ಎನ್.ಎಸ್.
ಸಂಪಾದಕ (ವಿ), ತೋಟಗಾರಿಕೆ ಇಲಾಖೆ
ಲಾಲ್‌ಬಾಗ್, ಬೆಂಗಳೂರು

ಎನ್.ಎಸ್.ಕೆ.
ಶ್ರೀಕಂಠ, ಎನ್. (ದಿ)
ಪ್ರಾಧ್ಯಾಪಕ, ರಸಾಯನವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎನ್.ಎಸ್.ಆರ್.
ರಘುನಾಥ್, ಎನ್.ಎಸ್.
ನಂ. 315, 13ನೆಯ ಮುಖ್ಯರಸ್ತೆ
ಸರಸ್ವತಿಪುರಂ, ಮೈಸೂರು

| | |
|---|---|
| ಎನ್.ಎಸ್.ಆರ್.ಬಿ. | ರಾಮಭದ್ರಾಚಾರ್ಯ, ಎನ್.ಎಸ್.<br>ಪ್ರಾಧ್ಯಾಪಕ (ವಿ), ಸಂಸ್ಕೃತ ಪಾಠಶಾಲೆ<br>ಮೈಸೂರು |
| ಎನ್.ಎಸ್.ವಿ. | ವೀರಪ್ಪ, ಎನ್.ಎಸ್. (ದಿ)<br>ಗೌರವ ಸಂಪಾದಕ<br>ಕನ್ನಡ ವಿಶ್ವಕೋಶ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಎನ್.ವಿ.ಎ. | ಅಶ್ವತ್ಥನಾರಾಯಣ, ಎನ್.ವಿ.<br>ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಪಿ.ಎ.ಆರ್. | ರಾಮಕೃಷ್ಣ ಅಯ್ಯರ್, ಪಿ.ಎ.<br>ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ಪಿ.ಬಿ.ಎನ್. | ಪ್ರಹ್ಲಾದ, ಬಿ. ನರೇಗಲ್ಲ<br>ಕೆ.ಎಂ. ಗಾಯಕವಾಡ ಚಾಳ<br>ತಬೀಬ್‌ಲ್ಯಾಂಡ್, ಹುಬ್ಬಳ್ಳಿ |
| ಪಿ.ಬಿ.ಪಿ. | ಪಂಡಿತ್, ಪಿ.ಬಿ.<br>ಭಾಷಾಶಾಸ್ತ್ರ ವಿಭಾಗ, ದೆಹಲಿ ವಿಶ್ವವಿದ್ಯಾಲಯ<br>4, ಲಖನೌ ರಸ್ತೆ, ನವದೆಹಲಿ |
| ಪಿ.ಸಿ.ಎಸ್. | ಪೂರ್ಣಿಮಾ, ಸಿ.ಎಸ್.<br>292, ರತ್ನಸ್ಮೃತಿ<br>ವಿಜಯನಗರ 3ನೆಯ ಹಂತ, ಮೈಸೂರು |
| ಪಿ.ಜಿ.ಡಿ. | ಪ್ರಧಾನ ಗುರುದತ್<br>ಪ್ರಾಧ್ಯಾಪಕ (ವಿ), ಭಾಷಾಂತರ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಪಿ.ಜಿ.ಆರ್. | ರಾಮಪ್ಪ. ಪಿ.ಜಿ.<br>ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಯುವರಾಜ ಕಾಲೇಜು, ಮೈಸೂರು |
| ಪಿ.ಕೆ.ಪಿ. | ಪಾಟೀಲ, ಪಿ.ಕೆ.<br>ಗ್ರಂಥಪಾಲ ಮತ್ತು ಪ್ರಾಧ್ಯಾಪಕ (ವಿ)<br>ವಿಶ್ವವಿದ್ಯಾನಿಲಯ ಗ್ರಂಥಾಲಯ<br>ಮೈಸೂರು |
| ಪಿ.ಎಂ. | ಪುಟ್ಟರುದ್ರಯ್ಯ, ಎಂ.<br>ನಿರ್ದೇಶಕ (ವಿ), ಕೃಷಿ ಕಾಲೇಜು<br>ಹೆಬ್ಬಾಳ, ಬೆಂಗಳೂರು |
| ಪಿ.ಎಂ.ಎಚ್. | ಹೆಗಡೆ, ಪಿ.ಎಂ<br>ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ<br>ಎಂ.ಎಂ. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು<br>ಶಿರಸಿ (ಉತ್ತರಕನ್ನಡ ಜಿಲ್ಲೆ) |
| ಪಿ.ಎಂ.ಯು.ಎಸ್. | ಉಮಾಪತಿಶಾಸ್ತ್ರಿ, ಪಿ.ಎಂ.<br>ಪ್ರಾಂಶುಪಾಲ (ವಿ)<br>ಶ್ರೀ ಗವಿಸಿದ್ಧೇಶ್ವರ, ವಿ.ವಿ. ಟ್ರಸ್ಟ್ ಕಾಲೇಜು<br>ಕೊಪ್ಪಳ |
| ಪಿ.ಎನ್.ಆರ್. | ನಾರಾಯಣರಾವ್, ಪಿ.<br>ಪ್ರಾಂಶುಪಾಲ (ವಿ)<br>ಪೂರ್ಣಪ್ರಜ್ಞ ಕಾಲೇಜು, ಉಡುಪಿ |
| ಪಿ.ಆರ್.ಎಂ. | ರಾಮಮೂರ್ತಿ, ಪಿ.ಆರ್. (ದಿ)<br>ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಪಿ.ಆರ್.ಪಿ. | ಪಂಢರಿ, ಪಿ.ಆರ್.<br>ಮುಖ್ಯಸಂಪಾದಕ (ವಿ)<br>ಕರ್ಮವೀರ ಕನ್ನಡ ವಾರಪತ್ರಿಕೆ, ಹುಬ್ಬಳ್ಳಿ |
| ಪಿ.ಆರ್.ಟಿ. | ತಿಪ್ಪೇಸ್ವಾಮಿ, ಪಿ.ಆರ್. (ದಿ)<br>ಕ್ಯೂರೇಟರ್<br>ಜಾನಪದ ವಸ್ತು ಸಂಗ್ರಹಾಲಯ<br>ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಪಿ.ಎಸ್.ಬಿ. | ಭಟ್ಟ, ಪಿ.ಎಸ್. (ದಿ)<br>ಮ್ಯಾನೇಜಿಂಗ್ ಡೈರೆಕ್ಟರ್<br>ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ<br>ಚಾಮರಾಜಪೇಟೆ, ಬೆಂಗಳೂರು |
| ಪಿ.ಎಸ್.ಜೆ. | ಜೋಶಿ, ಪಿ.ಎಸ್.<br>ಪ್ರಾಧ್ಯಾಪಕ (ವಿ), ವಿದಿಶ<br>27/7, ಡಬನುಕರ್ ಕಾಲೋನಿ<br>ಪುಣೆ |
| ಪಿ.ಎಸ್.ಎಂ. | ಸದಾಶಿವಮೂರ್ತಿ, ಪಿ.<br>ಉಪಗ್ರಂಥಪಾಲ (ವಿ)<br>ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ<br>ಬೆಂಗಳೂರು |
| ಪಿ.ಎಸ್.ಆರ್. | ಶಾಂತರಾಮರಾವ್, ಪಿ.<br>ಅಧ್ಯಾಪಕ (ವಿ), ಪ್ರಾಣಿವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಮಂಗಳೂರು |
| ಪಿ.ಎಸ್.ಆರ್ಎ. | ಸತ್ಯೇಂದ್ರರಾವ್, ಪಿ.<br>ಡೈರಿ ಅಭಿವೃದ್ಧಿ ಅಧಿಕಾರಿ (ವಿ)<br>ಕಾರ್ಲ್‌ಟನ್ ಹೌಸ್, ಬೆಂಗಳೂರು |
| ಪಿ.ಎಸ್.ಎಸ್. | ಶಂಕರ, ಪಿ.ಎಸ್.<br>ಪ್ರಾಧ್ಯಾಪಕ (ವಿ), ವೈದ್ಯವಿಭಾಗ<br>ಮೆಡಿಕಲ್ ಕಾಲೇಜು, ಗುಲ್ಬರ್ಗ |
| ಪಿ.ಎಸ್.ಎಸ್ಯು. | ಸುಬ್ಬರಾವ್, ಪಿ.ಎಸ್.<br>ಪ್ರಾಧ್ಯಾಪಕ (ವಿ)<br>ವಿಕ್ಟೋರಿಯ ಆಸ್ಪತ್ರೆ, ಬೆಂಗಳೂರು |
| ಪಿ.ವಿ. | ವೆಂಕಟರಾಮಯ್ಯ, ಪಿ.<br>ಕುಲಪತಿ (ವಿ)<br>ಕುವೆಂಪು ವಿಶ್ವವಿದ್ಯಾಲಯ<br>ಶಿವಮೊಗ್ಗ |
| ಪಿ.ವಿ.ಸಿ. | ಚಂದ್ರಶೇಖರ, ಪಿ.ವಿ. (ದಿ)<br>ಪ್ರಾಧ್ಯಾಪಕ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ<br>ಮಾನಸಗಂಗೋತ್ರಿ, ಮೈಸೂರು |
| ಆರ್.ಬಿ.ಎಸ್. | ರಾಮಾಚಾರ್, ಬಿ.ಎಸ್.<br>ಗಮಕಿ, ಗುಡಿಬಂಡೆ<br>ಚಿಕ್ಕಬಳ್ಳಾಪುರ ಜಿಲ್ಲೆ |
| ಆರ್.ಜಿ. | ರಾಮೇಗೌಡ<br>ಪ್ರಾಧ್ಯಾಪಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |

ಆರ್.ಜಿ.ಆರ್. ರಾಯಕರ್, ಆರ್.ಜಿ. (ದಿ)
ಕಲಾವಿದ
ಚನ್ನಪಟ್ಟಣ ಬಜಾರ್, ಶಿರಸಿ

ಆರ್.ಜಿ.ಎಸ್. ಶಿವಣ್ಣ, ಆರ್.ಜಿ.
ಪ್ರಾಧ್ಯಾಪಕ (ವಿ)
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಆರ್.ಎಲ್. ಲಲಿತಾ, ಆರ್.
ಪ್ರಾಧ್ಯಾಪಕಿ (ವಿ), ಪ್ರಾಣಿವಿಜ್ಞಾನ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು, ಬೆಂಗಳೂರು

ಆರ್.ಎಂ.ಎಸ್. ಷಡಕ್ಷರಯ್ಯ, ಆರ್.ಎಂ.
ಪ್ರಾಧ್ಯಾಪಕ, ಕನ್ನಡ ಸಂಶೋಧನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಆರ್.ಎನ್. ನಾಗರಾಜ, ಆರ್.
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಎಂ.ಎಂ. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು
ಶಿರಸಿ

ಆರ್.ಎನ್.ಕೆ. ಖಾಸನೀಸ, ಆರ್.ಎನ್.
ಸಹಾಯಕ ಗ್ರಂಥಪಾಲ (ವಿ)
ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ
ಬೆಂಗಳೂರು

ಆರ್.ಎನ್.ಎಸ್. ರಂಗರಾಜು, ಎನ್.ಎಸ್.
ಪ್ರಾಧ್ಯಾಪಕ (ವಿ)
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ
ವಿಭಾಗ, ಮಾನಸಗಂಗೋತ್ರಿ, ಮೈಸೂರು

ಆರ್.ಪಿ. ಪರಿಮಳ, ಆರ್.
ಪ್ರಾಧ್ಯಾಪಕಿ (ವಿ), ಇತಿಹಾಸ ವಿಭಾಗ
ಎಂ.ಇ.ಎಸ್. ಕಾಲೇಜು, ಬೆಂಗಳೂರು

ಆರ್.ಪಿ.ಎಸ್. ಸಿಂಗ್, ಆರ್.ಪಿ.
ಪ್ರಾಧ್ಯಾಪಕ (ವಿ), ಶಿಕ್ಷಣ ವಿಭಾಗ
ಪಟ್ನಾ ವಿಶ್ವವಿದ್ಯಾಲಯ
ಪಟ್ನಾ, ಬಿಹಾರ್

ಆರ್.ಆರ್.ಎ. ಅತಗೂರ್, ಆರ್.ಆರ್.
ಅಧ್ಯಾಪಕ (ವಿ), ಗ್ರಂಥಾಲಯ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಆರ್.ಆರ್.ಯು. ಉಮರ್ಜಿ, ಆರ್.ಆರ್.
ಪ್ರಾಧ್ಯಾಪಕ ಮತ್ತು ಮುಖ್ಯಸ್ಥ (ವಿ)
ಸಂಖ್ಯಾಕಲನಶಾಸ್ತ್ರ ವಿಭಾಗ
ಸೆಂಟ್ರಲ್ ಕಾಲೇಜು, ಬೆಂಗಳೂರು

ಆರ್.ಎಸ್.ಎನ್. ಸತ್ಯನಾರಾಯಣ, ಆರ್.
ಪ್ರಾಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ
ಶಾರದಾವಿಲಾಸ ಕಾಲೇಜು, ಮೈಸೂರು

ಆರ್.ಎಸ್.ವಿ. ರಾಮರಾವ್, ಎಸ್.ವಿ.
ಪ್ರಾಧ್ಯಾಪಕ (ವಿ)
ಬೆಂಗಳೂರು ಮೆಡಿಕಲ್ ಕಾಲೇಜು
ಬೆಂಗಳೂರು

ಎಸ್.ಎ.ಎಚ್. ಸಂಜೀವಯ್ಯ, ಎಚ್. (ದಿ)
ಪ್ರಾಧ್ಯಾಪಕ, ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎ.ಎನ್. ಅನಂತನಾರಾಯಣ, ಎಸ್. (ದಿ)
ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ
ಮಹಾರಾಜ ಕಾಲೇಜು, ಮೈಸೂರು

ಎಸ್.ಬಿ.ಎಂ. ಮಠದ್, ಎಸ್.ಬಿ.
ಪ್ರವಾಚಕ (ವಿ), ಪ್ರಾಣಿವಿಜ್ಞಾನ ವಿಭಾಗ
ಕರ್ನಾಟಕ ಕಾಲೇಜು, ಧಾರವಾಡ

ಎಸ್.ಬಿ.ಎಸ್. ಸಣ್ಣಯ್ಯ, ಬಿ.ಎಸ್.
ಸಹಾಯಕ ನಿರ್ದೇಶಕ (ವಿ)
ಸಂಪಾದನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಸಿ.ಜಿ. ಶೈಲೇಶಚಂದ್ರಗುಪ್ತ
ಉಪ–ಸಂಪಾದಕ (ವಿ), ಪ್ರಜಾವಾಣಿ
ಬೆಂಗಳೂರು

ಎಸ್.ಡಿ.ಕೆ. ಸಬಿತಾದೇವಿ, ಕೆ.
ಅಧ್ಯಾಪಕಿ, ಸಸ್ಯವಿಜ್ಞಾನ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎಸ್.ಜಿ.ಎಸ್. ಗೌರೀಶಂಕರ್, ಎಸ್.
ಅಸಿಸ್ಟೆಂಟ್ ಅಸೋಸಿಯೇಟ್
ಪ್ರೊಫೆಸರ್ ಆಫ್ ಮೆಡಿಸಿನ್ (ವಿ)
ಕೆ.ಆರ್. ಆಸ್ಪತ್ರೆ, ಮೈಸೂರು

ಎಸ್.ಎಚ್. ಶ್ರೀನಿವಾಸ, ಕೆ. ಹಾವನೂರ (ದಿ)
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ
ಮಂಗಳಗಂಗೋತ್ರಿ
ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

ಎಸ್.ಎಚ್.ಎ.ಐ. ಶಾಂತಾ ಇಮ್ರಾಪುರ
ಪ್ರವಾಚಕಿ (ವಿ)
ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್ಎಚ್ಐ. ಶಿವಣ್ಣ (ದಿ)
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಚ್.ಕೆ. ಸದಾನಂದ ಹೆಗಡೆಕಟ್ಟೆ
ಗ್ರಂಥಪಾಲ (ವಿ)
ಶ್ರೀ ಮಹಾವೀರ ಕಾಲೇಜು
ಮೂಡಬಿದರೆ

ಎಸ್ಎಚ್.ಎಂ. ಶಾಂತಾದೇವಿ ಮಾಳವಾಡ (ದಿ)
ಪ್ರಶಾಂತ, ಅತ್ತಿಕೊಳ್ಳ ರಸ್ತೆ
ಧಾರವಾಡ

ಎಸ್.ಎಚ್ಒ. ಹೊನ್ನಯ್ಯ, ಎಸ್.
ಪ್ರಾಧ್ಯಾಪಕ (ವಿ), ಜೈವಿಕವಿಜ್ಞಾನ ವಿಭಾಗ
ಮಂಗಳಗಂಗೋತ್ರಿ, ಮಂಗಳೂರು

ಎಸ್.ಎಚ್.ಎಸ್. ಸುಬ್ರಹ್ಮಣ್ಯಂ, ಎಚ್.ಎಸ್.
ಅಧ್ಯಾಪಕ (ವಿ), ಭೌತವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್ಐ.ಎಚ್. ಸಿದ್ಧಪ್ಪ ಹರಳೆಣ್ಣೆಯವರ್
ಸಹಾಯಕ ತೋಟಗಾರಿಕೆ ಅಧಿಕಾರಿ (ವಿ)
ಗ್ರಂಥಾಲಯ, ಲಾಲ್‌ಬಾಗ್, ಬೆಂಗಳೂರು

ಎಸ್.ಕೆ.ಎಚ್. ಕೃಷ್ಣನ್ ಹರವೆ, ಎಸ್.
ನಂ. 11, 3ನೆಯ ಮುಖ್ಯರಸ್ತೆ
ಸರಸ್ವತಿಪುರಂ, ಮೈಸೂರು

ಎಸ್.ಕೆ.ಆರ್. ರಾಮಚಂದ್ರರಾವ್, ಎಸ್.ಕೆ.
12/305, 1ನೆಯ ಹಂತ
6ನೆಯ ತಿರುವು, ಜಯನಗರ
ಬೆಂಗಳೂರು

ಎಸ್.ಕೆ.ಆರ್ಎ. ರಾಮಣ್ಣ, ಎಸ್.ಕೆ. (ದಿ)
ಪ್ರಾಧ್ಯಾಪಕ, ಕನ್ನಡ ವಿಭಾಗ
ಯುವರಾಜ ಕಾಲೇಜು, ಮೈಸೂರು

ಎಸ್.ಕೆ.ಎಸ್. ಶಿವಣ್ಣ, ಕೆ.ಎಸ್.
ಪ್ರಾಧ್ಯಾಪಕ (ವಿ), ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಲ್. ಸಿಂಪಿ ಲಿಂಗಣ್ಣ
ಚಡಚಣ, ಬಿಜಾಪುರ ಜಿಲ್ಲೆ

ಎಸ್.ಎಂ. ಸರೋಜಿನಿ ಮಹಿಷಿ
ಮಾಜಿ ರಾಜ್ಯಸಚಿವೆ
ಭಾರತ ಸರ್ಕಾರ, ನವದೆಹಲಿ

ಎಸ್.ಎಂ.ಎಚ್. ಹುಣಶಾಳ್, ಎಸ್.ಎಂ.
ಪ್ರಾಂಶುಪಾಲ (ವಿ)
ಹರ್ಮ್‌ದರ್ದ್ ಪ್ರೌಢಶಾಲೆ
ರಾಯಚೂರು

ಎಸ್.ಎಂ.ಕೆ. ಕೃಷ್ಣರಾಯ್, ಎಸ್.ಎಂ.
ಸಾಹಿತ್ಯ ಸದನ, ನಂ. 500
11ನೆಯ ತಿರುವು, 2ನೆಯ ಹಂತ
ಗಿರಿನಗರ, ಬೆಂಗಳೂರು

ಎಸ್.ಎಂ.ಪಿ. ಶಂಕರ ಮೊಕಾಶಿ ಪುಣೇಕರ (ದಿ)
ಇಂಗ್ಲಿಷ್ ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಎಂ.ವಿ. ವೀರರಾಘವಾಚಾರ್, ಎಸ್.ಎಂ.
ಪ್ರವಾಚಕ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್. ನಾಗರಾಜು, ಎಸ್.
ಪ್ರಾಧ್ಯಾಪಕ (ವಿ)
ಎ/5, ಸಾಯಿಗಣೇಶ್ ರೆಸಿಡೆನ್ಸ್
39, ರಾಮಾಂಜನೇಯ ಲೇಔಟ್
ಚಿಕ್ಕಸಂದ್ರ, ಬೆಂಗಳೂರು – 560061

ಎಸ್.ಎನ್ಎ. ನಾಗರಾಜು, ಎಸ್.
ಪ್ರಾಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್ಎಆರ್ಇ. ಸಂಗಮೇಶ ನರೇಗಲ್ಲ
ಡೆಮಾನ್ಸ್ಟ್ರೇಟರ್ (ವಿ)
ಭೂಗೋಳವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ಎನ್.ಬಿ. ಶ್ರೀನಾಗಭೂಷಣ
ವಿಶೇಷಾಧಿಕಾರಿ (ವಿ)
ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್‌ಟಿಟ್ಯೂಟ್
ಬೆಂಗಳೂರು

ಎಸ್.ಎನ್.ಕೆ. ಕೃಷ್ಣಜೋಯಿಸ್, ಎಸ್.ಎನ್. (ದಿ)
ಸಂಶೋಧನ ಸಹಾಯಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್.ಕೆಎ. ಸೂರ್ಯನಾಥ ಕಾಮತ್
ಪ್ರಾಧ್ಯಾಪಕ (ವಿ)
798, 'ಕೀರ್ತಿ', 11ನೆಯ ಮುಖ್ಯರಸ್ತೆ
6ನೆಯ ಅಡ್ಡರಸ್ತೆ, ಹನುಮಂತನಗರ
ಬೆಂಗಳೂರು – 560019

ಎಸ್.ಎನ್.ಎಲ್. ಲಕ್ಷ್ಮೀನಾರಾಯಣ, ಎಸ್.ಎನ್. (ದಿ)
ಉಪಗ್ರಂಥಪಾಲ, ಗ್ರಂಥಾಲಯ
ಮಾನಸಗಂಗೋತ್ರಿ, ಮೈಸೂರು

ಎಸ್.ಎನ್.ಎನ್. ನಂಜೇಗೌಡ, ಎಸ್.ಎನ್.
ಅಧ್ಯಾಪಕ (ವಿ), ಅರ್ಥಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಸ್.ಎನ್.ಎಸ್.ವಿ. ಶಾಂತವೀರಪ್ಪ, ಎಸ್.ಎನ್. (ದಿ)
ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಪಿ. ಶಾಂತಿಪಪ್ಪು
ಫ್ಲಾಟ್ ನಂ.2, ಮೋತಿ ಮಹಲ್ ಬಿಲ್ಡಿಂಗ್
ಆಳಂದಿ ರಸ್ತೆ, ವಿಶ್ರಾಂತವಾಡಿ, ಪುಣೆ

ಎಸ್.ಆರ್. ರಂಗಾಚಾರ್, ಎಸ್. (ದಿ)
ಸಂಸ್ಕೃತ ಪ್ರಾಧ್ಯಾಪಕ
1040, ಚಾಮರಾಜಪುರಂ, ಮೈಸೂರು

ಎಸ್.ಆರ್.ಜಿ. ಸಿದ್ದರಾಮೇಗೌಡ
ಪ್ರಾಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಆರ್.ಜಿಯು. ಗುಂಜಾಳ, ಎಸ್.ಆರ್.
ಉಪ ಗ್ರಂಥಪಾಲ (ವಿ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ಆರ್.ಕೆ. ಸಂಪದ್ಗಿರಿರಾವ್, ಕೆ. (ದಿ)
ಪ್ರಾಂಶುಪಾಲ, ನ್ಯಾಷನಲ್ ಕಾಲೇಜು
ಬೆಂಗಳೂರು

ಎಸ್.ಆರ್.ಎಂ. ಮಾಧವರಾವ್, ಎಸ್.ಆರ್.
ಮುಖ್ಯಸ್ಥ (ವಿ), ಗಣಿತವಿಜ್ಞಾನ ವಿಭಾಗ
ಜೆ.ಎಸ್.ಎಸ್. ವಾಣಿಜ್ಯ ಮತ್ತು ವಿಜ್ಞಾನ
ಕಾಲೇಜು, ಮೈಸೂರು

ಎಸ್.ಆರ್.ಎನ್. ನರಸಿಂಹಮೂರ್ತಿ, ಎಸ್.ಆರ್.
ಭೂವಿಜ್ಞಾನಿ (ವಿ)
ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯ
ಪೆಟ್ರಾಲಜಿ ಲ್ಯಾಬ್, ಹೈದರಾಬಾದ್

ಎಸ್.ಆರ್.ಆರ್.[1] ರಾಮರಾವ್, ಎಸ್.
ಪ್ರಾಧ್ಯಾಪಕ (ವಿ), ಶರೀರಕ್ರಿಯಾಶಾಸ್ತ್ರ ವಿಭಾಗ
ಮೆಡಿಕಲ್ ಕಾಲೇಜು, ಮೈಸೂರು

ಎಸ್.ಆರ್.ಆರ್.[2] ರಾಮರಾವ್, ಎಸ್.
1188, ಬಾಲಕೃಷ್ಣರಾವ್ ರಸ್ತೆ
ಚಾಮರಾಜಪುರಂ, ಮೈಸೂರು

ಎಸ್.ಆರ್.ಆರ್.ಎಸ್. ರಾಮಸ್ವಾಮಿ, ಎಸ್.ಆರ್.
ನಂ. 8, 4ನೆಯ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು

ಎಸ್.ಆರ್.ಎಸ್.[1] ಶೆಟ್ಟಿ, ಎಸ್.ಆರ್.
ಸಹಾಯಕ ಗ್ರಂಥಪಾಲ (ವಿ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ಆರ್.ಎಸ್.[2] ಶಶಿಧರ, ಎಸ್.ಆರ್.
ಅಧ್ಯಾಪಕ, ಜೀವವಿಜ್ಞಾನ ವಿಭಾಗ
ರಾಮಕೃಷ್ಣ ವಿದ್ಯಾಶಾಲ, ಮೈಸೂರು

ಎಸ್.ಆರ್.ಯು. ಸುಂದರರಾಜ ಅರಸು
ಅಧ್ಯಾಪಕ, ದೈಹಿಕ ಶಿಕ್ಷಣ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಸ್ಆರ್.ಯು. ಶ್ರೀನಿವಾಸ ಉಡುಪ
ವಿಜಯ ಬ್ಯಾಂಕ್ ಲೇನ್, ಜಪ್ಪು ರೈಲ್ವೆ
1ನೆಯ ಬ್ರಿಜ್, ಮಂಗಳೂರು

ಎಸ್.ಎಸ್. ಸೆಟ್ಟರ್, ಎಸ್.
ಪ್ರಾಧ್ಯಾಪಕ ಮತ್ತು ಮುಖ್ಯಸ್ಥ (ವಿ)
ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ಎಸ್.ಬಿ. ಭೂಸರೆಡ್ಡಿ, ಎಸ್.ಎಸ್.
ಪ್ರಾಧ್ಯಾಪಕ, ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ಎಸ್.ಜೆಎ. ಜಾಗೀರ್‌ದಾರ್, ಎಸ್.ಎಸ್.
ಸಹಾಯಕ ಶಾಸನತಜ್ಞ (ವಿ)
ಕಲ್ಪ, 406/ಬಿ, 3ನೆಯ ಮುಖ್ಯರಸ್ತೆ
ಸರಸ್ವತಿಪುರಂ, ಮೈಸೂರು – 570009

ಎಸ್.ಎಸ್.ಕೆ. ಶ್ರೀನಿವಾಸಕುಮಾರ್, ಎಸ್.
ಅಧ್ಯಾಪಕ (ವಿ), ಸರ್ಕಾರಿ ಶಿಕ್ಷಣ ಕಾಲೇಜು
ಮಂಗಳೂರು

ಎಸ್.ಎಸ್.ಎಂ. ಶ್ರೀಧರಮೂರ್ತಿ, ಎಸ್.
ಭಾಷಾಂತರ ಸಹಾಯಕ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು

ಎಸ್.ಎಸ್.ಎನ್. ನಂಜಣ್ಣನವರ್, ಎಸ್.ಎಸ್. (ದಿ)
ಪ್ರಾಧ್ಯಾಪಕ, ಭೂಗೋಳವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ಎಸ್ಆರ್. ಶ್ರೀದೇವಿ, ಎಸ್.
ಅಧ್ಯಾಪಕಿ (ವಿ), ಇತಿಹಾಸ ವಿಭಾಗ
ಜೆ.ಎಸ್.ಎಸ್. ಕಾಲೇಜು
ನಂಜನಗೂಡು

ಎಸ್.ಎಸ್.ಆರ್. ರಾಘವಾಚಾರ್, ಎಸ್.ಎಸ್. (ದಿ)
ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಎಸ್.ಎಸ್.ಆರ್ಎ. ಸೇತೂರಾವ್, ಎಸ್.
ಸಹಾಯಕ ಸಂಪಾದಕ (ವಿ)
ಪ್ರಕಾಶನ ವಿಭಾಗ
ಭಾರತ ಸರ್ಕಾರ, ನವದೆಹಲಿ

ಎಸ್.ಎಸ್ಆರ್ಐ. ಶ್ಯಾಮಲ ಶ್ರೀನಿವಾಸನ್
ಅಧ್ಯಾಪಕಿ (ವಿ)
ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ
ಮೈಸೂರು

ಎಸ್.ಎಸ್.ಎಸ್. ಸಿಂದಗಿ, ಎಸ್.ಎಸ್.
ತಳಿ ಅಭಿವೃದ್ಧಿ ಅಧಿಕಾರಿ (ವಿ)
ರೀಜನಲ್ ರೀಸರ್ಚ್ ಸ್ಟೇಷನ್
ರಾಯಚೂರು

ಎಸ್.ಟಿ. ಶ್ರೀವೆಂಕಟರಮಣ, ಟಿ.
ಪ್ರಾಧ್ಯಾಪಕ (ವಿ), ಸಂಖ್ಯಾಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಎಸ್.ಟಿ.ಪಿ. ಪುಟ್ಟಣ್ಣ, ಎಸ್.ಟಿ. (ದಿ)
ನಿರ್ದೇಶಕ, ಮಿಂಟೋ ಕಣ್ಣಾಸ್ಪತ್ರೆ
ಬೆಂಗಳೂರು

ಎಸ್ಯು. ಸುಧಾಕರ
ಪ್ರಾಧ್ಯಾಪಕ (ವಿ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ವಿ.ಡಿ. ವೆಂಕಟದೇಶಿಕಾಚಾರ್, ಎಸ್.
5, ಕಾರ್ನ್‌ವಾಲೀಸ್ ರಸ್ತೆ
ನವದೆಹಲಿ

ಎಸ್.ವಿ.ಎಲ್. ವೈದ್ಯಲಿಂಗಂ, ಎಸ್.
ಪ್ರಾಧ್ಯಾಪಕ (ವಿ), ತಮಿಳು ವಿಭಾಗ
ಅಣ್ಣಾಮಲೈ ವಿಶ್ವವಿದ್ಯಾಲಯ
ಅಣ್ಣಾಮಲೈ ನಗರ, ತಮಿಳುನಾಡು

ಎಸ್.ವಿ.ಪಿಎ. ಪಾಟೀಲ, ಎಸ್.ವಿ.
ಸಂಪಾದಕ (ವಿ), ಕರ್ಮವೀರ ವಾರಪತ್ರಿಕೆ
ಹುಬ್ಬಳ್ಳಿ

ಎಸ್.ವಿ.ಪಿ. ಶ್ರೀನಿವಾಸ ಪಾಡಿಗಾರ
ಮುಖ್ಯಸ್ಥ
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಸ್.ವಿ.ಆರ್. ರಂಗಣ್ಣ, ಎಸ್.ವಿ. (ದಿ)
ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಸ್.ವಿ.ಆರ್.ಎಸ್. ರಾಮಸ್ವಾಮಿ, ಎಸ್.ವಿ.
37, ಝಾನ್ಸಿ ಲಕ್ಷ್ಮೀಬಾಯಿ ರಸ್ತೆ
ಮೈಸೂರು

ಎಸ್.ವಿ.ಎಸ್.ಬಿ. ಭಟ್ಟಾಚಾರ್, ಎಸ್.ವಿ.ಎಸ್. (ದಿ)
ಶಾಸನ ಸಹಾಯಕ, ಎಪಿಗ್ರಾಫಿಯ ಕರ್ನಾಟಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಸ್.ವಿ.ಎಸ್ಯು. ಶ್ರೀನಿವಾಸ, ವಿ. ಸುತ್ರಾವೆ
ಪ್ರಾಧ್ಯಾಪಕ (ವಿ), ಇಂಗ್ಲಿಷ್ ವಿಭಾಗ
ಸರ್ಕಾರಿ ಕಾಲೇಜು, ಚಿತ್ರದುರ್ಗ

ಟಿ.ಸಿ. ಚನ್ನೆಗೌಡ, ಟಿ.
ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ
ಎಂ.ಡಿ.ಟಿ.ಡಿ.ಬಿ. ಕಾಲೇಜು, ಮೈಸೂರು

| | |
|---|---|
| ಟಿ.ಡಿ.ಪಿ. | ದಯಾನಂದ ಪಟೇಲ್, ಟಿ.<br>ನಿರ್ದೇಶಕ (ವಿ), ಪ್ರಾಚ್ಯ ವಸ್ತುಸಂಗ್ರಹಾಲಯ<br>ಮಾನಸಗಂಗೋತ್ರಿ, ಮೈಸೂರು |
| ಟಿ.ಇ.ಎಚ್. | ಹಿಲ್ಟನ್, ಟಿ.ಇ.<br>ಪ್ರಾಧ್ಯಾಪಕ (ವಿ), ಭೂಗೋಳವಿಜ್ಞಾನ ವಿಭಾಗ<br>ವಿಶ್ವವಿದ್ಯಾಲಯ ಕಾಲೇಜು<br>ಅಕ್ಲುಮೋಟ, ಘಾನ (ಪಶ್ಚಿಮ ಆಫ್ರಿಕ) |
| ಟಿ.ಕೆ.ಎಂ. | ಮೇಟಿ, ಟಿ.ಕೆ.<br>ಪ್ರವಾಚಕ (ವಿ), ಅರ್ಥಶಾಸ್ತ್ರ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಟಿ.ಎಲ್.ಬಿ. | ಬ್ಯಾಡಗಿ, ಟಿ.ಎಲ್.<br>ಸಹಾಯಕ ಗ್ರಂಥಪಾಲ (ವಿ)<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಟಿ.ಎನ್.ಎಸ್.ಎನ್. | ಶಂಕರನಾರಾಯಣ, ಟಿ.ಎನ್.<br>ಪ್ರಾಧ್ಯಾಪಕ (ವಿ), ಕನ್ನಡ ವಿಭಾಗ<br>ಕುವೆಂಪು ವಿಶ್ವವಿದ್ಯಾಲಯ<br>ಶಂಕರಘಟ್ಟ, ಶಿವಮೊಗ್ಗ |
| ಟಿ.ಆರ್.ಎನ್. | ನಾಗಪ್ಪ, ಟಿ.ಆರ್.<br>ಸಂಶೋಧನ ಸಹಾಯಕ (ವಿ)<br>ವಯಸ್ಕರ ಶಿಕ್ಷಣ ಸಮಿತಿ<br>ಮೈಸೂರು |
| ಟಿ.ಎಸ್.ಸಿ.ಎಸ್. | ಚಂದ್ರಶೇಖರ ಶರ್ಮ, ಟಿ.ಎಸ್.<br>ಅಧ್ಯಾಪಕ (ವಿ), ಸಸ್ಯವಿಜ್ಞಾನ ವಿಭಾಗ<br>ಸರ್ಕಾರಿ ಕಾಲೇಜು, ಹಾಸನ |
| ಟಿ.ಎಸ್.ಆರ್. | ರಾಜಪ್ಪ, ಟಿ.ಎಸ್.<br>ಸಹಾಯಕ ಸಂಶೋಧಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಟಿ.ಟಿ. | ತಿಮ್ಮಯ್ಯ, ಟಿ.<br>ನಿರ್ದೇಶಕ (ವಿ), ಗಣಿಗಳ ಶಾಲೆ<br>ಕೋರಮಂಡಲ, ಕೆ.ಜಿ.ಎಫ್. |
| ಟಿ.ಟಿ.ಎಸ್. | ಶರ್ಮ, ಟಿ.ಟಿ. (ದಿ)<br>ಪತ್ರಿಕೋದ್ಯಮಿ<br>ಶಂಕರಪುರ, ಬೆಂಗಳೂರು |
| ಟಿ.ವಿ.ಎಸ್. | ಸುಬ್ರಹ್ಮಣ್ಯಂ, ಟಿ.ವಿ. (ದಿ)<br>ಪ್ರಾಧ್ಯಾಪಕ, ಗ್ರಂಥಾಲಯ ವಿಜ್ಞಾನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ಟಿ.ವಿ.ವಿ. | ವೆಂಕಟಾಚಲಶಾಸ್ತ್ರಿ, ಟಿ.ವಿ.<br>ನಿರ್ದೇಶಕ ಮತ್ತು ಪ್ರಾಧ್ಯಾಪಕ (ವಿ)<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ಟಿ.ವಿ.ವಿಇ. | ವೆಂಕಟರಮಣಯ್ಯ, ಟಿ.ವಿ.<br>ಗ್ರಂಥಪಾಲ (ವಿ)<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು |
| ಯು.ಎಸ್.ಎಚ್. | ಹಬ್ಬು, ಯು.ಎಸ್.<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ವಿ.ಜಿ. | ವರದರಾಜರಾವ್, ಜಿ. (ದಿ)<br>ಪ್ರಾಧ್ಯಾಪಕ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ವಿ.ಜಿ.ಕೆ. | ಕೃಷ್ಣಮೂರ್ತಿ, ವಿ.ಜಿ. (ದಿ)<br>ಭಾಷಾಂತರ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ವಿ.ಕೆ. | ವೀರತ್ತಪ್ಪ, ಕೆ.<br>ಪ್ರವಾಚಕ (ವಿ), ಇತಿಹಾಸ ವಿಭಾಗ<br>ಸೆಂಟ್ರಲ್ ಕಾಲೇಜು, ಬೆಂಗಳೂರು |
| ವಿ.ಎಂ.ಐ. | ಇನಾಂದಾರ್, ವಿ.ಎಂ.<br>ಪ್ರಾಧ್ಯಾಪಕ (ವಿ), ಬೆಂಗಳೂರು |
| ವಿ.ಎನ್.ಕೆ. | ಕೃಷ್ಣಮೂರ್ತಿ, ವಿ.ಎನ್.<br>ಸಹಾಯಕ ನಿರ್ದೇಶಕ (ವಿ)<br>ಸಾರ್ವಜನಿಕ ಆರೋಗ್ಯ ಇಲಾಖೆ<br>ವ್ಯಾಕ್ಸಿನ್ ಸಂಸ್ಥೆ, ಬೆಳಗಾಂ |
| ವಿ.ಆರ್.ಡಿ. | ದಾನಿ, ವಿ.ಆರ್.<br>ಅಧ್ಯಾಪಕ (ವಿ), ರಸಾಯನವಿಜ್ಞಾನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ವಿ.ಆರ್.ಎಸ್. | ರಾಮಕೃಷ್ಣಶರ್ಮ, ವಿ.<br>ನಂ.9, 12ನೆಯ ಬ್ಲಾಕ್<br>ಕುಮಾರ ಪಾರ್ಕ್ (ಪಶ್ಚಿಮ)<br>ಬೆಂಗಳೂರು |
| ವಿ.ಎಸ್. | ಶೋಭಾ, ವಿ.<br>ಅಧ್ಯಾಪಕಿ<br>ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| ವಿ.ಎಸ್.ಬಿ. | ಭದ್ರಪುರ್, ವಿ.ಎಸ್.<br>ಇನ್‌ಸ್ಟ್ರಕ್ಟರ್, ಭೂಗೋಳವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಡಬ್ಲ್ಯು.ಜಿ.ಎಂ. | ವಿಲಿಯಂ, ಜಿ. ಮಾಲ್ಟನ್<br>ಪ್ರಾಧ್ಯಾಪಕ (ವಿ), ಭಾಷಾಶಾಸ್ತ್ರ ವಿಭಾಗ<br>ಸೆರಾಲ್ ವಿಶ್ವವಿದ್ಯಾಲಯ<br>ನ್ಯೂಯಾರ್ಕ್, ಯು.ಎಸ್.ಎ. |
| ವೈ.ಸಿ.ಬಿ. | ಭಾನುಮತಿ, ವೈ.ಸಿ.<br>ಸಂಶೋಧನ ಸಹಾಯಕಿ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| ವೈ.ಆರ್. | ರಾಜಶೇಖರ, ವೈ.<br>ಸರ್ಜನ್ (ವಿ)<br>ಎಸ್.ಡಿ.ಎಸ್. ಸ್ಯಾನಿಟೋರಿಯಂ<br>ಬೆಂಗಳೂರು |
| ವೈ.ವಿ.ಆರ್. | ರಾಮದಾಸ್, ವೈ.ವಿ.<br>ಪ್ರಾಧ್ಯಾಪಕ (ವಿ), ತಾಂತ್ರಿಕ ವಿಭಾಗ<br>ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು<br>ಬೆಂಗಳೂರು |
| ವೈ.ವೈ.ವೈ. | ಯಡ್ರಾವಿ, ವೈ.ವೈ.<br>ಗ್ರಂಥಪಾಲ (ವಿ)<br>ಯೂನಿವರ್ಸಿಟಿ ಕಾಲೇಜ್ ಆಫ್<br>ಎಜುಕೇಷನ್, ಧಾರವಾಡ |

**ಕೆಳಕಂಡ ಕಲಾವಿದರು ವಿಶ್ವಕೋಶದ ಆರನೆಯ ಸಂಪುಟಕ್ಕೆ ಚಿತ್ರಗಳನ್ನು ಬರೆದುಕೊಟ್ಟು ಉಪಕರಿಸಿದ್ದಾರೆ**

ಇಟಗಿ, ಎನ್.ಎಚ್., ಕಾರ್ಟೊಗ್ರಫಿಸ್ಟ್, ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಇಟಿಗಟ್ಟಿ, ಸಿ.ವಿ., ಎಲ್. 49, ಮಾನಸಗಂಗೋತ್ರಿ ಕ್ವಾರ್ಟರ್ಸ್, ಮೈಸೂರು

ಜಯಂತ್ ಲಕ್ಷ್ಮಣ್, 390, Ch.14, ಚಾಮರಾಜ ಡಬ್ಬಲ್ ರಸ್ತೆ, ಮೈಸೂರು

ತಿಪ್ಪೇಸ್ವಾಮಿ, ಪಿ.ಆರ್., ಕ್ಯೂರೇಟರ್, ಜಾನಪದ ವಸ್ತುಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ರಘುನಾಥ ಭಟ್, ಎಚ್.ಆರ್., ಅಧ್ಯಾಪಕ, ಇಂಡಾಲಜಿ ವಿಭಾಗ, ಮಹಾರಾಜ ಕಾಲೇಜು, ಮೈಸೂರು

ಲಕ್ಷ್ಮೇಗೌಡ, ಬಿ.ಟಿ., ಡ್ರಾಫ್ಟ್ಸ್‌ಮನ್, ಪ್ರಾಕ್ತನಶಾಸ್ತ್ರ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು

ವೆಂಕಟೇಶ್, ಕೆ.ಎಲ್., ಕಲಾವಿದ, ಕಿರಣ ಆರ್ಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಶಶಿಕಲಾ, ಎ., ಪ್ರಾಣಿಶಾಸ್ತ್ರ ವಿಭಾಗ, ಶಾರದಾವಿಲಾಸ ಕಾಲೇಜು, ಮೈಸೂರು

ಸತೀಶ್ ಮೋಹನ್‌ಗುಪ್ತ, ಆರ್., 1572/1, ಶಿವರಾಂಪೇಟೆ, ಮೈಸೂರು

**ಆರನೆಯ ಸಂಪುಟದ ಚಿತ್ರಗಳಿಗಾಗಿ ವಿವಿಧ ಗ್ರಂಥಗಳಿಂದ ನೆರವು ಒದಗಿದೆ. ಅಂಥವನ್ನು ಕೆಳಗೆ ಕೃತಜ್ಞತೆಯಿಂದ ನೆನೆಯಲಾಗಿದೆ**

ಅನಿಮಲ್ಸ್ ಆಫ್ ದಿ ವರ್ಲ್ಡ್ (1971)

ಅವರ್ ವಂಡರ್‌ಫುಲ್ ವರ್ಲ್ಡ್. ಪ್ರ : ಗ್ರೋಲಿಯರ್, ನ್ಯೂಯಾರ್ಕ್

ಅಸ್ಟ್ರಾನೊಮಿ (1961). ಲೇ : ಪ್ಯಾಟ್ರಿಕ್ ಮೋರ್

ಅಸ್ಟ್ರಾನೊಮಿ (1963). ಲೇ : ರಾಬರ್ಟ್ ಎಚ್. ಬೇಕರ್

ಆನ್ಯುಯಲ್ ರಿಪೋರ್ಟ್ ಆಫ್ ದಿ ಆರ್ಕಿಯಾಲಾಜಿಕಲ್ ಸರ್ವೇ ಆಫ್ ಮೈಸೂರು (1934)

ಇಂಡಿಯ (1967). ಲೇ : ಮಾರ್ಟಿನ್ ಹರ್ಲಿಮಾನ್

ಇಂಡಿಯನ್ ಆರ್ಕಿಟೆಕ್ಚರ್ (ಬುದ್ಧಿಸ್ಟ್ ಅಂಡ್ ಹಿಂದು). ಲೇ : ಪರ್ಸಿ ಬ್ರೌನ್

ಇಂಡಿಯನ್ ಆರ್ಕಿಯಾಲೊಜಿ (1957–58). ಸಂ : ಎ. ಘೋಷ್

ಇಂಡಿಯನ್ ನ್ಯಾಷನಲ್ ಲೈಬ್ರರಿ. ಲೇ : ಬಿ.ಎಸ್. ಕೇಶವನ್

ಇಂಡಿಯನ್ ಲೈಬ್ರರಿಯನ್. ಸಂಪುಟ 2; ಸಂಖ್ಯೆ 2 (1965). ಲೇ : ಬಿ.ಎಸ್. ಕೇಶವನ್

ಎಕ್ಸ್‌ಪೆರಿಮೆಂಟಲ್ ಸೈನ್ಸ್ ಫಾರ್ ಇಂಡಿಯನ್ ಸ್ಕೂಲ್ಸ್ (1936). ಲೇ : ಗ್ರೆಗೊರಿ ಮತ್ತು ಹಾಡ್ಜಸ್

ಎಕ್ಸ್‌ಪ್ಲೊರೇಷನ್ ಆಫ್ ದಿ ಯೂನಿವರ್ಸ್ (1964). ಲೇ : ಆಬೆಲ್

ಎನ್‌ಸೈಕ್ಲೊಪೀಡಿಯ ಆಫ್ ಲೈಬ್ರರಿ ಅಂಡ್ ಇನ್ಫರ್‌ಮೇಷನ್ ಸರ್ವೀಸ್ (1970). ಸಂ : ಆಲೆನ್ ಕೆಂಟ್ ಮತ್ತು ಹೆರಾಲ್ಡ್ ಲೆನ್‌ಕೂರ್

ಎನ್‌ಸೈಕ್ಲೊಪೀಡಿಯ ಆಫ್ ವರ್ಲ್ಡ್ ಆರ್ಟ್ (1962)

ಎನ್‌ಸೈಕ್ಲೊಪೀಡಿಯ ಬ್ರಿಟಾನಿಕ (1963)

ಎ ಮಲಯನ್ ಅಂಡ್ ಇಂಗ್ಲಿಷ್ ಡಿಕ್ಷನರಿ. ಲೇ : ಗುಂಡರ್ಟ್, ಎಚ್.

ಎವ್ವೆರಿಮನ್ಸ್ ಎನ್‌ಸೈಕ್ಲೊಪೀಡಿಯ (1967)

ಎ ಹಿಸ್ಟರಿ ಆಫ್ ಗುಜರಾತ್ (1938). ಲೇ : ಎಂ.ಎಸ್. ಕಮಿಸರಿಯೆಟ್

ಎ ಹಿಸ್ಟರಿ ಆಫ್ ವೆಸ್ಟರ್ನ್ ಆರ್ಟ್ (1962). ಲೇ : ಜಾನ್ ಐವ್ಸ್ ಸಿವಾಲ್

ಏನ್ಷಂಟ್ ಫ್ರೈನ್ಸ್ ಆಫ್ ಗೋವ (1965). ಸಂಗ್ರಹಣೆ : ಡಾ. ವಿ.ಟಿ. ಗುಣೆ

ಕಂಪ್ಯಾರಟಿವ್ ಲೈಬ್ರರಿಮನ್‌ಷಿಪ್ (1973). ಸಂ : ಎನ್.ಎನ್. ಗಿಡ್‌ವಾನಿ

ಕನಿಂಗ್‌ಹ್ಯಾಮ್ಸ್ ಮ್ಯಾನ್ಯುಯಲ್ ಆಫ್ ಪ್ರ್ಯಾಕ್ಟಿಕಲ್ ಅನಾಟಮಿ (1927). ಸಂ : ಆರ್ಥರ್ ರಾಬಿನ್‌ಸನ್

ಕಾಲಿಯರ್ಸ್ ಎನ್‌ಸೈಕ್ಲೊಪೀಡಿಯ (1956)

ಕ್ರೊನಾಲಜಿ ಆಫ್ ಗುಜರಾತ್ (1960). ಸಂ : ಎಂ.ಆರ್. ಮಜುಂದಾರ್

ಕ್ಲಿನಿಕಲ್ ಆಬ್‌ಸ್ಟೆಟ್ರಿಕ್ಸ್. ಲೇ : ಎ.ಎಲ್. ಮುದಲಿಯಾರ್ ಮತ್ತು ಎಂ.ಕೆ. ಕೃಷ್ಣಮೆನನ್

ಗಯಾ ಅಂಡ್ ಬುದ್ಧಗಯಾ (ಪುಸ್ತಕ 2). ಲೇ : ಬಿ.ಎಂ. ಬರ್ನಾ

ಗಾಂಧಾರನ್ ಆರ್ಟ್ ಇನ್ ಪಾಕಿಸ್ತಾನ್. ಲೇ : ಲೈಯಾನ್ ಹೆರಾಲ್ಡ್ ಇಂಗ್‌ಹಾಲ್ಟ್

ಗಾಯಕ್‌ವಾಡ್ ಓರಿಯಂಟಲ್ ಸೀರೀಸ್. ಸಂಖ್ಯೆ XLIII. ಮೀರತ್–1–ಅಹಮದಿ ಸಪ್ಲಿಮೆಂಟ್ (1928). ಅನು : ಸಯ್ಯದ್ ನವಾಬ್ ಮತ್ತು ಚಾರಲ್ಸ್ ನಾರ್ಮನ್ ಸೆಡ್ಡಾನ್

ಗುರು ತೇಜ ಬಹದೂರ್. ಲೇ : ತ್ರಿಲೋಚನ್ ಸಿಂಗ್

ಚಾಲುಕ್ಯಾಸ್ ಆಫ್ ಗುಜರಾತ್ (1956). ಲೇ : ಅಶೋಕ್ ಕುಮಾರ್ ಮಜುಂದಾರ್

ಚೇಂಬರ್ಸ್ ಎನ್‌ಸೈಕ್ಲೊಪೀಡಿಯ (1955)

ಜಿಯೋಗ್ರಫಿ ಆಫ್ ಗುಜರಾತ್ (1970). ಲೇ : ಕೆ.ಆರ್. ದೀಕ್ಷಿತ್

ಡ್ಯೂಯಿ ಡೆಸಿಮಲ್ ಕ್ಲಾಸಿಫಿಕೇಷನ್ ಅಂಡ್ ರಿಲೇಟಿವ್ ಇಂಡೆಕ್ಸ್ (1971)

ದಿ ಆರ್ಟ್ ಆಫ್ ಇಂಡಿಯನ್ ಏಷ್ಯ. ಲೇ : ಜಿಮ್ಮರ್

ದಿ ಎಕ್ಸ್‌ಪ್ಲೋಷನ್ ಆಫ್ ಸೈನ್ಸ್. ಸಂ : ಸರ್ ಬರ್ನಾರ್ಡ್ ಲೊವೆಲ್ ಮತ್ತು ಟಾಮ್ ಮಾರ್ಗೆರಿಸನ್

ದಿ ಕೇವ್ ಟೆಂಪಲ್ಸ್ ಆಫ್ ಇಂಡಿಯ. ಲೇ : ಫರ್ಗ್ಯೂಸನ್ ಮತ್ತು ಬರ್ಗೆಸ್

ದಿ ಗಾಂಧಾರ ಸ್ಟೈಲ್ ಅಂಡ್ ದಿ ಎವೊಲ್ಯೂಷನ್ ಆಫ್ ಬುದ್ಧಿಸ್ಟ್ ಆರ್ಟ್

ದಿ ಗ್ಲೋರಿ ದಟ್ ವಾಸ್ ಗೂರ್ಜರ ದೇಶ (ಭಾಗ III, 1944). ಲೇ : ಕೆ.ಎಂ. ಮುನ್ಷಿ

ದಿ ಟೆನ್ತ್ ಮಾಸ್ಟರ್ (1967)

ದಿ ಟ್ರೈಬ್ಸ್ ಆಫ್ ಮಧ್ಯಪ್ರದೇಶ್, ಪ್ರ : ದಿ ಟ್ರೈಬಲ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಚಿಂದ್‌ವಾರ್, ಮಧ್ಯಪ್ರದೇಶ

ದಿ ನ್ಯೂ ಕ್ಯಾಕ್ಸ್‌ಟನ್ ಎನ್‌ಸೈಕ್ಲೊಪೀಡಿಯ (1969)

ದಿ ಫ್ಲೆಮೇರಿಯನ್ ಬುಕ್ ಆಫ್ ಅಸ್ಟ್ರಾನೊಮಿ (1964)

ದಿ ಬರ್ತ್ ಆಫ್ ಇಂಡಿಯನ್ ಸಿವಿಲಿಜೇಷನ್ (1968). ಲೇ : ಬ್ರಿಡ್‌ಜೆಟ್ ಮತ್ತು ರೇಮಂಡ್ ಆಲ್ಚಿನ್

ದೀವಿಗೆ. ಗೋವಿಂದ ಪೈ ಸಂಸ್ಮರಣ ಸಂಚಿಕೆ (1965)

ನೊಬೆಲ್ ಲಕ್ಚರ್ಸ್–ಫಿಸಿಕ್ಸ್. 1942–1962 (1964)

ನ್ಯೂ ಲೈಟ್ ಆನ್ ದಿ ಮೋಸ್ಟ್ ಏನ್ಷಂಟ್ ಈಸ್ಟ್ (1952). ಲೇ : ಗೋರ್ಡನ್ ಚೈಲ್ಡ್

ಪೀಪಲ್, ಪ್ಲೇಸಸ್, ಥಿಂಗ್ಸ್ ಅಂಡ್ ಐಡಿಯಾಸ್. ಪೀಪಲ್. ಸಂಪುಟ 1. ಪ್ರ : ದಿ ವೇವರ್ಲಿ ಬುಕ್ ಕಂಪನಿ, ಲಂಡನ್

ಫೈವ್ ಥೌಸಂಡ್ ಇಯರ್ಸ್ ಆಫ್ ದಿ ಆರ್ಟ್ ಆಫ್ ಇಂಡಿಯ. ಲೇ : ಮಾರಿಯೋ ಬುಸಾಗ್ಲಿ ಮತ್ತು ಸಿ. ಶಿವರಾಮಮೂರ್ತಿ

ಫೌಂಡೇಷನ್ಸ್ ಆಫ್ ಮ್ಯಾಥಮ್ಯಾಟಿಕ್ಸ್ (1969). ಸಂ : ಜ್ಯಾಕ್ ಜೆ. ಒಲೂಫ್ ಮತ್ತು ಇತರರು

ಬಿಜಾಪುರ ಅಂಡ್ ಇಟ್ಸ್ ಆರ್ಕಿಟೆಕ್ಚರಲ್ ರಿಮೇನ್ಸ್ (1916). ಲೇ : ಹೆನ್ರಿ ಕಸಿನ್ಸ್

ಬೇಸಸ್ ಆಫ್ ಮಾಡ್ರನ್ ಲೈಬ್ರರಿಯನ್‌ಷಿಪ್ (1964). ಸಂ : ಕಾರ್ಲ್ ಎಂ. ಹ್ವೈಟ್

ಮಹಾತ್ಮ ಗಾಂಧಿ (1949). ಲೇ : ಜವಾಹರಲಾಲ್ ನೆಹರು

ಮಹಾಭಾರತ–ಆದಿಪರ್ವ (1933). ಸಂ : ವಿಷ್ಣು ಎಸ್. ಸಕ್ತಂಕರ್

ಮಾಡ್ರನ್ ಮೆನ್ ಆಫ್ ಸೈನ್ಸ್ (1961). ಲೇ : ಫ್ರೀಡರಿಕ್ ಇ ಟ್ರಂಕ್‌ಲೀನ್ ಮತ್ತು ಚಾರಲ್ಸ್ ಎಂ. ಹಫರ್

ಮೆಕ್‌ಗ್ರಾ–ಹಿಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ (1960, 1971)

ಮೈಂಡ್ ಅಲೈವ್ (1970). ಪ್ರ : ಹ್ಯಾಮ್ಲಿನ್, ಲಂಡನ್

ಮ್ಯಾಮಲ್ಸ್ ಆಫ್ ದಿ ವರ್ಲ್ಡ್ (1964). ಸಂಪುಟ 1, 2. ಲೇ : ಅರ್ನ್ಸ್ಟ್ ಪಿ. ವಾಕರ್

ಲಲಿತಾ ಕಲಾ–ಸಂಖ್ಯೆ 9 (ಏಪ್ರಿಲ್ 1961). ಪ್ರ : ಲಲಿತಕಲಾ ಅಕಾಡೆಮಿ

ಲಾರೂಸ್ ಎನ್‌ಸೈಕ್ಲೊಪೀಡಿಯ ಆಫ್ ಅಸ್ಟ್ರಾನೊಮಿ (1959). ಲೇ : ಲ್ಯೂಸಿಯನ್ ರೂಡಾಕ್ಸ್ ಅಂಡ್ ಜಿ. ದ ವಾಕೋಲಿಯರ್ಸ್

ಲಾರೂಸ್ ಎನ್‌ಸೈಕ್ಲೊಪೀಡಿಯ ಆಫ್ ಮೈಥಾಲಜಿ (1959)

ಲೈಫ್ ವರ್ಲ್ಡ್ ಲೈಬ್ರರಿ : ಜಪಾನ್ ಸಂಪುಟ (1970)

ಸ್ಕೈ ಅಂಡ್ ಟೆಲಿಸ್ಕೋಪ್ (ಫೆಬ್ರುವರಿ 1973ರ ಸಂಚಿಕೆ). ಪ್ರ.ಸಂ : ಚಾರ್ಲ್ಸ್ ಎ. ಫೆಡರರ್, ಜೂ.

ಸ್ಪೀಚಸ್ ಅಂಡ್ ರೈಟಿಂಗ್ಸ್ ಆಫ್ ಗೋಪಾಲಕೃಷ್ಣ ಗೋಖಲೆ, ಸಂಪುಟ II (1966). ಸಂ : ಡಿ.ಜಿ. ಕರ್ವೆ ಮತ್ತು ಡಿ.ವಿ. ಅಂಬೇಕರ್

ಸ್ಪೆಕ್ಟ್ರಮ್–ಬ್ರಿಟಿಷ್ ಸೈನ್ಸ್ ನ್ಯೂಸ್ (1973). ಸಂಖ್ಯೆ 104/1

ಹೆಲೆನಿಕ್ ಹಿಸ್ಟೊರಿ (1956). ಲೇ : ಜಾರ್ಜ್ ವಿಲ್ಲೀಸ್ ಬಾಟ್ಸ್‌ಫರ್ಡ್ ಮತ್ತು ಚಾರ್ಲ್ಸ್ ಅಲೆಗ್ಸಾಂಡರ್ ರಾಬಿನ್‌ಸನ್, ಜೂ.

## ಚಿತ್ರ, ಛಾಯಾಚಿತ್ರ ಮತ್ತು ಪಡಿಯಚ್ಚುಗಳನ್ನು ಒದಗಿಸಿ ಉಪಕರಿಸಿದ ಮಹನೀಯರು ಮತ್ತು ಸಂಘಸಂಸ್ಥೆಗಳು

ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು

ಅಳಸಿಂಗಾಚಾರ್, ಜಿ.ಎನ್., 384, ಕೃಷ್ಣವಿಲಾಸ ಅಗ್ರಹಾರ, ಮೈಸೂರು

ಇಂದಿರಾ ಕೃಷ್ಣ, ಪ್ರಿನ್ಸಿಪಾಲ್, ವಿ.ಎಚ್.ಡಿ. ಗೃಹವಿಜ್ಞಾನ ಕಾಲೇಜು, ಬೆಂಗಳೂರು

ಉಮಾನಾಥ್, ಎ. ವಿದ್ಯಾರ್ಥಿ, ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು, ಮೈಸೂರು

ಕಂದಸ್ವಾಮಿ ಪಿಳ್ಳೆ, ಸಿ.ಎನ್., ಗೌರವ ಕಾರ್ಯದರ್ಶಿ, ತಂಜಾವೂರ್ ಮಹಾರಾಜ್ ಸರ್ಫೋಜಿ ಸರಸ್ವತಿ ಮಹಲ್ ಲೈಬ್ರರಿ, ತಂಜಾವೂರು

ಕೇಸರಸಿಂಗ್, ಬಿ., ಛಾಯಾಚಿತ್ರಗ್ರಾಹಕ, 124, ಹನುಮಂತನಗರ, ಬೆಂಗಳೂರು

ಕ್ಷತ್ರಿ ಆರ್ಟ್ ಸ್ಟುಡಿಯೊ, ಕೊಪ್ಪಿಕರ್ ರೋಡ್, ಹುಬ್ಬಳ್ಳಿ

ಗಣೇಶ್, ಡಿ., ಕ್ಯೂರೇಟರ್, ಸಸ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಗವಿರಾಯಪ್ಪ, ಎಂ.ಆರ್. ವಾರ್ತಾ ವರದಿಗಾರ, ಆಲ್ ಇಂಡಿಯ ರೇಡಿಯೊ, ಕೊಹಿಮ, ನಾಗಾಲ್ಯಾಂಡ್

ಗುಂಡೂರಾವ್, ಎಚ್.ಆರ್., ಸಂಪಾದಕ, ವಿಜಯವಾಣಿ, ತುಮಕೂರು

ಗುಪ್ತ, ಬಿ.ಎನ್., ಪತ್ರಿಕೋದ್ಯಮಿ, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು

ಗುರುರಾಜ ಹೂಗಾರ, ಛಾಯಾಚಿತ್ರಗ್ರಾಹಕ ಮತ್ತು ಕಲಾವಿದ, ರಾಘವೇಂದ್ರ ಕಲಾಮಂದಿರ, 7ನೆಯ ಮೇನ್, ಸರಸ್ವತಿಪುರಂ, ಮೈಸೂರು

ಗೋವಿಂದರಾಜನ್, ಇ.ಕೆ., ಮೆಸರ್ಸ್ ಇ.ಜಿ.ಕೆ. ಅಂಡ್ ಸನ್, 3, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು

ಗ್ರಂಥಪಾಲ, ವಿಶ್ವವಿದ್ಯಾಲಯ ಗ್ರಂಥಾಲಯ, ಮುಂಬಯಿ

ಗ್ರೀಸ್ ರಾಯಭಾರ ಕಚೇರಿ, ನವದೆಹಲಿ

ದೇಶಪಾಂಡೆ, ಕೆ.ಎಸ್., ಗ್ರಂಥಪಾಲ, ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯ, ಧಾರವಾಡ

ದೇಸಾಯಿ, ಎಂ.ಪಿ., ಚೀಫ್ ಆಫೀಸರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಅಹಮದಾಬಾದ್

ನಾಗಪ್ಪ, ಬಿ., ಅಧ್ಯಾಪಕ, ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ನಾಗರಾಜ್, ಎಂ.ಎನ್., ಸಹಾಯಕ ಗ್ರಂಥಪಾಲ, ರಾಷ್ಟ್ರೀಯ ಗ್ರಂಥಾಲಯ, ಕಲ್ಕತ್ತ

ನಾಗರಾಜರಾವ್, ಎಂ.ಎಸ್., ನಿರ್ದೇಶಕ, ಪ್ರಾಕ್ತನಶಾಸ್ತ್ರ ಇಲಾಖೆ, ರಾಜ್ಯಸರ್ಕಾರ, ಲಕ್ಷ್ಮೀಪುರಂ, ಮೈಸೂರು

ನಾಗೇಂದ್ರ, ಕೆ.ಎ., ಕನ್ನಡ ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಪಬ್ಲಿಕ್ ರಿಲೇಷನ್ಸ್ ಆಫೀಸರ್, ನೈವೇಲಿ ಲಿಗ್‌ನೈಟ್ ಕಾರ್ಪೊರೇಷನ್ ಲಿಮಿಟೆಡ್, ನೈವೇಲಿ

ಪಬ್ಲಿಕ್ ರಿಲೇಷನ್ಸ್ ಆಫೀಸರ್, ಕೇರಳ ಸರ್ಕಾರ, ತಿರುವನಂತಪುರ

ಪಬ್ಲಿಕ್ ರಿಲೇಷನ್ಸ್ ಆಫೀಸರ್, ಪಂಜಾಬು ಸರ್ಕಾರ, ಚಂದೀಗಢ

ಪ್ರಭಾಕರ್, ಎ., ಸೆಲೆಕ್ಟ್ ಫಾರಂ. ಸಿದ್ಧಲಿಂಗಪುರ, ಮೈಸೂರು

ಪ್ರಭಾಕರ್, ಎಸ್., ಪ್ರಿನ್ಸಿಪಾಲ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,

ಪೋಸ್ಟ್ ಉಜಿರೆ, (ದ.ಕ.)

ಪ್ರಿನ್ಸಿಪಾಲ್, ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು, ಮೈಸೂರು

ಬಗರಿ, ಎನ್.ಡಿ., ರಾಜ್ಯಗ್ರಂಥಪಾಲ ಮತ್ತು ಮುಖ್ಯಸ್ಥ, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ, ಶೇಷಾದ್ರಿ ಐಯ್ಯರ್ ಸ್ಮಾರಕ ಭವನ, ಬೆಂಗಳೂರು

ಬಿ.ವಿ.ಕೆ. ಮೂರ್ತಿ ಅಂಡ್ ಸನ್ಸ್, 3ನೆಯ ಮೇನ್, ಚಾಮರಾಜಪೇಟೆ, ಬೆಂಗಳೂರು

ಭಿಡೆ, ಜಿ.ಆರ್., ಸಂಪಾದಕ, ಅಭಿನವ ಮರಾಠೀ ಜ್ಞಾನಕೋಶ, ಜ್ಞಾನಕೋಶ ಮಂಡಲ್, 2791, A ವಾರ್ಡ್, ಕೊಲ್ಹಾಪುರ

ಮಂಜುನಾಥಯ್ಯ, ಜಿ.ಎಂ., ಕಾಫಿ ಪ್ಲಾಂಟರ್, ಹರದೂರು ತೋಟ, ಸುಂಟಿಕೊಪ್ಪ, ಕೊಡಗು

ಮಲ್ಲೇಶ್ ಬಾರ್ಕರ್, ರಾಮಸಾಗರ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ

ಮಿರ್ಜಿ, ಎಚ್.ಕೆ., ಟೆಲಿಫೋನ್ ಇನ್ಸ್‌ಪೆಕ್ಟರ್, ಗೋಕಾಕ

ಮೆಹತಾ, ಜೆ.ಸಿ., ನಿರ್ದೇಶಕ, ದೆಹಲಿ ಪಬ್ಲಿಕ್ ಲೈಬ್ರರಿ, ಎಸ್.ಪಿ. ಮುಖರ್ಜಿ ಮಾರ್ಗ್, ದೆಹಲಿ

ಮೋನ ಫೋಟೋ ಸ್ಟುಡಿಯೊ, ಕೋಟೆರಸ್ತೆ, ಗುಲ್ಬರ್ಗ

ಮ್ಯಾನೇಜರ್, ದೆಹಲಿ ಸಿಕ್ ಗುರುದ್ವಾರ ಬೋರ್ಡ್, ಶ್ರೀ ಗುರು ತೇಜ್ ಬಹದ್ದೂರ್ ನಿವಾಸ್, ಸಿಸ್ ಗಂಜ್, ಚಾಂದನಿ ಚೌಕ್, ದೆಹಲಿ

ಯುನೈಟೆಡ್ ಸ್ಟೇಟ್ಸ್ ಇನ್ಫರ್‌ಮೇಷನ್ ಸರ್ವೀಸ್, ಮೌಂಟ್ ರೋಡ್, ಮದ್ರಾಸು

ರಾಮಕೃಷ್ಣಮೂರ್ತಿ, ಕೆ.ಎಸ್., ಸಂಪಾದಕ, ಕನ್ನಡಪ್ರಭ, ಕ್ವೀನ್ಸ್ ರಸ್ತೆ, ಬೆಂಗಳೂರು

ರಾಮಕೃಷ್ಣರಾಜು, ಛಾಯಾಚಿತ್ರಗ್ರಾಹಕ, ಪ್ರಾಣಿಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಛಾಯಾಚಿತ್ರ ವಿಭಾಗ, ಭಾರತಸರ್ಕಾರ, ಆಕಾಶವಾಣಿ ಭವನ್, ನವದೆಹಲಿ

ವಾರ್ತಾ ವಿಭಾಗ, ಬ್ರಿಟಿಷ್ ಉಪರಾಯಭಾರಕಚೇರಿ, ಮೌಂಟ್ ರೋಡ್, ಮದ್ರಾಸು,

ವಾರ್ತಾ ವಿಭಾಗ, ಯು.ಎಸ್.ಎಸ್.ಆರ್. ರಾಯಭಾರ ಕಚೇರಿ, 25, ಬಾರಾಖಾಂಬಾ ರಸ್ತೆ, ನವದೆಹಲಿ

ವಿಜಯಕುಮಾರ್, ಸಹಾಯಕ ನಿರ್ದೇಶಕ, ವಾರ್ತಾ ಮತ್ತು ಪ್ರವಾಸೋದ್ಯಮ ವಿಭಾಗ, ಮೈಸೂರು

ವೀರೇಂದ್ರ ಹೆಗ್ಗಡೆ, ಧರ್ಮದರ್ಶಿಗಳು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ದೇವಾಲಯ, ಧರ್ಮಸ್ಥಳ

ವೆಂಕಟರಾವ್, ರಾಯಲ್ ಸ್ಟುಡಿಯೊ, ಮಂಗಳೂರು

ಶರಶ್ಚಂದ್ರ, ಎಚ್.ಸಿ., ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಶಿವರಾಮ ಕಾರಂತ, ಕೆ., ಹರ್ಷ ಪ್ರಕಟಣಾಲಯ, ಪುತ್ತೂರು

ಶ್ರೀನಿವಾಸನ್, ಸಿ.ಎಸ್., ಛಾಯಾಚಿತ್ರಗ್ರಾಹಕ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

ಶ್ರೀನಿವಾಸ ಹಾವನೂರ, ಗ್ರಂಥಪಾಲ, ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಕೊಲಾಬ, ಮುಂಬಯಿ

ಶ್ರೀ ಸತ್ಯನಾರಾಯಣ ಫೈನ್ ಆರ್ಟ್ಸ್, ಧನ್ವಂತರಿ ರಸ್ತೆ, ಮೈಸೂರು

ಷಾ, ಹೇಮೇಂದ್ರ, ಎ., ಸಹಕಾರ್ ಬಿಲ್ಡಿಂಗ್, ವಲ್ಲಭವಿದ್ಯಾನಗರ್, ಖೈರಾ ಜಿಲ್ಲೆ, ಗುಜರಾತ್

ಸನದಿ, ಬಿ.ಎ., ಎಕ್ಸ್‌ಟೆನ್ಷನ್ ಆಫೀಸರ್, ಆಲ್ ಇಂಡಿಯ ರೇಡಿಯೊ, ಮುಂಬಯಿ

ಸಹಾಯಕ ನಿರ್ದೇಶಕ, ಖುದಾಭಕ್ಷ್ ಓರಿಯಂಟಲ್ ಪಬ್ಲಿಕ್ ಲೈಬ್ರರಿ, ಪಾಟ್ನ

ಸೀತಾರಾಮಶಾಸ್ತ್ರೀ, ಎ., ವಿಶೇಷಾಧಿಕಾರಿ, ವಾಟರ್ ರಿಸೋರ್ಸಸ್, ಇರ್ರಂ ಮಂಜಿಲ್, ಹೈದರಾಬಾದ್

ಸುಂದರರಾಜ್, ಕೆ.ಆರ್., ಛಾಯಾಚಿತ್ರಗ್ರಾಹಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಸೂಪರಿಂಟೆಂಡೆಂಟ್, ಪ್ರಬಂಧಕ್ ಸಮಿತಿ, ಶ್ರೀತೇಖ್ತ್ ಹರಿಮಂದಿರ್‌ಜಿ, ಪಾಟ್ನ ಸಾಹೇಬ್, ಪಾಟ್ನ

ಸೇತೂರಾವ್, ಎಸ್., ಸಹಾಯಕ ಸಂಪಾದಕ, ಪ್ರಕಾಶನ ವಿಭಾಗ, ಪಾಟಿಯಾಲ ಹೌಸ್, ಭಾರತ ಸರ್ಕಾರ, ನವದೆಹಲಿ

ಹೆಗಡೆ, ಗುರುಮೂರ್ತಿ, ಟಿ., ಛಾಯಾಚಿತ್ರಗ್ರಾಹಕ, 2821, ಹಿಲ್ ವ್ಯೂ, ಪಂಪಾಪತಿ ರಸ್ತೆ, ಜಯನಗರ, ಮೈಸೂರು

## ವಿಷಯಸೂಚಿ

ಗಣಕ ೧
ಗಣಕ ಕ್ಯಾಬಿನೆಟ್‌ಗಳು ೨೮
ಗಣಕಗಳ ಯಂತ್ರಾಂಶ ಬೆಳವಣಿಗೆ ೨೯
ಗಣಜಿಲೆ ೩೪
ಗಣತಂತ್ರ ೩೪
ಗಣದಾಸಿ ವೀರಣ್ಣ ೩೪
ಗಣಪತಿ ೩೪
ಗಣಪತಿಶಾಸ್ತ್ರಿ, ಟಿ. ೩೬
ಗಣರಾಜ್ಯ ೩೬
ಗಣ ಸಿದ್ಧಾಂತ ೩೭
ಗಣಿ ೪೩
ಗಣಿ ಅಪಘಾತ ೪೩
ಗಣಿ ಕಾರ್ಮಿಕರು ೪೪
ಗಣಿಗಲ ತೋರ ೪೫
ಗಣಿಗಾರಿಕೆ ೪೫
ಗಣಿಗಾರಿಕೆ, ಅಲೋಹ ಖನಿಜಗಳ ೫೦
ಗಣಿಗಾರಿಕೆ ಕಾನೂನುಗಳು ೫೧
ಗಣಿಗಾರಿಕೆಯ ಅರ್ಥಶಾಸ್ತ್ರ ೫೨
ಗಣಿಗಾರಿಕೆಯ ಪಾತ್ರ, ರಾಷ್ಟ್ರ ಆರ್ಥಿಕತೆಯಲ್ಲಿ ೫೩
ಗಣಿಗಾರಿಕೆಯ ಶಿಲ್ಪ ೫೫
ಗಣಿಗಾರಿಕೆ, ಸಮುದ್ರಗತ ೫೬
ಗಣಿತ ಆದರ್ಶಗಳು ೫೯
ಗಣಿತ ಕೋಷ್ಟಕಗಳು ೬೨
ಗಣಿತ ತರ್ಕಶಾಸ್ತ್ರ ೬೩
ಗಣಿತ ಪ್ರತಿರೂಪಗಳು ೬೫
ಗಣಿತ ಪ್ರತೀಕಗಳು ೬೬
ಗಣಿತಬೋಧನ ಕ್ರಮ ೬೮
ಗಣಿತ ಭೌತವಿಜ್ಞಾನ ೭೦
ಗಣಿತವಿಜ್ಞಾನ ೭೧
ಗಣಿತ ಸಂಘಗಳು ೮೭
ಗಣಿತಾನುಮಿತಿ ೮೮
ಗಣಿತೋಪಕರಣಗಳು ೯೦
ಗಣೇಕಲ್ ಸಂಗವಿಭು ೯೧
ಗಣೇಶ ದೈವಜ್ಞ ೯೧
ಗಣೇಶನ್ ೯೨
ಗಣೇಶ್, ಎಂ.ಪಿ. ೯೨
ಗಣೇಶ, ರಾಜಾ ೯೨
ಗಣೇಶ ಶಂಕರ ವಿದ್ಯಾರ್ಥಿ ೯೨
ಗಣೇಶ್ವರ ೯೩
ಗತಿ ಅರ್ಥಶಾಸ್ತ್ರ ೯೩
ಗತಿವಿಜ್ಞಾನ ೯೪
ಗತಿಶೀಲತೆ ೯೮
ಗದಗ ೯೯
ಗದಬ ೧೦೫
ಗದಾಧರ ಭಟ್ಟಾಚಾರ್ಯ ೧೦೫
ಗದಾಧರ ಸಿಂಹ ೧೦೫
ಗದಾಫಿ, ಮೌಮರ್ ೧೦೫
ಗದ್ದಗಿಮಠ, ಬಿ.ಎಸ್. ೧೦೬
ಗದ್ದರ್‌ಪಕ್ಷ ೧೦೬
ಗದ್ದಲ ಮತ್ತು ಅದರ ಪರಿಣಾಮಗಳು ೧೦೭
ಗದ್ದಿಗೆ ಮರುಳಸಿದ್ಧ ೧೦೮
ಗದ್ಯ ೧೦೮
ಗದ್ಯಸಾಹಿತ್ಯ ೧೧೦
ಗನಾಯ್‌ಡೀ ೧೧೩
ಗನ್‌ಚೆರಾಫ್, ಇವ್ಯಾನ್ ಅಲೆಕ್ಸಾನ್‌ಡ್ರವಿಚ್ ೧೧೩
ಗಪ್ಪಿ ಮೀನು ೧೧೪
ಗಬೆಲ್ಸ್, ಜೋಸೆಫ್ ೧೧೪
ಗಬ್ಬೂರು ೧೧೫
ಗಮಕ ಕಲೆ ೧೧೫
ಗಮೆಲ್ಲಿ–ಕರೇರಿ ೧೧೮
ಗಯಟೆ ೧೧೮
ಗಯ ೧೨೫
ಗಯಾನ ೧೨೭
ಗರಗಸ ಮೀನು ೧೨೯
ಗರಡಿ ೧೨೯
ಗರಾಶನಿನ್, ಇಲಿಯ ೧೩೧
ಗರಿ ೧೩೧
ಗರಿಕೆಹುಲ್ಲು ೧೩೩
ಗರಿನಕ್ಷತ್ರ ೧೩೪
ಗರುಡ ೧೩೪
ಗರುಡಗಂಬ ೧೩೫
ಗರುಡಪುರಾಣ: **ನೋಡಿ – ಅಷ್ಟಾದಶ ಪುರಾಣಗಳು** ೧೩೬
ಗರುಡ ಫಲ ೧೩೬
ಗರುಡ ಮೂಗಿನ ಆಮೆ ೧೩೬
ಗರುಡರು ೧೩೬
ಗರೂಡ ಸದಾಶಿವರಾವ್ ೧೩೭
ಗರೆಸ್, ಯೋಹಾನ್ ಯೋಸೆಫ್ ಫಾನ್ ೧೩೭
ಗರ್ನ್ಸಿ ೧೩೮
ಗರ್ಭಪಾತ ೧೩೮
ಗರ್ಭಾದಾನ ೧೪೦
ಗರ್ಭಾವಸ್ಥೆ ೧೪೧
ಗರ್ಭಾವಸ್ಥೆ (ಪ್ರಾಣಿಗಳಲ್ಲಿ) ೧೪೪
ಗರ್ಭೋನ್ಮಾದ **ನೋಡಿ: ಉನ್ಮಾದ** ೧೪೭
ಗರ್ಲಾಫ್ಷ ೧೪೭
ಗಲ್ ೧೪೭
ಗಲಗು ೧೪೮
ಗಲಾಪಗಸ್ ದ್ವೀಪಗಳು ೧೪೮
ಗಲಿಪೋಲಿ ೧೪೯
ಗಲೀನ ೧೪೯
ಗಲೀವರ್ಸ್ ಟ್ರಾವಲ್ಸ್ : **ನೋಡಿ – ಸ್ವಿಫ್ಟ್, ಜೊನ್ಯಾಥನ್** ೧೪೯
ಗಲ್ಫ್ ಸ್ಟ್ರೀಂ ೧೪೯
ಗಲ್‌ಸ್ಟ್ರಾಂಡ್, ಆಲ್‌ವಾರ್ ೧೫೦
ಗವರ್ನರ್ – ಜನರಲ್ ೧೫೦
ಗಸಗಸೆ ಗಿಡ ೧೫೨

ಗಸಗಸೆ ಹಣ್ಣಿನ ಮರ ೧೫೨
ಗಸ್ಟೇವಸ್ ೧೫೨
ಗಳಗಂಡ: **ನೋಡಿ – ಗಂಡಮಾಲೆ** ೧೫೪
ಗಳಗನಾಥ[1] ೧೫೪
ಗಳಗನಾಥ[2] ೧೫೪
ಗಳಲೆ ೧೫೬
ಗಳಿಸಿದ ವರಮಾನ ೧೫೬
ಗಾಂಕೂರ್ ಸಹೋದರರು ೧೫೭
ಗಾಂಗೇಯದೇವ ೧೫೮
ಗಾಂಜಾ ಗಿಡ ೧೫೮
ಗಾಂಡ ೧೬೦
ಗಾಂಡೀವ ೧೬೧
ಗಾಂಡೈಟ್ ೧೬೧
ಗಾಂದಿನಿ ೧೬೧
ಗಾಂಧರ್ವವಿವಾಹ ೧೬೧
ಗಾಂಧಾರ ೧೬೧
ಗಾಂಧಾರಿ ೧೬೪
ಗಾಂಧೀ – ಇರ್ವಿನ್ ಒಪ್ಪಂದ ೧೬೫
ಗಾಂಧೀಗ್ರಾಮ ೧೬೫
ಗಾಂಧೀ, ದೇವದಾಸ್ ೧೬೬
ಗಾಂಧೀನಗರ ೧೬೬
ಗಾಂಧೀ, ಫಿರೋಜ಼್ ೧೬೭
ಗಾಂಧೀ, ಮೋಹನ್‌ದಾಸ್ ಕರಮ್‌ಚಂದ್ ೧೬೭
ಗಾಂಫ್ರಿನ ೧೯೨
ಗಾಂವಕಾರ, ಎಸ್.ಡಿ. ೧೯೨
ಗಾಂವಕಾರ, ಸ. ಪ. ೧೯೨
ಗಾಗಮೇಲ ಕದನ ೧೯೨
ಗಾಗಲ್, ನಿಕಲ್ಯೆ ವಸೀಲ್ಯವಿಚ್ ೧೯೩
ಗಾಗಾಭಟ್ಟ ೧೯೩
ಗಾಗಿ, ಯೂಜಿನ್ ಹೆನ್ರಿ ಪಾಲ್ ೧೯೩
ಗಾಜ಼ ೧೯೪
ಗಾಜ಼ಿ ಆಂಟೆಪ್ ೧೯೫
ಗಾಜಿನ ಕೆಲಸ ೧೯೬
ಗಾಜಿನ ಬಟ್ಟೆ ೧೯೮
ಗಾಜಿನ ಮನೆ ೧೯೯
ಗಾಜಿನ ಮೀನು ೧೯೯
ಗಾಜು ೨೦೦
ಗಾಟಿಂಗೆನ್ ೨೦೧
ಗಾಟ್ಲೆಂಡ್ ೨೦೨
ಗಾಟ್‌ಷೆಡ್, ಯೋಹಾನ್ ಕ್ರಿಸ್ಟಾಫ್ ೨೦೨
ಗಾಟ್ಸಿ, ಕಾರ್ಲೋ ೨೦೩
ಗಾಟ್‌ಹೆಲ್ಫ್, ಯೆರೆಮೀಯಾಸ್ ೨೦೪
ಗಾಡಗೀಳ, ಗಂಗಾಧರ ಗೋಪಾಳ ೨೦೪
ಗಾಡಗೀಳ, ಧನಂಜಯ ರಾಮಚಂದ್ರ ೨೦೪
ಗಾಡಗೀಳ, ನರಹರ ವಿಷ್ಣು ೨೦೬
ಗಾಡರ್ಡ್, ರಾಬರ್ಟ್ ಹಚಿನ್ಸ್ ೨೦೬
ಗಾಡಿ ೨೦೭
ಗಾಡ್ವಿನ್ ಆಸ್ಟೆನ್ ಶಿಖರ ೨೧೧
ಗಾಡ್ವಿನ್, ಮೇರಿ ೨೧೧
ಗಾಡ್ವಿನ್, ವಿಲಿಯಂ ೨೧೧
ಗಾಡ್ವಿನ್, ಹೆನ್ರಿ ಥಾಮಸ್ ೨೧೧
ಗಾಡ್‌ಹ್ಯೂ ೨೧೨
ಗಾಣಗಾಪುರ ೨೧೨
ಗಾಣದ ಕನ್ನಪ್ಪ ೨೧೨
ಗಾತರು ೨೧೩
ಗಾತಿಕ್ ಕಲೆ ೨೧೪
ಗಾತಿಕ್ ಭಾಷೆ ೨೧೪
ಗಾತಿಕ್ ವಾಸ್ತು ಶೈಲಿ ೨೧೫
ಗಾತ್ರಾನುಗುಣ ಪ್ರತಿಫಲ ೨೧೮
ಗಾಥಾ[1] ೨೧೮
ಗಾಥಾ[2] ೨೧೮
ಗಾದೆಗಳು ೨೧೯
ಗಾನರೀಯ ೨೨೨
ಗಾಫ್, ಹ್ಯೂ ೨೨೩
ಗಾಬಿ ಚುಕ್ಕೆ ೨೨೩
ಗಾಬ್ರಿಯಲ್ ಗಾರ್ಸಿಯಾ ಮಾರ್ಕೆಜ್ ೨೨೩
ಗಾಬ್ರಿಯೇಲ್ ದಾಮಾನ್ ಟ್ಸ್ಯೊ ೨೨೪
ಗಾಮ ೨೨೪
ಗಾಮ, ವ್ಯಾಸ್ಕೋಡ ೨೨೫
ಗಾಯ ೨೨೬
ಗಾಯಕವಾಡ ೨೨೭
ಗಾಯತ್ರೀ ೨೨೭
ಗಾರ್ ಮೀನು ೨೨೯
ಗಾರಿಬಾಲ್ಡಿ, ಜೂಸೆಪ್ಪೆ ೨೨೯
ಗಾರೇಗಿಡ: **ನೋಡಿ – ಇಂಗುದಿ** ೨೩೦
ಗಾರ್ಕಿ ೨೩೦
ಗಾರ್ಕಿ, ಮ್ಯಾಕ್ಸಿಂ ೨೩೧
ಗಾರ್ಗಿ ೨೩೨
ಗಾರ್ಗ್ಯ[1] ೨೩೩
ಗಾರ್ಗ್ಯ[2] ೨೩೩
ಗಾರ್ಡನ್, ಚಾರಲ್ಸ್ ವಿಲಿಯಮ್ ೨೩೩
ಗಾರ್ಡಾ ಸರೋವರ ೨೩೩
ಗಾರ್ಡಿನರ್, ಆಲ್‌ಫ್ರೆಡ್ ಜಾರ್ಜ್ ೨೩೩
ಗಾರ್ಡಿಯಂ ೨೩೩
ಗಾರ್ಡಿಯನ್, ದಿ ೨೩೪
ಗಾರ್ಡ್ನರ್, ಅರ್ಲ್ ಸ್ಟ್ಯಾನ್ಲೀ ೨೩೪
ಗಾರ್ಡ್ನರ್, ಅಲೆಗ್ಸಾಂಡರ್ ೨೩೪
ಗಾರ್ಡ್ನರ್, ಸ್ಯಾಮ್ಯುಯೆಲ್ ರಾಸನ್ ೨೩೫
ಗಾರ್ತ್, ಸರ್ ಸ್ಯಾಮ್ಯುಯೆಲ್ ೨೩೫
ಗಾರ್ನೆಟ್ ೨೩೫
ಗಾರ್ನೆಟ್, ಡೇವಿಡ್ ೨೩೬
ಗಾರ್ನೆಟ್, ರಿಚರ್ಡ್ ೨೩೬
ಗಾರ್‌ಪೈಕ್ ೨೩೬
ಗಾರ್ಫೀಲ್ಡ್, ಜೇಮ್ಸ್ ಏಬ್ರಂ ೨೩೬
ಗಾರ್‌ಬೂರ್ಗ್, ಆರ್ನ್ ಎವನ್‌ಸನ್ ೨೩೭
ಗಾರ್ಬೋ, ಗ್ರೀಟ ೨೩೭
ಗಾರ್ಲೆಂಡ್, ಹ್ಯಾಮ್‌ಲಿನ್ ೨೩೭
ಗಾರ್‌ಷಿನ್, ಫಸೀವಲಟ್, ಮಿಖೈಲೊವಿಚ್ ೨೩೮
ಗಾರೆಶಿಲ್ಪ ೨೩೮
ಗಾರ್ಸಿಯಾ ಲೋರ್ಕ, ಫೆಡರಿಕೊ ೨೪೦
ಗಾರ್ಸ್ಟಾಂಗ್, ಜಾನ್ ೨೪೦
ಗಾರ್ಹಸ್ಥ್ಯ ೨೪೧
ಗಾಲ್ ೨೪೨
ಗಾಲ್, ಫ್ರಾನ್ಸ್ ಯೋಸೆಫ್ ೨೪೩
ಗಾಲ್ ಮಿಡ್ಜ್ ೨೪೩
ಗಾಲಕ, ವಿದ್ಯುತ್ ಅಲೆ ೨೪೩
ಗಾಲವ ೨೪೫
ಗಾಲಿ ೨೪೫
ಗಾಲಿನ, ಜೆಸಿಂತೊ ೨೪೭
ಗಾಲಿಬ್, ಮಿರ್ಜ಼ಾ ೨೪೭
ಗಾಲಿಯಂ ೨೪೮
ಗಾಲ್ಜಿ, ಕ್ಯಾಮಿಲೊ ೨೪೯
ಗಾಲ್ಟನ್, ಸರ್ ಫ್ರಾನ್ಸಿಸ್ ೨೪೯
ಗಾಲ್ಡೋನಿ, ಕಾರ್ಲೋ ೨೫೦
ಗಾಲ್ಫ್ ೨೫೦
ಗಾಲ್ಸ್‌ವರ್ದಿ, ಜಾನ್ ೨೫೨
ಗಾವಿಲಗಡ ೨೫೪
ಗಾಸ್, ಎಡ್ಮಂಡ್ ೨೫೪
ಗಾಹದ್ವಾಲ ಮನೆತನ ೨೫೪
ಗಾಳದ ಮೀನು ೨೫೫
ಗಾಳಿ[1] ೨೫೬
ಗಾಳಿ[2] ೨೫೬
ಗಾಳಿಗೂಡೊಡೆದ ರೋಗ ೨೫೬
ಗಾಳಿತುಂಬಿದೆದೆ ೨೫೭
ಗಾಳಿಪಟ ೨೫೭
ಗಾಳಿಮರ ೨೫೯
ಗಾಳಿಯುಬ್ಬಟೆ ರೋಗ ೨೬೦
ಗಿಂಗ್‌ಕೋ ೨೬೧
ಗಿಡತಿಗಣೆಗಳು ೨೬೧
ಗಿಡ್ಡಲೂರು ೨೬೨
ಗಿಡಿಂಗ್ಸ್, ಫ್ರಾಂಕ್ಲಿನ್ ಹೆನ್ರಿ ೨೬೨
ಗಿಡುಗ ೨೬೩
ಗಿಡುಗ ಸಾಕಣೆ ೨೬೪
ಗಿಣ್ಣು ೨೬೬
ಗಿನಿ ೨೬೭
ಗಿನಿ ಕೋಳಿ ೨೬೮
ಗಿನಿ ಖಾರಿ ೨೬೮
ಗಿನಿ ಗಣರಾಜ್ಯ ೨೬೮
ಗಿನಿ ಬಿಸ್ಸಾವು ೨೭೦
ಗಿನಿ ಹಂದಿ ೨೭೧
ಗಿನಿ ಹುಲ್ಲು ೨೭೨
ಗಿಬನ್ ೨೭೨
ಗಿಬ್ಬನ್, ಎಡ್ವರ್ಡ್ ೨೭೩
ಗಿಬ್ಸ್, ಜೋಸಯಾ ವಿಲಾರ್ಡ್ ೨೭೪
ಗಿಬ್ಸನ್, ವಿಲ್ಫ್ರೆಡ್ ವಿಲ್ಸನ್ ೨೭೪
ಗಿಯರ್ ೨೭೪
ಗಿರ್ ಅರಣ್ಯ ೨೭೭
ಗಿರಕಿ ರೋಗ ೨೭೭
ಗಿರವಿದಾರ ೨೭೮
ಗಿರಿಧರ ಕವಿರಾಯ ೨೭೮

ಗಿರಿಧಾಮಗಳು ೨೭೯
ಗಿರಿ, ವಿ.ವಿ. ೨೭೯
ಗಿರಿವ್ರಜ ೨೮೧
ಗಿರೀಶ್ ಕಾರ್ನಾಡ್ ೨೮೧
ಗಿರೀಶ್ ಕಾಸರವಳ್ಳಿ ೨೮೨
ಗಿರ್ನಾರ್ ೨೮೨
ಗಿಲೆರೊನ್, ಯೂಲ್ಸ್ ೨೮೩
ಗಿಲೆಸ್ಪಿ, ರಾಬಟ್ ರಾಲೋ ೨೮೩
ಗಿಲೊಟೀನ್ ೨೮೪
ಗಿಲ್ಗಮೆಷ್ ೨೮೪
ಗಿಲ್ಗಿಟ್ ೨೮೫
ಗಿಲ್ಬರ್ಟ್ ದ್ವೀಪಗಳು ೨೮೫
ಗಿಲ್ಬರ್ಟ್, ವಿಲಿಯಂ ೨೮೫
ಗಿಲ್ಬರ್ಟ್, ವಿಲಿಯಂ ಷ್ವೆಂಕ್ ೨೮೬
ಗಿಲ್ಬರ್ಟ್, ಹಂಫ್ರಿ ೨೮೭
ಗಿಲ್ಲೋಮೆ, ಡ್ಯುಪಿಟ್ರಾನ್ ೨೮೭
ಗಿಸ್ಸಿಂಗ್, ಜಾರ್ಜ್ ರಾಬರ್ಟ್ ೨೮೮
ಗಿಳಿ ೨೮೮
ಗಿಳಿಮೀನು ೨೮೯
ಗೀಗೀ ಪದ ೨೮೯
ಗೀಜ಼ ೨೯೦
ಗೀಜಗನ ಹಕ್ಕಿ ೨೯೧
ಗೀಜ಼ೋ ಫ್ರಾಂಕಾಯ್ ೨೯೧
ಗೀಟ್ರೀ, ಸಾಚಾ ೨೯೨
ಗೀತಪ್ರಿಯ ೨೯೨
ಗೀತರೂಪಕ ೨೯೩
ಗೀತಾ ನಾಗಭೂಷಣ ೨೯೫
ಗೀತಾಂಜಲಿ ೨೯೬
ಗೀತಿಕೆ ೨೯೮
ಗೀತೆ: **ನೋಡಿ – ಭಗವದ್ಗೀತೆ** ೨೯೮
ಗೀಸ಼ರ್ ೨೯೮
ಗೀಳು ೨೯೯
ಗುಂಜಿ ೨೯೯
ಗುಂಟಕಲ್ ೨೯೯
ಗುಂಟೂರು ೨೯೯
ಗುಂಡಪ್ಪ, ಡಿ. ವಿ. ೩೦೦
ಗುಂಡರ್ಟ್, ಹರ್ಮನ್ ೩೦೨
ಗುಂಡಿಗೆ ಮತ್ತು ಪುಪ್ಪುಸಗಳ ಶಸ್ತ್ರಚಿಕಿತ್ಸೆ ೩೦೩
ಗುಂಡಿಗೆಯ ಅಂಗರಚನೆ ೩೦೫
ಗುಂಡಿಗೆಯ ರೋಗಗಳು ೩೦೯
ಗುಂಡಿಗೆ ಸುತ್ತುಪೊರೆಯ ರೋಗ ೩೧೧
ಗುಂಡುಸ್ತರಗಳು ೩೧೨
ಗುಂಡ್ಲುಪೇಟೆ ೩೧೨
ಗುಂತಗೋಳ ಪಾಳೆಯಗಾರರು ೩೧೩
ಗುಂಥರ್, ಜಾನ್ ೩೧೪
ಗುಂಥರ್, ಯೋಹಾನ್ ಕ್ರಿಶ್ಚನ್ ೩೧೪
ಗುಂಪುಗಳು ೩೧೫
ಗುಂಪುಮದುವೆ ೩೧೯
ಗುಗ್ಗುಳದ ಮರ ೩೨೦
ಗುಜರಾತ್ ೩೨೦
ಗುಜರಾತ್ ಕದನ ೩೨೯
ಗುಜರಾತ್ ಸಮಾಚಾರ್ ೩೨೯
ಗುಜರಾತಿನ ಇತಿಹಾಸ ೩೨೯
ಗುಜರಾತಿನ ವಾಸ್ತು, ಶಿಲ್ಪ ೩೩೬
ಗುಜರಾತಿನ ಶಾಸನಗಳು, ನಾಣ್ಯಗಳು ೩೩೮
ಗುಜರಾತಿ ಭಾಷೆ ೩೪೦
ಗುಜರಾತಿ ಸಾಹಿತ್ಯ ೩೪೧
ಗುಜರಾತ್ ವಿದ್ಯಾಪೀಠ ೩೪೫
ಗುಜ್ರನ್‌ವಾಲಾ ೩೪೫
ಗುಜ್ರಾಲ್, ಐ.ಕೆ. ೩೪೫
ಗುಟ್ಸ್‌ಕೊ, ಕಾರ್ಲ್ ಫರ್ಡಿನಾಂಡ್ ೩೪೬
ಗುಡ್ ಫ್ರೈಡೆ ೩೪೬
ಗುಡಗುಂಟೆ ಪಾಳೆಯಗಾರರು ೩೪೬
ಗುಡಾರ ೩೪೭
ಗುಡಿಕೋಟೆ ೩೪೯
ಗುಡಿಗಾರಿಕೆ ೩೪೯
ಗುಡಿಬಂಡೆ ೩೫೦
ಗುಡಿಯಮ್ ೩೫೧
ಗುಡಿಸಿಲು ಕೈಗಾರಿಕೆಗಳು ೩೫೧
ಗುಡ್ನಾಪುರ ೩೫೩
ಗುಡ್‌ಇಯರ್, ಚಾರ್ಲ್ಸ್ ೩೫೪
ಗುಡ್ರುನ್ ೩೫೪
ಗುಣಕ ೩೫೪
ಗುಣಕ, ಗೀಗರ್ – ಮುಲ್ಲರ್ ೩೫೫
ಗುಣಗಳು ೩೫೫
ಗುಣನಂದಿ ೩೫೬
ಗುಣನಿಯಂತ್ರಣ, ಸಂಖ್ಯಾಕಲನೀಯ ೩೫೬
ಗುಣಭದ್ರ ೩೫೮
ಗುಣರತ್ನಸೂರಿ ೩೫೮
ಗುಣವರ್ಮ II ೩೫೯
ಗುಣವಾ ೩೫೯
ಗುಣಾಢ್ಯ ೩೫೯
ಗುಣೋತ್ತರ ವಿತರಣೆ : **ನೋಡಿ – ಜ್ಯಾಮಿತೀಯ ವಿತರಣೆ** ೩೫೯
ಗುತ್ತರು ೩೫೯
ಗುದ ೩೬೦
ಗುನಾ ೩೬೧
ಗುನ್ನಾರ್‌ಸ್ಸನ್, ಗುನ್ನಾರ್ ೩೬೧
ಗುಪ್ತಕೂಟ ೩೬೧
ಗುಪ್ತನಿಧಿ ೩೬೧
ಗುಪ್ತ, ಬಿ. ಎನ್. ೩೬೧
ಗುಪ್ತ ಪರಮೇಶ್ವರಿಲಾಲ್ ೩೬೨
ಗುಪ್ತ ಭಾಷೆಗಳು ೩೬೩
ಗುಪ್ತ ಮತದಾನ ೩೬೩
ಗುಪ್ತರ ನಾಣ್ಯಗಳು ೩೬೩
ಗುಪ್ತರ ವಾಸ್ತು ಮತ್ತು ಶಿಲ್ಪ ೩೬೫
ಗುಪ್ತರ ಶಾಸನಗಳು ೩೬೮
ಗುಪ್ತರು ೩೭೦
ಗುಪ್ತಲೇಖ ಶಾಸ್ತ್ರ ೩೭೪
ಗುಪ್ತ ಶಕ ೩೭೭
ಗುಪ್ತ ಸಂಘಗಳು ೩೭೮
ಗುಪ್ತೋಷ್ಣ : **ನೋಡಿ – ಉಷ್ಣದ ಪರಿಮಾಣ** ೩೭೯
ಗುಪ್ಪಟೆ ಗಿಡ ೩೭೯
ಗುಫ್‌ಕ್ರಾಲ್ ೩೭೯
ಗುಬ್ಬಚ್ಚಿ ೩೮೧
ಗುಬ್ಬಿ ೩೮೨
ಗುಬ್ಬಿ ವೀರಣ್ಣ ೩೮೩
ಗುಬ್ಬಿಯ ಮಲ್ಲಣ್ಣ ೩೮೪
ಗುಬ್ಬಿಯ ಮಲ್ಲಣ್ಣಾರ್ಯ ೩೮೪
ಗುಮಟೆ ಪದಗಳು ೩೮೫
ಗುಮ್ಮಟ ೩೮೬
ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು ೩೮೬
ಗುಮ್ಮಾಳಪುರ ೩೮೭
ಗುಯಟ್ ಹಾರ್ಡ್ ೩೮೭
ಗುರಜಾಡ ಅಪ್ಪಾರಾವ್ ೩೮೭
ಗುರಾಣಿಕ ಗ್ರಂಥಿ ೩೮೭
ಗುರಾಣಿಕ ಗ್ರಂಥಿಯ ರೋಗಗಳು ೩೮೮
ಗುರು[1] ೩೮೯
ಗುರು[2] ೩೮೯
ಗುರುಕುಲ ೩೯೧
ಗುರುಕುಲ ಕಾಂಗ್ರಿ ವಿಶ್ವವಿದ್ಯಾಲಯ ೩೯೩
ಗುರುತ್ವಾಕರ್ಷಣ ಕುಸಿತ ೩೯೪
ಗುರುತ್ವಾಕರ್ಷಣೆ ೩೯೫
ಗುರುದತ್ತ ೩೯೮
ಗುರುದಾಸಪುರ ೩೯೮
ಗುರುದ್ವಾರ ೩೯೮
ಗುರುನಾನಕ್ ವಿಶ್ವವಿದ್ಯಾಲಯ ೩೯೯
ಗುರುಪುರ ೩೯೯
ಗುರುಬಸವ ೩೯೯
ಗುರುಮುಖಿ ೪೦೦
ಗುರುಲಿಂಗವಿಭು ೪೦೦
ಗುರುವಾಯೂರು ೪೦೦
ಗುರುಶಾಂತಶಾಸ್ತ್ರಿ, ಶಿರಸಿ ೪೦೧
ಗುರುಶಿಷ್ಯ ಬಾಂಧವ್ಯ ೪೦೧
ಗುರೆಳ್ಳು ೪೦೩
ಗುಲಗಂಜಿ ೪೦೪
ಗುಲಾಬ್ ಸಿಂಗ್ ೪೦೪
ಗುಲಾಬಿ ೪೦೫
ಗುಲಾಬಿಗಳ ಯುದ್ಧಗಳು ೪೧೦
ಗುಲಾಮರು, ಗುಲಾಮರ ವ್ಯಾಪಾರ ೪೧೦
ಗುಲಾಮೀ ಸಂತತಿ ೪೧೫
ಗುಲಿಸ್ತಾನ್ ಒಪ್ಪಂದ ೪೧೭
ಗುಲ್ಜಾರಿಲಾಲ್, ನಂದಾ ೪೧೭
ಗುಲ್ಬರ್ಗ ೪೧೮
ಗುಲ್ಬರ್ಗ ವಿಶ್ವವಿದ್ಯಾಲಯ ೪೨೩
ಗುಲ್ಮ ೪೨೪
ಗುಲ್ಮ ರೋಗಗಳು ೪೨೫
ಗುಲ್ವಾಡಿ ವೆಂಕಟರಾವ್ ೪೨೬
ಗುಹ ೪೨೬
ಗುಹವಾಸಿ ಪ್ರಾಣಿಗಳು ೪೨೬

ಗುಹಾ ವಾಸ್ತು, ಶಿಲ್ಪ ೪೨೭
ಗುಹಾ ಶಾಸನಗಳು, ಭಾರತದ ೪೩೪
ಗುಹಾಸಮಾಧಿಗಳು, ಪ್ರಾಗಿತಿಹಾಸ ಕಾಲದ ೪೩೫
ಗುಹಿಲರು ೪೩೬
ಗುಹೆ ೪೩೭
ಗುಳುಮಾವು ೪೩೯
ಗುಳೇದಗುಡ್ಡ ೪೩೯
ಗುಳ್ಳೆನರಿ ೪೩೯
ಗುಳ್ಳೆಮಂದಿರ ೪೪೦
ಗೂಂಚ್ ಮೀನು ೪೪೦
ಗೂಂಡೂಲಿಚ್, ಐವಾನ್ ಫ್ರೇನಾರ್ ೪೪೧
ಗೂಗಾಲ್ ೪೪೧
ಗೂಚ್, ಜಾರ್ಜ್ ಪೀಬಾಡಿ ೪೪೧
ಗೂಟೆನ್‌ಬರ್ಗ್, ಯೋಹಾನ್ ೪೪೧
ಗೂಡುಗಳು ೪೪೨
ಗೂಢಚರ್ಯೆ ೪೪೪
ಗೂಢ ಸೇವಾ ವ್ಯವಸ್ಥೆ ೪೪೬
ಗೂಢೋಕ್ತಿ ೪೪೬
ಗೂನು ತಿಮಿಂಗಲ ೪೪೭
ಗೂಬೆ ೪೪೭
ಗೂರಲು ೪೪೯
ಗೂರ್ಖ ಯುದ್ಧ ೪೫೦
ಗೂರ್ಖರು ೪೫೧
ಗೂರ್ಜರ ವಂಶ ೪೫೧
ಗೂರ್ನಿಯ ೪೫೪
ಗೂವನ್ ೪೫೪
ಗೂಳಿ ೪೫೪
ಗೂಳಿಕಾಳಗ ೪೫೫
ಗೂಳಿ ನೊಣ ೪೫೭
ಗೂಳೂರು ೪೫೮
ಗೃಹ ೪೫೮
ಗೃಹ ಕೈಗಾರಿಕೆಗಳು ೪೬೪
ಗೃಹ ಮತ್ತು ಗೃಹಾಲಂಕರಣ ೪೬೫
ಗೃಹನಿರ್ಮಾಣ ಸಹಕಾರ ಸಂಘ ೪೭೨
ಗೃಹಪದ್ಧತಿ ೪೭೩
ಗೃಹರಕ್ಷಕ ದಳ ೪೭೩
ಗೃಹವಿಜ್ಞಾನ ೪೭೪
ಗೃಹಾಲೇಖ್ಯ ೪೭೭
ಗೃಹ್ಯಸೂತ್ರಗಳು ೪೭೮
ಗೆಂಟ್ಸ್, ಫ್ರೀಡ್ರಿಕ್ ೪೭೯
ಗೆಂಡೆ ಮೀನು ೪೮೦
ಗೆಕ್ಕೊ (ಹಲ್ಲಿ) ೪೮೦
ಗೆಜೆಟಿಯರ್ ೪೮೧
ಗೆಜೆಟ್ಟು ೪೮೩
ಗೆಜ್ಜಿಲ್ ೪೮೩
ಗೆಟಿಸ್‌ಬರ್ಗ್ ಕದನ ೪೮೩
ಗೆಟ್ರೂಡ್ ಬೆಲ್ ೪೮೪
ಗೆಡ್ಡೆ ೪೮೫
ಗೆಡ್ಡೆಕೋಸು ೪೮೫
ಗೆಣಸಿನ ಕುಟುಂಬ ೪೮೭
ಗೆಣಸು ೪೮೭
ಗೆದ್ದಲು ೪೮೮
ಗೆರಾರ್ಡ್, ಕ್ರೆಮೋನಾದ ೪೯೧
ಗೆರಾರ್ಡ್ ಡೊಮಾಕ್ ೪೯೧
ಗೆರಿಲ್ಲಾ ಕಾಳಗ: **ನೋಡಿ – ಕಿರುಕುಳ ಕಾಳಗ** ೪೯೨
ಗೆರ್ಹಾರ್ಟ್, ಪಾಲ್ ೪೯೨
ಗೆಲಿಲಿಯೊ ಗೆಲೀಲಿ ೪೯೨
ಗೆಲ್ಡನರ್, ಕಾರ್ಲ್ ಫ್ರೀಡ್ರಿಕ್ ೪೯೩
ಗೆಸ್ಟಾಫ್ ಫ್ರೈಟಾಕ್ ೪೯೩
ಗೆಸ್ಟಾಲ್ಟ್ ಮನೋವಿಜ್ಞಾನ ೪೯೪
ಗೇ, ಜಾನ್ ೪೯೬
ಗೇಟ್ಸ್, ಬಿಲ್ ೪೯೭
ಗೇಣಿ, ಗೇಣಿ ಸಿದ್ಧಾಂತ ೪೯೭
ಗೇಬಲ್, (ವಿಲಿಯಂ) ಕ್ಲಾರ್ಕ್ ೪೯೯
ಗೇಬ್ರಿಯಲ್ ಫ್ಯಾಲ್ಲೋಪಿಯಸ್ ೫೦೦
ಗೇಮೋವ್, ಜಾರ್ಜ್ ೫೦೦
ಗೇಯರೂಪಕ: **ನೋಡಿ – ಗೀತರೂಪಕ** ೫೦೧
ಗೇಯಲ್ ೫೦೧
ಗೇಯಸ್ ೫೦೨
ಗೇರಿಕೆ, ಆಟ್ಟೋ ಫಾನ್ ೫೦೨
ಗೇರಿ ಶಿಕ್ಷಣಪದ್ಧತಿ ೫೦೨
ಗೇರುಸೊಪ್ಪೆ ೫೦೩
ಗೇರುಸೊಪ್ಪೆ ಜಲಪಾತ ೫೦೪
ಗೇರ್‌ವಿನಸ್, ಜಾರ್ಜ್ ಗಾಟ್‌ಫ್ರೀಡ್ ೫೦೪
ಗೇಲಾರ್ಡಿಯ ೫೦೪
ಗೇಲೆನ್ ೫೦೫
ಗೇ – ಲ್ಯೂಸ್ಯಾಕ್, ಜೋಸೆಫ್ ಲೂಯಿ ೫೦೬
ಗೇವಿಯಾಲಿಸ್ ೫೦೬
ಗೇಷ ೫೦೬
ಗೈಗರ್, ಹ್ಯಾನ್ಸ್ ೫೦೭
ಗೈಟ್ಬೂನ್ ದಾರ್‌ಟ್ಸೂ ೫೦೭
ಗೈಡುಗಳು ಮತ್ತು ಗೈಡು ಪದ್ಧತಿ ೫೦೭
ಗೈಬೆಲ್, ಎಮಾನ್ಯುಯೆಲ್ ಫಾನ್ ೫೧೨
ಗೈಲ್ಸ್ ಲಿಟ್ಟನ್ ಸ್ಟ್ರೇಚಿ ೫೧೨
ಗೊಂಗೊರಾ ಇ ಆರ್ಗೋಟಾ, ಲೂಯಿಸ್ ಡೆ ೫೧೨
ಗೊಂಡಲ್ ೫೧೩
ಗೊಂದಲಿಗರು ೫೧೩
ಗೊಂಬೆಗಳು ೫೧೪
ಗೊಡೀಷಿಯ ೫೧೬
ಗೊಡ್ಡು ಈಚಲು ೫೧೭
ಗೊಡ್ಡುಗೇರು ಮರ ೫೧೭
ಗೊಡ್ಡೆ ೫೧೮
ಗೊಡ್ಲೆ ಮೀನು ೫೧೮
ಗೊದಮೊಟ್ಟೆ ೫೧೮
ಗೊದ್ದ ೫೧೯
ಗೊದ್ದನಮರ ೫೧೯
ಗೊಬ್ಬರ ೫೧೯
ಗೊಬ್ಬರದ ಅನಿಲಸ್ಥಾವರ ೫೨೧
ಗೊಬ್ಬಳಿ: **ನೋಡಿ – ಕರಿಜಾಲಿ** ೫೨೨
ಗೊಬ್ಬೆಕ್ಕಿ ತೆಪೆ ೫೨೨
ಗೊಮ್ಮಟೇಶ್ವರ ೫೨೩
ಗೊಮ್ಮೆ, ಜಾರ್ಜ್ ಲಾರೆನ್ಸ್ ೫೨೫
ಗೊಯ್ಡೆಲ್, ಕುರ್ಟ್ ೫೨೬
ಗೊರಟೆ ೫೨೮
ಗೊರವರು ೫೨೮
ಗೊರವಿ ೫೨೯
ಗೊರಸಿಗಳು ೫೨೯
ಗೊರಸು ೫೩೧
ಗೊರಿಲ ೫೩೨
ಗೊರೂರು ರಾಮಸ್ವಾಮಿ ಅಯ್ಯಂಗಾರ್ ೫೩೩
ಗೊಲ್ಲ ೫೩೪
ಗೋಂಡರು ೫೩೪
ಗೋಂಡಾ ೫೩೫
ಗೋಂಡಿ ೫೩೫
ಗೋಂಡೋಫರಸ್ ೫೩೬
ಗೋಂಡ್ವಾನ ೫೩೬
ಗೋಂಡ್ವಾನ ಖಂಡ ೫೩೭
ಗೋಂಡ್ವಾನ ವ್ಯವಸ್ಥೆ ೫೩೮
ಗೋಂದು ೫೩೯
ಗೋಕರ್ಣ ೫೪೦
ಗೋಕಾಕ ೫೪೧
ಗೋಕಾಕ, ವಿನಾಯಕ ಕೃಷ್ಣ ೫೪೧
ಗೋಕುಲ ೫೪೨
ಗೋಕುಲಾಷ್ಟಮಿ ೫೪೩
ಗೋಖಲೆ, ಗೋಪಾಲ ಕೃಷ್ಣ ೫೪೪
ಗೋಖಲೆಯವರ ಶೈಕ್ಷಣಿಕ ಮಸೂದೆ ೫೪೫
ಗೋಟ್ಯಾ, ತೌಫಿಲ್ ೫೪೬
ಗೋಡಂಬಿ ೫೪೬
ಗೋಡೆ ೫೪೮
ಗೋಡೈವ ೫೪೯
ಗೋಣಿತಟ್ಟು ೫೪೯
ಗೋಣಿಮರ ೫೪೯
ಗೋಣಿಸೊಪ್ಪು ೫೪೯
ಗೋಣುಕುರು ೫೫೦
ಗೋತಮಿ ಬಲಸಿರಿ ೫೫೦
ಗೋತ್ರ ಮತ್ತು ಪ್ರವರ ೫೫೦
ಗೋದಾನ ೫೫೧
ಗೋದಾವರಿ ೫೫೧
ಗೋದಾವರಿ, ಪೂರ್ವ ಮತ್ತು ಪಶ್ಚಿಮ ೫೫೫
ಗೋದಿ ೫೫೫
ಗೋಪಚಂದ್ರ ೫೬೧
ಗೋಪಾಲ್, ಬಿ.ಆರ್. ೫೬೧
ಗೋಪಾಲ ೫೬೨
ಗೋಪಾಲಕೃಷ್ಣ ಅಡಿಗ, ಎಂ. ೫೬೨
ಗೋಪಾಲಕೃಷ್ಣ ಭಾರತಿ ೫೬೪
ಗೋಪಾಲಕೃಷ್ಣರಾವ್, ಕೆ. ೫೬೪
ಗೋಪಾಲಕೃಷ್ಣರಾಯರು, ಎಂ. ೫೬೪
ಗೋಪಾಲಗೌಡ, ಶಾಂತವೇರಿ ೫೬೫
ಗೋಪಾಲದಾಸ ೫೬೫
ಗೋಪಾಲನಾಯಕ ೫೬೬

ಗೋಪಾಲರಾವ್ ಹಿರಿಯಡಕ ೫೬೬
ಗೋಪಾಲಸ್ವಾಮಿ ಬೆಟ್ಟ ೫೬೬
ಗೋಪಾಲಸ್ವಾಮಿ, ಎಂ. ವಿ. ೫೬೬
ಗೋಪಿಚಂದ, ರಾಜಾ ೫೬೭
ಗೋಪಿನಾಥ ರಾವ್, ಟಿ. ಎ. ೫೬೮
ಗೋಪುರ ೫೬೮
ಗೋಫರ್ ೫೭೦
ಗೋಬಿ ೫೭೦
ಗೋಬಿಂದ ಸಿಂಹ, ಗುರು ೫೭೧
ಗೋಬಿ ಮೀನು ೫೭೨
ಗೋಮತೀ ನದಿ ೫೭೨
ಗೋಮೇದಕ ೫೭೨
ಗೋಯಾ, ಇ ಲೂಸ್ಯಾನ್ ದಾ ೫೭೩
ಗೋಯೆಂಕಾ ರಾಮನಾಥ ೫೭೩
ಗೋರ್, ಕ್ಯಾಥರೀನ್ ಗ್ರೇಸ್, ಫ್ರಾನ್ಸಸ್ ೫೭೪
ಗೋರಂಟಿ ೫೭೪
ಗೋರಖ್‌ನಾಥ ೫೭೪
ಗೋರಖ್‌ಪುರ ೫೭೪
ಗೋರಾ ಕುಂಭಾರ ೫೭೫
ಗೋರಿಂಗ್, ಹರ್ಮನ್ ವಿಲ್ಹೆಲ್ಮ್ ೫೭೫
ಗೋರಿಕಾಯಿ ೫೭೬
ಗೋರ್ಗಸ್ ವಿಲಿಯಂ ಕ್ರಾಫರ್ಡ್ ೫೭೬
ಗೋರ್ಡನ್, ಆಡಮ್ ಲಿಂಡ್‌ಸೇ ೫೭೭
ಗೋರ್ಡನ್, ಚಾರಲ್ಸ್ ಜಾರ್ಜ್ ೫೭೭
ಗೋರ್ಡಿಯೇಸಿಯ ೫೭೭
ಗೋಲಿ ೫೭೭
ಗೋಲಿಹೇನು ೫೭೮
ಗೋಲ್ಕೊಂಡ ೫೭೮
ಗೋಲ್ಕೊಂಡ ವಜ್ರಗಳು ೫೭೯
ಗೋಲ್ಟ್‌ಷ್ಟೈನ್, ಯೂಜೆನ್ ೫೭೯
ಗೋಲ್ಡನ್ ಬೋ, ದಿ ೫೭೯
ಗೋಲ್ಡಿಂಗ್, ಲೂಯಿಸ್ ೫೮೦
ಗೋಲ್ಡಿಂಗ್ ವಿಲಿಯಮ್ ೫೮೦
ಗೋಲ್ಡ್‌ರಿಂಗ್, ಡಗ್ಲಸ್ ೫೮೧
ಗೋಲ್ಡ್‌ಸ್ಟಕರ್, ಥಿಯಡೋರ್ ೫೮೧
ಗೋಲ್ಡ್‌ಸ್ಮಿತ್, ಆಲಿವರ್ ೫೮೧
ಗೋಲ್ಡ್‌ಸ್ಟೀನ್ ಕೆನ್ನೆತ್ ೫೮೨
ಗೋಲ್ವಾರಾ ೫೮೨
ಗೋವ ೫೮೩
ಗೋವರ್ಧನ ೫೮೮
ಗೋವರ್, ಜಾನ್ ೫೮೮
ಗೋವಿಂದ (ಒರಿಸ್ಸದ) ೫೮೯
ಗೋವಿಂದ (ರಾಷ್ಟ್ರಕೂಟ) ೫೮೯
ಗೋವಿಂದ ಕವಿ ೫೯೦
ಗೋವಿಂದ ಚಂದ್ರ ೫೯೧
ಗೋವಿಂದ ದೀಕ್ಷಿತ ೫೯೧
ಗೋವಿಂದನಹಳ್ಳಿ ೫೯೧
ಗೋವಿಂದ ಪಂತ ೫೯೨
ಗೋವಿಂದ ಪಿಳ್ಳೈ, ಪಿ. ೫೯೨
ಗೋವಿಂದ ಪೈ ೫೯೩
ಗೋವಿಂದರಾಜ ೫೯೫
ಗೋವಿಂದ ವೈದ್ಯ ೫೯೫
ಗೋವಿಂದ ಸಖಾರಾಮ್ ಸರ್ ದೇಸಾಯಿ ೫೯೫
ಗೋವಿನ ಹಾಡು ೫೯೫
ಗೋ, ವಿನ್‌ಸೆಂಟ್ ವ್ಯಾನ್ (ವ್ಯಾನ್‌ಗೋ) ೫೯೬
ಗೋಷ್ಠಿಗಾನ ೫೯೭
ಗೋಷ್ವಾರೆ ಸಿದ್ಧಾಂತ ೫೯೮
ಗೋಸಲ ಚನ್ನಬಸವೇಶ್ವರ ೫೯೮
ಗೋಸಾನ್ ೫೯೯
ಗೋಸಾಯಿ ೫೯೯
ಗೋಳ ೫೯೯
ಗೋಳಕಲ್ಪ ೬೦೧
ಗೋಳಗುಮ್ಮಟ ೬೦೧
ಗೋಳತ್ರಿಕೋಣಮಿತಿ ೬೦೨
ಗೌಜಲು ಮರ ೬೦೬
ಗೌಜಲು ಹಕ್ಕಿ ೬೦೬
ಗೌಡ ದೇಶ ೬೦೬
ಗೌಡ ನಗರ ೬೦೬
ಗೌಡ, ಕೆ. ಸಿ. ಎನ್. ೬೦೭
ಗೌಡಪಾದ ೬೦೭
ಗೌತಮ ೬೦೮
ಗೌತಮ ಧರ್ಮಸೂತ್ರ ೬೦೮
ಗೌತಮ ಬುದ್ಧ: **ನೋಡಿ – ಬುದ್ಧ** ೬೦೯
ಗೌತಮೀಪುತ್ರ ಶಾತಕರ್ಣಿ ೬೦೯
ಗೌರಮ್ಮ, ಕೊಡಗಿನ ೬೦೯
ಗೌರವರಕ್ಷೆ ೬೧೦
ಗೌರಾಮಿ ೬೧೧
ಗೌರಿ ೬೧೧
ಗೌರಿಬಿದನೂರು ೬೧೨
ಗೌರೀಶ ಕಾಯ್ಕಿಣಿ ೬೧೨
ಗೌವರ್ ೬೧೩
ಗೌಸ್, ಯೋಹಾನ್ ಕಾರ್ಲ್ ಫ್ರೀಡರಿಚ್ ೬೧೩
ಗೌಹತಿ ೬೧೫
ಗ್ಡಿನ್ಯಾ ೬೧೬
ಗ್ಯಾಂಗ್ ೬೧೬
ಗ್ಯಾಂಗ್ಟ್‌ಸೆ ೬೧೬
ಗ್ಯಾಂಟನ ಕಾರ್ಯ ಮತ್ತು ಬೋನಸ್ ಪದ್ಧತಿ ೬೧೬
ಗ್ಯಾಂಬಿಯ ೬೧೭
ಗ್ಯಾಂಬಿಯ ನದಿ ೬೧೮
ಗ್ಯಾಂಬೆಟ, ಲಿಯಾನ್ ೬೧೯
ಗ್ಯಾಡೊಲಿನ್, ಯೋಹಾನ್ ೬೧೯
ಗ್ಯಾಡೊಲಿನಿಯಮ್ ೬೧೯
ಗ್ಯಾನಿ ಜೈಲ್‌ಸಿಂಗ್ ೬೨೦
ಗ್ಯಾಬಾನ್ ೬೨೦
ಗ್ಯಾಬ್ರೊ ೬೨೨
ಗ್ಯಾಮ ಉತ್ಪನ್ನ ೬೨೨
ಗ್ಯಾಮಕಿರಣ ಖಗೋಳವಿಜ್ಞಾನ ೬೨೪
ಗ್ಯಾಮಕಿರಣಗಳು ೬೨೬
ಗ್ಯಾಮಕ್ಷಯ ೬೨೮
ಗ್ಯಾಮ ವಿತರಣೆ ೬೨೯
ಗ್ಯಾಮೆಕ್ಲೇನ್ ೬೩೧
ಗ್ಯಾರಿಕ್, ಡೇವಿಡ್ ೬೩೧
ಗ್ಯಾರಿಸನ್, ವಿಲಿಯಮ್ ಲಾಯ್ಡ್ ೬೩೨
ಗ್ಯಾಲಪ್ ಎಣಿಕೆ ೬೩೩
ಗ್ಯಾಲಿಫಾರ್ಮಿಸ್ ೬೩೩
ಗ್ಯಾಲಿಯಮ್ ೬೩೩
ಗ್ಯಾಲ್ವ, ಎವರಿಸ್ಟ್ ೬೩೪
ಗ್ಯಾಲ್ವನೀಕರಣ ೬೩೬
ಗ್ಯಾಲ್ವಾನೀ, ಲ್ವಿಗಿ ೬೩೬
ಗ್ಯಾಸರ್, ಹರ್ಬರ್ಟ್ ಸ್ಪೆನ್ಸರ್ ೬೩೬
ಗ್ಯಾಸ್ಕೋಇನ್, ಜಾರ್ಜ್ ೬೩೭
ಗ್ಯಾಸ್ಟೀರಿಯ ೬೩೭
ಗ್ಯಾಸ್ಟ್ರಾಪೊಡ ೬೩೭
ಗ್ಯಾಸ್ಟ್ರೋಟ್ರೈಕ ೬೪೭
ಗ್ರಂಥ್ ಸಾಹೇಬ್ ೬೪೭
ಗ್ರಂಥ ಸಂಪಾದನೆ ೬೪೯
ಗ್ರಂಥಸ್ವಾಮ್ಯ: **ನೋಡಿ – ಕೃತಿಸ್ವಾಮ್ಯ** ೬೫೫
ಗ್ರಂಥಾಲಯ ೬೫೫
ಗ್ರಂಥಾಲಯ ವಿಜ್ಞಾನ ೭೫೮
ಗ್ರಂಥಿ ೭೬೨
ಗ್ರನಾಡ ೭೬೪
ಗ್ರನೈಕಸ್ ಕದನ ೭೬೫
ಗ್ರನ್‌ವಾಲ್ಡ್ ಕದನ ೭೬೫
ಗ್ರಸ್ ೭೬೫
ಗ್ರಹ ೭೬೫
ಗ್ರಹಕುಂಡಲಿ ೭೭೧
ಗ್ರಹಣಕಾರಕ ಯಮಳ ನಕ್ಷತ್ರಗಳು ೭೭೨
ಗ್ರಹಣ, ಖಗೋಳೀಯ ೭೭೩
ಗ್ರಹವರ್ಮನ್ ೭೭೯
ಗ್ರಹಾಂ ಕ್ಲಾರ್ಕ್ ೭೭೯
ಗ್ರಾಂಟ್, ಚಾರಲ್ಸ್ ೭೮೦
ಗ್ರಾಂಟ್, ಜೇಮ್ಸ್ ೭೮೦
ಗ್ರಾಟ್ಸ್ ೭೮೦
ಗ್ರಾನೈಟ್ ೭೮೦
ಗ್ರಾನೈಟ್ ನಗರ ೭೮೧
ಗ್ರಾನ್ಯುಲೋಮ ಇಂಗ್ವೈನಲಿ ೭೮೧
ಗ್ರಾಫ್, ಆರ್ಟುರೊ ೭೮೧
ಗ್ರಾಫ್, ರೇನ್ಯೇಡೆ ೭೮೧
ಗ್ರಾಫ್ ಸಿದ್ಧಾಂತ ೭೮೧
ಗ್ರಾಫೆ ೭೮೫
ಗ್ರಾಬ್, ಕ್ರಿಸ್‌ಟ್ಯಾನ್ ಡೀಟ್ರಿಕ್ ೭೮೫
ಗ್ರಾಮ್ ಅಣುತೂಕ ೭೮೫
ಗ್ರಾಮ್‌ಋಣ ಡಿಪ್ಲೊಕಾಕೈ ೭೮೫
ಗ್ರಾಮ್ ವರ್ಣ ೭೮೭
ಗ್ರಾಮ್ ಸಮಾನತೂಕ ೭೮೭
ಗ್ರಾಮ ೭೮೮
ಗ್ರಾಮಕೈಗಾರಿಕೆಗಳು ೭೮೯
ಗ್ರಾಮದಾನ ೭೯೦
ಗ್ರಾಮದೇವತೆ ೭೯೧
ಗ್ರಾಮ ನೈರ್ಮಲ್ಯ ಶಿಲ್ಪ ೭೯೩

ಗ್ರಾಮ ಪಂಚಾಯತಿ ೭೯೪
ಗ್ರಾಮ ಪುನರ್ರಚನೆ ೭೯೬
ಗ್ರಾಮವೃತ್ತಿಗಳು ೭೯೭
ಗ್ರಾಮ ಸಮಾಜ ೭೯೮
ಗ್ರಾಮಾಧಿಕಾರಿಗಳು ೮೦೦
ಗ್ರಾಮೀಣ ಉನ್ನತ ಶಿಕ್ಷಣ: **ನೋಡಿ – ಗ್ರಾಮೀಣ ಶಿಕ್ಷಣ** ೮೦೧
ಗ್ರಾಮೀಣ ಋಣಗ್ರಸ್ತತೆ ೮೦೧
ಗ್ರಾಮೀಣ ವಿಶ್ವವಿದ್ಯಾಲಯ: **ನೋಡಿ – ಗ್ರಾಮೀಣ ಶಿಕ್ಷಣ** ೮೦೨
ಗ್ರಾಮೀಣ ವಿಶ್ವವಿದ್ಯಾ ಸಂಸ್ಥೆ: **ನೋಡಿ – ಗ್ರಾಮೀಣ ಶಿಕ್ಷಣ** ೮೦೨
ಗ್ರಾಮೀಣ ಶಿಕ್ಷಣ ೮೦೨
ಗ್ರಾಮೀಣ ಸಂಪ್ರದಾಯ ೮೦೬
ಗ್ರಾಮೋಫೋನ್: **ನೋಡಿ–ಫೋನೊಗ್ರಾಫ್** ೮೦೭
ಗ್ರಾವೆಟ್ಟಿಯನ್ ೮೦೭
ಗ್ರಿನಿಜ್ ೮೦೮
ಗ್ರಿಫಿತ್, ಆರ್ಥರ್ ೮೦೮
ಗ್ರಿಫಿತ್, ಡೇವಿಡ್ ವಾರ್ಕ್ ೮೦೮
ಗ್ರಿಫಿತ್, ರಾಲ್ಫ್ ಥಾಮಸ್ ಹಾಚ್‌ಕಿನ್ ೮೦೯
ಗ್ರಿಫಿನ್, ಜೆರಾಲ್ಡ್ ೮೦೯
ಗ್ರಿಬಯೆಡಫ್ ಅಲೆಕ್ಸಾಂಡರ್ ಸೆರ್ಗೆಯ್‌ವಿಚ್ ೮೦೯
ಗ್ರಿಮ್, ಯಾಕಾಪ್ ಲೂಡ್‌ವಿಗ್ ಕಾರ್ಲ್ ಮತ್ತು ಗ್ರಿಮ್, ವಿಲ್‌ಹೆಲ್ಮ್ ಕಾಲ್ ೮೧೦
ಗ್ರಿಮಲ್‌ಷೌಸನ್, ಹ್ಯಾನ್ಸ್ ಯಾಕಾಪ್ ಕ್ರಿಸ್ಟೋಫಲ್ ಫಾನ್ ೮೧೧
ಗ್ರಿಮಾಲ್ಡಿ ಫಾಸಿಲುಗಳು ೮೧೧
ಗ್ರಿಯರ್‌ಸನ್, ಜಾರ್ಜ್ ಏಬ್ರಹಾಂ ೮೧೧
ಗ್ರಿಲ್‌ಪಾರ್ಟ್ಸರ್, ಫ್ರಾಂಜ಼್ ೮೧೨
ಗ್ರೀಕ್ ಕಲೆ, ವಾಸ್ತು, ಶಿಲ್ಪ ೮೧೩
ಗ್ರೀಕ್ ಕಾವ್ಯ ೮೧೭
ಗ್ರೀಕ್ ಛಂದಸ್ಸು ೮೧೮
ಗ್ರೀಕ್ ಧರ್ಮ ೮೧೯
ಗ್ರೀಕ್ ನಾಟಕಗಳು (ಪ್ರಾಚೀನ) ೮೨೫
ಗ್ರೀಕ್ ನ್ಯಾಯ ೮೨೯
ಗ್ರೀಕ್ ಭಾಷೆ ೮೩೨
ಗ್ರೀಕ್ ವಿಮರ್ಶೆ ೮೩೩
ಗ್ರೀಕ್ ಸಾಹಿತ್ಯ ೮೩೪
ಗ್ರೀಕೋ – ಲ್ಯಾಟಿನ್ ಚೌಕಗಳು ೮೪೧
ಗ್ರೀಗ್, ನಾರ್‌ಡಾಲ್ ಬ್ರನ್ ೮೪೨
ಗ್ರೀನ್, ಜಾನ್ ರಿಚರ್ಡ್ ೮೪೨
ಗ್ರೀನ್, ಜಾರ್ಜ್ ೮೪೨
ಗ್ರೀನ್, ಥಾಮಸ್ ಹಿಲ್ ೮೪೨
ಗ್ರೀನ್, ರಾಬರ್ಟ್ ೮೪೩
ಗ್ರೀನ್, ಹೆನ್ರಿ ಗ್ರಹಾಮ್ ೮೪೩
ಗ್ರೀನನ ಪ್ರಮೇಯ ೮೪೪
ಗ್ರೀನಿಜ್ ೮೪೫
ಗ್ರೀನಿಜ್ ಮಾಧ್ಯ ಕಾಲ ೮೪೬
ಗ್ರೀನೋವಿಯ ೮೪೬
ಗ್ರೀನ್‌ಯಾರ್ಡ್ ಕ್ರಿಯೆ ೮೪೬
ಗ್ರೀನ್ಲೆಂಡ್ ೮೪೭
ಗ್ರೀನ್‌ವುಡ್, ವಾಲ್ಟರ್ ೮೪೯
ಗ್ರೀಬ್ ೮೪೯
ಗ್ರೀಲಿ, ಹಾರೇಸ್ ೮೫೦
ಗ್ರೀಷ್ಮಋತು: **ನೋಡಿ – ಋತುಗಳು** ೮೫೧
ಗ್ರೀಷ್ಮನಿದ್ರೆ ೮೫೧
ಗ್ರೀಸ್ ೮೫೧
ಗ್ರೀಸಿನ ಚರಿತ್ರೆ ೮೫೩
ಗ್ರೀಸಿನ ಶಿಕ್ಷಣ ಪದ್ಧತಿ ೮೬೦
ಗ್ರುಂಟ್‌ವಿಗ್, ನಿಕೋಲೈ ಫ್ರೆಡರಿಕ್ ಸೆವರೀನ್ ೮೬೨
ಗ್ರುಂಟ್‌ವಿಗ್, ಸ್ವ್ಯಾನ್ ಹ್ಯಾರ್‌ಸ್ಲೆಬ್ ೮೬೩
ಗ್ರುನೆವಾಲ್ಟ್, ಮ್ಯಾಥಿಯಾಸ್ ೮೬೩
ಗ್ರುಫಿಯಸ್, ಆಂಡ್ರೆಯಾಸ್ ೮೬೪
ಗ್ರೂ, ನೆಹೆಮಿಯ ೮೬೪
ಗ್ರೂಪ್ ಸಿದ್ಧಾಂತ ೮೬೪
ಗ್ರೂಯಿಫಾರ್ಮಿಸ್ ೮೭೪
ಗ್ರೆಕೋ, ಎಲ್. ೮೭೪
ಗ್ರೆಗ್‌ನಾರ್ಡ್, ವಿಕ್ಟರ್ ೮೭೪
ಗ್ರೆಗರೈನ ೮೭೫
ಗ್ರೆಗೊರಿ ೮೭೫
ಗ್ರೆಗೊರಿ, ಇಸೆಬಲ ಆಗಸ್ಟ ೮೭೬
ಗ್ರೆಗೊರಿ, ಜೇಮ್ಸ್ ೮೭೬
ಗ್ರೆಗೊರಿಯನ್ ತಾರೀಕುಪಟ್ಟಿ ೮೭೬
ಗ್ರೆನ್‌ವಿಲ್, ಜಾರ್ಜ್ ೮೭೭
ಗ್ರೆಶಾಮನ ನಿಯಮ ೮೭೭
ಗ್ರೇ, ಚಾರ್ಲ್ಸ್ ೮೭೮
ಗ್ರೇ, ಜಾರ್ಜ್ ಎಡ್ವರ್ಡ್ ೮೭೮
ಗ್ರೇಟ್ ಬೇಸಿನ್ ೮೭೮
ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯ ೮೭೮
ಗ್ರೇಟ್ ಬ್ರಿಟನಿನ ಇತಿಹಾಸ ೮೮೫
ಗ್ರೇಟಿಯಸ್ ಫಾಲಿಸ್ಕಸ್ ೮೮೫
ಗ್ರೇ, ಥಾಮಸ್ ೮೮೬
ಗ್ರೇಪ್ ಹಣ್ಣು ೮೮೬
ಗ್ರೇಯಮ್ ಥಾಮಸ್ ೮೮೬
ಗ್ರೇಯಂ, ರಾಬರ್ಟ್ ೮೮೭
ಗ್ರೇವಿಲ್, ಚಾರ್ಲ್ಸ್ ಕ್ಯಾವೆಂಡಿಷ್ ಫಲ್ಕ್ ೮೮೭
ಗ್ರೇವೀ, ಫ್ರಾಂಕಾಯ್ ಪಾಲ್ ಜೂಲ್ಸ್ ೮೮೮
ಗ್ರೇವ್ಸ್, ರಾಬರ್ಟ್ ರ್‍ಯಾಂಕ ೮೮೮
ಗ್ರೇಷಿಯನ್ ೮೮೯
ಗ್ರೇಸ್, ವಿಲಿಯಂ ಗಿಲ್ಬರ್ಟ್ ೮೮೯
ಗ್ರೋಟ್ ಜಾರ್ಜ್ ೮೮೯
ಗ್ರೋಷಿಯಸ್, ಹ್ಯೂಗೊ ೮೯೦
ಗ್ರೋಸ್ಸಿ, ಟಾಮಾಜ್ಯೊ ೮೯೦
ಗ್ರೌಪರ್ ೮೯೦
ಗ್ರೌಬುಂಡೆನ್ ೮೯೧
ಗ್ರೌಸ್ ೮೯೧
ಗ್ರ್ಯಾಂಟ್ ಯುಲಿಸಿಸ್ ಸಿಂಪ್ಸನ್ ೮೯೨
ಗ್ರ್ಯಾಂಡ್ ಐಲೆಂಡ್ ೮೯೩
ಗ್ರ್ಯಾಂಡ್ ಕನೇರಿ ೮೯೩
ಗ್ರ್ಯಾಂಡ್ ಕ್ಯಾನ್ಯನ್ ೮೯೩
ಗ್ರ್ಯಾಂಡ್ ಡ್ಯೂಕ್ ೮೯೩
ಗ್ರ್ಯಾಂಡ್ ಬ್ಯಾಂಕ್ಸ್ ೮೯೪
ಗ್ರ್ಯಾಂಡ್ ರ್‍ಯಾಪಿಡ್ಸ್ ೮೯೪
ಗ್ರ್ಯಾಂಪಸ್ ೮೯೪
ಗ್ರ್ಯಾಕಲ್ ೮೯೪
ಗ್ರ್ಯಾಕಸ್ ೮೯೫
ಗ್ರ್ಯಾಟನ್, ಹೆನ್ರಿ ೮೯೫
ಗ್ರ್ಯಾನ್ಯುಲೈಟ್ ೮೯೫
ಗ್ರ್ಯಾನ್‌ವಿಲ್ – ಬಾರ್ಕರ್ ಹಾರ್ಲೆ ೮೯೬
ಗ್ರ್ಯಾನ್ಷಿಯ ೮೯೬
ಗ್ರ್ಯಾಪ್ಟೊಲೈಟುಗಳು ೮೯೬
ಗ್ರ್ಯಾಫೈಟ್ ೮೯೭
ಗ್ರ್ಯಾವಿಟಾನ್ ೮೯೮
ಗ್ರ್ಯಾವಿಮೆಟ್ರಿಕ್ ವಿಶ್ಲೇಷಣೆ: **ನೋಡಿ – ಭಾರಾತ್ಮಕ ವಿಶ್ಲೇಷಣೆ** ೮೯೮
ಗ್ಲಟನ್ ೮೯೮
ಗ್ಲಾಕ್ಸಿನಿಯ ೮೯೯
ಗ್ಲಾಬರ್ ಲವಣ ೮೯೯
ಗ್ಲಾಬ್ಯುಲಿನ್ ೮೯೯
ಗ್ಲಾಸಾಪ್ಟರಿಸ್ ೮೯೯
ಗ್ಲಾಸಿನ ನೊಣ ೮೯೯
ಗ್ಲಾಸಿ, ಹೆನ್ರಿ ೯೦೦
ಗ್ಲಾಸೆಮ್ಯಾಟಿಕ್ಸ್ ೯೦೦
ಗ್ಲಾಸ್ಟರ್ ೯೦೧
ಗ್ಲಿನ್, ಎಡ್ಮಂಡ್ ಡೇನಿಯಲ್ ೯೦೧
ಗ್ಲಿಪ್ಟೊಡಾನ್ ೯೦೧
ಗ್ಲಿಮ್, ಜೊಹಾನ್ ವಿಲ್‌ಹೆಲ್ಮ್ ಲೂಡ್‌ವಿಗ್ ೯೦೨
ಗ್ಲಿರಿಸಿಡಿಯ ೯೦೨
ಗ್ಲಿಸರಿನ್ ೯೦೨
ಗ್ಲೂಕ್, ಕ್ರಿಸ್ಟೊಫ್ ವಿಲಿಬಾಲ್ಡ್ ೯೦೩
ಗ್ಲೂಕೊಸೈಡುಗಳು ೯೦೪
ಗ್ಲೂಕೋಸ್ ೯೦೫
ಗ್ಲೂಟತಯೋನ್ ೯೦೬
ಗ್ಲೂಟಾಮಿಕ್ ಆಮ್ಲ ೯೦೬
ಗ್ಲೈಕಾಲುಗಳು ೯೦೬
ಗ್ಲೈಡರ್ ೯೦೬
ಗ್ಲೈಡಿನ್ಲಿ ೯೦೮
ಗ್ಲೋರಿಯೋಸ ೯೦೮
ಗ್ಲ್ಯಾಡಿಯೋಲಸ್ ೯೦೯
ಗ್ಲ್ಯಾಡ್‌ಸ್ಟನ್, ವಿಲಿಯಂ ಇವಾರ್ಟ್ ೯೦೯
ಗ್ಲ್ಯಾಸ್ಗೋ, ಎಲೆನ್ ಆಂಡ್ಯರ್ಸನ್ ಘೋಲ್ಸನ್ ೯೧೦
ಗ್ಲ್ಯಾಸ್ಗೋ ೯೧೦
ಗ್ವಾಂ ೯೧೧
ಗ್ವಾಟಿಮಾಲ ೯೧೧
ಗ್ವಾಟಿಮಾಲ ನಗರ ೯೧೩
ಗ್ವಾಡರ್ ೯೧೩
ಗ್ವಾಡ್ಲೂಪ್ ೯೧೩

**ಗ್ವಾನಾಕೋ:** ಆರ್ಟಿಯೊಡ್ಯಾಕ್ಟಿಲ ಗಣದ ಕಮೆಲಿಡೀ ಕುಟುಂಬಕ್ಕೆ ಸೇರಿದ ಒಂದು ಸ್ತನಿ. ಅಲ್ಪಾಕ, ಲಾಮಗಳ ಹತ್ತಿರ ಸಂಬಂಧಿ. ಲಾಮಗ್ವಾನಕೀ ಇದರ ವೈಜ್ಞಾನಿಕ ನಾಮ. ದಕ್ಷಿಣ ಅಮೆರಿಕದ ಪಶ್ಚಿಮ ಮತ್ತು ದಕ್ಷಿಣ ಭಾಗಗಳ ಬೆಟ್ಟಗಳಲ್ಲಿ ಕಾಣಬರುತ್ತದೆ. ಪೆರುವಿನಿಂದ ಹಿಡಿದು ಕೇಪ್ ಹಾರ್ನ್‌ವರೆಗೆ ಇದರ ವ್ಯಾಪ್ತಿ ಇದೆ. ಸುಮಾರು 1.2 ಮೀ ಎತ್ತರದ ಪ್ರಾಣಿಯದು. ದೇಹದ ಉದ್ದ 1.2–1.5 ಮೀ. ತೂಕ 48–96 ಕೆ.ಜಿ. ದೇಹದ

ಮೇಲೆಲ್ಲಾ ತುಪ್ಪಳದಂಥ ಹೊದಿಕೆಯಿದೆ. ಇದರ ಬಣ್ಣ ತಿಳಿ ಕಂದಿನಿಂದ ಕಡುಕಂದುವರೆಗೆ ಉದರ ಭಾಗ ಬಿಳಿ. ಮುಖ ಮಾತ್ರ ಸ್ವಲ್ಪ ಕಪ್ಪು ಬಣ್ಣದ್ದು. ಕತ್ತು ಒಂಟೆ ಲಾಮಗಳಿಗಿರುವಂತೆ. ಕಾಲುಗಳು ತೆಳುವಾಗಿಯೂ ಉದ್ದವಾಗಿಯೂ ಇವೆ. ಕಿವಿಗಳು ನೇರ ಹಾಗೂ ಸಣ್ಣ ಕಣ್ಣುಗಳು ಅಗಲವಾಗಿದ್ದು ಕಂದು ಬಣ್ಣದಿಂದ ಕೂಡಿದ್ದು ಆಕರ್ಷವಾಗಿವೆ. ಎಳೆಯ ಗ್ವಾನಾಕೋಗಳನ್ನು ಚುರೆಂಗೊ ಎಂದು ಕರೆಯಲಾಗುತ್ತದೆ. ಹುಲ್ಲು ಇದರ ಪ್ರಧಾನ ಆಹಾರ.

ಗ್ವಾನಾಕೋ ಸಂಘಜೀವಿ. 10–30ರ ಗುಂಪುಗಳಲ್ಲಿ ವಾಸಿಸುತ್ತವೆ. ಗುಂಪಿನಲ್ಲಿ ಒಂದೇ ಒಂದು ಗಂಡು ಇರುತ್ತದೆ. ಇವು ವೇಗದಲ್ಲಿ ಗಂಟೆಗೆ 50 ಕಿ.ಮೀ ಓಡಬಲ್ಲವು ಚೆನ್ನಾಗಿ ಈಜಲೂ ಬಲ್ಲವು. ಇವು ಬಹಳ ಸೂಕ್ಷ್ಮಗ್ರಾಹಿಗಳಾದುದರಿಂದ ಇವನ್ನು ಸಮೀಪಿಸುವುದು ಕಷ್ಟ. ಇವು ಎರಡು ವರ್ಷಕ್ಕೊಮ್ಮೆ ಮರಿ ಹಾಕುತ್ತವೆ. ಗರ್ಭಾವಸ್ಥೆಯ ಅವಧಿ 10–11 ತಿಂಗಳುಗಳು. ಒಂದು ಬಾರಿಗೆ ಒಂದೇ ಒಂದು ಮರಿ ಹಾಕುತ್ತದೆ. ಗ್ವಾನಾಕೋಗಳ ಆಯಸ್ಸು ಸುಮಾರು 20 ವರ್ಷಗಳು. ಗ್ವಾನಾಕೋಗಳನ್ನು ಮಾಂಸಕ್ಕಾಗಿ, ಚರ್ಮಕ್ಕಾಗಿ ಬೇಟೆಯಾಡುತ್ತಾರೆ. ಇವನ್ನು ಸಾಕಲೂಬಹುದು. ಪಟಗೋನಿಯದ ಇಂಡಿಯನರು ಇವುಗಳ ಸಗಣಿಯನ್ನು ಬೆರಣಿಮಾಡಿ ಉರುವಲಾಗಿ ಬಳಸುತ್ತಾರೆ.

(ಜಿ.ಎಸ್.ಆರ್.)

**ಗ್ವಾನಿಡೀನ್ :** ಗ್ವಾನೀನಿನಿಂದ ಉತ್ಪಾದಿಸಿದ ಒಂದು ಜೈವಿಕ ವಸ್ತು. ಇದರ ರಾಸಾಯನಿಕ ರಚನೆ HN:C(NH2)2. ಆರ್ಜಿನೀನ್ ಎಂಬ ಅಮೈನೋ ಆಮ್ಲವನ್ನು ಪೊಟಾಸಿಯಮ್ ಪರ್ಮ್ಯಾಂಗನೇಟಿನಿಂದ ಉತ್ಕರ್ಷಿಸಿದಾಗ ಕೂಡ ಗ್ವಾನಿಡೀನ್ ದೊರಕುತ್ತದೆ. ಸಾಮಾನ್ಯವಾಗಿ ಅಮೋನಿಯಮ್ ಥಯೊಸಯನೇಟನ್ನು 180–190oC. ಉಷ್ಣತೆಗೆ ಒಳಪಡಿಸಿ ಗ್ವಾನಿಡೀನನ್ನು ಪ್ರಯೋಗಾಲಯದಲ್ಲಿ ಪಡೆಯಬಹುದು. ಇದೊಂದು ವರ್ಣರಹಿತ ಹರಳು. ವಾತಾವರಣದಿಂದ ದ್ರವಾಂಶವನ್ನು ಹೀರಿ ದ್ರವಿಸುತ್ತದೆ. ಪ್ರತ್ಯಾಮ್ಲೀಯ ಸ್ವಭಾವದ್ದಾದ್ದರಿಂದ ವಾತಾವರಣದಿಂದ ಕಾರ್ಬನ್ ಡೈ ಆಕ್ಸೈಡನ್ನು ಕೂಡ ಹೀರಿಕೊಳ್ಳಬಲ್ಲದು. ಬೋರಿಕ್ ಮತ್ತು ಸಿಲಿಸಿಕ್ ಆಮ್ಲಗಳೊಡನೆ ಸೇರಿ ಸ್ಥಿರಲವಣಗಳನ್ನು ಕೊಡುತ್ತದೆ. ನೈಸರ್ಗಿಕವಾಗಿ ಹಲವಾರು ಸಸ್ಯಗಳಲ್ಲೂ ಪ್ರಾಣಿಗಳಲ್ಲೂ ಗ್ವಾನಿಡೀನ್ ಅಲ್ಪ ಗಾತ್ರದಲ್ಲಿರುವುದು ಕಂಡುಬಂದಿದೆ. ಗ್ವಾನಿಡೀನಿನಿಂದ ಉತ್ಪನ್ನವಾಗಬಲ್ಲ ವಸ್ತುಗಳಲ್ಲಿ ನೈಟ್ರೊಗ್ವಾನಿಡೀನ್ ಪ್ರಮುಖವಾದದ್ದು. ಅಮೈನೋ ಗ್ವಾನಿಡೀನ್ ಅನೇಕ ರೀತಿಯ ಬಣ್ಣಗಳ ಉತ್ಪಾದನೆಯಲ್ಲಿ ಉಪಯೋಗವಾಗುತ್ತದೆ. ಡೆಕಮಿಥಿಲಿನ್ ಗ್ವಾನಿಡೀನ್ ಟ್ರಿಪಾನೋಸೋಮದಿಂದ ಬರುವ ನಿದ್ರಾರೋಗಕ್ಕೆ ಮದ್ದು. ಕ್ಲೋರೊಗ್ವಾನಿಡೀನ್ ಹೈಡ್ರೊಕ್ಲೋರೈಡನ್ನು ಮಲೇರಿಯ ರೋಗಚಿಕಿತ್ಸೆಗೆ ಬಳಸಲಾಗುತ್ತದೆ. ಸಲ್ಫಗ್ವಾನಿಡೀನ್ ನೀರಿನಲ್ಲಿ ವಿಲೀನವಾಗದ ಒಂದು ಮದ್ದು. ಇದನ್ನು ಸೇವಿಸಿದಾಗ ಕರುಳಿನಿಂದ ರಕ್ತಗತವಾಗದೆ ಬಹುಕಾಲಿಕವಾಗಿ ಅಲ್ಲೇ ಇರುತ್ತದೆ. ಆದ್ದರಿಂದ ರೋಗಾಣುಕೃತ ಆಮಶಂಕೆಗೆ (ಬ್ಯಾಸಿಲರಿ ಡಿಸೆಂಟರಿ) ಇದು ತಕ್ಕ

ಮದ್ದು. ಗ್ವಾನಿಡೀನಿನ ಸಂಬಂಧವಾದ ಎರಡು ಅಮೈನೋ ಆಮ್ಲಗಳು ದೇಹಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮೊದಲನೆಯದು ಮೇಲೆ ಹೇಳಿದ ಆರ್ಜಿನೀನ್ (1–ಅಮೈನೋ–4ಗ್ವಾನಿಡೋ ವೆಲೇರಿಕ್ ಆಮ್ಲ). ಇದು ಪ್ರೋಟೀನುಗಳಲ್ಲಿ ಸಾಮಾನ್ಯವಾಗಿ ಇರುವ ಒಂದು ಘಟಕವಸ್ತು. ಸಸ್ತನಿಗಳ ದೇಹದಲ್ಲಿ ಪ್ರೋಟೀನುಗಳ ಚಯಾಪಚಯ ಕ್ರಿಯೆಯಿಂದ ನಿರಂತರವೂ ಉತ್ಪತ್ತಿಯಾಗುತ್ತಿರುವ ಅಮೋನಿಯ ದೇಹದಲ್ಲಿ ಇರುವ ಆರ್ನಿಥಿನ್ ಎಂಬ ಅಮೈನೋ ಆಮ್ಲದೊಡನೆ ಸೇರಿ ಕೊನೆಗೆ ಆರ್ಜಿನೀನ್ ಲಭಿಸುತ್ತದೆ. ಆಹಾರದ ಅಥವಾ ಹೊಸದಾಗಿ ಹೀಗೆ ಉತ್ಪಾದಿತವಾದ ಆರ್ಜಿನೀನ್ ವಿಶ್ಲೇಷಗೊಂಡು ಯೂರಿಯ ಮತ್ತು ಆರ್ನಿಥಿನ್ ಆಗುತ್ತವೆ. ಯೂರಿಯಾ ರಕ್ತಗತವಾಗಿ ಮುಂದೆ ಮೂತ್ರಪಿಂಡದಿಂದ ಮೂತ್ರರೂಪದಲ್ಲಿ ವಿಸರ್ಜಿತವಾಗುತ್ತದೆ. ಆರ್ನಿಥಿನ್ ಪುನಃ ಅಮೋನಿಯದೊಡನೆ ಸಂಯುಕ್ತವಾಗಿ ಆರ್ಜಿನೀನ್ ಆಗುತ್ತದೆ. ಹೀಗೆ ಚಕ್ರಾಕಾರವಾಗಿ ಪುನಃ ಪುನಃ ಅಮೋನಿಯದಿಂದ ಯೂರಿಯ ಉತ್ಪತ್ತಿಯಾಗಲು ಆರ್ಜಿನೀನ್ ಒಂದು ಘಟಕವಾಗಿರುವುದು ಅವಶ್ಯವಾಗಿದೆ. ಸಸ್ತನಿಗಳಲ್ಲಿ ಪ್ರೋಟೀನುಗಳ ಸಾರಜನಕ ವಿಸರ್ಜಿತವಾಗುವುದು ಹೀಗೆಯೇ– ಅಂದರೆ ಆರ್ಜಿನೀನ್ ಮೂಲಕ ಯೂರಿಯ ಆಗಿ. ಈ ರೀತಿಯ ತಯಾರಿಕೆಗೆ ಕ್ರೆಬ್ಸನ ಯೂರಿಯ ಚಕ್ರವೆಂದು ಹೆಸರು. **(ನೋಡಿ – ಕ್ರೆಬ್ಸ್ ಯೂರಿಯ ಚಕ್ರ).**

ದೇಹಕಾರ್ಯದಲ್ಲಿ ಪ್ರಮುಖಪಾತ್ರವಹಿಸುವ ಎರಡನೆಯ ವಸ್ತು ಕ್ರಿಯಾಟಿನ್ (ಮೀಥೈಲ್ ಗ್ವಾನಿಡೋ ಅಸೆಟಿಕ್ ಆಮ್ಲ). ಇದು ಫಾಸ್ಫರಿಕ್ ಆಮ್ಲದೊಡನೆ ಸಂಯುಕ್ತವಾಗಿ ಕ್ರಿಯಾಟಿನ್ ಫಾಸ್ಫೇಟ್ ಅಥವಾ ಫಾಸ್ಫಜೆನ್ ಎಂಬ ವಸ್ತುವಾಗಿ ಕಶೇರುಕಗಳ ದೇಹದ ಐಚ್ಛಿಕ ಸ್ನಾಯುಗಳಲ್ಲಿ (ವಾಲಂಟರಿ ಮಸಲ್ಸ್) ಅಲ್ಪ ಮೊತ್ತದಲ್ಲಿ ಶೇಖರವಾಗಿರುತ್ತದೆ. ಈ ಮಾಂಸಖಂಡಗಳು ದೀರ್ಘಕಾಲ ಕೆಲಸಮಾಡಲು ಫಾಸ್ಫಜೆನ್ ಆವಶ್ಯಕ. ಸ್ನಾಯುಗಳ ಸಂಕೋಚಕ್ಕೆ ತತ್‌ಕ್ಷಣವೇ ಬೇಕಾಗುವ ಶಕ್ತಿ ಅಡಿನೊಸಿನ್ ಟ್ರೈಫಾಸ್ಫೇಟ್ (ಎಟಿಪಿ) ಎಂಬ ವಸ್ತುವಿನ ಜಲವಿಶ್ಲೇಷಣೆಯಿಂದ ದೊರೆಯುತ್ತದೆ. ಮರುಕ್ಷಣದಲ್ಲೇ ಎಟಿಪಿ ಪುನಃ ಸಂಯೋಜಿತವಾಗಬೇಕು. ಹಾಗಾದರೆ ಮಾತ್ರ ಮಾಂಸಖಂಡದ ಸಂಕೋಚ ಮುಂದುವರಿಯಬಹುದಾಗಿದೆ. ಎಟಿಪಿಯ ಈ ಮರುಕ್ಷಣದ ಪುನಃ ಸಂಯೋಜನೆಗೆ ಕ್ರಿಯಾಟಿನ್ ಫಾಸ್ಫೇಟ್ ಅಗತ್ಯ ಇದಾದ ಬಳಿಕ ಕ್ರಿಯಾಟಿನ್ ಉಳಿದುಕೊಳ್ಳುತ್ತದೆ. ಇದೇ ಕಾಲದಲ್ಲಿ ನಿಧಾನವಾಗಿ ಜರಗುವ ಗ್ಲೂಕೋಸಿನ ಉತ್ಕರ್ಷಣೆಯಿಂದ ಅಗಾಧ ಮೊತ್ತದಲ್ಲಿ ಎಟಿಪಿ ಉತ್ಪತ್ತಿಯಾಗುತ್ತದೆ. ಇದರಿಂದ ಒದಗುವ ಶಕ್ತಿ ಕ್ರಿಯಾಟಿನನ್ನು ಪುನಃ ಕ್ರಿಯಾಟಿನ್ ಫಾಸ್ಫೇಟಾಗಿ ಪರಿವರ್ತಿಸುತ್ತದೆ. ಹೀಗೆ ಈ ವಸ್ತು ಪದೇ ಪದೇ ಪರಿವರ್ತನೆಯನ್ನು ತೋರಿಸುತ್ತ ಸ್ನಾಯುಗಳ ಕ್ರಿಯೆಗೆ ಅವಶ್ಯವಾಗಿದೆ. ಅಕಶೇರುಕಗಳಲ್ಲಿ ಕ್ರಿಯಾಟಿನ್ ಫಾಸ್ಫೇಟಿನ ಬದಲು ಆರ್ಜಿನೀನ್ ಫಾಸ್ಫೇಟ್ ಅಥವಾ ಫಾಸ್ಫೋಗ್ಲೂಕೋ ಸಯಾಮಿನ್ ರೀತಿಯ ಇನ್ನು ಬೇರೆ ಬೇರೆ ವಸ್ತುಗಳು ಪಾತ್ರವಹಿಸುವುವೆಂದು ತಿಳಿದಿದೆ. ಇಂಥ ವಸ್ತುಗಳಿಗೆಲ್ಲ ಫಾಸ್ಫಜೆನ್‌ಗಳೆಂದು ಸಾಮಾನ್ಯ ಹೆಸರನ್ನು ಕೊಟ್ಟಿದೆ. ಇವು ಗ್ವಾನಿಡೀನಿನ ಸಂಬಂಧಿಗಳೇ ಆಗಿವೆ.

ಎಟಿಪಿ ⟶ ಶಕ್ತಿ + ಎಡಿಪಿ

ಫಾಸ್ಫಜೆನ್ + ಎಡಿಪಿ ⟶ ಎಟಿಪಿ+ ಕ್ರಿಯಾಟಿನ್

ಗ್ಲೂಕೋಸ್ ⟶ ಎಟಿಪಿ

ಎಡಿಪಿ ⟶ ಎಟಿಪಿ

ಎಟಿಪಿ + ಕ್ರಿಯಾಟಿನ್ ⟶ ಫಾಸ್ಫಜೆನ್ + ಎಡಿಪಿ

ಕ್ರಿಯಾಟಿನ್ – ಕ್ರಿಯಾಟಿನ್ಫ್ ಫಾಸ್ಫೇಟ್ ಪರಿವರ್ತನೆ

ಕ್ರಿಯಾಟಿನ್ನಿಂದ ಕ್ರಿಯಾಟಿನಿನ್ ಎಂಬ ವಸ್ತು ದೇಹದಲ್ಲಿ ಉತ್ಪತ್ತಿಯಾಗುತ್ತಿದ್ದು ಮೂತ್ರದಲ್ಲಿ ವಿಸರ್ಜಿತವಾಗುತ್ತದೆ. ಇದೂ ಗ್ವಾನಿಡೀನಿನ ಸಂಬಂಧಿಯೆಂಬುದು ವ್ಯಕ್ತ. ದೇಹದಲ್ಲಿ ಉತ್ಪತ್ತಿಯಾಗಿ ವಿಸರ್ಜಿತವಾಗುವ ಸಾರಜನಕ ಸಂಯುಕ್ತವಸ್ತು ಪ್ರಮುಖವಾಗಿ ಇದೊಂದೇ ಆದ್ದರಿಂದ ದೇಹಾಂತರ ಸಾರಜನಕ ಚಯಾಪಚಯದ (ಎಂಡಾಜಿನಸ್ ನೈಟ್ರೊಜನ್ ಮೆಟಬಾಲಿಸಿಮ್) ವೇಗನಿಷ್ಕರ್ಷೆಗೆ ಮೂತ್ರದಲ್ಲಿ ಕ್ರಿಯಾಟಿನಿನ ಮಟ್ಟವನ್ನು ನಿರ್ಧರಿಸಲಾಗುತ್ತದೆ. ಮೂತ್ರದಲ್ಲಿ ಸಾಮಾನ್ಯವಾಗಿ ವಯಸ್ಕರಲ್ಲಿ ಕ್ರಿಯಾಟಿನ್ ವಿಸರ್ಜಿತವಾಗುವುದಿಲ್ಲ. ಆದರೆ ಬಹು ಶೀಘ್ರವಾಗಿ ಬೆಳೆಯುತ್ತಿರುವ ಮಕ್ಕಳಲ್ಲಿ, ಬಾಣಂತಿಯರಲ್ಲಿ ಕ್ರಿಯಾಟಿನ್ ಮೂತ್ರದಲ್ಲಿ ಕಂಡುಬರುತ್ತದೆ. ಮಿಕ್ಕ ವೇಳೆ ಕಂಡುಬಂದರೆ ಅದು ದೇಹದಲ್ಲಿ ಸ್ನಾಯುಶಿಥಿಲತೆ ಇದೆ ಎಂದು ಸೂಚಿಸುತ್ತದೆ. (ಪಿ.ಎಸ್.ಎಸ್.)

**ಗ್ವಾನೋ:** ಪಕ್ಷಿ, ಬಾವಲಿ, ಮತ್ತು ಸೀಲ್ ಮೀನುಗಳ ಮಲಮೂತ್ರದಿಂದಾದ ಗೊಬ್ಬರ. ಮೀನುಗಳನ್ನು ಭಕ್ಷಿಸುವ ಪೆಲಿಕನ್, ಕಾರ್ಮೊರಾಂಟ್ ಮತ್ತು ಗ್ಯಾನೆಟ್ (ಕಡಲಕೋಳಿ)ಗಳಿಂದ ಇದು ದೊರೆಯುವುದು. ಪೆರುವಿನ ಪಶ್ಚಿಮ ಕಡಲು ಪ್ರದೇಶ, ಕ್ಯಾಲಿಫೋರ್ನಿಯ ಮತ್ತು ಆಫ್ರಿಕದಲ್ಲಿ ಒಂದು ಚದರ ಮೈಲಿಗೆ 5,600,000ರ ಸಂಖ್ಯೆಯಲ್ಲಿ ಇವು ವಾಸಿಸುತ್ತವೆ. ಗ್ವಾನೋ ಗೊಬ್ಬರದಲ್ಲಿ ಶೇ.11–ಶೇ.16 ಸಾರಜನಕ, ಶೇ.8–ಶೇ.12 ರಂಜಕಾಮ್ಲ ಮತ್ತು ಶೇ.2–ಶೇ.3 ರಷ್ಟು ಪೊಟ್ಯಾಷ್ ಇದೆ. ಮಿಸ್ಸೋರಿ ಮತ್ತು ಗ್ರ್ಯಾಂಡ್ ಕ್ಯಾನ್ಯನ್ ಗುಹೆಗಳಲ್ಲಿ ಬಾವಲಿಗಳ ಗ್ವಾನೋ ಅಧಿಕ ಮೊತ್ತದಲ್ಲಿ ದೊರೆಯುತ್ತದೆ. ಸೀಲ್ ಪ್ರಾಣಿಯ ಗ್ವಾನೋ ದಕ್ಷಿಣ ಅಮೆರಿಕ ಲೋಬಾಸ್ ದ್ವೀಪಗಳಲ್ಲಿ ಶೇಖರವಾಗಿದೆ. ಪೆರು 1810 ರಿಂದ ಹೊರದೇಶಕ್ಕೆ ಗ್ವಾನೋ ಗೊಬ್ಬರವನ್ನು ರಫ್ತು ಮಾಡುತ್ತಿದೆ. ಅಧಿಕ ಉತ್ಪತ್ತಿಗಾಗಿ ಸರ್ಕಾರ ಕಡಲಕೋಳಿಗಳ ಬೇಟೆಯನ್ನು ನಿಷೇಧಿಸಿದೆ. (ಜಿ.ಎಸ್.ಆರ್.)

**ಗ್ವಾಯಾಕೀಲ್ :** (Guayaquil) ಗ್ವಾಯಾಕೀಲ್ ಎಕ್ವಡಾರ್ ದೇಶದ ಮುಖ್ಯ ಬಂದರು, ಅತ್ಯಂತ ದೊಡ್ಡ ಪಟ್ಟಣ. ದಕ್ಷಿಣ ಅಕ್ಷಾಂಶ 2°ಯಿಂದ ಸ್ವಲ್ಪ ದಕ್ಷಿಣಕ್ಕೆ ಗ್ವಾಯಾಸ್ ನದಿಯ ಎಡದಂಡೆಯ ಮೇಲೆ, ಗ್ವಾಯಾಕೀಲ್ ಖಾರಿಯಿಂದ 72 ಕಿಮೀ ದೂರದಲ್ಲಿದೆ. 1600 ರಲ್ಲಿ 2000 ಇದ್ದ ಜನಸಂಖ್ಯೆ 2009ರಲ್ಲಿ 2,634,000 ಆಗಿತ್ತು. ಪಟ್ಟಣದ ಪ್ರಮುಖ ಭಾಗ ಸೆರೋಸಂತಾ ಆನಾ ಹಾಗೂ ಸೆರೋ ಸಂತಾ ಸೆರ್‌ಮನ್ ದಿನ್ನೆಗಳ ಮೇಲಿದೆ. ಈ ಭಾಗ ಸಮುದ್ರ ಪಾತಳಿಯಿಂದ 10 ಮೀ ಆಗಿತ್ತು. ಎತ್ತರದಲ್ಲಿರುವುದರಿಂದ ನದಿಯ ಪ್ರವಾಹದಿಂದ ಸುರಕ್ಷಿತವಾಗಿದೆ. ಆದರೆ ನಗರದ ತಳಭಾಗಕ್ಕೆ ಒಮ್ಮೊಮ್ಮೆ ಪ್ರವಾಹದ ನೀರು ನುಗ್ಗುವುದುಂಟು.

ಗ್ವಾಯಾಕೀಲ್ ಪಟ್ಟಣದ್ದು ಸಮಭಾಜಕವೃತ್ತ ಪ್ರದೇಶದ ವಾಯುಗುಣ; ಆದರೆ ಉಷ್ಣತೆ ತೀವ್ರವಾಗುವುದಿಲ್ಲ. ಏಪ್ರಿಲ್ ತಿಂಗಳು ಬೇಸಗೆಯ ನಡುಗಾಲ. ಆಗಿನ ಉಷ್ಣತೆ 27ಲಿ ಸೆಂ. ಅತ್ಯಂತ ಚಳಿಯ ತಿಂಗಳು ಜುಲೈ. ಆಗ ಉಷ್ಣತೆ 24° ಸೆಂ. ಜನವರಿಯಿಂದ ಮೇ ವರೆಗೆ ಹೆಚ್ಚು ಮಳೆ ಸುರಿಯುತ್ತದೆ. ವಾರ್ಷಿಕ ಸರಾಸರಿ ಮಳೆ 38.8".

ಈಗಿನ ಗ್ವಾಯಾಕೀಲ್ ನಗರದ ಸಮೀಪದಲ್ಲಿ 1535ರಲ್ಲಿ ಸೆಬಾಸ್ಟಿಯನ್ ಡಿ ಬೆಲಾಲ್ಕಜ಼ಾರ್ ಎಂಬಾತ ವಸತಿ ಸ್ಥಾಪಿಸಿದ. ಬಾಬಾಹೋಯೋ ನದೀಮುಖದಲ್ಲಿದ್ದ ಈ ವಸತಿ ಪದೇ ಪದೇ ಪ್ರವಾಹಕ್ಕೂ ರೋಗಗಳಿಗೂ ತುತ್ತಾಗುತ್ತಿತ್ತು. 1538ರಲ್ಲಿ ಫ್ರಾನ್ಸಿಸ್ಕೋ ಡಿ ಓರೆಲಾನಾ ಎಂಬುವನು ಈಗಿನ ಸ್ಥಳದಲ್ಲಿ ವಸತಿ ಸ್ಥಾಪಿಸಿದ ಸಾಂಟಿಯಾಗೋ ಡಿ ಗ್ವಾಯಾಕೀಲ್ ಎಂದು ಇದಕ್ಕೆ ನಾಮಕರಣವಾಯಿತು. ಈ ನಗರ ಸಮುದ್ರಗಳ್ಳರಿಂದಲೂ ಅಗ್ನಿ ಅನಾಹುತಗಳಿಂದಲೂ ಭೂಕಂಪಗಳಿಂದಲೂ ಸಾಂಕ್ರಾಮಿಕ ರೋಗಗಳಿಂದಲೂ ತೊಂದರೆ ಅನುಭವಿಸಿದೆ. ಇದು ಪ್ಲೇಗಿನ ನೆಲೆಯೆನಿಸಿತ್ತು, 20ನೆಯ ಶತಮಾನದಲ್ಲಿ ಅನುಸರಿಸಲಾದ ನೈರ್ಮಲ್ಯ, ಆರೋಗ್ಯ ಹಾಗೂ ಎಂಜಿನಿಯರಿಂಗ್ ಕ್ರಮಗಳಿಂದಾಗಿ ನಗರದ ಆರೋಗ್ಯ ಸ್ಥಿತಿ ಸುಧಾರಿಸಿದೆ.

ಗ್ವಾಯಾಸ್ ಪ್ರದೇಶದ ಸರಕುಗಳು ಗ್ವಾಯಾಕೀಲ್‌ಗೆ ನದೀ ದೋಣಿಗಳ ಮುಖೇನ ಬರುತ್ತವೆ. ಅಮೆರಿಕಾಂತರ ಹೆದ್ದಾರಿಯೊಂದು ಗ್ವಾಯಾಸ್ ನದಿಯ ಎಡದಂಡೆಯ ಮೇಲೆ ಸಾಗಿ ಗ್ವಾಯಾಕೀಲ್‌ಗೆ ಬರುತ್ತದೆ. ಗ್ವಾಯಾಕೀಲಿನಿಂದ ಕ್ವೆಪಿಡೋ, ಸಲೀನಾಸ್, ಕೀಟೋಗಳಿಗೆ ರಸ್ತೆಗಳುಂಟು. ಗ್ವಾಯಾಕೀಲ್ ನಗರದಿಂದ ಎಕ್ವಡಾರಿನ ರಾಜಧಾನಿಯಾದ ಕೀಟೋವರೆಗೆ ರೈಲುಮಾರ್ಗವುಂಟು. ಈ ನಗರದೊಂದಿಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಮಾನ ಸಂಪರ್ಕ ಏರ್ಪಟ್ಟಿದೆ. ಗ್ವಾಯಾಕೀಲ್ ಬಂದರಿನಲ್ಲಿ 7 ಮೀ ಆಳಕ್ಕಿಳಿಯುವ ಹಡಗುಗಳು ನಿಲ್ಲಬಲ್ಲುವು. ಎಕ್ವಡಾರಿನ ಆಮದು ರಫ್ತುಗಳು ಈ ಬಂದರಿನ ಮೂಲಕ ಸಾಗುತ್ತವೆ. ಇಲ್ಲಿಂದ ಸಾಗುವ ಸರಕುಗಳಲ್ಲಿ ಹಿಂದೆ ಕೋಕೋ ಮುಖ್ಯವಾಗಿತ್ತು.

ಗ್ವಾಯಾಕೀಲಿನಲ್ಲಿ ಚರ್ಮ, ಆಲ್ಕೋಹಾಲ್, ಮೇಣದಬತ್ತಿ, ಸಿಮೆಂಟ್, ನೂಲು, ಕಬ್ಬಿಣ, ಸಕ್ಕರೆ, ಬಿಯರ್ ಮತ್ತು ಮರಕೊಯ್ಯುವ ಕೈಗಾರಿಕೆಗಳಿವೆ. 1867ರಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯವೂ ಸೇರಿದಂತೆ ಹತ್ತಾರು ವಿಶ್ವವಿದ್ಯಾನಿಲಯಗಳು ಇಲ್ಲಿವೆ. ಭೂಕಂಪದಿಂದ ಈ ನಗರದ ಬಹುಭಾಗ ನಾಶವಾಗಿತ್ತು. ಅದನ್ನೀಗ ಪುನಾರಚಿಸಲಾಗಿದೆ.

(ಎಸ್.ಎಂ.ಎಚ್.ಓ.; ಎಸ್.ಎನ್.ಎಸ್.ಆರ್‌ಇ.)

**ಗ್ವಾಯೂಲೇ :** ಆಸ್ಟರೇಸೀ (ಕಂಪಾಸಿಟೀ) ಕುಟುಂಬಕ್ಕೆ ಸೇರಿದ ಒಂದು ಪೊದೆ. ಪಾರ್ತೆನಿಯಮ್ ಅರ್ಜೆಂಟೇಟಮ್ ಇದರ ವೈಜ್ಞಾನಿಕ ಹೆಸರು. ಇದರಿಂದ ಕೌಚುಕ್ ಎಂಬ ಹೆಸರಿನ ವಿಶಿಷ್ಟ ಬಗೆಯ ರಬ್ಬರನ್ನು ತೆಗೆಯುತ್ತಾರೆ. ಅಮೆರಿಕ ಸಂಯುಕ್ತ ಸಂಸ್ಥಾನದ ದಕ್ಷಿಣ ಭಾಗ ಇಲ್ಲವೆ ಮೆಕ್ಸಿಕೋ ಇದರ ತವರು. ಭಾರತದಲ್ಲಿ ಪುಣೆಯ ಸುತ್ತಮುತ್ತಣ ಕಾಡುಗಳಲ್ಲಿ ಇದರ ಸಂಬಂಧಿಯಾದ ಪಾರ್ತೆನಿಯಮ್ ಹಿಸ್ಟಿರೋಫೋರಮ್ ಎಂಬ ಪ್ರಭೇದ ಬೆಳೆಯುತ್ತದೆ. ಈ ಪ್ರಭೇದ ಈಗ ಬೆಂಗಳೂರಿನಲ್ಲೆಲ್ಲ ಕಳೆಗಿಡವಾಗಿ ಬೆಳೆಯತೊಡಗಿದೆ.

ಬೇರೆ ರಬ್ಬರ್ ಮರಗಳಲ್ಲಿ ಹಾಲ್ನೊರೆಯ ರೂಪದಲ್ಲಿ ರಬ್ಬರ್ ಒಸರಿದರೆ ಗ್ವಾಯೂಲೇಯಲ್ಲಿ ಇದು ಅಂಗಾಂಶಗಳಲ್ಲಿ ಹರಡಿದ್ದು ಗಿಡವನ್ನು ಕತ್ತರಿಸಿ ಅರೆದಾಗ ಮಾತ್ರ ಹೊರಬರುತ್ತದೆ. ಗಿಡಗಳನ್ನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ ಅರೆದು ನೀರಿನೊಂದಿಗೆ ಬೆರೆಸುತ್ತಾರೆ. ಆಗ ಕೌಚುಕ್ ಅಂಗಾಂಶಗಳಿಂದ ಹೊರಬಂದು ನೀರಿನಲ್ಲಿ ತೇಲತೊಡಗುತ್ತದೆ. ಇದನ್ನು ಬೇರ್ಪಡಿಸಿ ಶುದ್ಧೀಕರಿಸುತ್ತಾರೆ. ಇದು ಹೀವಿಯ ಬ್ರಸಿಲಿಯೆನ್ಸಿಸ್ ಮರದಿಂದ ದೊರೆಯುವ ರಬ್ಬರಿನಷ್ಟೇ ಉತ್ತಮವಾಗಿದೆ. ಇದನ್ನು ನೇರವಾಗಿಯೇ ಬಳಸಬಹುದಾದರೂ ಕೃತಕ

ರಬ್ಬರಿನೊಂದಿಗೆ ಬೆರೆಸಿ ಉಪಯೋಗಿಸುವುದೇ ವಾಡಿಕೆಯಲ್ಲಿರುವ ಕ್ರಮ. ಗ್ವಾಯೂಲೇ ಗಿಡವನ್ನು ರಬ್ಬರ್ ಮರಗಳಂತೆ ತೋಟಗಳಲ್ಲಿ ಬೆಳೆಸುವ ಮತ್ತು ಇಳುವರಿಯ ಮೊತ್ತವನ್ನು ಹೆಚ್ಚಿಸುವ ಸಾಧ್ಯತೆಗಳನ್ನು ಕುರಿತು ಸ್ಪೇನ್, ಟರ್ಕಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸಂಶೋಧನೆ ನಡೆಯುತ್ತಿದೆ. (ಎಂ.ಸಿ.ಆರ್.)

**ಗ್ವಾಲಿಯರ್:** ಭಾರತದ ಮಧ್ಯಪ್ರದೇಶ ರಾಜ್ಯದಲ್ಲಿರುವ ಒಂದು ನಗರ ; ಅದೇ ಹೆಸರಿನ ಜಿಲ್ಲೆಯ ಮತ್ತು ವಿಭಾಗದ ಆಡಳಿತ ಕೇಂದ್ರ, ನಗರ ಹಿಂದೆ ಗ್ವಾಲಿಯರ್ ಸಂಸ್ಥಾನದ ರಾಜಧಾನಿಯಾಗಿತ್ತು. ಜನಸಂಖ್ಯೆ 2,030, 543(2011) ಉ.ಅ. 26o 12' ಮತ್ತು ಪೂ.ರೇ. 70o 10' ಮೇಲಿರುವ ಈ ನಗರ ಆಗ್ರ ನಗರದ ದಕ್ಷಿಣಕ್ಕೆ 122 ಕಿಮೀ ದೂರದಲ್ಲಿದೆ. ಮುಂಬಯಿ ರಾಷ್ಟ್ರೀಯ ಹೆದ್ದಾರಿ ಗ್ವಾಲಿಯರ್ ಮೂಲಕ ಹಾದುಹೋಗುತ್ತದೆ. ಗಂಗಾ ಯಮುನಾ ದೋಆಬ್ ಪ್ರದೇಶಕ್ಕೂ ದಖನ್ ಪ್ರಸ್ಥಭೂಮಿಗೂ ನಡುವೆ ಚಂಬಲ್ ಮಾರ್ಗದಲ್ಲಿ ಆಯಕಟ್ಟಿನ ಸ್ಥಳದಲ್ಲಿರುವುದರಿಂದ ಗ್ವಾಲಿಯರ್ ಬಹಳ ಹಿಂದಿನಿಂದಲೂ ಪ್ರಾಮುಖ್ಯಗಳಿಸಿದೆ. ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ಈ ನಗರಕ್ಕೆ ದೇಶದ ಇತರ ಮುಖ್ಯ ಸ್ಥಳಗಳೊಂದಿಗೆ ರೈಲ್ವೆ ಸಂಪರ್ಕ ಏರ್ಪಟ್ಟಿತು. ಈ ನಗರ ಮೂರು ಬದಿಗಳಲ್ಲಿ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟಿದೆ.

ಗ್ವಾಲಿಯರ್ ನಗರದ ಹೊರವಲಯದಲ್ಲಿ ಬಂಡೆಗೋಡೆಯಲ್ಲಿನ ಒಂದು ಜೈನ ವಿಗ್ರಹ

ಗ್ವಾಲಿಯರಿನ ಹಳೆಯ ನಗರ ಪ್ರದೇಶ ಇರುವುದು ಸುಮಾರು 91 ಮೀ ಎತ್ತರದ ಬಂಡೆಯೊಂದರ ಮೇಲೆ. ಇದರ ಸುತ್ತ ಕೋಟೆಯೊಂದಿದೆ. ಇದು ಭಾರತದ ಹಳೆಯ ಕೋಟೆಗಳಲ್ಲೊಂದು. 525 ರ ಶಾಸನವೊಂದರಲ್ಲಿ ಇದರ ಉಲ್ಲೇಖವುಂಟು. 9–10 ಮೀ ಎತ್ತರದ ಕೋಟೆಯ ಒಳಭಾಗದಲ್ಲಿ ಎಂಟು ಕೊಳಗಳೂ ಆರು ಅರಮನೆಗಳೂ ಆರು ದೇವಸ್ಥಾನಗಳೂ ಒಂದು ಮಸೀದಿಯೂ ಇನ್ನೂ ಹಲವಾರು ಕಟ್ಟಡಗಳೂ ಇವೆ. 11ನೆಯ ಶತಮಾನದ ತೇಲೀಕ ಮಂದಿರ, ಅತ್ತೆ–ಸೊಸೆಯರ ದೇಗುಲ, 15ನೆಯ ಶತಮಾನದಲ್ಲಿ ನಿರ್ಮಿತವಾದ ಮಾನ್ ಮಂದಿರ – ಇವು ಹಿಂದೂ ವಾಸ್ತುಶಿಲ್ಪದ ಉತ್ತಮ ನಿದರ್ಶನಗಳು. ಕರಣ್ ಅರಮನೆ ಇಂಡೋ–ಮುಸ್ಲಿಂ ಶಿಲ್ಪಕ್ಕೆ ಹೆಸರಾದ್ದು. ತೇಲಿಕ ಮಂದಿರ ಅತ್ಯುನ್ನತ ಕಟ್ಟಡ. ಅದರ ಗೋಪುರದ ಎತ್ತರ 33 ಮೀ ಗ್ವಾಲಿಯರಿನ ಹೊರವಲಯದಲ್ಲಿ ಬಂಡೆಗೋಡೆಗಳಲ್ಲಿ ಕೊರೆಯಲಾದ ಹಲವಾರು ಜೈನಮೂರ್ತಿಗಳುಂಟು. ಅವುಗಳ ಪೈಕಿ 25ಮೀ.ಎತ್ತರದ ಆದಿನಾಥಮೂರ್ತಿ ಪ್ರಮುಖವಾದ್ದು. ಕೋಟೆಯ ಹೊರಗಡೆ ಇರುವ ಕಟ್ಟಡಗಳಲ್ಲಿ ಮಹಮ್ಮದ್ ಗೌಸ್ ಮತ್ತು ತಾನ್‌ಸೇನ್ ಗೋರಿಗಳು ಮುಖ್ಯವಾದುವು.

ಹಳೆಯ ಗ್ವಾಲಿಯರ್ ಕೋಟೆಗೆ 1.5 ಕಿಮೀ ದೂರದಲ್ಲಿರುವ ಲಷ್ಕರ್ ಆಧುನಿಕ ನಗರ ಭಾಗ. ಇದು ಬಾರಾ ಬಜಾರ್, ದಾಲ್ ಜಾಜಾರ್, ಮಾಧವ ಗಂಜ್, ಫಾಲ್ಕಾ ಬಜಾರ್, ಜಾನಕ್ ಗಂಜ್‌ಗಳಿಂದ ಕೂಡಿದೆ. ಗ್ವಾಲಿಯರಿನ ಜನಸಂಖ್ಯೆಯಲ್ಲಿ ಶೇ. 40–ಶೇ. 50 ವಾಸಿಸುವುದು ಈ ಭಾಗದಲ್ಲಿ. ಗ್ವಾಲಿಯರ್ ನಗರ ಶಿಲ್ಪಕಲೆ, ಹೊಳಪಿನ ಹೆಂಚುಗಳು ಮತ್ತು ಆಭರಣಗಳಿಗೆ ಪ್ರಸಿದ್ಧವಾಗಿತ್ತು. ಈಗ ಇದು ಒಂದು ಕೈಗಾರಿಕಾ ಕೇಂದ್ರ, ರೇಯಾನ್, ಹತ್ತಿ ಮತ್ತು ರೇಷ್ಮೆ ಗಿರಣಿಗಳೂ ಚರ್ಮ, ಬಿಸ್ಕತ್ತು, ಎಂಜಿನಿಯರಿಂಗ್, ಬೆಂಕಿಕಡ್ಡಿ ಮತ್ತು ಕುಂಭ ಕಾರ್ಖಾನೆಗಳೂ ಇವೆ. ಗ್ವಾಲಿಯರ್‌ನಲ್ಲಿ ಹಲವಾರು ಪ್ರಮುಖ ಶೈಕ್ಷಣಿಕ ಸಂಸ್ಥೆಗಳಿವೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್‌ಮೇಷನ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾವೆಲ್ ಆ್ಯಂಡ್ ಟೂರಿಸಮ್ ಮ್ಯಾನೇಜ್‌ಮೆಂಟ್, ಮಾಧವ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಸೈನ್ಸ್, ಲಕ್ಷ್ಮೀಬಾಯ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫಿಸಿಕಲ್ ಎಜುಕೇಷನ್, ಅಲ್ಲದೆ ಆರು ವಿಶ್ವವಿದ್ಯಾನಿಲಯಗಳಿವೆ: ಜಿವಾಜಿ ಯೂನಿವರ್ಸಿಟಿ, ಮಹಾರಾಜ ಮಾನ್‌ಸಿಂಗ್ ತೋಮರ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್ ಯೂನಿವರ್ಸಿಟಿ, ರಾಜ್‌ಮಾತಾ ವಿಜಯರಾಜೆ ಸಿಂಧ್ಯಾ ಅಗ್ರಿಕಲ್ಚರಲ್ ಯೂನಿವರ್ಸಿಟಿ, ಲಕ್ಷ್ಮೀಬಾಯ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫಿಸಿಕಲ್ ಎಜುಕೇಷನ್, ಆ್ಯಮಿಟಿ ಯೂನಿವರ್ಸಿಟಿ, ಗ್ವಾಲಿಯರ್, ಐ.ಟಿ.ಎಂ ಯೂನಿವರ್ಸಿಟಿ.

**ಇತಿಹಾಸ :** ಗ್ವಾಲಿಯರ್‌ಗೆ ಆ ಹೆಸರು ಬರಲು ಇಲ್ಲಿ ವಾಸಿಸುತ್ತಿದ್ದ ಗ್ವಾಲಿಪ ಎಂಬ ತಪಸ್ವಿ ಕಾರಣವೆಂಬುದನ್ನು ಸ್ಥಳಪುರಾಣ ತಿಳಿಸುತ್ತದೆ. ಕುಷ್ಠರೋಗದಿಂದ ನರಳುತ್ತಿದ್ದ ಸೂರಜ್ ಸೇನ್ ಎಂಬ ಅರಸನ ರೋಗವನ್ನು ಆ ಸಂನ್ಯಾಸಿ ಗುಣಪಡಿಸಿದನೆಂದು ಪ್ರತೀತಿ. ಆತನ ಹೆಸರಾಗಿ ಆ ದೊರೆ ಗ್ವಾಲಿಯರ್ ಕೋಟೆಯನ್ನು ಕಟ್ಟಿಸಿದನೆಂದೂ ಗ್ವಾಲಿಪನ ಸೂಚನೆಯಂತೆ ತನ್ನ ಮುಂದೆ ಪಾಲ ಎಂಬ ಹೆಸರನ್ನು ಸೇರಿಸಿಕೊಂಡನೆಂದೂ ಈತನ ವಂಶದ ಅರಸನೊಬ್ಬ ತನ್ನನ್ನು ಪಾಲನೆಂದು ಕರೆದುಕೊಳ್ಳದಿದ್ದಾಗ ಪತನ ಹೊಂದಿದನೆಂದೂ ಹೇಳಲಾಗಿದೆ. ಗ್ವಾಲಿಯರಿಗೆ ಸಂಬಂಧಿಸಿದ ಶಾಸನಗಳಲ್ಲಿ ಈ ಬೆಟ್ಟವನ್ನು ಗೋಪಗಿರಿ, ಗೋಪಾದ್ರಿ, ಗೋಪಾಚಲ, ಎಂದು ಕರೆಯಲಾಗಿದೆ. ಇತಿಹಾಸದ ಪ್ರಕಾರ ಗ್ವಾಲಿಯರಿನ ಪ್ರಥಮ ಒಡೆಯರೆಂದರೆ ಹೂಣ ದೊರೆ ತೋರಮಾನ ಮತ್ತು ಆತನ ಮಗ ಮಿಹಿರಗುಲ. ಕೋಟೆಯಲ್ಲಿರುವ 525ರ ಶಾಸನವೊಂದರಿಂದ ಈ ವಿಷಯ ಗೊತ್ತಾಗುತ್ತದೆ. 9ನೆಯ ಶತಮಾನದಲ್ಲಿ ಕನೌಜಿನ ಗುರ್ಜರ–ಪ್ರತೀಹಾರ ದೊರೆಯಾದ ಭೋಜನಿಗೆ ಸೇರಿತ್ತು. ಇದು 1232 ವರೆಗೂ ಹಿಂದೂ ದೊರೆಗಳ ವಶದಲ್ಲೇ ಮುಂದುವರೆಯಿತು. 1021ರಲ್ಲಿ ಸುಲ್ತಾನ್ ಮಹಮ್ಮದ್ ಇದನ್ನು ರಜಪೂತರಿಂದ ಕಿತ್ತುಕೊಳ್ಳಲು



ಮಾನ್‌ಸಿಂಗನ ಅರಮನೆ

ಯತ್ನಿಸಿದ. 1232ರಲ್ಲಿ ಸುಲ್ತಾನ ಅಲ್ತಮಶ್ ಇದನ್ನು ಗೆದ್ದುಕೊಂಡ. 1398ರಲ್ಲಿ ಇದು ಮತ್ತೆ ರಜಪೂತರ ವಶಕ್ಕೆ ಬಂದು 1518ರ ವರೆಗೂ ಅವರ ಅಧೀನದಲ್ಲೇ ಇತ್ತು. ಈ ದೊರೆಗಳ ಪೈಕಿ ಪ್ರಸಿದ್ಧನಾದವನು ಮಾನ್‌ಸಿಂಗ್ (1456–1517). ಅವನು ಸುಂದರವಾದ ಅರಮನೆಯೊಂದನ್ನು ಕಟ್ಟಿಸಿದ. ಅವನ ರಾಣಿ ಮೃಗನಯನಾ ಎಂಬುವಳು ಕಲೆಗೆ ವಿಶೇಷ ಪ್ರೋತ್ಸಾಹ ನೀಡಿದಳು. ಗ್ವಾಲಿಯರ್ ಸಂಗೀತ ಕಲಾಕೇಂದ್ರವಾಯಿತು. ತಾನ್‌ಸೇನ್ ಗ್ವಾಲಿಯರಿನ ಆಸ್ಥಾನದಲ್ಲಿದ್ದ. ಆತ ಕೊನೆಯುಸಿರೆಳೆದದ್ದೂ ಗ್ವಾಲಿಯರ್‌ನಲ್ಲೇ.

ಗ್ವಾಲಿಯರ್ ಕೋಟೆ 1542ರಲ್ಲಿ ಷೇರ್‌ಷಹನ ವಶವಾಯಿತು. ಅವನ ವಂಶಜರಿಂದ 1559 ರಲ್ಲಿ ಅಕ್ಬರ್ ಇದನ್ನು ಗೆದ್ದುಕೊಂಡ. ಮೊಗಲ್ ಚಕ್ರವರ್ತಿಗಳು ಇದನ್ನು ರಾಜಕೀಯ ಬಂದಿಗಳನ್ನಿಡಲು ಬಳಸುತ್ತಿದ್ದರು. ಈ ಕೋಟೆ ಮರಾಠರ ವಶವಾದದ್ದು 1751ರಲ್ಲಿ. 1777ರಲ್ಲಿ ಇದು ಸಿಂಧ್ಯ ಮನೆತನದ ದೊರೆಗಳ ರಾಜಧಾನಿಯಾಯಿತು. 1780ರಲ್ಲಿ ಇದನ್ನು ಬ್ರಿಟಿಷರು ವಶಪಡಿಸಿಕೊಂಡರು. ಅವರಿಂದ 1783ರಲ್ಲಿ ಮರಾಠರ ಕೈಗೆ ಹೋಗಿದ್ದ ಈ ಕೋಟೆಯನ್ನು ಬ್ರಿಟಿಷರು ಮತ್ತೆ 1804ರಲ್ಲಿ ಗೆದ್ದುಕೊಂಡು 1805ರಲ್ಲಿ ಸಿಂಧ್ಯ

ಮನೆತನಕ್ಕೆ ಕೊಟ್ಟರು. 1844ರಲ್ಲಿ ಬ್ರಿಟಿಷ್ ಸೇನೆ ಇಲ್ಲಿ ನೆಲಸಿತು. 1853ರಲ್ಲಿ ಇದನ್ನು ಸಿಂಧ್ಯ ರಾಜನಿಗೆ ಮತ್ತೆ ಮರಳಿಸಲಾಯಿತು. 1857ರಲ್ಲಿ ಸಂಭವಿಸಿದ ಬಂಡಾಯದಲ್ಲಿ ಗ್ವಾಲಿಯರ್ ಪ್ರಧಾನ ಪಾತ್ರವಹಿಸಿತ್ತು. ಇದು ಬಂಡಾಯಗಾರರ ಕೊನೆಯ ನೆಲೆಯಾಗಿತ್ತು. 1858ರಲ್ಲಿ ಇದನ್ನು ಬ್ರಿಟಿಷರು ಮತ್ತೆ ವಶಪಡಿಸಿಕೊಂಡು, 1886ರಲ್ಲಿ ಝಾನ್ಸಿಗೆ ಪ್ರತಿಯಾಗಿ ಇದನ್ನು ಸಿಂಧ್ಯನಿಗೆ ಕೊಟ್ಟರು. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ದೇಶೀಯ ಸಂಸ್ಥಾನಗಳು ಭಾರತ ಒಕ್ಕೂಟದಲ್ಲಿ ವಿಲೀನಗೊಂಡಾಗ ಗ್ವಾಲಿಯರ್ ಮಧ್ಯಪ್ರದೇಶಕ್ಕೆ ಸೇರಿತು. 'ರೂಪ್‌ಸಿಂಗ್ ಸ್ಟೇಡಿಯಮ್' ಎಂಬ ಅಂತಾರಾಷ್ಟ್ರೀಯ ದರ್ಜೆಯ ಭಾರಿ ಕ್ರಿಕೆಟ್ ಮೈದಾನ ಗ್ವಾಲಿಯರ್‌ನಲ್ಲಿದೆ. (ಎಸ್.ಜಿ.ಆರ್.)

**ಗ್ವಾಲಿಯರ್ ಜಿಲ್ಲೆ :** ಮಧ್ಯ ಪ್ರದೇಶದ 50 ಜಿಲ್ಲೆಗಳಲ್ಲೊಂದು. ಇದರ ವಿಸ್ತೀರ್ಣ 52142 ಚ.ಕಿಮೀ. ಜನಸಂಖ್ಯೆ 2030543 (2011). ಜಿಲ್ಲೆಯ ಐದನೆಯ ಒಂದು ಭಾಗ ಅರಣ್ಯಮಯ. ಉಳಿದ ಭಾಗ ಫಲವತ್ತಾದ ಸಾಗುವಳಿ ನೆಲ. ಗೋದಿ, ಬತ್ತ, ಮುಸುಕಿನ ಜೋಳ, ಕಬ್ಬು ಜಿಲ್ಲೆಯ ಮುಖ್ಯ ಬೆಳೆಗಳು. ಜಿಲ್ಲೆಯಲ್ಲಿ ಕಟ್ಟಡಕ್ಕೆ ಉಪಯುಕ್ತವಾದ ಕಲ್ಲು ಹೇರಳವಾಗಿ ಸಿಗುತ್ತದೆ. ಗ್ವಾಲಿಯರ್ ನಗರದ ಭವ್ಯ ಕಟ್ಟಡಗಳ ಕಲ್ಲು ಜಿಲ್ಲೆಯದೇ.

**ಗ್ವಾಲಿಯರ್ ವಿಭಾಗ :** ಭಿಂಡ್, ಮೊರೇನಾ, ಶಿವಪುರಿ, ಗೂನಾ, ದಾತಿಯಾ, ಗ್ವಾಲಿಯರ್–ಇವು ಗ್ವಾಲಿಯರ್ ವಿಭಾಗಕ್ಕೆ ಸೇರಿರುವ ಜಿಲ್ಲೆಗಳು. ಗ್ವಾಲಿಯರ್ ವಿಭಾಗದ ವಿಸ್ತೀರ್ಣ 17,216 ಚ.ಮೈ ಜನಸಂಖ್ಯೆ 43,49,753 (1971). (ಕೆ.ಆರ್)

**ಗ್ವಾಲಿಯರ್ ಸಂಸ್ಥಾನ :** ಗ್ವಾಲಿಯರ್ ಸಂಸ್ಥಾನದ ಸ್ಥಾಪಕ ರಾಣೋಜಿ ಸಿಂಧ್ಯ. ಮರಾಠಾ ಪೇಷ್ವೆಯರ ಸೇನಾಧಿಕಾರಿಯಾಗಿದ್ದ ಸಿಂಧ್ಯ 18ನೆಯ ಶತಮಾನದಲ್ಲಿ ಸ್ವತಂತ್ರವಾದ ನೀತಿ ಅನುಸರಿಸತೊಡಗಿದ. ಈತ ತೀರಿಕೊಂಡದ್ದು 1745ರಲ್ಲಿ. 1761ರಲ್ಲಿ ಪಾಣಿಪಟ್ ಯುದ್ಧದಲ್ಲಿ ಪೇಷ್ವೆಗಳು ಸೋತಾಗ ಗ್ವಾಲಿಯರ್‌ನಲ್ಲಿ ಆಳುತ್ತಿದ್ದ ಮಹದಾಜಿ ಸಿಂಧ್ಯ ಬಲಿಷ್ಠನಾದ. ಹೆಸರಿಗೆ ಇವನು ಪೇಷ್ವೆಯರ ಅಧೀನನಾಗಿದ್ದರೂ ಮಧ್ಯಭಾರತ ಮತ್ತು ಸುತ್ತಮುತ್ತಣ ವಿಶಾಲವಾದ ಪ್ರದೇಶವನ್ನಾಳುತ್ತಿದ್ದ. 1785ರಲ್ಲಿ ದೆಹಲಿಯ ಸಿಂಹಾಸನದ ಮೇಲೆ ಷಾ ಆಲಮನನ್ನು ಕೂರಿಸಿದ್ದನಲ್ಲದೆ, ಅನೇಕ ರಜಪೂತ ದೊರೆಗಳಿಂದ ಕಪ್ಪಕಾಣಿಕೆ ವಸೂಲು ಮಾಡುತ್ತಿದ್ದ. 1794ರಲ್ಲಿ ಗ್ವಾಲಿಯರ್ ಸಿಂಹಾಸನವನ್ನೇರಿದ ದೌಲತ್ ರಾವ್ ಬ್ರಿಟಿಷರಿಗೆ ಸೋತು ತನ್ನ ಸಂಸ್ಥಾನದ ಹಲವು ಭಾಗಗಳನ್ನು ಕಳೆದುಕೊಳ್ಳಬೇಕಾಯಿತು. 1857ರಲ್ಲಿ ಸಂಭವಿಸಿದ ಬಂಡಾಯದಲ್ಲಿ ಗ್ವಾಲಿಯರ್ ಸಂಸ್ಥಾನಾಧೀಶ ಬ್ರಿಟಿಷರಿಗೆ ವಿಧೇಯನಾಗಿದ್ದನಾದರೂ ಆ ನಗರದ ಕೋಟೆಯಲ್ಲಿ ಬಂಡಾಯದ ವೀರರು ಸೇರಿಕೊಂಡು ಕೊನೆಯ ತನಕ ಹೋರಾಡಿದರು.

ಮಹಮ್ಮದ್ ಗೌಸನ ಸಮಾಧಿ. ಮೊಗಲ್ ವಾಸ್ತುಶಿಲ್ಪಕ್ಕೊಂದು ಉತ್ತಮ ನಿದರ್ಶನ

ಗ್ವಾಲಿಯರ್ ಸಂಸ್ಥಾನದ ಆಡಳಿತ ಕೇಂದ್ರವಾಗಿದ್ದುದು ಲಷ್ಕರ್. ಚಂಬಲ್ ನದಿಯ ದಕ್ಷಿಣಕ್ಕೆ ಭೂಪಾಲ್ ಸಂಸ್ಥಾನದ ಎಲ್ಲೆಯವರೆಗಿನ ಪ್ರದೇಶ, ವಿಂಧ್ಯ ಪರ್ವತದ ಉತ್ತರಕ್ಕೆ ಕಾಲಿಸಿಂಧ್ ನದಿಯ ಉಗಮದ ಪ್ರದೇಶ, ಇದಕ್ಕೆ ಪಶ್ಚಿಮದಲ್ಲಿರುವ ಪ್ರದೇಶಗಳು, ನರ್ಮದಾ ನದಿಯ ಉತ್ತರ ಪ್ರದೇಶ – ಇವು ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ್ದ ಭಾಗಗಳು. ಪ್ರಾಚೀನ ಉಜ್ಜಯಿನಿ, ಭಿಲ್ಸಾ, ಬೆಸ್ನಗರ್, ಉದಯಗಿರಿ, ಬಾಗ್ – ಇವು ಹಿಂದಿನ ಗ್ವಾಲಿಯರ್ ಸಂಸ್ಥಾನ ಪ್ರದೇಶದಲ್ಲಿವೆ. ಚಂದೇರಿ, ಮಂಡಸೋರ್, ಗೋಹದ್ – ಈ ಸ್ಥಳಗಳಲ್ಲಿ ಅನೇಕ ಐತಿಹಾಸಿಕ ಸ್ಮಾರಕಗಳಿವೆ. ಗ್ವಾಲಿಯರ್ ನಗರದ ಬಳಿಯಲ್ಲಿರುವ ಆಂಟ್ರಿಯಲ್ಲಿ ಅಬುಲ್ ಫಜûಲ್ ಅಲ್ಲಾಮಿಯ ಗೋರಿಯಿದೆ. ನಳಮಹಾರಾಜನ ರಾಜಧಾನಿ ಶಿವಪುರ ಜಿಲ್ಲೆಯಲ್ಲಿತ್ತೆಂದು ಪ್ರತೀತಿ. ನಾರ್ವಾರ್ ಕೋಟೆ ಅವನದೆನ್ನಲಾಗಿದೆ. ತಾನ್‌ಸೇನ್‌ನ ಸಮಾಧಿಯ ಬಳಿಯಲ್ಲೇ ಮಹಮ್ಮದ್ ಗೌಸನ ಘೋರಿಯುಂಟು. ಇದು ಮೊಗಲ್ ವಾಸ್ತುಶಿಲ್ಪಕ್ಕೆ ಉತ್ತಮ ನಿದರ್ಶನ. ಗ್ವಾಲಿಯರ್ ಸಂಸ್ಥಾನ 1948ರ ಮೇ 28ರಂದು ಮಧ್ಯಭಾರತದಲ್ಲಿ ವಿಲೀನಗೊಂಡಿತು. 1956ರ ನವೆಂಬರ್ 1ರಂದು ಮಧ್ಯಪ್ರದೇಶದ ಭಾಗವಾಯಿತು. (ಎಚ್.ಜಿ.ಆರ್)

**ಗ್ವಾಲಿಯರ್ ಕೌಲು :** ಮರಾಠರ ಪ್ರಾಬಲ್ಯವನ್ನು ಸಂಪೂರ್ಣವಾಗಿ ಉಡುಗಿಸಿದ ಮೂರನೆಯ ಮರಾಠಾ ಯುದ್ಧಕ್ಕೆ ಮೊದಲು ಗ್ವಾಲಿಯರಿನ ರಾಜ ದೌಲತ್‌ರಾವ್ ಸಿಂಧ್ಯ ಬ್ರಿಟಿಷರೊಡನೆ ಗ್ವಾಲಿಯರಿನಲ್ಲಿ ಮಾಡಿಕೊಂಡ ಕೌಲು (1817). ಗ್ವಾಲಿಯರಿನ ರಾಜಪ್ರಾತಿನಿಧ್ಯದ ವಿಚಾರವಾಗಿ ವ್ಯಾಜ್ಯ ಉದಿಸಿದೆಯೆಂಬ ನೆವದಿಂದ ಬ್ರಿಟಿಷರು 1843ರಲ್ಲಿ ಗ್ವಾಲಿಯರಿನ ಮೇಲೆ ದಂಡೆತ್ತಿ ಹೋಗಿ ಅಲ್ಲಿಯ ರಾಜಮನೆತನದವರನ್ನು ಮಣಿಸಿ ಅವರಿಂದ ಬರೆಯಿಸಿಕೊಂಡ ಕೌಲನ್ನೂ (1844) ಈ ಹೆಸರಿನಿಂದ ಕರೆಯುವುದಿದೆ. 1817ರ ಕೌಲಿನಂತೆ ದೊರೆ ದೌಲತ್‌ರಾವ್ ಸಿಂಧ್ಯ ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಮರಾಠರ ಜೊತೆ ಸೇರದೆ ನಿಂತನಲ್ಲದೆ ಬ್ರಿಟಿಷರಿಗೆ ಅಧೀನತ್ವವನ್ನು ಒಪ್ಪಿಕೊಂಡ. ಪಿಂಡಾರೆಯವರನ್ನು ಅಡಗಿಸಲು ಬ್ರಿಟಿಷರಿಗೆ ನೆರವು ನೀಡಲು ಒಪ್ಪಿದ. ಅಜ್ಮೀರ್ ಪ್ರದೇಶ ಬ್ರಿಟಿಷರಿಗೆ ವರ್ಗವಾಯಿತು.

1817ರ ಕೌಲಿನಿಂದ ಸಿಂಧ್ಯನ ಪ್ರತಿಷ್ಠೆ ಕುಂದಿತಲ್ಲದೆ ಬ್ರಿಟಿಷರ ಪ್ರಭಾವ ಅಲ್ಲಿ ಸ್ಥಾಪಿತವಾಯಿತು. ಬ್ರಿಟಿಷ್ ರೆಸಿಡೆಂಟನೊಬ್ಬನನ್ನು ಗ್ವಾಲಿಯರ್‌ನಲ್ಲಿರಿಸಲಾಯಿತು. ಗ್ವಾಲಿಯರ್ ರಾಜ್ಯದ ಮೇಲೆ ತಮ್ಮ ಪೂರ್ಣ ಹತೋಟಿ ಸ್ಥಾಪಿಸಲು ಹವಣಿಸುತ್ತಿದ್ದ ಬ್ರಿಟಿಷರ ಉದ್ದೇಶ 1844ರ ಕೌಲಿನಿಂದ ನೆರವೇರಿತು.

ಎರಡನೆಯ ಕೌಲಿಗೆ ಕಾರಣವಾದ ಸನ್ನಿವೇಶಗಳು ಹಲವು. ದೌಲತ್‌ರಾವ್ ಸಿಂಧ್ಯ 1827ರಲ್ಲಿ ನಿಧಾನನಾದಾಗ ಅವನ ರಾಣಿಯಾದ ಬೈಜಾಬಾಯಿ ಜಂಕೋಜಿರಾವ್ ಎಂಬ ಹುಡುಗನನ್ನು ದತ್ತು ತೆಗೆದುಕೊಂಡು ಅವನ ಪರವಾಗಿ ತಾನೇ ಅಧಿಕಾರ ವಹಿಸಿದಳು. ಜಂಕೋಜಿ 1833ರಲ್ಲಿ ಬಲಾತ್ಕಾರದಿಂದ ಅಧಿಕಾರ ವಹಿಸಿಕೊಂಡ. ಆ ಸಮಯದಲ್ಲಿ ಅವನು ಬ್ರಿಟಿಷರಿಗೆ ಅನೇಕ ಸವಲತ್ತುಗಳನ್ನು ವಹಿಸಿಕೊಟ್ಟ. ಆದರೆ ಜಂಕೋಜಿ 1843ರಲ್ಲಿ ಮಕ್ಕಳಿಲ್ಲದೆ ಮರಣ ಹೊಂದಿದ. ಆಗ ಅವನ ರಾಣಿ 11 ವಯಸ್ಸಿನವಳಾಗಿದ್ದುದರಿಂದ ಬ್ರಿಟಿಷರು ತಮ್ಮ ಪ್ರಾಬಲ್ಯವನ್ನು ಅಲ್ಲಿ ಸ್ಥಾಪಿಸಲು ಅನುಕೂಲವಾಯಿತು. ಅವಳು 9 ವರ್ಷ ವಯಸ್ಸಿನ ಜಿಯಾಜಿರಾಯನನ್ನು ದತ್ತು ತೆಗೆದುಕೊಂಡಳು. ರಾಣಿಯೂ ಅವಳ ದತ್ತು ಮಗನೂ ಅಪ್ರಾಪ್ತವಯಸ್ಕರಾಗಿದ್ದುದರಿಂದ ಬ್ರಿಟಿಷ್ ರೆಸಿಡೆಂಟ್ ಮಾಮ್ ಸಾಹೇಬನನ್ನು ರಾಜಪ್ರತಿನಿಧಿಯಾಗಿ ಆಡಳಿತ ನಡೆಸಲು ನೇಮಿಸಿದ. ಆದರೆ ಗ್ವಾಲಿಯರಿನ ಮುಖಂಡರು ಅವನ ಆಡಳಿತವನ್ನೊಪ್ಪಲಿಲ್ಲ. ಮಾಮ್ ಅಸಮರ್ಥನೆಂಬುದು ಸ್ಥಿರಪಟ್ಟಾಗ ಗ್ವಾಲಿಯರಿನ ಮುಖಂಡರ ಬೆಂಬಲ ಗಳಿಸಿದ್ದ ದಾದಾ ಬಸ್ಸಿವಾಲನನ್ನು ಆರಿಸಲಾಯಿತು. ಗವರ್ನರ್ ಜನರಲ್ ಲಾರ್ಡ್ ಅಲೆನ್‌ಬರೋ ಈ ವ್ಯವಸ್ಥೆಗೆ ಒಪ್ಪಲಿಲ್ಲ. ಆ ಸಂದಿಗ್ಧ ಸಮಯದಲ್ಲಿ ಗ್ವಾಲಿಯರ್ ಸಂಸ್ಥಾನದ ಮೇಲೆ ಬ್ರಿಟಿಷರ ಪೂರ್ಣ ಹತೋಟಿ ಸ್ಥಾಪಿಸಲು ಅಲೆನ್‌ಬರೋ ಕಾತರನಾಗಿದ್ದ. ಅವನ ಅಪ್ಪಣೆಯ ಮೇರೆಗೆ ದಾದಾ ಬಸ್ಸಿವಾಲನನ್ನು ಬ್ರಿಟಿಷರಿಗೆ ಒಪ್ಪಿಸಬೇಕೆಂಬ ಒತ್ತಾಯಕ್ಕೆ ಮಣಿಯಲೇಬೇಕಾಯಿತು. ಅನೇಕ ಸಲ್ಲದ ನೆವಗಳಿಂದ 1843ರ ಡಿಸೆಂಬರ್ ಕೊನೆಯಲ್ಲಿ ಬ್ರಿಟಿಷ್ ಸೇನೆ ಗ್ವಾಲಿಯರ್‌ನ್ನು ಪ್ರವೇಶಿಸಿತು. ಅಲೆನ್‌ಬರೋ ಸಹ ಸೇನೆಯ ಜೊತೆಯಲ್ಲಿ ಬಂದ. ಬ್ರಿಟಿಷ್ ಸೈನಿಕರಿಗೂ ಗ್ವಾಲಿಯರ ಸೈನ್ಯಕ್ಕೂ ಯುದ್ಧ ನಡೆಯಿತು. ಗ್ವಾಲಿಯರ್ ಸೈನ್ಯ ವೀರಾವೇಶದಿಂದ ಹೋರಾಡಿದರೂ ಸೋತುಹೋಯಿತು. 1844ರ ಜನವರಿ 5ರಂದು ಗವರ್ನರ್–ಜನರಲ್ ಅಪ್ರಾಪ್ತ ವಯಸ್ಸಿನ ಮಹಾರಾಣಿಯನ್ನೂ ಅವಳ ದತ್ತುಮಗನನ್ನೂ ಅರಮನೆಯಲ್ಲಿ ಸಂಧಿಸಿ ಗ್ವಾಲಿಯರ್ ರಾಜ್ಯದ ಭವಿಷ್ಯಕ್ಕೆ ಸಂಬಂಧಿಸಿದ ತನ್ನ ಷರತ್ತುಗಳನ್ನು ಬರೆಸಿ ಅವರಿಂದ ಒಪ್ಪಿಗೆ ಪಡೆದ. ಈ ಕೌಲಿನ ಪ್ರಕಾರ ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬ್ರಿಟಿಷ್ ಸೈನ್ಯವೊಂದನ್ನು ನೆಲೆಗೊಳಿಸಲಾಯಿತು. ಅದರ ನಿರ್ವಹಣೆಗಾಗಿ ಹಲವು ಜಿಲ್ಲೆಗಳ ಸಾಮಾನ್ಯ ಆಡಳಿತವನ್ನು ಬ್ರಿಟಿಷರಿಗೆ ವಹಿಸಲಾಯಿತು. ಗ್ವಾಲಿಯರ್ ರಾಜಮನೆತನ 26 ಲಕ್ಷ ರೂಪಾಯಿಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಕೊಡಬೇಕಾಯಿತು. ಗ್ವಾಲಿಯರ್ ಸಂಸ್ಥಾನದ ಸೈನ್ಯಬಲವನ್ನು 9,000ಕ್ಕೆ ಸೀಮಿತಗೊಳಿಸಬೇಕೆಂದೂ ರಾಣಿಯ ದತ್ತುಪುತ್ರನಾದ ಜಿಯಾಜಿರಾಯನಿಗೆ 19 ವರ್ಷ ಆಗುವವರೆಗೆ ಸಂಸ್ಥಾನದ ಆಡಳಿತವನ್ನು ಬ್ರಿಟಿಷ್‌ರಿಂದ ನಿಯೋಜಿಸಲ್ಪಟ್ಟ ಪ್ರತಿನಿಧಿ ಮಂಡಳಿ ನಡೆಸತಕ್ಕದ್ದೆಂದೂ ಆ ಮಂಡಳಿ ಬ್ರಿಟಿಷ್ ರೆಸಿಡೆಂಟನ ಅಭಿಪ್ರಾಯದಂತೆ ಕಾರ್ಯ ನಿರ್ವಹಿಸತಕ್ಕದ್ದೆಂದೂ ವಿಧಿಸಲಾಯಿತು.

ಈ ಕೌಲನ್ನು ಗವರ್ನರ್–ಜನರಲ್ ತನ್ನ ಸೈನ್ಯ ಬಲವನ್ನುಪಯೋಗಿಸಿ, ಅಕಾರಣವಾಗಿ ಬೆದರಿಕೆಯನ್ನುಂಟುಮಾಡಿ ಅಲ್ಲಿಯ ರಾಜಮನೆತನದ ಮೇಲೆ ಬಲಾತ್ಕಾರವಾಗಿ ಹೇರಿದ. ಇದರಿಂದ ಗ್ವಾಲಿಯರ್ ಬ್ರಿಟಿಷರ ಆಶ್ರಿತ ಸಂಸ್ಥಾನವಾಗಿ, ತನ್ನ ಸ್ವಾತಂತ್ರ್ಯ ಕಳೆದುಕೊಂಡಿತು. (ಜಿ.ಆರ್.ಆರ್.)

**ಗ್ವಿನಿಚೆಲ್ಲಿ, ಗ್ವಿಡೋ :** ಸು. 1240–76. ಇಟಲಿಯ ಒಬ್ಬ ಕವಿ. ಈತ ಜನಿಸಿದ್ದು ಬೊಲೊನ್ಯ ಎಂಬಲ್ಲಿ. ಕೆಲಕಾಲ ನ್ಯಾಯಶಾಸ್ತ್ರಪಂಡಿತನಾಗಿ ಸೇವೆ ಸಲ್ಲಿಸಿದ. ಘಿಬಲೀನ್ ಲ್ಯಾಂಬರ್‌ಟಾಜ್ಜ್ ಪಕ್ಷದ ಇನ್ನಿತರ ಸದಸ್ಯರೊಂದಿಗೆ ಈತನನ್ನೂ ದೇಶದಿಂದ ಗಡೀಪಾರುಮಾಡಲಾಯಿತು (1274). ದೇಶ ಬಿಟ್ಟು ಹೊರಗಿದ್ದಾಗಲೇ ಮರಣ ಹೊಂದಿದ. ಇವನ ಬಾಳು ಅಲ್ಪ ಅವಧಿಯದ್ದಾದರೂ ಈತನ ಕವನಸೃಷ್ಟಿ ವಿದ್ವಜ್ಜನರ ಮೆಚ್ಚುಗೆ

ಗಳಿಸಿತು. ಪ್ರೇಮಕಾವ್ಯದ ವಸ್ತುವನ್ನು ಕುರಿತು ಹೇಳುವುದು ಮಾತ್ರವಲ್ಲದೆ ಪದ್ಯಶೈಲಿಯಲ್ಲೂ ಈತ ತನ್ನ ವೈಶಿಷ್ಟ್ಯವನ್ನು ತೋರ್ಪಡಿಸಿದ್ದಾನೆ. ಪ್ರೇಮದ ಆಂತರಂಗಿಕ ಆಧ್ಯಾತ್ಮಿಕತೆ ಮತ್ತು ಘನತೆಗಳು ಇವನ ಕವನಗಳಲ್ಲಿ ಕಾಣಬರುತ್ತವೆ. ತನ್ನ ಅನುಭವಗಳನ್ನು ಬಲು ನಯವಾಗಿಯೂ ಜಾಣ್ಮೆಯಿಂದಲೂ ತನ್ನ ಕವನಗಳಲ್ಲಿ ಈತ ಮೂಡಿಸಿದ್ದಾನೆ. ಡಾಂಟೆಯಂಥ ಕವಿಗಳಿಂದಲೂ ಈತ ಮೆಚ್ಚುಗೆ ಪಡೆದಿದ್ದ. ಡಾಂಟೆ ಈತನನ್ನು ತನ್ನ ಸಾಹಿತ್ಯ ಜನಕನೆಂದು ಕರೆದದ್ದುಂಟು. ಈತ 20 ಲಘುಗೀತೆಗಳನ್ನೂ ಹಲವು ಸಾನೆಟ್ಟುಗಳನ್ನೂ ರಚಿಸಿದ್ದಾನೆ. ಈ ಕವನಗಳ ಅನುವಾದಗಳು ದಿ ಅರ್ಲಿ ಇಟ್ಯಾಲಿಯನ್ ಪೋಯೆಟ್ಸ್ (1861) ಮತ್ತು ಎನ್ ಆಂತಾಲಜಿ ಆಫ್ ಇಟ್ಯಾಲಿಯನ್ ಪೋಯೆಮ್ಸ್ (1922) ಎಂಬ ಕವನ ಸಂಗ್ರಹಗಳಲ್ಲಿ ಕಾಣಬರುತ್ತವೆ. (ಪಿ.ಎಂ.ಎಚ್.)

**ಗ್ರೀಸ್ ಮನೆತನ :** 16ನೆಯ ಶತಮಾನದಲ್ಲಿ ಫ್ರೆಂಚ್ ರಾಜಕಾರಣದಲ್ಲಿ ಪ್ರವರ್ಧಮಾನವಾಗಿದ್ದ, ಲೊರೇನ್ ಡ್ಯೂಕ್ ಮನೆತನದ ಒಂದು ಕಿರಿ ಶಾಖೆ. ಇದರ ಸ್ಥಾಪಕ ಕ್ಲಾಡ್ ಡೀ ಲೊರೇನ್. ಈತ ಗ್ವೀಸಿನ ಪ್ರಥಮ ಡ್ಯೂಕ್ ಎನಿಸಿಕೊಂಡಿದ್ದ. 1ನೆಯ ಫ್ರಾನ್ಸಿಸ್ ಈತನನ್ನು ಡ್ಯೂಕನಾಗಿ (1496–1550) ನೇಮಿಸಿದ. ಇವನ ಮಗಳು, ಗ್ವೀಸಿನ ಮೇರಿ, ಸ್ಕಾಟ್ಲೆಂಡಿನ 5ನೆಯ ಜೇಮ್ಸ್‌ನನ್ನು ಮದುವೆಯಾದಳು. ಸ್ಕಾಟರ ರಾಣಿ ಮೇರಿಯ ತಾಯಿ ಆಕೆ. ಇವನ ಮಗ ಫ್ರಾಂಕಾಯ್ ದ ಲೊರೇನ್ (1519–63) ಗ್ವೀಸಿನ 2ನೆಯ ಡ್ಯೂಕ್ ಆಗಿದ್ದ. ಇನ್ನೊಬ್ಬ ಮಗ ಚಾರಲ್ಸ್ ದ ಗ್ವೀಸ್ (ಸು. 1525–1574) ಕಾರ್ಡಿನಲ್ ದ ಲೊರೇನ್ ಆಗಿದ್ದು, ಸ್ಕಾಟರ ರಾಣಿ ಮೇರಿಯ ಮೊದಲನೆಯ ಗಂಡನಾಗಿದ್ದ 2ನೆಯ ಫ್ರಾನ್ಸಿಸನ ಕಾಲದಲ್ಲಿ ಫ್ರೆಂಚ್ ರಾಜಕೀಯದಲ್ಲಿ ಪ್ರಭಾವಶಾಲಿಯಾಗಿದ್ದ. (ಎಚ್.ಆರ್.ಆರ್.ಐ.)

ಈ ಮನೆತನದವರು ಹ್ಯೂಜೆನೋಗಳ ವಿರುದ್ಧ ಕೆಥೊಲಿಕರನ್ನು ಬೆಂಬಲಿಸಿದರಲ್ಲದೆ ಅನ್ಬಾದ ಪಿತೂರಿಯನ್ನು ನಿರ್ದಯೆಯಿಂದ ದಮನಮಾಡಿದರು. ಫ್ರಾನ್ಸಿಸನ ಮರಣಾನಂತರ ಕ್ಯಾದರೀನ್ ದ ಮೆಡಿಚಿಯನ ಉದಾರ ನೀತಿಯನ್ನು ಇವರು ವಿರೋಧಿಸಿದರಲ್ಲದೆ, 1562ರ ಮತೀಯ ಯುದ್ಧಗಳನ್ನು ಪ್ರಚೋದಿಸಿದರು. ಹ್ಯೂಜೆನೋಗಳನ್ನು ಫ್ರಾಂಕಾಯ್ ಸೋಲಿಸಿದ. ಅನಂತರ ಅವನೇ ಕೊಲೆಗೆ ಈಡಾದ. ಚಾರಲ್ಸ್ ಸ್ಪೇನಿನ ಸಹಾಯಕ್ಕಾಗಿ ಸಂಧಾನ ನಡೆಸಿ, ರಾಜಾಸ್ಥಾನದಲ್ಲಿ 1567–70ರಲ್ಲಿ ಅಧಿಕಾರಸ್ಥನಾಗಿದ್ದ. ಗ್ವೀಸಿನ ಮೂರನೆಯ ಡ್ಯೂಕ್ ಹೆನ್ರಿ ದ ಲೊರೇನ್ (1550–88). ಈತ ಫ್ರಾಂಕಾಯ್‌ನ ಮಗ. ಸಂತ ಬಾರ್ತೊಲೇಮ್ಯೊ ದಿನದ ಹತ್ಯಾಕಾಂಡಕ್ಕೆ ಹಂಚಿಕೆ ಹಾಕಿದವನು ಈತ. 1576ರ ಅನಂತರ ಇವನು ಕೆಥೊಲಿಕ್ ಕೂಟ ಸ್ಥಾಪಿಸಿದ. ಈತ ಮಹತ್ವಾಕಾಂಕ್ಷಿ. 3ನೆಯ ಹೆನ್ರಿಯ ವಿರುದ್ಧ ಪ್ಯಾರಿಸಿನ ಬಂಡಾಯವನ್ನು ಎತ್ತಿಕಟ್ಟಿ, ಆ ನಗರವನ್ನು ವಶಪಡಿಸಿಕೊಂಡಿದ್ದ. ದೊರೆ ಇವನೊಂದಿಗೆ ಒಪ್ಪಂದ ಮಾಡಿಕೊಂಡಂತೆ ನಟಿಸಿ ಇವನನ್ನು ಕೊಲ್ಲಿಸಿದ. ಇವನ ಸೋದರ ಲೂಯಿ ದ ಲೊರೇನನನ್ನೂ (1555–1588) ದೊರೆ ಆಗಲೇ ಕೊಲ್ಲಿಸಿದ (1588), ಕ್ಯಾತೊಲಿಕ್ ಲೀಗಿನ ನಾಯಕತ್ವ ಇವರ ಸೋದರ ಹೆನ್ರಿ ದ ಲೊರೇನನಿಗೆ (1614–1664) ಸಂದಿತು. ಈತ ಗ್ವೀಸಿನ 5ನೆಯ ಡ್ಯೂಕ್. ಇವನು ರಿಚಲೂ ವಿರುದ್ಧ ಪಿತೂರಿ ಮಾಡಿದ. ನೇಪಲ್ಸನ್ನು ಹಿಡಿದುಕೊಳ್ಳಲು ಪ್ರಯತ್ನಿಸಿ ಸ್ಪೇನಿನಲ್ಲಿ ಸ್ವಲ್ಪಕಾಲ ಬಂದಿಯಾಗಿದ್ದು ಅನಂತರ ಇವನು 14ನೆಯ ಲೂಯಿಯ ದರ್ಬಾರು ಬಕ್ಷಿಯಾಗಿದ್ದ. ಇವನ ಸೋದರನ ಮಗ ಲೂಯಿ ಜೋಸೆಫ್ (1650–1671) 6ನೆಯ ಡ್ಯೂಕ್. ಇವನು 13ನೆಯ ಲೂಯಿಯ ಸೋದರನ ಮಗಳಾದ ಎಲಿಜಬೆತಳನ್ನು ಮದುವೆಯಾಗಿದ್ದ. ಗ್ವೀಸಿನ 7ನೆಯ ಮತ್ತು ಕೊನೆಯ ಡ್ಯೂಕ್ ಫ್ರಾಂಕಾಯ್ ಜೋಸೆಫ್. ಇವನು ಲೂಯಿ ಜೋಸೆಫನ ಮಗ. ಅಲ್ಲಿಂದ ಮುಂದಕ್ಕೂ ಇದರ ಗಂಡುಸಂತಾನ ಮುಂದುವರೆಯಿತಾದರೂ ಗ್ವೀಸ್ ಡ್ಯೂಕ್ ಪದವಿ ಕೊನೆಗೊಂಡಿತು. 1704ರಲ್ಲಿ ಇದನ್ನು ಬೂರ್ಬನ್ ರಾಜಕುಮಾರರ ಸಲುವಾಗಿ ಮತ್ತೆ ಆರಂಭಿಸಲಾಯಿತಾದರೂ ಇದು 19ನೆಯ ಶತಮಾನದಲ್ಲಿ ಬೂರ್ಬನ್ ಆರ್ಲಿಯನ್ಸ್ ಮನೆತನದಲ್ಲಿ ಸೇರಿಹೋಯಿತು. *

**ಗ್ವೆರಿಜ಼ :** ಕೊಲೋಬಸ್ ಜಾತಿಗೆ ಸೇರಿದ 8 ಬಗೆಯ ಕೋತಿಗಳ ಸಾಮಾನ್ಯ ಹೆಸರು. ಕೊಲೋಬಸ್ ಪಾಲಿಕೋಮೋಸ್ (ಕಪ್ಪು ಬಿಳಿಪು ಗ್ವೆರಿಜ಼), ಕೊ. ಬೆಡಿಂಪಸ್ (ಕೆಂಪು ಗ್ವೆರಿಜ಼), ಕೊ. ವೇರಸ್ (ಆಲಿವ್ ಗ್ವೆರಿಜ಼) ಈ ಮೂರು ಬಗೆಗಳು. ಇವು ಪ್ರೈಮೇಟ್ ಗಣದ ಸರ್ಕೋಪಿತೆಸಿಡೀ ಕುಟುಂಬಕ್ಕೆ ಸೇರಿವೆ. ಮಧ್ಯ ಆಫ್ರಿಕದ ದಟ್ಟಕಾಡುಗಳಲ್ಲಿ ಮಾತ್ರ ಇವುಗಳ ವಾಸ. ಸೆನೆಗಲ್, ಇಥಿಯೋಪಿಯ ಮತ್ತು ಅಂಗೋಲಗಳ ವಿಸ್ತಾರವಾದ ಪ್ರದೇಶಗಳಲ್ಲಿ ಕಾಣಸಿಗುತ್ತವೆ.

ಚಿಕ್ಕ ಗಾತ್ರದ ಕಪಿಗಳಿವು. ದೇಹದ ಉದ್ದ 50–70 ಸೆಂ.ಮೀ. ತೂಕ ಸುಮಾರು 12 ಕೆಜಿ. ದೇಹದಷ್ಟೇ ಉದ್ದದ ಬಾಲವಿದೆ. ತೆಳುವಾದ ದೇಹ, ಚೆನ್ನಾಗಿ ಬೆಳೆದ ಜಡ್ಡುಗಟ್ಟಿದ ಪೃಷ್ಠದ ಉಬ್ಬುಭಾಗ ಇವು ಗ್ವೆರಿಜ಼ಗಳ ಕೆಲವು ಲಕ್ಷಣಗಳು. ಹೆಬ್ಬೆರಳು ಇಲ್ಲದಿರುವುದು ಇವುಗಳ ಅತ್ಯಂತ ಮುಖ್ಯ ಲಕ್ಷಣ. ಇದರಿಂದಲೇ ಈ ಜಾತಿಗೆ ಕೊಲೋಬಸ್ ಎಂಬ ಹೆಸರು ಬಂದಿದೆ (ಗ್ರೀಕ್ ಭಾಷೆಯಲ್ಲಿ ಕೊಲೋಬಸ್ ಎಂದರೆ ಊನವಾಗಿರುವುದು ಎಂದು ಅರ್ಥ). ಕಪ್ಪು ಬಿಳುಪು ಗ್ವೆರಿಜ಼ದಲ್ಲಿ ಬೆನ್ನಿನ ಎರಡು ಪಕ್ಕಗಳಲ್ಲೂ ಬಾಲದಲ್ಲೂ ಬಹಳ ಉದ್ದವಾದ ಬಿಳಿಯ ಬಣ್ಣದ ಮತ್ತು ರೇಷ್ಮೆಯಂಥ ಕೂದಲುಗಳಿವೆ. ಕೆನ್ನೆಯ ಮೇಲೂ ಉದ್ದನೆಯ ಬಿಳಿಯ ಕೂದಲುಗಳ ಕುಚ್ಚಿದೆ, ಇದರಿಂದಾಗಿ ಇದನ್ನು ಬಿಷಪ್ ಮಂಕಿ ಎಂದು ಕರೆಯುವುದುಂಟು.



ಪೂರ್ವ ಆಫ್ರಿಕದ ಗ್ವೆರಿಜ಼ಗಳು

ಇವು ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ ಮತ್ತು ಪ್ರತಿ ಗುಂಪಿನಲ್ಲಿ 3 ರಿಂದ 4 ಹೆಣ್ಣುಗಳು ಹಾಗೂ 1 ರಿಂದ 3 ಗಂಡುಗಳು ಹಾಗೂ ಮರಿಗಳು ಇರುತ್ತವೆ. ಇವುಗಳು ತಮ್ಮ ಪ್ರದೇಶಗಳನ್ನು ವಿವಿಧರೀತಿಯ ಧ್ವನಿಗಳಿಂದ ರಕ್ಷಿಸಿಕೊಳ್ಳುತ್ತವೆ.

ಗ್ವೆರಿಜ಼ಗಳು ಸಾಮಾನ್ಯವಾಗಿ ಎತ್ತರವಾದ ಮರಗಳಲ್ಲೇ ಇರುತ್ತವೆ. ನೆಲಕ್ಕೆ ಇಳಿಯುವುದು ಅಪರೂಪ. ವಿವಿಧ ಬಗೆಯ ಹಣ್ಣು, ಎಲೆಗಳನ್ನು ತಿಂದು ಬದುಕುತ್ತವೆ. ಇವು ಬಲುನಾಚಿಕೆಯ ಸ್ವಭಾವದವು. ಇವುಗಳ ದೇಹದ ಬಣ್ಣ ಹಿನ್ನೆಲೆಯೊಂದಿಗೆ ಬಲು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಇವು ಸಾಮಾನ್ಯವಾಗಿ ಸ್ವಲ್ಪವೂ ಸದ್ದುಮಾಡದೆ ಅಡಗಿರುವುದರಿಂದ ಕಣ್ಣಿಗೆ ಬೀಳುವುದೇ ಅಪರೂಪ. ಗ್ವೆರಿಜ಼ಗಳನ್ನು ಅವುಗಳ ಚರ್ಮಕ್ಕಾಗಿ ಬೇಟೆಯಾಡುತ್ತಾರೆ. ಆಫ್ರಿಕದ ಮೂಲವಾಸಿಗಳು ತಮ್ಮ ತಲೆಯುಡಿಗೆ, ಮೇಲಂಗಿ, ಬಿಲ್ಲು, ಗುರಾಣಿ ಮುಂತಾದವುಗಳ ಅಲಂಕರಣಕ್ಕೆ ಈ ಚರ್ಮವನ್ನು ಉಪಯೋಗಿಸುತ್ತಾರೆ. (ಜಿ.ಎಸ್.ಆರ್.)

**ಗ್ವೈಯಕಮ್ :** ಜೈಗೋಫಿಲೇಸೀ ಕುಟುಂಬಕ್ಕೆ ಸೇರಿದ ಒಂದು ಮರ. ಗ್ವೈಯಕಮ್ ಅಫಿಸಿನೇಲ್ ಇದರ ವೈಜ್ಞಾನಿಕ ಹೆಸರು. ಇದು ಮೂಲತಃ ಕರಿಬಿಯನ್ ಮತ್ತು ದಕ್ಷಿಣ ಅಮೆರಿಕದ ಉಷ್ಣವಲಯದ್ದು. ಭಾರತದಲ್ಲಿ ಇದನ್ನು ತೋಟಗಳಲ್ಲಿ ಬೆಳೆಸುವುದುಂಟು.



ಗ್ವೈ. ಅಫಿಸಿನೇಲ್ ಪ್ರಭೇದದ ಹೂರೆಂಬೆ

ಇದು ಸುಮಾರು 6–15ಮೀ. ಎತ್ತರಕ್ಕೆ ಬೆಳೆಯುವ ನಿತ್ಯಹಸಿರಿನ ಮರ. ಡೊಂಕುಡೊಂಕಾದ ಮುಖ್ಯಕಾಂಡ, ಗಂಟುಗಳುಳ್ಳ ರೆಂಬೆಗಳು, ಹಸಿರು ಮತ್ತು ಊದಾ ಬಣ್ಣದ ಮಚ್ಚೆಗಳಿರುವ ನುಣುಪಾದ ಹಾಗೂ ಬೂದಿಬಣ್ಣದ ತೊಗಟೆ, ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿರುವ ಸಂಯುಕ್ತ ಎಲೆಗಳು, ಎಲೆಗಳ ಬುಡದಲ್ಲಿ ಕಿತ್ತಳೆ ಬಣ್ಣದ ಚುಕ್ಕೆ ಇರುವುದು, ರಂಬೆಗಳ ತುದಿಗಳಲ್ಲಿನ ಗೊಂಚಲುಗಳಲ್ಲಿ ಸಮಾವೇಶಗೊಂಡಿರುವ ನೀಲಿ ಬಣ್ಣದ ಹೂಗಳು, ಚಿಕ್ಕಗಾತ್ರದ ಮತ್ತು ಹಳದಿ ಇಲ್ಲವೆ ಕಿತ್ತಳೆ ಬಣ್ಣದ ಬೆರಿ ಮಾದರಿಯ ಹಣ್ಣುಗಳು – ಇವು ಗ್ವೈಯಕಮ್ ಮರದ ಮುಖ್ಯ ಲಕ್ಷಣಗಳು. ಇದರ ಚೌಬೀನೆಗೆ ಲಿಗ್ನಮ್ ವೈಟೇ ಎಂಬ ವಾಣಿಜ್ಯ ನಾಮವಿದೆ. ಮರದ ಚೇಗುಭಾಗ ಹಸಿರುಮಿಶ್ರಿತ ಕಂದು ಇಲ್ಲವೆ ಕಪ್ಪುಬಣ್ಣದ್ದು. ಇದಕ್ಕೆ ಒಂದು ರೀತಿಯ ಹುಳಿವಾಸನೆ ಹಾಗು ಕಹಿರುಚಿ ಇದೆ. ರಸಕಾಷ್ಠ ಹಳದಿ ಬಣ್ಣದ್ದು. ಚೌಬೀನೆ ಬಲುಗಟ್ಟಿ, ರಾಳಮಯ ಮತ್ತು ಇದರಲ್ಲಿನ ಎಳೆಗಳು ಓರೆಮಾದರಿಯಲ್ಲಿ ಜೋಡಣೆಗೊಂಡಿವೆ. ಆದ್ದರಿಂದ ಇದನ್ನು ಸೀಳುವುದಾಗಲಿ ಇದರಿಂದ ಮರಗೆಲಸ ಮಾಡುವುದಾಗಲಿ ಸಾಧ್ಯವಿಲ್ಲ. ಆದರೆ ಇದು ಅತ್ಯಂತ ಭಾರವಾದ ಮತ್ತು ಗಟ್ಟಿಯಾದ

ಚೌಬೀನೆಗಳಲ್ಲೊಂದು. ಹೀಗಾಗಿ ರಾಟೆ, ಕೊರೆಯಚ್ಚು ಮತ್ತು ಉಳಿಕೊರಡುಗಳು, ಕುಂಚದ ಹಿಡಿಗಳು, ಒನಕೆ, ಸ್ಕಿಟಲ್ ಚೆಂಡುಗಳು, ಉರುಳುಯಂತ್ರ, ರೇಚಕಯಂತ್ರ ಮುಂತಾದವುಗಳ ಘರ್ಷಣ ಭಾಗಗಳು–ಇವೇ ಮೊದಲಾದವನ್ನು ತಯಾರಿಸಲು ಇದನ್ನು ಬಳಸುತ್ತಾರೆ. ಇದು ಉಪ್ಪುನೀರಿನಿಂದ ಹಾಳಾಗುವುದಿಲ್ಲವಾದ್ದರಿಂದ ಹಡಗುಗಳ ಚಾಲಕದ ಅಲಗು ಮುಂತಾದವುಗಳನ್ನು ತಯಾರಿಸಲು ಇದನ್ನು ಉಪಯೋಗಿಸುವುದುಂಟು. ಗ್ವೈಯಕಮ್ ಮರದ ರಾಳಕ್ಕೆ ಗ್ವೈಯಕಮ್ ಗೋಂದು ಇಲ್ಲವೆ ಗೈವಯಕ್ ರಾಳ ಎಂದು ಹೆಸರು. ಮರದಿಂದ ಸ್ವಾಭಾವಿಕವಾಗಿಯೇ ಒಸರುವ ಇದನ್ನು ನೇರವಾಗಿ ಸಂಗ್ರಹಿಸಬಹುದು. ಹೆಚ್ಚು ಮೊತ್ತದಲ್ಲಿ ಬೇಕಾದಾಗ ಮರದ ದಿಮ್ಮಿಗಳ ಮೇಲೆ ಅಲ್ಲಲ್ಲಿ ಕಚ್ಚುಮಾಡಿ ಅವುಗಳ ಒಂದು ತುದಿಗೆ ಬೆಂಕಿ ಹಚ್ಚಿ ರಾಳ ಹೊರಬರುವಂತೆ ಮಾಡಿಯೊ ಇಲ್ಲವೆ ಮರವನ್ನು ಚಕ್ಕೆ ಇಲ್ಲವೆ ಪುಡಿಯನ್ನಾಗಿ ಮಾಡಿ ಉಪ್ಪುನೀರಿನಲ್ಲಿ ಕುದಿಸಿ ರಾಳ ತೇಲುವಂತೆ ಮಾಡಿಯೊ ಸಂಗ್ರಹಿಸುವುದುಂಟು. ಆಗತಾನೇ ಸ್ರವಿಸಿದ ರಾಳ ಕಂದು ಇಲ್ಲವೆ ಕಪ್ಪು ಮಿಶ್ರಿತ ಕಂದು ಬಣ್ಣದ್ದು. ಗಾಳಿಗೆ ಕೊಂಚಕಾಲ ಒಡ್ಡಿದರೆ ಹಸಿರು ಬಣ್ಣವನ್ನು ತಳೆಯುವುದಲ್ಲದೆ ಪಾರದೀಪಕವಾದ (ಟ್ರಾನ್ಸ್‌ಲ್ಯೂಸೆಂಟ್) ಗಾಜಿನಂಥ ಹರಳುಗಳ ರೂಪಕ್ಕೆ ತಿರುಗುತ್ತದೆ. ಆಲ್ಕೊಹಾಲ್, ಈಥರ್, ಕ್ಲೋರೋಫಾರಮುಗಳಲ್ಲಿ ಕರಗುತ್ತದೆ. ಇದಕ್ಕೆ ಒಂದು ಬಗೆಯ ಕಡುರುಚಿ ಉಂಟು. ತಿಂದರೆ ಗಂಟಲುರಿ ಉಂಟಾಗುತ್ತದೆ. ಹಂದಿಯ ಕೊಬ್ಬು (ಲಾರ್ಡ್) ಮತ್ತು ನಿರ್ಜಲೀಕರಿಸಿದ ಆಹಾರವಸ್ತುಗಳು ಕೆಡದೆ ಹಲವು ಕಾಲ ಇರುವಂತೆ ಮಾಡಲು ಗ್ವೈಯಕ್ ರಾಳವನ್ನು ಬಳಸುತ್ತಾರೆ. ಅಲ್ಲದೆ ಕೀಲುವಾತ, ಗಂಟಲ ಉರಿಯೂತ, ಟಾನ್ಸಿಲೈಟಿಸ್ ಮುಂತಾದ ರೋಗಗಳ ನಿವಾರಣೆಗೂ ಲಘುವಿರೇಚಕವಾಗಿಯೂ ಇದನ್ನು ಉಪಯೋಗಿಸುವುದುಂಟು. ಮೂತ್ರ ಮುಂತಾದವುಗಳಲ್ಲಿ ರಕ್ತ ಇಲ್ಲವೆ ಹಿಮೊಗ್ಲಾಬಿನ್ ಇರವನ್ನು ಪತ್ತೆ ಹಚ್ಚಲು ಗ್ವೈಯಕಮ್ ಟಿಂಕ್ಚರನ್ನು ಬಳಸುತ್ತಿದ್ದರು. (ಎಚ್.ಎನ್.ಸಿ.)

**ಘ** ಕನ್ನಡ ವರ್ಣಮಾಲೆಯಲ್ಲಿನ ಕ ವರ್ಗದಲ್ಲಿ ನಾಲ್ಕನೆಯದು. ಮಹಾಪ್ರಾಣಾಕ್ಷರ. ಇದು ಕಂಠ್ಯ ಘೋಷಸ್ಪರ್ಶ. ಅಶೋಕನ ಕಾಲದಿಂದ ಮೈಸೂರು ಅರಸರ ಕಾಲದವರೆಗಿನ ಬರೆಹಗಳನ್ನು ಪರಿಶೀಲಿಸಿದರೆ ಈ ಅಕ್ಷರದ ರೂಪ ಅದೆಷ್ಟು ಬದಲಾಗಿದೆ ಯೆಂಬುದು ಸ್ಪಷ್ಟವಾಗುತ್ತದೆ. ರಾಷ್ಟ್ರಕೂಟರ ಕಾಲಕ್ಕೆ ಈ ಅಕ್ಷರದ ಮುಖ್ಯಭಾಗವಾದ ಕೊಂಡಿಯೊಂದು ಬಲಭಾಗದಲ್ಲಿ ಮೂಡಿರುವುದನ್ನು ಕಾಣಬಹುದು. ಇದೇ ರೂಪ ನಾಲ್ಕು ಶತಮಾನಗಳ ಕಾಲ ನಡೆದುಬಂತು. ಅನಂತರ, ಇದೇ ರೂಪದ ಷ ಮತ್ತು ಹ ಕಾರಗಳಿಂದ ಇದನ್ನು ಪ್ರತ್ಯೇಕಿಸಲು ಇದರ ಹೊಕ್ಕಳನ್ನು ಸೀಳಿದಂತೆ ತೋರುತ್ತದೆ. 18ನೆಯ ಶತಮಾನದ ಹೊತ್ತಿಗೆ ಖಚಿತ ಗೊಂಡ ಈ ರೂಪವೇ ಇಂದಿಗೂ ಬಳಕೆಯಲ್ಲಿದೆ. (ಎ.ವಿ.ಎನ್.)



ಅಶೋಕ ಪ್ರ.ಶ.ಪೂ.3ನೆಯ ಶತಮಾನ

ಶಾತವಾಹನ ಪ್ರ.ಶ.2ನೆಯ ಶತಮಾನ

ಕದಂಬ ಪ್ರ.ಶ.5ನೆಯ ಶತಮಾನ

ಗಂಗ ಪ್ರ.ಶ.6ನೆಯ ಶತಮಾನ

ರಾಷ್ಟ್ರಕೂಟ ಪ್ರ.ಶ.9ನೆಯ ಶತಮಾನ

ಕಲ್ಯಾಣಿಚಾಳುಕ್ಯ ಪ್ರ.ಶ.11ನೆಯ ಶತಮಾನ

ಕಳಚೂರಿ, ಹೊಯ್ಸಳ ಮತ್ತು ಸೇವುಣ. ಪ್ರ.ಶ.13ನೆಯ ಶತಮಾನ

ವಿಜಯನಗರ ಪ್ರ.ಶ.15ನೆಯ ಶತಮಾನ

ಮೈಸೂರು ಅರಸರು ಪ್ರ.ಶ. 18ನೆಯ ಶತಮಾನ

**ಘಂಟಾಕರ್ಣ :** ಶಿವಗಣದಲ್ಲೊಬ್ಬ. ಈತನ ಬಗ್ಗೆ ಅನೇಕ ಕಥೆಗಳಿವೆ. ಶಾಪಗ್ರಸ್ತನಾದ ಈತ ಮಾನವಯೋನಿಯಲ್ಲಿ ಹುಟ್ಟಿ, ವಿಕ್ರಮನ ಆಸ್ಥಾನದಲ್ಲಿ ಪಂಡಿತರನ್ನು ಗೆಲ್ಲಲಿಕ್ಕಾಗಿ ವರ ಬೇಡಲು ಶಿವನನ್ನು ಆರಾಧಿಸಿದ. ಶಿವ ಪ್ರತ್ಯಕ್ಷನಾಗಿ, ಕಾಳಿದಾಸನ ವಿನಾ ಎಲ್ಲರನ್ನೂ ಗೆಲ್ಲುತ್ತೀಯೆ ಎಂದು ವರಕೊಟ್ಟ. ಅಷ್ಟಕ್ಕೇ ತೃಪ್ತನಾಗದೆ ಕೋಪಗೊಂಡ ಘಂಟಾಕರ್ಣ ತಾನಿನ್ನು ಶಿವ ಶಬ್ದವನ್ನುಚ್ಚರಿಸುವುದಿಲ್ಲವೆಂದು ಪಣತೊಟ್ಟು ತನ್ನ ಜೊತೆ ವಾದ ಹೂಡಲು ಕಾಳಿದಾಸನನ್ನು ಆಹ್ವಾನಿಸಿದ. ಶಿವನ ಮೇಲೆ ಒಂದು ಸ್ತೋತ್ರವನ್ನು ಘಂಟಾಕರ್ಣ ರಚಿಸಿದರೆ ತಾನು ಪರಾಭವನಾದೆನೆಂದು ಒಪ್ಪಿಕೊಳ್ಳುವುದಾಗಿ ಕಾಳಿದಾಸ ತಿಳಿಸಿದ. ಹಾಗೆ ಮಾಡಿ ಘಂಟಾಕರ್ಣ ಕಾಳಿದಾಸನನ್ನು ಸೋಲಿಸಿದನಂತೆ. ಸ್ವಾರಸ್ಯವೇನೆಂದರೆ ಈತ ರಚಿಸಿದ ಶಿವಸ್ತೋತ್ರದಲ್ಲಿ ಎಲ್ಲಿಯೂ ಶಿವನ ಹೆಸರು ಬಂದಿರಲಿಲ್ಲ ಎಂಬುದು. ಆಗ ಶಿವ ಪ್ರಸನ್ನನಾಗಿ ಈತನನ್ನು ತನ್ನ ಪರಿವಾರದಲ್ಲಿ ಸೇರಿಸಿಕೊಂಡ.

ಈ ಕಥೆಯ ಮತ್ತೊಂದು ರೂಪಾಂತರ ಹರಿವಂಶದಲ್ಲಿ ಬಂದಿದೆ. ಘಂಟಾಕರ್ಣ ಪರಮ ಶಿವಭಕ್ತ, ಅನ್ಯದೈವದ ಹೆಸರೇ ತನ್ನ ಕಿವಿಗೆ ಬೀಳದಂತೆ ಕಿವಿಗೆ ಘಂಟೆ ಕಟ್ಟಿಕೊಂಡಿದ್ದ. ಒಮ್ಮೆ ಶಿವ ವೇಷಾಂತರದಿಂದ ಬಂದು 'ಹರಿಯಿತು' ಎಂಬ ಪದವನ್ನು ಈತನ ಎದುರಿಗೆ ಪ್ರಯೋಗಿಸಲಾಗಿ ಸಿಟ್ಟುಗೊಂಡ ಘಂಟಾಕರ್ಣ ಶಿವನನ್ನು ತಾಡಿಸಿ ಓಡಿಸಿದ. ಹರ ಮಹತ್ತ್ವವನ್ನು ಘಂಟಾಘೋಷವಾಗಿ ಸಾರಿದ ಈತನನ್ನು ಘಂಟಾಕರ್ಣನೆಂದು ಕರೆಯಲಾಗಿದೆ. ಈತ ಪೂಜಿಸಿದ ಪುಷ್ಪ ಬಾಡುತ್ತಿರಲಿಲ್ಲ. ಒಮ್ಮೆ ಸೂರ್ಯ ಅವನ್ನು ಬಾಡಿಸಲು ಕೋಪಗೊಂಡ ಘಂಟಾಕರ್ಣ ಕುಷ್ಠರೋಗಿಯಾಗೆಂದು ಸೂರ್ಯನನ್ನು ಶಪಿಸಿದ. ಆಗ ಸೂರ್ಯ ಈತನನ್ನೇ ಶರಣುಹೋಗಲು ಮನೋಹರನೆಂಬ ಗಣೇಶ್ವರನ ಪಾದೋದಕದಿಂದ ರೋಗ ವಾಸಿಯಾಗುವುದೆಂದು ಶಾಪವಿಮೋಚನ ಮಾರ್ಗವನ್ನು ತಿಳಿಸಿದ. ಆಗ ಸೂರ್ಯ ಕಾಶಿಯಲ್ಲಿ ಬಾಲಾರ್ಕೇಶ್ವರನನ್ನು ಸ್ಥಾಪಿಸಿ ಗಣೇಶ್ವರನ ಪಾದೋದಕವನ್ನು ಸ್ವೀಕರಿಸಿ ಕಷ್ಟವನ್ನು ಕಳೆದುಕೊಂಡ. ಈಗಲೂ ಬಂಗಾಳದಲ್ಲಿ ಘಂಟಾಕರ್ಣನನ್ನು ದೇವರೆಂದು ಭಾವಿಸಿ ಆಧಿವ್ಯಾಧಿಗಳಿಂದ ತಮ್ಮನ್ನು ರಕ್ಷಿಸಲು ಈತನನ್ನು ಪೂಜಿಸುತ್ತಾರೆ. ಈ ಪೂಜೆಗೆ ಯಾರ ಆವಶ್ಯಕತೆಯೂ ಇಲ್ಲ. ಮನೆಯಲ್ಲಿನ ವೃದ್ಧಸ್ತ್ರೀಯೇ ಈ ಕೆಲಸವನ್ನು ಸಾಗಿಸಬಹುದು. ಘಂಟಾಕರ್ಣನ ಪೂಜೆಗೆ ಬೇಕಾಗುವ ಸರಂಜಾಮನ್ನು ಭಿಕ್ಷೆಯೆತ್ತಿ ಕೂಡಿಸುತ್ತಾರೆ. ಇನ್ನೂ ಹಲವು ಕಡೆ ಮಸಿಯಾದ ಒಂದು ಮಡಕೆಯನ್ನು ತೆಗೆದುಕೊಂಡು ಅದಕ್ಕೆ ಗೋಮಯವನ್ನು ಲೇಪಿಸಿ, ಕವಡೆಗಳನ್ನು ಅಂಟಿಸಿ ಶೃಂಗರಿಸಿ ಘಂಟಾಕರ್ಣನ ಹೆಸರಿನಲ್ಲಿ ಪೂಜಿಸುತ್ತಾರೆ.

ಇನ್ನೊಂದು ಹೇಳಿಕೆಯ ಪ್ರಕಾರ ಈತ ವಿಷ್ಣುಭಕ್ತನಾಗಿದ್ದ. ಒಮ್ಮೆ ಶಿವನೇ ಸರ್ವೋತ್ತಮನೆಂದು ವಿಷ್ಣುವಿನಿಂದಲೇ ಅರಿತು, ತಪಸ್ಸು ಮಾಡಿ ಶಿವನಿಗೆ ತನ್ನನ್ನೇ ಅರ್ಪಿಸಿಕೊಂಡ. ಆಗ ಈತನ ದೇಹವೇ ಶಿವಗುಡಿಯ ಹೊಸ್ತಿಲಾಯಿತು. ಕೈಕಾಲು ಬಾಗಿಲ ತೋಳಾದವು. ತಲೆ ಘಂಟೆಯಾಯಿತು. ಮೊದಲು ಈ ಘಂಟೆ ಬಾರಿಸಿ ಅನಂತರ ಪೂಜಿಸಿದರೆ ಶಿವ ಮೆಚ್ಚುವನೆಂಬ ನಂಬಿಕೆಯಿದೆ. *

**ಘಜ್ನವೀಡ್ :** ಆಫ್ಘಾನಿಸ್ಥಾನದಲ್ಲಿರುವ ಘಜ್ನಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಎರಡು ಶತಮಾನಗಳ ಕಾಲ (977–1186) ರಾಜ್ಯವಾಳಿದ ವಂಶ. ಇದು ಹಿಂದೂಸ್ತಾನ ಮತ್ತು ಇಸ್ಲಾಂ ರಾಷ್ಟ್ರಗಳ ಸರಹದ್ದಿನ ಬಹುಭಾಗವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಆಳಿ ಮಧ್ಯಯುಗದ ಇತಿಹಾಸದಲ್ಲಿ ಪರಿಣಾಮಕಾರಿ ಪಾತ್ರ ವಹಿಸಿತು. ಮುಸ್ಲಿಮರು ಹಿಂದೂಸ್ತಾನವನ್ನು ಯಶಸ್ವಿಯಾಗಿ ಪ್ರವೇಶಿಸಿ ಅಲ್ಲಿ ರಾಜಕೀಯವಾಗಿ ನೆಲೆಗೊಳ್ಳಲು ಈ ರಾಜವಂಶ ವಿಶೇಷ ಪಾತ್ರ ವಹಿಸಿತು. ಈ ವಂಶದ ಪ್ರಸಿದ್ಧ ದೊರೆ ಮಹಮೂದನ ಕಾಲದಲ್ಲಿ (998–1030) ಘಜ್ನಿ ಸಾಮ್ರಾಜ್ಯ ಅತ್ಯಂತ ವಿಸ್ತಾರವೂ ಪ್ರಭಾವಶಾಲಿಯೂ ಆಗಿ ಮಹೋನ್ನತಿ ಗಳಿಸಿತು. ಆ ಕಾಲದಲ್ಲಿ ವಾಸ್ತುಶಿಲ್ಪ ಹಾಗೂ ಕಲೆಯಲ್ಲೂ ಹಲವು ಸಾಧನೆಗಳಾದವು. ಮಧ್ಯಯುಗದ ಇತಿಹಾಸದಲ್ಲಿ ಘಜ್ನಿವೀಡ್ ವಂಶದ ಸ್ಥಾನ ಹಿರಿದಾದದ್ದು.

ಸಮಾನಿದ್ ಅಮೀರರ ದಂಡನಾಯಕನಾಗಿದ್ದ ಬುಖಾರದ ಅಲಪ್ತಿಗಿನ್ ಘಜ್ನಿಗೆ ದಂಡೆತ್ತಿ ಬಂದು ಸ್ಥಳೀಯ ರಾಜ ಅಬೂ ಅಲೀ ಲವೀಕ್ ಅಥವಾ ಅನೂಕನನ್ನು 962ರಲ್ಲಿ ಸೋಲಿಸಿದ. ಇವನೇ ಘಜ್ನವೀಡ್ ವಂಶದ ಸ್ಥಾಪಕನೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಆದರೆ ಅದೇ ವಂಶಕ್ಕೆ ಸೇರಿದ. 977–8ರಲ್ಲಿ ಘಜ್ನಿಯಲ್ಲಿ ಅಧಿಕಾರ ಸ್ಥಾಪಿಸಿದ ಅಮೀರರ ದಂಡನಾಯಕ ಸಬಕ್ತಿಗೀನ್ ಈ ರಾಜ್ಯದ ಸ್ಥಾಪಕನೆಂದು ಹಲವು ಚರಿತ್ರಕಾರರು ಭಾವಿಸಿದ್ದಾರೆ. ಸಬಕ್ತಿಗೀನ್ ತನ್ನ ಸ್ಥಾನವನ್ನು ಬಲಪಡಿಸಿಕೊಂಡ ಕೂಡಲೇ ರಾಜ್ಯವಿಸ್ತರಣೆಯ ಕಾರ್ಯ ಕೈಗೊಂಡ. ಭಾರತದ ಪಂಜಾಬ್ ಪ್ರಾಂತ್ಯಕ್ಕೆ ದಾಳಿಯಿಟ್ಟು ರಾಜ ಜಯಪಾಲನನ್ನು 979 ಮತ್ತು 988ರಲ್ಲಿ ಸೋಲಿಸಿದ. ಇವನ ಕಾಲದಲ್ಲೇ ಉತ್ತರದ ಬಲೂಚಿಸ್ತಾನ, ಘೋರ್, ಜಾಬುಲಿಸ್ತಾನ ಮತ್ತು ಬ್ಯಾಕ್ಟ್ರಿಯಗಳು ಘಜ್ನಿವೀಡರ ಸಾಮ್ರಾಜ್ಯಕ್ಕೆ ಸೇರಿದುವು. ಹೀಗೆ ಇವನು ಘಜ್ನಿವೀಡರ ಸಾಮ್ರಾಜ್ಯಕ್ಕೆ ಭದ್ರ ಬುನಾದಿ ಹಾಕಿದ. ಇವನ ತರುವಾಯ ಪಟ್ಟಕ್ಕೆ ಬಂದ ಮಹಮೂದ (998–1030) ಘಜ್ನಿವೀಡ್ ಸಾಮ್ರಾಜ್ಯವನ್ನು ಎಲ್ಲ ದಿಕ್ಕುಗಳಲ್ಲೂ ವಿಸ್ತರಿಸಿದನಲ್ಲದೆ ರಾಜಧಾನಿಯನ್ನು ಭವ್ಯವಾಗಿ ನಿರ್ಮಿಸಿ ಈ ವಂಶದ ಅದ್ವಿತೀಯ ಚಕ್ರವರ್ತಿ ಎನಿಸಿಕೊಂಡ. ಹಿಂದುಸ್ತಾನದ ಮೇಲೆ ಈತ 17 ಬಾರಿ ದಂಡಯಾತ್ರೆ ಮಾಡಿದ. ಇವನ ಮರಣಕಾಲಕ್ಕೆ ಘಜ್ನಿವೀಡ್ ಸಾಮ್ರಾಜ್ಯ ಆಫ್ಘಾನಿಸ್ತಾನ ಮತ್ತು ಪರ್ಷಿಯದ ಭಾಗಗಳೂ ಸೇರಿ ಆಕ್ಸಸ್‌ನಿಂದ ಪಂಜಾಬ್ ವರೆಗೂ ವಿಸ್ತರಿಸಿತು. ಪ್ರಪಂಚದ ಮಹಾ ಸಮರಚತುರನಿವನೆಂದು ಪರಿಗಣಿತನಾಗಿದ್ದಾನೆ.

ಇವನ ಸ್ಥೈರ್ಯ, ಸಮಚಿತ್ತ, ಸಮಯಚಾತುರ್ಯಗಳಿಂದಾಗಿ ಏಷ್ಯದ ಇತಿಹಾಸದಲ್ಲೇ ಇವನ ವ್ಯಕ್ತಿತ್ವ ಅತ್ಯಂತ ಕುತೂಹಲಕರವಾದದ್ದು. ಮಹಮೂದನ ತರುವಾಯ ಅಧಿಕಾರಕ್ಕೆ ಬಂದ 1ನೆಯ ಮಸೂದ್ (1030–1040) ದಕ್ಷ ಆಡಳಿತಗಾರನಾಗಿರಲಿಲ್ಲ. ಅವನು ಹಿಂದುಸ್ತಾನದ ಮಾರ್ಗದಲ್ಲಿ ಕೊಲೆಗೀಡಾದ. ಅನಂತರ ಘಜ್ನವೀಡರು ಸಮರ್ಥ ರಾಜರಿಲ್ಲದೆ ದುರ್ಬಲರಾದರು. ತಮ್ಮ ಸಾಮ್ರಾಜ್ಯದ ಪೂರ್ವ ಮತ್ತು ಪಶ್ಚಿಮ ಗಡಿಗಳೆರಡರಲ್ಲೂ ಸ್ವಲ್ಪಸ್ವಲ್ಪ ಭಾಗಗಳು ಕಳೆದುಹೋಗುತ್ತ ಬಂದವು. 1044–46ರಲ್ಲಿ ಸೆಲ್ಜೂಕರು ಪರ್ಷಿಯವನ್ನು ಮುತ್ತಿ ಘಜ್ನವೀಡರನ್ನು ತೀವ್ರವಾಗಿ ದುರ್ಬಲಗೊಳಿಸಿದರು. ಘಜ್ನವೀಡರು ಸೆಲ್ಜೂಕರ ಆಧಿಪತ್ಯವನ್ನು ಮಾನ್ಯ ಮಾಡಿ ಅವರಿಗೆ ಕಪ್ಪ ಒಪ್ಪಿಸಬೇಕಾಯಿತು. ಘಜ್ನವೀಡರ ಆಶ್ರಿತರಾಗಿದ್ದು, ಕ್ರಮೇಣ ಪ್ರಾಬಲ್ಯಗಳಿಸಿ ಅವರೊಂದಿಗೆ ಸ್ಪರ್ಧೆ ಆರಂಭಿಸಿದ್ದ ಘೋರಿ ಕುತ್ಬ–ಉದ್–ದೀನ್ ಮಹಮ್ಮದನನ್ನೂ ಅವನ ತಮ್ಮ ಸೈಫ್–ಉದ್–ದೀನನನ್ನೂ ಬಹ್ರಾಮ್ ಷಹ ಕ್ರೂರವಾಗಿ ಕೊಲ್ಲಿಸಿದ. ಅವರ ತಮ್ಮ ಅಲ್ಲಾ–ಉದ್–ದೀನ್ ಇದಕ್ಕಾಗಿ ಸೇಡು ತೀರಿಸಿಕೊಳ್ಳಲು ಘಜ್ನಿಯನ್ನು ಮುತ್ತಿ ಅದನ್ನು ಬೆಂಕಿಗೆ ಆಹುತಿ ಮಾಡಿದ (1151). ಆ ನಗರ ಏಳು ದಿನಗಳ ಕಾಲ ಸತತವಾಗಿ ಉರಿಯಿತು. ಈ ಕೃತ್ಯದಿಂದಾಗಿ ಅಲ್ಲಾ–ಉದ್–ದೀನನಿಗೆ ಜಹಾನ್ಸೂಜ಼್ (ಪ್ರಪಂಚದಾಹಕ) ಎಂಬ ಬಿರುದು ಬಂತು. ಮುಂದೆ ಘಜ್ನವೀಡರು ವಿದೇಶೀ ದಾಳಿಗಳಿಂದಲೂ ಆಂತರಿಕ ಕಲಹದಿಂದಲೂ ಇನ್ನೂ ಕ್ಷೀಣಿಸತೊಡಗಿದರು. ಸ್ವಲ್ಪಕಾಲದಲ್ಲಿ ಅವರು ಘಜ್ನಿಯನ್ನು ತೊರೆದು ಪಂಜಾಬಿನಲ್ಲಿದ್ದ ಲಾಹೋರನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. 1163ರ ಹೊತ್ತಿಗೆ ಘಜ್ನಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳು ಘಜ್ನವೀಡರ ಪಾಲಿಗೆ ಇಲ್ಲವಾದವು. 1186ರಲ್ಲಿ ಷಿಹಾಬುದ್ದೀನ್ ಮಹಮ್ಮದ್ ಘೋರಿ ಪಂಜಾಬಿಗೆ ಮುತ್ತಿಗೆ ಹಾಕಿ ಲಾಹೋರನ್ನು ಆಕ್ರಮಿಸಿಕೊಂಡ. ಆಗ ಅಲ್ಲಿ ಆಳುತ್ತಿದ್ದ ಖುಸ್ರು ಮಲ್ಲಿಕ್ ಶರಣಾಗತನಾದ. ಅಲ್ಲಿಗೆ ಘಜ್ನವೀಡರ ಆಳ್ವಿಕೆ ಮುಗಿಯಿತು.

ಭಾರತ ಮತ್ತು ಪಶ್ಚಿಮ ಏಷ್ಯಗಳ ನಡುವೆ ನೇರ ರಾಜಕೀಯ ಸಂಪರ್ಕ ಏರ್ಪಡಲು, ಇಸ್ಲಾಂ ಸಂಸ್ಕೃತಿ ಭಾರತಕ್ಕೆ ಪ್ರವೇಶಿಸಲು ಮತ್ತು ಭಾರತೀಯ ಸಂಸ್ಕೃತಿಯ ಪ್ರಭಾವ ಪಶ್ಚಿಮ ಏಷ್ಯದ ಮೂಲಕ ಯುರೋಪನ್ನು ತಲುಪಲು ಈ ರಾಜವಂಶ ವಿಶೇಷವಾಗಿ ಕಾರಣವಾಯಿತು. ಪರ್ಷಿಯ, ಭಾರತಗಳಿಂದ ಕರೆಸಿಕೊಳ್ಳಲಾದ ಕಲಾವಿದರು ಘಜ್ನಿಯಲ್ಲಿ ಹಲವಾರು ಭವನಗಳನ್ನು ನಿರ್ಮಿಸಿದರು. ವಾಸ್ತುಶಿಲ್ಪವೇ ಮುಂತಾದ ಕಲೆಗಳು ಅಲ್ಲಿ ಬೆಳೆದುವು. **(ಡಿ.ಎಸ್.ಜೆ.)**

**ಘಜ್ನಿ :** ಮಧ್ಯ ಆಫ್ಘಾನಿಸ್ತಾನದ ಒಂದು ಪಟ್ಟಣ. ಮಧ್ಯಯುಗದ ಎರಡು ರಾಜವಂಶಗಳ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಈಗ ಘಜ್ನಿ ಪ್ರಾಂತ್ಯದ ಆಡಳಿತ ಕೇಂದ್ರ. ಉ.ಅ. 330 34' ಮತ್ತು ಪೂ.ರೇ. 680 18' ರಲ್ಲಿ ಸು. 2225 ಮೀ ಎತ್ತರದ ಪ್ರಸ್ಥಭೂಮಿಯ ಮೇಲೆ, ಘಜ್ನಿ ನದಿಯ ಎರಡೂ ದಂಡೆಗಳ ಮೇಲೆ ಸ್ಥಾಪಿತವಾಗಿರುವ ಈ ಪಟ್ಟಣ ಕಾಬೂಲಿನಿಂದ 150 ಕಿಮೀ ಮತ್ತು ಕಾಂದಹಾರ್‌ನಿಂದ 360 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,41,000(2006), ನದಿಯ ಎಡದಂಡೆಯ ಮೇಲಿರುವ ಹಳೆಯ ನಗರದ ಎತ್ತರದ ಗೋಡೆಗಳೂ ಅದರ ದುರ್ಗವೂ ಅದರಲ್ಲಿರುವ ಎತ್ತರದ ಗೋಪುರಗಳೂ ಭವ್ಯವಾಗಿವೆ. ಆಫ್ಘಾನಿಸ್ತಾನದಲ್ಲಿ ಉಳಿದಿರುವ, ಕೋಟೆಯಿಂದ ಆವೃತವಾಗಿರುವ ಪಟ್ಟಣ ಇದೊಂದೇ.

ಘಜ್ನಿಯ ಆರಂಭದ ಇತಿಹಾಸ ಸ್ಪಷ್ಟವಾಗಿಲ್ಲ. ಟಾಲಮಿಯಿಂದ ಗಾಜ಼ಾಕ ಎಂದೂ ಗ್ರೀಕ್ ಕವಿಗಳಿಂದ ಗಾಜ಼ೋಸ್ ಎಂದೂ ಕರೆಯಲ್ಪಟ್ಟ ಪಟ್ಟಣ ಇದೇ ಎಂದು ಹೇಳಲು ಸಾಕಷ್ಟು ಪುರಾವೆಗಳಿಲ್ಲ. 644ರಲ್ಲಿ ಚೀನೀ ಯಾತ್ರಿಕ ಹ್ಯುಯೆನ್‌ತ್ಸಾಂಗ್ ವರ್ಣಿಸಿದ ಹೊ–ಸಿ–ನ ಎಂಬ ಪಟ್ಟಣ ಇದೇ ಇರಬಹುದು. ಹೊ–ಸಿ–ನ ಪಟ್ಟಣ ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾಗಿದ್ದ ಟ್ಸಾವೊ–ಕಿನ್–ಟೊ ರಾಜ್ಯದ ರಾಜಧಾನಿಯಾಗಿತ್ತೆಂದು ಅವನು ಹೇಳಿದ್ದಾನೆ. ಘಜ್ನಿ ಪ್ರಾಚೀನ ಅರಬ್ ಮತ್ತು ಪರ್ಷಿಯನ್ ಭೂಗೋಳಶಾಸ್ತ್ರಜ್ಞರ ಮತ್ತು ಉದಂತಕಾರರ ಪ್ರಕಾರ ಜ಼ಾಬೂಲಿಸ್ತಾನದ ರಾಜಧಾನಿಯಾಗಿತ್ತು, ಇದು ಹಿಂದೂಸ್ತಾನದ ಭಾಗವಾಗಿತ್ತೆಂದೂ 7ನೆಯ ಶತಮಾನದ ಉತ್ತರಾರ್ಧದಲ್ಲಿ ಹಲವು ಬಾರಿ ಅರಬರು ಇದನ್ನು ಆಕ್ರಮಿಸಲು ಯತ್ನಿಸಿ ವಿಫಲರಾದರೆಂದೂ ಅವರು ಹೇಳಿದ್ದಾರೆ. ಘಜ್ನಿ ಪ್ರದೇಶವನ್ನು ಸು. 871ರಲ್ಲಿ ಸಫರೀದ್ ಯಾಕೂಬ್ ಇಬ್ನ್ ಲೈತ್ ಜಯಿಸಿದ. ಈತನೇ ಘಜ್ನಿಯನ್ನು ಸ್ಥಾಪಿಸಿದನೆಂದು ತಾರೀಖ್–ಇ–ಸಿಸ್ತಾನ್ ಎಂಬ ಪರ್ಷಿಯನ್ ಆಕರವೊಂದರಿಂದ ತಿಳಿದುಬರುತ್ತದೆ. ಆದರೆ ಇದು ನಿಜವಿರಲಾರದು. ಅದಕ್ಕೂ ಮುಂಚೆಯೇ ಈ ಪಟ್ಟಣ ಇತ್ತೆಂಬುದಕ್ಕೆ ಚೀನೀ ಬರೆಹಗಳೂ 10ನೆಯ ಶತಮಾನದ ಹುದುದ್–ಅಲ್–ಅಲಾಂ ಎಂಬ ಭೌಗೋಳಿಕ ಕೃತಿಯೂ ಸಾಕ್ಷಿಗಳಾಗಿವೆ.

ಇಸ್ಲಾಮೀ ಯುಗದಲ್ಲಿ ಘಜ್ನಿಯ ಪ್ರಾಮುಖ್ಯ ಆರಂಭವಾದ್ದು 962ರಲ್ಲಿ– ಸಾಮರ್‌ಕಂಡ್ ಮತ್ತು ಬುಖಾರಗಳ ಸಮಾನಿದ್ ಅಮೀರರ ರಕ್ಷಕ ಪಡೆಯ ನಾಯಕನಾಗಿದ್ದ ಟರ್ಕ್ ಆಲ್ಪ್‌ಟಿಗೀನ್ ಎಂಬವನು ಘಜ್ನಿಯನ್ನು ಜಯಿಸಿದಾಗಿನಿಂದ. ಆತನೂ ಅವನ ಉತ್ತರಾಧಿಕಾರಿಗಳೂ ಅಮೀರರಿಗೆ ಆಶ್ರಿತರಾಗಿದ್ದರು. ಅವನ ವಂಶಸ್ಥನಾದ ಸಬಕ್ತಿಗೀನ್ ಘಜ್ನಿಯಲ್ಲಿ ಅಧಿಕಾರಕ್ಕೆ ಬಂದ. ಅವನು ಸ್ಥಾಪಿಸಿದ ಘಜ್ನವೀಡ್ ವಂಶ (977–1186) ಮುಂದಿನ ಎರಡು ಶತಮಾನಗಳ ಕಾಲ ವೈಭವದಿಂದ ಆಳಿತು. ಈ ರಾಜವಂಶದವರು ಅಮೀರರೆಂಬ ಬಿರುದನ್ನು ಧರಿಸುತ್ತಿದ್ದರು. ಆದರೂ ಇತಿಹಾಸಕಾರರು ಇವರನ್ನು ಸುಲ್ತಾನರೆಂದು ಕರೆದಿದ್ದಾರೆ. ಸಬಕ್ತಿಗೀನನ ಕಾಲದಲ್ಲೇ ಈ ರಾಜ್ಯ ಉತ್ತರದ ಘೋರ್, ಜ಼ಾಬೂಲಿಸ್ತಾನ್, ಬ್ಯಾಕ್ಟ್ರಿಯಗಳವರೆಗೂ ಹಬ್ಬಿತು. ಹಿಂದೂಸ್ತಾನದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ಪಂಜಾಬಿನವರೆಗೂ ಈತ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ. ಇವನ ಮಗ ಮಹಮೂದನ (998–1030) ಕಾಲದಲ್ಲಿ ಈ ಸಾಮ್ರಾಜ್ಯ ಬೆಳೆದು ಪಶ್ಚಿಮದಲ್ಲಿ ಆಕ್ಸಸ್‌ನಿಂದ ಆಫ್ಘಾನಿಸ್ಥಾನ ಮತ್ತು ಪರ್ಷಿಯವೂ ಕೂಡಿಕೊಂಡು ಪಂಜಾಬಿನವರೆಗೂ ವ್ಯಾಪಿಸಿತು.

ಹೀಗೆ ಘಜ್ನಿ ನಗರ ಮಹಾಸಾಮ್ರಾಜ್ಯದ ರಾಜಧಾನಿಯಾಗಿ ರಾಜಕೀಯ ಚಟುವಟಿಕೆಯ ಕೇಂದ್ರವಾಯಿತು. ಹಿಂದುಸ್ತಾನದಿಂದ ದೋಚಿದ ಅಗಾಧ ಸಂಪತ್ತು ಮತ್ತು ವಸ್ತುಗಳನ್ನು ಬಳಸಿ ಈ ನಗರವನ್ನು ಕಟ್ಟಲಾಯಿತು. ಇದು ವ್ಯಾಪಾರ ಮತ್ತು ಕೈಗಾರಿಕೆಗಳ ಕೇಂದ್ರವಾಗಿಯೂ ರೂಪುಗೊಂಡಿತು. ಮಹಮೂದನ ಕಾಲದಲ್ಲಿ ಅನೇಕ ಕಟ್ಟಡಗಳು, ಅರಮನೆಗಳು ಮತ್ತು ಮಸೀದಿಗಳ ನಿರ್ಮಾಣವಾದವು. ಈ ಪ್ರಾಚೀನ ನಗರದಲ್ಲಿ 42 ಮೀ ಎತ್ತರದ ಎರಡು ಗೋಪುರಗಳಿವೆ. ಉತ್ತರಕ್ಕಿರುವ ಗೋಪುರ ಅರಬ್ಬಿ ಶಾಸನಗಳ ಪ್ರಕಾರ ಮಹಮೂದನಿಂದ ನಿರ್ಮಾಣವಾದದ್ದು; ಅದಕ್ಕೆ 365 ಮೀ ದೂರದಲ್ಲಿರುವ ಇನ್ನೊಂದು ಗೋಪುರ ಅವನ ಮಗ ಮಸೂದನಿಂದ ನಿರ್ಮಾಣಗೊಂಡಿತು ಎಂದು ತಿಳಿದುಬರುತ್ತದೆ. ಅರಮನೆಯ ಕಟ್ಟಡಗಳಿಗೆ ವಿಜಯಸೂರೆಯ ಸ್ಮಾರಕವಾಗಿ ಭಾರತದಿಂದ ತಂದ ಹಿಂದು ವಿಗ್ರಹಗಳು ಮತ್ತು ಅಮೂಲ್ಯ ಲೋಹದ ಮೂರ್ತಿಗಳನ್ನು ನೇರವಾಗಿ ಸೇರಿಸಲಾಯಿತು. ಮಹಮೂದನಿಂದ ಕಟ್ಟಲಾದ ಅರೂಸಲ್–ಫಲಕ್ ಎಂಬ ಮಸೀದಿಯೂ ಹೀಗೇಯೇ ನಿರ್ಮಿತವಾದದ್ದು. ಅದಕ್ಕೆ ಸೇರಿದಂತೆ ಇದ್ದ ಒಂದು ಅಧ್ಯಯನ ಪೀಠದಲ್ಲಿ ಒಂದು ಗ್ರಂಥಾಲಯವೂ ಇತ್ತು. ಈ ನಗರದ ಉತ್ತರಕ್ಕೆ ಮಹಮೂದ ಕಟ್ಟಿಸಿದ ಬಂದ್–ಇ–ಸುಲ್ತಾನ್ ಎಂಬ ಅಣೆಕಟ್ಟು ಈಗಲೂ ಉಳಿದಿದೆ. ಫ್ರೆಂಚ್ ಪುರಾತತ್ತ್ವ ಶಾಸ್ತ್ರಜ್ಞ ಎಂ.ಡಿ. ಸ್ಕೆಲುಂಬರ್ಗರ್ ಘಜ್ನಿ ಮಹಮೂದನ ಅರಮನೆಯ ಅವಶೇಷವನ್ನು ಲಷ್ಕರಿ ಬಜ಼ಾರಿನಲ್ಲಿ ಪತ್ತೆ ಹಚ್ಚಿದ.

ಘಜ್ನಿ 1151ರಲ್ಲಿ ಘೋರ್‌ನ ಅಲ್ಲಾವುದ್ದೀನನ ಭೀಕರ ದಾಳಿಗೆ ತುತ್ತಾಯಿತು. ಅವನು ನಗರಕ್ಕೆ ಬೆಂಕಿ ಹಚ್ಚಿ ಅದನ್ನು ಬಹಳಮಟ್ಟಿಗೆ ನಾಶಗೊಳಿಸಿದ. ಮುಂದೆ ಸ್ವಲ್ಪ ಕಾಲದಲ್ಲೇ ಘಜ್ನವೀಡರ ದೊರೆ ಖುಸ್ರು ಷಾಹ ಈ ನಗರವನ್ನು ತೊರೆದು ಪಂಜಾಬಿನ ಲಾಹೋರಿಗೆ ಹೋಗಿ ನೆಲಸಿದ. ಅಲ್ಲಿಗೆ ಘಜ್ನಿ ನಗರ ತನ್ನ ಮಧ್ಯಯುಗದ ಭವ್ಯತೆಯನ್ನು ಕಳೆದುಕೊಂಡಿತು. ಮುಂದೆ ಅನೇಕ ರಾಜವಂಶಗಳು ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರೂ ಅದು ತನ್ನ ಹಿಂದಿನ ವೈಭವವನ್ನು ಪುನಃ ಪಡೆಯಲಿಲ್ಲ.

1221ರಲ್ಲಿ ಇದನ್ನು ಜೆಂಘಿಸ್‌ಖಾನನ ಮಗ ಒಗದೈ ಆಕ್ರಮಿಸಿದ. ಒಗದೈ ಅನಂತರ ಮಂಗೋಲರ ಸಾಮ್ರಾಜ್ಯ ಇಬ್ಭಾಗವಾದಾಗ ಘಜ್ನಿಯನ್ನೊಳಗೊಂಡ ಭಾಗ ಪರ್ಷಿಯದ ಇಲ್–ಖಾನರಿಗೆ ಸೇರಿತು. 14ನೆಯ ಶತಮಾನದಲ್ಲಿ ಇದರ ಬಗ್ಗೆ ಹೆಚ್ಚು ಉಲ್ಲೇಖಗಳಿಲ್ಲ. ನಗರದ ಬಹುಭಾಗ ಪಾಳು ಬಿದ್ದಿತ್ತೆಂದು ಇಬ್ನ್ ಬತೂತ ಬರೆದಿದ್ದಾನೆ. ಆ ಶತಮಾನದ ಕೊನೆಯಲ್ಲಿ ಇದು ತೈಮೂರನ ವಶವಾಯಿತು. ಬಾಬರ್ 1504ರಲ್ಲಿ ಘಜ್ನಿಯನ್ನು ವಶಪಡಿಸಿಕೊಂಡ. ತರುವಾಯ 200 ವರ್ಷಗಳಿಗೂ ಹೆಚ್ಚು ಕಾಲ ಇದು ಮೊಗಲರ ಆಳ್ವಿಕೆಗೆ ಒಳಪಟ್ಟಿತ್ತು. 1738ರಲ್ಲಿ ಇದನ್ನು ನಾದಿರ್ ಷಾ ವಶಪಡಿಸಿಕೊಂಡ. 1839ರಲ್ಲಿ ಘಜ್ನಿಯನ್ನು ಬ್ರಿಟಿಷರು ಆಕ್ರಮಿಸಿಕೊಂಡರು. 1842ರಲ್ಲಿ ಆಫ್ಘನರು ಗೆದ್ದುಕೊಂಡರೂ ಮತ್ತೆ ಇದನ್ನು ಬ್ರಿಟಿಷರು ವಶಪಡಿಸಿಕೊಂಡರು.

ಹೀಗೆ ಘಜ್ನಿ ಬಹು ದೀರ್ಘಕಾಲ ಐತಿಹಾಸಿಕ ಮಹತ್ತ್ವ ಪಡೆದಿತ್ತು. ಈಗ ಅಳಿದುಳಿದಿರುವ ಹಳೆ ಪಟ್ಟಣ ಗೋಡೆಗಳಿಂದ ಆವೃತವಾಗಿದೆ. ಎತ್ತರದ ಗೋಪುರಗಳಿಂದ ಕೂಡಿದ ಈ ಭಾಗ ಕೆಳಗಿನಿಂದ ವೀಕ್ಷಿಸುವ ಪ್ರೇಕ್ಷಕನಿಗೆ ಅದ್ಭುತವಾಗಿ ಕಾಣುತ್ತದೆ. ಈಗಿರುವ ಹಳೆಯ ಗೋಡೆ ಹಳೆಯ ಪಟ್ಟಣದ ದುರ್ಗವಿದ್ದಿರಬಹುದು. 1835ರಲ್ಲಿ ಫ್ರೆಂಚ್ ಮತ್ತು ಇಟ್ಯಾಲಿಯನ್ ಪುರಾತತ್ತ್ವಜ್ಞರು ಇಲ್ಲಿ ಉತ್ಖನನಗಳನ್ನು ನಡೆಸಿ ಇದರ ಇತಿಹಾಸದ ಹಲವು ಅಂಶಗಳನ್ನು ಹೊರಗೆಡಹಿದರು. ಗುಡ್ಡದ ಇಳಿಜಾರಿನಲ್ಲಿದ್ದ ಅನೇಕ ವಾಸಗೃಹಗಳನ್ನು ಪರಿಶೋಧಿಸಲಾಗಿದೆ. ಹಳೆಯ ಕಾಬೂಲ್ ರಸ್ತೆಯಲ್ಲಿ ಮಹಮೂದನ ಗೋರಿ ಪತ್ತೆಯಾಗಿದೆ. ಬಯಲಿನ ದಕ್ಷಿಣಕ್ಕಿರುವ ಲಷ್ಕರಿ ಬಜಾರಿನಲ್ಲಿ ಮಹಮೂದನ ಅರಮನೆಯ ಪಳೆಯುಳಿಕೆಯಿದೆ. ದಿಬ್ಬದಲ್ಲಿ ಹಲವು ಅವಶೇಷಗಳು ದೊರೆತಿವೆ. ಘಜ್ನಿಯಲ್ಲಿರುವ ಕವಿ ಸನಾಯಿಯ ಮಂದಿರ ಮುಸ್ಲಿಮರ ಯಾತ್ರಾಸ್ಥಳ. 1935ರಲ್ಲಿ ಘಜ್ನಿಯಲ್ಲಿ ಪುರಾತತ್ತ್ವ ವಸ್ತು ಸಂಗ್ರಹಾಲಯವೊಂದು ಸ್ಥಾಪಿತವಾಯಿತು. ಆಧುನಿಕ ನಗರ ನದಿಯ ಬಲದಂಡೆಯ ಮೇಲೆ ಬೆಳೆಯುತ್ತಿದೆ. ಘಜ್ನಿಯ ಶೇ .70 ರಷ್ಟು ಜನ ಪರ್ಷಿಯನ್ ಭಾಷೆ ಮಾತನಾಡುತ್ತಾರೆ.

**ಘಜ್ನಿ ಪ್ರಾಂತ್ಯ :** ಆಫ್ಘಾನಿಸ್ತಾನದ ಪೂರ್ವಭಾಗದಲ್ಲಿದೆ. ವಾಯವ್ಯದಲ್ಲಿ ಕಾಬೂಲ್ ಪ್ರಾಂತ್ಯ, ಈಶಾನ್ಯದಲ್ಲಿ ಪಾಕ್ತಿಯ, ದಕ್ಷಿಣದಲ್ಲಿ ಕಾಂದಹಾರ, ಆಗ್ನೇಯದಲ್ಲಿ ಪಾಕಿಸ್ತಾನ – ಇವು ಇದರ ಮೇರೆಗಳು. ಪ್ರಾಂತ್ಯದ ಉತ್ತರ ಭಾಗ ಪರ್ವತಮಯ; ದಕ್ಷಿಣ ಭಾಗ ಪ್ರಸ್ಥಭೂಮಿ. ಆಗ್ನೇಯದಲ್ಲಿ ಷಿಂಕಾಯಿ ಬೆಟ್ಟ ಹಬ್ಬಿದೆ. ಘಜ್ನಿ ಪ್ರಾಂತ್ಯದಲ್ಲಿ ಚಳಿಗಾಲದಲ್ಲಿ ಬಹಳ ಚಳಿ. ಸುಮಾರು 3 ತಿಂಗಳುಗಳ ಕಾಲ 2' ರಿಂದ 3' ಹಿಮ ಇರುತ್ತದೆ. ಬೇಸಗೆಯಲ್ಲಿ ಹೆಚ್ಚೇನೂ ಸೆಖೆಯಿಲ್ಲ. ಸಂಜೆಯ ವೇಳೆ ಧೂಳಿನಿಂದ ಕೂಡಿದ ಬಿರುಗಾಳಿ ಬೀಸುವುದುಂಟು. ಗೋದಿ, ದ್ರಾಕ್ಷಿ, ಕುದುರೆಮಸಾಲೆ, ಮ್ಯಾಡರ್ – ಇವು ಬೆಳೆಗಳು. ಜನಸಂಖ್ಯೆ ಸು. 2,337,600 (2012). ಉತ್ತರದ ಪರ್ವತ ಪ್ರದೇಶದಲ್ಲಿ ಮಂಗೋಲಿಯನ್ ಹಜಾರಾರಗಳು ವಾಸಿಸುತ್ತಾರೆ. ಉಳಿದೆಡೆಯಲ್ಲಿರುವವರು ಘಿಲ್ಜಾಯ್ ಆಫ್ಘನರು. ಈ ಪ್ರಾಂತ್ಯದ ಮುಖ್ಯ ಪಟ್ಟಣವಾದ ಘಜ್ನಿ ವ್ಯವಸಾಯ ಮತ್ತು ವಾಣಿಜ್ಯ ಕೇಂದ್ರ. ಪ್ರಸಿದ್ಧವಾದ ಆಫ್ಘನ್ ಕುರಿ ಚರ್ಮದ ಕೋಟುಗಳನ್ನು ಇಲ್ಲಿ ಸಿದ್ಧಗೊಳಿಸಲಾಗುತ್ತದೆ. ಧಾನ್ಯ, ಹಣ್ಣು, ಉಣ್ಣೆ, ಮ್ಯಾಡರ್ ಬಣ್ಣ – ಇವುಗಳನ್ನು ಪ್ರಾಂತ್ಯದಿಂದ ಇಲ್ಲಿಗೆ ತಂದು ಮಾರುತ್ತಾರೆ. ಘಜ್ನಿ ಪಟ್ಟಣದಲ್ಲಿ ತಜಿಕ್ ಜನ ಪ್ರಧಾನವಾಗಿದ್ದಾರೆ. ಪ್ರಾಂತ್ಯದ ಇನ್ನೆರಡು ಪಟ್ಟಣಗಳು ಮಷಾಕಿ ಮತ್ತು ಮಕುರ್. ಈ ಮೂರು ಪಟ್ಟಣಗಳೂ ಪ್ರಾಂತ್ಯದ ಮೂಲಕ ಹಾದು ಹೋಗುವ ಕಾಬೂಲ್ – ಕಾಂದಹಾರ್ ರಸ್ತೆಯ ಮೇಲಿವೆ. (ಡಿ.ಎಸ್.ಜೆ)

**ಘಜ್ನಿ ಖಾನ್ :** ತುಘಲಕ್ ಸುಲ್ತಾನ್ ಫಿರೂಜ಼್ ಷಹನ ಮರಣಾನಂತರ(1388) ಮಲಿಕ್ ಫರೂಕಿಯಿಂದ ಖಾನ್ ದೇಶದಲ್ಲಿ ಸ್ಥಾಪಿತವಾದ ರಾಜವಂಶದ 7ನೆಯ ಸುಲ್ತಾನ. ದಾವೂದ್‌ಖಾನನ ಮಗ. ದಾವೂದ್ ಖಾನ 1508ರಲ್ಲಿ ನಿಧನನಾದಾಗ ಇವನು ಪಟ್ಟಕ್ಕೆ ಬಂದ. ಆದರೆ ಪಟ್ಟಕ್ಕೆ ಬಂದ ಹತ್ತೇ ದಿವಸಗಳಲ್ಲಿ ವಿಷಪ್ರಾಶನದಿಂದ ಕೊಲೆಗೀಡಾದ. ಸಿಂಹಾಸನಕ್ಕಾಗಿ ಅಹಮದ್‌ನಗರದ ಅಹಮದ್ ನಿಜಾಂ ಷಹನಿಗೂ ಗುಜರಾತಿನ ಮಹಮೂದ್ ಬೇಘರಾನಿಗೂ ಸ್ಪರ್ಧೆ ಏರ್ಪಟ್ಟು ಇವರ ಎರಡು ಗುಂಪುಗಳ ನಡುವೆ ಕಲಹಗಳೇರ್ಪಟ್ಟವು. ಕೊನೆಗೆ ಬೇಘರಾನ ಗುಂಪು ಜಯಗಳಿಸಿತು. ಅವನು 3ನೆಯ ಆದಿಲ್‌ಖಾನ್ ಎಂಬ ಹೆಸರು ತಳೆದು 1520ರವರೆಗೂ ರಾಜ್ಯವಾಳಿದ. ಅವನ ಅನಂತರ ಬಂದ ಸುಲ್ತಾನರು ದುರ್ಬಲರಾಗಿದ್ದರು. 1601ರಲ್ಲಿ ಖಾನ್ ದೇಶ ಅಕ್ಬರನ ವಶವಾಯಿತು. (ಡಿ.ಎಸ್.ಜೆ.)

**ಘಟಕರ್ಪರ:** ಒಂದು ಪುಟ್ಟ ಶೃಂಗಾರಕಾವ್ಯ : ಇದರಲ್ಲಿ ಇಪ್ಪತ್ತೆರಡು ಶ್ಲೋಕಗಳು ಮಾತ್ರ ಇವೆ. ಇದನ್ನು ಕಾಳಿದಾಸ ಬರೆದನೆಂದೂ ಪ್ರತೀತಿ ಇದೆ. ಘಟಕರ್ಪರವೆಂದರೆ ಗಡಿಗೆಗಪ್ಪರ, ಹರವಿಯೋಡು. ಈ ಕಾವ್ಯದಲ್ಲಿ ಕೊನೆಯ ಪದ್ಯದ ಕೊನೆಯ ಮಾತು ಘಟಕರ್ಪರ ಎಂದು. ಇದೇ ಹೆಸರಿನ ಕವಿಯೊಬ್ಬ ವಿಕ್ರಮಾದಿತ್ಯರಾಜನ ಆಸ್ಥಾನದ ನವಮಣಿಗಳಲ್ಲಿ ಒಬ್ಬನಾಗಿದ್ದನೆಂಬುದು ಈ ಮುಂದಿನ ಶ್ಲೋಕದಿಂದ ತಿಳಿದು ಬರುತ್ತದೆ:

ಧನ್ವಂತರಿ ಕ್ಷಪಣಕಾಮರಸಿಂಹ ಶಂಕು
ವೇತಾಲಭಟ್ಟ ಘಟಕರ್ಪರ ಕಾಲಿದಾಸಾಃ ।
ಖ್ಯಾತೋ ವರಾಹಮಿಹಿರೋ ನೃಪತೇಸ್ಸಭಾಯಾಂ
ರತ್ನಾನಿ ವೈ ವರರುಚಿರ್ನವವಿಕ್ರಮಸ್ಯ ॥

ಈ ಮೇಲಿನ ಶ್ಲೋಕದಲ್ಲಿ ಹೆಸರಿಸಲ್ಪಟ್ಟಿರುವ ಧನ್ವಂತರಿ ಮುಂತಾದವರು ಒಂದೇ ಕಾಲದವರಲ್ಲ. ಕೆಲವರ ವಿಚಾರವಂತೂ ಹೆಸರಿನ ವಿನಾ ಮತ್ತೇನೂ ತಿಳಿದಿಲ್ಲ. ಇವರಲ್ಲಿ ಘಟಕರ್ಪರ ಒಬ್ಬ. ಕಾಳಿದಾಸನೊಡನೆ ಕೂರಿಸಬಹುದಾದ ಈ ಘಟಕರ್ಪರ ಯಾರು, ಅವನ ಕಾಲವಾವುದು, ಮತ್ತು ಅವನ ಉದ್ಗ್ರಂಥ ನಮ್ಮ ಮುಂದಿರುವ ಇಪ್ಪತ್ತೆರಡು ಪದ್ಯಗಳ ಶೃಂಗಾರಪ್ರಧಾನವಾದ ಚಿತ್ರಕಾವ್ಯವೇ ಎಂಬ ಪ್ರಶ್ನೆಗಳು ಏಳುತ್ತವೆ. ಈ ಪುಟ್ಟ ಕಾವ್ಯಕ್ಕೆ ಅಭಿನವಗುಪ್ತನ ಹೆಸರಿನಲ್ಲಿ ವಿವೃತಿ ಒಂದಿರುವುದು ಮತ್ತೊಂದು ಅದ್ಭುತ ಸಂಗತಿ. ಅಭಿನವಗುಪ್ತ ಈ ಕಾವ್ಯದ ವಾಚ್ಯಾರ್ಥಕ್ಕಿಂತಲೂ ಧ್ವನ್ಯರ್ಥಕ್ಕೆ ಹೆಚ್ಚು ಪ್ರಾಧಾನ್ಯವಿತ್ತಿದ್ದಾನೆ. ಕಾವ್ಯದ ಉದ್ದೇಶ ವಿಪ್ರಲಂಭಶೃಂಗಾರವರ್ಣನೆ. ಆದರೆ ಕವಿ ಕೊನೆಯ ಪದ್ಯದಲ್ಲಿ ತಾನೇ ಹೇಳಿಕೊಳ್ಳುವಂತೆ ಯಮಕ ನೇಮಕವೂ ಅಷ್ಟೇ ಪ್ರಧಾನವಾದುದು; ಏಕೆ, ಅದಕ್ಕೂ ಮೀರಿದ ಗುರಿ ಎಂತಲೇ ಕಾಣುತ್ತದೆ. ಯಮಕನೇಮಕವೇನೋ ಶ್ರವಣ ಮಧುರವಾಗಿದ್ದರೂ ಶಬ್ದಕ್ಕಾಗಿ ಅರ್ಥವನ್ನು ಬಲಿಗೊಡಬೇಕಾದ ಅನರ್ಥವನ್ನು ತಪ್ಪಿಸುವುದಕ್ಕಾಗಿಲ್ಲ. "ಯಮಕಪ್ರಯೋಗದಲ್ಲಿ ಯಾರಾದರೂ ನನ್ನನ್ನು ಮೀರಿಸುವ ಕವಿಯಿದ್ದಲ್ಲಿ ಅವನಿಗೆ ಹರವಿಯೋಡಿನಲ್ಲಿ ನೀರನ್ನು ಹೊತ್ತು ತರುತ್ತೇನೆ, ಕುಡಿಯಲು ಹಿಡಿದಿರುವ ಬೊಗಸೆ ನೀರಿನ ಆಣೆಯಿಡುತ್ತೇನೆ, ಭಾವಾನುರಕ್ತೆಯಾದ ವನಿತೆಯ ಆಣೆಗೂ ಹೇಳುತ್ತೇನೆ" – ಹೀಗೆಂದು ಕವಿ ಪ್ರತಿಜ್ಞೆ ಮಾಡುತ್ತಾನೆ.

ಆಲಂಬ್ಯ ಚಾಂಬುತೃಷಿತಃ ಕರಕೋಶಪೇಯಂ
ಭಾವಾನುರಕ್ತವನಿತಾ ಸುರತೈಃ ಶಪೇಯಮ್ ।
ಜೀಯೇಯ ಯೇನ ಕವಿನಾ ಯಮಕೈಃ ಪರೇಣ
ತಸ್ಮೈ ವಹೇಯಮುದಕಂ ಘಟಕರ್ಪರೇಣ ॥

ಸಂಸ್ಕೃತ ಸಾಹಿತ್ಯಚರಿತ್ರೆಯನ್ನು ಬಲ್ಲವರಿಗೆ ನಿಜವಾದ ಪ್ರತಿಭೆ ಮತ್ತು ಅದರಿಂದ ಉದ್ಭವವಾದ ಮಹಾಕಾವ್ಯಗಳು ಮತ್ತು ನಾಟಕಗಳು ಚಿರಪರಿಚಿತವಾಗಿವೆ. ರೀತಿ, ಅರ್ಥಾಲಂಕಾರಗಳು, ಕೊನೆಗೆ ರಸ ಮತ್ತು ರಸಧ್ವನಿ – ಇವುಗಳೇ ಕಾವ್ಯದ ಜೀವಾಳವೆಂಬುದೂ ಮತ್ತು ಕೇವಲ ಶಬ್ದಾಲಂಕಾರ ಮತ್ತು ಚಿತ್ರಕಾವ್ಯ ವರಕವಿಗಳ ಕಾವ್ಯಕ್ಕೆ ಹೆಗಲೆಣೆಯಾಗಿ ನಿಲ್ಲಲಾರವೆಂಬುದೂ ಕಾವ್ಯವಿಮರ್ಶೆಯ ಖಚಿತಾಭಿಪ್ರಾಯ. ಘಟಕರ್ಪರ ಕಾವ್ಯವನ್ನು ಪರಿಶೀಲಿಸಿದಾಗ ಅದು ಮತ್ತು ಅದರ ಕರ್ತೃ ಕಾಳಿದಾಸಾದಿ ವರಕವಿಗಳ ಸಾಲಿನಲ್ಲಿ ಕೂಟ್ಟ ಕೊನೆಯಲ್ಲೂ ನಿಲ್ಲಲನರ್ಹನೆಂಬುದು ಯಾರಿಗಾದರೂ ಹೊಳೆದೀತು.

ಇರುವ ಇಪ್ಪತ್ತೆರಡು ಪದ್ಯಗಳಲ್ಲಿ ಮೊದಲನೆಯದು ಮತ್ತು ಕೊನೆಯ ಎರಡು ಹೀಗೆ ಒಟ್ಟಿಗೆ ಮೂರು ಕವಿ ಉಕ್ತಿ. ಎರಡನೆಯದರಿಂದ ಐದನೆಯ ಪದ್ಯ ಮತ್ತು ಎಂಟರಿಂದ ಹದಿನಾಲ್ಕರವರೆಗಿನ ಪದ್ಯಗಳು ಪ್ರೋಷಿತಭರ್ತೃಕೆಯಾದ ನಾಯಿಕೆಯ ಸಂದೇಶ. ಆರು ಏಳನೆಯ ಪದ್ಯಗಳು ನಾಯಕನಿಗೆ ದೂತೀವಾಕ್ಯ. ಹದಿನೈದರಿಂದ ಹತ್ತೊಂಬತ್ತು ನಾಯಕನು ನಾಯಕಿಗೆ ಕಳುಹಿಸಿದ ಪ್ರತಿಸಂದೇಶ, ಹೀಗೆ ಇದು ಮೇಘದೂತದಂತೆ ಒಂದು ಸಂದೇಶಕಾವ್ಯ. ಸಂದೇಶವಾಹಕ, ಮೇಘ, ಯಮಕಪ್ರಯೋಗಗಳ ಸೊಗಸಂತೂ ಕರ್ಣಮನೋಹರವಾಗಿದೆ. ಅಲ್ಲಲ್ಲಿ ಹೃದಯಂಗಮವೂ ಅಹುದು.

ಹಂಸಾ ನದನ್ಮೇಘಭಯಾ ದ್ರವಂತಿ
ನಿಶಾಮುಖಾನ್ಯದ್ಯ ನ ಚಂದ್ರವಂತಿ ।
ನವಾಂಬುಮತ್ತಾಃ ಶಿಖಿನೋ ನದಂತಿ
ಮೇಘಾಗಮೇ ಕುಂದಸಮಾನ ದಂತಿ ॥
ಗುಡುಗುಮೋಡದ ಭಯದಿ ನೋಡುತಿವೆ ಅಂಚೆಗಳು
ಯಾಮಿನೀಕಾಮಿನಿಯುಮಿಂದಲ್ಲವಿಂದುವದನೆ।
ಅಮಲಜಲದಮಲಿನಲಿ ಉಲಿಯುತಿವೆ ನವಿಲುಗಳು
ಮೋಡ ಮೂಡಲು ನೋಡು ಕುಂದಸುಮಧವಲರದನೆ ॥

ಇಲ್ಲಿನ ಕನ್ನಡಾನುವಾದ ಸಿ.ಜಿ. ಪುರುಷೋತ್ತಮರ ಅಪ್ರಕಟಿತ ಕನ್ನಡ ಘಟಕರ್ಪರದಿಂದ ಉದ್ಧೃತ.

ಈ ಕಾವ್ಯದ ಸೌಂದರ್ಯವೆಲ್ಲ ಶಬ್ದಾಡಂಬರದಲ್ಲಡಗಿದೆ. ಇರುವ ವರ್ಣನೆಗಳು, ಕೊಡುವ ಉಪಮೆಗಳು, ಸನ್ನಿವೇಶದ ಕಲ್ಪನೆ ಎಲ್ಲವೂ ಸಂಸ್ಕೃತ ಶೃಂಗಾರಕಾವ್ಯದ ಪ್ರಣಯಗೀತೆಗಳ ಚರ್ವಿತಚರ್ವಣ ಮಾತ್ರ. ಇಂಥ ಪುಟ್ಟ ಕಾವ್ಯದಲ್ಲೂ ಎರಡು ಮೂರು ಪ್ರಕ್ಷಿಪ್ತ ಪದ್ಯಗಳಿವೆಯೆಂಬುದೇ ಇದರ ಇನ್ನೊಂದು ಅದ್ಭುತ ವಿಷಯ.

ಘಟಕರ್ಪರ ಕಾವ್ಯ ಮುಂಬಯಿ ಮತ್ತು ಕಲ್ಕತ್ತಗಳಿಂದ ಕಾವ್ಯಸಂಗ್ರಹವೆಂಬ ಗ್ರಂಥಸರಣಿಯಲ್ಲಿ ಪ್ರಕಟವಾಗಿದೆ. ಅಭಿನವಗುಪ್ತರ ವಿವೃತಿಯೊಡನೆ ಪ್ರಕಟಗೊಂಡ ಇತ್ತೀಚಿನ ಸಂಪಾದನೆ ಕಾಶ್ಮೀರ ಗ್ರಂಥಮಾಲೆಯದು; ಶ್ರೀನಗರದಿಂದ ಪ್ರಕಟವಾಗಿದೆ.

(ಎಚ್.ಪಿ.ಡಿ.ಇ.)

**ಘಟಕ ವಿಶ್ಲೇಷಣೆ :** ಸಂಖ್ಯಾಕಲನವಿಜ್ಞಾನದ ಒಂದು ಅಂಗ (ಫ್ಯಾಕ್ಟರ್ ಅನಾಲಿಸಿಸ್). ಚಾರಿತ್ರಿಕವಾಗಿ ಇದು ಮಾನವಸಾಮರ್ಥ್ಯ (ಹ್ಯೂಮನ್ ಎಬಿಲಿಟಿ) ಮತ್ತು ವರ್ತನೆ (ಬಿಹೇವಿಯರ್) ಇವಕ್ಕೆ ಸಂಬಂಧಿಸಿದ ಮನೋವೈಜ್ಞಾನಿಕ ಸಿದ್ಧಾಂತಗಳ ವಿವರಣೆಗೆ ಗಣಿತೀಯ ಪ್ರರೂಪಗಳನ್ನು (ಮ್‌ಡೆಲ್ಸ್ ) ರಚಿಸುವ ದಿಶೆಯಲ್ಲಿ ಮಾಡಿದ ಪ್ರಯತ್ನಗಳ ಫಲವಾಗಿ ಕಳೆದ ಶತಮಾನದ ಮೊದಲ ದಶಕದಲ್ಲಿ ಅಸ್ತಿತ್ವಕ್ಕೆ ಬಂತು. ಘಟಕ ವಿಶ್ಲೇಷಣೆಯ ಮೂಲಭೂತ ಪ್ರರೂಪವನ್ನು

$$Z_j = a_{j1}F_1 + a_{j2}F_2 + \dots\dots + a_{jm}F_m + d_jU_j \qquad \dots(1)$$

$j = 1, 2, \dots\dots n;\ (m<n)$

ಎಂದು ಬರೆಯಬಹುದು. ಇಲ್ಲಿ ಪ್ರತಿಯೊಂದು $z$ ಚರವನ್ನು $m$ ಸಾಮಾನ್ಯ ಘಟಕಗಳ $(F_1, F_2, \dots\dots F_m)$ ಮತ್ತು ಒಂದು ವಿಶಿಷ್ಟ ಘಟಕದ $(U)$ ರೇಖೀಯ ಉತ್ಪನ್ನ (ಲೀನಿಯರ್ ಫಂಕ್ಷನ್) ಎಂದು ಪರಿಗಣಿಸಲಾಗಿದೆ. ಗುಣಾಂಕ $a$ ಮತ್ತು $d$ ಗಳು ಘಟಕಭಾರಗಳು (ಫ್ಯಾಕ್ಟರ್ ಲೋಡಿಂಗ್ಸ್). ಅವನ್ನು ಅಂದಾಜು ಮಾಡುವ ವಿಧಾನಗಳಿಗೆ ಘಟಕ ವಿಶ್ಲೇಷಣೆ ಎಂದು ಹೆಸರು. ಅಂಥ ಹಲವು ವಿಧಾನಗಳಿವೆ. ಪ್ರಧಾನ ಭಾಗಗಳ ವಿಧಾನ (ಪ್ರಿನ್ಸಿಪಲ್ ಕಾಂಪೊನೆಂಟ್ಸ್ ಮೆಥೆಡ್), ಪ್ರಧಾನ ಘಟಕ ವಿಧಾನ (ಪ್ರಿನ್ಸಿಪಲ್ ಫ್ಯಾಕ್ಟರ್ ಮೆಥಡ್), ಸೆಂಟ್ರಾಯಿಡ್ ವಿಧಾನ, ತ್ರಿಕೋಣೀಯ ವಿಭಜನೆ (ಟ್ರೈಆ್ಯಂಗ್ಯುಲರ್ ಡೀಕಾಂಪೊಸಿಷನ್), ಗರಿಷ್ಠ ಪ್ರಾಯಿಕತೆ ವಿಧಾನ (ಮ್ಯಾಕ್ಸಿಮಮ್ ಲೈಕ್‌ಲಿಹುಡ್ ಮೆಥಡ್), ಏಕಘಟಕ ವಿಧಾನ, ದ್ವಿಘಟಕ ವಿಧಾನ, ಬಹುಘಟಕ ವಿಧಾನ – ಇವು ಕೆಲವು

ಉದಾಹರಣೆಗಳು. ಆದರೆ ಸೈದ್ಧಾಂತಿಕವಾಗಿ ಅತ್ಯಂತ ತೃಪ್ತಿಕರವಾಗಿರುವ ಹೆಚ್ಚಿನವು ವ್ಯಾವಹಾರಿಕ ಉಪಯೋಗದಲ್ಲಿ ಸಾಕಷ್ಟು ಶ್ರಮದಾಯಕವಾಗಿವೆ. ಈ ದೃಷ್ಟಿಯಿಂದ ಆಧುನಿಕ ಗಣಕಗಳ ಬಳಕೆ ತುಂಬ ಸಹಾಯಕ. ಘಟಕ ವಿಶ್ಲೇಷಣೆಯ ಪ್ರಧಾನ ಉದ್ದೇಶ $n$ ಚರಗಳನ್ನು ಆದಷ್ಟು ಕಡಿಮೆ ಘಟಕಗಳ ರೇಖೀಯ ಉತ್ಪನ್ನಗಳಾಗಿ ನಿರೂಪಿಸುವುದು. ವಾಸ್ತವವಾಗಿ $n$ ಗಿಂತ $m$ ಕಡಿಮೆ ಇದ್ದಷ್ಟೂ ಹೆಚ್ಚು ಹಿತ. ಮೂಲ ಚರಗಳು ಕೊಡುವ ಎಲ್ಲ ಆವಶ್ಯಕ ಮಾಹಿತಿಯನ್ನು ಈ ಘಟಕಗಳು ಕೊಡುವಂತಿರಬೇಕು. ಅಂದರೆ ಮುಖ್ಯ ಗುರಿ ವಿವರಣೆಯ ಸಂಕ್ಷಿಪ್ತತೆ.

ಯಾವುದೇ ಒಂದು ಚರ $Xj$ ಯ $N$ ಮೌಲ್ಯಗಳು $Xj1$, $Xj2$ . . . . . . . Xjn ಆಗಿರಲಿ. ಆಗ $xj$ ಯ ಮಧ್ಯಕ (ಮೀನ್)

$$\overline{X}_j = \frac{1}{N} \sum_{i=1}^{N} X_{ji} \quad ..(2)$$

ಮತ್ತು Xj ಯ ಚಲನೀಯ (ವೇರಿಯನ್ಸ್)

$$s_j^{\ 2} = \frac{1}{N} \sum_{i=1}^{N} (X_{ji} - \bar{x}_j)^2 \quad ...(3)$$

ಯಾವುದೇ ಎರಡು $Xj$, $Xk$ ಗಳ ಸಹ ಚಲನೀಯ (ಕೋವೇರಿಯನ್ಸ್)

$$s_{jk} = \frac{1}{N} \sum_{i=1}^{N} (X_{ji} - \overline{X}_j)(X_{ki} - \overline{X}_k) \quad ...(4)$$

ಮತ್ತು ಅವುಗಳ ಸಹಸಂಬಂಧದ ಗುಣಾಂಕ (ಕಾರಿಲೇಷನ್ ಕೋ ಎಫಿಷೆಂಟ್)

$$r_{jk} = \frac{s_{jk}}{s_j\, s_k} \quad ....(5)$$

$$Z_{ji} = \left( \frac{X_{ji} - \overline{X_j}}{s_j} \right) \quad ....(6)$$

ಎಂದಿದ್ದರೆ ಆಗ $Zj$ ಗಳು ಶಿಷ್ಟೀಕೃತ ರೂಪದಲ್ಲಿವೆ ಎನ್ನುತ್ತೇವೆ. ಅಂಥ ಚರಗಳ ಮಧ್ಯಕ $0$ ಮತ್ತು ಚಲನೆಯ ಪ್ರತಿರೂಪ (1) ರಲ್ಲಿ ಚರ $Z_j$ ಮತ್ತು ಘಟಕಗಳು ಶಿಷ್ಟೀಕೃತ ರೂಪದಲ್ಲಿವೆ ಎಂದು ಭಾವಿಸೋಣ. $N$ ವ್ಯಕ್ತಿಗಳಲ್ಲಿ ಪ್ರತಿಯೊಬ್ಬನ ಬಗ್ಗೆ $Z$ ಚರಗಳ ಮೌಲ್ಯಗಳನ್ನು ಪಡೆಯಲಾಗಿದ್ದರೆ ಆಗ ವ್ಯಕ್ತಿ $i$ ಯ ಚರ $j$ ಯ ಮೌಲ್ಯವನ್ನು

$$Z_{ji} = \sum_{p=1}^{m} a_{jp} F_{pi} + d_j U_{ji} \quad .....(7)$$

$$i = 1, 2, \ldots, N; J = 1, 2, \ldots, n$$

ಎಂದು ಬರೆಯಬಹುದು. ಇಲ್ಲಿ $Fpi$ ವ್ಯಕ್ತಿ i ಯ ಸಾಮಾನ್ಯ ಘಟಕ $P$ ಯ ಮೌಲ್ಯ. ವಿಶಿಷ್ಟ ಘಟಕಗಳು ಮತ್ತು ಸಾಮಾನ್ಯ ಘಟಕಗಳು ಅಸಹಸಂಬಂಧಿತ (ಅನ್‌ಕಾರಿಲೇಟೆಡ್) ಎಂದೇ ಯಾವಾಗಲೂ ತಿಳಿಯಲಾಗುವುದು. ಸಾಮಾನ್ಯ ಘಟಕಗಳೂ ತಮ್ಮೊಳಗೆ ಅಸಹಸಂಬಂಧಿತವೆಂದು ತಿಳಿದರೆ ಆಗ

$$sj^2 = 1 = aji^2 + aj2^2 + \ldots + ajm^2 + dj^2 \quad ....(8)$$

ಚರ $Z_j$, ಶಿಷ್ಟೀಕೃತ ರೂಪದಲ್ಲಿರುವುದರಿಂದ ಅದರ ಚಲನೀಯ1. ಅದಕ್ಕೆ ಬೇರೆ ಬೇರೆ ಘಟಕಗಳ ಕೊಡುಗೆಗಳನ್ನು (8)ರ ಬಲಬದಿ ಪ್ರದರ್ಶಿಸುತ್ತದೆ. ಉದಾಹರಣೆಗೆ $F2$ರ ಕೊಡುಗೆ $aj2^2$. ಎಲ್ಲ ಚರಗಳ ವಿಚರಣೆಗಳಿಗೆ ಘಟಕ $Fp$ಯ ಒಟ್ಟು ಕೊಡುಗೆ

$$Vp = \sum_{j=1}^{n} ajp^2,\ p = 1, 2, \ldots, m \quad ....(9)$$

ಎಲ್ಲ ಚರಗಳ ಒಟ್ಟು ಚಲನೀಯಕ್ಕೆ ಎಲ್ಲ ಸಾಮಾನ್ಯ ಘಟಕಗಳ ಒಟ್ಟು ಕೊಡುಗೆ

$$V = \sum_{p=1}^{m} v_p \quad ....(10)$$

ನಿಷ್ಪತ್ತಿ $\frac{v}{n}$ ಅನ್ನು ಘಟಕ ವಿಶ್ಲೇಷಣೆಯ ಪೂರ್ಣತೆಯ ಸೂಚಕವಾಗಿ ಕೆಲವೊಮ್ಮೆ ತೆಗೆದುಕೊಳ್ಳುವುದಿದೆ. (8)ರಲ್ಲಿ ಸಾಮಾನ್ಯ ಘಟಕಗಳ ಗುಣಾಂಕಗಳ ವರ್ಗಗಳ ಮೊತ್ತ

$$h_j^{\ 2} = aji^2 + aj2^2 + ajm^2,\ j = 1, 2, \ldots, n \quad ....(11)$$

ಇದಕ್ಕೆ ಚರ $Zj$ ಯ ಸಾಮಾನ್ಯತೆ (ಕಾಮನ್ಯಾಲಿಟಿ) ಎಂದು ಹೆಸರು. $dj^2$ ಕ್ಕೆ $Zj$ಯ ವೈಶಿಷ್ಟ್ಯ (ಯುನೀಕ್‌ನೆಸ್) ಎಂದು ಹೆಸರು. ಇದನ್ನು ಕೆಲವೊಮ್ಮೆ ಎರಡು ಭಾಗ ಮಾಡುವುದಿದೆ; ಅಧ್ಯಯನದಲ್ಲಿ ಚರಗಳ ಪ್ರಸ್ತುತ ಆಯ್ಕೆಯಿಂದಾದುದು, ಚರಗಳ ಮಾಪನದೋಷದಿಂದಾದುದು. ಆಗ ಪ್ರತಿರೂಪ (1)ನ್ನು

$$Z_j = a_{j1} F_1 + a_{j2} F_2 + \ldots + a_{jm} F_m + b_j\ S_j + e_j\ E_j$$
$$j = 1, 2, \ldots, n \quad ....(12)$$

ಎಂದು ಬರೆಯಬಹುದು. ಇಲ್ಲಿ $Sj$ ಮತ್ತು $Ej$ ಗಳು ಅನುಕ್ರಮವಾಗಿ ನಿರ್ದಿಷ್ಟ (ಸ್ಪೆಸಿಫಿಕ್) ಮತ್ತು ದೋಷ (ಎರರ್) ಘಟಕಗಳು. $Sj$, $Ej$ ಗಳು ಅಸಹಸಂಬಂಧಿತವಾದ್ದರಿಂದ

$$d_j^{\ 2} = b_j^{\ 2} + e_j^{\ 2} \quad ....(13)$$

ಹೀಗಾಗಿ $$s_j^{\ 2} = 1 = h_j^{\ 2} + d_j^{\ 2} = h_j^{\ 2} + b_j^{\ 2} + e_j^{\ 2} \quad ..(14)$$

ಅಂದರೆ ಒಂದು ಚರದ ಒಟ್ಟು ಚಲನೀಯ ($F$ ಗಳಿಂದಾಗಿ) ಸಾಮಾನ್ಯತೆ ($hj2$) ಮತ್ತು ವೈಶಿಷ್ಟ್ಯಗಳ ($d_j^{\ 2}$) ಮೊತ್ತ; ಅಥವಾ ಪರ್ಯಾಯವಾಗಿ ಸಾಮಾನ್ಯತೆ ($S$ ಗಳಿಂದಾದ) ನಿರ್ದಿಷ್ಟತೆ (ಸ್ಪೆಸಿಫಿಸಿಟಿ, $b_j^{\ 2}$) ಮತ್ತು ($E$ಗಳಿಂದಾದ) ದೋಷ ವಿಚರಣೆಗಳ (ಎರರ್ ವೇರಿಯನ್ಸ್, $e_j^{\ 2}$) ಮೊತ್ತ.

ಆಂಗ್ಲ ಮನೋವಿಜ್ಞಾನಿ ಚಾರ್ಲ್ಸ್ ಸ್ಪಿಯರ್‌ಮನ್ (1863–1945) ಎಂಬಾತನನ್ನು ಘಟಕ ವಿಶ್ಲೇಷಣೆಯ ಜನಕ ಎಂಬುದಾಗಿ ಪರಿಗಣಿಸಲಾಗಿದೆ. ಅದರ ಸಂಖ್ಯಾಕಲನೀಯ ಅಂಶಗಳನ್ನು ಬೆಳೆಸಿದವರಲ್ಲಿ ಮುಖ್ಯನಾದವ ಆಂಗ್ಲ ಜೀವಗಣಿತ ವಿಜ್ಞಾನಿ ಕಾರ್ಲ್ ಪಿಯರ್‌ಸನ್ (1857–1936). ಎಲ್.ಎಲ್. ಥರ್ಸ್ಟನ್ (1887–1955) ಮತ್ತು ಕಾರ್ಲ್ ಜೆ. ಹೋಲ್‌ಝಿಂಗರ್ (1803–1954) – ಇವರು ಈ ವಿಧಾನದ ಬೆಳೆವಣಿಗೆಗೆ ಕಾರಣರಾದ ಇನ್ನಿಬ್ಬರು ಮುಖ್ಯರು.

ಪ್ರತಿರೂಪ (1)ರಲ್ಲಿ ಯಾವುದೇ ಒಂದು $F$ ಎಲ್ಲ $Z$ಗಳ ಮೇಲೂ ಪರಿಣಾಮ ಬೀರುವಂತಿದ್ದರೆ ಅದು ಒಂದು ಸಾರ್ವತ್ರಿಕ ಘಟಕ (ಜನರಲ್ ಫ್ಯಾಕ್ಟರ್). ಕೆಲವೊಂದು *ಚ*ಗಳ ಮೇಲೆ ಮಾತ್ರ ಪರಿಣಾಮ ಬೀರುತ್ತಿದ್ದು ಉಳಿದ *ಚ*ಗಳ ಮೇಲೆ ಪರಿಣಾಮ ಬೀರದ *ಈ*ಗಳಿಗೆ ಸಮೂಹ ಘಟಕಗಳು (ಗ್ರೂಪ್ ಫ್ಯಾಕ್ಟರ್ಸ್) ಎಂದು ಹೆಸರು. ಸ್ಪಿಯರ್‌ಮನ್‌ನ ಸಾರ್ವತ್ರಿಕ ಘಟಕವಾದದ (1904) ಪ್ರಕಾರ ಚರಗಳ ನಡುವಿನ ಸಹಸಂಬಂಧಗಳು ಕೆಲವು ಸಮೀಕರಣಗಳನ್ನು ತೃಪ್ತಿಪಡಿಸುವಂತಿದ್ದರೆ ಆಗ ಪ್ರತಿಯೊಂದು ಚರವನ್ನೂ ಒಂದೇ ಒಂದು ಸಾರ್ವತ್ರಿಕ ಘಟಕ ($g$) ಮತ್ತು ಆ ಚರಕ್ಕೆ ವಿಶಿಷ್ಟವಾಗಿರುವ ಇನ್ನೊಂದು ಘಟಕ – ಇವುಗಳ ರೇಖೀಯ ಉತ್ಪನ್ನವಾಗಿ ನಿರೂಪಿಸಬಹುದು. ಬೌದ್ಧಿಕ ಚಟುವಟಿಕೆಯ ಎಲ್ಲ ಶಾಖೆಗಳಿಗೂ ಸಾಮಾನ್ಯವಾದ ಒಂದು ಮೂಲಭೂತ ಉತ್ಪನ್ನ (ಇಲ್ಲವೇ ಉತ್ಪನ್ನಗಳ ಸಮೂಹ) ಉಂಟು. ಆದರೆ ಮಿಕ್ಕುಳಿದ ಇಲ್ಲವೇ ಚಟುವಟಿಕೆಯ ನಿರ್ದಿಷ್ಟ ಅಂಶಗಳಾದರೋ ಪ್ರತಿಯೊಂದು ಸಂದರ್ಭದಲ್ಲೂ ಇತರ ಎಲ್ಲವುಗಳಿಗಿಂತಲೂ ಪೂರ್ಣ ಭಿನ್ನವಾಗಿಯೇ ಇರುವಂತೆ ಅನಿಸುವುದು. ಬುದ್ಧಿಪರೀಕ್ಷೆಗಳಲ್ಲಿ $g$ ಅನುವಂಶಿಕತೆಯ ಮೇಲೆ ಹೊಂದಿಕೊಂಡಿದೆ. ವಿಶಿಷ್ಟ ಘಟಕಗಳು ವ್ಯಕ್ತಿಯ ಕಲಿಕೆ ಮತ್ತು ಅನುಭವಗಳನ್ನು ಪ್ರತಿನಿಧೀಕರಿಸುತ್ತವೆ ಎಂದು ಸ್ಪಿಯರ್‌ಮನ್ ವಾದಿಸಿದ. ಆದರೆ ಮನೋವೈಜ್ಞಾನಿಕ ಪರೀಕ್ಷೆಗಳ ಎಲ್ಲ ಸರಣಿಗಳನ್ನೂ ವಿವರಿಸಲು ಸಾರ್ವತ್ರಿಕ ಘಟಕವಾದ ಅಸಮರ್ಥವಾಗಿರುವುದು ಗಮನಕ್ಕೆ ಬಂದಾಗ ಸಮೂಹ ಘಟಕಗಳ ಪರಿಕಲ್ಪನೆ ಮೂಡಿತು (ಸು. 1930). ಸಂಖ್ಯಾ ಘಟಕ (ನ್ಯೂಮರಿಕಲ್ ಫ್ಯಾಕ್ಟರ್), ಭಾಷಾ ಘಟಕ (ವರ್ಬಲ್ ಫ್ಯಾಕ್ಟರ್), ಯಾಂತ್ರಿಕ

**ಕೋಷ್ಟಕ 1. ಸಾರ್ವತ್ರಿಕ ಘಟಕವಾದ**

| ಚರ | ಸಾರ್ವತ್ರಿಕ ಘಟಕ ($g$) | ವಿಶಿಷ್ಟ ಘಟಕ |
|---|---|---|
| $Z_1$ | $X$ | $U_1$ |
| $Z_2$ | $X$ | $U_2$ |
| $Z_3$ | $X$ | $U_3$ |
| $Z_4$ | $X$ | $U_4$ |
| $Z_5$ | $X$ | $U_5$ |
| $Z_6$ | $X$ | $U_6$ |

**ಕೋಷ್ಟಕ 2. ದ್ವಿಘಟಕವಾದ**

| ಚರ | ಸಾರ್ವತ್ರಿಕ ಘಟಕ | ಸಮೂಹ ಘಟಕಗಳು | | | ವಿಶಿಷ್ಟ ಘಟಕ |
|---|---|---|---|---|---|
| | | A | B | C | |
| $Z_1$ | $X$ | $X$ | | | $U_1$ |
| $Z_2$ | $X$ | $X$ | | | $U_2$ |
| $Z_3$ | $X$ | | $X$ | | $U_3$ |
| $Z_4$ | $X$ | | $X$ | | $U_4$ |
| $Z_5$ | $X$ | | | $X$ | $U_5$ |
| $Z_6$ | $X$ | | | $X$ | $U_6$ |

**ಕೋಷ್ಟಕ 3. ಬಹುಘಟಕವಾದ**

| ಚರ | ಸಮೂಹ ಘಟಕಗಳು | | | |
|---|---|---|---|---|
| | A | B | C | D |
| $Z_1$ | $X$ | | $X$ | |
| $Z_2$ | | $X$ | $X$ | |
| $Z_3$ | $X$ | | | $X$ |
| $Z_4$ | $X$ | $X$ | | $X$ |
| $Z_5$ | | $X$ | $X$ | |
| $Z_6$ | $X$ | | | $X$ |

ಘಟಕ (ಮೆಕ್ಯಾನಿಕಲ್ ಫ್ಯಾಕ್ಟರ್), ಸಂಕಲ್ಪ ಘಟಕ (ವಿಲ್ ಫ್ಯಾಕ್ಟರ್), ಸತತ ಪ್ರಯತ್ನ ಘಟಕ (ಪರ್ಸಿವರೇಷನ್ ಫ್ಯಾಕ್ಟರ್) – ಇವು ಸಮೂಹ ಘಟಕಗಳಿಗೆ ಕೆಲವು ನಿದರ್ಶನಗಳು. ಹೋಲ್‌ಝಿಂಗರ್ ಎಂಬಾತ ಪ್ರತಿಪಾದಿಸಿದ ಮನೋವೈಜ್ಞಾನಿಕ ನಡತೆಯ ದ್ವಿಘಟಕವಾದ (ಬೈಫ್ಯಾಕ್ಟರ್ ಥಿಯರಿ, ಸು. 1937) ಸ್ಪಿಯರ್‌ಮನನ ಒಂದೇ ಸಾರ್ವತ್ರಿಕ ಘಟಕವನ್ನು ಒಂದು ಸಾರ್ವತ್ರಿಕ ಮತ್ತು ಹಲವು ಸಮೂಹ ಘಟಕಗಳಾಗಿ ವಿಂಗಡಿಸಲು ಎಡೆಮಾಡಿಕೊಡುತ್ತದೆ. ಆದ್ದರಿಂದ ಪ್ರತಿಯೊಂದು ಚರವನ್ನು ಒಂದು ಸಾರ್ವತ್ರಿಕ ಘಟಕ, ಒಂದು ಸಮೂಹ ಘಟಕ ಮತ್ತು ಒಂದು ವಿಶಿಷ್ಟ ಘಟಕಗಳ ಮೂಲಕ ವಿವರಿಸಬಹುದು. ಥರ್ಸ್ಟನ್ ಎಂಬಾತ ಪ್ರತಿಪಾದಿಸಿದ ಬಹುಘಟಕವಾದ (ಸು. 1930) ಸಾರ್ವತ್ರಿಕ ಘಟಕವಾದದ ಅಸಮರ್ಪಕತೆಯನ್ನು ಪರಿಹರಿಸಲು ಹುಟ್ಟಿಕೊಂಡ ಇನ್ನೊಂದು ಪ್ರಮುಖವಾದ. ಇದು ಸಾರ್ವತ್ರಿಕ ಘಟಕದ ಪರಿಕಲ್ಪನೆಯನ್ನು ಬದಿಗಿಟ್ಟು ಒಂದರ ಮೇಲೊಂದು ಪೇರುವ ಸಮೂಹಘಟಕಗಳ ಪರಿಕಲ್ಪನೆಯನ್ನು ಮುಂದೊಡ್ಡುತ್ತದೆ. ಅಂದರೆ ಒಂದೇ ಚರವನ್ನು ವಿವರಿಸಲು ಹಲವು ಸಮೂಹ ಘಟಕಗಳನ್ನು ಉಪಯೋಗಿಸಿಕೊಳ್ಳಲಾಗುವುದು. ಆರು ಚರಗಳಿರುವ ಒಂದು ಸಂದರ್ಭದ ಮಾದರಿಯನ್ನು ಕೋಷ್ಟಕಗಳು 1, 2 ಮತ್ತು 3 ತೋರಿಸುತ್ತವೆ. ಇವುಗಳಲ್ಲಿ $X$ ಎಂಬುದು ಘಟಕದ ಇರುವಿಕೆಯನ್ನು ಸೂಚಿಸುತ್ತದೆ.

ಘಟಕ ವಿಶ್ಲೇಷಣೆಯ ಉಪಯೋಗ ಮೊದಮೊದಲು ಮನೋವಿಜ್ಞಾನಕ್ಕೆ ಮಾತ್ರ ಸೀಮಿತವಾಗಿತ್ತು. ಮಾನವನ ಮನಸ್ಸನ್ನು ಪೂರ್ಣವಾಗಿ ವಿವರಿಸುವ ಪರೀಕ್ಷೆಗಳನ್ನು ಅವುಗಳ ಸಂಖ್ಯೆ ಸಾಕಷ್ಟು ಕಡಿಮೆ ಇರುವಂತೆ ನಿರ್ಧರಿಸಲು ಮನೋವಿಜ್ಞಾನಿಗಳು ಈ ವಿಧಾನವನ್ನು ಸಫಲವಾಗಿ ಉಪಯೋಗಿಸಿದರು. ಬುದ್ಧಿಪರೀಕ್ಷೆಗಳ ಒಂದು ದೊಡ್ಡ ಸರಣಿಗೆ ಘಟಕ ವಿಶ್ಲೇಷಣೆಯನ್ನು ಅನ್ವಯಿಸಿ ಕೆಲವು ಸಾಮಾನ್ಯ ಘಟಕಗಳನ್ನು ಗುರುತಿಸಬಹುದು. ಬಳಿಕ ಈ ಘಟಕಗಳನ್ನು ಅತ್ಯುತ್ತಮವಾಗಿ ಅಳೆಯುವ ಪರೀಕ್ಷೆಗಳನ್ನು (ಅಥವಾ ಅವುಗಳ ಪುನರ್ವಿಮರ್ಶಿತ ರೂಪಗಳನ್ನು) ಮನೋಘಟಕಗಳ ನೇರಮಾನಗಳಾಗಿ ಉಪಯೋಗಿಸಬಹುದು. ಈಚಿನ ವರ್ಷಗಳಲ್ಲಿ ಈ ಪ್ರಬಲ ವಿಧಾನದ ಉಪಯೋಗ ಜೀವವಿಜ್ಞಾನ, ವೈದ್ಯವಿಜ್ಞಾನ, ಭೂವಿಜ್ಞಾನ, ಸಮರವಿಜ್ಞಾನ, ಶಿಕ್ಷಣವಿಜ್ಞಾನ, ಭೌತವಿಜ್ಞಾನ, ಸಮಾಜವಿಜ್ಞಾನ, ರಾಜ್ಯಶಾಸ್ತ್ರ ಇತ್ಯಾದಿ ಇತರ ಜ್ಞಾನಾಂಗಗಳಲ್ಲಿ ಕೂಡ ಆಗುತ್ತಿದೆ.

ಘಟಕ ವಿಶ್ಲೇಷಣೆಯ ಪ್ರತಿರೂಪದಲ್ಲಿ ಒಂದು ಅನಿಶ್ಚಿತತೆ (ಇನ್‌ಡಿಟರ್ಮಿನೆನ್ಸಿ) ಉಂಟು – ಚರಗಳ ನಡುವಿನ ಸಹಸಂಬಂಧಗಳು ದತ್ತವಾಗಿರುವಾಗಲೂ ಪ್ರತಿರೂಪ ಗುಣಾಂಕಗಳು ($a_{jp}$) ಏಕೈಕವಾಗಿ ನಿರ್ಧರಿತವಾಗುವುದಿಲ್ಲ. ಅಂದರೆ ದೊರೆತ ಸಹಸಂಬಂಧಗಳೊಡನೆ ಸಂಗತವಾಗಿರುವಂತೆ ಅನಂತ ವಿಧಗಳಲ್ಲಿ ಅಸಹಸಂಬಂಧಿತ ಘಟಕಗಳನ್ನು ಆಯ್ಕೆಮಾಡಬಹುದು. ಯಾವುದೇ ಒಂದು ಪರಿಹಾರ, ಸಾಮಾನ್ಯ ಘಟಕಗಳನ್ನು ಒಳಗೊಂಡಿರುವ $m$ ಆಯಾಮಗಳ ಸಮಷ್ಟಿಯನ್ನೇ ನಿರ್ಧರಿಸುತ್ತದೆ; ಆದರೆ ಈ ಸಮಷ್ಟಿಯಲ್ಲಿ ಘಟಕಗಳ ನಿಖರ ಸ್ಥಾನಗಳನ್ನು ನಿರ್ಧರಿಸುವುದಿಲ್ಲ.

ಕಂಡುಬಂದ ವಿದ್ಯಮಾನಗಳನ್ನು ಸರಳ ಸಿದ್ಧಾಂತಗಳ ಮೂಲಕ ವಿವರಿಸಲು ಮತ್ತು ಗಣಿತೀಯ ಕ್ಲಿಷ್ಟತೆಯನ್ನು ದೂರವಿಡಲು ವಿಜ್ಞಾನಿಗಳು ಹೆಚ್ಚಾಗಿ ರೇಖೀಯ ಪ್ರತಿರೂಪಗಳನ್ನೇ ಬಳಸುತ್ತಾರೆ. ಘಟಕವಿಶ್ಲೇಷಣೆಯಲ್ಲಿ ಈ ರೇಖೀಯತೆಯ ನಿರ್ಬಂಧವನ್ನು ತೆಗೆದುಹಾಕಿದರೆ ದೊರೆಯಬಹುದಾದ ಸಾರ್ವತ್ರೀಕರಣವನ್ನು ಬಾರ್ಟ್‌ಲೆಟ್ (1953ರಲ್ಲಿ), ಮೆಕ್‌ಡೊನಾಲ್ಡ್ (1962), ವುಡ್ (1964ರಲ್ಲಿ) ಮೊದಲಾದವರು ಸೂಚಿಸಿದ್ದಾರೆ.

(ಎಸ್.ಟಿ.)

**ಮನೋವಿಜ್ಞಾನದಲ್ಲಿ ಘಟಕ ವಿಶ್ಲೇಷಣೆ :** ಜೀವಿಗಳ ವೈವಿಧ್ಯಮಯ ವರ್ತನೆಯನ್ನು ಅಧ್ಯಯನಮಾಡಿ ಅದನ್ನು ಕೆಲವು ನಿರ್ದಿಷ್ಟ ನಿಯಮಗಳ ಅಥವಾ ಘಟಕಗಳ ಮೂಲಕ ವಿವರಿಸಲು ಮಾಡಿದ ಪ್ರಯತ್ನದ ಫಲ ಘಟಕ ವಿಶ್ಲೇಷಣೆ. ಈ ವಿಧಾನದ ಉದ್ದೇಶ ಜೀವಿಗಳ ವರ್ತನೆಯನ್ನು, ಅದರಲ್ಲೂ ಮುಖ್ಯವಾಗಿ ಮಾನವನ ವರ್ತನೆಯನ್ನು, ಗಣಿತಸೂತ್ರಗಳ ಮೂಲಕ ವಿಭಜಿಸಿ, ಅದನ್ನು ಕೆಲವು ನಿರ್ದಿಷ್ಟ ಅಂಶಗಳ ಅಥವಾ ಒಂದು ಅಂಗವಾದ ಬುದ್ಧಿಯ ರೂಪರೇಖೆಗಳನ್ನು ಅರಿಯುವುದರಲ್ಲಿ ಉಪಯೋಗಿಸಲಾಯಿತು. ಮನೋವಿಜ್ಞಾನಿಗಳು ಬುದ್ಧಿಯನ್ನು ಅಳೆಯುವುದರಲ್ಲಿ ಹಲವಾರು ಬುದ್ಧಿಪರೀಕ್ಷೆಗಳನ್ನು (ಇಂಟಲಿಜೆನ್ಸ್ ಟೆಸ್ಟ್ಸ್) ಮಾಡುವುದು ಸರಿಯಷ್ಟೆ. ಇಂಥ ಪರೀಕ್ಷೆಗಳು ನೂರಾರಿದ್ದು ಇವುಗಳಲ್ಲಿ ಯಾವುದನ್ನು ಉಪಯೋಗಿಸುವುದು ಎಂಬುದು ದೊಡ್ಡ ಸಮಸ್ಯೆ. ಒಬ್ಬ ವ್ಯಕ್ತಿಯ ಬುದ್ಧಿಸಾಮರ್ಥ್ಯವನ್ನು ಅರಿಯಲು ನೂರಾರು ಪರೀಕ್ಷೆಗಳನ್ನು ಮಾಡುವುದು ಅಸಾಧ್ಯವಲ್ಲದಿದ್ದರೂ ಅಂಥ ಕೆಲಸ ಅಪ್ರಾಯೋಗಿಕ. ಆದ್ದರಿಂದ ಕೆಲವೇ ಉತ್ತಮವಾದ ಬುದ್ಧಿಪರೀಕ್ಷೆಗಳನ್ನು ಆರಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಹೀಗೆ ಮಾಡಲು ನಮಗೆ ಬುದ್ಧಿಯ ಮೂಲರೂಪ ಮತ್ತು ರಚನೆಯ ಅರಿವು ಅವಶ್ಯ. ಅಂದರೆ ಬುದ್ಧಿಯನ್ನು ವಿಶ್ಲೇಷಿಸಿ ಅದರ ಅಂಶಗಳೇನು ಎಂಬುದನ್ನು ತಿಳಿಯಲು ನಮಗೆ ಸಾಧ್ಯವಾದರೆ ಆಗ ಆ ಅಂಶಗಳನ್ನು ಮಾತ್ರ ಅಳೆದು ಬುದ್ಧಿಯ ಪೂರ್ಣಚಿತ್ರವನ್ನು ಸುಲಭವಾಗಿ ಪಡೆಯಬಹುದು.

ಬುದ್ಧಿಯ ಸ್ವರೂಪವನ್ನು ಅರಿಯಲು ಮನೋವಿಜ್ಞಾನಿಗಳು ಬಹಳ ಕಾಲದಿಂದಲೂ ಯತ್ನಿಸುತ್ತಿದ್ದು ಅದರ ಪರಿಣಾಮವಾಗಿ ಬುದ್ಧಿಯ ರಚನೆಯನ್ನು ವಿವರಿಸುವ ಅನೇಕ ವಾದಗಳು ಬೆಳೆದು ಬಂದವು. ಅವುಗಳ ಪೈಕಿ ಕೆಲವು ಬುದ್ಧಿ ಕೇವಲ ಒಂದೇ ಘಟಕದಿಂದಾದುದೆಂದೂ ಬೇರೆ ಕೆಲವು ಬುದ್ಧಿ ಅಗಣಿತ ಘಟಕಗಳಿಂದಾದುದೆಂದೂ ವಾದಿಸುತ್ತವೆ. ಆದರೆ ಇವು ಕೇವಲ ವಾದಗಳಾಗಿಯೇ ಉಳಿದು ಅವುಗಳ ಸತ್ಯಾಸತ್ಯತೆಯನ್ನು ಸಾಧಿಸುವಲ್ಲಿ ಯಾವ ಪ್ರಗತಿಯೂ ಕಂಡುಬಂದಿರಲಿಲ್ಲ. ಇಂಥ ಒಂದು ಗೊಂದಲ ಪರಿಸ್ಥಿತಿಯನ್ನು ತಿರಸ್ಕರಿಸಿ ಬುದ್ಧಿಗೆ ಒಂದು ನಿಶ್ಚಿತ ರೂಪ ಅಂದರೆ ವೈಜ್ಞಾನಿಕ ವಿವರಣೆ ಕೊಡಲು ಪ್ರಥಮ ಬಾರಿಗೆ ಪ್ರಯತ್ನ ಮಾಡಿದವ ಈ ಹಿಂದೆ ಹೇಳಿದಂತೆ ಮನೋವಿಜ್ಞಾನಿ ಚಾರ್ಲ್ಸ್ ಸ್ಪಿಯರ್‌ಮನ್. ಇವನು 1904ರಲ್ಲಿ ಪ್ರಕಟಿಸಿದ ದ್ವಿಘಟಕ ವಾದ ಇಂದು ಬಳಕೆಯಲ್ಲಿರುವ ಸಮಸ್ತ ಘಟಕ ವಿಶ್ಲೇಷಣ ಕ್ರಮಗಳಿಗೂ ಪ್ರೇರಕ ಚೈತನ್ಯವಾಗಿದೆ.

ಸ್ಪಿಯರ್‌ಮನ್ನನ ವಾದದ ಪ್ರಕಾರ ಸಹಸಂಬಂಧ ಗುಣಾಂಕ ಎನ್ನುವ ಪರಿಕಲ್ಪನೆಗೆ ಪ್ರಾಮುಖ್ಯ ಉಂಟು. ಈ ಗುಣಾಂಕ ಎರಡು ಸರಣಿ ಅಂಕಗಳಲ್ಲಿರುವ ಪರಸ್ಪರ ಹೋಲಿಕೆ ಅಥವಾ ಸಂಬಂಧವನ್ನು ಸೂಚಿಸುವ ಒಂದು ಸಂಖ್ಯೆ. ಉದಾಹರಣೆಗೆ ಓರ್ವ ಉಪಾಧ್ಯಾಯ ತನ್ನ ತರಗತಿಯ ವಿದ್ಯಾರ್ಥಿಗಳನ್ನು ಚರಿತ್ರೆ ಮತ್ತು ಭೂಗೋಳಗಳಲ್ಲಿ ಪರೀಕ್ಷೆ ಮಾಡುತ್ತಾನೆ ಎಂದು ಭಾವಿಸೋಣ. ಆಗ ಆ ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಗೂ ಎರಡು ಅಂಕಗಳು ಬಂದಿರುತ್ತವೆ. ಒಂದು ಚರಿತ್ರೆಯದು, ಮತ್ತೊಂದು ಭೂಗೋಳದ್ದು. ಈ ಎರಡು ಅಂಕಸರಣಿಗಳಿಗಿರುವ ಹೋಲಿಕೆಯನ್ನು ತಿಳಿಸುವ ಸಂಖ್ಯೆಯೇ ಸಹಸಂಬಂಧ ಗುಣಾಂಕ. ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಗೂ ಚರಿತ್ರೆಯಲ್ಲಿ ಬಂದಷ್ಟೇ ಅಂಕಗಳು ಭೂಗೋಳದಲ್ಲೂ ಬಂದಿದ್ದರೆ ಆಗ ಆ ಗುಣಾಂಕ + 1 ಆಗಿರುತ್ತದೆ. ಒಂದು ವೇಳೆ ಯಾವುದೋ ಒಂದು ವಿಚಿತ್ರ ಕಾರಣದಿಂದಾಗಿ ಚರಿತ್ರೆಯಲ್ಲಿ ಮೊದಲ ಸ್ಥಾನ ಪಡೆದ ವಿದ್ಯಾರ್ಥಿ ಭೂಗೋಳದಲ್ಲಿ ಕೊನೆಯ ಸ್ಥಾನ ಪಡೆದಿದ್ದು, ಎರಡನೆಯ ಸ್ಥಾನಗಳಿಸಿದವನು ಕೊನೆಯಿಂದ ಎರಡನೆಯ ಸ್ಥಾನ ಪಡೆದಿದ್ದು, ಬೇರೆ ಎಲ್ಲ ವಿದ್ಯಾರ್ಥಿಗಳ ಅಂಕಗಳೂ ಇದೇ ರೀತಿ ಕ್ರಮವಾಗಿ ಸ್ಥಾನಪಲ್ಲಟವಾಗಿದ್ದರೆ ಆಗ ಈ ಸಹಸಂಬಂಧ ಗುಣಾಂಕ — 1 ಆಗಿರುತ್ತದೆ. ಅಥವಾ ಒಂದು ಪರೀಕ್ಷೆಯ ಅಂಕಕ್ಕೂ ಇನ್ನೊಂದರದಕ್ಕೂ ಪರಸ್ಪರ ಏನೂ ಹೋಲಿಕೆಯೇ ಇಲ್ಲದಿದ್ದರೆ ಈ ಗಣಾಂಕ 0 ಆಗಿರುತ್ತದೆ. ಹೀಗೆಯೇ ಎರಡು ಅಂಕಸರಣಿಗಳ ಹೋಲಿಕೆಯನ್ನು ಅವಲಂಬಿಸಿ ಸಹಸಂಬಂಧಗುಣಾಂಕ —1ರಿಂದ 0ಯ ಮೂಲಕ +1ರ ವರೆಗಿನ ಯಾವುದಾದರೂ ಒಂದು ದಶಮಾಂಶ ಸಂಖ್ಯೆಯಾಗಿರುವುದು. ಮೇಲಿನ ಉದಾಹರಣೆಯಲ್ಲಿ ಹೇಳಿದ ಚರಿತ್ರೆಯ ಭೂಗೋಳ ಪರೀಕ್ಷೆಗಳ ಬದಲು ಎರಡು ಬುದ್ಧಿಪರೀಕ್ಷೆಗಳನ್ನು ಉಪಯೋಗಿಸಿ ಅವೆರಡರ ನಡುವೆ ಇರುವ ಸಹಸಂಬಂಧವನ್ನು ನಾವು ಕಂಡುಹಿಡಿಯಬಹುದು. ಹೀಗೆ ಅನೇಕ ಪರೀಕ್ಷೆಗಳನ್ನು ಹಲವಾರು ಜನಗಳ ಮೇಲೆ ಪ್ರಯೋಗಿಸಿ ಪ್ರತಿಯೊಂದು ಪರೀಕ್ಷೆಗೂ ಮಿಕ್ಕೆಲ್ಲವಕ್ಕೂ ಇರುವ ಸಂಬಂಧವನ್ನು ಒಂದು ಕೋಷ್ಟಕದಲ್ಲಿ ಬರೆಯಬಹುದು. ಉದಾಹರಣೆಗೆ *a*, b, *c*, *d*, *e*, ಎಂಬ ಐದು ಪರೀಕ್ಷೆಗಳನ್ನು ಉಪಯೋಗಿಸಿಕೊಂಡು ಅವುಗಳ ನಡುವಣ ಸಹಸಂಬಂಧ ಗುಣಾಂಕವನ್ನು ಕಂಡುಹಿಡಿದೆವೆನ್ನೋಣ. ಆಗ ಆ ಗುಣಾಂಕಗಳನ್ನು ಕೋಷ್ಟಕ 1ರಲ್ಲಿ ತೋರಿಸಿರುವಂತೆ ಬರೆಯಬಹುದು. ಇಂಥ ಕೋಷ್ಟಕಕ್ಕೆ ಸಹಸಂಬಂಧ ಕೋಷ್ಟಕ ಎಂದು ಹೆಸರು.

**ಕೋಷ್ಟಕ 1**

| | a | b | c | d | e |
|---|---|---|---|---|---|
| a | - | 0.60 | 0.48 | 0.18 | 0.18 |
| b | 0.60 | — | 0.80 | 0.30 | 0.30 |
| c | 0.48 | 0.80 | — | 0.24 | 0.24 |
| d | 0.18 | 0.30 | 0.24 | — | 0.09 |
| e | 0.18 | 0.30 | 0.24 | | 0.09 |
| ಮೊತ್ತ | 1.44 | 2.00 | 1.76 | 0.81 | 0.81 |

ಸ್ಪಿಯರ್‌ಮನ್ ಆ ದಿನಗಳಲ್ಲಿ ಬಳಕೆಯಲ್ಲಿದ್ದ ವಿವಿಧ ಬುದ್ಧಿಪರೀಕ್ಷೆಗಳನ್ನು ಕಲೆಹಾಕಿ ಅವನ್ನು ಒಂದು ಪ್ರಾತಿನಿಧಿಕ ಸಮೂಹದ ಮೇಲೆ ಪ್ರಯೋಗಿಸಿ ಪ್ರತಿಯೊಂದು ಪರೀಕ್ಷೆಯನ್ನೂ ಉಳಿದ ಎಲ್ಲ ಪರೀಕ್ಷೆಗಳೊಡನೆ ಸಹಸಂಬಂಧಿಸಿ ಅವುಗಳ ಎಲ್ಲ ಅಂತರ ಸಹಸಂಬಂಧಗಳನ್ನೂ ಕಂಡುಹಿಡಿದ. ಅವೆಲ್ಲವೂ ಧನಾತ್ಮಕವಾಗಿದ್ದುವು. ಆಗ ಪ್ರತಿಯೊಂದು ಪರೀಕ್ಷೆಯೂ ಬೇರೆ ಎಲ್ಲ ಪರೀಕ್ಷೆಗಳೊಡನೆ ಹೊಂದಿರುವ ಸಹಸಂಬಂಧ ಗುಣಾಂಕಗಳ ಮೊತ್ತದ ಗಾತ್ರವನ್ನು ಅನುಸರಿಸಿ ಒಂದು ಕೋಷ್ಟಕವನ್ನು ನಿರ್ಮಿಸಿ ಅದನ್ನು ಪರಿಶೀಲಿಸಿದಾಗ ಸ್ಪಿಯರ್‌ಮನ್ನನಿಗೆ ಒಂದು ಮುಖ್ಯವಾದ ಗುಣವಿಶೇಷ ಗೋಚರವಾಯಿತು. ಅದೇನೆಂಬುದು ಆತ ಮಾಡಿದಂತೆಯೇ ಕೋಷ್ಟಕ 1ನ್ನು ಬದಲಾಯಿಸಿ ಬರೆದಾಗ ತಿಳಿಯುವುದು.

**ಕೋಷ್ಟಕ 2**

| | *b* | *c* | *a* | *d* | *e* |
|---|---|---|---|---|---|
| *b* | - | 0.80 | 0.60 | 0.30 | 0.30 |
| *c* | 0.80 | - | 0.48 | 0.24 | 0.24 |
| *a* | 0.60 | 0.48 | - | 0.18 | 0.18 |
| *d* | 0.30 | 0.24 | 0.18 | - | 0.09 |
| *e* | 0.30 | 0.24 | 0.18 | 0.09 | - |

ಈ ಕೋಷ್ಟಕವನ್ನು ಪರಿಶೀಲಿಸಿದಾಗ ಒಂದು ವಿಶೇಷ ಕಂಡುಬರುತ್ತದೆ. ಇದರಲ್ಲಿರುವ ಗುಣಾಂಕಗಳ ಬೆಲೆ ಯಾವುದೇ ಒಂದು ನಿರ್ದಿಷ್ಟ ಜಾಗದಿಂದ ಕೆಳಕ್ಕೆ ಅಥವಾ ಬಲಕ್ಕೆ ಹೋದಂತೆಲ್ಲ ಕಡಿಮೆಯಾಗುತ್ತಿರುವುದು ಮತ್ತು ಯಾವುದೇ ಎರಡು ಸಾಲಿನಲ್ಲಿರುವ ಗುಣಾಂಕಗಳು ಒಂದು ಸ್ಥಿರ ನಿಷ್ಪತ್ತಿಯಲ್ಲಿರುವುದು. ಉದಾಹರಣೆಗೆ ಮೊದಲನೆಯ ಎರಡು ಅಡ್ಡ ಸಾಲುಗಳಲ್ಲಿರುವ ಗುಣಾಂಕಗಳನ್ನು (ಖಾಲಿ ಇರುವ ಜಾಗಗಳನ್ನು ಬಿಟ್ಟು) ಪರಿಶೀಲಿಸೋಣ. ಅವು ಹೀಗಿವೆ:

0.60 0.30 0.30
0.48 0.24 0,24

ಕೆಳಸಾಲಿನ ಪ್ರತಿ ಗುಣಾಂಕವೂ ಅದರ ಮೇಲಿನ ಸಂವಾದೀ ಗುಣಾಂಕದ 4/5ರಷ್ಟೇ ಇದೆ. ಈ ಗುಣವಿಶೇಷವನ್ನು ಸ್ಪಿಯರ್‌ಮನ್ ಮೊದಲು ಗಮನಿಸಿ ಇದಕ್ಕೆ ಅಂತಸ್ತುತತ್ತ್ವ (ಪ್ರಿನ್ಸಿಪಲ್ ಆಫ್ ಹೈರಾರ್ಕಿ) ಎಂದು ಹೆಸರಿತ್ತ. ಹೀಗೆ ಯಾವುದೋ ಒಂದು ಅಂತರ ಸಹಸಂಬಂಧ ಕೋಷ್ಟಕದಲ್ಲಿ ಅಂತಸ್ತು ತತ್ತ್ವ ಪ್ರದರ್ಶಿತವಾಗಿದ್ದರೆ ಆಗ ಆ ಕೋಷ್ಟಕದಲ್ಲಿರುವ ಎಲ್ಲ ಅಂತರ ಸಹಸಂಬಂಧಗಳಿಗೂ ಕಾರಣ ಒಂದು ಮೂಲ ಘಟಕವಾಗಿರುತ್ತದೆ (ಇದನ್ನು ಗಣಿತಸೂತ್ರಗಳ ನೆರವಿನಿಂದ ಸಾಧಿಸಬಹುದು). ಈ ಘಟಕ ಕೋಷ್ಟಕದಲ್ಲಿರುವ ಎಲ್ಲ ಪರೀಕ್ಷೆಗಳಲ್ಲಿಯೂ ಕೊಂಚ ಹೆಚ್ಚು ಕಡಿಮೆ ಇದ್ದೇ ಇರುತ್ತದೆ. ಹೀಗೆ ಎಲ್ಲ ಬುದ್ಧಿಪರೀಕ್ಷೆಗಳಲ್ಲೂ ಪಾಲ್ಗೊಳ್ಳುತ್ತಿರುವ ಈ ಘಟಕಕ್ಕೆ ಸಾರ್ವತ್ರಿಕ ಘಟಕ ಎಂದು ಹೆಸರು. ಜೊತೆಗೆ ಪ್ರತಿಯೊಂದು ಪರೀಕ್ಷೆಯಲ್ಲಿಯೂ ಆಯಾ ಪರೀಕ್ಷೆಗೆ ಮಾತ್ರ ಸೀಮಿತವಾದ ಎರಡನೆಯ ಘಟಕ ಒಂದಿರುತ್ತದೆ. ಇದೇ ವಿಶಿಷ್ಟ ಘಟಕ. ಅಂದರೆ ನಾವು ಮೇಲೆ ಉದಾಹರಿಸಿದ ಐದು ಪರೀಕ್ಷೆಗಳಲ್ಲಿ ಒಂದು ಸಾರ್ವತ್ರಿಕ ಘಟಕವೂ ಐದು ವಿಶಿಷ್ಟ ಘಟಕಗಳೂ ಇವೆ ಎಂದಂತಾಯ್ತು. ಇದೇ ಸ್ಪಿಯರ್‌ಮನ್ನನ ದ್ವಿಘಟಕವಾದ.

ನಾವು ನೋಡಿದಂತೆ ದ್ವಿಘಟಕವಾದ ಅಂತಸ್ತುತತ್ತ್ವದ ಮೇಲೆ ನಿಂತಿದೆ. ಹಾಗಾದರೆ ಒಂದು ಸಹಸಂಬಂಧ ಕೋಷ್ಟಕದಲ್ಲಿ ಈ ತತ್ತ್ವದ ಅಸ್ತಿತ್ವವನ್ನು ಪರೀಕ್ಷಿಸುವುದು ಹೇಗೆ? ಇದಕ್ಕಾಗಿ ನಾವು ಎರಡನೆಯ ಕೋಷ್ಟಕದಲ್ಲಿ *a* ಮತ್ತು *d* ಗಳು *b* ಮತ್ತು *c*. ಗಳೊಡನೆ ಹೊಂದಿರುವ ಸಹಸಂಬಂಧಗಳನ್ನು ಪರಿಶೀಲಿಸೋಣ. ಅವು ಹೀಗಿವೆ:

**ಕೋಷ್ಟಕ 3**

| | *b* | *c* |
|---|---|---|
| *a* | 0.60 | 0.48 |
| *d* | 0.30 | 0.24 |

ಇಲ್ಲಿ (60 ÷ 48) = (30 ÷ 24) ಆಗಿದೆ.

ಇದನ್ನು ಒಂದು ಸಮೀಕರಣ ರೂಪದಲ್ಲಿ ಬರೆಯಬಹುದು. ಆಗ 0.60 x 0.24 — 0.48 ×0.30 =0 ಆಗುತ್ತದೆ. ಇದರಲ್ಲಿ ನಾಲ್ಕು ಧಾತುಗಳಿರುವುದರಿಂದ ಇದಕ್ಕೆ ಸ್ಪಿಯರ್‌ಮನ್ ಚತುಷ್ಟಯ ಸಮೀಕರಣ (ಟೆಟ್ರಡ್ ಈಕ್ವೇಷನ್) ಎಂದೂ ಈ ಸಮೀಕರಣ ಮೌಲ್ಯಕ್ಕೆ ಚತುಷ್ಟಯ ವ್ಯತ್ಯಾಸವೆಂದೂ ಹೆಸರುಗಳಿವೆ. ಇದೇ ರೀತಿ ಅನುಕ್ರಮವಾಗಿ ಯಾವುದೇ ಎರಡು ಸಾಲಿನ ನಾಲ್ಕು ಸಹಸಂಬಂಧ ಗುಣಾಂಕಗಳನ್ನು ಪರಿಶೀಲಿಸಿದರೂ ಅವೆಲ್ಲವುಗಳ ಚತುಷ್ಟಯ ವ್ಯತ್ಯಾಸಗಳು ಶೂನ್ಯವಾಗಿರುತ್ತವೆ. ಹೀಗೇ ಯಾವುದೇ ಒಂದು ಸಹಸಬಂಧ ಕೋಷ್ಟಕದಲ್ಲಿ ಎಲ್ಲ ಚತುಷ್ಟಯ ವ್ಯತ್ಯಾಸಗಳೂ ಶೂನ್ಯವಾದರೆ ಆ ಕೋಷ್ಟಕದಲ್ಲಿ ಅಂತಸ್ತುತತ್ತ್ವ ಪ್ರದರ್ಶಿತವಾಗಿದೆ ಎಂದು ನಂಬಬಹುದು. ಅಂದರೆ ಸ್ಪಿಯರ್‌ಮನ್ನನ ದ್ವಿಘಟಕವಾದವನ್ನು ಅಂಗೀಕರಿಸಲು ಚತುಷ್ಟಯ ವ್ಯತ್ಯಾಸಗಳು

ಶೂನ್ಯವಾಗುವುದು ಆವಶ್ಯಕ. ಇಲ್ಲಿ ಒಂದು ವಿಚಾರವನ್ನು ಮರೆಯಬಾರದು. ಮೇಲೆ ಉದಾಹರಿಸಿದ ಸಹಸಂಬಂಧ ಗುಣಾಂಕಗಳು ಸ್ಪಿಯರ್‌ಮನ್ನನ ವಾದವನ್ನು ವಿವರಿಸಲು ಊಹಿಸಿ ಬರೆದಂಥವು. ನಿಜವಾಗಿಯೂ ಪರೀಕ್ಷೆಗಳನ್ನೇ ಉಪಯೋಗಿಸಿ ಸಹಸಂಬಂಧ ಗುಣಾಂಕಗಳನ್ನು ಕಂಡುಹಿಡಿದು ಚತುಷ್ಪಯ ವ್ಯತ್ಯಾಸಗಳನ್ನು ಪರಿಶೀಲಿಸಿದರೆ ಅವು ಸಂಪೂರ್ಣವಾಗಿ ಶೂನ್ಯವಾಗದಿರಬಹುದು. ಸಾಮಾನ್ಯವಾಗಿ ಆಗುವುದೂ ಇಲ್ಲ. ಸ್ಪಿಯರ್‌ಮನ್ನನ ವಾದ ನಿಜವಾಗಲು ಅವು ಸಂಪೂರ್ಣವಾಗಿ ಶೂನ್ಯವಾಗಲೇಬೇಕೆಂದೇನೂ ಇಲ್ಲ. ಅವೆಲ್ಲವೂ ಶೂನ್ಯಗಾಮಿಗಳಾಗಿದ್ದರೂ ಸಾಕು. ಇದೇ ಸ್ಪಿಯರ್‌ಮನ್ನನ ವಾದದ ಸೂಕ್ಷ್ಮ ಪರಿಚಯ. ಈ ವಾದದ ಪ್ರಕಾರ ಬುದ್ಧಿಸಾಮರ್ಥ್ಯ ಸಾರ್ವತ್ರಿಕ ಘಟಕವನ್ನು ಅನುಸರಿಸುತ್ತದೆ. ಸ್ಪಿಯರ್‌ಮನ್ ಹಾಗೆಂದು ನೇರವಾಗಿ ಹೇಳದಿದ್ದರೂ ಆತನ ವಾದದಲ್ಲಿ ಈ ಅರ್ಥ ಸೂಚಿತವಾಗುತ್ತದೆ. ಅವನು ಸಾರ್ವತ್ರಿಕ ಘಟಕವನ್ನು *g* ಎಂದೂ ವಿಶಿಷ್ಟ ಘಟಕವನ್ನು *S* ಎಂದೂ ಕರೆದು, ಪರೀಕ್ಷೆಗಳಲ್ಲಿನ *g* ಮತ್ತು *S* ಘಟಕ ಭಾರಗಳನ್ನು (ಫ್ಯಾಕ್ಟರ್ ಲೋಡಿಂಗ್ಸ್) ನಿರ್ಧರಿಸಿ, ಅವುಗಳಿಂದ ಪರೀಕ್ಷಿಸಲ್ಪಟ್ಟ ಯಾವುದೇ ವ್ಯಕ್ತಿಯಲ್ಲಿರಬಹುದಾದ *g*ಯ ಪ್ರಮಾಣವನ್ನು ಕಂಡುಹಿಡಿಯುವ ವಿಧಾನಗಳನ್ನು ತನ್ನ ವಾದದಲ್ಲಿ ಕೂಲಂಕಷವಾಗಿ ವಿವರಿಸಿದ್ದಾನೆ. ಆದರೆ ಕಾಲ ಕಳೆದಂತೆ ಹೆಚ್ಚುಹೆಚ್ಚು ಪರೀಕ್ಷೆಗಳನ್ನು ಉಪಯೋಗಿಸಿಕೊಂಡು ಸಹಸಂಬಂಧ ಗುಣಾಂಕಗಳನ್ನು ಕಂಡುಹಿಡಿದು ಅವನ್ನು ಪರೀಕ್ಷಿಸಿದಾಗ ಅನೇಕ ವೇಳೆ ಅವು ಅಂತಸ್ಸುತತ್ತ್ವವನ್ನು ಪ್ರದರ್ಶಿಸದಿರುವುದು ತೋರಿಬಂದಿತು. ಅಂದರೆ ಚತುಷ್ಪಯ ವ್ಯತ್ಯಾಸಗಳು ಶೂನ್ಯಕ್ಕಿಂತ ಬಹಳ ಹೆಚ್ಚಾಗಿರುತ್ತಿದ್ದವು. ಇದರಿಂದ ಸ್ಪಿಯರ್‌ಮನ್‌ನ ವಾದ ಬುದ್ಧಿಸಾಮರ್ಥ್ಯವನ್ನು ವಿವರಿಸುವ ಸರ್ವವ್ಯಾಪೀ ಸೂತ್ರವೆಂದು ಒಪ್ಪಲು ಕಷ್ಟವಾಯಿತು. ಸ್ಪಿಯರ್‌ಮನ್ನನ ವಾದವನ್ನೂ ಅದು ಎದುರಿಸಬೇಕಾಗಿ ಬಂದ ಕ್ಲಿಷ್ಟ ಪರಿಸ್ಥಿತಿಯನ್ನೂ ಚಿತ್ರದ ಮೂಲಕ ವಿವರಿಸಬಹುದು. ಅದರಲ್ಲಿ ತೋರಿಸುವ *a, b, c, d, e, f* ಅಂಡಾಕೃತಿಗಳು ಆರು ಪರೀಕ್ಷೆಗಳನ್ನೂ ದೊಡ್ಡ ವೃತ್ತ *g*ಯನ್ನೂ ಸಣ್ಣ ವೃತ್ತಗಳು *S* ಘಟಕಗಳನ್ನೂ ಪ್ರತಿನಿಧಿಸುತ್ತವೆಂದು ಭಾವಿಸೋಣ. ಇಲ್ಲಿ ಪ್ರತಿಯೊಂದು




ಪರೀಕ್ಷೆಯೂ ಅದರ ಯೋಗ್ಯತಾನುಸಾರ *g* ಭಾರವನ್ನೊಳಗೊಂಡಿದೆ. ಆದರೆ *e* ಮತ್ತು *f* ಗಳು ಮಾತ್ರ *g* ಯನ್ನು ಪಾಲ್ಗೊಳ್ಳುವುದರ ಜೊತೆಗೆ ತಮ್ಮ ತಮ್ಮಲೇ ಕೆಲವು ಅಂಶಗಳನ್ನು ಸಾಮಾನ್ಯವಾಗಿ ಹೊಂದಿವೆ. ಆದ್ದರಿಂದ ಇವರೆಡರ ನಡುವಣ ಸಹಸಂಬಂಧವನ್ನು ಕೇವಲ ಒಂದೇ ಸಾರ್ವತ್ರಿಕ ಘಟಕದ ಇರುವಿಕೆಯಿಂದ ವಿವರಿಸಿದರೆ ತಪ್ಪಾಗುತ್ತದೆ. ಅಂದರೆ ಇವೆರಡೇ ಪರೀಕ್ಷೆಗಳಿಗೆ ಸೀಮಿತವಾದ ಇನ್ನೊಂದು ಸಾರ್ವತ್ರಿಕ ಘಟಕ ಕೂಡ ಇವೆರಡರ ನಡುವಿನ ಸಹಸಂಬಂಧಕ್ಕೆ ಕಾರಣವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಕೆಲವು ವೇಳೆ ಎರಡಕ್ಕಿಂತ ಹೆಚ್ಚು ಪರೀಕ್ಷೆಗಳು ಇಂಥ ಒಂದು ಪರಿಮಿತ ಸಾರ್ವತ್ರಿಕ ಘಟಕದಲ್ಲಿ ಪಾಲ್ಗೊಳ್ಳುತ್ತಿರುತ್ತವೆ. ಇನ್ನು ಕೆಲವು ವೇಳೆ ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಉಪಯೋಗಿಸಿದಾಗ ಇಂಥ ಘಟಕಗಳು ಹಲವಾರು ಕಂಡುಬರಬಹುದು. ಹೀಗೆ ಪರಿಮಿತ ವ್ಯಾಪ್ತಿಯುಳ್ಳ ಸಾರ್ವತ್ರಿಕ ಘಟಕಗಳಿಗೆ ಸಮೂಹಘಟಕಗಳೆಂದು (ಗ್ರೂಪ್ ಫ್ಯಾಕ್ಟರ್ಸ್) ಹೆಸರು. ಮೊದಮೊದಲು ಸ್ಪಿಯರ್‌ಮನ್ ಮತ್ತು ಆತನ ಸಂಗಡಿಗರು ಸಮೂಹಘಟಕಗಳ ಅಸ್ತಿತ್ವವನ್ನು ಒಪ್ಪಿಕೊಳ್ಳದಿದ್ದರೂ ಬರಬರುತ್ತ ಅವುಗಳ ಇರುವಿಕೆಯನ್ನು ಅವರು ಒಪ್ಪಿಕೊಳ್ಳಲೇಬೇಕಾಯಿತು. ಅವರು ಒಪ್ಪಿಕೊಂಡ ಸಮೂಹಘಟಕಗಳಲ್ಲಿ ಸಾಂಖ್ಯಿಕ ಘಟಕ, ಭಾಷಾಘಟಕ, ಸಂಕಲ್ಪಘಟಕ, ಯಾಂತ್ರಿಕ ಘಟಕ ಮತ್ತು ಸತತ ಪ್ರಯತ್ನ ಘಟಕಗಳು ಮುಖ್ಯವಾದವು. ಪರೀಕ್ಷೆಗಳಲ್ಲಿ ಸಾರ್ವತ್ರಿಕ ಘಟಕ ಪ್ರಮಾಣವನ್ನು ಕಂಡುಹಿಡಿಯುವಂತೆಯೇ ಸಮೂಹಘಟಕಗಳ ಪ್ರಮಾಣವನ್ನು ಕೂಡ ನಿರ್ಧರಿಸುವ ವಿಧಾನವನ್ನು ಸ್ಪಿಯರ್‌ಮನ್ ವಿವರಿಸಿದರೂ ಈ ಘಟಕಗಳ ಅಸ್ತಿತ್ವದಿಂದಾಗಿ ದ್ವಿಘಟಕ ವಿಶ್ಲೇಷಣ ವಿಧಾನದ ಅಸ್ತಿಭಾರ ಸಡಿಲವಾಗಿ ಬೇರೆ ಬೇರೆ ವಿಶ್ಲೇಷಣ ವಿಧಾನಗಳು ತಲೆಯೆತ್ತಲು ಕಾರಣವಾಯಿತು. ಹೀಗೆ ಹುಟ್ಟಿಕೊಂಡ ವಿಧಾನಗಳ ಪೈಕಿ ಥರ್ಸ್ಟನ್ ಎಂಬಾತನ ಬಹುಘಟಕ ವಿಶ್ಲೇಷಣ ವಿಧಾನ ಮುಖ್ಯವಾದದ್ದು, ಒಂದು ದೃಷ್ಟಿಯಲ್ಲಿ ಈ ವಿಧಾನ ದ್ವಿಘಟಕ ವಾದದ ವಿಸ್ತರಣೆ. ಈ ಮೇಲೆ ನೋಡಿದಂತೆ ದ್ವಿಘಟಕವಾದ ನಿಂತಿರುವುದು ಅಂತಸ್ಸುತತ್ತ್ವದ ಮೇಲೆ. ಆದರೆ ಪರೀಕ್ಷೆಗಳ ಸಂಖ್ಯೆ ಹೆಚ್ಚಿದಂತೆಲ್ಲ ಸಹಸಂಬಂಧ ಕೋಷ್ಟಕದಲ್ಲಿ ಚತುಷ್ಪಯ ವ್ಯತ್ಯಾಸಗಳು ಶೂನ್ಯವಾಗದೆ ಅಂತಸ್ಸುತತ್ತ್ವವನ್ನು ಕಾಣುವುದು ಕಷ್ಟವಾಯಿತು. ಇಂಥ ಸಂದರ್ಭದಲ್ಲಿ ಉಳಿದಿದ್ದು ಎರಡು ದಾರಿ: ಒಂದು, ಅಂತಸ್ಸುತತ್ತ್ವವನ್ನು ಕಲಕುತ್ತಿರುವಂಥ ಪರೀಕ್ಷೆಗಳನ್ನು ಪರೀಕ್ಷಾತಂಡದಿಂದ ತೆಗೆದುಹಾಕಿ ಕೋಷ್ಟಕದಲ್ಲಿ ಅಂತಸ್ಸು ತತ್ತ್ವ ಬರುವಂತೆ ಮಾಡುವುದು; ಎರಡು, ಬುದ್ಧಿ ಒಂದಕ್ಕಿಂತ ಹೆಚ್ಚು ಸಾರ್ವತ್ರಿಕ ಘಟಕಗಳನ್ನು ಒಳಗೊಂಡಿದೆ ಎಂಬ ವಾದವನ್ನು ಒಪ್ಪಿಕೊಳ್ಳುವುದು. ಸ್ಪಿಯರ್‌ಮನ್‌ವಾದಿಗಳು ಮೊದಲಿಗೆ ಒಂದನೆಯ ದಾರಿಯನ್ನೇ ಹಿಡಿದರು. ಹಾಗೆ ಮಾಡುವಾಗ ಅನೇಕವೇಳೆ ತಂಡದಲ್ಲಿ ಉಳಿಯಬಹುದಾದುದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ಹೊರಹಾಕಬೇಕಾಗುತ್ತಿತ್ತು. ಹೀಗೆ ಹೊರಹಾಕಿದ ಪರೀಕ್ಷೆಗಳಲ್ಲಿ ಬುದ್ಧಿಯ ಅಂಶವೇ ಇಲ್ಲವೆಂದು ಒಪ್ಪುವುದು ಅವರಿಗೂ ಕಷ್ಟವಾಯಿತು. ಆದ್ದರಿಂದ ಪರಿಸ್ಥಿತಿಯ ಒತ್ತಡಕ್ಕೆ ಬಾಗಿ ಅವರು ಸಮೂಹಘಟಕಗಳ ಅಸ್ತಿತ್ವವನ್ನು ಒಪ್ಪಿಕೊಂಡರು. ಹೀಗೆ ಒಪ್ಪಿಕೊಂಡರೆ ಸ್ಪಿಯರ್‌ಮನ್ನನ ವಾದ ದ್ವಿಘಟಕವಾದವಾಗಿ ಉಳಿಯದೆ ಬಹುಘಟಕವಾದವಾಗುತ್ತದೆ. ಹಾಗಾದರೆ ಬಹುಘಟಕ ವಿಶ್ಲೇಷಣೆಗೆ ದ್ವಿಘಟಕ ವಿಶ್ಲೇಷಣ ಕ್ರಮ ಅನುಚಿತವಾಗುತ್ತದೆ. ಈ ಪರಿಸ್ಥಿತಿಯಲ್ಲಿ ಒಂದು ಸ್ವತಂತ್ರವಾದ ಬಹುಘಟಕ ವಿಶ್ಲೇಷಣ ವಿಧಾನವನ್ನು ಅಳವಡಿಸಿಕೊಳ್ಳುವುದು ಯೋಗ್ಯಮಾರ್ಗವೆಂದು ಕೆಲವರಿಗೆ ತೋರಿದ್ದರಲ್ಲಿ ಆಶ್ಚರ್ಯವಿಲ್ಲ. ಇಂಥ ಒಂದು ಉಪಯುಕ್ತಮಾರ್ಗ ಕಂಡುಬಂದದ್ದು ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದ ಥರ್ಸ್ಟನ್ನನಿಗೆ. ಆತ ಸ್ಪಿಯರ್‌ಮನ್ನನ ಚತುಷ್ಪಯ ವ್ಯತ್ಯಾಸ ಸೂತ್ರವನ್ನೇ ವಿಸ್ತರಿಸುವುದರ ಮೂಲಕ ತನ್ನ ಬಹುಘಟಕ ವಿಧಾನವನ್ನು ನಿರೂಪಿಸಿದ. ಥರ್ಸ್ಟನ್ನನ ವಾದದ ಗಣಿತಮೂಲವನ್ನು ಇಲ್ಲಿ ವಿವರಿಸುವುದು ಕಷ್ಟ. ಆದ್ದರಿಂದ ಕೇವಲ ಕೆಲವೇ ಸೂತ್ರಗಳ ಮೂಲಕ ಆತನ ವಾದದ ತಿರುಳನ್ನು ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಒಂದು ಚೌಕಾಕೃತಿ ಅಥವಾ ಆಯಾಕೃತಿಯಲ್ಲಿ ಜೋಡಿಸಿ ಬರೆದ ಅಂಕೆಗಳ ಒಂದು ಸಮೂಹಕ್ಕೆ ಗಣಿತದಲ್ಲಿ ಮಾತೃಕೆ (ಮ್ಯಾಟ್ರಿಕ್ಸ್) ಎಂದು ಹೆಸರು. ಉದಾಹರಣೆ.

$$\begin{bmatrix} 1\,2\,3 \\ 4\,5\,6 \end{bmatrix}, \begin{bmatrix} a & b \\ c & d \end{bmatrix}, \begin{bmatrix} a & b \\ c & d \\ e & f \end{bmatrix}$$

ಇಂಥ ಒಂದು ಮಾತೃಕೆಯ ಜಾತಿಯನ್ನು (ರ್‍ಯಾಂಕ್) ನಿರ್ಧರಿಸಲು ಗಣಿತಜ್ಞರು ಎಲ್ಲ ಚತುಷ್ಪಯ ವ್ಯತ್ಯಾಸಗಳನ್ನೂ ಶೂನ್ಯವಾದರೆ ಆಗ ಆ ಮಾತೃಕೆಯ ಜಾತಿ ಒಂದಾಗಿರುತ್ತದೆ. ಹೀಗಾದಾಗ ಅದರಲ್ಲಿ ಒಂದು ಸಾರ್ವತ್ರಿಕ ಘಟಕವಿರುವುದು. ಒಂದು ವೇಳೆ ಕೆಲವು ಚತುಷ್ಪಯ ವ್ಯತ್ಯಾಸಗಳು ಶೂನ್ಯವಾಗದಿದ್ದರೆ ಆ ವ್ಯತ್ಯಾಸಗಳನ್ನೇ ಒಂದು ಚೌಕಾಕೃತಿಯಲ್ಲಿ ಜೋಡಿಸಿ ಅವುಗಳೊಳಗಿನ ಚತುಷ್ಪಯ ವ್ಯತ್ಯಾಸಗಳನ್ನು ಪರೀಕ್ಷಿಸುತ್ತಾರೆ. ಅವೆಲ್ಲ ಶೂನ್ಯವಾದರೆ ಆ ಮಾತೃಕೆಯ ಜಾತಿ ಎರಡಾಗಿರುತ್ತದೆ. ಆಗ ಆ ಕೋಶದಲ್ಲಿ ಎರಡು ಸಾರ್ವತ್ರಿಕ ಘಟಕಗಳಿರುತ್ತವೆ. ಅವು ಶೂನ್ಯವಾಗದಿದ್ದರೆ ಹೀಗೆಯೇ ಮುಂದುವರಿದು ಚತುಷ್ಪಯ ವ್ಯತ್ಯಾಸಗಳೊಳಗಿನ ಚತುಷ್ಪಯ ವ್ಯತ್ಯಾಸಗಳನ್ನು ಪರೀಕ್ಷಿಸುವುದರ ಮೂಲಕ ಆ ಮಾತೃಕೆಯ ಜಾತಿಯನ್ನೂ ತನ್ಮೂಲಕ ಅದರಲ್ಲಿರುವ ಸಾರ್ವತ್ರಿಕ ಘಟಕಗಳ ಸಂಖ್ಯೆಯನ್ನೂ ನಿರ್ಧರಿಸುತ್ತಾರೆ. ಈಗ ನಾವು ನಮ್ಮ ಸಹಸಂಬಂಧ ಚೌಕಗಳನ್ನು ಮಾತೃಕೆಗಳೆಂದು ಪರಿಗಣಿಸಿ, ಮೇಲೆ ಹೇಳಿದ ಗಣಿತಸೂತ್ರವನ್ನೇ ಉಪಯೋಗಿಸಿಕೊಂಡು ಯಾವುದೇ ಒಂದು ಸಹಸಂಬಂಧ ಮಾತೃಕೆಯ ಜಾತಿಯನ್ನು ನಿರ್ಧರಿಸುವುದರ ಮೂಲಕ ಅದರಲ್ಲಿರುವ ಸಾರ್ವತ್ರಿಕ ಘಟಕಗಳ ಸಂಖ್ಯೆಯನ್ನು ಕಂಡುಹಿಡಿಯಬಹುದು. ಮಾತೃಕೆಯ ಜಾತಿ ಒಂದಾದರೆ ಅದರಲ್ಲಿ ಒಂದು ಸಾರ್ವತ್ರಿಕ ಘಟಕವಿರುತ್ತದೆ (ಇದು ಸ್ಪಿಯರ್‌ಮನ್ನನ ವಾದ). ಮಾತೃಕೆಯ ಜಾತಿ ಎರಡಾದರೆ ಅದರಲ್ಲಿ ಎರಡು ಸಾರ್ವತ್ರಿಕ ಘಟಕಗಳಿರುತ್ತದೆ.

ಅಂದರೆ ಒಂದು ಸಹಸಂಬಂಧ ಜಾತಿಯಷ್ಟೇ ಸಾರ್ವತ್ರಿಕ ಘಟಕಗಳು ಆ ಮಾತೃಕೆಯಲ್ಲಿರುತ್ತವೆ. ಈ ಸೂತ್ರದ ಉಪಯುಕ್ತತೆಯನ್ನೇ ಗಮನಿಸಿ ಅದನ್ನು ಅಳವಡಿಸಿಕೊಂಡು ಥರ್ಸ್ಟನ್ ತನ್ನ ಬಹುಘಟಕ ವಿಶ್ಲೇಷಣ ವಿಧಾನವನ್ನು ಪ್ರಕಟಿಸಿದ.

ಚತುಷ್ಪಯ ವ್ಯತ್ಯಾಸಗಳ ವಿಸ್ತರಣೆಯ ಮೂಲಕ ಥರ್ಸ್ಟನ್ ಈ ವಾದವನ್ನು ಮಂಡಿಸಿದ್ದರೂ ಅವನ ವಿಶ್ಲೇಷಣ ವಿಧಾನದಲ್ಲಿ ಈ ವ್ಯತ್ಯಾಸಗಳನ್ನು ಕಂಡುಹಿಡಿಯುವ ಗೋಜು ಏನೂ ಇರುವುದಿಲ್ಲ. ಅವನು ನೇರವಾಗಿ ಒಂದು ಸಹಸಂಬಂಧ ಕೋಷ್ಟಕದಲ್ಲಿರುವ ಸಾರ್ವತ್ರಿಕ ಘಟಕಗಳನ್ನು ನಿರ್ಧರಿಸುವ ವಿಧಾನವನ್ನು ವಿವರಿಸಿದ್ದಾನೆ. ಆತನ ವಿಧಾನಕ್ಕೆ ಸೆಂಟ್ರಾಯ್ಡ್ ವಿಧಾನ ಎಂದು ಹೆಸರು. ಅವನ ಘಟಕವಿಶ್ಲೇಷಣ ವಿಧಾನದಲ್ಲಿ ಮುಖ್ಯವಾಗಿ ಮೂರು ಹಂತಗಳಿವೆ:

1. ಸೆಂಟ್ರಾಯ್ಡ್ ಘಟಕ ವಿಶ್ಲೇಷಣೆ: ಸಹಸಂಬಂಧ ಮಾತೃಕೆಯಲ್ಲಿರುವ ಸಾರ್ವತ್ರಿಕ ಘಟಕಗಳನ್ನು ಸೆಂಟ್ರಾಯ್ಡ್ ವಿಧಾನದಿಂದ ಕಂಡುಹಿಡಿಯುವುದು.
2. ಆವರ್ತನೆ: ಸೆಂಟ್ರಾಯ್ಡ್ ಘಟಕಗಳನ್ನು ಮನೋವೈಜ್ಞಾನಿಕವಾಗಿ ವಿವರಿಸಲು ಅನುವಾಗುವಂಥ ಒಂದು ನಿರ್ದಿಷ್ಟ ಸುಲಭಸ್ವರೂಪಕ್ಕೆ ಆವರ್ತಿಸುವುದು.
3. ಘಟಕಗಳ ಅರ್ಥವಿವರಣೆ: ಯಾವ ಯಾವ ಘಟಕಗಳು ಯಾವ ಯಾವ ಪರೀಕ್ಷೆಗಳಲ್ಲಿ ಎಷ್ಟೆಷ್ಟು ಇವೆ ಎಂಬುದನ್ನು ಅರಿತು ಪರೀಕ್ಷೆಗಳಲ್ಲಿ ಅಡಕವಾಗಿರುವ ಮನೋ ವ್ಯಾಪಾರಗಳನ್ನು ಅವಲಂಬಿಸಿ ಆವರ್ತಿತ ಘಟಕಗಳ ಅರ್ಥ ವಿವರಣೆ ಮಾಡಿ ಅವುಗಳಿಗೆ ಹೆಸರಿಡುವುದು.

ಥರ್ಸ್ಟನ್ ತನ್ನ ಈ ವಿಧಾನವನ್ನು ಅನುಸರಿಸಿ ಮನೋಸಾಮರ್ಥ್ಯಗಳನ್ನು (ಮೆಂಟಲ್ ಎಬಿಲಿಟೀಸ್) ವಿಶ್ಲೇಷಿಸಿದುದು ಮನಶ್ಶಾಸ್ತ್ರದ ಇತಿಹಾಸದಲ್ಲೇ ಒಂದು ಮೈಲಿಗಲ್ಲೆಂದು ಪರಿಗಣಿತವಾಗಿದೆ. ಆತ 57 ಮಾನಸಿಕ ಪರೀಕ್ಷೆಗಳನ್ನು ಒಂದು ಪ್ರಾತಿನಿಧಿಕ ವ್ಯಕ್ತಿಸಮೂಹದ ಮೇಲೆ ಪ್ರಯೋಗಿಸಿ ಅದರಿಂದ ಬಂದ 1596 ಸಹ ಸಂಬಂಧಗುಣಾಂಕಗಳ ಮಾತೃಕೆಯನ್ನು ಸೆಂಟ್ರಾಯ್ಡ್ ಕ್ರಮದಿಂದ ವಿಭಜಿಸಿದಾಗ ಅದರಲ್ಲಿ ಅವನಿಗೆ 12 ಘಟಕಗಳು ದೊರೆತವು. ಇವುಗಳಲ್ಲಿ 9 ಮಾತ್ರ ಸಾಕಷ್ಟು ಪ್ರಮಾಣದಲ್ಲಿದ್ದುದರಿಂದ ಅವನ್ನು ಸುಲಭ ಸ್ವರೂಪಕ್ಕೆ ಆವರ್ತಿಸಿ, ಅವುಗಳ ಅರ್ಥವಿವರಣೆ ಮಾಡಿದ. ಈ ಘಟಕಗಳು ಪ್ರಾಥಮಿಕ ಮನೋಸಾಮರ್ಥ್ಯಗಳು ಎಂಬ ಹೆಸರಿನಿಂದ ಮನೋವಿಜ್ಞಾನಿಗಳಿಗೆಲ್ಲ ಪರಿಚಿತವಾಗಿವೆ. ಅವುಗಳ ಪೈಕಿ ಸ್ಥಿರವಾಗಿ ಸ್ಥಾಪಿತವಾಗಿರುವ ಆರನ್ನು ಇಲ್ಲಿ ಕೊಟ್ಟಿದೆ : 1. ಭಾಷಾಸಾಮರ್ಥ್ಯ (*V*) 2. ಸಾಂಖ್ಯಿಕ ಸಾಮರ್ಥ್ಯ (*N*) 3. ಪ್ರತ್ಯಕ್ಷ ಸಾಮರ್ಥ್ಯ (*P*), 4. ಸ್ಥಾನಿಕ ಸಾಮರ್ಥ್ಯ (S) 5. ವಿವೇಚನ ಸಾಮರ್ಥ್ಯ, 6. (*R*) ಸ್ಮೃತಿ ಸಾಮರ್ಥ್ಯ (*M*):

ಹೀಗೆಂದ ಕೂಡಲೆ ಸ್ಪಿಯರ್‌ಮನ್ ವಾದ ತಪ್ಪೆಂದೂ ಥರ್ಸ್ಟನ್ ವಾದ ಸರಿಯೆಂದೂ ಹೇಳಬರುವುದಿಲ್ಲ. ಥರ್ಸ್ಟನ್ನನ ಘಟಕಗಳು ಪರಸ್ಪರ ಸಂಬಂಧ ಹೊಂದಿರುವುವೆಂದು ಅನಂತರದ ಸಂಶೋಧನೆಗಳು ತೋರಿಸಿವೆ. ಹಾಗಿದ್ದಲ್ಲಿ ಎಲ್ಲ ಪ್ರಾಥಮಿಕ ಮನೋಸಾಮರ್ಥ್ಯಗಳಲ್ಲೂ ಒಂದು ಸಾರ್ವತ್ರಿಕ ಘಟಕವಿದ್ದಿರಲೇಬೇಕು. ಅದು ಒಂದು ದ್ವಿತೀಯ ದರ್ಜೆಯ ಘಟಕವಾಗಿದ್ದು ಅದು ಸ್ಪಿಯರ್‌ಮನ್ನನ *g* ಯನ್ನು ಹೋಲುತ್ತದೆ ಎಂಬ ಅಂಶವನ್ನು ಥರ್ಸ್ಟನ್ನನೇ ಒಪ್ಪಿಕೊಂಡಿದ್ದಾನೆ. ಅಂದರೆ ಸಮಸ್ತ ವೈಜ್ಞಾನಿಕ ಸಂಶೋಧನೆಗಳಲ್ಲೂ ಮೊದಮೊದಲು ಭಿನ್ನಾಭಿಪ್ರಾಯಗಳಿದ್ದು ಹೆಚ್ಚು ಹೆಚ್ಚು ಹೊಸ ವಿಷಯಗಳು ಬೆಳಕಿಗೆ ಬಂದಂತೆಲ್ಲ ಅವುಗಳಲ್ಲಿನ ಅಂತರ ತಗ್ಗಿ, ಸಾಮರಸ್ಯ ಏರ್ಪಡುವುದು ಒಂದು ಐತಿಹಾಸಿಕ ಸತ್ಯ. ಅಂತೆಯೇ ಇಂದು ಸ್ಪಿಯರ್‌ಮನ್ ವಾದಿಗಳು ತಮ್ಮ *g*ಯ ಜೊತೆಗೆ ಸಮೂಹಘಟಕಗಳ ಅಸ್ತಿತ್ವವನ್ನು ಕೂಡ ಒಪ್ಪಿಕೊಳ್ಳುತ್ತಾರೆ. ಇಂಥ ಒಂದು ಸಾಮರಸ್ಯ ಏರ್ಪಡಲು ಕಾರಣರಾದವರ ಪೈಕಿ ಇಂಗ್ಲೆಂಡಿನ ಸಿರಿಲ್ ಬರ್ಟ್ ಎಂಬಾತನ ಪಾತ್ರ ಹಿರಿದಾದುದು. ತತ್ಪರಿಣಾಮವಾಗಿ ಇಂದು ಸಾಧಾರಣವಾಗಿ ಮನೋವಿಜ್ಞಾನಿಗಳು ಸಾರ್ವತ್ರಿಕ ಘಟಕ, ಸಮೂಹಘಟಕಗಳು ಮತ್ತು ವಿಶಿಷ್ಟ ಘಟಕಗಳು – ಈ ತ್ರಿವಿಧ ಘಟಕಗಳ ಅಸ್ತಿತ್ವವನ್ನು ಅಂಗೀಕರಿಸುತ್ತಾರೆ. (ಎಂ.ಬಿ.ಎ.)

**ಘಟನೆಗಳ ಗಣಿತ** : ಒಟ್ಟಾಗಿ ಇಲ್ಲವೆ ಬಿಡಿಯಾಗಿ ಘಟನೆಗಳು ಘಟಿಸುವುದರ ಇಲ್ಲವೇ ಘಟಿಸದಿರುವುದರ ಗಣಿತೀಯ ಅಧ್ಯಯನ (ಆಲ್ಜೀಬ್ರ ಆಫ್ ಈವೆಂಟ್ಸ್). ಸಂಭವಿಸಬಹುದಾದ ಘಟನೆಗಳನ್ನು A, B, C, ಇಲ್ಲವೇ $A_1, A_2, A_3$, ಮುಂತಾದ ಅಕ್ಷರಗಳಿಂದ ಸೂಚಿಸುತ್ತೇವೆ. ಈ ಘಟನೆಗಳ ಒಟ್ಟು ಸಮುದಾಯಕ್ಕೆ ಘಟನೆಗಳ ಆಕಾಶ ಅಥವಾ ವಿಶ್ವ ಎಂದು ಹೆಸರು. ಘಟನೆಗಳನ್ನು ಬಿಂದುಗಳಾಗಿ ಅಥವಾ ಪ್ರದೇಶಗಳಾಗಿ ಸೂಚಿಸುವುದು ಕೂಡ ಸಾಧ್ಯ. ಇಂಥ ಬಿಂದುಗಳು ವಿಯುತ (ಡಿಸ್‌ಜಾಯಿಂಟ್) ಆಗಿರಬಹುದು ಇಲ್ಲವೇ ಅವಿಚ್ಛಿನ್ನ (ಕಂಟಿನ್ಯುಯಸ್) ಆಗಿರಬಹುದು. ಅನುಕೂಲತೆಗೋಸ್ಕರ ಘಟನಾಕಾಶವನ್ನು ಅವಿಚ್ಛಿನ್ನವಾಗಿರುವಂತೆ ಭಾವಿಸುತ್ತೇವೆ.

ಒಂದು ನಾಣ್ಯವನ್ನು ಚಿಮ್ಮಿದರೆ ಅದು ನೆಲಕ್ಕೆ ಬಿದ್ದಾಗ ಮೇಲೆ ತಲೆ ಕಾಣುವಂತೆ ಬೀಳಬಹುದು–ಈ ಘಟನೆಯನ್ನು H = Head ಎಂದು ಸೂಚಿಸೋಣ; ಅಥವಾ ಬಾಲ ಮೇಲುಗಡೆ ಕಾಣುವಂತೆ ಬೀಳಬಹುದು; ಇದನ್ನು T = Tail ಎಂದು ಸೂಚಿಸೋಣ. ಈ ಎರಡೇ ಬಗೆಯ ಫಲಿತಾಂಶಗಳು ಸಾಧ್ಯ. ಆದ್ದರಿಂದ ಘಟನಾಕಾಶದಲ್ಲಿ ಇವೆರಡೇ ಬಿಂದುಗಳಿರುವುವು; ಮತ್ತು ಇವೆರಡೇ ಘಟನೆಗಳ ವಿಶ್ವ ಸಿಕ್ಕುವುದು. ಅಂದರೆ ಘಟನಾಕಾಶದಲ್ಲಿ ಈ ಒಂದು ಜೊತೆ ಬಿಂದುಗಳು ಇವೆಯೆಂದಾಯಿತು. ಒಂದು ಷಟ್ಫಲಕದ ದಾಳದ 6 ಬದಿಗಳ ಮೇಲೆ A, B, C, D, E, F ಎಂಬ ಅಕ್ಷರಗಳನ್ನು ಬರೆದಿದೆ ಎಂದು ಭಾವಿಸೋಣ. ಇದನ್ನು ನೆಲದ ಮೇಲೆ ಬಿಟ್ಟಾಗ 6 ಬೇರೆಬೇರೆ ಘಟನೆಗಳು ಸಂಭವಿಸುವುವು. ಇವನ್ನು A, B, C, D, E, F ಎಂದೇ ಸೂಚಿಸಬಹುದು. ಈಗ ಘಟನಾಕಾಶದಲ್ಲಿ 6 ಬಿಂದುಗಳಿರುವುವು. ಇವನ್ನು ಇದೇ ಪ್ರತೀಕಗಳಿಂದ ಸೂಚಿಸಬಹುದು. ಈ ಪ್ರಯೋಗದಲ್ಲಿ ಈ 6 ಬಿಂದುಗಳ ಸಮೂಹವೇ ಸಮಗ್ರ ಘಟನಾಕಾಶವಾಗುವುದು (ಚಿತ್ರ 2)



ಚಿತ್ರ 1



ಚಿತ್ರ 2

ಘಟನೆಗಳಲ್ಲಿ ಎರಡು ವಿಧಗಳುಂಟು : ಸರಳ ಘಟನೆಗಳು ಮತ್ತು ಸಂಯುಕ್ತ ಘಟನೆಗಳು. ಬೇರೆ ಬೇರೆ ಎರಡು ಅಥವಾ ಹೆಚ್ಚು ಘಟನೆಗಳನ್ನಾಗಿ ವಿಘಟಿಸಲಾಗುವ ಘಟನೆಗೆ ಸಂಯುಕ್ತ ಘಟನೆ ಎಂದು ಹೆಸರು. ಹೀಗೆ ವಿಘಟಿಸಲಾದ ಘಟನೆಗೆ ಸರಳ ಘಟನೆ ಎಂದು ಹೆಸರು. ರಸಾಯನವಿಜ್ಞಾನದಲ್ಲಿ ಅಣುಗಳು ಮತ್ತು ಪರಮಾಣುಗಳು ಇರುವಂತೆ.

ಅಣುವನ್ನು ಎರಡು ಅಥವಾ ಹೆಚ್ಚಿನ ಪರಮಾಣುಗಳನ್ನಾಗಿ ವಿಘಟಿಸಬಹುದು. ಪರಮಾಣುವನ್ನು ಹಾಗೆ ವಿಘಟಿಸಲಾಗುವುದಿಲ್ಲ. ಉದಾಹರಣೆಗೆ A, B, C, D, E, F ಎಂಬ ಅಂಕಿತಗಳುಳ್ಳ ಬದಿಗಳಿಗಿರುವ ದಾಳವನ್ನು ಉರುಳಿಸಿದಾಗ ಯಾವುದೇ ಒಂದು ಅಕ್ಷರ ಬಿದ್ದರೆ ಉದಾಹರಣೆಗೆ, A ಅದು ಸರಳ ಘಟನೆಯಾಗುವುದು. ಈಗ ವ್ಯಂಜನಾಕ್ಷರವನ್ನು ಪಡೆಯಬಹುದಾದಂಥ ಘಟನೆಯನ್ನು ಪರಿಶೀಲಿಸಿದರೆ ಅದನ್ನು B, C, D, E ಎಂಬ ನಾಲ್ಕು ಸರಳ ಘಟನೆಗಳನ್ನಾಗಿ ಒಡೆಯಬಹುದು. ಆದ್ದರಿಂದ ಅದು ಸಂಯುಕ್ತ ಘಟನೆಯಾಗುವುದು. ಇದರಂತೆಯೇ ಸ್ವರಾಕ್ಷರವನ್ನು ಪಡೆಯಬಹುದಾದಂಥ ಘಟನೆಯನ್ನು ಪರಿಶೀಲಿಸಿದರೆ ಅದೂ ಸಂಯುಕ್ತ ಘಟನೆಯಾಗುತ್ತದೆ. ಏಕೆಂದರೆ ಇದನ್ನು A ಮತ್ತು E ಎಂಬ ಎರಡು ಸರಳ ಘಟನೆಗಳನ್ನಾಗಿ ಒಡೆಯಬಹುದು.

ಮೇಲಿನ ಉದಾಹರಣೆಯಲ್ಲಿ ವಿವರಿಸಿರುವ 6 ಘಟನೆಗಳಿಂದ ಬೇರೆಯದಾದ 7ನೆಯ ಘಟನೆ ಸಾಧ್ಯವಿಲ್ಲ. ಈ 6 ಘಟನೆಗಳನ್ನು ಎರಡು ಭಿನ್ನರೀತಿಗಳಲ್ಲಿ ಪ್ರದರ್ಶಿಸಿ ಚಿತ್ರ 3ರಲ್ಲಿ ತೋರಿಸಿದೆ. ಈ ಘಟನೆಗಳು ಸಂಪೂರ್ಣ ಅಂದರೆ ವಿಶೇಷ (ಎಗ್‌ಸಾಸ್ಟಿವ್) ಆಗಿವೆ; ಮತ್ತು ಘಟನೆಗಳ ವಿಶ್ವ ಈ 6 ಘಟನೆಗಳನ್ನು ಮಾತ್ರ ಒಳಗೊಂಡಿರುವುದು. ಚಿತ್ರ(3)ರಲ್ಲಿ ನಿರೂಪಿಸಿರುವುದನ್ನೇ ಬೇರೊಂದು ರೀತಿಯಲ್ಲಿ ಚಿತ್ರ (4)ರಲ್ಲಿರುವಂತೆ ಪ್ರದರ್ಶಿಸಬಹುದು. ಬ್ರಿಟಿಷ್ ತಾರ್ಕಿಕನಾದ ಜಾನ್ ವೆನ್ (1834-1883) ಎಂಬಾತ ಘಟನೆಗಳನ್ನು ಈ ವಿಧವಾದ ಚಿತ್ರಗಳ ಮೂಲಕ



ಚಿತ್ರ 3



ಚಿತ್ರ 4

ನಿರೂಪಿಸಿವುದನ್ನು ಪ್ರಚುರಪಡಿಸಿದ. ಆದಕಾರಣ ಇಂಥ ಚಿತ್ರಗಳಿಗೆ ವೆನ್ ಚಿತ್ರಗಳೆಂಬ ಹೆಸರಾಯಿತು.

ಒಂದೊಂದರಲ್ಲೂ ಆರು ಘಟಕಗಳಿರುವ ಒಂದು ಜೊತೆ ದಾಳಗಳನ್ನು ಎಸೆದರೆ 36 ಬೇರೆ ಬೇರೆ ಸರಳ ಘಟನೆಗಳು ಒದಗುವುವು. ಮೊದಲನೆಯ ದಾಳದ ಗರವನ್ನು *x* ಎಂದೂ ಎರಡನೆಯ ದಾಳದ ಗರವನ್ನು *y* ಎಂದೂ ಸೂಚಿಸೋಣ. *x* = 1, 2, 3, 4, 5, 6 ಮತ್ತು *y* = 1, 2, 3, 4, 5, 6 ಎನ್ನುವ ಸಾಧ್ಯತೆಗಳಿವೆ. ಈ

ಸಂದರ್ಭದಲ್ಲಿ ಘಟನಾಕಾಶದಲ್ಲಿ 36 ಬಿಂದುಗಳಿರುವುವು. ಅವನ್ನು ಆಲೇಖದಲ್ಲಿ (ಚಿತ್ರ 5) ($x_i$, $y_i$); $i$, $j$,=,1, 2, 3, 4, 5, 6 ಎಂಬ 36)ರ ವಿವಿಧ ಬಿಂದುಗಳಾಗಿ ಗುರುತಿಸಬಹುದು. ಇಲ್ಲಿ ಪ್ರತಿಯೊಂದು ಬಿಂದುವೂ ಒಂದು ಸರಳ ಘಟನೆಯನ್ನು ಪ್ರತಿನಿಧಿಸುತ್ತದೆ.

ಈಗ ಒಂದು ಸಂಯುಕ್ತ ಘಟನೆಯನ್ನು ಪರಿಶೀಲಿಸೋಣ. ಎರಡು ದಾಳಗಳಲ್ಲಿನ ಗರಗಳ ಮೊತ್ತ 8 ಇರುವುದು ಎಂಬ ಘಟನೆ ಒಂದು ಸಂಯುಕ್ತ ಘಟನೆಯಾಗುವುದು. ಇದನ್ನು (2, 6), (3, 5), (4, 4), (5, 3), (6, 2) ಎಂಬ ಐದು ಬೇರೆ ಬೇರೆ ಸರಳ ಘಟನೆಗಳನ್ನಾಗಿ ವಿಘಟಿಸಬಹುದು. ಆಲೇಖದಲ್ಲಿ ಈ ಬಿಂದುಗಳನ್ನು ಒಂದು ವಲಯದಿಂದ ಸುತ್ತುಗಟ್ಟಿ ತೋರಿಸಲಾಗಿದೆ. ಮತ್ತೊಂದು ಸಂಯುಕ್ತ ಘಟನೆಯನ್ನು ತೆಗೆದುಕೊಳ್ಳೋಣ: ಎರಡು ದಾಳಗಳಲ್ಲಿನ ಗರಗಳ ಗುಣಲಬ್ಧ 12 ಇರುವ ಘಟನೆ. ಇದನ್ನು (2, 6), (3, 4), (4, 3), (6, 2) ಎಂಬ ನಾಲ್ಕು ಬೇರೆ ಬೇರೆ ಸರಳ ಘಟನೆಗಳನ್ನಾಗಿ ವಿಘಟಿಸಬಹುದು. ಈ ಬಿಂದುಗಳನ್ನು ಒಟ್ಟುಗೂಡಿಸಿ ಒಂದು ಪಟ್ಟಿಯಲ್ಲಿ ತೋರಿಸಿದೆ. A ಎಂಬ ಘಟನೆಗೆ ವ್ಯತಿರಿಕ್ತವಾದ (ಕಾಂಟ್ರರಿ) ಘಟನೆಯನ್ನು $\bar{A}$ ಎಂಬುದಾಗಿ ಬರೆಯೋಣ. ಇದನ್ನು A ಸಲಾಕಿ (ಬಾರ್) ಎಂದು ಓದಬಹುದು. ಒಂದು ನಾಣ್ಯವನ್ನು ಚಿಮ್ಮಿದಾಗ ಅದು ತಲೆಮೇಲುಗಡೆ ಇರುವಂತೆ ಬೀಳುವ ಘಟನೆ A ಆಗಿದ್ದರೆ ಆಗ ತಲೆಮೇಲುಗಡೆ ಬೀಳದಿರುವ ಘಟನೆ $\bar{A}$ ಆಗುತ್ತದೆ. ಇಲ್ಲಿ $\bar{A}$, A ಇವೆರಡೂ ಸರಳ ಘಟನೆಗಳು. ಷಟ್ಫಲಕದ ದಾಳವನ್ನು ಎಸೆದಾಗ ಗರ 6 ಬೀಳುವ ಘಟನೆಯನ್ನು S ಎಂದು ಸೂಚಿಸಿದರೆ, ಗರ 6 ಬೀಳದಿರುವ ಘಟನೆಯನ್ನು $\bar{S}$ ಎಂದು ಸೂಚಿಸುತ್ತೇವೆ. ಎಂದರೆ $\bar{S}$ ಎಂಬುದು ಸಂಯುಕ್ತ ಘಟನೆಯಾಗುತ್ತದೆ. ಇದನ್ನು 1, 2, 3, 4, 5 ಎಂಬ ಗರಗಳು ಬೀಳುವ 5 ಸರಳ ಘಟನೆಗಳನ್ನಾಗಿ ವಿಘಟಿಸಬಹುದು. S ಮತ್ತು $\bar{S}$ ಇವೆರಡೂ ಕೂಡಿ ಸಂಪೂರ್ಣ ಆಕಾಶವಾಗುವುದು. ಅಂದರೆ $S + \bar{S} = U$.



**ಚಿತ್ರ 5**



**ಚಿತ್ರ 6**



**ಚಿತ್ರ 7**

ಗಣಗಳ ಸಮತೆ, ಸಂಯೋಗ ಮತ್ತು ಛೇದನ : A, B ಎಂಬ ಎರಡು ಘಟನೆಗಳು ಒಂದೇ ಆಕಾಶದಲ್ಲಿದ್ದು A ಘಟಿಸಿದಾಗಲೆಲ್ಲ B ಘಟಿಸಿವುದಾದರೆ A ಯಲ್ಲಿ B ಸೇರ್ಪಡೆಯಾಗಿದೆ ಎನ್ನುತ್ತೇವೆ. ಪ್ರತೀಕಾತ್ಮಕವಾಗಿ $A \subseteq B$ ಅಥವಾ $B \supseteq A$ ಎಂದು ಕರೆಯುತ್ತೇವೆ. ದಾಳದ ಗರ 6 ಎಂಬ ಘಟನೆಯನ್ನು ಪರಿಶೀಲಿಸೋಣ. ಗರ 3ಕ್ಕಿಂತ ಹೆಚ್ಚು ಎಂಬ ಘಟನೆಯಲ್ಲಿ



**ಚಿತ್ರ 8**



**ಚಿತ್ರ 9**

ಇದು ಸೇರ್ಪಡೆ ಯಾಗಿದೆ ಚಿತ್ರ (8,9). ಇದೇ ರೀತಿ *F* ಎಂಬ ಘಟನೆ 'ನನಗೆ ಕರ್ನಾಟಕದ ಲಾಟರಿಯಲ್ಲಿ ಮೊದಲನೆಯ ಬಹುಮಾನ ಸಿಗುವುದು' ಮತ್ತು P ಎಂಬ ಘಟನೆ ನನಗೆ ಕರ್ನಾಟಕದ ಲಾಟರಿಯಲ್ಲಿ ಒಂದು ಬಹುಮಾನ ಸಿಗುವುದು ಎಂದಿರಲಿ. ಆಗ *F* ಘಟನೆ P ಎಂಬ ಘಟನೆಯಲ್ಲಿ ಸೇರ್ಪಡೆಯಾಗಿದೆ : $F \subseteq P$. A ಎಂಬ ಘಟನೆ B ಯಲ್ಲಿ ಸೇರ್ಪಡೆಯಾಗಿದ್ದು ಹಾಗೂ B ಎಂಬ ಘಟನೆ A ಯಲ್ಲಿ ಸೇರ್ಪಡೆಯಾಗಿದ್ದರೆ A,B ಎರಡೂ ಸಮ ಎನ್ನುತ್ತೇವೆ; ಮತ್ತು ಇದನ್ನು A=B ಎಂದು ಸಾಂಕೇತಿಕವಾಗಿ ಬರೆಯುತ್ತೇವೆ. A ಮತ್ತು B ಘಟನೆಗಳೆರಡೂ ಒಮ್ಮೆಲೇ ಏರ್ಪಟ್ಟಾಗ ಅದಕ್ಕೆ A ಮತ್ತು Bಗಳ ಛೇದನ (ಇಂಟರ್‌ಸೆಕ್ಷನ್) ಎಂದು ಹೆಸರು.

ಇದನ್ನು $A \cap B$ ಎಂಬುದಾಗಿ ಸೂಚಿಸುತ್ತೇವೆ. ಅಂದರೆ ಈ ಎರಡು ಘಟನೆಗಳೂ ಏಕಕಾಲದಲ್ಲಿ ಸಂಭವಿಸಬೇಕು. ಚಿತ್ರದಲ್ಲಿ A ಮತ್ತು Bಗಳಿಗೆ ಸಂವಾದಿಯಾದ ಪ್ರದೇಶದ ಛೇದಕ್ಷೇತ್ರ ಇದನ್ನು ಸೂಚಿಸುವುದು (ಚಿತ್ರ 10). A, B ಘಟನೆಗಳ ಪೈಕಿ ಒಂದಾದರೂ ಘಟಿಸುವುದು ಎಂಬುದನ್ನು A, B ಗಳ ಸಂಯೋಗ (ಯೂನಿಯನ್) ಎನ್ನುತ್ತೇವೆ. ಇದನ್ನು $A \cup B$ ಎಂಬುದಾಗಿ ಬರೆಯುತ್ತೇವೆ. A ಮತ್ತು B ಪ್ರದೇಶಗಳೆರಡನ್ನೂ ಒಳಗೊಂಡ ಪ್ರದೇಶ $A \cup B$ಯನ್ನು ಪ್ರತಿನಿಧಿಸುತ್ತದೆ (ಚಿತ್ರ 11). ಏಕಕಾಲದಲ್ಲಿ A, B ಘಟನೆಗಳೆರಡೂ ಘಟಿಸುವುದು ಸಾಧ್ಯವಿಲ್ಲದಿದ್ದಾಗ ಆ ಘಟನೆಗಳನ್ನು ವಿಯುತ (ಡಿಸ್‌ಜಾಯಿಂಟ್) ಅಥವಾ ಪರಸ್ಪರ ಹೊರತಾದವು (ಮ್ಯೂಚುಅಲಿ ಎಕ್ಸ್‌ಕ್ಲೂಸಿವ್) ಎನ್ನುತ್ತೇವೆ. ಈ ಸಂದರ್ಭದಲ್ಲಿ A, Bಗಳ ಛೇದನ ಅಲಭ್ಯವಾಗುವುದು. ಹೀಗೆ ಅಲಭ್ಯವಾಗುವ ಅಥವಾ ಅಸ್ತಿತ್ವ ಇಲ್ಲದಿರುವ ಘಟನೆಗೆ ಅಸಾಧ್ಯ ಘಟನೆ (ಇಂಪಾಸಿಬಲ್ ಈವೆಂಟ್) ಎಂದು ಹೆಸರು. ಇದನ್ನು ø ಎಂಬ ಸಂಕೇತದಿಂದ ಸೂಚಿಸುತ್ತೇವೆ. ಆಗ $A \cap B$ ಪ್ರದೇಶದಲ್ಲಿ ಯಾವುದೇ ಬಿಂದು ಇರುವುದಿಲ್ಲ. ಅಂದರೆ ಆ ಪ್ರದೇಶ ಶೂನ್ಯವಾಗಿರುತ್ತದೆ. ಅಂಥ ಗಣಕ್ಕೆ ಶೂನ್ಯಗಣ (ನಲ್ ಸೆಟ್) ಎಂದು ಹೆಸರು. ಇದನ್ನು ಪ್ರತೀಕಿಸುತ್ತದೆ. ಹೀಗೆ $A \cap B = \emptyset$. ಇದರಂತೆಯೇ $A \cap \overline{A} = \emptyset$ ಮತ್ತು A, Bಗಳ ಸಂಯೋಗ ಈ ಕ್ಷೇತ್ರಗಳ ಒಟ್ಟಾರೆ ಆಗುವುದು. ಆಗ $A \cup B$ ಸಂಯೋಗವನ್ನು $\underline{A} + B$ ಎಂಬ ಪ್ರತೀಕದಿಂದ ಸೂಚಿಸುವುದು ಕೂಡ ಉಂಟು. ಇದರ ಮೇರೆಗೆ $A + \overline{A} = U$, ವಿಶ್ವಗಣ.



**ಚಿತ್ರ 10**



**ಚಿತ್ರ 11**

ಮೇಲೆ ಹೇಳಿದ ವ್ಯಾಖ್ಯೆಗಳನ್ನೂ ಪ್ರತೀಕಗಳನ್ನೂ ಎರಡಕ್ಕಿಂತ ಹೆಚ್ಚಿನ ಘಟನೆಗಳಿಗೆ ಕೂಡ ಅನ್ವಯಿಸಬಹುದು. ಹೇಗೆಂದರೆ A, B, ಮತ್ತು C ಮೂರು ಘಟನೆಗಳಾದರೆ ಇವು ಮೂರಕ್ಕೂ ಸಾಮಾನ್ಯವಾದ ಪ್ರದೇಶವನ್ನು ಅಂದರೆ $A \cap B \cap C$ಯನ್ನು A, B, Cಗಳ ಛೇದನ ಎನ್ನುತ್ತೇವೆ. ಚಿತ್ರ (12)ದಲ್ಲಿ A ಯನ್ನು ವೃತ್ತದಿಂದಲೂ Bಯನ್ನು ದೀರ್ಘವೃತ್ತದಿಂದಲೂ Cಯನ್ನು ಚೌಕದಿಂದಲೂ ಸೂಚಿಸಿದ್ದೇವೆ. ಓರೆ ಗೀಟುಗಳು ಎಳೆದಿರುವ ಕ್ಷೇತ್ರ ಛೇದವನ್ನು ಸೂಚಿಸುತ್ತದೆ. ಹೀಗೆಯೇ $A_1, A_2 \ldots\ldots A_n$ ಎಂಬ $n$ ಘಟನೆಗಳಿದ್ದರೆ ಅವುಗಳ ಛೇದನವನ್ನು $A_1 \cap, A_2 \cap \ldots \cap A_n$ ಎಂದು ಸೂಚಿಸುತ್ತೇವೆ. ಇದನ್ನೇ $\bigcap_{k=1}^{n} A_k$ ಎಂದೂ ಬರೆಯುವುದುಂಟು. ಇದೇ ರೀತಿ $A_1, A_2 \ldots\ldots A_n$ಗಳ ಸಂಯೋಗವನ್ನು $A_1 \cup, A_2 \cup \ldots \cup A_n$ ಎಂದು ಬರೆಯುತ್ತೇವೆ. ಇದನ್ನೇ $\bigcup_{k=1}^{n} A_k$ ಎಂದೂ ಬರೆಯುವುದುಂಟು. ಘಟನೆಗಳ ಸಂಯೋಗ ಮತ್ತು ಛೇದನಕ್ಕೆ ಸಂಬಂಧಿಸಿದ ಪ್ರಮೇಯಗಳು ಗಣಸಿದ್ಧಾಂತದ ಪ್ರಮೇಯಗಳೇ ಆಗಿವೆ **(ನೋಡಿ–ಗಣ ಸಿದ್ಧಾಂತ)**.



**ಚಿತ್ರ 12**

ಘಟನೆಗಳ ಗಣಿತ ಮತ್ತು ಸಂಭಾವ್ಯತೆ : ಘಟನೆಗಳ ಗಣಿತವನ್ನು ಆಧಾರವಾಗಿಟ್ಟುಕೊಂಡು ಸಂಭಾವ್ಯತೆಯ (ಪ್ರಾಬಬಿಲಿಟಿ) ಗಣಿತವನ್ನು ಅಭ್ಯಾಸ ಮಾಡುವುದು ಈಚೆಗೆ ರೂಢಿಯಾಗಿದೆ. ನಮೂದಿಸಿದ ಯಾವುದಾದರೂ ಒಂದು ಘಟನೆ, ಅದು ಸರಳ ಘಟನೆಯೇ ಆಗಿರಲಿ ಸಂಯುಕ್ತ ಘಟನೆಯೇ ಆಗಿರಲಿ, ಒಂದು ದತ್ತ ಪರಿಸ್ಥಿತಿಯಲ್ಲಿ ಸಂಭವಿಸತಕ್ಕ ಸಮಸ್ತ ಘಟನೆಗಳು $U$ ಎಂಬ ವಿಶ್ವದ ಒಂದು ಉಪಗಣವಾಗಿರುವುದು ಎಂಬುದನ್ನು ಮೇಲೆ ವಿವರಿಸಲಾಗಿದೆ. ಈಗ $U$ವಿನ ಪ್ರತಿಯೊಂದು ಬಿಂದುವಿಗೂ ಇಲ್ಲವೆ ಮೂಲಾಂಗ ಪ್ರದೇಶಕ್ಕೂ ಅನೃಣವಾದ ಒಂದು ಭಾರವನ್ನು ನಿಗದಿ ಮಾಡೋಣ. ಇಂಥ ಭಾರಗಳ ಒಟ್ಟು ಮೊತ್ತ 1 ಇರತಕ್ಕದ್ದು. ಇದರಿಂದಾಗಿ ಪ್ರತಿಯೊಂದು ಬಿಂದುವಿಗೂ ಅಂದರೆ ಪ್ರತಿಯೊಂದು ಸರಳ ಘಟನೆಗೂ ಒಂದು ಕ್ಲುಪ್ತವಾದ ಭಾರವನ್ನು ಲಗತ್ತಿಸಿದಂತಾಯಿತು. ಒಂದು ಸಂಯುಕ್ತ ಘಟನೆಯ ಭಾರ ಅದರಲ್ಲಿ ಸೇರ್ಪಡೆಯಾದ ಎಲ್ಲ ಸರಳ ಘಟನೆಗಳ ಭಾರಗಳ ಮೊತ್ತವಾಗುವುದು. ಅಂದರೆ ನಿರ್ದಿಷ್ಟವಾದ $A$ ಎಂಬ ಘಟನೆಯ ಭಾರ ಅದರಲ್ಲಿ ಸೇರ್ಪಡೆಯಾದ ಎಲ್ಲ ಸರಳ ಘಟನೆಗಳ ಭಾರಗಳ ಮೊತ್ತವಾಗುವುದು. ಈ ಮೊತ್ತಕ್ಕೆ $A$ ಘಟನೆಯ ಅಳವು (ಮೆಷರ್) ಎನ್ನುತ್ತೇವೆ. $A$ ಘಟನೆಯ ಅಳವನ್ನೇ $A$ ಯ ಸಂಭಾವ್ಯತಾ ಅಳವು (ಪ್ರಾಬಬಿಲಿಟಿ ಮೆಷರ್) ಎನ್ನುತ್ತೇವೆ. ಸಂಭಾವ್ಯತಾ ಅಳವನ್ನು ನಿಯೋಜಿಸುವ ಕ್ರಮ ಸಂದರ್ಭಕ್ಕೆ ತಕ್ಕಂತೆ ಬದಲಾಗುತ್ತದೆ. ನಮಗೆ ವೇದ್ಯವಾಗಿರುವ ವಿವರಗಳನ್ನು ಪರ್ಯಾಲೋಚಿಸಿ ತಕ್ಕ ರೀತಿಯಲ್ಲಿ ಭಾರಗಳನ್ನು ನಿರ್ಧರಿಸಬೇಕಾದೀತು. ಉದಾಹರಣೆಗೆ, ಒಂದು ಷಣ್ಮುಖ ದಾಳವನ್ನು ಎಸೆದಾಗ, ಅದು ಸಹಜವಾದ ಸಮಾಂಗವಾದ ಪ್ರಾಮಾಣಿಕವಾದ ಹಾಗೂ ಚೊಕ್ಕ ದಾಳವೆಂಬುದರಲ್ಲಿ ಯಾವ ಸಂಶಯವೂ ಇಲ್ಲದಿದ್ದರೆ, ಅದರ ೬ ಮುಖಗಳಿಗೂ ಸಮಾನ ಭಾರಗಳನ್ನು ನಿಯೋಜಿಸಬೇಕೆಂಬುದು ತರ್ಕಸಮ್ಮತವಾದದ್ದು ಎಂಬುದನ್ನು ಎಲ್ಲರೂ ಒಪ್ಪುವರು. ಆಗ ಪ್ರತಿಯೊಂದು ಮುಖಕ್ಕೂ 1/6 ಎಂಬ ಭಾರವನ್ನು ನೀಡುತ್ತೇವೆ. ಭಾರಗಳ ಮೊತ್ತ 1 ಇರತಕ್ಕದ್ದೆಂಬುದನ್ನು ನೆನಪಿನಲ್ಲಿಡಬೇಕು. 'ಗರ 4 ಬೀಳುತ್ತದೆ' ಎಂಬ ಘಟನೆಯ ಸಂಭಾವ್ಯತೆ 1/6 ಆಗುವುದು. 'ಗರ ಸರಿಸಂಖ್ಯೆಯಾಗಿರುವುದು' ಎಂಬ (ಸಂಯುಕ್ತ) ಘಟನೆಯ ಸಂಭಾವ್ಯತಾ ಅಳವು 1/6 ಎಂಬ ಪರಸ್ಪರ ಹೊರತಾದ ಮೂರು ಸರಳ ಘಟನೆಗಳನ್ನಾಗಿ ವಿಭಜಿಸಬಹುದು. ಅಂದರೆ, ಪ್ರತೀಕಾತ್ಮಕವಾಗಿ [ಸರಿ ಸಂಖ್ಯೆಯ ಗರ] = [ಗರ 2] $\cup$ [ಗರ 4] $\cup$ [ಗರ 6] ದತ್ತದಾಳ ಚೊಕ್ಕದಾಳವಿಲ್ಲದಿದ್ದಾಗ ಎಲ್ಲ ಮುಖಕ್ಕೂ ಸಮಾನ ಭಾರವನ್ನು ನಿಯೋಜಿಸುವುದು ಸಾಧುವಲ್ಲ. ಆಗ ನಮಗೆ ತಿಳಿದ ಮಾಹಿತಿಗಳ ಆಧಾರದ ಮೇಲೆ ವಿವೇಚನೆ ಮಾಡಿ ಈ ಭಾರಗಳನ್ನು ನಿರ್ಧರಿಸಬೇಕು. $A$ ಎಂಬ ಘಟನೆಯ ಸಂಭಾವ್ಯತಾ ಅಳವನ್ನು $P(A)$ ಎಂದು ಪ್ರತೀಕಿಸುತ್ತೇವೆ.

ಒಂದು ರಾಜ್ಯದ ಮುಖ್ಯಮಂತ್ರಿಯ ಸ್ಥಾನಕ್ಕೆ ಆದಪ್ಪ, ಭೀಮಪ್ಪ, ಚಾಮಪ್ಪ ಎಂಬ ಮೂವರು ಸ್ಪರ್ಧಿಸುತ್ತಾರೆ ಎಂದು ಭಾವಿಸೋಣ. ಆದಪ್ಪ ಮತ್ತು ಭೀಮಪ್ಪ ಎಂಬುವರು ಸ್ಪರ್ಧೆಯಲ್ಲಿ ಗೆಲ್ಲುವ ಪ್ರಾಯಿಕತೆ (ಲೈಕ್‌ಲಿಹುಡ್) ಸಮಾನವಾಗಿದ್ದು ಚಾಮಪ್ಪ ಗೆಲ್ಲುವ ಪ್ರಾಯಿಕತೆ ಆದಪ್ಪ ಅಥವಾ ಭೀಮಪ್ಪನದಕ್ಕಿಂತ ಇಮ್ಮಡಿ ಇರುವುದೆಂದು ನಮ್ಮ ಊಹೆ ಆಗಿರಲಿ. ಈ ನಿರೂಪಣೆಯಲ್ಲಿ ಸ್ವಲ್ಪ ಅನಿಶ್ಚಿತತೆ ಉಂಟು. ನಮ್ಮ ಊಹೆಯ ಮೇರೆಗೆ ಆದಪ್ಪನ ವಿಜಯಕ್ಕೆ ¼, ಭೀಮಪ್ಪನ ವಿಜಯಕ್ಕೆ ¼ ಮತ್ತು ಚಾಮಪ್ಪನ ವಿಜಯಕ್ಕೆ ½ ಎಂಬ ಭಾರಗಳನ್ನು ನೀಡುವುದು ಉಚಿತವೆಂದು ಕಾಣುತ್ತದೆ. ಈ ಭಾರಗಳ ಮೊತ್ತ = 1. ಇಷ್ಟು ಹೇಳಿದ ಮೇಲೆ ಆದಪ್ಪ ಇಲ್ಲವೇ ಭೀಮಪ್ಪ ಇವರಿಬ್ಬರಲ್ಲಿ ಯಾರಾದರೊಬ್ಬರು ಜಯ ಗಳಿಸುವ ಘಟನೆಯ ಸಂಭಾವ್ಯತಾ ಅಳವು 1/4 +1/4 = ½ ಆಗುವುದು. ಹಾಗೂ ಆದಪ್ಪ ಅಥವಾ ಚಾಮಪ್ಪ ಜಯಗಳಿಸುವ ಸಂಭಾವ್ಯತೆ ¼+½ = ¾ ಆಗುವುದು. ಆದಪ್ಪನ ವಿಜಯವನ್ನು $A$ ಎಂದೂ ಭೀಮಪ್ಪನ ವಿಜಯವನ್ನು $B$ ಎಂದೂ, ಚಾಮಪ್ಪನ ವಿಜಯವನ್ನು $C$ ಎಂದೂ ಸೂಚಿಸಿದರೆ

$P(A) = P(B) = ¼$

$P(C) = ½$

ಎಂದು ಬರೆಯಬಹುದು. ವಿವಿಧ ಘಟನೆಗಳಿಗೆ ನೀಡತಕ್ಕ ಭಾರಗಳನ್ನು ನಿಗದಿ ಮಾಡಿದ್ದೇವೆ ಎಂದರೆ, ಮುಂದಿನ ಲೆಕ್ಕಾಚಾರವನ್ನು ಮಾಡಲು ಘಟನೆಗಳ ಗಣಿತವನ್ನು ಪ್ರಯುಕ್ತಿಸುತ್ತೇವೆ. ಕೆಲವೊಂದು ಘಟನೆಗಳಿಗೆ ನೀಡುವ ಭಾರ 0 ಆಗಿರಬಹುದು ಎಂಬುದನ್ನು ಗಮನಿಸಬೇಕು. ಋಣವಾಗಿರಲಾರದು ಎಂಬ ನಿರ್ಬಂಧ ಮಾತ್ರ ಉಂಟು.

ಸಂಭಾವ್ಯತಾ ಅಳವಿನ ಮುಖ್ಯ ಗುಣಲಕ್ಷಣಗಳನ್ನೂ ಅನುಗುಣವಾದ ಕೆಲವು ಪ್ರಮೇಯಗಳನ್ನೂ ಇಲ್ಲಿ ಕೊಡುತ್ತೇವೆ. ಪ್ರತಿ ಸಂದರ್ಭದಲ್ಲೂ ಘಟನೆಗಳ ವಿಶ್ವವನ್ನು $A$ ಎಂದು ಸೂಚಿಸುತ್ತೇವೆ.

1 $A$ ಎಂಬುದು $U$ಗೆ ಸೇರ್ಪಡೆಯಾದ ಯಾವುದೇ ಘಟನೆಯಾಗಿದ್ದರೆ. ಅಂದರೆ $A \subseteq A$ ಆದಾಗ

0 $\frac{c}{\lambda}$ $P(A) \leq 1$

2. $A = U$ ಆಗಿದ್ದರೆ $P = (A) = 1$ ಅಂದರೆ $P(U) = 1$ ಮತ್ತು $A$ □ $U$ ಆದಾಗ $P(A) = 0$

3. $P(A \overline{\text{s-b}} B) = P(A) + P(B) - P(A \cap B)$ ಈ ಫಲಿತಾಂಶವನ್ನು 3 ಅಥವಾ ಹೆಚ್ಚಿನ ಘಟನೆಗಳಿಗೆ ವಿಸ್ತರಿಸಬಹುದು. $P(A \cup B \cup C) = P(A) + P(B) + P(C) — P(A \cap B) — P(B \cap C) — P(A \cap C) + P(A \cap B \cap C)$ ಇತ್ಯಾದಿ.

4. ಈ ಫಲಿತದ ವಿಶಿಷ್ಟ ರೂಪ : A, B ಎರಡು ವಿಯುತ ಘಟನೆಗಳಾದರೆ $P(A \cup B) = P(A + B) = P(A) + P(B)$. ಇದಕ್ಕೆ ಸಂಭಾವ್ಯತೆಯ ಸಂಕಲನನಿಯಮ ಎಂದು ಹೆಸರು.

5. $P(A) + P(\bar{A}) = 1$

ಘಟನೆ $A$ ಮತ್ತು $\bar{A}$ 'ಇವೆರಡೂ ವಿಯುತವಾದ್ದರಿಂದ ಮತ್ತು $A + \bar{A} = U$ ಆದ್ದರಿಂದ ಇದು 4ನೆಯ ನಿಯಮದ ವಿಶಿಷ್ಟ ರೂಪವಾಗುವುದು.

ಕೆಲವು ಸಂದರ್ಭಗಳಲ್ಲಿ $P(\bar{A})$ ಎಂಬುದರ ಬೆಲೆಯನ್ನು ಸುಲಭವಾಗಿ ಪರಿಗಣಿಸಬಹುದು. ಆ ಪರಿಸ್ಥಿತಿಯಲ್ಲಿ ಎಂಬ ಸಾಮ್ಯವನ್ನು ಬಳಸಿಕೊಂಡು $P(A)$ಯ ಬೆಲೆಯನ್ನು ಲೆಕ್ಕ ಹಾಕುತ್ತೇವೆ.

6. $\varepsilon$ ಎಂಬುದು ಅಸಾಧ್ಯವಾದ ಘಟನೆಯಾದರೆ $\bar{\varepsilon} = U$ ಮತ್ತು $\varepsilon = \overline{U}$ ಆಗುವುದು. ಆದ್ದರಿಂದ $P(\varepsilon) = 1 - P(\overline{U}) = 0$

7. ಪ್ರಮೇಯ : $A \subseteq B$ ಆದಾಗ $P(A) \leq P(B)$. $A$ಯಲ್ಲಿ ಸೇರ್ಪಡೆಯಾಗದ $B$ಯ ಭಾಗವನ್ನು $C$ ಎಂದು ಕರೆಯೋಣ. ಆಗ $A$ ಮತ್ತು $C$ ವಿಯುತ ಘಟನೆಗಳಾಗುತ್ತವೆ. ಆದ್ದರಿಂದ $B = A + C$.

$\therefore P(B) = P(A + C) = P(A) + P(C)$

ಆದರೆ ಮೇಲಿನ ಫಲಿತಾಂಶ (2)ರಿಂದ $P(C) \geq 0$. ಆದ್ದರಿಂದ $P(B) \geq P(A)$ ಎಂದು ಸಿದ್ಧವಾಗುತ್ತದೆ.

8. ಮೇಲೆ ಫಲಿತಾಂಶ (2)ರಲ್ಲಿ $P(A \cup B) = P(A) + P(B) - P(A \cap B)$ ಎಂದು ತೋರಿಸಿದ್ದೇವೆ. ಇದನ್ನು

$P(A \cup B) \leq P(A) + P(B)$ ಎಂದು ಬರೆಯಬಹುದು. ಇದನ್ನು ಸಾರ್ವತ್ರೀಕರಿಸಲು $P(A_1 \cup A2 \cup A3 \ldots \cup Ak) \leq P(A1) + P(A2) + \ldots + P(Ak)$ ಘಟನೆಗಳೆಲ್ಲ ವಿಯುತವಾಗಿದ್ದಾಗ ಸಾಮ್ಯವನ್ನು ಸ್ವೀಕರಿಸಬೇಕು.

ವಿಧೇಯ ಸಂಭಾವ್ಯತೆ : ಒಂದು ಯತ್ನದ ಫಲವಾಗಿ $A$ ಘಟನೆ ಸಂಭವಿಸಿದೆ ಅಥವಾ ಸಂಭವಿಸಿಲ್ಲ ಎಂದು ಹೇಳಲು ಸಾಧ್ಯವಿದ್ದು, ಒಟ್ಟು $n$ ಯತ್ನಗಳಲ್ಲಿ $A$ ಘಟನೆ $a$ ಬಾರಿ ಸಂಭವಿಸಿದರೆ, $A$ಯ ಸಾಪೇಕ್ಷ ಆವೃತ್ತಿ $a/n$ ಆಗುವುದು. ಇದನ್ನು $f(A)$ ಎಂದು ಸಂಕೇತಿಸುತ್ತೇವೆ; ಅಂದರೆ $f(A) = a/n$. $n$ನ ಬೆಲೆ ಹೆಚ್ಚಿದಾಗಲೆಲ್ಲಾ $f(A)$ ಯ ಬೆಲೆ ಡೋಲಾಯಮಾನವಾಗುತ್ತದೆ. $n$ ಅನಂತಕ್ಕೆ ಅಪಹರಿಸಿದರೆ $f(A)$ ಒಂದು ಸ್ತಿಮಿತ ಬೆಲೆಗೆ ಅಭಿಸರಿಸುತ್ತದೆ. ಈ ನಿಯತ ಬೆಲೆಗೆ $A$ ಘಟನೆಯ ಸಂಭಾವ್ಯತೆ ಎಂದು ಹೆಸರು.

$A$ ಘಟನೆ ಸಂಭವಿಸಿರುವ ಒಟ್ಟು $a$ ಸಂದರ್ಭಗಳ ಪೈಕಿ $r$ ಬಾರಿ $B$ ಎಂಬ ಮತ್ತೊಂದು ಘಟನೆ ಸಂಭವಿಸುತ್ತದೆ ಎನ್ನೋಣ. ಅಂದರೆ, $A$ ಎಂಬುದು ಘಟಿಸಿದೆ ಎಂದು ತಿಳಿದಾಗ $B$ ಘಟನೆಯ ಸಾಪೇಕ್ಷ ಆವೃತ್ತಿ $r/a$ ಆಗುತ್ತದೆ. ಇದನ್ನು $f(B/A)$ ಎಂಬ ಸಂಕೇತದಿಂದ ಸೂಚಿಸುತ್ತೇವೆ. ಅಂದರೆ, $f(B/A) = \frac{r}{a} = \frac{r}{n} \div \frac{a}{n} = f(B \cap A)/f(A)$. ಇಲ್ಲಿ $a \neq 0$ ಎಂದು ಭಾವಿಸಲಾಗಿದೆ. ಈ ನಿಯಮ ಸಂಭಾವ್ಯತೆಗೂ ಅನ್ವಯಿಸುತ್ತದೆಂದು ಭಾವಿಸಬಹುದು.

$A$ ಘಟಿಸಿದೆ ಎಂದಾಗ $B$ ಎಂಬ ಮತ್ತೊಂದು ಘಟನೆಯ ಸಂಭಾವ್ಯತೆಯನ್ನು $P(B \cap A)$ $P(A)$ ಎಂದು ವ್ಯಾಖ್ಯಾನಿಸುತ್ತೇವೆ. $P(A) \neq 0$. ಈ ಸಂಭಾವ್ಯತೆಯನ್ನು $P(B/A)$ ಎಂದು ಸಂಕೇತಿಸುತ್ತೇವೆ. ಆಗ

$$P(B/A)=\frac{P(B\cap A)}{P(A)}, P(A)\neq 0$$

ಎಂದು ಬರೆಯಬಹುದು. ಇದಕ್ಕೆ *A* ಘಟಿಸಿದಾಗ *B* ಯ ವಿಧೇಯ ಸಂಭಾವ್ಯತೆ ಅಥವಾ ನಿರ್ಬಂಧಿತ ಸಂಭಾವ್ಯತೆ (ಕಂಡಿಷನಲ್ ಪ್ರಾಬಬಿಲಿಟಿ) ಎಂದು ಹೆಸರು. ಮೇಲಿನ ಸಾಮ್ಯವನ್ನು $P(B \cap A) = P(B/A).P(A)$ ಎಂದೂ ಬರೆಯಬಹುದು. ಇದರಂತೆಯೇ ಮತ್ತು $P(A \cap B) = P(A/B).P(B)$ ಎಂಬ ಸಾಮ್ಯಗಳು ದೊರೆಯುತ್ತವೆ. ಇದರಂತೆಯೇ

$$P(A/B)=\frac{P(A\cap B)}{P(B)}, P(B)\neq 0$$

*A* ಘಟನೆ ಒದಗಿದೆ ಎಂದು ತಿಳಿದಾಗ *B* ಒದಗಿದೆ ಎಂದು ತಿಳಿದಿರಲಿ ಇಲ್ಲವೆ ತಿಳಿಯದಿರಲಿ. ಈ ಎರಡು ಸಂದರ್ಭಗಳಲ್ಲೂ B ಘಟಿಸುವ ಆವೃತ್ತಿ ಸಂಖ್ಯೆ ಒಂದೇ ಆಗಿದ್ದರೆ *A* ಮತ್ತು *B* ಘಟನೆಗಳೆರಡೂ ಪರಸ್ಪರ ಸ್ವತಂತ್ರ ಘಟನೆಗಳು ಎನ್ನುತ್ತೇವೆ. ಆಗ $P(B/A)$ ಮತ್ತು $P(B)$ ಎರಡೂ ಸಮವಾಗಿರುತ್ತವೆ. ಈ ಪರಿಸ್ಥಿತಿಯಲ್ಲಿ

$$P(A \cap B) = P(A).\ P(B)$$

ಈ ಸಾಮ್ಯವನ್ನೇ ಆಧಾರವನ್ನಾಗಿಟ್ಟುಕೊಂಡು ಪರಸ್ಪರ ಸ್ವತಂತ್ರವಾದ ಘಟನೆಗಳ ವ್ಯಾಖ್ಯೆಯನ್ನು ಹೀಗೆ ನಿರೂಪಿಸುತ್ತೇವೆ. ಅಂದರೆ $(P(A \cap P) = P(A).P(B)$ ಆದಾಗ *A, B* ಘಟನೆಗಳು ಪರಸ್ಪರ ಸ್ವತಂತ್ರ ಘಟನೆಗಳೆನಿಸುವುವು. ಇದಕ್ಕೆ ಸಂಭಾವ್ಯತೆಯ ಗುಣನಿಯಮ ಎಂದು ಹೆಸರು.

ಘಟನೆಗಳು ಎರಡಕ್ಕಿಂತ ಹೆಚ್ಚಾಗಿದ್ದರೆ ಪರಿಸ್ಥಿತಿ ಜಟಿಲವಾಗುವುದು. ಪ್ರತಿ ಜೊತೆ ಘಟನೆಗಳೂ ಪರಸ್ಪರ ಸ್ವತಂತ್ರವಾಗಿರಬೇಕು. ಅಂದರೆ

$$P(A \cap B) = P(A).P(B)\ ;\ P(B \cap C) = P(B).\ P(C)\ ;$$
$$P(A \cap C) = P(A).\ P(C)$$

ಇವಲ್ಲದೆ $P(A \cap B \cap C) = P(A).P(B).P(C)$ ಎಂಬ ಸಾಮ್ಯವೂ ತಾಳೆ ಬೀಳಬೇಕು. ಇವಿಷ್ಟೂ ನಿಬಂಧನೆಗಳು ಪಾಲಿತವಾದರೆ *A, B, C*, ಘಟನೆಗಳು ಸ್ವತಂತ್ರವಾದವು ಎನಿಸುವುವು. ಈ ಘಟನೆಗಳು ಜೊತೆಜೊತೆಯಾಗಿ ಸ್ವತಂತ್ರವಾಗಿದ್ದು, ಆದರೆ ಕೊನೆಯ ನಿಬಂಧನೆ ಪಾಲಿತವಾಗದಿರಬಹುದು. ಆಗ ಘಟನೆಗಳು ಸ್ವತಂತ್ರವಾದವು ಎನಿಸುವುದಿಲ್ಲ; ಆದರೆ ಅವು ಜೊತೆಜೊತೆಯಾಗಿ ಸ್ವತಂತ್ರ ಎನಿಸುವುವು. ಇಂಥ ಪರಿಸ್ಥಿತಿಗಳು ಎಷ್ಟೋ ಇರುತ್ತವೆ. (ಎಂ.ವಿ.ಜೆ.)

**ಘಟಪ್ರಭಾ :** ಕರ್ನಾಟಕದ ಮುಖ್ಯ ನದಿಗಳಲ್ಲಿ ಒಂದು. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹರಿಯುತ್ತದೆ. ಬೆಳಗಾಂವಿ ನಗರಕ್ಕೆ 40 ಕಿಮೀ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿಯ ಅಂಚಿನಲ್ಲಿ ರಾಮಘಟ್ಟದಲ್ಲಿ ಉಗಮಿಸಿ, ಸ್ಥೂಲವಾಗಿ ಪೂರ್ವಾಭಿಮುಖವಾಗಿ ಹರಿದು, ಬಿಜಾಪುರ ಜಿಲ್ಲೆಯ ಚಿಮ್ಮಲಗಿಯ ಬಳಿ ಕೃಷ್ಣೆಯನ್ನು ಕೂಡಿಕೊಳ್ಳುವ ಈ ನದಿಯ ಉದ್ದ 305 ಕಿಮೀ. ಬೆಳಗಾಂವಿ ಜಿಲ್ಲೆಯ ಕಾನೂರ, ಅಡಕೂರ, ದಡ್ಡಿ, ವಂಟಮುರಿ, ಘೋಡಗೇರಿ, ಕೊಣ್ಣೂರ, ಧೂಪದಾಳ, ಗೋಕಾಕ, ಹುಣಶ್ಯಾಳ, ಸುಣದೇಳಿ ಊರುಗಳೂ ವಿಜಯಪುರ ಜಿಲ್ಲೆಯ ಬಾಗಲಕೋಟ, ಚಿಮ್ಮಲಗಿಗಳೂ ಈ ನದಿಯ ತೀರದಲ್ಲಿವೆ. ಬೆಳಗಾವಿ ಜಿಲ್ಲೆಯಲ್ಲಿ ಹುಕ್ಕೇರಿ ಗೋಕಾಕ ತಾಲ್ಲೂಕುಗಳ ಮೂಲಕ 193 ಕಿಮೀ ದೂರ ಹರಿದ ಮೇಲೆ ಮುಧೋಳ ನಗರಕ್ಕೆ ಪಶ್ಚಿಮದಲ್ಲಿ ವಿಜಯಪುರ ಜಿಲ್ಲೆಯನ್ನು ಪ್ರವೇಶಿಸಿ ಮುಧೋಳ ಮತ್ತು ಬಾಗಲಕೋಟೆ ತಾಲ್ಲೂಕುಗಳ ಮೂಲಕ ಸುಮಾರು 112 ಕಿಮೀ ದೂರ ಪ್ರವಹಿಸುತ್ತದೆ. ಗೋಕಾಕದ ಬಳಿಯ ಜಲಪಾತದ ಎತ್ತರ ಸು. 46 ಮೀ. ಅಲ್ಲೊಂದು ಕಟ್ಟೆ ಕಟ್ಟಿ ನದಿಯ ನೀರನ್ನು ಸಾಗುವಳಿಗೂ ವಿದ್ಯುತ್ತಿನ ಉತ್ಪಾದನೆಗೂ ಬಳಸಿಕೊಳ್ಳಲಾಗುತ್ತಿದೆ. ಗೋಕಾಕ ಗುಡ್ಡದಲ್ಲಿ ಕಣಿವೆಯ ಪ್ರದೇಶದಲ್ಲಿ ಹರಿಯುವ ನದಿಯ ನೋಟ ತುಂಬ ಸುಂದರವಾಗಿದೆ. ವಿಜಯಪುರ ಜಿಲ್ಲೆಯ ಹೆರಕಲ್ ಬಳಿ ಈ ನದಿಯಿಂದಾದ ಕೊರಕಲೂ ನೋಡಲು ರಮ್ಯ. ಘಟಪ್ರಭಾ ನದಿ ಕೃಷ್ಣೆಯನ್ನು ಸೇರುವೆಡೆಯಲ್ಲಿ ಅದರ ಮುಖ 100 ಮೀ ಅಗಲವಾಗಿದೆ.

ಹಿರಣ್ಯಕೇಶಿ, ತಾಮ್ರಪರ್ಣಿ – ಇವು ಘಟಪ್ರಭಾ ನದಿಯ ಉಪನದಿಗಳು. ಘಟಪ್ರಭಾ ನದಿಗೆ ಸಮೃದ್ಧವಾದ ಜಲಸಂಪನ್ಮೂಲವಿದೆ. ಇದಕ್ಕೆ 50"-250" ಮಳೆ ಬೀಳುವ ಮಲೆನಾಡ ವಿಶಾಲ ಜಲಾನಯನ ಪ್ರದೇಶವಿದೆ. ಇದರಲ್ಲಿ ವಾರ್ಷಿಕವಾಗಿ ಹರಿಯುವ ನೀರಿನ ಸರಾಸರಿ ಪರಿಮಾಣ 12,100 ಕೋಟಿ ಘನ ಅಡಿಗಳು. ಆದರೆ ಮಳೆಗಾಲದ ತರುವಾಯ ನದಿ ಕೃಶವಾಗತೊಡಗಿ ಸಣ್ಣ ತೊರೆಯಂತಾಗಿ ಬೇಸಗೆಯಲ್ಲಿ ಬಹಳ ಮಟ್ಟಿಗೆ ಬತ್ತಿಯೇ ಹೋಗುತ್ತದೆ. (ಎಸ್.ವಿ.ಪಿ.ಎ.)

**ಘಟಪ್ರಭಾ ಕಣಿವೆ ಅಭಿವೃದ್ಧಿ ಯೋಜನೆ :** ಘಟ್ಟ ಪ್ರದೇಶದಲ್ಲಿ ಮಳೆ ನಿಯತವಾಗಿಯೂ ವಿಪುಲವಾಗಿಯೂ ಬೀಳುವುದಾದರೂ ನದಿಯ ಪೂರ್ವಭಾಗದ ಬಯಲಿನಲ್ಲಿ ಅದು ತೀರ ಕಡಿಮೆ. ಬೆಳಗಾವಿ ಜಿಲ್ಲೆಯ ಪೂರ್ವಭಾಗವೂ ಇಡೀ ವಿಜಯಪುರ ಜಿಲ್ಲೆಯೂ

ರಭಸದಿಂದ ಕೆಳಗೆ ಧುಮುಕುವ ಘಟಪ್ರಭಾ ಜಲಾಶಯ

ಅನಾವೃಷ್ಟಿ ಪ್ರದೇಶಗಳಾಗಿರುವುದರಿಂದ ಅವು ಪದೇ ಪದೇ ಕ್ಷಾಮ ಮತ್ತು ಅಭಾವ ಪರಿಸ್ಥಿತಿಗಳಿಗೆ ಒಳಗಾಗುತ್ತವೆ. ಆದರೆ ಅಲ್ಲಿ ಹರಿಯುವ ನದಿತೊರೆಗಳ ಜಲಸಂಪತ್ತನ್ನು ಉಪಯೋಗಿಸಿಕೊಂಡು ಭಾರಿ ಪ್ರಮಾಣದಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಿ, ಅಲ್ಲಿಯ ಕಠಿಣ ಜೀವನ ಪರಿಸ್ಥಿತಿಗಳನ್ನು ಬಗೆಹರಿಸುವುದು ಅಸಾಧ್ಯವೇನಲ್ಲ.

**ಘಟಪ್ರಭಾ ಯೋಜನೆಯ ಇತಿಹಾಸ :** ಗೋಕಾಕ ಜಲಪಾತದ ಔನ್ನತ್ಯದ ಅನುಕೂಲವನ್ನು ಪಡೆದುಕೊಂಡು ಘಟಪ್ರಭಾ ನದಿಯನ್ನು ನೀರಾವರಿಗೆ ಬಳಸಿಕೊಳ್ಳುವ ಒಂದು ಯೋಜನೆ 1852ರಷ್ಟು ಹಿಂದೆಯೇ ರೂಪುಗೊಂಡಿತು. 1853ರಲ್ಲಿ ಪ್ರಾರಂಭಿಕ ಸರ್ವೇಕ್ಷಣೆಗಳು ನಡೆದವು; ಜಲಪಾತದ ಮೇಲಕ್ಕೆ 3.25 ಕಿಮೀ ದೂರದಲ್ಲಿ ಒಂದು ಗೊತ್ತಾದ ಸ್ಥಳದಿಂದ ನಾಲೆಯನ್ನು ತೆಗೆಯಲು ಯೋಜನೆಗಳನ್ನು ತಯಾರಿಸಲಾಯಿತು. ಜಲಪಾತಕ್ಕೆ ಮೇಲೆ 4 ಕಿಮೀ ದೂರದಲ್ಲಿ ಧೂಪದಾಳದ ಬಳಿ ಈ ನದಿಗೆ ಅಡ್ಡಲಾಗಿ



ಒಡ್ಡು ನಿರ್ಮಿಸಲು ಹಾಗೂ ಅಲ್ಲಿಂದ 24 ಕಿಮೀ ಉದ್ದದ ಗೋಕಾಕ ನಾಲೆಯನ್ನು ರಚಿಸಲು 1877ರಲ್ಲಿ ಯೋಜನೆಯೊಂದನ್ನು ಹಿಂದಿನ ಮುಂಬಯಿ ಸರ್ಕಾರ ಕ್ಷಾಮಪರಿಹಾರ ಕಾರ್ಯದ ಅಂಗವಾಗಿ ಮಂಜೂರು ಮಾಡಿತು. ಈ ಕೆಲಸವನ್ನು 15 ಲಕ್ಷ ರೂ. ವೆಚ್ಚದಲ್ಲಿ 1897 ರ ಹೊತ್ತಿಗೆ ಪೂರ್ಣಗೊಳಿಸಲಾಯಿತು. ಈ ಯೋಜನೆಯ ಮುಂದುವರಿಕೆಯಾಗಿ ಜಲಾಶಯವೊಂದನ್ನು ನಿರ್ಮಿಸಿ ನದಿಯ ಎರಡು ದಂಡೆಗಳಿಂದಲೂ ನಾಲೆಗಳನ್ನು ತೆಗೆಯುವ ದಡ್ಡಿ ಕಟ್ಟೆ ಯೋಜನೆಯನ್ನು 1924ರಲ್ಲಿ ತಯಾರಿಸಲಾಯಿತು. ಆದರೆ ಈ ಯೋಜನೆಯ ಪ್ರತಿಫಲ ಸಮರ್ಪಕವಾಗಿರದೆಂಬ ಕಾರಣದಿಂದ ಇದನ್ನು ಕಾರ್ಯರೂಪಕ್ಕೆ ತರಲಿಲ್ಲ.

1924ರಲ್ಲಿ ಆಗಿನ ಮುಂಬಯಿ ಸರ್ಕಾರ ಘಟಪ್ರಭಾ ಎಡದಂಡೆ ನಾಲೆಯ ಯೋಜನೆಯನ್ನು ಸಿದ್ಧಗೊಳಿಸಿತು. ಘಟಪ್ರಭಾ ಮತ್ತು ಕೃಷ್ಣಾನದಿಗಳ ನಡುವಣ ಭೂಮಿಯನ್ನು ನೀರಾವರಿಗೆ ಒಳಪಡಿಸುವ ನಾಲಾ ವ್ಯವಸ್ಥೆಯೊಂದನ್ನು ರಚಿಸಬೇಕೆಂಬುದು

ಅದರ ಉದ್ದೇಶ. ನದಿಯ ಎಡದಂಡೆಯಲ್ಲಿ ರಚಿಸಲುದ್ದೇಶಿಸಿದ್ದ ಈ ವ್ಯವಸ್ಥೆಯಲ್ಲಿ 117 ಕಿಮೀ ಉದ್ದದ ಒಂದು ಮುಖ್ಯ ನಾಲೆಯನ್ನೂ 5 ಶಾಖಾನಾಲೆಗಳನ್ನೂ ನಿರ್ಮಿಸಬೇಕೆಂದು ಯೋಚಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಆಗ ಈ ಯೋಜನೆಯನ್ನು ತ್ಯಜಿಸ ಬೇಕಾಯಿತು. ಹಿಂದಿನ ಮುಂಬಯಿ ಸರ್ಕಾರದ ಯುದ್ಧಾನಂತರ ಪುನಾರಚನಾ ಯೋಜನೆಗಳ ಪೈಕಿ ಒಂದು ಯೋಜನೆಯನ್ನಾಗಿ ಘಟಪ್ರಭಾ ಜಲಾಶಯ ಯೋಜನೆಯನ್ನು ಪರಿಷ್ಕರಿಸುವ ಕೆಲಸವನ್ನು 1947ರಲ್ಲಿ ಕೈಗೊಳ್ಳಲಾಯಿತು. ಇದಕ್ಕಾಗಿ ನಡೆಸಲಾದ ದೀರ್ಘ ಪರಿಶೀಲನೆಯ ಅನಂತರ ಘಟಪ್ರಭಾ ನದಿಗೆ ಅಡ್ಡಲಾಗಿ ಹಡಲ್ಗದ ಬಳಿಯಲ್ಲೂ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ಅಜ್ರಾ ಬಳಿಯಲ್ಲೂ ಎರಡು ಜಲಾಶಯಗಳನ್ನು ನಿರ್ಮಿಸುವ ಯೋಜನೆಗಳು ಸಿದ್ಧವಾದವು.



ಹಿಡಕಲ್ ಕಟ್ಟೆಯ ಕೋಡಿಯ ಭಾಗ

1956ರಲ್ಲಿ ಆದ ರಾಜ್ಯ ಪುನರ್ವಿಂಗಡಣೆಯ ಪರಿಣಾಮವಾಗಿ ಈ ಯೋಜನೆಯ ದೃಷ್ಟಿಯಲ್ಲಿ ಬದಲಾವಣೆಯಾಗಿದೆ. ಹಿಂದೆ ಪೂರ್ಣವಾಗಿ ಆಗಿನ ಮುಂಬಯಿ ರಾಜ್ಯಕ್ಕೆ ಸೇರಿದ್ದ ಈ ಯೋಜನೆ ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡೂ ರಾಜ್ಯಗಳಲ್ಲಿ – ಜಲಾಶಯಗಳು ಮಹಾರಾಷ್ಟ್ರದಲ್ಲೂ ನಾಲೆಗಳೂ ಕರ್ನಾಟಕದಲ್ಲೂ – ಬರುವಂತಾಯಿತು. ಆದ್ದರಿಂದ ಸ್ವಾಭಾವಿಕವಾಗಿಯೇ ಇದರ ಬಗ್ಗೆ, ಮುಖ್ಯವಾಗಿ ಮುಳುಗಡೆ ಆಗುವ ಭೂಮಿಯ ಬಗ್ಗೆ, ಎರಡೂ ರಾಜ್ಯಗಳ ನಡುವೆ ದೀರ್ಘಸಮಾಲೋಚನೆಗಳು ನಡೆದವು. ಜಲಾಶಯದಿಂದ ನೆರೆಯ ರಾಜ್ಯದ ಜಮೀನುಗಳ ಮುಳುಗಡೆಯಾಗುವುದನ್ನು ತಪ್ಪಿಸಲು ಹಡಲ್ಗದ ಕಟ್ಟೆಯ ನಿವೇಶನಕ್ಕೆ ಕೆಳಗಡೆಯಲ್ಲಿ ಜಲಾಶಯ ನಿರ್ಮಾಣಕ್ಕೆ ಅನುಕೂಲವಾದ ಮತ್ತೊಂದು ಸ್ಥಳವನ್ನು ಕಂಡುಹಿಡಿಯುವುದು ಅಪೇಕ್ಷಣೀಯವೆನಿಸಿತು. ಹಿಡಕಲ್ ಬಳಿಯಲ್ಲಿ ನದಿಗೆ ಅಡ್ಡಲಾಗಿ ಕಟ್ಟೆ ಕಟ್ಟಲು ನಿರ್ಧರಿಸಲಾಯಿತು.

ಹಿಡಕಲ್ ಬಳಿಯ ಜಲಾಶಯದಿಂದ 114 ಕಿಮೀ ಉದ್ದದ ಎಡದಂಡೆಯ ನಾಲೆಯನ್ನೂ 198ಕಿಮೀ ಉದ್ದದ ಬಲದಂಡೆಯ ನಾಲೆಯನ್ನೂ ನಿರ್ಮಿಸಲಾಗಿದೆ. ಈ ಜಲಾಶಯದಿಂದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹುಕ್ಕೇರಿ, ಅಥಣಿ, ರಾಯಬಾಗ್, ಗೋಕಾಕ, ಪರಸಗಡ ಮತ್ತು ರಾಮದುರ್ಗ ತಾಲ್ಲೂಕುಗಳಲ್ಲೂ ವಿಜಾಪುರ ಜಿಲ್ಲೆಯ ಜಮಖಂಡಿ, ಮುಧೋಳ, ಬೀಳಗಿ, ಬಾಗಲಕೋಟೆ ಮತ್ತು ಹುನಗುಂದ ತಾಲ್ಲೂಕುಗಳಲ್ಲೂ ಒಟ್ಟು 7.50 ಲಕ್ಷ ಎಕರೆ ಭೂಮಿಗೆ ಪ್ರಯೋಜನವಾಗಿದೆ. ಈ ಯೋಜನೆಯ ವೆಚ್ಚ ೯೦ ಕೋಟಿ ರೂ. ಮುಂದೆ ಕಾಣಿಸಿರುವಂತೆ ಮೂರು ಹಂತಗಳಲ್ಲಿ ಅದನ್ನು ಕಾರ್ಯಗತಗೊಳಿಸಲಾಗುತ್ತದೆ. ಮೊದಲನೆಯ ಹಂತದಲ್ಲಿ ಎಡದಂಡೆಯಿಂದ 44 ಮೈ. ಉದ್ದದ ನಾಲೆಯ ರಚನೆ ಸೇರಿದೆ. ಈ ನಾಲೆಯ ಜಲವಿಸರ್ಜನ ಸಾಮರ್ಥ್ಯ 1,500 ಕ್ಯೂಸೆಕ್‌ಗಳು. ಈಗಿನ ಧೂಪದಾಳ ಒಡ್ಡಿನಿಂದ ಪ್ರಾರಂಭವಾಗುವ ಈ ನಾಲೆಗೆ 31 ಮೈ. ಶಾಖಾ ನಾಲೆಗಳಿರುತ್ತವೆ. ಈ ಯೋಜನೆಯ ವೆಚ್ಚ 692 ಲಕ್ಷ ರೂ. ಇದು ಘಟಪ್ರಭಾ ಮತ್ತು ಕೃಷ್ಣಾನದಿ ಬಯಲಿನ 136 ಗ್ರಾಮಗಳಿಗೆ ಸೇರಿದ 1,20,000 ಎಕರೆ ಭೂಮಿಗೆ ನೀರುಣಿಸುತ್ತದೆ. ಘಟಪ್ರಭಾ ಎಡನಾಲೆಯನ್ನು 71 ಮೈಲಿಗಳ ಉದ್ದಕ್ಕೆ ವಿಸ್ತರಿಸುವುದೂ ಇಡೀ ನಾಲಾ ಪ್ರದೇಶದಲ್ಲಿ ಒಟ್ಟು 2.98 ಲಕ್ಷ ಎಕರೆಗಳ ಭೂಮಿಗೆ ನೀರು ಒದಗಿಸುವ ಸು. 62 ಮೈ. ಉದ್ದದ ಮೂರು ಶಾಖಾ ನಾಲೆಗಳನ್ನು ನಿರ್ಮಿಸುವುದೂ ಘಟಪ್ರಭಾ ಎಡದಂಡೆಯ ನಾಲೆಯಲ್ಲಿ ನೀರು ಹರಿಸುವ ಉದ್ದೇಶದಿಂದ ಈಗಿನ ಒಡ್ಡಿನಿಂದ ಮೇಲಕ್ಕೆ 12 ಮೈ. ದೂರದಲ್ಲಿ ಹಿಡಕಲ್‌ನಲ್ಲಿ 2,300 ಕೋಟಿ ಘ.ಅ. ನೀರನ್ನು ಶೇಖರಿಸಲು ಕಟ್ಟೆ ಕಟ್ಟುವುದು ಎರಡನೆಯ ಹಂತ. ಈಗಿನ ಅಂದಾಜಿನಂತೆ ಇದಕ್ಕೆ ಒಟ್ಟು ವೆಚ್ಚ 3,968 ಲಕ್ಷ ರೂ. ಹಿಡಕಲ್ ಕಟ್ಟೆಯಿಂದ 123 ಮೈ.ಉದ್ದ. ಘಟಪ್ರಭಾ ಬಲದಂಡೆ ನಾಲೆಯ ನಿರ್ಮಾಣವೂ ಈ ನಾಲೆಯಲ್ಲಿ ನೀರು ಹರಿಸುವುದಕ್ಕಾಗಿ 2,770 ಕೋಟಿ. ಘ.ಅ. ನೀರನ್ನು ದಾಸ್ತಾನು ಮಾಡಲು ಹಿಡಕಲ್ ಕಟ್ಟೆಯನ್ನು ಅದರ ಅಂತಿಮ ಎತ್ತರಕ್ಕೆ ಹೆಚ್ಚಿಸುವುದೂ ಮೂರನೆಯ ಹಂತ. ಈಗಿನ ಅಂದಾಜಿನಂತೆ ಇದಕ್ಕೆ ತಗಲುವ ವೆಚ್ಚ. 29.42 ಕೋಟಿ ರೂ. ಇದರಿಂದ ೩ ಲಕ್ಷ ಎಕರೆಗಳಿಗೆ ನೀರಾವರಿ ಸೌಲಭ್ಯ ಒದಗುತ್ತದೆ. ಕಟ್ಟೆಯ ಎತ್ತರ ಹೆಚ್ಚಿಸುವ ಕೆಲಸವನ್ನು ಮೊದಲನೆಯ ಹಂತಕ್ಕೆ ಅನುಬಂಧವಾಗಿ ತೆಗೆದುಕೊಳ್ಳಬೇಕೆಂದು ಸರ್ಕಾರ ಈಗ ತೀರ್ಮಾನಿಸಿದೆ.

ಘಟಪ್ರಭಾ ಯೋಜನೆಯ ಮೂರು ಹಂತಗಳಿಂದ 5.98 ಲಕ್ಷ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಏರ್ಪಟ್ಟಿದೆ. ಈ ಪ್ರದೇಶದ ಬಹುಭಾಗದಲ್ಲಿ ಮುಂಗಾರು ಬೆಳೆಯನ್ನೂ ಕೆಲವು ಕಡೆಗಳಲ್ಲಿ ಹಿಂಗಾರು ಫಸಲನ್ನೂ ಪಡೆಯಬಹುದು. 3'-4' ಆಳದ ಕಪ್ಪು ಮಣ್ಣು ಇರುವೆಡೆಗಳಲ್ಲಿ ಹತ್ತಿ ಬೆಳೆಯುತ್ತದೆ. ಮುಖ್ಯ ಬೆಳೆಗಳು ಜೋಳ, ಮೆಕ್ಕೆಜೋಳ, ಸಜ್ಜೆ, ನೆಲಗಡಲೆ, ಗೋದಿ, ಮತ್ತು ಹತ್ತಿ. ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿದ ಮೇಲೆ ಮಿಶ್ರ ತಳಿಯ ಮೆಕ್ಕೆಜೋಳ, ಸಜ್ಜೆ, ಜೋಳ, ಹತ್ತಿ, ದ್ವಿದಳ ಧಾನ್ಯಗಳು, ನೆಲಗಡಲೆ, ಸೂರ್ಯಕಾಂತಿ, ಗೋದಿ, ಕಬ್ಬು ಬೆಳೆಯಬಹುದು. ವರ್ಷಕ್ಕೆ 2.94 ಲಕ್ಷ ಟನ್ ಆಹಾರ ಧಾನ್ಯಗಳೂ 2.90 ಲಕ್ಷ ಟನ್ ವಾಣಿಜ್ಯ ಬೆಳೆಗಳೂ ಹೆಚ್ಚಾಗಿ ಬೆಳೆಯುವ ನಿರೀಕ್ಷೆಯಿದೆ. *

**ಘಟಿಕೋತ್ಸವ :** ವಿಶ್ವವಿದ್ಯಾಲಯದ ಇಲ್ಲವೆ ಇತರ ಅಂಗೀಕೃತ ಉನ್ನತಶಿಕ್ಷಣ ಸಂಸ್ಥೆಗಳ ಅಧ್ಯಯನ ಘಟಕವೊಂದರ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿದ ವಿದ್ಯಾರ್ಥಿಗಳಿಗೆ ಇಲ್ಲವೆ ಯಾವುದಾದರೂ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಅಥವಾ ಪಾಂಡಿತ್ಯ ಸಾಧಿಸಿದ ಖ್ಯಾತವ್ಯಕ್ತಿಗಳಿಗೆ ಪದವಿ ಅಥವಾ ಪ್ರಶಸ್ತಿಯನ್ನು ನೀಡಲು ಏರ್ಪಡಿಸುವ ಸಾಂಪ್ರದಾಯಿಕ ಸಮಾರಂಭ. ಇದನ್ನು ಇಂಗ್ಲೆಂಡಿನಲ್ಲೂ ಭಾರತ ಮುಂತಾದ ದೇಶಗಳಲ್ಲೂ ಕಾನ್ವೊಕೇಷನ್ ಎಂದು ಕರೆದರೆ ಅಮೆರಿಕದ ಸಂಯುಕ್ತ ಸಂಸ್ಥಾನಗಳಂಥ ದೇಶಗಳಲ್ಲಿ ಕಮೆನ್ಸ್‌ಮೆಂಟ್ ಅಥವಾ ಗ್ರಾಜುಯೇಷನ್ ಎಂದು ಕರೆಯುತ್ತಾರೆ.

ಪ್ರಾಚೀನ ಭಾರತದಲ್ಲಿ ಘಟಿಕೋತ್ಸವ : ಅಗ್ರಹಾರ, ದೇಗುಲದ ವಿದ್ಯಾಲಯ (ಟೆಂಪಲ್ ಕಾಲೇಜ್), ಬ್ರಹ್ಮಪುರಿ ಮುಂತಾದವುಗಳಂತೆ ಪ್ರಾಚೀನ ಭಾರತದಲ್ಲಿ ಘಟಿಕವೂ ಒಂದು ಮಾದರಿಯ ಉನ್ನತಶಿಕ್ಷಣ ಸಂಸ್ಥೆಯೆನಿಸಿತ್ತು. ಉದಾ–ಹೆಂಜೇರು ಪಟ್ಟಣದ ಮಹಾಘಟಿಕಾಲಯ. ಅಲ್ಲಿನ ಶಿಕ್ಷಣವನ್ನು ಮುಗಿಸಿದ ವಿದ್ಯಾರ್ಥಿಗಳಿಗೆ ಏರ್ಪಡಿಸುತ್ತಿದ್ದ ಬೀಳ್ಕೊಡುಗೆ ಸಮಾರಂಭದಿಂದ ಈ ಹೆಸರು ಬಂದಿರುವುದು ಸಂಭವ. ಪ್ರಾಚೀನ ಭಾರತದ ವೈದಿಕ ಶಿಕ್ಷಣಪದ್ಧತಿಯಲ್ಲಿ ಉನ್ನತ ಶಿಕ್ಷಣವನ್ನು ಮುಗಿಸಿದ ಸ್ನಾತಕರು (ಗ್ರ್ಯಾಜುಯೇಟ್ಸ್) ಜೀವನವನ್ನು ಆರಂಭಿಸುವ ಮುನ್ನ ಎಂದರೆ, ಬ್ರಹ್ಮಚರ್ಯದಿಂದ ಗೃಹಸ್ಥಾಶ್ರಮಕ್ಕೆ ಕಾಲಿಡುವಾಗ ಆಚರಿಸುತ್ತಿದ್ದ ಸಮಾವರ್ತನ ಸಂಸ್ಕಾರವನ್ನು ಇದಕ್ಕೆ ಹೋಲಿಸಬಹುದು. ಗುರುಕುಲದಲ್ಲಿ ವಿದ್ಯಾರ್ಥಿ ಉಪನಯನಾನಂತರ ಸುಮಾರು 12 ವರ್ಷಗಳ ಶಿಕ್ಷಣವನ್ನು ಮುಗಿಸಿದ ಮೇಲೆ ಒಂದು ಶುಭದಿನ ಸಮಾವರ್ತನ ಏರ್ಪಡುತ್ತಿತ್ತು. ವಿದ್ಯಾರ್ಥಿ ಮುಂಜಾನೆಯೆಲ್ಲ ಮನೆಯಲ್ಲೇ ಉಳಿದಿದ್ದು, ಮಧ್ಯಾಹ್ನ ಹೊರಗೆ ಬಂದು, ಕ್ಷೌರ ಮಾಡಿಸಿಕೊಂಡು ತಾನು ಧರಿಸಿದ್ದ ಮೇಖಲೆ, ಅಜಿನ ಮುಂತಾದ ವಿದ್ಯಾರ್ಥಿ ಲಾಂಛನಗಳನ್ನು ವಿಸರ್ಜಿಸುತ್ತಿದ್ದ. ಅವನ ಗುರುವೇ ಅವನಿಗೆ ಸುಗಂಧ ಜಲದಲ್ಲಿ ಸ್ನಾನಮಾಡಿಸಿ, ನೂತನ ವಸ್ತ್ರಗಳನ್ನು ತೊಡಿಸಿ, ಒಡವೆಗಳನ್ನಿಟ್ಟು, ಪುಷ್ಪಮಾಲಿಕೆ ಹಾಕಿ, ಪೇಟ ಕಟ್ಟಿ, ಛತ್ರಿ ಚಡಾವುಗಳನ್ನು ಕೊಟ್ಟು ಮಂತ್ರೋಚ್ಚಾರಣೆಯ ನಡುವೆ ಗೃಹಸ್ಥಾಶ್ರಮಕ್ಕೆ ಪದಾರ್ಪಣ ಮಾಡಿಸುತ್ತಿದ್ದ (ಗೋಭಿಲ ಗೃಹ್ಯಸೂತ್ರ), ಶ್ರೀಮಂತ ಮನೆತನಗಳಲ್ಲಿ ಅದೇ ಉಡುಪನ್ನು ಗುರುವಿಗೂ ತೊಡಿಸುತ್ತಿದ್ದರು. ಅನಂತರ, ಹೋಮ ಮಾಡಿ ಗುರು ಶಿಷ್ಯನಿಗೆ 'ನಿನಗೆ ಬೋಧಿಸಲು ಅನೇಕ ಮಂದಿ ವಿದ್ಯಾರ್ಥಿಗಳು ಸಿಕ್ಕಲಿ' ಎಂದು ಆಶೀರ್ವದಿಸುತ್ತಿದ್ದ (ಬೋಧಾಯನ ಗೃಹ್ಯಸೂತ್ರ) ಆಮೇಲೆ ಗುರು ಶಿಷ್ಯನಿಗೆ ರಾಜ, ಅಳಿಯ ಮುಂತಾದ ವಿಶೇಷ ಅತಿಥಿಗಳಿಗೆ ನೀಡುವ ಮಧುಪರ್ಕವನ್ನು ಆಹಾರವಾಗಿ ನೀಡುತ್ತಿದ್ದ. ಈ ಸಂಸ್ಕಾರದ ಅಂಗವಾಗಿ ಏರ್ಪಡುತ್ತಿದ್ದ ವಿದ್ವಜ್ಜನಗೋಷ್ಠಿಗೆ ಗುರು ತನ್ನ ಶಿಷ್ಯನನ್ನು ಆನೆಯ ಮೇಲೆ ಕೂರಿಸಿ ಕರೆದು ತಂದು ಆತ ಶ್ರೇಷ್ಠ ಪಂಡಿತನೆಂದು ಗೋಷ್ಠಿಗೆ ಪರಿಚಯ ಮಾಡಿಕೊಡುತ್ತಿದ್ದ. ಅಗತ್ಯವೆನಿಸಿದರೆ ಸ್ನಾತಕ ಅಲ್ಲಿನ ಚರ್ಚೆಯಲ್ಲಿ ಭಾಗವಹಿಸಿ ತನ್ನ ಪಾಂಡಿತ್ಯವನ್ನು ಪ್ರದರ್ಶಿಸುತ್ತಿದ್ದ. ಅಂದಿಗೆ ಆ ವಿದ್ಯಾರ್ಥಿಗೆ ತಾನು ಗಳಿಸಿದ ಪಾಂಡಿತ್ಯಕ್ಕೆ ತಕ್ಕ ಪ್ರಶಸ್ತಿ ಅಥವಾ ಪದವಿ ದೊರೆತಂತಾಗುತ್ತಿತ್ತು. ಬೌದ್ಧ ಶಿಕ್ಷಣಪದ್ಧತಿಯಲ್ಲೂ ಘಟಿಕೋತ್ಸವಕ್ಕೆ ಸಮಾನವೆನ್ನಬಹುದಾದ ಒಂದು ಸಂಸ್ಕಾರ ಪ್ರಚಾರದಲ್ಲಿತ್ತು. ಇಪ್ಪತ್ತು ವರ್ಷ ವಯಸ್ಸಾದ ಮೇಲೆ ಬೌದ್ಧವಿಹಾರದಲ್ಲಿ ಶಿಕ್ಷಣ ಮುಗಿಸಿದ ಶ್ರಮಣನಿಗೆ ಏರ್ಪಡುತ್ತಿದ್ದ ಈ ಸಮಾರಂಭಕ್ಕೆ ಉಪಸಂಪದ ಎಂದು ಹೆಸರಿತ್ತು. ವೈದಿಕ ಶಿಕ್ಷಣಪದ್ಧತಿಯ ಸಮಾವರ್ತನ ಸಂಸ್ಕಾರಕ್ಕೆ ಇದು ಸಮವೆಂದು ಭಾವಿಸಬಹುದು. ಆತನಕ ಅಲ್ಲಿಯವರೆಗೆ ಸಂಘದ ಸದಸ್ಯತ್ವಕ್ಕೆ ಉಮೇದುವಾರನಂತೆ ಶಿಕ್ಷಣಪಡೆಯುತ್ತಿದ್ದ ಅವನು ಉಪಸಂಪದದ ಅನಂತರವೇ ಅದರ ಪೂರ್ಣ ಸದಸ್ಯತ್ವವನ್ನು ಪಡೆಯುತ್ತಿದ್ದ. ಸಮಾವರ್ತನವಾದ ಮೇಲೆ ವಿದ್ಯಾರ್ಥಿ ಪಂಡಿತವರ್ಗಕ್ಕೆ ಅರ್ಹತೆ ಪಡೆಯುತ್ತಿದ್ದಂತೆ ಉಪಸಂಪದದಿಂದ ಆತ ಬೌದ್ಧಸಂಘದ ಪೂರ್ಣಸದಸ್ಯನಾಗುತ್ತಿದ್ದ. ಬ್ರಹ್ಮಚಾರಿ ಸಮಾವರ್ತನದ ಅನಂತರ ಗೃಹಸ್ಥಾಶ್ರಮ ಸೇರುತ್ತಿದ್ದಂತೆ ಶ್ರಮಣ ಉಪಸಂಪದದ ಅನಂತರ ಆಜೀವಬ್ರಹ್ಮಚಾರಿಯಾಗಿ ಉಳಿಯಬೇಕಾಗಿದ್ದ ಸಂನ್ಯಾಸಾಶ್ರಮವನ್ನು ಆರಂಭಿಸುತ್ತಿದ್ದ. ಬೌದ್ಧಸಂಘಗಳು ಮಹಿಳೆಯರಿಗೂ ಪ್ರವೇಶಾವಕಾಶವನ್ನು ನೀಡಿದಮೇಲೆ

ಉಪಸಂಪದ ಸಂಸ್ಕಾರ ಅವರಿಗೂ ಅನ್ವಯಿಸುತ್ತಿತ್ತು. ವಿವಿಧ ವೃತ್ತಿಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೂ ಶಿಕ್ಷಣ ಮುಗಿಸಿದ ಮೇಲೆ ಒಂದು ರೀತಿಯ ಘಟಿಕೋತ್ಸವವನ್ನು ಪ್ರಾಚೀನ ಭಾರತದಲ್ಲಿ ನಡೆಸುತ್ತಿದ್ದರು. ಉದಾ. ಸೈನಿಕ ಶಿಕ್ಷಣವನ್ನು ಮುಗಿಸಿದವರಿಗೆ ಕೊಡುತ್ತಿದ್ದ 'ಚುರಿಕ ಬಂಧ' ಎಂಬ ಸಂಸ್ಕಾರ. ಬ್ರಾಹ್ಮಣರಲ್ಲಿದ್ದ ಸಮಾವರ್ತನಕ್ಕೆ ಇದು ಸಮವೆನ್ನಬಹುದು. ಆಗ ಸೈನಿಕ ಶಿಕ್ಷಣವನ್ನು ಮುಗಿಸಿದವರಿಗೆ ಸಾಹಸ ಜೀವನದ ಆರಂಭದ ಕುರುಹಾಗಿ ಕಠಾರಿಯೊಂದನ್ನು ಅರ್ಪಿಸುತ್ತಿದ್ದರು (ವೀರಮಿತ್ರೋದಯ ಸಂಸ್ಕಾರ ಪ್ರಕಾಶದಲ್ಲಿ ನಾರದಸ್ಮೃತಿ). 19ನೆಯ ಶತಮಾನದ ಆದಿಯಲ್ಲೂ ರಾಜಪುತ್ರಸ್ಥಾನದ ಕ್ಷತ್ರಿಯರಲ್ಲಿ ಈ ಸಮಾರಂಭ ಪ್ರಚಾರದಲ್ಲಿತ್ತು. ವಿವಾಹಕ್ಕೆ ಮುಂಚಿತವಾಗಿ ಆಚರಿಸುತ್ತಿದ್ದ ಈ ಸಮಾರಂಭವನ್ನು 'ಖರ್ಗ್ ಬಂದಾಯ್' (ಚುರಿಕ ಬಂಧ ಎಂಬುದರ ತದ್ಭವ) ಎಂದು ಕರೆಯುತ್ತಿದ್ದರು.

ಆಧುನಿಕ ಭಾರತದಲ್ಲಿ ಘಟಿಕೋತ್ಸವ : ಭಾರತದಲ್ಲಿ ಆಧುನಿಕ ವಿಶ್ವವಿದ್ಯಾಲಯಗಳೂ ಇತರ ಉನ್ನತ ಶಿಕ್ಷಣಸಂಸ್ಥೆಗಳೂ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಮಾದರಿಯಲ್ಲಿ ರೂಪುಗೊಂಡಿವುದರಿಂದ ಸದ್ಯದಲ್ಲಿ ಇಂಗ್ಲಿಷ್ ಸಂಪ್ರದಾಯದಲ್ಲೇ ಘಟಿಕೋತ್ಸವ ನಡೆಯುತ್ತಿದೆ. ಸಾಮಾನ್ಯವಾಗಿ ಪ್ರತಿ ವಿಶ್ವವಿದ್ಯಾಲಯವೂ ಇತರ ಉನ್ನತ ಶಿಕ್ಷಣಸಂಸ್ಥೆಗಳೂ ಪ್ರತಿವರ್ಷವೂ ನಡೆಸುವ ಈ ಸಮಾರಂಭಕ್ಕೆ ಹಿಂದಿನ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಬರುವರು. ವೈದ್ಯ, ಎಂಜಿನಿಯರಿಂಗ್ ಮುಂತಾದ ವೃತ್ತಿಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಧ ಅಥವಾ ಒಂದು ವರ್ಷ ಪ್ರಯೋಗಕ್ಷೇತ್ರದಲ್ಲಿ ಅನುಭವಾ(ಅಭ್ಯಾಸಾ)ರ್ಥ ಸೇವೆಸಲ್ಲಿಸಿದ ಅನಂತರವೇ ಪದವಿದಾನಕ್ಕೆ ಅರ್ಹತೆ ಪಡೆಯುವರು.

ಬೇರೆ ಬೇರೆ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಸಮಾರಂಭಕ್ಕೆ ಬರುವಾಗ ಆಯಾ ಪದವಿಗೆ ನಿಷ್ಕರ್ಷಿಸಿರುವ ಬಣ್ಣ ನಿಲುವಂಗಿ (ಗೌನ್), ತಲೆಯುಡಿಗೆಗಳನ್ನು (ಹುಡ್), ಧರಿಸಿಕೊಂಡು ಬರಬೇಕೆಂಬ ನಿಯಮವುಂಟು. ಸಮಾರಂಭಕ್ಕೆ ರಾಷ್ಟ್ರದ ವರಿಷ್ಠ ನಾಯಕರೊಬ್ಬರು ಮುಖ್ಯ ಅತಿಥಿಗಳಾಗಿ ಬರುವರು. ಸಮಾರಂಭದ ಕಾರ್ಯಕ್ರಮಗಳು ಆರಂಭವಾಗುವುದಕ್ಕೆ ಅರ್ಧ ಅಥವಾ ಕಾಲು ಗಂಟೆ ಮುಂಚಿತವಾಗಿ ಅಭ್ಯರ್ಥಿಗಳೂ ವಿದ್ವಜ್ಜನರೂ ಇತರ ಆಹ್ವಾನಿತರೂ ಬಂದು ಸಭಾಂಗಣದಲ್ಲಿ ಕೂಡುವರು. ಮಹಾ ಕುಲಪತಿಗಳು ಆಗಮಿಸಿದೊಡನೆ ಅವರನ್ನು ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರೂ ವಿವಿಧ ವಿದ್ಯಾಮಂಡಳಿಗಳ ಅಧ್ಯಕ್ಷರೂ (ಡೀನ್‌ಗಳು) ಕುಲಸಚಿವರು ಮತ್ತು ಪರೀಕ್ಷಾಧಿಕಾರಿಗಳೂ ಬರಮಾಡಿಕೊಳ್ಳುವರು. ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜೊಂದರ ಮುಖ್ಯಾಧಿಕಾರಿ ವಿಶ್ವವಿದ್ಯಾಲಯದ ಅಧಿಕಾರದಂಡವನ್ನು ಹೊತ್ತು ಮುಂದೆ ಸಾಗಿ ಅದನ್ನು ವೇದಿಕೆಯ ಮಧ್ಯೆ ಸಭೆಗೆ ಕಾಣುವಂತೆ ಇರಿಸುವರು. ಮಹಾಕುಲಪತಿಗಳು ವೇದಿಕೆಯ ಮೇಲೆ ಕುಳಿತ ಮೇಲೆ ಮಿಕ್ಕವರೂ ತಮ್ಮ ತಮ್ಮ ಆಸನಗಳಲ್ಲಿ ಕೂಡುವರು. ಮಹಾಕುಲಪತಿಗಳು ಕುಲಪತಿಗಳ ಕೋರಿಕೆಯಂತೆ ಸಮಾರಂಭವನ್ನು ಉದ್ಘಾಟಿಸುವರು. ಪದವಿದಾನಕ್ಕೆ ಬಂದಿರುವ ಅಭ್ಯರ್ಥಿಗಳನ್ನು ನಿಲ್ಲುವಂತೆ ಹೇಳಿ, ಕುಲಪತಿಗಳು–ನಿಮಗೆ ಪದವಿ ನೀಡಿದರೆ ತ್ರಿಕರಣಪೂರ್ವಕವಾಗಿ ವಿಶ್ವವಿದ್ಯಾಲಯದ ಕೀರ್ತಿಗೊಪ್ಪುವಂತೆ ನಡೆದುಕೊಳ್ಳುವಿರಾ? ನಿಮ್ಮ ಕೈಲಾದಮಟ್ಟಿಗೆ ಸಾಮಾಜಿಕ ಪ್ರಗತಿಗೂ ಸೋದರವರ್ಗದ ಕಲ್ಯಾಣಕ್ಕೂ ದುಡಿಯುವಿರಾ? ನೈತಿಕ ಮತ್ತು ಜ್ಞಾನಕ್ಷೇತ್ರಗಳನ್ನು ಬಲಪಡಿಸಿ ವೃದ್ಧಿಪಡಿಸುವಿರಾ? ಎಂದು ಪ್ರಶ್ನಿಸುವರು. ಈ ಮೂರು ಅಂಶಗಳಿಗೂ ಪ್ರತ್ಯೇಕವಾಗಿ ಎಲ್ಲ ಅಭ್ಯರ್ಥಿಗಳೂ ಹಾಗೆಯೇ ನಡೆದುಕೊಳ್ಳುವುದಾಗಿ ಪ್ರಮಾಣವಚನವನ್ನು ನೀಡಿ ಅನಂತರ ಕುಳಿತುಕೊಳ್ಳುವರು. ಶಿಕ್ಷಣ, ಎಂಜಿನಿಯರಿಂಗ್, ನ್ಯಾಯ, ವೈದ್ಯ, ವ್ಯವಸಾಯ, ವಾಣಿಜ್ಯ ಮುಂತಾದ ವೃತ್ತಿ ಮತ್ತು ತಾಂತ್ರಿಕ ವಿಷಯಗಳ ಅಭ್ಯರ್ಥಿಗಳನ್ನು ಉದ್ದೇಶಿಸಿ–ನಿಮ್ಮ ನಿಮ್ಮ ವೃತ್ತಿಗೆ ಸಂದ ಕರ್ತವ್ಯಗಳನ್ನು ನಿರ್ವಹಿಸುತ್ತ ಅವುಗಳ ಉದ್ದೇಶ ಮತ್ತು ಪರಿಶುದ್ಧತೆಗಳನ್ನು ಕಾಪಾಡಿಕೊಂಡು ಬರುವಿರಾ? ನಿಮ್ಮ ವೃತ್ತಿಕೌಶಲವನ್ನು ಕ್ಷುಲ್ಲಕ, ಅನುಚಿತ ಉದ್ದೇಶಗಳಿಗಾಗಿ ಬಳಸದಿರುವಿರಾ? ಎಂದು ಪ್ರಶ್ನಿಸುವರು. ಅವರೆಲ್ಲ ಎದ್ದು ನಿಂತು ಹಾಗೆಯೇ ಮಾಡುವುದಾಗಿ ಪ್ರಮಾಣವಚನ ಸ್ವೀಕರಿಸುವರು. ಅನಂತರ ವಿದ್ಯಾಮಂಡಲಿಗಳ ಅಧ್ಯಕ್ಷರು ಒಬ್ಬೊಬ್ಬರಾಗಿ ತಮ್ಮ ತಮ್ಮ ವಿಷಯ ವಿಭಾಗದ ಅಭ್ಯರ್ಥಿಗಳನ್ನು ಆಯಾ ಪದವಿಗೆ ಅರ್ಹರೆಂದು ಶಿಫಾರಸು ಮಾಡುವರು. ಅವರೆಲ್ಲ ಎದ್ದು ನಿಂತು ಮಹಾಕುಲಪತಿಗಳಿಗೆ ನಮಸ್ಕರಿಸುವರು; ಆಯಾ ವಿಷಯವಿಭಾಗದಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳು ಮಹಾಕುಲಪತಿಗಳಿಂದ ಪದಕ ಪ್ರಶಸ್ತಿಗಳನ್ನು ಸ್ವೀಕರಿಸುವರು. ಹೀಗೆ ಎಲ್ಲ ವಿಷಯ ವಿಭಾಗಗಳ ಅಭ್ಯರ್ಥಿಗಳನ್ನೂ ಶಿಫಾರಸು ಮಾಡಿದ ಮೇಲೆ ಎಲ್ಲ ಅಭ್ಯರ್ಥಿಗಳೂ ಎದ್ದು ನಿಲ್ಲುವರು. ಮಹಾಕುಲಪತಿಗಳು ಅಭ್ಯರ್ಥಿಗಳಿಗೆ ಅವರವರು ಉತ್ತೀರ್ಣರಾಗಿರುವ ಪರೀಕ್ಷೆಯ ಪದವಿಗಳನ್ನು ಅನುಗ್ರಹಿಸುವರು. ಅದರ ಗುರುತಿಗಾಗಿ ಪ್ರಶಸ್ತಿಪತ್ರಗಳ ವಿತರಣೆಯಾಗುವುದು. ಮುಂದೆ ಅವರು ಆಯಾ ಪದವಿಗೆ ನಿಷ್ಕರ್ಷಿತವಾಗಿರುವ ಬಣ್ಣದ ಲಾಂಛನವನ್ನು ಧರಿಸಲು ಅನುಮತಿ ನೀಡುವರು. ಆಹ್ವಾನಿತ ಮುಖ್ಯ ಅತಿಥಿಗಳು ನೂತನ ಪದವೀಧರರನ್ನುದ್ದೇಶಿಸಿ ಉಪದೇಶಭಾಷಣ ಮಾಡಿದ ನಂತರ. ಸಮಾರಂಭ ಮುಕ್ತಾಯವಾಗುವುದು.

ಘಟಿಕೋತ್ಸವ (ಉಪದೇಶ) ಭಾಷಣ : ಘಟಿಕೋತ್ಸವಕ್ಕೆ ಕಳಸವಿಟ್ಟಂತೆ, ಪದವೀದಾನದ ಅನಂತರ, ಮುಖ್ಯ ಅತಿಥಿಗಳು ಸ್ನಾತಕರನ್ನುದ್ದೇಶಿಸಿ ಉಪದೇಶ ಭಾಷಣ (**ನೋಡಿ**) ಮಾಡುವುದು ಸಾಂಪ್ರದಾಯಿಕವಾಗಿ ನಡೆದುಬಂದಿದೆ. ಈ ಸಂಪ್ರದಾಯಕ್ಕೆ ಸರಿಸಮಾನ ವೆನ್ನಬಹುದಾದ ಕೆಲವು ಆಚರಣೆಗಳು ಪ್ರಾಚೀನ ಭಾರತದ ಶಿಕ್ಷಣಪದ್ಧತಿಯಲ್ಲಿದ್ದುದು ಕಂಡುಬರುತ್ತದೆ (ತೈತ್ತಿರೀಯ ಉಪನಿಷತ್ತು). ಆಗ ಮಾಡುತ್ತಿದ್ದ ಉಪದೇಶ ಭಾಷಣವೊಂದು ಈ ರೀತಿ ಇದೆ : 'ಸತ್ಯವನ್ನು ನುಡಿ. ನಿನ್ನ ಕರ್ತವ್ಯವನ್ನು ಮಾಡು. ನಿತ್ಯ ವೇದಾಧ್ಯಯನ ಮತ್ತು ಬೋಧನೆಗಳನ್ನು ಮಾಡುವುದನ್ನು ಮರೆಯಬೇಡ. ಉಪಯುಕ್ತವಾದುದನ್ನು ಬಿಡಬೇಡ. ಘನತೆಗೇರಲು ಬರುವ ಅವಕಾಶವನ್ನು ಕಳೆದುಕೊಳ್ಳಬೇಡ. ನಿನ್ನ ಗುರುಗಳೊಡನೆ ಮುಂದೆಯೂ ಸಂಪರ್ಕ ಹೊಂದಿರು. ನಿನ್ನ ಮಾತೆ, ಪಿತ, ಗುರು, ಅತಿಥಿ – ಇವರನ್ನು ದೇವರೆಂದು ಭಾವಿಸು. ದೋಷರಹಿತ ಕಾರ್ಯಗಳನ್ನು ಮಾತ್ರ ಆಚರಿಸು. ನಾವು ಮಾಡಿರುವ ಒಳ್ಳೆಯ ಕಾರ್ಯಗಳನ್ನು ಮಾತ್ರ ನೀನು ಅನುಕರಿಸು. ವಿದ್ವಜ್ಜನರಿಗೆ ಗೌರವ ತೋರು. ನೀನು ಏನು ನೀಡಿದರೂ ನಂಬಿಕೆ, ಸಂತೋಷ, ದೈನ್ಯ, ಭಕ್ತಿ, ದಯೆ – ಇವುಗಳಿಂದ ಕೂಡಿದವನಾಗಿರು. ಸಮಸ್ಯೆ ಎದುರಾದಾಗ ವಿವೇಚನೆಯಿಂದ ನಡೆದುಕೊ.' ಇದನ್ನು ವಿದ್ಯಾರ್ಥಿಯ ಗುರುಗಳೇ ನೀಡುತ್ತಿದ್ದರು. ಹಾಗೆಯೆ, ವೈದ್ಯವಿದ್ಯೆಯನ್ನು ಮುಗಿಸಿದ ಸ್ನಾತಕರಿಗೆ ನೀಡಬಹುದಾದ ಉಪದೇಶವನ್ನು ಚರಕ ಸಂಹಿತೆಯಲ್ಲಿ ಸೂಚಿಸಿದೆ. 'ವೈದ್ಯವೃತ್ತಿ ಆರಂಭಿಸಲು ಅನುಮತಿ ದೊರೆತು ವೃತ್ತಿನಿರತನಾದಾಗ ನಿನ್ನ ಗುರುಗಳಿಗೆ ತಕ್ಕ ಗುರುದಕ್ಷಿಣೆ ನೀಡು, ವೃತ್ತಿವ್ಯಾಪಾರ, ಅಭಿವೃದ್ಧಿ, ಖ್ಯಾತಿ – ಇವೆಲ್ಲ ಈಗ ಈ ಲೋಕದಲ್ಲೂ ಮುಂದೆ ಸ್ವರ್ಗದಲ್ಲೂ ಲಭಿಸುವಂತಾಗಲು ಬ್ರಾಹ್ಮಣರಿಗೂ ಹಸು ಮತ್ತು ಇತರ ಪ್ರಾಣಿಗಳಿಗೂ ಒಳ್ಳೆಯದನ್ನು ಮಾಡುವ ಗುರಿಯಿಟ್ಟುಕೊ. ರೋಗಿಗಳ ಆರೋಗ್ಯ ಉತ್ತಮಗೊಳಿಸಲು ನಿತ್ಯವೂ ಮನಃಪೂರ್ವಕವಾಗಿ ಯತ್ನಿಸು. ಇತರರ ಸಂಪತ್ತು, ಮಡದಿ ಇವುಗಳ ಬಗ್ಗೆ ದುಶ್ಚಿಂತೆ ಬೇಡ. ಉಡುಪು ಸರಳವಾಗಿರಲಿ, ಆಡಂಬರ ಬೇಡ, ಕುಡಿಯಬೇಡ, ಪಾಪಕಾರ್ಯ ಮಾಡಬೇಡ ಮಾಡಲು ಇತರರಿಗೆ ಸಹಾಯ ಮಾಡಬೇಡ. ನಿನ್ನ ಮಾತು ಸತ್ಯದಿಂದ ಕೂಡಿದ್ದು ಸರಳವೂ ನಯವೂ ಆಗಿದ್ದು ಸಂದರ್ಭಕ್ಕೆ ತಕ್ಕಂತೆ ಇರಲಿ. ನಿನ್ನ ಜ್ಞಾನ ಮತ್ತು ಉಪಕರಣಗಳನ್ನು ಹೆಚ್ಚಿಸಿಕೊ. ಖಂಡಿತವಾಗಿ ವಾಸಿಯಾಗದೆಂದು ಖಚಿತಪಟ್ಟ ರೋಗಿಗಳಿಗೂ ಇನ್ನೇನು ಸಾಯುವವರಿಗೂ ಪತಿ ಅಥವಾ ಪೋಷಕರು ಹಾಜರಿರದಿದ್ದ ಹೆಂಗಸಿಗೂ ಔಷಧಿ ಕೊಡಬೇಡ. ಪತಿ ಅಥವಾ ಪೋಷಕರು ಕಾಣದಂತೆ ಹೆಂಗಸರು ನೀಡುವ ಹಣ ಸ್ವೀಕರಿಸಬೇಡ. ರೋಗಿಯ ಕೊಠಡಿಗೆ ಹೋದೊಡನೆ ನಿನ್ನ ಗಮನವೆಲ್ಲ ರೋಗಿಯ ಮತ್ತು ಔಷಧೋಪಚಾರದ ಕಡೆ ಇರಲಿ. ರೋಗಿಯ ಮತ್ತು ಅವನ ಕುಟುಂಬಕ್ಕೆ ಸಂಬಂಧಿಸಿದ ಸುದ್ದಿಯನ್ನೆಲ್ಲ ರಹಸ್ಯವಾಗಿಡು. ಆಘಾತವಾಗುವಂತಿದ್ದರೆ, ರೋಗಿ ಸಾಯುವ ಸೂಚನೆ ಕಂಡುಬಂದರೆ ಅದನ್ನು ನಂಟರಿಷ್ಟರಿಗೆ ತಿಳಿಸಬೇಡ. ನಿನ್ನ ವೃತ್ತಿಯಲ್ಲಿ ಒಳ್ಳೆಯ ಅನುಭವವಿದ್ದರೂ ಜಂಬಕೊಚ್ಚಿಕೊಳ್ಳಬೇಡ. ನಿರಂತರವೂ ವೃತ್ತಿದಕ್ಷತೆ ಹೆಚ್ಚಿಸಿಕೊಳ್ಳಲು ಯತ್ನಿಸು. ನೀನು ವೃತ್ತಿನಿರತನಾಗುವಾಗ ನೂತನ ಅನುಭವವನ್ನು ಸಾಧಿಸುತ್ತಿರು. ನಿನಗೆ ಅನುಕೂಲವಾಗತಕ್ಕ ಮಾತನ್ನಾಗಲಿ ಅನುಭವವನ್ನಾಗಲಿ ಶತ್ರುಗಳಾದರೂ ಚಿಂತೆಯಿಲ್ಲ, ಕೇಳಿ ತಿಳಿದುಕೊ. ಇದು ಆ ಉಪದೇಶದ ಸಾರ. ಹೀಗೆಯೇ, ಇತರ ವೃತ್ತಿಶಿಕ್ಷಣ ಪಡೆದ ಸ್ನಾತಕರಿಗೂ ವಿಶಿಷ್ಟ ರೀತಿಯ ಉಪದೇಶ ನೀಡುತ್ತಿದ್ದಿರಬೇಕು.

ಆಧುನಿಕ ವಿಶ್ವವಿದ್ಯಾನಿಲಯಗಳ ಅಥವಾ ಉನ್ನತ ಶಿಕ್ಷಣಸಂಸ್ಥೆಗಳ ಘಟಿಕೋತ್ಸವ ಸಮಾರಂಭದಲ್ಲಿ ಉಪದೇಶ ಭಾಷಣ ಮಾಡಲು ಅಧಿಕಾರಸ್ಥಾನದಿಂದ, ರಾಜಕೀಯ ಪ್ರಭಾವದಿಂದ ಅಥವಾ ಪಾಂಡಿತ್ಯದಿಂದ ಖ್ಯಾತಿವೆತ್ತ ವ್ಯಕ್ತಿಯೊಬ್ಬರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸುವುದುಂಟು. ಕೆಲವು ವಿಶ್ವವಿದ್ಯಾಲಯಗಳು ಅಂಥ ಮುಖಂಡರ ಜೊತೆಗೆ ಒಬ್ಬ ಸ್ನಾತಕನೂ ಭಾಷಣವೀಯಲು ಅವಕಾಶ ಕಲ್ಪಿಸುತ್ತಿರುವರು. ಇದರಿಂದ ಜೀವನ ಆರಂಭಿಸಲಿರುವ ತರುಣ ತರುಣಿಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವಾಗುತ್ತದೆ. ಇದೊಂದು ಒಳ್ಳೆಯ ಸಂಪ್ರದಾಯವೆಂದು ಪರಿಗಣಿಸಲಾಗಿದೆ.

ಭಾರತದಲ್ಲಿ ಸದ್ಯದಲ್ಲಿ ನಡೆಯುತ್ತಿರುವ ಘಟಿಕೋತ್ಸವದ ಪರಕೀಯ ಸಂಪ್ರದಾಯವನ್ನೂ ಸಾಮೂಹಿಕವಾಗಿ ಪದವಿ ನೀಡುವ ಪದ್ಧತಿಯನ್ನೂ ಅನೇಕರು ಟೀಕಿಸುವರು. ಅಭ್ಯರ್ಥಿಗಳು ಸಮಾರಂಭಕ್ಕೆ ಬರಲು ಧರಿಸಬೇಕಾಗಿರುವ ಪೋಷಾಕು ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರದಲ್ಲಿದ್ದು, ರಾಜಕೀಯ ಕಾರಣದಿಂದಾಗಿ ಇಲ್ಲೂ ಆಚರಣೆಗೆ ಬಂದಿದೆ. ಭಾರತ ಸ್ವತಂತ್ರವಾದ ಮೇಲೂ ಅದನ್ನೇಕೆ ಮುಂದುವರಿಸಬೇಕೆಂಬ ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ನಿಲುವಂಗಿ, ಲಾಂಛನವಸ್ತ್ರ ಭಾರತೀಯ ಸಂಸ್ಕೃತಿಗೆ ಹೊಂದಿ ಬಂದವಲ್ಲ; ಇಲ್ಲಿನ ಹವಾಗುಣಕ್ಕೆ ಅವುಗಳ ಅಗತ್ಯವೂ ಇಲ್ಲ. ಅವುಗಳ ಬದಲು ಕಚ್ಚೆ, ನಿಲುವಂಗಿ, ಪೇಟ, ಉತ್ತರೀಯ ಅಥವಾ ಧೋತ್ರವನ್ನು ಭಾರತೀಯ ಘಟಿಕೋತ್ಸವದ ಪೋಷಾಕಾಗಿ ಏಕೆ ಅಂಗೀಕರಿಸಬಾರದೆಂಬ ಪ್ರಶ್ನೆಯನ್ನು ಅನೇಕರು ಎತ್ತಿರುವರು. ಇನ್ನು ಕೆಲವರು ರಷ್ಯ, ಜಪಾನ್ ಮುಂತಾದ ದೇಶಗಳು ವಿಶೇಷ ಉಡುಪನ್ನೇ ಸಮಾರಂಭಕ್ಕೆ ನಿಷ್ಕರ್ಷಿಸಿಲ್ಲವಾದ್ದರಿಂದ ಉಡುಪಿನ ಸಮಸ್ಯೆಯನ್ನು

ಕೈಬಿಡಬಹುದೆಂದು ಸೂಚಿಸಿರುವರು. ಈಚೆಗೆ ಉನ್ನತ ಶಿಕ್ಷಣ ಹತ್ತಾರು ಪಾಲು ವಿಸ್ತರಿಸಿದ್ದರ ಫಲವಾಗಿ ಘಟಿಕೋತ್ಸವಕ್ಕೆ ಹಲವಾರು ಸಹಸ್ರ ಅಭ್ಯರ್ಥಿಗಳು ಬರುವಂತಾಗಿದೆ. ಗೈರುಹಾಜರಿಯಲ್ಲಿ ಪದವಿ ಪಡೆಯುವುದೂ ಹೆಚ್ಚುತ್ತಿದೆ. ಈ ಪರಿಸ್ಥಿತಿಯನ್ನು ಪರಿಶೀಲಿಸುತ್ತ ಕೊಠಾರಿ ಶಿಕ್ಷಣ ಆಯೋಗ, ಸಾಮೂಹಿಕವಾಗಿ ಪದವಿ ನೀಡಲು ನಡೆಸುವ ಘಟಿಕೋತ್ಸವ ಅರ್ಥಹೀನವೆಂದು ಟೀಕಿಸಿದೆ. ಪ್ರಾಚೀನ ಭಾರತದಲ್ಲಿ ಅಭ್ಯರ್ಥಿ ಪ್ರತ್ಯೇಕವಾಗಿ ಪಾಂಡಿತ್ಯ ಪ್ರದರ್ಶಿಸಿ ಪದವಿ ಪಡೆಯುತ್ತಿದ್ದ ಸಂಪ್ರದಾಯದೊಡನೆ ಹೋಲಿಸಿ ನೋಡಿದರೆ ಈ ಟೀಕೆ ಸಾಧುವೆನಿಸುತ್ತದೆ. ಹಾಗೂ ಇಂಥ ಸಾಮೂಹಿಕ ಪದವೀದಾನದಿಂದ ವಿದ್ಯಾರ್ಥಿಗಳೂ ಆ ಗೌರವದಲ್ಲಿ ಭಾಗಿಯಾದ ತೃಪ್ತಿ ಸಂತೋಷಗಳನ್ನು ಅನುಭವಿಸಲಾರರು. ಆದ್ದರಿಂದ ಇಂಥ ಅರ್ಥಹೀನ ಸಮಾರಂಭದ ಔಚಿತ್ಯವನ್ನು ಪ್ರಶ್ನಿಸಿ ಅದನ್ನು ಕೈಬಿಡುವುದೇ ಲೇಸೆಂದು ಸೂಚಿಸಿರುವವರೂ ಉಂಟು.

ಘಟಿಕೋತ್ಸವ ಪದವೀಪ್ರದಾನಕ್ಕಾಗಿ ಏರ್ಪಟ್ಟರೂ ಅದು ಒಂದು ಸಂಸ್ಕಾರಸೂಚಕವೂ ಆಗಿದೆ. ಕೆಲವು ವಿಶ್ವವಿದ್ಯಾಲಯಗಳು ಅದನ್ನು ಕೈಬಿಡಲು ಆಲೋಚಿಸಿದ್ದರೂ ಕೊಲ್ಕತ್ತ ವಿಶ್ವವಿದ್ಯಾಲಯ ಅದನ್ನು ಕೇವಲ ಸಂಶೋಧನೆಯ ಮತ್ತು ಸ್ನಾತಕೋತ್ತರ ತರಗತಿಯ ಅಭ್ಯರ್ಥಿಗಳಿಗೆ ಮಾತ್ರ ನಡೆಸಬೇಕೆಂದೂ ಮಿಕ್ಕವರಿಗೆ ಅವರವರ ಕಾಲೇಜುಗಳಲ್ಲೇ ಆ ಸಮಾರಂಭ ಏರ್ಪಡಿಸಬಹುದೆಂದೂ ತೀರ್ಮಾನಿಸಿರುವುದು. ಗೈರುಹಾಜರಿಯಲ್ಲಿ ಪಡೆಯಲಾಶಿಸುವವರಿಗೆ ಅಂಚೆಯ ಮೂಲಕ ಪ್ರಶಸ್ತಿಪತ್ರ ವಿತರಣೆ ಮಾಡಬಹುದೆಂದೂ ಸೂಚಿಸಿದೆ. ಅಲ್ಲದೆ ಸಮಾರಂಭಕ್ಕೆ ಬರತಕ್ಕ ಅಭ್ಯರ್ಥಿಗಳು ನಿರ್ದಿಷ್ಟಗೊಳಿಸಿದ ಪೋಷಾಕಿಗೆ ಬದಲು ಲಕ್ಷಣವಾಗಿ ತಮಗಿಷ್ಟವಾದ ಉಡುಪು ಧರಿಸಿದರೂ ಸಾಕೆಂದೂ ತೀರ್ಮಾನಿಸಿದೆ. ಇತರ ವಿಶ್ವವಿದ್ಯಾಲಯಗಳಲ್ಲೂ ಈ ಅಭಿಪ್ರಾಯಕ್ಕೆ ಬೆಂಬಲ ದೊರಕುತ್ತಿದೆ.

ಘಟಿಕೋತ್ಸವವು ವಿದ್ಯಾರ್ಥಿಯ ಜೀವನದಲ್ಲಿ ಒಂದು ರಸಮಯ ಸನ್ನಿವೇಶವೂ ಹೌದು. ಅದನ್ನು ಉಜ್ವಲಗೊಳಿಸಲು ಹಲವು ವಿಶೇಷ ಸಂಪ್ರದಾಯಗಳನ್ನು ಅನುಸರಿಸಲಾಗುತ್ತಿದೆ. ತನ್ನ ಜೀವನದಲ್ಲಿ ಒಂದು ನಿರ್ದಿಷ್ಟ ಘಟ್ಟವನ್ನು ಮುಟ್ಟಿದ ವಿದ್ಯಾರ್ಥಿಗೆ ಅದು ಆಯಕಟ್ಟಿನ ಕಾಲ. ಅದನ್ನು ವೈಭವೋಜ್ಜ್ವಲಗೊಳಿಸಲೆಂದೇ ವಿದ್ಯಾಪೀಠದ ವಿಶಿಷ್ಟ ಪೋಷಾಕು; ಮಹಾನ್ ಪಂಡಿತರ, ನಾಯಕರ ಹಾಜರಾತಿ; ವಿಶೇಷ ರೀತಿಯ ವಿಧಿ ಸಂಸ್ಕಾರಗಳು; ಮಹಾವ್ಯಕ್ತಿಯೊಬ್ಬರಿಂದ ಉಪದೇಶ ಭಾಷಣ. ಆದರೆ ಪದವಿ ಪಡೆಯುವವರ ಸಂಖ್ಯೆ ಅಧಿಕಗೊಂಡಂತೆ, ಜೀವನದ ಸಮಸ್ಯೆಗಳು ಹೆಚ್ಚಿದಂತೆ ಕಾಲಕ್ರಮದಲ್ಲಿ ಅವೆಲ್ಲ ವ್ಯರ್ಥವಾಗಿ ತೋರುತ್ತಿವೆ. ಆದರೆ ಆಧುನಿಕ ಜೀವನ ಎಷ್ಟೇ ಜಟಿಲವಾದರೂ ವ್ಯಕ್ತಿಜೀವನದಲ್ಲಿ ಸಮಾರಂಭಗಳಿಗೆ ಸ್ಥಾನವಿದ್ದೇ ಇದೆ. ಹಾಗೂ, ಅದನ್ನು ಕೈಬಿಡುವುದರಿಂದ ವಿದ್ಯಾಕ್ಷೇತ್ರದಲ್ಲಿ ಪ್ರಾಚೀನಕಾಲದಿಂದ ನಡೆದುಬಂದ ಒಂದು ಸಂಸ್ಕಾರ ನಾಮಾವಶೇಷವಾಗುತ್ತದೆ. ವಿದ್ಯಾರ್ಥಿ ಜೀವನಕ್ಕೆ ಕಳಸವಿಡುವಂಥ ಸನ್ನಿವೇಶವೊಂದು ಇಲ್ಲವಾಗಿ ಜ್ಞಾನಪ್ರಗತಿಗೆ ಆದಷ್ಟು ಮಟ್ಟಿನ ಪ್ರಚೋದನೆ ತಪ್ಪಿಹೋಗುತ್ತದೆ. ಆದ್ದರಿಂದ ಅದನ್ನು ಅಗತ್ಯವೆನಿಸುವಂತೆ ಮಾರ್ಪಡಿಸಿ ಉಳಿಸಿಕೊಳ್ಳುವುದು ಒಳ್ಳೆಯದೆನಿಸದಿರದು. ಭಾರತೀಯ ಸಂಪ್ರದಾಯಗಳಿಗೆ ಒಪ್ಪುವಂತೆ ಇಡೀ ಘಟಿಕೋತ್ಸವದ ಉಡುಪಿನ ಸಮಸ್ಯೆಯನ್ನೂ, ವಿಧಿ, ಸಂಸ್ಕಾರಗಳನ್ನೂ, ಕಾರ್ಯಕ್ರಮಗಳನ್ನೂ ಭಾರತದ ಎಲ್ಲ ವಿಶ್ವವಿದ್ಯಾನಿಲಯಗಳಿಗೂ ಅನ್ವಯಿಸುವಂತೆ ಮಾರ್ಪಡಿಸಿಕೊಳ್ಳಬಹುದು. ಆ ಕಾರ್ಯವನ್ನು ನಿರ್ವಹಿಸಲು ಅಂತರ ವಿಶ್ವವಿದ್ಯಾಲಯ ಮಂಡಲಿ ಸೂಕ್ತ ಸಂಸ್ಥೆಯೆಂದು ಕೊಠಾರಿ ಶಿಕ್ಷಣ ಆಯೋಗವೂ ಸೂಚಿಸಿದೆ.

ಈಚೆಗೆ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಘಟಿಕೋತ್ಸವಕ್ಕೆ ಬರತಕ್ಕ ಅಭ್ಯರ್ಥಿಗಳು ಬಿಳಿಯ ನಿಲುವಂಗಿ ಮತ್ತು ಷರಾಯಿಯನ್ನೂ (ಮಹಿಳೆಯರಾದರೆ ಬಿಳಿಯ ಸೀರೆ ಮತ್ತು ಕುಪ್ಪಸವನ್ನೂ) ಆಯಾ ಪದವಿಗೆ ನಿಷ್ಕರ್ಷಿಸಿರುವ ಬಣ್ಣದ ಬಿಲ್ಲೆಯನ್ನೂ (ಬ್ಯಾಡ್ಜ್) ಧರಿಸಬೇಕೆಂದು ಗೊತ್ತುಮಾಡಿವೆ. (ಎನ್.ಎಸ್.ವಿ.)

**ಘಟೋತ್ಕಚ :** ಭೀಮ ಹಿಡಿಂಬೆಯರ ಮಗ. ಕೆಂಗಣ್ಣು ಕೋರೆದಾಡೆಗಳ ಭಯಂಕರ ರೂಪದವ. ಭೀಮನಂತೆಯೇ ಮಹಾ ಬಲಶಾಲಿ. ಬಾಲ್ಯದಲ್ಲಿಯೇ ಯೌವನವನ್ನು ಪಡೆದು ಶಸ್ತ್ರಾಸ್ತ್ರ ನಿಪುಣನಾದ. ಅಸಾಧಾರಣ ಒರಟುತನ, ದರ್ಪ, ಅಹಂಕಾರ, ಔದ್ಧತ್ಯಗಳು ಬಾಹ್ಯ ವ್ಯಕ್ತಿತ್ವದಲ್ಲಿ ಕಂಡುಬಂದರೂ ಪ್ರೀತಿ, ದಯೆ, ಭಕ್ತಿ, ಧರ್ಮಪರತೆ, ಗುರುಜನ ವಿಧೇಯತೆ, ಕರ್ತವ್ಯನಿಷ್ಠೆ, ಮುಂತಾದ ಮಾನವೀಯ ಗುಣಗಳನ್ನುಳ್ಳವ.

ಅರ್ಜುನ ತನ್ನ ಪ್ರತಿಜ್ಞೆಯಂತೆ, ಜಯದ್ರಥನನ್ನು ಕೊಂದಮೇಲೆ ಕರ್ಣನನ್ನು ಎದುರಿಸಲು ಸನ್ನದ್ಧನಾದ ಸಂದರ್ಭದಲ್ಲಿ ಕೃಷ್ಣ ಅವನನ್ನು ತಡೆದು ಘಟೋತ್ಕಚನನ್ನು ಕರೆಸುತ್ತಾನೆ. ಕಾಳರುದ್ರನ ಪಡೆಯಂತಿದ್ದ ಘಟೋತ್ಕಚನ ಪರಿವಾರದವರ ಕರಾಳದೇಹ ಮತ್ತು ಕೋರೆದಾಡೆಗಳನ್ನು ನೋಡಿದರೆ ಕಾರಿರುಳ ಪಟ್ಟಣಕ್ಕೆ ಚಂದ್ರನ ತೋರಣವನ್ನು ಕಟ್ಟಿದಂತೆ ಕಾಣುತ್ತಿತ್ತೆಂದು ಕುಮಾರವ್ಯಾಸ ಬಣ್ಣಿಸಿದ್ದಾನೆ. ಸಿಡಿಲ ಸೆರೆ ಬಿಟ್ಟಂತೆ ಇವನೂ ಇವನ ಪರಿವಾರಕೋಟಿಯೂ ಯುದ್ಧದಲ್ಲಿ ತೊಡಗುತ್ತಾರೆ. ಅಪಾರವಾದ ಕುರುಸೈನ್ಯದ ದಮನಕ್ಕಾಗಿ ಬಿರುಗಾಳಿಯಾಗಿ, ಕಾಳ್ಗಿಚ್ಚಾಗಿ, ಫಣಿಯಾಗಿ, ಸಮುದ್ರವಾಗಿ ಗಿರಿಜಾಲವಾಗಿ ಸಿಡಿಲು ಮಿಂಚುಗಳಾಗಿ, ಹೊಗೆಯಾಗಿ, ಹುಲಿಯಾಗಿ, ಭೈರವನ ರೂಪವಾಗಿ ಘಟೋತ್ಕಚ ಮಾಯಾಯುದ್ಧದಲ್ಲಿ ತೊಡಗುತ್ತಾನೆ. ಇದರಿಂದಾಗಿ ಕುರುಸೈನ್ಯದಲ್ಲಿ ಹಾಹಾಕಾರ ಏಳುತ್ತದೆ. ಇವನ ಹೊಡೆತವನ್ನು ತಾಳಲಾರದೆ ದ್ರೋಣ, ಅಶ್ವತ್ಥಾಮ, ಶಲ್ಯ, ಕೃಪ ಮುಂತಾದವರೆಲ್ಲ ಪಲಾಯನಗೈಯುತ್ತಾರೆ. ಅನಂತರ ಕರ್ಣ ಬರುತ್ತಾನೆ. ಆಗ ತಲೆ ಮುಗಿಲಿಗೆ ತುಡುಕುವಂತೆ ಘಟೋತ್ಕಚನ ದೇಹಾಕೃತಿ ಬೆಳೆದು ಕೈಕಾಲ್ ಮೂಡಿತೋ ನಭಕೆ ಎಂಬ ಭ್ರಮೆಯನ್ನುಂಟು ಮಾಡುತ್ತದೆ. ಕರ್ಣ ಸೂರ್ಯನ ಮಹಿಮೆಗೆ ದೈತ್ಯರಾಹುಗ್ರಹಣವಾಗುತ್ತದೆ. ಇಬ್ಬರಿಗೂ ಯುದ್ಧ ಮೊದಲಾಗುತ್ತದೆ. ತನ್ನ ಕೈಮೀರುತ್ತಿದೆ ಎಂದೆನಿಸಿದಾಗ ಕರ್ಣ, ಇಂದ್ರನಿಂದ ಪಡೆದಿದ್ದ ವೈಜಯಂತಿ ಎಂಬ ಶಕ್ತಿಯನ್ನು ದೈತ್ಯನ ಮೇಲೆ ಪ್ರಯೋಗಿಸುತ್ತಾನೆ. ಬಿರಿದ ಗಿರಿಯಂತೆ ಘಟೋತ್ಕಚ ಅಂತರಿಕ್ಷದಿಂದ ನೆಲಕ್ಕೆ ಉರುಳುತ್ತಾನೆ. ಈತ ಬಿದ್ದ ರಭಸಕ್ಕೆ ಒಂದು ಅಕ್ಷೋಹಿಣೀ ಸೈನ್ಯ ಸಾವನ್ನಪ್ಪುತ್ತದೆ. ಕರ್ಣನಲ್ಲಿದ್ದ ಮೂರು ಅತ್ಯುತ್ತಮ ರಕ್ಷಣೆಗಳಲ್ಲಿ ಮೊದಲೇ ಉಪಾಯಾಂತರದಿಂದ ಕವಚವನ್ನೂ ಕರ್ಣಕುಂಡಲವನ್ನೂ ಕಳೆದುಕೊಳ್ಳುವಂತೆ ಮಾಡಿದ್ದ ಕೃಷ್ಣ ಅವನಲ್ಲಿದ್ದ ಇನ್ನೊಂದು ಪ್ರಬಲ ಶಕ್ತಿಯಾದ ವೈಜಯಂತಿಯನ್ನು ನಾಶ ಮಾಡಲು ಘಟೋತ್ಕಚನನ್ನು ಬಲಿಕೊಡುತ್ತಾನೆ.

ರಾಜಸೂಯಯಾಗದ ಸಂದರ್ಭದಲ್ಲಿ ಲಂಕೆಗೆ ಹೋಗಿ ವಿಭೀಷಣನಿಂದ ಕಪ್ಪ ತಂದದ್ದು, ವನವಾಸದ ಸಂದರ್ಭದಲ್ಲಿ ಮೂರ್ಛೆಹೋದ ದ್ರೌಪದಿಯನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ನಾರಾಯಣಾಶ್ರಮ ಸೇರಿಸಿದ್ದು, ಅಭಿಮನ್ಯುವಿಗೆ ಮಾತಾಗಿ ಕುಟಿಲತೆಯಿಂದ ತಪ್ಪಿಹೋಗುತ್ತಿದ್ದ ಬಲರಾಮನ ಮಗಳಾದ ವತ್ಸಲೆಯನ್ನು ಅಭಿಮನ್ಯುವಿಗೇ ಮದುವೆ ಮಾಡಿಸಿದ್ದು, ಮಹಾಭಾರತದ ಯುದ್ಧದ ಸಂದರ್ಭದಲ್ಲಿ ತಾನೂ ತನ್ನ ಮಕ್ಕಳೂ ಪಾಂಡವರ ಪರವಾಗಿ ಹೋರಾಡಿದ್ದು, ಜಟಾಸುರನ ಮಗ ಅಲಂಬುಸನನ್ನೂ ಬಕಾಸುರನ ತಮ್ಮಂದಿರಾದ ಅಲಂಬಲ ಮತ್ತು ಅಲಾಯುಧರನ್ನೂ ಕೊಂದದ್ದು, ಕಾಮಕಟಂಕಟೆಯೆಂಬ ರಾಕ್ಷಸಿಯನ್ನು ಗೆದ್ದು, ಅವಳಲ್ಲಿ ಬರ್ಬರಿಕನೆಂಬ ಮಗನನ್ನು ಪಡೆದದ್ದು – ಇವು ಮಹಾಭಾರತದಲ್ಲಿ ಘಟೋತ್ಕಚನಿಂದಾದ ಮುಖ್ಯ ಕಾರ್ಯಕಲಾಪಗಳು. (ಆರ್.)

**ಘಟ್ಟಗಳು:** ದಖನ್ ಪ್ರಸ್ಥಭೂಮಿಯ ಪಶ್ಚಿಮ ಮತ್ತು ಪೂರ್ವ ಅಂಚುಗಳಲ್ಲಿರುವ ಪರ್ವತಶ್ರೇಣಿಗಳು. ಇವಕ್ಕೆ ಅನುಕ್ರಮವಾಗಿ ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಎಂಬ ಹೆಸರುಗಳಿವೆ. ನದಿ, ಕಾಲುವೆ, ಕೆರೆಗಳ ಅಂಚುಗಳಲ್ಲಿ, ನೀರಿಗೆ ಇಳಿದು ಸ್ನಾನ ಮಾಡುವುದೇ ಮುಂತಾದ ಉದ್ದೇಶಗಳಿಗಾಗಿ, ಕಟ್ಟಲಾದ ಸೋಪಾನ, ಜಗಲಿ ಮುಂತಾದವನ್ನೂ ಘಟ್ಟಗಳೆನ್ನುತ್ತಾರೆ.

ತಪತೀ ನದಿಯ ದಕ್ಷಿಣದಲ್ಲಿ ಆರಂಭವಾಗುವ ಘಟ್ಟಗಳು ಥಟ್ಟನೆ 900-1200ಮೀ. ಏರುತ್ತವೆ. ಕೆಲವೆಡೆಗಳಲ್ಲಿ 1500ಮೀ. ಎತ್ತರ ನಿಲುಕುವುದೂ ಉಂಟು. ದಖನ್ ಲಾವಾದಿಂದ ಆವೃತವಾಗಿರುವ ಈ ಭಾಗ ಸಮುದ್ರದ ಕಡೆಯಲ್ಲಿ ಗೋಡೆಯಂತೆ ಕಡಿದು, ಅಲ್ಲಲ್ಲಿ ಬಲು ಆಳವಾದ ಕಂದರಗಳಿವೆ. ಗೋವದಿಂದ ದಕ್ಷಿಣಕ್ಕೆ ನೈಸ್ ಶಿಲೆ ಮತ್ತು ಗ್ರ್ಯಾನೈಟುಗಳಿಂದ ಕೂಡಿರುವ ಘಟ್ಟಗಳು ಮುಂದೆ 320 ಕಿ.ಮೀ. ದೂರದಲ್ಲಿ 1,000 ಮೀ. ಗಿಂತ ಕಡಿಮೆ ಎತ್ತರವಾಗಿವೆ. ಈ ಭಾಗದಲ್ಲಿ ಕರಾವಳಿಯ ಹಲವು ನದಿಗಳು ಘಟ್ಟಗಳ ಬೆನ್ನೇಣುಗಳನ್ನು ಕತ್ತರಿಸಿ ಆಳವಾದ ಪಾತ್ರ ಸೃಷ್ಟಿಸಿಕೊಂಡು, ದಖನ್ ಪ್ರಸ್ಥಭೂಮಿಯ ನದಿಗಳ ತಲೆಯ ನೀರನ್ನೂ ಸಂಗ್ರಹಿಸಿಕೊಳ್ಳುತ್ತವೆ. ಮುಂದೆ ಘಟ್ಟಗಳು ಎತ್ತರವಾಗುತ್ತ ಸಾಗಿ ನೀಲಗಿರಿ ವಿಭಾಗದಲ್ಲಿ ಸೇರಿಕೊಳ್ಳುತ್ತವೆ. ಅತ್ಯಂತ ಎತ್ತರದ ಶಿಖರವಾದ ದೊಡ್ಡ ಬೆಟ್ಟ 2670 ಮೀ. ಈ ಭಾಗದಲ್ಲಿದೆ. ಇಲ್ಲಿಂದ ದಕ್ಷಿಣಕ್ಕೆ ಪಾಲಕ್ಕಾಡ್ ಬಳಿ ಎತ್ತರ ಕಡಿಮೆ. ಈ ಭಾಗವನ್ನು ಪಶ್ಚಿಮ ಘಟ್ಟಗಳ ದಕ್ಷಿಣ ತುದಿ ಎಂದು ಪರಿಗಣಿಸಲಾಗಿದೆಯಾದರೂ ಇಲ್ಲಿಂದ ದಕ್ಷಿಣಕ್ಕೂ ಅಣ್ಣೈಮಲೈ, ಪಳನಿ ಮತ್ತು ಏಲಕ್ಕಿ ಬೆಟ್ಟಗಳಲ್ಲಿ ಇವು ಮುಂದುವರಿದು ಭಾರತದ ದಕ್ಷಿಣ ತುದಿಯಾದ ಕನ್ಯಾಕುಮಾರಿ ಭೂಶಿರದವರೆಗೂ ಸಾಗುತ್ತವೆ. ಅಣ್ಣೈಮಲೈಯಲ್ಲಿ ಅಣ್ಣೈಮುಡಿಯ ಎತ್ತರ 2695ಮೀ. ತಪತಿಯಿಂದ ಕನ್ಯಾಕುಮಾರಿಯವರೆಗೆ 2650ಮೀ. ಮೈ. ದೂರ ಹಬ್ಬಿರುವ ಶ್ರೇಣಿಗಳನ್ನು ಪಾಲಕ್ಕಾಡ್ ಕಣಿವೆಯ ಮೂಲಕ ಮಾತ್ರ ಸುಲಭವಾಗಿ ದಾಟಬಹುದು.

ಒರಿಸ್ಸಾದ ಮಹಾನದಿಯಿಂದ ಕನ್ಯಾಕುಮಾರಿವರೆಗೆ, ಪೂರ್ವದಲ್ಲಿ ಸುಮಾರು 1367ಕಿಮೀ. ಹಬ್ಬಿರುವ ಬೆಟ್ಟಗಳನ್ನು ಪೂರ್ವಘಟ್ಟಗಳೆನ್ನುತ್ತಾರಾದರೂ ಪಶ್ಚಿಮಘಟ್ಟಗಳೊಂದಿಗೆ ಹೋಲಿಸಿದರೆ ಇವುಗಳಿಗೆ ಮಹತ್ವವಿಲ್ಲ. ಇವು ಪಶ್ಚಿಮಟ್ಟಗಳಷ್ಟು ಎತ್ತರವಾಗಿಯಾಗಲಿ ಅವಿಚ್ಛಿನ್ನವಾಗಿಯಾಗಲಿ ಇಲ್ಲ. ಗೋದಾವರಿ ಮತ್ತು ಕೃಷ್ಣಾ ನದಿಗಳ ನಡುವೆ ಸುಮಾರು 160 ಕಿಮೀ. ಗಳಷ್ಟು ದೂರ ಇವು ಅದೃಶ್ಯವಾಗುತ್ತವೆ. ಒರಿಸ್ಸದಲ್ಲಿ ಮಾತ್ರ ಕೆಲವೆಡೆ ಇವುಗಳು ಸು. 914 ಮೀ.ಗೂ ಮಿಗಿಲಾಗಿದೆ. ಅಲ್ಲಿ ಮಾತ್ರ ಈ ಪರ್ವತಪಂಕ್ತಿ ಬಹು ದಟ್ಟವಾದ ಅರಣ್ಯಗಳಿಂದ ತುಂಬಿದೆ. ಪೂರ್ವಘಟ್ಟದ ವಿವಿಧ ಭಾಗಗಳಿಗೆ ಸ್ಥಳೀಯವಾಗಿ ಬೇರೆ ಬೇರೆಡೆಗಳಲ್ಲಿ ಪ್ರತ್ಯೇಕ ಹೆಸರುಗಳೇ ಇವೆ. ಪಾಲಾರ್–ಪನ್ನಾರ್ ನದಿಯ ಎದುರಿಗಿನ ಶ್ರೇಣಿಗಳನ್ನು ಮಾತ್ರ ಪೂರ್ವ ಘಟ್ಟಗಳೆಂದು ಕರೆಯಬಹುದು.

ಅವು ಮಾತ್ರ ಪಶ್ಚಿಮ ಘಟ್ಟಗಳೊಂದಿಗೆ ಸಾದೃಶ್ಯಹೊಂದಿವೆ. ಪಶ್ಚಿಮಘಟ್ಟದಲ್ಲಿ ಹುಟ್ಟಿ, ಪೂರ್ವಾಭಿಮುಖವಾಗಿ, ಇಳಿಜಾರಾದ ದಕ್ಷಿಣದ ಪ್ರಸ್ಥಭೂಮಿಯಲ್ಲಿ ಹರಿದು ಬಂಗಾಳಕೊಲ್ಲಿಯನ್ನು ಸೇರುವ ನದಿಗಳೆಲ್ಲ ಈ ಘಟ್ಟಗಳ ನಡುವೆ ಸಾಗುತ್ತವೆ. ದಕ್ಷಿಣದ ಕೆಲವು ಭಾಗಗಳಲ್ಲಿ ಅಧಿಕವಾಗಿ ಕಬ್ಬಿಣದ ಅದುರಿನ ಮತ್ತು ಅಲ್ಪ ಸ್ವಲ್ಪ ತಾಮ್ರ ಮತ್ತು ಸೀಸಗಳ ನಿಕ್ಷೇಪಗಳುಂಟು. ಕೆಲವಡೆ ವಜ್ರವೂ ಸಿಕ್ಕಿವೆ.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮಳೆ ಅಧಿಕ (ಸುಮಾರು 100"- 300"). ಪೂರ್ವ ಘಟ್ಟಗಳಲ್ಲಿ ಮಳೆ ಬಹು ಅಲ್ಪ. ಪಶ್ಚಿಮ ಘಟ್ಟಗಳಲ್ಲಿ ದಟ್ಟವಾದ, ಸದಾ ಹಸಿರಾದ ಅರಣ್ಯಗಳಿವೆ; ಮತ್ತು ಅನೇಕ ಜಲಪಾತಗಳೂ ಆಕರ್ಷಕ ದೃಶ್ಯಗಳೂ ಇವೆ. ಆದರೆ ಪೂರ್ವ ಘಟ್ಟಗಳಲ್ಲಿ ಕೆಲವೆಡೆ ಮಾತ್ರ ದಟ್ಟ ಅರಣ್ಯಗಳುಂಟು. (ಎಚ್.ಜಿ.ಎ.)

**ಘಟ್ಟಿವಾಳಯ್ಯ :** 12ನೆಯ ಶತಮಾನದ ಒಬ್ಬ ವಚನಕಾರ. ಹುಟ್ಟು ಹೆಸರು ಮುದ್ದಣ. ಭಕ್ತನಾಗಿ ಮದ್ದಳೆಯನ್ನು ಬಾರಿಸುತ್ತ ಶಿವಾನುಭವವನ್ನು ಸಾರುವ ನರ್ತನಕಾಯಕವನ್ನು ಕೈಗೊಂಡ. ಮದುವೆಯಾದನಾದರೂ ಹೆಂಡತಿ ಅವನೊಡನೆ ಬಾಳ್ವೆ ಮಾಡಲಿಲ್ಲ. ಗಂಡನ ಅಧ್ಯಾತ್ಮದ ಹುಚ್ಚು ಸತಿಗೆ ಹಿಡಿಸಲಿಲ್ಲ. ಸಂಪತ್ತು ಮತ್ತು ಸುಖಾನುಭವಕ್ಕೆ ಮನಸೋತ ಅವಳು ಅನ್ಯಪುರುಷಸಂಗವನ್ನು ಮಾಡಿದಂತೆ ತೋರುತ್ತದೆ. ಸತಿಯ ಈ ನಡತೆಯಿಂದ ಘಟ್ಟಿವಾಳಯ್ಯನ ಮನಸ್ಸು ಸಂಪೂರ್ಣವಾಗಿ ವೈರಾಗ್ಯದತ್ತ ತಿರುಗಿತು. ಹೊನ್ನು ಭೂಪಾಲರಿಗೆ, ಹೆಣ್ಣೊಲಿದ ಕಾಮುಕಗೆ, ಮಣ್ಣು ಬಲವಂತಂಗಲ್ಲದೆ ಬರಿಯ ಭ್ರಾಂತಿಯಲ್ಲಿ ಕಣ್ಣುಗೆಟ್ಟರೆ ಬರುವುದೇ? ಎನ್ನ ಧನ ಜ್ಞಾನವೆಂಬಾಗಮದ ವಚನ ನಿನ್ನರಿದುಕೋ – ಎಂದು ತನಗೆ ತಾನು ಸಂತೈಸಿಕೊಂಡ.

ತರುವಾಯ ಕಾಲಜ್ಞಾನವನ್ನು ಸಾರುತ್ತ ಕಲ್ಯಾಣದತ್ತ ಪಯಣಮಾಡಿದ. ಅಲ್ಲಿ ಬಸವಣ್ಣನವರ ದಾಸೋಹದ ಆಸೆಗಾಗಿ ನೆರೆದಿದ್ದ ವೇಷಧಾರಿ ಜಂಗಮರನ್ನು ಕಂಡು ಸಹಿಸದೆ ನಿಷ್ಠುರವಾಗಿ ನುಡಿದು ಅವರ ಕೋಪಕ್ಕೆ ಪಾತ್ರನಾದ. ಅವರು ಇವನ ಇಷ್ಟಲಿಂಗವನ್ನು ಕಿತ್ತುಕೊಂಡು ಪ್ರತಿಯಾಗಿ ಒಂದು ಕಲ್ಲುಗುಂಡನ್ನು ಕೊಟ್ಟರು. ಅದನ್ನು ಈತ ತನ್ನ ಕರಸ್ಥಳದಲ್ಲೇ ಅಡಗಿಸಿಕೊಂಡನೆಂದು ಪ್ರತೀತಿ. ಜಂಗಮರ ಕ್ರೌರ್ಯ ಈತನ ಘನಭಕ್ತಿಗೆ ಕರಗಿಹೋಯಿತು. ಸಮಯಾಚಾರಕ್ಕಿಂತಲೂ ಸ್ವಾನುಭವ ದೊಡ್ಡದೆಂದು ಘಟ್ಟಿವಾಳಯ್ಯ ಸಾರಿ ಹೇಳಿದ. ಇವನ ಸದಾಚಾರದ ಪ್ರಭಾವದಿಂದ ಕಪಟಾಚಾರಿಗಳೂ ಪ್ರಾಮಾಣಿಕ ಜಂಗಮರಾದರು. ನರ್ತನ ಕಾಯಕದಲ್ಲಿ ತೊಡಗಿರುವಾಗಲೇ ಒಂದು ದಿನ ಘಟ್ಟಿವಾಳಯ್ಯ ತನ್ನ ಕೊನೆಯುಸಿರನ್ನು ಎಳೆದ.

ಘಟ್ಟಿವಾಳಯ್ಯ ಅಂದಿನ ಶರಣರ ನಡುವೆ ಗಮನಾರ್ಹವಾದ ಸ್ಥಾನವನ್ನು ಗಳಿಸಿಕೊಂಡಿದ್ದ. ಅಲ್ಲಮಪ್ರಭು ಇವನನ್ನು ಕುರಿತು ಅಂಗದ ಮೇಲಣ ಲಿಂಗಕ್ಕಿಂಗ ಅಂಗದೊಳಗಣ ಲಿಂಗವ ಹಿಂಗದಂತಿರಬೇಕು, ಘಟ್ಟಿವಾಳಯ್ಯನಂತೆ – ಎಂದೂ ಚೆನ್ನಬಸವಣ್ಣ ಕೂಡಲ ಚೆನ್ನಸಂಗಾ, ನಿನ್ನ ಶರಣ ಘಟ್ಟಿವಾಳಯ್ಯನಲ್ಲದೆ ನೆರೆ ಅರಿವವರಾರೋ–ಎಂದೂ ಮೋಳಿಗೆಯ ಮಾರಯ್ಯ ಲೆಕ್ಕವಿಲ್ಲದ ಆಸೆ ಮನದೊಳಗೆ ಹೊಕ್ಕು ತಿರುಗಾಡುತಿಹ ಚಿಕ್ಕ ಮಕ್ಕಳಿಗೆಲ್ಲಿಯದೋ ನಿರ್ವಾಣ, ಘಟ್ಟಿವಾಳಂಗಲ್ಲದೆ–ಎಂದೂ ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ. ಅದೃಶ್ಯ ಕವಿ ಇವನನ್ನು ದೃಢಶರಣಸೀಮಂತ ಮಣಿ ಎಂದು ಕೊಂಡಾಡಿದ್ದಾನೆ.

ಘಟ್ಟಿವಾಳಯ್ಯ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗಾ ಎಂಬ ಅಂಕಿತದಿಂದ ನೂರಾರು ವಚನಗಳನ್ನು ರಚಿಸಿದ್ದಾನೆ. ಇವನ ವಚನಗಳಲ್ಲಿ ಸತ್ಯನಿಷ್ಠುರತೆ ಮತ್ತು ಸದಾಚಾರಗಳು ಎದ್ದುಕಾಣುತ್ತವೆ. ಉದಾಹರಣೆಗಾಗಿ ಒಂದೆರಡನ್ನು ನೋಡಬಹುದು:

ಕಾಯ ಜೀವವನರಿದೆನೆಂಬುವರೆಲ್ಲರೂ ಹೋದರಲ್ಲಾ ಹೊಲಬುದಪ್ಪಿ
ಹೊನ್ನು ಹೆಣ್ಣು ಮಣ್ಣಿಗೆ ಹೋರಿಯಾಡುವರೆಲ್ಲರು
ಬಸವಣ್ಣನ ಬಾಗಿಲಲ್ಲಿ ಬಂಧಿತರಾಗಿ ನೊಂದವರಿಗೇಕೆ
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗಾ? ಇಲ್ಲ ಇಲ್ಲಾ ಎಂದೆ
ಇರಿವುದು, ಕಡಿವುದು, ಕೊಲುವುದು
ಮಲದೇಹಿಗಳಿಗಲ್ಲದೆ ನಿರ್ಮಲ ದೇಹಿಗಳಿಗುಂಟೆ?
ಹಾದಿಯ ಬೆಳ್ಳನ ಕಳ್ಳರು ತಾಗಿದರೆ
ಇನ್ನಾರಿಗೆ ಮೊರೆಯಿಡುವ?
ಈ ಉರುಳುಗಳ್ಳರ ಭಕ್ತರು ಜಂಗಮವೆಂದರೆ ಒಪ್ಪೆನಯ್ಯಾ
ರೋಗಿಗೆ ಹಾಲು ಸಿಹಿಯಪ್ಪುದೆ?
ಗೂಗೆಗೆ ರವಿ ಲೇಸಪ್ಪುದೆ?
ಚೋರಂಗೆ ಬೆಳಗು ಗುಣವಪ್ಪುದೆ?
ಭವಸಾಗರದ ಸಮಯದಲ್ಲಿದ್ದವರಿಗೆ?
ನಿರ್ಭಾವನ ಭಾವವನೆತ್ತ ಬಲ್ಲರು? (ಬಿ.ವಿ.ವಿ.ಬಿ.)

**ಘನ** [1]**:** ಒಂದು ಸಮಾಂತರ ಷಟ್ಫಲಕದ (ಪ್ಯಾರಲಲೇಪೈಪೆಡ್) ಆರು ಮುಖಗಳೂ (ಫೇಸಸ್) ಚೌಕಗಳಾದಾಗ ದೊರೆಯುವ ವಿಶೇಷ ಘನಾಕೃತಿ (ಕ್ಯೂಬ್). ಘನದ ಒಂದು ಅಂಚಿನ (ಎಜ್) ಉದ್ದ $a$ ಏಕಮಾನಗಳಾಗಿದ್ದರೆ ಆಗ ಅದರ ಘನಗಾತ್ರ (ವಾಲ್ಯೂಮ್) $a^3$ ಘನ ಏಕಮಾನಗಳು. ಈ ಕಾರಣದಿಂದಲೇ ಯಾವುದೇ ಏಕಮಾನದ ಮೂರನೆಯ ಘಾತಕ್ಕೆ ಘನ ಎನ್ನುವ ಹೆಸರು ಬಂದಿದೆ. ಒಂದು ಘನದ ಜ್ಯಾಮಿತೀಯ ವಿವರಗಳಿಷ್ಟು:

ಮುಖಗಳ (ಫೇಸಸ್, ಸಂಕೇತ, $f$) ಸಂಖ್ಯೆ . . . 6
ಅಂಚುಗಳ (ಎಜಸ್, ಸಂಕೇತ, $e$) ಸಂಖ್ಯೆ . . . 12
ಶೃಂಗಗಳ (ವರ್ಟಿಸಸ್, ಸಂಕೇತ $v$) ಸಂಖ್ಯೆ . . . 8

ಯಾವುದೇ ಶೃಂಗದಲ್ಲಿ ಸಂಪಾತಿಸುವ ಮೂರು ಅಂಚುಗಳೂ ಪರಸ್ಪರ ಲಂಬೀಯವಾಗಿವೆ.

ಯಾವುದೇ ಅಂಚಿನಲ್ಲಿ ಛೇದಿಸುವ ಎರಡು ಫಲಗಳೂ ಪರಸ್ಪರ ಲಂಬೀಯವಾಗಿವೆ.

ಎಲ್ಲ ಫಲಕಗಳೂ ಪರಸ್ಪರ ಸರ್ವಸಮಚೌಕಗಳು.

$f, e, v$ ಗಳ ನಡುವೆ $v+f=e+2$ ಎನ್ನುವ ಸಂಬಂಧ ಉಂಟು (ಇದಕ್ಕೆ ಆಯ್ಲರನ ಸೂತ್ರ ಎಂದು ಹೆಸರು).

ಪ್ರಾಚೀನ ಗ್ರೀಕರಿಗೆ ತಿಳಿದಿದ್ದ ಐದು ಕ್ರಮ ಘನಾಕೃತಿಗಳ (ರೆಗ್ಯುಲರ್ ಸಾಲಿಡ್ಸ್) ಪೈಕಿ ಘನವೂ ಒಂದು. **(ನೋಡಿ– ಗಣಿತಶಾಸ್ತ್ರ)**




ಘನದ ಅಭಿಮುಖ ಶೃಂಗಗಳನ್ನು ಜೋಡಿಸುವ ರೇಖೆಗಳಿಗೆ ಕರ್ಣಗಳೆಂದು ಹೆಸರು ಚಿತ್ರದಲ್ಲಿ $AC'$, $BD'$, $CA'$, $DB'$ ಘನದ ನಾಲ್ಕು ಕರ್ಣಗಳು. ಇಂಥ ಒಂದೊಂದು ಕರ್ಣಕ್ಕೂ ಅಸಮತಲೀಯವಾಗಿ (ಸ್ಕ್ಯೂ) ಘನದ ಆರು ಅಂಚುಗಳಿವೆ. (ಉದಾಹರಣೆಗೆ $AC'$ ಎಂಬ ಕರ್ಣದೊಡನೆ ಅಸಮತಲೀಯವಾದ ಆರು ಅಂಚುಗಳೆಂದರೆ $A'B'$, $B'B'$, $BC$, $CD$, $DD'$, $D'A'$

ಇವುಗಳ ನಡುಬಿಂದುಗಳು ಒಂದು ಸಮ ಷಡ್ಭುಜದ ಶೃಂಗಗಳು. (ಉದಾಹರಣೆಗೆ ಮೇಲಿನ ಆರು ಅಂಚುಗಳು ನಡುಬಿಂದುಗಳು ಅನುಕ್ರಮವಾಗಿ $P'$, $F$, $Q$, $R$, $H$, $S'$. ಇವು ಒಂದು ಸಮ ಷಡ್ಭುಜದ ಆರು ಶೃಂಗಗಳು).

ಪ್ರಾಚೀನ ಗ್ರೀಕರ ಒಂದು ಅಸಾಧಿತ ಸಮಸ್ಯೆ ಎಂದರೆ ಗುರುತುಗಳಿಲ್ಲದ ಗೆರೆಪಟ್ಟಿ ಹಾಗೂ ಕೈವಾರಗಳ ನೆರವಿನಿಂದ ದತ್ತ ಘನವೊಂದರ ಘನಗಾತ್ರದ ಎರಡರಷ್ಟು ಘನಗಾತ್ರವಿರುವ ಒಂದು ಘನದ ರಚನೆ ಹೇಗೆ ಎನ್ನುವುದು. ಈ ರಚನೆ ಅಪರಿಹಾರ್ಯ (ಅನ್‌ಸಾಲ್ವಬಲ್) ಎಂದು ಈಗ ತೋರಿಸಲಾಗಿದೆ. ಇಂಥ ಒಂದು ಘನದ ಅಂಚನ್ನು ಶಂಕುಜಗಳ ನೆರವಿನಿಂದ ಪಡೆಯಬಹುದು ಅಷ್ಟೆ. (ಬಿ.ಬಿ.ಬಿ.)

**ಘನ** [2] **:** ಯಾವುದೇ ರಾಶಿಯನ್ನು ಅದರಿಂದಲೇ ಮೂರು ಸಲ ಸಂತತವಾಗಿ ಗುಣಿಸಿದಾಗ ದೊರೆಯುವ ಫಲ. $a$ ಎಂಬ ರಾಶಿಯ ಘನ $a \times a \times a = a^3$. ಈ ಫಲ (ಎಂದರೆ $a^3$) ದತ್ತವಾಗಿರುವಾಗ ರಾಶಿಗೆ (ಎಂದರೆ $a$ ಗೆ) ಘನಮೂಲ ಎಂದು ಹೆಸರು. ದತ್ತ ಫಲ $b$ ಆಗಿದ್ದರೆ ಅದರ ಘನಮೂಲವನ್ನು $\sqrt[3]{b}$ ಇಲ್ಲವೆ ತತ್ಸಮಾನವಾಗಿ $b^{\frac{1}{3}}$ ಎಂಬುದಾಗಿ ಬರೆಯುತ್ತೇವೆ. 1, 8, 27, 64, 125 ಇವೇ ಮುಂತಾದವುಗಳಿಗೆ ಘನಸಂಖ್ಯೆಗಳೆಂದು ಹೆಸರು. ಇವು ಅನುಕ್ರಮವಾಗಿ $1^3$, $2^3$, $3^3$, $4^3$, $5^3$, ಎಂಬುದಾಗಿ ನೋಡಬಹುದು. ಆದ್ದರಿಂದ $n$ ನೆಯ ಘನ ಸಂಖ್ಯೆ $n^3$. ಈ ಘನಸಂಖ್ಯೆಗಳು ವಿಶಿಷ್ಟವಾದ ಒಂದು ಪ್ರರೂಪಕ್ಕೆ ಒಳಪಡುತ್ತವೆ.

$$1 = 1^3$$
$$3 + 5 = 2^3$$
$$7 + 9 + 11 = 3^3$$
$$13 + 15 + 17 + 19 = 4^3$$
$$21 + 23 + 25 + 27 + 29 = 5^3$$

ಇತ್ಯಾದಿ . .( 1)

ಮೇಲಿನ ಭಿನ್ನ ಹಂತಗಳಲ್ಲಿ ಬೆಸ ಸಂಖ್ಯೆಗಳನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ಅಳವಡಿಸಲಾಗಿದೆ. ಬೆಸ ಸಂಖ್ಯೆಗಳ ಉತ್ತರೋತ್ತರ ಮೊತ್ತಗಳು ಪ್ರತಿಯೊಂದೂ ಒಂದು ವರ್ಗ ಸಂಖ್ಯೆ

$$1 = 1^2$$
$$1 + 3 = 2^2$$
$$1 + 3 + 5 = 3^2$$
$$1 + 3 + 5 + 7 = 4^2$$
$$1 + 3 + 5 + 7 + 9 = 5^2$$

ಇತ್ಯಾದಿ . . . (2)

ಈಗ (1) ಮತ್ತು (2)ರಿಂದ

$1 = 1^3$

$1 + (3 + 5) = 1^3 + 2^3 = 3^2 = (1 + 2)^2$

$1 + (3 + 5) = (7 + 9 + 11) = 1^3 + 2^3 + 3^3 = 6^2 = (1 + 2 + 3)^2$

$1 + (3 + 5) = (7 + 9 + 11) = (13 + 15 + 17 + 19) = 1^3 + 2^3 + 3^3 + 4^3 + = 10^2 = (1 + 2 + 3 + 4)^2$

ಇತ್ಯಾದಿ . . . (3)

ಆದ್ದರಿಂದ ಮೊದ *n* ಘನ ಸಂಖ್ಯೆಗಳ ಮೊತ್ತ ಮೊದಲ *n* ನೈಸರ್ಗಿಕ ಸಂಖ್ಯೆಗಳ ಮೊತ್ತದ ವರ್ಗಕ್ಕೆ ಸಮ:

$$\sum_{n=1}^{n} n^3 = \left[\sum_{n=1}^{n} n\right]^2$$

ಇದಕ್ಕೆ ನಿಖರವಾದ ಗಣಿತೀಯ ಸಾಧನೆಯನ್ನು ಕೊಡಬಹುದು. ಸಂಖ್ಯೆಗಳ ಈ ವಿಶಿಷ್ಟ ಗುಣ ಪ್ರಾಚೀನ ಬ್ಯಾಬಿಲೋನಿಯನ್ನರಿಗೆ (ಕ್ರಿ.ಪೂ.ಸು. ೧೯೦೦–೧೬೦೦) ತಿಳಿದಿತ್ತೆನ್ನುವುದಕ್ಕೆ ಆಧಾರಗಳುಂಟು.

ಘನ ಸಮೀಕರಣಗಳ ವಿಚಾರ ತಿಳಿಯಲು ನೋಡಿ – ಸಮೀಕರಣ. *

**ಘನ ಆನಂದ :** ಸು. 1673 – 1756. ವ್ರಜಭಾಷೆಯ ಖ್ಯಾತಕವಿಗಳಲ್ಲಿ ಒಬ್ಬ. ಈತನನ್ನು ಆನಂಧ ಘನ ಎಂದೂ ಕರೆಯಲಾಗಿದೆ. ಈತ ಇದ್ದ ಕಾಲ ಯಾವುದೆಂದು ಸರಿಸುಮಾರಾಗಿ ಊಹಿಸಿದ್ದಾರಾದರೂ ಈತ ಯಾವಾಗ, ಎಲ್ಲಿ ಹುಟ್ಟಿದ, ಎಲ್ಲಿ ಬೆಳೆದ ಎಂಬ ವಿಷಯಗಳು ಖಚಿತವಾಗಿಲ್ಲ. ಸಾಂಪ್ರದಾಯಿಕ ಶೃಂಗಾರ ರಚನೆಗಳಿಗಿಂತ ಭಿನ್ನವಾದ ವಿಶಿಷ್ಟ ಕೃತಿಗಳನ್ನು ರಚಿಸಿ, ಹಿಂದೀ ಕಾವ್ಯಸಾಹಿತ್ಯಕ್ಕೆ ಹೊಸಮುಖವೊಂದನ್ನು ಜೋಡಿಸಿದ ಕವಿಪ್ರಮುಖರಲ್ಲಿ ಘನ ಆನಂದನಿಗೆ ಅಗ್ರಪಂಕ್ತಿ ಸಲ್ಲುತ್ತದೆ.

ಈತನಲ್ಲಿ ಅಸಾಧಾರಣ ಸಾಹಿತ್ಯ ಮತ್ತು ಸಂಗೀತ ಪ್ರತಿಭೆಗಳು ಸಂಗಮಗೊಂಡಿದ್ದವು. ದೆಹಲಿಯ ಬಾದಷಾಹನಾಗಿದ್ದ ಮೊಹಮದ್ ಷಾಹ ರಂಗೀಲೆಯ ಆಸ್ಥಾನದಲ್ಲಿ ಈತನಿಗೆ ತುಂಬ ಗೌರವದ ಸ್ಥಾನ ದೊರೆತಿತ್ತು. ಸಂಗೀತಸಂಬಂಧವಾದ ಈತನ ಪ್ರಸಿದ್ಧಿಯನ್ನು ಅರಿತ ಬಾದಷಾಹ ತನ್ನೆದುರು ಹಾಡುವಂತೆ ಸೂಚಿಸಿದಾಗ ನೆಪಗಳನ್ನೊಡ್ಡಿ ಈತ ತಪ್ಪಿಸಿಕೊಳ್ಳುತ್ತಿದ್ದ. ಈತ ಸುಜಾನ್ ಎಂಬ ನರ್ತಕಿಯಲ್ಲಿ ಆಸಕ್ತನಾಗಿದ್ದಾನೆಂದೂ ಆಕೆಯನ್ನು ಸಭೆಗೆ ಕರೆಸಿದರೆ ಈತ ತಪ್ಪದೆ ಹಾಡುತ್ತಾನೆಂದೂ ಇತರ ಆಸ್ಥಾನಿಕರು ತಿಳಿಸಿದರು. ಬಾದಷಾಹ ಹಾಗೆ ಮಾಡಿದಾಗ ಘನ ಆನಂದ ಅವಳತ್ತ ಮುಖಮಾಡಿ ಕುಳಿತುಕೊಂಡು ಆಸ್ಥಾನದಲ್ಲಿ ನೆರೆದಿದ್ದವರೆಲ್ಲರೂ ಮುಗ್ಧರಾಗುವ ದಿವ್ಯಗಾನ ಪ್ರವಾಹವನ್ನೇ ಹರಿಯಿಸಿದನೆಂದು ಹೇಳಲಾಗಿದೆ. ಸಂಗೀತದಿಂದ ಸಂತುಷ್ಟನಾದರೂ ತನ್ನ ಆಜ್ಞೆಯನ್ನು ಧಿಕ್ಕರಿಸಿ ಸುಜಾನಳಿಗಾಗಿಯೇ ಹಾಡಿದನೆಂಬ ರೋಷದಿಂದ ಬಾದಷಾಹ ಈತನನ್ನು ದೆಹಲಿಯಿಂದ ಹೊರಹಾಕಿಸಿದ. ತನ್ನ ನೆರಳಾಗಿ ಬರುವಳೆಂದು ಭಾವಿಸಿದ್ದ ಸುಜಾನಳೂ ಈತನನ್ನು ಕೈಬಿಟ್ಟಳು. ಈ ಘಟನೆ ಈತನ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತು. ಪ್ರೇಮವ್ಯಥಿತ ಮನದಿಂದ ವೃಂದಾವನಕ್ಕೆ ತೆರಳಿ, ನಿಂಬಾರ್ಕಸಂಪ್ರದಾಯದ ಶ್ರೀವೃಂದಾವನದೇವನಿಂದ ದೀಕ್ಷೆ ಪಡೆದು ಭಗವದ್ಧ್ಯಾನಸಂಕೀರ್ತನೆಗಳಲ್ಲಿ ಮುಳುಗಿದ. ಪ್ರೇಮಸಾಧನೆಯ ಪಥದಲ್ಲಿ ಈತನ ಅನನ್ಯಸಾಧನೆ ನಾಗರೀದಾಸನಂಥ ಶ್ರೇಷ್ಠ ಮಹಾತ್ಮರಿಂದಲೂ ಈತನಿಗೆ ಗೌರವವನ್ನು ತಂದುಕೊಟ್ಟಿತು. ಬಹುಗುನೀ ಎಂಬ ಈತನ ಹೆಸರು ಸಖೀಭಾವಸೂಚಕವಾಗಿಯೇ ಇದೆ ಎಂಬುದನ್ನೂ ಗಮನಿಸಬಹುದು.

ನಾದಿರ್‌ಷಾಹನ ಪೈಶಾಚಿಕ ಸೈನ್ಯದ ಪಾಶವೀಕೃತ್ಯಗಳಿಗೆ ವೃಂದಾವನವೂ ತುತ್ತಾಯಿತಷ್ಟೆ ಆ ಅವಧಿಯಲ್ಲಿ ಸೈನಿಕರು ಈತನ ಬಳಿ ಬಂದು ಜರವನ್ನು (ಹಣ) ಕೊಡುವಂತೆ ಒತ್ತಾಯಪಡಿಸಿದರೆಂದೂ ಆಗ ಈತ ಜರವನ್ನು ಕೊಳ್ಳಿರೆಂದು ಹೇಳಿ ಮೂರು ಹಿಡಿ ಮಣ್ಣನ್ನು ಸುರಿದನೆಂದೂ ಇದರಿಂದ ಕುಪಿತರಾದ ಸೈನಿಕರು ಈತನ ಕೈಗಳನ್ನು ಕತ್ತರಿಸಿಹಾಕಿದರೆಂದೂ ಹೇಳಲಾಗಿದೆ. ಕೊನೆಯುಸಿರನ್ನೆಳೆಯುವ ಮೊದಲು ತನ್ನ ರಕ್ತದಿಂದಲೇ ಬಹುತ್ ದಿನಾನ್ ಕೀ ಅವಧಿ . . . . . . ಸಂದೇಸೋ ಲೈ ಸುಜಾನ್ ಕೋ – ಎಂಬ ಪದ್ಯವನ್ನು ಬರೆದನೆಂದೂ ಹೇಳಲಾಗಿದೆ.

ಈತ ರಚಿಸಿದ ಕೃತಿಗಳ ಸಂಖ್ಯೆ ನಲವತ್ತೊಂದು ಎಂದು ಹೇಳಲಾಗಿದೆ. ವ್ರಜವರ್ಣನ ಎಂಬ ಕೃತಿ ಇಂದಿಗೂ ಲಭ್ಯವಾಗಿಲ್ಲ; ವ್ರಜಸ್ವರೂಪ ಎಂಬುದೇ ವ್ರಜವರ್ಣನವೂ ಆಗಿದ್ದಲ್ಲಿ ಈತನ ಎಲ್ಲ ಕೃತಿಗಳೂ ದೊರೆತಿವೆ ಎಂದುಕೊಳ್ಳಬಹುದು. ಇವನ ಉಪಲಬ್ಧ ಕೃತಿಗಳಿವು ಸುಜಾನ ಹಿತ, ಕೃಪಾಕಂದನಿಬಂಧ, ವಿಯೋಗ ಬೇಲಿ, ಇಷ್ಕೆ ಲತಾ, ಯಮುನಾಚರಣ (ಇದನ್ನು ಯಮುನಾಯಶ ಎಂದೂ ಕರೆಯಲಾಗಿದೆ), ಪ್ರೀತಿಪಾವಸ, ಪ್ರೇಮಪತ್ರಿಕಾ, ಪ್ರೇಮಸರೋವರ, ವ್ರಜವಿಲಾಸ ಸರಲವಸಂತ (ಅಥವಾ ರಸವಸಂತ), ಅನುಭವಚಂದ್ರಿಕಾ, ರಂಗಬಧಾಈ, ಪ್ರೇಮಪದ್ಧತಿ, ವೃಷಭಾನುಪುರ ಸುಷಮಾ, ಗೋಕುಲಗೀತ, ನಾಮಮಾಧುರೀ, ಗಿರಿಪೂಜನ, ವಿಚಾರಸಾರ, ದಾನಘಟಾ, ಭಾವನಾಪ್ರಕಾಶ, ಕೃಷ್ಣಕೌಮುದೀ, ಧಾಮಚಮತ್ಕಾರ, ಪ್ರಯಾಪ್ರಸಾದ, ವೃಂದಾವನಮುದ್ರಾ, ವ್ರಜಸ್ವರೂಪ, ಗೋಕುಲ ಚರಿತ್ರ, ಪ್ರೇಮಪಹೇಲೀ, ರಸನಾಯಶ, ಗೋಕುಲವಿನೋದ, ವ್ರಜಪ್ರಸಾದ, ಮುರಲಿಕಾಮೋದ, ಮನೋರಥಮಂಜರೀ, ವ್ರಜವ್ಯವಹಾರ, ಗಿರಿಗಾಥಾ, ವ್ರಜವರ್ಣನ, ಛಂದಾಷ್ಟಕ, ತ್ರಿಭಂಗೀಛಂದ, ಕವಿತ್ತಸಂಗ್ರಹ, ಸ್ಫುಟಪದಾವಲೀ ಮತ್ತು ಪರಮಹಂಸವಂಶಾವಲೀ.

ಸುಜಾನಹಿತ ಮೊದಲಾದ ಕೃತಿಗಳಿಗೆ ಪ್ರೇಮವಿರಹಗಳೇ ವಸ್ತುವೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಛಂದಾಷ್ಟಕ, ತ್ರಿಭಂಗೀಛಂದ, ಕವಿತ್ತಸಂಗ್ರಹ ಮತ್ತು ಸ್ಫುಟ – ಇವು ಮುಕ್ತಕ ರಚನೆಗಳನ್ನೊಳಗೊಂಡಿರುವ ಕಿರಿಯ ಕೃತಿಗಳು. ವಂಶಾವಲಿಯಲ್ಲಿ ಈತನ ಗುರುಪರಂಪರೆಯ ಉಲ್ಲೇಖವಿದೆ. ಪಾರಸೀ ಮಸನವೀಗಳನ್ನೂ ಈತ ರಚಿಸಿದ್ದಾನೆಂದು ಹೇಳಲಾಗಿದೆಯಾದರೂ ಅವು ಯಾವುವೂ ಉಪಲಬ್ಧವಾಗಿಲ್ಲ. ಈತನ ರಚನೆಗಳಲ್ಲಿ ಸಂಯೋಗ ಹಾಗೂ ವಿಯೋಗ ಶೃಂಗಾರಗಳೆರಡರ ಚಿತ್ರಣವೂ ಕಾಣ ದೊರೆಯುತ್ತದೆ ಯಾದರೂ ಈತ ವಿಯೋಗಶೃಂಗಾರದ ಅನನ್ಯಕವಿಯೆಂದೇ ಪ್ರಸಿದ್ಧನಾಗಿದ್ದಾನೆ. ಈತನ ವರ್ಣನೆಗಳಲ್ಲಿ ಬಾಹ್ಯ ಅಲಂಕರಣ, ಪ್ರೌಢಿಮೆಗಳು ಕಂಡುಬರದಿದ್ದರೂ ಮನಸ್ಸನ್ನು ತಟ್ಟುವಂಥ ಶಕ್ತಿ ಮಾತ್ರ ಇದೆ. ಮನೋಭಾವಗಳನ್ನು ಮೂರ್ತೀಕರಿಸುವ, ಹೃದಯವ್ಯಾಪಾರದ ಅನಂತಮುಖಗಳನ್ನು ತೆರೆದು ತೋರುವ ಇಲ್ಲಿನ ಅನುಪಮ ಕೌಶಲ ಸಾಮರ್ಥ್ಯಗಳು ಓದುಗರನ್ನು ಸೆರೆಹಿಡಿದು ನಿಲ್ಲಿಸುತ್ತವೆ.

ವಿಮರ್ಶಕರೂ ಈತನನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಪ್ರೇಮದ ಗೂಢ ಮನೋಭಾವಗಳನ್ನು ಈತ ತೆರೆದು ತೋರಿರುವಂತೆ ಹಿಂದಿಯ ಬೇರಾವ ಶೃಂಗಾರ ಕವಿಯೂ ತೋರಿಲ್ಲ ಎಂದೂ, ಈತನಂತೆ ಭಾಷೆಯನ್ನು ಬಳಸಿರುವ ರೀತಿ ಆ ಕಾಲದ ಕವಿಗಳು ಬಹುಮಂದಿ ಇಲ್ಲ ಎಂದೂ, ಪ್ರೇಮಗೀತಗಳ ರಚನೆಯಲ್ಲಿ ಈತ ಸರ್ವಶ್ರೇಷ್ಠನೆಂದೂ ಪ್ರಸಿದ್ಧ ವಿಮರ್ಶಕರು ಬಗೆಬಗೆಯಾಗಿ ಹಾಡಿ ಹೊಗಳಿದ್ದಾರೆ.

ಈತನ ಬಗೆಗೆ ರಚಿಸಲಾಗಿರುವ, ಪ್ರಶಸ್ತಿಪದ್ಯವೊಂದು ಈತನ ವ್ಯಕ್ತಿತ್ವ ಮತ್ತು ಸಾಹಿತ್ಯಸಾಧನೆಗಳನ್ನು ಸಮರ್ಪಕವಾಗಿ ಹೀಗೆ ಪರಿಚಯಿಸಿಕೊಡುತ್ತದೆ:

ನೇಹಿ ಮಹಾ ಬ್ರಜಭಾಷಾಪ್ರವೀನ ಔ ಸುಂದರತಾಹು ಕೇ ಭೇದ ಕೋ<br>
 ಜಾನ್ಯೆ ।<br>
ಯೋಗವಿಯೋಗ ಕೀ ರೀತಿ ಮೇಂ ಕೋವಿದ್ ಭಾವನಾ ಭೇದ ಸ್ವರೂಪ<br>
 ಕೋ ಠಾನ್ಯೆ ।<br>
ಚಾಹ ಕೇ ರಂಗ ಮೇಂ ಭೀಜ್ಯೋ ಹಿಯೋ ಬಿಛುರೇ ಮಿಲೇ ಪ್ರೀತಿಮ<br>
 ಸಾಂಚಿ ನ ಮಾನ್ಯೆ ।<br>
ಭಾಷಾ–ಪ್ರವೀನ ಸುಛಂದ ಸದಾ ರಹೈ ಸೋ ಘನ ಜೂ ಕೇ ಕಬಿತ್ತ ಬಖಾನ್ಯೆ ॥

(ಪಿ.ಜಿ.ಡಿ.)

**ಘನಕೋನ:** ಯಾವುದಾದರೂ *O* ಬಿಂದುವಿನಿಂದ ಒಂದು ಸೀಮಿತ ಮೇಲ್ಮೈ (ಬೌಂಡ್ ಸರ್ಫೇಸ್) *S* ಅನ್ನು ಅವಲೋಕಿಸಿದಾಗ ಏರ್ಪಡುವ ದೃಷ್ಟಿರೇಖೆಗಳ ಸಮಷ್ಟಿ ವಿನ್ಯಾಸ (ಸಾಲಿಡ್ ಆ್ಯಂಗಲ್). ದೃಷ್ಟಿರೇಖೆಗಳನ್ನು *S* ನಿಂದ ಆಚೆಗೂ ಅನಿರ್ದಿಷ್ಟವಾಗಿ ವಿಸ್ತರಿಸಲು ಅಡ್ಡಿಯಿಲ್ಲ. ಸೌಕರ್ಯಕ್ಕಾಗಿ *O* ವನ್ನು ಶೃಂಗ ಎಂದೂ *S* ಅನ್ನು ಪಾದ ಎಂದೂ ನಿರ್ದೇಶಿಸುತ್ತೇವೆ. (ಚಿತ್ರ1) ಇಂಥ ವಿನ್ಯಾಸದ ವ್ಯಾಪ್ತಿಯನ್ನು ಅಳೆಯುವ ಸಲುವಾಗಿ *O* ಕೇಂದ್ರದ ಸುತ್ತ ಏಕಮಾನ ತ್ರಿಜ್ಯದ (ಯೂನಿಟ್ ರೇಡಿಯಸ್) ಗೋಳವನ್ನು ಕಾಲ್ಪನಿಕವಾಗಿ ರಚಿಸುತ್ತೇವೆ. *O* ನಿಂದ Sನ ವಿವಿಧ ಬಿಂದುಗಳತ್ತ ಪ್ರಸರಿಸುವ ದೃಷ್ಟಿರೇಖೆಗಳು ಈ ಗೋಳದ ಮೇಲ್ಮೈಯನ್ನು ಛೇದಿಸಿ ಅದರಲ್ಲಿ Sನ ವಿಕ್ಷೇಪ T ಯನ್ನು ಗುರುತಿಸುತ್ತವೆ (ಚಿತ್ರ 2.) *T* ಯ ಮೇಲ್ಮೈಸಲೆಯೇ (ಸರ್ಫೇಸ್ ಏರಿಯ) ಪರಿಶೀಲಿತ ಘನಕೋನದ ಪರಿಮಾಣ. ಘನಕೋನಗಳ ಅಳತೆಯ ಮೂಲಮಾನಕ್ಕೆ ಸ್ಟಿರೇಡಿಯನ್ ಎಂದು ಹೆಸರು. (stere + radian= steradians stere-|stereo- ಎಂದರೆ ಘನ ಎಂದೂ *radian* ಎಂದರೆ ಕೋನವನ್ನು ಅಳತೆ ಮಾಡಲು ಬಳಸುವ ಒಂದು ಏಕಮಾನ ಎಂದೂ ಅರ್ಥ). *T*ಯ ಸಲೆ ಏಕಮಾನದಷ್ಟಿದ್ದರೆ *S* ಮೇಲ್ಮೈ *O* ನಲ್ಲಿ ಏರ್ಪಡಿಸುವ ಘನಕೋನ ಒಂದು ಸ್ಟಿರೇಡಿಯನ್ ಆಗಿರುತ್ತದೆ. ಏಕಮಾನ ತ್ರಿಜ್ಯದ

ಒಂದು ಗೋಳದ ಮೇಲ್ಮೈ ಸಲೆ 4π x ತ್ರಿಜ್ಯದ ವರ್ಗ = 4π ಆದಕಾರಣ *O*ನ ಸುತ್ತ ವ್ಯಾಪಿಸಿರುವ ಒಟ್ಟು ಘನ ಕೋನ 4π ಸ್ಟಿರೇಡಿಯನ್ ಆಗುವುದು. *O* ಬಿಂದುವಿನಲ್ಲಿ ಈ ಸಮಗ್ರ ಘನಕೋನವನ್ನು ಏರ್ಪಡಿಸುವ ಮೇಲ್ಮೈ *O*ವನ್ನು ಎಲ್ಲ ದಿಶೆಗಳಲ್ಲೂ ಆವರಿಸಿಕೊಂಡು




**ಚಿತ್ರ 1. ದೃಷ್ಟಿರೇಖೆಗಳ ವಿನ್ಯಾಸ Ω ಘನಕೋನ**

ಸಂವೃತವಾಗಿರಬೇಕಾಗುತ್ತದೆ (ಕ್ಲೋಸ್ಡ್ ಸರ್ಫೇಸ್, ಉದಾಹರಣೆಗೆ *O*–ಕೇಂದ್ರೀಯ ಗೋಳ). [ತಲ ಜ್ಯಾಮಿತಿಯ (ಪ್ಲೇನ್ ಜಿಆಮಿಟ್ರಿ) ಅನುರೂಪ ಪ್ರಕರಣದಲ್ಲಾದರೋ ಬಿಂದೊವೊಂದನ್ನು ಸುತ್ತುಗಟ್ಟುವ ಯಾವುದೇ ಸಂವೃತರೇಖೆ (ಉದಾಹರಣೆಗೆ ವೃತ್ತ)




**ಚಿತ್ರ 2. ಗೋಲ ಮೇಲ್ಮೈ ಮೇಲೆ *S*ನ್ನು ವಿಕ್ಷೇಪಿಸಿದಾಗ *T* ಲಭಿಸುತ್ತದೆ**

ಆ ಬಿಂದುವಿನಲ್ಲಿ ಏರ್ಪಡಿಸುವ ಸಮಗ್ರ ತಲಕೋನ (ಪ್ಲೇನ್ ಆಂಗಲ್) $2^{4/12}$ ರೇಡಿಯನ್ ಆಗಿರುವುದನ್ನು ಹೋಲಿಕೆಗಾಗಿ ಇಲ್ಲಿ ಸ್ಮರಿಸಬಹುದು]. ಕಲನಶಾಸ್ತ್ರದ ತತ್ತ್ವಗಳ ಪ್ರಯೋಗದಿಂದ ಏಕಮಾನ ತ್ರಿಜ್ಯದ ಗೋಳಗಳ ನೆರವಿಲ್ಲದೆಯೂ ಘನಕೋನಗಳನ್ನು ಅಳತೆ ಮಾಡಲು ಸಾಧ್ಯವಾಗುವುದು. *dS* ಸಲೆ (ಚಿತ್ರ1) *S* ಮೇಲ್ಮೈಯ ಒಂದು ವಿಕಲ ಘಟಕವಾಗಿರಲಿ (ಸರ್ಫೇಸ್ ಎಲಿಮೆಂಟ್). *dS*ನ್ನು *O*ಗೆ ಸೇರಿಸುವ ಸರಳರೇಖೆಯ ಉದ್ದ *r* ಹಾಗೂ ಆ ಸರಳರೇಖೆಗೂ *dS* ಗೆ ಎಳೆದ ಲಂಬಕ್ಕೂ ನಡುವೆ ಇರುವ ತಲಕೋನ $\phi$ ಆದಲ್ಲಿ *S*ನಿಂದ *O*ನಲ್ಲಿ ಏರ್ಪಟ್ಟ ಘನಕೋನದ ಸ್ಟಿರೇಡಿಯನ್ ಅಳತೆ ನಿಜಕ್ಕೂ $\int_S ds \cos\phi / r^2$ ಎಂಬ ಮೇಲ್ಮೈ ಅನುಕಲನಾಂಕವೇ (ಸರ್ಫೇಸ್ ಇಂಟೆಗ್ರಲ್) ಆಗುತ್ತದೆ. ಇದರಲ್ಲಿ *r* ಹಾಗೂ *dS* ಗಳ ಭೌತ ಆಯಾಮಗಳು (ಫಿಸಿಕಲ್ ಡೈಮೆನ್ಷನ್ಸ್) ಅನುಕ್ರಮವಾಗಿ [*L* = ಉದ್ದ] ಹಾಗೂ [$L^2$ = (ಉದ್ದ x ಉದ್ದ)] ಆದಕಾರಣ *dS* ಮತ್ತು $r^2$ ಗಳ ಆಯಾಮಗಳು ಪರಸ್ಪರ ರದ್ದುಗೊಳ್ಳುವುವು; ಎಂತಲೇ ಭೌತವಿಜ್ಞಾನದಲ್ಲಿ ತಲಕೋನಗಳಂತೆಯೇ ಘನಕೋನಗಳನ್ನು ಆಯಾಮರಹಿತವೆಂದು ಪರಿಗಣಿಸುವುದು ರೂಢಿ. ಘನಕೋನಗಳಿಗೆ ಎರಡು ಸರಳ ನಿದರ್ಶನಗಳೆಂದರೆ ಲಂಬವೃತ್ತೀಯ ಶಂಕು (ರೈಟ್ ಸರ್ಕ್ಯುಲರ್ ಕೋನ್) ಹಾಗೂ ಬಹುಫಲಕ ಕೋನಗಳು (ಪಾಲಿಹೆಡ್ರಲ್ ಆ್ಯಂಗಲ್ಸ್). ಲಂಬವೃತ್ತೀಯ ಶಂಕುವಿನ ಪ್ರಸಂಗದಲ್ಲಿ (ಚಿತ್ರ3) ಘನಕೋನದ ಪಾದ ಒಂದು ವೃತ್ತೀಯ ಫಲಕ (ಸರ್ಕ್ಯುಲರ್ ಡಿಸ್ಕ್ *S*). ಆ ಫಲಕದ ಕೇಂದ್ರ *M* ನಿಂದ ಫಲಕ ತಲಕ್ಕೆ ಎಳೆದ ಲಂಬದ ಮೇಲೆಯೇ ಘನಕೋನದ ಶೃಂಗವೂ (*O*) ಇರುವುದು ಅಗತ್ಯ. ಈ ಶಂಕ್ವಾಕೃತಿಯ ಘನಕೋನದ ಪರಿಮಾಣ $4\pi \sin^2 \frac{1}{2}\theta$ ಸ್ಟಿರೇಡಿಯನ್; ಇಲ್ಲಿ θ ಶಂಕುವಿನ ಶೃಂಗಾರ್ಧಕೋನ (ಸೆಮಿವರ್ಟಿಕಲ್ ಆ್ಯಂಗಲ್; *P* ಯು ಪಾದದ ಅಂಚಿನಲ್ಲಿರುವ ಯಾವುದೇ ಬಿಂದುವಾದಲ್ಲಿ ಶೃಂಗಾರ್ಧಕೋನ θ = ಕೋನ *POM* ಒಂದು ತಲಕೋನ ಎಂಬುದನ್ನು ಗಮನಿಸಬೇಕು). ಬಹುಫಲಕ ಕೋನಗಳ ಪ್ರಸಂಗದಲ್ಲಿ (ಚಿತ್ರ4) ಘನಕೋನದ




**ಚಿತ್ರ 3. ಲಂಬವೃತ್ತೀಯ ಶಂಕು**

ಪಾದ ಒಂದು ಬಹುಭುಜಾಕೃತೀಯ ಫಲಕ (ಪಾಲಿಗನಲ್ ಡಿಸ್ಕ್; ಚಿತ್ರದ *S*ನಲ್ಲಿ ನಿದರ್ಶನಾತ್ಮಕವಾಗಿ *AB, BD, CD, DA* ನಾಲ್ಕು ಭುಜಗಳನ್ನು ಪ್ರದರ್ಶಿಸಲಾಗಿದೆ); ಘನಕೋನದ ಶೃಂಗ (*O*) ಎಲ್ಲಿ ಬೇಕಾದರೂ ಇರಬಹುದು. *OAB, OBC, OCD, ODA* ತ್ರಿಭುಜಗಳು ಚಿತ್ರದಲ್ಲಿ ಬಹುಫಲಕ ಕೋನದ ಮುಖಗಳು (ಫೇಸಸ್), ಯಾವುದೇ ಒಂದು ಫಲಕದ (ಉದಾಹರಣೆಗೆ *OAB*) ತಲಕ್ಕೂ (ಪ್ಲೇನ್) ಅದರ ಪಕ್ಕದ ಮುಖದ (ಉದಾಹರಣೆಗೆ *OBC*) ತಲಕ್ಕೂ ನಡುವೆ ಇರುವ ಕೋನಕ್ಕೆ ದ್ವಿಫಲಕ ಕೋನ (ಡೈಹೆಡ್ರಲ್ ಆ್ಯಂಗಲ್, ಇದು ಒಂದು ತಲ ಕೋನವೇ ವಿನಾ ಘನ ಕೋನವಲ್ಲ) ಎಂದು ಹೆಸರು. ಬಹುಮುಖ ಕೋನವೊಂದಕ್ಕೆ (ಪಾಲಿಹೆಡ್ರಲ್ ಆಂಗಲ್) *n* ಮುಖಗಳಿದ್ದರೆ [*n* = 3, 4, 5 . . . . ಚಿತ್ರ 4ರಲ್ಲಿ *n* = 4] ಅದು ಒಳಗೊಳ್ಳುವ ದ್ವಿಫಲಕ ಕೋನಗಳ ಸಂಖ್ಯೆಯೂ *n* ಆಗಿರುತ್ತದೆ. ಈ ಎಲ್ಲ ದ್ವಿಮುಖ ಕೋನಗಳ ಮೊತ್ತ α ರೇಡಿಯನ್ ಆದಲ್ಲಿ ಬಹುಫಲಕ ಘನಕೋನದ ಸ್ಟಿರೇಡಿಯನ್ ಪರಿಮಾಣ [α - (*n* - 2)π] ಆಗುವುದು.




**ಚಿತ್ರ 4. ಬಹುಫಲಕ ಕೋನ**

ಒಂದು ಬಹುಫಲಕಕೋನದ ಫಲಕಗಳಲ್ಲಿ ಶೃಂಗದ ಬಳಿ ಏರ್ಪಟ್ಟಿರುವ ತಲಕೋನಗಳಿಗೆ [ಚಿತ್ರದಲ್ಲಿ *AOB, BOC, COD* ಹಾಗೂ *DOA* ಕೋನಗಳು] ಫಲಕ ಕೋನಗಳು (ಫೇಸ್ ಆ್ಯಂಗಲ್ಸ್) ಎಂದು ಹೆಸರು. ಬಹುಫಲಕ ಘನ ಕೋನವೊಂದರಲ್ಲಿ ಎಲ್ಲ *n* ದ್ವಿಫಲಕ ಕೋನಗಳೂ ಪರಸ್ಪರ ಸಮವಾಗಿರಬಹುದು;

ಮತ್ತು ಎಲ್ಲ $n$ ದ್ವಿಫಲಕ ಕೋನಗಳು ಸಹ ಪರಸ್ಪರ ಸಮವಾಗಿರಬಹುದು. ಹಾಗಿದ್ದಲ್ಲಿ ಆ ಘನಕೋನ ಒಂದು ಕ್ರಮಬಹುಫಲಕ ಕೋನ (ರೆಗ್ಯುಲರ್ ಪಾಲಿಹೆಡ್ರಲ್ ಆ್ಯಂಗಲ್) ಎಂದೆನಿಸಿಕೊಳ್ಳುತ್ತದೆ. ಇಂಥ ಕ್ರಮ ಬಹುಫಲಕ ಘನಕೋನವನ್ನು ಸೂಕ್ತವಾದ ಒಂದು ಲಂಬವೃತ್ತೀಯ ಶಂಕುವಿನಲ್ಲಿ ಅಂತರ್ಗತಗೊಳಿಸಬಹುದು. ಆ ಸೂಕ್ತ ಪರಿಶಂಕುವಿನ (ಸರ್ಕಮ್‌ಸ್ಕ್ರೈಬಿಂಗ್ ಕೋನ್) ಶೃಂಗಾರ್ಧಕೋನ $\theta$ ಆದಲ್ಲಿ ಕ್ರಮಬಹುಫಲಕ ಕೋನದ ಸ್ಟಿರೇಡಿಯನ್ ಪರಿಮಾಣ 2[4⁄12-*n arc tan (cosθtanπ/n]* ಆಗುವುದು. ಒಂದೊಂದು ಫಲಕಕೋನವೂ *f* ಆಗಿರುವಂಥ ಕ್ರಮಬಹುಫಲಕ ಘನಕೋನದ ಪರಿಮಾಣ 2[4⁄12-*n arc cos (sec 1/2f cos π/n]* ಸ್ಟಿರೇಡಿಯನ್. ಹಲವಾರು ಸಂದರ್ಭಗಳಲ್ಲಿ ಘನಕೋನದ ಪರಿಕಲ್ಪನೆ ಭೌತವಿಜ್ಞಾನಕ್ಕೆ ಉಪಯುಕ್ತವಾಗಿದೆ. ಉದಾಹರಣೆಗೆ $\Sigma$ ಮೇಲ್ಮೈ $O$ ಬಿಂದುವಿನಲ್ಲಿ $\Omega$ ಸ್ಟಿರೇಡಿಯನ್ ಘನಕೋನವನ್ನು ಉಂಟುಮಾಡಲಿ (ಚಿತ್ರ1). ಈಗ $O$ ಶೃಂಗ $Q$ ಕ್ಯಾಂಡೆಲಾದಷ್ಟು ಪ್ರಕಾಶದ ಒಂದು ದೀಪ ಎಂದು ಭಾವಿಸಿದರೆ $S$ ಮೇಲ್ಮೈ ಮೂಲಕ ಹಾದುಹೋಗುವ ದೀಪದ ಬೆಳಕಿನ ಪ್ರವಾಹದರ (ಲ್ಯೂಮಿನಸ್ ಫ್ಲಕ್ಸ್) $Q\Omega$ ಲ್ಯೂಮೆನ್ ಎಂದು ವ್ಯಾಖ್ಯಾನಿಸಲಾಗುವುದು. ಮತ್ತೊಂದು ನಿದರ್ಶನವಾಗಿ (0 ನಿಂದ ನೋಡಿದಾಗ ಅಪ್ರದಕ್ಷಿಣ ದಿಶೆಯಲ್ಲಿರುವಂತೆ) $S$ ಮೇಲ್ಮೈಯ ಅಂಚಿನ ಉದ್ದಕ್ಕೂ $C$ ಆಂಪೇರಿನಷ್ಟು ನಿಯತ ವಿದ್ಯುತ್ಪ್ರವಾಹವನ್ನು $N$ ಸುತ್ತುಗಳಲ್ಲಿ ಹರಿಯಲು ವ್ಯವಸ್ಥೆ ಮಾಡಲಾಗಿದೆಯೆಂದು ಭಾವಿಸೋಣ. ತತ್ಫಲವಾಗಿ $o$ ಬಿಂದುವಿನಲ್ಲಿ ರೂಪುಗೊಳ್ಳುವ ಕಾಂತಕ್ಷೇತ್ರವನ್ನು (ಮ್ಯಾಗ್ನೆಟಿಕ್ ಫೀಲ್ಡ್) ಆ್ಯಂಪೇರ್ ಮೀಟರ್$^{-1}$ ಮಾನದಲ್ಲಿ (SI ಪದ್ಧತಿ)

$$-CN\nabla\Omega/4\pi = (-CN/4\pi)\left(i\frac{\partial\Omega}{\partial x} + j\frac{\partial\Omega}{\partial y} + k\frac{\partial\Omega}{\partial z}\right)$$

ಎಂಬ ಸದಿಶವೂ ಅರ್ಸ್‌ಟೆಡ್ ಮಾನದಲ್ಲಿ (*CGS* ಪದ್ಧತಿ) $(-CN\nabla\Omega/10)$ ಎಂಬ ಸದಿಶವೂ ವ್ಯಕ್ತಪಡಿಸುತ್ತವೆ. ಇಲ್ಲಿ ಲಾಂಬಿಕ ಕಾರ್ಟೀಸಿಯನ್ ನಿರ್ದೇಶಕ *x,y,z*ಗಳನ್ನು SI ಪದ್ಧತಿಯಲ್ಲಿ ಮೀಟರುಗಳಲ್ಲೂ *CGS* ಪದ್ಧತಿಯಲ್ಲಿ ಸೆಂಟಿಮೀಟರುಗಳಲ್ಲೂ ಅಳೆಯಬೇಕು. *I.j.k* ಇವು *x.y.z* ಅಕ್ಷಗಳ ನೇರದಲ್ಲಿನ ಏಕಮಾನ ಸದಿಶಗಳು.

(ಎಸ್.ಆರ್.ಎಂ.)

$\theta$

**ಘನಜ್ಯಾಮಿತಿ:** ನೋಡಿ–ಜ್ಯಾಮಿತಿ

**ಘನಪಾಠ :** ವೇದಪಾಠದ ಅಷ್ಟ ವಿಕೃತಿಗಳಲ್ಲಿ 8ನೆಯದು. ವೇದವಾಙ್ಮಯವನ್ನು ಕಾಂಡ–ಪ್ರಶ್ನ ಅಥವಾ ಮಂಡಲ–ವರ್ಗ–ಸೂಕ್ತ–ಅನುವಾಕ–ಮಂತ್ರ–ಪದ–ವರ್ಣ–ಸ್ವರ ಇವೆಲ್ಲದರಲ್ಲಿಯೂ ಸ್ವಲ್ಪ ಮಾತ್ರವೂ ಸ್ವರೂಪ ಭ್ರಂಶವಾಗದಂತೆ ರಕ್ಷಿಸಿಕೊಂಡು, ಶಬ್ದ ಮತ್ತು ಅರ್ಥದ ಮೂಲಕ ದೃಷ್ಟಾದೃಷ್ಟ ಫಲಗಳನ್ನು ಹೊಂದಿ ಪುಣ್ಯ ಪುರುಷಾರ್ಥಮಯವಾಗಿ ಜೀವಿ ಬಾಳಿ ಬದುಕುವಂತಾಗಬೇಕೆಂದು ಋಷಿಗಳು ಆಶಿಸಿ ಅದಕ್ಕಾಗಿ ಶಬ್ದಸ್ವರೂಪರಕ್ಷಣೆಯನ್ನುದ್ದೇಶಿಸಿ ಎಂಟು ವಿಕೃತಿಗಳನ್ನು ಹೇಳಿದ್ದಾರೆ (ವ್ಯಾಳಿ–ವ್ಯಾಸಾದಿ ಶಿಕ್ಷಾ ಗ್ರಂಥಗಳು).

ಜಟಾ ಮಾಲಾ ದಂಡ ರೇಖಾ ರಥ ಧ್ವಜ ಶಿಖಾ ಘನಾಃ ।
ಕ್ರಮಮಾಶ್ರಿತ್ಯ ನಿವೃತ್ತಾಃ ವಿಕಾರಾಃ ಅಷ್ಟವಿಶ್ರುತಾಃ ॥

ಪಾಣಿನೀಯ ಶಿಕ್ಷೆಯಲ್ಲಿ–ಈ ಸ್ವರವರ್ಣಾದಿಗಳ ರಕ್ಷಣೆಯ ಮುಖ್ಯೋದ್ದೇಶ ಅದರಿಂದಾಗುವ ವಾಸ್ತವವಾದ ಅರ್ಥಾಭಿವ್ಯಕ್ತಿಯ ಸಂರಕ್ಷಣೆಯೇ ಹೊರತು ಮತ್ತಾವುದೂ ಅಲ್ಲವೆಂದೂ ಅಲ್ಲಿ ವಾಚಿತವಾದ ಅಪಚಾರದಿಂದ ಪ್ರಯೋಜನ ಭಂಗವಷ್ಟೇ ಅಲ್ಲದೆ ಅನಿಷ್ಟವೂ ತೀವ್ರವಾಗಿದೆಯೆಂದೂ ಹೇಳಿ ಎಚ್ಚರಿಸಿದೆ.

ಮಂತ್ರೋ ಹಿ ನಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ ನ ತಮರ್ಥಮಾಹ । ಸವಾಗ್ವಜ್ರೋ ಯಜಮಾನಂ ಹಿನಸ್ತಿ ಯಥೇನ್ದ್ರಶತ್ರುಃ ಸ್ವರತೋಽಪರಾಧಾತ್ ॥ – ಎಂದು. ಈ ಎಂಟು ಬಗೆಯ ವಿಕೃತಿಗಳೂ ಕ್ರಮಪಾಠವನ್ನೇ ಆಶ್ರಯಿಸಿ ರೂಪಗೊಂಡಿವೆ. ಘನಪಾಠದ ಲಕ್ಷಣ ಈ ರೀತಿ ಇದೆ–

ಶಿಖಾ ಮುಕ್ತ್ವಾ ವಿಪರ್ಯಸ್ಯ ತತ್ಪದಾನಿ ಪುನಃ ಪಠೇತ್ ।
ಅಯಂ ಘನಃ ಇತಿ ಪ್ರೋಕ್ತಃ . . . . . . . . .। (ವ್ಯಾಳಿಶಿಕ್ಷಾ)
ಉದಾಹರಣೆಗೆ–
ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್ ।
ಹೋತಾರಂ ರತ್ನಧಾತಮಮ್ ॥

ಇದರಲ್ಲಿ ಶಿಖಾಪಾಠ–ಅಗ್ನಿಮೀಳಈಳೇಗ್ನಿಮಗ್ನಿಮೀಳೇಪುರೋಹಿತಮ್– ಇಷ್ಟು ಹೇಳಿ ಅದನ್ನು ವಿಲೋಮವಾಗಿ ಒಮ್ಮೆ ಹೇಳಿ ಮತ್ತೆ ಅನುಲೋಮವಾಗಿ ಹೇಳುವುದು ಘನಪಾಠ. ಹೀಗೆ–

1. ಅಗ್ನಿಮೀಳೇ ಈಳೇಗ್ನಿಮಗ್ನಿಮೀಳೇ ಪುರೋಹಿತಂ ಪುರೋಹಿತ–ಮೀಳೇಗ್ನಿಮಗ್ನಿಮೀಳೇ ಪುರೋಹಿತಮ್ ।

2. ಈಳೇ ಪುರೋಹಿತಂ ಪುರೋಹಿತಮೀಳ ಈಳೇ ಪುರೋಹಿತಂ ಯಜ್ಞಸ್ಯ ಯಜ್ಞಸ್ಯ ಪುರೋಹಿತಮೀಳ ಈಳೇ ಪುರೋಹಿತಂ ಯಜ್ಞಸ್ಯ ।

3. ಪುರೋಹಿತಂ ಯಜ್ಞಸ್ಯ ಯಜ್ಞಸ್ಯ ಪುರೋಹಿತಂ ಪುರೋಹಿತಂ ಯಜ್ಞಸ್ಯ ದೇವಂ ದೇವಂ ಯಜ್ಞಸ್ಯ ಪುರೋಹಿತಂ ಪುರೋಹಿತಂ ಯಜ್ಞಸ್ಯ ದೇವಮ್ । ಪುರೋಹಿತಮಿತಿ ಪುರಃ ಹಿತಮ್ ।

4. ಯಜ್ಞಸ್ಯ ದೇವಂ ದೇವಂ ಯಜ್ಞಸ್ಯ ಯಜ್ಞಸ್ಯ ದೇವಮೃತ್ವಿಜಮೃತ್ವಿಜಂ ದೇವಂ ಯಜ್ಞಸ್ಯ ಯಜ್ಞಸ್ಯ ದೇವಮೃತ್ವಿಜಮ್ ।

5. ದೇವಮೃತ್ವಿಜಮೃತ್ವಿಜಂ ದೇವಂ ದೇವಮೃತ್ವಿಜಮ್ । ಋತ್ವಿಜಮಿತ್ಯೃತ್ವಿಜಮ್

6. ಹೋತಾರಂ ರತ್ನಧಾತಮಂ ರತ್ನಧಾತಮಂ ಹೋತಾರಂ ರತ್ನಧಾತಮಮ್ ರತ್ನಧಾತಮಮಿತಿ ರತ್ನಧಾತಮಮ್.

ಇದು ಈಗ ಬಳಕೆಯಲ್ಲಿರುವ ಘನಪಾಠದ ಪ್ರಕಾರವೆಂಬುದಾಗಿಯೂ ಮತ್ತೊಂದು ಪ್ರಕಾರ ಇರುವುದೆಂಬುದಾಗಿಯೂ ವ್ಯಾಳಿಶಿಕ್ಷಾ ವ್ಯಾಖ್ಯಾನಕಾರರು ಹೇಳಿ ಅದರ ಲಕ್ಷಣವನ್ನು ಹೀಗೆ ವಿವರಿಸಿದ್ದಾರೆ–

ಅನ್ತಾತ್ ಕ್ರಮಂ ಪಠೇತ್ ಪೂರ್ವಂ ಆದಿಪರ್ಯನ್ತಮಾನಯೇತ್ ।
ಆದಿಕ್ರಮಂ ನಯೇದಂತಂ ಘನಮಾಹುರ್ಮನೀಷಿಣಃ ॥
ಅದರಂತೆ–
1. ಋತ್ವಿಜಮಿತ್ಯೃತ್ವಿಜಮ್ । ದೇವಮೃತ್ವಿಜಮ್ । ಯಜ್ಞಸ್ಯ ದೇವಮ್ ।
ಪುರೋಹಿತಂ ಯಜ್ಞಸ್ಯ । ಪುರೋಹಿತಮಿತಿ ಪುರಃ ಹಿತಮ್ ।
2. ಈಳೇ ಪುರೋಹಿತಮ್ । ಅಗ್ನಿಮೀಳೇ ।
ಈಳೇ ಪುರೋಹಿತಮ್ । ಪುರೋಹಿತಂ ಯಜ್ಞಸ್ಯ । ಪುರೋಹಿತಮಿತಿ
ಪುರಃ ಹಿತಮ್ । ಯಜ್ಞಸ್ಯ ದೇವಮ್ । ದೇವಮೃತ್ವಿಜಮ್ ।
ಋತ್ವಿಜಮಿತ್ಯೃತ್ವಿಜಮ್ ।
3. ರತ್ನಧಾತಮಮಿತಿ ರತ್ನಧಾತಮಮ್ । ಹೋತಾರಂ ರತ್ನಧಾತಮಮ್ । ರತ್ನಧಾತಮಮಿತಿ ರತ್ನSಧಾತಮಮ್ । ಎಂದು ಆಗುವುದು.

ಈ ಬಗೆಯ ಅಭ್ಯಾಸಗಳಿಂದ ಪ್ರಕೃತಿ ಪ್ರತ್ಯಯ ವಿಭಾಗ, ಅವುಗಳಲ್ಲಿಯ ವ್ಯಾಕರಣವಿಶೇಷ, ಪ್ರತ್ಯೇಕಪದ–ಸಂಹಿತೆಗಳ ಸ್ವರನಿರ್ಣಯ, ಧಾತು–ಉಪಸರ್ಗ ವಿವೇಕ, ಅದರ ಸ್ವರವಿಶೇಷ, ಸಮಾಸಜ್ಞಾನ, ಅದರ ಸ್ವರ; ಇತ್ಯಾದಿಯಾಗಿ ವೇದಾಕ್ಷರಗಳಲ್ಲಿ ಒಂದು ಮಾತ್ರಾಕಾಲದಲ್ಲೂ ಹೆಚ್ಚು ಕಡಿಮೆಯಾಗದ ಸಂರಕ್ಷಣೆ, ಇದರಿಂದ ಶಿಕ್ಷಾ ನಿರುಕ್ತಾದಿಗಳಿಂದ ಒದಗಿದ ಅರ್ಥಪರಿಜ್ಞಾನ, ಧ್ಯಾನ ಸ್ಥಾನಗಳ ಜವಾಬ್ದಾರಿ, ಕರ್ಮಗಳಲ್ಲಿ ಉಪಯೋಗಿಸುವಾಗ ವರ್ಣ ಪದಾದಿ ದೇವತೆಗಳ ಪ್ರಕೋಪಕ್ಕೆ ಈಡಾಗದೆ ಅವರ ಪ್ರಸನ್ನತೆ ಹೊಂದುವುದು. ಅದರ ಮೂಲಕ ಧಾತು ಪ್ರಸನ್ನತೆಯಿಂದ ಪರಮ ಶಾಂತಿ–ಇವೆಲ್ಲ ಪ್ರಯೋಜನಗಳೂ ಸಿದ್ಧಿಸುವುವೆಂಬುದು ವೇದರಹಸ್ಯವನ್ನು ಅಂಗೈನೆಲ್ಲಿಯಂತೆ ಅರಿತ ಮಹರ್ಷಿಗಳ ನಿರ್ಣಯ. ಸಂಹಿತಾಪಾಠತಃ ಪುಣ್ಯಂ, ದ್ವಿಗುಣಂ ಪದಪಾಠತಃ ಎಂಬುದೂ ಜಟಾದಿ ವಿಕೃತೀನಾಂ ಯೇ ಪರಾಯಣಪಾರಾಯಣಾಃ । ಮಹಾತ್ಮಾನೋ ದ್ವಿಜಶ್ರೇಷ್ಠಾಃ ತೇ ಜ್ಞೇಯಾಃ ಪಙ್ಕ್ತಿಪಾವನಾಃ–ಎಂಬ ಮಾತೂ ಪಾಠಕ್ರಮದ ಉಪಯೋಗಗಳನ್ನು ಎತ್ತಿ ತೋರುತ್ತವೆ. ಅಧ್ಯಯನದ ಅವಧಿಯನ್ನು ಸಲಕ್ಷಣ–ಘನಾಂತ ಎಂಬುದಾಗಿಯೂ ಹಾಗೆ ಅಧ್ಯಯನ ಮಾಡಿದವರನ್ನು ಘನಪಾಠಿ ಎಂಬುದಾಗಿಯೂ ಗೌರವಿಸುವ ಸಂಪ್ರದಾಯ ಹಿಂದಿನಿಂದ ನಡೆದುಬಂದಿದೆ. (ಎನ್.ಎಸ್.ಆರ್.ಬಿ.)

**ಘನಮಠದ ಶಿವಯೋಗಿ :** ಒಬ್ಬ ಶಿವಶರಣ. ಹೈದರಾಬಾದ್ ಜಿಲ್ಲೆಯ ದೋರ್ವಾಡ ಗ್ರಾಮದಲ್ಲಿ 1828ರಲ್ಲಿ ಜನಿಸಿದ. ತಂದೆ ವೀರಯ್ಯ; ತಾಯಿ ವೀರಾಂಬೆ. ಹುಟ್ಟು ಹೆಸರು ನಾಗಭೂಷಣಯ್ಯ. 7ನೆಯ ವರ್ಷದಲ್ಲಿ ದೀಕ್ಷೆ ಪಡೆದ. ಹನ್ನೆರಡನೆಯ ವಯಸ್ಸಿನಲ್ಲಿ ಘನಮಠದ ಚರವರ್ಯ ಸದ್ಗುರುಗಳ ಆಶೀರ್ವಾದಕ್ಕೆ ಪಾತ್ರನಾದ. ಬಸವಣ್ಣನವರ ದಿವ್ಯಜೀವನ ಈತನ ಬಾಳನ್ನೆಲ್ಲ ಆವರಿಸಿತ್ತು. ಈತ ಕಲ್ಯಾಣದ ಸುತ್ತಮುತ್ತಲಿನ ಪ್ರದೇಶಗಳಾದ ಕಲ್ಬುರ್ಗಿ, ಬಿಜಾಪುರ, ರಾಯಚೂರು, ಜಿಲ್ಲೆಗಳಲ್ಲಿ ಹೆಚ್ಚಾಗಿ ಸಂಚಾರಮಾಡಿದ. ಚಿತ್ರಾಲಿ, ಸಂಗಮೇಶ್ವರ, ತಾಳಿಕೋಟೆ, ಬಾಗೇವಾಡಿ, ಬಳ್ಳಾರಿ, ಸೊನ್ನಲಾಪುರ, ಕುಂಟೋಜಿ, ಹುನುಗುಂದ, ಇಲಕಲ್ಲ, ಮೊದಲಾದ ಊರುಗಳಿಗೆ ಹೋಗಿದ್ದನೆಂಬುದಕ್ಕೆ ಆಧಾರಗಳು ಸಿಗುತ್ತವೆ.

ಈತ ತೆಲಗುದೇಶದಿಂದ ಬಂದವನಾದುದರಿಂದ ಕನ್ನಡನಾಡನ್ನು ಪ್ರವೇಶಿಸಿದಾಗ ಭಾಷಾಸಮಸ್ಯೆಯನ್ನು ಎದುರಿಸಬೇಕಾಯಿತು. ಬಸವಾದಿ ಪ್ರಮಥರ ವಚನಸಾಹಿತ್ಯದಲ್ಲಿ ಆಳವಾದ ಜ್ಞಾನವನ್ನು ಪಡೆಯಬೇಕೆಂಬ ಉತ್ಕಟ ಬಯಕೆ ನಡುವಯಸ್ಸಿನಲ್ಲಿ ಕನ್ನಡ

ಕಲಿಯಲು ಈತನನ್ನು ಪ್ರೇರೇಪಿಸಿತು. ಯರಗೋಳಮಠದ ರೇವಣಸಿದ್ಧಯ್ಯ ಎಂಬವರಲ್ಲಿ ವಿಧಿಪೂರ್ವಕವಾಗಿ ಕನ್ನಡ ಕಲಿತುದಲ್ಲದೆ ಕಾವ್ಯ ಪುರಾಣಗಳ ಸಾರವನ್ನೂ ವಚನಗಳ ತಿರುಳನ್ನೂ ಗ್ರಹಿಸಿದ. ಹೋದಲ್ಲೆಲ್ಲ ಈತನ ಹೆಗಲ ಮೇಲೆ ಬಸವಣ್ಣನವರ ವಚನಗಳ ಒಂದು ಸಂಗ್ರಹ ಸದಾ ಇರುತ್ತಿತ್ತಂತೆ. ಕಾವ್ಯರಚನೆಯ ಸಾಮರ್ಥ್ಯವಿತ್ತಾಗಿ ಈತ ಅನೇಕ ಹಾಡುಗಳನ್ನು ಕಟ್ಟಿ ಹಾಡಿದುದಲ್ಲದೆ, ಭಕ್ತಿಸುಧಾಸಾರ ಎಂಬ ಗ್ರಂಥವನ್ನು ರಚಿಸಿದನೆಂದು ತಿಳಿದುಬರುತ್ತದೆ.

ಶಿವಜ್ಞಾನ, ಶಿವಾನುಭವ, ತತ್ತ್ವಬೋಧನೆ ಈತನ ವ್ಯಕ್ತಿತ್ವದ ಒಂದು ಮುಖವಾದರೆ, ರೈತರ ಕ್ಷೇಮಾಭ್ಯುದಯ ಇನ್ನೊಂದು ಮುಖವಾಗಿತ್ತು. ವ್ಯವಸಾಯದ ವಿವಿಧ ಸಮಸ್ಯೆಗಳ ಅರಿವು ಈತನಿಗೆ ಚೆನ್ನಾಗಿತ್ತು. ವಿಶೇಷವಾಗಿ, ಬಾವಿ ತೋಡುವಾಗ ರೈತರು ಈತನ ಸಲಹೆಯನ್ನು ಪಡೆಯುತ್ತಿದ್ದರು.

ಈತ ವ್ಯವಸಾಯದಲ್ಲಿದ್ದ ತನ್ನ ಅಪಾರ ಜ್ಞಾನ ವ್ಯರ್ಥವಾಗಬಾರದೆಂದು ಭಾವಿಸಿ ತನ್ನ ಶಿಷ್ಯರಲ್ಲಿ ಒಬ್ಬನಾದ ಸಿದ್ಧರಾಮಪ್ಪ ಕುನ್ನಾಳ ಎಂಬಾತನಿಂದ ಕೃಷಿಜ್ಞಾನದೀಪಿಕೆ ಎಂಬ ಗ್ರಂಥವನ್ನು ಬರೆಯಿಸಿದ.

ಶಿವಯೋಗಿ ತನ್ನ ಅಂತ್ಯಕಾಲದಲ್ಲಿ ಲಿಂಗಸುಗೂರು ತಾಲ್ಲೂಕಿನ ಸಂತೆಕೆಲ್ಲೂರು ಗ್ರಾಮದಲ್ಲಿ ತಂಗಿದ್ದಾಗ ಶಂಕರಪ್ಪಗೌಡ ಎಂಬಾತನ ಮನೆಯಲ್ಲಿ ಕರುಣಪ್ರಸಾದ ಸಮಯದಲ್ಲಿ ಈತನಿಗೂ ನೀರಡಗುಂಭದ ಚನ್ನಬಸವಸ್ವಾಮಿಗೂ ವಾದ ನಡೆಯಿತು. ಕೊನೆಯಲ್ಲಿ 1880ರಲ್ಲಿ ಇಬ್ಬರೂ ಒಟ್ಟಾಗಿ ಲಿಂಗೈಕ್ಯರಾದರೆಂದು ತಿಳಿದುಬರುತ್ತದೆ.

ಭಕ್ತರಿಗೆ ಶಿವಜ್ಞಾನ, ಶಿವಾಚಾರಗಳನ್ನು ಬೋಧಿಸುತ್ತ ರೈತರ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುತ್ತ ಸುಮಾರು ಮೂವತ್ತೈದು ವರ್ಷಗಳ ಕಾಲ ಜನಾನುರಾಗವನ್ನು ಗಳಿಸಿ ತನ್ನ ಇಹಲೋಕಯಾತ್ರೆಯನ್ನು ಮುಗಿಸಿದ. ಈತನ ಜೀವನದ ಕುರುಹಾಗಿ ಈಗ ಕುಂಟೋಜಿಯಲ್ಲಿ ಈತನ ಪಾದುಕೆಗಳೂ ಸಂತೆಕೆಲ್ಲೂರಿನಲ್ಲಿ ಈತನ ಗದ್ದುಗೆಯೂ ಉಳಿದಿವೆ. (ಬಿ.ವಿ.ವಿ.ಬಿ.)

**ಘನಲಿಂಗದೇವ :** ಶಿವಾನುಭವಿ. ಮಧ್ಯಕಾಲೀನ ವಚನಕಾರರಲ್ಲಿ ಪ್ರಸಿದ್ಧ. ಮೈಸೂರು ಜಿಲ್ಲೆಯ ಕಪಿಲಾ ನದಿಯ ತೀರದಲ್ಲಿರುವ ಸುತ್ತೂರು ವೀರಸಿಂಹಾಸನ ಮಠದ ಆಚಾರ್ಯನೂ ಎಡೆಯೂರು ಸಿದ್ಧಲಿಂಗೇಶ್ವರನ ಶಿಷ್ಯನೂ ಆಗಿದ್ದ. ಇವನ ಕಾಲ 1480 ಎಂದು ಕವಿಚರಿತೆಕಾರರ ಅಭಿಪ್ರಾಯ. ಈತ ಹರದನಹಳ್ಳಿಯ ಗುರುಗಳ ಪ್ರಭಾವಕ್ಕೆ ಒಳಗಾಗಿದ್ದನೆನ್ನಲಾಗಿದೆ. ಈತನ 63 ವಚನಗಳು ಪ್ರಕಟವಾಗಿವೆ. ಸುದೀರ್ಘವೂ ವಿದ್ವತ್ಪೂರ್ಣವೂ ಆದ ಇವು ವೀರಶೈವಸಿದ್ಧಾಂತ ಬೋಧಕವಾಗಿವೆ. ಅಕ್ಕಮಹಾದೇವಿ ಸ್ತ್ರೀಯಾಗಿ ಹುಟ್ಟಿ ಚೆನ್ನಮಲ್ಲಿಕಾರ್ಜುನನಲ್ಲಿ ಪುರುಷಭಾವ ತಾಳಿ ಮುಕ್ತಿಯನ್ನು ಸಾಧಿಸಿದಳು. ಈತ ಗಂಡಾಗಿ ಹುಟ್ಟಿ ಶರಣವೆಣ್ಣಾಗಿ ಮೋಕ್ಷವನ್ನು ಗಳಿಸಿದ. ಅಕ್ಕನಿಗೆ ಚೆನ್ನಮಲ್ಲಿಕಾರ್ಜುನ ಅಂಕಿತವಾದರೆ ಈತನಿಗೆ ಮೋಹದ ಚೆನ್ನಮಲ್ಲಿಕಾರ್ಜುನ ಅಂಕಿತ. ಪ್ರತಿ ವಚನದ ಕೊನೆಯಲ್ಲಿ ಈತ ತನ್ನನ್ನು ಘನಲಿಂಗಿ ಎಂದುಕೊಂಡಿದ್ದಾನೆ. ಫ.ಗು. ಹಳಕಟ್ಟಿಯವರು ಈತನ ವಚನಗಳ ಭಾವ ಉಚ್ಚತರವಿದ್ದು ವಚನವಾಙ್ಮಯದಲ್ಲಿ ಅವಕ್ಕೆ ಉಚ್ಚಸ್ಥಾನವಿದೆ ಎಂದಿದ್ದಾರೆ.

ಈತನ ವಚನಗಳು ಕಾವ್ಯಮಯವಾಗಿವೆ. ಇವುಗಳಲ್ಲಿ ಶರಣಸತಿ ಲಿಂಗಪತಿ ಎಂಬ ಭಾವ ವ್ಯಕ್ತವಾಗಿದೆ. ಇವು ವೀರಶೈವ ಮತದ ಅಷ್ಟಾವರಣ, ಪಂಚಾಚಾರ ಷಟ್‌ಸ್ಥಲ ಸಿದ್ಧಾಂತಗಳನ್ನು ಚೆನ್ನಾಗಿ ನಿರೂಪಿಸುತ್ತವೆ. ಇವುಗಳಲ್ಲಿ ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಸಂಗನಬಸವಣ್ಣ, ಅನಿಮಿಷಯ್ಯ, ಅಕ್ಕಮಹಾದೇವಿ, ನೀಲಾಂಬಿಕೆ, ಬಿಜ್ಜಳರಾಜ, ತೋಂಟದಾರ್ಯ–ಇವರುಗಳ ಹೆಸರಿವೆ. ಘಟ್ಟಿವಾಳಯ್ಯ, ನಾಗದೇವ, ಸತ್ಯಕ್ಕ, ಶಿವರಾತ್ರಿ ಸಂಕಣ್ಣ, ನಿಜಗುಣಿ, ಚಂದಿಮರಸರನ್ನೂ ತನ್ನ ಗುರುಗಳಾದ ಪರ್ವತದೇವರು, ಭಂಡಾರಿ ಬಸವಪ್ಪೊಡೆಯರು, ಕೂಗಲೂರು ನಂಜಯ್ಯದೇವರು ಇವರನ್ನೂ ಈತ ಸ್ಮರಿಸಿದ್ದಾನೆ.

ಈತನ ಒಂದು ವಚನ ಹೀಗಿದೆ:

ದೇವ,
ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ
ಮರ್ತ್ಯಲೋಕಕ್ಕೆ ಬಂದು ಮಾನವಜನ್ಮವ ಕಂಡೆ ।
ಆ ಮಾನವಜನ್ಮಕ್ಕೆ ಘುಣಾಕ್ಷರ ನ್ಯಾಯದಂತೆ ಲಿಂಗ ಬಂದುದ ಕಂಡೆ ।
ಎನಗಿದು ಚೋದ್ಯ, ಎನಗಿದು ವಿಪರೀತವಯ್ಯ ।
ಇದಕ್ಕೆ ನುಡಿದಂತೆ ನಡೆಸು, ನಡೆದಂತೆ ನುಡಿಸು.
ನುಡಿ–ನಡೆಗೆ ಭಿನ್ನವಾದರೆ ನಮ್ಮ ಶರಣರೊಪ್ಪರು
ನಿಮ್ಮ ಶರಣರೊಪ್ಪದಲ್ಲಿಯೆ ನೀನೊಪ್ಪೆ
ನೀನೊಪ್ಪದಲ್ಲಿಯೆ ಬಂದಿತೆನಗೆ ಭವದ ಹೆಮ್ಮಾರಿ
ಅದಕ್ಕೆ ನಾನಂಜುವೆನಯ್ಯ, ನಾನಳುಕುವೆನಯ್ಯ ।
ನುಡಿ–ನಡೆ ಎರಡಾಗದಂತೆ ನಡೆಸಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. (ಬಿ.ಎಸ್.)

**ಘನಸ್ಥಿತಿ ಭೌತವಿಜ್ಞಾನ :** ಘನವಸ್ತುಗಳ ಭೌತ ಗುಣಲಕ್ಷಣಗಳನ್ನು ಅಭ್ಯಸಿಸುವ ಭೌತವಿಜ್ಞಾನ ವಿಭಾಗ (ಸಾಲಿಡ್ ಸ್ಟೇಟ್ ಫಿಸಿಕ್ಸ್). ಘನವಸ್ತು ಎಂದೊಡನೆಯೇ ಅದರ ಗಟ್ಟಿತನ, ಖಚಿತವಾದ ರೂಪ ಮುಂತಾದ, ದ್ರವ ಹಾಗೂ ಅನಿಲಗಳಿಂದ ಬೇರೆಯಾದ, ಹಲವಾರು ಲಕ್ಷಣಗಳು ನಮ್ಮ ಕಲ್ಪನೆಯಲ್ಲಿ ಮೂಡಿಬರುತ್ತವೆ. ಆದರೆ ಇವು ಯಾವುವೂ ಘನಸ್ಥಿತಿಯನ್ನು ಸಂಪೂರ್ಣವಾಗಿ ಹಾಗೂ ನಿಖರವಾಗಿ ಲಕ್ಷಣಿಸುವುದಿಲ್ಲ ಎನ್ನಬಹುದು. ಒಂದು ವಸ್ತುವಿನ ಮೇಲೆ ಆರೋಪಿಸಿದ ಬಲಗಳನ್ನು ತೆಗೆದು ಹಾಕಿದಾಗ ಅದು ಮೊದಲಿನ ರೂಪಕ್ಕೇ ಹಿಂತಿರುಗುವ ಪ್ರವೃತ್ತಿಯನ್ನು ಪ್ರದರ್ಶಿಸಿದರೆ ಅಂಥ ವಸ್ತುವನ್ನು ಘನವಸ್ತುವೆಂದು ಹೇಳುವುದುಂಟು. ಆದರೆ ಈ ನಿರೂಪಣೆ ಕೂಡ ಹಲವು ಸನ್ನಿವೇಶಗಳಲ್ಲಿ ತೃಪ್ತಿಕರವಾಗುವುದಿಲ್ಲ. ಉದಾಹರಣೆಗೆ, ಆರೋಪಿತ ಬಲಗಳ ಪ್ರಭಾವದಲ್ಲಿ ನಿಧಾನವಾದ ಆದರೆ ಖಾಯಂ ಆದ ರೂಪಬದಲಾವಣೆಯನ್ನು ಹೊಂದುವ ಮೇಣದಂಥ ಘನವಸ್ತುಗಳಿಗೂ ಸಾಕಷ್ಟು ಕಡಿಮೆ ಬಲಗಳನ್ನು ಹೇರಿದಾಗ ಹರಿಯದ ಥಿಕ್ಸೋಟ್ರಾಪಿಕ್ (ಸ್ಪರ್ಶಿಸಿದಾಗ ಬದಲಾಗುವ ಎಂದರ್ಥ) ದ್ರವಗಳಿಗೂ ಈ ಲಕ್ಷಣ ನಿರೂಪಣೆ ಅನ್ವಯಿಸುವುದಿಲ್ಲ. ಆದ್ದರಿಂದ ನಮ್ಮ ಸಾಮಾನ್ಯ ಪರಿಜ್ಞಾನಕ್ಕೆ ನಿಲುಕುವ ಆದರ್ಶ ಘನಸ್ಥಿತಿ ಹಾಗೂ ದ್ರವಸ್ಥಿತಿಗಳ ಪರಿಕಲ್ಪನೆಗಳ ನಡುವೆ ತೀರ ಖಚಿತವಾದ ಒಂದು ಎಲ್ಲೆಯಿಲ್ಲ ಎಂದು ಹೇಳಬೇಕಾಗುತ್ತದೆ. ಇದಲ್ಲದೆ ದ್ರವ ಮತ್ತು ಘನಸ್ಥಿತಿಗಳೆರಡರ ಕೆಲವು ಲಕ್ಷಣಗಳನ್ನೂ ಪ್ರದರ್ಶಿಸುವ ಹಲವಾರು ಮಧ್ಯಂತರ ಪ್ರಾವಸ್ಥೆಗಳು (**ನೋಡಿ– ದ್ರವಸ್ಫಟಿಕಗಳು**) ಕೂಡ ಪ್ರಕೃತಿಯಲ್ಲಿ ಕಂಡುಬರುತ್ತವೆ. ಘನಸ್ಥಿತಿಯ ಅಪಾರ ಗುಣವೈವಿಧ್ಯದಿಂದಾಗಿ ಘನಸ್ಥಿತಿ ಭೌತವಿಜ್ಞಾನವು ರಸಾಯನ, ಲೋಹ, ವಿದ್ಯುತ್, ಎಂಜಿನಿಯರಿಂಗ್ ಮುಂತಾದ ವಿಜ್ಞಾನವಿಭಾಗಗಳೊಂದಿಗೆ ಚಾಚಿಕೊಂಡು ಬೆರೆತಿರುವ ಬಹಳ ವ್ಯಾಪಕವಾದ ವಿಜ್ಞಾನವಾಗಿದೆ.

ವಿವಿಧ ಸ್ತರಗಳಲ್ಲಿ ಘನಸ್ಥಿತಿ ವಿಜ್ಞಾನದ ಬೆಳವಣಿಗೆ ಹೇಗಾಯಿತು ಎಂಬುದರ ಸ್ಥೂಲ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಟ್ಟಿದೆ.

ಬೆಳವಣಿಗೆಯ ಚರಿತ್ರೆ : ಘನಸ್ಥಿತಿಯ ಸ್ಥೂಲ ಬಾಹ್ಯಗುಣಗಳ ವಿಶ್ಲೇಷಣೆಯ ಚರಿತ್ರೆ 16ನೆಯ ಶತಮಾನಕ್ಕೂ ಹಿಂದಿನದೆನ್ನಬಹುದು. ಬಹು ಹಿಂದಿನ ಕಾಲದಿಂದಲೂ ಮನುಷ್ಯನಿಗೆ ಪ್ರಕೃತಿಯಲ್ಲಿ ದೊರೆಯುವ ಹರಳುಗಳು, ಖನಿಜಗಳು ಮುಂತಾದ ಘನವಸ್ತುಗಳಲ್ಲಿ ಅಪಾರವಾದ ಆಸಕ್ತಿಯಿತ್ತು. ಈ ಹರಳುಗಳ ಅಥವಾ ಸ್ಫಟಿಕಗಳ ಆಕರ್ಷಕ ಬಣ್ಣಗಳು, ಬಹು ಚೆನ್ನಾಗಿ ರೂಪಗೊಂಡ ಅವುಗಳ ಸ್ಫಟಿಕ ಮುಖಗಳು ಮತ್ತು ಅವು ಪ್ರದರ್ಶಿಸುವ ಹಲವಾರು ಕುತೂಹಲಕಾರಿ ದ್ಯುತಿ ಹಾಗೂ ಯಾಂತ್ರಿಕ (ಮೆಕ್ಯಾನಿಕಲ್) ಗುಣವಿಶೇಷಗಳು ಈ ಆಸಕ್ತಿಯನ್ನು ಇನ್ನೂ ಹೆಚ್ಚಿಸಿದವು. ಅಂದಿನ ದಿವಸಗಳಲ್ಲಿ ಲಭ್ಯವಿದ್ದ ಉಪಕರಣ ಮತ್ತು ತಾಂತ್ರಿಕ ವಿಧಾನಗಳಿಂದ ಸ್ಫಟಿಕಗಳ ಹಲವಾರು ಗುಣಗಳನ್ನು ಅರಿತರು. ಇದರಿಂದಾಗಿ ಈ ಸ್ಫಟಿಕಗಳು ಹಲವು ರೀತಿಯಲ್ಲಿ ಅಸಮದಿಶತ್ವವನ್ನು (ಎನ್ಐಸೊಟ್ರಪಿ) ಪ್ರದರ್ಶಿಸುತ್ತವೆ ಎಂಬ ಅಂಶ ವೇದ್ಯವಾಯಿತು. (ಯಾವುದೇ ವಸ್ತುವಿನ ಗುಣಗಳು ಅದರ ಎಲ್ಲ ದಿಶೆಗಳಲ್ಲೂ ಒಂದೇ ಆಗಿರದಿದ್ದರೆ, ಆ ಗುಣಗಳಿಗೆ ಸಂಬಂಧಿಸಿದಂತೆ, ವಸ್ತುವಿಗೆ ಅಸಮದಿಶಾವಸ್ತು ಎಂದು ಹೆಸರು). 19ನೆಯ ಶತಮಾನದ ಮಧ್ಯಭಾಗದ ವೇಳೆಗೆ ಸಮಾಂಗತೆಯ ಗುಣಗಳನ್ನು ಆಧರಿಸಿ ಸ್ಫಟಿಕೀಯ ವಸ್ತುಗಳನ್ನು (ಕ್ರಿಸ್ಟಲೈನ್ ಸಬ್‌ಸ್ಟನ್ಸಸ್) 32 ವರ್ಗಗಳಾಗಿ ವಿಂಗಡಿಸಲಾಗಿತ್ತು. ಈ ವರ್ಗಗಳಲ್ಲಿ, ಸಂಪೂರ್ಣ ಅಸಮದಿಶತ್ವವನ್ನು ಪ್ರದರ್ಶಿಸುವ ಸ್ಫಟಿಕಗಳಿಂದ ತೊಡಗಿ ಅತಿ ಹೆಚ್ಚಿನ ಸಮಾಂಗತೆಯನ್ನು ತೋರ್ಪಡಿಸುವ ಘನ (ಕ್ಯೂಬಿಕ್) ಸ್ಫಟಿಕಗಳವರೆಗೂ ಇವೆ.

ಸ್ಫಟಿಕೀಯ ಘನವಸ್ತುಗಳ ಗಮನಾರ್ಹ ಅನುಕ್ರಮತೆ ಮತ್ತು ಸಮಾಂಗತೆಗಳು ಆ ವಸ್ತುಗಳಲ್ಲಿನ ಪರಮಾಣುಗಳ ಅಥವಾ ಅಣುಗಳ ಕ್ರಮಾನುಗತವಾದ ಜೋಡಣೆಯಿಂದ ಜನಿಸುತ್ತವೆ ಎಂದು 19ನೆಯ ಶತಮಾನದ ಆದಿಭಾಗದ ವೇಳೆಗೆ ಊಹಿಸಲಾಗಿತ್ತು. ಸ್ಫಟಿಕೀಯ ವಸ್ತುಗಳಲ್ಲಿನ ಅಣುಗಳು ಮೂರು ಆಯಾಮಗಳಲ್ಲಿನ (3–ಡೈಮೆನ್ಷನ್ಸ್) ಕ್ರಮವುಳ್ಳ ಜಾಲಕದಲ್ಲಿ (ಲ್ಯಾಟಿಸ್) ಜೋಡಿಸಲ್ಪಟ್ಟಿರುತ್ತವೆ ಎಂಬ ಬಹು ಮುಖ್ಯವಾದ ಪರಿಕಲ್ಪನೆಯನ್ನು ಇದೇ ಸುಮಾರಿಗೆ ಎ. ಬ್ರವಾಯಿಸ್ ಎಂಬಾತ ಮುಂದಿಟ್ಟ. ಈ ಪರಿಕಲ್ಪನೆಯ ಪ್ರಕಾರ ಆದರ್ಶ ಸ್ಫಟಿಕಗಳು ಒಂದು ಮೂಲರಚನಾ ಘಟಕದ ಆಕಾಶದಲ್ಲಿನ ಪುನರಾವೃತ್ತಿಯಿಂದ ರಚಿತವಾಗಿರುತ್ತವೆ. ಅಂದರೆ ಎಲ್ಲ ಸ್ಫಟಿಕೀಯ ವಸ್ತುಗಳಿಗೂ ಮೂರು ಸ್ವತಂತ್ರ ದಿಶೆಗಳಲ್ಲಿ ಸರಳಚಲನೆಯ (ಟ್ರಾನ್ಸ್‌ಲೇಷನ್) ಸಮಾಂಗತೆ (ಸಿಮೆಟ್ರಿ) ಇರುತ್ತದೆ ಎಂದಾಗುತ್ತದೆ. ತಾಮ್ರ, ಬೆಳ್ಳಿ, ಚಿನ್ನ, ಕ್ಷಾರ ಲೋಹಗಳು ಮುಂತಾದ ಸರಳ ಸ್ಫಟಿಕೀಯ ವಸ್ತುಗಳಲ್ಲಿನ ಮೂಲರಚನಾ ಘಟಕ ಒಂದೇ ಒಂದು ಪರಮಾಣುವನ್ನು ಒಳಗೊಂಡಿರುತ್ತದೆ.

ಆದರೆ ಸಂಕೀರ್ಣ ಸ್ಫಟಿಕೀಯ ಘನವಸ್ತುಗಳಲ್ಲಿನ ಮೂಲರಚನಾ ಘಟಕದಲ್ಲಿ ನೂರಾರು ಪರಮಾಣುಗಳಿರಬಹುದು (ಪ್ರೋಟೀನುಗಳ ಸ್ಫಟಿಕಗಳ ಮೂಲ ರಚನಾಘಟಕಗಳಲ್ಲಿನ ಪರಮಾಣುಗಳ ಸಂಖ್ಯೆ 105ರಷ್ಟಿರುತ್ತದೆ.) 32 ಸ್ಫಟಿಕ ವರ್ಗಗಳ ಇರುವಿಕೆಯನ್ನೂ ಸ್ಫಟಿಕಜಾಲಕಗಳ ಊಹೆಯೊಂದರಿಂದಲೇ (ಹೈಪಾಥಿಸಿಸ್) ಅರ್ಥಮಾಡಿಕೊಳ್ಳಬಹುದೆಂದು ಬ್ರವಾಯಿಸ್ ಗಣಿತೀಯವಾಗಿ ಸಾಧಿಸಿ ತೋರಿಸಿದ್ದಾನೆ. 20ನೆಯ ಶತಮಾನದ ಆದಿಯ ವೇಳೆ ಡಬ್ಲ್ಯು.ಬಾರ್ಲೋ, ಈ.ಎಸ್. ಫೆಡೆರಾಫ್ ಮತ್ತು ಎ. ಶೋಯೆನ್‌ಫ್ಲೈಸ್ ಎಂಬುವರ ಸಂಶೋಧನೆಗಳಿಂದ 230 ಆಕಾಶಗುಂಪುಗಳಿಗೆ (ಸ್ಪೇಸ್ ಗ್ರೂಪ್ಸ್) ಸಂಬಂಧಿಸಿದಂತೆ 230 ರೀತಿಯ ಜಾಲಕಸಮಾಂಗತೆಗಳಿರುತ್ತವೆಂದು ತಿಳಿದುಬಂದಿತ್ತು. ಆದರೆ ಈ ಸೈದ್ಧಾಂತಿಕ ಪರಿಗಣನೆಗಳನ್ನು ಬಿಟ್ಟರೆ ಸ್ಫಟಿಕಗಳ ರಚನೆಯನ್ನು ಪ್ರಾಯೋಗಿಕವಾಗಿ ನಿರ್ಧರಿಸಲು ಯಾವ ಪ್ರಯತ್ನವನ್ನೂ ಮಾಡಲು ಸಾಧ್ಯವಾಗಿರಲಿಲ್ಲ.

ಬಹುಶಃ ಘನಸ್ಥಿತಿಶಾಸ್ತ್ರದ ಬೆಳವಣಿಗೆಯಲ್ಲಿನ ಅತಿಮುಖ್ಯ ಘಟನೆಯೆಂದರೆ ಮ್ಯಾಕ್ಸ್‌ಫಾನ್ ಲಾವೆ ಎಂಬಾತ ಎಕ್ಸ್‌ಕಿರಣಗಳು ಸ್ಫಟಿಕಗಳ ಮೂಲಕ ಹಾಯುವಾಗ ಅಲೆಗಳಂತೆ ನಮನ (ಡಿಫ್ರ್ಯಾಕ್ಷನ್) ಹೊಂದುತ್ತವೆ ಎಂದು 1912ರಲ್ಲಿ ತೋರಿಸಿದ್ದು. ತತ್ಪರಿಣಾಮವಾಗಿ ಎಕ್ಸ್ ಕಿರಣಗಳು ಅಲೆಗಳೆಂದು ಸಾಧಿತವಾದದ್ದೇ ಅಲ್ಲದೆ ಸ್ಫಟಿಕಗಳಲ್ಲಿನ ಪರಮಾಣುಗಳು ಅನುಕ್ರಮವಾದ ಸರಣಿಗಳಲ್ಲಿ ಜೋಡಣೆಯಾಗಿರುತ್ತವೆ ಎಂದು ಸಾಧಿತವಾಯಿತು ಕೂಡ. ಇದು ಎಕ್ಸ್‌ಕಿರಣಶಾಸ್ತ್ರದ ಹಾಗೂ ಸ್ಫಟಿಕರಚನಾ ವಿಶ್ಲೇಷಣೆಯ ವಿಧಾನಗಳ ವಿಶೇಷ ಬೆಳವಣಿಗೆಗೆ ನೆರವಾಯಿತೆನ್ನಬಹುದು. 1913ರಲ್ಲಿ ಡಬ್ಲ್ಯು.ಎಲ್.ಬ್ರ್ಯಾಗ್ ಎಂಬಾತ ಎಕ್ಸ್ ಕಿರಣ ನಮನ ವಿಧಾನದಿಂದ KCl, NaCl, KBr ಮತ್ತು KI ಸ್ಫಟಿಕಗಳ ರಚನೆಗಳನ್ನು ಕಂಡುಹಿಡಿದ. ಚಾರಿತ್ರಿಕವಾಗಿ ಇದೇ ಮೊಟ್ಟಮೊದಲ ಸ್ಫಟಿಕರಚನಾ ವಿಶ್ಲೇಷಣೆಗಳು. ಮುಂದೆ ಕೆಲವೇ ಖನಿಜಗಳ ಸ್ಫಟಿಕರಚನೆಯನ್ನು ಪಡೆಯಲಾಯಿತು. ಆರ್ಗ್ಯಾನಿಕ್ ಸ್ಫಟಿಕಗಳ ರಚನೆಯನ್ನು ಅರಿಯುವತ್ತ 1930ರ ತರುವಾಯ ಹೆಜ್ಜೆ ಇಡಲಾಯಿತು. ಎಕ್ಸ್ ಕಿರಣ ನಮನವಿಧಾನಗಳನ್ನು ಬರಿಯ ಸ್ಫಟಿಕರಚನೆಯ ವಿಶ್ಲೇಷಣೆಯಲ್ಲಲ್ಲದೆ ಜಾಲಕದ ರಚನೆಯಲ್ಲಿನ ದೋಷಗಳು ಅಥವಾ ಅಪರಿಪೂರ್ಣತೆಗಳನ್ನು ತಿಳಿಯಲು ಕೂಡ ಉಪಯೋಗಿಸಲಾಗುತ್ತದೆ. ಇತ್ತೀಚಿನ ದಿವಸಗಳಲ್ಲಿ ಸ್ಫಟಿಕರಚನಾ ವಿಶ್ಲೇಷಣೆ ಮತ್ತು ಅಪರಿಪೂರ್ಣತೆಗಳ ನಿರ್ಧರಣೆಗಳಲ್ಲಿ ನ್ಯೂಟ್ರಾನ್ ನಮನ ವಿಧಾನಗಳನ್ನೂ ಅನುಸರಿಸಲಾಗುತ್ತಿದೆ.

19ನೆಯ ಶತಮಾನದ ಅಂತ್ಯದಲ್ಲಿ ಎಲೆಕ್ಟ್ರಾನಿನ ಶೋಧವಾಯಿತಷ್ಟೆ. ಆಗ ದ್ರವ್ಯದ (ಮ್ಯಾಟರ್) ರಚನೆಯಲ್ಲಿ ಎಲೆಕ್ಟ್ರಾನಿನ ಪಾತ್ರವೇನೆಂದು ತಿಳಿಯುವತ್ತ ಆಸಕ್ತಿ ಸಹಜವಾಗಿ ಬೆಳೆಯತೊಡಗಿತು. ಇದೇ ವೇಳೆಯಲ್ಲಿ ಘನವಸ್ತುಗಳ ವಿವರಣಾತ್ಮಕ ಸಿದ್ಧಾಂತಗಳನ್ನು ಬೆಳೆಸಲು ಪ್ರಯತ್ನಿಸಿದವರಲ್ಲಿ ಪಿ.ಕೆ.ಎಲ್. ಡ್ರೂಡ್ ಮತ್ತು ಎಚ್.ಎ. ಲೊರೆಂಟ್ಸ್ ಎಂಬುವರು ಪ್ರಮುಖರಾದವರು. ಇವರ ಸಿದ್ಧಾಂತದಲ್ಲಿ ಲೋಹಗಳಲ್ಲಿನ ವೇಲೆನ್ಸ್ ಎಲೆಕ್ಟ್ರಾನುಗಳ ಆರೋಪಿತ ವಿದ್ಯುತ್ ಮತ್ತು ಕಾಂತಕ್ಷೇತ್ರಗಳ ಪ್ರಭಾವದಲ್ಲಿ ಮುಕ್ತವಾಗಿ ಚಲಿಸಲು ಸಾಧ್ಯವಿರುವ ಅನಿಲದಂತೆ ವರ್ತಿಸುತ್ತವೆ ಎಂದು ಭಾವಿಸಲಾಗುತ್ತದೆ. ಮುಂದೆ. ಇ. ಮ್ಯಾಡೆಲಂಗ್ ಮತ್ತು ಮ್ಯಾಕ್ಸ್ ಬಾರ್ನ್ ಎಂಬುವರು ಅಯಾನಿಕ ಸ್ಫಟಿಕಗಳ ಎಲೆಕ್ಟ್ರಾನಿಕ್ ಸಿದ್ಧಾಂತವನ್ನು ಬೆಳೆಸಿ ಅಭಿವೃದ್ಧಿಪಡಿಸಿದರು. ಅಯಾನಿಕ ಸ್ಫಟಿಕಗಳ ಸಿದ್ಧಾಂತ, ಈ ವಸ್ತುಗಳ ಗುಣವಿವರಣೆಯಲ್ಲಿ ಸಾಕಷ್ಟು ಯಶಸ್ವಿಯಾದರೂ ಮುಕ್ತ ಎಲೆಕ್ಟ್ರಾನ್ ಸಿದ್ಧಾಂತ ಮಾತ್ರ ಸತತವಾಗಿ ತೊಂದರೆಗಳನ್ನು ಎದುರಿಸಬೇಕಾಯಿತು. 1930ರ ಬಳಿಕ ಬೆಳೆದು ಬಂದ ಅಲೆಬಲವಿಜ್ಞಾನ (ವೇವ್ ಮೆಕ್ಯಾನಿಕ್ಸ್) ಹಾಗೂ ಕ್ವಾಂಟಮ್ ಸಂಖ್ಯಾಕಲನಶಾಸ್ತ್ರದ ಅಳವಡಿಕೆಯಿಂದ ಈ ತೊಂದರೆಗಳನ್ನು ನಿವಾರಿಸಲಾಗಿದೆ.

ಸ್ಫಟಿಕಜಾಲಕದಲ್ಲಿ ಅತ್ತಿಂದಿತ್ತ ಸುಳಿದಾಡುವ ಎಲೆಕ್ಟ್ರಾನುಗಳು ಸಂಪೂರ್ಣವಾಗಿ ಮುಕ್ತವಲ್ಲ, ಜಾಲಕದಲ್ಲಿನ ಸಮಾಂಗತೆಯನ್ನು ಅನುಸರಿಸಿ ಬದಲಾಗುವ ವಿದ್ಯುತ್ ವಿಭವಕ್ಷೇತ್ರದಲ್ಲಿ ಚಲಿಸುತ್ತವೆ ಎಂಬ ಪರಿಗಣನೆಗಳಿಂದ ಘನವಸ್ತುಗಳ ಪಟ್ಟಿ ಸಿದ್ಧಾಂತದ (ಬ್ಯಾಂಡ್ ಥಿಯರಿ) ಜನನವಾಯಿತು. ಈ ಸಿದ್ಧಾಂತದ ವಿಧಾನಗಳಿಂದ ಬೇರೆ ಬೇರೆ ಸ್ಫಟಿಕವರ್ಗಗಳಿಗೆ ಸೇರಿದ ಘನವಸ್ತುಗಳ ನಡುವಣ ಗಮನಾರ್ಹ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಶೇಷ ಸಹಾಯವಾಗಿದೆ. ಸರಳವಾದ ಘನವಸ್ತುಗಳಲ್ಲಿನ ಅಲೆ ಉತ್ಪನ್ನವನ್ನು (ವೇವ್ ಫಂಕ್ಷನ್) ಗಣಿಸುವ ವಿಧಾನವನ್ನು ಈ.ಪಿ.ವೈನರ್ ಮತ್ತು ಎಫ್.ಸೀಟ್ಸ್ ಎಂಬುವರು 1932ರಲ್ಲಿ ಕಂಡುಹಿಡಿದರು. ಮುಂದಿನ ದಶಕದಲ್ಲಿ ಈ ವಿಧಾನವನ್ನು ಜೆ. ಸಿ. ಸ್ಲೇಟರ್, ಎನ್. ಎಫ್. ಮಾಟ್, ಸಿ. ಹೆರಿಂಗ್, ಜೆ. ಎಚ್. ವಾನ್ ವ್ಲೆಕ್ ಮೊದಲಾದವರು ಹೆಚ್ಚಿನ ರೀತಿಯಲ್ಲಿ ಬೆಳೆಸಿ ಅಭಿವೃದ್ಧಿಪಡಿಸಿದರು. ಅಲ್ಲಿಂದೀಚೆಗೆ ಈ ವಿಷಯದಲ್ಲಿ ಹತ್ತಾರು ರೀತಿಗಳಲ್ಲಿ ಪ್ರಗತಿಯನ್ನು ಸಾಧಿಸಲಾಗಿದೆ.

ಜಾಲಕಗಳನ್ನು ಆದರ್ಶತೆಯಿಂದ ವಿಚಲಿಸುವ ಅಪರಿಪೂರ್ಣತೆಗಳ ಕಡೆಗೆ ಲಕ್ಷ್ಯವನ್ನು ಹರಿಸಲು ನೆರವಾದದ್ದು ಆದರ್ಶ ಸ್ಫಟಿಕಗಳ ಎಲೆಕ್ಟ್ರಾನಿಕ್ ಗುಣಗಳ ವಿವರಣೆಯ ಪ್ರಯತ್ನಗಳು. ಜಾಲಕದ ಆದರ್ಶ ಜೋಡಣೆಯಲ್ಲಿ ದೋಷಗಳು ಘನವಸ್ತುವಿನ ಗುಣಗಳನ್ನು ಹೇಗೆ ಮಾರ್ಪಡಿಸುತ್ತವೆ ಎಂಬುದನ್ನು ಅಧ್ಯಯನಮಾಡುವ ಒಂದು ಹೊಸ ಶಾಸ್ತ್ರಭಾಗವೇ ಇದರಿಂದಾಗಿ ಜನಿಸಿತು. 1940ರವರೆಗೂ ಶೈಶವಾವಸ್ಥೆಯಲ್ಲಿದ್ದ ಈ ಶಾಸ್ತ್ರಭಾಗ ಮುಂದಕ್ಕೆ ಬಹುಬೇಗ ಬೆಳೆದು 1950ರ ವೇಳೆಗೆ ಒಂದು ಪ್ರೌಢ ಶಾಸ್ತ್ರವೇ ಆಯಿತೆನ್ನಬಹುದು. ಆದರ್ಶಜಾಲಕದ ಭೌತಗುಣಗಳನ್ನು ದೋಷಗಳು ಗಮನಾರ್ಹ ರೀತಿಯಲ್ಲಿ ಬದಲಾಯಿಸುತ್ತವೆ. ಇದರಿಂದ ಅಶುದ್ಧತೆಯ ಅರೆವಾಹಕಗಳ (ಇಂಪ್ಯೂರಿಟಿ ಸೆಮಿಕಂಡಕ್ಟರ್ಸ್) ಕ್ರಿಯೆ, ಸ್ಫಟಿಕಗಳ ಪ್ಲಾಸ್ಟಿಕ್ ವಿರೂಪನ (ಡಿಫಾರ್ಮೇಷನ್), ತನ್ಯತೆ (ಡಕ್ಟಿಲಿಟಿ), ಅಯಾನಿಕ ಸ್ಫಟಿಕಗಳಲ್ಲಿನ ವಿದ್ಯುದ್ವಾಹಕತ್ವ ಮುಂತಾದ ಪ್ರಕ್ರಿಯೆಗಳನ್ನು ವಿವರಿಸಲು ಸಾಧ್ಯವಾಗಿದೆ.

ಘನಸ್ಥಿತಿಯ ವಿದ್ಯಮಾನದ ಅರ್ಥವಿಸುವಿಕೆಯಲ್ಲಿನ ಹೊಸ ಹೆಜ್ಜೆಯೆಂದರೆ ಘನ ವಸ್ತುಗಳ ಮೇಲ್ಮೈಯ ಭೌತಲಕ್ಷಣ ಹಾಗೂ ಗುಣಗಳ ಅಧ್ಯಯನ. ಉತ್ತೇರಣೆ (ಕ್ಯಾಟಾಲಿಸಿಸ್), ಅಧಿಶೋಷಣೆ (ಅಬ್‌ಸಾರ್ಪ್‌ಷನ್) ಇಂಥ ರಾಸಾಯನಿಕ ಪ್ರಕ್ರಿಯೆಗಳಲ್ಲಿ ಮೇಲ್ಮೈಯ ಪ್ರಾಮುಖ್ಯದ ಬಗ್ಗೆ ನಮಗೆ ಸಾಕಷ್ಟು ತಿಳಿದಿದೆ. ಘನವಸ್ತುಗಳಿಂದ ಎಲೆಕ್ಟ್ರಾನುಗಳ ಉಷ್ಣ ಹಾಗೂ ದ್ಯುತಿವಿಸರ್ಜನೆಯ ಪ್ರಕ್ರಿಯೆಯಲ್ಲಿ ಮೇಲ್ಮೈಯ ಗುಣಗಳು ವಿಸರ್ಜನೆಯನ್ನು ಗಣನೀಯವಾಗಿ ನಿರ್ಧರಿಸುತ್ತವೆ. ಮೇಲ್ಮೈಗೆ ಹತ್ತಿರುವಿರುವ ಎಲೆಕ್ಟ್ರಾನುಗಳಿಗೆ ಉಳಿದ ಎಲೆಕ್ಟ್ರಾನ್‌ಗಳಿಗಿಂತ ವಿಶಿಷ್ಟವಾದ ಶಕ್ತಿಮಟ್ಟಗಳಿರುತ್ತವೆ. ಈ ಮೇಲ್ಮೈ ಶಕ್ತಿಮಟ್ಟಗಳಲ್ಲಿನ ಎಲೆಕ್ಟ್ರಾನುಗಳು ಲೋಹಗಳ ಹಾಗೂ ಅವಾಹಕಗಳ ಸಂಪರ್ಕ ಗುಣಗಳನ್ನು ಬಹುಮಟ್ಟಿಗೆ ನಿರ್ಧರಿಸುತ್ತವೆ. ಇಂದು ಮೇಲ್ಮೈ ಭೌತ ವಿಜ್ಞಾನ(ಸರ್ಫೇಸ್ ಫಿಸಿಕ್ಸ್) ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕ್ಷೇತ್ರಗಳೆರಡರಲ್ಲೂ ಹೆಚ್ಚಿನ ಮುನ್ನಡೆಯನ್ನು ಸಾಧಿಸಿದೆ.

**ಘನವಸ್ತುಗಳ ವರ್ಗೀಕರಣ :** ಘನವಸ್ತುಗಳನ್ನು ವಿವಿಧ ವರ್ಗಗಳಾಗಿ ವಿಂಗಡಿಸುವಲ್ಲಿ ಸಾಮಾನ್ಯವಾಗಿ ಎರಡು ವಿಧಾನಗಳನ್ನು ಅನುಸರಿಸಬಹುದು. ಘನವಸ್ತುಗಳ ವೈದ್ಯುತ, ಕಾಂತೀಯ, ಉಷ್ಣೀಯ, ದ್ಯುತೀಯ ಹಾಗೂ ಯಾಂತ್ರಿಕ ಗುಣಗಳನ್ನು ಆಧರಿಸಿ ಮಾಡಲಾಗುವ ವರ್ಗೀಕರಣ ಒಂದು ಬಗೆಯದಾದರೆ ಘನವಸ್ತುವಿನಲ್ಲಿನ ಪರಮಾಣುಗಳ ನಡುವಿನ ಬಂಧಗಳನ್ನು (ಬಾಂಡ್ಸ್) ಆಧರಿಸಿ ಮಾಡುವ ವರ್ಗೀಕರಣ ಇನ್ನೊಂದು ಬಗೆಯದು. ಹೀಗೆಂದ ಮಾತ್ರಕ್ಕೆ ಈ ಎರಡೂ ರೀತಿಯ ವರ್ಗೀಕರಣಗಳು ಸಂಪೂರ್ಣವಾಗಿ ಸ್ವತಂತ್ರವಾದವೇನಲ್ಲ; ಒಂದು ಇನ್ನೊಂದನ್ನು ಬಹುಮಟ್ಟಿಗೆ ಪ್ರತಿಧ್ವನಿಸುತ್ತದೆ. ಘನವಸ್ತುಗಳಲ್ಲಿನ ಪರಮಾಣುಗಳನ್ನು ಹಲವಾರು ಸನ್ನಿವೇಶಗಳಲ್ಲಿ ದೃಢವಾದ ಗೋಳಗಳೆಂದು ಪರಿಗಣಿಸಿದರೆ ಸಾಕಾಗುತ್ತದೆ. ಇಂಥ ಗೋಳಗಳ ವಿವಿಧ ರೀತಿಯ ಜೋಡಣೆಯಿಂದ ಸ್ಫಟಿಕ ರಚನೆ ಉಂಟಾಗುತ್ತದೆಂದು ಹೇಳಬಹುದು. ಈ ಗೋಳಗಳನ್ನು, ಯಾವುದೇ ರೀತಿಯ ಜೋಡಣೆಯಲ್ಲಿ, ನಿರ್ದಿಷ್ಟ ಜಾಗಗಳಲ್ಲಿ ಕಟ್ಟಿ ಹಿಡಿಯುವ ಶಕ್ತಿ ಯಾವುದು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಶಕ್ತಿ ಬಹುಮಟ್ಟಿಗೆ, ಧನವಿದ್ಯುದಾವಿಷ್ಟ ನ್ಯೂಕ್ಲಿಯಸುಗಳ ಮತ್ತು ಋಣವಿದ್ಯುದಾವಿಷ್ಟ ಎಲೆಕ್ಟ್ರಾನುಗಳ ಪರಸ್ಪರ ಕೂಲಾಂಬ್ ಆಕರ್ಷಣೆಯಿಂದ ಜನಿಸುತ್ತದೆ ಎನ್ನಬಹುದು. ಕಾಂತೀಯ ಹಾಗೂ ಇತರ ಅಂತರಕ್ರಿಯೆಗಳಿಂದಲೂ ಘನವಸ್ತುವಿನ ಸಂಸಕ್ತಿ ಶಕ್ತಿಗೆ (ಕೊಹಿಷನ್ ಎನರ್ಜಿ) ಕೊಡುಗೆಗಳಿದ್ದರೂ ಕೂಲಾಂಬ್ ಆಕರ್ಷಣೆಗೆ ಹೋಲಿಸಿದಂತೆ ಇವು ಅತ್ಯಲ್ಪವಾಗಿರುತ್ತವೆ.




ಚಿತ್ರ 1

ಪರಮಾಣುಗಳ ಒಟ್ಟುಗೂಡಿಕೆ ಸ್ಥಿರವ್ಯವಸ್ಥೆ (ಸ್ಟೇಬಲ್ ಸಿಸ್ಟಮ್) ಆಗ ಬೇಕಾದರೆ ವ್ಯವಸ್ಥೆಯ ಒಟ್ಟು ಶಕ್ತಿ E (ಚಲನಶಕ್ತಿ + ವಿಭವಶಕ್ತಿ) ವ್ಯವಸ್ಥೆಯಲ್ಲಿನ ಸಮಸ್ತ ಪರಮಾಣುಗಳು ದೂರದೂರವಿದ್ದು ಸ್ವತಂತ್ರವಾಗಿರುವಾಗ ಇರುವ ಒಟ್ಟು ಶಕ್ತಿ $E'$ ಗಿಂತ ಕಡಿಮೆಯಾಗಿರಬೇಕು.

ಈ ಶಕ್ತಿ ವ್ಯತ್ಯಾಸ E'–E ವ್ಯವಸ್ಥೆಯ ಸಂಸಕ್ತಿಶಕ್ತಿ. ಇದಲ್ಲದೆ ವ್ಯವಸ್ಥೆಯ ಸ್ಥಿರತೆಗೆ ಪರಮಾಣುಗಳ ಅಂತರಕ್ರಿಯೆ, ನಡುವಣ ದೂರ ಜಾಸ್ತಿಯಿದ್ದಾಗ, ಆಕರ್ಷಕವಾಗಿಯೂ ನಡುವಣ ದೂರ ತೀರ ಕಡಿಮೆಯಾದಾಗಿ ವಿಕರ್ಷಕವಾಗಿಯೂ ಇರಬೇಕೆಂಬುದು ಒಂದು ಸಾಮಾನ್ಯ ನಿಯಮ. ಎರಡು ಪರಮಾಣುಗಳ ಅಂತರಕ್ರಿಯಾಶಕ್ತಿ (ಇಂಟರ್ ಆ್ಯಕ್ಷನ್ ಎನರ್ಜಿ) (ಪರಮಾಣುಗಳ ಅಂತರ ಅನಂತವಾಗಿದ್ದಾಗ ಶೂನ್ಯವೆಂದಿಟ್ಟುಕೊಂಡರೆ) ನಡುವಣ ದೂರದೊಡನೆ ಹೇಗೆ ವ್ಯತ್ಯಾಸವಾಗುವುದೆಂದು ಚಿತ್ರ (1)ರಲ್ಲಿ ತೋರಿಸಲಾಗಿದೆ.

ಶೂನ್ಯ ಉಷ್ಣತೆಯಲ್ಲಿರುವ (0 K) ಘನವಸ್ತುವಿನ ಸ್ಫಟಿಕವನ್ನು ಅದೇ ಉಷ್ಣತೆಯಲ್ಲಿ ಸ್ವತಂತ್ರ ಪರಮಾಣುಗಳನ್ನಾಗಿ ಬೇರ್ಪಡಿಸಲು ಬೇಕಾಗುವ ಶಕ್ತಿಯನ್ನು (ಅಂದರೆ ಸಂಸಕ್ತಿಶಕ್ತಿಯನ್ನು) ಪಟ್ಟಿ (1)ರಲ್ಲಿ ಕೆಲವು ವಸ್ತುಗಳಿಗೆ ಕೊಡಲಾಗಿದೆ. ವಸ್ತುವಿನಿಂದ ವಸ್ತುವಿಗೆ ಸಂಸಕ್ತಶಕ್ತಿಯಲ್ಲಿ ಗಮನಾರ್ಹ ಬದಲಾವಣೆಯನ್ನು ಈ ಪಟ್ಟಿಯಲ್ಲಿ ಕಾಣಬಹುದು. ಜಡ ಅನಿಲಗಳ ಸ್ಫಟಿಕಗಳ ಬಂಧನ (ಬೈಂಡಿಂಗ್) ಬಹು ದುರ್ಬಲವಾಗಿದ್ದರೆ ಟಂಗ್‌ಸ್ಟನಿನಂಥ ಲೋಹ ಸ್ಫಟಿಕಗಳಲ್ಲಿ ಅತಿ ಪ್ರಬಲವಾದ ಬಂಧನವಿರುತ್ತದೆ.

**ಪಟ್ಟಿ 1 : ಘನವಸ್ತುಗಳ ಸಂಸಕ್ತಿಶಕ್ತಿಗಳು**

| ಘನವಸ್ತು | | ಸಂಸಕ್ತಿಶಕ್ತಿ K cal/mole |
|---|---|---|
| ಆರ್ಗಾನ್ | ... | 1.85 |
| ಕ್ರಿಪ್ಟಾನ್ | ... | 2.67 |
| ಸೋಡಿಯಮ್ | ... | 26.0 |
| ಕ್ಯಾಲ್ಸಿಯಮ್ | ... | 42.1 |
| ಪೊಟ್ಯಾಸಿಯಮ್ | ... | 21.7 |
| ಬೆಳ್ಳಿ | ... | 68.3 |
| ಕಬ್ಬಿಣ | ... | 98.9 |
| ತಾಮ್ರ | ... | 80.8 |
| ಸತು | ... | 31.3 |
| ಚಿನ್ನ | ... | 87.3 |
| ಟಂಗ್‌ಸ್ಟನ್ | ... | 200 |
| ಇಂಗಾಲ (ವಜ್ರ) | ... | 170.00 |

ಸ್ಫಟಿಕಗಳಲ್ಲಿ ವ್ಯಾನ್‌ಡರ್‌ವಾಲ್ ಬಂಧ, ಅಯಾನಿಕ್ ಬಂಧ, ಲೋಹಬಂಧ, ಸಹವೇಲೆಂಟ್ ಬಂಧ ಎಂಬ ನಾಲ್ಕು ರೀತಿಯ ಬಂಧಗಳನ್ನು ಕಾಣಬಹುದು. ಇವುಗಳಿಗೆ ಉದಾಹರಣೆಯಾಗಿ ಜಡ ಅನಿಲಗಳ ಸ್ಫಟಿಕಗಳನ್ನು, ಸೋಡಿಯಮ್ ಕ್ಲೋರೈಡಿನಂಥ ಲವಣ ಸ್ಫಟಿಕಗಳು, ಲೋಹಗಳ ಸ್ಫಟಿಕಗಳು, ಇಂಗಾಲದಂಥ (ವಜ್ರ) ಸ್ಫಟಿಕಗಳನ್ನು ಅನುಕ್ರಮವಾಗಿ ಹೆಸರಿಸಬಹುದು.

ವ್ಯಾನ್‌ಡರ್‌ವಾಲ್ ಬಂಧದಲ್ಲಿ ತಟಸ್ಥ ಪರಮಾಣುಗಳು (ನ್ಯೂಟ್ರಲ್ ಆ್ಯಟಮ್ಸ್) ವಿದ್ಯುದಾವೇಶದ ಏರಿಳಿತಗಳಿಂದ (ಫ್ಲಕ್ಚುಏಷನ್ಸ್) ಜನಿಸುವ ದುರ್ಬಲ ಆಕರ್ಷಕ ಬಲಗಳಿಂದ ಬಂಧಿಸಲ್ಪಟ್ಟಿರುತ್ತವೆ. ಈ ಸ್ಫಟಿಕಗಳ ರಚನೆಯಲ್ಲಿ ಪರಮಾಣುಗಳು ಸಾಧ್ಯವಾದಷ್ಟೂ ಹತ್ತಿರ ಸೇರಿಕೊಂಡಿರುತ್ತವೆ. $^3$He ಮತ್ತು $^4$He ಗಳನ್ನುಳಿದು (**ನೋಡಿ– ಕ್ವಾಂಟಂ– ಸಂಖ್ಯಾಕಲನವಿಜ್ಞಾನ**) ಬೇರೆ ಜಡ ಅನಿಲಗಳ ಸ್ಫಟಿಕಗಳಿಗೆ ಇರುವ ರಚನೆ ಒತ್ತೊತ್ತಾಗಿ ಗಿಡಿದ (ಪ್ಯಾಕ್ಡ್) ಮುಖಕೇಂದ್ರಿತ ಘನದಂತೆ (ಫೇಸ್‌ಸೆಂಟರ್ಡ್ ಕ್ಯೂಬಿಕ್) ಉಂಟು (ಚಿತ್ರ 2). ವ್ಯಾನ್‌ಡರ್‌ವಾಲ್ ಬಂಧವಿರುವ ಈ ಸ್ಫಟಿಕಗಳನ್ನು ಆಣ್ವಿಕ ಸ್ಫಟಿಕಗಳೆಂದೂ ಕರೆಯುವುದುಂಟು.

ಪರಸ್ಪರ ವಿರುದ್ಧ ವಿದ್ಯುದಾವೇಶವುಳ್ಳ ಅಯಾನುಗಳ ಪ್ರಬಲವಾದ ಕೂಲಾಂಬ್ ಆಕರ್ಷಣೆಯಿಂದ ಅಯಾನಿಕ್ ಬಂಧ ಉಂಟಾಗುತ್ತದೆ. ಈ ಬಂಧವುಳ್ಳ ಸ್ಫಟಿಕಗಳಿಗೆ ಅಯಾನಿಕ್ ಸ್ಫಟಿಕಗಳೆಂದು ಹೆಸರು. ಕ್ಷಾರ ಹ್ಯಾಲೈಡುಗಳ ಸ್ಫಟಿಕಗಳನ್ನು ಪ್ರರೂಪೀ (ಟಿಪಿಕಲ್) ಅಯಾನಿಕ್ ಸ್ಫಟಿಕಗಳೆನ್ನಬಹುದು. ಪ್ರಬಲವಾದ ಬಂಧದಿಂದಾಗಿ ಈ ವಸ್ತುಗಳಿಗೆ ಉನ್ನತ ದ್ರವನ ಬಿಂದು, ಅಲ್ಪ ಉಷ್ಣ ವಿಕಸನದಂಥ (ಲೋ ಥರ್ಮಲ್ ಎಕ್ಸ್‌ಪ್ಯಾನ್‌ಷನ್) ಗುಣಗಳು ಉಂಟಾಗುತ್ತವೆ. ಇದಲ್ಲದೆ ಈ ಲವಣಗಳಲ್ಲಿ, ಸಾಮಾನ್ಯವಾಗಿ, ಉಷ್ಣತೆಯೊಡನೆ ಏರುವ ವಾಹಕತ್ವವೂ (ಅಯಾನಿಕ್ ವಾಹಕತ್ವ) ಕಂಡುಬರುತ್ತದೆ. ಒಂದು ಸರಳ ಅಯಾನಿಕ ಸ್ಫಟಿಕದಲ್ಲಿನ ಪರಮಾಣುಗಳ ಎಲೆಕ್ಟ್ರಾನ್ ಚಿಪ್ಪಿನ ರಚನೆಯನ್ನು ಗಮನಿಸಿದರೆ ಈ ಬಂಧ ಹೇಗೆ ಉಂಟಾಗುತ್ತದೆಂದು ತಿಳಿಯುತ್ತದೆ. ಸೋಡಿಯಮ್ ಕ್ಲೋರೈಡಿನಲ್ಲಿ ಸೋಡಿಯಮ್ ಮತ್ತು ಕ್ಲೋರೀನ್ ಪರಮಾಣುಗಳ ಎಲೆಕ್ಟ್ರಾನ್ ಚಿಪ್ಪಿನ ರಚನೆಗಳು ಅನುಕ್ರಮವಾಗಿ $1s^2 2s^2 2p^6 3s$ ಮತ್ತು $1s^2 2s^2 2p^6 3s^2 3p^5$ ಆಗಿರುತ್ತವೆ. ಹೆಚ್ಚು ಕಡಿಮೆ ಪೂರ್ಣವಾದ ಚಿಪ್ಪಿನ ರಚನೆಯುಳ್ಳ ಪರಮಾಣುಗಳು ಪರಿಪೂರ್ಣ ಚಿಪ್ಪಿನ ರಚನೆಯನ್ನು ಪಡೆಯಲು ಪ್ರಯತ್ನಿಸುತ್ತವೆಯಾದ್ದರಿಂದ ಸೋಡಿಯಮಿನ 3s ಎಲೆಕ್ಟ್ರಾನನ್ನು ಕ್ಲೋರೀನ್ ತೆಗೆದುಕೊಂಡು ತನ್ನ 3p ಚಿಪ್ಪನ್ನು ಪೂರ್ಣವಾಗಿ ತುಂಬಿಸಿಕೊಳ್ಳುತ್ತದೆ. ಇದರಿಂದ ಪರಿಪೂರ್ಣ ಚಿಪ್ಪಿನ ರಚನೆಯುಳ್ಳ ಧನಾತ್ಮಕ ಸೋಡಿಯಮ್ ಮತ್ತು ಋಣಾತ್ಮಕ ಕ್ಲೋರೀನ್ ಅಯಾನುಗಳು ಉಂಟಾಗಿ ಪರಸ್ಪರ ಕೂಲಾಂಬ್ ಆಕರ್ಷಣೆಯಿದ ಬಂಧನಕ್ಕೆ ಒಳಗಾಗುತ್ತವೆ. ಕೂಲಾಂಬ್ ಆಕರ್ಷಣೆ ಕೇವಲ ಅಯಾನುಗಳ ನಡುವಣ ದೂರವನ್ನು ಅವಲಂಬಿಸುವುದರಿಂದ ಈ ಆಕರ್ಷಕ ಬಲಕ್ಕೆ ದಿಶಾವಲಂಬಿ (ಡೈರೆಕ್ಷನಲ್)ಗುಣಗಳಿರುವುದಿಲ್ಲ. ಇದರಿಂದ ಪ್ರತಿಯೊಂದು ಅಯಾನೂ (ಧನ ಅಥವಾ ಋಣ) ತನ್ನ ವಿರುದ್ಧ ವಿದ್ಯುದಾವೇಶದ ಅಯಾನುಗಳನ್ನು ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಹೊಂದಲು ಪ್ರಯತ್ನಿಸುತ್ತದೆ. ಈ ಕಾರಣದಿಂದ ಸೋಡಿಯಮ್ ಕ್ಲೋರೈಡಿನ ಸ್ಫಟಿಕದಲ್ಲಿ ಪ್ರತಿಯೊಂದು ಅಯಾನಿಗೂ (ವಿರುದ್ಧ ವಿದ್ಯುದಾವೇಶವುಳ್ಳ) ಆರು ನೆರೆ ಅಯಾನುಗಳಿರುತ್ತವೆ. ಚಿತ್ರ (3)ರಲ್ಲಿ ಅಯಾನಿಕ ಬಂಧವುಳ್ಳ ಎರಡು ಸ್ಫಟಿಕರಚನೆಗಳನ್ನು ತೋರಿಸಲಾಗಿದೆ.



**ಚಿತ್ರ 2. ಮುಖಕೇಂದ್ರಿತ ಘನಿಕ**




(a) (b)

**ಚಿತ್ರ 3. ಸೀಸಿಯಮ್ ಕ್ಲೋರೈಡಿನ ರಚನೆಯನ್ನು (*a*) ಚಿತ್ರದಲ್ಲೂ ಸೋಡಿಯಮ್ ಕ್ಲೋರೈಡಿನ ರಚನೆಯನ್ನು (*b*) ಚಿತ್ರದಲ್ಲೂ ತೋರಿಸಿದೆ**

ಎರಡು ಪರಮಾಣುಗಳು ಪರಸ್ಪರ ವಿರುದ್ಧ ಗಿರಕಿ (ಸ್ಪಿನ್) ಇರುವ ಒಂದು ಜೊತೆ ಎಲೆಕ್ಟ್ರಾನುಗಳನ್ನು ತಮ್ಮಲ್ಲಿ ಹಂಚಿಕೊಳ್ಳುವುದರಿಂದ ಸಹವೇಲಂಟ್ (ಕೋವೇಲಂಟ್) ಬಂಧ ಉಂಟಾಗುತ್ತದೆ. ಇದು ತಟಸ್ಥ ಪರಮಾಣುಗಳ ನಡುವಿನ ಬಂಧವಾದರೂ ಬಹಳ ಪ್ರಬಲವಾದ ಬಂಧವಾಗಿರುತ್ತದೆ. ಎರಡು ಪರಮಾಣುಗಳಿರುವ $H_2$ ಅಣುವಿನ ಬಂಧ ಸಹವೇಲೆಂಟ್ ಬಂಧಕ್ಕೆ ಒಂದು ಸರಳವಾದ ಉದಾಹರಣೆ (ಚಿತ್ರ 4). ವಿನಿಮಯವಾಗುವ (ಎಕ್ಸ್‌ಚೇಂಜ್) ಎಲೆಕ್ಟ್ರಾನುಗಳ ಗಿರಕಿ ಪರಸ್ಪರ ವಿರುದ್ಧವಾಗಿರುವಾಗ ಮಾತ್ರ ಈ ಬಂಧ ಪ್ರಬಲವಾಗಿರುತ್ತದೆ. ಎಲೆಕ್ಟ್ರಾನ್ ವಿನಿಮಯದಿಂದ ಜನಿಸುವ ಈ ಅಂತರಕ್ರಿಯೆಗೆ ವಿನಿಮಯ ಅಂತರಕ್ರಿಯೆ ಎಂದು ಹೆಸರು.

ಸಹವೇಲಂಟ್ ಬಂಧದ ಸಂಸಕ್ತ ಶಕ್ತಿಯನ್ನು ಅಯಾನಿಕ್ ಬಂಧದ ಸಂಸಕ್ತ ಶಕ್ತಿಯೊಡನೆ ಹೋಲಿಸಬಹುದು. ಉದಾಹರಣೆಗೆ ಹೇಳುವುದಾದರೆ ವಜ್ರದಲ್ಲಿನ ಎರಡು ಇಂಗಾಲದ ತಟಸ್ಥ ಪರಮಾಣುಗಳ ನಡುವಣ ಸಹವೇಲಂಟ್ ಸಂಸಕ್ತ ಶಕ್ತಿ (ಬೇರ್ಪಡಿಸಿದ ತಟಸ್ಥ ಇಂಗಾಲದ ಪರಮಾಣುಗಳಿಗೆ ಹೋಲಿಸಿದಂತೆ) 170,000 cal/mole ಇರುತ್ತದೆ (ಪಟ್ಟಿ 1) ಅಯಾನಿಕ ಬಂಧಕ್ಕೆ ಯಾವ ದಿಶಾವಲಂಬಿ ಗುಣಗಳೂ ಇರುವುದಿಲ್ಲ. ಆದರೆ ಸಹವೇಲೆಂಟ್ ಬಂಧದಲ್ಲಿ ತೀವ್ರ ದಿಶಾವಲಂಬಿ ಗುಣಗಳಿರುತ್ತವೆ.

ಸಹವೇಲಂಟ್ ಬಂಧದ ಈ ದಿಶಾವಲಂಬನೆಯಿಂದಾಗಿ ಇಂಗಾಲ (ವಜ್ರ), ಸಿಲಿಕಾನ್ ಮತ್ತು ಜರ್ಮೇನಿಯಮುಗಳಲ್ಲಿ ಒತ್ತಾಗಿ ತುಂಬಿರದ, ಪ್ರತಿಯೊಂದು ಪರಮಾಣುವಿಗೂ ನಾಲ್ಕೇ ನೆರೆಯ ಪರಮಾಣುಗಳಿರುವ, ವಜ್ರದಂಥ ಸ್ಫಟಿಕ ರಚನೆ ಕಂಡುಬರುತ್ತದೆ. ಪರಮಾಣುಗಳನ್ನು ದೃಢವಾದ ಗೋಳಗಳೆಂದು ಪರಿಗಣಿಸಿ, ಒಂದು ನಿರ್ದಿಷ್ಟ ಗಾತ್ರವನ್ನು




**ಚಿತ್ರ 4. ಅಣುವಿನ ಸಂಸಕ್ತಿಶಕ್ತಿ : ಗಿರಕಿಗಳು ಪರಸ್ಪರ ವಿರುದ್ಧವಾಗಿದ್ದಾಗ ಬಂಧ ಪ್ರಬಲವಾಗಿರುತ್ತದೆ**

ಈ ಗೋಳಗಳಿಂದ ತುಂಬಿದರೆ, ಒತ್ತಾಗಿ ಗಿಡಿದ ಸ್ಫಟಿಕ ರಚನೆಯಲ್ಲಿ ಈ ಗಾತ್ರದ ಶೇ. 74 ಭಾಗ ಆಕ್ರಮಿತವಾದರೆ, ವಜ್ರದಂಥ ಸ್ಫಟಿಕರಚನೆಯಲ್ಲಿ (ಚಿತ್ರ 5) ಕೇವಲ 34% ಭಾಗ ಮಾತ್ರ ಆಕ್ರಮಿತವಾಗಿರುತ್ತದೆ. ಇದಲ್ಲದೆ ವಜ್ರದ ರಚನೆಯಲ್ಲಿ ಹನ್ನೆರಡು ನೆರೆಯ ಪರಮಾಣುಗಳಿರುತ್ತವೆ.



**ಚಿತ್ರ 5. ವಜ್ರದ ರಚನೆ. ಚತುಷ್ಫಲಕದ ಮಧ್ಯದಲ್ಲಿರುವ ಪರಮಾಣುವಿಗೆ ಮಾತ್ರ ಎಲ್ಲ ಬಂಧಗಳನ್ನೂ ತೋರಿಸಲಾಗಿದೆ**

ಸಹವೇಲಂಟ್ ಸ್ಫಟಿಕಗಳೆಂದು ಕರೆಯಲಾಗುವ ಈ ವರ್ಗದಲ್ಲಿನ ವಿಶೇಷ ಸಂಗತಿಯೆಂದರೆ ಒಂದೇ ವರ್ಗಕ್ಕೆ ಸೇರಿದ ಈ ಸ್ಫಟಿಕಗಳ ಗುಣಗಳಲ್ಲಿ ಕಂಡುಬರುವ ಗಣನೀಯ ವ್ಯತ್ಯಾಸಗಳು. ವಜ್ರ (ಇಂಗಾಲ), ಪ್ರಕೃತಿಯಲ್ಲಿ ಕಂಡುಬರುವ ಕಠಿಣತಮವಾದ ಮತ್ತು ಉನ್ನತ ದ್ರವನಬಿಂದು (~3280$^0$K) ಇರುವ ಘನವಸ್ತುವಾದರೆ ಇದೇ ವರ್ಗಕ್ಕೆ ಸೇರಿದ ತವರ ಅತಿ ಕಡಿಮೆ ದ್ರವನ ಬಿಂದು (~505$^0$K) ಇರುವ ಮೆದುವಾದ ಘನವಸ್ತು. ಸಹ ವೇಲಂಟ್ ಸ್ಫಟಿಕಗಳ ವಿದ್ಯುತ್ ಗುಣಗಳಲ್ಲಿಯೂ ಸ್ಫಟಿಕದಿಂದ ಸ್ಫಟಿಕಕ್ಕೆ ಅಪಾರ ವ್ಯತ್ಯಾಸಗಳನ್ನು ನೋಡಬಹುದು; ವಜ್ರ ಒಳ್ಳೆಯ ಅವಾಹಕವಾದರೆ, ತವರ ಒಳ್ಳೆಯ ವಿದ್ಯುದ್ವಾಹಕ, ಜರ್ಮೇನಿಯಮ್ ಮತ್ತು ಸಿಲಿಕಾನುಗಳಾದರೋ ಅರೆವಾಹಕಗಳು.

ಇಲ್ಲಿಯವರೆಗೆ ನೆರೆಯ ಪರಮಾಣುಗಳ ನಡುವೆ ಆಗುವ ಎಲೆಕ್ಟ್ರಾನ್ ವಿನಿಮಯದಿಂದ ಬಂಧಿಸಲ್ಪಡುವ ಘನ ಸ್ಫಟಿಕಗಳನ್ನು ಪರಿಗಣಿಸಿದೆವು. ಇಂಥ ಬಂಧಗಳಾಗಲು ಅಸಾಧ್ಯವಾದಾಗ ಇನ್ನೊಂದು ರೀತಿಯ ಬಂಧ ಉಂಟಾಗಬಹುದು. ಕೇವಲ ನೆರೆಯ ಪರಮಾಣುಗಳು ಎಲೆಕ್ಟ್ರಾನುಗಳನ್ನು ಹಂಚಿಕೊಳ್ಳುವ ಬದಲು ಪರಮಾಣುಗಳೆಲ್ಲವೂ ಒಟ್ಟಿಗೆ ಲಭ್ಯವಿರುವ ವೇಲನ್ಸ್ ಎಲೆಕ್ಟ್ರಾನುಗಳನ್ನು ಹಂಚಿಕೊಳ್ಳುವುದರಿಂದ ಉಂಟಾಗುವ ಈ ಬಂಧಕ್ಕೆ ಲೋಹಬಂಧವೆಂದು ಹೆಸರು. ಲೋಹಬಂಧವಿರುವ ಸ್ಫಟಿಕಗಳನ್ನು, ಅಂದರೆ ಲೋಹಗಳನ್ನು, ಎಲೆಕ್ಟ್ರಾನ್ ಸಮುದ್ರವೊಂದರಲ್ಲಿ ಮುಳುಗಿಸಿದ ಧನ ಅಯಾನುಗಳ ಜಾಲಕವೆಂದು ಬಣ್ಣಿಸಬಹುದು, ಲೋಕಗಳ ಸಂಸಕ್ತ ಶಕ್ತಿ (ಪಟ್ಟಿ 1) ಧನ ಅಯಾನುಗಳ ಜಾಲಕದಲ್ಲೆಲ್ಲ ಸುಳಿದಾಡುವ ಎಲೆಕ್ಟ್ರಾನುಗಳ ಸಂಕೀರ್ಣ ಅಂತರಕ್ರಿಯೆಯಿಂದಾಗಿ ಜನಿಸುತ್ತದೆ. ಸಹಜವಾಗಿಯೇ ಈ ಸಂಸಂಕ್ತಶಕ್ತಿಯ ವಿವರಣೆ ಕಷ್ಟ, ಕಬ್ಬಿಣ, ಟಂಗ್‌ಸ್ಟನ್ನಿನಂಥ ಸಂಕ್ರಮಣ ಧಾತುಗಳಲ್ಲಿ (ಟ್ರಾನ್ಸಿಷನ್ ಎಲಿಮೆಂಟ್ಸ್) ಸಂಸಕ್ತಶಕ್ತಿಗೆ ಪರಮಾಣುಗಳ ಒಳಗಣ ಅಪೂರ್ಣ ಎಲೆಕ್ಟ್ರಾನ್ ಚಿಪ್ಪುಗಳಲ್ಲಿನ ಎಲೆಕ್ಟ್ರಾನುಗಳೂ ಗಣನೀಯ ಕೊಡುಗೆ ನೀಡುತ್ತವೆ. ಇದರಿಂದ ಈ ಲೋಹಗಳ ಸಂಸಕ್ತಶಕ್ತಿ ಬಹಳ ಹೆಚ್ಚಾಗಿರುತ್ತದೆ. ಕ್ಷಾರಲೋಹಗಳ ಪರಮಾಣುಗಳಲ್ಲಿ ವೇಲನ್ಸ್ ಎಲೆಕ್ಟ್ರಾನನ್ನು ಬಿಟ್ಟರೆ ಉಳಿದ ಎಲ್ಲ ಒಳಚಿಪ್ಪುಗಳೂ ಭರ್ತಿಯಾಗಿರುವುದರಿಂದ ವೇಲನ್ಸ್ ಎಲೆಕ್ಟ್ರಾನ್ ಮತ್ತು ಜಾಲಕದ ಅಂತರಕ್ರಿಯೆಯಿಂದ ಮಾತ್ರ ಸಂಸಕ್ತ ಶಕ್ತಿಜನಿಸುತ್ತದೆ. ಇದರಿಂದ ಕ್ಷಾರಲೋಹಗಳ ಸಂಸಕ್ತಶಕ್ತಿ ಸಾಪೇಕ್ಷವಾಗಿ ಕಡಿಮೆ ಇರುತ್ತದೆ.

ಲೋಹಗಳಲ್ಲಿ ಬಂಧಕ್ಕೆ ಯಾವ ವಿಶೇಷ ದಿಶಾವಲಂಬನೆಯೂ ಇಲ್ಲದಿರುವುದರಿಂದ ಮತ್ತು ಅಯಾನಿಕ್ ಸ್ಫಟಿಕಗಳಲ್ಲಿನಂತೆ ಸ್ಥಳೀಯವಾಗಿ ವಿದ್ಯುತ್ತಾಟಸ್ಥ್ಯ ಇರಬೇಕೆಂಬ ನಿಯಮ ಇಲ್ಲದಿರುವುದರಿಂದ ಪರಮಾಣುಗಳು ಸಾಧ್ಯವಾದಷ್ಟೂ ಒತ್ತಾಗಿ ಸೇರಿಕೊಳ್ಳಲು ಪ್ರಯತ್ನಿಸುತ್ತವೆ. ಆದ್ದರಿಂದ ಲೋಹಗಳಲ್ಲಿ ಸಾಮಾನ್ಯವಾಗಿ (ಪ್ರತಿಯೊಂದು ಪರಮಾಣುವಿಗೂ 12 ನೆರೆಯ ಪರಮಾಣುಗಳಿಗಿರುವ) ಮುಖಕೇಂದ್ರಿತ ಘನಕ, ಒತ್ತಾಗಿ ತುಂಬಿದ ಷಡ್ಭುಜ ಮತ್ತು (8 ನೆರೆಯ ಪರಮಾಣುಗಳಿರುವ) ಕಾಯಕೇಂದ್ರಿತ ಘನಿಕಸ್ಫಟಿಕ ರಚನೆಗಳು ಕಂಡುಬರುತ್ತವೆ (ಚಿತ್ರ 6). ಹೆಚ್ಚಿನ ವಿದ್ಯುತ್ ಮತ್ತು ಉಷ್ಣವಾಹಕತ್ವ, ಬೆಳಕಿಗೆ ಅಪಾರದರ್ಶಕತ್ವ, ವಿದ್ಯುತ್ಕಾಂತ ಅಲೆಗಳ ಪ್ರತಿಫಲನ ಮೊದಲಾದ ಗುಣಗಳು ಲೋಹಗಳನ್ನು ಲಕ್ಷಣಿಸುತ್ತವೆ.




**ಚಿತ್ರ 6. ಒತ್ತಾಗಿ ತುಂಬಿದ ಷಡ್ಭುಜದ ರಚನೆಯನ್ನು (*a*) ಚಿತ್ರದಲ್ಲೂ ಕಾಯಕೇಂದ್ರಿತ ಘನಿಕದ ರಚನೆಯನ್ನು (*b*) ಚಿತ್ರದಲ್ಲೂ ತೋರಿಸಿದೆ**

ಒಂದೇ ಎಲೆಕ್ಟ್ರಾನ್ ಇರುವ ತಟಸ್ಥ ಹೈಡ್ರೋಜನ್ ಪರಮಾಣು ಇನ್ನೊಂದು ಪರಮಾಣುವಿನೊಡನೆ ಮಾತ್ರ ಸಹವೇಲಂಟ್ ಬಂಧವನ್ನು ಹೊಂದಬಹುದು. ಆದರೆ ಕೆಲವು ಸನ್ನಿವೇಶಗಳಲ್ಲಿ ಒಂದು ಹೈಡ್ರೋಜನ್ನಿನ ಪರಮಾಣುವಿನೊಡನೆ ಎರಡು ಪರಮಾಣುಗಳು ಬಂಧ ಹೊಂದುವುದು ಕಂಡುಬಂದಿದೆ. ಬಹುಮಟ್ಟಿಗೆ ಅಯಾನಿಕ್ ಬಂಧವನ್ನು ಹೋಲುವುದೆಂದು ನಂಬಲಾಗಿರುವ ಈ ಬಂಧಕ್ಕೆ (ಬಂಧಶಕ್ತಿ : 0.1 ev/ಪರಮಾಣು) ಹೈಡ್ರೋಜನ್ ಬಂಧ ಎಂದು ಹೆಸರು. ಹೈಡ್ರೋಜನ್ನಿನ ಪರಮಾಣುವಿನ ಅಲ್ಪ ಗಾತ್ರದಿಂದಾಗಿ ಆ ಪರಮಾಣುವಿಗೆ ಎರಡೇ ನೆರೆಯ ಪರಮಾಣುಗಳಿರುತ್ತವೆ. ಹೈಡ್ರೋಜನ್ ಬಂಧ, ನೀರಿನ ($H_2O$) ಅಣುಗಳ ನಡುವಣ ಅಂತರಕ್ರಿಯೆಯ ಪ್ರಮುಖ ಭಾಗವಾಗಿರುತ್ತದೆ. ಮತ್ತು ಅಣುಗಳ ವಿದ್ಯುತ್ ದ್ವಿಧ್ರುವ ಭ್ರಮಣಾಂಕಗಳ (ಎಲೆಕ್ಟ್ರಿಕ್ ಡೈಪೋಲ್ ಮೊಮೆಂಟ್ಸ್) ಆಕರ್ಷಕ ಅಂತರಕ್ರಿಯೆಯೊಡಗೂಡಿ ನೀರು ಹಾಗೂ ಬರ್ಫದ ಅನೇಕ ಆಶ್ಚರ್ಯಕರ ಭೌತಗುಣಗಳಿಗೆ ಕಾರಣವಾಗಿರುತ್ತದೆ.

ಮೇಲೆ ಹೇಳಿದ ಐದು ವಿಧವಾದ ಬಂಧಗಳು ಮತ್ತು ಅವನ್ನು ಅವಲಂಬಿಸಿ ಮಾಡಿದ ಘನ ಸ್ಫಟಿಕಗಳ ವರ್ಗೀಕರಣವನ್ನು ಆದರ್ಶ ಸ್ಫಟಿಕಗಳ ವರ್ಗೀಕರಣವೆನ್ನಬಹುದು. ಇದನ್ನು ವರ್ಗಗಳಲ್ಲಿ ಒಂದು ವರ್ಗಕ್ಕೆ ಸೇರಿದ್ದೆಂದು ನಿಖರವಾಗಿ ಹೇಳಬಹುದೆಂದು ತೋರುತ್ತದೆ. ಆದರೆ ಪ್ರಕೃತಿ ನಾವೆಣಿಸಿದಷ್ಟು ಸರಳವಾಗಿಲ್ಲ. ಎರಡು ಆದರ್ಶ ಸ್ಫಟಿಕ ವರ್ಗಗಳ ನಡುವಣ ವರ್ಗಕ್ಕೆ ಸೇರಿದವೆಂದು ಹೇಳಬೇಕಾಗುವ ಅನೇಕ ಸ್ಫಟಿಕಗಳಿವೆ. ವಜ್ರ ಒಂದು ಆದರ್ಶ ಸಹವೇಲಂಟ್ ಸ್ಫಟಿಕವಾದರೆ, ಕ್ವಾರ್ಟ್ಜ್ ಸ್ಫಟಿಕವನ್ನು ಭಾಗಶಃ ಸಹವೇಲಂಟ್ ಭಾಗಶಃ ಅಯಾನಿಕ್ ಎನ್ನಬೇಕಾಗುತ್ತದೆ. ಇದೇ ರೀತಿ ಅಯಾನಿಕ್ ಮತ್ತು ಸಹವೇಲಂಟ್ ವರ್ಗಗಳೆರಡರ ಮಧ್ಯದಲ್ಲಿ ಬೀಳುವ ಒಂದು ಸ್ಫಟಿಕ ಸರಣಿಯೇ ಇದೆ ಎಂದು ಹೇಳಬಹುದು. ಇಂಥ ವಸ್ತುಗಳ ಸ್ಫಟಿಕ ಬಂಧಗಳು ಎಷ್ಟರಮಟ್ಟಿಗೆ ಅಯಾನಿಕ್ ಅಥವಾ ಸಹವೇಲಂಟ್ ಎಂದು ನಿರ್ಧರಿಸುವುದು ಹಲವು ವೇಳೆ ಅತ್ಯಗತ್ಯವಾದರೂ ಅದು ಅತಿ ಕಠಿಣವಾದ ಕೆಲಸವಾಗುತ್ತದೆ.

ಇಲ್ಲಿಯವರೆಗೆ ಸ್ಫಟಿಕೀಯ ವಸ್ತುಗಳ ವಿವಿಧ ವರ್ಗಗಳನ್ನು ಮಾತ್ರ ಪರಿಶೀಲಿಸಲಾಯಿತು. ಆದರೆ ಪ್ರಕೃತಿಯಲ್ಲಿ ಕಂಡುಬರುವ ಎಲ್ಲ ಘನವಸ್ತುಗಳಿಗೂ ಸ್ಫಟಿಕೀಯ ರಚನೆ ಇರುವುದಿಲ್ಲ. ಗಾಜಿನಂಥ ಅನೇಕ ಅಸ್ಫಟಿಕೀಯ ವಸ್ತುಗಳೂ ಇವೆ. ಇಂಥ ಘನವಸ್ತುಗಳಲ್ಲಿ ಅವುಗಳ

ದ್ರವಪ್ರಾವಸ್ಥೆಯಿಂದ ಸಾಕಷ್ಟು ಬೇಗನೆ, ಪರಮಾಣುಗಳು ಕ್ರಮಬದ್ಧವಾಗಿ ಜೋಡಣೆಯಾಗುವ ಮುನ್ನವೇ, ತಣ್ಣಗೆ ಮಾಡುವುದರಿಂದ ಅಸ್ಫಟಿಕೀಯಪ್ರಾವಸ್ಥೆ ಫಲಿಸುತ್ತದೆಂದು ಹೇಳಬಹುದು. ತತ್ವಶಃ, ಘನೀಭವಿಸಬಲ್ಲ ಯಾವುದೇ ವಸ್ತುವನ್ನು ದ್ರವಪ್ರಾವಸ್ಥೆಯಿಂದ ಸಾಕಷ್ಟು ಬೇಗನೆ ತಣ್ಣಗೆ ಮಾಡುವುದರಿಂದ ಅಸ್ಫಟಿಕೀಯ ಸ್ಥಿತಿಗೆ ತರಬಹುದು. ಅಸ್ಫಟಿಕೀಯ ವಸ್ತುಗಳು ಸಾಮಾನ್ಯವಾಗಿ ದುರ್ಬಲವಾದ ಬಂಧವುಳ್ಳ ದೊಡ್ಡ ಅಣುಗಳಿಂದ ಸಂಯೋಜಿತವಾಗಿರುತ್ತವೆ. ಆದರೆ ಅಸ್ಫಟಿಕೀಯ ವಸ್ತುಗಳ ಅಣು ಅಥವಾ ಪರಮಾಣು ಜೋಡಣೆ ಸ್ಫಟಿಕೀಯ ವಸ್ತುಗಳಲ್ಲಿನಂತೆ ಕ್ರಮಬದ್ಧವಾಗಿರುವುದಿಲ್ಲ. ಈ ವಸ್ತುಗಳಲ್ಲಿ, ಸ್ಥಳೀಯವಾಗಿ, ಜೋಡಣೆ




ಚಿತ್ರ 7. ಬೋರಿಕ್ ಆಕ್ಸೈಡ್ ಗಾಜಿನ ಪರಮಾಣ್ವಕ ರಚನೆ

ಕ್ರಮಬದ್ಧವಾಗಿದ್ದರೂ ಈ ಕ್ರಮಬದ್ಧತೆ ಬಹಳ ದೂರ ಇರುವುದಿಲ್ಲ.ಸ್ಫಟಿಕೀಯ ವಸ್ತುಗಳಲ್ಲಿ ಸಮೀಪವ್ಯಾಪಿ ಮತ್ತು ದೂರವ್ಯಾಪಿ ಕ್ರಮಬದ್ಧತೆಗಳೆರಡೂ ಇದ್ದರೆ ಅಸ್ಫಟಿಕೀಯ ವಸ್ತುಗಳಲ್ಲಿ ಸಮೀಪವ್ಯಾಪಿ ಕ್ರಮಬದ್ಧತೆ ಮಾತ್ರ ಇರುತ್ತದೆ ಎಂದು ಹೇಳಬಹುದು. ಚಿತ್ರ (7)ರಲ್ಲಿ ಬೋರಿಕ್ ಆಕ್ಸೈಡಿನ (B2O3) ಗಾಜಿನಂಥ ಸ್ಥಿತಿಯಲ್ಲಿನ ಪರಮಾಣ್ವಕ ರಚನೆಯನ್ನು ತೋರಿಸಲಾಗಿದೆ. ಇದೇ ತರಹ ಸಿಲಿಕಾನ್ ಗಾಜಿನಲ್ಲಿ ಪ್ರತಿಯೊಂದು ಸಿಲಿಕಾನ್ ಪರಮಾಣುವಿನ ಸುತ್ತಲೂ ಆಕ್ಸಿಜನ್ನಿನ ನಾಲ್ಕು ಪರಮಾಣುಗಳು ಒಂದು ಚತುಷ್ಫಲಕದ (ಟೆಟ್ರಹೆಡ್ರನ್) ರೂಪದಲ್ಲಿ ಆವರಿಸಿರುತ್ತವೆ. ಆಕ್ಸಿಜನ್ನಿನ ಪ್ರತಿಯೊಂದು ಪರಮಾಣುವಿಗೂ ನೆರೆಯ ಪರಮಾಣುಗಳಾಗಿ ಎರಡು ಸಿಲಿಕಾನ್ ಪರಮಾಣುಗಳು ಉಂಟು. ಹೀಗಿದ್ದರೂ ಈ ಎರಡು ಉದಾಹರಣೆಗಳಲ್ಲಿಯೂ ಪರಮಾಣು ಜೋಡಣೆ ಮೂರು ಆಯಾಮಗಳಲ್ಲಿನ ಒಂದು ಪುನರಾವರ್ತಿಸುವ ಜಾಲಕವಾಗಿ ಪರಿಣಮಿಸುವುದಿಲ್ಲ. ಆದ್ದರಿಂದಲೇ ಈ ವಸ್ತುಗಳು ಅಸ್ಫಟಿಕೀಯವಾಗಿ ಪರಿಣಮಿಸುತ್ತವೆ. ಗಾಜುಗಳಿಗಿಂತಲೂ ನಾರಿನಂಥ ಘನವಸ್ತುಗಳಲ್ಲಿ ಕ್ರಮಬದ್ಧತೆ ಹೆಚ್ಚಾಗಿರುತ್ತದೆ. ಈ ವಸ್ತುಗಳ ನಾರಿನಲ್ಲಿರುವ ಉದ್ದ ಸರಪಳಿಯ ಅಣುಗಳಿಗೆ ನಾರಿನ ಅಕ್ಷಕ್ಕೆ ಸಮಾಂತರವಾಗಿ ಸ್ವಲ್ಪಮಟ್ಟಿಗೆ ದೂರವ್ಯಾಪಿ ಕ್ರಮಬದ್ಧತೆ ಇರುವುದು. ಇದೇ ರೀತಿ ರಬ್ಬರ್. ರಬ್ಬರಿನ ಗುಣಗಳನ್ನು ಪ್ರದರ್ಶಿಸುವ ಪ್ಲಾಸ್ಟಿಕ್ಕುಗಳು ಮತ್ತು ಪಾಲಿಮರುಗಳು ಸೆಳೆತಕ್ಕೊಳಗಾದಾಗ ಅರೆಸ್ಫಟಿಕೀಯ ರಚನೆಯನ್ನು ತೋರ್ಪಡಿಸುತ್ತವೆ.

ಮಿಶ್ರಲೋಹಗಳು ಮತ್ತು ರಾಸಾಯನಿಕ ಸಂಯೋಜನೆ : ಸರಳ ಲೋಹಗಳ ಆಕ್ಸೈಡ್ ಮತ್ತು ಕ್ಲೋರೈಡುಗಳು, ಪರ್ಯಾಪ್ತ ಹೈಡ್ರೋಕಾರ್ಬನ್‌ಗಳು ಮೊದಲಾದ ಅಲ್ಪ ವಿದ್ಯುದ್ವಾಹಕತ್ವವಿರುವ ಘನವಸ್ತುಗಳು ರಾಸಾಯನಿಕ ಸಂಯೋಜನೆಯಲ್ಲಿ ವೇಲನ್ಸಿಗೆ ಅನುಗುಣವಾದ ಸಂಯೋಜನೆಯ ಅನುಪಾತದ ನಿಯಮವನ್ನು ಅನುಸರಿಸುತ್ತವೆ. ಆದರೆ ಲೋಹಗಳ ಸಂಯೋಜನೆಯಲ್ಲಿ ಸಾಮಾನ್ಯವಾಗಿ ವೇಲನ್ಸಿಯ ನಿಯಮಗಳು ಪಾಲನೆಯಾಗುವುದಿಲ್ಲ. ಆದ್ದರಿಂದ ಮಿಶ್ರಲೋಹಗಳ ಸಂಯೋಜನೆಯಲ್ಲಿ ವಿವಿಧ ಅನುಪಾತಗಳ ಸಂಯೋಜನೆ ಸಾಧ್ಯವಾಗುತ್ತದೆ.

ಕರಗಿದ ಲೋಹಗಳ ನಿಯಮಿತ ಮಿಶ್ರಣದಿಂದ ಮಿಶ್ರಲೋಹಗಳನ್ನು ತಯಾರಿಸಲಾಗುತ್ತದೆ. ಹೀಗೆಂದ ಮಾತ್ರಕ್ಕೆ ಯಾವುದೇ ಎರಡು ಲೋಹಗಳನ್ನು ಕರಗಿಸಿ ಬೆರೆಸಿ ಪುನಃ ಘನೀಕರಿಸುವುದರಿಂದ ಸೂಕ್ತ ಮಿಶ್ರಲೋಹವೊಂದನ್ನು ಪಡೆಯಬಹುದು ಎಂದರ್ಥವಲ್ಲ. ಅಲ್ಯೂಮಿನಿಯಮ್ ಮತ್ತು ಸೀಸವನ್ನು ಕರಗಿಸಿ ಬೆರೆಸಿದರೆ ಬರುವ ಮಿಶ್ರಣ ನೀರಿನಲ್ಲಿ ಎಣ್ಣೆಯನ್ನು ಬೆರೆಸಿದಂತಿರುತ್ತದೆ. ಈ ಮಿಶ್ರಣವನ್ನು ಎರಕ ಹೊಯ್ದಾಗ ಲೋಹಗಳು ಎರಡು ಪದರಗಳಾಗಿ ಬೇರೆಯಾಗುತ್ತವೆ. ಭಾರವಾದ ಸೀಸದ ಪದರ ಹಗುರವಾದ ಅಲ್ಯೂಮಿನಿಯಮ್ ಪದರದ ಕೆಳಗೆ ನಿಲ್ಲುತ್ತದೆ. ಲೋಹಮಿಶ್ರಣದಲ್ಲಿ ಬದಲಿಕೆಯ ಮಿಶ್ರಣ (ಸಬ್‌ಸ್ಟಿಟ್ಯೂಷನಲ್ ಮಿಕ್ಸ್‌ಚರ್) ಮತ್ತು ಅಂತಃಸ್ಥಿತ ಮಿಶ್ರಣ (ಇಂಟರ್‌ಸ್ಟಿಷಿಯಲ್ ಮಿಶ್ರಣ) ಎಂಬ ಎರಡು ಬಗೆಗಳು ಕಂಡುಬರುತ್ತವೆ. ಬದಲಿಕೆ ಮಿಶ್ರಣದಲ್ಲಿ (ಅಥವಾ ದ್ರಾವಣದಲ್ಲಿ) ಒಂದು ಲೋಹದ ಜಾಲಕದಲ್ಲಿರುವ ಪರಮಾಣುಗಳು ಇನ್ನೊಂದು ಲೋಹದ ಪರಮಾಣುಗಳಿಂದ ಬದಲಿಸಲ್ಪಡುತ್ತವೆ. ಉದಾಹರಣೆಗೆ ಸತು ಮತ್ತು ತಾಮ್ರದ ಬೆರಕೆಯಿಂದ ಉಂಟಾಗುವ ಹಿತ್ತಾಳೆಯ ಪ್ರಾವಸ್ಥೆಯಲ್ಲಿ ಸತುವಿನ ಪ್ರಮಾಣ ಹೆಚ್ಚಿದಂತೆ ತಾಮ್ರದ ಜಾಲಕದಲ್ಲಿನ ತಾಮ್ರದ ಪರಮಾಣುಗಳು ಸತುವಿನ ಪರಮಾಣುಗಳಿಂದ ಬದಲಿಸಲ್ಪಡುತ್ತ ಬರುತ್ತವೆ. ಈ ಬದಲಾವಣೆಯಲ್ಲಿ ತಾಮ್ರದ ಪರಮಾಣುವಿಗಿಂತಲೂ ದೊಡ್ಡದಾದ ಪರಮಾಣು ತಾಮ್ರದ ಮುಖಕೇಂದ್ರಿತ ಘನರಚನೆಯಲ್ಲಿ ಹೋಗಿ ಕೂರುವುದರಿಂದ ಸ್ಫಟಿಕ ರಚನೆ ಸ್ವಲ್ಪ ವಿರೂಪಗೊಳ್ಳುತ್ತದೆ. ಸತುವಿನ ಪ್ರಮಾಣ ಹೆಚ್ಚಾದಂತೆ ಹಿತ್ತಾಳೆ ಹೆಚ್ಚು ಗಡುಸಾಗುತ್ತ ಬರುತ್ತದೆ. ಮಿಶ್ರಣದಲ್ಲಿ ಸತುವಿನ ಪ್ರಮಾಣ 36% ಆದಾಗ ಈ ವಿರೂಪನ ವಿಪರೀತವಾಗಿ, ಮುಖ ಕೇಂದ್ರಿತ ಘನಿಕದ ರಚನೆಗೆ ಬದಲಾಯಿಸುತ್ತದೆ. ಸತುವಿನ ಪ್ರಮಾಣ 36%ಕ್ಕಿಂತ ಕಡಿಮೆ ಇರುವಾಗ ಮಿಶ್ರಣವನ್ನು ಘನ ದ್ರಾವಣ ಎನ್ನಬಹುದು. ಈ ಪ್ರಾವಸ್ಥೆಯಲ್ಲಿನ ಮಿಶ್ರಣವನ್ನು ಸೂಕ್ಷ್ಮದರ್ಶಿಯಲ್ಲಿ ನೋಡಿದರೂ ಸತುವಿನ ಇರುವಿಕೆಯ ಬಗ್ಗೆ (ಬಣ್ಣದಲ್ಲಿನ ಅಲ್ಪ ಬದಲಾವಣೆಯನ್ನು ಬಿಟ್ಟರೆ) ಏನೂ ಸುಳಿವು ಸಿಕ್ಕುವುದಿಲ್ಲ. ಆದರೆ ಸತುವಿನ ಪ್ರಮಾಣ ಶೇ. 36 ಕ್ಕಿಂತ ಹೆಚ್ಚಾದಾಗ ಒಂದು ಹೊಸ ಪ್ರಾವಸ್ಥೆ ಉಂಟಾಗುತ್ತದೆ. ಈ ಬದಲಾವಣೆಯನ್ನು ಸೂಕ್ಷ್ಮದರ್ಶಿಯಲ್ಲಿ ಕಾಣಬಹುದು. ರೂಢಿಯಲ್ಲಿ ಮೊದಲ ಪ್ರಾವಸ್ಥೆಗೆ $\alpha$ – ಹಿತ್ತಾಳೆಯೆಂದೂ, ಎರಡನೆಯ ಪ್ರಾವಸ್ಥೆಗೆ $\beta$– ಹಿತ್ತಾಳೆಯೆಂದೂ ಹೆಸರು. ಮಿಶ್ರ ಮಾಡುವ ಲೋಹಗಳ ಪರಮಾಣುವ್ಯಾಸಗಳಲ್ಲಿ 15%ಕ್ಕಿಂತ ಹೆಚ್ಚು ವ್ಯತ್ಯಾಸ ಇದ್ದರೆ ಕೇವಲ ಬದಲಿಕೆಯ ಪ್ರಾವಸ್ಥೆಗಳು ಸಾಧ್ಯವಾಗುತ್ತವೆಯಲ್ಲದೆ ಇವುಗಳ ಸ್ಥಿರ ಸಂಯೋಜನೆಯ ಅನುಪಾತವನ್ನು ಹೆಚ್ಚು ವ್ಯತ್ಯಾಸ ಮಾಡಲು ಸಾಧ್ಯವಾಗುವುದಿಲ್ಲ. ಇದಲ್ಲದೆ ಬದಲಿಕೆಯ ಪ್ರಾವಸ್ಥೆಯಲ್ಲಿನ ಸ್ಫಟಿಕ ರಚನೆ ವೇಲನ್ಸ್ ಎಲೆಕ್ಟ್ರಾನುಗಳ ಸಂಖ್ಯೆ ಹಾಗೂ ಮಿಶ್ರಣದಲ್ಲಿನ ಎರಡು ಲೋಹಗಳ ಪರಮಾಣುಗಳ ಸಂಖ್ಯೆಯ ಪ್ರಮಾಣವನ್ನೂ ಅವಲಂಬಿಸಿರುತ್ತದೆ. ಅಂತಃಸ್ಥಿತ ಮಿಶ್ರಣದಲ್ಲಿ ಒಂದು ಲೋಹದ ಪರಮಾಣುಗಳು ಇನ್ನೊಂದರ ಜಾಲಕದ ಸಂದುಗಳಲ್ಲಿ ಹುದುಗಿಕೊಳ್ಳುತ್ತವೆ. ಹೀಗಾಗಬೇಕಾದರೆ ಅಂತಃಸ್ಥಿತವಾಗುವ ಅಥವಾ ಒಳಗೆ ಹುದುಗಿಕೊಳ್ಳುವ ಪರಮಾಣು ಸಾಕಷ್ಟು ಸಣ್ಣದಾಗಿರಬೇಕು. ಸಂಯೋಜನೆಯ ಪ್ರಮಾಣ ಹೆಚ್ಚಾದಂತೆ ಭರ್ತಿಯಾದ ಜಾಲಕದ ಸಂದುಗಳ ಸಂಖ್ಯೆ ಹೆಚ್ಚುತ್ತ ಹೋಗುತ್ತದೆ. ಇಂಗಾಲವನ್ನು (ಕಾರ್ಬನ್) ಕಬ್ಬಿಣದಲ್ಲಿ ಕರಗಿಸುವುದರಿಂದ ಉಂಟಾಗುವ ಮಿಶ್ರಲೋಹಗಳು ಅಂತಃಸ್ಥಿತ ಮಿಶ್ರಲೋಹಗಳಿಗೆ ಉದಾಹರಣೆಗಳು.

ಅಂತಃಸ್ಥಿತ ಮಿಶ್ರಣದಲ್ಲಿ ಅಂತಃಸ್ಥಿತಗೊಳ್ಳುವ ಪರಮಾಣುವಿನ ವ್ಯಾಸ ಇನ್ನೊಂದರ ಪರಮಾಣುವಿನ ವ್ಯಾಸದ 0.59ರಷ್ಟಕ್ಕಿಂತಲೂ ಕಡಿಮೆ ಇರಬೇಕು. ಹಾಗಿಲ್ಲದಿದ್ದರೆ ಈ ಪರಮಾಣುಗಳು ಇನ್ನೊಂದರ ಜಾಲಕದ ಸಂದುಗಳಲ್ಲಿ ಹುದುಗಿಕೊಳ್ಳಲು ತೀರ ದೊಡ್ಡದಾಗಿ ಅಂತಃಸ್ಥಿತ ಮಿಶ್ರಣ ಅಸಾಧ್ಯವಾಗುತ್ತದೆ. ಈ ಲಕ್ಷಣಗಳಿಗೆ ಹೇಳಿಸಿ ಮಾಡಿಸಿದಂತಿರುವ ಹೈಡ್ರೋಜನ್, ಬೋರಾನ್, ಇಂಗಾಲ, ನೈಟ್ರೋಜನ್‌ಗಳನ್ನು ಕಬ್ಬಿಣ, ಪ್ಲಾಟಿನಮ್, ಪೆಲಾಡಿಯಮಿನಂಥ ಸಂಕ್ರಮಣ ಲೋಹಗಳ ಜಾಲಕಗಳಲ್ಲಿ ಅಂತಃಸ್ಥಿತಗೊಳಿಸುವುದರಿಂದ ಉತ್ತಮ ಅಂತಃಸ್ಥಿತ ಮಿಶ್ರಲೋಹಗಳು ಫಲಿಸುತ್ತವೆ.

ಪರಮಾಣು ವ್ಯಾಸದ ನಿಷ್ಪತ್ತಿ 0.59ಕ್ಕಿಂತ ಹೆಚ್ಚಾಗಿಯೂ 0.85ಕ್ಕಿಂತ ಕಡಿಮೆಯಾಗಿಯೂ ಇದ್ದರೆ ಉತ್ತಮವಾದ ಲೋಹಮಿಶ್ರಣವಾಗುವುದಿಲ್ಲ. ಈ ಪರಿಮಿತಿಗಳೊಳಗೆ ಪರಮಾಣು ವ್ಯಾಸವಿದ್ದರೆ, ಚಿಕ್ಕ ಪರಮಾಣು ಇನ್ನೊಂದರ ಜಾಲಕದಲ್ಲಿ ಅಂತಃಸ್ಥಿತವಾಗಲು ತೀರ ದೊಡ್ಡದಾಗಿಯೂ ಜಾಲಕದಲ್ಲಿನ ಪರಮಾಣುಗಳನ್ನು ಬದಲಿಸಲು ತೀರ ಚಿಕ್ಕದಾಗಿಯೂ ಇರುವುದರಿಂದ ಅಂತಃಸ್ಥಿತ ಮಿಶ್ರಣವಾಗಲೀ ಬದಲಿಕೆಯ ಮಿಶ್ರಣವಾಗಲೀ ಅಸಾಧ್ಯವಾಗುತ್ತದೆ. ಪಟ್ಟಿ 2ರಲ್ಲಿ ಕೆಲವು ಪರಮಾಣುಗಳ ವ್ಯಾಸಗಳನ್ನು

**ಪಟ್ಟಿ 2 : ಪರಮಾಣುವ್ಯಾಸಗಳು**

| ಪರಮಾಣು | ವ್ಯಾಸ (10-8 cm. ನಲ್ಲಿ) |
|---|---|
| ಹೈಡ್ರೋಜನ್ | 0.75 |
| ಇಂಗಾಲ | 1.54 |
| ಸೋಡಿಯಮ್ | 3.67 |
| ತಾಮ್ರ | 2.55 |
| ತವರ | 2.80 |
| ಬೆಳ್ಳಿ | 2.88 |
| ಸತು | 2.65 |
| ಅಲ್ಯೂಮಿನಿಯಮ್ | 2.86 |
| ಸೀಸ | 3.48 |
| ಕಬ್ಬಿಣ | 2.58 |

ಕೊಡಲಾಗಿದೆ. ಅಲ್ಯೂಮಿನಿಯಮ್ ಮತ್ತು ಸೀಸಗಳ ಪರಮಾಣು ವ್ಯಾಸಗಳ ನಿಷ್ಪತ್ತಿ 0.59 < 2.86/3.48 < 0.85 ಆಗುವುದರಿಂದ ಇವುಗಳ ಮಿಶ್ರಣ ಉತ್ತಮಮಿಶ್ರಲೋಹವಾಗುವುದಿಲ್ಲವೆಂದು ತಿಳಿಯುತ್ತದೆ. ಇದೇ ರೀತಿ ಇಂಗಾಲ ಮತ್ತು ಕಬ್ಬಿಣಗಳ ಪರಮಾಣು ವ್ಯಾಸಗಳ ನಿಷ್ಪತ್ತಿ 1.54/2.58 = 0.5969. ಇದು 0.59ಕ್ಕೆ ಬಹು ಸಮೀಪವಾಗಿರುವುದು ಗಮನಾರ್ಹವಾಗಿದೆ. (ಇಂಗಾಲದ ಪರಮಾಣುಗಳೇನಾದರೂ ಸ್ವಲ್ಪ ದೊಡ್ಡವಾಗಿದ್ದರೆ ಇಂಗಾಲದ ಉಕ್ಕಿನಂಥ ಅಮೂಲ್ಯ ಮಿಶ್ರಲೋಹವನ್ನು ಹೊಂದುವ ಭಾಗ್ಯ ನಮಗಿರುತ್ತಿರಲಿಲ್ಲ).

ಮಿಶ್ರಲೋಹಗಳು ಬರಿಯ ಮಿಶ್ರಣಗಳೇ ಇಲ್ಲವೇ ಸಂಯುಕ್ತ ವಸ್ತುಗಳೇ ಎಂಬ ಪ್ರಶ್ನೆಗೆ ಉತ್ತರವಾಗಿ ಹಲವು ಸಂಯೋಜನೆಯ ಅನುಪಾತಗಳಿಗೆ ಮಿಶ್ರಣದ ಪ್ರಾವಸ್ಥೆ ಬದಲಾಗದಿದ್ದರೆ ಅವನ್ನು ಘನದ್ರಾವಣಗಳು ಎಂದೂ ಒಂದು ಮಿಶ್ರಣದ ಪ್ರಾವಸ್ಥೆ ನಿರ್ದಿಷ್ಟ ಸಂಯೋಜನೆಯ ಅನುಪಾತಕ್ಕೆ ಮಾತ್ರ ಫಲಿಸಿದರೆ ಆ ಪ್ರಾವಸ್ಥೆಯನ್ನು ಸಂಯುಕ್ತವಸ್ತು ಎಂದೂ ಹೇಳಬಹುದು.

ಪುಟಿತ ಗುಣಗಳು : ಒಂದು ವಸ್ತುವಿನಲ್ಲಿನ ಪರಮಾಣುಗಳನ್ನು ಅವುಗಳ ಸಮತೋಲ ಸ್ಥಳದಿಂದ (ಈಕ್ವಿಲಿಬ್ರಿಯಮ್ ಪೊಸಿಷನ್) ಪಲ್ಲಟಗೊಳಿಸುವಂತೆ ಬಾಹ್ಯ ಬಲಪ್ರಯೋಗ ಮಾಡಿದರೆ ಅವನ್ನು ಪುನಃ ಸಮತೋಲಕ್ಕೆ ಎಳೆಯುವಂಥ ಆಂತರಿಕ ಬಲಗಳು ಉದ್ಭವಿಸುತ್ತವೆ. ಇವುಗಳಿಗೆ ಪುಟಿತ ಬಲಗಳು (ಇಲ್ಯಾಸ್ಟಿಕ್ ಫೋರ್ಸಸ್) ಎಂದು ಹೆಸರು. ಆರೋಪಿತ ಹಾಗೂ ಪುಟಿತ ಬಲಗಳ ಸಮತೋಲದಿಂದ ಉಂಟಾಗುವ ವಸ್ತುವಿನ ವಿರೂಪಿತ ಅವಸ್ಥೆಗೆ ಶ್ರಮಿತ ಸ್ಥಿತಿ (ಸ್ಟ್ರೇನ್ಡ್ ಸ್ಟೇಟ್) ಎಂದು ಹೆಸರು. ಆರೋಪಿತ ಬಲಗಳನ್ನು ತೆಗೆದು ಹಾಕಿದೊಡನೆಯೇ ಪರಮಾಣುಗಳು ಸ್ವಸ್ಥಾನಗಳಿಗೆ ಹಿಂತಿರುಗಿದರೆ, ಅಂದರೆ ವಿರೂಪಣ ಸಂಪೂರ್ಣ ಮಾಯವಾದರೆ, ಅಂಥ ಶ್ರಮಕ್ಕೆ (ಸ್ಟ್ರೇನ್) ಪುಟಿತ ಶ್ರಮ ಎಂದು ಹೆಸರು. ವಸ್ತುವಿನ ಮೇಲೆ ಆರೋಪಿಸಿದ ಬಲಗಳಿಂದ ಉದ್ಭವಿಸುವ ಆಂತರಿಕ ಬಲಗಳಿಗೆ ಒತ್ತಾಯಗಳು (ಸ್ಟ್ರೆಸ್) ಎಂದು ಹೆಸರು. ಸಣ್ಣ ವಿರೂಪಣಗಳಲ್ಲಿ ಶ್ರಮ ಮತ್ತು ಒತ್ತಾಯಗಳ ಸಂಬಂಧ ರೇಖೀಯವಾಗಿರುತ್ತದೆ. ಈ ಸಂಬಂಧಕ್ಕೆ ಹುಕ್ ನಿಯಮ ಎಂದು ಹೆಸರು. ಆದರೆ ವಿರೂಪಣ ಹೆಚ್ಚಾದಂತೆಲ್ಲ ಅನಿಯಮಿತವಾಗಿ ಒತ್ತಾಯಗಳೂ ಹೆಚ್ಚಾಗುವುದಿಲ್ಲ, ಕಡಿಮೆಯಾಗತೊಡಗುತ್ತವೆ. ಚಿತ್ರ (8)ರಲ್ಲಿ ಒಂದು ತನ್ಯ (ಡಕ್ಟೈಲ್) ವಸ್ತುವಿನ ಶ್ರಮ ಮತ್ತು ಒತ್ತಾಯಗಳ ಸಂಬಂಧವನ್ನು ತೋರಿಸಲಾಗಿದೆ. ಅಂದರೆ ಒಂದು ನಿರ್ದಿಷ್ಟ ಮಿತಿಯನ್ನು ಮೀರಿದಾಗ ಹುಕ್ ನಿಯಮ ವಿಫಲವಾಗುತ್ತದೆ ಎಂದಾಗುತ್ತದೆ. ಪುಟಿತ ಮಿತಿಯನ್ನು ಮೀರಿದ ವಿರೂಪಣಗಳಲ್ಲಿ ವಸ್ತುವಿನ ವರ್ತನೆಗೆ ಅಪುಟಿತ ವರ್ತನೆ ಎಂದು ಹೆಸರು. ಹುಕ್ ನಿಯಮದ ವೈಫಲ್ಯವನ್ನು ಸೂಚಿಸುವ ಪುಟಿತ ಮಿತಿ ಘನವಸ್ತು ಹಾಗೂ ಅದರ ಚರಿತ್ರೆಯನ್ನು ಅವಲಂಬಿಸಿರುತ್ತದೆ.



ಚಿತ್ರ 8

ಅಂದರೆ ಒಂದೇ ವಸ್ತುವಿನ ಪುಟಿತ ಪರಿಮಿತಿ ವಸ್ತುವಿನ ಹಿಂದಿನ ವಿರೂಪನಗಳ ಚರಿತ್ರೆಯನ್ನು ಅವಲಂಬಿಸಿ ಬದಲಾಗಬಹುದು. ಮೇಲಿನ ಪರಿಗಣನೆಗಳಿಂದ ಸಾಕಷ್ಟು ಸಣ್ಣದಾದ ವಿರೂಪನಗಳಿಗೆ ಮಾತ್ರ ಪುಟಿತ ಗುಣಗಳಿರುತ್ತವೆ ಎಂದು ತೋರುತ್ತದೆ. ಆದರೆ ಬಹಳಷ್ಟು ಘನವಸ್ತುಗಳು ಅತಿಹೆಚ್ಚಿನ ದ್ರವ ಸ್ಥಾಯೀ ಒತ್ತಡಗಳಲ್ಲಿ ಕೂಡ ಪುಟಿತ ಗುಣಗಳನ್ನು ಪ್ರದರ್ಶಿಸುತ್ತವೆ ಎಂದು ಬ್ರಿಡ್ಜ್‌ಮನನ ಪ್ರಯೋಗಗಳು ತೋರಿಸಿಕೊಟ್ಟಿವೆ. ಅತಿ ಹೆಚ್ಚಿನ ದ್ರವಸ್ಥಾಯೀ ಒತ್ತಡಗಳ (ಅಂದರೆ 100,000 ಕಿಗ್ರಾಂ/ಸೆಂ.ಮೀ.2) ಪ್ರಯೋಗದಿಂದ ಬ್ರಿಡ್ಜ್‌ಮನ್ ಘನವಸ್ತುಗಳಲ್ಲಿ ದೊಡ್ಡ ಪರಿಮಾಣದ ಪುಟಿತ ವಿರೂಪಣಗಳನ್ನು ಉಂಟುಮಾಡಿ ನಡೆಸಿದ ಅಧ್ಯಯನಗಳು ಅತಿ ಹೆಚ್ಚಿನ ಒತ್ತಡದ ವಿಜ್ಞಾನಕ್ಕೆ ಜನ್ಮವಿತ್ತವು ಎನ್ನಬಹುದು. ಅತಿ ಹೆಚ್ಚಿನ ಒತ್ತಡಗಳಲ್ಲಿ ಜಾಲಕದ ರಚನೆಯೇ ಬದಲಾಗಬಹುದು. ಇಂಗಾಲದ ಒಂದು ರೂಪವಾದ ಗ್ರ್ಯಾಫೈಟನ್ನು ಅದರ ಇನ್ನೊಂದು ರೂಪವಾದ ವಜ್ರವಾಗಿ ಬದಲಿಸಲು ಅತಿ ಹೆಚ್ಚಿನ ಒತ್ತಡಗಳನ್ನು ಉಪಯೋಗಿಸಲಾಯಿತು (1953), ಇಂದು ಅತಿ ಹೆಚ್ಚಿನ ಒತ್ತಡದಲ್ಲಿ ವಸ್ತುಗಳ ಗುಣಗಳ ಅಧ್ಯಯನ ತೀವ್ರ ಸಂಶೋಧನ ಆಸಕ್ತಿಯಿರುವ ಕ್ಷೇತ್ರ ಎನ್ನಬಹುದು.

ಘನಸ್ಥಿತಿಯ ಸಿದ್ಧಾಂತ : ಘನವಸ್ತುಗಳ ವಿದ್ಯಮಾನ ಶಾಸ್ತ್ರೀಯ (ಫಿನಾಮಿನಲಾಜಿಕಲ್) ಮತ್ತು ಪರಿಮಾಣಾತ್ಮಕ ಸಿದ್ಧಾಂತವನ್ನು ಬೆಳೆಸುವಲ್ಲಿ ಕ್ವಾಂಟಮ್ ಬಲವಿಜ್ಞಾನದ ವಿಧಾನಗಳು ಬಹಳಮಟ್ಟಿಗೆ ಸಹಾಯ ಮಾಡಿವೆ. ಘನಸ್ಥಿತಿಯ ಸಿದ್ಧಾಂತವೆಂದರೆ ಬಹಳ ಮಟ್ಟಿಗೆ ಘನವಸ್ತುಗಳಲ್ಲಿನ ಎಲೆಕ್ಟ್ರಾನುಗಳ ಸಿದ್ಧಾಂತ; ಈ ಎಲೆಕ್ಟ್ರಾನ್‌ಗಳ ವರ್ತನೆಯನ್ನು ಅರ್ಥಮಾಡಿಕೊಂಡರೆ ಘನಸ್ಥಿತಿಯ ಅನೇಕ ಗುಣಗಳನ್ನು ವಿವರಿಸಲು ಸಾಧ್ಯವಾಗುತ್ತದೆ. ಪರಮಾಣುವೊಂದರಲ್ಲಿನ ಎಲೆಕ್ಟ್ರಾನ್‌ಗಳು ಅದರ ನ್ಯೂಕ್ಲಿಯಸ್‌ನ ಸುತ್ತ ಪರಿಭ್ರಮಿಸುತ್ತಿವೆ ಎಂಬ ಸಾಮಾನ್ಯ ಭಾವನೆ ನಮಗಿದೆ. ಆದ್ದರಿಂದ ಉಷ್ಣಸ್ಪಂದನದಂಥ ಪ್ರಕ್ರಿಯೆಗಳಲ್ಲಿ ಅದರ ನ್ಯೂಕ್ಲಿಯಸ್‌ಗಳೂ ಚಲನೆಯಲ್ಲಿ ಭಾಗವಹಿಸುವುದರಿಂದ ನ್ಯೂಕ್ಲಿಯಸ್‌ಗಳ ಸುತ್ತ ಚಲಿಸುವ ಎಲೆಕ್ಟ್ರಾನ್‌ಗಳ ಚಲನೆಯ ಅಧ್ಯಯನ ಅತ್ಯಂತ ಜಟಿಲ ಸ್ವರೂಪದ್ದಾಗುತ್ತದೆಂದು ಭಾಸವಾಗುತ್ತದೆ. ಆದರೆ ಘನವಸ್ತುವಿನಲ್ಲಿನ ನ್ಯೂಕ್ಲಿಯಸ್‌ಗಳು ಎಲೆಕ್ಟ್ರಾನ್‌ಗಳಿಗೆ ಹೋಲಿಸಿದಂತೆ ಬಹು ಮಂದಗತಿಯಲ್ಲಿ ಚಲಿಸುವುದರಿಂದ, ವ್ಯವಹಾರದಲ್ಲಿ ಎಲೆಕ್ಟ್ರಾನ್ ಚಲನೆಯನ್ನು ಸ್ಥಿರ ನ್ಯೂಕ್ಲಿಯಸ್‌ಗಳ ಸಮ್ಮುಖದಲ್ಲಿ ಮಾತ್ರ ಪರಿಗಣಿಸಿದರೆ ಸಾಕಾಗುತ್ತದೆ. ಬಹು ಸ್ಥೂಲವೆಂದು ತೋರಬಹುದಾದ ಈ ಸನ್ನಿಹಿತತೆ (ಅಪ್ರಾಕ್ಸಿಮೇಷನ್) ಹತ್ತಾರು ಉಪಯುಕ್ತ ಸನ್ನಿವೇಶಗಳಲ್ಲಿ ಸಾಕಷ್ಟು ನಿಖರವಾಗಿರುತ್ತದೆ. ಘನವಸ್ತುವಿನಲ್ಲಿನ ಪರಮಾಣು ನ್ಯೂಕ್ಲಿಯಸ್‌ಗಳೂ ಇತರ ಎಲೆಕ್ಟ್ರಾನ್‌ಗಳೂ ಸೇರಿ ಆದ ಸಂಕೀರ್ಣ ಬಹುಕಾಯ ವ್ಯವಸ್ಥೆಯೊಂದರ ಅಲೆ ಉತ್ಪನ್ನದ ಸಂಪೂರ್ಣ ನಿರ್ಧರಣೆ, ತತ್ತ್ವಶಃ ಸಾಧ್ಯವಾದರೂ ವ್ಯವಹಾರದಲ್ಲಿ ಅದು ತೀರ ದುಸ್ಸಾಧ್ಯವಾದ ಕಾರ್ಯ. ಆದ್ದರಿಂದ ಎಲೆಕ್ಟ್ರಾನ್ ಅಲೆ ಉತ್ಪನ್ನಗಳ ಸ್ಥೂಲ ಲೆಕ್ಕಮಾಡುವತ್ತ ಗಮನವೀಯಲಾಗುತ್ತದೆ. ಈ ಸನ್ನಿಹಿತತೆಗಳಲ್ಲಿ ಸಾಮಾನ್ಯವಾಗಿ ಪರಮಾಣುಗಳ ನಡುವಣ ಬಂಧ ಪರಮಾಣುಗಳ ಒಳಚಿಪ್ಪಿನ ಎಲೆಕ್ಟ್ರಾನ್ ರಚನೆಯನ್ನು ಹೆಚ್ಚಾಗಿ ಬದಲಾಯಿಸುವುದಿಲ್ಲ ಎಂದು ಭಾವಿಸಲಾಗುತ್ತದೆ. ಇದರಿಂದ ಒಳಚಿಪ್ಪಿನ ಎಲೆಕ್ಟ್ರಾನ್‌ಗಳನ್ನು ನ್ಯೂಕ್ಲಿಯಸ್‌ಗೆ ಸೇರಿದ ಭಾಗವೆಂದು ಪರಿಗಣಿಸಬಹುದು. ಹೀಗೆ ಮಾಡಿದರೆ ನ್ಯೂಕ್ಲಿಯಸ್‌ನ ಸ್ಥಿರವಿದ್ಯುತ್ ಕ್ಷೇತ್ರವನ್ನು ಮಾತ್ರ ಬದಲಾಯಿಸಿದಂತೆ ಆಗುತ್ತದೆ. ಪ್ರಥಮ ಸನ್ನಿಹಿತತೆಯಲ್ಲಿ ವೇಲೆನ್ಸ್ ಎಲೆಕ್ಟ್ರಾನ್ ಒಂದನ್ನು ಉಳಿದ ಎಲೆಕ್ಟ್ರಾನ್‌ಗಳ ಹಾಗು ನ್ಯೂಕ್ಲಿಯಸುಗಳ ಪ್ರಭಾವಕ್ಕೊಳಗಾಗಿ ಚಲಿಸುವ ಏಕಮಾನವೆಂದು ಭಾವಿಸಲಾಗುತ್ತದೆ. ಈ ವಿಧಾನಕ್ಕೆ ಹಾರ್ಟ್ರೀ–ಫಾಕ್ ಸನ್ನಿಹಿತತೆ ಎಂದು ಹೆಸರು. ಒಂದೊಂದು ಎಲೆಕ್ಟ್ರಾನ್‌ಗೂ ಒಂದೊಂದು ಬೇರೆ ಅಲೆ ಉತ್ಪನ್ನ ಇದೆಯೆಂದು ಪರಿಗಣಿಸುವ ಈ ವಿಧಾನವನ್ನು ಒಂಟಿ ಎಲೆಕ್ಟ್ರಾನ್ ಸನ್ನಿಹಿತತೆ ಎಂದು ಕರೆಯುವುದುಂಟು. ಇದರಲ್ಲಿ ಎಲೆಕ್ಟ್ರಾನ್‌ಗಳ ಪರಸ್ಪರ ಅಂತರಕ್ರಿಯೆಯನ್ನು ನಿರ್ಲಕ್ಷಿಸಲಾಗುವುದಿಲ್ಲ. ಬದಲಿಗೆ ಯಾವುದೇ ಒಂದು ಎಲೆಕ್ಟ್ರಾನಿಡನೆ ಸುತ್ತಣ ಎಲ್ಲ ಕಣಗಳ ಅಂತರಕ್ರಿಯೆಯನ್ನೂ ಒಂದು ಸೂಕ್ತ ವಿಭವದಿಂದ ಪ್ರತಿನಿಧಿಸಲು ಸಾಧ್ಯವೆಂಬ ಭಾವನೆಯನ್ನು ಬಳಸಲಾಗುತ್ತದೆ. ಈ ಸನ್ನಿಹಿತತೆ ಕೇವಲ ಪ್ರಥಮ ಸನ್ನಿಹಿತತೆ ಆದ್ದರಿಂದ ಇದರಿಂದ ಹೊರಬರುವ ಫಲಿತಾಂಶಗಳಿಗೆ ಬಹುಮಟ್ಟಿಗೆ ಗುಣಾತ್ಮಕ ಮೌಲ್ಯಗಳು ಮಾತ್ರ ಇರುತ್ತವೆಂದು ಹೇಳಬಹುದು. ಹಾರ್ಟ್ರೀ–ಫಾಕ್ ಸನ್ನಿಹಿತತೆಯನ್ನು ಪರಮಾಣ್ವಕ ಸನ್ನಿಹಿತತೆ ಮತ್ತು ಮುಕ್ತ ಎಲೆಕ್ಟ್ರಾನ್ ಸನ್ನಿಹಿತತೆ ಎಂದು ಕರೆಯುವ ಎರಡು ವಿಧಾನಗಳಲ್ಲಿ ಉಪಯೋಗಿಸಲಾಗುತ್ತದೆ. ಮೊದಲಿಗೆ ಪರಮಾಣ್ವಕ ಸನ್ನಿಹಿತತೆಯನ್ನು ಪರಿಗಣಿಸೋಣ. ಇದರ ಪ್ರಕಾರ ಪ್ರತಿಯೊಂದು ಎಲೆಕ್ಟ್ರಾನ್‌ಅನ್ನೂ ಒಂದು ನಿರ್ದಿಷ್ಟ ಪರಮಾಣು ಅಥವಾ ಪರಮಾಣುಗಳ ಗುಂಪಿಗೆ ಸೇರಿದ್ದೆಂದು ಭಾವಿಸಲಾಗುತ್ತದೆ. ಇಂಥ ಮಾದರಿಯಲ್ಲಿ ಎಲೆಕ್ಟ್ರಾನ್‌ಗಳು ಸುಲಭವಾಗಿ ಹರಿದಾಡಲು ಸಾಧ್ಯವಿಲ್ಲದಿರುವುದರಿಂದ ಆ ಮಾದರಿ ಅವಾಹಕ ಘನವಸ್ತುಗಳನ್ನು ಮಾತ್ರ ಪ್ರತಿನಿಧಿಸಬಹುದು. ಈ ಕಾರಣದಿಂದ ವಿರಳಾನಿಲಗಳ (ರೇರ್ ಗ್ಯಾಸಸ್) ಘನಸ್ಥಿತಿಗಳು, ಘನಮೀಥೇನಿನಂಥ ಆಣ್ವಕ ಘನವಸ್ತುಗಳು ಮತ್ತು ಕ್ಷಾರ ಹ್ಯಾಲೈಡುಗಳಂಥ ಸ್ಫಟಿಕೀಯ ಘನವಸ್ತುಗಳ ಗುಣ ವಿವರಣೆಯಲ್ಲಿ ಈ ಮಾದರಿ ಉಪಯುಕ್ತವಾಗುತ್ತದೆ. ಈ ಸನ್ನಿಹಿತತೆಯನ್ನು ಅವಾಹಕ ಘನವಸ್ತುಗಳ ವಿವರಣೆಗೆ ಅಳವಡಿಸುವಲ್ಲಿ ಒಂಟಿಯಾದ ಪರಮಾಣು ಅಥವಾ ಅಣುಗಳ ವರ್ತನೆಯ ಅಧ್ಯಯನದಿಂದ ಲಭಿಸಿದ ಎಲ್ಲ ಪರಿಕಲ್ಪನೆಗಳನ್ನೂ ಉಪಯೋಗಿಸಬಹುದು. ಈ ಪರಿಕಲ್ಪನೆಗಳಲ್ಲಿ ಅತಿ ಮುಖ್ಯವಾದುವೆಂದರೆ ಪರಮಾಣುಗಳ ಎಲೆಕ್ಟ್ರಾನ್ ಚಿಪ್ಪಿನ ರಚನೆ ಮತ್ತು ಪೌಲಿ ಬಹಿಷ್ಕರಣ ತತ್ತ್ವಗಳು. ಪರಮಾಣ್ವಕ ಸನ್ನಿಹಿತತೆಯಲ್ಲಿ ಘನಸ್ಥಿಯ ಮಾದರಿ ಕೇವಲ ಅವಾಹಕ ವಸ್ತುಗಳನ್ನು ಪ್ರತಿನಿಧಿಸುತ್ತದೆ ಎಂದು ಹಿಂದೆ ಹೇಳಲಾಯಿತು. ಆದರೆ ಎಲೆಕ್ಟ್ರಾನ್‌ಗಳು ಸಾಕಷ್ಟು ಶಕ್ತಿಯನ್ನು ಹೀರಿಕೊಂಡಾಗ ಮೇಲಿನ ಶಕ್ತಿಮಟ್ಟಗಳಿಗೆ ಹೋಗುವುದರಿಂದ ಘನವಸ್ತುವಿಗೆ ಕೊಂಚ ವಿದ್ಯುದ್ವಾಹಕತ್ವ ಉಂಟಾಗುತ್ತದೆ. ಉದಾಹರಣೆಗೆ ಸೂಕ್ತವಾದ ಅಲೆಯುದ್ದದ ಬೆಳಕನ್ನು ಇಂಥ ಅವಾಹಕ ಘನವಸ್ತುಗಳ ಮೇಲೆ ಪ್ರಕಾಶಿಸುವುದರಿಂದ ವಿದ್ಯುದ್ವಾಹಕತ್ವ ಉಂಟಾಗುತ್ತದೆ. ಘನವಸ್ತುವಿನ ಇಂಥ ಸ್ಥಿತಿಗೆ ದ್ಯುತಿವಾಹಕ (ಫೋಟೋಕಂಡಕ್ಟಿಂಗ್) ಸ್ಥಿತಿ ಎಂದು ಹೆಸರು. ಎಲ್ಲ ಅಲೆಯುದ್ದದ ಬೆಳಕಿನ ವಿಕಿರಣದಿಂದ (ಇರೆಡಿಯೇಷನ್) ದ್ಯುತಿವಾಹಕತ್ವ ಉಂಟಾಗುವುದಿಲ್ಲ; ಒಂದು ಸಂಧಿಸ್ಥ ಅಲೆಯುದ್ದಕ್ಕಿಂತ ಹೆಚ್ಚಿನ ಅಲೆಯುದ್ದಗಳಲ್ಲಿ ದ್ಯುತಿವಾಹಕತ್ವ ಉಂಟಾಗುವುದಿಲ್ಲ. ಅವಾಹಕಗಳ ದ್ಯುತಿವಾಹಕತ್ವ ಮತ್ತು ಸಂಧಿಸ್ಥ ಅಲೆಯುದ್ದದ ಇರುವಿಕೆಯನ್ನು ಪರಮಾಣ್ವಕ ಮಾದರಿಯಿಂದ ತೃಪ್ತಿಕರವಾಗಿ ವಿವರಿಸಬಹುದು.

ಅವಾಹಕದ ಜಾಲಕದಲ್ಲಿ ದೋಷಗಳಿದ್ದರೆ ಅವು ಇರುವ ಸ್ಥಳದಲ್ಲಿ ಎಲೆಕ್ಟ್ರಾನ್ ಶಕ್ತಿಹಂತಗಳ ವಿತರಣೆ ಜಾಲಕದ ಇತರ ಎಡೆಗಳಲ್ಲಿರುವುದಕ್ಕಿಂತ ಬೇರೆಯಾಗಿರುತ್ತದೆ. ಇದರಿಂದ ದೋಷರಹಿತ ಅವಾಹಕವನ್ನು ದ್ಯುತಿವಾಹಕವನ್ನಾಗಿ ಮಾಡುವ ಸಂಧಿಸ್ಥ ಅಲೆಯುದ್ದ ಗಮನಾರ್ಹವಾಗಿ ಹೆಚ್ಚಾಗಬಹುದು. ಬಳಕೆಯಲ್ಲಿರುವ ದ್ಯುತಿವಾಹಕಗಳು ದೋಷಗಳ ಸೂಕ್ತ ಸಂಯೋಜನೆಯಿಂದ ಸಿದ್ಧಪಡಿಸಿದ ಅವಾಹಕಗಳು. ಅವಾಹಕಗಳಲ್ಲಿನ ಪರಮಾಣುಗಳಿಗೆ ಬಂಧಿತವಾದ ಎಲೆಕ್ಟ್ರಾನ್‌ಗಳು ಸಾಧಾರಣ ಉಷ್ಣತೆಗಳಲ್ಲಿ ಆಗುವ ಉಷ್ಣದ ಏರಿಳಿತಗಳಿಂದ ಸಡಿಲವಾಗಿ ಹರಿದಾಡಲು ಸಾಧ್ಯವಾದರೆ ಅಂಥ ಅವಾಹಕಗಳಿಗೆ ಸ್ವಾಭಾವಿಕ (ಇನ್‌ಟ್ರಿನ್ಸಿಕ್) ಅರೆವಾಹಕಗಳೆಂದು ಹೆಸರು. ಸಾಧಾರಣ ಉಷ್ಣತೆಗಳಲ್ಲಿ ಆದರ್ಶ ಅವಾಹಕವಾಗಿ ವರ್ತಿಸುವ ಘನವಸ್ತುಗಳು ಕೂಡ ಜಾಲಕದಲ್ಲಿ ದೋಷಗಳಿದ್ದರೆ, ಅರೆವಾಹಕಗಳಾಗಿ ವರ್ತಿಸುತ್ತವೆ. ಇಂಥ ಅರೆವಾಹಕಗಳಿಗೆ ಅಶುದ್ಧತೆಯ ಅರೆವಾಹಕಗಳೆಂದು ಹೆಸರು. ಇವುಗಳಲ್ಲಿನ ಅಶುದ್ಧತೆಯ ಅಂಶಗಳಿಗೆ ಸೇರಿದ ಎಲೆಕ್ಟ್ರಾನ್‌ಗಳು ಸಾಧಾರಣ ಉಷ್ಣತೆಗಳಲ್ಲಿ ಕೂಡ ಸುಲಭವಾಗಿ ಉಷ್ಣದ ಏರಿಳಿತಗಳಿಂದ ಅಯಾನೀಕರಿಸಲ್ಪಡುವುದೇ ಅರೆವಾಹಕತ್ವಕ್ಕೆ ಕಾರಣ.

ಮುಕ್ತ ಎಲೆಕ್ಟ್ರಾನ್ ಸನ್ನಿಹಿತತೆಯಲ್ಲಿ ವೇಲನ್ಸ್ ಎಲೆಕ್ಟ್ರಾನ್‌ಗಳು ಜಾಲಕದಲ್ಲಿ ಸುಲಭವಾಗಿ ಹರಿದಾಡಲು ಸಾಧ್ಯ ಎಂದು ಭಾವಿಸಲಾಗುತ್ತದೆ. ಹೀಗೆಂದರೆ ಈ ಎಲೆಕ್ಟ್ರಾನ್‌ಗಳ ಅಲೆ ಉತ್ಪನ್ನದ ಪಾರ (ಆ್ಯಂಪ್ಲಿಟ್ಯೂಡ್) ಜಾಲಕದಲ್ಲಿಯೂ ಶೂನ್ಯವಾಗುವುದಿಲ್ಲ ಎಂದಾಗುತ್ತದೆ. ವೇಲನ್ಸ್ ಎಲೆಕ್ಟ್ರಾನ್‌ಗಳ ಪರಸ್ಪರ ಅಂತರಕ್ರಿಯೆಯನ್ನು ನಿರ್ಲಕ್ಷಿಸಿ ತೀರ ಸರಳಗೊಳಿಸಿದ ಮಾದರಿಯಲ್ಲಿ ಘನವಸ್ತುವಿನಲ್ಲಿನ ವೇಲನ್ಸ್ ಎಲೆಕ್ಟ್ರಾನ್ ಸಮೂಹವನ್ನು ಒಂದು ಅನಿಲ ಎಂದು ಭಾವಿಸಲಾಗುತ್ತದೆ. ಮೇಲುನೋಟಕ್ಕೆ ತೀರ ಒರಟೆಂದು ಕಾಣಬಹುದಾದ ಈ ಎಲೆಕ್ಟ್ರಾನ್ ಅನಿಲದ ಸನ್ನಿಹಿತತೆ ಕೂಡ ಎಲೆಕ್ಟ್ರಾನ್ ಸಮೂಹವನ್ನು ಒಂದು ಅನಿಲ ಎಂದು ಭಾವಿಸಲಾಗುತ್ತದೆ. ಮೇಲುನೋಟಕ್ಕೆ ತೀರ ಒರಟೆಂದು ಕಾಣಬಹುದಾದ ಈ ಎಲೆಕ್ಟ್ರಾನ್ ಅನಿಲದ ಸನ್ನಿಹಿತತೆ ಕೂಡ ಅನೇಕ ಉಪಯುಕ್ತ ಫಲಿತಾಂಶಗಳನ್ನು ನೀಡುತ್ತದೆ. ಮುಕ್ತ ಎಲೆಕ್ಟ್ರಾನ್ ಸನ್ನಿಹಿತತೆಯಲ್ಲಿನ ಘನಸ್ಥಿತಿಯ ಮಾದರಿ, ವೇಲನ್ಸ್ ಎಲೆಕ್ಟ್ರಾನ್‌ಗಳ ಸಾಪೇಕ್ಷ ಮುಕ್ತಿಯಿಂದಾಗಿ, ಕೇವಲ ವಿದ್ಯುದ್ವಾಹಕ ವಸ್ತುಗಳನ್ನು ಮಾತ್ರ ಅಂದರೆ ಲೋಹಗಳನ್ನು ಮಾತ್ರ ಪ್ರತಿನಿಧಿಸಬಹುದೆಂದು ಭಾಸವಾಗುತ್ತದೆ. ಆದರೆ ಅವಾಹಕಗಳ ಅನುತ್ತೇಜಿತ ಸ್ಥಿತಿಗಳನ್ನು (ನಾನ್‌ಎಕ್ಸೈಟೆಡ್ ಆರ್ ಗ್ರೌಂಡ್‌ಸ್ಟೇಟ್) ಕೂಡ ಮುಕ್ತ ಎಲೆಕ್ಟ್ರಾನ್ ಮಾದರಿಯಿಂದ ತೃಪ್ತಿಕರವಾಗಿ ವಿವರಿಸಲು ಸಾಧ್ಯವಾಗುತ್ತದೆ.

ಘನವಸ್ತುಗಳ ಪಟ್ಟಿ ಸಿದ್ಧಾಂತ : ಲೋಹಗಳ ಎಲೆಕ್ಟ್ರಾನಿಕ್ ಗುಣಗಳ ಬಗ್ಗೆ ಸಂಪೂರ್ಣ ಮುಕ್ತ ಎಲೆಕ್ಟ್ರಾನ್ ಮಾದರಿ ಸಾಕಷ್ಟು ನಿಖರವಾದ ಒಳನೋಟವನ್ನು ಒದಗಿಸಿದರೂ ಈ ಮಾದರಿಯಿಂದ ಅರ್ಥ ಮಾಡಿಕೊಳ್ಳಲು ಅಸಾಧ್ಯವಾದ ಹಲವಾರು ಎಲೆಕ್ಟ್ರಾನಿಕ್ ಗುಣಗಳಿವೆ. ಉದಾಹರಣೆಗೆ ವಸ್ತುಗಳು ಅವಾಹಕ, ವಾಹಕ ಅಥವಾ ಅರೆವಾಹಕಗಳಾಗಿ ಏಕೆ ಪರಿಣಮಿಸುತ್ತವೆ ಎಂಬುದನ್ನು ಮುಕ್ತ ಎಲೆಕ್ಟ್ರಾನ್ ಅನಿಲದ ಸಹಾಯದಿಂದ ವ್ಯತ್ಯಾಸ, ಅವಾಹಕ ಮತ್ತು ವಾಹಕಗಳ ರೋಧತ್ವದಲ್ಲಿನ ವ್ಯತ್ಯಾಸದ ಅಪಾರ ಹರವುಗಳನ್ನು (ಅಲ್ಪ ಉಷ್ಣತೆಗಳಲ್ಲಿ ಈ ವ್ಯತ್ಯಾಸದ ಹರವು 1032ರಷ್ಟಿರುತ್ತದೆ) ಅರ್ಥಮಾಡಿಕೊಳ್ಳಲು ಎಲೆಕ್ಟ್ರಾನ್ ಶಕ್ತಿಮಟ್ಟಗಳ ಪಟ್ಟೆ ರಚನೆಯನ್ನು ಪರಿಗಣಿಸಬೇಕಾಗುತ್ತದೆ. ಈಗ ಶಕ್ತಿಪಟ್ಟಿಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ಪರಿಗಣಿಸೋಣ. ಒಂಟಿಯಾಗಿರುವ ಪರಮಾಣುಗಳ ಎಲೆಕ್ಟ್ರಾನಿಕ್ ಶಕ್ತಿಮಟ್ಟಗಳು ಅವನ್ನು ಜೋಡಿಸಿ ಸಂಕೀರ್ಣ ವ್ಯವಸ್ಥೆಗಳನ್ನು ರಚಿಸಿದಾಗ ಗಮನಾರ್ಹವಾಗಿ ಬದಲಾಗುತ್ತವೆ. ಮೊದಲು ಒಂದೇ ಜಾತಿಯ ಎರಡು ಪರಮಾಣುಗಳು ಸೇರಿ ಒಂದು ಅಣುವಾದಾಗ ಶಕ್ತಿಮಟ್ಟಗಳಲ್ಲಿನ ಬದಲಾವಣೆಯನ್ನು ಗಮನಿಸೋಣ. ಪರಮಾಣುಗಳು ಪರಸ್ಪರ ದೂರವಿರುವಾಗ, ಅಂದರೆ ಅವುಗಳ ಪರಸ್ಪರ ಅಂತರಕ್ರಿಯೆ ಗಣನೀಯವಲ್ಲದಿರುವಾಗ, ಅವುಗಳೆರಡರಲ್ಲೂ ಎಲೆಕ್ಟ್ರಾನಿಕ್ ಶಕ್ತಿಮಟ್ಟಗಳು ಒಂಟಿ ಪರಮಾಣುವಿನ ಶಕ್ತಿಮಟ್ಟಗಳಂತೆಯೇ ಇರುತ್ತವೆ. ಪರಮಾಣುಗಳು ಹತ್ತಿರ ಬಂದಂತೆ ಒಂದು ಪರಮಾಣುವಿನ ಎಲೆಕ್ಟ್ರಾನ್‌ಗಳು ಇನ್ನೊಂದು ಪರಮಾಣುವಿನ ಪ್ರಭಾವಕ್ಕೆ ಒಳಗಾಗುತ್ತವೆ. ಪರಸ್ಪರ ಪ್ರಭಾವ ಅಥವಾ ಅಂತರಕ್ರಿಯೆ ಗಣನೀಯವಾದಾಗ ಎರಡು ಪರಮಾಣುಗಳನ್ನೂ ಸೇರಿಸಿದ ಒಂದು ಸಂಯುಕ್ತ ವ್ಯವಸ್ಥೆ ಉಂಟಾಗಿದೆ ಎಂದು ಹೇಳಬೇಕಾಗುತ್ತದೆ. ಈಗ ಈ ಸಂಯುಕ್ತ ವ್ಯವಸ್ಥೆಯಲ್ಲಿ ಎಲೆಕ್ಟ್ರಾನ್‌ಗಳ ಸಂಖ್ಯೆ ಒಂಟಿ ಪರಮಾಣುವಿನಲ್ಲಿ ಎಲೆಕ್ಟ್ರಾನ್ ಸಂಖ್ಯೆಯ ಎರಡರಷ್ಟಾಗಿರುವುದರಿಂದಲೂ ಒಂದೇ ಕ್ವಾಂಟಂ ಸ್ಥಿತಿಯಲ್ಲಿ ಎರಡು ಎಲೆಕ್ಟ್ರಾನ್‌ಗಳಿರಲು ಬಹಿಷ್ಕರಣ ನಿಯಮ ಬಿಡುವುದಿಲ್ಲವಾದ್ದರಿಂದಲೂ ಪ್ರತಿಯೊಂದು ಒಂಟಿ ಪರಮಾಣುವಿನ ಎಲೆಕ್ಟ್ರಾನಿಕ್ ಶಕ್ತಿಮಟ್ಟವೂ ಸುಮಾರಾಗಿ ಒಂದೇ ಶಕ್ತಿಯಿರುವ ಎರಡು ಮಟ್ಟಗಳಾಗಿ ಸೀಳಿಕೊಳ್ಳುತ್ತದೆ. ಪರಮಾಣುಗಳ ನಡುವಣ ದೂರ ಕಡಿಮೆ ಆದಂತೆ ಈ ಸೀಳಿಕೆಯ ಅಗಲ ಅಥವಾ ಸೀಳಿದ ಮಟ್ಟಗಳ ಶಕ್ತಿವ್ಯತ್ಯಾಸ ಹೆಚ್ಚಾಗುತ್ತದೆ. ಹೈಡ್ರೋಜನ್‌ನ (H2) ಅಣುವಿನಲ್ಲಿ 1s ಮಟ್ಟದ ಸೀಳಿಕೆ ಚಿತ್ರ (4)ರಲ್ಲಿ ತೋರಿಸಿದಂತಿರುತ್ತದೆ. ಚಿತ್ರ (9)ರಲ್ಲಿ ಹೈಡ್ರೋಜನ್‌ನ ಆರು ಪರಮಾಣುಗಳಿರುವ ಒಂದು ಕಾಲ್ಪನಿಕ ರೇಖೀಯ H6 ಅಣುವಿನಲ್ಲಿ 1s ಮತ್ತು 2s ಮಟ್ಟಗಳ ಸೀಳಿಕೆಯನ್ನು ತೋರಿಸಲಾಗಿದೆ. ಈ ಚಿತ್ರಗಳಲ್ಲಿ dಯು ಪರಮಾಣುಗಳ ನಡುವಿನ ದೂರವನ್ನೂ E ಪರಮಾಣುಗಳ ಅಂತರ ಕ್ರಿಯಾಶಕ್ತಿಯನ್ನೂ ಪ್ರತಿನಿಧಿಸುತ್ತವೆ.




ಚಿತ್ರ 9. ಕಾಲ್ಪನಿಕ ಅಣುವೊಂದರ $1_s$ ಮತ್ತು $2_s$ ಮಟ್ಟಗಳ ಸೀಳಿಕೆ

ಮೇಲೆ ವಿವರಿಸಿದ ಚಿತ್ರಣವನ್ನು ಬಹುಸಂಖ್ಯಾತ ಪರಮಾಣುಗಳ ಜೋಡಣೆಯಿಂದಾದ ಘನವಸ್ತುಗಳಿಗೂ ವಿಸ್ತರಿಸಬಹುದು. ಒಂದೇ ಜಾತಿಯ N ಪರಮಾಣುಗಳು ಸೇರಿ ಆದ ವ್ಯವಸ್ಥೆಯೊಂದರಲ್ಲಿ ಪ್ರತಿಯೊಂದು ಒಂಟಿ ಪರಮಾಣುವಿನ ಮಟ್ಟವೂ N ಆಣ್ವಕ




ಚಿತ್ರ 10 (*a*). ಘನಹೈಡ್ರೋಜನ್ನಿನ ಶಕ್ತಿಪಟ್ಟಿಗಳು

ಮಟ್ಟಗಳಾಗಿ ಸೀಳಿಕೊಳ್ಳುತ್ತದೆ. ಪರಮಾಣುಗಳ ನಡುವಿನ ದೂರ d ಕಡಿಮೆಯಾದಂತೆ ಅವುಗಳ ಹೊರಚಿಪ್ಪುಗಳ ಎಲೆಕ್ಟ್ರಾನುಗಳು ಮೊದಲು ಪರಸ್ಪರ ಅಂತರಕ್ರಿಯೆಗೆ ಒಳಗಾಗು ವುದರಿಂದ, ಈ ಎಲೆಕ್ಟ್ರಾನ್‌ಗಳ, ಅದರಲ್ಲಿಯೂ ವೇಲನ್ಸ್ ಎಲೆಕ್ಟ್ರಾನ್‌ಗಳ, ಶಕ್ತಿಮಟ್ಟಗಳು

ಮೊದಲು ಸೀಳಿಕೊಳ್ಳುತ್ತವೆ. ಚಿತ್ರ (10a) ಮತ್ತು (10b)ಗಳಲ್ಲಿನ ಘನ ಹೈಡ್ರೋಜನ್ ಮತ್ತು ಘನ ಸೋಡಿಯಮ್‌ಗಳಲ್ಲಿ ಶಕ್ತಿಮಟ್ಟಗಳ ಸೀಳಿಕೆಯನ್ನು ತೋರಿಸಲಾಗಿದೆ. ಈ ಸೀಳಿಕೆ ತೀರ ಒತ್ತಾಗಿರುವುದರಿಂದ ಚಿತ್ರದಲ್ಲಿ ಸೀಳಿದ ಮಟ್ಟಗಳ ವೇಷ್ಟನಗಳನ್ನು (ಎನ್ವಲಪ್ಸ್) ಮಾತ್ರ ತೋರಿಸಿದೆ. ಸೀಳಿಕೆ ಬಹು ಒತ್ತಾಗಿರುವುದರಿಂದ ಈ ಪ್ರಕ್ರಿಯೆಯನ್ನು ಸೀಳಿಕೆ ಎನ್ನುವುದಕ್ಕಿಂತಲೂ ಹರಡುವಿಕೆ ಎನ್ನುವುದು ಉಚಿತವಾಗುತ್ತದೆ. ಇಂಥ ಹರಡಿಕೊಂಡ ಶಕ್ತಿಮಟ್ಟಗಳ ಗುಂಪುಗಳಿಗೆ ಶಕ್ತಿಪಟ್ಟಿಗಳೆಂದು ಹೆಸರು. ಇವು ಘನ ಹೈಡ್ರೋಜನ್‌ನಲ್ಲಿರುವಂತೆ (ಚಿತ್ರ 10a) ದೂರದೂರವಿರಬಹುದು ಅಥವಾ ಘನಸೋಡಿಯಮಿನಲ್ಲಿರುವಂತೆ (ಚಿತ್ರ 10b) ಒಂದರಮೇಲೊಂದು ಬಿದ್ದಿರಬಹುದು. ಶಕ್ತಿಪಟ್ಟಿಗಳು ಪರಸ್ಪರ ಅನಾಚ್ಛಾದಿತವಾದಾಗ (ನಾನ್‌ಓವರ್‌ಲ್ಯಾಪಿಂಗ್) ಎರಡು ಪಟ್ಟಿಗಳ ನಡುವಣ ವಲಯಕ್ಕೆ ಪ್ರತಿಬಂಧಿತ ಶಕ್ತಿವಲಯ ಅಥವಾ ಶಕ್ತಿತೆರಪು (ಎನರ್ಜಿ ಗ್ಯಾಪ್) ಎಂದು ಹೆಸರು.




**ಚಿತ್ರ 10 (*b*). ಘನ ಸೋಡಿಯಮ್ ಲೋಹದಲ್ಲಿನ ಶಕ್ತಿಪಟ್ಟಿಗಳು**

ಘನವಸ್ತುವಿನಲ್ಲಿನ ಎಲೆಕ್ಟ್ರಾನ್‌ಗಳು ಅತ್ಯಂತ ಕಡಿಮೆ ಶಕ್ತಿ ಇರುವ ಶಕ್ತಿಮಟ್ಟಗಳಿಂದ ಪ್ರಾರಂಭಿಸಿ ಯಾವುದೋ ಒಂದು ನಿರ್ದಿಷ್ಟ ಮಟ್ಟದ (ಫರ್ಮಿ ಮಟ್ಟ)ವರೆಗೆ ಶಕ್ತಿಮಟ್ಟವೊಂದಕ್ಕೆ (ಪರಸ್ಪರ ವಿರುದ್ಧ ಗಿರಕಿ ಇರುವ) ಎರಡು ಎಲೆಕ್ಟ್ರಾನ್‌ಗಳಂತೆ ತುಂಬಿಕೊಳ್ಳುತ್ತವೆ. ಉಷ್ಣತೆಯ ನಿರಪೇಕ್ಷಶೂನ್ಯದಲ್ಲಿ (0° K) ಫರ್ಮಿ ಮಟ್ಟದ ಕೆಳಗಿನ ಮಟ್ಟಗಳೆಲ್ಲವೂ ಭರ್ತಿಯಾಗಿಯೂ ಮೇಲಿನ ಮಟ್ಟಗಳೆಲ್ಲವೂ ಖಾಲಿಯಾಗಿಯೂ ಇರುತ್ತವೆ. ಶೂನ್ಯವಲ್ಲದ ಉಷ್ಣತೆಗಳಲ್ಲಿ (T? 0) ಉಷ್ಣೀಯ (ಥರ್ಮಲ್) ಏರಿಳಿತಗಳಿಂದ ಫರ್ಮಿ ಮಟ್ಟದ ಕೆಳಗಿನ ಕೆಲವು ಶಕ್ತಿಮಟ್ಟಗಳಲ್ಲಿನ ಎಲೆಕ್ಟ್ರಾನ್‌ಗಳು ಫರ್ಮಿ ಮಟ್ಟದ ಮೇಲಿನ ಶಕ್ತಿಮಟ್ಟಗಳಿಗೆ ಹೋಗಬಹುದು. ಘನವಸ್ತುವಿನ ಫರ್ಮಿ ಮಟ್ಟ ಶಕ್ತಿಪಟ್ಟಿಯೊಂದರ ಮಧ್ಯದಲ್ಲಿದ್ದರೆ ಅಥವಾ ಶಕ್ತಿಪಟ್ಟಿಗಳು ಪರಸ್ಪರ ಆಚ್ಛಾದಿತವಾಗಿದ್ದರೆ ಫರ್ಮಿ ಮಟ್ಟದ ಮೇಲೆ ಹೋದ ಎಲೆಕ್ಟ್ರಾನ್‌ಗಳಿಗೆ ಹೆಚ್ಚು ಕಡಿಮೆ ಅವಿಚ್ಛಿನ್ನವಾದ ಅಸಂಖ್ಯಾತ ಶಕ್ತಿಮಟ್ಟಗಳು ಲಭ್ಯವಾಗುತ್ತವೆ. ಇದರಿಂದ ಫರ್ಮಿ ಮಟ್ಟದ ಮೇಲಿನ ಮಟ್ಟಗಳಲ್ಲಿನ ಎಲೆಕ್ಟ್ರಾನುಗಳನ್ನು ಮುಕ್ತ ಎಲೆಕ್ಟ್ರಾನ್‌ಗಳೆಂದು ಭಾವಿಸಬಹುದು. ಮುಕ್ತ ಕಣವೊಂದರ ಅಲೆಉತ್ಪನ್ನ ಸಮತಲ ಅಲೆ ಪರಿಹಾರವಾಗಿರುತ್ತದೆ, ಎಂದು ನಮಗೆ ತಿಳಿದಿದೆ (**ನೋಡಿ – ಕ್ವಾಂಟಂ ಬಲವಿಜ್ಞಾನ**). ಮುಕ್ತ ಎಲೆಕ್ಟ್ರಾನ್‌ಒಂದರ ದ್ರವ್ಯರಾಶಿ, ವೇಗ, ಶಕ್ತಿ ಅಲೆಯುದ್ದ ಮತ್ತು ಅಲೆಸದಿಶಗಳನ್ನು ಅನುಕ್ರಮವಾಗಿ m, v, E, λ ಮತ್ತು k ಗಳಿಂದ ಸೂಚಿಸಿದರೆ ನಡುವಣ ಸಂಬಂಧ

$$E = \frac{h^2 k^2}{8\Pi^2 m} \qquad \text{..........  ......(1)}$$

ಆಗಿರುತ್ತದೆ. ಇಲ್ಲಿ $k = |k| = \frac{2\Pi}{\lambda},\ \lambda = \frac{h}{mv},\ E = \frac{1}{2} mv^2$

ಎಂಬುದನ್ನು ಸ್ಮರಿಸಿಕೊಳ್ಳಬೇಕು. E ಮತ್ತು kಯ ಆಲೇಖ ಒಂದು ಪರವಲಯ ವಾಗುತ್ತದೆಂದು ಸಮೀಕರಣ (1)ರಿಂದ ತಿಳಿಯುತ್ತದೆ. ಆದರೆ ಫರ್ಮಿ ಮಟ್ಟದ ಮೇಲಿನ ಎಲೆಕ್ಟ್ರಾನುಗಳಿಗೆ ಎಲ್ಲ ಶಕ್ತಿಮಟ್ಟಗಳೂ ಲಭ್ಯವಲ್ಲದ್ದರಿಂದ, ಅಂದರೆ ಶಕ್ತಿಮಟ್ಟಗಳ ಪಟ್ಟಿರಚನೆ




**ಚಿತ್ರ 11**

ಯಲ್ಲಿ ಶಕ್ತಿ ತೆರಪುಗಳಿರುವುದರಿಂದ, ಈ ಪರವಲಯದಿಂದ ಪ್ರತಿಬಂಧಿತ ಶಕ್ತಿವಲಯಗಳನ್ನು ಕತ್ತರಿಸಿ ತೆಗೆಯಬೇಕಾಗುತ್ತದೆ. (ಚಿತ್ರ 11). ಪ್ರತಿಬಂಧಿತ ಶಕ್ತಿವಲಯಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ಎಲೆಕ್ಟ್ರಾನ್ ಅಲೆಗಳು ಜಾಲಕದಲ್ಲಿ ನಮನ ಹೊಂದುತ್ತವೆ ಎಂದು ಪರಿಗಣಿಸಿ ಬಹು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಬ್ರಾಗ್ ನಮನನಿಯಮದಂತೆ ? ಪತನಕೋನದಲ್ಲಿ ಎಲೆಕ್ಟ್ರಾನ್ ಅಲೆಯ ರಚನಾತ್ಮಕ ಪ್ರತಿಫಲನವಾಗಬೇಕಾದರೆ

$$n\lambda = 2d\sin\theta \qquad \text{.......(2)}$$

ಆಗಬೇಕು (ಚಿತ್ರ 12). ಇಲ್ಲಿ d ಪರಮಾಣುಗಳ ನಡುವಣ ಅಂತರ ಅಥವಾ ಜಾಲಕದ




**ಚಿತ್ರ 12**

ಸ್ಥಿರಾಂಕ; n ಒಂದು ಪೂರ್ಣಾಂಕ. ಅಲ್ಲದೆ $k = 2\pi/\lambda$ ಆದ್ದರಿಂದ ಬ್ರಾಗ್ ನಿಯಮ (2)ನ್ನು

$$k = \frac{n\Pi}{d\sin\theta} \qquad \text{......(3)}$$

ಎಂದೂ ಬರೆಯಬಹುದು. ಆದ್ದರಿಂದ ಸ್ಥಿರವಾದ ಒಂದು $\theta$ ದಲ್ಲಿ n ನ ವಿವಿಧ ಪೂರ್ಣಾಂಕ ಬೆಲೆಗಳಿಗೆ ಹೊಂದಿಕೊಂಡ k ಯ ಅನೇಕ ಬೆಲೆಗಳಿವೆ ಎಂದು ತಿಳಿಯುತ್ತದೆ. K ಯ ಈ ಯಾವ ಬೆಲೆಯಲ್ಲಿಯಾದರೂ ಎಲೆಕ್ಟ್ರಾನ್ ಅಲೆಯು ಬ್ರಾಗ್ ಪ್ರತಿಫಲನದಿಂದಾಗಿ ಚಲಿಸುವ ಅಲೆಯಾಗುವುದಿಲ್ಲ; ಬದಲು ಸ್ಥಿತ ಅಲೆಯಾಗಿ (ಸ್ಟ್ಯಾಂಡಿಂಗ್ ವೇವ್) ಪರಿಣಮಿಸುತ್ತದೆ. ಉದಾಹರಣೆಗೆ x– ಅಕ್ಷಕ್ಕೆ ಸಮಾಂತರವಾಗಿ $(\theta = \pi/2)$ ವಿರುದ್ಧ ದಿಶೆಯಲ್ಲಿ ಚಲಿಸುವ ಅಲೆಗಳಾದ $A\exp\left(\frac{i\pi x}{d}\right)$ ಮತ್ತು $A\exp\left(\frac{-i\pi x}{d}\right)$ ಗಳ ಅಧ್ಯಾರೋಪಣದಿಂದ (ಸೂಪರ್‌ಪೊಸಿಷನ್) ಈ ಕೆಳಗಿನ ಎರಡು ಸ್ಥಿತ ಅಲೆಗಳನ್ನು ಪಡೆಯಬಹುದು:

$$\Psi(+) = 2A\cos(\pi x/d)$$

$$\Psi(-) = 2iA\sin(\pi x/d)$$

ಈ ಸ್ಥಿತ ಅಲೆಗಳಿಗೆ ಸಂಬಂಧಿಸಿದ ಎಲೆಕ್ಟ್ರಾನ್ ಇರುವಿಕೆಯ ಸಂಭಾವ್ಯತಾ ಸಾಂದ್ರತೆ

$p(x) = |\Psi|^2$ ವನ್ನು




**ಚಿತ್ರ 13. ಚಿತ್ರದಲ್ಲಿ ಸಂಖ್ಯೆ 1 ಎಂಬುದು $|\psi(+)|^2$ ನ್ನೂ ಸಂಖ್ಯೆ 2 ಎಂಬುದು ಚಲಿಸುವ ಅಲೆಯ ಸಂಭಾವ್ಯತಾ ಸಾಂದ್ರತೆಯನ್ನೂ ಸಂಖ್ಯೆ 3 ಎಂಬುದು $|\psi(-)|^2$ ನ್ನೂ ಪ್ರತಿನಿಧಿಸುತ್ತವೆ**

ಚಲಿಸುವ ಮತ್ತು ಸ್ಥಿತ ಅಲೆಗಳಿಗೆ ಚಿತ್ರ (13)ರಲ್ಲಿ ತೋರಿಸಲಾಗಿದೆ. ಅಲೆ ಉತ್ಪನ್ನ $\Psi(+)$ ಎಲೆಕ್ಟ್ರಾನುಗಳನ್ನು ಧನ ಅಯಾನುಗಳ ಹತ್ತಿರ ತಂದು ಸೇರಿಸಿದರೆ $\Psi(-)$ ಎಲೆಕ್ಟ್ರಾನುಗಳನ್ನು ಧನ ಅಯಾನುಗಳ ನಡುವೆ ತಂದು ಸೇರಿಸುತ್ತದೆ. ಚಲಿಸುವ ಅಲೆಗಳು ಎಲೆಕ್ಟ್ರಾನುಗಳನ್ನು ಒಂದೇ ಸಮವಾಗಿ ಹರಡುತ್ತವೆ. ಧನ ಅಯಾನುಗಳ ಮತ್ತು ಎಲೆಕ್ಟ್ರಾನುಗಳ ನಡುವಿನ ದೂರ ಕಡಿಮೆ ಇರುವ $\Psi(+)$ ಸ್ಥಿತ ಅಲೆಗೆ $\Psi(-)$ ಸ್ಥಿತ ಅಲೆಗಿಂತಲೂ ಹೆಚ್ಚಿನ ವಿದ್ಯುತ್ ವಿಭವ ಶಕ್ತಿ ಉಂಟು. ಈ ಎರಡು ಸ್ಥಿತ ಅಲೆಗಳ ವಿಭವ ಶಕ್ತಿಯ ಅಂತರ Eg ಆದರೆ E-k ಆಲೇಖದಲ್ಲಿ $k_1 = \pm\pi/d$ ಯಲ್ಲಿ Eg ಯಷ್ಟು ಅಗಲದ ಪ್ರತಿಬಂಧಿತ ಶಕ್ತಿವಲಯವಿರುತ್ತದೆ (ಚಿತ್ರ 11).

ಜಾಲಕದಲ್ಲಿ ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವ ವಿದ್ಯುತ್‌ವಿಭವದಿಂದ ಎಲೆಕ್ಟ್ರಾನುಗಳು ನಮನ ಹೊಂದುತ್ತವೆ. ಪ್ರತಿಯೊಂದು ಧನ ಅಯಾನಿನ ಬಳಿಯಲ್ಲೂ ಜಾಲಕದಲ್ಲಿನ ವಿದ್ಯುತ್ ವಿಭವಕ್ಕೆ ಒಂದೊಂದು ಕುಳಿ (ವೆಲ್) ಉಂಟು (ಚಿತ್ರ 13). ಕಡಿಮೆ ವೇಲನ್ಸಿಯುಳ್ಳ ಪರಮಾಣ್ವಿಕ ಜಾಲಕದಲ್ಲಿನ ವಿಭವ ಕುಳಿಗಳ ಆಳ ಹೆಚ್ಚಿನ ವೇಲನ್ಸಿಯುಳ್ಳ ಪರಮಾಣ್ವಿಕ ಜಾಲಕಗಳಲ್ಲಿನದಕ್ಕಿಂತ ಕಡಿಮೆ ಇರುವುದರಿಂದ Eg ಯು ವೇಲನ್ಸಿ ಹೆಚ್ಚಾದಂತೆ ಹೆಚ್ಚಾಗುತ್ತದೆ. ಒಂದು ಕಾಲ್ಪನಿಕ k-ಆಕಾಶದಲ್ಲಿ ಲಭ್ಯವಿರುವ k ಬೆಲೆಗಳ ಮೂರು ಆಯಾಮಗಳಲ್ಲಿನ ಪ್ರಾತಿನಿಧ್ಯಕ್ಕೆ ಬ್ರಿಲೋನ್ ವಲಯಗಳು ಎಂದು ಹೆಸರು. ಚಿತ್ರ (11)ರಲ್ಲಿ $k1 < k < k2$ ನ್ನು ಪ್ರಥಮ (ಒಂದು ಆಯಾಮದಲ್ಲಿನ) ಬ್ರಿಲೋನ್ ವಲಯ ಎಂದೂ $k2 < k < k1$ ನ್ನು ದ್ವಿತೀಯ ಬ್ರಿಲೋನ್ ವಲಯ ಎಂದೂ ಕರೆಯಬಹುದು.

ಘನವಸ್ತುಗಳ ವಿದ್ಯುತ್ ಗುಣಗಳು : ಈಗ ಶಕ್ತಿಪಟ್ಟಿಗಳ ರಚನೆಯಿಂದ ಘನವಸ್ತುಗಳ ವಿದ್ಯುದ್ವಾಹಕತ್ವವನ್ನು ಹೇಗೆ ವಿವರಿಸಬಹುದೆಂದು ನೋಡೋಣ. ಪರಮಾಣುಗಳನ್ನು ಹತ್ತಿರ ತಂದು ಸೇರಿಸಿ ಒಂದು ಸಂಯುಕ್ತ ವ್ಯವಸ್ಥೆಯನ್ನು ಮಾಡಿದಾಗ, ಪ್ರತಿಯೊಂದು ಒಂಟಿ ಎಲೆಕ್ಟ್ರಾನ್ ಮಟ್ಟವೂ N ಮಟ್ಟಗಳಾಗಿ ಸೀಳಿಕೊಳ್ಳುತ್ತದೆಂದು ತಿಳಿಯಲಾಯಿತು. ಆದ್ದರಿಂದ (ವಿರುದ್ಧ ಗಿರಕಿ ಇರುವ) ಎರಡು ಎಲೆಕ್ಟ್ರಾನುಗಳಿಗೆ ಜಾಗವೀಯಬಲ್ಲ ಒಂಟಿ ಪರಮಾಣುವಿನ S ಮಟ್ಟ ಸಂಯುಕ್ತ ವ್ಯವಸ್ಥೆಯಲ್ಲಿ 2N ಎಲೆಕ್ಟ್ರಾನುಗಳಿಗೆ ಜಾಗವೀಯಬಲ್ಲ S ಪಟ್ಟಿ ಆಗುತ್ತದೆ. ಇದೇ ರೀತಿ ಒಂಟಿ ಪರಮಾಣುವಿನ 6 ಎಲೆಕ್ಟ್ರಾನುಗಳಿಗೆ ಜಾಗವೀಯಬಲ್ಲ p ಮಟ್ಟ 6N ಎಲೆಕ್ಟ್ರಾನುಗಳಿಗೆ ಜಾಗವೀಯಬಲ್ಲ p ಪಟ್ಟಿ ಆಗುತ್ತದೆ. ವೇಲನ್ಸ್ ಎಲೆಕ್ಟ್ರಾನ್‌ಗಳಿರುವ ಪಟ್ಟಿಯನ್ನು ವೇಲನ್ಸ್ ಪಟ್ಟಿಯೆಂದೂ ಫರ್ಮಿ ಮಟ್ಟವಿರುವ ಮೇಲಿನ ಪಟ್ಟಿ ಭಾಗಶಃ ಭರ್ತಿ ಆಗಿದ್ದರೆ ಅದನ್ನು ವಹನ ಪಟ್ಟಿ ಎಂದೂ ಕರೆಯುತ್ತೇವೆ. ಲೋಹಗಳಲ್ಲಿ ವೇಲನ್ಸ್ ಪಟ್ಟಿ ಸಾಮಾನ್ಯವಾಗಿ ಭಾಗಶಃ ಭರ್ತಿಯಾಗಿರುತ್ತದೆ. (ಚಿತ್ರ 14). ಉದಾಹರಣೆಗೆ,




**ಚಿತ್ರ 14**

ತಾಮ್ರದಲ್ಲಿ 4s ವೇಲನ್ಸ್ ಎಲೆಕ್ಟ್ರಾನುಗಳು (ಪರಮಾಣುವೊಂದಕ್ಕೆ ಒಂದೇ 4s ಎಲೆಕ್ಟ್ರಾನ್ ಇರುವುದರಿಂದ) s ಪಟ್ಟಿಯನ್ನು ಅರ್ಧ ಮಾತ್ರ ತುಂಬಿಸುತ್ತವೆ. ಕೆಲವು ಲೋಹಗಳಲ್ಲಿ ವೇಲನ್ಸ್ ಪಟ್ಟಿ ಸಂಪೂರ್ಣ ಭರ್ತಿ ಆಗಿದ್ದರೂ ಖಾಲಿಯಿರುವ ಮೇಲಿನ ಪಟ್ಟಿಯೊಂದಿಗೆ ಆಚ್ಛಾದಿತವಾಗಿರುತ್ತದೆ. ಇದರಿಂದ ಫರ್ಮಿ ಮಟ್ಟದ ಬಳಿಯಿರುವ ಎಲೆಕ್ಟ್ರಾನುಗಳು, ಲಭ್ಯವಿರುವ ಅಸಂಖ್ಯಾತ ಖಾಲಿ ಮಟ್ಟಗಳಿರುವುದರಿಂದ, ಚಲಿಸಲು ಮುಕ್ತವಾಗಿರುತ್ತವೆ; ಮತ್ತು ಘನವಸ್ತುವಿನ ಉತ್ತಮ ವಿದ್ಯುದ್ವಾಹಕತ್ವಕ್ಕೆ ಕಾರಣವಾಗುತ್ತವೆ. ಒಂದು ವೇಳೆ ವೇಲನ್ಸ್ ಪಟ್ಟಿ ಸಂಪೂರ್ಣ ಭರ್ತಿಯಾಗಿಯೂ ಅದರ ಮೇಲಿನ ಪಟ್ಟಿ ಸಂಪೂರ್ಣ ಖಾಲಿಯಾಗಿಯೂ ಇದ್ದು ಎರಡು ಪಟ್ಟಿಗಳೂ ಅನಾಚ್ಛಾದಿತವಾಗಿದ್ದರೆ (ಚಿತ್ರ 14) ಘನವಸ್ತು ಅವಾಹಕವಾಗುತ್ತದೆ. ಆರೋಪಿತ ವಿದ್ಯುತ್ ಕ್ಷೇತ್ರದಲ್ಲಿ ಎಲೆಕ್ಟ್ರಾನ್‌ಗಳು ಹರಿಯಬೇಕಾದರೆ ಅವು ಬೇರೆ ಶಕ್ತಿಮಟ್ಟಗಳಿಗೆ ಹೋಗಬೇಕು. ಹೀಗಾಗಲು ಅವು ಶಕ್ತಿಪಟ್ಟಿಗಳ ನಡುವಿನ ಶಕ್ತಿ ತೆರಪನ್ನು ದಾಟಿ ಹೋಗಬೇಕಾಗುತ್ತದೆ. ಈ ಶಕ್ತಿ ತೆರಪು ಕೆಲವು ಎಲೆಕ್ಟ್ರಾನ್ ವೋಲ್ಟುಗಳಷ್ಟು ಅಗಲವಾಗಿದ್ದರೆ ಎಲೆಕ್ಟ್ರಾನ್‌ಗಳು ಅದನ್ನು ದಾಟಲು ಅತಿ ಹೆಚ್ಚಿನ ವಿದ್ಯುತ್ ವಿಭವಗಳನ್ನು ಹಾಕಬೇಕಾಗುತ್ತದೆ. ಅಂದರೆ ಘನವಸ್ತು ಅವಾಹಕವಾಗುತ್ತದೆ. ಆದರೆ ಶಕ್ತಿ ತೆರಪು ಸಾಕಷ್ಟು ಕಡಿಮೆ ಇದ್ದರೆ (ಚಿತ್ರ 14) ಉಷ್ಣದ ಏರಿಳಿತಗಳಿಂದ ಎಲೆಕ್ಟ್ರಾನುಗಳು ಮೇಲಿನ ಪಟ್ಟಿಗೆ ಹೋಗಲು ಸಾಧ್ಯವಾಗುತ್ತದೆ; ಅಂದರೆ ವಸ್ತು ಅರೆವಾಹಕವಾಗಿರುತ್ತದೆ. ಸಹವೇಲಂಟ್ ಸ್ಫಟಿಕಗಳಲ್ಲಿ ವೇಲನ್ಸ್ ಪಟ್ಟಿ ಸಂಪೂರ್ಣವಾಗಿ ಭರ್ತಿಯಾಗಿರುತ್ತದೆ. ವಜ್ರದಲ್ಲಿನ ಶಕ್ತಿ ತೆರಪು 7eV ಗಳಷ್ಟಿರುವುದರಿಂದ ವಜ್ರ ಉತ್ತಮ ಅವಾಹಕವಾಗಿರುತ್ತದೆ. ಸಿಲಿಕಾನ್‌ನಲ್ಲಿ ಶಕ್ತಿ ತೆರಪು 2eV ಮಾತ್ರ ಇರುವುದರಿಂದ ಸಿಲಿಕಾನ್ ಅರೆವಾಹಕವಾಗುತ್ತದೆ. ಯಾವುದೇ ಸ್ಫಟಿಕ ವಿದ್ಯುದ್ವಾಹಕವಾಗಲು ಎರಡು ಕಾರಣಗಳಿರುತ್ತವೆ; ವೇಲೆನ್ಸ್ ಪಟ್ಟಿಯಿಂದ ಮೇಲೆ ಹೋದ ಎಲೆಕ್ಟ್ರಾನ್ ಮತ್ತು ವೇಲನ್ಸ್ ಪಟ್ಟಿಯಲ್ಲಿ ಎಲೆಕ್ಟ್ರಾನ್‌ನ ವರ್ಗಾವಣೆಯಿಂದ ಉಂಟಾಗುವ ಖಾಲಿಮಟ್ಟ (ಇದನ್ನು ಬಿಲ ಎಂದು ಕರೆಯಬಹುದು). ಇವೆರಡೂ ವಿದ್ಯುದ್ವಹನ ಕ್ರಿಯೆಯಲ್ಲಿ ಭಾಗವಹಿಸುತ್ತವೆ. ವಿದ್ಯುದ್ವಹನ ಕ್ರಿಯೆಯಲ್ಲಿ ಬಿಲ ಧನವಿದ್ಯುದಾವಿಷ್ಟ ಕಣವೊಂದರಂತೆ ವರ್ತಿಸುತ್ತದೆ ಎಂದು ತೋರಿಸಬಹುದು.

ಮುಕ್ತ ಎಲೆಕ್ಟ್ರಾನ್‌ಗಳಿಂದ ವಿದ್ಯುದ್ವಹನ ಉಂಟಾಗುವಂತೆ ಮುಕ್ತ ಅಯಾನ್‌ಗಳಿಂದಲೂ ವಿದ್ಯುದ್ವಹನ ಸಾಧ್ಯವಾಗುತ್ತದೆ. ಇಂಥ ಪ್ರಕ್ರಿಯೆಗೆ ಅಯಾನಿಕ್ ವಿದ್ಯುದ್ವಹನ ಎಂದು ಹೆಸರು. ಅಯಾನ್‌ಗಳಿಂದ ವಿದ್ಯುದ್ವಹನ ಉಂಟಾಗಬೇಕಾದರೆ ಉಷ್ಣದ ಏರಿಳಿತಗಳಲ್ಲಿ ಅಯಾನ್ ಒಂದು ಸಮತೋಲ ಸ್ಥಳದಿಂದ ಇನ್ನೊಂದಕ್ಕೆ ಹೋಗಲು ಸಾಧ್ಯವಾಗಬೇಕು. ಹಲವಾರು ಲವಣಗಳಲ್ಲಿ ಅಯಾನಿಕ್ ವಾಹಕತ್ವ ಕಂಡುಬರುತ್ತದೆ. ಜಾಲಕವು ದೋಷಗಳಿಲ್ಲದೆ ಪರಿಪೂರ್ಣವಾಗಿದ್ದರೆ ಮತ್ತು ಜಾಲಕದಲ್ಲಿನ ಪರಮಾಣುಗಳು ಸಂಪೂರ್ಣವಾಗಿ

ನಿಶ್ಚಲವಾಗಿದ್ದರೆ ವಾಹಕಗಳ ವಿದ್ಯುದ್ವಾಹಕತ್ವ ಪರಿಮಿತವಾಗಲು ಆರೋಪಿತ ವಿದ್ಯುತ್ ಕ್ಷೇತ್ರದಲ್ಲಿ ವೇಗೋತ್ಕರ್ಷ ಹೊಂದುವ ಎಲೆಕ್ಟ್ರಾನ್‌ಗಳು ಅಯಾನ್‌ಗಳಿಂದ ಮತ್ತು ಜಾಲಕದಲ್ಲಿನ ದೋಷಗಳಿಂದ ಪಥ ವಿಚಲಿತವಾಗುವುದೇ ಕಾರಣ. ಶುದ್ಧವಾದ ಲೋಹಗಳಲ್ಲಿ ರೋಧತ್ವ ಶೂನ್ಯವಾಗದಿರುವಿಕೆಗೆ ಜಾಲಕದ ಉಷ್ಣಸ್ಪಂದನ ಬಹುಮುಖ್ಯವಾದ ಕಾರಣವಾದರೆ ಅಶುದ್ಧ ಲೋಹಗಳು ಮತ್ತು ಮಿಶ್ರಲೋಹಗಳಲ್ಲಿ ವಿದೇಶೀ ಪರಮಾಣುಗಳ ಅಸ್ತಿತ್ವ ರೋಧತ್ವವನ್ನು ಹೆಚ್ಚಿಸಲು ಕಾರಣವಾಗಿರುತ್ತದೆ.

ಎಲೆಕ್ಟ್ರಾನುಗಳ ವಿದ್ಯುದಾವೇಶದಿಂದ ಜನಿಸುವ ವಿಕರ್ಷಣೆಯಿಂದಾಗಿ ಮುಕ್ತ ಎಲೆಕ್ಟ್ರಾನ್ ಅನಿಲ ತಟಸ್ಥ ಕಣಗಳ ಅನಿಲವನ್ನು ಸಂಪೂರ್ಣವಾಗಿ ಹೋಲುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಎಲೆಕ್ಟ್ರಾನ್‌ಗಳಿಗೆ ಅತಿ ಹೆಚ್ಚಿನ ಪರಸ್ಪರ ಸಹಕಾರವಿರುವ ಚಲನೆಗಳು ಇರುತ್ತವೆ. ಎಲೆಕ್ಟ್ರಾನ್ ಪ್ಲಾಸ್ಮದ ವರ್ತನೆಯನ್ನು ಅಧ್ಯಯಿಸಿ ಇವನ್ನು ವಿವರಿಸಬಹುದು. ಅತಿ ಕಡಿಮೆ ಉಷ್ಣತೆಗಳಲ್ಲಿ ಕೆಲವು ಲೋಹಗಳ ಮತ್ತು ಮಿಶ್ರಲೋಹಗಳ ರೋಧತ್ವ ಉಷ್ಣತೆ ಒಂದು ಸಂಧಿಸ್ಥ ಉಷ್ಣತೆಗಿಂತ ಕಡಿಮೆಯಾದಾಗ ಸಂಪೂರ್ಣವಾಗಿ ಮಾಯವಾಗುತ್ತದೆ. ಈ ಪ್ರಕ್ರಿಯೆಗೆ ಅತಿವಾಹಕತ್ವ (ಸೂಪರ್‌ಕಂಡಕ್ಟಿವಿಟಿ) ಎಂದು ಹೆಸರು. ಕೆ.ಓನ್ಸ್ ಎಂಬಾತ ಅತಿವಾಹಕತ್ವವನ್ನು ಪಾದರಸದಲ್ಲಿ ಮೊದಲ ಬಾರಿಗೆ ಗಮನಿಸಿದ (1911). ವಸ್ತುವಿನ ಕಾಂತೀಯ ಗುಣಗಳಲ್ಲಿ ಗಮನಾರ್ಹ ಬದಲಾವಣೆಯೊಂದಿಗೆ ಅತಿವಾಹಕತ್ವದ ಆರಂಭ ಆಗುತ್ತದೆ. ಅತಿವಾಹಕ ತನ್ನಲ್ಲಿ ಹಾಯುವ ಕಾಂತೀಯ ರೇಖೆಗಳನ್ನು ಹೊರದಬ್ಬಲು ಪ್ರಯತ್ನಿಸುತ್ತದೆ; ಅಂದರೆ ಒಂದು ಆದರ್ಶ ಪ್ರತಿಕಾಂತೀಯ (ಡಯಾಮ್ಯಾಗ್ನೆಟಿಕ್) ವಸ್ತುವಾಗಲು ಪ್ರಯತ್ನಿಸುತ್ತದೆ. ಒಂದು ಅತಿವಾಹಕ ಲೋಹವನ್ನು ಕಾಂತಕ್ಷೇತ್ರದಲ್ಲಿಟ್ಟು ಉಷ್ಣತೆಯನ್ನು ಅತಿವಾಹಕ ಉಷ್ಣತೆ T2ಗಿಂತ ಕಡಿಮೆ ಮಾಡಿದರೆ ಅದರಲ್ಲಿ ಹಾಯ್ದುಹೋಗುವ ಸಮಸ್ತ ಕಾಂತೀಯರೇಖೆಗಳೂ ಹೊರಬರುತ್ತವೆ (ಚಿತ್ರ 15). ಇದಕ್ಕೆ ಮೈಸ್ನರ್ ಪರಿಣಾಮ ಎಂದು ಹೆಸರು.




**ಚಿತ್ರ 15. ಮೈಸ್ನರ್ ಪರಿಣಾಮ. ಅತಿವಾಹಕ ಗೋಳವೊಂದನ್ನು ಸ್ಥಿರಕಾಂತ ಕ್ಷೇತ್ರವೊಂದರಲ್ಲಿರಿಸಿ ಅತಿವಾಹಕ ಉಷ್ಣತೆಗಿಂತ ಕಡಿಮೆ ಉಷ್ಣತೆಗೆ ತಂದಾಗ ಕಾಂತ ಪ್ರಚೋದನೆ Bಯ ರೇಖೆಗಳು ಗೋಳದಿಂದ ಹೊರಕ್ಕೆ ದಬ್ಬಲ್ಪಡುತ್ತವೆ**

ಅತಿವಾಹಕ ಸ್ಥಿತಿಯಲ್ಲಿನ ಲೋಹವೊಂದರಲ್ಲಿ ಎಲೆಕ್ಟ್ರಾನ್‌ಗಳು ಜಾಲಕದ ಸ್ಪಂದನದ ಅಲೆಗಳೊಡನೆ ಸಹಕರಿಸಿ ಚಲಿಸುತ್ತವೆ. ಇದರಿಂದ ಅತಿವಾಹಕ ಸ್ಥಿತಿಯಲ್ಲಿನ ಲೋಹ ಶಕ್ತಿಪಟ್ಟಿಗಳ ನಡುವಿನ ತೆರಪು ಅತ್ಯಂತ ಇರುವ ಅವಾಹಕದಂತೆ ವರ್ತಿಸುತ್ತದೆ ಎನ್ನಬಹುದು. ಈ ವಿಧಾನವನ್ನು ಅನುಸರಿಸಿ ಎಲ್.ಕೂಪರ್, ಟಿ. ಶ್ರೀಫರ್ ಮತ್ತು ಜೆ. ಬಾರ್ಡೀನ್ ಎಂಬುವರು ಅತಿವಾಹಕತ್ವದ ಸಿದ್ಧಾಂತವನ್ನು ಬೆಳೆಸಿದ್ದಾರೆ. **(ನೋಡಿ–ಬಿಸಿಎಸ್ ಸಿದ್ಧಾಂತ)**.

ಘನವಸ್ತುಗಳ ಉಷ್ಣೀಯ ಗುಣಗಳು: ಉಷ್ಣಗತಿವಿಜ್ಞಾನದ (ಥರ್ಮೋಡೈನಮಿಕ್ಸ್) ಸಾಮಾನ್ಯ ನಿಯಮಗಳ ಪ್ರಕಾರ ವ್ಯವಸ್ಥೆಯೊಂದಕ್ಕೆ ಸ್ಥಿರ ಸ್ಥಿತಿ ಉಂಟಾಗಬೇಕಾದರೆ ಅದರ ಮುಕ್ತ ಶಕ್ತಿ F ಕನಿಷ್ಠವಾಗಿರಬೇಕು. ಅಂದರೆ $F = E + PV - TS$. ಕನಿಷ್ಠವಾಗಿರಬೇಕು. ಇಲ್ಲಿ E, P, V, T ಮತ್ತು S ಗಳು ಅನುಕ್ರಮವಾಗಿ ವ್ಯವಸ್ಥೆಯ ಶಕ್ತಿ, ಒತ್ತಡ, ಗಾತ್ರ, ಉಷ್ಣತೆ ಮತ್ತು ಎಂಟ್ರೊಪಿಯನ್ನು ಸೂಚಿಸುತ್ತವೆ. ಸಾಧಾರಣ ಒತ್ತಡಗಳಲ್ಲಿ ಘನವಸ್ತುವಿನ ಗಾತ್ರ V ಹೆಚ್ಚು ಬದಲಾಯಿಸದೇ ಇರುವುದರಿಂದ $F \approx E - TS$ ಎಂದು ಪರಿಗಣಿಸಬಹುದು. ಆದ್ದರಿಂದ ಉಷ್ಣತೆ ಅತಿ ಕಡಿಮೆ ಇರುವಾಗ (T ~ O) F ಕನಿಷ್ಠವಾಗಬೇಕಾದರೆ E ಕಡಿಮೆ ಇರಬೇಕು ಎಂದಾಗುತ್ತದೆ. ಅಂದರೆ ಅಲ್ಪ ಉಷ್ಣತೆಗಳಲ್ಲಿ E ಕಡಿಮೆ ಇರುವ ಮತ್ತು ಹೆಚ್ಚಿನ ಕ್ರಮಬದ್ಧತೆ ಇರುವ ವ್ಯವಸ್ಥೆಗಳು ಘನವಸ್ತುಗಳಿಗೆ ಸಹಜವಾಗಿರುತ್ತವೆ. ಅಲ್ಲದೆ ಮುಕ್ತ ಶಕ್ತಿ Fನ್ನು Eಯು ಹೆಚ್ಚಿಸಲೂ TS ಕಡಿಮೆ ಮಾಡಲೂ ಪ್ರಯತ್ನಿಸುವುದರಿಂದ ಹೆಚ್ಚಿನ ಉಷ್ಣತೆಗಳಲ್ಲಿ ಎಂಟ್ರೊಪಿ S ಹೆಚ್ಚಾಗಿರುವಂಥ ಮತ್ತು ಕಡಿಮೆ ಕ್ರಮಬದ್ಧತೆಯುಳ್ಳ ವ್ಯವಸ್ಥೆಗಳು ಘನವಸ್ತುವಿಗೆ ಉಂಟಾಗುತ್ತವೆ. ಉಷ್ಣತೆ ಹೆಚ್ಚಾದಂತೆ ಸ್ಫಟಿಕಜಾಲಕ ಕಂಪಿಸಲು ಆರಂಭಿಸುತ್ತದೆ. ಈ ರೀತಿಯ ಕಂಪನಗಳಿಂದ ಘನವಸ್ತುವಿನ ಗ್ರಾಹ್ಯೋಷ್ಣ (ಸ್ಪೆಸಿಫಿಕ್ ಹೀಟ್) ಹೆಚ್ಚುತ್ತದೆ. ಉಷ್ಣತೆ ಸಾಕಷ್ಟು ಹೆಚ್ಚಾದಾಗ ಸ್ಫಟಿಕ ರಚನೆ ಕೂಡ ಬದಲಾಯಿಸಬಹುದು. ಉದಾಹರಣೆಗೆ ಕಬ್ಬಿಣದ ರಚನೆ 1176° K ಉಷ್ಣತೆಯಲ್ಲಿ ಕಾಯಕೇಂದ್ರಿತ ಘನಿಕದಿಂದ ಮುಖಕೇಂದ್ರಿತ ಘನಿಕಕ್ಕೆ ಬದಲಾಗುತ್ತದೆ. ಇಂಥ ಬದಲಾವಣೆಗೆ ಬಹುರೂಪಿ (ಅಲಾಟ್ರಪಿಕ್) ಬದಲಾವಣೆ ಎಂದು ಹೆಸರು. ಉಷ್ಣತೆ ಹೆಚ್ಚಾದಂತೆ ಗಂಧಕ ಹಲವಾರು ಬಹುರೂಪಿ ಬದಲಾವಣೆಗಳನ್ನು ತೋರ್ಪಡಿಸುವುದು ಚಿರಪರಿಚಿತ. ಎಂಟ್ರೊಪಿಯ ಹೆಚ್ಚಳದಿಂದ ಸ್ಫಟಿಕಜಾಲಕದಲ್ಲಿ ಅನೇಕ ರೀತಿಯ ಅಪರಿಪೂರ್ಣತೆಗಳು ಜನಿಸುತ್ತವೆ. ಇದರಿಂದಾಗಿ ಜಾಲಕದಲ್ಲಿ ಬೇರೆ ಬೇರೆ ಜಾತಿಯ ಪರಮಾಣುಗಳು ಪರಸ್ಪರ ಸ್ಥಳ ಬದಲಾಯಿಸಬಹುದು. ಮಿಶ್ರಲೋಹಗಳಲ್ಲಿ ಇದಕ್ಕೆ ಬೇಕಾಗುವ ಶಕ್ತಿ ಬಹಳ ಕಡಿಮೆ ಇರುವುದರಿಂದ ಇಂಥ ಬದಲಾವಣೆಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಸಾಧಾರಣ ಉಷ್ಣತೆಗಳಲ್ಲಿ β– ಹಿತ್ತಾಳೆಯ ಸ್ಫಟಿಕಜಾಲಕದಲ್ಲಿ ಒಂದು ಲೋಹದ ಪರಮಾಣುಗಳು ಕಾಯಕೇಂದ್ರದಲ್ಲಿಯೂ ಇನ್ನೊಂದು ಲೋಹದ ಪರಮಾಣುಗಳು ಘನ ಮೂಲೆಗಳಲ್ಲೂ ಕುಳಿತಿರುತ್ತವೆ. ಉಷ್ಣತೆ ಹೆಚ್ಚಿದಂತೆ ಈ ಪರಮಾಣುಗಳು ಸ್ಥಳ ಬದಲಾಯಿಸುತ್ತ ಬಂದು ಸುಮಾರು 753° K ಸರದಿಯಲ್ಲಿ ಜಾಲಕದ ಬಿಂದುವೊಂದರ ವಸತಿ ಸಂಭಾವ್ಯತೆ (ಆಕ್ಯುಪೇಷನ್ ಪ್ರಾಬಬಿಲಿಟಿ) ಎರಡು ಲೋಹದ ಪರಮಾಣುಗಳಿಗೂ ಸಮವಾಗಿರುತ್ತದೆ. ಹೀಗಾದರೂ ಈ ತೆರನಾದ ಬದಲಾವಣೆಗಳಲ್ಲಿ ಸ್ಫಟಿಕ ಜಾಲಕದ ರಚನೆ ಬದಲಾಯಿಸುವುದಿಲ್ಲ. ಕೆಲವು ವೇಳೆ ಪರಮಾಣುಗಳು ಬೇರೆಡೆಗೆ ವಲಸೆ ಹೋಗುವುದರಿಂದ ಜಾಲಕದಲ್ಲಿ ಖಾಲಿ ನಿವೇಶನಗಳು ಉಂಟಾಗಿ ಅಪರಿಪೂರ್ಣತೆಗಳು ಜನಿಸಬಹುದು. ಅಯಾನಿಕವಾಹಕತ್ವ, ವಿಸರಣ (ಡಿಫ್ಯೂಷನ್) ಮುಂತಾದ ಭೌತಗುಣಗಳು ಇಂಥ ಅಪರಿಪೂರ್ಣತೆಗಳಿಂದ ಉಂಟಾಗುತ್ತವೆ. ಜಾಲಕದ ಈ ರೀತಿಯ ದೋಷಗಳು ಉಷ್ಣತೆಯೊಡನೆ ಹೆಚ್ಚಾಗುವುದರಿಂದ ಮೇಲೆ ಹೇಳಿದ ಭೌತಗುಣಗಳೂ ಬದಲಾಗುತ್ತವೆ.

ಯಾವುದೇ ರೀತಿಯ ಅವ್ಯವಸ್ಥೆಯ ಬೆಳವಣಿಗೆ ಶಕ್ತಿಯನ್ನು ವ್ಯಯಿಸಿ ಆಗುವುದರಿಂದ ಈ ರೀತಿಯ ಅವ್ಯವಸ್ಥೆಗಳು ಘನವಸ್ತುವಿನ ಗ್ರಾಹ್ಯೋಷ್ಣಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತವೆ. ಆದ್ದರಿಂದ ಗ್ರಾಹ್ಯೋಷ್ಣದ ಮಾಹಿತಿಗಳೂ ಅನೇಕ ವೇಳೆ ವಸ್ತುವಿನಲ್ಲಿನ ಅವ್ಯವಸ್ಥೆಯ ಮೇಲೆ ಬೆಳಕು ಬೀರಬಹುದು. ಪ್ರಾವಸ್ಥಾ ಬದಲಾವಣೆಗಳಿಲ್ಲದಿರುವಾಗ ಸಾಮಾನ್ಯವಾಗಿ ಎಲ್ಲ ಘನವಸ್ತುಗಳೂ ಉಷ್ಣತೆಯ ಹೆಚ್ಚಳದೊಂದಿಗೆ ವಿಕಾಸ ಹೊಂದುತ್ತವೆ. ಹೆಚ್ಚಿನ ಉಷ್ಣತೆಗಳಲ್ಲಿ ಪರಮಾಣುಗಳ ನಡುವಣ ಸರಾಸರಿ ದೂರ ಹೆಚ್ಚಾಗುವುದೇ ವಿಕಸನಕ್ಕೆ ಕಾರಣ. ಸಾಮಾನ್ಯವಾಗಿ ನೋಡುವ ರೀತಿಯಲ್ಲಿ ಪರಮಾಣುಗಳ ರೇಖೀಯ ಅಂತರಕ್ರಿಯೆಯನ್ನು ಮಾತ್ರ ಪರಿಗಣಿಸಿದರೆ ವಿಕಸನವನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಸೂಕ್ತವಾದ ಅರೇಖೀಯ ಅಂತರಕ್ರಿಯೆಗಳನ್ನು ಪರಿಗಣಿಸುವುದರಿಂದ ಉಷ್ಣವಿಕಸನ ಗುಣಾಂಕವನ್ನು (ಕೋಎಫಿಷಂಟ್ ಆಫ್ ಥರ್ಮಲ್ ಎಕ್ಸ್‌ಪ್ಯಾನ್ಷನ್) ಗಣಿಸಬಹುದು.

ಕಾಂತೀಯ ಗುಣಗಳು : ಘನವಸ್ತುಗಳ ಕಾಂತೀಯ ಗುಣಗಳು ಅವುಗಳಲ್ಲಿನ ಎಲೆಕ್ಟ್ರಾನ್‌ಗಳ ಚಲನೆಯಿಂದಲೂ ಪರಮಾಣುಗಳ ಮತ್ತು ಎಲೆಕ್ಟ್ರಾನ್‌ಗಳ ಶಾಶ್ವತ ಕಾಂತೀಯ ಭ್ರಮಣಾಂಕಗಳಿಂದಲೂ (ಪರ್ಮನೆಂಟ್ ಮ್ಯಾಗ್ನೆಟಿಕ್ ಮೊಮೆಂಟ್ಸ್) ಉದ್ಭವಿಸುತ್ತವೆ. ಕಾಂತಕ್ಷೇತ್ರದ ತೀಕ್ಷ್ಣತೆ H ಮತ್ತು ಪ್ರೇರಣೆ (ಇಂಡಕ್ಷನ್) B ಗಳ ಸಂಬಂಧ ನಿರ್ವಾತದಲ್ಲಿ

$$B = \mu_0 H,\ \mu_o = 4\pi \times 10^{-7} \text{ henry/meter}$$

ಯಾವುದೇ ಮಾಧ್ಯಮದಲ್ಲಿ

$$B = \mu H = \mu_0 (H+M)$$

ಆಗಿಯೂ ಇರುತ್ತದೆ. ಇಲ್ಲಿ $\mu_0$ ಮತ್ತು μ ಗಳು ಅನುಕ್ರಮವಾಗಿ ನಿರ್ವಾತ ಹಾಗೂ ಮಾಧ್ಯಮದ ಕಾಂತ ಪಾರಗಮ್ಯತೆಯನ್ನೂ (ಮ್ಯಾಗ್ನೆಟಿಕ್ ಪರ್ಮಿಯಬಿಲಿಟಿ) M ಮಾಧ್ಯಮದ ಕಾಂತೀಕರಣವನ್ನೂ (ಮ್ಯಾಗ್ನೆಟೈಸೇಷನ್) ಪ್ರತಿನಿಧಿಸುತ್ತವೆ. ಆದ್ದರಿಂದ ನಿರ್ವಾತದ ಕಾಂತೀಕರಣವನ್ನು ಶೂನ್ಯವೆಂದು ಹೇಳಬಹುದು. M ಮಾಧ್ಯಮದಲ್ಲಿನ ಕಾಂತೀಯ ದ್ವಿಧ್ರುವ ಭ್ರಮಣಾಂಕದ ಸಾಂದ್ರತೆ ಎಂದು ಸುಲಭವಾಗಿ ತೋರಿಸಬಹುದು. ನಿರ್ವಾತಕ್ಕೆ ಹೋಲಿಸಿದಂತೆ ಮಾಧ್ಯಮದ ಸಾಪೇಕ್ಷ ಪಾರಗಮ್ಯತೆಯನ್ನು $\mu r = \mu / \mu^0$ ಎಂದು ನಿರೂಪಿಸಿದರೆ ಮೇಲಿನ ಸಮೀಕರಣದಿಂದ

$$\mu_r = 1 + Xm \ ;\ Xm = M/H$$

ಎಂದು ತೋರಿಸಬಹುದು. ಇಲ್ಲಿ Xm ಗೆ ಮಾಧ್ಯಮದ ಕಾಂತೀಯ ಗ್ರಾಹಕತ್ವ ಎಂದು ಹೆಸರು. ಆದ್ದರಿಂದ M, Xm, $\mu_r$ ಇಲ್ಲವೇ μಗಳಲ್ಲಿ ಯಾವುದೇ ಒಂದನ್ನು ಪ್ರಾಚಲ Hನ ಉತ್ಪನ್ನವಾಗಿ ಭಾವಿಸಿದರೆ ಉಳಿದವನ್ನು ಈ ಸಮೀಕರಣದಿಂದ ಗಣಿಸಬಹುದು.

ಘನವಸ್ತುವಿನ ಕಾಂತೀಕರಣ M ಋಣಾತ್ಮಕವಾಗಿದ್ದರೆ (ಅಂದರೆ M ಮತ್ತು B ಪರಸ್ಪರ ವಿರುದ್ಧ ದಿಶೆಗಳಲ್ಲಿದ್ದರೆ) ಆಗ ಘನವಸ್ತುವಿಗೆ ಪ್ರತಿಕಾಂತೀಯ ವಸ್ತು ಎಂದು ಹೆಸರು. ಪ್ರತಿಕಾಂತತ್ವದಿಂದಾಗಿ (ಡಯಮ್ಯಾಗ್ನೆಟಿಸಮ್) ಬಿಸ್ಮತ್, ತಾಮ್ರ, ಬೆಳ್ಳಿ, ಚಿನ್ನಗಳಂಥ ಘನವಸ್ತುಗಳಲ್ಲಿ ಕಾಂತಪ್ರೇರಣೆ ನಿರ್ವಾತಕ್ಕಿಂತ ಕಡಿಮೆ ಇರುತ್ತದೆ. ಬಹಳಷ್ಟು ಘನವಸ್ತುಗಳಲ್ಲಿ ಪ್ರತಿಕಾಂತತೆ ಬಹುದುರ್ಬಲವಾಗಿರುವುದರಿಂದ (ಪ್ರತಿಕಾಂತೀಯಗ್ರಾಹಕತ್ವ ಈ ವಸ್ತುಗಳಲ್ಲಿ ಸುಮಾರು 10-5 ರಷ್ಟಿರುತ್ತದೆ) ಬೇರೆ ರೀತಿಯ ಕಾಂತತ್ವಗಳು ಇಲ್ಲದಿರುವಾಗ ಮಾತ್ರ ಇದನ್ನು ಗಮನಿಸಬಹುದು. ಘನವಸ್ತುಗಳಲ್ಲಿನ ಶಾಶ್ವತ ಕಾಂತ ಭ್ರಮಣಾಂಕಗಳನ್ನು ಪಡೆದಿರುವ ಎಲೆಕ್ಟ್ರಾನ್ ಮತ್ತು ಪರಮಾಣುಗಳಿಂದ ಧನಾತ್ಮಕ ಕಾಂತ ಗ್ರಾಹಕತ್ವ ವಸ್ತುವಿಗೆ ಉಂಟಾಗಬಹುದು. ಸಾಮಾನ್ಯವಾಗಿ ಅತ್ಯಲ್ಪವಿರುವ ಈ ರೀತಿಯ ಕಾಂತತ್ವಕ್ಕೆ ಅನುಕಾಂತತ್ವ (ಪ್ಯಾರ ಮ್ಯಾಗ್ನೆಟಿಸಮ್) ಎಂದು ಹೆಸರು. ಎಲೆಕ್ಟ್ರಾನುಗಳ ಕಕ್ಷಕ ಚಲನೆ (ಆರ್ಬಿಟಲ್ ಮೋಷನ್) ಮತ್ತು ಭ್ರಮಣಗಳಿಂದ ಉಂಟಾಗುವ ಕಾಂತ ಭ್ರಮಣಾಂಕಗಳಿಂದ ಅನುಕಾಂತತ್ವ ಜನಿಸುತ್ತದೆ. ನ್ಯೂಕ್ಲಿಯಸುಗಳ ಕಾಂತ ಭ್ರಮಣಾಂಕಗಳು ಎಲೆಕ್ಟ್ರಾನುಗಳ ಕಾಂತ ಭ್ರಮಣಾಂಕಗಳಿಗಿಂತ ಸುಮಾರು 10-3 ರಷ್ಟು ಕಡಿಮೆ ಇರುತ್ತದೆ. ಕಬ್ಬಿಣ, ಕೋಬಾಲ್ಟ್ ಮತ್ತು ನಿಕಲಿನಂಥ ಸಂಕ್ರಮಣ ಲೋಹಗಳು, ಗ್ಯಾಡೊಲಿನಿಯಮಿನಂಥ ವಿರಳ ಭಸ್ಮಧಾತುಗಳು, ಕ್ರೋಮಿಯಮ್ ಮತ್ತು ಎರ್ಬಿಯಮ್ ಆಕ್ಸೈಡುಗಳಂಥ (CrO2, ErO) ಕೆಲವು ಆಕ್ಸೈಡುಗಳು ಅತಿ ಹೆಚ್ಚಿನ ಕಾಂತೀಕರಣವನ್ನು ಪ್ರದರ್ಶಿಸುತ್ತವೆ. ಕಾಂತೀಕರಿಸುವ ಕ್ಷೇತ್ರವನ್ನು ತೆಗೆದು ಹಾಕಿದಾಗಲೂ ಈ ವಸ್ತುಗಳ ಕಾಂತೀಕರಣ ಸಂಪೂರ್ಣ ಮಾಯವಾಗುವುದಿಲ್ಲ. ಬದಲು ಭಾಗಶಃ ಉಳಿಯುತ್ತದೆ. ಈ ವಸ್ತುಗಳು ಪ್ರದರ್ಶಿಸುವ ಅತಿ ಪ್ರಬಲ ಕಾಂತತ್ವಕ್ಕೆ ಫೆರೊಕಾಂತತ್ವ ಎಂದು ಹೆಸರು. ಕ್ವಾಂಟಮ್ ಬಲವೈಜ್ಞಾನಿಕ ವಿನಿಮಯ ಅಂತರಕ್ರಿಯೆಗಳು ನೆರೆಯ ಪರಮಾಣುಗಳ ಕಾಂತಿ ಭ್ರಮಣಾಂಕಗಳನ್ನು ಒಂದೇ ದಿಶೆಯಲ್ಲಿ ಜೋಡಿಸುವುದರಿಂದ ಫೆರೊಕಾಂತತ್ವ ಉಂಟಾಗುತ್ತದೆ (ಚಿತ್ರ 16a). ಫೆರೊಕಾಂತ ವಸ್ತುಗಳಲ್ಲಿನ ಪರಮಾಣುಗಳ ನಡುವಣ ಅಂತರ ಸಾಕಷ್ಟು ಕಡಿಮೆ ಇರುವುದರಿಂದ ವಿನಿಮಯ ಅಂತರಕ್ರಿಯೆಗಳು ಗಣನೀಯ ವಾಗಿರುತ್ತವೆ. ಈ ಅಂತರ ಕ್ರಿಯೆಗಳಿಂದ ಜನಿಸುವ ಬಲಗಳು ಹತ್ತಿರವಿರುವ ಅನೇಕ ಪರಮಾಣುಗಳಿಂದ ಆದ




**ಚಿತ್ರ 16.** ಸರಳ ಫೆರೊಕಾಂತ ಅನುಕ್ರಮತೆಯನ್ನು (*a*)ಯಲ್ಲೂ ಪ್ರತಿಫೆರೋಕಾಂತ ಅನುಕ್ರಮತೆಯನ್ನು (*b*)ಯಲ್ಲೂ ಫೆರಿಕಾಂತ ಅನುಕ್ರಮತೆಯನ್ನು (*c*)ಯಲ್ಲೂ ತೋರಿಸಿದೆ

ಪರಮಾಣು ಗುಂಪುಗಳ ಕಾಂತ ಭ್ರಮಣಾಂಕಗಳನ್ನು ಸಮಾಂತರವಾಗಿ ಜೋಡಿಸಿ ಪ್ರಬಲ ಕಾಂತಭ್ರಮಣಾಂಕವಿರುವ ಪ್ರಾಂತಗಳನ್ನು (ಡೊಮೇನ್ಸ್) ಉಂಟುಮಾಡುತ್ತವೆ. ಅಕಾಂತಿತ (ಅನ್‌ಮ್ಯಾಗ್ನೆಟೈಸ್ಡ್) ಕಬ್ಬಿಣದ ಚೂರೊಂದರಲ್ಲಿ ಈ ತರಹ ಕಾಂತೀಯ ಪ್ರಾಂತಗಳ ಫಲಿತ ಕಾಂತಭ್ರಮಣಾಂಕ ಶೂನ್ಯವಾಗಿರುತ್ತದೆ. ಇಂಥ ಚೂರೊಂದನ್ನು ಹೊರಗಣ ಕಾಂತಕ್ಷೇತ್ರದಲ್ಲಿರಿಸಿದಾಗ ಈ ಕಾಂತೀಯ ಪ್ರಾಂತಗಳು ಒಂದೇ ದಿಕ್ಕಿನಲ್ಲಿ ಜೋಡಣೆಯಾಗುವುದರಿಂದ ಚೂರಿಗೆ ಕಾಂತತ್ವ ಉಂಟಾಗುತ್ತದೆ.

ಕೆಲವು ವಸ್ತುಗಳಲ್ಲಿ ವಿನಿಮಯ ಅಂತರಕ್ರಿಯೆ ಪರಮಾಣು ಕಾಂತಭ್ರಮಣಾಂಕವನ್ನು ಒಂದೇ ದಿಶೆಯಲ್ಲಿ ತಿರುಗಿಸುವ ಬದಲು ನೆರೆಯ ಕಾಂತ ಭ್ರಮಣಾಂಕಗಳನ್ನು ಪರಸ್ಪರ ವಿರುದ್ಧವಾಗಿ ತಿರುಗಿಸುತ್ತದೆ (ಚಿತ್ರ 16b). ಕಾಂತ ಭ್ರಮಣಾಂಕಗಳು ಒಂದೇ ಸಮವಾಗಿದ್ದರೆ ಇಂಥ ವ್ಯವಸ್ಥೆಯಲ್ಲಿನ ಫಲಿತ ಕಾಂತಭ್ರಮಣಾಂಕ ಶೂನ್ಯವಾಗುತ್ತದೆ. ಈ ತರಹದ ವರ್ತನೆಯನ್ನು ಪ್ರದರ್ಶಿಸುವ ಮ್ಯಾಂಗನೀಸ್ ಆಕ್ಸೈಡಿನಂಥ ವಸ್ತುಗಳಿಗೆ ಪ್ರತಿಫೆರೊಕಾಂತ ವಸ್ತುಗಳೆಂದು ಹೆಸರು.

ಅಸಮ ಪರಮಾಣು ಕಾಂತಭ್ರಮಣಾಂಕಗಳ ಪರಸ್ಪರ ವಿರುದ್ಧ ದಿಶೆಯಲ್ಲಿನ ಜೋಡಣೆಯಿಂದಲೋ (ಚಿತ್ರ 16c) ಇಲ್ಲವೇ ಒಂದು ದಿಶೆಯಲ್ಲಿನ ಫಲಿತ ಕಾಂತಭ್ರಮಣಾಂಕ ಅದರ ವಿರುದ್ಧ ದಿಶೆಯಲ್ಲಿನ ಫಲಿತ ಕಾಂತಭ್ರಮಣಾಂಕಕ್ಕೆ ಸಮವಾಗದೆ ಇರುವುದರಿಂದಲೋ ಕೆಲವು ವಸ್ತುಗಳಲ್ಲಿ ಕಾಂತತ್ವ ಉಂಟಾಗುತ್ತದೆ. ಇಂಥ ಕಾಂತತ್ವವನ್ನು ಫೆರೈಟುಗಳಲ್ಲಿ ಮೊದಲು ಗಮನಿಸಲಾದ್ದರಿಂದ ಅದಕ್ಕೆ ಫೆರಿಕಾಂತತ್ವ ಎಂಬ ಹೆಸರು ಬಂದಿದೆ. ಭ್ರಮಣಾಂಕಗಳ ಫೆರಿಕಾಂತ ಅನುಕ್ರಮತೆ ಪರಮಾಣುಗಳ ವಿನಿಮಯ ಅಂತರಕ್ರಿಯೆಯಿಂದ ಉಂಟಾಗುತ್ತದೆ. ಫೆರೈಟುಗಳು ಫೆರಿಕಾಂತಗಳಿಗೆ ಉತ್ತಮ ಉದಾಹರಣೆಗಳು. M ಎನ್ನುವುದು ವೇಲನ್ಸಿ ಎರಡಿರುವ ಧನ ಅಯಾನನ್ನು ಸೂಚಿಸಿದರೆ (ಉದಾಹರಣೆಗೆ Zn, Cd, Fe, Ni, Cu, Co, Mg) MO.FeO3 ಎನ್ನುವುದು ಫೆರೈಟುಗಳ ಒಂದು ವರ್ಗದ ರಾಸಾಯನಿಕ ಸೂತ್ರವನ್ನು ಸೂಚಿಸುತ್ತದೆ. ಈ ವರ್ಗದ ಫೆರೈಟುಗಳಿಗಿಂತ ಹೆಚ್ಚು ಸಂಕೀರ್ಣವಾದ ಬೇರಿಯಮ್‌ಯುಕ್ತ ಫೆರೈಟುಗಳೂ ಬಳಕೆಯಲ್ಲಿವೆ. ಸೂಕ್ತ ಸಂಯೋಜನೆಯಿಂದ ಗಣನೀಯವಾದ ಫೆರೊಕಾಂತತ್ವವನ್ನು ಹೊಂದಿರುವ ಫೆರೈಟುಗಳನ್ನು ತಯಾರಿಸಬಹುದು. ಇಂಥ ಫೆರೈಟುಗಳಿಗೆ ತಮ್ಮ ವಿದ್ಯುದವಾಹಕತ್ವದಿಂದಾಗಿ ಲೋಹ ಫೆರೋಕಾಂತಗಳ ಹುಚ್ಚು ಪ್ರವಾಹದಂಥ (ಎಡಿ ಕರೆಂಟ್ಸ್) ಅನಪೇಕ್ಷಿತ ಪರಿಣಾಮಗಳು ಇರುವುದಿಲ್ಲ. ಆದ್ದರಿಂದ ಇವನ್ನು ವಿವಿಧ ರೀತಿಯ ಸುರುಳಿಗಳಲ್ಲಿ ಮತ್ತು ಟ್ರಾನ್ಸ್‌ಫಾರ್ಮರ್ ಗಳಲ್ಲಿ ತಂತಿಯನ್ನು ಸುತ್ತಲು ತಿರುಳುಗಳಾಗಿ ಬಳಸುತ್ತಾರೆ. ಈ ಕಾರಣದಿಂದ ಸಾಮಾನ್ಯ ಫೆರೊಕಾಂತ ತಿರುಳಿರುವ ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಸುರುಳಿಗಳನ್ನು ಉಪಯೋಗಿಸಲು ಅಸಾಧ್ಯವಾದ ಅತಿ ಹೆಚ್ಚಿನ ಆವರ್ತಾಂಕಗಳಲ್ಲಿಯೂ ಫೆರೈಟ್ ತಿರುಳಿರುವ ಸುರುಳಿಗಳು ಮತ್ತು ಟ್ರಾನ್ಸ್-ಫಾರ್ಮರ್‌ಗಳನ್ನು ಉಪಯೋಗಿಸಬಹುದು. ಗಣಕದ ಜ್ಞಾಪಕಾಂಗದಂಥ ಅನೇಕ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಫೆರೈಟುಗಳು ಅತ್ಯುಪಯುಕ್ತ ವಸ್ತುಗಳು. ಒಂದು ಸಂಧಿಸ್ಥ ಉಷ್ಣತೆಯನ್ನು ಮೀರಿದ ಉಷ್ಣತೆಗಳಲ್ಲಿ ಫೆರೊಕಾಂತ, ಪ್ರತಿಕಾಂತ ಮತ್ತು ಫೆರಿಕಾಂತ ವಸ್ತುಗಳು ಅನುಕಾಂತವಸ್ತುಗಳಾಗಿ ಮಾರ್ಪಡುತ್ತವೆ. ಈ ಉಷ್ಣತೆಗೆ ಕ್ಯೂರಿ ಉಷ್ಣತೆ (**ನೋಡಿ**) ಎಂದು ಹೆಸರು. ಉದಾಹರಣೆಗೆ ಕಬ್ಬಿಣದ ಕ್ಯೂರಿ ಉಷ್ಣತೆಯಾದ 1043° Kಯನ್ನು ಮೀರಿದ ಉಷ್ಣತೆಗಳಲ್ಲಿ ಫೆರೊಕಾಂತತ್ವ ಕಬ್ಬಿಣದಲ್ಲಿ ಮಾಯವಾಗುತ್ತದೆ.

ವಸ್ತುಗಳ ಕಾಂತೀಯ ವಿದ್ಯಮಾನಗಳಲ್ಲಿ ಗಮನ ಸೆಳೆವ ಇನ್ನೊಂದು ಅಂಶವೆಂದರೆ ಕಾಂತೀಯ ಅನುರಣನೆ (ಮ್ಯಾಗ್ನೆಟಿಕ್ ರೆಸೊನೆನ್ಸ್). ಆರೋಪಿತ ಕಾಂತಕ್ಷೇತ್ರವೊಂದರಲ್ಲಿ ವಸ್ತುವಿನಲ್ಲಿನ ಶಾಶ್ವತ ಕಾಂತೀಯ ಭ್ರಮಣಾಂಕವನ್ನು ಹೊಂದಿರುವ ನ್ಯೂಕ್ಲಿಯಸುಗಳು ಮತ್ತು ಎಲೆಕ್ಟ್ರಾನುಗಳು ಅನೇಕ ಶಕ್ತಿಮಟ್ಟಗಳನ್ನು ಕಾಂತೀಯ ಅಂತರಕ್ರಿಯೆಯಿಂದ ಪಡೆಯುತ್ತವೆ. ಈ ಶಕ್ತಿಮಟ್ಟಗಳ ಅಂತರಕ್ಕೆ ಸಮವಾದ ಶಕ್ತಿಯುಳ್ಳ ವಿದ್ಯುತ್ಕಾಂತ ಅಲೆ ಈ ವಸ್ತುಗಳಲ್ಲಿ ಹಾಯ್ದುಹೋದರೆ ಅಲೆಗಳ ಶಕ್ತಿಹೀರಿಕೆ ಅನುರಣನೆಯಿಂದ ಉಂಟಾಗ ಬಹುದು. ಆದ್ದರಿಂದ ಕಾಂತಕ್ಷೇತ್ರದಲ್ಲಿರಿಸಿದ ವಸ್ತುವೊಂದರಲ್ಲಿ ಸೂಕ್ತ ಅಲೆಯುದ್ದದ ರೇಡಿಯೋ ಅಲೆಗಳು ಅನುರಣಕವಾಗಿ ಲೀನವಾಗುತ್ತವೆ. ಕಾಂತೀಯ ಅನುರಣನೆಯ ಅಧ್ಯಯನಗಳು ವಸ್ತುವಿನ ಅನೇಕ ಗುಣಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಅತ್ಯಂತ ಉಪಯುಕ್ತವಾಗಿವೆ.

ಘನವಸ್ತುಗಳ ಕಾಂತೀಯ ಗುಣಗಳನ್ನು ವಿವರಿಸುವ ಸಫಲ ಸಿದ್ಧಾಂತವನ್ನು ರೂಪಿಸುವಲ್ಲಿ ಕ್ವಾಂಟಮ್ ಬಲವಿಜ್ಞಾನದ ವಿಧಾನಗಳು ಬಹಳ ಸಹಾಯ ಮಾಡಿವೆ. ಘನ ವಸ್ತುಗಳ ಕಾಂತತ್ವದ ಸಿದ್ಧಾಂತದ ಬೆಳವಣಿಗೆಯಲ್ಲಿ ಮುಖ್ಯವಾಗಿ ಪೌಲಿ ಮಂಡಿಸಿದ ಲೋಹಗಳ ಅನುಕಾಂತತ್ವದ ಸಿದ್ಧಾಂತ; ಹೈಸನ್‌ಬರ್ಗ್, ಬ್ಲಾಕ್ ಮೊದಲಾದವರಿಂದ ರೂಪಿಸಲ್ಪಟ್ಟ ಫೆರೊಕಾಂತಗಳ ಸಿದ್ಧಾಂತ; ಅನುಕಾಂತೀಯ ಲವಣಗಳನ್ನು ಕುರಿತಾದ ವ್ಯಾನ್ ವ್ಲೆಕ್ ಎಂಬಾತನ ಪರಿಶೋಧನೆಗಳು; ಪ್ರಬಲ ಪ್ರತಿಕಾಂತತ್ವವನ್ನು ಪ್ರದರ್ಶಿಸುವ ಬಿಸ್ಮತ್, ಆ್ಯಂಟಿಮನಿಯಂಥ ಲೋಹವನ್ನು ಕುರಿತು ಮಾಟ್, ಜೋನ್ಸ್ ಮೊದಲಾದವರು ಮಾಡಿದ ಪರಿಶೋಧನೆಗಳು – ಇವು ಮುಖ್ಯವಾಗಿ ಗಮನಿಸಬೇಕಾದ ಅಂಶಗಳು.

ಪರಾವೈದ್ಯುತ (ಡೈಎಲೆಕ್ಟ್ರಿಕ್) ಮತ್ತು ದ್ಯುತೀಯ ಗುಣಗಳು : ಅವಾಹಕ ವಸ್ತುಗಳಿಗೆ ಪರಾವೈದ್ಯುತ ವಸ್ತುಗಳೆಂದೂ ಹೆಸರಿದೆ. ಆರೋಪಿತ ವಿದ್ಯುತ್ ಕ್ಷೇತ್ರಗಳ ಪ್ರಭಾವದಲ್ಲಿ ಅವಾಹಕದಲ್ಲಿನ ಎಲೆಕ್ಟ್ರಾನುಗಳು ಮುಕ್ತವಾಗಿ ಹರಿಯಲು ಅವಕಾಶವಿರುವುದಿಲ್ಲ. ಆದರೆ ಎಲೆಕ್ಟ್ರಾನುಗಳು ತಮ್ಮ ಸಮತೋಲ ಸ್ಥಳಗಳಿಂದ ಪಲ್ಲಟಗೊಳ್ಳುವುದರಿಂದಲೋ (ಅಂದರೆ ಎಲೆಕ್ಟ್ರಾನ್ ಚಿಪ್ಪುಗಳ ವಿರೂಪನ) ಅಥವಾ ಮಾಧ್ಯಮದಲ್ಲಿನ ಶಾಶ್ವತ ವಿದ್ಯುತ್ ದ್ವಿಧ್ರುವ ಭ್ರಮಣಾಂಕಗಳ ಮರುಜೋಡಣೆಯಿಂದಲೋ ವಿದ್ಯುತ್ ಕ್ಷೇತ್ರದಲ್ಲಿರಿಸಿದ ಅವಾಹಕದ ಧ್ರುವೀಕರಣಸ್ಥಿತಿ ಬದಲಾಗುತ್ತದೆ. ಒಂದು ಅವಾಹಕಕ್ಕೆ ಸಂಬಂಧಿಸಿದಂತೆ ಆರೋಪಿತ ವಿದ್ಯುತ್ ಕ್ಷೇತ್ರವನ್ನು E ಯಿಂದಲೂ ಪರಾವೈದ್ಯುತ ಸ್ಥಳಾಂತರವನ್ನು D ಯಿಂದಲೂ ಪ್ರಚೋದಿತ ವಿದ್ಯುತ್ ದ್ವಿಧ್ರುವ ಭ್ರಮಣಾಂಕದ ಸಾಂದ್ರತೆಯನ್ನು P ಯಿಂದಲೂ ಪ್ರತಿನಿಧಿಸಿದರೆ ಇವುಗಳ ಪರಸ್ಪರ ಸಂಬಂಧವನ್ನು $D = \varepsilon E = P + \varepsilon_0 E$ ಎಂದು ಬರೆಯಬಹುದು. ಇಲ್ಲಿ ನಿರ್ವಾತ ಮತ್ತು ಅವಾಹಕದ ವಿದ್ಯುತ್ ಶೀಲತೆಯನ್ನು ಅನುಕ್ರಮವಾಗಿ $\varepsilon_0$ ಮತ್ತು $\varepsilon$ಗಳು ಸೂಚಿಸುತ್ತವೆ. ಕಾಂತೀಯ ವಸ್ತುಗಳ ಕಾಂತಗ್ರಾಹಕತ್ವವನ್ನು ನಿರೂಪಿಸಿದಂತೆಯೇ ಪರಾವೈದ್ಯುತದ ವಿದ್ಯುತ್ ಗ್ರಾಹಕತ್ವವನ್ನು $X_E = P/E$ ಎಂದು ನಿರೂಪಿಸಿದರೆ

$$X_E = \varepsilon_0 (k-1),\quad \varepsilon_0 \approx 8.5 \times 10^{-12} \text{ farads/meter}$$

ಎಂದಾಗುತ್ತದೆ. ಇಲ್ಲಿ $k \equiv \varepsilon / \varepsilon_0$ ಗೆ ಅವಾಹಕದ ಪರಾವೈದ್ಯುತ ಸ್ಥಿರಾಂಕ ಎಂದು ಹೆಸರು. ವಿದ್ಯುತ್ ಕ್ಷೇತ್ರದಲ್ಲಿರಿಸಿದ ಅವಾಹಕದಲ್ಲಿ ಉಂಟಾಗುವ ಪ್ರಚೋದಿತ ವಿದ್ಯುತ್‌ದ್ವಿಧ್ರುವ ಕ್ಷೇತ್ರದಿಂದಾಗಿ ಅವಾಹಕದಲ್ಲಿನ ಸ್ಥಳೀಯ ವಿದ್ಯುತ್ ಕ್ಷೇತ್ರ $E_{loc}$ ಆರೋಪಿತ ಕ್ಷೇತ್ರ Eಯಿಂದ ಬೇರೆಯಾಗಿರುತ್ತದೆ, ಅಂದರೆ $E \neq E_{loe}$, ಅವಾಹಕದ ಒಂದು ಪರಮಾಣುವಿನಲ್ಲಿ ಪ್ರಚೋದಿತವಾದ ವಿದ್ಯುತ್ ದ್ವಿಧ್ರುವ ಭ್ರಮಣಾಂಕ p ಆಗಿದ್ದರೆ ಆಗ

ಪರಮಾಣುವಿನ ಧ್ರುವೀಕರಣಶೀಲತೆ (ಪೋಲರೈಸಬಿಲಿಟಿ) $\alpha$ ವನ್ನು $p=\alpha$ Eloe ಎಂದು ನಿರೂಪಿಸಲಾಗುತ್ತದೆ. ಅವಾಹಕದ ಒಟ್ಟು ಧ್ರುವೀಕರಣಶೀಲತೆ ಅದರಲ್ಲಿನ ಎಲೆಕ್ಟ್ರಾನಿಕ್, ಅಯಾನಿಕ್ ಮತ್ತು ದ್ವಿಧ್ರುವೀಯ ಧ್ರುವೀಕರಣ ಶೀಲತೆಗಳ ಮೊತ್ತ. ವಿದ್ಯುತ್ಕಾಂತ ರೋಹಿತದ ದೃಗ್ಗೋಚರ ಭಾಗದ ಅಲೆಯುದ್ದಗಳಲ್ಲಿ ಆಣ್ವಕ ದ್ವಿಧ್ರುವಗಳ ಮತ್ತು ಅಯಾನುಗಳ ಹೆಚ್ಚಿನ ಜಡತ್ವದಿಂದಾಗಿ (ಇನರ್ಷಿಯ) ಎಲೆಕ್ಟ್ರಾನುಗಳ ಧ್ರುವೀಕರಣಶೀಲತೆ ಮಾತ್ರ ಗಣನೀಯವಾಗಿರುತ್ತದೆ. ಆದ್ದರಿಂದ ಅವಾಹಕಗಳ ಎಲೆಕ್ಟ್ರಾನಿಕ್ ಧ್ರುವೀಕರಣಶೀಲತೆಯನ್ನು ನಿರ್ಧರಿಸುವುದರಿಂದ ಅವಾಹಕದ ರಿಫ್ರೇಕ್ಷಣಾಂಕ $n=\sqrt{\varepsilon}$ ನ್ನು ಕಂಡುಹಿಡಿಯಬಹುದು. ಎಲೆಕ್ಟ್ರಾನಿಕ್ ಧ್ರುವೀಕರಣಶೀಲತೆಯನ್ನು ಗಣಿಸುವಲ್ಲಿ ಅಭಿಜಾತ ಮತ್ತು ಕ್ವಾಂಟಮ್ ಬಲವೈಜ್ಞಾನಿಕ ವಿಧಾನಗಳನ್ನು ಉಪಯೋಗಿಸಲಾಗುತ್ತದೆ. ಇದರಿಂದ ಅವಾಹಕಗಳಲ್ಲಿನ ದ್ಯುತಿ ರಿಫ್ರೇಕ್ಷಣ ಮತ್ತು ದ್ಯುತಿಲೀನತೆ (ಆಪ್ಟಿಕಲ್ ಅಬ್‌ಸಾರ್ಪ್‌ಷನ್) ಮತ್ತು ದ್ಯುತಿ ಪ್ರಸರಗಣಗಳಂಥ (ಆಪ್ಟಿಕಲ್ ಡಿಸ್ಪರ್ಷನ್) ಪ್ರಕ್ರಿಯೆಗಳನ್ನು ತೃಪ್ತಿಕರವಾಗಿ ವಿವರಿಸಬಹುದು.

ಅವಾಹಕಗಳ ಮತ್ತು ಲೋಹಗಳ ಮೇಲ್ಮೈಯಿಂದ ವಿದ್ಯುತ್ಕಾಂತ ಅಲೆಗಳ ಪ್ರತಿಫಲನವನ್ನು ಅಭಿಜಾತ ವಿದ್ಯುತ್ಕಾಂತ ಸಿದ್ಧಾಂತದಿಂದ ಸಂಪೂರ್ಣವಾಗಿ ವಿವರಿಸಬಹುದು. ಮೇಲೆ ಹೇಳಿದ ಪರಿಗಣನೆಗಳು ದ್ಯುತೀಯವಾಗಿ ಸಮದಿಶತ್ವವನ್ನು ಹೊಂದಿರುವ ಅವಾಹಕಗಳಿಗೆ ಅನ್ವಯಿಸುತ್ತವೆ. ಅವಾಹಕದ ಪರಾವೈದ್ಯುತ ಸ್ಥಿರಾಂಕ ದಿಶೆಯಿಂದ ದಿಶೆಗೆ ಬದಲಾಯಿಸಿದರೆ ಅಂದರೆ ಅವಾಹಕ ದ್ಯುತೀಯ ಅಸಮದಿಶತ್ವವನ್ನು (ಆಪ್ಟಿಕಲ್ ಅನೈಸಾಟ್ರಪಿ) ಪ್ರದರ್ಶಿಸಿದರೆ ದ್ವಿರಿಫ್ರೇಕ್ಷಣದಂಥ ಹಲವಾರು ಹೊಸ ದ್ಯುತಿ ವಿದ್ಯಮಾನಗಳು ಕಂಡುಬರುತ್ತವೆ. ಇವುಗಳ ಅಧ್ಯಯನ ಸ್ಫಟಿಕ ದ್ಯುತಿವಿಜ್ಞಾನಕ್ಕೆ ಸೇರಿದ ವಿಷಯ (**ನೋಡಿ–ಸ್ಫಟಿಕ ದ್ಯುತಿ ವಿಜ್ಞಾನ**).

ಹೊರಗಣ ವಿದ್ಯುತ್‌ಕ್ಷೇತ್ರವಿಲ್ಲದಿರುವಾಗಲೂ ವಿದ್ಯುತ್ ದ್ವಿಧ್ರುವ ಭ್ರಮಣಾಂಕವನ್ನು ಪ್ರದರ್ಶಿಸುವ ಸ್ಫಟಿಕಗಳಿಗೆ ಫೆರೋವೈದ್ಯುತ ಸ್ಫಟಿಕಗಳೆಂದು ಹೆಸರು. ವಿದ್ಯುತ್ ದ್ವಿಧ್ರುವಗಳ ಅನುಕ್ರಮತೆಗೆ ಅನುಗುಣವಾಗಿ (ಕಾಂತತ್ವಗಳ ವರ್ಗೀಕರಣದಂತೆ) ಇಲ್ಲಿಯೂ ಪ್ರತಿಫೆರೋವೈದ್ಯುತ ಮತ್ತು ಫೆರೋವೈದ್ಯುತ ವಸ್ತುಗಳನ್ನು ಕಾಣಬಹುದು. ಒಂದು ಸಂಧಿಸ್ಥ ಉಷ್ಣತೆಯನ್ನು (ಕ್ಯೂರಿ ಉಷ್ಣತೆ) ಮೀರಿದ ಉಷ್ಣತೆಯಲ್ಲಿ ಫೆರೊವಿದ್ಯುತ್ ಮಾಯವಾಗುತ್ತದೆ. ಸಂಧಿಸ್ಥ ಉಷ್ಣತೆಯನ್ನು ಮೀರಿದ ಈ ಸ್ಥಿತಿಗೆ ಪರಾವೈದ್ಯುತ ಸ್ಥಿತಿ ಎಂದು ಹೆಸರು. ಪಾರಾವೈದ್ಯುತ ಸ್ಥಿತಿಯಲ್ಲಿ ಉಷ್ಣತೆ ಹೆಚ್ಚಾದಂತೆ ಪಾರಾವೈದ್ಯುತ ಸ್ಥಿರಾಂಕ ಕಡಿಮೆಯಾಗುತ್ತದೆ. ರಾಷೆಲ್ ಲವಣ, ಬೇರಿಯಮ್ ಟೈಟಾನೇಟುಗಳು (Ba Ti O3) ಫೆರೋವೈದ್ಯುತ ಸ್ಫಟಿಕಗಳಿಗೆ ಉತ್ತಮ ಉದಾಹರಣೆಗಳು. ಈ ಸ್ಫಟಿಕಗಳ ಧ್ರುವೀಕರಣಶೀಲತೆ ಒತ್ತಾಯದೊಡನೆ ಬದಲಾಗುತ್ತದೆ. ಇದೇ ರೀತಿ ಧ್ರುವೀಕರಣಶೀಲತೆ ಬದಲಾದಾಗ ಈ ಸ್ಫಟಿಕಗಳಲ್ಲಿ ಒತ್ತಾಯಗಳು ಉಂಟಾಗುತ್ತವೆ. ಈ ರೀತಿಯ ಪರಿಣಾಮಕ್ಕೆ ಪೀಜ಼ೋವೈದ್ಯುತ ಪರಿಣಾಮ ಎಂದು ಹೆಸರು. ಫೆರೊವೈದ್ಯುತ ಸ್ಫಟಿಕಗಳು ಪೀಜ಼ೋ ವಿದ್ಯುತ್ತನ್ನು ಪ್ರದರ್ಶಿಸುತ್ತವೆಯಾದರೂ ಎಲ್ಲ ಪೀಜ಼ೋವೈದ್ಯುತ ಸ್ಫಟಿಕಗಳೂ ಫೆರೋವೈದ್ಯುತ ಸ್ಫಟಿಕಗಳಾಗಿರುವುದಿಲ್ಲ.

ಕೆಲವು ಘನವಸ್ತುಗಳಲ್ಲಿ ಕಂಡುಬರುವ ನಿರ್ದಿಷ್ಟ ಅಲೆಯುದ್ದಗಳಲ್ಲಿನ ಬೆಳಕಿನ ಉತ್ಸರ್ಜನೆ (ಎಮಿಷನ್) ಮತ್ತು ಲೀನತೆ (ಅಬ್‌ಸಾರ್ಪ್‌ಷನ್) ಈ ವಸ್ತುಗಳಲ್ಲಿನ ಅಶುದ್ಧತೆಗಳಿಂದ ಉಂಟಾಗಬಹುದು. ಅಶುದ್ಧತೆಯ ಅಂಶಗಳು ಈ ವಸ್ತುಗಳ ಪ್ರತಿಬಂಧಿತ ಶಕ್ತಿವಲಯದಲ್ಲಿ ಬೀಳುವ ಕೆಲವು ಹೊಸ ಶಕ್ತಿಮಟ್ಟಗಳನ್ನು ಒದಗಿಸುವುದೇ ಇಂಥ ಉತ್ಸರ್ಜನೆ ಮತ್ತು ಲೀನತೆಗಳಿಗೆ ಕಾರಣ. ಉದಾಹರಣೆಗೆ, ಹೀರಿಕೊಂಡ ಶಕ್ತಿಯನ್ನು ಕಣ್ಣಿಗೆ ಕಾಣುವ ಅಲೆಯುದ್ದಗಳಲ್ಲಿ ಉತ್ಸರ್ಜಿಸುವ ದ್ಯುತಿ ಉತ್ಸರ್ಜಕ ವಸ್ತುಗಳಲ್ಲಿ ಪಟುಕಾರಿಗಳೆಂದು (ಆ್ಯಕ್ಟಿವೇಟರ್) ಕರೆಯುವ ಅಶುದ್ಧತೆಯ ಅಂಶಗಳು ಸೂಕ್ತವಾದ ಹೊಸ ಶಕ್ತಿಮಟ್ಟಗಳನ್ನು ಒದಗಿಸುವುದು ದ್ಯುತಿ ಉತ್ಸರ್ಜನೆಗೆ ಕಾರಣ. ಇಂಥ ದ್ಯುತಿ ಉತ್ಸರ್ಜಕಗಳಲ್ಲಿನ ಪಟುಕಾರಿ ಪರಮಾಣುಗಳ ಸಂಖ್ಯೆ ದ್ಯುತಿ ಉತ್ಸರ್ಜನೆಯನ್ನು ಗಣನೀಯವಾಗಿ ನಿರ್ಧರಿಸುತ್ತದೆ. ಉದ್ರೇಕಗೊಂಡ ಒಡನೆ ಅಥವಾ ಸುಮಾರು 10–8 ಸೆಕೆಂಡಿನ ಒಳಗೆ ದ್ಯುತಿ ಉತ್ಸರ್ಜನೆಯಾದರೆ ಅಂಥ ಪ್ರಕ್ರಿಯೆಗೆ ಪ್ರತಿದೀಪ್ತಿ (ಫ್ಲೂರೆಸೆನ್ಸ್) ಎಂದೂ, ಇದಕ್ಕಿಂತ ತಡವಾಗಿ ಆಗುವ ಪ್ರಕ್ರಿಯೆಗೆ ಸ್ಫುರದೀಪ್ತಿ (ಫಾಸ್ಫರೆಸೆನ್ಸ್) ಎಂದೂ ಹೆಸರು. ಥಾಲಿಯಮ್ ಪರಮಾಣುಗಳನ್ನು ಪಟುಕಾರಿಗಳಾಗಿ ಹೊಂದಿರುವ ಕ್ಷಾರ ಹಾಲೈಡುಗಳು ದ್ಯುತಿವಾಹಕತ್ವವನ್ನು ತೋರಿಸದ ದ್ಯುತಿಉತ್ಸರ್ಜಕಗಳಾದರೆ ತಾಮ್ರವನ್ನು ಪಟುಕಾರಿಯಾಗಿ ಹೊಂದಿರುವ ಸತುವಿನ ಸಲ್ಫೈಡ್ (ZnS) ದ್ಯುತಿವಾಹಕತ್ವವನ್ನು ಪ್ರದರ್ಶಿಸುವ ದ್ಯುತಿ ಉತ್ಸರ್ಜಕಗಳಿಗೆ ಉದಾಹರಣೆ.

ಫೋಟೋಗ್ರಾಫಿಕ್ ಫಲಕಗಳಲ್ಲಿರುವ ಬೆಳ್ಳಿಯ ಬ್ರೋಮೈಡ್ ಬೆಳಕನ್ನು ಹೀರಿ ಕೊಂಡೊಡನೆಯೇ ವಿಸಂಯೋಜಿತವಾಗಲು (ಡೀಕಂಪೋಸ್ಡ್) ಎಲೆಕ್ಟ್ರಾನುಗಳು, ಬಿಲಗಳು ಮತ್ತು ಅಶುದ್ಧತೆಯ ಅಂಶಗಳು ಕಾರಣವಾಗುತ್ತವೆ. ಅವಾಹಕ ಸ್ಫಟಿಕಗಳ ಬಣ್ಣ ಈ ವಸ್ತುಗಳಲ್ಲಿನ ಶಕ್ತಿಪಟ್ಟಿಗಳ ತೆರಪಿನ ಅಗಲವನ್ನು ಅವಲಂಬಿಸಿರುತ್ತದೆ. ಚಿನ್ನ, ತಾಮ್ರ, ಹಿತ್ತಾಳೆ ಮೊದಲಾದ ಲೋಹ ಮತ್ತು ಮಿಶ್ರಲೋಹಗಳ ಬಣ್ಣ, ರೋಹಿತದ ಅತಿ ನೇರಿಳೆ ಅಲೆಯುದ್ದಗಳಲ್ಲಿ ಕ್ಷಾರಲೋಹಗಳ ಪಾರದರ್ಶಕತ್ವ ಮೊದಲಾದ ಗುಣಗಳನ್ನು ಮುಕ್ತ ಎಲೆಕ್ಟ್ರಾನ್ ಸಿದ್ಧಾಂತದಿಂದ ನೇರವಾಗಿ ವಿವರಿಸಬಹುದು.

ಘನವಸ್ತುಗಳಲ್ಲಿನ ಅಪರಿಪೂರ್ಣತೆಗಳು : ಮೇಲಿನ ಚರ್ಚೆಗಳು ಘನವಸ್ತುವಿನ ಗುಣಗಳನ್ನು ರೂಪಿಸುವಲ್ಲಿ ಸ್ಫಟಿಕಜಾಲಕದಲ್ಲಿನ ಅಪರಿಪೂರ್ಣತೆಗಳು ಅಥವಾ ದೋಷಗಳು ಮಹತ್ತರ ಪಾತ್ರವನ್ನು ವಹಿಸುವುವು ಎಂದು ತೋರಿಸಿಕೊಡುತ್ತವೆ. ಈಗ ಸ್ವಲ್ಪ ವಿವರವಾಗಿ ಅಪರಿಪೂರ್ಣತೆಗಳ ಲಕ್ಷಣಗಳು, ವೈವಿಧ್ಯಗಳು ಮತ್ತು ಅವುಗಳಿಂದ ಉಂಟಾಗುವ ಗುಣಗಳ ಬಗ್ಗೆ ತಿಳಿದುಕೊಳ್ಳೋಣ. ಪರಿಪೂರ್ಣ ಅವಧಿಯುತ ಜಾಲಕದ (ಪರ್ಫೆಕ್ಟ್ ಪೀರಿಯಾಡಿಕ್ ಲ್ಯಾಟಿಸ್) ರಚನೆಯನ್ನು ಹಾಳುಮಾಡುವ ಯಾವುದೇ ವಿಚಲನೆಯನ್ನು (ಡೀವಿಯೇಷನ್) ಅಪರಿಪೂರ್ಣತೆ ಎನ್ನಬಹುದು. ಸಂಪೂರ್ಣವಾಗಿ ಪರಿಪೂರ್ಣ ಜಾಲಕವನ್ನುಳ್ಳ ಘನವಸ್ತುಗಳ ಇರುವಿಕೆ ಒಂದು ಮಿಥ್ಯೆ ಎನ್ನಬಹುದು; ಘನವಸುಗಳಲ್ಲಿ ಒಂದಲ್ಲ ಒಂದು ರೀತಿಯ ದೋಷ ಇದ್ದೇ ಇರುತ್ತದೆ (ಹಲವು ವೇಳೆ ಅದು ಅತಿ ಹೆಚ್ಚಿನ ಪರಿಮಾಣದಲ್ಲಿರುತ್ತದೆ.) ಮೊದಲು ಕಣ್ಣಿಗೆ ಎದ್ದು ಕಾಣುವ ಅಪರಿಪೂರ್ಣತೆಯೆಂದರೆ ಸ್ಫಟಿಕಗಳ ಸಾಂತ ರೂಪ ಮತ್ತು ಗಾತ್ರ. ಇದರಿಂದ ಜಾಲಕದಲ್ಲಿನ ಸರಳ ಚಲನೀಯ ಸಮಾಂಗತ್ವಕ್ಕೆ (ಟ್ರಾನ್ಸ್‌ಲೇಷನಲ್ ಸಿಮೆಟ್ರಿ) ಧಕ್ಕೆಯುಂಟಾಗುತ್ತದೆ. ಸ್ಫಟಿಕದ ಮೇಲ್ಮೈಯಲ್ಲಿನ ಪರಮಾಣುಗಳು ಒಳಗಿನ ಪರಮಾಣುಗಳಿಗಿಂತ ಭಿನ್ನವಾದ ಪರಿಸರದಲ್ಲಿ ಇರುವುದರಿಂದ ಒಂದು ರೀತಿಯ ಮೇಲ್ಮೈ ಸೆಳೆತ ಉಂಟಾಗುತ್ತದೆ. ಜಾಲಕದಲ್ಲಿನ ವಿದ್ಯುತ್ ವಿಭವವನ್ನು ಪರಿಪೂರ್ಣವಾಗಿ ಸರಳ ಚಲನೀಯ ಸಮಾಂಗತ್ವವುಳ್ಳದ್ದೆಂದು ಪರಿಗಣಿಸಿ ಪಡೆದ ಶಕ್ತಿಪಟ್ಟಿಗಳ ರಚನೆ ಮೇಲ್ಮೈಗಳ ಇರುವಿಕೆಯಿಂದಾಗಿ ಸ್ವಲ್ಪ ಬದಲಾಗುತ್ತದೆ. ಮೇಲ್ಮೈ ಪರಮಾಣುಗಳು ಘನವಸ್ತುವಿನ ಪ್ರತಿಬಂಧಿತ ಶಕ್ತಿವಲಯಗಳಲ್ಲಿ ಕೆಲವು ಶಕ್ತಿಮಟ್ಟಗಳನ್ನು ಹೊಂದಿರುತ್ತವೆ. ಇಂಥ ಮಟ್ಟಗಳಿಗೆ ಮೇಲ್ಮೈಮಟ್ಟಗಳು ಎಂದು ಹೆಸರು. ಈ ಮೇಲ್ಮೈ ಸ್ಥಿತಿಗಳು ಘನವಸ್ತುಗಳ ಸಂಪರ್ಕ ಗುಣಗಳಂಥ ಮೇಲ್ಮೈ ವಿದ್ಯಮಾನಗಳಲ್ಲಿ ಪ್ರಮುಖ ಪಾತ್ರ ವಹಿಸಿದರೂ




**ಚಿತ್ರ 17. ಅಂಚಿನ ಸ್ಥಳಪಲ್ಲಟ. ಈ ಸ್ಥಳಪಲ್ಲಟ ಸ್ಫಟಿಕಗಳ ಜಾರುತಲದಲ್ಲಿ ಉಂಟಾಗುತ್ತದೆ. ಈ ಸ್ಥಳಪಲ್ಲಟದ ರೇಖೆಯ ಮೇಲ್ಭಾಗದಲ್ಲಿ ಪರಮಾಣುಗಳ ಒಂದು ಪದರ ಹೆಚ್ಚಾಗಿರುವುದರಿಂದ ಹೀಗಾಗುತ್ತದೆ (ಚಿತ್ರ *a*) : ತಿರುಪಿನ ಸ್ಥಳಪಲ್ಲಟವನ್ನು ಚಿತ್ರ (*b*)ಯಲ್ಲಿ ತೋರಿಸಿದೆ**

ಘನವಸ್ತುವಿನ ಸ್ಥೂಲ ಗುಣಗಳ ನಿರ್ಧರಣೆಯಲ್ಲಿ ಮುಖ್ಯವಾಗಿರುವುದಿಲ್ಲ. ಸಾಕಷ್ಟು ದೊಡ್ಡದಾದ ಸ್ಫಟಿಕವೊಂದರಲ್ಲಿನ ಮೇಲ್ಮೈಯ ಪರಮಾಣುಗಳ ಸಂಖ್ಯೆ ಒಟ್ಟು ಪರಮಾಣುಗಳ ಸಂಖ್ಯೆಗೆ ಹೋಲಿಸಿದಾಗ ಅತಿ ಕಡಿಮೆ ಇರುವುದೇ ಇದಕ್ಕೆ ಕಾರಣ. ಸ್ಫಟಿಕಗಳ ಒಳಗೂ ಪರಮಾಣುಗಳ ದೋಷಯುಕ್ತ ಜೋಡಣೆಯಿರುವ ತಲಗಳು ಇರಬಹುದು. ಉದಾಹರಣೆಗೆ ಘನವಸ್ತುಗಳಲ್ಲಿನ ಬಿರುಕುಗಳು ಇಂಥ ತಲದೋಷಗಳು. ಒಂದು ಆಯಾಮದಲ್ಲಿನ ದೋಷಯುಕ್ತ ಪರಮಾಣು ಜೋಡಣೆಗಳಿಗೆ ರೇಖೀಯ ದೋಷಗಳು ಎಂದು ಹೆಸರು. ಸ್ಥಳಪಲ್ಲಟಗಳು (ಡಿಸ್‌ಲೊಕೇಷನ್ಸ್) ಎಂದು ಕರೆಯುವ ದೋಷಗಳು ರೇಖೀಯ ದೋಷಗಳಿಗೆ ಉದಾಹರಣೆಗಳು. ಸ್ಥಳಪಲ್ಲಟವಿರುವ ರೇಖೆಗಳಲ್ಲಿ ಪರಮಾಣುಗಳಿಗೆ ಸರಿಯಾದ ಸಂಖ್ಯೆಯಲ್ಲಿ ನೆರೆಯ ಪರಮಾಣುಗಳಿಲ್ಲದಿರಬಹುದು ಅಥವಾ ಪರಮಾಣುಗಳ ನಡುವಿನ ಅಂತರ ಮತ್ತು ಕೋನಗಳು ಸರಿಯಿಲ್ಲದಿರಬಹುದು. ಸಾಮಾನ್ಯವಾಗಿ ಒಂದು ಪ್ರಾಕೃತಿಕ ಸ್ಫಟಿಕದಲ್ಲಿ ಕಂಡುಬರುವ ಸ್ಥಳಪಲ್ಲಟಗಳ ಸಾಂದ್ರತೆ ಚದರ ಸೆಂಟಿಮೀಟರಿಗೆ

1011 ರಿಂದ ಹಿಡಿದು ಶೂನ್ಯದ ಬಹು ಸಮೀಪದವರೆಗೂ ಇರಬಹುದು. ಸ್ಥಳಪಲ್ಲಟಗಳಲ್ಲಿ ಮುಖ್ಯವಾಗಿ ಅಂಚಿನ ಸ್ಥಳಪಲ್ಲಟ ಮತ್ತು ತಿರುಪಿನ ಸ್ಥಳಪಲ್ಲಟಗಳೆಂಬ ಎರಡು ರೀತಿಗಳನ್ನು ಗಮನಿಸಬಹುದು. ಸ್ಥಳಪಲ್ಲಟಗಳು ಸ್ಫಟಿಕಗಳ ಪ್ಲಾಸ್ಟಿಕ್ ಗುಣಗಳನ್ನೂ ಸ್ಫಟಿಕ ಬೆಳವಣಿಗೆಯನ್ನೂ ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಚಿತ್ರ 17(a) ಯಲ್ಲಿ ಅಂಚಿನ ಸ್ಥಳಪಲ್ಲಟದ ಚಲನೆಯಿಂದ ಸ್ಫಟಿಕದಲ್ಲಿ ಜಾರುವಿಕೆ ಎಂದು ಕರೆಯಲಾಗುವ ಪ್ಲಾಸ್ಟಿಕ್ ವಿರೂಪ ಹೇಗೆ ಉಂಟಾಗುತ್ತದೆಂದು ತೋರಿಸಲಾಗಿದೆ. ಚಿತ್ರ 17(b) ಯಲ್ಲಿ ತಿರುಪಿನ ಸ್ಥಳಪಲ್ಲಟವೊಂದನ್ನು ತೋರಿಸಲಾಗಿದೆ. ತಿರುಪಿನ ಅಕ್ಷದ ಸುತ್ತ ತಿರುಗುವುದರಿಂದ ಅಕ್ಷಕ್ಕೆ ಲಂಬವಾಗಿರುವ ಒಂದು ಸ್ಫಟಿಕ ತಲದಿಂದ ಇನ್ನೊಂದಕ್ಕೆ ಅವಿಚ್ಛಿನ್ನವಾಗಿ ಹೋಗಬಹುದು. ತಿರುಪಿನ ಸ್ಥಳಪಲ್ಲಟ ನಿಮ್ನ ಅತಿಪರ್ಯಾಪ್ತ (ಲೋ ಸೂಪರ್ ಸ್ಯಾಚುರೇಟೆಡ್) ದ್ರಾವಣದಲ್ಲಿ ಸ್ಫಟಿಕಗಳ ಶೀಘ್ರ ಬೆಳವಣಿಗೆಗೆ ಕಾರಣವಾಗಿರುತ್ತದೆ ಎನ್ನಬಹುದು.

ದೋಷಗಳ ವ್ಯಾಪ್ತಿ ಒಂದು ಪರಮಾಣು ವ್ಯಾಸದಷ್ಟು ದೂರಕ್ಕೆ ಮಾತ್ರ ಸೀಮಿತವಾಗಿದ್ದರೆ ಅಂಥವುಗಳಿಗೆ ಬಿಂದುದೋಷಗಳೆಂದು ಹೆಸರು. ಬಿಂದುದೋಷಗಳಲ್ಲಿ ಖಾಲಿ ನಿವೇಶನಗಳು ಮತ್ತು ಸ್ಟಾಯ್ಕಿಯೋಮೆಟ್ರಿಕ್ ವಿಚಲನೆಗಳು ಎಂದು ಕರೆಯಲಾಗುವ ಎರಡು ವರ್ಗಗಳನ್ನು ಗಮನಿಸಬಹುದು. ಜಾಲಕದಲ್ಲಿ ಅಯಾನು ಅಥವಾ ಪರಮಾಣುವೊಂದರ ಇಲ್ಲದಿರುವಿಕೆಯಿಂದ ಉಂಟಾಗುವ ಖಾಲಿ ನಿವೇಶನಗಳು ಜಾಲಕವನ್ನು ದೋಷಪೂರಿತವನ್ನಾಗಿ ಮಾಡುತ್ತವೆ. ಇಂಥ ಬಿಂದು ದೋಷಗಳಿಗೆ ಶಾಟ್ಕಿ ದೋಷಗಳೆಂಬುದಾಗಿ ಕೂಡ ಹೆಸರುಂಟು. ಇವು ಜಾಲಕದಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿರುತ್ತವೆ. ಒಂದು ಖಾಲಿ ನಿವೇಶವನ್ನು ಉಂಟುಮಾಡಲು ಗಣನೀಯ ಪ್ರಮಾಣದಲ್ಲಿ ಶಕ್ತಿ ವ್ಯಯವಾಗುವುದರಿಂದ (ಉದಾಹರಣೆಗೆ ತಾಮ್ರದಲ್ಲಿ ಖಾಲಿ ನಿವೇಶನವುಂಟಾಗಲೂ ~1ev ಬೇಕಾಗುತ್ತದೆ) ಹೆಚ್ಚಿನ ಉಷ್ಣತೆಗಳಲ್ಲಿ ಮಾತ್ರ ಇಂಥ ದೋಷಗಳು ಗಣನೀಯ ಪ್ರಮಾಣದಲ್ಲಿ ಉಂಟಾಗುತ್ತವೆ. ಅಯಾನುಗಳು ಘನವಸ್ತುವಿನಲ್ಲಿ ಅತ್ತಿತ್ತ ತೂರಲು ಖಾಲಿ ನಿವೇಶನಗಳು ಸಹಾಯ ಮಾಡುತ್ತವೆ. ಒಂದು ಖಾಲಿ ನಿವೇಶನಕ್ಕೆ ಒಂದು ಅಯಾನ್ ನುಗ್ಗುವುದರಿಂದ ಖಾಲಿ ನಿವೇಶನ ಹಿಂದೆ ಸರಿಯುತ್ತದೆ. ಇಂಥ ಪ್ರಕ್ರಿಯೆಗಳ ಸರಪಳಿಯಿಂದ ಅಯಾನ್‌ಗಳು (ಅಥವಾ ಖಾಲಿ ನಿವೇಶನಗಳು) ಚಲಿಸುತ್ತವೆ. ಋಣ ಅಯಾನೊಂದರ ಇಲ್ಲದಿರುವಿಕೆಯಿಂದ ಉಂಟಾದ ಖಾಲಿ ನಿವೇಶನಕ್ಕೆ ಎಲೆಕ್ಟ್ರಾನುಗಳನ್ನು ಹಿಡಿಯುವ ಸಾಮರ್ಥ್ಯವಿರುತ್ತದೆ. ಆದ್ದರಿಂದ ಋಣ ಅಯಾನ್ ಖಾಲಿ ನಿವೇಶನದಲ್ಲಿ ಸಿಕ್ಕಿಕೊಂಡ ಎಲೆಕ್ಟ್ರಾನು ಸುತ್ತಲಿನ ಅಯಾನುಗಳ ಪ್ರಭಾವದಲ್ಲಿ ಚಲಿಸಲು ಪ್ರಾರಂಭಿಸುತ್ತದೆ. ಇಂಥ ಚಲನೆಯ ವಿಚ್ಛಿನ್ನ ಶಕ್ತಿಮಟ್ಟಗಳ ಶಕ್ತಿ ಅಂತರ ಅಯಾನಿಕ್ ಸ್ಫಟಿಕಗಳಲ್ಲಿ ಸಾಮಾನ್ಯವಾಗಿ ದ್ಯುತಿರೋಹಿತದ ದೃಗ್ಗೋಚರ ಭಾಗಗಳಲ್ಲಿರುವುದರಿಂದ ದ್ಯುತಿಲೀನತೆ ಮತ್ತು ಉತ್ಸರ್ಜನೆ (ದೃಗ್ಗೋಚರ ಅಲೆಯುದ್ದಗಳಲ್ಲಿ) ಸಾಧ್ಯವಾಗುತ್ತದೆ. ಇಂಥ ಪ್ರಕ್ರಿಯೆ ಅಯಾನಿಕ್ ಸ್ಫಟಿಕಗಳಲ್ಲಿ ವರ್ಣಗಳಿಗೆ ಕಾರಣವಾಗಿರುವುದರಿಂದ ಖಾಲಿ ನಿವೇಶನಗಳನ್ನು ವರ್ಣಕೇಂದ್ರಗಳು ಎಂದು ಕರೆಯುವುದುಂಟು.

ಸ್ಟಾಯ್ಕಿಯೋಮೆಟ್ರಿಕ್ ವಿಚಲನೆಗಳು ಘನವಸ್ತುಗಳ ತಯಾರಿಕೆಯಲ್ಲಿ ವಿವಿಧ ಧಾತುಗಳ ಪ್ರಮಾಣಗಳಲ್ಲಿ ಆಗುವ ಅಲ್ಪ ಏರಿಳಿತಗಳಿಂದ ಉಂಟಾಗುತ್ತವೆ. ಪೊಟ್ಯಾಸಿಯಮ್ ಪರಮಾಣುಗಳು ಸ್ವಲ್ಪವಾಗಿ ಅಧಿಕವಾಗಿರುವ ಪೊಟ್ಯಾಸಿಯಮ್ ಕ್ಲೋರೈಡ್ ಇಂಥ




**ಚಿತ್ರ 18. ಬದಲಿಕೆಯಿಂದ ಉಂಟಾಗುವ ದೋಷವನ್ನು (*a*) ಚಿತ್ರದಲ್ಲೂ ಅಂತಃಸ್ಥಿತ ದೋಷವನ್ನು (*b*) ಚಿತ್ರದಲ್ಲೂ ತೋರಿಸಿದೆ**

ವಿಚಲನೆಗೆ ಒಂದು ಉದಾಹರಣೆ. ಹೀಗೆ ಹೆಚ್ಚಾಗುವ ಪರಮಾಣು ಜಾಲಕದ ಬಿಂದುವೊಂದರಲ್ಲಿ ಹೋಗಿ ಕೂರಬಹುದು (ಚಿತ್ರ 18a) ಅಥವಾ ಸಾಕಷ್ಟು ಚಿಕ್ಕದಾಗಿದ್ದರೆ ಜಾಲಕದ ಸಂದುಗಳಲ್ಲಿ ಹೋಗಿ ಕೂರಬಹುದು (ಚಿತ್ರ 18b). ಈ ಎರಡು ರೀತಿಗಳಲ್ಲಿಯೂ ಜಾಲಕದ ಅವಧಿಯುತ ಸಮಾಂಗತ್ವ ಹಾಳಾಗುತ್ತದೆ. ಮೊದಲನೆಯ ರೀತಿಯ ದೋಷಕ್ಕೆ ಬದಲಿಕೆಯ ದೋಷ (ಸಬ್‌ಸ್ಟಿಟ್ಯೂಷನಲ್ ಡಿಫೆಕ್ಟ್) ಎಂದೂ ಎರಡನೆಯ ರೀತಿಯ ದೋಷಕ್ಕೆ ಅಂತಃಸ್ಥಿತ ದೋಷ (ಇಂಟರ್‌ಸ್ಟಿಷಿಯಲ್ ಡಿಫೆಕ್ಟ್) ಎಂದೂ ಹೆಸರು. ದೋಷರಹಿತ ಸ್ಫಟಿಕವೊಂದರಲ್ಲಿ ಇಂಥ ದೋಷಗಳು ಪ್ರತಿಬಂಧಿತ ಶಕ್ತಿವಲಯಗಳಲ್ಲಿ ಅನೇಕ ಶಕ್ತಿಮಟ್ಟಗಳನ್ನು ಹೊಂದಿರುತ್ತವೆ. ಈ ಕಾರಣದಿಂದ ಅರೆವಾಹಕಗಳ ತಯಾರಿಕೆಯಲ್ಲಿ ದೋಷಗಳ ಸೂಕ್ತ ಹಾಗೂ ನಿಖರವಾದ ಸಂಯೋಜನೆ ಅತಿ ಮುಖ್ಯ.

ಸಜಾತೀಯ ಪರಮಾಣುವೊಂದರ ಬದಲಿಕೆಯಿಂದಾಗಲಿ ಅಂತಃಸ್ಥಿತಿಯಿಂದಾಗಲಿ ದೋಷವನ್ನು ಉಂಟುಮಾಡುವಂತೆ ವಿಜಾತೀಯ ಪರಮಾಣುಗಳೂ ಇದೇ ರೀತಿಯ ದೋಷಗಳನ್ನು ಉಂಟುಮಾಡಬಹುದು. ಲೋಹಗಳ ಮಿಶ್ರಣ ತತ್ತ್ವಶಃ ಈ ರೀತಿಯ ದೋಷಸಂಯೋಜನೆ, ದೋಷಗಳ ಪ್ರಮಾಣವನ್ನು ಸರಿಯಾಗಿ ನಿರ್ಧರಿಸುವುದರಿಂದ ಅಪೇಕ್ಷಿತ ಗುಣಗಳಿರುವ ವಸ್ತುಗಳನ್ನು ಹೊಂದಲು ಸಾಧ್ಯ ಎಂದು ಹೇಳಬಹುದು. (ಎ.ವಿ.ಜಿ.)

**ಘನಸ್ಥಿತಿ ರಸಾಯನವಿಜ್ಞಾನ :** ವಸ್ತುಗಳ ಘನಸ್ಥಿತಿಯಲ್ಲಿ ರಾಸಾಯನಿಕ ಬಂಧಗಳು, ಸ್ಫಟಿಕ ವಸ್ತುಗಳ ಬೆಳವಣಿಗೆ, ಅವುಗಳ ಶುದ್ಧೀಕರಣ ಮತ್ತು ಘಟನಾತ್ಮಕ ಅಧ್ಯಯನ, ರಾಸಾಯನಿಕ ಕ್ರಿಯೆಗಳು, ಮೇಲ್ಮೈ ರಸಾಯನವಿಜ್ಞಾನ (ಸರ್ಫೇಸ್ ಕೆಮಿಸ್ಟ್ರಿ) ಮುಂತಾದವುಗಳ ಅಧ್ಯಯನ (ಸಾಲಿಡ್–ಸ್ಟೇಟ್ ಕೆಮಿಸ್ಟ್ರಿ). ಸ್ಫಟಿಕ ದೋಷಗಳ ಅಧ್ಯಯನ ಕೂಡ ಇದೇ ವಿಭಾಗಕ್ಕೆ ಸೇರಿದೆ. ಸಾಮಾನ್ಯವಾಗಿ ಘನವಸ್ತುಗಳ ಭೌತ ಮತ್ತು ರಾಸಾಯನಿಕ ಗುಣಗಳನ್ನು ನಿರ್ಧರಿಸಲು ಸ್ಫಟಿಕ ದೋಷಗಳು ಬಹುಮಟ್ಟಿಗೆ ನೆರವಾಗುತ್ತವೆ. ಈ ದೋಷಗಳ ಅಂತರಕ್ರಿಯೆ, ಸಮತೋಲ ಮತ್ತು ಅವುಗಳ ಸಾರತೆಯನ್ನು (ಕಾನ್ಸಂಟ್ರೇಷನ್) ಹತೋಟಿಯಲ್ಲಿಡುವುದು ಮುಂತಾದವು ರಾಸಾಯನಿಕ ಸಮಸ್ಯೆಗಳಾಗಿರುವುದರಿಂದ ಘನಸ್ಥಿತಿ ರಸಾಯನವಿಜ್ಞಾನ ಅವುಗಳ ಅಧ್ಯಯನಕ್ಕೆ ಪ್ರಾಮುಖ್ಯ ನೀಡುತ್ತದೆ. ಘನಗಳಲ್ಲಿ ಅತಿಮುಖ್ಯವಾದವು ಸ್ಫಟಿಕೀಯ ಘನಗಳು. ಅರೆಸ್ಫಟಿಕೀಯ ಮತ್ತು ಅಸ್ಫಟಿಕೀಯ ಘನಗಳಿಗೆ ಪಾಲಿಮರ್‌ಗಳ ಮತ್ತು ಗಾಜುಗಳ ಉದಾಹರಣೆಯನ್ನು ಕೊಡಬಹುದು. ಆದರೆ ಈ ಘನಗಳಲ್ಲಿನ ಅಣು ಅಥವಾ ಪರಮಾಣುಗಳು ಯಾವುದೇ ನಿರ್ದಿಷ್ಟವಾದ ರಚನೆಯಲ್ಲಿ ಇಲ್ಲವಾದ್ದರಿಂದ ಈ ವಸ್ತುಗಳ ಪರಮಾಣುಗಳು ಸಮತಲಗಳ ವಿಚಾರವಾಗಲಿ ಅಂತರಪರಮಾಣು ದೂರುಗಳನ್ನಾಗಲಿ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಘನಸ್ಥಿತಿ ರಸಾಯನ ವಿಜ್ಞಾನ ಹೆಚ್ಚಿಗೆ ಸ್ಫಟಿಕೀಯ ಘನಗಳ ರಚನಾಕೃತಿಯನ್ನೇ ಕುರಿತಾಗಿರುತ್ತದೆ.




**ಚಿತ್ರ 1. ಮಿಲ್ಲರ್ ಘಾತಾಂಕಗಳನ್ನು ಹೊಂದಿರುವ ಸಮತಲಗಳು**

ಸ್ಫಟಿಕಗಳ ರಚನೆ : ಸ್ಫಟಿಕದಲ್ಲಿನ ಅಣು ಅಥವಾ ಪರಮಾಣುಗಳು ಒಂದು ನಿರ್ದಿಷ್ಟವಾದ ರಚನೆಯಲ್ಲಿವೆ. ಅಂದರೆ ಸ್ಫಟಿಕಜಾಲಕದಲ್ಲಿ (ಕ್ರಿಸ್ಟಲ್ ಲ್ಯಾಟಿಸ್) ಇವು ಮೂರು ಆಯಾಮಗಳಲ್ಲಿ ಅವಧಿಯುತವಾಗಿ ಪುನರಾವರ್ತಿಸುವ ರಚನೆಯನ್ನು ಪಡೆದಿವೆ. ಈ ರೂಪದ ಸದಿಶಗಳನ್ನು a, b, c ಎಂದಿಟ್ಟುಕೊಂಡಲ್ಲಿ ಇವುಗಳನ್ನೊಳಗೊಂಡ ಘನಾಕೃತಿಯನ್ನು ಸ್ಫಟಿಕದ ಆದಿಮಕೋಶ (ಪ್ರಿಮಿಟಿವ್ ಸೆಲ್) ಎಂದು ಕರೆಯಬಹುದು. ಇದನ್ನು ಮೂರು ಆಯಾಮಗಳಲ್ಲಿ ಪುನರಾವರ್ತಿಸಿದರೆ ಸ್ಫಟಿಕಜಾಲಕ ದೊರೆಯುತ್ತದೆ. ಆಗ ಈ ಕೋಶವನ್ನು ಏಕಮಾನಕೋಶವೆಂದು (ಯೂನಿಟ್ ಸೆಲ್) ಕೂಡ ಕರೆಯುತ್ತಾರೆ. ಸ್ಫಟಿಕಜಾಲಕದಲ್ಲಿ ಹದಿನಾಲ್ಕು ತರಹದ ವಿವಿಧ ರಚನೆಗಳು ಸಾಧ್ಯ. ಇವುಗಳಿಗೆ ಬ್ರೇವಾಸ್

ಜಾಲಕಗಳೆಂದು ಹೆಸರು. ಈ ಹದಿನಾಲ್ಕು ಜಾಲಕಗಳನ್ನು ಅಸ್ಫಟಿಕ ವ್ಯವಸ್ಥೆಗಳಲ್ಲಿ ಅಳವಡಿಸಲಾಗಿದೆ **(ನೋಡಿ– ಸ್ಫಟಿಕವಿಜ್ಞಾನ)**. ಸ್ಫಟಿಕಜಾಲಕಗಳನ್ನು ಕೆಲವು ಜ್ಯಾಮಿತೀಯ ಪರಿಕರ್ಮಗಳಿಗೆ ಗುರಿಮಾಡಬಹುದು. ಇವುಗಳಲ್ಲಿ ಮುಖ್ಯ ಸಮಾಂಗತಾಕ್ಷ (ಆಕ್ಸಿಸ್ ಆಫ್ ಸಿಮೆಟ್ರಿ), ಸಮಾಂಗತಾಕೇಂದ್ರ ಮತ್ತು ಸಮಾಂಗತಾಸಮತಲ. ಸ್ಫಟಿಕ ರಚನೆಯನ್ನು ತಿಳಿದುಕೊಳ್ಳಲು ಸ್ಫಟಿಕದ ಸಮತಲಗಳನ್ನು ಮಿಲ್ಲರ್ ಘಾತಾಂಕಗಳಿಂದ (ಮಿಲ್ಲರ್ ಇಂಡಿಸಸ್) ಗುರುತಿಸುವುದು ಅಗತ್ಯ. ಸರಳ ಘನಿಕ ಜಾಲಕದಲ್ಲಿ (ಸಿಂಪಲ್ ಕ್ಯೂಬಿಕ್ ಲ್ಯಾಟಿಸ್) (100), (110), (111) ಮತ್ತು (112) ಮಿಲರ್ ಘಾತಾಂಕಗಳನ್ನು ಹೊಂದಿರುವ ಸಮತಲಗಳನ್ನು ಚಿತ್ರದಲ್ಲಿ ತೋರಿಸಿದೆ.




**ಚಿತ್ರ 2. ಷಟ್ಕೋನೀಯ ವಿಧಾನದಲ್ಲಿ ಗಿಡಿದಿರುವ ಸ್ಫಟಿಕ ಪರಮಾಣು ವ್ಯವಸ್ಥೆಯನ್ನು ಎಡಗಡೆ ಚಿತ್ರದಲ್ಲೂ ಘನಿಕ ವಿಧಾನದಲ್ಲಿ ಗಿಡಿದಿರುವ ಸ್ಫಟಿಕ ಪರಮಾಣು ವ್ಯವಸ್ಥೆಯನ್ನು ಬಲಗಡೆ ಚಿತ್ರದಲ್ಲೂ ಕಾಣಿಸಿದೆ**

ಸ್ಫಟಿಕದಲ್ಲಿನ ಪರಮಾಣುಗಳನ್ನು ದೃಢ ಗೋಳಗಳೆಂದಿಟ್ಟುಕೊಂಡರೆ (ರಿಜಿಡ್ ಸ್ಫಿಯರ್ಸ್) ಅವನ್ನು ಘನದಲ್ಲಿ ಒತ್ತಾಗಿ ಗಿಡಿದು ಅಂತಃಸ್ಥಿತ ಗಾತ್ರವನ್ನು (ಇಂಟರ್‌ಸ್ಟೀಷಿಯಲ್ ವಾಲ್ಯೂಮ್) ಅತಿಕಡಿಮೆಯಾಗುವಂತೆ ಮಾಡಬಹುದು. ಈ ರೀತಿಯಾದ ಘನರಚನೆಗೆ ಘನಿಕ ಅಥವಾ ಷಟ್ಕೋನೀಯ ವಿಧಾನಗಳನ್ನು ಅನುಸರಿಸಬಹುದು. ಈ ಎರಡು ವಿಧಾನದ ರಚನೆಗಳನ್ನು **(ಚಿತ್ರ2)**ರಲ್ಲಿ ತೋರಿಸಿದೆ. ಸ್ಫಟಿಕರಚನೆಯಲ್ಲಿನ ಇನ್ನೊಂದು ಮುಖ್ಯಾಂಶವೆಂದರೆ ಅದರಲ್ಲಿನ ಪರಮಾಣುವ್ಯಾಸ; ಅಥವಾ ಘನ ಅಯಾನಿಕ್ ಸ್ಫಟಿಕವಾಗಿದ್ದರೆ ಅಯಾನ್ ವ್ಯಾಸಗಳನ್ನು ಪಾಲಿಂಗ್ ಎಂಬಾತನ ಅನುಭವಜನ್ಯ ಸಮೀಕರಣದಿಂದ ಲೆಕ್ಕಾಚಾರ ಮಾಡಬಹುದು.

$$R = \frac{C_n}{Z - S}$$

ಇಲ್ಲಿ R ಅಯಾನ್ ವ್ಯಾಸ, Z ನ್ಯೂಕ್ಲಿಯಸಿನ ಆವೇಶ ಮತ್ತು S ತೆರೆಯ ಸ್ಥಿರಾಂಕ (ಸ್ಕ್ರೀನಿಂಗ್ ಕಾನ್‌ಸ್ಟೆಂಟ್), Cn ಅನುಪಾತದ ಸ್ಥಿರಾಂಕ. ಈ ರೀತಿ ಸ್ಫಟಿಕದ ಧನ ಅಯಾನ್ ಮತ್ತು ಋಣ ಅಯಾನುಗಳ ವ್ಯಾಸಗಳನ್ನು ಗೊತ್ತುಮಾಡಿದರೆ ಅವುಗಳ ನಿಷ್ಪತ್ತಿಯಿಂದ ಘನದಲ್ಲಿರುವ ಪ್ರತಿಯೊಂದು ಅಯಾನ್‌ನ ನೆರೆಯಲ್ಲಿರುವ ಅಯಾನ್‌ಗಳ ಸಂಖ್ಯೆಯನ್ನು (ಕೋಆರ್ಡಿನೇಷನ್ ನಂಬರ್) ಮತ್ತು ಸ್ಫಟಿಕ ಜಾಲಕ ರಚನೆ ರೂಪವನ್ನೂ ತಿಳಿದುಕೊಳ್ಳಬಹುದು. ಇದನ್ನು ಮುಂದಿನ ಯಾದಿಯಲ್ಲಿ ತೋರಿಸಿದೆ.

| ವ್ಯಾಸನಿಷ್ಪತ್ತಿ $R_+/R_-$ | ನೆರೆ ಅಯಾನುಗಳ ಸಂಖ್ಯೆ (ಕೋಆರ್ಡಿನೇಷನ್ ನಂಬರ್) | ಸ್ಫಟಿಕಜಾಲಕ ರಚನಾ ಪ್ರರೂಪ |
|---|---|---|
| 0.73 | 8 | ಸೀಸಿಯಮ್ ಕ್ಲೋರೈಡ್ ಪ್ರರೂಪ ($C_sC1$ ಟೈಪ್) |
| 1.41–0.73 | 6 | ಸೋಡಿಯಮ್ ಕ್ಲೋರೈಡ್ ಪ್ರರೂಪ ($N_aC1$ ಟೈಪ್) |
| 0.225–0.41 | 4 | ಚತುಷ್ಫಲಕೀಯ |
| 0.155–0.225 | 3 | ತ್ರಿಕೋಣೀಯ |

ರಾಸಾಯನಿಕವಾಗಿ ಸಮರೂಪವಾಗಿದ್ದು (ಸಿಮಿಲರ್) ಒಂದೇ ವಿಧವಾದ ಸ್ಫಟಿಕ ರಚನೆಯನ್ನು ಹೊಂದಿರುವ ಎರಡು ಘನಗಳಿಗೆ ಸಮಾಕೃತಿಕ (ಐಸೊಮಾರ್ಫಸ್) ಘನಗಳೆಂದು ಹೆಸರು. ಈ ಕೆಳಗಿನ ಜೊತೆಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

$K_2SO_4, Al_2(SO_4)_3 \cdot 24H_2O$ } $NiSO_4(NH_4)_2SO_4 \cdot 6H_2O$

$K_2SO_4 \cdot Cr_2(SO_4)_3 \cdot 24H_2O$ } $MgSO_4(NH_4)_2SO_4 \cdot 6H_2O$

$ZnSO_4.7H_2O$

$NiSO_4.7H_2O$

ಆದರೆ ಈ ಘನಗಳು ರಾಸಾಯನಿಕವಾಗಿ ಭಿನ್ನವಾಗಿದ್ದಲ್ಲಿ ಅವುಗಳಿಗೆ ಸಂರಚನಾ ಸ್ಫಟಿಕಗಳು (ಐಸೊಸ್ಟ್ರಕ್ಚರಲ್ ಕ್ರಿಸ್ಟಲ್ಸ್) ಎಂದು ಹೆಸರು. ಈಗ ಸತುವಿನ ಸಲ್ಫೈಡಿನಲ್ಲಿ ನೆರೆ ಅಯಾನ್‌ಗಳ ಸಂಖ್ಯೆ ನಾಲ್ಕು ಆಗಿದ್ದರೂ ಅದು ಘನಿಕ ಮತ್ತು ಷಟ್ಕೋನೀಯ ಆಕೃತಿಗಳೆರಡರಲ್ಲೂ ಕಂಡುಬರುತ್ತದೆ. ಇದಕ್ಕೆ ಬಹುರೂಪತೆ (ಪಾಲಿಮಾರ್ಫಿಸಮ್) ಎಂದು ಹೆಸರು. ಸಮಾಕೃತಿಕ ಧಾತುಗಳ ಅಥವಾ ಸಂಯುಕ್ತಗಳ ವಿಶೇಷ ಗುಣವೆಂದರೆ ಅವು ಸುಲಭವಾಗಿ ಘನದ್ರಾವಣಗಳನ್ನು ಉಂಟುಮಾಡಬಲ್ಲವು. ಲೋಹಗಳಿಂದ ಉಂಟಾಗುವ ಮಿಶ್ರಲೋಹಗಳು ಘನದ್ರಾವಣಗಳಿಗೆ ಉದಾಹರಣೆ. ಆದರೆ ಘನಗಳಲ್ಲಿ ಸ್ಫಟಿಕ ರಚನೆ ಒಂದೇ ಆಗಿದ್ದು ರಾಸಾಯನಿಕ ಸ್ವಭಾವ (ನೇಚರ್) ಬೇರೆಯಾಗಿದ್ದಲ್ಲಿ ಘನದ್ರಾವಣಗಳು ಉಂಟಾಗುತ್ತವೆ. NiO ಮತ್ತು CoO ಗಳ ಮಿಶ್ರಣ ಈ ಘನದ್ರಾವಣಗಳಿಗೆ ಉದಾಹರಣೆ. ಆದರೆ NaCl ಮತ್ತು KCl ನಂಥ ಸಮಾಕೃತಿಕ ಸಂಯುಕ್ತಗಳಲ್ಲಿರುವಂತೆ ಅಯಾನ್‌ಗಳ ಅಳತೆಯಲ್ಲಿ ಬಹಳ ವ್ಯತ್ಯಾಸವಿದ್ದಲ್ಲಿ ಇವುಗಳಿಂದ ಘನ ದ್ರಾವಣಗಳು ಒಂದು ಪರಿಮಿತ ವ್ಯಾಪ್ತಿಯಲ್ಲಿ ಮಾತ್ರ ಉತ್ಪತ್ತಿಯಾಗುತ್ತವೆ.




**ಚಿತ್ರ 3**

ಸ್ಫಟಿಕ ವ್ಯವಸ್ಥೆ (ಕ್ರಿಸ್ಟಲ್ ಹ್ಯಾಬಿಟ್) ಮತ್ತು ಸೀಳಿದ ಸಮತಲಗಳನ್ನು ಪರೀಕ್ಷಿಸಿ ಸ್ವಲ್ಪಮಟ್ಟಿಗೆ ಸ್ಫಟಿಕ ರಚನೆಯನ್ನು ಊಹಿಸಿಕೊಳ್ಳಬಹುದು. ಪೂರ್ಣ ಅಧ್ಯಯನವನ್ನು ಎಕ್ಸ್‌ಕಿರಣನಮನದಿಂದ ಮಾಡಬಹುದು. ಕೆಲವು ವೇಳೆ ಇದರೊಂದಿಗೆ ಎಲೆಕ್ಟ್ರಾನ್‌ನಮನ ವಿಧಾನಗಳನ್ನೂ ಅನುಸರಿಸಬೇಕಾಗುತ್ತದೆ.

ಘನಗಳಲ್ಲಿನ ರಾಸಾಯನಿಕ ಬಂಧಗಳು : ಘನಗಳ ಭೌತ ಮತ್ತು ರಾಸಾಯನಿಕ ಗುಣಗಳನ್ನು ಅವುಗಳಲ್ಲಿರುವ ಅಂತರಪರಮಾಣುಬಂಧನಗಳಿಂದ (ಇಂಟರ್–ಅಟಾಮಿಕ್ ಬಾಂಡಿಂಗ್ಸ್) ತಿಳಿದುಕೊಳ್ಳಬಹುದು. ಈ ಬಂಧನಗಳಲ್ಲಿ ಅತಿ ಮುಖ್ಯವಾದವೆಂದರೆ ಅಯಾನಿಕ್, ಸಹವೇಲೆಂಟ್, ಲೋಹ ಮತ್ತು ವಾಂಡರ್‌ವಾಲ್ಸ್ ಬಂಧನಗಳು. ಅಂತರಪರಮಾಣು ಬಂಧನಗಳು ಉಂಟಾಗುವುದನ್ನು ಚಿತ್ರ(3)ರ ಮೂಲಕ ವಿವರಿಸಬಹುದು. ಪರಮಾಣು A ಮತ್ತು Bಗಳ ನಡುವಣ ಅಂತರ ಅನಂತವಾಗಿದ್ದಲ್ಲಿ ಅವುಗಳ ಅಂತರಕ್ರಿಯಾ ಬಲಗಳು ಶೂನ್ಯವಿದ್ದು ಈ ಅಂತರಕ್ರಿಯಾ ವಿಭವಶಕ್ತಿಯೂ ಶೂನ್ಯವಾಗಿರುತ್ತದೆ.

ಆದರೆ ಕ್ರಮೇಣ B ಯು ಪರಮಾಣು A ಯ ಬಳಿ ಸರಿದಲ್ಲಿ ಆಕರ್ಷಕ ಅಂತರಪರಮಾಣು ಬಲಗಳುಂಟಾಗುವುದರಿಂದ AB ವ್ಯವಸ್ಥೆಯ ವಿಭವಶಕ್ತಿ ಕುಗ್ಗುತ್ತದೆ. ಆದರೆ B ಮತ್ತು A ಗಳ ನಡುವಣ ಅಂತರ ಬಹಳ ಕಡಮೆಯಾದಾಗ ಆ ಪರಮಾಣುಗಳಲ್ಲಿರುವ ಎಲೆಕ್ಟ್ರಾನ್ ಮೋಡಗಳಿಂದ ವಿಕರ್ಷಣ ಬಲಗಳ ಉತ್ಪತ್ತಿಯಾಗುತ್ತದೆ. ಈ ಎಲೆಕ್ಟ್ರಾನ್ ಮೋಡಗಳು ಒಂದಕ್ಕೊಂದು ತಾಗಿದರೆ AB ವ್ಯವಸ್ಥೆಯ ವಿಭವಶಕ್ತಿ ಹೆಚ್ಚಾಗುತ್ತದೆ. ಈ ಶಕ್ತಿಯನ್ನು ಮುಂದಿನ ಸಮೀಕರಣದಿಂದ ತಿಳಿಸಬಹುದು:

$$V = -\frac{\alpha}{r^n} + \frac{\beta}{r^m}$$

ಇಲ್ಲಿ r ಎನ್ನುವುದು A ಮತ್ತು B ಪರಮಾಣುಗಳ ನಡುವಣ ಅಂತರ. $\alpha$ ಮತ್ತು $\beta$ಗಳು ಆಕರ್ಷಣೆ ಮತ್ತು ವಿಕರ್ಷಣೆ ಶಕ್ತಿಗಳಿಗೆ ಸಂಬಂಧಿಸಿದ ಸ್ಥಿರಾಂಕಗಳು. m ಮತ್ತು nಗಳು ಚಿಕ್ಕ ಪೂರ್ಣಾಂಕಗಳು. ಅವು AB ವ್ಯವಸ್ಥೆಯನ್ನು ಅವಲಂಬಿಸಿವೆ. ಚಿತ್ರ3ರಲ್ಲಿರುವಂತೆ AB ವ್ಯವಸ್ಥೆಯ ಕನಿಷ್ಠ ವಿಭವಶಕ್ತಿಗೆ ಅನುಗುಣವಾಗಿರುವ ಅಂತರ ಪರಮಾಣು ದೂರಕ್ಕೆ ಸಮತೋಲ ಅಂತರವೆಂದು ಹೆಸರು. ಈ ಬಿಂದುವಿನ ಅಂತರದಲ್ಲಿ ಆಕರ್ಷಣ ಮತ್ತು ವಿಕರ್ಷಣ ಬಲಗಳು ಸಮವಾಗಿರುವುದರಿಂದ Aಮತ್ತು B ಪರಮಾಣುಗಳ ಮೇಲಿನ ಒಟ್ಟು ಬಲಗಳು ಶೂನ್ಯವಾಗಿರುತ್ತವೆ.

ಈ ಮೇಲಿನ ವ್ಯವಸ್ಥೆಯಲ್ಲಿ A ಧನವೈದ್ಯುತ ಧಾತುವಾಗಿದ್ದು B ಋಣವೈದ್ಯುತ ಗುಂಪಿಗೆ ಸೇರಿದ್ದರೆ Aಯಲ್ಲಿರುವ ವೇಲೆನ್ಸ್ ಎಲೆಕ್ಟ್ರಾನ್ ಪರಮಾಣುವಿನಿಂದ ಆಕರ್ಷಿಸಲ್ಪಟ್ಟು A ಧನವಿದ್ಯುದಾವಿಷ್ಟ ಅಯಾನಾಗಿಯೂ B ಋಣವಿದ್ಯುದಾವಿಷ್ಟ ಅಯಾನಾಗಿಯೂ ಮಾರ್ಪಡುತ್ತವೆ. ಸೋಡಿಯಮ್ ಕ್ಲೋರೈಡ್ ಸಂಯುಕ್ತದ ಉದಾಹರಣೆಯನ್ನು ತೆಗೆದುಕೊಂಡರೆ ಇಲ್ಲಿ ಸೋಡಿಯಮ್ ಪರಮಾಣುವಿನ ವೇಲೆನ್ಸ್ ಎಲೆಕ್ಟ್ರಾನ್ ಕ್ಲೋರೀನ್ ಪರಮಾಣುವಿಗೆ ವರ್ಗಾಯಿಸಲ್ಪಟ್ಟು Na + ಮತ್ತು Cl– ಅಯಾನುಗಳಾಗಿ ಪರಿವರ್ತಿಸಲ್ಪಟಡುತ್ತವೆ. ಆಗ ಎರಡು ಅಯಾನ್‌ಗಳಲ್ಲೂ ತಲಾ ಹತ್ತು ಎಲೆಕ್ಟ್ರಾನ್‌ಗಳಿರುವ ಚಿಪ್ಪುಗಳು ಉತ್ಪತ್ತಿಯಾಗಿ ಜಡಾನಿಲವಾದ ನಿಯಾನ್ ಎಲೆಕ್ಟ್ರಾನ್ ವ್ಯವಸ್ಥೆಗೆ ಸಮವಾಗಿರುತ್ತವೆ:

$$Na(1s^2\,2s^2\,2p^6\,3s^1) + Cl\,(1s^2\,2s^2\,2p^6\,3s^2\,3p^5) \rightarrow$$
$$Na^+\,(1s^2\,2s^2\,2p^6\,3s^0) + Cl^-\,(1s^2\,2s^2\,2p^6\,3s^2\,3p^6)$$

ಸೋಡಿಯಮ್ ಕ್ಲೋರೈಡ್ ಸ್ಫಟಿಕದಲ್ಲಿ Na+ ಮತ್ತು Cl—ಅಯಾನುಗಳ ನಡುವೆ ಸ್ಥಿರ ವೈದ್ಯುತ ಬಲಗಳಿವೆ (ಎಲೆಕ್ಟ್ರೋಸ್ಟ್ಯಾಟಿಕ್ ಫೋರ್ಸಸ್). ಇವು ಬಹು ಪ್ರಬಲ ಬಲಗಳಾದ್ದರಿಂದ ಸಾಮಾನ್ಯವಾಗಿ ಅಯಾನಿಕ ಸ್ಫಟಿಕಗಳು ಗಡಸಾಗಿದ್ದು ಅವುಗಳ ದ್ರವನಬಿಂದು ಮತ್ತು ಕುದಿಬಿಂದುಗಳು ಹೆಚ್ಚಿನವಾಗಿರುತ್ತವೆ. ಅಯಾನಿಕ ಸ್ಫಟಿಕಗಳು ಸಾಮಾನ್ಯವಾಗಿ ಧ್ರುವೀಯ ದ್ರಾವಕಗಳಲ್ಲಿ (ಪೋಲಾರ್ ಸಾಲ್ವೆಂಟ್ಸ್) ಕರಗುತ್ತವೆ. ದ್ರವನಸ್ಥಿತಿಯಲ್ಲಿ (ಮೋಲ್ಟನ್ ಸ್ಟೇಟ್) ಮತ್ತು ದ್ರಾವಣ ರೂಪದಲ್ಲಿದ್ದಾಗ ವಿದ್ಯುದ್ವಾಹಕಗಳಾಗಿಯೂ ಇರುತ್ತವೆ.

ಮೇಲಿನ ಉದಾಹರಣೆಯಲ್ಲಿ ವೇಲೆನ್ಸ್ ಎಲೆಕ್ಟ್ರಾನ್‌ಗಳ ವರ್ಗಾವಣೆಯಾಗುವುದರ ಬದಲು A ಮತ್ತು B ಪರಮಾಣುಗಳು ತಮ್ಮ ವೇಲೆನ್ಸ್ ಎಲೆಕ್ಟ್ರಾನ್‌ಗಳನ್ನು ಪರಸ್ಪರ ಹಂಚಿಕೊಂಡು ಜಡಾನಿಲವೊಂದರ ಎಲೆಕ್ಟ್ರಾನ್ ಚಿಪ್ಪುಗಳ ವ್ಯವಸ್ಥೆಯನ್ನು ಹೊಂದಿದಲ್ಲಿ ಆಗ ಈ ಪರಮಾಣುಗಳ ನಡುವೆ ಸಹವೇಲೆಂಟ್ ಬಂಧ ಉಂಟಾಗುತ್ತದೆ. ಪರಸ್ಪರ ಎರಡು ವೇಲನ್ಸ್ ಎಲೆಕ್ಟ್ರಾನುಗಳನ್ನು ಹಂಚಿಕೊಂಡಲ್ಲಿ ಏಕವೇಲೆಂಟ್ ಬಂಧವೂ ನಾಲ್ಕು ಎಲೆಕ್ಟ್ರಾನುಗಳನ್ನು ಹಂಚಿಕೊಂಡಲ್ಲಿ ದ್ವಿವೇಲೆಂಟ್ ಬಂಧವೂ ಇತ್ಯಾದಿ, ಆಗುತ್ತವೆ. ಸಾಮಾನ್ಯವಾಗಿ ಆರ್ಗ್ಯಾನಿಕ್ ಸಂಯುಕ್ತಗಳಲ್ಲಿ ಬಹುಮಟ್ಟಿಗೆ ಸಹವೇಲೆಂಟ್ ಬಂಧಗಳಿರುತ್ತವೆ. ಸಹವೇಲೆಂಟ್ ಬಂಧದಲ್ಲಿರುವ ಎಲೆಕ್ಟ್ರಾನ್ ಗಿರಕಿಗಳು (ಸ್ಪಿನ್ಸ್) ಜೊತೆಗೂಡಿರುವುವು. ಸಾಮಾನ್ಯವಾಗಿ ಸಹವೇಲೆಂಟ್ ಬಂಧಗಳು ಬಹಳ ಶಕ್ತಿಯುತವಾಗಿರುತ್ತವೆ. ಉದಾರಹಣೆಗೆ, ವಜ್ರದ ಕಠಿಣತೆ ಮತ್ತು ಅಧಿಕ ದ್ರವನಬಿಂದುವಿಗೆ ಒಂದು ಕಾರಣ ಸಹವೇಲೆಂಟ್ ಬಂಧ ಇರುವುದೂ ಆಗಿರಬಹುದು ಎನ್ನಿಸುತ್ತದೆ. ವಜ್ರದಲ್ಲಿರುವ ಪ್ರತಿಯೊಂದು ಇಂಗಾಲ ಪರಮಾಣುವೂ ಚತುಷ್ಫಲಕೀಯವಾಗಿ ನಾಲ್ಕು ಸಮೀಪವರ್ತಿ ಇಂಗಾಲದ ಪರಮಾಣುಗಳ ಜೊತೆಯಲ್ಲಿ ಸಹವೇಲೆಂಟ್ ಬಂಧಗಳನ್ನು ಹೊಂದಿರುತ್ತದೆ. ಇಲ್ಲಿ ಪ್ರತಿಯೊಂದು ಇಂಗಾಲದ ಪರಮಾಣುವಿನ 2s ಮತ್ತು 2p ಕಕ್ಷಗಳು ಮಿಶ್ರತಳಿಯಾಗಿ ಈ ಕಕ್ಷಕ ಮಿಶ್ರಣದಿಂದ ನಾಲ್ಕು ಸಮಬಲ ಕಕ್ಷಕಗಳು ಉತ್ಪತ್ತಿಯಾಗಿರುತ್ತವೆ. ಆದ್ದರಿಂದ ಪ್ರತಿಯೊಂದು ಇಂಗಾಲ ಪರಮಾಣುವಿನ ನಾಲ್ಕು ಸಹವೇಲಂಟ್ ಬಂಧಗಳೂ ಸಮಬಲವನ್ನು ಹೊಂದಿರುವುವು. ಇದೇ ರೀತಿ ಹೆಚ್ಚಿನ ಆರ್ಗ್ಯಾನಿಕ್ ಅಣುಗಳಲ್ಲಿರುವ ಅಂತರಬಂಧಗಳು ಅತಿಶಕ್ತಿಯುತವಾಗಿರುತ್ತವೆ. ಆದರೆ ಈ ವಸ್ತುಗಳ ಕೆಲವು ಗುಣಗಳು ಅಂದರೆ ನಿಮ್ನ ದ್ರವನಬಿಂದು ಮತ್ತು ನಿಮ್ನ ಯಾಂತ್ರಿಕ ಸಾಮರ್ಥ್ಯ ಸಹವೇಲೆಂಟ್ ಗುಣವಿಲ್ಲದಿರುವ ದುರ್ಬಲ ಅಂತರ ಅಣುಶಕ್ತಿಗಳಿಂದ ಉಂಟಾಗುತ್ತವೆ. ಶುದ್ಧ ಅಯಾನಿಕ ಮತ್ತು ಸಹವೇಲೆಂಟ್ ಬಂಧಗಳಲ್ಲದೆ ಇವೆರಡರ ಗುಣಗಳನ್ನು ಹೊಂದಿರುವ ಮಧ್ಯಸ್ಥ ಬಂಧಗಳ ಉದಾಹರಣೆಗಳೂ ಉಂಟು. ಬಂಧಗಳು ಎಷ್ಟು ಮಟ್ಟಿಗೆ ಅಯಾನಿಕ್ ಅಥವಾ ಸಹವೇಲೆಂಟ್ ಬಂಧದ ಲಕ್ಷಣಗಳನ್ನು ಪಡೆದಿವೆ ಎನ್ನುವುದನ್ನು ಪಾಲಿಂಗನ ವೈದ್ಯುತ ಋಣಮಾನಕದಿಂದ (ಎಲೆಕ್ಟ್ರೋನೆಗೇಟಿವ್ ಸ್ಕೇಲ್) ಗಣಿಸಬಹುದು.

ಲೋಹಸ್ಫಟಿಕಗಳಲ್ಲಿರುವ ಬಂಧಗಳ ವ್ಯವಸ್ಥೆಯೇ ಬೇರೆ. ಇವುಗಳಿಗೆ ಲೋಹಬಂಧಗಳೆಂದು ಹೆಸರು. ಇಲ್ಲಿ ಲೋಹದ ಜಾಲಕದಲ್ಲಿರುವ ಪರಮಾಣುಗಳ ವೇಲೆನ್ಸ್ ಎಲೆಕ್ಟ್ರಾನುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಕ್ವಾಂಟಮ್ ಸಿದ್ಧಾಂತವನ್ನು ಉಪಯೋಗಿಸಿ ಫರ್ಮಿ, ಬ್ಲಾಕ್, ಸೋಮರ್‌ಫಿಲ್ಡ್ ಮುಂತಾದವರು ಲೋಹಬಂಧದ ವಿವರಣೆಯನ್ನು ಪಟ್ಟಿಸಿದ್ಧಾಂತದ (ಬ್ಯಾಂಡ್ ಥಿಯರಿ) ಮೂಲಕ ತಿಳಿಸಿದ್ದಾರೆ.

ಕೆಲವು ಬಾರಿ, ದುರ್ಬಲ ಸ್ಥಿರ ವೈದ್ಯುತ ಬಲಗಳಾದ ವಾಂಡರ್‌ವಾಲ್ಸ್ ಬಲಗಳಿಂದ ಒಂದು ಘನಾಕೃತಿಯ ರಚನೆ ಸಾಧ್ಯವಾಗುತ್ತದೆ. ಈ ಬಲಗಳು ಘನದಲ್ಲಿನ ಅಣು ಅಥವಾ ಪರಮಾಣುಗಳ ಎಲೆಕ್ಟ್ರಾನ್ ಚಲನೆಯಿಂದ ಕ್ಷಣಿಕವಾಗಿ ಉತ್ಪತ್ತಿಯಾದ ವಿದ್ಯುತ್ ದ್ವಿಧ್ರುವಗಳಿಂದ ಉಂಟಾಗುತ್ತವೆ. ಇಂಥ ಬಲಗಳನ್ನು ಪಡೆದಿರುವ ಘನಗಳಿಗೆ ಅಣುಸ್ಫಟಿಕಗಳೆಂದು ಹೆಸರು. ವಾಂಡರ್‌ವಾಲ್ಸ್ ಬಲಗಳು ಅತಿ ದುರ್ಬಲವಾದ್ದರಿಂದ ಜಡಾನಿಲ ಸ್ಫಟಿಕಗಳನ್ನೂ (ಇನರ್ಟ್ ಗ್ಯಾಸ್ ಕ್ರಿಸ್ಟಲ್ಸ್) ಹಲವಾರು ಆರ್ಗ್ಯಾನಿಕ್ ಸ್ಫಟಿಕಗಳನ್ನೂ ತೆಗೆದುಕೊಳ್ಳಬಹುದು.

ಘನಗಳಲ್ಲಿನ ಎಲೆಕ್ಟ್ರಾನ್ ರಚನೆ : ಘನವಸ್ತುಗಳ ಭೌತ ಮತ್ತು ರಾಸಾಯನಿಕ ಗುಣಗಳನ್ನು ತಿಳಿದುಕೊಳ್ಳಬೇಕಾದರೆ ಅವುಗಳಲ್ಲಿರುವ ಎಲೆಕ್ಟ್ರಾನ್ ರಚನೆ ಮತ್ತು ಬಂಧಶಕ್ತಿಗಳ ಮೂಲವನ್ನು ಅಧ್ಯಯನ ಮಾಡುವುದು ಅಗತ್ಯ. ನಾವು ಮಂಡಿಸುವ ಘನಸಿದ್ಧಾಂತಕ್ಕೆ ಅತಿರೇಕ ವಿದ್ಯುತ್ ವಾಹಕ ಶಕ್ತಿಗಳನ್ನು ಪಡೆದಿರುವ ಲೋಹಗಳ ಮತ್ತು ರೋಧಿಗಳ (ಇನ್ಸುಲೇಟರ್ಸ್) ಇರುವಿಕೆಯನ್ನು ವಿವರಿಸುವ ಸಾಮರ್ಥ್ಯ ಇರಬೇಕು. ಪರಮಾಣುಗಳ ಕ್ವಾಂಟಮ್ ಸಿದ್ಧಾಂತದ ಪ್ರಕಾರ ಪರಮಾಣುವಿನ ಎಲೆಕ್ಟ್ರಾನ್‌ಗಳ ಶಕ್ತಿಮಟ್ಟಗಳು ಕ್ವಾಂಟೀಕೃತವಾಗಿದ್ದು ಪ್ರತಿಯೊಂದು ಎಲೆಕ್ಟ್ರಾನ್‌ಗೂ ನಾಲ್ಕು ಕ್ವಾಂಟಮ್ ಸಂಖ್ಯೆಗಳಿರುತ್ತವೆ. ಇವುಗಳಿಗೆ ಪ್ರಧಾನ, ಅಜಿಮುತಲ್, ಕಾಂತ ಮತ್ತು ಗಿರಕಿ ಕ್ವಾಂಟಮ್ ಸಂಖ್ಯೆಗಳೆಂದು ಹೆಸರು, ಪರಮಾಣುವಿನಲ್ಲಿ ವಿವಿಧ ಶಕ್ತಿಮಟ್ಟಗಳಲ್ಲಿ ಅಂದರೆ s, p, d ಮತ್ತು f ಮಟ್ಟಗಳಲ್ಲಿ ಎಲೆಕ್ಟ್ರಾನ್ ರಚನೆಯನ್ನು ತಿಳಿದುಕೊಳ್ಳಲು ಪಾಲೀ ಎಂಬಾತನ ಬಹಿಷ್ಕರಣ ತತ್ತ್ವ (ಪಾಲೀಸ್ ಎಕ್ಸ್‌ಕ್ಲೂಷನ್ ಪ್ರಿನ್ಸಿಪಲ್) ಸಹಾಯ ಮಾಡುತ್ತದೆ. ಈ ತತ್ತ್ವದ ಪ್ರಕಾರ ಒಂದೇ ಮಟ್ಟದಲ್ಲಿರುವ ಎರಡು ಎಲೆಕ್ಟ್ರಾನ್‌ಗಳ ಎಲ್ಲ ಕ್ವಾಂಟಮ್ ಸಂಖ್ಯೆಗಳೂ ಸಮವಾಗಿರಲು ಸಾಧ್ಯವಿಲ್ಲ. **(ನೋಡಿ– ಕ್ವಾಂಟಂ–ರಸಾಯನ ವಿಜ್ಞಾನ)**.




**ಚಿತ್ರ 4 (*a*) ಘನದಲ್ಲಿ ಪರಮಾಣುಗಳ ಆವರ್ತ ಸಂಕಲನದಿಂದ ಶಕ್ತಿಪಟ್ಟಿಗಳ ಉದ್ಭವ**

ಸಾಮಾನ್ಯವಾಗಿ ಲೋಹ ಘನಗಳಲ್ಲಿ ಪರಮಾಣುಗಳ ವೇಲೆನ್ಸ್ ಎಲೆಕ್ಟ್ರಾನ್‌ಗಳು ನ್ಯೂಕ್ಲಿಯಸಿನಿಂದ ಬಹುದೂರದಲ್ಲಿರುವುದರಿಂದ ನ್ಯೂಕ್ಲಿಯಸ್‌ನ ಆಕರ್ಷಣೆ ತಪ್ಪಿ ಅವು ಮುಕ್ತ ಸ್ಥಿತಿಯಲ್ಲಿವೆ ಎನ್ನಬೇಕು. ಈ ಆಧಾರದ ಮೇಲೆ ಡ್ರೂಡ್, ಲೊರೆಂಟ್ಜ್ ಮತ್ತು ಇತರರು ಲೋಹಗಳ ಮುಕ್ತ ಎಲೆಕ್ಟ್ರಾನ್ ಅನಿಲ ಸಿದ್ಧಾಂತವನ್ನು ಮಂಡಿಸಿದ್ದಾರೆ. ಇದರ ಪ್ರಕಾರ ಲೋಹದಲ್ಲಿನ ಎಲ್ಲ ಪರಮಾಣುಗಳ ವೇಲೆನ್ಸ್ ಎಲೆಕ್ಟ್ರಾನ್‌ಗಳೂ ಮುಕ್ತಸ್ಥಿತಿಯಲ್ಲಿದ್ದು

ಲೋಹಜಾಲಕದಲ್ಲಿ ಸ್ವತಂತ್ರವಾಗಿ ಓಡಾಡುವ ಸಾಮರ್ಥ್ಯ ಪಡೆದಿದ್ದು ಲೋಹದ ಧನ ಅಯಾನ್‌ಗಳು ಈ ಎಲೆಕ್ಟ್ರಾನ್ ಸಾಗರದಲ್ಲಿನ ದ್ವೀಪಗಳಂತೆ ತೋರುತ್ತವೆಂದು ತಿಳಿದುಬರುತ್ತದೆ. ಮುಕ್ತ ಎಲೆಕ್ಟ್ರಾನ್ ಸಿದ್ಧಾಂತ ಲೋಹಘನಗಳ ವಿದ್ಯುದ್ವಾಹಕತ್ವ ಮತ್ತು ಬೆಳಕಿನ ಶಕ್ತಿ ಹೀರುವಿಕೆಗಳನ್ನು ಸಮಾಧಾನಕರವಾಗಿ ವಿವರಿಸಿದರೂ ಅದಕ್ಕೆ ಘನಗಳ ವಿಶಿಷ್ಟ ಉಷ್ಣ (ಸ್ಪೆಸಿಫಿಕ್ ಹೀಟ್), ಕಾಂತಗ್ರಾಹಕತ್ವ (ಮ್ಯಾಗ್ನೆಟಿಕ್ ಸಸೆಪ್ಟಿಬಿಲಿಟಿ) ಮತ್ತು ರೋಧಕಗುಣಗಳನ್ನು (ಇನ್ಸುಲೇಟರ್ ಪ್ರಾಪರ್ಟೀಸ್) ವಿವರಿಸುವ ಸಾಮರ್ಥ್ಯವಿಲ್ಲ. ಆದ್ದರಿಂದ ಕ್ವಾಂಟಮ್ ಸಿದ್ಧಾಂತ ಮತ್ತು ಪಾಲಿಬಹಿಷ್ಕರಣ ತತ್ತ್ವಗಳನ್ನು ಉಪಯೋಗಿಸಿಕೊಂಡು ಫರ್ಮಿ ಮುಂತಾದವರು ಘನಗಳ ಪಟ್ಟಿಸಿದ್ಧಾಂತವನ್ನು ಮಂಡಿಸಿದ್ದಾರೆ. ಈ ಸಿದ್ಧಾಂತದ ಪ್ರಕಾರ ಲೋಹದ ಪರಮಾಣುಗಳಲ್ಲಿರುವ s, p, d, f ಕಕ್ಷಕ ಎಲೆಕ್ಟ್ರಾನ್‌ಗಳು ಪರಸ್ಪರ ಅಧಿವ್ಯಾಪಿಸಿ (ಓವರ್‌ಲ್ಯಾಪ್), , s, p, d, f ಪಟ್ಟಿಗಳಾಗಿ ಪರಿವರ್ತನೆ ಹೊಂದುತ್ತವೆ.




ಒಂಟಿ ಪರಮಾಣುವಿನಲ್ಲಿರುವ ಎಲೆಕ್ಟ್ರಾನ್ ಶಕ್ತಿಮಟ್ಟಗಳು

ಘನದಲ್ಲಿ ಎಲೆಕ್ಟ್ರಾನ್ ಶಕ್ತಿಮಟ್ಟಗಳಿಂದಾದ ಶಕ್ತಿಪಟ್ಟಿಗಳು

ಚಿತ್ರ 4 (*b*) ಒಂಟಿಪರಮಾಣುವಿನಲ್ಲಿರುವ ಎಲೆಕ್ಟ್ರಾನ್ ಶಕ್ತಿಮಟ್ಟಗಳಿಗೂ ಘನದಲ್ಲಿರುವ ಎಲೆಕ್ಟ್ರಾನ್ ಶಕ್ತಿಪಟ್ಟಿಗಳಿಗೂ ಇರುವ ಹೋಲಿಕೆ

ಈ ಪಟ್ಟಿಗಳಲ್ಲಿ ಪಾಲೀ ಬಹಿಷ್ಕರಣ ತತ್ತ್ವಕ್ಕೆ ಅನುಸಾರವಾಗಿ s, ಪಟ್ಟಿಯಲ್ಲಿ 2, p ಪಟ್ಟಿಯಲ್ಲಿ 10 ಮತ್ತು f ಪಟ್ಟಿಯಲ್ಲಿ 14 ಎಲೆಕ್ಟ್ರಾನ್‌ಗಳಿರುತ್ತವೆ. ಪರಮಾಣು ಕಕ್ಷಕಗಳಿಂದ ಘನದಲ್ಲಿ ಶಕ್ತಿಪಟ್ಟಿಗಳು ಉಂಟಾಗುವುದನ್ನು ಚಿತ್ರ (a) ಯಲ್ಲಿ ತೋರಿಸಿದೆ. ಸಾಮಾನ್ಯವಾಗಿ ಈ ಪಟ್ಟಿಗಳ ಅಗಲ ಪರಮಾಣು ಕಕ್ಷಕಗಳು ಎಷ್ಟರಮಟ್ಟಿಗೆ ಪರಸ್ಪರ ಅಧಿವ್ಯಾಪಿತವಾಗುತ್ತವೆಂಬುದರ ಮೇಲೆ ಅವಲಂಬಿಸಿದೆ. ಈ ಅಧಿವ್ಯಾಪನೆ ಪರಮಾಣುವಿನ ನಿಮ್ನ ಶಕ್ತಿಮಟ್ಟಗಳಿಗೆ ಕಡಿಮೆಯಾಗಿದ್ದು ವೇಲೆನ್ಸ್ ಎಲೆಕ್ಟ್ರಾನ್ ಶಕ್ತಿಮಟ್ಟಗಳಿಗೆ ಹೆಚ್ಚಾಗಿರುತ್ತವೆ. ಘನದ ಶಕ್ತಿಪಟ್ಟಿಗಳನ್ನು ಬ್ರಿಲಾಯಿನ ವಲಯಗಳೆಂದೂ ಕರೆಯುವುದುಂಟು. ಘನವಸ್ತುವಿನ ಎಲೆಕ್ಟ್ರಾನುಗಳು ಅತ್ಯಂತ ಕಡಿಮೆ ಶಕ್ತಿ ಇರುವ ಶಕ್ತಿಮಟ್ಟಗಳಿಂದ ಪ್ರಾರಂಭಿಸಿ ಯಾವುದೋ ಒಂದು ನಿರ್ದಿಷ್ಟಮಟ್ಟದ ಅಂದರೆ ಫರ್ಮಿ ಮಟ್ಟದವರೆಗಿರುವ ಶಕ್ತಿಮಟ್ಟವೊಂದಕ್ಕೆ ಗಿರಕಿಗಳು ಜೊತೆಯಾಗಿರುವ ಎರಡು ಎಲೆಕ್ಟ್ರಾನುಗಳಂತೆ ತುಂಬಿಕೊಳ್ಳುತ್ತವೆ. ಉಷ್ಣತೆಯ ನಿರಪೇಕ್ಷ ಶೂನ್ಯದಲ್ಲಿ (O°K) ಕೆಳಗಿನ ಮಟ್ಟಗಳು ಭರ್ತಿಯಾಗಿಯೂ ಮೇಲಿನ ಮಟ್ಟಗಳು ಖಾಲಿಯಾಗಿಯೂ ಇರುವುವು. ಶೂನ್ಯವಲ್ಲದ ಉಷ್ಣತೆಗಳಲ್ಲಿ ($T \neq 0$) ಉಷ್ಣೀಯ ಏರಿಳಿತಗಳಿಂದ ಫರ್ಮಿಮಟ್ಟದ ಕೆಳಗಿನ ಕೆಲವು ಶಕ್ತಿಮಟ್ಟಗಳಲ್ಲಿನ ಎಲೆಕ್ಟ್ರಾನುಗಳು ಫರ್ಮಿಮಟ್ಟದ ಮೇಲಿನ ಶಕ್ತಿಮಟ್ಟಗಳಿಗೆ ಹೋಗಬಹುದು. ಘನವಸ್ತುವಿನ ಫರ್ಮಿಮಟ್ಟ ಶಕ್ತಿಪಟ್ಟಿಯೊಂದರ ಮಧ್ಯದಲ್ಲಿದ್ದರೆ ಅಥವಾ ಶಕ್ತಿಪಟ್ಟಿಗಳು ಪರಸ್ಪರ ಅಧಿವ್ಯಾಪಿತವಾಗಿದ್ದರೆ ಫರ್ಮಿ ಮಟ್ಟದ ಮೇಲೆ ಹೋದ ಎಲೆಕ್ಟ್ರಾನುಗಳಿಗೆ ಅವಿಚ್ಛಿನ್ನವಾದ ಅಸಂಖ್ಯಾತ ಶಕ್ತಿ ಮಟ್ಟಗಳು ಲಭಿಸಿ ಅವು ಹೆಚ್ಚು ಕಡಿಮೆ ಮುಕ್ತ ಎಲೆಕ್ಟ್ರಾನುಗಳಾಗುತ್ತವೆ. ಸಾಮಾನ್ಯವಾಗಿ ವೇಲನ್ಸ್ ಎಲೆಕ್ಟ್ರಾನುಗಳು ಫರ್ಮಿಮಟ್ಟದ ಬಳಿಯಲ್ಲಿಯೇ ಇದ್ದು ಘನದ ಗುಣಗಳಿಗೆ ಅನುಗುಣವಾಗಿ ಪೂರ್ಣ ಅಥವಾ ಅಪೂರ್ಣವಾಗಿ ತುಂಬಿರುತ್ತವೆ. ಇದರಿಂದ ಘನ ಅವಾಹಕವೋ ಅರೆವಾಹಕವೋ ಅಥವಾ ಲೋಹವೋ ಎಂಬುದನ್ನು ನಿರ್ಧರಿಸಬಹುದು. ಘನದ ಎಲ್ಲ ಪಟ್ಟಿಗಳೂ ಪೂರ್ಣವಾಗಿ ತುಂಬಿದ್ದಲ್ಲಿ ಅದು ಅವಾಹಕವಾಗುತ್ತದೆ. ಆಗ ಈ ಘನದಲ್ಲಿ ವಿದ್ಯುತ್ತನ್ನು ಹರಿಸಲು ಪ್ರಯತ್ನಿಸಿದಲ್ಲಿ ವಿದ್ಯುತ್ ಹರಿಯುವ ದಿಶೆಯಲ್ಲೂ ಚಲಿಸುವುದರಿಂದ ಮೊತ್ತದಲ್ಲಿ ಬದಲಾವಣೆಯಾಗುವುದಿಲ್ಲ, ಆದ್ದರಿಂದ ಅದರಲ್ಲಿ ವಿದ್ಯುತ್ ಹರಿಯುವುದಿಲ್ಲ. ಆದರೆ ಲೋಹಘನಗಳಲ್ಲಿ ವೇಲೆನ್ಸ್ ಪಟ್ಟಿ ಅಪೂರ್ಣವಾಗಿರುವುದರಿಂದ ವಿದ್ಯುತ್ ಹರಿಯುವ ದಿಶೆಯಲ್ಲಿ ಎಲೆಕ್ಟ್ರಾನುಗಳು ಚಲಿಸುತ್ತವೆ. ಇನ್ನು ಕೆಲವು ಲೋಹಗಳಲ್ಲಿ ವೇಲೆನ್ಸ್ ಪಟ್ಟಿ ಪೂರ್ಣವಾಗಿ ತುಂಬಿದ್ದರೂ ಅದರ ಮೇಲಿನ ಖಾಲಿ ವಿದ್ಯುದ್ವಾಹಕತ್ವ ಪಟ್ಟಿ ಅಧಿವ್ಯಾಪಿತವಾಗಿರುವುದರಿಂದ ವಿದ್ಯುದ್ವಾಹಕತ್ವಕ್ಕೆ ಅವಕಾಶವಿದೆ. ಅರೆವಾಹಕಗಳ ವೇಲೆನ್ಸ್ ಪಟ್ಟಿಯಲ್ಲಿ ಕೇವಲ ಕೆಲವೇ ಎಲೆಕ್ಟ್ರಾನ್‌ಗಳಿರುವುದರಿಂದ ವಿದ್ಯುದ್ವಾಹಕತ್ವ ಅತಿಕ್ಷೀಣವಾಗಿರುತ್ತದೆ. ಇವುಗಳ ವಿವರಣೆಯನ್ನು ಚಿತ್ರದಲ್ಲಿ 5(a)ಯಲ್ಲಿ ತೋರಿಸಿದೆ.



ಚಿತ್ರ 5 (*a*) ಅವಾಹಕಕ್ಕೆ ಉದಾಹರಣೆಗೆ ವಜ್ರ, ವೇಲೆನ್ಸ್‌ಪಟ್ಟಿ ಭರ್ತಿಯಾಗಿದೆ; ಎರಡನೆಯ ಪಟ್ಟಿಗೆ ಬಹಿಷ್ಕೃತ ಪ್ರದೇಶವನ್ನು ಹಾಯ್ದುಹೋಗಬೇಕು. ಅರೆವಾಹಕಕ್ಕೆ ಉದಾಹರಣೆ Sc ಮತ್ತು $Cu_2O$. ವೇಲೆನ್ಸ್‌ಪಟ್ಟಿ ಭರ್ತಿಯಾಗಿದೆ; ಶಕ್ತಿತೆರಪು ಚಿಕ್ಕದಿದೆ; ಸ್ವಲ್ಪ ಹೆಚ್ಚಿನ ಉಷ್ಣತೆಯಲ್ಲಿ ಎಲೆಕ್ಟ್ರಾನುಗಳು ಎರಡನೆಯ ಅಥವಾ ವಿದ್ಯುದ್ವಾಹಕಪಟ್ಟಿಗೆ ಮರೆಹೋಗಬಲ್ಲವು. ವಿದ್ಯುದ್ವಾಹಕ (I)ಕ್ಕೆ ಉದಾಹರಣೆ– ಕ್ಷಾರಲೋಹಗಳು, Au Ag ಮತ್ತು Bu. ಪಟ್ಟಿ ಅರ್ಧ ತುಂಬಿದೆ. ವಿದ್ಯುದ್ವಾಹಕ (II)ಕ್ಕೆ ಉದಾಹರಣೆ–ಕ್ಷಾರ ಭಸ್ಮಲೋಹಗಳು. ಮೊದಲನೆಯ ಪಟ್ಟಿ ತುಂಬಿದೆ; ಎರಡನೆಯ ಪಟ್ಟಿ ಮೊದಲನೆಯದರ ಮೇಲೆ ಆಚ್ಛಾದಿಸಿದೆ

ಎರಡು ಪಟ್ಟಿಗಳ ಮಧ್ಯದಲ್ಲಿ ಶಕ್ತಿ ತೆರಪುಗಳು (ಎನರ್ಜಿ ಗ್ಯಾಪ್ಸ್) ಇರುವುದನ್ನು ಚಿತ್ರ 5(b)ಯಲ್ಲಿ ಕಾಣಬಹುದು. ಈ ಶಕ್ತಿ ತೆರಪುಗಳು ಲೋಹಗಳಲ್ಲಿ ಕಿರಿದಾಗಿದ್ದು ಅವಾಹಕಗಳಲ್ಲಿ ಮಾತ್ರ ಹಲವಾರು ಎಲೆಕ್ಟ್ರಾನ್ ವೋಲ್ಟುಗಳಷ್ಟಿರುತ್ತದೆ. ಅವಾಹಕಗಳ ಉಷ್ಣತೆಯನ್ನು ಹೆಚ್ಚಿಸಿದಾಗ ಅವುಗಳಲ್ಲಿನ ವೇಲೆನ್ಸ್ ಎಲೆಕ್ಟ್ರಾನ್‌ಗಳು ಈ ಶಕ್ತಿ ತೆರಪುಗಳನ್ನು ಹಾಯ್ದು ಅವುಗಳ ಮೇಲಿರುವ ಶೂನ್ಯಪಟ್ಟಿಗೆ (ವಿದ್ಯುದ್ವಾಹಕಪಟ್ಟಿ) ಲಂಘಿಸಬಲ್ಲವು. ಆಗ ಅವಾಹಕವು ವಿದ್ಯುದ್ವಾಹಕವಾಗಿ ಮಾರ್ಪಾಡುತ್ತದೆ. ಹೀಗೆ ಆವರ್ತಕೋಷ್ಟಕದಲ್ಲಿ ಲೋಹದ ಗುಂಪುಗಳ ಗುಣವ್ಯತ್ಯಾಸಗಳನ್ನು ಅವುಗಳ ಪಟ್ಟಿರಚನೆಗಳಿಂದ ವಿವರಿಸಬಹುದು.




ಚಿತ್ರ 5 (*b*) ಸೋಡಿಯಮ್ ಮತ್ತು ನಿಯಾನ್ ಘನಗಳಲ್ಲಿರುವ ಶಕ್ತಿಪಟ್ಟಿಗಳು

ಕ್ಷಾರಲೋಹಗಳಲ್ಲಿ ಪ್ರತಿಯೊಂದು ಪರಮಾಣುವಿಗೂ ಒಂದೇ ಒಂದು s ಕಕ್ಷಕ ವೇಲೆನ್ಸ್ ಎಲೆಕ್ಟ್ರಾನ್ ಇರುವುದರಿಂದ ವಿಶಾಲವಾಗಿರುವ ಶಕ್ತಿಪಟ್ಟಿ ಅರ್ಧದ ಮಟ್ಟಿಗೆ ತುಂಬುತ್ತದೆ. ಕ್ಷಾರಭಸ್ಮ ಲೋಹಗಳಲ್ಲಿ (ಆಲ್ಕಲೈನ್ ಅರ್ತ್ ಮೆಟಲ್ಸ್) ಎರಡು s ಕಕ್ಷಕ ವೇಲೆನ್ಸ್ ಎಲೆಕ್ಟ್ರಾನುಗಳಿದ್ದು ಘನದಲ್ಲಿ s ಶಕ್ತಿಪಟ್ಟಿ ಪೂರ್ಣವಾಗಿ ತುಂಬಿರುತ್ತದೆ. ಅಂದರೆ ಈ ಲೋಹಗಳು ಅವಾಹಕಗಳಾಗಬೇಕು. ಆದರೆ ಪಟ್ಟಿಯ ಮೇಲಿರುವ ಶೂನ್ಯ p ಮತ್ತು d ಪಟ್ಟಿಗಳು ಈ ಪಟ್ಟಿಯನ್ನು ಅಧಿವ್ಯಾಪಿಸಿರುವುದರಿಂದ ಈ ಲೋಹಗಳು ವಿದ್ಯುದ್ವಾಹಕಗಳಾಗಿರುತ್ತವೆ. ಏಕವೇಲೆನ್ಸೀಯ ತಾಮ್ರ, ಬೆಳ್ಳಿ ಮತ್ತು ಚಿನ್ನಗಳಲ್ಲಿ d ಎಲೆಕ್ಟ್ರಾನ್ ಪಟ್ಟಿಗಳು ಪೂರ್ಣವಾಗಿ ತುಂಬಿದ್ದು ಅವು ಒಂದೇ ಒಂದು s ವೇಲೆನ್ಸ್

ಎಲೆಕ್ಟ್ರಾನ್ ಇರುವ s ಪಟ್ಟಿಯನ್ನು ಅಧಿವ್ಯಾಪಿಸಿರುವುದರಿಂದ d ಎಲೆಕ್ಟ್ರಾನ್‌ಗಳು ವಿದ್ಯುದ್ವಾಹಕತ್ವ ಕಾರ್ಯದಲ್ಲಿ ಭಾಗವಹಿಸುತ್ತವೆ. ಸಂಕ್ರಮಣ ಧಾತುಗಳಲ್ಲಿ (ಟ್ರಾನ್ಸಿಷನ್ ಎಲಿಮೆಂಟ್ಸ್) ಪಟ್ಟಿಗಳು ಅಪೂರ್ಣವಾಗಿದ್ದು ಮೇಲಿರುವ ಶೂನ್ಯ s ಪಟ್ಟಿಗಳಿಗೆ ಅಧಿವ್ಯಾಪಿತವಾಗಿರುತ್ತವೆ. ಇಂಥ ರಚನೆಯಿಂದ ಈ ಲೋಹಗಳಿಗೆ ಕಾಂತತ್ವ ಉಂಟಾಗುತ್ತದೆ.

ಘನಗಳಲ್ಲಿರುವ ದೋಷಗಳು : ಘನಗಳ ಕುತೂಹಲಜನಕ ಗುಣಗಳು ಅವುಗಳಲ್ಲಿರುವ ದೋಷಗಳ ದೆಸೆಯಿಂದ ಉಂಟಾಗುತ್ತವೆ. ಸಾಮಾನ್ಯವಾಗಿ ಒಂದು ಆದರ್ಶ ಸ್ಫಟಿಕದಲ್ಲಿ ಕೂಡ ಸುಮಾರು 106 ದೋಷಗಳಿವೆಯೆಂದು ಅಂದಾಜು ಮಾಡಲಾಗಿದೆ. ಈ ದೋಷಗಳು 00K ಮೇಲಿನ ಉಷ್ಣತೆಯಲ್ಲಿ ಉಷ್ಣೀಯ ಮಟ್ಟದ ವ್ಯತ್ಯಾಸಗಳಿಂದ ಉಂಟಾಗಿದ್ದಲ್ಲಿ ಅವನ್ನು ಮೂಲದೋಷಗಳೆಂದು ಕರೆಯುತ್ತಾರೆ. ಸ್ಫಟಿಕವನ್ನು ವಿಕಿರಣಕ್ಕೊಳಪಡಿಸಿದಾಗ (ಇರ್ರೇಡಿಯೇಷನ್) ಇಲ್ಲವೆ ಅಶುದ್ಧತೆಗಳನ್ನು ಬೇಕೆಂದೇ ಸ್ಫಟಿಕಕ್ಕೆ ಬೆರೆಸಿದಾಗ ಈ ದೋಷಗಳು ಉತ್ಪತ್ತಿಯಾಗಬಹುದು.

ಸ್ಫಟಿಕದಲ್ಲಿ ಓಡಾಡುವ ಮುಕ್ತ ಎಲೆಕ್ಟ್ರಾನ್‌ಗಳನ್ನೂ ಅವುಗಳಿಂದ ಉಂಟಾದ ರಂಧ್ರಗಳನ್ನೂ ಸ್ಫಟಿಕ ದೋಷಗಳೆಂದು ಪರಿಗಣಿಸುತ್ತಾರೆ. ಸಾಮಾನ್ಯವಾಗಿ ಒಂದು ಆದರ್ಶಸ್ಫಟಿಕದಲ್ಲಿ 00K ಉಷ್ಣತಾಮಟ್ಟದಲ್ಲಿ ಎಲ್ಲ ಎಲೆಕ್ಟ್ರಾನ್‌ಗಳೂ ಅತಿ ಕೆಳಗಿನ ಶಕ್ತಿಮಟ್ಟದಲ್ಲಿ ಇರಬೇಕೆಂದು ನಿರೀಕ್ಷಿಸುತ್ತೇವೆ. ಆದರೆ ಉಷ್ಣತೆ 00K ಹೆಚ್ಚಾದಾಗ ವೇಲೆನ್ಸ್ ಪಟ್ಟಿಯಲ್ಲಿರುವ ಎಲೆಕ್ಟ್ರಾನ್‌ಗಳು ಅದರ ಮೇಲಿನ ಶೂನ್ಯ ವಿದ್ಯುದ್ವಾಹಕ ಪಟ್ಟಿಗೆ ಲಂಘಿಸಿ ಸ್ಫಟಿಕ ವಿದ್ಯುದ್ವಾಹಕ ವಾಗುವಂತೆ ಪರಿವರ್ತಿಸುತ್ತವೆ. ವೇಲೆನ್ಸ್ ಪಟ್ಟಿಯಿಂದ ವರ್ಗಾವಣೆಯಾದ ಎಲೆಕ್ಟ್ರಾನ್‌ಗಳ ಸ್ಥಾನಗಳಿಗೆ ರಂಧ್ರಗಳು ಎಂದು ಹೆಸರು. ಇಂಥ ಸ್ಫಟಿಕದಲ್ಲಿ ವಿದ್ಯುತ್ತನ್ನು ಹರಿಸಿದಲ್ಲಿ ವಿದ್ಯುದ್ವಾಹಕ ಪಟ್ಟಿಯಲ್ಲಿರುವ ವೇಲೆನ್ಸ್ ಎಲೆಕ್ಟ್ರಾನ್‌ಗಳು ವಿದ್ಯುತ್ ಹರಿಯುವ ದಿಶೆಯಲ್ಲಿ ಚಲಿಸಿ ರಂಧ್ರಗಳು ವಿರುದ್ಧ ದಿಶೆಯಲ್ಲಿ ಹರಿಯುವಂತೆ ಭಾಸವಾಗುತ್ತದೆ. ಅಂದರೆ ರಂಧ್ರಗಳು ಧನವಿದ್ಯುದಾವೇಶವನ್ನು ಪಡೆದಿವೆ ಎಂದು ತಿಳಿದುಕೊಳ್ಳಬಹುದು.

ಸ್ಫಟಿಕದೋಷಗಳಲ್ಲಿ ಪರಮಾಣು ದೋಷಗಳೂ ಸೇರಿಕೊಂಡಿವೆ. ಪರಮಾಣು ದೋಷಗಳಲ್ಲಿ ಮುಖ್ಯವಾದುವೆಂದರೆ ಬಿಂದುದೋಷಗಳು, ರೇಖಾದೋಷಗಳು ಮತ್ತು ಸಮತಲದೋಷಗಳು. ಬಿಂದು ದೋಷಗಳಲ್ಲಿ ಫ್ರೆಂಕಲ್ ಮತ್ತು ಷಾಟ್ಕಿ ದೋಷಗಳನ್ನು ಅಧ್ಯಯನ ಮಾಡಬಹುದು. ಸ್ಫಟಿಕದೊಳಗೆ ಕ್ರಮಬದ್ಧ ರಚನೆಯಲ್ಲಿರುವ ಪರಮಾಣು ಸಮೂಹದಿಂದ ಯಾವುದಾದರೂ ಒಂದು ಪರಮಾಣು ಸ್ವಸ್ಥಾನದಿಂದ ಪಲ್ಲಟಹೊಂದಿ ಪರಮಾಣು ಸಾಲುಗಳ ಮಧ್ಯದಲ್ಲಿ ಬಂದು ನಿಂತರೆ ಅದಕ್ಕೆ ಫ್ರೆಂಕಲ್ ದೋಷವೆಂದು ಹೆಸರು. ಆದರೆ ಅದು ಸ್ಫಟಿಕದ ಮೇಲ್ಮೈ ಪ್ರದೇಶಕ್ಕೆ ಬಂದಲ್ಲಿ ಆಗ ಷಾಟ್ಕಿದೋಷ ಉಂಟಾಗುತ್ತದೆ. ಈ ಬದಲಾವಣೆಗಳು ಅಯಾನಿಕ್ ಸ್ಫಟಿಕವೊಂದರಲ್ಲಿ ಉಂಟಾದಾಗ ಪಲ್ಲಟ ಹೊಂದಿನ ಅಯಾನಿನ ಸ್ಥಾನದಲ್ಲಿ ವಿರುದ್ಧ ವಿದ್ಯುದಾವೇಶ ಉಂಟಾಗುತ್ತದೆ. ಉದಾಹರಣೆಗೆ ಸೋಡಿಯಮ್ ಕ್ಲೋರೈಡ್ ಸ್ಫಟಿಕದಲ್ಲಿ ಸೋಡಿಯಮ್ ಅಯಾನ್ ಸ್ಥಾನಪಲ್ಲಟ ಹೊಂದಿದರೆ ಅದರ ಸ್ಥಾನ ಋಣ ವಿದ್ಯುದಾವೇಶವನ್ನು ಪಡೆಯುತ್ತದೆ. ಈ ಸ್ಥಿತಿ ಕ್ಲೋರೈಡಿಗೆ ಉಂಟಾದರೆ ಅದರ ಸ್ಥಾನದಲ್ಲಿ ಧನವಿದ್ಯುದಾವೇಶ ಉಂಟಾಗುತ್ತದೆ.




ಚಿತ್ರ 6. ಆದರ್ಶ ಅಯಾನಿಕ್ ಸ್ಫಟಿಕವನ್ನು (*a*)ಯಲ್ಲೂ ಫ್ರೆಂಕಲ್ ದೋಷವನ್ನು (*b*)ಯಲ್ಲೂ ಷಾಟ್ಕಿದೋಷವನ್ನು (*c*)ಯಲ್ಲೂ ತೋರಿಸಿದೆ

ರೇಖಾದೋಷಗಳನ್ನು ಸ್ಥಾನಪಲ್ಲಟಗಳೆಂದು (ಡಿಸ್‌ಲೋಕೇಷನ್) ಕರೆಯಬಹುದು. ಸ್ಫಟಿಕದಲ್ಲಿನ ಪರಮಾಣು ಅಥವಾ ಅಯಾನುಗಳ ಸಮತಲಗಳು ಸ್ಥಾನಪಲ್ಲಟ ಹೊಂದಿದಾಗ ಈ ದೋಷಗಳು ಉಂಟಾಗುತ್ತವೆ. ಈ ಸ್ಥಾನಪಲ್ಲಟ ಅಂಚಿನಲ್ಲಿದ್ದರೆ ಅದನ್ನು ಟೇಲರ್–ಆರೋವಾನ್ ಅಥವಾ ಅಂಚು ಸ್ಥಾನಪಲ್ಲಟ ಎಂದೂ, ಅದು ಒಂದು ತಿರುಪಿನ ರೂಪದಲ್ಲಿದ್ದರೆ ಅದನ್ನು ಬರ್ಗರ್ ಅಥವಾ ತಿರುಪು ಸ್ಥಾನಪಲ್ಲಟವೆಂದೂ ಕರೆಯುತ್ತಾರೆ. ಈ ದೋಷಗಳನ್ನು ಚಿತ್ರ 6 ಮತ್ತು 7ರಲ್ಲಿ ತೋರಿಸಿದೆ. ಸ್ಫಟಿಕದಲ್ಲಿ ಸಮತಲ ದೋಷಗಳಿದ್ದಲ್ಲಿ ಆಗ ಸ್ಫಟಿಕೀಯ ಮೇಲ್ಮೈ ತರಿತರಿಯಾಗಿ ಇರುತ್ತದೆ. ಅಥವಾ ಮಚ್ಚೆ ಅಂಚುಗಳಿಂದ ಕೂಡಿರುತ್ತದೆ. ಇದನ್ನು ಚಿತ್ರ (8)ರಲ್ಲಿ ತೋರಿಸಿದೆ.

ಫ್ರೆಂಕಲ್ ಮತ್ತು ಷಾಟ್ಕಿ ದೋಷಗಳು ಉಂಟಾದಾಗ ಪಲ್ಲಟ ಹೊಂದಿದ ಋಣ ಅಯಾನ್‌ನ ಸ್ಥಾನಗಳು ಧನ ವಿದ್ಯುದಾವೇಶ ಪಡೆದಿರುವುದರಿಂದ ಸ್ಫಟಿಕದಲ್ಲಿ ಮುಕ್ತ ಎಲೆಕ್ಟ್ರಾನ್‌ಗಳು ಚಲಿಸುವಾಗ ಈ ಸ್ಥಾನಗಳ ಆಕರ್ಷಣೆಗೆ ಒಳಪಟ್ಟು ಬಂಧಿಸಲ್ಪಡುವ ಸಾಧ್ಯತೆ ಉಂಟು. ಹೈಡ್ರೋಜನ್‌ನ ಪರಮಾಣುವಿಗೆ ಸಮವಾಗಿರುವ ಈ ವ್ಯವಸ್ಥೆಗೆ ವರ್ಣಕೇಂದ್ರ ಅಥವಾ F ಕೇಂದ್ರವೆಂದು ಹೆಸರು. F ಕೇಂದ್ರಗಳ ಉತ್ಪತ್ತಿಯಿಂದ ಸ್ಫಟಿಕ ವರ್ಣಮಯವಾಗುವುದುಂಟು.




ಚಿತ್ರ 7. ಅಂಚು ಸ್ಥಾನಪಲ್ಲಟವನ್ನು (*a*)ಯಲ್ಲೂ ತಿರುಪುಸ್ಥಾನಪಲ್ಲಟವನ್ನು (*b*)ಯಲ್ಲೂ ತೋರಿಸಿದೆ

ಒಂದು ವೇಳೆ ಎರಡು ಎಲೆಕ್ಟ್ರಾನ್‌ಗಳು ಒಟ್ಟಿಗೆ ಒಂದು ಋಣ ಅಯಾನ್‌ನ ಸ್ಥಾನದಲ್ಲಿ ಬಂಧಿಸಲ್ಪಟ್ಟಾಗ F' ಕೇಂದ್ರ ಉತ್ಪತ್ತಿಯಾಗುತ್ತದೆ.



ಚಿತ್ರ 8. ಘನದ ಮೇಲ್ಮೈಯಲ್ಲಿರುವ ಮಚ್ಚೆ ಅಂಚುಗಳು

ಇದೇ ರೀತಿ ಧನವಿದ್ಯುದಾವಿಷ್ಟ ರಂಧ್ರಗಳು ಧನ ಅಯಾನ್‌ನ ಸ್ಥಾನದಲ್ಲಿ ಬಂಧಿಸಲ್ಪಟ್ಟಾಗ ಗಿ ಕೇಂದ್ರಗಳು ಉತ್ಪತ್ತಿಯಾಗುತ್ತವೆ. ಇವುಗಳ ಉತ್ಪತ್ತಿಯ ಸಾರಾಂಶವನ್ನು ಈ ಕೆಳಗೆ ಕೊಟ್ಟಿದೆ:

V1 ಕೇಂದ್ರ : ಧನ ಅಯಾನ್ ಸ್ಥಾನಕ್ಕೆ ಒಂದು ರಂಧ್ರ ಬಂಧಿಸಲ್ಪಟ್ಟಿರುವುದು.

V3 ಕೇಂದ್ರ : ಒಂದು ಜೊತೆ ಧನ ಅಯಾನ್ ಸ್ಥಾನಗಳಿಗೆ ಒಂದು ರಂಧ್ರ ಬಂಧಿಸಲ್ಪಟ್ಟಿರುವುದು.

V2 ಕೇಂದ್ರ : ಒಂದು ಜೊತೆ ಧನ ಅಯಾನ್ ಸ್ಥಾನಗಳಿಗೆ ಒಂದು ಜೊತೆ ರಂಧ್ರಗಳು ಬಂಧಿಸಲ್ಪಟ್ಟಿರುವುವು.




ಚಿತ್ರ 9 (*a*). ಪೊಟ್ಯಾಸಿಯಮ್ ಕ್ಲೋರೈಡಿನಲ್ಲಿ ಉತ್ಪತ್ತಿಯಾಗುವ *F* ಮತ್ತು *F'* ಪಟ್ಟಿಗಳು. *F* ಪಟ್ಟಿಯ ರೂಪವನ್ನು *A* ರೇಖೆಯೂ *F* ಪಟ್ಟಿಗೆ ಅನುಗುಣವಾದ ಘನವನ್ನು ವಿಕಿರಣನ ಮಾಡಿದಾಗ *F* ಪಟ್ಟಿಯ ಕುಗ್ಗಿದ ಸ್ಥಿತಿಯನ್ನು *B* ರೇಖೆಯೂ *F'* ಪಟ್ಟಿಯ ಉತ್ಪತ್ತಿಯನ್ನು (ವಿಕಿರಣನ ಆದ ಮೇಲೆ) *C* ರೇಖೆಯೂ ಸೂಚಿಸುತ್ತವೆ

V4 ಕೇಂದ್ರ : ಒಂದು ರಂಧ್ರ ಎರಡು ಧನ ಅಯಾನ್ ಸ್ಥಾನಗಳು ಮತ್ತು ಒಂದು ಋಣ ಅಯಾನ್ ಸ್ಥಾನವಿರುವ ವ್ಯವಸ್ಥೆಯಲ್ಲಿ ಬಂಧಿಸಲ್ಪಟ್ಟಿರುವುದು.

ಈ ಕೇಂದ್ರಗಳ ಅಧ್ಯಯನವನ್ನು ಮಾಡಲು ರೋಹಿತಮಾಪಿಯನ್ನು ಉಪಯೋಗಿಸಬೇಕು. ಅದರಿಂದ ಕಂಡುಹಿಡಿಯಲ್ಪಟ್ಟ F ಮತ್ತು F' ಪಟ್ಟೆಗಳನ್ನು ಚಿತ್ರ 9(b)ಲ್ಲಿ ತೋರಿಸಿದೆ. F ಪಟ್ಟೆ ಪ್ರಯೋಗಶಾಲೆಯ ಉಷ್ಣತೆಯಲ್ಲಿ ಭದ್ರವಾಗಿರುತ್ತದೆ. F' ಕೇಂದ್ರಗಳು F ಕೇಂದ್ರಗಳಿಂದ ಉತ್ಪತ್ತಿಯಾಗುವುದರಿಂದ ಇವು ನಿಮ್ನ ಉಷ್ಣತೆಗಳಲ್ಲಿ ಭದ್ರವಾಗಿದ್ದು ಪ್ರಯೋಗಶಾಲೆಯ ಉಷ್ಣತೆಯಲ್ಲಿ ಪ್ರತಿಯೊಂದು F' ಕೇಂದ್ರ ಎರಡು F ಕೇಂದ್ರಗಳಾಗಿ ಮಾರ್ಪಡುತ್ತವೆ. ಪೊಟ್ಯಾಸಿಯಮ್ ಕ್ಲೋರೈಡ್ ಉದಾಹರಣೆ ತೆಗೆದುಕೊಂಡು ಈ ವಿದ್ಯಮಾನವನ್ನು ತೋರಿಸಬಹುದು.




ಚಿತ್ರ 9 (*b*)

ಸ್ಫಟಿಕದಲ್ಲಿ F ಕೇಂದ್ರಗಳನ್ನು ಉತ್ಪತ್ತಿಮಾಡಲು ಸ್ಫಟಿಕವನ್ನು ಅಯಾನೀಕರಿಸುವ ವಿಕಿರಣಗಳಿಂದ (ಅಯನೈಸಿಂಗ್ ರೇಡಿಯೇಷನ್ಸ್) ವಿಕಿರಣನ ಮಾಡಬೇಕು; ಇಲ್ಲವೇ ಕ್ಷಾರಲೋಹ ಹ್ಯಾಲೈಡುಗಳಾಗಿದ್ದಲ್ಲಿ ಆ ಕ್ಷಾರಲೋಹದ ಆವಿಯಲ್ಲಿ ಕಾಯಿಸಬೇಕು. ಇವೆರಡು ವಿಧಾನಗಳಿಂದಲೂ ಮುಕ್ತ ಎಲೆಕ್ಟ್ರಾನ್‌ಗಳು ಉಂಟಾಗಿ F ಕೇಂದ್ರಗಳನ್ನು ಉಂಟುಮಾಡುತ್ತವೆ.

ಎಷ್ಟೋ ಬಾರಿ ಹೊರಗಿನ ಅಶುದ್ಧತೆಯ ಪರಮಾಣುಗಳನ್ನು ಸ್ಫಟಿಕಕ್ಕೆ ಬೆರೆಸುವುದರಿಂದ ಸ್ಫಟಿಕದೋಷಗಳು ಉತ್ಪತ್ತಿಯಾಗುತ್ತವೆ. ಉದಾಹರಣೆಗೆ ಸಿಲಿಕಾನ್ ಸ್ಫಟಿಕಕ್ಕೆ ಅಲ್ಯೂಮಿನಿಯಮ್ ಲೋಹವನ್ನು ಬೆರೆಸಿದಲ್ಲಿ ಸಿಲಿಕಾನಿನಲ್ಲಿ ನಾಲ್ಕು ವೇಲೆನ್ಸ್ ಎಲೆಕ್ಟ್ರಾನ್‌ಗಳಿದ್ದು ಆಲ್ಯೂಮಿನಿಯಮ್ ಪರಮಾಣುವಿನಲ್ಲಿ ಮೂರು ಮಾತ್ರವೇ ಇರುವುದರಿಂದ ಈ ನಾಲ್ಕನೆಯ ಎಲೆಕ್ಟ್ರಾನ್‌ನ ಋಣ ವಿದ್ಯುದಾವೇಶವನ್ನು ತಟಸ್ಥಗೊಳಿಸಲು ಸ್ಫಟಿಕದಲ್ಲಿ ಒಂದು ರಂಧ್ರ ಉತ್ಪತ್ತಿಯಾಗಬೇಕಾಗುತ್ತದೆ. ಒಂದು ವೇಳೆ ಐದು ವೇಲೆನ್ಸ್ ಎಲೆಕ್ಟ್ರಾನ್‌ಗಳಿರುವ ಫಾಸ್ಫರಸನ್ನು ಸಿಲಿಕಾನ್ ಸ್ಫಟಿಕಕ್ಕೆ ಬೆರೆಸಿದಲ್ಲಿ ಈ ಐದನೆಯ ವೇಲೆನ್ಸ್ ಎಲೆಕ್ಟ್ರಾನ್ ಫಾಸ್ಫರಸಿನ ಪರಮಾಣುವಿಗೆ ಧನ ವಿದ್ಯುದಾವೇಶ ಬರುವಂತೆ ಮಾಡಿ ಮುಕ್ತ ವಿದ್ಯುದ್ವಾಹಕ ಎಲೆಕ್ಟ್ರಾನ್ ರೂಪದಿಂದ ಸ್ಫಟಿಕದಲ್ಲಿ ಚಲಿಸಲಾರಂಭಿಸುತ್ತದೆ.

ಈ ಮೇಲಿನ ದೋಷಗಳ ಜೊತೆಗೆ ಫೋನಾನ್ ಮತ್ತು ಎಕ್ಸೈಟಾನುಗಳನ್ನು ಅಪೂರ್ಣತೆ ಅಥವಾ ದೋಷಗಳೆಂದೇ ತಿಳಿಯಬೇಕು. ಫೋನಾನ್ ಎನ್ನುವುದು ಕ್ವಾಂಟಮ್ ನಿಯಮಗಳಿಗೆ ಒಳಪಟ್ಟಿರುವ ಜಾಲಕ ಕಂಪನ. ಎಲೆಕ್ಟ್ರಾನ್ ಶಕ್ತಿಮಟ್ಟಗಳಂತೆಯೇ ಜಾಲಕ ಕಂಪನಗಳು ಕೂಡ ಕ್ವಾಂಟಮ್ ನಿಯಮಗಳಿಗೆ ಒಳಪಟ್ಟು ಕಂಪನ ಶಕ್ತಿ ಅವಿಚ್ಛಿನ್ನವಲ್ಲದ ಮೌಲ್ಯಗಳಲ್ಲಿ ಮಾತ್ರ ಬದಲಾವಣೆಯಾಗುತ್ತವೆ. ಪ್ರತಿಯೊಂದು ಘನದ ಫೋನಾನುಗಳು ಒಂದು ವಿಶಿಷ್ಟ ಉಷ್ಣ ಮತ್ತು ಇತರ ಭೌತರಸಾಯನಿಕ ವಿಚಾರಗಳನ್ನು ಗೊತ್ತುಮಾಡಲು ಸಹಾಯ ಮಾಡುತ್ತದೆ. ಎಕ್ಸೈಟಾನುಗಳನ್ನು ಎಲೆಕ್ಟ್ರಾನಿನ ಉದ್ರೇಕ ಸ್ಥಿತಿಯೆಂದು ತಿಳಿದುಕೊಳ್ಳಬಹುದು ಸಹವೇಲೆಂಟ್ ಅಥವಾ ಅಯಾನಿಕ್ ಸ್ಫಟಿಕಗಳಲ್ಲಿ ಎಕ್ಸೈಟಾನ್ ವಿದ್ಯುದ್ವಾಹಕ ಪಟ್ಟೆಯ ಎಲೆಕ್ಟ್ರಾನ್ ಮತ್ತು ರಂಧ್ರಗಳು ಸಡಿಲವಾಗಿ ಬಂಧಿಸಲ್ಪಟ್ಟಿರುವ ಒಂದು ರಚನೆಗೆ ಸಮವಾಗಿರುತ್ತದೆ. ಇದನ್ನು ಹೈಡ್ರೋಜನ್ ಪರಮಾಣುವಿನ ಉದ್ರೇಕಸ್ಥಿತಿಗೂ ಹೋಲಿಸಬಹುದು. ಅಂದರೆ ಇಲ್ಲಿ ಪ್ರೋಟಾನ್ ಮತ್ತು ಎಲೆಕ್ಟ್ರಾನ್ ಇನ್ನೂ ಒಂದಕ್ಕೊಂದು ಬಂಧಿಸಲ್ಪಟ್ಟಿರುತ್ತವೆ. ಸ್ಫಟಿಕದಲ್ಲಿ ಎಕ್ಸೈಟಾನುಗಳ ಚಲನೆ ರಂಧ್ರ ಎಲೆಕ್ಟ್ರಾನ್ ಜೋಡಿಯ ವಿಸರಣದಿಂದಾಗಲಿ (ಡಿಫ್ಯೂಷನ್) ಅಣು ಉದ್ರಿಕ್ತಶಕ್ತಿಯನ್ನು ಬೇರೊಂದು ಅಣುವಿಗೆ ವರ್ಗಾವಣೆ ಮಾಡುವುದರಿಂದಾಗಲಿ ಉಂಟಾಗುತ್ತದೆ.

ಅಯಾನಿಕ್ ಸ್ಫಟಿಕಗಳಲ್ಲಿ ಮಂದವಾಗಿ ಚಲಿಸುವ ಎಲೆಕ್ಟ್ರಾನುಗಳಿಂದ ಸ್ಥಳೀಯ ಧ್ರುವೀಭವನ ಉಂಟಾಗಬಹುದು. ಇದರಿಂದ ಉಂಟಾದ ಎಲೆಕ್ಟ್ರಾನ್ – ಫೋನಾನ್ ಜೋಡಿಗೆ ಪೋಲರಾನ್ ಎಂದು ಕರೆಯುವುದುಂಟು. ಅಣು ಸ್ಫಟಿಕದಲ್ಲಿ ಅಕ್ಕಪಕ್ಕದಲ್ಲಿರುವ ಎರಡು ಉದ್ರಿಕ್ತ ಅಣುಗಳು ಅಂತರಕ್ರಿಯೆಗೊಂಡಾಗ ಪರಮಾಣು ಸ್ಥಾನಗಳ ತಾತ್ಕಾಲಿಕ ಮರುಜೋಡಣೆ ಮತ್ತು ಎಲೆಕ್ಟ್ರಾನ್ ಶಕ್ತಿಮಟ್ಟಗಳ ಬದಲಾವಣೆ ಆಗಬಹುದು. ಈ ಘಟನೆಗೆ ಎಕ್ಸೈಮರ್ ಎಂದು ಹೆಸರು.

ಘನದಲ್ಲಿನ ದೋಷ ಅಥವಾ ಅಪೂರ್ಣತೆಗಳಿಗೂ ಭೌತ ಗುಣಗಳಿಗೂ ಇರುವ ಸಂಬಂಧ : ವಸ್ತುವಿನಲ್ಲಿರುವ ದೋಷ ಅಥವಾ ಅಪೂರ್ಣತೆಗಳು ಅದರ ರಾಸಾಯನಿಕ ಗುಣಗಳನ್ನು ಅವಲಂಬಿಸಿರುವುದರಿಂದ ಅವುಗಳಿಗೂ ಘನದ ಭೌತ ಗುಣಗಳಿಗೂ ನಿಕಟ ಸಂಬಂಧ ಉಂಟು. ಇವುಗಳಲ್ಲಿ ಮುಖ್ಯವಾದವೆಂದರೆ ವೈದ್ಯುತ, ದ್ಯುತಿಯ, ಕಾಂತೀಯ, ಉಷ್ಣೀಯ ಮತ್ತು ಯಾಂತ್ರಿಕ ಗುಣಗಳು, ಘನಗಳ ವೈದ್ಯುತ ಗುಣಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಲೋಹಗಳಿಗೂ ಅತಿವಾಹಕಗಳಿಗೂ ಅವಾಹಕಗಳಿಗೂ ವಿದ್ಯುದ್ವಾಹಕ ಮೌಲ್ಯದಲ್ಲಿ ಬಹಳ ವ್ಯತ್ಯಾಸ ಉಂಟು. ನಿಮ್ನ ಉಷ್ಣಾಮಟ್ಟಗಳಲ್ಲಿ ವಿದ್ಯುದ್ವಾಹಕ ಲೋಹಗಳಲ್ಲಿ 108/ohm-cm ಇದ್ದಲ್ಲಿ ಅವಾಹಕಗಳಲ್ಲಿ ಇದು 10-22/ohm-cm ನಷ್ಟಿರುತ್ತದೆ. ಸಾಮಾನ್ಯವಾಗಿ ವಿದ್ಯುದ್ವಾಹಕತ್ವವನ್ನು $\sigma=Nq\mu$ ಎಂಬ ಸಮೀಕರಣದಿಂದ ಸೂಚಿಸಬಹುದು. ಇಲ್ಲಿ N ಮುಕ್ತ ವಿದ್ಯುದ್ವಾಹಕ ಎಲೆಕ್ಟ್ರಾನ್‌ಗಳ ಸಾರತೆ, q ಎಲೆಕ್ಟ್ರಾನ್‌ನ ವಿದ್ಯುದಾವೇಶ ಮತ್ತು $\mu$ ವಿದ್ಯುದ್ವಾಹಕದ ಚಲನಶೀಲತೆ. ಈ ಸಂದರ್ಭಗಳಲ್ಲಿ ಸ್ಫಟಿಕ ಎಲೆಕ್ಟ್ರಾನ್ ವಿದ್ಯುದ್ವಾಹಕವೋ, ಅಯಾನಿಕ್ ವಿದ್ಯುದ್ವಾಹಕವೋ ಎಂಬುದನ್ನು ನಿರ್ಧರಿಸಬೇಕು ಎಲೆಕ್ಟ್ರಾನ್ ವಿದ್ಯುದ್ವಾಹಕಗಳಲ್ಲಿ ಎಲೆಕ್ಟ್ರಾನ್ ಮತ್ತು ರಂಧ್ರಗಳು ವಿದ್ಯುತ್ತನ್ನು ಒಯ್ಯುತ್ತವೆ. ಆದರೆ ಕೆಲವು ಘನಗಳಲ್ಲಿ ಈ ಕಾರ್ಯ ಅಯಾನ್‌ಗಳಿಂದಲೇ ನಡೆಯುತ್ತದೆ. ಅಯಾನ್‌ಗಳ ಚಲನೆ ಎಲೆಕ್ಟ್ರಾನ್ ಮತ್ತು ರಂಧ್ರಗಳಿಗೆ ಹೋಲಿಸಿದಲ್ಲಿ ಅತಿಕಡಿಮೆ. ಆದರೆ ಕೆಲವು ಸ್ಫಟಿಕ ಗಳಲ್ಲಿ ಎಲೆಕ್ಟ್ರಾನ್ ಮತ್ತು ರಂಧ್ರಗಳ ಸಾರವೇ ಕಡಿಮೆಯಿರುವ ಸಾಧ್ಯತೆ ಉಂಟು. ಉದಾಹರಣೆಗೆ ಕ್ಷಾರ ಲೋಹದ ಹ್ಯಾಲೈಡ್‌ಗಳನ್ನು ಪರೀಕ್ಷಿಸಿದರೆ ಅಲ್ಲಿ ಅಯಾನ್‌ಗಳ ಸಾರ ಎಲೆಕ್ಟ್ರಾನ್ ಮತ್ತು ರಂಧ್ರಗಳ ಸಾರಕ್ಕಿಂತ ಅತಿ ಹೆಚ್ಚಿರುವುದರಿಂದ ಅಯಾನಿಕ್ ವಿದ್ಯುದ್ವಾಹಕತ್ವ ಎಲೆಕ್ಟ್ರಾನ್ ವಿದ್ಯುದ್ವಾಹಕತ್ವಕ್ಕಿಂತ ಹೆಚ್ಚಾಗಿರುತ್ತದೆ. ಸಾಧಾರಣ ಉಷ್ಣತೆಯಲ್ಲಿ ಲೋಹಗಳ ವಿದ್ಯುದ್ವಾಹಕತ್ವ ಅವುಗಳಲ್ಲಿನ ಅಶುದ್ಧತೆ ಅಥವಾ ಜಾಲಕದೋಷಗಳ ಮೇಲೆ ಅಷ್ಟಾಗಿ ಅವಲಂಬಿಸಿರುವುದಿಲ್ಲ. ಎಲೆಕ್ಟ್ರಾನಿಕ್ ಚಲನೆ ಸ್ಫಟಿಕ ಜಾಲಕ ಕಂಪನಗಳ ಮೇಲೆ ಅವಲಂಬಿಸಿರುತ್ತದೆ. ಆದರೆ ಈ ಜಾಲಕಕಂಪನಗಳು ಸ್ಫಟಿಕದ ಉಷ್ಣತೆಯ ಮೇಲೆ ಅವಲಂಬಿಸಿರುವುದರಿಂದ ಉಷ್ಣತೆ ಕಡಿಮೆಯಾದರೆ ಅವೂ ಕಡಿಮೆಯಾಗಿ 00Kಯಲ್ಲಿ ಶೂನ್ಯವಾಗುತ್ತವೆಂದು ಭಾವಿಸಬಹುದು. ಆಗ ಘನದಲ್ಲಿನ ವಿದ್ಯುತ್ ಅಡಚಣೆ (18= 1/σ) ಶೂನ್ಯವಾಗಿ ವಿದ್ಯುದ್ವಾಹಕತ್ವ ಅನಂತವಾಗಬೇಕು. ಇದು ಪ್ರಾಯಶಃ ಶುದ್ಧ ಸ್ಫಟಿಕಗಳಲ್ಲಿ ಮಾತ್ರ ಸಾಧ್ಯ. ಅಂದರೆ ಸ್ಫಟಿಕಗಳಲ್ಲಿ ಅಶುದ್ಧತೆ ಅಥವಾ ಸ್ಫಟಿಕ ದೋಷಗಳಿದ್ದರೆ ವಿದ್ಯುತ್ ಅಡಚಣೆ (ρ) ಶೂನ್ಯ–ವಾಗುವುದಿಲ್ಲ. ಸಾಮಾನ್ಯವಾಗಿ ದೋಷ–ಗಳಿಲ್ಲದಿರುವ ಸ್ಫಟಿಕಗಳೇ ಇಲ್ಲವಾದ್ದರಿಂದ ಘನಗಳಲ್ಲಿ ಈ ಗುಣವನ್ನು ಗುರುತಿಸುವುದು ಅಷ್ಟು ಸುಲಭವಲ್ಲ. ಘನಗಳಲ್ಲಿ ಅಶುದ್ಧತೆ ಹೆಚ್ಚಾದಂತೆಲ್ಲ ವಿದ್ಯುತ್ ಅಡಚಣೆಯೂ ಹೆಚ್ಚುತ್ತದೆ. (ಚಿತ್ರ 10) ರಲ್ಲಿ ಇದನ್ನು ತೋರಿಸಿದೆ.




ಚಿತ್ರ 10. ಕಡಿಮೆ ಉಷ್ಣತೆಗಳಲ್ಲಿ ಲೋಹದ ವಿದ್ಯುತ್ ಅಡಚಣೆಗೂ ಉಷ್ಣತೆಗೂ ಇರುವ ಸಂಬಂಧ

ಅರೆವಾಹಕಗಳ ವಿದ್ಯುದ್ವಾಹಕತ್ವವನ್ನು ಅವುಗಳಲ್ಲಿರುವ ಅಶುದ್ಧತೆಗಳು ಮತ್ತು ಜಾಲಕ ದೋಷಗಳ ಸಾರತೆಯಿಂದ ಗಣಿಸಬಹುದು. ಇವುಗಳ ವಿದ್ಯುದ್ವಾಹಕತ್ವ ಕೆಲವು ಉಷ್ಣತೆಯ ವ್ಯಾಪ್ತಿಗಳಲ್ಲಿ ಅತಿಯಾಗಿ ಹೆಚ್ಚಾಗುತ್ತದೆ.




ಚಿತ್ರ 11. ವೇಲೆನ್ಸ್ ಮತ್ತು ವಿದ್ಯುದ್ವಾಹಕ ಪಟ್ಟೆಗಳ ನಡುವೆ ಎಲೆಕ್ಟ್ರಾನ್ ಶಕ್ತಿಮಟ್ಟಗಳು ಅಡಗಿರುವಿಕೆ. (*a*) ಅಯಾನೀಕರಣವಾಗಿರುವ ದಾನಿಗಳು, (*b*) ಅಯಾನೀಕರಣವಾಗಿರುವ ಪರಿಗ್ರಾಹಿಗಳು, (*c*) ದಾನಿ ಮತ್ತು ಪರಿಗ್ರಾಹಿಗಳು ಒಟ್ಟಿಗೆ ಇರುವುದು

ಹಿಂದೆ ತಿಳಿಸಿದಂತೆ ಆವರ್ತಕೋಷ್ಟದಲ್ಲಿನ ನಾಲ್ಕನೆಯ ಗುಂಪಿನಲ್ಲಿರುವ ಸಿಲಿಕಾನ್ ಮುಂತಾದ ಧಾತುಗಳಿಗೆ 3ನೆಯ ಗುಂಪಿನ ಅಲ್ಯುಮಿನಿಯಮನ್ನು ಅಶುದ್ಧವಾಗಿ ಬೆರೆಸಿದರೆ ಇದರಲ್ಲಿ ಒಂದು ವೇಲೆನ್ಸ್ ಎಲೆಕ್ಟ್ರಾನ್ ಕಡಿಮೆಯಾಗಿರುವುದರಿಂದ ಪರಿಗ್ರಾಹಿ ಪರಮಾಣುವಾಗಿಯೂ (ಅಕ್ಸೆಪ್ಟರ್ ಆ್ಯಟಮ್) 5ನೆಯ ಗುಂಪಿನ ಫಾಸ್ಫರಸನ್ನು ಬೆರೆಸಿದರೆ ಅದು ದಾನಿಯಾಗಿಯೂ (ಡೋನರ್) ವರ್ತಿಸುತ್ತದೆ. ದಾನಿ ಮತ್ತು ಪರಿಗ್ರಾಹಿ ವಸ್ತುಗಳ ಶಕ್ತಿಮಟ್ಟಗಳು ಘನದ ವಿದ್ಯುದ್ವಾಹಕ ಪಟ್ಟೆ ಮತ್ತು ವೇಲೆನ್ಸ್ ಪಟ್ಟೆಯಲ್ಲಿನ ಮಧ್ಯದಲ್ಲಿರುವ ಬಹಿಷ್ಕೃತ ಪ್ರದೇಶ ಅಥವಾ ಶಕ್ತಿ ತೆರಪಿನಲ್ಲಿರುತ್ತವೆ. ಇದನ್ನು ಚಿತ್ರ (11)ರಲ್ಲಿ ತೋರಿಸಿದೆ.

ಒಂದು ವೇಳೆ ಅರೆವಾಹಕಗಳಲ್ಲಿ ದಾನಿ ಮತ್ತು ಪರಿಗ್ರಾಹಿ ಗುಣಗಳಿರುವ ಎರಡು ಅಶುದ್ಧತೆಗಳೂ ಇದ್ದಲ್ಲಿ ದಾನಿಯ ಸಾರ [D] ಇದ್ದು ಪರಿಗ್ರಾಹಿಯ ಸಾರ [A] ಇದ್ದಲ್ಲಿ ವಿದ್ಯುದಾವೇಶ ವಾಹಕಗಳು {[D] - [A]} ಗೆ ಸಮನಾಗಿರುತ್ತವೆ. ದಾನಿಯ ಸಾರ ಪರಿಗ್ರಾಹಿಯ ಸಾರಕ್ಕಿಂತ ಹೆಚ್ಚಿದಲ್ಲಿ ಅದನ್ನು ಋಣ ಪ್ರರೂಪದ ಅರೆವಾಹಕವೆಂದೂ (*n*–ಟೈಪ್) ಪರಿಗ್ರಾಹಿಯ ಸಾರ ಹೆಚ್ಚಿದಲ್ಲಿ ಅದನ್ನು ಧನ ಪ್ರರೂಪದ ಅರೆವಾಹಕವೆಂದೂ (*p*–ಟೈಪ್) ಕರೆಯುತ್ತಾರೆ.

ಅರೆವಾಹಕದ ಉಷ್ಣತೆಯನ್ನು ಹೆಚ್ಚಿಸಿದಲ್ಲಿ ಕೆಲವು ವೇಲೆನ್ಸ್ ಎಲೆಕ್ಟ್ರಾನ್‌ಗಳು ವೇಲೆನ್ಸ್ ಪಟ್ಟೆಯಿಂದ ವಿದ್ಯುದ್ವಾಹಕ ಪಟ್ಟೆಗೆ ಲಂಘಿಸುತ್ತವೆ. ಆಗ ವೇಲನ್ಸ್ ಪಟ್ಟೆಯಲ್ಲಿ ಅಷ್ಟೇ ಸಂಖ್ಯೆಯಲ್ಲಿ ರಂಧ್ರಗಳು ಉತ್ಪತ್ತಿಯಾಗುತ್ತವೆ. ಈ ಮುಕ್ತ ಎಲೆಕ್ಟ್ರಾನ್‌ಗಳು ಮತ್ತು ರಂಧ್ರಗಳ ಸಂಖ್ಯೆಯು ಉಷ್ಣತೆ ಹೆಚ್ಚಿದಂತೆಲ್ಲ ಹೆಚ್ಚುತ್ತವೆ. ಈ ರೀತಿ ಉತ್ಪತ್ತಿಯಾದ ವಿದ್ಯುದ್ವಾಹಕಗಳ ಸಂಖ್ಯೆ (ಎಲೆಕ್ಟ್ರಾನ್ ಮತ್ತು ರಂಧ್ರಗಳು) ದಾನಿ ಅಥವಾ ಪರಿಗ್ರಾಹಿಗಳ ಸಾರತೆಗೆ ಮೀರಿದಲ್ಲಿ ಸ್ಫಟಿಕದ ವಿದ್ಯುದ್ವಾಹಕ ಕಾರ್ಯವನ್ನು ಬಹುಮಟ್ಟಿಗೆ ಈ ಎಲೆಕ್ಟ್ರಾನು ಮತ್ತು ರಂಧ್ರಗಳೇ ನಿರ್ವಹಿಸುತ್ತವೆ. ಈ ರೀತಿ ಆಗುವ ಉಷ್ಣತೆಯ ವ್ಯಾಪ್ತಿಗೆ ಆಂತರಿಕ ವ್ಯಾಪ್ತಿ (ಇನ್‌ಟ್ರಿನ್ಸಿಕ್ ರೇಂಜ್) ಎಂದು ಹೆಸರು. ಅತಿ ನಿಮ್ನ ಉಷ್ಣತೆಗಳಲ್ಲಿ ಈ ವಿದ್ಯುದ್ವಾಹಕಗಳ ಸಂಖ್ಯೆ ಅತಿ ಕಡಿಮೆಯಾಗಿದ್ದು {[D] –[A]} ಯ ಒಂದು ಚಿಕ್ಕ ಭಾಗವಾಗಿರುತ್ತದೆ. ಆದರೆ ಕೆಲವು ಮಧ್ಯ ಉಷ್ಣತೆಗಳಲ್ಲಿ ಈ ವಾಹಕಗಳ ಸಂಖ್ಯೆ ಸ್ಥಿರವಾಗಿದ್ದು {[D] –[A]}ಗೆ ಸಮವಾಗಿರುತ್ತವೆ. ಈ ಉಷ್ಣತಾಮಟ್ಟಕ್ಕೆ ಬಾಹ್ಯ ವ್ಯಾಪ್ತಿ (ಎಕ್ಸ್‌ಟ್ರಿನ್ಸಿಕ್ ರೇಂಜ್) ಎಂದು ಹೆಸರು.

ಅಣು ಸ್ಫಟಿಕಗಳ ವಿದ್ಯುದ್ವಾಹಕತ್ವ ಅತಿ ಕ್ಷೀಣವಾಗಿರುತ್ತದೆ. ಏಕೆಂದರೆ ಇಲ್ಲಿ ವಾಹಕಗಳ ಸಾರತೆ ಮತ್ತು ಚಲನೆ ಬಹಳ ಕಡಿಮೆಯಿರುವುದು. ಆ್ಯಂತ್ರಸೀನ್ ಸ್ಫಟಿಕವನ್ನು ಉದಾಹರಣೆಯಾಗಿ ತೆಗೆದುಕೊಂಡರೆ ವಿದ್ಯುದ್ವಾಹಕ ಕಾರ್ಯ ಎಲೆಕ್ಟ್ರಾನ್ ಒಂದು ಅಣುವಿನಿಂದ ಇನ್ನೊಂದಕ್ಕೆ ಶಕ್ತಿತಡೆಯ ಮೂಲಕ ಕುಪ್ಪಳಿಸುವುದರಿಂದ ನಡೆಯುತ್ತದೆ. ಇದೇ ರೀತಿ ಧನ ಅಯಾನ್‌ಗಳ ಎರಡು ವೇಲೆನ್ಸ್ ಸ್ಥಿತಿಯಲ್ಲಿರುವ ಸಂಕ್ರಮಣ ಧಾತುಗಳ ಆಕ್ಸೈಡುಗಳಲ್ಲಿಯೂ ವಿದ್ಯುದ್ವಾಹಕ ಕಾರ್ಯ ಎಲೆಕ್ಟ್ರಾನ್ ಒಂದು ಅಯಾನಿನಿಂದ ಇನ್ನೊಂದಕ್ಕೆ ಕುಪ್ಪಳಿಸುವುದರ ಮೂಲ ನಡೆಯುತ್ತದೆ. ಸಾಮಾನ್ಯವಾಗಿ ಆ್ಯರೋಮ್ಯಾಟಿಕ್ ಅಣುಗಳಲ್ಲಿ π ಎಲೆಕ್ಟ್ರಾನ್‌ಗಳು ವಿದ್ಯುದ್ವಾಹಕಗಳಾಗಿ ಕೆಲಸ ಮಾಡುತ್ತವೆ.




**ಚಿತ್ರ 12. ಹೊರವಿದ್ಯುತ್ ಕ್ಷೇತ್ರದಿಂದ ಅಣುವಿನಲ್ಲಿರುವ ವಿದ್ಯುತ್ ಕೇಂದ್ರಗಳ ಸ್ಥಾನಪಲ್ಲಟ (ಧ್ರುವೀಕರಣ). *A* ವಿದ್ಯುತ್ ಕ್ಷೇತ್ರವಿಲ್ಲದಿರುವಾಗ ಅಣುವಿನ ರೂಪ, *B* ವಿದ್ಯುತ್ ಕ್ಷೇತ್ರವಿದ್ದಾಗ ಅಣುವಿನಲ್ಲುಂಟಾದ ಧ್ರುವೀಕರಣದ ರೂಪವಕ್ರತೆ**

ಲೋಹಗಳಲ್ಲಿ ವಿದ್ಯುದ್ವಾಹಕಗಳಾಗಿರುವ ವೇಲೆನ್ಸ್ ಎಲೆಕ್ಟ್ರಾನುಗಳ ಸಂಖ್ಯೆಯನ್ನು ಲೋಹದ ವೇಲೆನ್ಸಿ ಮೂಲಕ ಸುಲಭವಾಗಿ ಗಣಿಸಬಹುದು. ಆದರೆ ಅರೆವಾಹಕಗಳಲ್ಲಿ ಈ ಗಣನೆ ಅಷ್ಟು ಸುಲಭವಲ್ಲ. ಆಗ ಒಂದು ವಿಧಾನವೆಂದರೆ ರಾಸಾಯನಿಕ ಪ್ರಯೋಗಗಳಿಂದ ಸ್ಫಟಿಕದಲ್ಲಿ ಪರಿಗ್ರಾಹಿ ಮತ್ತು ದಾನಿಯ ಸಾರಗಳನ್ನು ಕಂಡುಹಿಡಿಯುವುದು. ಇನ್ನೊಂದು ಅನುಕೂಲವಾದ ಮತ್ತು ಖಚಿತವಾದ ವಿಧಾನವೆಂದರೆ ಸ್ಫಟಿಕದ ಹಾಲ್ ಪರಿಣಾಮವನ್ನು (ಹಾಲ್ ಎಫೆಕ್ಟ್) ಅಳೆಯುವುದು. ಅವಾಹಕಗಳಲ್ಲಿ ಎಲೆಕ್ಟ್ರಾನ್‌ಗಳು ಅಯಾನ್ ಅಥವಾ ಪರಮಾಣುಗಳಿಗೆ ಬಂಧಿಸಲ್ಪಟ್ಟಿರುವುದರಿಂದ ವಿದ್ಯುದ್ವಾಹಕಗಳ ಕೊರತೆಯಿರುತ್ತದೆ. ಆದ್ದರಿಂದ ಅವಾಹಕಗಳ ವಿದ್ಯುದ್ವಾಹಕ ಸಾಮರ್ಥ್ಯ ಶೂನ್ಯವೆನ್ನಬಹುದು. ಇವನ್ನು ಪರಾವೈದ್ಯುತಗಳೆಂದೂ (ಡೈಎಲೆಕ್ಟ್ರಿಕ್ಸ್) ಕರೆಯುತ್ತಾರೆ. ಅವಾಹಕಗಳನ್ನು ಒಂದು ವಿದ್ಯುತ್ ಕ್ಷೇತ್ರದಲ್ಲಿರಿಸಿದರೆ ವಿದ್ಯುತ್ ತಟ್ಟೆಗಳಿಗೂ ಅವಾಹಕ ಪರಮಾಣುಗಳಲ್ಲಿರುವ ನ್ಯೂಕ್ಲಿಯಸ್ ಮತ್ತು ಎಲೆಕ್ಟ್ರಾನ್‌ಗಳ ಸ್ಥಾನಗಳು ಸ್ವಲ್ಪ ಮಟ್ಟಿಗೆ ಸ್ಥಾನಪಲ್ಲಟ ಹೊಂದುತ್ತವೆ. ಈ ಸ್ಥಾನಪಲ್ಲಟದ ಪರಿಣಾಮವಾಗಿ ಪರಮಾಣು ಅಥವಾ ಅಣುವಿನಲ್ಲಿ ವಿದ್ಯುತ್ ದ್ವಿಧ್ರುವಗಳು (ಡೈಪೋಲ್ಸ್) ಹುಟ್ಟಿಕೊಳ್ಳುವುದರಿಂದ ಈ ಕಾರ್ಯಕ್ಕೆ ಧ್ರುವೀಕರಣವೆಂದು (ಪೋಲರೈಸೇಷನ್) ಹೆಸರು. ಇದನ್ನು ಚಿತ್ರ(12) ರಲ್ಲಿ ತೋರಿಸಿದೆ. ಉತ್ಪತ್ತಿಯಾದ ವಿದ್ಯುತ್‌ದ್ವಿಧ್ರುವದ ಭ್ರಮಣಾಂಕ μಎಂದಿದ್ದಲ್ಲಿ ಮತ್ತು ಈ ವಿದ್ಯುತ್‌ಕ್ಷೇತ್ರ ಶಕ್ತಿಯಾದಲ್ಲಿ $\mu = \alpha F$. ಇಲ್ಲಿ α ಅವಾಹಕದ ಒಂದು ಸ್ಥಿರಾಂಕ. ಇದಕ್ಕೆ ಧ್ರುವೀಕರಣಶೀಲತೆಯೆಂದು ಹೆಸರು.

ಈ ಸಮೀಕರಣ ವಿದ್ಯುತ್ ದ್ವಿಧ್ರುವದ ಭ್ರಮಣಾಂಕ ಕ್ಷೇತ್ರಶಕ್ತಿಯನ್ನು ಅವಲಂಬಿಸಿದೆಯೆಂದು ತೋರಿಸುತ್ತದೆ. ಕೆಲವು ವೇಳೆ ಅವಾಹಕ ಸ್ಫಟಿಕವನ್ನು ಯಾಂತ್ರಿಕ ಒತ್ತಾಯಗಳಿಗೆ ಗುರಿಪಡಿಸಿದಾಗ ಧನ ಮತ್ತು ಋಣ ಅಯಾನ್‌ಗಳು ಅಸಮಾಂಗವಾಗಿ (ಅಸಿಮೆಟ್ರಿಕ್) ಸ್ಥಾನಪಲ್ಲಟ ಹೊಂದಿದರೆ ಅದಕ್ಕೆ ಪೀಜೋವಿದ್ಯುತ್ ಸ್ಫಟಿಕವೆಂದು ಹೆಸರು. ಈ ಸ್ಫಟಿಕಗಳಲ್ಲಿ ಸಮಾಂಗತಾ ಕೇಂದ್ರವಿರುವುದಿಲ್ಲ. ಉದಾಹರಣೆಗೆ ಬೆಣಚುಕಲ್ಲು. ಇನ್ನು ಕೆಲವು ಸ್ಫಟಿಕಗಳಲ್ಲಿ ಸ್ವಪ್ರೇರಿತ ಧ್ರುವೀಕರಣವಾಗಿ ವಿದ್ಯುತ್ ಕ್ಷೇತ್ರವಿಲ್ಲದಿದ್ದರೂ ವಿದ್ಯುತ್ ಧ್ರುವ ಭ್ರಮಣಾಂಕ ಉಂಟಾಗುತ್ತದೆ. ಇವನ್ನು ವಿದ್ಯುತ್ ಕ್ಷೇತ್ರದಲ್ಲಿಟ್ಟರೆ ಧ್ರುವೀಕರಣದ ದಿಶೆಯನ್ನು ಬದಲಿಸಬಹುದು. ಇಂಥ ಘನಗಳಿಗೆ ಫೆರ್ರೊ ವಿದ್ಯುತ್ ಸ್ಫಟಿಕಗಳೆಂದು ಹೆಸರು. ಉದಾಹರಣೆಗೆ ರಾಷೆಲ್ ಲವಣ ಮತ್ತು ಬೇರಿಯಮ್ ಟೈಟನೇಟ್‌ನಲ್ಲಿ, ಸ್ವಪ್ರೇರಿತ ಧ್ರುವೀಕರಣ ಸ್ಫಟಿಕ ಅಯಾನು ರಚನೆಯಲ್ಲಿನ ಸ್ವಪ್ರೇರಿತ ಸ್ಥಾನಪಲ್ಲಟಗಳಿಂದ ಉಂಟಾಗುತ್ತದೆ. ಉದಾಹರಣೆಗೆ ಬೇರಿಯಮ್ ಟೈಟನೇಟ್‌ನಲ್ಲಿ Ti4+ ಮತ್ತು Ba2+ಅಯಾನ್‌ಗಳು ಆಕ್ಸಿಜನ್ ಅಯಾನ್‌ಗೆ ಅನುಗುಣವಾಗಿ ಸ್ಥಾನಪಲ್ಲಟ ಹೊಂದಿದಾಗ ವಿದ್ಯುತ್‌ಧ್ರುವಗಳು ಉಂಟಾಗುತ್ತವೆ.

ಸ್ಫಟಿಕದೋಷಗಳಿಂದ ಉಂಟಾದ ದ್ಯುತೀಯ ಗುಣಗಳನ್ನು ಈಗ ವಿಮರ್ಶೆ ಮಾಡಬಹುದು. ಸಾಮಾನ್ಯವಾಗಿ ಒಂದು ಸಂಯುಕ್ತದ ಮೇಲೆ ಶಕ್ತಿಯುತ ವಿಕಿರಣಗಳು ಬಿದ್ದಲ್ಲಿ ಅದರಲ್ಲಿರುವ ಎಲೆಕ್ಟ್ರಾನ್‌ಗಳು ಈ ವಿಕಿರಣಗಳ ಶಕ್ತಿಯನ್ನು ಹೀರಿ, ಉದ್ರೇಕಗೊಂಡು ಮೇಲಿನ ಶೂನ್ಯ ಶಕ್ತಿಮಟ್ಟಗಳಿಗೆ ಲಂಘಿಸಬಲ್ಲವು. ವಿಕಿರಣಗಳ ಶಕ್ತಿ ಕಡಿಮೆಯಾಗಿದ್ದಲ್ಲಿ ಸಂಯುಕ್ತ ಒಂದು ಕಂಪನ ಶಕ್ತಿಮಟ್ಟ (ವೈಬ್ರೇಷನಲ್ ಎನರ್ಜಿ ಸ್ಟೇಟ್) ಅಥವಾ ಆವರ್ತಕ ಶಕ್ತಿಮಟ್ಟದಿಂದ (ರೊಟೇಷನಲ್ ಎನರ್ಜಿ ಸ್ಟೇಟ್) ಮತ್ತೊಂದಕ್ಕೆ ಲಂಘಿಸುವುದನ್ನು ನೋಡಬಹುದು. ಸಾಮಾನ್ಯವಾಗಿ ಸ್ಫಟಿಕಗಳಲ್ಲಿ ಅಪೂರ್ಣತೆ ಅಥವಾ ದೋಷಗಳಿದ್ದರೆ ಅವು ವಿಕಿರಣಪಟುತ್ವವನ್ನು ಹೀರಬಲ್ಲವು. ಉದಾಹರಣೆಗೆ ಕ್ಷಾರಲೋಹ ಹ್ಯಾಲೈಡ್ ಸ್ಫಟಿಕಗಳು ಶುದ್ಧವಾಗಿದ್ದಲ್ಲಿ ದೃಗ್ಗೋಚರ ಬೆಳಕಿನ ವಿಕಿರಣಗಳನ್ನು ಹೀರುವುದಿಲ್ಲ. ಆದರೆ ದೋಷಕೇಂದ್ರಗಳಲ್ಲಿ (ಷಾಟ್ಕಿ ಅಥವಾ ಫ್ರೆಂಕಲ್) ಅವು ಈ ವಿಕಿರಣಗಳನ್ನು ಹೀರಿ ಈ ಕೇಂದ್ರಗಳನ್ನು ಉತ್ಪತ್ತಿಮಾಡಿ, ಸ್ಫಟಿಕ ವರ್ಣಮಯವಾಗುವಂತೆ ಮಾಡುತ್ತವೆ. ಇಂಥ ಸ್ಫಟಿಕಗಳನ್ನು ರೋಹಿತಮಾಪಿಯಲ್ಲಿ ಪರೀಕ್ಷಿಸಿ F ಕೇಂದ್ರಗಳ ಪಟ್ಟೆ ಅಂದರೆ F ಪಟ್ಟೆಯನ್ನು ಬರೆಯಬಹುದು. ಈ ಸ್ಫಟಿಕಗಳನ್ನು F– ಪಟ್ಟೆಯಷ್ಟೇ ಅಲೆಯುದ್ದ ವಿಕಿರಣದಿಂದ ವಿಕಿರಣಮಾಡಿದರೆ F ಪಟ್ಟೆಯ ತೀಕ್ಷ್ಣತೆ ಕುಗ್ಗಿ F' ಪಟ್ಟೆ ಉತ್ಪತ್ತಿಯಾಗುತ್ತದೆ. F ಕ್ರಿಯೆಯಲ್ಲಿ ವಿಕಿರಣ F ಕೇಂದ್ರದಲ್ಲಿ ಬಂಧಿಸಲ್ಪಟ್ಟಿರುವ ಎಲೆಕ್ಟ್ರಾನ್‌ಅನ್ನು ಬಿಡುಗಡೆಮಾಡುವುದರಿಂದ ಅದು ಸ್ಫಟಿಕದಲ್ಲಿ ಸರಾಗವಾಗಿ ಓಡಾಡುವ ಸಾಮರ್ಥ್ಯವನ್ನು ಪಡೆಯುತ್ತದೆ. F ಓಡಾಟದಲ್ಲಿ ಅದು ಇನ್ನೊಂದು F ಕೇಂದ್ರದ ಆಕರ್ಷಣೆಯಲ್ಲಿ ಸಿಕ್ಕಿಕೊಂಡು F' ಕೇಂದ್ರ ಉತ್ಪತ್ತಿಯಾಗುತ್ತದೆ. F' ಕೇಂದ್ರಗಳು ಋಣ ವಿದ್ಯುದಾವೇಶವನ್ನು ಪಡೆದಿರುತ್ತವೆ. ಹಿಂದೆಯೇ ತಿಳಿಸಿರುವಂತೆ F' ಕೇಂದ್ರಗಳು ನಿಮ್ನ ಉಷ್ಣತಾಮಟ್ಟದಲ್ಲಿ ಭದ್ರವಾಗಿದ್ದು (ಸ್ಟೇಬಲ್) ಪ್ರಯೋಗಶಾಲೆಯ ಉಷ್ಣತೆಯಲ್ಲಿ ಎರಡು ಕೇಂದ್ರಗಳಾಗಿ ವಿಕಲನವಾಗುತ್ತವೆ (ಡಿಸೋಸಿಯೇಟ್). F ಮತ್ತು F' ಪಟ್ಟೆಗಳ ಹೀರುವಿಕೆಯ ಶಿಖರಗಳ ಶಕ್ತಿ ಮಟ್ಟದಿಂದ ಈ ಕೇಂದ್ರದಲ್ಲಿನ ಎಲೆಕ್ಟ್ರಾನ್ ಬಂಧಶಕ್ತಿಯನ್ನು ಗಣಿಸಬಹುದು.

ಘನಗಳಲ್ಲಿನ ಪರಮಾಣು ಚಲನೆಗಳು ವಿಕಿರಣಪಟುತ್ವವನ್ನು ಹೀರಿದರೆ ಅದರ ಅಧ್ಯಯನದಿಂದಲೂ ಅಪೂರ್ಣತೆ ಅಥವಾ ದೋಷಗಳ ವಿಚಾರವನ್ನು ತಿಳಿದುಕೊಳ್ಳಬಹುದು. ಉದಾಹರಣೆಗೆ ಸಿಲಿಕಾನ್ ಘನದಲ್ಲಿ ಆಕ್ಸಿಜನ್ ಅನಿಲವನ್ನು ಕರಗಿಸಿ ಅದರ ಅತಿರಕ್ತ ರೋಹಿತದಲ್ಲಿ Si-O ಬಂಧನ ಹಿಗ್ಗುವ ಮತ್ತು ಬಾಗುವ ವಿಧಾನಗಳನ್ನು ಅಧ್ಯಯನ ಮಾಡಿದಲ್ಲಿ ಆಕ್ಸಿಜನ್ ಪರಮಾಣು ಆಂತರಿಕವಾಗಿ ಪಕ್ಕದಲ್ಲಿರುವ ಎರಡು ಸಿಲಿಕಾನ್ ಪರಮಾಣುಗಳಿಗೆ 1100 ಕೋನದಲ್ಲಿ ಬಂಧಿಸಲ್ಪಟ್ಟಿರುವುದು ತಿಳಿದುಬರುತ್ತದೆ.

ಅನೇಕ ಅವಾಹಕಗಳನ್ನು ಶಕ್ತಿಯುತ ವಿಕಿರಣಗಳಿಗೆ ತೆರೆದಿಟ್ಟಲ್ಲಿ ಅವು ವಿದ್ಯುದ್ವಾಹಕಗಳಾಗುತ್ತವೆ. ಇದಕ್ಕೆ ದ್ಯುತಿ ವಿದ್ಯುದ್ವಾಹಕತ್ವ ಎಂದು ಹೆಸರು. ಇಲ್ಲಿ ಅವಾಹಕದ ವೇಲೆನ್ಸ್ ಪಟ್ಟೆಯಲ್ಲಿರುವ ಎಲೆಕ್ಟ್ರಾನ್‌ಗಳು ವಿಕಿರಣಪಟುತ್ವವನ್ನು ಹೀರಿ ಮೇಲಿನ ಶೂನ್ಯ ವಿದ್ಯುದ್ವಾಹಕ ಪಟ್ಟೆಗೆ ಲಂಘಿಸುತ್ತವೆ. ಆಗ ಅವಾಹಕ ಸ್ಫಟಿಕ ವಿದ್ಯುದ್ವಾಹಕವಾಗುತ್ತದೆ.

ಸಂದೀಪ್ತಿ (ಲ್ಯೂಮಿನೆಸೆನ್ಸ್) : ವಿದ್ಯುದ್ವಾಹಕ ಪಟ್ಟೆಯಲ್ಲಿರುವ ಉದ್ರಿಕ್ತ ಎಲೆಕ್ಟ್ರಾನ್ ಒಂದು ಶೂನ್ಯಮಟ್ಟವಿರುವ ವೇಲೆನ್ಸ್ ಪಟ್ಟೆಗಾಗಲೀ ಇನ್ನಾವುದಾದರೂ ಕೆಳಮಟ್ಟಕ್ಕಾಗಲೀ ಇಳಿದಲ್ಲಿ ಅದರ ಉದ್ರೇಕಶಕ್ತಿ ಉಷ್ಣರೂಪದಿಂದ ಸ್ಫಟಿಕಜಾಲಕದಲ್ಲಿ ಪ್ರಸಾರವಾಗುತ್ತದೆ. ಅಥವಾ ಅದು ಕೆಲವು ಸಂದರ್ಭಗಳಲ್ಲಿ ದೃಗ್ಗೋಚರ ರಶ್ಮಿಯ ರೂಪದಲ್ಲಿ ಹೊರಬರಬಹುದು.

ಈ ಉತ್ಸರ್ಜನೆಗೆ ಸಂದೀಪ್ತಿ ಎಂದು ಹೆಸರು. ಇದನ್ನು ಪ್ರತಿದೀಪ್ತಿ (ಫ್ಲೋರೆಸೆನ್ಸ್) ಅಥವಾ ಸ್ಫುರದೀಪ್ತಿ (ಫಾಸ್ಫಾರಿಸೆನ್ಸ್) ಎಂದೂ ಕರೆಯಬಹುದು. ಪ್ರತಿದೀಪ್ತಿಯಲ್ಲಿ ಉತ್ಸರ್ಜನೆಗೆ ಹೆಚ್ಚು ಕಾಲ ಬೇಕಾಗುವುದಿಲ್ಲ. (10-9 ಸೆಕೆಂಡಿಗಿಂತಲೂ ಕಡಿಮೆ). ಆದರೆ ಸ್ಫುರದೀಪ್ತಿಯಲ್ಲಿ ಉತ್ಸರ್ಜನೆಗೆ ಹೆಚ್ಚು ಕಾಲ ಬೇಕಿದ್ದು ಇದರ ಆಯುಷ್ಯ 10-4 ಸೆಕೆಂಡ್‌ನಿಂದ ಹಲವಾರು ಸೆಕೆಂಡ್‌ಗಳವರೆಗೂ ಇರುತ್ತದೆ. ಘನದ ಎಲೆಕ್ಟ್ರಾನ್‌ಗಳನ್ನು ಉದ್ರಿಕ್ತಸ್ಥಿತಿಗೆ ತರಲು ಎಲೆಕ್ಟ್ರಾನ್ ಜಾಲಕವನ್ನು ಉಪಯೋಗಿಸಿ ಬರುವ ಉತ್ಸರ್ಜನೆಗೆ ಕ್ಯಾಥೊಡೋ ಸಂದೀಪ್ತಿ ಎಂದು ಹೆಸರು. ಈ ಗುಣವನ್ನು ಹೊಂದಿರುವ ವಸ್ತುಗಳಿಗೆ ಫಾಸ್ಫಾರ್‌ಗಳು ಎಂಬ ಹೆಸರಿದೆ. ಇವನ್ನು ಕ್ಯಾಥೋಡ್ ಕಿರಣನಾಳದಲ್ಲಿ ಬೆಳಕು ಉತ್ಪತ್ತಿ ಮಾಡುವ ತೆರೆಗೆ ಲೇಪನ ಮಾಡುವ ವಸ್ತುವಾಗಿ ಉಪಯೋಗಿಸುತ್ತಾರೆ. ಲೇಸರ್ ಕೂಡ ಘನಗಳ ಸಂದೀಪ್ತಿ ಗುಣಗಳನಗಳನ್ನವಲಂಬಿಸಿದೆ. ಸಾಮಾನ್ಯವಾಗಿ ಫಾಸ್ಫಾರ್‌ಗಳಿಗೆ ಅಶುದ್ಧತೆಗಳನ್ನು ಬೆರೆಸುವುದರಿಂದ ದೃಗ್ಗೋಚರ ಬೆಳಕನ್ನು ಹೊರಚಿಮ್ಮುವಂತೆ ಮಾಡಬಹುದು. ಇವುಗಳಲ್ಲಿ ಮುಖ್ಯವಾದ ಫಾಸ್ಫಾರುಗಳೆಂದರೆ ಆವರ್ತಕೋಷ್ಟಕದ ಎರಡರಿಂದ ಆರನೆಯ ಗುಂಪಿನವರೆಗೂ ಇರುವ ಧಾತುಗಳ ಸಂಯುಕ್ತಗಳು. ಉದಾಹರಣೆಗೆ ಥಾಲಿಯಮ್‌ನಿಂದ ಪಟುತ್ವಗೊಳಿಸಿದ ಕ್ಷಾರಲೋಹದ ಹ್ಯಾಲೈಡ್‌ಗಳು (ಮುಖ್ಯವಾಗಿ ಸೋಡಿಯಮ್ ಅಯೊಡೈಡ್). ಇಲ್ಲಿ ಅಶುದ್ಧವಾದ ಥಾಲಿಯಮ್ ಅಯಾನ್ ($Tl^+$) ಸ್ಫಟಿಕದಲ್ಲಿನ ಧನ ಅಯಾನ್‌ನ ಸ್ಥಾನಗಳನ್ನು ಕ್ರಮರಹಿತ ವ್ಯವಸ್ಥೆಯಲ್ಲಿ ಆಕ್ರಮಿಸಿಕೊಂಡಿರುತ್ತದೆ. ವಿಕಿರಣ ಪಟುತ್ವವನ್ನು ಭಾರವಾದ ಅಯೋಡೈಡ್ ಅಯಾನ್ ಹೀರಿ ಅದು ಥಾಲಿಯಮ್ ಅಯಾನ್‌ಗೆ ವರ್ಗಾವಣೆಯಾದಾಗ ಈ ಅಯಾನ್‌ನ ಎಲೆಕ್ಟ್ರಾನ್ ಉದ್ರಿಕ್ತವಾಗಿ ಮೇಲಿನ ಎಲೆಕ್ಟ್ರಾನ್ ಶಕ್ತಿಮಟ್ಟಗಳಿಗೆ ಲಂಘಿಸುತ್ತದೆ. ಸ್ವಲ್ಪಕಾಲದ ಮೇಲೆ ಅದರ ಸ್ವಸ್ಥಾನಕ್ಕೆ ಮರಳಿದಾಗ ಉದ್ರಿಕ್ತಶಕ್ತಿಯನ್ನು ವಿಕಿರಣರೂಪದಲ್ಲಿ ಪ್ರಸಾರ ಮಾಡುತ್ತದೆ. ಬಹಳಷ್ಟು ಸಂದೀಪ್ತವಸ್ತುಗಳು ಈ ವಿಧವಾಗಿ ಕ್ರಿಯಾಶೀಲವಾಗಿವೆ. ಇಲ್ಲಿ ಬಹುಮಟ್ಟಿಗೆ ಅಶುದ್ಧತೆ ಪರಮಾಣುಗಳ ವಿಕಿರಣದ ಹೀರಿಕೆ ಮತ್ತು ಉತ್ಸರ್ಜನೆಗೆ ಕಾರಣವಾಗಿದೆ.

ಸಲ್ಫೈಡ್ ಫಾಸ್ಫಾರ್‌ಗಳ ಕ್ರಿಯಾವಿನ್ಯಾಸ ಸ್ವಲ್ಪ ಜಟಿಲವಾಗಿದೆ. ಸಾಮಾನ್ಯವಾಗಿ ಈ ಫಾಸ್ಫಾರ್‌ಗಳಲ್ಲಿ ಸತುವಿನ ಸಲ್ಫೈಡ್ ಸ್ಫಟಿಕದಲ್ಲಿ ಬೆಳ್ಳಿ ಅಥವಾ ತಾಮ್ರದ ಅಯಾನ್‌ಗಳನ್ನೂ ಕ್ಯಾಡ್ಮಿಯಮ್ ಸಲ್ಫೈಡ್‌ನಲ್ಲಿ ಬೆಳ್ಳಿಯ ಅಯಾನ್‌ಗಳನ್ನೂ ಅಶುದ್ಧತೆಯಾಗಿ ಉಪಯೋಗಿಸುತ್ತಾರೆ. ಅಣು ಸ್ಫಟಿಕಗಳ ಉದಾಹರಣೆಯಾಗಿ ಆ್ಯಂತ್ರಸೀನನ್ನು ತೆಗೆದುಕೊಂಡರೆ ಇಲ್ಲಿ ಪ್ರತಿದೀಪ್ತಿಯ ಅಥವಾ ಸ್ಫುರದೀಪ್ತಿಯ ಉತ್ಪತ್ತಿ ಅಣುವಿನ ಎಲೆಕ್ಟ್ರಾನ್‌ಗಳು ಮೇಲಿನ ಅಣುಶಕ್ತಿಮಟ್ಟಕ್ಕೆ ಲಂಘಿಸಿ (ಮೊದಲನೆಯ ಉದ್ರಿಕ್ತ ಸಿಂಗ್ಲೆಟ್ ಶಕ್ತಿಮಟ್ಟ) ಅವು ತತ್‌ಕ್ಷಣವೇ ಸ್ವಸ್ಥಾನಕ್ಕೆ ಮರಳಿದಲ್ಲಿ ಪ್ರತಿದೀಪ್ತಿ ಉತ್ಸರ್ಜನೆಯಾಗಿಯೂ ಒಂದು ವೇಳೆ ಸ್ವಸ್ಥಾನದ ಮೇಲಿರುವ ತ್ರಿವಳಿ (ಟ್ರಿಪ್ಲೆಟ್) ಶಕ್ತಿಮಟ್ಟಗಳಿಗೆ ಇಳಿದು, ಬಳಿಕ ಸ್ವಸ್ಥಾನಕ್ಕೆ ಮರಳಿದರೆ ಸ್ಫುರದೀಪ್ತಿ ಉತ್ಸರ್ಜನೆಯಾಗಿಯೂ ಉಂಟಾಗುತ್ತವೆ.

ವಸ್ತುಗಳ ಕಾಂತ ಗುಣಗಳನ್ನು ಪರಿಶೀಲಿಸಿದಲ್ಲಿ ಅವನ್ನು ಪ್ರತಿಕಾಂತೀಯ (ಡಯಾಮ್ಯಾಗ್ನೆಟಿಕ್) ಮತ್ತು ಅನುಕಾಂತೀಯ (ಪ್ಯಾರಮ್ಯಾಗ್ನೆಟಿಕ್) ವಸ್ತುಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಪ್ರತಿಕಾಂತೀಯ ವಸ್ತುಗಳಿಗೆ ಋಣಕಾಂತೀಯ ಗ್ರಾಹಕತ್ವವಿದ್ದು (+10-6) ಈ ವಸ್ತುಗಳ ಎಲೆಕ್ಟ್ರಾನ್ ಗಿರಕಿಗಳೆಲ್ಲವೂ ಜೊತೆಗೂಡಿರುತ್ತವೆ. ಕಾಂತಕ್ಷೇತ್ರದಲ್ಲಿ ಈ ವಸ್ತುಗಳು ವಿಕರ್ಷಣೆಯನ್ನು ಹೊಂದುತ್ತವೆ. ಉದಾಹರಣೆಗೆ $H_2$, KCl. ಅನುಕಾಂತೀಯ ವಸ್ತುಗಳಲ್ಲಿ ಗಿರಕಿ ಜೊತೆಯಾಗದ ಎಲೆಕ್ಟ್ರಾನ್ ಒಂದಾದರೂ ಇದ್ದು ಈ ವಸ್ತುಗಳು ಕಾಂತಕ್ಷೇತ್ರದಲ್ಲಿ ಆಕರ್ಷಣೆಯನ್ನು ಹೊಂದುತ್ತವೆ. ಇವು ಧನಕಾಂತೀಯ ಗ್ರಾಹಕತ್ವವನ್ನು (~+10-5) ಹೊಂದಿರುತ್ತವೆ. ಉದಾಹರಣೆಗೆ ಮುಕ್ತ ಸೋಡಿಯಮ್ ಪರಮಾಣು, ನೈಟ್ರಿಕ್ ಆಕ್ಸೈಡ್ (NO), ದ್ರವ ಆಕ್ಸಿಜನ್, ಆರ್ಗ್ಯಾನಿಕ್ ಮುಕ್ತ ರ್‍ಯಾಡಿಕಲುಗಳು, ಅಪೂರ್ಣ ಎಲೆಕ್ಟ್ರಾನ್ ಚಿಪ್ಪುಗಳನ್ನು ಹೊಂದಿರುವ ಸಂಕ್ರಮಣ ಧಾತುಗಳು.

ಇನ್ನು ಕೆಲವು ವಸ್ತುಗಳಲ್ಲಿ ಕಾಂತಕ್ಷೇತ್ರವಿಲ್ಲದಿದ್ದರೂ ಅವುಗಳಲ್ಲಿನ ಭ್ರಮಣಾಂಕಗಳು ಸಾಲುಗೂಡಿರುತ್ತವೆ. ಇವುಗಳಿಗೆ ಫೆರ್ರೊಕಾಂತೀಯ ವಸ್ತುಗಳೆಂದು ಹೆಸರು. ಈ ವಸ್ತುಗಳ ಕಾಂತೀಯ ಗ್ರಾಹಕತ್ವ ಧನವಾಗಿದ್ದು ಬಹಳ ಹೆಚ್ಚಿನ ಮೌಲ್ಯವನ್ನು ಹೊಂದಿರುವುದು (~+10-2). ಉದಾಹರಣೆಗೆ ಲೋಹಗಳು. ಇವುಗಳಲ್ಲಿ ಎಲ್ಲ ಭ್ರಮಣಾಂಕಗಳೂ ಒಂದೇ ದಿಶೆಗೆ ಸಾಲುಗೂಡಿರುತ್ತವೆ. ಆದರೆ ಮ್ಯಾಂಗನೀಸ್ ಆಕ್ಸೈಡ್‌ನಲ್ಲಿ (MnO) ಈ ಭ್ರಮಣಾಂಕಗಳು ಎರಡು ವಿರುದ್ಧ ದಿಶೆಗಳಲ್ಲಿ ಸಮವಾಗಿ ಸಾಲುಗಟ್ಟಿರುವುದರಿಂದ ಭ್ರಮಣಾಂಕದ ಮೊತ್ತ ಶೂನ್ಯವಾಗುತ್ತದೆ. ಇಂಥ ವಸ್ತುಗಳಿಗೆ ಪ್ರತಿಫೆರ್ರೊಕಾಂತೀಯ ವಸ್ತುಗಳೆಂದು ಹೆಸರು. ಇವುಗಳಿಗೆ ಧನಕಾಂತೀಯ ಗ್ರಾಹಕತ್ವ ಇರುವುದು (+10-7 ರಿಂದ 10-4 ವರೆಗೆ). ಎರಡು ವಿರುದ್ಧ ದಿಶೆಗಳಲ್ಲಿ ಸಾಲುಗೂಡಿರುವ ಭ್ರಮಣಾಂಕಗಳು ಸಮಸಂಖ್ಯೆಯಲ್ಲಿಲ್ಲದಿದ್ದರೆ ಭ್ರಮಣಾಂಕದ ಮೊತ್ತ ಶೂನ್ಯವಾಗುವುದಿಲ್ಲ. ಇಂಥ ವಸ್ತುಗಳಿಗೆ ಫೆರಿಕಾಂತೀಯ ವಸ್ತುಗಳೆಂದು ಹೆಸರು (ಕಾಂತ ಗ್ರಾಹಕತ್ವ ~ +10-5.).

[ಉದಾಹರಣೆಗೆ $Fe_3O_4$] ಇವನ್ನು ಚಿತ್ರ–13 ರಲ್ಲಿ ತೋರಿಸಿದೆ. ಘನವಸ್ತುಗಳ ಕಾಂತ ಗುಣಗಳನ್ನು ಎಲೆಕ್ಟ್ರಾನ್ ಗಿರಕಿ ಅನುರಣ (ಸ್ಪಿನ್ ರೆಸೊನೆನ್ಸ್) ಮತ್ತು ನ್ಯೂಕ್ಲಿಯರ್ ಕಾಂತೀಯ ಅನುರಣನ ವಿಧಾನಗಳಿಂದ ಅಧ್ಯಯನ ಮಾಡಬಹುದು.




**ಚಿತ್ರ 13. ಕಾಂತೀಯ ಭ್ರಮಣಾಂಕಗಳ ಜೋಡಣೆ. (*a*) ಫೆರೊಕಾಂತೀಯಗಳು, (*b*) ಆಂಟಿಫೆರೊಕಾಂತೀಯಗಳು, (*c*) ಫೆರಿಕಾಂತೀಯಗಳು**

ವಿಶಿಷ್ಟ ಉಷ್ಣ ಮತ್ತು ಉಷ್ಣೀಯ ವಾಹಕತ್ವ ಮುಂತಾದ ಉಷ್ಣೀಯ ಗುಣಗಳು ಸ್ಫಟಿಕದ ಮೂಲಭೂತ ಗುಣಗಳು. ಇವುಗಳಲ್ಲಿ ಸ್ಫಟಿಕ ದೋಷ ಅಥವಾ ಅಪೂರ್ಣತೆಗಳ ಪಾತ್ರ ಹೆಚ್ಚಿನದಿರುವುದಿಲ್ಲ. ಘನದಲ್ಲಿನ ಒಂದು ಗ್ರಾಮ್ ಪರಮಾಣುತೂಕ ಜಾಲಕ ಪರಿಮಾಣುಗಳ ವಿಶಿಷ್ಟ ಉಷ್ಣ Cv ಯು 3R ಗೆ ಸಮವಾಗಿದೆಯೆಂದು ಡಾಲಾಂಗ್ ಮತ್ತು ಪೆಟಿಟ್‌ರ ಅನುಭವಜನ್ಯಸೂತ್ರ ತಿಳಿಸುತ್ತದೆ. ಇಲ್ಲಿ R ಅನಿಲ ಸ್ಥಿರಾಂಕ. R ಬೆಲೆ 1.987 ಕೆಲೊರಿಗಳಾದ್ದರಿಂದ Cv ಯ ಬೆಲೆ ಸುಮಾರು 6 ಕೆಲೊರಿಗಳಷ್ಟಾಗುತ್ತದೆಂದು ತಿಳಿದುಕೊಳ್ಳಬಹುದು. ಘನದ ಉಷ್ಣತೆ ಕಡಿಮೆಯಾದಂತೆ Cv ಯ ಬೆಲೆಯೂ ಕಡಿಮೆಯಾಗುವುದನ್ನು ಐನ್‌ಸ್ಟೈನ್, ಡಿಬೈ, ಬಾರ್ನ್, ಫಾನ್ ಕಾರ್ಮನ್ ಮುಂತಾದವರು ಕ್ವಾಂಟಮ್ ಸಿದ್ಧಾಂತದ ಮೂಲಕ ಪರಿಶೀಲಿಸಿದ್ದಾರೆ. ಘನದ ನಿರಪೇಕ್ಷ ಉಷ್ಣತೆ T ಎಂದಿದ್ದಲ್ಲಿ ನಿಮ್ನ ಉಷ್ಣತೆಗಳಲ್ಲಿ Cv ಯು $T^3$ ಕ್ಕೆ ಅನುಪಾತೀಯವಾಗಿರುವುದು ಕಂಡುಬರುತ್ತದೆ. ಘನದಲ್ಲಿ ಉಷ್ಣೀಯ ವಾಹಕತ್ವ ಬಹುಮಟ್ಟಿಗೆ ಜಾಲಕಕಂಪನಗಳಿಂದ ನಡೆಯುವುದಾದರೂ ಈ ಕಾರ್ಯಕ್ಕೆ ವಿದ್ಯುದ್ವಾಹಕ ಎಲೆಕ್ಟ್ರಾನ್‌ಗಳ ಕೊಡುಗೆಯೂ ಉಂಟು. ನಿಮ್ನ ಉಷ್ಣತಾಮಟ್ಟದಲ್ಲಿ ಎಲೆಕ್ಟ್ರಾನ್ ವಿಶಿಷ್ಟ ಉಷ್ಣ Tಗೆ ಅನುಪಾತೀಯ ವಾಗಿರುವುದರಿಂದ ವಿಶಿಷ್ಟ ಉಷ್ಣದ ಮೊತ್ತ

Cv = Cv (ಜಾಲಕಂಪನ) + Cv (ಎಲೆಕ್ಟ್ರಾನ್)

ಅಂದರೆ $C_v = \alpha T^3 + \gamma T$

ಅಲ್ಲಿ $\alpha$ ಮತ್ತು $\gamma$ ನಿಯತಾಂಕಗಳು

$\frac{C_v}{T}$ ಮತ್ತು $T^2$ ಗಳ ಗ್ರಾಫ್‌ನ್ನು ಬಿಡಿಸಿದರೆ ಅದರ ಓಟದ ಪರಿಶೀಲನೆಯಿಂದ Cv (ಜಾಲಕ ಕಂಪನ)ವನ್ನೂ ರೇಖಾಂತರದಿಂದ ಎಲೆಕ್ಟ್ರಾನ್ ವಿಶಿಷ್ಟ ಉಷ್ಣವನ್ನೂ ಗಣಿಸಬಹುದು.

ಘನಗಳ ಯಾಂತ್ರಿಕ ಗುಣಗಳು : ಘನಗಳ ಬಹುಮಟ್ಟಿನ ಗುಣಗಳ ಅಧ್ಯಯನವನ್ನು ಕೂಲಂಕಷವಾಗಿ ಮಾಡಿದ್ದರೂ ಅವುಗಳ ಯಾಂತ್ರಿಕ ಗುಣಗಳ ಅರ್ಥ ಇನ್ನೂ ಪೂರ್ಣವಾಗಿ ಗೊತ್ತಾಗಿಲ್ಲ. ಸ್ಫಟಿಕೀಯ ಪರಿಪೂರ್ಣತೆಯನ್ನೂ ರಾಸಾಯನಿಕ ಶುದ್ಧತೆಯನ್ನೂ ಪಡೆದಿರುವ ಘನಗಳ ಮೇಲೆ ಹೆಚ್ಚಿನ ಪ್ರಯೋಗಗಳು ನಡೆದಿಲ್ಲವಾದ್ದರಿಂದ ಘನಗಳ ಯಾಂತ್ರಿಕ ಗುಣಗಳ ಅಧ್ಯಯನ ಅಪೂರ್ಣವೆಂದೇ ಹೇಳಬೇಕು. ಒಂದು ಪ್ರಾಯೋಗಿಕ ಸ್ಫಟಿಕಕ್ಕೂ ಆದರ್ಶ ಸ್ಫಟಿಕ್ಕೂ ಹೆಚ್ಚಿನ ಗುಣವ್ಯತ್ಯಾಸಗಳಿವೆ. ಆದರ್ಶ ಸ್ಫಟಿಕಗಳಲ್ಲಿ ಲೆಪ್ಪರೂಪದಲ್ಲಿ ವಿರೂಪವಾಗುವುದಾಗಲಿ (ಪ್ಲಾಸ್ಟಿಕ್ ಡಿಫಾರ್ಮೇಷನ್) ಸೀಳುವುದಾಗಲಿ ಸುಲಭವಾಗಿ ಆಗಲಾರವು. ಆದರೆ ಪ್ರಾಯೋಗಿಕ ಸ್ಫಟಿಕ ಸುಲಭವಾಗಿ ವಿರೂಪವಾಗಬಲ್ಲದು ಮತ್ತು ಎಷ್ಟೋ ಬಾರಿ ಕಡಿಮೆ ಒತ್ತಡಗಳಿಗೆ ಕೂಡ ಲೆಪ್ಪರೂಪವಾಗಿ ಹರಿಯಬಲ್ಲದು. ಎಷ್ಟೋ ಬಾರಿ ಅತಿ ಶುದ್ಧ ಸ್ಫಟಿಕಗಳಲ್ಲಿ ಕೆಲವು ಸ್ಥಾನಪಲ್ಲಟಗಳಿದ್ದಲ್ಲಿ ಅವನ್ನು ಕಡಿಮೆ ಒತ್ತಡಕ್ಕೆ ಗುರಿಪಡಿಸಿದರೂ ಸೀಳಬಲ್ಲವು. ಸ್ಫಟಿಕದಲ್ಲಿ ಸ್ಥಾನಪಲ್ಲಟಗಳು ಒಂದಕ್ಕೊಂದು ಹೆಣೆದುಕೊಂಡರೆ ಸ್ಫಟಿಕ ಗಡಸುತನವನ್ನು ಹೊಂದಬಹುದು. ಆದರೆ ಈ ಯಾವ ಗುಣಗಳೂ ಹೆಚ್ಚಿನ ಉಷ್ಣತೆಯಿದ್ದಾಗ ಉಪಯೋಗವಾಗುವುದಿಲ್ಲವಾದ್ದರಿಂದ ಘನದ ಸಾಮರ್ಥ್ಯ ಕುಗ್ಗುತ್ತದೆ. ಆದರೆ ಕೆಲವು ವಸ್ತುಗಳು ಅಂದರೆ ಟೈಟೇನಿಯಮ್, ಮಾಲಿಬ್ಡಿನಮ್, ಟಂಗ್‌ಸ್ಟನ್ ಮತ್ತು ಬೆರಿಲಿಯಮ್ ಮುಂತಾದವು ಇದಕ್ಕೆ ವಿರುದ್ಧವಾಗಿದ್ದು ಹೆಚ್ಚಿನ ಉಷ್ಣತೆಗಳಲ್ಲಿ ಬಹಳ ಉಪಯೋಗವಾಗುತ್ತವೆ. ಆದರೆ ಈ ಧಾತುಗಳ ತನ್ಯತೆ (ಡಕ್ಟಿಲಿಟಿ) ಕಡಿಮೆಯಾದ್ದರಿಂದ ಇವನ್ನು ಯಂತ್ರಭಾಗಗಳನ್ನು ತಯಾರಿಸಲು ಅಷ್ಟು

ಉಪಯೋಗಿಸುವುದಿಲ್ಲ. ಆದರೆ ಇವನ್ನು ಹೆಚ್ಚಿಗೆ ಶುದ್ಧೀಕರಿಸಿದಲ್ಲಿ ಇವುಗಳ ತನ್ಯತೆ ವೃದ್ಧಿಯಾಗುತ್ತದೆ. ಬಹುಶಃ ಅಶುದ್ಧತೆ ಸ್ಥಾನಪಲ್ಲಟಗಳನ್ನು ಹಿಡಿದಿಟ್ಟು ಘನವನ್ನು ಗಡಸುಮಾಡುವ ಕ್ರಿಯಾವಿನ್ಯಾಸದ ಬದಲಾವಣೆಯಿಂದ ಇದು ಸಾಧ್ಯವಾಗುತ್ತದೆ. (ಡಿ.ಎಸ್.ಎಂ.)

**ಘನಾಕೃತಿ :** ಜ್ಯಾಮಿತಿಯ ವ್ಯಾಖ್ಯೆಗೆ ಒಳಪಡುವ ಬಹುಫಲಕಗಳು, ಗೋಳ, ಗೋಳಕಲ್ಪಗಳು, ಶಂಕುಕಲ್ಪಗಳು ಇತ್ಯಾದಿಗಳ ಒಟ್ಟು ಹೆಸರು (ಸಾಲಿಡ್). ಒಂದು ಬಹುಫಲಕ ಹಲವಾರು ಸಮತಲ ಬಹುಭುಜಗಳಿಂದ ಆವೃತವಾಗಿರುವ ಘನಾಕೃತಿ. ಈ ಬಹುಭುಜಗಳಿಗೆ ಘನಾಕೃತಿಯ ಫಲಕಗಳು ಎಂದು ಹೆಸರು. ಎರಡು ಫಲಕಗಳು ಒಂದು ಅಂಚಿನಲ್ಲಿಯೂ ಮೂರು ಅಥವಾ ಹೆಚ್ಚು ಫಲಕಗಳು ಒಂದು ಶೃಂಗದಲ್ಲಿಯೂ ಛೇದಿಸುವುವು. ಒಂದು ಪೀನ ಬಹುಫಲಕ (ಕಾನ್ವೆಕ್ಸ್ ಪಾಲೀಹೆಡ್ರನ್) ಯಾವುದೇ ಒಂದು ಫಲಕದ ಒಂದೇ ಪಾರ್ಶ್ವದಲ್ಲಿ ಪೂರ್ಣವಾಗಿ ಇರುವುದು. ಇದರ ಸಮತಲ ಛೇದ ಒಂದು ಪೀನ ಬಹುಭುಜ. ನಿಸರ್ಗದಲ್ಲಿ ಲಭಿಸುವ ರತ್ನಗಳ ಮತ್ತು ಖನಿಜಗಳ ಹರಳುಗಳು ಬಹುಫಲಕಗಳು. ಒಂದು ಕ್ರಮಬಹುಫಲಕದಲ್ಲಿ (ರೆಗ್ಯುಲರ್ ಪಾಲಿಹೆಡ್ರನ್) ಎಲ್ಲ ಫಲಕಗಳೂ ಸಮವಾಗಿವೆ, ಎಲ್ಲ ಘನಕೋನಗಳೂ (ಸಾಲಿಡ್ ಆ್ಯಂಗಲ್ಸ್) (**ನೋಡಿ– ಘನಕೋನ**) ಸಮವಾಗಿವೆ. ಒಂದು ಫಲಕದ (ಅಂದರೆ ಬಹುಭುಜದ) ಎಲ್ಲ ಭುಜಗಳೂ ಎಲ್ಲ ಕೋನಗಳೂ ಪರಸ್ಪರ ಸಮವಾಗಿದ್ದರೆ ಅದಕ್ಕೆ ಕ್ರಮ ಫಲಕ (ಕ್ರಮಬಹುಭುಜ) ಎಂದು ಹೆಸರು. ಆದ್ದರಿಂದ ಒಂದು ಕ್ರಮ ಬಹುಫಲಕದಲ್ಲಿ ಎಲ್ಲ ಫಲಕಗಳೂ ಎಲ್ಲ ಘನಕೋನಗಳೂ ಪರಸ್ಪರ ಸರ್ವಸಮವಾಗಿವೆ (ಕಾಂಗ್ರುಎಂಟ್). ಕ್ರಮ ಚತುಷ್ಫಲಕ (ರೆಗ್ಯುಲರ್ ಟೆಟ್ರಹೆಡ್ರನ್) ಮತ್ತು ಘನ ಇವು ಕ್ರಮಬಹುಫಲಕಕ್ಕೆ ಪರಿಚಿತ ನಿದರ್ಶನಗಳು.



ಚಿತ್ರ 1

ಬೇರೆ ಬೇರೆ ಉದ್ದ, ಅಗಲ, ಕೋನಗಳು ಇರುವ ಹಲವಾರು ಸಮತಲಗಳನ್ನು ಒಂದು ಬಹುಫಲಕವಾಗುವಂತೆ ಸಮರ್ಪಕವಾಗಿ ಸೇರಿಸಿ ದೊರೆಯುವ ಬಹುಫಲಕಕ್ಕೆ ವಿಕೃತರೂಪ (ಡಿಸ್ಟಾರ್ಟೆಡ್ ರೆಪ್ರೆಸೆಂಟೇಷನ್) ಎಂದು ಹೆಸರು. ಉದಾಹರಣೆಗೆ ಒಂದು ಕ್ರಮ ಬಹುಫಲಕದ ಅಥವಾ ಘನದ ಒಂದು ಫಲಕವನ್ನು ಕಿತ್ತು ಹಾಕಿದರೆ ಉಳಿಯುವ ಘನಾಕೃತಿ ಒಂದು ವಿಕೃತ ರೂಪವಾಗುತ್ತದೆ. ತೆರೆದಿರುವ ಪೆಟ್ಟಿಗೆ ಇಂಥ ಒಂದು ಉದಾಹರಣೆ. ವಿಕೃತರೂಪದ ಸಂಪೂರ್ಣ ಒಳಭಾಗವನ್ನು ಅದರ ತೆರೆದ ಭಾಗದ ಮೂಲಕ ನೋಡಲು ಸಾಧ್ಯ ಉಂಟು.

ಆಯ್ಲರನ ಪ್ರಮೇಯ: ಒಂದು ಪೀನ ಸಂವೃತ ಬಹುಫಲಕದ ಅಂಚುಗಳ, ಫಲಕಗಳ ಮತ್ತು ಶೃಂಗಗಳ ಸಂಖ್ಯೆಗಳು ಅನುಕ್ರಮವಾಗಿ e, f, v ಆಗಿದ್ದರೆ ಆಗ $f + v - e = 2$. ಯಾವುದೇ ಮಾದರಿಯನ್ನು ಆಯ್ದು ಈ ಪ್ರಮೇಯದ ನಿಜತ್ವದ ತಾಳೆ ನೋಡಬಹುದು.

ಪ್ರಮೇಯ : ಒಂದು ಕ್ರಮಬಹುಫಲಕದಲ್ಲಿ ಪ್ರತಿಯೊಂದು ಶೃಂಗವೂ ಒಂದು m- ಫಲಕೋನ (m–ಹೆಡ್ರಲ್ ಆ್ಯಂಗಲ್) ಮತ್ತು ಪ್ರತಿಯೊಂದು ಫಲಕವೂ ಒಂದು n ಭುಜವಾಗಿದ್ದರೆ (n–ಗನ್) ಆಗ

$$2e = mv = nf\frac{4mn}{2m+2n-mn}$$

$$(m-2)\,(n-2) < 4$$

ಈಗ ಒಂದು ಅಂಚು ಎರಡು ಶೃಂಗಗಳನ್ನು ಜೋಡಿಸುವುದರಿಂದ ಮತ್ತು ಅದು ಎರಡು ಫಲಗಳ ಛೇದನವೂ ಆಗಿರುವುದರಿಂದ

$2e = mv = n f = k$ (ಆಗಿರಲಿ)

ಈಗ ಹಿಂದಿನ ಸೂತ್ರವನ್ನು ಬಳಸಿದರೆ

$$k = \frac{4mn}{2m+2n-mn}$$

ಒಂದು ಪೀನ ಬಹುಫಲಕಕೋನದ ಫಲಕಕೋನಗಳ ಮೊತ್ತ $2\pi$ ಗಿಂತ ಕಡಿಮೆಯಾಗಿರುವುದರಿಂದ ಪ್ರತಿಯೊಂದು ಶೃಂಗದಲ್ಲಿನ ಫಲಕಕೋನವೂ $2\pi/m$ ಗಿಂತ ಕಡಿಮೆಯಾಗಿದೆ. ಅಲ್ಲದೆ ಒಂದು ಕ್ರಮ n–ಭುಜದ ಕೋನ $\pi\left(1-\frac{2}{n}\right)$ ಗೆ ಸಮವಾಗಿದೆ.

$$\therefore \pi\left(1-\frac{2}{n}\right) < \frac{2\pi}{m}$$

$$\therefore (m-2)\,(n-2) < 4 \qquad \ldots (1)$$

| m-2 | n-2 | m | n | e | v | f | ಹೆಸರು |
|---|---|---|---|---|---|---|---|
| 1 | 1 | 3 | 3 | 6 | 4 | 4 | ಚತುಷ್ಫಲಕ |
| 1 | 2 | 3 | 4 | 12 | 8 | 6 | ಷಷ್ಠಫಲಕ (ಘನ) |
| 1 | 3 | 3 | 5 | 30 | 20 | 12 | ದ್ವಾದಶಫಲಕ |
| 2 | 1 | 4 | 3 | 12 | 6 | 8 | ಅಷ್ಟ ಫಲಕ |
| 3 | 1 | 5 | 4 | 30 | 12 | 20 | ವಿಂಶತಿಫಲಕ |

ಕೊನೆಯ ಫಲಿತಾಂಶ (1) ರಿಂದ ಈ ಹಿಂದೆ ಕಾಣಿಸಿರುವ ಕೋಷ್ಟಕ ನಮಗೆ ದೊರೆಯುತ್ತದೆ. ಇದರಿಂದ ಐದು ಕ್ರಮ ಬಹುಫಲಕಗಳ ರಚನೆಯ ಸಾಧ್ಯತೆ ನಮಗೆ ತಿಳಿಯುವುದು. ಇವನ್ನು ಕೆಲವು ವೇಳೆ ಪ್ಲ್ಯಾಟೋನಿಕ್ ಘನಾಕೃತಿಗಳು ಎಂದು ಕರೆಯುವುದೂ ಉಂಟು.

ಐದು ಕ್ರಮ ಬಹುಫಲಕಗಳ ರಚನೆಯ ಸಾಧ್ಯತೆಯನ್ನು ಮೇಲೆ ತೋರಿಸಿದ್ದೇವೆ. ಇವುಗಳ ಪೈಕಿ ಕ್ರಮಚತುಷ್ಫಲಕವೂ ಘನವೂ ನಮಗೆ ಸುಪರಿಚಿತ. ಅಲ್ಲದೆ ಒಂದು ಘನದ ಆರು ಫಲಕಗಳ ಆರು ಕೇಂದ್ರಬಿಂದುಗಳು ಒಂದು ಕ್ರಮ ಅಷ್ಟಫಲಕದ ಶೃಂಗಗಳೆಂದು ಸುಲಭವಾಗಿ ತಿಳಿಯುತ್ತೇವೆ. ಇದರ ಫಲಕಗಳು ಎಂಟು ಸಮಭುಜ ತ್ರಿಭುಜಗಳು; ಮತ್ತು ಶೃಂಗಗಳು ಸರ್ವಸಮ ಚತುಷ್ಫಲಕ ಕೋನಗಳು. ಒಂದು ಕ್ರಮ ಚತುಷ್ಫಲಕದ ಆರು ಅಂಚುಗಳ ನಡು ಬಿಂದುಗಳು ಒಂದು ಕ್ರಮ ಅಷ್ಟಭುಜದ ಆರು ಶೃಂಗಗಳು ಎಂದೂ ಸುಲಭವಾಗಿ ಪರಿಶೀಲಿಸಬಹುದು (**ನೋಡಿ– ಗಣಿತವಿಜ್ಞಾನ**).



ಚಿತ್ರ 2

ಒಂದು ಕ್ರಮಘನಾಕೃತಿಯ ಇರವನ್ನು ಹೇಗೆ ಸಾಧಿಸುವುದು ಎನ್ನುವುದನ್ನು ಕೆಳಗೆ ತೋರಿಸಲಾಗಿದೆ.

ಪ್ರಮೇಯ : ಪ್ರತಿಯೊಂದು ಫಲಕದಲ್ಲಿ ಮೂರು ಮತ್ತು ಪ್ರತಿಯೊಂದು ಶೃಂಗದಲ್ಲಿ ನಾಲ್ಕು ಅಂಚುಗಳಿರುವ ಒಂದು ಕ್ರಮ ಬಹುಫಲಕವಿದೆ.

ಸಾಧನೆ : O ಎನ್ನುವ ಒಂದು ಶೃಂಗದಲ್ಲಿ ಸಂಗಮಿಸುವ OA, OB, OC, OD ಎಂಬ ನಾಲ್ಕು ಅಂಚುಗಳಿಂದ ಸಾಧನೆಯನ್ನು ಪ್ರಾರಂಭಿಸಿ OAB, OBC, OCD, ODA ಫಲಕಗಳನ್ನು ಪೂರ್ಣಗೊಳಿಸುತ್ತೇವೆ. ಈಗ ಪ್ರತಿಯೊಂದು ಶೃಂಗ A, B, C, D ಯಲ್ಲಿಯೂ ಇನ್ನೊಂದು ಅಂಚೂ ಪ್ರತಿಯೊಂದು ಫಲಕ OAB, OBC, OCD, ODA ಯ ಬದಿಯಲ್ಲಿ ಇನ್ನೊಂದು ತ್ರಿಭುಜಫಲಕವೂ ಬೇಕಾಗಿವೆ. A, B, C, D ಗಳಿಗೆ $O_1A$, $O_1B$, $O_1C$, $O_1D$ ಎನ್ನುವ ನಾಲ್ಕು ಸಂಗಮ ಅಂಚುಗಳನ್ನು ಜೋಡಿಸುವುದರ ಮೂಲಕ ಇವೆಲ್ಲವೂ ದೊರೆಯುವುವು. ಹೀಗೆ ಒಂದೊಂದು ಫಲಕಕ್ಕೂ ಮೂರು ಮತ್ತು ಒಂದೊಂದು ಶೃಂಗಕ್ಕೂ ನಾಲ್ಕು ಅಂಚುಗಳು ಇರುವಂಥ ಒಂದು ಬಹುಫಲಕವಿದೆಯೆಂದು ಗೊತ್ತಾಗುವುದು.



ಚಿತ್ರ 3

ಇದಕ್ಕೆ ನಾಲ್ಕು ಫಲಕಗಳೂ ಆರು ಶೃಂಗಗಳೂ ಇವೆ. ಈ ಘನಾಕೃತಿಗೆ ಎಂಟು ಫಲಕಗಳಿರುವುದರಿಂದ ಇದನ್ನು ಒಂದು ಕ್ರಮ ಅಷ್ಟಫಲಕವೆಂದು ಕರೆಯುತ್ತೇವೆ. ಇದೇ ರೀತಿಯಲ್ಲಿ ಪ್ರತಿಯೊಂದು ಫಲಕಕ್ಕೂ ಐದು ಮತ್ತು ಪ್ರತಿಯೊಂದು ಶೃಂಗಕ್ಕೂ ಮೂರು ಅಂಚುಗಳಿರುವಂಥ ಒಂದು ಕ್ರಮ ಬಹುಫಲಕವಿದೆಯೆಂದೂ ಸಾಧಿಸಬಹುದು. ಇದಕ್ಕೆ ಹೊಂದುವಂಥ ವಿಕೃತ ರೂಪವನ್ನು ಚಿತ್ರ (3)ರಲ್ಲಿ ಕೊಡಲಾಗಿದೆ. ಚಿತ್ರದಿಂದ ಈ ಘನಾಕೃತಿಗೆ 30 ಅಂಚುಗಳು, 20 ಶೃಂಗಗಳು ಮತ್ತು 12 ಫಲಕಗಳಿವೆಯೆಂದು ತಿಳಿಯಬಹುದು. ಇದರ ಹೆಸರು ಕ್ರಮದ್ವಾದಶ ಫಲಕ.

ಒಂದು ಕ್ರಮವಿಂಶತ್ರಿಭುಜಕ್ಕೆ ಅನ್ವಯವಾಗುವಂಥ ಪ್ರಮೇಯ ಉಂಟು : ಪ್ರತಿ ಒಂದು ಶೃಂಗಕ್ಕೆ ಐದು ಮತ್ತು ಪ್ರತಿ ಒಂದು ಫಲಕಕ್ಕೆ ಮೂರು ಅಂಚುಗಳಿರುವಂಥ ಒಂದು ಕ್ರಮ ಬಹುಫಲಕವಿದೆ (ಚಿತ್ರ–4). ಒಂದು ಮಾದರಿಯಲ್ಲಿ ಅಥವಾ ವಿಕೃತ

ಬಹುಫಲಕದಲ್ಲಿ OA, OB, OC, OD, OE ಎನ್ನುವ ಐದು ಅಂಚುಗಳು ಸಂಗಮಿಸುವ O ಎನ್ನುವ ಶೃಂಗದಿಂದ ತೊಡಗಿ OAB, OBC . . .ತ್ರಿಭುಜ ಫಲಕಗಳನ್ನು ಪೂರ್ಣಗೊಳಿಸುತ್ತೇವೆ. A, B, . . . ಶೃಂಗಗಳಲ್ಲಿ ಪ್ರತಿಯೊಂದರಲ್ಲಿ ಇನ್ನೂ ಎರಡು ಅಂಚುಗಳೂ AB, AC, . . . ಅಂಚುಗಳಿಗೆ ಪ್ರತಿಯೊಂದಕ್ಕೂ ಒತ್ತಾಗಿ ಒಂದೊಂದು ತ್ರಿಭುಜ ಫಲಕವೂ ನಮಗೆ ಬೇಕಾಗಿವೆ. ಇವನ್ನು $ABD_1$, $BOE_1$, . . . ತ್ರಿಭುಜಗಳು ಪೂರೈಸುವುವು. $C_1AD_1$, $D_1BE_1$, . . . . ತ್ರಿಭುಜಗಳನ್ನು ಪೂರ್ಣಗೊಳಿಸಬೇಕು. ಈಗ $A_1$, $B_1$, . . . ಪ್ರತಿಂಯೊಂದು ಶೃಂಗದಲ್ಲಿಯೂ ಇನ್ನೊಂದು ಅಂಚು ಬೇಕಾಗಿವೆ. $A_1$, $B_1$, $C_1$, . . . ಗಳಿಂದ ಪ್ರಾರಂಭಿಸಿ O1, ಬಿಂದುವಿನಲ್ಲಿ ಸಂಗಮಿಸುವ ಅಂಚುಗಳು ಈ ಆವಶ್ಯಕತೆಯನ್ನು ಪೂರ್ಣಗೊಳಿಸುವುವು.



ಚಿತ್ರ 4

ಕ್ರಮಬಹುಫಲಕಗಳ ರಟ್ಟಿನ ಮಾದರಿಗಳು : ಒಂದು ಕ್ರಮ ಬಹುಫಲಕದ ಮಾದರಿಯನ್ನು ತೆಳು ರಟ್ಟಿನಿಂದ ರಚಿಸಿ ಅದರ ಅಂಚುಗಳಲ್ಲಿ ಅದನ್ನು ಕತ್ತರಿಸಿ ಫಲಕಗಳು ವಿಕೃತಗೊಳ್ಳದಂತೆ ಅದನ್ನು ಚಪ್ಪಟೆಗೊಳಿಸಿದೆಯೆಂದು ಭಾವಿಸೋಣ. ಹೀಗೆ ದೊರೆಯುವಂಥ ಸಮತಲಾಕೃತಿಗೆ ಬಹುಫಲಕದ ಬಲೆ (ನೆಟ್) ಎಂದು ಹೆಸರು. ವಿಲೋಮವಾಗಿ ಒಂದು ಬಲೆ ದತ್ತವಾಗಿರುವಾಗ ಅದರ ಅನುರೂಪ ಬಹುಫಲಕವನ್ನು ರಚಿಸಲು ಮುಂದುವರಿಯುವ ಕ್ರಮ ಹೀಗಿದೆ : ಬಲೆಯಲ್ಲಿ ಪರಸ್ಪರ ಒತ್ತಾಗಿರುವ ಫಲಕಗಳ ಸಾಮಾನ್ಯ ಅಂಚಿನಲ್ಲಿ ರಟ್ಟಿನ ಮೇಲೆ ಬ್ಲೇಡಿನ ಸಹಾಯದಿಂದ ಗೀರಬೇಕು. ಹೀಗೆ ಗೀರಿದ ಅಂಚುಗಳಲ್ಲಿ ಫಲಕಗಳು ಒಳಸೇರುವಂತೆ ಮಡಿಸಬೇಕು. ಕೊನೆಗೆ ಬಿಡು ಅಂಚುಗಳು ಒಂದನ್ನು ಇನ್ನೊಂದು ಸೇರುವಂತೆ ಅಂಟುಪಟ್ಟಿಯ ಸಹಾಯದಿಂದ ಅವನ್ನು ಜೋಡಿಸಬೇಕು.

ಒಂದು ಕ್ರಮಬಹುಫಲಕದ ಅಥವಾ ಯಾವುದೇ ಒಂದು ಬಹುಫಲಕದ ವಿಕೃತ ರೂಪವಿದೆಯೆಂದೂ ಅದರ ಗಾತ್ರ ಮತ್ತು ಫಲಕಗಳ ಆಕಾರ ತಿಳಿದಿವೆಯೆಂದೂ ಭಾವಿಸೋಣ. ಆಗ ರೂಪದ ಪೂರ್ವಜ್ಞಾನವಿಲ್ಲದೆ ಒಂದು ಬಲೆಯನ್ನು ರಚಿಸಬಹುದು. ಆ ವಿಕೃತರೂಪದಲ್ಲಿನ ಎಲ್ಲ ಫಲಕಗಳನ್ನೂ ಸಂಖ್ಯೆಗಳಿಂದ ಗುರುತಿಸಬೇಕು ನಿರ್ದಿಷ್ಟ ಫಲಕಗಳ ಒತ್ತಿಗೆ ಬರುವ ಮತ್ತು ನಿರ್ದಿಷ್ಟ ಶೃಂಗಗಳಲ್ಲಿ ಸಂಗಮಿಸುವ ಫಲಕಗಳ ಸ್ಥಾನಗಳನ್ನು ಗಮನಿಸಬೇಕು; ಹೀಗೆ ಮಾಡಿದರೆ ಅದು ಬಲೆಯ ಒಳಮೈಯನ್ನು (ಇನ್ನರ್ ಸರ್ಫೇಸ್) ಕೊಡುವುದು. ಆದ್ದರಿಂದ ಬಲೆಯಿಂದ ಬಹುಫಲಕವನ್ನು ರಚಿಸುವಾಗ ಇದಕ್ಕೆ ಅನುಗುಣವಾಗಿ ಮಡಿಸಬೇಕು. ಕ್ರಮ ಅಷ್ಟಭುಜದ ವಿಕೃತರೂಪದಲ್ಲಿ 1,2,3,4 ಫಲಕಗಳಿಗೆ ಒಂದು ಸಾಮಾನ್ಯ ಶೃಂಗವಿದೆ ಮತ್ತು ಅವು ಪ್ರದಕ್ಷಿಣ ದಿಶೆಯಲ್ಲಿವೆ. ಈ ಬಲೆಯನ್ನು 1,2,3,4 ಎನ್ನುವ ನಾಲ್ಕು ಸಮಭುಜತ್ರಿಭುಜಗಳಿಂದ ಪ್ರದಕ್ಷಿಣ ದಿಶೆಯಲ್ಲಿ ಪ್ರಾರಂಭಿಸುತ್ತೇವೆ. 1,5 ಮತ್ತು 2,6 ಫಲಕಗಳು ಒತ್ತಾಗಿ ಇವೆ. ಅಲ್ಲದೆ 6,2,1,5, ಫಲಕಗಳು ಒಂದು ಸಾಮಾನ್ಯ ಶೃಂಗದ ಸುತ್ತ ಪ್ರದಕ್ಷಿಣ ದಿಶೆಯಲ್ಲಿ ಬರುತ್ತವೆ. ಇವಿಷ್ಟು ಅಂಶಗಳು 5 ಮತ್ತು 6 ತ್ರಿಭುಜಗಳ ನಿರ್ದಿಷ್ಟ ಸ್ಥಾನಗಳನ್ನು ಗುರುತಿಸಲು ನಮಗೆ ಸಹಾಯಕವಾಗುವುವು. ಈ ಪ್ರಕಾರ ಚಿತ್ರ (5) ರಲ್ಲಿರುವಂಥ ಅಥವಾ ಬೇರೊಂದು ಉತ್ತಮ ಪ್ರತ್ಯೇಕ ಬಲೆ ನಮಗೆ ದೊರೆಯುವುದು. ಇದೇ ರೀತಿ ಚಿತ್ರ (3) ಮತ್ತು ಚಿತ್ರ (4) ರಲ್ಲಿರುವ ವಿಕೃತ ಸಮದ್ವಾದಶ ಫಲಕ ಮತ್ತು ವಿಕೃತ ಸಮವಿಂಶತಿ ಫಲಕ ಅನುಕ್ರಮವಾಗಿ ಚಿತ್ರ (6) ಮತ್ತು ಚಿತ್ರ (7) ರಲ್ಲಿರುವ ಬಲೆಗಳನ್ನು ಕೊಡುವುವು. ಇವುಗಳಲ್ಲಿ ಫಲಕಗಳು ಅವುಗಳ ಮೊದಲಿನ ಸಂಖ್ಯೆಗಳನ್ನು ಉಳಿಸಿಕೊಂಡಿವೆ.



ಚಿತ್ರ 5




ಚಿತ್ರ 6

ಅರೆಕ್ರಮಬಹುಫಲಕ (ಸೆಮಿರೆಗ್ಯುಲರ್ ಪಾಲಿಹೆಡ್ರನ್) : ಒಂದು ಬಹುಫಲಕದ ಎಲ್ಲ ಫಲಕಗಳೂ ಕ್ರಮವಾಗಿದ್ದರೆ ಅಥವಾ ಅವೆಲ್ಲವೂ ಸರ್ವಸಮವಾಗಿದ್ದರೆ ಅಂಥ ಬಹುಫಲಕಕ್ಕೆ ಅರೆಕ್ರಮಬಹುಫಲಕ ಎಂದು ಹೆಸರು.

ಸಮಭುಜತ್ರಿಭುಜ ಮತ್ತು ಚೌಕ ಕ್ರಮಫಲಕಗಳು ಸಮದ್ವಿಭುಜ ತ್ರಿಭುಜ ಮತ್ತು ಆಯತಗಳಾದರೋ ಕ್ರಮಫಲಕಗಳಲ್ಲ. ಸರ್ವಸಮವಾಗಿರುವ ಎರಡು ಫಲಕಗಳಿರಬಹುದು; ಆದರೆ ಅವು ಕ್ರಮ ಫಲಕಗಳಾಗಿರಬೇಕಾಗಿಲ್ಲವೆಂಬುದು ಸ್ಪಷ್ಟ ಸಮದ್ವಿಭುಜ ತ್ರಿಭುಜಗಳಿಂದ ರಚಿತವಾದ ಚತುಷ್ಫಲಕವನ್ನು ಪರಿಶೀಲಿಸೋಣ. ಇದರ ಎಲ್ಲ ಫಲಕಗಳೂ ಸರ್ವಸಮವಾಗಿವೆ. ಆದರೆ ಯಾವ ಫಲಕವೂ ಕ್ರಮವಾಗಿಲ್ಲ. ಆದ್ದರಿಂದ ಈ ಚತುಷ್ಫಲಕವನ್ನು (ನಮ್ಮ ಮೇಲಿನ ವ್ಯಾಖ್ಯೆಯ ಪ್ರಕಾರ) ಎರಡನೆಯ ಜಾತಿಯ ಅರೆಕ್ರಮ ಬಹುಫಲಕ ಎಂದು ಕರೆಯುತ್ತೇವೆ. ಅಲ್ಲದೆ ಇಂಥ ಚತುಷ್ಫಲಕದ ಅಂಚುಗಳ ಆರು ನಡುಬಿಂದುಗಳು ಎರಡನೆಯ ಜಾತಿಯ ಅರೆಕ್ರಮ ಅಷ್ಟಫಲಕದ ಶೃಂಗಗಳಾಗಿವೆ. ಮೂರನೆಯ ಒಂದು ಉದಾಹರಣೆ ಯನ್ನೂ ಕೊಡಬಹುದು. ಒಂದು ಘನದ ಕೇಂದ್ರದ ಮೂಲಕ ಅದರ ಅಂಚುಗಳಿಗೆ ಸಮಾನಾಂತರ ರೇಖೆಗಳನ್ನು ಎಳೆಯಬೇಕು. ಅವುಗಳ ಮೇಲೆ ಕೇಂದ್ರದಿಂದ ಒಂದು ಅಂಚಿನಷ್ಟು ದೂರದಲ್ಲಿ ಬಿಂದುಗಳನ್ನು ಗುರುತಿಸ ಬೇಕು. ಹೀಗೆ ದೊರೆಯುವ ಆರು ಬಿಂದುಗಳೂ ಘನದ ಎಂಟು ಶೃಂಗ ಗಳೂ ಒಟ್ಟಾಗಿ ಎರಡನೆಯ ಜಾತಿಯ ಅರೆಕ್ರಮಬಹುಫಲಕದ 14 ಶೃಂಗ ಗಳಾಗುವುವು. ಅದಕ್ಕೆ 12 ಫಲಕಗಳೂ 24 ಅಂಚುಗಳೂ ಇವೆ. ಈ ಎಲ್ಲ ಫಲಕಗಳೂ ಸರ್ವಸಮ ವಜ್ರಾಕೃತಿಗಳು. ಇದರ ಹೆಸರು ವಜ್ರದ್ವಾದಶ ಫಲಕ (ರಾಂಬಿಕ್ ಡೋಡೆಕಹೆಡ್ರನ್). ಇಲ್ಲಿ ಮೊದಲನೆಯ ಜಾತಿಯ ಅರೆಕ್ರಮ ಬಹುಫಲಕಗಳಿಗೆ ಮೂರು ಉದಾಹರಣೆಗಳನ್ನು ಕೊಟ್ಟಿದೆ.




ಚಿತ್ರ 7

1, ಒಂದು ಕ್ರಮ ಚತುಷ್ಫಲಕದ ಪ್ರತಿಯೊಂದು ಅಂಚನ್ನು ಮೂರು ಸಮಭಾಗಗಳಾಗಿ ವಿಭಾಗಿಸುವ ಒಂದೊಂದು ಜೊತೆ ಬಿಂದುಗಳು ಒಂದನೆಯ ಜಾತಿಯ ಅರೆಕ್ರಮ ಘನಾಕೃತಿಯ ಶೃಂಗಗಳು. ಇದಕ್ಕೆ ಎಂಟು ಫಲಕಗಳಿವೆ. ಇವುಗಳಲ್ಲಿ ನಾಲ್ಕು ಸಮಭುಜ ತ್ರಿಭುಜಗಳು, ಮತ್ತು ಉಳಿದವು ಕ್ರಮಷಷ್ಠಭುಜಗಳು.

2. ಒಂದು ಘನದ ಅಂಚುಗಳ 12 ನಡುಬಿಂದುಗಳು ಒಂದು ಅರೆಕ್ರಮ ಬಹುಫಲಕದ ಶೃಂಗಗಳು. ಇದಕ್ಕೆ 6 ಚೌಕಗಳೂ 8 ಸಮಭುಜ ತ್ರಿಭುಜಗಳೂ ಫಲಕಗಳಾಗಿವೆ. ಈ ಘನಾಕೃತಿಯ ಹೆಸರು ಚೌಕಾಷ್ಟಫಲಕ (ಕ್ಯೂಬಾಕ್ಟಹೆಡ್ರನ್).

3. ಒಂದು ಘನದ ಪ್ರತಿಯೊಂದು ಫಲಕವೂ ಕ್ರಮ ಅಷ್ಟಭುಜವಾಗುವಂತೆಯೂ ಪ್ರತಿಯೊಂದು ಶೃಂಗದಲ್ಲಿ ಸಮಭುಜ ತ್ರಿಭುಜ ದೊರೆಯುವಂತೆಯೂ ಘನವನ್ನು ಛೇದಿಸುವಾಗ ದೊರೆಯುವ ಘನಾಕೃತಿ. ಇದರ ಹೆಸರು ಖಂಡಿತ ಘನ (ಟ್ರಂಕೇಟೆಡ್ ಕ್ಯೂಬ್).

(ಬಿ.ಬಿ.ಬಿ)

**ಘರ್ಷಕ :** ಪದಾರ್ಥಗಳನ್ನು ಉಜ್ಜಿ ಇಲ್ಲವೇ ಸಾಣೆ ಹಿಡಿದು ನಯಮಾಡಲು ಅಥವಾ ನಿಶ್ಚಿತ ರೂಪಕ್ಕೆ ತರಲು ಬಳಸುವ ಅತ್ಯಂತ ಕಠಿಣವಾದ ವಸ್ತು (ಅಬ್ರೇಸಿವ್). ಘರ್ಷಕಗಳು ಬಿಡಿಹರಳುಗಳಾಗಬಹುದು, ಸಾಣೆ ಚಕ್ರವಾಗಬಹುದು, ಮರಳು ಕಾಗದವಾಗಬಹುದು; ಅಥವಾ ಕರ್ತನೋಪಕರಣಗಳೂ ಆಗಬಹುದು. ವಜ್ರ, ಕುರಂದ, ಎಮರಿ, ಬೀಸುವಕಲ್ಲು, ಸಾಣೆ ಹಿಡಿಯುವ ತಿರುಗುಚಕ್ರ ಇವೆಲ್ಲವೂ ಬಳಕೆಯಲ್ಲಿರುವ ಘರ್ಷಕಗಳು. ಸಾಣೆ ವಸ್ತುವಾಗಲು ಯೋಗ್ಯತೆ ಇರುವಂಥ ಖನಿಜಗಳು ಸ್ವಾಭಾವಿಕವಾಗಿ ಸಿಕ್ಕುತ್ತವೆ. ಅವನ್ನು ಕೃತಕವಾಗಿಯೂ ತಯಾರಿಸಬಹುದು. ಆಧುನಿಕ ಕೈಗಾರಿಕೋದ್ಯಮಗಳಲ್ಲಿ ಕೃತಕ ಸಾಣೆ ವಸ್ತುಗಳ ಪಾತ್ರವೇ ಹೆಚ್ಚಿನದು. ಇವನ್ನು ನಾಲ್ಕು ಮುಖ್ಯ ವರ್ಗಗಳಾಗಿ ವಿಂಗಡಿಸಿದೆ:

1. ಸ್ವಾಭಾವಿಕ ಸಾಣೆ ವಸ್ತುಗಳು : ವಜ್ರ, ಕುರಂದ, ಎಮರಿ ಮತ್ತು ಗಾರ್ನೆಟ್, ಇವುಗಳ ಪೈಕಿ ಅತಿ ಮುಖ್ಯವಾದದ್ದು ವಜ್ರ. ಇದಕ್ಕಿಂತ ಕಠಿಣ ವಸ್ತು ಇನ್ನೊಂದಿಲ್ಲ. ವಜ್ರದ ಚೂರುಗಳನ್ನು ಜೋಡಿಸಿರುವ ಆಯುಧದಿಂದ ಎಂಥ ಗಡಸು ಕಲ್ಲನ್ನೂ ಕೊರೆಯಬಹುದು. ಭೂಮಿಯಲ್ಲಿ ಅತಿ ಆಳದಲ್ಲಿ ದೊರೆಯುವ ಖನಿಜಗಳ ಅನ್ವೇಷಣೆಗೆ ವಜ್ರಾಯುಧಗಳು ಸಹಕಾರಿ. ಹಾಗೆಯೇ ಕಲ್ಲುಗಳನ್ನು ನಯಮಾಡುವುದಕ್ಕೂ ಗಾಜುಗಳನ್ನು ಸೀಳುವುದಕ್ಕೂ ವಜ್ರಮಿಶ್ರಿತ ಆಯುಧಗಳನ್ನು ಉಪಯೋಗಿಸುತ್ತಾರೆ. ಕಾರ್ಬೋನಾಡೋ ಮತ್ತು ಬೋರ್ಟ್ ಎಂಬ ಎರಡು ಬಗೆಯ ವಜ್ರರೂಪಗಳು ಈ ಕೆಲಸಕ್ಕೆ ಉಪಯೋಗ ವಾಗುತ್ತವೆ. ಇವು ಪಾರದರ್ಶಕವಲ್ಲದವು. ಅವುಗಳಿಗೆ ಕಾಠಿಣ್ಯ ಬಿಟ್ಟು ಹೊಳಪಾಗಲಿ ಪಾರದರ್ಶಕತೆಯಾಗಲಿ ಇರುವುದಿಲ್ಲ. ಕುರಂದ ಸ್ವಾಭಾವಿಕವಾಗಿ ಸಿಕ್ಕುವ ಖನಿಜ. ಇದು ಆರು ಮೂಲೆಯ ಹರಳುಗಳಾಗಿ ದೊರೆಯುತ್ತದೆ. ಕುರಂದ ಕಲ್ಲಿನಲ್ಲಿ ಮೂರು ಮುಖ್ಯ ರೂಪಗಳನ್ನು ಗುರುತಿಸಬಹುದು: (i) ವೈಡೂರ್ಯ, (ii) ಕುರಂದ ಮತ್ತು (iii) ಎಮರಿ.

ಪಾರದರ್ಶಕವಾಗಿದ್ದು ಹೊಳಪುಳ್ಳ ರತ್ನ ಯೋಗ್ಯವಾದ ಕುರಂದ ವೈಡೂರ್ಯವೆಂದೆನಿಸಿಕೊಳ್ಳುತ್ತದೆ. ಪಾರದರ್ಶಕವಲ್ಲದ ಸಾಮಾನ್ಯ ಖನಿಜಕ್ಕೆ ಕುರಂದವೆಂದು ಹೆಸರು. ಕುರಂದದೊಡನೆ ಮ್ಯಾಗ್ನಟೈಟ್, ಹೀಮಟೈಟ್ ಮುಂತಾದ ಕಬ್ಬಿಣ ಸಂಬಂಧದ ಹರಳುಗಳು ಸೇರಿದಾಗ ಅದಕ್ಕೆ ಎಮರಿ ಎಂದು ಹೆಸರು. ಕುರಂದ ಮತ್ತು ಎಮರಿ ಕಠಿನವಾದ ಉತ್ತಮ ದರ್ಜೆಯ ಸಾಣೆ ವಸ್ತುಗಳು. ಇವು ಬಣ್ಣದಲ್ಲಿ ಬೂದು ಅಥವಾ ಕೆಂಪು ಛಾಯೆಯನ್ನು ಹೊಂದಿವೆ. ಕುರಂದದ ಪುಡಿ ಇಲ್ಲವೆ ಅಂಟು ಪದಾರ್ಥ ಸೇರಿಸಿ ತಯಾರಿಸಿದ ಕುರಂದ ಕಾಗದ (ಮರಳು ಕಾಗದ) ಅಥವಾ ವಿವಿಧ ಆಕಾರದ ಅಳತೆಯ ಕುರಂದದ ಸಾಣೆ ಚಕ್ರವನ್ನು ಸಾಣೆ ಕೆಲಸಕ್ಕೆ ಉಪಯೋಗಿಸುತ್ತಾರೆ. ಗಾರ್ನೆಟ್ ಅಥವಾ ಕೆಂಪು ಕೂಡ ಸಾಣೆಗೆ ಯೋಗ್ಯವಾದ ಖನಿಜ. ಇದು ಪಾರದರ್ಶಕವಾಗಿದ್ದರೆ ಮಾತ್ರ ರತ್ನವೆಂದು ಪರಿಗಣಿಸಲ್ಪಡುತ್ತದೆ. ಸಾಧಾರಣವಾದ ಗಾರ್ನೆಟ್ ಸಾಣೆ ಕೆಲಸಕ್ಕೆ ಉಪಯೋಗವಾಗುತ್ತದೆ. ಗಾರ್ನೆಟ್ ಪುಡಿ ಅಂಟಿಸಿ ಮಾಡಿರುವ ಮರಳು ಕಾಗದಗಳನ್ನು ಮರಗೆಲಸದಲ್ಲಿಯೂ ಚರ್ಮವನ್ನು ನುಣುಪು ಮಾಡುವುದರಲ್ಲಿಯೂ ಉಪಯೋಗಿಸುತ್ತಾರೆ.

2. ಸಿಲಿಕಾಂಶವಿರುವ ಘರ್ಷಕ ವಸ್ತುಗಳು : ಬೀಸುವಕಲ್ಲು, ಫ್ಲಿಂಟ್ ಗುಂಡುಗಳು ಮತ್ತು ಬೆಣಚು. ಪ್ರತಿ ಮನೆಯಲ್ಲಿಯೂ ಬೀಸುವುದಕ್ಕಾಗಿ ಉಪಯೋಗಿಸುವ ಬೀಸುಕಲ್ಲುಗಳೂ ಒಂದು ಬಗೆಯ ಘರ್ಷಕ ವಸ್ತುಗಳೇ. ಕಠಿಣ ಮತ್ತು ತೂಕವಾಗಿರುವ ಬೆಣಚು ಹರಳುಗಳನ್ನು ಒಳಗೊಂಡ ಕಲ್ಲುಗಳು ಬೀಸುವ ಕೆಲಸಕ್ಕೆ ಹೇಳಿದಂಥವು. ಹೊನ್ನಾಳಿ ತಾಲ್ಲೂಕಿನಲ್ಲಿ ಇಂಥ ಬಗೆಯ ಕಲ್ಲು ದೊರೆಯುವ ಗುಡ್ಡ ಉಂಟು. ಅದಕ್ಕೆ ಬೀಸೊಕಲ್ ಮಟ್ಟಿ ಎಂದೇ ಹೆಸರು. ಕತ್ತಿ ಮತ್ತು ಚಾಕುಗಳನ್ನು ಸಾಣೆ ಹಿಡಿಯುವುದಕ್ಕೆ ಸ್ಲೇಟುಕಲ್ಲನ್ನು ಉಪಯೋಗಿಸುತ್ತಾರೆ. ಫ್ಲಿಂಟ್ ಎಂಬುದು ಗಡುಸಾದ ಬೆಣಚುಕಲ್ಲಿನ ಒಂದು ರೂಪ. ಫ್ಲಿಂಟ್‌ನಿಂದಾದ ಕಲ್ಲು ಗುಂಡುಗಳನ್ನು ಉರುಳುವ ಬಾಲ್ ಮಿಲ್ಲುಗಳಲ್ಲಿ ಉಪಯೋಗಿಸುತ್ತಾರೆ. ಫ್ಲಿಂಟ್ ಗುಂಡುಗಳ ಘರ್ಷಣೆಯಿಂದ ಎಂಥ ಕಠಿಣ ಕಲ್ಲನ್ನೂ ದೂಳಿನ ಗಾತ್ರಕ್ಕೆ ಚೂರ್ಣಿಸಬಹುದು. ಖನಿಜ ಸಾಮಗ್ರಿಯನ್ನು ನುಣ್ಣಗೆ ಅರೆಯುವುದಕ್ಕೆ ಫ್ಲಿಂಟ್ ಗುಂಡುಗಳನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

3. ಮೃದು ಸಾಣೆ ವಸ್ತುಗಳು : ಕೆಯೊಲಿನ್, ಫೆಲ್‌ಸ್ಪಾರ್, ಬಳಪದ ಕಲ್ಲು ಮತ್ತು ಟಾಲ್ಕ್ ಇವುಗಳಲ್ಲಿ ಸೇರುತ್ತವೆ. ಮುಖ್ಯವಾಗಿ ವಸ್ತುಗಳಿಗೆ ಮೆರುಗು ಕೊಡಲು ಇವನ್ನು ಬಳಸುತ್ತಾರೆ. ಮೋಟಾರು ಗಾಡಿಯ ಎಂಜಿನಿನ ಸಿಲಿಂಡರನ್ನು ಬಹು ಹೊಳಪಾಗಿಯೂ ಸಮಂಜಸವಾಗಿಯೂ ಕೂಡಿಸಲು ಇಂಥ ಮೃದು ಸಾಣೆ ವಸ್ತುಗಳ ಉಪಯೋಗ ಉಂಟು.

4 ಕೃತಕ ಘರ್ಷಕ ವಸ್ತುಗಳು : ಕಾರ್ಬೋರೆಂಡಮ್ ಅಥವಾ ಸಿಲಿಕಾನ್ ಕಾರ್ಬೈಡ್, ಆಲುಂಡಮ್ ಮತ್ತು ಲೋಹ ಘರ್ಷಕಗಳು. ಇವು ಈಚಿನ ವರ್ಷಗಳಲ್ಲಿ ಬಹಳ ಪ್ರಾಮುಖ್ಯಕ್ಕೆ ಬಂದಿವೆ. ಉತ್ತಮ ಸಿಲಿಕ ಮತ್ತು ಇದ್ದಲು, ಸ್ವಲ್ಪ ಮಟ್ಟಿಗೆ ಮರದ ಹೊಟ್ಟು, ಉಪ್ಪು ಇವನ್ನು ಸೇರಿಸಿ ಅತ್ಯುಷ್ಣತೆಗೆ ಗುರಿಪಡಿಸಿದರೆ ಇವುಗಳ ಸಂಯೋಗ ನಡೆದು ಸಿಲಿಕಾನ್ ಕಾರ್ಬೈಡ್ ಉತ್ಪತ್ತಿಯಾಗುತ್ತದೆ. ಉಷ್ಣತೆ ಸುಮಾರು 30000°ಸೆಂ. ಬೇಕಾಗಿರುವುದರಿಂದ ವಿದ್ಯುತ್ ಒಲೆಯನ್ನೇ ಉಪಯೋಗಿಸಬೇಕು. ಕಾರ್ಬೋರಂಡಮ್ ಸುಮಾರು ವಜ್ರದಷ್ಟೇ ಕಠಿಣವಾಗಿದೆ. ಇದರ ಹರಳುಗಳು ಬಹು ಪೆಡಸು, ಇದರ ಉಷ್ಣತಾಸಹಿಷ್ಣುತೆ ಕೂಡ ಅತಿ ಹೆಚ್ಚು. ಆದ್ದರಿಂದಲೇ ಈ ವಸ್ತುವನ್ನು ಬೀಡುಕಬ್ಬಿಣ, ಸತು, ತಾಮ್ರ, ಕಲ್ಲು, ಗಾಜು ಮೊದಲಾದವನ್ನು ಉಜ್ಜಿ ಹರಿತಗೊಳಿಸಲು ಮತ್ತು ನಯಮಾಡಲು ಉಪಯೋಗಿಸುತ್ತಾರೆ. ಏಕೀಕರಿಸಿದ ಅಲ್ಯೂಮಿನಿಯಮ್ ಆಕ್ಸೈಡ್ ಕೂಡ ಕಾರ್ಬೊರಂಡಮಿನಂತೆಯೇ ಒಳ್ಳೆಯ ಸಾಣೆ ವಸ್ತು. ಇದನ್ನು ಬಾಕ್ಸೈಟ್ ಎಂಬ ಅಲ್ಯೂಮಿನಿಯಂ ಅದಿರಿನಿಂದ ತಯಾರಿಸುತ್ತಾರೆ. ಬಾಕ್ಸೈಟ್ ಅದಿರು, ಕೋಕ್ ಮತ್ತು ಕಬ್ಬಿಣದ ಚೂರುಗಳನ್ನು ಸೇರಿಸಿ ಒಂದು ವಿದ್ಯುತ್ ಒಲೆಯಲ್ಲಿ ಕರಗಿಸಿದಾಗ ರಾಸಾಯನಿಕ ಕ್ರಿಯೆಗಳು ನಡೆದು ನೀರು ಮತ್ತು ಇತರ ಕಲ್ಮಷಗಳು ಕೆಳಗೆ ನಿಂತು, ಮೇಲೆ ಏಕೀಕರಿಸಿದ ಅಲ್ಯೂಮಿನಿಯಮ್ ಆಕ್ಸೈಡ್ ಉತ್ಪನ್ನವಾಗುತ್ತದೆ. ಅದನ್ನು ಹೊರಕ್ಕೆ ತೆಗೆದು ಪುಡಿಮಾಡಿ ಸಲ್ಫ್ಯೂರಿಕ್ ಆಮ್ಲದಲ್ಲೂ, ಬಳಿಕ ಸೋಡಿಯಮ್ ಹೈಡ್ರಾಕ್ಸೈಡ್ ದ್ರಾವಣದಲ್ಲೂ ಶುದ್ಧೀಕರಿಸಿ ನೀರಿನಲ್ಲಿ ತೊಳೆಯುತ್ತಾರೆ. ಹೀಗೆ ಉತ್ಪಾದನೆಯಾದ ಏಕೀಕರಿಸಿದ ಅಲ್ಯೂಮಿನಿಯಮ್ ಆಕ್ಸೈಡನ್ನು ಸಾಣೆಕಲ್ಲು ಮಾಡುವುದಕ್ಕೂ ಹೇರಳವಾಗಿ ಉಪಯೋಗಿಸುತ್ತಾರೆ.

ಕರಗಿರುವ ಉಕ್ಕನ್ನು ಒಮ್ಮೆಗೇ ತಣ್ಣಗಾಗುವಂತೆ ಮಾಡಿದಾಗ ಅದು ಅತಿ ಗಡುಸಾಗುತ್ತದೆ. ಇಂಥ ಗಡುಸಾದ ಉಕ್ಕಿನ ಗೋಲಿಗಳನ್ನು ಬಾಲ್ ಮಿಲ್ಲುಗಳಲ್ಲಿ ಹೇರಳವಾಗಿ ಉಪಯೋಗಿಸುತ್ತಾರೆ. ಗಡುಸಾದ ಎಂಥ ಕಲ್ಲನ್ನಾಗಲಿ ಈ ಬಾಲ್ ಮಿಲ್ಲುಗಳಲ್ಲಿ ಹಿಟ್ಟಿನಂತೆ ನುಣ್ಣಗೆ ಮಾಡಿಬಿಡಬಹುದು. ಉಕ್ಕಿನ ತಂತಿಗಳನ್ನು ಹೆಣೆದು ನಾರಿನಂತೆ ಮಾಡಿ ಅದನ್ನು ಮರದ ಸಾಮಾನುಗಳನ್ನು ಹೆರೆಯುವುದಕ್ಕೂ ನಯ ಮಾಡುವುದಕ್ಕೂ ಬಳಸುವುದುಂಟು.

(ಬಿ.ಪಿ.ಆರ್.)

**ಘರ್ಷಕ ಪರೀಕ್ಷಣ ಯಂತ್ರ :** ಪರಸ್ಪರಾಭಿಮುಖವಾದ ಎರಡು ವಸ್ತುಗಳು ಒಂದನ್ನೊಂದು ಉಜ್ಜಿದಾಗ ಅವುಗಳ ಮೇಲ್ಮೈಯಲ್ಲಿ ಉಂಟಾಗುವ ಸವೆತವನ್ನು ಅಳೆಯಲು ಬಳಸುವ ಯಂತ್ರ (ಅಬ್ರೇಷನ್ ಟೆಸ್ಟಿಂಗ್ ಮಷೀನ್). ಸಾಮಾನ್ಯವಾಗಿ ಇಲ್ಲಿ ಬಳಸುವ ಯಂತ್ರದ ಹೆಸರು ಡಾರಿಯ ಪರೀಕ್ಷಾಯಂತ್ರ. ಇದಕ್ಕೆ ದುಂಡನೆಯ, ತಿರುಗುವ ಒಂದು ಉಕ್ಕಿನ ಬಟ್ಟು ಉಂಟು. ಪರೀಕ್ಷೆಗೆ ಒಳಗಾಗುವ ಕಲ್ಲಿನ ಪ್ರಮಾಣ ಒಂದು ಅಂಗುಲ ವ್ಯಾಸ ಮತ್ತು ಒಂದು ಅಂಗುಲ ಎತ್ತರ ಇರಬೇಕು. ಇಂಥ ಕಲ್ಲನ್ನು ಮೊದಲು ತೂಕ ಮಾಡಿ ಇದನ್ನು ಉಕ್ಕಿನ ಬಟ್ಟಿನ ಮೇಲಿಟ್ಟು 1,250 ಗ್ರಾಂಗಳಷ್ಟು ಒತ್ತಡಕ್ಕೆ ಗುರಿಪಡಿಸಬೇಕು. ಅನಂತರ ಉಕ್ಕಿನ ಬಟ್ಟನ್ನು ಮಿನಿಟಿಗೆ 28 ಸುತ್ತುಗಳಂತೆ ಆವರ್ತಿಸಬೇಕು. ಹೀಗೆ ಸುತ್ತುತ್ತಿರುವಾಗ ದಪ್ಪವಾದ ಮರಳನ್ನು ಅದರ ಮೇಲೆ ನಿಧಾನವಾಗಿ ಉದುರಿಸಬೇಕು. ಪರೀಕ್ಷೆಗೆ ಒಳಗಾಗಿರುವ ಕಲ್ಲು ಆಗ ದಪ್ಪವಾದ ಮರಳಿನೊಡನೆ ಸಂಪರ್ಕವನ್ನು ಪಡೆದಿರುವುದು. ಉಕ್ಕಿನ ಬಟ್ಟು 1000 ಸುತ್ತು ಸುತ್ತಬೇಕು. ಹೀಗೆ ಸುತ್ತುವಾಗ ಮರಳಿನ ಮೂಲಕ ಪರೀಕ್ಷೆಗೆ ಗುರಿಯಾದ ಕಲ್ಲಿನೊಡನೆ ಸಂಪರ್ಕ ಹೊಂದಿರುವಂತೆ ನೋಡಿಕೊಳ್ಳಬೇಕು. ಈ ಕಾರ್ಯ ನಡೆಯುತ್ತಿರುವಾಗ ಮರಳಿನಿಂದ ತರಿಯಾಗಿರುವ ಬಟ್ಟಿನ ಮೇಲ್ಮೈಗೆ ಕಲ್ಲಿನ ತಳಭಾಗ ಸಿಕ್ಕಿ ಉಜ್ಜಲ್ಪಟ್ಟು ಸವೆತ ಉಂಟಾಗುತ್ತದೆ. ಕಾಠಿಣ್ಯ ಗುಣಾಂಕವನ್ನು (ಕೋಎಫಿಷಂಟ್ ಆಫ್ ಹಾರ್ಡ್‌ನೆಸ್) ಈ ಕೆಳಗಣ ಸೂತ್ರದಿಂದ ನಿರ್ಧರಿಸಬಹುದು.

$$C = 20 - \frac{\text{ಕಲ್ಲಿನ ಸವೆತ (ಗ್ರಾಮಿನಲ್ಲಿ)}}{3}$$

ಈ ಸೂತ್ರದಿಂದ ನಿರ್ಧರಿಸಲ್ಪಟ್ಟ ಕಾಠಿನ್ಯ ಗುಣಾಂಕ ವಸ್ತುವಿನ ಘರ್ಷಕತ್ವವನ್ನು ಸೂಚಿಸುತ್ತದೆ. Cಯ ಗುಣಾಂಕ 14ಕ್ಕಿಂತ ಕಡಿಮೆ ಇದ್ದರೆ ಅದು ರಸ್ತೆಯ ಉಪಯೋಗಕ್ಕೆ ಯೋಗ್ಯವಲ್ಲ. 14 ರಿಂದ 17ರ ವರೆಗಿದ್ದರೆ ಅದು ಮಧ್ಯಮ ದರ್ಜೆಯದು, 17ಕ್ಕಿಂತ ಹೆಚ್ಚಿದ್ದರೆ ತೃಪ್ತಿಕರ.

(ಕೆ.ಸಿ.ಆರ್.)

**ಘರ್ಷಣಕ್ಷಯ ಪರೀಕ್ಷಣ ಯಂತ್ರ :** ಜಲ್ಲಿ ಹಾಸಿದ ರಸ್ತೆಯಲ್ಲಿ ವಾಹನಗಳ ಸಂಚಾರದಿಂದ ಜಲ್ಲಿಯಲ್ಲಿ ಆಗುವ ಕ್ಷಯ, ಮಾರ್ಪಾಡು ಮುಂತಾದವನ್ನು ಪರೀಕ್ಷಿಸಲು ರಚಿಸಿರುವ ಪ್ರಯೋಗಶಾಲಾ ಪ್ರತಿರೂಪ (ಅಟ್ರಿಷನ್ ಟೆಸ್ಟಿಂಗ್ ಮಷೀನ್). ವಾಸ್ತವಿಕ ಪರಿಸ್ಥಿತಿಯನ್ನು ಪ್ರಯೋಗಶಾಲೆಯಲ್ಲಿ ಅನುಕರಿಸಿ ಯಂತ್ರ ಪ್ರತಿರೂಪದ ನೆರವಿನಿಂದ ಮಾರ್ಪಾಡುಗಳನ್ನು ಅಳೆಯುವುದು ಇಲ್ಲಿನ ತಂತ್ರ. ಈ ಯಂತ್ರದಲ್ಲಿ 29ಸೆಂ.ಮೀ. ವ್ಯಾಸ ಮತ್ತು 34ಸೆಂ.ಮೀ. ಎತ್ತರದ ಒಂದು ಉರುಳೆ ಉಂಟು. ಇದರ ಒಳಗೆ ಸುಮಾರು $1\frac{7}{8}$ ಅಂಗುಲ ವ್ಯಾಸದ ಹಾಗೂ 390 ರಿಂದ 445 ಗ್ರಾಮ್ ತೂಕದ 6 ಗುಂಡುಗಳಿರುತ್ತವೆ. ಪ್ರತಿ ಪರೀಕ್ಷಾ ಕಾಲದಲ್ಲೂ ಹತ್ತು ಹೆಚ್ಚು ಕಡಿಮೆ 2,500 ಗ್ರಾಮುಗಳಷ್ಟು ಕಲ್ಲನ್ನು ನಿಗದಿ ಮಾಡಲ್ಪಟ್ಟ ಪ್ರಮಾಣದಲ್ಲಿ ಉರುಳೆಯ ಒಳಗೆ ಹಾಕಬೇಕು. ಯಂತ್ರದ ಆವರ್ತನ ವೇಗ ಮಿನಿಟಿಗೆ 30-35ರ ವರೆಗೆ ಇರುತ್ತದೆ. ಈ ವೇಗದಲ್ಲಿ ಯಂತ್ರ 10,000 ಸಲ ಆವರ್ತಿಸಿದ ಬಳಿಕ ಆದರಿಂದ ಜಲ್ಲಿಯೆಲ್ಲವನ್ನೂ ಹೊರತೆಗೆದು ಅದನ್ನು 12ನೆಯ ಸಂಖ್ಯೆಯ ಜರಡಿಯಲ್ಲಿ ಜರಡಿ ಹಿಡಿಯಬೇಕು. ಜರಡಿಯಲ್ಲಿ ಉಳಿದ ಪದಾರ್ಥವನ್ನು ತೊಳೆದು ಆರಲು ಬಿಟ್ಟು ತರುವಾಯ ತೂಗಬೇಕು. ಹೀಗೆ ಮಾಡಿದ ತೂಕ ಅದರ ಅತಿಸಮೀಪದ ಗ್ರಾಮಿನಷ್ಟಿರಬೇಕು. ತೇಮಾನವನ್ನು ಮೂಲಪದಾರ್ಥದ ತೂಕಕ್ಕೂ 12ನೆಯ ಸಂಖ್ಯೆಯ ಜರಡಿಯಲ್ಲಿ ನಿಂತ ವಸ್ತುವಿನ ತೂಕಕ್ಕೂ ಉಂಟಾದ ಅಂತರವೆಂಬುದಾಗಿಯೂ ಪ್ರಾರಂಭದಲ್ಲಿ ಪರೀಕ್ಷೆಗಾಗಿ ಉಪಯೋಗಿಸಿದ್ದ ಪ್ರತಿರೂಪವಸ್ತುವಿನ ಸೇಕಡವಾರು ತೂಕವೆಂಬುದಾಗಿಯೂ ಪರಿಗಣಿಸಬೇಕು. ಈ ತೇಮಾನ ಶೇ.2 ಇದ್ದರೆ ಅಂಥ ಜಲ್ಲಿ ಅತ್ಯುತ್ತಮವಾದುದೆಂದೂ ಶೇ.7 ಇದ್ದರೆ ಅಂಥ ಜಲ್ಲಿ ಸಾಮಾನ್ಯವಾಗಿ ತೃಪ್ತಿಕರವಾದುದೆಂದೂ ನಿರ್ಧರಿಸಲಾಗುತ್ತದೆ.

(ಕೆ.ಸಿ.ಆರ್.)

**ಘರ್ಷಣೆ :** ಸಾಪೇಕ್ಷ ಚಲನೆಯ ವಿರುದ್ಧ ತಲೆದೋರುವ ಯಾಂತ್ರಿಕ ನಿರೋಧ (ಫ್ರಿಕ್ಷನ್) ಒಂದು ಪದಾರ್ಥವನ್ನು ಮತ್ತೊಂದರ ಮೇಲೆ ಸರಿಸಿದಾಗ ಚಲನೆಗೆ ಸ್ವಲ್ಪಮಟ್ಟಿನ ಅಡಚಣೆ ಉಂಟಾಗುತ್ತದೆಂಬುದು ಅನುಭವ. ಈ ಅಡಚಣೆಗೆ ಕಾರಣ ಆ ಪದಾರ್ಥಗಳ ಸ್ಪರ್ಶಬಿಂದುಗಳಲ್ಲಿ ಚಲನೆಯ ಪರಿಣಾಮವಾಗಿ ಉಂಟಾಗುವ ಸ್ಪರ್ಶಕೀಯ ಪ್ರತಿಬಲಗಳು. ನುಣುಪು ನೆಲದ ಮೇಲೆ ಚಲನೆ (ಎಂದರೆ ಜಾರಿಕೆ) ಸುಲಭ – ಕಾರಣ, ಪ್ರತಿಬಲಗಳು ಅಂದರೆ ಘರ್ಷಣೆ ಅಲ್ಲಿ ಕಡಿಮೆ. ಒರಟು ನೆಲದ ಮೇಲಾದರೋ ಚಲನೆ ಕಷ್ಟ–ಕಾರಣ, ಘರ್ಷಣೆ ಅಲ್ಲಿ ಹೆಚ್ಚು. ಸ್ಪಷ್ಟವಾಗಿ ಹೇಳುವುದಾದರೆ, ಯಾವುದೇ ವಸ್ತುವನ್ನು ಇನ್ನೊಂದರ ಮೇಲೆ ಸರಿಸಲು ಪ್ರಯುಕ್ತಿಸಬೇಕಾದ ಪ್ರಾರಂಭಿಕ ಬಲವೇ ಘರ್ಷಣೆ. ಉದಾಹರಣೆಗೆ

ಪುಸ್ತಕವೊಂದನ್ನು ಮೇಜಿನ ಮೇಲೆ ಇಟ್ಟಾಗ ಅದರ ಮೇಲೆ R ಎಂಬ ಪ್ರತಿಕ್ರಿಯೆ ಉಂಟಾಗುವುದಷ್ಟೆ (ಚಿತ್ರ 1). ಇದಕ್ಕೆ ಲಂಬ ಪ್ರತಿಕ್ರಿಯೆ ಎಂದು ಹೆಸರು. ವಸ್ತುವಿನ ತೂಕ W ಹೆಚ್ಚಿದಂತೆ ಲಂಬ ಪ್ರತಿಕ್ರಿಯೆಯ ಮೌಲ್ಯವೂ ಹೆಚ್ಚುತ್ತದೆ. ಈಗ ಪುಸ್ತಕವನ್ನು P ಎಂಬ ಬಲದಿಂದ ಮೃದುವಾಗಿ ತಳ್ಳಲು ಪ್ರಯತ್ನಿಸಿದರೆ ಅದು ಜರುಗಲಾರದು.




ಚಿತ್ರ 1

ಏಕೆಂದರೆ ಚಲನೆಯನ್ನು ತಡೆಗಟ್ಟುವ F ಎಂಬ ಪ್ರತಿಬಲವೊಂದು ಅದರ ಮೇಲೆ ಆಚರಣೆಗೆ ಬರುತ್ತದೆ. ಈ ಪ್ರತಿಬಲಕ್ಕೆ ಘರ್ಷಣಬಲವೆಂದು ಹೆಸರು. Pಯನ್ನು ಹೆಚ್ಚಿಸಿದಂತೆಲ್ಲ F ಕೂಡ ಹೆಚ್ಚಿ ಪುಸ್ತಕವನ್ನು ನಿಶ್ಚಲವಾಗಿಡಲು ಪ್ರಯತ್ನಿಸುತ್ತದೆ. ಆದರೆ ಯಾವುದೋ ಒಂದು ಹಂತದಲ್ಲಿ ಪುಸ್ತಕ ಜರುಗಲು ಪ್ರಾರಂಭಿಸಬಹುದು. ಈ ಹಂತದಲ್ಲಿ ಘರ್ಷಣ ಬಲ ಗರಿಷ್ಠವಾಗಿರುತ್ತದೆ. (ಚಿತ್ರ 1) ಇದಕ್ಕೆ ಸ್ಥಿರ ಘರ್ಷಣೆಯ ಪರಿಮಿತಿ ಎಂದು ಹೆಸರು. ಇದು ಲಂಬ ಪ್ರತಿಕ್ರಿಯೆಯನ್ನು ಮಾತ್ರವಲ್ಲದೆ ಮೇಲ್ಮೈಗಳ ಒರಟುತನವನ್ನೂ ಅವುಗಳ ವಸ್ತು ತರಹೆಯನ್ನೂ ಅವಲಂಬಿಸಿದೆ. ಆದರೆ ಮೇಲ್ಮೈಗಳ ಸಲೆಯನ್ನು ಅವಲಂಬಿಸಿಲ್ಲ. ವಸ್ತುವಿನ ತೂಕ (ಅಥವಾ ಲಂಬ ಪ್ರತಿಕ್ರಿಯೆ) ಹೆಚ್ಚಿದಂತೆಲ್ಲ ಘರ್ಷಣ ಬಲ ಹೆಚ್ಚುತ್ತದೆ. ಘರ್ಷಣೆಯ ಪರಿಮಿತಿ ಲಂಬಪ್ರತಿಕ್ರಿಯೆಗೆ ಅನುಗುಣವಾದದ್ದರಿಂದ ಇವುಗಳ ನಿಷ್ಪತ್ತಿ ಒಂದು ಸ್ಥಿರಾಂಕವಾಗಿರುವುದು. ಇದಕ್ಕೆ ಸ್ಥಿರ ಘರ್ಷಣ ಗುಣಾಂಕ ಎಂದು ಹೆಸರು.

$$\frac{\text{ಘರ್ಷಣೆಯ ಪರಿಮಿತಿ}}{\text{ಲಂಬ ಪ್ರತಿಕ್ರಿಯೆ}} = \text{ಘರ್ಷಣೆಯ ಪರಿಮಿತಿ}$$

ಪ್ರತೀಕಾತ್ಮಕವಾಗಿ $\frac{F}{R} = \mu$

ಎಂದಾಗುತ್ತದೆ. ಇದರ ಪ್ರಕಾರ 100 ಕಿ.ಗ್ರಾಂ. ತೂಕವುಳ್ಳ ವಸ್ತುವನ್ನು ಇನ್ನೇನು ಜರುಗಿಸಲು 20 ಕಿ.ಗ್ರಾಂ. ಬಲ ಬೇಕಾದರೆ ಘರ್ಷಣ ಗುಣಾಂಕ .00= 20/100 = 0.2. ಹಲವು ಪದಾರ್ಥಗಳ ಘರ್ಷಣ ಗುಣಾಂಕವನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ. ಒಣಗಿದ ಮತ್ತು ಸಾಕಷ್ಟು ನುಣುಪುಳ್ಳ ಅನೇಕ ಮೇಲ್ಮೈಗಳಿಗೆ ಇದರ ಬೆಲೆ 0.15 ರಿಂದ 0.6 ರ ತನಕ ಇರುತ್ತದೆ.

| ಸ್ಪರ್ಶದಲ್ಲಿರುವ ವಸ್ತುಗಳು | ಘರ್ಷಣ ಗುಣಾಂಕಗಳು |
|---|---|
| ಒಣಗಿದ ಮರಗಳು | 0.35 |
| ಚರ್ಮ ಮತ್ತು ಲೋಹ | 0.55 |
| ಕಬ್ಬಿಣ ಮತ್ತು ಕಲ್ಲು | 0.50 |
| ಮರ ಮತ್ತು ಕಲ್ಲು | 0.40 |
| ಕಲ್ಲು ಮತ್ತು ಕಲ್ಲು | 0.65 |
| ಎಣ್ಣೆ ಸವರಿದ ಲೋಹ | 0.05 |

ಘರ್ಷಣೆಗೆ ಸಂಬಂಧಪಟ್ಟ ಪ್ರಾಯೋಗಿಕ ವಿವರಗಳನ್ನು ಕೂಲಾಂಬ್ ಎಂಬಾತ ಪರೀಕ್ಷಿಸಿದ್ದಾನೆ. ಅದರ ಸ್ಥೂಲ ವಿವರವಿಷ್ಟು. ಘರ್ಷಣೆಯ ಪರೀಕ್ಷೆಗೆ ಒಳಪಡಿಸುವ ವಸ್ತುಗಳನ್ನು A ಮತ್ತು B ಎಂಬ ಚಪ್ಪಡಿಗಳಾಗಿ ಏರ್ಪಡಿಸಿದೆ (ಚಿತ್ರ–2). A ಯನ್ನು ಮೇಜಿನ ಮೇಲೆ ಭದ್ರಪಡಿಸಿ B ಎಂಬುದಕ್ಕೆ ದಾರವನ್ನು ಕಟ್ಟಿ ರಾಟೆಯ ಮೇಲೆ ಹಾಯಿಸಿ ತೂಕದ ತಟ್ಟೆಯನ್ನು ಕಟ್ಟಿದೆ. ತಟ್ಟೆಯಲ್ಲಿ ತೂಕದ ಬೊಟ್ಟುಗಳನ್ನು ಹಾಕುವುದರಿಂದ B ಯು A ಸಮತಲದ ಮೇಲೆ ಜರುಗುವಂತೆ ಮಾಡಬಹುದು. B ಯ ಮೇಲಿನ ತೂಕ R ಹೆಚ್ಚಿದಂತೆಲ್ಲ, ಅದನ್ನು ಜರುಗಿಸಲು ಬೇಕಾಗುವ ತೂಕ F ಎಂಬುದು ಹೆಚ್ಚುತ್ತದೆ. ಅಂದರೆ ತೂಕ ಅಥವಾ ಲಂಬ ಪ್ರತಿಕ್ರಿಯೆಗೆ ಅನುಗುಣವಾಗಿ ಘರ್ಷಣಬಲ ಇರುವುದೆಂದು ಹೇಳಬಹುದು. ಇದು ಘರ್ಷಣೆಯ ಮೊದಲನೆಯ ನಿಯಮ.




ಚಿತ್ರ 2

ಸ್ಥಿರ ಘರ್ಷಣೆಯ ನಿಯಮಗಳು ಈ ರೀತಿ ಇವೆ : 1 ಚಲನೆ ಇನ್ನೇನು ಆರಂಭಿಸುವ ಮುನ್ನಿನ ಘರ್ಷಣ ಬಲ (ಅಂದರೆ ಘರ್ಷಣೆಯ ಪರಿಮಿತಿ) ಮೇಲ್ಮೈಗಳ ಲಂಬ ಪ್ರತಿಕ್ರಿಯೆಗೆ ಅನುಗುಣವಾಗಿದೆ. 2 ಲಂಬ ಪ್ರತಿಕ್ರಿಯೆ ಸ್ಥಿರಾಂಕವಾಗಿರುವಾಗ ಘರ್ಷಣೆಯ ಪರಿಮಿತಿ (ಅಥವಾ ಘರ್ಷಣೆ) ಸಲೆಯನ್ನು ಅನುಸರಿಸಿ ಇರುವುದಿಲ್ಲ. 3 ಘರ್ಷಣೆಯ ಪರಿಮಿತಿ ಮತ್ತು ಲಂಬ ಪ್ರತಿಕ್ರಿಯೆಗಳ ನಿಷ್ಪತ್ತಿ ಒಂದು ಸ್ಥಿರಾಂಕ. ಇದಕ್ಕೆ ಘರ್ಷಣ ಗುಣಾಂಕವೆಂದು ಹೆಸರು.

ವಸ್ತುವನ್ನು ಜರುಗಿಸಲು ಬೇಕಾಗುವ ಪ್ರಾರಂಭಬಲ ಸ್ಥಿರಘರ್ಷಣೆ. ಜರುಗಿಸಿದ ತರುವಾಯ ಅದನ್ನು ಏಕರೀತಿ ಚಲನೆಯಲ್ಲಿ ಇಡಲು ಬೇಕಾಗುವ ಬಲ ಇದಕ್ಕಿಂತ ಕಡಿಮೆ ಇರುತ್ತದೆ. ಈ ಬಲಕ್ಕೆ ಗತೀಯ ಘರ್ಷಣೆ ಎಂದು ಹೆಸರು. ಇದರ ಬೆಲೆ ಸಾಮಾನ್ಯವಾಗಿ ಸ್ಥಿರ ಘರ್ಷಣೆಗಿಂತ ಕಡಿಮೆ. ಗತೀಯ ಘರ್ಷಣೆ ಮತ್ತು ಲಂಬ ಪ್ರತಿಕ್ರಿಯೆಗಳ ಅನುಪಾತಕ್ಕೆ ಚಲನ ಘರ್ಷಣಗುಣಾಂಕವೆಂದು ಹೆಸರು. ಇದು ಸಲೆಯನ್ನಾಗಲಿ ವಸ್ತುವಿನ ಚಲನವೇಗವನ್ನಾಗಲಿ ಅವಲಂಬಿಸಿಲ್ಲ. ಇಳಿಜಾರಿನ ಮೇಲೆ ವಸ್ತುವೊಂದನ್ನಿಟ್ಟು ಕ್ರಮೇಣ ಇಳಿತವನ್ನು ಏರಿಸುತ್ತ ಹೋದರೆ ಯಾವುದೋ ಒಂದು ಹಂತದಲ್ಲಿ ವಸ್ತು ಇನ್ನೇನು ಜಾರಲು ಆರಂಭಿಸುತ್ತದೆ. ಆ ಸ್ಥಿತಿಯಲ್ಲಿನ ಇಳಿಜಾರು ಕೋನದ ಬೆಲೆ $\theta$ ಆಗಿದ್ದರೆ $\tan\theta$ ವು ಘರ್ಷಣೆಯ ಗುಣಾಂಕ.

ನುಣುಪು ಹೆಚ್ಚಿದಷ್ಟೂ ಘರ್ಷಣೆ ಕಡಿಮೆ. ವಾಸ್ತವವಾಗಿ ನುಣುಪು ಎಂಬ ಪದಕ್ಕೆ ಅರ್ಥವಿಲ್ಲ. ಎಲ್ಲ ಮೇಲ್ಮೈಗಳೂ ಸಾಧಾರಣವಾಗಿ ಒರಟಾಗಿಯೇ ಇರುತ್ತವೆ. ಚೆನ್ನಾಗಿ ನುಣುಪು ಮಾಡಲ್ಪಟ್ಟ ವಸ್ತು ಕೂಡ ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಸಣ್ಣ ಸಣ್ಣ ಉಬ್ಬು ಮತ್ತು ತಗ್ಗುಗಳಿಂದ ಕೂಡಿರುವುದಾಗಿ ಕಾಣಬರುತ್ತದೆ. ವಸ್ತುಗಳನ್ನು ಒಂದರ ಮೇಲೊಂದಿಟ್ಟಾಗ ಒತ್ತಡದ ಉಷ್ಣತೆಯ ಪರಿಣಾಮವಾಗಿ ಈ ಉಬ್ಬುಗಳು ಬೆಸೆಯಲ್ಪಟ್ಟು ಒಂದಕ್ಕೊಂದು ಅಂಟಿಕೊಳ್ಳುವುದೂ ಉಂಟು. ಇದಕ್ಕೆ ಒತ್ತಡದ ಬೆಸುಗೆ ಎಂದು ಹೆಸರು. ವಸ್ತುವನ್ನು ಜರುಗಿಸುವಾಗ ಈ ಬೆಸುಗೆಗಳನ್ನು ಬಿಡಿಸಬೇಕಾಗುವುದರಿಂದ ಹೆಚ್ಚು ಪ್ರಯತ್ನ ಆವಶ್ಯಕವಾಗುವುದು. ಇದೇ ವಸ್ತು–ವಸ್ತು ನಡುವಣ ಘರ್ಷಣೆಗೆ ಕಾರಣವೆಂದು ವಿಜ್ಞಾನಿಗಳ ಅಭಿಪ್ರಾಯ. ವಸ್ತುವನ್ನು ಜರುಗಿಸಿ ಬಿಟ್ಟ ಬಳಿಕ ಈ ಬೆಸುಗೆಗಳು ಕಳಚಿ ಹೋಗುವುದರಿಂದ ಚಲನೆಗೆ ಕಡಿಮೆ ಬಲ ಸಾಕು. ಆದ್ದರಿಂದ ಪ್ರಾರಂಭಯತ್ನ ಯಾವಾಗಲೂ ಚಲನ ದಿಶೆಯಲ್ಲಿನ ಪ್ರಯತ್ನಕ್ಕಿಂತ ಹೆಚ್ಚಿರುತ್ತದೆ.

ಘರ್ಷಣೆಯನ್ನು ತಗ್ಗಿಸಲು ಹಲವು ವಿಧದ ಎಣ್ಣೆ ಅಥವಾ ಕೊಬ್ಬುಗಳನ್ನು ಸವರುವುದುಂಟು. ಇವುಗಳಿಗೆ ಸ್ನೇಹಕಗಳೆಂದು ಹೆಸರು. ವಸ್ತುಗಳ ನಡುವೆ ಸ್ನೇಹಕಗಳನ್ನು ಲೇಪಿಸಿದಾಗ ಕಣಪದರಗಳಲ್ಲಿ ಚಲನೆ ಉಂಟಾಗಿ ಘರ್ಷಣೆ ತಗ್ಗುತ್ತದೆ. ವಸ್ತು ವೇಗದಿಂದ ಚಲಿಸುವಾಗ ಸ್ನೇಹಕದ ಪದರಗಳು ಎಳೆಯಲ್ಪಟ್ಟು ತೆಳುವಾದ ಪರೆಯನ್ನು ಉಂಟುಮಾಡುತ್ತವೆ. ಇದು ವಸ್ತುಗಳನ್ನು ಪ್ರತ್ಯೇಕಿಸಿ ಪರಸ್ಪರ ಉಜ್ಜದಂತೆ ಮಾಡಿ ಘರ್ಷಣೆಯನ್ನು ತಗ್ಗಿಸುತ್ತದೆ. ಆಗ ವಸ್ತುವಿಗೆ ಅಪಾಯ ಉಂಟಾಗುವುದಿಲ್ಲ. ಆದ್ದರಿಂದ ಚಕ್ರದ ಅಚ್ಚುಗಳೇ ಮುಂತಾದವುಗಳಿಗೆ ಸ್ನೇಹಕಗಳನ್ನು ಹಾಕಿ ಘರ್ಷಣೆ ತಗ್ಗುವಂತೆಯೂ ಲೋಹಕ್ಕೆ ಅಪಾಯವಾಗದಂತೆಯೂ ಮಾಡಿರುತ್ತಾರೆ. ಎಣ್ಣೆ ಹಾಕಿದಾಗ ನಡೆಯುವ ಚಲನೆ ದ್ರವ ಘರ್ಷಣೆಯ ನಿಯಮಗಳನ್ನು ಅನುಸರಿಸುತ್ತದೆ. (ದೋಣಿ ನೀರಿನ ಮೇಲೆ

ಓಡುವಾಗ ಅದರ ಪದರಗಳಲ್ಲಿ ವೇಗ ವ್ಯತ್ಯಾಸವನುಂಟು ಮಾಡುವುದಷ್ಟೆ. ಇದು ದ್ರವ ಘರ್ಷಣೆಯ ಪರಿಣಾಮ). ದ್ರವ ಘರ್ಷಣೆಯ ನಿಯಮಗಳು ಈ ರೀತಿ ಇವೆ : ಘರ್ಷಣೆಯ ತಡೆ (1) ವಸ್ತುಗಳ ಒತ್ತಡವನ್ನು ಅನುಸರಿಸುವುದಿಲ್ಲ; (2) ಉಜ್ಜುವ ಮೇಲ್ಮೈಗಳ ಸಲೆಗಳಿಗೆ ಅನುಗುಣವಾಗಿರುತ್ತದೆ; (3) ಹೆಚ್ಚು ಅಥವಾ ನಡುವಣ ವೇಗಗಳಲ್ಲಿ ವೇಗವರ್ಗಕ್ಕೂ ಕಡಿಮೆ ವೇಗಗಳಲ್ಲಿ (ಸುಮಾರು) ವೇಗಕ್ಕೂ ಅನುಪಾತೀಯವಾಗಿರುತ್ತದೆ; (4) ದ್ರವದ ಮೇಲೆ ಜಾರುವ ಘನವಸ್ತುವಿನ ವಸ್ತುತರಹೆಯನ್ನು ಅನುಸರಿಸುವುದಿಲ್ಲ, ಆದರೆ ಒರಟುತನವನ್ನು ಸ್ವಲ್ಪಮಟ್ಟಿಗೆ ಅವಲಂಬಿಸಿರುತ್ತದೆ; (5) ದ್ರವದ ಸಾಂದ್ರತೆಗೆ ಅನುಗುಣವಾಗಿಯೂ ಸ್ವಲ್ಪಮಟ್ಟಿಗೆ ಸ್ನಿಗ್ಧತ್ವಕ್ಕೆ ಸಂಬಂಧಿಸಿಯೂ ಇರುತ್ತದೆ.

ಯಂತ್ರಗಳಲ್ಲಿ ಘರ್ಷಣೆಯಿಂದ ಅಪಾರ ಶಕ್ತಿಹ್ರಾಸ ಉಂಟಾಗುತ್ತದೆ. ಉದಾಹರಣೆಗಾಗಿ ಮೋಟಾರ್‌ಕಾರಿನಲ್ಲಿ ಸುಮಾರು 20% ರಷ್ಟು ಶಕ್ತಿ ಘರ್ಷಣೆಯನ್ನು ಎದುರಿಸಲು ವ್ಯಯವಾಗುತ್ತದೆ. ವಿಮಾನದ ಕೊಂತದ ಎಂಜಿನ್ನಿನಲ್ಲಿ ಸುಮಾರು ಶೇ.9 ರಷ್ಟೂ ಜೆಟ್ ಎಂಜಿನ್ನಿನಲ್ಲಿ ಶೇ.1-2 ರಷ್ಟೂ ಶಕ್ತಿಹ್ರಾಸ ಉಂಟಾಗುತ್ತದೆ. ಘರ್ಷಣೆಯಿಂದ ಎಂಜಿನ್ನಿನ ಭಾಗಗಳು ಸವೆದು ಹೆಚ್ಚು ಅಪಾಯ ಸಂಭವಿಸುವುದೂ ಉಂಟು. ಕೆಲವು ವೇಳೆ ಚಕ್ರದ ಅಚ್ಚುಗಳು ಬಿಸಿ ಏರಿ ತಿರುಗಲಾಗದಂತೆ ಬಿಗಿಹಿಡಿಯಲೂಬಹುದು.

ಹಲವೆಡೆಗಳಲ್ಲಿ ಘರ್ಷಣೆ ಅನುಕೂಲಕಾರಿಯಾಗಿ ಪರಿಣಮಿಸುವುದೂ ಉಂಟು. ಉದಾಹರಣೆಗಾಗಿ ಚಲಿಸುವ ವಾಹನಗಳನ್ನು ನಿಲ್ಲಿಸಲು ಘರ್ಷಣೆ ಅತ್ಯಾವಶ್ಯಕ. ಆದ್ದರಿಂದ ಮೋಟಾರ್ ಕಾರಿನ ಬಿರಿಗಳ ತಯಾರಿಕೆಯಲ್ಲಿ ಹೆಚ್ಚು ಘರ್ಷಣ ಗುಣಾಂಕವಿರುವ ವಸ್ತುಗಳನ್ನೇ ಅಸ್ತರಿಗಳಿಗಾಗಿ ಉಪಯೋಗಿಸುತ್ತಾರೆ. ಯಂತ್ರಗಳಲ್ಲಿ ಚಕ್ರದಿಂದ ಚಕ್ರವನ್ನು ಓಡಿಸಲು ಪಟ್ಟೆಗಳನ್ನು ಉಪಯೋಗಿಸುವುದುಂಟು. ಇವು ಘರ್ಷಣೆಯಿಂದ ಕೆಲಸ ಮಾಡುತ್ತವೆ. ಮಳೆಗಾಲದಲ್ಲಿ ರೈಲ್ವೆ ಚಕ್ರಗಳು ಕಂಬಿಯ ಮೇಲೆ ಜಾರದಂತೆ ಮರಳನ್ನು ಸುರಿಯುತ್ತಾರೆ. ಇದರಿಂದ ಉಂಟಾಗುವ ಘರ್ಷಣೆ ಚಕ್ರವನ್ನು ಮುಂದಕ್ಕೆ ಉರುಳಿಸುತ್ತದೆ. ಬೆಂಕಿಕಡ್ಡಿಯನ್ನು ಗೀರುವಾಗ ಘರ್ಷಣೆ ಆವಶ್ಯಕ. (ವಿ.ಸಿ.ಐ.)

**ಘಸೀಟಿ ಬೇಗಂ:** ಬಂಗಾಳದ ನವಾಬನಾಗಿದ್ದ (1740-56) ಆಲಿವರ್ದಿ ಖಾನನ ಮೂವರು ಹೆಣ್ಣು ಮಕ್ಕಳ ಪೈಕಿ ಮೊದಲನೆಯವಳು. ಅವನಿಗೆ ಗಂಡು ಸಂತಾನವಿರಲಿಲ್ಲ. ಮೂವರು ಹೆಣ್ಣು ಮಕ್ಕಳನ್ನೂ ಅವನು ತನ್ನ ಸಹೋದರನ ಮೂವರು ಪುತ್ರರಿಗೆ ವಿವಾಹ ಮಾಡಿಕೊಟ್ಟಿದ್ದ. ಘಸೀಟಿ ಬೇಗಮಳ ಗಂಡ ನವಾಜಿಸ್ ಮಹಮ್ಮದ್. ಆಲಿವರ್ದಿ ತನ್ನ ಕೊನೆಯ ಮಗಳ ಮಗನಾದ ಸಿರಾಜ್–ಉದ್–ದೌಲನನ್ನು ಉತ್ತರಾಧಿಕಾರಿಯನ್ನಾಗಿ ಆರಿಸಿದ. ಆದರೆ ಈ ಆಯ್ಕೆ ಆವನ ಮೊದಲ ಇಬ್ಬರು ಅಳಿಯಂದಿರಿಗೆ ಸರಿಬೀಳಲಿಲ್ಲ. ಢಾಕಾ ಮತ್ತು ಪೂರ್ನಿಯದ ಅಧಿಪತಿಗಳಾಗಿದ್ದ ಇವರು ಅನೇಕ ಪಿತೂರಿಗಳ ಕೇಂದ್ರವಾದರು. ಆಲಿವರ್ದಿಯ ಅಂತ್ಯಕಾಲದಲ್ಲಿ ಈ ಇಬ್ಬರು ಅಳಿಯಂದಿರೂ ನಿಧನರಾದರು. ಅದರೆ ಸಿರಾಜ್–ಉದ್–ದೌಲನ ಉತ್ತರಾಧಿಕಾರವನ್ನು ಘಸೀಟಿ ಬೇಗಂ ಪ್ರಶ್ನಿಸಿದಳು. ಘಸೀಟಿಯು ಪಿತೂರಿಗೆ ಅವಳ ದಿವಾನನಾದ ರಾಜಾವಲ್ಲಭನ ಸಂಪೂರ್ಣ ಬೆಂಬಲವಿತ್ತು. ಆಲಿವರ್ದಿಯ ಅನಾರೋಗ್ಯದಿಂದಾಗಿ ಅವನ ಪರವಾಗಿ ಆಡಳಿತ ನಡೆಸುತ್ತಿದ್ದ ಸಿರಾಜ್–ಉದ್–ದೌಲ ಇಂಗ್ಲಿಷರ ವೈರವನ್ನು ಕಟ್ಟಿಕೊಂಡಿದ್ದ. ಫ್ರೆಂಚರು ಪ್ರಬಲರಾಗುತ್ತಿದ್ದರೆಂಬ ಕಾರಣದಿಂದ ಕೋಲ್ಕತದಲ್ಲಿ ತಮ್ಮ ಕೋಟೆಕೊತ್ತಲುಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದ ಇಂಗ್ಲಿಷರ ವರ್ತನೆಯಿಂದಾಗಿ ಸಿರಾಜ್–ಉದ್–ದೌಲನಿಗೆ ಅಸಮಾಧಾನವಾಗಿತ್ತು. ಸಿರಾಜ್–ಉದ್–ದೌಲ ಬಂಗಾಳದ ನವಾಬನಾಗಲಾರನೆಂಬುದು ಅವರ ಅಭಿಪ್ರಾಯವಾಗಿತ್ತು. ಆದ್ದರಿಂದ ಅವರು ಅವನ ವಿರೋಧಿಗಳಾದ ಘಸೀಟಿಲ್ ಬೇಗಂ ಮತ್ತು ರಾಜಾವಲ್ಲಭರಿಗೆ ಬೆಂಬಲವಾಗಿದ್ದರು. ಆಲಿವರ್ದಿಯ ಮರಣಕಾಲ ಸನ್ನಿಹಿತವಾದಾಗ, ಘಸೀಟಿಬೇಗಂ ರಾಜಧಾನಿಯಾದ ಮುರ್ಷಿದಾಬಾದನ್ನು ಬಿಟ್ಟು ಅದಕ್ಕೆ ಎರಡು ಮೈಲಿ ದೂರದಲ್ಲಿ ಮೋತಿಝೀಲ್ ಎಂಬ ತೋಟದಲ್ಲಿ ಬಿಡಾರ ಹೂಡಿದಳು. ಉತ್ತರಾಧಿಕಾರಿಯ ಸಮಸ್ಯೆಯಲ್ಲಿ ಘಸೀಟಿಗೆ ಹೆಚ್ಚಿನ ಬೆಂಬಲ ಕಂಡುಬಂದದ್ದರಿಂದ ಆಂಗ್ಲ ಅಧಿಕಾರಿಗಳು ಅವಳ ನೆರವಿಗೆ ನಿಂತರು.

ಆಲಿವರ್ದಿ 1756 ರಲ್ಲಿ ಮರಣ ಹೊಂದಿದಾಗ ಸಿರಾಜ್–ಉದ್–ದೌಲ ಬಂಗಾಳದ ನವಾಬನಾದ. ಕೂಡಲೇ ಅವನು ತನ್ನ ಸ್ಥಾನವನ್ನು ಭದ್ರಪಡಿಸುವ ಉದ್ದೇಶದಿಂದ ಘಸೀಟಿ ಬೇಗಮಳನ್ನು ತನ್ನ ಅರಮನೆಗೆ ಎತ್ತಿಕೊಂಡು ಹೋಗಿ ಬಂಧನದಲ್ಲಿಟ್ಟ. ಇದರಿಂದ ಅವಳ ರಾಜಕೀಯ ಮಹತ್ವಾಕಾಂಕ್ಷೆ ಕೊನೆಗೊಂಡಿತು. ಕೊನೆಗೆ ಅವಳು ಪ್ರಭಾವಹೀನಳಾಗಿ ತೀರಿಕೊಂಡಳು. (ಕೆ.ಟಿ.ಆರ್.)

**ಘಾಘ್ರಾ :** ಗಂಗಾನದಿಯ ಮುಖ್ಯ ಉಪನದಿಗಳಲ್ಲೊಂದು. ಟಿಬೆಟ್‌ನಲ್ಲಿ ಮಾನಸ ಸರೋವರದ ಬಳಿ ರಾಕಸ್ ತಾಲ್ ಎಂಬಲ್ಲಿ (ಉ.ಅ. 30º 40' ಮತ್ತು ಪೂ.ರೇ. 88º 48') ಹುಟ್ಟಿ ಉತ್ತರ ಪ್ರದೇಶದ ಮೂಲಕ ಹರಿದು, ಬಿಹಾರದಲ್ಲಿ ಛಪ್ರಾ ಬಳಿ ಗಂಗೆಯೊಂದಿಗೆ ಸಂಗಮಿಸುತ್ತದೆ. ಕೈಲಾಸ, ಕಾಮೆಟ್ ಮತ್ತು ಮಾಂಧಾಲ ಶಿಖರಗಳಿಂದಾದ ತ್ರಿಕೋಣದ ನಡುವೆ ಇದರ ಉಗಮ ಸ್ಥಳವಿದೆ. ಪರ್ವತಪ್ರದೇಶದಲ್ಲಿ ಇದಕ್ಕೆ ಕನಿಯಾಲ ಎಂಬ ಹೆಸರಿದೆ. ಕೌರಿಯಾಲ ಎಂಬುದು ಇದರ ನೇಪಾಳಿ ಹೆಸರು. ಹಿಮಾಲಯ ಮತ್ತು ಸಿವಾಲಿಕ್ ಶ್ರೇಣಿಗಳನ್ನು ಭೇದಿಸಿಕೊಂಡು ಆಳವಾದ ಕಣಿವೆಗಳನ್ನು ಕೊರೆದು, ಖೇರಿ ಮತ್ತು ಬಹ್ರಾಯಿಚ್ ಜಿಲ್ಲೆಗಳ ಮೂಲಕ ಮಧ್ಯ ಗಂಗಾ ಬಯಲನ್ನು ತಲುಪಿದಾಗ ಇದಕ್ಕೆ ಘಾಘ್ರಾ ಎಂಬ ಹೆಸರು ಪ್ರಾಪ್ತವಾಗುತ್ತದೆ. ಘಾಘ್ರಾ ಎಂಬುದೇ ಹೆಚ್ಚು ಪ್ರಚಾರದಲ್ಲಿರುವ ಹೆಸರು. ಮುಂದೆ ಇದಕ್ಕೆ ದೇವೊಹಾ ಎಂಬ ಹೆಸರೂ ಉಂಟು. ಹಿಮಾಲಯದ ವಿಶಾಲವಾದ ಜಲಾನಯನ ಪ್ರದೇಶದಲ್ಲಿ ಇದು ಹಲವು ಚಿಕ್ಕ, ದೊಡ್ಡ ಉಪನದಿಗಳೊಂದಿಗೆ ಕೂಡಿಕೊಳ್ಳುತ್ತದೆ. ಶಾರ್ದಾ, ಭೇರಿ, ಸರಯೂ, ರಾಪ್ತಿ, ಛೋಟಿ ಗಂಡಕ್ ಇವು ಇದರ ಮುಖ್ಯ ಉಪನದಿಗಳು.

ಘಾಘ್ರಾ ನದಿ ಸ್ಟೀಮರ್ ಸಂಚಾರಕ್ಕೆ ಉಪಯುಕ್ತವಾಗಿದೆ. ಟಾಂಡಾ ಬರಹಜ್, ರಿಬಿಲ್‌ಗಂಜ್ ಇವು ಈ ನದಿಯ ದಂಡೆಯ ಮೇಲಿರುವ ಪ್ರಮುಖ ವ್ಯಾಪಾರ ಸ್ಥಳಗಳು. ಮಳೆಗಾಲದಲ್ಲಿ ಈ ನದಿ ಮೈದಾನದಲ್ಲಿ ತಂದು ತುಂಬುವ ಮೆಕ್ಕಲು ಮಣ್ಣಿನಿಂದಾಗಿ ಇದರ ನೆರೆನಾಡು ಫಲವತ್ತಾಗಿದೆ.

F £ÀAiÀ ÉÄÃ ÉÆAiÀ¥ÉÆ§º Á¤ªÀ ÀWÁmï §½AiÀ®èÉ (1126 ಮೀ.) ಅಯೋಧ್ಯೆಯ ಬಳಿಯಲ್ಲೂ (1192 ಮೀ.) ಇರುವವು ಪ್ರಮುಖವಾದವು. ಘಾಘ್ರಾ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದಿರುವ ಜಮೀನಿನ ವಿಸ್ತೀರ್ಣ 24,474 ಎಕರೆಗಳು. (ಆರ್.ಪಿ.ಎಸ್)

**ಘಾಜೀ–ಉದ್–ದೀನ್ ಇಮಾದ್–ಉಲ್–ಮುಲ್ಕ್ :** ಮೊಗಲ್ ಚಕ್ರವರ್ತಿ ಔರಂಗಜೇಬನ ಮರಣಾನಂತರ ದೆಹಲಿಯ ಚಕ್ರವರ್ತಿ ನಿರ್ಮಾಪಕರಾಗಿದ್ದವರಲ್ಲಿ ಒಬ್ಬ. ಹೈದರಾಬಾದಿನ ಪ್ರಥಮ ನಿಜಾಮನ ಹಿರಿಯ ಮಗನ ಮಗ. ಇವನ ತಂದೆ ವಿಷಪ್ರಯೋಗದಿಂದ ಕೊಲೆಗೆ ಈಡಾದಾಗ (1752) ಘಾಜೀ–ಉದ್–ದೀನ್ ಇಮಾದ್–ಉಲ್–ಮುಲ್ಕ್ ದೆಹಲಿಯಲ್ಲಿದ್ದ. ಅಲ್ಲಿಯ ಸಫ್ದರ್ ಜಂಗ್ ಎಂಬ ಆಸ್ಥಾನಿಕನೊಬ್ಬನ ಪ್ರಭಾವವನ್ನು ಬಳಸಿಕೊಂಡು ಮಹಾವೇತನಾಧಿಕಾರಿಯ ಹುದ್ದೆ ಗಳಿಸಿಕೊಂಡ. ತನಗೆ ಅಧಿಕಾರ ದೊರಕಿಸಿಕೊಟ್ಟ ಸಫ್ದರ್ ಜಂಗನಿಗೇ ಈತ ಕೃತಘ್ನನಾಗಿ ಮರಾಠರನ್ನು ಬರಮಾಡಿಕೊಂಡು ಅವರ ನೆರವಿನಿಂದ ತಾನೇ ವಜೀರನಾಗಿ ದೆಹಲಿಯ ಚಕ್ರವರ್ತಿ ಅಹಮದ್ ಷಾನನ್ನು ಸಿಂಹಾಸನದಿಂದ ಉರುಳಿಸಿ, ಅವನ ಕಣ್ಣು ಕೀಳಿಸಿದ (1754). ಆ ವೇಳೆಗೆ ದೆಹಲಿಯ ಸಿಂಹಾಸನದ ಅಧೀನದಲ್ಲಿದ್ದ ರಾಜ್ಯವೆಂದರೆ ಅದರ ಸುತ್ತಮುತ್ತಣ ಪ್ರದೇಶ ಮಾತ್ರ. ಘಾಜೀ–ಉದ್–ದೀನ್ ಚತುರನೇನೂ ಅಲ್ಲ. ಆದರೆ ಮಹತ್ವಾಕಾಂಕ್ಷಿ. ತನಗೆ ಹಿಂದೆ ಚಕ್ರವರ್ತಿ ನಿರ್ಮಾಪಕರಾಗಿ ಅಧಿಕಾರ ಬದಲಾಯಿಸುತ್ತಿದ್ದ ಸಯ್ಯಿದ್ ಸೋದರರಂತೆ ತಾನೂ ಆಗಬೇಕೆಂದು ಬಯಸಿದ. ಜಹಾಂದಾರ್ ಷಾನ ಮಗನಾದ ಅಜೀಜ್–ಉದ್–ದೀನ್‌ನನ್ನು ದೀರ್ಘಕಾಲದ ಬಂಧನದಿಂದ ಬಿಡುಗಡೆಗೊಳಿಸಿ, ಸಿಂಹಾಸನದ ಮೇಲೆ ಕೂರಿಸಿದ. ತಾನೂ ಔರಂಗಜೇಬನಂತೆ ಎಂಬುದು ಆತನ ಭ್ರಮೆ. ಆತ ತನ್ನನ್ನು 2ನೆಯ ಆಲಂಗೀರ್ ಎಂದು ಕರೆದುಕೊಂಡ. ಬಹು ಬೇಗ ಆ ಚಕ್ರವರ್ತಿಯ ಭ್ರಮನಿರಸನವಾಯಿತು. ಸಿಂಹಾಸನದ ಮೇಲೆ ಕುಳಿತರೂ ಬಂದಿಯಾಗಿಯೇ ಮುಂದುವರಿದ ಆತ ಸ್ವತಂತ್ರವಾಗಿ ವರ್ತಿಸಲು ಯತ್ನಿಸಿದಾಗ ಘಾಜೀ–ಉದ್–ದೀನನ ಕ್ರೂರದೃಷ್ಟಿ ಅವನ ಮೇಲೆ ಬಿತ್ತು. ಅವನನ್ನು ಘಾಜೀ–ಉದ್–ದೀನ್ ಕೊಲ್ಲಿಸಿದ (1759). 2ನೆಯ ಆಲಂಗೀರನ ಮಗನೂ ಸಿಂಹಾಸನಕ್ಕೆ ಉತ್ತರಾಧಿಕಾರಿಯೂ ಆಗಿದ್ದ 2ನೆಯ ಷಾ ಆಲಂ ದೇಶಭ್ರಷ್ಟನಾಗಿ ಅಲೆದಾಡುತ್ತ ಇಂಗ್ಲಿಷರ ರಕ್ಷಣೆಯಲ್ಲಿ ಜೀವ ಉಳಿಸಿಕೊಳ್ಳಬೇಕಾಯಿತು.

ಈ ನಡುವೆ ದೆಹಲಿಯ ಮೇಲೆ ಶತ್ರುಗಳು ಪದೇಪದೇ ದಂಡೆತ್ತಿ ಬರುತ್ತಿದ್ದರು. ಘಾಜೀ–ಉದ್–ದೀನ್ ಇವರ ಮುಂದೆ ಏನೂ ಮಾಡಲಾರದವನಾಗಿದ್ದ. ಆಕ್ರಮಣಕಾರರ ಕೋಟಲೆ ಕಡಿಮೆಯಾದಾಗ ಇವನು ತನ್ನ ಅಧಿಕಾರ ಚಲಾಯಿಸುತ್ತಿದ್ದ. 2ನೆಯ ಆಲಂಗೀರನ ಕೊಲೆಯ ಅನಂತರ ಔರಂಗ್‌ಜೇಬನ ಕಿರಿಯ ಮಗನಾದ ಕಾಂಬಕ್ಷನ ಮೊಮ್ಮಗನಾದ 3ನೆಯ ಷಾಹಜಹಾನನನ್ನು ಸಿಂಹಾಸನದ ಮೇಲೆ ಕೂರಿಸಿದ. ಹಿಂದೆ ಎರಡು ಬಾರಿ ದೆಹಲಿಯ ಮೇಲೆ ದಂಡೆತ್ತಿ ಬಂದಿದ್ದ ಅಹಮದ್ ಷಾ ಅಬ್ದಾಲಿ ಮತ್ತೆ ಬಂದಾಗ ಘಾಜೀ–ಉದ್–ದೀನ್ ಭಯದಿಂದ ಜಾಟ್ ದೊರೆ ಸೂರಜ್ ಮಲ್ಲನ ಆಶ್ರಯ ಪಡೆದ. ಮರಾಠರ ನೆರವಿನಿಂದ ಅಬ್ದಾಲಿಯನ್ನೆದುರಿಸಬೇಕೆಂಬುದು ಅವನ ಇಚ್ಛೆಯಾಗಿತ್ತು. ಆದರೆ 3ನೆಯ ಪಾಣಿಪಟ್ ಯುದ್ಧದಲ್ಲಿ ಮರಾಠರು ಭಾರಿ ಪರಾಭವವನ್ನನುಭವಿಸಿದರು. ಅದಕ್ಕೂ ಮುಂಚೆಯೇ ಘಾಜೀ–ಉದ್–ದೀನ್ ಮರಾಠರನ್ನು ತ್ಯಜಿಸಿ ವಲ್ಲಭಗಢದಲ್ಲಿ ತಲೆಮರೆಸಿಕೊಂಡಿದ್ದ. ಅವನ ಹಂಚಿಕೆಗಳೆಲ್ಲ ಮಣ್ಣುಗೂಡಿದುವು. 1800ರಲ್ಲಿ ಆತ ಸತ್ತ. (ವಿ.ಕೆ.)

**ಘಾಜೀಪುರ :** ಭಾರತದ ಉತ್ತರ ಪ್ರದೇಶ ರಾಜ್ಯದ ಒಂದು ಜಿಲ್ಲೆ ; ಆ ಜಿಲ್ಲೆಯ ಮುಖ್ಯ ಪಟ್ಟಣ. ಪಟ್ಟಣ ಉ. ಅ. 25° 35' ಮತ್ತು ಪೂ. ರೇ. 83° 36' ನಡುವೆ ಇದೆ. ಜಿಲ್ಲೆಯ ವಿಸ್ತೀರ್ಣ 3384 ಚ.ಕಿಮೀ. ಜನಸಂಖ್ಯೆ 3622727 (2011). ವಾರ್ಷಿಕ

ಸರಾಸರಿ ಮಳೆ 40". ಈ ಜಿಲ್ಲೆಯ ನಡುವೆ ಗಂಗಾ ನದಿ ಹರಿಯುತ್ತದೆ. ಗಂಗಾ ನದಿಯ ಎರಡೂ ಭಾಗದಲ್ಲಿ ಹರಡಿರುವ ಸಮತಲ ಮೆಕ್ಕಲು ಮಣ್ಣಿನ ಭೂಮಿ ತುಂಬ ಫಲವತ್ತಾಗಿದೆ. ಜನಸಾಂದ್ರತೆ ಅಧಿಕ. ಕಬ್ಬು, ಬತ್ತ, ಗೋಧಿ, ಬಾರ್ಲಿ, ಅಫೀಮು ಮತ್ತು ದ್ವಿದಳ ಧಾನ್ಯಗಳು ಈ ಜಿಲ್ಲೆಯ ಪ್ರಮುಖ ಬೆಳೆಗಳು.

ಜಿಲ್ಲೆಯ ಕೇಂದ್ರವಾದ ಘಾಜೀಪುರ ಗಂಗಾ ನದಿಯ ದಡದ ಮೇಲೆ ವಾರಾಣಸಿಯಿಂದ 75 ಕಿ.ಮೀ. ಪೂರ್ವದಲ್ಲಿದೆ. ಜನಸಂಖ್ಯೆ 1,05243(2001). ಭಾರತದ ಪ್ರಾಚೀನ ನಗರಗಳಲ್ಲಿ ಒಂದಾದ ಈ ನಗರಕ್ಕೆ ಮೊದಲು ಗಾಧೀಪುರ ಎಂಬ ಹೆಸರಿತ್ತು. 1330ರಲ್ಲಿ ಮುಸ್ಲಿಂ ದೊರೆಯೊಬ್ಬನ ವಂಶನಾಮಕ್ಕನುಗುಣವಾಗಿ ನಗರದ ಹೆಸರನ್ನು ಘಾಜೀಪುರ ಎಂದು ಬದಲಾಯಿಸಲಾಯಿತು. ಬ್ರಿಟಿಷ್ ಆಳ್ವಿಕೆಯ ಆರಂಭಕಾಲದಲ್ಲಿ ಇದೊಂದು ಪ್ರಮುಖ ಸೇನಾನೆಲೆಯೂ ಮುಖ್ಯ ನದೀರೇವುಪಟ್ಟಣವೂ ಆಗಿತ್ತು.

1805ರಲ್ಲಿ ನಿಧನನಾದ ಭಾರತದ ವೈಸ್‌ರಾಯ್ ಲಾರ್ಡ್ ಕಾರ್ನ್‌ವಾಲೀಸನ ಸಮಾಧಿಭವನ ಘಾಜೀಪುರದಲ್ಲಿದೆ. ಚರ್ಚ್, ಗೋರಾಬಜ಼ಾರ್, 40 ಸ್ತಂಭಗಳ ಅರಮನೆ ಎಂಬ ಹೆಸರು ಪಡೆದ ರಾಜಭವನ – ಇವು ಇಲ್ಲಿಯ ಪ್ರಮುಖ ಭವನಗಳು. ಘಾಜೀಪುರಕ್ಕೆ ರೈಲ್ವೆ ಸೌಲಭ್ಯವುಂಟು. ಗಂಗಾನದಿಯ ಒಂದು ದಡದಲ್ಲಿ ಈಶಾನ್ಯ ರೈಲ್ವೆಗೆ ಸೇರಿದ ಎರಡು ನಿಲ್ದಾಣಗಳೂ ಇನ್ನೊಂದು ದಡದಲ್ಲಿ ಪೂರ್ವ ರೈಲ್ವೆಯ ಒಂದು ನಿಲ್ದಾಣವೂ ಇವೆ. ವಾರಾಣಸಿ ಮತ್ತು ಘಾಜೀಪುರಗಳ ನಡುವೆ ಬಸ್ಸುಗಳು ಓಡಾಡುತ್ತವೆ. ವಿವಿಧ ಬಗೆಯ ಹೂಗಳಿಂದ ತಯಾರಿಸಿದ ತೈಲ ಮತ್ತು ಪರಿಮಳ ದ್ರವ್ಯಗಳಿಗೆ ಘಾಜೀಪುರ ಪ್ರಖ್ಯಾತವಾಗಿದೆ. ಉತ್ತರ ಭಾರತದ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲಿ ಒಂದಾದ ಈ ನಗರದ ವ್ಯಾಪಾರ, ರೈಲು ಸಂಪರ್ಕಕ್ಕೆ ಮುಂಚೆ, ಗಂಗಾನದಿಯ ಮೂಲಕ ಸಾಗುತ್ತಿತ್ತು. ಸಕ್ಕರೆ, ತಂಬಾಕು, ಹತ್ತಿ, ಪನ್ನೀರು ಇವು ಪ್ರಮುಖ ವ್ಯಾಪಾರ ಸರಕುಗಳು. ಬ್ರಿಟನ್ನಿನ 'ಈಸ್ಟ್ ಇಂಡಿಯಾ ಕಂಪನಿ', 1820ರಲ್ಲಿ ಆರಂಭಿಸಿದ ಇದು ಕೈಮಗ್ಗದ ಬೀಡು. ಅಫೀಮಿನ ಕಾರ್ಖಾನೆ ಘಾಜೀಪುರದಲ್ಲಿದೆ.

ಇಲ್ಲಿ ಅನೇಕ ಜಿಲ್ಲಾ ಕಚೇರಿಗಳೂ ಕಾರ್ಖಾನೆಗಳೂ ನಾಲ್ಕು ಸ್ನಾತಕೋತ್ತರ ಕಾಲೇಜುಗಳೂ, ಶಾಲೆಗಳೂ ಇವೆ. ಇಲ್ಲಿ 'ಸಂಕಟ್‌ಮೋಚನ್' ಎಂಬ ದೊಡ್ಡ ಹನುಮಂತನ ದೇವಸ್ಥಾನವಿದೆ. (ಎಚ್.ಜಿ.ಎ.)

**ಘಾಟಿ ಸುಬ್ರಹ್ಮಣ್ಯ :** ಪ್ರಸಿದ್ಧ ಯಾತ್ರಾಸ್ಥಳ. ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರಕ್ಕೆ ಎಂಟು ಮೈಲಿ ದೂರದಲ್ಲಿದೆ. ಇಲ್ಲಿಯ ದೇವರು ಸುಬ್ರಹ್ಮಣ್ಯೇಶ್ವರ. ಈ ದೇವರ ಪೂಜೆ ವಿಶೇಷವಾಗಿರುವುದು ದಕ್ಷಿಣ ಭಾರತದಲ್ಲೇ. ತಮಿಳುನಾಡಿನಲ್ಲಿ ಪಳನಿಯೂ ಈ ದೇವರ ಪುಣ್ಯಕ್ಷೇತ್ರವಾಗಿದೆ. ಪುತ್ರಸಂತಾನವಿಲ್ಲದವರು ಘಾಟಿ ಸುಬ್ರಹ್ಮಣ್ಯಕ್ಕೆ ಬಂದು ನಾಗರಪ್ರತಿಷ್ಠೆ ಮಾಡುತ್ತಾರೆ. ಇಲ್ಲಿನ ಸುತ್ತಮುತ್ತಲಿನ ಪ್ರದೇಶದವರು ತಮ್ಮ ಚೌಲಸಂಸ್ಕಾರವನ್ನು ಇಲ್ಲಿ ನಡೆಸುತ್ತಾರೆ. ಈಚಿನ ಕಾಲದಲ್ಲಿ ಉಪನಯನಗಳೂ ವಿವಾಹಗಳೂ ನಡೆಯುತ್ತಿವೆ. ನಾಗರ ಪಂಚಮಿ, ಸುಬ್ಬರಾಯನ ಷಷ್ಠಿಗಳಂದು ಇಲ್ಲಿ ವಿಶೇಷಪೂಜೆ ಮತ್ತು ಉತ್ಸವಗಳು ನಡೆಯುತ್ತವೆ. ಕ್ಷೇತ್ರಕ್ಕೆ ಬಸ್ಸು ಸೌಕರ್ಯವಿದೆ. ಯಾತ್ರಿಕರು ಇಳಿದುಕೊಳ್ಳಲು ಛತ್ರಗಳಿವೆ. (ಜಿ.ಎಚ್.)

**ಘಾತ ಶ್ರೇಣಿ :** ಒಂದು ಚರದ (ವೇರಿಯಬಲ್) ಆರೋಹೀ ಧನಾತ್ಮಕ ಪೂರ್ಣಾಂಕ ಘಾತಗಳು ಪದಗಳಾಗಿರುವ (ಟರ್ಮ್ಸ್) ಒಂದು ಶ್ರೇಣಿಪವರ್ ಸೀರೀಸ್). ಇದರ ರೂಪ ಹೀಗಿದೆ :

$$a_0 + a_1x + a_2x^2 + \ldots\ldots + a_nx^n + \ldots\ldots$$

ಇಲ್ಲಿ aಗಳು ಸ್ಥಿರಾಂಕಗಳು, $x$ ಚರ. ಘಾತ ಶ್ರೇಣಿಯ ರೂಪ ಈ ಕೆಳಗಿನಂತೆಯೂ ಇರಬಹುದು :

$$a_0 + a_1(x-\alpha) + a_2(x-\alpha)^2 + \ldots + a_n(x-\alpha)^n + \ldots (1)$$

ಪ್ರಮೇಯ: ಘಾತ ಶ್ರೇಣಿ (1) $x$ನ ಯಾವುದೇ ಒಂದು ಬೆಲೆಗೆ – ಅದು $x^2$ ಆಗಿರಲಿ, ಇಲ್ಲಿ $V2 \neq \alpha$ – ಅಭಿಸರಿಸುವುದಾದರೆ (ಕನ್ವರ್ಜ್) ಮತ್ತು

$$R = |x_2 - \alpha 1|$$

ಆಗಿದ್ದರೆ ಆಗ $|x1 - \alpha| < R$ ಆಗಿರುವಂಥ, α ಕೇಂದ್ರ ಮತ್ತು R ತ್ರಿಜ್ಯವಾಗಿರುವ ವೃತ್ತ C ಯ ಒಳಗಿರುವ ಎಲ್ಲ $x_1$ ಕ್ಕೂ ಘಾತಶ್ರೇಣಿ (1) ಅಭಿಸರಿಸುತ್ತದೆ; ಮತ್ತು ಈ ಕಾರಣದಿಂದ ಅದೊಂದು ಉತ್ಪನ್ನ $f(x)$ ನ್ನು ವ್ಯಾಖ್ಯಿಸುತ್ತದೆ. ಈ ಉತ್ಪನ್ನ $f(x)$ ಅವಶ್ಯವಾಗಿಯೂ Cಯಲ್ಲಿ ವಿಶ್ಲೇಷಕ (ಅನಲಿಟಿಕ್) ಆಗಿರಬೇಕು ಮತ್ತು ಶ್ರೇಣಿ (1), α ವನ್ನು ಕುರಿತು ಇದರ, ಟೇಲರನ ಶ್ರೇಣಿ (ನೋಡಿ) ಆಗಿರಬೇಕು. (ಇಲ್ಲಿ C, ಕೇಂದ್ರ αದಲ್ಲಿರುವ ಹಾಗೂ ತ್ರಿಜ್ಯ R ಇರುವ, ಒಂದು ವೃತ್ತ). Cಯ ಒಳಗೆ ಶ್ರೇಣಿ (1)ನ್ನು ಪದವಾರು ಅವಕಲಿಸಬಹುದು (ಡಿಫರೆನ್ಷಿಯೇಟ್) ಅಥವಾ ಅನುಕಲಿಸಬಹುದು (ಇಂಟಿಗ್ರೇಟ್). ಅಂದರೆ

$$f(x) = a_0 + a_1(x-\square) + a_2(x-a)^2 + a_3(x-\square)^3 + \ldots (1)$$

ಆಗಿದ್ದರೆ ಆಗ

$$f'(x) = a_1 + 2a_2(x-\alpha) + 3a_3(x-\alpha)^2 + \quad \ldots\ldots (2)$$

ಮತ್ತು

$$\int_\alpha^x f(x)\,dx = a_0(x-\alpha) + \frac{a_1}{2}(x-\alpha)^2 + \frac{a^2}{3}(x-\alpha)^3 + \ldots 3)$$

(3) ರಲ್ಲಿ ಅನುಕಲನಾಂಕವನ್ನು (ಇಂಟೆಗ್ರಲ್)

$$\int_\alpha^x f(x)\,dx = F(x) = |_\alpha^x = F(x) - F(\alpha) \quad \ldots (4)$$

ಎಂಬುದರಿಂದ ವ್ಯಾಖ್ಯಿಸುತ್ತೇವೆ. ಇಲ್ಲಿ $F(x)$ ಎಂಬುದು Cಯ ಒಳಗಿನ ಎಲ್ಲ $x$ ಗಳಿಗೂ $f(x) = F'(x) = \frac{dF}{dx}$ .....(5)

ಆಗಿರುವ ಒಂದು ಉತ್ಪನ್ನ. ಒಂದು ಘಾತ ಶ್ರೇಣಿ ಅವಶ್ಯವಾಗಿಯೂ ಅದರ ಮೊತ್ತ ಉತ್ಪನ್ನದ (ಸಮ್ ಫಂಕ್ಷನ್) ಟೇಲರನ ಶ್ರೇಣಿ. ಆದ್ದರಿಂದ ಈ ಮುಂದಿನ ಪ್ರರೂಪದ ಒಂದು ಸಮೀಕರಣದಿಂದ

$$a_0 + a_1(x-\square) + a_2(x-\square)^2 + \ldots\ldots = b_0 + b_1(x-\square) + b_1(x-\square)^2 + \ldots\ldots \quad \ldots (6)$$

ಈ ಕೆಳಗಿನಂತೆ ತೀರ್ಮಾನಿಸಬಹುದು.

$$a_0 = b_0,\ a_1 = b_1,\ a_2 = b_2 \ \ldots\ldots \quad \ldots (7)$$

ವಾಸ್ತವಿಕವಾಗಿ a ಮತ್ತು $x$ ಗಳನ್ನು ನೈಜಮೌಲ್ಯಗಳಿಗೆ ಸೀಮಿತಗೊಳಿಸಿದಾಗ (6) ನಿಜವೆಂದು ಗೊತ್ತಿದ್ದರೆ ಆಗ ತೀರ್ಮಾನ (7) ಸಾಧುವಾಗುತ್ತದೆ.

ಮೊತ್ತ ಉತ್ಪನ್ನದ ಗುಣಗಳು ಗೊತ್ತಿರುವಾಗ, ಒಂದು ದತ್ತ ಘಾತ ಶ್ರೇಣಿಗೆ ಅನೇಕ ವೇಳೆ ಸಾಧ್ಯವೃತ್ತ Cಯನ್ನು ಪಡೆಯಬಹುದು. ಇಲ್ಲವೇ ಒಂದು ಮೌಲ್ಯ $x2$ನ್ನು ಶೋಧಿಸುವುದು ಶಕ್ಯವಾದರೆ ಆಗ ಈ ಮೊದಲು ನಿರೂಪಿಸಿರುವ ಪ್ರಮೇಯವನ್ನು ಬಳಸಬಹುದು. (ಬಿ.ಎಸ್.ಎಸ್.)

**ಘಾತೀಯ ಉತ್ಪನ್ನದ ಪೊರ್ದಿಕೆ :** ವೀಕ್ಷಿತ ದತ್ತಾಂಶಕ್ಕೆ ಹೊಂದುವಂಥ ಒಂದು ಘಾತೀಯ ವಕ್ರರೇಖೆಯ ನಿರ್ಧರಣೆ. ಉದಾಹರಣೆಗೆ ಒಂದು ದೇಶದ ಜನಸಂಖ್ಯೆಯ ಬೆಳವಣಿಗೆಯನ್ನು ನಿರೂಪಿಸಲು ಪೊರ್ದಿಸುವ ವಕ್ರರೇಖೆ. ಇದು $x = ae^t$ ಆಗಿರಬಹುದು. ಇಲ್ಲಿ $x$ ಜನಸಂಖ್ಯೆಯನ್ನೂ t ಕಾಲವನ್ನೂ ಸೂಚಿಸುತ್ತವೆ. ಅಳವಡಿಸಿದ ಪ್ರಯೋಗಗಳಿಂದ ಲಭಿಸುವ ಇಲ್ಲವೇ ಪ್ರಾಕೃತವಾಗಿ ದೊರೆಯುವ ವೀಕ್ಷಣೆಗಳು ಹಲವಾರು ದೋಷಗಳಿಗೆ ಒಳಗಾಗಿರುತ್ತವೆ. ವೀಕ್ಷಣ ದೋಷಗಳಲ್ಲದೆ ಹಲವಾರು ಸಣ್ಣಪುಟ್ಟ ಅನಿಶ್ಚಿತ ದೋಷಗಳೂ ಇವುಗಳಲ್ಲಿ ಕಾರಣಾಂತರದಿಂದ ನುಸುಳಿರುವುದುಂಟು. ಇಂಥ ವೀಕ್ಷಣೆಗಳಿಂದ ನಿಜವಾದ ಬೆಲೆಗಳನ್ನು ಅಂದಾಜು ಮಾಡುವಲ್ಲಿ ಕನಿಷ್ಠತಮ ವರ್ಗತತ್ತ್ವವನ್ನು (ನೋಡಿ) ಬಳಸುತ್ತೇವೆ. ಬೆಳವಣಿಗೆಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಪೊರ್ದಿಸುವುದರಲ್ಲಿ ಚರಗಳಿಗಿರುವ ಸಂಬಂಧ ಘಾತೀಯವಾಗಿರುವುದೆಂದು (ಎಕ್ಸ್‌ಪೊನೆನ್ಷಿಯಲ್) ಭಾವಿಸಿ ಲೆಕ್ಕ ಮಾಡುವುದು ಹೆಚ್ಚು ಸಮಂಜಸವಾಗಿರುವುದೆಂಬುದು ಅನುಭವಸಿದ್ಧವಾದ ಮಾತು. ಅಂದರೆ x,y ಎಂಬ ಚರಗಳಿಗಿರುವ ಸಂಬಂಧವನ್ನು $y=ab^x$ ಎಂದು ತೆಗೆದುಕೊಳ್ಳುವುದು ಸೂಕ್ತವೆಂದು ಕಂಡುಬರುವುದು.

ಕನಿಷ್ಠತಮ ವರ್ಗತತ್ತ್ವ : ದತ್ತ ವೀಕ್ಷಣೆಗಳಿಗೆ ಹೊಂದಿಕೆಯಾಗುವಂತೆ ಒಂದು ವಕ್ರವನ್ನು ಪೊರ್ದಿಸುವಲ್ಲಿ ಯಾವ ತತ್ತ್ವವನ್ನು ಬಳಸಬೇಕು ಎನ್ನುವ ಪ್ರಶ್ನೆಗೆ ಉತ್ತರವಾಗಿ ಕನಿಷ್ಠತಮ ವರ್ಗತತ್ತ್ವದ ಸ್ಥಾಪನೆಯಾಗಿರುವುದು. x,y ಚರಗಳ ಸಂವಾದಿ ಬೆಲೆಗಳನ್ನು

$(x_i, y_i)$, i = 1,2,…….n ಎಂದು ಸೂಚಿಸೋಣ. ಅಲ್ಲದೆ $x, y$ ಚರಗಳಿಗಿರುವ ಸಂಬಂಧದ ಪಡಿಕಟ್ಟು $y = a + bx$ ಎಂದಿರಲಿ. ಈ ಪಡಿಕಟ್ಟಿಗೆ ಅನುಸಾರವಾಗಿ $x$ ಚರದ ಬೆಲೆ $x_i$ ಇದ್ದಾಗ $y$ ಚರದ ಬೆಲೆ $a+bx_i$ ಇರುವುದು. ಆದರೆ ವೀಕ್ಷಿತ ಬೆಲೆ $y_i$ ಇದ್ದು ಅಂದಾಜು ಮಾಡಿದ ಬೆಲೆ $a+bx_i$ ನಿಂದ ಬೇರೆಯಾಗಿರುವುದು. ಈ ವ್ಯತ್ಯಾಸವನ್ನು, ಅಂದರೆ yi – ($a+bx_i$) ಯನ್ನು $\delta_i$ ಎಂದು ಪ್ರತೀಕಿಸಿದರೆ

$$s = \Sigma\delta_i^2 = \sum_{i=1}^{n}[y_i - (a + bx_i)]^2$$

ಎಂಬ ವರ್ಗಯೋಗದ ಉತ್ಪನ್ನ ಕನಿಷ್ಠತಮವಾಗಿರುವಂತೆ a,b ಗಳನ್ನು ಆಯ್ದುಕೊಳ್ಳುವುದು ಹೆಚ್ಚು ಲಾಭದಾಯಕವೆಂಬುದೇ ಕನಿಷ್ಠತಮ ವರ್ಗತತ್ತ್ವದ ತಿರುಳು. ಗಣಿತವಿಜ್ಞಾನದ ರೀತ್ಯಾ ಇದಕ್ಕೆ ಬೇಕಾದ ನಿರ್ಬಂಧಗಳು ಎಂದರೆ a,b ಗಳನ್ನು ಕುರಿತ S ನ ಆಂಶಿಕ ಅವಕಲನಾಂಕಗಳು (ಪಾರ್ಷಿಯಲ್ ಡಿರೈವಟಿವ್ಸ್) ಸೊನ್ನೆ ಆಗಬೇಕು. ಅಂದರೆ $\frac{\delta s}{\delta a} = \frac{\delta s}{\delta b} = 0$. ಇವುಗಳಿಂದ ದೊರೆವ ಸಮೀಕರಣಗಳಿಗೆ ಪ್ರಸಾಮಾನ್ಯ ಸಮೀಕರಣಗಳೆಂದು ಹೆಸರು. ಇವನ್ನು ಬಿಡಿಸಿದಾಗ a, b ಗಳ ಬೆಲೆಗಳು ದೊರೆಯುವುವು. ಇವನ್ನೇ ಲಾಭಕರವಾದ ಬೆಲೆಗಳೆಂದು ಪರಿಗಣಿಸುತ್ತೇವೆ.

ಘಾತೀಯ ಉತ್ಪನ್ನದ ಪೊರ್ದಿಕೆ : x,y ಚರಗಳಿಗಿರುವ ಸಂಬಂಧ ಘಾತೀಯ ವಾದಾಗ ಅಂದರೆ $y = ab^x$ ಎಂದಿದ್ದಾಗ ಮೇಲೆ ಹೇಳಿದ ಕನಿಷ್ಠತಮ ವರ್ಗತತ್ತ್ವವನ್ನು ಪ್ರಯೋಗಿಸುವುದು ಸುಲಭಸಾಧ್ಯವಲ್ಲ. ಆದ್ದರಿಂದ ಈ ತತ್ತ್ವದ ತಳಹದಿಯಲ್ಲೇ ಬದಲಾವಣೆಯನ್ನು ಮಾಡುವ ಅಗತ್ಯ ಉಂಟು. ಕನಿಷ್ಠತಮ ವರ್ಗವನ್ನೇನೋ ಬಳಸುತ್ತೇವಾದರೂ $yi - ab^{xi}$ ಎಂಬುದರ ವರ್ಗ ಯೋಗದ ಕನಿಷ್ಠತಮ ಬೆಲೆಯನ್ನು ಗಣಿಸುವುದಿಲ್ಲ. ಇದಕ್ಕೆ ಬದಲು $y = ab^x$ ಎಂಬ ಸಾಮ್ಯದ ಎರಡು ಬದಿಗಳ ಲಘುಗಣಕಗಳನ್ನು ಇಳಿಸಿ ಬರುವ ಸಾಮ್ಯವನ್ನು x,y ಗಳ ನಡುವೆ ಇರುವ ಸಂಬಂಧವೆಂದು ಇಟ್ಟುಕೊಳ್ಳುತ್ತೇವೆ. ಅಂದರೆ

$$\log y = \log a + x \log b$$

ಎಂದು ಬರೆಯುತ್ತೇವೆ. ಈಗ log y = Y, log a = A ಮತ್ತು log b = B ಎಂದು ಆದೇಶಿಸಿ ಮೇಲಿನ ಸಮೀಕರಣವನ್ನು ಹೀಗೆ ನಿರೂಪಿಸುತ್ತೇವೆ:

$$Y = A + Bx$$

ಕನಿಷ್ಠತಮ ವರ್ಗತತ್ತ್ವವನ್ನು ಈಗ ಪ್ರಯುಕ್ತಿಸಲು

$$S = \Sigma(Y_i - A - Bx_i)^2$$

ಎಂಬ ವರ್ಗಯೋಗವನ್ನು ಕನಿಷ್ಠತಮ ಮಾಡಿ ಅದರಿಂದ A, B ಗಳ ಬೆಲೆಗಳನ್ನು ಪಡೆಯುತ್ತೇವೆ. ಹೀಗೆ ಮಾಡಿದಾಗ ಅವೇಕ್ಷಿತ Yi ಬೆಲೆಗಳಿಗೂ $y = ab^x$ ಎಂಬ ಸಮೀಕರಣದಿಂದ ಅಂದಾಜು ಮಾಡಿದ $ab^{xi}$ ಬೆಲೆಗಳಿಗೂ ಇರುವ ವ್ಯತ್ಯಾಸಗಳ ವರ್ಗಗಳ ಮೊತ್ತವನ್ನು ಕನಿಷ್ಠತಮ ಮಾಡಿದಂತಾಗಲಿಲ್ಲ. ಗಣಿಸಲು ಅನುವಾದ ಯಾವುದೋ ಘಟ್ಟದಲ್ಲಿ ಕನಿಷ್ಠತಮ ವರ್ಗತತ್ತ್ವವನ್ನು ಬಳಸಿದ್ದೇವೆ. ಈ ಮಾತನ್ನು ಜ್ಞಾಪಕದಲ್ಲಿಡಬೇಕು. ಮೇಲಿನ ಸಾಮ್ಯದಲ್ಲಿ A,B ಗಳ ಕನಿಷ್ಠತಮ ವರ್ಗ ಬೆಲೆಗಳನ್ನು ಕಂಡುಹಿಡಿಯಲು

$$\frac{\delta S}{\delta A} = \frac{\delta S}{\delta B} = 0$$

ಎಂಬ ಪ್ರಸಾಮಾನ್ಯ ಸಮೀಕರಣಗಳನ್ನು ಬಿಡಿಸಬೇಕು. ಈ ಸಮೀಕರಣಗಳು

$$\Sigma Y_i = \Sigma A + B\,\Sigma X_i$$
$$\Sigma XY_i - A\Sigma X_i + B\Sigma x_i^2$$

ಎಂಬ ರೂಪ ತಳೆಯುತ್ತವೆ. ಸೂಕ್ತ ರೀತಿಯಲ್ಲಿ X ನ ಕಾರ್ಯಾಂಗ ಮೂಲವನ್ನು (ವರ್ಕಿಂಗ್ ಆರಿಜಿನ್) ಗೊತ್ತುಪಡಿಸಿಕೊಂಡರೆ ಈ ಸಮೀಕರಣಗಳನ್ನು ಸರಳೀಕರಿಸಬಹುದು.

$$y = ab^x$$
$$\therefore \log y = \log a + x \log b$$
ಅಥವಾ $Y = AB + X$

ಪ್ರಸಾಮಾನ್ಯ ಸಮೀಕರಣಗಳು :

$$9A = 34.3000, \therefore A = 3.8111$$
$$60B = 3.6564, \therefore B = 0.06094$$
$$\therefore \log y = 3.8111 + (x - 1694)(0.06094)$$
ಅಂದರೆ $y = 6473\,(1.150)\,(x\text{-}1964)$

ಕರ್ನಾಟಕದಲ್ಲಿ ಕೈಗಾರಿಕೆಗಳಿಗೆ ನೀಡಲಾದ ಬ್ಯಾಂಕು ಮುಂಗಡದ ಅಂಕಿ ಅಂಶಗಳಿಗೆ ಇಂಥ ವಕ್ರವನ್ನು ಪೊರ್ದಿಸಬೇಕು ಎಂದು ಭಾವಿಸೋಣ. ಕೋಷ್ಟಕದಲ್ಲಿ 1960 ರಿಂದ 1968 ರ ವರೆಗೆ, ಅಂದರೆ 9 ವರ್ಷಗಳ, ಮಾಹಿತಿಗಳನ್ನು ಕೊಡಲಾಗಿದೆ. 1964 ನೆಯ ಇಸವಿಯನ್ನು x-ನ ಕಾರ್ಯಾಂಗ ಮೂಲಬಿಂದುವನ್ನಾಗಿ ಆಯ್ದುಕೊಂಡು $x_i$-1964 = $x_i$ ಎಂದು ಬರೆಯೋಣ. ಆಗ $x_i = 0$ ಆಗುವುದು ಮತ್ತು $\Sigma Xi2 = 60$ ಆಗುವುದು. ಆಗ ಪ್ರಸಾಮಾನ್ಯ ಸಮೀಕರಣಗಳು ಈ ರೂಪಕ್ಕೆ ಇಳಿಯುತ್ತವೆ :

$\Sigma Y_i = 9A$ ಮತ್ತು $\Sigma X_iY_i = 60B$. ಕೋಷ್ಟಕದಿಂದ $\Sigma Y_i = 34.3$ ಮತ್ತು $\Sigma X_iY_i = 39.9591$ ಈ ಬೆಲೆಗಳನ್ನು ಆದೇಶಿಸಿ ಸಮೀಕರಣಗಳನ್ನು ಬಿಡಿಸಲು A = 308111. B = 0.0609 ದೊರೆಯುತ್ತವೆ. ಈ ಬೆಲೆಗಳನ್ನು ಬಳಸಿಕೊಂಡು Y ಯ ಬೆಲೆಗಳನ್ನು ಗಣಿಸಿ ಅನಂತರ Y ಬೆಲೆಗಳನ್ನು ಗಣಿಸಬಹುದು. ಹೀಗೆ ಗಣಿಸಿದ ಬೆಲೆಗಳನ್ನು Y' ಎಂದು ಸೂಚಿಸಬಹುದು.

ಇನ್ನೂ ಹೆಚ್ಚು ನಿಖರತೆಯಿಂದ ಪೊರ್ದಿಸಬೇಕೆಂದು ಬಯಸಿದರೆ X,Y ಗಳಿಗಿರುವ ಸಂಬಂಧವನ್ನು $Y = \log y = A + BX + CX^2$ ಎಂದು ತೆಗೆದುಕೊಳ್ಳಬಹುದು. ಆಗ ಈ ಕೆಳಗಿನ ಪ್ರಸಾಮಾನ್ಯ ಸಮೀಕರಣಗಳು ದೊರೆಯುತ್ತವೆ:

$$\Sigma Y_i = \Sigma A + B\,\Sigma X_i + C\,\Sigma X_{i2}$$
$$\Sigma X_i\,Y_i = A\,\Sigma X_i + B\,\Sigma X_{i2} + C\,\Sigma X_{i3}$$
$$\Sigma X_{i2} Y_i = A\,\Sigma X_{i2} + B\,\Sigma X_{i3} + C\,\Sigma X_{i4}$$

ಮೊದಲಿನಂತೆ ಕಾರ್ಯಾಂಗ ಮೂಲಬಿಂದುವನ್ನು 1964ರಲ್ಲಿ ತೆಗೆದುಕೊಂಡರೆ

$\Sigma X_i = 0,\ \Sigma X_{i2} = 60,\ \Sigma X_{i3} = 0,\ \Sigma X_{i4} = 708$ ಆಗುವುವು.

ಇದರಿಂದಾಗಿ ಪ್ರಸಾಮಾನ್ಯ ಸಮೀಕರಣಗಳು ಈ ಸರಳರೂಪಗಳನ್ನು ತಳೆಯುತ್ತವೆ:

$$\Sigma Yi = 9.A + 60C$$
$$\Sigma XiYi = 60B$$
$$\Sigma X_i^2\,yi = 60A + 708C$$

ಅಂದರೆ Bಯ ಬೆಲೆಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. Aಯ ಬೆಲೆಯಲ್ಲಿ ಸ್ವಲ್ಪ ಬದಲಾವಣೆಯಾಗುತ್ತದೆ. A, Cಗಳ ಬೆಲೆಗಳನ್ನು ಪಡೆಯಲು

$$9A + 60C = 34.3$$
$$60A + 708C = 228.7056$$

ಈ ಸಮೀಕರಣಗಳನ್ನು ಬಿಡಿಸಲು A = 3.8102; C = 0.00013. ಈ ಬೆಲೆಗಳನ್ನು ಬಳಸಿಕೊಂಡು Yಯ ವಿವಿಧ ಬೆಲೆಗಳನ್ನು ಗಣಿಸಿ ಅನಂತರ Y = antilog*y* ಎಂಬ ಸಾಮ್ಯದಿಂದ Y ಯ ಬೆಲೆಗಳನ್ನು ಕಂಡುಹಿಡಿಯಬಹುದು. ಹೀಗೆ ಘಾತೀಯ ಉತ್ಪನ್ನಗಳಲ್ಲಿ ರೇಖೀಯ ಮತ್ತು ವರ್ಗೀಯ ಸಂಬಂಧಗಳಿಗೆ ಅನುಸಾರವಾಗಿ ದೊರೆತ ಅಂದಾಜಿನ ಬೆಲೆಗಳನ್ನು ಕೋಷ್ಟಕದಲ್ಲಿ ತೋರಿಸಿದೆ. ವರ್ಗೀಯ ಸಂಬಂಧದಿಂದ ಪೊರ್ದಿಸಿದ ಬೆಲೆಗಳು ಹೆಚ್ಚು ಹೊಂದಿಕೆಯಾಗಿರುವುದನ್ನು ಕಾಣಬಹುದು.

ತಿದ್ದಿದ ಘಾತೀಯ ಉತ್ಪನ್ನ : ಕೆಲವು ವೇಳೆ ಘಾತೀಯ ಉತ್ಪನ್ನದ ತಿದ್ದಿದ ರೂಪವನ್ನು ಬಳಸುತ್ತೇವೆ. ಹಲವು ಸಲ ಇದು ಹೆಚ್ಚು ಉಪಯುಕ್ತವಾದುದೆಂದು ಅನುಭವದಿಂದ ಕಂಡುಬಂದಿದೆ. ತಿದ್ದಿದ ಘಾತೀಯ ಉತ್ಪನ್ನದ ಸಂಬಂಧ ಹೀಗಿರುವುದು:

$$y = k + ab^x$$

| ಮುಂಗಡ $y$ | ರೇಖೀಯ ಅಂದಾಜು $y' = A+BX$ | ವರ್ಗೀಯ ಅಂದಾಜು $y'' = A+BX+CX^2$ |
|---|---|---|
| 1 | 2 | 3 |
| 3697 | 3693 | 3702 |
| 4652 | 4249 | 4252 |
| 4520 | 4889 | 4884 |
| 5226 | 5626 | 5615 |
| 6218 | 6458 | 6461 |
| 8011 | 7449 | 7435 |
| 9089 | 8690 | 8563 |
| 10112 | 9930 | 9868 |
| 10728 | 11320 | 11380 |

ಈ ರೂಪದಲ್ಲಿ ನಿರೂಪಿಸಿದಾಗ y ಯ ಒಂದು ವಿಶೇಷ ಗುಣವೆಂದರೆ ಇದರ ಮೊದಲನೆಯ ವ್ಯತ್ಯಾಸಗಳು (ಫಸ್ಟ್ ಡಿಫರೆನ್ಸಸ್) ಗುಣೋತ್ತರ ಶ್ರೇಣಿಯಲ್ಲಿರುವುವು. ಇಂಥ ಸನ್ನಿವೇಶದಲ್ಲಿ ಈ ವಕ್ರವನ್ನು ಪೊರ್ದಿಸುವುದು ಅಷ್ಟು ಸುಲಭವಲ್ಲ. ಲಾಜಿಸ್ಟಿಕ್ ವಕ್ರವನ್ನು ಪೊರ್ದಿಸುವ ಕ್ರಮವನ್ನು ಅನುಸರಿಸಬೇಕಾಗುತ್ತದೆ. (**ನೋಡಿ– ಲಾಜಿಸ್ಟಿಕ್ ವಕ್ರ**)

(ಎಂ.ವಿ.ಜೆ.)

**ಘಾತೀಯ ಶ್ರೇಣಿ ಹಾಗೂ ಉತ್ಪನ್ನ :** ಗಣಿತೀಯ ವಿಶ್ಲೇಷಣೆಯಲ್ಲಿ ಕೆಲವೊಮ್ಮೆ ಅವಿಚ್ಛಿನ್ನ ಅವಲಂಬಿ ಚರವೊಂದು ಏರುತ್ತ ಹೋಗುವ ದರ ಕ್ಷಣಕ್ಷಣಕ್ಕೂ ಅದಕ್ಕೆ ಪ್ರಾಪ್ತವಾಗುವ ಪ್ರಚಲಿತ ಬೆಲೆಗೇ ಅನುಪಾತೀಯವಾಗಿರುವುದುಂಟು (ಪ್ರಪೋರ್ಷನಲ್). ಇಂಥ ಪರಿಸ್ಥಿತಿಯಲ್ಲಿ ಅವಲಂಬಿ ಚರದ ಅಭಿವ್ಯಕ್ತಿಗೆ ಸಾಧಕವಾಗುವ ಒಂದು ಮೂಲಭೂತ ಮಾಧ್ಯಮ ಘಾತೀಯ ಶ್ರೇಣಿ (ಎಕ್ಸ್‌ಪೊನೆನ್ಷಲ್ ಸೀರೀಸ್). ಈ ಶ್ರೇಣಿಯ ರೂಪ

$$\sum_{n=0}^{\infty} \frac{x^n}{n!} = 1 + \frac{x}{1} + \frac{x^2}{2!} + \frac{x^3}{3!} + ...... + \frac{x^n}{n!} + .......\infty$$

ಈ ರೂಪದಿಂದ ಘಾತೀಯ ಶ್ರೇಣಿಯು ಘಾತ ಶ್ರೇಣಿಗಳ (**ನೋಡಿ**) ಒಂದು ವಿಶೇಷ ಪ್ರಸಂಗ ಎಂಬ ಅಂಶ ಸ್ಪಷ್ಟವಾಗುವುದು. ಈಗ ಪ್ರಚಲಿತ ಸ್ವಮೌಲ್ಯಕ್ಕೆ ಹೆಚ್ಚು ಕಡಿಮೆ ಅನುಪಾತೀಯ ದರದಲ್ಲಿ ಏರುವ ಚರಗಳಿಗೆ ಎರಡು ನಿತ್ಯ ವ್ಯಾವಹಾರಿಕ ನಿದರ್ಶನಗಳನ್ನು ನೀಡಬಹುದು. ಮೊದಲನೆಯದು, ಪ್ರತ್ಯೇಕಿತ ಭೂಭಾಗವೊಂದರ ಜನಸಂಖ್ಯೆ (ಅಲ್ಲಿ 20 ಮಿಲಿಯನ್ ಜನರಿರುವಾಗ ಜನಸಂಖ್ಯೆಯ ವರ್ಷಂಪ್ರತಿ ಏರಿಕೆ 100 ಸಹಸ್ರ ಆದಲ್ಲಿ 40 ಮಿಲಿಯನ್ ಜನರಿರುವಾಗ ಅದರ ವರ್ಷಂಪ್ರತಿ ಏರಿಕೆ 200 ಸಹಸ್ರ ಆದೀತೆಂದು ನಿರೀಕ್ಷಿಸುವುದು ಸ್ವಾಭಾವಿಕ); ಎರಡನೆಯದು ಚಕ್ರಬಡ್ಡಿ ಗಳಿಸಿ ವೃದ್ಧಿಯಾಗುತ್ತಿರುವ ಒಂದು ಹಣದ ಮೊಬಲಗು (1000 ರೂಪಾಯಿಗಳಷ್ಟಿರುವಾಗ ತಿಂಗಳಿಗೆ 10 ರೂಪಾಯಿ ಬಡ್ಡಿ ಗಳಿಸುವ ಮೊಬಲಗು 2,000 ರೂಪಾಯಿಯಾಗಿ ಬೆಳೆದಾಗ ತಿಂಗಳಿಗೆ 20 ರೂಪಾಯಿ ಬಡ್ಡಿ ಸಂಪಾದಿಸುತ್ತದೆ). ಭೌತವಿಜ್ಞಾನದಲ್ಲೂ ಈ ಬಗ್ಗೆ ಚರಗಳು ಪ್ರಕಾಶಕ್ಕೆ ಬಂದಿವೆ. ಉದಾಹರಣೆಗೆ ರೇಡಿಯಮ್ ಅದಿರಿನ ಒಂದು ಚೂರಿನಲ್ಲಿ ಒಂದು ಮಿಲಿಯನ್ ($10^{12}$) ರೇಡಿಯಂ ಪರಮಾಣುಗಳಿರುವಾಗ ಅವುಗಳ ಪೈಕಿ ಒಂದೊಂದು ಸೆಕೆಂಡಿಗೂ 14 ಪರಮಾಣುಗಳು ವಿಕಿರಣಪಟುತ್ವದ ಪರಿಣಾಮವಾಗಿ ಕ್ಷಯಿಸುತ್ತಿರುತ್ತವೆ. (ರೇಡಿಯೋಆ್ಯಕ್ಟಿವ್ ಡಿಕೇ) ; ಆ ಚೂರಿನಲ್ಲಿರುವ ರೇಡಿಯಂ ಪರಮಾಣುಗಳ ಸಂಖ್ಯೆ ಐನೂರು ಸಹಸ್ರ ಮಿಲಿಯನ್‌ಗೆ (5 x 1011) ಇಳಿದಾಗಲಾದರೋ ಸೆಕೆಂಡಿಗೆ 7 ರೇಡಿಯಂ ಪರಮಾಣುಗಳು ಮಾತ್ರ ಕ್ಷಯಿಸುವುವು. ಶುದ್ಧ ಗಣಿತದ ದೃಷ್ಟಿಯಿಂದ ಈ ನಿದರ್ಶನಗಳಲ್ಲಿ ಕೆಲವು ಅಪರಿಪೂರ್ಣತೆಗಳಿರುವುದು ನಿಜ. ಚಕ್ರಬಡ್ಡಿಯ ಉದಾಹರಣೆಯಲ್ಲಿ ರೂಢಿಯಂತೆ ಬಡ್ಡಿಯನ್ನು ಕೊಡುವುದು ತಿಂಗಳು ಅಥವಾ ವರ್ಷಕ್ಕೊಮ್ಮೆಯೇ ವಿನಾ ನಿರಂತರವಾಗಿ ಅಲ್ಲ ; ಜನಸಂಖ್ಯೆಯ ಏರಿಕೆ ಹಾಗೂ ವಿಕಿರಣಪಟು ಪರಮಾಣುಗಳ ಕ್ಷಯ ಅಂತಿಮ ವಿಶ್ಲೇಷಣೆಯಲ್ಲಿ ಸಂಭಾವ್ಯ ವಿದ್ಯಮಾನಗಳೇ ವಿನಾ ನಿರುಪಾಧಿಕ ನಿಶ್ಚಿತತೆ ಇರಬೇಕಾದಂಥವಲ್ಲ. ಕೊನೆಯದಾಗಿ ಬಡ್ಡಿ ಒಳಗೊಳ್ಳುವ ಪೈಸೆಗಳ ಸಂಖ್ಯೆ, ರೇಡಿಯಂ ಪರಮಾಣುಗಳ ಸಂಖ್ಯೆಯ ಇಳಿತ, ಜನಸಂಖ್ಯೆಯ ಏರಿಕೆ ಇವೆಲ್ಲವೂ ಪೂರ್ಣಾಂಕಗಳಾಗಬೇಕೇ ಹೊರತು ಅಪರಿಮೇಯಗಳಾಗಲು (ಇರ್‍ಯಾಷನಲ್ಸ್) ಸಾಧ್ಯವಿಲ್ಲದ ಕಾರಣ ನಾವು ಉದಾಹರಿಸಿರುವ ಚರಗಳಾವುವೂ ಅವಿಚ್ಛಿನ್ನ ಚರಗಳಲ್ಲವೇ ಅಲ್ಲ (ನಾಟ್ ಕಂಟಿನ್ಯುಯಸ್ ವೇರಿಯಬಲ್ಸ್). ಆದಾಗ್ಯೂ ಈ ಬಗ್ಗೆ ಅಪರಿಪೂರ್ಣ ಸನ್ನಿವೇಶಗಳನ್ನು ಸೂಕ್ತವಾಗಿ ಆದರ್ಶೀಕರಿಸುವುದರಿಂದ ಪ್ರಚಲಿತ ಸ್ವಮೌಲ್ಯಕ್ಕೆ ನಿಖರಾನುಪಾತೀಯ ದರದಲ್ಲೇ ಏರುವ ಅವಿಚ್ಛಿನ್ನ ಚರದ ಪರಿಕಲ್ಪನೆ ಗಣಿತವಿಜ್ಞಾನದಲ್ಲಿ ಉದ್ಭವಿಸಿದೆ. ಇಂಥದೊಂದು ಆದರ್ಶೀಕೃತ [ನೈಜ ಅಥವಾ ಸಂಕೀರ್ಣ (ರಿಯಲ್ ಆರ್ ಕಾಂಪ್ಲೆಕ್ಸ್) ಸಂಖ್ಯಾಮೌಲ್ಯಗಳನ್ನು ಸ್ವೀಕರಿಸುವ] ಚರವನ್ನು f = f(t) ಎಂಬ ಒಂದು ಉತ್ಪನ್ನದಿಂದ ನಿರ್ದೇಶಿಸಬಹುದು. ಇಲ್ಲಿ f ಚರದ ಏರಿಕೆಯ ದರವನ್ನು t ಎಂಬ ಮತ್ತೊಂದು (ಸ್ವತಂತ್ರ) ಚರದ ಏರಿಕೆಗೆ ಸಾಪೇಕ್ಷವಾಗಿ ಅಳತೆ ಮಾಡಲು ಉದ್ದೇಶಿಸಲಾಗಿದೆ. (ಮೇಲಿನ ಉದಾಹರಣೆಗಳಲ್ಲಿ t ಕಾಲಸೂಚಕ ಚರವಾಗುವುದು). t ಚರ dt ಯಷ್ಟು ಹೆಚ್ಚಿದಾಗ f ಚರ d f ನಷ್ಟು ಏರಿದರೆ f ನ ಏರಿಕೆಯ ದರವನ್ನು $\frac{df}{dt}$ ಎಂಬ ಅವಕಲನಾಂಕ ಸೂಚಿಸುತ್ತದೆ. (**ನೋಡಿ– ಕಲನಶಾಸ್ತ್ರ**). ಈ ದರ f ನ ಪ್ರಚಲಿತ ಮೌಲ್ಯ f(t) ಗೆ ಅನುಪಾತೀಯವಾಗಿರಬೇಕಾದ ಕಾರಣ $\frac{df}{dt}$ = kf (t) ಆಗುವಂತೆ ಒಂದು ದತ್ತನಿಯತಾಂಕ k ಇರಬೇಕಾಗುವುದು. k = 0 ಆಗುವ ಸ್ವಾರಸ್ಯರಹಿತ ಪ್ರಸಂಗದಲ್ಲಿ df = 0 ಎಂದಾಗಿ f ನಲ್ಲಿ ಯಾವ ಏರಿಕೆಯೂ ಸಂಭವಿಸದೆ ಅದು ಒಂದು ನಿಯತಾಂಕವಾಗಿ ಉಳಿದುಹೋಗುವುದು. $k \neq 0$ ಆದಾಗ x = kt ಎಂಬ ಹೊಸತೊಂದು ಸ್ವತಂತ್ರ ಚರವನ್ನು x ನ್ನು ಕುರಿತಂತೆ y(x) = f(t) = f($x$/k) ಎಂಬ ಹೊಸ ಉತ್ಪನ್ನವನ್ನು ರಚಿಸಿ $\frac{df}{dt}$ = k f (t) ಅವಕಲ ಸಮೀಕರಣವನ್ನು $\frac{dy}{dx}$ = y (x) ಅಥವಾ y'(x) = y(x) ಎಂಬ ರೂಪದಲ್ಲಿ ಬರೆಯಬಹುದು. [ಇಲ್ಲಿ y'(x) ಪ್ರತೀಕ y(x) ನ ಅವಕಲನಾಂಕವನ್ನು ಸೂಚಿಸುತ್ತದೆ.] ಈ ರೂಪಾಂತರಿತ ಸಮೀಕರಣದ ಪ್ರತಿಯೊಂದು ಪರಿಹಾರ y(x)ಗೂ ಅನುಗುಣವಾಗಿ ಮೊದಲಿನ ಸಮೀಕರಣಕ್ಕೆ f(t) = y(kt) ಎಂಬ ಪರಿಹಾರ ಲಭಿಸುವುದರಿಂದ ಇನ್ನೂ ಮುಂದೆ y'(x) = y ($x$) ಸಮೀಕರಣವನ್ನು ಮಾತ್ರ ಪರಿಶೀಲಿಸಿದರೆ ಸಾಕು. x = 0 ಯ ನೆರೆಯಲ್ಲಿ ಇದರ ಯಾವುದಾದರೊಂದು ಪರಿಹಾರ (ಸಲ್ಯೂಷನ್) y(x) ಆದಲ್ಲಿ

$$\frac{d}{dx}[y(x)\,y(-x)] = y'(x)\,y(-x) + y(x)\,\{-y'(-x)\}$$

$$= y(x)\,y(-x) - y(x)\,y(-x)$$

$$= 0$$

ಇದರಿಂದ y(x) y(-x) ಒಂದು ನಿಯತಾಂಕ ಎಂದು ಗೊತ್ತಾಗುವುದು : y(x) y(-x) = $[y(0)]^2$. ಈಗ y(0) = 1 ಆಗುವಂತೆ ಒಂದು ವಿಶೇಷ ಪರಿಹಾರ y(x) ನ್ನು

$$y'(x) = a_1 + 2a_2 x + 3a_3 x^2 + .......\infty$$

ಎಂಬ ಘಾತಶ್ರೇಣಿ ರೂಪದಲ್ಲಿ ರಚಿಸಲು ಪ್ರಯತ್ನಿಸುತ್ತೇವೆ. ಈ ಶ್ರೇಣಿಯ ಅಭಿಸರಣ ವೃತ್ತದೊಳಗೆ (ಸರ್ಕಲ್ ಆಫ್ ಕನ್ವರ್ಜೆನ್ಸ್)

$$y'(x) = a^1 + 2a_2 x + 3a_3 x^2 + ..........\infty$$

$y'(x) = y(x)$ ಆಗಬೇಕಾದ ಕಾರಣ $a^1 = 1, 2a2 = a_1, 3a3 = a_2,$

ಅಥವಾ

$$a1 = 1,\ a_2 = \frac{a_1}{2} = \frac{1}{2!},\quad a_3 = \frac{a^2}{3} = \frac{1}{3!}$$ ಇತ್ಯಾದಿ.

ಮೇಲಿನ ಶ್ರೇಣಿಯಲ್ಲಿ ಈ ಬೆಲೆಗಳನ್ನು ಆದೇಶಿಸಿದಾಗ y(x) ಉತ್ಪನ್ನ, ಪ್ರಾರಂಭದಲ್ಲೇ ಸೂಚನೆ ನೀಡಿರುವಂತೆ,

$$1 + \frac{x}{1!} + \frac{x^2}{2!} + \frac{x^3}{3!} + \quad .........\infty = \sum_{n=0} \frac{x^n}{n!} \quad ...[1]$$

ರೂಪದಲ್ಲಿ ಅಭಿವ್ಯಕ್ತವಾಗುವುದು. ಹೀಗೆ ಫಲಿಸುವ ಘಾತೀಯ ಶ್ರೇಣಿ $x$ ನ ಎಲ್ಲ (ನೈಜ ಮತ್ತು ಸಂಕೀರ್ಣ) ಬೆಲೆಗಳಿಗೂ ಅಭಿಸರಣಶೀಲವಾಗಿರುತ್ತದೆ. [I] ಶ್ರೇಣಿಯ ಮೊತ್ತವನ್ನು $x$ ನ ಘಾತೀಯ ಉತ್ಪನ್ನ (ಎಕ್ಸ್‌ಪೊನೆನ್ಷಲ್ ಫಂಕ್ಷನ್) ಎಂಬುದಾಗಿ ಕರೆದು exp $x$ ಎಂಬ ಪ್ರತೀಕದಿಂದ ಸೂಚಿಸುವುದು ವಾಡಿಕೆ. y'($x$) = y($x$), y(0) = 1 ಸಮೀಕರಣಗಳಿಗೆ y($x$) = exp $x$ ಒಂದು ಪರಿಹಾರವಾಗುವುದರಿಂದ ಮೇಲೆ ತರ್ಕಿಸಿರುವಂತೆ y $x$) y(-$x$) = $[y(0)]_2$ = [exp x] [exp (-x)] = $[\exp 0]^2$ = 1.

ಈ ಕೊನೆಯ ಸಂಬಂಧದಿಂದ $x$ ನ ಎಲ್ಲ ನೈಜ ಹಾಗೂ ಸಂಕೀರ್ಣ ಬೆಲೆಗಳಿಗೂ $\exp x \neq 0$ ಎಂದು ಸ್ಪಷ್ಟವಾಗುತ್ತದೆ. ಆದ್ದರಿಂದ $y(x)$ ಎಂಬುದು $y'(x)= y(x)$ ಅವಕಲ ಸಮೀಕರಣದ ಬೇರಾವುದೇ ಪರಿಹಾರವಾಗಲಿ, $y(x)$ /exp x ಭಾಗಲಬ್ಧವನ್ನು ರಚಿಸಲು ಶಕ್ಯವಾಗಿ

$$\frac{d}{dx}\left[\frac{y(x)}{\exp x}\right] = \frac{\exp x . y'(x) - y(x).\exp' x}{(\exp x)^2}$$

$$= \frac{\exp x . y(x) - y(x).\exp x}{(\exp x)^2} = 0$$

ಆಗಬೇಕಾಗುವುದು. ಎಂತಲೇ ಭಾಗಲಬ್ಧ $y(x)$ /exp $x$ ಒಂದು ನಿಯತಾಂಕ C ಆಗಿ ಪರಿಣಮಿಸಿ $y'(x) = y(x)$ ನ ಯಾವುದೇ ಪರಿಹಾರವನ್ನು $y(x) = C \exp x$ ರೂಪದಲ್ಲಿ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಈಗ a ಒಂದು ನಿಯತಾಂಕವಾದಲ್ಲಿ $y(x) = \exp(a + x)$ ಸಹ $y'(x) = y(x)$ ನ ಒಂದು ಪರಿಹಾರವೆಂದು ಸುಲಭವಾಗಿ ಮನಗಾಣಬಹುದು. ಆದ್ದರಿಂದ ಸೂಕ್ತ Cಗೆ ಎಲ್ಲ $x$ ಗಳಿಗೂ $\exp(a + x) = C \exp x$ ಆಗಬೇಕಾಗುತ್ತದೆ. ಇದರಲ್ಲಿ $x = 0$ ಆದೇಶಿಸಿ, C = exp a ಎಂದು ನಿರ್ಧರಿಸಬಹುದು.

$\exp(a + x) = \exp a \exp x$ ....................[II]

a ಹಾಗೂ $x$ ಗಳ ಎಲ್ಲ ಬೆಲೆಗಳಿಗೂ ಸತ್ಯವಾಗುವ ಈ ಸಂಬಂಧಕ್ಕೆ ಘಾತೀಯ ಉತ್ಪನ್ನದ ಉತ್ಪನ್ನ ಸಮೀಕರಣ (ಫಂಕ್ಷನಲ್ ಈಕ್ವೇಷನ್) ಎಂದು ಹೆಸರು. ಇದರಿಂದ $\exp 2a = (\exp a)^2$, $\exp 3a = (\exp a)^3$, ............... $\exp na = (\exp a)^n$ ಇತ್ಯಾದಿ ಸೂತ್ರಗಳನ್ನು ಸುಲಭವಾಗಿ ಉತ್ಪಾದಿಸಬಹುದು. exp 1 ಎಂಬ ಸಂಖ್ಯೆಯನ್ನು e ಎಂಬ ಪ್ರತೀಕದಿಂದ ಸೂಚಿಸುವುದು ವಾಡಿಕೆ:

$$e = 1 + \frac{1}{1!} + \frac{1}{2!} + \frac{1}{3!} + ........\infty \qquad .[III]$$

ಪ್ರಮುಖ ಗಣಿತೀಯ ನಿಯತಾಂಕಗಳಲ್ಲೊಂದಾದ ಈ ಸಂಖ್ಯೆ ಒಂದು ಬೀಜಗಣಿತಾತೀತ ಸಂಖ್ಯೆ (ಟ್ರಾನ್ಸೆಂಡೆಂಟಲ್ ನಂಬರ್). ಇದರ ದಶಮಾಂಶ ರೂಪ e = 2.718281828459….. eಯನ್ನು ಅಭಿವ್ಯಕ್ತಿಸುವ ಮತ್ತಿತರ ಗಮನಾರ್ಹ ಸೂತ್ರಗಳು ಇಂತಿವೆ :

$$e = \lim_{n\to\infty}\left(1 + \frac{1}{n}\right) \qquad .........[IV]$$

$$e^z = 1 + \prod_{n=1}^{\infty} z\left(\frac{z}{4n^2\pi^2} + 1\right)$$

$$e = 1 + \prod_{n=1}^{\infty} z\left(\frac{1}{4n^2\pi^2} + 1\right) \qquad ….[V]$$

$$e = 2 + \frac{1}{1} + \frac{1}{2} + \frac{1}{1} + \frac{1}{1} + \frac{1}{4} + \frac{1}{1} + \frac{1}{1} + \frac{1}{6} + ........$$

ಅಥವಾ e-1 = [1,1,2,1,1,4,1,1,6,1,1,8,…]

$\sqrt[q]{e}$ =[ 1, q –1, 1, 1, 3q-1, 1, 1, 5q-1, 1, 1, 7q-1, 1, 1, ….(q>1) ...[VI]

ಉತ್ಪನ್ನ ಸಮೀಕರಣ [II] ರಲ್ಲಿ $a = x = 1$ ಆದೇಶಿಸಿದಾಗ $\exp 2 = [\exp 1]^2$ ಎಂದು ಸಿದ್ಧಪಡುವುದು. ಇದೇ ಪ್ರಕಾರ ಪ್ರತಿಯೊಂದು ಪರಿಮೇಯ (ರ್‍ಯಾಷನಲ್) ಸಂಖ್ಯೆ $n$ಗೂ exp n =e $n$ ಎಂದು ಸಾಧಿಸಬಹುದು. $n$ ಅಪರಿಮೇಯ ವಾದಾಗಲಾದರೋ e$n$ = exp n ಎಂಬುದನ್ನು e$n$ ಘಾತದ ವ್ಯಾಖ್ಯೆಯನ್ನಾಗಿ ಅಂಗೀಕರಿಸಬಹುದು.

$x$ ನೈಜವಾದಾಗಲೆಲ್ಲ exp $x$ ಕೂಡ ನೈಜವೆಂಬುದು [1] ಶ್ರೇಣಿಯ ರೂಪದಿಂದ ಸ್ಪಷ್ಟವಾಗಿದೆ. $[\exp x][\exp(-x)] = 1$ ಆದಕಾರಣ $x$ ಯಾವ ನೈಜ ಸಂಖ್ಯೆಯಾದರೂ exp 0 > 0 ಮತ್ತು ತತ್ಫಲವಾಗಿ $\exp' x = \exp x$ >o ಆಗಬೇಕಾಗುವುದು. ಇದರಿಂದ ನೈಜಸಂಖ್ಯೆಗಳ $-\infty < x < \infty$ ಅಂತರದಲ್ಲಿ exp $x$ ಒಂದು ನಿರಂತರ ಆರೋಹಣಶೀಲ ಉತ್ಪನ್ನ (ಮಾನಟಾನಿಕ್ ಇನ್‌ಕ್ರೀಸಿಂಗ್ ಫಂಕ್ಷನ್) ಎಂದು ಶ್ರುತಪಡುತ್ತದೆ. e > 2 ಆದ್ದರಿಂದ n ಪೂರ್ಣಾಂಕ ಚರವಾದಾಗ lim exp n= lim n→ ∞ exp n = lim n→ ∞ $e^n$ =8, lim exp n=lin $e^n$ = 0 ತತ್ಪರಿಣಾಮವಾಗಿ log exp $x = x$ ಆಗುವಂತೆ $n$=- ∞ $n \to -\infty$

exp $x$ ಉತ್ಪನ್ನಕ್ಕೆ ಒಂದು ನಿರ್ದಿಷ್ಟ log $\frac{1}{18}$ ಎಂಬ ಆರೋಹಣಶೀಲ ವ್ಯಸ್ತ ಉತ್ಪನ್ನ ನೈಜ ಸಂಖ್ಯೆಗಳ $0 < \xi < \infty$ ಅಂತರದಲ್ಲಿ ಇರುತ್ತದೆ. log ξ ಗೆ ξ ಯ ಸ್ವಾಭಾವಿಕ ಲಘುಗಣಕ ಎಂದು ಹೆಸರು ; ಇದನ್ನು lnξ ಎಂಬುದಾಗಿಯೂ ಸೂಚಿಸುವುದುಂಟು. log ξಉತ್ಪನ್ನಕ್ಕೆ ಸಂಬಂಧಿಸಿದ ಕೆಳಗಿನ ಉತ್ಪನ್ನ ಸಮೀಕರಣವನ್ನು [II] ರಿಂದ ಸುಲಭವಾಗಿ ಸಮರ್ಥಿಸಬಹುದು :

log (ξ n) = log ξ+ log n …… [ VII]

ಅಲ್ಲದೆ b ಮತ್ತು $x$ ಗಳು ನೈಜಸಂಖ್ಯೆಗಳೂ b ಧನವೂ ಆದಾಗ b$x$ ಘಾತವನ್ನು exp ($x$ log b) ಎಂದು ವ್ಯಾಖ್ಯಿಸಬಹುದು.




**ಘಾತೀಯ ಮತ್ತು ಅತಿಪರವಲಯಕ ಉತ್ಪನ್ನಗಳಿಗೆ ಸಂಬಂಧಿಸಿದ ಕಾರ್ಟೀಸಿಯನ್ ಸಮೀಕರಣಗಳ ನಕ್ಷೆ**

∈

ಘಾತೀಯ ಉತ್ಪನ್ನದ ನೆರವಿನಿಂದ ಸುಲಭವಾಗಿ ವ್ಯಾಖ್ಯಿಸಬಹುದಾದ ಇತರ ಕೆಲವು ಉತ್ಪನ್ನಗಳನ್ನು ಕೆಳಗೆ ನಮೂದಿಸಲಾಗಿದೆ :

$$\cosh x = \frac{1}{2}[\exp x + \exp(-x)]$$

$$\sinh x = \frac{1}{2}[\exp x - \exp(-x)]$$

$$\cos x = \frac{1}{2}[\exp(ix) + \exp(-ix)]$$

$$\sin x = \frac{1}{2_i}[\exp(ix) - \exp(-ix)]$$

ಈ ವ್ಯಾಖ್ಯೆಗಳ ಆಧಾರದಿಂದ ಕೆಳಗಿನ ಸೂತ್ರಗಳನ್ನು ತಾಳೆ ನೋಡುವುದು ಸುಲಭ:

$\exp x = \cosh x + \sinh x = \cos ix - i \sin ix$

$\exp ix = \cos x + i \sin x$

$\cosh^2 x - \sinh^2 x = \cos^2 x + \sin^2 x = 1$

$\cos a \cos x - \sin a \sin x = \cos(a + x)$

$\sin a \cos x + \cos a \sin x = \sin(a + x)$

$$\cos x = 1 - \frac{x^2}{2!} + \frac{x^4}{4!} - \frac{x^6}{6!} + ........\infty$$

$$\sin x = x \frac{x^3}{3!} + \frac{x^5}{5!} - \frac{x^7}{7!} + ........\infty$$

$x$ ಮತ್ತು ξಗಳು ಅನುಕ್ರಮವಾಗಿ ಕೇವಲ ನೈಜಸಂಖ್ಯಾಕ್ಷೇತ್ರ ಮತ್ತು ಧನಸಂಖ್ಯಾ ಪ್ರಾಂತಗಳಿಗೆ ಸೀಮಿತವಾಗಿರದೆ ಸಮ್ಮಿಶ್ರ ಸಂಖ್ಯೆಗಳೂ ಆಗಬಹುದಾದರೆ $\exp x = \xi$ ಸಮೀಕರಣಕ್ಕೆ ಸರಿಹೊಂದುವ $x$ ನ ಎಲ್ಲ ಬೆಲೆಗಳ ಗಣವನ್ನು Log ξ ಎಂಬ ಪ್ರತೀಕದಿಂದ ನಿರ್ದೇಶಿಸುತ್ತೇವೆ. ಆಗಲೇ ಸೂಚಿಸಿರುವಂತೆ $\exp\ x = 0$ ಗೆ ಪರಿಹಾರಗಳಿರುವುದಿಲ್ಲ; ಆದ್ದರಿಂದ Log 0 ಒಂದು ಶೂನ್ಯಗಣ. $x \neq 0$ ಆದಾಗಲಾದರೋ Log $x$ ಒಂದು ಅನಂತ ಗಣವಾಗುತ್ತದೆ ಎಂದು ತೋರಿಸಬಹುದು. exp $x$ ಉತ್ಪನ್ನ 2πi ಅವಧಿಯ ಒಂದು ಆವರ್ತೋತ್ಪನ್ನ (ಪೀರಿಯಾಡಿಕ್ ಫಂಕ್ಷನ್) ಆಗಿರುವುದೇ ಹೀಗಾಗಲು ಕಾರಣ. [cos $x$ = 0 ಸಮೀಕರಣಕ್ಕೆ ಧನ ಪರಿಹಾರಗಳಿವೆಯೆಂದು ತೋರಿಸಿ ಆ ಪರಿಹಾರಗಳ ಪೈಕಿ ಕನಿಷ್ಠವಾದುದಕ್ಕೆ π/2 ಎಂಬುದಾಗಿ ನಾಮಕರಣಮಾಡುವುದರ ಮೂಲಕ exp $x$ ಉತ್ಪನ್ನದ ಆವರ್ತತೆಯನ್ನು ವ್ಯಕ್ತಪಡಿಸುವ $\exp\ (x + 2\pi in) = \exp x\ n = 0, \pm 1, \pm 2, ....)$ ಸೂತ್ರವನ್ನು ಸಾಧಿಸಲು ಸಾಧ್ಯವಾಗುವುದು.] ಕೊನೆಯದಾಗಿ b ಮತ್ತು $x$ ಗಳು ಸಂಕೀರ್ಣ ಸಂಖ್ಯೆಗಳಾದಾಗ $(b \neq 0)\ b^x$ ಘಾತವನ್ನು ಸಹ ಒಂದು ಗಣವನ್ನಾಗಿಯೇ ವ್ಯಾಖ್ಯಿಸುವುದು ಅವಶ್ಯ : $b^x = \exp\ (x \text{ Log } b) = \{\exp\ (xL) \mid L \in \text{Log } b\}$ ಈ ಗಣ $x$ ಪೂರ್ಣಾಂಕವಾದಾಗ ಒಂದು ಏಕಧಾತುಗಣವೂ $x$ ಪರಿಮೇಯವಾದಾಗ ಸಾಂತಗಣವೂ $x$ ಅಪರಿಮೇಯವಾದಾಗ ಅನಂತಗಣವೂ ಆಗುತ್ತದೆ. (ಎಸ್.ಆರ್.ಎಂ.)

**ಘಾನ :** ಪಶ್ಚಿಮ ಆಫ್ರಿಕದಲ್ಲಿ ಗಿನಿ ಖಾರಿಯ ಮೇಲಿರುವ ಒಂದು ಗಣರಾಜ್ಯ. ಉ. ಅ. 40 45' ಮತ್ತು 110 10', ಪೂ.ರೇ. 10 12' ಮತ್ತು 30 15' ನಡುವೆ ಇದೆ. ಪೂರ್ವ, ಉತ್ತರ, ಪಶ್ಚಿಮಗಳಲ್ಲಿ ಟೋಗೋ, ಉತ್ತರ ವೋಲ್ಟ ಮತ್ತು ಐವರಿ ಕೋಸ್ಟ್ ರಾಜ್ಯಗಳೂ ದಕ್ಷಿಣದಲ್ಲಿ ಗಿನಿ ಖಾರಿಯೂ ಇವೆ. ವಿಸ್ತೀರ್ಣ 238535 ಚ.ಕಿಮೀ. ಜನಸಂಖ್ಯೆ 24, 233, 431(2010) ಮತ್ತು ಅಕ್ರಾ ರಾಜಧಾನಿ ಅಕ್ರಾ ಅತಿ ದೊಡ್ಡ ನಗರ.

∈

**ಭೌತಲಕ್ಷಣ :** ಘಾನ ರಾಜ್ಯ ಬಹುತೇಕ ತಗ್ಗು ಪ್ರದೇಶ. ನೈಋತ್ಯ, ವಾಯವ್ಯ ಮತ್ತು ಅತ್ಯಂತ ಉತ್ತರ ಭಾಗಗಳಲ್ಲಿ 305 ಮೀ ಎತ್ತರದ ನಗ್ನೀಕೃತ ಬಯಲುಗಳಿವೆ. ಇವುಗಳ ಅಂಚಿನ ನೆಲ 610 ಮೀ ವರೆಗೂ ಎತ್ತರವಾಗಿರುವುದುಂಟು. ಘಾನ ರಾಜ್ಯದ ಮಧ್ಯದಲ್ಲಿ ವೋಲ್ಟ ನದಿಯ ಕಣಿವೆಯ ವಿಶಾಲ ಪ್ರದೇಶ ಸಾಮಾನ್ಯವಾಗಿ 152 ಮೀ ಗಿಂತ ಎತ್ತರವಾಗಿಲ್ಲ. ಆದರೆ ಈ ಕಣಿವೆಯ ತುದಿಗಳಲ್ಲಿರುವ ಕ್ವಾಹು ಮತ್ತು ಗಂಬಾಗ ಪ್ರಸ್ಥಭೂಮಿಗಳ ಎತ್ತರ 457-533 ಮೀ ಆಗ್ನೇಯ ಭಾಗದಲ್ಲಿರುವ ಅಣ್ವಪಿಂ–ಟೋಗೋ ಶ್ರೇಣಿಗಳ ಸರಾಸರಿ ಎತ್ತರ 457 ಮೀ ಘಾನದ ಅತ್ಯುನ್ನತ ಶಿಖರಗಳಾದ ಅಫಾಡ್ಜಾಟೊ 885 ಮೀ ಮತ್ತು ಡ್ಜೆಬೋಬೊ 875 ಮೀ ಇಲ್ಲಿವೆ. ಕರಾವಳಿ ಸಮತಟ್ಟಾಗಿದೆ, ಮರಳಿನಿಂದಲೂ ಲಗೂನುಗಳಿಂದಲೂ ಕೂಡಿದೆ. ಘಾನಕ್ಕೆ 537 ಕಿಮೀ ಉದ್ದದ ಸಮುದ್ರತೀರವುಂಟು. ವೋಲ್ಟ, ಪ್ರಾ ಆಂಕೋಬ್ರ, ಟಾನೊ ಇವು ಘಾನದ ನದಿಗಳು.

**ವಾಯುಗುಣ :** ಘಾನದ್ದು ಉಷ್ಣವಲಯದ ವಾಯುಗುಣ. ಈಶಾನ್ಯದಲ್ಲಿ ಸಹಾರ ಮರುಭೂಮಿಯ ಕಡೆಯಿಂದ ದೂಳುತುಂಬಿದ ಉಷ್ಣ ಶುಷ್ಕ ಮಾರುತವೂ ನೈಋತ್ಯದಲ್ಲಿ ಅಟ್ಲಾಂಟಿಕ್ ಸಾಗರದಿಂದ ತೇವಗೂಡಿದ ಮಾನ್ಸೂನ್ ಮಾರುತವೂ ಘಾನದ ಮೇಲೆ ಬೀಸುತ್ತವೆ. ಇವೆರಡೂ ಕೂಡುವೆಡೆಯಲ್ಲಿ ಗುಡುಗಿನಿಂದ ಕೂಡಿದ ಬಿರುಗಾಳಿ ಸಂಭವಿಸುತ್ತದೆ. ಸೂರ್ಯನ ಚಲನೆಗೆ ಅನುಗುಣವಾಗಿ ಋತುಗಳು ವ್ಯತ್ಯಾಸವಾಗುತ್ತವೆ. ಶುಷ್ಕಮಾರುತ ಬೀಸುವೆಡೆಯಲ್ಲಿ ಮಳೆಯಿಲ್ಲ. ಉತ್ತರದಲ್ಲಿ ಮಳೆ ಕಡಿಮೆ. ದಕ್ಷಿಣದಲ್ಲಿ ಪಶ್ಚಿಮದ ಕಡೆ ಹೆಚ್ಚು ಮಳೆಯಾಗುತ್ತದೆ. ಗರಿಷ್ಠ ಮಳೆ 86". ವಾಯುಗುಣ ಮಳೆಯಷ್ಟು ವ್ಯತ್ಯಾಸವಾಗುವುದಿಲ್ಲ. 79° ಫ್ಯಾ. – 84° ಫ್ಯಾ. (26° ಸೆಂ. – 29° ಸೆಂ) ಸರಾಸರಿ ಉಷ್ಣತೆ. ಎತ್ತರ ಹಾಗೂ ಸಮುದ್ರ ಪ್ರಭಾವಗಳಿರುವೆಡೆ ಉಷ್ಣತೆ ಕಡಿಮೆ.

**ಸಸ್ಯ ಪ್ರಾಣಿಜೀವನ :** ದಕ್ಷಿಣದಲ್ಲಿ ಅರಣ್ಯವೂ ಉತ್ತರದಲ್ಲಿ ಸವಾನವೂ ಸ್ವಾಭಾವಿಕ. ಪರಿನಿಯತ ಮೀಸಲು ಕಾಡುಗಳಿರುವೆಡೆಯನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಕಾಡುಗಳನ್ನು ಕಡಿದು ಕೋಕೋ ಮರಗಳನ್ನು ನೆಡಲಾಗಿದೆ; ಬಾಳೆ, ಎಣ್ಣೆಯ ತಾಳೆ, ಮುಸುಕಿನ ಜೋಳ ಬೆಳೆಯಲಾಗುತ್ತಿದೆ. ನೆಲ ಫಲವತ್ತಾಗಿಲ್ಲದ ಪ್ರದೇಶಗಳಲ್ಲಿ ಮರಗೆಣಸನ್ನೂ, ಹಳ್ಳಿಗಳ ಸುತ್ತ ಜಂಬೀರ ವೃಕ್ಷಗಳನ್ನೂ ಬೆಳೆಯುತ್ತಾರೆ. ಹೆಚ್ಚು ಮಳೆ ಬೀಳದ ಕರಾವಳಿ ಪ್ರದೇಶದಲ್ಲಿ ಕುರುಚಲುಗಿಡ ವಿಶೇಷ.




ಸಿಂಹ, ಚಿರತೆ, ಕಿರುಬ, ಜಿಂಕೆ, ಆನೆ, ಕಾಡೆಮ್ಮೆ, ಕಾಡುನಾಯಿ, ಚಿಂಪಾಜಿ, ಕೋತಿ, ಹೆಬ್ಬಾವು, ನಾಗರಹಾವು, ಆ್ಯಡರ್ ಸರ್ಪ – ಇವು ಇಲ್ಲಿಯ ಕೆಲವು ಪ್ರಾಣಿಗಳು. ನದಿಗಳಲ್ಲೂ ನೀರು ನಿಂತ ಸ್ಥಳಗಳಲ್ಲೂ ಮೊಸಳೆಗಳುಂಟು. ವೋಲ್ಟ ನದಿಯಲ್ಲಿ ನೀರಾನೆಗಳಿವೆ. ವಿವಿಧ ವರ್ಗಗಳ ಹಲ್ಲಿಗಳು, ಆಮೆ, ದೊಡ್ಡ ಆಕಾರದ ಬಸವನ ಹುಳು – ಇವೂ ಸಾಮಾನ್ಯ. ಗಿಳಿ, ಕೊಂಬುಕೊಕ್ಕಿನ ಹಕ್ಕಿ, ಮೀಂಚುಳ್ಳಿ, ಹದ್ದು, ಗಿಡುಗ, ಕ್ರೌಂಚ, ಕೋಗಿಲೆ, ಗೋಟ್‍ಸಕರ್, ಕದಿರುಗಿಣಿ, ಪಾರಿವಾಳ ಮುಂತಾದ ಹಲವು ಬಗೆಯ ಪಕ್ಷಿಗಳಿವೆ. ಹಲವು ಜಾತಿಗಳ ಮೀನುಗಳೂ ನದೀಮುಖಗಳಲ್ಲಿ ಷಾರ್ಕ್‍ಗಳೂ ಉಂಟು. ಜೇಡ, ಚೇಳು, ಇರುವೆ, ಗೆದ್ದಲು, ಚಿಟ್ಟೆ, ಮಿಡತೆ, ಸೊಳ್ಳೆ, ಟ್ಸೆಟ್ಸೆ ನೊಣ – ಇವೆಲ್ಲ ಧಾರಾಳವಾಗಿವೆ. (ವಿ.ಜಿ.ಕೆ)

**ಇತಿಹಾಸ :** 1471ರಲ್ಲಿ ಪೋರ್ಚುಗೀಸ್ ವ್ಯಾಪಾರಿಗಳು ಚಿನ್ನ, ದಂತ, ಮತ್ತು ಸಂಬಾರ ದಿನಸಿಗಳಿಗಾಗಿ ಇಲ್ಲಿಗೆ ಬಂದಮೇಲೆ ಘಾನದ ಆಧುನಿಕ ಇತಿಹಾಸ ಪ್ರಾರಂಭವಾಯಿತು. ಈ ದೇಶಕ್ಕೆ ಘಾನ ಎಂಬ ಹೆಸರು ಬಂದದ್ದು ಇದಕ್ಕೆ ಸ್ವಾತಂತ್ರ್ಯ ಬಂದಮೇಲೆ. 4-13 ನೆಯ ಶತಮಾನಗಳಲ್ಲಿ ನೈಜರ್ ನದೀ ಬಯಲಿನಲ್ಲಿ ಪ್ರಸಿದ್ಧವಾಗಿದ್ದ ಘಾನ ಸಾಮ್ರಾಜ್ಯದಿಂದ ಇದಕ್ಕೆ ಘಾನ—ಎಂದರೆ ರಾಜಯೋಧ ಹೆಸರು ಬಂದಿದೆ. ಪೋರ್ಚುಗೀಸರು 1482 ರಲ್ಲಿ ಸಮುದ್ರದಂಚಿನಲ್ಲಿ ಎಲ್ಮಿನ ದುರ್ಗವನ್ನು ಕಟ್ಟಿದರು. ಅವರ ತರುವಾಯ ಸ್ವೀಡನ್, ಡೆನ್ಮಾರ್ಕ್, ಪ್ರಷ್ಯ ದೇಶಗಳ ಜನರೂ ಬ್ರಿಟಿಷರೂ ಬಂದರು. ಬಂಗಾರದ ವ್ಯಾಪಾರ ಮಾಡುತ್ತಿದ್ದ ಪೋರ್ಚುಗೀಸರು ಕ್ರಮೇಣ ಗುಲಾಮ ವ್ಯಾಪಾರವನ್ನಾರಂಭಿಸಿ ಇಲ್ಲಿಂದ ಜನರನ್ನು ಬಲಾತ್ಕಾರವಾಗಿ ಸಾಗಿಸತೊಡಗಿದರು. 1807ರಲ್ಲಿ ಬ್ರಿಟಿಷರು ಗುಲಾಮ ವ್ಯಾಪಾರವನ್ನು ವಿರೋಧಿಸಿದರು. 19ನೆಯ ಶತಮಾನದಲ್ಲಿ ಇಲ್ಲಿ ಬ್ರಿಟಿಷರ ಬಲ ಹೆಚ್ಚಿ ಯೂರೋಪಿನ ಇತರ ದೇಶಗಳ ಪ್ರಭಾವ ಕುಗ್ಗಿತು. ಅಶಾಂಟೀ ಬಣದವರು ಸಮುದ್ರತೀರದ ಬಣಗಳ ಜನರನ್ನು ಗುಲಾಮರನ್ನಾಗಿ ಮಾರಲು ಸಹಾಯಕರಾಗಿದ್ದ ಕಾರಣ ಅವರಿಗೂ ಬ್ರಿಟಿಷರಿಗೂ 1806-1902 ರ ನಡುವೆ ಏಳು

ಯುದ್ಧಗಳು ನಡೆದು ಕೊನೆಗೆ ಅಲ್ಲಿಯ ಚಿನ್ನದಿಂದಾಗಿ ಗೋಲ್ಡ್ ಕೋಸ್ಟ್ ಎಂದು ಹೆಸರು ಪಡೆದಿದ್ದ ಕರಾವಳಿ ಪ್ರದೇಶ 1874ರಲ್ಲಿ ಇಂಗ್ಲೆಂಡಿನ ವಸಾಹತಾಯಿತು. 1887ರಲ್ಲಿ ಬ್ರಿಟಿಷರು ಉತ್ತರದ ತಮ್ಮ ಪ್ರದೇಶಗಳನ್ನೆಲ್ಲ ಒಂದುಗೂಡಿಸಿ ಆರಕ್ಷಿತ ಪ್ರದೇಶವನ್ನಾಗಿ ಮಾಡಿದರು. 1901ರಲ್ಲಿ ಜರ್ಮನಿಗೆ ಸೇರಿದ್ದ ಟೋಗೋಲ್ಯಾಂಡಿನ ಸ್ವಲ್ಪಭಾಗ ಒಂದನೆಯ ಮಹಾಯುದ್ಧದ ತರುವಾಯ ಬ್ರಿಟಿಷರ ನ್ಯಾಸಾಧಿಕಾರಕ್ಕೆ ಸೇರಿತು. ಗೋಲ್ಡ್ ಕೋಸ್ಟ್‌ನ ಒಂದು ಭಾಗವಾಗಿ ಇದರ ಆಡಳಿತ ನಡೆಸಲಾಗುತ್ತಿತ್ತು.

ಎರಡನೆಯ ಮಹಾಯುದ್ಧದ ವೇಳೆಗೆ ಘಾನ ಜನರಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚಿತು. 1946ರಿಂದ ಸ್ಥಳೀಯ ಜನ ಆಡಳಿತದಲ್ಲಿ ಭಾಗವಹಿಸಲಾರಂಭಿಸಿದರು. ಆ ತರುವಾಯ ಸ್ವಯಮಾಡಳಿತಕ್ಕೆ ಒತ್ತಡ ಹೆಚ್ಚಿತು. ಅಶಾಂಟೀ ಪ್ರದೇಶವೂ ಸೇರಿದಂತೆ ಉತ್ತರದ ಆರಕ್ಷಿತ ಪ್ರದೇಶ ಮತ್ತು ಬ್ರಿಟಿಷರ ನ್ಯಾಸದಲ್ಲಿದ್ದ ಟೋಗೋಲ್ಯಾಂಡ್ ಇವು ಗೋಲ್ಡ್‌ಕೋಸ್ಟ್ ವಸಾಹತುವಿನೊಡನೆ 1957ರಲ್ಲಿ ವಿಲೀನಗೊಂಡವು. ಇದು ಸ್ವತಂತ್ರವಾಯಿತು. ಈ ಒಟ್ಟುಪ್ರದೇಶಕ್ಕೆ ಘಾನ ಎಂಬ ಹೆಸರು ಬಂತು. ಆಫ್ರಿಕದ ನೀಗ್ರೋ ದೇಶಗಳ ಪೈಕಿ ಮೊಟ್ಟಮೊದಲು ಸ್ವಾತಂತ್ರ್ಯ ಪಡೆದ ರಾಜ್ಯ ಘಾನ. 1960ರ ಜುಲೈ 1 ರಂದು ಇದು ಗಣರಾಜ್ಯವಾಯಿತು.

ಅಶಾಂಟೀಯ ರಾಜಕುವರಿ

1960-65ರ ಅವಧಿಯಲ್ಲಿ ನ್‌ಕ್ರುಮ ಘಾನದ ರಾಷ್ಟ್ರಪತಿಯಾಗಿದ್ದ. ಫೆಬ್ರುವರಿ 1966ರಲ್ಲಿ ಅವನ ಸರ್ಕಾರ ಉರುಳಿ ಸೈನಿಕ ಪ್ರಭುತ್ವ ಏರ್ಪಟ್ಟಿತು. ತರುವಾಯ 1969ರಲ್ಲಿ ಎರಡನೆಯ ಗಣರಾಜ್ಯ ಅಸ್ತಿತ್ವಕ್ಕೆ ಬಂತು. ಹೊಸ ಸಂವಿಧಾನದ ಪ್ರಕಾರ ಚುನಾವಣೆ ನಡೆಯಿತು 1ನೆಯ ಸೆಪ್ಟೆಂಬರ್ 1970ರಂದು ಎಡ್ವರ್ಡ್ ಅಕುಫೊ–ಅಡ್ಡೊ ಘಾನದ ಅಧ್ಯಕ್ಷನಾದ. 1992ರಲ್ಲಿ ಅಧ್ಯಕ್ಷೀಯ (ಪ್ರೆಸಿಡೆನ್ಷಿಯಲ್) ಹಾಗೂ ಪಾರ್ಲಿಮೆಂಟರಿ ಚುನಾವಣೆಗಳು ನಡೆದವು. 1992ರ ಸಂವಿಧಾನವು ಅಧಿಕಾರವನ್ನು ಅಧ್ಯಕ್ಷ, ಪಾರ್ಲಿಮೆಂಟ್ ಸಚಿವ ಸಂಪುಟ, ಕೌನ್ಸಿಲ್ ಆಫ್ ಸ್ಟೇಟ್ ಹಾಗೂ ಸ್ವತಂತ್ರ ನ್ಯಾಯಾಂಗಗಳ ನಡುವೆ ಹಂಚಿಕೆ ಮಾಡಿದೆ. (ಕೆ.ಎಸ್.ಎಸ್.)

**ಆಡಳಿತ :** ಘಾನದಲ್ಲಿ ಏಕಸದನೀಯ ವಿಧಾನಮಂಡಲವಿದೆ. ಅದರ ಚುನಾಯಿತರ ಸದಸ್ಯರ ಸಂಖ್ಯೆ 140. ಐದು ವರ್ಷಗಳಿಗೊಮ್ಮೆ ಚುನಾವಣೆಗಳು ನಡೆಯುತ್ತವೆ. ಆಡಳಿತ ಸೌಕರ್ಯಕ್ಕಾಗಿ ದೇಶವನ್ನು ಆಡಳಿತಾತ್ಮಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವನ್ನು 170 ಜಿಲ್ಲೆಗಳಾಗಿ ವಿಭಾಗ ಮಾಡಲಾಗಿದೆ. ನ್ಯಾಯಾಂಗ ವ್ಯವಸ್ಥೆ ಬ್ರಿಟಿಷ್ ಕಾನೂನನ್ನು ಆಧರಿಸಿದೆ. ಆಡಳಿತ ಸಮಿತಿಗಳು ಜಿಲ್ಲೆಗಳ ಆಡಳಿತ ನಡೆಸುತ್ತವೆ. (ಎ.ಎಂ.ಆರ್.)

**ಜನ:** ಘಾನದ ಜನ ನೀಗ್ರೋ ಬುಡಕಟ್ಟಿಗೆ ಸೇರಿದವರು. ಇದರಲ್ಲಿ ಹಲವು ಬಣಗಳಿವೆ, ಅಕಾನ್ ಬಣದಲ್ಲಿ ಟ್ವಿ ಮತ್ತು ಫಾಂಟಿ ಎಂದು ಎರಡು ತಂಡಗಳುಂಟು. ಟ್ವಿಗಳು ಅಶಾಂಟೀ ಮತ್ತು ಮಧ್ಯ ಘಾನದಲ್ಲಿ ವಾಸಿಸುತ್ತಾರೆ. ಫಾಂಟಿಗಳು ಸಮುದ್ರತೀರಗಳಲ್ಲಿ ನೆಲೆಸಿದ್ದಾರೆ. ವೋಲ್ಟ ನದೀಬಯಲಿನಲ್ಲಿ ಗುಅನ್ ಬಣ ನೆಲೆಸಿದೆ. ಆ ನದಿಯ ಪೂರ್ವಕ್ಕೆ ಇವಿ ಜನರಿದ್ದಾರೆ. ಈ ರಾಜ್ಯದಲ್ಲಿ 50 ಪ್ರಾಂತೀಯ ಭಾಷೆಗಳಿವೆ. ಆಡಳಿತ ಭಾಷೆ ಇಂಗ್ಲಿಷ್.

ಘಾನ ಜನರಲ್ಲಿ ಶೇ. 68.9 ಕ್ರೈಸ್ತರು, ಶೇ.15.9 ಮುಸ್ಲಿಮರು, ಉಳಿದವರು ಆಫ್ರಿಕದ ಸಾಂಪ್ರದಾಯಿಕ ಸರ್ವಚೇತನ ಪಂಥದವರು. (ವಿ.ಜಿ.ಕೆ.)

**ಶಿಕ್ಷಣ ಪದ್ಧತಿ :** ಘಾನ ಬಹಳ ವರ್ಷಗಳ ಕಾಲ ಬ್ರಿಟಿಷರ ವಸಾಹತು ರಾಜ್ಯವಾಗಿದ್ದ ಕಾರಣ ಅದರ ಶಿಕ್ಷಣ ಪದ್ಧತಿ ಭಾರತದ ಆಧುನಿಕ ಶಿಕ್ಷಣದ ಆರಂಭ ಮತ್ತು ಬೆಳೆವಣಿಗೆಯನ್ನು ಬಹುಮಟ್ಟಿಗೆ ಹೋಲುತ್ತದೆ. ಸ್ವಾತಂತ್ರ್ಯಾನಂತರ ಏಕಪ್ರಕಾರವಾಗಿ ಅಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಅಗತ್ಯವನ್ನು ಪೂರೈಸಲು ತೀವ್ರಗತಿಯಲ್ಲಿ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸುವುದರ ಜೊತೆಗೆ ಉತ್ತಮ ಬೋಧನೆಯನ್ನೊದಗಿಸಲು ಘಾನ ಶ್ರಮಿಸುತ್ತಿದೆ.

16ಯ ಶತಮಾನದ ಆದಿಯಲ್ಲೇ ಪೋರ್ಚುಗೀಸರು ಎಲ್ಮಿನದ ಬಳಿ ಯುರೋಪಿಯನ್ ಮಾದರಿಯ ಶಾಲೆಗಳನ್ನು ಆರಂಭಿಸಿದ್ದರು. ಆಮೇಲೆ ಮುಂದಿನ ಎರಡು ಶತಮಾನಗಳ ಅವಧಿಯಲ್ಲಿ ಬ್ರಿಟಿಷರು, ಡೇನರು ಮತ್ತು ಡಚ್ಚರು ತೀರಪ್ರದೇಶದ ತಮ್ಮತಮ್ಮ ವ್ಯಾಪಾರಕೋಠಿಗಳ ಸುತ್ತ ಅನೇಕ ಪಾಠಶಾಲೆಗಳನ್ನು ಆರಂಭಿಸಿದರು. ಹೀಗೆ ಆರಂಭವಾದ ಶಾಲೆಗಳ ಜೊತೆಗೆ 19ನೆಯ ಶತಮಾನದ ಆದಿಯಿಂದ ವೆಸ್ಲಿಯನ್ ಮೆತಾಡಿಸ್ಟ್, ಬಾಸಲ್ ಮಿಷನ್ ಮುಂತಾದ ಕ್ರೈಸ್ತಮತೀಯ ಸಂಸ್ಥೆಗಳು ನೂತನ ಶಾಲೆಗಳನ್ನು ಆರಂಭಿಸಿ, ಅಂದು ದಕ್ಷಿಣ ಗೋಲ್ಡ್ ಕೋಸ್ಟ್ ಎಂದು ಹೆಸರಾಗಿದ್ದ ಆ ಭಾಗದಲ್ಲಿ ವಿಧಾಯಕ ಶಿಕ್ಷಣಕ್ಕೆ ಹಾದಿಮಾಡಿಕೊಟ್ಟವು. ತೀರಪ್ರದೇಶವನ್ನು ಪೂರ್ಣವಾಗಿ ಬ್ರಿಟಿಷರು



ಅಶಾಂಟೇ ರಾಜನ ಆಸ್ಥಾನ

1874ರಲ್ಲಿ ಆಕ್ರಮಿಸಿದ ಮೇಲೆ ಅವರು ಶಿಕ್ಷಣದ ಬಗ್ಗೆ ಅಷ್ಟಾಗಿ ಆಸಕ್ತಿ ತೋರದೆ ಶಾಲೆಗಳನ್ನು ನಡೆಸುತ್ತಿದ್ದ ಮಿಷನರಿಗಳಿಗೆ ಸಹಾಯಧನವನ್ನು ಮಾತ್ರ ನೀಡುತ್ತ ಬಂದರು. ಸರ್ಕಾರ ಅಲ್ಲೊಂದು ಇಲ್ಲೊಂದು ಶಾಲೆಯನ್ನು ಮಾತ್ರ ಆರಂಭಿಸಿತ್ತು. 1900ರ ವೇಳೆಗೆ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಒಟ್ಟು 12,000 ವಿದ್ಯಾರ್ಥಿಗಳು ಮಾತ್ರ ಶಿಕ್ಷಣ ಪಡೆಯುತ್ತಿದ್ದರು. 1901ರ ತನಕ ಒಳನಾಡಿನ ಭಾಗಗಳನ್ನೂ ಉತ್ತರದ ಪ್ರದೇಶಗಳನ್ನೂ ಅವರು ಆಕ್ರಮಿಸಿರಲಿಲ್ಲವಾದ್ದರಿಂದ ಶಾಲಾಸೌಲಭ್ಯ ತೀರ ಪ್ರದೇಶಕ್ಕೆ ಮಾತ್ರ ಮೀಸಲಾಗಿತ್ತು. ಅನಂತರ ಎರಡನೆಯ ಮಹಾಯುದ್ಧದವರೆಗೂ ದೇಶಾದ್ಯಂತ ಅಲ್ಲಲ್ಲಿ ಕೆಲವು ಶಾಲೆಗಳು ಆರಂಭವಾದವು. 1920ರಲ್ಲಿ ಶಿಕ್ಷಣದಲ್ಲಿ ಸುಧಾರಣೆ ಆರಂಭವಾಯಿತು. ಪ್ರಾಥಮಿಕ ಶಾಲೆಯ ಶಿಕ್ಷಣವನ್ನು ಉತ್ತಮಪಡಿಸುವ ಮತ್ತು ಆಗಲೆ ಆರಂಭವಾಗಿದ್ದ ಖಾಸಗಿ ಪ್ರೌಢಶಾಲೆಗಳ ಜೊತೆಗೆ ಅಖಿಮೋಟ ಎಂಬ ಹೆಸರಿನ ಉತ್ತಮ ರೀತಿಯ ಸರ್ಕಾರಿ ಪ್ರೌಢಶಾಲೆಗಳನ್ನು ಆರಂಭಿಸುವ ಯತ್ನ ನಡೆಯಿತು. 1945ರ ವೇಳೆಗೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಒಟ್ಟು 1,43,000 ವಿದ್ಯಾರ್ಥಿಗಳಿದ್ದರು. ಆಗಲೂ ಒಳನಾಡಿನಲ್ಲೂ ಉತ್ತರದ ಪ್ರದೇಶದಲ್ಲೂ ಶಿಕ್ಷಣಸೌಲಭ್ಯ ಅಷ್ಟಾಗಿ ವಿಸ್ತರಿಸಿರಲಿಲ್ಲ. 1948ರಲ್ಲಿ ತೀರ ಪ್ರದೇಶದ ಅಕ್ರಾದಲ್ಲಿ ಆರು ವರ್ಷಗಳ ಪ್ರಾಥಮಿಕ ಶಿಕ್ಷಣ ಮುಗಿಸಿದ್ದವರ ಪ್ರಮಾಣ 18% ಆಗಿದ್ದರೂ ಒಳನಾಡಿನಲ್ಲಿ ಅದು 3.9% ರಷ್ಟು ಮಾತ್ರವಿತ್ತು. ಉತ್ತರದ ಪ್ರದೇಶದಲ್ಲಿ ಇನ್ನೂ ಕಡಿಮೆಯಿತ್ತು.



ಘಾನದ ಒಂದು ಬಣದ ಮುಖ್ಯಸ್ಥ

ಯುದ್ಧಾನಂತರದ ದಿನಗಳಲ್ಲಿ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸುವ ಕಾರ್ಯ ಭರದಿಂದ ಸಾಗಿತ್ತು. 1957ರಲ್ಲಿ ದಾಸ್ಯದಿಂದ ವಿಮುಕ್ತಿ ಹೊಂದಿದ ರಾಷ್ಟ್ರ ವಿಸ್ತರಣ ಕಾರ್ಯವನ್ನು ಮುಂದುವರಿಸಿ 1965ರ ವೇಳೆಗೆ ಇಡೀ ಸಹಾರದ ಕೆಳ ರಾಷ್ಟ್ರಗಳಲ್ಲೆಲ್ಲ ಹೆಚ್ಚು ಮುಂದುವರಿದ ರಾಷ್ಟ್ರವಾಯಿತು. 1960 ರ ವರೆಗೆ ಇದರ ಹಣಕಾಸಿನ ಸ್ಥಿತಿ ಉತ್ತಮವಾಗಿತ್ತಲ್ಲದೆ ಆದಾಯದ ಬಹುಭಾಗವನ್ನು ಶಿಕ್ಷಣದ ವಿಸ್ತರಣಕ್ಕಾಗಿ ವಿನಿಯೋಗಿಸಲಾಗುತ್ತಿತ್ತು. ಕಾಲಕ್ರಮೇಣ ಹಣಕಾಸಿನ ಸ್ಥಿತಿ ಕ್ಷೀಣಿಸಿ ಈಗ ಆದಾಯದ 1/5 ಭಾಗದಷ್ಟು ಮಾತ್ರ ಶಿಕ್ಷಣಕ್ಕೆ ಮೀಸಲಾಗುತ್ತಿದೆ.



ಜೈಲೋಫೋನ್ – ಘಾನದ ಒಂದು ಜನಪ್ರಿಯ ವಾದ್ಯ

1961 ರಿಂದ ರಾಷ್ಟ್ರಾದ್ಯಂತ ಆರು ವರ್ಷದ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿದೆ. ಉಚಿತವೆಂದು ಕಾನೂನು ಮಾಡಿದ್ದರೂ ಹಣದ ಅಭಾವದಿಂದಾಗಿ ಪೋಷಕರಿಂದ ಶುಲ್ಕ ಸಂಗ್ರಹಣೆಯಂತೂ ಆಗುತ್ತಲೇ ಇದೆ. ಪ್ರಾಥಮಿಕ ಶಿಕ್ಷಣ ಮುಗಿಸಿದವರಿಗೆ ನಾಲ್ಕು ವರ್ಷದ ಅವಧಿಯ ಶಿಕ್ಷಣ ನೀಡುವ ಮಾಧ್ಯಮಿಕ ಶಾಲೆಗಳಿವೆ. ಈ ಮಾಧ್ಯಮಿಕ ಶಿಕ್ಷಣ ಮುಗಿಸಿದ ಬಹುತೇಕ ಮಂದಿ ಜೀವನೋಪಾಯಕ್ಕಾಗಿ ಯಾವುದಾದರೊಂದು ವೃತ್ತಿಯನ್ನು ಹಿಡಿಯುತ್ತಾರೆ. ಪ್ರೌಢಶಾಲೆ, ತಾಂತ್ರಿಕ ಶಾಲೆ ಅಥವಾ ಅಧ್ಯಾಪಕರ ಕಾಲೇಜಿಗೆ ಹೋಗುವವರು ಎಲ್ಲೋ ಕೆಲ ಮಂದಿ ಮಾತ್ರ. ಈ ಮಟ್ಟದ ಶಿಕ್ಷಣವೂ ಹೆಸರಿಗೆ ಮಾತ್ರ ಉಚಿತ ಮತ್ತು ಕಡ್ಡಾಯ. 15% ರಷ್ಟು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಪಶ್ಚಿಮ ಆಫ್ರಿಕ ಪರೀಕ್ಷಾ ಮಂಡಲಿ ನಡೆಸುವ ಸಾರ್ವತ್ರಿಕ ಪರೀಕ್ಷೆಗೆ ಕುಳಿತು, ಅದರಲ್ಲಿ ಉತ್ತೀರ್ಣರಾದವರು ಮಾತ್ರ ಪ್ರೌಢಶಾಲೆಗೆ ಸೇರುತ್ತಾರೆ. ಇದರ ಫಲವಾಗಿ ಅವರು ಮಧ್ಯದಲ್ಲೇ ಮಾಧ್ಯಮಿಕ ಶಾಲೆಯ ಶಿಕ್ಷಣವನ್ನು ತೊರೆದು ಪ್ರೌಢಶಾಲೆಗೆ ಸೇರುವ ಅವಕಾಶ ಲಭಿಸಿದೆ. ಈ ಪ್ರವೃತ್ತಿಯಿಂದ ಮಾಧ್ಯಮಿಕ ಶಾಲೆಯನ್ನು ಎರಡು ವರ್ಷದ ಶಾಲೆಯನ್ನಾಗಿ ಮಾಡುವ ಇಲ್ಲವೆ, ಪ್ರಾಥಮಿಕ ಶಾಲೆಯೊಡನೆ ಆ ಮಾಧ್ಯಮಿಕದ ಎರಡು ತರಗತಿಗಳನ್ನು ಸೇರಿಸಿಬಿಡುವ ಯತ್ನ ನಡೆಯುತ್ತಿದೆ. ಪ್ರೌಢಶಾಲೆಯ ಐದು ವರ್ಷದ ಶಿಕ್ಷಣದ ಅನಂತರ ನಡೆಯುವ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಕೆಲವು ಪ್ರೌಢಶಾಲೆಯಲ್ಲೇ ಇರುವ 6ನೆಯ ತರಗತಿಯ ಎರಡು ವರ್ಷದ ಶಿಕ್ಷಣವನ್ನು ಕೈಕೊಂಡು ಆ ಬಳಿಕ ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಹೋಗಲು ಯತ್ನಿಸುವರು. ಆದರೆ ಪ್ರೌಢಶಾಲೆಯ ಬಹುಮಂದಿ ಐದನೆಯ ತರಗತಿಗೇ ತಮ್ಮ ಶಿಕ್ಷಣವನ್ನು ಮುಗಿಸುವರು.

2007ರಲ್ಲಿ ವಯಸ್ಕ ಸಾಕ್ಷರತೆ ಶೇ. 65 ರಷ್ಟಿತ್ತು; ಅದರಲ್ಲಿ ಗಂಡಸರು ಶೇ. 71.7, ಮತ್ತು ಹೆಂಗಸರು, 58 3, ಈಗ ಘಾನದಲ್ಲಿ 21,530 ಪ್ರಾಥಮಿಕ ಶಾಲೆಗಳು, 8850 ಜೂನಿಯರ್ ಸೆಕೆಂಡರಿ ಶಾಲೆಗಳು, 900 ಸೀನಿಯರ್ ಸೆಕೆಂಡರಿ ಶಾಲೆಗಳು, 52 ಸಾರ್ವಜನಿಕ ಶಿಕ್ಷಣ ಕಾಲೇಜುಗಳು, 5 ಖಾಸಗಿ ಶಿಕ್ಷಣ ಕಾಲೇಜುಗಳು, 5 ಪಾಲಿಟೆಕ್ನಿಕ್ ಸಂಸ್ಥೆಗಳು, 8 ವಿಶ್ವವಿದ್ಯಾನಿಲಯಗಳು ಇವೆ. ಶಿಕ್ಷಣ ಮಾಧ್ಯಮ ಇಂಗ್ಲಿಷ್.

ಅಧ್ಯಾಪಕರ ಶಿಕ್ಷಣ : ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಅಧ್ಯಾಪಕರ ಶಿಕ್ಷಣದ ಕಾಲೇಜುಗಳಲ್ಲಿ ಐದು ವರ್ಷಗಳ ಶಿಕ್ಷಣ ಪಡೆದು ('ಎ' ಸರ್ಟಿಫಿಕೇಟ್) ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಅಧ್ಯಾಪಕರಾಗುವರು. ಪ್ರೌಢಶಾಲೆಯ ವಿದ್ಯಾರ್ಥಿಗಳೂ ಅಲ್ಲಿ ಶಿಕ್ಷಣಕ್ಕೆ ಸೇರಲವಕಾಶವಿದೆ. ಆದರೆ ಅವರು ಎರಡೇ ವರ್ಷಗಳಲ್ಲಿ ಶಿಕ್ಷಣ ಮುಗಿಸಿಕೊಳ್ಳಬೇಕಾಗುತ್ತದೆ. ಸಂಗೀತ, ದೈಹಿಕ ಶಿಕ್ಷಣ, ಕುಶಲಕಲೆ, ಮನೆವಾರ್ತೆ, ಲೆಕ್ಕ, ಮುಂತಾದ ಪಾಠಗಳನ್ನು ಬೋಧಿಸುವ ಅಧ್ಯಾಪಕರಿಗೂ ಅಲ್ಲಿ ಶಿಕ್ಷಣವೀಯಲಾಗುವುದು.

**ತಾಂತ್ರಿಕ ಶಿಕ್ಷಣ** : ಪ್ರಾಥಮಿಕ ಶಿಕ್ಷಣ ಮುಗಿಸಿದವರಿಗೆ ತಾಂತ್ರಿಕ ಶಾಲೆಗಳು ವರ್ಣಕಲೆ, ಕಟ್ಟಡದ ಕೆಲಸ, ಯಂತ್ರಶಿಲ್ಪ, ವಿದ್ಯುತ್ತಿನ ತಂತಿ ಜೋಡಿಸುವ ಕೆಲಸ, ವಾಣಿಜ್ಯ ವ್ಯವಹಾರಗಳ ವಿದ್ಯೆ, ಗೃಹಾಲಂಕಾರ, ಗೃಹವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಎರಡು ವರ್ಷದ ಅವಧಿಯ ತರಬೇತು ನೀಡುವುವು. ಕೆಲವು ಪ್ರಾಥಮಿಕ ಶಾಲೆಗಳಲ್ಲೂ ತಾಂತ್ರಿಕ ಶಿಕ್ಷಣದ ವ್ಯವಸ್ಥೆ ಉಂಟು. ಆದರೆ ಕ್ರಮಬದ್ಧ ತಾಂತ್ರಿಕ ಶಿಕ್ಷಣ ಇದಕ್ಕೆಂದೇ ಇರುವ ತಾಂತ್ರಿಕ ಶಿಕ್ಷಣ ಇನ್ಸ್ಟಿಟ್ಯೂಟುಗಳಲ್ಲಿ ದೊರಕುತ್ತದೆ. ಮಾಧ್ಯಮಿಕ ಶಿಕ್ಷಣ ಮುಗಿಸಿದವರು ಇಲ್ಲಿ ವರ್ಣಕಲೆ, ಗೃಹಾಲಂಕಾರ, ಮರಗೆಲಸ, ಕಟ್ಟಡದ ಕೆಲಸ, ಎಂಜಿನಿಯರಿಂಗ್ , ವಾಣಿಜ್ಯ ವಿದ್ಯೆ ಮುಂತಾದವುಗಳಲ್ಲಿ ಎರಡು ವರ್ಷಗಳ ಅವಧಿಯ ತಾಂತ್ರಿಕ–ಪೂರ್ವದ ಶಿಕ್ಷಣ ಪಡೆಯುವರು. ಇಲ್ಲಿನ ಶಿಕ್ಷಣ ಮುಗಿಸಿದವರು ಪಾಲಿಟೆಕ್ನಿಕ್ಕುಗಳಲ್ಲಿ ಸೇರಿ ತಮ್ಮ ಆಯ್ದ ವೃತ್ತಿಯಲ್ಲಿ ಹೆಚ್ಚಿನ ಶಿಕ್ಷಣ ಪಡೆಯುವುದಕ್ಕೆ ಅವಕಾಶವಿದೆ. ಇವುಗಳ ಜೊತೆಗೆ ಎರಡು ತಾಂತ್ರಿಕ ಶಿಕ್ಷಣದ ಅಧ್ಯಾಪಕರ ತರಬೇತಿ ಸಂಸ್ಥೆಗಳೂ ಗಣಿ ಕೆಲಸದಲ್ಲಿ ಶಿಕ್ಷಣವೀಯುವ ಟಾರ್ಕ್ವ ಮೈನಿಂಗ್ ಪಾಠಶಾಲೆಯೂ ಇವೆ. ಚಿತ್ರ (ರಸ್ತೆಯಂಚಿನ ಮಾರಾಟದ ಅಂಗಡಿಗಳು ಘಾನದಲ್ಲಿ ಸಾಮಾನ್ಯ).

ಶಿಕ್ಷಣದ ಆಡಳಿತ : ರಾಷ್ಟ್ರದ ಶಿಕ್ಷಣ, ಶಿಕ್ಷಣ ಸಚಿವರ ನೇರ ಆಡಳಿತಕ್ಕೊಳಪಟ್ಟಿದೆ. ವಿಶ್ವವಿದ್ಯಾಲಯದ ಪೂರ್ವದ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಆಡಳಿತ ಮತ್ತು ಅವುಗಳ ಮೇಲ್ವಿಚಾರಣೆಗಾಗಿ ಸಚಿವಾಲಯ ಎರಡು ವಿಭಾಗಗಳಾಗಿ ವ್ಯವಸ್ಥೆಗೊಂಡಿದೆ. ಬಹುತೇಕ ಶಾಲೆಗಳನ್ನು ಸ್ಥಳೀಯ ಸರ್ಕಾರದ ಸಂಸ್ಥೆಗಳೂ ಇಲ್ಲವೆ ಧಾರ್ಮಿಕ ಸಂಸ್ಥೆಗಳೂ ನಡೆಸುತ್ತಿವೆ. ಅವಕ್ಕೆ ಕೇಂದ್ರ ಸರ್ಕಾರ ಅನುದಾನ ನೀಡುತ್ತದೆ. ಅನುದಾನ ಪಡೆಯುವ ಈ ಶಾಲೆಗಳು ಸಾರ್ವಜನಿಕ (ಸರ್ಕಾರದ) ಶಾಲೆಗಳೆಂದೇ ಪರಿಗಣನೆಯುಂಟು. ಅನುದಾನವನ್ನು ಪಡೆಯದ ಅನೇಕ ಖಾಸಗಿ ಪ್ರೌಢಶಾಲೆಗಳೂ ಅಸ್ತಿತ್ವದಲ್ಲಿವೆ.

(ಎನ್. ಎಸ್. ವಿ.)

**ಆರ್ಥಿಕತೆ**: ಘಾನದ ಮುಖ್ಯ ಕಸಬು ವ್ಯವಸಾಯ. ಸವಾನ ಹುಲ್ಲುಗಾಡುಗಳಲ್ಲದೆ ಶೇ.22% ಭೂಮಿ ವ್ಯವಸಾಯ ಯೋಗ್ಯವಾದ್ದು, ಶೇ.17% ಅರಣ್ಯ ಪ್ರದೇಶ. ಘಾನದಲ್ಲಿ ಶೇಕಡ ಐವತ್ತು ಮಂದಿ ರೈತರು. ಶೇ.15% ಮಂದಿ ಮಾತ್ರ ಉದ್ಯಮಗಳಲ್ಲಿ ನಿರತರಾಗಿದ್ದಾರೆ. ಕೋಕೋ ಮುಖ್ಯ ಬೆಳೆ. 1970ರಲ್ಲಿ 345 ಟನ್ ಕೋಕೋ ಬೆಳೆಯಾಯಿತು. ಈ ದೇಶದ ಇತರ ಬೆಳೆಗಳು ಬತ್ತ, ತೆಂಗು, ನೆಲಗಡಲೆ, ಕಾಫಿ, ರಬ್ಬರ್, ಮರಗೆಣಸು, ಜಂಬೀರ ಫಲಗಳು. ಅನಾನಾಸ್ ಘಾನ ಮತ್ಸ್ಯೋದ್ಯಮ ಕಾರ್ಪೋರೇಷನ್ ಮೀನುಗಾರಿಕೆಯ ಅಭಿವೃದ್ಧಿಗೆ ಗಮನ ನೀಡುತ್ತಿದೆ.

ರಸ್ತೆ ಅಂಚಿನ ಮಾರಾಟದ ಅಂಗಡಿಗಳು ಘಾನದಲ್ಲಿ ಸಾಮಾನ್ಯ

ಘಾನದ ಅರಣ್ಯಗಳು ಹೆಚ್ಚಾಗಿ ದಕ್ಷಿಣದಲ್ಲಿವೆ. ಅವುಗಳ ಒಟ್ಟು ವಿಸ್ತೀರ್ಣ 31,760 ಚ.ಮೈ. ವ್ಯವಸಾಯಕ್ಕಾಗಿ ಮರಗಳನ್ನು ಕಡಿಯಬೇಕಾಗಿದ್ದರೂ ಮೀಸಲು ಅರಣ್ಯಗಳಲ್ಲಿ ಮರಗಳನ್ನು ರಕ್ಷಿಸಲಾಗಿದೆ. ಮರಗಳನ್ನು ಪ್ಲೈವುಡ್ ಕಾರ್ಖಾನೆಗಳಲ್ಲಿ ಬಳಸಲಾಗುತ್ತಿರುವುದರಿಂದ ದಿಮ್ಮಿಗಳು ರಫ್ತಾಗುವುದು ಕಡಿಮೆ.

ಘಾನದಲ್ಲಿ ಚಿನ್ನ ಹೆಚ್ಚಾಗಿ ಸಿಗುತ್ತದೆ. 1968 ರಲ್ಲಿ 22,000 ಕಿ.ಗ್ರಾಂ. ಚಿನ್ನವನ್ನು ಉತ್ಪಾದಿಸಲಾಯಿತು. ಮ್ಯಾಂಗನೀಸ್, ಬಾಕ್ಸೈಟ್ ಮತ್ತು ವಜ್ರಗಳೂ ಸಿಗುತ್ತವೆ. 1987ರಲ್ಲಿ 327,000 ಔನ್ಸುಗಳಷ್ಟಿದ್ದ ಸುವರ್ಣೋತ್ಪಾದನೆ 1992ರಲ್ಲಿ ಒಂದು ಮಿಲಿಯನ್ ಔನ್ಸುಗಳಿಗೇರಿತು.

ಘಾನದ ಮುಖ್ಯ ಆಮದುಗಳು: ಯಂತ್ರೋಪಕರಣ, ರಾಸಾಯನಿಕ ವಸ್ತುಗಳು, ಹೊಗೆಸೊಪ್ಪು. ರಫ್ತುಗಳು: ಕೋಕೋ, ಅರಣ್ಯೋತ್ಪಾದನಗಳು, ಚಿನ್ನ, ವಜ್ರ, ಮ್ಯಾಂಗನೀಸ್ ಮತ್ತು ಬಾಕ್ಸೈಟ್.

ಘಾನದ ನಾಣ್ಯ ಸೀಡಿ (ನೂರು ಪೆಸವಾಗಳು).

**ಸಾರಿಗೆ, ಸಂಪರ್ಕ :** ಪ್ರಯಾಣಿಕರ ಸಂಚಾರ ಮತ್ತು ಸರಕುಗಳ ಸಾಗಣೆಗೆ ರೈಲು ಮುಖ್ಯ ಸಾಧನ. 1997 ರಲ್ಲಿ 735 ಕಿ.ಮೀ. ದೂರದಷ್ಟು ರೈಲು ರಸ್ತೆಗಳಿದ್ದವು. ಅಕ್ರಾ, ಕೂಮಾಸಿ ಮತ್ತು ಟಾಕೊರಾಡಿ ನಗರಗಳಿಗೆ ರೈಲ್ವೆ ಸಂಪರ್ಕವಿದೆ.

ಘಾನದಲ್ಲಿ 40,186 ಕಿಮೀ ಗಳಷ್ಟು ರಸ್ತೆಗಳಿವೆ. ಸಮುದ್ರದ ಅಂಚಿನಲ್ಲಿ ಸ್ವಾಭಾವಿಕ ರೇವುಗಳಿಲ್ಲ. ಸೆಕಂಡೀ-ಟಾಕೊರಾಡಿ ಒಂದು ಕೃತಕ ಬಂದರು. 1920ರಲ್ಲಿ ನಿರ್ಮಿತವಾದ ಈ ಬಂದರನ್ನು ಎರಡನೆಯ ಮಹಾಯುದ್ಧದ ಕಾಲದಲ್ಲಿ ವಿಸ್ತರಿಸಲಾಯಿತು. 1962ರಲ್ಲಿ ತೆರೆಯಲಾದ ಕೃತಕ ಬಂದರು ಟೆಮ. ಘಾನದಿಂದ ಆಫ್ರಿಕದ ಪ್ರಮುಖ ಪಟ್ಟಣಗಳಿಗೆ ಮತ್ತು ಲಂಡನ್ ನಗರಕ್ಕೆ ವಿಮಾನ ಸೌಲಭ್ಯವಿದೆ.

ಘಾನದ ಮುಖ್ಯ ಪಟ್ಟಣಗಳು ಮತ್ತು ಅವುಗಳ ಜನಸಂಖ್ಯೆಗಳನ್ನು ಮುಂದೆ ಕೊಟ್ಟಿದೆ: ಅಕ್ರಾ (2,291,352), ಕೂಮಾಸಿ (1,989,062), ಸೆಕಂಡೀ (144,570), ಟಮಾಲ (537,986), ಕೇಪ್ ಕೋಸ್ಟ್ (217,032), ಟಾಕೊರಾಡಿ (260,635) ಮತ್ತು ಟೆಮ (160,939).

ಘಾನದಲ್ಲಿ 5 ಬಿಲಿಯನ್ ಬ್ಯಾರಲ್‌ಗಳಷ್ಟು ತೈಲನಿಕ್ಷೇಪವಿದೆಯೆಂದು ನಂಬಲಾಗಿದೆ. ಪ್ರವಾಸೋದ್ಯಮ ಕ್ಷೇತ್ರವೂ ತೀವ್ರವಾಗಿ ಬೆಳೆಯುತ್ತಿದ್ದು ಐರೋಪ್ಯರು, ಅಮೆರಿಕನ್ನರು, ಮತ್ತಿತರ ರಾಷ್ಟ್ರಗಳವರು ಇಲ್ಲಿಗೆ ಪ್ರವಾಸದಮೇಲೆ ಬರುತ್ತಾರೆ. (ವಿ.ಜಿ.ಕೆ.)

**ಘಾನ್‌ಸಿಂಗ್:** ಬಿಗ್ನೋನಿಯೇಸೀ ಕುಟುಂಬಕ್ಕೆ ಸೇರಿದ ಒಂದು ಪರ್ಣಪಾತಿ ಮರ. ಸ್ಟೀರಿಯೋಸ್ಪರ್ಮಮ್ ಸೈಲೋಕಾರ್ಪಮ್ ಇದರ ಶಾಸ್ತ್ರೀಯ ಹೆಸರು; ಕೋಣನ ಕೊಂಬುಮರ ಎಂದೂ ಪರ್ಯಾಯವಾಗಿ ಕರೆಯುತ್ತಾರೆ. ಇದರ ತವರು ಭಾರತ ; ಬೆಟ್ಟಗುಡ್ಡಗಳಲ್ಲಿ ಕಾಣದೊರೆಯುತ್ತದೆ. ಸುಮಾರು 10ರಿಂದ 20ಮೀ. ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ದೊಡ್ಡವು; 1 ಮೀ. ಉದ್ದ ಇವೆ. ಫೆಬ್ರುವರಿ-ಮಾರ್ಚ್ ತಿಂಗಳಿನಲ್ಲಿ ಎಲೆಗಳೆಲ್ಲ ಉದುರಿಹೋಗುತ್ತವೆ. ಹೂಗಳು ಅರಳುವುದು ಮಾರ್ಚ್ ತಿಂಗಳಲ್ಲಿ. ಹೂಗಳ ಬಣ್ಣ ಬಿಳಿ, ಮಧುರವಾದ ವಾಸನೆಯೂ ಉಂಟು. ಕಾಯಿಗಳು ಕೋಣನ ಕೊಂಬಿನಂತಿವೆ.

ಚೌಬೀನೆ ಗಟ್ಟಿಯಾಗಿರುವುದರಿಂದ ಬೀರು ಮುಂತಾದ ವಸ್ತುಗಳ ತಯಾರಿಕೆಗೆ ಬಳಸುತ್ತಾರೆ. ಮರದಿಂದ ತೆಗೆಯಬಹುದಾದ ರಾಳವನ್ನು ಚರ್ಮರೋಗಗಳಿಗೆ ಉಪಯೋಗಿಸುವುದುಂಟು. ಅಲ್ಲದೆ ಈ ರಾಳ ಉತ್ತೇಜಕ, ಕಫಹಾರಿ ಹಾಗೂ ಪರೋಪಜೀವಿನಾಶಕವೂ ಹೌದು. (ಎಸ್‌ಐ.ಎಚ್.)

**ಘಾಸೀ ಪಂಥ :** ಸತ್‌ನಾಮಿ ಪಂಥದಿಂದ (ನೋಡಿ) ಕವಲೊಡೆದ ಒಂದು ಪಂಥ. ಸತ್‌ನಾಮಿಗಳು ನಿರಾಕಾರನಾದ, ಏಕೈಕನಾದ ದೇವರ ನಾಮವನ್ನೇ ಜಪಿಸುವವರು, ಸ್ತೋತ್ರ ಮಾಡುವವರು; ವಿಗ್ರಹಾರಾಧಕರಲ್ಲ. ರಾಮದಾಸ್, ಕಬೀರ್ ಮೊದಲಾದವರು ಈ ಪಂಥದ ಪ್ರೇರಕರು. ಈ ಪಂಥದವರಲ್ಲಿ ಮೂರು ಗುಂಪುಗಳಿವೆ. ಅವುಗಳಲ್ಲಿ ಒಂದು ಗುಂಪಿನವರ ಗುರು ರಾಮದಾಸ್. ಇನ್ನೊಂದು ಗುಂಪಿನವರ ಗುರು ಜಗಜೀವನ್‌ದಾಸ್. ಮೂರನೆಯದಾದ ಘಾಸೀಗುಂಪಿನವರ ಗುರು ಚಮ್ಮಾರ ಜಾತಿಯ ಘಾಸೀರಾಮ್. ಅವನ ಅನುಯಾಯಿಗಳಿಗೆ ಘಾಸೀಯರೆಂದೇ ಹೆಸರು. ಈ ಪಂಥದವರು ಜಾತಿಭೇದವನ್ನೆಣಿಸದೆ ಎಲ್ಲರೂ ಸತ್ ನಾಮ್ ಜಪಕ್ಕೆ ಅರ್ಹರೆಂದು ಭಾವಿಸುತ್ತಾರೆ. ಈ ಪಂಥದವರ ಮುಖ್ಯ ಕೇಂದ್ರ ಛತ್ತೀಸ್‌ಘರ್ ಪ್ರಾಂತ. ಇಪ್ಪತ್ತನೇ ಶತಮಾನದ ಆದಿಯಲ್ಲಿ ಇವರ ಸಂಖ್ಯೆ 4,00,000 ಇತ್ತು. ಇವರಲ್ಲಿ ಎರಡು ಸಾವಿರ ಜನರನ್ನು ಬಿಟ್ಟರೆ ಉಳಿದವರೆಲ್ಲ ಚಮ್ಮಾರರು. (ಜಿ.ಎಚ್.)

**ಘಿಯಾಸ್ - ಉದ್ - ದೀನ್ ಆಜಂ ಷಾ :** ಬಂಗಾಲವನ್ನಾಳಿದ ಒಬ್ಬ ಸುಲ್ತಾನ; ಸಿಕಂದರನ ಮಗ. ಇವನು ಪಟ್ಟಕ್ಕೆ ಬಂದ ಕಾಲ ನಿರ್ದಿಷ್ಟವಾಗಿ ತಿಳಿದಿಲ್ಲ. ಸಿಕಂದರ್ ಬಹುಶಃ 1393ರಲ್ಲಿ ಮಗನಾದ ಘಿಯಾಸ್-ಉದ್-ದೀನನೊಂದಿಗೆ ಪಾಂಡುವಾ ಎಂಬಲ್ಲಿ ನಡೆದ ಕದನದಲ್ಲಿ ನಿಧನನಾಗಿರಬೇಕು. ಆ ವರ್ಷ ಘಿಯಾಸ್-ಉದ್-ದೀನ್ ಸಿಂಹಾಸನವನ್ನೇರಿರಬೇಕು. ಘಿಯಾಸ್-ಉದ್-ದೀನನ ಆಡಳಿತದ ಕಾಲ ಸಮೃದ್ಧಿಯದಾಗಿತ್ತೆಂದು ಊಹಿಸಬಹುದು. ಈತ ಹೊರಡಿಸಿದ ವೈವಿಧ್ಯಪೂರ್ಣವಾದ ನಾಣ್ಯಗಳೂ ಆದೀನ ಎಂಬಲ್ಲಿ ಇವನು ಕಟ್ಟಿಸಿದ ಭವ್ಯವಾದ ಮಸೀದಿಯೂ ಇದಕ್ಕೆ ಸಾಕ್ಷಿ. ಇವನು 1409 ರ ವರೆಗೆ ಆಳಿದ.

ಈತನ ಆಳ್ವಿಕೆಯಲ್ಲಿ ಅಹೋಂ ರಾಜ ಸುದನ್‌ಗ್ಫನಿಗೂ ಕಾಮಾಟದ ರಾಜನಿಗೂ ನಡುವೆ ಘರ್ಷಣೆಯುಂಟಾಯಿತು. ಆಜಂ ಷಾ ಈ ಅವಕಾಶವನ್ನು ಉಪಯೋಗಿಸಿಕೊಂಡು, ತನ್ನ ರಾಜ್ಯವನ್ನು ವಿಸ್ತರಿಸುವ ಉದ್ದೇಶದಿಂದ ಕಾಮಾಟದ ಮೇಲೆ ದಂಡೆತ್ತಿ ಹೋದ. ಆದರೆ ಆ ಇಬ್ಬರು ರಾಜರೂ ತಮ್ಮ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಒಂದಾದರು. ಆಜಂ ಷಾ ಅವರ ಸಂಯುಕ್ತ ಬಲವನ್ನು ಎದುರಿಸಲಾಗದೆ ಹಿಂದಿರುಗಬೇಕಾಯಿತು.

ಜಾನ್‌ಪುರದ ಖ್ವಾಜಾ ಖಾನನೊಡನೆ ಆಜಂ ಷಾ ಸ್ನೇಹದಿಂದಿದ್ದ. ಆದರೆ ಖ್ವಾಜಾ ಖಾನನ ಉತ್ತರಾಧಿಕಾರಿ ಇಬ್ರಾಹಿಂ ಬಂಗಾಲದ ಮೇಲೆ ದಂಡೆತ್ತಿ ಬಂದ. ಆಜಂ ಷಾ ಆ ಆಕ್ರಮಣವನ್ನು ಹಿಮ್ಮೆಟ್ಟಿಸಿದ.

1408ರಲ್ಲಿ ಆಜಂ ಷಾನ ಆಸ್ಥಾನಕ್ಕೆ ಚೀನಿ ಚಕ್ರವರ್ತಿ ಹುಯಿ-ಟಿ ಎಂಬುವನ ಪ್ರತಿಸ್ಪರ್ಧಿ ಯುಂಗ್-ಲೋ ತನ್ನ ರಾಯಭಾರಿಯನ್ನೂ ಸುಲ್ತಾನನಿಗೆ ಮತ್ತು ಅವನ ರಾಣಿಗೆ ಬಹುಮಾನಗಳನ್ನೂ ಕಳಿಸಿದ. ಆಜಂ ಷಾ ಪ್ರತಿಯಾಗಿ ಅವನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿ, ಚಿನ್ನದ ತಗಡಿನ ಮೇಲೆ ಬರೆದ ಒಂದು ಪತ್ರವನ್ನು ಮತ್ತು ಒಂದು ಜಿರಾಫೆಯನ್ನು ಬಹುಮಾನವಾಗಿ ಕಳುಹಿಸಿಕೊಟ್ಟ. ಚೀನೀ ರಾಯಭಾರಕ್ಕೆ ಸೇರಿದ ವ್ಯಾಖ್ಯಾನಕಾರ ಮಹೌನ್ ಆ ಕಾಲದ ಬಂಗಾಲದ ಬಗ್ಗೆ ಬರೆದಿದ್ದಾನೆ.

ಆಜಂ ಷಾಗೆ ಸಾಹಿತ್ಯದಲ್ಲಿ ಪ್ರೀತಿಯಿತ್ತು. ಆತ ಪ್ರಸಿದ್ಧ ಕವಿ ಹಾಫೀಜನೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದ. ಅವನು ದಕ್ಷವಾಗಿ ಆಡಳಿತ ನಡೆಸುತ್ತಿದ್ದ. ನಿಷ್ಪಕ್ಷಪಾತವಾಗಿ ನ್ಯಾಯಪರಿಪಾಲನೆ ಮಾಡುತ್ತಿದ್ದ. ಒಂದು ಬಾರಿ ಸುಲ್ತಾನ ಹೊಡೆದ ಬಾಣವೊಂದು ಒಬ್ಬ ವಿಧವೆಯ ಮಗನಿಗೆ ತಗುಲಿದಾಗ ಅವಳು ತನ್ನ ಫಿರ್ಯಾದನ್ನು ಕಾಜಿಯ ಮುಂದಿಟ್ಟಳೆಂದೂ ಅವನು ಸುಲ್ತಾನನನ್ನು ಬರಮಾಡಿ ವಿಚಾರಣೆ ನಡೆಸಿ ವಿಧಿಸಿದ ದಂಡವನ್ನು ಸುಲ್ತಾನ ತೆತ್ತನೆಂದೂ ಕಾಜಿಯ ನ್ಯಾಯಪರಿಪಾಲನೆಯನ್ನು ಕಂಡು ಸುಲ್ತಾನನಿಗೆ ಮೆಚ್ಚುಗೆಯಾಯಿತೆಂದೂ ಹೇಳಲಾಗಿದೆ. ಸುಲ್ತಾನ ಆ ಕಾಲದ ಸುಪ್ರಸಿದ್ಧ ಜಿಸ್ತಿ ಸಂತ ಷೇಕ್ ನೂರ್ ಕುತ್ಬಿ ಆಲಂನೊಡನೆ ನಿಕಟ ಸಂಬಂಧ ಹೊಂದಿದ್ದ. ಆಜಂ ಷಾ 1409ರಲ್ಲಿ ಗಣೇಶ ರಾಜನ ಕೈಯಿಂದ ದುರಂತ ಮರಣಕ್ಕೀಡಾದನೆಂದು ಹೇಳಲಾಗಿದೆ. ರಿಯಾಜ್, ನಿಜಾಂ ಉದ್-ದೀನ್ ಫಿರಿಷ್ಟಾ ಮತ್ತು ಮಹೌನರ ಬರೆವಣಿಗೆಗಳಿಂದ ಘಿಯಾಸ್-ಉದ್-ದೀನ್ ಆಜಂ ಷಾನ ವಿಷಯ ತಿಳಿದುಬರುತ್ತದೆ. (ಎ.ವಿ.ವಿ.)

**ಘಿಯಾಸ್-ಉದ್-ದೀನ್ ಖಲ್ಜಿ :** 1469-1500. ಮಾಳವದ ಖಲ್ಜಿ ಸುಲ್ತಾನ ಸಂತತಿಯ ಸ್ಥಾಪಕನಾದ ಮಹಮದನ ಹಿರಿಯ ಮಗ, ಆ ವಂಶದ ಎರಡನೆಯ ಸುಲ್ತಾನ. ತಂದೆ ಸತ್ತ ಎರಡು ದಿನಗಳ ಅನಂತರ (1469 ಜೂನ್ 3 ರಂದು) ಸಿಂಹಾಸನವನ್ನೇರಿದ. ಸುಲ್ತಾನನಾದ ಕೂಡಲೇ ಒಂದು ಹೇಳಿಕೆಯಿತ್ತು ತನ್ನ ರಾಜ್ಯದ ನೆರೆಹೊರೆಯವರೊಡನೆ ಶಾಂತಿ ಮತ್ತು ಸ್ನೇಹದಿಂದಿರುವುದೇ ತನ್ನ ದೃಢ ಧ್ಯೇಯವೆಂದೂ ಪ್ರಾಪಂಚಿಕ ಸುಖವನ್ನು ಅನುಭವಿಸುವುದೇ ತನ್ನ ಜೀವನದ ಗುರಿಯೆಂದೂ ಸಾರಿದ. ಶಾಂತಿನೀತಿಯನ್ನು ಈತ ಎಷ್ಟರಮಟ್ಟಿಗೆ ಪಾಲಿಸಿದನೆಂದರೆ, ಒಂದು ಸಲ ಬಹಲೂಲ್ ಲೂದಿ ಪಾಲಂಪುರದ ಮೇಲೆ ಆಕ್ರಮಣ ನಡೆಸಿದಾಗ ಘಿಯಾಸ್-ಉದ್-ದೀನ್ ಅದನ್ನು ತಡೆಗಟ್ಟಲು ಯಾವ ಪ್ರಯತ್ನವನ್ನೂ ಮಾಡಲೇ ಇಲ್ಲ. ಆ ಸಂದಿಗ್ಧ ಪರಿಸ್ಥಿತಿಯಲ್ಲಿ ಅವನ ಮಂತ್ರಿಗಳು ಅವನಿಗೆ ಸುಲ್ತಾನನ ಕರ್ತವ್ಯಗಳನ್ನು ಮನವರಿಕೆ ಮಾಡಿಕೊಡಬೇಕಾಯಿತು. ಆಗಲೂ ಆತ ಸ್ವತಃ ಸೈನ್ಯದ ನಾಯಕತ್ವ ವಹಿಸದೆ, ತನ್ನ ಸೈನ್ಯಾಧಿಕಾರಿಗಳನ್ನು ಯುದ್ಧಕ್ಕೆ ಕಳುಹಿಸಿಕೊಟ್ಟ.

ತನ್ನ ತಂದೆಯಂತೆ ಇವನೂ ತೀವ್ರ ಮತಾಭಿಮಾನವುಳ್ಳವನಾಗಿದ್ದ. ಈ ವಿಚಾರದಲ್ಲಿ ತಂದೆಯನ್ನೂ ಮೀರಿಸಿದ್ದ. ಒಂದು ಸಾರಿ ಗುಜರಾತಿನ ಸುಲ್ತಾನ ಮಹಮದ್ ಬೇಗಾರ ಚಂಪಾನೇರ್ ಕೋಟೆಯನ್ನು ಮುತ್ತಿದಾಗ, ಅಲ್ಲಿಯ ಜನ ಘಿಯಾಸ್-ಉದ್-ದೀನನ ಸಹಾಯವನ್ನು ಕೋರಿದರು. ಆಗ ಈತ ಸ್ವಧರ್ಮೀಯನಾದ ಬೇಗಾರನನ್ನು ಎದುರಿಸಿ ಹೋರಾಡುವುದೂ ಕಾಫಿರರಿಗೆ ಸಹಾಯ ಮಾಡುವುದೂ ತನ್ನ ಧರ್ಮಕ್ಕೆ ವಿರುದ್ಧವೆಂದು ಹೇಳಿ ಅವರಿಗೆ ಸಹಾಯ ಮಾಡಲಿಲ್ಲ. ಹೀಗೆ ಈತ ಮಾಳವದ ಸುಲ್ತಾನರು ಹಿಂದಿನಿಂದ ಅನುಸರಿಸುತ್ತಿದ್ದ ನೀತಿಯನ್ನು ಬದಲಾಯಿಸಿ, ಅದುವರೆಗೂ ಅಭೇದ್ಯವಾಗಿದ್ದ ಚಂಪಾನೇರ್ ಕೋಟೆ ಗುಜರಾತಿನ ಸುಲ್ತಾನನ ವಶವಾಗಲು ಅವಕಾಶ ಮಾಡಿಕೊಟ್ಟ.

ಈತ ಶಾಂತಿಪ್ರಿಯನೆಂದು ಹೇಳಿಕೊಂಡರೂ ಚಿತ್ತೂರಿನ ಮೇಲೆ ಎರಡು ಬಾರಿ ದಂಡೆತ್ತಿ ಹೋದನೆಂದೂ, ಆದರೆ ಎರಡು ಬಾರಿಯೂ ಸೋತನೆಂದೂ ಹೇಳಲಾಗಿದೆ.

ಘಿಯಾಸ್-ಉದ್-ದೀನ್ ತನ್ನ ಆಳ್ವಿಕೆಯ ಪ್ರಾರಂಭದಲ್ಲಿಯೇ ಆಡಳಿತಸೂತ್ರವನ್ನು ಮಗನಾದ ನಾಸಿರ್-ಉದ್-ದೀನನಿಗೆ ವಹಿಸಿಕೊಟ್ಟು ತನ್ನ ಕಾಲವನ್ನೆಲ್ಲ ಜನಾನಾದಲ್ಲಿಯೇ ಕಳೆದ. ಈತ ವಿಷಯಲೋಲುಪನಾದರೂ ಧಾರ್ಮಿಕ ಶ್ರದ್ಧೆಯುಳ್ಳವನಾಗಿದ್ದ. ದೈನಂದಿನ ಪ್ರಾರ್ಥನೆಯನ್ನು ತಪ್ಪಿಸುತ್ತಿರಲಿಲ್ಲ. ಮದ್ಯವೇ ಮುಂತಾದ ನಿಷಿದ್ಧ ಪಾನೀಯಗಳನ್ನೂ ಆಹಾರಗಳನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಇಷ್ಟಾದರೂ ಈತ ಪೆದ್ದ ದೊರೆಯೆಂದೇ ಹೇಳಲಾಗಿದೆ. ಇವನು ತನ್ನ ದಡ್ಡತನವನ್ನು ಅನೇಕ ಬಾರಿ ತೋರಿಸಿ, ಮೋಸಗಾರರ ಕೈಗೊಂಬೆಯಾದ.

ಘಿಯಾಸ್-ಉದ್-ದೀನನ ಆಳ್ವಿಕೆಯ ಕೊನೆಯ ದಿನಗಳು ಸುಖಮಯವಾಗಿರಲಿಲ್ಲ. ಸುಲ್ತಾನ್ ಪದವಿಗಾಗಿ ಅವನ ಮಕ್ಕಳಾದ ನಾಸಿರ್-ಉದ್-ದೀನ್ ಮತ್ತು ಅಲ್ಲಾ-ಉದ್-ದೀನ್ ಹೋರಾಟ ನಡೆಸಿದರು. ಈ ಕಲಹದಲ್ಲಿ ಘಿಯಾಸ್-ಉದ್-ದೀನನ ಪ್ರಿಯ ರಾಣಿ ಕುರ್ಷಿದ್ ಅಲ್ಲಾ-ಉದ್-ದೀನನಿಗೆ ಬೆಂಬಲವಿತ್ತಳು. ನಾಸಿರ್-ಉದ್-ದೀನ್ ಅಲ್ಲಾ-ಉದ್-ದೀನನನ್ನು ಕೊಂದು ಕುರ್ಷಿದಳನ್ನು ಬಂಧಿಸಿ, 1500ರ ಅಕ್ಟೋಬರ್ 22ರಂದು ಮಾಳವದ ಸುಲ್ತಾನನಾದ. ಇದರಿಂದ ಘಿಯಾಸ್-ಉದ್-ದೀನನಿಗೆ ಯಾವ

ತೊಂದರೆಯೂ ಆಗದಿದ್ದರೂ ಇವನು ಆ ಮಾನಸಿಕ ಯಾತನೆಯನ್ನು ತಡೆಯಲಾರದೆ 1501ರ ಫೆಬ್ರವರಿ 28 ರಂದು ಮರಣ ಹೊಂದಿದ. ಸಿಂಹಾಸನಕ್ಕಾಗಿ ಹೋರಾಟ ನಡೆದ ಅನಂತರ ಸ್ವಲ್ಪ ಕಾಲದಲ್ಲೇ ಇವನು ನಿಧನಗೊಂಡಿದ್ದರಿಂದ ನಾಸಿರ್-ಉದ್-ದೀನನೇ ಇವನಿಗೆ ವಿಷ ಕೊಟ್ಟು ಸಾಯಿಸಿದನೆಂದು ಭಾವಿಸಿದ್ದರು. (ಕೆ.ಟಿ.ಆರ್.)

**ಘಿಯಾಸ್-ಉದ್-ದೀನ್ ತುಘಲಕ್ :** ಆಳ್ವಿಕೆ 1320-1325. ದೆಹಲಿಯ ಸುಲ್ತಾನ; ತುಘಲಕ್ ಸಂತತಿಯ ಸ್ಥಾಪಕ. ಇವನ ತಂದೆ ತುರ್ಕ; ಸುಲ್ತಾನ್ ಬಲ್ಬನನ ಗುಲಾಮನಾಗಿದ್ದ. ತಾಯಿ ಹಿಂದೂ; ಜಾಟ್ ಮಹಿಳೆ. ಘಿಯಾಸ್-ಉದ್-ದೀನ್ ಸ್ವಸಾಮರ್ಥ್ಯದಿಂದ ಮೇಲಕ್ಕೇರಿದ. ಇವನ ಮೊದಲ ಹೆಸರು ಘಾಜಿ ಮಾಲಿಕ್. ದೆಹಲಿಯ ಸುಲ್ತಾನನಾಗಿದ್ದ ಅಲಾ-ಉದ್-ದೀನ್ ಖಿಲ್ಜಿಯಿಂದ ಸೈನ್ಯದಲ್ಲಿ ಉನ್ನತ ಹುದ್ದೆಗೆ ನೇಮಕ ಹೊಂದಿದ್ದ ಈತ ವಾಯವ್ಯ ಗಡಿನಾಡಿನಲ್ಲಿ ಮಂಗೋಲರ ಆಕ್ರಮಣವನ್ನು ಧೈರ್ಯದಿಂದ ಎದುರಿಸಿ ಕಾದಾಡಿದ. ಅಲಾ-ಉದ್-ದೀನನ ಮರಣಾನಂತರದ ಕಾಲದಲ್ಲಿ ದೆಹಲಿಯ ಸಿಂಹಾಸನವನ್ನು ಅಪಹರಿಸಿಕೊಂಡಿದ್ದ ಖುಸ್ರಾವ್ ಖಾನನನ್ನು ಸೋಲಿಸಿ ಕೊಲ್ಲಿಸುವುದರಲ್ಲಿ ಈತ ಪ್ರಧಾನ ಪಾತ್ರ ವಹಿಸಿದ್ದನೆಂದು ಹೇಳಲಾಗಿದೆ. ದೆಹಲಿಯ ಸುಲ್ತಾನ ಪದವಿ ತಾನಾಗಿಯೇ ಒದಗಿ ಬಂದಿದ್ದರೂ ಅದನ್ನು ಸ್ವೀಕರಿಸಲು ಈತ ಹಿಂಜರಿದ. ಆ ವೇಳೆಗೆ ಇಳಿವಯಸ್ಸಿನವನಾಗಿದ್ದ ಈತನನ್ನು ದೆಹಲಿಯ ಆಸ್ಥಾನಿಕರು ಸುಲ್ತಾನನೆಂದು ಘೋಷಿಸಿದಾಗ ಸಿಂಹಾಸವನ್ನೇರಿ ಘಿಯಾಸ್-ಉದ್-ದೀನ್ ತುಘಲಕ್ ಎಂಬ ಹೆಸರು ತಳೆದ. ಈತ ಕೇವಲ 5 ವರ್ಷಗಳ ಕಾಲ ರಾಜ್ಯವಾಳಿದವನಾದರೂ ಇವನ ಆಡಳಿತದಲ್ಲಿ ವಿಶೇಷ ದಕ್ಷತೆಯಿತ್ತು. ಅನಾಯಕತ್ವದಿಂದ ಬಿಗಿತಪ್ಪಿದ್ದ ರಾಜ್ಯವನ್ನು ಇವನು ಪುನರ್ವ್ಯವಸ್ಥೆಗೊಳಿಸಿ, ಶಾಂತಿ ನೆಲಸುವಂತೆ ಮಾಡಿದ. ಅಧಿಕಾರಿಗಳನ್ನು ಬಿಗಿಯಾಗಿಟ್ಟಿದ್ದ, ದರೋಡೆಕೋರರ ಹುಟ್ಟಡಗಿಸಿದ; ಕಂದಾಯದ ಹೊರೆಯಿಳಿಸಿದ. ಕಾನೂನುಬಾಹಿರವಾಗಿ ಜಮೀನು ಪಡೆದಿದ್ದವರಿಂದ ಅದನ್ನು ಹಿಂದಕ್ಕೆ ಪಡೆದುಕೊಂಡ. ನೀರಾವರಿಯೇ ಮುಂತಾದ ಹಲವು ಯೋಜನೆಗಳು ಕಾರ್ಯಗತವಾದುವು. ಇದರಿಂದ ರೈತರ ಜೀವನ ಉತ್ತಮಗೊಂಡಿತು. ಬಡವರಿಗೆ ಪರಿಹಾರ ದೊರಕಿಸುವ ವ್ಯವಸ್ಥೆಯೊಂದು ಜಾರಿಗೆ ಬಂತು. ಅಂಚೆಯ ವ್ಯವಸ್ಥೆ ಸುಗಮಗೊಂಡಿತು. ಹೀಗೆ ಆಡಳಿತದ ಎಲ್ಲ ಕ್ಷೇತ್ರಗಳಲ್ಲೂ ಸುಧಾರಣೆಗಳನ್ನು ತಂದ ಘಿಯಾಸ್-ಉದ್-ದೀನ್ ಕವಿಜನಾಶ್ರಯನೂ ಆಗಿದ್ದ. ಭಾರತದ ಗಿಣಿ ಎನಿಸಿದ ಪಾರಸೀ ಕವಿ ಅಮೀರ್ ಖುಸ್ರು ಈತನ ಆಸ್ಥಾನ ಕವಿಯಾಗಿದ್ದ.

ದಕ್ಷ ಆಡಳಿತಗಾರನಾಗಿದ್ದ ಘಿಯಾಸ್-ಉದ್-ದೀನ್ ಯುದ್ಧಚತುರನೂ ಆಗಿದ್ದ. ದಖನ್ ಮತ್ತು ಬಂಗಾಲಗಳಲ್ಲಿ ಏಳುತ್ತಿದ್ದ ದಂಗೆಗಳನ್ನು ಅಡಗಿಸಿದ. ತನ್ನ ಆಳ್ವಿಕೆ ಆರಂಭವಾದೊಡನೆಯೇ ತನ್ನ ಮಗನಾದ ಜೌನ ಖಾನನನ್ನು (ಮಹಮದ್ ಬಿನ್ ತುಘಲಕ್) ದಕ್ಷಿಣಕ್ಕೆ ಕಳಿಸಿ ಅಲ್ಲಿಯ ಪರಿಸ್ಥಿತಿಯನ್ನು ಹತೋಟಿಗೆ ತಂದ. ವಾರಂಗಲ್ಲಿನ ಎರಡನೆಯ ಪ್ರತಾಪರುದ್ರದೇವನನ್ನು ಮಣಿಸಿದ. ಕೆಲವು ವರ್ಷಗಳ ತರುವಾಯ ಬಂಗಾಲವನ್ನು ಸುವ್ಯವಸ್ಥೆಗೆ ಒಳಪಡಿಸುವ ಸಲುವಾಗಿ ಅಲ್ಲಿಗೆ ಹೋಗಿದ್ದು ಹಿಂದಿರುಗಿ ಬರುತ್ತಿದ್ದಾಗ ಸಾವಿಗೀಡಾದ. ಆದರೆ ಇದು ಆಕಸ್ಮಿಕವಲ್ಲವೆಂದೂ ದೆಹಲಿಯ ಸಿಂಹಾಸನವನ್ನು ಆದಷ್ಟು ಜಾಗ್ರತೆ ಏರಬೇಕೆಂಬ ಆಸೆಯಿಂದ ಮಗನಾದ ಜೌನ ಖಾನನೇ ಇದಕ್ಕೆ ಕಾರಣವೆಂದೂ ಕೆಲವರ ಅಭಿಮತ. (ಕೆ.ಟಿ.ಆರ್.)

**ಘಿಯಾಸ್-ಉದ್-ದೀನ್ ಬಲ್ಬನ್ :** ದೆಹಲಿಯ ಸುಲ್ತಾನರಲ್ಲೊಬ್ಬ. ಇವನ ಆಳ್ವಿಕೆಯ ಕಾಲ 1266-1287. ಇಲ್ತುಮಿಷ್‌ನ ವಂಶದ ನಾಸಿರ್-ಉದ್-ದೀನ್ ತೀರಿಕೊಂಡಾಗ ಪಟ್ಟಕ್ಕೆ ಬಂದ. ಇವನಿಗೂ ಹಿಂದೆ ದೆಹಲಿಯನ್ನಾಳಿದ ಸುಲ್ತಾನರಂತೆಯೇ ಇವನು ತುರ್ಕಿಸ್ತಾನದ ಇಲ್ಬರೀ ಪಂಗಡದವನು. ಇವನು ತರುಣನಾಗಿದ್ದಾಗ ಮಂಗೋಲರು ದಂಡಯಾತ್ರೆ ನಡೆಸಿ ಇವನನ್ನು ಹಿಡಿದು ಬಾಗ್ದಾದಿಗೆ ಕೊಂಡೊಯ್ದಿದ್ದರು. ಬಸೋರದ ಖ್ವಾಜಾ ಜಮಾಲ್-ಉದ್-ದೀನ್ ಇವನನ್ನು ಕೊಂಡು, ತನ್ನ ಇತರ ಗುಲಾಮರೊಂದಿಗೆ ದೆಹಲಿಗೆ ಕರೆತಂದ (1232). ಸುಲ್ತಾನ್ ಇಲ್ತುಮಿಷ್ ಇವನನ್ನು ಕೊಂಡ; ಇವನನ್ನು ತನ್ನ ಖಾಸ್ ದಾರನಾಗಿ ನೇಮಿಸಿಕೊಂಡ. ಬಹಾಉದ್ದೀನ್ ಬಲ್ಬನ್ ಎಂಬುದು ಇವನ ಮೊದಲ ಹೆಸರು. ಸ್ವಸಾಮರ್ಥ್ಯದಿಂದ ಇವನು ಸುಲ್ತಾನನ ಪ್ರೀತಿಗಳಿಸಿ ಕ್ರಮಕ್ರಮವಾಗಿ ಮೇಲೇರಿದ. ಕೊನೆಗೆ ನಾಸಿರ್-ಉದ್-ದೀನನ ಪ್ರತಿನಿಧಿಯಾದ. ನಾಸಿರ್-ಉದ್-ದೀನ್ ಗಂಡು ಸಂತಾನವಿಲ್ಲದೆ ತೀರಿಕೊಂಡಾಗ ಇವನು ಆಸ್ಥಾನಿಕರ ಮತ್ತು ಅಧಿಕಾರಿಗಳ ಸಮ್ಮತಿಯೊಡನೆ ಸಿಂಹಾಸನವೇರಿದ. ಆಗ ಈತ ತಳೆದ ಹೆಸರು ಘಿಯಾಸ್-ಉದ್-ದೀನ್. ನಾಸಿರ್-ಉದ್-ದೀನ್ ಇವನನ್ನೇ ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ್ದನೆಂದು ತಿಳಿದುಬರುತ್ತದೆ.

ಇಲ್ತುಮಿಷ್‌ನ ಮರಣಾನಂತರ ದೆಹಲಿಯ ಆಡಳಿತ ಹದಗೆಟ್ಟಿತ್ತು. ಖಜಾನೆ ಬರಿದಾಗಿತ್ತು. ದೆಹಲಿಯ ಸುಲ್ತಾನನ ಅಧಿಕಾರ ಮತ್ತು ಗೌರವವನ್ನು ಪುನಃ ಸ್ಥಾಪಿಸುವುದೇ ಬಲ್ಬನ್ ಕೈಗೊಂಡ ಮೊದಲನೆಯ ಕ್ರಮ. ದೆಹಲಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮತ್ತು ದೋಆಬ್‌ನಲ್ಲಿ ಶಾಂತಿಸ್ಥಾಪನೆ ಜರೂರಾಗಿತ್ತು. ವ್ಯಾಪಾರಮಾರ್ಗಗಳಲ್ಲಿ ಭದ್ರತೆ ಏರ್ಪಡಿಸಬೇಕಾಗಿತ್ತು. ಈ ವಿಚಾರಗಳಿಗಲ್ಲದೆ, ಪದೇಪದೇ ಸಂಭವಿಸುತ್ತಿದ್ದ ಮಂಗೋಲರ ದಾಳಿಗಳನ್ನು ಎದುರಿಸಿ ದಂಗೆಕೋರರನ್ನು ಅಡಗಿಸುವುದರ ಕಡೆಗೂ ಬಲ್ಬನ್ ಲಕ್ಷ್ಯ ನೀಡಿದ. ಈತ ರಾಜ್ಯದಲ್ಲಿ ಶಾಂತಿಸ್ಥಾಪನೆ ಮಾಡಲು ಕೈಗೊಂಡ ಕ್ರಮಗಳನ್ನು ಬರನೀ ಎಂಬ ಇತಿಹಾಸಕಾರ ವಿವರಿಸಿದ್ದಾನೆ.

ಬಲ್ಬನ್ ಸಿಂಹಾಸನವನ್ನೇರಿದ ಕೂಡಲೇ ಸೈನ್ಯವನ್ನು ಸುವ್ಯವಸ್ಥಿತಗೊಳಿಸಿದ. ದೆಹಲಿಯ ನೆರೆಯ ಕಾಡುಗಳಲ್ಲಿದ್ದ ಮೆವಾಟಿಗಳನ್ನು ಓಡಿಸಿದ, ಹಲವರನ್ನು ಕೊಂದ. ದೆಹಲಿಯ ಸುತ್ತಮುತ್ತಲಿನ ಅಡವಿಗಳನ್ನು ನಿರ್ನಾಮ ಮಾಡಿದ. ಮುಂದೆ ದಂಗೆಯಾಗದಂತೆ ತಡೆಗಟ್ಟಲು ಗೋಪಾಲ್‌ಗಿರ್‌ನಲ್ಲಿ ಒಂದು ಕೋಟೆಯನ್ನು ಕಟ್ಟಿಸಿದನಲ್ಲದೆ, ದೆಹಲಿಯ ಬಳಿ ಅನೇಕ ಠಾಣೆಗಳನ್ನು ಸ್ಥಾಪಿಸಿ ಅವಕ್ಕೆ ಆಫ್ಘನರನ್ನು ನೇಮಿಸಿದ. ದೋಆಬಿನ ದಂಗೆಕೋರರನ್ನು ಅಡಗಿಸಿ, ಪ್ರಯಾಣ ಸುರಕ್ಷಿತವಾಗುವ ಹಾಗೆ ಮಾಡಿದ. ಕಟೆಹರ್‌ನಲ್ಲಿ ದಂಗೆಯನ್ನಡಗಿಸಿದ. ಜೂದ್ ಪರ್ವತಪ್ರದೇಶವಾಸಿಗಳನ್ನೂ ಮಣಿಸಲಾಯಿತು. ದೋಆಬ್‌ನಲ್ಲಿ ಭೂಹಿಡುವಳಿಯನ್ನು ಸುಧಾರಿಸಲು ಯತ್ನಿಸಿದನಾದರೂ ಹಿಂದಿನಿಂದ ಬಂದಿದ್ದ ದುಷ್ಟಪದ್ಧತಿಗಳನ್ನು ಸರಿಪಡಿಸಲಾಗಲಿಲ್ಲ.

ದೇಶದಲ್ಲಿ ಭದ್ರತೆ, ನೆಮ್ಮದಿಗಳು ನೆಲಸುವ ಹಾಗೆ ಮಾಡಿದ ಮೇಲೆ ಬಲ್ಬನನ ಗಮನ ವಾಯವ್ಯ ಗಡಿ ಪ್ರದೇಶದ ಕಡೆಗೆ ಹರಿಯಿತು. ಮಂಗೋಲರು ಘಜ್ನಿ ಮತ್ತು ಟ್ರಾನ್ಸಾಕ್ಸಿಯಾನದಲ್ಲಿ ನೆಲೆಯೂರಿ, ಬಾಗ್ದಾದನ್ನು ಹಿಡಿದುಕೊಂಡು ಪಂಜಾಬ್ ಮತ್ತು ಸಿಂಧ್ ಪ್ರದೇಶಕ್ಕೆ ನುಗ್ಗಿದ್ದರು. ಬಲ್ಬನ್ 1271ರಲ್ಲಿ ಲಾಹೋರಿಗೆ ಸೇನೆಯೊಂದಿಗೆ ಹೋಗಿ ಅಲ್ಲಿಯ ಕೋಟೆಯನ್ನು ಸರಿಪಡಿಸಿದ. ಭಾಟಿಂಡ, ಭಟ್ನೇರ್, ಸಾಮಾನ ಮತ್ತು ಸುನಾಮ್‌ಗಳನ್ನಾಳುತ್ತ ಮಂಗೋಲರನ್ನು ಬಲವಾಗಿ ಎದುರಿಸುತ್ತಿದ್ದ ಷೇರ್‌ಖಾನ್ ಅನಿರೀಕ್ಷಿತವಾಗಿ ತೀರಿಕೊಂಡ. ಅವನು ಬಲ್ಬನನ ದಾಯಾದಿ. ಸಂಶಯದಿಂದ ಬಲ್ಬನನೇ ಅವನನ್ನು ಕೊಲ್ಲಿಸಿದನೆಂದು ಬರನೀ ಹೇಳುತ್ತಾನೆ. ಷೇರ್‌ಖಾನನ ಮರಣದಿಂದ ಮಂಗೋಲರು ತಮಗಿದ್ದ ಆತಂಕ ತಪ್ಪಿತೆಂದು ಭಾವಿಸಿ ಗಡಿಪ್ರದೇಶದ ಮೇಲೆ ಧಾಳಿ ಮಾಡತೊಡಗಿದರು. ಇವರನ್ನೆದುರಿಸಲು ಬಲ್ಬನ್ ತನ್ನ ಹಿರಿಯ ಮಗ ಮುಹಮ್ಮದನನ್ನು ಮುಲ್ತಾನಿನ ರಾಜ್ಯಪಾಲನಾಗಿ ನೇಮಿಸಿದ. ಸಾಮಾನ ಮತ್ತು ಸುನಾಮ್‌ಗಳ ರಕ್ಷಣೆಯ ಹೊಣೆ ಎರಡನೆಯ ಮಗನಾದ ಬುಘ್ರಾಖಾನನದಾಯಿತು. 1279 ರಲ್ಲಿ ಮಂಗೋಲರು ಬಹಳ ಮುಂದುವರಿದು ಸಟ್ಲೆಜ್ ನದಿಯನ್ನು ದಾಟಿದರು. ಮಹಮ್ಮದ್ ಮತ್ತು ಬುಘ್ರಾಖಾನರ ಸೇನೆಗಳೂ ದೆಹಲಿಯಿಂದ ಬಂದ ಸೇನೆಯೂ ಕೂಡಿ ಹೋರಾಡಿ ಮಂಗೋಲರನ್ನು ಪೂರ್ಣವಾಗಿ ಸೋಲಿಸಿದವು. ಅವರ ಹಾವಳಿ ನಿಂತಿತು.

ಆ ವೇಳೆಗೆ ಬಂಗಾಲ ಪ್ರಾಂತ್ಯದ ಅಧಿಪತಿಯಾಗಿದ್ದ ತುಘ್ರಿಲ್ ಖಾನ್ ದಂಗೆಯೆದ್ದ; ಅಲ್ಪ್‌ಗೀನನ ನಾಯಕತ್ವದಲ್ಲಿ ಬಲ್ಬನ್ ಕಳುಹಿಸಿದ ಸೇನೆ ಪರಾಜಯ ಹೊಂದಿತು. ಕುಪಿತನಾದ ಸುಲ್ತಾನ ಅಲ್ಪ್‌ಗೀನನನ್ನು ದೆಹಲಿಯ ಕೋಟೆಯ ಬಾಗಿಲಿಗೆ ನೇಣುಹಾಕಿಸಿ ಕೊಲ್ಲಿಸಿದ. 1280 ರಲ್ಲಿ ತುಘ್ರಿಲ್ ಖಾನನನ್ನು ಹತ್ತಿಕ್ಕಲು ಇನ್ನೊಂದು ಸೇನೆ ಹೋಯಿತು. ಅದಕ್ಕೂ ಸೋಲು ಕಾದಿತ್ತು. ಕೊನೆಗೆ ಸುಲ್ತಾನನೇ ಮಗನಾದ ಬುಘ್ರಾ ಖಾನನೊಂದಿಗೆ ಲಖ್‌ನಾವತಿಗೆ ದಂಡೆತ್ತಿ ಹೋದ. ಪಲಾಯನ ಮಾಡಿದ ತುಘ್ರಿಲ್ ಖಾನನನ್ನು ಸುಲ್ತಾನ ಅಟ್ಟಿಸಿಕೊಂಡು ಹೋಗಿ ಅವನನ್ನು ಕೊಂದು ಅವನ ಬಂಧುಗಳನ್ನೂ ಅನುಯಾಯಿಗಳನ್ನೂ ಘೋರವಾಗಿ ಶಿಕ್ಷಿಸಿ, ಬುಘ್ರಾ ಖಾನನನ್ನು ಪ್ರಾಂತ್ಯಾಧಿಪತಿಯಾಗಿ ನೇಮಿಸಿದ.

ಮುಂದೆ ಸುಲ್ತಾನನಿಗೆ ಮಹಾ ಆಘಾತವೊಂದು ಒದಗಿತು. ಮಂಗೋಲರು ಪಂಜಾಬಿನ ಮೇಲೆ ಮತ್ತೆ ಎರಗಿದರು (1285). ಸುಲ್ತಾನನ ಹಿರಿಯ ಮಗ ಮುಹಮ್ಮದ್ ಅವರನ್ನೆದುರಿಸುತ್ತಿದ್ದಾಗ ಶತ್ರುಗಳು ಮರೆಯಿಂದ ಅವನನ್ನು ಕೊಂದರು. ಆಗ ಬಲ್ಬನನಿಗೆ 80 ವರ್ಷ ವಯಸ್ಸಾಗಿತ್ತು. ಪುತ್ರಶೋಕದಿಂದ ಕೊರಗಿ ಅವನು ನಿಧನನಾದ (1287). ಬುಘ್ರಾ ಖಾನ್ ಉತ್ತರಾಧಿಕಾರಿಯಾಗಬೇಕೆಂಬುದು ಸುಲ್ತಾನನ ಇಚ್ಛೆಯಾಗಿತ್ತು. ಅವನು ಆ ಹೊಣೆ ಹೊರಲು ಇಷ್ಟಪಡಲಿಲ್ಲವಾದ್ದರಿಂದ ಮೊಮ್ಮಗ ಖುಸ್ರಾವ್ ತನ್ನ ಅನಂತರ ಸಿಂಹಾಸನವನ್ನೇರತಕ್ಕದೆಂದು ಸುಲ್ತಾನ ನಿಯೋಜಿಸಿದ.

ರಾಜತ್ವ ದೈವದತ್ತವಾದ್ದೆಂದು ಬಲ್ಬನ್ ಪರಿಗಣಿಸಿದ್ದ. ತಾನು ಪಟ್ಟಕ್ಕೆ ಬಂದಿದ್ದು ದೈವೇಚ್ಛೆ ಎಂದು ಪ್ರಚಾರ ಮಾಡಿದ. ರಾಜ ದೇವರ ಮರ್ತ್ಯ ಪ್ರತಿನಿಧಿಯೆಂಬುದೂ ಘನತೆಯಲ್ಲಿ ಪ್ರವಾದಿಗೆ ಎರಡನೆಯದೆಂಬುದೂ ಅವನ ಭಾವನೆಯಾಗಿತ್ತು. ರಾಜತ್ವಕ್ಕೆ ಬಾಹ್ಯ ಘನತೆಯೂ ಆವಶ್ಯಕವೆಂದು ನಂಬಿದ್ದ ಈತ ಸಾಮಾನ್ಯ ಜನರೊಂದಿಗೆ ಸಂಪರ್ಕ ಬೆಳೆಸಲು ನಿರಾಕರಿಸುತ್ತಿದ್ದ. ಇವನು ಆಸ್ಥಾನದಲ್ಲಿ ಪರ್ಷಿಯನ್ ಪದ್ಧತಿಯನ್ನು ಜಾರಿಗೆ ತಂದ. ಪ್ರಜೆಗಳಿಗೆ ನಿಷ್ಪಕ್ಷಪಾತದಿಂದ ನ್ಯಾಯ ವಿತರಣೆ ಮಾಡುತ್ತಿದ್ದನೆಂದು ತಿಳಿದುಬರುತ್ತದೆ. ಆದರೆ ಪ್ರಜೆಗಳ ಮತ್ತು ಸರ್ಕಾರದ ನಡುವಿನ ವ್ಯಾಜ್ಯ ಕುರಿತ ವಿಷಯಗಳಲ್ಲಿ ಹಾಗಿರಲಿಲ್ಲ.

ಬಲ್ಬನ್ ತುರ್ಕಿ ಶ್ರೀಮಂತರನ್ನು ಕಠಿಣವಾಗಿ ಕಾಣುತ್ತಿದ್ದ. ಅವರಲ್ಲಿ ಬಲಿಷ್ಠ ಶ್ರೀಮಂತರನ್ನು ಕೊಲ್ಲಿಸಿದ. 40 ಜನರ ಪ್ರಭಾವಿ ಗುಂಪು ನಿರ್ನಾಮವಾಯಿತು. ಸೈನ್ಯ ವ್ಯವಸ್ಥಿತವಾಯಿತು. ಸೈನಿಕ ಕಾರ್ಯಚರಣೆಯಲ್ಲಿ ಬಡವರಿಗೆ ಮತ್ತು ಆಸಹಾಯಕರಿಗೆ ಯಾವ ಅಪಾಯವೂ ಆಗದಂತೆ ಬಲ್ಬನ್ ನೋಡಿಕೊಳ್ಳುತ್ತಿದ್ದ. ಸೈನ್ಯದ ಮೇಲ್ವಿಚಾರಣೆಗೆ ಪ್ರಾಮಾಣಿಕರನ್ನು ಮತ್ತು ನಿಷ್ಠೆಯುಳ್ಳವರನ್ನು ನೇಮಿಸಿದ. ಅಧಿಕಾರ ಕೇಂದ್ರೀಕೃತವಾಯಿತು. ಮುಖ್ಯ ನೇಮಕಗಳನ್ನು ಅವನೇ ನೇರವಾಗಿ ಮಾಡುತ್ತಿದ್ದ ಅಥವಾ ಅವಕ್ಕೆ ಅವನ ಒಪ್ಪಿಗೆ ಅವಶ್ಯವಾಗಿತ್ತು. ದಕ್ಷತೆ, ನಿಷ್ಠೆಗಳೇ ನೇಮಕದಲ್ಲಿ ಪರಿಗಣಿಸಲಾಗುತ್ತಿದ್ದ ನಿಯಮಗಳು. ಪ್ರಾಂತ್ಯಾಧಿಕಾರಿಗಳು ಆಗಾಗ್ಗೆ ವರದಿಗಳನ್ನು ಸಲ್ಲಿಸಬೇಕಾಗಿತ್ತು. ಗೂಢಚಾರ ಇಲಾಖೆ ತುಂಬ ಸಮರ್ಥವಾಗಿ ಕೆಲಸ ಮಾಡುತ್ತಿತ್ತು. (ಎ.ವಿ.ವಿ)

**ಘಿಯಾಸ್–ಉದ್–ದೀನ್ ಬಹಾದುರ್ ಷಾ :** ಬಂಗಾಲದಲ್ಲಿ ಆಳಿದ ಒಬ್ಬ ಸುಲ್ತಾನ. ಷಂಸ್–ಉದ್–ದೀನ್ ಫಿರೋಜ಼ನ ಒಬ್ಬ ಮಗ. ತಂದೆ ಬದುಕಿರುವಾಗಲೇ ಇವನೂ ಇವನ ಸೋದರರಲ್ಲೊಬ್ಬರಾಗಿದ್ದ ಷಿಹಾಬ್–ಉದ್–ದೀನ್ ಬುಘ್‌ದಾನೂ ಅನುಕ್ರಮವಾಗಿ ಸೊನಾರ್‌ಗಾವ್ ಮತ್ತು ಲಖ್‌ನಾವತಿಗಳಲ್ಲಿ ದಂಗೆಯೆದ್ದರು (1310-14). ಫಿರೊಜ಼್ 1315ರಲ್ಲಿ ಲಖ್‌ನಾವತಿಯ ಮೇಲೆ ತನ್ನ ಹತೋಟಿ ಸ್ಥಾಪಿಸಿದನಾದರೂ 1317-18ರಲ್ಲಿ ಷಿಹಾಬ್–ಉದ್–ದೀನ್ ಅದನ್ನು ಆಳುತ್ತಿದ್ದ. 1322ರಲ್ಲಿ ಅಥವಾ ಅನಂತರ ಫಿರೊಜ಼್ ತೀರಿಕೊಂಡಾಗ ನಾಸಿರ್–ಉದ್–ದೀನ್ ಮತ್ತು ಷಿಹಾಬ್–ಉದ್–ದೀನರನ್ನು ಬಿಟ್ಟು ಬಹುಶಃ ಉಳಿದೆಲ್ಲ ಸೋದರರನ್ನೂ ಷಿಹಾಬ್–ಉದ್–ದೀನ್ ಷಾ ಕೊಂದು ಲಖ್‌ನಾವತಿ ಮತ್ತು ಸೊನಾರ್ ಗಾವ್ ಎರಡರಲ್ಲೂ ಆಳತೊಡಗಿದ.

ಫಿರೋಜ಼್ ಷಾನ ಮರಣಾನಂತರ ಷಿಹಾಬ್–ಉದ್–ದೀನ್ ಸಿಂಹಾಸನವನ್ನೇರಿದನೆಂದೂ ಆದರೆ ಷಾಹನ ಕೊನೆಯ ಮಗ ಘಿಯಾಸ್–ಉದ್–ದೀನ್ ಬಹುದುರ್ ಬುರಾ (ಕಪ್ಪು) ಸಿಂಹಾಸನವನ್ನಾಕ್ರಮಿಸಿಕೊಂಡು ತನ್ನ ಬಹುತೇಕ ಸೋದರರನ್ನು ಕೊಂದನೆಂದೂ ಅವನ ಸೋದರರಲ್ಲಿ ಇಬ್ಬರಾದ ಷಿಹಾಬ್–ಉದ್–ದೀನ್ ಮತ್ತು ನಸೀರ್–ಉದ್–ದೀನ್ ದೆಹಲಿಯ ಸುಲ್ತಾನ ಘಿಯಾಸ್–ಉದ್–ದೀನ್ ತುಘಲಕ್‌ನ ಬಳಿಗೆ ಓಡಿಹೋದರೆಂದೂ ತುಘಲಕ್ ಅವರೊಂದಿಗೆ ಘಿಯಾಸ್–ಉದ್–ದೀನ್ ಬಹಾದುರನ ಮೇಲೆ ದಂಡೆತ್ತಿ ಹೋದನೆಂದೂ ಇಬ್ನ್ ಬತೂತ ಬರೆದಿದ್ದಾನೆ. ಆದರೆ ಇದನ್ನು ಸಮರ್ಥಿಸುವ ಬೇರೆ ಯಾವ ಆಧಾರಗಳೂ ಇಲ್ಲ. ಲಖ್‌ನಾವತಿಯ ಕೆಲವು ಆಸ್ಥಾನಿಕರು ತಾವು ಪಡುತ್ತಿದ್ದ ಪಾಡನ್ನು ಕುರಿತು ದೆಹಲಿಯ ಸುಲ್ತಾನನಿಗೆ ದೂರು ಹೊತ್ತರೆಂದೂ ಘಿಯಾಸ್–ಉದ್–ದೀನನ ದಬ್ಬಾಳಿಕೆಯನ್ನು ಕೊನೆಗೊಳಿಸಲು ಸುಲ್ತಾನ ದಂಡೆತ್ತಿ ಹೋದನೆಂದೂ ಬರನೀ ಹೇಳುತ್ತಾನೆ.

ಅಂತೂ ದೆಹಲಿಯ ಸುಲ್ತಾನ ಬಂಗಾಲದ ಮೇಲೆ ತನ್ನ ಒಡೆತನ ಸ್ಥಾಪಿಸಲು 1324ರಲ್ಲಿ ದಂಡೆತ್ತಿ ಹೋದ. ಅವನ ಸೇನೆ ಲಖ್‌ನಾವತಿಯನ್ನು ತಲುಪಿದಾಗ ಬಹಾದುರ್ ನಗರದಿಂದ ಹೊರಬಂದು ದೆಹಲಿಯ ಸೇನೆಯೊಂದಿಗೆ ಕಾದಿದ. ಅವನಿಗೆ ಸೋಲಾಯಿತು. ಓಡಿ ಹೋಗಲು ಯತ್ನಿಸಿ ಅವನು ಸೆರೆಸಿಕ್ಕಿದ. ದೆಹಲಿಯ ಸಾಮಂತನಾಗಿ ನಸೀರ್–ಉದ್–ದೀನ್ ಲಖ್‌ನಾವತಿಯಿಂದ ಆಳತೊಡಗಿದ.

ಬಂಗಾಲದಿಂದ ಹಿಂದಿರುಗುತ್ತಿದ್ದಾಗ ಘಿಯಾಸ್–ಉದ್–ದೀನ್ ತುಘಲಕ್ ದುರಂತಕ್ಕೀಡಾದ. ಮಹಮ್ಮದ್–ಬಿನ್–ತುಘಲಕ್ ದೆಹಲಿಯ ಸುಲ್ತಾನನಾದ ಮೇಲೆ ಬಹಾದುರನನ್ನು ಬಿಡುಗಡೆ ಮಾಡಿ, ತನ್ನ ಸಾಮಂತನಾಗಿ ಸೊನಾರ್ ಗಾವ್‌ನಿಂದ ಆಳಲು ಅವನಿಗೆ ಅವಕಾಶ ನೀಡಿದನೆಂದೂ ಜೊತೆಗೆ ಬಹ್ರಾಂ ಖಾನನನ್ನು ತನ್ನ ಪ್ರತಿನಿಧಿಯಾಗಿ ಅಲ್ಲಿಟ್ಟನೆಂದೂ ತಿಳಿದುಬರುತ್ತದೆ. ಸುಮಾರು ಮೂರು ವರ್ಷಗಳ ಕಾಲ, 1327-28ರವರೆಗೆ, ಅವನು ಬಹ್ರಾಂ ಖಾನನೊಂದಿಗೆ ಸ್ನೇಹವಾಗಿ ಆಡಳಿತ ನಡೆಸಿದನಲ್ಲದೆ ತನ್ನ ಮತ್ತು ಮಹಮ್ಮದ್–ಬಿನ್–ತುಘಲಕನ ಹೆಸರಿನಲ್ಲಿ ಸಂಯುಕ್ತವಾಗಿ ನಾಣ್ಯಗಳನ್ನು ಚಲಾವಣೆಗೆ ತಂದ, ಆದರೆ ದೆಹಲಿಯು ಸುಲ್ತಾನನಿಗೆ ಅಧೀನನಾಗಿಯೇ ಮುಂದುವರಿಯಲೊಲ್ಲದೆ, ಅವನಿಂದ ಸ್ವತಂತ್ರನಾಗಲು ಸಮಯ ಕಾಯುತ್ತಿದ್ದ. ಅವನ ಅಣ್ಣ ನಸೀರ್–ಉದ್–ದೀನ್‌ನನ್ನು ಸುಲ್ತಾನ ಪದಚ್ಯುತನನ್ನಾಗಿ ಮಾಡಿದಾಗ ಘಿಯಾಸ್–ಉದ್–ದೀನ್ ಬಹಾದುರ್ ಷಾ ತನಗೂ ಆ ಪಾಡು ಬರದಿರಲೆಂದು ಸ್ವಾತಂತ್ರ್ಯ ಗಳಿಸಲು ಯತ್ನಿಸಿದ. ಬಹ್ರಾಂ ಖಾನ್ ಇವನನ್ನು ಸೋಲಿಸಿ ಕೊಂದು, ಇವನ ಚರ್ಮವನ್ನು ಸುಲಿದು ದೆಹಲಿಯ ಸುಲ್ತಾನನಿಗೆ ಕಳಿಸಿದನೆಂದು ಈಸಾಮೀ ಎಂಬ ಚರಿತ್ರಕಾರ ಬರೆಯುತ್ತಾನೆ. ಆದರೆ ಬಹ್ರಾಂ ಖಾನ್ ಇವನನ್ನು ಕೊಲ್ಲಲಿಲ್ಲವೆಂದೂ ಕೆಲವು ಷರತ್ತುಗಳನ್ನು ವಿಧಿಸಿ ಸುಲ್ತಾನ ಇವನನ್ನು ಬಿಡುಗಡೆ ಮಾಡಿದನೆಂದೂ ಘಿಯಾಸ್–ಉದ್–ದೀನ್ ತನ್ನ ಮಗನನ್ನು ದೆಹಲಿಯಲ್ಲಿ ಒತ್ತೆಯಾಗಿಡಬೇಕೆಂಬುದು ಷರತ್ತುಗಳಲ್ಲೊಂದೆಂದೂ ಈ ಷರತ್ತನ್ನು ಘಿಯಾಸ್–ಉದ್–ದೀನ್ ಪಾಲಿಸದಿದ್ದಾಗ ಸುಲ್ತಾನ ಇವನ ವಿರುದ್ಧ ಸೈನ್ಯ ಕಳಿಸಿದನೆಂದೂ ಇಬ್ನ್ ಬತೂತ ಬರೆದಿದ್ದಾನೆ. ಬಹಾದುರನ ಮರಣಾನಂತರ ಹತ್ತು ವರ್ಷಗಳ ಕಾಲ ಬಂಗಾಲ ದೆಹಲಿಗೆ ಅಧೀನವಾಗಿತ್ತು. ಅಲ್ಲಿ ಶಾಂತ ಪರಿಸ್ಥಿತಿಯಿತ್ತು. (ವಿ.ಕೆ.)

**ಘಿಯಾಸ್–ಉದ್–ದೀನ್ ಮಹಮೂದ್ ಷಾ :** 1553-1538. ಬಂಗಾಲವನ್ನಾಳಿದ (೧೪೯೩–೧೫೩೮) ಹುಸೇನ್ ಷಾಹಿ ವಂಶದ ಕೊನೆಯ ದೊರೆ. 1533 ರಲ್ಲಿ ನಾಸಿರ್–ಉದ್–ದೀನ್ ನುಸ್ರತ್ ಖಾನ್ ತನ್ನ ಅರಮನೆಯ ನಪುಂಸಕರಿಂದ ಕೊಲೆಗೀಡಾದಾಗ ಅವನ ಮಗ ಘಿಯಾಸ್–ಉದ್–ದೀನ್ ಮಹಮೂದ್ ಷಾ ಸಿಂಹಾಸನವೇರಿದ.

ಆಗ ದೆಹಲಿಯಲ್ಲಿ ಅಧಿಕಾರಕ್ಕೇರಿದ್ದ ಷೇರ್ ಷಾನನ್ನು ತಡೆಯುವ ಉದ್ದೇಶದಿಂದ ಲೊಹಾನಿ ಆಫ್ಘನರು ಘಿಯಾಸ್–ಉದ್–ದೀನ್ ಮಹಮೂದ್ ಷಾನ ಮೈತ್ರಿ ಬೆಳೆಸಿದರು. ಆದರೆ ಅವರ ಉದ್ದೇಶ ಸಫಲವಾಗಲಿಲ್ಲ. ಬಂಗಾಲದ ಮೇಲೆ ಷೇರ್‌ಷಾ ದಾಳಿ ಮಾಡಿದಾಗ ಘಿಯಾಸ್–ಉದ್–ದೀನ್ ಅವನನ್ನು ವಿರೋಧಿಸಲು ಯತ್ನಿಸದೆ ಒಪ್ಪಂದ ಮಾಡಿಕೊಂಡು ಸು. ೧೩ ಲಕ್ಷ ಚಿನ್ನದ ನಾಣ್ಯಗಳನ್ನೂ ಹೆಚ್ಚು ಪ್ರದೇಶವನ್ನೂ ಅವನಿಗೆ ಒಪ್ಪಿಸಿದ. ಆದರೂ ಷೇರ್ ಷಾ ಬಿಡಲಿಲ್ಲ. ಬಂಗಾಲವನ್ನು ಆಕ್ರಮಿಸಿಕೊಂಡು ಘಿಯಾಸ್–ಉದ್–ದೀನನನ್ನು ಓಡಿಸಿದ.

ಘಿಯಾಸ್–ಉದ್–ದೀನ್ ದಕ್ಷತೆಯಿಂದ ಬಂಗಾಲದ ಸ್ವಾತಂತ್ರ್ಯದ ನಾಶಕ್ಕೆ ಕಾರಣನಾದನೆಂದು ಸಮಕಾಲೀನ ಇತಿಹಾಸಕಾರರು ಬರೆದಿದ್ದಾರೆ. ಈತ ವಿಷಯಲಂಪಟನಾಗಿದ್ದನೆಂದೂ ಇವನ ಜನಾನಾದಲ್ಲಿ ಹತ್ತು ಸಾವಿರ ಸ್ತ್ರೀಯರಿದ್ದರೆಂದೂ ಪೋರ್ಚುಗೀಸರ ಬರೆವಣಿಗೆಗಳಿಂದ ತಿಳಿದುಬರುತ್ತದೆ. (ವಿ.ಕೆ.)

**ಘಿಯಾಸ್–ಉದ್–ದೀನ್ ಮಹಮ್ಮದ್ (ಘೋರಿ):** 1157-1202. ಆಫ್ಘಾನಿಸ್ತಾನದ ಘೋರಿ ಮನೆತನದ ಒಬ್ಬ ಪ್ರಸಿದ್ಧ ಸುಲ್ತಾನ. 12ನೆಯ ಶತಮಾನದಲ್ಲಿ ಭಾರತದ ಮೇಲೆ ದಂಡಯಾತ್ರೆಗಳನ್ನು ನಡೆಸಿ ದೆಹಲಿಯ ಸುಲ್ತಾನರ ಆಳ್ವಿಕೆಗೆ ಅಸ್ತಿಭಾರ ಹಾಕಿದ ಮಹಮ್ಮದ್ ಘೋರಿಯ ಅಣ್ಣ ಸೈಫ್–ಉದ್–ದೀನನ ಮರಣಾನಂತರ (1157) ಪಟ್ಟಕ್ಕೆ ಬಂದ. ಹಿಂದಿನಿಂದಲೂ ನಡೆಯುತ್ತಿದ್ದ ಘೋರಿ ಮತ್ತು ಘಜ್ನಿ ಮನೆತನಗಳ ನಡುವಣ ಹೋರಾಟ ಇವನ ಕಾಲದಲ್ಲಿ ಅಂತ್ಯವಾಯಿತು. ಕೈಬಿಟ್ಟುಹೋಗಿದ್ದ ಘಜ್ನಿ ಪ್ರಾಂತ್ಯವನ್ನು ಘಿಯಾಸ್–ಉದ್–ದೀನ್ ಮತ್ತೆ ಹೋರಾಡಿ ಆಕ್ರಮಿಸಿಕೊಂಡು, ತಮ್ಮನಾದ ಮಹಮದ್ ಘೋರಿಯನ್ನು ಆ ಪ್ರಾಂತ್ಯದ ಅಧಿಕಾರಿಯಾಗಿ ನೇಮಿಸಿದ. ಘಜ್ನಿಯಲ್ಲಿ ಘೋರಿ ಮಹಮ್ಮದ್ ಹೆಚ್ಚು ಕಡಿಮೆ ಸ್ವತಂತ್ರ ಸುಲ್ತಾನನಂತೆ ಅಧಿಕಾರ ನಡೆಸುತ್ತಿದ್ದರೂ ತನ್ನ ನಾಣ್ಯಗಳ ಮೇಲೆ ತನ್ನ ಅಣ್ಣ ಘಿಯಾಸ್–ಉದ್–ದೀನನ ಹೆಸರನ್ನು ಕೆತ್ತಿಸಿದ. ಘಿಯಾಸ್–ಉದ್–ದೀನನ ಸಾರ್ವಭೌಮಾಧಿಕಾರಕ್ಕೆ ಮನ್ನಣೆ ನೀಡಿದ್ದ. ಅವನು ಭಾರತದ ದಂಡಯಾತ್ರೆ ಕೈಗೊಂಡಾಗಲೂ ಅಣ್ಣನ ಅಧಿಕಾರಿಯಾಗಿಯೇ ಇದ್ದ. ಈ ಸಹೋದರರಲ್ಲಿ ಅಪರೂಪವಾದ ಅನ್ಯೋನ್ಯತೆ, ಸಾಮರಸ್ಯಗಳಿದ್ದುವು. ಘಿಯಾಸ್–ಉದ್–ದೀನ್ ಕೊರಾಸಾನ್ ಪ್ರಾಂತ್ಯವನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಹೀರತ್ ನಗರದಲ್ಲಿ ಒಂದು ಭವ್ಯವಾದ ಮಸೀದಿಯನ್ನು ಕಟ್ಟಿಸಿದ. ಘಿಯಾಸ್–ಉದ್–ದೀನ್ 1202 ನಿಧನನಾದ. (ಬಿ.ಎಸ್.ಎ.)

**ಘುರ್ಯೆ, ಗೋವಿಂದ ಸದಾಶಿವ :** 1893–1983. ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ ಸಮಾಜಶಾಸ್ತ್ರಜ್ಞರು ಹಾಗೂ ಸಂಸ್ಕತ ವಿದ್ವಾಂಸರು. ಸಂಸ್ಕೃತ ಎಂ.ಎ. ಪದವಿಯನ್ನು ಕುಲಪತಿಗಳ ಪದಕದೊಂದಿಗೆ ಪಡೆದು (1918) ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ಪ್ಯಾಟ್ರಿಕ್ ಗೆಡ್ಡಸ್ ಎಂಬ ಪ್ರಸಿದ್ಧ ಸಮಾಜವಿಜ್ಞಾನದ ಪ್ರಾಧ್ಯಾಪಕರಿಂದ ಪ್ರಭಾವಿತರಾಗಿ ಸಮಾಜವಿಜ್ಞಾನದಲ್ಲಿ ಆಸಕ್ತಿ ವಹಿಸಿದ ಇವರು ಆ ಕ್ಷೇತ್ರದಲ್ಲಿ ವಿಶೇಷ ವ್ಯಾಸಂಗಕ್ಕೆಂದು ಲಂಡನ್ನಿಗೆ ತೆರಳಿದರು. ಅಲ್ಲಿ ಪ್ರೊಫೆಸರ್ ಎಲ್.ಟಿ. ಹಾಬ್‌ಹೌಸ್ ಎಂಬುವರ ನೇತೃತ್ವದಲ್ಲಿ ಕೆಲಕಾಲ ಅಭ್ಯಾಸ ಮಾಡಿದರಲ್ಲದೆ ಪ್ರೊಫೆಸರ್ ಡಬ್ಲ್ಯು. ಆರ್.ಎಸ್. ರಿವರ್ಸ್ ಅವರನ್ನು ಕೇಂಬ್ರಿಜ್‌ನಲ್ಲಿ ಸಂಧಿಸಿದರು. ಸಮಾಜವಿಜ್ಞಾನದಲ್ಲಿ ವಿಶೇಷ ಪರಿಣತಿಯನ್ನು ಪಡೆದು ಪಿಎಚ್.ಡಿ. ಪದವಿಯೊಂದಿಗೆ 1923ರಲ್ಲಿ ಸ್ವದೇಶಕ್ಕೆ ಮರಳಿದರು.

ಮುಂಬಯಿ ವಿಶ್ವವಿದ್ಯಾಲಯದ ಸಮಾಜವಿಜ್ಞಾನ ಇಲಾಖೆಯಲ್ಲಿ ಉಪ ಪ್ರಾಧ್ಯಾಪಕ ಮತ್ತು ಇಲಾಖೆಯ ಮುಖ್ಯರೆಂದು ನೇಮಕಗೊಂಡ ಘುರ್ಯೆ ಮುಂದೆ ಪ್ರಾಧ್ಯಾಪಕರಾದರು.

ಭಾರತೀಯ ಮತ್ತು ಪಾಶ್ಚಾತ್ಯ ಸಮಾಜವಿಜ್ಞಾನ ಮತ್ತು ಮಾನವಶಾಸ್ತ್ರಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಕುರಿತು ಇವರು ಬರೆದು ಪ್ರಕಟಿಸಿರುವ ಪ್ರಬಂಧಗಳು ಇವರ ಪಾಂಡಿತ್ಯ, ವಸ್ತುನಿಷ್ಠೆ ಮತ್ತು ನಿಷ್ಕೃಷ್ಟ ವಿಶ್ಲೇಷಣೆಗಳಿಗೆ ಹೆಸರಾಗಿದ್ದು, ಸಮಾಜವಿಜ್ಞಾನಕ್ಕೆ ಸಂದಿರುವ ಅಮೂಲ್ಯ ಕೊಡುಗೆಗಳೆನಿಸಿವೆ. 'ಮ್ಯಾನ್ ಇನ್ ಇಂಡಿಯ' ಪತ್ರಿಕೆಯಲ್ಲಿ 1925ರಲ್ಲಿ ಪ್ರಕಟವಾದ 'ನಾಗರಿಕತೆ ಮತ್ತು ಸಂತಾನಾಭಿವೃದ್ಧಿ ಶಕ್ತಿ' ಎಂಬ ಪ್ರಬಂಧ ಇವರಿಗೆ ಒಳ್ಳೆಯ ಪ್ರಸಿದ್ಧಿಯನ್ನು ತಂದುಕೊಟ್ಟಿತು.

ಘುರ್ಯೆ ಅವರ ಪ್ರಥಮ ಕೃತಿ 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯ' (1932) ಈ ಕ್ಷೇತ್ರದ ಸಂಶೋಧನ ವಿದ್ಯಾರ್ಥಿಗಳಿಗೆ ಒಂದು ಒಳ್ಳೆಯ ಆಕರಗ್ರಂಥವೆನಿಸಿದೆ. ಭಾರತೀಯ ಮಾನವಶಾಸ್ತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಆಧುನಿಕ ಮತ್ತು ವೈಜ್ಞಾನಿಕ ದೃಷ್ಟಿಕೋನಗಳಿಂದ ನೋಡುವುದು ಘುರ್ಯೆ ಅವರ ಪದ್ಧತಿ. ಇವರು ಪ್ರಾರಂಭಿಸಿದ ಭಾರತೀಯ ಸಾಮಾಜಿಕ ಸಂಘ ಇಂಥ ಕೆಲಸಕ್ಕೆ ಕೈಹಾಕಿರುವ ಮೊದಲ ಸಂಸ್ಥೆ. ಇವರ ಅಧ್ಯಕ್ಷತೆಯಲ್ಲಿ ಸಂಘ ಪ್ರತಿವರ್ಷ ಸೋಷಿಯ ಲಾಜಿಕಲ್ ಬುಲೆಟಿನ್ ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದೆ.



ಘುರ್ಯೆ ಅವರ ಇತರ ಪ್ರಮುಖ ಕೃತಿಗಳಿವು : ಭರತನಾಟ್ಯ ಅಂಡ್ ಇಟ್ಸ್ ಕಾಸ್ಟ್ಯೂಮ್ (1958), ರಿಲಿಜಿಯಸ್ ಕಾನ್ಷಸ್‌ನೆಸ್ (1965). ಕಲ್ಚರ್ ಅಂಡ್ ಸೊಸೈಟಿ ಎಂಬ ಇವರ ಇನ್ನೊಂದು ಕೃತಿ 1947 ರಲ್ಲಿ ಲಂಡನ್ನಿನಿಂದ ಪ್ರಕಟವಾಯಿತು. ಇವರ ಅರುವತ್ತನೆಯ ಹುಟ್ಟುಹಬ್ಬದಂದು ಇಂಡಿಯನ್ ಸಾಧೂಸ್ (1953) ಎಂಬ ಇವರ ಪುಸ್ತಕ ಪ್ರಕಟವಾಯಿತು. ಘುರ್ಯೆಯವರಿಗೆ ಅವರ ಶಿಷ್ಯರು ಮತ್ತು ಅಭಿಮಾನಿಗಳು 1954ರಲ್ಲಿ ಒಂದು ಗೌರವ ಗ್ರಂಥವನ್ನು ಅರ್ಪಿಸಿದರು. (ಎ.ಬಿ.ಎಚ್.)

**ಘೆಂಟ್:** ಬೆಲ್ಜಿಯಮ್‌ನ ಈಸ್ಟ್ ಫ್ಲಾಂಡರ್ಸ್ ಪ್ರಾಂತ್ಯದ ರಾಜಧಾನಿ; ಐತಿಹಾಸಿಕ ನಗರ. ಲೀಸ್ ಮತ್ತು ಸ್ಕೆಲ್ಟ್ ನದಿಗಳ ಸಂಗಮ ಸ್ಥಳದಲ್ಲಿದೆ. ಲೀಡ್ ಬರ್ಗ್, ಗೆಂಟ್ ಬರ್ಗ್ ಮತ್ತು ಸೇಂಟ್ ಆಮಾಂಡ್ಸ್‌ಬರ್ಗ್– ಈ ಮೂರು ಮುಖ್ಯ ಉಪನಗರಗಳೂ ಸೇರಿ ಇದರ ಒಟ್ಟು ವಿಸ್ತೀರ್ಣ 156.18 ಚ.ಕಿಮೀ. ಜನಸಂಖ್ಯೆ 243,366(2010). ಘೆಂಟ್ ನಗರವನ್ನು 7ನೆಯ ಶತಮಾನದಲ್ಲಿ ಕಟ್ಟಲಾಯಿತು. ಮಧ್ಯಯುಗದಲ್ಲಿ ಈ ನಗರದ ಉಣ್ಣೆ ಬಟ್ಟೆ ಜಗತ್ಪ್ರಸಿದ್ಧವಾಗಿತ್ತು. ಬೆಲ್ಜಿಯಮ್ ದೇಶದಲ್ಲಿ ಇಂದಿಗೂ ಹತ್ತಿ ಮತ್ತು ಉಣ್ಣೆ ಬಟ್ಟೆ ತಯಾರಿಕೆಯಲ್ಲಿ ಈ ನಗರ ಪ್ರಮುಖ ಸ್ಥಾನ ಪಡೆದಿದೆ. ದೇಶದಲ್ಲಿ

ದೋಣಿಗಾರರ ಸಂಘದ ಪ್ರಧಾನ ಕಟ್ಟಡ. 16ನೆಯ ಶತಮಾನದಲ್ಲಿ ನಿರ್ಮಾಣವಾದ ಇದು ಘೆಂಟ್ ನಗರದ ಪ್ರಮುಖ ಆಕರ್ಷಣೆಗಳಲ್ಲೊಂದು

ತಯಾರಾಗುವ ಲಿನನ್ ಬಟ್ಟೆಯಲ್ಲಿ 2/3 ರಷ್ಟು ಘೆಂಟ್ ನಗರದಲ್ಲೇ ತಯಾರಾಗುತ್ತದೆ. ಇದು ರಸ್ತೆ ಮತ್ತು ರೈಲ್ವೆ ಸಂಧಿಸ್ಥಳ. ಈ ನಗರದಿಂದ ಉತ್ತರ ಸಮುದ್ರಕ್ಕೆ ಸಂಪರ್ಕವಿದೆ. ನಗರದ ಸುತ್ತಮುತ್ತ ತೋಟಗಳೂ ಉದ್ಯಾನಗಳೂ ಇವೆ. ಯಂತ್ರದ ಹಾಗೂ ಕಾಗದದ ಕಾರ್ಖಾನೆಗಳಿವೆ. ಇದು ಒಂದು ವಾಣಿಜ್ಯ ಕೇಂದ್ರ. ಸುಪ್ರಸಿದ್ಧ ಕವಿ, ಕತೆಗಾರ ಮಾರಿಸ್ ಮೇಟರ್ ಲಿಂಕ್ (1862-1949), ಖಗೋಳವಿಜ್ಞಾನಿ, ಪವನವಿಜ್ಞಾನಿ ಸಂಖ್ಯಾಕಲನವಿಜ್ಞಾನಿಯಾಗಿದ್ದ ಲ್ಯಾಂಬರ್ಟ್ ಕ್ವೆಟ್‌ಲೆ (1796-1874) ಮುಂತಾದವರ ಜನ್ಮಸ್ಥಳವಿದು. ಇಲ್ಲಿ ಅನೇಕ ಸುಂದರವಾದ ಭವನಗಳೂ ಭವ್ಯವಾದ ಚೌಕಗಳೂ ಇವೆ. ಕಲಾವಸ್ತು ಪ್ರಾಚ್ಯವಸ್ತು ಸಂಗ್ರಹಾಲಯಗಳೂ ಈ ನಗರದ ವೈಶಿಷ್ಟ್ಯಗಳು. ಹಾಲೆಂಡಿನ 1ನೆಯ ವಿಲಿಯಮ್ ದೊರೆ 1816ರಲ್ಲಿ ಘೆಂಟ್ ನಗರದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ. 85.ಮೀ. ಎತ್ತರವಿರುವ ಹಾಗೂ 52 ಗಂಟೆಗಳನ್ನು ಉಳ್ಳ ಗೋಪುರ ಈ ನಗರದ ಪ್ರಮುಖ ಆಕರ್ಷಣೆಗಳಲ್ಲೊಂದು. ಈ ಗೋಪುರದ ಒಂದೊಂದು ಗಂಟೆಯೂ 6ಟನ್ ತೂಗುತ್ತದೆ. ಘೆಂಟ್ ನಗರದಲ್ಲಿರುವ ಪ್ರಾಚೀನ ಕಟ್ಟಡಗಳು ಗಾತಿಕ್ ಮತ್ತು ಪುನರುಜ್ಜೀವನ ಕಾಲದ ವಾಸ್ತುಶಿಲ್ಪ ಮಾದರಿಯಲ್ಲಿ ರಚಿತವಾಗಿವೆ. ಸೇಂಟ್ ಬಾವೊ ಕತೀಡ್ರಲ್ ಮತ್ತು ಸೇಂಟ್ ನಿಕಲಸ್ ಚರ್ಚ್‌ಗಳು ಆಗಿನ ಗಗನಚುಂಬಿ ಕಟ್ಟಡಗಳಿಗೆ ಸಾಕ್ಷಿಯಾಗಿವೆ.

ಬಹಳ ಹಿಂದಿನಿಂದಲೂ ಘೆಂಟ್ ನಗರ ಫ್ಲಾಂಡರ್ಸ್ ಪ್ರಾಂತ್ಯದ ಪ್ರಮುಖ ಪಟ್ಟಣವಾಗಿತ್ತು. 10ನೆಯ ಶತಮಾನದಲ್ಲಿ ಫ್ಲಾಂಡರ್ಸ್ ಪ್ರಾಂತ್ಯ ಗಳಿಸಿದ ಪ್ರಗತಿಯ ಹಿನ್ನೆಲೆಯಲ್ಲಿ ಈ ನಗರ ಪ್ರಾಮುಖ್ಯ ಪಡೆಯಿತು. ಮೊದಲು ನಗರವನ್ನು ಲೀಸ್ ನದಿಯ ದಂಡೆಯ ಮೇಲೆ ಕಟ್ಟಲಾಯಿತು. ಫ್ಲಾಂಡರ್ಸ್ ಪ್ರಾಂತ್ಯದ ಪಾಳೆಯಗಾರರು ಇಲ್ಲೊಂದು ಕೋಟೆ ಕಟ್ಟಿದರು. 12ನೆಯ ಶತಮಾನದಲ್ಲಿ ಘೆಂಟ್ ಶೀಘ್ರವಾಗಿ ಬೆಳೆಯಿತು, 13ನೆಯ ಶತಮಾನದ ವೇಳೆಗೆ ಇಡೀ ಉತ್ತರ ಯುರೋಪಿನಲ್ಲೇ ಒಂದು ಪ್ರಮುಖ ಪಟ್ಟಣವಾಯಿತು. ಬಟ್ಟೆ ಕೈಗಾರಿಕೆಯೇ ಈ ನಗರದ ಅಭಿವೃದ್ಧಿಗೆ ಪ್ರಮುಖ ಕಾರಣ. ಇಂಗ್ಲೆಂಡಿನ ಉಣ್ಣೆಯಿಂದ ತಯಾರಾಗುತ್ತಿದ್ದ ಇಲ್ಲಿಯ ಬಟ್ಟೆಗಳು ಪ್ರಸಿದ್ಧಿ ಪಡೆದವು. ನಗರದ ಶ್ರೀಮಂತಿಕೆಯಿಂದ ಅದಕ್ಕೆ ರಾಜಕೀಯ ಅಂತಸ್ತು, ಅಧಿಕಾರ ಬಂದವು. ಅವನ್ನು ಇಲ್ಲಿಯ ಜನ ಶ್ರದ್ಧೆಯಿಂದ ಕಾಪಾಡಿಕೊಂಡು ಬಂದರು. ಅನೇಕ ವೇಳೆ ಯುರೋಪಿಯನ್ ರಾಜಕೀಯ ಚದುರಂಗದಲ್ಲಿ ಘೆಂಟ್ ನಗರವೊಂದು ಕಾಯಿ ಆಗಿದ್ದುದೂ ಉಂಟು. ಜಾಕಬ್ ವಾನ್ ಆರ್ಟೆವೆಲ್ಡೆಯ (1290-1345) ನಾಯಕತ್ವದಲ್ಲಿ ಘೆಂಟ್ ನಗರದ ಜನ ಇಂಗ್ಲೆಂಡಿನ ಮಿತ್ರರಾಗಿ ಫ್ರೆಂಚರ ವಿರುದ್ಧ ಹೋರಾಡಿದರು. 1382ರಲ್ಲಿ ಫ್ರಾನ್ಸ್ ದೇಶದ ರಾಜನ ವಿರುದ್ಧ ಇಲ್ಲಿ ನಡೆದ ದಂಗೆ ವಿಫಲವಾಯಿತು. ಬರ್ಗಂಡಿಯ ಡ್ಯೂಕನಾಗಿದ್ದ ಚಾರ್ಲ್ಸನ ವಿರುದ್ಧ 15ನೇ ಶತಮಾನದಲ್ಲಿ ನಡೆದ ದಂಗೆಯೂ ಫಲಿಸಲಿಲ್ಲ. ಚಕ್ರವರ್ತಿ 5ನೆಯ ಚಾರ್ಲ್ಸ್ ಘೆಂಟ್ ನಗರದಲ್ಲಿ ಹುಟ್ಟಿದ್ದರೂ ಈ ನಗರದ ಜನ ಅವನ ವಿರುದ್ಧ ಬಂಡಾಯವೆದ್ದರು. ಚಾರ್ಲ್ಸ್ ಅದನ್ನು ದಮನಮಾಡಿ 19ನೆಯ ಶತಮಾನದಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಫಲವಾಗಿ ಇಲ್ಲಿ ಜವಳಿ ಕೈಗಾರಿಕೆ ಮತ್ತೆ ಬೆಳೆಯಿತು. ಘೆಂಟ್ ನಗರ ಮತ್ತೆ ಚೇತರಿಸಿಕೊಂಡಿತು. ಎರಡು ಮಹಾಯುದ್ಧಗಳ ಕಾಲದಲ್ಲಿ ಘೆಂಟ್ ನಗರ ಜರ್ಮನರ ಆಕ್ರಮಣಕ್ಕೊಳಗಾಗಿತ್ತು. (ಬಿ.ಎಸ್.ಎ.)

**ಘೇರಂಡಸಂಹಿತೆ :** ತಾಂತ್ರಿಕ ಸಾಧನೆಗೆ ಸಂಬಂಧಪಟ್ಟಿದ್ದು, ಹಠಯೋಗಕ್ಕೆ ಆಧಾರಪ್ರಾಯವಾಗಿರುವ ಒಂದು ಗ್ರಂಥ. ಘೇರಂಡ ಮಹರ್ಷಿ ತನ್ನ ಶಿಷ್ಯನಾದ ಚಂಡಕಾಪಾಲಿಗೆ ಯೋಗಾಭ್ಯಾಸದ ವಿಷಯವಾಗಿ ನೀಡಿದ ೭ ಉಪದೇಶಗಳು ಏಳು ಅಧ್ಯಾಯಗಳ ರೂಪದಲ್ಲಿ ಘೇರಂಡಸಂಹಿತೆ ಎಂಬುದಾಗಿ ಪ್ರಸಿದ್ಧವಾಗಿದೆ. ಇಷ್ಟಿದ್ದರೂ ಗ್ರಂಥ ಚಿಕ್ಕದು. ಇದರಲ್ಲಿ ಒಟ್ಟು 350 ಶ್ಲೋಕಗಳಿವೆ.

ಮೊದಲನೆಯ ಅಧ್ಯಾಯದಲ್ಲಿ ಷಟ್ಕರ್ಮಗಳ ವಿಷಯ; ಎರಡನೆಯ ಅಧ್ಯಾಯದಲ್ಲಿ ಸಿದ್ಧಾಸನ, ಪದ್ಮಾಸನ, ಭದ್ರಾಸನ, ಉಷ್ಟ್ರಾಸನ, ಭುಜಂಗಾಸನ ಇತ್ಯಾದಿಯಾದ ವಿವಿಧ ಆಸನಗಳ ನಿರೂಪಣೆ; ಮೂರನೆಯ ಅಧ್ಯಾಯದಲ್ಲಿ, ಮಹಾಮುದ್ರಾ, ನಭೋಮುದ್ರಾ, ಖೇಚರೀಮುದ್ರಾ, ಭುಜಂಗಿನೀ ಮುದ್ರಾ, ಇತ್ಯಾದಿಯಾದ ವಿವಿಧ ಯೋಗಮುದ್ರೆಗಳ ಸ್ವರೂಪ, ಲಕ್ಷಣ ಮತ್ತು ಉಪಯೋಗ; ನಾಲ್ಕನೆಯ ಅಧ್ಯಾಯದಲ್ಲಿ ಅರಿಷಡ್ವರ್ಗಗಳನ್ನು ಜಯಿಸಿ ಆತ್ಮವನ್ನು ವಶಮಾಡಿಕೊಳ್ಳಲು ಅನುಕೂಲವಾದ ಪ್ರತ್ಯಾಹಾರ ಮಾರ್ಗ; ಐದನೆಯ ಅಧ್ಯಾಯದಲ್ಲಿ ಸ್ಥಾನನಿರ್ಣಯ, ಕಾಲನಿರ್ಣಯ, ಮಿತಾಹಾರ, ನಾಡೀಶುದ್ಧಿ, ಪ್ರಾಣಾಯಾಮವಿಧಿ ಇತ್ಯಾದಿ; ಆರನೆಯ ಅಧ್ಯಾಯದಲ್ಲಿ ಸ್ಥೂಲ ಧ್ಯಾನ, ಜ್ಯೋತಿರ್ಮಯ ಧ್ಯಾನ, ಸೂಕ್ಷ್ಮ ಧ್ಯಾನ ಇತ್ಯಾದಿಯಾದ ವಿವಿಧ ಧ್ಯಾನರೀತಿಗಳು; 7ನೆಯ ಅಧ್ಯಾಯದಲ್ಲಿ ಸಮಾಧಿಯೋಗ, ಅದರಲ್ಲಿರುವ ವಿವಿಧ ಭೇದಗಳು ಅಂದರೆ ಧ್ಯಾನಯೋಗಸಮಾಧಿ, ನಾದಯೋಗಸಮಾಧಿ, ರಸಾನಂದಯೋಗಸಮಾಧಿ, ಲಯಸಿದ್ಧಿಯೋಗಸಮಾಧಿ, ಭಕ್ತಿಯೋಗಸಮಾಧಿ, ರಾಜಯೋಗಸಮಾಧಿ ಇತ್ಯಾದಿಗಳು ಬರುತ್ತವೆ.

ಹಠಯೋಗದ ಮೇಲೆ ಇರುವ ಹಠಯೋಗಪ್ರದೀಪಿಕಾ, ಗೋರಕ್ಷಪದ್ಧತಿ, ಶಿವಸಂಹಿತಾ ಇತ್ಯಾದಿಯಾದ ಅನೇಕ ಗ್ರಂಥಗಳಿಗಿಂತಲೂ ವಿಶೇಷವಾಗಿ ಘೇರಂಡಸಂಹಿತೆ ಹಠಯೋಗದ ಕ್ರಿಯಾಪಾದವನ್ನು ವಿಶದವಾಗಿ ವಿವರಿಸುತ್ತದೆ. ಇಲ್ಲಿನ ಶ್ಲೋಕಗಳು ಅತಿ ಸರಳವಾಗಿವೆ. ಇಲ್ಲಿನ ಆಜ್ಞಾಚಕ್ರದಲ್ಲಿ ಪ್ರಣವಧ್ಯಾನ ಅಜಪಾಜಪ ಇತ್ಯಾದಿ ತತ್ತ್ವಗಳು ವಿಶೇಷವಾಗಿ ಪ್ರತಿಪಾದಿತವಾಗಿವೆ. ಇಲ್ಲಿನ ಹಠಯೋಗವು ರಾಜಯೋಗದಲ್ಲಿ ಪರ್ಯವಸಾನವಾಗುತ್ತದೆ. ಪಾತಂಜಲಿಯೋಗದರ್ಶನದ ರಾಜಯೋಗಕ್ಕೂ ಇಲ್ಲಿನ ರಾಜಯೋಗಕ್ಕೂ ಮುಖ್ಯವಾದ ವ್ಯತ್ಯಾಸವೊಂದಿದೆ. ಆತನದು ದ್ವೈತವಾದವಾದರೆ ಇಲ್ಲಿನದು ಅದ್ವೈತವಾದ. (ಆರ್.ಎಸ್.)

**ಘೇರಾವೊ :** ಸುತ್ತುಗಟ್ಟುವುದು ಎಂಬುದು ಘೇರಾವೊ ಪದದ ಅರ್ಥ. ಅನೇಕ ಕಾರ್ಮಿಕರು ಗುಂಪುಗೂಡಿ, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಡಬಹುದಾದ ಮಾಲೀಕರನ್ನು ಅಥವಾ ಆಡಳಿತ ಅಥವಾ ವ್ಯವಸ್ಥಾಪಕ ವರ್ಗಕ್ಕೆ ಸೇರಿದವರನ್ನು ಅಂಥ ಸ್ಥಳದಿಂದ ಯಾವೊಂದು ಸ್ಥಳ, ಕೊಠಡಿ, ಕಚೇರಿ ಅಥವಾ ಹೊರಗೆ ಬಾರದಂತೆ ತಡೆಯುವುದು. ಮಾಲೀಕರನ್ನೋ ಅಧಿಕಾರಿಗಳನ್ನೋ ಮಾಲೀಕರ ಕಾರಭಾರಿಗಳನ್ನೋ ಸುತ್ತುಗಟ್ಟಿ ಬಾಹ್ಯಸಂಪರ್ಕವನ್ನು ತಪ್ಪಿಸಿ, ಅವರ ಜೀವನವನ್ನು ದುಸ್ತರಗೊಳಿಸಿ, ಭಯಭೀತಿಗಳು ಅವರ ಮೇಲೆ ಪ್ರಭಾವ ಬೀರುವ ಹಾಗೆ ಮಾಡಿ ಅವರು ಕಾರ್ಮಿಕರ ಬೇಡಿಕೆಗಳನ್ನು ಒಪ್ಪುವಂತೆ ಮಾಡುವುದು ಇದರ ಉದ್ದೇಶವಾಗಿರುತ್ತದೆ. ಈ ಅರ್ಥದಲ್ಲಿ ಘೇರಾವೊ ಪದದ ಬಳಕೆ ಇತ್ತೀಚಿನದಾದರೂ ಈ ವಿಧಾನ ಬಹಳ ಕಾಲದಿಂದಲೂ ಬಳಕೆಯಲ್ಲಿದೆಯೆಂಬುದು 1959ರಲ್ಲಿ ಎಸ್.ಎ. ಡಾಂಗೆ ವ್ಯಕ್ತಪಡಿಸಿದ ಅಭಿಪ್ರಾಯ. 1967ರಿಂದ ಘೇರಾವ್ ತೀವ್ರವಾಗಿದೆ. ಘೇರಾವ್ ವೈಶಿಷ್ಟ್ಯವೇನೆಂದರೆ ಅದು ಗಂಟೆಗಟ್ಟಲೆ ಮುಂದುವರಿಯುವುದು. ಈ ಅವಧಿಯಲ್ಲಿ ಕಾರ್ಯನಿರ್ವಾಹಕ ಮಂಡಲದ ಅಧಿಕಾರಿಗಳು ಊಟ ತಿಂಡಿ ತೆಗೆದುಕೊಳ್ಳುವುದಿರಲಿ, ದೇಹಬಾಧೆ ತೀರಿಸಿಕೊಳ್ಳುವುದೂ ಅವರಿಗೆ ಇಲ್ಲವಾಗುತ್ತದೆ. ಹಲವೊಮ್ಮೆ ಅಧಿಕಾರಿಗಳು ಚಿತ್ರಹಿಂಸೆಗೂ ಗುರಿಯಾದದ್ದುಂಟು. ಕಾರ್ಮಿಕರ ಆಂದೋಲನದ ಒಂದು ಸ್ವರೂಪವಾಗಿ ಘೇರಾವ್ ಜನ್ಮತಾಳಿರುವುದಾದರೂ ಸಮಾಜದ ಇತರ ವರ್ಗಗಳು, ಅದರಲ್ಲೂ ವಿದ್ಯಾರ್ಥಿಗಳು, ಅನೇಕ ಘೇರಾವುಗಳನ್ನು ಮಾಡಿದ್ದಾರೆ.

ಘೇರಾವು ನ್ಯಾಯಬಾಹಿರವಷ್ಟೇ ಅಲ್ಲ, ಅಪರಾಧದ ಸ್ವರೂಪವನ್ನು ತಾಳುತ್ತದೆ. ಘೇರಾವಿನ ಮೊದಲ ಹಂತ ಅದರ ಆರಂಭ ; ಎರಡನೆಯ ಹಂತ ಅದರ ಮುಂದುವರಿಕೆ. ಮೊದಲ ಹಂತ ಅಪರಾಧವಾಗದು. ಆದರೆ ಅದರ ಎರಡನೆಯ ಹಂತದಲ್ಲಿ ಭಾರತದ ದಂಡಸಂಹಿತೆಯಲ್ಲಿ ನಮೂದಿಸಲಾದ ಕೆಲವು ಅಪರಾಧಗಳ ಲಕ್ಷಣಗಳು ಕಾಣಬರುತ್ತವೆ. ಹೀಗೆ ಘೇರಾವೊ ಅಪರಾಧದಲ್ಲಿ ಪರ್ಯವಸಾನವಾಗುತ್ತದೆ.

ಘೇರಾವ್ ಮಾಡಲು ತೊಡಗಿದ ಕಾರ್ಮಿಕರು ಶಾಂತವಾಗಿರಬಹುದು, ಇಲ್ಲವೆ ಘೋಷಣೆಗಳನ್ನು ಕೂಗುತ್ತಿರಬಹುದು. ಅನೇಕ ಸಲ ಇದು ಹಿಂಸಾರೂಪ ತಾಳಿರುವುದೂ ಉಂಟು. ಘೇರಾವ್‌ಗಳ ಅವಧಿ ಇಷ್ಟೇ ಎಂದು ಹೇಳಲು ಬರುವುದಿಲ್ಲ. ಘೇರಾವ್‌ಅನ್ನು ಅಪರಾಧವೆಂದು ಪರಿಗಣಿಸುವುದಕ್ಕೆ ಅದರ ಅವಧಿ ಅಥವಾ ಅದು ಹಿಂಸಾರೂಪ ತಾಳುವುದು ಕಾರಣವಲ್ಲ. ಘೇರಾವ್ ಹಿಂಸಾರೂಪ ತಾಳದಿದ್ದರೂ ಅದು ಅಪರಾಧವಾಗುತ್ತದೆ. ಪ್ರತಿಬಂಧಿಸುವುದು, ಅವರೋಧಿಸುವುದು ಇದರ ಮುಖ್ಯಲಕ್ಷಣಗಳಾಗಿರುವುದರಿಂದ ಇದು ಅಪರಾಧವಾಗುತ್ತದೆ. ಇದು, ಇತರ ಅಪರಾಧಿಕ ಸನ್ನಿವೇಶಗಳನ್ನೊಳಗೊಂಡಾಗ, ವಿವಿಧ ಅಪರಾಧಗಳಿಗೆ ಹೊಣೆಯಾಗುತ್ತದೆ.

ಶಾಂತ ಸ್ವರೂಪದ ಸಂಪು ಕಾರ್ಮಿಕರ ನ್ಯಾಯಿಕಹಕ್ಕು ಎಂಬುದನ್ನು ವಿಶ್ವದ ಅನೇಕ ರಾಷ್ಟ್ರಗಳು ಒಪ್ಪಿವೆ. ಭಾರತದ 1947ರ ಕಾರ್ಮಿಕರ ವಿವಾದಗಳ ಸಂಬಂಧದ ಕಾನೂನು ಇದನ್ನು ದೃಢೀಕರಿಸುತ್ತದೆ. ಆದರೆ ಈ ರೀತಿಯ ಸಂಪು ಮತ್ತು ಮುಷ್ಕರಗಳಿಗೂ ಘೇರಾವ್‌ಗಳಿಗೂ ವ್ಯತ್ಯಾಸವಿದೆ. ಘೇರಾವ್‌ನ ಸ್ವರೂಪ ಮತ್ತು ಸಿದ್ಧಾಂತಗಳನ್ನು ಕುರಿತು ಅನೇಕರು ವಿವೇಚಿಸಿದ್ದಾರೆ. ಇದು ವ್ಯವಸ್ಥಾಪಕರ ಮೇಲೆ ಹೇರಲಾಗುವ ಆರ್ಥಿಕ ದಬ್ಬಾಳಿಕೆ, ಕಾರ್ಮಿಕರ ಪ್ರದರ್ಶನ, ಮುಷ್ಕರ ಮತ್ತು ಸತ್ಯಾಗ್ರಹಗಳ ಹತ್ತಿರದ ಸಂಬಂಧಿ ಎಂದು ಮುಂತಾಗಿ ಅಭಿಪ್ರಾಯಗಳಿವೆ. ಶಾಂತ ಪ್ರದರ್ಶನ ಭಾರತೀಯರ ಮೂಲಭೂತ ಹಕ್ಕು ಎಂದು ಇಲ್ಲಿಯ ಶ್ರೇಷ್ಠ ನ್ಯಾಯಾಲಯ ಘೋಷಿಸಿದೆ. ಆದರೆ ದಿಗ್ಬಂಧನದ ಒತ್ತಡದ ಘೇರಾವೊ ಶಾಂತಪ್ರದರ್ಶನವಾಗಲಾರದು.

ಘೇರಾವ್ ಮತ್ತು ಸತ್ಯಾಗ್ರಹಗಳಲ್ಲಿ ಮೂಲಭೂತ ತಾತ್ತ್ವಿಕ ಭೇದವಿದೆ. ವಿವಾದಗಳನ್ನು ಬಗೆಹರಿಸಿಕೊಳ್ಳಲು ಘೇರಾವ್ ಮತ್ತು ಸತ್ಯಾಗ್ರಹ ಎರಡೂ ವಿಧಾನಗಳನ್ನು ಬಳಸಿಕೊಳ್ಳಬಹುದು. ಆದರೆ ಇವೆರಡರ ಸ್ವರೂಪ ಬೇರೆಬೇರೆ. ತಮ್ಮನ್ನು ತೊಂದರೆಗೊಡ್ಡಿಕೊಳ್ಳುವುದರ ಮೂಲಕ ಪರರ ಅಂತಃಕರಣವನ್ನು ಕಲಕುವುದು ಸತ್ಯಾಗ್ರಹದ ಮಾರ್ಗ. ಎದುರಾಳಿಯ ಮನಸ್ಸಿನ ಪರಿವರ್ತನೆ ಅದರ ಉದ್ದೇಶ. ಅದು ಹಲವು ವೇಳೆ ಸ್ವಂತವಾಗಿ ಹೇರಿಕೊಂಡ ಪ್ರಾಯಶ್ಚಿತ್ತ. ಪರರನ್ನು ತೊಂದರೆಗೀಡುಮಾಡಿ ತಮ್ಮ ಉದ್ದೇಶವನ್ನು ಪೂರೈಸಿಕೊಳ್ಳುವುದು ಘೇರಾವ್‌ನ ಉದ್ದೇಶ. ಕುಳಿತು ಸಂಪು ಹೂಡುವ ವಿಧಾನ ಕಾರ್ಮಿಕರಿಗಿರುವ ಉತ್ತಮ ಆಯುಧ ಎಂದು ಹೇಳಲಾಗಿದೆ. ಸಾಮೂಹಿಕ ಚೌಕಾಸಿಯೂ ಕಾರ್ಮಿಕ ಹೋರಾಟದ ಒಂದು ವಿಧಾನ. ಕುಳಿತು ಸಂಪು ಹೂಡುವುದರಲ್ಲಿ ಮತ್ತು ಸಾಮೂಹಿಕ ಚೌಕಸಿಯಲ್ಲಿ ಸಾಮೂಹಿಕ ಒಮ್ಮತ ಮತ್ತು ಸಂಘಟನ ಶಕ್ತಿ ಕಂಡುಬಂದರೂ, ಅವುಗಳಲ್ಲಿ ಯಾರನ್ನಾದರೂ ಪ್ರತಿಬಂಧಿಸುವ ಅಥವಾ ಅವರೋಧಿಸುವ ಪ್ರವೃತ್ತಿ ಇರುವುದಿಲ್ಲ. (ಎಲ್.ಎಸ್.ಜೆ.)

ಈ ಅಸ್ತ್ರ ಹಿಂಸಾತ್ಮಕವೂ ಅನಿರೀಕ್ಷಿತವೂ ಆದ್ದರಿಂದ ಕೆಲವು ದುಷ್ಪರಿಣಾಮಗಳಿಗೆ ಎಡೆಮಾಡಿಕೊಡುವುದುಂಟು. ಉದಾಹರಣೆಗೆ, 1967ರಲ್ಲಿ ಪಶ್ಚಿಮ ಬಂಗಾಳದಲ್ಲಿ ಘೇರಾವ್‌ಗಳು ವ್ಯಾಪಕವಾಗಿದ್ದ ಕಾಲದಲ್ಲಿ ಅನೇಕ ಕಾರ್ಖಾನೆಗಳು ಹೊರಗೀಲಿ ಹಾಕಿದುವು. ಈ ಕ್ರಮದಿಂದ ಉತ್ಪಾದನೆಯಲ್ಲಿ ಖೋತಾ ಉಂಟಾಯಿತು. ಪಶ್ಚಿಮ ಬಂಗಾಳದಿಂದ ಹೊರಕ್ಕೆ ಬಂಡವಾಳ ಹರಿಯತೊಡಗಿತು. ಆದಕಾರಣ ಪಶ್ಚಿಮ ಬಂಗಾಳದಲ್ಲಿ ನಿರುದ್ಯೋಗ ಸಮಸ್ಯೆ ತೀವ್ರವಾಯಿತು. ಆವಶ್ಯಕ ವಸ್ತುಗಳ ಕೊರತೆಯುಂಟಾಗಿ ಗ್ರಾಹಕರಿಗೆ ತೊಂದರೆಯುಂಟಾಯಿತು. ಸರ್ಕಾರಿ ನೌಕರರೂ ಈ ಅಸ್ತ್ರವನ್ನು ಪ್ರಯೋಗಿಸಲು ಪ್ರಾರಂಭಿಸಿದ ಕಾರಣ ರಾಜ್ಯದಲ್ಲಿ ಆಡಳಿತ ಸಡಿಲಗೊಂಡು ಜೀವಕ್ಕೆ ಹಾಗು ಆಸ್ತಿಪಾಸ್ತಿಗೆ ಭದ್ರತೆಯಿಲ್ಲದಂತಾಯಿತು. ಮುಖ್ಯವಾಗಿ ಈ ಅಸ್ತ್ರದ ಪ್ರಯೋಗ ಕಾರ್ಮಿಕ–ಮಾಲೀಕ ಸಂಬಂಧದ ಮೇಲೆ ದುಷ್ಪರಿಣಾಮವನ್ನುಂಟುಮಾಡಿತು. ಹಿಂಸಾತ್ಮಕವೂ ಅನಿರೀಕ್ಷಿತವೂ ಆದಕಾರಣ ಈ ಅಸ್ತ್ರವನ್ನು ಪ್ರಯೋಗಿಸಿದಾಗಲೆಲ್ಲ ಕಾರ್ಮಿಕರಿಗೆ ಮೊದಮೊದಲು ಅನುಕೂಲಗಳೇರ್ಪಟ್ಟುವು. ಆದಕಾರಣ ಕಾರ್ಮಿಕರೂ ಪದೇಪದೇ, ಸಣ್ಣಪುಟ್ಟ ವಿವಾದಗಳನ್ನು ಇತ್ಯರ್ಥಗೊಳಿಸಿಕೊಳ್ಳುವುದಕ್ಕೂ, ಈ ಅಸ್ತ್ರವನ್ನು ಪ್ರಯೋಗಿಸಲು ಹಿಂಜರಿಯಲಿಲ್ಲ. ಹೀಗಾಗಿ ಕಾರ್ಮಿಕ–ಮಾಲೀಕ ಸಂಬಂಧ ಬಿಗಡಾಯಿಸಲು ಪ್ರಾರಂಭಿಸಿತು. ಪಶ್ಚಿಮ ಬಂಗಾಳ ಮಾತ್ರವೇ ಅಲ್ಲ, ರಾಷ್ಟ್ರದ ಇತರ ಭಾಗಗಳಲ್ಲಿ ಎಲ್ಲೆಲ್ಲಿ ಈ ಅಸ್ತ್ರ ಪ್ರಯೋಗಿಸಲ್ಪಟ್ಟಿತೊ ಅಲ್ಲೆಲ್ಲ ಮೇಲೆ ಹೇಳಿದ ಪರಿಣಾಮಗಳು ಸ್ವಲ್ಪಮಟ್ಟಿಗೆ ಕಂಡುಬಂದುವು.

ಕಾರ್ಮಿಕರ ರಾಷ್ಟ್ರೀಯ ಸಂಘಟನೆಗಳಲ್ಲೊಂದಾದ ಐ.ಎನ್.ಟಿ.ಯು.ಸಿ ಈ ಅಸ್ತ್ರವನ್ನು ಸ್ಪಷ್ಟವಾಗಿ ಖಂಡಿಸಿದೆ. ಆದರೆ ಇತರ ಸಂಘಟನೆಗಳಾದ ಎ.ಐ.ಟಿಸಿ.ಯು.ಸಿ., ಯು.ಟಿ.ಯು.ಸಿ, ಸಿ.ಐ.ಟಿ– ಇವು ಇಂಥ ಅಸ್ತ್ರದ ಆವಶ್ಯಕತೆಯನ್ನು ಸಮರ್ಥಿಸಿವೆ. ಈ ಅಸ್ತ್ರದ ಆವಶ್ಯಕತೆಯನ್ನು ಸಮರ್ಥಿಸುವ ಕಾರ್ಮಿಕ ಸಂಘಗಳು ಇದು ಒಂದು ಕ್ರಮಬದ್ಧವಾದ ಅಸ್ತ್ರವೆಂದು ತೋರಿಸುವ ದೃಷ್ಟಿಯಿಂದ ಎರಡು ವಾದಗಳನ್ನು ಮುಂದೊಡ್ಡಿದುವು : ೧ ವೇತನ ಮಂಡಳಿಗಳ ಶಿಫಾರಸುಗಳನ್ನು ಮಾಲೀಕರು ನೆರವೇರಿಸದೆ ತಮಗೆ ನ್ಯಾಯವಾಗಿ ಸಿಗಬೇಕಾದ ಅನುಕೂಲಗಳನ್ನು ತಡೆಹಿಡಿದಿರುವ ಕಾರಣ ಕಾರ್ಮಿಕರಿಗೆ ಆಶಾಭಂಗವಾಗಿದೆ. ಮಾಲೀಕರ ಇಂಥ ಧೋರಣೆಗಳ ವಿರುದ್ಧ ಹೋರಾಡಬೇಕಾದರೆ ಯಾವುದಾದರೂ ಒಂದು ಬಲಾತ್ಕಾರ ಸ್ವರೂಪದ ಅಸ್ತ್ರವನ್ನೇ ಪ್ರಯೋಗಿಸಬೇಕಾಗುತ್ತದೆ. ಘೇರಾವ್ ಈ ಪರಿಸ್ಥಿತಿಗೆ ಹೊಂದಿಕೆಯಾಗುವ, ಒಂದು ಸೂಕ್ತವಾದ ಅಸ್ತ್ರ. ೨. ಭಾರತದ ಕಾರ್ಮಿಕ ಸಂಘಟನೆಗಳು ತೀರ ದುರ್ಬಲವಾದಂಥವು. ಈ ಕಾರಣದಿಂದ ಚೌಕಾಸಿಯ ಸಾಮರ್ಥ್ಯದ ವಿಷಯದಲ್ಲಿ ಮಾಲೀಕ ಮತ್ತು ಕಾರ್ಮಿಕರಲ್ಲಿ ಅಸಮಾನತೆ ಉಂಟಾಗಿದೆ. ಮಾಲೀಕರು ಈ ಅಸಮಾನತೆಯ ದುರುಪಯೋಗ ಪಡೆಯುವುದಕ್ಕೆ ಪ್ರಾರಂಭಿಸಿದ್ದಾರೆ. ಮಾಲೀಕರ ಇಂಥ ದೌರ್ಜನ್ಯದಿಂದ ಕಾರ್ಮಿಕರನ್ನು ಬಿಡುಗಡೆ ಮಾಡಬೇಕಾದರೆ ಸಾಮೂಹಿಕ ಚೌಕಾಸಿಯ ಸಾಮರ್ಥ್ಯದಲ್ಲಿ ಸಮಾನತೆಯನ್ನು ಸ್ಥಾಪಿಸಬೇಕು. ಘೇರಾವ್ ಈ ಧ್ಯೇಯವನ್ನು ಸಾಧಿಸಬಲ್ಲ ಬಲಾತ್ಕಾರ ರೂಪದ ಸಾಧನವಷ್ಟೆ..

ಘೇರಾವ್‌ಅನ್ನು ಕ್ರಮಬದ್ಧವಾದ ಸಾಧನವೆಂದು ಒಪ್ಪದವರು ಮೇಲಿನ ವಾದಗಳನ್ನು ಖಂಡಿಸಿದ್ದಾರೆ. ಅವರ ಪ್ರಕಾರ ವೇತನಮಂಡಳಿ ಸಾಮಾನ್ಯ ಉದ್ಯಮ ಸಂಸ್ಥೆಯ ಸಾಮರ್ಥ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಶಾದ್ಯಂತ ಯಾವುದೇ ಕೈಗಾರಿಕೆಯ ವೇತನಮಟ್ಟವನ್ನು ನಿರ್ಣಯಿಸುವುದರಿಂದ ಕೆಲವು ಉದ್ಯಮಸಂಸ್ಥೆಗಳು ಆ ಮಟ್ಟದ ವೇತನವನ್ನು ಕೊಡಲು ಅಸಮರ್ಥವಾಗುವುದು ಸ್ವಾಭಾವಿಕ. ಆ ಮಟ್ಟದ ವೇತನವನ್ನು ಕೊಡುವ ಸಾಮರ್ಥ್ಯವನ್ನು ವೃದ್ಧಿಗೊಳಿಸುವ ತನಕ ಅಂಥ ಉದ್ಯಮಸಂಸ್ಥೆಗಳಿಗೆ ರಿಯಾಯಿತಿ ತೋರಿಸುವುದು ಸೂಕ್ತ. ಹೀಗೆ ಎಷ್ಟೋ ಬಾರಿ ವೇತನ ಮಂಡಳಿಗಳ ಶಿಫಾರಸುಗಳ ಚೌಕಟ್ಟಿನಲ್ಲಿಯೇ ಕೆಲವು ಉದ್ಯಮ ಸಂಸ್ಥೆಗಳ ಮಾಲೀಕರೂ ಕಾರ್ಮಿಕರೂ ಸಂಧಾನದ ಮೂಲಕ ಒಡಂಬಡಿಕೆಗೆ ಬಂದಿರುವುದೂ ಉಂಟು. ಹೀಗಾಗಿ ಕೆಲವು ಮಾಲೀಕರು ವೇತನಮಂಡಳಿಯ ಶಿಫಾರಸುಗಳನ್ನು ನೆರವೇರಿಸದಿದ್ದರೆ ಅದಕ್ಕೆ ಪ್ರಬಲವಾದ ಆರ್ಥಿಕ ಕಾರಣಗಳುಂಟು. ಅಂಥ ಸಂದರ್ಭದಲ್ಲಿ ಕಾರ್ಮಿಕರೂ ಉದ್ಯಮದ ಸಮಸ್ಯೆಗಳ ಬಗ್ಗೆ ಸಹಾನುಭೂತಿ ತೋರಿಸಿ ಮಾಲೀಕರೊಂದಿಗೆ ಸಂಧಾನ ಮಾಡಿಕೊಂಡು ಒಡಂಬಡಿಕೆಗೆ ಬರುವುದು ಸೂಕ್ತವೇ ಹೊರತು, ಬಲಾತ್ಕಾರದ ಕ್ರಮಗಳನ್ನು ಅನುಸರಿಸುವುದು ಸಾಧುವಲ್ಲ.

ಘೇರಾವ್ ಚೌಕಾಸಿ ಸಾಮರ್ಥ್ಯಗಳನ್ನು ಸಮಾನಗೊಳಿಸುವ ಸರ್ಮಪಕವಾದ ಸಾಧನವಲ್ಲವೆಂಬುದು ಇವರ ಅಭಿಪ್ರಾಯ. ಚೌಕಾಸಿಯ ಸನ್ನಿವೇಶದಲ್ಲಿ ಎರಡೂ ಪಕ್ಷಗಳ ಸಂಧಾನ ಕುಸಿದರೆ ಅದರಿಂದ ತಮಗೆ ನಷ್ಟವುಂಟಾಗುತ್ತದೆ ಎಂಬ ಅರಿವಿನಿಂದ ಅವು ಸಂಧಾನ ಕೈಗೊಳ್ಳುತ್ತವೆ. ಆದ್ದರಿಂದ ಚೌಕಾಸಿಯ ಕಾರ್ಯಗತಿಯಲ್ಲಿ ಎರಡೂ ಪಕ್ಷದವರಿಗೂ ಹಣಕಾಸಿನ ನಷ್ಟಸಂಭವವಿರುತ್ತದೆ. ಸಂಧಾನ ಕುಸಿದರೆ ಮುಷ್ಕರ ಸಂಭವಿಸುತ್ತದೆ. ಉತ್ಪಾದನೆ ನಿಂತು ಮಾಲೀಕರಿಗೆ ನಷ್ಟವಾಗುತ್ತದೆ. ಅವರು ತಮ್ಮ ಸರಕಿಗೆ ಮಾರುಕಟ್ಟೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಮುಷ್ಕರದಿಂದ ಕಾರ್ಮಿಕರಿಗೆ ವೇತನ ಹಾಗೂ ಉದ್ಯೋಗ ನಷ್ಟವುಂಟಾಗುತ್ತದೆ. ಆದರೆ ಮುಷ್ಕರ ಹೂಡುವುದಕ್ಕೆ ಮೊದಲು ಎಲ್ಲ ಸಾಧಕಬಾಧಕಗಳನ್ನೂ ಕೂಲಂಕಷವಾಗಿ ವಿಚಾರಮಾಡಿ ಅನಂತರವೇ ಯಾವುದೇ ನಿರ್ಣಯಕ್ಕೆ ಬರಲಾಗುತ್ತದೆ. ಉದಾಹರಣೆಗೆ, ಉದ್ಯಮಿಯಾದವನು ಕಾರ್ಮಿಕರ ಬೇಡಿಕೆಯನ್ನು ಪೂರೈಸುವುದಾಗಿ

ಒಪ್ಪಿಕೊಳ್ಳುವುದರಿಂದ ಸಂಭವಿಸುವ ನಷ್ಟವನ್ನು ಅದಕ್ಕೆ ಒಪ್ಪಿಕೊಳ್ಳದೆ ಮುಷ್ಕರಕ್ಕೆ ಎಡೆಕೊಟ್ಟರೆ ಆಗುವ ನಷ್ಟವನ್ನೂ ಹೋಲಿಸಿ ನೋಡುತ್ತಾನೆ. ಇವೆರಡರಲ್ಲಿ ಯಾವ ಮಾರ್ಗ ಅನುಸರಿಸುವುದರಿಂದ ನಷ್ಟ ಕಡಿಮೆಯೋ ಆ ಮಾರ್ಗವನ್ನನುಸರಿಸುತ್ತಾನೆ. ಕಾರ್ಮಿಕರೂ ಮುಷ್ಕರದಿಂದಾಗುವ ನಷ್ಟವನ್ನು ಮುಷ್ಕರ ಮಾಡದೆ ಮಾಲೀಕರ ಷರತ್ತುಗಳನ್ನು ಒಪ್ಪಿಕೊಳ್ಳುವುದರಿಂದ ಕಳೆದುಕೊಳ್ಳುವ ಅನುಕೂಲಗಳೊಡನೆ ಹೋಲಿಸಿ ನೋಡುತ್ತಾರೆ. ಈ ಅಂಶಗಳ ವಿವೇಚನೆಯ ಆಧಾರದ ಮೇಲೆ ಎರಡೂ ಪಕ್ಷಗಳ ನಡುವೆ ಆಗುವ ತೀರ್ಮಾನ ಪ್ರಸ್ತುತ ಪರಿಸ್ಥಿತಿಯಲ್ಲಿ ಇಬ್ಬರ ದೃಷ್ಟಿಯಿಂದಲೂ ಕ್ಷೇಮಕರವಾಗಿರುತ್ತದೆ. ಆದರೆ ಘೇರಾವ್‌ದಲ್ಲಿಯ ಸ್ಥಿತಿಯೇ ಬೇರೆ. ಇಲ್ಲಿ ಕಾರ್ಮಿಕರು ಮಾಲೀಕನ್ನು ಅನಿರೀಕ್ಷಿತವಾಗಿ ಸುತ್ತುವರಿಯುವುದರಿಂದ ಆತನಿಗೆ ಬೇಡಿಕೆಗಳ ನ್ಯಾಯಬದ್ಧತೆಯ ವಿಚಾರ ಮಾಡಲು ಅವಕಾಶವಿರುವುದಿಲ್ಲ. ಎರಡನೆಯದಾಗಿ, ಇಲ್ಲಿ ನಷ್ಟಸಂಭವವನ್ನು ಎದುರಿಸಬೇಕಾದವನು ಮಾಲೀಕನೊಬ್ಬನೇ ಹೊರತು ಕಾರ್ಮಿಕರಲ್ಲ. ಏಕೆಂದರೆ ಘೇರಾವೊ ಮುಷ್ಕರವಲ್ಲವಾದ್ದರಿಂದ ಕಾರ್ಮಿಕರು ವೇತನವನ್ನು ಕಳೆದುಕೊಳ್ಳುವ ಪ್ರಮೇಯವಿಲ್ಲ. ಅಲ್ಲದೆ ಮಾಲೀಕ ಎದುರಿಸಬೇಕಾದ ನಷ್ಟಸಂಭವ ಹಣಕಾಸಿನದೊಂದೇ ಅಲ್ಲ, ಅದು ವೈಯಕ್ತಿಕ ಸೌಕರ್ಯ. ಒಂದೊಂದು ವೇಳೆ ಜೀವಕ್ಕೆ ಅಪಾಯವಿರುವುದುಂಟು. ಘೇರಾವ್‌ಅನ್ನು ಈ ದೃಷ್ಟಿಯಿಂದ ನೋಡಿದ್ದೇ ಆದರೆ ಅದು ಮಾಲೀಕರಲ್ಲೂ ಕಾರ್ಮಿಕರಲ್ಲೂ ಚೌಕಾಸಿ ಸಾಮರ್ಥ್ಯವನ್ನು ಸಮಗೊಳಿಸುವಂಥ ಸರಿಯಾದ ಸಾಧನವಲ್ಲ ಎಂದು ವಾದಿಸಲಾಗಿದೆ. (ಎ.ಬಿ.ಎ.)

ಕಾರ್ಮಿಕರ ಆಶೋತ್ತರಗಳನ್ನು ಈಡೇರಿಸುವಲ್ಲಿ ಮತ್ತು ಸೂಕ್ತ ಪರಿಹಾರವನ್ನು ಒದಗಿಸುವಲ್ಲಿ ಆಚರಣೆಯಲ್ಲಿರುವ ಕಾರ್ಮಿಕ ಕಾನೂನುಗಳು ಅಸಮರ್ಥ ಮತ್ತು ಅಪರಿಪೂರ್ಣವಾಗಿರುವುದು ಘೇರಾವ್‌ಗಳಿಗೆ ಕಾರಣವಾಗಿದೆ ಎಂಬುದು ಒಂದು ವಾದ. ಕಾರ್ಮಿಕರಲ್ಲಿ ತಾಳ್ಮೆ, ನ್ಯಾಯ, ನಿಷ್ಠೆ ಮತ್ತು ಶಿಸ್ತುಪಾಲನೆಗಳ ಅಭಾವ ಘೇರಾವ್ ವಿಧಾನಕ್ಕೆ ಅವಕಾಶವಿತ್ತಿದೆ ಎನ್ನುವುದು ಮತ್ತೊಂದು ವಾದ. ಕಾರಣ ಯಾವುದೇ ಆಗಿದ್ದರೂ ಘೇರಾವ್‌ನ ವಿಧಾನವನ್ನು ಅನುಸರಿಸುವುದು ಕಾನೂನುಬಾಹಿರವಾಗಿದೆ. ಘೇರಾವ್‌ನ ಪರಿಣಾಮವಾಗಿ ರೂಪುಗೊಂಡ ಒಪ್ಪಂದವೂ ನ್ಯಾಯಸಮ್ಮತವಲ್ಲ. ಅಲ್ಲದೆ ಘೇರಾವ್ ಮೂಲಕ ಮಾಡಿಕೊಳ್ಳಲಾಗುವ ಒಪ್ಪಂದ ಕಾರ್ಮಿಕ ಮತ್ತು ವ್ಯವಸ್ಥಾಪಕ ವರ್ಗಗಳ ಪರಸ್ಪರ ಸಮ್ಮತಿಯ ಒಪ್ಪಂದವಾಗಲಾರದು ಮತ್ತು ಈ ರೀತಿಯ ಬಲವಂತದ ಒಪ್ಪಂದ ಉಭಯವರ್ಗಗಳ ಮಾನಸಿಕ ಸಂಬಂಧದಲ್ಲಿ ಆತಂಕವನ್ನುಂಟುಮಾಡುತ್ತದೆ.

ಭಾರತದ ಕಾರ್ಮಿಕ ಕಾನೂನುಗಳು ಘೇರಾವ್‌ಗಳಿಗೆ ಅವಕಾಶ ನೀಡುತ್ತವೆಯೇ ಎನ್ನುವುದು ಒಂದು ಪ್ರಶ್ನೆ. ಅಪರಾಧಗಳನ್ನು ಮಾಡಿದರೆ ಮತ್ತು ಅಪರಾಧಗಳನ್ನು ಮಾಡಲು ಒಪ್ಪಂದ ಮಾಡಿಕೊಂಡಿದ್ದರೆ ತತ್ಸಂದರ್ಭದಲ್ಲಿ ಸಂಬಂಧಪಟ್ಟ ಕಾರ್ಮಿಕರು ಮತ್ತು ಕಾರ್ಮಿಕ ಸಂಘದ ಸದಸ್ಯರು ಶಿಕ್ಷೆಗೆ ಮತ್ತು ಕಾನೂನು ಕ್ರಮಕ್ಕೆ ಗುರಿಯಾಗುತ್ತಾರೆ ಎಂಬುದಾಗಿ ಕಾರ್ಮಿಕ ಸಂಘಗಳ ಅಧಿನಿಯಮದ 17ನೆಯ ಮತ್ತು 18ನೆಯ ಕಲಮುಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ವಿಧಿ ಉಲ್ಲಂಘಿಸಿ ಸಭೆ ಸೇರಿದ ಅಪರಾಧ, ಯಾರೊಬ್ಬರನ್ನು ಪ್ರತಿಬಂಧಿಸಿದ ಅಥವಾ ಅವರೋಧಿಸಿದ ಅಪರಾಧ, ಆಪರಾಧಿಕ ಬಲಪ್ರಯೋಗ, ಮೇಲೆ ಬೀಳುವುದು, ಕುಚೇಷ್ಟೆ, ಅತಿಕ್ರಮಣಾಪರಾಧ, ಆಪರಾಧಿಕ ಭಯೋತ್ಪಾದನೆ ಮುಂತಾದ ವಿವಿಧ ಅಪರಾಧಗಳಾಗಿ ಘೇರಾವೊ ಪರಿಣಮಿಸಬಹುದು. ಭಾರತದ ದಂಡಸಂಹಿತೆಯ 339, 340, 341, 342 ಮುಂತಾದ ಕಲಮುಗಳಲ್ಲಿ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಅವರೋಧಿಸುವುದು ಮತ್ತು ಪ್ರತಿಬಂಧಿಸುವುದನ್ನು ಅಪರಾಧಗಳೆಂದು ಪರಿಗಣಿಸಲು ಮತ್ತು ಆ ಬಗ್ಗೆ ಸೂಕ್ತ ದಂಡಗಳನ್ನು ವಿಧಿಸಲು ಅವಕಾಶವಿದೆ. ಹಾಗೆ ನೋಡಿದರೆ ಬಲಪ್ರಯೋಗವಾಗಲೇಬೇಕಿಲ್ಲ. ಬಲಪ್ರಯೋಗ ನಿಶ್ಚಿತವೆಂದು ಸೂಚಿಸುವ ಭಯವೂ ದಂಡದ ಹೊಣೆಗಾರಿಕೆಗೆ ಕಾರಣವಾಗುತ್ತದೆ. 351 ಮತ್ತು 352ನೆಯ ಕಲಮುಗಳೂ ಈ ಅಭಿಪ್ರಾಯವನ್ನು ಬಲಪಡಿಸುತ್ತವೆ. 503ನೆಯ ಕಲಮಿನಲ್ಲಿ ಆಪರಾಧಿಕ ಭಯೋತ್ಪಾದನೆಯನ್ನು ಕುರಿತು ಹೇಳಲಾಗಿದೆ. ಈ ಅಪರಾಧಕ್ಕೆ 506ನೆಯ ಕಲಮಿನನ್ವಯ ಎರಡು ವರ್ಷಗಳವರೆಗಿನ ಶಿಕ್ಷೆ ಇಲ್ಲವೆ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ.

ಘೇರಾವ್ ಅಪರಾಧದ ಸ್ವರೂಪ ತಾಳುವುದನ್ನು ತಡೆಗಟ್ಟಲು ಮತ್ತು ಅದನ್ನು ಹತೋಟಿಗೆ ತರಲು ದಂಡಪ್ರಕ್ರಿಯಾಸಂಹಿತೆಯ ಉಪಬಂಧಗಳನ್ವಯ ಕ್ರಮ ಕೈಗೊಳ್ಳಲು ಅವಕಾಶವಿದೆ. ಯಾವ ಕೋರ್ಟಿನ ಆಜ್ಞೆಯೂ ಇಲ್ಲದೆ ಪೊಲೀಸರು ಈ ಸಂಬಂಧದಲ್ಲಿ ತನಿಖೆ ನಡೆಸಬಹುದು. ಅಪರಾಧಕ್ಕೆ ಕಾರಣರಾದವರನ್ನು ಕೂಡಲೆ ದಸ್ತಗಿರಿ ಮಾಡಬಹುದು ಮತ್ತು ಅವರನ್ನು ನ್ಯಾಯಾಲಯದ ವಿಚಾರಣೆಗೆ ಗುರಿ ಮಾಡಬಹುದು. ಆದರೆ ಪೊಲೀಸರು ಈ ಕ್ರಮ ಕೈಗೊಳ್ಳದಿದ್ದುದೂ ಉಂಟು. 1967ರಲ್ಲಿ ಪಶ್ಚಿಮ ಬಂಗಾಳ ಸರ್ಕಾರ ತನ್ನ ಪೂರ್ವ ಅನುಮತಿ ಇಲ್ಲದೆ ಘೇರಾವ್‌ಗಳನ್ನು ತಡೆಯಬಹುದೆಂದು ಪೊಲೀಸರಿಗೆ ಆದೇಶ ಹೊರಡಿಸಿತ್ತು. ಉಪಟಳ ಮತ್ತು ಪೊಲೀಸರ ಧೋರಣೆಯ ಕಾರಣದಿಂದ ಕೊಲ್ಕತದ ಉಚ್ಚ ನ್ಯಾಯಾಲಯದ ಮುಂದೆ ಅನೇಕ ರಿಟ್ ಅರ್ಜಿಗಳು ಬಂದವು. ಸಂವಿಧಾನದ ಉಪಬಂಧಗಳು, ಕಾರ್ಮಿಕ ಕಾನೂನುಗಳು, ದಂಡಸಂಹಿತೆ, ದಂಡಪ್ರಕ್ರಿಯಾ ಸಂಹಿತೆ ಮುಂತಾದ, ಇದಕ್ಕೆ ಸಂಬಂಧಪಟ್ಟ ಎಲ್ಲ ಕಾನೂನುಗಳನ್ನೂ ಉಚ್ಚ ನ್ಯಾಯಲಯ ವಿವೇಚಿಸಿ, ಘೇರಾವೊ ಸಂವಿಧಾನಕ್ಕೆ ವಿರೋಧವೂ ರಾಷ್ಟ್ರದ ಕಾನೂನಿನನ್ವಯ ಅಪರಾಧವೂ ಆಗಿದೆ ಎಂದು ತೀರ್ಪಿತ್ತಿತು.

ಘೇರಾವ್‌ಗಳ ಬಗ್ಗೆ ಪೋಲೀಸರು ಕ್ರಮ ತೆಗೆದುಕೊಳ್ಳದಿರುವುದು ಸಾಮಾಜಿಕ ಸುವ್ಯವಸ್ಥೆಯ ದೃಷ್ಟಿಯಿಂದ ಒಳ್ಳೆಯದಲ್ಲವೆಂದು ವಾದಿಸಲಾಗಿದೆ. ಅವರ ಕರ್ತವ್ಯಕ್ಕೆ ಚ್ಯುತಿ ಬಂದರೆ ಕಾನೂನಿನನ್ವಯ ಅವರು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಸಾರ್ವಜನಿಕ ಅಂತಃಸಾಕ್ಷಿ ಮತ್ತು ನ್ಯಾಯನಿಷ್ಠೆಗಳ ಅಡಿಪಾಯವುಳ್ಳ ಭಾರತೀಯ ನ್ಯಾಯಾಲಯಗಳು ಈ ಬಗ್ಗೆ ಪೊಲೀಸ್ ಖಾತೆಯನ್ನು ಎಚ್ಚರಿಸುವುದರ ಜೊತೆಗೆ, ಘೇರಾವ್‌ನಿಂದ ತೊಂದರೆಗೆ ಈಡಾದವರನ್ನು ಮುಕ್ತಗೊಳಿಸುವಲ್ಲಿ ಸಫಲವಾಗಿವೆ. ದಂಡಪ್ರಕ್ರಿಯಾ ಸಂಹಿತೆಯ 100, 107, 117, 144 ಮತ್ತು 491ನೆಯ ಕಲಮುಗಳು ಅಪರಾಧಗಳ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಲು ಮತ್ತು ಅವುಗಳನ್ನು ತಡೆಯಲು ಸಹಾಯಕವಾಗುತ್ತವೆ. ಇಂಗ್ಲೆಂಡ್, ಅಮೆರಿಕ, ಜರ್ಮನಿ, ಇಸ್ರೇಲ್ ಮುಂತಾದ ಅನೇಕ ದೇಶಗಳಲ್ಲಿ ಭಾರತದ ದಂಡಸಂಹಿತೆ ಮತ್ತು ದಂಡಪ್ರಕ್ರಿಯಾ ಸಂಹಿತೆಗಳಲ್ಲಿ ಹೇಳಲಾದಂಥ, ಕಾನೂನಿನ ಅನೇಕ ನಿಯಮಗಳು ಆಚರಣೆಯಲ್ಲಿವೆ. ಆದ್ದರಿಂದ ಅನೇಕ ದೇಶಗಳಲ್ಲಿ ಘೇರಾವ್ ಅಪರಾಧವೆಂದು ಪರಿಗಣಿಸಲು ಸಾಧ್ಯವಿದೆ.

ಘೇರಾವ್ ರೀತಿಯ ಕಾರ್ಮಿಕ ಆಂದೋಲನ ವಿಶ್ವದ ಇತರ ರಾಷ್ಟ್ರಗಳಲ್ಲಿ ಹೆಚ್ಚಾಗಿ ನಡೆದಿಲ್ಲವೆನ್ನಬಹುದಾಗಿದ್ದರೂ, ಒಂದನೆಯ ಮಹಾಯುದ್ಧಕ್ಕೆ ಮುಂಚೆ ಬ್ರಿಟನ್ನಿನಲ್ಲಿ ಮತ್ತು ಎರಡನೆಯ ಮಹಾಯುದ್ಧಕ್ಕೆ ಮುಂಚೆ ಜಪಾನಿನಲ್ಲಿ ಇಂಥ ಘಟನೆಗಳು ನಡೆದಿವೆ. ಇತ್ತೀಚೆಗೆ ವೆಸ್ಟ್ ಇಂಡೀಸ್, ಗಯಾನ ಮುಂತಾದೆಡೆಗಳಲ್ಲಿ ಇಂಥ ಪ್ರಸಂಗಗಳು ಜರುಗಿವೆ. ನ್ಯಾಯದ ಶ್ರೇಷ್ಠತೆಯನ್ನು ಎತ್ತಿಹಿಡಿಯುವ, ಮತ್ತು ಪ್ರಜಾತಂತ್ರಸ್ವರೂಪದ ಆಡಳಿತವಿರುವ ಎಲ್ಲ ದೇಶಗಳೂ ಘೇರಾವ್‌ಅನ್ನು ಖಂಡಿಸುವುದರ ಜೊತೆಗೆ ಅಲ್ಲಿಯ ದಿವಾಣಿ ಮತ್ತು ದಂಡಸಂಹಿತೆಗಳನ್ವಯ ಅದನ್ನು ನ್ಯಾಯಬಾಹಿರ ಮತ್ತು ಅಪರಾಧ ಎಂದು ಪರಿಗಣಿಸುತ್ತವೆ.

ಅನೇಕ ದೇಶಗಳಲ್ಲಿಯ ಕಾನೂನುಗಳಲ್ಲಿ ಕಾರ್ಮಿಕರ ವಿವಾದಗಳನ್ನು ಇತ್ಯರ್ಥಗೊಳಿಸಲು ಸಂಧಾನ ಮತ್ತು ನ್ಯಾಯನಿರ್ಣಯಗಳಂಥ ವ್ಯವಸ್ಥೆ ಮಾಡಲಾಗಿದೆ. ಘೇರಾವ್ ಈ ಎರಡೂ ರೀತಿಯ ವ್ಯವಸ್ಥೆಗಳಿಗೆ ಹೊಂದಿಕೊಳ್ಳುವುದಿಲ್ಲ. ಅಲ್ಲದೆ ನ್ಯಾಯ, ಕಾರ್ಮಿಕ ಸಮಾಜದ ಪ್ರಗತಿ ಇವೆರಡಕ್ಕೂ ಘೇರಾವ್ ಉತ್ತಮ ಸಾಧನವಾಗಲಾರದು.

ಹಾಗಾದರೆ ಇನ್ನು ಮುಂದೆ ಘೇರಾವ್‌ಗಳು ಇಲ್ಲವಾಗಬಹುದೆ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಕಾರ್ಮಿಕ ಸಂಘಟನೆ, ಕಾರ್ಮಿಕ ವಿವಾದಗಳ ಇತ್ಯರ್ಥದ ವ್ಯವಸ್ಥೆಯಲ್ಲಿ ಸುಧಾರಣೆ, ವ್ಯವಸ್ಥಾಪಕ ಮತ್ತು ಕಾರ್ಮಿಕರಲ್ಲಿಯ ಉತ್ತಮ ಸಂಬಂಧ– ಇವು ಘೇರಾವ್‌ಗಳ ಆವಶ್ಯಕತೆಯನ್ನು ತೊಡೆದುಹಾಕಬಹುದು. ಸಾಮಾಜಿಕ ಸುವ್ಯವಸ್ಥೆ ಮತ್ತು ರಾಜಕೀಯ ಧೋರಣೆಗಳಲ್ಲಿಯ ಪರಿವರ್ತನೆಯಿಂದಾಗಿ ಇತರ ರಂಗಗಳಲ್ಲೂ ಘೇರಾವ್‌ಗಳು ಇಲ್ಲವಾಗಬಹುದು. (ಎಲ್.ಎಸ್.ಜೆ.)

**ಫೊಳ್ ಮೀನುಗಳು:** ಪ್ರಪಂಚದ ಉಷ್ಣ ಹಾಗೂ ಸಮಶೀತೋಷ್ಣವಲಯಗಳ ಸಮುದ್ರಗಳಲ್ಲಿ ಕಂಡುಬರುವ ಹಲವಾರು ಬಗೆಯ ಮೀನುಗಳು (ಜ್ಯೂ ಫಿಷ್) ಪರ್ಸಿಫಾರ್ಮಿಸ್ ಗಣದ ಸಯೀನೀಡಿ ಕುಟುಂಬಕ್ಕೆ ಸೇರಿದ ಸಯೀನ, ಸೂಡೊಸಯೀನ ಜಾತಿಯ ಕೆಲವು ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಈ ಮೀನುಗಳು ತಮ್ಮ ಗಾಳಿಚೀಲಗಳಿಂದ ಮಾಡುವ ಶಬ್ದ ತಮಟೆ ಬಡಿದ ಶಬ್ದವನ್ನು ಹೋಲುತ್ತದೆ. ಆದ್ದರಿಂದ ಈ ಹೆಸರು ಬಂದಿದೆ. (ಭಾರತದ ಪಶ್ಚಿಮ ಕರಾವಳಿಯಲ್ಲಿ ಫೊಳ್ ಎಂದರೆ ತಮಟೆ ಎಂದರ್ಥ). ಸಾಮಾನ್ಯ ಆಂಗ್ಲ ಭಾಷೆಯಲ್ಲಿ ಇವುಗಳಿಗೆ ಜ್ಯೂ ಫಿಷ್, ಡ್ರಮ್ ಫಿಷ್ ಎಂಬ ಹೆಸರುಗಳಿವೆ. ಭಾರತ, ಮಾಯನ್ಮಾರ್, ಮಲಯ, ಸುಮಾತ್ರ, ಪೂರ್ವ ಆಫ್ರಿಕ, ಉತ್ತರ ಮತ್ತು ದಕ್ಷಿಣ ಅಮೆರಿಕಗಳ ಕರಾವಳಿಗಳಲ್ಲಿ ಈ ಮೀನುಗಳು ಕಂಡುಬರುತ್ತವೆ. ಕೆಲವೊಮ್ಮೆ ನದೀಮುಖಜ ಪ್ರದೇಶಗಳ ಮುಖಾಂತರ ಒಳನಾಡಿಗೂ ಬರುವುದುಂಟು.

ಭಾರತದಲ್ಲಿ ಫೊಳ್ ಮೀನುಗಳು ಸೂಡೋಸಯೀನ ಡಯಕಾಂತಸ್ ಪ್ರಭೇದದವಾಗಿವೆ. ಇದರೊಂದಿಗೆ ಓಟೊಲಿತಾಯ್ಡಿಸ್ (ಕೋತ್ ಮೀನು), ಓಟೋಲಿತಸ್, ಸಯೀನ, ಜಾನಿಯಸ್ (ಧೋಮ ಮೀನುಗಳು) ಸಯಿನಿಡೆ ಕುಟುಂಬಕ್ಕೆ ಸೇರಿದವುಗಳೇ ಆಗಿವೆ.

ಮಧ್ಯಮ ಗಾತ್ರದ ಮೀನುಗಳಿವು; ಸುಮಾರು 120 ರಿಂದ 150 ಸೆಂ.ಮೀ. ಉದ್ದದವರೆಗೆ ಬೆಳೆಯುತ್ತವೆ. ತೂಕ ಸುಮಾರು 5 ಕೆಜಿ. ಮಹಾರಾಷ್ಟ್ರದ ಕರಾವಳಿಯಲ್ಲಿ 5-11 ಕೆಜಿ. ವರೆಗಿನ ಮೀನುಗಳು ದೊರೆತಿವೆ. ದೃಢವಾದ ದೇಹ, ಆಳವಾದ ಕಚ್ಚನ್ನು ತೋರುವ ಬೆನ್ನಿನ ಈಜುರೆಕ್ಕೆ, ಎರಡು ಮುಳ್ಳುಗಳುಳ್ಳ ಗುದದ ಈಜುರೆಕ್ಕೆ, ಎದೆಯ ಈಜುರೆಕ್ಕೆಗಳ ಕಕ್ಷದಲ್ಲಿ ಮಾಂಸಲ ರಚನೆಗಳಿರುವುದು, ಮೊಂಡಾಗಿ ಕತ್ತರಿಸಿದಂತೆ ಇರುವ

ಬಾಲದ ಈಜುರೆಕ್ಕೆ – ಇವು ಘೋಳ್ ಮೀನುಗಳ ಗುಣಲಕ್ಷಣಗಳು. ದೇಹದ ಬಣ್ಣ ವಿವಿಧ ಪ್ರಭೇದಗಳಲ್ಲಿ ಬೇರೆ ಬೇರೆ ರೀತಿಯಾಗಿರುವುದಾದರೂ ಮೂಲತಃ ಕಂದು ಇಲ್ಲವೆ ಬೂದಿ ಬಣ್ಣ, ಅಲ್ಲಲ್ಲಿ ಊದಾ, ನೀಲಿ ಮುಂತಾದ ಬಣ್ಣದ ಚುಕ್ಕೆಗಳಿರುವುದುಂಟು.

ಈ ಮೀನುಗಳು ಮಾಂಸಾಹಾರಿಗಳು. ಇತರ ಜಾತಿಯ ಮೀನುಗಳು, ಕಠಿಣಚರ್ಮಿಗಳು, ವಲ್ಕವಂತಗಳು, ಮತ್ತು ಮೃದ್ವಂಗಿಗಳನ್ನು ತಿಂದು ಜೀವಿಸುತ್ತವೆ. ಇವುಗಳ ಸಂತಾನೋತ್ಪತ್ತಿಯ ಕಾಲ ಮೇ–ಜುಲೈ.

ಮಹಾರಾಷ್ಟ್ರ ಮತ್ತು ಕಾಠೇವಾಡಗಳಲ್ಲಿ ಈ ಮೀನುಗಳನ್ನು ಗಣನೀಯ ಪ್ರಮಾಣದಲ್ಲಿ ಹಿಡಿಯಲಾಗುತ್ತದೆ. 2002 ನೇಯ ವರ್ಷದಲ್ಲಿ ಸುಮಾರು ೨.೬೭ ಲಕ್ಷ ಟನ್‍ಗಳಷ್ಟು ಮೀನನ್ನು ಹಿಡಿಯಲಾಗಿದೆ. ಇವು ಒಳ್ಳೆಯ ಆಹಾರದ ಮೀನುಗಳು. ಇವುಗಳ ಗಾಳಿಚೀಲದಿಂದ ತಯಾರಾಗುವ ಉಪ ಉತ್ಪನ್ನಗಳಿಗೆ ಒಳ್ಳೆಯ ಬೇಡಿಕೆಯಿದ್ದು ಸ್ಥಳೀಯವಾಗಿ ಇದರ ಗಾಳಿಚೀಲವನ್ನು ಮಾವ್ ಗಳೆಂದು ಕರೆಯುತ್ತಾರೆ. ಉತ್ತಮ ಗುಣಮಟ್ಟದ ಮಾವ್‍ಗಳನ್ನು ರಫ್ತು ಮಾಡಲಾಗುತ್ತದೆ. ಇದನ್ನು ವೈನ್ ತಯಾರಿಕಾ ಹಂತದಲ್ಲಿ ಶುದ್ಧೀಕರಣಕ್ಕೆ ಬಳಸಲಾಗುತ್ತದೆ. ಒಣಗಿಸಿದ ಗಾಳಿಚೀಲಗಳನ್ನು ಐಸಿಂಗ್ಲಾಸ್ ತಯಾರಿಕೆಯಲ್ಲಿ ಬಳಸಲಾಗುತ್ತದೆ. (ಎಸ್.ಪಿ.ಎಂ.; ಟಿ.ಎಸ್.ಎ.)

**ಘೋರ್ :** ಆಫ್ಘಾನಿಸ್ತಾನದಲ್ಲಿ ಸು. 10-14ನೆಯ ಶತಮಾನಗಳಲ್ಲಿದ್ದ ಒಂದು ಸಾಮ್ರಾಜ್ಯ. (ಇದನ್ನು ಘೋರ್, ಘೌರ್, ಘೌರ್, ಘೂರ್ ಎಂದೂ ಕರೆಯಲಾಗಿದೆ). ಈ ಪ್ರದೇಶ ಇಂದು ಪಶ್ಚಿಮ ಆಫ್ಘಾನಿಸ್ತಾನದ ಹೆರಾತ್ ಮತ್ತು ಕಾಂದಹಾರದ ವಾಯವ್ಯ ಭಾಗದಲ್ಲಿದೆ. ಫಿರ್ದೌಸಿಯ (1010) ಶಾಹನಾಮಾ ಮತ್ತು ಪ್ರಾಚೀನ ಅರಬ್ಬೀ ಭೂವಿವರಣೆಗಳಲ್ಲಿ ಇದರ ಉಲ್ಲೇಖ ಬಂದಿದೆ. ಚಾರಿತ್ರಿಕವಾಗಿ ಘೋರ್‌ನ ವಿಷಯ ತಿಳಿಯುವುದು ಘಜ್ನಿ ಸಂತತಿಯ ಮೂಲಕವೇ.

ಘೋರ್ ಸಾಮ್ರಾಜ್ಯ ಪರ್ಷಿಯ, ಆಫ್ಘಾನಿಸ್ತಾನ, ಉತ್ತರ ಭಾರತ ಮತ್ತು ಟ್ರ್ಯಾನ್ಸೊಂಕ್ಸಿಯಾನ ಪ್ರದೇಶಗಳನ್ನು ಒಳಗೊಂಡಿತ್ತು. ಘಜ್ನಿ ಮಹಮೂದ್ ಮತ್ತು ಆತನ ಮಗ ಮಸೌದರ ಚರಿತ್ರೆಯ ಜೊತೆಗೆ ಘೋರ್‌ನ ಮೊದಲ ಉಲ್ಲೇಖ ಬರುತ್ತದೆ. ಮಸೌದ್ 1020ರಲ್ಲಿ ಇದನ್ನು ಗೆದ್ದ. ಮಲ್ಲಿಕ್ ಇಜುದ್ದೀನ್ ಸು. 1100ರಲ್ಲಿ ಘೋರ್ ಸಾಮ್ರಾಜ್ಯದ ಒಡೆಯನಾದ. ಈತನನ್ನು ಮತ್ತು ಈತನ ವಂಶದ ಮುಂದಿನ ಏಳು ಜನರನ್ನು ರಾಜರ ಪಿತೃಗಳೆಂದು ಕರೆಯಲಾಗಿದೆ. ಘಜ್ನಿಯನ್ನು ಮಲ್ಲಿಕ್ ಇಜುದ್ದೀನನ ಮಗ ಅಲಾ–ಉದ್–ದೀನ್ ಜಹಾನ್ ಸೋಜ್ ವಶಪಡಿಸಿಕೊಂಡು ಅದನ್ನು ಸುಟ್ಟುಹಾಕಿದ. ಈತನ ಸೋದರಳಿಯರಾದ ಘಯಾಸುದ್ದೀನ್ ಮಹಮ್ಮದ್ ಮತ್ತು ಮುಯಿಜ್ ಉದ್ದೀನರು ಖುರಾಸಾನ್ ಮತ್ತು ಘಜ್ನಿಯಲ್ಲಿ ಅಧಿಕಾರಿಗಳಾದರು. ಅಲ್ಲಾ–ಉದ್–ದೀನನ ಅನಂತರ ನಡೆಸಲಾದ ದಂಡಯಾತ್ರೆಗಳಲ್ಲಿ ಇವರು ವಿಶೇಷವಾಗಿ ಸಹಾಯ ಮಾಡಿದರು. ಈ ದಂಡಯಾತ್ರೆಗಳಲ್ಲಿ ಮುಲ್ತಾನ್ (1176), ಲಾಹೋರ್ (1186), ಅಜ್ಮೀರ್ (1180) ಇವನ್ನು ಮುಯಿಜ್ ಉದ್ದೀನ್ ವಶಪಡಿಸಿಕೊಂಡ. ಅನಂತರದ 6 ವರ್ಷಗಳಲ್ಲಿ ಭಾರತದ ದಕ್ಷಿಣದಲ್ಲಿ ನಾಗಪುರದವರೆಗೂ, ಪೂರ್ವದಲ್ಲಿ ಇರಾವಾಡಿಯವರೆಗೂ ಘೋರ್ ಸಾಮ್ರಾಜ್ಯ ವಿಸ್ತಾರಗೊಂಡಿತು. ಅಂದಿನ ಘೋರ್ ಸಾಮ್ರಾಜ್ಯ ಭಾರತದಿಂದ ಬ್ಯಾಬಿಲೋನಿಯದವರೆಗೂ ಆಕ್ಸಸ್‌ನಿಂದ ಹಾರ್ಮೂಜ್ ಜಲಸಂಧಿಯವರೆಗೂ ವಿಸ್ತರಿಸಿತ್ತು. ಮುಯಿಜ್ ಉದ್ದೀನನ ಮರಣಾನಂತರ ಭಾರತದ ಸಂಸ್ಥಾನಗಳು ಮತ್ತೆ ಸ್ವತಂತ್ರವಾದುವು. ಅನಂತರ ಘೋರ್ ಸಾಮ್ರಾಜ್ಯದ ವಿಸ್ತಾರ ಘೋರ್‌ನ ಸುತ್ತಣ ಪ್ರದೇಶ, ಸೀಯಿಸ್ತಾನ್ ಮತ್ತು ಹೆರಾತ್‌ಗಳಿಗೆ ಸೀಮಿತವಾಯಿತು. ಸುಮಾರು 1215ರಲ್ಲಿ ಈ ಸಾಮ್ರಾಜ್ಯವನ್ನು ಖ್ವಾರಾಜಮ್‌ನ ರಾಜ ವಶಪಡಿಸಿಕೊಂಡ. ಸು. 30 ವರ್ಷಗಳ ಅನಂತರ ಘೋರ್ ರಾಜಕುಮಾರರು ಇದನ್ನು ಪುನರುತ್ಥಾನಗೊಳಿಸಿ ಹೆರಾತ್‌ನಲ್ಲಿ ರಾಜ್ಯ ಸ್ಥಾಪಿಸಿದರು. 1383ರಲ್ಲಿ ಹೆರಾತ್ ಮೇಲೆ ಮಂಗೋಲರ ತೈಮೂರ್ ದಾಳಿ ಮಾಡಿ ಅದನ್ನು ನಾಶಪಡಿಸಿದ. ಘೋರ್ ಸಾಮ್ರಾಜ್ಯ ಕಣ್ಮರೆಯಾಯಿತು. (ವಿ.ಕೆ.)

**ಘೋರಿ ಸುಲ್ತಾನರು :** ಆಫ್ಘಾನಿಸ್ತಾನದಲ್ಲಿ ಹೆರಾತಿನ ಆಗ್ನೇಯದ ಘೋರ್ ಸಂಸ್ಥಾನವನ್ನಾಳುತ್ತಿದ್ದು, ಕ್ರಮೇಣ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡು ಆಳಿದ ಸುಲ್ತಾನರು. ಇವರು ಆಫ್ಘನರೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಪೂರ್ವ ಪರ್ಷಿಯನರ ಮೂಲದವರೆಂದು ಮತ್ತೆ ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವರು ಮೊದಲು ಘಜ್ನಿ ಸಾಮ್ರಾಜ್ಯಕ್ಕೆ ಅಧೀನರಾಗಿದ್ದರು. ಅದರ ಅವನತಿಯ ಅನಂತರ ಘೋರಿಗಳು ಪ್ರಬಲರಾದರು. ಇವರಿಗೂ ಘಜ್ನಿಗಳಿಗೂ ಘರ್ಷಣೆ ಆರಂಭವಾಯಿತು. ಘಜ್ನಿಯ ಬಹ್ರಾಂ ಷಾ ಎಂಬವನು ಘೋರಿ ಸುಲ್ತಾನ ಕುತ್ಬ್–ಉದ್–ದೀನ್ ಮಹಮ್ಮದನನ್ನೂ ಅವನ ತಮ್ಮ ಸೈಫ್–ಉದ್–ದೀನನನ್ನೂ ಕೊಲ್ಲಿಸಿದ. ಇವರಿಬ್ಬರ ಸೋದರ ಅಲಾ–ಉದ್–ದೀನ್ ಹುಸೇನ್ ಈ ಕೊಲೆಯ ಸೇಡು ತೀರಿಸಿಕೊಳ್ಳಲು ಘಜ್ನಿಯ ಮೇಲೆ ದಂಡೆತ್ತಿಹೋಗಿ ಅದನ್ನು ಕೊಳ್ಳೆ ಹೊಡೆದು ನಗರಕ್ಕೆ ಬೆಂಕಿ ಹಚ್ಚಿದ. ಈ ಕೃತ್ಯಕ್ಕಾಗಿ ಅವನಿಗೆ ಜಹಾನ್ಸೂಜ್ ಅಥವಾ ಪ್ರಪಂಚ ಭಸ್ಮಕ ಎಂಬ ಹೆಸರು ಬಂತು. ಬಹ್ರಾಮನ ಮಗ ಖುಸ್ರಾವ್ ಷಾನ್ನು ಘುಜ್ಜ್ ತುರ್ಕ್‌ಮನರು ಘಜ್ನಿಯಿಂದ ಹೊಡೆದೋಡಿಸಿದರು. ಇವನು ಪಂಜಾಬಿಗೆ ಓಡಿಹೋದ. ಘಜ್ನಿ ಹತ್ತು ವರ್ಷಗಳ ಕಾಲ ಘುಜ್ಜ್ ತುರ್ಕ್‌ಮನರ ವಶದಲ್ಲಿತ್ತು.

ಘೋರಿ ಸುಲ್ತಾನರು ಮತ್ತೆ ಪ್ರಬಲರಾಗಿ ಘಜ್ನಿಯನ್ನು ಹಿಡಿದುಕೊಂಡರು. ಅಲಾ–ಉದ್–ದೀನ್ ಹುಸೇನನ ಮಗ ಸೈಫ್–ಉದ್–ದೀನ್ ಮುಹಮ್ಮದ ಘುಜ್ ತುರ್ಕ್‌ಮನರೊಂದಿಗೆ ಯುದ್ಧಮಾಡುತ್ತಿದ್ದಾಗ ಸತ್ತಿದ್ದ. ಅವನ ದಾಯಾದಿಯೂ ಉತ್ತರಾಧಿಕಾರಿಯೂ ಆದ ಘಿಯಾಸ್–ಉದ್–ದೀನ್ ಮುಹಮದ್ ಘುಜ್ಜ್ ತುರ್ಕ್‌ಮನರನ್ನು ಓಡಿಸಿ, ತನ್ನ ತಮ್ಮ ಷಿಹಾಬ್–ಉದ್–ದೀನನನ್ನು ಘಜ್ನಿ ಪ್ರಾಂತ್ಯದ ಆಡಳಿತ ನೋಡಿಕೊಳ್ಳಲು ನೇಮಿಸಿದ. ಷಿಹಾಬ್–ಉದ್–ದೀನನಿಗೆ ಮುಯಿಜ್ಜ್–ಉದ್–ದೀನ್ ಮುಹಮ್ಮದ್ ಬಿನ್ ಸಾಮ್ ಎಂಬ ಹೆಸರು ಇದೆ. ಘೋರಿ ಮುಹಮ್ಮದ್ ಎಂದು ಜನರ ಬಾಯಲ್ಲಿರುವವನು ಈತನೆ.

ಘೋರಿ ಮುಹಮ್ಮದ್ 1175ರಲ್ಲಿ ಮೊದಲ ಬಾರಿಗೆ ಭಾರತದ ಮೇಲೆ ದಂಡಯಾತ್ರೆ ಕೈಗೊಂಡು ಮುಲ್ತಾನಿನ ಇಸ್ಮೇಲರನ್ನು ಸೋಲಿಸಿದ. ಉಚ್ ಕೋಟೆ ಅವನ ವಶವಾಯಿತು. 1178ರಲ್ಲಿ ಗುಜರಾತಿನ ಮೇಲೆ ನಡೆಸಿದ ಆಕ್ರಮಣ ವಿಫಲವಾಯಿತು. ಮರುವರ್ಷ ಪೆಷಾವರಿನ ಮೇಲೆ ಏರಿ ಹೋದ. ಅದು ಇವನ ವಶವಾಯಿತು. ಪಂಜಾಬಿಗೆ ದಂಡೆತ್ತಿಹೋಗಿ ಘಜ್ನವೀಡ್ ವಂಶದ ಕೊನೆಯ ದೊರೆಯನ್ನು ಸೋಲಿಸಿ ಸೆರೆ ಹಿಡಿದುಕೊಂಡ.

ಈ ಗೆಲುವಿನಿಂದ ಭಾರತದ ಮೇಲೆ ದಂಡಯಾತ್ರೆ ಮುಂದುವರಿಸಲು ಘೋರಿ ಮಹಮ್ಮದನಿಗೆ ಹೆಚ್ಚು ಅನುಕೂಲವಾಯಿತು. ಭಾರತದಲ್ಲಿ ಅವನು ಗಳಿಸಿದ ಜಯಗಳಲ್ಲಿ ಪೃಥ್ವೀರಾಜ್ ಚೌಹಾನನನ್ನು ಸೋಲಿಸಿದ್ದು ಮುಖ್ಯವಾದ್ದು. ಪೃಥ್ವೀರಾಜನ ವಿರುದ್ಧ ಥಾನೇಶ್ವರದ ಬಳಿಯಲ್ಲಿ ತರೈನ್‌ನಲ್ಲಿ ನಡೆದ ಕದನದಲ್ಲಿ (1190-91) ಮಹಮ್ಮದ್ ಅನೇಕ ಸೈನಿಕರನ್ನು ಕಳೆದುಕೊಂಡು ಸೋತು ಗಾಯಗೊಂಡು ಪಲಾಯನ ಮಾಡಿದ. ಎರಡನೆಯ ತರೈನ್ ಕದನದಲ್ಲಿ (1192) ಪೃಥ್ವೀರಾಜನನ್ನು ಸೋಲಿಸಿ ಕೊಂದ. ಈ ವಿಜಯದ ಅನಂತರ ದೆಹಲಿಯನ್ನು ಗೆದ್ದು, ಅಲ್ಲೂ ಅಜ್ಮೀರದಲ್ಲೂ ಹಿಂದೂ ಸಾಮಂತರನ್ನು ನೇಮಿಸಿ ಅನಂತರ ಸೈನಿಕ ನೆಲೆಗಳಾದ ಹಾಂಸೀ, ಕುಹ್‌ರಾಮ್, ಸುರ್‌ಸೂತಿ ಮತ್ತು ಸಿರ್‌ಹಿಂದ್‌ಗಳನ್ನು ಹಿಡಿದು ಭದ್ರಪಡಿಸಿದ. ಭಾರತದ ಈ ಪ್ರದೇಶಗಳನ್ನು ತನ್ನ ನೆಚ್ಚಿನ ಸೇವಕ ಕುತ್ಬ್–ಉದ್–ದೀನ್ ಐಬಕ್‌ನ ವಶಕ್ಕೊಪ್ಪಿಸಿ ಘಜ್ನಿಗೆ ಮರಳಿದ.

1193ರಲ್ಲಿ ಮುಹಮ್ಮದ್ 50,000 ಅಶ್ವಸೇನೆಯೊಡನೆ ಮತ್ತೆ ಭಾರತಕ್ಕೆ ಬಂದ. ಈ ಬಾರಿ ಕನೌಜಿನ ಗಾಹಡ್ವಾಲ ಮನೆತನದ ದೊರೆ ಜಯಚಂದ್ರನಿಗೆ ಸೋಲು ಕಾದಿತ್ತು. ಮಹಮ್ಮದ್ ಅನೇಕ ದೇವಾಲಯಗಳ ಮೇಲೆ ದಾಳಿ ಮಾಡಿದ. ಕಾಶಿಯೊಂದರಲ್ಲೇ ಸುಮಾರು ಒಂದು ಸಾವಿರ ದೇವಾಲಯಗಳು ನೆಲಸಮವಾದುವು. ಮಸೀದಿಗಳು ಎದ್ದವು. ಜನರು ಹಿಂಸೆ ಮತ್ತು ಲೂಟಿಗಳಿಗೆ ತುತ್ತಾದರು. ಗಾಹಡ್ವಾಲರ ಬೊಕ್ಕಸ ಅವನ ಕೈಸೇರಿತು. ಅಂತ್ಯದಲ್ಲಿ ಗಾಹಡ್ವಾಲರು ತಮ್ಮ ರಾಜ್ಯದ ಕೆಲವು ಭಾಗಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಾದರೂ ಅವರ ಐಶ್ವರ್ಯ ಮಹಮ್ಮದನದಾಯಿತು.

ಮಹಮ್ಮದ್ ಈ ಐಶ್ವರ್ಯದ ರಾಶಿಯೊಂದಿಗೆ ತನ್ನ ದೇಶಕ್ಕೆ ಮರಳಿದ ಮೇಲೆ ಎದ್ದ ದಂಗೆಗಳನ್ನು ಐಬಕ್ ಹತ್ತಿಕ್ಕಿ, ಘೋರಿ ರಾಜ್ಯವನ್ನು ಭದ್ರಪಡಿಸಿದ. ಅಲ್ಲದೆ ಸುಮಾರು 27 ಹಿಂದೂ ಮತ್ತು ಜೈನ ದೇವಾಲಯಗಳ ಸಾಮಗ್ರಿಯಿಂದ ದೆಹಲಿಯಲ್ಲಿ ಕುವ್ವತ್–ಉಲ್–ಇಸ್ಲಾಂ ಮಸೀದಿಯನ್ನು 1194ರಲ್ಲಿ ಕಟ್ಟಿಸಿದ. ಅಜ್ಮೀರದಲ್ಲಿ ವಿಶಾಲದೇವ ಕಟ್ಟಿಸಿದ್ದ ಸಂಸ್ಕೃತ ಪಾಠಶಾಲೆಯ ಮೇಲೂ ಎರಡು ವರ್ಷಗಳ ಅನಂತರ ಒಂದು ಮಸೀದಿ ಎದ್ದಿತು.

ಮಹಮ್ಮದ್ ಮತ್ತೆ ಭಾರತಕ್ಕೆ ಬಂದು ಗ್ವಾಲಿಯರ್ ಕೋಟೆಗೆ ಮುತ್ತಿಗೆ ಹಾಕಿದ. ಕೋಟೆಯನ್ನು ಜಯಿಸುವುದು ಸುಲಭವಾಗಲಿಲ್ಲ. ಸಲ್ಲಕ್ಷಣರಾಜ ಮುತ್ತಿಗೆ ತೆಗೆಯುವಂತೆ ಕೇಳಿಕೊಂಡಾಗ ಅದಕ್ಕೆ ಒಪ್ಪಿ, ಬಹಾವುದ್ದೀನ್ ತುಘ್ರಿಲ್‌ನನ್ನು ಶಾಂತಿ ಮಾತುಕತೆಗೆ ನೇಮಿಸಿ ಹಿಂದಿರುಗಿದ. ಕಾಲಾನುಕ್ರಮದಲ್ಲಿ ಗ್ವಾಲಿಯರ್ ದೆಹಲಿ ಸುಲ್ತಾನರ ಆಡಳಿತಕ್ಕೊಳಪಟ್ಟಿತು. ಮುಹಮ್ಮದ್ ಗೆದ್ದ ಪ್ರದೇಶಗಳನ್ನು ಐಬಕ್ ಭದ್ರಪಡಿಸಿದನಲ್ಲದೆ ಅವನ ಸಾಮ್ರಾಜ್ಯಕ್ಕೆ ಹೊಸ ಪ್ರದೇಶಗಳನ್ನೂ ಸೇರಿಸಿದ.

ಸ್ವದೇಶದಲ್ಲಿ ಘೋರಿ ಸಾಮ್ರಾಜ್ಯ ವಿಸ್ತರಣೆಗೆ ಖಾರಜ್ಜ್ ಮಿಯನ್ ಮನೆತನ ಅಡ್ಡಿಯಾಗಿತ್ತು. ಅದರ ನಾಯಕ ತಕಷ್ ಸತ್ತ ಅನಂತರ ಉಂಟಾದ ಯಾದವೀ ಕಲಹದಲ್ಲಿ ಘೋರಿಗಳು ಮುಖ್ಯ ನಗರಗಳಾದ ನಿಷಾಪುರ್, ತುಸ್, ಮೆರ್ವ್‌ಗಳನ್ನು 1201ರಲ್ಲಿ ವಶಪಡಿಸಿಕೊಂಡರು. ತಕಷನ ಅನಂತರ ಅಲಾ–ಉದ್–ದೀನ್ ಪಟ್ಟಕ್ಕೆ ಬಂದ ಅವನು ಹೆರಾತ್‌ವರೆಗಿನ ಪ್ರದೇಶಗಳನ್ನು ಘೋರಿಗಳಿಂದ ವಶಪಡಿಸಿಕೊಂಡ.

ಮಹಮ್ಮದನ ಅಣ್ಣ ಘಿಯಾಸ್–ಉದ್–ದೀನ್ 1203ರಲ್ಲಿ ತೀರಿಕೊಂಡಾಗ ಘೋರಿ ಮಹಮ್ಮದ್ ಘಜ್ನಿ, ಘೋರ್ ಮತ್ತು ದೆಹಲಿಗಳ ಸುಲ್ತಾನನೆಂದು ಘೋಷಿಸಿಕೊಂಡ. ಖ್ವಾರಜ್ಜ್ ಮಿಯನ್ ಮನೆತನದವರೊಡನೆ ಹಗೆತನ ಮುಂದುವರಿಯಿತು. ಅವರಿಂದ

ಮಹಮ್ಮದ್ 1205ರಲ್ಲಿ ಅನಭವಿಸಿದ ಸೋಲು ಅವನ ಗೌರವಕ್ಕೆ ಭಾರಿ ಪೆಟ್ಟು ಕೊಟ್ಟಿತು. ಖೊಕಾರರು ಮತ್ತು ಭಾರತದ ಇತರ ಗಿರಿಜನರು ಬಂಡೆದ್ದು ಮುಲ್ತಾನಿನ ರಾಜ್ಯಪಾಲನನ್ನು ಸೋಲಿಸಿದರು. ಅವರು ಲಾಹೋರನ್ನು ಲೂಟಿ ಮಾಡಿದರಲ್ಲದೆ ಲಾಹೋರ್–ಘಜ್ನಿ ರಸ್ತೆಯನ್ನು ಮುಚ್ಚಿದರು. ಇವರನ್ನು ಅಡಗಿಸುವುದು ಐಬಕನಿಗೆ ಸಾಧ್ಯವಾಗದಿದ್ದುದರಿಂದ, ಮುಹಮ್ಮದನೇ ಘಜ್ನಿಯಿಂದ ಬಂದು, ಇವರನ್ನು ಸೋಲಿಸಿದ. ಅನಂತರ ಲಾಹೋರಿಗೆ ತೆರಳಿ ಅಲ್ಲಿಯ ಪರಿಸ್ಥಿತಿಯನ್ನು ತಹಬಂದಿಗೆ ತಂದ. ಘಜ್ನಿಗೆ ಹಿಂದಿರುಗುತ್ತಿದ್ದಾಗ ದಾರಿಯಲ್ಲಿ ಮಹಮ್ಮದ್ ಕೊಲೆಗೆ ಈಡಾದ (1206).

ಅವನ ಅನಂತರ ಘೋರಿ ಸಾಮ್ರಾಜ್ಯ ಬಹಲ ಕಾಲ ಉಳಿಯಲಿಲ್ಲ. ಘೋರಿ ಮಹಮ್ಮದನಿಗೆ ಗಂಡುಮಕ್ಕಳಿರಲಿಲ್ಲ. ಅವನ ಅನಂತರ ಘೋರಿ ರಾಜ್ಯದ ಬಹುಭಾಗ ಖ್ವಾರಜ್ ಮಿಯನ್ ಮನೆತನದ ಒಡೆತನಕ್ಕೆ ಬಂದಿತು. ಸ್ವಲ್ಪ ಕಾಲದವರೆಗೆ ಘಜ್ನಿಯನ್ನು ಕಿರ್ಮಾನಿನ ರಾಜ್ಯಪಾಲ ತಾಜ್–ಉದ್–ದೀನ್ ಯಿಲ್ದಿಜ್ ಆಳುತ್ತಿದ್ದ, ಅವನು ಪದಚ್ಯುತನಾದ ಮೇಲೆ (1215) ಮಧ್ಯ ಏಷ್ಯದಲ್ಲಿ ಘೋರಿ ರಾಜ್ಯ ಕೊನೆಗೊಂಡಿತು. ಭಾರತದಲ್ಲಿ ಘೋರಿ ರಾಜ್ಯಕ್ಕೆ ಐಬಕ್ ಉತ್ತರಾಧಿಕಾರಿಯಾದ. (ಎಚ್.ವಿ.ಎಸ್.ಎಂ.)

**ಘೋಷ್, ರಾಷ್ ಬಿಹಾರಿ :** 1845-1921. ಬಂಗಾಳದ ಪ್ರಸಿದ್ಧ ವಕೀಲ, ವಿದ್ವಾಂಸ, ಸಮಾಜಸುಧಾರಕ, ಶಾಸನಕರ್ತ. ಎರಡು ಬಾರಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. 1845ರ ಡಿಸೆಂಬರ್ 23ರಂದು. ಬರ್ದ್‌ವಾನ್ ಜಿಲ್ಲೆಯ ತೋರೆಕೋನ ಗ್ರಾಮದಲ್ಲಿ ಜನಿಸಿದರು. ಅವರ ಮಲತಮ್ಮನ ಹೇಳಿಕೆಯ ಪ್ರಕಾರ ಅವರು ಹುಟ್ಟಿದ್ದು ಖಾಂದಘೋಷ್‌ನಲ್ಲಿ. ತೋರೆಕೋನ ಎಂಬುದು ಅವರ ಹಿರಿಯರ ಸ್ಥಳ. ರಾಷ್ ಬಿಹಾರಿ ಘೋಷರು ಜಗಬಂಧು ಘೋಷರ ಮೊದಲನೆಯ ಹೆಂಡತಿಯ ಮಗ. ಇವರದು ಮಧ್ಯಮವರ್ಗದ ಕಾಯಸ್ಥ ವಂಶ. ಸ್ಥಳೀಯ ಪಾಠಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಇವರು ಬರ್ದ್‌ವಾನ್ ರಾಜ್ ಕೊಲಿಜಿಯೆಟ್ ಶಾಲೆಯಲ್ಲಿ ವ್ಯಾಸಂಗ ಮುಂದುವರಿಸಿದರು. ಬಂಕುರದಿಂದ ಎಂಟ್ರನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೋಲ್ಕತದ ಪ್ರೆಸಿಡೆನ್ಸಿ ಕಾಲೇಜ್ ಸೇರಿದರು. ಎಫ್.ಎ.ಯಲ್ಲಿ (1862) ಪ್ರಥಮ ಸ್ಥಾನವನ್ನೂ ಬಿ.ಎ.ಯಲ್ಲಿ (1865) ಎರಡನೆಯ ಸ್ಥಾನವನ್ನೂ ಗಳಿಸಿದ ಇವರು ಇಂಗ್ಲಿಷ್ ಎಂ.ಎ.ಯಲ್ಲಿ ಪ್ರಥಮ ಶ್ರೇಣಿಯನ್ನೂ ಚಿನ್ನದ ಪದಕವನ್ನೂ ಗಳಿಸಿದರು (1867). 1871ರಲ್ಲಿ ನ್ಯಾಯಶಾಸ್ತ್ರದ ಆನರ್ಸ್–ಇನ್–ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಇವರಿಗೆ 1884ರಲ್ಲಿ ಡಾಕ್ಟರ್ ಆಫ್ ಲಾಸ್ ಪದವಿ ದೊರಕಿತು. ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪದವಿ ಪಡೆಯಬೇಕೆಂಬುದು ಇವರ ಅಭಿಲಾಷೆಯಾಗಿತ್ತು. ಆದರೆ ಇವರು ಅಲ್ಲಿಗೆ ಹೋಗಲು ಇವರ ಬಂಧುಗಳು ಒಪ್ಪಲಿಲ್ಲ. ಕೋಲ್ಕತದಲ್ಲಿ ವಕೀಲರಾಗಿ ಇವರು ಚೆನ್ನಾಗಿ ಹಣ ಸಂಪಾದಿಸಿದರು.

ರಾಷ್ ಬಿಹಾರಿ ಘೋಷರಿಗೆ ಸಾಹಿತ್ಯದಲ್ಲಿ ವಿಶೇಷವಾದ ಅಭಿರುಚಿಯಿತ್ತು. ಕೋಲ್ಕತ್ತ ವಿಶ್ವವಿದ್ಯಾಲಯದೊಂದಿಗೆ ನಿಕಟ ಸಂಪರ್ಕ ಬೆಳೆಸಿಕೊಂಡ ಘೋಷರು 1879ರಲ್ಲಿ ಅದರ ಫೆಲೊ ಆದರು. 1893-1895ರವರೆಗೆ ನ್ಯಾಯಶಾಸ್ತ್ರ ವಿಭಾಗದ ಅಧ್ಯಕ್ಷರೂ 1887-1899ರಲ್ಲಿ ಸಿಂಡಿಕೇಟ್ ಸದಸ್ಯರೂ ಆಗಿದ್ದರು. ಗೋಖಲೆಯವರು ಪ್ರತಿಪಾದಿಸಿದ ಕಡ್ಡಾಯ ಶಿಕ್ಷಣ ಯೋಜನೆಯನ್ನು ಇವರೂ ಅನುಮೋದಿಸಿದರು. ಸ್ವದೇಶಿ ಚಳವಳಿಯ ಕಾಲದಲ್ಲಿ ಇವರು ರಾಷ್ಟ್ರೀಯ ಶಿಕ್ಷಣ ಚಳವಳಿಗೆ ಬೆಂಬಲ ಸೂಚಿಸಿದರು. 1906-1921ರಲ್ಲಿ ಇವರು ರಾಷ್ಟ್ರೀಯ ಶಿಕ್ಷಣ ಮಂಡಲಿಯ ಅಧ್ಯಕ್ಷರಾಗಿದ್ದರು. ಸ್ತ್ರೀವಿದ್ಯಾಭ್ಯಾಸವನ್ನು ಇವರು ವಿಶೇಷವಾಗಿ ಪ್ರೋತ್ಸಾಹಿಸಿದರು.

1905ರ ವರೆಗೂ ರಾಷ್ ಬಿಹಾರಿ ಘೋಷರು ನೇರವಾಗಿ ರಾಜಕೀಯವನ್ನು ಪ್ರವೇಶಿಸಲಿಲ್ಲ. ಅವರು ಆ ವರ್ಷ ಕಲ್ಕತ್ತ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ವೈಸ್ ರಾಯ್ ಲಾರ್ಡ್ ಕರ್ಜನ್ ಮಾಡಿದ ಕೆಲವು ಟೀಕೆಗಳ ವಿರುದ್ಧ ಪ್ರತಿಭಟಿಸಲು ಸೇರಿದ್ದ ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. 1906ರ ಅಂತ್ಯಭಾಗದಲ್ಲಿ ಕೋಲ್ಕತ್ತದಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಬಂಗಾಲದ ವಿಭಜನೆಯ ಹಿನ್ನೆಲೆಯಲ್ಲಿ ಸೇರಿದ ಸಭೆ ಸಂಪ್ರದಾಯದ ಸಮಾವೇಶಗಳಂತಿರಲಿಲ್ಲ. ಕಾಂಗ್ರೆಸ್ಸಿನ ಸದಸ್ಯರಲ್ಲಿ ಆ ಸಂಸ್ಥೆಯ ಧ್ಯೇಯದ ಬಗ್ಗೆ ಮತ್ತು ಅದನ್ನು ಸಾಧಿಸುವ ಮಾರ್ಗದ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿತ್ತು. ಸೌಮ್ಯವಾದಿಗಳು ಸೌಮ್ಯ ಮಾರ್ಗಗಳನ್ನು ಅನುಸರಿಸಬೇಕೆಂದೂ ಉಗ್ರಪಂಥಿಗಳು ಕ್ರಾಂತಿಕಾರಕ ದಾರಿಯನ್ನು ಹಿಡಿಯಬೇಕೆಂದೂ ಮಹಾಸಭೆಯನ್ನು ಒತ್ತಾಯಪಡಿಸಿದರು. ಹೀಗೆ ವಿಭಿನ್ನವಾದ ಅಭಿಪ್ರಾಯಗಳು ಕಲ್ಕತ್ತೆಯ ಅಧಿವೇಶನದಲ್ಲಿ ವ್ಯಕ್ತವಾದರೂ ಅಲ್ಲಿ ಸೌಮ್ಯವಾದಿ ಮತ್ತು ತೀವ್ರಗಾಮಿಗಳ ನಡುವೆ ಒಂದು ಒಡಂಬಡಿಕೆ ಆಯಿತು. ಈ ಒಪ್ಪಂದದ ಪರಿಣಾಮವಾಗಿ ಕಾಂಗ್ರೆಸ್ ತನ್ನ ಏಕತೆಯನ್ನು ಕಳೆದುಕೊಳ್ಳಲಿಲ್ಲ. ಸೌಮ್ಯವಾದಿಗಳ ವಾದವನ್ನು ಪ್ರತಿಬಿಂಬಿಸುವ ಸ್ವಾಗತ ಭಾಷಣವನ್ನು ರಾಷ್ ಬಿಹಾರಿ ಘೋಷ್ ಮಾಡಿದರು. ಅವರ ಭಾಷಣ ಮುಖ್ಯವಾಗಿ ಬಂಗಾಳದ ವಿಭಜನೆ, ಸ್ವದೇಶಿ, ರಾಷ್ಟ್ರೀಯ ವಿದ್ಯಾಭ್ಯಾಸ ಮತ್ತು ಬಹಿಷ್ಕಾರಗಳ ಕುರಿತದ್ದಾಗಿತ್ತು. 1907ರಲ್ಲಿ ಸೂರತ್ತಿನಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ರಾಷ್‌ಬಿಹಾರಿ ಘೋಷ್ ಅಧ್ಯಕ್ಷರಾಗಿದ್ದರು. ತೀವ್ರಗಾಮಿಗಳು ಮತ್ತು ಸೌಮ್ಯವಾದಿಗಳ ನಡುವಣ ಭಿನ್ನತೆಯಿಂದಾಗಿ ಆ ಅಧಿವೇಶನಲ್ಲಿ ಗೊಂದಲವುಂಟಾಗಿ ಅದು ಅರ್ಧದಲ್ಲೇ ಕೊನೆಗೊಂಡಿತು. ಮರುವರ್ಷ ಚೆನ್ನೈನ ಅಧಿವೇಶನಕ್ಕೆ ಅವರು ಅಧ್ಯಕ್ಷರಾಗಿದ್ದರು.

ರಾಷ್‌ಬಿಹಾರಿ ಘೋಷ್ ಸೌಮ್ಯವಾದಿಗಳಾಗಿದ್ದರು. ಸ್ವದೇಶಿ ಚಳವಳಿಯಲ್ಲಿ ಅವರಿಗೆ ತುಂಬ ನಂಬಿಕೆಯಿತ್ತು. ವಿದೇಶೀಯರ ದ್ವೇಷವಿಲ್ಲದ, ಸ್ವದೇಶದ ಅಭಿಮಾನದಿಂದ ಕೂಡಿದ, ಸ್ವದೇಶಿ ಚಳವಳಿಯನ್ನು ಅವರು ಪ್ರತಿಪಾದಿಸುತ್ತಿದ್ದರು. ಸಂವಿಧಾನಬದ್ಧ ಕ್ರಮಗಳಿಂದಲೇ ಇದನ್ನು ಸಾಧಿಸಬಹುದೆಂಬುದು ಅವರ ನಂಬಿಕೆಯಾಗಿತ್ತು. ಭಾರತದಲ್ಲಿ ಬ್ರಿಟಿಷ್ ಆಡಳಿತ ಒಂದು ವರವೆಂದೇ ಅವರು ಭಾವಿಸಿದ್ದರು. ಬ್ರಿಟಿಷರು ಭಾರತಕ್ಕೆ ವಿಜೇತರಾಗಿ ಬರಲಿಲ್ಲ; ಅನಾಯಕತ್ವವನ್ನು ತೊಡೆದು ಸುವ್ಯವಸ್ಥೆ ಸ್ಥಾಪಿಸಲು ಬಂದರು. ಅದು ಈಗ ಸಾಧಿತವಾಗಿರುವುದರಿಂದ ಅವರು ಭಾರತಕ್ಕೆ ಸ್ವಯಮಾಡಳಿತ ಕೊಟ್ಟೇ ಕೊಡುತ್ತಾರೆ. ಬ್ರಿಟಿಷ್ ಸಾಮ್ರಾಜ್ಯದೊಳಗೆ ಸ್ವಯಮಾಡಳಿತ ಸ್ಥಾಪಿಸುವುದೇ ನಮ್ಮ ಗುರಿ–ಎಂಬುದು ಅವರ ಭಾವನೆಯಾಗಿತ್ತು.

ಬ್ರಿಟಿಷ್ ಸರ್ಕಾರ ಮುಕ್ತವ್ಯಾಪಾರ ತತ್ತ್ವಗಳನ್ನು ಅನುಸರಿಸುತ್ತಿರುವುದರಿಂದ ಅದು ಭಾರತದ ಕೈಗಾರಿಕೆಗಳಿಗೆ ರಕ್ಷಣೆ ದೊರಕಿಸಿಕೊಡಲಿಲ್ಲವೆಂದು ಅವರು ಭಾವಿಸಿದ್ದರು. ಆದ್ದರಿಂದ ಅವರು ಸ್ವದೇಶಿ ಚಳವಳಿಯ ಮೂಲಕ ಭಾರತದ ಆರ್ಥಿಕ ಹಿತಗಳನ್ನು ರಕ್ಷಿಸಲು ಯತ್ನಿಸಿದರು. ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸುವುದರಿಂದ ಇದನ್ನು ಸಾಧಿಸಿದಂತಾಗುವುದಿಲ್ಲ. ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದರಿಂದ ಇದು ಸಾಧ್ಯ. ಭಾರತೀಯ ಕೈಗಾರಿಕೆಗಳಲ್ಲಿ ಬಂಡವಾಳವನ್ನು ತೊಡಗಿಸಬೇಕೆಂದು ಅವರು ಹೇಳಿದರಲ್ಲದೆ, ಅವರೇ ಒಂದು ಕೈಗಾರಿಕೆಗೆ ಧನಪೋಷಣೆ ಮಾಡಿದರು.

ರಾಷ್‌ಬಿಹಾರಿ ಘೋಷರು 1891-1896 ಮತ್ತು 1906-1907ರಲ್ಲಿ ಭಾರತ ವಿಧಾನಮಂಡಲಿಯ ಸದಸ್ಯರಾಗಿದ್ದರು. ಹಿಂದು ಮುಸ್ಲಿಂ ಕುಟುಂಬಗಳ ಪಾಲು, ಋಣಿಗಳು ತಮ್ಮ ಸ್ವತ್ತನ್ನು ಮತ್ತೆ ಕೊಳ್ಳುವ ಹಕ್ಕು ಮುಂತಾದ ಹಲವು ವಿಧೇಯಕಗಳನ್ನು ಕುರಿತ ಚರ್ಚೆಗಳಲ್ಲಿ ಅವರು ಭಾಗವಹಿಸಿದರು. ಸಿವಿಲ್ ಪ್ರಕ್ರಿಯಾ ಸಂಹಿತೆಯ ವಿಧೇಯಕದ ರಚನೆಯಲ್ಲಿ ಅವರು ವಹಿಸಿದ ಪಾತ್ರ ಪ್ರಮುಖವಾಗಿತ್ತು.

ರಾಷ್ ಬಿಹಾರಿ ಘೋಷರು ಬ್ರಿಟಿಷ್ ಸರ್ಕಾರದಲ್ಲಿ ನಂಬಿಕೆಯಿಟ್ಟಿದ್ದರೂ ಅದು ತಪ್ಪು ಹಾದಿಯಲ್ಲಿ ಹೋದಾಗ ಅದನ್ನು ಖಂಡಿಸದೆ ಇರಲಿಲ್ಲ. ಸರ್ಕಾರ 1907ರ ರಾಜದ್ರೋಹ ಅಧಿನಿಯಮವನ್ನು ಜಾರಿಗೆ ತಂದಾಗ ಅದರಿಂದ ಭಾರತದ ರಾಜಕೀಯ ಜೀವನವೇ ನಾಶವಾಗುವುದೆಂದು ಹೇಳಿ ಅವರು ಆ ಅಧಿನಿಯಮವನ್ನು ಬಲವಾಗಿ ವಿರೋಧಿಸಿದರು.

1909ರ ಅನಂತರ ರಾಷ್‌ಬಿಹಾರಿ ಘೋಷರು ರಾಜಕೀಯದಿಂದ ನಿವೃತ್ತಿ ಹೊಂದಿದರೆಂದು ಹೇಳಬಹುದು. ಅನಂತರ ಅವರು ರಾಷ್ಟ್ರೀಯ ವಿದ್ಯಾಭ್ಯಾಸದ ಕಡೆಗೆ ವಿಶೇಷ ಗಮನ ಹರಿಸಿದರು. ಅದನ್ನು ಜನರಲ್ಲಿ ಬೇರೂರಿಸಲು ದೇಶದಾದ್ಯಂತ ಪ್ರವಾಸ ಕೈಗೊಂಡು ತಮ್ಮ ಉದ್ದೇಶದಲ್ಲಿ ಬಹಳಮಟ್ಟಿಗೆ ಯಶಸ್ವಿಯಾದರು.

ರಾಷ್‌ಬಿಹಾರಿ ಘೋಷರು ತಮ್ಮ ಹಳ್ಳಿಯಾದ ತೋರೆಕೋನದ ಅಭಿವೃದ್ಧಿಗಾಗಿಯೂ ಹಲವಾರು ಶಿಕ್ಷಣ ಸಂಸ್ಥೆಗಳಿಗೂ ಒಟ್ಟು ಸುಮಾರು ಐವತ್ತು ಲಕ್ಷ ರೂ. ಗಳಷ್ಟು ದಾನ ಮಾಡಿದ್ದಾರೆ. ಅವರು 1921ರಲ್ಲಿ ತೀರಿಕೊಂಡರು. (ಕೆ.ಟಿ.ಆರ್.)

**ಘೋಷ್, ಲಾಲ್ ಮೋಹನ್ :** 1849-1909. ವಾಕ್ಚತುರ, ದೇಶಪ್ರೇಮಿ, ಹೋರಾಟಗಾರ, 1903ರಲ್ಲಿ ಮದರಾಸಿನಲ್ಲಿ ಸೇರಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ. ಜನನ 1849ರಲ್ಲಿ ಕೃಷ್ಣಗರ್‌ನಲ್ಲಿ. ತಂದೆ ರಾಮಲೋಚನ ಘೋಷ್ ಬಂಗಾಳ ಸರ್ಕಾರದ ನ್ಯಾಯಿಕ ಅಧಿಕಾರಿಯಾಗಿದ್ದರು. ಅವರು ಉದಾರವಾದಿ, ಪ್ರಗತಿಪರ. ಕೋಲ್ಕತ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಉತ್ತೀರ್ಣನಾಗಿ ಇಂಗ್ಲೆಂಡಿಗೆ ಹೋಗಿ (1869) ಬ್ಯಾರಿಸ್ಟರ್ ಪದವಿ ಗಳಿಸಿ ಭಾರತಕ್ಕೆ ಮರಳಿ 1873ರಲ್ಲಿ ಕೋಲ್ಕತದಲ್ಲಿ ವಕೀಲರಾದರು.

ಆ ಕಾಲದಲ್ಲಿ ಲೋಕಸೇವಾ ಪರೀಕ್ಷೆಯ ಪ್ರಶ್ನೆ ಮುಖ್ಯವಾಗಿತ್ತು. ಆ ಪರೀಕ್ಷೆಯ ಅರ್ಹತೆಯ ವಯಸ್ಸನ್ನು 21ರಿಂದ 19ಕ್ಕೆ ಇಳಿಸಿದ್ದುದು ಭಾರತೀಯರು ಆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅಡ್ಡಿಯಾಗಿತ್ತು. ಅಲ್ಲದೆ ಇಂಗ್ಲೆಂಡಿನಲ್ಲಿ ಮಾತ್ರವೇ ಈ ಪರೀಕ್ಷೆಯನ್ನು ನಡೆಸುತ್ತಿದ್ದುದು ಮತ್ತೊಂದು ಅಡಚಣೆಯಾಗಿತ್ತು. ಇದರ ಬಗ್ಗೆ ಒಂದು ಮನವಿಯನ್ನು ಕಾಮನ್ಸ್ ಸಭೆಗೆ ಕಳುಹಿಸಲು ಇಂಡಿಯ ಅಸೋಸಿಯೇಷನ್ ಮತ್ತು ಪುಣೆಯ ಸಾರ್ವಜನಿಕ ಸಭೆ ಸಂಯುಕ್ತವಾಗಿ ನಿರ್ಧರಿಸಿ, ಅದನ್ನು ಕಾಮನ್ಸ್ ಸಭೆಯಲ್ಲಿ ಮಂಡಿಸಲು ಲಾಲ್ ಮೋಹನರನ್ನು ತನ್ನ ಪ್ರತಿನಿಧಿಯಾಗಿ ಚುನಾಯಿಸಿತು. 1879ರಲ್ಲಿ ಲಾಲ್‌ಮೋಹನ್

ಇಂಗ್ಲೆಂಡಿಗೆ ಹೋಗಿ ಲಂಡನ್ನಿನಲ್ಲಿ ಜಾನ್ ಬ್ರೈಟನ ಅಧ್ಯಕ್ಷತೆಯಲ್ಲಿ ಈ ಸಮಸ್ಯೆಯ ಬಗ್ಗೆ ಭಾಷಣ ಮಾಡಿದರು. ಅವರ ಭಾಷಣ ಎಲ್ಲ ಸಭಿಕರ ಮೆಚ್ಚುಗೆ ಪಡೆಯಿತು. ಇದರ ಪರಿಣಾಮವಾಗಿ, ಈ ಸಭೆಮುಗಿದ 24 ಗಂಟೆಗಳಲ್ಲೇ ಲೋಕಸೇವಾ ಹುದ್ದೆಗೆ ಸಂಬಂಧಿಸಿದ ನಿಬಂಧನೆಗಳನ್ನು ಕಾಮನ್ಸ್ ಸಭೆಯಲ್ಲಿ ಇಡಲಾಯಿತು. ಭಾರತಕ್ಕೆ ಹಿಂದಿರುಗಿದ ಮೇಲೆ ಲಾಲ್ ಮೋಹನ್ ದೇಶದ ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿವಹಿಸಿದರು. 1880ರಲ್ಲಿ ಹತ್ತಿ ಸುಂಕದ ರದ್ದಿನ ಬಗ್ಗೆ ಇಂಡಿಯನ್ ಅಸೋಸಿಯೇಷನ್‌ನ ಮನವಿ ಸಲ್ಲಿಸಲು ಇಂಗ್ಲೆಂಡಿಗೆ ಹೋದರು. ಬ್ರಿಟಿಷ್ ಉದಾರವಾದಿ ನಾಯಕರು ಲಾಲ್ ಮೋಹನರನ್ನು 1884ರಲ್ಲಿ ಡೆಫ್ಟ್‌ಫರ್ಡ್ ಕ್ಷೇತ್ರದಿಂದ ತಮ್ಮ ಪಕ್ಷದ ಉಮೇದುವಾರರನ್ನಾಗಿ ಕಾಮನ್ಸ್ ಸಭೆಗೆ ನಿಲ್ಲಿಸಿದರು. ಚುನಾವಣಾ ಪ್ರಚಾರಕ್ಕಾಗಿ ಬಂಗಾಳದ ಜನ ಸುಮಾರು 11 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿಕೊಟ್ಟರು. ಲಾಲ್ ಮೋಹನ್ ಚುನಾವಣೆಯಲ್ಲಿ ಪರಾಭವ ಹೊಂದಿದರಾದರೂ ಬ್ರಿಟಿಷ್ ಕಾಮನ್ಸ್ ಸಭೆಗೆ ಚುನಾವಣೆಗೆ ನಿಂತ ಪ್ರಥಮ ಭಾರತೀಯರಿವರು.

ಭಾರತಕ್ಕೆ ಹಿಂದಿರುಗಿದ ಮೇಲೆ ಲಾಲ್ ಮೋಹನ್ 1890ರಲ್ಲಿ ಕಲ್ಕತ್ತದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ, ಭಾರತ ಸರ್ಕಾರದ ಸುಧಾರಣೆಗಳ ದೋಷಗಳನ್ನು ಕುರಿತು ಮಾತನಾಡಿದರು.

1903ರಲ್ಲಿ ಚೆನ್ನೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಚುನಾಯಿತರಾದರು. ಅವರ ಅಧ್ಯಕ್ಷ ಭಾಷಣ ಕಾಂಗ್ರೆಸ್ ವೇದಿಕೆಯ ಮೇಲೆ ಮಾಡಿದ ಅತ್ಯಂತ ಪರಿಣಾಮಕಾರಿಯಾದ ಭಾಷಣಗಳಲ್ಲೊಂದು ಎಂದು ಪಟ್ಟಾಭಿ ಸೀತಾರಾಮಯ್ಯನವರು ಹೇಳಿದ್ದಾರೆ. ಕಾಂಗ್ರೆಸ್ಸಿನಲ್ಲಿ ನಿರಂಕುಶಾಧಿಕಾರ ಪ್ರವೃತ್ತಿಯನ್ನು ಅಧ್ಯಕ್ಷ ಭಾಷಣದಲ್ಲಿ ಖಂಡಿಸಿದವರಲ್ಲಿ ಇವರೇ ಮೊದಲಿಗರು. ತಮ್ಮ ಭಾಷಣದಲ್ಲಿ ದೇಶದ ಬಡತನ ಮತ್ತು ಬರ ಪರಿಸ್ಥಿತಿಯನ್ನು ವಿವರಿಸಿ, ಅದೇ ಸಮಯದಲ್ಲಿ ಬ್ರಿಟಿಷರು ಆಚರಿಸಿದ ಆಡಂಬರಯುತವಾದ ದರ್ಬಾರಿನ ಔಚಿತ್ಯವನ್ನು ಪ್ರಶ್ನಿಸಿದರು.

ಲಾಲ್ ಮೋಹನ್ 1909ರ ಅಕ್ಟೋಬರ್ 18 ರಂದು ನಿಧನ ಹೊಂದಿದರು.

(ಕೆ.ಟಿ.ಆರ್.)

**ಘೋಷಯಾತ್ರೆ :** ಪೂರ್ವದಲ್ಲಿ ರಾಜರು ಜಲವಸತಿಯಿದ್ದ ಕೆಲವು ಪ್ರದೇಶಗಳಲ್ಲಿ ವಿಸ್ತಾರವಾದ ಹುಲ್ಲುಗಾವಲುಗಳನ್ನು ಬೆಳೆಸಿ ಅಲ್ಲಿ ತಮ್ಮ ಹಸುಗಳ ಮಂದೆಗಳನ್ನು ಮೇಯಲು ಬಿಟ್ಟು ಅವುಗಳ ಸಂರಕ್ಷಣೆಗಾಗಿ ಪಶುಪಾಲಕರನ್ನು ನೇಮಿಸುತ್ತಿದ್ದರು. ಇಂಥ ಗೊಲ್ಲರ ಆವಾಸಗಳಿಗೆ ಘೋಷಗಳೆಂದು ಹೆಸರು. ಆಗಾಗ ರಾಜರು ಅಥವಾ ಅವರ ನಂಬುಗೆಯ ಅಧಿಕಾರಿಗಳು, ಈ ಪಶುಸಂವರ್ಧನ ಕ್ಷೇತ್ರಗಳಿಗೆ ಹೋಗಿ ಹಸುಗಳನ್ನೂ ಕರುಗಳನ್ನೂ ಲೆಕ್ಕ ಮಾಡಿ ಗೊಲ್ಲರ ಕಷ್ಟಸುಖಗಳನ್ನು ವಿಚಾರಿಸಿ ಸೂಕ್ತ ವ್ಯವಸ್ಥೆ ಮಾಡುತ್ತಿದ್ದರು. ಇಂಥ ಭೇಟಿಗಳಿಗೆ ಘೋಷಯಾತ್ರೆ ಎಂದು ಹೆಸರು. ದುರ್ಯೋಧನ ಮಹಾರಾಜ ನಡೆಸಿದ ಒಂದು ಘೋಷಯಾತ್ರೆಯ ವೃತ್ತಾಂತ ಮಹಾಭಾರತದಲ್ಲಿ ಪ್ರಸಿದ್ಧವಾಗಿದೆ. ವನಪರ್ವದಲ್ಲಿ ಘೋಷಯಾತ್ರಾಪರ್ವ ಎಂಬ ಹೆಸರಿನಿಂದ 22 ಅಧ್ಯಾಯಗಳುಳ್ಳ ಒಂದು ಉಪಪರ್ವವೇ ಇದೆ.

ಪಾಂಡವರು ದ್ಯೂತಾಂತ್ಯದಲ್ಲಿ 22 ವರ್ಷಗಳ ಅರಣ್ಯವಾಸ ಮತ್ತು 1 ವರ್ಷದ ಅಜ್ಞಾತವಾಸದ ಪ್ರತಿಜ್ಞೆಗೆ ಕಟ್ಟುಬಿದ್ದು ದ್ವೈತವನದಲ್ಲಿ ವಾಸಿಸುತ್ತಿದ್ದಾಗ ಚಳಿಮಳೆ, ಗಾಳಿಬಿಸಿಲುಗಳಿಗೆ ಸಿಕ್ಕಿ ಕ್ಲೇಶಪಟ್ಟು ವಲ್ಕಲಧಾರಿಗಳಾಗಿ ಕಷ್ಟಪಡುತ್ತಿರುವ ಪಾಂಡವರ ದುಃಸ್ಥಿತಿಯನ್ನು ಕಣ್ಣಾರೆ ಕಂಡು ಅವರೆದುರಿಗೆ ತಮ್ಮ ರಾಜ್ಯೈಶ್ವರ್ಯದ ವೈಭವವನ್ನು ಮೆರೆದು ಅವರಿಗೂ ದ್ರೌಪದಿಗೂ ಮತ್ತಷ್ಟು ಸಂಕಟವುಂಟು ಮಾಡಬೇಕೆಂಬ ಅಪೇಕ್ಷೆ ದುರ್ಯೋಧನನ ದುರ್ಮಂತ್ರಿಗಳಾದ ಶಕುನಿ, ಕರ್ಣರಿಗೆ ಹುಟ್ಟಿತು. ಅವರು ತಮ್ಮ ಅಭಿಪ್ರಾಯವನ್ನು ದುರ್ಯೋಧನನಿಗೆ ಹೇಳಿಯೂ ಆಯಿತು. ಈ ಯೋಜನೆ ದುರ್ಯೋಧನನಿಗೂ ಪ್ರಿಯವಾದದ್ದೇ ಆಗಿದ್ದರೂ ಇದಕ್ಕೆ ಧೃತರಾಷ್ಟ್ರನ ಅನುಮತಿ ದೊರೆಯುವುದು ಅಸಂಭವವೆಂಬುದು ಅವನಿಗೆ ಗೊತ್ತಿತ್ತು. ಆಗ ಕರ್ಣನ ಮನಸ್ಸಿನಲ್ಲಿ ನಿರಾಕ್ಷೇಪಣೀಯವಾದ ಘೋಷಯಾತ್ರೆಯ ಯೋಚನೆ ಹೊಳೆಯಿತು. ದ್ವೈತವನದಲ್ಲಿಯೂ ಅದರ ಪರಿಸರಗಳಲ್ಲಿಯೂ ಕೆಲವು ಘೋಷಗಳಿದ್ದುವು. ಈ ವಿಚಾರ ಹೇಳಿದಾಗಲೂ ಅಂಧರಾಜ ದ್ವೈತವನದಲ್ಲಿ ಮಹಾರಥರಾದ ಪಾಂಡವರಿರುವುದರಿಂದ ಅಲ್ಲಿಗೆ ಕೌರವರು ಪರಿವಾರಸಮೇತರಾಗಿ ಹೋಗುವುದು ಕ್ಷೇಮಕರವಲ್ಲವೆಂದು ಆಕ್ಷೇಪಣೆಯನ್ನೇ ಒಡ್ಡಿದ. ಆಗ ಧೀಮಂತನಾದ ಶಕುನಿ ಸಮಯಪ್ರಜ್ಞೆಯನ್ನು ಮೆರೆದು ತಾವು ಯಾರೂ ಪಾಂಡವರಿರುವ ದಿಕ್ಕಿಗೆ ಹೋಗುವುದಿಲ್ಲವೆಂದು ಭರವಸೆ ನೀಡಿದ ಮೇಲೆ ಧೃತರಾಷ್ಟ್ರ ಘೋಷಯಾತ್ರೆಗೆ ಅನುಮತಿ ನೀಡಿದ. ಅಂಧರಾಜ ಅನುಮತಿ ನೀಡಿದ ಒಡನೆಯೇ ದುರ್ಯೋಧನ, ದುಶ್ಶಾಸನಾದಿ ಸೋದರರೊಡನೆ ಕರ್ಣಶಕುನಿಸಮೇತನಾಗಿ ದೊಡ್ಡ ಸೈನ್ಯವನ್ನು ಹೊರಡಿಸಿ ಅಂತಃಪುರದ ಸ್ತ್ರೀಜನರನ್ನೂ ಅವರ ಪರಿವಾರವನ್ನೂ ಜೊತೆಯಲ್ಲಿ ಕರೆದುಕೊಂಡು ಘೋಷಯಾತ್ರೆಯ ನೆಪದಲ್ಲಿ ಪಾಂಡವರಿಗೆ ಪೀಡೆಯನ್ನುಂಟುಮಾಡುವ ಏಕೈಕ ಮನೋರಥದಿಂದ ದ್ವೈತವನಕ್ಕೆ ಹೊರಟ. ಅವನ ಹಿಂದೆ ಅನೇಕ ಪೌರರೂ ವ್ಯಾಪಾರಿಗಳೂ ಇತರರೂ ಹೊರಟರು.

ದಾರಿಯಲ್ಲಿ ಕೌರವ ಹಲವು ಗೊಲ್ಲರ ಹಳ್ಳಿಗಳನ್ನು ಸಂದರ್ಶಿಸಿ ಗೊಲ್ಲರ ಗಾನ ನೃತ್ಯಗಳನ್ನು ನೋಡಿ ನಲಿದು ಅವರಿಗೆ ಯಥೋಚಿತವಾದ ಪಾರಿತೋಷಕಗಳನ್ನಿತ್ತು ದ್ವೈತವನವನ್ನು ಪ್ರವೇಶಿಸಿ ಪಾಂಡವರಿದ್ದ ಸ್ಥಳಕ್ಕೆ ಹತ್ತಿರದಲ್ಲಿಯೇ ಬೀಡು ಬಿಟ್ಟು ಪಾನ ಭೋಜನಾದಿಗಳಾದ ಮೇಲೆ ಗಾನ ನರ್ತನಗಳ ವ್ಯವಸ್ಥೆಯನ್ನೇ ಮಾಡಿದ. ವಿಹಾರಶೀಲರಾದ ಪೌರರು, ವೇಶ್ಯೆಯರು ಮೊದಲಾದವರು ವಿಶೇಷವಾದ ಕೋಲಾಹಲವನ್ನೇ ನಡೆಸಿದರು. ದ್ವೈತವನದ ಸರೋವರದ ಬಳಿ ಆ ವೇಳೆಗಾಗಲೇ ಬಂದು ಬಿಡಾರ ಮಾಡಿದ್ದ ಚಿತ್ರಸೇನನೆಂಬ ಗಂಧರ್ವನ ಪರಿವಾರದವರಿಗೂ ಕೌರವ ಸೈನಿಕರಿಗೂ ಘರ್ಷಣೆಯೇರ್ಪಟ್ಟು ಕೊನೆಗೆ ಅದು ಕದನದಲ್ಲಿ ಪರ್ಯವಸಾನಗೊಂಡಿತು. ದುರ್ಯೋಧನನ ಆಜ್ಞೆಯಂತೆ ಸಹಸ್ರಸಂಖ್ಯೆಯ ಸೈನಿಕರು ಗಂಧರ್ವರನ್ನು ಹಿಡಿದು ಮರ್ದಿಸತೊಡಗಿದರು. ಆಗ ಸ್ವಯಂ ಚಿತ್ರಸೇನನೇ ರಂಗಕ್ಕಿಳಿದು ಕಾಳಗವನ್ನಾರಂಭಿಸಲು ಕರ್ಣನಂಥ ಮಹಾವೀರರೂ ಅಂಜಿ ಆತುರದಿಂದ ವಿಕರ್ಣನ ರಥಕ್ಕೆ ಹಾರಿ ರಣರಂಗದಿಂದ ದಾಟಿಕೊಂಡ. ಗಂಧರ್ವರ ಹೊಡೆತಕ್ಕೆ ತಾಳಲಾರದೆ ಸಮಸ್ತ ಕೌರವಬಲವೂ ರಣರಂಗದಿಂದ ಪಲಾಯನ ಮಾಡತೊಡಗಿತು. ದುರ್ಯೋಧನ ಯುದ್ಧದಲ್ಲಿ ವಿರಥನಾಗಿ ನೆಲಕ್ಕೆ ಬಿದ್ದ. ಆಗ ಚಿತ್ರಸೇನನ ಅಪ್ಪಣೆಯಂತೆ ಗಂಧರ್ವರು ದುರ್ಯೋಧನ, ದುಶ್ಶಾಸನ ಮೊದಲಾದವರನ್ನೂ ಸಮಸ್ತ ರಾಜಪತ್ನಿಯರನ್ನೂ ಸೆರೆಹಿಡಿದು ಕರೆದೊಯ್ದರು. ಪಾಂಡವರಿಗೆ ಪೀಡೆಯಂಟುಮಾಡಲು ಹೊರಟವರಿಗೆ ಗಂಧರ್ವರಿಂದ ಪೀಡೆಯೊದಗಲು ಅದರ ಪರಿಹಾರಕ್ಕಾಗಿ ಕೌರವ ಪರಿವಾರದವರನೇಕರು ಪಾಂಡವರಲ್ಲಿಗೇ ಹೋಗಿ ಮೊರೆಯಿಡುವಂತಾಯಿತು.

ಕೌರವರಿಗೊದಗಿದ ಸಂಕಟವನ್ನು ಕೇಳಿದಾಗ ಭೀಮಸೇನನಿಗೆ ಅಂತಹ ದುಃಖವೇನೂ ಆಗಲಿಲ್ಲ. ನಾವೇ ಮಾಡಬೇಕಾದ ಕೆಲಸವನ್ನು ಗಂಧರ್ವರೇ ಮಾಡಿದರು. ಇದರಿಂದ ಲೋಕದಲ್ಲಿ ನಮಗೂ ಮಿತ್ರರಿದ್ದಾರೆಂದು ತಿಳಿದಂತಾಯಿತು–ಎಂದುಬಿಟ್ಟ. ಆದರೆ ಯಧಿಷ್ಠಿರ ಅದಕ್ಕೆ ಒಪ್ಪದೆ ತಮ್ಮ ಬಂಧುಗಳೂ ಅವರ ಹೆಂಡಿರೂ ಅನ್ಯರ ಸೆರೆಯಾಗಿರುವಾಗ ತಾವು ಸುಮ್ಮನಿರುವುದು ಸರಿಯಲ್ಲವೆಂದೂ, ಕೂಡಲೇ ಹೋಗಿ ಅವರನ್ನು ಬಿಡಿಸಬೇಕೆಂದೂ ಹೇಳಿ ತಮ್ಮಂದಿರನ್ನು ಒಪ್ಪಿಸಿ ಕಾಳಗಕ್ಕೆ ಹುರಿದುಂಬಿಸಿ ಕಳುಹಿಸಿದ. ದುರ್ಯೋಧನನ ರಥಗಳನ್ನೇ ಬಳಸಿಕೊಂಡು ಭೀಮಾರ್ಜುನ ಹಾಗೂ ನಕುಲಸಹದೇವರು ಗಂಧರ್ವರ ಮೇಲೆ ಕಾಳಗಹೂಡಿದರು. ಇವರ ಹೊಡೆತವನ್ನು ತಾಳಲಾರದೆ ಚಿತ್ರಸೇನ ಮಾಯಾ ಯುದ್ಧವನ್ನು ಆರಂಭಿಸಿದನಾದರೂ ಅರ್ಜುನನ ಶಬ್ದವೇಧಿ ಬಾಣಗಳ ಮುಂದೆ ಅವನ ಆಟ ನಡೆಯದಾಯಿತು. ಆಗ ಚಿತ್ರಸೇನ ಅರ್ಜುನನ ಸಂಗಡ ಮಾತಿಗೆ ತೊಡಗಿ ದೇವೇಂದ್ರನ ಅಪ್ಪಣೆಯಂತೆ ಕೌರವರನ್ನೂ ಅವರ ಹೆಂಡಿರನ್ನೂ ಸೆರೆಹಿಡಿಯಲು ಬಂದೆನೆಂದು ಹೇಳಿ ಅದಕ್ಕೆ ಅವನು ಅಡ್ಡಿ ಬರಬಾರದೆಂದು ಸಲಹೆ ಮಾಡಿದ. ಪಾಪಿಗಳಾದ ಕೌರವರು ಬಿಡುಗಡೆಗೆ ಅರ್ಹರಲ್ಲವೆಂದೂ ಅವರಿಗೆ ಕನಿಕರ ತೋರಬಾರದೆಂದೂ ಚಿತ್ರಸೇನ ಹೇಳಿದರೂ ಲಕ್ಷಿಸದೆ ಧರ್ಮರಾಯನ ಇಚ್ಛೆಗನುಗುಣವಾಗಿ ಕೌರವರನ್ನೂ ಅವರ ಹೆಂಡಿರನ್ನೂ ಕೂಡಲೇ ಬಿಟ್ಟುಬಿಡಬೇಕೆಂದು ಅರ್ಜುನ ವಾದಿಸಿದ. ಆಗ ಚಿತ್ರಸೇನ ಬಂಧಿತರೆಲ್ಲರನ್ನೂ ಕರೆದುಕೊಂಡು ಧರ್ಮರಾಯನ ಬಳಿಗೆ ಬಂದು ನಡೆದ ವೃತ್ತಾಂತವನ್ನೆಲ್ಲ ಬಿನ್ನವಿಸಿದ.

ಧರ್ಮಪುತ್ರ ಚಿತ್ರಸೇನನ ಉಪಕಾರವನ್ನು ಮನ್ನಿಸಿ ಅವನ ಸ್ನೇಹಾಭಿಮಾನಗಳನ್ನು ಪ್ರಶಂಸೆ ಮಾಡಿ ಅವನನ್ನೂ ಅವರ ಪರಿವಾರವನ್ನೂ ಕಳುಹಿಸಿ ಕೊಟ್ಟು ಕೌರವರನ್ನೆಲ್ಲ ಬಿಡುಗಡೆ ಮಾಡಿ ಕೌರವನಿಗೆ ಬುದ್ಧಿ ಹೇಳಿ ಬೀಳ್ಕೊಟ್ಟ. ದುರ್ಯೋಧನ ಧರ್ಮಪುತ್ರನಿಗೆ ಪ್ರಣಾಮವನ್ನು ಮಾಡಿ ನಾಚಿಕೆಪಟ್ಟುಕೊಂಡು ಅಲ್ಲಿಂದ ಹೊರಟುಬಿಟ್ಟ. ಅವನು ಕೈಗೊಂಡ ಘೋಷಯಾತ್ರೆ ದುಸ್ಸಹವಾದ ಅಪಮಾನಕ್ಕೆ ಕಾರಣವಾಯಿತು. ಇದಕ್ಕೆ ಪ್ರೇರಕವಾದ ಕರ್ಣ ಕಾಳಗದಲ್ಲಿ ಸೋತು ಕಣದಿಂದ ಹಿಮ್ಮೆಟ್ಟಿದವ ನಡುದಾರಿಯಲ್ಲಿ ಬಂದು ದುರ್ಯೋಧನನೊಡನೆ ಸೇರಿಕೊಂಡ. ಚಿತ್ರಸೇನನ ದೆಸೆಯಿಂದಾದ ಪರಾಭವದ ವಾರ್ತೆ ಕೇಳಿ ಕರ್ಣನಿಗೂ ವ್ಯಥೆಯಾಯಿತು.

ಅಭಿಮಾನಧನನಾದ ಸುಯೋಧನ ಈ ಘೋರವಾದ ಪರಾಭವವನ್ನು ನುಂಗಿಕೊಂಡು ರಾಜಧಾನಿಗೆ ಹಿಂತಿರುಗಲು ಇಷ್ಟವಿಲ್ಲದೆ ವಿರಕ್ತನಾಗಿ ಪ್ರಾಯೋಪವೇಶ ಮಾಡಲು ನಿರ್ಧರಿಸಿದ. ಕರ್ಣಶಕುನಿಗಳು ಬಹುವಿಧವಾಗಿ ಸಮಾಧಾನ ಹೇಳಿದರೂ ಪ್ರಯೋಜನವಾಗಲಿಲ್ಲ. ಶತ್ರುಪರಾಜಿತನಾದ ತಾನು ಭೀಷ್ಮದ್ರೋಣಕೃಪಾದಿಗಳೆದುರಿಗೆ ನಿಲ್ಲಲು ಮನಸ್ಸೊಪ್ಪದೆ ದುರ್ಯೋಧನ ಅಪಮಾನದಿಂದ ಕುಗ್ಗಿ ಹೋಗಿ ಪ್ರಾಣತ್ಯಾಗಕ್ಕೆ ನಿರ್ಧರಿಸಿಕೊಂಡು ದರ್ಭಾಸನದ ಮೇಲೆ ಕುಳಿತು ನಿಶ್ಚೇಷ್ಟಿತನಾಗಿದ್ದುಬಿಟ್ಟ. ಆ ಸಮಯದಲ್ಲಿ ಹಿಂದೆ ದೇವೇಂದ್ರನಿಂದ ವಿಜಿತರಾಗಿದ್ದ ಅಸುರರು ಅಹಿ ಲೋಕದಲ್ಲಿರುತ್ತ ದುರ್ಯೋಧನನ ಸ್ಥಿತಿಯನ್ನು ಅರಿತು ಅವನನ್ನು ತಮ್ಮಲ್ಲಿಗೆ ಕರೆತರುವಂತೆ ಒಬ್ಬ ಕೃತ್ಯೆಯನ್ನು ಕಳುಹಿಸಿದರು. ಆಕೆ ಸುಯೋಧನನನ್ನು ರಸಾತಳಕ್ಕೆ ಎತ್ತಿಕೊಂಡು ಹೋಗಿ ಆ ದೈತ್ಯರಿಗೆ ಒಪ್ಪಿಸಿದಳು.

ಆ ದೈತ್ಯರು ದುರ್ಯೋಧನನನ್ನು ಪ್ರೀತಿಯಿಂದ ಸ್ವಾಗತಿಸಿ ಧೈರ್ಯ ಹೇಳುತ್ತ "ನೀನು ಭೂಮಿಯ ಮೇಲೆ ಹುಟ್ಟುತ್ತಲೇ ನಿನಗೆ ಸಹಾಯ ಮಾಡುವುದಕ್ಕೆಂದು ನಾನಾ ವಿಧ ದೈತ್ಯಗಣದವರು ರಾಜಕುಲಗಳಲ್ಲಿ ಹುಟ್ಟಿದ್ದಾರೆ. ಭಗದತ್ತನೇ ಮೊದಲಾದ ದೈತ್ಯ ವೀರರಂತೂ ಅರಿವಿಧ್ವಂಸಕರಾಗಿದ್ದಾರೆ. ನಿನಗೆ ಅರ್ಜುನನ ದೆಸೆಯಿಂದ ಭೀತಿಯಿರಬಹುದು. ಆದರೆ ಅಂಜಬೇಡ. ಕೇಳು, ಕೃಷ್ಣನಿಂದ ಸತ್ತ ನರಕಾಸುರನ ಅಂಶ ಕರ್ಣನನ್ನು ಹೊಕ್ಕಿದೆ. ಅವನು ಕೃಷ್ಣಾರ್ಜುನರ ಮೇಲೆ ಬದ್ಧವೈರನಾಗಿ ಹೋರಾಡುತ್ತಾನೆ, ಮುಂದಿನ ಯುದ್ಧದಲ್ಲಿ ನಿನಗೆ ಜಯ ಖಂಡಿತ" –ಎಂದು ಅಭಯ ನೀಡಿ ಆದರಪೂರ್ವಕವಾಗಿ ಬೀಳ್ಕೊಟ್ಟರು. ಮತ್ತೆ ಕೃತ್ಯೆ ಸುಯೋಧನನನ್ನು ರಸಾತಳದಿಂದ ಹೊತ್ತು ತಂದು ಮೊದಲಿನ ಸ್ಥಾನದಲ್ಲಿ ಬಿಟ್ಟಳು.

ಇಷ್ಟೆಲ್ಲ ನಡೆಯುವ ವೇಳೆಗೆ ಬೆಳಗಾಯಿತು. ದುರ್ಯೋಧನ ಇದೆಲ್ಲ ಸ್ವಪ್ನದಲ್ಲಿ ನಡೆದುದೆಂದು ಭಾವಿಸಿ ಕುಳಿತಿರಲು ಕರ್ಣಶಕುನಿಗಳು ಮತ್ತೆ ಬಂದು ಅವನನ್ನು ಹಲವು ಬಗೆಯಿಂದ ಸಂತೈಸಿ ಹಸ್ತಿನಪುರಕ್ಕೆ ಕರೆದುಕೊಂಡು ಹೋದರು. ಮಾನಭಂಗಕ್ಕೆ ನೊಂದ ಸುಯೋಧನ ದೈತ್ಯರ ಪ್ರೋತ್ಸಾಹವಾಕ್ಯಗಳಿಂದಲೂ ಮುಂದೆ ಲಭಿಸಬಹುದಾದ ಅಂತ್ಯಜಯದ ಆಸೆಯಿಂದಲೂ ಜೀವ ಹಿಡಿದುಕೊಂಡು ರಾಜಧಾನಿಗೆ ಹಿಂತಿರುಗಿದ.

(ಕೆ.ವಿ.ಇ.)

**ಘ್ರಾಣಮಂಡಲ :** ವಾಸನೆಯನ್ನು ಗ್ರಹಿಸಿಬಳಿಕ ಅದನ್ನು ನರಗಳ ಮೂಲಕ ಮಿದುಳಿಗೆ ರವಾನಿಸಿ ಅಲ್ಲಿ ಅದರ ಅನುಭವವನ್ನು ಉಂಟುಮಾಡುವ ವ್ಯವಸ್ಥೆ (ಆಲ್‌ಫ್ಯಾಕ್ಟರಿ ಸಿಸ್ಟಮ್). ಇದರಲ್ಲಿ ಮೂಗು, ಘ್ರಾಣೇಂದ್ರಿಯದ ನರಮಾರ್ಗ ಮತ್ತು ಮಿದುಳು ಸೇರಿವೆ. ಮೂಗಿನ ಹೊಳ್ಳೆಗಳ ಲೋಳೆಪೊರೆಯ ಶಿರೋಭಾಗ ಘ್ರಾಣಸಂಬಂಧಿ ಲೋಳೆಪೊರೆ ಯಿಂದ ಆವೃತವಾಗಿ ವಾಸನೆಯನ್ನು ಗ್ರಹಿಸಲು ಸಹಾಯಕವಾಗಿದೆ; ತಳಭಾಗ ಉಸಿರಾಟದ




**ಚಿತ್ರ 1. ಬಲಮೂಗಿನ ಹೊಳ್ಳೆಯ ಹೊರಭಿತ್ತಿ : 1. ಮಧ್ಯದ ನಾಳಮಾರ್ಗ, 2. ಮಧ್ಯದ ಅಧೋಮುಖ ಶಂಕ್ವಾಕಾರದ ಮೂಳೆ, 3. ಹಂದರದಂತಿರುವ ಎತ್‌ಮಾಯಿಡ್ ಮೂಳೆಯ ಭಾಗ, 4. ಶಿರೋನಾಳ ಮಾರ್ಗ, 5. ಶಿರೋಭಾಗದ ಅಧೋಮುಖ ಶಂಕ್ವಾಕಾರದ ಮೂಳೆ, 6. ಸ್ಫೀನೋ ಎತ್‌ಮಾಯಿಡ್ ಆವರಣ ಮತ್ತು ಎಲ್ಲಕ್ಕಿಂತ ಮೇಲಿರುವ ಅಧೋಮುಖ ಶಂಕ್ವಾಕಾರದ ಮೂಳೆ, 7. ಸ್ಫೀನಾಯಿಡಲ್ ವಾಯುಕೋಶ, 8. ಅಂಗುಳ, 9. ಯೂಸ್ಟೇಕಿಯಸ್ಸನ ನಾಳ, 10. ಕೆಳಗಿನ ಅಧೋಮುಖ ಶಂಕ್ವಾಕಾರದ ಮೂಳೆ, 11. ಕೆಳಗಿನ ನಾಳಮಾರ್ಗ, 12. ಮೇಲ್ದವಡೆ, 13. ಮೂಗಿನ ಹೊಳ್ಳೆ, 14. ಮಧ್ಯನಾಳಮಾರ್ಗದ ಅಂಗುಳ, 15. ಮುಂದಲೆ ಮೂಳೆಯ ವಾಯುಕೋಶ**

ಮಾರ್ಗ. ಮೂಗಿನ ಹೊರ ಮೇಲ್ಭಾಗದ ಆಕಾರ ಮೂಳೆಯಿಂದ ಒದಗಿದರೆ, ಕೆಳಭಾಗದ ಆಕಾರ ಮೃದ್ವಸ್ಥಿಯಿಂದ ಒದಗುತ್ತದೆ. ಹೊಳ್ಳೆಗಳ ಪಕ್ಕದ ಕೆಳಭಾಗ ಕೇವಲ ಚರ್ಮದಿಂದ ಆಗಿದ್ದು ಚರ್ಮದ ಮಧ್ಯದಲ್ಲಿರುವ ತಂತುಗಳೊಂದಿಗೆ ಕೊಬ್ಬಿನ ಅಂಶವೂ ಸೇರಿಕೊಂಡಿದೆ. ಎಡ ಮತ್ತು ಬಲ ಮೂಗಿನ ಹೊಳ್ಳೆಗಳು ಒಂದು ನಡುತಡಿಕೆಯಿಂದ ಬೇರ್ಪಟ್ಟಿವೆ. ಇದರ ಕೆಳಭಾಗವನ್ನು ಗೊಂಚಲಿನಂತಿರುವ ಗ್ರಂಥಿಗಳು ಮತ್ತು ಅಧಿಕ ರಕ್ತನಾಳಗಳನ್ನು ಒಳಗೊಂಡಿರುವ ಲೋಳೆಪೊರೆ ರೂಪಿಸಿವೆ. ನಡುತಡಿಕೆಯ ಮೇಲಿನ ಭಾಗ ಜರಡಿಯಂಥ ಮೂಳೆಯಿಂದಲೂ (ಇದರ ಹೆಸರು ಎತ್‌ಮಾಯಿಡ್ ಬೋನ್) ಇದರ ಕೆಳಗೆ ವೋಮರ್ ಎಂಬ ಹೆಸರಿನ ಮೂಳೆಯಿಂದಲೂ ಮುಂದಿನ ಭಾಗ ತಡಿಕೆಯ ಮೃದ್ವಸ್ಥಿಯಿಂದಲೂ ಆಗಿವೆ. ಮೂಗಿನ ಹೊಳ್ಳೆಗಳ ಪಕ್ಕದ ಗೋಡೆಗಳ ಭಾಗವು, ಅಧೋಮುಖ ಶಂಕ್ವಾಕಾರದ ಮೂಳೆಗಳಿಂದ, ಮೂರು ನಾಲೆಗಳಾಗಿ ವಿಭಾಗಗೊಂಡಿದೆ. ಈ ಮೂಳೆಗಳಿಗೆ ಕಾಞ್ಚಗಳೆಂದು ಹೆಸರು. ಮೇಲುಭಾಗದ ಕಾಞ್ಚಕ್ಕೂ ಮೂಗಿನ ಛಾವಣಿಗೂ ನಡುವೆ ಇರುವ ಜಾಗಕ್ಕೆ ಸ್ಫೀನಾಯಿಡ್ ಎಲುಬಿನ ವಾಯುಕೋಶಗಳೊಂದಿಗೆ ಸಂಪರ್ಕ ಉಂಟು. ಈ ಜಾಗವೇ ಸ್ಫೀನೊಎತ್‌ಮಾಯಿಡ್ ಆವರಣ. ಮೇಲಿನ ಮತ್ತು ಮಧ್ಯದ ಕಾಞ್ಚಗಳ ನಡುವೆ ಮೇಲಿನ ನಾಲೆ (ಸುಪೀರಿಯರ್ ಮಿಯೇಟಸ್) ಉಂಟು. ಈ ಜಾಗಕ್ಕೆ ಅದರ ಹಿಂಭಾಗದಲ್ಲಿನ ಎತ್‌ಮಾಯಿಡ್ ಮೂಳೆಯ ವಾಯುಕೋಶಗಳೊಂದಿಗೆ ಸಂಪರ್ಕ ಏರ್ಪಟ್ಟಿದೆ. ಮಧ್ಯದ ಮತ್ತು ಕೆಳಗಿನ ಕಾಞ್ಚಗಳ ನಡುವೆ ಮಧ್ಯನಾಲೆ (ಮಿಡಲ್ ಮಿಯೇಟಸ್) ಉಂಟು. ಮೂರು ನಾಲೆಗಳಲ್ಲಿ ಇದೇ ಅತ್ಯಂತ ದೊಡ್ಡದು. ಇದರಲ್ಲಿ ವೃತ್ತಾಕಾರದ ಉಬ್ಬುಭಾಗವಿದೆ. ಇದೇ ಎತ್‌ಮಾಯಿಡ್ ಕೋಶಗಳ ದಿಣ್ಣೆ. ಇದಕ್ಕೆ ಮೇಲ್ದವಡೆಯ ಡೊಗರಿನೊಂದಿಗೆ (ಮ್ಯಾಕ್ಸಿಲರಿ ಸೈನಸ್) ಮುಂದೆ ಹಾಗೂ ಕೆಳಗೆ ಸಂಪರ್ಕ ಏರ್ಪಟ್ಟಿದೆ. ಕೆಳಗಿನ ನಾಲೆ (ಇನ್‌ಫೀರಿಯರ್ ಮಿಯೇಟಸ್) ಕೆಳಕಾಞ್ಚದ ಕೆಳಗೆ ಉಂಟು. ಇದನ್ನು ಎತ್ತಿ ಹಿಡಿದರೆ ಕವಾಟದಂತಿರುವ ಮೂಗಿನ ಒಳದ್ವಾರ ಗೋಚರವಾಗುವುದು. ಮೂಗಿನ ಛಾವಣಿ ಕಿರಿದಾಗಿದೆ. ಅಲ್ಲಿ ಘ್ರಾಣಕ್ಕೆ ಸಂಬಂಧಿಸಿದ ನರಗಳು ಜರಡಿಯಂತಿರುವ ತೆಳುವಾದ ಮೂಳೆಯ ಮೂಲಕ ಹಾದುಹೋಗಿವೆ.




**ಚಿತ್ರ 2. ಬಲಮೂಗಿನ ಹೊಳ್ಳೆಯ ಹೊರಭಿತ್ತಿ (ಮೂರು ಅಧೋಮುಖ ಶಂಕ್ವಾಕಾರದ ಮೂಳೆಗಳನ್ನು ತೆಗೆದ ಮೇಲೆ) : 1. ಆಲಿಕೆಯಲ್ಲಿ ಬಾಣ, 2. ಅರ್ಧಚಂದ್ರಾಕಾರದ ದ್ವಾರ, 3. ಮೇಲ್ದವಡೆಯ ವಾಯುಕೋಶದ ದ್ವಾರ, 4. ಮಧ್ಯ ಎತ್‌ಮಾಯಿಡಲ್ ಕೋಶದ ದ್ವಾರ, 5. ಹಿಂಭಾಗದ ಎತ್‌ಮಾಯಿಡಲ್ ಕೋಶದ ದ್ವಾರ, 6. ಸ್ಫೀನಾಯಿಡಲ್ ವಾಯುಕೋಶದ ದ್ವಾರದಲ್ಲಿ ಬಾಣ, 7. ಯೂಸ್ಟೇಕಿಯಸ್ಸನ ನಾಳದ ದ್ವಾರ, 8. ನಾಳದ ಉಬ್ಬು, 9. ಗಂಟಲಿನ ಕುಹರ, 10. ಅಧೋಮುಖ ಶಂಕ್ವಾಕಾರ ಮೂಳೆಗಳ ಕೊಯ್ದ ಅಂಚು, 11. ಎತ್‌ಮಾಯ್ಡಿನ ಉಬ್ಬು, 12. ಅಂಗುಳ, 13. ಕೆಳಗಡೆಯ ನಾಳಮಾರ್ಗ, 14. ಎಡ ಮತ್ತು ಬಲ ಮುಂದಲೆ ಮೂಳೆಯ ವಾಯುಕೋಶ**

ಭ್ರೂಣದ ಬೆಳವಣಿಗೆಯ ಮೂರನೆಯ ವಾರದಲ್ಲಿ ತಲೆಭಾಗದ ಮುಂದುಗಡೆಯಲ್ಲಿ ಮೂಗಿನ ಎರಡು ತಗ್ಗುಗಳು ಉಂಟಾಗುತ್ತವೆ. ಘ್ರಾಣೇಂದ್ರಿಯಕ್ಕೆ ಸಂಬಂಧಿಸಿದಂತೆ ಮೂಗಿನ ಬೆಳವಣಿಗೆಯಲ್ಲಿ ಪ್ರಥಮವಾಗಿ ಕಾಣಿಸಿಕೊಳ್ಳುವುದು ಇದೇ. ಇಲ್ಲಿನ ಕೆಲವು ಕೋಶಗಳು ನರಕೋಶಗಳು. ಅವುಗಳ ತಂತುಗಳು ಮಿದುಳಿನ ಘ್ರಾಣ ಭಾಗಕ್ಕೆ ಸಂಪರ್ಕಗೊಂಡು ಘ್ರಾಣೇಂದ್ರಿಯ ನರಗಳಾಗಿ ವ್ಯೂಹಗೊಳ್ಳುತ್ತವೆ. ಮೂಗಿನ ಈ ತಗ್ಗುಗಳ ಮಧ್ಯೆ ದೊಡ್ಡದಾದ ಮಧ್ಯಕ ಲಲಾಟನಾಸಿಕ ಪ್ರಲಂಬ (ಮೀಡಿಯನ್ ಫ್ರಾಂಟೋನೇಸಲ್ ಪ್ರಾಸೆಸ್) ಮುಂದಲೆಯಿಂದ ಕೆಳಮುಖವಾಗಿ ಬೆಳೆಯುತ್ತ ಹೋಗಿ ಮೂಗಿನ ಮೇಲುಭಾಗವಾಗಿಯೂ ಮೂಗಿನ ಮುಂದಿನ ಭಾಗದ ನಡು ತಡಿಕೆಯ ಭಾಗವಾಗಿಯೂ ರೂಪಗೊಳ್ಳುತ್ತದೆ. ಹಾಗೆಯೇ ಪಕ್ಕನಾಸಿಕ ಪ್ರಲಂಬಗಳು (ಲ್ಯಾಟರಲ್ ನೇಸಲ್ ಪ್ರಾಸೆಸಸ್) ಕೆಳಮುಖವಾಗಿ ಬೆಳೆದು ಮೊದಲನೆಯ ಅಂತರ ಅವಯವಗಳ ವೃತ್ತಖಂಡದಿಂದ (ವಿಸರಲ್ ಆರ್ಚ್) ಹೊರಟ ಮೇಲ್ದವಡೆಯ ಆಕೃತಿಯನ್ನು ಸೇರಿಕೊಳ್ಳುತ್ತವೆ. ಹೀಗೆ ಮೂಗಿನ ಹೊಳ್ಳೆಗಳು ಉಂಟಾಗುತ್ತವೆ. ಪ್ರಾರಂಭದಲ್ಲಿ ಒಂದು ತೆಳುಪೊರೆ ಅದನ್ನು ಬಾಯಿಯಿಂದ ಬೇರ್ಪಡಿಸಿರುತ್ತದೆ. ಇದು ಬೇಗ ನಶಿಸಿ ಮೂರು ತಿಂಗಳ ಭ್ರೂಣಾವಸ್ಥೆಯವರೆಗೂ, ಅಂದರೆ ಬಾಯಿಯ ಅಟ್ಟ ಸೃಷ್ಟನೆಯಾಗುವವರೆಗೂ, ಮೂಗು ಬಾಯಿ ಒಂದೇ ಆವರಣದಿಂದ ಕೂಡಿರುತ್ತವೆ. ಮಗು ಹುಟ್ಟುವ ಹೊತ್ತಿಗೆ ಮೂಗಿನ ಹೊಳ್ಳೆಗಳು ಮೇಲಿನಿಂದ ಕೆಳಕ್ಕೆ ಅಷ್ಟು ಆಳವಿಲ್ಲದ್ದಾಗಿರುತ್ತವೆ. ಪ್ರೌಢಾವಸ್ಥೆಯ ಹೊತ್ತಿಗೆ ಅವು ಕ್ರಮೇಣ ಸಾಕಷ್ಟು ಆಳವಾಗುವುವು.

ಸಸ್ತನಿಗಳಲ್ಲಿ ಘ್ರಾಣಗ್ರಾಹಿ ನರಗಳು ಮೂಗಿನ ಹೊಳ್ಳೆಗಳ ಮೇಲಿನ ಭಾಗದಿಂದ ಪ್ರಾರಂಭವಾಗುತ್ತವೆ. ಮನುಷ್ಯನ ಮೂಗಿನ ಒಂದೊಂದು ಹೊಳ್ಳೆಯಲ್ಲೂ ಘ್ರಾಣಕ್ಕೆ ಸಂಬಂಧಪಟ್ಟಂತೆ ಹಳದಿ ವರ್ಣದ ತೆಳು ಪೊರೆ 2.5 ಚ.ಸೆಂ.ಮೀ ನಷ್ಟಿರುತ್ತದೆ. ಈ ಘ್ರಾಣ ಕ್ಷೇತ್ರದಲ್ಲಿ ಸಾವಿರಾರು ಕೋಶಗಳು ಉಂಟು. ಇವು ತೆಳು ಮತ್ತು ಉದ್ದವಾಗಿವೆ.

ಬಹು ಸಂಖ್ಯೆಯ ಮತ್ತು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾದ ಲೋಮಗಳು ಇಲ್ಲಿವೆ. ಇವು ಮೂಗಿನ ಲೋಳೆಪೊರೆಯ ಮೂಲಕ ಹೊರಬಂದಿರುತ್ತವೆ. ವಿಶೇಷ ಸೂಕ್ಷ್ಮದರ್ಶಕದಿಂದ ನೋಡಿದಾಗ ಪ್ರತಿಯೊಂದು ಕೋಶಕ್ಕೂ 6–12 ಘ್ರಾಣಲೋಮಗಳಿರುವುದು ಕಂಡುಬರುತ್ತದೆ. ಕೋಶದ ಬುಡಭಾಗ ಕ್ರಮೇಣ ಕಿರಿದಾಗಿ ಒಂದು ಸೂಕ್ಷ್ಮ ನರದ ಎಳೆಯಾಗುವುದು. ಈ ರೀತಿಯ ಅನೇಕ ಎಳೆಗಳು, ಮೂಗಿನ ಮೇಲು ಭಾಗದ ಜರಡಿಯಂತಿರುವ ಮೂಳೆಯ ಮುಖಾಂತರ ಪ್ರವೇಶಿಸಿ, ಮಿದುಳಿನಲ್ಲಿ ಸಣ್ಣ ಕವಲುಗಳಂತೆ ಹೊರಚಾಚಿಕೊಂಡಿರುವ ಘ್ರಾಣ ಮುಕುಲಗಳಿಗೆ (ಆಲ್‌ಫ್ಯಾಕ್ಟರಿ ಬಲ್ಬುಗಳು) ಸೇರಿಕೊಳ್ಳುತ್ತವೆ. ಅಲ್ಲಿ ಈ ನರಗಳು ಮೈಟ್ರಲ್ ಕೋಶಗಳ ಕವಲುಗಳೊಂದಿಗೆ ಹೆಣೆದುಕೊಳ್ಳುತ್ತವೆ. ಘ್ರಾಣವಾಹಿನಿಯ ಮಾರ್ಗದಲ್ಲಿ ಮೈಟ್ರಲ್ ಕೋಶಗಳು ಎರಡನೆಯ ಮುಖ್ಯಕೊಂಡಿ. ಪ್ರತಿಯೊಂದು ಮೈಟ್ರಲ್ ಕೋಶದಿಂದಲೂ ನರಗಳು ಹೊರಟು ಅವೆಲ್ಲವೂ ಒಟ್ಟಾಗಿ ಘ್ರಾಣೇಂದ್ರಿಯ ವ್ಯೂಹವಾಗುತ್ತವೆ. ಈ ವ್ಯೂಹದ ನರಗಳು ಮಿದುಳಿನ ಪ್ರಿಪೈರಿ ಫಾರಮ್ ಕಾರ್ಟೆಕ್ಸ್‌ಗೆ ಬಂದು ಸೇರುತ್ತವೆ. ಘ್ರಾಣಾನುಭವಕ್ಕೆ ಮಿದುಳಿನ ಈ ಭಾಗವೇ ಸೀಮಿತವೆಂದು ನಂಬಲಾಗಿದೆ.

ವಾಸನೆಯನ್ನು ಉಂಟುಮಾಡುವ ಪದಾರ್ಥಗಳ ಸಣ್ಣ ಕಣಗಳು ಉಸಿರಾಟದ ವಾಯುವಿನೊಂದಿಗೆ ಮೂಗಿನ ಹೊಳ್ಳೆಗಳನ್ನು ಹೊಕ್ಕು ಘ್ರಾಣಕ್ಷೇತ್ರದ ಲೋಳೆಪೊರೆಗೆ ವ್ಯಾಪಿಸುತ್ತವೆ. ವಾಯುವನ್ನು ವೇಗವಾಗಿ ಎಳೆದುಕೊಂಡಾಗ ವಾಸನೆಯ ಕಣಗಳು ಘ್ರಾಣಕ್ಷೇತ್ರವನ್ನು ಹೆಚ್ಚಾಗಿ ತಲುಪಲು ಸಹಾಯವಾಗುತ್ತವೆ. ನೆಗಡಿ ಮುಂತಾದ ರೋಗಗಳು ಕಾಣಿಸಿಕೊಂಡಾಗ ಘ್ರಾಣಕ್ಷೇತ್ರದ ಲೋಳೆಪೊರೆಯಲ್ಲಿ ಉರಿಯೂತ ಕಾಣಿಸಿಕೊಂಡು ಘ್ರಾಣಸಾಮರ್ಥ್ಯ ಕಡಿಮೆ ಆಗುತ್ತದೆ. ಘ್ರಾಣಸಾಮರ್ಥ್ಯ ತೀಕ್ಷ್ಣವಾಗಿರುವಂಥ ನಾಯಿ, ಹುಲಿ, ಬೆಕ್ಕು, ಮೊಲ ಇತ್ಯಾದಿ ಸಸ್ತನಿಗಳಲ್ಲಿ ಘ್ರಾಣಸಂಬಂಧಿ ಮಿದುಳಿನ ಭಾಗ ವಿಶಾಲವಾಗಿದೆ. ಇದು ಮುಂಮಿದುಳಿನ ತಳಭಾಗದ ಅತ್ಯಂತ ಹೆಚ್ಚಿನ ಪ್ರದೇಶವನ್ನು ಆಕ್ರಮಿಸಿಕೊಂಡಿರುತ್ತದೆ ಕೂಡ. ಕಪಿ ಮತ್ತು ಮಾನವರಲ್ಲಿ ಈ ಪ್ರಮಾಣ ಬಲು ಕಡಿಮೆ. ಇವರಲ್ಲಿ ಜೈವಿಕ ಕಾರ್ಯಗಳಿಗೆ ಘ್ರಾಣಾನುಭವಕ್ಕಿಂತ ದೃಷ್ಟಿ ಮತ್ತು ಸ್ಪರ್ಶಾನುಭವಗಳೇ ಹೆಚ್ಚು ಉಪಯೋಗದಲ್ಲಿವೆ.

ಪ್ರಾಣಿಗಳಲ್ಲಿ ಘ್ರಾಣಮಂಡಲ ವಿವಿಧ ರೀತಿಯಲ್ಲಿ ಉಂಟು. ಮೀನುಗಳಿಗಿಂತ ಕೆಳದರ್ಜೆಯ ಲ್ಯಾನ್ಸಿಲೇಟ್ ಎಂಬ ಪ್ರಾಣಿಯಲ್ಲಿ ನರಮಂಡಲದ ಮುಂತುದಿಯಲ್ಲಿ ಲೋಮಗಳಿಂದ ಕೂಡಿದ ಒಂದೇ ಒಂದು ಹಳ್ಳವಿರುತ್ತದೆ. ಬಹುಶಃ ಇದು ಮೂಲಾಂಕುರವಾದ ಘ್ರಾಣಮಂಡಲವಾಗಿರಬಹುದು. ಮುಂದಿನ ವಿಕಾಸ ಸೈಕ್ಲಸ್ಟೋಮುಗಳಲ್ಲಿ ಕಂಡುಬರುತ್ತದೆ. ಹಳ್ಳ ಮೊದಲು ಮುಮ್ಮೈ ಕಡೆಗಿದ್ದು ಅನಂತರ ಬೆನ್ನಿನ ಕಡೆ ಪಿಟ್ಯುಟರಿ ಇಳಿನಾಳಕ್ಕೆ ಸಮಾನವಾದ ದ್ವಾರವುಳ್ಳ ಹಳ್ಳವಾಗಿ ಕಾಣಬರುತ್ತದೆ. ಬಳಿಕ ಇದು ಒಳಗೆ ಎಡಬಲಭಾಗವಾಗಿ ವಿಕಾಸವಾಗುತ್ತದೆ. ಮೀನುಗಳಲ್ಲಿ ಎರಡು ಹೊರಪಕ್ಕದ ಹಳ್ಳಗಳಿದ್ದು ಅವುಗಳ ಹೊಳ್ಳೆಗಳು ತೊರ್ಕೆ (ಶಾರ್ಕ್) ಮತ್ತು ಚಟ್ಟೆ ಮೀನುಗಳಲ್ಲಿ ಮೂತಿಯ ಮುಮ್ಮೈ ಕಡೆಗೂ ಇನ್ನುಳಿದ ಮೀನುಗಳಲ್ಲಿ ಬೆನ್ನಿನ ಕಡೆಗೂ ಇರುತ್ತವೆ. ಮೀನಿನವರೆಗಿನ ಪ್ರಾಣಿಗಳ ವಿಕಾಸ ರೂಪದಲ್ಲಿ ಘ್ರಾಣಮಂಡಲ ಕೇವಲ ತಗ್ಗಿನ ಪ್ರದೇಶದಂತಿರುತ್ತದೆ. ಆದರೆ ಡಿಪ್ನಾಯ್ ಎಂಬ ಮಣ್ಣುಮೀನಿನಲ್ಲಿ ಇದು ಮುಂದುವರಿದು ಈ ತಗ್ಗಿನಿಂದ ಬಾಯಿಯ ಮಾಳಿಗೆಯ ಜಾಗಕ್ಕೆ ಒಂದು ನಾಳವೇರ್ಪಟ್ಟು ಉಸಿರಾಟ ಮತ್ತು ಆಘ್ರಾಣ ಎರಡಕ್ಕೂ ಉಪಯೋಗಿಸಲ್ಪಡುವ ಸಮಾನವಾದ ಅಂಗವಾಗುತ್ತದೆ.

ದ್ವಿಚರಪ್ರಾಣಿಗಳಲ್ಲಿ ಘ್ರಾಣೇಂದ್ರಿಯ ತಲೆಬುರುಡೆಯಲ್ಲೇ ಸೇರಿಸಲ್ಪಟ್ಟು ಉಸಿರಾಟದ ಮತ್ತು ಆಘ್ರಾಣದ ವಿಭಾಗಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಪ್ರಾಣಿಗಳಲ್ಲಿ ಅಧೋಮುಖ ಶಂಕ್ವಾಕಾರಗಳ ಹಾಗೂ ಕಣ್ಣೀರು ಮೂಗಿನೊಳಕ್ಕೆ ಹರಿಯುವ ನಾಳದ ಬೆಳವಣಿಗೆ ಕಂಡುಬರುತ್ತದೆ. ಸರೀಸೃಪ ವರ್ಗಕ್ಕೆ ಸೇರಿದ ಹಲ್ಲಿಗಳಲ್ಲಿ ಘ್ರಾಣ ಮತ್ತು ಉಸಿರಾಟದ ವಿಭಾಗಗಳು ನಿರ್ದಿಷ್ಟವಾಗಿವೆ. ಅಧೋಮುಖ ಶಂಕ್ವಾಕಾರದ ಮೂಳೆಯೊಂದು ಹೊರಪಕ್ಕದ ಗೋಡೆಯಿಂದ ಬೆಳೆದಿರುವುದು ಕಾಣುತ್ತದೆ. ಇದರ ಹತ್ತಿರ ಮೂಗಿನ ಒಂದು ದೊಡ್ಡ ಗ್ರಂಥಿ ಉಂಟು. ಮೊಸಳೆಗಳಲ್ಲಿ ಗಡುಸಾದ ಅಂಗುಳು ಮೂತಿಯ ಉದ್ದಕ್ಕೂ ಬೆಳೆದಿರುವುದರಿಂದ ಮೂಗಿನ ಹೊರದ್ವಾರಕ್ಕೂ ಒಳದ್ವಾರಕ್ಕೂ ಸಾಕಷ್ಟು ಅಂತರವಿದ್ದು ಘ್ರಾಣ ಪ್ರದೇಶದಿಂದ ತಲೆಬುರುಡೆಯ ಮೂಳೆಗಳಿಗೆ ವಾಯುಕೋಶಗಳ ಸಂಪರ್ಕ ಏರ್ಪಟ್ಟಿರುವುದು ಕಾಣಿಸುತ್ತದೆ. ಪಕ್ಷಿಗಳಲ್ಲಿ ಘ್ರಾಣಮಂಡಲ ಸರೀಸೃಪಗಳಲ್ಲಿರುವಂತೆಯೇ ಉಂಟು. ಇದರ ಜೊತೆಗೆ ಉಸಿರಾಟದ ಅವಯವವೂ ಇದ್ದು ಅಧೋಮುಖ ಶಂಕ್ವಾಕಾರದ ಮೂಳೆ ಬೆಳೆದಿರುವುದೂ ಕಾಣಿಸುತ್ತದೆ. ಸಸ್ತನಿಗಳಲ್ಲಿ ಕಂಡುಬರುವ ವಾಸನೆಯ ಜೈವಿಕಕಾರ್ಯ ಪ್ರಾಮುಖ್ಯಕ್ಕೆ ಅನುಸಾರವಾಗಿ ಘ್ರಾಣಮಂಡಲದ ಮೂಗಿನ ಬೆಳವಣಿಗೆ ವಿವಿಧವಾಗಿದೆ. ಬಹು ಸಸ್ತನಿಗಳು ಬೃಹತ್ ವಾಸನಾಗ್ರಾಹಿಗಳು. ಅವುಗಳಲ್ಲಿ ಘ್ರಾಣೇಂದ್ರಿಯದ ಲೋಳೆಪೊರೆ ಹೆಚ್ಚು ಜಾಗವನ್ನು ಆಕ್ರಮಿಸಿರುತ್ತದೆ. ಕಪಿ ಮತ್ತು ಮಾನವರು ಕಿರುವಾಸನಾಗ್ರಾಹಿಗಳಾಗಿರುತ್ತಾರೆ. ಆದರೆ ಹಲ್ಲುಗಳಿರುವ ತಿಮಿಂಗಿಲಗಳಲ್ಲಿ ಘ್ರಾಣೇಂದ್ರಿಯದ ಕುರುಹೇ ಕಾಣಿಸುವುದಿಲ್ಲ. ಇವು ವಾಸನಾಗ್ರಾಹಿಗಳಲ್ಲ. ಬೃಹತ್ ವಾಸನಾಗ್ರಾಹಿ ಸಸ್ತನಿಗಳಲ್ಲಿ ಐದು ಕಾಜ್ಜಗಳಿವೆ. ಹೀಗೆ ಪ್ರಾಣಿಗಳಲ್ಲಿ ವಿಕಾಸ ರೂಪಾಂತರ ಹೊಂದುವಾಗ ಘ್ರಾಣಮಂಡಲದಲ್ಲಿಯೂ ಬದಲಾವಣೆ ಆಗುತ್ತದೆ; ಮನುಷ್ಯನಲ್ಲಿ ಇದರ ಉಪಯೋಗ ಗಣನೀಯವಾಗಿ ಕಡಿಮೆ. (ಎಚ್.ಆರ್.ಡಿ.ಎಚ್.)

**ಘ್ರಾಣ ಮತ್ತು ರುಚಿ :** ಮೂಗಿನಿಂದ ಮತ್ತು ನಾಲಗೆಯಿಂದ ಅನುಕ್ರಮವಾಗಿ ಅನುಭವಕ್ಕೆ ಬರುವ ವಸ್ತುಗುಣಗಳು. ವಾಸನೆಗೂ ರುಚಿಗೂ ನಿಕಟ ಸಂಬಂದ ಉಂಟು. ಆದರೆ ನಮಗೆ ಆಹಾರದ ಪೂರ್ಣವಾದ ಮತ್ತು ಆನಂದದಾಯಕ ಅನುಭವ ಪಡೆಯಲು ಕೇವಲ ಘ್ರಾಣ ರುಚಿಗಳೆರಡೇ ಸಾಲವು. ಜೊತೆಗೆ ನೋಟ ಶಬ್ದಗಳ ಅರಿವು ಸಹ ಬೇಕು. ಸುಗಂಧದ್ರವ್ಯಗಳ ಇಂದ್ರಿಯಾನುಭವದಲ್ಲಿ ಘ್ರಾಣಾಂಶ ಪ್ರಮುಖ. ಕೆಲವು ವಸ್ತುಗಳ ಘ್ರಾಣಾನುಭವಕ್ಕೆ ಸ್ಪರ್ಶಾಂಶವೂ ಅಗತ್ಯ. ಇನ್ನೂ ವಿಚಿತ್ರವೆಂದರೆ ಹಿಂದೆಂದೂ ರುಚಿ ಅನುಭವವಿಲ್ಲದ ಪ್ರಬಲರುಚಿ ಇಲ್ಲದ ಒಂದು ರಾಸಾಯನಿಕ ವಸ್ತುವನ್ನು ಮೊದಲ ಬಾರಿ ರುಚಿ ನೋಡಿದರೆ, ಆ ವಸ್ತುವಿನ ರುಚಿ ಇಂಥದ್ದೇ ಎಂದು ಹೇಳಲು ಕಷ್ಟವಾದೀತು. ವಸ್ತುವಿನ ರಾಸಾಯನಿಕ ರಚನೆಗೂ ರುಚಿಗೂ ಸಂಬಂಧ ಉಂಟು ಎಂದು ತಿಳಿದಿದ್ದರೂ ರುಚಿಯ ಸಂಪೂರ್ಣ ರಾಸಾಯನಿಕ ಹಿನ್ನೆಲೆ ಮಾತ್ರ ಅರ್ಥವಾಗಿಲ್ಲ. ಇದೇ ಘ್ರಾಣಕ್ಕೂ ಅನ್ವಯಿಸುತ್ತದೆ. ನಮ್ಮ ಘ್ರಾಣ ನರತಂತುಗಳ ತುತ್ತತುದಿಯ ಅಂಗಗಳಲ್ಲಿ ಪ್ರಾರಂಭವಾಗುತ್ತದೆ. ಲವಂಗ ಮತ್ತು ಮೆಣಸು ರುಚಿಯೊಂದಿಗೆ ಉರಿಯನ್ನೂ ಉಂಟು ಮಾಡುತ್ತವೆ. ಉರಿ ರುಚಿಗೆ ಸೇರಿದ್ದಲ್ಲ. ಉಪ್ಪು, ಹುಳಿ, ಸಿಹಿ ಮತ್ತು ಕಹಿಗಳು ರುಚಿಗೆ ಸೇರಿದ್ದು. ಉರಿಯಾದರೋ ರಾಸಾಯನಿಕ ಪ್ರಚೋದಿತ. ವಾಸನೆ ಮತ್ತು ರುಚಿಗಳಿಗೆ ರಾಸಾಯನಿಕ ಹಿನ್ನೆಲೆಯಿರುವುದರಿಂದಲೇ ಕೆಳದರ್ಜೆಯ ಜೀವಿಗಳು ತಮಗೆ ಹಿತವಾದ ಪದಾರ್ಥಗಳನ್ನು ಅಂಗೀಕರಿಸಲು ಮತ್ತು ಅಹಿತವಾದವನ್ನು ತ್ಯಜಿಸಲು ಸಾಧ್ಯವಾಗುತ್ತದೆ.

ಘ್ರಾಣ : ಸಸ್ತನಿಗಳಲ್ಲಿ ಘ್ರಾಣಗ್ರಾಹಿಕೋಶಗಳು (ಆಲ್‌ಫ್ಯಾಕ್ಟರಿ ಸೆಲ್ ರಿಸೆಪ್ಟರ್ಸ್) ಮೂಗಿನ ಹೊಳ್ಳೆಗಳ ಮೇಲ್ಭಾಗದಲ್ಲಿ ಅಡಕವಾಗಿವೆ. ಇವು ಘ್ರಾಣ ಪೊರೆಯಲ್ಲಿ ಸುಮಾರು 2–5 ಚದರ ಸೆಂಟಿಮೀಟರಿನಷ್ಟು ಕ್ಷೇತ್ರದ ಮಚ್ಚೆಗಳಲ್ಲಿವೆ.




**ಚಿತ್ರ 1. ಘ್ರಾಣೇಂದ್ರಿಯ**

ಘ್ರಾಣಗ್ರಾಹಿಕೋಶಗಳು ನೀಳವಾಗಿ ತೆಳ್ಳಗಿವೆ. ಇವುಗಳ ತುದಿಗಳಿಂದ, ಸೂಕ್ಷ್ಮ ಕೂದಲಂತಿರುವ ಅನೇಕ ಎಳೆಗಳು. ಮೂಗಿನ ಲೋಳೆಪೊರೆಯಿಂದ ಹಾದು ಹೊರ ಚಾಚುತ್ತವೆ. ಈ ಕೋಶವನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಿ ನೋಡಿದರೆ ಪ್ರತಿ ಕೋಶದಲ್ಲೂ ಸುಮಾರು ನೂರಾರು ಎಳೆಗಳು ಇರುವುದನ್ನು ಕಾಣಬಹುದು. ಈ ಕೋಶಗಳ ಮತ್ತೊಂದು ತುದಿ ಮೊನಚಾಗಿ ಕಡೆಗೆ ನರತಂತುವಾಗಿ ಮಾರ್ಪಟ್ಟು, ಇದೇ ರೀತಿ ಇತರ ಘ್ರಾಣಗ್ರಾಹಿ ಕೋಶಗಳಿಂದ ಹೊರಡುವ ನರತಂತುಗಳೊಂದಿಗೆ ಘ್ರಾಣನರವಾಗಿ ಘ್ರಾಣಮುಕುಲವನ್ನು (ಆಲ್‌ಫ್ಯಾಕ್ಟರಿ ಬಲ್ಬ್) ಸೇರುತ್ತವೆ. ಮಿದುಳಿನ ನೇರಸಂಪರ್ಕವಿರುವ

ನರಗಳಲ್ಲಿ ಒಂದಾದ ಟ್ರೈಜಿಮೈನಲ್ ನರದ ತಂತುಗಳು ಸಹ ಮೂಗಿನ ಹೊಳ್ಳೆ ಹಾಗೂ ಘ್ರಾಣಕ್ಷೇತ್ರದಲ್ಲಿ ಹರಡಿ ಉರಿಯ ಪ್ರಚೋದನೆಯಲ್ಲಿ ಭಾಗವಹಿಸುತ್ತವೆ. ಅತ್ಯಲ್ಪ ವಾಸನೆ ಇಲ್ಲವೇ ಕಿರುಕುಳ ಕೊಡುವಷ್ಟು ಉದ್ರೇಕಿಸುವ ವಾಸನೆಗಳು ಕೂಡ ಟ್ರೈಜಿಮೈನಲ್ ನರತಂತುಗಳ ಹಾಗೂ ಘ್ರಾಣನರತಂತುಗಳ ತುತ್ತತುದಿಯ ಅಂಗಗಳನ್ನು ಪ್ರಚೋದಿಸುತ್ತವೆ. ವಾಸನೆ ಬೀರುವ ಪದಾರ್ಥದ ಅಣುಗಳು ನಾವು ಸಾಧಾರಣವಾಗಿ ಉಸಿರಾಡುವಾಗ ಉತ್ಪತ್ತಿಯಾಗುವ ವಾಯುಸುಳಿಗಳಲ್ಲಿ ಸಿಕ್ಕು ಘ್ರಾಣಕ್ಷೇತ್ರಕ್ಕೆ ಅಪ್ಪಳಿಸುತ್ತವೆ. ಅಣುಗಳು ತುತ್ತತುದಿಯ ಅಂಗಗಳನ್ನು ಮುಟ್ಟಿದ ಕೂಡಲೆ ಅಲ್ಲಿ ಅಲ್ಪ ವಿದ್ಯುತ್ ಪ್ರವಾಹ ಹುಟ್ಟುತ್ತದೆ. ಇದನ್ನು ನರಗಳ ಕಂತೆ ಮಿದುಳಿನಲ್ಲಿರುವ ಘ್ರಾಣಕೇಂದ್ರಕ್ಕೆ ತತ್‌ಕ್ಷಣ ಸಾಗಿಸುತ್ತದೆ. ಈ ಕೇಂದ್ರ ವಿದ್ಯುತ್ ಪ್ರವಾಹವನ್ನು ವಿಘಟಿಸಿ ವಿವಿಧ ವಾಸನೆಗಳಾಗಿ ಗುರುತಿಸುವುದು.

ಕೀಟಗಳಲ್ಲಿ ಗ್ರಾಹಕ ತಂತುಗಳೇ (ಆಂಟೆನ) ಪ್ರಮುಖ ಘ್ರಾಣೇಂದ್ರಿಯ. ದವಡೆ ತುಟಿಗಳ ಸ್ಪರ್ಶಾಂಗಗಳ ನರತಂತುಗಳ ಕೊನೆಯಲ್ಲೂ ಘ್ರಾಣಗ್ರಾಹಿಗಳು ಇರಬಹುದು. ಕೆಲವು ಕೀಟಗಳಲ್ಲಿ ಘ್ರಾಣೇಂದ್ರಿಯ ಚಪ್ಪಟೆಯಾದ ಒಂದರಿಯಂತೆ ಇನ್ನು ಕೆಲವಲ್ಲಿ ಬೆಣೆಯಂತಿರುವ ಸೂಕ್ಷ್ಮ ಕೂದಲಿನ ಎಳೆಯಂತೆ ಕಾಣುತ್ತವೆ. ಈ ಬೆಣೆಗಳ ಮೇಲುಹೊದಿಕೆ (ಕ್ಯೂಟಿಕಲ್) ಕೇವಲ 1/1000 ಮಿಲಿಮೀಟರಿನಷ್ಟು ತೆಳುವಾಗಿದೆ. ಅದರ ಇಕ್ಕಡೆಗಳಲ್ಲೂ ಬಹುತೇಕ ನರತಂತುಗಳುಳ್ಳ ಕೋಶಗಳಿವೆ. ಆದ್ದರಿಂದ ನರಮಂಡಲಕ್ಕೂ ಹೊರಗೆ ಬೀರುವ ವಾಸನೆಗೂ ಮಧ್ಯೆ ಘ್ರಾಣೇಂದ್ರಿಯದ ನಿರ್ಜೀವ ಹೊದಿಕೆ (ಕ್ಯೂಟಿಕಲ್) ಅಡ್ಡ ಉಂಟು. ಈ ಹೊದಿಕೆಯಿಂದ ಲೋಳೆ ಅಥವಾ ಇತರ ಯಾವ ರೀತಿಯ ಸ್ರಾವವೂ ಸ್ರವಿಸುವುದಿಲ್ಲ. ಆದರೂ ವಾಸನೆಗೆ ಅಡ್ಡತಡೆಗಳಿಲ್ಲ. ವಾಸನೆಯ ಅಣುಗಳು ಘ್ರಾಣನರತಂತುಗಳನ್ನು ನೇರವಾಗಿ ಪ್ರಚೋದಿಸುತ್ತವೆ. ಅವು ದ್ರವರೂಪದಲ್ಲಿ ಇರಬೇಕಾದ ಅಗತ್ಯವಿಲ್ಲ ಎಂಬ ವಾದಕ್ಕೆ ಈ ಮೇಲಿನ ಪ್ರಾಯೋಗಿಕ ಅಧ್ಯಯನವೇ ಆಧಾರವೆಂದು ಕೆಲವರ ಅಭಿಪ್ರಾಯ. ಮನುಷ್ಯನಿಗೂ ಅಕಶೇರುಕ ಪ್ರಾಣಿವರ್ಗಕ್ಕೂ ರಚನೆಯಲ್ಲಿ ಅನೇಕಾನೇಕ ವ್ಯತ್ಯಾಸಗಳಿವೆ. ಆದರೂ ಮನುಷ್ಯ ಹಾಗೂ ಕೀಟಗಳಲ್ಲಿ ವಾಸನಾ ಪ್ರಚೋದನೆಯ ಕ್ರಿಯೆ ಬಹುತೇಕ ಒಂದೇ ಎಂದು ಹೇಳಲಾಗಿದೆ. ಕೀಟಗಳ ಮೇಲೆ ನಡೆಸಿರುವ ಪ್ರಯೋಗಗಳು ಮನುಷ್ಯನಿಗೂ ಹೊಂದುತ್ತವೆ. ಕಶೇರುಕ ಪ್ರಾಣಿವರ್ಗದಲ್ಲಿ ಘ್ರಾಣನರತಂತುಗಳು ಘ್ರಾಣಮುಕುಲವನ್ನು ಹೊಕ್ಕು ಅದರಲ್ಲಿ ಒಂದು ರೀತಿಯ ಬುಟ್ಟಿ ಹೆಣಿಗೆಯಂತೆ ಹೆಣೆದುಕೊಂಡಿರುವ ಗ್ಲೋಮರುಲೈ ಎಂಬ ಗೊಂಚಲುಗಳಲ್ಲಿ ಕೊನೆ ಮುಟ್ಟುತ್ತವೆ. ಮೊಲದಲ್ಲಿ ಪ್ರತಿ ಒಂದು ಗ್ಲೊಮರುಲಸ್ ಸುಮಾರು 26,000 ಘ್ರಾಣಗ್ರಾಹಿಗಳಿಂದ (ರಿಸೆಪ್ಟರ್ಸ್) ಘ್ರಾಣ ವಿದ್ಯುತ್ ಸ್ಪಂದನವನ್ನು ಪಡೆದು 24 ಮೈಟ್ರಲ್ ಜೀವಕೋಶಗಳ ಮತ್ತು 68 ಜೀವಕೋಶಗಳ ಕುಚ್ಚಿನ (ಟಫ್ಟ್‌ಸೆಲ್ಸ್) ಮೂಲಕ ಮುಂದಕ್ಕೆ ಸಾಗಿಸುತ್ತದೆ. ಎಡಬಲ ಒಂದೊಂದು ಕಡೆಯಲ್ಲೂ ಸುಮಾರು 60,000 ಮೈಟ್ರಲ್ ಜೀವಕೋಶಗಳಿರುತ್ತವೆಂದು ಅಂದಾಜು ಮಾಡಲಾಗಿದೆ. ಮೈಟ್ರಲ್ ಜೀವಕೋಶದ ಅಕ್ಷತಂತುಗಳು (ಆಕ್ಸೆಸ್ ಫೈಬರ್ಸ್) ಮಿದುಳಿನ ಬುಡದಲ್ಲಿರುವ ಘ್ರಾಣಕೇಂದ್ರವನ್ನು ಘ್ರಾಣಮಾರ್ಗದ ಮೂಲಕ ಸೇರುತ್ತವೆ. ವಾಸನೆಯನ್ನು ಪ್ರಚೋದಿಸಿದಾಗ ಮೂಲ ಘ್ರಾಣಮಾರ್ಗದ ಮೂಲಕ ಸೇರುತ್ತವೆ. ವಾಸನೆಯನ್ನು ಪ್ರಚೋದಿಸಿದಾಗ ಮೂಲ ಘ್ರಾಣನರ, ಘ್ರಾಣಮುಕುಲ, ಘ್ರಾಣಮಾರ್ಗ ಹಾಗೂ ಮಿದುಳಿನ ಪೈರಿಫಾರಮ್ ಹಾಲೆಗಳಲ್ಲಿ ವಿದ್ಯುತ್ ಚಟುವಟಿಕೆಯನ್ನು ಗುರುತಿಸಲು ಸಾಧ್ಯವಾಗಿದೆ. ಘ್ರಾಣಮುಕುಲವನ್ನೇ ಶಸ್ತ್ರಕ್ರಿಯೆಯಿಂದ ತೆಗೆದುಹಾಕಿದರೆ ವಿವಿಧ ವಾಸನೆಗಳನ್ನು ಪತ್ತೆ ಮಾಡಲು ಅಸಾಧ್ಯ. ಘ್ರಾಣಕೇಂದ್ರದ ಕ್ರಿಯೆ ಹೀಗೆಯೇ ಉಂಟು ಎಂದು ಕರಾರುವಾಕ್ಕಾಗಿ ಹೇಳಲು ನಮಗೆ ವಿವರಗಳು ಇನ್ನೂ ತಿಳಿದಿಲ್ಲ.

ಒಂದು ಪದಾರ್ಥ ವಾಸನೆ ಬೀರಬೇಕಾದರೆ ಅದಕ್ಕೆ ಸ್ವಲ್ಪಮಟ್ಟಿಗಾದರೂ ಬಾಷ್ಪಗುಣ ಇರಬೇಕು. ಆದರಿಂದ ಅಣುಗಳು ಹೊರಬಿದ್ದು ವಾಯುಸುಳಿಗಳ ಮೂಲಕ ಮೂಗಿನ ಹೊಳ್ಳೆಗಳಿಗೆ ಪ್ರವೇಶಿಸಬೇಕು. ನೀರಿನಲ್ಲಿಯೂ ಜಿಡ್ಡಿನಲ್ಲಿಯೂ ಕರುಗುವ ವಸ್ತುಗಳಿಗೆ ಅಧಿಕ ವಾಸನೆ ಉಂಟು. ಆದರೆ ವಾಸನೆಯೇ ಇಲ್ಲದ ಇಂಥ ವಸ್ತುಗಳೂ ಇವೆ. ವಾಸನೆ ಬೀರುವ ಪದಾರ್ಥಗಳ ಭೌತ ಅಥವಾ ರಾಸಾಯನಿಕ ವೈಶಿಷ್ಟ್ಯಗಳೇನೆಂಬುಂದು ಇನ್ನೂ ತಿಳಿದಿಲ್ಲ. ರಾಸಾಯನಿಕ ಧಾತುಗಳಲ್ಲಿ ಕೇವಲ ಏಳು ವಸ್ತುಗಳಿಗೆ ಮಾತ್ರ ವಾಸನೆ ಉಂಟು. ಫೊರೀನ್, ಕ್ಲೋರೀನ್, ಬ್ರೋಮೀನ್, ಅಯೋಡೀನ್, ಓಝೋನ್ ರೂಪದಲ್ಲಿರುವ ಆಕ್ಸಿಜನ್, ರಂಜಕ ಹಾಗೂ ಆರ್ಸೆನಿಕ್, ವಾಸನೆ ಬೀರುವ ರಾಸಾಯನಿಕಗಳಲ್ಲಿ ಅನೇಕವು ಆರ್ಗ್ಯಾನಿಕ್ ಗುಂಪಿಗೆ ಸೇರಿದವು. ಬಹುಶಃ ರಾಸಾಯನಿಕ ವ್ಯವಸ್ಥೆ, ರೂಪ, ಅಣುಗಳು ಇತ್ಯಾದಿ ಅವುಗಳಿಂದ ಬರುವ ವಾಸನೆಗೆ ಕಾರಣವಾಗಿದೆ.

ಅತ್ಯಂತ ಅಲ್ಪಪ್ರಮಾಣದ ವಾಸನೆಯೂ ಘ್ರಾಣಕೇಂದ್ರವನ್ನು ಚೋದಿಸಬಲ್ಲದು. ರುಚಿಗಿಂತ ಘ್ರಾಣಸಕ್ತಿ 10,000 ಪಾಲಿನಷ್ಟು ಸೂಕ್ಷ್ಮ. ವಾತಾವರಣದ ಉಷ್ಣತೆಯೂ ಆವಿಯ ಸಾಂದ್ರತೆಯೂ ವಾಸನೆಯ ಗುಣಮಟ್ಟವನ್ನು ನಿರ್ಧರಿಸಬಲ್ಲವು. ಉದಾಹರಣೆಗೆ, ಸುಗಂಧದ್ರವ್ಯಗಳನ್ನು ತಯಾರಿಸುವಾಗ ಅವು ಸುಲಭವಾಗಿ ವಾಸನೆ ಬೀರಿ ಅಲ್ಪಕಾಲದಲ್ಲೇ ಅಳಿದು ಹೋಗಬೇಕೇ ಅಥವಾ ಸ್ವಲ್ಪ ಕಾಲ ಇದ್ದು ತರುವಾಯ ಇಲ್ಲದಂತಾಗಬೇಕೇ ಎಂಬುದನ್ನು ನಿರ್ಧರಿಸಿ ಸೂಕ್ತ ವಸ್ತುಗಳೊಂದಿಗೆ ಸುಗಂಧಗಳನ್ನು ಬೆರೆಸುತ್ತಾರೆ. ಆಲ್ಕೊಹಾಲ್ ಜೊತೆಗೆ ಬೆರೆಸಿದರೆ ಅದರ ಬಾಷ್ಪಶೀಲ ಗುಣದಿಂದಾಗಿ ವಾಸನೆ ಜಾಗ್ರತೆ ಮಾಯವಾಗುತ್ತದೆ. ನೀರಿನೊಂದಿಗೆ ಅತ್ಯಲ್ಪ ಪ್ರಮಾಣದಲ್ಲಿ ಇಂಡೋಲ್ ಸೇರಿಸಿ ದ್ರವ್ಯಗಳನ್ನು ಬೆರೆಸಿದರೆ ದೀರ್ಘಕಾಲ ವಾಸನೆ ಉಳಿಯಲು ಅವಕಾಶ ಉಂಟು (ಕ್ಲಿಂಗಿಂಗ್ ಓಡರ್).

ಯಾವುದಾದರೂ ರಾಸಾಯನಿಕ ಅಥವಾ ಕಂಪು ಬೀರುವ ಕಾರ್ಖಾನೆಗೆ ಭೇಟಿ ಕೊಟ್ಟರೆ ಮೊಟ್ಟ ಮೊದಲು ವಾಸನೆ ಬಂದು ನಮಗೆ ಅಪ್ಪಳಿಸಿ ಮೂಗು ಮುಚ್ಚಿಕೊಳ್ಳುವಂತೆ ಮಾಡುತ್ತದೆ. ಆದರೆ ಸ್ವಲ್ಪ ಕಾಲದ ಬಳಿಕ ಈ ವಾಸನೆಯ ಅನುಭವವೇ ಮಾಯವಾಗಿ ಹೋಗುವುದು. ನೀಲಗಿರಿ ತೈಲದ ವಾಸನೆ ಮೂಸಿ ತರುವಾಯ ಕರ್ಪೂರವನ್ನು ಮೂಸಿದರೆ ಇದರ ವಾಸನೆಯನ್ನು ಗುರುತಿಸುವುದು ಕಷ್ಟವಾದೀತು. ಸಾವಿರಾರು ರೀತಿಯ ವಾಸನೆಗಳಿವೆ. ಅವೆಲ್ಲವನ್ನೂ ವರ್ಗೀಕರಿಸುವುದು ಸಾಧ್ಯವಾಗಲಾರದಾದರೂ ಕೆಲವು ವಾಸನೆಗಳು ಮಾತ್ರ ಪ್ರಧಾನವಾಗಿರಬೇಕೆಂಬ ಅಂಶ ಮನನವಾಗಿದೆ. ವಾಸನೆಗಳ ವರ್ಗೀಕರಣ ವ್ಯಕ್ತಿಯ ಅನುಕೂಲತೆಗೆ ಸೇರಿದ್ದು. ಹೆನ್ನಿಂಗ್ ಎಂಬಾತ ಸುಮಾರು 400ಕ್ಕೂ ಅಧಿಕ ಸಂಖ್ಯೆಯ ವಾಸನೆಗಳ ವಿಚಾರವಾಗಿ ಮನುಷ್ಯರ ಮೇಲೆ ಪ್ರಯೋಗಿಸಿ ಅಧ್ಯಯನ ಮಾಡಿದ್ದಾನೆ. ಆತ ವಾಸನೆಯನ್ನು ಆರು ಗುಂಪುಗಳಾಗಿ ವಿಂಗಡಿಸಿದ : ಹಣ್ಣು, ಹೂ, ಹೊಲಸು, ರಾಳ, ಸಂಬಾರ, ಸೀದ (ಸುಟ್ಟ) ಪದಾರ್ಥಗಳ ವಾಸನೆಗಳು. ಒಂದು ವಾಸನೆಗೂ ಮತ್ತೊಂದಕ್ಕೂ ಇರುವ ಮೂಲ ಸಂಬಂಧವನ್ನು ಚಿತ್ರ (2)ರಲ್ಲಿ ತೋರಿಸಿದೆ.

ವಿದ್ಯುತ್‌ಶರೀರ ಕ್ರಿಯಾ (ಎಲೆಕ್ಟ್ರೊ ಫಿಸಿಯಾಲಾಜಿಕಲ್) ವಿಧಾನವನ್ನು ಬಳಸಿಕೊಂಡು ವಿವಿಧ ವಾಸನೆಗಳ ಗುಣವಿಶೇಷಗಳ ಜ್ಞಾನಚೋದನೆಯ ಅಧ್ಯಯನ ನಡೆದಿದೆ. ಎಲೆಕ್ಟ್ರೋಡುಗಳನ್ನು ಮುಕುಲಕ್ಕೆ ಚುಚ್ಚಿ ಘ್ರಾಣಮುಕುಲದ ವಿದ್ಯುತ್ ಚಟುವಟಿಕೆಗಳನ್ನು ಪರಿಶೀಲಿಸಬಹುದು. ಈ ಚಟುವಟಿಕೆಗಳು ಎರಡು ವಿಧ : ಒಂದು, ಅಲೆಯೋಪಾದಿಯಲ್ಲಿ ಮುಕುಲದ ಹೊರ ಭಾಗದಿಂದ ಬರುವ ಅನುಕ್ರಿಯೆ (ರೆಸ್ಪಾನ್ಸ್) ; ಎರಡು, ಮೈಟ್ರಲ್ ಜೀವಕೋಶಗಳನ್ನು ಚೋದಿಸಿದರೆ ಹೊರಬೀಳುವ ವಿದ್ಯುತ್ಪ್ರವಾಹ. ಮೊಲದ ಘ್ರಾಣ ಮುಕುಲದ ಮುಂಭಾಗ ಅಥವಾ ಬಾಯಿ ಕಡೆಗಿರುವ ಭಾಗ ನೀರಿನಲ್ಲಿ ಕರಗುವ ವಸ್ತುಗಳ ವಾಸನಾ ದ್ರವ್ಯಗಳಿಂದ ಹೆಚ್ಚು ಪ್ರಚೋದಿತ ವಾಗುತ್ತದೆ. ಇಷ್ಟೇ ಅಲ್ಲದೆ ಒಂದೇ ಒಂದು ಮೈಟ್ರಲ್ ಜೀವಕೋಶದ ಅಂಶವನ್ನು ಪ್ರಚೋದಿಸಲು ಸಾಧ್ಯವಾಗದಷ್ಟು ಸೂಕ್ಷ್ಮವಾದ ಎಲೆಕ್ಟ್ರೋಡನ್ನು ಉಪಯೋಗಿಸಿ ಪ್ರಚೋದಿಸಿದ ಸಂದರ್ಭಗಳಲ್ಲಿ ಬೇರೆಬೇರೆ ಮೈಟ್ರಲ್ ಜೀವಕೋಶಗಳು ವಿವಿಧ ವರ್ಗಕ್ಕೆ ಸೇರಿದ ರಾಸಾಯನಿಕಗಳಿಂದ ಪ್ರಚೋದಿತವಾಗುವುದು ಕಂಡುಬಂದಿತು.



ಚಿತ್ರ 2

ಇತ್ತೀಚಿನವರೆಗೂ ವಿವಿಧ ಪದಾರ್ಥಗಳ ರಾಸಾಯನಿಕ ಧಾತು ವೈವಿಧ್ಯವೇ ಅವುಗಳ ವಿವಿಧ ವಾಸನೆಗಳಿಗೆ ಕಾರಣವಿರಬೇಕೆಂದು ತಿಳಿಯಲಾಗಿತ್ತು. ಆದರೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಅಮೂರ್ ಎಂಬ ವಿಜ್ಞಾನಿ ಇದು ಬೇರೆ ಕಾರಣದಿಂದ ಎಂದು ತೋರಿಸಿದ್ದಾನೆ. ಪ್ರಧಾನ ವಾಸನೆಗಳು ಯಾವುದೆಂದು ಗೊತ್ತಾದರೆ ವಾಸನೆಯ ರಹಸ್ಯವನ್ನು ಭೇದಿಸಿದಂತೆ ಎಂದು ಆತನ ಅಭಿಪ್ರಾಯ. ಅಮೂರ್ ಸುಮಾರು 600 ಘ್ರಾಣಸಂಯುಕ್ತಗಳನ್ನು ಆಯ್ದು ಅವು ಬೀರುವ ವಾಸನೆಗಳಲ್ಲಿ ಯಾವ ನಿರ್ದಿಷ್ಟ ವಾಸನೆಗಳು ಅತ್ಯಧಿಕ ವಸ್ತುಗಳಲ್ಲಿ ಪುನರಾವರ್ತಿಸುವುದೆಂಬುದನ್ನು ಹುಡುಕಿ ನೋಡಿದ. ಏಳು ವಾಸನೆಗಳು ಪ್ರಧಾನ ಘ್ರಾಣಗಳೆಂಬುದು ಅವನ ತೀರ್ಮಾನ. ಅವು ಕರ್ಪೂರ, ಕಸ್ತೂರಿ, ಹೂ, ಪೆಪ್ಪರ್‌ಮಿಂಟ್ ಅಥವಾ ಪುದಿನ ಸೊಪ್ಪು, ಕ್ಲೋರೋಫಾರಮ್, ಘಾಟಿನಿಂದ ಕೂಡಿದವು. ಕೊಳೆತವುಗಳ ಹೊಲಸು ನಾತ. ಈ ವಾಸನೆಗಳ ರಹಸ್ಯವೇನು? ಪ್ರಾಚೀನ ಗ್ರೀಸಿನ ಮಹಾದಾರ್ಶನಿಕರಲ್ಲಿ ಒಬ್ಬನಾದ ಉಕ್ರಿಷಿಯಸ್ ವಸ್ತುಗಳ ವಾಸನೆ ಅವುಗಳ ಅಣುಗಳ ಗಾತ್ರ ಮತ್ತು ಆಕಾರವನ್ನು ಅವಲಂಬಿಸಿದೆ ಎಂಬ ವಾದವನ್ನು ಸುಮಾರು 2000 ವರ್ಷಗಳ ಹಿಂದೆಯೇ ಮಂಡಿಸಿದ್ದ. ಕರ್ಪೂರದ ವಾಸನೆಯನ್ನು ಹೋಲುವ ಸಂಯುಕ್ತಗಳನ್ನೆಲ್ಲ

ವಿವಿಧ ಸೂಕ್ಷ್ಮದರ್ಶಕೀಯ ಪರೀಕ್ಷೆಗಳಿಗೆ ಒಳಪಡಿಸಿ ಪರಿಶೀಲಿಸಿದಾಗ ಅವುಗಳ ಗೋಳಾಕಾರದ ಅಣುಗಳಾಗಿದ್ದುವು. ಅವುಗಳ ಗಾತ್ರವೆಲ್ಲ ಹೆಚ್ಚು ಕಡಿಮೆ ಸಮನಾಗಿದ್ದವು. ಅವೆಲ್ಲ ಸುಮಾರಾಗಿ ಒಂದು ಸೆಂಟಿಮಿಟರಿನ ಕೋಟ್ಯಂಶದಷ್ಟು ವ್ಯಾಸದ ಗೋಲಿಗಳಾಗಿದ್ದುವು. ಕಸ್ತೂರಿವಾಸನೆ ಇರುವ ಸಂಯುಕ್ತಗಳ ಅಣುಗಳೆಲ್ಲ ಮೊಟ್ಟೆಯಾಕಾರದ ಅಣುಗಳಾಗಿ ಕಂಡುಬಂದಿದೆ. ಗುಲಾಬಿ, ಮಲ್ಲಿಗೆಯಂತಹ ಸುವಾಸನಾದ್ರವ್ಯ ಸಂಯುಕ್ತಗಳ ಅಣುಗಳ ಆಕಾರ ಬಾಲಕಟ್ಟಿರುವ ಗುಂಡು ಗಾಳೀಪಟವನ್ನು ಹೋಲುತ್ತದೆ. ಪುದಿನದ ವಾಸನೆ ಕೊಡುವ ಅಣುಗಳಿಗೆ ಬೆಣೆ ಆಕಾರ ಉಂಟು. ಕ್ಲೊರೋಫಾರಮ್ ವಾಸನೆ ಬೀರುವ ದ್ರವ್ಯಗಳ ಅಣುಗಳು ಗುಂಡು ಕಂಬಿ ಅಥವಾ ತಂತಿಯ ಆಕಾರವೆಂದು ತಿಳಿದಿದೆ. ನಮ್ಮ ಮೂಗು ಈ ಅಣುಗಳನ್ನು ಹೇಗೆ ಗುರುತಿಸುತ್ತದೆ? ಗುರುತು ಹಚ್ಚಲು ಗಾತ್ರ ಮತ್ತು ಆಕಾರ ಮುಖ್ಯ. ಮೂಗಿನ ಘ್ರಾಣ ಮುಕುಲದ ಮೈಮೇಲೆ ಲಕ್ಷಾಂತರ ಗುಳಿಗಳಿವೆ. ಇವುಗಳಲ್ಲಿ ಕೆಲವು ಅರ್ಧಗೋಳಾಕಾರ (ಬಾಣಲೆಯಂತೆ) ಇವೆ. ಇವುಗಳ ಅಗಲ ಒಂದು ಸೆಂಟಿಮೀಟರಿನ ಕೋಟ್ಯಂಶದಷ್ಟು. ಆಳ ಅದರರ್ಧ. ಈ ಪುಟಾಣಿ ಬಾಣಲೆಗಳಲ್ಲಿ ಅದೇ ಗಾತ್ರದ ಗೋಳಾಣು ಸರಿಯಾಗಿ ಕೂರಬಹುದು. ಆದರೆ ಗೋಳದ ಅರ್ಧಭಾಗ ಮೇಲಿರುತ್ತದೆ. ಹೀಗೆ ಅಣುಗೋಳದಲ್ಲಿ ಹೊಂದಿಕೊಂಡು ಕೂಡಿದ ಒಡನೆ ನಮಗೆ ಕರ್ಪೂರಸದೃಶ ವಾಸನೆಯ ಅನುಭವವಾಗುತ್ತದೆ. ಘ್ರಾಣಮುಕುಲದಲ್ಲಿರುವ ಇತರ ಕೆಲವು ಗುಳಿಗಳು ಅಂಡಾಕಾರದ ತಟ್ಟೆಗಳಂತಿವೆ. ಇವುಗಳಲ್ಲಿ ಅದೇ ಗಾತ್ರದ ಮೊಟ್ಟೆಯಾಕಾರದ ಅಣುಗಳು ಸಲೀಸಾಗಿ ಅಳವಡುವುವು. ಕೂಡಲೇ ನಮಗೆ ಕಸ್ತೂರಿ ವಾಸನೆಯ ಅನುಭವವಾಗುತ್ತದೆ. ಮತ್ತೆ ಕೆಲವು ಗುಳಿಗಳಿಗೆ ಒಂದು ಗುಂಡು ತಟ್ಟೆ, ಆ ತಟ್ಟೆಗೆ ಒಂದು ಉದ್ದವಾದ ಆದರೆ ತಟ್ಟೆಗಿಂತ ಆಳವಾದ ಕಾಲುವೆ ಹಿಡಿ ಜೋಡಿಸಿರುವ ಆಕಾರ ಉಂಟು. ಇಂಥ ಗುಳಿಗಳು ಗಾಳಿಪಟ ಆಕಾರದ ಅಣುಗಳಿಗೆ ತಕ್ಕ ಆಸನಗಳು. ಅಣುಗಳು ಆಯಾ ಗುಳಿಗಳಲ್ಲಿ ಕುಳಿತ ಒಡನೆ ಕುಸುಮದ ಸುವಾಸನೆಯಿಂದ ನಮ್ಮ ಮನಸ್ಸು ತಣಿಯುತ್ತದೆ. ಇದೇ ರೀತಿ ಬೆಣೆಯ ಆಕಾರದ, ದೋಣಿಯ ಆಕಾರದ ಗುಳಿಗಳನ್ನು ಆಯಾ ಘನಾಕಾರದ ಅಣುಗಳು ತುಂಬಿದಾಗ ಪುದಿನ ಮತ್ತು ಕ್ಲೋರೋಫಾರಮ್ ವಾಸನೆಗಳನ್ನು ನಾವು ಗುರುತಿಸುತ್ತೇವೆ. ವಾಸನೆಯ ಜ್ಞಾನಪ್ರಚೋದನೆ ಆರಂಭವಾಗುವುದು ಮೂಗಿನ ಹೊಳ್ಳೆಯೊಳಗಿರುವ ಘ್ರಾಣಕ್ಷೇತ್ರದಲ್ಲಿ ಎಂದು ಮೊದಲು ಹೇಳಿದೆ. ವಿವಿಧ ವಾಸನೆಗಳ ಜ್ಞಾನದ ಅರಿವಾಗುವುದು ಘ್ರಾಣಮುಕುಲದಲ್ಲಿ ಎಂದು ಈಗ ಹೇಳಲಾಗಿದೆ. ಅಂದರೆ ಘ್ರಾಣಪ್ರಚೋದನೆ ಘ್ರಾಣಕ್ಷೇತ್ರದಲ್ಲೇ ಅಥವಾ ಘ್ರಾಣ ಮುಕುಲದಲ್ಲೇ ಎಂಬ ಗೊಂದಲ ಉಂಟಾಗಬಹುದು. ನಿಜಕ್ಕೂ ಹೇಳುವುದಾದರೆ ಈ ವಿಚಾರದಲ್ಲಿ ಇರುವ ಜ್ಞಾನ ಪರಿಪಕ್ವವಾಗಿಲ್ಲ. ಘ್ರಾಣಕ್ಷೇತ್ರದಲ್ಲಿ ವಾಸನೆಯ ಅರಿವು ಪ್ರಾರಂಭವಾಗುತ್ತದೆಂಬುದು ಮಾತ್ರ ಇತ್ಯರ್ಥವಾಗಿದೆ. ವಾಸನೆಗಳ ವೈವಿಧ್ಯದ (ಅಂದರೆ ಏಳು ವಾಸನೆಗಳಲ್ಲಿ ಯಾವುದು ಎಂದು ನಿರ್ಣಯಿಸುವ ಸಾಮರ್ಥ್ಯ) ಅರಿವನ್ನು ಉಂಟುಮಾಡುವ ಕ್ಷೇತ್ರ ಘ್ರಾಣಮುಕುಲವೆಂದು ಹೇಳಲಾಗಿದೆ. ಇದನ್ನು ಶಸ್ತ್ರಕ್ರಿಯೆಯಿಂದ ತೆಗೆದುಹಾಕಿದರೆ ವಿವಿಧ ವಾಸನೆಗಳನ್ನು ಗುರುತಿಸುವುದು ಅಸಾಧ್ಯವೆಂದೂ ತಿಳಿದಿದೆ. ಈ ವಿವರಗಳನ್ನು ಅಂಗೀಕರಿಸುವ ಮುನ್ನ ಮತ್ತೊಂದು ಪ್ರಶ್ನೆ ಏಳುವುದು ಸಹಜ – ವಾಸನೆಯ ಅಣುಗಳು ಮೂಗಿನ ಹೊಳ್ಳೆಯೊಳಗಿನ ಘ್ರಾಣಕ್ಷೇತ್ರ ಸ್ಪರ್ಶವಾದೊಡನೆ ವಿದ್ಯುತ್ಪ್ರವಾಹವಾಗಿ ಮಾರ್ಪಟ್ಟು ಅದು ನರತಂತುಗಳ ಮೂಲಕ ಘ್ರಾಣಮುಕುಲಕ್ಕೆ ಹಾಯುತ್ತದೆ: ಈಗ ಘ್ರಾಣವೈವಿಧ್ಯದ ಅರಿವಾಗಲು ಈ ವಿದ್ಯುತ್ಪ್ರವಾಹವಾಗಿ ಮಾರ್ಪಟ್ಟು ಅದು ನರತಂತುಗಳ ಮೂಲಕ ಘ್ರಾಣಮುಕುಲಕ್ಕೆ ಹಾಯುತ್ತದೆ: ಈಗ ಘ್ರಾನವೈವಿಧ್ಯದ ಅರಿವಾಗಲು ಈ ವಿದ್ಯುತ್ಪ್ರವಾಹ ಪುನಃ ಅನುಕ್ರಮ ಆಕಾರ ಗಾತ್ರದ ಅಣುಗಳಾಗಿ ಘ್ರಾಣಮುಕುಲದಲ್ಲಿರುವ ಗುಳಿಗಳಲ್ಲಿ ಹೊಂದಿಕೊಳ್ಳಬೇಕೇ ಎಂಬುದು ತಿಳಿದಿಲ್ಲ.

ಘಾಟು ಹಗೂ ಕೊಳೆತು ಹೊಲಸು ಬೀರುವ ನಾತದ ಅನುಭವದ ಮೂಲ ಈ ರೀತಿಯದಲ್ಲ, ಇವೆರಡು ವಾಸನೆಗಳ ಅನುಭವಕ್ಕೆ ಅಣುಗಳ ಗಾತ್ರ, ಆಕಾರ ಕಾರಣವಲ್ಲ, ಬದಲು ಅವುಗಳ ವಿದ್ಯುತ್ ಸ್ಥಿತಿಗಳು. ಕೆಲವು ಅಣುಗಳು ತಮ್ಮ ಹೊರಹೊದಿಕೆಯ ಎಲೆಕ್ಟ್ರಾನುಗಳನ್ನು ಕಳೆದುಕೊಂಡಿರುತ್ತವೆ. ಅಂದರೆ ಅವು ಧನ ಹೊರಹೊದಿಕೆಯ ಎಲೆಕ್ಟ್ರಾನುಗಳನ್ನು ಕಳೆದುಕೊಂಡಿರುತ್ತವೆ. ಅಂದರೆ ಅವು ಧನ ವಿದ್ಯುತ್ತಿನ ಅಣುಗಳಾಗಿರುತ್ತವೆ. ಇಂಥ ಅಣುಗಳು ಗಾಳಿಯಲ್ಲಿ ಬೆರೆತಿದ್ದರೆ ಅವು ಘ್ರಾಣಮುಕುಲದಲ್ಲಿರುವ ಋಣವಿದ್ಯುತ್ ಪ್ರಾಂತಗಳ ಕಡೆ ಧಾವಿಸುತ್ತವೆ. ಹಾಗೆ ಮುಕುಲದ ಮೇಲೆ ಬಿದ್ದಾಗ ಘಾಟು ವಾಸನೆಯ – ಮೆಣಸು, ಸೀಗೆಪುಡಿ ಇತ್ಯಾದಿ ಗುಂಪಿಗೆ ಸೇರಿದ ವಸ್ತುಗಳ ವಾಸನೆ ಅರಿವು ಬರುತ್ತದೆ. ಈ ವಾಸನೆಗಳಿಗೆ ವಿದ್ಯುನ್ಮಿತ್ರ ಘ್ರಾಣಗಳೆಂದು ಹೆಸರು. ಇನ್ನು ಕೆಲವು ಅಣುಗಳ ಹೊರವಲಯಗಳಲ್ಲಿ ಸಮವಿದ್ಯುತ್ ಸ್ಥಿತಿಗೆ ಬೇಕಾದದ್ದಕ್ಕಿಂತ ಹೆಚ್ಚು ಎಲೆಕ್ಟ್ರಾನುಗಳಿರುತ್ತವೆ. ಈ ಅಣುಗಳನ್ನು ಮುಕುಲದಲ್ಲಿ ಅಲ್ಲಲ್ಲಿರುವ ಧನವಿದ್ಯುತ್ಪ್ರಾಂತಗಳು ತಮ್ಮ ಕಡೆಗೆ ಎಳೆದುಕೊಳ್ಳುತ್ತವೆ. ಇವೆರಡೂ ಸಂಧಿಸಿದಾಗ ಕೊಳೆತ ನಾತ ನಮ್ಮನ್ನು ಪೀಡಿಸುತ್ತದೆ. ಇಂಥ ವಾಸನೆಗಳಿಗೆ ಪರಮಾಣು ಬೀಜಮಿತ್ರ ಅಥವಾ ಬೀಜಮಿತ್ರ ಘ್ರಾಣಗಳೆಂದು ಹೆಸರು. ಏಕೆಂದರೆ ಬೀಜಗಳು ಧನ ವಿದ್ಯುದಾವೇಶಗಳು. ಕೆಲವು ಅಣುಗಳ ಆಕಾರ ತೊಡಕಾಗಿದ್ದು ಅವು ಒಂದು ಭಂಗಿಯಲ್ಲಿ ಬಾಣಲೆಯಲ್ಲಿ ಸುಸೂತ್ರವಾಗಿ ಕೂರಬಹುದು. ಇನ್ನೊಂದು ನಿಲುವಿನಲ್ಲಿ ಬೆಣೆಯಾಕಾರದ ಗುಳಿಯಲ್ಲಿ ಅವು ಹಿಡಿಸಬಹುದು. ಈ ಸಂದರ್ಭದಲ್ಲಿ ಕರ್ಪೂರ ಹಾಗೂ ಪುದಿನಗಳ ಮಿಶ್ರವಾಸನೆಯ ಅನುಭವ ನಮಗಾಗುತ್ತದೆ. ಇದೇ ರೀತಿ ಇತರ ಮಿಶ್ರ ಘ್ರಾಣಗಳ ಪರಿಚಯವೂ ಆಗುವುದು.

ಅಮೂರನ ಈ ವಾದಕ್ಕೆ ಅವನ ಸಹಸಂಶೋಧಕರಾದ ರೂಬಿನ್ ಮತ್ತು ಜಾನ್‌ಸ್ಟನ್ ಎಂಬುವವರು ಅತಿ ಸಮರ್ಪಕವಾದ ಪ್ರಾಯೋಗಿಕ ಸಮರ್ಥನೆಗಳನ್ನು ದೊರಕಿಸಿ ಕೊಟ್ಟಿದ್ದಾರೆ. ಅವು ಕೃತಕ ಸಂಶ್ಲೇಷಣೆಯಿಂದ ವಿವಿಧ ಆಕಾರಗಳ ಅಣುಗಳನ್ನು ತಯಾರಿಸಿ ಅವನ್ನು ಆವಿಯ ರೂಪದಲ್ಲಿ ಕೊಳವೆ ಕವಾಟಗಳ ಮೂಲಕ ಗೊತ್ತಾದ ಪ್ರಮಾಣದಲ್ಲಿ ವಾಯುವಿನೊಂದಿಗೆ ಬೆರೆಸಿ ಘ್ರಾಣ ಪ್ರವೀಣರ ಮೂಗುಗಳಿಗೆ ಬೀರಿದ್ದಾರೆ. ಇಂಥ ಉಪಕರಣಗಳಿಗೆ ಘ್ರಾಣಮಾಪಿಗಳೆಂದು ಹೆಸರು. ಘ್ರಾಣಮಾಪಿಗಳಿಂದ ಹೊರಬಿದ್ದ ವಿವಿಧ ವಾಸನೆಗಳನ್ನು ಘ್ರಾಣಪ್ರವೀಣರು ನಿರೀಕ್ಷೆಗೆ ಅನುಗುಣವಾಗಿಯೇ ಗುರುತಿಸಿದ್ದಾರೆ. ಉದಾಹರಣೆಗೆ ಕರ್ಪೂರ, ಕಸ್ತೂರಿ, ಹೂ, ಪುದಿನಗಳ ವಾಸನೆಗಳನ್ನು ಸೂಸುವ ಅಣುಗಳನ್ನು ರಚಿಸಿ ತಕ್ಕ ಪ್ರಮಾಣದಲ್ಲಿ ಬೆರೆಸಿ ಅವರು ಗಂಧದೆಣ್ಣೆಯ ವಾಸನೆ ಬೀರುವ ದ್ರವ್ಯವನ್ನು ಯಶಸ್ವಿಯಾಗಿ ಸೃಷ್ಟಿಸಿದ್ದಾರೆ. ಈ ದ್ರವ್ಯದ ರಾಸಾಯನಿಕ ಸಂಯೋಜನೆಗೂ ಗಂಧದೆಣ್ಣೆಯ ಪರಮಾಣು ಸಂಯೋಜನೆಗೂ ಯಾವ ಸಂಬಂಧವೂ ಇಲ್ಲ.

ವಾಸನೆಗಳ ಮಿಶ್ರಣ ಹಾಗೂ ಸ್ವಾದ (ಓಡರ್ ಬ್ಲೆಂಡಿಂಗ್ ಅಂಡ್ ಫ್ಲೇವರ್) : ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಕ್ರಮವಿದು. ವಾಸನೆಗಳ ಸಂಯೋಜನೆ ಹಾಗೂ ವಿವಿಧ ಮಿಶ್ರಣಗಳು ವ್ಯವಹಾರದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಏಕಕಾಲದಲ್ಲಿ ಎರಡು ರೀತಿಯ ವಾಸನೆಗಳನ್ನು ಮೂಸಿದರೆ ಅವುಗಳ ವ್ಯತ್ಯಾಸವನ್ನು ಕಂಡುಹಿಡಿಯಲು ಸಾಧ್ಯ. ಇವೆರಡೂ ವಾಸನೆಗಳಲ್ಲಿರುವ ವ್ಯತ್ಯಾಸ ಕಡಿಮೆಯಾದಷ್ಟೂ ಅವುಗಳ ಸಂಯೋಜನ ಸಾಮರ್ಥ್ಯ ಅಧಿಕಗೊಳ್ಳುತ್ತದೆ. ಹೀಗಿದ್ದರೂ ಒಬ್ಬ ಘ್ರಾಣಪ್ರವೀಣ ಎರಡು ಸಂಯೋಜಿತ ವಾಸನೆಗಳು ಯಾವುವೆಂಬುದನ್ನು ಸಾಮಾನ್ಯವಾಗಿ ಹೇಳಬಲ್ಲ. ಒಂದರ ವಾಸನೆ ಮತ್ತೊಂದಕ್ಕಿಂತ ಬಹುತೇಕ ಹೆಚ್ಚಿದ್ದರೆ ಇದು ಮತ್ತೊಂದರ ವಾಸನೆಗೆ ಅಡ್ಡಿಬರುತ್ತದೆ. ವಾಸನೆಯ ಅಳಿವಿಗೆ ರಾಸಾಯನಿಕ ತಟಸ್ಥೀಕರಣ (ನ್ಯೂಟ್ರಲೈಸೇಷನ್) ಅನೇಕ ವೇಳೆ ಮೂಲ ಆಧಾರ: ಮತ್ತು ರಾಸಾಯನಿಕಗಳಿಗೆ ಸಂಬಂಧವಿಲ್ಲದ ವಾಸನೆಗಳಲ್ಲಿ ಶರೀರವೈಜ್ಞಾನಿಕ (ಫಿಸಿಯಲಾಜಿಕಲ್) ಇಲ್ಲವೇ ಮನೋವೈಜ್ಞಾನಿಕ (ಸೈಕಲಾಜಿಕಲ್) ಪ್ರಚೋದನೆ ಆಧಾರ ಎಂಬುದು ಕೆಲವರ ಅಭಿಪ್ರಾಯ. ಆದರೆ ಸಾಮಾನ್ಯವಾಗಿ ಈ ಅಭಿಪ್ರಾಯಕ್ಕೆ ಮನ್ನಣೆ ದೊರೆತಿಲ್ಲ. ಸುಗಂಧ ಸಂಯೋಜನೆ ನಡೆಯುವುದು ಬಹುಮಟ್ಟಿಗೆ ಪ್ರವೀಣನ ಕುಶಲತೆಯಿಂದಲೇ ಹೊರತು ವೈಜ್ಞಾನಿಕ ಸೂತ್ರಗಳಿಂದಲ್ಲ.

ಆಹಾರ ಪದಾರ್ಥಗಳಿಗೆ ಇರುವ ಸ್ವಾದವೈಶಿಷ್ಟ್ಯ ವಾಸನೆಯನ್ನೇ ಅವಲಂಬಿಸುತ್ತದೆ. ಇದು ಅನೇಕ ಅನುಭವಗಳು ಒಂದುಗೂಡಿ ವ್ಯಕ್ತಿಯ ಪ್ರಜ್ಞೆಗೆ ಬರುವಂಥದು. ನೀರುಳ್ಳಿ ಕರಿಯುವಾಗ ಅಥವಾ ಕಾಫಿಬೀಜ ಹುರಿಯುವಾಗ ಹೊರ ಬರುವ ಘಮಘಮಗಳಲ್ಲಿ ಘ್ರಾಣಪ್ರಜ್ಞೆಯೇ ಪ್ರಧಾನ. ಆಹಾರ ಕೈಗಾರಿಕೆಯಲ್ಲಿ ಸ್ವಾದ ಪಾತ್ರ ಬಹುಮುಖ್ಯ. ಈಚೀಚೆಗೆ ಸ್ವಾದಗಳಿಂದ ಗಿರಾಕಿಗಳನು ಆಕರ್ಷಿಸಲು ಪ್ರವೀಣರ ತಂಡವನ್ನೇ ನೇಮಿಸುವುದು ವಾಡಿಕೆಯಾಗಿದೆ. ಇಂಥ ತಂಡ ಆಹಾರಗಳ ಸ್ವಾದಗಳಲ್ಲಿ ಅತಿ ಸೂಕ್ಷ್ಮವ್ಯತ್ಯಾಸಗಳನ್ನು ಶೋಧಿಸಿ ಗ್ರಾಹಕರ ದೃಷ್ಟಿಯಿಂದ ಯಾವುದು ಮೇಲು ಯಾವುದು ಕೀಳು ಎಂಬ ನಿರ್ಣಯವನ್ನು ಕೊಡುವುದು. ಆದರೆ ಈ ತಂಡದವರು ಮುಖ್ಯವಾಗಿ ತಮಗಿರುವ ರುಚಿ ಮತ್ತು ಘ್ರಾಣಸಾಮರ್ಥ್ಯಗಳ ಆಧಾರಗಳಿಂದ ನಿರ್ಣಯಕ್ಕೆ ಬರುತ್ತಾರೆಯೇ ವಿನಾ ವೈಜ್ಞಾನಿಕ ನಿಯಮಗಳಿಂದಲ್ಲ.

ಘ್ರಾಣಸಾಮರ್ಥ್ಯ ಮತ್ತು ವ್ಯಕ್ತಿವರ್ತನೆ : ವಾಸನೆ ಹಿಡಿದು ತನ್ನ ವರ್ತನೆ ರೂಪಿಸಿಕೊಳ್ಳುವುದನ್ನು ಕೆಳವರ್ಗಗಳ ಪ್ರಾಣಿಗಳಲ್ಲಿ ಕಾಣಬಹುದು. ಸ್ನೇಹಿತ ಅಥವಾ ಶತ್ರು ಎಂಬುದನ್ನು ಕೀಟಗಳು ತಮ್ಮ ಘ್ರಾಣಸಾಮರ್ಥ್ಯದಿಂದಲೇ, ತಿಳಿದುಕೊಳ್ಳುತ್ತವೆ. ಕೆಲವು ಜಾತಿಯ ಇರುವೆಗಳ ಗ್ರಾಹಕತಂತುಗಳನ್ನು ತೆಗೆದುಬಿಟ್ಟರೆ ಅವು ತಮ್ಮ ತಮ್ಮಲ್ಲೇ ಕಚ್ಚಾಡಿ ನಾಶಹೊಂದುವುದುಂಟು. ಜೇನ್ನೊಣಗಳು ತಮ್ಮ ಗೂಡಲ್ಲದೆ ಅನ್ಯ ಗೂಡಿನೊಳಗೆ ನುಗ್ಗಿದರೆ ಅವು ಪರಕೀಯ ಕೀಟಗಳೆಂದು ಆ ಗೂಡಿನ ಜೇನ್ನೊಣಗಳು ಘ್ರಾಣಸಾಮರ್ಥ್ಯದಿಂದಲೇ ನಿರ್ಧರಿಸಿ ಅವನ್ನು ಕೊಂದುಹಾಕುತ್ತವೆ. ಜೇನ್ನೊಣಗಳಿಗೆ ಗ್ರಾಹಕತಂತುಗಳ ಜೊತೆಗೆ ಹೊಟ್ಟೆಯ ತುದಿಯಲ್ಲಿ ಮತ್ತೊಂದು ಘ್ರಾಣಾಂಗವೂ ಉಂಟು. ಇವು ಅವುಗಳ ಆಹಾರಾನ್ವೇಷಣೆಯಲ್ಲಿ ಸಹಾಯಕವಾಗುತ್ತವೆ.

ವಾಸನೆಗೂ ಲೈಂಗಿಕ ಆಕರ್ಷಣೆ ಮತ್ತು ನಡತೆಗೂ ನಿಕಟ ಸಂಬಂಧವಿದೆ. ಹೆಣ್ಣು ಗಂಡುಗಳ ಗ್ರಾಹಕ ತಂತುಗಳಲ್ಲಿರುವ ಗಮನಾರ್ಹವಾದ ವ್ಯತ್ಯಾಸಗಳನ್ನು ಇಲ್ಲಿ ಗಮನಿಸ ಬಹುದು. ಕಾಡುಗಳಲ್ಲಿರುವ ಸಸ್ತನಿ ಪ್ರಾಣಿಗಳು ಇತರ ಪ್ರಾಣಿಗಳನ್ನು ಆಕರ್ಷಿಸಲು ತಮ್ಮ

ಘ್ರಾಣಗ್ರಂಥಿಗಳನ್ನು ಉಪಯೋಗಿಸಿಕೊಳ್ಳುತ್ತವೆ. ಮೃಗಗಳ ಬೆದೆಗಾಲದ ಅರಿವು ಮೂಡುವುದು ವಾಸನೆಯಿಂದಲೇ. ಋತುಚಕ್ರದ ವಿವಿಧ ವೇಳೆಗಳಲ್ಲಿ ಹೆಣ್ಣಿನ ವಾಸನೆ ವ್ಯತ್ಯಾಸ ಆಯಾ ಕಾಲದ ಅಂತಸ್ಸ್ರಾವಗಳನ್ನು ಅವಲಂಬಿಸಿದೆ.

ರುಚಿ : ಬಾಯಿಯ ಒಳಗಿರುವ ರುಚಿಮೊಗ್ಗುಗಳು (ಟೇಸ್ಟ್ ಬಡ್ಸ್) ನಮಗೆ ರುಚಿಯ ಅರಿವನ್ನು ಉಂಟುಮಾಡುವ ಅಂಗಗಳು. ಇವು ಜೀವಕೋಶಗಳ ಗುಚ್ಛ. ಇವುಗಳ ಆಕಾರ ಬೋಗುಣಿಯಂತೆ. ಈ ಕೋಶಗಳು ನಾಲಗೆಯಲ್ಲಿ ಅಡಕವಾಗಿದ್ದು ರುಚಿರಂಧ್ರಗಳ ಮೂಲಕ ಬಾಯ ಒಳಕ್ಕೆ ತೆರೆಯುತ್ತವೆ. ಈ ಗುಚ್ಛದಲ್ಲಿರುವ ಜೀವಕೋಶಗಳು




ಚಿತ್ರ 3. ಜಿಹ್ವೇಂದ್ರಿಯ

ಎರಡು ವಿಧ : ತಳಪಾಯದಲ್ಲಿರುವ ಆಸರೆಕೋಶಗಳು ಹಾಗೂ ರುಚಿಗ್ರಾಹಕ (ಗಸ್ಟೇಟರಿ) ಸೂಕ್ಷ್ಮತಂತು ಕೋಶಗಳು. ಇವುಗಳ ತುದಿಯಲ್ಲಿ ನವಿರಾದ ಕೂದಲಿನ ಎಳೆ ರುಚಿರಂಧ್ರದ ಹೊರಗೆ ಚಾಚಿರುತ್ತದೆ. ಮನುಷ್ಯನ ಮತ್ತು ಸಸ್ತನಿ ಪ್ರಾಣಿಗಳ ನಾಲಗೆಗಳಲ್ಲಿ ಫಂಗಿಫಾರಮ್, ಫೋಲಿಯೇಟ್‌ಮತ್ತು ಸರ್ಕಂವ್ಯಾಲೇಟ್ ಪ್ಯಾಪಿಲ್ಲೆ ಎಂಬ ಉಬ್ಬುಗಳ ಮೇಲೆ ಹಾಗೂ ಅವುಗಳ ಪಕ್ಕಗಳಲ್ಲಿ ರುಚಿಮೊಗ್ಗುಗಳು ಇವೆ. ಅಲ್ಲದೆ ನಾಲಗೆ ಗಂಟಲುಗಳ ಮೇಲ್ಪೊರೆಯಲ್ಲೂ ಅಡಕವಾಗಿರಬಹುದು. ರುಚಿಮೊಗ್ಗುಗಳನ್ನು ಹೊಗುವ ಜ್ಞಾನವಾಹಿ ನರತಂತು ರುಚಿಮೊಗ್ಗುಗಳ ಕೋಶಗಳ ಸುತ್ತ ಹೆಣೆದುಕೊಂಡು ಆವರಿಸಿ ಒಂದಲ್ಲ ಒಂದು ರುಚಿಗ್ರಾಹಕ ಕೋಶದೊಡನೆ ಸಂಪರ್ಕಿಸಿರುತ್ತದೆ. ನಾಲಗೆಯ ನರವನ್ನು ತುಂಡುಮಾಡಿದರೆ ನರತಂತುಗಳೂ ರುಚಿಮೊಗ್ಗುಗಳೂ ಕ್ಷೀಣಿಸಿ ಹೋಗುತ್ತವೆ. ನರವನ್ನು ಪುನಃ ಸೂಕ್ತರೀತಿಯಲ್ಲಿ ಕೂಡಿಸಿದರೆ ಆ ಜಾಗದಲ್ಲೇ ಇರುವ ಮೇಲುಪೊರೆಯ ಕೋಶಗಳಿಂದ ರುಚಿಮೊಗ್ಗುಗಳು ಪುನಃ ರೂಪುಗೊಳ್ಳುತ್ತವೆ.

ಅಕಶೇರುಕಗಳಲ್ಲಿ, ಉದಾಹರಣೆಗೆ ಕೀಟಗಳಲ್ಲಿ, ಘ್ರಾಣ ಹಾಗೂ ರುಚಿಯ ಪೂರ್ಣ ವಿಭೇದವಿರುವುದನ್ನು ಕಾಣಬಹುದು. ಜಠರಪದಿ, ಹುಳುಗಳು ಇತ್ಯಾದಿ ಪ್ರಾಣಿಗಳು ಕಹಿ ಬೆರೆತ ಆಹಾರವನ್ನು ತ್ಯಜಿಸುವುದನ್ನೂ ಸಿಹಿ ಬೆರೆತ ಆಹಾರವನ್ನು ಸೇವಿಸುವುದನ್ನೂ ಪ್ರಯೋಗಳಿಂದ ಇತ್ಯರ್ಥಮಾಡಿ ತೋರಿಸಬಹುದು. ಕೀಟಗಳಿಗೆ ಅವುಗಳ ಕಾಲಿನ ಸುತ್ತ ರೋಮ ಹಾಗೂ ಬಾಯಿ ಸುತ್ತ ರಾಸಾಯನಿಕ ಗ್ರಾಹಿಗಳು ಸಾಕಷ್ಟಿವೆ. ಇವುಗಳಿಂದ ಕೀಟಗಳಿಗೆ ಸ್ಪರ್ಶದ ಅರಿವಾಗುವುದೊಂದೇ ಅಲ್ಲದೆ ರುಚಿಗ್ರಹಣವೂ ಆಗುತ್ತದೆ. ರೋಮ ಒಂದಕ್ಕೆ ಸಕ್ಕರೆ ತೊಟ್ಟಿನ ಸ್ಪರ್ಶ ಮಾಡಿಸಿದರೆ ಅದರ ಹೀರುಕೊಳವೆ (ಪ್ರೋಬೋಸಿಸ್) ಮುಂದಕ್ಕೆ ಚಾಚಿ ಬರುತ್ತದೆ. ಈ ತೊಟ್ಟಿಗೆ ಉಪ್ಪು ಬೆರೆಸಿ ಸ್ಪರ್ಶ ಮಾಡಿಸಿದರೆ ಹೀರುಕೊಳವೆ ಅಷ್ಟಾಗಿ ಮುಂಚಾಚುವುದಿಲ್ಲ. ನೊಣಗಳ ತುಟಿರೋಮಗಳಲ್ಲಿ ಮೂರು ನರತಂತುಗಳಿವೆ. ಇವುಗಳಲ್ಲಿ ಎರಡು ರೋಮಗಳು ಮಾತ್ರ ತುದಿಯಲ್ಲಿರುವ ರಾಸಾಯನಿಕಗ್ರಾಹಿಗಳವರೆಗೆ ಮುಂದುವರಿಯುತ್ತವೆ. ಈ ತಂತುಗಳ ಪ್ರಚೋದನೆಯಿಂದ ಉಂಟಾದ ವಿದ್ಯುತ್‌ಸ್ಪಂದನವನ್ನು ನಿರೂಪಿಸಿ ಪರಿಶೀಲಿಸಲು ಸಾಧ್ಯ. ಈ ರಾಸಾಯನಿಕ ಗ್ರಾಹಗಳು ಹೀರುಕೊಳವೆಯಲ್ಲೂ ಗ್ರಾಹಕತಂತುವಿನಲ್ಲೂ ಕೆಲವು ವೇಳೆ ಇರಬಹುದಾದರೂ ಇವೆರಡು ಅಂಗಗಳು ಮಾತ್ರ ಮುಖ್ಯವಾಗಿ ಕೀಟದ ಘ್ರಾಣೇಂದ್ರಿಯಗಳು.

ರುಚಿ ಒಂದರ ಅರಿವನ್ನು ಮಾತ್ರ ಉಂಟು ಮಾಡುವ ಏಕೈಕ ಜ್ಞಾನವಾಹಿ ನರತಂತು ಕಶೇರುಕ ಪ್ರಾಣಿವರ್ಗಗಳಲ್ಲಿ ಇಲ್ಲ. ಮೂರು ನರಗಳು ಬೇರೆ ಅರಿವಿನ ಜೊತೆಗೆ ರುಚಿಯ ಅರಿವನ್ನೂ ಉಂಟುಮಾಡುತ್ತವೆ. ಮಾನವನಲ್ಲಿ ನಾಲಗೆಯ ಮುಂದಿನ $\frac{2}{3}$ ಭಾಗದಲ್ಲಿ ಜಿಹ್ವಾನರದ ವ್ಯಾಪನೆ ಉಂಟು. ಹಿಂದಿರುವ $\frac{1}{3}$ ಭಾಗಕ್ಕೆ ಗಂಟಲ ಕುಹರ ಜಿಹ್ವಾನರದ ವ್ಯಾಪನೆ ಇದೆ. ಗಂಟಲು, ಧ್ವನಿಪೆಟ್ಟಿಗೆ ಗಳಿಗೆ ವೇಗಸ್ ನರದ ಕೆಲವು ಶಾಖೆಗಳು ಹೋಗುತ್ತವೆ. ಸ್ಪರ್ಶ, ಉಷ್ಣತೆ ಹಾಗೂ ನೋವುಗಳ ಅರಿವನ್ನು ಉಂಟುಮಾಡುವ ಕ್ರಿಯೆಯಲ್ಲಿ ಜಿಹ್ವಾನರಗಳು ಭಾಗಿಗಳಾಗುವುವು. ನಾಲಗೆಯ ಮುಂಭಾಗದಲ್ಲಿ ಉಂಟಾಗುವ ರುಚಿಯ ಅರಿವನ್ನು ಸಾಗಿಸುವ ನರತಂತುಗಳು ಜಿಹ್ವಾನರದಿಂದ ಬೇರ್ಪಟ್ಟು ಬೇರೆ ಒಂದು ಸೂಕ್ಷ್ಮ ನರತಂತುವಾಗಿ ಕಾರ್ಡಟಿಂಪಾನಿ ಎಂಬ ಹೆಸರಿನಿಂದ ಕಿವಿತಮಟೆಯ ಮೂಲಕ ಹಾದು ಮಿದುಳುಬಳ್ಳಿಯನ್ನು ಸೇರುತ್ತದೆ. ಕಿವಿ ತಮಟೆಯ ಶಸ್ತ್ರಚಿಕಿತ್ಸೆ ನಡೆಸುವಾಗ ಈ ಕಾರ್ಡಟಿಂಪಾನಿ ನರತಂತುವಿಗೆ ಅಪಾಯವಾಗುತ್ತದೆ. ಅಥವಾ ಅದು ಕಿತ್ತು ಹೋಗುವುದೂ ಉಂಟು. ಈ ಸಂದರ್ಭಗಳಲ್ಲಿ ಯಾವ ಕಡೆ ನರತಂತು ಕಿತ್ತುಹೋಗಿದೆಯೋ ಅಥವಾ ಅಪಾಯ ಸಂಭವಿಸಿದೆಯೋ ಆ ಭಾಗದಲ್ಲಿ ರುಚಿಮೊಗ್ಗುಗಳು ಅದೃಶ್ಯವಾಗಿ ನಾಲಗೆಯ ಮುಂಭಾಗದ ಎಡ ಅಥವಾ ಬಲ ಪಾರ್ಶ್ವದಲ್ಲಿ ರುಚಿಯ ಅರಿವು ನಾಶವಾಗುತ್ತದೆ. ಬಾಯಿಯಿಂದ ಹೊರಡುವ ರುಚಿಯ ನರತಂತುಗಳನ್ನು ಒಳಗೊಂಡಿರುವ ಎಲ್ಲ ಜ್ಞಾನವಾಹೀ ನರಗಳೂ ಒಂದು ಗೂಡಿ ಟ್ರ್ಯಾಕ್ಟಸ್ ಸಾಲಿಟೇರಿಯಸ್ ಪಥದಲ್ಲಿ ಹಾಗೂ ಮಿದುಳಿನ ಮೆಡುಲ್ಲ ಅಬ್ಲಾಂಗೇಟಕ್ಕೆ ಸಂಬಂಧಪಟ್ಟ ನ್ಯೂಕ್ಲಿಯಸಿನಲ್ಲಿ ಹಾಯುತ್ತವೆ. ಇಲ್ಲಿರುವ ಹಾಗೂ ಮಿದುಳಿನ ಇತರ ಎಲ್ಲ ಹಂತಗಳಲ್ಲಿ ಕೂಡ ಇರುವ ರುಚಿನರತಂತುಗಳು ನಾಲಗೆಯ ಸ್ಪರ್ಶ, ಉಷ್ಣತೆಗಳ ಅರಿವನ್ನು ಉಂಟುಮಾಡುವ ನರತಂಡದೊಂದಿಗೇ ಅತಿ




ಚಿತ್ರ 4

ನಿಕಟವಾಗಿ ಒಡಗೂಡಿರುವುದು ಕಾಣುತ್ತದೆ. ಮುಂದೆ ಮೆಡುಲ್ಲದಿಂದ ನರತಂತುಗಳು ಮೇಲೇರಿ ಇತರ ತಂತುಗಳೊಂದಿಗೆ ಸ್ವಲ್ಪಮಟ್ಟಿಗೆ ಬೆರೆತು ಶಿರಗುಳಿಯ (ಥಲಮಸ್) ಸಂವೇದನ ನ್ಯೂಕ್ಲಿಯಸ್ ಮಧ್ಯಭಾಗದಲ್ಲಿ ಅಡಕವಾಗಿರುವ ಸಣ್ಣಕೋಶಗಳ ಗುಚ್ಛ ಒಂದನ್ನು ಸೇರುತ್ತವೆ. ಇಲ್ಲಿಂದ ಮುಂದೆ ರುಚಿನರತಂತುಗಳು ನಿಮ್ಮಿದುಳ ತೊಗಟೆಯ (ಸೆರೆಬ್ರಲ್ ಕಾರ್ಟೆಕ್ಸ್) ಮುಂಭಾಗಕ್ಕೆ ನಾಲಗೆಯ ಸ್ಪರ್ಶ ಮತ್ತು ಉಷ್ಣತಾ ನರತಂತುಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿಯೇ ಬಾಯಿಯಿಂದ ಬರುವ ಜ್ಞಾನವಾಹಿಗಳನ್ನು ಅಂಗೀಕರಿಸುವ ಕ್ಷೇತ್ರದಲ್ಲಿ ಅಸ್ತಿತ್ವಕ್ಕೆ ಬರುತ್ತವೆ. ರುಚಿಪ್ರಜ್ಞೆಗೆ ನಿಮ್ಮಿದುಳಿನ (ಸೆರೆಬ್ರಮ್)

ಯಾವ ಒಂದು ಭಾಗವೂ ಸೀಮಿತವಾಗಿಲ್ಲ. ಆಮ್ಲಗಳನ್ನು ಬಿಟ್ಟು ಉಳಿದ ಪದಾರ್ಥಗಳ ರುಚಿಪ್ರಜ್ಞೆಗೂ ರಾಸಾಯನಿಕ ಧಾತುವೈವಿಧ್ಯಕ್ಕೂ ಒಂದು ಸರಳ ಸಂಬಂಧ ಕಲ್ಪಿಸಲು ಸಾಧ್ಯವಿಲ್ಲ. ಇನಾರ್ಗ್ಯಾನಿಕ್ ಲವಣಗಳ ರುಚಿಗುಣ ತೊಡಕು. ಸೋಡಿಯಮ್ ಕ್ಲೋರೈಡ್ ಅಥವಾ ಅಡುಗೆ ಉಪ್ಪಿನ ರುಚಿ ಉಪ್ಪುಪ್ಪು. ಸಿಹಿ ಕಹಿ ರುಚಿಗಳು ಬೇರೆ ಬೇರೆ ರಾಸಾಯನಿಕ ವರ್ಗಗಳಿಗೆ ಸೇರಿದ ಪದಾರ್ಥಗಳಲ್ಲಿ ಕಂಡುಬರುತ್ತವೆ.

ನಾಲಗೆಯ ಪೂರ್ಣಕ್ಷೇತ್ರದಲ್ಲಿ ರುಚಿಪ್ರಜ್ಞೆ ಇರುವುದಿಲ್ಲ. ಇದರ ಮಧ್ಯಕ್ಷೇತ್ರ ರುಚಿರಹಿತ. ನಾಲಗೆಯ ಅಂಚಿನಲ್ಲಿ ಉಪ್ಪು, ನಾಲಗೆಯ ತುದಿಯಲ್ಲಿ ಸಿಹಿ, ನಾಲಗೆಯ ಇಬ್ಬದಿಗಳಲ್ಲಿ ಹುಳಿ ಮತ್ತು ನಾಲಗೆಯ ಹಿಂಭಾಗದಲ್ಲಿ ಕಹಿ ಅರಿವಾಗುತ್ತವೆ. ಮೂಲತಃ ನಾಲ್ಕು ಅಂದರೆ ಉಪ್ಪು, ಹುಳಿ, ಸಿಹಿ ಮತ್ತು ಕಹಿಗಳನ್ನು ಗುರುತಿಸುವ ರುಚಿಗ್ರಾಹಿಗಳು ಮಾತ್ರ ಇವೆ ಎಂದು ನಂಬಲಾಗಿತ್ತು. ಪ್ರಾಣಿಗಳ ನಾಲಗೆಯ ವಿವಿಧ ಭಾಗಗಳನ್ನು ವಿದ್ಯುತ್ಕ್ರಿಯಾ ಪ್ರಚೋದನೆಗೆ ಒಳಪಡಿಸಿ ಹೊರಬಿದ್ದ ಚಿತ್ರಗಳ ಅಧ್ಯಯನದಿಂದ ಈ ನಂಬಿಕೆ ಆಧಾರರಹಿತವಾದದ್ದೆಂದೂ ರುಚಿವೈವಿಧ್ಯ ಪ್ರಾಣಿಗಳಲ್ಲಂತೂ ಇಷ್ಟು ಸರಳವಲ್ಲವೆಂದೂ ತಿಳಿದಿದೆ. ನಾಲಗೆಯ ಒಂದೇ ನರತಂತುವಿನಲ್ಲಿ ವಿವಿಧ ರುಚಿ ಪ್ರಚೋದನೆ ಸಾಧ್ಯ. ಮೂಲರುಚಿಯೊಂದೇ ಅಲ್ಲದೆ ಇತರ ಮಿಶ್ರ ರುಚಿ ಪ್ರಚೋದನೆ ಅಂದರೆ ಆಮ್ಲ+ಕ್ಷಾರ ಅಥವಾ ಆಮ್ಲ+ಕ್ಷಾರ+ಸಿಹಿ ರುಚಿಗಳು ಒಂದೇ ನರತಂತುವಿನ ಪ್ರತಿಕ್ರಿಯೆಯಾಗಿರಬಲ್ಲವು. ರುಚಿ ಮೊಗ್ಗುಗಳು ಒಂದೇ ರುಚಿಯಲ್ಲದೆ ಬೇರೆ ಬೇರೆ ರುಚಿಯ ಅನುಭವವನ್ನು ವ್ಯಕ್ತಿಗೆ ಮೂಡಿಸಬಲ್ಲವು ಎಂದು ತೋರುತ್ತದೆ. ಕೆಲವು ಜಾತಿಯ ಪ್ರಾಣಿಗಳಲ್ಲಿ ನೀರು ಕೂಡ ಕೆಲವು ರುಚಿಗ್ರಾಹಿಗಳನ್ನು ಪ್ರವಚೋದಿಸಬಲ್ಲುದು. ಅಂತೆಯೇ ಉಪ್ಪು ಈ ಪ್ರಚೋದನೆಗೆ ಅಡ್ಡಿ ತರಬಹುದು. ರುಚಿ ಇಂಥದ್ದೇ ಎಂಬ ಅನುಭವ ಮಿದುಳು ಈ ಪ್ರಚೋದನೆಗಳನ್ನು ಯಾವ ರೀತಿ ಅಳವಡಿಸಿಕೊಳ್ಳುತ್ತದೆ, ಯಾವ ರೀತಿ ರುಚಿವಾಹಿನಿಯನ್ನು ನರತಂತುಗಳ ಮೂಲಕ ಅಂಗೀಕರಿಸುತ್ತದೆ ಎಂಬುದನ್ನು ಅವಲಂಬಿಸಿದೆ.

ಹುಳಿ : ಆಮ್ಲಗಳಲ್ಲಿರುವ ಹೈಡ್ರೊಜನ್ನಿನ ಅಯಾನುಗಳು ಹುಳಿ ರುಚಿಯ ಪ್ರಜ್ಞೆಗೆ ಕಾರಣ. ಈ ಅಯಾನುಗಳ ಸಾಂದ್ರತೆ ಪದಾರ್ಥದಲ್ಲಿ ಹೆಚ್ಚಿದಷ್ಟೂ ಹುಳಿ ಹೆಚ್ಚುತ್ತದೆ. ಆದರೆ ಹುಳಿ ರುಚಿಗೆ ಇದೊಂದೇ ಕಾರಣವಲ್ಲ. ಸಾರರಿಕ್ತ ಆರ್ಗ್ಯಾನಿಕ್ ಆಮ್ಲಗಳು. ಉದಾಹರಣೆಗೆ ಅಸಿಟಿಕ್ ಆಮ್ಲ, ಹೈಡ್ರೊಜನ್ ಅಯಾನುಗಳ ಸಾಂದ್ರತೆಗೆ ತಕ್ಕಂತೆ ಹುಳಿ ಹುಟ್ಟಿಸುವುದಿಲ್ಲ. ಆದರೆ ಅದಕ್ಕಿಂತ ಹೆಚ್ಚಾಗಿ ತೋರುತ್ತದೆ. ಬಹುಶಃ ಅಧಿಕವಾದ ಅದರ ಛೇದಕಸಾಮರ್ಥ್ಯದಿಂದ ಇದು ಸಾಧ್ಯವಾಗಿದೆ.

ಉಪ್ಪು : ಉಪ್ಪಿನ ಪ್ರಜ್ಞೆ ಮೂಡುವುದು ನೀರಲ್ಲಿ ಕರಗುವ ಲವಣಗಳಿಂದ. ಅನೇಕ ರಾಸಾಯನಿಕ ಲವಣಗಳು ವಿವಿಧ ರುಚಿಗಳ ಅನುಭವ ಕೊಡುತ್ತವೆ. ಕಹಿ ಲವಣಗಳು, ಹುಳಿ ಲವಣಗಳು ಇತ್ಯಾದಿ ಉದಾಹರಣೆಗಳು. ಕಡಿಮೆ ಅಣುತೂಕವಿರುವ ಲವಣಗಳಲ್ಲಿ ಉಪ್ಪು ರುಚಿ ಪ್ರಧಾನ. ಆದರೆ ಬರಿಲಿಯಮ್ ಲವಣಗಳು ಸಿಹಿ. ಹೆಚ್ಚು ಅಣುತೂಕವಿರುವ ಲವಣಗಳಲ್ಲಿ ಕಹಿ ಪ್ರಧಾನ. ಪಾದರಸದ ಲವಣಗಳಂತೆ ಬಹುತೂಕವುಳ್ಳ ಲವಣಗಳು ಒಂದು ರೀತಿಯ ಲೋಹಪ್ರಧಾನ ರುಚಿಯನ್ನು ಪ್ರಚೋದಿಸುತ್ತವೆ. ಸೀಸ ಲವಣಗಳು ಸಿಹಿರುಚಿಕೊಡುತ್ತವೆ. ಧನವಿದ್ಯುತ್ ಕಣ ಹಾಗೂ ಋಣ ವಿದ್ಯುತ್ ಕಣಗಳೆರಡೂ ರುಚಿಯ ಗುಣಮಟ್ಟವನ್ನು ನಿರ್ಧರಿಸುವುದೊಂದೇ ಅಲ್ಲದೆ ಅದರ ಪ್ರಚೋದನೆಯ ಯಶಸ್ಸಿಗೂ ಕಾರಣ. ಮನುಷ್ಯರಲ್ಲಿ ಅಮೋನಿಯಮ್, ಪೊಟ್ಯಾಸಿಯಮ್, ಕ್ಯಾಲ್ಸಿಯಮ್, ಸೋಡಿಯಮ್, ಲಿಥಿಯಮ್ ಮತ್ತು ಮೆಗ್ನೀಷಿಯಮ್ ಲವಣಗಳು ಅನುಕ್ರಮವಾಗಿ ಅಂತಕ್ಷಾರದಿಂದ ಅತ್ಯಲ್ಪ ಕ್ಷಾರರುಚಿ ಪ್ರಚೋದಕಗಳು.

ಸಿಹಿ : ಸೀಸ ಮತ್ತು ಬರಿಲಿಯಮ್ ಸೇರಿದ ಕೆಲವು ಇನಾರ್ಗ್ಯಾನಿಕ್ ಲವಣಗಳನ್ನು ಬಿಟ್ಟು ಉಳಿದೆಲ್ಲ ವಸ್ತುಗಳು ಸಿಹಿ ರುಚಿ ಇರುವುದು ಆರ್ಗ್ಯಾನಿಕ್ ಸಂಯುಕ್ತವಸ್ತುಗಳಿಗೆ ಎಂದು ಕಂಡುಬರುತ್ತದೆ. ಉದಾಹರಣೆಗೆ ಆಲ್ಕೊಹಾಲುಗಳು ಮತ್ತು ಗ್ಲೈಕಾಲುಗಳು, ಸಕ್ಕರೆ. ರಾಸಾಯನಿಕ ಧಾತುವೈವಿಧ್ಯಕ್ಕೂ ಸಿಹಿ ರುಚಿಗೂ ಇರುವ ಜಟಿಲ ಸಂಬಂಧ ಸಂಪೂರ್ಣ ಅರ್ಥವಾಗಿಲ್ಲ. ಕೃತಕವಾಗಿ ತಯಾರಿಸಿದ ಸಾಕರಿನ್ ಡಲ್ಸಿನುಗಳೂ ಸಿಹಿರುಚಿ ಕೊಡುತ್ತವೆ ಎಂಬುದು ತಿಳಿದಿರುವ ವಿಷಯ. ಇವುಗಳ ಸಾರವನ್ನು ನೀರು ಬೆರೆಸಿ 700 ಪಟ್ಟು ಕಡಿಮೆ ಮಾಡಿದರೂ ಇವು ಸಿಹಿ ಅನುಭವವನ್ನು ಪ್ರಚೋದಿಸಬಲ್ಲವು. ಇಷ್ಟೇ ಅಲ್ಲದೆ ರುಚಿ ಅಣುವಿನ ಆವರಣದಲ್ಲಿ ಯಾವ ರೀತಿ ಯಾವ ಕಡೆ ಅಣುವಿನ ಪರಮಾಣುಗಳು ವ್ಯವಸ್ಥಿತವಾಗಿವೆ ಎಂಬುದು ಬಹುಮುಖ್ಯ. ಸಿಹಿ ಅಣುವಿನ ಪರಮಾಣು ವ್ಯವಸ್ಥೆಯಲ್ಲಿ ಅತ್ಯಲ್ಪ ಬದಲಾವಣೆಯಾದರೂ ಆ ವಸ್ತು ರುಚಿರಹಿತ ಅಥವಾ ಕಹಿಯಾಗುತ್ತದೆ. ಚಿತ್ರ (5)ರಲ್ಲಿ ಕೊಟ್ಟಿರುವ ಅಣುರೂಪಗಳನ್ನು ಗಮನಿಸಬಹುದು.

ಕಹಿ : ಇದು ಕೂಡ ಸಿಹಿಯಂತೆ ಅನೇಕ ರಾಸಾಯನಿಕಗಳಿಂದ ಪ್ರಚೋದಿತವಾಗುತ್ತದೆ. ಕಹಿಯೊಂದಿಗೆ ಸಿಹಿ ಮತ್ತಿತರ ರುಚಿಗಳ ಅನುಭವವೂ ಸೇರಿರುವುದು. ಇನಾರ್ಗ್ಯಾನಿಕ್ ಲವಣಗಳ ಅಣುಭಾರ ಹೆಚ್ಚಿದಂತೆ ಅಥವಾ ಆರ್ಗ್ಯಾನಿಕ್ ಅಣುಗಳ ಇಂಗಾಲ ಸರಪಳಿ ಹೆಚ್ಚಿದಂತೆ ಕಹಿಗುಣವೂ ವೃದ್ಧಿಯಾಗುತ್ತದೆ. ಕಹಿಗುಂಪಿಗೆ ಸೇರಿದ ಆಲ್ಕಲಾಯಿಡುಗಳು ಉದಾಹರಣೆಗೆ ಕ್ವಿನೈನ್, ಕ್ಯಾಫೀನ್, ಸ್ಟ್ರಿಕ್ನಿನ್ ಇತ್ಯಾದಿ – ಅತಿ ಕಹಿವಸ್ತುಗಳು : ಹಾಗೂ ಇವು ಅತಿ ಅಲ್ಪಪ್ರಮಾಣದಲ್ಲೇ ಪಾಷಾಣವಾಗಿ ಪರಿಣಮಿಸುತ್ತವೆ. ಕೆಲವರಿಗೆ ಕಹಿ ರುಚಿ ತಿಳಿಯುವುದಿಲ್ಲ. ಇವರು ರುಚಿ ಅಂಧರು. ಈ ಗುಣ ಮೆಂಡೆಲ್ ತತ್ವವನ್ನು ಅನುಸರಿಸಿ ಅಪ್ರಭಾವಶೀಲ ಜೀನುಗಳೊಂದಿಗೆ (ರಿಸೆಸ್ಸಿವ್ ಜೀನ್ಸ್) ಶಿಶುವಿಗೆ ಹಾಯುತ್ತದೆ. ಈ ವ್ಯಕ್ತಿಗಳಿಗೆ ಫೀನೈಲ್ ಥಯೋ ಕಾರ್ಬಮೈಡಿನ (ಪಿ.ಟಿ.ಸಿ) ಮತ್ತು ಇದರಂತೆ ಇರುವ ಮತ್ತಾವುದೇ ರಾಸಾಯನಿಕ ವಸ್ತುಗಳ ರುಚಿ ಹತ್ತುವುದಿಲ್ಲ. ಕಾಕೇಷಿಯನ್ ಬುಡಕಟ್ಟಿಗೆ




ಸಿಹಿ ರುಚಿರಹಿತ ಸ್ವಲ್ಪ ಕಹಿ

ಚಿತ್ರ 5

ಸೇರಿದ ಮೂರನೆಯ ಒಂದು ಭಾಗ ವ್ಯಕ್ತಿಗಳಿಗೆ ಈ ಗುಣ ಉಂಟು, ಉಳಿದ ಜನಾಂಗಗಳಲ್ಲಿ ಇದರ ಪ್ರಮಾಣ ವ್ಯತ್ಯಾಸವಾಗುತ್ತದೆ. ಪಿ.ಟಿ.ಸಿ. ರುಚಿ ಅಂಧತ್ವ ಮನುಷ್ಯ ಹಾಗೂ ಅವನ ಗುಂಪಿಗೆ ಸೇರಿದ ಪ್ರಾಣಿಗಳಲ್ಲಿ ಕಂಡುಬರುವ ವೈಶಿಷ್ಟ್ಯ. ಇದಕ್ಕೆ ಸಂಬಂಧಪಟ್ಟ ಜೀನಿನ ವಿಕಸನ ಬಹಳ ತಡವಾಗಿ ಹೊರಬಿದ್ದಿರಬೇಕು. ಆದರೆ ರುಚಿ ಅಂಧತೆಗೆ ಕಾರಣ ಇನ್ನೂ ಬೆಳಕಿಗೆ ಬಂದಿಲ್ಲ. ರುಚಿ ಬದಲಾವಣೆ ಕೆಲವು ಸಂದರ್ಭಗಳಲ್ಲಿ ಕಾಣಬಹುದು. ಅತಿ ಬಿಸಿಯಾದ ಅಥವಾ ಅತಿ ಬಿಸಿಯಾದ ಅಥವಾ ಅತಿ ಶೀತಾವಸ್ಥೆಯ ಪದಾರ್ಥ ಬಾಯಿಗೆ ಬಿದ್ದರೆ ತಾತ್ಕಾಲಿಕ ರುಚಿ ಅಂಧತ್ವವಾಗುವುದು ಎಲ್ಲರ ಅನುಭವ. ದೇಹದ ಉಷ್ಣತಾಮಟ್ಟ ಅಥವಾ ಅದಕ್ಕಿಂತ ಸ್ವಲ್ಪ ಕಡಿಮೆ ಉಷ್ಣತೆಗಳಲ್ಲಿ ರುಚಿಯ ಅನುಭವ ಉತ್ಕೃಷ್ಟ. ಉಷ್ಣತೆ ಅಧಿಕಗೊಂಡರೆ ಸಿಹಿಯ ಗುಣಗ್ರಹಣವೂ ಉತ್ತಮಗೊಳ್ಳುತ್ತದೆ. ಆದರೆ ಉಪ್ಪು ಮತ್ತು ಕ್ವಿನೈನುಗಳ ರುಚಿ ಕಡಿಮೆಯಾಗುತ್ತದೆ. ಆಮ್ಲಗಳ ರುಚಿ ಬದಲಾವಣೆ ಅಷ್ಟಿಲ್ಲ. ರುಚಿಗುಣಗ್ರಹಣವನ್ನು ಒಂದು ನಿರ್ದಿಷ್ಟ ರಾಸಾಯನಿಕ ಕ್ರಿಯೆ ಎಂದು ವಿವರಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಇದು ಸಾಧ್ಯವಾಗುತ್ತಿದ್ದರೆ ಎಲ್ಲ ರುಚಿಗಳ ಗ್ರಹಣವೂ ಉಷ್ಣತೆ ಅಧಿಕಗೊಂಡಂತೆಲ್ಲ ಉತ್ತಮಗೊಳ್ಳಬೇಕಿತ್ತು. ಬಾಯಿಯಲ್ಲಿಯೇ ಸ್ವಲ್ಪಕಾಲ ಒಂದು ದ್ರವವನ್ನು ಇಟ್ಟುಕೊಂಡಿದ್ದರೆ ಅದರ ರುಚಿ ಆಂಶಿಕವಾಗಿ ಅಥವಾ ಸಂಪೂರ್ಣವಾಗಿ ಮರೆಯಾಗಬಹುದು. ಇನ್ನು ಕೆಲವು ವೇಳೆ ಒಂದು ಆಮ್ಲದಿಂದ ಈ ರೀತಿ ರುಚಿ ವ್ಯತ್ಯಾಸವಾದರೆ ಎಲ್ಲ ಆಮ್ಲಗಳಿಗೂ ಅದೇ ರೀತಿ ವ್ಯತ್ಯಾಸ ಕಾಣಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಪರಸ್ಪರ ರುಚಿ ಗುಣ ವ್ಯತ್ಯಾಸಗಳಿಂದ ಒಂದು ಮತ್ತೊಂದರ ರುಚಿ ಕೊಡಬಹುದು. ಸಾರರಿಕ್ತ ಆಮ್ಲದ ರುಚಿಗ್ರಹಣದ ತರುವಾಯ ಸಾಂದ್ರೀಕರಿಸಿದ ನೀರು ಸಿಹಿರುಚಿ ಕೊಡಬಹುದು. ಒಂದರ ರುಚಿಯನ್ನು ಇತರ ವಸ್ತುಗಳ ಮಿಶ್ರಣದಿಂದ ಕಾಣದಂತೆ ಮಾಡುವುದು ಎಲ್ಲರಿಗೂ ತಿಳಿದಿದೆ. ಉದಾಹರಣೆಗೆ ಹುಳಿಯನ್ನು ಬೆಲ್ಲ ಸಕ್ಕರೆ ಬೆರೆಸಿ ಮುಚ್ಚುವುದು. ರುಚಿ ಬದಲಾವಣೆಯನ್ನು ನಾಲಗೆ ಗ್ರಹಿಸಲು ಸಾರ ಕಡೇಪಕ್ಷ 20% ರಷ್ಟು ಹೆಚ್ಚಬೇಕು ಹಾಗೂ ಸಾರ 100ಕ್ಕೆ 100ರಷ್ಟು ಹೆಚ್ಚಿದಾಗಲೂ ವ್ಯತ್ಯಾಸ ಕಂಡುಬರುವ ಸಂದರ್ಭಗಳೂ ಉಂಟು.

ಜೀವಿಗಳು ತಮಗೆ ಬೇಕಾದ ಆಹಾರ ಆರಿಸಿಕೊಳ್ಳುವುದೂ ಬೇಡದ್ದನ್ನು ಬಿಡುವುದೂ ಒಂದು ನಿಯಮಕ್ಕೆ ಒಳಪಟ್ಟಿದೆ ಎಂದರೆ ತಪ್ಪಿಲ್ಲ. ಜನಿಸಿದ ಶಿಶು ಮೊಲೆ ಚೀಪುವುದು ಒಂದು ನಿರಿಚ್ಛಾ ಪ್ರತಿಕ್ರಿಯೆ. ಇದನ್ನು ರುಚಿ ಬದಲಾವಣೆಯಿಂದ ಮಾರ್ಪಡಿಸಬಹುದು, ಚೀಪುವುದನ್ನು ಸಿಹಿ ಪದಾರ್ಥಗಳು ಹೆಚ್ಚಿಸುತ್ತವೆ. ಕಹಿ, ಉಪ್ಪು ಹಾಗೂ ಹುಳಿ ಪದಾರ್ಥಗಳಾದರೋ ಚೀಪುವುದನ್ನೇ ನಿಲ್ಲಿಸುತ್ತವೆ. ರುಚಿಯೇ ನಮ್ಮ ಮನಸ್ಸಿಗೆ ಹಿತವಾದ ಆಹಾರ ಎಂದು ಪ್ರಚೋದಿಸಿ ಅದನ್ನು ಸ್ವೀಕರಿಸುವಂತೆ ಪ್ರೇರೇಪಿಸುವುದು. ಮಕ್ಕಳಲ್ಲಿ ಹಾಗೂ ಇತರ ಕೆಳವರ್ಗದ ಜೀವಿಗಳಲ್ಲಿ ಆಹಾರದ ಸ್ವೀಕಾರ ಇಲ್ಲವೇ ತಿರಸ್ಕಾರ ಆಗುವುದು ಈ ರುಚಿವಿಶೇಷದಿಂದಲೇ. ಕೀಟಗಳಲ್ಲಿ ರುಚಿಗೆ ಪ್ರತಿಕ್ರಿಯೆ ಅವುಗಳ ಹೀರುಕೊಳವೆ ಉದ್ದಕ್ಕೆ ಚಾಚಿಕೊಳ್ಳುವುದು ಅಥವಾ ಮುದುಡಿಕೊಳ್ಳುವುದರಿಂದ

ತಿಳಿಯಬಹುದು. ಸಿಹಿಯನ್ನು ಬಾಯಿಗಾಗಲೀ ಕಾಲಿಗಾಗಲೀ ಸೋಕಿಸಿದರೆ ಹೀರುಕೊಳವೆ ಮುಂದಕ್ಕೆ ಚಾಚಿರುತ್ತದೆ. ನೊಣವನ್ನು ಹೊಟ್ಟೆಗಿಲ್ಲದಂತೆ ಹಸಿವೆ ಹುಟ್ಟಿಸಿ ಅತಿ ಕಡಿಮೆ ಸಾರವಿರುವ ದ್ರವವನ್ನು ಸೋಕಿಸಿದರೂ ಹೀರುಕೊಳವೆ ಚಾಚುವಂತೆ ಮಾಡಬಹುದು. ಅದೇ ನೊಣಕ್ಕೆ ಹೊಟ್ಟೆ ತುಂಬಿದ ವೇಳೆಯಲ್ಲಿ ಇದೇ ದ್ರವವನ್ನು ಸೋಕಿಸಿದರೆ ಯಾವ ಪ್ರತಿಕ್ರಿಯೆಯನ್ನೂ ತೋರಿಸುವುದಿಲ್ಲ. ಆದ್ದರಿಂದಲೇ ಹೀರುಕೊಳವೆಯ ಚಾಚುವಿಕೆಯನ್ನು ಕೀಟಗಳಲ್ಲಿ ರುಚಿಸೂಚಿ ಎಂದು ಪರಿಗಣಿಸಲಾಗಿದೆ.

ಕೆಳದರ್ಜೆಯ ಸಸ್ತನಿಗಳಲ್ಲಿ, ಉದಾಹರಣೆಗೆ ಇಲಿಗಳಲ್ಲಿ, ಆಹಾರವನ್ನು ಆಯ್ಕೆ ಮಾಡಿಕೊಳ್ಳುವಾಗ ತಮ್ಮ ದೇಹಕ್ಕೆ ಬೇಕಾದ ಸತ್ತ್ವಾಂಶಗಳುಳ್ಳ ಆಹಾರವನ್ನೇ ಚುನಾಯಿಸಿಕೊಳ್ಳುವ ಆಶ್ಚರ್ಯಕರ ಧೋರಣೆ ಇರುವುದು ಕಂಡುಬರುತ್ತದೆ. ಇದು ಅವುಗಳ ರುಚಿಗ್ರಾಹಕ ಸಾಮರ್ಥ್ಯವನ್ನೇ ಅವಲಂಬಿಸಿದೆ. ಪ್ರಯೋಗಶಾಲೆಯಲ್ಲಿರುವ ಇಲಿಗಳಿಗೆ ಪಿಷ್ಟ, ಜಿಡ್ಡು, ಪ್ರೋಟೀನ್, ವಿಟಮಿನ್ ಮತ್ತು ಲವಣಗಳುಳ್ಳ ಆಹಾರವಷ್ಟನ್ನೂ ಮುಂದಿಟ್ಟರೆ ತಮ್ಮ ಶ್ರಮ, ದಣಿವು ಇತ್ಯಾದಿಗಳನ್ನು ಅವಲಂಬಿಸಿದಂತೆ ತಮಗೆ ಸೂಕ್ತವಾದ ಆಹಾರವನ್ನೇ ಆರಿಸಿಕೊಳ್ಳುತ್ತವೆ. ಅಡ್ರಿನಲ್ ಗ್ರಂಥಿಯನ್ನು ಇಲಿಯಿಂದ ತೆಗೆದರೆ ಅವಲ್ಲಿ ಆಗ ಉಪ್ಪಿನ ಕೊರತೆ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಅವು ತಮ್ಮಷ್ಟಕ್ಕೆ ತಾವೇ ಉಪ್ಪನ್ನು ಹೆಚ್ಚಿಗೆ ಸೇರಿಸಿ ಕೊರತೆಯನ್ನು ಹೋಗಲಾಡಿಸಿಕೊಂಡು ಇತರ ಇಲಿಗಳಂತೆಯೇ ಆರೋಗ್ಯವಾಗಿ ಬೆಳೆಯುವುದು ಕಂಡುಬಂದಿದೆ. ಅವುಗಳಲ್ಲಿ ರುಚಿಗ್ರಾಹಕ ನರಗಳನ್ನು ಛೇದಿಸಿ ಅವಕ್ಕೆ ರುಚಿ ತಿಳಿಯದಂತೆ ಮಾಡಿದರೆ ಇದು ಸಾಧ್ಯವಿಲ್ಲ. ಈ ರೀತಿ ಉಪ್ಪಿನ ಕೊರತೆ ಹೋಗಲಾಡಿಸಿಕೊಳ್ಳದಿದ್ದರೆ ಆ ಇಲಿ ಜೀವದಿಂದ ಇರಲಾಗುತ್ತಿರಲಿಲ್ಲ. ಈ ಗುಣ ಮನುಷ್ಯರಲ್ಲೂ ಇದೆ ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಅಡ್ರಿನಲ್ ಗ್ರಂಥಿಯು ರೋಗವನ್ನು ಅನುಭವಿಸುತ್ತಿದ್ದ ಮಗು ಒಂದು ತನ್ನ ಉಪ್ಪಿನ ದಾಹವನ್ನು ಶಮನಮಾಡಿಕೊಳ್ಳಲು ಯಥೇಚ್ಛವಾಗಿ ಉಪ್ಪು ತಿನ್ನುತ್ತಿದ್ದುದು ವರದಿಯಾಗಿದೆ. ಅಡ್ರಿನಲ್ ರೋಗವಿರುವ ದೊಡ್ಡವರಲ್ಲೂ ಈ ರೀತಿಯ ಪ್ರತಿಕ್ರಿಯೆ ಉಂಟೇ ಅಂದರೆ ಇಲ್ಲ ಎನ್ನಬೇಕಾಗುತ್ತದೆ, ಏಕೆಂದರೆ ದೊಡ್ಡವರಲ್ಲಿ ಅವರ ಆಹಾರಸೇವನೆಯ ರೂಪರೇಖೆಗಳು ಹುಟ್ಟಿದಂದಿನಿಂದ ಬಂದಿರುವ ಅನುಭವವನ್ನು ಅವಲಂಬಿಸಿರುತ್ತದೆ. ಈ ಸಂದರ್ಭದಲ್ಲಿ ದೇಹದ ಹಿತಾಹಿತಗಳನ್ನು ಗಮನಿಸದೆ ತನಗೆ ಮೊದಲಿನಿಂದ ತಿಂದು ರೂಢಿಯಾಗಿರುವ ಆಹಾರವನ್ನೇ ಸೇವಿಸಲು ಪ್ರೇರೇಪಣೆ ಇರುತ್ತದೆ. ಮಾನವನ ಆಹಾರಾಭ್ಯಾಸಗಳು ಬಹುಮಟ್ಟಿಗೆ ಆತನ ಅಂತಸ್ತು, ಸಂಸ್ಕೃತಿ, ಸಂಪ್ರದಾಯ ಹಾಗೂ ಮನೋಭಾವಗಳನ್ನು ಪ್ರತಿಬಿಂಬಿಸುತ್ತವೆ.

ವಿಷಪದಾರ್ಥಗಳು ಅವುಗಳ ರುಚಿವಿಶೇಷದಿಂದಲೇ ತ್ಯಜಿಸಲ್ಪಡುತ್ತವೆ. ಆದರೆ ಎಲ್ಲ ವಿಷಗಳಿಗೂ ರುಚಿ ಇದ್ದೇ ತೀರಬೇಕೆಂಬ ನಿಯಮವಿಲ್ಲ. ಇಲಿ ಪಾಷಾಣ (ಆಲ್ಫನ್ಯಾಫ್ತೈಲ್ ಥಯೋ ಯೂರಿಯಾ) ಎಂಬ ಅತಿ ವಿಷವಸ್ತುವಿಗೆ ರುಚಿಯೇ ಇಲ್ಲ. ಸೀಸಲವಣಗಳು ಅತಿ ವಿಷ. ಆದರೆ ರುಚಿ ಸಿಹಿ. ಹಿಂದೆ ಈ ಲವಣಗಳು ಸಿಹಿರುಚಿಯಾಗಿ ಬಳಸಲ್ಪಟ್ಟು ಅನಾಹುತಗಳಾಗಿ ಅನಂತರ ಅವನ್ನು ಕೈಬಿಟ್ಟ ವರದಿಗಳಿವೆ. ರುಚಿಯೊಂದನ್ನೇ ಪ್ರಧಾನವಾಗಿಟ್ಟುಕೊಂಡು ಪದಾರ್ಥಗಳನ್ನು ಬಳಸುವುದು ಅಪಾಯಕಾರಿ. (ಆರ್.ಎಸ್.ವಿ)

**ಘ್ರಾಣಮಾಪನೆ ಮತ್ತು ರುಚಿಮಾಪನೆ :** ವ್ಯಕ್ತಿಯ ಘ್ರಾಣಗ್ರಾಹಕ ಹಾಗೂ ರುಚಿಯ ಅರಿವಿನ ಸಾಮರ್ಥ್ಯಗಳ ಅಳವು. ಅಂಥ ಅಳತೆಯಿಂದ ವಿವಿಧ ವ್ಯಕ್ತಿಗಳಲ್ಲಿ ಘ್ರಾಣ ಹಾಗೂ ರುಚಿಗ್ರಾಹಕ ಸಾಮರ್ಥ್ಯಗಳಲ್ಲಿ ಇರುವ ವ್ಯತ್ಯಾಸ, ಅದೇ ವ್ಯಕ್ತಿಯಲ್ಲಿ ರೋಗ ಇಲ್ಲವೇ ಬೇರೆ ಕಾರಣಗಳಿಂದ ಇವುಗಳಲ್ಲಿ ಉಂಟಾಗಬಹುದಾದ ವ್ಯತ್ಯಾಸ ಮುಂತಾದವನ್ನು ತಿಳಿಯಬಹುದು.

ಘ್ರಾಣಮಾಪನಕ್ಕೆ ಬಳಸುವ ಸಲಕರಣೆಯ ಹೆಸರು ಜ್ವಾರ್ಡಿಮೇಕರನ ಘ್ರಾಣಮಾಪಕ (ಆಲ್ಫ್ಯಾಕ್ಟೊಮೀಟರ್). ಇಲ್ಲಿ ಅಂಶಾಂಕಿಸಿದ ಒಂದು ಗಾಜಿನ ಕೊಳವೆ ಉಂಟು. ಇದರ ವ್ಯಾಸ ಸುಮಾರು ನಾಲ್ಕು ಮಿಲಿಮೀಟರ್. ಈ ಕೊಳವೆಯ ಒಂದು ತುದಿಗೆ ಮೂಗಿನ ಹೊಳ್ಳೆಯೊಳಗೆ ಇಟ್ಟುಕೊಳ್ಳುವಂತ ಆಕೃತಿ ಇದೆ. ಇನ್ನೊಂದು ತುದಿಯನ್ನು ಇದಕ್ಕಿಂತ ಸ್ವಲ್ಪ ದೊಡ್ಡದಾದ ಕೊಳವೆಯೊಳಗೆ ತೂರಿಸಲಾಗಿದೆ. ದೊಡ್ಡ ಕೊಳವೆಯ ಒಳಮೈಗೆ ಸ್ಪಂಜಿನಂತಿರುವ ವಾಸನಾರಹಿತ ರಬ್ಬರ್ ಪದರವನ್ನು ಹೊದೆಸಲಾಗಿದೆ. ಒಳಕೊಳವೆಯನ್ನು ಹೊರಕೊಳವೆಯೊಳಗೆ ಹೆಚ್ಚಾಗಿ ಅಥವಾ ಕಡಿಮೆಯಾಗಿ ತೂರಿದರೆ ಅಂಶಾಂಕನ ತೋರಿಸಿದಷ್ಟು ಭಾಗ ರಬ್ಬರ್ ಸ್ಪಂಜು ಅನಾವೃತವಾಗಿರತ್ತದೆ. ಸ್ಪಂಜನ್ನು ವಾಸನಾಯುಕ್ತ ವಸ್ತುವಿನ ನಿರ್ದಿಷ್ಟ ಸಾರದ ದ್ರಾವಣದಲ್ಲಿ ತೋಯಿಸಿ, ಒಳ ಕೊಳವೆಯಿಂದ ವಾಯುವನ್ನು ಮೂಗಿನ ಹೊಳ್ಳೆಯೊಳಕ್ಕೆ ಎಳೆದುಕೊಂಡರೆ ಅನಾವೃತವಾಗಿರುವ ಭಾಗದಿಂದ ಮಾತ್ರ (ಅಂದರೆ ನಿರ್ದಿಷ್ಟ ಪ್ರಮಾಣದಲ್ಲಿ) ಕಂಪುವಸ್ತು ಬಾಷ್ಪಶೀಲವಾಗಿ ಮೂಗಿಗೆ ತಲುಪುತ್ತದೆ. ಈ ರೀತಿ ಒಂದು ಕಂಪು ಬೀರುವ ವಸ್ತುವನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ಮೂಗಿನ ಒಳಹೊಗಿಸಿ ವ್ಯಕ್ತಿಯ ಘ್ರಾಣಗ್ರಾಹಕ ಸಾಮರ್ಥ್ಯವನ್ನು ಅಳೆಯಬಹುದು. ಯಾವ ವಸ್ತುವನ್ನು ಪ್ರಯೋಗಕ್ಕೆ ಉಪಯೋಗಿಸಿದೆ ಎಂಬುದು ವ್ಯಕ್ತಿಗೆ ತಿಳಿಯದಂತೆ ಒಂದು ಅಡ್ಡತಡಿಕೆಯನ್ನೂ ಈ ಸಲಕರಣೆಯಲ್ಲಿ ಅಳವಡಿಸಲಾಗಿದೆ. ವ್ಯಕ್ತಿಯ ಘ್ರಾಣಗ್ರಾಹಕ ಸಾಮರ್ಥ್ಯ ಆತ ವಾಸನೆಯನ್ನು ಆಘ್ರಾಣಿಸುವ ರಭಸವನ್ನು ಅವಲಂಬಿಸಿದೆ. ಆದ್ದರಿಂದ ಮೇಲೆ ಹೇಳಿರುವ ರೀತಿಯ ಘ್ರಾಣಮಾಪನೆ ಸೂಕ್ಷ್ಮರೀತಿಯದೆಂದು ಒಪ್ಪಲಾಗಿಲ್ಲ. ಇದರ ಬದಲು ಬೇರೆ




ಚಿತ್ರ 1. ಜ್ವಾರ್ಡಿಮೇಕರನ ಘ್ರಾಣಮಾಪಕ : 1. ನಾಸಿಕ ಭಾಗ, 2. ಅಡ್ಡತಡಿಕೆ, 3. ಅಂಶಾಂಕಿಸಿದ ಒಳಗಾಜಿನ ಕೊಳವೆಗೂ ಹೊರಗಿನ ದೊಡ್ಡ ಕೊಳವೆಗೂ ನಡುವೆ ಇರುವ ರಬ್ಬರ್ ಸ್ಪಂಜು

ಏರ್ಪಾಡಿನಿಂದ ಘ್ರಾಣಮಾಪನೆ ಮಾಡಲಾಗುತ್ತದೆ. ಈ ವಿಧಾನದಲ್ಲಿ ಪ್ರತಿಯೊಂದು ಕಂಪುಪರೀಕ್ಷೆಗೂ ಬೇರೆ ಕುಪ್ಪಿಯನ್ನೂ ಮೂಗಿನ ಹೊಳ್ಳೆಯೊಳಗೆ ಇಡುವ ನಾಸಿಕ ಭಾಗಗಳನ್ನೂ ಉಪಯೋಗಿಸಬೇಕು. ಮೊದಲು ನಾಸಿಕ ಭಾಗಗಳನ್ನು ವ್ಯಕ್ತಿ ಮೂಗಿನ ಹೊಳ್ಳೆಗಳೊಳಗೆ ಇರಿಸಿಕೊಳ್ಳಬೇಕು ಮತ್ತು ಬಾಯಲ್ಲಿ ಉಸಿರಾಡುತ್ತಿರಬೇಕು. ಸೂಚನೆ ಕೊಟ್ಟೊಡನೆ ಉಸಿರಾಡುವುದನ್ನು ನಿಲ್ಲಿಸಬೇಕು. ಪ್ರಯೋಗಕಾರ ಪಿಚಕಾರಿಯಿಂದ ನಿರ್ದಿಷ್ಟ ಪ್ರಮಾಣದಲ್ಲಿ ವಾಯುವನ್ನು ಕುಪ್ಪಿಯೊಳಕ್ಕೆ ನೂಕುತ್ತ ಅದೇ ವೇಳೆಯಲ್ಲಿ ಕೊಳವೆಯನ್ನು ಅದುಮಿ ಹಿಡಿದಿರುವ ಚಿಮುಟವನ್ನು ಸಡಿಲಿಸಬೇಕು.




ಚಿತ್ರ 2. ಪರಿಷ್ಕೃತ ಘ್ರಾಣಮಾಪಕ : 1. ನಾಸಿಕ ಭಾಗಗಳು, 2. ಚಿಮಟ, 3. ವಾಸನಾಯುಕ್ತ ದ್ರಾವಣ, 4. ಪಿಚಕಾರಿ

ಇದರಿಂದ ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಮತ್ತು ಕ್ಲುಪ್ತರಭಸದಿಂದ ವಾಸನಾಯುಕ್ತ ವಸ್ತುವಿನ ಬಾಷ್ಪವನ್ನು ಮೂಗಿನ ಹೊಳ್ಳೆಗಳ ಒಳಹೊಗಿಸಲು ಸಾಧ್ಯ. ನಾಸಿಕಭಾಗಗಳನ್ನು ಹೊರತೆಗೆದು ಮೂಗಿನಿಂದ ಉಸಿರಾಡಲು ಪ್ರಾರಂಭಿಸಿದಾಗ ಅಷ್ಟು ಪ್ರಮಾಣದ ಕಂಪು ವಸ್ತು ಘ್ರಾಣಕ್ಷೇತ್ರವನ್ನು ತಲುಪತ್ತದೆ. ಹೀಗೆ ವ್ಯಕ್ತಿಯ ಘ್ರಾಣಗ್ರಾಹಕ ಸಾಮರ್ಥ್ಯವನ್ನು ಕಂಡುಹಿಡಿಯಬಹುದು.

ರುಚಿಗ್ರಾಹಕ ಸಾಮರ್ಥ್ಯವನ್ನು ಅಳೆಯಲು ವಿಶೇಷ ಸಲಕರಣೆಗಳು ಬೇಕಿಲ್ಲ. 3% ಸಕ್ಕರೆಯ ದ್ರಾವಣ, 1% ಕ್ವಿನೀನಿನ ದ್ರಾವಣ, 5% ಉಪ್ಪಿನ ದ್ರಾವಣ. ಶೇ. 0.1% ಸಲ್ಫ್ಯೂರಿಕ್ ಆಮ್ಲ ಮತ್ತು ಇವನ್ನು ನಾಲಗೆಯ ಮೇಲೆ ನಿರ್ದಿಷ್ಟ ಸ್ಥಳದಲ್ಲಿ ಮಾತ್ರ ಸೋಕಿಸಲು ಸಹಾಯಕವಾಗಿ ಕುಂಚ ಅಥವಾ ಶಾಯಿ ತುಂಬುವ ಕೊಳವೆಯಂತೆ ಮೂತಿ ಉಳ್ಳ ಒಂದು ಗಾಜಿನ ನಾಳ ಇದ್ದರೆ ಸಾಕು. ವ್ಯಕ್ತಿ ಕಣ್ಣು ಮುಚ್ಚಿಕೊಂಡು ನಾಲಗೆಯನ್ನು ಹೊರ ಚಾಚಿರಬೇಕು. ನಾಲಗೆಯನ್ನು ಜೊಲ್ಲಿನಿಂದ ತೋಯಿಸಿರಬಾರದು.

ಅಲ್ಲದೆ ರುಚಿಯನ್ನು ಪತ್ತೆ ಮಾಡುವ ವೇಳೆಯಲ್ಲೂ ನಾಲಗೆಯನ್ನು ಹೊರಚಾಚಿಕೊಂಡೇ ಇರಬೇಕು. ನಾಲಗೆಯ ತುದಿಯ ಹಿಂಭಾಗ, ಎರಡು ಅಂಚುಗಳು ಮತ್ತು ಮೇಲ್ಮೈಗಳಲ್ಲಿ ಕೇವಲ ಸ್ಥಳೀಯವಾಗಿ ಮತ್ತು ಹರಡಿಕೊಳ್ಳದ ಪ್ರಮಾಣದಲ್ಲಿ ಈ ದ್ರಾವಣಗಳನ್ನು ಒಂದೊಂದಾಗಿ ಸೋಕಿಸಿ ವ್ಯಕ್ತಿಯ ರುಚಿಗ್ರಾಹಕ ಸಾಮರ್ಥ್ಯವನ್ನು ಅಳೆಯಬೇಕು. ಪ್ರತಿಯೊಂದು ಪ್ರಯೋಗಾನಂತರವೂ ಶುಚಿಯಾದ ನೀರಿನಲ್ಲಿ ಬಾಯಿ ಮುಕ್ಕಳಿಸಿ ಮುಂದಿನ ಪ್ರಯೋಗವನ್ನು ಪ್ರಾರಂಭಿಸಬೇಕು. ವ್ಯಕ್ತಿಯ ರುಚಿಗ್ರಾಹಕ ಸಾಮರ್ಥ್ಯದ ಸೂಕ್ಷ್ಮತೆಯನ್ನು ಪರೀಕ್ಷಿಸಬೇಕಾದರೆ ವಿವಿಧ ಸಾಂದ್ರತೆಯ ಉಪ್ಪು ನೀರನ್ನೂ ಆಮ್ಲ ದ್ರಾವಣವನ್ನೂ ಉಪಯೋಗಿಸಬೇಕಾಗುತ್ತದೆ. ಸಾಮಾನ್ಯವಾಗಿ ಸಾವಿರದಲ್ಲಿ ಒಂದು ಭಾಗ, 800ರಲ್ಲಿ ಒಂದು ಭಾಗ, ಹೀಗೇ 600, 500, 400, 300ರಲ್ಲಿ ಒಂದು ಭಾಗ ಉಪ್ಪು ಇರುವ ದ್ರಾವಣವನ್ನೂ 7000ರಲ್ಲಿ ಒಂದುಭಾಗ, 6000, 5500, 5000, 4000, 3000 ದಲ್ಲಿ ಒಂದು ಭಾಗ ಅಸೆಟಿಕ್ ಆಮ್ಲವಿರುವ ದ್ರಾವಣವನ್ನೂ ಇಂಥ ಮಾಪನಗಳಿಗೆ ಉಪಯೋಗಿಸುತ್ತಾರೆ. ಈಚೆಗೆ ವಿದ್ಯುತ್ ವಿಧಾನಗಳಿಂದ ರುಚಿ ಮತ್ತು ಘ್ರಾಣಮಾಪನಗಳನ್ನು ಮಾಡಲಾಗುತ್ತಿದೆ. ಇವು ಬಹು ಸೂಕ್ಷ್ಮಮಾಪನ ವಿಧಾನಗಳಾಗಿದ್ದು ಸಂಶೋಧನೆಗೆ ಹೆಚ್ಚು ಸಹಾಯಕವಾಗಿವೆ. (ಎಸ್.ಆರ್.ಆರ್.)

ಕನ್ನಡ ವರ್ಣಮಾಲೆಯಲ್ಲಿ ಚ ವರ್ಗದಲ್ಲಿನ ಮೊದಲ ಅಕ್ಷರ. ಚಿತ್ರದಲ್ಲಿ ಕಾಣಿಸಿರುವಂತೆ ಇದಕ್ಕೆ ಈಗಿನ ರೂಪದ ಅಲ್ಪಸ್ವಲ್ಪ ಹೋಲಿಕೆ ಕಂಡುಬರುವುದು ಗಂಗರ ಕಾಲದಲ್ಲಿ. ರೂಪ ಇನ್ನೂ ಸ್ಫುಟವಾಗುವುದು ಕಲ್ಯಾಣಿ ಚಾಳುಕ್ಯರ ಕಾಲಕ್ಕೆ. ಮುಂದಿನ ಶತಮಾನಗಳಲ್ಲಿ ಅಕ್ಷರದ ಪ್ರಾರಂಭದ ಎಡತುದಿಯಲ್ಲಿ ಸಣ್ಣ ಕೊಂಡಿ ಸೇರಿಕೊಳ್ಳುತ್ತದೆ. ಅಲ್ಲದೆ ಬ ಮತ್ತು ಭ ಕಾರಗಳಿಂದ ಇದನ್ನು ಪ್ರತ್ಯೇಕಿಸಲು ಇದರ ಬಲ ಭಾಗದಲ್ಲಿ ಹೆಚ್ಚಿನ ಒಂದು ಕೊಂಡಿ ಸೇರಿರುವುದು ಗಮನಾರ್ಹವಾದುದು.

ಇದೇ ರೂಪವೇ ವಿಶೇಷ ಬದಲಾವಣೆಯಿಲ್ಲದೆ ಮುಂದು ವರಿದು ಈಗಿನ ರೂಪವನ್ನು ತಾಳುತ್ತದೆ. ಈ ಅಕ್ಷರ ತಾಲವ್ಯ ಅಘೋಷ ಸ್ಪರ್ಶ ಧ್ವನಿಯನ್ನು ಸೂಚಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಇದು ಸ್ಪರ್ಶಕ್ಕೆ ಬದಲಾಗಿ ಅನುಘರ್ಷವೂ ಆಗಿರುತ್ತದೆ. (ಎ.ವಿ.ಎನ್.)

ಅಶೋಕ ಪ್ರ.ಶ.ಪೂ. 3ನೆಯ ಶತಮಾನ

ಶಾತವಾಹನ ಪ್ರ.ಶ. 2ನೆಯ ಶತಮಾನ

ಕದಂಬ ಪ್ರ.ಶ. 5ನೆಯ ಶತಮಾನ

ಗಂಗ ಪ್ರ.ಶ. 6ನೆಯ ಶತಮಾನ

ಬಾದಾಮಿ ಚಳುಕ್ಯ ಪ್ರ.ಶ. 6ನೆಯ ಶತಮಾನ

ರಾಷ್ಟ್ರಕೂಟ ಪ್ರ.ಶ. 9ನೆಯ ಶತಮಾನ

ಕಲ್ಯಾಣಿಚಾಳುಕ್ಯ ಪ್ರ.ಶ. 11ನೆಯ ಶತಮಾನ

ಕಳಚೂರಿ, ಹೊಯ್ಸಳ ಮತ್ತು ಸೇವುಣ. ಪ್ರ.ಶ. 13ನೆಯ ಶತಮಾನ

ವಿಜಯನಗರ ಪ್ರ.ಶ.15ನೆಯ ಶತಮಾನ

ಮೈಸೂರು ಅರಸರು ಪ್ರ.ಶ. 18ನೆಯ ಶತಮಾನ

**ಚಂಗಲಕೋಷ್ಠ :** ಜಿಂಜಿಬರೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ ಹಾಗೂ ಔಷಧಿಸಸ್ಯ. ಪುಷ್ಕರ ಮೂಲ, ಪದ್ಮಪತ್ರ ಪರ್ಯಾಯ ನಾಮಗಳು. ಕಾಸ್ಟಸ್ ಸ್ಪೀಷಿಯೋಸಸ್ ಶಾಸ್ತ್ರೀಯ ಹೆಸರು. ಸಾಮಾನ್ಯ ಇಂಗ್ಲಿಷಿನಲ್ಲಿ ಎಲಿಫೆಂಟ್ ಆ್ಯರೋರೂಟ್, ಸ್ವೀಟ್ ಕಾಸ್ಟಸ್ ಎಂಬ ಹೆಸರುಗಳಿವೆ. ಇದು ಭಾರತ ಮತ್ತು ಮಲಯಗಳ ಮೂಲದ್ದು. ಭಾರತಾದ್ಯಂತ ಮೈದಾನ ಪ್ರದೇಶಗಳಿಂದ ಹಿಡಿದು 1200 ಮೀ ಎತ್ತರದ ಬೆಟ್ಟ ಸೀಮೆಗಳವರೆಗೆ ಇದರ ವ್ಯಾಪ್ತಿ ಉಂಟು. ಇದು ಸುಮಾರು 1-3 ಮೀ ಎತ್ತರಕ್ಕೆ ಬೆಳೆಯುವ ಪೊದೆಸಸ್ಯ. ಕಾಂಡ ಪ್ರಕಂದ ಮಾದರಿಯದು. ಎಲೆಗಳು ದೊಡ್ಡವು ; ಆಕಾರ ಈಟಿಮೊನೆಯಂತೆ. ಹೂಗಳೂ ದೊಡ್ಡ ಗಾತ್ರದವು ; ಬಿಳಿಯ ದಳಗಳು ಮತ್ತು ಕೆಂಪು ವೃಂತಪತ್ರಕಗಳು ಇರುವುದರಿಂದ ಆಕರ್ಷಕವಾಗಿ ಕಾಣುತ್ತವೆ. ಗಿಡವನ್ನು ಪ್ರಕಂದದ ತುಂಡುಗಳಿಂದ ಬೆಳೆಸಲಾಗುತ್ತದೆ. ಹೆಚ್ಚು ತೇವವಿರುವ ಫಲವತ್ತಾದ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಬೆಳೆಸುವ ಸ್ಥಳದಲ್ಲಿ ನೆರಳಿರಬೇಕು. ಇದರ ಪ್ರಕಂದದಲ್ಲಿ ಅಧಿಕ ಮೊತ್ತದ ಪಿಷ್ಟವಿದೆ. ಆದ್ದರಿಂದ ಇದು ತಿನ್ನಲು ಯೋಗ್ಯವೆನಿಸಿದೆ. ಅಲ್ಲದೆ ಇದನ್ನು ಸಕ್ಕರೆಯ ಪಾಕದಲ್ಲಿ ಕುದಿಸಿ ಮುರಬ್ಬ ಮಾಡಿ ತಿನ್ನುವುದುಟು. ಬೇರು ಮತ್ತು ಪ್ರಕಂದಗಳಿಗೆ ಔಷಧೀಯ ಗುಣಗಳು ಇವೆ. ಪ್ರಕಂದ ಒಳ್ಳೆಯ ಶಕ್ತಿವರ್ಧಕ ಹಾಗೂ ವಿರೇಚಕ. ಕೆಮ್ಮು, ಚರ್ಮರೋಗ, ಅಗ್ನಿಮಾಂದ್ಯ, ಶೀತದಿಂದುಂಟಾಗುವ ಜ್ವರ ನಿವಾರಣೆಗೆ ಹಾಗೂ ಜಂತುನಾಶಕ್ಕೆ ಇದನ್ನು ಬಳಸುತ್ತಾರೆ. (ಎಸ್.ಐ.ಎಚ್.)

**ಚಂಜಂಬುವಿ, ಕೃಷ್ಣಪಿಳ್ಳೆ : 1911-1948.** ಮಲೆಯಾಳಂ ಸಾಹಿತ್ಯದ ರಮ್ಯ ಸಂಪ್ರದಾಯದ ಕವಿ. 1930–35ರ ಕಾಲದಲ್ಲಿ ಮಲೆಯಾಳಂನಲ್ಲಿ ಕುಮಾರನ್ ಆಶಾನ್, ವಳ್ಳತ್ತೋಳ್, ಉಳ್ಳೂರ್, ಶಂಕರನ್ ಕುರುಪ್ ಇವರಿಗಿಂತ ಭಿನ್ನರೀತಿಯ ಕಾವ್ಯ ಪರಂಪರೆಯೊಂದನ್ನು ಸೃಷ್ಟಿಸಿದ. ಇಡಪ್ಪಳ್ಳಿ ರಾಘವನ್ ಪಿಳ್ಳೆಯ ಗೆಳೆಯನಾಗಿದ್ದ ಈತ ಆತನ ಜೊತೆಯಲ್ಲಿ ಪ್ರೇಮಾನುಭೂತಿ ತುಂಬಿದ ಕವಿತೆಗಳನ್ನು ಹಾಡಿದ. ಇವು ವಿಷಾದಾತ್ಮಕತೆಯ ಸ್ವರ ಮೊಳಗುವ ಕವಿತೆಗಳಾಗಿದ್ದುವು. ಕೃಷ್ಣಪಿಳ್ಳೆಯ ಕಾವ್ಯ ರಾಘವನ್ ಪಿಳ್ಳೆಯ ಕಾವ್ಯಕ್ಕಿಂತ ಹೆಚ್ಚು ಸಂಕೀರ್ಣವಾದುದು. ಕವಿ ಬದುಕಿದ್ದುದು ಕೇವಲ 36 ವರ್ಷ ಮಾತ್ರ. ಇಂಗ್ಲೆಂಡಿನ ಕೀಟ್ಸ್ ಕವಿಯಂತೆ ಈತನದು ಅತ್ಯುತ್ಕೃಷ್ಟ ಪ್ರತಿಭೆ. ಈತನ ಜೀವನಾನುಭವಗಳೆಲ್ಲ ಕವಿತೆಗಳಾಗಿ ಪರಿಣಮಿಸಿದವು. ಲೋಕದ ನಿರ್ದಯತೆ, ಕಾಠಿಣ್ಯ, ಕಾಪಟ್ಯಗಳನ್ನು ಈತ ತನ್ನ ಕೃತಿಗಳಲ್ಲಿ ನಿಶಿತವಾಗಿ ಖಂಡಿಸಿದ್ದಾನೆ:

ಕಪಟಲೋಕದಲ್ಲಿ ಆತ್ಮಾರ್ಥವಾದೊಂದು
ಹೃದಯವಿದ್ದುದೇ ನನ್ನ ಪರಾಜಯ !

ಎಂದು ತನ್ನ ಹೃದಯದಳಲನ್ನು ತೋಡಿಕೊಂಡಿದ್ದಾನೆ. ಕೆಲವೊಮ್ಮೆ ಬದುಕಿಗಿಂತ ಮರಣವೇ ಮಧುರವಾಗಿ ಈತನಿಗೆ ತೋರಿದೆ.

ಸರಳವಾದ ನಿರೂಪಣೆ, ಮಾದಕವಾದ ಸಂಗೀತ ಮಾಧುರ್ಯ, ಯುವಲೋಕಕ್ಕೆ ಹೃದ್ಯವಾಗಿ ಕಾಣಿಸುವ ಪ್ರೇಮಾನುಭೂತಿ ತುಂಬಿದ ಭಾವಾತ್ಮಕತೆ–ಇವು ಕೃಷ್ಣಪಿಳ್ಳೆಯ ವೈಶಿಷ್ಟ್ಯಗಳು. ಈ ಬಗೆಯ ಸಂಗೀತರಸ ತುಂಬಿತುಳುಕುವ ಕವಿತೆಗಳನ್ನು ಅಲ್ಲಿಯ ತನಕ ಮಲೆಯಾಳಂ ಭಾಷೆಯಲ್ಲಿ ಯಾರೂ ಬರೆದಿರಲಿಲ್ಲ. ಅದು ಕೇವಲ ಬಾಹ್ಯ ಸಂಗೀತವಾಗಿರದೆ ಹೃದಯಾಂತರಾಳದಿಂದ ಅನಾಯಾಸವಾಗಿ ಹೊರಹೊಮ್ಮಿದ ಆಂತರಿಕ ಸಂಗೀತವಾಗಿತ್ತು. ಜೊತೆಗೆ ಸ್ನಿಗ್ಧಕೋಮಲವಾದ ಪದಸಂಯೋಜನೆ ಆ ಸಂಗೀತದ ಶ್ರವಣಸುಭಗತೆಯನ್ನು ಹೆಚ್ಚಿಸಿತು.

ಕರುಣರಸ ಬೆರೆತ ಪ್ರೇಮಾನುಭೂತಿಯ ಆವಿಷ್ಕರಣಗಳಾಗಿದ್ದ ಈತನ ಕವಿತೆಗಳು ಜನಸಾಮಾನ್ಯರ ಮೇಲೆ, ಅದರಲ್ಲೂ ವಿಶೇಷವಾಗಿ ಯುವಜನರ ಮೇಲೆ, ಹೆಚ್ಚು ಪ್ರಭಾವವನ್ನು ಬೀರಿದವು. ಈತನ ಕವನಗಳಲ್ಲಿ ಮನುಷ್ಯಸಹಜವಾದ ಲಲಿತಭಾವಗಳೂ ಋಜುವಾದ ಚಿಂತನೆಗಳೂ ಹೆಚ್ಚು. ದುರ್ಗ್ರಾಹ್ಯವಾದ ಆಶಯಗಳಾಗಲೀ ಸಹಾನುಭೂತಿ ಪಡೆಯಲು ಅನರ್ಹವಾದ ಭಾಗಗಳಾಗಲೀ ಅವುಗಳಲ್ಲಿಲ್ಲ. ಈತ ಒಬ್ಬ ಚಿಂತಕನಲ್ಲ ಎಂಬುದೂ ನಿಜವೇ.

ರಮಣನ್ ಎಂಬುದು ಈತನ ಗೀತನಾಟಕ. ಇದು ಒಂದು ಆರಣ್ಯಕ ವಿಲಾಪ ಕಾವ್ಯ. ಇದರ ರೂಪಶಿಲ್ಪ ಮಿಲ್ಟನ್ನನ ಲಿಸಿಡಾಸ್ ಮೊದಲಾದವನ್ನು ನೆನಪಿಸುವಂತಿದ್ದರೂ ಇಡೀ ಕೃತಿಯ ಒಟ್ಟು ಸ್ವರ ಮತ್ತು ಸಂವಿಧಾನಗಳು ತೀರ ಸ್ವೋಪಜ್ಞವಾಗಿವೆ. ಇದರಲ್ಲಿ ಪ್ರಾರಂಭವಾದ ಈತನ ಕ್ರಾಂತಿಪ್ರವೃತ್ತಿ ರಕ್ತಪುಷ್ಪಂಜಳ್‌ನಲ್ಲಿಯೂ ಮುಂದುವರಿಯಿತು. ವಾಟಿಕ್ಕುಲ, ಕೊಡುಂಗಾಟ್ಟ್, ನವವರ್ಷನಾಂದಿ, ತೀಪ್ಪೊರಿ, ಇನ್ನತ್ತೆನಿಲ–ಎಂಬ ಕವನಗಳು ಕಾರ್ಮಿಕಮಾಲೀಕ ಸಂಘಟನೆಯನ್ನು ತ್ವರಿತಗೊಳಿಸಿ ಸಾಮಾಜಿಕ ಸಮಾನತೆಯನ್ನು ಉಂಟುಮಾಡಬೇಕೆಂಬ ಉದ್ದೇಶದಿಂದ ರಚಿತವಾದುವು. ಒಬ್ಬ ಸಾಧುಪ್ರಾಣಿಯಾದ ಹೊಲೆಯ ನೆಟ್ಟು ಬೆಳೆಸಿದ ಬಾಳೆಯಲ್ಲಿ ಬಿಟ್ಟ ಗೊನೆ, ಅದರ ಬಗೆಗೆ ಆಸೆಯಿಂದ ಕಣ್ಣಿಟ್ಟಿದ್ದ ಆತನ ಮಕ್ಕಳು, ಅದನ್ನು ಕೊಯ್ದುಕೊಂಡು ಹೋಗುವ ಮಾಲೀಕ–ಇವುಗಳ ಚಿತ್ರಣ ವಾಟಿಕ್ಕುಲ (ಬಾಳೆಗೊನೆ) ಕವನದಲ್ಲಿದೆ. ಇಲ್ಲಿ ಶೋಷಣೆ, ಪ್ರತೀಕಾರಗಳ ಧ್ವನಿಯಿದೆ.

ಇಷ್ಟಿದ್ದರೂ ಚಂಜಂಬುಟಿ ಒಬ್ಬ ಕ್ರಾಂತಿಕಾರಿ ಕವಿಯೆಂಬುದನ್ನು ಕೆಲವರು ಒಪ್ಪಿಲ್ಲ. ಏಕೆಂದರೆ ಕ್ರಾಂತಿಕಾರಿಯೊಬ್ಬನಿಗೆ ಇರಬೇಕಾದ ಯಾಥಾರ್ಥ್ಯ ಪ್ರಜ್ಞೆಯಾಗಲೀ ದೃಢ ಪ್ರತಿಜ್ಞೆಯಾಗಲೀ ಕವಿಗಿರಲಿಲ್ಲವೆಂದು ಅವರ ವಾದ. ಈತ ಪ್ರಧಾನವಾಗಿ ರಮ್ಯಕವಿ.

ಈತನ ದೋಷಗಳು ಏನೇ ಇರಲಿ, ಮಲೆಯಾಳಂ ಸಾಹಿತ್ಯದಲ್ಲಿ ಈತನ ಕವನಗಳು ಶಾಶ್ವತವಾದ ಸ್ಥಾನವನ್ನು ಗಳಿಸಿಕೊಂಡಿವೆ. (ಕೆ.ಕೆ.ಎಸ್.)

**ಚಂಡದಂಡೇಶ :** ಕಂಚಿಯಲ್ಲಾಳಿದ ಒಬ್ಬ ದೊರೆ. ಬನವಾಸಿಯಲ್ಲಿ ಆಳಿದ ಕದಂಬರ ಅರಸನಾದ ರವಿವರ್ಮ ಸೋಲಿಸಿದ ಅರಸರಲ್ಲಿ ಪ್ರಮುಖನಾದವನು. ಕಾಂಚೀಶ್ವರನೆನಿಸಿದ ಚಂಡದಂಡನೆಂದು ತಾಮ್ರಶಾಸನದಲ್ಲಿ ಹೇಳಿದೆ. ಈತನನ್ನು ಕಾಂಚೀಪತಿಯೆಂದು ವರ್ಣಿಸಿರುವುದರಿಂದ, ಆಗ (5ನೆಯ ಶತಮಾನದ ಅಂತ್ಯಭಾಗ) ಕಂಚಿಯಲ್ಲಿ ಪಲ್ಲವರು ಆಳುತ್ತಿದ್ದರೆಂಬುದು ತಿಳಿದಿದೆಯಾದ್ದರಿಂದ, ಈ ಚಂಡದಂಡೇಶ ಪಲ್ಲವವಂಶಕ್ಕೆ ಸೇರಿದವನೆಂದು ಊಹಿಸಲಾಗಿದೆ. ಕದಂಬ 1ನೆಯ ಕೃಷ್ಣವರ್ಮನ ಮಗನಾದ ವಿಷ್ಣುವರ್ಮನಿಗೂ ರವಿವರ್ಮನಿಗೂ ನಡುವೆ ನಡೆದ ಕದನದಲ್ಲಿ ಚಂಡದಂಡ ವಿಷ್ಣುವರ್ಮನಿಗೆ ಬೆಂಬಲವಾಗಿ ನಿಂತು ಕಾದಿದನೆಂದೂ, ಆದರೆ ವಿಷ್ಣುವರ್ಮನನ್ನು ಕೊಂದ ಬಳಿಕ ರವಿವರ್ಮ ಚಂಡದಂಡೇಶನ ವಿರುದ್ಧ ಏರಿಹೋಗಿ ಅವನನ್ನು ಸೋಲಿಸಿದನೆಂದೂ ಹೇಳಲಾಗಿದೆ. ಆದರೆ ಇದುವರೆಗೆ ತಿಳಿದಂತೆ ಪಲ್ಲವರ ವಂಶಾವಳಿಯಲ್ಲಿ ಚಂಡದಂಡ ಎಂಬ ಹೆಸರೇ ಕಾಣಿಸುವುದಿಲ್ಲ. ರವಿವರ್ಮನ ತಂದೆಯಾದ ಮೃಗೇಶವರ್ಮನೂ ಪಲ್ಲವ ಅರಸನೊಬ್ಬನೊಡನೆ ಕಾದಿದನೆಂದು ಹೇಳಿದೆ. ಆತ ಇದೇ ಚಂಡದಂಡೇಶನೇ ಆಗಿರಬಹುದೆಂದು ಊಹಿಸಲಾಗಿದೆ. ಆದರೆ ಇದುವರೆಗೂ ಚಂಡದಂಡೇಶನನ್ನು ಕುರಿತು ಖಚಿತವಾದ ಯಾವ ವಿವರಗಳೂ ಲಭ್ಯವಾಗಿಲ್ಲ. (ಜಿ.ಬಿ.ಆರ್.)

**ಚಂಡಮಾರುತ :** ಉಷ್ಣವಲಯದಲ್ಲಿ ತಲೆದೋರುವ ಒಂದು ಆವರ್ತಮಾರುತದ **(ನೋಡಿ)** ಹೆಸರು (ಹರಿಕೇನ್). ಸಾಮಾನ್ಯವಾಗಿ ಇದರ ಬೀಸುವೇಗ ಗಂಟೆಗೆ 121ಕಿ.ಮೀ ಗಳಿಗಿಂತ ಅಧಿಕವಾಗಿರುತ್ತದೆ. ಚಂಡಮಾರುತದ ಶ್ರಾಯ ಹೆಚ್ಚುಕಡಿಮೆ ಜೂನಿನಿಂದ ಅಕ್ಟೋಬರ್ ವರೆಗೆ. ಇದರ ಅತಿ ತೀವ್ರವಾದ ಸುಳಿ (ವೋರ್ಟೆಕ್ಸ್) ಮತ್ತು ಸಂವಾದೀ ಸಂಮರ್ದ ಓಟದ (ಪ್ರೆಷರ್ ಗ್ರೇಡಿಯಂಟ್) ಪರಿಣಾಮವಾಗಿ ಪ್ರಬಲ ಮಾರುತಗಳು ಉಂಟಾಗುತ್ತವೆ. ಉತ್ತರಾರ್ಧವಲಯದಲ್ಲಿ ಇವು ಅಪ್ರದಕ್ಷಿಣವಾಗಿಯೂ ದಕ್ಷಿಣಾರ್ಧ ವಲಯದಲ್ಲಿ ಪ್ರದಕ್ಷಿಣವಾಗಿಯೂ ಬೀಸುತ್ತವೆ. *

**ಚಂಡಿ : ನೋಡಿ– ಉದ್ದಾಲಕ**

**ಚಂಡೀಗಢ :** ಕೇಂದ್ರಾಡಳಿತ ಪ್ರದೇಶ. ದೆಹಲಿಗೆ ಉತ್ತರ–ವಾಯವ್ಯದಲ್ಲಿ 151ಕಿ.ಮೀ. ದೂರದಲ್ಲಿದೆ. ವಿಸ್ತೀರ್ಣ 114 ಚ.ಕಿಮೀ. ಒಟ್ಟು ಜನಸಂಖ್ಯೆ 960787. ನಗರ ಭಾಗದ ಜನಸಂಖ್ಯೆ 1,025682. ಚಂಡೀಗಢ ಭಾರತದ ಅತ್ಯಂತ ಶುಚಿಯಾದ, ಸುಂದರ ನಗರ. ಲಿಂಗದ ಅನುಪಾತ 1000 ಗಂಡಸರಿಗೆ 829 ಹೆಂಗಸರು. ಈ ನಗರ, ವಾಸ್ತುಶಿಲ್ಪ ಪ್ರಪಂಚದ ಒಂದು ವೈಶಿಷ್ಟ್ಯ. ನಾರ್ಮ ಎವೆನ್ಸನ್ ಬರೆದಿರುವಂತೆ ಇದರ ಕಲ್ಪನೆಯೇ ಒಂದು ನವ್ಯ ಕವಿತೆಯಿದ್ದಂತೆ. ಇದು ತಂತ್ರಜ್ಞಾನಕ್ಕೂ ವೇಗ–ಚಲನೆಗಳಿಗೂ ಬೆಳಕು ತುಂಬಿದ ಅನಂತ ದೃಷ್ಟಿಪಥಗಳನ್ನು ತೆರೆಯುವ ಮಾನವಕೃತ ವಿಶಾಲ ಆಯಾಮಗಳ ಜಗತ್ತಿಗೂ ಸಲ್ಲಿಸಿದ ಸಂಕೀರ್ತನೆಯಂತಿದೆ.

ಪಂಜಾಬ್ ವಿಶ್ವವಿದ್ಯಾಲಯ ಕ್ಷೇತ್ರದ ಒಂದು ನೋಟ

ಚಂಡೀಗಢದ ಇತಿಸಹಾದ ಆರಂಭ 1947ರಲ್ಲಿ, ಭಾರತದ ವಿಭಜನೆ ಆದಾಗ. ಪಂಜಾಬ್ ಪ್ರಾಂತ್ಯದ ಪಶ್ಚಿಮ ಭಾಗ ಅದರ ರಾಜಧಾನಿಯಾದ ಲಾಹೋರಿನೊಂದಿಗೆ ಪಾಕಿಸ್ತಾನಕ್ಕೆ ಹೋಯಿತು. ಪೂರ್ವಭಾಗ ಭಾರತದ ಪಾಲಿಗೆ ಬಂತು. ಪೂರ್ವ ಪಂಜಾಬ್ ಸರ್ಕಾರ ಸ್ವಲ್ಪ ಕಾಲ ಜಲಂಧರ್‌ನಿಂದ ಆಡಳಿತ ನಡೆಸುತ್ತಿತ್ತು. ಆದರೆ ಕಚೇರಿಗಳನ್ನು ನಡೆಸಲು ಸಾಕಷ್ಟು ಸ್ಥಳಾವಕಾಶವಿಲ್ಲದ್ದರಿಂದ ರಾಜಧಾನಿಯನ್ನು ತಾತ್ಕಾಲಿಕವಾಗಿ ಸಿಮ್ಲಾ ನಗರಕ್ಕೆ ವರ್ಗಾಯಿಸಲಾಯಿತು. ಹೊಸ ಸರ್ಕಾರದ ರಾಜಧಾನಿಯಾಗಲು ಹಲವು ನಗರಗಳು ಮುಂದೆ ಬಂದು ತಂತಮ್ಮಲ್ಲೇ ಸ್ಪರ್ಧಿಸಿದುವು. ಹಳೆಯ ನಗರವೊಂದನ್ನು ಮಾರ್ಪಡಿಸಿಕೊಳ್ಳುವುದಕ್ಕಿಂತ ಹೊಸ ನಗರವೊಂದನ್ನು ನಿರ್ಮಿಸುವುದೇ ಅಗ್ಗವೂ ಸರಳವೂ ಆದುದು ಎಂದು ಭಾವಿಸಲಾಯಿತು. ಅದಕ್ಕಾಗಿ ಸೂಕ್ತ ಸ್ಥಳದ ಅನ್ವೇಷಣೆ ಆರಂಭವಾಯಿತು. ವಾಯು ಸರ್ವೇಕ್ಷಣೆ ನಡೆಸಿದಮೇಲೆ, ವಿವಿಧ ದೃಷ್ಟಿಗಳಿಂದ ಈಗಿನ ನಗರದ ನಿವೇಶನವನ್ನು ಆರಿಸಲಾಯಿತು. ಪಂಜಾಬಿನ ನಗರಗಳಿಗೂ ದೆಹಲಿಗೂ ಈ ಸ್ಥಳದ ಸಾಮೀಪ್ಯ, ರಸ್ತೆ–ರೈಲು ಸಂಪರ್ಕ, ನೆಲದ ಅಡಿಯ ನೀರಿನ ಸೌಲಭ್ಯ, ಆಗ್ನೇಯದ ಕಡೆಗೆ ನೆಲ ಇಳಿಜಾರಾಗಿರುವುದರಿಂದ ಜಲೋತ್ಸಾರಣ ಸೌಕರ್ಯ, ಬೆಟ್ಟ ತೊರೆಗಳಿಗೆ ಹತ್ತಿರವಿರುವುದರಿಂದ ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ವಸ್ತುಗಳಲ್ಲಿ ಕೆಲವನ್ನು ಸುಲಭವಾಗಿ ದೊರಕಿಸಿಕೊಳ್ಳುವ ಸಾಧ್ಯತೆ, ಹಿಮಾಲಯ ಪರ್ವತಗಳ ಭವ್ಯ ಹಿನ್ನೆಲೆ–ಇವು ಈ ಸ್ಥಳವನ್ನು ಆರಿಸಲು ಕೆಲವು ಮುಖ್ಯ ಕಾರಣಗಳು. ಈ ನಗರದಿಂದ 13 ಮೈ. ದೂರದಲ್ಲಿರುವ ಪುರಾತನ ಚಂಡೀ ಮಂದಿರದಿಂದಾಗಿ ಇದಕ್ಕೆ ಚಂಡೀಗಢವೆಂಬ ಹೆಸರು ನೀಡಲಾಗಿದೆ.

ನಗರದ ಪ್ರಥಮ ನಕ್ಷೆಯನ್ನು ನ್ಯೂಯರ್ಕಿನಲ್ಲಿ ಅಲ್ಬರ್ಟ್ ಮೇಯರ್ ಎಂಬವರು ಮ್ಯಾತ್ಯೂ ನಾವಿಕಿಯೊಂದಿಗೆ ಸೇರಿ ರಚಿಸಿದರು. ೧೯೫೦ರಲ್ಲಿ ವಿಮಾನಾಪಘಾತವೊಂದರಲ್ಲಿ ನಾವಿಕಿ ತೀರಿಕೊಂಡರು. ಆಗ ಈ ಕೆಲಸವನ್ನು ಜಗದ್ವಿಖ್ಯಾತ ವಾಸ್ತುಶಿಲ್ಪಿ ಲ ಕಾರ್ಬ್ಯೂಸ್ಯೇಗೆ ವಹಿಸಲಾಯಿತು. ಕಾರ್ಬ್ಯೂಸ್ಯೇಯ ಸೋದರ ಸಂಬಂಧಿ ಪ್ಯೇರ್ ಷಾನ್ರೆ, ಇಂಗ್ಲಿಷ್ ವಾಸ್ತುಶಿಲ್ಪಿಗಳಾದ ಇ. ಮ್ಯಾಕ್ಸ್‌ವೆಲ್ ಫ್ರೈ ಮತ್ತು ಜೇನ್ ಬಿ. ಡ್ರ್ಯೂ ಇವರು ಕಾರ್ಬ್ಯೂಸ್ಯೇಗೆ ಸಹಾಯ ಮಾಡಿದರು. 1951-1965ರಲ್ಲಿ ಚಂಡೀಗಢದಲ್ಲಿ ಬಹುತೇಕ ಸಾರ್ವಜನಿಕ ಹಾಗೂ ಖಾಸಗಿ ಕಟ್ಟಡಗಳು ಇವರ ನೇತೃತ್ವದಲ್ಲಿ ನಿರ್ಮಿತವಾದವು. ನಿಷ್ಠಾವಂತರಾದ ಭಾರತೀಯ ವಾಸ್ತುಶಿಲ್ಪಿಗಳ ಹಾಗೂ ನಗರಯೋಜಕರ ತಂಡವೊಂದು ಈ ಕಾರ್ಯದಲ್ಲಿ ನೆರವು ನೀಡಿತು.

ಹೊರ ಹಿಮಾಲಯ ಪರ್ವತಪ್ರದೇಶದಲ್ಲಿ ಮನೋಹರವಾದ ಸಿವಾಲಿಕ್ ಬೆಟ್ಟದ ತಪ್ಪಲಿನಲ್ಲಿ ನಿರ್ಮಿತವಾಗಿರುವ ಈ ನಗರದ ಪೂರ್ವಕ್ಕೆ ಸುಖ್ನಾ ಚೋ ಮತ್ತು ಪಶ್ಚಿಮಕ್ಕೆ ಪಾಟಿಯಾಲಿ ರಾವ್ ನದಿಗಳು ಹರಿಯುತ್ತವೆ. ಇವು ಮಳೆಗಾಲದಲ್ಲಿ ಮಾತ್ರ ಪ್ರವಾಹದಿಂದ ಕೂಡಿರುತ್ತವೆ. ಹೀಗೆ ಈ ನಗರಕ್ಕೆ ಮೂರು ಕಡೆಗಳಲ್ಲಿ ನೈಸರ್ಗಿಕ ಎಲ್ಲೆಕಟ್ಟುಗಳಿವೆ. ದಕ್ಷಿಣದ ಕಡೆಯ ನೆಲ ಇಳಿಜಾರಾಗಿ ತೆರೆದಂತಿರುವುದರಿಂದ ಭವಿಷ್ಯದಲ್ಲಿ ನಗರದ ಬೆಳೆವಣಿಗೆಗೆ ಧಾರಾಳವಾದ ಅವಕಾಶವುಂಟು.

ಚಂಡೀಗಢ ನಗರ ಲ ಕಾರ್ಬ್ಯೂಸ್ಯೇ ಯೋಜನೆಯ ಕಲ್ಪನಾಲೋಕದ ಆವಿಷ್ಕಾರ. ಮಾನವ ನಿರ್ಮಿತ ಕೃತಿಗೆ ಆಂತರಿಕ ನಿಯಮವೊಂದು ಚೇತನ ನೀಡಬೇಕು–ಎಂಬುದು ಅವರ ಅಭಿಪ್ರಾಯ. ಇಡೀ ನಗರ ಒಂದು ಶರೀರ ಎಂಬಂತೆ ಕಲ್ಪಿಸಿಕೊಂಡಿರುವುದು ಸಹಜವೇ. ನಗರಕ್ಕೆ ಶಿರಃಪ್ರಾಯವಾಗಿರತಕ್ಕದ್ದು ಆಡಳಿತ ವಿಭಾಗ. ಸಚಿವಾಲಯ, ಉಚ್ಚ ನ್ಯಾಯಾಲಯ, ವಿಧಾನಭವನ ಮುಂತಾದ ಕಟ್ಟಡಗಳು ಇರುವುದು ಇಲ್ಲಿ. ವಾಣಿಜ್ಯಕೇಂದ್ರವೇ ನಗರದ ಹೃದಯಭಾಗ. ವಿಶ್ವವಿದ್ಯಾಲಯ ಇದರ ಮಿದುಳು, ಜ್ಞಾನಕೇಂದ್ರ, ಸ್ನಾತಕೋತ್ತರ ವೈದ್ಯ ಸಂಶೋಧನ ಶಿಕ್ಷಣ ಸಂಸ್ಥೆ, ಎಂಜಿನಿಯರಿಂಗ್ ಕಾಲೇಜ್, ವಸ್ತುಸಂಗ್ರಹಾಲಯ ಮುಂತಾದ ಹಲವು ಕಟ್ಟಡಗಳು ಇಲ್ಲಿವೆ. ನಗರದ ಕೈಗಾರಿಕಾ ಕ್ಷೇತ್ರ ಕೈ ಇದ್ದಂತೆ. ಹೀಗೆಂದು ಜೇನ್ ಡ್ರ್ಯೂ ಇದನ್ನು ವರ್ಣಿಸಿದ್ದಾರೆ. ನಗರ ಯೋಜನೆಯನ್ನು ಕುರಿತ ಇಂಥ ಶಾರೀರಿಕ ದೃಷ್ಟಿ ಜೀವಂತ, ಅರ್ಥಪೂರ್ಣ.

ನಗರವನ್ನು 46 ವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವಿಭಾಗವೂ ಒಂದು ಪ್ರತಿವೇಶ ಘಟಕ. ಒಂದೊಂದು ವಿಭಾಗದಲ್ಲೂ ವಸತಿಗಳ ಜೊತೆಗೆ ಅಂಗಡಿಗಳು, ಪ್ರಾಥಮಿಕ ಶಾಲೆ, ಉದ್ಯಾನಗಳು, ತೋಟಗಳು ಇವೆ. ಇವು ಜನರ ನಿತ್ಯಾಗತ್ಯಗಳನ್ನು ಪೂರೈಸುತ್ತವೆ. ಒಳ್ಳೆಯ ನೆರೆಹೊರೆಯನ್ನು ಬೆಳೆಸುವ ಪ್ರಯತ್ನವಿದು. ಸಾಮಾಜಿಕವಾಗಿ ಜನರು ಪರಸ್ಪರ ಹೆಚ್ಚು ಬೆರೆಯುವಂತೆ ಅವಕಾಶ ಕಲ್ಪಿಸುವುದು ಈ ಬಗೆಯ ರಚನೆಯ ಮುಖ್ಯೋದ್ದೇಶ. ಒಳ್ಳೆಯ ನೆರೆಹೊರೆ ಸಂಬಂಧ ನಮ್ಮ ಅನೇಕ ನಗರಗಳಲ್ಲಿ ಇಲ್ಲವೆಂಬುದನ್ನು ಮನಗಂಡು ಈ ನಗರವನ್ನು ಹೀಗೆ ಯೋಜಿಸಲಾಗಿದೆ. ನಗರದ ನಡುವೆ ಉತ್ತರದಿಂದ ದಕ್ಷಿಣದ ಕಡೆಗೆ ನೇರವಾಗಿ ಹೋದರೆ ಸ್ಥೂಲವಾಗಿ ವಿಭಾಗಗಳ ಜನಸಾಂದ್ರತೆ ಅಧಿಕವಾಗುವುದನ್ನೂ ವರಮಾನ ಮಟ್ಟ ಕಡಿಮೆಯಾಗುವುದನ್ನೂ ಕಾಣಬಹುದು.

ಈ ನಗರಯೋಜನೆಯ ಇನ್ನೊಂದು ಗಮನಾರ್ಹ ಅಂಶವೆಂದರೆ ರಸ್ತೆ ವ್ಯವಸ್ಥೆ. ನಗರದ ಆವಶ್ಯಕತೆ ಹಾಗೂ ಸೌಕರ್ಯಗಳಿಗೆ ಅನುಗುಣವಾಗಿ ಇರುವಂತೆ ಇದನ್ನು ಕಲ್ಪಿಸಿಕೊಂಡು ಸುಂದರವಾಗಿ ವಿನ್ಯಾಸಗೊಳಿಸಲಾಗಿದೆ. ಒಟ್ಟಿನಲ್ಲಿ ಇದರದು ಸರಳು ಚೌಕಟ್ಟಿನ ನಮೂನೆ. ಆದರೆ ಈ ಜಾಲದಲ್ಲಿ ಏಳು ಬಗೆಯ ರಸ್ತೆಗಳಿವೆ (ಈಚೆಗೆ ಎಂಟನೆಯ ಬಗೆಯೊಂದನ್ನು ಅಳವಡಿಸಲಾಗಿದೆ). ಇವನ್ನು ಏಳು Vಗಳೆಂದು ಕರೆಯಲಾಗಿದೆ. ಇವುಗಳ ಮೇಲೆ ಸಂಚರಿಸಬಹುದಾದ ವಾಹನಗಳ ಸ್ವರೂಪ ಹಾಗೂ ವೇಗಗಳ ಆಧಾರದ ಮೇಲೆ ಈ ರಸ್ತೆಗಳಲ್ಲಿ ವ್ಯತ್ಯಾಸ ಕಲ್ಪಿಸಲಾಗಿದೆ. ಮತ್ತೆ ಲ ಕಾರ್ಬ್ಯೂಸ್ಯೇ ಈ ವ್ಯವಸ್ಥೆಯನ್ನು ಜೀವವಿಜ್ಞಾನಕ್ಷೇತ್ರಕ್ಕೆ ಹೋಲಿಸಿ ಈ ರೀತಿ ಹೇಳಿದ್ದಾರೆ: ಜೀವವಿಜ್ಞಾನದಲ್ಲಿ ರಕ್ತಪರಿಚಲನೆ, ದುಗ್ಧರಸವ್ಯವಸ್ಥೆ ಮತ್ತು ಉಸಿರಾಟ ವ್ಯವಸ್ಥೆಗಳಂತೆ 7 vಗಳು ಕಾರ್ಯ ನಿರ್ವಹಿಸುತ್ತವೆ. ಇತರ ರಸ್ತೆಗಳಂತೆ ಇವಂತೂ ಮುಂದೆ ಮೃತ್ಯುವಿನ ದುಷ್ಟ ಸಾಧನಗಳಾಗವು. ಇವು ಆಧುನಿಕ ಸಂಚಾರ ವ್ಯವಸ್ಥೆಯನ್ನು ನಿಯಂತ್ರಣಕ್ಕೊಳಪಡಿಸಬಲ್ಲ ಸಂಘಟಿತ ಅನುಕ್ರಮ ಶ್ರೇಣಿಯಾಗುತ್ತವೆ.

ವಿಶಾಲವಾದ ಉದ್ಯಾನಗಳೂ ವನಗಳೂ ಕ್ರೀಡಾಮೈದಾನಗಳೂ ನಗರ ಶರೀರದ ಶ್ವಾಸಕೋಶಗಳಂತಿವೆ. ಉದ್ಯಾನ ಪ್ರದೇಶಗಳಲ್ಲಿ ಅತ್ಯಂತ ಮುಖ್ಯವಾದ್ದು ವಿರಾಮ ಕಣಿವೆ. ನಗರದ ಮಧ್ಯೆ, ಉತ್ತರದಿಂದ ದಕ್ಷಿಣಕ್ಕೆ ಉದ್ದಕ್ಕೂ ಇದು ಹಬ್ಬಿದೆ. ಗುಲಾಬಿವನ ಇದರ ನಡುವೆ ಇದೆ. ಸುಖ್ನಾ ಹೊಳೆಗೆ ಕಟ್ಟೆ ಕಟ್ಟಿ ರಚಿಸಲಾಗಿರುವ ಸುಖ್ನಾ ಸರೋವರ ಇನ್ನೊಂದು ಮನರಂಜನೆಯ ಸ್ಥಳ.

ನಗರದ ಕಾರ್ಯಭಾರ ಆಡಳಿತಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಪ್ರಮುಖ ಶಿಕ್ಷಣಕೇಂದ್ರ ಕೂಡ. ಕೈಗಾರಿಕೆಗಳೂ ಇಲ್ಲಿ ಬೆಳೆದಿವೆ. ವಿದ್ಯುತ್ ಮಾಪಕ, ಹೆಣಿಕೆ ಸೂಜಿ, ಉಣ್ಣೆಯ ಮೇಲುಡುಗೆ, ತಾಂಡವಾಳದ ಕೊಳವೆ, ವಿದ್ಯುತ್ ಸರಕು, ವರ್ಣವಸ್ತು, ರಸಾಯನ ವಸ್ತು ಮುಂತಾದವು ತಯಾರಾಗುತ್ತವೆ. ಇಲ್ಲಿಯವು ಧೂಮರಹಿತ ಕೈಗಾರಿಕೆಗಳು, ಇವಲ್ಲದೆ ನಗರದ ಹೊರ ವಲಯದಲ್ಲಿ ಹರಿಯಾಣದ ಪಂಚಕುಲ ಮತ್ತು ಪಂಜಾಬಿನ ಮೊಹಾಲಿ ಕೈಗಾರಿಕಾ ಸ್ಥಾನಗಳಿವೆ. ಪಂಜಾಬ್, ಹರಿಯಾಣಾ ಮತ್ತು ಹಿಮಾಚಲ ಪ್ರದೇಶಗಳ ಪ್ರಮುಖ ಪಟ್ಟಣಗಳೊಂದಿಗೆ ಚಂಡೀಗಢಕ್ಕೆ ರಸ್ತೆ ಸಂಪರ್ಕವುಂಟು. ಅಂಬಾಲಾ, ದೆಹಲಿ, ಕಾಲ್ಕಾ ಮತ್ತು ಸಿಮ್ಲಾಗಳಿಗೆ ರೈಲು ಮಾರ್ಗಗಳಿವೆ. (ಜಿ.ಎಸ್.ಜಿ.ಒ.)

ಪಂಜಾಬಿನ ರಾಜಧಾನಿಯಾಗಿ ನಿರ್ಮಿತವಾದ ಈ ನಗರ, ಪಂಜಾಬ್ ಮತ್ತು ಹರಿಯಾಣಾ ರಾಜ್ಯಗಳ ರಚನೆಯಿಂದಾಗಿ 1966ರ ನವೆಂಬರ್ 1 ರಂದು ಒಕ್ಕೂಟ ಪ್ರದೇಶವಾಯಿತು(ಯೂನಿಯನ್ ಟೆಂಟರಿ). ಚಂಡೀಗಢ ತಮಗೆ ಸೇರಬೇಕೆಂದು ಪಂಜಾಬ್ ಹರಿಯಾಣಾಗಳೆರಡೂ ಕೇಳಿಕೆ ಮಂಡಿಸಿದವು. ಐದು ವರ್ಷಗಳೊಳಗೆ ಚಂಡೀಗಢವನ್ನು ಪಂಜಾಬಿಗೆ ವರ್ಗಾಯಿಸಲಾಗುವುದೆಂದೂ ಹರಿಯಾಣಕ್ಕಾಗಿ ಪ್ರತ್ಯೇಕ ರಾಜಧಾನಿ ನಿರ್ಮಾಣವಾಗುವವರೆಗೆ ಚಂಡೀಗಢ ಒಕ್ಕೂಟ ಪ್ರದೇಶವಾಗಿರತಕ್ಕದೆಂದೂ ಹರಿಯಾಣದ ರಾಜಧಾನಿಯ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಹಣದ ನೆರವು ನೀಡುವುದೆಂದೂ 1970 ರಲ್ಲಿ ಭಾರತ ಸರ್ಕಾರ ಪ್ರಕಟಿಸಿತು. ಲೋಕಸಭೆಯಲ್ಲಿ ಇದಕ್ಕೆ ಒಂದು ಸ್ಥಾನವಿದೆ. *

**ಚಂಡೀದಾಸ :** ಬಂಗಾಳೀ ಸಾಹಿತ್ಯದಲ್ಲಿ ಕೃಷ್ಣಭಕ್ತಿಯ ರಸವನ್ನು ಹರಿಸಿದ ಅಮರಕವಿಗಳಲ್ಲಿ ಈತನ ಹೆಸರು ಮೊದಲಿಗೆ ಬರುತ್ತದೆ. ಈತನ ಕಾಲ ಸುಮಾರು 15ನೆಯ ಶತಮಾನ. ಕವೀಂದ್ರ ರವೀಂದ್ರನಾಥ ಠಾಕೂರರು ಈತನಿಂದ ತಮ್ಮ ಕಾವ್ಯರಚನೆಗೆ ಒದಗಿದ ಸ್ಫೂರ್ತಿಯನ್ನು ನೆನೆದಿದ್ದಾರೆ.

ಹಾಗೆ ನೋಡಿದರೆ ಬಂಗಾಳಿಯಲ್ಲಿ ಚಂಡೀದಾಸ ಎಂಬ ಹೆಸರಿನ ಮೂವರು ಕವಿಗಳನ್ನು ಗುರುತಿಸಬಹುದು. ಅವರಲ್ಲಿ ಒಬ್ಬ ಅನಂತ ಬಡು ಚಂಡೀದಾಸ (ಸುಮಾರು 14ನೆಯ ಶತಮಾನ). ಶ್ರೀಕೃಷ್ಣ ಚೈತನ್ಯರಿಗಿಂತ(ಚೈತನ್ಯ ಮಹಾಪ್ರಭು) ಈತ ಸ್ವಲ್ಪ ಹಿಂದಿನವ. ಮೈಥಿಲೀಕವಿ ದಾರ್ಶನಿಕ ವಿಷ್ಣುಸ್ವಾಮಿ ಈತನಿಗೆ ಪರಿಚಿತನೆಂದು ತೋರುತ್ತದೆ. ಬಂಗಾಳಿಯ ಚರ್ಯಾ ಪದಗಳನ್ನು ಬಿಟ್ಟರೆ ಉಳಿದ ಈತನ ಕೃತಿಗಳ ಭಾಷೆ ಪುರಾತನ ಬಂಗಾಳಿ. ಶ್ರೀಕೃಷ್ಣಸಂಕೀರ್ತನ, ಶ್ರೀಕೃಷ್ಣಭಕ್ತಿ ಈತನ 24 ಪದಗಳ ವಸ್ತು. ಎರಡನೆಯವನೇ ದ್ವಿಜ ಚಂಡೀದಾಸ. ಈತ ಚೈತನ್ಯರ ಅನಂತರ ಬಂದವ ಇಲ್ಲವೆ ಅವರ ಕಿರಿಯ ಸಮಕಾಲೀನ. ರಾಧಾಕೃಷ್ಣರ ಪ್ರೇಮವೇ ಈತನ ಪದ್ಯಗಳ ಮುಖ್ಯವಸ್ತು. ಮಧ್ಯಕಾಲೀನ ಬಂಗಾಳದ ಪ್ರಸಿದ್ಧ ಕವಿಗಳಲ್ಲಿ ಈತನ ಹೆಸರು ಪ್ರಮುಖ ಸ್ಥಾನ ಪಡೆದಿದೆ.

ಮೂರನೆಯ ಚಂಡೀದಾಸ ಶಾಕ್ತಪಂಥದ ಭಾವುಕ ಕವಿ, ದಾಸಕವಿ. ಪ್ರಚಲಿತ ಪ್ರತೀತಿಯೊಂದರ ಪ್ರಕಾರ ಈತನ ತಂದೆ ಬಂಗಾಲದ ಬೀರ್‌ಭೂಮ್ ಜಿಲ್ಲೆಯ ಹಳ್ಳಿಯೊಂದರ ಚಂಡೀಮಾತೆಯ ಪೂಜಾರಿ. ಬೆಳೆಬೆಳೆಯುತ್ತ ಆವೇಶ ಬಂದವನಂತೆ, ಭಾವೋನ್ಮತ್ತನಂತೆ ವರ್ತಿಸುತ್ತಿದ್ದ. ಲೋಕ ಇವನನ್ನು ಹುಚ್ಚನೆಂದು ಭಾವಿಸಿತ್ತು.

ಒಮ್ಮೆ ಈತ ನದಿಯ ಪಕ್ಕದಲ್ಲಿ ಅಡ್ಡಾಡುತ್ತಿದ್ದಾಗ, ಬಟ್ಟೆಯೊಗೆಯುತ್ತಿದ್ದ ರಾಮೀ (ತಾರಾ) ಎಂಬ ಅಗಸರ ಹೆಣ್ಣೊಬ್ಬಳಲ್ಲಿ ಅನುರಕ್ತನಾದ. ಪರಿಣಾಮವಾಗಿ ಈತನಿಗೆ ಜಾತಿಯಿಂದ ಬಹಿಷ್ಕೃತನಾದದ್ದಲ್ಲದೆ ಅರ್ಚಕ ಹುದ್ದೆಯೂ ತಪ್ಪಿತು. ಆ ಬಾಂಧವ್ಯವನ್ನು ತ್ಯಜಿಸಿ ಮತ್ತೆ ಸಮಾಜಪ್ರವೇಶ ಮಾಡುವ ಬಯಕೆ ಚಂಡೀದಾಸನಿಗೆ ಆಗಲಿಲ್ಲ. ಲೋಕದ ಮಲ ತೊಳೆದು ಮಡಿ ಮಾಡಿಕೊಡುತ್ತಿದ್ದ ಆ ರಾಮಿ ಚಂಡೀದಾಸನಿಗೆ ತಾರಾ ಮಾತೆಯಂತೆ, ಜಗನ್ಮಾತೆ ಚಂಡಿಯಂತೆ ಕಂಡಳು. ಅವನೂರಿನ ಪಂಡಿತರಿಗಿಂತ ಆಕೆ ಎಷ್ಟೋ ಪಾಲು ಮಡಿವಂತೆಯಾಗಿ, ಪಾವನೆಯಾಗಿ ತೋರಿದಳು. ಭಾವಾವೇಶದಿಂದ ಚಂಡೀಮಾತೆಯನ್ನು ಆಶುಗೀತೆಗಳಿಂದ ಸ್ತೋತ್ರಗೈಯುತ್ತ ಬೀದಿ ಬೀದಿ ಅಲೆಯುತ್ತಿದ್ದ ಈ ಸಾಮಾನ್ಯ ಜನತಾಕವಿ ದೀನ ಚಂಡೀದಾಸನಾದ, ದಾಸಕವಿಯಾದ. ಈತನ ಪ್ರಸಿದ್ಧಿ ಸಮಾಜದ ಎಲ್ಲ ಸ್ತರಗಳಿಗೂ ವಿಸ್ತರಿಸಿತು. ಗೌಡ ದೇಶದ ರಾಣಿ ಈತನ ಭಕ್ತಿಗೀತೆಗಳಿಂದ ಆಕರ್ಷಿತಳಾಗಿ ಈತನ ಬೆನ್ನು ಹತ್ತಿದ್ದಳು. ರಾಣಿಯ ಮನವೊಲಿಸಿಕೊಳ್ಳಲಾರದ ರಾಜ ಈತನಿಗೆ ಹೇಳಬಾರದ ಕಿರುಕುಳವಿತ್ತ. ಕೊನೆಗೆ ಆನೆಯ ಕಾಲಿಗೆ ಕಟ್ಟಿಸಿ, ಎಳೆಸಿ ಕೊಲ್ಲಿಸಿದ.

ಹೀಗೆ ಮೂರು ಜನ ಚಂಡೀದಾಸರೂ ಬೇರೆಬೇರೆ ಕಾಲದಲ್ಲಿದ್ದರೂ ಅವರ ರಾಧಾಕೃಷ್ಣಪ್ರೇಮ, ಶ್ರೀಕೃಷ್ಣನಾಮಸಂಕೀರ್ತನ, ಶ್ರೀಚಂಡೀಮಾತಾಗೀತೆಗಳು, ಸಾಮಾನ್ಯತಃ ದೈವಭಕ್ತಿಪ್ರೇರಕಗಳಾಗಿದ್ದುದರಿಂದ, ಜನಸಾಮಾನ್ಯರಲ್ಲಿ ಸಮಾನ ಪ್ರೀತ್ಯಾದರಗಳನ್ನು ಗಳಿಸಿಕೊಂಡು ಅವರ ನಾಲಗೆಯಲ್ಲಿ ನಲಿಯುತ್ತ ಉಳಿದು ಬಂದುವು. ಇಂದು ಚಂಡೀದಾಸಕೃತವೆಂದು ಪ್ರಸಿದ್ಧವಾಗಿರುವ ಒಂದು ಸಾವಿರದ ಎರಡು ನೂರು ಪದಗಳಲ್ಲೂ ಈ ಮೂರು ಭಕ್ತಿ ಸ್ರೋತಸ್ಸುಗಳೂ ಒಂದಾಗಿ ಪ್ರವಹಿಸುವುದನ್ನು ಕಾಣಬಹುದು. ಹಾಗಾಗಿ ಇವೆಲ್ಲ ಒಂದೇ ಆಗಿದ್ದು ಒಬ್ಬ ಚಂಡೀದಾಸನ ಕೃತಿಗಳಾಗಿವೆ.

ಸಂಸ್ಕೃತದಲ್ಲಿ ಜಯದೇವಕವಿ ರಚಿಸಿದ 'ಗೀತಗೋವಿಂದ' ಬಂಗಾಳೀ ಸಾಹಿತ್ಯದಲ್ಲಿ ಹೊಸದೊಂದು ಕಾವ್ಯಪರಂಪರೆಯೇ ಹುಟ್ಟಲು ಕಾರಣವಾಯಿತೆನ್ನಬಹುದು. ರಾಧೆ–ಮಾಧವರ ಪ್ರಣಯ ಶೃಂಗಾರ ರಸದ ಪರಾಕಾಷ್ಠೆಯ ಪ್ರತೀಕವಷ್ಟೇ ಅಲ್ಲ; ಭಕ್ತನಿಗೆ ಭಗವಂತನಲ್ಲಿರುವ ಮಧುರ ಭಕ್ತಿಯ ಪರಮೋಚ್ಚ ಪ್ರತೀಕವೂ ಹೌದೆನ್ನುವ ವೈಷ್ಣವ ಕವಿಸಂಪ್ರದಾಯ ಬಂಗಾಳಿಯಲ್ಲಿ ರೂಢಮೂಲವಾಗಲು ಚಂಡೀದಾಸ ರಚಿಸಿದ ಶ್ರೀಕೃಷ್ಣಕೀರ್ತನ ಮುಂತಾದ ಗೇಯ ಕೃತಿಗಳೂ ಹಾಡುಗಳೂ ಬಹುಮಟ್ಟಿಗೆ ಕಾರಣವಾದವು. ಇವನ ಹಾಡುಗಳನ್ನು ಭಣಿತಗಳೆಂದು ಕರೆಯುವ ವಾಡಿಕೆ ಇದೆ. ಈ ಕೃತಿಗಳಲ್ಲಿ ಕಥಾಭಾಗ ಕಡಿಮೆ; ನಾಟಕೀಯವಾಗಿ ಮೂರೇ ಪಾತ್ರಗಳು–ರಾಧೆ, ಕೃಷ್ಣ, ಮುದುಕಿ. ಸುಂದರವಾದ ದೇಸೀ ಛಂದಸ್ಸಿನ ತಾಳಲಯಬದ್ಧ ಹಾಡುಗಳ ಮೂಲಕ ಅವು ಪ್ರೇಮೋನ್ಮಾದದ ವಿವಿಧ ಅವಸ್ಥೆಗಳನ್ನು ಸೂಚಿಸುತ್ತವೆ. ಇಲ್ಲಿ ಪೌರಾಣಿಕವಾದ ಪ್ರತಿಪಾದನೆಯ ಸ್ಥಾನದಲ್ಲಿ ನಿತ್ಯ ಜನಜೀವನದ ಛಾಯೆ ತಾನೇತಾನಾಗಿ ಮೆರೆಯುತ್ತದೆ. ಕೃಷ್ಣ ಪರನಾರಿಯಾದ ರಾಧೆಯನ್ನು ವಶೀಕರಿಸಿಕೊಳ್ಳಲು ಬೆಸ್ತನಾಗುತ್ತಾನೆ. ಸುಂಕದ ಅಧಿಕಾರಿಯಾಗುತ್ತಾನೆ, ವೇಷಾಂತರಗಳನ್ನು ತಳೆಯುತ್ತಾನೆ. ಕಡೆಗೆ ವಿರಹದಿಂದ ವಿಹ್ವಲೆಯಾದ ರಾಧೆಯ ಕರುಣಾಜನಕ ಚಿತ್ರ ಬರುತ್ತದೆ.

ಚಂಡೀದಾಸ ದಕ್ಷಿಣಾಪಥಕ್ಕೆ ಬಂದಾಗ ವಿಜಯನಗರದ ರಾಜಾಸ್ಥಾನಕ್ಕೂ ಭೇಟಿಯಿತ್ತು ರಮಾನಂದರಾಯನನ್ನು ಭಕ್ತಿಪಂಥಕ್ಕೆ ತಿರುಗಿಸಿದನೆಂದೂ ಒಂದು ಐತಿಹ್ಯವಿದೆ.

(ಕೆ.ಕೆ.; ಸಿ.ಜಿ.ಪಿ.)

**ಚಂದಬರದಾಈ :** ಹಿಂದಿಯ ಮೊದಲ ಮಹಾಕಾವ್ಯವೆಂಬ ಅತ್ಯುಕ್ತಿಗೆ ಪಾತ್ರವಾಗಿರುವ ಪೃಥ್ವೀರಾಜರಾಸೋ ಎಂಬ ದೀರ್ಘಕಾವ್ಯದ ಕರ್ತೃವೆಂದು ಈತ ಪ್ರಸಿದ್ಧ; ಕೊನೆಯ ಹಿಂದೂ ಚಕ್ರವರ್ತಿಯಾದ ಪೃಥ್ವೀರಾಜನ ಸ್ನೇಹಿತ ಹಾಗೂ ಆಸ್ಥಾನ ಕವಿ ಆಗಿದ್ದನೆಂದೂ ಹೇಳಲಾಗಿದೆ. ಇವರಿಬ್ಬರೂ ಒಂದೇ ದಿನ ಹುಟ್ಟಿ ಒಂದೇ ದಿನ ಸತ್ತರೆಂದೂ ಚಂದನ ಮರಣಾನಂತರ, ಅವನ ಮಗನಾದ ಜಲ್ಹಣ ಈ ಕಾವ್ಯವನ್ನು ಪೂರೈಸಿದ ನೆಂದೂ ಹೇಳಲಾಗಿದೆ. ಈ ಕೃತಿಯ ವೈಶಿಷ್ಟ್ಯವೇನೆಂದರೆ, ಕವಿಯಾಗಿರುವ ವ್ಯಕ್ತಿಯೇ ಕಾವ್ಯದ ಒಂದು ಪಾತ್ರವೂ ಆಗಿರುವುದು. ಪೃಥ್ವೀರಾಜನಿಗೆ ಈತ ಮಿತ್ರನೂ ಹೌದು, ಮಾರ್ಗದರ್ಶಿಯೂ ಹೌದು, ಈತನ ಪಾತ್ರ ಕಾವ್ಯದಲ್ಲಿ ಹಾಸು ಹೊಕ್ಕಾಗಿದ್ದು ಈತ ನನ್ನು ಕಾವ್ಯದಿಂದ ನೋಡುವುದು ಸಾಧ್ಯವಾಗು ವುದಿಲ್ಲ. ಕವಿಗೆ ಸಂಬಂಧಿಸಿದ ಐತಿಹಾಸಿಕ ವಿವರಗಳು ಅಷ್ಟಾಗಿ ಲಭ್ಯವಾಗಿಲ್ಲದಿರುವುದೂ ಇದಕ್ಕೆ ಕಾರಣ. ರಾಸೋದ ಕಥಾನಕದಲ್ಲಿಯಂತೂ ಈ ಕವಿ ಪೃಥ್ವೀರಾಜನೊಡನೆ ಯುದ್ಧಕ್ಷೇತ್ರಕ್ಕೂ ತೆರಳುತ್ತಾನೆ. ಸಂಯೋಗಿತೆಯೊಡನೆ ವಿಲಾಸದಲ್ಲಿ ಮುಳುಗಿದ್ದ ಪೃಥ್ವೀರಾಜನಿಗೆ ಘೋರಿಯ ಕುತಂತ್ರಗಳ ನೆನಪು ಮಾಡಿಕೊಟ್ಟು, ಆತನನ್ನು ಎಚ್ಚರಿಸುತ್ತಾನೆ; ಕಣ್ಣು ಕಳೆದುಕೊಂಡಿದ್ದ ಪೃಥ್ವೀರಾಜನ ಮೂಲಕ ಘೋರಿಯನ್ನು ಕೊಲ್ಲಿಸುವವನೂ ಇವನೇ. ವಿಮರ್ಶಕರೊಬ್ಬರು ಹೇಳಿರುವಂತೆ, ರಾಸೋದ ಪೃಥ್ವೀರಾಜ ಏನಾದರೂ ಆಗಿರಲಿ, ಅದಕ್ಕೆ ಈತನೇ ಕಾರಣ.

ಇತ್ತ ಪೃಥ್ವೀರಾಜರಾಸೋದ ಪ್ರಾಮಾಣಿಕತೆ ಮತ್ತು ಐತಿಹಾಸಿಕತೆಗಳ ಬಗ್ಗೆ ವಿದ್ವಾಂಸರು ಪ್ರಬಲ ಸಂದೇಹಗಳನ್ನು ಮುಂದಿಟ್ಟಿರುವುದರಿಂದ (ಉದಾ : 1. ಅಬೂ ಪರ್ವತದ ರಾಜರು ಜೇತ ಮತ್ತು ಸಲಕ ಎಂದು ಕಾವ್ಯದಲ್ಲಿ ಹೆಳಿದೆ. ಆದರೆ ಇದಕ್ಕೆ ಶಾಸನಗಳಲ್ಲಿ ಆಧಾರವಿಲ್ಲ. ಅಷ್ಟೇ ಅಲ್ಲ, ಆಗ ವಾಸ್ತವವಾಗಿ ಆಳುತ್ತಿದ್ದ ಧಾರಾವರ್ಷ ಪರಮಾರನ ಉಲ್ಲೇಖವಿಲ್ಲ ; 2 ಗುಜರಾತಿನ ರಾಜ ಭೀಮಸೇನನನ್ನು ಕೊಲ್ಲಲಾಯಿತು ಎಂದು

ಕಾವ್ಯದಲ್ಲಿ ಉಕ್ತವಾಗಿದೆ. ಆದರೆ, ಆತ ಮುಂದೆಯೂ ಬಹುಕಾಲ ಬದುಕಿದ್ದನೆಂದು ಶಾಸನಗಳು ಹೇಳುತ್ತವೆ ; 3 ಕಾವ್ಯದ ಪ್ರಕಾರ ಶಹಾಬುದ್ದೀನ್ ಘೋರಿ ಪೃಥ್ವೀರಾಜನ ಶಬ್ದವೇಧಿ ಬಾಣದಿಂದ ಸಾಯುತ್ತಾನೆ ; ಆದರೆ ಠಕ್ಕರ ಕೈಗೆ ಸಿಕ್ಕಿ 1203ರಲ್ಲಿ ಸತ್ತನೆಂಬುದು ಐತಿಹಾಸಿಕ ಸತ್ಯ ; 4. ಪೃಥ್ವೀರಾಜನ ತಂಗಿಯಾದ ಪೃಥಾಕುವರಿಯ ಪತಿ ರಾಜಾ ಸಮರಸಿಂಹ ತೀರಿಕೊಂಡ ವೃತ್ತಾಂತ ಕಾವ್ಯದಲ್ಲಿ ಬರುತ್ತದೆ. ಆದರೆ 1278-85ರ ನಡುವಣ ಅವಧಿಯಲ್ಲೂ, ಅಂದರೆ ಪೃಥ್ವೀರಾಜ ಸತ್ತ ಅನೇಕ ವರ್ಷಗಳ ತರುವಾಯವೂ, ಆತ ರಾಜ್ಯಭಾರ ಮಾಡುತ್ತಿದ್ದನೆಂದು ಶಾಸನ ಹೇಳುತ್ತದೆ; 5. ಅಂತೆಯೇ, ಕೃತಿಯಲ್ಲಿ ನಮೂದಿತವಾಗಿರುವ ಇತರ ತಾರೀಖುಗಳೂ ತಪ್ಪುತಪ್ಪಾಗಿವೆ.) ಕವಿಯ ಅಸ್ತಿತ್ವ ಮತ್ತು ವ್ಯಕ್ತಿತ್ವಗಳ ಬಗ್ಗೆಯೂ ಪ್ರಶ್ನಾರ್ಥಕ ಚಿಹ್ನೆಗಳು ಕಾಣಿಸಿಕೊಂಡಿವೆ. ಪೃಥ್ವೀರಾಜನ ಆಸ್ಥಾನದಲ್ಲಿದ್ದ ಕಾಶ್ಮೀರಿಕವಿ ಜಯಾನಕ ರಚಿಸಿರುವ ಪೃಥ್ವೀರಾಜವಿಜಯದಲ್ಲಿ ಚಂದಬರದಾಯಿಯ ಹೆಸರು ಕಾಣದೊರೆಯುವುದಿಲ್ಲ. ಒಂದೆಡೆಯೇನೋ ಚಂದ್ರಕ ಎಂಬ ಹೆಸರು ಉಲ್ಲೇಖಿತವಾಗಿದೆಯಾದರೂ ಅದು ಕಾಶ್ಮೀರದ ಚಂದ್ರಕನೆಂಬ ಮತ್ತೊಬ್ಬ ಕವಿಯ ಹೆಸರಾಗಿರಬೇಕೆಂದು ವಿದ್ವಾಂಸರು ಭಾವಿಸಿದ್ದಾರೆ. ಚಂದ ಪೃಥ್ವೀರಾಜನ ತಂದೆಯಾದ ಸೋಮೇಶ್ವರನ ಆಸ್ಥಾನಿಕನಾಗಿದ್ದ ಹಾಗೂ ಪೃಥ್ವೀರಾಜನ ಸ್ನೇಹಿತನೂ ಮಂತ್ರಿಯೂ ಆಗಿದ್ದ. ನಾಗೌರ್‌ನಲ್ಲಿ ಪೃಥ್ವೀರಾಜ ಚಂದನಿಗೆ ಜಮೀನನ್ನು ದಾನವಾಗಿ ಕೊಟ್ಟಿದ್ದ. ಇಂದಿಗೂ ಆತನ ವಂಶದವರು ಅಲ್ಲಿ ವಾಸವಾಗಿದ್ದಾರೆ ಎಂದು ಹರಪ್ರಸಾದಶಾಸ್ತ್ರಿಗಳು ಹೇಳಿದ್ದಾರೆ. ಈ ಸ್ಥಿತಿಯಲ್ಲಿ ಚಂದಬರದಾಈ ಎಂಬ ಹೆಸರಿನ ಕವಿಯೇನಾದರೂ ಇದ್ದಿದ್ದರೆ ಆತ ಪೃಥ್ವೀರಾಜನ ಆಸ್ಥಾನದಲ್ಲಿದ್ದಿರಬೇಕು ಅಥವಾ ಜಯಾನಕ ಕಾಶ್ಮೀರಕ್ಕೆ ಹಿಂದಿರುಗಿದ ಮೇಲೆ ಈತ ಬಂದಿರಬೇಕು ಎಂದು ಮಾತ್ರ ಹೇಳಬಹುದಾಗಿದೆ. ಪೃಥ್ವೀರಾಜನ ಮಗನಾದ ಗೋವಿಂದರಾಜನ ಇಲ್ಲವೇ ಆತನ ಸೋದರ ಹರಿರಾಮ ಇಲ್ಲವೇ ಈ ಇಬ್ಬರಲ್ಲಿ ಯಾರಾದರೂ ಒಬ್ಬರ ವಂಶದಲ್ಲಿ ಚಂದನೆಂಬ ವಂದಿಮಾಗಧನಿದ್ದು ಆತ ತನ್ನ ಪೂರ್ವಜನಾದ ಪೃಥ್ವೀರಾಜನ ಶೌರ್ಯಾದಿಗಳನ್ನು ವರ್ಣಿಸುವ ಕೆಲವೊಂದು ರಚನೆಗಳನ್ನು ಮುಂದಿರಿಸಿದ್ದಿರಬೇಕು. ಮುಂದೆ ಬಹುಮಟ್ಟಿಗೆ ಕಲ್ಪಿತವಾದ 'ಭಟ್ಟ ಭಣಂತ' ಕೃತಿ ಸಿದ್ಧವಾಗುತ್ತ ಬಂದು ಅವೆಲ್ಲವನ್ನೂ ಒಂದುಗೂಡಿಸಿ ಹಾಗೂ ಚಂದನ ಮತ್ತು ಪೃಥ್ವೀರಾಜರನ್ನು ಸಮಕಾಲೀನರನ್ನಾಗಿಸಿ ರಾಸೋ ಎಂಬ ಹೆಸರಿನ ಈ ಬೃಹತ್ ಕೃತಿಯನ್ನು ಕಟ್ಟಿ ನಿಲ್ಲಿಸಿರಬೇಕು ಎಂದು ಆಚಾರ್ಯ ರಾಮಚಂದ್ರ ಶುಕ್ಲರು ಅಭಿಪ್ರಾಯಪಡುತ್ತಾರೆ. ಬಾಬೂ ರಾಮನಾರಾಯಣ ದೂಗಡ್ ಅವರು ಚಂದನ ಪದ್ಯಗಳು ಎಲ್ಲೆಲ್ಲೊ ಚೆದರಿಹೋಗಿದ್ದುವು; ಅವನ್ನು ಮಹಾರಾಣಾ ಅಮರಸಿಂಹರು ಒಂದುಗೂಡಿಸಿದರು–ಎಂದು ಕೃತಿಯ ಒಂದು ಪ್ರತಿಯಲ್ಲಿ ಹೇಳಿದೆ ಎಂದಿದ್ದಾರೆ. ಈಚೆಗೆ ಮುನಿಜಿನವಿಜಯರು ಜಯಚಂದ ಪ್ರಬಂಧವೆಂಬ ಕೃತಿಯೊಂದರಲ್ಲಿ ಚಂದನ ನಾಲ್ಕು ಪದ್ಯಗಳು ಉದ್ಧೃತವಾಗಿರುವುದನ್ನು ತೋರಿಸಿಕೊಟ್ಟಿದ್ದಾರೆ. ಭಟ್ಟ ಕೇದಾರನ ಜಯಚಂದ ರಾಸೋದಲ್ಲಿಯೂ ಒಂದೆಡೆ ಚಂದ ಮತ್ತು ಭಟ್ಟ ಕೇದಾರರ ಸಂಭಾಷಣೆ ಕಾಣದೊರೆಯುತ್ತದೆ. ಹೀಗಾಗಿ ವಾದವಿವಾದಗಳ ನಡುವೆಯೂ ಚಂದನೆಂಬ ಕವಿಯೊಬ್ಬನಿಂದ ಈ ಕೃತಿ ಭಾಗಶಃ ರಚಿತವಾಗಿದ್ದಿರಬೇಕೆಂದು ನಂಬಬಹುದಾಗಿದೆ. ಒಟ್ಟಿನಲ್ಲಿ ಬಹುಮತಾಭಿಪ್ರಾಯದಂತೆ ಇದು 1470ರಲ್ಲಿ ರಚಿತವಾಗಿದ್ದಿರಬಹುದಾದ ಕಾವ್ಯ.

ಅಬೂವಿನ ಯಜ್ಞಕುಂಡದಿಂದ ನಾಲ್ಕು ಕ್ಷತ್ರಿಯ ವಂಶಗಳ ಉತ್ಪತ್ತಿಯಾಗುವುದರಿಂದ ಹಿಡಿದು ಪೃಥ್ವೀರಾಜನ ಮರಣದವರೆಗೆ ರಾಸೋದ ಕಥೆ ವಿಸ್ತರಿಸಿಕೊಂಡಿದೆ. ಹೀಗಾಗಿ, ಇದು 96 ಸರ್ಗಗಳ ಸುಮಾರು ಎರಡೂವರೆ ಸಾವಿರ ಪುಟಗಳಷ್ಟು ದೀರ್ಘವಾದ ಬಹುಕವಿಕೃತವಾದ ದೀರ್ಘಕಾವ್ಯವಾಗಿ ಪರಿಣಮಿಸಿದೆ. ಪ್ರಾಚೀನ ಕಾವ್ಯ ಸಂಪ್ರದಾಯವನ್ನು ಅನುಸರಿಸಿ ಗಿಳಿಗಳ ನಡುವಣ ಸಂವಾದದ ರೂಪದಲ್ಲಿ ಕಥಾನಕವನ್ನು ಸಾದರಪಡಿಸಲಾಗಿದೆ. ವೀರಕಾವ್ಯದ ವಿಶದಕಲ್ಪನೆ ಈ ಕಾವ್ಯದಿಂದ ಮೂಡುವಂತೆ ಹಿಂದೀಸಾಹಿತ್ಯದ ಬೇರಾವ ಕೃತಿಯಿಂದಲೂ ಮೂಡಿಬಂದಿಲ್ಲವೆಂಬ ಸಂಗತಿ ಈ ಕಾವ್ಯದ ವೈಶಿಷ್ಟ್ಯ ಮತ್ತು ಮಹತ್ತ್ವಗಳನ್ನು ಹೆಚ್ಚಿಸಿದೆ. ಪೃಥ್ವೀರಾಜ ಸಂಯೋಗಿತೆಯರ ಅನುರಾಗ, ವಿರಹ, ಸಂಯೋಗಿತಾಹರಣ, ಯುದ್ಧಾನಂತರದಲ್ಲಿ ಅವರ ಮಿಲನ ಪ್ರೇಮವಿಲಾಸಗಳು, ಶಹಾಬುದ್ದೀನ್ ಘೋರಿಯ ಆಕ್ರಮಣ ಮತ್ತು ಯುದ್ಧ–ಇವೇ ಮೊದಲಾದ ಪ್ರಸಂಗಗಳ ಚಿತ್ತಾಕರ್ಷಕ ವರ್ಣನೆ ಓದುಗರನ್ನು ಉತ್ಸಾಹ ಮತ್ತು ಆನಂದಗಳ ಅಲೆಯ ಮೇಲೆ ತೇಲಿಸಿಕೊಂಡು ಹೋಗುತ್ತದೆ. ಶೃಂಗಾರ ಮತ್ತು ವೀರರಸಗಳ ಅಭಿವ್ಯಕ್ತಿಗೆ ಪ್ರಾಧಾನ್ಯ ದೊರೆತಿದೆಯಾದರೂ ಇತರ ರಸಗಳೂ ಈ ಕಾವ್ಯದಲ್ಲಿ ಮೈದಳೆದಿವೆ. ಕವಿಯ ವರ್ಣನಕೌಶಲ ಅಸಾಧಾರಣವಾಗಿದ್ದು ಆತನ ಕಾವ್ಯಶಕ್ತಿಯ ಬಗೆಗೆ ಗೌರವವನ್ನು ಮೂಡಿಸುತ್ತದೆ. ಈ ದೃಷ್ಟಿಯಿಂದ ಈ ಕಾವ್ಯದಲ್ಲಿ ಮೂಡಿಬಂದಿರುವಂತೆ ಪ್ರಕೃತಿವರ್ಣನೆ–ಅದರಲ್ಲಿಯೂ ಷಡ್ ಋತುಗಳ ವರ್ಣನೆ–ಗಮನಾರ್ಹವಾಗಿದೆ. ಸಮಗ್ರಕಾವ್ಯಕ್ಕೆ ಒಂದೇ ಛಂದಸ್ಸನ್ನು ಬಳಸದೆ ಕವಿತ್ತ (ಛಪ್ಪೆಯ), ದೂಹಾ, ತೋಮರ, ತ್ರೋಟಕ, ಗಾಹಾ, ಆರ್ಯಾ ಮೊದಲಾದ ಛಂದಸ್ಸುಗಳನ್ನು ಅಗತ್ಯಾನುಗುಣವಾಗಿ ಬಳಸಿರುವುದರಿಂದ ವೈವಿಧ್ಯಕ್ಕೂ ಎಡೆ ದೊರೆತಿದೆ. ಅಂತೆಯೇ ಭಾಷೆ ಮತ್ತು ಶೈಲಿಗಳೂ ಮನೋಹರವಾಗಿವೆ. ಕಾವ್ಯದಲ್ಲಿ ನಿರೂಪಿತವಾಗಿರುವ ಸಂಗತಿಗಳ ಐತಿಹಾಸಿಕ ಸತ್ಯಾಸತ್ಯತೆಗಳ ವಿಷಯ ಹೇಗಾದರೂ ಇರಲಿ, ಹೃದಯವನ್ನು ಸೆರೆ ಹಿಡಿದು ನಿಲ್ಲಿಸಬಲ್ಲ ಚುಂಬನಶಕ್ತಿ ಇದರ ಕಥಾನಕದಲ್ಲಿ ಇದೆಯೆಂಬುದು ಹೆಜ್ಜೆ ಹೆಜ್ಜೆಗೂ ಓದುಗನ ಅನುಭವನಕ್ಕೆ ಬರುತ್ತದೆ. ಇಂಥ ವೈಶಿಷ್ಟ್ಯಗಳನ್ನೊಳಗೊಂಡ ರಸಸ್ಯಂದಿ ಕಾವ್ಯವಾಗಿರುವುದರಿಂದಲೇ ಇದು ಹಿಂದೀ ಸಾಹಿತ್ಯದ ಆದಿಕಾಲದ ವಿಶಿಷ್ಟಕೃತಿಯೆಂಬ, ಸುಂದರಕಾವ್ಯವೆಂಬ ಕೀರ್ತಿಗೆ ಪಾತ್ರವಾಗಿದೆ. **(ಪಿ.ಜಿ.ಡಿ.)**

**ಚಂದಮಾಮ :** ಚೆನ್ನೈನಿಂದ ಹೊರಡುವ ಮಕ್ಕಳ ಮಾಸಪತ್ರಿಕೆ. ಒಟ್ಟು ಓದುಗರ ಸಂಖ್ಯೆ ಸು. 200,000. ಕನ್ನಡ, ತಮಿಳು, ತೆಲುಗು, ಹಿಂದಿ, ಮರಾಠಿ, ಗುಜರಾತಿ, ಇಂಗ್ಲಿಷ್, ಮಲಯಾಳಂ, ಬಂಗಾಲಿ, ಒರಿಯ ಮೊ. 13 ಭಾಷೆಗಳಲ್ಲಿ ಪ್ರಕಟವಾಗುತ್ತಿದೆ.

ಕನ್ನಡ, ತೆಲುಗು, ಹಿಂದಿ, ಗುಜರಾತಿ, ಇಂಗ್ಲಿಷ್, ಬಂಗಾಲಿಗಳಲ್ಲಿ ಚಂದ ಮಾಮ, ತಮಿಳಿನಲ್ಲಿ ಅಂಬುಲಿ ಮಾಮ, ಮಲಯಾಳಂನಲ್ಲಿ ಅಂಬಿ ಅವ್ಮ್ಮಾವನ್, ಮರಾಠಿಯಲ್ಲಿ ಚಂದೋಬ, ಒರಿಯದಲ್ಲಿ ಜಹ್ನ ಮಾಮು ಎಂದು ಪತ್ರಿಕೆಯ ಹೆಸರು. ಪತ್ರಿಕೆ ತಮಿಳು ತೆಲುಗುಗಳಲ್ಲಿ 1947 ರಲ್ಲೂ, ಕನ್ನಡದಲ್ಲಿ 1948 ರಲ್ಲೂ, ಹಿಂದಿಯಲ್ಲಿ 1949ರಲ್ಲೂ, ಮರಾಠಿಯಲ್ಲಿ 1952 ರಲ್ಲೂ, ಗುಜರಾತಿಯಲ್ಲಿ 1954ರಲ್ಲೂ, ಇಂಗ್ಲಿಷ್, ಮಲಯಾಳಂಗಳಲ್ಲಿ 1970ರಲ್ಲೂ, ಬಂಗಾಲಿ, ಒರಿಯ ಗಳಲ್ಲಿ 1972ರಲ್ಲೂ ಆರಂಭ ವಾಯಿತು. ಇದರ ಸ್ಥಾಪಕರು ಬಿ ನಾಗಿರೆಡ್ಡಿ ಮತ್ತು ಚಕ್ರಪಾಣಿ. ಸಂಪಾದಕರು ಮತ್ತು ಪ್ರಕಾಶಕರು ಬಿ ವಿಶ್ವನಾಥರೆಡ್ಡಿ. 21 x 17ಸೆ.ಮೀ. ಆಕಾರದ ಬಿಡಿ ಪತ್ರಿಕೆಯ ಬೆಲೆ ರೂ.1 (ಫೆಬ್ರವರಿ 1974 ರಂದು) ಪ್ರತಿ ತಿಂಗಳ ಒಂದರಂದು ಪ್ರಕಟವಾಗುತ್ತದೆ.

ಮಕ್ಕಳಲ್ಲಿ ಓದುವ ಅಭ್ಯಾಸವನ್ನು ಬೆಳೆಸುವುದು, ದೇಶದ ಭವ್ಯಪರಂಪರೆಯನ್ನೂ ಪ್ರಾಚೀನ ಸಂಸ್ಕೃತಿ ಮತ್ತು ನೈತಿಕ ಮೌಲ್ಯಗಳನ್ನೂ ಕಥೆಗಳ ಮತ್ತು ಇತಿಹಾಸದ ವೃತ್ತಾಂತದ ನಿರೂಪಣೆಯ ಮೂಲಕ ಅವರಿಗೆ ಪರಿಚಯ ಮಾಡಿ ಕೊಡುವುದು ಚಂದಮಾಮದ ಉದ್ದೇಶಗಳು. ಬಣ್ಣ ಬಣ್ಣದ ಚಿತ್ರಗಳು, ದೇಶವಿದೇಶಗಳ ಕಥೆಗಳು, ಓದುಗರ ಇಂದ್ರಿಯ ಗ್ರಹಣಶಕ್ತಿಯನ್ನೂ ಕಲ್ಪನಾಶಕ್ತಿಯನ್ನೂ ಕುದುರಿಸುವ ದೃಷ್ಟಿಯಿಂದ ಏರ್ಪಡಿಸುವ ಛಾಯಾಚಿತ್ರ ಶೀರ್ಷಿಕೆ ಸ್ಪರ್ಧೆ–ಇವು ಚಂದಮಾಮದ ಕೆಲವು ವೈಶಿಷ್ಟ್ಯಗಳು. ಪತ್ರಿಕೆ ಮಕ್ಕಳ ವಿವಿಧ ರುಚಿಗಳನ್ನು ಗಮನದಲ್ಲಿಟ್ಟುಕೊಂಡು, ಎಲ್ಲರಿಗೂ ಆಕರ್ಷಣೀಯವಾಗುವಂತೆ ಪ್ರಕಟವಾಗುತ್ತಿದೆ. ಬಹುರಾಷ್ಟ್ರೀಯ ಮೋರ್ಗನ್ ಸ್ಟಾನ್ಲಿ ಕಂಪನಿಯು 1999ರಲ್ಲಿ ಚಂದಮಾಮ ಪ್ರಕಾಶನ ಸಂಸ್ಥೆಯಲ್ಲಿ ಪಾಲುಗಾರಿಕೆ ಹೊಂದಿದೆ.

ಸಂಸ್ಕೃತ ಕೃತಿಯಾದ ವೇತಾಳ ಪಂಚವಿಂಶತಿ ಕೃತಿಯ ವಿಕ್ರಮ ಮತ್ತು ಬೇತಾಳ ಕಥೆ ಧಾರಾವಾಹಿಯಾಗಿ ಪ್ರಕಟವಾಗಿ ಈ ಪತ್ರಿಕೆ ತುಂಬ ಜನಪ್ರಿಯವಾಯಿತು. ಈಗ ಚಂದಮಾಮದ ಮಲ್ಟಿಮೀಡಿಯ ಸಿಡಿಗಳೂ ಪ್ರಕಟವಾಗಿವೆ; ಅಂತರ್ಜಾಲದಲ್ಲೂ ಪ್ರಕಟವಾಗುತ್ತಿದೆ. **(ಟಿ.ಎಸ್.ಎಸ್.ಆರ್.ಎ.)**

**ಚಂದಲದೇವಿ :** ಕರ್ನಾಟಕದಲ್ಲಿ ಆಳಿದ ಅರಸರ ರಾಣಿಯರಲ್ಲಿ ಈ ಹೆಸರಿನವರು ಹಲವರು. ಬಹುಶಃ ಚಂದ್ರಲೇಖಾ ಎಂಬ ಮೂಲ ಸಂಸ್ಕೃತರೂಪದ ಹೆಸರು ಚಂದಲದೇವಿ, ಚಂದಲಕಬ್ಬೆ, ಚಂದ್ರಿಕಾದೇವಿ, ಚಂದಲೆ, ಚಂದವ್ವೆ, ಚಂಡಾಂಬಿಕಾ, ಚಂದ್ರಾಂಬಿಕೆ, ಚಂದಿಕಬ್ಬೆ ಇತ್ಯಾದಿ ರೂಪಗಳಲ್ಲಿ ಕಾಣಿಸಿಕೊಂಡಿವೆ. ಚಂದಲದೇವಿ ಮತ್ತು ಆ ಹೆಸರಿನ ರೂಪಾಂತರಗಳಿದ್ದವರಲ್ಲಿ ಕೆಲವರನ್ನು ಕುರಿತ ವಿವರಣೆಯನ್ನಿಲ್ಲಿ ಕೊಡಲಾಗಿದೆ.

ಕಲ್ಯಾಣದಲ್ಲಿ ಆಳಿದ ಚಾಳುಕ್ಯ ಸೋಮೇಶ್ವರನ ಪತ್ನಿ ಚಂದಲಕಬ್ಬೆ ಅಥವಾ ಚಂದ್ರಿಕಾದೇವಿ. 1047-48ರ ನಿಂಬರಗಿ ಶಾಸನದಲ್ಲಿ ಈಕೆಯನ್ನು ಆತನ ಪಿರಿಯರಸಿ ಎಂದು ಕರೆಯಲಾಗಿದೆ.

ಹೆಚ್ಚು ಖ್ಯಾತಿ ಹೊಂದಿದವಳು ಆರ್ವಡಿ ವಿಕ್ರಮಾದಿತ್ಯನ ಪಟ್ಟಮಹಿಷಿ ಎನಿಸಿದ ಚಂದಲದೇವಿ ಅಥವಾ ಚಂದ್ರಲೇಖೆ. ಅನುಪಮ ಸುಂದರಿ ಎನಿಸಿದ್ದ ಈಕೆ ಶಿಲಾಹಾರ ಮನೆತನಕ್ಕೆ ಸೇರಿದವಳೆಂದೂ ಸ್ವಯಂವರ ಸಭೆಯಲ್ಲಿ ವಿಕ್ರಮಾದಿತ್ಯನನ್ನು ವರಿಸಿದಳೆಂದೂ ಬಿಲ್ಹಣ ತನ್ನ ವಿಕ್ರಮಾಂಕದೇವಚರಿತದಲ್ಲಿ ತಿಳಿಸಿದ್ದಾನೆ. ಈಕೆ ಅರಸನ ವಿಶೇಷವಾದ ಪ್ರೀತಿಗೆ ಪಾತ್ರಳಾಗಿದ್ದುದಲ್ಲದೆ, ಆತನಿಗೆ ಆಡಳಿತದಲ್ಲಿ ಸಹಾಯಕಳಾಗಿಯೂ ಇದ್ದಳು. ರಾಜಧಾನಿಗೆ ಸಮೀಪದಲ್ಲಿದ್ದ ಅಳಂದೆ ಸಾಸಿರ ಎಂಬ ಪ್ರಾಂತ್ಯದ ಆಡಳಿತದ ಹೊಣೆ ಈಕೆಯದಾಗಿತ್ತು. ಈಕೆ ಆಳಂದೆ ಸಾಸಿರ ಪ್ರಮುಖವನೇಕಭತ್ತಗ್ರಾಮಂಗಳುಮಂ ಅಟ್ಟಿರಸುಗೆಯ್ಯುತ್ತಿದ್ದಳೆಂದು ಶಾಸನಗಳಲ್ಲಿ ಹೇಳಿದೆ. ಈಕೆಯನ್ನು ನೃತ್ಯವಿದ್ಯಾಧರಿ, ಸಕಳಕಳಾಧರಿ, ಅಭಿನವ ಸರಸ್ವತಿ ಎಂದೆಲ್ಲ ವರ್ಣಿಸಲಾಗಿದೆ. ಸೋಮಭೂಪ, ಜಯಕರ್ಣ, ಕುಮಾರ ತೈಲರು ಈಕೆಯ ಮಕ್ಕಳು. ಇವರಲ್ಲಿ ಸೋಮಭೂಪನೇ ಮುಂದೆ ಭೂಲೋಕಮಲ್ಲ ಸೋಮೇಶ್ವರನೆಂಬ ಹೆಸರಿನಿಂದ ಆಳಿದ. ಎರಡನೆಯ ಕಳಚುರಿ ಬಿಜ್ಜಲ ಈಕೆಯ ಮೊಮ್ಮಗನೆಂದು ವಳಸಂಗದ ಶಾಸನದಿಂದ ತಿಳಿದಿದೆ. ಆದ್ದರಿಂದ ಬಿಜ್ಜಲನ ತಾಯಿಯಾದ ನಾಗಲದೇವಿ ಚಂದಲದೇವಿಯ ಮಗಳೆಂದು ಊಹಿಸಲಾಗಿದೆ.

ಚಾಳುಕ್ಯರ ಆಸ್ಥಾನದಲ್ಲಿ ವಣಿಕಶ್ರೇಷ್ಠನೆನಿಸಿದ ರಾಯರಸೆಟ್ಟಿಯ ಪತ್ನಿ ಚಂದವ್ವೆ ಎಂಬಾಕೆ ಕರ್ನೂಲು ಜಿಲ್ಲೆಯ ಕಮ್ಮರಚೇಡು ಗ್ರಾಮದಲ್ಲಿ ವರ್ಧಮಾನ ವಿಗ್ರಹವೊಂದನ್ನು ಪುನಃ ಪ್ರತಿಷ್ಠಾಪಿಸಿದಳು. ಈಕೆ ಜೈನಮುನಿಯಾದ ಪದ್ಮ ಪ್ರಭಮಲಧಾರಿ ದೇವರ ಪ್ರಿಯ ಗುಡ್ಡಿಯಾಗಿದ್ದಳು.

ಹೊಯ್ಸಳ ವಿಷ್ಣುವರ್ಧನನ ಪತ್ನಿಯರಲ್ಲಿ ಚಂದಲದೇವಿ ಎಂಬವಳೂ ಒಬ್ಬಳು. ಈಕೆ ಕೊಂಗಾಳ್ವ ಮನೆತನಕ್ಕೆ ಸೇರಿದವಳು ಎಂದು ಹೇಳಲಾಗಿದೆಯಾದರೂ ಇದು ಸಂದೇಹಾಸ್ಪದವಾಗಿದೆ.

ಕೂಂಡಿ ಪ್ರಾಂತ್ಯಾಧಿಕಾರಿಯಾಗಿ ಆಳಿದ ಸವದತ್ತಿಯ ರಟ್ಟ ಎಂಬ ಮಾಂಡಲಿಕ ಮನೆತನದ 1ನೆಯ ಲಕ್ಷ್ಮೀದೇವನ ಪತ್ನಿ ಹಾಗೂ Ⅱನೆಯ ಕಾರ್ತವೀರ್ಯನ ತಾಯಿಯ ಹೆಸರು ಸಹ ಚಂದಲದೇವಿ. ಯಾದವಕುಲಕ್ಕೆ ಸೇರಿದ ರಾಜ ಎಂಬವನ ಪುತ್ರಿಯಾದ ಈಕೆಗೆ ಮಲ್ಲಿಕಾರ್ಜುನನೆಂಬ ಇನ್ನೊಬ್ಬ ಮಗ ಇದ್ದ. ಶಾಸನದಲ್ಲಿ ಈಕೆಯನ್ನು ಚಂದ್ರಿಕೆ, ಚಂದ್ರಿಕಾದೇವಿ ಎಂದೂ ಕರೆಯಲಾಗಿದೆ.

ಹೊಯ್ಸಳ ಇಮ್ಮಡಿ ಬಲ್ಲಾಳನ ಅಮಾತ್ಯನಾಗಿದ್ದ ನಾಗದೇವನ ಪತ್ನಿ ಚಂದಲದೇವಿ. ಈಕೆ ಪಟ್ಟಣಸ್ವಾಮಿ ಎನಿಸಿದ ಮಲ್ಲಸೆಟ್ಟಿ ಮತ್ತು ಮಾಚವೆಸೆಟ್ಟಿಕವ್ವೆಯ ಮಗಳು. ಈಕೆಯ ಮೊಮ್ಮಗಳಾದ ಮಾಚಿಕಬ್ಬೆ ಖ್ಯಾತಳಾದ ಶಾಂತಲದೇವಿಯ ತಾಯಿ.

16ನೆಯ ಶತಮಾನದ ಮಧ್ಯಭಾಗದಲ್ಲಿ ಘಟ್ಟದ ಕೆಳಗಣ ಮತ್ತು ಘಟ್ಟದ ಮೇಲಣ ತುಳುರಾಜ್ಯವನ್ನು ಆಳುತ್ತಿದ್ದ ಕಳಸ–ಕಾರ್ಕಳದ ಒಡೆಯನಾಗಿದ್ದ ವೀರಪಾಂಡ್ಯವೊಡೆಯನ ತಾಯಿ ಚಂದಲದೇವಿ. ಈಕೆ ಕೆರವಸೆ ರಾಜ್ಯಕ್ಕೆ ಸೇರಿದ ರಾಜಕುಮಾರಿಯಾಗಿದ್ದಳು.

(ಜಿ.ಬಿ.ಆರ್.)

**ಚಂದಾ, ಅರುಣ ಕುಮಾರ :** 1899-1947. ಅಸ್ಸಾಮಿನ ಒಬ್ಬ ಸ್ವಾತಂತ್ರ್ಯ ಹೋರಾಟಗಾರ. 1899 ಫೆಬ್ರುವರಿ 17ರಂದು ಸಿಲ್ಚಾರಿನಲ್ಲಿ ಜನಿಸಿದರು. ತಂದೆ ಕಾಮಿನೀ ಕುಮಾರ ಚಂದಾ ಯಶಸ್ವೀ ವಕೀಲ, ಉದಾರವಾದಿ. ಅರುಣಕುಮಾರ ಚಂದಾ ಸಿಲ್ಚಾರ್, ಸಿಲ್ಹೆಟ್ ಮತ್ತು ಕೋಲ್ಕತ್ತದಲ್ಲೂ ಅನಂತರ ಇಂಗ್ಲೆಂಡಿನಲ್ಲೂ ವಿದ್ಯಾಭ್ಯಾಸ ಮಾಡಿದರು. ಭಾರತಕ್ಕೆ ಹಿಂದಿರುಗಿದ ಮೇಲೆ 1930-31ರಲ್ಲಿ ಸಿಂಗಪುರದಲ್ಲಿ ವಕೀಲವೃತ್ತಿ ನಡೆಸಿದರು. ಆದರೆ ತಂದೆಯ ಅನಾರೋಗ್ಯದ ಕಾರಣ ಅವರು ಸಿಲ್ಚಾರಿಗೆ ಹಿಂದಿರುಗಿ ಅಲ್ಲೇ ವಕೀಲವೃತ್ತಿಯನ್ನು ಮುಂದುವರಿಸಿದರು. ಜೊತೆಗೆ ರಾಜಕೀಯ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ, ಸೇವಾನಿರತರಾದರು.

ಕಾಚಾರ್ ಮತ್ತು ಸಿಲ್ಹೆಟ್ ಜಿಲ್ಲೆಗಳನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ಚಂದಾ ಅವರು ಅಲ್ಲಿಯ ರಾಜಕೀಯದಲ್ಲಿ ಪ್ರಮುಖರಾದರು. ಅವರಿಗೆ ರಾಜಕೀಯ ಪ್ರಜ್ಞೆ ಪ್ರಾಪ್ತವಾದದ್ದು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರ ತಂದೆಯಿಂದ. ಚಿತ್ತರಂಜನ ದಾಸರಿಂದಲೂ ಅವರು ತುಂಬಾ ಪ್ರಭಾವಿತರಾಗಿದ್ದರು. ಇಂಗ್ಲೆಂಡಿನಲ್ಲಿದ್ದಾಗ ಅಲ್ಲಿಯ ಲೇಬರ್ ಪಕ್ಷದೊಡನೆ ಸಂಪರ್ಕ ಹೊಂದಿದ್ದರಲ್ಲದೆ ಅದರ ಚುನಾವಣಾ ಪ್ರಚಾರ ಸಭೆಗಳಲ್ಲಿ ಇವರೂ ಭಾಷಣ ಮಾಡುತ್ತಿದ್ದರು. 1935ರಲ್ಲಿ ಇವರು ಸಿಲ್ಚಾರಿನಲ್ಲಿ ಗುರುಚರಣ ಕಾಲೇಜನ್ನು ಸ್ಥಾಪಿಸಿ ಕೆಲವು ಕಾಲ ಗೌರವ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. ಕಾರ್ಮಿಕ ಕ್ಷೇತ್ರದಲ್ಲಿ ಆಸಕ್ತಿ ವಹಿಸಿದ ಇವರು, ಕಾಚಾರ್ ಜಿಲ್ಲೆಯ ಅಂಚೆ ಮತ್ತು ರೈಲ್ವೆ ಅಂಚೆ ಸೇವಾಸಂಘದ ಅಧ್ಯಕ್ಷರಾಗಿದ್ದರು. ಚಹ ತೋಟದ ಕಾರ್ಮಿಕರ ಮತ್ತು ಅಸ್ಸಾಂ ತೈಲ ಕಂಪನಿಯ ಕಾರ್ಮಿಕರ ಸಂಘಗಳನ್ನು ಚೇತನಗೊಳಿಸಿದ ಅವರು ಪ್ರಥಮ ಪ್ರಾಂತೀಯ ಕಾರ್ಮಿಕ ಸಂಘ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು.

1937ರಿಂದ ಕೊನೆಯುಸಿರು ಎಳೆಯುವವರೆಗೆ ಕಾಚಾರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಇವರು 1937ರಲ್ಲಿ ಅಸ್ಸಾಂ ಪ್ರಾಂತ್ಯದ ವಿಧಾನಸಭೆಗೆ ಚುನಾಯಿತರಾಗಿ, ಅಲ್ಲಿಯ ಕಾಂಗ್ರೆಸ್ ವಿಧಾನ ಸಭಾಪಕ್ಷದ ಉಪನಾಯಕರಾಗಿ ಆಯ್ಕೆ ಹೊಂದಿದ್ದರು. ಸಿಲ್ಚಾರಿನ ಸಪ್ತಕ್ ಎಂಬ ಬಂಗಾಲೀ ವಾರಪತ್ರಿಕೆಯನ್ನು ಇವರು ನಿರ್ದೇಶಿಸುತ್ತಿದ್ದರಲ್ಲದೆ ಅದಕ್ಕೆ ಲೇಖನಗಳನ್ನೂ ಬರೆಯುತ್ತಿದ್ದರು. 1941 ರಲ್ಲಿ ಬ್ರಿಟಿಷರ ಯುದ್ಧ ಪ್ರಯತ್ನದ ವಿರುದ್ಧವಾಗಿ ಇವರು ಸತ್ಯಾಗ್ರಹ ಮಾಡಿ ಒಂದು ವರ್ಷದ ಕಾರಾಗೃಹ ವಾಸದ ಶಿಕ್ಷೆಗೆ ಗುರಿಯಾಗಿದ್ದರು. 1942ರಲ್ಲಿ ಸರ್ಕಾರ ಇವರನ್ನು ಮತ್ತೆ ಬಂಧಿಸಿತ್ತು. ಇವರು ಬಿಡುಗಡೆಯಾದ ಮೇಲೂ 1945ರ ಮಧ್ಯಭಾಗದವರೆಗೂ ಅಸ್ಸಾಂ ಪ್ರಾಂತ್ಯಕ್ಕೆ ಪ್ರವೇಶಿಸದಂತೆ ಸರ್ಕಾರ ಇವರಿಗೆ ಪ್ರತಿಬಂಧಕಾಜ್ಞೆ ವಿಧಿಸಿತ್ತು. ಭಾರತದ ವಿಧಾನಸಭೆಯ ಸದಸ್ಯರಾಗಿ ಅವಿರೋಧವಾಗಿ ಚುನಾಯಿತರಾಗಿದ್ದ ಇವರು ದೀರ್ಘಕಾಲ ವ್ಯಾಧಿಯನ್ನನುಭವಿಸಿ 1947ರ ಏಪ್ರಿಲ್ 26ರಂದು ಕೋಲ್ಕತ್ತದಲ್ಲಿ ನಿಧನಹೊಂದಿದರು. (ಎಂ.ಯು.ಎಂ.)

**ಚಂದಾವರಕರ, ನಾರಾಯಣ ಗಣೇಶ :** 1855-1923. ಭಾರತದ ಒಬ್ಬ ರಾಜಕಾರಣಿ, ಸಮಾಜಸುಧಾರಕ, ಶಿಕ್ಷಣತಜ್ಞ, ನ್ಯಾಯವಾದಿ; ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯೂ ಇಂದೂರು ಸಂಸ್ಥಾನದಲ್ಲಿ ಸ್ವಲ್ಪ ಕಾಲ ಪ್ರಧಾನಮಂತ್ರಿಯೂ ಆಗಿದ್ದವರು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ 1855ರ ಡಿಸೆಂಬರ್ 2ರಂದು ಜನಿಸಿದರು. 14ನೆಯ ವಯಸ್ಸಿನಲ್ಲಿ ಮುಂಬಯಿಗೆ ತೆರಳಿ ಅಲ್ಲಿ



ತಮ್ಮ ಸೋದರಮಾವನ ಆಶ್ರಯದಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಎಲ್ಫಿನ್‌ಸ್ಟನ್ ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ವ್ಯಾಸಂಗ ಮಾಡು ತ್ತಿದ್ದಾಗ ಅಲ್ಲಿ ಪ್ರಾಧ್ಯಾಪಕ ರಾಗಿದ್ದ ಭಂಡಾರ್‌ಕರ್, ಪರಮಾನಂದ್, ರಾನಡೆ, ತೆಲಂಗ್ ಮತ್ತು ಫಿರೋಜ್ ಷಾ ಮೆಹತಾರಂಥ ಮಹೋಪಾಧ್ಯಾಯರ ಪ್ರಭಾವಕ್ಕೆ ಒಳಗಾದರು. ಅವರು ಬಿ.ಎ. ಪದವಿ ಪಡೆದದ್ದು 1876ರಲ್ಲಿ. 1878ರಲ್ಲಿ ತೆಲಾಂಗರ ಸಲಹೆಯ ಮೇರೆಗೆ ಇಂದುಪ್ರಕಾಶ ಎಂಬ ದ್ವಿಭಾಷಾ ವಾರಪತ್ರಿಕೆಯ ಸಂಪಾದಕತ್ವ ವಹಿಸಿ ಹತ್ತು ವರ್ಷಗಳಿಗೂ ಹೆಚ್ಚು ಕಾಲ ಕೆಲಸಮಾಡಿ ಆ ಪತ್ರಿಕೆಯ ಖ್ಯಾತಿಗೆ ಕಾರಣರಾದರು. ಪತ್ರಿಕೋದ್ಯಮದ ಜೊತೆಗೆ ಅವರು ನ್ಯಾಯಶಾಸ್ತ್ರದ ಅಧ್ಯಯನ ಮಾಡಿ 1881ರಲ್ಲಿ ಅದರಲ್ಲೂ ಪದವಿ ಪಡೆದು ವಕೀಲವೃತ್ತಿಯನ್ನಾರಂಭಿಸಿದರಲ್ಲದೆ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿದರು. 1885ರಲ್ಲಿ ಬ್ರಿಟನ್ನಿನ ಮಹಾ ಚುನಾವಣೆಗಳ ಸಮಯದಲ್ಲಿ ಅಲ್ಲಿಯ ನಾಗರಿಕರಲ್ಲಿ ಭಾರತದ ಬಗ್ಗೆ ತಿಳುವಳಿಕೆ ಮೂಡಿಸಲು ತೆರಳಿದ ಮೂವರು ಪ್ರತಿನಿಧಿಗಳ ನಿಯೋಗದಲ್ಲೊಬ್ಬರಾಗಿದ್ದು ಬ್ರಿಟನ್ನಿನಲ್ಲಿ ಮೂರು ತಿಂಗಳುಗಳ ಕಾಲ ಪ್ರವಾಸಮಾಡಿದರು. ಚಂದಾವರಕರರು ಬ್ರಿಟನ್ನಿನಿಂದ ಭಾರತಕ್ಕೆ ಹಿಂದಿರುಗಿದ ಮೇಲೆ ರಾನಡೆಯವರು ಸ್ಥಾಪಿಸಿದ ಭಾರತ ರಾಷ್ಟ್ರೀಯ ಸಾಮಾಜಿಕ ಸಮ್ಮೇಳನದ ಕಾರ್ಯದಲ್ಲಿ ಅವರಿಗೆ ನೆರವು ನೀಡುತ್ತಿದ್ದರಲ್ಲದೆ 1901ರಲ್ಲಿ ರಾನಡೆಯವರು ನಿಧನರಾದ ಮೇಲೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಎರಡು ದಶಕಗಳ ಕಾಲ ಸಮಾಜ ಸುಧಾರಣೆ, ಹಿಂದುಳಿದ ವರ್ಗಗಳ ಮತ್ತು ಕಾರ್ಮಿಕರ ಕ್ಷೇಮಾಭಿವೃದ್ಧಿ ಇವುಗಳಿಗಾಗಿ ಶ್ರಮಿಸಿದರು. ವಕೀಲ ವೃತ್ತಿಯಲ್ಲೂ ಶ್ರದ್ಧೆ, ನಿರಂತರ ಶ್ರಮ, ವಾಕ್ಚಾತುರ್ಯ ಇವುಗಳಿಂದಾಗಿ ಇವರು ಮುಂಬಯಿ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳಲ್ಲಿ ಅಗ್ರಶ್ರೇಣಿಯನ್ನು ಪಡೆದರಲ್ಲದೆ 1901ರಲ್ಲಿ ಆ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡರು. 1912ರಲ್ಲಿ ಆ ಅಧಿಕಾರದಿಂದ ನಿವೃತ್ತರಾದ ಮೇಲೆ ಎರಡು ವರ್ಷಕಾಲ ಇಂದೂರು ಸಂಸ್ಥಾನದ ಪ್ರಧಾನ ಮಂತ್ರಿಯಾಗಿದ್ದು ದಕ್ಷವಾಗಿ ಆಡಳಿತ ನಿರ್ವಹಿಸಿದರು.

ಚಂದಾವರಕರರು ಮುಂಬಯಿ ನಗರದ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಹು ಒಳ್ಳೆಯ ಮಾರ್ಗದರ್ಶಿಯಂತಿದ್ದರು. ಬೊಂಬಾಯಿ ಪ್ರೆಸಿಡೆನ್ಸಿ ಸಮಾಜ ಸುಧಾರಣಾ ಸಂಘ, ದಲಿತೋದ್ಧಾರ ಸಂಸ್ಥೆ, ಸಮಾಜ ಸೇವಾ ಲೀಗ್, ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆ, ಪ್ರಾರ್ಥನಾ ಸಮಾಜ ಮತ್ತು ವಿದ್ಯಾರ್ಥಿ ಸಹೋದರರ ಸಮೂಹ ಮೊದಲಾದ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಮುಂಬಯಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆಯ ಕಾಲದಿಂದಲೂ ಅದರಲ್ಲಿ ಆಸಕ್ತಿ ಹೊಂದಿದ್ದ ಅವರು 1900ರಲ್ಲಿ ಲಾಹೋರಿನಲ್ಲಿ ಅದರ ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ಸಿನಲ್ಲಿ ಎರಡು ಬಣಗಳೇರ್ಪಟ್ಟಾಗ ಸುರೇಂದ್ರನಾಥ ಬ್ಯಾನರ್ಜಿ ಮತ್ತು ಸಂಗಡಿಗರೊಡನೆ ಮಿತವಾದಿಗಳ ಸಮ್ಮೇಳನದ ನಾಯಕರಾಗಿದ್ದರು. ಚಂದಾವರಕರರ ಸಲಹೆಗಳನ್ನು ಗಾಂಧೀಜಿಯವರೂ ಅನೇಕ ವೇಳೆ ಪುರಸ್ಕರಿಸುತ್ತಿದ್ದರು.

ಮಾಂಟ್‌ಫರ್ಡ್ ಸುಧಾರಣೆಗಳು 1921ರಲ್ಲಿ ಭಾರತದಾದ್ಯಂತ ಜಾರಿಗೆ ಬಂದಾಗ ಮುಂಬಯಿ ವಿಧಾನ ಪರಿಷತ್ತಿನ ಪ್ರಥಮ ಖಾಸಗಿ ಅಧ್ಯಕ್ಷರಾಗಿ ನೇಮಿಸಲ್ಪಟ್ಟು ತಮ್ಮ ಕೊನೆಯ ದಿನಗಳವರೆಗೂ ಆ ಪೀಠವನ್ನಲಂಕರಿಸಿದ್ದರು. ರಾಷ್ಟ್ರೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿದ ಚಂದಾವರಕರರು 1923ರ ಮೇ 14ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. (ಎಂ.ಕೆ.ಎಸ್.)

**ಚಂದಾ ಸಾಹೇಬ್ :** ಕರ್ನಾಟಕದ (ಕೋರಮಂಡಲ ಮತ್ತು ಅದರ ಹಿನ್ನಾಡಿನ ಪ್ರದೇಶಕ್ಕೆ ಐರೋಪ್ಯರು ಇಟ್ಟಿದ್ದ ಹೆಸರು) ನವಾಬ ದೋಸ್ತ್ ಆಲಿಯ ಅಳಿಯ. 1749 ರಿಂದ 1752ರ ವರೆಗೆ ನವಾಬನಾಗಿದ್ದವ. 1741ರಲ್ಲಿ ಮರಾಠರು ಕರ್ನಾಟಕದ ಮೇಲೆ ದಂಡೆತ್ತಿ ಹೋಗಿ, ನವಾಬ್ ದೋಸ್ತ್ ಆಲಿಯನ್ನು ಕೊಂದು ಚಂದಾ ಸಾಹೇಬನನ್ನು ಸೆರೆಹಿಡಿದರು. ದೋಸ್ತ್ ಆಲಿಯ ಮಗ ಸಫ್ದರ್ ಆಲಿ ಮರಾಠರಿಗೆ ಒಂದು ಕೋಟಿ ರೂ. ಕೊಡುವುದಾಗಿ ವಾಗ್ದಾನ ಮಾಡಿ ತಲೆ ಉಳಿಸಿಕೊಂಡ. ಆದರೆ ಸ್ವಲ್ಪ ಕಾಲಾನಂತರ ಅವನ ದಾಯಾದಿಗಳು ಅವನನ್ನು ಕೊಂದರು. ಅವನ ಚಿಕ್ಕ ವಯಸ್ಸಿನ ಮಗ ನವಾಬನಾದ. ಈ ಭಾಗ ದಖನ್ನಿನ ಸುಬೇದಾರನಾಗಿದ್ದ ಹೈದರಾಬಾದ್ ನಿಜಾಮನ ಅಧಿಕಾರಕ್ಕೆ ಒಳಪಟ್ಟಿತ್ತಾದರೂ ಅವನು ಸ್ವತಃ ಮರಾಠರ ವಿರುದ್ಧ ಸೆಣಸಾಟದಲ್ಲಿ ಹಾಗೂ ಉತ್ತರ ಭಾರತದ ರಾಜಕೀಯದಲ್ಲಿ ಸಿಲುಕಿದ್ದುದರಿಂದ ಇದರತ್ತ ಗಮನ ಹರಿಸಲಾಗಿರಲಿಲ್ಲ. ಪರಿಸ್ಥಿತಿ ಹದಗೆಟ್ಟಾಗ ಅವನು ಆರ್ಕಾಟಿಗೆ ಬಂದು, ಅನ್ವರ್–ಉದ್–ದೀನ್ ಖಾನನನ್ನು ನವಾಬನನ್ನಾಗಿ ನೇಮಿಸಿದ. ಇದರಿಂದ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ಅವನಿಗೂ ದೋಸ್ತ್ ಆಲಿಯ ಬಂಧುಗಳಿಗೂ ದ್ವೇಷ ಬೆಳೆಯಿತು.

1748ರಲ್ಲಿ ಮರಾಠರು ಚಂದಾ ಸಾಹೇಬನನ್ನು ಬಂಧನದಿಂದ ವಿಮೋಚನೆಗೊಳಿಸಿದಾಗ ಅವನಿಗೆ ಆರ್ಕಾಟಿನ ಸಿಂಹಾಸನದ ಆಸೆ ಪ್ರಬಲವಾಯಿತು. ಪುದುಚೇರಿಯಲ್ಲಿ ಫ್ರೆಂಚ್ ಗವರ್ನರ್ ಆಗಿದ್ದ ಡುಪ್ಲೆಕ್ಸನ ನೆರವಿನಿಂದ ಅವನು ತನ್ನ ಕಾರ್ಯ ಸಾಧಿಸಿಕೊಳ್ಳಲು ಬಯಸಿ ಅವನೊಂದಿಗೆ ಒಪ್ಪಂದ ಮಾಡಿಕೊಂಡ. ದಖನ್ನಿನ ಸಿಂಹಾಸನವನ್ನು ಸ್ಥಾಪಿಸಿದ ಆಸಫ್ ಝಾ ನಿಜಾಂ–ಉಲ್–ಮುಲ್ಕ್ 1748ರಲ್ಲಿ ತೀರಿಕೊಂಡಿದ್ದರಿಂದ ಆ ಸಿಂಹಾಸನಕ್ಕಾಗಿಯೂ ಕಲಹ ಆರಂಭವಾಗಿತ್ತು. ಆಸಫ್ ಝಾನ ಮಗ ನಾಸಿರ್ ಜಂಗ್ ಸಿಂಹಾಸನವನ್ನೇರಿದ್ದನಾದರೂ, ಮೊಗಲ್ ಚಕ್ರವರ್ತಿ ತನ್ನನ್ನು ದಖನ್ನಿನ ಸುಬೇದಾರನಾಗಿ ನೇಮಿಸಿದ್ದನೆಂದು ಆಸಫ್ ಝಾನ ಮೊಮ್ಮಗ ಮುಝಫರ್ ಜಂಗ್ ವಾದ ಹೂಡಿದ್ದ. ಅವನನ್ನು ದಖನ್ನಿನ ಸಿಂಹಾಸನದ ಮೇಲೆ ಕೂರಿಸುವುದಾಗಿ ಡುಪ್ಲೆಕ್ಸ್ ಅವನೊಂದಿಗೂ ಒಪ್ಪಂದ ಮಾಡಿಕೊಂಡ.

ಫ್ರೆಂಚರೂ ಮುಜ್ಫರ್ ಜಂಗನೂ ಚಂದಾ ಸಾಹೇಬನೂ ಸೇರಿ ಅನ್ವರ್–ಉದ್–ದೀನನ ವಿರುದ್ಧ ವೆಲ್ಲೂರಿಗೆ ಆಗ್ನೇಯದಲ್ಲಿರುವ ಅಂಬೂರಿನಲ್ಲಿ ನಡೆಸಿದ ಕದನದಲ್ಲಿ ಅನ್ವರ್–ಉದ್–ದೀನ್ ಸತ್ತ. ಅವನ ಮಗ ಮಹಮ್ಮದ್ ಆಲಿ ತಂಜಾವೂರಿಗೆ ಓಡಿಹೋಗಿ ತಲೆ ಮರೆಸಿಕೊಂಡ. ಚಂದಾ ಸಾಹೇಬ್ ಆರ್ಕಾಟಿನಲ್ಲಿನ ಕರ್ನಾಟಕದ ನವಾಬನಾಗಿ ಆಳತೊಡಗಿದ.

ಫ್ರೆಂಚರ ಸೇನೆ ತಿರುಚಿನಾಪಳ್ಳಿಯನ್ನು ಮುತ್ತಿತು. ಮುಹಮ್ಮದ್ ಆಲಿಯ ನೆರವಿಗೆ ಧಾವಿಸಿದ ನಾಸಿರ್ ಜಂಗ್ ಯುದ್ಧದಲ್ಲಿ ಸತ್ತ. ಸೆರೆಯಲ್ಲಿದ್ದ ಮುಝಫರ್ ಜಂಗನನ್ನು ಫೆಂಚರು ಬಿಡುಗಡೆ ಮಾಡಿ ಅವನನ್ನು ಹೈದರಾಬಾದಿನ ಸುಬೇದಾರನೆಂದು ಘೋಷಿಸಿದರು.

ಆದರೆ ಫ್ರೆಂಚರು ತಿರುಚಿನಾಪಳ್ಳಿಯ ಮುತ್ತಿಗೆಯನ್ನು ತೀವ್ರಗೊಳಿಸಲಾರದೆ ಹೋದರು. ಅಲ್ಲಿ ತಡವಾದಷ್ಟೂ ಮಹಮ್ಮದ್ ಆಲಿಯ ಕೈ ಮೇಲಾಯಿತು. ಬ್ರಿಟಿಷರು ಹೆಚ್ಚು ಸೈನ್ಯ ಕಳಿಸಿದರು. 1751ರ ಅಂತ್ಯದ ವೇಳೆಗೆ ಮೈಸೂರು, ತಂಜಾವೂರು ಮತ್ತು ಮರಾಠರ ನೆರವೂ ದೊರಕಿತು. ತಿರುಚಿನಾಪಳ್ಳಿಯ ಮುತ್ತಿಗೆಯಲ್ಲಿ ನಿರತನಾಗಿದ್ದ ಚಂದಾ ಸಾಹೇಬನ ಗಮನವನ್ನು ಬೇರೆಡೆಗೆ ಸೆಳೆಯುವ ಉದ್ದೇಶದಿಂದ ಕೇವಲ ಇನ್ನೂರು ಮಂದಿ ಐರೋಪ್ಯರನ್ನೂ ಮುನ್ನೂರು ಮಂದಿ ಭಾರತೀಯ ಸಿಪಾಯಿಗಳನ್ನೂ ಒಳಗೊಂಡ ಸೇನೆಯೊಂದು ಕ್ಲೈವನ ನೇತೃತ್ವದಲ್ಲಿ ಮುತ್ತಿಗೆ ಹಾಕಿತು, ಚಂದಾ ಸಾಹೇಬ್ ಕೂಡಲೇ ದೊಡ್ಡ ಸೇನೆಯೊಂದಿಗೆ ಆರ್ಕಾಟಿಗೆ ಹೋದ 53 ದಿನಗಳ ಕದನದ ಅನಂತರ ಆ ಸೇನೆ ಹಿಮ್ಮೆಟ್ಟಬೇಕಾಯಿತು. ಕ್ಲೈವನ ವಿಜಯದಿಂದ ಫ್ರೆಂಚರ ಸೇನೆಯ ಧೈರ್ಯ ಕುಗ್ಗಿತು. ಇಂಗ್ಲಿಷರು ಅಲ್ಲೂ ಗೆದ್ದರು. ಚಂದಾ ಸಾಹೇಬ್ ಸೆರೆಸಿಕ್ಕಿದ. ತಂಜಾವೂರಿನ ದೊರೆ ಅವನನ್ನು ಕೊಲ್ಲಿಸಿದ. (ಬಿ.ಎಂ.)

**ಚಂದಿಮರಸ :** ಒಬ್ಬ ವಚನಕಾರ. ಗುಲ್ಬರ್ಗ ಜಿಲ್ಲೆಯ ಕೆಂಭಾವಿಯಲ್ಲಿ ಅರಸನಾಗಿದ್ದ. ಕಾಲ ಸು. 1020. ಜೇಡರ ದಾಸಿಮಯ್ಯನಿಗಿಂತ ಹಿಂದೆ ಇದ್ದಿರಬೇಕೆಂದು ಡಿ.ಎಲ್. ನರಸಿಂಹಾಚಾರ್ಯರ ಅಭಿಪ್ರಾಯ. ಈತ ಬ್ರಾಹ್ಮಣರ ಚಾಡಿ ಮಾತುಗಳನ್ನು ಕೇಳಿ ಭೋಗಣ್ಣನೆಂಬ ಶರಣನನ್ನು ಊರಿನಿಂದ ಓಡಿಸಿದನೆಂದೂ ಆತನ ಹಿಂದೆಯೇ ಆ ಊರಿನ ಲಿಂಗಗಳೆಲ್ಲ ಹಾರಿಹೋಗಲು ರಾಜ ಆ ಶರಣನನ್ನು ಹಿಂದಕ್ಕೆ ಕರೆಸಿ ತಾನು ವೀರಶೈವ ಧರ್ಮವನ್ನು ಸ್ವೀಕರಿಸಿ, ರಾಜ್ಯಕೋಶಗಳನ್ನು ತೊರೆದು, ಕೃಷ್ಣಾ ನದೀತೀರದ ಚಿಮ್ಮಲಿಗೆಯಲ್ಲಿ ವಾಸಿಸುತ್ತ ನಿಜಗುಣನಿಂದ ದೀಕ್ಷೆ ಪಡೆದು ತಾನೂ ಗುರುವಿನಂತೆ ವಚನಕಾರನಾಗಿ ಧರ್ಮಪ್ರಸಾರ ಕೈಗೊಂಡು ಚಿಮ್ಮಲಿಗೆಯಲ್ಲಿಯೇ ಸಮಾಧಿಸ್ಥನಾದನೆಂದೂ ಪ್ರತೀತಿ. ಚಿಮ್ಮಲಿಗೆಯಲ್ಲಿ ಈತನ ಹೆಸರಿನ ಒಂದು ಗುಡಿ ಇಂದಿಗೂ ಇದೆ. ಘನಲಿಂಗ ಈತನನ್ನು ಮಹಾತ್ಮನೆಂದು ತನ್ನ ವಚನಗಳಲ್ಲಿ ಹಾಡಿದ್ದಾನೆ.

ಈತನ ಅಂಕಿತ ಸಿಮ್ಮಲಿಗೆಯ ಚೆನ್ನರಾಮ ಎಂದಿದೆ. ಈಗ ದೊರೆತಿರುವ ಒಂದು ಪ್ರತಿಯಲ್ಲಿ ಈ ಅಂಕಿತ ಚಂದಿಮರಸನಿಗೆ ಸೇರಿದ್ದೆಂದೂ ಎಲಹಂಕ ನಾಡಪ್ರಭು ಮುಮ್ಮಡಿ ಕೆಂಪಯ್ಯಗೌಡರ (1661) ಕಾಲದಲ್ಲಿ ಬರೆದದ್ದೆಂದು ಹೇಳಲಾದ ಇನ್ನೊಂದು ಪ್ರತಿಯಲ್ಲಿ ಈ ಅಂಕಿತ ಚಿಮ್ಮಲಿಗೆಯ ಚಂದಯ್ಯನಿಗೆ ಸೇರಿದ್ದೆಂದೂ ಹೇಳಲಾಗಿದೆ. ಈತನ ವಚನಗಳು ಶ್ರೇಷ್ಠತರವಾದುವೆಂದೂ ಈತನ ವಚನಗಳನ್ನು ಉದಾಹರಿಸದ ಯಾವ ವಚನ ಸಂಗ್ರಹಕಾರನೂ ಇಲ್ಲವೆಂಬುದೂ ಹಳಕಟ್ಟಿಯವರ ಅಭಿಪ್ರಾಯ.

ಈತನ 15 ವಚನಗಳು ದೊರೆತಿವೆ. ಅವುಗಳಲ್ಲಿ ಎರಡು ಹೀಗಿವೆ :

ಸಂಸಾರವೆಂಬತ್ತೆಗೆ ನಿರ್ಬುದ್ಧಿ ಸೊಸೆಯೊಬ್ಬಳು; ಅಟ್ಟುಂಡೆನೆಂದು ಒಲೆಯ ಬೂದಿಯ ತೋಡುವತನಕ ಒಳಗೊಂದು ಕಿಡಿಯಿರ್ದು ಕೈಬೆಂದು ಮಱುಗುವಂತಾಯಿತ್ತಲ್ಲಾ ಎನಗೆ; ನಿಸ್ಸಂಗತಿಯ ಒಡಲೊಲೆಯ ಬೂದಿಯ ಕೆದಟು ವನಕ ಒಳಗೊಂದು ಸುಜ್ಞಾನವೆಂಬ ಕಿಡಿಯಿರ್ದು ಎನ್ನ ಮನಬೆಂದು ಹೃದಯದಲ್ಲಿ ಮಱುಗುತ್ತಿದ್ದೇನೆ. ಇದಕ್ಕೆ ಸೀತಾಳಮಂತ್ರ ಉಂಟೆ ಅಯ್ಯ. ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ ನಿಜಗುಣಶರಣೆಂಬುದೆ ಮಂತ್ರ

ಇಂದುವಿನ ಬೆಳಗಿನಿಂದ ಇಂದುವನು, ಭಾನುವಿನ ಬೆಳಗಿನಿಂದ ಭಾನುವನು, ದೀಪದ ಬೆಳಗಿನಿಂದ ದೀಪವನು ಕಾಂಬಂತೆ ತನ್ನ ಬೆಳಗಿನಿಂದ ತನ್ನನೆ ಕಂಡುನಿಂದ ನಿಲವು ತಾನೆ ಸಿಮ್ಮಲಿಗೆಯ ಚೆನ್ನರಾಮ. *

**ಚಂದುಮೇನೋನ್, ಓಯ್ಯಾರತ್ತ್ :** 1846-1899. ಮಲೆಯಾಳಂನ ಪ್ರಸಿದ್ಧ ಕಾದಂಬರಿ ಇಂದುಲೇಖದ ಕರ್ತೃ. ಇದರ ಪ್ರಕಟಣೆಯಿಂದ ಮಲೆಯಾಳಂ ಸಾಹಿತ್ಯಕ್ಕೆ ಗಮನಾರ್ಹವಾದ ಕಾದಂಬರಿಯೊಂದು ಲಭಿಸಿದಂತಾಯಿತು.

ಇಂದುಲೇಖ ಒಂದು ಸಾಮಾಜಿಕ ಕಾದಂಬರಿ. ಹೆನ್ರಿಟಾ ಟೆಂಪ್ಲ್ (ಬಿಕನ್ಸ್ ಫೀಲ್ಡ್) ಇಲ್ಲವೆ ಪ್ರೈಡ್ ಅಂಡ್ ಪ್ರಿಜುಡಿಸ್ (ಜೇನ್ ಆಸ್ಟೆನ್) ಕಾದಂಬರಿಯನ್ನು ಓದಿದ್ದುದರಿಂದ ಈ ಕೃತಿರಚನೆಗೆ ಪ್ರೇರಣೆ ದೊರೆಕಿತೆಂದು ಹೇಳುತ್ತಾರೆ. ಆಧುನಿಕ ವಿದ್ಯಾವಂತನೊಬ್ಬನ ದೃಷ್ಟಿಯಲ್ಲಿ ಅಂದಿನ ಸಾಮಾಜಿಕ ಜೀವನ ಪ್ರತಿಫಲಿಸಿದುದರ ವಾಸ್ತವಿಕ ಚಿತ್ರಣ ಇದರಲ್ಲಿದೆ. ಆ ಕಾಲದಲ್ಲಿ ನಂಬೂದಿರಿಗಳೂ ನಾಯರುಗಳೂ ಎಷ್ಟೇ ಸುಸಂಸ್ಕೃತ ವರ್ಗದವರಾಗಿದ್ದರೂ ಬಹಳ ಕಾಲದಿಂದ ಅವರು ಕೇರಳದಲ್ಲಿ ನಿರ್ವಹಿಸುತ್ತ ಬಂದಿದ್ದ ಜಮೀನ್ದಾರಿ ಪದ್ಧತಿಯ ದುಷ್ಫಲಗಳು ಅವರನ್ನು ಕ್ರಮೇಣ ಅಧಃಪತನದ ಹಾದಿಗೆ ತಳ್ಳುತ್ತಿದ್ದುವು. ಅನಾಚಾರಗಳಾದರೋ ಅಸಂಖ್ಯ; ಒಂದು ಕಡೆ ಆರ್ಥಿಕ ಶೋಷಣೆ; ಇನ್ನೊಂದು ಕಡೆ ದಾಂಪತ್ಯ ಸಂಬಂಧ ಮತ್ತು ಕೌಟುಂಬಿಕ ಘಟನೆಯ ಶೈಥಿಲ್ಯಗಳು. ಹೀಗೆ ಸರ್ವತೋಮುಖವಾಗಿ ಸಂಭವಿಸುತ್ತಿದ್ದ ಭಗ್ನತೆಯನ್ನು, ಇಂಗ್ಲಿಷ್ ಸಾಹಿತ್ಯದ ಮೂಲಕ ಲಭಿಸಿದ ವೈಜ್ಞಾನಿಕ ಮುಂಬೆಳಕಿನಲ್ಲಿ ಚಂದುಮೇನೋನ್ ವಿವರವಾಗಿ ವೀಕ್ಷಿಸಿದ. ಸಾಮಾಜಿಕವಾದ ಆ ವಿಲಕ್ಷಣತೆಗಳು ಯಥಾರ್ಥ ರೂಪದಲ್ಲಿ ಆತನ ಮನೋಮುಕುರದಲ್ಲಿ ಪ್ರತಿಬಿಂಬಿಸಿದವು. ಇದರ ಪರಿಣಾಮವಾಗಿ ರೂಪುಗೊಂಡ ಕಲಾಸೃಷ್ಟಿಯೇ ಇಂದುಲೇಖ. ಇದರ ನಾಯಕ ನಾಯಕಿಯರಾದ ಮಾಧವ ಮತ್ತು ಇಂದುಲೇಖ ಹೊಸಪೀಳಿಗೆಯ ಪ್ರತಿನಿಧಿಗಳು. ಪಂಜು ಮೇನೋನ್, ಸೂರಿ ನಂಬೂದಿರಿ–ಇವರು ಅಧಃಪತನಗೊಂಡ ತಲೆಮಾರಿನ ಮಾದರಿಗಳು. ಈ ವಿಭಿನ್ನ ಸ್ವಭಾವದ ಜನರಲ್ಲಿ ನಡೆಯುವ ಸಂಘರ್ಷದ ಚಿತ್ರೀಕರಣ ಕಾದಂಬರಿಯಲ್ಲಿ ಸೊಗಸಾಗಿ ಮೂಡಿಬಂದಿದೆ.

ಕುಂಜನ್ ನಂಬಿಯಾರರ ಬಳಿಕ ಸಮಕಾಲೀನ ಸಮಾಜದ ವಿಲಕ್ಷಣತೆಗಳನ್ನು ಈತನಷ್ಟು ಧೈರ್ಯದಿಂದ ಪ್ರಕಟಿಸಿದವರು ಯಾರೂ ಇಲ್ಲವೆಂದೇ ಹೇಳಬೇಕು. ಇಂದುಲೇಖ ಉಂಟುಮಾಡಿದಷ್ಟು ಸಾಮಾಜಿಕ ಪರಿವರ್ತನೆ ಯಾವುದೇ ಸಂಘಟಿತ ಪಂಥದಿಂದಲೂ ಸಾಧ್ಯವಾಗಿರುವಂತೆ ಕಂಡುಬಂದಿಲ್ಲ. ಈತನ ವಿರುದ್ಧ ಸಂಪ್ರದಾಯವಾದಿಗಳಾದ ನಂಬೂದಿರಿಗಳೂ ನಾಯರರೂ ಕ್ರುದ್ಧರಾದರು. ಇದು ಚಂದುಮೇನೋನನ ವ್ಯಂಗ್ಯ ನೇರವಾಗಿ ಅವರಿಗೆ ತಾಕಿದೆಯೆಂಬುದಕ್ಕೆ ಸಾಕ್ಷಿ. ನಿಜವಾಗಿಯೂ ಆಧುನಿಕ ಕೇರಳದ ಸಾಮಾಜಿಕ ಪರಿಷ್ಕಾರದ ಮೊದಲ ಪ್ರಚೋದನೆ ಇಂದುಲೇಖದಿಂದ ಲಭ್ಯವಾಯಿತೆಂಬುದು ನಿಸ್ಸಂದೇಹ. ಅದಕ್ಕೂ ಮೊದಲು ಬಹಳ ಮಂದಿ ಅದರ ಬಗೆಗೆ ಮಾತನಾಡಿರಬಹುದು, ಬರೆದಿರಬಹುದು. ಆದರೆ ಪರಿಷ್ಕಾರಗೊಳ್ಳಬೇಕಾದ ಸಾಮಾಜಿಕ ಆಚಾರವಿಚಾರಗಳ ಬಗೆಗೆ ಜನಸಮೂಹ ಚೆನ್ನಾಗಿ ಆಲೋಚಿಸತೊಡಗಿದುದು ಇಂದುಲೇಖವನ್ನು ಓದಿದ ತರುವಾಯವೇ.

ಚಂದುಮೇನೋನ್‌ನ ಮತ್ತೊಂದು ಕೃತಿ ಶಾರದ. ಇದರ ಒಂದು ಭಾಗವನ್ನು ಮಾತ್ರ ಆತ ಪೂರೈಸಿದ್ದ. ಎರಡನೆಯ ಭಾಗ ಬರೆಯಬೇಕೆನ್ನುವಷ್ಟರಲ್ಲಿ ಮೃತ್ಯುವಿಗೆ ತುತ್ತಾದ. ಅಪೂರ್ಣವಾದರೂ ಶಾರದ ಸೊಗಸಾದ ಕಲಾಶಿಲ್ಪ, ಕಲಾವಿದನ ಪರಿಪಕ್ವತೆ ಇದರಲ್ಲಿ ಎದ್ದು ಕಾಣುತ್ತದೆ. ಇಂದುಲೇಖಕ್ಕಿಂತ ಶಾರದದಲ್ಲೇ ಈತನ ವ್ಯಕ್ತಿತ್ವ ಚೆನ್ನಾಗಿ ಗೋಚರಿಸುತ್ತದೆ. ನ್ಯಾಯಪೀಠಗಳು, ಅವನ್ನು ಆಶ್ರಯಿಸಿರುವ ವಕೀಲರು, ವ್ಯವಹಾರಪ್ರಿಯರು, ದಲ್ಲಾಳಿಗಳು ಮೊದಲಾದ ಬಗೆಬಗೆಯ ವ್ಯಕ್ತಿಗಳ ನಿಕಟಸಂಪರ್ಕವನ್ನು ಹೊಂದಿದ ಈತ ವಕೀಲನೂ ಆಗಿದ್ದ. ತನ್ನ ಅನುಭವದ ಸಾರವನ್ನು ಶಾರದದಲ್ಲಿ ಭಟ್ಟಿಯಿಳಿಸಿದ್ದಾನೆ. (ಕೆ.ಕೆ.ಎಸ್.)

**ಚಂದೇರಿ :** ಬುಂದೇಲಖಂಡದ ಮತ್ತು ಮಾಳವಗಳ ಗಡಿಯಲ್ಲಿರುವ ನಗರ. ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಚಿತೋಡಿನ ರಾಣಾ ಸಂಗ ಸೋಲಿಸಿ ಈ ನಗರವನ್ನು ವಶಪಡಿಸಿಕೊಂಡ. ಮೊಗಲ ಸಾಮ್ರಾಟ ಬಾಬರನ ಆಳ್ವಿಕೆಗೆ ಔಧ್ ಒಂದನ್ನು ಬಿಟ್ಟು ಮಿಕ್ಕೆಲ್ಲ ರಾಜ್ಯಗಳು ಸೇರಿಹೋದಾಗ ಸುಮಾರು 1527ರಲ್ಲಿ ಮೇದಿನಿರಾಯ್ ಎಂಬ ರಾಜಪೂತ ಸರದಾರ ಚಂದೇರಿಯಲ್ಲಿ ತನ್ನ ಆಡಳಿತ ಸ್ಥಾಪಿಸಿದ. ಅನಂತರ ಪೂರನಮಲ್ ಚಾಟ್ ಇದನ್ನು ತನ್ನ ವಶಪಡಿಸಿಕೊಂಡ. ಶೇರ್‌ಷಹ ಚಂದೇರಿಗೆ ಮುತ್ತಿದ. ಎಷ್ಟು ಕಾಲವಾದರೂ ನಗರದ ಕೋಟೆಯನ್ನು ವಶಪಡಿಸಕೊಳ್ಳಲಾರದೆ ಹೋದ. ಸಂಧಿ ಮಾಡಿಕೊಳ್ಳುವಂತೆ ಸುಳ್ಳು ಹೇಳಿ ಕೋಟೆಯಿಂದ ಪೂರನಮಲ್ ಹೊರಗೆ ಬಂದಾಗ ವಂಚಿಸಿ, ಮತ್ತೆ ಯುದ್ಧ ಸಾರಿ ಕೋಟೆಯನ್ನು ವಶಪಡಿಸಿಕೊಂಡ.

24 ಜನ ತೀರ್ಥಂಕರ ಮೈಬಣ್ಣಕ್ಕನುಗುಣವಾದ ಶಿಲೆಯಿಂದ ಅವರ ಮೂರ್ತಿಗಳನ್ನು ಕಡೆದು ಸ್ಥಾಪಿಸಿರುವ ಜೈನಕ್ಷೇತ್ರವಾಗಿ ಚಂದೇರಿ ಇಂದಿಗೂ ಪ್ರಸಿದ್ಧವಾಗಿದೆ. (ಬಿ.ಜಿ.)

**ಚಂದೇಲರು :** ಪ್ರ.ಶ. 9ನೆಯ ಶತಮಾನದಲ್ಲಿ ಪ್ರತೀಹಾರ ಚಕ್ರಾಧಿಪತ್ಯದ ಪತನದ ಅನಂತರ ಉತ್ತರ ಭಾರತದ ಮಧ್ಯಭಾಗದಲ್ಲಿ ಪ್ರಸಿದ್ಧಿ ಪಡೆದ ಒಂದು ರಾಜಮನೆತನದವರು. ಇವರು ಬುಂದೇಲಖಂಡದವರು. ತಾವು ಚಂದ್ರವಂಶಕ್ಕೆ ಸೇರಿದ ಋಷಿ ಚಂದ್ರಾತ್ರೇಯನಿಂದ ಜನಿಸಿದವರೆಂದು ಚಂದೇಲರು ಹೇಳಿಕೊಂಡಿದ್ದಾರೆ. 36 ಪ್ರಸಿದ್ಧ ರಾಜಪುತ್ರ ವಂಶಗಳಲ್ಲಿ ಚಂದೇಲರದೂ ಒಂದು–ಎಂದು ಅವರ ಆಸ್ಥಾನ ಕವಿಗಳು ಹೇಳಿದ್ದಾರೆ. ಅವರ ಅತಿಪ್ರಾಚೀನವೆನಿಸಿದ, 954ರ ಶಾಸನದಲ್ಲಿ ಈ ಅರಸರು ಚಂದ್ರಾತ್ರೇಯ ವಂಶದವರೆಂದು ಹೇಳಿದೆ. 1098ರ ಕೀರ್ತಿವರ್ಮನ ದೇವಗಢದ ಶಾಸನದಲ್ಲಿ ಚಂದೆಲ್ಲ ಎಂಬ ಹೆಸರೂ ಕಾಣಸಿಗುತ್ತದೆ. ಚಂದೇಲರು ಆಳುತ್ತಿದ್ದ ಪ್ರದೇಶವನ್ನು ಜೇಜಭುಕ್ತಿ, ಜೇಜಕಭುಕ್ತಿ, ಜೇಜಕಭುಕ್ತಿ ಮಂಡಲ ಎಂದು ಶಾಸನಗಳಲ್ಲಿ ಹೆಸರಿಸಿದೆ. ಇದು ಅನಂತರ ಬುಂದೇಲ ಖಂಡವೆನಿಸಿಕೊಂಡಿತು. 10ನೆಯ ಶತಮಾನದಿಂದ 13ನೆಯ ಶತಮಾನದವರೆಗೆ ಇವರ ಈ ರಾಜ್ಯ ಖಜುರಾಹೊ, ಕೌಲಂಜರ, ಮಹೋಬಾ ಹಾಗೂ ಅಜಯಾಗಢಗಳನ್ನೊಳಗೊಂಡಿತ್ತು.

ಪ್ರಶ 9ನೆಯ ಶತಮಾನದ ಆದಿಭಾಗದಲ್ಲಿ ನನ್ನುಕ ಚಂದೇಲನೆಂಬವನು ಖಜುರಾಹೊ ಎಂಬಲ್ಲಿ ಚಂದೇಲರಾಜ್ಯದ ಸ್ಥಾಪನೆ ಮಾಡಿದ. ಬಹುಶಃ ಚಂದ್ರವರ್ಮನೆಂಬ ಬಿರುದನ್ನು ಹೊಂದಿದ್ದ ಈತ ಪ್ರತೀಹಾರ ನಾಗಭಟನ ಸಾಮಂತನಾಗಿ ಆಳಿದ. ಈತನ ಅನಂತರ ಅಧಿಕಾರಕ್ಕೆ ಬಂದ ವಾಕ್ಪತಿ, ಆತನ ಇಬ್ಬರು ಮಕ್ಕಳಾದ ಜಯಶಕ್ತಿ ಮತ್ತು ವಿಜಯಶಕ್ತಿ, ವಿಜಯಶಕ್ತಿಯ ಮಗ ರಾಹಿಲ–ಇವರು ಪ್ರತೀಹಾರರಿಗೆ ಸಾಮಂತರಾಗಿ ಆಳುತ್ತಿದ್ದರು.

ರಾಹಿಲನ ಮಗ ಹರ್ಷನ (900-925) ಕಾಲದಲ್ಲಿ ಚಂದೇಲ ರಾಜ್ಯಶಕ್ತಿ ಬೆಳೆಯಿತು. ರಾಷ್ಟ್ರಕೂಟರ 3ನೆಯ ಇಂದ್ರನಿಂದ ಪದಚ್ಯುತಗೊಳಿಸಲ್ಪಟ್ಟ ಪ್ರತೀಹಾರ ಮಹೀಪಾಲ ತನ್ನ ಸಿಂಹಾಸನವನ್ನು ಮರಳಿ ಪಡೆಯಲು ಹರ್ಷ ಸಹಾಯ ಮಾಡಿದ. ಹರ್ಷನ ಮಗನಾದ ಯಶೋವರ್ಮನ ಕಾಲದಲ್ಲಿ ಪ್ರತೀಹಾರರು ತಮ್ಮೆಲ್ಲ ಶಕ್ತಿಯನ್ನೂ ಕಳೆದುಕೊಂಡು ಹೆಸರಿಗೆ ಮಾತ್ರ ಅರಸರಾಗಿ ಉಳಿದಿದ್ದರು. ಎಂತಲೇ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನಿಂದ ಇನ್ನೊಮ್ಮೆ ಪ್ರತೀಹಾರ ರಾಜ್ಯವನ್ನು ಹಿಂದಕ್ಕೆ ಪಡೆಯುವ ಸಂದರ್ಭದಲ್ಲಿ ಯಶೋವರ್ಮ ಕಾಲಂಜರ ಮುಂತಾದ ಕೋಟೆಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡ. ಇದಲ್ಲದೆ ಈತ ಕಳಚುರಿ ವಂಶದ ಯುವರಾಜದೇವನನ್ನು, ಪರಮಾರ ಮನೆತನದ ಸೀಯಕನನ್ನು ಮತ್ತು ಬಂಗಾಲದ ಪಾಲಮನೆತನದ ವಿಗ್ರಹಪಾಲನನ್ನು ಸೋಲಿಸಿ ಕೀರ್ತಿಗಳಿಸಿದ. ಯಶೋವರ್ಮ ದಕ್ಷ ಸೇನಾಪತಿಯಾಗಿದ್ದಂತೆ ದೈವಭಕ್ತನೂ ಆಗಿದ್ದ. ಇವನ ಕಾಲದಲ್ಲಿ ಕಟ್ಟಲು ಆರಂಭಿಸಲಾದ ಖಜುರಾಹೋದ ಚತುರ್ಭುಜ ದೇವಾಲಯ ಧಂಗನ ಆಳ್ವಿಕೆಯ ಕಾಲದಲ್ಲಿ ಪೂರ್ಣಗೊಂಡಿತು.

ಯಶೋವರ್ಮನ ಮಗನಾದ ಧಂಗ (950-1008) ಚಂದೇಲರ ಪ್ರಸಿದ್ಧ ಅರಸರಲ್ಲಿ ಒಬ್ಬನೆಂದು ಎಣಿಸಲ್ಪಟ್ಟಿದ್ದಾನೆ. ಪ್ರತೀಹಾರ ಅರಸರೊಡನೆ ಎಲ್ಲ ಸಂಬಂಧಗಳನ್ನೂ ಕಡಿದುಕೊಂಡು ಸ್ವತಂತ್ರನಾಗಿ ಆಳಿದ ಈತ ಕಾಲಂಜರ ಕೋಟೆಯನ್ನಲ್ಲದೆ, ಗೋಪಗಿರಿ (ಗ್ವಾಲಿಯರ್), ಕೌಶಿಕ (ವಾರಾಣಸಿ) ಹಾಗೂ ಪ್ರಯಾಗಗಳನ್ನು ತನ್ನ ಅಧೀನಕ್ಕೆ ತಂದುಕೊಂಡಿದ್ದ. ಇದರಿಂದ ಉತ್ತರಭಾರತದಲ್ಲಿ ಪ್ರತೀಹಾರರು ಪಡೆದಿದ್ದ ಸಾರ್ವಭೌಮತ್ವ ಈಗ ಚಂದೇಲರದಾಯಿತು. ಅಂಗ (ಉತ್ತರಬಂಗಾಳ), ರಾಢ (ಬಂಗಾಲದ ಬರ್ದ್ವಾನ್ ಹಾಗೂ ಬೀರ್‌ಭುಮ್ ಜಿಲ್ಲೆಗಳು), ಕೋಸಲ, ಆಂಧ್ರ, ಕುಂತಲ ಮತ್ತು ಸಿಂಹಲ ದೇಶಾಧೀಶ್ವರರೊಡನೆ ಇವನು ಹೋರಾಡಿದನೆಂದು ಖಜುರಾಹೊ ಶಾಸನವೊಂದು ತಿಳಿಸುತ್ತದೆಯಾದರೂ ಇದರಲ್ಲಿ ಸ್ವಲ್ಪಮಟ್ಟಿನ ಉತ್ಪ್ರೇಕ್ಷೆ ಇದೆ. ಅದರಲ್ಲಿಯೂ ಆಂಧ್ರ, ಸಿಂಹಲ ಹಾಗೂ ಕುಂತಲ ದೇಶದ ಅರಸರೊಡನೆ ಈತ ಕದನಹೂಡಿದನೆಂಬ ಹೇಳಿಕೆ ಸಂದೇಹಾಸ್ಪದವಾಗಿದೆ. ಭಟಿಂಡದ ಷಾಹಿ ಅರಸರಾದ ಜಯಪಾಲ ಹಾಗೂ ಆನಂದಪಾಲರು ಕ್ರಮವಾಗಿ ಸುಲ್ತಾನ ಸಬಕ್ತಗೀನ ಮತ್ತು ಸುಲ್ತಾನ ಮಹಮ್ಮದನನ್ನು ಯುದ್ಧರಂಗದಲ್ಲಿ ಎದುರಿಸಬೇಕಾಗಿ ಬಂದ ಸಂದರ್ಭದಲ್ಲಿ ಧಂಗ ಸಹ ಅವರಿಬ್ಬರಿಗೆ ನೆರವಾಗಿ ನಿಂತಂತೆ ತೋರುತ್ತದೆ. ಆದರೆ 989 ಹಾಗೂ 1008 ರಲ್ಲಿ ನಡೆದ ಈ ಎರಡೂ ಕದನಗಳು ಫಲಪ್ರದವಾಗಲಿಲ್ಲ. ಧಂಗ ತನ್ನ ರಾಜ್ಯದಲ್ಲಿ ನೂರಾರು ದೇವಾಲಯಗಳನ್ನು ಕಟ್ಟಿಸಿದ. ನ್ಯಾಯಶಾಸ್ತ್ರ ಪ್ರವೀಣನಾದ ಪ್ರಭಾಸ ಇವನ ಮುಖ್ಯಮಂತ್ರಿಯಾಗಿದ್ದ. ಸುಮಾರು 60 ವರ್ಷಗಳ ಕಾಲ ಆಳಿದ, 100 ವರ್ಷಗಳ ಕಾಲ ಬದುಕಿದ ಈತ ಪ್ರಯಾಗದಲ್ಲಿ ಜಲಸಮಾಧಿ ಹೊಂದಿದನೆಂದು ಅನಂತರದ ಶಾಸನವೊಂದು ತಿಳಿಸುತ್ತದೆ.

ಇವನ ಅನಂತರ ಇವನ ಮಗ ಮತ್ತು ಮೊಮ್ಮಗ ವಿದ್ಯಾಧರರು ಕ್ರಮವಾಗಿ 9 ಹಾಗೂ 12 ವರ್ಷಗಳ ಕಾಲ ಆಳಿದರು. ವಿದ್ಯಾಧರನ ಆಳ್ವಿಕೆಯಲ್ಲಿ ಭಾರತದ ಮೇಲೆ ಘಜ್ನಿ ಮಹಮ್ಮದನ ದಂಡಯಾತ್ರೆಗಳು ನಡೆದುವು. ಪ್ರತೀಹಾರ ಮನೆತನದ ರಾಜ್ಯಪಾಲ ಮಹಮೂದನೊಡನೆ ಯುದ್ಧ ಮಾಡದೆ ಶರಣಾಗತನಾದನೆಂಬ ಕಾರಣದಿಂದ ಅವನನ್ನು ಕೊಂದು ಅವನ ಮಗ ತ್ರಿಲೋಚನಪಾಲನನ್ನು ಪಟ್ಟಕ್ಕೇರಿಸಿದ. ಕನೌಜಿನ ಷಾಹಿ ಅರಸನಾದ ಆನಂದಪಾಲನ ಮಗ ತ್ರಿಲೋಚನಪಾಲನನ್ನು ಅವನ ಪೂರ್ವಜರ ರಾಜ್ಯದಲ್ಲಿ ನೆಲೆಗೊಳಿಸಲು ಸಹಾಯ ಮಾಡುವುದಾಗಿ ಒಪ್ಪಿದ. ಇವುಗಳಿಂದ ಕ್ರುದ್ಧನಾದ ಘಜ್ನಿ ಮಹಮೂದ ಕಾಲಿಂಜರದ ಮೇಲೆ 1019 ಮತ್ತು 1022 ರಲ್ಲಿ ಏರಿ ಬಂದಾಗ ಅವನೊಡನೆ ಯುದ್ಧ ಮಾಡುವುದು ವಿನಾಶಕರವೆಂದು ತಿಳಿದ ವಿದ್ಯಾಧರ ಮುಹಮೂದನಿಗೆ ಹಣ ಕೊಟ್ಟು ಸಂಧಿ ಮಾಡಿಕೊಂಡ. ಕಚ್ಛಪಘಾತ ಮನೆತನದ ಅರ್ಜುನ, ವಿದ್ಯಾಧರನ ಸಾಮಂತನಾಗಿ, ಪ್ರತೀಹಾರ ರಾಜ್ಯಪಾಲನನ್ನು ಕೊಲ್ಲುವುದರಲ್ಲಿ ಆತನಿಗೆ ಸಹಾಯ ಮಾಡಿದ. ಪರಮಾರ ಭೋಜ ಮತ್ತು ಕಳಚುರಿಯ ಗಾಂಗೇಯ ದೇವ, ಇವರು ಸಹ ವಿದ್ಯಾಧರನ ಸಾರ್ವಭೌಮತ್ವವನ್ನು ಒಪ್ಪಿಕೊಂಡಂತೆ ತೋರುತ್ತದೆ.

ವಿದ್ಯಾಧರನ ಮಗ ವಿಜಯಪಾಲ 1030ರಿಂದ ಸುಮಾರು 20 ವರ್ಷಗಳ ಕಾಲ ಆಳಿದ. ಅನಂತರ ಆತನ ಮಗ ದೇವವರ್ಮ 1060ರ ವರೆಗೂ ಆ ಬಳಿಕ ಆತನ ಸೋದರ ಕೀರ್ತಿವರ್ಮ 1100ರ ವರೆಗೂ ಕ್ರಮವಾಗಿ ಆಳಿದರು. ಇವರ ಕಾಲದಲ್ಲಿ ಚಂದೇಲರ ಪ್ರಾಬಲ್ಯ ಕ್ಷೀಣಿಸಿತು. ವಿಜಯಪಾಲ ಆಳುವಾಗ ಕಳಚುರಿ ಗಾಂಗೇಯ ಚಂದೇಲರ ಸಾರ್ವಭೌಮತ್ವವನ್ನು ಕಿತ್ತೊಗೆದು ಅವರಿಂದ ಪ್ರಯಾಗವನ್ನು ಕಸಿದುಕೊಂಡ. ಕಚ್ಛಪಘಾತರೂ ಸ್ವತಂತ್ರರಾದರು. ವಿಜಯಪಾಲನ ಅನಂತರ ದೇವವರ್ಮ ಹಾಗೂ ಕೀರ್ತಿವರ್ಮರ ನಡುವೆ ಸಿಂಹಾಸನಕ್ಕಾಗಿ ಕಲಹಗಳುಂಟಾದುವು. ದೇವವರ್ಮನನ್ನು ಕಳಚುರಿ ಲಕ್ಷ್ಮೀಕರ್ಣ ಸೋಲಿಸಿದ. ಅನಂತರ ಆಳತೊಡಗಿದ ಕೀರ್ತಿವರ್ಮ ತನ್ನ ಸಾಮಂತನಾದ ಗೋಪಾಲನ ಸಹಾಯದಿಂದ ಕರ್ಣನನ್ನು ಸೋಲಿಸಿ ರಾಜ್ಯವನ್ನು ಉಳಿಸಿಕೊಂಡ. ಚಂದೇಲ ಅರಸರೊಡನೆ ಪರಮಾರ ಚೌಳುಕ್ಯ, ಪಾಲ ಮತ್ತು ಚಾಳುಕ್ಯ ಅರಸರೂ ಕೂಡಿ ಕರ್ಣನ ಶೌರ್ಯವನ್ನು ಮುರಿದಂತೆ ತೋರುತ್ತದೆ. ಇದರಿಂದ ಚಂದೇಲರು ಪುನಃ ಚೇತರಿಸಿಕೊಂಡರು. ಪ್ರಬೋಧಚಂದ್ರೋದಯವೆಂಬ ಕಾವ್ಯ ಬರೆಯಲ್ಪಟ್ಟದ್ದು ಈತನ ಕಾಲದಲ್ಲೇ. ಈತನ ಮಗ ಸಲ್ಲಕ್ಷಣವರ್ಮ 5 ವರ್ಷಗಳ ಆಳ್ವಿಕೆಯ ಬಳಿಕ ಸಿಂಹಾಸನವನ್ನು ತನ್ನ ಚಿಕ್ಕಪ್ಪನಿಗೆ ಬಿಟ್ಟುಕೊಟ್ಟ. ಪೃಥ್ವೀವರ್ಮ ಸುಮಾರು 10 ವರ್ಷಗಳ ಕಾಲ ಆಳಿದ ಮೇಲೆ ಅವನ ಮಗ ಮದನವರ್ಮ ಪಟ್ಟಕ್ಕೆ ಬಂದ

(1129-62). ಈತ ಮಾಳವೆಯ ಭಿಲಸಾ ಪ್ರದೇಶವನ್ನು ಗೆದ್ದನಲ್ಲದೆ, ಚೇದಿ ಅರಸರನ್ನು ಸೋಲಿಸಿ, ತನ್ನ ಮೇಲೆ ಯುದ್ಧಕ್ಕೆ ಬಂದ ಗುಜರಾತಿನ ಜಯಸಿಂಹ–ಸಿದ್ಧರಾಜನಿಂದ ಬುಂದೇಲಖಂಡವನ್ನು ರಕ್ಷಿಸಿದ. ಇವನ ಬಳಿಕ ಬಹುಶಃ ಒಂದೆರಡು ವರ್ಷಗಳ ಕಾಲ ಈತನ ಮಗ ಯಶೋವರ್ಮ ಅಧಿಕಾರದಲ್ಲಿದ್ದ. ಅನಂತರ ಅವನ ಮಗ ಪರಮರ್ದಿ (1165-1202) ಪಟ್ಟಕ್ಕೆ ಬಂದ. ಚಂದೇಲರಲ್ಲಿ ಇವನೊಬ್ಬ ಪ್ರಸಿದ್ಧ ಅರಸ. ಇವನು ವೀರಯೋಧನಾಗಿದ್ದ; ಗುಜರಾತಿನ ಚೌಳುಕ್ಯ ಅರಸರಿಂದ ದಶಾರ್ಣವನ್ನು (ಭಿಲಸಾ) ತಿರುಗಿ ಗೆದ್ದುಕೊಂಡ. ಆದರೆ 1182ರಲ್ಲಿ 3ನೆಯ ಪೃಥ್ವೀರಾಜನಿಂದಲೂ 1202ರಲ್ಲಿ ಘೋರಿ ಮಹಮದನ ಸೇನಾಪತಿ ಕುತ್ಬ್–ಉದ್–ದೀನನಿಂದಲೂ ಸೋಲಿಸಲ್ಪಟ್ಟ. ಮುಸ್ಲಿಮರೊಡನೆ ಸಂಧಿ ಮಾಡಿಕೊಂಡನೆಂದು ಪರಮರ್ದಿಯನ್ನು ಅವನ ಮಂತ್ರಿ ಅಜಯದೇವ ಕೊಂದ. ಕುತ್ಬ್–ಉದ್–ದೀನ್ ಮತ್ತೆ ಬುಂದೇಲಖಂಡದ ಮೇಲೆ ದಾಳಿ ಮಾಡಿ ಕಾಲಿಂಜರ, ಮಹೋಬಾ ಪಟ್ಟಣಗಳನ್ನು ಲೂಟಿ ಮಾಡಿ, ಒಬ್ಬ ಮುಸ್ಲಿಮ್ ಸರದಾರನನ್ನು ರಾಜ್ಯಪಾಲನನ್ನಾಗಿ ನೇಮಿಸಿದ. ಸ್ವಲ್ಪ ಕಾಲದಲ್ಲೇ ಪರಮರ್ದಿಯ ಮಗ ತ್ರೈಲೋಕ್ಯಮಲ್ಲ ಮುಸ್ಲಿಮರನ್ನು ಸೋಲಿಸಿ, ಸಮಗ್ರ ಬುಂದೇಲಖಂಡವನ್ನು ತಿರುಗಿ ಗೆದ್ದುಕೊಂಡ. ಈತ ಸುಮಾರು 10 ವರ್ಷಗಳ ಕಾಲ (1202-86) ಆಳಿದ. ಅನಂತರ ಈತನ ಮಗ ವೀರವರ್ಮ ಸಿಂಹಾಸನಾರೂಢನಾದ. ಈತ ಸುಮಾರು 35 ವರ್ಷಗಳ ಕಾಲ, ಪ್ರ.ಶ. ಸು.1250-86.ರಲ್ಲಿ ಆಳಿದ. ವೀರವರ್ಮನ ಬಳಿಕ ಅನುಕ್ರಮವಾಗಿ ಭೋಜವರ್ಮ ಹಾಗೂ ಹಮ್ಮೀರವರ್ಮರು ಆಳಿದರು. ಅಲ್ಲಿಂದ ಮುಂದೆ ಚಂದೇಲ ರಾಜ್ಯ ಅನೇಕ ಮುಸ್ಲಿಂ ದಾಳಿಗಳಿಗೆ ಸಿಕ್ಕಿ ಪತನದ ಹಾದಿ ಹಿಡಿಯಿತು. ಕಾಲಕ್ರಮದಲ್ಲಿ ಚಂದೇಲರು ತಮ್ಮ ಪ್ರಭುತ್ವ ಶಕ್ತಿಯನ್ನು ಕಳೆದುಕೊಂಡು ಕಣ್ಮರೆಯಾದರು. ಹಮ್ಮೀರವರ್ಮನ ಅನಂತರವೂ ಕಾಲಿಂಜರ ಪ್ರದೇಶದಲ್ಲಿ ಚಂದೇಲರು ಆಳುತ್ತಿದ್ದರೆಂದು ಹೇಳಬಹುದಾದರೂ ಉತ್ತರ ಭಾರತದ ಇತಿಹಾಸದಲ್ಲಿ ಅವರಿಗೆ ಯಾವ ಗಣನೀಯ ಸ್ಥಾನವೂ ಇಲ್ಲದೆ ಹೋಯಿತು. (ಕೆ.ವಿ.ಎಸ್.ಯು.; ಜಿ.ಬಿ.ಆರ್.)

**ಚಂದ್ರ[1] :** ಭೂಮಿಯ ಏಕೈಕ ನೈಸರ್ಗಿಕ ಉಪಗ್ರಹ; ಭೂಮಿಗೆ ನೆರೆ ಆಕಾಶಕಾಯ; ಇತರ ಲೋಕಗಳಿಗೆ ಪ್ರಯಾಣ ಮಾಡುವ ಪ್ರಯತ್ನಗಳಲ್ಲಿ ಮನುಷ್ಯ ಕಾಲೂರಿದ ಪ್ರಥಮ ಆಕಾಶಕಾಯ ಉಪಗ್ರಹ (ಸ್ಯಾಟಲೈಟ್) ಮತ್ತು ಚಂದ್ರ ಪದಗಳನ್ನು ಸಮಾನಾರ್ಥದಲ್ಲಿ ಬಳಸುವುದು ಕೂಡ ಉಂಟು. ಉದಾಹರಣೆಗೆ, ಗುರುವಿಗೆ 50ಕ್ಕೂ ಹೆಚ್ಚು ಚಂದ್ರಗಳಿವೆ.

ಪ್ರಸಕ್ತ ಲೇಖನವನ್ನು ಈ ಕೆಳಗಿನ ಮುಖ್ಯ ಶೀರ್ಷಿಕೆಗಳ ಅಡಿಯಲ್ಲಿ ಅಳವಡಿಸಿದೆ:

I ಚಂದ್ರನ ಉಗಮ
II ಭೌತ ಸ್ವರೂಪ
  1. ದ್ರವ್ಯರಾಶಿ
  2. ಗಾತ್ರ
  3. ಸಾಂದ್ರತೆ
  4. ಗುರುತ್ವ ಬಲ
  5. ವಿಮೋಚನ ವೇಗ
  6. ವಾಯುಮಂಡಲ ಮತ್ತು ಜಲರಾಶಿ
  7. ನೈಸರ್ಗಿಕ ಬಲಗಳು
  8. ಪ್ರಾಕೃತಿಕ ಸ್ಥಿತಿ
  9. ಸಮುದ್ರಗಳು
  10. ಕೂಪಗಳು
  11. ಪರ್ವತಗಳು
  12. ಮ್ಯಾಸ್ಕಾನುಗಳು
  13. ಚಂದ್ರಸ್ಮಾರಕಗಳು
  14. ಚಂದ್ರತಲದಲ್ಲಿನ ರಾಸಾಯನಿಕಗಳು
  15. ಚಂದ್ರನ ಅದೃಶ್ಯ ಭಾಗ
III ಚಲನೆಗಳು
  1 ಆವರ್ತನೆ, ಪರಿಭ್ರಮಣೆ
  2 ದೋಲನಗಳು
  3 ಕಕ್ಷೆ
  4 ಆಕಾಶದಲ್ಲಿ ಚಂದ್ರನ ಚಲನೆ
  5. ಶರಚ್ಚಂದ್ರ
IV ಕಲೆಗಳು
V ತಿಂಗಳ ಬೆಳಕು
VI ಕೆಲವು ಉಪಯುಕ್ತ ಮಾಹಿತಿಗಳು
VII ಭಾರತೀಯ ಖಗೋಳವಿಜ್ಞಾನದಲ್ಲಿ ಚಂದ್ರ
VIII ಮಾನವ, ಚಂದ್ರನ ಮೇಲೆ

**I ಚಂದ್ರನ ಉಗಮ** : ಐದು ಮುಖ್ಯ ಊಹೆಗಳು (ಹೈಪಾಥಿಸಸ್) ಇವೆ:

**ಮೊದಲನೆಯದು ಅನುರಣನ (ರೆಸೊನೆನ್ಸ್) ಊಹೆ:** ಇದನ್ನು ಮಂಡಿಸಿದಾತ ಜಾರ್ಜ್ ಹೊವಾರ್ಡ್ ಡಾರ್ವಿನ್ (1845-1912). ಇದರ ಸಾರವಿಷ್ಟು, ಚಂದ್ರ–ಭೂಮಿ ನಡುವೆ ಪರಸ್ಪರ ಗುರುತ್ವಾಕರ್ಷಣಬಲ ವರ್ತಿಸುತ್ತಿರುವುದು ಸರಿಯಷ್ಟೆ. ಭೂಮಿಯ ಮೇಲೆ ಚಂದ್ರನ ಆಕರ್ಷಣೆಯ ಪರಿಣಾಮವನ್ನು ಸಮುದ್ರದ ಭರತ ಇಳಿತಗಳಲ್ಲಿ ಚೆನ್ನಾಗಿ ಗುರುತಿಸಬಹುದು. 24 ಗಂಟೆಗಳ ದಿವಸವೊಂದಕ್ಕೆ ಒಂದು ಸುತ್ತಿನಂತೆ ಸತತವಾಗಿ




**ಚಿತ್ರ 1. ಭೂಮಿ ಅಪ್ರದಕ್ಷಿಣ ದಿಶೆಯಲ್ಲಿ (ಪಶ್ಚಿಮ–ಪೂರ್ವ) ದಿಶೆಯಲ್ಲಿ ಆವರ್ತಿಸುತ್ತದೆ. ಈ ವೇಗದೊಡನೆ ಹೊಂದಿಕೊಳ್ಳಲಾಗದ ನೀರಿನ ರಾಶಿಯ ಮೇಲೆ ಚಂದ್ರಾಕರ್ಷಣೆ b ಹಾಗೂ c ದಿಶೆಗಳಲ್ಲಿ ವರ್ತಿಸುತ್ತದೆ (b>c). ಇವುಗಳ ಸಂಯುಕ್ತ ಫಲವಾಗಿ ಭೂಮಿಯ ಆವರ್ತನವೇಗ ಕುಂಠಿತವಾಗುತ್ತದೆ. ಅದೇ ವೇಳೆ ನೀರಿನ ರಾಶಿಯ ಆಕರ್ಷಣಬಲ ಚಂದ್ರನ ಮೇಲೆ b' ಆಗೂ c' ದಿಶೆಗಳಲ್ಲಿ ವರ್ತಿಸುತ್ತದೆ (b'>c'). ಇವುಗಳ ಸಂಯುಕ್ತ ಫಲವಾಗಿ ಚಂದ್ರನ ಕಕ್ಷೆ ದೂರ ಸರಿಯಲು (ಚುಕ್ಕಿ ಗುರುತು) ಪ್ರಯತ್ನಿಸುತ್ತದೆ. ಆದ್ದರಿಂದ ಚಂದ್ರನ ಕಕ್ಷಾವೇಗೋತ್ಕರ್ಷ ಏರುತ್ತದೆ**

ಆವರ್ತಿಸುತ್ತಿರುವ ಭೂಮಿಯ ವೇಗದ ವಿರುದ್ಧ ಬಿರಿಗಳಂತೆ (ಬ್ರೇಕ್ಸ್) ಈ ಭರತ–ಇಳಿತಗಳು ವರ್ತಿಸುತ್ತವೆ. ತತ್ಪರಿಣಾಮವಾಗಿ ಭೂಮಿಯ ಆವರ್ತನವೇಗ ಲಕ್ಷಾಂತರ ವರ್ಷಗಳಲ್ಲಿ ಕ್ರಮೇಣ ಕುಂಠಿತವಾಗುತ್ತದೆ. ಅದೇ ವೇಳೆಯಲ್ಲಿ, ಗತಿವೈಜ್ಞಾನಿಕ ನಿಯಮಗಳು ತಿಳಿಸುವಂತೆ, ಚಂದ್ರ–ಭೂಮಿ ಅತಿ ಸಮೀಪವಾಗಿದ್ದ ಕಾಲ ಒಂದಿರಬೇಕು, ಅದಕ್ಕೂ ಹಿಂದೆ ಅವೆರಡೂ ಕೂಡಿಕೊಂಡು ಅಖಂಡವಾದ ಒಂದೇ ವಸ್ತು ಇದ್ದಿರಬೇಕು ಎಂಬ ಅಂಶ ಸ್ಪಷ್ಟವಾಗುತ್ತದೆ. ಆ ದಿವಸಗಳಲ್ಲಿ ಚಂದ್ರ–ಭೂಮಿಯ ಆವರ್ತನವೇಗ ಈಗಿನದರ ಆರುಪಟ್ಟು ಜಾಸ್ತಿ–ಅಂದರೆ ಅಂದಿನ ಆವರ್ತನಾವಧಿ ಅಥವಾ ದಿವಸದ ಉದ್ದ 4 ಗಂಟೆಗಳು–ಇದ್ದಿರಬೇಕು. ಈಗ ಕಲ್ಪನೆಯನ್ನು ಇನ್ನಷ್ಟು ಗತಕಾಲಕ್ಕೆ, ಎಂದರೆ ಭೂಮಿಯ ಉಗಮದ ವೇಳೆಗೆ, ಹರಿಸಬೇಕು. ಮೊದಲು ಅನಿಲರೂಪದಲ್ಲಿದ್ದ ಭೂಮಿಯ ಹೊರ ಮೈ ವಿಸ್ತರಣೆಯಿಂದ (ರೇಡಿಯೇಷನ್) ಉಷ್ಣವನ್ನು ಕಳೆದುಕೊಂಡು ದ್ರವರೂಪಕ್ಕೆ ಇಳಿಯಿತು. ಆಗ ನೀರು ಹಬೆಯ ರೂಪದಲ್ಲಿ ಭೂಮಿಯನ್ನು ಆವರಿಸಿತ್ತು. ಇನ್ನಷ್ಟು ಉಷ್ಣ ನಷ್ಟವಾದಂತೆ ಭೂಮಿಯ ಮೇಲು ಭಾಗ ಘನೀಭವಿಸಿತು ಮತ್ತು ಮುಂದೊಂದು ದಿವಸ ಮೊದಲ ಮಳೆ ಮುಸಲಧಾರೆಯಲ್ಲಿ ಸಹಸ್ರಾರು ವರ್ಷಗಳ ಕಾಲ ಸುರಿಯಿತು. ಇದು ನಡೆದದ್ದು ಒಂದು ಒಂದೂವರೆ ಬಿಲಿಯನ್ ವರ್ಷಗಳಿಗೂ ಹಿಂದೆ (1 ಬಿಲಿಯನ್ = 100 ಕೋಟಿ). ಕಮರಿ ಕೊರಕಲುಗಳೆಲ್ಲ ನೀರಿನಿಂದ ತುಂಬಿ ಸಮುದ್ರ ಸರೋವರಗಳಾದುವು. ಇವುಗಳ ಮೇಲೆ ಸೂರ್ಯಾಕರ್ಷಣೆಯ ಪರಿಣಾಮವಾಗಿ ಉಬ್ಬರವಿಳಿತಗಳು ತಲೆದೋರಿದ್ದವು. ಭೂಮಿಯ ಆವರ್ತನೆಯ ಅವಧಿಯಲ್ಲಿ (ಅಂದು 4 ಗಂಟೆಗಳು) ಉಬ್ಬರವಿಳಿತಗಳು ಎರಡು ಸಲ ಕಾಣಿಸಿಕೊಳ್ಳುತ್ತಿದ್ದವು. ಅವುಗಳ ಅವಧಿಕಾಲ 2 ಗಂಟೆಗಳು. ಅಂದರೆ ಆವರ್ತನಾವಧಿಗೂ ಉಬ್ಬರವಿಳಿತಗಳ ಅವಧಿಕಾಲಕ್ಕೂ ಒಂದು ನಿರ್ದಿಷ್ಟ ಪೂರ್ಣಾಂಕ ಸಂಬಂಧ ಏರ್ಪಟ್ಟಿತ್ತು. ಹೀಗಾಗಿ ಪ್ರತಿ ಒಂದು ಆವರ್ತನೆಯಲ್ಲೂ ಉಬ್ಬರವಿಳಿತಗಳು ಭೂಮಿಗೆ ಹೆಚ್ಚಿನ ಬಲವನ್ನು ಒದಗಿಸುವ ನೂಕುಬಲಗಳಾಗಿ ಪರಿಣಮಿಸಿದುವು (ಉಯ್ಯಾಲೆಯ ಒಂದು ತುಯ್ತ ಮುಗಿದು ಮುಂದಿನದು ತೊಡಗುವಾಗ ಅದನ್ನು ತಳ್ಳಿದರೆ, ಅಂದರೆ ಅದಕ್ಕೆ ಬಲವನ್ನು ಒದಗಿಸಿದರೆ, ತುಯ್ತ ಏರುವ ವಿದ್ಯಮಾನವನ್ನು ಗಮನಿಸಬಹುದು). ಇದೇ ಅನುರಣನ ಸಿದ್ಧಾಂತ. ಭೂಮಿಯ ಮೇಲ್ಮೈ ಇನ್ನೂ ಮೆದುವೇ

ಆಗಿದ್ದುದರಿಂದ, ಅನುರಣನೆ ಉಂಟುಮಾಡಿದ ಕುಲುಕಾಟದಿಂದ, ಭೂತಲದಲ್ಲಿ ಭಾರೀ ಬಿರುಕು ತಲೆದೋರಿ, ಕ್ರಮೇಣ ಅದರಿಂದ ಭೂಮಿಯ ಒಂದು ಅಂಶ ಕಳಚಿಕೊಂಡು ಆಕಾಶಕ್ಕೆ ಸಿಡಿದು ಹೋಯಿತು. ಇದೇ ಚಂದ್ರ. ಈ ಘಟನೆ ಸಂಭವಿಸಲು ಕನಿಷ್ಠ ಪಕ್ಷ




**ಚಿತ್ರ 2. ಭೂಮಿಯಿಂದ ಚಂದ್ರ ಸಿಡಿದು ಹೋಗಿರದಿದ್ದರೆ ಭೂಮಿ ಹೇಗೆ ಕಾಣುತ್ತಿತ್ತು ಎಂಬುದರ ಕಾಲ್ಪನಿಕ ಚಿತ್ರ**

500 ವರ್ಷಗಳಾದರೂ ತೆಗೆದುಕೊಂಡಿರಬೇಕು. ಚಂದ್ರ ಜನನದಿಂದ ಉಂಟಾದ ಗಾಯ ಪೆಸಿಫಿಕ್ ಸಾಗರ. ಚಂದ್ರನ ಮೇಲೆ ಭೂಮಿ–ಸೂರ್ಯರ ಆಕರ್ಷಣೆ, ಭೂಮಿಯ ಆವರ್ತನವೇಗ ಹಾಗೂ ಅದರ ಮೇಲೆ ಉಬ್ಬರವಿಳಿತಗಳ ಪರಿಣಾಮ ಇವೆಲ್ಲವುಗಳ ಸಮಗ್ರ ಫಲಿತವಾಗಿ ಚಂದ್ರ ಭೂಮಿಯಿಂದ ಕ್ರಮೇಣ ದೂರ ಸರಿಯುತ್ತ ಇಂದಿನ ಸ್ಥಾನಕ್ಕೆ ಬಂದಿದೆ. ಅನುರಣನ ಸಿದ್ಧಾಂತಕ್ಕೆ ಐತಿಹಾಸಿಕ ಪ್ರಾಧಾನ್ಯ ಮಾತ್ರ ಉಂಟಷ್ಟೆ. ಏಕೆಂದರೆ ಈ ಊಹೆಯನ್ನು ಸಮರ್ಥಿಸುವ ಪುರಾವೆಗಳ ತೂಕ ಇವನ್ನು ವಿರೋಧಿಸುವ ಪುರಾವೆಗಳ ತೂಕವನ್ನು ಸಮತೋಲಿಸಲು ಶಕ್ತವಾಗಿಲ್ಲ.

ಎರಡನೆಯದು ಸ್ಫೋಟನೆ ಊಹೆ. ಇದನ್ನಿಂದು ವಿಜ್ಞಾನಿಗಳು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಇದರ ಪ್ರಕಾರ ಮೊದಲಿನದ್ದದ್ದು ಭೂಮಿ–ಚಂದ್ರ–ಮಂಗಳ ಒಂದುಗೂಡಿದ್ದ ಸಂಯುಕ್ತ ವಸ್ತು. ಆವರ್ತನೆಯನ್ನೂ ಸೂರ್ಯ ಪರಿಭ್ರಮಣೆಯನ್ನೂ ಮಾಡುತ್ತಿದ್ದ ಆ ವಸ್ತುವಿಗೆ ಸಮತೋಲನವನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗಲಿಲ್ಲ. ಅದರ ರೂಪ ಉದ್ದುದ್ದವಾಗಿ ವಿಕಾರಗೊಂಡು ಕ್ರಮೇಣ ನಡುವಿನ ತೆಳುಭಾಗದಲ್ಲಿ ತುಂಡಾಯಿತು. ಈ ಕ್ರಿಯೆಯಲ್ಲಿ 'ಕೊಸರಾ'ಗಿ ಮೂರನೆಯ ಒಂದು ತುಣುಕು ಉಳಿಯಿತು. ಅದೇ ಚಂದ್ರ, ದೊಡ್ಡ ಭಾಗ ಭೂಮಿ, ಚಿಕ್ಕ ಭಾಗ ಮಂಗಳ. ಭೂಮಿಯ ಗುರುತ್ವಾಕರ್ಷಣ ಬಲ ಅಧಿಕ. ಅದ್ದರಿಂದ ಚಂದ್ರನನ್ನು ಅದು ತನ್ನ ಕ್ಷೇತ್ರದಲ್ಲೇ ಉಳಿಸಿಕೊಂಡಿತು. ಭೂಮಿ, ಚಂದ್ರ, ಮಂಗಳ ಏಕಕಾಲದಲ್ಲಿ ಜನಿಸಿದುದರಿಂದ ಚಂದ್ರನನ್ನು ಭೂಮಿಯ ತಮ್ಮ ಎಂದೂ ಮಂಗಳವನ್ನು ಭೂಮಿಯ ಅವಳಿ ಎಂದೂ ಕರೆಯುವುದುಂಟು. ಚಂದ್ರನಿಂದ ತಂದಿರುವ ಶಿಲೆಗಳ ಪರೀಕ್ಷೆಯಿಂದ ಭೂಮಿ ಹಾಗೂ ಚಂದ್ರ ಎರಡೂ ಸಮಾನ ವಯಸ್ಸಿನ ಕಾಯಗಳು (ಸುಮಾರು $5 \times 10^9$ ವರ್ಷಗಳು) ಎಂಬುದು ಸ್ಥಿರಪಟ್ಟಿದೆ.

ಮೂರನೆಯದು ಅಪಹರಣ ಊಹೆ. ಇದರ ಪ್ರಕಾರ ಚಂದ್ರ ಮತ್ತು ಭೂಮಿಗೆ ಮೂಲತಃ ಯಾವುದೇ ಸಂಬಂಧವಿರಲಿಲ್ಲ. ಅಂದು ಚಂದ್ರ ಕ್ಷುದ್ರ ಗ್ರಹಗಳ ಹೊನಲಿನಲ್ಲಿ ಇದ್ದ ಒಂದು ಕಾಯ. ಯಾವುದೋ ಗಳಿಗೆಯಲ್ಲಿ ಚಂದ್ರ ಸ್ವಂತ ಕಕ್ಷೆಯಿಂದ ವಿಚಲಿತವಾಗಿ ಭೂಕಕ್ಷೆಯ ತೀರ ಸಮೀಪ ಹಾಯುತ್ತಿದ್ದಿರಬಹುದು. ಆಗ ಭೂಮ್ಯಾಕರ್ಷಣೆಯಿಂದ ಬಂಧಿತವಾಗಿ ಭೂಮಿಯ ಸುತ್ತ ಪರಿಭ್ರಮಿಸುವ ಉಪಗ್ರಹವಾಯಿತು. ಆದ್ದರಿಂದ ಭೂಮಿಗೆ ಚಂದ್ರ ಪ್ರಾಪ್ತವಾದದ್ದು ಭೂಮಿಯ ಉಗಮದ ಬಹುಕಾಲಾನಂತರದಲ್ಲಿ. ಭೂಮಿ ಸೆರೆಹಿಡಿದದ್ದು ದಕ್ಕಿಸಿಕೊಳ್ಳಲು ಕಷ್ಟವಾಗುವಂಥ ಒಂದು ಮಹಾಗಾತ್ರವನ್ನೇ. ಇದರಿಂದ ಭೂಮಿಯ ಮೇಲೆ ಚಂದ್ರನಿಂದ (ಅದೇ ರೀತಿ ಚಂದ್ರನ ಮೇಲೆ ಭೂಮಿಯಿಂದ) ವಿಪ್ಲವ ಪರಂಪರೆಗಳೇ ಸಂಭವಿಸಿರಬೇಕು. ಭೂತೊಗಟೆಯ ವಿವಿಧ ಪ್ರದೇಶಗಳ ವಿವಿಧ ಸ್ತರಗಳ ಪ್ರತಿಚಯಗಳನ್ನು ತರಿಸಿ ಅಭ್ಯಸಿಸಿದ್ದಾರೆ. ಇದರ ಪ್ರಕಾರ ಲಭ್ಯವಾಗಿರುವ ಸಂಗತಿ ಇಷ್ಟು.. ಭೂಮಿಯ ವಯಸ್ಸು ಸುಮಾರು $5 \times 10^9$ ವರ್ಷಗಳು. ಸುಮಾರು $4 \times 10^9$ ವರ್ಷಗಳ ಹಿಂದೆ (ಎಂದರೆ ಭೂಮಿ ಹುಟ್ಟಿ ಸುಮಾರು 100 ಕೋಟಿ ವರ್ಷಗಳ ತರುವಾಯ) ಒಂದು ಭೀಕರ ಘಟನೆ ಅಂತರಿಕ್ಷದಲ್ಲಿ ಸಂಭವಿಸಿದುದಕ್ಕೆ ಪುರಾವೆಗಳು ದೊರೆತಿವೆ. ಇದು ಚಂದ್ರನನ್ನು ಸೆರೆ ಹಿಡಿದಿದ್ದರಿಂದ ಆಗಿರಬಹುದೇ ಅಥವಾ ಬೇರೆ ಯಾವುದೋ ಕಾರಣದಿಂದ ಆಗಿರಬಹುದೇ ಎಂಬುದು ಇನ್ನೂ ತಿಳಿದಿಲ್ಲ. ಈ ಊಹೆಗೆ ಇಂದು ವಿಜ್ಞಾನಲೋಕದಲ್ಲಿ ಹೆಚ್ಚಿನ ಬೆಂಬಲವಿಲ್ಲ.



**ಚಿತ್ರ 3. ಒಂದು ದೊಡ್ಡ ಕಾಯ ಕ್ರಮೇಣ ವಿರೂಪಗೊಂಡು ನಡು ತೆಳುವಾಗಿ ಒಡೆದು ಎರಡಾಗುವ ವಿದ್ಯಮಾನವನ್ನು ತೋರಿಸುವ ಚಿತ್ರ. ಸೂರ್ಯನೆಡೆ ಒಂದು ಗುರುತ್ವಾಕರ್ಷಣಕೇಂದ್ರದೆಡೆಗೆ ಬಾಣ ಗುರುತು ಉಂಟು**

ನಾಲ್ಕನೆಯದು ಸ್ತಿಮಿತ ಸ್ಥಿತಿ ಊಹೆ. ಇದರ ಪ್ರಕಾರ ಸೌರವ್ಯೂಹದ ಉಗಮಕಾಲದಲ್ಲೇ, ಎಂದರೆ ಭೂಮಿ ಮುಂತಾದ ಗ್ರಹಗಳು ಜನಿಸಿದಾಗಲೇ ಚಂದ್ರ ಕೂಡ ಜನಿಸಿತ್ತು. ಆಗಿನಿಂದಲೂ ಅದು ಭೂಮಿಯ ಉಪಗ್ರಹವಾಗಿಯೇ ಇತ್ತು ಎಂದಿದೆ. ಈ ಊಹೆಗೂ ಇಂದು ಭದ್ರವಾದ ಬುನಾದಿಯಿಲ್ಲ.

ಐದನೆಯದು ಸಂಲಯನ ಊಹೆ. ಇದರ ಪ್ರಕಾರ ಕ್ಷುದ್ರಗ್ರಹಗಳು ಗ್ರಹಗಳನ್ನು ಕಟ್ಟಿದ ಇಟ್ಟಿಗೆ ತುಂಡುಗಳು. ಎಲ್ಲ ಗ್ರಹಗಳೂ ಮೂಲತಃ ದೂಳು ಮತ್ತು ಕ್ಷುದ್ರಗ್ರಹಗಳ ಒಕ್ಕೂಟಗಳೇ. ಹಲವಾರು ಕ್ಷುದ್ರಗ್ರಹಗಳು ದೂಳಿನೊಡನೆ ಸೇರಿಕೊಂಡು ಭೂಮಿಯಂಥ ಒಂದು ಗ್ರಹವಾಯಿತು. ಅದೇ ಆಸುಪಾಸಿನಲ್ಲಿದ್ದ ಉಳಿದ ಚೂರುಗಳು ಒಟ್ಟುಗೂಡಿ ಚಂದ್ರ ಆಯಿತು. ಈ ಊಹೆಯನ್ನೂ ಇಂದು ಬಹುತೇಕ ವಿಜ್ಞಾನಿಗಳು ಒಪ್ಪುವುದಿಲ್ಲ.

ಈ ಐದು ಊಹೆಗಳಿಗೆ ಹೋಲಿಸಿದಲ್ಲಿ ಅಪೋಲೋ ಗಗನಯಾತ್ರಿಗಳು ತಂದ ಚಂದ್ರನ ಕಲ್ಲುಮಣ್ಣುಗಳನ್ನು ವಿಶ್ಲೇಷಿಸಿದ ನಂತರ ಮತ್ತೊಂದು ಬಗೆಯ ಊಹೆಯನ್ನು ವಿಜ್ಞಾನಿಗಳು ಮಾಡಿದರು. ಅವರ ಪ್ರಕಾರ ಮಂಗಳಗ್ರಹದಷ್ಟು ದೊಡ್ಡದಾದ ಆಕಾಶಕಾಯವೊಂದು ಭೂಮಿಯ ಬಾಲ್ಯದಲ್ಲಿ ಇಲ್ಲಿಗೆ ಬಂದು ಒಂದು ವಿಶೇಷ ಬಗೆಯಲ್ಲಿ ಡಿಕ್ಕಿ ಹೊಡೆಯಿತಂತೆ. ಆ ಆಕಾಶಕಾಯಕ್ಕೆ ವಿಜ್ಞಾನಿಗಳು ಜರ್ಥಿಯಸ್ ಎಂಬ ಹೆಸರನ್ನು ನೀಡಿದ್ದಾರೆ. ಇದರಿಂದ ಆ ಆಕಾಶಕಾಯ ನಾಶವಾದುದಲ್ಲದೇ ಭೂಮಿಯ ಮೇಲ್ಚಿಪ್ಪೂ ಅನಿಲರೂಪಕ್ಕೆ ತೆರಳಿತಂತೆ. ಮುಂದೆ ಈ ಅನಿಲದ ಮೋಡ ಭೂಮಿಯನ್ನು ಸುತ್ತಲಾರಂಭಿಸಿತೆಂದು ವಿಜ್ಞಾನಿಗಳು ನುಡಿಯುತ್ತಾರೆ. ಅನಂತರ ಆ ಅನಿಲಗಳು ಬಾಷ್ಪೀಕರಣಕ್ಕೆ ಒಳಗಾಗಿ ಚಂದ್ರನ ಉದ್ಭವಕ್ಕೆ ಕಾರಣವಾಯಿತಂತೆ. ಈ ಊಹೆಗೆ ಇಂದು ಸಾಕಷ್ಟು ಬೆಂಬಲ ವಿಜ್ಞಾನಲೋಕದಲ್ಲಿ ದೊರಕಿದೆ.

**ii ಭೌತಸ್ವರೂಪ :** 1 ದ್ರವ್ಯರಾಶಿ : ಚಂದ್ರನ ದ್ರವ್ಯರಾಶಿ (ಮಾಸ್) 7.35 x $10^2$ ಕಿ.ಗ್ರಾಂ. (ಭೂಮಿ 5.98 x 1024 ಕಿ.ಗ್ರಾಂ.). ಇದು ಭೂದ್ರವ್ಯರಾಶಿಯ (1/81.68) ಪಟ್ಟು ಕಡಿಮೆ.

**2 ಗಾತ್ರ :** ಭೂಕೇಂದ್ರದಿಂದ ಕಾಣುವಂತೆ ಚಂದ್ರನ ಸರಾಸರಿ ಕೋನ ವ್ಯಾಸ 31 5". ರೇಡಾರ್, ಲೇಸರ್ ಮುಂತಾದ ಆಧುನಿಕ ತಂತ್ರಗಳಿಂದ ಭೂಮಿ–ಚಂದ್ರ ಸರಾಸರಿ ದೂರವನ್ನು ಅಳೆಯಲಾಗಿದೆ. ಭೂ ಕೇಂದ್ರದಿಂದ ಚಂದ್ರಕೇಂದ್ರದ ಸರಾಸರಿ ದೂರ 3,84.403 ಕಿ.ಮೀ. ಈ ರೇಖೀಯ ದೂರವನ್ನೂ ಚಂದ್ರನ ದೃಗ್ವ್ಯಾಸವನ್ನೂ




ಚಿತ್ರ 4. ಚಂದ್ರನ ಕೋನವ್ಯಾಸ

ಸಂಬಂಧಿಸಿ ಚಂದ್ರನ ರೇಖೀಯ ವ್ಯಾಸವನ್ನೂ ತನ್ಮೂಲಕ ಘನಗಾತ್ರವನ್ನೂ ಗಣಿಸುವುದು ಸಾಧ್ಯ. ಚಂದ್ರನ ವ್ಯಾಸ 3475.9 ಕಿ.ಮೀ. (2156,86 ಮೈಲಿ) ಭೂಮಿಗೆ ಈ ಬೆಲೆ 12,742 ಕಿ.ಮೀ. (7917.88 ಮೈಲಿ). ಆದ್ದರಿಂದ ಭೂಮಿಯ ಮತ್ತು ಚಂದ್ರನ ಘನಗಾತ್ರಗಳ (ಅವು ಗೋಳಗಳೆಂದು ಭಾವಿಸಿದರೆ) ನಿಷ್ಪತ್ತಿ 49.47:1. ಅಲ್ಲಿಗೆ, ಭೂಮಿ ಒಂದು ಖಾಲಿ ಗೋಳವಾಗಿದ್ದರೆ ಅದರ ಒಳಗೆ ಸುಮಾರು 50 ಚಂದ್ರರನ್ನು ತುಂಬಬಹುದು ಎಂದಾಯಿತು.

ಚಿತ್ರ 5. ಭೂಮಿ (ಎಡಗಡೆಯದು) ಮತ್ತು ಚಂದ್ರ ತೌಲನಿಕ ಗಾತ್ರ

3. ಸಾಂದ್ರತೆ: ದ್ರವ್ಯರಾಶಿಯನ್ನು ಘನಗಾತ್ರದಿಂದ ಭಾಗಿಸಿದಾಗ ದೊರೆಯುವ ಸೂಚ್ಯಂಕವಿದು. ಚಂದ್ರನ ಸರಾಸರಿ ಸಾಂದ್ರತೆ 3.34 ಗ್ರಾಂ/ಘನಸೆಂ.ಮೀ. (ಭೂಮಿ 5.5 ಗ್ರಾಂ/ಘನಸೆಂ.ಮೀ.) ಅಂದರೆ ಸಮಾನ ಗಾತ್ರದ ನೀರಿನ ತೂಕಕ್ಕಿಂತ ಚಂದ್ರನ ತೂಕ 3.34 ಪಟ್ಟು. (ಭೂಮಿಯ ತೂಕ 5.5 ಪಟ್ಟು). ಚಂದ್ರನ ಸರಾಸರಿ ಸಾಂದ್ರತೆ ಭೂಮಿಯದಕ್ಕಿಂತ ಕಡಿಮೆ ಇರುವುದನ್ನು ಗಮನಿಸಿದ ಕೆಲವು ವಿಜ್ಞಾನಿಗಳು ಭೂಮಿಯ ಆರಂಭದ ದಿವಸಗಳಲ್ಲಿ, ಚಂದ್ರನು ಇನ್ನೂ ಭೂಮಿಯ ಅವಿಭಾಜ್ಯ ಅಂಗವಾಗಿದ್ದಾಗ, ಭಾರವಾದ ದ್ರವ್ಯಗಳು ಭೂ ಕೇಂದ್ರದೆಡೆಗೂ, ಹಗುರವಾದ ದ್ರವ್ಯಗಳು ಭೂಮೇಲ್ಮೈ ಎಡೆಗೂ ಸಾಗಿ ಸಂಗ್ರಹಗೊಂಡಿದ್ದುವು. ಆ ವೇಳೆ ಭೂಮಿಯ ಮೇಲ್ಮೈಯಿಂದ ಸಿಡಿದು ಬೇರ್ಪಟ್ಟ ಚಂದ್ರನ ಸರಾಸರಿ ಸಾಂದ್ರತೆ ಭೂಮಿಯ ಸರಾಸರಿ ಸಾಂದ್ರತೆಗಿಂತ ಕಡಿಮೆ ಆಗಿರುವುದು ಸಹಜವೇ ಆಗಿದೆ ಎಂದು ವಾದಿಸುತ್ತಾರೆ.

4. ಗುರುತ್ವಬಲ : ದ್ರವ್ಯರಾಶಿ M ಮತ್ತು ತ್ರಿಜ್ಯ R ಇರುವ ಒಂದು ಗೋಳೀಯ ವಸ್ತುವಿನ ತಲದಲ್ಲಿ ಗುರುತ್ವಬಲ ಆ ವಸ್ತುವಿನ ಗುರುತ್ವಬಲ ಉಂಟುಮಾಡುವ ವೇಗೋತ್ಕರ್ಷ a ಆಗಿದ್ದರೆ ಆಗ $a = G.\frac{M}{R^2}$.

ಇಲ್ಲಿ G ವಿಶ್ವ ಗುರುತ್ವಾಕರ್ಷಣೀಯ ಸ್ಥಿರಾಂಕ. ಚಂದ್ರನ ಮೇಲ್ಮೈಯಲ್ಲಿ aಯ ಬೆಲೆ 161.7 ಸೆಂ.ಮೀ./ಸೆಕೆಂಡ್$^2$ (ಭೂಮಿಯದು 980 ಸೆಂ.ಮೀ./ಸೆಕೆಂಡ್$^2$. ಅಂದರೆ ಚಂದ್ರತಲದಲ್ಲಿ ವೇಗೋತ್ಕರ್ಷ ಭೂತದಲ್ಲಿನದಕ್ಕಿಂತ ಸುಮಾರು $\frac{1}{6}$ ರಷ್ಟು ಕಡಿಮೆ ಇರುತ್ತದೆ. ಯಾವುದೇ ಗ್ರಹದಲ್ಲಿ (ಇಲ್ಲವೇ ಉಪಗ್ರಹ) ಒಂದು ವಸ್ತುವಿನ ತೂಕ ಅದರ ದ್ರವ್ಯರಾಶಿ (m) ಹಾಗೂ ಗುರುತ್ವ ವೇಗೋತ್ಕರ್ಷಗಳ (g) ಗುಣಲಬ್ಧ (ತೂಕ = mg). ಆದ್ದರಿಂದ ಭೂಮಿಯಲ್ಲಿ 90 ಕಿ.ಗ್ರಾಂ. ತೂಕವಿರುವ ಓರ್ವ ವ್ಯಕ್ತಿಯ ತೂಕ ಚಂದ್ರನಲ್ಲಿ ಕೇವಲ 15 ಕಿ.ಗ್ರಾಂ. ಭೂಮಿಯಲ್ಲಿ ಒಂದಿಷ್ಟು ಪ್ರಯತ್ನದಿಂದ ಜಿಗಿಯಬಲ್ಲ ಎತ್ತರದ ಆರು ಪಟ್ಟು ಎತ್ತರವನ್ನು ಅಷ್ಟೇ ಪ್ರಯತ್ನದಿಂದ ಚಂದ್ರನಲ್ಲಿ ಆತ ಜಿಗಿಯಬಲ್ಲ.

5. ವಿಮೋಚನಾ ವೇಗ : ಒಂದು ಆಕಾಶಕಾಯದ ಗುರುತ್ವಬಲದ ಹಿಡಿತದಿಂದ ತಪ್ಪಿಸಿಕೊಂಡು ಸ್ವತಂತ್ರವಾಗಲು ಯಾವುದೇ ಕಣ ಆ ಕಾಯದ ತಲದಿಂದ ಜಿಗಿಯಬೇಕಾದ ಕನಿಷ್ಠ ಪ್ರಾರಂಭಿಕ ವೇಗಕ್ಕೆ ವಿಮೋಚನಾ ವೇಗ (ಎಸ್ಕೇಪ್ ವೆಲಾಸಿಟಿ) ಎಂದು ಹೆಸರು. ಇದರ ಅಳತೆ $v = \sqrt{2GM/R}$. ಆದ್ದರಿಂದ ಕಾಯ ಹೆಚ್ಚು ಹೆಚ್ಚು ಭಾರವುಳ್ಳದ್ದಾದಂತೆ ಅದರ ಗುರುತ್ವಬಲದೊಂದಿಗೆ ವಿಮೋಚನಾ ವೇಗವೂ ಹೆಚ್ಚು ಹೆಚ್ಚು ಆಗುತ್ತದೆ. ಸೂರ್ಯನಲ್ಲಿ ಇದರ ಬೆಲೆ 618 ಕಿ.ಮೀ./ಸೆ.; ಗುರುವಿನಲ್ಲಿ 59.54 ಕಿಮೀ./ಸೆ ; ಭೂಮಿಯಲ್ಲಿ 11.19 ಕಿ.ಮೀ./ಸೆ; ಚಂದ್ರನಲ್ಲಿ 2.38 ಕಿ.ಮೀ./ಸೆ. ಸೂರ್ಯೋಷ್ಣದಿಂದ ಕಾದ ವಾಯುವಿನ ಅಣುಗಳು ಅನುಕೂಲ ಸನ್ನಿವೇಶಗಳಲ್ಲಿ 10 ಕಿ.ಮೀ./ಸೆ ವೇಗವನ್ನು ತಲಪುವುದೇನೂ ಅಸಾಮಾನ್ಯ ಘಟನೆಗಳಲ್ಲ. ಇಂಥ ಕ್ಷೋಭಿತ ಕಣಗಳನ್ನು ಬಂಧಿಸಿ ಭೂಮಿಗೆ ವಾಯುಮಂಡಲದ ಕವಚವನ್ನು ಕಾಪಾಡಿ ಇಟ್ಟಿರುವುದು ಭೂಮಿಯ ಪ್ರಬಲ ಗುರುತ್ವಬಲ. ಚಂದ್ರದಲ್ಲಿನ ಸ್ಥಿತಿ ತದ್ವಿಪರೀತ. ಒಂದು ಕಾಲದಲ್ಲಿ ಅಲ್ಲಿ ವಾಯುಮಂಡಲ ಇದ್ದಿದ್ದರೆ, ಅದೇ ಸೂರ್ಯೋಷ್ಣದಿಂದ ಕಾದು ಕ್ಷೋಭೆಗೊಂಡ ವಾಯಕಣಗಳನ್ನು ಹಿಡಿದಿಡಲು ಚಂದ್ರಗುರುತ್ವಬಲಕ್ಕೆ ಸಾಧ್ಯವಾಗಲಿಲ್ಲ. ಹೀಗಾಗಿ ವಾಯುಕಣಗಳು ಚಂದ್ರನಲ್ಲಿನ ವಿಮೋಚನ ವೇಗವನ್ನು ಮೀರಿ ಜಿಗಿದು ವಿಶಾಲಾಕಾಶದಲ್ಲಿ ಸ್ವತಂತ್ರವಾಗಿರಬೇಕು. ಚಂದ್ರನಲ್ಲಿ ವಾಯುಮಂಡಲ, ಅದರಂತೆಯೇ ಜಲರಾಶಿ ಇಲ್ಲದಿರುವುದಕ್ಕೆ ಚಂದ್ರ ವಿಮೋಚನವೇಗ ಬಲು ಕಡಿಮೆ ಆಗಿರುವುದು ಒಂದು ಮುಖ್ಯ ಕಾರಣ.

6. ವಾಯುಮಂಡಲ ಮತ್ತು ಜಲರಾಶಿ : ಚಂದ್ರನಲ್ಲಿ ಇವೆರಡೂ ಇಲ್ಲ. ಚಂದ್ರನ ಮೇಲೆ ಮಾನವ ಇಳಿವ ಮೊದಲೇ ಅಥವಾ ಚಂದ್ರನ ಸಮೀಪ ದೃಶ್ಯಗಳನ್ನು ಆಧುನಿಕ ತಂತ್ರಗಳಿಂದ ಪಡೆಯುವ ಮೊದಲೇ ಈ ವಿಚಾರದಲ್ಲಿ ಸಾಕಷ್ಟು ಖಚಿತ ಜ್ಞಾನ ಅವನಿಗಿತ್ತು. ವಾಯುಮಂಡಲ ಸೂರ್ಯನ ಬೆಳಕನ್ನು ಚದರಿಸುತ್ತದೆ. ಚದರುವಿಕೆಯ ಪರಿಣಾಮಗಳನ್ನು ದೂರವೀಕ್ಷಣೆಯಿಂದ ಅಳೆಯಬಹುದು. ಚಂದ್ರನಲ್ಲಿ ಇಂಥ ಚದರಿಕೆಯ ಯಾವ ಲಕ್ಷಣಗಳನ್ನೂ ಗುರುತಿಸಲಾಗಿಲ್ಲ. ಅಲ್ಲದೆ ಸೂರ್ಯಗ್ರಹಣದ ಸಂದರ್ಭದಲ್ಲಿ ಚಂದ್ರಬಿಂಬದ ಹರಿತವಾದ ಅಂಚನ್ನು ಗುರುತಿಸಲಾಗಿದೆ; ಅಲ್ಲಿ ವಾಯುಮಂಡಲವಿದ್ದು ಬೆಳಕಿನ ಚದರಿಕೆ ಆಗಿದ್ದರೆ ಬಿಂಬದ ಅಂಚು ಮಸುಕಾಗುತ್ತಿತ್ತು. ವಾಯುಮಂಡಲದ ಅಭಾವದಿಂದಾಗಿ ಚಂದ್ರನ ಮೇಲ್ಮೈಯಲ್ಲಿ ಉಷ್ಣತೆಯ ಏರಿಳಿತಗಳು ಬಲು ತೀವ್ರವಾಗಿರುತ್ತವೆ. ಹಠಾತ್ತಾಗಿಯೂ ಇರುತ್ತವೆ. ಚಂದ್ರನ ಸೂರ್ಯಮುಖ ಪಾರ್ಶ್ವದಲ್ಲಿ ಉಷ್ಣತೆ ನೀರಿನ ಕುದಿಬಿಂದುವಿಗಿಂತ ($100^0$.ಸೆ.) ಹೆಚ್ಚಿದ್ದರೆ ಸೂರ್ಯವಿಮುಖ ಪಾರ್ಶ್ವದಲ್ಲಿ ಅದು–$173^0$ ಸೆ. ನಷ್ಟು ಕೆಳಕ್ಕೆ ಇಳಿದಿರುವುದುಂಟು. ಉಷ್ಣತೆಯ ಏರಿಳಿತಗಳ ಈ ಅತಿವ್ಯಾಪ್ತಿಯ ಪ್ರದೇಶದಲ್ಲಿ ಜಲರಾಶಿ ಇದ್ದಿದ್ದರೆ ಅದು ಉಗಿ–ಬರ್ಫ ಸ್ಥಿತಿಗಳ ನಡುವೆ ಆಂದೋಲಿಸುತ್ತಿರಬೇಕಾಗಿತ್ತು. ಆದರೆ ಆ ಮೊದಲೇ ಉಗಿಯ ಕಣಗಳು ಚಂದ್ರತಲದಿಂದ ಜಿಗಿದು ಮುಕ್ತವಾಗಿಬಿಡುತ್ತಿದ್ದುವು. ಹೀಗೆ ವಾಯು ಹಾಗು ಜಲರಾಹಿತ್ಯದ ಪರಿಣಾಮವಾಗಿ ಚಂದ್ರನಲ್ಲಿ ಯಾವ ತರಹದ ಜೀವಿಗಳ ಉಗಮ ಮತ್ತು ವಿಕಾಸವೂ ಸಾಧ್ಯವಾಗಲಿಲ್ಲ. ಚಂದ್ರ ಒಂದು ನಿರ್ಜೀವ ಜಗತ್ತು.

7. ನೈಸರ್ಗಿಕ ಬಲಗಳು : ಭೂಮಿಯ ಮೇಲೆ ವರ್ತಿಸುವ ನೈಸರ್ಗಿಕ ಬಲಗಳು ಪ್ರಧಾನವಾಗಿ ಏಳು: ಸೂರ್ಯಾಕರ್ಷಣೆ, ಚಂದ್ರಾಕರ್ಷಣೆ, ಸೂರ್ಯೋಷ್ಣ, ಉಲ್ಕಾಪಾತ, ವಾಯುಮಂಡಲದ ಕ್ಷೋಭೆ, ಜಲರಾಶಿಯ ಬಡಿತ, ಆಂತರಿಕ ಬಲಗಳು (ಭೂಕಂಪನ). ಇವುಗಳ ಪೈಕಿ, ಭೂಮಿಯ ಸ್ವರೂಪದ ಮೇಲೆ ತೀವ್ರ ಕುರುಹುಗಳನ್ನು ಮಾಡುವ ಬಲಗಳೆಂದರೆ ಸೂರ್ಯೋಷ್ಣ,ವಾಯು ಜಲರಾಶಿಗಳ ಕ್ಷೋಭೆ ಹಾಗೂ ಆಂತರಿಕ ಬಲಗಳು. ಪರ್ವತಗಳ ಹುಟ್ಟು, ಬೆಳವಣಿಗೆ, ಅಳಿವು, ನೆಲದ ಸವಕಳಿ, ಸಸ್ಯರಾಶಿಯ ವ್ಯಾಪ್ತಿ ಮುಂತಾದ ಸಮಸ್ತ ಬದಲಾವಣೆಗಳಿಗೂ ಕಾರಣಗಳಿವು. ಇನ್ನು ಉಲ್ಕಾಪಾತವನ್ನು ಸಮರ್ಥವಾಗಿ ತಡೆಹಿಡಿದು ಭೂಮಿಯ ಮೇಲ್ಮೈಗೆ ರಕ್ಷೆ ಒದಗಿಸುವ ಹೊದಿಕೆಯೇ ವಾಯುಮಂಡಲ. ಆದ್ದರಿಂದ ಉಲ್ಕೆಗಳ ಪತನದಿಂದ ಭೂಮೇಲ್ಮೈಯಲ್ಲಿ ಆಗಿರುವ ಹಾನಿ ಅತ್ಯಲ್ಪ. ಚಂದ್ರನಲ್ಲಾದರೋ ವಾಯು ಹಾಗೂ ಜಲರಾಶಿಗಳ ಅಭಾವದಿಂದಾಗಿ ಅಲ್ಲಿನ ಮೇಲ್ಮೈಸ್ವರೂಪವನ್ನು ತೀವ್ರವಾಗಿ ಬದಲಾಯಿಸಬಲ್ಲ ಎರಡು ಪ್ರಧಾನ ನೈಸರ್ಗಿಕ ಬಲಗಳೇ ಇಲ್ಲವಾಗಿವೆ. ಇನ್ನು ಭೂಮಿ ಹಾಗೂ ಸೂರ್ಯಾಕರ್ಷಣೆಗಳು ಉಂಟುಮಾಡುವ ಬದಲಾವಣೆಗಳು ದೀರ್ಘಕಾಲದಲ್ಲಿ ಅತ್ಯಲ್ಪ. ಆದ್ದರಿಂದ ಚಂದ್ರಸ್ವರೂಪವನ್ನು



ಚಿತ್ರ 6 (ಎ). ಮೊದಲ ಪಾದದ (ಶುಕ್ಲಪಕ್ಷದ ಪ್ರಥಮಾರ್ಧ) ಚಂದ್ರಬಿಂಬದ ಚಿತ್ರ. ಇದರ ಮೇಲುಭಾಗ ದಕ್ಷಿಣ, ಕೆಳಭಾಗ ಉತ್ತರ, ಎಡಭಾಗ ಪಶ್ಚಿಮ ಮತ್ತು ಬಲಭಾಗ ಪೂರ್ವದಿಕ್ಕುಗಳು. ಇದರಲ್ಲಿ ಕಾಣುವ ಕೆಲವು ಪ್ರಮುಖ ಏರುತಗ್ಗುಗಳನ್ನು ಮುಂದಿನ ಯಾದಿಯ ನೆರವಿನಿಂದ ಗುರುತಿಸಬಹುದು

| | ಎಡದಿಂದ ಬಲಕ್ಕೆ | ಕೆಳಗಿನಿಂದ ಮೇಲಕ್ಕೆ |
|---|---|---|
| ಅಂಡಾರಮ್ ಸಮುದ್ರ | 8 | 67 |
| ಆಬನೇಜ್ರ | 57 | 96 |
| ಆಬುಲ್‌ಫೇಡ | 56 | 88 |
| ಆರಿಸ್ಟೊಟೆಲೀಜ಼್ | 56 | 20 |
| ಆಲೀಯಸೆನ್ಸಿಸ್ | 65 | 105 |
| ಆಲ್ಬಟೆಗ್ನೀಯಸ್ | 66 | 84 |
| ಆಲ್ಮನಾನ್ | 55 | 91 |
| ಆಸ್ಟ್ರೇಲೀ ಸಮುದ್ರ | 25 | 115 |
| ಕಾಕೇಸಿಯನ್ ಪರ್ವತಗಳು | 62 | 32 |
| ಕ್ರಿಸಿಯಮ್ ಸಮುದ್ರ | 15 | 50 |
| ಜ್ಯಾನ್ಸನ್ | 40 | 56 |
| ಟಾರಸ್ ಪರ್ವತಗಳು | 30 | 35 |
| ಟ್ಯಾಂಗ್‌ಕ್ವಿಲೀಟಾಟಿಸ್ ಸಮುದ್ರ | 40 | 62 |
| ನೆಕ್ಟಾರಿಸ್ ಸಮುದ್ರ | 35 | 90 |
| ಪೈರನೀಜ಼್ ಪರ್ವತಗಳು | 28 | 87 |
| ಪ್ಲೇಫಾರ್ | 61 | 99 |

| | ಎಡದಿಂದ ಬಲಕ್ಕೆ | ಕೆಳಗಿನಿಂದ ಮೇಲಕ್ಕೆ |
|---|---|---|
| ಫೇಕಂಡಿಟಾಟಿಸ್ ಸಮುದ್ರ | 18 | 75 |
| ಫ್ರಾಕಸ್ಟೊರ್ | 36 | 95 |
| ಬೆಸಲ್ | 52 | 48 |
| ಬೋಮಾಂಟ್ | 39 | 92 |
| ಮನಿಲೇಯಸ್ | 66 | 57 |
| ಮಾರ್ಜಿನಸ್ ಸಮುದ್ರ | 3 | 50 |
| ಯೂಡಾಕ್ಸಸ್ | 56 | 25 |
| ಲ ಮೋನ್ಯೇ | 39 | 42 |
| ಲೈಪ್‌ನಿಟ್ಸ್ ಪರ್ವತಗಳು | 55 | 130 |
| ಲ್ಯಾಂಗ್ರೀನಸ್ | 11 | 79 |
| ವರ್ನರ್ | 67 | 101 |
| ವೇಪೋರಮ್ ಸಮುದ್ರ | 65 | 58 |
| ಸರೆನಿಟಾಟಿಸ್ ಸಮುದ್ರ | 52 | 42 |
| ಸ್ಮೂಮಾನ್‌ಜ಼್ ಸಮುದ್ರ | 8 | 67 |
| ಸ್ಮಿತಿಯೈ ಸಮುದ್ರ | 1 | 68 |
| ಹೈಂಡ್ | 62 | 82 |
| ಹ್ಯಾಡ್ಲಿ ದಿಬ್ಬ | 65 | 41 |
| ಹ್ಯಾಲ್ಮಸ್ ಪರ್ವತಗಳು | 60 | 50 |



ಚಿತ್ರ 6 (ಬಿ). ನಾಲ್ಕನೆಯ ಪಾದದ (ಕೃಷ್ಣಪಕ್ಷದ ಉತ್ತರಾರ್ಧ) ಚಂದ್ರಬಿಂಬದ ಚಿತ್ರ. ದಿಕ್ಕುಗಳು ಈ ಹಿಂದಿನ ಚಿತ್ರದಂತೆಯೇ. ಕೆಲವು ಪ್ರಮುಖ ಏರುತಗ್ಗುಗಳನ್ನು ಮುಂದಿನ ಯಾದಿಯ ನೆರವಿನಿಂದ ಗುರುತಿಸಬಹುದು

| | ಎಡದಿಂದ ಬಲಕ್ಕೆ | ಕೆಳಗಿನಿಂದ ಮೇಲಕ್ಕೆ |
|---|---|---|
| ಅಪನೈನ್ ಪರ್ವತಗಳು | 72 | 50 |
| ಆರಿಸ್ಟಿಲಸ್ | 69 | 34 |
| ಆರ್ಕಿಮಿಡೀಸ್ | 75 | 39 |
| ಆಲ್ಫೈನ್ ಕಣಿವೆ | 67 | 21 |
| ಆಲ್ಪ್ಸ್ | 67 | 20 |
| ಆಲ್ಫಾನ್ಸಸ್ | 74 | 87 |
| ಇಂಬ್ರಿಯಮ್ ಸಮುದ್ರ | 90 | 35 |
| ಕಾರ್ಪೇಥೀಯನ್ ಪರ್ವತಗಳು | 95 | 55 |
| ಕಾಸೀನೀ ಉಜ್ಜ್ವಲ ಬಿಂದು | 73 | 106 |
| ಕೊಪರ್ನಿಕಸ್ | 93 | 60 |
| ಕ್ಲೇವೀಯಸ್ | 75 | 124 |
| ಗ್ರಿಮಾಲ್ಡೀ | 126 | 74 |
| ಜುರ ಪರ್ವತಗಳು | 92 | 20 |

| | ಎಡದಿಂದ ಬಲಕ್ಕೆ | ಕೆಳಗಿನಿಂದ ಮೇಲಕ್ಕೆ |
|---|---|---|
| ಟೆನರಿಫ್ ಸಾಲು | 79 | 21 |
| ಟೈಕೊ | 78 | 114 |
| ಡೂಅರೆಫಲ್ ಪರ್ವತಗಳು | 89 | 125 |
| ಡ್ಯಾಲಂಬೇರ್ ಪರ್ವತಗಳು | 127 | 76 |
| ನೂಬೀಯಮ್ ಸಮುದ್ರ | 85 | 94 |
| ಪೀಟಾನ್ ದಿಬ್ಬ | 71 | 28 |
| ಫ್ರಿಗೋರಿಸ್ ಸಮುದ್ರ | 70 | 14 |
| ಮೇರಿಯಸ್ | 117 | 56 |
| ರುಕ್ ಪರ್ವತಗಳು | 110 | 108 |
| ಷ್ರೋಟರ್ಸ್ ಕಣಿವೆ | 113 | 42 |
| ಹಿರಾಡಟಸ್ | 113 | 43 |
| ಹೈಗನ್‌ಜ಼್ ದಿಬ್ಬ | 73 | 49 |
| ಹ್ಯೂಮಾರಮ್ ಸಮುದ್ರ | 105 | 96 |

ಬದಲಾಯಿಸುವ ನೈಸರ್ಗಿಕ ಬಲಗಳೇನಿದ್ದರೂ ಅವು ಮುಖ್ಯವಾಗಿ ಸೂರ್ಯೋಷ್ಣ, ಉಲ್ಕಾಪಾತ ಹಾಗೂ ಆಂತರಿಕಬಲಗಳು. ಈ ಹಿಂದೆ ಹೇಳಿದಂತೆ ಚಂದ್ರನ ಮೇಲೆ ಸೂರ್ಯೋಷ್ಣತೆ–173$^{0}$ ಸೆ. ಯಿಂದ ತೊಡಗಿ 100$^{0}$ ಸೆ. ಅನ್ನೂ ಮಿಕ್ಕಿ ವ್ಯತ್ಯಯವಾಗುತ್ತದೆ. ಇದರಿಂದ ಬಂಡೆ, ನೆಲ, ಕಮರಿ ಎಲ್ಲವೂ ಅತಿ ತೀವ್ರ ಉಷ್ಣತೆಗಳ ನಡುವೆ ಏರಿಳಿಯುವುವು.



ಚಿತ್ರ 6 (ಸಿ). ಎಡ : ಹುಣ್ಣಿಮೆ ಚಂದ್ರನ ಬಿಂಬದ ಚಿತ್ರ; ಬಲ : (ಚಂದ್ರಬಿಂಬದ ಹಿಂಬದಿಯ ಚಿತ್ರ) ಲೂನಿಕ್ III 1959ರಲ್ಲಿ ತೆಗೆದ ಚಿತ್ರ

ಬಂಡೆಗಳು ಒಡೆದು ಕಲ್ಲು ಚೂರು ಹೋಗಿ ಕ್ರಮೇಣ ದೂಳಾಗುವುದು ಈ ಏರಿಳಿತದ ಪರಿಣಾಮ. ಚಂದ್ರಪರ್ವತಗಳ ಬದಿಗಳು ತೀರ ಕಡಿದಾಗಿರುತ್ತವೆ. ಚಂದ್ರತಲದ ಮೇಲೆ ನೇರವಾಗಿ ಬೀಳುವ ಉಲ್ಕಾವೃಷ್ಟಿಯಿಂದ ಸಾಕಷ್ಟು ಕಲೆಗಳೂ ಕೂಪಗಳೂ ಉಂಟಾಗುವುವು. ಚಂದ್ರನಲ್ಲಿ ಆಂತರಿಕ ಬಲಗಳು ಇವೆಯೋ ಇಲ್ಲವೇ ಎನ್ನುವುದು ಪತ್ತೆಯಾಗಿಲ್ಲ. ಜ್ವಾಲಾಮುಖಿಗಳ ಅಸ್ತಿತ್ವದ ಬಗ್ಗೆ ಸ್ಪಷ್ಟ ಪುರಾವೆ ಲಭಿಸಿಲ್ಲ. ಅಂದರೆ ಚಂದ್ರಗರ್ಭ ಸಹ ಘನೀಭವಿಸಿ ಹೋಗಿದೆಯೇ (ಭೂಮಿಯಲ್ಲಿ ಹೀಗಾಗಿಲ್ಲವಷ್ಟೆ?) ಅಥವಾ ಚಂದ್ರನ ತೊಗಟೆ ಸಾಕಷ್ಟು ದಪ್ಪ ಮತ್ತು ಗಡಸಾಗಿದ್ದು ಸುಪ್ತ ಜ್ವಾಲಾಮುಖಿಗಳ ಪ್ರಕಟಣೆಯನ್ನು ಅದುಮಿಟ್ಟಿದೆಯೇ? ಉತ್ತರ ಖಚಿತವಿಲ್ಲ. ಮೊದಲಿಗೆ ಚಂದ್ರನ ಮೇಲೆ ವಿಪುಲವಾಗಿ ಕಾಣಬರುವ ಕೂಪ ಮತ್ತು ಕುಳಿಗಳು ಚಂದ್ರನಲ್ಲಿ ಒಂದು ಕಾಲದಲ್ಲಿ ಕ್ರಿಯಾಶೀಲವಾಗಿದ್ದು ಈಗ ಸುಪ್ತವಾಗಿರಬಹುದಾದ ಜ್ವಾಲಾಮುಖಿಗಳ ಪರಿಣಾಮವಾಗಿರಬಹುದು; ಆಗ



ಚಿತ್ರ 7 (ಎ). ಚಂದ್ರಕಕ್ಷೆಯಲ್ಲಿ ಪರಿಭ್ರಮಿಸುತ್ತಿದ್ದ (ಲೂನಾರ್ ಆರ್ಬಿಟರ್) ಉಪಗ್ರಹದಿಂದ ತೆಗೆದ ಚಂದ್ರನ ಒಂದು ದೃಶ್ಯ. ಮಾರಿಯಸ್ ಬೆಟ್ಟದ ಸಾಲನ್ನು ನೋಡಬಹುದು. ಹಿನ್ನೆಲೆಯಲ್ಲಿ (ಮೇಲೆ ಬಲಕ್ಕೆ) ಇರುವುದು ಕೂಪ ಮಾರಿಯಸ್

ಜ್ವಾಲಾಮುಖಿಗಳಿಂದ ಪ್ರವಹಿಸಿದ ಲಾವಾರಸ ಹರಿದು ಆಕಾರರಹಿತ ಕೊರಕಲು ಕಣಿವೆಗಳಿಗೆ ಲೇಪನಗೊಂಡು ಕೂಪಗಳಾಗಿರಬಹುದೆಂಬ ವಾದ ಇದ್ದಿತು. ಹೀಗಲ್ಲದೆ, ಚಂದ್ರತಲ ಇನ್ನೂ ಮಿದುವಾಗಿದ್ದಾಗ ಅಲ್ಲಿ ಪತನವಾದ ಉಲ್ಕೆಗಳಿಂದಾದ ಗಾಯಗಳು ಈ ಕೂಪ ಹಾಗೂ ಕುಳಿಗಳಾಗಿರಬಹುದೆಂಬ ವಾದವೂ ಸಹ ಇದ್ದಿತು. ಆದರೆ ಇಂದು ವಿಜ್ಞಾನಿಗಳು ಚಂದ್ರನ ಮೇಲೆ ಇರುವ ಕಡುಬೂದಿ ಬಣ್ಣದ ಬೃಹತ್ ತಗ್ಗಿನ ಪ್ರದೇಶಗಳು ಚಂದ್ರನಿಗೆ ಬೃಹತ್ ಉಲ್ಕೆಗಳು ಅಪ್ಪಳಿಸಿದ ನಂತರ ಚಂದ್ರನ ಮೇಲ್ಮೆಯಡಿಯಿಂದ ಹರಿದ ಲಾವಾರಸದಿಂದ ಉಂಟಾಗಿವೆ ಎಂದು ನಂಬಿದ್ದಾರೆ.

8. ಪ್ರಾಕೃತಿಕ ಸ್ಥಿತಿ : ಹುಣ್ಣಿಮೆಯ ರಾತ್ರಿಯ ಪೂರ್ಣಚಂದ್ರಬಿಂಬವನ್ನು ಬರಿಗಣ್ಣಿನಿಂದಲೇ ನೋಡಿ ಅದರ ಬಣ್ಣ ಏಕರೀತಿಯಾಗಿಲ್ಲ ಎಂಬುದನ್ನು ಅರಿಯಬಹುದು. ಗೆಲಿಲಿಯೋ (1564–1642) ತಾನೇ ರೂಪಿಸಿದ ದೂರದರ್ಶಕದಿಂದ ಚಂದ್ರನತ್ತ ನೋಡಿದಾಗ ಚಂದ್ರನ ಮೇಲೆ ಪರ್ವತಾವಳಿಗಳೂ ಕೂಪಕಮರಿಗಳೂ ಇದ್ದುದು ಸ್ಪಷ್ಟವಾಗಿ ಗೋಚರವಾಯಿತು. ಸಮುದ್ರಗಳಂತೆ ಗೋಚರಿಸಿದ ಪ್ರದೇಶಗಳನ್ನು ಆಗ ಗುರುತಿಸಿ ಅವುಗಳಿಗೆ ಹೆಸರಿಸಲಾಯಿತು. ಡಾನ್ಸಿಗ್‌ನ ಜಾನ್ ಹೆವೆಲ್ (1611–1687) ಎಂಬಾತ 1647ರಲ್ಲಿ ಸೆಲೆನೋಗ್ರಾಫಿಯ ಎಂಬ ಗ್ರಂಥವನ್ನು ಪ್ರಕಟಿಸಿದ. ಅದರಲ್ಲಿ ಅವನು ದೃಗ್ಗೋಚರ ಚಂದ್ರಪಾರ್ಶ್ವದ ಪ್ರಧಾನ ಏರು ತಗ್ಗುಗಳನ್ನೆಲ್ಲ ಗುರುತಿಸಿ ಹೆಸರಿಸಿದ್ದ. ಅಂದಿನ ನಂಬಿಕೆಯ ಪ್ರಕಾರ ಚಂದ್ರನಲ್ಲಿ ಭೂಮಿಯಲ್ಲಿರುವಂತೆಯೇ ಖಂಡಗಳೂ ಸಮುದ್ರಗಳೂ ಇವೆ, ಜೀವಿಗಳ ನಿವಾಸವದು–ಅಂದರೆ ಭೂಮಿಯಂತೆ ಇರುವ ಇನ್ನೊಂದು ಲೋಕ ಚಂದ್ರ–ಎಂದಿತ್ತು. ಆದರೆ ಇಂದು, ಈ ಮೊದಲೇ ಹೇಳಿರುವಂತೆ, ಚಂದ್ರ ಒಂದು ಬರಡು ಲೋಕ ಎಂದು ಈಗ ಚೆನ್ನಾಗಿ ಗೊತ್ತಿದೆ. ಚಂದ್ರನಲ್ಲಿರುವ ಪರ್ವತ, ಕಣಿವೆ, ಕೂಪ ಮುಂತಾದವು ಭೂಮಿಯಲ್ಲಿನ ಸಂವಾದೀ ಏರುತಗ್ಗುಗಳಿಗಿಂತ ಭಿನ್ನ ಸ್ವರೂಪದವು. ಅಲ್ಲಿ ವರ್ತಿಸುವ ಬಲಗಳೇ ಬೇರೆ, ಇಲ್ಲಿ ವರ್ತಿಸುವ ಬಲಗಳೇ ಬೇರೆ ಆಗಿರುವುದು ಇದರ ಕಾರಣ.



ಚಿತ್ರ 7 (ಬಿ). ಮಾರಿಯಸ್ ಬೆಟ್ಟಸಾಲಿನ ನೇರ ಮೇಲಿನಿಂದ ತೆಗೆದ ಚಿತ್ರ. ಗುಳುಪುಗಳು, ಗುಂಡಿಗಳು, ಕುಳಿಗಳು ಮುಂತಾದವನ್ನು ಕಾಣಬಹುದು

9. ಸಮುದ್ರಗಳು : ಚಂದ್ರಬಿಂಬಕ್ಕೆ ಮೊಲದ ಮುದ್ರೆ ಒತ್ತಿರುವ ಮಹಾ ಆಳಗಳಿವು; ನೀರಿಲ್ಲದ ಬರಡುಪ್ರದೇಶಗಳು. ಮೊದಲು ತಪ್ಪಾಗಿ ಕರೆಯಲ್ಪಟ್ಟ ಮಾರಿಯಾ (ಲ್ಯಾಟಿನಿನಲ್ಲಿ ಸಮುದ್ರಗಳು) ಎಂಬ ಹೆಸರೇ ಇಂದಿಗೂ ಉಳಿದುಕೊಂಡಿದೆಯಷ್ಟೆ. ಈ ಸಮುದ್ರಗಳು ಒಣ, ವಿಶಾಲ, ಮಟ್ಟಸ, ತಗ್ಗು ನೆಲಗಳು. ಹೀಗಾಗಿ ಆಸುಪಾಸಿನ ನೆಲಕ್ಕಿಂತ ಮಂದ ಕಳೆಯವಾಗಿ ಇವು ಕಾಣುತ್ತವೆ. ಚಂದ್ರನ ದೃಗ್ಗೋಚರ ಪಾರ್ಶ್ವದಲ್ಲಿರುವ 15 ಸಮುದ್ರಗಳ ಪೈಕಿ ಅತಿ ದೊಡ್ಡದು ಇಂಬ್ರಿಯಮ್ ಸಮುದ್ರ. ಇದು ಅಡ್ಡವಾಗಿ 1125 ಕಿ.ಮೀ. ನಷ್ಟು ವ್ಯಾಪಿಸಿದೆ. ಹೆಚ್ಚಿನ ಸಮುದ್ರಗಳಿಗೆ ಸ್ಥೂಲವಾದ ವರ್ತುಲಾಕಾರ ಉಂಟು. ಇವುಗಳಲ್ಲಿ ಹೆಚ್ಚಿನವು ಪರಸ್ಪರ ಸಂಯೋಜಿತವಾಗಿವೆ, ಕೆಲವು ಒಂದರ ಮೇಲೊಂದು ವ್ಯಾಪಿಸಿವೆ ಕೂಡ. ಇಂದಿನ ತಿಳಿವಳಿಕೆಯ ಪ್ರಕಾರ ತಳಗಳು ನಾವು ಭಾವಿಸಿರುವಷ್ಟು ನುಣುಪಾಗಿ ಏನೂ ಇಲ್ಲ. ಸಾವಿರಾರು ಗುಳಿಗಳು ಕೂಪಗಳು ಒಂದೊಂದು ಸಮುದ್ರತಳದಲ್ಲೂ ಇವೆ.

ಸೂರ್ಯನ ಬೆಳಕು ಅವುಗಳ ಮೇಲೆ ಬಿದ್ದಾಗ ಕೆಲವು ತಳಗಳು ಅಲೆ ಅಲೆಯಂಥ ಬೆಳಕನ್ನು ಪ್ರತಿಫಲಿಸುವುದೂ ಕಂಡುಬಂದಿದೆ. ಇನ್ನು ಕೆಲವು ತಳಗಳಲ್ಲಿ ಗುಡ್ಡಗಳಿವೆ. ಉದಾಹರಣೆಗೆ ನ್ಯೂಬಿಯಮ್ ಸಮುದ್ರ ತಳದಲ್ಲಿರುವ ನೇರ ಗೋಡೆ (ಸ್ಟ್ರೇಟ್ ವಾಲ್). ಇದರ ಎತ್ತರ ಸುಮಾರು 180 ಮೀ. ಉದ್ದ ಸುಮಾರು 130 ಕಿ.ಮೀ. ಮೊದಲಿಗೆ ಮಾನವರಹಿತ ಸರ್ವೇಯರ್ ಆಕಾಶನೌಕೆಗಳು ಮತ್ತು ನಂತರ ಗಗನಯಾತ್ರಿಗಳಿದ್ದ ಅಮೆರಿಕದ ಅಪೋಲೋ ಅಂತರಿಕ್ಷ ನೌಕೆಗಳು ಚಂದ್ರನ ಸಮುದ್ರ ತಳಗಳ ಮೇಲೆ ಇಳಿದು ದತ್ತಾಂಶಗಳನ್ನು ಭೂಮಿಗೆ ಪ್ರಸರಿಸಿವೆ. ಅಲ್ಲಿನ ವಸ್ತುಸ್ಥಿತಿಗಳ ಬಗ್ಗೆ ಗಮನಾರ್ಹ ಸಾದೃಶ್ಯ ಉಂಟು. ಸುಮಾರು 5–10 ಮೀ. ದಪ್ಪದ ಭಗ್ನಾವಶೇಷಗಳು ಅಲ್ಲಿ ತುಂಬಿವೆ. ದೂಳು, ಸುಮಾರು 0.0025 ಸೆಂ.ಮೀ. ವ್ಯಾಸದ ಸೂಕ್ಷ್ಮ ಕಣಗಳು, ಮರಳ ಹರಳುಗಳು ಇವುಗಳ ಮಿಶ್ರಣವೇ ಈ ಭಗ್ನಾವಶೇಷ. ಇದರ ಸರಾಸರಿ ಸಾಂದ್ರತೆ ಗ್ರಾಂ/ಘನಸೆಂ.ಮೀ.ಗೆ 0.7 ರಿಂದ 1.2ರ ನಡುವೆ ಉಂಟು. ಈ ವಸ್ತುವನ್ನು ಅದುಮಬಹುದಾದರೂ ಇದು ಮನುಷ್ಯನ ತೂಕವನ್ನು ಸುಲಭವಾಗಿ ಭರಿಸಬಲ್ಲುದು.



**ಚಿತ್ರ 7 (ಸಿ). ಲೂನಾರ್ ಆರ್ಬಿಟರಿನಿಂದ ತೆಗೆದ ಚಂದ್ರನ ಪೀಠಭೂಮಿಯ ಚಿತ್ರ. ಬಾಣಗುರುತುಗಳು ಡೇಕಾರ್ಟೇ ಕೂಪವನ್ನು ತೋರಿಸುತ್ತವೆ**

10 ಕೂಪಗಳು : ವ್ಯಾಸ 1.5 ಕಿ.ಮೀ. ನಿಂದ ತೊಡಗಿ 300 ಕಿಮೀ. ವರೆಗೆ ಇರುವ ವರ್ತುಲೀಯ ತಗ್ಗುಗಳಿವು. ಇನ್ನೂ ಚಿಕ್ಕವುಗಳಿಗೆ ಗುಳಿಗಳೆಂದು ಹೆಸರು. ಚಂದ್ರನ ಮೇಲ್ಮೈಯಲ್ಲಿ ಸಮುದ್ರಗಳಾದ ಬಳಿಕ ಇವುಗಳಿಗೆ ಅಧಿಕ ಪ್ರಾಧಾನ್ಯ ಉಂಟು. ಭೂಮಿಯಿಂದ ವೀಕ್ಷಿಸಿ ಸುಮಾರು 30,000 ದಷ್ಟು ಕೂಪಗಳನ್ನು ಲೆಕ್ಕ ಮಾಡಲಾಗಿತ್ತು. ಇವುಗಳ ಪೈಕಿ ಕ್ಲೇವಿಯಸ್ ಮತ್ತು ಗ್ರಿಮಾಲ್ಡಿ ಎಂಬವು ಅತಿ ದೊಡ್ಡವು. ಇವುಗಳ ವ್ಯಾಸ ಸುಮಾರು 240 ಕಿಮೀ. ವಿಖ್ಯಾತ ವಿಜ್ಞಾನಿಗಳ ಹೆಸರಿನಿಂದ ಕೂಪಗಳನ್ನು ಹೆಸರಿಸಲಾಗಿದೆ–ಟೈಕೊ, ಕೊಪರ್ನಿಕಸ್, ಕೆಪ್ಲರ್ ಇತ್ಯಾದಿ. ಸಮುದ್ರಗಳು ವ್ಯಾಪಿಸಿಲ್ಲದ ಚಂದ್ರ ಪ್ರದೇಶದಲ್ಲಿ ಕೂಪಗಳು ಹೆಚ್ಚಾಗಿ ಇರುವುದನ್ನು ಗುರುತಿಸಲಾಗಿದೆ. ಇನ್ನು ಸಮುದ್ರಗಳ ಒಳಗೇ ಪರಿಶೀಲಿಸಿದರೆ ಇರುವ ಕೂಪಗಳ ಸಂಖ್ಯೆ ಹೋಲಿಕೆಯಿಂದ ಕಡಿಮೆ. ಆದ್ದರಿಂದ ಚಂದ್ರತಲದಲ್ಲಿ ಕೂಪಗಳ ಉಗಮ ಮೊದಲು ಆಗಿರಬೇಕೆಂದೂ ಸಮುದ್ರಗಳ ಉಗಮ ಅನಂತರದ ವಿದ್ಯಮಾನವೆಂದೂ ಭಾವಿಸುವುದುಂಟು. ಸಾಧಾರಣ ಗಾತ್ರದ ಹೆಚ್ಚಿನ ಕೂಪಗಳು ವೃತ್ತಾಕಾರವಾಗಿವೆ. ಅವುಗಳಿಗೆ ಹೊರಗೋಡೆಗಳಿವೆ–ಇವುಗಳ ಎತ್ತರ ತಳದಿಂದ 300 ಮೀ. ಗಿಂತಲೂ ಹೆಚ್ಚಾಗಿರುವುದು ಅಪರೂಪವಲ್ಲ. ಪರಿಸರದ ನೆಲಕ್ಕಿಂತ ಕೂಪದ ತಳ ಎತ್ತರ ಮಟ್ಟದಲ್ಲಿರುವುದೂ ಉಂಟು. ಆದರೆ ಇದು ವಿರಳ. ಹೆಚ್ಚಿನ ಕೂಪಗಳಲ್ಲಿ ತಳ ಆಸುಪಾಸಿನ ನೆಲಕ್ಕಿಂತ ತಗ್ಗಿನಲ್ಲೇ ಇದೆ. ಕೂಪಗಳ ಒಳಗೋಡೆಗಳು ಹೊರಗೋಡೆಗಳಿಗಿಂತ ತೀರ ಕಡಿದಾಗಿ ಇರುವುದರಿಂದ ಪ್ರತಿಯೊಂದು ಕೂಪವೂ ಭಯಂಕರ ಮೃತ್ಯುಕೂಪ ದಂತೆಯೇ ಇರುವುದು. ವಿಶಾಲ ಕೂಪಗಳಲ್ಲಿ ಹೆಚ್ಚಿನವುಗಳ ಕೇಂದ್ರದಲ್ಲಿ ಪರ್ವತಾವಳಿಗಳು ಚಾಚಿಕೊಂಡಿವೆ. ಬಯಲು ನೆಲದ ಮೇಲೆ ಬಾಂಬ್ ಬಿದ್ದು ಆಸ್ಫೋಟಿಸಿದಾಗ ಉಳಿಯುವ ಗುರುತನ್ನು ಹೆಚ್ಚಿನ ಕೂಪಗಳು ಹೋಲುವುವು. ಅಂದರೆ ಪ್ರಬಲ ಆಘಾತದ ಪರಿಣಾಮ ಈ ಕೂಪಗಳು ಎಂದು ಭಾವಿಸಬಹುದು. ಬಾಹ್ಯವಸ್ತುಗಳ ತಾಡನೆಯೋ ಆಂತರಿಕ ಜ್ವಾಲಾಮುಖಿಗಳ ಆಸ್ಫೋಟನೆಯೋ ಕೂಪಗಳನ್ನು ರೂಪಿಸಿರಬೇಕು. ಹಿಂದೊಮ್ಮೆ ಕ್ರಿಯಾಪಟುಗಳಾಗಿದ್ದ ಜ್ವಾಲಾಮುಖಿಗಳಿಂದ ಪ್ರವಹಿಸಿದ ಲಾವಾರಸ ಹರಿದು ಆಕಾರರಹಿತ ಕೊರಕಲು ಕಣಿವೆಗಳಿಗೆ ಲೇಪನಗೊಂಡು ಕೂಪಗಳಾಗಿರಬಹುದೆಂಬ ಊಹೆ ಮೊದಲು ಇದ್ದಿತು. ಇವುಗಳ ಗಾತ್ರ ಮತ್ತು ರೂಪ ಬದಲಾದದ್ದನ್ನು ಗಮನಿಸಲಾಗಿದೆ. ಪೂರ್ಣಚಂದ್ರಗ್ರಹಣ ಕಾಲದಲ್ಲಿ ಕೆಲವು ಕೂಪಗಳು ಸ್ವಂತ ಪ್ರಕಾಶವನ್ನು ಬೀರುವುದನ್ನು ಗುರುತಿಸಿದ್ದಾರೆ. ಅವುಗಳ ಒಳಗಿರುವ ಲೋಹಾಂಶಗಳ ವಿಶ್ಲೇಷಣೆ ಸಾಕಷ್ಟು ಆದ ಮೇಲೆ ಇದರ ಕಾರಣ ತಿಳಿಯಬಹುದು.

**ಚಿತ್ರ 8 (ಎ). ಅಪೊಲೊ–17ನ ಯಾತ್ರಿ ಷ್ಮಿಟ್ ಚಂದ್ರನ ಮೇಲಿಳಿದು ಟಾರಸ್–ಲಿಟೊ ಪ್ರದೇಶದಲ್ಲಿನ ದೊಡ್ಡ ಬಂಡೆಯೊಂದನ್ನು ಪರೀಕ್ಷಿಸುತ್ತಿರುವುದು**

11 ಪರ್ವತಗಳು : ಚಂದ್ರನಲ್ಲಿ ಸಾಕಷ್ಟು ಪರ್ವತಸಮೂಹಗಳೇ ಇವೆ–ಆಲ್ಪ್ಸ್, ಆಪೆನ್ನೈನ್ಸ್, ಕಾರ್ಪೇಥಿಯನ್ಸ್ ಇತ್ಯಾದಿ. ಈ ಹೆಸರುಗಳು ಭೂಮಿಯ ಮೇಲಿನ ಪರ್ವತಾವಳಿಗಳ ಹೆಸರುಗಳಿಂದಲೇ ಪ್ರಭಾವಿತವಾದವು. ಆದರೆ ಸಾದೃಶ್ಯ ಇಲ್ಲಿಗೆ ಮುಕ್ತಾಯವಾಗುತ್ತದೆ. ಮಳೆಯ ಹೊಡೆತ, ಗಾಳಿಯ ಬಡಿತ, ನೀರಿನ ಹರಿಯುವಿಕೆ ಯಿಂದಾಗುವ ಸವಕಳಿ, ಗಿಡಮರಗಳ ನಿರಂತರ ಪ್ರಭಾವ ಇವೇ ಮುಂತಾದವುಗಳಿಂದ ಭೂಮಿಯ ಮೇಲಿನ ಪರ್ವತಾವಳಿಗಳ ಬಾಹ್ಯ ರೂಪಗಳಲ್ಲಿ ತೀವ್ರ ವ್ಯತ್ಯಾಸಗಳು ತಲೆದೋರಿವೆ. ಇಂಥ ಯಾವ ಸಮಸ್ಯೆಯೂ ಇಲ್ಲದಿರುವ ಚಂದ್ರಲೋಕದ ಬೆಟ್ಟಗುಡ್ಡಗಳು



**ಚಿತ್ರ 8 (ಬಿ). ಚಂದ್ರತಲದಿಂದ ತೆಗೆದ ಒಂದು ಚಿತ್ರ (ಅಪೊಲೊ 17)**

ಹೆಚ್ಚು ಕಡಿಮೆ ಅವು ಮೈದಳೆದ ಕಾಲದ ನಗ್ನರೂಪದಲ್ಲಿಯೇ ಇಂದಿಗೂ ಇವೆ. ಕಡಿದಾದ ಮೈಗಳು, ನೆಲದಿಂದ ಹಠಾತ್ತಾಗಿ ಅಂತರಿಕ್ಷಕ್ಕೆ ಚಾಚಿರುವ ಶಿಖರಾಗ್ರಗಳು, ಒಂಟಿ ಬಂಡೆಗಳು ಮುಂತಾದವು ಚಂದ್ರಪರ್ವತಗಳ ವೈಶಿಷ್ಟ್ಯ. ಅತ್ಯುನ್ನತ ಶಿಖರದ ಎತ್ತರ 7,620 ಮೀ. ವರೆಗೂ ಇದೆ. (ಅತ್ಯುನ್ನತ ಎವರೆಸ್ಟಿನ ಎತ್ತರ 8,839 ಮೀ.). ಅಪೆನ್ನೈನ್ಸ್ ಪರ್ವತ ಶ್ರೇಣಿಗಳಲ್ಲಿ ಹ್ಯಾಡ್ಲೀ ಎಂಬವನ ಹೆಸರಿನ ರಿಲ್ ಅಥವಾ ಕಣಿವೆ ಎದ್ದು ತೋರುವ ಉದ್ದವಾದ ಒಂದು ಬಿರುಕು. ಸರಿ ಸುಮಾರು ಒಂದೇ ದಪ್ಪದ ನಳಿಗೆ ಅಡ್ಡಾದಿಡ್ಡಿ ಹರಿದಂತೆ ಇದರ ವ್ಯಾಪ್ತಿ ಉಂಟು. ಇದು ಪರ್ವತದಿಂದ ತೊಡಗಿ ಪಕ್ಕದ ಸಮುದ್ರದವರೆಗೂ ಹಬ್ಬಿಕೊಂಡಿದೆ. ಈ ವಲಯದ ಚಿತ್ರಗಳ ಪರಿಶೀಲನೆಯಿಂದ ತಿಳಿದಿರುವುದಿಷ್ಟು: ಹ್ಯಾಡ್ಲೀ ಕಣಿವೆಯ ಎರಡು ಪಕ್ಕಗಳ ಗೋಡೆಗಳಿಂದ ಹೊಸತಾಗಿ ಕಲ್ಲುಗಳು ಉರುಳಿರುವ ಗಾಯಗಳನ್ನು

ಗುರುತಿಸಲಾಗಿದೆ; ಈ ಕಣಿವೆ ಒಂದು ಸಮುದ್ರದ ತಳವನ್ನು ಸೇರಿ ಅಲ್ಲಿಯೂ ಕೊರೆದುಕೊಂಡು ಮುಂದೆ ಹೋಗಿದೆ. ಇದರ ಹರಿವಿನ ಪೂರ್ಣ ಅಧ್ಯಯನ ಚಂದ್ರನ ವಿವಿಧ ಸ್ತರಗಳ ರಚನೆ, ರೂಪಾಂತರ, ವಯಸ್ಸು ಮುಂತಾದವುಗಳಿಗೆ ಹೆಚ್ಚಿನ ಒಳನೋಟ ನೀಡಿದೆ.

**ಚಿತ್ರ 8 (ಸಿ). ಚಂದ್ರನ ಮೇಲೆ ಇಳಿದ ಭೂವಿಜ್ಞಾನಿ–ಗಗನಯಾತ್ರಿ ಷ್ಮಿಟ್ ಭೂವೈಜ್ಞಾನಿಕ ಸಾಧನವೊಂದನ್ನು ಬಳಸಿ ಪ್ರತಿಚಯಗಳನ್ನು ಸಂಗ್ರಹಿಸುತ್ತಿರುವುದು (ಅಪೋಲೊ 17)**

12 ಮ್ಯಾಸ್ಕನುಗಳು : ಚಂದ್ರನಲ್ಲಿ ಅಧಿಕ ದ್ರವ್ಯರಾಶಿ ಕೇಂದ್ರೀಕೃತ ಸ್ಥಳಗಳಿಗೆ ಈ ಹೆಸರುಂಟು. MASs CONcentration ಎಂಬ ಪದಗಳ ಸಂಯೋಜಿತ ಸಂಕ್ಷೇಪ ರೂಪ MASCON. ಚಂದ್ರನ ಸುತ್ತ ಪ್ರಪರಿಭ್ರಮಿಸಲು ನಿಯೋಜಿಸಿದ ಆಂತರಿಕ್ಷ ನೌಕೆಗಳ ಕಕ್ಷಾವೇಗಗಳನ್ನು ಕರಾರುವಾಕ್ಕಾಗಿ ನಿರ್ಧರಿಸಲಾಗಿತ್ತು. ಆದರೆ ವಾಸ್ತವಿಕ ಕಕ್ಷಾವೇಗಗಳು ಸೈದ್ಧಾಂತಿಕ ಕಕ್ಷಾವೇಗಗಳಿಂದ ವಿಚಲನೆಗೊಂಡಿದ್ದುದನ್ನು–ಅದೂ ಕೆಲವೆಡೆಗಳಲ್ಲಿ ಮಾತ್ರ– ಗುರುತಿಸಲಾಯಿತು. ಇಂಬ್ರಿಯಮ್, ಸೆರೆನಿಟೆಟಿಸ್, ಕ್ರಿಸಿಯಮ್, ಹ್ಯೂಮರಮ್ ಮತ್ತು ನೆಕ್ಟಾರಿಸ್ ಸಮುದ್ರಗಳ ಮೇಲುಭಾಗಗಳಲ್ಲಿ ಒಂದು ನೌಕೆ ಸಾಗುತ್ತಿದ್ದಾಗ ಅದರ ಕಕ್ಷಾವೇಗ ಏರುತ್ತಿತ್ತು. ಆದ್ದರಿಂದ ಆ ವಲಯಗಳಲ್ಲಿ ಚಂದ್ರನ ಗುರುತ್ವಾಕರ್ಷಣ ಬಲ ಹೆಚ್ಚು ಇರಬೇಕು ಎಂದು ವಿಜ್ಞಾನಿಗಳು ತೀರ್ಮಾನಿಸಿದರು. ಇದರ ಕಾರಣ ಅಲ್ಲಿ ಅಧಿಕ ದ್ರವ್ಯರಾಶಿ ಕೇಂದ್ರೀಕರಣ. ಇಂಥ ವಲಯಗಳೇ ಮ್ಯಾಸ್ಕನುಗಳು. ದ್ವೈತ್ರಾತ್ತದ, ಮಹಾಭಾರದ ಹಾಗೂ ಕಬ್ಬಿಣಾಂಶ ಜಾಸ್ತಿ ಇರುವ ಉಲ್ಕಾಪಿಂಡಗಳು ಮ್ಯಾಸ್ಕನ್ ವಲಯಗಳಲ್ಲಿ ಹುದುಗಿ ಕೊಂಡಿರಬಹುದು ಎಂದು ಕೆಲವರ ಊಹೆ. ಚಂದ್ರನ ಒಳಗಿನಿಂದ ಹರಿದ ವಿವಿಧ ಸಾಂದ್ರತೆಗಳ ಲಾವಾರಸ ಈ ತಗ್ಗು ಪ್ರದೇಶಗಳನ್ನು ಆವರಿಸಿ ಅಲ್ಲಿ ದಟ್ಟವಾಗಿ ಘನೀಭವಿಸಿರ ಬಹುದು ಎಂದು ಬೇರೆಯವರ ಅಭಿಪ್ರಾಯ. ಉಲ್ಕಾ ಸಂಘರ್ಷದಿಂದ ಉಂಟಾದ ಕೂಪಗಳನ್ನು ಮುಚ್ಚಲು, ಅಂದು ದ್ರವರೂಪದಲ್ಲಿ ಇದ್ದಿರಬಹುದಾದ ಚಂದ್ರರಸ ಹರಿದು ಈ ವಲಯದಲ್ಲಿ ದಟ್ಟೈಸಿರಬಹುದು ಎಂದು ಮತ್ತೊಂದು ವಿಜ್ಞಾನಿಗಳ ಗುಂಪಿನ ಅಭಿಪ್ರಾಯ. ಈ ಬಗ್ಗೆ ಇನ್ನೂ ಖಚಿತವಾದ ತೀರ್ಮಾನಕ್ಕೆ ಬರಲು ವಿಜ್ಞಾನಲೋಕಕ್ಕಿನ್ನೂ ಸಾಧ್ಯವಾಗಿಲ್ಲ.

13 ಚಂದ್ರನ ಸ್ಮಾರಕಗಳು : ಚಂದ್ರನ ಮೇಲಿಳಿದ ಮನುಷ್ಯ ಅಲ್ಲಿಂದ ಶಿಲೆಗಳನ್ನು ತಂದಿದ್ದಾನೆ. ಇವನ್ನು ಭೂಮಿಯಲ್ಲಿನ ಪ್ರಯೋಗಶಾಲೆಗಳಲ್ಲಿ ವಿಭಜಿಸಿ ಪರೀಕ್ಷಿಸಲಾಗಿದೆ. ಆಯ್ದು ತಂದ ಚಂದ್ರಶಿಲೆಗಳು ಅಗ್ನಿಜನ್ಯ ಅಂದರೆ ಉಷ್ಣಶಕ್ತಿಯಿಂದ ನಿರ್ಮಿತವಾದವುಗಳೆಂದು ಗೊತ್ತಾಗಿದೆ. (ಮ್ಯಾಗ್ಮದ–ಎಂದರೆ ಕಾಯವೊಂದು ಘನೀಭವಿಸುವ ಪೂರ್ವಸ್ಥಿತಿಯ ಶಿಲಾದ್ರವದ–ಉಷ್ಣವು ವಿಸರಣೆಯಿಂದ ನಷ್ಟವಾದಂತೆ ಅದು ಹೆಪ್ಪುಗಟ್ಟಿ ಅಕ್ಕಪಕ್ಕದ ಸಂಸ್ತರಗಳ ಒತ್ತಡದಿಂದ ಕಲ್ಲಾಗುವುದು. ಇದೇ ಅಗ್ನಿಜನ್ಯಶಿಲೆ ಅಥವಾ ಅಗ್ನಿಶಿಲೆ. ಭೂಮಿಯಲ್ಲಿ ಇರುವ ಇತರ ಎರಡು ವಿಧದ ಶಿಲೆಗಳು ಜಲಜ ಶಿಲೆಗಳು ಮತ್ತು ರೂಪಾಂತರಿತ ಶಿಲೆಗಳು. ಆದರೆ ಶೇ.95 ರಷ್ಟು ಅಗ್ನಿಶಿಲೆಗಳೇ. ಆದ್ದರಿಂದ ಚಂದ್ರ ಮೊದಲು ಶಿಲಾದ್ರವದ ರೂಪದಲ್ಲಿದ್ದು ಘನೀಭವಿಸಿ ಈಗಿನ ರೂಪಕ್ಕೆ ಬಂದಿರಬಹುದು ಎಂಬ ಊಹೆಗೆ ಬಲವಾದ ಪುರಾವೆ ಲಭಿಸಿದಂತಾಗಿದೆ. ಜಲಜಶಿಲೆ ಇದುವರೆಗೆ (2005) ದೊರೆತಿಲ್ಲ. ಅಗ್ನಿಶಿಲೆಗಳ ಶೋಧನೆಯಿಂದ ಶೀತಲಚಂದ್ರ ಊಹೆಗೆ (ಇದರ ಪ್ರಕಾರ ಚಂದ್ರ ಎಂದೂ ಬಿಸಿಯಾಗಿರಲಿಲ್ಲ; ಆದ್ದರಿಂದ ಅದರ ಗರ್ಭದಲ್ಲಿಯೂ ಉಷ್ಣವಿರುವುದು ಸಾಧ್ಯವಿಲ್ಲ ಎಂದಿದೆ) ಮಂಗಳ ಹಾಡಿದಂತಾಯಿತು. ಈಗ ದೊರೆತಿರುವ ಅಗ್ನಿಶಿಲೆಗಳ ವಯಸ್ಸು 3.1x10$^8$ ವರ್ಷಗಳೆಂದು

**ಚಿತ್ರ 8 (ಡಿ). ಚಂದ್ರತಲದಿಂದ ನೋಡುವವನಿಗೆ ನೆಲ, ಪರ್ವತಗಳು, ಸಮುದ್ರಗಳು ಹಾಗೂ ನಕ್ಷತ್ರಗಳು ಹೇಗೆ ಕಾಣಬಹುದು ಎನ್ನುವುದನ್ನು ತೋರಿಸುವ ಕಾಲ್ಪನಿಕ ಚಿತ್ರ**

ಅಂದಾಜು. ಇವನ್ನು ಪಡೆದದ್ದು ಚಂದ್ರನ ಸಮುದ್ರದಿಂದ. ಆದ್ದರಿಂದ ಸಮುದ್ರದ ವಯಸ್ಸು ಕನಿಷ್ಠ ಪಕ್ಷ 3.1x10$^8$ ವರ್ಷಗಳಾಗಿರಲೇಬೇಕು. ಇದರ ಅರ್ಥ ಚಂದ್ರನ ಸಮುದ್ರಗಳು ಈಚಿನ ರಚನೆಗಳಲ್ಲ; ಇವು ಸಾಕಷ್ಟು ಹಳೆಯವು ಮಾತ್ರವಲ್ಲ, ಲಕ್ಷಾಂತರ ವರ್ಷಗಳಿಂದ ಅದೇ ರೂಪದಲ್ಲಿ ಇವೆ ಕೂಡ. ಭೂಮಿಯಲ್ಲಿ ದೊರೆತಿರುವ ಅತಿ ಪ್ರಾಚೀನ ಶಿಲೆಗಳ ವಯಸ್ಸು ಸುಮಾರು 3.3x10$^8$ ವರ್ಷಗಳು. ಈ ಹೋಲಿಕೆಯಲ್ಲಿ ಚಂದ್ರ ಮತ್ತು ಭೂಮಿಯ ಶಿಲೆಗಳು ಸಮಕಾಲೀನವಾಗಿವೆ. ಆದರೆ ಭೂಮಿಯಲ್ಲಿ ಆ ಮೊದಲೂ ಶಿಲೆಗಳಿದ್ದಿರಲಿಲ್ಲ ಎಂದು ತೀರ್ಮಾನಿಸಲಾಗದು. ನೈಸರ್ಗಿಕ ಬಲಗಳ ಹೊಡೆತದಿಂದ ಅವು ಶಿಥಿಲವಾಗಿ ನಾಶವಾಗಿಹೋಗಿರುವ ಸಾಧ್ಯತೆ ಉಂಟು. ಚಂದ್ರನ ಟ್ರಾಂಕ್ವಿಲಿಟಿ ಸಮುದ್ರತಳದಿಂದ ಆಯ್ದು ತಂದ ದೂಳನ್ನೂ ಶಿಲೆಗಳನ್ನೂ ಪರಿಶೀಲಿಸಿದಾಗ ದೂಳಿನ ವಯಸ್ಸು ಸುಮಾರು 4.6x10$^9$ ವರ್ಷಗಳೆಂದೂ ಶಿಲೆಗಳ ವಯಸ್ಸು ಸುಮಾರು 3.6x10$^9$ ವರ್ಷಗಳೆಂದೂ (ಎಂದರೆ ಶಿಲೆಗಳು ದೂಳಿಗಿಂತ 1x109 ವರ್ಷಗಳಷ್ಟು ತರುಣ) ಕಂಡುಬಂದಿತು. ದೂಳಿನ ಪ್ರಾಯ ಚಂದ್ರನ ಪ್ರಾಯದಷ್ಟೇ (ಇದು ಸರಿಸುಮಾರಾಗಿ 5x10$^9$ ವರ್ಷಗಳು).

ಅನಂತರದ ಅಪೋಲೋ 17ರ ಗಗನಯಾತ್ರಿಗಳು ಚಂದ್ರನ ಎತ್ತರ ಪ್ರದೇಶದಲ್ಲಿ ಇಳಿದು ಅಲ್ಲಿಂದ ಸಂಗ್ರಹಿಸಿ ತಂದ ಶಿಲೆಗಳು ಸುಮಾರು 4–4.3 ರಿಂದ 4.3 ಬಿಲಿಯನ್ ವರ್ಷಗಳಷ್ಟು ಹಳೆಯವೆಂದು ಅಂದಾಜು ಮಾಡಲಾಯಿತು. ಈ ನಿಟ್ಟಿನಲ್ಲಿ ಅಪೋಲೋ 17ರ ಗಗನಯಾತ್ರಿಗಳು ತಂದ ಒಂದು ಶಿಲೆಯ ವಯಸ್ಸು ಸುಮಾರು 4.6 ಬಿಲಿಯನ್

**ಚಿತ್ರ 8 (ಇ). ಅಪನೈನ್ ಪರ್ವತಗಳು ಮತ್ತು ಅವುಗಳ ತಳದಲ್ಲಿರುವ ಇಂಬ್ರಿಯಮ್ ಸಮುದ್ರ (ಎಡ ಕೆಳಗೆ)**

ವರ್ಷಗಳೆಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಚಂದ್ರಜನನವಾದ ಸುಮಾರು $1x10^9$ ವರ್ಷಗಳ ತರುವಾಯ, ಎಂದರೆ ಸುಮಾರು $4x10^9$ ವರ್ಷಗಳ ಹಿಂದೆ, ಸಂಭವಿಸಿದ ಕೆಲವು ದುರ್ಘಟನೆಗಳ ಪರಂಪರೆ ಚಂದ್ರನನ್ನು ಭೀಕರವಾಗಿ ಅಲುಗಿಸಿಬಿಟ್ಟಿತು. ಆಗ ಲಾವಾರಸದ (ಅಥವಾ ಚಂದ್ರಶಿಲಾರಸದ) ಪ್ರವಾಹವೇ ಹರಿಯಿತು. ಚಂದ್ರಗರ್ಭದಿಂದ ಹೊರಬಂದ ಲಾವಾರಸ ತಣಿದು ಶಿಲೆಗಳಾಗಿರಬಹುದು ಅಥವಾ ಉಲ್ಕಾ ತಾಡನೆಯಿಂದ ಶಿಲೆ ಕರಗಿ ಮರುರೂಪ ಪಡೆದಿರಬಹುದು. ಎರಡನೆಯ ಕಾರಣ ಸಮರ್ಪಕ ಎಂದು ಭಾವಿಸಿದರೆ ಅಂಥ ದುರ್ಘಟನೆಯ ಕುರುಹು ಚಂದ್ರನ ನೆರೆಕಾಯವಾದ ಭೂಮಿಯಲ್ಲಿಯೂ ಕಾಣಬೇಕು. ಬಹುಶಃ ಈ ಕಾರಣದಿಂದ ವಿಜ್ಞಾನಿಗಳಿಗೆ ಭೂಮಿಯ ಮೇಲೆ $3.6 \times 10^9$ ವರ್ಷಗಳಿಗಿಂತ ಹಳೆಯ ಕಲ್ಲುಗಳನ್ನು ಪತ್ತೆ ಮಾಡುವುದು ಸಾಧ್ಯವಾಗಿಲ್ಲ (ಭೂಮಿಯ ವಯಸ್ಸು ಸುಮಾರು $5 \times 10^9$ ವರ್ಷಗಳು). ಚಂದ್ರನಿಂದ ತಂದ ವಸ್ತುಗಳ ನಮೂನೆಯನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳ ನೆರವಿನಿಂದ ಪರಿಶೀಲಿಸಿದಾಗ ಉಲ್ಕಾಪಾತದ ಪರವಾಗಿ ಇನ್ನಷ್ಟು ದಾಖಲೆ ದೊರೆಯಿತು. ಅತ್ಯಂತ ಸೂಕ್ಷ್ಮಕಣಗಳ (ಅತಿಸೂಕ್ಷ್ಮ ಉಲ್ಕೆಗಳು) ಅವಿಚ್ಛಿನ್ನ ಪ್ರಹಾರದಿಂದ ಚಂದ್ರಶಿಲೆಗಳ ಕಣಕಣಗಳ ಮೇಲೆಯೂ ಆದ ಗುರುತುಗಳು ಸ್ಪಷ್ಟವಾಗಿ ಕಂಡವು. ಗಾಜಿನಂತೆ ಹೊಳೆವ ತುಣುಕುಗಳೂ ಸಾಕಷ್ಟು ದೊರೆತಿವೆ. ಉಲ್ಕಾಪಾತದಿಂದ ಕರಗಿ ಹಾರಿದ ಮರಳುಮಿಶ್ರಿತ ಕಲ್ಲಿನ ದ್ರವ ಘನೀಭವಿಸಿದಾಗ ಇವು ಉಂಟಾಗಿರಬಹುದು. ವಿಶ್ವಕಿರಣ (ಕಾಸ್ಮಿಕ್ ರೇ) ಮತ್ತು ಸೌರ ಕಣಗಳ ತಾಡನದ ಅಚ್ಚಳಿಯದ ಕುರುಹುಗಳನ್ನೂ ಗುರುತಿಸಲಾಗಿದೆ. ಎಂದೆಂದೂ ಮಾಸದ ಈ ಕುರುಹುಗಳ ಪರಿಶೀಲನೆಯಿಂದ ಅವು ಯಾವಾಗ ಉಂಟಾದವೆಂದು ಕಂಡುಹಿಡಿಯಬಹುದು. ಟ್ರಾಂಕ್ವಿಲ್ಲಿಟ ಸಮುದ್ರದಿಂದ ಸಂಗ್ರಹಿಸಿದ ಶಿಲೆಗಳಲ್ಲಿ ಭೂಮಿಯ ಮೇಲೆ ಇರದಂಥ ಕನಿಷ್ಠ ಪಕ್ಷ ಮೂರು ಲೋಹಸಂಯುಕ್ತಗಳನ್ನು ಪತ್ತೆಹಚ್ಚಲಾಯಿತು. ಇವೆಲ್ಲವುಗಳಲ್ಲೂ



**ಚಿತ್ರ 9 (ಎ). ಹೈಜಿನಸ್ ಕಣಿವೆ ಇದರ ಉದ್ದ 180 ಕಿಮೀ, ಅಗಲ 3–6 ಕಿಮೀ, ಆಳ 400 ಮೀ**

ಕಬ್ಬಿಣದ ಅಂಶವೇ ಪ್ರಧಾನ. ಚಂದ್ರನಲ್ಲಿ ಜೀವ ವಿಕಾಸವನ್ನು ಕುರಿತು ಅಭಿಪ್ರಾಯ ಸ್ಪಷ್ಟವಾಗಿದೆ–ಅಲ್ಲಿ ಎಂದೂ ಜೀವಿಗಳಿದ್ದಿರಲಾರವು; ಜೀವವಿಕಾಸಕ್ಕೆ ಚಂದ್ರ ಖಂಡಿತವಾಗಿಯೂ ಪ್ರತಿಕೂಲ ಪರಿಸರ. ರಚನೆ, ವಯಸ್ಸು ಈ ದೃಷ್ಟಿಯಿಂದ ಭೂಮಿ ಹಾಗೂ ಚಂದ್ರರಲ್ಲಿ ಸಾಮ್ಯ ಕಂಡುಬಂದರೂ ಇತರ ವಿವರಗಳ ಪರಿಶೀಲನೆಯಿಂದ ಇವುಗಳಲ್ಲಿರುವ ಭಿನ್ನತೆ ಮತ್ತು ಅಸಮತೆಗಳು ಜಾಸ್ತಿ ಎಂದು ತಿಳಿದಿದೆ. ಚಂದ್ರಗರ್ಭದಲ್ಲಿ ಯಾವ ತರಹದ ಕಂಪನವನ್ನೂ ಪತ್ತೆ ಹಚ್ಚಲಾಗಿಲ್ಲ. ಚಂದ್ರನ ತೊಗಟೆಯ ಮೇಲಿರುವ ರಾಸಾಯನಿಕ ಸಂಯುಕ್ತಗಳೂ ಖನಿಜಗಳೂ ಭೂಮಿಯ ಮೇಲಿನವುಗಳಿಂತ ಗಮನಾರ್ಹವಾಗಿ ಬೇರೆಯಾಗಿವೆ. ಅದೊಂದು ಕಿಟ್ಟ; ಅಧಿಕ ಉಷ್ಣತೆಯಲ್ಲಿ ತಯಾರಾದ, ನೀರು ಇದ್ದಿದ್ದರೆ ಅಂದೇ ಕಳೆದುಕೊಂಡ, ಬರಡು ಆಕಾಶಕಾಯ ಎಂದು ವಿಜ್ಞಾನಿಗಳ ತೀರ್ಮಾನ.

**ಚಿತ್ರ 9 (ಬಿ). ಅರಿಸ್ಟಾರ್ಕಸ್ ಪೀಠಭೂಮಿಯಿಂದ ಪೂರ್ವಕ್ಕೆ ಇರುವ ಕಣಿವೆಗಳು (ಎದ್ದು ಕಾಣುತ್ತಿರುವ ವಕ್ರಗಳು)**

14. ಚಂದ್ರನ ಮೇಲ್ಮೈಯಲ್ಲಿನ ರಾಸಾಯನಿಕಗಳು: ಚಂದ್ರನ ಮೇಲೆ 1966 ರಿಂದ ಈಚೆಗೆ ರಷ್ಯ ದೇಶದ ಲ್ಯೂನಾ ಸರಣಿಯ ಅಮೆರಿಕ ದೇಶದ ಸರ್ವೆಯರ್ ಸರಣಿಯ ರೋಬೋಟ್ ನೌಕೆಗಳು ಮತ್ತು ಅಪೋಲೋ ಸರಣಿಯ ಮಾನವ ಸಹಿತ ನೌಕೆಗಳು

ವಿವಿಧ ಪ್ರದೇಶಗಳಲ್ಲಿ ನಿಧಾನವಾಗಿ ಇಳಿದವು. ಲೂನಾ ನೌಕೆಗಳಲ್ಲಿ ಮತ್ತು ಅವುಗಳಲ್ಲಿ ಚಂದ್ರನ ಮೇಲೆ ಇಳಿಸಿದ ಎರಡು ಲೊನಖೋಡ್–1 ಮತ್ತು ಎರಡು ಸ್ವಯಂಚಾಲಿತ ವಾಹನಗಳಲ್ಲಿ ಮತ್ತು ಸರ್ವೇಯರ್ ನೌಕೆಗಳಲ್ಲಿ ಅಳವಡಿಸಿದ್ದ ಸೂಕ್ಷ್ಮ ಉಪಕರಣಗಳ ನೆರವಿನಿಂದ ಚಂದ್ರನ ಮೇಲ್ಮೈಯಲ್ಲೇ ಕೆಲವು ಪ್ರಯೋಗಗಳನ್ನು ಸ್ವಯಂಚಾಲಿತವಾಗಿ ನಡೆಸಿ ದತ್ತಾಂಶಗಳನ್ನು ಸಂಗ್ರಹಿಸಲಾಯಿತು. ವಿಶ್ಲೇಷಣೆಗೆ ಆಯ್ದುಕೊಂಡ ವಸ್ತುವಿನ ಮೇಲೆ ಆಲ್ಫಾ ಕಣಗಳನ್ನು (ಹಿಲಿಯಮ್ ಪರಮಾಣುಗಳ ತಿರುಳುಗಳು) ತಾಡಿಸಲಾಯಿತು. ಈ ಆಲ್ಫಾ ಕಣಗಳು ಚಂದ್ರವಸ್ತುವಿನ ಪರಮಾಣುವಿನ ತಿರುಳುಗಳೊಡನೆ ಅಂತರಕ್ರಿಯೆ ಎಸಗಿ ಹಲವಾರು ಪ್ರೋಟಾನುಗಳೂ ಇತರ ಆಲ್ಫಾ ಕಣಗಳೂ ಹೊರಹೊಮ್ಮುವಂತೆ ಮಾಡಿದುವು. ಹಾಗೆ ಚಿಮ್ಮಲ್ಪಟ್ಟ ಪ್ರೋಟಾನುಗಳ ಹಾಗೂ ಆಲ್ಫಾ ಕಣಗಳ ಶಕ್ತಿವಿತರಣೆ

ಚಿತ್ರ 9 (ಸಿ). ಹಾವು ಇಲ್ಲವೆ ಹೊಳೆ ಹರಿದಂತೆ ಕಾಣುವ ಒಂದು ಕಣಿವೆ

ತಾಡಿತ ವಸ್ತುವನ್ನು ನಿರ್ಮಿಸಿರುವ ಪರಮಾಣುಗಳ ಬಗೆಗಳನ್ನು ಅವಲಂಬಿಸಿತ್ತು. ಆದ್ದರಿಂದ ತಾಡನಾನಂತರ ಲಭಿಸಿದ ಶಕ್ತಿ ವಿತರಣೆಯನ್ನು ಸೂಕ್ಷ್ಮವಾಗಿ ಅಳೆದು ದೊರೆತ ಮಾಹಿತಿಗಳನ್ನು ಭೂಮಿಗೆ ಬಿತ್ತರಿಸಲಾಯಿತು. ಇವನ್ನು ಆಧರಿಸಿ ವಿಜ್ಞಾನಿಗಳು ಚಂದ್ರತಲದಲ್ಲಿನ ಶಿಲೆಗಳ ಹಾಗೂ ಕಣಗಳ ವಿಶ್ಲೇಷಣೆಯನ್ನು ಮಾಡಿದರು. ಮೊದಲಿಗೆ ಚಂದ್ರನ ಮೇಲ್ಮೈಯ ಬೇರೆ ಬೇರೆ ಭಾಗಗಳಿಂದ ಆಯ್ದು ತಂದ ಶಿಲೆಯ ಮಾದರಿಗಳಿಂದ ದೊರೆತ ಫಲಿತಾಂಶಗಳೂ ಕೆಲಮಟ್ಟಿಗೆ ಒಂದೇ ಆಗಿದ್ದುದು ಕಂಡುಬಂದಿತು. ಅವುಗಳಲ್ಲಿ ಚಂದ್ರನ ಸಾಗರ ಸಮುದ್ರ ಪ್ರದೇಶಗಳಲ್ಲಿ ದೊರೆತ ಬಸಾಲ್ಟ್ ಶಿಲೆಗಳಲ್ಲಿ ಕಬ್ಬಿಣ, ಮ್ಯಾಂಗನೀಸ್ ಹಾಗೂ ಟೈಟೇನಿಯಂ ನಂತರ 'ಭಾರವಾದ' ಧಾತುಗಳು ಹೆಚ್ಚಾಗಿ ಕಂಡುಬಂದರೆ ಅನೋರ್ಥೋಸೈಟ್‌ಗಳಲ್ಲಿ ಅಲ್ಯೂಮಿನಿಯಂ ಹಾಗೂ ಕ್ಯಾಲ್ಸಿಯಂನಂತಹ ಧಾತುಗಳು ಹೆಚ್ಚಿನ ಪ್ರಮಾಣದಲ್ಲಿವೆ. ಇವು ಒಂದೊಂದೂ ರಾಸಾಯನಿಕ ರಚನೆಯ ರೀತ್ಯಾ ಚಂದ್ರನ ಈ ಶಿಲೆಗಳು ಭೂಮಿಯಲ್ಲಿ ದೊರೆಯುವ ಬಸಾಲ್ಟ್ ಹಾಗೂ ಅನೋರ್ಥೋಸೈಟ್ ಶಿಲೆಗಳನ್ನು ಹೋಲುತ್ತವೆ. ಆದ್ದರಿಂದ ಚಂದ್ರ ಮತ್ತು ಭೂಮಿಗಳ ಕೆಲವು ವಸ್ತುಗಳಿಗಾದರೂ ಒಂದೇ ರಾಸಾಯನಿಕ ಇತಿಹಾಸವಿತ್ತೆಂದು ವೇದ್ಯವಾಯಿತು.

ಚಿತ್ರ 10. ಚಂದ್ರನಿಂದ ತಂದ ಸ್ಮಾರಕ ಶಿಲೆ

15 ಚಂದ್ರನ ಅದೃಶ್ಯಭಾಗ : ಭೂಮಿಯಿಂದ ನೋಡುವ ವೀಕ್ಷಕನಿಗೆ ಚಂದ್ರನ ಒಂದು ಭಾಗ ಮಾತ್ರ ಸದಾ ಕಾಣುತ್ತಿರುತ್ತದೆ. ಇನ್ನೊಂದು ಭಾಗ, ಎಂದರೆ ಹಿಂಭಾಗ, ಸದಾ ಅದೃಶ್ಯವಾಗಿಯೇ ಇರುವುದು. 1959ರ ಅಕ್ಟೋಬರ್ 4ರಂದು ರಷ್ಯ ದೇಶದ ಆಕಾಶನೌಕೆ ಲೂನಿಕ್ 3 ಚಂದ್ರನ ಅದೃಶ್ಯಭಾಗದೆಡೆಗೆ ಸಾಗಿ ಭೂಮಿಗೆ ಅಲ್ಲಿನ ಚಿತ್ರಗಳನ್ನು ಬಿತ್ತರಿಸಿತು. ಇವೇ ನಮಗೆ ದೊರೆತ ಪ್ರಥಮ ಚಿತ್ರಗಳು. ಆ ಬಳಿಕ ಸಾಕಷ್ಟು ಸವಿವರ ಚಿತ್ರಗಳನ್ನು ಲೂನಾರ್ ಆರ್ಬಿಟರ್ ಲೂನಾ ಕ್ಲಮಂಟೈನ್, ಲೂನಾರ್ ಪ್ರಾಸ್‌ಪೆಕ್ಟರ್, ಇಂತಹ ರೋಬೋಟ್ ನೌಕೆಗಳ ಹಾಗೂ ಅಪೋಲೋ ಮಾನವಸಹಿತ ನೌಕೆಗಳ ನೆರವಿನೊಡನೆ ಸಂಗ್ರಹಿಸಲಾಗಿದೆ. ಅದೃಶ್ಯಭಾಗದಲ್ಲಿ 'ಸಮುದ್ರ'ಗಳ ಸಂಖ್ಯೆ ಗಮನಾರ್ಹವಾಗಿ ಕಡಿಮೆ ಇರುವ ಒಂದು ವ್ಯತ್ಯಾಸವನ್ನು ಬಿಟ್ಟರೆ ಚಂದ್ರನ ಎರಡೂ ಅರ್ಧಗಳಲ್ಲಿ ಸಾಕಷ್ಟು ಸಾದೃಶ್ಯ ಉಂಟು.

III ಚಲನೆಗಳು : 1 ಆವರ್ತನೆ ಭ್ರಮಣೆ ; ಸಾಮಾನ್ಯವಾಗಿ ಎಲ್ಲ ಆಕಾಶಕಾಯಗಳಿಗೂ ಇರುವಂತೆ ಚಂದ್ರನಿಗೆ ಕೂಡ ಎರಡು ಪ್ರಧಾನ ಚಲನಗಳಿವೆ–ಸ್ವಂತಾಕ್ಷದ ಸುತ್ತ ಆವರ್ತನೆ, ಭೂಮಿಯ ಸುತ್ತ ಭ್ರಮಣೆ. ಇವೆರಡರ ಅವಧಿಗಳೂ ಸಮವಾಗಿವೆ, ಎಂದರೆ, ಚಂದ್ರನ ನಾಕ್ಷತ್ರಿಕ ಪರಿಭ್ರಮಣೆಯ ಅವಧಿ (ಸೈಡೀರಿಯಲ್ ರಿವೊಲ್ಯೂಷನ್–ಸ್ಥಿರ ನಕ್ಷತ್ರಗಳನ್ನು ಕುರಿತಂತೆ ಭೂಮಿಯನ್ನು ಒಂದು ಸಲ ಸುತ್ತುಹಾಕಲು ಚಂದ್ರನಿಗೆ ಬೇಕಾಗಿರುವ ಕಾಲಾವಧಿ) ಚಂದ್ರನ ನಾಕ್ಷತ್ರಿಕ ಆವರ್ತನೆಯ ಅವಧಿಗೆ (ಸೈಡೀರಿಯಲ್ ರೋಟೇಷನ್) ಸಮವಾಗಿದೆ. ಇದು 27.32 ದಿವಸಗಳು ಅಥವಾ 27 ದಿ. 7 ಗಂ. 43 ನಿ. 11.5 ಸೆ. ಆದರೆ ಇದೇ ಅವಧಿಯಲ್ಲಿ ಭೂಮಿ–ಚಂದ್ರ ವ್ಯವಸ್ಥೆ ಸೂರ್ಯನ ಸುತ್ತ ಸುಮಾರು 27/365 (ಎಂದರೆ ಸುಮಾರು 1/13ರಷ್ಟು ಅಥವಾ ಸುಮಾರು $27^0$ ದೂರವನ್ನು ಗಮಿಸಿರುತ್ತದೆ. ಆದ್ದರಿಂದ ಚಂದ್ರನ ಒಂದು ನಾಕ್ಷತ್ರಿಕ ಪರಿಭ್ರಮಣೆಯ ಅವಧಿಯಲ್ಲಿ ಸೂರ್ಯ ಸ್ಥಿರನಕ್ಷತ್ರಗಳ ಹಿನ್ನೆಲೆಯಲ್ಲಿ ಸುಮಾರು $27^0$ಯಷ್ಟು ಪಶ್ಚಿಮ–ಪೂರ್ವದಿಶೆಯಲ್ಲಿ ಚಲಿಸಿರುವಂತೆ ಭೂಮಿಯಲ್ಲಿರುವ ವೀಕ್ಷಕನಿಗೆ ಭಾಸವಾಗುತ್ತದೆ. ಚಂದ್ರನ ಪರಿಭ್ರಮಣ ದಿಶೆಯೂ ಪಶ್ಚಿಮ–ಪೂರ್ವ. ಹೀಗಾಗಿ ಸೂರ್ಯನನ್ನು ಕುರಿತಂತೆ ಚಂದ್ರ ಒಂದು ಪರಿಭ್ರಮಣೆಯನ್ನು ಭೂಮಿಯ ಸುತ್ತ ಮುಗಿಸಲು ನಾಕ್ಷತ್ರಿಕ





ಚಿತ್ರ 11 (ಎ). ಭೂಮಿಯ (ಕೇಂದ್ರ ವೃತ್ತ) ಸುತ್ತ ಚಂದ್ರನ ಚಲನೆ

ಪರಿಭ್ರಮಣಾವಧಿಗಿಂತ ಸ್ವಲ್ಪ ಹೆಚ್ಚು ಕಾಲಾವಕಾಶ ಬೇಕಾಗುವುದು. ಈ ಅವಕಾಶಕ್ಕೆ ಸಂಯುತಿ ಅವಧಿ(ಸಿನಾಡಿಕ್ ಪೀರಿಯಡ್) ಎಂದು ಹೆಸರು. ಇದೇ ಅವಧಿಯಲ್ಲಿ ಚಂದ್ರನ ಕಲೆಗಳಲ್ಲಿ (ಫೇಸಸ್) ಒಂದು ಪೂರ್ಣಾಂದೋಳನ ಮುಗಿಯುವುದರಿಂದ




**ಚಿತ್ರ 11 (ಬಿ). ಭೂಮಿಯ ಸುತ್ತ ಚಂದ್ರನ ಹಾಗೂ ಸೂರ್ಯನ ಸುತ್ತ ಭೂಮಿಯ ಪರಿಭ್ರಮಣೆಗಳ ಸಂಯುಕ್ತಚಿತ್ರ. A–ಅಮಾವಾಸ್ಯೆ, B–ಅರ್ಧಚಂದ್ರ, C–ಹುಣ್ಣಿಮೆ, D–ಅರ್ಧಚಂದ್ರ, A–ಅಮಾವಾಸ್ಯೆ. (ಚಿತ್ರದ ಮೇಲುಭಾಗದಲ್ಲಿ ಸೂರ್ಯ ಇದೆಯೆಂದು ಭಾವಿಸಿಕೊಳ್ಳಬೇಕು. ಅವಧಾರಣೆಗೋಸ್ಕರ ಚಿತ್ರವನ್ನು ಅತಿಯಾಗಿ ಲಂಬಿಸಿದೆ)**




**ಚಿತ್ರ 11 (ಸಿ). ಭೂಮಿ–ಚಂದ್ರರ ವಾಸ್ತವಿಕ ಕಕ್ಷೆಗಳು**

ಇದಕ್ಕೆ ಚಾಂದ್ರಮಾಸ ಅಥವಾ ತಿಂಗಳು (ಲ್ಯೂನೇಷನ್) ಎಂಬ ಹೆಸರು ಕೂಡ ಉಂಟು. ಚಾಂದ್ರಮಾಸದ ಅವಧಿ 29.53 ದಿವಸಗಳು ಅಥವಾ 29 ದಿ. 12 ಗಂ. 44 ನಿ. 2.8 ಸೆ. ಸಾಮಾನ್ಯ ವೀಕ್ಷಕರಿಗೆ ಚಾಂದ್ರಮಾಸವೇ ಪ್ರಕಟಿತವಾಗಿ (ಕಲೆಗಳ ಪೂರ್ಣಾಂದೋಳನದ ಪರಿಣಾಮ) ಕಾಣುವುದರಿಂದ ರೂಢಿಯಲ್ಲಿ ಅದಕ್ಕೇ ಹೆಚ್ಚಿನ ಪ್ರಾಧಾನ್ಯ ಲಭಿಸಿದೆ.

**2. ದೋಲನಗಳು :** ಚಂದ್ರನ ಆವರ್ತನಾವಧಿಯೂ ಪರಿಭ್ರಮಣಾವಧಿಯೂ ಸಮವಾಗಿರುವುದರಿಂದ ಭೂಮಿಯಲ್ಲಿ ನಿಂತಿರುವ ವೀಕ್ಷಕನಿಗೆ ಚಂದ್ರನ ಒಂದು ಪಾರ್ಶ್ವ ಮಾತ್ರ ಕಾಣುತ್ತದೆ, ಉಳಿದ ಪಾರ್ಶ್ವ ಸದಾ ಅದೃಶ್ಯವಾಗಿರುತ್ತದೆ. ಈ ವೈಚಿತ್ರ್ಯದ ಗಣಿತ ಅರ್ಥವಾಗಲು ಒಂದು ಸುಲಭ ಪ್ರಯೋಗ ಮಾಡಿನೋಡಬಹುದು. ಹಜಾರದ ನಡುವೆ ಒಂದು ಅಗ್ಗಿಷ್ಟಿಕೆ ಇರಲಿ (O) (ಚಿತ್ರ 12). ಅದರ ಸುತ್ತ ತುಸು ದೂರದಲ್ಲಿ ಒಂದು ವೃತ್ತ ಪರಿಧಿಯ ಮೇಲೆ (S) ಒಬ್ಬ ವ್ಯಕ್ತಿ ಸದಾ ಅಗ್ಗಿಷ್ಟಿಕೆ ಕಡೆಗೆ ಮುಖಮಾಡಿಕೊಂಡಿರುವಂತೆ ಚಲಿಸಲಿ. ಉದಾಹರಣೆಗೆ Aಯಲ್ಲಿ ಆತನ ಮುಖ ಉತ್ತರಕ್ಕಿದೆ; ಹಾಗೆ ಬಂದಾಗ ಅದು ಪಶ್ಚಿಮಕ್ಕಿರುವುದು; Cಗೆ ಬಂದಾಗ ಅದು ದಕ್ಷಿಣಕ್ಕಿರುವುದು; ಹಾಗೆ Bಗೆ ಬಂದಾಗ ಅದು ಪೂರ್ವಕ್ಕಿರುವುದು. ಕೊನೆಗೆ Dಗೆ ಬಂದಾಗ ಪುನಃ ಉತ್ತರಾಭಿಮುಖಿಯಾಗಿರುವುದು. ಅಲ್ಲಿಗೆ ಆ ವ್ಯಕ್ತಿ Sನ ಮೇಲೆ ಒಂದು ಸುತ್ತನ್ನು ಮುಗಿಸುವ ಅವಧಿಯಲ್ಲಿ ತನ್ನ ಸುತ್ತ ಕೂಡ ಒಂದು ಸುತ್ತನ್ನು ಮುಗಿಸಿರುತ್ತಾನೆ ಎಂದಾಯಿತು. ಈಗ O ಭೂಮಿ ಮತ್ತು ವ್ಯಕ್ತಿ ಚಂದ್ರ ಎಂದು ಭಾವಿಸಿದರೆ O ನಿಂದ ನೋಡುವ ವೀಕ್ಷಕನಿಗೆ ಚಂದ್ರನ ಬೆನ್ನುಭಾಗ ಎಂದೂ ಕಾಣುವುದಿಲ್ಲ. ವಾಸ್ತಾವಿಕವಾಗಿ ಚಂದ್ರನ ಚಲನೆ ಬಲು ಜಟಿಲವಾಗಿದೆ. ಹಲವಾರು ಆಂದೋಲನಗಳಿಂದ ಕೂಡಿದೆ. ಇವುಗಳ ಪರಿಣಾಮವಾಗಿ, ಯಾವುದೇ ಒಂದು ಕ್ಷಣದಲ್ಲಿ ಭೂವೀಕ್ಷಕನಿಗೆ ಚಂದ್ರನ ಅರ್ಧಭಾಗ ಮಾತ್ರ ಕಾಣಿಸುವುದು ನಿಜವಾದರೂ ಒಂದು ವರ್ಷದ ಅವಧಿಯಲ್ಲಿ ಚಂದ್ರನ ಅದೃಶ್ಯಭಾಗದ ಒಂದಿಷ್ಟು ಅಂಶವೂ ಕಂಡಿರುತ್ತದೆ. ಈ ವಿದ್ಯಮಾನಕ್ಕೆ, ಎಂದರೆ ಭೂಮಿ–ಚಂದ್ರ ವ್ಯವಸ್ಥೆಯ ಚಲನೆಯ ಪರಿಣಾಮವಾಗಿ ಚಂದ್ರನ ಅದೃಶ್ಯಭಾಗದ ಒಂದಿಷ್ಟು ಅಂಶವನ್ನು ಕಾಣಲಾಗುವ ವಿದ್ಯಮಾನಕ್ಕೆ, ಚಂದ್ರನ ದೋಲನಗಳು (ಲೈಬ್ರೇಷನ್ಸ್) ಎಂದು ಹೆಸರು. ದೋಲನಗಳನ್ನು ಜ್ಯಾಮಿತೀಯ ಮತ್ತು ಭೌತದೋಲನಗಳೆಂದು ವರ್ಗೀಕರಿಸ ಲಾಗಿದೆ. ಜ್ಯಾಮಿತೀಯ ದೋಲನಗಳಲ್ಲಿ ಮೂರು ಬಗೆಗಳುಂಟು : ರೇಖಾಂಶ ದೋಲನ, ಅಕ್ಷಾಂಶ ದೋಲನ, ದೈನಂದಿನ ದೋಲನ.




**ಚಿತ್ರ 12**

(i) ರೇಖಾಂಶ ದೋಲನ (ಲೈಬ್ರೇಷನ್ ಇನ್ ಲಾಂಜಿಟ್ಯೂಡ್) : ಚಂದ್ರನ ಆವರ್ತನ ದರ ಏಕರೀತಿ ಇದೆ. ಆದರೆ ಕಕ್ಷೆಯ ಮೇಲೆ ಸಂಚರಿಸುವಾಗ ಚಂದ್ರನ ಕೋನವೇಗ (ಎಂದರೆ ಪರಿಭ್ರಮಣವೇಗ) ಬದಲಾಗುತ್ತಲೇ ಇರುವುದು. ಹೀಗಾಗಿ ಇವೆರಡು ಚಲನೆಗಳ ಸರಾಸರಿ ದರ ಒಂದೇ ಆಗಿದ್ದರೂ ಒಂದು ಇನ್ನೊಂದರೊಡನೆ ಹೊಂದಿಕೊಳ್ಳದೇ ಲಯ ತಪ್ಪುತ್ತದೆ. ತತ್ಪರಿಣಾಮವಾಗಿ ಭೂವೀಕ್ಷಕರಿಗೆ ಮೊದಲು ಚಂದ್ರನ ಒಂದಿಷ್ಟು ಪಶ್ಚಿಮ (ಅದೃಶ್ಯ) ಪಾರ್ಶ್ವವೂ, ಬಳಿಕ ಒಂದಿಷ್ಟು ಪೂರ್ಣ (ಅದೃಶ್ಯ) ಪಾರ್ಶ್ವವೂ




**ಚಿತ್ರ 13 (ಎ). ಚಂದ್ರನ ದೈನಂದಿನ ದೋಲನ. *A*ಯಲ್ಲಿರುವ ವೀಕ್ಷಕನಿಗೆ ಹುಣ್ಣಿಮೆ ರಾತ್ರಿ ಆರಂಭವಾಗುತ್ತಿರುವಾಗ ಚಂದ್ರನ *ab* ಚಾಪಾವೃತ ಪ್ರದೇಶ ಕಾಣುತ್ತದೆ. *B*ಯಲ್ಲಿರುವ ವೀಕ್ಷಕನಿಗೆ ಹುಣ್ಣಿಮೆರಾತ್ರಿ ಮುಗಿಯುತ್ತಿರುವಾಗ ಚಂದ್ರನ *cd* ಚಾಪಾವೃತ ಪ್ರದೇಶ ಕಾಣುತ್ತದೆ. ಆದ್ದರಿಂದ *ac* ಹಾಗೂ *bd* ಪೂರಕವಲಯಗಳು ನಮಗೆ ಕಾಣುವುದು ದೈನಂದಿನ ದೋಲನದ ಪರಿಣಾಮವಾಗಿ**




**ಚಿತ್ರ 13 (ಬಿ). ಚಂದ್ರನ ರೇಖಾಂಶದೋಲನ. ನಡುವಿನಲ್ಲಿರುವ ಕರಿಬೊಟ್ಟು ಭೂಮಿ: ಅದರ ಮೇಲಿರುವ ವೀಕ್ಷಕನ ನೇರಿದಿರುಬಿಂದು *a* ಮತ್ತು ಮೊದಲನೆಯ ಪಾದದಲ್ಲಿರುವ (1) ಚಂದ್ರನ ಕೇಂದ್ರ *c* ಎರಡೂ ಐಕ್ಯವಾಗುತ್ತವೆ: ಚಂದ್ರ 90°ಯಷ್ಟು ಚಾಪವನ್ನು ಕ್ರಮಿಸಿ (2)ಕ್ಕೆ ಬಂದಾಗ (ಹುಣ್ಣಿಮೆ) *a* ಮತ್ತು *c* ಬಿಂದುಗಳು ಬೇರೆ ಬೇರೆಯಾಗುತ್ತವೆ. ಈಗ ವೀಕ್ಷಕ *AB*ಯಷ್ಟು ಮೇಲ್ಮೈಯನ್ನು ಕಾಣಬಹುದು. ನಾಲ್ಕನೆಯ ಪಾದದಲ್ಲಿ (3) *a* ಮತ್ತು *c* ಬಿಂದುಗಳು ಪುನಃ ಐಕ್ಯವಾಗುತ್ತವೆ.**




**ಚಿತ್ರ 13 (ಸಿ). ಚಂದ್ರನ ಅಕ್ಷಾಂಶದೋಲನ. ಚಂದ್ರನ ಉತ್ತರ–ದಕ್ಷಿಣ ಅಕ್ಷ ಕಕ್ಷಾತಲಕ್ಕೆ ಲಂಬವಾಗಿಲ್ಲ. ಈ ತಲ ಭೂಕಕ್ಷಾತಲಕ್ಕೆ (*B*) 5° 8' 40"ಯಷ್ಟು ಬಾಗಿಕೊಂಡಿದೆ. ಚಂದ್ರ ಕೆಲವು ಸಲ *B*ಯ ಮೇಲೆ ಕೆಲವು ಸಲ *B*ಯ ಕೆಳಗೆ ಇರುವುದರಿಂದ ನಮಗೆ ಚಂದ್ರನ *aS* ಹಾಗೂ *Nb* ಖಂಡಗಳನ್ನು ನೋಡುವುದು ಸಾಧ್ಯವಾಗುತ್ತದೆ**

ಗೋಚರಿಸುತ್ತವೆ. ಒಂದೊಂದು ಪಾರ್ಶ್ವದಲ್ಲೂ ಸುಮಾರು 8°ಗಳಷ್ಟು ಹೆಚ್ಚಿನ ಅಂಶವನ್ನು ಈ ಪ್ರಕಾರ ಕಾಣುತ್ತೇವೆ.

(ii) ಅಕ್ಷಾಂಶ ದೋಲನ (ಲೈಬ್ರೇಷನ್ ಇನ್ ಲ್ಯಾಟಿಟ್ಯೂಡ್ : ಚಂದ್ರನ ಆವರ್ತನಾಕ್ಷ ಚಂದ್ರಕಕ್ಷೆಯ ಸಮತಲಕ್ಕೆ ಲಂಬವಾಗಿಲ್ಲ. ಬದಲು ಸುಮಾರು $6.50^0$ಗಳಷ್ಟು ವಾಲಿಕೊಂಡಿದೆ. ಚಂದ್ರನ ಅಕ್ಷವಿನ್ಯಾಸ, ಭೂಮಿಯ ಅಕ್ಷ ವಿನ್ಯಾಸದಂತೆ ಸದಾಕಾಲ ಸ್ಥಿರವಾಗಿರುವುದು. ತತ್ಪರಿಣಾಮವಾಗಿ ಭೂವೀಕ್ಷಕನಿಗೆ ಚಂದ್ರನ ಉತ್ತರ ಮೇರುವಿನಿಂದ ಆಚೆಗೆ ಅದೃಶ್ಯ ಪಾರ್ಶ್ವದ $6.5^0$ಯಷ್ಟು ಒಮ್ಮೆ ಗೋಚರಿಸಿದರೆ ಎರಡು ವಾರಗಳ ತರುವಾಯ ದಕ್ಷಿಣ ಮೇರುವಿನಿಂದ ಆಚೆಗೆ ಅದೃಶ್ಯ ಪಾರ್ಶ್ವದ $6.5^0$ ಯಷ್ಟು ಗೋಚರಿಸುವುದು.

(iii) ದೈನಂದಿನ ದೋಲನ (ಡೈಯರ್ನಲ್ ಲೈಬ್ರೇಷನ್) : ಭೂಮಿಯ ಆವರ್ತನೆ ಹಾಗೂ ಪ್ರರಿಭ್ರಮಣೆಗಳ ಸಂಯುಕ್ತ ಪರಿಣಾಮವಾಗಿ ಚಂದ್ರನ ಪೂರ್ವ ಹಾಗೂ ಪಶ್ಚಿಮ ಅಂಚುಗಳಿಂದ ಆಚೆಗೆ $1^0$ ಯಷ್ಟು ಅದೃಶ್ಯ ಪಾರ್ಶ್ವ ಗೋಚರಿಸುತ್ತದೆ.

ಜ್ಯಾಮಿತೀಯ ದೋಲನಗಳ ಸಂಯುಕ್ತ ಫಲವಾಗಿ ಚಂದ್ರನ ಭಾಗ ಭೂವೀಕ್ಷಕನಿಗೆ ಸದಾ ಗೋಚರಿಸುತ್ತದೆ: ಶೇ.41 ಅಂಶ ಎಂದೂ ಗೋಚರಿಸುವುದಿಲ್ಲ. ಶೇ.18 ಅಂಶ ಪರ್ಯಾಯವಾಗಿ ಗೋಚರ ಅಗೋಚರವಾಗುತ್ತಿರುವುದು.

ಭೌತ ದೋಲನ (ಫಿಸಿಕಲ್ ಲೈಬ್ರೇಷನ್): ಚಂದ್ರನ ಆಕಾರ ಪರಿಪೂರ್ಣಗೋಳವಲ್ಲ; ಪರಸ್ಪರ ಲಂಬವಾಗಿರುವ ಮೂರು ಅಕ್ಷಗಳಿಂದ ಕೂಡಿದ ದೀರ್ಘವೃತ್ತ ಕಲ್ಪವಿದು (ಟ್ರೈ ಆಕ್ಸಿಯಲ್ ಎಲಿಪ್ಸಾಯಿಡ್). ಹೀಗಾಗಿ ಚಂದ್ರನ ಭೌತಸನ್ನಿವೇಶಗಳನ್ನು ನಾವು ವೀಕ್ಷಿಸುವಾಗ ಸ್ವಲ್ಪ ಏರಿಳಿತಗಳು ತೋರುವುವು. ಇದೇ ಭೌತ ದೋಲನಗಳು.

3 ಕಕ್ಷೆ : ಚಂದ್ರ ಭೂಮಿಯ ಸುತ್ತ ಸಂಚರಿಸುವ ಕಕ್ಷೆಯ ಆಕಾರ ದೀರ್ಘವೃತ್ತ. ಇದರ ಒಂದು ನಾಭಿಯಲ್ಲಿ ಭೂಮಿಯಲ್ಲಿ ಉಂಟು. ಈ ಚಲನೆ ಕೆಪ್ಲರನ ನಿಯಮಗಳ (ನೋಡಿ) ಅನುಸಾರ ಇದೆ. ಕಕ್ಷೆಯ ಸರಾಸರಿ ಉತ್ಕೇಂದ್ರತೆ 0.0549 ಭೂಮಿಯ ನೀಚ



ಚಿತ್ರ 14. ಭೂಮಿಯ ಸುತ್ತ ಚಂದ್ರನ ಕಕ್ಷೆ

ಬಿಂದುವಿನಲ್ಲಿ (ಪೆರಿಜೀ–ಎಂದರೆ ಚಂದ್ರ ತನ್ನ ಕಕ್ಷೆಯಲ್ಲಿ ಭೂಮಿಗೆ ಅತಿ ಸಮೀಪವಾಗಿರುವ ಬಿಂದು) ಭೂಮಿ–ಚಂದ್ರರ ದೂರ ಸುಮಾರು 356,400 ಕಿಮೀ; ಮತ್ತು ಭೂಮ್ಯುಚ್ಚ ಬಿಂದುವಿನಲ್ಲಿ (ಅಪೋಜೀ–ಎಂದರೆ ಚಂದ್ರ ತನ್ನ ಕಕ್ಷೆಯಲ್ಲಿ ಭೂಮಿಗೆ ಅತಿ ದೂರವಾಗಿರುವ ಬಿಂದು) ಭೂಮಿ–ಚಂದ್ರನ ದೂರ ಸುಮಾರು 406,686 ಕಿಮೀ.




ಚಿತ್ರ 15. *E*–ಭೂಮಿ, *M*–ಚಂದ್ರ, *P*–ಭೂಮಿನೀಚ ಬಿಂದು, *M*–ಭೂಮ್ಯುಚ್ಚಬಿಂದು

ನೀಚಬಿಂದುವಿನಲ್ಲಿ ಕಕ್ಷಾವೇಗ ಗರಿಷ್ಠ ಉಚ್ಚಬಿಂದುವಿನಲ್ಲಿ ಅದು ಕನಿಷ್ಠ. ಕಕ್ಷಾವೇಗದ ಸರಾಸರಿ 1021 ಮೀ./ಸೆ. ಚಂದ್ರನ ಕಕ್ಷಾತಲ ಕ್ರಾಂತಿ ವೃತ್ತ ತಲಕ್ಕೆ (ನೋಡಿ– ಕ್ರಾಂತಿ–ವೃತ್ತ) ಸುಮಾರು $5^0 8'$ಗಳಷ್ಟು ವಾಲಿಕೊಂಡಿದೆ. ಇವೆರಡೂ ವೃತ್ತಗಳು N, N'ಎಂಬ ಎರಡು ಬಿಂದುಗಳಲ್ಲಿ ಛೇದಿಸುತ್ತವೆ. ಇವುಗಳಿಗೆ ಪಾತ ಬಿಂದುಗಳು ಅಥವಾ ಸರಳವಾಗಿ ಪಾತಗಳು (ನೋಡ್ಸ್) ಎಂದು ಹೆಸರು (**ನೋಡಿ– ಗ್ರಹಣ,–ಖಗೋಳೀಯ**) ಬಹು ಪ್ರಬಲ ಗುರುತ್ವಾಕರ್ಷಣ ಕೇಂದ್ರವಾದ ಸೂರ್ಯ ಸಹಜವಾಗಿಯೇ ಚಂದ್ರನನ್ನು ಕ್ರಾಂತಿವೃತ್ತ ತಲಕ್ಕೆ ಸೀಮಿತಗೊಳಿಸಲು ಸೆಳೆಯುತ್ತಿರುತ್ತದೆ. ಆದರೆ ಚಂದ್ರನ ನಿರಂತರ ಚಲನೆಯ ಪರಿಣಾಮವಾಗಿ ಇದು ಸಾಧ್ಯವಾಗುವುದಿಲ್ಲ. ಬದಲು ಪಾತಗಳು ಚಂದ್ರಚಲನೆಯ ವಿರುದ್ಧ ದಿಶೆಯಲ್ಲಿ (ಎಂದರೆ ಪೂರ್ವ–ಪಶ್ಚಿಮ ದಿಶೆಯಲ್ಲಿ) ಕ್ರಾಂತಿವೃತ್ತದ ಮೇಲೆ ಕ್ರಮೇಣ ಜರುಗುತ್ತವೆ (ಭೂಕಕ್ಷೆ ವಿಷುವದ್ವೃತ್ತವನ್ನು ಛೇದಿಸುವ $\gamma, \Omega$ ಎಂಬ ಎರಡು ವಿಷುವದ್ಬಿಂದುಗಳು ಕ್ರಾಂತಿವೃತ್ತದ ಮೇಲೆ ಪೂರ್ವ–ಪಶ್ಚಿಮ ದಿಶೆಯಲ್ಲಿ ಚಲಿಸುವ ಅಯನಾಂಶ (**ನೋಡಿ**) ಎಂಬ ವಿದ್ಯಮಾನಕ್ಕೆ ಸಂವಾದಿಯಾದ ವಿದ್ಯಮಾನವಿದು).




ಚಿತ್ರ 16. *CNLC*–ಕ್ರಾಂತಿವೃತ್ತ, *ANBN'* ಚಂದ್ರಕಕ್ಷೆ *O*–ವೀಕ್ಷಕ *M*–ಚಂದ್ರ *K, K'* ಕ್ರಾಂತಿವೃತ್ತದ ಧ್ರುವಗಳು, *C* ಕ್ರಾಂತಿವೃತ್ತಕ್ಕೆ ಚಂದ್ರಕಕ್ಷೆಯ ಬಾಗು ($5^0 8'$)

ಪಾತರೇಖೆ 6,798 ದಿವಸಗಳಲ್ಲಿ ಅಥವಾ 18 ವ. 224 ದಿ.ಗಳಲ್ಲಿ ಕ್ರಾಂತಿವೃತ್ತದ ಮೇಲೆ ಒಂದು ಪೂರ್ಣ ಪರಿಭ್ರಮಣೆಯನ್ನು ಮುಗಿಸುತ್ತದೆ.

4. ಆಕಾಶದಲ್ಲಿ ಚಂದ್ರನ ಚಲನೆ: ನಿರಪೇಕ್ಷವಾಗಿ ಪರಿಶೀಲಿಸುವಾಗ ಚಂದ್ರನ ಚಲನೆ ತೀರ ಜಟಿಲ ವಾದದ್ದು. ಚಂದ್ರನ ಮೂಲ ಹಾಗು ಸಮೀಪಗ್ರಹವಾದ ಭೂಮಿಯ ಪ್ರಭಾವ ಒಂದು ಕಡೆ, ಸೌರವ್ಯೂಹದ ಪ್ರಧಾನ ಕಾಯ ಸೂರ್ಯನ ಪ್ರಭಾವ ಒಂದು ಕಡೆ–ಇವುಗಳ ಪರಿಣಾಮ ವಾಗಿ ಚಂದ್ರನ ವರ್ತನೆ ಬಲು ಸಿಕ್ಕುಸಿಕ್ಕಾಗಿದೆ. ಇದರ ಮುಖ್ಯಾಂಶಗಳನ್ನು ಮುಂದೆ ತಿಳಿಸಿದೆ.

i. ಭೂಮಿಯ ಸುತ್ತ ಚಂದ್ರ ರೇಖಿಸುವ ದೀರ್ಘವೃತ್ತ ಒಂದು ಸಮತಲದ ಮೇಲೆ ಸ್ಥಿರವಾಗಿಲ್ಲ–ಅದು ತಲದ ಮೇಲೆ ಚಂದ್ರಚಲನೆಯ ದಿಶೆಯಲ್ಲಿ ಪರಿಭ್ರಮಿಸುತ್ತದೆ (ನೇರ ಚಲನೆ ಅಥವಾ ಡೈರೆಕ್ಟ್ ಮೋಷನ್ ಎಂದು ಇದರ ಹೆಸರು). ಹೀಗಾಗಿ ದೀರ್ಘವೃತ್ತದ ದೀರ್ಘಾಕ್ಷ ಒಂದು ಪೂರ್ಣ ಪರಿಭ್ರಮಣೆಯನ್ನು 3232 ದಿವಸಗಳಲ್ಲಿ ಅಥವಾ 8 ªÀ. 310 ದಿನಗಳಲ್ಲಿ ಮುಗಿಸುತ್ತದೆ. ಈ ಚಲನೆಗೆ ಸದೃಶವಾದದ್ದು ಭೂಕಕ್ಷೆಯ ನೀಚೋಚ್ಚ ರೇಖೆಯ (ಲೈನ್ ಆಫ್ ಆ್ಯಪ್ಸಿಡ್ಸ್) ಚಲನೆ–21,000 ವರ್ಷಗಳಲ್ಲಿ ಇದು ಒಂದು ಸುತ್ತನ್ನು ಪೂರೈಸುವುದು.

ii. ಪಾತರೇಖೆಯ ಹಿನ್ನಡೆ (ರಿಟ್ರೋಗ್ರೇಡ್ ಮೋಷನ್). ಇದನ್ನು ಈ ಮೇಲೆ ಕಕ್ಷೆ ಎಂಬ ಶೀರ್ಷಿಕೆಯಲ್ಲಿ ವಿವರಿಸಿದೆ.

iii. ಚಂದ್ರಕಕ್ಷೆಯ ತಲ ಕಾಂತಿವೃತ್ತ ತಲಕ್ಕೆ ವಾಲಿಕೊಂಡಿದೆ (ಸರಾಸರಿ ಬೆಲೆ $5^0$ 8' 48") ಎಂದು ಹೇಳಿದೆಯಷ್ಟೆ. ಈ ಬಾಗು (ಇನ್‌ಕ್ಲಿನೇಷನ್) ಕನಿಷ್ಠ $5^0$ 0' 1" ನಿಂದ ಗರಿಷ್ಠ $5^0$ 17' 35" ಗಳ ವರೆಗೆ ಆಂದೋಳಿಸುತ್ತದೆ. ಇದರ ಅವಧಿ 173 ದಿವಸಗಳು.

iv. ಕಕ್ಷೆಯ ಉತ್ಕೇಂದ್ರತೆಯ ಪರಿಣಾಮವಾಗಿ ಪ್ರತಿಯೊಂದು ತಿಂಗಳಿನಲ್ಲೂ ಚಂದ್ರ $6^0$ ಯೂನಿಟ್‌ಗಳಷ್ಟು ತಡವಾಗಿ ಇಲ್ಲವೇ ಮೊದಲಾಗಿ ಚಲಿಸುತ್ತಿರುತ್ತದೆ. ಇದಕ್ಕೆ ಕೇಂದ್ರ ಸಂಸ್ಕಾರ (ಇಕ್ವೇಷನ್ ಆಫ್ ಸೆಂಟರ್) ಎಂದು ಹೆಸರು.

v. ಸ್ವಂತ ಕಕ್ಷೆಯಲ್ಲಿ ಚಲಿಸುತ್ತಿರುವ ಚಂದ್ರನ ಮೇಲೆ ಸೂರ್ಯಾಕರ್ಷಣೆ ಕ್ಷೋಭೆ ಉಂಟುಮಾಡುತ್ತದೆ ಚಂದ್ರಕಕ್ಷೆಯ ನೀಚೋಚ್ಚರೇಖೆಯ ಮೂಲಕ ಸೂರ್ಯ ಹಾಯುವಾಗ ಕಕ್ಷೆಯ ಉತ್ಕೇಂದ್ರತೆ ಹೆಚ್ಚಾಗುವುದು; ಅದಕ್ಕೆ ಲಂಬವಾಗಿರುವ ರೇಖೆಯ ಮೂಲಕ ಸೂರ್ಯ ಹಾಯುವಾಗ ಈ ಉತ್ಕೇಂದ್ರತೆ ಕಡಿಮೆ ಆಗುವುದು. ಈ ಪರಿಣಾಮಕ್ಕೆ ಚಾಂದ್ರಕಕ್ಷಾ ಕ್ಷೋಭೆ ಅಥವಾ ಸರಳವಾಗಿ ಚಾಂದ್ರಕ್ಷೋಭೆ (ಎವೆಕ್ಷನ್) ಎಂದು ಹೆಸರು. ಇದರ ಪ್ರಕಟಿತರೂಪವಾಗಿ ಚಂದ್ರನ ರೇಖಾಂಶದಲ್ಲಿ (ಲಾಂಜಿಟ್ಯೂಡ್) $1^0$ 15'ಗಳಷ್ಟು ಗರಿಷ್ಠ ವ್ಯತ್ಯಾಸ ತೋರಿಬರುತ್ತದೆ. ಕ್ಷೋಭೆಯ ಅವಧಿಕಾಲ 32 ದಿವಸಗಳು.

vi. ಇತರ ಅಸಮತೆಗಳಲ್ಲಿ ಮುಖ್ಯವಾದವು 15 ದಿವಸಗಳ ಅವಧಿಕಾಲವಿರುವ ವಿಚರಣೆ (ವೇರಿಯೇಷನ್), ಒಂದು ವರ್ಷ ಅವಧಿಕಾಲವಿರುವ ವಾರ್ಷಿಕ ಸಂಸ್ಕಾರ (ಆ್ಯನ್ಯುಯಲ್ ಈಕ್ವೇಷನ್), 29 ದಿವಸಗಳ ಅವಧಿಕಾಲವಿರುವ ದಿಗ್ವ್ಯತ್ಯಾಸದ ಅಸಮತೆ ಇತ್ಯಾದಿ. ಚಂದ್ರನ ಚಲನೆಯಲ್ಲಿ 1500ರಷ್ಟು ಅಸಮತೆಗಳನ್ನು ಗುರುತಿಸಿದ್ದುಂಟು. ಅವುಗಳ ಪೈಕಿ ಮುಖ್ಯವಾದ 500ನ್ನು ಗಮನದಲ್ಲಿಟ್ಟುಕೊಂಡೇ ಚಾಂದ್ರಕೋಷ್ಟಕಗಳನ್ನು ತಯಾರಿಸಬೇಕು. ಉದಾಹರಣೆಗೆ, ಚಂದ್ರನ ಕಕ್ಷಾವೇಗ ಶತಮಾನವೊಂದರ 12" ಗಳಷ್ಟು ಏರುವುದೆಂದು ತಿಳಿದಿದೆ. ಆದ್ದರಿಂದ 1974ರಲ್ಲಿ ಬಲು ನಿಖರವಾಗಿ ಚಂದ್ರಕಕ್ಷೆಯನ್ನು ಗುರುತು ಮಾಡಿ ದೊರೆತ ಫಲಿತಾಂಶಗಳನ್ನು 2074ರಲ್ಲಿ ಉಪಯೋಗಿಸಿದರೆ ಅಂದಿನ ವಾಸ್ತವ ಚಂದ್ರ, ಗಣನೆ ತಿಳಿಸುವ ಚಂದ್ರ ಇರಬೇಕಾದಲ್ಲಿ ಇರುವುದಿಲ್ಲ, ಬದಲು ಸುಮಾರು 12" ಅಥವಾ ಸುಮಾರು 22.5 ಕಿಮೀ. ಮುಂದೆ ಇರುವುದು.

ಇದುವರೆಗೆ ವಿವರಿಸಿದ ಎಲ್ಲ ಅಸಮತೆಗಳ ಹಾಗೂ ಅಸಮ ಬಲಗಳ ಪರಿಣಾಮವಾಗಿ ಭೂಮಿ–ಚಂದ್ರ ವ್ಯವಸ್ಥೆ ಸೂರ್ಯನನ್ನು ಕುರಿತಂತೆ ಆಕಾಶದಲ್ಲಿ ರೇಖಿಸುವ ಪಥವನ್ನು ಚಿತ್ರ 11 (ಬಿ), (ಸಿ) ಗಳಲ್ಲಿ ಕಾಣಿಸಿದೆ.

5. ಶರಚ್ಚಂದ್ರ : ಶರತ್ಕಾಲದಲ್ಲಿ (ಎಂದರೆ ಆಶ್ವೀಜ ಕಾರ್ತಿಕ ಮಾಸಗಳು; ಆಗಸ್ಟ್–ನವೆಂಬರ್ ಅವಧಿಯಲ್ಲಿ ಹಿಂದೆ ಮುಂದೆ ಬರುತ್ತವೆ) ಬರುವ ಹುಣ್ಣಿಮೆಯ ಚಂದ್ರ ಶರಚ್ಚಂದ್ರ. ಇದು ವಸಂತ ವಿಷುವದ್ಬಿಂದುವಿನೊಡನೆ (r ಬಿಂದು ಅಂದರೆ ಫಸ್ಟ್ ಪಾಯಿಂಟ್



ಚಿತ್ರ 17 (ಎ). ಶರಚ್ಚಂದ್ರ ವಿದ್ಯಮಾನವನ್ನು ವಿವರಿಸುವ ಚಿತ್ರ

ಆಫ್ ಏರೀಸ್ ಅಂದರೆ ವರ್ನಲ್ ಈಕ್ವಿನಾಕ್ಸ್) ಉದಯಿಸುವುದು. ಉತ್ತರ ಅಕ್ಷಾಂಶಗಳ ನಿವಾಸಿಗಳಿಗೆ ಆ ವೇಳೆ ಕ್ರಾಂತಿವೃತ್ತ ಕ್ಷಿತಿಜದೊಡನೆ ಕನಿಷ್ಠವಾಗಿ ಬಾಗಿಕೊಂಡಿರುತ್ತದೆ.




**ಚಿತ್ರ 17 (ಬಿ). ಒಂದನೆಯ ರಾತ್ರಿ ಶರಚ್ಚಂದ್ರ 1ರಲ್ಲಿ ಉದಯಿಸುವುದು. ಮರುರಾತ್ರಿ ಅದು ಸುಮಾರು $12^0$ ಹಿಂದೆ ಸರಿದು *A*ಯಲ್ಲಿರುವುದು, ಆದರೆ ಆ ರಾತ್ರಿ ಮೊದಲು ಅದು *AB* ದೂರದಷ್ಟು, ಕಡಿಮೆ ದೂರವನ್ನು <$12^0$ ಕ್ರಮಿಸಿದರೆ ಸಾಕು**

ಚಂದ್ರಕಕ್ಷೆ ಕ್ರಾಂತಿವೃತ್ತಕ್ಕೆ $5^0$ 8'ಗಳಷ್ಟು ಬಾಗಿಕೊಂಡಿರುವುದರಿಂದ ಚಂದ್ರ ವಸಂತ ವಿಷವದ್ಬಿಂದುವಿನಿಂದ ವಿಶೇಷ ದೂರಸಾಗುವುದಿಲ್ಲ. ಹೀಗಾಗಿ ಶರಚ್ಚಂದ್ರ ಮತ್ತು ಅದರ ಸಮೀಪದ ಸಂಜೆಗಳೆಂದು ಚಂದ್ರೋದಯದಲ್ಲಿ ಗಣನೀಯ ತಡವಾಗುವುದಿಲ್ಲ. ಅರ್ಥಾತ್ ಭೂನಿವಾಸಿಗಳಿಗೆ ಆ ದಿವಸಗಳಂದು ತಿಂಗಳ ಬೆಳಕು ಸಂಜೆ ಕವಿಯುವ ಮೊದಲೇ ದೊರೆಯುತ್ತದೆ. **ಚಿತ್ರ–17–ಎ** ಹಲವಾರು ಪ್ರದೇಶಗಳಲ್ಲಿ ಇದು ಕೊಯ್ಲಿನ ವೇಳೆ. ಆದ್ದರಿಂದ ಇಂಗ್ಲೆಂಡ್ ಮುಂತಾದೆಡೆಗಳಲ್ಲಿ ಶರಚ್ಚಂದ್ರನಿಗೆ ಕೊಯ್ಲು ಚಂದ್ರ (ಹಾರ್ವೆಸ್ಟ್ ಮೂನ್) ಎಂದು ಕರೆಯುವುದು ವಾಡಿಕೆ. ಮರುತಿಂಗಳ ಹುಣ್ಣಿಮೆಯ ವೇಳೆ ಜನ ಬೇಟೆಯಲ್ಲಿ ತೊಡಗುವುದರಿಂದ D ಚಂದ್ರನಿಗೆ ಬೇಟೆಗಾರರ ಚಂದ್ರ ಎಂದು ಕರೆಯುವುದುಂಟು.

VI ಕಲೆಗಳು (ಫೇಸಸ್) : ಚಂದ್ರ (ಇನ್ನಷ್ಟು ವ್ಯಾಪಕವಾಗಿ ಹೇಳುವುದಾದರೆ ಯಾವುದೇ ಗ್ರಹ) ಭೂಮಿಗೆ ಪ್ರದರ್ಶಿಸುವ ಬಿಂಬಕ್ಕೆ–ಎಂದರೆ ಹೊಳೆಯುವ ಭಾಗಕ್ಕೆ–ಕಲೆ ಎಂದು ಹೆಸರು. ಇದರ ಮಾಪಕ ಹೊಳೆಯುವ ಭಾಗ ಹಾಗೂ ಪೂರ್ಣಬಿಂಬಗಳ ನಿಷ್ಪತ್ತಿ. ಆದ್ದರಿಂದ ಅಮಾವಾಸ್ಯೆ ಚಂದ್ರನ ಕಲೆ 0, ಹುಣ್ಣಿಮೆ ಚಂದ್ರನ ಕಲೆ 1. ಉಳಿದ ದಿವಸಗಳಂದು ಚಂದ್ರನ ಕಲೆ ಒಂದು ಭಿನ್ನರಾಶಿ. ಯಾವುದೇ ಮುಹೂರ್ತದಲ್ಲಿ ಭೂಮುಖವಾಗಿರುವ ಅರ್ಧಾಂಶ ಭೂನಿವಾಸಿಗಳಿಗೆ ಕಾಣುತ್ತಿರುವುದು. ಚಿತ್ರ18ರಲ್ಲಿ E ಭೂಮಿ: F ಅರ್ಧಾಂಶ AFCG: ಸೂರ್ಯಮುಖವಾಗಿರುವ ಅರ್ಧಾಂಶ ಬೆಳಗುತ್ತಿರುವುದು–ಚಿತ್ರದಲ್ಲಿ S ಸೂರ್ಯ; ಬೆಳಗುತ್ತಿರುವ ಅರ್ಧಾಂಶದ ಗಡಿಯನ್ನು ABC ಸೂಚಿಸುತ್ತದೆ. ಆದ್ದರಿಂದ ಈ ಎರಡು ಅರ್ಧಗೋಳಗಳ ಸಾಮಾನ್ಯ ಗೋಳಖಂಡ




**ಚಿತ್ರ 18**

(ಚಂದ್ರಕ ಅಥವಾ ಲ್ಯೂನ್ ಎಂದು ಇದನ್ನು ಕರೆಯುವುದುಂಟು) ವೀಕ್ಷಕನಿಗೆ ಬೆಳಕು ಪ್ರತಿಫಲಿಸುವ ಭಾಗ–ಇದು ABCFA ಎಂಬ ಚಂದ್ರಕ. ಮೂರು ಆಯಾಮಗಳ ಈ ಚಂದ್ರಕ ಭೂಮಿ–ಚಂದ್ರ ದೂರದ ಅಗಾಧತೆಯಿಂದಾಗಿ, ವೀಕ್ಷಕನ ದೃಷ್ಟಿರೇಖೆಗೆ (EM) ಲಂಬವಾಗಿರುವ ಸಮತಲದ ಮೇಲೆ (ಕಾಗದದ ಸಮತಲ) ವಿಕ್ಷೇಪಿತವಾದಂತೆ ಭಾಸವಾಗುತ್ತದೆ.–ಇದು ADCFA ಸಮತಲ. ಹೀಗಾಗಿ ಚಂದ್ರನ ಹೊಳೆಯುವ ಭಾಗ (ಅಂತೆಯೇ ಪೂರ್ಣಚಂದ್ರ) ಒಂದು ಸಮತಲದಂತೆ ಕಾಣುವುದು.

$$\text{ಚಂದ್ರನ ಕಲೆ} = \frac{\text{ಸಲೆ ADCFA}}{\text{ಸಲೆ AGCF}} = \frac{\frac{\pi^2}{2} - \frac{\pi^2}{2}\cos\theta}{\pi^2}$$

$$= \frac{1-\cos\theta}{2}, \text{ಚಂದ್ರನ ತ್ರಿಜ್ಯ}$$

ಇಲ್ಲಿ $\theta$ ಕೋನಕ್ಕೆ ಚಂದ್ರನ ಕೋನಾಂತರ (ಇಲಾಂಗೇಷನ್) ಎಂದು ಹೆಸರು.

ಒಂದು ಚಾಂದ್ರಮಾಸದಲ್ಲಿ (ಲ್ಯುನೇಷನ್) ಚಂದ್ರನ ಕಲೆಗಳಲ್ಲಿ ಒಂದು ಪೂರ್ಣಾಂದೋಳನ ಮುಗಿಯುತ್ತದೆ. ಒಂದು ನಿಶ್ಚಿತ ಸಂಜೆ ಅಮಾವಾಸ್ಯೆ ಎಂದು ಭಾವಿಸೋಣ. ಅದು ವೀಕ್ಷಕ–ಸೂರ್ಯರೇಖೆಯ ದಿಶೆಯಲ್ಲಿ ಸರಿಸುಮಾರಾಗಿ ಚಂದ್ರ ಇರುತ್ತದೆ. ಸೂರ್ಯ ಚಂದ್ರರ ರೇಖಾಂಶಗಳು ಅಂದು ಸಮ. ಆದ್ದರಿಂದ ಚಂದ್ರನ ಹೊಳೆಯುವ ಭಾಗ ಭೂಮಿಯ ವಿರುದ್ಧ ದಿಕ್ಕಿನಲ್ಲಿರುವುದು. ಅಲ್ಲದೆ ಸೂರ್ಯನ ಬೆಳಕಿನಲ್ಲಿ ಚಂದ್ರ ಕಾಣಿಸುವುದು ಸಾಧ್ಯವಾಗುವುದಿಲ್ಲ.



ಚಿತ್ರ 19 (ಎ). ಚಂದ್ರನ ವಿವಿಧ ಕಲೆಗಳು

ಎರಡನೆಯ ಸಂಜೆಯಾಗುವಾಗ ಸೂರ್ಯ ಭೂಮಿಯ ಸುತ್ತ ಸುಮಾರು $1^0$ ಯಷ್ಟು (ಇದು ತೋರ್ಕೆ ಚಲನೆ) ಮತ್ತು ಚಂದ್ರ ಸುಮಾರು $13^0$ ಗಳಷ್ಟು ಪಶ್ಚಿಮ–ಪೂರ್ವ ದಿಶೆಯಲ್ಲಿ ಚಲಿಸಿರುತ್ತವೆ. ಆದ್ದರಿಂದ ಅಂದು ಚಂದ್ರ ಸೂರ್ಯನಿಗಿಂತ ಸುಮಾರು $12^0$ ಗಳಷ್ಟು ಮುನ್ನಡೆದಿರುತ್ತದೆ (ಪಶ್ಚಿಮ–ಪೂರ್ವ). ಅಂದರೆ ಚಂದ್ರ–ಸೂರ್ಯರ ರೇಖಾಂಶ ವ್ಯತ್ಯಾಸ $12^0$ ಎಂದಾಯಿತು. ಚಂದ್ರ ಸೂರ್ಯನಿಗಿಂತ ಪೂರ್ವಕ್ಕೆ ಇರುವುದರಿಂದ ಸೂರ್ಯ ಕಂತಿ ಸ್ವಲ್ಪ ಕಾಲಾನಂತರ ಚಂದ್ರ ಕಂತುವುದು. ಆದರೆ ಈ ಅಂತರ ಅತ್ಯಲ್ಪವಾಗಿರುವುದರಿಂದ ಪಾಡ್ಯದ ಚಂದ್ರನನ್ನು ಕಾಣುವುದು ಕಷ್ಟ.

ಮೂರನೆಯ ಸಂಜೆ ಸೂರ್ಯ–ಚಂದ್ರ ಅಂತರ (ರೇಖಾಂಶ ವ್ಯತ್ಯಾಸ) ಗಮನಾರ್ಹವಾಗಿ ಏರಿರುತ್ತದೆ. ಅದು ಈಗ ಸುಮಾರು $24^0$. ಆದ್ದರಿಂದ ಬಿದಿಗೆ ಚಂದ್ರನನ್ನು ಪ್ರಯಾಸದಿಂದ ಕಾಣಬಹುದು. ಇದರ ಹೊಳೆಯುವ ಭಾಗ ಸೂರ್ಯಮುಖವಾಗಿ–ಎಂದರೆ ಪಶ್ಚಿಮ ದಿಶೆಗೆ–ಇದೆ.

ಮುಂದಿನ ಸಂಜೆಗಳಲ್ಲಿ ಚಂದ್ರನ ಕಲೆ ಕ್ರಮೇಣ ಏರುವುದರ ಜೊತೆಗೆ ಸಂಜೆ ವೇಳೆ ಚಂದ್ರ ಸೂರ್ಯನಿಗಿಂತ ಪಶ್ಚಿಮ ಪೂರ್ವ ದಿಶೆಯಲ್ಲಿ ಸಾಕಷ್ಟು ದೂರ ಸರಿದಿರುತ್ತದೆ ಕೂಡ. 15 ದಿವಸಗಳಾಗುವಾಗ ರೇಖಾಂಶ ವ್ಯತ್ಯಾಸ $180^0$ ಆಗಿರುತ್ತದೆ. ಅಂದು ಭೂವೀಕ್ಷಕನಿಗೆ ಸೂರ್ಯ ಮತ್ತು ಚಂದ್ರ ವಿರುದ್ಧ ದಿಶೆಗಳಲ್ಲಿರುತ್ತವೆ. ಆದ್ದರಿಂದ ಚಂದ್ರನ ಹೊಳೆಯುವ ಭಾಗ ಪೂರ್ತಿ ಗೋಚರಿಸುತ್ತದೆ. ಇದೇ ಹುಣ್ಣಿಮೆ. ಚಂದ್ರನ ಪಶ್ಚಿಮಾಭಿಮುಖ ಚಲನೆ ಏಕಪ್ರಕಾರ ಮುಂದುವರಿಯುತ್ತಲೇ ಇರುವುದು. ಆದ್ದರಿಂದ ರೇಖಾಂಶವ್ಯತ್ಯಾಸ ವೃದ್ಧಿಗೊಳ್ಳುತ್ತಿರುವುದು. ಹೀಗಾಗಿ ಚಂದ್ರೋದಯ ಒಂದು ಸಂಜೆಯಿಂದ ಮತ್ತೊಂದು ಸಂಜೆಗೆ ತಡವಾಗುತ್ತಾ, ಇದೇ ವೇಳೆ ಚಂದ್ರನ ಕಲೆ ತಗ್ಗುತ್ತಾ, ಸಾಗುವುದು. ಈಗ ಚಂದ್ರನ ಪೂರ್ವಪಾರ್ಶ್ವ ಬೆಳಕನ್ನು ಬಿರುತ್ತದೆ. ಹುಣ್ಣಿಮೆಯ ಅನಂತರದ 15 ದಿವಸಗಳಲ್ಲಿ ಸೂರ್ಯ ಮತ್ತು ಚಂದ್ರರ ರೇಖಾಂಶ ವ್ಯತ್ಯಾಸ $360^0$ ಎಂದರೆ $0^0$ ಆಗಿ ಅಂದು ಪುನಃ ಅಮಾವಾಸ್ಯೆ ಸಂಭವಿಸುವುದು.



ಚಿತ್ರ 19 (ಬಿ). ಚಂದ್ರನ ಕಲೆಗಳಲ್ಲಿ ಆಗುವ ವ್ಯತ್ಯಾಸವನ್ನು ತಿಳಿಸುವ ಚಿತ್ರ.
***A*, *B*** **ಭೂಮಿಯ ಸ್ಥಾನಗಳು**

ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗಿನ 15 ದಿವಸಗಳ ಅವಧಿಗೆ ಶುಕ್ಲಪಕ್ಷವೆಂದು ಹೆಸರು. ಚಂದ್ರನ ಕಲೆಗಳಲ್ಲಿ ತಲೆದೋರುವ ಏರಿಳಿತಗಳನ್ನು ಚಿತ್ರ 19 (ಎ)ನಲ್ಲಿ ಕಾಣಿಸಿದೆ.



ಚಿತ್ರ 19 (ಸಿ). ಚಂದ್ರನ ವಿವಿಧ ಕಲೆಗಳು–ಇನ್ನೊಂದು ಚಿತ್ರ

V ತಿಂಗಳ ಬೆಳಕು : ಸೂರ್ಯನಿಂದ ಹೊಮ್ಮುವ ಬೆಳಕು, ಉಷ್ಣ ಮುಂತಾದ ವಿದ್ಯುತ್ಕಾಂತ ವಿಸರಣೆ (ಶಕ್ತಿ) ಚಂದ್ರನ ಮೇಲೆ ಕೂಡ ಬೀಳುತ್ತದೆ. ಇದರ ಒಂದಂಶವನ್ನು ಚಂದ್ರ ಪ್ರತಿಫಲಿಸುವುದು. ಪ್ರತಿಫಲಿತ ಬೆಳಕಿಗೆ ತಿಂಗಳ ಬೆಳಕು ಅಥವಾ ಬೆಳದಿಂಗಳು ಎಂದು ಹೆಸರು. ಭೂಮಿ ಸಹ ಇದೇ ರೀತಿ ಬೆಳಕನ್ನು ಪ್ರತಿಫಲಿಸುತ್ತದೆ. ಇದರ ಹೆಸರು ಭೂಕಾಂತಿ. ಬಾಲಚಂದ್ರ ಬಿಂಬದಲ್ಲಿ ಹೊಳೆಯುವ ಭಾಗಕ್ಕೆ ಪೂರಕವಾಗುವಂತೆ ಮಸಕಾದ ಭಾಗ ಎದ್ದು ಕಾಣುವುದು ಭೂಕಾಂತಿಯ ಪರಿಣಾಮ. ಬೆಳುದಿಂಗಳು ತಂಪು ಎನ್ನುವ ಪ್ರಚಲಿತ ಭಾವನೆ ತಪ್ಪು. ಈ ಕೆಳಗಿನ ಯಾದಿ ಇದನ್ನು ಸ್ಪಷ್ಟಪಡಿಸುತ್ತದೆ.

| | | ವಿಸರಣೆಯ ಶೇಕಡಾ | |
|---|---|---|---|
| | | **ಸೌರಬೆಳಕು** | **ಬೆಳುದಿಂಗಳು** |
| ಅತಿನೇರಿಳೆ (ಹ್ರಸ್ವ ಅಲೆ) | ... | 10 | 1 |
| ದೃಗ್ಗೋಚರ ಬೆಳಕು | ... | 46 | 5 |
| ಅತಿರಕ್ತ (ದೀರ್ಘ ಅಲೆ) | ... | 44 | 6 |
| ಗ್ರಹೋಷ್ಣ (ಅತಿ ದೀರ್ಘ ಅಲೆ) | ... | 0 | 88 |

ಗ್ರಹೋಷ್ಣ ಎಂದರೆ ಒಂದು ಗ್ರಹ (ಅಥವಾ) ಉಪಗ್ರಹ; ನಕ್ಷತ್ರವಲ್ಲ ಎನ್ನುವ ಅರ್ಥದಲ್ಲಿ) ತನ್ನ ಮೇಲೆ ಪಾತವಾಗುವ ಸೌರ ಉಷ್ಣವನ್ನು ಪ್ರತಿಫಲಿಸುವುದರಿಂದ ದೊರೆಯುವ ಉಷ್ಣ. ಸುಮಾರು ಐದು ಲಕ್ಷ ಹುಣ್ಣಿಮೆ ಚಂದ್ರರು ಏಕಕಾಲದಲ್ಲಿ ನೀಡುವ

ಬೆಳಕಿನ ಮೊತ್ತ ಸೂರ್ಯನ ಬೆಳಕಿಗೆ ಸಮವಾದೀತು! ಅಥವಾ, ರಾತ್ರಿಯ ಆಕಾಶವಿಡೀ ಹೊಳೆಯುವ ಚಂದ್ರ ಆಗಿದ್ದರೆ ಆಗ ನಮಗೆ ದೊರೆಯುವ ಬೆಳಕು ಸೂರ್ಯನ ಬೆಳಕಿನ 1/5 ಅಂಶ ಮಾತ್ರವಾದೀತಷ್ಟೆ! ತಿಂಗಳ ಬೆಳಕಿನ ತೀವ್ರತೆ 1/4 ಮೀಟರ್–ಕ್ಯಾಂಡಲ್ (ಒಂದು ಮೀಟರ್ ದೂರದಲ್ಲಿ ಇರಿಸಿದ ಕ್ಯಾಂಡಲ್, ಎಂದರೆ ಮೇಣದ ಬತ್ತಿ, ಬೀರುವ ಬೆಳಕಿಗೆ 1 ಮೀ. ಕ್ಯಾಂ. ಎಂದು ಹೆಸರು). ಬೆಳುದಿಂಗಳು ಇದರ ¼ರಷ್ಟು ಉಂಟಷ್ಟೆ. ಹುಣ್ಣಿಮೆಯ ಚಂದ್ರನ ಕಾಂತಿಮಾನ– 12.5 (ಶುಕ್ರ –4.4, ಗುರು –2.5, ಲುಬ್ಧಕ –1.58). ಚಂದ್ರನ ಆಲ್ಬೆಡೊ (ಎಂದರೆ ಪ್ರತಿಫಲನ ಸಾಮರ್ಥ್ಯ; ಪ್ರತಿಫಲಿತ ಬೆಳಕು ಮತ್ತು ಪಾತ ಬೆಳಕುಗಳ ನಿಷ್ಪತ್ತಿ ಇದರ ಸೂಚ್ಯಂಕ) 0.07. ಸೌರವ್ಯೂಹದ ಗ್ರಹಗಳಲ್ಲಿ ಗರಿಷ್ಠ ಆಲ್ಬೆಡೊ ಶುಕ್ರನಿಗೂ (0.64) ಕನಿಷ್ಠ ಆಲ್ಬೆಡೊ ಬುಧನಿಗೂ (0.06)ಉಂಟು. ಭೂಮಿಯ ಆಲ್ಬೆಡೊ 0.4. ಚಂದ್ರನ ಮೇಲೆ ಪಾತವಾಗುವ ಸೌರ ಬೆಳಕಿನ ಶೇ.93ರಷ್ಟು ಅಲ್ಲಿಯೇ ಹೀರಿಕೊಳ್ಳಲ್ಪಡುತ್ತದೆ. ಇದು ಉಷ್ಣವಾಗಿ ಪರಿವರ್ತನೆಗೊಂಡು ಚಂದ್ರನನ ಮೇಲ್ಮೈಯ ಉಷ್ಣತೆ ಏರುವುದು. ಚಂದ್ರನ ಆಲ್ಬೆಡೊ ಇಷ್ಟೊಂದು ಕಡಿಮೆ ಆಗಿರಲು ಕಾರಣ ಅದರ ತಲದ ಏರಿಳಿತಗಳು, ಡೊಗರು, ಕಮರಿಗಳು. ಆರ್ಧಚಂದ್ರ (ಎಂದರೆ ಚಂದ್ರನ ಕಲೆ ೪) ಬೀರುವ ಬೆಳಕು, ಹುಣ್ಣಿಮೆ ಚಂದ್ರ ಬೀರುವ ಬೆಳಕಿನ 1/9 ರಷ್ಟು ಮಾತ್ರ ಉಂಟು. ಇದು ಚಂದ್ರನ ತಲದ ವಕ್ರತೆಗಳನ್ನೂ ಪಾತವಾಗುವ ಸೌರಕಿರಣಗಳ ದಿಸೆಯನ್ನೂ ಅವಲಂಬಿಸಿ ಹೀಗಾಗುತ್ತದೆ.

**VI ಕೆಲವು ಉಪಯುಕ್ತ ಮಾಹಿತಿಗಳು :** ಚಂದ್ರಗೋಳದ ತ್ರಿಜ್ಯ (ಭೂಮಿಯ ಸಮಭಾಜಕೀಯ ತ್ರಿಜ್ಯ = 1) : 0.27227 ; ಎಂದರೆ 1736.7 ಕಿ.ಮೀ

ಸಲೆ : $10^5$ ಕಿ.ಮೀ$^2$

ಘನಗಾತ್ರ : $219 \times 10^8$ ಕಿಮೀ.$^3$

ದ್ರವ್ಯರಾಶಿ (ಭೂಮಿ=1) : $\frac{1}{81.38}$ ; ಎಂದರೆ $7.35 \times 10^{25}$ ಗ್ರಾಂ.

ಸರಾಸರಿ ಸಾಂದ್ರತೆ (ನೀರು=1) : 3.36

ಚಂದ್ರತಲದಲ್ಲಿ ಗುರುತ್ವ ವೇಗೋತ್ಕರ್ಷ : 163 ಸೆಂಮೀ.

ಸಂಯುತಿ ಅವಧಿ (ಚಾಂದ್ರಮಾಸ) : 29.530588 ದಿ

= 29 ದಿ. 12 ಗಂ. 44 ಮಿ. 2.8 ಸೆ,

ನಾಕ್ಷತ್ರಿಕ ಅವಧಿ 27.321661 ದಿ. = 27 ದಿ. 7 ಗಂ. 43 ಮಿ. 11.5 ಸೆ.

ಸರಾಸರಿ ದಿಗ್ವ್ಯತ್ಯಾಸ : 57’2.7"

ಸರಾಸರಿ ದೂರ (ಭೂಮಿಯ ಸಮಭಾಜಕೀಯ ತ್ರಿಜ್ಯ = 1) : 60.2665; ಎಂದರೆ 384,400 ಕಿಮೀ.

ಸರಾಸರಿ ತೋರ್ಕೆ ತ್ರಿಜ್ಯ : 15' 32" (ಸೂರ್ಯ 16')

ಕಕ್ಷೆಯ ಸರಾಸರಿ ಉತ್ಕೇಂದ್ರತೆ : 0.0549

ಸರಾಸರಿ ಭೂಮಿ ನೀಚ ದೂರ : 363,300 ಕಿಮೀ (ಕನಿಷ್ಠ 356,500 ಕಿ.ಮೀ)

ಸರಾಸರಿ ಭೂಮ್ಯುಚ್ಚ ದೂರ : 405,500 ಕಿ.ಮೀ (ಗರಿಷ್ಠ : 406,800 ಕಿ.ಮೀ)

ಕ್ರಾಂತಿವೃತ್ತಕ್ಕೆ ಕಕ್ಷೆಯ ಸರಾಸರಿ ಬಾಗು : $5^0$ 8' 43"

ಕ್ರಾಂತಿವೃತ್ತಕ್ಕೆ ಚಾಂದ್ರ ಸಮಭಾಜಕೀಯವೃತ್ತದ ಬಾಗು ; $1^0$ 32"

**VII ಭಾರತೀಯ ಖಗೋಳ ವಿಜ್ಞಾನದಲ್ಲಿ ಚಂದ್ರ :** ಆಕಾಶದಲ್ಲಿ ಸೂರ್ಯನಾದ ಬಳಿಕ ಅತ್ಯಂತ ಗಮನಾರ್ಹ ಕಾಯವೆಂದರೆ ಚಂದ್ರನೇ. ಕೇವಲ ಪ್ರಕಾಶ ಒಂದರಲ್ಲೇ ಅಲ್ಲ, ತನ್ನ ಕಲೆಗಳ ಏರಿಳಿತಗಳು ನಾಕ್ಷತ್ರಿಕ ಹಿನ್ನೆಲೆಯಲ್ಲಿ ವೇಗಯುತವಾದ ಚಲನೆ ಇವುಗಳಿಂದಲೂ ಚಂದ್ರ ಒಂದು ವಿಶಿಷ್ಟ ಗುಣವಿರುವ ಆಕಾಶಕಾಯ. ಚಂದ್ರನಿಗೆ ಸ್ವಂತ ಪ್ರಕಾಶವಿಲ್ಲ. ಸೂರ್ಯಪ್ರಕಾಶವನ್ನು ಪ್ರತಿಫಲಿಸಿ ಅದು ಬೆಳಗುತ್ತದೆ ಎನ್ನುವುದನ್ನು ಭಾರತೀಯ ಖಗೋಳವಿಜ್ಞಾನಿಗಳು ಋಗ್ವೇದ ಕಾಲದಷ್ಟು ಹಿಂದೆಯೇ ಗಮನಿಸಿ ಉಲ್ಲೇಖಿಸಿದ್ದಾರೆ. (ಋಗ್ವೇದ IX 71.9) ಅಮಾವಾಸ್ಯೆಯ ವಿದ್ಯಮಾನವನ್ನು ಆಲಂಕಾರಿಕವಾಗಿ ಶತಪಥ ಬ್ರಾಹ್ಮಣದಲ್ಲಿ ಈ ಕೆಳಗಿನಂತೆ ವರ್ಣಿಸಿದೆ (ಶ.ಬ್ರಾ. 1.6.4. 18–20) :

ಅಲ್ಲಿ ಉರಿಯುತ್ತಿರುವ ಆ ಕಾಯ (ಎಂದರೆ ಸೂರ್ಯ) ಬೇರೆ ಯಾರೂ ಅಲ್ಲ–ಸಾಕ್ಷಾತ್ ಇಂದ್ರನೇ : ಇನ್ನು ಚಂದ್ರನೋ ಸ್ವತಃ ವೃತ್ರನೇ. ಪ್ರವೃತ್ತಿಯಿಂದ ಇಂದ್ರ ವೃತ್ರನ ಶತ್ರು. ಈ ವೃತ್ರ ಹಿಂದೆ (ಎಂದರೆ ಹಿಂದಿನ ರಾತ್ರಿ) ಇಂದ್ರ (ಸೂರ್ಯ)ನಿಗಿಂತ ಅತಿ ದೂರದಲ್ಲಿ ಮೂಡಿದ್ದರೂ ಈಗ ಅವನು (ವೃತ್ರ) ಇಂದ್ರನೆಡೆಗೆ ಈಸಿ ಅವನ ತೆರೆಬಾಯಿಯನ್ನು ಪ್ರವೇಶಿಸುತ್ತಾನೆ. ಹೀಗೆ ವೃತ್ರನನ್ನು ಕಬಳಿಸಿದ ಇಂದ್ರ ಮೂಡುತ್ತಾನೆ–ವೃತ್ರ ಈಗ ಎಲ್ಲೂ ಕಾಣಿಸುವುದಿಲ್ಲ. ವೃತ್ರನ ಸತ್ತ್ವವನ್ನು ಹೀರಿಕೊಂಡು ಇಂದ್ರ ಆತನನ್ನು ಹೊರ ಗೆಸೆದುಬಿಡುತ್ತಾನೆ. ಸತ್ತ್ವ ಕಳೆದುಕೊಂಡ ವೃತ್ರನನ್ನು ಪಶ್ಚಿಮಾಕಾಶದಲ್ಲಿ ಕಾಣಬಹುದು. ಅಲ್ಲಿಂದ ಮುಂದೆ ಅವನು ಕ್ರಮೇಣ ವೃದ್ಧಿಹೊಂದುತ್ತಾನೆ. ಪುನಃ ಇಂದ್ರನಿಗೆ ಆಹಾರವಾಗುತ್ತಾನೆ.

ಸೂರ್ಯನನ್ನು ಕುರಿತು ಚಂದ್ರನ ಪಶ್ಚಿಮ–ಪೂರ್ವ ದಿಶೆಯ ಚಲನೆಯನ್ನೂ ಚಂದ್ರನ ಕಲೆಗಳ ಏರಿಳಿತಗಳನ್ನೂ ಬಲು ಸೊಗಸಾಗಿ ವರ್ಣಿಸುವ ಚಿತ್ರವಿದು. ಕಾಲ ಮಾಪನವನ್ನು ಮಾಡಲು ಸಹಜವಾಗಿ ಒದಗುವ ಆಕಾಶಗಡಿಯಾರ ಚಂದ್ರ ಎನ್ನುವ ಸಂಗತಿ ಬಲು ಪ್ರಾಚೀನ ಕಾಲದಲ್ಲೇ ಭಾರತೀಯರಿಗೆ ತಿಳಿದಿತ್ತು. ಚಂದ್ರನ ಸಂಯುತಿ ಅವಧಿ (ಚಾಂದ್ರಮಾಸ) ಹಾಗೂ ನಾಕ್ಷತ್ರಿಕ ಅವಧಿ ಇವೆರಡನ್ನೂ ಅವರು ಗುರುತಿಸಿದ್ದರು–ಮೊದಲನೆಯದು ಸೂರ್ಯನನ್ನು ಕುರಿತಂತೆ ಒಂದು ಪೂರ್ಣ ಪರಿಭ್ರಮಣೆ (ಅವಧಿ 29.5 ದಿ.) ಎರಡನೆಯದು ಸ್ಥಿರ ನಕ್ಷತ್ರಗಳನ್ನು ಕುರಿತಂತೆ ಒಂದು ಪೂರ್ಣ ಪರಿಭ್ರಮಣೆ (ಅವಧಿ ಸುಮಾರು 27 ದಿ.) ಈ ವಿವರಗಳು ಆರಂಭದ ಸಂಹಿತೆಗಳಲ್ಲೇ ಬಂದಿವೆ, ಚಂದ್ರಕಕ್ಷೆಯಲ್ಲಿರುವ ಆಶ್ವಿನಿಯಿಂದ ರೇವತಿವರೆಗಿನ 27 ನಕ್ಷತ್ರಗಳಿಗೆ ಪ್ರಾಧಾನ್ಯ ಬಂದದ್ದು ಈ ಕಾರಣದಿಂದ.

**VIII ಮಾನವ, ಚಂದ್ರನ ಮೇಲೆ :** ಚಂದ್ರನ ಮೇಲೆ ಮಾನವ ಮೊದಲು ಕಾಲಿಟ್ಟಿದ್ದು 1969ರ ಜುಲೈ 21 ರಂದು. (ನೋಡಿ–ಅಪೋಲೊ–11). ಆಕಾಶಯಾನದ ಇತರ ವಿವರಗಳಿಗಾಗಿ **(ನೋಡಿ– ಅಂತರಿಕ್ಷ ಸಂಶೋಧನೆ); ಉಪಗ್ರಹ,ಕೃತಕ.**

ಮನುಷ್ಯನನ್ನು ಚಂದ್ರನ ಮೇಲೆ ಇಳಿಸಿ, ಸ್ವಲ್ಪ ಕಾಲ ಅಲ್ಲಿಯೇ ಉಳಿಸಿ, ಬಳಿಕ ಭೂಮಿಗೆ ಮರಳಿಸುವ ಉದ್ದೇಶದಿಂದ ಅಪೊಲೊ ಆಕಾಶಯೋಜನೆ 1961–70ರ ದಶಕದಲ್ಲಿ ಕಾರ್ಯಪ್ರವೃತ್ತವಾಯಿತು. ಇದರ ಪ್ರಥಮ ಫಲ ಸಿದ್ಧಿಸಿದ್ದು 1969ರ ಜುಲೈ 21ರಂದು ಮೊದಲಿಗೆ ನೀಲ್ ಆರ್ಮ್‌ಸ್ಟ್ರಾಂಗ್ ನಂತರ ಎಡ್ವಿನ್ ಅಲ್ಡ್ರಿನ್ ಚಂದ್ರನ ಮೇಲೆ ಕಾಲಿಟ್ಟಾಗ. ಅವರು ಪಯಣಿಸಿದ ಅಂತರಿಕ್ಷ ನೌಕೆಯ ಹೆಸರು ಅಪೊಲೊ–11. ಆ ಮೊದಲಿನ ಅಪೊಲೊ ಹಾಗೂ ಇತರ ಮಾನವರಹಿತ ಅಂತರಿಕ್ಷ ನೌಕೆಗಳು ಮನುಷ್ಯನ ಚಂದ್ರಾವತರಣಕ್ಕೆ ಬೇಕಾದ ಮಾಹಿತಿಗಳನ್ನು ಸವಿವರವಾಗಿ ಮತ್ತು ವಿಪುಲವಾಗಿ ಒದಗಿಸುವುದರಲ್ಲಿ ಯಶಸ್ವಿಯಾದ್ದರಿಂದಲೇ ಆರ್ಮ್‌ಸ್ಟ್ರಾಂಗ್ “ ಅದು ಮಾನವನೊಬ್ಬನಿಗೆ ಬಲು ಪುಟ್ಟ ಹೆಜ್ಜೆ, ಆದರೆ ಮಾನವಜನಾಂಗಕ್ಕೆ ದೈತ್ಯ ನೆಗೆತ” ಈ ಅರ್ಥಬರುವ ಮೊತ್ತಮೊದಲ ಮಾತನ್ನು ಚಂದ್ರನ ಮೇಲಿಂದ ಉದ್ಗರಿಸಲು ಸಮರ್ಥನಾದ. ಅಪೊಲೊ ಸರಣಿ ಮುಂದುವರಿದು 1972ರ ಡಿಸೆಂಬರಿನಲ್ಲಿ ಅಪೊಲೊ–17 ನೌಕೆ ಅದರ ಯಾನಿಗಳ ಸಮೇತ ಧರೆಗೆ ಸುರಕ್ಷಿತವಾಗಿ ಮರಳಿದಾಗ ಅಪೊಲೊ ಯೋಜನೆ, ಎಂದರೆ “ಚಂದ್ರನ ಮೇಲೆ ಮಾನವ,” ಯೋಜನೆ ಪೂರ್ಣವಾಯಿತು. ಈ ಯೋಜನೆಯ ಮುಕ್ತಾಯ ಮಾನವನ ಜ್ಞಾನಕ್ಷಿತಿಜವನ್ನು ಆರು ಪ್ರಮುಖ ಕ್ಷೇತ್ರಗಳಲ್ಲಿ ವಿಸ್ತರಿಸಿತು.

ಮೊದಲನೆಯದು ಜೀವವಿಜ್ಞಾನ ಕ್ಷೇತ್ರ. ಮನುಷ್ಯ ಭೂಮಿಯ ಶಿಶು. ಇಲ್ಲಿನ ವಾಯುಮಂಡಲ, ಜಲರಾಶಿ, ಹವೆ, ಸಸ್ಯಸಂಪತ್ತು, ಗುರುತ್ವಬಲ, ಸೌರವಿಕಿರಣ, ಭೌತಪರಿಸ್ಥಿತಿ, ಸಾಮಾಜಿಕ ಜೀವನ ಒಂದೊಂದೂ ಈತನ ದೇಹ ಮತ್ತು ಮನಸ್ಸನ್ನು ರೂಪಿಸಿದೆ. ಭೂಮಿಯಿಂದ ಹೊರಗೆ ಹೋಗುವ ಮನುಷ್ಯ ಇವೆಲ್ಲ ಅನುಕೂಲ ಪ್ರಭಾವಗಳಿಂದ ಪರೋಕ್ಷವಾಗಿ ತಿಳಿದ ಮತ್ತು ತಿಳಿಯದ ಎಷ್ಟೋ ಪ್ರಭಾವಗಳಿಗೆ ಈಡಾಗುತ್ತಾನೆ. ಅಂತರಿಕ್ಷದ ಹಾಗೂ ಅಂತರಿಕ್ಷಯಾನದ ಹಲವಾರು ವಿದ್ಯಮಾನಗಳನ್ನು ಭೂಮಿಯಲ್ಲೇ ಕೃತಕವಾಗಿ ಸೃಷ್ಟಿಸಿ ಅವುಗಳಿಗೆ ಮನುಷ್ಯನನ್ನು ಒಡ್ಡಿ ಆ ಪರಿಣಾಮಗಳನ್ನು ಆಭ್ಯಸಿಸಿ ಅವನನ್ನು ಅಂತರಿಕ್ಷಯಾನಕ್ಕೆ ಸಿದ್ಧಪಡಿಸಲಾಯಿತು. ಸುಸಜ್ಜಿತವಾದ ಅಂತರಿಕ್ಷ ಉಡುಪನ್ನು ತೊಟ್ಟು ಭೂಗುರುತ್ವದ ಆರರಲ್ಲಿ ಒಂದರಷ್ಟು ಮಾತ್ರ ಇರುವ ಚಂದ್ರತಲದಲ್ಲಿ ನಡೆಯುವುದು, ನಿಲ್ಲುವುದು, ವಿವಿಧ ವೈಜ್ಞಾನಿಕ ಪ್ರಯೋಗಗಳನ್ನು ನಡೆಸುವುದು ಇವೇ ಮೊದಲಾದ ಅಂತರಿಕ್ಷ ಚಟುವಟಿಕೆಗಳು ಇಂಥ ಪ್ರಯತ್ನದ ಫಲ. ಅಂದರೆ ಯುಕ್ತಶಿಕ್ಷಣ, ತಕ್ಕ ಪೋಷಾಕು, ಸವಾಲನ್ನು ಎದುರಿಸುವ ದಿಟ್ಟತನ, ಸಮರ್ಥ ಭೂನಿಯಂತ್ರಣ ಇವೇ ಮುಂತಾದವು ಸುಸಂಘಟಿತವಾಗಿ ಮೇಳೈಸಿದರೆ ಮನುಷ್ಯ ಭೂಮಿಯಿಂದ ಹೊರಕ್ಕೆ ಹೋಗಿ ಅಜ್ಞಾತಲೋಕಗಳ ಅನ್ವೇಷಣೆ ನಡೆಸಿ ಯಶಸ್ವಿಯಾಗಿ ಮರಳಬಲ್ಲ ಎಂಬುದು ಇದರಿಂದ ವೇದ್ಯವಾಯಿತು.

ಎರಡನೆಯದು ಯಂತ್ರನಿರ್ಮಾಣ ಕ್ಷೇತ್ರ. ಆಕಾಶಯಾನಕಾಲದಲ್ಲಿ ಎದುರಾಗುವ ವೇಗ, ಉಷ್ಣತೆ, ಸಂಮರ್ದ, ಘರ್ಷಣೆ, ಸೌರವಿಕಿರಣ ಇವೆಲ್ಲವೂ ಭೂಪರಿಸರದ ಯಾವ ಪ್ರಯಾಣದಲ್ಲೂ ಎದುರಾಗದಂಥವು. ಇಂಥ ತೀವ್ರ ಪ್ರಭಾವಗಳ ವಿರುದ್ಧ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ತಮ್ಮೊಳಗಿರುವ ಸೂಕ್ಷ್ಮೋಪಕರಣಗಳಿಗೂ ಗಗನಯಾತ್ರಿಗಳಿಗೂ ರಕ್ಷಣೆ ಒದಗಿಸುವ ಅಂತರಿಕ್ಷನೌಕೆಗಳ ನಿರ್ಮಾಣ ಮನುಷ್ಯ ಹಿಂದೆಂದೂ ಎದುರಿಸದ ಹೊಸ ಸಮಸ್ಯೆಗಳನ್ನೇ ಸೃಷ್ಟಿಸಿದುವು. ಉದಾಹರಣೆಗೆ ಅಪೊಲೊ–11 ನೌಕೆ ಅದರ ವಾಹನ

ಸ್ಯಾಟರ್ನ್–5 ರಾಕೆಟ್ಟಿನ ಸಮೇತ ನೆಲದ ಮೇಲೆ ನಿಂತಿದ್ದಾಗ ಈ ವ್ಯವಸ್ಥೆಯ ತೂಕ 3000 ಟನ್ ಎತ್ತರ 110 ಮೀಟರ್, ಇಂಥ ಮಹಾತೂಕವನ್ನು ಭೂಮಿಯಿಂದ ಮೇಲಕ್ಕೆ ಉಡಾಯಿಸುವಾಗ 3400 ಟನ್ನುಗಳಷ್ಟು ನೂಕುಬಲವನ್ನು ಮೊದಲು ಉತ್ಪಾದಿಸಬೇಕಾಯಿತು. ಭೂಮಿಯನ್ನು ಸುತ್ತುವ ಕಾರ್ಯದಿಂದ ವಿಮೋಚನೆ ಪಡೆದ ಹಂತದಲ್ಲಿ ನೌಕೆಯ ವೇಗ ಗಂಟೆಗೆ 39,260 ಕಿಲೋ ಮೀಟರುಗಳಷ್ಟಿತ್ತು! ಚಂದ್ರಯಾನ ಮುಗಿಸಿ ಭೂಮಿಗೆ ಮರಳುವಾಗ ನೌಕೆಯ ಹೊರಕವಚದ ಉಷ್ಣತೆ $2600^0$ ಸೆ. ಇಂಥ ಸಮಸ್ಯೆಗಳನ್ನು ನಿರೀಕ್ಷಿಸಿ ಸೂಕ್ತ ಮತ್ತು ಸಮರ್ಥ ಯಂತ್ರಗಳನ್ನೂ ರಚನೆಗಳನ್ನೂ ನಿರ್ಮಿಸಲೆಂದೇ ಮೈದಳೆದ ವಿಜ್ಞಾನವಿಭಾಗದ ಹೆಸರು ಅಂತರಿಕ್ಷ ವಿನ್ಯಾಸಶಾಸ್ತ್ರ. ನೌಕೆಯ ಒಂದೊಂದು ಬಿಡಿಭಾಗವೂ ಅತಿನಿಷ್ಕೃಷ್ಟ ಮತ್ತು ಕಠಿಣ ಪೂರ್ವಪರೀಕ್ಷೆಗೆ ಒಳಗಾದ ವಿನಾ ಅದು ಯಾನಯೋಗ್ಯವಾಗುವುದಿಲ್ಲ. ಇಂಥ ಬಿಡಿ ಭಾಗಗಳ ಆಲೇಖ್ಯ ಹೇಗಿರಬೇಕು, ಆ ಭಾಗಗಳನ್ನು ಯಾವ ಪದಾರ್ಥಗಳಿಂದ ನಿರ್ಮಿಸಬೇಕು ಎಂಬ ವಿವರಗಳೆಲ್ಲವೂ ಈಗ ಅಂತರಿಕ್ಷ ವಿನ್ಯಾಸಕರಿಗೆ ತಿಳಿದಿರುವ ಸಂಗತಿಗಳಾಗಿವೆ.

ಮೂರನೆಯದು ಶಕ್ತಿಮೂಲಾನ್ವೇಷಣೆ. ಅಂತರಿಕ್ಷಯಾನ ಸಾಂಪ್ರದಾಯಿಕ ವಿಮಾನಸಂಚಾರಕ್ಕಿಂತ ತೀರ ಭಿನ್ನವಾದದ್ದು. ಅತಿಯಾಗಿ ಸರಳೀಕರಿಸಿ ಹೇಳುವುದಾದರೆ ವಿಮಾನಯಾನವೆಂದರೆ ವಾಯುಸಮುದ್ರದಲ್ಲಿ ಸಾಗುತ್ತಿರುವ ಹಡಗು. ಅಂತರಕ್ಷ ನೌಕೆ ಹೀಗಲ್ಲ. ಅದು ಭೂಮಿಯ ವಾಯುಮಂಡಲದ ತೀರ ಸೀಮಿತವಲಯವನ್ನು ತೊರೆದ ಬಳಿಕ ನಿರ್ವಾತ ಪ್ರದೇಶದಲ್ಲಿ ಬಹುಕಾಲ ಬಹುದೂರ ಸಂಚರಿಸುತ್ತಿರುವುದು. ಅಲ್ಲದೆ ಭೂಗುರುತ್ವದ ಬಿಗಿ ಅಪ್ಪುಗೆಯಿಂದ ಪಾರಾಗಿ ಹೋಗಲು ನೌಕೆ ಗಂಟೆಗೆ 40,000 ಕಿಲೋಮೀಟರುಗಳಿಗೂ ಮಿಕ್ಕಿದ ವೇಗವನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಇಲ್ಲಿ ಬೇಕಾದದ್ದು ನಿರ್ವಾತಪ್ರದೇಶದಲ್ಲಿ ಅಧಿಕವೇಗವನ್ನು ನೌಕೆಗೆ ನೀಡಬಲ್ಲ ಶಕ್ತಿಮೂಲ. ರಾಕೆಟ್ಟುಗಳ ನಿರ್ಮಾಣ ಈ ಹೊಸ ಆಯಾಮವನ್ನು ಒದಗಿಸಿದೆ. ರಾಕೆಟನ್ನು ಉರಿಸಿದಾಗ ಅದರ ಬೆಂಕಿಯ ನಾಲಗೆ ಚಾಚುವ ದಿಶೆಗೆ ವಿರುದ್ಧ ದಿಶೆಯಲ್ಲಿ ನೌಕೆ ಚಲಿಸುತ್ತದೆ. ಈ ನಿಯಮಾನುಸಾರ ರಾಕೆಟುಗಳನ್ನು ಸೂಕ್ತದಿಶೆಯಲ್ಲಿ ಉರಿಸಿ ಒಂದು ನೌಕೆಗೆ ಅಧಿಕವೇಗವನ್ನು ನೀಡಬಹುದು. ಇಲ್ಲವೇ ನೌಕೆಯ ವೇಗವನ್ನು ಮಂದಗೊಳಿಸಬಹುದು ಅಥವಾ ಅದರ ಚಲನದಿಶೆಯನ್ನು ಬದಲಾಯಿಸಬಹುದು. ರಾಕೆಟ್ಟುಗಳಲ್ಲಿ ಶಕ್ತಿಮೂಲವಾಗಿ ಘನ ಮತ್ತು ದ್ರವ ನೋದನಕಾರಿಗಳೆರಡರ (ನೋದನಕಾರಿ ಎಂದರೆ ಇಂಧನ ಮತ್ತು ಆಕ್ಸಿಡ್‌ಕಾರಕಗಳ ಜೋಡಿ) ಬಳಕೆಯೂ ಉಂಟು. ಅಪೊಲೊ–11ನ್ನು ಒಯ್ದ ಸ್ಯಾಟರ್ನ್–5 ರಾಕೆಟ್‌ನಲ್ಲಿ ದ್ರವ ಹೈಡ್ರೋಜನ್, ಸೀಮೆಎಣ್ಣೆ ಮತ್ತು ದ್ರವ ಆಕ್ಸಿಜನ್ನುಗಳ ಮಿಶ್ರಣವನ್ನು ನೋದನಕಾರಿಗಳಾಗಿ ಉಪಯೋಗಿಸಿದ್ದರು. ದ್ರವ ಹೈಡ್ರೋಜನ್ನನ್ನು–$253^0$ ಸೆ. ನಲ್ಲಿಯೂ ದ್ರವ ಆಕ್ಸಿಜನ್ನನ್ನು–$173^0$ ಸೆ.ನಲ್ಲಿಯೂ ಕಾಪಾಡಿಕೊಂಡು ಯುಕ್ತ ಮಿಶ್ರಣವನ್ನು ಪೂರೈಕೆ ಮಾಡಿ ಶಕ್ತಿಯನ್ನು ಒದಗಿಸಲಾಯಿತು. ಇಂಥ ಆಸ್ಫೋಟಕ ನೋದನಕಾರಿಗಳನ್ನು ಭಾರಿಪ್ರಮಾಣದಲ್ಲಿ ಸುದೀರ್ಘ ಅಂತರಿಕ್ಷಯಾನಕ್ಕೆ ಕೊಂಡೊಯ್ಯುವುದು ಬಲು ದುಬಾರಿಯ ಸಾಹಸವಾಗುತ್ತದೆ. ಆದ್ದರಿಂದ ಆಕಾಶಕಾಯಗಳ ಗುರುತ್ವಾಕರ್ಷಣ ಶಕ್ತಿಯನ್ನೂ ಅಲ್ಪ ಪ್ರಮಾಣದಲ್ಲಿ ಸೂರ್ಯನಿಂದ ದೊರೆಯುವ ಶಕ್ತಿಯನ್ನೂ ಪರಮಾಣು ಶಕ್ತಿಯನ್ನೂ ಅಂತರಿಕ್ಷನೌಕೆಯೊಂದರ ಚಲನೆಗಾಗಿ ಬಳಸಿಕೊಳ್ಳುವ ಏರ್ಪಾಡು ಸಹ ಇಂದು ಉಂಟು.

ನಾಲ್ಕನೆಯದು ನಿಯಂತ್ರಣ ವಿಜ್ಞಾನ: ಇಂದಿನ ಜೆಟ್ ವಿಮಾನಗಳ ಯಾನವೇಗ ಏರುತ್ತಿರುವಂತೆ ಅವುಗಳ ನಿಯಂತ್ರಣವನ್ನು ಬಲುಮಟ್ಟಿಗೆ ಸ್ವಯಂಚಲನೆಗೊಳಿಸಲಾಗುತ್ತಿದೆ. ಅಂತಹ ಉನ್ನತವೇಗದಲ್ಲಿ ಚಾಲಕನ ನಿರ್ಧರಣ ಸಾಮರ್ಥ್ಯ ಸಾಕಷ್ಟು ನಿಷ್ಕೃಷ್ಟವೂ ಕ್ಷಿಪ್ರವೂ ಆಗಿರದಿರುವುದೇ ಇದರ ಕಾರಣ. ಭೂಪರಿಸರದಲ್ಲೇ ಪರಿಸ್ಥಿತಿ ಹೀಗಿದ್ದರೆ ಇನ್ನು ಆಕಾಶಯಾನದಲ್ಲಿ ನಿಯಂತ್ರಣ ಸಮಸ್ಯೆ ಅದೆಷ್ಟು ಗಂಭೀರವಾಗಿದ್ದೀತು ಎಂಬುದನ್ನು ಊಹಿಸಿಕೊಳ್ಳಬಹುದು. ನೌಕೆಯೊಂದರಲ್ಲಿನ ಮತ್ತು ಕೆಲವು ವೇಳೆ ಯಾನನಿರ್ವಹಣಾ ವ್ಯವಸ್ಥೆ ಅಂತರಿಕ್ಷನೌಕೆಯ ಯಾನವನ್ನು ಕ್ಷಣಕ್ಷಣ ನಿಯಂತ್ರಿಸುತ್ತದೆ. ಅಪೊಲೋ ನೌಕೆಯ ನಿಯಂತ್ರಣ ವ್ಯವಸ್ಥೆಯ ಎಂದಿನ ಸಾಧಾರಣ ಕ್ರಿಯೆಗಳೆಲ್ಲವೂ ಗಣಕೀಕೃತವಾಗಿ ಸ್ವಯಂಚಾಲಿತವಾಗಿ ಕ್ರಮವಿಧಿಯನ್ನೇ ಬದಲಾಯಿಸಬೇಕಾಗಿ ಬಂದಾಗ ವಿವಿಧ ವಿಜ್ಞಾನಪ್ರಕಾರಗಳಲ್ಲಿ ತಜ್ಞರಾದವರ ಒಂದು ತಂಡವೇ ಸೂಕ್ತ ನಿರ್ಧಾರವನ್ನು ತಳೆದು ಅದನ್ನು ಗಗನಯಾತ್ರಿಗಳಿಗೆ ಘೋಷಿಸಲಾಗುತ್ತಿತ್ತು. ಯಂತ್ರ–ಮನುಷ್ಯ ಅಂತರಕ್ರಿಯೆ ಬೇರೆಲ್ಲ ಕ್ಷೇತ್ರಗಳಿಗಿಂತ ಹೆಚ್ಚಿನ ಅನ್ಯೋನ್ಯತೆಯಿಂದ ಇಲ್ಲಿ ನಡೆಯುತ್ತಿತ್ತು.

ಐದನೆಯದು ಚಂದ್ರಪರಿಸರವಿಜ್ಞಾನ. ಆಕಾಶಯುಗ 1957ರಲ್ಲಿ ಆರಂಭವಾಯಿತಷ್ಟೆ. ಆ ಮೊದಲು ಚಂದ್ರನ ಭೌತ ಪರಿಸ್ಥಿತಿಯನ್ನು ಕುರಿತು ನಮಗೆ ತಿಳಿದಿದ್ದ ವಿಷಯಗಳೇನಿದ್ದರೂ ಅವು ಪರೋಕ್ಷ ವಿಧಾನಗಳಿಂದ ಮತ್ತು ಗಣನೆಗಳಿಂದ ಲಭಿಸಿದವು ಮಾತ್ರ. ಇಷ್ಟನ್ನೇ ಆಧರಿಸಿ ಮನುಷ್ಯನನ್ನು ಚಂದ್ರನ ಮೇಲೆ ಇಳಿಸುವುದು ಅಪ್ರಾಯೋಗಿಕ. ಹೀಗಾಗಿ ಮನುಷ್ಯನ ಚಂದ್ರಯಾನದ ಮೊದಲು ಮಾನವರಹಿತ. ಆದರೆ ಉಪಕರಣಸಹಿತ, ನೌಕೆಗಳನ್ನು ಚಂದ್ರನ ಮೇಲೆ ಇಳಿಸಿ ಅವುಗಳ ನೆರವಿನಿಂದ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಅಲ್ಲದೆ ಅಪೊಲೊ–8ರಲ್ಲಿ ಮೂವರು ಅಮೆರಿಕಾದ ಗಗನಯಾತ್ರಿಗಳು 1968ರಲ್ಲಿ ಚಂದ್ರನಿಗೆ ಪ್ರದಕ್ಷಿಣೆ ಹಾಕಿ ಚಂದ್ರನ ಸಮೀಪಚಿತ್ರಗಳನ್ನು ಪಡೆದು ಧರೆಗೆ ಮರಳಿದರು. ಸಮೀಪದಿಂದ ತೆಗೆಯಲಾದ ಇಂತಹ ಚಿತ್ರಗಳಿಂದ ಚಂದ್ರನ ಸಾಗರಗಳು ವಾಸ್ತವಿಕವಾಗಿ ಜಲರಹಿತ ಮಹಾಕಮರಿಗಳು, ಕೂಪಗಳು ಉಲ್ಕಾಪಾತದಿಂದಲೇ ಉಂಟಾದವು. ಚಂದ್ರನ ಮಟ್ಟಸ ಪ್ರದೇಶಗಳಲ್ಲಿ ಮನುಷ್ಯ ಹೂತುಹೋಗಬಹುದಾದಂಥ ದೂಳಿನ ರಾಶಿ ಏನೂ ಇಲ್ಲ. ಮತ್ತು ಚಂದ್ರ ಪೂರ್ಣವಾಗಿ ವಾಯುರಹಿತ ಎಂದು ಮುಂತಾದುವು ಖಚಿತವಾಗಿ ತಿಳಿಯಿತು. ಅಲ್ಲದೆ ಚಂದ್ರತಲದಲ್ಲಿ ಸೂರ್ಯೋಷ್ಣದಿಂದ ಒದಗುವ ಉಷ್ಣತೆಯ ತೀವ್ರ ಏರಿಳಿತಗಳನ್ನು ಕುರಿತು ವಿವರಗಳು ಲಭಿಸಿದವು. ಹೀಗೆ ದೊರೆತ ಜ್ಞಾನದ ಪರಿಣಾಮವಾಗಿ ಮನುಷ್ಯನನ್ನು ಎಲ್ಲಿ ಹೇಗೆ ಎಂದು ಇಳಿಸಬೇಕು, ಎಷ್ಟು ಕಾಲ ಆತ ಅಲ್ಲಿ ಇರಬೇಕು, ಏನೇನು ಕಾರ್ಯಗಳನ್ನು ನಡೆಸಬೇಕು ಇವೇ ಮುಂತಾದ ಕ್ರಮವಿಧಿಗಳನ್ನು ರೂಪಿಸಲು ವಿಜ್ಞಾನಿಗಳು ಸಮರ್ಥರಾದರು.

ಆರನೆಯದು ಬ್ರಹ್ಮಾಂಡವನ್ನು ಕುರಿತಂತೆ ಉಂಟಾಗಿರುವ ಪರಿಜ್ಞಾನ. ಬ್ರಹ್ಮಾಂಡದ ಒಂದು ಕಿರುತುಣುಕು ಸೌರವ್ಯೂಹ. ಅದರ ಒಂದು ಅಲ್ಪಾಂಶ ಭೂಮಿ–ಚಂದ್ರ ವಲಯ. ಮನುಷ್ಯನಿಗೆ ಬ್ರಹ್ಮಾಂಡವನ್ನು ಕುರಿತು ಜ್ಞಾನ ಮೊದಲು ಲಭಿಸುವುದು ಅವನ ಸ್ವಂತ ಗ್ರಹದ ಅನ್ವೇಷಣೆಯಿಂದ; ಬಳಿಕ ಆಕಾಶವೀಕ್ಷಣೆಯಿಂದ, ಯುಗಯುಗಗಳಿಂದ ಆಕಾಶದ ದೃಶ್ಯ ಕಾಯಗಳು ಮನುಷ್ಯನಿಗೆ ನಾನಾವಿಧದ ಸವಾಲುಗಳನ್ನೂ ಆಕರ್ಷಣೆಗಳನ್ನೂ ಒಡ್ಡುತ್ತ ಬಂದಿವೆ. ಇಂಥ ಸವಾಲುಗಳ ಪೈಕಿ ಒಂದು ಭೂಮಿಗೆ ಅತಿ ಸಮೀಪ ಆಕಾಶಕಾಯವಾದ ಚಂದ್ರನಲ್ಲಿ ಯಾವ ವಿಧವಾದ ಜೀವಿಗಳಿದ್ದುದಕ್ಕೂ ದಾಖಲೆಗಳಿಲ್ಲ. ಚಂದ್ರನಿಂದ ಆಯ್ದು ತಂದ ಬಹುತೇಕ ಶಿಲೆಗಳು ಘನೀಭವಿಸಿದ್ದು 325 ರಿಂದ 360 ಕೋಟಿ ವರ್ಷಗಳಷ್ಟು ಪ್ರಾಚೀನದಲ್ಲಿ, ಚಂದ್ರನ ವಯಸ್ಸು ಸುಮಾರು 4600 ದಶಲಕ್ಷ ವರ್ಷಗಳು, ಭೂಮಿಗಿಂತ ಚಂದ್ರ ಪ್ರಾಯಶಃ 40 ಕೋಟಿ ವರ್ಷಗಳಷ್ಟು ಕಿರಿಯದು, ಇಂತಹ ವಿಷಯಗಳು ತಿಳಿದಿವೆ.



**ಚಿತ್ರ 20. ಭವಿಷ್ಯದ ಚಂದ್ರವಸಾಹತಿನ ಊಹಾಚಿತ್ರ**

ಮನುಷ್ಯನ ತಂತ್ರವಿಜ್ಞಾನದ ಪ್ರಗತಿಯ ಹಾಗೂ ಯಶಸ್ಸಿನ ಪ್ರಧಾನ ಪ್ರತೀಕ ಅಪೊಲೊ ಯೋಜನೆ. ಮನುಷ್ಯ ಭೂಮಿಗೆ ಸದಾ ಬಂಧಿತನಾಗಿ ಇರಬೇಕಾಗಿಲ್ಲ. ಭಿನ್ನ ಪರಿಸರಕ್ಕೆ ತೆರಳಿ ಅಲ್ಲಿ ಬದುಕಬಲ್ಲ ಎಂದು ಇದರಿಂದ ರುಜುವಾತಾಗಿದೆ. ಅಪೊಲೊ ಯೋಜನೆಯ ಉಪೋತ್ಪನ್ನಗಳಾಗಿ ಮಾನವ ಜನಾಂಗಕ್ಕೆ ಒದಗಿರುವ ಲಾಭ ಸೌಕರ್ಯಗಳ ವಿಶ್ಲೇಷಣೆ ಸುದೀರ್ಘವಾದುದರಿಂದ ಅದನ್ನು ಪ್ರತ್ಯೇಕವಾಗಿಯೇ ಮಾಡಬೇಕಾಗುತ್ತದೆ. ಆದ್ದರಿಂದ ಅಪೊಲೊ ಯೋಜನೆಯ ಅನಂತರ ಆದದ್ದೇನು ಎಂಬ ಪ್ರಶ್ನೆಗೆ ವೈಜ್ಞಾನಿಕ ಉತ್ತರವನ್ನು ನೀಡಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಯೋಜನೆಯ ನಿರ್ಮಾಪಕ ರಾಷ್ಟ್ರವಾದ ಅಮೆರಿಕದ ಸಂಯುಕ್ತ ಸಂಸ್ಥಾನಗಳ ವಿಜ್ಞಾನಿಗಳ ಚಿಂತನೆ ಎರಡು ಸ್ಪಷ್ಟ ದಿಶೆಗಳಲ್ಲಿ ಹರಿಯಿತು.

ಮೊದಲನೆಯದು ಅಂತರಿಕ್ಷ ನಿಲ್ದಾಣಗಳ ಸ್ಥಾಪನೆ–ಸ್ಪೇಸ್ ಸ್ಟೇಷನ್ಸ್ ಎಂದು ಇವನ್ನು ಇಂಗ್ಲಿಷಿನಲ್ಲಿ ಕರೆಯುತ್ತಾರೆ. ಭೂಮಿಯ ಸುತ್ತ ನಿರಂತರವಾಗಿ ಸುತ್ತಲು ಇಂಥ ನೌಕೆಯನ್ನು 1973ರಲ್ಲಿ ಉಡಾಯಿಸಲಾಯಿತು. ಸೂರ್ಯ, ಚಂದ್ರ ಹಾಗೂ ಭೂಮಿಯನ್ನು ಕುರಿತು ಹೆಚ್ಚಿನ ಜ್ಞಾನವನ್ನು ಗಳಿಸುವುದು ಈ ಅಂತರಿಕ್ಷ ನಿಲ್ದಾಣ ಯೋಜನೆಯ ಒಂದು ಉದ್ದೇಶವಾಗಿತ್ತು. ವಿಜ್ಞಾನಿಗಳ ಚಿಂತನೆ ಹರಿದಿರುವ ಎರಡನೆಯ ದಿಶೆ ಎಂದರೆ ಚಂದ್ರನ

ವಸಾಹತೀಕರಣ. ಚಂದ್ರಪರಿಸರ ಮಾನವನ ಮುಕ್ತವಾಸಕ್ಕೆ ಸರ್ವಥಾ ಅಯೋಗ್ಯ ಎಂಬುದು ಸಿದ್ಧವಾಗಿದ್ದರೂ ಈ ಆಸೆ ಏಕೆ ಎಂಬ ಪ್ರಶ್ನೆಗೆ ಉತ್ತರ ಬಲು ಸರಳ ಮನುಷ್ಯನ ಅದಮ್ಯ ಸಾಹಸ ಪ್ರವೃತ್ತಿ. ಚಂದ್ರನ ನಿರ್ವಾತಪ್ರದೇಶದಲ್ಲಿ, ದೂಳಿನಿಂದ ಕಲುಷಿತವಾಗಿರದ ಮತ್ತು ಮನುಷ್ಯಕೃತ ಬೆಳಕಿನಿಂದ ಮಲಿನವಾಗಿರದ ಆವರಣದಲ್ಲಿ, ಕಡಿಮೆ ಗುರುತ್ವದ ಪ್ರಭಾವದಲ್ಲಿ, ಖಗೋಳ ವೀಕ್ಷಣಾಲಯಗಳ ಸ್ಥಾಪನೆ ಮತ್ತು ಅವುಗಳಿಂದ ವೀಕ್ಷಣೆ ಹೆಚ್ಚು ಸುಲಭ ಹಾಗೂ ಫಲಕಾರಿ. ಅಲ್ಲಿ ಸಂಗ್ರಹಿಸಲ್ಪಡುವ ದತ್ತಾಂಶಗಳು ಹೆಚ್ಚು ನಿಷ್ಕೃಷ್ಟ. ಚಂದ್ರನಲ್ಲಿ ಸ್ಥಾಪಿಸಬಹುದಾದ ದೂರದರ್ಶಕಗಳು ಪ್ರಪಂಚದ ಅನೇಕ ದೊಡ್ಡ ದೂರದರ್ಶಕಗಳಿಗಿಂತ ಅದೆಷ್ಟೋ ಪಟ್ಟು ಹೆಚ್ಚು ವಿವರಗಳನ್ನು ಇನ್ನಷ್ಟು ನಿಷ್ಕೃಷ್ಟವಾಗಿ ಒದಗಿಸಬಲ್ಲವೆಂದು ವಿಜ್ಞಾನಿಗಳು ಭಾವಿಸಿದ್ದರು. ರೇಡಿಯೋ ದೂರದರ್ಶಕದ ವಿಚಾರದಲ್ಲೂ ಇದು ಅಷ್ಟೇ ಸತ್ಯ. ಖಗೋಳವಿಜ್ಞಾನಿಗಳಿಗೆ ಹೇಗೋ ಭೂವಿಜ್ಞಾನಿಗಳಿಗೂ ಹಾಗೆ ಚಂದ್ರ ಬಲು ಪ್ರಿಯ. ಭೂಮಿಯ ಮೈಯನ್ನು ಸತತವಾಗಿ ಘಾಸಿಗೊಳಿಸಬಹುದಾದ ಗಾಳಿ, ಮಳೆ, ನೀರಿನ ಪ್ರವಾಹ, ಜೀವಿಕ್ರಿಯೆ ಅಲ್ಲಿಲ್ಲ. ಜ್ವಾಲಾಮುಖಿಗಳ ಚಟುವಟಿಕೆ ಈಗ ಅಲ್ಲಿ ಪ್ರಕಟವಾಗುತ್ತಿಲ್ಲ. ನೇರವಾಗಿ ಚಂದ್ರನ ಮೈಮೇಲೆ ಪಾತವಾಗುವ ಸೌರವಿಕಿರಣ, ಅದರಿಂದ ಉದ್ಭವಿಸುವ ಉಷ್ಣತೆಯ ತೀವ್ರ ಏರಿಳಿತಗಳನ್ನು ಬಿಟ್ಟರೆ ಚಂದ್ರನ ಭೌತಸ್ಥಿತಿಯನ್ನು ಬದಲಾಯಿಸುವ ಬೇರಾವ ಕಾರಕವೂ ಅಲ್ಲಿಲ್ಲ. ಅಪೋಲೋ ಕಾರ್ಯಕ್ರಮದ ಮೊದಲು ಇಂಥ ಪ್ರದೇಶದಲ್ಲಿ ಭೂವಿಜ್ಞಾನಿಗಳು ಚಂದ್ರನ ಹುಟ್ಟಿನಿಂದ ತೊಡಗಿ ಇಂದಿನವರೆಗಿನ ಸಮಸ್ತ ವಿಕಾಸಗಳ ಅಚ್ಚಳಿಯದ ವಿಪುಲ ದಾಖಲೆಗಳನ್ನು ಕಾಣುವ ತವಕದಿಂದಿದ್ದರು. ಚಂದ್ರನಲ್ಲಿ ಸ್ಥಾಪಿಸಬಹುದಾದ ಭೂ ಹವಾವೀಕ್ಷಣಾಲಯ ಭೂನಿವಾಸಿಗಳಿಗೆ ಅಲ್ಲಿನ ಹವೆಯನ್ನು ಕುರಿತು ನಿಷ್ಕೃಷ್ಟ ಮತ್ತು ವ್ಯಾಪಕ ವಿವರಗಳನ್ನು ಒದಗಿಸಬಲ್ಲುದೆಂದು ಹವಾವಿಜ್ಞಾನಿಗಳು ಭಾವಿಸಿದ್ದರು. ಚಂದ್ರಗರ್ಭದಲ್ಲಿ ಹುದುಗಿರಬಹುದಾದ ಖನಿಜ ಸಂಪತ್ತಿನ ಅಂದಾಜು ಸಂಪೂರ್ಣವಾಗಿ ಯಾರಿಗೂ ಇಲ್ಲ. ಸೌರವ್ಯೂಹದ ಇತರ ಗ್ರಹಗಳಿಗೆ ಯಾನ ಮಾಡಲು ಮನುಷ್ಯನಿಗೆ ಸಹಜವಾಗಿ ಒದಗುವ ಪ್ರಥಮ ನೈಸರ್ಗಿಕ ಅಂತರಿಕ್ಷನಿಲ್ದಾಣ ಚಂದ್ರ. ಅಲ್ಲಿನ ಭೌತಬಲಗಳು ಭೂಮಿಗಿಂತ ತೀರ ಭಿನ್ನವಾದ್ದರಿಂದ ಹಲವಾರು ವಿಶೇಷ ಯಂತ್ರಸ್ಥಾವರಗಳ ರಚನೆ ಮತ್ತು ಸ್ಥಾಪನೆ ಸಾಕಷ್ಟು ಲಾಭದಾಯಕವಾಗಬಹುದು. ಅವುಗಳ ಉತ್ಪನ್ನಗಳನ್ನು ಚಂದ್ರನಿಂದ ಭೂಮಿಗೆ ಸಾಗಿಸಲು ತಗಲುವ ಖರ್ಚನ್ನು ಭರಿಸಿಯೂ ಅವು ಲಾಭ ನೀಡಬಹುದು ಎಂದು 1970ರ ದಶಕದ ಪ್ರಾರಂಭದಲ್ಲಿ ನಂಬಲಾಗಿತ್ತು. ಆದ್ದರಿಂದ ಅಜ್ಞಾತ ಲೋಕದ ಅಸಂಖ್ಯಾತ ವಿಭವಗಳನ್ನು ಮಾನವ ಕಲ್ಯಾಣಕ್ಕಾಗಿ ಅಳವಡಿಸಲು ಚಂದ್ರನ ವಸಾಹತೀಕರಣ ಅವಶ್ಯ. ಇದು ಹೇಗೆ ನಡೆಯಬಹುದು ಎನ್ನುವ ದಿಶೆಯಲ್ಲೂ ಸಾಕಷ್ಟು ವೈಜ್ಞಾನಿಕ ಚಿಂತನೆ ಹರಿದಿದೆ. ಚಂದ್ರಲೋಕದಲ್ಲಿ ಮಾನವಜೀವನಕ್ಕೆ ಅವಶ್ಯವಾದ ಕೃತಕ ಭೂಪರಿಸರವನ್ನು ಸೃಷ್ಟಿಸಿ ಇದು ನಿರಂತರವಾಗಿಯೂ ಸ್ವಯಂ ಉತ್ಪಾದನೆ ಆಗುತ್ತಿರುವಂಥ ಕ್ರಿಯಾವಿನ್ಯಾಸವನ್ನು ಏರ್ಪಡಿಸಬೇಕು. ಚಂದ್ರವಸಾಹತಿಗೂ ಭೂಮಿಗೂ ನಡುವೆ ಮನುಷ್ಯರನ್ನು ಸರಾಗವಾಗಿ ಒಯ್ಯಬಲ್ಲ ವಾಹನಗಳು ಜೆಟ್ ವಿಮಾನಗಳಂತೆ ಅನುದಿನದ ವಿದ್ಯಮಾನಗಳಾಗಿರಬೇಕು. ಇಂತಹ ಕಲ್ಪನಾವಿಲಾಸದಲ್ಲಿ ವಿಜ್ಞಾನಿಗಳು ಈಗ್ಗೆ 35 ವರ್ಷಗಳ ಹಿಂದೆ ಮುಳುಗಿದ್ದರು. ಚಂದ್ರನಲ್ಲಿಗೆ ಮಾನವರು ಹಿಂತಿರುಗುವುದಕ್ಕೆ ಬೆಂಬಲವನ್ನು ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ಜೂನಿಯರ್ ಅವರು 2004ರಲ್ಲಿ ವ್ಯಕ್ತಪಡಿಸಿದರು. **(ಜಿ.ಟಿ.ಎನ್.) ಪರಿಷ್ಕರಣೆ: ಬಿ.ಆರ್.ಜಿ.**

**ಚಂದ್ರ (ಭಾರತೀಯ ಪುರಾಣ, ಜ್ಯೋತಿಷಗಳಲ್ಲಿ):** ನವಗ್ರಹಗಳಲ್ಲಿ ಒಬ್ಬ. ಗ್ರಹಮಂಡಲಗಳಲ್ಲಿ ಭೂಮಿಗೆ ಅತ್ಯಂತ ಸಮೀಪದಲ್ಲಿರುವ ಮಂಡಲದ ಅಧಿಪತಿ. ಈ ಆಧಿಪತ್ಯ ಮನ್ವಂತರ ಬದಲಾದಂತೆಲ್ಲ ಬದಲಾಯಿಸುತ್ತದೆ. ಸ್ವಾಯಂಭುವ ಮನ್ವಂತರದಲ್ಲಿ ಅತ್ರಿ ಋಷಿಯ ಮಗ ಚಂದ್ರನಾಗಿದ್ದನೆಂದು ಶ್ರೀಮದ್ಭಾಗವತದಲ್ಲಿದೆ. ಬ್ರಹ್ಮನಿಂದ ಸೃಷ್ಟಿಕಾರ್ಯದಲ್ಲಿ ನಿಯುಕ್ತನಾದ ಅತ್ರಿ ತಪಸ್ಸು ಮಾಡುತ್ತಿದ್ದಾಗ ಆತನ ಕಣ್ಣುಗಳಿಂದ ನೀರು ಸುರಿಯಲು ಅದರಿಂದ ಹತ್ತು ದಿಕ್ಕುಗಳನ್ನು ಬೆಳಗುವ ದಿವ್ಯ ಕಾಂತಿ ಉದ್ಭವಿಸಿ ಲೋಕವನ್ನೆಲ್ಲ ಆವರಿಸುತ್ತದೆ. ಆ ತೇಜಸ್ಸಿಗೆ ಮರುಳಾದ ದಶದಿಕ್ಕುಗಳು ಹೆಣ್ಣಿನ ರೂಪದಿಂದ ಆ ಬೆಳಗುತ್ತಿರುವ ದಿವ್ಯಕಾಂತಿಯನ್ನು ಬಹಳ ಕಾಲ ಗರ್ಭದಲ್ಲಿ ಧರಿಸಿದ್ದು ಕೊನೆಗೆ ಅದನ್ನು ತಾಳಲಾರದೆ ಹೊರಗೆಡಹುತ್ತವೆ. ಆಗ ಬ್ರಹ್ಮ ಆ ಗರ್ಭಪಿಂಡಗಳನ್ನೆಲ್ಲ ಒಟ್ಟುಗೂಡಿಸಿ ಸರ್ವಾಯುಧಗಳಿಂದ ಕೂಡಿದ ಒಬ್ಬ ತರುಣನನ್ನು ನಿರ್ಮಿಸಿ ಆತನನ್ನು ಸಾವಿರ ಕುದುರೆಗಳನ್ನು ಹೂಡಿದ ವೇದಶಕ್ತಿಸ್ವರೂಪವಾದ ಒಂದು ರಥದಲ್ಲಿ ಕುಳ್ಳಿರಿಸಿಕೊಂಡು ತನ್ನ ನಿವಾಸಕ್ಕೆ ಕರೆದೊಯ್ಯುತ್ತಾನೆ. ಅಲ್ಲಿ ದೇವತೆಗಳೂ, ಋಷಿಗಳೂ, ಓಷಧಿಗಳೂ ಈ ಪುರುಷನನ್ನು ಸೋಮದೇವತಾಕ ಮಂತ್ರಗಳಿಂದ ಹೊಗಳುತ್ತಾರೆ. ಪಾರ್ವತೀಸಹಿತನಾದ ಶಿವನೂ ಈ ಯುವಕನನ್ನು ತನ್ನ ಎಂಟನೆಯ ಒಂದು ಅಂಶದಿಂದ ನೋಡಿ ಅನುಗ್ರಹಿಸುತ್ತಾನೆ. ಈ ಕಾರಣದಿಂದ ಈತನಿಗೆ ಸೋಮನೆಂಬ ಹೆಸರು ಬಂದಿದೆ. ದೇವತೆಗಳು ಸ್ತುತಿಸಿದಂತೆಲ್ಲ ಈತನ ತೇಜಸ್ಸು ಹೆಚ್ಚಿ ಅದರಿಂದ ಓಷಧಿಗಳೆಲ್ಲ ರಸಯುಕ್ತವಾಗುತ್ತವೆ. ಇದರಿಂದ ಓಷಧೀಶ, ದ್ವಿಜರಾಜ ಎಂಬ ಹೆಸರುಗಳೂ ಬಂದಿವೆ. ಬ್ರಹ್ಮ ಈ ತರುಣನನ್ನು ಚಂದ್ರಗ್ರಹಮಂಡಲಕ್ಕೆ ಅಧಿಪತಿಯನ್ನಾಗಿ ಮಾಡುತ್ತಾನೆ. ಸೃಷ್ಟ್ಯಾದಿಯಿಂದ ಪ್ರಳಯಕಾಲದವರೆಗೂ ಶಾಶ್ವತವಾಗಿರುವ ಈ ಗ್ರಹಮಂಡಲ ರೂಪ ದೇವಗೃಹಗಳು ಪುಣ್ಯವಂತರ ಪುಣ್ಯಫಲ ಭೋಗಕ್ಕಾಗಿ ಸೃಷ್ಟಿಯಾಗಿವೆ. ಈಗ ನಡೆಯುತ್ತಿರುವ ವೈವಸ್ವತಮನ್ವಂತರದಲ್ಲಿ ಧರ್ಮಪ್ರಜಾಪತಿಯಿಂದ ವಸುಮ್ನಿ ಎಂಬುವಳಲ್ಲಿ ಹುಟ್ಟಿದ ಋಷಿ ಅಥವಾ ವಸು ಎಂಬಾತ ಚಂದ್ರನ ಸ್ಥಾನದಲ್ಲಿದ್ದಾನೆ. ಚಂದ್ರನಿಗೆ ಇಂದು ಓಷಧೀಶ, ಅಬ್ಜ, ಕುಮುದಬಂಧು, ಕಲಾನಿಧಿ, ಗ್ಲೌ, ರೋಹಿಣೀಕಾಂತ, ಕ್ಷಪಾಕರ, ನಿಶಾಕರ, ತಾರೇಶ, ನಕ್ಷತ್ರೇಶ, ಜೈವಾತೃಕ, ಹಿಮಕರ, ಅಮೃತಕಿರಣ, ವಿಧು ಹೆಸರುಗಳೂ ಪ್ರಚಲಿತವಾಗಿವೆ. ತನ್ನನ್ನು ನೋಡುವವರಿಗೆ ಆಹ್ಲಾದವನ್ನುಂಟು ಮಾಡುವುದರಿಂದಲೂ ತಾನು ಪ್ರಕಾಶಿಸುತ್ತಿರುವುದರಿಂದಲೂ ಈ ಗ್ರಹಕ್ಕೆ ಚಂದ್ರ ಎಂಬ ಹೆಸರು ಅನ್ವರ್ಥವಾಗಿ ಬಂದಿದೆ. ಉಳಿದ ಹೆಸರುಗಳು ಆತನ ಹುಟ್ಟು ಮತ್ತು ಗುಣಗಳನ್ನು ಅನುಸರಿಸಿ ಬಂದಿವೆ. ಬ್ರಹ್ಮ ಸೃಷ್ಟಿಸಲು ಇಷ್ಟಪಟ್ಟೊಡನೆಯೆ ಮನಸ್ಸಿನಿಂದ ಚಂದ್ರನನ್ನು ಸೃಷ್ಟಿಸಿದನೆಂದು ಸೂರ್ಯಸಿದ್ಧಾಂತದಲ್ಲಿ ಹೇಳಿದೆ.

**ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಶ್ರೀತತ್ವನಿಧಿ ಎಂಬ ಗ್ರಂಥದಲ್ಲಿ ನಿರೂಪಿತವಾಗಿರುವ ಚಿತ್ರದ ಪ್ರತಿಕೃತಿ. ಮೇಲುಗಡೆ ಚಂದ್ರ. ಎಡಭಾಗದಲ್ಲಿ ಅಧಿದೇವತೆ ಅಪ್‌ದೇವಿ, ಬಲಭಾಗದಲ್ಲಿ ಪ್ರತ್ಯಧಿದೇವತೆ ಗೌರಿ, ನಡುಭಾಗದಲ್ಲಿ ಚಂದ್ರ ಸಮಷ್ಟಿಯಂತ್ರ – ಇವನ್ನು ಚಿತ್ರಿಸಲಾಗಿದೆ**

ಚಂದ್ರ ದಕ್ಷಪುತ್ರಿಯರಲ್ಲಿ ನಕ್ಷತ್ರಸ್ವರೂಪರಾದ ಆಶ್ವಿನಿ ಮೊದಲಾದ 27 ಕನ್ಯೆಯರನ್ನು ಮದುವೆಯಾಗುತ್ತಾನೆ. ಆದರೆ ಅವರಲ್ಲಿ ರೋಹಿಣಿ ಎಂಬುವಳಲ್ಲಿ ಮಾತ್ರ ವಿಶೇಷವಾಗಿ ಲೋಲನಾಗಿರುತ್ತಾನೆ. ಉಳಿದವರು ಈ ವಿಷಯವನ್ನು ತಮ್ಮ ತಂದೆಯಾದ ದಕ್ಷಬ್ರಹ್ಮನಲ್ಲಿ ಹೇಳಿಕೊಳ್ಳಲು ಆತ ಚಂದ್ರನಿಗೆ ಕ್ಷಯರೋಗ ಪೀಡಿತನಾಗುವಂತೆ ಶಾಪವನ್ನು ಕೊಡುತ್ತಾನೆ. ಇದನ್ನು ಕೇಳಿದ ಚಂದ್ರ ಭಯಪಟ್ಟು ಶಿವನಲ್ಲಿ ಮೊರೆಯಿಡುತ್ತಾನೆ. ಶಿವ ಪ್ರೀತನಾಗಿ ಆಗವನಿಗೆ ಅಭಯಪ್ರದಾನ ಮಾಡಲು ಚಂದ್ರ ಸುಖವಾಗಿರುತ್ತಾನೆ. ಈ ಸ್ಥಿತಿಯನ್ನರಿತ ದಕ್ಷ ಶಿವನಿಗೆ ಶಾಪಕೊಡಬೇಕೆಂದು ಬಗೆಯುತ್ತಾನೆ. ಅಷ್ಟರಲ್ಲಿ ಬ್ರಹ್ಮವಿಷ್ಣುಗಳು ಅಲ್ಲಿಗೆ ಬಂದು ಚಂದ್ರನನ್ನು ಎರಡು ಭಾಗಮಾಡಿ ಒಂದು ಭಾಗಕ್ಕೆ ವೃದ್ಧಿಕ್ಷಯಗಳಿಲ್ಲದಂತೆ ಮಾಡಿ ಆ ಭಾಗವನ್ನು ನಕ್ಷತ್ರಗಳಿಗೆ ಕೊಡುತ್ತಾರೆ. ದಕ್ಷಶಾಪದಿಂದ ಖಿನ್ನನಾದ ಚಂದ್ರ ದಕ್ಷನ ಸಂಪತ್ತು ನಾಶವಾಗುವಂತೆ ಶಾಪಕೊಟ್ಟು ಎಲ್ಲಿಯೋ ಅಡಗಿಕೊಳ್ಳುತ್ತಾನೆ. ಚಂದ್ರ ದರ್ಶನವಿಲ್ಲದೆ ಪೈರುಗಿಡ ಮರಬಳ್ಳಿಗಳೆಲ್ಲ ಸಾರಹೀನವಾಗುತ್ತವೆ. ದೇವತೆಗಳೆಲ್ಲ ಆಗ ಬ್ರಹ್ಮನಲ್ಲಿ ಮೊರೆಯಿಡುತ್ತಾರೆ. ಬ್ರಹ್ಮನ ಸೂಚನೆಯಂತೆ ಅವರೆಲ್ಲ ಒಟ್ಟುಗೂಡಿ ಓಷಧಿಗಳನ್ನೆಲ್ಲ ತಂದು ಕ್ಷೀರಸಮುದ್ರದಲ್ಲಿ ಹಾಕಿ ಕಡೆಯುತ್ತಾರೆ. ಅಲ್ಲಿಂದ ಚಂದ್ರ ಉದ್ಭವಿಸಿ ಬರುತ್ತಾನೆ. ಶಾಪಗ್ರಸ್ತನಾದ ಚಂದ್ರ ಪ್ರಭಾಸತೀರ್ಥದಲ್ಲಿ ಸ್ನಾನಮಾಡಿದ ಕೂಡಲೆ ಕ್ಷಯರೋಗ ನಿವಾರಣೆಯಾಗುತ್ತದೆ.

ಚಂದ್ರ ಬೃಹಸ್ಪತ್ಯಾಚಾರ್ಯರಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಗುರುಪತ್ನಿಯಾದ ತಾರೆಗೂ ಈತನಿಗೂ ಮೋಹ ಅಂಕುರಿಸುತ್ತದೆ. ಬೃಹಸ್ಪತಿ ಇಲ್ಲದ ವೇಳೆಯಲ್ಲಿ ಚಂದ್ರ ತಾರೆಯನ್ನು ಅಪಹರಿಸುತ್ತಾನೆ. ಇದನ್ನು ತಿಳಿದ ಬೃಹಸ್ಪತಿ ಬ್ರಹ್ಮನಲ್ಲಿ ಮೊರೆಯಿಡುತ್ತಾನೆ. ಬ್ರಹ್ಮನ ಆದೇಶದಂತೆ ಚಂದ್ರ ತಾರೆಯನ್ನು ಬೃಹಸ್ಪತಿಗೆ ಒಪ್ಪಿಸುತ್ತಾನೆ. ಆ ವೇಳೆಗೆ ತಾರೆ ಚಂದ್ರನಿಂದ ಗರ್ಭ ಧರಿಸಿದ್ದ ಕಾರಣ ಮಗುವಿನ ವಿಚಾರದಲ್ಲಿ ವಿವಾದ ಹುಟ್ಟುತ್ತದೆ. ಬ್ರಹ್ಮ ತಾರೆಯಿಂದ ವಸ್ತುಸ್ಥಿತಿಯನ್ನು ತಿಳಿದು ಮಗು ಚಂದ್ರನಿಗೇ ಸೇರತಕ್ಕದೆಂದು ನಿಷ್ಕರ್ಷಿಸುತ್ತಾನೆ. ಇದರಿಂದ ತಾರೆಯಲ್ಲಿ ಜನಿಸಿದ ಬುಧ ಚಂದ್ರನ ಮಗನಾಗುತ್ತಾನೆ ಎಂದು–ಪುರಾಣಗಳಲ್ಲಿದೆ.

ಒಮ್ಮೆ ಪ್ರಾಚೇತಸಮುನಿ ಕ್ರುದ್ಧನಾಗಿ ಗಿಡಮರ ಬಳ್ಳಿಗಳನ್ನು ಸುಡಲು ತೊಡಗುತ್ತಾನೆ. ಆಗ ಓಷಧಿಗಳೆಲ್ಲ ತಮ್ಮ ಒಡೆಯನಾದ ಚಂದ್ರನಲ್ಲಿ ಮೊರೆಯಿಡುತ್ತವೆ. ಚಂದ್ರ ವೃಕ್ಷಪುತ್ರಿಯಾದ ಮಾರಿಷೆ ಎಂಬ ಕನ್ಯೆಯನ್ನು ಪ್ರಾಚೇತಸನಿಗೆ ಕೊಡಿಸಿ ಅವನ ಕೋಪವನ್ನು ಶಾಂತಗೊಳಿಸಿ ವೃಕ್ಷಗಳ ದುಃಖವನ್ನು ಪರಿಹರಿಸುತ್ತಾನೆಂದು ವಿಷ್ಣುಪುರಾಣದಲ್ಲಿದೆ.

ದೇವತೆಗಳೂ ದೈತ್ಯರೂ ಕೂಡಿ ಅಮೃತಕ್ಕಾಗಿ ಕ್ಷೀರಸಮುದ್ರವನ್ನು ಕಡೆದು ಅಮೃತವನ್ನು ಪಡೆದ ಬಳಿಕ ಅದರ ಪ್ರಾಶನಕ್ಕಾಗಿ ಎಲ್ಲರೂ ಕುಳಿತಿದ್ದ ವೇಳೆಯಲ್ಲಿ ರಾಹು ಎಂಬ ಅಸುರ ದೇವತೆಗಳ ಗುಂಪಿನಲ್ಲಿ ಸೇರಿ ತಾನೂ ಅಮೃತಪ್ರಾಶನ ಮಾಡುತ್ತಾನೆ. ಸೂರ್ಯ ಚಂದ್ರರು ಇದನ್ನು ವಿಷ್ಣುವಿಗೆ ತಿಳಿಸುತ್ತಾರೆ. ಕೂಡಲೇ ವಿಷ್ಣು ಆ ರಕ್ಕಸನ ಶಿರಸ್ಸನ್ನು ಕತ್ತರಿಸುತ್ತಾನೆ. ಆ ವೇಳೆಗೆ ರಕ್ಕಸ ಅಮೃತಪ್ರಾಶನ ಮಾಡಿದ್ದುದರಿಂದ ರಾಹುವಿನ ರುಂಡಮುಂಡಗಳೆರಡೂ ರಾಹು-ಕೇತುಗಳೆಂಬ ಹೆಸರಿನಿಂದ ಸಜೀವವಾಗುತ್ತವೆ. ಸೂರ್ಯಚಂದ್ರರು ತನ್ನ ಮೇಲೆ ದೂರು ಹೇಳಿದರೆಂಬ ದ್ವೇಷದಿಂದ ರಾಹು ಆಗಾಗ್ಗೆ, ವರ್ಷಕಾಲಗಳಲ್ಲಿ ಅವರನ್ನು ಪೀಡಿಸುತ್ತಾನೆ-ಎಂಬ ಪೌರಾಣಿಕ ಕಥೆ ಇದೆ.

ಗಣಪತಿ ತನ್ನ ಪತ್ನಿಯರಾದ ಸಿದ್ಧಿಬುದ್ಧಿಗಳೊಡನೆ ಮೂಷಕವಾಹವನ್ನೇರಿ ಲೋಕಸಂಚಾರ ಮಾಡುತ್ತ ಚಂದ್ರಲೋಕಕ್ಕೆ ಬಂದು ಅಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತಾನೆ. ಆಗ ಸೌಂದರ್ಯಸಂಪನ್ನನಾಗಿದ್ದ ಚಂದ್ರ ಗಣಪತಿಯ ರೂಪವನ್ನು ನೋಡಿ ಅಪಹಾಸ್ಯ ಮಾಡಿ ನಗುತ್ತಾನೆ. ಅದನ್ನು ಕಂಡು ಗಣಪತಿಗೆ ಕೋಪ ಬಂದು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ದುರದುರನೆ ಚಂದ್ರನನ್ನು ನೋಡಿ-ಎಲೌ ಮದಾಂಧನೆ ನಿನ್ನ ಗರ್ವವನ್ನು ನಾನು ಬಲ್ಲೆ. ನನ್ನನ್ನು ಹಾಸ್ಯ ಮಾಡಿದುದಕ್ಕೆ ತಕ್ಕ ಫಲವನ್ನು ನೀನು ಅನುಭವಿಸುತ್ತೀಯೆ. ಇಂದಿನಿಂದ ನಿನ್ನ ಸೌಂದರ್ಯ ಕುಂದಿಹೋಗಲಿ. ನೀನು ಮೃಗಲಾಂಛನನಾಗಿ ಬಾಳು. ಭಾದ್ರಪದ ಮಾಸ ಶುಕ್ಲಪಕ್ಷದ ಚತುರ್ಥಿಯಂದು ಯಾರು ನಿನ್ನನ್ನು ನೋಡುವರೋ ಅವರಿಗೆ ಮಿಥ್ಯಾಪವಾದ ಉಂಟಾಗಲಿ. ಇದು ನನ್ನ ಶಾಪ-ಎಂದು ಹೇಳುತ್ತಾನೆ. ಚಂದ್ರ ತನಗೆ ಬಂದ ಶಾಪಕ್ಕೆ ಹೆದರಿ ಕಂಗೆಟ್ಟು ಕಮಲಮಧ್ಯದಲ್ಲಿ ಅಡಗಿಕೊಳ್ಳುತ್ತಾನೆ. ಮುಂದೆ ಅವನ ಪ್ರಕಾಶವೇ ಇಲ್ಲದಂತಾಗುತ್ತದೆ. ಅಮೃತಪಾನಜೀವಿಗಳಾದ ದೇವತೆಗಳಿಗೆ ಅಮೃತಕಿರಣನಾದ ಚಂದ್ರನಿಲ್ಲದ ಕಾರಣ ಆಹಾರವೇ ಇಲ್ಲದಂತಾಗುತದೆ. ಇದರಿಂದ ನೊಂದ ದೇವತೆಗಳು ಬ್ರಹ್ಮನಲ್ಲಿಗೆ ಬಂದು ಆತನನ್ನು ರಕ್ಷಿಸುವಂತೆ ಪ್ರಾರ್ಥಿಸುತ್ತಾರೆ. ಆಗ ಬ್ರಹ್ಮ ಈ ಗಣಪತಿಯ ಶಾಪವನ್ನು ಪರಿಹರಿಸುವಂತೆ ಕೇಳಿಕೊಳ್ಳಬೇಕೆಂದು ತಿಳಿಸಿ ಸಂಕಷ್ಟಹರ ಗಣಪತಿವ್ರತವನ್ನು ಉಪದೇಶ ಮಾಡುತ್ತಾನೆ. ಚಂದ್ರ ಈ ವ್ರತದಿಂದ ಗಣಪತಿಯನ್ನು ತುಷ್ಟಿಪಡಿಸುತ್ತಾನೆ. ಬಳಿಕ ಪ್ರಾರ್ಥನೆಯಿಂದ ವಿಶಾಪವನ್ನು ಕೊಡುತ್ತಾನೆ. ಅದರಂತೆ ಭಾದ್ರಪದ ಶುದ್ಧ ಚತುರ್ಥಿಯಂದು ಚಂದ್ರನನ್ನು ಮೊದಲು ದರ್ಶನ ಮಾಡಿದವರಿಗೆ ಈ ದೋಷ ಉಂಟಾಗುವುದಿಲ್ಲ ಎಂದು ಸ್ಯಮಂತಕೋಪಾಖ್ಯಾನದ ಕಥೆ ಹೇಳುತ್ತದೆ.

ಚಂದ್ರ ಸ್ವಯಂಪ್ರಕಾಶವುಳ್ಳ ಗ್ರಹವಲ್ಲ, ಸಹಸ್ರಕಿರಣನಾದ ಸೂರ್ಯನ ಕಿರಣಗಳಲ್ಲಿ ಸುಷುಮ್ನಾ ಎಂಬ ಕಿರಣ ಪ್ರತಿಬಿಂಬಿತವಾಗುತ್ತದಾಗಿ ಆತ ಪ್ರಕಾಶಿಸುತ್ತಾನೆ. ಚಂದ್ರನ ದೇಹ ಶುಕ್ಲವರ್ಣದಿಂದ ಕೂಡಿ ಜಲಮಯವಾಗಿದೆ.

ಸೂರ್ಯನಿಗೆ ಕೆಳಗಿರುವ ಚಂದ್ರನ ಸೂರ್ಯಾಭಿಮುಖವಾದ ಅರ್ಧಭಾಗ ಸೂರ್ಯನ ಕಾಂತಿಯಿಂದ ಪ್ರಕಾಶಿಸುತ್ತದೆ. ಬಿಸಿಲಿನಲ್ಲಿಟ್ಟ ಮಡಕೆಯಂತೆ ಉಳಿದ ಅರ್ಧಭಾಗ ಕಪ್ಪಗಿರುತ್ತದೆ; ಜಲಮಯವಾದ ಚಂದ್ರನ ಮೇಲೆ ಸೂರ್ಯನ ಕಿರಣಗಳು ಬಿದ್ದು ಕನ್ನಡಿಯಲ್ಲಿನಂತೆ ಪ್ರತಿಬಿಂಬಿತವಾಗಿ ಅಲ್ಲಿರುವ ಕತ್ತಲೆ ಹೋಗುತ್ತದೆ ಎಂದು ವರಾಹಮಿಹಿರನ ಬೃಹತ್ ಸಂಹಿತೆಯಲ್ಲಿದೆ.

ಅಷ್ಟಮೂರ್ತಿ ಸ್ವರೂಪಗಳಲ್ಲಿ ಚಂದ್ರ ಮಹಾದೇವಸ್ವರೂಪಿ ಆಗಿದ್ದಾನೆ. ಶ್ರೀಕೃಷ್ಣಜಯಂತಿ ದಿವಸ ರೋಹಿಣಿಸಹಿತನಾದ ಚಂದ್ರನಿಗೆ ಅರ್ಘ್ಯಪ್ರದಾನ ಮಾಡುವುದು ಇಂದಿಗೂ ರೂಢಿಯಲ್ಲಿದೆ.

ಚಂದ್ರ ಸುತ್ತುವ ಕಕ್ಷೆಯ ಪ್ರಮಾಣ 3,24,000 ಯೋಜನಗಳು. ಒಂದು ಕಲ್ಪದಲ್ಲಿ ಚಂದ್ರ 5,77,33,00,000 ಬಾರಿ ಆವರ್ತಿಸುತ್ತಾನೆ. ಚಂದ್ರನನ್ನು ಮಂದೋಚ್ಚ ಮತ್ತು ಪಾತವೆಂಬ ಎರಡು ಶಕ್ತಿಗಳು ತಮ್ಮ ತಮ್ಮ ಕಡೆಗೆ ಸೆಳೆಯುತ್ತವೆ. ಈ ಸೆಳೆತದಿಂದ ಚಂದ್ರನಿಗೆ ಗತಿ ಉಂಟಾಗುತ್ತದೆ. ಒಂದು ಕಲ್ಪದಲ್ಲಿ ಚಂದ್ರನ ಮಂದೋಚ್ಚ 48,81,05,858 ಭಗಣಗಳು. ಚಂದ್ರನ ಪಾತ 23,23,11,168 ಭಗಣಗಳು. ಚಂದ್ರನ ದೈನಂದಿನ ಗತಿ 13 ಅಂಶ 34 ಕಲೆ 52 ವಿಕಲೆ 4 ಪ್ರವಿಕಲೆ ಎಂದು ಸೂರ್ಯಸಿದ್ಧಾಂತದಲ್ಲಿ ಉಕ್ತವಾಗಿದೆ.

ಭಾಸ್ಕರಾಚಾರ್ಯ ತಿಳಿಸಿರುವಂತೆ ಚಂದ್ರನ ಮೇಲ್ಭಾಗದಲ್ಲಿ ಪಿತೃದೇವತೆಗಳು ವಾಸಿಸುತ್ತಾರೆ.

> ಕನ್ನಡ ಜಾತಕತಿಲಕದ ಕರ್ತೃವಾದ ಶ್ರೀಧರಾಚಾರ್ಯ (1049)
> ಮೃದುವಾಕ್ಯನಸ್ಯಕ್ಸಾರಂ
> ಸುದೃಷ್ಟಿ ಮೇಧಾವಿ ನಿಡಿಯನನಿಲಕಫಾತ್ಮಂ
> ಸದಯಂ ಚೊಚ್ಚನೆ ಮೈ ಬ
> ಟ್ಟಿದನತಿಚಪಳಂ ಸುಖಪ್ರಿಯಾಸಸಿಯೆನಿಕುಂ

(ಮೃದುಭಾಷಿ, ರಕ್ತಪುಷ್ಟ, ನೋಡಲು ಸುಂದರ, ಮೇಧಾವಿ, ಸ್ನೇಹಪರ, ದಯಾವಂತ, ಎತ್ತರವಾದ ಕಫವಾತಗಳಿಂದ ಕೂಡಿದ ಗುಂಡುಶರೀರ, ಬಿಳುಪು ಬಣ್ಣ, ಚಪಲಸ್ವಭಾವದವ) ಎಂದು ಚಂದ್ರಸ್ವರೂಪವನ್ನು ವರ್ಣಿಸಿದ್ದಾನೆ.

ವಿಷ್ಣುವಿನ ಕಣ್ಣೂ ಶಂಕರನ ಶಿರೋಭೂಷಣವೂ ಅತ್ರಿಪುತ್ರನೂ ಶ್ವೇತವಸ್ತ್ರಧಾರಿಯೂ ಗದಾಪಾಣಿಯೂ ಸರ್ವಾಭರಣಭೂಷಿತನೂ ಶ್ವೇತಛತ್ರದಿಂದ ಕೂಡಿದವನೂ ಹತ್ತು ಬಿಳಿಕುದುರೆಗಳುಳ್ಳ ರಥದಲ್ಲಿ ಚತುರಸ್ರಾಕಾರದ ಪೀಠದ ಮೇಲೆ ಪಶ್ಚಿಮಾಭಿಮುಖನಾಗಿ, ಅಭಯ ಮತ್ತು ವರದ ಮುದ್ರೆಗಳಿಂದ ಕೂಡಿ ವಿರಾಜಿಸುತ್ತಿರುವ ಚಂದ್ರನನ್ನು ಧ್ಯಾನಿಸಿದರೆ ಕ್ಷಯ, ಅಪಸ್ಮಾರ, ಕುಷ್ಠ, ತಾಪಜ್ವರ ಮೊದಲಾದ ಉಪದ್ರವಗಳು ನಿವಾರಿತವಾಗಿ ಸರ್ವ ಸಂಪತ್ಸಮೃದ್ಧಿಯುಂಟಾಗುತ್ತದೆಯೆಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ಚಂದ್ರಗ್ರಹವನ್ನು ಉದ್ದೇಶಿಸಿ ಮಾಡುವ ಹೋಮದಲ್ಲಿ ಪಲಾಶಸಮಿತ್ತನ್ನು ಉಪಯೋಗಿಸಬೇಕು. ನವಗ್ರಹಪೂಜೆ ಮಾಡುವಾಗ ಚಂದ್ರನನ್ನು ಆಗ್ನೇಯಭಾಗದಲ್ಲಿಟ್ಟು ಪೂಜಿಸಬೇಕು.

ಕಾಮಶಾಸ್ತ್ರದಲ್ಲಿ

> ಪೂಷಾಯಶಾಸುಮನಸಾ ರತಿಪ್ರಾಪ್ತಿಸ್ತಥಾ ಧೃತಿಃ
> ಋದ್ಧಿಸ್ಸೌಮ್ಯಾಮರೀಚಿಶ್ಚ ತಥಾಚೈವಾಂಶುಮಾಲಿನೀ
> ಅಂಗಿರಾ ಶಶಿನೀಚೇತಿ ಛಾಯಾ ಸಂಪೂರ್ಣಮಂಡಲಾ
> ತುಷ್ಟಿಶ್ಚೈವಾಮೃತಾ ಚೇತಿ ಕಲಾಸ್ಸೋಮಸ್ಯ ಷೋಡಶ ಎಂದೂ

ಮಂತ್ರಶಾಸ್ತ್ರದಲ್ಲಿ

> ಅಮೃತಾ ಮಾನದಾ ಪೂಷಾ ಪುಷ್ಟಿಸ್ತುಷ್ಟೀ ರತಿರ್ಧೃತಿಃ
> ಶಶಿನೀ ಚಂದ್ರಿಕಾ ಕಾಂತಿರ್ಜ್ಯೋತ್ಸ್ನಾ ಶ್ರೀಃ ಪ್ರೀತಿರಂಗದಾ
> ಪೂರ್ಣಾಪೂರ್ಣಾಮೃತಾಕಾಮದಾಯಿನ್ಯಃ ಶಶಿನಃ ಕಲಾಃ

ಎಂದೂ ಚಂದ್ರನ ಹದಿನಾರು ಕಲೆಗಳು ಉಕ್ತವಾಗಿವೆ.

ತಿಥಿಭೇದದಿಂದ ಸ್ತ್ರೀಯರ ಅಂಗವಿಶೇಷಗಳಲ್ಲಿ ಇರುವ ಕಾಮನನ್ನು ಪ್ರತ್ಯೇಕವಾಗಿ ಓಂಕಾರಸಹಿತ ಈ ಕಲಾನಾಮರೂಪ ಮಂತ್ರಗಳಿಂದ ಚಲಿಸುವಂತೆ ಮಾಡಬಹುದು. ಚಂದ್ರಗ್ರಹಕ್ಕೆ ಅಧಿದೇವತೆ ಅಪ್ಪು (ನೀರು), ಪ್ರತ್ಯಧಿದೇವತೆ ಉಮಾ(ಗೌರಿ).

ಶುಕ್ಲಪಕ್ಷದ ಪ್ರಾರಂಭದಲ್ಲಿ ಏಕಕಲಾಮಾತ್ರದಿಂದ ಕೂಡಿದ ಚಂದ್ರ ಒಂದೊಂದು ತಿಥಿಗೆ ಒಂದೊಂದು ಕಲೆಯಂತೆ ಕೂಡಿಕೊಂಡು ಪೂರ್ಣಿಮಾ ತಿಥಿಯಲ್ಲಿ ಷೋಡಶಕಲಾಪರಿಪೂರ್ಣನಾಗುತ್ತಾನೆ. ಸೂರ್ಯನ ತೇಜಸ್ಸಿನಿಂದ ಈತ ವೃದ್ಧಿಹೊಂದುತ್ತಾನೆ. ಕೃಷ್ಣಪಕ್ಷದಲ್ಲಿ ಪ್ರಥಮ ಮೊದಲಾದ ತಿಥಿಕ್ರಮದಲ್ಲಿ ಅಗ್ನಿ, ವಾಯು, ವಿಶ್ವೇದೇವರು, ಪ್ರಜಾಪತಿ, ವರುಣ, ವಾಸವ, ದಿವ್ಯಋಷಿಗಳು, ಅಷ್ಟವಸುಗಳು, ಇಂದ್ರ, ಮರುದ್ದೇವತೆಗಳು, ರುದ್ರ, ವಿಷ್ಣು, ಕುಬೇರ, ಪಶುಪತಿ, ಪಿತೃಗಳು-ಇವರು ಅಮೃತರೂಪದ ಚಂದ್ರನ ಕಲೆಗಳನ್ನು ಪಾನಮಾಡುವುದರಿಂದ ಚಂದ್ರ ಕ್ಷಯಿಸಿ ಅಮಾವಾಸ್ಯೆಯಲ್ಲಿ ಏಕಕಲಾವಶಿಷ್ಟನಾಗುತ್ತಾನೆ.

ಶುಕ್ಲಪಕ್ಷ ಪಾಡ್ಯದಿಂದ ಚಂದ್ರಬಿಂಬದ ಕೆಳಪಾರ್ಶ್ವದಿಂದ ಶೌಕ್ಲ್ಯ ವೃದ್ಧಿಯಾಗುತ್ತದೆ. ಇದು ಶೃಂಗದಂತೆ ಕಾಣುತ್ತದೆ. ಕೆಲವು ವೇಳೆ ಉತ್ತರಕ್ಕೆ ಶೃಂಗ ಎದ್ದು ಕಾಣುತ್ತದೆ. ಭಾರತದಲ್ಲಿ ಸಾಧಾರಣವಾಗಿ ಇದು ಮಿಥುನ ಮಾಸದಿಂದ ಮಕರ ಮಾಸದವರೆಗೆ ಆಗುತ್ತದೆ. ವೃಷಭ ಮತ್ತು ಕುಂಭಮಾಸಗಳಲ್ಲಿ ಚಂದ್ರನ ಎರಡು ಶೃಂಗಗಳೂ ಸಮವಾಗಿರುತ್ತವೆ. ಉಳಿದ ತಿಂಗಳುಗಳಲ್ಲಿ ಶೃಂಗ ದಕ್ಷಿಣಕ್ಕೆ ಎದ್ದು ಕಾಣುತ್ತದೆ.

ಈ ಶೃಂಗೋನ್ನತಿಯನ್ನು ನೋಡಿ ದೇಶಕ್ಕೆ ಆಗುವ ಹತ್ತು ಬಗೆಯ ಫಲಗಳನ್ನು ವರಾಹಮಿಹಿರಾಚಾರ್ಯ ತಿಳಿಸಿರುತ್ತಾರೆ.

ಶೃಂಗ ಎದ್ದಿರುವುದು ಹಡಗಿನಂತೆ ಕಂಡರೆ ನೌಸಂಸ್ಥಾ. ಇದರಿಂದ ನಾವಿಕರಿಗೆ ಪೀಡೆ, ಲೋಕಕಲ್ಯಾಣ. ನೇಗಿಲಿನಂತೆ ಅರ್ಧ ಮೇಲಕ್ಕೆದ್ದಿದ್ದರೆ ಲಾಂಗಲ. ರೈತರಿಗೆ ತೊಂದರೆ. ದಕ್ಷಿಣ ಶೃಂಗ ಅರ್ಧಮಾತ್ರ ಮೇಲಕ್ಕೆ ಕಂಡರೆ ದುಷ್ಟ ಲಾಂಗಲ. ಅಶುಭ. ಎರಡು ಶೃಂಗಗಳೂ ಸಮನಾಗಿದ್ದರೆ ಸಮಶೃಂಗ. ಸುಭಿಕ್ಷ. ಶೃಂಗ ಎದ್ದುಕಾಣದೆ ಕೋಲಿನಂತೆ ಒಂದೇ ಸಮನಾಗಿ ಕಂಡರೆ ದಂಡ. ಹಸುಗಳಿಗೆ ಪೀಡೆ, ಬಿಲ್ಲಿನ ಆಕಾರದಲ್ಲಿ ಕಂಡರೆ ಕಾರ್ಮುಕ. ಯುದ್ಧ ಭಯ. ದಕ್ಷಿಣೋತ್ತರ ವಿಸ್ತಾರವಾಗಿ ಕಂಡರೆ ಯುಗ. ಭೂಕಂಪ. ಯುಗ ಸಂಸ್ಥೆಯಲ್ಲಿ ದಕ್ಷಿಣಭಾಗ ಸ್ವಲ್ಪ ಎದ್ದು ಕಂಡರೆ ಪಾರ್ಶ್ವಶಾಯಿ, ದೇಶಾಂತರ ವ್ಯಾಪಾರಸ್ಥರಿಗೆ ನಷ್ಟ. ದಕ್ಷಿಣ ಶೃಂಗ ಹೆಚ್ಚಾಗಿ ಬಗ್ಗಿದ್ದರೆ ಅವರ್ಜಿತ. ಸುಭಿಕ್ಷವಿಲ್ಲ. ಖಂಡರೇಖೆಯಂತೆ ಕಂಡರೆ ಕುಂಡಲ್ಲಿ, ರಾಜನಿಗೆ ಪದಚ್ಯುತಿ. ಉತ್ತರ ಶೃಂಗವಾದರೆ ಶ್ರೇಯಸ್ಕರ. ಚಂದ್ರನಲ್ಲಿ ಒಂದೇ ಶೃಂಗವನ್ನು ಕಂಡರೆ ಇಲ್ಲವೆ ಶುಕ್ಲಪಕ್ಷದಲ್ಲಿ ಕೆಳಮುಖವಾದ ಶೃಂಗವನ್ನು ಕಂಡರೆ ನೋಡಿದವನಿಗೆ ಸಾವು ನಿಶ್ಚಯ. ಚಂದ್ರನ ಆಕಾರ ಚಿಕ್ಕದಾಗಿ ಕಂಡರೆ ದೇಶಕ್ಕೆ ದುರ್ಭಿಕ್ಷಭಯ. ದೊಡ್ಡದಾಗಿ ಕಂಡರೆ ಸುಭಿಕ್ಷ. ಮಧ್ಯಾಕಾರದಲ್ಲಿ ಕಂಡರೆ ಕ್ಷುದ್ಭಯ.

ಚಂದ್ರನ ಶೃಂಗ ಕುಜನಿಂದ ಆಹತವಾದಂತೆ ಕಂಡರೆ ಮ್ಲೇಚ್ಛದೇಶಕ್ಕೆ ತೊಂದರೆ. ಬುಧನಿಂದ ಆಹತವಾದರೆ ಶಸ್ತ್ರಕ್ಷುದ್ಭಯ. ಗುರುವಿನಿಂದ ಆಹತವಾದರೆ ಶ್ರೇಷ್ಠ ಪ್ರಮುಖ ವ್ಯಕ್ತಿಯ ಮರಣ. ಶುಕ್ರನಿಂದ ಆಹತವಾದರೆ ಅಲ್ಪರಾಜರ ಮರಣ.

ಚಂದ್ರ ಬೆಳ್ಳಗೆ ಮಲ್ಲೆಹೂವಿನಂತೆ ಕಾಂತಿಯಿಂದ ಕೂಡಿರುವಂತೆ ಕಂಡರೆ ಜಗತ್ತಿಗೆ ಮಂಗಳ.

ಭೂಮಿಯ ಛಾಯೆ ಚಂದ್ರನ ಮೇಲೆ ಬಿದ್ದಾಗ ಚಂದ್ರಗ್ರಹಣ ಸಂಭವಿಸುತ್ತದೆ. ಭೂಛಾಯೆಯನ್ನು ಪೂರ್ವಾಭಿಮುಖವಾಗಿ ಚಂದ್ರ ಪ್ರವೇಶಿಸುವುದರಿಂದ ಚಂದ್ರಬಿಂಬದ ಪಶ್ಚಿಮ ಭಾಗದಲ್ಲಿ ಗ್ರಹಣ ಸ್ಪರ್ಶವಾಗುವಂತೆ ನಮಗೆ ಕಾಣುತ್ತದೆ. ಈ ಗ್ರಹಣಕಾಲದಲ್ಲಿ ರಾಹು–ಕೇತುಗಳ ಸಾನ್ನಿಧ್ಯವಿರುತ್ತದೆಂಬ ಪ್ರಾಚೀನರ ಅಭಿಪ್ರಾಯದಂತೆ ರಾಹುಗ್ರಸ್ತ ಕೇತುಗ್ರಸ್ತ ಎಂದು ಇಂದಿಗೂ ಹೇಳುತ್ತಾರೆ. ಗ್ರಹಣಕಾಲದಲ್ಲಿ ಮಾಡುವ ತರ್ಪಣ ಹೋಮಾದಿಗಳ ಫಲ ಆ ರಾಹುಕೇತುಗಳಿಗೆ ತಲುಪುತ್ತವೆ. ಗ್ರಹಣ ಹಿಡಿದಿರುವಾಗ ಚಂದ್ರ ಅಸ್ತನಾದರೆ, ಗ್ರಹಣ ಹಿಡಿದಿರುವಾಗಲೇ ಉದಯಿಸಿದರೆ ವಿಶೇಷ ಫಲಗಳು ಉಕ್ತವಾಗಿವೆ.

ಜ್ಯೋತಿಷ ಫಲಶಾಸ್ತ್ರದಲ್ಲಿ ಚಂದ್ರನ ಪಾತ್ರ ಅತಿಮುಖ್ಯವಾದದ್ದು. ಚಾಂದ್ರಬಲಂ ಹಿ ನಿಖಿಲ ಗ್ರಹವೀರ್ಯಬೀಜಂ ಎಂದು ಮಾಧವಾಚಾರ್ಯರು ತಿಳಿಸಿರುತ್ತಾರೆ. ಚಂದ್ರ–ತಾರಾಬಲವಿಲ್ಲದೆ ಜನ ಯಾವ ಕೆಲಸವನ್ನೂ ಮಾಡುವುದಿಲ್ಲ. ಚಂದ್ರನಿರುವ ನಕ್ಷತ್ರವೇ ದೈನಂದಿನ ನಕ್ಷತ್ರ. ಜನ್ಮಕಾಲದಲ್ಲಿ ಚಂದ್ರನಿರುವ ನಕ್ಷತ್ರ ಜನ್ಮನಕ್ಷತ್ರ. ಜನ್ಮನಕ್ಷತ್ರದಿಂದ ಇಷ್ಟದಿನದ ನಕ್ಷತ್ರದವರೆಗೆ ಲೆಕ್ಕಮಾಡಿ ಬಂದ ಸಂಖ್ಯೆಯಿಂದ ತಾರಾಬಲವನ್ನು ನೋಡುವುದು ಇಂದಿಗೂ ರೂಢಿಯಲ್ಲಿದೆ. ಜನ್ಮನಕ್ಷತ್ರ ಯಾವ ರಾಶಿಗೆ ಸೇರುತ್ತದೋ ಅದೇ ಜನ್ಮರಾಶಿ, ದೈನಂದಿನ ನಕ್ಷತ್ರ ಯಾವ ರಾಶಿಗೆ ಸೇರುತ್ತದೋ ಅದು ಚಂದ್ರನಿರುವ ರಾಶಿ. ಜನ್ಮರಾಶಿಯಿಂದ ಚಂದ್ರನಿರುವ ರಾಶಿಯವರೆಗೆ ಲೆಕ್ಕಮಾಡಿ ಚಂದ್ರಬಲವನ್ನು ಗಣನೆ ಮಾಡುತ್ತಾರೆ. ಜನ್ಮರಾಶಿಯಿಂದ 3,6,7,10,11ನೆಯ ರಾಶಿಗಳಲ್ಲಿ ಚಂದ್ರನಿದ್ದರೆ ಚಂದ್ರ ಬಲವಿರುತ್ತದೆ. ಇದು ಶುಭಪ್ರದ. ಕೃಷ್ಣಪಕ್ಷದಲ್ಲಿ ಚಂದ್ರಬಲ ಮುಖ್ಯ. ನಿಸರ್ಗಬಲದಲ್ಲಿ ಸೂರ್ಯನನ್ನು ಬಿಟ್ಟರೆ ಚಂದ್ರನೇ ಅತಿಬಲಿಷ್ಠ ಗ್ರಹ.

ಚಂದ್ರನಿಗೆ ಸೂರ್ಯ, ಬುಧರು ಮಿತ್ರರು. ಉಳಿದವರು ಮಧ್ಯಸ್ಥರು. ಶತ್ರುಗಳಿಲ್ಲ. ಚಂದ್ರಬಿಂಬದಲ್ಲಿ ಅರ್ಧಕ್ಕಿಂತ ಅಧಿಕ ಶುಕ್ಲವರ್ಣವಿದ್ದಾಗ ಚಂದ್ರ ಶುಭಗ್ರಹವೆಂದೂ ಶೌಕ್ಲ್ಯ ಅರ್ಧಕ್ಕಿಂತ ಕಡಿಮೆಯಾಗಿದ್ದಾಗ ಪಾಪಗ್ರಹವೆಂದೂ ಪರಿಗಣಿತನಾಗಿದ್ದಾನೆ. ಶುಕ್ಲಪಕ್ಷದ ಅಷ್ಟಮಿಯಿಂದ ಕೃಷ್ಣಪಕ್ಷದ ಅಷ್ಟಮಿವರೆಗಿನ ಚಂದ್ರ ಶುಭಗ್ರಹ, ಉಳಿದ ಕಾಲದ ಚಂದ್ರ ಪಾಪಗ್ರಹ, ಮೇಷಾದಿ ಹನ್ನೆರಡು ರಾಶಿಗಳಲ್ಲಿ ಕರ್ಕಾಟಕ ಚಂದ್ರನ ರಾಶಿ. ವೃಷಭ ಉಚ್ಚರಾಶಿ. ಅದರಲ್ಲಿ ಮೂರನೆಯ ಅಂಶ ಪರಮೋಚ್ಚ ಭಾಗ. ಆತನಿಗೆ ಮೂಲ ತ್ರಿಕೋಣ ವೃಷಭರಾಶಿಯೇ ಆಗಿದೆ. ವಾಯವ್ಯದಿಕ್ಕಿಗೆ ಚಂದ್ರ ಅಧಿಪತಿ. ಮನಸ್ಸಿಗೆ ಕಾರಕ.

ಐದನೆಯ ತಿಂಗಳಿನಲ್ಲಿ ಗರ್ಭಕ್ಕೆ ಚಂದ್ರ ಅಧಿಪತಿ. ಗರ್ಭಸ್ಥಶಿಶುವಿಗೆ ಈ ಕಾಲದಲ್ಲಿ ಧರ್ಮ ಹುಟ್ಟುತ್ತದೆ. ಮತ್ತೆ ಗರ್ಭದ ಒಂಬತ್ತನೆಯ ತಿಂಗಳಿಗೂ ಚಂದ್ರನೇ ಅಧಿಪತಿ. ಗರ್ಭಿಣಿಯ ಪ್ರಸವಕಾಲವನ್ನು ಪ್ರಶ್ನಕಾಲದಲ್ಲಿ ಚಂದ್ರನಿರುವ ದ್ವಾದಶಾಂಶದಿಂದ ತಿಳಿಯಬಹುದು. ಚಂದ್ರ ಮಾತೃಕಾರಕ. ಮಾತೃವಿಗೆ ಸಂಬಂಧಪಟ್ಟ ವಿಚಾರವನ್ನು ಜಾತಕದಲ್ಲಿರುವ ಚಂದ್ರನ ಸ್ಥಿತಿಯಿಂದ ತಿಳಿಯಬಹುದು. ಜನನಕಾಲದಲ್ಲಿ ಚಂದ್ರ ಲಗ್ನದಿಂದ ಷಷ್ಠ–ಅಷ್ಟಮೀ–ವ್ಯಯಸ್ಥಾನಗಳಲ್ಲಿದ್ದರೆ ಮಗುವಿಗೂ ತಾಯಿಗೂ ತೊಂದರೆ ಉಂಟಾಗುತ್ತದೆ.

ಜನನಕಾಲದಲ್ಲಿ ಚಂದ್ರನಿರುವ ಸ್ಥಾನದಿಂದ ಫಲಗಳು ಉಕ್ತವಾಗಿವೆ. ಲಗ್ನ ಮೇಷ–ವೃಷಭ–ಕರ್ಕಾಟಕ ಆಗಿ ಅಲ್ಲಿ ಚಂದ್ರನಿದ್ದರೆ ಶಿಶು ಸುಂದರವಾಗಿರುವುದಲ್ಲದೆ ಮುಂದೆ ಧನಧಾನ್ಯ ಸಮೃದ್ಧಿಯುಳ್ಳದ್ದಾಗಿರುತ್ತದೆ. ಲಗ್ನದಿಂದ ಎರಡನೆಯ ಸ್ಥಾನದಲ್ಲಿ ಚಂದ್ರನಿದ್ದರೆ ಸೌಖ್ಯ, ಸ್ತ್ರೀವಿಲಾಸ, ದೈವಭಕ್ತಿ, ಪ್ರತಾಪ. ಮೂರನೆಯ ಸ್ಥಾನದಲ್ಲಿದ್ದರೆ ಧನಲಾಭ, ವಿಕ್ರಮ. ನಾಲ್ಕನೆಯ ರಾಶಿಯಲ್ಲಿ ಬಂಧುಸ್ತ್ರೀಪುತ್ರಸಂತೋಷ, ಗುರುದೈವಭಕ್ತಿ, ನಮ್ರಸ್ವಭಾವ. ಐದನೆಯ ಸ್ಥಾನದಲ್ಲಿ ಸಂತಾನಸೌಖ್ಯ, ನಿರ್ಮಲಬುದ್ಧಿ, ಆರನೆಯ ಸ್ಥಾನದಲ್ಲಿ ಬಹುಶತ್ರುವಿದ್ದರೂ ಪ್ರತಾಪಶಾಲಿ, ಮಾತೃಸೇವಾರಹಿತ, ರೋಗಿ, ನಿತ್ಯಶತ್ರು, ದುರ್ಬುದ್ಧಿ. ಏಳನೆಯ ಸ್ಥಾನದಲ್ಲಿ ಸ್ತುತಿಯೋಗ್ಯ, ಯೌವನ, ಚತುರಬುದ್ಧಿ, ಹತ್ತನೆಯ ಸ್ಥಾನದಲ್ಲಿ ಬಹುಪ್ರಿಯ, ಬಂಧುಸೌಖ್ಯ, ಪುಣ್ಯಭಾಗಿ, ಹನ್ನೊಂದನೆಯ ಸ್ಥಾನದಲ್ಲಿ ಸರ್ವಸ್ತುತ್ಯ, ಪ್ರಸನ್ನತೆ. ಹನ್ನೆರಡನೆಯ ಸ್ಥಾನದಲ್ಲಿ ವಿವಾಹಾದಿ ಮಂಗಳಕಾರ್ಯಗಳಲ್ಲಿ ಅಧಿಕ ಧನವ್ಯಯ, ರಕ್ತಸಂಬಂಧವಾದ ರೋಗ, ಬಹುಶತ್ರು.

ಈ ಫಲಗಳು ಜ್ಯೋತಿಷ ಫಲ ಗ್ರಂಥದಲ್ಲಿ ಉಕ್ತವಾಗಿವೆ.

ಮನುಷ್ಯನ ನೂರಿಪ್ಪತ್ತು ವರ್ಷಗಳ ಅವಧಿಯನ್ನು ಒಂಬತ್ತು ಗ್ರಹಗಳಿಗೂ ವಿಭಾಗ ಮಾಡಿ ಅವರವರ ದೇಶಕಾಲವನ್ನು ಗೊತ್ತುಮಾಡಿದ್ದಾರೆ. ಈ ವಿಭಾಗದಂತೆ ಚಂದ್ರನ ದಶಾಕಾಲ ಹತ್ತು ವರ್ಷಗಳು. ಸೂರ್ಯನ ದಶೆ ಕಳೆದ ಮೇಲೆ ಚಂದ್ರನ ದಶೆ ಪ್ರಾರಂಭವಾಗುತ್ತದೆ. ರೋಹಿಣಿ, ಹಸ್ತ, ಶ್ರವಣ ನಕ್ಷತ್ರಗಳಲ್ಲಿ ಹುಟ್ಟಿದವರಿಗೆ ಚಂದ್ರದಶೆ ಪ್ರಾರಂಭದಲ್ಲೇ ಬರುತ್ತದೆ.

ಚಂದ್ರ ದುಷ್ಟಸ್ಥಾನದಲ್ಲಿದ್ದು ಅಶುಭಫಲಪ್ರದನೆಂದು ತಿಳಿದುಬಂದಾಗ ಚಂದ್ರ ಶಾಂತಿಗಾಗಿ ತಂಡುಲದಾನ, ಮುಕ್ತಾಫಲದಾನ, ಘೃತಯುಕ್ತಪಾಯಸದಾನ, ಶುಭವಸ್ತ್ರದಾನ, ಶ್ವೇತಗೋದಾನ, ರೌಪ್ಯದಾನ, ಚಂದ್ರಮಂತ್ರಜಪ–ಇವೇ ಮೊದಲಾದ ಶಾಂತಿಗಳನ್ನು ನಡೆಸುವುದರಿಂದ ಕೆಟ್ಟಫಲಗಳು ಹೋಗುತ್ತವೆಯೆಂದು ಗ್ರಂಥಗಳಲ್ಲಿ ಉಕ್ತವಾಗಿದೆ. ಅದರಂತೆ ಇಂದಿಗೂ ಜನ ಶಾಂತಿಯನ್ನು ಮಾಡುತ್ತಾರೆ.

ಕವಿಸಮಯದಲ್ಲೂ ಚಂದ್ರ ಪ್ರಮುಖ ಪಾತ್ರ ವಹಿಸಿದ್ದಾನೆ. ಸೌಂದರ್ಯವರ್ಣನೆಯಲ್ಲಿ ಮುಖವನ್ನು ಚಂದ್ರನಿಗೆ ಹೋಲಿಸುತ್ತಾರೆ. ವಿರಹಿಗಳಿಗೆ ಚಂದ್ರೋದಯವಾದಾಗ ತಾಪ ಅಧಿಕವಾಗುವುದನ್ನೂ ಕಾಮಿಗಳಿಗೆ ಕಾಮೋದ್ರೇಕವಾಗುವುದನ್ನೂ ಕವಿಗಳು ಬಗೆಬಗೆಯಾಗಿ ವರ್ಣಿಸಿದ್ದಾರೆ. (ಎಸ್.ಎನ್.ಕೆ.)

**ಚಂದ್ರ**[2] : ದೆಹಲಿಯ ಸಮೀಪದಲ್ಲಿ, ಈಗ ರಾಜಧಾನಿಯ ಒಂದು ಉಪನಗರವಾಗಿರುವ ಮೆಹರೌಲಿ ಎಂಬ ಗ್ರಾಮದಲ್ಲಿ ನಿಲ್ಲಿಸಿದ ಕಬ್ಬಿಣದ ಕಂಬದ ಮೇಲೆ ಕೊರೆಯಲಾದ, 5ನೆಯ ಶತಮಾನಕ್ಕೆ ಸೇರಿದ, ಸಂಸ್ಕೃತ ಭಾಷೆಯ, ಆರು ಸಾಲುಗಳುಳ್ಳ, ಶಾಸನದಲ್ಲಿ ಉಲ್ಲೇಖಿತನಾದ ಒಬ್ಬ ದೊರೆ. ಅದರಲ್ಲಿ ಈತನ ಪ್ರಶಸ್ತಿ ಇದೆ. ಈತ ಕುರುಕ್ಷೇತ್ರ ಮತ್ತು ಬೀಯಾಸ್ ನದಿಯ ಸಮೀಪದ ವಿಷ್ಣುಪದವೆಂಬ ಗಿರಿಯಲ್ಲಿ ವಿಷ್ಣುಧ್ವಜವನ್ನು ಸ್ಥಾಪಿಸಿದನೆಂದು ಶಾಸನ ಹೇಳುತ್ತದೆ. ಈ ಚಂದ್ರ ಸ್ವಸಾಮರ್ಥ್ಯದಿಂದ ಪೂರ್ವದಲ್ಲಿ ವಂಗ, ಪಶ್ಚಿಮದಲ್ಲಿ ಸಿಂಧೂಮುಖ, ದಕ್ಷಿಣದಲ್ಲಿ ಜಲನಿಧಿ ಮತ್ತು ಉತ್ತರದಲ್ಲಿ ವಹ್ಲಿಕದವರೆಗಿನ ಪ್ರದೇಶವನ್ನು ದಿಗ್ವಿಜಯದಿಂದ ಸಾಧಿಸಿದನೆಂದಿದೆ. ಇದು ಉತ್ಪ್ರೇಕ್ಷೆಯಾಗಿದ್ದಿರಬಹುದು. ಈ ಚಂದ್ರ ಯಾರು ಎಂಬ ವಿಷಯದಲ್ಲಿ ವಿವಾದಗಳೆದ್ದಿದ್ದುವು. ಈತ ಮೌರ್ಯ ಚಂದ್ರಗುಪ್ತನೆಂದು ಮೊದಲು ಮಾಡಿದ ಊಹೆಯನ್ನು ಅಲ್ಲಗಳೆಯಲಾಗಿದೆ. ಸುಸುನಿಯ ಶಾಸನದ ಚಂದ್ರವರ್ಮ, ನಾಗವಂಶದ ಚಂದ್ರಾಂಶು, ಗುಪ್ತರ ಒಂದನೆಯ ಚಂದ್ರಗುಪ್ತ ಇವರುಗಳಲ್ಲಿ ಒಬ್ಬನಾಗಿರಬಹುದೆಂದು ಬೇರೆಬೇರೆ ಪಂಡಿತರು ಸೂಚಿಸಿದ್ದಾರೆ. ಆದರೂ ಶಾಸನದ ಕಾಲ, ಈತ ದಿಗ್ವಿಜಯಕ್ಕೆ ಹೊರಟನೆಂಬ ವಿಷಯ, ವಿಷ್ಣುಧ್ವಜವನ್ನು ಸ್ಥಾಪಿಸಿದ ಉಲ್ಲೇಖ, ದೆಹಲಿ ಹಾಗೂ ಸುತ್ತಲಿನ ಪ್ರದೇಶಗಳು ಅವನ ಅಧೀನದಲ್ಲಿದ್ದುವೆಂಬುದು–ಈ ವಿಷಯಗಳನ್ನು ಪರಿಗಣಿಸಿದರೆ ಈತ ಗುಪ್ತ ಮನೆತನದ ಇಮ್ಮಡಿ ಚಂದ್ರಗುಪ್ತನೇ ಆಗಿರಬಹುದೆಂಬ ಅಭಿಪ್ರಾಯ ಈಗ ಬಹುಮಾನ್ಯವಾಗಿದೆ. ಈ ಶಾಸನ ಚಂದ್ರಗುಪ್ತನ ಮರಣಾನಂತರ ಅಸ್ತಿತ್ವಕ್ಕೆ ಬಂತೆಂದು ಹೇಳಲಾಗಿದೆ. (ಜಿ.ಬಿ.ಆರ್.)

**ಚಂದ್ರ ಕವಿ** : ವಿಜಯನಗರದ ಅರಸ ಪ್ರೌಢದೇವರಾಯನ (1419–46) ಆಸ್ಥಾನದಲ್ಲಿದ್ದ ಕವಿ. ಈತನಿಗೆ ಚಂದ್ರಶೇಖರ ಎಂಬ ಹೆಸರೂ ಇದೆ. ಈತ ಪಂಪಾ ವಿರೂಪಾಕ್ಷಸ್ಥಾನ ವರ್ಣನೆ. ಗುರುಮೂರ್ತಿಶಂಕರಶತಕ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಇವು ಗಾತ್ರದಲ್ಲಿ ಕಿರಿದಾದರೂ ಕವಿತಾಪ್ರೌಢಿಮೆಯಲ್ಲಿ ಹಿರಿದಾಗಿವೆ. ಕವಿಯ ಕಾಲ ಸು. 1430. ವೀರಶೈವಧರ್ಮಕ್ಕೆ ಸೇರಿದವ. ಈತ ಅಷ್ಟಭಾಷೆಗಳಲ್ಲಿ ಪ್ರವೀಣನಾಗಿದ್ದನೆಂದು ತಿಳಿದುಬರುತ್ತದೆ. ತನ್ನ ಗ್ರಂಥಗಳ ಆರಂಭದಲ್ಲಿ ಆಶ್ರಯದಾತನಾದ ಪ್ರೌಢದೇವರಾಯನನ್ನೂ ಮಹಾಪ್ರಧಾನನಾದ ಗುರುರಾಯನನ್ನೂ ಸ್ತುತಿಸಿದ್ದಾನೆ. ತನ್ನನ್ನು ವಚಸ್ಸುಧಾಸಾಗರ, ಕವೀಶ್ವರ ಎಂದು ಸಂಬೋಧಿಸಿಕೊಂಡಿದ್ದಾನೆ.

ಪಂಪಾವಿರೂಪಾಕ್ಷಸ್ಥಾನವರ್ಣನೆ ಒಂದು ಚಂಪೂಕಾವ್ಯ. ಹಂಪೆಯ ವಿರೂಪಾಕ್ಷನ ಆಸ್ಥಾನವನ್ನು ವರ್ಣಿಸುತ್ತದೆ. ಇದರಲ್ಲಿ 61 ಪದ್ಯಗಳೂ 34 ವಚನಗಳೂ ಇವೆ. ಕಾವ್ಯಾರಂಭದಲ್ಲಿ ಹಂಪೆಯ ವಿರೂಪಾಕ್ಷ, ಸಿದ್ಧಿವಿನಾಯಕ, ವಾಗ್ದೇವಿಯರ ಪ್ರಾರ್ಥನೆಯಾದ ಬಳಿಕ ಪ್ರೌಢದೇವರಾಯ ಮತ್ತು ಗುರುರಾಯರ ಸ್ತುತಿ ಇದೆ. ಕವಿ ಇದನ್ನು ಗುರುರಾಯನ ಆಣತಿಯಂತೆ ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಈ ಚಿಕ್ಕ ಕಾವ್ಯದಲ್ಲಿ ಈಶ್ವರನ ಆಸ್ಥಾನ ವರ್ಣನೆ ವಿಷಯವಾದರೂ ಅಷ್ಟಾದಶ ವರ್ಣನೆಯಿದ್ದು, ಉಪಮೆ, ಉತ್ಪ್ರೇಕ್ಷೆ, ರೂಪಕ ಅತಿಶಯೋಕ್ತಿ ಮೊದಲಾದ ಅಲಂಕಾರಗಳಿಂದ ಕೂಡಿ ಮನೋಹರವಾಗಿದೆ. ಕಥಾವಸ್ತುವೇ ಇಲ್ಲದೆ ಕೇವಲ ವರ್ಣನಾತ್ಮಕವಾಗಿರುವ ಈ ಕೃತಿಯನ್ನು ರಚಿಸಿರುವ ಈ ಕವಿ ನಿಜಕ್ಕೂ ಚತುರನೇ ಸರಿ.

ಈತನ ಮತ್ತೊಂದು ಕೃತಿ ಗುರುಮೂರ್ತಿಶಂಕರಶತಕ ವೃತ್ತಗಳಲ್ಲಿದೆ. ಸಚಿವೇಂದ್ರನಾದ ಗುರುರಾಯನ ಆಜ್ಞಾನುಸಾರ ಭಕ್ತಿ ವಿರಕ್ತಿ ಮುಕ್ತಿಗಳಿಗೆ ಬೀಜವಾಗುವಂತೆ ಇದನ್ನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಕಾವ್ಯಾರಂಭದಲ್ಲಿ ಶಿವಸ್ತುತಿ ಇದೆ. ಈ ಶತಕದ ಪ್ರತಿವೃತ್ತವೂ ಗುರುಮೂರ್ತಿಶಂಕರ ಎಂದು ಮುಗಿಯುತ್ತದೆ. (ಎಸ್.ಎನ್.ಕೆ.)

**ಚಂದ್ರಕೀರ್ತಿ**[1] : ಪರಮಾಗಮಸಾರ ಎಂಬ ಕಂದವೃತ್ತಗಳನ್ನೊಳಗೊಂಡ ಕನ್ನಡ ಗ್ರಂಥದ ಕರ್ತೃ. ಜೈನ. ಈತನ ಕಾಲನಿರ್ಣಯಕ್ಕೆ ಯಾವುದೇ ಆಧಾರ ದೊರೆಯುವುದಿಲ್ಲ. ಕವಿಚರಿತೆಕಾರರು ಈತ ಸುಮಾರು 1400ರಲ್ಲಿದ್ದಿರಬಹುದೆಂದು ಹೇಳುತ್ತಾರೆ. ಈತನ ಗ್ರಂಥ ಆತ್ಮಸ್ವರೂಪ, ವೈರಾಗ್ಯ ಮುಂತಾದ ವಿಷಯಗಳನ್ನೊಳಗೊಂಡಿದೆ. ಇದರಲ್ಲಿ 132

ಕಂದವೃತ್ತಗಳಿವೆ. ತನ್ನ ಗ್ರಂಥಕ್ಕೆ ಆ ಹೆಸರು ಬರಲು ಕಾರಣವನ್ನು ಕವಿ ಹೀಗೆ ವಿವರಿಸುತ್ತಾನೆ.
ಪರಮಜಿನೇಶ್ವರ ಮತದೊಳ್ । ಪರಿಕಿಸಿ ಸಾರಾಯಮಪ್ಪುವಂ ಕೊಂಡು ಕರಂ ॥
ವಿರಚಿಸಿತಪ್ಪುದಜೆಂದಂ । ಪರಮಾಗಮಸಾರಮಾದುದೀ ಕೃತಿಯಂದಂ॥

ಮುನಿಪತಿ ದರ್ಶನಶುದ್ಧಂ ।
ವಿನುತಯಶಂ ಶೀಲರತ್ನನಚಳಿತಧೈರ್ಯಂ ॥

ಮನಸಿಜಮದಕರಿಸಿಂಹಂ ।
ವಿನಯನಿಧಾನಂ ಸರಸ್ವತೀಮುಖತಿಲಕಂ ॥

ಯಮನಿಯಮಧ್ಯಾನಯುತಂ ।
ಸಮಚಿತ್ತಂ ತತ್ತ್ವವೇದಿ ವೈರಾಗ್ಯಯುತಂ।
ಶಮಿತ ಕಷಾಯಂ ನಿಸ್ಪೃಹ ।
ನಮಲಂ ಭವ್ಯಂ ಸರಸ್ವತೀಮುಖತಿಲಕಂ ॥

ಎಂಬೀ ಎರಡು ಪದ್ಯಗಳಲ್ಲಿ ಕವಿ ತನ್ನ ಗುಣಾತಿಶಯಗಳನ್ನು ಹೇಳಿಕೊಂಡಿದ್ದಾನೆ. ಸರಸ್ವತೀಮುಖತಿಲಕಂ, ಕವಿಜನಮಿತ್ರ ಎಂಬುವು ಈತನ ಬಿರುದುಗಳಿದ್ದಿರಬಹುದು.

(ಎಸ್.ಬಿ.ಎಸ್.)

**ಚಂದ್ರಕೀರ್ತಿ**[2] : ಬೌದ್ಧಧರ್ಮದ ಮಹಾಯಾನ ಪಂಗಡಕ್ಕೆ ಸೇರಿದ ವಿದ್ವಾಂಸ. ಬಹುಶಃ ಪ್ರಶ.ಸು. 7ನೆಯ ಶತಮಾನದ ಪೂರ್ವಾರ್ಧದಲ್ಲಿ ಇದ್ದವನೆಂದು ವಿದ್ವಾಂಸರ ಅಭಿಪ್ರಾಯ. ಪ್ರಸಿದ್ಧ ವಿದ್ವಾಂಸ ಸತೀಶಚಂದ್ರ ವಿದ್ಯಾಭೂಷಣ ಈತನನ್ನು ಶ್ರೀ ಶಂಕರಾಚಾರ್ಯರ ಸಮಕಾಲೀನನೆಂದು ಭಾವಿಸುತ್ತಾನೆ.

ಈತನ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ಆದ್ದರಿಂದಲೇ ವಿದ್ವಾಂಸರಲ್ಲಿ ಈತನ ಬಗ್ಗೆ ಭಿನ್ನಾಭಿಪ್ರಾಯವಿದೆ. ಬೌದ್ಧ ವಿದ್ವಾಂಸ ಆರ್ಯದೇವ ಈತನೇ ಎಂದು ಈವರೆಗೂ ಭಾವಿಸಲಾಗಿತ್ತು. ಆದರೆ ಇತ್ತೀಚೆಗೆ ಇದನ್ನು ನಿರಾಕರಿಸಲಾಗಿದೆ. ಏಕೆಂದರೆ ಚಂದ್ರಕೀರ್ತಿಯೇ ಆರ್ಯದೇವನನ್ನೂ ಮತ್ತು ಆತನ ಗ್ರಂಥಗಳಾದ ಶತಕ–ಚತುಶತಕ, ಶತಕಶಾಸ್ತ್ರ ಮತ್ತು ಆರ್ಯಪದೀಯಗಳನ್ನು ತನ್ನ ಗ್ರಂಥವಾದ ಮಾಧ್ಯಮಿಕವೃತ್ತಿ ಎನ್ನುವ ಗ್ರಂಥದಲ್ಲಿ ಸ್ಮರಿಸಿದ್ದಾನೆ.

ಚಂದ್ರಕೀರ್ತಿ ಬರೆದ ಮತ್ತೊಂದು ಸ್ವತಂತ್ರ ಗ್ರಂಥವೆಂದರೆ ಮಾಧ್ಯಮಿಕಾವತಾರ. ಇದು ಮೂಲದಲ್ಲಿ ಸಂಸ್ಕೃತ ಗ್ರಂಥ; ಈಗ ಲಭ್ಯವಾಗಿರುವುದು ಟಿಬೆಟನ್ ಲಿಪಿಯಲ್ಲಿ. ಮಹಾಯಾನ ಬೌದ್ಧಮತದ ವಿಚಾರವಾಗಿ ಈ ಗ್ರಂಥ ಅಧಿಕೃತವಾಣಿಯಿಂದ ಹೇಳುವುದಲ್ಲದೆ ಆ ಮತದ ಅಧ್ಯಯನಕ್ಕೆ ಈ ಗ್ರಂಥ ಅತ್ಯುತ್ತಮ ಪ್ರಸ್ತಾವನೆಯಾಗಿದೆ ಎಂದು ವಿದ್ವಾಂಸರ ಅಭಿಪ್ರಾಯ. ಈತನ ಮತ್ತೊಂದು ಗ್ರಂಥ ನಾಗಾರ್ಜುನನ ಮಾಧ್ಯಮಿಕ ಸೂತ್ರಗಳ ಮೇಲಿನ ಪ್ರಪನ್ನಪದ ಎನ್ನುವ ಸಂಸ್ಕೃತ ಭಾಷ್ಯ. (ಕೆ.ಬಿ.ಆರ್.)

**ಚಂದ್ರಗಿರಿ**[1] : ಶ್ರವಣಬೆಳಗೊಳದ ಎರಡು ಬೆಟ್ಟಗಳಲ್ಲಿ ಒಂದು. ಇದನ್ನು ಚಿಕ್ಕ ಬೆಟ್ಟವೆಂದೂ ಕರೆಯುತ್ತಾರೆ. ಮತ್ತೊಂದು ಬೆಟ್ಟ ಇಂದ್ರಗಿರಿ (**ನೋಡಿ**). ಚಂದ್ರಗಿರಿ ಶಿಖರದ ಎತ್ತರ ಸಮುದ್ರಮಟ್ಟದಿಂದ 930 ಮೀ. ಈ ಬೆಟ್ಟದ ಮೇಲೆ 13 ಬಸದಿಗಳಿವೆ. ಎಲ್ಲವೂ ದ್ರಾವಿಡ ಶೈಲಿಯಲ್ಲಿ ಕಟ್ಟಿದವು. ಇದರಲ್ಲಿ ಕೆಲವು 8ನೆಯ ಶತಮಾನದಷ್ಟು ಪುರಾತನವಾದವು. ಶಾಂತಿನಾಥ ಬಸದಿ, ಪಾರ್ಶ್ವನಾಥ ಬಸದಿ, ಚಂದ್ರಗುಪ್ತ ಬಸದಿ, ಚಂದ್ರಪ್ರಭ ಬಸದಿ, ಚಾವುಂಡರಾಯ ಬಸದಿ–ಇವು ಇಲ್ಲಿರುವ ಬಸದಿಗಳಲ್ಲಿ ಕೆಲವು. ಕೂಗೆ ಬ್ರಹ್ಮದೇವರ ಕಂಬ, ಮಹಾನವಮಿ ಮಂಟಪ, ಭರತೇಶ್ವರ ವಿಗ್ರಹ, ಇರುವೆ ಬ್ರಹ್ಮದೇವರ ಗುಡಿ, ಕಂಚಿನ ದೋಣೆ, ಲಕ್ಕಿದೋಣೆಭದ್ರಬಾಹು, ಗುಹೆ, ಚಾವುಂಡರಾಯನ ಬಂಡೆ–ಇವೂ ಪ್ರೇಕ್ಷಣೀಯ.

ಉತ್ತರಭಾರತದಲ್ಲಿ ಕ್ಷಾಮ ಸಂಭವಿಸಿದಾಗ ಭದ್ರಬಾಹುಮುನಿಯ ನೇತೃತ್ವದಲ್ಲಿ ಜೈನಸಂಘ ದಕ್ಷಿಣಕ್ಕೆ ವಲಸೆ ಬಂದು ಶ್ರವಣಬೆಳಗೊಳದಲ್ಲಿ ಬೀಡುಬಿಟ್ಟ ವಿಷಯವನ್ನೊಳಗೊಂಡ ಪ್ರಸಿದ್ಧ ಶಾಸನ ಇರುವುದು ಚಂದ್ರಗಿರಿಯ ಬೆಟ್ಟದ ಮೇಲೆಯೇ. ಚಂದ್ರಗುಪ್ತ ಮೌರ್ಯ ತನ್ನ ಕೊನೆಗಾಲವನ್ನು ಇಲ್ಲಿಯೇ ಕಳೆದನೆಂದು ನಂಬಲಾಗಿದೆ. ಈ ಬೆಟ್ಟದ ಬಂಡೆಗಳ ಮೇಲಣ ಶಾಸನಗಳು ಕನ್ನಡ ಲಿಪಿ, ಭಾಷೆ, ಸಾಹಿತ್ಯ ಕುರಿತ ವಿಚಾರಗಳ ಮೇಲೆ ವಿಶೇಷವಾದ ಬೆಳಕು ಬೀರುತ್ತವೆ.

**ಚಂದ್ರಗಿರಿ**[2] : ಉ.ಅ. $13^0$ 25’ ಮತ್ತು ಪೂ.ರೇ. $79^0$ 19’ ಮೇಲೆ ಇರುವ ಈ ಪಟ್ಟಣ ಆಂಧ್ರಪ್ರದೇಶದ ತಿರುಪತಿಯ ಸಮೀಪದಲ್ಲಿ, ಸ್ವರ್ಣಮುಖಿ ನದಿಯ ಬಲದಂಡೆಯ ಮೇಲೆ ಇದೆ. ಸುತ್ತಣ ಪ್ರದೇಶದಿಂದ ಸು. 180ಮೀ. ಎತ್ತರವಿರುವ ಗ್ರಾನೈಟ್ ಶಿಲೆಯ ಬೆಟ್ಟದ ಮೇಲೆ ಭದ್ರವಾದ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆಯನ್ನು ಇಮ್ಮಡಿ ನರಸಿಂಹ (1491–1505) ಕಟ್ಟಿಸಿದನೆಂದು ಹೇಳಲಾಗಿದೆ. ವಿಜಯನಗರದ ಅರಸರು ಈ ಕೋಟೆಯನ್ನು ಉತ್ತಮಪಡಿಸಿ ಅಲ್ಲಿ ಇನ್ನು ಕೆಲವು ಕಟ್ಟಡಗಳನ್ನು ಹೊಸದಾಗಿ ಕಟ್ಟಿಸಿದರು. ರಾಜಕೀಯ ಖೈದಿಗಳನ್ನು ಬಂಧಿಸಿಡಲು ಈ ಕೋಟೆಯನ್ನು ಮೊದಲಿನಿಂದಲೂ ಬಳಸಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯವನ್ನು ಆಡಳಿತಾನುಕೂಲಕ್ಕಾಗಿ ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಚಂದ್ರಗಿರಿ ಪ್ರಾಂತ್ಯ ಅವುಗಳಲ್ಲೊಂದು. ಚಂದ್ರಗಿರಿ ಪಟ್ಟಣವೇ ಆ ಪ್ರಾಂತ್ಯದ ಅಧಿಕಾರಿಯ ಆಡಳಿತ ಕೇಂದ್ರವಾಗಿತ್ತು. 1565ರ ತಾಳಿಕೋಟೆ

ವಿಜಯನಗರ ಕಾಲದಲ್ಲಿ ಕಟ್ಟಲಾದ ಅರಮನೆ

ಯುದ್ಧದಲ್ಲಿ ಸೋತ ವಿಜಯನಗರದ ಅರಸ ಚಂದ್ರಗಿರಿಗೆ ಓಡಿಬಂದು ಅಲ್ಲಿ ತನ್ನ ಆಡಳಿತವನ್ನು ಸ್ಥಾಪಿಸಲು ಪ್ರಯತ್ನಿಸಿದ. 1586 ರಲ್ಲಿ ವಿಜಯನಗರದ ಸಿಂಹಾಸನವೇರಿದ ಮೊದಲನೆಯ ವೆಂಕಟ ತನ್ನ ಜೀವನದ ಬಹುಭಾಗವನ್ನು ಚಂದ್ರಗಿರಿಯಲ್ಲೇ ಕಳೆಯುತ್ತಿದ್ದ. 1592ರ ಅನಂತರ ಆತ ಚಂದ್ರಗಿರಿಯನ್ನೇ ತನ್ನ ರಾಜಧಾನಿಯಾಗಿ ಮಾಡಿಕೊಂಡನೆಂದು ಫಾದರ್ ಹೆರಾಸನ ಅಭಿಪ್ರಾಯ. ಮೊದಲನೆಯ ವೆಂಕಟ ಚಂದ್ರಗಿರಿ ಸೀಮೆಯನ್ನು ಆಳುತ್ತಿದ್ದನೆಂದು 1603ರ ವೈಕುಂಠ ಶಾಸನ ಮತ್ತು 1605 ರ ಸಿದ್ದೌಟ್ ಶಾಸನಗಳು ತಿಳಿಸುತ್ತವೆ. ಮುಂದೆ 6ನೆಯ ಶ್ರೀರಂಗನ ಕಾಲದವರೆಗೂ (1659) ಚಂದ್ರಗಿರಿ ವಿಜಯನಗರ ದೊರೆಗಳ ಮೆಚ್ಚಿನ ವಾಸಸ್ಥಾನವಾಗಿತ್ತು. ಅಂತೆಯೇ ವಿಜಯನಗರದ ಅರವೀಡು ಮನೆತನದ ದೊರೆಗಳನ್ನು ಚಂದ್ರಗಿರಿ ರಾಜರೆಂದು ಕರೆಯಲಾಗಿದೆ.

1646ರಲ್ಲಿ ಇದು ಗೋಲ್ಕೊಂಡ ಸುಲ್ತಾನನ ವಶವಾಯಿತು. 1758ರಲ್ಲಿ ಕರ್ನಾಟಕದ ನವಾಬನ ಸಹೋದರ ಅಬ್ದುಲ್ ವಹಾಬ್ ಖಾನನ ವಶಕ್ಕೆ ಬಂದ ಇದು 1782ರಲ್ಲಿ ಹೈದರ್ ಅಲಿಯ ಆಡಳಿತಕ್ಕೊಳಪಟ್ಟಿತು. ಮುಂದೆ 1792ರ ಶ್ರೀರಂಗಪಟ್ಟಣದ ಕೌಲಿನ ವರೆಗೂ ಇದು ಹೈದರ್ ಅಲಿಯ ವಶದಲ್ಲೇ ಇತ್ತು. (ಎ.ವಿ.ವಿ.)

ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಹುಟ್ಟಿ ಕಾಸರಗೋಡು ತಾಲ್ಲೂಕಿನಲ್ಲಿ ಹರಿದು ಕಾಸರಗೋಡಿನ ಬಳಿ ಅರಬ್ಬೀ ಸಮುದ್ರವನ್ನು ಸೇರುವ ಪಯಸ್ವಿನಿ ನದಿಗೂ ಚಂದ್ರಗಿರಿ ಎಂಬ ಹೆಸರಿದೆ. ಈ ನದಿಯ ದಂಡೆಯ ಮೇಲೆ ಚಂದ್ರಗಿರಿ ಎಂಬ ಕೋಟೆ ಇದೆ. ಇದನ್ನು ಉತ್ತಮಪಡಿಸಿದವ ವೆಂಕಟಪ್ಪನಾಯಕ, ಕುಂಬಳೆಯ ಅರಸನಾದ ಇಮ್ಮಡಿ ಜಯಸಿಂಹ ಪಾಂಡ್ಯರಾಜನನ್ನು ಸೋಲಿಸಿದ್ದು ಈ ಕೋಟೆಯ ಸಮೀಪದಲ್ಲಿಯೇ. *

**ಚಂದ್ರಗುತ್ತಿ** : ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಒಂದು ಹೋಬಳಿ; ಐತಿಹಾಸಿಕ ಮತ್ತು ಯಾತ್ರಾ ಸ್ಥಳ. ವರದಾನದಿಯ ದಡದಲ್ಲಿದೆ. ಈ ಊರನ್ನು ಹಿಂದೆ ಚಂದ್ರಗುಪ್ತಿ, ಚಂದ್ರಗುಪ್ತಪುರ, ಚಂದ್ರಗುತ್ತಿಪುರ, ಚಂದ್ರಗುತ್ತಿ ವೇಂಠೆ ಎಂದು ಕರೆಯುತ್ತಿದ್ದರೆಂಬುದು ಹಲವು ಶಾಸನಗಳಿಂದ ತಿಳಿದುಬರುತ್ತದೆ.

ಈ ಊರಿನ ಬಹು ಎತ್ತರದ ಗುಡ್ಡ ಚಂದ್ರನ ಹಾದಿಯಲ್ಲಿ ಅಡ್ಡಬಂದದ್ದರಿಂದಾಗಿ ಇದಕ್ಕೆ ಚಂದ್ರಗುತ್ತಿಯೆಂದು ಹೆಸರು ಬಂದಿತೆಂದೂ ಜರಾಸಂಧ ಮತ್ತು ಶ್ರೀ ಕೃಷ್ಣರು ಇಲ್ಲಿ ಯುದ್ಧ ಮಾಡುತ್ತಿದ್ದಾಗ ಕೃಷ್ಣ ಅಡಗಿ ಕುಳಿತುಬಿಟ್ಟನೆಂದೂ ಜರಾಸಂಧ ಅವನನ್ನು ಹುಡಕಲಾರದೆ ಇಡೀ ಗುಡ್ಡೆಯನ್ನೇ ಎತ್ತಿದ್ದನ್ನು ಕಂಡು ಚಂದ್ರ ನಕ್ಕನೆಂದೂ ಸ್ಥಳಪುರಾಣ ಹೇಳುತ್ತದೆ. ಭೌಗೋಳಿಕವಾಗಿ ಇದು ಬಹುಶಃ ಜ್ವಾಲಾಮುಖಿಯಿಂದುಂಟಾಗಿರಬೇಕು. 865 ಮೀ.ಎತ್ತರವಿರುವ ಈ ಗ್ರ್ಯಾನೈಟ್ ಗುಡ್ಡದಲ್ಲಿ ಕಲ್ಲನ್ನು ತೆಗೆಯುವ ಉದ್ಯಮ ಅನೇಕ ವರ್ಷಗಳಿಂದ ನಡೆದುಬಂದಿದೆ. ಇದು ಚಂದ್ರಗುತ್ತಿ ಕಲ್ಲು ಎಂದು ಪ್ರಸಿದ್ಧವಾಗಿದೆ.

ಚಂದ್ರಗುತ್ತಿಯು ಬನವಾಸಿ ಕದಂಬರ ಪ್ರಾಚೀನ ನಿವಾಸವಾಗಿತ್ತೆಂದೂ ಗುಡ್ಡದ ಬುಡದಲ್ಲಿರುವ ನಗರವನ್ನು ತ್ರಿನೇತ್ರ ಕದಂಬ ಸ್ಥಾಪಿಸಿದನೆಂದೂ ಹೇಳುತ್ತಾರೆ. ಇದಕ್ಕೆ ಹೆಚ್ಚಿನ ಆಧಾರಗಳಿಲ್ಲ. ಆದರೆ ಮಲೆನಾಡ ಸೆರಗಿನಲ್ಲಿರುವ ಈ ಪ್ರದೇಶ ಹೆಚ್ಚು ಪ್ರಾಮುಖ್ಯ ಗಳಿಸಿದ್ದು ಹಲವು ಶತಮಾನಗಳ ಅನಂತರ, ವಿಜಯನಗರದ ಅರಸರ ಕಾಲದಲ್ಲಿ. ವಿಜಯನಗರ ಸಾಮ್ರಾಜ್ಯದ 1ನೆಯ ಹರಿಹರನ ಕಾಲದಲ್ಲಿ (1336–1356) ಮಾರಪ್ಪನೆಂಬುವನು ಪಶ್ಚಿಮ ಕೊಂಕಣದ ಮಲೆರಾಜ್ಯವನ್ನು ಆಳುತ್ತಿದ್ದಾಗ ಚಂದ್ರಗುತ್ತಿಪುರ ಆತನ ಆಡಳಿತ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಅನಂತರ ಇಮ್ಮಡಿ ಹರಿಹರನ

ಕಾಲದಲ್ಲಿ (1377–1404) ಮಹಾಪ್ರಧಾನಿಯಾದ ಮಲ್ಲಪೊಡೆಯ ಗುತ್ತಿದುರ್ಗದ (ಚಂದ್ರಗುತ್ತಿ) ಪ್ರಾಂತ್ಯಾಧಿಕಾರಿಯಾಗಿದ್ದನೆಂದು ಕಂಡುಬರುತ್ತದೆ. 13–16ನೆಯ ಶತಮಾನಗಳಲ್ಲಿ ಪಶ್ಚಿಮ ಕರಾವಳಿಯಲ್ಲಿ ಪೋರ್ಚುಗೀಸರು ವಿಜಯನಗರದ ಅರಸರೊಡನೆ ವ್ಯಾಪಾರ–ವ್ಯವಹಾರಗಳನ್ನು ಅಧಿಕಗೊಳಿಸಿದ ಕಾರಣ ಚಂದ್ರಗುತ್ತಿ ಮುಂತಾದ ನಗರಗಳು ಪೇಟೆಗಳೆನಿಸಿ, ವೇಂಠೆಗಳಾಗಿ, ಪ್ರಾಂತ್ಯಗಳಾಗಿ ಮಾರ್ಪಟ್ಟುವು. ಆದ್ದರಿಂದ ವಿಜಯನಗರದ ಕಾಲದಲ್ಲಿ ಇದೊಂದು ಆಡಳಿತ ಕೇಂದ್ರವಾಗಿತ್ತೆಂದು ಸ್ಪಷ್ಟವಾಗುತ್ತದೆ. ಚಂದ್ರಗುತ್ತಿ ಸ್ವಲ್ಪಕಾಲ ಇಕ್ಕೇರಿ ನಾಯಕರ ವಶದಲ್ಲಿತ್ತು. ಹೈದರ್ ಅಲಿಯ ಕಾಲದಲ್ಲಿ ಇದು ಮುಸ್ಲಿಮರ ಧಾಳಿಗೆ ತುತ್ತಾಗಿತ್ತು. 18ನೆಯ ಶತಮಾನದಲ್ಲಿ ಬಿಳಿಗಿಯ ಸೋಮಶೇಖರನಾಯಕ ಚಂದ್ರಗುತ್ತಿಯನ್ನು ಧ್ವಂಸ ಮಾಡಿದನೆಂದು ತಿಳಿದುಬರುತ್ತದೆ. ಅನಂತರ ಪರಶುರಾಮಭಾವೋ ಮತ್ತು ಧುಂಡಿಯಾ ಎಂಬ ಇಬ್ಬರು ಅಧಿಕಾರಿಗಳು ಕೆಲವು ತಿಂಗಳುಗಳ ಕಾಲ ಇಲ್ಲಿ ಆಡಳಿತ ನಡೆಸಿದರೆನ್ನಲು ಆಧಾರಗಳಿವೆ.

ಚಂದ್ರಗುತ್ತಿಯಲ್ಲಿ ನೋಡತಕ್ಕ ಅನೇಕ ಐತಿಹಾಸಿಕ ಸ್ಥಳಗಳುಂಟು. ಗುತ್ತಮ್ಮ ಅಥವಾ ಅಮ್ಮನವರು ಎಂದು ಕರೆಯಲ್ಪಡುವ ರೇಣುಕಾಂಬೆಯ ದೇವಾಲಯ ಗುತ್ತಿಗುಡ್ಡೆಯ ಬುಡದಲ್ಲಿದೆ. ಪರಶುರಾಮ ತನ್ನ ತಾಯಿಯಾದ ರೇಣುಕೆಯನ್ನು ಕಡಿಯಲು ಅಟ್ಟಿಸಿಕೊಂಡು ಬಂದಾಗ ನೈಸರ್ಗಿಕವಾದ ಈ ಗುಹಾಲಯದಲ್ಲಿ ಆಕೆ ಅವಿತು ಕುಳಿತಿದ್ದಳೆಂದು ಜನರ ನಂಬಿಕೆ. ಈ ಗುಹಾಲಯದ ಮುಂಭಾಗದಲ್ಲಿ ಸುಕನಾಸಿಯೂ ಅದಕ್ಕೆ ಹೊಂದಿಕೊಂಡು ನವರಂಗವೂ ಇವೆ. ಇದು ಬಹುಶಃ ವಿಜಯನಗರ ಶೈಲಿಯ ಕಟ್ಟಡ. ಇಲ್ಲಿ ಸರಸ್ವತಿಯದೆಂದು ಹೇಳಲಾದ ಒಂದು ವಿಗ್ರಹವಿದೆ. ಅದರ ಎರಡೂ ಕಡೆ ಎರಡು ರುಂಡಗಳನ್ನು ಕೆತ್ತಿರುವುದು ಗಮನಾರ್ಹ. ನವರಂಗದಲ್ಲಿ ಹಾಸಿದ ಚಪ್ಪಡಿಗಳ ಮೇಲೆ ಅನೇಕ ಭಕ್ತರು ಹೆಸರುಗಳನ್ನು ಬರೆಯಿಸಿದ್ದಾರೆ. ಅವುಗಳಲ್ಲಿ ಕೆಲವು ಹೆಸರುಗಳು ಪಾಳೆಯಗಾರರವು. ಈ ದೇವಾಲಯದ ಸಮೀಪದಲ್ಲಿ ಇರುವುದು ಮಾತಂಗಿ ದೇವಾಲಯ. ಇದರ ಸುತ್ತಮುತ್ತ ಮಾಸ್ತಿಕಲ್ಲುಗಳೂ ವೀರಗಲ್ಲುಗಳೂ ಇವೆ. ಇಲ್ಲಿರುವ ಎತ್ತರದ ಪರಶುರಾಮ ವಿಗ್ರಹ ಮುಖ್ಯವಾದದ್ದು. ಗುಡ್ಡವನ್ನೇರುತ್ತಿದ್ದಂತೆ ಕಾಣಬರುವುದು ತಾವರೆಕೆರೆ. ಅದರ ಪಕ್ಕದಲ್ಲಿ ವಿಜಯನಗರ ಕಾಲದ ಕೋಟೆ ಕೊತ್ತಲಗಳಿವೆ. ಅಲ್ಲಿಂದ ಸುಮಾರು 30 ಮೀ. ಮೇಲೇರಿದಾಗ ಸಿಗುವ ಇನ್ನೊಂದು ಗುಹೆಯಲ್ಲಿ ದಂಡಿನ ದುರ್ಗಿ ಎಂಬ ಸುಂದರವಾದ ಮಹಿಷಾಸುರ ಮರ್ದಿನಿಯ ವಿಗ್ರಹವುಂಟು. ಈ ಗುಹೆಯ ಮುಂಭಾದಲ್ಲಿರುವ ಒಂದು ಕಗ್ಗಲ್ಲಿನ ಫಲಕದ ಮೇಲೆ ಇಬ್ಬರು ಭಕ್ತರು ದುರ್ಗೆಯ ಪಾದಕ್ಕೆ ತಮ್ಮ ಶಿರಗಳನ್ನು ಸಮರ್ಪಿಸುತ್ತಿರುವಂತೆ ಚಿತ್ರಿಸಲಾಗಿದೆ. ಅಲ್ಲಿಂದ ಮುಂದೆ ಸಾಗಿದರೆ ದೊಡ್ಡ ಫಿರಂಗಿ ಕೋಟೆಯ ಬುರುಜುಗಳು, ಪಾಳುಬಿದ್ದ ಮಸೀದಿ ಶಿಲಾಪ್ರತಿಷ್ಠಾನಗಳು ಮುಂತಾದ ಅನೇಕ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ.

ಸೌದೆ ಭಾವಾನಿ ತೀರ್ಥ, ಶಂಕರಲಿಂಗ ತೀರ್ಥ ಎಂಬ ಎರಡು ಬಾವಿಗಳ ಪಕ್ಕದಲ್ಲಿ ಕೆಲವು ಶಾಸನಗಳಿವೆ. ಗುಡ್ಡದ ತುದಿಯಲ್ಲಿ ಒಂದು ದೇವಾಲಯದ ತಳಪಾಯವಿದೆ. ಇದು ಚಂದ್ರಮೌಳೀಶ್ವರ ದೇವಾಲಯ. ಅದರಿಂದಾಗಿ ಆ ಊರಿಗೆ ಚಂದ್ರಗುತ್ತಿಯೆಂದು ಹೆಸರು ಬಂದಿರಬಹುದು. ಚಂದ್ರಗುತ್ತಿಯಲ್ಲಿ ಕಂಡುಬರುವ ಇತರ ದೇವಾಲಯಗಳಲ್ಲಿ ಶೂಲದ ಭೀರಪ್ಪನ ಗುಡಿ, ಭೈರವ ದೇವಾಲಯ ಮತ್ತು ಶಿವಾಲಯ ಮುಖ್ಯವಾದವು. ಶೂಲದ ಭೀರಪ್ಪನ ಗುಡಿಯಲ್ಲಿ ಭಕ್ತರು ಒಪ್ಪಿಸಿದ ಸಾವಿರಾರು ತ್ರಿಶೂಲಗಳ ರಾಶಿಯಿದೆ.

ಚಂದ್ರಗುತ್ತಿಯ ರೇಣುಕಾಂಬೆಯ ಜಾತ್ರೆಯಲ್ಲಿ ಕೋಣಗಳನ್ನು ಹಿಂದೆ ಬಲಿ ಕೊಡುತ್ತಿದ್ದರು. ಬೆತ್ತಲೆಸೇವೆ, ಉರುಳುಸೇವೆಗಳು ನಡೆಯುತ್ತಿದ್ದವು. ಇತ್ತೀಚೆಗೆ ಪಶುಬಲಿಯನ್ನು ನಿಲ್ಲಿಸಲಾಗಿದೆ.

ಚಂದ್ರಗುತ್ತಿಯ ಸುತ್ತಮುತ್ತಣ ನೆಲ ಫಲವತ್ತಾದುದು. ಇಲ್ಲಿ ಶ್ರೀಗಂಧ, ಬೀಟೆ, ಹೊನ್ನೆ ಮುಂತಾದ ಹಲವು ಮರಗಳಿವೆ. ಅಲ್ಲದೆ ಈ ಊರಿನ ಪಕ್ಕದಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ. (ಎಚ್.ಆರ್.ಆರ್.ಬಿ.)

**ಚಂದ್ರಗುಪ್ತ I:** ಆಳ್ವಿಕೆ ಸು. 329–ಸು. 335, ಗುಪ್ತ ಮನೆತನದ ಒಬ್ಬ ದೊರೆ. ಘಟೋತ್ಕಚಗುಪ್ತನ ಮಗ. ತಂದೆಯ ತರುವಾಯ ಸು. 320ರಲ್ಲಿ ಸಿಂಹಾಸನವನ್ನೇರಿದ. ಈ ಮನೆತನದ ಅತ್ಯಂತ ಪ್ರತಾಪಶಾಲಿ ಅರಸನೂ ಗುಪ್ತ ಸಾಮ್ರಾಜ್ಯದ ಸಂಸ್ಥಾಪಕನೂ ಆದ ಸಮುದ್ರಗುಪ್ತ ಸಿಂಹಾಸನವನ್ನೇರಿದ ವರ್ಷದಿಂದ ಆರಂಭವಾಗಿ ಗುಪ್ತರ ಹೆಸರಿನಲ್ಲಿ ಒಂದು ಶಕೆಯನ್ನು ಗಣನೆಗೆ ತರಲಾಯಿತೆಂದು ಆರ್.ಸಿ.ಮಜುಂದಾರ್ ಅಭಿಪ್ರಾಯಪಟ್ಟಿದ್ದಾರಾದರೂ. 320ರ ಫೆಬ್ರವರಿ 26ರಂದು ಆರಂಭಿಸಲಾದ ಗುಪ್ತ ಶಕವನ್ನು 1ನೆಯ ಚಂದ್ರಗುಪ್ತ ತನ್ನ ಸಿಂಹಾಸನಾರೋಹಣದ ಸ್ಮರಣಾರ್ಥವಾಗಿ ಆರಂಭಿಸಿದನೆಂದು ಈಗ ಸಾಮಾನ್ಯವಾಗಿ ಒಪ್ಪಲಾಗಿದೆ.

ಗುಪ್ತ ವಂಶ ಪ್ರಾಮುಖ್ಯಕ್ಕೆ ಬಂದದ್ದು ಈತನ ಕಾಲದಲ್ಲೇ. ಈತನ ತಂದೆ–ತಾತಂದಿರು ಕೇವಲ ಮಹಾರಾಜ ಎಂಬ ಬಿರುದಿನಿಂದ ಬಂಗಾಳದ ಕೆಲಭಾಗಗಳನ್ನು ಆಳುತ್ತಿದ್ದರು. ಮಹಾರಾಜಾಧಿರಾಜ ಎನಿಸಿಕೊಂಡ ಚಂದ್ರಗುಪ್ತನನ್ನು ಈ ಮನೆತನದ ಮೊದಲ ಸ್ವತಂತ್ರ ಅರಸನೆಂದು ಪರಿಗಣಿಸಬಹುದು. ಬಿಹಾರ ಪ್ರಾಂತ್ಯದ ಉತ್ತರ ಭಾಗದಲ್ಲಿ ವೈಶಾಲಿ ಮತ್ತು ನೇಪಾಳಗಳ ನಡುವಣ ಪ್ರದೇಶ ಪ್ರಾಚೀನ ಭಾರತದ ಸುಪ್ರಸಿದ್ಧ ಲಿಚ್ಛವಿ ಗಣರಾಜ್ಯವಾಗಿತ್ತು. ಗುಪ್ತರು ಆಳುತ್ತಿದ್ದಿರಬಹುದಾದ ಪ್ರದೇಶಕ್ಕೆ ಇದು ಹೊಂದಿದಂತಿತ್ತು. ಆ ಮನೆತನದ ರಾಜಕುಮಾರಿ ಕುಮಾರದೇವಿಯನ್ನು ಚಂದ್ರಗುಪ್ತ ಮದುವೆಯಾದ. ಇದು ಇವನ ಬಾಳಿನಲ್ಲಿ ಮಹತ್ತ್ವದ ಘಟನೆ. ಆ ವಂಶದಲ್ಲೇ ಗಂಡು ಸಂತತಿಯಿಲ್ಲದ್ದರಿಂದ ಲಿಚ್ಛವಿ ರಾಜ್ಯ ಕುಮಾರದೇವಿಯ ಮೂಲಕ ಇವನಿಗೆ ದೊರಕಿತು. ತತ್ಫಲವಾಗಿ ಇವನ ರಾಜ್ಯ ವಿಸ್ತಾರಗೊಂಡಿತು. ಈ ಸಂಬಂಧದ ಮಹತ್ವವನ್ನು ಸೂಚಿಸಲೆಂದೇ ಈತ ಅಚ್ಚು ಹಾಕಿಸಿದ ಸುವರ್ಣ ನಾಣ್ಯಗಳ ಒಂದು ಬದಿಯಲ್ಲಿ ಈತನ ರಾಣಿಯಾದ ಕುಮಾರದೇವಿಯ ಚಿತ್ರವನ್ನೂ ಇನ್ನೊಂದು ಬದಿಯಲ್ಲಿ ಸಿಂಹದ ಮೇಲೆ ಕುಳಿತ ದೇವಿಯ ಚಿತ್ರವನ್ನೂ 'ಲಿಚ್ಛವಯಃ' ಎಂಬ ಆಲೇಖವನ್ನೂ ಕೆತ್ತಲಾಗಿದೆ. ಪುರಾಣಗಳಲ್ಲಿಯ ಹೇಳಿಕೆಗಳನ್ನು ಆಧರಿಸಿ, ಈತ ಸಾಕೇತ (ಅವಧಿ), ಪ್ರಯಾಗ ಮತ್ತು ಮಗಧ (ದಕ್ಷಿಣ ಬಿಹಾರ) ರಾಜ್ಯಗಳ ಅಧಿಪತಿಯಾಗಿದ್ದನೆಂದು ಊಹಿಸಬಹುದು. ಇವನ ಇತರ ಸಾಧನೆಗಳ ವಿವರಗಳು ತಿಳಿದಿಲ್ಲ. ತನ್ನ ಮಕ್ಕಳ ಪೈಕಿ ಹೆಚ್ಚು ಶಕ್ತನಾದ ಸಮುದ್ರಗುಪ್ತನನ್ನು ತುಂಬಿದ ಆಸ್ಥಾನದಲ್ಲಿ ಈತ ತನ್ನ ಉತ್ತರಾಧಿಕಾರಿಯಾಗಿ ಆರಿಸಿದನೆಂದು ಸಮುದ್ರಗುಪ್ತನ ಅಲಹಾಬಾದ್ ಶಾಸನದಿಂದ ತಿಳಿಯುತ್ತದೆ. ಇವನಿಗೆ ಕಾಚಗುಪ್ತನೆಂಬ ಹಿರಿಯ ಮಗ ಇದ್ದನೆಂದು ಹೇಳಲಾಗಿದೆ. ಆದರೆ ಈ ವಿಚಾರಗಳು ಇನ್ನೂ ವಿವಾದಸ್ಪದವಾಗಿವೆ. (ಜಿ.ಬಿ.ಆರ್.)

**ಚಂದ್ರಗುಪ್ತ II:** ಆಳ್ವಿಕೆ ಸು. 376–413. ಗುಪ್ತ ದೊರೆಗಳಲ್ಲೊಬ್ಬ, ಸಮುದ್ರಗುಪ್ತನ ತರುವಾಯ ಸಿಂಹಾಸನವನ್ನೇರಿದನೆಂಬುದು ತತ್ಕಾಲೀನ ಶಾಸನಾಧಾರಗಳಿಂದ ತಿಳಿದುಬರುತ್ತದೆ. ಚಂದ್ರಗುಪ್ತನಿಗೆ ದೇವಗುಪ್ತ, ದೇವರಾಜ, ದೇವಶ್ರೀ ಎಂಬ ಹೆಸರುಗಳೂ ಇದ್ದವು. ದತ್ತಾದೇವಿಯ ಮಗನಾದ ಈತನಿಗೆ ಧ್ರುವದೇವಿ ಮತ್ತು ಕುಬೇರನಾಗಾ ಎಂಬ ಇಬ್ಬರು ಪತ್ನಿಯರು ಇದ್ದದ್ದು ತಿಳಿದಿದೆ. ಸಮುದ್ರಗುಪ್ತನಂತೆ ಈತನೂ ತನ್ನ ತಂದೆಯಿಂದ ಸಿಂಹಾಸನಕ್ಕೆ ಆರಿಸಲ್ಪಟ್ಟನೆಂದೂ ಇವನಿಗೆ ರಾಮಗುಪ್ತನೆಂಬ ಹಿರಿಯ ಸಹೋದರ ಇದ್ದನೆಂದೂ ಆತ ಒಂದೆರಡು ವರ್ಷಗಳಾದರೂ ತನ್ನ ಹಕ್ಕನ್ನು ಸ್ಥಾಪಿಸಿ ರಾಜ್ಯವಾಳಿರಬಹುದೆಂದೂ ಹೇಳಲಾಗಿದೆ. ರಾಮಗುಪ್ತನವೆಂದು ಹೇಳಲಾದ ಒಂದೆರಡು ಶಾಸನಗಳು ಇತ್ತೀಚೆಗೆ ಲಭ್ಯವಾಗಿವೆ. ವಿಶಾಖದತ್ತನ ದೇವಿಚಂದ್ರಗುಪ್ತವೆಂಬ ನಾಟಕ ಇಮ್ಮಡಿ ಚಂದ್ರಗುಪ್ತನ ಜೀವನಕ್ಕೆ ಸಂಬಂಧಿಸಿದುದೆಂದು ಊಹಿಸಲಾಗಿದೆ. ರಾಮಗುಪ್ತ ಶಕರ ದಾಳಿಯನ್ನು ತಡೆಯಲಾಗದೆ ರಾಜ್ಯವನ್ನೂ ರಾಣಿಯನ್ನೂ ಕಳೆದುಕೊಳ್ಳುವ ಪರಿಸ್ಥಿತಿ ಬಂದಾಗ ಚಂದ್ರಗುಪ್ತ ಯುಕ್ತಿ ಹಾಗೂ ಸಾಮರ್ಥ್ಯಗಳಿಂದ ರಕ್ಷಿಸದನೆಂದೂ, ಅನಂತರ ಅಣ್ಣನ ಹೆಂಡತಿಯನ್ನು ತಾನೇ ಮದುವೆಯಾದನೆಂದೂ ಹೇಳಲಾಗಿದೆ. ಇವು ಎಷ್ಟರಮಟ್ಟಿಗೆ ಸತ್ಯವೆಂದು ಹೇಳಲಾಗದಾದರೂ ರಾಮಗುಪ್ತನ ಕೆಲವು ನಾಣ್ಯಗಳು, ಇತ್ತೀಚೆಗೆ ದೊರೆತ ಶಾಸನಗಳು, ಚಂದ್ರಗುಪ್ತ ಶಕರನ್ನು ಸೋಲಿಸಿ ಶಕಾರಿ ಎಂಬ ವಿಶಿಷ್ಟವಾದ ಬಿರುದನ್ನು ಧರಿಸಿದ್ದು–ಇವು ಮೇಲಿನ ಊಹೆಗಳಿಗೆ ಸ್ವಲ್ಪ ಮಟ್ಟಿಗೆ ಪುಷ್ಟಿನೀಡಿವೆ.

ತಂದೆಯಂತೆಯೇ ಈತನಿಗೂ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಮಹತ್ವಾಕಾಂಕ್ಷೆಯಿತ್ತು. ಅದನ್ನು ಈಡೇರಿಸಲು ಈತ ತನ್ನ ಪ್ರಬಲವಾದ ಸೈನ್ಯವನ್ನೂ ವಿವಾಹ ಸಂಬಂಧಗಳನ್ನೂ ಸಾಧನಗಳಾಗಿ ಬಳಸಿಕೊಂಡ. ಕರ್ನಾಟಕದಲ್ಲಿ ಆಳಿದ ಕದಂಬ ಕಾಕುಸ್ಥವರ್ಮ ತನ್ನ ಮಗಳನ್ನು ಈತನಿಗೆ ಅಥವಾ ಈತನ ಮಗನಿಗೆ ಮದುವೆ ಮಾಡಿಕೊಟ್ಟನೆನ್ನಲು ಶಾಸನಾಧಾರವಿದೆ. ಆರಂಭದಿಂದಲೂ ಗುಪ್ತ ಮನೆತನಕ್ಕೆ ಹಗೆಯಾಗಿದ್ದ ನಾಗ ಮನೆತನದ ರಾಜಕುಮಾರಿ ಕುಬೇರನಾಗಾ ಎಂಬವಳನ್ನು ಈತ ಮದುವೆಯಾಗಿ ಆ ಮನೆತನದೊಂದಿಗೆ ಸ್ನೇಹ ಬೆಳೆಸಿದ. ಕುಬೇರನಾಗಾಳಲ್ಲಿ ಜನಿಸಿದ ಪ್ರಭಾವತಿ ಗುಪ್ತಳನ್ನು ದಕ್ಷಿಣದ ಪ್ರಬಲ ಮನೆತನಗಳಲ್ಲೊಂದಾಗಿದ್ದ ವಾಕಾಟಕ ವಂಶದ ಇಮ್ಮಡಿ ರುದ್ರಸೇನನಿಗೆ ಮದುವೆ ಮಾಡಿಕೊಟ್ಟು ಆ ಮನೆತನದೊಡನೆಯೂ ಸ್ನೇಹ ಬೆಳೆಸಿದ. ಈ ರೀತಿ ಸಾಮ್ರಾಜ್ಯದ ಉತ್ತರ ಹಾಗೂ ದಕ್ಷಿಣದ ಮೇರೆಗಳನ್ನು ನಿರಾತಂಕಗೊಳಿಸಿ ಸಾಕಷ್ಟು ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಅನಂತರ ಶಕರ ಅರಸನಾದ ಮುಮ್ಮಡಿ ರುದ್ರಸಿಂಹನ ವಿರುದ್ಧ ದಂಡೆತ್ತಿಹೋದ. ಅವನನ್ನು ಸೋಲಿಸಿದ್ದೇ ಅಲ್ಲದೆ ಅವನ ರಾಜ್ಯವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಕುಷಾನರೂ ಇವನಿಗೆ ಸೋತರು. ಮಾಳವ, ಗುಜರಾತ್, ಕಾಠಿಯಾವಾಡ ಪ್ರದೇಶಗಳು ಇವನ ಸ್ವಾಧೀನಕ್ಕೆ ಬಂದವು. ದೆಹಲಿಯ ಬಳಿ ಮೆಹರೂಲಿ ಎಂಬಲ್ಲಿಯ ಕಬ್ಬಿಣದ ಸ್ತಂಭಶಾಸನದಲ್ಲಿ ಉಕ್ತನಾದ ಚಂದ್ರ ಈತನೇ ಎಂಬುದನ್ನೂ ಅದರಲ್ಲಿ ಹೇಳಿರುವಂತೆ ವಾಲ್ಹಿಕಾ (ಬ್ಯಾಕ್ಟ್ರಿಯಾ) ಮತ್ತು ವಂಗ (ಪೂರ್ವಬಂಗಾಲ) ಪ್ರದೇಶಗಳನ್ನು ಈತ ವಶಪಡಿಸಿಕೊಂಡನೆಂಬುದನ್ನೂ ಈಗ ಒಪ್ಪಲಾಗಿದೆ.

ಸಮುದ್ರಗುಪ್ತ ಹಾಕಿದ ಅಡಿಪಾಯದ ಮೇಲೆ ಭವ್ಯವಾದ ಗುಪ್ತ ಸಾಮ್ರಾಜ್ಯವೆಂಬ ಕಟ್ಟಡವನ್ನು ಕಟ್ಟಿದ ಕೀರ್ತಿ ಈತನದು. ಪಾಟಲೀಪುತ್ರ ಇವನ ರಾಜಧಾನಿಯಾಗಿ ಮುಂದುವರಿದರೂ ಉಜ್ಜಯಿನಿಯೂ ಅಷ್ಟೇ ಪ್ರಾಮುಖ್ಯವನ್ನು ಪಡೆಯಿತು.

ವಿಕ್ರಮಾದಿತ್ಯನೆಂಬ ಬಿರುದಾಂಕಿತನಾದ ಈತನೇ ಪೌರಾಣಿಕ ಖ್ಯಾತಿ ಪಡೆದ ಉಜ್ಜಯಿನಿಯ ಅರಸನಾದ ವಿಕ್ರಮಾದಿತ್ಯನೆಂದು ಹೇಳಲಾಗಿದೆ. ಅಯೋಧ್ಯೆ ಇವನ ಇನ್ನೊಂದು ನೆಲೆವೀಡಾಗಿತ್ತು.

ಈತನ ದೀರ್ಘಕಾಲದ ಆಳ್ವಿಕೆಯಲ್ಲಿ ಶಾಂತಿ, ಸಮೃದ್ಧಿಗಳು ನೆಲೆಸಿದವು. ನವರತ್ನಗಳೆನಿಸಿದ ಕವಿಗಳು, ಪಂಡಿತರು ಈತನ ಆಸ್ಥಾನವನ್ನು ಬೆಳಗಿದರೆಂದು ಹೇಳಿದೆ. ಕಾಳಿದಾಸ, ಶೂದ್ರಕ, ಭಾಸ, ಭವಭೂತಿ, ವಿಶಾಖದತ್ತ, ದಂಡಿ, ಸುಬಂಧು, ವರಾಹಮಿಹಿರ, ಆರ್ಯಭಟ, ದಿಙ್ನಾಗ, ಅಮರ ಮುಂತಾದ ಕವಿಗಳು, ನಾಟಕಕಾರರು, ಲೇಖಕರು, ಗಣಿತವಿಜ್ಞಾನಿಗಳೂ ಖಗೋಳವಿಜ್ಞಾನಿಗಳೂ, ತತ್ತ್ವಜ್ಞಾನಿಗಳೂ, ವೈಯಾಕರಣಿಗಳೂ ಇವನ ಕಾಲದಲ್ಲಿದ್ದವರೆನ್ನಲಾಗಿದೆ. ಚಿತ್ರಕಲೆ, ಮೂರ್ತಿಶಿಲ್ಪ , ವಾಸ್ತುಶಿಲ್ಪ ಹಾಗೂ ಸಂಗೀತಕಲೆಗಳೂ ಅಭಿವೃದ್ಧಿ ಹೊಂದಿದವು. ಈತ ಹೊರಡಿಸಿದ ಸುವರ್ಣ ನಾಣ್ಯಗಳು ಇವನ ಕಾಲದ ಸುಖಸಮೃದ್ಧಿಗೆ ನಿರ್ದಶನಗಳಾಗಿವೆ. ಸುಮಾರು 7 ಭಿನ್ನಮಾದರಿಗಳ ನಾಣ್ಯಗಳನ್ನು ಈತ ಅಚ್ಚು ಹಾಕಿಸಿದ. ಧ್ವಜ, ಬಿಲ್ಲುಗಾರ, ಸಿಂಹಸಂಹಾರಿ ಮುಂತಾದ ಚಿತ್ರಗಳು ಅವುಗಳ ಮೇಲಿದ್ದವು. ಸಿಂಹಸಂಹಾರಿ ನಾಣ್ಯದ ಮೇಲೆ ವಂಶಸ್ಥ ವೃತ್ತದಲ್ಲಿ "ನರೇಂದ್ರಚಂದ್ರಃ ಪ್ರಥಿತರಣೋರಣೇ ಜಯತ್ಯಜೇಯೋ ಭುವಿ ಸಿಂಹವಿಕ್ರಮಃ" ಎಂಬ ಆಲೇಖ ಇದೆ. ಈತ ಬೆಳ್ಳಿಯ ಹಾಗೂ ತಾಮ್ರದ ನಾಣ್ಯಗಳನ್ನೂ ಚಲಾವಣೆಗೆ ತಂದ. 2ನೆಯ ಚಂದ್ರಗುಪ್ತನ ಕಾಲದಲ್ಲಿ ಗುಪ್ತಕಾಲದ ಸುವರ್ಣಯುಗ ತನ್ನ ಪರಾಕಾಷ್ಠೆಯನ್ನು ಮುಟ್ಟಿತ್ತು. ಚೀನ ದೇಶದ ಬೌದ್ಧ ಪ್ರವಾಸಿ ಫಾಹಿಯಾನ್ ಭಾರತಕ್ಕೆ ಭೇಟಿ ಕೊಟ್ಟಿದ್ದು ಈತನ ಕಾಲದಲ್ಲೇ. ಪಾಟಲೀಪುತ್ರದ ಅರಮನೆಗಳನ್ನೂ ದಾನಶಾಲೆ ಹಾಗೂ ಆಸ್ಪತ್ರೆಗಳನ್ನೂ ಆತ ಮನಮುಟ್ಟುವಂತೆ ಹೊಗಳಿದ್ದಾನೆ. (ಜಿ.ಬಿ.ಆರ್.; ಕೆ.ಆರ್.ಬಿ.)

**ಚಂದ್ರಗುಪ್ತ ಮೌರ್ಯ :** ಪ್ರಾಚೀನ ಭಾರತದ ಒಬ್ಬ ಪ್ರಸಿದ್ಧ ದೊರೆ. ಮೌರ್ಯ ಸಂತತಿಯ ಮೂಲಪುರುಷ. ಸಣ್ಣ-ಪುಟ್ಟ ರಾಜ್ಯಗಳನ್ನು ಒಂದುಗೂಡಿಸಿ, ನೆರೆಯ ಪ್ರದೇಶಗಳನ್ನು ಗೆದ್ದು ಸೇರಿಸಿಕೊಂಡು ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದ. ಇವನ ಕಾಲದಿಂದ ಭಾರತದ ಇತಿಹಾಸವನ್ನು ಕ್ರಮಬದ್ಧವಾಗಿ ಅರಿಯುವುದು ಸಾಧ್ಯ. ಚಂದ್ರಗುಪ್ತನ ಇತಿಹಾಸ ಭಾರತದ ರಾಜನೈತಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಐಕ್ಯದ ಕತೆಯಾಗಿದೆ.

ಭಾರತವನ್ನು ಮ್ಯಾಸಿಡೋನಿಯನರಿಂದ ಮುಕ್ತಗೊಳಿಸಿ ಅದರ ಬಹು ಭಾಗವನ್ನು ರಾಜಕೀಯವಾಗಿ ಒಂದು ಆಡಳಿತಕ್ಕೆ ಒಳಪಡಿಸಿದ ಚಂದ್ರಗುಪ್ತನ ಸಾಧನೆ ಬಹಳ ದೊಡ್ಡದು. ಅವನಿಗೆ ಸಿಂಹಾಸನ ಪಿತ್ರಾರ್ಜಿತವಾಗಿ ಬಂದದ್ದಲ್ಲ. ಅವನ ಜನನ ಬಾಲ್ಯಗಳ ಬಗ್ಗೆ ಸ್ಪಷ್ಟ ಮಾಹಿತಿ ನಮಗೆ ದೊರಕುವುದಿಲ್ಲ. ಅವನು ಬಡ ಸಂಸಾರದಲ್ಲಿ ಹುಟ್ಟಿದವನೆಂದು ಗ್ರೀಕ್ ಲೇಖಕ ಜಸ್ಟಿನ್ ಹೇಳುತ್ತಾನೆ. ಜೈನ ಸಂಪ್ರದಾಯದ ಪ್ರಕಾರ ಆತನ ತಾಯಿ ಹಳ್ಳಿಯ ಮುಖಂಡನೊಬ್ಬನ ಮಗಳು. ಮಯೂರ ಪೋಷಕರಿಂದ ಆ ಹಳ್ಳಿ ಕೂಡಿತ್ತು. ಅವನ ಜೀವನದ ಹೆಚ್ಚು ವಿವರಗಳು ಬ್ರಾಹ್ಮಣ ಮತ್ತು ಬೌದ್ಧ ಬರೆಹಗಳಿಂದ ತಿಳಿದುಬರುತ್ತದೆ. ಪುರಾಣಗಳಲ್ಲಿ ಅವನ ಬಗ್ಗೆ ಹೆಚ್ಚು ಮಾಹಿತಿಯಿಲ್ಲ. ಕೌಟಿಲ್ಯನೆಂಬ ಬ್ರಾಹ್ಮಣ ನಂದರನ್ನು ಸಿಂಹಾಸನದಿಂದ ಉರುಳಿಸಿ ಚಂದ್ರಗುಪ್ತನನ್ನು ಅದರ ಮೇಲೆ ಕುಳ್ಳಿರಿಸಿದನೆಂದು ಅವು ಹೇಳುತ್ತವೆ. ವಿಷ್ಣುಪುರಾಣದ ಭಾಷ್ಯಕಾರನೊಬ್ಬ ಮೊಟ್ಟ ಮೊದಲಿಗೆ ಚಂದ್ರಗುಪ್ತನನ್ನು ಹೀನಕುಲಜನೆಂದು ಹೇಳುತ್ತಾನೆ. ನಂದದೊರೆಯೊಬ್ಬನ ಪತ್ನಿಯಾಗಿದ್ದಳೆನ್ನಲಾದ ಮುರಾ ಎಂಬುವಳ ಮಗನಿವನೆಂಬುದು ಅವನ ಹೇಳಿಕೆ. ಇದು ನಿಜವೆನ್ನಲು ಆಧಾರಗಳಿಲ್ಲ. ಮುರಾ ಶೂದ್ರಸ್ತ್ರೀ ಎಂಬುದೂ ಅವಳು ದೊರೆಯ ಉಪಪತ್ನಿಯಾಗಿದ್ದಳೆಂಬುದೂ ಅನಂತರದ ಲೇಖಕರ ಸೃಷ್ಟಿ. ಮುರಾ ಎಂಬವಳಿಂದ ಮೌರ್ಯ ಎಂಬ ಹೆಸರು ಬಂದಿದೆಯೆಂಬುದು ವ್ಯಾಕರಣದ ದೃಷ್ಟಿಯಿಂದ ಸಾಧುವಾಗಲಾರದು. 'ಮುರ' ಎಂಬ ಪುಲ್ಲಿಂಗ ನಾಮದಿಂದ ಮೌರ್ಯ ಆಗುವುದು ಸಾಧ್ಯ; ಮುರಾ ಎಂಬುವಳ ಮಗ ಮೌರೇಯನಾಗಬೇಕೇ ವಿನಾ ಮೌರ್ಯನಲ್ಲ.

ಅನಂತರ ಬಂದ ಕೃತಿಗಳಲ್ಲೊಂದಾದ 'ಮುದ್ರಾರಾಕ್ಷಸ' ನಾಟಕದಲ್ಲಿ ಚಂದ್ರಗುಪ್ತನನ್ನು ವೃಷಲ, ಕುಲಹೀನ ಎಂದು ಕರೆಯಲಾಗಿದೆ. ಆದರೆ ಕುಲಹೀನ ಎಂದರೆ ಬಡ ಕುಟುಂಬದಲ್ಲಿ ಹುಟ್ಟಿದವ; ವೃಷಲ ಎಂಬುದನ್ನು ವೃಷ ಅಥವಾ ದೊರೆಗಳಲ್ಲಿ ಮುಖ್ಯನೆಂದು ಅರ್ಥ ಮಾಡಬೇಕು-ಎಂದು ಕೆಲವರು ಸೂಚಿಸಿದ್ದಾರೆ. 'ಮುದ್ರರಾಕ್ಷಸ'ದ ಅನಂತರದ ಟೀಕಾಕಾರನೊಬ್ಬ ಚಂದ್ರಗುಪ್ತನನ್ನು ಮೌರ್ಯನ ಮಗನೆಂದು ಹೇಳಿದ್ದಾನೆ. ಅವನ ತಾಯಿ ಮುರಾ. ಅವನು ಮೌರ್ಯಪುತ್ರ, ಅವನ ವಂಶ ನಂದವಂಶದ ಒಂದು ಶಾಖೆ.

ಬೌದ್ಧ ಬರೆಹಗಳ ಪ್ರಕಾರ ಚಂದ್ರಗುಪ್ತ ಕ್ಷತ್ರಿಯ. ಮೋರಿಯ ವಂಶದವ. ಈ ಹೆಸರಿನ ವಂಶವೊಂದು ಬುದ್ಧನ ಕಾಲದಲ್ಲೂ ಇದ್ದುದು ಖಚಿತ. ಚಂದ್ರಗುಪ್ತ ಈ ವಂಶದವನೆಂಬುದು ನಿಜವಿರಬಹುದೆಂದು ಕಾಣುತ್ತದೆ. ಚಂದ್ರಗುಪ್ತನ ತಂದೆ ಪಿಪ್ಪಲಿ ವನದ ರಾಜನಾಗಿದ್ದಾಗ ಯುದ್ಧವೊಂದರಲ್ಲಿ ಮರಣಹೊಂದಿದ. ಚಂದ್ರಗುಪ್ತನ ತಾಯಿ ದೂರದ ಪುಷ್ಪಪುರ ಅಥವಾ ಕುಸುಮಪುರ ಅಥವಾ ಪಾಟಲಿಪುತ್ರಕ್ಕೆ ಬಂದು ಆಶ್ರಯ ಪಡೆದಳು. ಚಂದ್ರಗುಪ್ತ ಹುಟ್ಟಿದ್ದೂ ಅಲ್ಲಿಯೇ. ಹಳ್ಳಿಗರ ನಡುವೆ ಬೆಳೆಯುತ್ತಿದ್ದ ಹುಡುಗನಿಂದ ಚಾಣಕ್ಯ ಆಕರ್ಷಿತನಾಗಿ ಅವನನ್ನು ತನ್ನ ಸ್ಥಳವಾದ ತಕ್ಷಶಿಲೆಗೆ ಕರೆದೊಯ್ದು ಸಕಲ ಕಲೆ ಶಾಸ್ತ್ರಗಳಲ್ಲಿ ಅವನನ್ನು ಪಾರಂಗತನನ್ನಾಗಿ ಮಾಡಿದ. ವಿದೇಶೀಯರ ಆಕ್ರಮಣದಿಂದ ದೇಶವನ್ನು ವಿಮೋಚನೆಗೊಳಿಸುವುದೂ ಚಾಣಕ್ಯನಿಗೆ ಅವಮಾನಮಾಡಿದ್ದ ನಂದ ದೊರೆಯ ದುರಾಡಳಿತದಿಂದ ಅದನ್ನು ಪಾರು ಮಾಡುವುದೂ ಅವನಿಗೆ ವಹಿಸಲಾದ ಕರ್ತವ್ಯ. ಚಾಣಕ್ಯನ ನೆರವಿನಿಂದ ಇವನು ಈ ಕರ್ತವ್ಯವನ್ನು ಚೆನ್ನಾಗಿ ನೆರವೇರಿಸಿದ, ಚಂದ್ರಗುಪ್ತ ಪಂಜಾಬಿನಲ್ಲಿ ಅಲೆಗ್ಸಾಂಡರನನ್ನು ಸಂಧಿಸಿದ್ದನೆಂಬುದಾಗಿ ಕೆಲವು ಅಭಿಜಾತ ಕೃತಿಗಳು ಹೇಳುತ್ತವೆ. ಅವನಿಗೆ ಕೋಪ ಬರುವಂತೆ ಚಂದ್ರಗುಪ್ತ ವರ್ತಿಸಿದನೆಂದೂ ಇವನನ್ನು ಕೊಲ್ಲಬೇಕೆಂದು ಅಲೆಗ್ಸಾಂಡರ್ ಆಜ್ಞೆ ನೀಡಿದನೆಂದೂ ಚಂದ್ರಗುಪ್ತ ಅಲ್ಲಿಂದ ತಪ್ಪಿಸಿಕೊಂಡು ಹೋದನೆಂದೂ ಹೇಳಲಾಗಿದೆ. ಅಲೆಗ್ಸಾಂಡರನ ವಿರುದ್ಧ ಹೋರಾಡಿ ರಕ್ತ ಚೆಲ್ಲಿದ ಪಂಜಾಬಿನ ಜನಪದಗಳ ಯುದ್ಧಶಕ್ತಿಗಳನ್ನೂ ಅವು ಸೂಕ್ತ ಸಂಘಟನೆ ಮತ್ತು ನಾಯಕತ್ವ ಇಲ್ಲದ್ದರಿಂದ ಕುಸಿದುಬಿದ್ದದ್ದನ್ನೂ ಚಂದ್ರಗುಪ್ತ ಅರಿತುಕೊಂಡಿದ್ದಿರಬೇಕು. ಇದು ಆತನ ಅನಂತರದ ಮಹತ್ ಕಾರ್ಯಕ್ಕೆ ಬುನಾದಿಯಾಗಿದ್ದಿರಬಹುದು.

ತಾನು ಸಂಗ್ರಹಿಸಿದ ಸೈನ್ಯದ ನೆರವಿನಿಂದ ಮೊದಲು ಸಿಂಹಾಸನವನ್ನೇರಿ ಅನಂತರ ಅಲೆಗ್ಸಾಂಡರನ ಪ್ರಾಂತ್ಯಾಧಿಕಾರಿಗಳೊಡನೆ ಹೋರಾಡಿ ಅವರನ್ನು ಸೋಲಿಸಿ, ಹಲವರನ್ನು ಕೊಂದು ದೇಶವನ್ನು ವಿಮೋಚನೆಗೊಳಿಸಿದನೆಂದು ಜಸ್ಟಿನ್ ಹೇಳಿದ್ದಾನೆ. ಅವನು ಹೆಸರಿಸಿರುವ ಸಂದ್ರಕೋಟಸ್ ಎಂಬುವನು ಚಂದ್ರಗುಪ್ತನೇ ಇರಬೇಕು. ಇದುವರೆಗೆ ಲಭ್ಯವಿರುವ ಎಲ್ಲ ಪುರಾವೆಗಳಿಂದ ಚಂದ್ರಗುಪ್ತ ಪ್ರ.ಶ ಸು. 324ರಲ್ಲಿ ಸಿಂಹಾಸವನ್ನೇರಿರಬಹುದೆಂದು ತಾತ್ಕಾಲಿಕವಾಗಿ ನಿರ್ಧರಿಸಬಹುದಾಗಿದೆ. ಪಂಜಾಬ್ ಮತ್ತು ಸಿಂಧ್ ಪ್ರದೇಶಗಳ ಮೇಲೆ ಒಡೆತನ ಸ್ಥಾಪಿಸಿದ ಮೇಲೆ ದೊರೆ ನಂದನ ದುರಾಡಳಿತವನ್ನು ಕೊನೆಗೊಳಿಸುವ ಕಾರ್ಯದಲ್ಲಿ ಚಂದ್ರಗುಪ್ತ ಉದ್ಯುಕ್ತನಾದನೆಂದು ಹೇಳಲಾಗಿದೆ. ಆದರೆ ಚಂದ್ರಗುಪ್ತ ಮಗಧ ರಾಜ್ಯವನ್ನು ಗೆದ್ದ ಬಗ್ಗೆ ಖಚಿತವಾದ ವಿವರಗಳು ಲಭ್ಯವಿಲ್ಲ. ಸುತ್ತಣ ರಾಜ್ಯವನ್ನು ಗೆಲ್ಲದೆ ದೇಶದ ಹೃದಯಭಾಗಕ್ಕೇ ಇವನು ದಂಡೆತ್ತಿಹೋದದ್ದು ಪ್ರಮಾದವಾಯಿತೆಂದು ಕೆಲವು ಕೃತಿಗಳು ಅಭಿಪ್ರಾಯಪಟ್ಟಿವೆ. ಚಂದ್ರಗುಪ್ತ ಗಡಿಪ್ರದೇಶಗಳಿಂದ ಆರಂಭಿಸಿ ಹಾದಿಯಲ್ಲಿ ಹಲವು ರಾಷ್ಟ್ರಗಳನ್ನೂ ಜನಪದಗಳನ್ನೂ ಜಯಿಸಿದನೆಂದೂ ಆದರೆ ತಾನು ಜಯಿಸಿದ ಪ್ರದೇಶಗಳ ತುದಿಭಾಗಗಳ ರಕ್ಷಣೆಗೆ ಸೈನ್ಯ ನೇಮಿಸಲಿಲ್ಲವಾದ್ದರಿಂದ ಅವು ಆಕ್ರಮಣಕ್ಕೊಳಗಾದುವೆಂದೂ ಬೌದ್ಧಸಂಪ್ರದಾಯದ ಬರೆವಣಿಗೆಗಳು ಹೇಳುತ್ತವೆ. ಕೊನೆಗೆ ಅವನು ಪಾಟಲಿಪುತ್ರವನ್ನು ಆಕ್ರಮಿಸಿ, ದುರಾಡಳಿತದಿಂದ ಜನಪ್ರಿಯತೆಯನ್ನು ಕಳೆದುಕೊಂಡಿದ್ದ ಧನನಂದನನ್ನು ಕೊಂದನೆಂದು ಅವು ತಿಳಿಸುತ್ತವೆ. ಚಾಣಕ್ಯನೇ ಈ ಮಹಾಸಾಧನೆಯ ಕರ್ತೃವೆಂಬುದು ಬ್ರಾಹ್ಮಣ ಕೃತಿಗಳ ನಂಬಿಕೆ. ಚಂದ್ರಗುಪ್ತನ ಸಮರಚಾತುರ್ಯಕ್ಕೆ ಚಾಣಕ್ಯನ ರಾಜತಂತ್ರ ಸೇರಿಕೊಂಡಿತೆಂದು ಬಹುಶಃ ಹೇಳಬಹುದು.

ಪಾಟಲಿಪುತ್ರದಲ್ಲಿ ಮೌರ್ಯರ ಆಳ್ವಿಕೆ ಆರಂಭವಾಯಿತು. ಕೌಟಿಲ್ಯನನ್ನು ಚಂದ್ರಗುಪ್ತ ತನ್ನ ಮುಖ್ಯಮಂತ್ರಿಯನ್ನಾಗಿ ಮಾಡಿಕೊಂಡು, ಚಕ್ರವರ್ತಿಯಾಗಿ ನಂದರ ಸೈನ್ಯವನ್ನೆಲ್ಲ ಪಡೆದು, ವಾಯವ್ಯ ಸೈನ್ಯವನ್ನು ಅದಕ್ಕೆ ಸೇರಿಸಿ ಅದು ದಕ್ಷತೆಯಿಂದ ಕೂಡಿರುವಂತೆ ಮಾಡಿದ. ಈ ಸೈನ್ಯದ ಸಹಾಯದಿಂದ ಕೆಲವೇ ವರ್ಷಗಳಲ್ಲಿ ಅವನು ಸಾಮ್ರಾಜ್ಯ ವಿಸ್ತರಿಸಿದ. ಅವನ ವಿಜಯಗಳಿಗೆ ಮುಖ್ಯವಾಗಿ ಅವನ ಪ್ರತಿಭೆಯೇ ಕಾರಣವಾಗಿತ್ತು. ಅವನು ಸ್ಥಾಪಿಸಿದ ಸಾಮ್ರಾಜ್ಯ ಹಿಂದಿನ ರಾಜ್ಯಗಳಿಗಿಂತ ವಿಸ್ತಾರವಾಗಿತ್ತು. ರಾಜ್ಯವಿಸ್ತರಣಕಾರ್ಯ ಮುಗಿದ ಮೇಲೆ ಸಂಘಟನೆಯ ಕೆಲಸ ಆರಂಭವಾಯಿತು. ಕೌಟಿಲ್ಯ ಉತ್ತಮ ಆಡಳಿತ ವ್ಯವಸ್ಥೆಯನ್ನು ರೂಪಿಸಿದ. ಅದರಲ್ಲಿ ಅಧಿಕಾರವೆಲ್ಲ ರಾಜನಲ್ಲಿಯೇ ಕೇಂದ್ರಿಕೃತವಾಗಿತ್ತು. ಭಾರತ ಹಿಂದಿನಂತೆ ಅಂತರ್ಯುದ್ಧಗಳಿಗೆ ಒಳಗಾದ ಸಣ್ಣ ಸಣ್ಣ ರಾಜ್ಯಗಳಿಂದ ಕೂಡಿರಲಿಲ್ಲ. ಅದರ ಬದಲು ಏಕತೆಯಿಂದ ಕೂಡಿದ ದಕ್ಷ ರಾಜ್ಯವಾಗಿದ್ದು ಪರಕೀಯರ ದಾಳಿಯನ್ನು ಎದುರಿಸುವ ಶಕ್ತಿ ಹೊಂದಿತ್ತು.

ಅಲೆಗ್ಸಾಂಡರನ ಮರಣಾನಂತರ ಅವನ ದಳಪತಿಗಳಲ್ಲಿ ಒಬ್ಬನಾದ ಸೆಲ್ಯೂಕಸ್ ತನ್ನ ವೈರಿಗಳ ಮೇಲೆ ಜಯಗಳಿಸಿ ಅಲೆಗ್ಸಾಂಡರನ ಸಾಮ್ರಾಜ್ಯದ ಪೂರ್ವಭಾಗಗಳಲ್ಲಿ ಹಲವನ್ನು ಗೆದ್ದು, ಪ್ರಬಲನಾಗಿ, ಅಲೆಗ್ಸಾಂಡರ್ ಭಾರತದಲ್ಲಿ ಆಕ್ರಮಿಸಿಕೊಂಡಿದ್ದು ಕೈತಪ್ಪಿಹೋಗಿದ್ದ ಪ್ರದೇಶಗಳನ್ನು ಹಿಂದಕ್ಕೆ ಪಡೆಯುವ ಉದ್ದೇಶದಿಂದ ಪ್ರ.ಶ.ಪೂ. 305ರಲ್ಲಿ ಭಾರತದ ಮೇಲೆ ಧಾಳಿ ಮಾಡಿದ. ಸೆಲ್ಯೂಕಸನಿಗೂ ಚಂದ್ರಗುಪ್ತ ಮೌರ್ಯನಿಗೂ ಯುದ್ಧ ನಡೆಯಿತು. ಯುದ್ಧದಲ್ಲಿ ಚಂದ್ರಗುಪ್ತ ಸೆಲ್ಯೂಕಸನನ್ನು ಪೂರ್ಣವಾಗಿ ಸೋಲಿಸಿದ. ಸೆಲ್ಯೂಕಸ್ ಒಪ್ಪಂದ ಮಾಡಿಕೊಂಡು ಏರಿಯ, ಆರಾಕೋಸಿಯ, ಪರೋಪನಿಸಿಡೀ ಪ್ರದೇಶಗಳನ್ನು ಚಂದ್ರಗುಪ್ತನಿಗೆ ಒಪ್ಪಿಸಬೇಕಾಯಿತು. ಈಗಿನ ಹೆರಾತ್, ಕಾಂದಹಾರ್ ಮತ್ತು ಕಾಬೂಲ್‍ಗಳು ಅವುಗಳ ರಾಜಧಾನಿಗಳಾಗಿದ್ದುವು. ಜಿಡ್ರೋಷಿಯದ (ಬಲೂಚಿಸ್ತಾನ) ಕೆಲವು ಭಾಗಗಳೂ ಚಂದ್ರಗುಪ್ತನ ವಶವಾಗಿದ್ದಿರಬೇಕು. ಪ್ರತಿಯಾಗಿ ಚಂದ್ರಗುಪ್ತ ಅವನಿಗೆ

500 ಯುದ್ಧದ ಆನೆಗಳನ್ನು ಕೊಟ್ಟ. ಅವರಿಬ್ಬರ ನಡುವೆ ವಿವಾಹಬಾಂಧವ್ಯ ಬೆಳೆಯಿತು. ಸೆಲ್ಯೂಕಸನ ಮಗಳನ್ನು ಚಂದ್ರಗುಪ್ತ ಮದುವೆಯಾದನೆಂದು ಭಾವಿಸಲಾಗಿದೆ. ಇವರಿಬ್ಬರ ಸಖ್ಯದ ಗುರುತಿಗಾಗಿ ಮೆಗಾಸ್ತನೀಸ್ ಎಂಬ ರಾಯಭಾರಿಯನ್ನು ಸೆಲ್ಯೂಕಸ್ ಚಂದ್ರಗುಪ್ತನ ಆಸ್ಥಾನಕ್ಕೆ ಕಳಿಸಿದ. ಮೆಗಾಸ್ತನೀಸ್ ಪಾಟಲಿಪುತ್ರದಲ್ಲಿ ಬಹಳ ಕಾಲ ಇದ್ದ. ಭಾರತದ ಬಗ್ಗೆ ಪುಸ್ತಕವೊಂದನ್ನು ಬರೆದ. ಅದು ನಷ್ಟವಾಗಿದೆ. ಅದರ ಹಲವು ಭಾಗಗಳು ಇತರ ಲೇಖಕರಿಂದ ದೀರ್ಘವಾಗಿ ಉದ್ಧೃತವಾಗಿವೆ.

ಚಂದ್ರಗುಪ್ತನ ಸಾಮ್ರಾಜ್ಯ ವಿಸ್ತಾರವಾಗಿತ್ತೆಂಬುದು ನಿಸ್ಸಂದೇಹ. 6 ಲಕ್ಷ ಜನರಿಂದ ಕೂಡಿದ ಇವನ ಸೇನೆ ಇಡೀ ಭಾರತವನ್ನು ಗೆದ್ದಿತೆಂದು ಪ್ಲೂಟಾರ್ಕ್ ಹೇಳಿದ್ದಾನೆ. ಇವನ ಸಾಮ್ರಾಜ್ಯದ ವಿಸ್ತಾರವೆಷ್ಟಿತ್ತೆಂಬುದು ಪರೋಕ್ಷವಾದ ಮಾಹಿತಿಗಳಿಂದ ತಿಳಿದುಬರುತ್ತದೆ. ಇವನ ಮೊಮ್ಮಗನಾದ ಅಶೋಕ ಕಳಿಂಗವೊಂದನ್ನು ಬಿಟ್ಟು ಬೇರೆ ಯಾವ ಪ್ರದೇಶವನ್ನೂ ಗೆದ್ದಂತೆ ಕಾಣುವುದಿಲ್ಲ. ಬಿಂದುಸಾರ ಯಾವುದೇ ನೆಲವನ್ನು ಗೆದ್ದ ಬಗ್ಗೆ ಉಲ್ಲೇಖಗಳಿಲ್ಲ. ಅಶೋಕ ಬಹುತೇಕ ಚಂದ್ರಗುಪ್ತ ಗೆದ್ದ ನೆಲವನ್ನೇ ಆಳುತ್ತಿದ್ದನೆಂಬುದು ಸ್ಪಷ್ಟ. ದಕ್ಷಿಣದಲ್ಲಿ ಕರ್ನಾಟಕದವರೆಗೂ ವಾಯವ್ಯದಲ್ಲಿ ಪರ್ಷಿಯದ ಎಲ್ಲೆಯವರೆಗೂ ಅವನ ಸಾಮ್ರಾಜ್ಯ ಹಬ್ಬಿತ್ತು. ವಂಬ ಮೋರಿಯರು ದಕ್ಷಿಣದ ಮೇಲೆ ದಂಡೆತ್ತಿ ಬಂದಿದ್ದರೆಂದು ಕೆಲವು ತಮಿಳು ಕೃತಿಗಳಲ್ಲಿ ಹೇಳಲಾಗಿದೆ. ಇವರು ಚಂದ್ರಗುಪ್ತನ ಸೇನೆಯ ಜನರೇ ಇರಬೇಕು. ತಿನ್ನವೆಲ್ಲಿ ಜಿಲ್ಲೆಯವರೆಗೂ ಇವನ ಸೇನೆ ಬಂದಿತ್ತೆಂದು ಹೇಳಲಾಗಿದೆ. ಜುನಾಗಢದಲ್ಲಿರುವ ಒಂದನೆಯ ರುದ್ರದಾಮನ ಶಾಸನದ ಪ್ರಕಾರ ಸೌರಾಷ್ಟ್ರ ಚಂದ್ರಗುಪ್ತ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿತ್ತು. ಅದನ್ನು ಪುಷ್ಯಗುಪ್ತನೆಂಬ ಪ್ರಾಂತ್ಯಾಧಿಕಾರಿ ಆಳುತ್ತಿದ್ದ.

ಚಂದ್ರಗುಪ್ತ ತನ್ನ ಜೀವಮಾನದ ಉಳಿದ ಬಹುಭಾಗವನ್ನು ಜೈತ್ರಯಾತ್ರೆಯಲ್ಲಿ ಮತ್ತು ಸಾಮ್ರಾಜ್ಯ ಸಂಘಟನೆಯಲ್ಲಿ ಕಳೆದ. ಅವನು ಪ್ರ.ಶ.ಪೂ. 300ರ ವರೆಗೆ ಆಳಿರಬೇಕು. ಆ ಬಗ್ಗೆ ವಿವರಗಳು ದೊರಕುವುದಿಲ್ಲ. ಚಂದ್ರಗುಪ್ತ ಜೈನಧರ್ಮವನ್ನವಲಂಬಿಸಿ, ಎಲ್ಲಾ ಭೋಗಭಾಗ್ಯಗಳನ್ನೂ ತ್ಯಜಿಸಿ, ರಾಜ್ಯವನ್ನು ಮಗನಾದ ಬಿಂದುಸಾರನಿಗೆ ವಹಿಸಿಕೊಟ್ಟು, ಗುರುವಾದ ಭದ್ರಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಬಂದು ಉಪವಾಸ ಮಾಡಿ ದೇಹತ್ಯಾಗಮಾಡಿದನೆಂದು ಜೈನರ ನಂಬಿಕೆ.

ಚಂದ್ರಗುಪ್ತನ ರಾಜಧಾನಿ ಪಾಟಲಿಪುತ್ರ ವಿಶಾಲನಗರವಾಗಿತ್ತು. ಅದರ ಮಧ್ಯೆ ಸುಂದರವಾದ ಉಪವನಗಳಿಂದ ಆವೃತವಾದ ಅರಮನೆಯಿತ್ತು.

ರಾಜ್ಯಭಾರ : ಚಂದ್ರಗುಪ್ತ ತನ್ನ ವಿಶಾಲ ಸಾಮ್ರಾಜ್ಯವನ್ನು ಆಳಲು ಸುಲಭವಾಗುವಂತೆ ಅದನ್ನು ಹಲವು ಪ್ರಾಂತ್ಯಗಳಾಗಿ ವಿಂಗಡಿಸಿ ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿದ್ದ. ಪೂರ್ವ ಮತ್ತು ಮಧ್ಯಭಾಗಗಳನ್ನು ನೇರವಾಗಿ ಅವನೇ ಆಳುತ್ತಿದ್ದ. ಗ್ರಾಮಾಡಳಿತ ಗ್ರಾಮಸಭೆಯಿಂದ ನಡೆಯುತ್ತಿತ್ತು. ಬಹಳಮಟ್ಟಿಗೆ ಅಧಿಕಾರದ ವಿಕೇಂದ್ರೀಕರಣ ಜಾರಿಯಲ್ಲಿತ್ತು. ಸಚಿವರುಗಳಿಂದ ಕೂಡಿದ ಮಂತ್ರಿಪರಿಷತ್ತು ಆಡಳಿತದಲ್ಲಿ ರಾಜನಿಗೆ ಸಹಾಯಕವಾಗಿತ್ತು. ಗೂಢಚಾರರ ಮೂಲಕ ದೇಶದ ಆಗುಹೋಗುಗಳನ್ನು ರಾಜ ತಿಳಿಯುತ್ತಿದ್ದ.

ಮೆಗಾಸ್ತನೀಸ್ ಸ್ಥಳೀಯಾಡಳಿತದ, ಅದರಲ್ಲೂ ಪಾಟಲೀಪುತ್ರದ ಪೌರಾಡಳಿತದ ವಿಷಯವಾಗಿ ವಿಶೇಷ ಮಾಹಿತಿ ಕೊಟ್ಟಿದ್ದಾನೆ. ಅದರ ಆಡಳಿತ ಆಧುನಿಕ ಪೌರಸಭೆಯ ಆಡಳಿತದಂತಿತ್ತು. ನಗರಪಾಲಕನ ನೇತೃತ್ವದಲ್ಲಿ ಐವರು ಸದಸ್ಯರ ಆರು ಸಮಿತಿಗಳಿದ್ದುವು. ಪ್ರತಿ ಸಮಿತಿಗೂ ಒಂದೊಂದು ಕೆಲಸವನ್ನು ವಹಿಸಲಾಗಿತ್ತು. ಮೊದಲ ಸಮಿತಿ ನಗರದ ಔದ್ಯೋಗಿಕ ಕಾರ್ಯಗಳನ್ನು ನೋಡಿಕೊಳ್ಳುತ್ತಿತ್ತು. ಎರಡನೆಯ ಸಮಿತಿ ನಗರದ ವಿದೇಶೀಯರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿತ್ತು. ಜನನಮರಣ ದಾಖಲೆಗಳನ್ನು ಇಡುವುದು ಮೂರನೆಯದರ ಕೆಲಸ. ನಾಲ್ಕನೆಯದು ವ್ಯಾಪಾರದ ತೂಕ ಮತ್ತು ಅಳತೆಗಳನ್ನು ನೋಡಿಕೊಳ್ಳುತ್ತಿತ್ತು. ಐದನೆಯದು ಕೈಗಾರಿಕಾವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ನೋಡಿಕೊಳ್ಳುತ್ತಿತ್ತು. ಮಾರಾಟವಾದ ಸರಕುಗಳ ಬೆಲೆಯ ಹತ್ತನೆಯ ಒಂದು ಭಾಗವನ್ನು ವಸೂಲು ಮಾಡುವುದು ಆರನೆಯ ಸಮಿತಿಯ ಕಾರ್ಯಭಾರ. ಲೋಕೋಪಯೋಗಿ ಕೆಲಸಗಳು, ಮಾರುಕಟ್ಟೆ, ಬಂದರು, ದೇವಸ್ಥಾನಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ವ್ಯವಸ್ಥೆಯಿತ್ತು.

ರಕ್ಷಣಾಡಳಿತವೂ ಉತ್ತಮವಾಗಿತ್ತು. ಉತ್ತಮ ತರಬೇತಿ ಪಡೆದು ದಕ್ಷತೆಯಿಂದ ಕೂಡಿದ್ದ ಸೈನ್ಯವಿತ್ತು. ಸೈನ್ಯದಲ್ಲಿ 6 ಲಕ್ಷ ಸೈನಿಕರು, 30 ಸಾವಿರ ಕುದುರೆಗಳು, 9 ಸಾವಿರ ಆನೆಗಳು ಮತ್ತು 8 ಸಾವಿರ ರಥಗಳಿದ್ದುವು. ರಾಜನೇ ಸೈನ್ಯದ ಮುಖ್ಯ ನಾಯಕನಾಗಿದ್ದ. ಅದರ ಆಡಳಿತ, ಹತೋಟಿ 30 ಸಾವಿರ ಜನರ ಕಚೇರಿಯ ಹೊಣೆ. ಅದರಲ್ಲಿ ಆರು ಮಂಡಳಿಗಳಿದ್ದುವು.

ಭೂಕಂದಾಯವೇ ರಾಜ್ಯದ ಮುಖ್ಯ ಆದಾಯ. ಉದ್ಯೋಗಗಳು, ಗಣಿ, ಕಾಡುಗಳ ಮೇಲೆ ತೆರಿಗೆ ಮತ್ತು ಸಾಮಂತರಾಜರ ಕಪ್ಪಕಾಣಿಕೆಗಳು ಇತರ ಆದಾಯಗಳು. ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಸಮಾಹರ್ತ ಎಂಬ ಅಧಿಕಾರಿಯಿದ್ದ. ಚಂದ್ರಗುಪ್ತ ಮೌರ್ಯ ವ್ಯವಸಾಯಕ್ಕೆ ಪ್ರೋತ್ಸಾಹ ನೀಡಿದ. ಅವನ ಆಸ್ಥಾನದ ವೈಭವವನ್ನೂ ಅರಮನೆಯನ್ನೂ ಮೆಗಾಸ್ತನೀಸ್ ವಿವರಿಸಿದ್ದಾನೆ. ಉದ್ಯಾನಗಳಲ್ಲಿ ನವಿಲುಗಳೂ ಇತರ ಹಲವು ಪಕ್ಷಿಗಳೂ ಇದ್ದುವು. ಅರಮನೆಯ ತಟಾಕಗಳಲ್ಲಿ ಬಣ್ಣಬಣ್ಣದ ಮೀನುಗಳಿದ್ದುವು. ಗ್ರೀಕ್ ಚರಿತ್ರಕಾರರು ಸಾಮಾನ್ಯ ಜನಗಳ ಜೀವನದ ವಿಚಾರವಾಗಿಯೂ ಕೆಲವು ಮಾಹಿತಿ ಒದಗಿಸಿದ್ದಾರೆ. ರಾಜ್ಯ ಸುಭಿಕ್ಷದಿಂದಿತ್ತು. ಜನರಲ್ಲಿ ನೆಮ್ಮದಿ ಇತ್ತು. ಅವರು ಕುಶಲಕಲೆ ಮತ್ತು ಇತರ ಉದ್ಯೋಗಗಳಲ್ಲಿ ಪರಿಶ್ರಮ ಹೊಂದಿದ್ದವರಾಗಿದ್ದರು. ಜನ ಪ್ರಾಮಾಣಿಕರಾಗಿದ್ದರು. ಕಳ್ಳತನ ಮತ್ತು ದರೋಡೆಗಳು ವಿರಳವಾಗಿದ್ದುವು. ಜನತೆಯ ರಕ್ಷಣೆಗಾಗಿ ಒಂದು ಪೊಲೀಸ್ ಪಡೆಯಿತ್ತು. ದಂಡನೀತಿ ಕಠಿಣವಾಗಿತ್ತು. (ವಿ.ಕೆ.ಎನ್.ಕೆ.)

**ಚಂದ್ರದೇವ :** ಆಳ್ವಿಕೆ 1089–1103. ಗಾಹಡ್ವಾಲ ಮನೆತನದ ಮೊದಲ ಅರಸ. 1089–90ರ ಇವನ ಮೊದಲ ಶಾಸನದಲ್ಲಿ ತಿಳಿಸಿರುವ ಪರಮಭಟ್ಟಾರಕ, ಮಹಾರಾಜಾಧಿರಾಜ, ಪರಮೇಶ್ವರ ಇತ್ಯಾದಿ ಬಿರುದುಗಳಿಂದ ಇವನು ಸ್ವತಂತ್ರ ಅರಸನಾಗಿದ್ದನೆಂಬುದು ಸ್ಪಷ್ಟಪಡುತ್ತದೆ. ಕಳಚುರಿ ಅರಸ ಲಕ್ಷ್ಮೀಕರ್ಣನ ಪರಾಜಯ ಮತ್ತು ಪರಮಾರ ಭೋಜನ ಮರಣಾನಂತರ ಘಜ್ನಿಯ ಮುಸ್ಲಿಮರ ಆಕ್ರಮಣಗಳಿಂದಾಗಿ ಉತ್ತರ ಭಾರತದ ಪರಿಸ್ಥಿತಿ ಗಂಭೀರವಾಗಿದ್ದ ಸಮಯದಲ್ಲಿ ಇವನು ಅಧಿಕಾರಕ್ಕೆ ಬಂದಂತೆ ತೋರುತ್ತದೆ. ಚಂದ್ರದೇವ ಶತ್ರುಮಂಡಲವನ್ನು ಜಯಿಸಿದವನೆಂದು ಗಾಹಡ್ವಾಲ ಶಾಸನಗಳು ತಿಳಿಸುತ್ತವೆ. 1093ರ ಶಾಸನವೊಂದು ಇವನು ನರಪತಿ, ಗಜಪತಿ, ಗಿರಿಪತಿ ಮತ್ತು ತ್ರಿಶಂಕುಪತಿಗಳನ್ನು ಜಯಿಸಿದನೆಂದು ತಿಳಿಸುತ್ತದೆ. ಇವು ವಿವಿಧ ಸಾಮಂತವರ್ಗಗಳ ಹೆಸರುಗಳಾಗಿರಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನರಪತಿ ಮತ್ತು ಗಜಪತಿ ಎಂಬುದು ಕಳಚುರಿ ಅರಸರು ಧರಿಸುತ್ತಿದ್ದ ಬಿರುದುಗಳೂ ಆಗಿದ್ದುದರಿಂದ ಪ್ರಾಯಶಃ ಚಂದ್ರದೇವ ಹಾಗೂ ಕಳಚುರಿ ಯಶಃಕರ್ಣರ ನಡುವಣ ತಿಕ್ಕಾಟವನ್ನು ಈ ಶಾಸನಗಳು ಸೂಚಿಸುತ್ತವೆಂದು ಹೇಳಬಹುದು. ಲಕ್ಷ್ಮೀಕರ್ಣನ ಅಧೀನದಲ್ಲಿದ್ದ ಅಂತರ್ವೇದಿ ಮತ್ತು ವಾರಾಣಸಿ ಪ್ರದೇಶಗಳು ಸು. 1090ರ ಹೊತ್ತಿಗೆ ಚಂದ್ರದೇವನ ವಶವಾಗಿದ್ದುವು. ಗೋವಿಂದಚಂದ್ರನ ಪತ್ನಿ ಕುಮಾರದೇವಿಯ ಸಾರನಾಥ ಶಾಸನ ಉಲ್ಲೇಖಿಸುವ, ಚಂದ್ರದೇವನಿಂದ ಯಮುನಾತೀರದಲ್ಲಿ ಪರಾಜಿತರಾದ ಅರಸರಲ್ಲಿ ಕಳಚುರಿ ಯಶಃಕರ್ಣ, ಚಂದ್ರಾತ್ರೇಯ ವಂಶದ ಸಲ್ಲಕ್ಷಣಸಿಂಹರೂ ಸೇರಿರಬೇಕು. ಆದರೆ, ಚಂದ್ರದೇವನ ಮುಖ್ಯ ಸಾಧನೆ ಎಂದರೆ ಹರ್ಷ ಮತ್ತು ಪ್ರತೀಹಾರರ ರಾಜಧಾನಿಯಾಗಿದ್ದ ಕಾನ್ಯಕುಬ್ಜ ಅಥವಾ ಮಹೋದಯದ ಮೇಲಿನ ದಿಗ್ವಿಜಯ. ಕಾನ್ಯಕುಬ್ಜವೂ ಸ್ವಲ್ಪಕಾಲ ಚಂದ್ರದೇವನ ರಾಜಧಾನಿಯಾಗಿದ್ದಂತೆ ತೋರುತ್ತದೆ. ಇವನ ರಾಜ್ಯ ದಕ್ಷಿಣದಲ್ಲಿ ಯಮುನಾತೀರದವರೆಗೂ ಪಶ್ಚಿಮದಲ್ಲಿ ಕಾನ್ಯಕುಬ್ಜ ಮತ್ತು ಸುತ್ತಮುತ್ತಲಿನ ಪ್ರದೇಶದವರೆಗೂ ಉತ್ತರದಲ್ಲಿ ಪಾಂಚಾಲ ಮತ್ತು ಉತ್ತರ ಕೋಸಲದ (ಈಗಿನ ಔಧ್–ಗೋರಖಪುರ ಪ್ರದೇಶ) ವರೆಗೂ ಪೂರ್ವದಲ್ಲಿ ಬಹುಕಾಲದವರೆಗೆ ಅವನ ರಾಜಧಾನಿಯಾಗಿ ಮೆರೆದ ವಾರಾಣಸಿಯವರೆಗೂ ವ್ಯಾಪಿಸಿತ್ತು. ಈತ ಪೂರ್ವದಲ್ಲಿ ರಾಜ್ಯ ವಿಸ್ತರಿಸಲು ಯತ್ನಿಸಿದನಾದರೂ ಈ ಪ್ರಯತ್ನದಲ್ಲಿ ಖಚಿತವಾದ ವಿಜಯವೇನನ್ನೂ ಸಾಧಿಸಲಿಲ್ಲ. ವಾರಾಣಸಿಯಿಂದ ದೆಹಲಿಯವರೆಗಿನ ಪ್ರದೇಶವನ್ನು ಪಡೆಯಲು ಇವನು ಅನೇಕ ಹೋರಾಟಗಳನ್ನು ನಡೆಸಬೇಕಾಯಿತು.

ಚಂದ್ರದೇವ ತನ್ನ ಪ್ರತಾಪದಿಂದ ಪ್ರಜೆಗಳ ತೊಂದರೆಗಳನ್ನು ಪರಿಹರಿಸುತ್ತಿದ್ದವನೆಂದೂ ಉದಾರ ಗುಣವುಳ್ಳವನೆಂದೂ ಗಾಹಡ್ವಾಲ ಶಾಸನಗಳು ವರ್ಣಿಸುತ್ತವೆ. ಇವನು ತುಲಾಪುರುಷ ಮಹಾದಾನ ಮುಂತಾದ ಧರ್ಮಕಾರ್ಯಗಳನ್ನು ಮಾಡಿದ. ಕಾಶಿ, ಕುಶಿಕ (ಕಾನ್ಯಕುಬ್ಜ), ಉತ್ತರ ಕೋಸಲ (ಅಯೋಧ್ಯಾ), ಇಂದ್ರಸ್ಥಾನೀಯಕ (ಇಂದ್ರಪ್ರಸ್ಥ) ಮುಂತಾದ ಪುಣ್ಯಸ್ಥಳಗಳನ್ನು ಈತ ರಕ್ಷಿಸಿದ. ಚಂದ್ರದೇವ ಸಕಲ ಶಾಸ್ತ್ರಪಾರಂಗತನಾಗಿದ್ದ, ವೇದಾಧ್ಯಯನಕ್ಕೆ ವಿಶೇಷ ಪ್ರೋತ್ಸಾಹ ನೀಡಿದ. ಕಾಶಿಯಲ್ಲಿರುವ ಚಂದ್ರಮಾಧವ ಮತ್ತು ಆದಿಕೇಶವ ದೇವಾಲಯಗಳನ್ನು ಇವನು ಕಟ್ಟಿಸಿದಂತೆ ತೋರುತ್ತದೆ. (ಎಚ್.ಎಂ.ಎನ್.ಆರ್.)

**ಚಂದ್ರನಗರ :** ಪಶ್ಚಿಮ ಬಂಗಾಲದ ಹೂಗ್ಲಿ ಜಿಲ್ಲೆಯಲ್ಲಿರುವ ಒಂದು ಪಟ್ಟಣ. ಈಗ ಇದನ್ನು ಚಂದನ್ನಗರ ಎನ್ನುತ್ತಾರೆ. ಕೊಲ್ಕತದ ವಾಯವ್ಯಕ್ಕೆ 34 ಕಿಮೀ ದೂರದಲ್ಲಿ ಉ. ಅ. $22^0$ 52' ಮತ್ತು ಪೂ.ರೇ. $88^0$ 22' ನಲ್ಲಿ ಹೂಗ್ಲಿ ನದಿಯ ಬಲದಂಡೆಯ ಮೇಲಿರುವ ಈ ಪಟ್ಟಣ ಹಿಂದೆ ಫ್ರೆಂಚರ ವಸಾಹತಾಗಿತ್ತು. ಜನಸಂಖ್ಯೆ 1,50,000(2001) ವಿಸ್ತೀರ್ಣ 20 ಚ.ಕಿಮೀ. ಯುರೋಪಿನ ಅನೇಕ ದೇಶಗಳವರು ಭಾರತದೊಂದಿಗೆ ನೇರ ವ್ಯಾಪಾರ ಮಾಡಲು ಈ ದೇಶಕ್ಕೆ ಬಂದಾಗ ಫ್ರೆಂಚರೂ ಈ ದೇಶದ ವಿವಿಧ ಭಾಗಗಳಲ್ಲಿ ಕೋಠಿಗಳನ್ನು ಸ್ಥಾಪಿಸಿದರು. 1674ರಲ್ಲಿ ಅಥವಾ 1676ರಲ್ಲಿ ಫ್ರೆಂಚರ ವ್ಯಾಪಾರಕೋಠಿ ಆರಂಭವಾಯಿತು. 1688ರಲ್ಲಿ ಇವರು ಔರಂಗ್‌ಜೇಬನಿಂದ ಚಂದ್ರನಗರ ಹಾಗೂ ಅದರ ಸುತ್ತಣ 31/2 ಕಿಮೀ ಪ್ರದೇಶವನ್ನು ಪಡೆದುಕೊಂಡರು. ತರುವಾಯ ಇಲ್ಲಿ ಒಂದು ಕೋಟೆಯನ್ನು ನಿರ್ಮಿಸಲಾಯಿತು. ಈ ಊರು ಹೂಗ್ಲಿ ನದಿಯ ದಂಡೆಯ ಮೇಲಿದ್ದುದರಿಂದ ನೌಕಾ ವ್ಯಾಪಾರಕ್ಕೂ ಅನುಕೂಲವಾಗಿತ್ತು. ಭಾರತದ ಇತರ ಕೆಲವು

ಪ್ರದೇಶಗಳಂತೆ ಬಂಗಾಳದಲ್ಲೂ ಫ್ರೆಂಚರಿಗೂ ಬ್ರಿಟಿಷರಿಗೂ ರಾಜಕೀಯ ಪೈಪೋಟಿ ಏರ್ಪಟ್ಟಿತ್ತು. 1757ರಲ್ಲಿ ಬ್ರಿಟಿಷರು ಚಂದ್ರನಗರವನ್ನು ಮುತ್ತಿದರು. ಆಗ ಕ್ಲೈವ್ ಭೂಸೈನ್ಯದ ದಂಡನಾಯಕತ್ವವನ್ನೂ ಅಡ್ಮಿರಲ್ ವ್ಯಾಟ್ಸನ್ ನೌಕಾಪಡೆಯ ನೇತೃತ್ವವನ್ನೂ ವಹಿಸಿದ್ದರು. ಚಂದ್ರನಗರ ಬ್ರಿಟಿಷರ ವಶವಾಯಿತು. ಬ್ರಿಟಿಷರು ಇಲ್ಲಿ ಅನೇಕ ಮನೆಗಳನ್ನು ನಾಶಮಾಡಿದರು, ಕೋಟೆಯನ್ನು ಹಾಳುಗೆಡವಿದರು. ಈ ಊರಿನ ಪತನದಿಂದ ಬಂಗಾಲದಲ್ಲಿ ಫ್ರೆಂಚರ ಬಲ ಕುಸಿಯಿತು.

ಯುರೋಪಿನಲ್ಲಿ ನಡೆದ ಏಳು ವರ್ಷಗಳ ಯುದ್ಧದ ಅನಂತರ ಏರ್ಪಟ್ಟ ಶಾಂತಿ ಕೌಲಿನಂತೆ 1765ರಲ್ಲಿ ಬ್ರಿಟಿಷರು ಚಂದ್ರನಗರವನ್ನು ಫ್ರೆಂಚರಿಗೆ ಹಿಂದಿರುಗಿಸಿದರಾದರೂ 1784ರಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ಗಳ ನಡುವೆ ಮತ್ತೆ ವಿರಸ ಬೆಳೆದಾಗ ಬ್ರಿಟಿಷರು ಈ ಊರನ್ನು ಪುನಃ ವಶಪಡಿಸಿಕೊಂಡರು. 1802ರಲ್ಲಿ ಆದ ಅಮಿಯೆನ್ಸ್ ಶಾಂತಿ ಕೌಲಾದಾಗ ಇದು ಮತ್ತೆ ಫ್ರೆಂಚರ ಕೈಸೇರಿತು. ಅದೇ ವರ್ಷ ಬ್ರಿಟಿಷರು ಪುನಃ ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈ ರೀತಿ ಪದೇ ಪದೇ ಇದರ ಒಡೆತನದಲ್ಲಿ ಬದಲಾವಣೆ ಆದ ಬಳಿಕ ಅಂತಿಮವಾಗಿ 1815ರ ಒಪ್ಪಂದಕ್ಕನುಗುಣವಾಗಿ ಇದು ಫ್ರೆಂಚರ ಕೈಸೇರಿತು. 1950ರ ವರೆಗೂ ಅವರ ವಶದಲ್ಲೇ ಉಳಿದಿತ್ತು.

ಡೂಪ್ಲೆಕ್ಸ್ ಫ್ರೆಂಚ್ ಭಾರತದ ಗವರ್ನರಾಗಿ ಬಂದಾಗ ಚಂದ್ರನಗರದ ಮಹತ್ತ್ವ ಅಧಿಕವಾಯಿತು. ಆಗ ಇದನ್ನು ಅಭಿವೃದ್ಧಿಗೊಳಿಸಲಾಯಿತು. ಆಗ ಇಟ್ಟಿಗೆಗಳನ್ನು ಬಳಸಿ 2,000 ಮನೆಗಳು ನಿರ್ಮಾಣವಾದುವು. ಗಣನೀಯ ಪ್ರಮಾಣದಲ್ಲಿ ವ್ಯಾಪಾರ ಬೆಳೆಯಿತು. 1880ರಲ್ಲಿ ಇಲ್ಲಿ ಒಂದು ದೊಡ್ಡ ರೋಮನ್ ಕೆಥೊಲಿಕ್ ಚರ್ಚ್ ನಿರ್ಮಾಣವಾಯಿತು. 1882ರಲ್ಲಿ ಸ್ಥಾಪಿಸಿದ ಕಾಲೇಜ್ ಡೂಪ್ಲೆಕ್ಸ್ ಈಗ ಒಂದು ಪ್ರಮುಖ ಶಿಕ್ಷಣಸಂಸ್ಥೆಯಾಗಿದೆ. ಹಿಂದೆ ಸರ್ಕಾರಿಭವನವಾಗಿದ್ದ ಕಟ್ಟಡದಲ್ಲಿ ಈಗ ವಸ್ತುಸಂಗ್ರಹಾಲಯ, ಕಲಾಪ್ರದರ್ಶನಾಲಯ ಇವೆ.

ಕಳ್ಳ ಸಾಗಣೆದಾರರಿಗೂ ತಲೆ ತಪ್ಪಿಸಿಕೊಳ್ಳುವವರಿಗೂ ಇದು ಹಿಂದೆ ಅನುಕೂಲವಾದ ಸ್ಥಳವಾಗಿತ್ತು. ಬ್ರಿಟಿಷ್ ಭಾರತದ ನಡುವೆ ಈ ಚಿಕ್ಕ ಫ್ರೆಂಚ್ ವಸಾಹತು ಇದ್ದದ್ದೂ ಇಲ್ಲಿಂದ ಸುಲಭವಾಗಿ ಬಂಗಾಳ ಕೊಲ್ಲಿಯನ್ನು ಪ್ರವೇಶಿಸಿ ಇತರ ಪ್ರದೇಶಗಳಿಗೆ ಹೋಗಲು ಸುಲಭವಾಗಿದ್ದದ್ದೂ ಇದಕ್ಕೆ ಕಾರಣವಿರಬಹುದು. ಇದು ಬ್ರಿಟಿಷ್ ಭಾರತದಿಂದ ಸುತ್ತುವರಿಯಲ್ಪಟ್ಟ ಪುಟ್ಟ ವಸಾಹತಾಗಿದ್ದುದರಿಂದ ಫ್ರೆಂಚರ ಪ್ರತ್ಯೇಕ ಆಡಳಿತದಲ್ಲಿ ಇದು ಪ್ರಗತಿ ಸಾಧಿಸಲಿಲ್ಲ. 1950ರಲ್ಲಿ ನಡೆಸಿದ ಜನಮತಗಣನೆಗೆ ಅನುಗುಣವಾಗಿ ಗಣರಾಜ್ಯ ಭಾರತದಲ್ಲಿ ಇದು ವಿಲೀನಗೊಂಡಿತು. 1951ರಲ್ಲಿ ಇದನ್ನು ಪಶ್ಚಿಮ ಬಂಗಾಲದ ಹೂಗ್ಲಿ ಜಿಲ್ಲೆಗೆ ಸೇರಿಸಲಾಯಿತು. ಇಲ್ಲಿ ಮುನಿಸಿಪಲ್ ಕಾರ್ಪೊರೇಷನ್ ಸ್ಥಾಪಿತವಾದ್ದು 1954ರಲ್ಲಿ. ಪಶ್ಚಿಮ ಬಂಗಾಲದ ಒಂದು ಭಾರಿ ಸೆಣಬಿನ ಗಿರಣಿ ಇಲ್ಲಿದೆ. ಕೋಲ್ಕತ ಮತ್ತ ಚಂದ್ರನಗರಗಳ ನಡುವೆ ರೈಲುಸಂಪರ್ಕವಿದೆ. ಬಟ್ಟೆ ನೇಯುವುದು, ಪೀಠೋಪಕರಣಗಳ ತಯಾರಿಕೆ ಇಲ್ಲಿಯ ಪ್ರಧಾನ ಕೈಗಾರಿಕೆಗಳು. ಚಂದ್ರನಗರ–ಚಿನ್‍ಸುರಾ ಮಾರ್ಗದ ನಡುವೆ, ಇದಕ್ಕೆ ಸಮೀಪದಲ್ಲೇ, ಗೋಸ್ವಾಮಿಘಾಟ್ ಬಳಿ ಕಾಳಿಯ ಒಂದು ಪ್ರಾಚೀನ ದೇವಾಲಯವುಂಟು. ಅದು ಈಗ ಜೀರ್ಣಾವಸ್ಥೆಯಲ್ಲಿದೆ. ಇಲ್ಲಿಯ ವಾಯುಗುಣ ಕೊಲ್ಕೊತ್ತಕ್ಕಿಂತಲೂ ತಂಪಾದದ್ದು. ಕೊಲ್ಕತ್ತವನ್ನು ಬಿಟ್ಟರೆ ಇತರ ಸ್ಥಳಗಳಿಗೂ ಚಂದ್ರನಗರಕ್ಕೂ ನಡುವೆ ಈಗ ಗಣನೀಯ ವ್ಯಾಪಾರ ನಡೆಯುವುದಿಲ್ಲ. (ಡಿ.ಎಸ್.ಜೆ.; ಎನ್.ಎ.)

**ಚಂದ್ರಪುರ :** ಗೋವೆಯ ಕದಂಬರು ಗೋವೆಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳುವುದಕ್ಕೆ ಮುಂಚೆ ಗೋವ ಮತ್ತು ಅದರ ಪರಿಸರಗಳಲ್ಲಿ ಆಳುತ್ತಿದ್ದ ಪ್ರಾಚೀನ ರಾಜಮನೆತನಗಳ ರಾಜಧಾನಿಯಾಗಿದ್ದ ಸ್ಥಳ. ಸಾಲ್ಸೆಟ್ಟಿನಲ್ಲಿರುವ ಈಗಿನ ಚಂದೋರ್ ಎಂಬುದೇ ಚಂದ್ರಪುರವೆಂದು ಭಾವಿಸಲಾಗಿದೆ. ಬೆಳಗಾಂವಿ ಜಿಲ್ಲೆಯ ಚಂದಗಡ್ ಪಟ್ಟಣವೇ ಹಿಂದೆ ಚಂದ್ರಪುರವಾಗಿದ್ದಿರಬಹುದೆಂದೂ ಒಂದು ಊಹೆಯುಂಟು. ಭೋಜವಂಶಕ್ಕೆ ಸೇರಿದ ದೇವರಾಜ ಚಂದ್ರಪುರದಲ್ಲಿದ್ದು, ಗೋಸ್ವಾಮಿ ಮತ್ತು ಇಂದ್ರಸ್ವಾಮಿ ಎಂಬ ಇಬ್ಬರು ಬ್ರಾಹ್ಮಣರಿಗೆ ದತ್ತಿಬಿಟ್ಟನೆಂಬುದು ಸುಮಾರು 4ನೆಯ ಶತಮಾನಕ್ಕೆ ಸೇರಬಹುದಾದ ಶಿರೋಡ ತಾಮ್ರಶಾಸನದಿಂದ ತಿಳಿದುಬರುತ್ತದೆ. ಗೋವೆಯ ಕದಂಬರೂ ಸ್ವಲ್ಪಕಾಲ ಚಂದ್ರಪುರದಿಂದಲೇ ಆಳುತ್ತಿದ್ದರು. ಹೇಮಚಂದ್ರ ತನ್ನ ದ್ವ್ಯಾಶ್ರಯಕಾವ್ಯದಲ್ಲಿ ಈ ನಗರವನ್ನು ಹೆಸರಿಸಿದ್ದಾನೆ. ಇಮ್ಮಡಿ ಶಸ್ತದೇವ ಇಲ್ಲಿ ಆಳುತ್ತಿದ್ದಾಗ ಶಿಲಹಾರರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ. ಇವನ ಮಗ ಒಂದನೆಯ ಜಯಕೇಶಿ 1052ರಲ್ಲಿ ತನ್ನ ರಾಜಧಾನಿಯನ್ನು ಚಂದ್ರಪುರದಿಂದ ಗೋವಕಪಟ್ಟಣ ಅಥವಾ ಗೋವಕಪುರಿಗೆ ಬದಲಾಯಿಸಿದ. ಚಂದ್ರಪುರದ ಆ ಕಾಲದ ಅವಶೇಷಗಳು ಬಹುಮಟ್ಟಿಗೆ ನಾಶವಾಗಿವೆ. ಸುಮಾರು 11ನೆಯ ಶತಮಾನಕ್ಕೆ ಸೇರಬಹುದಾದ ಶಿವಲಿಂಗವೊಂದೂ ದೇವಾಲಯದ ಅವಶೇಷಗಳೂ ಅಲ್ಲಿ ಕಂಡುಬಂದಿವೆ. (ಎ.ವಿ.ವಿ.; ಎಂ.ಎಚ್.)

**ಚಂದ್ರಪುಷ್ಪ :** ಕನ್ವಾಲ್ವುಲೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಕ್ಯಾಲೊನಿಕ್ಟಿಯಾನ್ ಬೋನಾನಾಕ್ಸ್ ಇದರ ಶಾಸ್ತ್ರೀಯ ಹೆಸರು. ಇದು ಅಮೆರಿಕದ ಉಷ್ಣಪ್ರದೇಶಗಳ ಮೂಲದ್ದು. ಭಾರತದಲ್ಲಿ ಉದ್ಯಾನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸಲಾಗುತ್ತದೆ. ಇದೊಂದು ಬಹುವಾರ್ಷಿಕ ಬಳ್ಳಿ. ಇದರ ಕಾಂಡದಲ್ಲಿ ಬಿಳಿಯ ಬಣ್ಣದ ಹಾಲ್ತೊರೆಯಿದೆ. ಎಲೆಗಳು ಹೃದಯಾಕಾರದವು. ಹೂಗಳಿಗೆ ಸುವಾಸನೆ ಉಂಟು. ಅವುಗಳ ಬಣ್ಣ ಬಿಳಿ ಇಲ್ಲವೆ ಊದಾ, ಬಲು ಆಕರ್ಷಕವಾಗಿವೆ. ರಾತ್ರಿ ಅರಳಿ ಮರುಬೆಳಗ್ಗೆ ಬಾಡುತ್ತವೆ.

ಚಂದ್ರಪುಷ್ಪವನ್ನು ಬೀಜಗಳಿಂದ ಬೆಳೆಸಲಾಗುತ್ತದೆ. ಕೆಲವೊಮ್ಮೆ ಕಾಂಡತುಂಡುಗಳಿಂದ ಬೆಳೆಸುವುದೂ ಉಂಟು. ಇದರ ಪ್ರಾಮುಖ್ಯ ಅಲಂಕಾರ ಮಾತ್ರವಲ್ಲದೆ ಬೇರೆ ಉಪಯೋಗಗಳೂ ಉಂಟು. ಇದರ ಎಳೆಯ ಎಲೆ ಮತ್ತು ಪುಷ್ಪಪಾತ್ರೆಗಳನ್ನು ತರಕಾರಿಯಾಗಿ ಬಳಸುತ್ತಾರೆ. ಇದರ ಬೇರಿನ ತೊಗಟೆಯನ್ನು ವಿರೇಚಕವಾಗಿ ಉಪಯೋಗಿಸುವುದುಂಟು. (ಎಸ್.ಐ.ಎಚ್.)

**ಚಂದ್ರಪ್ಪಗೌಡರು, ಎಚ್ ಡಿ :** 1929ರ ಸೆಪ್ಟೆಂಬರ್ 26ರಂದು ಮಲೆನಾಡಿನಲ್ಲಿ ಜನಿಸಿದರು. ಹೆಸರಾಂತ ವೈದ್ಯರು ಹಾಗೂ ಲೇಖಕರು. ತಮ್ಮ ವೈದ್ಯವೃತ್ತಿಯನ್ನೆಲ್ಲ ಗ್ರಾಮೀಣ ಪ್ರದೇಶಕ್ಕೆ ಮುಡಿಪಾಗಿರಿಸಿದರು. ಬಾಲ್ಯದಿಂದಲೂ ಕಷ್ಟ–ನಿಷ್ಠುರಗಳ ಜೊತೆಯಲ್ಲೇ ಬೆಳೆದ ಇವರು ಉತ್ತಮ ವೈದ್ಯರಾಗಿ, ಶಸ್ತ್ರವೈದ್ಯರಾಗಿ ಮತ್ತು ಲೇಖಕರಾಗಿ ಹೆಸರುಗಳಿಸಿದ್ದಾರೆ. ಜನಸಾಮಾನ್ಯರಲ್ಲಿ ಉತ್ತಮ ಆರೋಗ್ಯದ ಬಗ್ಗೆ ಜಾಗೃತಿಯುಂಟುಮಾಡುವ ಅನೇಕ ವೈದ್ಯಕೀಯ ಲೇಖನಗಳನ್ನು ಕನ್ನಡದಲ್ಲಿ ಸರಳವಾಗಿ ಬರೆದಿದ್ದಾರೆ. ಸ್ವಂತ ಅನುಭವದಿಂದ ಲೇಖನ ಬರೆಯುವ ಇವರ ನಿರೂಪಣಾ ಶೈಲಿ ಓದುಗರನ್ನು ಒಂದೇ ಬಾರಿಗೆ ಸೆಳೆದುಕೊಂಡುಬಿಡುತ್ತದೆ. ಒಟ್ಟು 21 ಪುಸ್ತಕಗಳನ್ನು ರಚಿಸಿರುವ ಇವರಿಗೆ ಅನೇಕ ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ. ಇವರ ಮೂರು ಪುಸಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತಿವೆ. ವೈದ್ಯಲೋಕದ ಕೌತುಕಗಳು, ಮಾನವ ಯಂತ್ರ ಕುಸುಮ ಬೀಳದಂತೆ ತಡೆಯುವುದು ಹೇಗೆ? ಹಾಗೂ ಡಾ॥ ವ್ಲಾಡಿಯರ್ ಹಾಫ್‌ಕಿನ್ ಪುಸ್ತಕಗಳು ಬಹುಮಾನ ಪಡೆದಿವೆ. ಇವಲ್ಲದೆ ಇತರ ಪುಸ್ತಕಗಳಿಗೆ ಆರ್ಯಭಟ ಸಾಹಿತ್ಯ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಡಾ॥ ಪಿ.ಎಸ್. ಶಂಕರ್ ಪ್ರಶಸ್ತಿ, ಗೊರೂರು ಪ್ರತಿಷ್ಠಾನದ ರತ್ನ ಪ್ರಶಸ್ತಿ, ಕುವೆಂಪು ವೈದ್ಯಸಾಹಿತ್ಯ ಪ್ರಶಸ್ತಿಗಳಿಗೆ ಭಾಜನರಾಗಿರುವ ಡಾ॥ ಹೆಚ್.ಡಿ. ಚಂದ್ರಪ್ಪಗೌಡರು ಬದುಕಿನುದ್ದಕ್ಕೂ ಪ್ರಾಮಾಣಿಕರಾಗಿ, ನಿಷ್ಕಳಂಕ ರೀತಿಯಲ್ಲಿ ಜನಸೇವೆ ಮಾಡಿದ್ದಾರೆ.

ಎಚ್.ಡಿ. ಚಂದ್ರಪ್ಪಗೌಡರು ಸರ್ಕಾರಿ ಸೇವೆಯಲ್ಲಿ 28 ವರ್ಷಗಳ ಕಾಲ ಶಿಕಾರಿಪುರ, ಕೆ.ಜಿ.ಎಫ್, ಮೈಸೂರು, ಮಂಗಳೂರು, ಕೊಳ್ಳೇಗಾಲ, ಚಿಕ್ಕಮಗಳೂರು, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ವೈದ್ಯರಾಗಿ, ಶಸ್ತ್ರವೈದ್ಯರಾಗಿ, ಜಿಲ್ಲಾ ಸರ್ಜನ್ ಆಗಿ ಸೇವೆ ಸಲ್ಲಿಸಿದ್ದಾರೆ.

ಇವರ ಇತರ ಕೆಲವು ಪ್ರಮುಖ ಪುಸ್ತಕಗಳು: ಕ್ಯಾನ್ಸರ್‌ಲೋಕ, ನನಗೆ ಬೈಪಾಸ್ ಆಯಿತು, ವಿಶ್ವವಿಖ್ಯಾತ ವೈದ್ಯವಿಜ್ಞಾನಿಗಳು, ಜೀರ್ಣಾಂಗರೋಗಗಳು, ಡಾ॥ ವ್ಲಾಡಿಯರ್ ಹಾಫ್‌ಕಿನ್, ಡಾ॥ ಯಲ್ಲಾಪ್ರಾಗಡ ಸುಬ್ಬರಾವ್ ಇತ್ಯಾದಿ. (ವಿ.ಬಿ.)

**ಚಂದ್ರಪ್ರಭ :** ಎಂಟನೆಯ ತೀರ್ಥಕರ. **ನೋಡಿ– ತೀರ್ಥಂಕರರು.**

**ಚಂದ್ರಭಟ್ಟ :** ಕನ್ನಡ ಸಾಹಿತ್ಯದಲ್ಲಿ ಚಂದ್ರಭಟ್ಟ ಎಂಬ ಹೆಸರು ಕೆಲವು ಕೃತಿಗಳಲ್ಲಿ ಮತ್ತು ಶಾಸನಗಳಲ್ಲಿ ಕಂಡುಬರುತ್ತದೆ. ಈಗ ಉಪಲಬ್ಧವಿರುವ ಪ್ರಮಾಣಗಳಿಂದ ಚಂದ್ರಭಟ್ಟ ಎಂಬ ಇಬ್ಬರು ಕವಿಗಳು ಇದ್ದುದು ತಿಳಿಯುತ್ತದೆಯೇ ಹೊರತು ಅವರು ಯಾವ ಗ್ರಂಥಗಳನ್ನು ಬರೆದಿದ್ದಾರೆಂಬುದು ಖಚಿತವಾಗಿ ತಿಳಿದಿಲ್ಲ.

ಸು. 1025ರಲ್ಲಿದ್ದ ದುರ್ಗಸಿಂಹ ಪೂರ್ವಕವಿಗಳನ್ನು ಹೇಳುವಾಗ ಕನ್ನಡ ಕವಿಗಳ ಸಾಲಿನಲ್ಲಿ ಒಬ್ಬ ಚಂದ್ರನನ್ನು (ಭಟ್ಟ) ಹೆಸರಿಸುತ್ತಾನೆ. 1049ರಲ್ಲಿದ್ದ ಶ್ರೀಧರಾಚಾರ್ಯ ತನ್ನ ಜಾತಕತಿಲಕದಲ್ಲಿ ಪೂರ್ವಕವಿಗಳನ್ನು ನೆನೆಯುವಾಗ ಅಂಬುಜಾರಿ (ಅಂಬುಜ+ಅರಿ =ಚಂದ್ರ) ಎಂಬ ಹೆಸರನ್ನು ಹೇಳುತ್ತಾನೆ. ದುರ್ಗಸಿಂಹ ಮತ್ತು ಶ್ರೀಧರಾಚಾರ್ಯರು ಹೇಳುವ ಚಂದ್ರನೇ ಚಂದ್ರಭಟ್ಟ ಎಂದು ಹೇಳಬಹುದಾದರೆ ಈತನ ಕಾಲ ಸುಮಾರು 1000 ಅಥವಾ ಅದಕ್ಕಿಂತ ಸ್ವಲ್ಪ ಹಿಂದೆ ಆಗಬಹುದು.

ಸು. 1185ರಲ್ಲಿದ್ದ ರುದ್ರಭಟ್ಟ, ಸು. 1260ರಲ್ಲಿದ್ದ ಕೇಶಿರಾಜ ಮತ್ತು ಸು. 1300ರಲ್ಲಿದ್ದ ಅಟ್ಟಕವಿ–ಇವರ ಕೃತಿಗಳಲ್ಲಿ ಚಂದ್ರಭಟ್ಟ ಎಂಬ ಹೆಸರು ಸ್ಪಷ್ಟವಾಗಿ ಕಾಣಿಸುತ್ತದೆ. ರುದ್ರಭಟ್ಟ ಪೂರ್ವಕವಿಗಳನ್ನು ಹೇಳುವಾಗ ಚಂದ್ರಭಟ್ಟನ ಜತಿ .......... ಮತ್ಕೃತಿಯೊಳ್ಕೆರ್ ಎನ್ನುತ್ತಾನೆ. ಚಂದ್ರಭಟ್ಟನ ........ ಸುಮಾರ್ಗಮಿದಜೊಳೆ ಲಕ್ಷ್ಯಂ ಎಂದು ಶಬ್ದಮಣಿದರ್ಪಣದಲ್ಲಿ ಕೇಶಿರಾಜ ಹೇಳಿದ್ದಾನೆ. ಅಟ್ಟಕವಿ ತನ್ನ ಅಟ್ಟಮತದಲ್ಲಿ ಚಂದಿರಭಟ್ಟರ ದಯೆಯಿಂ ಸಂದೆಯ ಮಣಮಿಲ್ಲದಂತು ಕಲ್ತುದು ಮಟಿಯಂ ಎಂದು ಹೇಳಿದ್ದಾನೆ. ಅಟ್ಟಕವಿಯ ಈ ಮಾತಿನ ಆಧಾರದಿಂದ, ಚಂದ್ರಭಟ್ಟ ಮಳೆಗೆ ಸಂಬಂಧಿಸಿದಂತೆ ಒಂದು ವೃಷ್ಟಿ ಶಾಸ್ತ್ರಗ್ರಂಥವನ್ನು ಬರೆದಿರಬಹುದು. ರುದ್ರಭಟ್ಟ ಮತ್ತು ಕೇಶಿರಾಜರು ಹೇಳುವ ಜತಿ ಮತ್ತು ಸುಮಾರ್ಗಗಳಿಂದ ಖ್ಯಾತನಾದ ಚಂದ್ರಭಟ್ಟ ಮತ್ತು ಅಟ್ಟಕವಿ ಹೇಳುವ ಚಂದ್ರಭಟ್ಟ ಒಬ್ಬನೇ ಇರಬಹುದು. ಧಾರವಾಡ ಜಿಲ್ಲೆಯ ಹೊಟ್ಟೂರಿನ ರಾಜವಲ್ಲಭ ಬರೆದ ಶಾಸನವೊಂದನ್ನು ಚಂದ್ರಭಟ್ಟ ವಿಸ್ತರಿಸಿ ತಿದ್ದಿ ಬರೆದುದು ಆ ಶಾಸನದ ಅಂತ್ಯಪದ್ಯದಿಂದ

ತಿಳಿಯುತ್ತದೆ. ಈ ಶಾಸನದಲ್ಲಿ ಚಂದ್ರಭಟ್ಟನಿಗೆ ವಾಕ್ಪತಿ ಎಂಬ ವಿಶೇಷಣವಿದೆ. ಶಾಸನದ ಕಾಲ 1067. ಮತ್ತೊಂದು ಶಾಸನ ಇದೇ ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕಿನ ಕೋಟವುಮಚಿಗಿ ಗ್ರಾಮಕ್ಕೆ ಸೇರಿದ್ದು. ಇದರ ಕಾಲ 1099. ಈ ಶಾಸನದ ಕೊನೆಯ ಭಾಗದಲ್ಲಿ ಅಪೂರ್ಣವಾಗಿರುವ ಒಂದು ಕಂದಪದ್ಯ..........ಚಂದ್ರಭಟ್ಟ ಕವಿ ವಿರಚಿಸಿದಂ ಎಂದು ಹೇಳುತ್ತದೆ.

ರುದ್ರಭಟ್ಟ, ಕೇಶಿರಾಜ ಮತ್ತು ಜಟ್ಟಕವಿಗಳು ಹೇಳಿರುವ ಚಂದ್ರಭಟ್ಟ ಹಾಗೂ ಶಾಸನಗಳಲ್ಲಿ ಕಂಡುಬರುವ ಚಂದ್ರಭಟ್ಟ ಒಬ್ಬನೇ ಆಗಿರುವ ಸಾಧ್ಯತೆಗಳೇ ಹೆಚ್ಚು. ಈ ಚಂದ್ರಭಟ್ಟ ಮತ್ತು ದುರ್ಗಸಿಂಹ, ಶ್ರೀಧರಾಚಾರ್ಯ ಇವರು ಹೇಳಿದ ಚಂದ್ರ (ಭಟ್ಟ) ಇವರಿಬ್ಬರೂ ಬೇರೆ ಬೇರೆ ಎಂದು ಹೇಳಬಹುದು. (ಎಸ್‌ಎಚ್‌.ಸಿ.)

**ಚಂದ್ರಮತಿ :** ಹರಿಶ್ಚಂದ್ರನ ಧರ್ಮಪತ್ನಿ. ಮಹಾಭಾರತದಲ್ಲಿ ಈಕೆಯನ್ನು ತಾರಮತಿ ಎಂದು ಕರೆಯಲಾಗಿದೆ. ಲೋಹಿತಾಶ್ವ ಈಕೆಯ ಮಗ. ವಿಶ್ವಾಮಿತ್ರ ಹರಿಶ್ಚಂದ್ರನನ್ನು ಸತ್ಯಪರೀಕ್ಷೆಗೆ ಗುರಿಮಾಡಿದಾಗ ಚಂದ್ರಮತಿಯ ಪರೀಕ್ಷೆಯೂ ಸಾಕಷ್ಟು ಆಯಿತು. ಮುನಿ ಕೊಟ್ಟ ಅವಧಿಯಲ್ಲಿ ಹಣ ಹೊಂದಿಸಲಾಗದೆ ಹರಿಶ್ಚಂದ್ರ ಚಿಂತಾಮಗ್ನನಾಗಿದ್ದಾಗ ತನ್ನನ್ನೂ ಮಗನನ್ನೂ ಮಾರಲು ಈಕೆಯೇ ಸೂಚಿಸಿದಳು. ತನ್ನನ್ನು ಕೊಂಡ ಬ್ರಾಹ್ಮಣನಲ್ಲಿ ಪತಿಗೆ ಸಲ್ಲಬೇಕಾದ ಸೇವೆಗಳ ವಿನಾ ಮಿಕ್ಕೆಲ್ಲ ಕೆಲಸಗಳನ್ನೂ ಮಾಡಲು ಒಪ್ಪಿಕೊಂಡು ಅದರಂತೆ ದುಡಿದಳು. ಸರ್ಪದಂಶದಿಂದ ಮರಣಹೊಂದಿದ ಲೋಹಿತಾಶ್ವನನ್ನು ಸುಡಲು ಮಸಣಕ್ಕೆ ಹೋದಾಗ ಅಲ್ಲಿ ಹರಿಶ್ಚಂದ್ರನೇ ಕಾವಲುಗಾರನಾಗಿದ್ದ. ತೆರ ಕೊಟ್ಟಲ್ಲದೆ. ಶವಸಂಸ್ಕಾರಕ್ಕೆ ಹರಿಶ್ಚಂದ್ರ ಅನುಮತಿ ಕೊಡದಿರಲು ಹಣ ಸಂಪಾದಿಸಲು ಊರಿಗೆ ಹಿಂತಿರುಗುವಾಗ ದುಷ್ಚರ ಕೈಯಲ್ಲಿ ಕೊಲೆಯಾಗುತ್ತಿದ್ದ ಕಾಶೀರಾಜನ ಮಗನ ಧ್ವನಿ ಕೇಳಿ ಅತ್ತ ಧಾವಿಸಿದಳು. ರಾಜಭಟರು ಬಂದಾಗ ಈಕೆಯ ಕೈಯಲ್ಲಿ ರಾಜಕುವರನ ಶವ ಕಂಡು ಕೊಲೆಯ ಆರೋಪ ಹೊರಿಸಿದರು. ರಾಜನಿಂದ ಮರಣದಂಡನೆಗೆ ಗುರಿಯಾದ ಚಂದ್ರಮತಿ ವಧಸ್ಥಾನಕ್ಕೆ ಬಂದಾಗ ಅಲ್ಲಿಯೂ ಹರಿಶ್ಚಂದ್ರನೇ ತಲೆಗಡಿವ ಕೆಲಸಕ್ಕೆ ನೇಮಿತನಾಗಿದ್ದ. ಕೊನೆಗಳಿಗೆಯಲ್ಲೂ ಚಂದ್ರಮತಿ ವಿಚಲಿತಳಾಗದೆ ಕಲಿ ಹರಿಶ್ಚಂದ್ರರಾಯ ಸತ್ಯವೆರಸಿ ಬಾಳಲಿ, ಮಗ ಮುಕ್ತನಾಗಲಿ, ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ ಎಂದೇ ಪ್ರಾರ್ಥಿಸಿದಳು. ಇಂಥ ಸತೀಶಿರೋಮಣಿಯ ಕತ್ತಿಗೆ ಹರಿಶ್ಚಂದ್ರನ ಕತ್ತಿ ಹೂವಾಗಿ ಎರಗಿತು. ಹರನ ಸಾಕ್ಷಾತ್ಕಾರದಿಂದ ಎಲ್ಲ ಸಂಕಷ್ಟಗಳೂ ಪರಿಹಾರವಾದುವು.

ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ಚಂದ್ರಮತಿಯ ಪಾತ್ರ ಬಲು ಸೊಗಸಾಗಿ ಚಿತ್ರಿತವಾಗಿದೆ. ಇಲ್ಲಿ ಬರುವ ಚಂದ್ರಮತಿ ಓದುಗರ ಅಂತಃಕರಣವನ್ನು ಕಲಕುತ್ತಾಳೆ. ಲೋಹಿತಾಶ್ವ ಮರಣಹೊಂದಿದಾಗ ಈಕೆ ಪಡುವ ದುಃಖದ ಸನ್ನಿವೇಶ ಕನ್ನಡ ಸಾಹಿತ್ಯದಲ್ಲಿಯೇ ಅದ್ವಿತೀಯವೆಂದು ಹೇಳಲಾಗಿದೆ. (ಪಿ.ವಿ.ಸಿ.)

**ಚಂದ್ರರಾಜ :** ಮದನತಿಲಕಂ ಎಂಬ ಕಾಮಶಾಸ್ತ್ರದ ಕರ್ತೃ. ಈತ ಚಾಳುಕ್ಯರ ಮನೆತನದಲ್ಲಿ ಚೋಳಕುಲವಿಲಯಕಾಲಂ, ಮಾಳವರಾಜಕಶೂಲಂ ಮೊದಲಾದ ವಿಶೇಷಣಗಳಿಂದ ಪ್ರಸಿದ್ಧನಾಗಿರುವ ಜಯಸಿಂಹರಾಜನ (1015–42) ಮಾಂಡಲಿಕರಲ್ಲಿ ಒಬ್ಬನಾದ, ಪಂಚಮಹಾಶಬ್ದಗಳ ಮರ್ಯಾದೆಯನ್ನು ಪಡೆದಿದ್ದ ರೇಚ ಅಥವಾ ರೇಚಿಗ ಎಂಬವನ ಪೋಷಣೆಯಲ್ಲಿ ಕೃತಿರಚನೆ ಮಾಡಿದ. ಆದ್ದರಿಂದ ಈತನ ಕಾಲ, ಸ್ಥೂಲವಾಗಿ 11ನೆಯ ಶತಮಾನದ ಪೂರ್ವಾರ್ಧ. ಈತ ಮತದಿಂದ, ವಾಜಿಗೋತ್ರದವನಾದ ಬ್ರಾಹ್ಮಣ. ಕವಿತಾಮಹಾರ್ಣವ, ಪ್ರತ್ಯಕ್ಷಕಂದರ್ಪ–ಈ ಮುಂತಾದುವು ಈತನ ನಚ್ಚಿನ ಬಿರುದುಗಳು. ವ್ಯಾಕರಣ, ಅರ್ಥಶಾಸ್ತ್ರ, ಗಣಿತ, ಅಲಂಕಾರ, ಕಾವ್ಯ, ನಾಟಕ, ಕಾಮಶಾಸ್ತ್ರ, ನೃತ್ಯ, ಗೀತ, ಹಯಶಾಸ್ತ್ರ, ಅದ್ವೈತ, ಗಾಂಧರ್ವವಿದ್ಯೆ, ತರ್ಕಶಾಸ್ತ್ರ, ಇಂದ್ರಜಾಲ, ವೈದ್ಯ, ವಾದ್ಯ, ಶಕುನ–ಈ ಹಲವು ವಿದ್ಯೆಗಳನ್ನು ಬಲ್ಲೆನೆಂದು ಹೇಳಿಕೊಂಡಿರುವುದು ನೋಡಿದರೆ ಈತ ದೊಡ್ಡ ಪಂಡಿತನಾಗಿದ್ದನೆಂದು ಭಾವಿಸಬಹುದು. ಅಲ್ಲದೆ ಶುದ್ಧಚರಿತ್ರ, ಸಂಪ್ರದಾಯಶೀಲ, ಪರಹಿತಾಸಕ್ತ ಮತ್ತು ಸತ್ಯಸಂಧ ಎಂಬುದಾಗಿ ಲೋಕ ತನ್ನನ್ನು ಮೆಚ್ಚಿಕೊಂಡಿದ್ದಿತೆಂದು ತಾನೇ ತನ್ನ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ.

ಈತನದಾಗಿ ತಿಳಿದಿರುವುದೂ ದೊರೆತಿರುವುದೂ ಮದನತಿಲಕ ಒಂದೇ. ಕನ್ನಡ ಭಾಷೆಯ ಕಾಮಶಾಸ್ತ್ರಗ್ರಂಥಗಳಲ್ಲಿ ಇದೇ ಮೊಟ್ಟಮೊದಲನೆಯದು. ಶಿವನೂ ಆ ಬಳಿಕ ತನ್ನ ಪೋಷಕ ರೇಚ ಮಹೀಶನೂ ತಂತಮ್ಮ ಕಾಂತೆಯರಿಗೆ ಹೇಳಿದ ಕಾಮತತ್ತ್ವವನ್ನೇ ತಾನು ನಿರೂಪಿಸುತ್ತಿರುವುದಾಗಿ ಹೇಳಿರುವುದು ಸಂಪ್ರದಾಯದ ಮಾತು. ವಾತ್ಸ್ಯಾಯನ ಮೊದಲಾದವರು ಸಂಸ್ಕೃತ ಭಾಷೆಯಲ್ಲಿ ಬರೆದಿರುವ ಹಲವು ಕಾಮಶಾಸ್ತ್ರ ಗ್ರಂಥಗಳಿಂದ ಉಚಿತವಾದಷ್ಟು ಅಂಶಗಳನ್ನು ಸಂಗ್ರಹಿಸಿಯೂ ಸ್ವಕೀಯವಾಗಿ ಕೆಲವಂಶಗಳನ್ನು ಹೊಸದಾಗಿ ಸೇರಿಸಿಯೂ ಪ್ರಾಯಶಃ ಈ ಗ್ರಂಥವನ್ನು ಚಂದ್ರರಾಜ ಬರೆದಿದ್ದಾನೆ–ಎಂದು ಹೇಳಬಹುದು. ಕೃತಿಕರ್ತನ ಮಾತಿನಲ್ಲಿ ಈ ಕೃತಿ, ಪ್ರಾಚೀನರ ಶಾಸ್ತ್ರದಲ್ಲಿ ಆಗಮಿಕ ಲೌಕಿಕ ವಿರೋಧಮಂ ಕಳೆದು ಸಾರಾಂಶಮಂ ಕೊಂಡು ಪಲವು ಮತಂಗಳನೊಂದುಮಾಡಿ' ಬರೆದಿದ್ದಾಗಿದೆ. ಕೃತಿಯನ್ನು ತಿದ್ದಿದವ ಬ್ರಹ್ಮ.

ಮದನತಿಲಕದಲ್ಲಿ 18 ಅಧಿಕರಣಗಳೂ ನಾನಾ ಛಂದಸ್ಸಿನ 500 ಗದ್ಯಪದ್ಯಗಳೂ ಇವೆಯೆಂದು ಕವಿಯ ಹೇಳಿಕೆ. ಆದರೆ ದೊರೆತು ಪ್ರಕಟವಾಗಿರುವ ಪುಸ್ತಕದಲ್ಲಿ 11 ಅಧಿಕರಣಗಳೂ ಕಡಿಮೆ ಸಂಖ್ಯೆಯ ಗದ್ಯ ಪದ್ಯಗಳೂ ಕಂಡುಬರುತ್ತಿವೆ. ಮೂಲವಾದ ಎರಡು ಹಸ್ತಪ್ರತಿಗಳಲ್ಲಿಯೂ ಬಗೆಬಗೆಯ ಸ್ಖಾಲಿತ್ಯಗಳೂ ಗ್ರಂಥಪಾತಗಳೂ ಬಹುವಾಗಿದ್ದು ಗ್ರಂಥಸ್ವರೂಪವೇ ಅನಿರ್ದಿಷ್ಟವಾಗಿದೆ. ಹೀಗಿದ್ದೂ ಹಲವು ದೃಷ್ಟಿಗಳಿಂದ ಇದು ಕನ್ನಡ ಸಾಹಿತ್ಯದಲ್ಲಿ ಒಂದು ಉಪಯುಕ್ತವಾದ ಕೃತಿಯಾಗಿದೆ. ಗ್ರಂಥದ ಪ್ರಯೋಜನವನ್ನು ಹೀಗೆ ಪಟ್ಟಿ ಮಾಡಬಹುದು: 1. ಚಾಳುಕ್ಯ ಚಕ್ರವರ್ತಿ ಜಯಸಿಂಹ ಮತ್ತು ಆತನ ಸಾಮಂತ ರೇಚನೃಪ ಇವರ ಚರಿತ್ರೆಗೆ ಒಂದು ಸಾಹಿತ್ಯಕ ಆಕರವಾಗಿದೆ. 2. 11ನೆಯ ಶತಮಾನದ ಕನ್ನಡ ಭಾಷೆ, ಸಾಹಿತ್ಯ, ಸಾಮಾಜಿಕ ಜೀವನ, ಸಂಸ್ಕೃತಿಗಳ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯಿದೆ. 3. ಕನ್ನಡದಲ್ಲಿ ಬಹು ವಿರಳವಾದ ಚಿತ್ರಕವಿತ್ವದ ನಿದರ್ಶನಗಳು ದೊರೆಯುತ್ತವೆ : ಚಕ್ರವೃತ್ತ, ಮುರಜಬಂಧ, ಪಣವಬಂಧ, ಗೋಮೂತ್ರಿಕೆ, ಅರ್ಧಪಾದ ಗತಪ್ರತ್ಯಾಗತ, ಜತ್ತರಟ್ಟ (?), ಏಕಾಕ್ಷರಿ–ದ್ವ್ಯಕ್ಷರಿ–ತ್ರ್ಯಕ್ಷರಿ, ನಿರೋಷ್ಠ್ಯ ಓಕಾರಾಂತ ಕಂದ ಪ್ರಭೇದಗಳು ಇತ್ಯಾದಿ. 4. ಕನ್ನಡ ಕಾವ್ಯಗಳಲ್ಲಿ ಬಹುವಿರಳವಾಗಿ ಮಾತ್ರ ಬಳಕೆಯಾಗಿರುವ ಹಾಗೂ ಬಳಕೆಯಾಗಿಲ್ಲದ ಕೆಲವು ವರ್ಣವೃತ್ತಗಳು ಕಂಡುಬರುತ್ತವೆ : ಊರ್ಜಿತ, ಕಲ್ಪಲತೆ, ಕಳಕಂಠ, ಕಳಹಂಸ, ಕುಂತಳೆ, ಕೋಕಿಳ, ಕೌಮುದಿ, ಚಿತ್ರಲತೆ, ತ್ರೋಟಕ, ದ್ರುತವಿಳಂಬಿತ, ದೌತಿಕೆ, ಮರಣಿರಂಗ, ವನಮಯೂರ, ಕ್ರೌಂಚಪದ, ವಿದ್ಯುನ್ಮಾಲೆ ಇತ್ಯಾದಿ (ಉತ್ಕೃತಿಯೊಳಗಿನ ವರ್ಣವೃತ್ತಗಳು) ; ಲಲಿತ (ಮಾಲಾವೃತ್ತಗಳು) ; ತ್ರಿಪದೋನ್ನತಿ (ವಿಷಮವೃತ್ತ) ; ಮಹಾಕಾವ್ಯದ ಅನುಷ್ಟುಪ್. 5. ವಿರಳವಾದ ದೇಶೀಯ ವೃತ್ತಜಾತಿಗಳಿಗೆ ನಿದರ್ಶನಗಳು ಕಾಣುತ್ತವೆ : ಮೂಲಷಟ್ಪದಿ, ಎಡೆಯಕ್ಕರ, ನಡುವಣಕ್ಕರ, ಚೌಪದಿ. 6. ಒಂದು ಬಗೆಯ ವೃತ್ತಜಾತಿಯಿಂದ ಹಲವು ಬಗೆಯ ವೃತ್ತಗಳನ್ನು ಹೊರಡಿಸಬಹುದೆಂಬ ಸಾಧ್ಯತೆಯನ್ನು ತೋರುತ್ತದೆ.

ವಸ್ತುವಿನ ದೃಷ್ಟಿಯಿಂದ ಚಂದ್ರರಾಜನ ಮದನತಿಲಕ ಬಹು ಸಾಮಾನ್ಯವಾಗಿ ತೋರಿದರೂ ಚಿತ್ರಕವಿತ್ವ ಮತ್ತು ಅದಕ್ಕಿಂತ ಮಿಗಿಲಾಗಿ ವಿವಿಧ ಛಂದಃಪ್ರಯೋಗಗಳ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಉಪಯುಕ್ತ ಕೃತಿಗಳಲ್ಲಿ ತನ್ನ ಸ್ಥಾನವನ್ನು ಚಿರಸ್ಥಾಯಿಯಾಗಿ ಮಾಡಿಕೊಂಡಿದೆ. ಚಂದ್ರರಾಜನ ವೈಯಕ್ತಿಕತೆ, ಘನತೆಗಳು ನಿಂತಿರುವುದೂ ಅಲ್ಲಿಯೇ. (ಟಿ.ವಿ.ವಿ.)

**ಚಂದ್ರವರ್ಮ :** ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನದಲ್ಲಿ ಉಲ್ಲೇಖಿತನಾದ ಒಬ್ಬ ಅರಸ. ಉತ್ತರಾಪಥದಲ್ಲಿ ನಿರ್ಮೂಲ ಮಾಡಲ್ಪಟ್ಟ ಅರಸರಲ್ಲಿ ಇವನೂ ಒಬ್ಬ. ಆದರೆ ಈತ ಯಾರು ಎಂಬುದನ್ನು ಖಚಿತವಾಗಿ ಗುರುತಿಸಲಾಗಿಲ್ಲ. ಪಶ್ಚಿಮ ಬಂಗಾಲದ ಬಂಕುರಾ ಜಿಲ್ಲೆಯ ಸುಸುನಿಯಾ ಎಂಬಲ್ಲಿ ದೊರೆತ ಶಾಸನವೊಂದರಲ್ಲಿ ಚಂದ್ರವರ್ಮನೆಂಬ ಅರಸನ ಉಲ್ಲೇಖವಿದೆ. ಸಮುದ್ರಗುಪ್ತನಿಂದ ಸೋಲಿಸಲ್ಪಟ್ಟ ಅರಸ ಈತನೇ ಇರಬಹುದೆಂದು ಊಹಿಸಲಾಗಿದೆ. ಆದರೆ ಈತನನ್ನು ಕುರಿತ ಇತರ ವಿವರಗಳು ತಿಳಿದಿಲ್ಲ.

ಕರ್ನಾಟಕದಲ್ಲಿ ಪ್ರ.ಶ. 6–7ನೆಯ ಶತಮಾನಗಳಲ್ಲಿ ಪಶ್ಚಿಮ ಕರಾವಳಿಯ ಕೊಂಕಣ ಪ್ರದೇಶದಲ್ಲಿ ಮೌರ್ಯವಂಶಕ್ಕೆ ಸೇರಿದ ಕೆಲವು ಅರಸರು ಆಳುತ್ತಿದ್ದುದು ಇತ್ತೀಚೆಗೆ ಲಭ್ಯವಾದ ಅವರ ಶಾಸನಗಳಿಂದ ತಿಳಿದಿದೆ. ಅವರಲ್ಲಿ ಚಂದವರ್ಮ ಒಬ್ಬ. ಭಗ್ನತಟಾಕವ್ಯಾಪ್ರ ಪಾಷಾಣಪರ್ಯಾಪ್ತವಾದ ಭೂಮಿಯನ್ನು ದಾನಮಾಡಿದನೆಂದು ಚಂದ್ರವರ್ಮನ ಆಳ್ವಿಕೆಯಲ್ಲಿ 2ನೆಯ ವರ್ಷದ ಶಿವಪುರ ತಾಮ್ರಶಾಸನದಲ್ಲಿ ಹೇಳಿದೆ. ಮೊಟ್ಟ ಮೊದಲು ಇವನ ತಾಮ್ರಶಾಸನವನ್ನು ಪ್ರಕಟಿಸಿದ ದಿವಂಗತ ಎ.ಜಿ.ದಿಕ್ಷಿತರು ಇವನು ಕದಂಬವಂಶಕ್ಕೆ ಸೇರಿದವನಾಗಿರಬಹುದೆಂದು ಊಹಿಸಿದರು. ಆದರೆ ಅನಂತರ .ಡಿ.ಸಿ. ಸರ್ಕಾರರು ಶಾಸನಪಾಠವನ್ನು ಮೌರ್ಯ ಎಂದು ಸರಿಯಾಗಿ ಓದಿ, ಕೊಂಕಣದಲ್ಲಿ–ಶಾಸನದಲ್ಲಿ ಉಲ್ಲೇಖವಾದ ಪ್ರದೇಶದಲ್ಲಿ–ಮೌರ್ಯವಂಶದ ಅರಸರು ಆಳುತ್ತಿದ್ದರೆಂದು ತೋರಿಸಿದರು. ಇದೇ ವಂಶಕ್ಕೆ ಸೇರಿದ ಅನಿರ್ಜಿತವರ್ಮನೆಂಬ ಇನ್ನೊಬ್ಬ ಅರಸನ ತಾಮ್ರಶಾಸನವೊಂದು ಇತ್ತೀಚೆಗೆ ದೊರೆತಿದೆ. ಇದು ಚಂದ್ರವರ್ಮನ ಶಾಸನದ ಆನಂತರ ಹುಟ್ಟಿದ ಶಾಸನವೆಂದು ಲಿಪಿಯ ಆಧಾರದ ಮೇಲೆ ಹೇಳಲಾಗಿದೆ. ಆದರೆ ಇವರ ನಡುವಣ ಸಂಬಂಧ ಎಂಥದೆಂಬುದು ತಿಳಿಯದು. ಇದೇ ಕಾಲದಲ್ಲಿ ಇಲ್ಲಿ ಭೋಜ ಮನೆತನದ ಕೆಲವು ಅರಸರು ಆಳುತ್ತಿದ್ದರೆಂಬುದು ಅವರ ಶಾಸನಗಳಿಂದ ತಿಳಿದಿದೆ. ಬಹುಶಃ ಈ ಅರಸರನ್ನು ಮೌರ್ಯರು ಓಡಿಸಿ ಈ ಪ್ರದೇಶದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿರಬಹುದು. ಚಂದ್ರವರ್ಮನಿಗೆ ಈ ಯಶಸ್ಸು ಸಲ್ಲುತ್ತದೆಂದು ಹೇಳಲಾಗದು. (ಜಿ.ವಿ.ಆರ್.)

**ಚಂದ್ರವಳ್ಳಿ :** ಚಿತ್ರದುರ್ಗದ ಪಶ್ಚಿಮಕ್ಕೆ ಬೆಟ್ಟದ ಬುಡದಲ್ಲಿ ಇರುವ ಪ್ರಾಕ್ತನ ನಿವೇಶನ. ಪ್ರಾಗೈತಿಹಾಸಿಕ ಕಾಲದಿಂದಲೂ ಇಲ್ಲಿ ಜನವಸತಿಯಿದ್ದು, ಇತಿಹಾಸ ಕಾಲದಲ್ಲಿ ವಿಜಯನಗರದ ಕಾಲದವರೆಗೂ ಇಲ್ಲಿ ಊರು ಬೆಳೆದು ಬಂದಿದ್ದಂತೆ ತೋರುತ್ತದೆ. ಹುಲೆಗುಂದಿ, ನೇರಲಗೊಂದಿ, ಬಾರಲಗೊಂದಿಗಳೆಂಬ ಬೆಟ್ಟದ ಕಣಿವೆ ಪ್ರದೇಶಗಳೂ ಅಂಕಲೆ ಮಠವಿರುವ ಗವಿಗಳೂ ಸುತ್ತಮುತ್ತಲ ಗುಡ್ಡಗಳೂ ಅಲ್ಲಿ ನಿರಂತರವಾಗಿ

ಪ್ರವಹಿಸುತ್ತಿದ್ದ ಹಳ್ಳವೂ ಪ್ರಾಚೀನ ಕಾಲದಲ್ಲಿ ಜನವಸತಿಗೆ ಅನುಕೂಲವಾಗಿದ್ದುವು. ಆದ್ದರಿಂದಲೇ ಇಲ್ಲಿ ನವಶಿಲಾಯುಗದ ಜನರಿದ್ದ ಕುರುಹುಗಳೂ ಕಂಡುಬಂದಿವೆ. ಈ ನಿವೇಶನ ಮೊದಲು ಬೆಳಕಿಗೆ ಬಂದದ್ದು ಸುಮಾರು 120 ವರ್ಷಗಳ ಹಿಂದೆ–ನೀರಿನ ಕಾಲುವೆಯೊಂದನ್ನು ಈ ನಿವೇಶನದ ನಡುವೆ ತೋಡುತ್ತಿದ್ದಾಗ ಅಲ್ಲಿ ದೊರೆತ ಸೀಸದ ನಾಣ್ಯಗಳಿಂದ. ಆರ್. ನರಸಿಂಹಾಚಾರ್ಯರು ಮೊದಲ ಬಾರಿಗೆ ಇಲ್ಲಿ ಕೆಲವು ಕುಳಿಗಳನ್ನು ತೋಡಿ ಅಲ್ಲಿ ದೊರೆತ ನಾಣ್ಯಗಳು, ಮಣ್ಣಿನ ಪಾತ್ರೆಗಳು, ಮಣಿಗಳು ಮೊದಲಾದವನ್ನು 1909ರಲ್ಲಿ ವರದಿ ಮಾಡಿ ಅದರ ಪ್ರಾಮುಖ್ಯವನ್ನು ಪ್ರಕಟಿಸಿದರು. 20 ವರ್ಷಗಳ ತರುವಾಯ ಎಂ.ಎಚ್. ಕೃಷ್ಣ ಅವರು ವಿಸ್ತಾರವಾದ ಭೂಶೋಧನೆಯನ್ನು ಕೈಗೊಂಡರು. 30ಕ್ಕೂ ಹೆಚ್ಚು ಕಡೆ ಉತ್ಖನನ ನಡೆಸಿದರು. ಇದರಿಂದ ಅಲ್ಲಿ ಅನೇಕ ಕಟ್ಟಡಗಳ ಅವಶೇಷಗಳು, ನಾಣ್ಯಗಳು, ಆಭರಣಗಳು, ಮಣಿಗಳು, ರೇಖಾಚಿತ್ರ ಮತ್ತು ಇತರ ಅಲಂಕರಣಗಳಿಂದ ಕೂಡಿದ ಮೃತ್ಪಾತ್ರೆಗಳ ತುಂಡುಗಳು, ಕಬ್ಬಿಣದ ಮತ್ತು ಇತರ ಮನೆಬಳಕೆಯ ವಸ್ತುಗಳು ಹೇರಳವಾಗಿ ಕಂಡುಬಂದುವು. ಗೌತಮೀಪುತ್ರ ವಿಳಿವಾಯಕುರ, ಮಹಾರಠಿ ಸಡಕಣ ಕಳಲಾಯ, ಯಜ್ಞಶ್ರೀ ಶಾತಕರ್ಣಿ ಮುಡಾನಂದ ಮೊದಲಾದ ಶಾತವಾಹನ ಅರಸರ, ಮಾಂಡಲಿಕರ ಸೀಸದ ಮತ್ತು ಮಿಶ್ರಲೋಹದ ಹಲವಾರು ನಾಣ್ಯಗಳ ಜೊತೆಗೆ ರೋಂ ಚಕ್ರವರ್ತಿಗಳಾದ ಆಗಸ್ಟಸ್ ಮತ್ತು ಟೈಬೀರಿಯನರ ನಾಣ್ಯಗಳಿದ್ದುವು. ಇವಲ್ಲದೆ ಕೃಷ್ಣ ಅವರು ಎರಡು ಕಡೆ ಭೂಮಿಯೊಳಗೆ ಬೃಹತ್ ಶಿಲಾಸಮಾಧಿಯ ಕಲ್ಲಿನ ಶವಪೆಟ್ಟಿಗೆಯನ್ನೂ ಕಂಡರು. ಪುನಃ 1947ರಲ್ಲಿ ಮಾರ್ಟಿಮರ್ ಹ್ವೀಲರ್ ಅವರ ನೇತೃತ್ವದಲ್ಲಿ ಭಾರತ ಸರ್ಕಾರದ ಮತ್ತು ಮೈಸೂರು ಸರ್ಕಾರದ ಪುರಾತತ್ತ್ವ ಇಲಾಖೆಗಳು ಇಲ್ಲಿ ಒಟ್ಟಾಗಿ ಹೆಚ್ಚು ವೈಜ್ಞಾನಿಕವಾದ ಉತ್ಖನನ ನಡೆಸಿದುವು.

ಈ ಎಲ್ಲ ಉತ್ಖನನಗಳ ಫಲವಾಗಿ ಅಲ್ಲಿ ಮುಖ್ಯವಾಗಿ ಎರಡು ಸಂಸ್ಕೃತಿಗಳ ಅವಶೇಷಗಳಿದ್ದುದು ಸ್ಪಷ್ಟವಾಯಿತು. ಒಂದು ಪ್ರಾಗೈತಿಹಾಸಿಕ ಯುಗದ ಬೃಹಚ್ಛಿಲಾ ಸಮಾಧಿಯ ಸಂಸ್ಕೃತಿ. ಇನ್ನೊಂದು ಇತಿಹಾಸದ ಆರಂಭಕಾಲದ ಸಂಸ್ಕೃತಿ. ಮೊದಲನೆಯದು ಅಷ್ಟು ವ್ಯಾಪಕವಾಗಿಲ್ಲದೆ ಅದರ ಕೊನೆಯ ಹಂತದ ಅವಶೇಷಗಳು ಮಾತ್ರ ಕೆಳಗಿನ ಪದರಗಳಲ್ಲಿ ಸ್ವಲ್ಪಮಟ್ಟಿಗೆ ಕಂಡುಬಂದವು. ಎರಡನೆಯ ಸಂಸ್ಕೃತಿ ಹೆಚ್ಚು ವ್ಯಾಪಕವಾಗಿ, ಬಹುಮುಖವಾಗಿ ಬೆಳೆದು ಹರಡಿದ್ದುದು ಸ್ಪಷ್ಟವಾಗಿದೆ. ಈ ಸಂಸ್ಕೃತಿ ಪ್ರಶ ಸು. 3ನೆಯ ಶತಮಾನದಲ್ಲಿ ಆರಂಭವಾಗಿ ಪ್ರ.ಶ. 3ನೆಯ ಶತಮಾನದವರೆಗೂ ಬೆಳೆದುಬಂದಂತೆ ತೋರುತ್ತದೆ. ಇಲ್ಲಿ ದೊರೆತ ಶಾತವಾಹನ ಅರಸರ ಸೀಸದ, ಮಿಶ್ರಲೋಹದ ನಾಣ್ಯಗಳ ಜೊತೆಗೆ ರೋಂ ನಾಣ್ಯಗಳು, ರೂಲೆಟೆಡ್ ಮೃತ್ಪಾತ್ರೆಗಳು ದೊರೆತಿರುವುದು ಇದರ ಕಾಲವನ್ನು ಗೊತ್ತುಪಡಿಸಲು ಸಹಕಾರಿಯಾಗಿದೆ. ಸುಟ್ಟ ಇಟ್ಟಿಗೆಗಳಿಂದ ದೊಡ್ಡ ಮನೆಗಳನ್ನು ಕಟ್ಟುತ್ತಿದ್ದುದು, ಕಪ್ಪು ಕೆಂಪು ಬಣ್ಣದ ಮಡಕೆಗಳ ಮೇಲೆ ಬಿಳಿಯ ಬಣ್ಣದಿಂದ ರೇಖಾಚಿತ್ರಗಳನ್ನು ಬಿಡಿಸುವುದು ಮತ್ತು ಅವುಗಳ ಕಂಠಗಳ ಮೇಲೆ ಬಗೆಬಗೆಯ ಅಲಂಕರಣಗಳನ್ನು ಕೊರೆದಿರುವುದು, ಪ್ರಶಸ್ತ ಶಿಲೆಗಳಲ್ಲಿ, ದಂತ ಶಂಖ ಮೊದಲಾದವುಗಳಲ್ಲಿ ಮಾಡಿದ ಮಣಿಗಳು ಮತ್ತು ಗಾಜಿನ, ದಂತದ ಬಳೆಗಳು, ಸೀಸದ ನಾಣ್ಯಗಳು ಈ ಸಂಸ್ಕೃತಿಯ ಹೆಗ್ಗುರುತುಗಳಾಗಿವೆ.

ಕದಂಬ ಮಯೂರ ಶರ್ಮ ಇಲ್ಲಿ ಒಂದು ಕೆರೆಯನ್ನು ಕಟ್ಟಿಸಿದ್ದನೆಂಬುದು ಇಲ್ಲಿ ದೊರೆತ ಶಾಸನವೊಂದರಿಂದ ತಿಳಿಯುತ್ತದೆ. (ಎಂ.ಎಚ್.)

**ಚಂದ್ರಶೇಖರ್ :** 1927–2007. ಜನತಾ ಪಕ್ಷ 1977ರಲ್ಲಿ ಉದಯವಾದಾಗ ಲೋಕನಾಯಕ ಜಯಪ್ರಕಾಶನಾರಾಯಣ್ ಅವರ ಆಶೀರ್ವಾದದಿಂದ ಅದರ ಅಧ್ಯಕ್ಷರಾದವರು ಚಂದ್ರಶೇಖರ್. ವಿವಿಧ ಪಕ್ಷಗಳ ಕಿಚಡಿಯಾಗಿದ್ದ ಪಕ್ಷವನ್ನು ಒಗ್ಗೂಡಿಸುವ ಗುರುತರ ಹೊಣೆ ಅವರ ಹೆಗಲಿಗೆ ಬಿತ್ತು. ಕಟ್ಟುನಿಟ್ಟಾದ ಸಮಾಜವಾದಿ. ಆಚಾರ್ಯ ನರೇಂದ್ರದೇವರ ಅನುಯಾಯಿ. ಇಂದಿರಾಗಾಂಧಿ ಕಾಲದಲ್ಲಿ ಕಾಂಗ್ರೆಸ್‌ನ ತರುಣ ಟರ್ಕರ ಮುಂದಾಳು. ಹೀಗೆ ಸಮಾಜವಾದಿ ಸಂಸ್ಕಾರ, ಕಾಂಗ್ರೆಸ್ ಪರಂಪರೆಯ ಪರಿಚಯ. ಚಂದ್ರಶೇಖರ್‌ಗೆ 1989–90ರ ಅವಧಿಯಲ್ಲಿ ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ಕೊಡುವ ವಿಶ್ವನಾಥ ಪ್ರತಾಪಸಿಂಗ್‌ರವರ ತಂತ್ರಗಾರಿಕೆಯ ರಾಜಕಾರಣ ಅವರಿಗೇ ತಿರುಗುಬಾಣವಾಯಿತು. ಬೆಂಬಲ ನೀಡಿದ್ದ ಬಿ.ಜೆ.ಪಿ. ಹಾಗೂ ಎಡಪಕ್ಷಗಳು ಹಿಂದೆ ಸರಿದಾಗ ವಿ ಪಿ ಸಿಂಗ್ ಸರ್ಕಾರ ಪತನಗೊಂಡಿತು. ಅಂದಿನ ಜನತಾಪಕ್ಷದ ಒಂದು ದೊಡ್ಡಗುಂಪು ಚಂದ್ರಶೇಖರ್ ಅವರನ್ನು 1990ರ ನವಂಬರ್‌ನಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ಪ್ರಧಾನಮಂತ್ರಿಯನ್ನಾಗಿ ಮಾಡಿತು. ಆದರೆ ಕೆಲವೇ ತಿಂಗಳಲ್ಲಿ ಕಾಂಗ್ರೆಸ್ ನಾಯಕ ರಾಜೀವ್‌ಗಾಂಧಿಯವರ ಮನೆಯ ಮುಂದೆ ಹರಿಯಾಣ ಪೊಲೀಸರು ಬೇಹುಗಾರಿಕೆ ನಡೆಸಿದರು ಎಂಬ ಆರೋಪ ಮುಂದು ಮಾಡಿ ಚಂದ್ರಶೇಖರ್ ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆಯಿತು. ಚಂದ್ರಶೇಖರ್ ರಾಜೀನಾಮೆ ನೀಡಿದರು. ಸಾರ್ವತ್ರಿಕ ಚುನಾವಣೆ ಬಂದಿತು.

ಉತ್ತರಪ್ರದೇಶದ ಬಲಿಯಾ ಜಿಲ್ಲೆಯ ಇಬ್ರಾಹಿಂಪಟ್ಟಿ ಗ್ರಾಮದಲ್ಲಿ ರೈತಕುಟುಂಬದಲ್ಲಿ 1927ರ 1ರಂದು ಚಂದ್ರಶೇಖರ್ ಜನಿಸಿದರು. ವಿದ್ಯಾರ್ಥಿದೆಸೆಯಿಂದಲೇ ರಾಜಕಾರಣದಲ್ಲಿ ಆಸಕ್ತಿ. ಕ್ರಾಂತಿಕಾರಿ ಆದರ್ಶ. 1950–51ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದಿಂದ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ. ನಂತರ ಸಮಾಜವಾದಿ ಚಳವಳಿಗೆ ಪ್ರವೇಶ. ಆಚಾರ್ಯ ನರೇಂದ್ರದೇವರ ನಿಕಟ ಒಡನಾಡಿ. ಉತ್ತರಪ್ರದೇಶ ಪ್ರಜಾ ಸಮಾಜವಾದಿ ಪಕ್ಷದ ಜಂಟಿ ಕಾರ್ಯದರ್ಶಿ. 1955–56ರಲ್ಲಿ ಅದರ ಪ್ರಧಾನ ಕಾರ್ಯದರ್ಶಿ. 1962ರಲ್ಲಿ ಉತ್ತರಪ್ರದೇಶದಿಂದ ರಾಜ್ಯಸಭೆಗೆ ಆಯ್ಕೆ. 1965ರ ಜನವರಿಯಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆ. 1967ರಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ಪ್ರಧಾನ ಕಾರ್ಯದರ್ಶಿ. ಆಗಲೇ ತಮ್ಮ ವೈಚಾರಿಕ ಬದ್ಧತೆಯಿಂದಾಗಿ ತರುಣ ಟರ್ಕರೆಂದು ಪ್ರಸಿದ್ಧಿಯಾದರು. ಮೋಹನ್ ಧಾರಿಯಾ ಇವರ ನಿಕಟ ಸಹಯೋಗಿ.



ಚಂದ್ರಶೇಖರ್ ಅವರದ್ದು ವ್ಯಕ್ತಿಗತ ರಾಜಕಾರಣಕ್ಕಿಂತ ಸಾಮಾಜಿಕ ಪರಿವರ್ತನೆಯ ಸಿದ್ಧಾಂತದ ಕಡೆಗಿನ ರಾಜಕಾರಣದ ಕಡೆ ಹೆಚ್ಚಿನ ಒಲವು. ಹೀಗಾಗಿ 1973–75ರ ಸಮಯದಲ್ಲಿ ಸ್ವಾಭಾವಿಕವಾಗಿಯೇ ಚಂದ್ರಶೇಖರ್ ಜಯಪ್ರಕಾಶ್ ನಾರಾಯಣ್‌ರವರ ಕಡೆಗೆ ಸರಿದರು. ಕಾಂಗ್ರೆಸ್ ಪಕ್ಷದಲ್ಲಿ ಇಂದಿರಾಗಾಂಧಿ ವಿರುದ್ಧ ಭಿನ್ನಮತದ ಧ್ವನಿಯಾದರು. 1975ರ ಜೂನ್ 25ರಂದು ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿದಾಗ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರೂ ಕೂಡ ಚಂದ್ರಶೇಖರ್‌ರವರನ್ನು ಮೀಸಾ ಕಾಯಿದೆ ಅಡಿ ಬಂಧಿಸಿ ಸೆರೆಮನೆಗೆ ದೂಡಲಾಯಿತು. ಅವರು ಜೈಲಿನಲ್ಲಿದ್ದಾಗ ನನ್ನ ಜೈಲಿನ ದಿನಚರಿ ಎಂಬ ಹಿಂದಿ ಪುಸ್ತಕ ಬರೆದರು.

ಡೈನಾಮಿಕ್ಸ್ ಆಫ್ ಸೋಷಿಯಲ್ ಛೇಂಜ್ ಅವರ ಅತ್ಯುತ್ತಮ ಲೇಖನ ಸಂಗ್ರಹ. ಜನತಾ ಪಕ್ಷ ಅಧಿಕಾರಕ್ಕೆ ಬಂದು ಅದರ ವಿಭಜನೆ ಹಾಗೂ ಅನಂತರದ ವಿದ್ಯಮಾನಗಳು ಚಂದ್ರಶೇಖರ್ ಅವರನ್ನು ಹತಾಶೆಗೆ ಈಡುಮಾಡಿತು. ಆದರೂ 1983 ಜನವರಿ 6ರಿಂದ ಅದೇ ವರ್ಷದ ಜೂನ್ 25ರವರೆಗೆ ಕನ್ಯಾಕುಮಾರಿಯಿಂದ ಹಿಡಿದು ಗಾಂಧಿ ಸಮಾಧಿ ರಾಜಘಾಟ್‌ವರೆಗೆ 4,260 ಕಿಮೀ ಪಾದಯಾತ್ರೆಯನ್ನು ಚಂದ್ರಶೇಖರ್ ಕೈಗೊಂಡರು. ಜನರ ಸಮಸ್ಯೆಗಳನ್ನು ಅರಿಯಲು, ಜನರೊಂದಿಗೆ ಬೆರೆಯಲು ಅವರಿಗೆ ಪಾದಯಾತ್ರೆ ನೆರವಾಯಿತು. ಈ ಯಾತ್ರೆಯ ಅಂಗವಾಗಿ ಕರ್ನಾಟಕವೂ ಸೇರಿದಂತೆ ದೇಶದ 15 ಭಾಗಗಳಲ್ಲಿ ಅವರು ಭಾರತ ಯಾತ್ರಾಕೇಂದ್ರಗಳನ್ನು ಸ್ಥಾಪಿಸಿದರು.

1984 ರಿಂದ 1989ರ ಅವಧಿ ಹೊರತುಪಡಿಸಿ 1962 ರಿಂದ ಅವರು ಸಂಸತ್ ಸದಸ್ಯರಾಗಿದ್ದರು. 1989ರಲ್ಲಿ ಬಲಿಯಾ ಹಾಗೂ ಬಿಹಾರದ ಮಹಾರಾಜ್‌ಗಂಜ್, ಎರಡೂ ಕ್ಷೇತ್ರಗಳಿಂದ ಸ್ಪರ್ಧಿಸಿ ಗೆದ್ದರು. 80ನೆಯ ವಯಸ್ಸಿನಲ್ಲಿ ಒಂದು ಬಗೆಯ ಕ್ಯಾನ್ಸರಿನಿಂದ 2007ರ ಜುಲೈ 8 ರಂದು ಮೃತರಾದರು. ಭಾರತೀಯ ಸಾರ್ವಜನಿಕ ಜೀವನದ ಒಬ್ಬ ಶುದ್ಧ ರಾಜಕಾರಣಿ ಚಂದ್ರಶೇಖರ್. (ಕೆ.ಎಸ್.ಎ.)

**ಚಂದ್ರಶೇಖರ್, ಎಂ.ಎಸ್. :** (1924–). ಮೈಸೂರು ಸುಬ್ರಹ್ಮಣ್ಯ ಶಾಸ್ತ್ರಿ ಚಂದ್ರಶೇಖರ್ ಇವರು ಮೈಸೂರಿನಲ್ಲಿ 1924 ಏಪ್ರಿಲ್ 16 ರಂದು ಜನಿಸಿದರು ಇವರದು ಒಂದು ಸಾಧಾರಣ ಕುಟುಂಬ. ಇವರ ಅಜ್ಜಂದಿರ ಹಿರೀಕರೊಬ್ಬರು ಚಿತ್ರಿತ ಹಸ್ತಪ್ರತಿಗಳನ್ನು ರಚಿಸುತ್ತಿದ್ದರೆಂದು ತಿಳಿದು ಬರುತ್ತದೆಯಾದರೂ ಅವು ಯಾವುದೂ ಉಳಿದು ಬಂದಿಲ್ಲ. ಎಳವೆಯಲ್ಲಿ ಕೆಲಕಾಲ ನಂಜನಗೂಡಿನಲ್ಲಿ ವಾಸ್ತವ್ಯವಿದ್ದ ಚಂದ್ರಶೇಖರ್ ಅವರಿಗೆ ಅಲ್ಲಿಯ ಪ್ರಕೃತಿ, ಗ್ರಾಮೀಣ ಪರಿಸರಗಳು ಸ್ಫೂರ್ತಿ ನೀಡಿ ಚಿತ್ರ ರಚಿಸಲು ಪ್ರೇರೇಪಿಸುವಂತಾಯಿತು. ಪ್ರೌಢಶಾಲಾ ವಿದ್ಯಾಭ್ಯಾಸದ ಅನಂತರ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಗೆ ಸೇರಿ ಪಾವಂಜೆ, ಸ್ವಾಮಿ, ಟಂಕಸಾಲೆ, ಸುಬ್ರಹ್ಮಣ್ಯರಾಜು ಮುಂತಾದವರಲ್ಲಿ ಕಲಾಭ್ಯಾಸಮಾಡಿ ಡಿಪ್ಲೊಮಾ ಪದವಿ ಪಡೆದರು (1942). ಅನಂತರ ಚನ್ನಪಟ್ಟಣದ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಕಲಾವಿದರಾಗಿದ್ದರು. ಅಂದಿನ ಕೈಗಾರಿಕಾ ಮಂತ್ರಿ ಹಾಗೂ ಕಲಾಪ್ರೇಮಿ ಎಂ.ಎ.ಶ್ರೀನಿವಾಸನ್ ಅವರು ಕಲಾಪೋಷಕರಿಗೆ ಕಲಾಕೃತಿಗಳನ್ನು ಕೊಳ್ಳಲು ಚಂದ್ರಶೇಖರ್ ಅವರ ಹೆಸರನ್ನೂ ಶಿಫಾರಸ್ಸು ಮಾಡಿದ್ದಲ್ಲದೆ, ಕೋಲಾರದ ಚಿನ್ನದ ಗಣಿ ಹಾಗೂ ಮತ್ತಿತರ ಕಡೆಗಳಲ್ಲಿದ್ದ ಕಲಾಕೃತಿ ಗ್ರಾಹಕರಿಗೆ ಚಂದ್ರಶೇಖರ್ ಅವರು ಹಾಗೂ ಅವರ

ಕೃತಿಗಳ ಪರಿಚಯ ಮಾಡಿಸಿ ಕೃತಿಗಳನ್ನೂ ಕೊಂಡು ಪ್ರೋತ್ಸಾಹಿಸುವಂತೆ ಮಾಡಿದರು. ಆ ವೇಳೆಗೆ ಚಂದ್ರಶೇಖರ್ ಅವರು ದೇಶೀಯ ಹಾಗೂ ಪಾಶ್ಚಾತ್ಯ ನಿಸರ್ಗ ಚಿತ್ರಕಲಾವಿದರ ಹಾಗೂ ಕಲಾಕೃತಿಗಳಿಂದ ಪ್ರೇರಣೆ ಪಡೆದು ಭೂದೃಶ್ಯ (ಲ್ಯಾಂಡ್‍ಸ್ಕೇಪ್) ರಚನೆಯನ್ನೇ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರು. ಅಂದಿಗೆ ಬೆಂಗಳೂರು ಪ್ರದೇಶದಲ್ಲಿದ್ದ ಐರೋಪ್ಯ ಅಧಿಕಾರಿಗಳು ಇನ್ನಿತರ ದೇಶೀಯ (ಸ್ಥಳೀಯ) ಭೂದೃಶ್ಯ ಕಲಾವಿದರಿಗೆ ನೀಡುವುದಕ್ಕಿಂತ ಹೆಚ್ಚಿನ ಸಂಭಾವನೆ, ಗೌರವಾದರಗಳನ್ನು ನೀಡಿ ಚಂದ್ರಶೇಖರ್ ಅವರ ಕೃತಿಗಳನ್ನು ಸಂಗ್ರಹಿಸಿದರು. ಇದರೊಂದಿಗೆ ರಾಷ್ಟ್ರದ ವಿವಿಧ ಕಡೆಗಳಲ್ಲಿ ನಡೆಯುತ್ತಿದ್ದ ಕಲಾಪ್ರದರ್ಶನ, ಸ್ಪರ್ಧೆಗಳಿಗೆ ಕೃತಿಗಳನ್ನು ಕಳುಹಿಸುತ್ತಿದ್ದು ಪಾರಿತೋಷಕ ದೊರೆತುದಲ್ಲದೆ ಕೃತಿಗಳ ಮಾರಾಟವೂ ಆಗುತ್ತಿತ್ತು. ಇದರಿಂದಾಗಿ ಚಂದ್ರಶೇಖರ ಅವರ ಹೆಸರು ಪ್ರಸಿದ್ಧವಾಗಿ ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಲಾವಿದರಾಗಿ ಸೇರಲು ನೆರವಾಯಿತು.

1953ರಲ್ಲಿ ಕೇಂದ್ರ ಸರ್ಕಾರದ ಸೇವೆಗೆ (ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ) (ಅಜಂತದ ಕಲಾಕೃತಿಗಳನ್ನು ಪ್ರತಿಮಾಡುವ ಕಾರ್ಯಕ್ಕೆ) ನೇಮಕವಾಗಿದ್ದು 1982ರಲ್ಲಿ ನಿವೃತ್ತರಾಗುವವರೆಗೆ ಅಜಂತೆಯ ಹಲವಾರು ಕೃತಿಗಳನ್ನು ಪ್ರತಿಕೃತಿ ಮಾಡಿ ಇಲಾಖೆಗೆ ನೀಡಿದ್ದಲ್ಲದೆ ಖಾಸಗಿಯವರಿಗೂ ಮರುಪ್ರತಿ ಚಿತ್ರಿಸಿ ನೀಡುವಂತಾಯಿತು. ಅದೇ ವೇಳೆಯಲ್ಲಿ ಬಾದಾಮಿಯ ಗುಹಾದೇವಾಲಯದ ಕೆಲವು ಚಿತ್ರಗಳನ್ನು ಪ್ರತಿಮಾಡಿದರು. ಇವಲ್ಲದೆ ಬೆಂಗಳೂರಿನ ವಿಧಾನಸೌಧದಲ್ಲಿ ಪ್ರದರ್ಶಿಸಲು ತೈಲವರ್ಣ ಭಾವಚಿತ್ರಗಳನ್ನೂ ದೆಹಲಿಯ ಪಾರ್ಲಿಮೆಂಟ್ ಭವನದಲ್ಲಿ ಪ್ರದರ್ಶಿಸಲು ವಿಜಯನಗರದ ಕೃಷ್ಣದೇವರಾಯನ ಚಿತ್ರವನ್ನೂ ರಚಿಸಿದ್ದಾರೆ. ಕೇಂದ್ರ ಪ್ರಾಚ್ಯವಸ್ತು ಇಲಾಖೆಯ ಶತಮಾನೋತ್ಸವ ಸಮಾರಂಭ, ಬೆಂಗಳೂರಿನ ತಾತಾ ವಿಜ್ಞಾನಮಂದಿರದ ವಜ್ರಮಹೋತ್ಸವ ಸಮಾರಂಭ, ಉದಕಮಂಡಲದ ಸಂಶೋಧನಾಲಯಗಳಲ್ಲಿ ಹಲವಾರು ಚಿತ್ರಗಳನ್ನು ಪ್ರದರ್ಶಿಸಿದ್ದಾರೆ. ದೆಹಲಿಯ ಅಖಿಲಭಾರತ ಕಲೆ ಹಾಗೂ ಕರಕುಶಲ ಕಲಾಸಂಸ್ಥೆಯ ವತಿಯಿಂದ ದೇಶ ವಿದೇಶಗಳಲ್ಲಿ ನಡೆದ ಗುಂಪು ಪ್ರದರ್ಶನ, ಕೇಂದ್ರ ವಿದ್ಯಾ ಇಲಾಖೆಯವರು ಏರ್ಪಡಿಸಿದ್ದ ಕೋಲ್ಕತ ಹಾಗು ಅಮೆರಿಕದಲ್ಲಿ ನಡೆದ ಗುಂಪು ಪ್ರದರ್ಶನ, ಕೇಂದ್ರ ಲಲಿತ ಕಲಾ ಅಕಾಡೆಮಿಯ ಪ್ರದರ್ಶನಗಳಲ್ಲಿ ಪಾಲುಗೊಂಡಿದ್ದರು. ಬೆಂಗಳೂರಿನ ಚಿತ್ರಕಲಾ ಪರಿಷತ್‍ನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದ ಚಂದ್ರಶೇಖರ್ ಅವರು ಅಲ್ಲಿಯೂ ಸೇರಿದಂತೆ ವೆಂಕಟಪ್ಪ ಕಲಾ ಶಾಲೆ ಇತ್ಯಾದಿಗಳಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಟಿ ಪಿ ಇಸ್ಸಾರ್ ಅವರ ಬ್ಲಾಸಮ್ ಸಿಟಿ ಸೇರಿದಂತೆ ಅನೇಕ ಗ್ರಂಥಗಳಲ್ಲಿ ಶ್ರೀಯುತರ ಚಿತ್ರಗಳು ಸೇರ್ಪಡೆಯಾಗಿವೆ. ಚಂದ್ರಶೇಖರ್ ಅವರಿಗೆ 1992ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿಯಿಂದ ದಾವಣಗೆರೆಯ ಶಂಕರ ಪಾಟೀಲ್ ಸ್ಮರಣಾರ್ಥ ಗೌರವಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಪ್ರಶ. 2000ನೆಯ ಸಾಲಿನ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿಗೆ ಭಾಜನರಾಗಿದ್ದಾರೆ. (ಎ.ಎಲ್.ಎನ್.)

**ಚಂದ್ರಶೇಖರ್, ಸಿ.ಆರ್. :** 1948. ಇವರು ಮನೋವೈದ್ಯರಾಗಿ, ಲೇಖಕರಾಗಿ, ಶಿಕ್ಷಕರಾಗಿ ಮತ್ತು ಆಪ್ತ ಸಲಹೆಗಾರರಾಗಿ ಸದಾ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡವರು. ಆರೋಗ್ಯ ಮತ್ತು ಮನೋವೈದ್ಯಕೀಯಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಅತ್ಯಂತ ಸರಳವಾಗಿ, ಸುಂದರವಾಗಿ ಓದುಗರ ಮನಮುಟ್ಟುವಂತೆ ಸಾಹಿತ್ಯ ರಚಿಸುವುದರಲ್ಲಿ ಅಗ್ರಮಾನ್ಯರು. ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ 1948 ಡಿಸೆಂಬರ್ 12 ರಂದು ಜನಿಸಿದರು. ತಂದೆ ರಾಜಣ್ಣಾಚಾರ್ ಮತ್ತು ತಾಯಿಯ ಹೆಸರು ಎನ್. ಪಿ. ಸರೋಜಮ್ಮ. ಇವರು 135 ಪುಸ್ತಕಗಳನ್ನು ರಚಿಸಿದ್ದಾರೆ. ಮೂವತ್ತಕ್ಕೂ ಹೆಚ್ಚು ಪುಸ್ತಕಗಳು ಮರುಮುದ್ರಣ ಕಂಡಿವೆ. ಬಾನಾಮತಿ ಪುಸ್ತಕ 7 ಮುದ್ರಣ ಕಂಡಿದ್ದರೆ "ನಿಮ್ಮ ಜ್ಞಾಪಕಶಕ್ತಿ ಹೆಚ್ಚಿಸಿಕೊಳ್ಳಿ" ಕೃತಿ 6 ಮುದ್ರಣ ಕಂಡಿದೆ. ಅಲ್ಲದೆ ತೆಲುಗಿಗೆ ಅನುವಾದಗೊಂಡ ಇವರ ನಾಲ್ಕು ಕೃತಿಗಳು 4 ಮುದ್ರಣಗಳನ್ನು ಕಂಡಿವೆ. ಹತ್ತು ಹಲವು ಪುರಸ್ಕಾರಗಳು ಇವರಿಗೆ ಲಭಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಡಾ॥ ಎನ್. ಎನ್. ಜಯರಾಂ ಪ್ರಶಸ್ತಿ, ಡಾ॥ ಎಚ್, ನರಸಿಂಹಯ್ಯ ದತ್ತಿ ಬಹುಮಾನ, ಡಾ॥ ಪಿ.ಎಸ್. ಶಂಕರ್ ಪ್ರಶಸ್ತಿ ಮುಂತಾದವುಗಳು. ಅಲ್ಲದೇ ಇವೆಲ್ಲಕ್ಕೂ ಗರಿಯಿಟ್ಟಂತೆ ರಾಷ್ಟ್ರೀಯ ವಿಜ್ಞಾನ ಸಂಸ್ಥೆಯ ಪ್ರಶಸ್ತಿಯೂ ಲಭಿಸಿದೆ. ಖ್ಯಾತ ವೈದ್ಯ ಹಾಗೂ ವೈದ್ಯ ಸಾಹಿತಿ ಎಚ್.ಡಿ. ಚಂದ್ರಪ್ಪಗೌಡರು ಸಿ.ಆರ್.ಸಿ ಇವರನ್ನು ಲಿವಿಂಗ್ ಲೆಜೆಂಡ್ ಎಂದು ಕರೆದಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

10ನೆಯ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದು ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಪೂರೈಸಿದರು. ಪ್ರಸ್ತುತ ನಿಮ್ಹಾನ್ಸ್‍ನ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥರಾಗಿರುವ ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ಗೌರವ ಹುದ್ದೆಗಳನ್ನಲಂಕರಿಸಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ವೈದ್ಯಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಇವರು ರಾಜೀವ್‍ಗಾಂಧಿ ವೈದ್ಯಾಲಯದ ಪ್ರಸಾರಾಂಗದ ಸಲಹಾ ಸಮಿತಿಯ ಸದಸ್ಯರೂ ಆಗಿದ್ದಾರೆ. ಅಲ್ಲದೆ ವಿಶ್ವ ಆರೋಗ್ಯ ಸಂಸ್ಥೆಯ ಅಲ್ಪಾವಧಿ ತಜ್ಞ ಸಲಹೆಗಾರರಾಗಿಯೂ(1991) ಕಾರ್ಯ ನಿರ್ವಹಿಸಿದ್ದಾರೆ. (ಡಾ. ವಸುಂಧರಾ ಭೂಪತಿ)

**ಚಂದ್ರಶೇಖರ್, ಸುಬ್ರಹ್ಮಣ್ಯನ್ :** 1910–1995. ಭಾರತ ಸಂಜಾತ ಅಮೆರಿಕ ಖಭೌತವಿಜ್ಞಾನಿ. ನೊಬೆಲ್ ಪ್ರಶಸ್ತಿ ವಿಜೇತ. 1910ರ ಅಕ್ಟೋಬರ್ 10ರಂದು ಲಾಹೋರಿನಲ್ಲಿ ಜನಿಸಿದರು. ತಂದೆ ಚಂದ್ರಶೇಖರ ಸುಬ್ರಮಣ್ಯನ್ ಅಯ್ಯರ್. ತಾಯಿ ಸೀತಾಲಕ್ಷ್ಮಿ. ಚಂದ್ರಶೇಖರ್ ಅವರು ಇಬ್ಬರು ಅಕ್ಕಂದಿರು, ಮೂವರು ತಮ್ಮಂದಿರು ಮತ್ತು ನಾಲ್ವರು ತಂಗಿಯರ ತುಂಬು ಮನೆಯಲ್ಲಿ ಬೆಳೆದರು. ತಂದೆ ತಾಯಿಯರೇ ಇವರ ಮೊದಲ



ಗುರುಗಳು. ಇವರು ಹುಟ್ಟುವ ವೇಳೆಗಾಗಲೇ ಇವರ ಚಿಕ್ಕಪ್ಪ ಸಿ.ವಿ. ರಾಮನ್ ವಿಜ್ಞಾನ ಕ್ಷೇತ್ರದಲ್ಲಿ ತಾರೆಯಾಗಿದ್ದರು. ಬಾಲ್ಯದಿಂದಲೇ ಇವರದು ವಿಜ್ಞಾನದತ್ತ ಒಲವು, ಎಲ್ಲ ತರಗತಿಗಳಲ್ಲಿಯೂ ಮೊದಲಿಗರಾಗಿಯೇ ಉತ್ತೀರ್ಣರಾದರು. ಇವರ ಮೊದಲನೆಯ ಸಂಶೋಧನ ಲೇಖನವಾದ 'ಕಾಂಪ್ಟನ್ ಸ್ಕ್ಯಾಟರಿಂಗ್ ಅಂಡ್ ದಿ ನ್ಯೂ ಸ್ಟ್ಯಾಟಿಸ್ಟಿಕ್ಸ್' ಪ್ರಕಟವಾದಾಗ (ಪ್ರೊಸೀಡಿಂಗ್ಸ್ ಆಫ್ ದಿ ರಾಯಲ್ ಸೊಸೈಟಿ, 1928) ಇವರಿಗಿನ್ನೂ 18 ವರ್ಷ ವಯಸ್ಸು. ಆಗ ತಾನೇ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎಸ್‍ಸಿ.ಯು ಮೆಟ್ಟಿಲನ್ನು ಹತ್ತಿದ್ದರು. 1930 ರಲ್ಲಿ ತಮ್ಮ ಆನರ್ಸ್ ಪದವಿಯನ್ನು ಪಡೆದರು. ಅದರಲ್ಲಿ ಇವರು ಅತಿ ಹೆಚ್ಚು ಅಂಕಗಳ ದಾಖಲೆಯನ್ನು ಸ್ಥಾಪಿಸಿದ್ದು ಅನಿರೀಕ್ಷಿತವಾಗಿರಲಿಲ್ಲ. ತರುವಾಯ ಮದ್ರಾಸ್ ಸರ್ಕಾರದ ವಿದ್ಯಾರ್ಥಿವೇತನದ ಸಹಾಯದಿಂದ ಕೇಂಬ್ರಿಜ್‍ನ ಟ್ರಿನಿಟಿ ಕಾಲೇಜಿಗೆ ಉನ್ನತ ವ್ಯಾಸಂಗಕ್ಕಾಗಿ ತೆರಳಿದರು. ಅಲ್ಲಿ ಆರ್. ಎಚ್. ಫೌಲರ್ ಹಾಗೂ ಪಿ.ಎ.ಎಂ.ಡಿರಾಕರ ನೇತೃತ್ವದಲ್ಲಿ ಸಂಶೋಧನೆ ನಡೆಸಿ 1933ರಲ್ಲಿ ಸೈದ್ಧಾಂತಿಕ ಭೌತವಿಜ್ಞಾನದಲ್ಲಿ ಪಿಎಚ್.ಡಿ.ಯನ್ನು ಗಳಿಸಿದರು. ಮುಂದಕ್ಕೆ ಸುಮಾರು 4 ವರ್ಷಗಳ ಕಾಲ ಇವರು ಟ್ರಿನಿಟಿ ಕಾಲೇಜಿನ ಫೆಲೋ ಆಗಿದ್ದರು. ಕೇಂಬ್ರಿಜ್‍ನ ವಿದ್ಯಾರ್ಥಿಜೀವನದಲ್ಲಿ ಇವರಿಗೆ ದೊರಕಿದ ಇತರ ಸನ್ಮಾನಗಳಲ್ಲಿ ಐಸಾಕ್ ನ್ಯೂಟನ್ ವಿದ್ಯಾರ್ಥಿವೇತನ ಹಾಗೂ ಷೀಪ್ ಷಾಂಕ್ಸ್ ಬಹುಮಾನ ಮುಖ್ಯವಾದವು.

ಚಂದ್ರಶೇಖರರ ಸಂಶೋಧಕ–ವಿದ್ಯಾರ್ಥಿ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಅವರ ಪಾಂಡಿತ್ಯ ಹಾಗೂ ಆತ್ಮವಿಶ್ವಾಸಗಳಿಗೆ ಸಾಕ್ಷಿಯಾಗಿ ಇಲ್ಲಿ ಉದಾಹರಿಸಬಹುದು. ಆಸ್ಟ್ರೋಫಿಸಿಕಲ್ ಜರ್ನಲ್ ಎಂಬ ಪ್ರಸಿದ್ಧ ಖಗೋಳವಿಜ್ಞಾನ ಪತ್ರಿಕೆಗೆ ಇವರೊಂದು ಲೇಖನವನ್ನು ಮುದ್ರಣಕ್ಕಾಗಿ ಕಳುಹಿಸಿದರು. ಹಿರಿಯ ವಿಜ್ಞಾನಿಗಳೊಬ್ಬರು ಅದನ್ನು ಪರಾಮರ್ಶಿಸಿ ಮುದ್ರಣಕ್ಕೆ ಯೋಗ್ಯವಲ್ಲ ಎಂದು ನಿರಾಕರಿಸಿದರು. ಆಗ ಚಂದ್ರಶೇಖರರು ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆದರು. ಲೇಖನವನ್ನು ಸ್ವೀಕರಿಸಲು ಇಲ್ಲವೇ ನಿರಾಕರಿಸಲು ಸಂಪಾದಕರಿಗೆ ಇರುವ ಹಕ್ಕನ್ನು ಮೊದಲು ಒಪ್ಪಿಕೊಂಡು ವಿಮರ್ಶಕರ ಆಕ್ಷೇಪ ತಪ್ಪು ಎಂದು ಸಕಾರಣವಾಗಿ ಅದರಲ್ಲಿ ವಿವರಿಸಿದ್ದರು; ಆದ್ದರಿಂದ ತಾನು ಲೇಖನದಲ್ಲಿ ಮಂಡಿಸಿದ ವಾದ ಸರಿಯೆಂದು ಸಾಧಿಸಿದರು ಕೂಡ. ಲೇಖನ ಪ್ರಕಟ ವಾಯಿತೆಂದು ಬೇರೆ ಹೇಳಬೇಕಿಲ್ಲ. (ಮುಂದೆ ಇದೇ ಪತ್ರಿಕೆಯ ಸಂಪಾದಕತ್ವವನ್ನು ಚಂದ್ರಶೇಖರರು ಸುಮಾರು ಎರಡು ದಶಕಗಳ ಕಾಲ ವಹಿಸಿಕೊಂಡಿದ್ದರು (1952–67).

ಕೇಂಬ್ರಿಜ್‍ನಿಂದ ಚಂದ್ರಶೇಖರರು ತಮ್ಮ ನವವಿವಾಹಿತ ಪತ್ನಿ ಲಲಿತ ಚಂದ್ರಶೇಖರರೊಡನೆ 1936ರಲ್ಲಿ ಅಮೆರಿಕಕ್ಕೆ ಬಂದರು. ಹಾರ್ವರ್ಡಿನಲ್ಲಿ ಅಲ್ಪಕಾಲದ ವಾಸದ ತರುವಾಯ ಶಿಕಾಗೋ ವಿಶ್ವವಿದ್ಯಾಲಯದ ಯರ್ಕ್ಸ್ ವೇಧಶಾಲೆಗೆ 1937ರಲ್ಲಿ ಬಂದು ಸುಪ್ರಸಿದ್ಧ ಖಗೋಳವಿಜ್ಞಾನಿ ಸ್ಟ್ರುವೆ ಅವರ ನೇತೃತ್ವದಲ್ಲಿ ತಮ್ಮ ಸಂಶೋಧನೆಯನ್ನು ಮುಂದುವರಿಸಿದರು. 1953ರಲ್ಲಿ ಅಮೆರಿಕದ ಪೌರತ್ವವನ್ನು ಪಡೆದು ಆ ದೇಶದಲ್ಲೇ ನೆಲೆಸಿದರು.

ಚಂದ್ರಶೇಖರರ ಅಪೂರ್ವ ವಿಶ್ಲೇಷಣ ಸಾಮರ್ಥ್ಯದ ಹಾಗೂ ಖಗೋಳವಿಜ್ಞಾನವೇ ಅಲ್ಲದೆ ಸಮಗ್ರ ಭೌತವಿಜ್ಞಾನಕ್ಕೆ ಸಂಬಂಧಿಸಿದಂತೆ ಅಮೋಘ ಗಣಿತಗ್ರಹಣ ಸಾಮರ್ಥ್ಯದ ಪರಿಚಯ ಹಿರಿಯ ವಿಜ್ಞಾನಿಗಳಿಗಾಗಲು ಬಹಳ ಕಾಲ ಬೇಕಾಗಲಿಲ್ಲ. ತಮ್ಮ ಸರಳ ಹಾಗೂ ಕ್ರಮಬದ್ಧ ಜೀವನ ಮತ್ತು ಅಸಾಧಾರಣ ಪಾಂಡಿತ್ಯದಿಂದ ಸುತ್ತಲಿನ ವಿಜ್ಞಾನಿಗಳನ್ನು

ಬೆರಗುಗೊಳಿಸುವ ವ್ಯಕ್ತಿತ್ವ ಇವರದು. ಮಾತನಾಡಬೇಕಾದರೂ ಅಷ್ಟೇ ಹೇಳಬೇಕಾದ್ದನ್ನು ದೃಢವಿಶ್ವಾಸದಿಂದ ನಿಖರವಾಗಿ, ಸ್ಪಷ್ಟವಾಗಿ ಹೇಳುವ ಸ್ವಭಾವ. ಪ್ರಪಂಚದ ಅನೇಕ ಕಡೆಗಳಲ್ಲಿ ಸುತ್ತಿ ಭೌತವಿಜ್ಞಾನ ಹಾಗೂ ಖಭೌತವಿಜ್ಞಾನಕ್ಕೆ ಸಂಬಂಧಿಸಿದಂತೆ ಉಪನ್ಯಾಸಗಳನ್ನು




**ಶೀತಲ ನಕ್ಷತ್ರಕಾಯಗಳ ತ್ರಿಜ್ಯ ಮತ್ತು ದ್ರವ್ಯರಾಶಿಗಳ ನಡುವಣ ಸಂಬಂಧವನ್ನು ತೋರಿಸುವ ನಕ್ಷೆ – ಎಸ್. ಚಂದ್ರಶೇಖರ್ ಅವರ ಹಸ್ತಪ್ರತಿಯೊಂದರ ಪುನಃಪ್ರತಿ. ಚಿತ್ರದಲ್ಲಿ ಕಾಣಬರುವ ವಿಶೇಷ ಪ್ರತೀಕಗಳು ಅನುಕ್ರಮವಾಗಿ (ಎಡದಿಂದ ಬಲಕ್ಕೆ) ಚಂದ್ರ, ಭೂಮಿ, ಶನಿ ಮತ್ತು ಗುರುಗಳನ್ನು ಸೂಚಿಸುತ್ತವೆ. ದ್ರವ್ಯರಾಶಿ ಮತ್ತು ತ್ರಿಜ್ಯ ಎಂಬ ಪದಗಳನ್ನು ಚಂದ್ರಶೇಖರ್ ಅವರು ತಮಿಳಿನಲ್ಲಿ ಬರೆದಿದ್ದಾರೆ. ಭೂಮಿಯ ದ್ರವ್ಯರಾಶಿಗಿಂತ 4,60,000ರಷ್ಟು ಹೆಚ್ಚಾಗಿರುವ ದ್ರವ್ಯರಾಶಿಯುಳ್ಳ ಕಾಯಗಳ ತ್ರಿಜ್ಯ ಶೂನ್ಯವಾಗುವುದನ್ನು ಗಮನಿಸಬಹುದು.**

ಇವರು ನೀಡಿದ್ದಾರೆ. ಕಾಂತಕ್ಷೇತ್ರಗಳಲ್ಲಿ ದ್ರವಾನಿಲಗಳ ನಾನಾ ಬಗೆಯ ಗತಿವಿನ್ಯಾಸ, ಪ್ರಕ್ಷೋಭೆ ಮತ್ತು ಸ್ಥಿರತೆಯ (ಸ್ಟೆಬಿಲಿಟಿ) ಬಗ್ಗೆ ನೀಡಿದ ಡಾರ್ವಿನ್ ಉಪನ್ಯಾಸಗಳು ಮತ್ತು ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ಲಾಸ್ಮಾ ಭೌತವಿಜ್ಞಾನದ ಮೇಲೆ ನೀಡಿದ ಉಪನ್ಯಾಸಮಾಲಿಕೆ ಇವುಗಳ ಪೈಕಿ ಬಹಳ ಪ್ರಸಿದ್ಧವಾದವು. ಎರಡೂ ಕ್ಷೇತ್ರಗಳಲ್ಲಿ ಅವರ ಮೂಲಭೂತ ಕೊಡುಗೆಗಳು ಅನೇಕ ಉಂಟು.

ಚಂದ್ರಶೇಖರರ ಕ್ಷೇತ್ರ ಇಂಥದ್ದೇ ಎಂದು ಕರಾರುವಾಕ್ಕಾಗಿ ಹೇಳುವುದು ಬಹಳ ಕಷ್ಟ. ಅವರ ಸಂಶೋಧನೆಗಳ ಬಹುಪಾಲು ನಕ್ಷತ್ರಗಳನ್ನೂ ಎಲೆಕ್ಟ್ರಾನುಗಳನ್ನೂ ಕುರಿತವು; ಭೌತ, ಖಭೌತ ಹಾಗೂ ಗಣಿತವಿಜ್ಞಾನಗಳಲ್ಲಿ ಇವರ ಪಾಂಡಿತ್ಯ ಉನ್ನತಮಟ್ಟದ್ದು. ಸ್ವತಃ ಸ್ಟ್ರುವೆಯವರೇ ಒಮ್ಮೆ ಉದ್ಗರಿಸಿದರು ಚಂದ್ರಶೇಖರ್ ಒಬ್ಬ ಖಗೋಳವಿಜ್ಞಾನಿಯೋ ಭೌತವಿಜ್ಞಾನಿಯೋ ಅಥವಾ ಗಣಿತವಿಜ್ಞಾನಿಯೋ ಖಚಿತವಾಗಿ ನಿರ್ಧರಿಸುವಂತಿಲ್ಲ. ಚಂದ್ರಶೇಖರ್ ಅವರು ತಮ್ಮನ್ನು ಒಬ್ಬ ಖಗೋಳವಿಜ್ಞಾನಿಯೆಂದು ಹೇಳಿಕೊಂಡಿದ್ದಾರೆ.

ಷಿಕಾಗೋದಲ್ಲಿ ಚಂದ್ರಶೇಖರರ ಒಲವು ಮೊದಲ ಹತ್ತು ವರ್ಷಗಳಲ್ಲಿ ನಕ್ಷತ್ರ ರಚನೆ ಹಾಗೂ ಅವುಗಳ ಗತಿವಿಜ್ಞಾನದ ಕಡೆಗೆ ಒಲಿದಿತ್ತು. ನಕ್ಷತ್ರರಚನೆಗೆ ಸಂಬಂಧಿಸಿದಂತೆ ಅವರು ಅನೇಕ ಹೊಸ ಸಿದ್ಧಾಂತಗಳನ್ನು ತೋರಿಸಿಕೊಟ್ಟರು. ನಕ್ಷತ್ರಗಳ ದ್ರವ್ಯರಾಶಿ ಹಾಗೂ ಕಾಂತಿಗಳ (ಮಾಸ್ ಅಂಡ್ ಲ್ಯೂಮಿನಾಸಿಟಿ) ಸಂಬಂಧವನ್ನು ಕುರಿತ ಅವರ ಕೊಡುಗೆ ಗಣನೀಯವಾದದ್ದು. ಶ್ವೇತಕುಬ್ಜ ನಕ್ಷತ್ರಗಳನ್ನು ಕುರಿತು ಗಮನಾರ್ಹ ಸಂಶೋಧನೆ ನಡೆಸಿದ್ದಾರೆ. ನಕ್ಷತ್ರವಿಕಾಸದ ಅಂತಿಮ ಹಂತ ಶ್ವೇತಕುಬ್ಜ. ಒಂದು ನಕ್ಷತ್ರದಲ್ಲಿರುವ ಹೈಡ್ರೋಜನ್ ಮತ್ತು ಹೀಲಿಯಮ್ ನ್ಯೂಕ್ಲಿಯರ್ ಪ್ರಕ್ರಿಯೆಗಳಿಂದ ತೀರಿಹೋದಂತೆ (ಅಂದರೆ ಭಾರ ಅಣುಗಳಾಗಿ ಮಾರ್ಪಾಡಾದಂತೆ) ನಕ್ಷತ್ರ ತಣ್ಣಗಾಗುತ್ತ, ಕುಗ್ಗುತ್ತ ಸಾಗುತ್ತದೆ. ಅದರೊಳಗಿನ ಒತ್ತಡ ಈ ಕುಗ್ಗುವಿಕೆಯನ್ನು ವಿರೋಧಿಸಲು ಶಕ್ಯವಾಗುವ ದೇಹಲಿ ಸ್ಥಿತಿಗೆ ನಕ್ಷತ್ರ ಬಂದಾಗ ಆ ನಕ್ಷತ್ರಕ್ಕೆ ಶ್ವೇತಕುಬ್ಜವೆಂದು ಹೆಸರು. ಹೀಗಾಗಬೇಕಾದರೆ ಒಂದು ನಕ್ಷತ್ರದ ದ್ರವ್ಯರಾಶಿ ಸೂರ್ಯ ದ್ರವ್ಯರಾಶಿಯ 1.44 ಕ್ಕಿಂತ ಕಡಿಮೆ ಆಗಿರಬೇಕೆಂದು ಚಂದ್ರಶೇಖರ್ ತೋರಿಸಿಕೊಟ್ಟಿದ್ದಾರೆ. ಇಲ್ಲವಾದಲ್ಲಿ, ಒಂದು ಭಯಂಕರ ಆಸ್ಫೋಟ ದಿಂದಲೋ ಇಲ್ಲವೇ ನಿರಂತರವಾಗಿ ಕುಗ್ಗಿ ಕುಸಿಯುವುದರಿಂದಲೋ ಇಲ್ಲವೇ ಈ ಎರಡೂ ಬಗೆಯಿಂದಲೋ ನಕ್ಷತ್ರ ತನ್ನ ಅವಸಾನವನ್ನು ಕಾಣಬೇಕಾಗುತ್ತದೆ. ಶ್ವೇತಕುಬ್ಜಗಳ ದ್ರವ್ಯರಾಶಿಗೆ ಇರುವ ಈ ಪರಿಮಿತಿಗೆ (1.44 ಸೂರ್ಯ ದ್ರವ್ಯರಾಶಿಯಷ್ಟು) ಚಂದ್ರಶೇಖರ್ ಪರಿಮಿತಿ ಎಂದು ಹೆಸರು. ಇದನ್ನೂ ನಕ್ಷತ್ರಗಳ ಗತಿವಿಜ್ಞಾನದಲ್ಲಿ ಅವರು ಆವಿಷ್ಕರಿಸಿದ ಅನೇಕ ಸಿದ್ಧಾಂತಗಳನ್ನೂ ಗಮನಿಸಿದ ಷಿಕಾಗೋ ವಿಶ್ವವಿದ್ಯಾಲಯ 1942ರಲ್ಲಿ ಚಂದ್ರಶೇಖರರಿಗೆ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು.

ನಕ್ಷತ್ರಗಳ ಒಳರಚನೆ, ವಾಯುಮಂಡಲ ಹಾಗೂ ಅವುಗಳ ವಿಕಾಸದ ಬಗ್ಗೆ ಮತ್ತು ನಕ್ಷತಮಂಡಲಗಳಲ್ಲಿ ಗುರುತ್ವಾಕರ್ಷಣೆಯಿಂದಾಗಿ ನಡೆಯುವ ಅನೇಕ ಕ್ರಿಯೆಗಳನ್ನು ಅರಿಯುವಲ್ಲಿ ಚಂದ್ರಶೇಖರರ ಕಾರ್ಯ ಬೆಳಕನ್ನು ಬೀರಿದೆ. ಭೌತವಿಜ್ಞಾನಕ್ಕೆ ಅವರ ಪ್ರಮುಖ ಕಾಣಿಕೆ ಕಾಂತಕ್ಷೇತ್ರಗಳಲ್ಲಿ ಅಯಾನೀಕೃತ ಅನಿಲಗಳ ಚಲನೆಯನ್ನು ಕುರಿತಾದದ್ದು. ಈಚೆಗೆ ಇವರು ಸಾರ್ವತ್ರಿಕ ರಿಲೆಟಿವಿಟಿ ಸಿದ್ಧಾಂತದ ಹಲ ವಿಷಯಗಳ ಕಡೆಗೂ ತಮ್ಮ ಗಮನವನ್ನು ಹರಿಸಿದ್ದಾರೆ. ಚಂದ್ರಶೇಖರರ ಅನೇಕ ಸಂಶೋಧನ ಲೇಖನಗಳು ಪ್ರಮುಖ ವಿಜ್ಞಾನಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬ್ರೌನಿಯನ್ ಚಲನೆ ಮೊದಲಾದವುಗಳಿಗೆ ಸಂಬಂಧಪಟ್ಟ ಸ್ಟೊಕ್ಯಾಸ್ಟಿಕ್ ನಿಯಮಗಳ ಬಗ್ಗೆ ಇವರು ಬರೆದ ಸುದೀರ್ಘ ಹಾಗೂ ಸವಿವರ ಲೇಖನ ಬಹಳ ಪ್ರಾಮುಖ್ಯ ಪಡೆದಿದೆ. ಅಣುಗಳ ಪ್ರಪಂಚದಲ್ಲಿ ಉಷ್ಣಕ್ರಿಯೆಗಳನ್ನು ನಿಯಂತ್ರಿಸುವ ನಿಯಮಗಳ ವ್ಯಾಪ್ತಿಯನ್ನು ವಿಶ್ವಪ್ರಮಾಣಕ್ಕೆ (ಅಂದರೆ ನಕ್ಷತ್ರಗಳೇ ಮೊದಲಾದ ಬೃಹತ್ ಕಾಯಗಳಿಗೆ) ವಿಸ್ತರಿಸಿದುದಕ್ಕಾಗಿಯೂ ವಿಕಿರಣ ಸಮತೋಲನದ (ರೇಡಿಯೇಟಿವ್ ಈಕ್ವಿಲಿಬ್ರಿಯಮ್) ಬಗ್ಗೆ ಇವರು ಬರೆದ ಕೃತಿಗಾಗಿಯೂ ಇವರಿಗೆ ರಮ್‌ಫರ್ಡ್ ಪದಕವನ್ನು ನೀಡಿ ಅಮೆರಿಕದ ವಿಜ್ಞಾನ ಹಾಗೂ ಕಲಾಸಮಿತಿ ಗೌರವಿಸಿದೆ. ಬೆಳಕಿನ ರೂಪದಲ್ಲಿ ಉಷ್ಣ ಪ್ರಸಾರವಾಗಿ, ಆ ಬೆಳಕು ವಸ್ತುವಿಗೆ ಆಧಾರವಾಗಿ ಮತ್ತೆ ವಸ್ತು ಉಷ್ಣದ ಪ್ರಸಾರವಾಗಿ, ಆ ಬೆಳಕು ವಸ್ತುವಿಗೆ ಆಧಾರವಾಗಿ ಮತ್ತೆ ವಸ್ತು ಉಷ್ಣದ ಮೂಲವಾಗುವಂಥ ಸಮತೋಲನ ಸ್ಥಿತಿಯನ್ನು ಚಂದ್ರಶೇಖರರು ವಿವರಿಸಿದರು.

ಚಂದ್ರಶೇಖರರ ವೈಜ್ಞಾನಿಕ ಜೀವನದ ವ್ಯಾಪ್ತಿ ಎಷ್ಟು ದೊಡ್ಡದೋ ಅಷ್ಟೇ ಚಿಕ್ಕದು ಅವರ ಸಾಮಾಜಿಕ ಜೀವನದ ವ್ಯಾಪ್ತಿ. ಮನರಂಜನೆಗಾಗಿ ಅವರಿಗೆ ಒಮ್ಮೊಮ್ಮೆ ಪತ್ನಿಯೊಡನೆ ಸಂಗೀತ ಕಚೇರಿಗಳಿಗೆ ಹೋಗುವ ಹವ್ಯಾಸವಿತ್ತು. ಕರ್ನಾಟಕ ಸಂಗೀತದಲ್ಲಿ ಇವರಿಗೆ ವಿಶೇಷ ಆಸಕ್ತಿ. ಅಮೆರಿಕಕ್ಕೆ ಹೋದ ಹೊಸತರಲ್ಲಿ ತಮ್ಮ ಪತ್ನಿಯ ವೀಣಾವಾದನದ ಮೂಲಕ ಅಲ್ಲಿನವರಿಗೆ ನಮ್ಮ ಸಂಗೀತದ ಕಡೆಗೆ ಒಲವನ್ನು ಉಂಟುಮಾಡಲು ಪ್ರಯತ್ನಿಸಿದ್ದರಂತೆ.

ಚಂದ್ರಶೇಖರರಿಗೆ ಸಂದಿರುವ ಸನ್ಮಾನಗಳಲ್ಲಿ ಮುಖ್ಯವಾದವನ್ನು ಇಲ್ಲಿ ಉಲ್ಲೇಖಿಸಬಹುದು: 1944ರಲ್ಲಿ ರಾಯಲ್ ಸೊಸೈಟಿಯ ಫೆಲೋ (ಎಫ್.ಆರ್.ಎಸ್.); 1952ರಲ್ಲಿ ಅಸ್ಟ್ರನಾಮಿಕಲ್ ಸೊಸೈಟಿ ಆಫ್ ಪೆಸಿಫಿಕಿನ ಬ್ರೂಸ್ ಸುವರ್ಣಪದಕ; 1953ರಲ್ಲಿ ರಾಯಲ್ ಅಸ್ಟ್ರನಾಮಿಕಲ್ ಸೊಸೈಟಿಯ ಸ್ವರ್ಣಪದಕ; 1957ರಲ್ಲಿ ಅಮೆರಿಕದ ವಿಜ್ಞಾನ ಹಾಗೂ ಕಲಾ ಅಕಾಡೆಮಿಯ ಸ್ವರ್ಣಪದಕ (ರಮ್‌ಫರ್ಡ್ ಮೆಡಲ್); 1962ರಲ್ಲಿ ರಾಯಲ್ ಸೊಸೈಟಿಯ ರಾಯಲ್ ಪದಕ; 1966ರಲ್ಲಿ ಅಮೆರಿಕದ ರಾಷ್ಟ್ರೀಯ ವಿಜ್ಞಾನ ಪದಕ; 1971ರಲ್ಲಿ ಅಮೆರಿಕದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಹೆನ್ರಿ ಡ್ರೇಪರ್ ಪದಕ. ಭಾರತ ಸರ್ಕಾರ ಇವರನ್ನು 1968ರಲ್ಲಿ ನೆಹರು ಸ್ಮಾರಕ ಉಪನ್ಯಾಸಕ್ಕೆ ಕರೆಸಿ ಗೌರವಿಸಿದೆ. ರಾಷ್ಟ್ರೀಯ ವಿಜ್ಞಾನ ಸಂಸ್ಥೆಯ ರಾಮಾನುಜನ್ ಪದಕ ಆಗ ಇವರಿಗೆ ದೊರಕಿತು. ಮುಂಬಯಿಯ ಟಾಟಾ ಮೂಲಭೂತ ಅನುಸಂಧಾನ ಕೇಂದ್ರ (ಟಿ.ಐ.ಎಫ್.ಆರ್.) 1971ರಲ್ಲಿ ತನ್ನ ರಜತ ಮಹೋತ್ಸವದ ಸಂದರ್ಭದಲ್ಲಿ ಇವರನ್ನು ಗೌರವ ಫೆಲೋ ಆಗಿ ಆಯ್ದು ಸನ್ಮಾನಿಸಿತು. 1983ರ ನೊಬೆಲ್ ಪಾರಿತೋಷಿಕವನ್ನು ಚಂದ್ರಶೇಖರ್ ಮತ್ತು ವಿಲಿಯಂ ಎ. ಫೌಲರ್ ಇವರುಗಳಿಗೆ ಸಮವಾಗಿ ಪ್ರದಾನಮಾಡಲಾಯಿತು.

1937ರಲ್ಲಿ ರಿಸರ್ಚ್ ಅಸೋಸಿಯೇಟ್ ಆಗಿ ಷಿಕಾಗೋ ವಿಶ್ವವಿದ್ಯಾಲಯದ ಯರ್ಕ್ಸ್ ವೇಧಶಾಲೆಗೆ ಬಂದ ಚಂದ್ರಶೇಖರರು 1974 ರಲ್ಲಿಯೂ ಅಲ್ಲಿಯೇ ಇದ್ದರು. 1938ರಲ್ಲಿ ಸಹಾಯಕ ಪ್ರಾಧ್ಯಾಪಕರಾಗಿಯೂ, 1942ರಲ್ಲಿ ಅಸೋಸಿಯೇಟ್ ಪ್ರಾಧ್ಯಾಪಕರಾಗಿಯೂ 1944ರಲ್ಲಿ ಪ್ರಾಧ್ಯಾಪಕರಾಗಿಯೂ ನೇಮಕವಾಗಿ 1952ರಿಂದ ಘನತೆವೆತ್ತ ಸೇವಾ ಪ್ರಾಧ್ಯಾಪಕರಾಗಿದ್ದರು. (ಡಿಸ್ಟಿಂಗ್ವಿಷ್ಟ್ ಸರ್ವಿಸ್ ಪ್ರೊಫೆಸರ್).

ಚಂದ್ರಶೇಖರರು ವಿಜ್ಞಾನಕ್ಕೆ ನೀಡಿರುವ ಅಮೂಲ್ಯ ಕಾಣಿಕೆಗಳಲ್ಲಿ ಈ ಗ್ರಂಥಗಳು ಸೇರಿವೆ: ಆ್ಯನ್ ಇನ್‌ಟ್ರಡಕ್ಷನ್ ಟು ದಿ ಥಿಯರಿ ಆಫ್ ಸ್ಟೆಲ್ಲಾರ್ ಸ್ಟ್ರಕ್ಚರ್ (1939), ಪ್ರಿನ್ಸಿಪಲ್ಸ್ ಆಫ್ ಸ್ಟೆಲ್ಲಾರ್ ಡೈನಮಿಕ್ಸ್ (1942), ರೇಡಿಯೇಟಿವ್ ಟ್ರಾನ್ಸ್‌ಫರ್ (1950), ಹೈಡ್ರೋಡೈನಮಿಕ್ ಅಂಡ್ ಹೈಡ್ರೋ ಮ್ಯಾಗ್ನಟಿಕ್ ಸ್ಟೆಬಿಲಿಟಿ (1961), ಎಲಿಪ್ಸಾಯಿಡಲ್ ಫಿಗರ್ಸ್ ಆಫ್ ಈಕ್ವಿಲಿಬ್ರಿಯಮ್ (1969). ಕೇಂಬ್ರಿಜ್ ವಿಶ್ವವಿದ್ಯಾಲಯದ ಅತ್ಯುಚ್ಚ ಪುರಸ್ಕಾರವಾದ ಆ್ಯಡಮ್ ಬಹುಮಾನ ಚಂದ್ರಶೇಖರರ ರೇಡಿಯೇಟಿವ್ ಟ್ರಾನ್ಸ್‌ಫರ್ ಎಂಬ ಗ್ರಂಥಕ್ಕೆ ಲಭಿಸಿದೆ. ಈ ಗ್ರಂಥಗಳ ಹೆಸರುಗಳೇ ಚಂದ್ರಶೇಖರರ ಪಾಂಡಿತ್ಯ ವೈಶಾಲ್ಯಕ್ಕೆ ಸೂಚಕವಾಗಿವೆ. ಪ್ರತಿಯೊಂದು ಗ್ರಂಥದಲ್ಲಿಯೂ ಇವರು ತಮ್ಮದೇ ಆದ ಕೆಲವು ಹೊಸ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. "ನ್ಯೂಟನ್ಸ್ ಪ್ರಿನ್ಸಿಪಿಯಾ ಫಾರ್ ದ ಕಾಮನ್ ರೀಡರ್" ಎಂಬ ಪುಸ್ತಕವನ್ನು 1995ರಲ್ಲಿ ಹೊರತಂದರು. ಚಂದ್ರಶೇಖರರ ಜೀವನ ಚರಿತ್ರೆ ಇಂಗ್ಲಿಷ್‌ನಲ್ಲಿ (ಚಂದ್ರ – ಎ ಬಯೋಗ್ರಫಿ ಆಫ್ ಚಂದ್ರಶೇಖರ್, ಲೇಖಕರು ಶ್ರೀ ಕಾಮೇಶ್ವರ ಸಿ. ವಾಲಿ, ಚಿಕಾಗೋ ವಿಶ್ವವಿದ್ಯಾನಿಲಯ, 1990–91) ಮತ್ತು ಕನ್ನಡದಲ್ಲಿ (ಸುಬ್ರಮಣ್ಯನ್

ಚಂದ್ರಶೇಖರ್, ಲೇಖಕರು ಶ್ರೀ ಜಿ.ಟಿ. ನಾರಾಯಣ ರಾವ್, ಅತ್ರಿ ಬುಕ್ ಸೆಂಟರ್, ಮಂಗಳೂರು, 1995) ಪ್ರಕಟವಾಗಿವೆ. ರಾಯಲ್ ಅಸ್ಟ್ರನಾಮಿಕಲ್ ಸೊಸೈಟಿಯ ಸುವರ್ಣಪದಕವನ್ನು ನೀಡುವ ಸಂದರ್ಭದಲ್ಲಿ ಅಧ್ಯಕ್ಷರು ಚಂದ್ರಶೇಖರರ ಕಾಣಿಕೆಯನ್ನು ಪ್ರಶಂಸಿಸುತ್ತ ಅದು ಬೃಹತ್ಪ್ರಮಾಣದಲ್ಲಿದ್ದು, ಪರಿಣತರಿಗೂ ಸಂಕ್ಷೇಪಿಸಲು ಅಸಾಧ್ಯವೆಂದು ತೋರುವಷ್ಟು ಹೆಚ್ಚಿನದು ಎಂದು ಹೇಳಿ, ಅವರನ್ನು ಗೌರವಿಸುವುದರ ಮೂಲಕ ಸೊಸೈಟಿ ತನ್ನನ್ನು ತಾನೇ ಗೌರವಿಸಿಕೊಂಡಿದೆಯೆಂದು ನುಡಿದರು. ಚಂದ್ರಶೇಖರರ ವೈಜ್ಞಾನಿಕ ಜೀವನದ ದಾರಿಯನ್ನೂ ಅವರ ಅಭ್ಯಾಸಕ್ರಮವನ್ನೂ ತಿಳಿಯಲು ಅವರೇ ಈ ವಿಷಯಗಳ ಮೇಲೆ ಸೂಚಿಸಿದ ಹಲವು ಮಾತುಗಳ ಕಡೆ ಗಮನಹರಿಸಬಹುದು. ಅವರ ಪ್ರಕಾರ ವಿಜ್ಞಾನವೆಂಬುದು ನಿರಂತರವಾಗಿ ಸಂಭವಿಸುತ್ತಿರುವ ವಿದ್ಯಮಾನ. ಅದರ ಮೌಲ್ಯಗಳನ್ನು ಪಡೆಯಲು ಅದರಲ್ಲಿ ಭಾಗವಹಿಸುವವರೆಲ್ಲರೂ ತಮ್ಮ ಒಟ್ಟಾದ ಉದ್ಯಮದಿಂದ ಅದರ ಮುನ್ನಡೆಯಲ್ಲಿ ಸಹಭಾಗಿಗಳಾಗಬೇಕು. ಯಾವುದೇ ಒಂದು ವಿಷಯದ ವೈಜ್ಞಾನಿಕ ಅಭ್ಯಾಸಕ್ರಮ ಹೀಗಿರಬೇಕು: ಮೊದಲು ಆ ವಿಷಯದ ಬಗ್ಗೆ ಗೊತ್ತಿರುವ ಅಂಶಗಳನ್ನೆಲ್ಲ ತಿಳಿಯುವುದು; ಇವುಗಳಲ್ಲಿ ಪ್ರತಿಯೊಂದರ ಪರಿಪಕ್ವತೆ, ತರ್ಕಬದ್ಧತೆ ಮತ್ತು ಪರಿಪೂರ್ಣತೆಗಳನ್ನು ಒರೆಗೆ ಹಚ್ಚಲು ನಾವು ಕೇಳಬಹುದಾದ ಪ್ರಶ್ನೆಗಳಿಗೆಲ್ಲ ಇವು ಸಮರ್ಪಕ ಉತ್ತರ ನೀಡಬಲ್ಲವೇ ಎಂದು ನೋಡುವುದು; ಒಂದು ವೇಳೆ ಸರಿಯಾದ ಸಮಾಧಾನ ಸಿಗದಿದ್ದಲ್ಲಿ ಅದನ್ನು ದೊರಕಿಸಿಕೊಳ್ಳುವೆಡೆ ಪ್ರಯತ್ನ ನಡೆಸುವುದು. ಹೀಗೆ ಮಾಡಿದಲ್ಲಿ ಒಂದು ಸುಖಕರ ವಾತಾವರಣವುಂಟಾಗಿ ಅದರಲ್ಲಿ ವಿಜ್ಞಾನದ ಹಾದಿಯನ್ನು ನಿರ್ದೇಶಿಸಿದರೆ ಅದರ ಮೌಲ್ಯಗಳನ್ನು ನಾವು ಪಡೆದುಕೊಳ್ಳಬಲ್ಲ ಭರವಸೆ ಸಿಗುತ್ತದೆ.

ವಿಶ್ವದ ಅತಿ ಸುಂದರ ವಸ್ತು ಎಂದರೆ "ಕಪ್ಪು ಕುಳಿ" (ಬ್ಲ್ಯಾಕ್ ಹೋಲ್) ಎನ್ನುತ್ತಿದ್ದ ಚಂದ್ರಶೇಖರ್ ನಿಧನರಾಗಿದ್ದು 22 ಆಗಸ್ಟ್ 1995ರಂದು ಷಿಕಾಗೋದಲ್ಲಿ. ಇವರ ಗೌರವಾರ್ಥ ನಾಸಾ ಕಟ್ಟಿಸಿದ ಕ್ಷ-ಕಿರಣ ವೇಧಶಾಲೆಗೆ ಚಂದ್ರ ಎಂದು ನಾಮಕರಣ ಮಾಡಿದ್ದಾರೆ.

(ಸಿ.ಆರ್.ಎಸ್.)

**ಚಂದ್ರಶೇಖರ ಆಜ಼ಾದ್ :** 1906–1931. ಭಾರತ ವಿಮೋಚನೆಗಾಗಿ ದಿಟ್ಟತನದಿಂದ ಹೋರಾಡಿ ಪ್ರಾಣತೆತ್ತ ಕ್ರಾಂತಿವೀರ. ಮಧ್ಯ ಪ್ರದೇಶದ ಝಾಬುವಾ ಜಿಲ್ಲೆಯ ಭಾವರಾ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಪಂಡಿತ್ ಸೀತಾರಾಮ್ ತಿವಾರಿ, ತಾಯಿ ಜಗರಾನೀ ದೇವಿ. ತಂದೆ ಬಡವರು. ಆರಂಭದ ಶಿಕ್ಷಣವನ್ನು ಭಾವರಾದಲ್ಲಿಯೆ ಪಡೆದ ಚಂದ್ರಶೇಖರ ಬಾಲ್ಯದಲ್ಲೇ ಬಿಲ್ಲರ ಜೊತೆ ಸೇರಿ ಬಿಲ್ಲು ಬಾಣ ಹಿಡಿದು ಅವರೊಂದಿಗೆ ಅಲೆಯುತ್ತಿದ್ದರು. ತಂದೆತಾಯಿಯರು ಇದರಿಂದ ಬಹಳ ಆತಂಕಗೊಂಡಿದ್ದರು. ಸುಮಾರು ಹದಿನಾಲ್ಕನೆಯ ವಯಸ್ಸಿಗೆ ಚಂದ್ರಶೇಖರ ವಾರಾಣಸಿಯನ್ನು ಸೇರಿ ಉಚಿತ ಊಟ ವಸತಿ ಪಡೆದು ಸಂಸ್ಕೃತ ಪಾಠಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು.

1920–21ರ ಅಸಹಕಾರ ಚಳವಳಿಯ ಕಾಲ. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಅಹಿಂಸಾತ್ಮಕ ಚಳವಳಿಗೆ ವಿದ್ಯಾರ್ಥಿಗಳು ಧುಮುಕುತ್ತಿದ್ದರು. ಚಂದ್ರಶೇಖರರೂ ಚಳವಳಿಗಿಳಿದು ಬಂಧಿತರಾದರು. ನ್ಯಾಯಾಲಯದಲ್ಲಿ ಕೇಳಲಾದ ಪ್ರಶ್ನೆಗಳಿಗೆ ತಮ್ಮ ಹೆಸರು ಆಜ಼ಾದ್ (ಸ್ವತಂತ್ರ), ತಂದೆಯ ಹೆಸರು ಸ್ವಾಧೀನ, ತಮ್ಮ ಮನೆ ಜೈಲು ಎಂದು ಉತ್ತರಿಸಿದರು. ನ್ಯಾಯಾಧೀಶ ಅವರಿಗೆ 15 ಛಡಿ ಏಟುಗಳ ಶಿಕ್ಷೆ ವಿಧಿಸಿದ. ಪ್ರತಿ ಏಟಿಗೂ ಮಹಾತ್ಮಗಾಂಧಿ ಕಿ ಜೈ ಎಂದು ಆಜ಼ಾದ್ ಜಯಕಾರ ಮಾಡುತ್ತ ಅವನ್ನು ಸಹಿಸಿದರು. ಜನ ಅವರನ್ನು ಆಜ಼ಾದ್ ಎಂದೇ ಕರೆದು ಗೌರವಿಸಿದರು. ಆ ಹೆಸರಿನಿಂದ ಮುಂದೆ ಅವರು ಪ್ರಸಿದ್ಧರಾದರು. ಗಾಂಧಿಯವರು ಅಸಹಕಾರ ಚಳವಳಿಯನ್ನು ಹಿಂದೆಗೆದುಕೊಂಡಾಗ ಕೆಲವರಲ್ಲಿ ಕ್ರಾಂತಿಯ ಮನೋಭಾವ ಕೆರಳಿತು. ಮನ್ಮಥನಾಥ ಗುಪ್ತರ ಸಹಾಯದಿಂದ ಚಂದ್ರಶೇಖರ ಆಜ಼ಾದ್ ಹಿಂದೂಸ್ತಾನ್ ಸಮಾಜವಾದಿ ಗಣರಾಜ್ಯವಾದಿ ಸೈನ್ಯವನ್ನು ಸೇರಿ ಅಲ್ಲಿ ಬಹುಬೇಗ ಜನಪ್ರಿಯರಾದರು. ಆ ಸಂಸ್ಥೆಯ ನೇತೃತ್ವದಲ್ಲಿ ನಡೆದ ಬಹುಪಾಲು ಸಶಸ್ತ್ರ ಕಾರ್ಯಾಚರಣೆಗಳಲ್ಲಿ ರಾಮಪ್ರಸಾದ್ ಬಿಸ್ಮಿಲ್ಲರ ಜೊತೆಯಲ್ಲಿ ಅವರು ಭಾಗವಹಿಸಿದರು. 1925ರ ರೈಲು ಲೂಟಿ, ಕಾಕೋರಿ ವಿದ್ರೋಹ (1926), ವಿಧಾನಸಭೆಯಲ್ಲಿ ಬಾಂಬ್ ಎಸೆತ, ದೆಹಲಿ ವಿದ್ರೋಹ, ಲಾಹೋರಿನಲ್ಲಿ ಸಾಂಡರ್ಸನ ಕೊಲೆ (1928), ಎರಡನೆಯ ಲಾಹೋರ್ ದಂಗೆ ಇವುಗಳಲ್ಲೆಲ್ಲ ಚಂದ್ರಶೇಖರ್ ಆಜ಼ಾದರ ಪಾತ್ರವಿತ್ತು. ಕಾಕೋರಿ ದಂಗೆಯಲ್ಲಿ ರಾಮಪ್ರಸಾದ್ ಬಿಸ್ಮಿಲ್ಲರಿಗೆ ಫಾಸಿ ಶಿಕ್ಷೆಯಾಯಿತು. ಚಂದ್ರಶೇಖರ ಪೊಲೀಸರ ಕೈಗೆ ಸಿಗದೆ ತಪ್ಪಿಸಿಕೊಂಡರು.

1928ರಲ್ಲಿ ಸೈಮನ್ ಕಮಿಷನನ್ನು ನಿಷೇಧಿಸುವ ಸಂದರ್ಭದಲ್ಲಿ ಪೊಲೀಸರ ಲಾಠಿ ಪೆಟ್ಟು ತಿಂದು ಲಾಲಾ ಲಜಪತರಾಯ್ ತೀರಿಕೊಂಡರು. ಇದಕ್ಕೆ ಪ್ರತೀಕಾರವಾಗಿ ಲಾಹೋರಿನ ಪೊಲೀಸ್ ಸೂಪರಿಂಟೆಂಡೆಂಟ್ ಸಾಂಡರ್ಸ್ ಗುಂಡಿಗೆ ಬಲಿಯಾದ. ಈ ಸಂಚಿನಲ್ಲಿ ಚಂದ್ರಶೇಖರ, ಭಗತ್ ಸಿಂಹ, ಜಯಗೋಪಾಲ್ ಮತ್ತು ರಾಜಗುರು ಭಾಗವಹಿಸಿದ್ದರು. ಭಗತ್ ಸಿಂಹ, ರಾಜಗುರು ಮತ್ತು ಸುಖದೇವರಿಗೆ ಗಲ್ಲಾಯಿತು. ಚಂದ್ರಶೇಖರ ಮತ್ತೆ ತಪ್ಪಿಸಿಕೊಂಡರು. 1930ರ ಜುಲೈ 6ರಂದು ದೆಹಲಿಯ ಅಂಗಡಿಯೊಂದರಲ್ಲಿ 14,000 ರೂ. ಲೂಟಿ ಮಾಡಿದರು. ಇದರ ಶೋಧನೆಯಲ್ಲಿ ಇವರ ಕೆಲವು ಅನುಯಾಯಿಗಳು ದಸ್ತಗಿರಿಯಾದರು. ದೆಹಲಿಯಲ್ಲೇ, ಚಂದ್ರಶೇಖರರ ಗುಂಪಿನವರು ಬಾಂಬುಗಳನ್ನು ತಯಾರಿಸುತ್ತಿದ್ದ ಸ್ಥಳದಲ್ಲಿ 6,000 ಬಾಂಬುಗಳಿಗೆ ಸಾಕಾಗುವಷ್ಟು ರಾಸಾಯನಿಕ ಮತ್ತು ಇತರ ಪದಾರ್ಥಗಳ ಪತ್ತೆಯಾಯಿತು. ಚಂದ್ರಶೇಖರ ಪಂಜಾಬಿಗೆ ತಪ್ಪಿಸಿಕೊಂಡು ಹೋದರು. ಅವರನ್ನು ಹಿಡಿದು ಕೊಟ್ಟವರಿಗೆ ಅಥವಾ ಅವರ ದಸ್ತಗಿರಿಗೆ ಸಹಾಯ ಮಾಡಿದವರಿಗೆ ಸರ್ಕಾರ 10,000 ರೂ. ಬಹುಮಾನ ನೀಡುವುದಾಗಿ ಘೋಷಿಸಿತು. ಆದರೆ ಚಂದ್ರಶೇಖರ ಸಿಗಲಿಲ್ಲ.

1931ರ ಫೆಬ್ರವರಿ 27ರಂದು ಅಲಹಾಬಾದಿನ ಆಲ್‌ಫ್ರೆಡ್ ಪಾರ್ಕಿನಲ್ಲಿ ಇನ್ನೊಬ್ಬ ಕ್ರಾಂತಿಕಾರಿಯನ್ನು ಆಜ಼ಾದ್ ಭೇಟಿಯಾಗಬೇಕಿತ್ತು. ಅವನು ದೇಶಕ್ಕೂ ಆಜ಼ಾದರಿಗೂ ದ್ರೋಹ ಬಗೆದು, ಆಜ಼ಾದರ ಆಗಮನದ ಬಗ್ಗೆ ಪೋಲೀಸರಿಗೆ ಸೂಚನೆ ಕೊಟ್ಟಿದ್ದ. ಚಂದ್ರಶೇಖರ ಅಲ್ಲಿಗೆ ಬಂದಾಗ ಸಶಸ್ತ್ರ ಪೊಲೀಸರು ಅವರನ್ನು ಸುತ್ತುವರಿದರು. ಆಜ಼ಾದ್ ಧೈರ್ಯಗುಂದಲಿಲ್ಲ. ತಮ್ಮಲ್ಲಿದ್ದ ಒಂದು ಚಿಕ್ಕ ಪಿಸ್ತೂಲಿನಿಂದಲೇ ಹೋರಾಡಿ ಇಬ್ಬರು ಪೋಲೀಸರನ್ನು ಗಾಯಗೊಳಿಸಿದರು. ಕೊನೆಗೆ ಗುಂಡಿಗೆ ಬಲಿಯಾದರು. ಪೊಲೀಸರ ಬಂಧನಕ್ಕೊಳಗಾಗಿ ಗಲ್ಲುಗಂಬವನ್ನೇರಲು ಇಷ್ಟಪಡದೆ ಕೊನೆಯ ಗುಂಡಿನಿಂದ ಆತ್ಮಹತ್ಯೆ ಮಾಡಿಕೊಂಡರೆಂದು ಕೆಲವರು ಹೇಳಿದ್ದಾರೆ. ಚಂದ್ರಶೇಖರ ಆಜ಼ಾದ್ ಇಂದಿಗೂ ಭಾರತೀಯ ಯುವಕರಿಗೆ ಆದರ್ಶವಾಗಿಯೇ ಉಳಿದಿದ್ದಾರೆ. ಆಜ಼ಾದ್ ಅಲಹಾಬಾದಿನ ಪಾರ್ಕಿನಲ್ಲಿ ಪ್ರಾಣಾರ್ಪಣೆ ಮಾಡಿದ ನೇರಳೆ ಮರದ ಗುರುತೂ ಉಳಿಯದಂತೆ ಪೊಲೀಸರು ಅದನ್ನು ಕಡಿದು ಹಾಕಿದರು. ಆದರೆ ಕೆಲವೇ ದಿನಗಳಲ್ಲಿ ಅದೇ ಜಾಗದಲ್ಲಿ ಮತ್ತೊಂದು ನೇರಳೆ ಮರವು ಚಿಗುರಿತು.

(ಎ.ಎಂ.)

**ಚಂದ್ರಶೇಖರ ಕಂಬಾರ :** 1937– ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು (2011). ಕನ್ನಡ ರಂಗಭೂಮಿ, ನಾಟಕ ಸಾಹಿತ್ಯ, ಕಾವ್ಯ, ಕತೆ, ಕಾದಂಬರಿ, ಜಾನಪದ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟಕ್ಕೆ ಕನ್ನಡದ ಕೀರ್ತಿಯನ್ನು ಕೊಂಡೊಯ್ದವರು ಚಂದ್ರಶೇಖರ ಕಂಬಾರ.

ಇವರು 1937ರ 2ರಂದು, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯಲ್ಲಿ ಜನಿಸಿದರು. ತಂದೆ ಬಸವಣ್ಣೆಪ್ಪ ಆರ್.ಕಂಬಾರ್, ತಾಯಿ ಚನ್ನಮ್ಮ. ಮನೆತನದ ವೃತ್ತಿ ಕಮ್ಮಾರಿಕೆ ಇಂದಿಗೂ ಮುಂದುವರಿದಿದೆ. ಚಂದ್ರಶೇಖರರ ಪ್ರಾಥಮಿಕ ವಿದ್ಯಾಭ್ಯಾಸ



ಘೋಡಗೇರಿಯಲ್ಲಿ. ಪ್ರೌಢಶಾಲಾ ವಿದ್ಯಾಭ್ಯಾಸ ಗೋಕಾಕದಲ್ಲಿ, ಖ್ಯಾತ ಕಾದಂಬರಿಕಾರರಾದ ಕೃಷ್ಣಮೂರ್ತಿ ಪುರಾಣಿಕರು ತಮ್ಮ ವಿದ್ಯಾರ್ಥಿ ಚಂದ್ರಶೇಖರನ ಪ್ರತಿಭೆಯನ್ನು ಗುರುತಿಸಿ ಪೋಷಿಸಿದರು, ಆರ್ಥಿಕ ಅಡಚಣೆಯಿಂದ ತಮ್ಮ ನೆಚ್ಚಿನ ವಿದ್ಯಾರ್ಥಿ ಶಾಲೆಗೆ ಬರುವುದನ್ನು ನಿಲ್ಲಿಸಿದಾಗ, ಆತನನ್ನು ಕರೆಸಿಕೊಂಡು ಸಾವಳಗಿ ಮಠದ ಹಾಸ್ಟೆಲ್‌ನಲ್ಲಿರಲು ವ್ಯವಸ್ಥೆ ಮಾಡಿದರು. ಕೃಷ್ಣಮೂರ್ತಿ ಪುರಾಣಿಕರ ಪ್ರೋತ್ಸಾಹದ ಮೇರೆಗೆ ನಾಟಕ ಬರೆದು ಓದಿದ್ದರು. ಕಥಾವಳಿ ಮಾಸಪತ್ರಿಕೆಯಲ್ಲಿ ಇವರು ರಚಿಸಿದ ಸ್ವಾತಂತ್ರ್ಯ ಹೋರಾಟದ ವಸ್ತುವುಳ್ಳ ಕವಿತೆಯೊಂದು ಪ್ರಕಟವಾಗಿತ್ತು. ಸಾವಳಗಿ ಮಠದ ಸ್ವಾಮಿಗಳು ಮೆಚ್ಚಿ – ತಮ್ಮ ಮಠದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಯ ಬರೆವಣಿಗೆಗೆ ಪ್ರೋತ್ಸಾಹ ನೀಡಿದರು. ಈ ಬಾಲಪ್ರತಿಭಾಶಾಲಿ ಬರೆದ ಕತೆಯೊಂದನ್ನು ಮೂಡಬಿದಿರೆಯ ಪ್ರಕಾಶನ ಸಂಸ್ಥೆಯೊಂದು ಕಿರು ಪುಸ್ತಿಕೆ ಮಾಲೆಯಲ್ಲಿ ಪ್ರಕಟಿಸಿತು.

ಮುಂದೆ ಚಂದ್ರಶೇಖರ ಕಂಬಾರರ ವಿದ್ಯಾಭ್ಯಾಸ ಬೆಳಗಾವಿಯ ಕಾಲೇಜಿನಲ್ಲಿ ಮುಂದುವರಿಯಿತು. ಭೂಸನೂರುಮಠರ ಮಾರ್ಗದರ್ಶನದಲ್ಲಿ ಜನಪದರಂಗಭೂಮಿ ಬಗ್ಗೆ ವಿಶೇಷ ಅಧ್ಯಯನ ಮಾಡಿ ರಚಿಸಿದ ಪ್ರೌಢ ಪ್ರಬಂಧಕ್ಕೆ ಪಿಎಚ್.ಡಿ. ಲಭಿಸಿತು. ಅನಂತರ ಷಿಕಾಗೋ ವಿಶ್ವವಿದ್ಯಾಲಯದ ವಿಶೇಷ ಆಹ್ವಾನದ ಮೇರೆಗೆ ಅಮೆರಿಕೆಗೆ ತೆರಳಿ 1968ರಿಂದ 1970ರ ವರೆಗೆ ಜಾನಪದ ಕ್ಷೇತ್ರದ ತಜ್ಞರಾಗಿ ಕೆಲಸಮಾಡಿದರು. ಆಗ ಜೊತೆಗಾರರಾಗಿದ್ದ ಎ.ಕೆ. ರಾಮಾನುಜನ್ ಅವರೂ ಕಂಬಾರರ ಬರೆಹಗಳಿಗೆ ಪ್ರೇರಣೆಯಾದದ್ದುಂಟು. 1984–86ರ ಅವಧಿಯಲ್ಲಿ ಫೋರ್ಡ್ ಸಂಸ್ಥೆಯ ಫೆಲೋಷಿಪ್ ಪಡೆದು ಸಾಂಪ್ರದಾಯಿಕ ರಂಗಭೂಮಿ, ಜಾನಪದ ರಂಗಭೂಮಿಗಳೊಂದಿಗೆ ಆಧುನಿಕ ರಂಗಭೂಮಿಯ ಅಂತರ್‌ಸಂಬಂಧವನ್ನು ಕುರಿತು ವಿಶೇಷ ಅಧ್ಯಯನ ನಡೆಸಿದರು.

1970ರಿಂದ 1991ರವರೆಗೆ ಕಂಬಾರರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಶ್ರಮಿಸಿದರು. ಅನಂತರ ಅವರ ಬಹುದೊಡ್ಡ ಕನಸಾಗಿದ್ದ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟುವ ಅವಕಾಶ ದೊರಕಿತು. ಕರ್ನಾಟಕ ಸರ್ಕಾರದ ನೆರವಿನಿಂದ ಹಲವು ಹುದ್ದೆಗಳಲ್ಲಿದ್ದುಕೊಂಡು ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ, ಪ್ರಾಕೃತಿಕ ಪರಿಸರಕ್ಕೆ ಹೊಂದುವಂತಹ ವಿನ್ಯಾಸವನ್ನು ಒಳಗೂ ಹೊರಗೂ ಅಳವಡಿಸಿಕೊಳ್ಳುತ್ತ ರಚಿತವಾದ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಭಾರತದಲ್ಲೇ ಮೊದಲ ಹಾಗೂ ಯಶಸ್ವೀ ಪ್ರಯೋಗ. ಈ ವಿಶ್ವವಿದ್ಯಾಲಯದಲ್ಲಿ 1991–98ರ ಅವಧಿಯಲ್ಲಿ ಕುಲಪತಿಯಾಗಿ ಅನೇಕ ವಿನೂತನ ಕಾರ್ಯಗಳನ್ನು ಆಯೋಜಿಸಿ ಕಾರ್ಯಗತ ಮಾಡಿದವರು ಕಂಬಾರರು. ಬಹುಮುಖ ಪ್ರತಿಭೆಯ ಇವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಗಣನೀಯ, 21 ನಾಟಕಗಳು, ಎಂಟು ಕವಿತಾ ಸಂಕಲನಗಳು, ಮೂರು ಕಾದಂಬರಿಗಳು ಮತ್ತು ಜನಪದ, ರಂಗಭೂಮಿ, ಶಿಕ್ಷಣ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟಂತೆ 12 ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಚಂದ್ರಶೇಖರ ಕಂಬಾರರು ಸ್ವತಃ ಉತ್ತಮ ನಟ, ಗಾಯಕ. ರಂಗಭೂಮಿ, ಚಲನಚಿತ್ರರಂಗಗಳಲ್ಲಿ ನಿರ್ದೇಶಕರೂ ಆಗಿದ್ದಾರೆ. ಬೆಂಗಳೂರಿನಲ್ಲಿ 70ರ ದಶಕದಲ್ಲಿ ನಡೆದ ಬಯಲು ನಾಟಕೋತ್ಸವದಲ್ಲಿ ಕಂಬಾರರ ಜೋಕುಮಾರಸ್ವಾಮಿ ನಾಟಕವನ್ನು ಬಿ.ವಿ.ಕಾರಂತರು ನಿರ್ದೇಶಿಸಿದ್ದರು. ಕಂಬಾರರು ಆ ನಾಟಕದಲ್ಲಿ ಸೂತ್ರಧಾರನಾಗಿ ಅಭಿನಯಿಸಿ, ಸಂಗೀತ ನಿರ್ದೇಶನವನ್ನು ಮಾಡಿದ್ದರು. ಚಂದ್ರಶೇಖರ ಕಂಬಾರರು ವಸಾಹತುಶಾಹಿಯನ್ನು ವಿರೋಧಿಸುವ ತಮ್ಮ ನಾಟಕಗಳಿಗೆ ಜನಪದದ ಎಲ್ಲ ಸತ್ವವನ್ನೂ ತುಂಬಿ ಪ್ರಸ್ತುತಪಡಿಸುವ ರೀತಿ ಅನನ್ಯ. ರಂಗಭೂಮಿಗೆ ಹೊಸ ಚೈತನ್ಯ, ಹೊಸ ಪರಂಪರೆ, ಹೊಸ ಆಯಾಮವನ್ನೇ ಹಾಕಿಕೊಟ್ಟವರು ಚಂದ್ರಶೇಖರ ಕಂಬಾರ.

ಕಂಬಾರರ ಬಹುತೇಕ ಕವಿತೆ, ನಾಟಕ ಕೃತಿಗಳಲ್ಲಿ ಶೃಂಗಾರ ಹಾಗೂ ಜನಪದ ಆಚರಣೆಗಳಿಗೆ ಪ್ರಾಧಾನ್ಯ. ಇವರ ಭಾಷೆ, ರಂಗದ ಮೇಲೆ ತಂದ ಪದಗತಿ, ಸಂಗೀತ ಆ ದಿನಗಳಲ್ಲಿ ರಂಗೇತಿಹಾಸಕ್ಕೇ ಹೊಸ ತಿರುವನ್ನು ಕೊಟ್ಟವು. ಬಾಲ್ಯದಿಂದಲೂ ಬಯಲಾಟದ ಪರಿಚಯ, ಒಡನಾಟ ಇದ್ದುದರಿಂದ ಆಧುನಿಕ ಚಿಂತನೆಗೆ ಜನಪದ ಕಲೆಯನ್ನು ಕಸಿಮಾಡಿ ಹೊಸ ರಂಗತಂತ್ರವನ್ನು ರೂಪಿಸುವಲ್ಲಿ ಅತ್ಯಂತ ಯಶಸ್ವೀ ಎನ್ನಿಸಿದರು.

ಬಹುತೇಕ ನವ್ಯ ಸಾಹಿತಿಗಳೊಡನೆ ಗುರುತಿಸಿಕೊಂಡರೂ ಕಂಬಾರರು ತಮ್ಮದೇ ಆದ ಛಾಪನ್ನು ಉಳಿಸಿಕೊಂಡದ್ದೇ ಅವರ ಜನಪದ ಶೈಲಿ–ಭಾಷೆಗಳ ಶ್ರೀಮಂತ ಬಳಕೆಯಿಂದ ರಂಗಭೂಮಿಯಲ್ಲಿ ಅಸಂಗತ ನಾಟಕಗಳು ವಿಜೃಂಭಿಸಿದ ದಿನಗಳಲ್ಲಿ ಕಂಬಾರರ ನಾರ್ಸಿಸಸ್, ಚಾಳೇಶ ಮೊದಲಾದ ಕೆಲವು ನಾಟಕಗಳನ್ನು ಅಸಂಗತ ಎನ್ನಲಾಯಿತು. ಆದರೆ ಭಾರತೀಯ ಪರಂಪರೆಯಲ್ಲಿ ಪಾಶ್ಚಾತ್ಯರ ಹಾಗೆ ಹಪಾಪಿತನವಿಲ್ಲ, ಇಲ್ಲಿಗೆ ಅಸಂಗತ ಸಲ್ಲುವುದಿಲ್ಲವೆಂದ ಕಂಬಾರರು ತಮ್ಮ ನಾಟಕಗಳಲ್ಲಿ ಅಧ್ಯಾತ್ಮವಿದೆ: ಅರವಿಂದರ ಚಿಂತನೆಗಳಿವೆ; ತನ್ನತನದ ಹುಡುಕಾಟವಿದೆ; ಮನುಷ್ಯನೊಳಗಿನ ದ್ವಿಧಾಭಾವವನ್ನು ಗುರುತಿಸಿ ನಿಜವನ್ನು ಧ್ಯಾನಿಸುವ ಹಂಬಲವಿದೆ ಎಂದು ವಾದಿಸಿದರು.

ಅವರ ಕವಿತೆ, ನಾಟಕಗಳಲ್ಲಿ ಮನುಷ್ಯನೊಳಗಿನ ದ್ವಿಧಾಭಾವ, ಸ್ವಂತದ ಹುಡುಕಾಟ ನಿರಂತರವಾಗಿದೆ. ಅವರ ಸಾಹಿತ್ಯರಚನೆಗಳಲ್ಲಿ ಅಲ್ಲಮಪ್ರಭು, ಏಟ್ಸ್ ಕವಿ ಹಾಗೂ ಸ್ಪ್ಯಾನಿಷ್ ನಾಟಕಕಾರ ಲೋರ್ಕಾನ ಪ್ರಭಾವ ಬಹಳವಾಗಿದೆ. ಚಂದ್ರಶೇಖರ ಕಂಬಾರರು ಎಲ್ಲ ಪ್ರಭಾವಗಳ ಆಚೆಗೂ ಅನನ್ಯತೆಯನ್ನು ಸಾಧಿಸಿದ ಸಾಹಿತಿ, ಕಲಾವಿದ.

ನಾಟಕ ಸಾಹಿತ್ಯದಲ್ಲಿ ಕಂಬಾರರ ಕೊಡುಗೆ ವಿಶಿಷ್ಟ. ಇವು ರಂಗಭೂಮಿಯಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿದವು. ಬೆಂಬತ್ತಿದ ಕಣ್ಣು (1961), ನಾರ್ಸಿಸಸ್ (1969), ಋಷ್ಯಶೃಂಗ (1970), ಜೋಕುಮಾರಸ್ವಾಮಿ (1972), ಚಾಳೇಶ (1973), ಸಂಗ್ಯಾಬಾಳ್ಯ ಅನಬೇಕೊ ನಾಡೊಳಗ (1975), ಕಿಟ್ಟಿಯ ಕಥೆ (1974) ಜೈಸಿದ ನಾಯಕ (1975), ಅಲಿ ಬಾಬಾ (1980), ಕಾಡುಕುದುರೆ (1976), ನಾಯಿಕಥೆ (1976), ಖರೋಖರ (1977), ಮತಾಂತರ (1974), ಹರಕೆಯ ಕುರಿ (1953), ನಾಟಕಗಳ ಸಂಗ್ರಹ 'ಕಂಬಾರರ ನಾಟಕಗಳು' (1984), ಸಾಂಬಶಿವ ಪ್ರಹಸನ (1987), ಸಿರಿಸಂಪಿಗೆ (1980), ಹುಲಿಯ ನೆರಳು (1990), ಭೋಳೆ ಶಂಕರ (1991), ಪುಷ್ಪರಾಣಿ (1990), ತಿರುಕನ ಕನಸು (1989), ಮಹಾಮಾಯಿ (1999), ನೆಲಸಂಪಿಗೆ (2004), ರಾಕ್ಸ್ ಆಫ್ ಹಂಪಿ (2004), ಜಕ್ಕಣ (2008). ಇವುಗಳಲ್ಲಿ ಋಷ್ಯಶೃಂಗ, ಕಾಡುಕುದುರೆ, ನಾಯಿಕಥೆ (ಸಂಗೀತ), ಹರಕೆಯ ಕುರಿ, ಹುಲಿಯ ನೆರಳು, ಪುಷ್ಪರಾಣಿ ಚಲನಚಿತ್ರ ಮಾಧ್ಯಮಕ್ಕೂ ಹೋಗಿ ಪ್ರಶಸ್ತಿ ಪಡೆದಿವೆ.

ಜೋಕುಮಾರಸ್ವಾಮಿ ನಾಟಕವು ಇಂಗ್ಲಿಷ್, ಮರಾಠಿ, ಹಿಂದಿ, ತೆಲುಗು, ತಮಿಳು, ಪಂಜಾಬಿ, ಕೊಂಕಣಿ, ಮೊದಲಾದ ಭಾಷೆಗಳಿಗೆ ಅನುವಾದವಾಗಿದೆ. ಚಾಳೇಶ ನಾಟಕವು ಹಿಂದಿಗೆ ಭಾಷಾಂತರಗೊಂಡಿದೆ. ಜೈಸಿದ ನಾಯಕ ನಾಟಕವು ಹಿಂದಿ, ಇಂಗ್ಲಿಷ್ ಭಾಷೆಗಳಿಗೆ ಭಾಷಾಂತರವಾಗಿದೆ. ಅಲಿಬಾಬಾ ಮಕ್ಕಳ ನಾಟಕವು ಇಂಗ್ಲಿಷ್, ಹಿಂದಿಯಲ್ಲಿ ಅನುವಾದವಾಗಿದೆ.

ಸಾಂಬಶಿವ ಪ್ರಹಸನ (ವಿಡಂಬನೆ) ಹರಕೆಯ ಕುರಿ ನಾಟಕಗಳು ಹಿಂದಿ ಹಾಗೂ ಇಂಗ್ಲಿಷ್‌ಗೆ ಭಾಷಾಂತರವಾಗಿವೆ. ಸಿರಿಸಂಪಿಗೆ ನಾಟಕವು ಕೇಂದ್ರ ಸಾಹಿತ್ಯ ಅಕಾಡೆಮಿ ವತಿಯಿಂದ ಬಹುತೇಕ ಎಲ್ಲ ಭಾರತೀಯ ಭಾಷೆಗಳಿಗೂ ಅನುವಾದವಾಗಿದೆ ಮತ್ತು ಈ ನಾಟಕದ ತಮಿಳು, ರಾಜಾಸ್ತಾನಿ, ಹಿಂದಿ, ಮರಾಠಿ, ಅನುವಾದಿತ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿದೆ. ಹುಲಿಯ ನೆರಳು ನಾಟಕವು ಇಂಗ್ಲಿಷ್, ಹಿಂದಿ, ತಮಿಳು ಭಾಷೆಗಳಿಗೆ ಅನುವಾದಗೊಂಡಿದೆ. ತಿರುಕನ ಕನಸು ಇಂಗ್ಲಿಷ್, ಹಿಂದಿ ಭಾಷೆಗಳಿಗೆ ಅನುವಾದಗೊಂಡಿದೆ. ಮಹಾಮಾಯಿ ನಾಟಕವು ಇಂಗ್ಲಿಷ್ ಹಾಗೂ ಹಿಂದಿಗೆ ಅನುವಾದವಾಗಿದೆ.

ಇವರ ಪ್ರಕಟಿತ ಗದ್ಯ ಕೃತಿಗಳಲ್ಲಿ ಅಣ್ಣ–ತಂಗಿ (1956), ಕರಿಮಾಯಿ (1975), ಜಿ.ಕೆ. ಮಾಸ್ತರರ ಪ್ರಣಯ ಪ್ರಸಂಗ (1987), ಸಿಂಗಾರವ್ವ ಮತ್ತು ಅರಮನೆ (1982) ಕಾದಂಬರಿಗಳು ಮುಖ್ಯವಾದವು. ಕರಿಮಾಯಿ ಕಾದಂಬರಿ ಚಲನಚಿತ್ರವಾಗಿದೆ. ಮತ್ತು ಇದನ್ನು ಖ್ಯಾತ ರಂಗತಜ್ಞೆ ಬಿ.ಜಯಶ್ರೀ ಅವರು ರಂಗಭೂಮಿಗೆ ಅಳವಡಿಸಿ ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ. ಜಿ.ಕೆ. ಮಾಸ್ತರ ಪ್ರಣಯ ಪ್ರಸಂಗವು ದೂರದರ್ಶನಕ್ಕಾಗಿ ಚಿತ್ರಿತವಾಗಿತ್ತು. ಹಿಂದಿ ಭಾಷೆಗೆ ಅನುವಾದವಾಗಿದೆ. ಸಿಂಗಾರವ್ವ ಮತ್ತು ಅರಮನೆ ಚಲನಚಿತ್ರವಾಗಿದೆ. ಏಕವ್ಯಕ್ತಿ ಪ್ರಸ್ತುತ್ತಿಗೆ ಅಳವಡಿಸಿಕೊಂಡು ಲಕ್ಷ್ಮೀ ಚಂದ್ರಶೇಖರ್ ಅವರು ಪ್ರದರ್ಶನ ನೀಡುತ್ತಿದ್ದಾರೆ. ಈ ರಂಗಕೃತಿಯು ಇಂಗ್ಲಿಷ್‌ಗೂ ಅನುವಾದಗೊಂಡಿದೆ. ಕಾದಂಬರಿಯು ಹಿಂದಿ, ಮಲೆಯಾಳ ಭಾಷೆಗಳಿಗೆ ಅನುವಾದಗೊಂಡಿದೆ.

ಕವನ ಸಂಕಲನಗಳಲ್ಲಿ ಕ್ರಮವಾಗಿ ಮುಗುಳು (1958), ಹೇಳತೇನ ಕೇಳ (1964), ತಕರಾರಿನವರು (1971), ಸಾವಿರದ ನೆರಳು (1979), ಆಯ್ದ ಕವನಗಳು (1980), ಬೆಳ್ಳಿ ಮೀನು (1980), ಅಕ್ಕಕ್ಕು ಹಾಡುಗಳೆ (1993), ಈವರೆಗಿನ ಹೇಳತನ ಕೇಳ (2003) ಪ್ರಕಟವಾಗಿವೆ. ಕಂಬಾರರು 1996ರಲ್ಲಿ ಪ್ರಕಟಿಸಿದ ಚಕೋರಿಯನ್ನು ಮಹಾಕಾವ್ಯ ಎನ್ನಲಾಗಿದೆ. ಈ ಕೃತಿಯನ್ನು ರಂಗಭೂಮಿಗೂ ಅಳವಡಿಸಿ ಪ್ರದರ್ಶಿಸಲಾಗಿತ್ತು. ಚಕೋರಿಯು ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿದ್ದು, ಅದನ್ನು ಪೆಂಗ್ವಿನ್ ಸಂಸ್ಥೆಯು ಪ್ರಕಟಿಸಿದೆ.

ಚಂದ್ರಶೇಖರ ಕಂಬಾರರ ಪ್ರೌಢ ಪ್ರಬಂಧ. "ಉತ್ತರ ಕರ್ನಾಟಕದ ಜನಪದ ರಂಗಭೂಮಿ"ಯು 1965ರಲ್ಲಿ ಪ್ರಕಟವಾಯಿತು. ಇದಲ್ಲದೆ ಕಂಬಾರರು ಬಿಡಿ ಬಿಡಿಯಾಗಿ ರಚಿಸಿದ ಸಂಶೋಧನ ಪ್ರಬಂಧಗಳು ಪ್ರಕಟವಾಗಿವೆ. ಅವುಗಳಲ್ಲಿ, ಸಂಗ್ಯಾಬಾಳ್ಯಾ (1966), ಬಣ್ಣಿಸಿ ಹಾಡವ್ವ ನನ್ನ ಬಳಗಾ (1968), ಬಯಲಾಟಗಳು (1973), ಮಾತಾಡೋ ಲಿಂಗವೆ (1973), ನಮ್ಮ ಜಾನಪದ (1980), ಬಂದಿರೆ ನನ್ನ ಜಡೆಯೊಳಗೆ (1981), ಬೇಡರ ಹುಡುಗ ಮತ್ತು ಗಿಳಿ (1989), ಲಕ್ಷಾಧಿಪತಿ ರಾಜನ ಕಥೆ (1981), ಕಾಸಿಗೊಂದು ಸೇರು (1989), ನೆಲದ ಮರೆಯ ನಿಧಾನ (1993), ಬೃಹದ್ದೇಶಿಯ ಚಿಂತನ (2001) ಮತ್ತು ಕಂಬಾರರು ಸಿದ್ಧಪಡಿಸಿ 1984ರಲ್ಲಿ ಪ್ರಕಟವಾದ ಕನ್ನಡ ಜಾನಪದ ನಿಘಂಟು ಹಾಗೂ ರಾಷ್ಟ್ರೀಯ ನಾಟಕಶಾಲೆಗಾಗಿ ಸಂಪಾದಿಸಿ 2000ನೇ ಇಸವಿಯಲ್ಲಿ ಪ್ರಕಟವಾದ ಆಧುನಿಕ ಭಾರತೀಯ ನಾಟಕಗಳು ಮುಖ್ಯವಾದ ಕೃತಿಗಳು.

ಚಂದ್ರಶೇಖರ ಕಂಬಾರರು ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದು ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ (1980–83), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ (1980–83), ಮೈಸೂರಿನಲ್ಲಿರುವ ಕರ್ನಾಟಕದ ರೆಪರ್ಟರಿ ರಂಗಾಯಣ (1987–91), ಕೇಂದ್ರ ಸಾಹಿತ್ಯ ಅಕಾಡೆಮಿ, 1992–98, ಕೇಂದ್ರ ಸಂಗೀತ ನಾಟಕ ಅಕಾಡೆಮಿ (1992–96 ಮತ್ತು 1998), ರಾಷ್ಟ್ರೀಯ ರಂಗಶಾಲೆ (1995–96), ಈ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.

ಇವರು ಪ್ರತಿಷ್ಠಿತ ಫೋರ್ಡ್ ಫೌಂಡೇಷನ್, ಕೇಂದ್ರ ಸಂಗೀತ ನಾಟಕ ಅಕಾಡೆಮಿ (1998), ಭೂಪಾಲದ ಭಾರತ ಭವನಗಳಲ್ಲಿ ರಂಗತಜ್ಞರ ಸಮಿತಿಗಳಲ್ಲಿ ಸಕ್ರಿಯ ಸದಸ್ಯರಾಗಿದ್ದರು.

ದೆಹಲಿಯ ರಾಷ್ಟ್ರೀಯ ರಂಗಶಾಲೆಯ ಉಪಾಧ್ಯಕ್ಷರಾಗಿ, ಅನಂತರ ಅಧ್ಯಕ್ಷರಾಗಿ (1996–2000) ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು (1983–87). 2004ರಲ್ಲಿ ರಾಜ್ಯ ವಿಧಾನ ಪರಿಷತ್ತಿಗೆ ಸದಸ್ಯರಾಗಿದ್ದರು (ಎಂ.ಎಲ್.ಸಿ.).

ಚಂದ್ರಶೇಖರ ಕಂಬಾರರ ಸಾಹಿತ್ಯ, ನಾಟಕ ಕೃತಿಗಳೂ ಹಲವು ಪ್ರಶಸ್ತಿಗಳನ್ನು ಗಳಿಸಿವೆ. ಅವುಗಳಲ್ಲಿ ಮುಖ್ಯವಾಗಿ ಕೆಲವನ್ನು ಹೀಗೆ ಗುರುತಿಸಬಹುದು: ಭಾರತದಲ್ಲೇ ಅತ್ಯುತ್ತಮ ಕೃತಿಯೆಂದು 1975ರಲ್ಲಿ ಇವರ ಜೋಕುಮಾರಸ್ವಾಮಿ ನಾಟಕ ಕೃತಿಯನ್ನು ಆಯ್ಕೆಮಾಡಿ ನೀಡಿದ ನಾಟ್ಯಸಂಘದ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ ಮತ್ತು ಇವರ ಜೈಸಿದ ನಾಯಕ ನಾಟಕ ಕೃತಿಯನ್ನು ವರ್ಷದ ಶ್ರೇಷ್ಠ ಕೃತಿಯೆಂದು ಮಾನ್ಯ ಮಾಡಿ ವರ್ಧಮಾನ ಪ್ರಶಸ್ತಿ ನೀಡಲಾಯಿತು. ಕೇರಳ ಕುಮರನ್ ಆಶಾನ್ ಪ್ರಶಸ್ತಿ ಸಮಿತಿಯು ಇವರ ಸಾವಿರದ

ನೆರಳು ಕವಿತಾ ಸಂಕಲನವನ್ನು ಕರ್ನಾಟಕದ ಅತ್ಯುತ್ತಮ ಕೃತಿಯೆಂದು ಗುರುತಿಸಿ ಆಶಾನ್ ಪ್ರಶಸ್ತಿ ನೀಡಿ ಗೌರವಿಸಿತು. ಕೇಂದ್ರ ಸಾಹಿತ್ಯ ಅಕಾಡೆಮಿಯು ಕಂಬಾರರ ಸಿರಿಸಂಪಿಗೆ ನಾಟಕಕ್ಕೆ 1991ನೇ ಸಾಲಿನ ಶ್ರೇಷ್ಠ ಕೃತಿಯೆಂದು ಆಯ್ಕೆಮಾಡಿ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಇವರಿಗೆ 5 ಬಾರಿ ಶ್ರೇಷ್ಠಕೃತಿ ಪ್ರಶಸ್ತಿ ನೀಡಿ ಗೌರವಿಸಿದೆ. ಕಂಬಾರರ ತಕರಾರಿನವರು ಕವನ ಸಂಕಲನಕ್ಕೆ (1971), ಜೋಕುಮಾರಸ್ವಾಮಿ (ನಾಟಕ) (1972), ಜೈಸಿದ ನಾಯಕ (ನಾಟಕ)(1975), ಸಿಂಗಾರೆವ್ವ ಮತ್ತು ಅರಮನೆ (ಕಾದಂಬರಿ) (1988) ಮತ್ತು ಬೇಡರ ಹುಡುಗ ಮತ್ತು ಗಿಳಿ ಎಂಬ ಸಂಶೋಧನ ಕೃತಿ (1989) ಇವು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಗಳು.

ಹಲವು ಸಂಸ್ಥೆಗಳು ಕಂಬಾರರ ರಂಗಭೂಮಿ, ಸಾಹಿತ್ಯ, ಶೈಕ್ಷಣಿಕ ಕ್ಷೇತ್ರಗಳಲ್ಲಿಯ ಸೇವೆಯನ್ನು ಗುರುತಿಸಿ ಗೌರವಿಸಿವೆ. ಅವುಗಳಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಸಮಾರಂಭದಲ್ಲಿ (1975) ಸಂದ ಗೌರವ, ಕಲ್ಕತ್ತೆಯ ನಂದೀಕರ್ ಪ್ರಶಸ್ತಿ (1987), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1987), ರಾಜ್ಯ ಸರ್ಕಾರವು ಕೊಡಮಾಡುವ ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1988), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1989), ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1983), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1993), ಮಾಸ್ತಿ ಪ್ರಶಸ್ತಿ (1997), ಕೇಂದ್ರ ಸರ್ಕಾರದ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ (2001), ಕಬೀರ್ ಸಮ್ಮಾನ್ (2002), ರಾಜ್ಯ ಸರ್ಕಾರವು ಸಾಹಿತ್ಯ ಕ್ಷೇತ್ರಕ್ಕೆ ಕೊಡುವ ಅತ್ಯುನ್ನತ ಪ್ರಶಸ್ತಿಯಾದ ಪಂಪ ಪ್ರಶಸ್ತಿ (2004) ಹಾಗೂ ಆಂಧ್ರ ಪ್ರದೇಶದ ಜೋಷುವಾ ಸಾಹಿತ್ಯ ಪುರಸ್ಕಾರ (2005)ಗಳು ಮತ್ತು ಕಂಬಾರರ ನಿರಂತರ ರಂಗಸೇವೆಗಾಗಿ ಮಂಡ್ಯದ ಪ್ರತಿಷ್ಠಿತ ಶಂಕರೇಗೌಡ ಪ್ರಶಸ್ತಿಯನ್ನು 1982ರಲ್ಲಿ ನೀಡಿ ಗೌರವಿಸಿರುವುದು ಮುಖ್ಯವಾಗಿ ಹೆಸರಿಸುವಂಥವು.

ಕಂಬಾರರು ಚಲನಚಿತ್ರ, ಕಿರುತೆರೆ ಕ್ಷೇತ್ರಗಳಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. ಹಲವಾರು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಕಿರುತೆರೆಯ ಧಾರಾವಾಹಿಗಳು, ಚಲನಚಿತ್ರಗಳ ಕಿರುಚಿತ್ರಗಳನ್ನು ಸಿದ್ಧಪಡಿಸಿದ್ದಾರೆ. ಇವರು ತಮ್ಮ ಕಾಡುಕುದುರೆ ನಾಟಕವನ್ನು 1987ರಲ್ಲಿ ಚಲನಚಿತ್ರ ಮಾಧ್ಯಮಕ್ಕೆ ನಿರ್ದೇಶಿಸಿದರು. ಈ ಚಿತ್ರವು ಭಾರತೀಯ ಪನೋರಮಾ ವಿಭಾಗಕ್ಕೆ ಆಯ್ಕೆಯಾಗಿ ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡಿತ್ತು. ಚಿತ್ರವು ಹಲವು ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿತು. ಪ್ರಪ್ರಥಮ ಬಾರಿಗೆ ಈ ಚಿತ್ರದಲ್ಲಿ ಕಂಬಾರರ ಸಂಗೀತ ನಿರ್ದೇಶನದಲ್ಲಿ ಹಾಡಿದ ಗಾಯಕರಿಗೆ ರಾಷ್ಟ್ರಪ್ರಶಸ್ತಿ ಲಭಿಸಿ ಇತಿಹಾಸ ನಿರ್ಮಿಸಿತು. ಇವರು ತಮ್ಮ ಮತ್ತೊಂದು ನಾಟಕ ನಾಯಿಕಥೆಯನ್ನು ಸಂಗೀತಾ ಎಂಬ ಚಲನಚಿತ್ರವಾಗಿ ನಿರ್ದೇಶಿಸಿದರು. ಇದಕ್ಕೆ 1981ರಲ್ಲಿ ತೃತೀಯ ಅತ್ಯುತ್ತಮ ಚಿತ್ರವೆಂದು ರಾಜ್ಯ ಸರ್ಕಾರವು ಪ್ರಶಸ್ತಿ ನೀಡಿತು. ಚಂದ್ರಶೇಖರ ಕಂಬಾರರು ಇತರರ ಚಿತ್ರಗಳಿಗೂ ಸಂಗೀತ ನಿರ್ದೇಶನ, ಸಾಹಿತ್ಯ ರಚನೆ ಮಾಡಿದ್ದಾರೆ. ಅವರಿಗೆ ಅತ್ಯುತ್ತಮ ಸಾಹಿತ್ಯ, ಸಂಭಾಷಣೆಗಾಗಿ ಪ್ರಶಸ್ತಿಗಳು ಬಂದಿವೆ. ಅವರು ಅತ್ಯುತ್ತಮ ಸಂಗೀತ ನಿರ್ದೇಶಕರಾಗಿಯೂ, ಚಿತ್ರ ನಿರ್ದೇಶಕರಾಗಿಯೂ ಪ್ರಶಸ್ತಿ ಪಡೆದಿದ್ದಾರೆ. (ವಿ)

**ಚಂದ್ರಶೇಖರ, ಬಿ.ಎಸ್. :** 1945–. ಭಾರತದ ಪ್ರಸಿದ್ಧ ಕ್ರಿಕೆಟ್ ಆಟಗಾರರಲ್ಲಿ ಒಬ್ಬರು. ಉತ್ತಮ ಲೆಗ್‌ಸ್ಪಿನ್ ಬೌಲರ್. ಭಗವತ್ ಸುಬ್ರಹ್ಮಣ್ಯಂ ಚಂದ್ರಶೇಖರ್ ಇವರ ಪೂರ್ಣ ಹೆಸರು. 1945 ರಮೇ 17 ರಂದು ಮೈಸೂರಿನಲ್ಲಿ ಜನಿಸಿದರು.

1963ರ ನವೆಂಬರ್ 14ರಂದು ಬೆಂಗಳೂರಿನಲ್ಲಿ ನಡೆದ ರಣಜಿ ಟ್ರೋಫಿ ಪಂದ್ಯದಲ್ಲಿ (ಕೇರಳದ ವಿರುದ್ಧ) ಕರ್ನಾಟಕ ರಾಜ್ಯದ ಟೀಮಿನಲ್ಲಿ ಚಂದ್ರಶೇಖರ್ ಪ್ರಥಮ ಬಾರಿಗೆ ಸೇರಿಕೊಂಡರು. ಇವರು ಭಾಗಿಯಾದ ಪ್ರಥಮ ಟೆಸ್ಟ್ ಪಂದ್ಯ–1964ರ ಜನವರಿ 21ರಂದು ಮುಂಬಯಿಯಲ್ಲಿ, ಇಂಗ್ಲೆಂಡ್ ವಿರುದ್ಧ ನಡೆದ ಎರಡನೆಯ ಟೆಸ್ಟ್.

ಬಾಲ್ಯದಲ್ಲಿ ಪೋಲಿಯೋ ರೋಗಕ್ಕೆ ಗುರಿಯಾಗಿದ್ದ ಚಂದ್ರಶೇಖರ್ ವಿಶ್ವದ ಅಸಾಧಾರಣ ಬೌಲರ್‌ಗಳಲ್ಲಿ ಒಬ್ಬರು. ಬಲಗೈನಿಂದ ಬೌಲ್ ಮಾಡುವ ಇವರು ಪರಿಣಾಮಕಾರಿ ಲೆಗ್ ಸ್ಪಿನ್‌ಬೌಲರ್ ಆಗಿದ್ದಾರೆ. ಮಧ್ಯೆ ಮಧ್ಯೆ ಗೂಗ್ಲಿ ಕೂಡ ಹಾಕುತ್ತಾರೆ. 1971ರ ಇಂಗ್ಲೆಂಡ್ ಪ್ರವಾಸಾ ನಂತರ ಕರಾರುವಾಕ್ಕಾದ ಲೆನ್ತ್ ಮತ್ತು ಗುರಿಯನ್ನು ಸಾಧಿಸಿಕೊಂಡಿದ್ದಾರೆ.

ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿದ್ದಾಗ ಕ್ರಿಕೆಟ್ ಆಡಲು ಪ್ರಾರಂಭಿಸಿದ ಚಂದ್ರಶೇಖರ್ ವೈ. ಎಸ್. ರಾಮಸ್ವಾಮಿ ಸ್ಮಾರಕ ಕ್ರಿಕೆಟ್ ಟೂರ್ನ್‌ಮೆಂಟ್‌ನಲ್ಲಿ ಭಾಗವಹಿಸಿ ಮೂರು ಪಂದ್ಯಗಳಲ್ಲಿ 17 ವಿಕೆಟ್ ಗಳಿಸುವ ಮೂಲಕ ಬೆಳಕಿಗೆ ಬಂದರು. 1963–64ರಲ್ಲಿ ಜ್ಯೂನಿಯರ್ ಕ್ರಿಕೆಟ್‌ನಿಂದ ಟೆಸ್ಟ್ ಹಂತಕ್ಕೆ ಏರಿದರು. ಇವರು ಬೆಂಗಳೂರು ವಿಶ್ವವಿದ್ಯಾಲಯದ ಕ್ರಿಕೆಟ್ ಟೀಮಿನ ನಾಯಕರೂ ಆಗಿದ್ದರು.

ವಿಜ್ಞಾನದ ಪದವೀಧರರಾಗಿರುವ ಚಂದ್ರಶೇಖರ್ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಒಬ್ಬ ಅಧಿಕಾರಿಯಾದ್ದರು.

1972–73ರಲ್ಲಿ ದೆಹಲಿಯಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಟೆಸ್ಟ್ ಪಂದ್ಯದಲ್ಲಿ 79ರನ್ ಕೊಟ್ಟು 8 ವಿಕೆಟ್‌ಗಳನ್ನೂ, 1966–67ರಲ್ಲಿ ಮುಂಬಯಿಯಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆದ ಪಂದ್ಯದಲ್ಲಿ 235 ರನ್ ಕೊಟ್ಟು 11 ವಿಕೆಟ್‌ಗಳನ್ನೂ ಪಡೆದಿರುವುದು ಇವರ ಅತ್ಯುತ್ತಮ ಬೌಲಿಂಗ್ ದಾಖಲೆಗಳು.

1971ರ ಆಗಸ್ಟ್ 24ರಂದು ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ನಾಲ್ಕು ವಿಕೆಟ್‌ಗಳ ಜಯ ತಂದುಕೊಟ್ಟ ಐತಿಹಾಸಿಕ ಓವಲ್ ಟೆಸ್ಟ್‌ನಲ್ಲಿ ಚಂದ್ರಶೇಖರ್ 114 ರನ್‌ಗಳಿಗೆ ಎಂಟು ವಿಕೆಟ್ ಬಲಿ ತೆಗೆದುಕೊಂಡಿದ್ದರು. (ಮೊದಲ ಇನ್ನಿಂಗ್ಸ್‌ನಲ್ಲಿ 76 ಕ್ಕೆ 2, ಎರಡನೇ ಇನ್ನಿಂಗ್ಸ್‌ನಲ್ಲಿ 38ಕ್ಕೆ 6.)

1967–68ರಲ್ಲಿ ಭಾರತದ ತಂಡ ಆಸ್ಟ್ರೇಲಿಯದಲ್ಲಿ ಪ್ರವಾಸ ಮಾಡುತ್ತಿದ್ದಾಗ ಪ್ರವಾಸದ ಮುಕ್ತಾಯದಲ್ಲಿ ಭಾರತಕ್ಕೆ ಹಿಂತಿರುಗಿದ ಚಂದ್ರಶೇಖರ್, ನ್ಯೂಜ಼ೀಲೆಂಡ್ ಪ್ರವಾಸಕ್ಕೆ ಹೋಗಲಿಲ್ಲ. ಅನಂತರ ಬೆಂಗಳೂರಿನಲ್ಲಿ ಉಂಟಾದ ಸ್ಕೂಟರ್ ಅಪಘಾತವೊಂದರಲ್ಲಿ ಗಾಯಗೊಂಡಿದ್ದರಿಂದ ನ್ಯೂಜ಼ೀಲೆಂಡ್ (1968–69) ಆಸ್ಟ್ರೇಲಿಯ (1969) ಮತ್ತು



ವೆಸ್ಟ್ ಇಂಡೀಸ್ (1971) ವಿರುದ್ಧ ನಡೆದ ಪಂದ್ಯಗಳಲ್ಲೂ ಭಾಗವಹಿಸಲಿಲ್ಲ. 1973ರ ಫೆಬ್ರವರಿ 11 ರಂದು ನಡೆದ ಪಂದ್ಯದ ಎರಡನೆಯ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡಿನ ಸ್ಕೋರು 37 ರನ್ ಆಗಿದ್ದಾಗ 8 ರನ್ ಮಾಡಿದ್ದ ಇಂಗ್ಲೆಂಡಿನ ವಿಕೆಟ್ ಕೀಪರ್ ಅಲನ್ ನಾಟ್ ಚಂದ್ರಶೇಖರ್ ಅವರ ಬೌಲಿಂಗಿಗೆ ಬಲಿಯಾದರು. ಈ ವಿಕೆಟ್ ಪತನ ಹೊಸ ವಿಕ್ರಮ ವನ್ನು ಸ್ಥಾಪಿಸಿತು. ಈ ವಿಕೆಟ್ಟನ್ನು ಪಡೆಯುವುದರ ಮೂಲಕ ಚಂದ್ರಶೇಖರ್ 1972–73ರ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ 662 ರನ್ನುಗಳಿಗೆ 35 ವಿಕೆಟ್ಟುಗಳನ್ನು ಗಳಿಸಿ ಹೊಸ ವಿಕ್ರಮವನ್ನು ಸ್ಥಾಪಿಸಿದಂತಾಯಿತು. 1951–52ರಲ್ಲಿ ವೀನೂ ಮಂಕಡ್ 571 ರನ್‌ಗಳಿಗೆ 34 ಇಂಗ್ಲೆಂಡ್ ವಿಕೆಟ್ಟುಗಳನ್ನೂ, ಸುಭಾಷ್ ಗುಪ್ತೆ 1955–59ರಲ್ಲಿ 669 ರನ್ನುಗಳಿಗೆ 34 ನ್ಯೂಜ಼ೀಲೆಂಡ್ ವಿಕೆಟ್ಟುಗಳನ್ನೂ ಪಡೆದು ಸ್ಥಾಪಿಸಿದ್ದ ದಾಖಲೆ ಇದರಿಂದ ಅಳಿಸಿಹೋಯಿತು.

ಈ ಸರಣಿಯಲ್ಲಿ ಚಂದ್ರಶೇಖರ್ ಇನ್ನೂ ಒಂದು ವಿಕ್ರಮವನ್ನು ಸ್ಥಾಪಿಸಿ ಹಿಂದಿನ ವೀನೂ ಮಂಕಡ್ ಅವರ ದಾಖಲೆಯನ್ನು ಮುರಿದರು. ವೀನೂ ಮಂಕಡ್ ಹನ್ನೊಂದು ಟೆಸ್ಟ್ ಪಂದ್ಯಗಳಲ್ಲಿ 1249 ರನ್‌ಗಳಿಗೆ 54 ಇಂಗ್ಲೆಂಡ್ ವಿಕೆಟ್‌ಗಳನ್ನು ಪಡೆದಿದ್ದರೆ, ಚಂದ್ರಶೇಖರ್ 15 ಟೆಸ್ಟ್‌ಗಳಲ್ಲಿ 1815ರನ್ ಗಳಿಗೆ ಇಂಗ್ಲೆಂಡಿನ 74 ವಿಕೆಟ್‌ಗಳನ್ನು (1972–73ರ ಸರಣಿ ಮುಕ್ತಾಯವಾದಾಗ) ಪಡೆದಿದ್ದರು.

1974ರ ಜನವರಿ 14ರಂದು ಮದ್ರಾಸಿನಲ್ಲಿ ನಡೆದ ಟೆಸ್ಟ್ ಪಂದ್ಯದ ಎರಡನೆಯ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡಿನ ಅಮಿಸ್ ಅವರನ್ನು ಔಟ್ ಮಾಡಿದ ಚಂದ್ರಶೇಖರ್ ಅಧಿಕೃತ ಟೆಸ್ಟ್‌ಗಳಲ್ಲಿ ವಿಕೆಟ್‌ಗಳ ಶತಕವನ್ನು ಪೂರ್ಣಗೊಳಿಸಿದರು. ಇದರಿಂದ 1972–73ರ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ (ಇದು ಮೂರನೆಯ ಟೆಸ್ಟ್) 25 ವಿಕೆಟ್‌ಗಳ ಸಂಖ್ಯೆಯನ್ನು ಇವರು ದಾಟಿದರು. ಇದು ಚಂದ್ರಶೇಖರ್ ಅವರ 22ನೆಯ ಅಧಿಕೃತ ಟೆಸ್ಟ್. ಇವರು 58 ಟೆಸ್ಟ್‌ಗಳನ್ನೂ, ಒಂದು ಏಕ ದಿನ ಪಂದ್ಯವನ್ನೂ, (ನ್ಯೂಜೀಲೆಂಡ್ ವಿರುದ್ಧ), (1976), 246 ಮೊದಲ ದರ್ಜೆ ಮ್ಯಾಚ್‌ಗಳನ್ನೂ ಆಡಿದ್ದಾರೆ. ಅಂತಿಮ ಟೆಸ್ಟ್ ಆಡಿದ್ದು 1979ರಲ್ಲಿ. (ಬಿ.ವಿ.ವಿವೈ.)

**ಚಂದ್ರಸಾಗರ ವರ್ಣಿ :** ಸು. 1810. ಜೈನಕವಿ. ಈತ ಕದಂಬಪುರಾಣ, ಚಂದನೆಯ ಕಥೆ, ಜಿನಭಕ್ತಿಸಾರ, ಜಿನಮುನಿ, ಪರಶುರಾಮ ಭಾರತ, ಪುರಾಣ ಸ್ತೋತ್ರ, ಬೆಟ್ಟವರ್ಧನ ಚರಿತ್ರೆ, ಬ್ರಹ್ಮಶತಕೋಶ, ಭವ್ಯಾಮೃತ, ಮುಲ್ಲಾಶಾಸ್ತ್ರ, ಜಿನರಾಮಾಯಣ, ರುದ್ರಯಕ್ಷಗಾನ, ವಾಸುದೇವ ಪಾರಿಜಾತ, ಶಬ್ದಾರ್ಥಮಂಜರಿ, ಸ್ಮರ ಕೊರವಂಜಿ, ಹಿಮಶೀತಳನ ಕಥೆ–ಈ ಗ್ರಂಥಗಳನ್ನು ಬರೆದಿದ್ದಾನೆ. ಈತ ಕರ್ನಾಟಕ ರಾಜ್ಯದ ತುಮಕೂರು

ಜಿಲ್ಲೆಗೆ ಸೇರಿದ ಕೊರಟಗೆರೆ ತಾಲ್ಲೂಕಿನ ತೋವಿನಕೆರೆ ಗ್ರಾಮದವ. ಪಿತಾಮಹ ಚಂದ್ರನಾಥ; ತಂದೆ ಚಂದಣ್ಣ; ತಾಯಿ ಪೊಂಬೂಜಿಯಮ್ಮ. ಈತನಿಗೆ ಚಂದ್ರನಾಥ, ಗುಟ್ಟಬ್ರಹ್ಮ, ಪದ್ಮಣ್ಣ ಎಂಬ ಮೂವರು ಸಹೋದರರು ಇದ್ದಂತೆ ತಿಳಿದು ಬರುತ್ತದೆ. ಈತನ ಪೂರ್ವಿಕರು ಹುಬ್ಬಳ್ಳಿ–ಬಳ್ಳಾರಿ ಮಾರ್ಗದಲ್ಲಿ ತುಂಗಭದ್ರಾನದಿಯ ನೆರೆಯಲ್ಲಿರುವ ಹುಲಿಗೆಯ ಹೆಗ್ಗಡೆಗಳಾಗಿದ್ದರು. ಅನಂತರ ತೋವಿನಕೆರೆಗೆ ಬಂದು ನೆಲೆಸಿದರು.

ಈತನ ಪೂರ್ವಾಶ್ರಮದ ಹೆಸರು ಬ್ರಹ್ಮ, ಬ್ರಹ್ಮಣಾಂಕ ಎಂದಿತ್ತು. ಜೈನದೀಕ್ಷೆ ಪಡೆದ ಮೇಲೆ ಈತ ಚಂದ್ರಸಾಗರವರ್ಣಿಯಾದ. ಈತನ ಗುರು ಲಕ್ಷ್ಮೀಸೇನ. ಈತ ಸೇನಾ ಪಂಗಡಕ್ಕೆ ಸೇರಿದವ. ಜಿನಮುನಿ ಎಂಬ ಗ್ರಂಥದಲ್ಲಿ ಈತ ಗೃಹಸ್ಥಾಶ್ರಮದಲ್ಲಿದ್ದಾಗ ಸ್ಮರ ಕೊರವಂಜಿ, ಬ್ರಹ್ಮಶತಕೋಶ, ನಾಗಕುಮಾರ ಷಟ್ಪದಿ, ಜಿನಭಾರತ (ಚಾರುಭಾರತ) ಎಂಬ ಗ್ರಂಥಗಳನ್ನೂ, ದೀಕ್ಷಾನಂತರ ರುದ್ರಯಕ್ಷಗಾನ, ಮುಲ್ಲಾಶಾಸ್ತ್ರ, ಪರಶುರಾಮ ಭಾರತ, ಭವಾಮೃತ, ಚಂದನೆಯ ಕಥೆ ಎಂಬ ಐದು ಗ್ರಂಥಗಳನ್ನೂ ರಚಿಸಿದಂತೆ ತಿಳಿದುಬರುತ್ತದೆ. ಪರಶುರಾಮ ಭಾರತವನ್ನು 1810ರಲ್ಲೂ ಜಿನಮುನಿಯನ್ನು 1814ರಲ್ಲೂ ಬರೆದಂತೆ ಕವಿ ಹೇಳಿಕೊಂಡಿದ್ದಾನೆ.

ಪುರಾಣಸ್ತೋತ್ರ ಹಾಗೂ ಜಿನಮುನಿ ವಾರ್ಧಕ ಷಟ್ಪದಿಯಲ್ಲಿವೆ. ಜಿನಮುನಿಯಲ್ಲಿ 50 ಸಂಧಿಗಳು, 2.551 ಪದ್ಯಗಳು ಇವೆ. ಈ ಗ್ರಂಥವನ್ನು ವೇಣುಪುರಿಯ ಶ್ರಾವಕರ ಪ್ರಾರ್ಥನಾನುಸಾರ ರಚಿಸಿದೆನೆಂದು ಕವಿ ಹೇಳಿಕೊಂಡಿದ್ದಾನೆ. ಪರಶುರಾಮ ಭಾರತ (24 ಅಧ್ಯಾಯ, 1,369 ಪದ್ಯಗಳು), ಜೈನತತ್ತ್ವವನ್ನು ಬೋಧಿಸುವ ಜಿನಭಕ್ತಿಸಾರ (108 ಪದ್ಯಗಳು), ಮುಲ್ಲಾಶಾಸ್ತ್ರ, ಜಿನರಾಮಾಯಣ, ಕದಂಬಪುರಾಣ (199 ಪದ್ಯಗಳು)– ಇವು ಭಾಮಿನಿ ಷಟ್ಪದಿಯಲ್ಲಿವೆ. ಕದಂಬಪುರಾಣದಲ್ಲಿ ಕವಿ ಬೆಟ್ಟವರ್ಧನ ಚರಿತ್ರೆ, ಮುಲ್ಲಾಶಾಸ್ತ್ರಗಳನ್ನು ಬರೆದಂತೆ ಹೇಳಿಕೊಂಡಿದ್ದಾನೆ. ಹಿಮಶೀತಳನ ಕಥೆ, ಬೆಟ್ಟವರ್ಧನ ಚರಿತ್ರೆ ಸಾಂಗತ್ಯ ಗ್ರಂಥಗಳು. (ಎಂ.ಎ.)

**ಚಂದ್ರಹಾಸ :** ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಬಹು ಜನಪ್ರಿಯವಾಗಿರುವ ಒಂದು ಕಥೆಯ ನಾಯಕ. ಅಶ್ವಮೇಧದ ಪ್ರಕರಣವನ್ನು ವಿವರಿಸುವ ಸಂಸ್ಕೃತ ಜೈಮಿನಿಯ ಭಾರತದಲ್ಲಿ ಚಂದ್ರಹಾಸನ ಕಥೆ ಒಂದು ಉಪಕಥೆಯಾಗಿ ಬರುತ್ತದೆಯಾದರೂ ಸಾಕಷ್ಟು ದೊಡ್ಡದಾಗಿ ಬರುತ್ತದೆ. ಲಕ್ಷ್ಮೀಶನಲ್ಲಿ ಕೂಡ ಈ ಕಥೆ ನಾಲ್ಕು ಆಶ್ವಾಸಗಳಷ್ಟು ವಿಸ್ತಾರವಾಗಿದೆ. ಲಕ್ಷ್ಮೀಶನ ಅನಂತರ ಕನ್ನಡದಲ್ಲಿ ಈ ಕಥೆಯನ್ನು ತೆಗೆದುಕೊಂಡು ಕೃತಿರಚನೆ ಮಾಡಿದವರು ಹೆಳವನಕಟ್ಟೆ ಗಿರಿಯಮ್ಮ ಮತ್ತು ಕುವೆಂಪು.

ಚಂದ್ರಹಾಸನು ಹುಟ್ಟಿನಲ್ಲಿ ರಾಜಪುತ್ರನಾದರೂ ಅದೃಷ್ಟಹೀನನಾಗಿ ಅನಾಥನಾಗಿ ದಾದಿಯೊಬ್ಬಳ ಆಶ್ರಯದಲ್ಲಿ ಬೆಳೆಯುತ್ತಾನೆ. ಪುರೋಹಿತ ಗಾಲವರು ಈ ಅನಾಥ ಬಾಲಕ ರಾಜನಾಗುವನೆಂಬ ಭವಿಷ್ಯ ನುಡಿಯುತ್ತಾರೆ. ರಾಜನಿಗೆ ಗಂಡು ಮಕ್ಕಳಿರಲಿಲ್ಲವಾದ್ದರಿಂದ ಮಂತ್ರಿಯಾದ ದುಷ್ಟಬುದ್ಧಿ ತನ್ನ ಮಗನಿಗೆ ಬರಬೇಕಾದ ಆ ರಾಜ್ಯಕ್ಕೆ ಈ ಅನಾಥ ಹುಡುಗ ಒಡೆಯನಾಗುವುದನ್ನು ಕೇಳಿ ಹೇಗಾದರೂ ಆತನನ್ನು ನಿರ್ಮೂಲಮಾಡುವ ಛಲಹೊಂದಿ ಕಟುಕರನ್ನು ನೇಮಿಸಿ ಅವನನ್ನು ಕೊಲ್ಲಲು ಯೋಚಿಸುತ್ತಾನೆ. ಶ್ರೀಹರಿಯನ್ನು ಸದಾ ಸ್ತುತಿಸುವ ಈ ಮುಗ್ಧ ಬಾಲಕನನ್ನು ಕೊಲ್ಲಲು ಮನಸ್ಸಿಲ್ಲದ ಕಟುಕರು ಗುರುತಿಗಾಗಿ ಅವನ ಒಂದು ಬೆರಳನ್ನು ಕೊಯ್ದು ತಂದು ತೋರಿಸುತ್ತಾರೆ. ಅರಣ್ಯದಲ್ಲಿ ರೋದಿಸುತ್ತಿದ್ದ ಆ ಬಾಲಕನನ್ನು ಕುಳಿಂದಕ ಕರೆದುಕೊಂಡು ಹೋಗಿ ಸಾಕುತ್ತಾನೆ. ಚಂದ್ರಹಾಸ ಇನ್ನೂ ಬದುಕಿರುವುದನ್ನು ದುಷ್ಟಬುದ್ಧಿ ಮುಂದೆ ಕಾಣುತ್ತಾನೆ. ಅವನನ್ನು ಕೊನೆಗಾಣಿಸಬೇಕೆಂಬ ಛಲ ಮತ್ತೆ ಜಾಗೃತವಾಗುತ್ತದೆ. ಒಂದು ಪತ್ರದೊಂದಿಗೆ ಚಂದ್ರಹಾಸನನ್ನು ತನ್ನ ಮಗ ಮದನನಲ್ಲಿಗೆ ಕಳುಹಿಸುತ್ತಾನೆ. ಅದರಲ್ಲಿ ಈತನಿಗೆ 'ವಿಷ' ವನ್ನು ಕೊಡುವುದು ಎಂದಿರುತ್ತದೆ. ದಾರಿಯಲ್ಲಿ ಬರುತ್ತ ಉಪವನ ಒಂದರಲ್ಲಿ ಚಂದ್ರಹಾಸ ವಿಶ್ರಮಿಸುತ್ತ ನಿದ್ದೆ ಹೋದಾಗ ಅಲ್ಲಿ ಬಂದ ದುಷ್ಟಬುದ್ಧಿಯ ಮಗಳು ವಿಷಯೆ 'ವಿಷ' ಎಂಬುದನ್ನು 'ವಿಷಯೆ' ಎಂದು ತಿದ್ದುತ್ತಾಳೆ. ಅದರ ಪರಿಣಾಮ ವಿಷಯೆ–ಚಂದ್ರಹಾಸರ ಮದುವೆಯಾಗುತ್ತದೆ. ಹಿಂದಿರುಗಿದ ದುಷ್ಟಬುದ್ಧಿಗೆ ದಿಗ್ಭ್ರಮೆಯಾಗುತ್ತದೆ. ಅಳಿಯನಾದರೂ ಶತ್ರು ಶತ್ರುವೇ. ದುಷ್ಟಬುದ್ಧಿ ತನ್ನ ಪ್ರಯತ್ನವನ್ನು ಬಿಡದೆ ಮತ್ತೊಂದು ವಿಷವ್ಯೂಹ ರಚಿಸುತ್ತಾನೆ. ಮನೆಯ ಸಂಪ್ರದಾಯದಂತೆ ಅಳಿಯನನ್ನು ಪೂಜಾಸಾಮಗ್ರಿಗಳೊಂದಿಗೆ ಚಂಡಿಕಾಲಯಕ್ಕೆ ಕಳುಹಿಸಿ, ಅಲ್ಲಿ ಅವನನ್ನು ಕೊಲ್ಲಲು ಚಂಡಾಲರನ್ನು ನೇಮಿಸುತ್ತಾನೆ. ಗುಡಿಗೆ ಹೋಗುತ್ತಿದ್ದ ಚಂದ್ರಹಾಸ ದಾರಿಯಲ್ಲಿ ಸಿಕ್ಕಿದ್ದರಿಂದ ಅವನನ್ನು ಅರಮನೆಗೆ ಕಳುಹಿಸಿ ಮದನನೇ ಚಂಡಿಕಾಲಯಕ್ಕೆ ಹೋಗಿ ಅಲ್ಲಿ ಚಂಡಾಲರಿಂದ ಹತನಾಗುತ್ತಾನೆ. ತನ್ನ ಯೋಜನೆ ತನ್ನ ವಂಶದ ಬೆಳಕನ್ನೇ ನುಂಗಿದುದನ್ನು ಕಂಡು ಎದೆಯೊಡೆದ ದುಷ್ಟಬುದ್ಧಿ ತನ್ನನ್ನು ತಾನೇ ಇರಿದುಕೊಳ್ಳುತ್ತಾನೆ.

ಲಕ್ಷ್ಮೀಶನಿಗೆ ವೈಷ್ಣವಭಕ್ತಿಯನ್ನು ಸಾರಲು ಚಂದ್ರಹಾಸನ ಕಥೆ ಒಳ್ಳೆಯ ಮಾಧ್ಯಮವಾಗಿದೆ. ಗಿರಿಯಮ್ಮನ ಸಾಂಗತ್ಯ ಸರಳವಾಗಿದ್ದು ಲಕ್ಷ್ಮೀಶನ ಹಿಂದೆಯೇ ಹೆಜ್ಜೆಹಾಕುತ್ತದೆ. ಕೆಲವು ಬದಲಾವಣೆಗಳೊಂದಿಗೆ ಹೊಸಗನ್ನಡ ನಾಟಕರೂಪದಲ್ಲಿರುವುದು ಕುವೆಂಪು ಅವರ ಚಂದ್ರಹಾಸ.

ದುಷ್ಟಶಕ್ತಿ ಸತ್ ಶಕ್ತಿಯನ್ನು ತುಳಿಯಲು ಯತ್ನಿಸುತ್ತದೆ. ಆದರೆ ಅಂತಿಮ ಜಯ ಸತ್ ಶಕ್ತಿಯದೇ ಎಂಬುದು ಈ ಕಥೆ ಪ್ರತಿಪಾದಿಸುವ ಮೌಲ್ಯ. ದೈವಕೃಪೆ ಚಂದ್ರಹಾಸನನ್ನು ರಕ್ಷಿಸುತ್ತದೆ. ದುಷ್ಟಬುದ್ಧಿ, ತನ್ನ ದುಷ್ಟಯೋಚನೆಯ ಫಲವನ್ನು ಅನುಭವಿಸುತ್ತಾನೆ. ಚಂದ್ರಹಾಸನ ಕಥೆಯ ಪ್ರಬಲ ಆಕರ್ಷಣೆ ಅದರ ನಾಯಕನ ಮುಗ್ಧತೆ. ನಿಷ್ಕಾರಣವಾಗಿ ದುಷ್ಟಬುದ್ಧಿ ಒಡ್ಡುವ ಅಡ್ಡಿಗಳು, ಚಂದ್ರಹಾಸನ ನಿರ್ಗತಿಕತೆ ಇತ್ಯಾದಿಗಳು ಕೇಳುವವರ ಕರುಣೆಯನ್ನು ಸೆಳೆದುಕೊಳ್ಳುತ್ತವೆ. ದುಷ್ಟಬುದ್ಧಿಯ ಹೋರಾಟ ವಿಧಿಯ ಮುಂದೆ ಸೋತು ಶರಣಾಗುತ್ತದೆ.

ಚಂದ್ರಹಾಸನು ಒಳ್ಳೆಯತನದ ಪ್ರತೀಕ, ಭಕ್ತ, ದೈವಕೃಪೆಯುಳ್ಳವ. ದುಷ್ಟಬುದ್ಧಿಯು ದುಷ್ಟಶಕ್ತಿಯ ಪ್ರತೀಕ. ಪ್ರತಿಷ್ಠೆಯ ಮೋಹ, ರಾಜ್ಯದಾಹ, ಅಂತಸ್ಸತ್ತ್ವದ ಕೊರತೆ–ಇವು ಅನೀತಿಯನ್ನು ಆಶ್ರಯಿಸುತ್ತವೆ ಎಂಬುದರ ಪ್ರಾಯೋಗಿಕ ನಿದರ್ಶನ ದುಷ್ಟಬುದ್ಧಿ. ಈ ಎರಡು ಶಕ್ತಿಗಳ ಸಂಘರ್ಷ, ಒಂದರ ಸೋಲು ಮತ್ತೊಂದರ ಗೆಲುವು ಈ ಕಥೆಯ ಕೇಂದ್ರ. ಕಥೆಯ ಘಟನೆಗಳೂ ಉಳಿದ ಪಾತ್ರಗಳೂ ನಾಯಕನಾದ ಚಂದ್ರಹಾಸನ ಔನ್ನತ್ಯವನ್ನು ಒಂದಲ್ಲ ಒಂದು ರೀತಿಯಲ್ಲಿ ಹೆಚ್ಚಿಸುವುವೇ ಆಗಿವೆ. ಒಟ್ಟು ಕಥೆಯ ಆವರಣ ತನ್ನ ಉದ್ದೇಶವನ್ನು ಸ್ಪಷ್ಟಗೊಳಿಸಲು ಅತಿಮಾನವಶಕ್ತಿಯ ರಕ್ಷಣೆಯಲ್ಲಿ ನಡೆಯುತ್ತದೆ. ಒಟ್ಟು ಕಥೆಯಲ್ಲಿ ಜನಪದ ಕಥೆಯ ಆಶಯಗಳನ್ನು ಹೇರಳವಾಗಿ ಗುರುತಿಸಬಹುದು. (ಡಿ.ವಿ.)

**ಚಂದ್ರಾಪೀಡ :** ಬಾಣಭಟ್ಟನ ಕಾದಂಬರಿ ಎಂಬ ಸಂಸ್ಕೃತ ಗದ್ಯಕಾವ್ಯದ ನಾಯಿಕೆಯಾದ ಕಾದಂಬರಿಯ ಪತಿ. ಚಂದ್ರಾಪೀಡ ಕಾದಂಬರಿಯರ ಮತ್ತು ಮಹಾಶ್ವೇತೆ ಪುಂಡರೀಕರ ಪ್ರಣಯವೃತ್ತಾಂತ ವರ್ಣನೆಯೇ ಬಾಣನ ಕೃತಿಯ ವಸ್ತು. ಈ ಕೃತಿಗೆ ಆಧಾರವಾದ ಕಥಾಸರಿತ್ಸಾಗರದಲ್ಲಿ ಚಂದ್ರಾಪೀಡನನ್ನು ಸೋಮಪ್ರಭನೆನ್ನಲಾಗಿದೆ.

ಪುಂಡರೀಕನಿಂದ ಶಾಪಪಡೆದ ಚಂದ್ರನೇ ಚಂದ್ರಾಪೀಡನಾಗಿ ಜನಿಸಿ ಗಂಧರ್ವ ಕನ್ಯೆಯಾದ ಕಾದಂಬರಿಯೊಂದಿಗೆ ಅನುರಾಗ ಹೊಂದಿ ಅವಳನ್ನು ವರಿಸುವ ಮುಂಚೆಯೇ ದೇಹ ತ್ಯಜಿಸುತ್ತಾನೆ. ಅನಂತರ ಶೂದ್ರಕ ರಾಜನಾಗಿ ಹುಟ್ಟಿ ಶಾಪವಿಮೋಚನೆಯಾದ ಮೇಲೆ ಮತ್ತೆ ಚಂದ್ರಾಪೀಡನಾಗಿ ಕಾದಂಬರಿಯನ್ನು ವಿವಾಹವಾಗುತ್ತಾನೆ.

ಒಟ್ಟು ಕಥೆಯ ನಡಿಗೆ ಬೇರೆ ಬೇರೆ ಪಾತ್ರಗಳ ಅಭಿವ್ಯಕ್ತಿಯ ಮೂಲಕವಾದರೂ ಮುಖ್ಯಕಥೆಯ ದೃಷ್ಟಿಯಿಂದ ಒಂದು ರೀತಿಯಲ್ಲಿ ಚಂದ್ರಾಪೀಡನೇ ಅದಕ್ಕೆ ಪ್ರೇರಕ ಮತ್ತು ಕೇಂದ್ರ. ಮಹಾಶ್ವೇತೆಗೆ ಅಭಯವಿತ್ತು, ಅವಳ ಕಥೆಯನ್ನು ನಮಗೆ ಕೇಳಿಸಿ, ಕಾದಂಬರಿಯನ್ನು ಪ್ರೀತಿಸಿ ಮುಂದಿನ ಘಟನೆಗೆ ಕಾರಣನಾಗಿ, ಶೂದ್ರಕನಾಗಿ ಮತ್ತೆ ಗಿಣಿಯಿಂದ ಕಥೆಯನ್ನು ಕೇಳಿಸಿ–ಹೀಗೆ ಪ್ರತ್ಯಕ್ಷ, ಪರೋಕ್ಷವಾಗಿ ಚಂದ್ರಾಪೀಡ ಇಲ್ಲಿ ಮುಖ್ಯಬಿಂದುವಾಗುತ್ತಾನೆ.

ಚಂದ್ರನಂತೆಯೇ ಚಂದ್ರಾಪೀಡ ಸೌಮ್ಯಪ್ರವೃತ್ತಿಯವ. ವಿದ್ಯೆ, ವಿನಯ, ಗಾಂಭೀರ್ಯ– ಎಲ್ಲ ಇವನಲ್ಲಿ ನೆಲಸಿವೆ. ಈತ ಎಷ್ಟು ಉತ್ತಮನಾದ ಗೆಳೆಯ, ಪಾಲಕ, ಮಗ ಎಂಬುದನ್ನು ಕಾವ್ಯದ ಉದ್ದಕ್ಕೂ ನೋಡುತ್ತೇವೆ. ಇವನಿಗೆ ಮಹಾಶ್ವೇತೆಯಲ್ಲಿ ಭಕ್ತಿ, ಗೌರವ. ಆಕೆಗೂ ಇವನಲ್ಲಿ ಸೋದರವಾತ್ಸಲ್ಯ. ಮಹಾಶ್ವೇತೆಯ ಮಾರ್ಗದರ್ಶನದಲ್ಲಿ ನಂಬಿಕೆಯಿಟ್ಟು ಈತ ನಡೆಯುತ್ತಾನೆ. ಕಾದಂಬರಿಯನ್ನು ಪ್ರೀತಿಸಿದರೂ ಅದು ತೂಕತಪ್ಪಿದ ಲಘುಪ್ರಣಯವಲ್ಲ. ಸಂಯಮ ವಿವೇಚನೆ ಇವನ ನಡತೆಯ ಹಿಂದಿದೆ. ಇವನ ಪ್ರೀತಿ ಕಾದಂಬರಿಯಲ್ಲಿ ಕೇಂದ್ರೀಕೃತವಾದದ್ದು. ಕಾದಂಬರಿ ಮಹಾಶ್ವೇತೆಯರೊಂದಿಗಿನ ನಡೆವಳಿಕೆ, ಕಾದಂಬರಿಯ ವಿಷಯವನ್ನು ತಂದೆತಾಯಿಗೆ ಹೇಳುವಲ್ಲಿನ ಸಂಕೋಚ, ಗೆಳೆಯನನ್ನು ಕಾಣುವ ಆತುರದಲ್ಲಿಯೂ ಯೋಚಿಸುವ ರೀತಿ–ಈ ಎಲ್ಲವೂ ಇವನ ಸುಸಂಸ್ಕೃತ, ನಾಗರಿಕ ಮನೋಭಾವಕ್ಕೆ ಸಾಕ್ಷಿಗಳು. ಶೂದ್ರಕ, ಚಂದ್ರಾಪೀಡ ಈ ಎರಡೂ ಜನ್ಮಗಳಲ್ಲಿ ಮೇಲಿನ ಗುಣಗಳು ಎದ್ದುಕಾಣುತ್ತವೆ. ಮಹಾಶ್ವೇತೆ ಇವನನ್ನು ಕಂಡು ಆದರಿಸಿ ತನ್ನ ಆತ್ಮವೃತ್ತಾಂತವನ್ನು ಹೇಳಿಕೊಂಡಿರುವುದೇ ಇವನ ಯೋಗ್ಯತೆಗೆ, ವಿವೇಕಕ್ಕೆ ದಿಕ್ಸೂಚಿಯಾಗಿವೆ. ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕಾದಂಬರಿಯ ಉದ್ದಕ್ಕೂ ಚಂದ್ರಾಪೀಡ ಸುಳಿಯುತ್ತಾನೆ. ನಾಗವರ್ಮನು ಕರ್ಣಾಟಕ ಕಾದಂಬರಿ ಎಂಬ ಹೆಸರಿನಿಂದ ಮೂಲ ಸಂಸ್ಕೃತ ಗದ್ಯಕೃತಿಯನ್ನು ಸುಂದರ ಕನ್ನಡ ಚಂಪೂವನ್ನಾಗಿ ಅನುವಾದ ಮಾಡಿದ್ದಾನೆ. ಅಲ್ಲಿ ಕೃತಿಪತಿ ನರೇಂದ್ರ ಚಂದ್ರಂ ಎಂದಿರುವುದನ್ನು ನೋಡಿದರೆ ನಾಗವರ್ಮನ ಆಶ್ರಯದಾತನ ಹೆಸರೇ ನಾಯಕನದೂ ಆಗಿರಬೇಕೆಂಬ ಊಹೆಗೆ ಅವಕಾಶವಾಗುತ್ತದೆ. ಇದರಿಂದ ಚಂದ್ರಾಪೀಡನ ಪಾತ್ರದ ಮಹತ್ವ ಮತ್ತಷ್ಟು ಹೆಚ್ಚುತ್ತದೆ. (ಡಿ.ವಿ.)

**ಚಂದ್ರಿಕಾ :** ಮಲಯಾಳಂ ಭಾಷೆಯ ಪತ್ರಿಕೆ. 1934ರ ಮಾರ್ಚ್ 26 ರಂದು ವಾರಪತ್ರಿಕೆಯಾಗಿ ಉತ್ತರ ಮಲಬಾರಿನ ತೆಲ್ಲಿಚೇರಿಯಿಂದ ಪ್ರಕಟನೆ ಆರಂಭವಾಯಿತು. ಇದು ಪ್ರಮುಖವಾಗಿ ಮುಸ್ಲಿಂ ಲೀಗಿನ ಮುಖವಾಣಿಪತ್ರಿಕೆಯಾಗಿದೆ. ಮುಸ್ಲಿಮರ ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಶೋತ್ತರಗಳ ಪೂರೈಕೆಗೆ ಇದು ಮೀಸಲಾಗಿದೆ. ಕೆ.ಕೆ. ಮಹಮದ್ ಸಾಹೇಬ್ ಇದರ ಸಂಪಾದಕರಾಗಿದ್ದರು. 1938ರಲ್ಲಿ ಚಂದ್ರಿಕಾ ದಿನಪತ್ರಿಕೆಯಾಗಿ ಪರಿವರ್ತನೆಗೊಂಡಿತು. ಅನಂತರ ಇದರ ಮಾಲೀಕತ್ವ ಖಾಸಗಿ ಪರಿಮಿತ ಕಂಪನಿಯೊಂದಕ್ಕೆ

ಸೇರಿತು. ಈ ದಿನಪತ್ರಿಕೆಯ ಪ್ರಪ್ರಥಮ ವ್ಯವಸ್ಥಾಪಕ ನಿರ್ದೇಶಕರಾಗಿದ್ದವರು ಆಗ ತೆಲ್ಲಿಚೇರಿಯ ನಗರಪಾಲಿಕೆಯ ಅಧ್ಯಕ್ಷರಾಗಿದ್ದ ಜನಾಬ್ ಸಿ.ಪಿ. ಮಮ್ಮುಕಯಿ. 1946ರಲ್ಲಿ ಪತ್ರಿಕೆಯ ಕಾರ್ಯಾಲಯವನ್ನು ಕೋಳಿಕೋಡ್‌ನಲ್ಲಿರುವ ಅದರ ಸ್ವಂತ ಕಟ್ಟಡಕ್ಕೆ ವರ್ಗಾಯಿಸಲಾಯಿತು. ಅಲ್ಲಿ ಇದರದೇ ಮುದ್ರಣಾಲಯವಿದೆ. ಅಬ್ದುಲ್ ರಹಮಾನ್ ಸಾಹೇಬ್ ಸಂಪಾದಕತ್ವವನ್ನು ಬಿಟ್ಟಾಗ ಮುಸ್ಲಿಂ ಲೀಗಿನ ಮುಖಂಡ ಸಿ.ಎಚ್. ಮಹಮದ್ ಕೋಯ ಸಂಪಾದಕರಾದರು. ಅವರು ಬಿಟ್ಟ ಮೇಲೆ ವಿ.ಸಿ. ಅಬೂಬಾಕರ್ ಸಂಪಾದಕರಾದರು.

ಮಹಿಳಾ ಚಂದ್ರಿಕಾ, ಸ್ಪೋರ್ಟ್ಸ್ ಚಂದ್ರಿಕಾ ಮತ್ತು ಆರೋಗ್ಯ ಚಂದ್ರಿಕಾ ಎಂಬ ಪತ್ರಿಕೆಗಳೂ ಇದರ ಸೋದರ ಪತ್ರಿಕೆಗಳು. (ಟಿ.)

**ಚಂದ್ರೊಬ್ಬಲಬ್ಬೆ :** 843–870ರಲ್ಲಿ ಆಳಿದ ಗಂಗವಂಶದ ದೊರೆ ನೀತಿಮಾರ್ಗ ಎರೆಗಂಗನ ಕಿರಿಯ ಮಗ 1ನೆಯ ಬೂತುಗನ ರಾಣಿ; ರಾಷ್ಟ್ರಕೂಟ ದೊರೆ ಅಮೋಘವರ್ಷನ ಮಗಳು. ನೀತಿಮಾರ್ಗ ಎರೆಗಂಗನಿಗೆ ಹಿಂದೆ ಗಂಗ ರಾಜ್ಯವನ್ನು ರಾಚಮಲ್ಲ ಆಳುತ್ತಿದ್ದಾಗ ರಾಷ್ಟ್ರಕೂಟರ ಸೇನಾನಿ ಬಂಕೇಶ ಗಂಗರಾಜ್ಯದ ಒಂದು ಭಾಗವನ್ನು ಆಕ್ರಮಿಸಿದ್ದ. ಈ ಭಾಗವನ್ನು ಪುನಃ ವಶಪಡಿಸಿಕೊಳ್ಳುವುದರಲ್ಲಿ ರಾಚಮಲ್ಲ ಯಶಸ್ವಿಯಾಗಲಿಲ್ಲ. ನೀತಿಮಾರ್ಗ ಎರೆಗಂಗ ರಾಜಾರಾಮುಡು ಎಂಬ ಸ್ಥಳದಲ್ಲಿ ಬಂಕೇಶನೊಡನೆ ನಡೆಸಿದ ಕದನ ನಿರ್ಣಾಯಕವಾಗಲಿಲ್ಲ. ಗಂಗರನ್ನು ಅಡಗಿಸಲು ಸಾಧ್ಯವಿಲ್ಲವೆಂಬುದನ್ನು ಅರಿತ ರಾಷ್ಟ್ರಕೂಟ ದೊರೆ ಅಮೋಘವರ್ಷ ಚಂದ್ರೊಬ್ಬಲಬ್ಬೆಯನ್ನು ಬೂತುಗನಿಗೆ ವಿವಾಹ ಮಾಡಿಕೊಟ್ಟು ಗಂಗರೊಂದಿಗೆ ಸಂಬಂಧ ಬೆಳೆಸಿದ. ಚಂದ್ರೊಬ್ಬಲಬ್ಬೆ ಅತ್ಯಂತ ಸುಂದರಿಯೂ ಗುಣವತಿಯೂ ಆಗಿದ್ದಳೆಂದೂ ನಾಟ್ಯಕಲೆಯಲ್ಲಿ ವಿಶೇಷ ಪರಿಶ್ರಮ ಪಡೆದಿದ್ದಳೆಂದೂ ಶಾಸನಗಳು ತಿಳಿಸುತ್ತವೆ. 883–920ರಲ್ಲಿ ಆಳಿದ ಗಂಗರಾಜ ಎರೆಗಂಗ ಚಂದ್ರೊಬ್ಬಲಬ್ಬೆಯ ಮಗ. (ಎ.ವಿ.ಎ.)

**ಚಂಪಕಮಾಲೆ :** ಸಂಸ್ಕೃತ ಭಾಷೆಯ ಲೌಕಿಕ ಛಂದಸ್ಸಿಗೆ ಸೇರಿದ ಒಂದು ವರ್ಣವೃತ್ತ; ಪ್ರಕೃತಿಯೆಂಬ 21 ಅಕ್ಷರಗಳ ಪಾದಪ್ರಮಾಣದ ಛಂದೋವರ್ಗದಲ್ಲಿ 7,11,600ನೆಯದಾದ ಸಮಚತುಷ್ಪದಿ; ಸಂಸ್ಕೃತ ಸಾಹಿತ್ಯದಲ್ಲಿ ಬಹುವಿರಳವಾಗಿಯೂ ಕನ್ನಡ ಮತ್ತು ತೆಲುಗು ಸಾಹಿತ್ಯಗಳಲ್ಲಿ ಬಹು ವಿಶೇಷವಾಗಿಯೂ ಬಳಕೆಯಾಗಿದೆ. ಇದರ ಲಕ್ಷಣವನ್ನು ಸಂಸ್ಕೃತ ಭಾಷೆಯ ಛಂದೋಗ್ರಂಥಗಳಲ್ಲಿ ಶಶಿವದನಾ (ಪಿಂಗಲನ ಛಂದಸ್ಸೂತ್ರಗಳು), ಸಿದ್ಧಿ (ಸ್ವಯಂಭೂ ಛಂದಸ್, ಹೇಮಚಂದ್ರನ ಛಂದೋನುಶಾಸನ), ಚಿತ್ರಲತಿಕಾ (ಜಯಕೀರ್ತಿಯ ಛಂದೋನುಶಾಸನ) ಮುಂತಾದ ಹೆಸರುಗಳಿಂದ ವಿವರಿಸಿರುವುದು ಕಂಡುಬರುತ್ತದೆ. ರುಚಿರಾ, ಸರಸೀ, ಸಲಿಲನಿಧಿ, ಧೃತಶ್ರೀ, ಪಂಚಕಾವಲೀ ಈ ಕೆಲವು ಹೆಸರುಗಳೂ ಬೇರೆ ಬೇರೆ ಛಂದೋಗ್ರಂಥಗಳಲ್ಲಿ ಅಥವಾ ಅವುಗಳಿಗಿರುವ ವ್ಯಾಖ್ಯೆಗಳಲ್ಲಿ ಪಾಠಭೇದಗಳ ಬೇರೆ ಬೇರೆ ಪ್ರತಿಗಳಲ್ಲಿ ಇದೇ ವೃತ್ತವನ್ನು ಉಲ್ಲೇಖಿಸುವಾಗ ಬಂದಿವೆ. ಕನ್ನಡ ಭಾಷೆಯ ಛಂದೋಗ್ರಂಥಗಳಲ್ಲಿ ಚಂಪಕಮಾಲೆಯೆಂದೇ ಪ್ರಸಿದ್ಧವಾಗಿದೆ (ಛಂದೋಂಬುಧಿ, ಛಂದಸ್ಸಾರ). ಸಾಹಿತ್ಯದಲ್ಲಿಯೂ ಅಷ್ಟೇ.

ಇದರ ಲಕ್ಷಣವನ್ನು ಹೇಳಿರುವ ಪ್ರಾಚೀನರು ಎಂದರೆ ಪಿಂಗಲ (ಸು. 200) ಮತ್ತು ಸ್ವಯಂಭು (ಸು. 628–783). ಪಿಂಗಲ ಕೊಡುವ ಲಕ್ಷಣ ಹೀಗೆ : ಶಶಿವದನಾ ನಜೌ ಭಜೌ ಜ ಜರೌ ರುದ್ರದಿಶಃ (ನಜಭಜಜಜರ ಎಂಬ ಗಣವಿನ್ಯಾಸ ಪ್ರತಿಪಾದದಲ್ಲಿಯೂ ಇದ್ದು, 11 ಮತ್ತು 10ನೆಯ ಅಕ್ಷರಗಳಾದ ಮೇಲೆ ಯತಿ ಬರುವುದು ಶಶಿವದನಾ ವೃತ್ತ). ಸ್ವಯಂಭು ಕೊಡುವ ಲಕ್ಷಣವಾದರೂ ಇದೇ; ಆದರೆ ಯತಿಯನ್ನು ಹೇಳಿಲ್ಲ. ನಾಗವರ್ಮ ತ್ರಿದಶ (ನಗಣ), ರವಿ (ಜಗಣ), ಇಂದು (ಭಗಣ), ಭಾಸ್ಕರತ್ರಯ (ಜಗಣಗಳು ಮೂರು) ಮತ್ತು ಅಗ್ನಿ (ರಗಣ) ಇವುಗಳಿಂದ ಕೂಡಿದ ಪಾದವುಳ್ಳದ್ದು, 13ನೆಯ ಅಕ್ಷರವಾದ ಮೇಲೆ ಯತಿಪಾಲಿತವಾಗತಕ್ಕದ್ದು ಚಂಪಕಮಾಲೆಯೆಂದು ಹೇಳಿದ್ದಾರೆ. ರೂಢಿಯಲ್ಲಿ ಈ ವೃತ್ತದ ಲಕ್ಷಣವನ್ನು ನಜಭಜಜಂಜರಂ ಬಗೆಗೊಳ್ಳುತ್ತಿರೆ ಚಂಪಕಮಾಲೆಯೆಂದಪರ್ ಎಂದು ಲಕ್ಷಣ ಲಕ್ಷ್ಯ ಒಟ್ಟಿಗೆ ತೋರುವಂತೆ ಸೂಚಿಸುವುದು ಸಾಮಾನ್ಯ (ಕನ್ನಡ ಕೈಪಿಡಿ). ಪಿಂಗಲನ ಸೂತ್ರ ಮತ್ತು ಅದರ ಭಟ್ಟ ಹಲಾಯುಧ ವ್ಯಾಖ್ಯೆ, ಮಾಘ ಕವಿಯ ಶಿಶುಪಾಲವಧೆಯ ಮಲ್ಲಿನಾಥಕೃತ ವ್ಯಾಖ್ಯೆ–ಇಲ್ಲಿ ಮಾತ್ರ ಯತಿಸೂಚನೆಯಿದ್ದು, ಅನ್ಯತ್ರ ಯಾರೂ ಅಂಥ ಸೂಚನೆಯನ್ನು ಕೊಟ್ಟಿಲ್ಲ. ಕನ್ನಡ ಕಾವ್ಯಗಳ ಚಂಪಕಮಾಲೆಯ ನಿದರ್ಶನಗಳಲ್ಲಿ ನಾಗವರ್ಮ ಹೇಳಿರುವಂತೆ 13 ಅಕ್ಷರವಾದ ಬಳಿಕಣ ಯತಿಯನ್ನು ಪಾಲಿಸುವಂತೆ ಬಹುಮಟ್ಟಿಗೆ ತೋರುವುದು ಕುತೂಹಲಕರವಾಗಿದೆ.

ಆಂಧ್ರ ದೇಶದ ಸಂಸ್ಕೃತ ಮತ್ತು ತೆಲುಗು ಪಂಡಿತರು ಸಂಸ್ಕೃತ ಸಾಹಿತ್ಯದಲ್ಲಿ ಚಂಪಕಮಾಲೆಯ ಅಸ್ತಿತ್ವ ಮತ್ತು ಪ್ರಾಚುರ್ಯಗಳನ್ನು ಕುರಿತು ಹಲವು ವರ್ಷಗಳ ಹಿಂದೆ ಬಹುವಾಗಿ ಚರ್ಚಿಸಿದರು. ಈ ಚರ್ಚೆಯ ಫಲವಾಗಿ, ಈ ವೃತ್ತ ಮೂಲತಃ ಸಂಸ್ಕೃತ ಭಾಷೆಯ ಲೌಕಿಕ ಛಂದಸ್ಸಿನ ಒಂದು ವೃತ್ತವಾದರೂ ಅಲ್ಲಿ ಇದಕ್ಕೆ ಅಂಥ ಇತರ ವೃತ್ತಗಳಂತೆ ಪ್ರಾಚಾರ್ಯವೂ ಪ್ರಸಿದ್ಧಿಯೂ ಇಲ್ಲವೆಂಬುದು ನಿಶ್ಚಯವಾಯಿತು. ಈವರೆಗೆ ಸಂಸ್ಕೃತದಲ್ಲಿ ದೊರೆತಿರುವ ಚಂಪಕಮಾಲೆಯ ನಿದರ್ಶನಗಳು ಆರೆಂಟು ಮಾತ್ರ. ಪೂರ್ವ ಚಾಳುಕ್ಯರಾಜ ಮುಮ್ಮಡಿ ಗುಣಗ ವಿಜಯಾದಿತ್ಯನ (844–88) ಸಾತಲೂರು ತಾಮ್ರಶಾಸನದೊಳಗಿನ ಅರಿನೃಪವಾಜಿ ವಾರಣ ಪದಾತಿ ಮಹಾಬ್ಧವಿರಾಮ ಮಾರುತಃ–ಎಂಬ, ಮಾಘಕವಿಯ (ಸು. 750) ಶಿಶುಪಾಲವಧದೊಳಗಿನ ತುರಗಶತಾಕುಲಸ್ಯ ಪರಿತಃ ಪರಮೇಕತುರಂಗ ಜನ್ಮನಃ ಎಂಬ ಆರಂಭವಿರುವ ಎರಡು ವೃತ್ತಗಳೂ ವಾಮನ (ಸು. 750–800), ರಾಜಶೇಖರ (880–920), ಮಮ್ಮಟ (ಸು. 1050–1110), ರುಯ್ಯಕ (ಸು. 1135–1150) ಮುಂತಾದ ಆಲಂಕಾರಿಕರ ಗ್ರಂಥಗಳೊಳಗಿನ ಹಾಗೂ ಸ್ವಯಂಭು ಪ್ರಾಕೃತದಲ್ಲಿಯೂ ಹೇಮಚಂದ್ರ ಸಂಸ್ಕೃತದಲ್ಲಿಯೂ ಲಕ್ಷ್ಯವಾಗಿ ಕೊಟ್ಟಿರುವ ಒಂದೊಂದು–ಒಟ್ಟಿಗೆ ಎರಡು ವೃತ್ತಗಳೂ ಅಮಿತಗತಿಯ ಸುಭಾಷಿತ ರತ್ನಸಂದೋಹ (994) ಮೊದಲಾದ ಪದ್ಯಸಂಕಲನಗಳೊಳಗಿನ ಸುಮಾರು ಆರೇಳು ವೃತ್ತಗಳೂ–ಇಷ್ಟು ಮಾತ್ರವೇ ಈವರೆಗೆ ಸಂಸ್ಕೃತಭಾಷೆಯಲ್ಲಿ ದೊರೆತಿರುವ ಚಂಪಕಮಾಲಾವೃತ್ತಗಳಾಗಿವೆ. ಇವುಗಳಲ್ಲಿ ಮಾಘಕವಿಯ ಒಂದು ವೃತ್ತದ ಹೊರತಾಗಿ ಉಳಿದವುಗಳಲ್ಲಿ ಪಿಂಗಲೋಕ್ತವಾದ ಯತಿಸ್ಥಾನ ಪಾಲಿತವಾಗಿಲ್ಲ; ಯತಿಭಂಗ ದೋಷಗಳು ಸಾಮಾನ್ಯ. ಅಮಿತಗತಿಯ ವೃತ್ತದಲ್ಲಿ ನಾಗವರ್ಮೋಕ್ತವಾದ ಯತಿಸ್ಥಾನದ ಪಾಲನೆಯಿದೆ. ಸಾತಲೂರು ತಾಮ್ರಶಾಸನದ ವೃತ್ತದಲ್ಲಿ ಆದಿಪ್ರಾಸವಿರುವುದು ಕುತೂಹಲಕರವಾಗಿದೆ.

ಕನ್ನಡ ಭಾಷೆಯ ಶಾಸನ ಮತ್ತು ಸಾಹಿತ್ಯಗ್ರಂಥಗಳಲ್ಲಿ ಚಂಪಕಮಾಲೆ ಹೇರಳವಾಗಿ ಪ್ರಯೋಗವಾಗಿದೆ. ಖ್ಯಾತಕರ್ಣಾಟಕಗಳೆಂದು (**ನೋಡಿ**) ಪ್ರಸಿದ್ಧವಾಗಿರುವ ಆರು ವರ್ಣಸಮಚತುಷ್ಪದಿಗಳಲ್ಲಿ ಇದು ಸೇರಿದೆ. ಅಷ್ಟು ಮಾತ್ರವಲ್ಲದೆ, ಅಚ್ಚ ಕನ್ನಡ ಮಾತುಗಳು ಈ ವೃತ್ತದ ಛಂದಸ್ಸಿನಲ್ಲಿ ಚೆನ್ನಾಗಿ ಹೊಂದಿಕೊಳ್ಳುತ್ತವೆ–ಎಂಬ ಕಾರಣದಿಂದಲೋ ಏನೋ ಇತರ ವರ್ಣವೃತ್ತಗಳಿಗಿಂತ ಹೆಚ್ಚಾಗಿಯೇ ಇದೂ ಗುರುಲಘು ವಿನ್ಯಾಸದಲ್ಲಿ ಇದನ್ನೇ ಹತ್ತಿರದಿಂದ ಹೋಲುವ ಉತ್ಪಲಮಾಲೆಯೂ ಅಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಶ್ರವಣಬೆಳ್ಗೊಳದ ಪ್ರಾಚೀನ ಕನ್ನಡ ಶಾಸನಗಳಲ್ಲಿ ಕವಿರಾಜಮಾರ್ಗ ಮತ್ತು ಪಂಪಕವಿಯ ಕೃತಿಗಳು ಮೊದಲಾದ ಕಡೆಗಳಲ್ಲಿ ಬಹುಸಂಖ್ಯೆಯಲ್ಲಿ ಇದು ಕಣ್ಣಿಗೆ ಬೀಳುತ್ತ ಹೋಗುತ್ತದೆ.

ಈ ವೃತ್ತದ ಮೂಲ ಎಲ್ಲಿ ? ಉತ್ಪಲ, ಶಾರ್ದೂಲ, ಸ್ರಗ್ಧರೆ–ಇವುಗಳ ಮೊದಲಿನ ಗುರುವಿಗೆ ಎರಡು ಲಘುಗಳನ್ನು ಇಟ್ಟು ಚಂಪಕ, ಮತ್ತೇಭ, ಮಹಾಸ್ರಗ್ಧರೆಗಳನ್ನು ಕನ್ನಡ ಕವಿಗಳು ಮಾಡಿಕೊಂಡಂತೆ ಕಾಣುವುದು ಎಂಬ ಒಂದು ಅಭಿಪ್ರಾಯವಿದೆ. ಶಾರ್ದೂಲವಿಕ್ರೀಡಿತ, ಸ್ರಗ್ಧರೆಗಳು ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವುದರಿಂದ ಮತ್ತೇಭವಿಕ್ರೀಡಿತ ಮತ್ತು ಮಹಾಸ್ರಗ್ಧರೆಗಳು ಅವುಗಳಿಂದ ಹುಟ್ಟಿರುವುದು ಸಾಧ್ಯ ; ಬಹುಶಃ ಹುಟ್ಟಿವೆ. ಆದರೆ ಉತ್ಪಲಮಾಲೆ ಅಲ್ಲಿ ಸ್ವಲ್ಪವೂ ಪ್ರಸಿದ್ಧವಿಲ್ಲ. ಅದರ ಲಕ್ಷಣವನ್ನು ಈಚೆಗೆ ಜಯಕೀರ್ತಿ ಹೇಮಚಂದ್ರರ ಹೊರತು ಇತರರಾರೂ ಹೇಳಿಲ್ಲ, ಅವಕ್ಕೆ ನಿದರ್ಶನಗಳೂ ದೊರೆತಿಲ್ಲ. ಇದನ್ನು ಗಮನಿಸಿದರೆ ಅಷ್ಟಿಷ್ಟು ಪ್ರಸಿದ್ಧವಾಗಿರುವ ಚಂಪಕಮಾಲೆಯ ಆದಿ ದ್ವಿಲಘುವಿಗೆ ಒಂದು ಗುರುವನ್ನಿಟ್ಟು ಉತ್ಪಲಮಾಲೆಯನ್ನೇ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಕಲ್ಪಿಸಿರಬಹುದೇ ಎಂಬ ಸಂದೇಹ ಹುಟ್ಟುತ್ತದೆ. ಅಂತೂ ಇದು ವಿಚಾರಣೀಯವಾದ್ದು. (ಟಿ.ವಿ.ವಿ.)

**ಚಂಪಾ :** ವಿಯಟ್ನಾಮಿನ ಆಗ್ನೇಯ ಭಾಗದಲ್ಲಿ ಟೂರೇನ್ ರೇವುಪಟ್ಟಣದಿಂದ ಕೇಪ್ ವರೆಲ್ಲವರೆಗಿನ ಕರಾವಳಿ ಪ್ರದೇಶಕ್ಕೆ ಪ್ರಾಚೀನ ಕಾಲದಲ್ಲಿದ್ದ ಹೆಸರು. ಇಂಡೋನೇಷ್ಯದ ಚಾಮ್ ಜನಾಂಗದವರು ಅಲ್ಲಿ ವಾಸಿಸುತ್ತಿದ್ದರು. ಅವರ ಸಂಸ್ಕೃತಿ ಬಹಳಮಟ್ಟಿಗೆ ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತವಾಗಿತ್ತು. **(ನೋಡಿ– ಚಾಮ್–ಜನ)**

ಚೀನೀಯರ ಇತಿಹಾಸಗಳಲ್ಲಿ 3ನೆಯ ಶತಮಾನದ ವೇಳೆಗೆ ಲಿನ್ ಯಿ ಎಂಬ ಹೆಸರಿನಲ್ಲಿ ಈ ರಾಜ್ಯದ ಮೊಟ್ಟಮೊದಲ ಉಲ್ಲೇಖ ದೊರೆಯುತ್ತದೆ. ಅಮರಾವತಿ (ಕ್ವಾಂಗ್ ನಾಮ್), ವಿಜಯ (ಬಿನ್‌ದಿನ್), ಕೌಥರ (ನ್ಹ ತ್ರಂಗ್) ಮತ್ತು ಪಂಡುರಂಗ (ಫನ್‌ರಂಗ್) ಎಂಬ ನಾಲ್ಕು ವಿಭಾಗಗಳನ್ನು ಇದು ಒಳಗೊಂಡಿತ್ತು. ಇಲ್ಲಿಯ ರಾಜಮನೆತನಗಳು ಪ್ರಬಲವಾದುವು. ಕ್ರಮೇಣ ಈ ಭಾಗಗಳೆಲ್ಲ ಒಂದೇ ಆಧಿಪತ್ಯಕ್ಕೊಳಪಟ್ಟುವು. 14ನೆಯ ಶತಮಾನದವರೆಗೆ ಹೆಚ್ಚು ಕಡಿಮೆ ಸ್ವತಂತ್ರ ರಾಜ್ಯವಾಗಿದ್ದ ಇದು ಅನಂತರ ವಿಯಟ್ನಾಂ ಜನರ ಅಧೀನಕ್ಕೆ ಒಳಪಟ್ಟಿತು.

3ನೆಯ ಶತಮಾನದ ಆರಂಭದವರೆಗೂ ಈ ಪ್ರದೇಶ ಚೀನೀಯರ ಅಂಕೆಯಲ್ಲಿತ್ತು. ಹಾನ್ ಮನೆತನ ಸು. 220ರ ವೇಳೆಗೆ ಚೀನದಲ್ಲಿ ಅಂತ್ಯಗೊಂಡಿತು. ಇದರ ಪ್ರಯೋಜನ ಪಡೆದ ಚಾಮ್ ಜನರು ತಮ್ಮದೇ ಆದ ರಾಜ್ಯವನ್ನು ಚಂಪಾದಲ್ಲಿ ಆರಂಭಿಸಿದರು. ಆದರೂ ಚೀನದ ಅರಸರು ಇವರ ಮೇಲೆ ಆಗಿಂದಾಗ್ಗೆ ಧಾಳಿ ಮಾಡಿ ಇವರು ತಮ್ಮ ಸಾರ್ವಭೌಮತ್ವವನ್ನು ಒಪ್ಪುವಂತೆ ಮಾಡುತ್ತಿದ್ದರು. ತಮ್ಮ ರಾಯಭಾರಿಗಳನ್ನು ಚೀನಕ್ಕೆ ಕಳುಹಿಸಿ, ಕ್ರಮವಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸಿ, ಚಂಪಾದ ಅರಸರು ತಮ್ಮ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವುದರಲ್ಲಿ ಯಶಸ್ವಿಗಳಾದರು.

ಚೀನದ ಲೇಖಕರ ಬರವಣಿಗೆಗಳಲ್ಲಿ ವರ್ಮ ಎಂದು ಅಂತ್ಯಗೊಳ್ಳುವ ಚಂಪಾ ದೇಶದ ಅರಸರ ಹೆಸರುಗಳು ಕಂಡುಬಂದಿವೆಯಾಗಿ ಇವರು ಭಾರತೀಯರಾಗಿರ ಬಹುದೆಂದು ಊಹಿಸಲಾಗಿದೆ. ಚಂಪಾದ ಮೊದಲ ಅರಸ ಫಾನ್ ಹಾಂಗ್ ಸು. 270ರಲ್ಲಿ ಕಾಣಿಸಿಕೊಳ್ಳುತ್ತಾನೆ. ಟಾನ್ ಕಿನ್ ವಿರುದ್ಧ ಈತ ಧಾಳಿ ನಡೆಸಿದ. ಆದರೆ ಅಲ್ಲಿಯವರು ಇವನನ್ನು ಕೆಲಕಾಲಾನಂತರ ಓಡಿಸಿದರು. ಅನಂತರದ ಫಾನ್ ಯಿ 50 ವರ್ಷಗಳಿಗೂ ಹೆಚ್ಚುಕಾಲ ಆಳಿದ. ಅವನ ಮಂತ್ರಿಯಾಗಿದ್ದ ವೆನ್ ಅವನ ಉತ್ತರಾಧಿಕಾರಿಯಾದ (336). 349ರಲ್ಲಿ ಅವನ ಮಗ ಫಾನ್ ಹೊ ರಾಜ್ಯವಾಳತೊಡಗಿದ. ಚೀನೀಯರ ವಿರುದ್ಧ ಹೋರಾಡಿ ತನ್ನ ತಂದೆ ಗೆದ್ದಿದ್ದ ಪ್ರದೇಶಗಳನ್ನು ಈತ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಒದಗಿತು. ನಿರಂತರವಾಗಿ ಚೀನದೊಡನೆ ಯುದ್ಧ ಮಾಡುವುದರಲ್ಲಿ ಈತ ತನ್ನ ಆಳ್ವಿಕೆಯ ಬಹುಭಾಗವನ್ನು ಕಳೆದ. ಅನಂತರ ಈತನ ಮಗ ಫಾನ್ ಹು–ತ ಪಟ್ಟಕ್ಕೆ ಬಂದ. ಚಂಪಾ ದೇಶದ ಇತಿಹಾಸದಲ್ಲಿ ಇವನು ಪ್ರಮುಖ.

ಆ ಕಾಲದ ಅನೇಕ ಸಂಸ್ಕೃತ ಶಾಸನಗಳು ಚಂಪಾದಲ್ಲಿ ದೊರೆತಿವೆ. ಇವುಗಳಲ್ಲಿ ಈ ಅರಸರ ಭಾರತೀಯ ಹೆಸರುಗಳಿವೆ. ಫಾನ್ ಹು–ತ ಎಂಬುವನೇ ಸಂಸ್ಕೃತ ಶಾಸನದ ಶ್ರೀ ಭದ್ರವರ್ಮ. ಇವನು ಶ್ರೀಮಾರ ರಾಜಕುಲಕ್ಕೆ ಸೇರಿದವನೆಂದು ಹೇಳಲಾಗಿದೆ. ಚೊ ದಿನ್ ಎಂಬಲ್ಲಿ ದೊರೆತ ಎರಡು ಶಾಸನಗಳು ಧರ್ಮ ಮಹಾರಾಜ ಭದ್ರವರ್ಮನ ಭದ್ರೇಶ್ವರಿ ಸ್ವಾಮಿ ಹೆಸರುಗಳನ್ನೊಳಗೊಂಡಿದೆ. ಈತ ಭದ್ರೇಶ್ವರಸ್ವಾಮಿ ದೇವಾಲಯವನ್ನು ಕಟ್ಟಿಸಿದ. ಭದ್ರವರ್ಮನ ಸಂತಾನಕ್ಕೆ ಶುಭವಾಗಲೆಂದು ಪ್ರಾರ್ಥನೆ ಒಂದು ಶಾಸನದಲ್ಲಿ ಇದೆ. ಇನ್ನೊಂದು ಶಾಸನವನ್ನು "ಶಿವದಾಸೋ ಬಧ್ಯತೇ" ಎಂದು ಓದಿ, ಶಿವನ ಪ್ರೀತ್ಯರ್ಥವಾಗಿ ನರನೊಬ್ಬನನ್ನು ಬಲಿ ಕೊಡುವುದನ್ನು ಇದು ಸೂಚಿಸುತ್ತದೆ ಎಂದು ಕೆಲವರು ಮೊದಲು ಅದಕ್ಕೆ ಅರ್ಥ ನೀಡಿದ್ದರು. ಆದರೆ ವಾಸ್ತವವಾಗಿ ಈ ಶಾಸನ "ಶಿವದಾಸೋ ವನ್ದ್ಯತೇ" ಎಂದಿದೆಯೆಂದೂ ಅರಸ ಶಿವಭಕ್ತನಾಗಿದ್ದನೆಂದಷ್ಟೇ ಸೂಚಿಸುತ್ತದೆ ಎಂದೂ ಇತ್ತೀಚೆಗೆ ತೋರಿಸಲಾಗಿದೆ. ಮೆಸಾನ್ ಎಂಬಲ್ಲಿ ಈತ ಭದ್ರೇಶ್ವರ ಸ್ವಾಮಿಯ ದೇವಾಲಯವನ್ನು ಕಟ್ಟಿಸಿದನೆಂದು ಅಲ್ಲಿ ದೊರೆತ ಶಾಸನ ತಿಳಿಸುತ್ತದೆ. ಅರಸನ ಹೆಸರನ್ನೇ ದೇವಾಲಯಗಳಿಗೆ ಇಡುವ ಪದ್ಧತಿ ಇಲ್ಲಿ ಆರಂಭವಾದದ್ದು ಗಮನಾರ್ಹ. ಭದ್ರೇಶ್ವರಾಲಯ ಅಗ್ನಿಗೆ ಆಹುತಿಯಾಯಿತೆಂದು ಅನಂತರದ ಶತಮಾನದಲ್ಲಿ ಆಳಿದ ಶಂಭುವರ್ಮನೆಂಬುವನು ಇದನ್ನು ಜೀರ್ಣೋದ್ಧಾರ ಮಾಡಿದನೆಂದೂ ಅಲ್ಲಿಯ ಇನ್ನೊಂದು ಶಾಸನದಲ್ಲಿ ಹೇಳಿದೆ. ಈ ದೇವಾಲಯ ಆಗ ಶಂಭು ಭದ್ರೇಶ್ವರ ಎನಿಸಿಕೊಂಡಿತು. 24 ಸಾಲುಗಳ ಆ ಶಾಸನ, ಪದ್ಯ–ಗದ್ಯ ಮಿಶ್ರಿತ ಸಂಸ್ಕೃತದಲ್ಲಿದೆ. ಮಂದಾಕ್ರಾಂತ, ಮಾಲಿನಿ ಮತ್ತು ಉಪೇಂದ್ರವಜ್ರ ವೃತ್ತಗಳನ್ನು ಅದರಲ್ಲಿ ಬಳಸಲಾಗಿದೆ. ಭದ್ರವರ್ಮ ಮತ್ತು ಶಂಭುವರ್ಮರ ನಡುವೆ ರುದ್ರವರ್ಮನೆಂಬ ಇನ್ನೊಬ್ಬ ಅರಸ ಆಳಿದ. ಅವರ ಪರಸ್ಪರ ಸಂಬಂಧಗಳು ತಿಳಿದಿಲ್ಲ. ಅವರ ಕಾಲದಲ್ಲಿ ಚೀನೀ ಅರಸರೊಂದಿಗೆ ಮೇಲಿಂದ ಮೇಲೆ ನಡೆದ ಕದನಗಳು ಅವರ ಬಲವನ್ನು ಕುಗ್ಗಿಸಿದವು. ದಕ್ಷನಾದ ಅರಸನಿಲ್ಲದೆ ಆಂತರಿಕ ಕಲಹಗಳುಂಟಾದವು. ಭದ್ರವರ್ಮನಿಂದ ಆರಂಭವಾದ ಈ ಅರಸರ ಆಳ್ವಿಕೆ ಅಂತ್ಯಗೊಂಡಿತು. ಈ ವಂಶದ ಅರಸರಲ್ಲಿ ಪ್ರಕಾಶಧರ್ಮ ಪ್ರಮುಖನಾದವನು. ವಿಕ್ರಾಂತವರ್ಮನೆಂಬ ಹೆಸರಿನಿಂದ ಖ್ಯಾತನಾದ ಈತ ವಿಷ್ಣು ದೇವಾಲಯಗಳನ್ನು ಕಟ್ಟಿಸಿದ. ವೈಷ್ಣವಧರ್ಮ ಇವನ ಕಾಲದಲ್ಲಿ ಹೆಚ್ಚಾಗಿ ಪ್ರಚಾರವಾಯಿತು.

8ನೆಯ ಶತಮಾನದಲ್ಲಿ ಇಲ್ಲಿ ಪಂಡುರಂಗ ಮನೆತನ ಅಸ್ತಿತ್ವಕ್ಕೆ ಬಂತು. ಚೀನದ ಇತಿಹಾಸಕಾರರು ಈ ರಾಜ್ಯವನ್ನು ಮೊದಲಿನಂತೆ ಲಿನ್ ಯಿ ಎಂದು ಕರೆಯದೆ ಹ್ವಾನ್ ವಾಂಗ್ ಎಂದು ಕರೆದಿದ್ದಾರೆ. ಪಂಡುರಂಗ ಮನೆತನ ಚಂಪಾದಲ್ಲಿ ಆಳಿದ 5ನೆಯ ವಂಶವೆಂದು ಕೆಲವರು ಗಣಿಸಿದ್ದಾರೆ. ಪೃಥ್ವೀಂದ್ರವರ್ಮ ಅವರ ಮೊದಲ ಅರಸ. ಇವನ ಕಾಲದಲ್ಲಿ ಶೈವಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಿತು. ಲಿಂಗಗಳ ಪ್ರತಿಷ್ಠೆ ಮಾಡಿ, ಅವಕ್ಕೆ ವಿವಿಧ ಆಕೃತಿಗಳ ಲೋಹದ ಮುಖವಾಡಗಳನ್ನು ಹೊದಿಸುವ ಪದ್ಧತಿ ಆರಂಭವಾಯಿತು. ಜಾವಾ ದ್ವೀಪದ ನಾವಿಕರು ಚಂಪಾದ ಮೇಲೆ ದಾಳಿ ಮಾಡಿ ಅಲ್ಲಿಯ ದೇವಾಲಯದ ದ್ರವ್ಯವನ್ನು ದೋಚಿದಾಗೊಮ್ಮೆ ಸತ್ಯವರ್ಮನೆಂಬ ಅರಸ ಅವರನ್ನು ಸೋಲಿಸಿ, ಅವರನ್ನು ಬೆಂಕೊಂಡು, ಅವರು ಸಮುದ್ರದಲ್ಲಿ ಎಸೆದು ಹೋದ ದೇವರ ವಿಗ್ರಹಗಳನ್ನು ಪುನಃ ಪ್ರತಿಷ್ಠಾಪಿಸಿದ. ಸತ್ಯವರ್ಮನ ಬಳಿಕ ಇಂದ್ರವರ್ಮ ಮತ್ತು ಹರಿವರ್ಮರು ಆಳಿದರು. ಹರಿವರ್ಮ ಜಾವದ ಧಾಳಿಯನ್ನು ಯಶಸ್ವಿಯಾಗಿ ಎದುರಿಸಿದನಲ್ಲದೆ, ಚೀನ ಮತ್ತು ಕಾಂಬೋಡಿಯಗಳ ವಿರುದ್ಧವಾಗಿಯೂ ಸೈನ್ಯಾಚರಣೆ ನಡೆಸಿದ.

ಇಮ್ಮಡಿ ಇಂದ್ರವರ್ಮ (854–898) ಆರನೆಯ ಭೃಗುವಂಶದ ಮೂಲಪುರುಷ. ಈ ವಂಶದ ಅರಸರು ಅನೇಕ ಹೊಸ ದೇವಾಲಯಗಳನ್ನು ಕಟ್ಟಿಸಿದ್ದಲ್ಲದೆ ಭಗ್ನವಾಗಿದ್ದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದರು. 10ನೆಯ ಶತಮಾನದ ಆರಂಭದಲ್ಲಿ (907) ಚೀನದ ಟಾಂಗ್ ಮನೆತನ ಅಳಿದು ಅನ್ನಾಂ ಜನರ ರಾಜ್ಯ ಪ್ರಬಲವಾಯಿತು. ಈ ಹೊಸ ರಾಜ್ಯಕ್ಕೂ ಭೃಗುವಂಶದ ಅರಸರಿಗೂ ನಡುವೆ ವಿರಸವೇರ್ಪಟ್ಟು, ಪರಮೇಶ್ವರ ವರ್ಮ ಅನ್ನಾಂ ರಾಜ್ಯದ ರಾಯಭಾರಿಯನ್ನು ಸೆರೆಮನೆಯಲ್ಲಿಟ್ಟನೆಂಬ ಕಾರಣದಿಂದ ಆ ರಾಜ್ಯದ ಅರಸನಾದ ಲೆ ಹೋನ್ ಚಂಪಾವನ್ನು ಮುತ್ತಿ, ಪರಮೇಶ್ವರ ವರ್ಮವನ್ನು ಕೊಂದ. ರಾಜಧಾನಿಯಾದ ಇಂದ್ರಪುರವನ್ನು ನಾಶಮಾಡಿದ. ಇದರ ಫಲವಾಗಿ ಚಂಪಾದಲ್ಲಿ ಸ್ವಲ್ಪಕಾಲ ಅರಾಜಕತೆ ಉಂಟಾಯಿತು. ಲೂ ಕಿ–ಟಾಂಗ್ ಎಂಬ ಅನ್ನಾಂ ನಾಯಕನೊಬ್ಬ ಚಂಪಾದ ಅರಸನೆಂದು ಘೋಷಿಸಿಕೊಂಡು ಆಳತೊಡಗಿದ.

ಆದರೆ ವಿಜಯ (ಬಿನ್ ದಿನ್) ಎಂಬ ನಗರದಲ್ಲಿ ಚಾಮ್ ಪ್ರಜೆಯೊಬ್ಬ ಪ್ರಾಮುಖ್ಯ ಗಳಿಸಿ, ಹರಿವರ್ಮನೆಂಬ ಹೆಸರಿನಿಂದ ಚಂಪಾರಾಜ್ಯದ ಅರಸನಾದ. ಅವನನ್ನು ಅಡಗಿಸಲು ಮಾಡಿದ ಯತ್ನಗಳು ನಿರರ್ಥಕವಾದವು. ಈತ 7ನೆಯ ವಂಶದ ಮೊದಲ ಅರಸ. ಇವನಿಗೆ ಚೀನದ ಅರಸ ಮನ್ನಣೆ ನೀಡಿದ. ಕ್ರಮೇಣ ಈತ ರಾಜಧಾನಿಯನ್ನು ಇಂದ್ರಪುರಕ್ಕೆ ಬದಲಾಯಿಸಿದನಾದರೂ ಅನಂತರ ಬಂದ ವಿಜಯಶ್ರೀ ಎಂಬುವನು ಅನ್ನಾಂ ರಾಜ್ಯದ ಆಕ್ರಮಣಗಳಿಗೆ ಹೆದರಿ ಪುನಃ ವಿಜಯನಗರಕ್ಕೆ ರಾಜಧಾನಿಯನ್ನು ಬದಲಾಯಿಸಬೇಕಾಯಿತು. 1041ರಲ್ಲಿ ವಿಜಯಶ್ರೀ ಮರಣ ಹೊಂದಿದ ಬಳಿಕ ಚೀನದ ಅರಸರ ಸಹಾಯದಿಂದ ಇಮ್ಮಡಿ ಜಯಸಿಂಹವರ್ಮ ಪಟ್ಟಕ್ಕೆ ಬಂದ. ಆದರೆ ಅವನ ಮೇಲೆ ದಂಡೆತ್ತಿ ಬಂದ ಅನ್ನಾಂ ಸೈನ್ಯ ರಾಜಧಾನಿಯನ್ನು ಆಕ್ರಮಿಸಿ ಅವನನ್ನು ಕೊಂದು ರಾಜ್ಯವನ್ನು ಕೊಳ್ಳೆ ಹೊಡೆಯಿತು. ಇದರೊಂದಿಗೆ 7ನೆಯ ಅರಸುಮನೆತನ ಅಂತ್ಯಗೊಂಡಿತು.

8ನೆಯ ಮನೆತನ ಜಯಪರಮೇಶ್ವರ ವರ್ಮನಿಂದ ಆರಂಭವಾಯಿತು. ಈತ ಆಂತರಿಕ ದಂಗೆಗಳನ್ನು ಅಡಗಿಸಿ, ಚೀನ ಮತ್ತು ಅನ್ನಾಮ್ ಗಳಿಗೆ ರಾಯಭಾರಿಗಳನ್ನು ಕಳುಹಿಸಿ ಅವುಗಳ ಅರಸರ ಸ್ನೇಹ ಬೆಳೆಸಿದ. ಈ ಮನೆತನದ ಕೊನೆಯ ಅರಸ ಮುಮ್ಮಡಿ ರುದ್ರವರ್ಮ. 1069ರಲ್ಲಿ ಈತನಿಗೂ ಅನ್ನಾಂ ರಾಜ್ಯದ ಅರಸನಿಗೂ ನಡುವೆ ಭೀಕರ ಕದನ ಉಂಟಾಗಿ ಅನ್ನಾಂ ಅರಸನಾದ ಲಿ ಥಾನ್ ತೋನ್ ರಾಜಧಾನಿಯನ್ನು ಮುತ್ತಿ, ಇವನನ್ನು ಸೆರೆಹಿಡಿದು ರಾಜಧಾನಿಯನ್ನು ನಾಶಗೊಳಿಸಿದ. ರುದ್ರವರ್ಮ ತನ್ನ ರಾಜ್ಯದ ಬಹುಭಾಗವನ್ನು ಕಳೆದುಕೊಂಡ. ಆತ ಬಿಡುಗಡೆ ಹೊಂದಿ ಹಿಂದಿರುಗಿದನಾದರೂ ಚಂಪಾ ರಾಜ್ಯದ ಪರಿಸ್ಥಿತಿ ಹದಗೆಟ್ಟಿತು.

ಥಾಂಗ್ ಈ ರಾಜ್ಯದ 9ನೆಯ ವಂಶದ ಮೊದಲ ಅರಸ. ಈತ 4ನೆಯ ಹರಿವರ್ಮನೆಂಬ ಹೆಸರಿನಿಂದ ಆಳತೊಡಗಿದ. ಈತ ಅನ್ನಾಂ ದೇಶದೊಡನೆ ಮಿತ್ರತ್ವ ಸಾಧಿಸಿ, ತನ್ಮೂಲಕ ರಾಜ್ಯದಲ್ಲಿ ಶಾಂತಿ ನೆಲೆಗೊಳ್ಳುವಂತೆ ಮಾಡಿ, ರಾಜ್ಯದ ಪ್ರಗತಿಗೆ ಹೇತುವಾದ. ಮಧ್ಯೆಮಧ್ಯೆ ತೊಡಕುಗಳುಂಟಾದರೂ 13ನೆಯ ಶತಮಾನದ ಮಧ್ಯಭಾಗದವರೆಗೂ ಈ ಎರಡೂ ರಾಜ್ಯಗಳ ನಡುವಣ ಸಂಬಂಧ ಒಟ್ಟಿನಲ್ಲಿ ಸುಮುಖವಾಗಿತ್ತು. ಆದರೆ ಖ್ಮೇರ್ ಜನಾಂಗದವರು ತಮ್ಮ ಪ್ರಭುತ್ವವನ್ನು ಚಂಪಾ ರಾಜ್ಯದ ಮೇಲೆ ಹೇರಲು ಯತ್ನಿಸಿ ಚಂಪಾದ ಹೊಸ ಶತ್ರುಗಳಾದರು.

1145ರಲ್ಲಿ ಅಂಗ್‌ಕೋರ್ ನ ಇಮ್ಮಡಿ ಸೂರ್ಯವರ್ಮ ಚಂಪಾವನ್ನು ಮುತ್ತಿ 3ನೆಯ ಜಯ ಇಂದ್ರವರ್ಮನನ್ನು ಹೊರದೂಡಿದ. ನಾಲ್ಕೈದು ವರ್ಷಗಳ ಕಾಲ ಈ ರಾಜ್ಯದ ಉತ್ತರ ಭಾಗ ಅವನ ವಶದಲ್ಲಿತ್ತು. ಆದರೆ ಪಂಡುರಂಗದಲ್ಲಿ ಹೊಸ ಮನೆತನವನ್ನಾರಂಭಿಸಿದ (1147) ಜಯಹರಿ ವರ್ಮ ಮೂರು ನಾಲ್ಕು ವರ್ಷಗಳಲ್ಲಿ ವಿಜಯವನ್ನು ಆಕ್ರಮಿಸಿ ರಾಜ್ಯವನ್ನು ಒಟ್ಟುಗೂಡಿಸಿದ. 1167ರಲ್ಲಿ ಹರಿವರ್ಮನ ಮಗನನ್ನು ಬದಿಗೆ ಸರಿಸಿ ರಾಜನಾದ ಜಯ ಇಂದ್ರವರ್ಮ ಕಂಬುಜದ ಮೇಲೆ ಸೇಡು ತೀರಿಸಿಕೊಳ್ಳಲು ಸನ್ನದ್ಧನಾಗಿ 1177ರಲ್ಲಿ ಮೆಕಾಂಗ್ ಪ್ರದೇಶವನ್ನು ದಾಟಿ ಅಂಗ್ ಕೋರ್ ನಗರವನ್ನು ಮುತ್ತಿ ಕೊಳ್ಳೆಹೊಡೆದ. ಇದು ಚಂಪಾ ಹಾಗು ಕಂಬುಜ ದೇಶಗಳ ನಡುವಣ ವಿರೋಧವನ್ನು ಹೆಚ್ಚಿಸಿತು. 13ನೆಯ ಶತಮಾನದ ಆದಿಭಾಗದಲ್ಲಿ ಕಂಬುಜದ ಕೈ ಮೇಲಾಗಿ ಚಂಪಾ ತನ್ನ ವ್ಯಕ್ತಿತ್ವವನ್ನು ಎರಡು ದಶಕಗಳ ಕಾಲ ಕಳೆದುಕೊಂಡಿತು. 1220ರ ಬಳಿಕ 2ನೆಯ ಜಯ ಪರಮೇಶ್ವರವರ್ಮನ ಕಾಲದಲ್ಲಿ ಚಂಪಾ ಪುನಃ ಚೇತರಿಸಿಕೊಂಡಿತಾದರೂ ಅವನ ಅನಂತರ ಬಂದ ಅರಸರ ಕಾಲದಲ್ಲಿ ಮಂಗೋಲರು ಕುಬ್ಲೈಖಾನನ ನೇತೃತ್ವದಲ್ಲಿ ಈ ಪ್ರದೇಶದ ಮೇಲೆ ನುಗ್ಗಿದರು. ಹಲವಾರು ಘರ್ಷಣೆಗಳ ಬಳಿಕ ಚಂಪಾ ರಾಜ್ಯ ದುರ್ಬಲವಾಯಿತು. 14ನೆಯ ಶತಮಾನದ ಆರಂಭದಲ್ಲಿ ಅನ್ನಾಂ ರಾಜ್ಯ ಮತ್ತೊಮ್ಮೆ ಪ್ರಬಲವಾಗಿ ಚಂಪಾವನ್ನು ತನ್ನ ಅಧೀನಕ್ಕೆ ತೆಗೆದುಕೊಂಡಿತು. ಚಂಪಾ ರಾಜ್ಯದ ಅನಂತರದ ಇತಿಹಾಸ ಆಂತರಿಕ ಕಲಹಗಳಿಂದ ಕೂಡಿದ್ದಾಗಿದೆ. 15ನೆಯ ಶತಮಾನದ ಕೊನೆಗೆ ಈ ರಾಜ್ಯ ಅನ್ನಾಂ ರಾಜ್ಯದಲ್ಲಿ ಸೇರಿಹೋಯಿತು.

ಚಂಪಾ ರಾಜ್ಯದಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವ ಬಹಳಮಟ್ಟಿಗೆ ಕಂಡುಬಂದಿದೆ. ಅಲ್ಲಿ ದೊರೆತ ಅನೇಕ ಶಾಸನಗಳು ಸಂಸ್ಕೃತ ಭಾಷೆಯಲ್ಲಿವೆ. ಅಲ್ಲಿಯ ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು ಭಾರತೀಯ ಶೈಲಿಯಿಂದ ಪ್ರಭಾವಿತವಾದವು. ಪ್ರ.ಶ. 4ನೆಯ ಶತಮಾನದಲ್ಲಿ ಆಳಿದ ಗುಪ್ತ ಅರಸರು ಈ ಸಂಸ್ಕೃತಿ ಪ್ರಸಾರಕ್ಕೆ ಕಾರಣರೆಂದು ಊಹಿಸಲಾಗಿತ್ತು. ಆದರೆ ಇತ್ತೀಚೆಗೆ ಅಲ್ಲಿಯ ಶಾಸನಗಳ ಲಿಪಿ ಭಾಷೆ ಮುಂತಾದವುಗಳ ಪುನರ್ ಪರಿಶೀಲನೆ

ನಡೆಯುತ್ತಿದೆ. ಪಲ್ಲವರೂ ಕರ್ನಾಟಕದಲ್ಲಿ ಆಳಿದ ಕದಂಬ ಹಾಗೂ ಬಾದಾಮಿಯ ಚಾಳುಕ್ಯರೂ ಈ ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ನೆರವಾಗಿದ್ದರೆಂಬ ವಿಷಯ ಗೋಚರವಾಗುತ್ತದೆ. ಶೈವ, ವೈಷ್ಣವ ಧರ್ಮಗಳೇ ಅಲ್ಲದೆ ಬೌದ್ಧಧರ್ಮದ ಪರಿಚಯ ಸಹ ಅಲ್ಲಿಯ ಜನರಿಗೆ ಇತ್ತು. ಅಲ್ಲಿ ಅನೇಕ ಬೌದ್ಧ ಸ್ತೂಪಗಳಿದ್ದುವೆಂದು ಚೀನೀ ಯಾತ್ರಿಕರ ಬರೆವಣಿಗೆಗಳಿಂದ ತಿಳಿದಿದೆ. ಭಾರತದ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳು ಆ ಜನರನ್ನು ಆಕರ್ಷಿಸಿದ್ದುವು. ನಮ್ಮ ಧರ್ಮಶಾಸ್ತ್ರಗಳ, ಸಾಹಿತ್ಯಕೃತಿಗಳ ಪರಿಚಯ ಅವರಿಗೆ ಇತ್ತು. ಈ ವಿಷಯ ಅವರ ಶಾಸನಗಳ ಉಲ್ಲೇಖಗಳಿಂದ ತಿಳಿದುಬಂದಿದೆ. (ಜಿ.ಬಿ.ಆರ್.)

**ಚಂಪಾ**[2] **:** ಬಿಹಾರ ರಾಜ್ಯದ ಭಾಗಲ್‌ಪುರದಿಂದ ಪಶ್ಚಿಮಕ್ಕೆ ಸುಮಾರು 6 ಕಿಮೀ ದೂರದಲ್ಲಿರುವ ಒಂದು ಪ್ರಾಚೀನ ನಗರ; ಭಾಗಲ್‌ಪುರದ ಬಳಿ ಹರಿಯುವ ಒಂದು ನದಿ. ಚಂಪಾ ನಗರ ಹಿಂದೆ ಲೋಮಪಾದರಾಜನ ರಾಜಧಾನಿಯಾಗಿತ್ತೆಂದು ರಾಮಾಯಣದಿಂದ ತಿಳಿದುಬರುತ್ತದೆ. ಹಿಂದೆ ಇದಕ್ಕೆ ಮಾಲಿನೀ ಎಂದು ಹೆಸರಿತ್ತೆಂದೂ ಅನಂತರ ಇಲ್ಲಿ ಚಂಪಾ ದೊರೆ ಆಳುತ್ತಿದುದ್ದರಿಂದ ಚಂಪಾಪುರಿ, ಚಂಪಾನಗರ ಎಂಬ ಹೆಸರು ಪ್ರಾಪ್ತವಾಯಿತೆಂದೂ ಹೇಳಲಾಗಿದೆ. ಚಂಪಕ ವೃಕ್ಷಗಳು ಇದರ ಸುತ್ತ ಹೇರಳವಾಗಿ ಬೆಳೆಯುವುದರಿಂದ ಈಗಿನ ಹೆಸರು ಬಂದಿರಬಹುದೆಂದು ಒಂದು ಊಹೆ. ಮಹಾಭಾರತ ಕಾಲದಲ್ಲಿ ದುರ್ಯೋಧನ ಕರ್ಣನನ್ನು ಅಂಗದೇಶಾಧಿಪತಿಯನ್ನಾಗಿ ಮಾಡಿದಾಗ ಆ ದೇಶದ ರಾಜಧಾನಿಯಾಗಿದ್ದ ಕರ್ಣಪುರಿಯೇ ಈಗಿನ ಚಂಪಾನಗರವೆಂದು ಹೇಳಲಾಗಿದೆ.

ಜೈನ ಔಪಪತ್ತಿಕ ಸೂತ್ರದಲ್ಲಿ ಈ ನಗರವನ್ನು ಪೃಥ್ವಿಯ ಮೇಲಿನ ಸ್ವರ್ಗ ಎಂದು ವರ್ಣಿಸಲಾಗಿದೆ. 12ನೆಯ ತೀರ್ಥಂಕರನಾದ ವಾಸುಪೂಜ್ಯ ಹುಟ್ಟಿದ ಸ್ಥಳ ಚಂಪಾ; ಆತನಿಗೆ ಕೇವಲಜ್ಞಾನವೂ ನಿರ್ವಾಣವೂ ಇಲ್ಲಿ ಪ್ರಾಪ್ತವಾದುವೆಂದು ಹೇಳಲಾಗಿದೆ. ಮಹಾವೀರನ ಶಿಷ್ಯ ಚಂದನವಾಲಾ ಇಲ್ಲಿಯೇ ಹುಟ್ಟಿದ. ಕರಕಂಡೂ ಎಂಬ ರಾಜ ಇಲ್ಲಿ ಪಾರ್ಶ್ವನಾಥ ಮೂರ್ತಿಯನ್ನು ಸ್ಥಾಪಿಸಿದನೆನ್ನಲಾಗಿದೆ. ಶ್ರೇಣಿಕ ರಾಜನ ಮಗನಾದ ಕುಣಿಕನೆಂಬುವನು ರಾಜಗೃಹವನ್ನು ಬಿಟ್ಟು ಚಂಪಾವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ತಿಳಿದುಬರುತ್ತದೆ.

ಚಂಪಾನದಿಗೆ ಹಿಂದೆ ಮಾಲಿನೀ ಎಂದೂ ಹೆಸರಿತ್ತು. ಕಾಳಿದಾಸನ ಶಾಕುಂತಲದಲ್ಲಿ ಕಣ್ವ ಋಷಿಯ ಆಶ್ರಮ ಮಾಲಿನೀ ತೀರದಲ್ಲಿದ್ದ ವಿಚಾರ ಬರುತ್ತದೆ. ಇದೊಂದು ಪವಿತ್ರ ನದಿಯೆಂದು ಪದ್ಮಪುರಾಣದಲ್ಲಿ ವರ್ಣಿಸಲಾಗಿದೆ. *

**ಚಂಪಾರಣ್ :** ಬಿಹಾರ ರಾಜ್ಯದ ವಾಯವ್ಯದಲ್ಲಿರುವ ಒಂದು ಜಿಲ್ಲೆ. ತಿರಹುತ್ ವಿಭಾಗಕ್ಕೆ ಸೇರಿದೆ. ಉತ್ತರದಲ್ಲಿ ನೇಪಾಳ, ಪಶ್ಚಿಮದಲ್ಲಿ ಗಂಡಕ್ ನದಿ, ಪೂರ್ವದಲ್ಲಿ ಭಾಗಮತೀ ನದಿ, ದಕ್ಷಿಣದಲ್ಲಿ ಮುಜಫರ್‌ಪುರ ಜಿಲ್ಲೆ–ಇವು ಮೇರೆಗಳು. ವಿಸ್ತೀರ್ಣ 5228 ಚ.ಕಿಮೀ. ಜನಸಂಖ್ಯೆ 3043044 (2001).

ಜಿಲ್ಲೆಯ ವಾಯವ್ಯ ಭಾಗದಲ್ಲಿ ಶಿವಾಲಿಕ್ ಶ್ರೇಣಿಯ ದುನ್ ಮತ್ತು ಸುಮೇಶ್ವರ ಬೆಟ್ಟಗಳಿವೆ. ಇವು ಅರಣ್ಯಾವೃತ. ಇಲ್ಲಿ ಸಾಲ್ ವೃಕ್ಷಗಳು ಹೆಚ್ಚು. ಸಮುದ್ರಮಟ್ಟಕ್ಕೆ ಸರಾಸರಿ 457 ಮೀ ಎತ್ತರದಲ್ಲಿರುವ 360 ಚ.ಕಿಮೀಗಳಷ್ಟು ವಿಸ್ತೀರ್ಣದ ಈ ಪ್ರದೇಶಕ್ಕೆ ದಕ್ಷಿಣದಲ್ಲಿ ನುರುಜುಗಲ್ಲಿನಿಂದ ಕೂಡಿದ ಕಿರು ಪ್ರದೇಶವೂ ಅದಕ್ಕೆ ದಕ್ಷಿಣದಲ್ಲಿ ಹುಲ್ಲಿನಿಂದ ಕೂಡಿದ ಜವುಗು ನೆಲವೂ (ಟೆರಾಯ್) ಇವೆ. ಜಿಲ್ಲೆಯ ಉಳಿದ ಭಾಗ ಮೆಕ್ಕಲುಮಣ್ಣಿನ ಮೈದಾನ. ಅಲ್ಲಲ್ಲಿ ಮಾವಿನ ಮರಗಳ ತೋಪುಗಳಿವೆ. ಗಂಡಕ್, ದೊಡ್ಡ ಗಂಡಕ್, ಧನೌತೀ, ಭಾಗಮತೀ ಮತ್ತು ಲೇಲ್‌ವಾಗೀ–ಇವು ಜಿಲ್ಲೆಯ ನದಿಗಳು. ಜಿಲ್ಲೆಯಲ್ಲಿ 360.ಚ.ಕಿಮೀಗಳಷ್ಟು ಸರೋವರಗಳಿವೆ. ವಾರ್ಷಿಕ ಸರಾಸರಿ ಉಷ್ಣತೆ $76^{0}$ ಫ್ಯಾ. ಮಳೆ ಸರಾಸರಿ $55^{0}$. ಅರಣ್ಯಪ್ರದೇಶದಲ್ಲಿ ಮರಗಳನ್ನು ಕಡಿದು ಸಾಗಿಸುವುದು, ದನಗಳನ್ನು ಮೇಯಿಸುವುದು ಮುಖ್ಯ ಕಸುಬುಗಳು. ಗೋಧಿ, ಸೆಣಬು, ಮುಸುಕಿನಜೋಳ, ಎಣ್ಣೆಬೀಜಗಳು, ಗಸಗಸೆ, ನೀಲಿ ಮುಖ್ಯ ಬೆಳೆಗಳು. ಈಚೆಗೆ ನೀಲಿಯ ಬದಲು ಕಬ್ಬು ಹೆಚ್ಚಾಗಿ ಬೆಳೆಯುತ್ತಿದೆ. ತೆವುರ್ ಧಾಕಾ ಮತ್ತು ತ್ರಿವೇಣಿ ಕಾಲುವೆಗಳಿಂದ 1,35,000 ಎಕರೆಗಳಿಗೆ ನೀರಾವರಿ ಸೌಲಭ್ಯವುಂಟು. ಮಳೆಗಾಲದಲ್ಲಿ ನದಿಗಳು ತುಂಬಿ ಹರಿದು ಅನಾಹುತ ಮಾಡುತ್ತವೆ. ನದಿಗಳ ಪಾತ್ರಗಳೂ ಆಗಾಗ ಬದಲಾಗುತ್ತದೆ. ಜಿಲ್ಲೆಯ ನದಿಗಳಲ್ಲಿ ಸಾಲಿಗ್ರಾಮಗಳು ಸಿಕ್ಕುತ್ತವೆ. ಬಂಗಾರದ ಚಿಕ್ಕ ಚಿಕ್ಕ ಕಣಗಳೂ ಪ್ರವಾಹದಲ್ಲಿ ತೇಲಿ ಬರುವುದುಂಟು. ಕೆಲವು ತೀರಗಳಲ್ಲಿ ಸುಣ್ಣಕಲ್ಲು ಸಿಕ್ಕುತ್ತದೆ. ಕ್ಷಾರಮಿಶ್ರಿತ ಮಣ್ಣಿನಿಂದ ಉಪ್ಪು ತೆಗೆಯುತ್ತಾರೆ.

ಕೈಮಗ್ಗದ ಬಟ್ಟೆ, ಚಾದರ, ಕಂಬಳಿಗಳು, ಮಣ್ಣಿನ ಪಾತ್ರೆಗಳು ಮುಂತಾದವು ಇಲ್ಲಿ ತಯಾರಾಗುತ್ತವೆ. ಬೆಟ್ಟಿಹಾದಲ್ಲಿ ಸಕ್ಕರೆಯನ್ನು ಶುದ್ಧಗೊಳಿಸುವ ಕಾರ್ಖಾನೆಯಿದೆ. ಸರಾಹ್‌ದಲ್ಲಿ ಸಕ್ಕರೆ ಕಾರ್ಖಾನೆಯುಂಟು. ಸಕ್ಕರೆ ಮತ್ತು ಅಕ್ಕಿಗಿರಣಿಗಳ ಸಂಖ್ಯೆಯ ದೃಷ್ಟಿಯಿಂದ ಈ ಜಿಲ್ಲೆ ಬಿಹಾರ ರಾಜ್ಯದಲ್ಲೇ ಪ್ರಥಮ. ನೀಲಿಯ ವ್ಯಾಪಾರವೂ ನಡೆಯುತ್ತದೆ.

ನೇಪಾಲಕ್ಕೆ ಹೋಗುವ ಮುಖ್ಯರಸ್ತೆ ಚಂಪಾರಣ್ ಮುಖಾಂತರ ಹಾದು ಹೋಗುತ್ತದೆ. ನೀಲಿ, ಎಳ್ಳು, ಸಕ್ಕರೆ ಇಲ್ಲಿಂದ ರಫ್ತಾಗುತ್ತವೆ. ಬಟ್ಟೆ, ಉಪ್ಪು, ಸೀಮೆಎಣ್ಣೆ, ಕಲ್ಲಿದ್ದಲು ಮತ್ತು ತಂಬಾಕು ಆಮದಾಗುತ್ತವೆ. ವ್ಯಾಪಾರ ಸಾಮಾನ್ಯವಾಗಿ ನದಿಗಳ ಮುಖಾಂತರ ನಡೆಯುತ್ತದೆ.

**ಇತಿಹಾಸ :** ಹಿಂದೆ ಚಂಪಾರಣ್ ದಟ್ಟ ಕಾಡಾಗಿತ್ತು. ಇಲ್ಲಿ ರಾಮ ಮತ್ತು ಲವಕುಶರ ಯುದ್ಧ ಸಂಭವಿಸಿದ್ದರಿಂದ ಈ ಸ್ಥಳಕ್ಕೆ ಸಂಗ್ರಾಮಪುರ ಎನ್ನುವ ಹೆಸರು ಬಂತೆಂದು ಹೇಳಲಾಗಿದೆ. ಜಿಲ್ಲೆಯ ಅನೇಕ ಭಾಗಗಳಿಗೆ ಹಿಂದು ಋಷಿಗಳ ಹೆಸರಿನ್ನಿಡಲಾಗಿದೆ. ಈ ಭಾಗ ಮಿಥಿಲಾ ರಾಜ್ಯದಲ್ಲಿತ್ತೆನ್ನಲಾಗಿದೆ. ಇದು ಸ್ವಲ್ಪ ಕಾಲ ನೇಪಾಳದ ರಾಜರ ವಶದಲ್ಲಿದ್ದಿರಬಹುದು. 1765ರಲ್ಲಿ ಇದು ಈಸ್ಟ್ ಇಂಡಿಯ ಕಂಪನಿಯ ಆಡಳಿತಕ್ಕೆ ಸೇರಿತು. 1912ರಲ್ಲಿ ಬಿಹಾರ ಪ್ರಾಂತ್ಯದಲ್ಲಿ ಸಮಾವೇಶಗೊಂಡಿತು. ಈಗ ಬಿಹಾರ ರಾಜ್ಯದ ಒಂದು ಜಿಲ್ಲೆ.

ಮಹಾತ್ಮ ಗಾಂಧಿಯವರು ಇಲ್ಲಿಗೆ ಭೇಟಿ ಕೊಟ್ಟಂದಿನಿಂದ ಈ ಪ್ರದೇಶಕ್ಕೆ ರಾಜಕೀಯ ಮಹತ್ತ್ವ ಬಂದಿತು. ನೀಲಿ ತೋಟದ ಕೆಲಸಗಾರರ ಸ್ಥಿತಿಯನ್ನು ಸ್ವತಃ ಪರಿಶೀಲಿಸಲು ಗಾಂಧೀಜಿ ಇಲ್ಲಿಗೆ ಬಂದಿದ್ದರು. ಅವರು ನಡೆಸಿದ ಸತ್ಯಾಗ್ರಹದ ಫಲವಾಗಿ ನೀಲಿ ಕೆಲಸಗಾರರ ಪರಿಸ್ಥಿತಿ ಉತ್ತಮಗೊಂಡಿತ **(ನೋಡಿ– ಚಂಪಾರಣ್–ಸತ್ಯಾಗ್ರಹ)** (ಎಂ.ವಿ.ಎಸ್.ಆರ್.)

ಜಿಲ್ಲೆಯ ಆಡಳಿತಕೇಂದ್ರ ಮೋತೀಹಾರೀ. ಜನಸಂಖ್ಯೆ 101506(2001). ಇದು ವ್ಯಾಪಾರ ಮತ್ತು ಶಿಕ್ಷಣ ಕೇಂದ್ರ. ಪಟ್ಟಣಗಳ ಪೈಕಿ ಬೇತಿಯಾ 1116692(2001) ಅತ್ಯಂತ ದೊಡ್ಡದು ಸಗೌಲಿ. ಒಂದು ಸೈನಿಕ ಕೇಂದ್ರ. 1815ರ ನೇಪಾಳಿ ಕೌಲು ಸಹಿಯಾದ್ದು ಈ ಸ್ಥಳದಲ್ಲಿ. ಲೌರಿಯಾ ನಂದನಗಢ, ಲೌರಿಯಾ ಆರಾರಾಜ್ ಮತ್ತು ರಾಂಪುರ್ವದಲ್ಲಿ ಚಕ್ರವರ್ತಿ ಅಶೋಕನ ಶಾಸನಗಳಿವೆ. *

**ಚಂಪಾರಣ್ ಸತ್ಯಾಗ್ರಹ :** ಈಗಿನ ಬಿಹಾರ ರಾಜ್ಯದ ತಿರುಹುತ್ ವಿಭಾಗದ ಚಂಪಾರಣ್ ಜಿಲ್ಲೆಯಲ್ಲಿ ಗಾಂಧಿಯವರ ನೇತೃತ್ವದಲ್ಲಿ ನಡೆದ ಸತ್ಯಾಗ್ರಹ. ನೀಲಿಯನ್ನು ಬೆಳೆಯುತ್ತಿದ್ದ ರೈತರ ಕಷ್ಟದ ನಿವಾರಣೆಗಾಗಿ ಇದನ್ನು ಕೈಗೊಳ್ಳಲಾಯಿತು. ರಾಮಾಯಣದ ಪ್ರಕಾರ ಚಂಪಾರಣ್ಯ ಜನಕರಾಜನ ನಾಡು. ಹಿಮಾಲಯ ಪರ್ವತದ ಪಾದತಲದಲ್ಲಿ ಅಡಗಿ ಗಂಗಾನದಿಯ ತೀರ ಉತ್ತರಕ್ಕೆ ನೇಪಾಲದ ಗಡಿಯವರೆಗೆ ಹರಡಿರುವ, ಜನಸಮೃದ್ಧವಾದ, ಜಲಸಮೃದ್ಧವಾದ ಈ ಜಿಲ್ಲೆಯು ಬತ್ತ ಬೆಳೆಯಲು ಅತ್ಯಂತ ಫಲವತ್ತಾದ ಪ್ರದೇಶ. ಇದು ಎಷ್ಟು ಸಮೃದ್ಧವಾಗಿತ್ತೆಂದರೆ ಇಲ್ಲಿ ಕಾಗೆಗಳಿಗೆ ಸಹ ಆಗಿ ಮಿಗುವಷ್ಟು ಅಕ್ಕಿಯಿದೆಯೆಂಬ ಪ್ರತೀತಿಯಿತ್ತು ; ಹಾಗೆಂಬ ಅರ್ಥದ ಒಂದು ಗಾದೆಯಿತ್ತು.

ಜಿಲ್ಲೆಯ ಜಮೀನುಗಳು ನೀಲಿಯನ್ನು ಬೆಳೆಯಲು ಬಹಳ ಅನುಕೂಲವಾಗಿದ್ದುವು. ಇವುಗಳಲ್ಲಿ ಮುಖ್ಯವಾದ ಪ್ರದೇಶ ಜಿಲ್ಲೆಯಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚಾಗಿತ್ತು. ಇವು ಮೊದಲು ರಾಜರಿಗೆ (ಜಮೀನ್ದಾರರಿಗೆ) ಸೇರಿದ್ದುವು. ಈ ಜಮೀನುಗಳನ್ನು ಯುರೋಪಿಯನ್ ಜನರು ರಾಜರಿಂದ ದೀರ್ಘ ಅವಧಿಯ ಗುತ್ತಿಗೆಗೆ ಹಿಡಿದು, ನೀಲಿ ಬೆಳೆಯಲು ಪ್ರಾರಂಭಿಸಿದರು. ತಾವು ಹಿಡಿದ ಜಮೀನುಗಳನ್ನು ಭಾರತೀಯ ರೈತರಿಗೆ ಗುತ್ತಿಗೆಗೆ ಕೊಟ್ಟರು ; ನೀಲಿ ಕಾರ್ಖಾನೆಗಳನ್ನು ಸ್ಥಾಪಿಸಿದರು. 1917ರ ವೇಳೆಗೆ ಅವರು 70 ಕಾರ್ಖಾನೆಗಳನ್ನು ಸ್ಥಾಪಿಸಿದ್ದರು. ಜಿಲ್ಲೆಯಲ್ಲಿ ಕಬ್ಬು ಮತ್ತು ಬತ್ತದ ಬೆಳೆ ಕಡಿಮೆಯಾಯಿತು.

ಯುರೋಪಿಯನ್ ತೋಟಗಾರರು ರೈತರಿಗೆ ಬಹಳ ಕಠಿಣವಾದ ನಿಬಂಧನೆಗಳ ಮೇಲೆ ಜಮೀನನ್ನು ಸಾಗುವಳಿಗೆ ಕೊಟ್ಟಿದ್ದರು. ಪ್ರತಿ ರೈತನೂ ತನಗೆ ಇಷ್ಟವಿರಲಿ ಇಲ್ಲದಿರಲಿ, ಪ್ರತಿ ಇಪ್ಪತ್ತು ಕಟ್ಠೆ (ಒಂದು ಎಕರೆ) ಜಮೀನಿನಲ್ಲಿ ಮೂರು ಕಟ್ಠೆಯಷ್ಟು ನೆಲದಲ್ಲಾದರೂ ನೀಲಿಯನ್ನು ಬಿತ್ತಿ ಬೆಳೆದು ಅದನ್ನು ತೋಟಗಾರ ನಿರ್ಣಯಿಸಿದ ಬೆಲೆಗೆ ಅವನ ಕಾರ್ಖಾನೆಗೇ ಮಾರಬೇಕಾಗಿತ್ತು. ಹಾಗೆ ಮಾಡದೆ ತಪ್ಪಿದರೆ ಅವನಿಗೆ ದಂಡ ವಿಧಿಸಲಾಗುತ್ತಿತ್ತು. ಈ ಪದ್ಧತಿಗೆ ತೀನ್ ಕಠಿಯಾ ಎಂದು ಹೆಸರಿತ್ತು. ಇವುಗಳ ಜೊತೆಗೆ ರೈತನು ಜಮೀನ್ದಾರನಿಗೆ ಉಚಿತವಾಗಿ ಅನೇಕ ಸೇವೆಗಳನ್ನು ಸಲ್ಲಿಸಬೇಕಾಗಿತ್ತು. ಕಾರ್ಖಾನೆಯ ನೀಲಿ ಸಾಗಿಸಲು ತನ್ನ ಗಾಡಿಯನ್ನು ನೀಡುವುದು, ನಿಯಮಿತ ದಿನಗಳಲ್ಲಿ ಉಚಿತವಾಗಿ ಆಳುಗಳ ಸೇವೆಯನ್ನು ಒದಗಿಸುವುದು ಮುಂತಾದ ರೀತಿಯಲ್ಲಿ ನೆರವಾಗಬೇಕಾಗಿತ್ತು. ರೈತನ ಸ್ವಾತಂತ್ರ್ಯ ಪೂರ್ಣವಾಗಿ ಹರಣವಾಗಿ, ಅವನು ಒಂದು ರೀತಿಯಲ್ಲಿ ಜಮೀನ್ದಾರನಿಗೆ ಗುಲಾಮನೇ ಆಗಿದ್ದ. ಯುರೋಪಿಯನ್ ಜಮೀನ್ದಾರರು ರೈತರನ್ನು ಹೊಡೆಯುವುದಕ್ಕೂ ಅವರ ಮನೆ ಆಸ್ತಿಗಳನ್ನು ಲೂಟಿ ಮಾಡುವುದಕ್ಕೂ ಹಿಂದೆಗೆಯುತ್ತಿರಲಿಲ್ಲ. ಅವರು ಏನೇ ಮಾಡಲೂ ಅವರಿಗೆ ಕಾನೂನಿನ ಬೆಂಬಲವಿತ್ತು. ರೈತರು ಅಜ್ಞಾನಿಗಳೂ ಅವಿದ್ಯಾವಂತರೂ ಅಧೀರರೂ ಆಗಿದ್ದುದರಿಂದ ಇದನ್ನು ಪ್ರತಿಭಟಿಸಲಾರದೆ ಕಷ್ಟಕ್ಕೆ ಒಳಗಾಗಿದ್ದರು. 1917ಕ್ಕೆ ಹಿಂದೆ ಸುಮಾರು ನೂರು ವರ್ಷಗಳಿಂದ ಈ ಪದ್ಧತಿ ಜಾರಿಯಲ್ಲಿತ್ತು. ಹಿಂಸೆ, ಸಂಕೋಲೆ, ಬಂಧನಗಳಿಂದ ತಪ್ಪಿಸಿಕೊಳ್ಳುವ ಮಾರ್ಗ ರೈತರಿಗೆ ತಿಳಿದಿರಲಿಲ್ಲ.

ಆ ವೇಳೆಗೆ ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ಬಿಳಿಯರ ಸರ್ಕಾರಕ್ಕೆ ಎದುರಾಗಿ ಅಹಿಂಸಾ ಮಾರ್ಗದಿಂದ ಹೋರಾಡಿ ರಾಜಕೀಯದಲ್ಲಿ ಸತ್ಯ ಅಹಿಂಸೆಗಳನ್ನು ಪ್ರಥಮ ಬಾರಿಗೆ ಪ್ರಯೋಗಿಸಿ, ಶತ್ರುವಿನ ಒಂದು ತೊಟ್ಟು ರಕ್ತವನ್ನೂ ಕೆಡವದೆ ಅವನ ಮನಸ್ಸನ್ನು ಪರಿವರ್ತನೆಗೊಳಿಸಿ ಜಯಶಾಲಿಯಾಗಿ ಭಾರತಕ್ಕೆ ಹಿಂದಿರುಗಿದ್ದರು. ಭಾರತದಲ್ಲಿ ಇನ್ನೂ ವ್ಯಾಪಕವಾಗಿ ಸತ್ಯಾಗ್ರಹವನ್ನು ಪ್ರಯೋಗಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಆದರೆ ಇನ್ನೂ ಯಾವ ವಿಷಯದಲ್ಲೂ ಅವರು ಸ್ಪಷ್ಟವಾದ ತೀರ್ಮಾನಕ್ಕೆ ಬಂದಿರಲಿಲ್ಲ. ಗಯಾ

ಕಾಂಗ್ರೆಸ್‌ನಲ್ಲಿ ರಾಜಕುಮಾರ ಶುಕ್ಲನೆಂಬ ಚಂಪಾರಣ್ಯದ ಒಬ್ಬ ರೈತ ಗಾಂಧೀಜಿಯವರನ್ನು ಸಂಧಿಸಿ, ನೀಲಿ ಬೆಳೆಯುವ ರೈತರ ಕಷ್ಟಗಳನ್ನು ವಿವರಿಸಿ, ಗಾಂಧೀಜಿ ಚಂಪಾರಣ್ಯಕ್ಕೆ ಬಂದು ನೋಡಿ ಪರಿಹಾರ ಮಾರ್ಗವನ್ನು ಸೂಚಿಸಬೇಕೆಂದು ಬೇಡಿದ. ಗಾಂಧಿಯವರು ಮುಜಫರ್‌ಪುರಕ್ಕೆ 1917ರ ಏಪ್ರಿಲ್ 10 ರಂದು ಹೋದರು. ಅಲ್ಲಿಯ ಪರಿಸ್ಥಿತಿಯನ್ನೂ ರೈತರ ಸಮಸ್ಯೆಯನ್ನೂ ಅವರು ಅಧ್ಯಯನ ಮಾಡಿದಾಗ, ಇದು ಸತ್ಯಾಗ್ರಹ ಮಾಡಲು ಅರ್ಹವಾದ ಸಮಸ್ಯೆ ಎಂಬುದು ಅವರಿಗೆ ಮನವರಿಕೆಯಾಯಿತು. ರೈತರ ಸ್ಥಿತಿಗತಿಗಳನ್ನು ವಿಚಾರಿಸಿ ತಿಳಿದುಕೊಳ್ಳಲು ಗಾಂಧಿಯವರು ಉದ್ದೇಶಿಸಿ, ಅದಕ್ಕೆ ಮೊದಲು ತೋಟಗಾರರ ಮತವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರು. ಆದರೆ ಹೊರಗಿನವರಾದ ಗಾಂಧಿಯವರು ತಮಗೂ ತಮ್ಮ ರೈತರಿಗೂ ನಡುವೆ ಪ್ರವೇಶಿಸುವ ಅಗತ್ಯವಿಲ್ಲವೆಂದು ತೋಟಗಾರರ ಸಂಘದ ಕಾರ್ಯದರ್ಶಿ ಹೇಳಿದ. ತಾವು ಹೊರಗಿನವರಾದರೂ ರೈತರು ಅಪೇಕ್ಷಿಸಿದರೆ ಅವರ ಸ್ಥಿತಿಗತಿಗಳ ವಿಚಾರಣೆ ನಡೆಸಲು ತಮಗೆ ಹಕ್ಕುಂಟೆಂದು ಗಾಂಧಿಯವರು ಮರ್ಯಾದೆಯಾಗಿ ಹೇಳಿದರು. ಗಾಂಧಿಯವರು ತಿರುಹತ್ ಬಿಟ್ಟು ಹೋಗಬೇಕೆಂದು ಕಮಿಷನರ್ ಹೇಳಿದ. ಗಾಂಧಿಯವರು ಒಪ್ಪಲಿಲ್ಲ. ಚಂಪಾರಣ್ಯದ ಮುಖ್ಯ ಪಟ್ಟಣವಾದ ಮೋತಿಹಾರಿಗೆ ಐದು ಮೇಲಿ ದೂರದಲ್ಲಿ ರೈತನೊಬ್ಬನಿಗೆ ಆಗಿದ್ದ ಹಿಂಸೆಯನ್ನು ವಿಚಾರಿಸಲು ಗಾಂಧಿಯವರು ಅನುಚರರೊಂದಿಗೆ ಆನೆಯ ಮೇಲೆ ಕುಳಿತು ಹೊರಟರು. ನಡುದಾರಿಯಲ್ಲಿ ಸರ್ಕಾರ ಅವರ ಮೇಲೆ ತಡೆಯಾಜ್ಞೆ ಜಾರಿ ಮಾಡಿತು. ಚಂಪಾರಣ್ಯವನ್ನು ಬಿಟ್ಟು ಹೋಗಲು ಅವರು ಒಪ್ಪಲಿಲ್ಲ. ಅಪ್ಪಣೆಯನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ಸರ್ಕಾರ ಅವರ ಮೇಲೆ ಮೊಕದ್ದಮೆ ಹೂಡಿತು. ಆಜ್ಞೆಯನ್ನುಲ್ಲಂಘಿಸಿದ್ದುಂಟೆಂದು ಗಾಂಧಿಯವರು ಒಪ್ಪಿಕೊಂಡರು. ಸವಿನಯ ಪ್ರತಿಭಟನೆಯೇ ತಮ್ಮ ಉದ್ದೇಶವೆಂದು ಹೇಳಿದರು. ಆ ವೇಳೆಗೆ ಸರ್ಕಾರ ಮೊಕದ್ದಮೆಯನ್ನು ಹಿಂತೆಗೆದುಕೊಂಡಿತಲ್ಲದೆ ಗಾಂಧಿಯವರು ತಮ್ಮ ವಿಚಾರಣೆ ನಡೆಸಬಹುದೆಂದು ಅನುಮತಿ ನೀಡಿತು.

ಗಾಂಧೀಜಿ ಸರ್ಕಾರದ ಎದುರಿಗೆ ಇಡಲು ಒಂದು ವರದಿಯನ್ನು ಸಿದ್ಧಪಡಿಸ ತೊಡಗಿದರು. ರೈತರು ತಮ್ಮ ಕಷ್ಟಗಳನ್ನು ಕುರಿತು ಹೇಳಿಕೆ ಕೊಡಬಹುದೆಂದೂ ಸ್ವಯಂಸೇವಕರು ಅವನ್ನು ಬರೆದುಕೊಳ್ಳತಕ್ಕದ್ದೆಂದೂ ನಿಯಮಿಸಿದರು. ರೈತರು ನಿಜವನ್ನೇ ಹೇಳಬೇಕೆಂಬ ಕಟ್ಟುಪಾಡಾಗಿತ್ತು. ಹೇಳಿಕೆಯನ್ನು ನೀಡುವ, ಅದನ್ನು ಬರೆದುಕೊಳ್ಳುವ ಕೆಲಸ ಬಹಿರಂಗವಾಗಿಯೇ ನಡೆಯುತ್ತಿತ್ತು. ಒಬ್ಬ ಪೊಲೀಸ್ ಅಧಿಕಾರಿಯೂ ಅಲ್ಲಿದ್ದ. ಬಹುತೇಕ ಎಲ್ಲ ಹಳ್ಳಿಗಳಿಂದಲೂ ರೈತರು ತಂಡತಂಡವಾಗಿ ಬಂದು ಹೇಳಿಕೆಗಳನ್ನು ಕೊಡತೊಡಗಿದರು. ಯಾವ ಯಾವ ಜಮೀನ್ದಾರರ ಮೇಲೆ ಅತ್ಯಂತ ಗುರುತರವಾದ ಮತ್ತು ಹೆಚ್ಚಿನ ಆಕ್ಷೇಪಣೆಗಳಿದ್ದುವೋ, ಅವರನ್ನು ಗಾಂಧೀಜಿ ಸಂಧಿಸಲು ಪ್ರಯತ್ನಿಸಿದರು. ಆದರೆ ಜಮೀನ್ದಾರರು ಗಾಂಧೀಜಿಯೊಂದಿಗೆ ಆ ವಿಷಯವನ್ನು ಚರ್ಚಿಸಲು ಒಪ್ಪಲಿಲ್ಲ.

ಕೊನೆಗೆ ಯುರೋಪಿಯನ್ ತೋಟಗಾರರು ಸರ್ಕಾರದ ಮೇಲೆ ಪ್ರಭಾವವನ್ನು ತಂದರು. ವಿಚಾರಣೆ ದೀರ್ಘವಾಯಿತೆಂದೂ ಇದನ್ನು ಮುಗಿಸಬೇಕೆಂದೂ ಸರ್ಕಾರ ಸೂಚಿಸಿತು.

ರೈತರ ಕಷ್ಟಗಳು ನಿಜವೆಂದೂ ಅವರಿಗೆ ಪರಿಹಾರ ದೊರಕದೆ ಚಂಪಾರಣ್ ಜಿಲ್ಲೆಯನ್ನು ಬಿಡುವುದು ತಮ್ಮ ಉದ್ದೇಶವಲ್ಲವೆಂದೂ ಸರ್ಕಾರವೇ ವಿಚಾರಣೆ ನಡೆಸಿ ರೈತರಿಗೆ ಕಷ್ಟಗಳಿವೆಯೆಂಬುದನ್ನು ಒಪ್ಪಿ ಪರಿಹಾರ ನೀಡಬೇಕೆಂದೂ ಗಾಂಧಿಯವರು ಉತ್ತರಿಸಿದರು. ಬಿಹಾರದ ರಾಜ್ಯಪಾಲ ವಿಚಾರಣೆ ನಡೆಸಲು ಒಪ್ಪಿದ. ಇದಕ್ಕಾಗಿ ರಚಿಸಲಾದ ಸಮಿತಿಯಲ್ಲಿ ಗಾಂಧಿಯವರೂ ಸದಸ್ಯರಾಗಿರಬೇಕೆಂದು ಸೂಚಿಸಿದ. ವಿಚಾರಣೆಯ ಕಾಲದಲ್ಲಿ ಜೊತೆಯವರೊಂದಿಗೆ ಸಮಾಲೋಚಿಸಲೂ ರೈತರ ಪರವಾಗಿ ವಾದಿಸಲೂ ವಿಚಾರಣೆಯಿಂದ ರೈತರಿಗೆ ಸಮಾಧಾನ ಸಿಗದಿದ್ದರೆ ಮುಂದೇನು ಮಾಡಬೇಕೆಂಬುದನ್ನು ಅವರಿಗೆ ತಿಳಿಸಲು ತಮಗೆ ಸ್ವಾತಂತ್ರ್ಯವಿರಬೇಕೆಂದೂ ಗಾಂಧಿಯವರು ಷರತ್ತು ಹಾಕಿದರು. ಸರ್ಕಾರ ಒಪ್ಪಿಕೊಂಡಿತು.

ವಿಚಾರಣಾ ಸಮಿತಿ ರೈತರ ಪರವಾಗಿಯೇ ತೀರ್ಪು ಕೊಟ್ಟಿತು. ತೋಟಗಾರರು ರೈತರಿಂದ ಅನ್ಯಾಯವಾಗಿ ವಸೂಲು ಮಾಡಿದ್ದ ಹಣದಲ್ಲಿ ಒಂದು ಭಾಗವನ್ನು ಅವರಿಗೆ ಹಿಂದಿರುಗಿಸಬೇಕೆಂದೂ ತೀನ್ ಕಠಿಯಾ ಪದ್ಧತಿಯನ್ನು ಕಾನೂನಿನ ಮೂಲಕ ರದ್ದು ಮಾಡಬೇಕೆಂದೂ ಸಲಹೆ ನೀಡಿತು. ತೋಟಗಾರರ ಪ್ರಭಾವ, ಒತ್ತಾಯಗಳಿಗೆ ಮಣಿಯದೆ ರಾಜ್ಯಪಾಲ ಆ ಸಲಹೆಗಳನ್ನು ಜಾರಿ ಮಾಡಲು ಒಪ್ಪಿಗೆ ನೀಡಿದ.

ಈ ಕಾರ್ಯಕ್ರಮಕ್ಕೆ ಗಾಂಧೀಜಿಗೆ ಒಟ್ಟು ಆರು ತಿಂಗಳುಗಳ ಕಾಲ ಹಿಡಿಯಿತು. ನೂರು ವರ್ಷಗಳಿಂದ ಇದ್ದ ತೊಂದರೆ ಪರಿಹಾರವಾಯಿತು. ಈ ಚಳವಳಿಗೆ ಪೂರ್ಣವಾಗಿ ತಗುಲಿದ ವೆಚ್ಚ ಸುಮಾರು 3 ಸಾವಿರ ರೂಪಾಯಿಗಳು ಮಾತ್ರ.

ಸತ್ಯಾಗ್ರಹ ಚಳವಳಿ ಗೆಲ್ಲುವುದು ಹಣದಿಂದಲ್ಲ ; ಅಹಿಂಸೆ, ಸತ್ಯ, ಸಾಚಾ ಮಾರ್ಗ, ಎದುರಾಳಿಯಲ್ಲಿ ಸಹ ಪ್ರೇಮ, ಅಸೀಮ ಶಾಂತಿ, ಉದ್ರೇಕದಿಂದಲೂ ಆಸ್ತಿನಾಶದಿಂದಲೂ ಪೂರ್ಣ ವಿಮುಖತೆ–ಇವುಗಳಿಂದ ಎಂಬುದು ಸಿದ್ಧವಾಯಿತು. **(ನೋಡಿ– ಗಾಂಧೀ,–ಮೋಹನ್‌ದಾಸ್–ಕರಮ್‌ಚಂದ್)** (ಜಿ.ಆರ್.ಎ.)

**ಚಂಪೂ :** ಸಂಸ್ಕೃತ, ಕನ್ನಡಗಳಲ್ಲಿಯೂ ಇತರ ಕೆಲವು ಭಾರತೀಯ ಭಾಷೆಗಳಲ್ಲಿಯೂ ಚಂಪೂ (ಚಂಪು) ಎಂಬುದು ಪ್ರಾಚೀನವೂ ಪ್ರಸಿದ್ಧವೂ ಆದ ಒಂದು ಸಾಹಿತ್ಯ ಪ್ರಕಾರ. ಹರಿಶ್ಚಂದ್ರ ತನ್ನ ಜೀವಂಧರಚಂಪೂ ಎಂಬ ಕಾವ್ಯದಲ್ಲಿ ಗದ್ಯಾವಲೀಃ ಪದ್ಯಪರಂಪರಾ ಚ ಪ್ರತ್ಯೇಕಮಸ್ವಾವಹತಿಪ್ರಮೋದಮ್। ಹರ್ಷಪ್ರಕರ್ಷತನುತೇ ಮಿಲಿತ್ವಾದ್ರಾಗ್ಬಾಲ್ಯ ತಾರುಣ್ಯವತೀವ ಕಾಂತಾ ॥– ಎಂಬುದಾಗಿ ಹೇಳಿದ್ದಾನೆ. (ಗದ್ಯಪದ್ಯಗಳು ಪ್ರತ್ಯೇಕವಾಗಿ ಪ್ರಮೋದಕರಗಳು ; ಆದರೆ ಚಂಪೂ ರಚನೆ ಎರಡರಿಂದಲೂ ಕೂಡಿದ್ದು, ಬಾಲ್ಯ ತಾರುಣ್ಯಗಳೆರಡರ ಸೇರಿಕೆಯಿಂದ ಆಹ್ಲಾದ ಉಂಟುಮಾಡುವ ಕಾಂತೆಯಂತೆ ಇದೆ. ಸಾವಿರ ವರ್ಷಗಳಿಗೆ ಮೇಲ್ಪಟ್ಟ ಇತಿಹಾಸ ಚಂಪೂವಿಗಿದೆ. ಈ ಪ್ರಕಾರದಲ್ಲಿ ಆಯಾ ಭಾಷೆಯಲ್ಲಿ ಬಹುಕಾಲ ನಿಲ್ಲುವ ಉತ್ಕೃಷ್ಟವಾದ ಸಾಹಿತ್ಯ ನಿರ್ಮಿತವಾಗಿದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಮೊದಮೊದಲಿನ ಶ್ರೇಷ್ಠಕವಿಗಳು ಈ ಪ್ರಕಾರವನ್ನು ಯಶಸ್ವಿಯಾಗಿ ಬಳಸಿಕೊಂಡು ಉತ್ತಮ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದು, ಮುಂದೆ ಅದು ವಿಶೇಷವಾಗಿ ಪ್ರಬಲಿಸಿ ಕನ್ನಡ ಸಾಹಿತ್ಯದಲ್ಲಿ ಗಣ್ಯವೂ ಸುಸ್ಥಿರವೂ ಆದ ನೆಲೆಯನ್ನು ಗಳಿಸಿಕೊಳ್ಳುವಂತಾಯಿತು.

ಚಂಪೂವಿನ ಲಕ್ಷಣವನ್ನು ದಂಡಿಯ (ಸು. 650) ಕಾವ್ಯಾದರ್ಶವೆಂಬ ಸಂಸ್ಕೃತ ಭಾಷೆಯ ಲಕ್ಷಣಗ್ರಂಥದಲ್ಲಿ ಮೊದಲು ನಿರೂಪಿಸಿದೆ. ಅನಂತರದಲ್ಲಿ ಹೇಮಚಂದ್ರ (1088–1172), ವಿಶ್ವನಾಥ (14ನೆಯ ಶ.), ವಿದ್ಯಾನಾಥ (14ನೆಯ ಶ.) ಮುಂತಾದವರು ತಮ್ಮ ಅಲಂಕಾರಗ್ರಂಥಗಳಲ್ಲಿ ಹೇಳಿದ್ದಾರೆ. ಹಾಗೆಯೇ ಕನ್ನಡದಲ್ಲಿಯೂ ನಾಗವರ್ಮ II, ಉದಯಾದಿತ್ಯ ಇವರ ಅಲಂಕಾರಗ್ರಂಥಗಳಲ್ಲಿ ಆ ವಿಷಯದ ಉಲ್ಲೇಖವಿದೆ. ದಂಡಿ ಚಂಪೂವಿನ ಲಕ್ಷಣವನ್ನು ಗದ್ಯಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ–ಎಂದು ಹೇಳಿದ್ದಾನೆ. ಹೆಚ್ಚಿನ ವಿವರಗಳಾಗಲಿ ವ್ಯತ್ಯಾಸವಾಗಲಿ ಇಲ್ಲದೆ ಇದೇ ಲಕ್ಷಣವನ್ನು ಈಚಿನವರು ಅನುವಾದ ಮಾಡಿದ್ದಾರೆ.

ಚಂಪೂ (ಚಂಪು) ಎಂಬ ಪದದ ಮೂಲ ಅನಿರ್ದಿಷ್ಟವಾದುದು. ಅದರ ನಿಷ್ಪತ್ತಿಯನ್ನು ಬೇರೆ ಬೇರೆ ರೀತಿಯಲ್ಲಿ ವಿದ್ವಾಂಸರು ವಿವರಿಸಿದ್ದಾರೆ. ಈ ಸಾಹಿತ್ಯಪ್ರಕಾರ ಸಂಸ್ಕೃತಮೂಲವಾದುದು ಎಂದು ಗ್ರಹಿಸುವವರು ಒಂದು ರೀತಿಯಾಗಿಯೂ, ಕನ್ನಡ ಮೂಲವಾದುದು ಎಂದು ಗ್ರಹಿಸುವವರು ಇನ್ನೊಂದು ರೀತಿಯಾಗಿಯೂ ಹೇಳುವುದು ಕಾಣುತ್ತದೆ. ಸಂಸ್ಕೃತ ವಿದ್ವಾಂಸರ ಅಭಿಪ್ರಾಯ ಹೀಗೆ : ಸಂಸ್ಕೃತ ನಳಚಂಪುವಿನ ಉಪೋದ್ಘಾತದಲ್ಲಿ, ನಂದಕಿಶೋರ ಶರ್ಮ ಅವರು ಗತ್ಯರ್ಥದ ಚಪಿ ಧಾತುವಿನಿಂದ ಚಂಪಯತಿ ಚಂಪತಿ ಇತಿ ಚಂಪೂ (ಗತಿಯನ್ನುಳ್ಳದ್ದು ಚಂಪೂ) ಎಂದಿದ್ದಾರೆ. ಅದೇ ಗ್ರಂಥದ ಅಡಿಟಿಪ್ಪಣಿಯಲ್ಲಿ ಚಮತ್ಕೃತ್ಯ ಪುನಾತಿ ಸಹೃದಯಾನ್ ವಿಸ್ಮಿತೀಕೃತ್ಯ ಪ್ರಸಾದಯತೀತಿ ಚಂಪೂ—ಎಂಬುದಾಗಿ ಹರಿದಾಸ ಭಟ್ಟಾಚಾರ್ಯರೆಂಬವರ ಅಭಿಪ್ರಾಯವನ್ನು ಉಲ್ಲೇಖಿಸಿದೆ. ಸಂಸ್ಕೃತದ ಧಾತುಪಾಠದಲ್ಲಿ ಗತ್ಯರ್ಥಕದ ಚಪ್‌ಃಚಂಪ್ ಧಾತುವಿದೆ. ಇದರ ರೂಪವನ್ನು ಚಂಪತಿ, ಚಂಪಯತಿ ಎಂದು ಮುಂತಾಗಿ ಸಿದ್ಧಾಂತಕೌಮುದಿಯಲ್ಲಿ ತೋರಿಸಿದೆ. ವಚನಾರ್ಥದ ಗದ್, ಪದ್ ಎಂಬ ಧಾತುಗಳಿಂದ ಗದ್ಯ, ಪದ್ಯ ಎಂಬ ರೂಪಗಳ ನಿರ್ವಚನ ಸಾಧ್ಯವಿರುವಂತೆಯೇ ಚಪ್ ಧಾತುವಿನಿಂದ ಚಂಪೂ ಅಥವಾ ಚಂಪು ಎಂಬ ರೂಪಗಳನ್ನು ಸಾಧಿಸಲು ಸಾಧ್ಯವಿದೆ. ಗದ್ಯ ಪದ್ಯಗಳೆರಡರ ಕೂಡಿಸುವಿಕೆಯನ್ನು ಮಾತ್ರ ತೋರಿಸುವ ಮೂರನೆಯ ಶಬ್ದ ಬೇಕಾದ್ದರಿಂದ, ಸಂಸ್ಕೃತ ಪಂಡಿತರು ವಚನಾರ್ಥದ ಧಾತುವಿನ ಬದಲು ಗತ್ಯರ್ಥಕ ಧಾತುವೊಂದನ್ನು ಉದ್ದೇಶಪೂರ್ವಕವಾಗಿಯೇ ಆರಿಸಿಕೊಂಡರೆಂದೂ ಹೇಳಲವಕಾಶವಿದೆ ಎಂಬುದಾಗಿ ಕೆ. ಕೃಷ್ಣಮೂರ್ತಿ ಹೇಳಿದ್ದಾರೆ. ಒಟ್ಟಿನಲ್ಲಿ ನಂದಕಿಶೋರ ಶರ್ಮರ ನಿಷ್ಪತ್ತಿಯನ್ನೇ ಇಲ್ಲಿ ಎತ್ತಿಹಿಡಿದಿದೆ.

ಕನ್ನಡ ವಿದ್ವಾಂಸರ ಅಭಿಪ್ರಾಯ ಹೀಗೆ : ಕೆನ್, ಚೆನ್ ಎಂಬ ಮೂಲಶಬ್ದಗಳಿಂದಾದ ಕೆಂಪು, ಚೆಂಪು ಎಂಬ ಪದಗಳು ಸುಂದರ, ಮನೋಹರ ಎಂಬ ಅರ್ಥವನ್ನು ಕೊಡುತ್ತವೆ. ಗದ್ಯಪದ್ಯಮಿಶ್ರವಾದ ಕಾವ್ಯವಿಶೇಷವೊಂದನ್ನು ಕೇಳಿ ಅದು ಸುಂದರವಾಗಿದೆ, ಮನೋಹರವಾಗಿದೆ ಎಂಬ ಉದ್ಗಾರವಾಚಿಯಾಗಿ ಚೆಂಪು ಎಂಬುದು ಮೊದಲು ಹುಟ್ಟಿ ಮುಂದೆ ರೂಢಿಬಲದಿಂದ ಆ ಕಾವ್ಯರೂಪಕ್ಕೆ ಚೆಂಪು, ಚಂಪು ಎಂಬ ಹೆಸರು ನೆಲೆಗೊಂಡಿರಬೇಕು. ಇದು ರಂ.ಶ್ರೀ. ಮುಗಳಿಯವರ ಅಭಿಪ್ರಾಯ. ಅವರ ಈ ಅಭಿಪ್ರಾಯವನ್ನು ಉಲ್ಲೇಖಿಸುವ ಚಂಪುವಿನ ಮೂಲ ಎಂಬ ಲೇಖನದಲ್ಲಿಯೇ ಕನ್ನಡ ಮತ್ತು ತುಳು ಭಾಷೆಗಳಲ್ಲಿ ಸಂಪು ಮತ್ತು ಚಂಪೆ, ಜಂಪೆ ಎಂಬ ಶಬ್ದಗಳಿದ್ದು ಅವುಗಳಿಗೆ ಸುಂದರ ಮತ್ತು ಮಿಶ್ರ ಎಂಬ ಅರ್ಥಗಳಿವೆ ; ಅವುಗಳಿಂದ ಚಂಪೂ ಪದವು ನಿಷ್ಪನ್ನವಾಗಿರಬಹುದು–ಎಂಬ ದ.ರಾ.ಬೇಂದ್ರೆಯವರ ಅಭಿಪ್ರಾಯವನ್ನೂ ಕೊಟ್ಟಿದೆ.

ಇನ್ನು ಚಂಪೂ ಯಾವ ಭಾಷೆಯಲ್ಲಿ ಮೊದಲು ಕಾಣಿಸಿಕೊಂಡಿತು ಎನ್ನುವ ವಿಷಯದಲ್ಲಿಯೂ ಹೀಗೆಯೇ ಭಿನ್ನಮತವಿದೆ. ಸಂಸ್ಕೃತ ಮೂಲವನ್ನು ಹೇಳುವವರ ಅಭಿಪ್ರಾಯ ಹೀಗೆ ; ಸಂಸ್ಕೃತ ಸಾಹಿತ್ಯದಲ್ಲಿ ಪ್ರಾಚೀನವಾದ ಜಾತಕಕಥೆಗಳು, ಪಂಚತಂತ್ರ ಮುಂತಾದವುಗಳಲ್ಲಿ ಗದ್ಯಪದ್ಯಗಳ ಸಮ್ಮಿಶ್ರಣವಿದೆ. ಆದರೆ ಅವುಗಳಲ್ಲಿ ಕಾವ್ಯದೃಷ್ಟಿಗಿಂತ

ಇತರ ದೃಷ್ಟಿಗಳೇ ಹೆಚ್ಚು. ಆದ್ದರಿಂದ ಅವು ಚಂಪೂ ಎನ್ನಿಸಲಾರವು. ಹರಿಷೇಣನ ಸಮುದ್ರಗುಪ್ತನ ಪ್ರಶಸ್ತಿ (ಪ್ರಶ.350) ಲಾಕ್ಷಣಿಕರ ಕಾವ್ಯವಿಭಾಗದ ಪ್ರಕಾರ ಚಂಪೂ ಆಗಬಹುದು. ದಂಡಿ ಚಂಪೂವನ್ನು ಪ್ರತ್ಯೇಕವಾಗಿ ಹೇಳಿರುವುದರಿಂದ ಆತನಿಗೆ ಪೂರ್ವದಲ್ಲಿ, ಎಂದರೆ ಪ್ರ.ಶ. 7ನೆಯ ಶತಮಾನಕ್ಕೆ ಮೊದಲು ಆ ಸಾಹಿತ್ಯ ಪ್ರಕಾರದ ಕೃತಿಗಳು ಸಂಸ್ಕೃತದಲ್ಲಿ ಇದ್ದಿರಬೇಕು. ಅವು ಕಾಲಧರ್ಮದಿಂದಾಗಿ ನಷ್ಟವಾಗಿರಬಹುದು. ಸಂಸ್ಕೃತ ಗದ್ಯಕಾವ್ಯಕಾರರು ಪ್ರಾಯಿಕವಾಗಿ ಕಲ್ಪಿತ ಕಥೆಗಳನ್ನೂ ಪದ್ಯಕಾವ್ಯಕಾರರು ಪೂರ್ವ ಪುರಾಣೇತಿಹಾಸಪ್ರಸಿದ್ಧವಾದ ವಸ್ತುಗಳನ್ನೋ ಐತಿಹಾಸಿಕ ರಾಜವೃತ್ತಾಂತಗಳನ್ನೋ ಆಶ್ರಯಿಸಿ ಮಹಾಕಾವ್ಯಗಳನ್ನು ಬರೆಯುತ್ತಿದ್ದರು. ಈ ಪರಿಹಾರವನ್ನು ಬದಲಾಯಿಸಿ ಪ್ರಸಿದ್ಧ ಹಾಗೂ ಪ್ರಶಸ್ತಿಪರ ವೃತ್ತಾಂತಗಳನ್ನು ಚಂಪೂಮಾರ್ಗದಿಂದ ಹೇಳುವ ಪದ್ಧತಿ ಹೊಸದಾದ ಚಂಪೂ ಶೈಲಿಗೆ ಪ್ರೇರಕವಾಯಿತೆಂದು ಹೇಳಬಹುದು. ಕಾಳಿದಾಸಾದಿ ಪದ್ಯಕವಿಗಳೂ ಬಾಣಾದಿ ಗದ್ಯಕವಿಗಳೂ ಬರೆದ ಮೇಲೆ ಈಚಿನವರಿಗೆ ವಸ್ತುವಿನ ಆಯ್ಕೆಯಲ್ಲಿ ಮತ್ತು ಶೈಲಿಯಲ್ಲಿ ಆ ಪ್ರಸಿದ್ಧರೊಡನೆ ಸ್ಪರ್ಧಿಸುವುದು ಕಷ್ಟವಾಗಿ, ಹಳೆಯ ವಸ್ತುವನ್ನು ಹೊಸದಾದ ಶೈಲಿಯಲ್ಲಿ ಹೇಳುವ ಪ್ರಯತ್ನ ನಡೆದಂತೆ ಕಾಣುತ್ತದೆ. ಚಂಪೂ ಶೈಲಿ ಪಂಡಿತಪ್ರಿಯವಾಗಿ ಪರಿಣಮಿಸಿದ ಮೇಲೆ ಆಸ್ಥಾನಕವಿಗಳೂ ರಾಜ ಪ್ರಶಸ್ತಿ, ಆಚಾರ್ಯ ದಿಗ್ವಿಜಯ ಮುಂತಾದವುಗಳಿಗೂ ಅವನ್ನು ಬಳಸಿಕೊಂಡರು. ಇದು ಒಬ್ಬ ವಿದ್ವಾಂಸರ ವಿಚಾರಸರಣಿ.

ಕನ್ನಡ ಮೂಲವನ್ನು ಹೇಳುವವರ ಅಭಿಪ್ರಾಯ ಹೀಗೆ: ಪ್ರಾಚೀನವಾದ ಸಂಸ್ಕೃತ ವಾಙ್ಮಯದಲ್ಲಿ ಚಂಪೂ ಸಾಹಿತ್ಯಪ್ರಕಾರ ಅಷ್ಟೇನೂ ಪ್ರಾಚೀನವಾದುದಲ್ಲ, ಈಚೆಗೆ ಕಾಣಿಸಿಕೊಂಡದ್ದು. ಆ ಭಾಷೆಯಲ್ಲಿ ಆ ರೀತಿಯ ಸಾಹಿತ್ಯ ಕಣ್ಣಿಗೆ ಬೀಳುವುದು ಪ್ರ.ಶ. 10ನೆಯ ಶತಮಾನದಿಂದ. ತ್ರಿವಿಕ್ರಮಭಟ್ಟನ (ಪ್ರ.ಶ. ಸು. 915) ದಮಯಂತೀ ಕಥೆ ಅಥವಾ ನಳಚಂಪೂ ಮತ್ತು ಸೋಮದೇವನ ಯಶಸ್ತಿಲಕ ಚಂಪೂ (ಪ್ರ.ಶ. 959) ಇವು ಈಗ ತಿಳಿದಮಟ್ಟಿಗೆ ಆ ಭಾಷೆಯಲ್ಲಿಯ ಆದ್ಯ ಚಂಪೂ ಕೃತಿಗಳು. ಇವು ರಚನೆಯಾದದ್ದು ಕರ್ಣಾಟಕದಲ್ಲಿ, ಹಾಗೂ ಕನ್ನಡ ರಾಜರ ಆಶ್ರಯದಲ್ಲಿದ್ದ ಕವಿಗಳಿಂದ. ಇವರು ಆ ವೇಳೆಗಾಗಲೇ ಕನ್ನಡನಾಡಿನ ಕನ್ನಡ ಜೈನ ಕವಿಗಳು ಕಲ್ಪಿಸಿ ರೂಢಿಸಿದ್ದ ಚಂಪೂ ಮಾರ್ಗವನ್ನು ಅನುಸರಿಸಿದರೆಂದು ತೋರುತ್ತದೆ. ಕನ್ನಡದಲ್ಲಿ ಚಂಪೂ ಗ್ರಂಥಗಳು 8–9 ಶತಮಾನಗಳಲ್ಲಿಯೇ ಕಾಣಿಸಿಕೊಂಡಿದ್ದವೆಂದು ತಿಳಿಯುವುದಕ್ಕೆ ಆಧಾರಗಳಿವೆ. ಆದರೆ ಸು. 7ನೆಯ ಶತಮಾನದ ದಂಡಿ ಚಂಪೂವಿನ ಲಕ್ಷಣವನ್ನು ಹೇಳಿದ್ದಾನಲ್ಲದೆ, ಆತನ ಕಾಲದಲ್ಲಿಯೂ ಅದಕ್ಕೆ ಮೊದಲಲ್ಲಿಯೂ ಸಂಸ್ಕೃತ ಚಂಪೂಗ್ರಂಥಗಳು ಇಲ್ಲದೆ ಹೀಗೆ ಹೇಳಿರುವುದು ಸಾಧ್ಯವೇ ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ದಂಡಿಗೆ ಪರಿಚಿತವಾಗಿದ್ದ ಚಂಪೂ ಸಾಹಿತ್ಯ ಪೂರ್ತಿಯಾಗಿ ನಷ್ಟವಾಗಿದೆ ಎಂಬುದು ತೃಪ್ತಿಕರವಾದ ಉತ್ತರವಲ್ಲ. ಆತ ದಾಕ್ಷಿಣಾತ್ಯನಾದುದರಿಂದ, ಆ ಕಾಲಕ್ಕೆ ದಕ್ಷಿಣದಲ್ಲಿ ಪ್ರಚಲಿತವಾಗಿದ್ದ ಕನ್ನಡ, ತಮಿಳು ಭಾಷೆಗಳಲ್ಲಿಯ ಚಂಪೂಕೃತಿಗಳನ್ನು ನೋಡಿದ್ದಿರಬಹುದು. ಒಂದು ಪಕ್ಷ ಮೂಲತಃ ಸಂಸ್ಕೃತವೆಂದು ತಿಳಿದರೂ ಅದು ಕನ್ನಡ ಸಾಹಿತ್ಯದಲ್ಲಿ ಪಡೆದ ರೂಪ ಸಂಸ್ಕೃತದ ಅನುಕರಣೆಯ ಫಲವಲ್ಲ, ವೈಶಿಷ್ಟ್ಯಪೂರ್ಣವಾದುದು–ಇದಿಷ್ಟೂ ಒಟ್ಟಿನಲ್ಲಿ ಒಬ್ಬ ವಿದ್ವಾಂಸರ ವಿಚಾರಸರಣಿ.

ಇನ್ನೊಬ್ಬ ವಿದ್ವಾಂಸರು ಹೀಗೆಯೇ, ಸಂಸ್ಕೃತಸಾಹಿತ್ಯದಲ್ಲಿ ಚಂಪೂ ಸಾಹಿತ್ಯದ ಅರ್ವಾಚೀನತೆ, ಸಂಸ್ಕೃತದ ಪ್ರಾಚೀನ ಲಾಕ್ಷಣಿಕರಲ್ಲಿ ದಾಕ್ಷಿಣಾತ್ಯನಾದ ದಂಡಿಯೊಬ್ಬನೇ ಅದನ್ನು ಹೆಸರಿಸತಕ್ಕವನು ಎಂಬ ಸಾಕ್ಷ್ಯ, ಚಂಪೂ ಶಬ್ದಕ್ಕೆ ಸಂಸ್ಕೃತದಲ್ಲಿ ಸ್ವರಸವಾದ ರೂಪನಿಷ್ಪತ್ತಿಯನ್ನು ಹೇಳುವುದರ ಅಶಕ್ಯತೆ, ತಮಿಳು ಭಾಷೆಯ ಪ್ರಾಚೀನಕಾವ್ಯವಾದ ಶಿಲಪ್ಪದಿಕಾರದ ಅನೇಕ ಸರ್ಗಗಳು ಗದ್ಯಪದ್ಯಾತ್ಮಕಗಳಾಗಿರುವುದು–ಇವನ್ನು ಗಮನಿಸಿ, ಚಂಪೂಕಾವ್ಯರೂಪ ಭಾರತೀಯ ಸಾಹಿತ್ಯಕ್ಕೆ ದಕ್ಷಿಣ ಭಾರತದ ಕೊಡುಗೆಯಾಗಿರಬೇಕೆಂದು ಭಾವಿಸಬಹುದು–ಎಂದಿದ್ದಾರೆ. ಅಲ್ಲದೆ ಕನ್ನಡದ ಮಟ್ಟಿಗೆ ಹೇಳುವುದಾದರೆ, ಹಿಂದಿನಿಂದ ಪ್ರಚಾರವಾಗಿದ್ದ ಚತ್ತಾಣದಲ್ಲಿ ಗದ್ಯಖಂಡಗಳು (ವಚನಗಳು) ನಡುನಡುವೆ ಸೇರಿ ಚಂಪು ತಲೆಯೆತ್ತಿರಬಹುದು ಎಂಬುದಾಗಿ ಕನ್ನಡದಲ್ಲಿ ಚಂಪುವಿನ ಉಗಮವನ್ನು ಗುರುತಿಸಲು ಯತ್ನಿಸಿದ್ದಾರೆ. (ಚತ್ತಾಣ ಎಂಬುದರ ಸ್ವರೂಪವನ್ನು ಅವರು ಹೀಗೆ ಹೇಳಿದ್ದಾರೆ; ಕವಿರಾಜಮಾರ್ಗದಲ್ಲಿ ಉಕ್ತವಾದ, ಅದಕ್ಕೆ ಹಿಂದಿನ ಕಾಲದಿಂದಲೂ ಕನ್ನಡದಲ್ಲಿ ಪ್ರಚಲಿತವಾಗಿದ್ದ ಕಾವ್ಯರೂಪ. ಇದು ಬಾಜನೆಗಬ್ಬ; ವಾಚಿಸತಕ್ಕದ್ದು ; ಇದರಲ್ಲಿ ಕಂದ, ಹಲವು ಬಗೆಯ ಸಂಸ್ಕೃತ ವೃತ್ತಗಳು, ದೇಶೀಯ ಪದ್ಯಜಾತಿಗಳು –ಇವೆಲ್ಲ ಬರುತ್ತವೆ; ಪದ್ದಳಿಯೂ ಬರಬಹುದು ; ಇದು ಅಖಿಲ ವರ್ಣನೆಗಳಿಂದ ಕೂಡಿದ ಕಾವ್ಯ; ಆದಕಾರಣವೇ ಬಹುಶಃ ದೀರ್ಘವಾಗಿರುತ್ತದೆ.

ಅಂತೂ ಚಂಪೂವಿನ ಉಗಮದ ವಿಷಯದಲ್ಲಿ ಭಿನ್ನಮತವಿರುವುದೂ ಅನಿರ್ದಿಷ್ಟತೆ ಇರುವುದೂ ಇದರಿಂದ ಸ್ಪಷ್ಟವಾಗಿ ತೋರುತ್ತದೆ. ಸಂಸ್ಕೃತ ಶಾಸನಸಾಹಿತ್ಯದಲ್ಲಿಯ ಹರಿಷೇಣಕೃತವಾದ ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನದಂಥ (ಸು. 350) ಪ್ರಶಸ್ತಿ ಶಾಸನಗಳ ಗದ್ಯಪದ್ಯಾತ್ಮಕ ಸ್ವರೂಪವೂ ಪ್ರಾಕೃತಸಾಹಿತ್ಯದಲ್ಲಿ ಉದ್ಯೋತನಸೂರಿಕೃತ ಕುವಲಯಮಾಲಾ ಕಹಾದಂಥ (ಪ್ರ.ಶ. 779) ಗದ್ಯಪದ್ಯಗಳು ಅನುಸ್ಯೂತ ಬೆರೆತ ಕಥಾನಿರೂಪಣೆಯೂ ವರ್ಣನೆಗಳೂ ಚಂಪೂವಿನ ಉಗಮವನ್ನು 10ನೆಯ ಶತಮಾನಕ್ಕಿಂತ ಹಿಂದಕ್ಕೆ ಒಯ್ಯಲು ತಕ್ಕ ಸಾಕ್ಷ್ಯಗಳಾಗಿರುವಂತೆ ತೋರುತ್ತದೆ. ಈ ಗ್ರಂಥದ ಸಂಪಾದಕರು ಇದನ್ನು ಚಂಪುವೆಂದೇ ಕರೆಯಬಹುದು–ಎಂದು ಸೂಚಿಸಿದ್ದಾರೆ. ಸಂಶೋಧನೆಯಿಂದ ಹೊಸ ಸಂಗತಿಗಳು ಬೆಳಕಿಗೆ ಬಂದ ಹೊರತು ಈ ವಿಷಯದಲ್ಲಿ ಯಾವ ನಿರ್ಣಯಕ್ಕೂ ಬರುವುದು ಸರಿಯಾಗದು. (ಟಿ.ವಿ.ವಿ.)

**ಸಂಸ್ಕೃತದಲ್ಲಿ ಚಂಪೂ ಸಾಹಿತ್ಯ :** ಪ್ರಾಚೀನ ಗ್ರಂಥಗಳಾದ ಜಾತಕಮಾಲ, ಪಂಚತಂತ್ರ ಮುಂತಾದವಲ್ಲಿ ಗದ್ಯಪದ್ಯ ಮಿಶ್ರಣ ಕಂಡುಬರುತ್ತದೆ. ಅವುಗಳಲ್ಲಿ, ಗದ್ಯದಲ್ಲಿ ವಿವರಿಸಿದ ವಿಷಯದ ಸಾರವನ್ನು ಸಂಗ್ರಹಿಸಿ ನೆನಪಿನಲ್ಲಿ ನೆಲೆಗೊಳಿಸಲು ಪದ್ಯಗಳು ವಿರಳವಾಗಿ ಬರುತ್ತವೆ; ಇಲ್ಲವೆ ನೀತಿಬೋಧಕ ಸುಭಾಷಿತಗಳಂತೆ ಬರುತ್ತವೆ. ಹರಿಷೇಣನಿಂದ ರಚಿತವಾದ ಸಮುದ್ರಗುಪ್ತ ಪ್ರಶಸ್ತಿಯಲ್ಲೂ (ಪ್ರ.ಶ.345) ಗದ್ಯಪದ್ಯಮಿಶ್ರಣವಿದೆ; ವಿಶೇಷವಾಗಿ ಕಾವ್ಯಾಂಶವಿಲ್ಲದಿರುವುದರಿಂದ ಇವನ್ನು ಚಂಪೂ ಕಾವ್ಯಗಳೆಂದು ಪರಿಗಣಿಸಲಾಗಿಲ್ಲ.

ದಂಡಿಯಿಂದ ಲಕ್ಷಿತವಾದ ಚಂಪೂ ಕಾವ್ಯ ಅವನಿಗಿಂತ ಹಳೆಯದಿರಬೇಕು. ಆದರೂ ಅವನಿಗಿಂತ ಹಿಂದಿನ ಇಲ್ಲವೆ ಅವನ ಕಾಲದ ಚಂಪೂಕಾವ್ಯಗಳು ನಮಗೆ ದೊರೆತಿಲ್ಲ. ಉಪಲಬ್ಧವಿರುವ ಕಾವ್ಯಗಳಲ್ಲಿ ಪ್ರಾಚೀನವೆಂದೆನ್ನಿಸಿಕೊಂಡವು ಪ್ರ.ಶ. 10ನೆಯ ಶತಮಾನದಲ್ಲಿ ರಚಿತವಾದವು. ರಾಷ್ಟ್ರಕೂಟ ರಾಜ ಮೂರನೆಯ ಇಂದ್ರನ ನೌಸರಿ ಶಾಸನ ರಚಿಸಿದ ತ್ರಿವಿಕ್ರಮಭಟ್ಟ (ಪ್ರ.ಶ.ಸು.915) ದಮಯಂತೀ ಕಥಾ ಅಥವಾ ನಲಚಂಪೂ ಎಂಬ ಕಾವ್ಯವನ್ನು ರಚಿಸಿದ. ಮಹಾಭಾರತದಲ್ಲಿ ಸರಳ ಹಾಗೂ ಸುಂದರವಾಗಿ ನಿರೂಪಿತವಾಗಿರುವ ಪ್ರಸಿದ್ಧ ನಲಚರಿತವನ್ನು ಈ ಕವಿ ಶ್ಲೇಷಯಮಕಾದ್ಯಲಂಕಾರಗಳಿಂದ ಕೂಡಿದ ಪ್ರೌಢಶೈಲಿಯಲ್ಲಿ ಬೆಳೆಸಿದ್ದಾನೆ. ಈತನ ಮತ್ತೊಂದು ಕೃತಿ ಮದಾಲಸಾಚಂಪೂ. ಇದೇ ಶತಮಾನಕ್ಕೆ ಸೇರಿದ ಇನ್ನೊಂದು ಚಂಪೂಕಾವ್ಯ ಯಶಸ್ತಿಲಕ. ರಾಷ್ಟ್ರಕೂಟರಾಜ ಕೃಷ್ಣನ ಸಾಮಂತನಾಗಿದ್ದ 2ನೆಯ ಅರಿಕೇಸರಿಯ ಮಗನ ಆಶ್ರಯ ಪಡೆದಿದ್ದ ದಿಗಂಬರ ಜೈನ ಸೋಮದೇವ (ಸೋಮಪ್ರಭಸೂರಿ ಪ್ರ.ಶ. 959) ಇದನ್ನು ಬರೆದ. 8 ಆಶ್ವಾಸಗಳುಳ್ಳ ಈ ಕಾವ್ಯ ತ್ರಿವಿಕ್ರಮನ ಕೃತಿಗಿಂತ ವಿಸ್ತಾರವೂ ಉತ್ತಮವೂ ಆಗಿದೆ. ಜೈನರ ಕಥೆಗಳಲ್ಲಿ ಪ್ರಸಿದ್ಧವಾದ ಯಶೋಧರಚರಿತವೇ ಇದರ ಕಥಾ ವಸ್ತು. ಯೋಧೇಯ ದೇಶದ ರಾಜ ಮಾರಿದತ್ತ ತನ್ನ ಕುಲಪುರೋಹಿತನ ಉಪದೇಶದಂತೆ ಯಾಗವೊಂದನ್ನು ಕೈಗೊಂಡಾಗ ಚಂಡಮಾರಿ ದೇವತೆಗೆ ಎಲ್ಲ ಪ್ರಾಣಿಗಳ ಜೋಡಿಗಳನ್ನೂ ಬಲಿಕೊಡಬೇಕಾಗುತ್ತದೆ. ಆ ಜೋಡಿಗಳಲ್ಲಿ ಮನುಷ್ಯ ಜೋಡಿಯೂ ಸೇರಿದೆ. ರಾಜಭಟರು ಮುನಿವೃತ್ತಿಯನ್ನು ಸ್ವೀಕರಿಸಿದ್ದ ಅಣ್ಣತಂಗಿಯರ ಜೋಡಿಯನ್ನು ವಧಸ್ಥಾನಕ್ಕೆ ಕರೆತರುತ್ತಾರೆ. ಅವರ ದರ್ಶನದಿಂದ ರಾಜನ ಅಜ್ಞಾನಾಂಧಕಾರ ಕಳೆಯುತ್ತದೆ. ನಿಜವಾಗಿಯೂ ಆ ಸೋದರ ಸೋದರಿಯರು ರಾಜನ ಸೋದರಿಯ ಅವಳಿಮಕ್ಕಳು, ಜಾತಿಸ್ಮರನಾದ ಆ ಸೋದರ ಪೂರ್ವಜನ್ಮವೃತ್ತಾಂತವನ್ನು ವಿವರಿಸುತ್ತಾನೆ. ಅವನೇ ಹಿಂದಿನ ಒಂದು ಜನ್ಮದಲ್ಲಿ ಯಶೋಧರನಾಗಿದ್ದವ. ರಾಜ ತಾನು ಮಾಡಲಿದ್ದ ಘೋರವಾದ ಪಾಪಕೃತ್ಯವನ್ನರಿತು ಜೈನಧರ್ಮವನ್ನವಲಂಬಿಸುತ್ತಾನೆ. ಸೋಮದೇವ ಈ ಕೃತಿಯಲ್ಲಿ, ಬಾಣನ ಕಾದಂಬರಿಯಲ್ಲಿ ಬರುವಂತೆ, ಕಥೆಯೊಳಗೆ ಕಥೆಯನ್ನು ಅಡಕಮಾಡಿ ಅನೇಕ ಜನ್ಮಗಳ ವೃತ್ತಾಂತವನ್ನು ಹೇಳಿದ್ದಾನೆ. ಕವಿಗಿದ್ದ ವಿವಿಧ ಶಾಸ್ತ್ರಗಳ ಪರಿಚಯ ಇಲ್ಲಿ ಪ್ರದರ್ಶಿತವಾಗಿದೆ. ಕವಿಯ ಧರ್ಮಶ್ರದ್ಧೆಯ ಫಲವಾಗಿ ಜೈನಧರ್ಮೋಪದೇಶ ಕೊನೆಯ ಮೂರು ಆಶ್ವಾಸಗಳಲ್ಲಿ ತುಂಬಿದೆ. ಪ್ರಾಯಶಃ ಇದೇ ಶತಮಾನದಲ್ಲಿ ರಚಿತವಾದ ಮತ್ತೊಂದು ಜೈನಚಂಪೂಕಾವ್ಯ ಜೀವಂಧರಚಂಪೂ. ಇದರಲ್ಲಿ 11 ಲಂಬಕಗಳಿವೆ. ಗುಣಭದ್ರನ ಉತ್ತರಪುರಾಣದ ಆಧಾರದ ಮೇಲೆ ಹರಿಚಂದ್ರ ಈ ಕಾವ್ಯವನ್ನು ರಚಿಸಿದ್ದಾನೆ.

ಕೊಂಕಣದ ಮುಮ್ಮುನಿರಾಜನ ಆಶ್ರಯ ಪಡೆದಿದ್ದ ವಾಲಭಕಾಯಸ್ಥ ಸೊಡ್ಡಲ (ಸು. 1000) ಉದಯಸುಂದರೀಕಥಾ ಎಂಬ ಚಂಪೂವನ್ನು ರಚಿಸಿದ. ಇದರಲ್ಲಿ 6 ಉಚ್ಛ್ವಾಸಗಳಿವೆ. ಕವಿ ನಾಗಲೋಕದ ರಾಜಕನ್ಯೆ ಉದಯಸುಂದರೀ ಮತ್ತು ಪ್ರತಿಷ್ಠಾನದ ರಾಜಕುಮಾರ ಮಲಯವಾಹನ – ಇವರ ಪ್ರೇಮದ ಕಥೆಯೊಡನೆ ತಾರಾವಳಿ ಮತ್ತು ಕುಮಾರಕೇಸರಿಯರ ಪ್ರಣಯವೃತ್ತಾಂತವನ್ನು ಹೆಣೆದು ಬಾಣನ ಕಾದಂಬರಿಯನ್ನು ನೆನಪಿಗೆ ತರುತ್ತಾನೆ, ಮತ್ತು ಬಾಣನ ಹರ್ಷಚರಿತದಲ್ಲಿರುವಂತೆ ತನ್ನ ಹಿಂದಿನ ಕವಿಗಳ ಮೇಲೆ ಸುಮಾರು 25 ಪದ್ಯಗಳನ್ನೂ ಬರೆದಿರುವುದಲ್ಲದೆ ತನ್ನ ವಂಶಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನೂ ತಿಳಿಸಿದ್ದಾನೆ. ಚಂಪೂರಾಮಾಯಣ ಭೋಜರಾಜನಿಂದ ವಿರಚಿತವಾದುದೆಂದು ಹೇಳಲಾಗಿದೆ. ಈ ಕಾವ್ಯಕರ್ತೃ ಧಾರಾನಗರದಲ್ಲಿ ಆಳುತ್ತಿದ್ದ ಪ್ರಖ್ಯಾತನಾದ ಭೋಜರಾಜನೇ (1018–1063) ಇರಬೇಕೆಂಬ ಇನ್ನೊಂದು ನಂಬಿಕೆ ಇದೆ. ಪ್ರತಿ ಕಾಂಡದ ಸಮಾಪ್ತಿವಾಕ್ಯದಲ್ಲಿ ವಿದರ್ಭರಾಜ ವಿರಚಿತವೆಂಬ ಮಾತು ಬರುತ್ತದೆಯಾದರೂ ಕರ್ತೃವಿನ ಹೆಸರಿಲ್ಲ. ಸುಂದರಕಾಂಡದಲ್ಲಿ ಮುಗಿದ ಈ ಕಾವ್ಯಕ್ಕೆ ಯುದ್ಧಕಾಂಡವನ್ನು ರಚಿಸಿ ಸೇರಿಸಿದ ಲಕ್ಷ್ಮಣಕಾವ್ಯದ ಕರ್ತೃ

ಭೋಜನೆಂದೇ ಹೆಸರಿಸುತ್ತಾನೆ. ಕವಿ ಇಲ್ಲಿ ಮೂಲರಾಮಾಯಣದ ಕಥೆಯನ್ನು ಏನೂ ವ್ಯತ್ಯಾಸಮಾಡದೆ ಸುಂದರವಾಗಿ ಚಂಪೂಶೈಲಿಯಲ್ಲಿ ಸಂಗ್ರಹಿಸಿಕೊಟ್ಟಿದ್ದಾನೆ. ಗದ್ಯವೂ ಪದ್ಯವೂ ಬಹುಮಟ್ಟಿಗೆ ಚೆನ್ನಾಗಿದ್ದು ಕಾವ್ಯ ಪ್ರಿಯವಾಗಿದೆ.

ಉತ್ತರಕಾಂಡದ ಕಥೆಯನ್ನು ಚಂಪೂಶೈಲಿಯಲ್ಲಿ ಅನೇಕರು ರಚಿಸಿರುತ್ತಾರೆ. ಸು. 1050ರಲ್ಲಿ ಅಭಿನವಕಾಳಿದಾಸ 6 ಉಚ್ಛ್ವಾಸಗಳಲ್ಲಿ ಭಾಗವತ ಚಂಪೂವನ್ನು ಬರೆದ. ಸೋಮೇಶ್ವರದೇವ (1240) ವೀರಧವಲನ ಮಂತ್ರಿ ವಸ್ತುಪಾಲನ ಚರಿತೆಯನ್ನು ಕೀರ್ತಿಕೌಮುದೀ ಎಂಬ ಚಂಪೂಕಾವ್ಯದಲ್ಲಿ ಹೇಳಿದ್ದಾನೆ. ಕಳಿಂಗದೇಶವನ್ನಾಳಿದ ಗಂಗರನ್ನು ಕುರಿತ ಗಂಗವಂಶಾನುಚರಿತಂ ಎಂಬ ಚಂಪೂವನ್ನು ವಾಸುದೇವ ರಥ ಸು. 1420ರಲ್ಲಿ ರಚಿಸಿದ. ಭಾರತಚಂಪೂವನ್ನು ರಚಿಸಿದ ಅನಂತಭಟ್ಟನ ಕಾಲ ಖಚಿತವಾಗಿ ತಿಳಿದಿಲ್ಲ. ನಾರಾಯಣೀಯದ ಕರ್ತೃ ಮಲಬಾರಿನ ನಾರಾಯಣ ಭಟ್ಟಾತಿರಿ (1560–1646) ಅನಂತಭಟ್ಟನ ಚಂಪೂಕೃತಿಗಳಿಂದ ಅನೇಕ ವಾಕ್ಯಗಳನ್ನು ಉದಾಹರಿಸಿದ್ದಾನೆ. ಆದ್ದರಿಂದ ಭಾರತ ಚಂಪೂ 16ನೆಯ ಶತಮಾನಕ್ಕಿಂತ ಮುಂಚೆ ರಚಿತವಾಗಿರಬೇಕು. ಇದರಲ್ಲಿ 12 ಸ್ತಬಕಗಳಿವೆ. ಶಬ್ದಸಂಪತ್ತಿನಿಂದಲೂ ನಾನಾ ಅಲಂಕಾರಗಳಿಂದಲೂ ಪದ್ಯಗಳ ವೃತ್ತವೈವಿಧ್ಯ ದಿಂದಲೂ ಆಕರ್ಷಕವೂ ಪ್ರಿಯವೂ ಆಗಿರುವ ಚಂಪೂಭಾರತದಲ್ಲಿ ಮಹಾಭಾರತದ ಕಥೆಯ ಸುಂದರಸಂಗ್ರಹವಿದೆ. ಅನಂತಭಟ್ಟ ಒಂದು ಭಾಗವತ ಚಂಪೂವನ್ನೂ ಬರೆದಿದ್ದಾನೆ.

16 ಮತ್ತು 17ನೆಯ ಶತಮಾನಗಳಲ್ಲಿ ಚಂಪೂಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಚಿತವಾದುವು. ವಿಜಯನಗರದ ಅಚ್ಯುತರಾಯನ ರಾಣಿ ತಿರುಮಲಾಂಬೆ ಪ್ರಶ.ಸು.1550ರಲ್ಲಿ ವರದಾಂಬಿಕಾಪರಿಣಯ ಚಂಪೂವನ್ನು ಬರೆದಳು. ಅಚ್ಯುತರಾಯ ಮತ್ತು ರಾಜಕುಮಾರಿ ವರದಾಂಬಿಕೆಯರ ವಿವಾಹವೇ ಇದರ ವಸ್ತು. ರಾಮಾನುಜಾಚಾರ್ಯರ (11ನೆಯ ಶತಮಾನ) ಜೀವನಚರಿತ್ರೆಯನ್ನೂ ಹಿರಿಮೆಯನ್ನೂ ವರ್ಣಿಸುವ ರಾಮಾನುಜ ಚಂಪೂವನ್ನು 16ನೆಯ ಶತಮಾನದಲ್ಲಿ ರಾಮಾನುಜಾಚಾರ್ಯ ರಚಿಸಿದ. ಚಿದಂಬರ ಕವಿ ಇದೇ ಶತಮಾನದಲ್ಲಿ ಪಂಚಕಲ್ಯಾಣ ಚಂಪೂವನ್ನು ರಚಿಸಿದ. ಇದರಲ್ಲಿ ರಾಮ, ಕೃಷ್ಣ, ವಿಷ್ಣು, ಶಿವ, ಸ್ಕಂದ–ಈ ಐವರ ವಿವಾಹವೃತ್ತಾಂತಗಳನ್ನೂ ಒಮ್ಮೆಲೇ ಹೇಳುವ ಕೌಶಲವನ್ನು ಪ್ರದರ್ಶಿಸಿದ್ದಾನೆ. ಅಲ್ಲದೆ ಒಂದು ಭಾಗವತ ಚಂಪೂವನ್ನು ಬರೆದಿದ್ದಾನೆ. ಅಂತೆಯೇ ರಾಮಭದ್ರ, ರಾಜನಾಥ ಇವರೂ ಭಾಗವತ ಚಂಪೂವನ್ನು ಬರೆದಿದ್ದಾರೆ. ಭಾಗವತ ಚಂಪೂವನ್ನು ಬರೆದಂತೆಯೇ ಹಲವರು ಪ್ರಹ್ಲಾದನ ಕಥೆಯನ್ನು ಕುರಿತು ಚಂಪೂಕಾವ್ಯಗಳನ್ನು ರಚಿಸಿದ್ದಾರೆ. ಕೇಶವಭಟ್ಟ 6 ಸ್ತಬಕಗಳಲ್ಲೂ ದೈವಜ್ಞಸೂರ್ಯ 5 ಉಚ್ಛ್ವಾಸಗಳಲ್ಲೂ ಸಂಕರ್ಷಣ 4 ಉಲ್ಲಾಸಗಳಲ್ಲೂ ನೃಸಿಂಹಚಂಪೂವನ್ನು ರಚಿಸಿರುತ್ತಾರೆ. 16ನೆಯ ಶತಮಾನದ ಉತ್ತರಾರ್ಧದಲ್ಲಿ ಶೇಷಕೃಷ್ಣನೆಂಬಾತ ಪಾರಿಜಾತಹರಣಚಂಪೂವನ್ನು ರಚಿಸಿದ. ಇದೇ ಕಾಲದಲ್ಲಿ ಸಮರಪುಂಗಮದೀಕ್ಷಿತ (ತೀರ್ಥ) ಯಾತ್ರಾಪ್ರಬಂಧದಲ್ಲಿ ತನ್ನ ಅಣ್ಣನೊಡನೆ ತಾನು ಮಾಡಿದ ತೀರ್ಥಯಾತ್ರೆಯನ್ನು ಕುರಿತು ಬರೆಯುತ್ತ ಋತುಗಳು, ಸೂರ್ಯೋದಯ, ಸೂರ್ಯಾಸ್ತ ಮುಂತಾದವನ್ನು ವರ್ಣಿಸಿದ್ದಾನೆ. ನಾರಾಯಣಭಟ್ಟ (ಸು. 1620) ಕೃಷ್ಣನ ಬಾಲಚರಿತವನ್ನು ವರ್ಣಿಸುವ ಆನಂದಕಂದ ಚಂಪೂವನ್ನೂ ಚಕ್ರಕವಿ (1650) ದ್ರೌಪದೀ ಪರಿಣಯ ಚಂಪೂವನ್ನೂ ರಚಿಸಿದ್ದಾರೆ. ನೀಲಕಂಠದೀಕ್ಷಿತ (1637) ನೀಲಕಂಠವಿಜಯ ಚಂಪೂವನ್ನು ರಚಿಸಿದ. ದೇವದಾನವರು ಕ್ಷೀರಸಾಗರವನ್ನು ಅಮೃತಕ್ಕಾಗಿ ಕಡೆದಾಗ ಉದ್ಭವಿಸಿದ ಹಾಲಾಹಲವನ್ನು ಲೋಕಕಲ್ಯಾಣಕ್ಕಾಗಿ ತಾನೇ ಕುಡಿದು ನೀಲಕಂಠನಾದ ಶಿವನ ಕಥೆಯೇ ಈ ಕಾವ್ಯದ ವಸ್ತು. ಕವಿಪ್ರತಿಭೆಯಿಂದ ಮೂಡಿದ ತಿಳಿಹಾಸ್ಯ, ಲಲಿತೋತ್ಪ್ರೇಕ್ಷೆ ಗಳಿಂದ ಕೂಡಿರುವ ಈ ಕಾವ್ಯದಲ್ಲಿ ಸುಂದರವಾದ ವರ್ಣನೆ, ಚತುರೋಕ್ತಿಗಳಿದ್ದು ಕೃತಿ ಮನೋಹರವಾಗಿದೆ. ಇದೇ ಶತಮಾನದ ಉತ್ತರಾರ್ಧದಲ್ಲಿ ವೆಂಕಟಾಧ್ವರಿ ಎಂಬಾತ ವರದಾಭ್ಯುದಯ (ಹಸ್ತಿಗಿರಿ ಚಂಪೂ), ಶ್ರೀನಿವಾಸಚಂಪೂ, ಉತ್ತರಚಂಪೂ, ವಿಶ್ವಗುಣಾದರ್ಶಚಂಪೂ– ಇವನ್ನು ರಚಿಸಿದ. ಇವುಗಳಲ್ಲಿ ವಿಶ್ವಗುಣಾದರ್ಶ ಆಕರ್ಷಕವಾಗಿದೆ. ಆಕಾಶದಲ್ಲಿ ಸಂಚರಿಸುತ್ತಿರುವ ಗುಣಗ್ರಾಹಿಯಾದ ವಿಶ್ವಾವಸು ಮತ್ತು ದೋಷವನ್ನೇ ಕಂಡು ಖಂಡಿಸುವ ಕೃಶಾನು ಎಂಬ ಗಂಧರ್ವರಿಬ್ಬರ ಸಂಭಾಷಣೆಯಲ್ಲಿ ಕವಿ ಇಲ್ಲಿ ಅನೇಕ ದೇಶಗಳ ವೃತ್ತಿಪ್ರವೃತ್ತಿಗಳನ್ನೂ ಆಚಾರವ್ಯವಹಾರಗಳನ್ನೂ ವಿಡಂಬನಾತ್ಮಕ ವಾಗಿ ಚಿತ್ರಿಸಿದ್ದಾನೆ. ನಾರಾಯಣನ ಸ್ವಾಹಾಸುಧಾಕರ ಚಂಪೂ ಕೃತಿ ಅಗ್ನಿಯ ಪತ್ನಿ ಸ್ವಾಹಾ ಮತ್ತು ಚಂದ್ರ–ಇವರ ಪ್ರಣಯವನ್ನು ಕುರಿತದ್ದಾಗಿದೆ. ವಿಶ್ವಗುಣಾದರ್ಶದ ಧಾಟಿಯನ್ನೇ ಅನುಸರಿಸಿ ಅನ್ನಮಾರ್ಯ ತನ್ನ ತತ್ತ್ವಗುಣಾದರ್ಶದಲ್ಲಿ ಶೈವನಾದ ಜಯ ಮತ್ತು ವೈಷ್ಣವನಾದ ವಿಜಯ–ಇವರಿಬ್ಬರ ಸಂಭಾಷಣೆಯಲ್ಲಿ ಶೈವ, ವೈಷ್ಣವ ಮತಗಳ ತಾರತಮ್ಯವನ್ನು ವರ್ಣಿಸಿದ್ದಾನೆ.

ಜೈನಕವಿಗಳು ಚಂಪೂಕಾವ್ಯಪದ್ಧತಿಯನ್ನು ಸ್ವಧರ್ಮಪ್ರಚಾರಕ್ಕಾಗಿ ಹೇಗೆ ಉಪಯೋಗಿಸಿ ಕೊಂಡರೂ ಹಾಗೆಯೇ ಬಂಗಾಳದ ವೈಷ್ಣವಪಂಥದವರೂ ಬಳಸಿಕೊಂಡರು. ಚೈತನ್ಯನ ಅನುಯಾಯಿ ರಘುನಾಥದಾಸ ಮುಕ್ತಾಚರಿತ್ರದಲ್ಲಿ ಹಾಲೆರೆದು ಮುತ್ತಿನಬೆಳೆಯನ್ನು ಬೆಳೆಯಬಹುದೆಂದು ಕೃಷ್ಣ ತೋರ್ಪಡಿಸಿದ ಕಥೆಯನ್ನು ಹೇಳುತ್ತಾನೆ. ಜೀವಗೋಸ್ವಾಮಿಯ ಗೋಪಾಲಚಂಪೂ ಮತ್ತು ಪರಮಾನಂದದಾಸಸೇನಕವಿಕರ್ಣಪೂರನ ಆನಂದ ವೃಂದಾವನ ಚಂಪೂ ಕಾವ್ಯಗಳು ಹರಿವಂಶ ಮತ್ತು ಭಾಗವತವನ್ನನುಸರಿಸಿ ಕೃಷ್ಣಚರಿತ್ರವನ್ನೇ ಹೇಳುತ್ತವೆ.

ತಂಜಾವೂರು ರಾಜಾ ಸರ್ಫೋಜಿಯಿಂದ 18ನೆಯ ಶತಮಾನದ ಪೂರ್ವಾರ್ಧದಲ್ಲಿ ಕುಮಾರಸಂಭವ ಚಂಪೂ ರಚಿತವಾಯಿತು. ಇದೇ ಶತಮಾನದ ಉತ್ತರಾರ್ಧದಲ್ಲಿ ಬಾಣೇಶ್ವರ ಬರ್ದವಾನರಾಜ ಚಿತ್ರಸೇನನನ್ನು ಕುರಿತ ಚಿತ್ರಚಂಪೂವನ್ನು ರಚಿಸಿದ. ಶಂಕರಕವಿ ಚೇತಸಿಂಹನನ್ನು ಕುರಿತು ಶಂಕರಚೇತೋವಿಲಾಸಚಂಪೂವನ್ನು ಬರೆದ. ಕೃಷ್ಣಕವಿಯ ಮಂದಾರಮರಂದ ಚಂಪೂವಿನಲ್ಲಿ ಕಾವ್ಯಾಂಶಕ್ಕಿಂತ ಹೆಚ್ಚಾಗಿ ಕಾವ್ಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ವಿಷಯಗಳೂ ವೃತ್ತಗಳ ವಿಚಾರವೂ ಇವೆ. ಚಂಪೂಕಾವ್ಯರಚನೆ ಕರ್ಣಾಟಕದ ಹಲವೆಡೆಗಳಲ್ಲಿ ಇತ್ತೀಚಿನವರೆಗೂ ಮುಂದುವರಿದಿದೆ. ಉದಾಹರಣೆಗೆ, ಇತ್ತೀಚಿನ ಕಾಲದ ಸೀತಾರಾಮಕವಿ, ಗರಳಪುರಿಶಾಸ್ತ್ರಿ ಮೊದಲಾದ ಚಂಪೂಕಾವ್ಯಕರ್ತೃಗಳನ್ನು ಇಲ್ಲಿ ಹೆಸರಿಸಬಹುದು.

ರಾಮಾಯಣ, ಮಹಾಭಾರತ, ಪುರಾಣೇತಿಹಾಸಗಳು ದೃಶ್ಯಕಾವ್ಯಗಳಿಗೂ ಮಹಾಕಾವ್ಯಗಳಿಗೂ ಕಥಾವಸ್ತುವನ್ನೊದಗಿಸಿ ಸ್ಫೂರ್ತಿನೀಡಿರುವಂತೆ ಚಂಪೂ ಕಾವ್ಯಕ್ಕೂ ಸ್ಫೂರ್ತಿದಾಯಕವಾಗಿವೆ. ಒಂದೇ ಕಥೆಯನ್ನು ಕುರಿತ ಹಲವು ಚಂಪೂಗಳಿರುವುದು ಮೇಲಿನ ನಿರೂಪಣೆಯಿಂದ ಸ್ಪಷ್ಟವಾಗುತ್ತದೆ ; ಹಾಗೆಯೇ ಚಂಪೂಕಾವ್ಯಗಳ ವಸ್ತುವೈವಿಧ್ಯವೂ ಅಷ್ಟೇ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ರಾಮಾಯಣ, ಭಾರತ, ಭಾಗವತಗಳು, ಅವುಗಳಲ್ಲಿ ಬರುವ ಕಥೆಗಳು, ಜೈನರ ಪುರಾಣಕಥೆಗಳು, ಧರ್ಮಪ್ರಚಾರ, ಮತವಿಚಾರ, ಐತಿಹಾಸಿಕ ಘಟನೆಗಳು, ಸಮಾಜದ ಲೋಪದೋಷಗಳ ಟೀಕೆ–ಇವೆಲ್ಲವೂ ಚಂಪೂ ಕಾವ್ಯಗಳಿಗೆ ವಿಷಯವಾಗಿ, ಇತರ ಸಾಹಿತ್ಯಪ್ರಕಾರಗಳಂತೆ ಈ ಕಾವ್ಯಶೈಲಿಯೂ ಮಾನ್ಯವಾಗಿದೆ. ಚಂಪೂ ಪ್ರಕಾರಕ್ಕೆ ಏನಿಲ್ಲೆಂದರೂ ಒಂದು ಸಾವಿರ ವರ್ಷಗಳ ದೀರ್ಘ ಪರಂಪರೆ ಇದೆ.

**(ನೋಡಿ– ಕನ್ನಡ–ಚಂಪೂಸಾಹಿತ್ಯ)** (ಎಂ.ಎಲ್.ಜಿ.)

**ಚಂಬಾ :** ಹಿಮಾಚಲಪ್ರದೇಶದ ಒಂದು ಜಿಲ್ಲೆ; ಸಾಲ್ ಮತ್ತು ರಾವಿ ನದಿಗಳ ಸಂಗಮ ಪ್ರದೇಶದಲ್ಲಿರುವ ಒಂದು ಪಟ್ಟಣ. ಜಿಲ್ಲೆ ಹಿಮಾಲಯ ಮತ್ತು ಶಿವಾಲಿಕ ಪರ್ವತಗಳ ಮಧ್ಯೆ ರಾವಿ ಮತ್ತು ಚಂದ್ರಭಾಗಾ ನದಿಗಳಿಂದಾದ ಕಣಿವೆಯಲ್ಲಿದೆ. ಪಶ್ಚಿಮಕ್ಕೆ ಕಾಶ್ಮೀರ, ಪೂರ್ವಕ್ಕೆ ಲಡಾಖ್ ಮತ್ತು ಲಾಹೂಲ, ದಕ್ಷಿಣಕ್ಕೆ ಕಾಂಗಡಾ ಮತ್ತು ಗುರುದಾಸಪುರ ಜಿಲ್ಲೆಗಳಿವೆ. ಎಷ್ಟೋ ಕಡೆ ಈ ಭಾಗದ ಎತ್ತರ 610 ಮೀ(640 ಮೀ.)ಎತ್ತರದವರೆಗೆ ಮಾನವ ವಸತಿಗಳಿವೆ. ಚಂಬಾ, ಭರವತಾರ್, ಚುರಾಹ್, ಭಟಿಯಾತ್ ಮತ್ತು ಪಾಂಗೀ ಇಲ್ಲಿಯ ತಾಲ್ಲೂಕುಗಳು, ಚಂಬಾ ಪ್ರದೇಶ ಅರಣ್ಯಮಯವಾಗಿ ದುರ್ಗಮವಾಗಿದ್ದರೂ ರಮಣೀಯವಾದ್ದು.

ಈ ಪ್ರದೇಶವನ್ನು 6ನೆಯ ಶತಮಾನದಲ್ಲಿ ಮೂಶಣ ವಂಶದವರು ಆಳುತ್ತಿದ್ದರೆಂಬುದು ಇಲ್ಲಿ ಸಿಕ್ಕಿರುವ ಶಾಸನದಿಂದ ತಿಳಿದುಬರುತ್ತದೆ. ಚಂಬಾ ನಗರಕ್ಕೆ ಸುಮಾರು 40 ಕಿಮೀ ದೂರದಲ್ಲಿರುವ ಬ್ರಹ್ಮೌರ್ (ಹಿಂದಿನ ಬ್ರಹ್ಮಪುರ) ಎಂಬಲ್ಲಿ ಆ ವಂಶದ ಅಜಿತವರ್ಮ ರಾಜ 750ರಲ್ಲಿ ರಾಜ್ಯವಾಳುತ್ತಿದ್ದನೆನ್ನಲಾಗಿದೆ. ಆತನ ಅನಂತರ ಸುವರ್ಣವರ್ಮ ಮತ್ತು ಲಕ್ಷ್ಮೀವರ್ಮ ಪಟ್ಟಕ್ಕೆ ಬಂದರು. ತರುವಾಯ ಬಂದ ಸಜ್ಜನವರ್ಮ ಚಂಪಕಾ (ಚಂಬಾ) ನಗರವನ್ನು ಸ್ಥಾಪಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಎಂಬುದು ವ್ಹೊಗೆಲ್ ಅವರ ಮತ. ಇದನ್ನು 10ನೆಯ ಶತಮಾನದ ಪೂರ್ವಾರ್ಧದಲ್ಲಿ ಸಾಹಿಲ್ಲವರ್ಮ ಕಟ್ಟಿಸಿದನೆಂದೂ ಕೆಲವರ ಮತ.

11ನೆಯ ಶತಮಾನದಿಂದ ಚಂಬಾ ರಾಜ್ಯದ ಇತಿಹಾಸ ಹೆಚ್ಚಾಗಿ ತಿಳಿದುಬಂದಿಲ್ಲ. ಹಿಂದೆ ಅದು ಚಿಕ್ಕ ಸಂಸ್ಥಾನವಾಗಿತ್ತು. ಈಗ ಹಿಮಾಚಲ ಪ್ರದೇಶದ ಒಂದು ಭಾಗವಾಗಿದೆ.

ಚಂಬಾ ಪ್ರದೇಶದಲ್ಲಿ 8ನೆಯ ಶತಮಾನದಲ್ಲಿ ಬರೀ ಮರಗಳಿಂದ ನಿರ್ಮಿಸಲಾದ ದೇವಸ್ಥಾನಗಳು ಈಗಲೂ ಇವೆ. ಇವು ರಾಜ ಮೇರುವರ್ಮನ ಕಾಲದಲ್ಲಿ ನಿರ್ಮಿತವಾದವೆನ್ನಲಾಗಿದೆ. ಬ್ರಹ್ಮೌರ್‌ನಲ್ಲಿ ಲಕ್ಷ್ಮಣಾದೇವಿಯ ಮತ್ತು ಉದಯಪುರದಲ್ಲಿ ಮುರ್ಕುಲ ದೇವಿಯ ಗುಡಿಗಳು ಪ್ರಾಚೀನವಾದವು. ಗರ್ಭಗುಡಿಯಲ್ಲಿ ಮತ್ತು ಪ್ರವೇಶದ್ವಾರಗಳಲ್ಲಿರುವ ನಕ್ಕೆ ಕೆಲಸಗಳು ಸುಂದರವಾಗಿವೆ. ಇವುಗಳಲ್ಲಿ ಅಷ್ಟಧಾತುಗಳಿಂದ ಕೂಡಿದ ಮಹಿಷಾಸುರಮರ್ದಿನಿಯ ಮೂರ್ತಿ ಅತ್ಯಂತ ಗಮನಾರ್ಹವಾದ್ದು.

ಮುರ್ಕುಲ ದೇವಿ ಮತ್ತು ಶಕ್ತಿ ದೇವಿಯ ಆಲಯಗಳ ನಕ್ಷೆ ಕೆಲಸ ಅಪ್ರತಿಮವಾದ್ದು. ಮುರ್ಕುಲದೇವಿ ಗುಡಿಯಲ್ಲಿ ರಾಮಾಯಣ, ಮಹಾಭಾರತ ಪ್ರಸಂಗಗಳನ್ನೂ ಶಿವ, ಪಾರ್ವತಿ, ನವಗ್ರಹ ಮತ್ತು ಲೋಕಪಾಲಕಮೂರ್ತಿಗಳನ್ನು ಸುಂದರವಾಗಿ ಕೆತ್ತಿದ್ದಾರೆ. ಎತ್ತರವಾದ ತ್ರಿಕೋನಾಕಾರದ ಚಪ್ಪರಗಳು ಈ ದೇವಸ್ಥಾನಗಳ ವೈಶಿಷ್ಟ್ಯ.

ಬ್ರಹ್ಮೌರದ ಮಧ್ಯಭಾಗದಲ್ಲಿ ಕಲ್ಲುಕಟ್ಟಡದ ಮಣಿಮಹೇಶ ದೇವಸ್ಥಾನದ ಶಿಖರ ಎತ್ತರವಾದ್ದು. ಅಲ್ಲಿ ಹಿತ್ತಾಳೆಯಲ್ಲಿ ಕೊರೆದ ನಂದಿಯ ಮೇಲೆ ಮೇರುವರ್ಮನ ಆಲೇಖವಿದೆ. ಹಾಗೆಯೇ ನರಸಿಂಹ ದೇವಸ್ಥಾನ, ಎಂಬತ್ತನಾಲ್ಕು ಸಿದ್ಧರ ಸಮಾಧಿ, ಗಣೇಶಮೂರ್ತಿ,

ಸೂರ್ಯಮುಖಿ ಶಿವಲಿಂಗ ಇವೆ. ಚಂಬಾದ ಶಿಲ್ಪಕಲೆಯಲ್ಲಿ ಉತ್ತಮ ಗುಪ್ತಶೈಲಿಯ ಮಾದರಿಯನ್ನೂ ಸ್ಥಳೀಯ ಜನರ ಶೈಲಿಯನ್ನೂ ಕಾಣಬಹುದು. ಮುರ್ಕುಲ ದೇವಿ ಮಂದಿರ ಕಾಶ್ಮೀರಿ ಕಲಾಶೈಲಿಯಲ್ಲಿ ಕಟ್ಟಲಾಗಿದೆ. ಚಂಬಾ ನಗರದ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಸಂಗಮರವರೀ ಕಲ್ಲಿನಲ್ಲಿ ಕೆತ್ತಿದ ವಿಷ್ಣುವಿನ ಸುಂದರ ಮೂರ್ತಿಯಿದೆ. ಇದನ್ನು ರಾಜ ಸಾಹಿಲ್ಲವರ್ಮ ನಿರ್ಮಿಸಿದ. ಚಂದ್ರಗುಪ್ತ ಮತ್ತು ತ್ರಿಮುಖರ ಶೈವಮಂದಿರಗಳೂ ಈತ ನಿರ್ಮಿಸಿದವೇ. ಲಕ್ಷ್ಮಣವರ್ಮನೆಂಬ ರಾಜಕುಮಾರ 11ನೆಯ ಶತಮಾನದಲ್ಲಿ ಶ್ರೀ ಹರಿಹರ ದೇವಸ್ಥಾನವನ್ನು ಕಟ್ಟಿಸಿದ. ಸಾಹಿಲ್ಲವರ್ಮನ ಮಗಳಾದ ಚಂಪಾವತಿಯ ಪ್ರೀತ್ಯರ್ಥವಾಗಿ ಚಂಪೇಶ್ವರೀ ದೇವಸ್ಥಾನವನ್ನು ಕಟ್ಟಿಸಲಾಯಿತೆಂದು ಪ್ರತೀತಿ.

ಚಂಬಾದಲ್ಲಿ ರಾವಿ ನದೀತೀರದಲ್ಲಿರುವ ರಂಗಮಹಲಿನ ಭಿತ್ತಿಚಿತ್ರಗಳಲ್ಲಿ ರಾಮಾಯಣ, ಭಾಗವತ, ದುರ್ಗಾಸಪ್ತಶತಿಗಳ ಪ್ರಸಂಗಗಳ ಚಿತ್ರಣಗಳಿವೆ. *

**ಚಂಬೈ ವೈದ್ಯನಾಥ ಭಾಗವತರು :** 1896–1974. ಹಿರಿಯ ಹೆಸರಾಂತ ದಾಕ್ಷಿಣಾತ್ಯ ಸಂಗೀತ ವಿದ್ವಾಂಸರ ಪೈಕಿ ಒಬ್ಬರು. ಕೇರಳದ ಪಾಲಘಾಟ್ ಜಿಲ್ಲೆಯ ಚಂಬೈ ಗ್ರಾಮ ಪ್ರಸಿದ್ಧ ಸಂಗೀತ ವಿದ್ವಾಂಸರಾಗಿದ್ದ ದೊಂಡಕುಳದಿ ಅನಂತರಾಮ ಭಾಗವತರು ಇವರ ತಂದೆ. ತಂದೆಯೇ ಇವರ ವಿದ್ಯಾಗುರುಗಳೂ ಹೌದು. ಭಾಗವತರ ಸಂಗೀತಜೀವನ ಚಿಕ್ಕವಯಸ್ಸಿನಲ್ಲೇ ಪ್ರಾರಂಭವಾಯಿತು. 8–10 ವಯಸ್ಸಿನಲ್ಲಿಯೇ ಶಾರೀರ ಕೆಟ್ಟುಹೋದ ಕಾರಣ ಪಿಟೀಲುವಾದನವನ್ನು ಅಭ್ಯಾಸ ಮಾಡಿದರು. ಹಲವು ವರ್ಷಗಳ ಅನಂತರ, ಇವರ ಆರಾಧನಾಮೂರ್ತಿಗಳಾದ ಶ್ರೀ ಗುರುವಾಯರ್ ಅಪ್ಪನ್ ಮತ್ತು ಕೊಲ್ಲೂರು ಮೂಕಾಂಬಿಕೆಯರ ಅನುಗ್ರಹದಿಂದ ಇವರ ಶಾರೀರ ಸರಿಹೋಯಿತಲ್ಲದೆ ಸಂಗೀತ ಕಲಿಕೆಯೂ ಅಡೆಯಿಲ್ಲದೆ ನಡೆಯಿತು. ತಮ್ಮ 27ನೆಯ ವಯಸ್ಸಿನಲ್ಲಿ ಇವರು ಮದ್ರಾಸಿನ ಗೋಖಲೆಭವನದಲ್ಲಿ ಪ್ರಥಮ ಕಚೇರಿ ಮಾಡಿದರು. ಅನಂತರ ಚೌಡಯ್ಯ ಮತ್ತು ಮಣಿಗಳೊಂದಿಗೆ ಇವರು ಅನೇಕಾನೇಕ ಕಚೇರಿಗಳನ್ನು ನಡೆಸಿದರು. ಇಡೀ ಭಾರತದಲ್ಲಿ ಒಳ್ಳೆಯ ಹೆಸರು ಗಳಿಸಿದರು. ಪಾಲಘಾಟ್ ಟಿ.ಎಸ್. ಮಣಿ ಅಯ್ಯರನ್ನು ಬೆಳಕಿಗೆ ತಂದವರು ಇವರೇ. ಪಿಟೀಲ್ ಗೋವಿಂದಸ್ವಾಮಿ ನಾಯಿಡು, ಅಳಗನಂಬಿ, ದಕ್ಷಿಣಾಮೂರ್ತಿ ಪಿಳ್ಳೆ ಇವರ ಜೊತೆಯಲ್ಲಿ ಅನೇಕ ಕಚೇರಿಗಳನ್ನು ಮಾಡಿರುತ್ತಾರೆ. ತಿಂಗಳಲ್ಲಿ 20 ರಿಂದ 25 ಕಚೇರಿಗಳು ನಡೆದದ್ದೂ ಉಂಟು. ಕೆಲವು ಸಂದರ್ಭದಲ್ಲಿ ಒಂದೇ ದಿವಸ 2 ಕಚೇರಿಗಳು ನಡೆದಿವೆ. ಇವರು ಸಾಂಪ್ರದಾಯಿಕವಾದ ಸಂಗೀತವನ್ನು ಕಾಪಾಡಿಕೊಂಡು ಬಂದಿರುತ್ತಾರೆ. ಅದರಂತೆಯೇ ತಮ್ಮ ಆಚಾರ, ವ್ಯವಹಾರಗಳಲ್ಲೂ ಇವರು ಸಂಪ್ರದಾಯಸ್ಥರು. ಶಿಸ್ತುಸಂಯಮದಿಂದ ಕೂಡಿದ ಸಾತ್ವಿಕಜೀವಿಗಳು, ಮಹಾದೇವನ ಭಕ್ತರು, ತುಂಬ ಸರಳರು, ಯಾವಾಗಲೂ ಹಸನ್ಮುಖಿಗಳು, ಹಿರಿಯ ಸಾಧಕರು. 55ನೆಯ ವಯಸ್ಸಿನಲ್ಲಿ ಮತ್ತೆ ಇವರ ಶಾರೀರ ಸಂಪತ್ತು ಕಡಿಮೆಯಾಯಿತಾದರೂ ಗುರುವಾಯೂರಪ್ಪನ ಕೃಪೆಯಿಂದ ಮತ್ತೆ ನಾಲ್ಕು ವರ್ಷಗಳಲ್ಲಿ ಸರಿಹೋಯಿತು. ಇವರ ಗಾಯನದಲ್ಲಿ ಬಿಕ್ಕಟ್ಟಿನ ಲಯ, ಶ್ರುತಿಬದ್ಧತೆ, ಗಂಭೀರನಾದಗಳನ್ನು ಕಾಣಬಹುದು. ಒಂದು ಕೃತಿಯನ್ನು ಮೊದಲಿನಿಂದ ಕಡೆಯವರೆಗೂ ಒಂದೇ ಸಮನಾದ ಕಾಲಪ್ರಮಾಣದಲ್ಲಿ ನಡೆಸುವುದು, ತ್ರಿಕಾಲದಲ್ಲೂ ಸ್ವರವಿನ್ಯಾಸಮಾಡುವುದು, ಅದರಲ್ಲಿ ಸ್ಫುಟತೆಯನ್ನು ತೋರುವುದು ಇವರ ವೈಶಿಷ್ಟ್ಯ. ಕೃತಿಗಳಿಗೆ ನೆರವಲ್ ಮಾಡುವ ಪದ್ಧತಿ ಇವರಲ್ಲಿ ವಿಶೇಷವಾಗಿ ಎದ್ದುಕಾಣುತ್ತದೆ. ಮೃದಂಗ ನುಡಿಸಲು ಬಾರದಿದ್ದರೂ ಮೃದಂಗ ಜತಿಗಳನ್ನು ಇವರು ಚೆನ್ನಾಗಿ ತಿಳಿದಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರವರು ಇವರಿಗೆ ಬೆಲೆಬಾಳುವ ಖಿಲ್ಲತ್ತುಗಳನ್ನೂ ಉಚಿತ ಸಂಭಾವನೆಯನ್ನೂ ಕೊಟ್ಟಿರುತ್ತಾರೆ. ರಾಷ್ಟ್ರಪ್ರಶಸ್ತಿಯಲ್ಲದೆ ಇವರಿಗೆ ಸಂಗೀತಕಲಾನಿಧಿ ಇತ್ಯಾದಿ ಹಲವಾರು ಬಿರುದುಗಳು ಸಂದಿವೆ. ಇವರ ಖ್ಯಾತ ಶಿಷ್ಯರೆಂದರೆ ಯೇಸುದಾಸ್, ಟಿ.ವಿ. ಗೋಪಾಲಕೃಷ್ಣನ್, ವಿ.ವಿ. ಸುಬ್ರಹ್ಮಣ್ಯಂ, ಪಿ.ಲೀಲಾ ಮೊದಲಾದವರು. ಭಾಗವತರು 1974ರ ಅಕ್ಟೋಬರ್ 16ರಂದು ನಿಧನರಾದರು. ಅವರ ಸ್ಮಾರಕಾರ್ಥ ಪ್ರತಿವರ್ಷ ಗುರುವಾಯೂರಿನಲ್ಲಿ ಚೆಂಬೈ ಸಂಗೀತೋತ್ಸವ ನಡೆಯುತ್ತದೆ. (ಆರ್.ಸಿ.ಆರ್.ಜಿ.)

**ಚಕಮಕಿ ಕಲ್ಲು :** ಸಿಲಿಕದ ಅಸ್ಫಟಿಕ ರೂಪದಿಂದಾದ ಶಿಲೆ (ಫ್ಲಿಂಟ್). ಬೆಣಚುಕಲ್ಲಿನ ಇನ್ನೊಂದು ರೂಪ. ಬಣ್ಣ ಕಪ್ಪು ಅಥವಾ ಊದಾ ಕಪ್ಪು. ಚಕಮಕಿ ಕಲ್ಲು ಮುಖ್ಯವಾಗಿ ಉಂಡೆ ಇಲ್ಲವೆ ಮುದ್ದೆಮುದ್ದೆಯಾಗಿ ಚಾಕ್ ಮತ್ತು ಸುಣ್ಣ ಶಿಲೆಗಳಲ್ಲಿ ದೊರೆಯುತ್ತದೆ. ಇದು ಬಲು ಕಠಿಣ ಹಾಗೂ ತೂಕವಾದ ಕಲ್ಲು. ಇದರ ಕಾಠಿಣ್ಯಾಂಕ 7.5 ಇದನ್ನು ಸುತ್ತಿಗೆಯಿಂದ ಬಡಿದಾಗ ಹೋಳುಗಳಾಗಿ ಒಡೆಯುತ್ತದೆ. ಹೊರಭಾಗ ಸಿಬಿರು ಸಿಬಿರಾಗಿರುತ್ತದೆ. ಹೋಳುಮೈಯ ಒಳಭಾಗದಲ್ಲಿ ಉಕ್ಕಿನಂಥ ಊದಾಬಣ್ಣವನ್ನೂ ಹೊರಭಾಗದಲ್ಲಿ ಬಿಳಿಯ ಬಣ್ಣವನ್ನೂ ಕಾಣಬಹುದು. ಆದಿಮಾನವನಿಗೂ ಈ ಶಿಲೆಗಳಿಗೂ ಬಹಳ ನಂಟು. ಆತ ಈ ಶಿಲೆಯಿಂದಲೇ ಆಯುಧಗಳನ್ನು ನಿರ್ಮಿಸುತ್ತಿದ್ದ. ಅಲ್ಲದೆ ಬೆಂಕಿಯನ್ನು ಆವಿಷ್ಕರಿಸಿದ್ದು ಪ್ರಾಯಶಃ ಚಕಮಕಿಯಿಂದ ಹೊರಟ ಕಿಡಿಯಿಂದ. ಹದಿನೆಂಟನೆಯ ಶತಮಾನದ ಅಂತ್ಯದವರೆಗೂ ಈ ಕಲ್ಲಿನಿಂದ ಚಕಮಕಿ ಮೀಟಿಕೆಗಳನ್ನು (ಫ್ಲಿಂಟ್ ಲಾಕ್) ತಯಾರಿಸಿ ಬಂದೂಕಗಳಲ್ಲಿ ಅಳವಡಿಸುತ್ತಿದ್ದರು. ಹತ್ತಿಯನ್ನು ಚಕಮಕಿ ಕಲ್ಲಿನ ಮೇಲಿಟ್ಟು ಒಂದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಿಂದ ಉಕ್ಕಿನ ಚೂರನ್ನು ಒಂದೆರಡು ಬಾರಿ ಚಕಮಕಿಸಿದರೆ ಸಾಕು. ಅದರಿಂದ ಬರುವ ಕಿಡಿಯಿಂದ ಹತ್ತಿ ಹೊತ್ತಿಕೊಂಡು ಬೆಂಕಿ ಸಿದ್ಧವಾಗುತ್ತದೆ. ಅಶುದ್ಧವಾದ ಚಕಮಕಿಗೆ ಚರ್ಟ್‌ಶಿಲೆ ಎಂದು ಹೆಸರು. ಈ ಕಲ್ಲು ಮಂದವಾದ ಪೊರೆಗಳಲ್ಲಿ ಅಪಾರದರ್ಶಕ, ಸೂಕ್ಷ್ಮ ತೆಳುಪೊರೆಗಳಲ್ಲಿ ಪಾರದರ್ಶಕ. ಅತಿ ಕಾಠಿಣ್ಯ ಮತ್ತು ಬಣ್ಣದಿಂದಾಗಿ ಇದರ ಉಪಯುಕ್ತತೆ ಹೆಚ್ಚು. ಕಪ್ಪು ಚಕಮಕಿಯನ್ನು ಅಕ್ಕಸಾಲಿಗರು ಹಾಗೂ ಚಿನ್ನ ವ್ಯಾಪಾರಿಗಳು ಚಿನ್ನದ ಪರಿಶುದ್ಧತೆಯನ್ನು ಪರೀಕ್ಷಿಸುವ ಒರೆಗಲ್ಲುಗಳನ್ನಾಗಿ ಉಪಯೋಗಿಸುತ್ತಾರೆ.

ಒಳ್ಳೆಯ ದರ್ಜೆಯ ಚಕಮಕಿ ಕಲ್ಲು ಬೆಲ್ಜಿಯಮ್, ಇಂಗ್ಲೆಂಡ್ ಹಾಗೂ ಪ್ಯಾರಿಸುಗಳಲ್ಲಿ ದೊರೆಯುವುದು. ಭಾರತದಲ್ಲಿ ಇದು ಬೆಸಾಲ್ಟ್ ಎಂಬ ಅಗ್ನಿಶಿಲೆ ದೊರೆಯುವ ಪ್ರದೇಶಗಳಲ್ಲಿ ಜಾಸ್ಪರ್, ಅಗೇಟ್, ಚಾಲ್ಸಡನಿ ಮತ್ತು ಚರ್ಟುಗಳೊಂದಿಗೆ ಸಿಕ್ಕುತ್ತದೆ (ನೋಡಿ– ಚರ್ಟ್). ಈ ಖನಿಜಗಳೆಲ್ಲವೂ ದಖನ್ ಟ್ರಾಪ್ ಮತ್ತು ರಾಜಮಹಲ್ ಟ್ರಾಪುಗಳಲ್ಲಿ ಹೇರಳವಾಗಿ ಇವೆ. ಗೋದಾವರಿ, ಕೃಷ್ಣ ಮತ್ತು ನರ್ಮದ ನದಿಗಳಲ್ಲೂ ಚಕಮಕಿ ಉಂಡೆಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಕಲಬುರುಗಿ, ಬೆಳಗಾವಿ, ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿ ದೊರೆಯುತ್ತದೆ. (ಟಿ.ವಿ.ಎಸ್.ಎಚ್.)

**ಚಕ್ಕೆ :** ಶಿಲಾಯುಗ ಸಂಸ್ಕೃತಿಗಳ ಕಾಲದಲ್ಲಿ ಬಳಕೆಯಲ್ಲಿದ್ದ ಕೆಲವು ರೀತಿಯ ಆಯುಧಗಳನ್ನು ತಯಾರಿಸಲು ಉಪಯೋಗಿಸುತ್ತಿದ್ದ ಕಲ್ಲುಫಲಕ. ಉಂಡೆಕಲ್ಲೊಂದರಿಂದ ತೆಗೆದ ಚಕ್ಕೆಗಳ ಅಂಚುಗಳನ್ನು ಚೂಪುಮಾಡಿ ಹೆರೆಯುವ ಆಯುಧ, ಭರ್ಜಿಯ ಮೊನೆ, ಕೊರೆಯುವ ಉಳಿ ಮುಂತಾದ ಆಯುಧಗಳನ್ನು ತಯಾರಿಸಲಾಗುತ್ತಿತ್ತು. ಪೂರ್ವ ಶಿಲಾಯುಗದುದ್ದಕ್ಕೂ ಈ ರೀತಿಯ ಆಯುಧಗಳನ್ನು ತಯಾರಿಸುತ್ತಿದ್ದರೂ ಅದರ ಅಂತ್ಯಕಾಲದಲ್ಲಿ ಆಯುಧಗಳನ್ನು ಹೆಚ್ಚಾಗಿ ಉದ್ದವಾಗಿಯೂ ತೆಳುವಾಗಿಯೂ ಸಮಾನಾಂತರ ಅಂಚುಗಳುಳ್ಳವಾಗಿಯೂ ಇದ್ದ ಕಲ್ಲುಚಕ್ಕೆಗಳಿಂದ ಮಾಡಲಾಗುತ್ತಿತ್ತು. ಇಂಥ ಚಕ್ಕೆಗಳನ್ನು ಕೂರಲಗು ಫಲಕಗಳೆಂದು (ಬ್ಲೇಡ್) ಕರೆಯಲಾಗಿದೆ. ಮಧ್ಯ ಶಿಲಾಯುಗ ಸಂಸ್ಕೃತಿಗಳಲ್ಲಿ ಬಳಕೆಯಲ್ಲಿದ್ದ ಚಕ್ಕೆಕಲ್ಲಿನ ಆಯುಧಗಳು ಸಣ್ಣವಾಗಿದ್ದುವು. ಅನೇಕ ರೀತಿಯ ಆಯುಧಗಳ ತಯಾರಿಕೆಗೆ ಅವನ್ನು ಬಳಸಲಾಗುತ್ತಿತ್ತು. ಪೂರ್ವ ಶಿಲಾಯುಗ ಸಂಸ್ಕೃತಿಗಳನ್ನು ಯುರೋಪಿನಲ್ಲಿ ತಿರುಳ್ಗಲ್ಲಿನ ಆಯುಧಗಳ (ಕೋರ್ ಟೂಲ್) ಮತ್ತು ಚಕ್ಕೆಕಲ್ಲಿನ ಆಯುಧಗಳ (ಫ್ಲೇಕ್ ಟೂಲ್) ಸಂಸ್ಕೃತಿಗಳೆಂದು ವಿಭಾಗಿಸುವುದುಂಟು. ಚಕ್ಕೆಕಲ್ಲಿನ ಆಯುಧಗಳ ಸಂಸ್ಕೃತಿಗಳಲ್ಲಿ ಕ್ಲಾಕ್ಟೋನಿಯನ್, ಲೆವಾಲ್ವಾಸಿಯನ್, ಮಾಸ್ಟೀರಿಯನ್ ಮುಖ್ಯವಾದವು. ಆದರೆ ಆಫ್ರಿಕ ಮತ್ತು ಏಷ್ಯ ಖಂಡಗಳಲ್ಲಿ ಎರಡು ರೀತಿಯ ಸಂಸ್ಕೃತಿಗಳು ಒಟ್ಟೊಟ್ಟಿಗೆ ರೂಢಿಯಲ್ಲಿದ್ದುವು. ಆಫ್ರಿಕ ಮತ್ತು ಭಾರತಗಳಲ್ಲಿ ಮಧ್ಯಶಿಲಾಯುಗದಲ್ಲಿ ಬಹುಮಟ್ಟಿಗೆ ಎಲ್ಲ ಆಯುಧಗಳನ್ನೂ ಚಕ್ಕೆಗಳಿಂದಲೇ ತಯಾರಿಸಲಾಗುತ್ತಿತ್ತು. (ಬಿ.ಕೆ.ಜಿ.)

**ಚಕ್ಕೋತ :** ರೂಟೇಸೀ ಕುಟುಂಬಕ್ಕೆ (ಕಿತ್ತಳೆ, ನಿಂಬೆ, ಮುಂತಾದವುಗಳ ಗುಂಪು) ಸೇರಿದ ಒಂದು ಪ್ರಸಿದ್ಧ ಹಣ್ಣಿನ ಮರ. ಗ್ರೇಪ್ ಹಣ್ಣಿನ ಮರಕ್ಕೆ ಬಲು ಹತ್ತಿರ ಸಂಬಂಧಿ (**ನೋಡಿ– ಗ್ರೇಪ್–ಹಣ್ಣು**). ಸಿಟ್ರಸ್ ಗ್ರ್ಯಾಂಡಿಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಸಿಟ್ರಸ್ ಮ್ಯಾಕ್ಸಿಮ, ಸಿ. ಡೆಕಮೇನ ಎಂಬವು ಪರ್ಯಾಯನಾಮಗಳು. ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಇದನ್ನು ಷ್ಯಾಡಕ್, ಪಮೆಲೊ ಎಂದು ಕರೆಯುವುದುಂಟು. ಕನ್ನಡದಲ್ಲಿ ಸಕ್ಕರೆಕಂಚಿ, ಸಿಹಿಕಂಚಿ ಎಂಬ ಹೆಸರುಗಳೂ ಇವೆ.

ಚಕ್ಕೋತದ ತವರು ಥೈಲೆಂಡ್ ಇಲ್ಲವೆ ಮಲಯ ಎಂದು ಹೇಳಲಾಗಿದೆ. ಬಹು ಹಿಂದೆಯೇ ಭಾರತ, ಚೀನ ಮತ್ತು ಪರ್ಷಿಯಗಳಿಗೆ ಇದು ಕಾಲಿಟ್ಟಿತು. 12 ಇಲ್ಲವೆ 13ನೆಯ ಶತಮಾನದ ವೇಳೆಗೆ ಯುರೋಪಿಗೂ 17ನೆಯ ಶತಮಾನದಲ್ಲಿ ಬಾರ್ಬಡಾಸಿಗೂ ಚಕ್ಕೋತವನ್ನು ತಂದು ಬೆಳೆಸಲಾಯಿತು. ಬಾರ್ಬೆಡಾಸಿಗೆ ಇದನ್ನು ಈಸ್ಟ್ ಇಂಡಿಯ ಕಂಪನಿಗೆ ಸೇರಿದ ಹಡಗೊಂದರ ಕ್ಯಾಪ್ಟನ್ ಷ್ಯಾಡಕ್ ಎಂಬಾತ ತಂದನಂತೆ. ಇದರಿಂದಲೇ ಚಕ್ಕೋತಕ್ಕೆ ಷ್ಯಾಡಕ್ಕೆ ಎಂಬ ಸಾಮಾನ್ಯ ಬಳಕೆಯ ಹೆಸರು ಬಂದಿರಬೇಕೆಂದು ತಿಳಿಯಲಾಗಿದೆ.

ಬಲುಬೇಗ ವೆಸ್ಟ್ ಇಂಡೀಸಿನಲ್ಲೆಲ್ಲ ಹರಡಿದ ಇದನ್ನು ಅನಂತರ ಉತ್ತರ ಅಮೆರಿಕದಲ್ಲೂ ಬೆಳೆಸಲಾಯಿತು. ಆದರೆ ಪ್ರಪಂಚದಲ್ಲಿ ಎಲ್ಲೂ ಕಿತ್ತಳೆ, ಮೋಸಂಬಿ ಇತ್ಯಾದಿಗಳಷ್ಟು ಹೆಚ್ಚಿನ ಪ್ರದೇಶದಲ್ಲಿ ಚಕ್ಕೋತದ ಬೆಳೆ ಇಲ್ಲ. ಭಾರತದಲ್ಲಿ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ಪಂಜಾಬು ಮತ್ತು ಉತ್ತರ ಪ್ರದೇಶಗಳಲ್ಲಿ ಅಲ್ಪ ಪ್ರಮಾಣದಲ್ಲಿ ಇದನ್ನು ಬೆಳೆಸಲಾಗುತ್ತಿದೆ.

ಚಕ್ಕೋತ ಸುಮಾರು 5–15 ಮೀ. ಎತ್ತರಕ್ಕೆ ಬೆಳೆಯುವ ಪೊದೆಯಂಥ ಮರ. ಎಳೆಯ ರೆಂಬೆಗಳ ಮತ್ತು ಎಲೆಗಳ ಮೇಲೆ ಮೃದುವಾದ ಕೂದಲುಗಳಿವೆ. ಎಲೆಗಳ ಬಣ್ಣ ದಟ್ಟಹಸಿರು. ತೊಟ್ಟಿನ ಮೇಲೆ ಎರಡು ರೆಕ್ಕೆಗಳಿವೆ. ಹೂಗಳು ದೊಡ್ಡ ಗಾತ್ರದವು; ಒಂಟೊಂಟಿಯಾಗಿವೆ ಇಲ್ಲವೆ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ದಳ ಕೆನೆಬಣ್ಣದ್ದು. ಕೇಸರುಗಳು 20–25. ಫಲ ಕಿತ್ತಳೆ, ನಿಂಬೆಗಳಲ್ಲಿರುವಂತೆಯೇ ಹೆಸ್ಪರಿಡಿಯಮ್ ಮಾದರಿಯದು. ಆದರೆ ಗಾತ್ರದಲ್ಲಿ ಬಲುದೊಡ್ಡದು (10–30 ಸೆ.ಮೀ. ವ್ಯಾಸವುಳ್ಳದ್ದು). ಸಿಪ್ಪೆಯೂ ಬಲುದಪ್ಪ. ಫಲದ ಆಕಾರ ಗುಂಡು ಇಲ್ಲವೆ ಪೇರುಹಣ್ಣಿನಂತೆ, ಹಣ್ಣಿನ ಬಣ್ಣ ನಸುಹಳದಿ. ತೊಳೆಗಳ ಬಣ್ಣ ತಿಳಿಹಳದಿ ಇಲ್ಲವೆ ಪಾಟಲ. ತೊಳೆಗಳನ್ನು ಸುಲಭವಾಗಿ ಬಿಡಿಸಬಹುದು. ಹಣ್ಣಿಗೆ ಹುಳಿಮಿಶ್ರಿತ ಸಿಹಿರುಚಿಯಿದೆ. ಬೀಜಗಳು ಕಿತ್ತಳೆ ಮುಂತಾದವುಗಳ ಬೀಜಗಳಿಗಿಂತ ದೊಡ್ಡವು. ಕೆಲವು ಬಗೆಗಳಲ್ಲಿ ಬೀಜಗಳೇ ಇರುವುದಿಲ್ಲ. ಚಕ್ಕೋತದ ಬೇಸಾಯ ಕ್ರಮವೆಲ್ಲ ಕಿತ್ತಳೆಯ ರೀತಿಯಲ್ಲಿ ಇದೆ. ಚಕ್ಕೋತದಲ್ಲಿ ಅನೇಕ ಬಗೆಗಳಿವೆ ; ಇವುಗಳಲ್ಲಿ ಮ್ಯಾಮತ್, ಟ್ರೆಸ್ಕ ಮತ್ತು ಪಿಂಕ್ ಎಂಬವು ಮುಖ್ಯವೆನಿಸಿವೆ.

ಚಕ್ಕೋತ ಪುಷ್ಟಿಕಾರಕ ಹಾಗೂ ತಂಪು. ಇದನ್ನು ಹಾಗೆಯೇ ತಿನ್ನುವುದಲ್ಲದೆ ಮುರಬ್ಬ ಮುಂತಾದ ರೂಪಗಳಲ್ಲೂ ಬಳಸುವುದುಂಟು. ಇದರ ಸಿಪ್ಪೆಯಿಂದ ಒಂದು ರೀತಿಯ ಕಹಿ ಪದಾರ್ಥವನ್ನು ತಯಾರಿಸಿ ಷೆರಿ ಮುಂತಾದ ಮಾದಕ ಪಾನೀಯಗಳೊಂದಿಗೆ ಅಲ್ಪ ಪ್ರಮಾಣದಲ್ಲಿ ಸೇರಿಸಿ ಕುಡಿಯುವುದುಂಟು. ಚಕ್ಕೋತದ ಎಲೆಗಳನ್ನು ಅಪಸ್ಮಾರ, ಕೆಮ್ಮು ಮುಂತಾದ ರೋಗಗಳ ಚಿಕಿತ್ಸೆಯಲ್ಲಿ ಬಳಸುವುದಿದೆ. (ಎಂ.ಎಚ್.ಎಂ.)

**ಚಕ್ಕೋತ ಸೊಪ್ಪು :** ಕೀನೋಪೋಡಿಯೇಸೀ ಕುಟುಂಬಕ್ಕೆ ಸೇರಿದ ಒಂದು ಏಕವಾರ್ಷಿಕ ಮೂಲಿಕೆಸಸ್ಯ. ಆಟ್ರಿಪ್ಲೆಕ್ಸ್ ಹಾರ್ಟೆನ್ಸಿಸ್ ಇದರ ಶಾಸ್ತ್ರೀಯ ಹೆಸರು. ಇದರ ಎಲೆ ಮತ್ತು ಎಳೆಯ ಕಾಂಡವನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಪ್ರಪಂಚದ ಉಷ್ಣೋಷ್ಣ ಹಾಗೂ ಸಮಶೀತೋಷ್ಣವಲಯಗಳಲ್ಲೆಲ್ಲ ಇದರ ವ್ಯಾಪ್ತಿ ಉಂಟು. ಭಾರತದಲ್ಲಿ ಬಂಗಾಳ ಮತ್ತು ದಕ್ಷಿಣದ ರಾಜ್ಯಗಳಲ್ಲಿ ಇದನ್ನು ಬೆಳೆಸಲಾಗುತ್ತದೆ. ದಪ್ಪ ಹಾಗೂ ಮೆತು ತಿರುಳಿನ ಕಾಂಡ ಮತ್ತು ಎಲೆಗಳುಳ್ಳ ಪುಟ್ಟ ಗಿಡ ಇದು. ಎಲೆಗಳು ಹೃದಯ ಇಲ್ಲವೆ ತ್ರಿಕೋನಾಕಾರದವು. ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಉದ್ದ 10–23 ಸೆಂ.ಮೀ. ಅಂಚು ನಯವಾಗಿರಬಹುದು ಇಲ್ಲವೆ ದಂತಿತವಾಗಿರಬಹುದು. ಹೂಗಳು ಚಿಕ್ಕಗಾತ್ರದವು; ಅಂತ್ಯಾರಂಭಿ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಚಕ್ಕೋತಸೊಪ್ಪನ್ನು ಯಾವ ಬಗೆಯ ಮಣ್ಣಿನಲ್ಲಾದರೂ ಬೆಳೆಯಬಹುದು. ಬಿತ್ತನೆ ಕಾಲ ಮಾರ್ಚ್ ತಿಂಗಳು. ಒಂದು ಎಕರೆಗೆ 2 ರಿಂದ 1/2 ಕಿ.ಗ್ರಾಂ.. ಬೀಜ ಬೇಕಾಗುತ್ತದೆ. ಇದರ ಬೀಜ ಹಾಗೂ ಎಲೆಗಳಲ್ಲಿ ವಿಟಮಿನ್ ಎ ಅಧಿಕವಾಗಿದೆ. (ಬಿ.ಎ.ಸಿ.; ಎಸ್.ಐ.ಎಚ್.)

**ಚಕ್ರಕ :** ಅಸಾಧು ತರ್ಕಗಳಲ್ಲಿ ಅಥವಾ ತರ್ಕಾಭಾಸಗಳಲ್ಲಿ ಒಂದು. ನಾವು ಯಾವುದನ್ನು ಸಕಾರಣವಾಗಿ ತರ್ಕದ ಮೂಲಕ ಸ್ಥಾಪಿಸಬೇಕಾಗಿದೆಯೋ ಅದಕ್ಕೆ ಸರಿಯಾದ ಕಾರಣ ಕೊಡದೆ ಸಾಧಿಸಬೇಕಾದುದನ್ನೇ ಅಂದರೆ ಸಾಧ್ಯವನ್ನೇ ಅದಕ್ಕೆ ಕಾರಣವಾಗಿ ಕುರಿತಾಗ ಇಲ್ಲವೆ ಬೇಡಿದಾಗ ಈ ದೋಷ ಉಂಟಾಗುತ್ತದೆ. ಇದನ್ನು ಪಾಶ್ಚಾತ್ಯ ತಾರ್ಕಿಕರು ಸರ್ಕ್ಯುಲರ್ ರೀಸನಿಂಗ್ ಎಂದು ಕರೆದಿದ್ದಾರೆ. ಸಾಧಿಸಬೇಕಾದುದಕ್ಕೆ ಕಾರಣ ಕೊಡಲು ಸುತ್ತಿ ಬೇಸತ್ತು ಕಾರಣ ಕೊಡಲಾಗದೆ ಹೋದಾಗ ಸಾಧ್ಯವನ್ನೇ ಅದಕ್ಕೆ ಆಧಾರವಾಗಿ ಬೇಡುವುದು ಇಂಥ ತರ್ಕದ ರೀತಿ. ಒಂದು ಉದಾಹರಣೆ. ಬೆಟ್ಟದಲ್ಲಿ ಬೆಂಕಿ ಇದೆ ಎಂಬುದು ಸಾಧಿಸಬೇಕಾದದ್ದು. ಏಕೆ? ಎಂದು ಕೇಳಿದರೆ ಅದಕ್ಕೆ ಕಾರಣವಾಗಿ (ಹೇತುವಾಗಿ) ಹೊಗೆಯನ್ನು ಕುರಿಯ ಲಾಗುವುದು. ಅನಂತರ ಹೊಗೆ ಇದ್ದ ಕಡೆಗಳಲ್ಲೆಲ್ಲ ಬೆಂಕಿ ಇದೆ. ಹೊಗೆ ಇಲ್ಲದ ಕಡೆಗಳಲ್ಲೆಲ್ಲಿ ಬೆಂಕಿ ಇಲ್ಲ ಎಂದು ತೋರಿಸಿದಲ್ಲಿ ಹೊಗೆಗೂ ಬೆಂಕಿಗೂ ಅವಿನಾ ಸಂಬಂಧವಿದೆಯಾದ್ದರಿಂದ ಬೆಟ್ಟದಲ್ಲಿ ಹೊಗೆ ಇರುವುದರಿಂದ ಅಲ್ಲಿ ಅಗತ್ಯವಾಗಿ ಬೆಂಕಿ ಇದ್ದೇ ಇದೆ ಎಂದು ಸ್ಥಿರಪಡಿಸಿದಂತಾಗುತ್ತದೆ. ಇದು ಸಾಧು ತರ್ಕ. ಬೆಂಕಿ ಇದೆ ಎಂಬುದಕ್ಕೆ ಸರಿಯಾದ ಕಾರಣ ಕೊಡದೆ, ಅಗ್ನಿ ಇರುವುದರಿಂದ ಅಲ್ಲಿ ಬೆಂಕಿ ಇದೆ– ಎಂದು ಸಾಧ್ಯ ಪದಕ್ಕೆ ಸಮಾನ ಅರ್ಥವುಳ್ಳ ಬೇರೊಂದು ಪದವನ್ನು ಕಾರಣವಾಗಿ ಕೊಟ್ಟಾಗ ಸಾಧ್ಯಪದಕ್ಕೆ ಅದನ್ನೇ ಕಾರಣವಾಗಿ ಯಾಚಿಸಲಾಗುತ್ತದೆಯಾದ್ದರಿಂದ ಆ ತರ್ಕ ಚಕ್ರಕ ದೋಷಕ್ಕೆ ಎಡೆಕೊಡುತ್ತದೆ.

ಲಕ್ಷಣ ನಿರೂಪಣೆಯಲ್ಲೂ (ಡೆಫಿನಿಷನ್) ಇದೇ ಬಗೆಯ ದೋಷವನ್ನು ನಾವು ಕಾಣಬಹುದು. ಅದಕ್ಕೆ ಪಾಶ್ಚಾತ್ಯ ತಾರ್ಕಿಕರು ಕೊಟ್ಟಿರುವ ಹೆಸರು ಸರ್ಕ್ಯುಲರ್ ಡೆಫಿನಿಷನ್ ಎಂದು. ಮನುಷ್ಯ ಎಂಬ ಪದಕ್ಕೆ ಆಲೋಚಿಸುವ ಪ್ರಾಣಿ ಎಂಬುದು ಸಾಧುವಾದ ಲಕ್ಷಣನಿರೂಪಣೆ. ಅದರ ಬದಲು ಮನುಷ್ಯ ಎಂಬ ಪದಕ್ಕೆ ಲಕ್ಷಣವಾಗಿ ಮಾನವ ಎಂಬ ಪದವನ್ನು ಕುರಿತರೆ, ಚಕ್ರಕ ದೋಷವಾಗುತ್ತದೆ. (ಜಿ.ಕೆ.ಎಚ್.; ಜಿ.ಎಚ್.)

**ಚಕ್ರಗಳು (ಯೋಗದಲ್ಲಿ) :** ದೇಹದಲ್ಲಿರುವ ಅನೇಕ ನಾಡಿಗಳಲ್ಲಿನ ಪ್ರಾಣಶಕ್ತಿಯ ಸೂಕ್ಷ್ಮ ಕೇಂದ್ರಗಳನ್ನು ಯೋಗಶಾಸ್ತ್ರದಲ್ಲಿ ಚಕ್ರ ಅಥವಾ ಪದ್ಮಗಳೆಂದು ಕರೆಯುತ್ತಾರೆ. ನಾಡಿಗಳು ಅತಿಸೂಕ್ಷ್ಮ ಕೊಳವೆಗಳಾಗಿದ್ದು ಮಾನಸಿಕ ಶಕ್ತಿಯ ವಾಹಕಗಳಾಗಿವೆ. ಅವುಗಳಲ್ಲಿ ಇಡಾ, ಪಿಂಗಳಾ, ಸುಷುಮ್ನಾ, ಗಾಂಧಾರೀ, ಹಸ್ತಜಿಹ್ವಾ, ಪ್ರೂಷಾ, ಯಶಸ್ವಿನೀ, ಅಲಂಬುಷಾ, ಕುಹು, ಶಂಖಿನೀ– ಎಂಬ ಹತ್ತು ನಾಡಿಗಳು ಪ್ರಾಣವಾಹಕಗಳಾಗಿದ್ದು ಮುಖ್ಯವೆನಿಸಿಕೊಂಡಿವೆ. ಈ ಹತ್ತರಲ್ಲಿ ಇಡಾ, ಪಿಂಗಳಾ, ಸುಷುಮ್ನಾ– ಇವು ಅತಿ ಮುಖ್ಯವಾಗಿವೆ. ಇಡಾ ಎಂಬುದು ಮೇರು ದಂಡದ (ಕಶೇರುಕದ) ಎಡ ಭಾಗದಲ್ಲೂ, ಪಿಂಗಳಾ, ಎಂಬುದು ಬಲಭಾಗದಲ್ಲೂ, ಸುಷುಮ್ನಾ ಎಂಬುದು ಮಧ್ಯ ಭಾಗದಲ್ಲೂ ಇರತಕ್ಕವು. ಗುದ ಸ್ಥಾನಕ್ಕೂ ಜನನೇಂದ್ರಿಯದ ಮೂಲ ಪ್ರದೇಶಕ್ಕೂ ಮಧ್ಯೆ ಇರುವ ಕಂದ ಎಂಬ ಸೂಕ್ಷ್ಮ ಭಾಗದಿಂದ ಈ ಎಲ್ಲ ನಾಡಿಗಳೂ ಹೊರಡುತ್ತವೆ. ಇವಕ್ಕೆ ಸಂಬಂಧಿಸಿದಂತೆ ಅಲ್ಲಲ್ಲಿ ಇರುವ ಎಲ್ಲ ಚಕ್ರಗಳೂ, ಮೇರು ದಂಡದೊಡನೆ ಸಂಪರ್ಕ ಪಡೆದಿವೆ. ಧ್ಯಾನಾದಿಗಳಲ್ಲಿ ಈ ಚಕ್ರಗಳ ಇರುವಿಕೆ ಗೋಚರವಾಗುವುದೆಂದು ಶಾಸ್ತ್ರದಲ್ಲಿ ಪ್ರತಿಪಾದಿತವಾಗಿದೆ. ಚಕ್ರಗಳ ಸಂಖ್ಯೆಯ ವಿಚಾರದಲ್ಲಿ ಭಿನ್ನಾಭಿಪ್ರಾಯವಿರುವುದನ್ನು ಗಮನಿಸಬಹುದು ; ಕೆಲವು ಹಠಯೋಗಿಗಳ ಮತದಲ್ಲಿ ಇಪ್ಪತ್ತೊಂದು ಅಪ್ರಧಾನ



**ಷಟ್‌ಚಕ್ರಗಳು ಮತ್ತು ಅವುಗಳ ಸ್ಥಾನಗಳನ್ನು ತೋರಿಸುವ ಸಾಂಕೇತಿಕ ಚಿತ್ರಣ : 1. ಮೂಲಾಧಾರ ಚಕ್ರ, 2. ಸ್ವಾಧಿಷ್ಠಾನ ಚಕ್ರ, 3. ಮಣಿಪೂರಕ ಚಕ್ರ, 4. ಅನಾಹತ ಚಕ್ರ, 5. ವಿಶುದ್ಧಿ ಚಕ್ರ, 6. ಆಜ್ಞಾಚಕ್ರ, 7. ಸಹಸ್ರಾರ (ಚಕ್ರ), 8. ಬ್ರಹ್ಮ ರಂಧ್ರ, 9. ಹುಬ್ಬುಗಳ ನಡುವಣ ಸ್ಥಾನ, 10. ಕಂಠಸ್ಥಾನ, 11. ಹೃದಯ ಸ್ಥಾನ, 12. ಮೇರುದಂಡ, 13. ನಾಭಿ ಸ್ಥಾನ, 14. ಜನನೇಂದ್ರಿಯ ಮೂಲಸ್ಥಾನ, 15. ಗುದಸ್ಥಾನ, 16. ಕುಂಡಲಿನೀ ಶಕ್ತಿ, (a) ಇಡಾನಾಡಿ, (b) ಪಿಂಗಳಾ ನಾಡಿ ಮತ್ತು (c) ಸುಷುಮ್ನಾನಾಡಿ**

ಚಕ್ರಗಳೂ, ಹದಿಮೂರು ಪ್ರಧಾನ ಚಕ್ರಗಳೂ ಇವೆ. ಮತ್ತೆ ಕೆಲವರ ಪ್ರಕಾರ ಈ ಚಕ್ರಗಳ ಸಂಖ್ಯೆ ನಲವತ್ತೊಂಬತ್ತು ; ಕೆಲವು ಪ್ರಾಚೀನ ಯೋಗಿಗಳು ಹೇಳಿರುವಂತೆ ಒಟ್ಟು ನೂರ ನಲವತ್ತನಾಲ್ಕು ಚಕ್ರಗಳಿವೆ. ಅವುಗಳಲ್ಲಿ ಬಹು ಮುಖ್ಯವೆಂದು ಸೂಚಿತವಾಗಿರತಕ್ಕವು–ಮೂಲಾಧಾರ ಚಕ್ರ, ಸ್ವಾಧಿಷ್ಠಾನ ಚಕ್ರ, ಮಣಿಪೂರ ಚಕ್ರ, ಅನಾಹತ ಚಕ್ರ, ವಿಶುದ್ಧಿ ಚಕ್ರ, ಆಜ್ಞಾಚಕ್ರ ಎಂಬ ಆರು. ಚೈತನ್ಯ ಶಕ್ತಿಯ ಸೂಕ್ಷ್ಮ ಕೇಂದ್ರಗಳಾಗಿರುವ ಇವು ಶರೀರದ ವಿವಿಧ ಚಟುವಟಿಕೆಗಳನ್ನು ನಿಯಂತ್ರಣಗೊಳಿಸುತ್ತವೆ. ಈ ಎಲ್ಲ ಚಕ್ರಗಳಿಗೂ ವ್ಯಾಪಕವಾದ, ಮೂಲಭೂತ ಹಾಗೂ ವಿಶ್ವಾತ್ಮಕವಾಗಿರುವ ಕುಂಡಲಿನಿ (**ನೋಡಿ**) ಎಂಬುದು ಮೂಲಾಧಾರ ಚಕ್ರದಲ್ಲಿ ಸರ್ಪದಂತೆ ಸುತ್ತಿಕೊಂಡು ನೆಲಸಿರುವ ಅವ್ಯಕ್ತ ದಿವ್ಯಶಕ್ತಿ.

ಹಠಯೋಗದಲ್ಲಿ ಅಷ್ಟಾಂಗಯೋಗವೆಂದು ಪ್ರಸಿದ್ಧವಾಗಿರುವ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಎಂಬ ಯೋಗಮಾರ್ಗಗಳಿಂದಲೂ ಮಹಾಮುದ್ರಾ ಮುಂತಾದ ಯೋಗಮುದ್ರೆಗಳಿಂದಲೂ ಕುಂಡಲಿನೀ ಶಕ್ತಿಯನ್ನು ಪ್ರಬುದ್ಧಗೊಳಿಸಬಹುದು ; ಚಿತ್ತೈಕಾಗ್ರತೆ ಮುಂತಾದ ಸಾಧನೆಗಳಿಂದ ಕುಂಡಲಿನಿ ಪ್ರಬುದ್ಧವಾಗುತ್ತದೆಂದು ರಾಜಯೋಗ ತಿಳಿಸುತ್ತದೆ. ಹಾಗೆ ಎಚ್ಚೆತ್ತ ಕುಂಡಲಿನೀ ಶಕ್ತಿ ಮೇಲೆ ಹೇಳಿದ ಷಟ್ಚಕ್ರಗಳ ಮೂಲಕ ಸಾಗಿ ಅವನ್ನೂ ಎಚ್ಚರಗೊಳಿಸಿ ಶಿರೋಭಾಗದಲ್ಲಿರುವ ಸಹಸ್ರಾರವೆಂಬ ಮುಖ್ಯಕೇಂದ್ರವನ್ನು ಸೇರುವುದೇ ಆನಂದ ಸ್ವರೂಪದ ಮುಕ್ತಿಯೆಂದು ಹೇಳಲಾಗಿದೆ. ಮೇರುದಂಡದ ತಳಭಾಗದಿಂದ ಹಿಡಿದು ಮೇಲ ಮೇಲಣ ನಾನಾ ಭಾಗಗಳೂ ಕಡೆಯದಾಗಿ ತಲೆಯಲ್ಲಿರುವ ಬ್ರಹ್ಮರಂಧ್ರವೂ ಈ ಚಕ್ರಗಳ ನಾನಾ ಸ್ಥಾನಗಳಾಗಿವೆ. ಪ್ರತಿ ಚಕ್ರಕ್ಕೂ ದೇವತೆ, ವರ್ಣ, ಬೀಜಾಕ್ಷರಗಳಿವೆ.

ಮೇಲ್ಕಂಡ ಆರು ಚಕ್ರಗಳಲ್ಲಿ ಮೊದಲನೆಯದಾದ ಮೂಲಾಧಾರಚಕ್ರ ಗುದದ ಸಮೀಪದಲ್ಲಿ 'ಇಡಾಪಿಂಗಳಾ' ಸುಷುಮ್ನಾ ನಾಡಿಗಳ ಸಂಧಿಸ್ಥಾನದ ಕೆಳಭಾಗದಲ್ಲಿದೆ. ಇದು ಕುಂಡಲಿನೀ ಶಕ್ತಿ ನೆಲೆಸಿರುವ ಒಂದು ಮೂಲಕೇಂದ್ರ. ಸಾಧಕನಿಗೆ ಈ ಚಕ್ರ ಗೋಚರವಾಗುವುದಲ್ಲದೆ ಕುಂಡಲಿನಿಯನ್ನು ಪ್ರಾಣಾಯಾಮಾದಿಗಳಿಂದ ಪ್ರಬುದ್ಧಗೊಳಿಸುವ ಕ್ರಮದ ಅರಿವೂ ಉಂಟಾಗುತ್ತದೆ. ಈ ಸ್ಥಿತಿಯಲ್ಲಿ ಅವನು ಮನಸ್ಸನ್ನು ಸಂಪೂರ್ಣವಾಗಿ ನಿಗ್ರಹಿಸ–ಬಲ್ಲವನಾಗುತ್ತಾನೆ; ಅವನಿಗೆ ಸಹಜವಾದ ಆನಂದ ಲಭಿಸುತ್ತದೆ.

ಎರಡನೆಯದಾದ ಸ್ವಾಧಿಷ್ಠಾನ ಚಕ್ರ ಸುಷುಮ್ನಾನಾಡಿಯಲ್ಲಿದ್ದು ಮೂಲಾಧಾರ ಚಕ್ರದಿಂದ ಸುಮಾರು ಎರಡಂಗುಲಗಳಷ್ಟು ಮೇಲೆ, ಜನನೇಂದ್ರಿಯದ ಮೂಲಭಾಗದಲ್ಲಿರುತ್ತದೆ. ಕುಂಡಲಿನೀ ಶಕ್ತಿಯಿಂದ ಈ ಚಕ್ರ ಎಚ್ಚರಗೊಂಡಾಗ ಸಾಧಕ ಅನೇಕ ಸಿದ್ಧಿಗಳನ್ನು ಪಡೆಯುತ್ತಾನೆ. ಅಲ್ಲದೆ ಕಾಮಾದಿ ಅರಿಷಡ್ವರ್ಗಗಳನ್ನು ಜಯಿಸಲು ಸಮರ್ಥನಾಗುತ್ತಾನೆ.

ಅನಂತರ ಮಣಿಪೂರಕಚಕ್ರ, ಇದು ನಾಭಿಸ್ಥಾನದಲ್ಲಿದೆ. ಸುಷುಮ್ನಾ ನಾಡಿಯಲ್ಲಿರುವ ಇದನ್ನು ಎಚ್ಚರಿಸಿಕೊಳ್ಳಬಲ್ಲ ಸಾಧಕನು ರೋಗರಹಿತನೂ ಅಗ್ನಿ ಮುಂತಾದವುಗಳ ಭಯವಿಲ್ಲದವನೂ ಆಗುತ್ತಾನೆ. ಮುಂದೆ ನಾಲ್ಕನೆಯದು ಅನಾಹತಚಕ್ರ. ಸುಷುಮ್ನಾ ನಾಡಿಯಲ್ಲಿರುವ ಇದು ಹೃದಯಸ್ಥಾನದಲ್ಲಿರತಕ್ಕದ್ದು. ಈ ಚಕ್ರದ ಅರಿವನ್ನು ಕುಂಡಲಿನೀ ಶಕ್ತಿಯ ಮೂಲಕ ಪಡೆದ ಸಾಧಕ ವಿಶ್ವಪ್ರೇಮಿ–ಯಾಗುವುದಲ್ಲದೆ, ಕಾಯಸಿದ್ಧಿ ಮುಂತಾದ ಫಲಗಳನ್ನೂ ಪಡೆಯುತ್ತಾನೆ.

ಇನ್ನು ವಿಶುದ್ಧಿಚಕ್ರ, ಸುಷುಮ್ನಾ ನಾಡಿಯಲ್ಲಿದ್ದು, ಕಂಠಸ್ಥಾನದಲ್ಲಿರುವ ಚಕ್ರ. ಕುಂಡಲಿನೀ ಶಕ್ತಿ ಇಲ್ಲಿ ನಿಂತಾಗ ಸಾಧಕ ತ್ರಿಕಾಲ ಜ್ಞಾನಿಯಾಗುತ್ತಾನೆ. ಅವನ ಯೌವನ, ಉತ್ಸಾಹಗಳು ಸ್ಥಿರವಾಗುತ್ತವೆ. ಆರನೆಯದಾಗಿ ಆಜ್ಞಾಚಕ್ರ. ಇದೂ ಸುಷುಮ್ನಾ ನಾಡಿಯಲ್ಲೇ ಇದೆ, ಎರಡು ಹುಬ್ಬುಗಳ ನಡುವೆ ಇದರ ಸ್ಥಾನವಿದೆ. ಓಂಕಾರ ಈ ಚಕ್ರಕ್ಕೆ ಬೀಜಾಕ್ಷರ. ಕುಂಡಲಿನಿಯಿಂದ ಇದನ್ನು ಎಚ್ಚರಿಸಬಲ್ಲ ಯೋಗಿ ತನ್ನ ಕರ್ಮವನ್ನೆಲ್ಲ ನೀಗಿಕೊಂಡು ಜೀವನ್ಮುಕ್ತನ ಸ್ಥಿತಿಯನ್ನು ಪಡೆಯುತ್ತಾನೆ. ಹೀಗೆ ಕುಂಡಲಿನೀ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಂಡ ಯೋಗಿಗೆ ಅಣಿಮಾದಿ ಅಷ್ಟಸಿದ್ಧಿಗಳು (ನೋಡಿ) ಲಭಿಸುತ್ತವೆಂದು ಶಾಸ್ತ್ರದಲ್ಲಿ ಪ್ರತಿಪಾದಿತವಾಗಿದೆ.

ಯೋಗಶಾಸ್ತ್ರದ ಪ್ರಕಾರ ಮೇಲ್ಕಂಡಂತೆ ಚಕ್ರಗಳು ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನುಂಟು ಮಾಡಬಲ್ಲ ಸೂಕ್ಷ್ಮ ಕೇಂದ್ರಗಳಾಗಿ ಮಹತ್ತ್ವವನ್ನು ಪಡೆದಿವೆ. ಮೂಲಾಧಾರಚಕ್ರದಲ್ಲಿನ ಕುಂಡಲಿನಿ ಎಚ್ಚರಗೊಂಡು ಈ ಷಟ್ಚಕ್ರಗಳ ಮೂಲಕ ಪ್ರಸರಿಸಿ ಶಿರೋಭಾಗದಲ್ಲಿರುವ ಮತ್ತು ಶರೀರದಲ್ಲಿ ಅತಿಪ್ರಧಾನ ಕೇಂದ್ರವಾಗಿರುವ ಸಹಸ್ರಾರವನ್ನು (ಇದನ್ನೂ ಚಕ್ರ ಎಂದೇ ಕರೆದಿದ್ದಾರೆ) ಸೇರಿದಾಗ ಯೋಗಿಗೆ ಮುಕ್ತಿಯ ಪರಮಾನಂದ ಲಭಿಸುತ್ತದೆ.

ಕುಂಡಲೀ ಕುಟಿಲಾಕಾರಾ ಸರ್ಪವತ್ ಪರಿಕೀರ್ತಿತಾ ।
ಸಾ ಶಕ್ತಿಶ್ಚಾಲಿತಾ ಯೇನ ಸ ಮುಕ್ತೋ ನಾತ್ರ ಸಂಶಯಃ ॥ (ಬಿ.ಕೆ.ಎಸ್.)

**ಚಕ್ರಜ :** ಸರಳರೇಖೆಯ ಮೇಲೆ ಒಂದು ಚಕ್ರ (ವೃತ್ತ) ಉರುಳುವಾಗ ಅದರ ಪರಿಧಿಯ ಮೇಲಿನ ಸ್ಥಿರ ಬಿಂದುವನ್ನು ರೇಖಿಸುವ ಸಮತಲೀಯ ವಕ್ರರೇಖೆ (ಸೈಕ್ಲಾಯಿಡ್). ಚಿತ್ರ 1ರಲ್ಲಿ S ಚಕ್ರವನ್ನು ಅಥವಾ ಉರುಳು ವೃತ್ತವನ್ನು ಸೂಚಿಸುತ್ತದೆ. P ಅದರ ಪರಿಧಿಯ ಮೇಲೆ ಗುರುತಿಸಿರುವ ಸ್ಥಿರಬಿಂದು. ಪ್ರಾರಂಭದಲ್ಲಿ ಚಕ್ರ O ಬಿಂದುವಿನ ಮೇಲೆ P ಯು Oನೊಡನೆ ಐಕ್ಯವಾಗುವಂತೆ ನಿಂತಿತ್ತು. OX ಸರಳರೇಖೆಯ ಮೇಲೆ ಚಕ್ರ θ ಕೋನದಷ್ಟು ಉರುಳಿದಾಗ P ಈಗಿನ ಸ್ಥಾನಕ್ಕೆ ಬರುತ್ತದೆ. ಈಗ LPCM=θ, ಕಂಸ MP (ಖಂಡದಿಶೆ) =OM. Pಯ ಪಥವೇ ಚಕ್ರಜ. OX, OYಗಳನ್ನು ಕುರಿತು P ಯ ನಿರ್ದೇಶಕಗಳು (X,Y) ಆಗಿದ್ದರೆ ಆಗ

$$X = a(\theta\text{-}\sin\theta) \qquad .....(1)$$

$$Y= a(1\text{-cose } \theta) \qquad .....(2)$$

ಇಲ್ಲಿ a ಚಕ್ರದ ತ್ರಿಜ್ಯ. (1) ಮತ್ತು (2) ಚಕ್ರಜದ ಪ್ರಾಚಲ ಸಮೀಕರಣಗಳು. ಇಲ್ಲಿ θ ಪ್ರಾಚಲ,




ಚಿತ್ರ 1

**ಗುಣಗಳು :** ಪ್ರಾಚಲ θ=0 ಇದ್ದಾಗ Pಯ Oನೊಡನೆ ಯಕ್ಯವಾಗಿರುತ್ತದೆ. θ=2π ಆದಾಗ ಚಕ್ರ ಪೂರ್ಣ ಸುತ್ತನ್ನು ಮುಗಿಸುವುದರಿಂದ P ಈಗ A ಬಿಂದುವಿನಲ್ಲಿ ಸರಳರೇಖೆಯ ಮೇಲಿರುತ್ತದೆ. ಅಲ್ಲಿಂದ ಮುಂದಕ್ಕೆ ಮೊದಲಿನ ವಿದ್ಯಮಾನ




ಚಿತ್ರ 2

ಪುನರಾವರ್ತಿಸುತ್ತದೆ. ಆದ್ದರಿಂದ OA ಸರಳರೇಖೆಯ ಉದ್ದ ಚಕ್ರದ ಪರಿಧಿಗೆ ಸಮ : $OA=2^{4)12}a$. OHA ವಕ್ರರೇಖೆ (ಚಿತ್ರ–2) ಚಕ್ರಜದ ಪೂರ್ತಿ ಚಾಪ(ಆರ್ಚ್). ಇದರ ಉದ್ದ 8a ಚಕ್ರಜ ಹಾಗು OX ಅಕ್ಷ ಸಂವೃತಿಸುವ ವಲಯದ ಸಲೆ $3^{4)12}a^2$ ಇದು ಚಕ್ರದ ಸಲೆಯ ($=pa^2$)ಮೂರರಷ್ಟು ಇದೆ. ಚಕ್ರಜದ ನಿಮ್ನತಮ ಬಿಂದುಗಳು O,A. ಇವುಗಳಿಗೆ ಉಭಯಾಗ್ರಗಳೆಂದು (ಕಸ್ಪ್ಸ್) ಹೆಸರು. ಚಕ್ರಜದ ಉನ್ನತತಮ ಬಿಂದು H. ಈಗ KH= ಚಕ್ರದ ವ್ಯಾಸ 2a ಎನ್ನುವುದು ಸ್ಪಷ್ಟವಾಗಿದೆ.

ಗತಿವಿಜ್ಞಾನದಲ್ಲಿ ಚಕ್ರಜದ ಈ ಕೆಳಗಿನ ಎರಡು ಗುಣಗಳಿಗೆ ಮಹತ್ವ ಉಂಟು.




ಚಿತ್ರ 3

1. OX ರೇಖೆ ಕ್ಷಿತಿಜೀಯವಾಗಿರಲಿ ಹಾಗೂ ಚಕ್ರಜ ಅಧೋಮುಖಿಯಾಗಿರಲಿ. ಚಕ್ರಜ ನುಣುಪು ವಕ್ರರೇಖೆ ಎಂದೂ ಅದು ಊರ್ಧ್ವತಲದಲ್ಲಿ ಇದೆಯೆಂದೂ ಭಾವಿಸೋಣ (**ಚಿತ್ರ 3**). ಆಗ ಅದರ ಮೇಲಿನ ಯಾವುದೇ ಬಿಂದುವಿನಿಂದ ತೊಡಗಿ ನಿಮ್ನತಮ ಬಿಂದುವಿನ (H)ವರೆಗೆ ಜಾರಿ ತಲುಪಲು ಒಂದು ಕಣ ತೆಗೆದುಕೊಳ್ಳುವ ಕಾಲ ಪ್ರಾರಂಭ ಬಿಂದುವಿನ ಸ್ಥಾನವನ್ನು ಅವಲಂಬಿಸಿಲ್ಲ. ಈ ಗುಣಕ್ಕೆ ಸಮಕಾಲಿಕ (ಐಸೋಕ್ರೋನಸ್) ಗತಿ ಎಂದು ಹೆಸರು.

2. P ಮತ್ತು Q ಒಂದೇ ಊರ್ಧ್ವತಲದ ಮೇಲಿರುವ, ಆದರೆ ಒಂದೇ ಊರ್ಧ್ವರೇಖೆಯ ಮೇಲಿರದ, ಎರಡು ಬಿಂದುಗಳಾಗಿರಲಿ. ಈಗ P ಯಿಂದ Qಗೆ ಒಂದು ಕಣ ಬೀಳಲು ತೆಗೆದುಕೊಳ್ಳುವ ಕಾಲ ಕಣದ ಪಥವನ್ನು ಅವಲಂಬಿಸಿದೆ.

ಇಂಥ ವಿವಿಧ ಕಾಲಗಳಲ್ಲಿ ಕನಿಷ್ಠತಮ್ ಕಾಲ ದೊರಿಯುವುದು ಕಣದ ಪಥ P ಮತ್ತು Q ಮೂಲಕ ಸಾಗುವ ಚಕ್ರಜದ ಕಂಸವಾದಾಗ. ಈ ಗುಣಕ್ಕೆ ದೃತತಮಪತನ (ಬ್ರ್ಯಾಕಿಸ್ಟೊಕ್ರೋನ್) ಎಂದು ಹೆಸರು.



ಚಿತ್ರ 4

ಅಧಿಕಚಕ್ರಜ (ಎಪಿಸೈಕ್ಲಾಯಿಡ್) ಮತ್ತು ಅಂತ್ಯಶ್ಚಕ್ರಜ (ಹೈಪೊ ಸೈಕ್ಲಾಯಿಡ್): ಸ್ಥಿರ ವೃತ್ತ ಪರಿಧಿಯ ಹೊರಮೈಯಲ್ಲಿ ಒಂದು ಚಕ್ರ ಉರುಳಿದಾಗ ಚಕ್ರದ ಪರಿಧಿಯ ಮೇಲಿನ ಸ್ಥಿರಬಿಂದುವೊಂದು ರೇಖಿಸುವ ಸಮತಲೀಯ ರೇಖೆ ಅಧಿಕಚಕ್ರಜ. ಸ್ಥಿರ ವೃತ್ತ ಹಾಗೂ ಚಕ್ರಗಳೆರಡೂ ಒಂದೇ ಊರ್ಧ್ವ ತಲದಲ್ಲಿರಬೇಕು.

ಹೀಗಲ್ಲದೆ ಚಕ್ರವು ಸ್ಥಿರವೃತ್ತದ ಒಳಮೈಯಲ್ಲಿ ಉರುಳಿದಾಗ ದೊರೆಯುವ ಪಥದ ಹೆಸರು ಅಂತಶ್ಚಕ್ರಜ. (**ಚಿತ್ರ 6**)



ಚಿತ್ರ 5. ಅಧಿಚಕ್ರಜ



ಚಿತ್ರ 6. ಅಂತಶ್ಚಕ್ರಜ

ಅಧಿಕಚಕ್ರಜದ ಪ್ರಾಚಲ ಸಮೀಕರಣಗಳಿವು :

$$X = (a+b)\cos\theta - a\cos[(a+b)\,\theta/a]$$
$$Y = (a+b)\sin\theta - a\sin[(a+b)\,\theta/a]$$

ಅಂತಶ್ಚಕ್ರಜದ ಪ್ರಾಚಲ ಸಮೀಕರಣಗಳಿವು :

$$X = (a-b)\cos\theta + b\cos[(a-b)\,\theta/b]$$
$$Y = (a-b)\sin\theta - b\sin[(a-b)\,\theta/a]$$

ಇಲ್ಲಿ a ಚಕ್ರದ ಮತ್ತು b ಸ್ಥಿರವೃತ್ತದ ಪರಿಧಿಗಳು.

$a = b/n$ ಆಗಿರುವಾಗ ಈ ಎರಡು ಚಕ್ರಜಗಳಲ್ಲೂ ಚಾಪಗಳ ಸಂಖ್ಯೆ n *

**ಚಕ್ರಮುನಿ :** ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಪೊದೆಸಸ್ಯ. ಒಳ್ಳೆಯ ಸೊಪ್ಪು ತರಕಾರಿ ಎಂದು ಹೆಸರಾಗಿದೆ. ಸೌರೋಪಸ್ ಆಂಡ್ರೋಗೈನಸ್ ಇದರ ವೈಜ್ಞಾನಿಕ ಹೆಸರು. ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲೆಲ್ಲ ಸ್ವಾಭಾವಿಕವಾಗಿ ಬೆಳೆಯುತ್ತದೆ. ತರಕಾರಿಯಾಗಿ ಇದನ್ನು ತೋಟಗಳಲ್ಲಿ ಬೆಳೆಸುವುದುಂಟು. ಸುಮಾರು 1.5ಮೀ. ಎತ್ತರಕ್ಕೆ ಬೆಳೆಯುವ ಗಿಡ ಇದು. ಎಲೆಗಳು ಕರಿಬೇವಿನ ಎಲೆಗಳಿದ್ದ ಹಾಗಿರುತ್ತವೆ; ಜೋಡಣೆ ಪರ್ಯಾಯ ಮಾದರಿಯದು. ಹೂಗಳು ಏಕಲಿಂಗಿಗಳು; ಎಲೆಗಳ ಕಂಕುಳಲ್ಲಿ ಒಂಟೊಂಟಿಯಾಗಿ ಇಲ್ಲವೆ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಫಲಗಳು ಸಂಪುಟ ಮಾದರಿಯವು; ಗುಂಡಗಿವೆ. ಒಂದೊಂದರಲ್ಲೂ 6 ಬೀಜಗಳಿರುತ್ತವೆ.

ಗಿಡವನ್ನು ಕಾಂಡದ ತುಂಡುಗಳಿಂದ ವೃದ್ಧಿ ಮಾಡಬಹುದು. ಫಲವತ್ತಾದ ಮತ್ತು ಚೆನ್ನಾಗಿ ನೀರು ಬಸಿದುಹೋಗುವಂಥ ಎಲ್ಲ ತರದ ಭೂಮಿಯಲ್ಲಿಯೂ ಯಶಸ್ವಿಯಾಗಿ ಇದರ ಬೇಸಾಯ ಸಾಧ್ಯ.

ಸೀಸದ ಕಡ್ಡಿ ಗಾತ್ರದ, ಚೆನ್ನಾಗಿ ಬಲಿತ ರೆಂಬೆಗಳನ್ನು 30–45 ಮಿ.ಮೀ. ಉದ್ದದ ತುಂಡುಗಳಾಗಿ ಕತ್ತರಿಸಿ ಮರಳಿನಲ್ಲಿ ನೆಡಬೇಕು. ನೆಟ್ಟ 15–20 ದಿವಸಗಳ ಅನಂತರ ಇವು ಚಿಗುರತೊಡಗುತ್ತವೆ. ಆಮೇಲೆ 2 ಘನ ಅಡಿ ಅಳತೆಯ ಗುಂಡಿಗಳನ್ನು ತೆಗೆದು, ಕೆಲವು ದಿನ ಅರಲು ಬಿಟ್ಟು ಎರಡು ಮಂಕರಿ ಕೊಟ್ಟಿಗೆ ಗೊಬ್ಬರವನ್ನು ಮೇಲ್ಮಣ್ಣಿನೊಡನೆ ಮಿಶ್ರಮಾಡಿ ಗುಂಡಿಗಳಿಗೆ ತುಂಬಬೇಕು. ಅನಂತರ ಒಂದೊಂದು ಗುಂಡಿಗೂ ಎರಡು ತುಂಡುಗಳಂತೆ 20–35 ಮೀ. ಅಂತರದಲ್ಲಿ 12–12 ಮೀ. ಆಳವಾಗಿ ನೆಡಬೇಕು. ಮೂರು ತಿಂಗಳ ಅನಂತರ ಗಿಡಗಳು ಪೊದೆಯಾಗಿ ಕೊಯ್ಲಿಗೆ ಬರುತ್ತವೆ. ಗಿಡಗಳು ಹೆಚ್ಚು ಉದ್ದ ಬೆಳೆಯಲು ಬಿಡದೆ ಜುಲೈ–ಆಗಸ್ಟ್ ತಿಂಗಳಿನ ವೇಳೆಗೆ ಅದನ್ನು ಸಮರಿ ಗಿಡ ಒಂದಕ್ಕೆ 1–2 ಬುಟ್ಟಿ ಕೊಟ್ಟಿಗೆ ಗೊಬ್ಬರ, ಒಂದು ಕಿ.ಗ್ರಾಂ. ಮೀನುಗೊಬ್ಬರ ಮತ್ತು

ಚಕ್ರಮುನಿ ಸಸ್ಯ (ಒಳಚಿತ್ರದಲ್ಲಿ ಹೂವು ಮತ್ತು ಕಾಯಿಗಳನ್ನು ತೋರಿಸಿದೆ)

100–150 ಗ್ರಾಂ. ರಾಸಾಯನಿಕ ಗೊಬ್ಬರಗಳ ಮಿಶ್ರಣವನ್ನು ಗಿಡದ ಬುಡದಿಂದ ಒಂದು ಅಡಿ ದೂರದಲ್ಲಿ ಸುತ್ತಲೂ ಹಾಕಿ ಮಣ್ಣನ್ನು ಕೆದಕಿ ನೀರು ಹಾಯಿಸಬೇಕು. ಗಿಡಗಳನ್ನು ಹದವರಿತು ಸಮರುವುದರಿಂದಲೂ ಕಾಲಕಾಲಕ್ಕೆ ಸರಿಯಾಗಿ ಗೊಬ್ಬರ ಮತ್ತು ನೀರನ್ನು ಹಾಕುವುದರಿಂದಲೂ ಸೊಪ್ಪನ್ನು ವರ್ಷಪೂರ್ತಿ ಪಡೆಯಬಹುದು. ಒಂದು ಸಲಕ್ಕೆ ಒಂದು ಗಿಡದಿಂದ ಸರಾಸರಿ 2–3 ಸೊಪ್ಪಿನಂತೆ 15–20 ವರ್ಷಕಾಲ ಪಡೆಯಬಹುದು.

(ಎಂ.ಎಚ್.ಎಂ.)

**ಚಕ್ರವರ್ತಿ, ಅಂಬಿಕಾ :** 1802–1962. ಭಾರತದ ಒಬ್ಬ ಕ್ರಾಂತಿವೀರ. 1892ರಲ್ಲಿ ಬರ್ಮದಲ್ಲಿ (ಈಗಿನ ಮಾಯನ್ಮಾರ್) ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ತಂದೆ ನಂದಕುಮಾರ್ ಚಕ್ರವರ್ತಿ. ಇವರು ತಮ್ಮ ಸಂಸಾರದೊಂದಿಗೆ ಈಗಿನ ಬಾಂಗ್ಲಾದೇಶದ ಚಿತ್ತಗಾಂಗ್‌ನಲ್ಲಿ ನೆಲಸಿದ್ದರಿಂದ ಅಂಬಿಕಾ ಚಕ್ರವರ್ತಿ ಅಲ್ಲೇ ಬೆಳೆದರು. ಇವರು ಹೆಚ್ಚು ವಿದ್ಯಾಭ್ಯಾಸ ಮಾಡಲಿಲ್ಲ.

ಚಿಕ್ಕಂದಿನಲ್ಲಿ ಇವರು ಬಂಗಾಲದಲ್ಲಿ ಹಬ್ಬಿದ್ದ ಕಾಂಗ್ರೆಸ್ಸಿನ ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿದರು. ಆ ಸಮಯದಲ್ಲಿ ಇವರು ಚಿತ್ತಗಾಂಗಿನ ಕಾಂಗ್ರೆಸ್ ಮುಂದಾಳಾಗಿದ್ದ ಜೆ.ಎಂ. ಸೇನ್ ಗುಪ್ತರಿಂದ ಪ್ರಭಾವಿತರಾದರು. ವಿವೇಕಾನಂದರ ಬರಹಗಳೂ ಕ್ಷುಧಿರಾಂ, ಪ್ರಫುಲ್ಲ ಚಾಕಿ ಮುಂತಾದವರ ಜೀವನಚರಿತ್ರೆಗಳೂ ಇವರ ಮೇಲೆ ತುಂಬ ಪರಿಣಾಮ ಉಂಟುಮಾಡಿದುವು. ದೇಶದ ಬಿಡುಗಡೆಗಾಗಿ ಜೀವನವನ್ನು ಮುಡಿಪಾಗಿಡಲು ಸಂಕಲ್ಪಿಸಿ ಆಜೀವ ಬ್ರಹ್ಮಚರ್ಯವನ್ನು ಅನುಸರಿಸಿದರು. 1911–12ರಲ್ಲಿ ಇವರಿಗೆ ಸೇನ್ ಗುಪ್ತರ ಸಂಪರ್ಕ ಲಭಿಸಿ ಇವರು ಕಾಂಗ್ರೆಸ್ ಸೇರಿದರು. ಸೇನ್ ಗುಪ್ತರ ನಾಯಕತ್ವದಲ್ಲಿ ಇವರು ಚಾಂದ್‌ಪುರ ಕಾರ್ಮಿಕ ಮುಷ್ಕರದಲ್ಲೂ ಅಸ್ಸಾಂ–ಬಂಗಾಲ ರೈಲ್ವೆ ಮುಷ್ಕರದಲ್ಲೂ ಭಾಗವಹಿಸಿದರು. ಇದೇ ಕಾಲದಲ್ಲೇ ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದ್ದ ಸೂರ್ಯ ಸೇನರ ಭೇಟಿಯಾದ ಮೇಲೆ ಇವರ ಜೀವನದಲ್ಲೊಂದು ಮಹಾ ಪರಿವರ್ತನೆ ಯುಂಟಾಯಿತು. ಇವರೊಬ್ಬ ಕ್ರಾಂತಿಕಾರಿಯಾಗಿ ಚಿತ್ತಗಾಂಗಿನ ಕ್ರಾಂತಿಕಾರಿಗಳ ಗುಂಪಿಗೆ

ನಾಯಕರಾದರು. ಆದರೆ ಕಾಂಗ್ರೆಸ್ಸಿನೊಂದಿಗೆ ಸಂಬಂಧವನ್ನು ಕಡಿದುಕೊಳ್ಳಲಿಲ್ಲ. ಚಿತ್ತಗಾಂಗ್ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರೂ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರೂ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರೂ ಆಗಿದ್ದರು.

ಕ್ರಾಂತಿಯೋಧರ ಸಂಗ್ರಹ, ತರಬೇತು, ಶಸ್ತ್ರಸಂಗ್ರಹಣೆ ಮುಂತಾದ ಕಾರ್ಯಗಳಲ್ಲಿ ಇವರು ನಿರತರಾದರು. ಹಣ ಎತ್ತಲು ದರೋಡೆ ಮಾಡಿದರು. 1924ರಲ್ಲಿ ಇವರು ಬಂಧನಕ್ಕೊಳಗಾಗಿ ನಾಲ್ಕು ವರ್ಷಗಳ ಕಾಲ ಜೈಲಿನಲ್ಲಿದ್ದರು. ಬಿಡುಗಡೆಯಾದ ಮೇಲೆ ಇವರು ಸುಭಾಷ್‌ಚಂದ್ರ ಬೋಸರ ಅನುಯಾಯಿಯಾದರು. ಕಾಂಗ್ರೆಸಿನ ಮುಸುಕಿನಲ್ಲಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸುವುದು ಇವರ ಉದ್ದೇಶವಾಗಿತ್ತು.

ಸೂರ್ಯ ಸೇನ್ ಮತ್ತು ನಿರ್ಮಲ್ ಸೇನ್ ಅವರೊಡನೆ ಸೇರಿ ಇವರು ಚಿತ್ತಗಾಂಗ್ ವಿಮೋಚನೆಗಾಗಿ ಸಾಹಸದ ಯೋಜನೆಯೊಂದನ್ನು ಹಾಕಿಕೊಂಡರು. 1930ರ ಏಪ್ರಿಲ್ 18ರಂದು ಇವರ ನಾಯಕತ್ವದ ಒಂದು ತುಕಡಿ ಅಲ್ಲಿಯ ದೂರವಾಣಿ ಮತ್ತು ತಂತಿ ಕಚೇರಿಗಳನ್ನು ವಶಪಡಿಸಿಕೊಂಡಿತು. ಇನ್ನೊಂದು ತುಕಡಿ ಶಸ್ತ್ರಾಗಾರವನ್ನು ವಶಪಸಿಕೊಂಡಿತು. ಆದರೆ ಅಲ್ಲಿ ನಿರೀಕ್ಷಿಸಿದಂತೆ ತೋಟಾಗಳು ಸಿಕ್ಕಲಿಲ್ಲವಾದ್ದರಿಂದ ಇವರಿಗೆ ನಿರಾಶೆ ಕಾದಿತ್ತು. ಕ್ರಾಂತಿಕಾರಿ ಚಟುವಟಿಕೆಗಳ ಸಂಯೋಜನಾ ನೆಲೆಯಾಗಿ ನಿರ್ಧರಿಸಲಾಗಿದ್ದ ಜಲಾಲಾಬಾದ್ ಬೆಟ್ಟಕ್ಕೆ ಇವರು ತಮ್ಮ ಯೋಧರನ್ನು ಕರೆದೊಯ್ದರು. ಆದರೆ ಇವರ ಯೋಜನೆ ಫಲಿಸಲಿಲ್ಲ. ಏಪ್ರಿಲ್ 22ರಂದು ಅಲ್ಲಿಗೆ ಬಂದ ಸರ್ಕಾರದ ಭಾರಿ ಪಡೆಯೊಂದಿಗೆ ಹೋರಾಟದಲ್ಲಿ ಅಂಬಿಕಾ ಚಕ್ರವರ್ತಿಯ ಎದೆಗೆ ಗುಂಡು ತಗುಲಿತು. ತಮ್ಮ ಅನುಯಾಯಿಗಳೊಂದಿಗೆ ಇವರು ತಪ್ಪಿಸಿಕೊಳ್ಳಲಾಗಲಿಲ್ಲವಾದರೂ ಸರ್ಕಾರಿ ಪಡೆಗೆ ಸಿಕ್ಕದೆ ತೆವಳಿಕೊಂಡು ನೆರೆಯ ಗ್ರಾಮಕ್ಕೆ ಸೇರಿ, ಅಲ್ಲಿಯವರ ಸಹಾಯದಿಂದ ತಲೆತಪ್ಪಿಸಿಕೊಂಡು ಭೂಗತರಾದರು. 1930ರಲ್ಲಿ ಇವರ ದಸ್ತಗಿರಿಯಾಯಿತು. ಇವರಿಗೆ ಜೀವಾವಧಿ ಶಿಕ್ಷೆಯಾಯಿತು. ಇವರನ್ನು ಅಂಡಮಾನಿಗೆ ರವಾನಿಸಲಾಯಿತು.

ಅಂಡಮಾನಿನಲ್ಲಿದ್ದಾಗ ಇವರು ಮಾರ್ಕ್ಸಿಸ್ಟ್ ಸಾಹಿತ್ಯದಿಂದ ತುಂಬ ಪ್ರಭಾವಿತರಾದರು. 1946ರಲ್ಲಿ ಬಿಡುಗಡೆ ಹೊಂದಿದಾಗ ಇವರು ಕಮ್ಯೂನಿಸ್ಟ್ ಪಕ್ಷ ಸೇರಿ ಕೊನೆಯವರೆಗೂ ಅದರ ಸದಸ್ಯರಾಗಿದ್ದರು. ಜನತಾವೀರನೆಂಬ ಖ್ಯಾತಿ ಇವರಿಗೆ ಬಂದಿತ್ತು. 1948ರಲ್ಲಿ ಕಮ್ಯೂನಿಸ್ಟ್ ಪಕ್ಷ ಬಹಿಷ್ಕೃತವಾದಾಗ ಇವರು ಭೂಗತರಾದರು. 1949ರಲ್ಲಿ ಇವರು ಬಂಧನಕ್ಕೊಳಗಾಗಿ 1951ರಲ್ಲಿ ಬಿಡುಗಡೆಯಾದರು. ಭಾರತೀಯ ಕಮ್ಯೂನಿಸ್ಟ್ ಪಕ್ಷದ ಪಶ್ಚಿಮ ಬಂಗಾಲದ ಪ್ರಾಂತೀಯ ಸಮಿತಿಯ ಸದಸ್ಯರಾದರು. ಭಾರತ ವಿಭಜನೆಯ ಅನಂತರ ಕೋಲ್ಕತಗೆ ಬರುತ್ತಿದ್ದ ನಿರಾಶ್ರಿತರ ಪುನರ್ವಸತಿಯ ಕೆಲಸದಲ್ಲಿ ಇವರು ವಹಿಸಿದ ಪಾತ್ರ ಮುಖ್ಯವಾದ್ದು. 1952ರಲ್ಲಿ ಪಶ್ಚಿಮ ಬಂಗಾಲದ ವಿಧಾನಸಭೆಗೆ ಕಮ್ಯೂನಿಸ್ಟ್ ಅಭ್ಯರ್ಥಿಯಾಗಿ ಇವರು ಆಯ್ಕೆಗೊಂಡರು. ಆದರೆ 1957ರ ಚುನಾವಣೆಯಲ್ಲಿ ಇವರಿಗೆ ಪರಾಜಯವಾಯಿತು. 1962ರ ಮಾರ್ಚ್ 6ರಂದು ಕಾರೊಂದು ಇವರ ಮೇಲೆ ಹರಿದ ಪರಿಣಾಮವಾಗಿ ಇವರು ನಿಧನರಾದರು. ಅಂಬಿಕಾ ಚಕ್ರವರ್ತಿ ಧೈರ್ಯಶಾಲಿ, ಮಿತಭಾಷಿ. ಕೊನೆಯವರೆಗೂ ಇವರು ಉಜ್ಜ್ವಲ ಕ್ರಾಂತಿಕಾರಿಯಾಗಿಯೇ ಉಳಿದರು. ಇವರು ಒಳ್ಳೆಯ ಭಾಷಣಕಾರರಾಗಲಿ ಬುದ್ಧಿಜೀವಿಯಾಗಲಿ ಆಗಿರದಿದ್ದರೂ ಜನರ ನಡುವೆ ಸದಾ ಕಾರ್ಯನಿರತರಾಗಿದ್ದು ಅವರ ಪ್ರೀತಿ ಗೌರವಗಳಿಗೆ ಭಾಜನರಾಗಿದ್ದರು. *

**ಚಕ್ರವರ್ತಿ, ತ್ರೈಲೋಕ್ಯ :** 1880–1970. ಬಂಗಾಲದ ಒಬ್ಬ ಕ್ರಾಂತಿವೀರ. ಈಗಿನ ಬಾಂಗ್ಲಾದೇಶದ ಮೈಮೆನ್‌ಸಿಂಗ್ ಜಿಲ್ಲೆಯ ಒಂದು ಗ್ರಾಮದಲ್ಲಿ 1889ರ ಮೇ ತಿಂಗಳಲ್ಲಿ ಜನಿಸಿದರು. ತಂದೆ ದುರ್ಗಾಚರಣ ಚಕ್ರವರ್ತಿ ರಾಷ್ಟ್ರೀಯ ಭಾವನೆಯುಳ್ಳವರಾಗಿದ್ದರು. ಸ್ವದೇಶಿ ಬಟ್ಟೆಗಳನ್ನೇ ಉಪಯೋಗಿಸುವಂತೆ ಕುಟುಂಬದವರನ್ನು ಪ್ರೋತ್ಸಾಹಿಸುತ್ತಿದ್ದರು. ತ್ರೈಲೋಕ್ಯರ ಸಹೋದರ ಕಾಮಿನಿ ಮೋಹನ್ ಚಕ್ರವರ್ತಿ ಮೈಮೆನ್ ಸಿಂಗ್‌ನ ಕ್ರಾಂತಿಕಾರಿಗಳಿಗೆ ಬೆಂಬಲ ನೀಡುತ್ತಿದ್ದರು. ತ್ರೈಲೋಕ್ಯ ಚಕ್ರವರ್ತಿಯೂ ರಾಷ್ಟ್ರೀಯ ಭಾವನೆಗಳನ್ನು ಬೆಳೆಸಿಕೊಂಡಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ಪ್ರವೇಶಪರೀಕ್ಷೆಗೆ ಕುಳಿತಿದ್ದಾಗ ಪರೀಕ್ಷೆಗೆ ಹಿಂದಿನ ದಿನ ಬಂಧನಕ್ಕೊಳಗಾದರು. ಅಲ್ಲಿಗೆ ಅವರ ವಿದ್ಯಾರ್ಥಿಜೀವನ ಕೊನೆಗೊಂಡಿತು.

ತ್ರೈಲೋಕ್ಯರ ರಾಷ್ಟ್ರಪಜ್ಞೆ ಸ್ವದೇಶಿ ಚಳವಳಿಯಿಂದ ಪ್ರಚೋದನೆಗೊಂಡಿತು. 1906ರಲ್ಲಿ ಅವರು ಅನುಶೀಲನ ಸಮಿತಿಯನ್ನು ಸೇರಿದರು. ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಹಲವರು; ಮೊದಲು ಪುಲಿನ್ ಬಿಹಾರಿ ದಾಸ್, ಮಖನ್ ಲಾಲ್ ಸೇನ್ ಮತ್ತು ರಬೀಂದ್ರ ಮೋಹನ್ ಸೇನ್; ಅನಂತರ ಸಿ.ಆರ್. ದಾಸ್ ಮತ್ತು ಸುಭಾಷ್ ಚಂದ್ರ ಬೋಸ್, ಬಂಕಿಮಚಂದ್ರ ಮತ್ತು ರಮೇಶದತ್ತರ ಕೃತಿಗಳೂ ಮ್ಯಾಟ್ಸಿನಿ, ಗಾರಿಬಾಲ್ಡಿ ಮುಂತಾದವರನ್ನು ಕುರಿತ ಗ್ರಂಥಗಳೂ ಅವರ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದುವು.

ಅನುಶೀಲನ ಸಮಿತಿಯ ಸದಸ್ಯರಾಗಿ ತ್ರೈಲೋಕ್ಯರು ಇಡೀ ಜಿಲ್ಲೆಯಲ್ಲಿ ಸಂಘಗಳನ್ನೂ ವ್ಯಾಯಾಮಶಾಲೆಗಳನ್ನೂ ಸ್ಥಾಪಿಸಿ ಯುವಕರನ್ನು ಸಂಘಟಿಸಿದರು. ಈ ಸಂದರ್ಭದಲ್ಲಿ ಅವರಿಗೆ ಅನುಶೀಲನ ಸಮಿತಿಯ ಹಿರಿಯ ನಾಯಕರಾದ ಪುಲಿನ್ ಬಿಹಾರಿ ದಾಸರ ಸಂಪರ್ಕವುಂಟಾಯಿತು. 1908ರಲ್ಲಿ ದೋಣಿಯೊಂದನ್ನು ಕದ್ದ ಆಪಾದನೆಯ ಮೇಲೆ ತ್ರೈಲೋಕ್ಯರು ಬಂಧನಕ್ಕೆ ಒಳಗಾದರು. 1909ರಲ್ಲಿ ಬಿಡುಗಡೆ ಹೊಂದಿ ಢಾಕಾಗೆ ಹೋದರು. ಢಾಕಾ ಪಿತೂರಿ ಮೊಕದ್ದಮೆಯಲ್ಲಿ ತ್ರೈಲೋಕ್ಯರೂ ಒಬ್ಬ ಆಪಾದಿತರಾಗಿದ್ದರೂ ಪೋಲೀಸರ ಕೈಗೆ ಸಿಗದೆ ತಪ್ಪಿಸಿಕೊಂಡರು. ಅಗರ್‌ತಲದ ಉದಯಪುರ ಬೆಟ್ಟಕ್ಕೆ ಓಡಿಹೋಗಿ ಅಲ್ಲಿ ತಮ್ಮ ಗುಂಪಿನ ಒಂದು ಶಾಖೆ ಸ್ಥಾಪಿಸಿದರು. 1912ರಲ್ಲಿ ಒಂದು ಕೊಲೆಯ ಆಪಾದನೆ ಹೊರಿಸಿ ಅವರನ್ನು ಬಂಧಿಸಲಾಯಿತು. ಆದರೆ ಆಪಾದನೆ ರುಜುವಾತಾಗಲಿಲ್ಲ. ಅವರ ಬಿಡುಗಡೆಯಾಯಿತು.

1913–14 ರಲ್ಲಿ ಮಾಲ್ದ, ರಾಜ್‌ಷಾಹಿ, ಕೊಮಿಲ್ಲಾ ಮುಂತಾದ ಜಿಲ್ಲೆಗಳಲ್ಲಿ ಅವರು ಸಂಘದ ಶಾಖೆಗಳನ್ನು ಸ್ಥಾಪಿಸಲು ಪ್ರವಾಸ ಮಾಡಿದರು. 1914ರಲ್ಲಿ ಬಾರಿಸಾಲ್ ಪಿತೂರಿ ಸಂಬಂಧದಲ್ಲಿ ಅವರನ್ನು ಕೊಲ್ಕತದಲ್ಲಿ ಬಂಧಿಸಿ ಹತ್ತು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿ ಅಂಡಮಾನಿಗೆ ಕಳಿಸಲಾಯಿತು.

ಅವರು 1924ರಲ್ಲಿ ಬಿಡುಗಡೆಯಾಗಿ ಭಾರತಕ್ಕೆ ಬಂದರು. ಚಿತ್ತರಂಜನದಾಸರ ಸೂಚನೆಯ ಮೇರೆಗೆ ದಕ್ಷಿಣ ಕೊಲ್ಕತ್ತ ರಾಷ್ಟ್ರೀಯ ಶಾಲೆಯ ಕಾರ್ಯಭಾರವನ್ನು ವಹಿಸಿಕೊಂಡರು. 1927ರಲ್ಲಿ ಅವರನ್ನು ಬಂಧಿಸಿ ಮಾಂಡಲೆಗೆ ಕಳಿಸಲಾಯಿತು. 1928ರಲ್ಲಿ ಅವರು ಭಾರತಕ್ಕೆ ಮರಳಿದರು. ಆದರೆ ಅವರನ್ನು ನವಖಾಲಿ ಜಿಲ್ಲೆಯ ಹಾಟಿಯ ದ್ವೀಪದಲ್ಲಿ ಸ್ಥಾನಬದ್ಧತೆಯಲ್ಲಿಡಲಾಯಿತು. ಅಲ್ಲಿಂದ ಬಿಡುಗಡೆಯಾದ ಅನಂತರ ಉತ್ತರ ಭಾರತಕ್ಕೆ ಹೋಗಿ ಹಿಂದೂಸ್ತಾನ್ ರಿಪಬ್ಲಿಕನ್ ಸಂಘವನ್ನು ಸೇರಿದರು. ಬರ್ಮದಲ್ಲಿದ್ದ ಭಾರತದ ಕ್ರಾಂತಿಕಾರಿಗಳನ್ನು ಭೇಟಿಯಾಗಲು ಅವರನ್ನು ಬರ್ಮಕ್ಕೆ ಕಳಿಸಿಕೊಡಲಾಯಿತು. ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲೂ ಕೆಲಸ ಮಾಡಿದರು. 1929ರಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. 1930ರಲ್ಲಿ ಅವರನ್ನು ರಾಜ್‌ಷಾಹಿಯಲ್ಲಿ ಬಂಧಿಸಿ ದಕ್ಷಿಣ ಭಾರತದಲ್ಲಿ ಬಂಧನದಲ್ಲಿಡಲಾಯಿತು. 1938ರಲ್ಲಿ ಬಿಡುಗಡೆ ಹೊಂದಿ ಸುಭಾಷ್ ಚಂದ್ರ ಬೋಸರನ್ನು ಭೇಟಿಯಾಗಿ ರಾಮ್‌ಘರ್ ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಿದರು. ಎರಡನೆಯ ಮಹಾಯುದ್ಧ ಆರಂಭವಾದಾಗ ಭಾರತ ಸೈನ್ಯದಲ್ಲಿ ಸಶಸ್ತ್ರ ಬಂಡಾಯವನ್ನು ಸಂಘಟಿಸಲು ಪ್ರಯತ್ನಿಸಿದರು. ಅವರ ಪ್ರಯತ್ನ ಫಲಕಾರಿಯಾಗಲಿಲ್ಲ. ಅವರನ್ನು ಚಿತ್ತಗಾಂಗಿನಲ್ಲಿ ಬಂಧಿಸಲಾಯಿತು. ಬಿಡುಗಡೆಯಾದ ಮೇಲೆ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿ ಮತ್ತೆ ಸೆರೆಯಾದರು.

ತ್ರೈಲೋಕ್ಯರು 1906ರಲ್ಲಿ ಬಿಡುಗಡೆ ಹೊಂದಿ ನವಖಾಲಿಯಲ್ಲಿ ರಚನಾತ್ಮಕ ಕಾರ್ಯದಲ್ಲಿ ತೊಡಗಿದರು. ಭಾರತ ಸ್ವತಂತ್ರವಾದ ಮೇಲೆ ಅಂದಿನ ಪೂರ್ವ ಪಾಕಿಸ್ತಾನದಲ್ಲಿ ಉಳಿದು ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. 1954ರಲ್ಲಿ ಅಲ್ಲಿಯ ಪ್ರಾಂತೀಯ ಸಭೆಗೆ ಸಂಯುಕ್ತ ಪ್ರಗತಿವಾದಿ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆ ಹೊಂದಿದರು. 1958ರಲ್ಲಿ ಅವರ ಚುನಾವಣೆಯನ್ನು ಪಾಕಿಸ್ತಾನ್ ಸರ್ಕಾರ ತಳ್ಳಿಹಾಕಿತು. ರಾಜಕೀಯ ಚಟುವಟಿಕೆಗಳಲ್ಲೂ ಸಮಾಜಕಲ್ಯಾಣ ಕಾರ್ಯಗಳಲ್ಲೂ ಭಾಗವಹಿಸದಂತೆ ನಿರ್ಬಂಧ ವಿಧಿಸಿತು. 1970ರ ವರೆಗೂ ಅವರು ತಮ್ಮ ಸ್ವಗ್ರಾಮದಲ್ಲಿ ಒಂಟಿ ಬಾಳನ್ನು ಬಾಳಿ, ಅನಾರೋಗ್ಯನಿಮಿತ್ತ ಚಿಕಿತ್ಸೆಗಾಗಿ ಭಾರತಕ್ಕೆ ಬಂದರು. ಅದೇ ವರ್ಷ ದೆಹಲಿಯಲ್ಲಿ ನಿಧನರಾದರು. ಅವರು ಕೊನೆಯವರೆಗೂ ಅವಿವಾಹಿತರಾಗಿದ್ದು ದೇಶಕ್ಕಾಗಿ ದುಡಿದರು. ಅವರನ್ನು ಜನರು 'ಮಹಾರಾಜ್' ಎಂದು ಕರೆಯುತ್ತಿದ್ದರು. *

**ಚಕ್ರವರ್ತಿ, ನಿರಂಜನ ಪ್ರಸಾದ್ :** 1893–1956. ಭಾರತದ ಪ್ರಸಿದ್ಧ ಶಾಸನತಜ್ಞ, ಸಂಸ್ಕೃತ ವಿದ್ವಾಂಸ. ಪಶ್ಚಿಮ ಬಂಗಾಲದ ನದಿಯಾ ಜಿಲ್ಲೆಯ ಕೃಷ್ಣಾನಗರ್‌ನಲ್ಲಿ 1893ರ ಜುಲೈ 1ರಂದು ಜನಿಸಿದರು. ಎಂ. ಎ. ಪದವೀಧರರಾದ ಮೇಲೆ ಇವರು 1917ರಲ್ಲಿ ಕೊಲ್ಕತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಮತ್ತು ಪಾಲಿ ಭಾಷೆಗಳ ಅಧ್ಯಾಪಕರಾದರು. ಯೂರೋಪಿನಲ್ಲಿ ಅಧ್ಯಯನಕ್ಕಾಗಿ 1921ರಲ್ಲಿ ಭಾರತ ಸರ್ಕಾರದ ವ್ಯಾಸಂಗವೇತನವೊಂದು ಇವರಿಗೆ ಲಭಿಸಿತು. ಇವರು ಪ್ಯಾರಿಸಿನ ಸಾರ್ ಬಾನ್ ವಿಶ್ವವಿದ್ಯಾಲಯದಲ್ಲೂ, ಬರ್ಲಿನ್ ವಿಶ್ವವಿದ್ಯಾಲಯದಲ್ಲೂ ಅಧ್ಯಯನ ನಡೆಸಿದರು. 1924ರಲ್ಲಿ ಇವರು ಇಂಗ್ಲೆಂಡಿಗೆ ಹೋದರು. 1926ರಲ್ಲಿ ಇವರಿಗೆ ಕೇಂಬ್ರಿಜ್ ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಫಿಲಾಸಫಿ ಪದವಿ ಲಭಿಸಿತು. ಭಾರತಕ್ಕೆ ಹಿಂದಿರುಗಿದ ಚಕ್ರವರ್ತಿಯವರು 1929ರಲ್ಲಿ ಭಾರತ ಸರ್ಕಾರದ ಪುರಾತತ್ವ ಸರ್ವೇಕ್ಷಣ ವಿಭಾಗವನ್ನು ಸೇರಿ ಉದಕಮಂಡಲದಲ್ಲಿ ಶಾಸನ ಉಪ ಸೂಪರಿಂಟೆಂಡೆಂಟ್ ಆದರು. ಸಂಶೋಧನ ಕಾರ್ಯದಲ್ಲಿ ಚಕ್ರವರ್ತಿಯವರು ತೋರಿಸಿದ ಶ್ರದ್ಧೆ ಆಸಕ್ತಿಗಳಿಂದಾಗಿ ಇವರಿಗೆ 1934ರಲ್ಲಿ ಭಾರತದ ಸರ್ಕಾರಿ ಶಾಸನತಜ್ಞರ ಹುದ್ದೆ ಪ್ರಾಪ್ತವಾಯಿತು. 1940ರಲ್ಲಿ ಇವರು ನವದೆಹಲಿಯಲ್ಲಿ ಪುರಾತತ್ವ ಉಪನಿರ್ದೇಶಕರೂ 1948ರಲ್ಲಿ ಮಹಾನಿರ್ದೇಶಕರೂ ಆದರು. ಇವರು ಆ ಹುದ್ದೆಯಿಂದ ನಿವೃತ್ತಿ ಹೊಂದಿದ್ದು 1950ರಲ್ಲಿ. 1950–52ರಲ್ಲಿ ಎನ್.ಪಿ. ಚಕ್ರವರ್ತಿಯವರು ಪುರಾತತ್ವ ಇಲಾಖೆಯಲ್ಲಿ ಸಲಹೆಗಾರರಾಗಿದ್ದರು. ಅನಂತರ ಇವರು ಸಂಸತ್ ಭವನದ ಗೋಡೆಗಳ ಮೇಲೆ

ನಾಗರಿಕತೆಯ ಉದಯದಿಂದ ಸ್ವಾತಂತ್ರ್ಯದವರೆಗಿನ ಭಾರತದ ಇತಿಹಾಸದ ಮುಖ್ಯ ಘಟನೆಗಳ ಚಿತ್ರಣದಲ್ಲಿ ನಿರತರಾಗಿದ್ದ ಕಲಾವಿದರ ದಿಗ್ದರ್ಶನಾಧಿಕಾರಿಯಾಗಿ ನೇಮಕಗೊಂಡರು. 1956ರಲ್ಲಿ ನಿಧನರಾಗುವವರೆಗೂ ಈ ಅಧಿಕಾರದಲ್ಲಿದ್ದರು.

ಪುರಾತತ್ತ್ವ ಹಾಗೂ ಶಾಸನಕ್ಷೇತ್ರದಲ್ಲಿ ಇವರು ಮಾಡಿರುವ ಕೆಲಸ ನಾನಾಮುಖವಾದ್ದು. ಇವರು ಸರ್ಕಾರಿ ಶಾಸನತಜ್ಞರಾಗಿದ್ದಾಗ ಎಪಿಗ್ರಾಫಿಯ ಇಂಡಿಕದ XXIIರಿಂದ–XXVI ಸಂಪುಟಗಳನ್ನು ಸಂಪಾದಿಸಿದರು. 1948ರಲ್ಲಿ ಅಖಿಲ ಭಾರತ ಪ್ರಾಚ್ಯ ವಿದ್ಯಾ ಸಮ್ಮೇಳನದಲ್ಲಿ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಕುರಿತು ಚಕ್ರವರ್ತಿಯವರು ನೀಡಿದ ಉಪನ್ಯಾಸ ಇವರ ಪಾಂಡಿತ್ಯದ ಆಳ–ಹರಹುಗಳಿಗೆ ದ್ಯೋತಕವಾಗಿದೆ. 1954 ರಲ್ಲಿ ಅಹಮದಾಬಾದಿನಲ್ಲಿ ನಡೆದ ಭಾರತದ ಇತಿಹಾಸ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಭಾರತಶಾಸ್ತ್ರದ ಸಮಸ್ಯೆಗಳು ಮತ್ತು ಅದರ ಭವಿಷ್ಯವನ್ನು ಕುರಿತು ಇವರು ನೀಡಿದ ಉಪನ್ಯಾಸ ಆ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ಎಲ್ಲ ವಿದ್ವಾಂಸರ ಗಮನ ಸೆಳೆಯಿತು. ಭಾರತ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ವಾರ್ಷಿಕ ವರದಿಗಳೇ ಅಲ್ಲದೆ ಹಲವು ವಿದ್ವತ್ ಪತ್ರಿಕೆಗಳಿಗೆ ಚಕ್ರವರ್ತಿಯವರು ಅಭ್ಯಾಸಪೂರ್ಣವಾದ ಲೇಖನಗಳನ್ನು ಬರೆದಿದ್ದಾರೆ. ಎಪಿಗ್ರಾಫಿಯ ಇಂಡಿಕಕ್ಕೆ ಇವರು ಸಲ್ಲಿಸಿರುವ ಲೇಖನಗಳು ಹಲವು. ಬಿ.ಆರ್. ಚಟರ್ಜಿಯವರ 'ಇಂಡಿಯ ಅಂಡ್ ಜಾವ' ಗ್ರಂಥದಲ್ಲಿ ಜಾವದ ಶಾಸನಗಳ ಸಂಪಾದನ ಕಾರ್ಯ ಮಾಡಿದವರು ಇವರು. ಯಾಜ್ದಾನಿಯವರ ಅಜಂತ ಗ್ರಂಥದ 3ನೆಯ ಭಾಗದಲ್ಲಿ ಶಾಸನಗಳನ್ನು ಕುರಿತು ಬರೆದಿದ್ದಾರೆ. ಇವರು ದೇಶವಿದೇಶಗಳ ಹಲವಾರು ವಿದ್ವತ್ ಸಂಘ ಸಂಸ್ಥೆಗಳ ಸದಸ್ಯರಾಗಿದ್ದರು. ಬಂಗಾಲದ ರಾಯಲ್ ಏಷ್ಯಾಟಿಕ್ ಸೊಸೈಟಿಯ ಫೆಲೊ ಆಗಿದ್ದರಲ್ಲದೆ ಲಂಡನಿನ ರಾಯಲ್ ಸೊಸೈಟಿ ಆಫ್ ಇಂಡಿಯ ಅಂಡ್ ಪಾಕಿಸ್ತಾನ್‌ನ ಉಪಾಧ್ಯಕ್ಷರೂ, ಯುನೆಸ್ಕೊ ರಚಿಸಿದ ಅಂತಾರಾಷ್ಟ್ರೀಯ ನಿವೇಶನ ಮತ್ತು ವಸ್ತುಸಂಗ್ರಹಾಲಯ ಸಮಿತಿಯ ಮತ್ತು ಅಖಿಲ ಭಾರತ ಲಲಿತ ಮತ್ತು ಕುಶಲಕಲಾ ಸಂಘದ ಉಪಾಧ್ಯಕ್ಷರೂ ಆಗಿದ್ದರು. (ಎಚ್.ಆರ್.ಆರ್.ಬಿ.)

**ಚಕ್ರವರ್ತಿ, ಸತೀಶ ಚಂದ್ರ :** 1801–1968. ಭಾರತದ ಒಬ್ಬ ರಾಜಕೀಯ ಕ್ರಾಂತಿವೀರ. ಪೂರ್ವ ಬಂಗಾಲದ ಖುಲ್ನ ಜಿಲ್ಲೆಯ ಹಳ್ಳಿಯೊಂದರಲ್ಲಿ 1891ರಲ್ಲಿ ಜನಿಸಿದರು. ತಂದೆ ಛತ್ರನಾಥ, ತಾಯಿ ಮೋಕ್ಷದಾ ಸುಂದರಿ. ಸತೀಶ ಚಂದ್ರರಿಗೆ ಹನ್ನೊಂದು ವರ್ಷವಾಗಿದ್ದಾಗ ತಂದೆ ನಿಧನರಾದರು. ಸತೀಶ ಚಂದ್ರರು ಅಣ್ಣ ಬಿಪಿನ್ ಬಿಹಾರಿಯ ಪೋಷಣೆಯಲ್ಲಿ ಬೆಳೆದರು.

1905ರ ಬಂಗಾಲ ವಿಭಜನೆಯ ವಿರೋಧಿ ಚಳವಳಿಯ ಸಮಯದಲ್ಲಿ ಅವರು ಗುಪ್ತ ಸಂಘವೊಂದಕ್ಕೆ ಸೇರಿದ್ದರು. ಬರ್ಹಾಂಪುರದಲ್ಲಿ ವಿದ್ಯಾರ್ಥಿಯಾಗಿದ್ದಾಗ (1912) ಅವರು ನೇರವಾಗಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು. ಅತುಲಕೃಷ್ಣ ಘೋಷರು ತಾವು ಸ್ಥಾಪಿಸಿದ್ದ ಕ್ರಾಂತಿಕಾರಿ ರಹಸ್ಯ ತಂಡದ ನಿರ್ವಹಣೆಯ ಹೊಣೆಯನ್ನು ತಾತ್ಕಾಲಿಕವಾಗಿ ಇವರಿಗೆ ವಹಿಸಿಕೊಟ್ಟಿದ್ದಾಗ ಜಿಲ್ಲೆಯಲ್ಲಿ ಅದರ ಚಟುವಟಿಕೆಗಳನ್ನು ಬೆಳೆಸಿದರು. ಇವರಿಗೆ ಪ್ರೋತ್ಸಾಹ ಕೊಟ್ಟ ಪ್ರಾಧ್ಯಾಪಕರಲ್ಲಿ ರಾಧಾಕಮಲ್ ಮುಖರ್ಜಿ ಪ್ರಮುಖರು.

ಸತೀಶಚಂದ್ರರು 1914ರಲ್ಲಿ ಬಿ.ಎ. ಮುಗಿಸಿ ನ್ಯಾಯಶಾಸ್ತ್ರ ಮತ್ತು ಎಂ.ಎ. ತರಗತಿಗಳಿಗೆ ಸೇರಿದರು. ಆಗ ಜತೀಂದ್ರನಾಥ್ ಮುಖರ್ಜಿಯವರ ನಾಯಕತ್ವದಲ್ಲಿ ಸುಧಾರಿತ ಜುಗಾಂತರ್ ಪಕ್ಷ ಉತ್ತರಭಾರತದಲ್ಲಿ ಕ್ರಾಂತಿಕಾರ್ಯಗಳಲ್ಲಿ ನಿರತವಾಗಿತ್ತು. ಇದೇ ಕಾಲದಲ್ಲಿ ಅಮೆರಿಕದಿಂದ ಕೆಲವು ಕ್ರಾಂತಿಕಾರಿ ಪಂಜಾಬಿಗಳು ಭಾರತಕ್ಕೆ ಹಿಂತಿರುಗುವಾಗ ಸರ್ಕಾರದ ಪಡೆಗಳೊಂದಿಗೆ ಹೋರಾಡಿ ತಪ್ಪಿಸಿಕೊಂಡು ಬಂದರು. ಅವರನ್ನು ಸತೀಶಚಂದ್ರರೂ ಅವರ ಸಂಗಡಿಗರೂ ಸುರಕ್ಷಿತವಾಗಿ ಪಂಜಾಬಿಗೆ ತಲುಪಿಸಿದರು. ಜರ್ಮನಿಯಿಂದ ರಹಸ್ಯವಾಗಿ ಶಸ್ತ್ರಾಸ್ತ್ರಗಳನ್ನು ತರಿಸಲು ಇವರು ಮಾಡುತ್ತಿದ್ದ ಪ್ರಯತ್ನಗಳು ಸರ್ಕಾರಕ್ಕೆ ಗೊತ್ತಾದುವು. ಸತೀಶಚಂದ್ರರು ಭೂಗತರಾದರು. ಇವರ ಬಂಧನಕ್ಕಾಗಿ ಸರ್ಕಾರ ಭಾರಿ ಬಹುಮಾನ ಘೋಷಿಸಿತು. 1916ರಲ್ಲಿ ಪೊಲೀಸರು ಮನೆಯೊಂದರ ಮೇಲೆ ದಾಳಿ ಮಾಡಿ ಇವರ ಜೊತೆಗಾರರಲ್ಲಿ ಕೆಲವರನ್ನು ಬಂಧಿಸಿದರು. ಸತೀಶಚಂದ್ರರು ತಪ್ಪಿಸಿಕೊಂಡರಾದರೂ ಪೊಲೀಸರ ಕೈಗೆ ಜೀವಂತವಾಗಿ ಸಿಕ್ಕಿಬೀಳುವ ಭಯದಿಂದ ಪೊಟ್ಯಾಸಿಯಂ ಸೈಯನೈಡ್ ತಿಂದರು. ತತ್‌ಕ್ಷಣವೇ ವಿಷದ ಪ್ರತಿರೋಧಕಗಳನ್ನು ಕೊಟ್ಟು ಇವರ ಜೀವ ಉಳಿಸಲಾಯಿತಾದರೂ ಇವರ ಆರೋಗ್ಯ ಕೆಟ್ಟು, ದೇಹ ದುರ್ಬಲವಾಯಿತು.

ಅಮೆರಿಕದಲ್ಲಿ ಇಂಡೋ–ಜರ್ಮನ್ ಪಿತೂರಿಯೊಂದು ಬಯಲಾಗಿ, ಶಸ್ತ್ರಗಳನ್ನು ಹೊರಗಿನಿಂದ ಪಡೆಯುವ ಪ್ರಯತ್ನ ವಿಫಲವಾದುದರಿಂದ ನಿರಾಶರಾದ ಕ್ರಾಂತಿಕಾರಿಗಳು ಚಂದ್ರನಗರದಲ್ಲಿ ಆಶ್ರಯ ಪಡೆದರು. 1917ರಲ್ಲಿ ಈ ನೆಲೆಗಳನ್ನು ಪೊಲೀಸರು ಶೋಧಿಸಿದರು. ಅತುಲಕೃಷ್ಣರ ಹೊರತು ಉಳಿದವರೆಲ್ಲ ತಪ್ಪಿಸಿಕೊಂಡರು. ಸತೀಶ ಚಂದ್ರರು ಮೊದಲು ರಂಗಪುರದಲ್ಲೂ ಅನಂತರ ಆಲಿಪುರ್ ದೌರ್‌ನಲ್ಲೂ ತಲೆಮರೆಸಿಕೊಂಡಿದ್ದರು.

ಒಂದನೆಯ ಮಹಾಯುದ್ಧ ಮುಗಿದ ಬಳಿಕ ಸರ್ಕಾರ ಕ್ಷಮಾದಾನ ನೀಡಿ ಬಂಧಿತರನ್ನೆಲ್ಲ ಬಿಡುಗಡೆ ಮಾಡಿತು. ತಲೆತಪ್ಪಿಸಿಕೊಂಡಿದ್ದ ಕ್ರಾಂತಿಕಾರಿಗಳ ಬಂಧನಕ್ಕೆ ಸರ್ಕಾರ ಹೊರಡಿಸಿದ್ದ ಆಜ್ಞೆಗಳನ್ನೂ ಹಿಂತೆಗೆದುಕೊಳ್ಳಲಾಯಿತು. 1922ರಲ್ಲಿ ಸತೀಶಚಂದ್ರರು ಹೊರಗೆ ಬಂದರು. ಬ್ರಿಟಿಷ್ ಅಧಿಕಾರಿಯೊಬ್ಬನ ಕೊಲೆಯ ಸಂಬಂಧವಾಗಿ 1924ರಲ್ಲಿ ಇವರು ಬಂಧನಕ್ಕೊಳಗಾದರು.

ಸತೀಶಚಂದ್ರರು 1928ರಲ್ಲಿ ಬಿಡುಗಡೆಯಾದರು. ಭಾರತಕ್ಕೆ ಅಧಿರಾಜ್ಯದ ಸ್ಥಾನ ಬೇಕೆಂಬುದು ಆಗ ಗಾಂಧಿಯವರ ಕೇಳಿಕೆಯಾಗಿತ್ತು. ಪೂರ್ಣ ಸ್ವಾತಂತ್ರ್ಯ ಬೇಕೆಂಬುದು ಸುಭಾಷ್ ಚಂದ್ರ ಬೋಸರ ಅಭಿಮತವಾಗಿತ್ತು. ಇದರಿಂದಾಗಿ ಬಂಗಾಲದ ಕಾಂಗ್ರೆಸಿನಲ್ಲಿ ಎರಡು ಗುಂಪುಗಳಾದುವು. ಸತೀಶ ಚಂದ್ರರು ಸುಭಾಷ್ ಚಂದ್ರರಿಗೆ ಬೆಂಬಲವಾಗಿದ್ದರು. ಕಾಂಗ್ರೆಸಿನಲ್ಲಿ ಇವರು ಇದ್ದು ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು.

1930ರ ಅಸಹಕಾರ ಚಳವಳಿಯ ಕಾಲದಲ್ಲಿ ಸತೀಶಚಂದ್ರರು ರಹಸ್ಯ ಅಂಚೆ ವ್ಯವಸ್ಥೆಯೊಂದನ್ನು ಸಂಘಟಿಸಿದರು. 1938ರಲ್ಲಿ ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪನೆಯಾದಾಗ ಕಾಂಗ್ರೆಸಿನ ಪ್ರಭಾವ ಬಂಗಾಲದಲ್ಲಿ ಕುಗ್ಗಿತು. ಆಗ ಅದನ್ನು ಬೆಳೆಸಲು ಸತೀಶಚಂದ್ರರೂ ಅವರ ಜೊತೆಗಾರರೂ ಶ್ರಮಿಸಿದರು. ಭಾರತ ಬಿಟ್ಟು ತೊಲಗಿ ಚಳವಳಿಯ ಕಾಲದಲ್ಲಿ ಬಂಗಾಲದ ತಾಮ್‌ಲೂಕ್ ಮತ್ತು ಬಾಲುರ್ ಘಾಟ್‌ನಲ್ಲಿ ನಡೆದ ಚಳವಳಿಯ ಯಶಸ್ಸಿಗೆ ಸತೀಶಚಂದ್ರರೇ ಕಾರಣ.

1946ರಲ್ಲಿ ಸತೀಶ ಚಂದ್ರರು ಬಂಗಾಲದ ವಿಧಾನಸಭೆಗೆ ಆಯ್ಕೆಯಾದರು. 1947ರಲ್ಲಿ ಭಾರತ ವಿಭಜನೆಯಿಂದಾಗಿ ಇವರ ಅಣ್ಣ ನಿರಾಶ್ರಿತರಾಗಿ ತಮ್ಮ ದೊಡ್ಡ ಕುಟುಂಬದೊಡನೆ ಭಾರತಕ್ಕೆ ಬಂದರು. ಸತೀಶ ಚಂದ್ರರು ನಿರಾಶರಾಗಿದ್ದರು. ಅವರ ಆರೋಗ್ಯ ಕೆಟ್ಟಿತ್ತು. ಆದರೂ ಅಣ್ಣನ ನೆರವಿಗೆ ಇವರು ನಿಂತರು. ಅವರಿಗೆ ಅಲ್ಪ ರಾಜಕೀಯ ಪಿಂಚಣಿ ದೊರಕಿತು. 1968ರಲ್ಲಿ ಸತೀಶ ಚಂದ್ರರು ತೀರಿಕೊಂಡರು.

ಸತೀಶ ಚಂದ್ರರು ಓದು ಮುಗಿಸಿ ಸರ್ಕಾರಿ ನೌಕರಿಯ ಸುಖಜೀವನದ ಹಾದಿ ಹಿಡಿಯದೆ ತಾಯಿನಾಡಿನ ಸೇವೆಗೆ ನಿಂತು, ಕ್ರಾಂತಿಕಾರಿಯಾಗಿ, ಕಾಂಗ್ರೆಸಿಗರಾಗಿ ನಿಷ್ಠೆಯಿಂದ ದುಡಿದರು. ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಮಾನಸಿಕವಾಗಿ, ದೈಹಿಕವಾಗಿ ಅನೇಕ ತೊಂದರೆಗಳನ್ನು ಸಹಿಸಿದ ಇವರು ಯಾವ ಸ್ಥಾನಮಾನಗಳನ್ನೂ ಹೊಗಳಿಕೆಯನ್ನೂ ಬಯಸಲಿಲ್ಲ. ಇವರ ಇಡೀ ಜೀವನ ತ್ಯಾಗಮಯವಾದ್ದು. *

**ಚಕ್ರೀಯ ಚಾಂಚಲ್ಯ :** ಕಾಲಶ್ರೇಣಿಯನ್ನು ಸಾಂಪ್ರದಾಯಿಕವಾಗಿ ವಿಶ್ಲೇಷಿಸಿದಾಗ ಪರಿಗಣನೆಗೆ ಬರುವ ಅದರ ಒಂದು ಘಟಕ (ಸೈಕ್ಲಿಕ್ ಫ್ಲಕ್ಚುಯೇಷನ್). ಈ ವಿಶ್ಲೇಷಣೆಯಲ್ಲಿ ಉಳಿದ ಪ್ರಮುಖ ಘಟಕಗಳೆಂದರೆ ದೀರ್ಘಕಾಲಿಕ ಪ್ರವೃತ್ತಿ (ಸೆಕ್ಯುಲರ್ ಟ್ರೆಂಡ್), ಕಾಲಿಕ ಬದಲಾವಣೆ (ಸೀಸನಲ್ ವೇರಿಯೇಷನ್) ಮತ್ತು ಯಾದೃಚ್ಛಿಕ ಚಾಂಚಲ್ಯ (ರ್‍ಯಾಂಡಮ್ ಫ್ಲಕ್ಚುಯೇಷನ್). ಕಾಲಶ್ರೇಣಿಯಿಂದ ದೀರ್ಘಕಾಲಿಕ ಪ್ರವೃತ್ತಿ ಮತ್ತು ಯಾದೃಚ್ಛಿಕ ಚಾಂಚಲ್ಯಗಳನ್ನು ಪ್ರತ್ಯೇಕಿಸಿದ ಬಳಿಕ ಉಳಿಯುವ ಅಂಶವಾದ ಚಕ್ರೀಯ ಚಾಂಚಲ್ಯ ಮತ್ತು ಯಾದೃಚ್ಛಿಕ ಚಾಂಚಲ್ಯಗಳ ಸಂಯೋಗವನ್ನು ಇಲ್ಲಿ ವಿಮರ್ಶಿಸಲಾಗುವುದು. ಇದು ಸ್ಥಾಯಿ ಅಥವಾ ಸಂಚಾರಿ(ಸ್ಟೇಷನರಿ ಆರ್ ನಾನ್‌ಸ್ಟೇಷನರಿ) ಸಾಂಭವಿಕ ಪ್ರಕ್ರಿಯಾಶ್ರೇಣಿ (ಸ್ಟೊಕೇಸ್ಟಿಕ್ ಪ್ರೋಸೆಸ್) ಆಗಿರಬಹುದು. ಪ್ರಕೃತ ಸ್ಥಾಯಿ ಪ್ರಕ್ರಿಯಾಶ್ರೇಣಿಯ ಅಧ್ಯಯನ ತೀರ ಈಚಿನದಾಗಿದ್ದು ಅದರ ವಿಮರ್ಶೆ ಇನ್ನೂ ಸ್ಥಿರರೂಪವನ್ನು ಪಡೆಯಬೇಕಾಗಿದೆ. ಶಿಖರ (ಪೀಕ್), ಇಳಿಕೆ (ಡಿಕ್ಲೈನ್), ತಳ (ಟ್ರಫ್) ಮತ್ತು ಪುನರೇರಿಕೆ (ರಿಕವರಿ)–ಈ ನಾಲ್ಕು ಭಾವಗಳನ್ನು ಅನುಕ್ರಮವಾಗಿ ಹೊಂದುತ್ತ ಹೋಗುವುದೇ ಆರ್ಥಿಕ ಕಾಲಶ್ರೇಣಿಯಲ್ಲಿ

ಚಕ್ರೀಯ ಚಾಂಚಲ್ಯವನ್ನು ಗುರುತಿಸುವುದಕ್ಕೆ ಇರುವ ಸುಲಭೋಪಾಯ. ಈ ಚಕ್ರೀಯ ಚಾಂಚಲ್ಯ ಪ್ರಕೃತಿಸಹಜವಾದ ಕಾಲಿಕ ಚಾಂಚಲ್ಯಕ್ಕಿಂತ ಭಿನ್ನವಾಗಿದೆ ಎಂಬುದು ಗಮನಾರ್ಹ. ಒಂದು ತಂಪು ಪಾನೀಯ ಮಾರಾಟ ಸಂಸ್ಥೆಯ ವ್ಯಾಪಾರ ಮಳೆಬಿಸಿಲುಗಳಿಗೆ ಅನುಗುಣವಾಗಿ ವಿವಿಧ ತಿಂಗಳುಗಳಲ್ಲಿ ಬದಲಾಗುವ ಪ್ರವೃತ್ತಿ ವರ್ಷದಿಂದ ವರ್ಷಕ್ಕೆ ಒಟ್ಟಿನಲ್ಲಿ ಒಂದೇ ರೀತಿಯಲ್ಲಿರುತ್ತದೆ. ಇದು ಕಾಲಿಕ ಚಾಂಚಲ್ಯದ ಒಂದು ನಿದರ್ಶನ. ಚಕ್ರೀಯ ಚಾಂಚಲ್ಯದ ಆವರ್ತಾವಧಿ ಸಾಮಾನ್ಯವಾಗಿ ಒಂದು ವರ್ಷಕ್ಕಿಂತ ಹೆಚ್ಚಿನದಾಗಿರುತ್ತದೆ. ಆರ್ಥಿಕ ಕಾಲಶ್ರೇಣಿಗಳಲ್ಲಿ 3,7,21, 50 ಮತ್ತು ಇನ್ನೂ ಹೆಚ್ಚು ವರ್ಷಗಳ ಆವರ್ತಾವಧಿಗಳುಳ್ಳ ಚಕ್ರೀಯ ಚಾಂಚಲ್ಯಗಳನ್ನು ಗುರುತಿಸಲಾಗಿದೆ.

xt ಯು t ಕಾಲಬಿಂದುವಿನಲ್ಲಿ ಸಂಭವಚರ $x$ ನ ಬೆಲೆಯಾಗಿರಲಿ. t ಯ ಅನುಕ್ರಮ ಬೆಲೆಗಳಾದ ……., -2, -1, 0, 1, 2….. ಗಳಿಗೆ $x$ ಪಡೆಯುವ ಬೆಲೆಗಳ ಗಣ {xt} = }……, x-2, x -1, x0, x1, x2……} ಒಂದು ಕಾಲಶ್ರೇಣಿಯೆಂದು ಹೇಳಿದಂತಾಯಿತು. ಈ $x$ t ಯನ್ನು ಚಕ್ರೀಯ ಘಟಕವಾದ $y$t ಮತ್ತು ಯಾದೃಚ್ಛಿಕ ಘಟಕವಾದ et ಗಳ ಮೊತ್ತವೆಂದು ಭಾವಿಸಿಕೊಳ್ಳುತ್ತೇವೆ. (ಪ್ರತಿಯೊಂದು t ಬೆಲೆಯಲ್ಲೂ ಶ್ರಾಯಕ ಮತ್ತು ದೀರ್ಘಕಾಲ ಪ್ರವೃತ್ತಿಯ ಘಟಕಗಳನ್ನು ಕಾಲಶ್ರೇಣಿಯಿಂದ ಪ್ರತ್ಯೇಕಿಸಿದ ತರುವಾಯ ಉಳಿಯುವ ಭಾಗವೇ ಮೇಲಿನ xt ಎಂಬುದನ್ನು ಗಮನಿಸಬೇಕು). $y$t ಯ ಲಕ್ಷಣವೆಂದರೆ ಅದು ಚಕ್ರೀಯವಾಗಿ ಪುನರಾವರ್ತಿಸುವುದು–ಅಂದರೆ ಆವರ್ತನಾವಧಿ r ಎಂದು ಭಾವಿಸಿದರೆ

yt = yt + r, t = …… -2, -1, 0, 1, 2,…………..

ಅದೇ et ಗಳಾದರೆ ಅವುಗಳಿಗೆ ಈ ಆವರ್ತಗುಣ ಇರುವುದಿಲ್ಲ ; ಬದಲಾಗಿ ಅವು ಸಂಭವಚರಗಳಾಗಿರುತ್ತವೆ. ಸಾಧಾರಣವಾಗಿ ಕಾಲಶ್ರೇಣಿಯ ವಿಶ್ಲೇಷಣೆಯಲ್ಲಿ ಈ etಗಳು ಪರಸ್ಪರ ಸ್ವತಂತ್ರವಾಗಿದ್ದು ಪ್ರಸಾಮಾನ್ಯ ಸಂಭಾವ್ಯತಾವಿತರಣೆಯನ್ನು (ನಾರ್ಮಲ್ ಪ್ರಾಬಬಿಲಿಟಿ ಡಿಸ್ಟ್ರಿಬ್ಯೂಷನ್) ಅನುಸರಿಸುವುದೆಂದು ಭಾವಿಸುವುದು ರೂಢಿ. ದತ್ತಾಂಶಗಳಿಂದ ಅರಿತ ಅನುಭವಜನ್ಯ (ಎಂಪಿರಿಕಲ್) ಚಕ್ರೀಯ ಚಾಂಚಲ್ಯವನ್ನು ವಿವರಿಸಲು ಸೈದ್ಧಾಂತಿಕ ಗಣಿತ ಪ್ರತಿರೂಪಗಳನ್ನು (ಮಾಡಲ್ಸ್) ಕಟ್ಟಬೇಕಾಗುತ್ತದೆ. ಪ್ರಕೃತದಲ್ಲಿ ಅಂಥ ಎರಡು ಪ್ರತಿರೂಪಗಳನ್ನು ಮಾತ್ರ ಪರಿಶೀಲಿಸುತ್ತೇವೆ. ಇವು ಸ್ವಯಂಸಹಸಂಬಂಧ ವಿಶ್ಲೇಷಣೆ (ಆಟೊಕಾರಿಲೇಷನ್ ಅನಾಲಿಸಿಸ್) ಮತ್ತು ಆವರ್ತರೇಖಾ (ಪೀರಿಯಡೋಗ್ರಾಮ್) ವಿಶ್ಲೇಷಣೆ. ರೇಖೀಯ ಸಹಸಂಬಂಧ ಗುಣಾಂಕದ ಎರಡು ಸಂಭವಚರಗಳ ರೇಖೀಯ ಅನುಬಂಧ ಪ್ರಮಾಣವನ್ನು ಸೂಚಿಸುತ್ತದೆಂಬುದು ತಿಳಿದ ಸಂಗತಿಯೇ ; ಆದ್ದರಿಂದ 2T+1 ಆವರ್ತಾವಧಿಯ ಒಂದು ಕಾಲಶ್ರೇಣಿಯ ಅನುಕ್ರಮ ಪದಗಳನ್ನು ಒಂದು ನಿರ್ದಿಷ್ಟವಾದ ಪದಾಂತರದಿಂದ (ಗಿವನ್ ಲ್ಯಾಗ್) ಪಲ್ಲಟಿಸಿ ಇನ್ನೊಂದು ಶ್ರೇಣಿಯನ್ನು ಪಡೆದರೆ ಪದಾಂತರ 2T + 1 ಅಥವಾ ಅದರ ಪೂರ್ಣಾಂಕ ಗುಣಕವಾದಾಗ ಇವೆರಡೂ ಶ್ರೇಣಿಗಳೂ ಒಂದೇ ಆಗಬೇಕೆಂಬುದು ಸಹಜ. ಇವು ನಿಯತ ಶ್ರೇಣಿಗಳಲ್ಲದೆ ಯಾದೃಚ್ಛಿಕ ಶ್ರೇಣಿಗಳಾದಲ್ಲಿ ಇವುಗಳ ನಿರೀಕ್ಷಿತ ಬೆಲೆಗಳಿಗೆ (ಎಕ್ಸ್‌ಪೆಕ್ಟೇಷನ್ಸ್) ಮೇಲೆ ಹೇಳಿದ ಗುಣ ಇರುವುದು. ಆದ್ದರಿಂದ ಈ ರೀತಿ ವಿವಿಧ ಪದಾಂತರಗಳಲ್ಲಿ ಪಲ್ಲಟಗೊಂಡ ಶ್ರೇಣಿಗಳ ಸಹಸಂಬಂಧ ಗುಣಾಂಕವನ್ನು ಗುಣಿಸಿದರೆ ಈ ಪದಾಂತರ 2T + 1 ಅಥವಾ ಅದರ ಪೂರ್ಣ ಗುಣಕವಾದಾಗ ಸಹ–ಸಂಬಂಧ 1 ಆಗಬೇಕೆಂಬುದು ಸ್ಪಷ್ಟ. ಅರ್ಥಾತ್ $y$t = $y$t + r ಆಗುವಂತೆ {$y$t} ಎಂಬ ಶ್ರೇಣಿಯಲ್ಲಿನ ಪದಗಳಿಗೂ {$y$t} ಶ್ರೇಣಿಯ ಪದಗಳಿಗೂ ಇರುವ ಸಹಸಂಬಂಧವನ್ನು ρr ಎಂದು ಕರೆದರೆ r = (2T +1)k (ಇಲ್ಲಿ k ಪೂರ್ಣಾಂಕ) ಆದಾಗ ρr = **1** ಆಗಲೇಬೇಕು. ಆದ್ದರಿಂದ ದತ್ತಶ್ರೇಣಿಯನ್ನು ವಿವಿಧ ಪದಾಂತರಗಳಲ್ಲಿ ಪಲ್ಲಟಿಸಿ ಪಡೆದ ವಿವಿಧ ρr ಗಳನ್ನು ಒಂದು ನಕ್ಷೆಯಲ್ಲಿ ಗುರುತಿಸಿದರೆ rನ ಯಾವ ಬೆಲೆಗೆ ρr ಸರಿಸುಮಾರು 1 ಆಗುತ್ತದೋ ಅದನ್ನು y ಶ್ರೇಣಿಯ ಆವರ್ತಾವಧಿ ಎಂದು ಅನುಮಾನಿಸಬಹುದು.

ಈಗ ಆವರ್ತರೇಖಾ ವಿಶ್ಲೇಷಣೆಯಿಂದ ಶ್ರೇಣಿಯ ಆವರ್ತತೆಯನ್ನು ಪರಶೀಲಿಸುವ ವಿಧಾನವನ್ನು ಗಮನಿಸೋಣ. ನಮ್ಮ Yt ಶ್ರೇಣಿ λ ಆವರ್ತತೆಯ n ಪದಗಳುಳ್ಳ ಸಾಂತ ಶ್ರೇಣಿಯೆಂದು ಭಾವಿಸೋಣ. ಅರ್ಥಾತ್ $ut = a \sin \frac{2\pi t}{A}$ ಆಗಿರಲಿ.

ಈಗ $A = \frac{2}{n} \sum_{t=1}^{n} u_t \cos \frac{2\pi t}{\mu}$ ಮತ್ತು

$$B = \frac{2}{n} \sum_{t=1}^{n} u_t \sin \frac{2\pi t}{\mu}$$

ಆಗಿದ್ದರೆ ಆಗ $A^2(\mu) + B^2(\mu) = R^2(\mu)$ ವನ್ನು ತೀವ್ರತೆ (ಇನ್‌ಟೆನ್ಸಿಟಿ) ಎಂದು ಕರೆಯುತ್ತೇವೆ. μ ವು λವನ್ನು ಸಮೀಪಿಸಿದಂತೆ $R^2$ ವು $a^2$ ವನ್ನು ಸಮೀಪಿಸುತ್ತವೆ. ಹಾಗೆಯೇ(μ) ವು λದಿಂದ ದೂರವಾದರೆ $R^2$ ದ ಬೆಲೆ $a^2$ಗೆ ಹೋಲಿಸಿದರೆ ಬಹಳ ಚಿಕ್ಕದಾಗಿರುತ್ತದೆ. ಆದ್ದರಿಂದ yt ಶ್ರೇಣಿಯ ಆವರ್ತಾವಧಿ λವನ್ನು ಕಂಡುಹಿಡಿಯಲು ವಿವಿಧ ಬೆಲೆಗಳಿಗೆ $R^2(\mu)$ ವನ್ನು ಲೆಕ್ಕಿಸಿ ಅದರ ಹೆಚ್ಚಿನ ಬೆಲೆ ಯಾವ (μ) ಗೆ ದೊರಕುತ್ತದೋ ಆ μಬೆಲೆಯೇ yt ಯ ಆವರ್ತಾವಧಿ ಎಂಬುದನ್ನು ಗಮನಿಸುವುದು ಮತ್ತೊಂದು ಮಾರ್ಗ.

ಮೇಲೆ ಗಮನಿಸಿದಂತೆ ಕಾಲಶ್ರೇಣಿಯನ್ನು ದೀರ್ಘಕಾಲ ಪ್ರವೃತ್ತಿ, ಶ್ರಾಯಕ ಚಲನೆ, ಚಕ್ರೀಯ ಚಾಂಚಲ್ಯ ಇತ್ಯಾದಿಯಾಗಿ ವಿಶ್ಲೇಷಿಸುವುದು ಆರ್ಥಿಕ ಕಾಲಶ್ರೇಣಿಯಲ್ಲಿ ಕಂಡುಬರುವ ಸಂಪ್ರದಾಯ. ಆದರೆ ಈ ಪರಿಕಲ್ಪನೆಗಳಿಗೆ ಅರ್ಥಶಾಸ್ತ್ರೀಯ ಆಧಾರ ಇರಬಹುದೇ ವಿನಾ ಗಣಿತರೀತ್ಯಾ ಇವನ್ನು ಪ್ರತ್ಯೇಕಿಸಿ ನೋಡುವ ಅಗತ್ಯ ಕಂಡುಬರುವುದಿಲ್ಲ. ಉದಾಹರಣೆಗೆ ಸ್ವಯಂಸಮಾಶ್ರಯಣ (ಆಟೋರಿಗ್ರೆಸಿವ್) ಪ್ರತಿರೂಪಗಳನ್ನು ಬಳಸಿ ಅವುಗಳಿಂದ ಬರುವ ವಿಕಲನ ಸಮೀಕರಣಗಳ ಮೂಲಕ ವಿಶ್ಲೇಷಿಸಿದರೆ ಒಂದು ಶ್ರೇಣಿಯಲ್ಲಿ ಇರಬಹುದಾದ ದೀರ್ಘಕಾಲಿಕ ಮತ್ತು ಚಕ್ರೀಯ ಪ್ರವೃತ್ತಿಗಳೂ ಹೊರಕಾಣಿಸುತ್ತವೆ.

(ಟಿ.ಎನ್.ಆರ್.)

**ಚಗಚೆ :** ಲೆಗ್ಯೂಮಿನೇಸೀ ಕುಟುಂಬದ ಸೀಸಾಲ್‌ಪಿನೀ ಉಪಕುಟುಂಬಕ್ಕೆ ಸೇರಿದ ಒಂದು ಏಕವಾರ್ಷಿಕ ಮೂಲಿಕೆಗಿಡ. ಭಾರತದಾದ್ಯಂತ ಒಂದು ಕಳೆಗಿಡವಾಗಿ ಬೆಳೆಯುತ್ತದೆ. ಕ್ಯಾಸಿಯ ಟೋರ ಇದರ ಶಾಸ್ತ್ರೀಯ ಹೆಸರು. ಗಂಡು ತಗಚೆ, ತರಗಸಿ, ಚಗತೆ ಪರ್ಯಾಯ ನಾಮಗಳು. ಭಾರತದ ಬಯಲುಸೀಮೆಗಳಲ್ಲಿ, ರಸ್ತೆಬದಿಗಳಲ್ಲಿ, ಪಾಳುಬಿದ್ದ ಸ್ಥಳಗಳಲ್ಲಿ, ಕಾಡಿನಲ್ಲಿ ಕುರುಚಲಾಗಿ ಬೆಳೆಯುವ ಪುಟ್ಟ ಗಿಡ ಇದು. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ ; ಅವು ಸಂಯುಕ್ತ ಬಗೆಯವು. ಒಂದೊಂದು ಎಲೆಗಳ ಕಕ್ಷದಲ್ಲಿ ಜೊತೆಜೊತೆಯಾಗಿ ಅರಳುತ್ತವೆ. ಇವುಗಳ ಬಣ್ಣ ಹಳದಿ. ಫಲ ಪಾಡ್ ಬಗೆಯದು ಇವುಗಳ ಉದ್ದ ಸುಮಾರು 6"–9". ಚಪ್ಪಟೆಯಾದ ಹಾಗೂ ಕಪ್ಪುಬಣ್ಣದ ಬೀಜಗಳಿವೆ.

ಬೀಜಗಳಿಂದ ಒಂದು ಬಗೆಯ ನೀಲಿಬಣ್ಣವನ್ನು ಪಡೆಯುವುದಿದೆ. ಬೀಜಗಳನ್ನು ಕಾಫಿ ಬೀಜದ ಬದಲಾಗಿ ಉಪಯೋಗಿಸುವುದುಂಟು. ಅಧಿಕ ಮೊತ್ತದ ಪ್ರೋಟೀನ್ ಇರುವುದರಿಂದ ಬೀಜಗಳನ್ನು ದನಕರುಗಳ ಮೇವಾಗಿ ಬಳಸಬಹುದು. ಚಗಚೆಯ ಎಲೆಗಳ ರಸವನ್ನು ಹುಳಿಮಜ್ಜಿಗೆ, ನಿಂಬೆರಸ, ಕಳ್ಳಿಗಿಡದ ರಸ, ಗಂಜಲ, ಗರಗಲು ಗಿಡದ ರಸದೊಂದಿಗೆ ಸೇರಿಸಿ ಗಜಕರ್ಣ, ತುರಿ ಮುಂತಾದ ಚರ್ಮರೋಗಗಳ ಚಿಕಿತ್ಸೆಗೆ ಬಳಸಲಾಗುತ್ತದೆ. ಚಗಚೆ ಕುಡಿಯ ತಂಬುಳಿ ಹಲವಾರು ಬಗೆಯ ಉದರರೋಗಗಳಿಗೆ ಒಳ್ಳೆಯ ಮದ್ದು.

(ಎಸ್.ಐ.ಎಸ್.)

**ಚಚನಾಮಾ :** ಚಾರಿತ್ರಿಕ ಅರಬ್ಬೀಗ್ರಂಥ. ಇದರ ಲೇಖಕ ಯಾರೆಂದು ತಿಳಿದಿಲ್ಲ. ಪೂರ್ಣ ಹೆಸರು ಚಚನಾಮಾ ಫತೇಹನಾಮಾ–ಇ–ಸಿಂಧ್. ಸಿಂಧ್ ಪ್ರದೇಶದ ಅಲೋರ ಪಟ್ಟಣದಲ್ಲಿ ನೆಲೆಸಿದ್ದ ಸಕಿಫೀ ಪಂಗಡದ ಕಾಜೀ ಮನೆತನದವನೊಬ್ಬ ಇದನ್ನು ರಚಿಸಿದನೆಂದು ಹೇಳಲಾಗುತ್ತದೆ. ಇದನ್ನು ಆ ಮನೆತನದವರು ಬಹು ಜೋಪಾನದಿಂದ ಕಾಪಾಡಿಕೊಂಡು ಬಂದರು. 1216ರಲ್ಲಿ ಮಹಮ್ಮದ್ ಆಲಿ ಇಬ್ನ್ ಹಮೀದ್ ಇಬ್ನ್ ಅಬೂ ಬಕ್ರ್ ಕೂಫೀ ಎಂಬಾತ ಈ ಗ್ರಂಥವನ್ನು ಪರ್ಷಿಯನ್ ಭಾಷೆಗೆ ಅನುವಾದಿಸಿದ. 1900ರಲ್ಲಿ ಕರಾಚಿಯ ಮಿರ್ಝಾ ಕಲೀಚ್ ಬೇಗ್ ಫ್ರೆದೂನ ಬೇಗ್ ಎಂಬುವನು ಇದರ ಇಂಗ್ಲಿಷ್ ಭಾಷಾಂತರವನ್ನು ಪ್ರಕಟಿಸಿದ. ಅರಬರು ಸಿಂಧು ರಾಜ್ಯವನ್ನು ಆಕ್ರಮಿಸಿದ ಇತಿಹಾಸವನ್ನು ರಮೇಶಚಂದ್ರ ಮಜುಮದಾರರು ಚಚನಾಮಾ ಮತ್ತು ಇತರ ಅರಬ್ಬೀ ಗ್ರಂಥಗಳ ಆಧಾರದಿಂದ ಸಿದ್ಧಪಡಿಸಿ ಪ್ರಕಟಿಸಿದ್ದಾರೆ.

7ನೆಯ ಶತಮಾನದಲ್ಲಿ ಸಿಂಧು ರಾಜ್ಯವನ್ನು ಆಳಿದ ಚಚರಾಜನ ಮತ್ತು ಅವನ ಮಗ ದಾಹರನ ಕಾಲದಲ್ಲಿ ಅರಬರು ಸಿಂಧು ರಾಜ್ಯವನ್ನು ಆಕ್ರಮಿಸಿಕೊಂಡ ಘಟನೆಯ ವಿವರ ಚಚನಾಮದಲ್ಲಿ ಸಿಗುತ್ತದೆ. ಈ ಘಟನೆಯ ಉಲ್ಲೇಖ ಇನ್ನೂ ಕೆಲವು ಅರಬ್ಬೀ ಗ್ರಂಥಗಳಲ್ಲಿ ದೊರೆಯುತ್ತದೆ. ಆದರೆ ಚಚನಾಮದಲ್ಲಿ ಮಾತ್ರ ಈ ಘಟನೆಯ ಎಲ್ಲ ವಿವರಗಳೂ ವರ್ಣಿತವಾಗಿವೆ. ಆದ್ದರಿಂದ ಭಾರತೀಯ ಇತಿಹಾಸದ ಆಕರಗ್ರಂಥಗಳಲ್ಲಿ ಚಚನಾಮಾಕ್ಕೆ ಮಹತ್ತ್ವದ ಸ್ಥಾನವಿದೆ.

ಸು. 6ನೆಯ ಶತಮಾನದಲ್ಲಿ ಸಿಂಧು ರಾಜ್ಯವನ್ನು ರಾಹಿರಾಸ ಎಂಬುವನು ಆಳುತ್ತಿದ್ದ. ಅವನ ಅನಂತರ ಚಚ ಎಂಬ ಬ್ರಾಹ್ಮಣನು ಪಟ್ಟವನ್ನು ಆಕ್ರಮಿಸಿದ. ಚಚನ ಅನಂತರ ಆತನ ಮಗ ದಾಹರ ಪಟ್ಟಕ್ಕೆ ಬಂದ. ದಾಹರನ ಕಾಲದಲ್ಲಿ ಅರಬರಿಂದಾದ ಧಾಳಿ

ಅನಿರೀಕ್ಷಿತವಾದುದಾಗಲಿ ಮೊದಲನೆಯದಾಗಲಿ ಆಗಿರಲಿಲ್ಲ. ಅರಬರು ಸಿಂಧು ರಾಜ್ಯಕ್ಕೆ ಮೊದಲ ಬಾರಿಗೆ ದಾಳಿಯಿಟ್ಟದ್ದು 643ರ ಸುಮಾರಿಗೆ. ಆಗ ಸಿಂಧು ನದಿಯ ಮುಖದಲ್ಲಿದ್ದ ದೇಬಲ ಬಂದರಿಗೆ ಅವರು ತಮ್ಮ ನೌಕಾಬಲದಿಂದ ಮುತ್ತಿಗೆ ಹಾಕಿದರು. ಅಲ್ಲಿಯ ಪ್ರಾಂತ್ಯಾಧಿಕಾರಿ ಅರಬರನ್ನು ಪೂರ್ಣವಾಗಿ ಸೋಲಿಸಿದ. ಈ ಯುದ್ಧದಲ್ಲಿ ಅರಬರ ಸೇನಾಪತಿ ಮಡಿದ. ಮುಂದೆ 660ರ ಸುಮಾರಿಗೆ ಅರಬರು ಪುನಃ ಭೂಮಾರ್ಗವಾಗಿ ಬಂದು ಸಿಂಧು ರಾಜ್ಯದ ಕೀಕಾನ ಭಾಗಕ್ಕೆ ಧಾಳಿಯಿಟ್ಟರು. ಆ ಸಲವೂ ಅವರು ತಮ್ಮ ಸೇನಾನಿಯನ್ನು ಬಲಿಕೊಟ್ಟರಲ್ಲದೆ ತೀವ್ರವಾದ ಸೋಲನ್ನು ಅನುಭವಿಸಬೇಕಾಯಿತು. ಮುಂದೆ 20 ವರ್ಷಗಳಲ್ಲಿ ಅರಬರು ಆರು ಬಾರಿ ಸಿಂಧು ರಾಜ್ಯದ ಗಡಿಗಳಿಗೆ ಧಾಳಿಯಿಟ್ಟರು. ಪ್ರತಿಸಲವೂ ಅವರಿಗೆ ಸೋಲೇ ಮೀಸಲಾಗಿತ್ತು. ಇದರಿಂದ ನಿರಾಶೆಗೊಂಡ ಅರಬರು ಆ ಯತ್ನವನ್ನೇ ಬಿಟ್ಟುಬಿಟ್ಟರು.

ಸು. 708ರಲ್ಲಿ ಶ್ರೀಲಂಕದಿಂದ ಇರಾಕಿಗೆ ಹೊರಟಿದ್ದ ಒಂದು ಹಡಗನ್ನು ಕಡಲುಗಳ್ಳರು ದೇಬಲದ ಹತ್ತಿರ ಹಿಡಿದುಕೊಂಡು, ಅದರಲ್ಲಿಯ ಮುಸಲ್ಮಾನ ಸ್ತ್ರೀಯರನ್ನು ಬಂಧಿಸಿದರು. ಬಂಧಿತ ಸ್ತ್ರೀಯರನ್ನು ಕೂಡಲೇ ಬಿಡುಗಡೆ ಮಾಡಲು ಇರಾಕಿನ ಪ್ರಾಂತ್ಯಾಧಿಕಾರಿಯಾಗಿದ್ದ ಹಜ್ಜಾಜ್ ದಾಹರನಿಗೆ ಪತ್ರ ಬರೆದ. ಕಡಲುಗಳ್ಳರು ತನ್ನ ಅಧೀನರಲ್ಲವೆಂದು ದಾಹರ ಉತ್ತರಿಸಿದ. ಸಿಂಧು ರಾಜ್ಯಕ್ಕೆ ಧಾಳಿಯಿಡಲು ಹಜ್ಜಾಜನಿಗೆ ಹೊಸದೊಂದು ನೆವ ಸಿಕ್ಕಿತು. ಕಲೀಫನ ಅನುಮತಿ ಪಡೆದು ಅವನು ಅದರ ಧಾಳಿಗೆ ತನ್ನ ಸೈನ್ಯವನ್ನಟ್ಟಿದ.

ಎರಡು ಸಲ ವ್ಯರ್ಥ ಪ್ರಯತ್ನ ಮಾಡಿದ ಬಳಿಕ ಮೂರನೆಯ ಬಾರಿಗೆ ತನ್ನ ಅಳಿಯ ಖ್ಯಾತ ಸೇನಾಪತಿ ಮಹಮ್ಮದ್ ಇಬ್ನ್ ಕಾಸಿಮನನ್ನು ಅಲ್ಲಿಗೆ ಕಳಿಸಿದ. ಈತ ದಾಹರನನ್ನು ಎದುರಿಸಿದಾಗ ದಾಹರನ ಸೈನ್ಯ ರಭಸದಿಂದ ಹೋರಾಡಿತು. ಚಚನಾಮಾದ ಶಬ್ದಗಳಲ್ಲಿ ಹೇಳುವುದಾದರೆ, ಕಾಫಿರರು ಒಳ್ಳೇ ನಿಕರದಿಂದ ಅರಬರ ಮೇಲೆ ಎತಗಿದರು. ಅವರ ರಭಸಕ್ಕೆ ಮುಸ್ಲಿಮ್ ಸೈನಿಕರು ಕಂಗೆಟ್ಟರು. ಅವರ ಸೈನ್ಯರಚನೆಯೆಲ್ಲ ಮುರಿದುಬಿದ್ದು ದೊಡ್ಡ ಗೊಂದಲವುಂಟಾಯಿತು. ಆದರೂ ಆಕಸ್ಮಿಕವಾಗಿ ಬಾಣವೊಂದು ನೆಟ್ಟು ದಾಹರ ಯುದ್ಧರಂಗದಲ್ಲಿ ಮಡಿದ. ಇದರಿಂದ ಅರಬರಿಗೆ ಜಯ ಲಭಿಸಿತು. ಮುಂದೆ ಮುಹಮ್ಮದ್ ಬ್ರಾಹ್ಮಣಾಬಾದ್ ಮತ್ತು ಅಲೋರಗಳನ್ನು ಕೈವಶಮಾಡಿಕೊಂಡ. ಅಲ್ಲಿಯ ಪ್ರಜೆಗಳು ಮತ್ತು ಸೈನಿಕರು ಅವನ್ನು ನಿಕರದಿಂದ ಎದುರಿಸಿದರು. ಆದರೆ ಅನೇಕ ಸಿಂಧೀಯರು ಅವನನ್ನು ಕೂಡಿಕೊಂಡದ್ದರಿಂದ ಅವನ ಮುಂದಿನ ಧಾಳಿಗಳೆಲ್ಲ ಸುಲಭವೇ ಆದುವು. ಈ ರೀತಿಯಲ್ಲಿ ಅರಬರು ಸಿಂಧು ರಾಜ್ಯವನ್ನು ಆಕ್ರಮಿಸಿಕೊಂಡು ಭಾರತದಲ್ಲಿ ಮುಸಲ್ಮಾನರು ನೆಲೆಸಲು ಒಳ್ಳೆಯ ಅವಕಾಶ ಕಲ್ಪಿಸಿದರು. ಇದಿಷ್ಟು ಚಚನಾಮಾದಿಂದ ಆಯ್ದ ಚರಿತ್ರೆಯ ಅಂಶ.

ಮುಸಲ್ಮಾನರು ಮೇಲಿಂದ ಮೇಲೆ ಸಿಂಧು ರಾಜ್ಯದ ಮೆಲೆ ಧಾಳಿಯಿಡಲು ಪ್ರಯತ್ನಿಸಿ ಸೋತದ್ದನ್ನೂ ಅವರಿಗೆ ಕೊನೆಗೆ ಅನಿರೀಕ್ಷಿತವಾಗಿ ಜಯ ದೊರೆತದ್ದನ್ನೂ ಅವರು ಸಿಂಧು ರಾಜ್ಯದಲ್ಲಿ ನಿರ್ದಯೆಯಿಂದ ಮಾಡಿದ ಅನೇಕ ಅತ್ಯಾಚಾರಗಳನ್ನೂ ಚಚನಾಮಾ ಗ್ರಂಥದಲ್ಲಿ ನಿಷ್ಪಕ್ಷಪಾತವಾಗಿ ಬಣ್ಣಿಸಿರುವುದು ಒಂದು ವಿಶೇಷ. ಅದನ್ನು ಬರೆದಂಥ ಸತ್ಯನಿಷ್ಠ ಲೇಖಕರು ದುರ್ಲಭ. (ಸಿ.)

**ಚಟ :** ಯಾವುದಾದರು ವ್ಯಸನಕ್ಕೊಳಪಡುವುದಕ್ಕೆ ಚಟ ಎಂದು ಹೇಳುವುದು ವಾಡಿಕೆ. ಉದಾ : ಸಿಗರೇಟಿನ ಚಟ, ಹೆಣ್ಣಿನ ಚಟ ಇತ್ಯಾದಿ. ಪಾರಿಭಾಷಿಕ ಅರ್ಥದಲ್ಲಿ, ವಿಧಿವತ್ತಾಗಿ, ಮಾಡಿದ್ದನ್ನೇ ಮಾಡಬೇಕೆಂಬ ಒಂದು ಬಗೆಯ ಕಾರ್ಯಒತ್ತಡವೇ ಚಟ (ಕಂಪಲ್ಷನ್). ಚಟಗಳು ವಿಲಕ್ಷಣವಾದ, ಅಸಂವೇದ್ಯವಾದ ರೀತಿನೀತಿಗಳನ್ನೂ ನಡೆವಳಿಕೆಗಳನ್ನೂ ಒಳಗೊಂಡಿರುತ್ತವೆ. ಪದೇ ಪದೇ ಕೈ ತೊಳೆದುಕೊಳ್ಳುವುದು, ರಸ್ತೆಯಲ್ಲಿ ಹೋಗುವಾಗ ಪ್ರತಿಯೊಂದು ವಿದ್ಯುತ್ ಕಂಬವನ್ನೂ ಮುಟ್ಟುವುದು ಅಥವಾ ರಸ್ತೆಯಲ್ಲಿ ಕಾಣುವ ಪ್ರತಿಯೊಂದು ಬೋರ್ಡನ್ನೂ ಓದುವುದು, ಯಾವುದೋ ಕಂಬವನ್ನು ಮುಟ್ಟದೆ ಅಥವಾ ಬೋರ್ಡನ್ನು ಓದದೆ ಮುಂದೆ ಹೋದರೆ ಪುನಃ ಹಿಂದಕ್ಕೆ ಬಂದು ಆ ಕಂಬವನ್ನು ಮುಟ್ಟಿ ಅಥವಾ ಬೋರ್ಡನ್ನು ಓದಿ ಮುಂದೆ ಹೋಗುವುದು; ಮೆಟ್ಟಿಲುಗಳನ್ನು ಏರುವಾಗಲೆಲ್ಲಾ ಅವುಗಳನ್ನು ಎಣಿಸುತ್ತಾ ಹೋಗುವುದು, ವಿಧಿವತ್ತಾಗಿ ಬಟ್ಟೆಯನ್ನು ತೊಡುವುದು ಮತ್ತು ಕಳಚುವುದು–ಈ ಮೊದಲಾದ ಉದ್ದೇಶರಹಿತ ಮತ್ತು ಅರ್ಥವಿಲ್ಲದ ನಡೆವಳಿಕೆಗಳು ಚಟದ ನಿದರ್ಶನಗಳಾಗಿವೆ. ಚಟಕ್ಕೆ ಬಲಿಯಾದ ವ್ಯಕ್ತಿ ತನ್ನ ನಡೆವಳಿಕೆ ಅಸಂಬದ್ಧ ಎಂಬುದನ್ನು ಸಂಪೂರ್ಣವಾಗಿ ಬಲ್ಲ. ಆದರೂ ಅವುಗಳಲ್ಲಿ ತೊಡಗದೆ ಇರಲಾರ. ಅವನ್ನು ಹತ್ತಿಕ್ಕುವಲ್ಲಿ ಆತ ಪೂರ್ಣ ಅಸಮರ್ಥನಾಗಿರುತ್ತಾನೆ. ಅವನ ನಡುವಳಿಕೆಗಳು ಅವನ ಇಚ್ಛೆಗೆ ವಿರುದ್ಧವಾಗಿಯೇ ಇರುತ್ತವೆ.

ಈ ಬಗೆಯ ನಡೆವಳಿಕೆಗಳು ಸಾಮಾನ್ಯರಲ್ಲಿ ತೋರಿಬಂದರೂ ಅವು ವಿಪರೀತಕ್ಕೆ ಹೋದಾಗ ಮನೋರೋಗದ ರೂಪವನ್ನು ತಾಳುತ್ತವೆ. ಚಟಗಳು ವ್ಯಕ್ತಿಯ ಕಾರ್ಯ ದಕ್ಷತೆಯನ್ನು ಕುಂಠಿತಗೊಳಿಸುತ್ತವೆ; ವಾಸ್ತವ ಪ್ರಪಂಚದೊಡನೆ ಅವನಿಗಿರಬೇಕಾದ ಹೊಂದಾಣಿಕೆಗೆ ಅಡ್ಡಿ ಬರುತ್ತವೆ. ಚಟಕ್ಕೆ ಬಲಿಯಾದ ವ್ಯಕ್ತಿ ಯಾವಾಗಲೂ ಉದ್ವಿಗ್ನನಾಗಿರುತ್ತಾನೆ. ಕೈ ತೊಳೆದುಕೊಳ್ಳುವ ಚಟಕ್ಕೆ ತುತ್ತಾದ ವ್ಯಕ್ತಿ ಯಾವಾಗಲೂ ಕೈ ತೊಳೆದುಕೊಳ್ಳಲು ಹಾತೊರೆಯುತ್ತಿರುತ್ತಾನೆ; ಯಾವುದೇ ಕಾರ್ಯದಲ್ಲಿ ಅವನು ನಿರತನಾಗಿದ್ದರೂ ಅವನ ಗಮನವೆಲ್ಲ ಕೈ ಚೊಕ್ಕಟ ಮಾಡಿಕೊಳ್ಳುವತ್ತಲೇ ಕೇಂದ್ರೀಕೃತವಾಗಿರುತ್ತದೆ. ಕೈತೊಳೆದುಕೊಂಡ ಗಳಿಗೆಯಲ್ಲಿ ಉದ್ವಿಗ್ನತೆಗೆ ತಾತ್ಕಾಲಿಕ ಬಿಡುಗಡೆ ದೊರೆತರೂ, ಮರುಕ್ಷಣದಲ್ಲಿಯೇ ಪುನಃ ಕೈತೊಳೆದುಕೊಳ್ಳುವ ಯೋಚನೆ ತಲೆಗೆ ಏರುತ್ತದೆ. ಹೀಗೆ ಕೊನೆಯೇ ಇಲ್ಲದ ಒತ್ತಡ ಜಾಲದಲ್ಲಿ ತೊಳಲಾಡುತ್ತಾನೆ. ಬೇರೆಲ್ಲ ವಿಚಾರಗಳೂ ಬದಿಗೆ ಸರಿದು ನಿಲ್ಲುತ್ತವೆ. ಅವನ ಶಕ್ತಿ ಮತ್ತು ಕಾಲಗಳೆರಡೂ ಈ ಚಟದಲ್ಲಿಯೇ ವ್ಯಯವಾಗಿ ಹೋಗುತ್ತವೆ.

ವಿಶಿಷ್ಟ ಬಗೆಯ ಸಮಾಜಘಾತುಕ ಚಟಗಳನ್ನು ಕೆಲವರು ಪ್ರದರ್ಶಿಸುತ್ತಾರೆ. ಇವುಗಳಿಗೆ ನಿದರ್ಶನವಾಗಿ ಕೆಲವರಲ್ಲಿ ಕಾಣಬರುವ ಕದಿಯುವ ಚಟ (ಕ್ಲೆಪ್ಟೊಮೇನಿಯ) ಇಲ್ಲವೆ ಬೆಂಕಿಯಿಡುವ ಚಟಗಳನ್ನು (ಪೈರೊಮೇನಿಯ)ಇಲ್ಲಿ ಹೆಸರಿಸಬಹುದು. ಕದ್ದ ವಸ್ತುಗಳನ್ನು ವ್ಯಕ್ತಿ ಬಳಸುವುದೂ ಇಲ್ಲ, ಅವುಗಳಿಂದ ಲಾಭ ಪಡೆಯುವುದೂ ಇಲ್ಲ. ಆದರೆ ಕದಿಯುವುದರಿಂದ ಯಾವುದೋ ಬಗೆಯ ಸಾಂಕೇತಿಕ ತೃಪ್ತಿಯನ್ನು ಮಾತ್ರ ಅನುಭವಿಸುತ್ತಾನೆ. ಅಂತೆಯೇ ಬೆಂಕಿ ಹಚ್ಚುವವನಿಗೆ ಯಾವ ದುರುದ್ದೇಶವೂ ಇರುವುದಿಲ್ಲ. ಬೆಂಕಿ ಹಚ್ಚುವಿಕೆಗೆ ಇಲ್ಲಿ ಸಾಂಕೇತಿಕ ರೀತಿಯಲ್ಲಿ ಪಡೆದುಕೊಳ್ಳುವ ಮೈಥುನ ತೃಪ್ತಿ–ಎಂಬ ವಿವರಣೆ ಕೊಡುವುದುಂಟು. ಕದಿಯುವಿಕೆ ಅಥವಾ ಬೆಂಕಿಯಿಡುವಿಕೆ ಯಾವುದೋ ಆಂತರಿಕ ಒತ್ತಡದಿಂದ ಬಿಡುಗಡೆ ಪಡೆಯಲು ವ್ಯಕ್ತಿ ಅವಲಂಬಿಸುವ ನಡವಳಿಕೆಗಳಾಗಿರುತ್ತವೆ.

ಗೀಳುಗಳಿಗೂ (ಅಬ್‌ಸೆಷನ್ಸ್) ಚಟಗಳಿಗೂ ಅನೋನ್ಯ ಸಂಬಂಧವಿದೆ. ಕೆಲವು ಗೀಳುಗಳು ಚಟಕ್ಕೆ ಎಡೆಮಾಡಿಕೊಡದೆ ಗೀಳುಗಳಾಗಿಯೇ ಉಳಿದುಕೊಳ್ಳಬಹುದಾದರೂ ಸಾಮಾನ್ಯವಾಗಿ ಎಲ್ಲ ಚಟಗಳಿಗೂ ಗೀಳೊಂದು ಮೂಲವಾಗಿರುತ್ತದೆ. ಗೀಳುಗಳಂತೆ ಚಟಗಳೂ ಆಂತರಿಕ ಘರ್ಷಣೆಯಿಂದುಂಟಾಗುವ ಉದ್ವಿಗ್ನತೆಯನ್ನು ಕಡಿಮೆ ಮಾಡಿಕೊಳ್ಳಲು ಅಥವಾ ಕಳೆದುಕೊಳ್ಳಲು ಬಳಸುವ ರಕ್ಷಣಾತಂತ್ರಗಳು. ಇನ್ನೊಂದು ವಿವರಣೆಯೆಂದರೆ, ಚಟಗಳು ಇನ್ನೂ ಹೆಚ್ಚು ಆತಂಕಕಾರಿ ವಿಚಾರಗಳಿಂದ ವ್ಯಕ್ತಿಯನ್ನು ವಿಮುಕ್ತಗೊಳಿಸುವ ಬದಲಿ ಚಟುವಟಿಕೆಗಳು. ಈ ಬದಲಿಕಾರ್ಯಗಳಲ್ಲಿ ಮನಸ್ಸನ್ನು ಹರಿಯಬಿಡುವ ಮೂಲಕ ಹೆಚ್ಚು ಆತಂಕಕಾರಿ ವಿಚಾರಗಳಿಂದ ವ್ಯಕ್ತಿ ಬಿಡುಗಡೆ ಪಡೆಯುತ್ತಾನೆ.

ಚಟಗಳಿಗೆ ಬಲಿಯಾದ ವ್ಯಕ್ತಿಗಳ ಬೆಳೆವಣಿಗೆಯ ಹಿನ್ನೆಲೆಯಲ್ಲಿ ಕೆಲವು ಸಾಮಾನ್ಯ ವಿಚಾರಗಳನ್ನು ಗಮನಿಸಬಹುದು. ಅವರ ಮನೆಯ ವಾತಾವರಣದಲ್ಲಿ ಸುವ್ಯವಸ್ಥೆ ಮತ್ತು ನೈರ್ಮಲ್ಯಗಳಿಗೆ ಅತಿಯಾದ ಪ್ರಾಧಾನ್ಯ ಇರುತ್ತದೆ. ಮನೋವಿಶ್ಲೇಷಣೆಯ ಸಿದ್ಧಾಂತಗಳ ಪ್ರಕಾರ ಬಾಲ್ಯಾವಸ್ಥೆಯಲ್ಲಿ, ಪ್ರಸಾಧನ ತರಬೇತಿಯ ಅವಧಿಯಲ್ಲಿ ತಂದೆತಾಯಿಗಳು ಹೇರುವ ಕಟ್ಟುನಿಟ್ಟಿನ ಮತ್ತು ದಮನಕಾರಿ ಕ್ರಮಗಳೇ ಗೀಳು ಮತ್ತು ಚಟಗಳಿಗೆ ಕಾರಣವಾಗಿರುತ್ತವೆ. ಈ ಅವಧಿಯ ಸಮಸ್ಯೆಗಳ ಪರಿಣಾಮವಾಗಿ ರೂಪಿತವಾಗುವ 'ಗುದ ವ್ಯಕ್ತಿತ್ವ' (ಏನಲ್ ಪರ್ಸನ್ಯಾಲಿಟಿ) ಇವರದ್ದಾಗಿರುತ್ತದೆ. ಈ ವ್ಯಕ್ತಿತ್ವದ ಲಕ್ಷಣಗಳಾಗಿರುವ ಕೃಪಣತ್ವ ಮತ್ತು ಹಟಮಾರಿತನವನ್ನು ಇವರಲ್ಲಿ ಕಾಣಬಹುದು. ಜೊತೆಗೆ ಇವರ ವ್ಯಕ್ತಿತ್ವದಲ್ಲಿ ಕಾರ್ಯನಿಷ್ಠೆ ಮತ್ತು ಆದರ್ಶಗಳನ್ನೂ ಗುರುತಿಸಬಹುದಾಗಿದೆ.

ಚಟಕ್ಕೆ ಬಲಿಯಾದ ವ್ಯಕ್ತಿಯೊಬ್ಬನ ಬಗ್ಗೆ ಸ್ಟ್ರೈಕರ್ ಹೀಗೆ ವರದಿ ಮಾಡಿದ್ದಾನೆ: 45 ವಯಸ್ಸಿನ ಎ.ಬಿ. ಎಂಬ ವ್ಯಾಪಾರಿ ಪರಿಶುದ್ಧ ಜೀವನ ನಡೆಸುವ ಒತ್ತಡಕ್ಕೆ ಒಳಗಾಗಿದ್ದ. ಒಂದು ದಿನದಲ್ಲಿ ಆತ 15 ಬಾರಿಯಾದರೂ ಸ್ನಾನಮಾಡುತ್ತಿದ್ದ. ಅಲ್ಲದೆ ತನ್ನ ಆ ನಡತೆಗೆ ಏನಾದರೊಂದು ಕುಂಟುನೆಪ ಹುಡುಕುತ್ತಿದ್ದ; ಮೈಯೆಲ್ಲಾ ಬೆವೆತು ಹೋಗಿದೆ; ತನ್ನ ಉಗ್ರಾಣ ಕೊಳೆ, ದೂಳಿನಿಂದ ತುಂಬಿಹೋಗಿದೆ–ಹೀಗೆ. ನೀರು, ಸಾಬೂನು ಮುಂತಾದವನ್ನು ಧಾರಾಳವಾಗಿ ಉಪಯೋಗಿಸುತ್ತಿದ್ದ. ಒಮ್ಮೆ ತನ್ನ ಹಾಸಿಗೆಯ ಮೇಲೆ ಬಿದ್ದ ನೆರಳಿನ ಗುರುತನ್ನು ಯಾವುದೋ ಕೊಳೆಯ ಕಲೆಯೆಂದು ಭಾವಿಸಿ ಅದನ್ನು ತೊಳೆಯಲು ಯತ್ನಿಸಿದ್ದೂ ಉಂಟು. ತನ್ನ ನಡತೆ ಅಸಂಬದ್ಧ ಎಂದು ತಿಳಿದಿದ್ದರೂ ಅದನ್ನು ತಿದ್ದಿಕೊಳ್ಳುವಲ್ಲಿ ಆತ ಅಸಹಾಯಕನಾಗಿದ್ದ. ಅವನ ವರ್ತನೆಗೆ ಹಿನ್ನೆಲೆಯಾಗಿದ್ದ ನಿಗೂಢ ರಹಸ್ಯಗಳು ಬೆಳಕಿಗೆ ಬರುವ ತನಕವೂ ಅವನ ನಡೆವಳಿಕೆಯಲ್ಲಿ ಮಾರ್ಪಾಡು ಉಂಟಾಗಲಿಲ್ಲ. ಎ.ಬಿ. ಎಂಟು ವರ್ಷ ವಯಸ್ಸಿನವನಾಗಿದ್ದಾಗ ಒಮ್ಮೆ ಮುಷ್ಟಿಮೈಥುನದಲ್ಲಿ ತೊಡಗಿರುವುದನ್ನು ಅವನ ಅಣ್ಣ ಕಂಡು, ಕೊಳಕ, ಹೇಸಿಗೆಯವನು– ಎಂದೆಲ್ಲ ಛೀಮಾರಿ ಹಾಕಿದ; ಗುಟ್ಟನ್ನು ರಟ್ಟು ಮಾಡುವುದಾಗಿ ಬೆದರಿಕೆ ಹಾಕಿದ. ತಮ್ಮನನ್ನು ಕಾಲಮೇಲೆ ಬೀಳುವಂತೆ ಮಾಡಿ, ಪರಿಶುದ್ಧವಾದ ಜೀವನ ನಡೆಸುವಂತೆ ಅವನಿಂದ ವಚನ ಪಡೆದುಕೊಂಡ. ಮುಂದೆಯೂ ಅಣ್ಣ ಪದೇ ಪದೇ ತಮ್ಮನನ್ನು ಬೆದರಿಸುತ್ತಲೇ ಇದ್ದ. ಅಣ್ಣ ಕಾಲೇಜು ಓದಲು ಬೇರೆಯ ಊರಿಗೆ ಹೋದ ಅನಂತರ, ಎ.ಬಿ. ಆ ಘಟನೆಯನ್ನು ಮರೆತನಾದರೂ ಅವನ ಉದ್ವಿಗ್ನತೆ ಮಡಿಯ ಚಟವಾಗಿ ಕಾಣಿಸಿಕೊಂಡಿತು. ಮಾನಸಿಕ ಚಿಕಿತ್ಸೆಯ ಸಹಾಯದಿಂದ ಎ.ಬಿ. ತನ್ನ ಚಟವನ್ನು ಗೆದ್ದು ಸುಖವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. **ನೋಡಿ– ಗೀಳು.** (ಎಚ್.ಎಸ್.ಐ.)

**ಚಟರ್ಜಿ, ಕಾಳೀಪ್ರಸನ್ನ :** 1863–1919. ಭಾರತದ ಒಬ್ಬ ಪತ್ರಿಕೋದ್ಯಮಿ, ರಾಷ್ಟ್ರಪ್ರೇಮಿ, ಸಮಾಜಸುಧಾರಕ; ಸಂಗೀತ ಚಿತ್ರಕಲೆಗಳಲ್ಲಿ ಪರಿಣತರು. ಜನ್ಮತಃ ಬಂಗಾಲಿ; ಪಂಜಾಬಿನಲ್ಲಿ ನೆಲಸಿ, ಭಾಷೆ, ಉಡುಪು, ವರ್ತನೆಗಳಲ್ಲಿ ಪಂಜಾಬಿಯೆಂದೇ ಇತರರು ಭಾವಿಸುವ ಮಟ್ಟಿಗೆ ಅಲ್ಲಿಯ ಜನಜೀವನದಲ್ಲಿ ತಾದಾತ್ಮ್ಯ ಸಾಧಿಸಿದರು. ಇವರು 1863ರ ಮಾರ್ಚ್ 1ರಂದು ಜನಿಸಿದರು. ತಂದೆ ಹರಿಮೋಹನರು ಬಂಗಾಲದ ಅಶ್ವದಳದಲ್ಲಿ ಅಧಿಕಾರಿ. ಜಲಪೈಗುರಿಯಲ್ಲಿ ವಾಸ. ತಾಯಿ ದಕ್ಷಿಣಾದೇವಿ. ಇಬ್ಬರೂ ಶ್ರದ್ಧಾನ್ವಿತ ಹಿಂದೂಗಳು. ತಂದೆ ಭಾರತದ ಹಲವು ಭಾಷೆಗಳನ್ನು ಬಲ್ಲವರಾಗಿದ್ದರು. ಮಗನೂ ತಂದೆಯಂತೆ ಆದರು. ಕಾಳೀಪ್ರಸನ್ನರು ಹುಟ್ಟಿದ ಕೆಲವು ವರ್ಷಗಳ ಅನಂತರ ಹರಿಮೋಹನರು ಲಾಹೋರಿನಲ್ಲಿ ಉದ್ಯೋಗ ಸಂಪಾದಿಸಿ, ಸಂಸಾರದೊಂದಿಗೆ ಅಲ್ಲಿ ನೆಲಸಿದರು. ಕಾಳೀಪ್ರಸನ್ನರು ಪಂಜಾಬಿನಲ್ಲೇ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪೂರೈಸಿದರು. ಅವರು ಲಾಹೋರ್ ವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿದ್ದಾಗ ಅವರ ತಾಯಿ ನಿಧನಹೊಂದಿದರು. ಕೌಟುಂಬಿಕ ತೊಂದರೆಗಳಿಂದಾಗಿ ಅವರ ಶಿಕ್ಷಣ ಅಷ್ಟಕ್ಕೇ ನಿಂತಿತು. ಆದರೆ ಕಾಳೀಪ್ರಸನ್ನರು ನಾನಾ ವಿಷಯಗಳ ಅಧ್ಯಯನದಲ್ಲಿ ನಿರತರಾದರು. ತಾಯಿಯ ನಿಧನದ ದುಃಖ ಮತ್ತು ಲಾಹೋರಿನ ಕಾಳೀದೇವಾಲಯದ ಸ್ವಾಮಿ ಕೇಶವಾನಂದರ ಪ್ರಭಾವಗಳಿಂದಾಗಿ ಇವರು ಮನೆ ತೊರೆದು ಸಂನ್ಯಾಸ ಜೀವನ ನಡೆಸತೊಡಗಿದರು. ಸ್ವಲ್ಪ ಕಾಲದ ಅನಂತರ ಅವರ ತಂದೆ ಮಗನ ಮನಸ್ಸನ್ನು ಪ್ರಾಪಂಚಿಕ ವಿಚಾರಗಳತ್ತ ತಿರುಗಿಸಿ ಇವರನ್ನು ಮನೆಗೆ ಕರೆತಂದರು. 1894ರಲ್ಲಿ ಇವರು ಅನ್ನಪೂರ್ಣಾದೇವಿಯನ್ನು ವಿವಾಹವಾದರು.

ಕಾಳೀಪ್ರಸನ್ನರು ಲಾಹೋರಿನ ಸಿವಿಲ್ ಮತ್ತು ಮಿಲಿಟರಿ ಗೆಜೆಟ್ ಪತ್ರಿಕೆಯ ಭಾಷಾಂತರಕಾರರಾಗಿ ಪತ್ರಿಕೋದ್ಯಮ ಜೀವನವನ್ನಾರಂಭಿಸಿದರು. ಈ ಸಂದರ್ಭದಲ್ಲಿ ಇವರಿಗೆ ಧಾರ್ಮಿಕ, ಸಾಮಾಜಿಕ, ಸಾರ್ವಜನಿಕ ಸಂಸ್ಥೆಗಳ ಸಂಪರ್ಕ ಉಂಟಾಯಿತು. ಆರ್ಯ ಸಮಾಜದೊಂದಿಗೆ ಸಂಬಂಧ ಬೆಳೆಯಿತು. ವಕ್ತೃತ್ವ ಕಲೆ, ಪತ್ರಿಕೋದ್ಯಮದ ಸಾಮರ್ಥ್ಯ, ಸಾರ್ವಜನಿಕ ವಿಚಾರಗಳಲ್ಲಿ ಆಸಕ್ತಿ–ಇವುಗಳಿಂದಾಗಿ ಅವರಿಗೆ ಖ್ಯಾತಿ ಬಂತು. ಇವರು ಟ್ರಿಬ್ಯೂನ್ ಪತ್ರಿಕೆಯ ಸಂಪಾದಕೀಯ ವಿಭಾಗವನ್ನು ಸೇರಿದರು. ಅದರ ಸಂಪಾದಕರಾಗಿದ್ದ ಗೋರಕನಾಥ ಚಟರ್ಜಿಯವರಿಗೆ ಅವರಲ್ಲಿ ವಿಶೇಷವಾದ ಪ್ರೀತಿ. ಕಾಳೀಪ್ರಸನ್ನರು ಸುಮಾರು ಎರಡು ದಶಕಗಳ ಕಾಲ ಆ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದರು. ಅವರ ವರದಿಗಳೂ ಟೀಕೆ ಟಿಪ್ಪಣಿಗಳೂ ತುಂಬ ಜನಪ್ರಿಯವಾದವು. 1905ರಲ್ಲಿ ಕಾಳೀಪ್ರಸನ್ನರು ಟ್ರಿಬ್ಯೂನ್ ಪತ್ರಿಕೆಯನ್ನು ಬಿಟ್ಟು ತಮ್ಮದೇ ಆದ ಲೈಟ್ ಎಂಬ ಸಾಪ್ತಾಹಿಕವನ್ನು ಪ್ರಾರಂಭಿಸಿದರು. ಮುಂದೆ ಇದು ದಿನಪತ್ರಿಕೆಯಾಯಿತು. ಲಾಲಾ ಲಜಪತರಾಯರೇ ಮುಂತಾದ ಹಲವರು ಪತ್ರಿಕೆಯನ್ನು ಮೆಚ್ಚಿದರು. ಆದರೆ ಎರಡು ವರ್ಷಗಳಾಗುವಷ್ಟರಲ್ಲಿ ಆರ್ಥಿಕ ತೊಂದರೆಗಳಿಂದಾಗಿ ಅದನ್ನು ನಿಲ್ಲಿಸಬೇಕಾಯಿತು. ಮರುವರ್ಷ ಶಿಶಿರಕುಮಾರ ಘೋಷರ ಆಮಂತ್ರಣದ ಮೇರೆಗೆ ಕೋಲ್ಕತದ ಅಮೃತ ಬಜಾರ್ ಪತ್ರಿಕೆಯ ಸಂಪಾದಕೀಯ ವಿಭಾಗ ಸೇರಿದರು. ಐದು ವರ್ಷಗಳ ಅನಂತರ ಈ ಪತ್ರಿಕೆಯಿಂದ ಹೊರಬಿದ್ದರು. ಆದರೆ ಘೋಷರೊಂದಿಗಿನ ಸಂಬಂಧ ಉಳಿದುಬಂತು. ಮತ್ತೆ ಇವರು ಲಾಹೋರಿಗೆ ಮರಳಿ ಪಂಜಾಬಿನ ಇಂಗ್ಲಿಷ್ ದೈನಿಕವೊಂದರ ಸಂಪಾದಕರಾದರು. 1911ರಲ್ಲಿ ವಾರಾಣಸಿಗೆ ಹೋಗಿ ಭಾರತ ಧರ್ಮ ಮಹಾಮಂಡಲದ ಮುಖಪತ್ರದ ಸಂಪಾದಕರಾದರು. ಸ್ವಲ್ಪಕಾಲ ಡೆಹರಾಡೂನಿನಲ್ಲಿ ಕಾಸ್ಮೊಪಾಲಿಟನ್ ಪತ್ರಿಕೆಯ ಸಂಪಾದಕರಾಗಿದ್ದರು. ಈ ಸಂದರ್ಭದಲ್ಲಿ ಅವರಿಗೆ ಟ್ರಿಬ್ಯೂನ್ ಪತ್ರಿಕೆಯ ಸಂಪಾದಕರಾಗಲು ಆಹ್ವಾನ ಬಂತು. ಆದರೆ ಇವರು ಅದನ್ನು ಒಪ್ಪಿಕೊಳ್ಳಲಿಲ್ಲ. 1918ರಲ್ಲಿ ಶಾಂತಿನಿಕೇತನವನ್ನು ಸಂದರ್ಶಿಸಿ ಎರಡು ಉಪನ್ಯಾಸ ನೀಡಿ, ರವೀಂದ್ರರೇ ಮುಂತಾಗಿ ಹಲವರ ಮೆಚ್ಚುಗೆ ಗಳಿಸಿದರು. ಅಲ್ಲಿ ಇವರು ಶಿಕ್ಷಕರಾಗಬೇಕೆಂಬುದು ರವೀಂದ್ರರ ಅಪೇಕ್ಷೆಯಾಗಿತ್ತು. ಆದರೆ ಅವರ ಇಚ್ಛೆ ಪೂರೈಸಲಿಲ್ಲ. 1919ರ ನವೆಂಬರ್ 12ರಂದು ಕಾಳೀಪ್ರಸನ್ನ ಚಟರ್ಜಿಯವರು ನಿಧನರಾದರು. ಕಾಳೀಪ್ರಸನ್ನರು ಪಂಜಾಬಿನ ರಾಷ್ಟ್ರೀಯ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಾಂಗ್ರೆಸ್ ಸಂಸ್ಥೆಯನ್ನು ಸಂಘಟಿಸುವಲ್ಲಿ ನೆರವು ನೀಡಿದರು. ವಿಧವಾವಿವಾಹಕ್ಕೆ ಪ್ರೋತ್ಸಾಹ ನೀಡಿ ಸಮಾಜಸುಧಾರಣೆಗೂ ಯತ್ನಿಸಿದರು. ಇವರು ಬರೆದ ಸಿಖ್ ಸಮ್ರಾಟ್ ಓ ಸಾತಿರ್ ಅಭಿಶಾಪ್ ಎಂಬ ಕಾದಂಬರಿಯ ಇವರ ಮರಣಾನಂತರ ಬಂಗಾಲಿಯ ಸಾಹಿತ್ಯ ಪತ್ರಿಕೆ ಪರಿಚಯದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. (ಎಸ್.ವಿ.ಪಿ.ಎ.)

**ಚಟರ್ಜಿ, ಜೀವನಲಾಲ್ :** 1880–1970. ಭಾರತದ ಒಬ್ಬ ಕ್ರಾಂತಿಕಾರ. 1889ರಲ್ಲಿ ಢಾಕಾ ಜಿಲ್ಲೆಯಲ್ಲಿ ಜನನ. ತಂದೆ ಜಾನಕೀನಾಥ ಚಟರ್ಜಿ. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಕೋಲ್ಕತದಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮುಂದೆ ಇವರು ಕಾಲೇಜ್ ಸೇರಿದರಾದರೂ ಆ ವೇಳೆಗೆ ರಾಜಕೀಯದಲ್ಲಿ ಪಾತ್ರ ವಹಿಸಿದ್ದರಿಂದ ಇವರ ವಿದ್ಯಾಭ್ಯಾಸ ನಡುವೆಯೇ ನಿಂತು ಹೋಯಿತು.

ಜೀವನಲಾಲ್ ರಾಜಕೀಯ ಪ್ರವೇಶಿಸಿದಾಗ ಬಂಗಾಲ ವಿಭಜನೆಯ ವಿರುದ್ಧ ಚಳವಳಿ ಬಿರುಸಾಗಿತ್ತು. ಢಾಕಾ ಪಿತೂರಿ ಮೊಕದ್ದಮೆಯ ಸಂಬಂಧವಾಗಿ ಇವರು 1907ರಲ್ಲಿ ದಸ್ತಗಿರಿಯಾದರು. ಆದರೆ ಇವರ ಮೇಲಿನ ಆಪಾದನೆ ರುಜುವಾತಾಗದ್ದರಿಂದ ಇವರ ಬಿಡುಗಡೆಯಾಯಿತು. 1908ರಲ್ಲಿ ಆಲಿಪುರ ಪಿತೂರಿಯ ಮೊಕದ್ದಮೆಯ ಅನಂತರ ಇವರು ಕ್ರಾಂತಿಕಾರಿ ಜತಿನ್ ಮುಖರ್ಜಿಯವರ ಪ್ರಭಾವಕ್ಕೆ ಒಳಗಾದರು. ಯುಗಾಂತರ ಪಕ್ಷದ ನಿರ್ದೇಶನದಲ್ಲಿ ನಡೆಯುತ್ತಿದ್ದ ಭಾರತ ಜರ್ಮನ್ ಪಿತೂರಿ ಬಯಲಾಗಿ ಜತಿನ್ ಮುಖರ್ಜಿ ಪೊಲೀಸರೊಂದಿಗೆ ಕಾದಾಡುತ್ತ ಬಲೇಶ್ವರದಲ್ಲಿ ಪ್ರಾಣಬಿಟ್ಟರು. ಜತಿನ್ ಮುಖರ್ಜಿಯವರು ನಡೆಸುತ್ತಿದ್ದ ಕಾರ್ಯಾಚರಣೆಯ ಹೊಣೆ ಜೀವನಲಾಲ್‌ರ ಮೇಲೆ ಬಿತ್ತು. 1916ರ ವರೆಗೂ ಇವರು ತಮ್ಮ ಕಾರ್ಯವನ್ನು ತಡೆಯಿಲ್ಲದೆ ನಡೆಸಿಕೊಂಡು ಬಂದರು. ಪಕ್ಷದ್ರೋಹಿಯೊಬ್ಬ ಇವರ ಸುಳಿವನ್ನು ಪೊಲೀಸರಿಗೆ ತಿಳಿಸಿದ; ಜೀವನಲಾಲರು ಬಂಧನಕ್ಕೊಳಗಾದರು.

1920ರಲ್ಲಿ ಜೀವನಲಾಲರ ಬಿಡುಗಡೆಯಾಯಿತು. ಇವರಿಗೆ ಮಹಾತ್ಮ ಗಾಂಧಿಯವರ ಅಸಹಕಾರ ಚಳವಳಿಯಲ್ಲೂ ಅಹಿಂಸಾ ತತ್ತ್ವದಲ್ಲೂ ನಂಬಿಕೆ ಇರಲಿಲ್ಲವಾದರೂ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಚೇತನಗೊಳಿಸಲು ಆ ಚಳವಳಿಯಲ್ಲಿ ಭಾಗವಹಿಸಿದರು. ಅನಂತರ ಇವರು ಮುನ್ಷಿಗಂಜ್ ರಾಷ್ಟ್ರೀಯ ಶಾಲೆಯಲ್ಲಿ ಅಧ್ಯಾಪಕರಾದರು. ಜೊತೆಗೆ ತಮ್ಮ ಕ್ರಾಂತಿಕಾರ್ಯಗಳನ್ನೂ ಮುಂದುವರಿಸಿದರು.

ಗಾಂಧಿಯವರು ಅಸಹಕಾರ ಚಳವಳಿಯನ್ನು ಹಿಂದೆಗೆದುಕೊಂಡಾಗ ಜೀವನ ಲಾಲ್ ಚಟರ್ಜಿಯವರು ದೇಶಬಂಧು ಚಿತ್ತರಂಜನ್ ದಾಸರ ಸ್ವರಾಜ್ಯ ಪಕ್ಷದೊಂದಿಗೂ ನೇತಾಜಿ ಸುಭಾಷ್ ಚಂದ್ರ ಬೋಸ್‌ರೊಂದಿಗೂ ಹೆಚ್ಚು ಸಂಪರ್ಕ ಬೆಳೆಸಿದರು. ನೇತಾಜಿ ಸುಭಾಷ್ ಚಂದ್ರ ಬೋಸ್‌ರಿಗೆ ಬರ್ಮೀ ಭಾಷೆಯ ಪ್ರಥಮ ಪಾಠ ಹೇಳಿಕೊಟ್ಟವರು ಜೀವನಲಾಲ್ ಚಟರ್ಜಿ. ಭಾರತದಲ್ಲಿ ಕಮ್ಯುನಿಸ್ಟ್ ಚಳವಳಿ ಪ್ರಾರಂಭವಾದಾಗ ಅದರಲ್ಲಿ ಚಟರ್ಜಿ ಹೆಚ್ಚು ಆಸಕ್ತಿ ವಹಿಸಿದರು. ಬಂಗಾಲದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸಂಘಟಿಸುವ ಕಾರ್ಯವನ್ನು ಇವರಿಗೆ ವಹಿಸಬೇಕೆಂದು ತೃತೀಯ ಕಮ್ಯುನಿಸ್ಟ್ ಅಂತಾರಾಷ್ಟ್ರೀಯ ಸಭೆ ಆಲೋಚಿಸಿತ್ತು. ಆದರೆ 1923ರಲ್ಲಿ ಇವರು ಮತ್ತೆ ಬಂಧನಕ್ಕೊಳಗಾದರು. ಬಂಗಾಲದಲ್ಲೂ ಬರ್ಮದಲ್ಲೂ (ಈಗಿನ ಮಾಯನ್ಮಾರ್) ಇವರನ್ನು ಸೆರೆಯಲ್ಲಿಡಲಾಯಿತು. 1928ರಲ್ಲಿ ಅನಾರೋಗ್ಯದ ನಿಮಿತ್ತ ಇವರು ಬಿಡುಗಡೆಯಾದರು.

1930ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಘಟಿಸಿದ ಚಳವಳಿಯಲ್ಲಿ ಜೀವನಲಾಲರೂ ಮುಖ್ಯ ಪಾತ್ರ ವಹಿಸಿದರು. ಇವರನ್ನು ಬಂಗಾಲ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಕಾರ್ಯದರ್ಶಿಯಾಗಿ ಆರಿಸಲಾಯಿತು. ಅಷ್ಟರಲ್ಲಿ ಸರ್ಕಾರ ಇವರನ್ನು ಬಂಧಿಸಿ 1938ರ ವರೆಗೂ ಬಂಧನದಲ್ಲಿಟ್ಟಿತು. ಬಂಧನದಿಂದ ವಿಮೋಚನೆಯಾದ ಮೇಲೆ ಇವರು ಕಾಂಗ್ರೆಸಿನಲ್ಲಿ ಕ್ರಾಂತಿಕಾರಿಗಳ ವೇದಿಕೆಯೊಂದನ್ನು ನಿರ್ಮಿಸಲು ಯತ್ನಿಸಿದರು. 1940ರ ರಾಮಘರ್ ಕಾಂಗ್ರೆಸ್ ಸಭೆಯಲ್ಲಿ ಈ ಬಗ್ಗೆ ಮಾತಾಡಿದರು. ಆದರೆ ಗಾಂಧಿಯವರ ಅಹಿಂಸಾ ತತ್ತ್ವವನ್ನೊಪ್ಪಿಕೊಂಡಿದ್ದ ಕಾಂಗ್ರೆಸಿನಲ್ಲಿ ಇವರ ಅಭಿಪ್ರಾಯಕ್ಕೆ ಮನ್ನಣೆ ದೊರಕಲಿಲ್ಲ. ಜೀವನಲಾಲರು ಇದನ್ನು ಪ್ರತಿಭಟಿಸಿ ಕಾಂಗ್ರೆಸನ್ನು ತ್ಯಜಿಸಿದರು. 1943ರಲ್ಲಿ ಇವರು ಡೆಮೊಕ್ರಾಟಿಕ್ ವ್ಯಾನ್ ಗಾರ್ಡ್ ಎಂಬ ಸಂಘವನ್ನು ಸ್ಥಾಪಿಸಿ ಕಮ್ಯುನಿಸ್ಟರಿಗೆ ಸಹಾಯ ಮಾಡಲಾರಂಭಿಸಿದರು. ಪಕ್ಷ ಬಿಟ್ಟು ತೊಲಗಿ ಚಳವಳಿಯ ಸಮಿತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅಖಿಲ ಭಾರತ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಭಾರತೀಯ ಕೆಲಸಗಾರರ ಪಕ್ಷದ ಸ್ಥಾಪಕ ಅಧ್ಯಕ್ಷರಾಗಿದ್ದ ಇವರು ಕೊನೆಯವರೆಗೂ ಆ ಪಕ್ಷದ ಏಳ್ಗೆಗಾಗಿ ಶ್ರಮಿಸಿ 1970ರ ಡಿಸೆಂಬರ್ 1ರಂದು ನಿಧನರಾದರು.

ಜೀವನಲಾಲ್ ಪ್ರಗತಿಪರರು, ಆಜನ್ಮಬ್ರಹ್ಮಚಾರಿ, ಜಾತಿಪದ್ಧತಿಯನ್ನೂ ಅಸ್ಪೃಶ್ಯತೆಯನ್ನೂ ಖಂಡಿಸುತ್ತಿದ್ದರು. ಮಹಿಳೆಯರಲ್ಲಿ ಇವರಿಗೆ ವಿಶೇಷ ಗೌರವವಿತ್ತು. ಬ್ರಿಟಿಷ್ ದ್ವೇಷಿಯಾಗಿದ್ದರೂ ಪಾಶ್ಚಾತ್ಯ ಶಿಕ್ಷಣಕ್ಕೆ ಇವರ ವಿರೋಧವಿರಲಿಲ್ಲ. ರಾಜಕೀಯ ಮತ್ತು ಆರ್ಥಿಕ ಬಂಧನದಿಂದ ಜನಸಾಮಾನ್ಯರ ಬಿಡುಗಡೆಯೇ ನಿಜವಾದ ರಾಷ್ಟ್ರೀಯ ಸ್ವಾತಂತ್ರ್ಯವೆಂದು ಇವರು ನಂಬಿದ್ದರು. ಈ ನಂಬಿಕೆಯಿಂದಲೇ ಜೀವನಲಾಲರು ಕಾರ್ಮಿಕರ ಬಿಡುಗಡೆಗಾಗಿ ದುಡಿದರು.

ಜೀವನಲಾಲ್ ಚಟರ್ಜಿಯವರು ನವೀನ್ ಬಂಗ್ಲಾ ಮತ್ತು ಘನ ವಿಪ್ಲವ್ ಎಂಬ ಎರಡು ಬಂಗಾಲಿ ಪತ್ರಿಕೆಗಳನ್ನು ಸಂಪಾದಿಸುತ್ತಿದ್ದರು. ಇವರ ಅನೇಕ ಕೃತಿಗಳ ಪೈಕಿ ಹೆಸರಾದಂಥವು ಉದರೇರ್ ಚಿಂತಾ (ಹೊಟ್ಟೆಯ ಚಿಂತೆ) ಮತ್ತು ಸಾಂಪ್ರದಾಯಿಕತಾರ್ ಗ್ಲಾನಿ (ಜಾತೀಯತೆಯ ಕಳಂಕ). *

**ಚಟರ್ಜಿ, ಜೋಗೇಶ ಚಂದ್ರ :** 1895–1969. ಬಂಗಾಲದ ಒಬ್ಬ ಪ್ರಖ್ಯಾತ ಕ್ರಾಂತಿಕಾರಿ ನಾಯಕ. ಢಾಕಾ ಜಿಲ್ಲೆಯ ಗಾವೊಡಿಯ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಬಿಪಿನ್ ಚಂದ್ರ ಚಟರ್ಜಿ ದೌಲತ್ ಖಾನ್‌ನಲ್ಲಿ ವರ್ತಕರಾಗಿದ್ದರು. ಹಳ್ಳಿಯಲ್ಲಿ

ಪ್ರಾಥಮಿಕ ಶಿಕ್ಷಣ ಮುಗಿಸಿ 12ನೆಯ ವರ್ಷಕ್ಕೆ ಅವರು ದೌಲತ್ ಖಾನ್ ಸೇರಿ ಅಲ್ಲಿ ಎರಡು ವರ್ಷ ಓದಿದ ಮೇಲೆ ಕೊಮಿಲಾದಲ್ಲಿ ವಕೀಲರಾಗಿದ್ದ ತಮ್ಮ ಚಿಕ್ಕಪ್ಪ ವಿಶ್ವೇಶ್ವರ ಚಟರ್ಜಿಯವರ ಆಶ್ರಯದಲ್ಲಿ ಪ್ರೌಢ ಶಿಕ್ಷಣ ಮುಂದುವರಿಸಿದರು. ಅಲ್ಲಿ ಇವರಿಗೆ ಅನುಶೀಲನ ಸಮಿತಿಯ ಕ್ರಾಂತಿವೀರ ಬಿರೆನ್ ಚಟರ್ಜಿಯ ಸ್ನೇಹವಾಯಿತು. ಕ್ರಮೇಣ ಇವರು ಕ್ರಾಂತಿಕಾರಿ ಚಳವಳಿಯಲ್ಲಿ ಸಂಪೂರ್ಣವಾಗಿ ಮಗ್ನರಾದರು. ಇವರ ಕ್ರಾಂತಿಕಾರಿ ಚಟುವಟಿಕೆಗಳನ್ನು ಗಮನಿಸಿದ ಪೊಲೀಸರು ಚಟರ್ಜಿಯವರನ್ನು ದಸ್ತಗಿರಿ ಮಾಡಲು ಪ್ರಯತ್ನಿಸಿದಾಗ ಕೊಮಿಲಾದಿಂದ ತಪ್ಪಿಸಿಕೊಂಡು ಕೋಲ್ಕತ್ತೆಗೆ ಬಂದರು. ಅತ್ಯಂತ ಪ್ರಯಾಸದಿಂದ ಇವರನ್ನು ದಸ್ತಗಿರಿ ಮಾಡಿ, ಚಿತ್ರಹಿಂಸೆಗೊಳಪಡಿಸಿ, ಮೊದಲು ಪ್ರೆಸಿಡೆನ್ಸಿ ಕಾರಾಗೃಹದಲ್ಲೂ, ಅನಂತರ ರಾಜಶಾಹಿ ಜೈಲಿನಲ್ಲೂ ಬಂಧನದಲ್ಲಿಡಲಾಯಿತು. 1920ರಲ್ಲಿ ಬಂಧನದಿಂದ ಬಿಡುಗಡೆಯಾದ ಚಟರ್ಜಿಯವರು ಪುನಃ ರಾಜಕೀಯ ಚಟುವಟಿಕೆಗಳಲ್ಲಿ ನಿರತರಾದರಲ್ಲದೆ ಅನುಶೀಲನ ಸಮಿತಿಯ ಕ್ರಾಂತಿಕಾರಿ ಚಟುವಟಿಕೆಗಳನ್ನು ಸಂಯುಕ್ತ ಪ್ರಾಂತ್ಯಕ್ಕೂ ಉತ್ತರ ಭಾರತದ ಇತರ ಭಾಗಗಳಿಗೂ ವಿಸ್ತರಿಸಲು ಯತ್ನಿಸಿ, ಕಾಶಿ ಮತ್ತು ಕಾನ್ಪುರಗಳನ್ನು ತಮ್ಮ ಕಾರ್ಯಾಚರಣೆಯ ಕೇಂದ್ರಗಳನ್ನಾಗಿ ಮಾಡಿಕೊಂಡು ಕಾರ್ಯೋನ್ಮುಖರಾದರು. ಶಚೀಂದ್ರನಾಥ ಸನ್ಯಾಲ್, ಶಚೀನ್ ಬಕ್ಷಿ. ಭಗತ್ ಸಿಂಗ್ ಮುಂತಾದ ಕ್ರಾಂತಿಕಾರಿ ವೀರನಾಯಕರ ಸಂಪರ್ಕ ಬೆಳೆಸಿದರು. 1925ರಲ್ಲಿ ಜೋಗೇಶ ಚಂದ್ರ ಚಟರ್ಜಿಯವರು ಬಂಗಾಳಕ್ಕೆ ಭೇಟಿಯಿತ್ತಿದ್ದಾಗ ಕೋಲ್ಕತದಲ್ಲಿ ಇವರು ಬಂಧನಕ್ಕೊಳಗಾದರು. ಕಕೋರಿ ಪಿತೂರಿಯ ಆರೋಪಿಯಾಗಿ ಇವರನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಆಜೀವ ಗಡಿಪಾರು ಶಿಕ್ಷೆಗೆ ಒಳಗಾದ ಇವರನ್ನು ಫತೇಗಢ ಕೇಂದ್ರ ಕಾರಾಗೃಹದಲ್ಲೂ ಅನಂತರ ಆಗ್ರದ ಕೇಂದ್ರ ಕಾರಾಗೃಹದಲ್ಲೂ ಇಡಲಾಯಿತು. ಆಗ್ರದ ಕಾರಾಗೃಹದಿಂದ ಇವರನ್ನು ಬಿಡಿಸಿಕೊಳ್ಳಲು ಇತರ ಕ್ರಾಂತಿಕಾರಿಗಳು ನಡೆಸಿದ ಪ್ರಯತ್ನ ಫಲಿಸಲಿಲ್ಲ. ಇವರನ್ನು ಅಲ್ಲಿಂದ ಲಖನೌ ಜೈಲಿಗೆ ವರ್ಗಾಯಿಸಿ ಮತ್ತೆ ಆಗ್ರ ಜೈಲಿಗೆ ಕರೆತರಲಾಯಿತು. ಅಲ್ಲಿ ಇವರು ಉಪವಾಸ ಸತ್ಯಾಗ್ರಹ ಮಾಡಿದರು.

1937ರಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪಿತವಾದಾಗ ಎಲ್ಲ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಲಾಯಿತು. ಜೋಗೇಶ್ ಚಂದ್ರ ಚಟರ್ಜಿಯವರೂ ಬಿಡುಗಡೆ ಹೊಂದಿದರು. 1940ರಲ್ಲಿ ಅನುಶೀಲನ ಪಕ್ಷದವರು ಕ್ರಾಂತಿಕಾರಿ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು. ಕೆಲವು ವರ್ಷಗಳ ಕಾಲ ಚಟರ್ಜಿ ಅದರ ಕಾರ್ಯದರ್ಶಿಯಾಗಿ ಕೆಲಸಮಾಡಿ ಅನಂತರ ಆ ಪಕ್ಷವನ್ನು ಬಿಟ್ಟರು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಇವರು ಪುನಃ ದಸ್ತಗಿರಿಯಾದರು. ದೇವೋಲಿ ಸ್ಥಾನಬದ್ಧತಾ ಶಿಬಿರದಲ್ಲಿ ಇವರನ್ನು ಇಡಲಾಯಿತು. ಅಲ್ಲೂ ಇವರು ಉಪವಾಸ ಮುಷ್ಕರ ಹೂಡಿದರು. 1941ರ ನವೆಂಬರ್ 7ರಂದು ಯಾವ ಷರತ್ತೂ ಇಲ್ಲದೆ ಬಿಡುಗಡೆ ಹೊಂದಿದರು. ಆದರೆ 1942ರಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿ ಪ್ರಾರಂಭವಾದಾಗ ಪುನಃ ದಸ್ತಗಿರಿಯಾದರು. ಇವರು 22 ದಿನಗಳ ಉಪವಾಸ ಮುಷ್ಕರ ನಡೆಸಿದ ಮೇಲೆ ಬಿಡುಗಡೆ ಹೊಂದಿದರು. ಜೋಗೇಶ ಚಂದ್ರ ಚಟರ್ಜಿ ಸುಮಾರು 24 ವರ್ಷಗಳ ಕಾಲ ವಿವಿಧ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸಿದರು. 1956ರಲ್ಲಿ ಉತ್ತರ ಪ್ರದೇಶದಿಂದ ರಾಜ್ಯಸಭೆಗೆ ಚುನಾಯಿತರಾದರು. ಇವರು 1969ರ ಏಪ್ರಿಲ್ 22ರಂದು ನಿಧನ ಹೊಂದಿದರು. (ಎಂ.ಕೆ. ಎಸ್.)

**ಚಟರ್ಜಿ, ಬೀರೇಂದ್ರನಾಥ :** 1880–1937. ಭಾರತೀಯ ಕ್ರಾಂತಿವೀರ. ಢಾಕಾದಲ್ಲಿ ಜನನ. ಇವರನ್ನು ವೀರೇಂದ್ರನಾಥ ಚಟ್ಟೋಪಾಧ್ಯಾಯ ಎಂದೂ ಕರೆಯುತ್ತಾರೆ. ತಂದೆ ಅಘೋರನಾಥ ಚಟರ್ಜಿ ಹೈದರಾಬಾದಿನ ನಿಜಾಂ ಕಾಲೇಜಿನಲ್ಲಿ ರಸಾಯನವಿಜ್ಞಾನ ಪ್ರಾಧ್ಯಾಪಕರಾಗಿದ್ದರು. ಸರೋಜಿನಿ ನಾಯ್ಡು ಬೀರೇಂದ್ರನಾಥರ ಸಹೋದರಿ. ಮುಂದೆ ಪಶ್ಚಿಮ ಬಂಗಾಲದ ರಾಜ್ಯಪಾಲ ಸ್ಥಾನವನ್ನೇರಿದ ಪದ್ಮಜಾ ನಾಯ್ಡು ಇವರ ಸೋದರ ಸೊಸೆ. ಬೀರೇಂದ್ರರ ಮೊದಲ ಹೆಂಡತಿ ಕ್ರೈಸ್ತ ಸಂನ್ಯಾಸಿನಿಯಾದ್ದರಿಂದ ಇವರು ಮತ್ತೆ ಮದುವೆಯಾದರು. ಈ ಮದುವೆ ನಡೆದದ್ದು ಮಾಸ್ಕೋದಲ್ಲಿ, ಕಮ್ಯುನಿಸ್ಟ್ ಪದ್ಧತಿಗೆ ಅನುಸಾರವಾಗಿ. ಎರಡನೆಯ ಹೆಂಡತಿ ಅಗ್ನೆಸ್ ಸ್ಮೆಡ್ಲಿ ಅಮೆರಿಕನ್ ಸಂಜಾತೆ. ಆಕೆ ಪತ್ರಿಕೋದ್ಯಮಿಯಾಗಿದ್ದರು. ಅಮೆರಿಕದ ಕಾರ್ಮಿಕ ಸಂಘವೊಂದರಲ್ಲಿದ್ದು ಅನಂತರ ಭಾರತೀಯ ಕ್ರಾಂತಿಕಾರಿಗಳ ಸಂಪರ್ಕ ಹೊಂದಿದ್ದ ಆಕೆ ನ್ಯೂಯಾರ್ಕಿನ ಭಾರತ ಸ್ವಾತಂತ್ರ್ಯ ಮಿತ್ರರ ಸಂಘದ ಸ್ಥಾಪಕರಲ್ಲೊಬ್ಬರು.

ಐ.ಸಿ.ಎಸ್. ಪರೀಕ್ಷೆಗಾಗಿ ಲಂಡನಿಗೆ ಹೋದ ಬೀರೇಂದ್ರನಾಥರು ಆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. 1906–1907ರಲ್ಲಿ ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡಿದರು. ಲಂಡನ್‌ನಲ್ಲಿ ಸಾವರ್ಕರರ ಭೇಟಿಯಾದಾಗ ಇವರ ಜೀವನಕ್ಕೆ ಹೊಸ ತಿರುವು ಬಂತು. ಬೀರೇಂದ್ರರ ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ 1910ರಲ್ಲಿ ನ್ಯಾಯವ್ಯಾಸಂಗದಿಂದ ಇವರಿಗೆ ಉಚ್ಚಾಟನೆಯಾಯಿತು.

ಬೀರೇಂದ್ರರು ಸಮಾಜವಾದಿ ಸಾಹಿತ್ಯವನ್ನು ವಿಶೇಷವಾಗಿ ಓದಿದರು. ಸಿ.ಆರ್.ಪಿಳ್ಳೆ, ರಾಜ ಮಹೇಂದ್ರ ಪ್ರತಾಪ್, ಮೇಡಂ ಕಾಮ, ಲಾಲಾ ಹರ್ ದಯಾಲ್, ಭೂಪೇಂದ್ರನಾಥ ದತ್ತ, ಎಂ. ಎಂ. ಧಿಂಗ್ರ, ಶ್ಯಾಮಾಜಿ ಕೃಷ್ಣವರ್ಮ ಮುಂತಾದವರೊಂದಿಗೆ ಇವರ ಸಂಪರ್ಕ ಬೆಳೆಯಿತು. ಮುಂದೆ ವಿ.ಐ.ಲೆನಿನ್ ಇವರಿಗೆ ಆದರ್ಶ ವ್ಯಕ್ತಿಯಾದ. ಬ್ರಿಟಿಷರನ್ನು ಭಾರತದಿಂದ ಓಡಿಸಲು ಯಾವುದೇ ಕ್ರಮ ತೆಗೆದುಕೊಂಡರೂ ಸರಿ ಎಂಬುದು ಇವರ ಅಭಿಪ್ರಾಯವಾಗಿತ್ತು. ಇವರ ಸಾಮ್ರಾಜ್ಯಶಾಹಿವಿರೋಧಿ ಭಾವನೆಯನ್ನು ಲೆನಿನ್ ಮೆಚ್ಚಿಕೊಂಡಿದ್ದ. ಜರ್ಮನಿ ಮತ್ತು ರಷ್ಯದಲ್ಲಿ ಬೀರೇಂದ್ರರು ತಮ್ಮ ಕ್ರಾಂತಿಕಾರ್ಯಗಳನ್ನು ವಿಸ್ತರಿಸಿದರು. ಬೀರೇಂದ್ರನಾಥರೊಂದಿಗೆ ತಮ್ಮ ಕುಟುಂಬ ಎಲ್ಲ ಸಂಬಂಧಗಳನ್ನೂ ಕಡಿದುಕೊಂಡಿದೆಯೆಂದು ಸೋದರಿ ಸರೋಜಿನಿ ನಾಯ್ಡು ಅವರು ಸರ್ಕಾರಕ್ಕೆ ಬರೆದಾಗಲೂ ಇವರು ಅಧೀರರಾಗಿಲ್ಲಿಲ್ಲ. 1908ರಲ್ಲಿ ಇವರು ಐರ್ಲೆಂಡಿಗೆ ಭೇಟಿಕೊಟ್ಟರು. 1909ರಲ್ಲಿ ಮೇಡಂ ಕಾಮ ಅವರ ವಂದೇಮಾತರಂ ಬಳಗವನ್ನು ಸೇರಲು ಪ್ಯಾರಿಸ್ಸಿಗೆ ಹೋದರು. ಒಂದನೆಯ ಮಹಾಯುದ್ಧಕ್ಕೆ ಸ್ವಲ್ಪ ದಿನಗಳ ಮೊದಲು ಬೀರೇಂದ್ರನಾಥರು ಬರ್ಲಿನ್‌ನಲ್ಲಿದ್ದಾಗ 'ಜಪಾನ್, ಏಷ್ಯದ ಶತ್ರು' ಎಂಬ ಲೇಖನ ಪ್ರಕಟಿಸಿದರು. ಇದು ಜರ್ಮನ್ ಸರ್ಕಾರದ ಗಮನ ಸೆಳೆಯಿತು. 1915–16ರಲ್ಲಿ ಬೀರೇಂದ್ರನಾಥರನ್ನು ಬರ್ಲಿನ್ ಸಮಿತಿಗೆ ಕಾರ್ಯದರ್ಶಿಯಾಗಿ ಆರಿಸಲಾಯಿತು. ಆ ಸಂದರ್ಭದಲ್ಲಿ ಇವರು ಚಟ್ಟೋ ಎಂದು ಪ್ರಸಿದ್ಧರಾದರು. 1915ರಲ್ಲಿ ಇವರು ಸ್ವಿಟ್ಜರ್ಲೆಂಡ್‌ಗೆ ಭೇಟಿ ನೀಡಿದಾಗ ಇವರ ಕೊಲೆಗೆ ಪ್ರಯತ್ನ ನಡೆಯಿತು. ಅಲ್ಲಿಯ ಪೊಲೀಸರು ಬೀರೇಂದ್ರನಾಥರಿಗೆ ರಕ್ಷಣೆ ನೀಡಿ ತಮ್ಮ ದೇಶದಿಂದ ಇವರನ್ನು ಗಡಿಪಾರು ಮಾಡಿದರು. ರಷ್ಯದ ಕ್ರಾಂತಿಯಾದ ಸ್ವಲ್ಪಕಾಲದ ಮೇಲೆ ಸ್ವೀಡನ್‌ನಲ್ಲಿ ಬರ್ಲಿನ್ ಸಮಿತಿಯ ಶಾಖೆಯೊಂದು ಸ್ಥಾಪಿತವಾಯಿತು. ಅಲ್ಲಿ ಇವರಿಗೆ ಅನೇಕ ಬೋಲ್ಷೆವಿಕ್ ನಾಯಕರ ಸಂಪರ್ಕವುಂಟಾಯಿತು.

ರಷ್ಯನ್ ಪರವಾದ ಕ್ರಾಂತಿಕಾರಿಗಳು 1920ರಲ್ಲಿ ಸ್ಟಾಕ್‌ಹೋಂನಲ್ಲಿ ಸೇರಿದ್ದ ಸಭೆಯಲ್ಲಿ ಬೀರೇಂದ್ರನಾಥರನ್ನು ಆರಿಸಿ ಮಾಸ್ಕೋಗೆ ಕಳುಹಿಸಿದರು. ಅಲ್ಲಿ ಇವರಿಗೆ ಟ್ರಾಟ್ಸ್ಕಿ ಮತ್ತು ಲೆನಿನ್‌ರ ನಿಕಟ ಸಂಪರ್ಕವುಂಟಾಯಿತು. ಭಾರತಕ್ಕೆ ಆಗಿನ ತುರ್ತು ಅಗತ್ಯವೆಂದರೆ ರಾಷ್ಟ್ರೀಯ ಚಳವಳಿಯೇ ಹೊರತು ಕಾರ್ಮಿಕ ಚಳವಳಿಯಲ್ಲ ಎಂದು ಬೀರೇಂದ್ರರು ವಾದಿಸಿದರು. ಇವರ ವಾದವನ್ನು ಲೆನಿನ್ ಕೂಡ ಮೆಚ್ಚಿದ. ಬೀರೇಂದ್ರರ ಮುಂದಿನ ಜೀವನ, ಕಾರ್ಯಗಳ ಬಗ್ಗೆ ಹೆಚ್ಚು ತಿಳಿದು ಬಂದಿಲ್ಲ. 1926–1927ರಲ್ಲಿ ಇವರಿಗೆ ತೀವ್ರ ಅನಾರೋಗ್ಯವಾಗಿದೆಯೆಂಬ ವರದಿ ಬಂದಿತ್ತು. ಟ್ರಾಟ್ಸ್ಕಿನೊಂದಿಗೆ ಇವರು ಸ್ನೇಹದಿಂದ ಇದ್ದುದಕ್ಕಾಗಿ ಸ್ಟಾಲಿನ್ ಇವರನ್ನು ಬಂಧನದಲ್ಲಿರಿಸಿದನೆಂದೂ ಇವರು ಸಾಯುವ ಮುನ್ನ ರಷ್ಯದ ಪೌರತ್ವ ಪಡೆದುಕೊಂಡಿದ್ದರೆಂದೂ ಹೇಳಲಾಗಿದೆ. ಇವರು 1946ರಲ್ಲಿ ಹೃದಯಾಘಾತದಿಂದ ನಿಧಾನ ಹೊಂದಿದರೆಂದು ಪ್ರತೀತಿಯಿದೆಯಾದರೂ ಹೀಗೆಂದು ಅಧಿಕೃತ ವರದಿಯಿಲ್ಲ.

ಬೀರೇಂದ್ರನಾಥ ಚಟರ್ಜಿಯವರದು ಪ್ರಗತಿಪರ ದೃಷ್ಟಿ. ಜಾತಿಪದ್ಧತಿಯನ್ನೂ ಅಸ್ಪೃಶ್ಯತೆಯನ್ನೂ ಇವರು ಖಂಡಿಸುತ್ತಿದ್ದರು. ಪಾಶ್ಚಾತ್ಯ ಶಿಕ್ಷಣದ ಬಗ್ಗೆ ಇವರಿಗೆ ಒಲವಿತ್ತು. ಭಾರತದ ಎಲ್ಲ ಬಗೆಯ ಆರ್ಥಿಕ ಕಷ್ಟನಷ್ಟಗಳಿಗೆ ಬ್ರಿಟಿಷ್ ಆಡಳಿತವೇ ಕಾರಣವಾದ್ದರಿಂದ ಭಾರತದಲ್ಲಿ ಬ್ರಿಟಿಷರ ಆಡಳಿತವನ್ನು ಸಂಪೂರ್ಣವಾಗಿ ಕೊನೆಗಾಣಿಸಬೇಕೆಂಬುದು ಬೀರೇಂದ್ರನಾಥರ ಗುರಿಯಾಗಿತ್ತು. ಬ್ರಿಟಿಷ್ ರೂಲ್ ಇನ್ ಇಂಡಿಯ ಕಂಡೆಮ್ಡ್ ಬೈ ದಿ ಬ್ರಿಟಿಷ್ ದೆಮ್‌ಸೆಲ್ವ್ಸ್, ಸೋಷಿಯಲಿಸ್ಟ್ ಕಾನ್ಫರೆನ್ಸ್ ಆನ್ ಬ್ರಿಟಿಷ್ ರೂಲ್ ಇನ್ ಇಂಡಿಯ ಎಂಬ ಇವರ ಕೃತಿಗಳಲ್ಲಿ ಈ ಭಾವನೆಗಳು ವ್ಯಕ್ತವಾಗಿವೆ. ಯುರೋಪಿನ ಒಂದು ಬ್ರಿಟಿಷ್‌ವಿರೋಧಿ ಪತ್ರಿಕೆಯಾಗಿದ್ದ ತಲ್ವಾರ್‌ನಲ್ಲಿ ಇವರ ಲೇಖನಗಳು ಪ್ರಕಟವಾಗುತ್ತಿದ್ದುವು. ಬೀರೇಂದ್ರನಾಥರು ಕ್ರಾಂತಿವಿಧಾನವನ್ನು ಒಪ್ಪಿದ್ದರಾದರೂ ಭಯೋತ್ಪಾದಕ ಚಟುವಟಿಕೆಗಳನ್ನು ಸಂಪೂರ್ಣವಾಗಿ ಸಮರ್ಥಿಸುತ್ತಿರಲಿಲ್ಲ. ಇಂಥ ಚಟುವಟಿಕೆಗಳನ್ನು ಕೊನೆಗೊಳಿಸಬೇಕೆಂಬುದು ತಮ್ಮ ಇಚ್ಛೆಯಾದರೂ ಇವುಗಳ ದಮನಕಾರ್ಯದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ತಾವು ನೆರವು ನೀಡುವುದಿಲ್ಲವೆಂದು 1919ರಲ್ಲಿ ಇವರು ಬರೆದಿದ್ದರು. *

**ಚಟರ್ಜಿ, ರಮಾನಂದ :** 1865–1943. ಬಂಗಾಳದ ಪ್ರಖ್ಯಾತ ಪತ್ರಿಕೋದ್ಯಮಿ, ವಿದ್ವಾಂಸ; 'ಪ್ರಬಾಸಿ, ಮಾಡರ್ನ್ ರಿವ್ಯೂ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ. ಬಂಕುರಾ ಪಟ್ಟಣದಲ್ಲಿ ಸಂಸ್ಕೃತ ವಿದ್ವಾಂಸರ ಮನೆತನದಲ್ಲಿ ಜನನ. ತಂದೆ ಶ್ರೀನಾಥ್. ರಮಾನಂದರು ಬಂಕುರಾದ ಶಾಲೆಗಳಲ್ಲಿ ಆರಂಭಿಕ ಶಿಕ್ಷಣ ಪಡೆದರು. ಅಲ್ಲಿಯ ಪ್ರೌಢ ಇಂಗ್ಲಿಷ್ ಶಾಲೆಯಲ್ಲಿದ್ದಾಗ ಕೇದಾರನಾಥ ಕುಲಪಿಯೆಂಬ ಗಣಿತ ಅಧ್ಯಾಪಕರ ಸಂಪರ್ಕದಿಂದ ಬ್ರಹ್ಮಸಮಾಜದೊಂದಿಗೆ ರಮಾನಂದರ ಸಂಬಂಧ ಬೆಳೆಯಿತು. ಇವರು ಕೇಶವಚಂದ್ರಸೇನರು ಕೋಲ್ಕತ್ತದಿಂದ ಹೊರಡಿಸುತ್ತಿದ್ದ ಸುಲಭಸಮಾಚಾರ ಎಂಬ ವಾರಪತ್ರಿಕೆಯ ಓದುಗರಾದರು. ರಮಾನಂದರು ಕಾಲೇಜು ಪ್ರವೇಶಪರೀಕ್ಷೆಯಲ್ಲಿ ನಾಲ್ಕನೆಯವರಾಗಿ ಉತ್ತೀರ್ಣರಾಗಿ

ವಿದ್ಯಾರ್ಥಿವೇತನ ಪಡೆದು ಕೋಲ್ಕತ್ತದ ಪ್ರೆಸಿಡೆನ್ಸಿ ಕಾಲೇಜನ್ನು ಸೇರಿದರು. ಅಲ್ಲಿ ಪ್ರಾಧ್ಯಾಪಕರಾಗಿದ್ದ ಜಗದೀಶಚಂದ್ರ ಬೋಸರ ಪರಿಚಯವಾಯಿತು. ಇದು ಆಜೀವಸ್ನೇಹವಾಗಿ ಪರಿಣಮಿಸಿತು. ರಮಾನಂದರಿಗೆ ಬರುತ್ತಿದ್ದ ವಿದ್ಯಾರ್ಥಿವೇತನವನ್ನು ಅಕ್ರಮವಾಗಿ ನಿಲ್ಲಿಸಿದಾಗ ಇವರು ಆ ಕಾಲೇಜನ್ನು ಬಿಟ್ಟು ಸೇಂಟ್ ಸೇವಿಯರ್ ಕಾಲೇಜು ಸೇರಿದರು. 1885ರಲ್ಲಿ ಎಫ್.ಎ. ಪರೀಕ್ಷೆಯಲ್ಲಿ ನಾಲ್ಕನೆಯ ಸ್ಥಾನಗಳಿಸಿದರು. ಮತ್ತೆ ಇವರಿಗೆ ವಿದ್ಯಾರ್ಥಿವೇತನ ದೊರಕಿತು. ಮುಂದೆ ವಿಜ್ಞಾನಾನಂದರಾಗಿ ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಹರಿಪ್ರಸನ್ನ ಚಟರ್ಜಿಯವರ ಸ್ನೇಹ ರಮಾನಂದರಿಗೆ ಆದದ್ದು ಇವರು ಆ ಕಾಲೇಜಿನಲ್ಲಿದ್ದಾಗಲೇ; ಅನಂತರ ಇವರು ಸಿಟಿ ಕಾಲೇಜನ್ನು ಸೇರಿ 1888ರಲ್ಲಿ ಬಿ.ಎ. ಯಲ್ಲೂ 1890ರಲ್ಲಿ ಇಂಗ್ಲಿಷ್ ಎಂ.ಎ.ಯಲ್ಲೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. 1886ರಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ, ರಮಾನಂದರಿಗೆ ಮನೋರಮಾ ದೇವಿಯೊಂದಿಗೆ ವಿವಾಹವಾಯಿತು. ರಮಾನಂದ ಚಟರ್ಜಿಯವರು ವಿದ್ಯಾರ್ಥಿಯಾಗಿದ್ದಾಗ ವ್ಯಾಸಂಗೇತರ ವಿಚಾರಗಳಲ್ಲೂ ವಿಶೇಷ ಆಸಕ್ತಿ ತಳೆದಿದ್ದರು. ಬ್ರಹ್ಮಸಮಾಜದ ಚಟುವಟಿಕೆಗಳಲ್ಲಿ ಇವರೂ ಭಾಗವಹಿಸುತ್ತಿದ್ದರು. ಸಿಟಿ ಕಾಲೇಜಿನ ಪ್ರಾಚಾರ್ಯರಾಗಿದ್ದ ಹೇರಂಬ ಚಂದ್ರ ಮೈತ್ರರು ಸಂಪಾದಿಸಿ ಪ್ರಕಟಿಸುತ್ತಿದ್ದ 'ದಿ ಇಂಡಿಯನ್ ಮೆಸೆಂಜರ್' ಪತ್ರಿಕೆಯ ಕಾರ್ಯದಲ್ಲಿ ಇವರು ನೆರವು ನೀಡಬೇಕಾಗಿತ್ತಲ್ಲದೆ ಅದಕ್ಕೆ ನಿಯತವಾಗಿ ಲೇಖನ ಬರೆಯಬೇಕಾಗಿತ್ತು. ಪ್ರಖ್ಯಾತ ಬಂಗಾಳಿ ವಾರಪತ್ರಿಕೆ 'ಸಂಜೀವನಿ'ಗೂ ಇವರು ಲೇಖನ ಬರೆಯುತ್ತಿದ್ದರು. ಅದನ್ನು ಸಾಧಾರಣ ಬ್ರಹ್ಮ ಸಮಾಜದ ಪ್ರಮುಖರಲ್ಲೊಬ್ಬರು ಹೊರಡಿಸುತ್ತಿದ್ದರು. ರಮಾನಂದರ ಸಾಮರ್ಥ್ಯವೂ ಪ್ರಗತಿಪರ ವಿಚಾರಗಳೂ ದಾಸಾಶ್ರಮದ ಕಾರ್ಯಕರ್ತರ ಗಮನ ಸೆಳೆದುವು. ಸಮಾಜಸೇವೆ ಆ ಸಂಸ್ಥೆಯ ಉದ್ದೇಶ. ರಮಾನಂದರು ಆ ಸಂಸ್ಥೆಯ ಚಟುವಟಿಕೆಗಳಲ್ಲೂ ಆಸಕ್ತಿ ತಳೆದರು. ಅದರ ಅಧ್ಯಕ್ಷರಾಗಿ ಆಯ್ಕೆಯಾದರು. ಇವರ ಸಲಹೆಯಂತೆ ಆರಂಭವಾದ 'ದಾಸಿ' ಎಂಬ ಪತ್ರಿಕೆಗೆ ಇವರೇ ಸಂಪಾದಕರಾಗಬೇಕಾಯಿತು. ಆ ಕಾಲದಲ್ಲೇ ಇವರು ಕುರುಡರಿಗಾಗಿ ಬಂಗಾಲಿಯಲ್ಲಿ ಬ್ರೇಲ್ ಲಿಪಿಯನ್ನು ರೂಪಿಸಿದ್ದು. ಎಂ.ಎ. ಪದವಿ ಗಳಿಸಿದ ಮೇಲೆ ರಮಾನಂದರು ಸಿಟಿ ಕಾಲೇಜನ್ನು ಸೇರಿದರು. ಮೊದಲ ಎರಡು ವರ್ಷ ಇವರು ಸಂಬಳವಿಲ್ಲದೆಯೇ ಗೌರವ ಅಧ್ಯಾಪಕರಾಗಿ ದುಡಿದರು.

ಬ್ರಹ್ಮಸಮಾಜದವರ ಪೈಕಿ ರಮಾನಂದರ ಮೇಲೆ ತುಂಬ ಪ್ರಭಾವ ಬೀರಿದ ವ್ಯಕ್ತಿ ಶಿವನಾಥಶಾಸ್ತ್ರಿ ಅವರ ವಿದ್ವತ್ತೂ ಶೀಲವೂ ರಮಾನಂದರ ಮೆಚ್ಚುಗೆ ಗಳಿಸಿದುವು. ಸರ್ಕಾರಿ ನಿಯಂತ್ರಣಕ್ಕೆ ಒಳಪಡೆನೆಂದು ಸಂಸ್ಕೃತ ಕಾಲೇಜಿನ ಪ್ರಾಚಾರ್ಯ ಹುದ್ದೆಗೆ ರಾಜೀನಾಮೆ ನೀಡಿದ್ದ ಶಿವನಾಥಶಾಸ್ತ್ರಿಯವರ ಮೇಲ್ಪಂಕ್ತಿಯನ್ನೇ ಅನುಸರಿಸಿ ರಮಾನಂದರು ಬ್ರಿಟಿಷ್ ವಿಶ್ವವಿದ್ಯಾಲಯದಲ್ಲಿ ಎಂ.ಎ. ಓದಲು ಬಂದಿದ್ದ ಸರ್ಕಾರಿ ವ್ಯಾಸಂಗವೇತನವನ್ನು ತಿರಸ್ಕರಿಸಿದರು. ಶಿವನಾಥಶಾಸ್ತ್ರಿಯವರು 'ಮುಕುಲ್' ಎಂಬ ಮಕ್ಕಳ ಮಾಸಪತ್ರಿಕೆ ಆರಂಭಿಸುವಂತೆ ಇವರನ್ನು ಒಪ್ಪಿಸಿ, ಇವರಿಗೆ ಆ ಕೆಲಸದಲ್ಲಿ ನೆರವಾದವರು. ಸಿಟಿ ಕಾಲೇಜಿನ ಹುದ್ದೆ ತ್ಯಜಿಸಿ ಅಲಹಾಬಾದಿನ ಕಾಯಸ್ಥ ಕಾಲೇಜಿನ ಪ್ರಿನ್ಸಿಪಾಲ್ ಆದ ರಮಾನಂದ ಚಟರ್ಜಿಯವರು 'ಪ್ರದೀಪ್' ಎಂಬ ಬಂಗಾಳಿ ಸಾಂಸ್ಕೃತಿಕ ಸಾಹಿತ್ಯಕ ಮಾಸಿಕಪತ್ರಿಕೆಯ ಸಂಪಾದಕರೂ ಆದರು. ಸ್ವಲ್ಪಕಾಲ 'ಪ್ರದೀಪ್' ಪತ್ರಿಕೆ ನಡೆಸಿ ಅದರ ಸಂಪಾದಕತ್ವಕ್ಕೆ ಇವರು ರಾಜೀನಾಮೆ ನೀಡಿದಾಗ ಸ್ವಂತ ಪತ್ರಿಕೆಯೊಂದನ್ನು ಪ್ರಾರಂಭಿಸುವ ಯೋಚನೆ ಮಾಡಿದರು. ಆರ್ಥಿಕವಾಗಿ ಇದರಿಂದ ಬಹಳ ಕಷ್ಟನಷ್ಟಗಳುಂಟಾಗುವುವೆಂಬುದನ್ನರಿತೂ 'ಪ್ರಬಾಸಿ' ಎಂಬ ಬಂಗಾಳಿ ಪತ್ರಿಕೆಯನ್ನಾರಂಭಿಸಿದರು. ಕಾಯಸ್ಥ ಕಾಲೇಜಿನ ಆಡಳಿತವರ್ಗದೊಂದಿಗೆ ಭಿನ್ನಾಭಿಪ್ರಾಯ ಬಂದ ಫಲವಾಗಿ ಇವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. 'ಪ್ರಬಾಸಿಯ' ಕೆಲಸ ಮುಂದುವರಿಯಿತು. ಅದು ಅತ್ಯಂತ ಜನಪ್ರಿಯವಾಯಿತು. ಪ್ರಬಾಸಿ ಪತ್ರಿಕೆ ತರಿಸದ ಮನೆ ಸಂಪೂರ್ಣವಲ್ಲವೆಂದು ಸುಸಂಸ್ಕೃತ ಜನ ಪರಿಭಾವಿಸುವ ಮಟ್ಟಿಗೆ ಅದು ಯಶಸ್ಸು ಗಳಿಸಿತು. ಸ್ವಲ್ಪ ಕಾಲಾನಂತರ ಇವರು 'ಮಾಡರ್ನ್ ರಿವ್ಯೂ' ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನಾರಂಭಿಸಿದರು (1906). ಅದು ಬಹುಬೇಗ ಪ್ರಸಿದ್ಧವಾಯಿತು; ಪ್ರತಿಭೆಯ ಸೆಲೆಯಾಯಿತು. ರೆವರೆಂಡ್ ಸಿ. ಎಫ್. ಆಂಡ್ರ್ಯೂಸ್, ಸೋದರಿ ನಿವೇದಿತಾ, ರೆವರೆಂಡ್ ಜೆ.ಟಿ. ಸಂಡರ್ಲೆಂಡ್ ಮೊದಲಾದ ರಾಷ್ಟ್ರೀಯ, ಅಂತಾರಾಷ್ಟ್ರೀಯ ಖ್ಯಾತಿಯ ಲೇಖಕರು ಅದಕ್ಕಾಗಿ ಬರೆಯುತ್ತಿದ್ದರು. ರವೀಂದ್ರರ ಕವನಗಳು 'ಪ್ರಬಾಸಿ'ಯಲ್ಲೂ ಅವುಗಳ ಇಂಗ್ಲಿಷ್ ಅನುವಾದಗಳು ಮಾಡರ್ನ್ ರಿವ್ಯೂ ದಲ್ಲೂ ಪ್ರಕಟವಾಗುತ್ತಿದ್ದವು. ನಾಡಿನ ಕಲಾವಿದರ ಕಲಾಕೃತಿಗಳನ್ನು ಮಾರ್ಡನ್ ರಿವ್ಯೂ ಪತ್ರಿಕೆಯಲ್ಲಿ ಅಚ್ಚು ಮಾಡಿಸುವ ಸಂಪ್ರದಾಯವನ್ನು ಇವರು ಇಟ್ಟುಕೊಂಡಿದ್ದರು. ಇವರು ಬರೆಯುತ್ತಿದ್ದ ಸಂಪಾದಕೀಯ ಟಿಪ್ಪಣಿಗಳು ಅತ್ಯಂತ ಅಮೂಲ್ಯವೆಂದು ನಾಡಿನ ವಿಚಾರವಂತರೂ ವಿದ್ವಾಂಸರೂ ಪರಿಗಣಿಸಿದ್ದರು.

1926ರಲ್ಲಿ ಲೀಗ್ ಆಫ್ ನೇಷನ್ಸ್ ಆಮಂತ್ರಣದ ಮೇರೆಗೆ ರಮಾನಂದರು ಜಿನೀವಕ್ಕೆ ಹೋಗಿ ಅಲ್ಲಿ ಆ ಸಂಸ್ಥೆ ಕೆಲಸ ಮಾಡುವ ಬಗೆಯನ್ನು ವೀಕ್ಷಿಸಿದರು. ಐರೋಪ್ಯ ದೇಶಗಳಲ್ಲಿ ಸಂಚರಿಸಿ ಬಂದರು. ಮರುವರ್ಷ ರಷ್ಯಕ್ಕೆ ಭೇಟಿ ಕೊಡಬೇಕೆಂದು ಇವರಿಗೆ ಆಹ್ವಾನ ಬಂತು. ಆದರೆ ಅಲ್ಲಿ ವ್ಯಕ್ತಿಸ್ವಾತಂತ್ರ್ಯವಿಲ್ಲವೆಂಬ ಕಾರಣದಿಂದ ಇವರು ಅಲ್ಲಿಗೆ ಹೋಗಲಿಲ್ಲ. ಮೊದಲು ರಾಷ್ಟ್ರೀಯ ಕಾಂಗ್ರೆಸಿನಲ್ಲಿದ್ದ ರಮಾನಂದರು ಸೂರತ್ ಅಧಿವೇಶನದ ಅನಂತರ ಅದನ್ನು ತ್ಯಜಿಸಿ ಹಿಂದೂ ಮಹಾಸಭೆಯನ್ನು ಸೇರಿದರು. ಇದಕ್ಕಾಗಿ ಹಲವರು ಇವರನ್ನು ಟೀಕಿಸಿದರು. 'ಪ್ರಬಾಸಿ', 'ಮಾಡರ್ನ್ ರಿವ್ಯೂ' ಪತ್ರಿಕೆಗಳ ಸೋದರ ಪತ್ರಿಕೆಯಾಗಿ ಇವರು ಆರಂಭಿಸಿದ್ದ ಹಿಂದೀ ಮಾಸಪತ್ರಿಕೆಯಾದ 'ವಿಶಾಲಭಾರತ'ದ ಸಂಪಾದಕರಾಗಿದ್ದ ಪಂಡಿತ್ ಚತುರ್ವೇದಿಯವರು ರಮಾನಂದರನ್ನು ಟೀಕಿಸಿ ಸಂಪಾದಕೀಯವನ್ನು ಬರೆದು, ಅದನ್ನೂ ಅದರೊಂದಿಗೆ ತಮ್ಮ ರಾಜೀನಾಮೆಯನ್ನೂ ರಮಾನಂದರಿಗೆ ಕಳಿಸಿದರು. ಇವರು ಪತ್ರಿಕೆಯ ಮಾಲೀಕರಾದ್ದರಿಂದ ತಮ್ಮ ಈ ಸಂಪಾದಕೀಯವನ್ನು ತಡೆಹಿಡಿಯಲು ಇವರಿಗೆ ಹಕ್ಕುಂಟೆಂದೂ, ಹಾಗೆ ಮಾಡುವುದಾದಲ್ಲಿ ತಮ್ಮ ರಾಜೀನಾಮೆಯನ್ನು ಸ್ವೀಕರಿಸಬೇಕೆಂದೂ ಪತ್ರ ಬರೆದರು. ರಮಾನಂದರು ಇವೆರಡನ್ನೂ ಹಿಂದಿರುಗಿಸಿದರು. ಸಂಪಾದಕರಾಗಿ ಚತುರ್ವೇದಿಯವರಿಗೆ ತಮ್ಮನ್ನು ಟೀಕಿಸುವ ಸ್ವಾತಂತ್ರ್ಯವುಂಟೆಂದೂ ತಾವು ಅಡ್ಡ ಬರುವುದಿಲ್ಲವೆಂದೂ ಹೇಳಿದರು.

ರಮಾನಂದ ಚಟರ್ಜಿಯವರು ಹಿಂದೂ ಮಹಾಸಭೆಯ ಸೂರತ್ ಅಧಿವೇಶನ, ಪ್ರಬಾಸಿ ವಂಗಸಾಹಿತ್ಯ ಸಮ್ಮೇಳನದ ರಂಗೂನ್ ಅಧಿವೇಶನ, ವಂಗೀಯ ಸಾಹಿತ್ಯ ಸಮ್ಮೇಳನದ ವಾರ್ಷಿಕ ಅಧಿವೇಶನ ಇವುಗಳ ಅಧ್ಯಕ್ಷರಾಗಿದ್ದರು. ಬ್ರಿಟಿಷ್ ಆಳ್ವಿಕೆಯ ಅಕ್ರಮಗಳನ್ನು ಕುರಿತ ಅಧಿಕೃತ ಗ್ರಂಥವನ್ನು ಅಲಹಾಬಾದಿನ ಮೇಜರ್ ಬಿ.ಡಿ. ಬಸು ಅವರಿಂದ ಬರೆಯಿಸಿದರಲ್ಲದೆ, ತಾವು 'ಟುವರ್ಡ್ಸ್ ಹೋಮ್ ರೂಲ್' ಎಂಬ ಗ್ರಂಥವನ್ನು ರಚಿಸಿದರು. ಇವರ ಸಾಹಿತ್ಯಕೃತಿಗಳಲ್ಲಿ ಕೃತ್ತಿವಾಸ ರಾಮಾಯಣದ ಬಂಗಾಲಿ ರೂಪ, ಅರೇಬಿಯನ್ ನೈಟ್ಸ್‌ನ ಅನುವಾದ (ಅರಬ್ಯ ಉಪನ್ಯಾಸ್), ಕಾಶೀರಾಮ ದಾಸನ ಮಹಾಭಾರತದ ಬಂಗಾಲಿ ಅವತರಣ ಮುಖ್ಯವಾದವು. ರಮಾನಂದ ಚಟರ್ಜಿಯವರ ವ್ಯಕ್ತಿತ್ವದ ವೈಶಿಷ್ಟ್ಯವೆಂದರೆ ಇವರಿಗಿದ್ದ ಆತ್ಮವಿಶ್ವಾಸ, ತಮ್ಮ ನಿಲುವಿನಲ್ಲಿ ದೃಢನಂಬಿಕೆ, ಜೆ.ಟಿ.ಸಂಡರ್‌ಲೆಂಡರ 'ಇಂಡಿಯ ಅಂಡರ್ ಬಾಂಡೇಜ್' ಎಂಬ ಇಂಗ್ಲಿಷ್ ಗ್ರಂಥವನ್ನು ಧೈರ್ಯವಾಗಿ ಪ್ರಕಟಿಸಿದರು. ಕೂಡಲೇ ಪೋಲೀಸರು ಅದರ ಪ್ರತಿಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು, ಇವರನ್ನು ಜೈಲುಶಿಕ್ಷೆಗೆ ಗುರಿಪಡಿಸಿದರು. ಇವರು ಬಹಳ ಭಾರಿ ದಂಡವನ್ನೂ ತೆರಬೇಕಾಯಿತು. ಆದರೂ ಇವರು ತಮ್ಮ ಪ್ರಸನ್ನಚಿತ್ತವನ್ನು ಕಳೆದುಕೊಳ್ಳಲಿಲ್ಲ. ರಮಾನಂದ ಚಟರ್ಜಿಯವರು 1943ರಲ್ಲಿ ತೀರಿಕೊಂಡರು. (ಜೆ.ಆರ್.ಪಿ.)

**ಚಟರ್ಜಿ, ಸುನೀತಿ ಕುಮಾರ :** 1890–1977. ಬಂಗಾಳೀ ಸಾಹಿತ್ಯ ಸಂಸ್ಕೃತಿಗಳಲ್ಲದೆ ಭಾಷಾಶಾಸ್ತ್ರ ಮತ್ತು ಅನೇಕ ಭಾಷೆಗಳ ಮೇಲೆ ಪ್ರಭುತ್ವ ಪಡೆದಿರುವ ಇವರು ಅಂತಾರಾಷ್ಟ್ರೀಯ ವಿಖ್ಯಾತಿಯನ್ನು ಗಳಿಸಿರುವ ಭಾರತೀಯ ವಿದ್ವಾಂಸರು.

ಇವರು ಕೋಲ್ಕತ್ತೆಯ ಶಿವಪುರದಲ್ಲಿ ಜನಿಸಿದರು. ಇವರದ್ದು ಹತ್ತಾರು ತಲೆಮಾರಿನಿಂದ ವೈದುಷ್ಯಕ್ಕೆ ಹೆಸರಾದ ಬ್ರಾಹ್ಮಣವಂಶ (ಸಾಮವೇದ, ಕಾಶ್ಯಪಗೋತ್ರ). ಮಹಾರಾಜ ಬಲ್ಲಾಳ ಸೇನ (1158–79) ಇವರ ಪೂರ್ವ ವಂಶೀಯರೊಬ್ಬರಿಗೆ ಚತುತಿ ಎಂಬ ಗ್ರಾಮವನ್ನು ದಾನ ಮಾಡಿ ಮನ್ನಣೆಯಿತ್ತ ದಾಖಲೆಯಿದೆ. ಇವರ ತಂದೆ ಬಾಬು ಹರಿದಾಸ ಚಟರ್ಜಿ; ನಾಲ್ಕು ಜನ ಸಹೋದರರಲ್ಲಿ ಇವರು ಎರಡನೆಯವರು. ಇವರ ವಿದ್ಯಾರ್ಥಿದಶೆಯೆಲ್ಲ ಕೋಲ್ಕತ್ತ ನಗರದಲ್ಲಿ ಕಳೆಯಿತು. ಇಂಗ್ಲಿಷ್ ಭಾಷೆಯಲ್ಲಿ ಎಂ.ಎ. ಪರೀಕ್ಷೆಯಲ್ಲಿ ಪ್ರಥಮವರ್ಗದಲ್ಲಿ ತೇರ್ಗಡೆಯಾಗಿ ಅನಂತರ ಇವರು ಲಂಡನ್ ವಿಶ್ವವಿದ್ಯಾಲಯದಲ್ಲಿ ಧ್ವನಿಶಾಸ್ತ್ರದಲ್ಲಿ ವಿಶೇಷ ಪ್ರಾವೀಣ್ಯ ಪಡೆದು ಡಿ.ಲಿಟ್. ಪದವಿಗಳಿಸಿದರು. ಅಲ್ಲಿ ಡೇನಿಯಲ್ ಜೋನ್ಸ್, ಎಫ್. ಡಬ್ಲ್ಯು ತಾಮಸ್, ಎಲ್.ಡಿ. ಬಾರ್ನೆಟ್ ಮುಂತಾದ

ಪ್ರಾಚ್ಯಭಾಷಾ ಪಂಡಿತರೊಂದಿಗೆ ಸಂಶೋಧನೆಗಳಲ್ಲಿ ಆಸಕ್ತರಾದರು. ಪ್ಯಾರಿಸ್ ನಗರದಲ್ಲಿಯೂ ಕೆಲವು ಕಾಲ ಇದ್ದು ಫ್ರೆಂಚ್ ವಿದ್ವಾಂಸರ ಗೌರವವನ್ನು ಪಡೆದರು. 1922ರಲ್ಲಿ ಕೋಲ್ಕತ್ತ ವಿಶ್ವವಿದ್ಯಾಲಯದಲ್ಲಿ ಖೈರಾ ಭಾಷಾಶಾಸ್ತ್ರ ಪೀಠದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಇವರ ಸಂಶೋಧನೆಯ ಉದ್ಗ್ರಂಥ–ಬಂಗಾಳ ಭಾಷೆಯ ಉತ್ಪತ್ತಿ ಮತ್ತು ವಿಕಾಸ (1300 ಪುಟ) ಎಂಬುದು 1926ರಲ್ಲಿ ಪ್ರಕಟವಾಯಿತು. 1927ರಲ್ಲಿ ರವೀಂದ್ರನಾಥ ಠಾಕೂರರ ಪರಿವಾರದವರಾಗಿ ಮಲಯ, ಸುಮಾತ್ರ, ಜಾವ, ಬಾಲಿ, ಸಯಾಂ ಮುಂತಾದ ದೇಶಗಳಲ್ಲಿ ಪ್ರವಾಸಮಾಡಿ ಅಲ್ಲೆಲ್ಲ ಭಾರತೀಯ ಕಲೆಸಂಸ್ಕೃತಿಯನ್ನು ಕುರಿತು ಭಾಷಣಮಾಡಿ ಬಂದರು. 1935ರಲ್ಲಿ ಯುರೋಪನ್ನು ಸಂಚರಿಸಿ ವಿದ್ವತ್ಸಭೆಗಳಲ್ಲಿ ಭಾಗವಹಿಸಿ ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸವಿತ್ತರು. 1936ರಲ್ಲಿ ಬರ್ಮ, ಯುರೋಪು ಹಾಗೂ ಅಮೆರಿಕ ಯಾತ್ರೆಗಳು ಒದಗಿದವು. ಇಂಡೋ ಆರ್ಯನ್ ಭಾಷಾವರ್ಗ ಮತ್ತು ಹಿಂದಿ ; ಭಾರತೀಯ ಭಾಷಾಸಮಸ್ಯೆ ಮುಂತಾದ ಗ್ರಂಥಗಳು ಪ್ರಕಟವಾದವು. ಬಂಗಾಳೀ ಸಾಹಿತ್ಯದಲ್ಲೂ ಇವರು ಉತ್ತಮ ಗದ್ಯಕಾರರೆಂದು ಹೆಸರಾಗಿದ್ದಾರೆ. ವಂಗೀಯ ಸಾಹಿತ್ಯ ಪರಿಷತ್, ಕೋಲ್ಕತ್ತ ; ನಾಗರೀ ಪ್ರಚಾರಿಣೀ ಸಭಾ, ಕಾಶೀ ; ಭಂಡಾರಕರ್ ಸಂಶೋಧನ ಸಂಸ್ಥೆ, ಪುಣೆ–ಇತ್ಯಾದಿ ಭಾರತೀಯ ಸಂಶೋಧನ ಸಂಸ್ಥೆಗಳಲ್ಲೂ ಲೀಗ್ ಆಫ್ ನೇಷನ್ಸ್, ಜಿನೀವಾ; ಧ್ವನಿಶಾಸ್ತ್ರ ಸಮ್ಮೇಳನ, ಲಂಡನ್; ರಾಯಲ್ ಏಷ್ಯಾಟಿಕ್ ಸೊಸೈಟಿ, ಲಂಡನ್ ಮುಂತಾದ ಹತ್ತಾರು ವಿದೇಶೀಯ ಉನ್ನತ ಸಂಶೋಧನ ಸಂಸ್ಥೆಗಳಲ್ಲೂ ಇವರಿಗೆ ಗೌರವದ ಸದಸ್ಯತ್ವವಿದೆ. 1954ರಲ್ಲಿ ಆಫ್ರಿಕಕ್ಕೂ 1955ರಲ್ಲಿ ಚೀನಕ್ಕೂ ಇವರು ಭೇಟಿ ನೀಡಿದ್ದಾರೆ. ಭಾರತ ಸರ್ಕಾರ 1955ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿನೀಡಿದೆ. ರವೀಂದ್ರನಾಥಠಾಕೂರರು ಸ್ಥಾಪಿಸಿದ ವಿಶ್ವಭಾರತಿ ವಿಶ್ವವಿದ್ಯಾಲಯದ ಆಡಳಿತ ಸಮಿತಿಯಲ್ಲಿ ಇವರು ಆರಂಭದಿಂದಲೂ ಕೆಲಸ ಮಾಡಿದ್ದಾರೆ ; ಅಮೆರಿಕೆಯ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯ ಇವರನ್ನು ಗೌರವ ಪ್ರಾಧ್ಯಾಪಕರಾಗಿ ನೇಮಿಸಿತ್ತು. ಠಾಕೂರರು ಇವರಿಗೆ ಭಾಷಾಚಾರ್ಯ ಎಂಬ ಬಿರುದನ್ನಿತ್ತಿದ್ದಾರೆ.

ಚಟರ್ಜಿಯವರು ಸ್ವತಂತ್ರ ಭಾರತದ ರಾಜಕಾರಣದಲ್ಲಿಯೂ ಇದ್ದು ಅಪಾರ ಸೇವೆ ಸಲ್ಲಿಸಿದ್ದಾರೆ. ಭಾರತ ಸಂಸತ್ತಿನ ಸದಸ್ಯರಾಗಿ, ನಾನಾ ವಿಶ್ವವಿದ್ಯಾಲಯಗಳ ಸಂಶೋಧನ ಸಂಸ್ಥೆಗಳ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಏಷ್ಯ, ಯುರೋಪುಗಳ ಅನೇಕ ಭಾಷೆಗಳಲ್ಲಿ ಪ್ರಭುತ್ವ ಪಡೆದು ವಿಶ್ವಪರ್ಯಟನ ಮಾಡಿ ವಿಶ್ವವಿಖ್ಯಾತಿಯನ್ನು ಗಳಿಸಿ ನೂರಾರು ಸಂಶೋಧನ ಪ್ರಬಂಧಗಳಿಂದಲೂ ಪುಸ್ತಕರಚನೆಯಿಂದಲೂ ಭಾಷಣ ಕೌಶಲದಿಂದಲೂ ವಿಶ್ವದ ವಿದ್ವನ್ಮಂಡಲಿಯಲ್ಲಿಯೇ ತಮ್ಮದೊಂದು ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಇಂಡಿಯನ್ ಲಿಂಗ್ವಿಸ್ಟಿಕ್ ಸೊಸೈಟಿಯು ಚಟರ್ಜಿಯವರ ಅರವತ್ತನೆಯ ಹುಟ್ಟು ಹಬ್ಬದ ಸವಿನೆನಪಿಗಾಗಿ ಚಟರ್ಜಿ ಗೌರವ ಗ್ರಂಥವೊಂದನ್ನು ಪ್ರಕಟಿಸಿದೆ (1955). ಅವರು ಪಶ್ಚಿಮ ಬಂಗಾಲದ ವಿಧಾನ ಮಂಡಲದ ಸದಸ್ಯರಾಗಿಯೂ (1952–58), ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಅವರು 1977ರ ಮೇ 29 ರಂದು ಕೋಲ್ಕತದಲ್ಲಿ ನಿಧನರಾದರು. ಅವರ ಮನೆ ಈಗ 'ಫ್ಯಾಬ್ ಇಂಡಿಯ' ದ ಅಂಗಡಿಮಳಿಗೆಯಾಗಿದೆ. **(ಕೆ.ಕೆ.)**

**ಚಟುವಟಿಕೆಗಳು :** ಜೀವನವನ್ನು ಅರ್ಥಪೂರ್ಣವೂ ಉಪಯುಕ್ತವೂ ಆಗುವಂತೆ ಮಾಡಿಕೊಳ್ಳಲು ವಿದ್ಯಾರ್ಥಿಗಳು, ಇತರರು, ಶಾಲೆಯ ಒಳಗೂ ಹೊರಗೂ ಕೈಗೊಳ್ಳುವ ಕಾರ್ಯಕಲಾಪಗಳು (ಆಕ್ಟಿವಿಟೀಸ್). ಶಾಲೆಗಳಲ್ಲಂತೂ ಇವುಗಳ ಪ್ರಾಮುಖ್ಯ ಹೇಳತೀರದು. ಮನಸ್ಸಿಗೆ ಬಂದುದನ್ನು, ಬುದ್ಧಿಗೆ ಹೊಳೆದುದನ್ನು, ಮಾಡಿನೋಡುವ ಕುತೂಹಲ ಮಕ್ಕಳಲ್ಲಿ ಸಹಜವಾಗಿರುತ್ತದೆ. ಹಾಗೆ ಮಾಡಿ ನೋಡಿದಾಗಲೇ ಅಮೂರ್ತವಾಗಿ ತಾವು ಕಲಿತ ವಿಷಯಗಳು ಅವರ ಅನುಭವಕ್ಕೆ ಸೇರಿಹೋಗಿ ಅವರವಾಗುತ್ತವೆ. ಓದುವ ಮಕ್ಕಳಿಗೆ ಒಂದಿಲ್ಲೊಂದು ಬಗೆಯ ಚಟುವಟಿಕೆಯನ್ನು ಒದಗಿಸುವ ಪರಿಪಾಠ ಬಹಳ ಹಿಂದಿನಿಂದಲೂ ನಡೆದು ಬರುತ್ತಿದೆ. ಆದರೆ ಚಟುವಟಿಕೆಗಳನ್ನೇ ಬೋಧನಮಾರ್ಗವಾಗಿ ಬಳಸಲು ಪ್ರಾರಂಭಿಸಿದುದು ಈಚೆಗೆ. ಅಂಥ ಶಾಲೆಗಳನ್ನು ಚಟುವಟಿಕೆ ಶಾಲೆಗಳೆಂದೇ **(ನೋಡಿ)** ಕರೆಯುತ್ತಾರೆ.

ಮೊದಲು ಪಠ್ಯ ವಿಷಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನೋಡೋಣ. ಅಭ್ಯಾಸ ಪತ್ರಿಕೆಯಂತೆ ಆಯಾ ವಿಷಯಗಳ ಪಾಠ ಕಲಿಸಲು ಬೇಕಾಗುವ ಚಟುವಟಿಕೆಗಳನ್ನು ಪಠ್ಯಚಟುವಟಿಕೆಗಳೆಂದು ಕರೆಯಲಾಗುತ್ತದೆ. ಗಣಿತ, ಭಾಷೆ, ಸಮಾಜವಿಜ್ಞಾನ, ಶಾಸ್ತ್ರೀಯ ವಿಷಯ, ಚಿತ್ರಕಲೆ, ಇತಿಹಾಸ, ಭೂಗೋಳ ಮುಂತಾದ ವಿಷಯಗಳ ಪಾಠಗಳು ಒಂದಲ್ಲೊಂದು ಹೊಂದಿಕೆಯ ಪೂರ್ವಯೋಜಿತ ಚಟುವಟಿಕೆಯ ಮುಖಾಂತರ ನಡೆಯಬಹುದು. ರೇಖಾಗಣಿತ ಅಥವಾ ಕ್ಷೇತ್ರಫಲ ಲೆಕ್ಕದಲ್ಲಿ ಆಯತದ ಕಲ್ಪನೆಗಾಗಿ ತರಗತಿಯ ವಿದ್ಯಾರ್ಥಿಗಳು ತಮ್ಮ ಕೋಣೆಯಲ್ಲಿ ನಿರೀಕ್ಷಣೆ ಮಾಡುತ್ತ ಉಪಕರಣಗಳನ್ನು ಉಪಯೋಗಿಸುತ್ತ ಅದರ ಉದ್ದ, ಅಗಲಗಳನ್ನು ಅಳೆದು ನೋಡುವ ಚಟುವಟಿಕೆಯಲ್ಲಿ ತೊಡಗಬಹುದು. ಭೂಗೋಳ, ವಿಜ್ಞಾನ, ಭೂಮಿತಿ ವಿಷಯಗಳನ್ನು ಅರಿಯಲು ಶಾಲೆಯ ತೋಟ, ಸುತ್ತಲಿನ ಉದ್ಯಾನವನಗಳೇ ಚಟುವಟಿಕೆಗಳ ಕ್ಷೇತ್ರಗಳಾಗಿರುತ್ತವೆ. ಪಾಠಕ್ಕಿಂತ ಆ ಪಾಠ ನಡೆಯಿಸುವ ಚಟುವಟಿಕೆಯ ವಿಧಾನವೇ ಹೆಚ್ಚಿನದು. ಕೈಕೆಲಸ, ಹೊಲಿಗೆ, ಸಸ್ಯವಿಜ್ಞಾನ ಮುಂತಾದ ವಿಷಯಗಳಲ್ಲಂತೂ ಚಟುವಟಿಕೆಯ ಮುಖಾಂತರವೇ ಸಾಗಬೇಕು. ವಿಜ್ಞಾನ ಬೋಧನೆಯಲ್ಲಂತೂ ಪ್ರಯೋಗಶಾಲೆಗಳಲ್ಲಿ, ಶಾಲೆಯ ಹೊರಗಡೆಗಳಲ್ಲಿ ನಡೆಸುವ ಅನೇಕಾನೇಕ ಪ್ರಯೋಗಗಳೇ ಸಮರ್ಪಕ ಚಟುವಟಿಕೆಗಳಾಗುತ್ತದೆ.

ಸಹಪಠ್ಯಚಟುವಟಿಕೆಗಳು ಮತ್ತು ಪಠ್ಯೇತರ ಚಟುವಟಿಕೆಗಳು: ನವಶಿಕ್ಷಣ ಮಾಲಿಕೆಯಲ್ಲಿ ಅಭ್ಯಾಸ ಅಂದರೆ ಜೀವನ; ಜೀವನ ಎಂದರೆ ಅಭ್ಯಾಸ. ಕೊಟ್ಟ ಅಭ್ಯಾಸ ಪ್ರಕ್ರಿಯೆಯಂತೆ ಕೆಲ ವಿಷಯಗಳನ್ನು ಕಡ್ಡಾಯವಾಗಿ ಪಠ್ಯವಿಷಯಗಳಂತಲೇ ಅಭ್ಯಾಸ ಮಾಡಬೇಕಾಗುತ್ತದೆ. ಶಿಕ್ಷಣ ಪರಿಪೂರ್ಣ ಜೀವನಕ್ಕೆ ಹೊಂದುವಂತಾಗಲು ಆ ವಿಷಯಗಳನ್ನು ಅರಿಯಲು ಶಾಲೆಯ ಹೊರಗೆ ಹೋಗಬೇಕಾಗುತ್ತದಲ್ಲದೆ ಹಾಗೆ ಮಾಡುವುದು ಹೊಸ ಶೈಕ್ಷಣಿಕ ದೃಷ್ಟಿಯಿಂದ ಅತಿ ಅವಶ್ಯ. ಪ್ರವಾಸದಿಂದ ಬರುವ ಅನುಭವವೂ ಜ್ಞಾನವೂ ಯಥೇಚ್ಛ. ಶಾಲೆಯೊಳಗಿನ ಶಿಕ್ಷಣಕ್ಕೆ ಇದು ಪೂರಕವಾಗುತ್ತದೆ. ನಾಡಿನ ಹಾಗೂ ಜನಾಂಗದ ಇತಿಹಾಸ ಪರಂಪರೆ ಮತ್ತು ಸಂಸ್ಕೃತಿಯನ್ನು ತಿಳಿದುಕೊಳ್ಳಲು ರಾಷ್ಟ್ರೀಯ ದಿನಾಚರಣೆ, ಮಹಾಪುರುಷರ ಜಯಂತಿ, ಭಾಷಣ, ಮನೋರಂಜನೆಯ ಕಾರ್ಯಕ್ರಮ ಮುಂತಾದ ಚಟುವಟಿಕೆಗಳು ನೆರವಾಗುತ್ತವೆ. ಪ್ರವಾಸ, ವಸ್ತುಸಂಗ್ರಹಾಲಯ ದರ್ಶನ ಇಂಥ ಕಾರ್ಯಕ್ರಮಗಳೂ ಅಗತ್ಯವಾಗುತ್ತವೆ. 'ಮಾಡುತ್ತ ಕಲಿ; ಕಲಿಯುತ್ತ ಮಾಡು' ಎಂಬ ಶಿಕ್ಷಣದ ಹೊಸ ತತ್ತ್ವವನ್ನು ಕಾರ್ಯಗತ ಮಾಡಲು ವಿದ್ಯಾರ್ಥಿಸಂಘ, ವಿದ್ಯಾರ್ಥಿಸದನ, ಮಂತ್ರಿಮಂಡಲ, ಚರ್ಚಾಕೂಟ, ಸೇವಾಸಂಘ, ಭಾಷಣಮಂಡಲ, ಸಹಕಾರಸಂಘ, ಸಹಕಾರಅಂಗಡಿ, ಬಾಲಚಮೂ ಚಟುವಟಿಕೆ ಮುಂತಾದ ವಿದ್ಯಾರ್ಥಿಸಂಸ್ಥೆಗಳು ನೆರವಾಗುತ್ತಿವೆ. ಇಂಥ ಸಂಸ್ಥೆಗಳ ಆಡಳಿತವನ್ನು ವಿದ್ಯಾರ್ಥಿಗಳೇ ತಮ್ಮ ತಮ್ಮೊಳಗೆ ವಹಿಸಿಕೊಂಡು ಸಾಗಿಸುತ್ತಾರೆ. ಇಂಥ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಯ ಕೈ, ಮೈ, ಮನಸ್ಸು ಪಳಗುತ್ತವೆ. ವ್ಯಕ್ತಿತ್ವದ ಓರೆಕೋರೆಗಳು ನೆರವಾಗುತ್ತವೆ. ಸಹಬಾಳ್ವೆಯ ಮರ್ಮ ತಿಳಿಯುತ್ತದೆ.

ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಚಟುವಟಿಕೆಗಳು ಬಹುಮಟ್ಟಿಗೆ ಮಕ್ಕಳ ಆಸಕ್ತಿಯ ಆಟಗಳ ರೂಪದಲ್ಲಿದ್ದರೆ ಮೇಲ್ದರ್ಜೆಯ ಶಿಕ್ಷಣಸಂಸ್ಥೆಗಳಲ್ಲಿ ಅವು ಉದ್ದೇಶ ಪೂರ್ವಕವೆನಿಸುವ ಕಾರ್ಯಕ್ರಮಗಳ ರೂಪವನ್ನು ತಾಳುತ್ತವೆ; ನಾಟಕ, ನೃತ್ಯ, ಲೇಖನ, ಚರ್ಚೆ, ವಿಚಾರಗೋಷ್ಠಿ, ಪ್ರಕಟಣೆ, ಸಂಶೋಧನೆ? ಇವೆಲ್ಲ ಅಂಥ ಚಟುವಟಿಕೆಗಳಲ್ಲಿ ಹಲವು.

ಒಟ್ಟಿನಲ್ಲಿ ಎಲ್ಲ ಹಂತದ ಶಿಕ್ಷಣಸಂಸ್ಥೆಗಳಲ್ಲೂ ಒಂದಲ್ಲ ಒಂದು ರೀತಿಯ ಚಟುವಟಿಕೆಯನ್ನು ಅಳವಡಿಸಲು ಅವಕಾಶವಿದೆ. ಇಂದು ಶಿಕ್ಷಣಕ್ಕೆ ಅಂಟಿಕೊಂಡು ಬಂದಿರುವ 'ಬರೀ ಪುಸ್ತಕದ ಕಲಿವು' ಎಂಬ ಅಪಖ್ಯಾತಿಯನ್ನು ಹೋಗಲಾಡಿಸಲು ನಮ್ಮ ಶಿಕ್ಷಣಸಂಸ್ಥೆಗಳು ಎಲ್ಲ ವಿಷಯಗಳಲ್ಲೂ ಎಲ್ಲ ಮಟ್ಟದಲ್ಲೂ ಸೂಕ್ತ ರೀತಿಯ ಹಾಗೂ ಫಲದಾಯಕವೆನ್ನಬಹುದಾದ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. **(ಆರ್.ಆರ್.ಕೆಯು.)**

**ಚಟುವಟಿಕೆಯ ಶಾಲೆ :** ಮಕ್ಕಳ ಬುದ್ಧಿ, ಭಾವ ಹಾಗೂ ದೇಹದ ಬೆಳವಣಿಗೆಗೆ ಸಹಕಾರಿಯಾದ ಒಂದಲ್ಲೊಂದು ಚಟುವಟಿಕೆ ಎಲ್ಲ ಶಾಲೆಗಳಲ್ಲೂ ಇರುತ್ತದಾದರೂ ಚಟುವಟಿಕೆಗಳನ್ನೇ ಕೇಂದ್ರವಾಗಿಸಿಕೊಂಡು ಶಾಲಾ ಪಠ್ಯವನ್ನು ಕ್ರಮಗೊಳಿಸಿಕೊಂಡಿರುವ ಶಾಲೆಗಳಿಗೆ ಈ ಹೆಸರಿದೆ (ಆಕ್ಟಿವಿಟಿ ಸ್ಕೂಲ್ಸ್). ಚಿಕ್ಕ ವಯಸ್ಸಿನಲ್ಲಿ ಮಕ್ಕಳು ಒಂದೇ ಸಮನೆ ಕುಳಿತು ಅಭ್ಯಾಸ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವರ ಅವಧಾನದ ವ್ಯಾಪ್ತಿ ಬಹಳ ಕಡಿಮೆಯದಾಗಿರುತ್ತದೆ. ಅಲ್ಲದೆ ಅವರು ಕಲಿವಿನ ಯಾವ ನಿರ್ದಿಷ್ಟ ಉದ್ದೇಶವನ್ನೂ ಹೊಂದಿರುವುದಿಲ್ಲ. ಅದು ಒಂದು ಬಲಾತ್ಕಾರದ ಕೆಲಸವೆಂದು ಅವರು ಭಾವಿಸುತ್ತಾರೆ; ಅಲ್ಲದೆ ಬಹುಬೇಗ ಅದರಿಂದವರು ಆಯಾಸ ಹೊಂದುತ್ತಾರೆ. ಆದ್ದರಿಂದ ಅವರನ್ನು ಬಲಾತ್ಕಾರಕ್ಕೆ ಒಳಪಡಿಸದೆ ತಮ್ಮ ಸ್ವಯಂಪ್ರವೃತ್ತಿಗಳ ಮತ್ತು ಉತ್ಕಟೇಚ್ಛೆಗಳ ಮೂಲಕ ಪ್ರೋತ್ಸಾಹಿಸಿ ಅವರ ಮನಸ್ಸನ್ನು ಹದಮಾಡಿ ಕಲಿವಿಗೆ ಅವಕಾಶ ಮಾಡಿ ಕೊಡಬೇಕು. ಈ ಅಂಶಗಳನ್ನು ಮನವರಿಕೆ ಮಾಡಿಕೊಂಡು ಅನೇಕ ವಿದ್ಯಾತಜ್ಞರು, ಮನೋವಿಜ್ಞಾನಿಗಳು ಮಕ್ಕಳು ಸ್ವಪ್ರೇರಣೆಯಿಂದ ನಿರತರಾಗುವ ಚಟುವಟಿಕೆಗಳೂ ಆಟಗಳೂ ಶಾಲೆಗಳಲ್ಲಿ ಇರಬೇಕೆಂದು ವಾದಿಸಿದ್ದರ ಫಲವಾಗಿ ಚಟುವಟಿಕೆಯ ಶಾಲೆಗಳು ರೂಢಿಗೆ ಬಂದಿವೆ. **(ನೋಡಿ– ಚಟುವಟಿಕೆಗಳು)**

ಶಾಲೆಗಳಲ್ಲಿ ಚಟುವಟಿಕೆಗಳು ಅಥವಾ ಕೈಕೆಲಸದ ಕಸಬುಗಳು ಬಹಳ ಹಿಂದಿನಿಂದಲೂ ರೂಢಿಯಲ್ಲಿವೆ. ಪ್ಲೇಟೋ, ಅರಿಸ್ಟಾಟಲ್ ಮೊದಲಾದ ತತ್ತ್ವಜ್ಞಾನಿಗಳ ಕಾಲದಿಂದಲೂ ಸಂಗೀತನಾಟಕಗಳಿಂದ ಕೂಡಿದ ವಿದ್ಯಾಭ್ಯಾಸ ಶಾಲೆಗಳಲ್ಲಿತ್ತು. ಎಂದರೆ ಭವಿಷ್ಯ ಸಮಾಜಕ್ಕೆ

ಹೊರೆಯಾಗದಂತೆ ಮಕ್ಕಳನ್ನು ತಯಾರು ಮಾಡುವ ಉದ್ದೇಶ ವಿದ್ಯಾಭ್ಯಾಸದ್ದಾಗಿತ್ತು. ನಾಗರಿಕತೆ ಮುಂದುವರಿದಂತೆ ವಿದ್ಯಾಭ್ಯಾಸದ ಮೇಲೆ ಸಮಾಜಶಾಸ್ತ್ರ ಮತ್ತು ಮನಶ್ಶಾಸ್ತ್ರಗಳ ಪರಿಣಾಮ ಹೆಚ್ಚಿ, ಮಕ್ಕಳ ಕಲಿವು ಸುಧಾರಿತ ರೀತಿಯಲ್ಲಿ ನಡೆಯಬೇಕೆಂದು ರೂಸೊ, ಪೆಸ್ಟಲಾಟ್ಸಿ, ಫ್ರೋಬೆಲ್, ಮಾಂಟೆಸೊರಿ, ಡ್ಯೂಯಿ ಮೊದಲಾದ ವಿದ್ಯಾತಜ್ಞರು ಅಭಿಪ್ರಾಯಪಟ್ಟು ಅವರಿಗೆ ಬೇಕಾಗುವ ಚಟುವಟಿಕೆಗಳಲ್ಲಿ ತೊಡಗಿಸಿ ಕಲಿವನ್ನುಂಟುಮಾಡಲು ಪ್ರಾಯೋಗಿಕ ಶಾಲೆಗಳನ್ನು ಆರಂಭಿಸಿದರು. ಭಾರತೀಯ ವಿದ್ಯಾಕ್ಷೇತ್ರಗಳಲ್ಲಿಯೂ ಅತಿಯಾದ ಕಟ್ಟುಪಾಡುಗಳಿಂದ ಕೂಡಿದ ವಿದ್ಯಾಭ್ಯಾಸ ಇರಕೂಡದೆಂದು, ಸುಧಾರಣೆಯನ್ನು ಕಾರ್ಯರೂಪಕ್ಕೆ ತರಲು ಕವಿ ರವೀಂದ್ರರೂ ಗಾಂಧೀಜಿಯವರೂ ಪ್ರಯತ್ನಿಸಿದರು.

ಇವೆಲ್ಲದರ ಫಲವಾಗಿ ಇಂದು ಶಾಲೆಗಳಲ್ಲಿ ಮಕ್ಕಳ ಕಲಿವನ್ನು ಪ್ರೋತ್ಸಾಹಿಸಲು ಚಟುವಟಿಕೆಗಳು ರೂಢಿಗೆ ಬಂದಿವೆ. ಪೆಸ್ಟಲಾಟ್ಸಿ ಶಾಲೆ, ಕಿಂಡರ್‌ಗಾರ್ಟನ್ ಶಾಲೆ ನರ್ಸರಿ ಶಾಲೆ ಮುಂತಾದವುಗಳಲ್ಲಿರುವಂತೆ ಮೂಲಶಿಕ್ಷಣ ಶಾಲೆಗಳಲ್ಲೂ ಶಾಂತಿನಿಕೇತನದ ವಿದ್ಯಾಮಂದಿರಗಳಲ್ಲಿಯೂ ಚಟುವಟಿಕೆಗಳಿಗೆ ಮುಖ್ಯ ಸ್ಥಾನವುಂಟು.

ಶಾಲೆಯಲ್ಲಿ ಚಟುವಟಿಕೆಗಳನ್ನು ಸೇರಿಸಿರುವ ಮುಖ್ಯ ಉದ್ದೇಶವೆಂದರೆ: 1. ಮಕ್ಕಳಲ್ಲಿ ಏಕಾಗ್ರತೆ ಮತ್ತು ಅವಧಾನದ ವ್ಯಾಪ್ತಿಯನ್ನು ಹೆಚ್ಚಿಸುವುದು; ಅವರ ಕಲಿವನ್ನು ಪ್ರಚೋದಿಸುವುದು; 2. ಅವರ ಶಾರೀರಿಕ, ಬೌದ್ಧಿಕ ಮತ್ತು ನೈತಿಕ ಬೆಳವಣಿಗೆಯನ್ನು ಸಮೀಕರಿಸುವುದು; 3. ಅವರಿಗೆ ಕಲಿವಿನಿಂದಾಗುವ ಆಯಾಸವನ್ನು ಕಡಿಮೆ ಮಾಡುವುದು; 4. ವೈಜ್ಞಾನಿಕ ಕನ್ನಡ ಭಾವನೆಗಳನ್ನೂ ವಿಧಾನಗಳನ್ನೂ ಬೆಳೆಸುವುದು; 5. ಸಾಂಘಿಕ ಮತ್ತು ಸಹಕಾರ ಮನೋಭಾವಗಳನ್ನು ವೃದ್ಧಿಪಡಿಸುವುದು; 6. ಪರಿಸರವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಕಲ್ಪಿಸುವುದು; 7 ಉತ್ಪಾದನೆಯ ಉದ್ದೇಶವನ್ನೂ ಸ್ವಾವಲಂಬನೆಯ ದೃಷ್ಟಿಯನ್ನೂ ಮೂಡಿಸುವುದು; 8. ಹಸ್ತಕೌಶಲವನ್ನು ಹೆಚ್ಚಿಸುವುದು; 9. ವಿರಾಮಕಾಲವನ್ನು ಸದ್ವಿನಿಯೋಗಪಡಿಸಿಕೊಳ್ಳುವ ಅಭ್ಯಾಸವನ್ನು ಬೆಳೆಸುವುದು; 10. ಸಾಮಾಜಿಕ ಜೀವನವನ್ನು ಪರಿಚಯ ಮಾಡಿಕೊಡುವುದು; 11. ದೈಹಿಕ ಶ್ರಮದ ವೃತ್ತಿಗಳಿಗೆ ಅಂಟಿಕೊಂಡಿರುವ ಅಹಿತಭಾವನೆಗಳನ್ನು ತೆಗೆದುಹಾಕುವುದು; 12. ಶಾರೀರಿಕ ದಾರ್ಢ್ಯವನ್ನು ಹೆಚ್ಚಿಸುವುದು; 13. ಶಾಲಾಸನ್ನಿವೇಶಗಳಿಗೆ ಸುಲಭವಾಗಿ ಹೊಂದಿಕೊಳ್ಳುವಂತೆ ಮಾಡುವುದು; 14.ಚಟುವಟಿಕೆಗಳಿಂದ ಶಾಲೆಯಲ್ಲಿನ ಕಲಿವು ಸ್ವಪ್ರೇರಣೆಯ ಕಾರ್ಯವೆನಿಸುವಂತೆ ಮಾಡುವುದು. ಆದ್ದರಿಂದ ಶಾಲೆಗಳಲ್ಲಿ ನಡೆಯುವ ಚಟುವಟಿಕೆಗಳು ಮಕ್ಕಳ ಮನಸ್ಸಿಗೆ ರಂಜಕವಾಗಿಯೂ ಉತ್ಪಾದನಾತ್ಮಕವಾಗಿಯೂ ರಚನಾತ್ಮಕವಾಗಿಯೂ ಇರುತ್ತವೆ. ಈ ಉದ್ದೇಶಗಳನ್ನು ಸಾಧಿಸಲು ಹಲವಾರು ವಿಧದ ಚಟುವಟಿಕೆಗಳು ಈಗ ಶಾಲೆಗಳಲ್ಲಿ ರೂಢಿಗೆ ಬಂದಿವೆ.

**ಚಟುವಟಿಕೆಯ ಪಠ್ಯಕ್ರಮ:** ಪ್ರಾಥಮಿಕ ಪೂರ್ವದ ಕಿಂಡರ್‌ಗಾರ್ಟನ್, ಮಾಂಟೆಸೊರಿ ಶಾಲೆ, ನರ್ಸರಿ ಶಾಲೆ ಮುಂತಾದ ಶಾಲೆಗಳಲ್ಲಿ ಚಟುವಟಿಕೆಯೇ ಪ್ರಧಾನ ಪಠ್ಯವಿಷಯ. ಬಹುಮಟ್ಟಿಗೆ ಅವು ಮಕ್ಕಳು ಸ್ವಪ್ರೇರಣೆಯಿಂದ ಭಾಗವಹಿಸಬಹುದಾದ ಆಟಗಳ ರೂಪದಲ್ಲಿರುತ್ತದೆ. ಅವುಗಳಿಂದ ಮಕ್ಕಳಲ್ಲಿ ಜೀವನಕ್ಕೆ ಬೇಕಾಗುವ ಒಳ್ಳೆಯ ಅಭ್ಯಾಸಗಳೂ ನಡೆನುಡಿಗಳೂ ಮನೋಭಾವಗಳೂ ವರ್ಧಿಸುವುದರ ಜೊತೆಗೆ ಮಾತುಗಾರಿಕೆ, ಸಂವಾದ, ಕಥೆ ಹೇಳುವುದು, ಕೇಳುವುದು ಮುಂತಾದವುಗಳ ಮೂಲಕ ಪ್ರಾಥಮಿಕ ಶಾಲೆಯ ಕಲಿವಿಗೆ ಸಿದ್ಧತೆಯೂ ದೊರಕುತ್ತದೆ. ಅಲ್ಲದೆ ಕುಟುಂಬ ಜೀವನದ ಕೊರತೆಯಿಂದ ಏರ್ಪಟ್ಟಿರುವ ಹಲವು ಅಹಿತ ಅಭ್ಯಾಸಗಳೂ ಸರಿಹೋಗುತ್ತವೆ.

ಸರಿಯಾಗಿ ನಿಲ್ಲುವುದು, ಸರಿಯಾಗಿ ನಡೆಯುವುದು, ಊಟಕ್ಕೆ ಸರಿಯಾಗಿ ಕೂಡುವುದು, ಕೈಕಾಲು ಮೊದಲಾದವನ್ನು ಚೆನ್ನಾಗಿ ತೊಳೆಯುವುದು, ಬಟ್ಟೆ ಹಾಕಿಕೊಳ್ಳುವುದು ಇತ್ಯಾದಿ ಅಭ್ಯಾಸಗಳ ಜೊತೆಗೆ ಕುದುರೆ ಆಟ, ಮಣಿ ಜೋಡಿಸುವುದು, ರಟ್ಟಿನಿಂದ ಮನೆಗಳನ್ನು ಕಟ್ಟುವುದು, ಬಣ್ಣದ ಕಾಗದಗಳಿಂದ ಆಕೃತಿ ಕತ್ತರಿಸುವುದು, ಮರದ ತುಂಡುಗಳಿಂದ ಗೋಪುರಗಳನ್ನು ಕಟ್ಟುವುದು, ಬಣ್ಣದ ಕಡ್ಡಿಗಳಿಂದ ಆಟ ಆಡುವುದು, ಜೋಕಾಲೆ ಆಡುವುದು, ರೈಲಿನ ಆಟ ಮುಂತಾದ ಚಟುವಟಿಕೆಗಳೂ ಅಲ್ಲಿ ಸೇರುತ್ತವೆ.

ಶಿಕ್ಷಣದಲ್ಲಿ ಚಟುವಟಿಕೆಗಳ ಉಪಯುಕ್ತತೆ ವ್ಯಕ್ತಪಟ್ಟಂತೆ ಪ್ರಾಥಮಿಕ ಕನ್ನಡ ಶಾಲೆಯ ಪಠ್ಯಕ್ರಮದಲ್ಲಿ ಪೂರ್ಣವಾಗಿಯೋ ಆಂಶಿಕವಾಗಿಯೋ ಚಟುವಟಿಕೆಗಳನ್ನು ಅಳವಡಿಸುವುದು ಹೆಚ್ಚುತ್ತಿದೆ. ಮೂಲಶಿಕ್ಷಣ ಶಾಲೆಗಳಲ್ಲಂತೂ ಉದ್ಯಮಾಚರಣೆಯೇ ಪ್ರಧಾನ ಪಠ್ಯವಸ್ತುವಾಗಿದ್ದು ಅದನ್ನು ಕಲಿಯುವುವಾಗ ಅಥವಾ ಆಚರಿಸುವಾಗ ಇತರ ಸಾಂಪ್ರದಾಯಿಕ ಅಂಶಗಳನ್ನು ಕಲಿಯುವುದುಂಟು. ಅಲ್ಲಿ ಚಟುವಟಿಕೆ ಲಾಭದಾಯಕ ಕಸುಬೊಂದರ ರೂಪನ್ನು ತಾಳಿದೆ. ಈಚೆಗೆ ಸಾಮಾನ್ಯ ಪಾಠಶಾಲೆಗಳಲ್ಲಿ ಕಸಬಿಗೆ ಬದಲು ವಿದ್ಯಾಸೌಲಭ್ಯವನ್ನೊದಗಿಸಬಲ್ಲ ಅನೇಕ ಚಟುವಟಿಕೆಗಳು ಸೇರುತ್ತಿವೆ. ಅವುಗಳಲ್ಲಿ ವ್ಯವಸಾಯ, ತೋಟಗಾರಿಕೆ, ನೂಲುವುದು, ನೇಯುವುದು, ಹತ್ತಿ ಬಿಡಿಸುವುದು, ಹತ್ತಿ ಹಿಂಜುವುದು, ಮರಗೆಲಸ, ಜೇನು ಸಾಕುವುದು, ಶಾಲೆಯ ಆವರಣದ ಕಸ ಗುಡಿಸುವುದು (ಸಫಾಯ್), ಶಾಲಾಸ್ವಯಂ ಸರ್ಕಾರಗಳನ್ನು ರಚಿಸುವುದು ಮತ್ತು ಚುನಾವಣೆಗಳನ್ನು ನಡೆಸುವುದು, ಚರ್ಮ ಹದ ಮಾಡುವುದು, ಚರ್ಮದ ಕೆಲಸ ಮಾಡುವುದು, ಕಬ್ಬಿಣದ ಕೆಲಸ ಮಾಡುವುದು, ಹೊಲಿಯುವುದು, ರಟ್ಟಿನಿಂದ ಕೆಲಸ ಮಾಡುವುದು, ಜೇಡಿಮಣ್ಣಿನಿಂದ ಕೃತಿಗಳನ್ನು ಮಾಡುವುದು, ಚಿತ್ರ ಬರೆಯುವುದು, ಬಣ್ಣ ಹಾಕುವುದು, ಮಡಕೆ ಮಾಡುವುದು, ಸಂಗೀತ, ಬಟ್ಟೆ ಹೊಲಿಯುವುದು, ಮಣ್ಣಿನಿಂದ ಇಟ್ಟಿಗೆ ಮಾಡುವುದು, ಶಾಲಾಸಹಕಾರಸಂಘಗಳನ್ನು ನಡೆಸುವುದು, ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಹಬ್ಬಗಳನ್ನು ಆಚರಿಸುವುದು–ಇವೇ ಮುಂತಾದ ಚಟುವಟಿಕೆಗಳು ಇರುತ್ತವೆ.

ಈ ರೀತಿಯಾಗಿ ಚಟುವಟಿಕೆಗಳು ಸಾಂಪ್ರದಾಯಿಕ ಬೋಧನೆಯ ಬೇಸರವನ್ನು ತಪ್ಪಿಸಿ ಮಕ್ಕಳು ಸ್ವಪ್ರೇರಣೆಯಿಂದ, ಸ್ವಾತಂತ್ರ್ಯದಿಂದ, ಸಂತೋಷದಿಂದ, ಶಾಲಾಜೀವನವನ್ನು ನಡೆಸಲು ನೆರವಾಗುವುದರ ಜೊತೆಗೆ ಕಲಿವನ್ನು ಪರಿಣಾಮಗೊಳಿಸುತ್ತವೆ, ಸಮಾಜಕ್ಕೆ ಹೊಂದಿಕೊಳ್ಳಲು ಸಹಾಯ ಮಾಡುತ್ತವೆ. ಕೆಲಸದಲ್ಲಿ ತೊಡಗಿಸಲು ಈ ಪ್ರಾಥಮಿಕ ಪೂರ್ವದ ಮತ್ತು ಪ್ರಾಥಮಿಕ ಶಿಕ್ಷಣದ ಹಂತಗಳಲ್ಲಿ ಚಟುವಟಿಕೆಗಳು ಮುಖ್ಯವಾಗಿ ಮಕ್ಕಳ ಆಸಕ್ತಿಯನ್ನು ಆಧಾರ ಮಾಡಿಕೊಂಡಿರಬೇಕು; ಆಯಾ ಪರಿಸರವನ್ನು ಅವಲಂಬಿಸಿದಂತೆಯೂ ಇರಬೇಕು. ಮೇಲ್ವರ್ಗದ ಶಿಕ್ಷಣ ಸಂಸ್ಥೆಗಳಲ್ಲಿ ಅದು ಹೆಚ್ಚು ಹೆಚ್ಚು ಉದ್ದೇಶಪೂರ್ಣವಾಗಿದ್ದು ಕ್ರಮಕ್ರಮವಾಗಿ ವೃತ್ತಿಗಳ ಸ್ವರೂಪವನ್ನು ತಾಳಬೇಕು. ಶಿಕ್ಷಣ ಮುಗಿಸಿಕೊಂಡು ಜೀವನಕ್ಕೆ ಕಾಲಿಡುವ ವ್ಯಕ್ತಿಗೆ ಅದು ಜೀವನೋಪಾಯಕ್ಕೆ ನೆರವಾಗಬೇಕು.

(ಕೆ.ಎನ್.ಬಿ.)

**ಚಟ್ಟೋಪಾಧ್ಯಾಯ, ಕಮಲಾದೇವಿ :** 1903–1988. ಭಾರತದ ಸ್ವಾತಂತ್ರ್ಯ ಹೋರಾಟಗಾರ್ತಿಯರಲ್ಲೊಬ್ಬರು; ಕಲಾಭಿಜ್ಞೆ, ಸಾಮಾಜಿಕ ಕಾರ್ಯಕರ್ತೆ. ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಮಂತ ಸಾರಸ್ವತ ಕುಟುಂಬವೊಂದರಲ್ಲಿ 1903ರಲ್ಲಿ ಜನನ. ತಂದೆ ಮದ್ರಾಸ್ ಸಿವಿಲ್ ಸರ್ವಿಸಿನಲ್ಲಿ ಉನ್ನತ ದರ್ಜೆಯ ಅಧಿಕಾರಿ. ಚಿಕ್ಕಪ್ಪ ಸುಪ್ರಸಿದ್ಧ ನ್ಯಾಯವಾದಿ. ಮಂಗಳೂರಿನ ಕೆಥೊಲಿಕ್ ಕಾನ್ವೆಂಟ್ ಮತ್ತು ಸೇಂಟ್ ಮೇರಿಸ್ ಕಾಲೇಜಿನಲ್ಲೂ ಆ ಮೇಲೆ ಬೆಡ್‌ಫರ್ಡ್ ಕಾಲೇಜು ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲೂ ವಿದ್ಯಾಭ್ಯಾಸ ಮಾಡಿದರು. ಬಾಲ್ಯದಲ್ಲೇ ಇವರ ವಿವಾಹವಾಗಿತ್ತು. ಶಾಲಾ ವಿದ್ಯಾರ್ಥಿನಿಯಾಗಿದ್ದಾಗಲೇ ಇವರಿಗೆ ವೈಧವ್ಯ ಪ್ರಾಪ್ತವಾಯಿತು. ಆದರೆ ಹಳೆಯ ಕಂದಾಚಾರವನ್ನು ಮುರಿದು, ತಾವು ಒಪ್ಪಿದ ಹರಿಂದ್ರನಾಥ ಚಟ್ಟೋಪಾಧ್ಯಾಯರನ್ನು ಮದುವೆಯಾದರು. ಪತಿಯೊಂದಿಗೆ ಯುರೋಪಿನಲ್ಲಿ ಪ್ರವಾಸಮಾಡಿ ಕಲಾವಿದರನ್ನು ಸಂದರ್ಶಿಸುತ್ತ ರಂಗಭೂಮಿಯ ಅಧ್ಯಯನ ಮಾಡಿದರು; ಪ್ರಯೋಗತಂತ್ರವನ್ನು ಕಲಿತರು. ಭಾರತಕ್ಕೆ ಮರಳಿದ ಮೇಲೆ ತಾವೇ ಮುಖ್ಯಪಾತ್ರಗಳನ್ನು ವಹಿಸಿ, ಕಲಾತ್ಮಕ ನಾಟಕಗಳನ್ನು ರಂಗಭೂಮಿಯ ಮೇಲೆ ತರಲು ಪತಿಯೊಂದಿಗೆ ಕಲೆತು ಕೆಲಸ ಮಾಡಿದರು.

ಗಾಂಧೀಜಿ, ಜವಾಹರಲಾಲ್ ನೆಹರು, ಸರೋಜಿನಿ ನಾಯಿಡು, ಕಸ್ತೂರ್‌ಬಾ ಇವರ ಪ್ರಭಾವ ಕಮಲಾದೇವಿಯ ಮೇಲೆ ವಿಶೇಷವಾಗಿ ಆಯಿತು. ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗಲೇ ಇವರು ಕಾಲೇಜು ವಿದ್ಯಾಭ್ಯಾಸ ತೊರೆದು ಅಸಹಕಾರ ಚಳವಳಿಯಲ್ಲಿ ಧುಮುಕಿದರು. ಎರವಡಾ, ಬೆಳಗಾವಿ ಮತ್ತು ವೆಲ್ಲೂರು ಜೈಲುವಾಸ ಶಿಕ್ಷೆ ಅನುಭವಿಸಿದರು. ಅನಂತರವೂ ಅನೇಕ ಸಾರಿ ಇವರಿಗೆ ಸೆರೆಮನೆವಾಸದ ಶಿಕ್ಷೆ ಆಗಿತ್ತು. ಕರ್ನಾಟಕದ ಯುವಕರಲ್ಲಿ ರಾಷ್ಟ್ರಸೇವೆಯ ಜಾಗೃತಿ ಉಂಟುಮಾಡುವುದರಲ್ಲಿ ಇವರು ಹಿರಿಯ ಪಾತ್ರವಾಹಿಸಿದರು. ಕೃಷಿಕರ ಸಮಸ್ಯೆಗಳ ಪರಿಹಾರದಿಂದಲೇ ಜನತೆಯ ಉದ್ಧಾರ ಸಾಧ್ಯವೆಂದು ನಂಬಿ ಕೃಷಿಕ್ಷೇತ್ರದಲ್ಲಿ

ತೀವ್ರ ಆಸಕ್ತಿ ತಳೆದರು. ಜಮೀನುದಾರಿ ಪದ್ಧತಿ ರದ್ದಾಗಿ, ಭೂಮಿಯ ಸಮಾನವಾದ, ನ್ಯಾಯಸಮ್ಮತ ಹಂಚಿಕೆಯಾಗಬೇಕೆಂದು ಆಗ ಇವರು ಆಶಯವಾಗಿತ್ತು. ಕಾಂಗ್ರೆಸ್ಸಿಗರ ಭೂಸುಧಾರಣೆ ಕ್ರಮಗಳು ಇವರಿಗೆ ಸಮರ್ಪಕವೆನಿಸಲಿಲ್ಲ. 1948ರಲ್ಲಿ ಇವರು ಕಾಂಗ್ರೆಸ್ ಸಮಾಜವಾದೀ ಪಕ್ಷವನ್ನು ಸೇರಿದರು. ಬಡತನದ ವಿರುದ್ಧವಾದ ಘೋಷಣೆಗಳನ್ನು ಕೂಗುವುದಕ್ಕಿಂತ ಸುಖಮಯ ಮಾನವ ಸಂಬಂಧಗಳಿಗಾಗಿ ಕ್ರಿಯಾ ಶೀಲವಾದ ಕಳಕಳಿಯೇ ಸಮಾಜವಾದದ ಸತ್ತ್ವವೆಂಬುದು ಇವರ ನಂಬಿಕೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುವುದಕ್ಕಾಗಿ ಕಾಂಗ್ರೆಸ್ಸನ್ನು ಬಲಪಡಿಸುವ ಕರೆ ಕೊಟ್ಟ ಇವರು ಸಮಾಜವಾದದ ಧ್ಯೇಯನಿರೂಪಣೆಯಿಂದ ಒಮ್ಮೆಲೇ ಭಾರತದ ಮುಂಚೂಣಿ ನಾಯಕರ ಮಟ್ಟಕ್ಕೇರಿದರು. ಕಾರ್ಮಿಕರ ಹಿತರಕ್ಷಣೆಗಾಗಿ ಕಾರ್ಮಿಕ ಸಂಸ್ಥೆಗಳಲ್ಲಿ ಇವರ ಸಂಘಟನೆಗೂ ಚಳವಳಿಗೂ ಸಮರ್ಥವಾದ ನಾಯಕತ್ವವನ್ನೂ ಉತ್ತೇಜನವನ್ನೂ ಒದಗಿಸಿದರು.

ಭಾರತದ ಮಹಿಳಾ ಆಂದೋಲನದ ಪ್ರಮುಖ ಮುಂದಾಳು ಕಮಲಾದೇವಿ. ಈ ಕ್ಷೇತ್ರದಲ್ಲಿ ಪ್ರಾರಂಭದ ಕೆಲಸ ನಡೆದದ್ದು ಈಕೆಯಿಂದಲೇ ಎನ್ನಬಹುದು. ಇವರು ದೇಶಾದ್ಯಂತ ಸಂಚರಿಸಿ, ಭಾಷಣಗಳಿಂದ, ಸಂದರ್ಶನಗಳಿಂದ ಸ್ಫೂರ್ತಿ ನೀಡಿ, ಅಖಿಲ ಭಾರತ ಮಹಿಳಾ ಸಮ್ಮೇಳನವನ್ನು ಬೆಳೆಸಿದರು. ಮಹಿಳಾ ಆಂದೋಲನವೆಂದರೆ ಮುಖ್ಯವಾಗಿ ಅದು ಸಾಮಾಜಿಕ ಆಂದೋಲನವೇ. ನಮ್ಮ ಸಮಾಜದಲ್ಲಿ ಬೇರೂರಿರುವ ದೋಷಯುಕ್ತ ಸಾಮಾಜಿಕ ಸಂಸ್ಥೆಗಳ ವಿರುದ್ಧ ನಮ್ಮ ಹೋರಾಟ ಸಾಗಬೇಕಾಗಿದೆ ಎಂದು ಇವರು ಘೋಷಿಸಿದರು. ಬಿಳಿಯ ಒರಟು ಖಾದಿಗೆ ಕಲಾತ್ಮಕತೆಯನ್ನು ತಂದುಕೊಡಲು ಕಮಲಾದೇವಿಯವರು ಯತ್ನಿಸಿದರು. ಅರಿವೆಗೆ ಬಣ್ಣ ಹಾಕುವ ಭಾರತೀಯ ಕಲೆಯಲ್ಲಿ ಇವರಿಗೆ ಆಸಕ್ತಿ. ಆ ಕಲೆಯನ್ನು ಆಳವಾಗಿ ಅಧ್ಯಯನಮಾಡಿ, ಲೇಖನಗಳನ್ನು ಬರೆದು ಅದರ ಪುನರುಜ್ಜೀವನಕ್ಕೆ ಸ್ಫೂರ್ತಿ ನೀಡಿದರು. ಕಮಲಾದೇವಿಯವರು ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನೇಕ ಉನ್ನತ ಸ್ಥಾನಗಳಲ್ಲಿ ನಿಂತು ಕೆಲಸಮಾಡಿದ್ದಾರೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಕಾರ್ಯಕಾರಿ ಸಮಿತಿಯ, ಅಖಿಲ ಭಾರತ ಮಹಿಳಾ ಸಮ್ಮೇಳನದ ಸಂಘಟನಾ ಕಾರ್ಯದರ್ಶಿತ್ವ, ಉಪಾಧ್ಯಕ್ಷತೆ ಮತ್ತು ಅಧ್ಯಕ್ಷತೆ, ಭಾರತೀಯ ಸಹಕಾರ ಸಂಘದ ಅಧ್ಯಕ್ಷತೆ, ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್‌ನ ಉಪಾಧ್ಯಕ್ಷತೆ, ಅಖಿಲ ಭಾರತ ಕರಕುಶಲ ಮಂಡಳಿಯ ಅಧ್ಯಕ್ಷತೆ ಅಖಿಲ ಭಾರತ ಡಿಸೈನ್ ಸೆಂಟರ್‌ನ ಅಧ್ಯಕ್ಷತೆ ಇವು ಕಮಲಾದೇವಿಯವರು ತಳೆದಿದ್ದ ಕೆಲವು ಅಧಿಕಾರಗಳು. ಇವರು ಅಂತಾರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ಭಾರತ ರಾಷ್ಟ್ರೀಯ ರಂಗಭೂಮಿ ಕೇಂದ್ರದ ಸಂಸ್ಥಾಪಕರು.

ಕಮಲಾದೇವಿ ವ್ಯಾಪಕವಾಗಿ ಪ್ರಪಂಚಪರ್ಯಟನೆ ಮಾಡಿದರು. ಇವರು ಉತ್ತಮ ಲೇಖಕಿಯೂ ಹೌದು. ಇಂಗ್ಲಿಷಿನಲ್ಲಿ ಹತ್ತು ಪುಸ್ತಕಗಳನ್ನು ಬರೆದಿದ್ದಾರೆ. ಭಾರತೀಯ ಕರಕುಶಲ ಕೈಗಾರಿಕೆಗಳು, ಭಾರತೀಯ ಕಂಬಳಿಗಳು ಮತ್ತು ನೆಲಾವರಣಗಳು, ಸಮಾಜವಾದ ಮತ್ತು ಸಮಾಜ, ಭಾರತೀಯ ಮಹಿಳಾ ಜಾಗೃತಿ, ರಾಷ್ಟ್ರೀಯ ರಂಗಭೂಮಿ–ಮುಂತಾದ ಅನೇಕ ವಿಷಯಗಳನ್ನು ಕುರಿತ ಬರೆಹಗಳು ಕಮಲಾದೇವಿಯವರ ವೈವಿಧ್ಯಪೂರ್ಣ ಅಭಿರುಚಿಯನ್ನೂ ಆಸಕ್ತಿಯನ್ನೂ ಪ್ರತಿಫಲಿಸುತ್ತವೆ. ಸಾಮಾಜಿಕ ಧುರೀಣತ್ವಕ್ಕಾಗಿ ವಾಟ್ಯುಮಲ್ ಮತ್ತು ಮ್ಯಾಗ್ಸೆಸೇ ಪ್ರಶಸ್ತಿಗಳನ್ನು (1962 ಮತ್ತು 1966) ಗಳಿಸಿದ್ದಾರೆ. 1970ರಲ್ಲಿ ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಿಂದ ಇವರಿಗೆ 'ದೇಶಿಕೋತ್ತಮಾ' ಎಂಬ ಪ್ರಶಸ್ತಿ ದತ್ತವಾಯಿತು. (ಜೆ.ಆರ್.ಪಿ.)

**ಚಟ್ಟೋಪಾಧ್ಯಾಯ, ಬಂಕಿಮಚಂದ್ರ :** 1838–94. ಬಂಗಾಳಿ ಭಾಷಾ ಸಾಹಿತ್ಯಗಳ ನವೋದಯ ಕಾಲದ ಪ್ರಮುಖ ಸಾಹಿತಿಗಳಲ್ಲಿ, ಚಿಂತಕರಲ್ಲಿ ಒಬ್ಬ. ತನ್ನ ಕಾದಂಬರಿಗಳಿಂದಲೂ ವಿಚಾರಸಾಹಿತ್ಯದಿಂದಲೂ ಬಹು ಜನಪ್ರಿಯನೆನಿಸಿದವ. ಪ್ರಸಿದ್ಧ ದೇಶಭಕ್ತಿ ಗೀತೆಯೆನಿಸಿದ ವಂದೇ ಮಾತರಂನ ಕರ್ತೃ. ಈತನ ಅನೇಕ ಕೃತಿಗಳು ಕನ್ನಡಕ್ಕೆ ಅನುವಾದ ವಾಗಿವೆ. ಸರ್ಕಾರದ ಕೈಕೆಳಗೆ ಡೆಪ್ಯುಟಿ ಕಲೆಕ್ಟರ್ ಆಗಿದ್ದ ಯಾದವಚಂದ್ರ ಚಟ್ಟೋಪಾಧ್ಯಾಯನ ನಾಲ್ಕು ಗಂಡು ಮಕ್ಕಳಲ್ಲಿ ಈತ ಮೂರನೆಯವ. ಬಾಲ್ಯದಿಂದಲೂ ಅಸಾಧಾರಣ ಶಕ್ತಿ ಗಳಿಂದ ಕೂಡಿದ ಮೇಧಾವಿಯೆನಿಸಿಕೊಂಡಿದ್ದ. ಪಾಠಶಾಲೆಗೆ ಸೇರಿದ ದಿನವೇ ವರ್ಣಮಾಲೆಯ ಅಕ್ಷರವೆಲ್ಲವನ್ನೂ ಈತ ಕಲಿತುಬಿಟ್ಟನಂತೆ. ಪರೀಕ್ಷೆಗಳಲ್ಲಿ ಮೊದಲನೆಯ ದರ್ಜೆಯಲ್ಲಿ ತೇರ್ಗಡೆ ಹೊಂದಿ 1859ರಲ್ಲಿ ಈತ ಬಿ.ಎ. ಪದವೀಧರನಾದ. ಕೂಡಲೇ ಡೆಪ್ಯುಟಿ ಕಲೆಕ್ಟರನ ಹುದ್ದೆ ಲಭಿಸಿತು. ಸರ್ಕಾರದ ನಾನಾ ಇಲಾಖೆಗಳಲ್ಲಿ ಅಧಿಕಾರಿಯಾಗಿ ಹತ್ತು ಹನ್ನೊಂದು ಊರುಗಳಲ್ಲಿ ದಕ್ಷತೆಯಿಂದ ಕೆಲಸಮಾಡಿದ. ಮ್ಯಾಜಿಸ್ಟ್ರೇಟ್ ಪದವಿಯಲ್ಲಿದ್ದಾಗಿನ ಈತನ ಚಾಕಚಕ್ಯತೆ ಜನ ಅದ್ಭುತ ಕತೆ ಕಟ್ಟುವಷ್ಟು ಎತ್ತರದ್ದಾಗಿತ್ತು. 1869ರಲ್ಲಿ ಬಿ.ಎಲ್. ಪರೀಕ್ಷೆಯಲ್ಲಿ ಉತ್ತೀರ್ಣನಾದ. ಆ ಕಾಲದಲ್ಲಿ ವಿದೇಶೀ ಮೇಲಧಿಕಾರಿಗಳ ದುರಹಂಕಾರ ಮಿತಿ ಮೀರಿತ್ತೆಂದು ಹೇಳಬೇಕಾದ್ದಿಲ್ಲ. ಬಂಕಿಮನೆಂದೂ ಅದಕ್ಕೆ ಅಂಜಿ ಬಗ್ಗುತ್ತಿರಲಿಲ್ಲ. ನ್ಯಾಯಪರತೆಯಿಂದಲೂ ನಿರ್ದಾಕ್ಷಿಣ್ಯವಾಗಿಯೂ ಈತ ಜನಸೇವೆ ಮಾಡಿದ. 1891ರಲ್ಲಿ ತನ್ನನ್ನು ನಿವೃತ್ತಿ ಮಾಡಬೇಕೆಂದು ಕೇಳಿಕೊಂಡಾಗ ಸರ್ಕಾರ ಅನುಮತಿ ನೀಡಲಿಲ್ಲ; ಖುದ್ದಾಗಿ ಲೆಫ್ಟಿನೆಂಟ್ ಗವರ್ನರನನ್ನು ಭೇಟಿಮಾಡಿ ಗ್ರಂಥ ಬರೆಯಲು ತನಗೆ ಅವಕಾಶ ಅಗತ್ಯವೆಂದು ವಿವರಿಸಿ, ಚಾಕರಿಯಿಂದ ವಿಶ್ರಾಂತ ನಾದ. ಈತನಿಗೆ ದತ್ತ ವಾದ ರಾಂಯ್ ಬಹದ್ದೂರ್, ಸಿ.ಐ.ಇ. ಪ್ರಶಸ್ತಿ ಸರ್ಕಾರಕ್ಕೆ ಈತನನ್ನು ಕುರಿತು ಇದ್ದ ಗೌರವದ ಕುರುಹು. ನಿಜಕ್ಕೂ ಮೊದಲ ಮೂರು ವರ್ಷಗಳಲ್ಲಿ ಇವನಿಂದ ಹೆಚ್ಚಿನ ಕೃತಿ ರಚನೆ ಏನೂ ನಡೆಯಲಿಲ್ಲ. ಆದರೂ ಉದ್ಗ್ರಂಥಗಳನ್ನು ರಚಿಸುವ ಮಹೋದ್ದೇಶ ಇವನಲ್ಲಿ ತುಂಬಿಕೊಂಡಿತ್ತು. ವಯಸ್ಸು ಐವತ್ತಾರು ಪೂರೈಸುವುದರೊಳಗೇ ತನ್ನನ್ನು ಸಿಹಿಮೂತ್ರ ವ್ಯಾಧಿ ಪರಲೋಕಕ್ಕೆ ಕಂಡೊಯ್ಯುತ್ತದೆಂದು ಬಹುಶಃ ಈತ ಊಹಿಸಿರಲಿಲ್ಲ. ಹಿಂದೆಯೇ ಕೆಲಸಕಾರ್ಯದ ನಡು ನಡುವೆ ಹೇಗೊ ಬಿಡುವು ಮಾಡಿಕೊಂಡು ಕಾದಂಬರಿ ಕಥೆ, ಪ್ರಬಂಧ, ವಿಮರ್ಶೆ ಮುಂತಾದ ಸಾಹಿತ್ಯವನ್ನು ಅನಲ್ಪ ಪ್ರಮಾಣದಲ್ಲಿ ಬರೆದು ಮುಗಿಸಿದ್ದ; ಅದು ವಂಗದೇಶದ ಪುಣ್ಯ ಭಾರತದ ಪುಣ್ಯ. ಓದುಗ ಪ್ರಪಂಚದ ಪುಣ್ಯ. ಬಂಕಿಮಚಂದ್ರನಿಗೆ ಎರಡು ಬಾರಿ ವಿವಾಹವಾಗಿತ್ತು. 11ನೆಯ ವರ್ಷದಲ್ಲಿ 5 ವರ್ಷದ ಬಾಲಿಕೆಯೊಡನೆ ಮೊದಲನೆಯದು; ಅವಳು ಹದಿನಾರನೆಯ ವಯಸ್ಸಿನಲ್ಲಿ ನಿಧನ ಹೊಂದಿದಳು. ಆಮೇಲೆ ಎರಡನೆಯ ಮದುವೆ; ಆ ದಾಂಪತ್ಯದಲ್ಲಿ ಮೂವರು ಹೆಣ್ಣುಮಕ್ಕಳ ಜನನ.



ಭಾಷೆ ಸಾಹಿತ್ಯ ಸಂಸ್ಕೃತಿಗಳ ಚರಿತ್ರೆಯ ದೃಷ್ಟಿಯಿಂದ ಬಂಕಿಮಚಂದ್ರನ ಕೃತಿಚಕ್ರಕ್ಕೆ ಇರುವ ಹಿರಿಮೆಯೂ ಪ್ರಭಾವವೂ ಅದರ ಆಂತರಿಕ ಘನತೆಗಿಂತ ಏನೇನೂ ಕಡಮೆಯಾದದ್ದಲ್ಲ. 1860ರ ಸುಮಾರಿನಲ್ಲಿ ಪ್ಯಾರೀಚಾಂದ ಮಿತ್ರ, ಈಶ್ವರಚಂದ್ರ ಗುಪ್ತ, ದೀನಬಂಧು ಮಿತ್ರರೇ ಆದಿಯಾಗಿ ಕೆಲವರು ಬಂಗಾಳಿಯನ್ನು ತಮ್ಮ ಮಾಧ್ಯಮವಾಗಿ ಬಳಸಿಕೊಂಡರೂ ಅದನ್ನು ಕಂಡರೆ ಅವರಿಗೆ ಮರುಕ, ಅನುಗ್ರಹಬುದ್ಧಿ. ಇತರರಿಗೋ ಅದು ಕೇವಲ ಗ್ರಾಮ್ಯ, ಒರಟುಮಾತು. ಇಂಗ್ಲಿಷ್ ವ್ಯಾಮೋಹಬದ್ಧರಿಗಂತೂ ಅದು ಬೇರೆಯಲ್ಲ, ಕಾಡುನುಡಿ ಬೇರೆಯಲ್ಲ. ಬಂಗಾಳಿಗೂ ಅಧಿಕ ಅಂದಚಂದ, ಸೂಚಕತೆ, ಸತ್ತ್ವ, ಔನ್ನತ್ಯ ಉಂಟೆಂಬುದನ್ನು ಮನವರಿಕೆಯಾಗುವಂತೆ ನಿಸ್ಸಂದೇಹವೆಂಬುವಂತೆ ತೋರಿಸಿಕೊಟ್ಟ ಮುಂದಾಳು ಬಂಕಿಮಚಂದ್ರ. ಆ ಸಾಹಸಕ್ಕೆ ಅವನಲ್ಲಿ ಗಿಡಿದು ತುಂಬಿದ್ದ ಪ್ರಚಂಡ ಪ್ರತಿಭೆ ಒಂದು ಕಾರಣ; ಇನ್ನೊಂದು ತಾಯ್ನುಡಿಯ ಮೇಲಣ ಪೂರ್ಣಭಕ್ತಿ. ಬಂಗಾಳಿ ತನ್ನಿಂದ ಉದ್ಧಾರಗೊಂಡಿತು ಎಂಬ ಗರ್ವಭಾವಕ್ಕೆ ಯಾವಾಗಲೂ ಎಡೆಗೊಡದೆ, ತಾನು ಮಾಡುತ್ತಿರುವುದು ಸಜ್ಜನನೊಬ್ಬನ ಕರ್ತವ್ಯ ಎಂಬ ಅಭಿಮತವನ್ನು ಅನುಸರಿಸಿಯೇ ಈತ ನಡೆದುಕೊಂಡ. ಅಲ್ಲದೆ, ಸೃಜನಸಾಹಿತ್ಯ, ವಿಮರ್ಶಾ ಸಾಹಿತ್ಯ, ವಿಜ್ಞಾನ, ಇತಿಹಾಸ, ತತ್ತ್ವಶಾಸ್ತ್ರ ಇತ್ಯಾದಿ ವಿಚಾರಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ದೊಡ್ಡ ಮಟ್ಟದ ಧ್ಯೇಯವನ್ನೇ ಪಾಲಿಸಬೇಕೆಂದು ತಾನೂ ಹಟ ಹಿಡಿದಿದ್ದ; ಪರರಿಗೂ ಉಪದೇಶಗೈಯುತ್ತಿದ್ದ, ಅವರ ಕಳಪೆ ಲೇಖನದ ವಿಡಂಬನೆಯ ಮೂಲಕ. ಸಾಹಿತ್ಯೋದ್ಯಮ ಹಗುರ ಹುಡುಗಾಟವಲ್ಲ, ವಿಪುಲ ಹೊಣೆಗಾರಿಕೆಯ ಗಂಭೀರ ವ್ಯವಸಾಯ ಎಂಬುದು ಅವನ ಗಾಢನಂಬಿಕೆಯಾಗಿತ್ತು. ರವೀಂದ್ರನಾಥ ಠಾಕೂರರು ಹೇಳುವಂತೆ, ಬಂಕಿಮಚಂದ್ರ ಎದ್ದುಬಂದದ್ದು ವಂಗಸಾಹಿತ್ಯದಲ್ಲಿ ಸೂರ್ಯೋದಯವಾದಂತಾಯಿತು.

ಕ್ರೌನ್ ಅಷ್ಟಪತ್ರ ಆಕಾರದ ಸು. 3,800 ಪುಟಗಳ 9 ಸಂಪುಟದ ಗ್ರಂಥರಾಶಿ ಬಂಕಿಮಚಂದ್ರನ ಲೇಖನಿಯ ಸಾರಸ್ವತ ಸಂತಾನ. ಉಜ್ಜ್ವಲ ಉತ್ಸಾಹವೂ ವಿಶುದ್ಧ ಶಕ್ತಿಯೂ ಇದ್ದ ಈ ಸಾಹಿತಿಗೆ ದೈನಂದಿನ ಜೀವನದ ಅನುಲ್ಲಂಘ್ಯ ಕಾರ್ಯಭಾರ

ಎಂದಿಗೂ ಪ್ರತಿಬಂಧಕವಾಗಲಿಲ್ಲ. ತನ್ನ 14–18ನೆಯ ವಯಸ್ಸಿವನವರೆಗೆ ಬಂಕಿಮ ಹಲವು ಸಣ್ಣ ಕವನಗಳನ್ನೂ ಎರಡು ನೀಳ್ಗವಿತೆಗಳನ್ನೂ ಬರೆದ; ಅವು ಅಚ್ಚೂ ಆದವು. ಸಾಂಪ್ರದಾಯಿಕ ಕವಿಸಮಯದಿಂದ ತೆಗೆದುಕೊಂಡ ಸಾಮಗ್ರಿಯಲ್ಲದೆ ಮತ್ತೇನನ್ನು ಕೊಡಬಲ್ಲ ಕಿಶೋರಕವಿ? ಈಶ್ವರಚಂದ್ರ ಗುಪ್ತನ ಬುದ್ಧಿವಾದಕ್ಕೆ ತಲೆಬಾಗಿ ಬಂಕಿಮ ಪದ್ಯ ಬರೆಯುವ ಚಟವನ್ನು ಬಿಟ್ಟುಕೊಟ್ಟ. ಆದರೂ ತಾನು ಸ್ಥಾಪಿಸಿ ಆರು ವರ್ಷ ನಡೆಸಿದ ವಂಗದರ್ಶನ ಎಂಬ ಮಾಸಪತ್ರಿಕೆಗೆ ಪುಟ ತುಂಬಬೇಕಾದ ಸಂದರ್ಭದಲ್ಲಿ ಆಗೊಂದು ಈಗೊಂದು ಪದ್ಯ ಕಟ್ಟುವ ಕೆಲಸವನ್ನು ಹರ್ಷದಿಂದ ಮಾಡುತ್ತಿದ್ದ. ವಂಗದರ್ಶನದೊಂದಿಗೆ ಪ್ರಚಾರ ಎಂಬ ಒಂದು ಪತ್ರಿಕೆಯನ್ನೂ ಬಂಕಿಮಚಂದ್ರ ಕೆಲವು ಕಾಲ ನಡೆಸುತ್ತಿದ್ದುದುಂಟು. ಈ ಎರಡಲ್ಲಿ ಈತನ ಬಹುಪಾಲು ಗ್ರಂಥಗಳು, ಲೇಖನಗಳು ಪ್ರಕಟಗೊಂಡವು.

ಈತನ ಪ್ರಥಮ ಕಾದಂಬರಿ ಇಂಗ್ಲಿಷಿನಲ್ಲಿ ಬರೆದದ್ದು; ಅದರ ಹೆಸರು 'ರಾಜಮೋಹನ್ಸ್ ವೈಫ್'. ಅದನ್ನು 1846ರಲ್ಲಿ 'ಇಂಡಿಯನ್ ಫೀಲ್ಡ್' ಎಂಬ ಇಂಗ್ಲಿಷ್ ವಾರಪತ್ರಿಕೆ ಧಾರಾವಾಹಿಯಾಗಿ ಪ್ರಕಟಿಸಿತು. ಡಕಾಯಿತ, ಜಮೀನುದಾರ, ಕೆಟ್ಟದಾರಿಗೆ ಕಾಲಿಡುವ ಯುವಕ, ಧೈರ್ಯದ ಯುವತಿ, ಉಯಿಲಿನ ಹಗರಣ, ಅದನ್ನು ಕದಿಯಲು ಪ್ರಯತ್ನ, ಒಬ್ಬನಿಗೆ ಇಬ್ಬರು ಹೆಂಡತಿಯರು ಮುಂತಾದ ಸಂಗತಿಗಳು ಇಲ್ಲಿ ಬರುವುದನ್ನು ಗಮನಿಸಬೇಕು. ಅವು ವಿವಿಧ ರೂಪದಲ್ಲಿ ಬಂಕಿಮನ ಕಾದಂಬರಿಗಳಲ್ಲಿ ಪುನಃಪುನಃ ಕಾಣಿಸಿಕೊಳ್ಳುತ್ತವೆ. ಕಥಾಸಂವಿಧಾನ ಪತ್ತೇದಾರಿ ಕಥೆಯ ತೆರದಲ್ಲಿದೆ. ಕೆಲವು ಕಾಲದ ತರುವಾಯ ಆ ಕಾದಂಬರಿಯನ್ನು ಇಂಗ್ಲಿಷಿನಿಂದ ಬಂಗಾಳಿಗೆ ಬಂಕಿಮನೇ ತರ್ಜುಮೆಗೊಳಿಸಲು ಆರಂಭಿಸಿ ಏಳು ಅಧ್ಯಾಯ ಮುಗಿಸಿದ. ಅಲ್ಲಿಂದ ಮುಂದೆ ತನ್ನ ಪ್ರಬಂಧ ವಿಮರ್ಶೆ ಕುಶಲ ಪತ್ರಗಳಿಗೆ ಇಂಗ್ಲಿಷನ್ನು ಉಪಯೋಗಿಸಿದನೇ ಹೊರತು ಕಥೆ ಕಾದಂಬರಿಗಳಿಗೆ ಅಲ್ಲ.

ಸು. 22 ವರ್ಷದ ಅವಧಿಯಲ್ಲಿ ಬಂಕಿಮನಿಂದ 14 ಕಾದಂಬರಿಗಳು ರಚಿತವಾದುವು: ದುರ್ಗೇಶನಂದಿನಿ (1865), ಕಪಾಲಕುಂಡಲೆ (1866?), ಮೃಣಾಲಿನಿ (1869), ವಿಷವೃಕ್ಷ (1872), ಇಂದಿರಾ, ಯುಗಳಾಂಗುರೀಯ, ರಾಧಾರಾಣೀ (1872–75), ರಜನಿ (1873–74), ಕೃಷ್ಣಕಾಂತನ ಉಯಿಲು (1875–77), ಚಂದ್ರಶೇಖರ (1875), ಆನಂದಮಠ (1882), ರಾಜಸಿಂಹ (1882–83), ದೇವೀ ಚೌಧುರಾಣಿ (1884), ಸೀತಾರಾಮ (1887). ಇವುಗಳಲ್ಲಿ ಮೂರು (ಇಂದಿರಾ, ಯುಗಳಾಂಗುರೀಯ, ರಾಧಾರಾಣೀ) ಕಿರು ಕಾದಂಬರಿಗಳು. ಅವನ್ನು ಬಂಕಿಮ ಉಪಕಥೆ, ಕ್ಷುದ್ರ ಕಥೆ ಎಂದು ಕರೆದ. ಹೊಸ ಹೊಸ ಮುದ್ರಣಕ್ಕೆ ಬಂದಾಗಲೆಲ್ಲ ಅವು ಗಾತ್ರದಲ್ಲಿ ಬೆಳೆಯುತ್ತ ಹೋದುವು. ಇಂದಿರಾ 45 ಪುಟಗಳಿಂದ 177 ಪುಟಗಳಿಗೆ ವೃದ್ಧಿಸಿತು. ಹದಿನಾಲ್ಕರಲ್ಲಿ ಆರನ್ನು ಸಾಮಾಜಿಕವೆಂದು ಮಿಕ್ಕ ಎಂಟನ್ನು ಐತಿಹಾಸಿಕವೆಂದೂ ವಿಂಗಡಿಸುವುದು ವಾಡಿಕೆಯಾಗಿದೆ. ಆದರೆ ಇತಿಹಾಸ ಎಷ್ಟರಮಟ್ಟಿಗೆ ನಿಜಾಂಶದ ಖಚಿತ ಆಧಾರದ ಮೇಲೆ ನಿಂತಿದೆಯೋ ಎಂಬ ವಿಷಯವಾಗಿ ಬಂಕಿಮಚಂದ್ರನಿಗೇ ಬಲವಾದ ಅನುಮಾನವಿತ್ತು. ವಿಭಾವನಾ ಶಕ್ತಿಗೂ (ಇಮ್ಯಾಜಿನೇಷನ್) ಕಾಲ್ಪನಿಕತೆಗೂ (ಫ್ಯಾನ್ಸಿ) ಧಾರಾಳವಾದ ಸ್ವಾತಂತ್ರ್ಯವನ್ನು ದಯಪಾಲಿಸಿ ಕವಿ ಸಮಾಧಾನದಿಂದಿದ್ದ. ಎಲ್ಲ ಕಾದಂಬರಿಗಳಲ್ಲೂ–ರಜನಿ ಒಂದು ವಿನಾ–ಸಮಸ್ತ ಸಂಗತಿಯನ್ನೂ ಬಲ್ಲ ಸರ್ವಜ್ಞ ಗ್ರಂಥಕರ್ತನೇ ಕಥಾನಿರೂಪಕ, ಪಾತ್ರಶಿಲ್ಪಿ, ವರ್ಣನಾಪಟು, ವ್ಯಾಖ್ಯಾನಕಾರ. ರಜನಿಯಲ್ಲಿ ಪಾತ್ರಗಳು ತಮ್ಮ ತಮ್ಮ ಕಥೆಯನ್ನು ಹೇಳಿಕೊಳ್ಳುತ್ತವೆ. ಘಟನಾವಳಿಯ ನಿಯೋಜನೆಯಲ್ಲಿ ಅಪೂರ್ವ ವ್ಯಾಪಾರಗಳಿಗೂ ಅನಿರೀಕ್ಷಿತ ಹೊಂದಾಣಿಕೆಗಳಿಗೂ ಮುನ್ಸೂಚನೆಯ ಸ್ವಪ್ನಜ್ಯೋತಿಷ್ಯ ಮುಂತಾದುವಕ್ಕೂ ಸಾಕಾದಷ್ಟು ಸ್ಥಾನ ಸಿಕ್ಕಿದೆ. ಪಾತ್ರವರ್ಗದ ಆಗುಹೋಗುಗಳು ಕುತೂಹಲ ಕೆರಳಿಸುತ್ತ ಅಚ್ಚರಿ ಹುಟ್ಟಿಸುತ್ತ ಜರುಗುತ್ತವೆಯಾಗಿ ಪಾತ್ರವಾವುದೋ ತನ್ನ ವಿಶಿಷ್ಟ ವರ್ಚಸ್ಸಿನಿಂದ ಓದುಗರನ್ನು ತಡೆದು ನಿಲ್ಲಿಸುವ ಸಂಭವ ಕಡಿಮೆ. ವರ್ಣನೆಯೆಂದರೆ ಬಂಕಿಮಚಂದ್ರನಿಗೆ ಅತಿಶಯ ಆಸಕ್ತಿ. ಒಂದು ಅಧ್ಯಾಯ ಪೂರ್ತಿ ಕೋಗಿಲೆಗೆ ಮೀಸಲಾಗಿದೆ. ಹಾಗೆಯೇ ಮಾನಸಿಕ ವಿದ್ಯಮಾನಗಳ ವರದಿಗೂ ಆಗಾಗ ಸ್ವಲ್ಪ ಹೆಚ್ಚಾಯಿತೆಂದು ತೋರುವಷ್ಟು ಗಮನ ಸಂದಿದೆ. ಒಟ್ಟಿನಲ್ಲಿ ಒಳ್ಳೆಯ ವ್ಯಕ್ತಿಗಳು ಕಷ್ಟದಿಂದ ಪಾರಾಗಿ ಸುಖ ಪಡೆಯುವಂತೆಯೂ ಒಳ್ಳೆಯವರಲ್ಲದವರು ನಷ್ಟಪಡೆಯುವಂತೆಯೂ ನಿಯಂತ್ರಿಸುವ ಕಾವ್ಯನ್ಯಾಯ ಕವಿಗೆ ಅಚ್ಚುಮೆಚ್ಚು. ಈತನ ಕೃತಿಗಳಲ್ಲಿ ಖಳನಾಯಕರಿಗೆ ಪ್ರವೇಶವಿಲ್ಲವೆಂದೇ ಹೇಳಬೇಕು.

ಬಂಕಿಮಚಂದ್ರನ ಇತರ ಬರೆಹವೂ ಬೇಕಾದಷ್ಟಿದೆ, ಗಮನಾರ್ಹವಾಗಿದೆ. ಅವಹೇಳನಪ್ರಮುಖ ಲೇಖನಗಳು ಹದಿನೈದಿವೆ; ಗಾರ್ದಭ, ಬಾಬು, ಇಂಗ್ಲಿಷಿನ ಸ್ತೋತ್ರ ಮುಂತಾದ ಶಿರೋನಾಮೆಯಿಂದಲೇ ಅವುಗಳ ಸ್ವರೂಪ ಸುವ್ಯಕ್ತ, ಕಮಲಾಕಾಂತ ಎಂಬ ಅಫೀಮುಖೋರ ವಿಕಟಪುರುಷನನ್ನು ಕಲ್ಪಿಸಿಕೊಂಡು ಅವನ ಮುಖಾಂತರ ಅಣಕಮಾಡಿದ್ದಾನೆ. ಕಮಲಾಕಾಂತನ ದಫ್ತರದಲ್ಲಿ 14, ಪತ್ರಗಳಲ್ಲಿ 5, ಹೇಳಿಕೆ 1–ಈ ಇಪ್ಪತ್ತು ಲಘುಲೇಖನಗಳೂ ಉತ್ತಮ ಹಾಸ್ಯದಿಂದ ಸ್ವಾರಸ್ಯವಾಗಿವೆ. ಅಲ್ಲಿ ಕಲ್ಪನಾಶಕ್ತಿ ಲವಲವಿಕೆಯಿಂದ ಲಾಸ್ಯಗೈಯುತ್ತಿದೆ. ತನ್ನ ಕೃತಿಗಳಲ್ಲೆಲ್ಲ ಇದೇ ಶ್ರೇಷ್ಠವೆಂದು ಬಂಕಿಮಚಂದ್ರ ಬಗೆದಿದ್ದನಂತೆ; ಕೆಲವು ಸ್ನೇಹಿತರ ಅಭಿಪ್ರಾಯವೂ ಅದೇ ಆಗಿತ್ತಂತೆ. ಮುಜಿರಾಮಗುಡನ ಜೀವನ ಚರಿತೆಯೆಂಬ ಹದಿನಾಲ್ಕು ಪರಿಚ್ಛೇದಗಳ ಕಿರು ಹೊತ್ತಗೆಯೂ ಉತ್ಕೃಷ್ಟ ವಿಡಂಬನ. ಇವುಗಳಿಂದ ಪ್ರೇರಿತವಾಗಿ ಆಗಿನ ವಂಗಸಮಾಜ ಎಷ್ಟು ಮಟ್ಟಿಗೆ ತನ್ನ ಲೋಪದೋಷಗಳನ್ನು ಕಳೆದುಕೊಂಡಿತೆಂದು ನಿರ್ಧರಿಸಲಾಗುವುದಿಲ್ಲವಾದರೂ ಇವುಗಳಲ್ಲಿ ಅಂದಿನ ಸಮಾಜದ ನೈಜ ಚಿತ್ರಣ ಸಿಗುವುದೇನೋ ಖಚಿತ.

ಇದಲ್ಲದೆ ಈತನ ಶ್ರೀಕೃಷ್ಣಚರಿತ್ರೆ, ಧರ್ಮತತ್ತ್ವ, ದೇವತತ್ತ್ವ, ಭಗವದ್ಗೀತೆಯ ಟೀಕೆ ಎಂಬ ಪಾಂಡಿತ್ಯಪೂರ್ಣ ಪ್ರಬಂಧಗಳೂ 38 ವಿಮಾರ್ಶಾತ್ಮಕ ಪ್ರಬಂಧಗಳೂ ಬೋಧಪ್ರದವಾಗಿವೆ. ಈತ ಬರೆದ ಕುಶಲಪತ್ರಗಳಲ್ಲಿ ಇಂಗ್ಲಿಷಿನವು 29, ಬಂಗಾಳಿಯವು 8 ಉಪಲಬ್ಧವಾಗಿವೆ; ಅವುಗಳಲ್ಲಿ ಸೂಕ್ತಿಯಂಥ ಅನೇಕ ವಾಕ್ಯಗಳಿವೆ.

1884ರಂದು ಬಂಕಿಮಚಂದ್ರ ಬಂಗಾಳೀ ಸಾಹಿತಿಗಳಿಗೆ ನಿವೇದಿಸಿದ ಬಿನ್ನಹದಿಂದ ಕೆಲವು ಆಯ್ಕೆಗಳು; ದುಡ್ಡಿಗಾಗಿ ಬರೆಯಬೇಡಿ, ಆಗ ಜನರಂಜನೆ ಮಾಡಬೇಕಾಗುತ್ತದೆ; ತಿಳಿಯದ ವಿಷಯಕ್ಕೆ ಕೈಹಾಕಬೇಡಿ; ಸರಳತೆಯೇ ಅಲಂಕಾರಗಳಲ್ಲೆಲ್ಲಾ ಶ್ರೇಷ್ಠವಾದ ಅಲಂಕಾರ; ಅಸತ್ಯ ಅಧರ್ಮ ಅಹಿತ ಆದದ್ದನ್ನು ಬರೆಯಬೇಡಿ, ಅದು ಮಹಾ ಪಾಪ. ಬಂಕಿಮ ಚಂದ್ರನ ಬಗ್ಗೆ ಎ.ಆರ್. ಕೃಷ್ಣಶಾಸ್ತ್ರಿಯವರು ಬರೆದ ಜೀವನಚರಿತ್ರೆ ವಂಗಸಾಹಿತ್ಯದಲ್ಲೇ ಬಂದಿಲ್ಲವೆಂದು ಹೇಳಲಾಗಿದೆ. (ಎಸ್.ವಿ.ಆರ್.)

**ಚಟ್ಟೋಪಾಧ್ಯಾಯ, ಶರತ್‌ಚಂದ್ರ :** 1876–1938. ಬಂಗಾಳದ ಅಗ್ರಮಾನ್ಯ ಕಾದಂಬರಿಕಾರರಲ್ಲಿ ಒಬ್ಬ. ರಾಷ್ಟ್ರೀಯ ಕಾಂಗ್ರೆಸ್ಸಿನ ಚಟುವಟಿಕೆಯಲ್ಲೂ ಪ್ರಮುಖ ಪಾತ್ರವಹಿಸಿದವ. ವಿಚಿತ್ರ ಘಟನಾವಳಿಗಳಿಂದ ಕೂಡಿದ ಈತನ ಬದುಕು ಗಮನಾರ್ಹವಾಗಿದೆ.



ಅದನ್ನು ಮೂರು ಮುಖ್ಯ ಘಟ್ಟಗಳಲ್ಲಿ ನೋಡಬಹುದು; ಬಾಲ್ಯಾನಂತರ ಭಾಗಲ್ಪುರದಲ್ಲಿ ಕಳೆದ ಸು. 17 ವರ್ಷಗಳು, ಆನಂತರ ಬರ್ಮಾದಲ್ಲಿ (ಈಗಿನ ಮಾಯನ್ಮಾರ್) ಕಳೆದ 12 ವರ್ಷಗಳು, ಕೋಲ್ಕತ್ತಾದಲ್ಲಿನ ಕಡೆಯ 22 ವರ್ಷಗಳು. ಶರಚ್ಚಂದ್ರನ ತಂದೆ ಮತಿಲಾಲ ಚಟ್ಟೋಪಾಧ್ಯಾಯ ಸಾಧಾರಣ ಸ್ಥಿತಿಯ ಒಬ್ಬ ಬ್ರಾಹ್ಮಣ. ಆತನಿಗೆ ಸಾಹಿತಿಯಾಗಬೇಕೆಂಬ ಚಪಲ. ಕಥೆ, ಕಾದಂಬರಿ, ಪದ್ಯ, ನಾಟಕವೆಲ್ಲಕ್ಕೂ ಕೈಹಾಕಿ ಏನೊಂದನ್ನೂ ಮುಗಿಸದೆ, ಪ್ರಕಟಿಸದೆ ನಿಂತ; ಅವನ ಅಸ್ಥಿಮಿತತೆಯೇ ಅದಕ್ಕೆ ಕಾರಣ. ಅಪ್ಪ ತನ್ನ ಲೇಖನಚಟ, ಅಸ್ಥಿರ ಬುದ್ಧಿ ಎರಡನ್ನೂ ಮಗನಿಗೆ ದತ್ತಿ ಬಿಟ್ಟು ಹೋದ. ಶರತ್‌ಚಂದ್ರನ ತಾಯಿ ಭಾಗಲ್ಪುರದ ಪ್ರಸಿದ್ಧ ಗಂಗೂಲಿ ಮನೆತನಕ್ಕೆ ಸೇರಿದವಳು: ಸಹೋದರರ ಉಸ್ತುವಾರಿಯಲ್ಲಿ ಓದಿ ಮುಂದಕ್ಕೆ ಬರಲೆಂದು ಹತ್ತು ವರ್ಷದ ತನ್ನ ಮಗನನ್ನು ಆಕೆ ಭಾಗಲ್ಪುರಕ್ಕೆ ಕಳಿಸಿದಳು. ಆದರೆ ಮಗ ಅಲ್ಲಿ ವ್ಯಾಸಂಗದ ಕಡೆಗೆ ಶ್ರದ್ಧೆ ತೋರಿಸಲಿಲ್ಲ. ಅಲೆಮಾರಿಯಾಗಿ ಕಾಲ ತಳ್ಳುವುದರಲ್ಲಿ ನಿಪುಣನಾದ. ಹೇಗೋ ಪ್ರವೇಶಪರೀಕ್ಷೆಯನ್ನು ದಾಟಿ ಎಫ್.ಎ.ಗೆ ಅರ್ಹತೆ ಪಡೆಯಲು ಯತ್ನಿಸುವಾಗಲೇ ವಿದ್ಯಾಭ್ಯಾಸ ಅವನಿಗೆ ಸಾಕುಸಾಕಾಗಿ ಹೋಯಿತು. ಅನಂತರ ಶ್ರೀಮಂತರಲ್ಲಿ ಗುಮಾಸ್ತನಾಗಿ, ಸಾಧುವಿನ ವೇಷದಲ್ಲಿ ಸಂಚರಿಸುತ್ತ, ಕೊನೆಗೆ ಬಿಹಾರದ ಒಬ್ಬ ಭೂಮಾಲೀಕನ ಬಳಿ ಕೆಲಸ ಮಾಡುತ್ತ ಬೆಳೆದ. ಏತನ್ಮಧ್ಯೆ ಬಿಭೂತಿ ಭೂಷಣ ಭಟ್ಟ ಎಂಬ ಗೆಳೆಯನೊಂದಿಗೆ ಸೇರಿ ಒಂದು ಸಾಹಿತ್ಯಸಂಘವನ್ನು 'ಛಾಯಾ' ಎಂಬ ಕೈಬರಹದ

ಪತ್ರಿಕೆಯನ್ನೂ ಸ್ಥಾಪಿಸಿದ. ಬಂಕಿಮಚಂದ್ರ ಮೊದಲಾದವರ ಕೃತಿಗಳನ್ನು ಪಠಿಸುವುದೆಂದರೆ ಈತನಿಗೆ ವಿಶೇಷ ಉತ್ಸಾಹ. ಸಾಹಿತಿಯಾಗಿದ್ದ ಸೋದರಮಾವ ಉಪೇಂದ್ರನಾಥ ಗಂಗೂಲಿಯಿಂದಾಗಿ ಈತನಿಗೂ ಸಾಹಿತ್ಯದ ಆಕರ್ಷಣೆ ತಟ್ಟಿತು.

1903ರಂದು ಮತಿಲಾಲ ದೈವಾಧೀನನಾದ. ಕೂಡಲೇ ಶರತ್ ಕೋಲ್ಕತ್ತೆಗೆ ಪ್ರಯಾಣ ಮಾಡಿ, ಮಾರನೆಯ ವರ್ಷ ರಂಗೂನಿಗೆ ವಲಸೆ ಹೋದ. ಈತನ ಸೋದರತ್ತೆ ಮತ್ತು ಆಕೆಯ ಪತಿ ಈತನಿಗೆ ನೆರವು ನೀಡಿ ರೈಲ್ವೆ ಇಲಾಖೆಯಲ್ಲಿ ಉದ್ಯೋಗ ದೊರಕಿಸಿಕೊಟ್ಟರು. ರೈಲ್ವೆಯಲ್ಲೂ ಸರ್ಕಾರದ ಲೋಕೋಪಯೋಗಿ ಶಾಖೆಯಲ್ಲೂ ಚಾಕರಿ ಮಾಡುತ್ತ ಒಟ್ಟು 12 ವರ್ಷ ಬರ್ಮಾದಲ್ಲಿ(ಈಗಿನ ಮಾಯನ್ಮಾರ್) ಈತ ನೆಲಸಿದ್ದ. ಅಂಕೆಯಿಲ್ಲದೆ ಸ್ವೇಚ್ಛಾಚಾರ ಈತನ ದಿನಚರಿಯಾಗಿದ್ದರೂ ನಾನಾ ವಿಷಯಗಳ ಮೇಲಣ ಗ್ರಂಥಗಳನ್ನು ಮನಸ್ಸಿಟ್ಟು ಅಧ್ಯಯನ ಮಾಡಿ ಜ್ಞಾನಾರ್ಜನೆ ಮಾಡಿಕೊಂಡ, ಅಲ್ಲದೆ ಕಥೆ, ಪ್ರಬಂಧ ಇತ್ಯಾದಿಗಳನ್ನು ರಚಿಸಿ ಕೋಲ್ಕತ್ತೆಗೆ ರವಾನಿಸುತ್ತಿದ್ದ; ಅವನ್ನು ಭಾರತಿ, ಯಮುನಾ, ಬಂಗಭಾಷಿ ಮುಂತಾದ ಪತ್ರಿಕೆಗಳು ಪ್ರಕಟಿಸುತ್ತಿದ್ದುವು. ಶರತ್‌ಚಂದ್ರ ಕೆಲವೊಮ್ಮೆ ಸುರೇಂದ್ರನಾಥ ಗಂಗೂಲಿ ಅನಿಲಾದೇವಿ, ಮುಂತಾದ ಕಾವ್ಯನಾಮಗಳನ್ನು ಇಟ್ಟುಕೊಳ್ಳುತ್ತಿದ್ದ. 1912ರಲ್ಲಿ ಏತಕ್ಕೊ ಕೋಲ್ಕತ್ತೆಗೆ ಬಂದಿದ್ದಾಗ ಶಾಂತಿದೇವಿ ಎಂಬ ಕನ್ಯೆಯನ್ನು ಮದುವೆಯಾದ; ಅವಳಿಗೆ ಬೇಗ ಸಾವು ಬಂತು. ರಂಗೂನಿಗೆ ಹಿಂತಿರುಗಿ 1913ರಲ್ಲಿ ಹಿರಣ್ಮಯೀ ದೇವಿ ಎಂಬಾಕೆಯನ್ನು ಕೈಹಿಡಿದ. 1916ರಲ್ಲಿ ಬರ್ಮವನ್ನು ತ್ಯಜಿಸಿ ಕೋಲ್ಕತ್ತೆಗೆ ಬಂದು ಅಲ್ಲಿಯೇ ಬೀಡುಬಿಟ್ಟ. ಸಾಹಿತ್ಯವನ್ನೇ ವೃತ್ತಿಯನ್ನಾಗಿಸಿಕೊಂಡು ಅದರ ವರಮಾನದಿಂದ ಸುಖಸೌಕರ್ಯದ ಜೀವನ ನಡೆಸಿದ ಗ್ರಂಥಕರ್ತರಲ್ಲಿ ಈತನೇ ಮೊದಲಿಗನೆಂದು ಎಣಿಸಲಾಗಿದೆ. 1934ರಲ್ಲಿ ಪತ್ನಿಯ ಬಯಕೆ ಈಡೇರಿಸಲು ಇನ್ನೊಂದು ಭವನವನ್ನು ಕಟ್ಟಿಸಿದ. ಮುಂದೆ ನಾಲ್ಕು ಸಂವತ್ಸರ ಬಾಳಿ 1938 ಜನವರಿ 16ರಂದು ತೀರಿಕೊಂಡ. ಕೊಲ್ಕತ್ತೆಗೆ ಬಂದದ್ದೇ ತಡ ಶರತ್‌ಚಂದ್ರ ರಾಜಕೀಯದ ಸೆಳೆತಕ್ಕೆ ಸಿಕ್ಕಿದ. 1917ರಲ್ಲಿ ಚಿತ್ತರಂಜನ ದಾಸನನ್ನು ತನ್ನ ಗುರುವಾಗಿ ಸ್ವೀಕರಿಸಿದ. 1921ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯನಾಗಿ ಹೌರ ಜಿಲ್ಲಾಸಮಿತಿಗೆ ಅಧ್ಯಕ್ಷನಾದ, ದಾಸನ ಸೂಚನೆಯಂತೆ ಹೆಂಗಸರ ಕಾರ್ಯಕಲಾಪಗಳಿಗಾಗಿ ನಾರೀಕರ್ಮ ಮಂದಿರ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ. ಹಲವು ನಾಯಕರಿಗೆ ಹತ್ತಿರದವನಾಗಿ ಮಹಾತ್ಮಗಾಂಧೀಜಿಯ ಬೆಂಬಲಿಗನಾಗಿ ಬಹಳಷ್ಟು ಸಮಾಜಸೇವೆ ಸಲ್ಲಿಸಿದ. ಗಾಂಧೀಜಿಗೆ ಒಮ್ಮೆ ಈತ ಹೀಗೆಂದನಂತೆ: 'ನೂಲುವುದನ್ನು ನಾನು ಕಲಿತೆ, ಚರಕದ ಒಲುಮೆಯಿಂದಲ್ಲ, ನಿನ್ನ ಕುರಿತು ಒಲುಮೆಗೋಸ್ಕರ.' ಶಾಲಾ ಕಾಲೇಜು ಬಹಿಷ್ಕರಿಸಿ ಬನ್ನಿ ಎಂಬ ಕರೆ ಗಾಂಧೀಜಿಯಿಂದ ಘೋಷಿತವಾದಾಗ ರವೀಂದ್ರನಾಥ ಠಾಕೂರರು ಅದಕ್ಕೆ ಆಕ್ಷೇಪ ಎತ್ತಿದರಂತೆ; ತತ್‌ಕ್ಷಣ ಶರತ್‌ಚಂದ್ರ ತನಗೆ ಸಾಹಿತ್ಯಿಕ ದಾರಿ ತೋರುಗರಲ್ಲಿ ಒಬ್ಬರಾಗಿದ್ದರೂ ಅವರನ್ನು ಖಂಡಿಸಿದ. ಕ್ರಾಂತಿಕಾರೀ ಗುಂಪನ್ನು ಕಂಡರೂ ಶರತ್‌ಚಂದ್ರನಿಗೆ ಸಹಾನುಭೂತಿ ಇತ್ತು. ಅವರಲ್ಲಿ ಕೆಲವರು 1927ರಲ್ಲಿ ಜೈಲಿನಿಂದ ಹೊರಬಂದಾಗ ಅವರಿಗೆ ಹಾರ್ದಿಕ ಸತ್ಕಾರ ಏರ್ಪಡಿಸಿದ, ಅಸ್ಪೃಶ್ಯತೆ ಇರಕೂಡದೆಂದೇ ಈತನ ತೀವ್ರವಾದ; ದೀನ ದಲಿತರ ವಿಷಯವಾಗಿ ಈತನ ಎದೆ ಸದಾ ಕರಗುತ್ತಿತ್ತು. ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳನ್ನು ಚರ್ಚಿಸಿ ಈತ ಮೂರು ಪುಸ್ತಕ ಬರೆದ; ನಾರೀರ್ ಮೂಲ್ಯ (1923), ತರುಣರ್ ವಿದ್ರೋಹ (1929), ಸ್ವದೇಶ್ ಓ ಸಾಹಿತ್ಯ (1932). ಅಲ್ಲದೆ ತನ್ನ ಕೆಲವು ಪ್ರಬಂಧಗಳಲ್ಲೂ ಕುಶಲ ಪತ್ರಗಳಲ್ಲೂ ಆ ಪ್ರಶ್ನೆಗಳನ್ನು ಪ್ರಸ್ತಾವಿಸಿದ.

ಈತನ ಕೃತಿಗಳ ಸಂಖ್ಯೆ 44. ಮೊಟ್ಟ ಮೊದಲ ಕಥೆ–ಮಂದಿರ್ (1903), ಅದಕ್ಕೆ ಕುಂತಳ ಬಹುಮಾನ ಸಿಕ್ಕಿತು. ನುರಿತ ಹಿರಿಯ ಸಾಹಿತಿ ಜಾಧವ ಸೇನ್ ತೀರ್ಪುಗಾರನಾಗಿದ್ದ. ಎರಡನೆಯ ಕಥೆ ಬಡಾದೀದಿ (1907) ಅಷ್ಟೊಂದು ಸಮರ್ಪಕವಲ್ಲವೆಂದು ತಜ್ಞರ ಅಭಿಪ್ರಾಯ. ರಾಮೆರ್ ಸುಮತಿ (1914), ಪಥನಿರ್ದೇಶ, ಬಿಂದೂರ್ ಚೇಲೆ (1913) ಎಂಬ ಮೂರು ಕಥೆಗಳು ಮೆಚ್ಚಿಕೆ ಪಡೆದಿವೆ. ಈತನ ಅತ್ಯುತ್ತಮ ಕಾದಂಬರಿ ಚರಿತ್ರಹೀನ; ಅದರಲ್ಲಿ ಸುಶಿಕ್ಷಿತನೂ ಕುಲೀನನೂ ಆದ ಒಬ್ಬ ಯುವಕನಿಗೆ ಊಟದ ಹೋಟೆಲಿನಲ್ಲಿ ದಾಸಿಯಾಗಿರುವ ಒಬ್ಬ ವಿಧವೆಯ ಮೇಲೆ ಪ್ರೇಮ ಉಂಟಾಗುತ್ತದೆ. ಅದು ಫಲಿಸದ ಪ್ರಣಯ, ಇದರ ಹಸ್ತಪ್ರತಿಯನ್ನು ಶರತ್‌ಚಂದ್ರ ಮೊದಲು ಭಾರತವರ್ಷ ಎಂಬ ಖ್ಯಾತ ಪ್ರತಿಕೆಗೆ ಕಳಿಸಿದ; ಸಂಪಾದಕ ದ್ವಿಜೇಂದ್ರಲಾಲ ರಾಯ್ ಅದನ್ನು ಪ್ರಕಟಿಸಲು ನಿರಾಕರಿಸಿದ. ಕಾಲಾನಂತರ ಶರತ್‌ಚಂದ್ರ ಯಮುನಾ ಪತ್ರಿಕೆಗೆ ಸಹಸಂಪಾದಕನಾದಾಗ ಅದು ಮುದ್ರಣಗೊಂಡಿತು. ಅಷ್ಟೇಕೆ, ರಮಾನಂದ ಚಟರ್ಜಿ ಸಂಪಾದಿತ 'ಪ್ರವಾಸಿ' ಆ ಸಮಯದಲ್ಲಿ ಹೆಸರಾಂತ ಪತ್ರಿಕೆಯಾಗಿತ್ತು. ಅದರಲ್ಲಿ ಠಾಕೂರರ ಕೃತಿಗಳು ಪ್ರಕಟವಾದುವೇ ವಿನಾ ಶರತ್‌ಚಂದ್ರನ ಒಂದು ಕೃತಿಯೂ ಪ್ರಕಟವಾಗಲಿಲ್ಲ, ಇದೊಂದು ಸೋಜಿಗದ ಸಂಗತಿ.

ಶರತ್‌ಚಂದ್ರ ದೊಡ್ಡ, ಮಧ್ಯಮ, ಚಿಕ್ಕ ಗಾತ್ರದ ಹಲವು ಕಾದಂಬರಿಗಳನ್ನು ಬರೆದ. ಪಂಡಿತ ಮಹಾಶಯ (1914), ಹಳ್ಳಿ ಸಮಾಜ (1916), ಗೃಹದಾಹ (1920), ಶ್ರೀಕಾಂತ I, II, III (1922 ಮುಂದೆ), ನಾನು ಮಾಧವಿ, ಶೇಷಪ್ರಶ್ನೆ (1931), ಭೈರವಿ, ವಿಪ್ರದಾಸ್, ವಿರಾಜ್ ಬಹೂ, ಚಂದ್ರನಾಥ್, ಅರಕ್ಷಣೀಯ, ಮಹೇಶ, ನವ ವಿಧಾನ್, ನಿಷ್ಕೃತಿ ಇತ್ಯಾದಿ ಅಲ್ಲದೆ ನಾಲ್ಕೈದು ಪ್ರಬಂಧಗಳೂ ಪತ್ರಗಳೂ ಈತನಿಂದ ರಚಿತವಾದುವು. ಹೆಣ್ಣಿನ ಸ್ಥಾನಮಾನದ ಸಮಸ್ಯೆ ಈತನ ಚಿತ್ರದಲ್ಲಿ ಸದಾ ಮಿಡಿದಾಡುತ್ತಿತ್ತು. ಅದನ್ನು ಕುರಿತು ಈತ ತಯಾರಿಸಿದ ಪ್ರಬಂಧ ಗಮನಾರ್ಹ. ಇಲ್ಲಿ ತೀವ್ರ ರಾಗದಿಂದ ಪೂರಿತನಾಗಿದ್ದರೂ ಶರತ್‌ನ ತರ್ಕವಿಚಕ್ಷಣೆಗೂ ಸ್ವಂತ ಆಲೋಚನೆಗೂ ಧಕ್ಕೆ ತಟ್ಟಿಲ್ಲ.

ಹಲವು ಸನ್ಮಾನಗಳು ಈತನಿಗೆ ಲಭಿಸಿದವು. 1923ರಲ್ಲಿ ಸೃಜನಸಾಹಿತ್ಯಕ್ಕೆ ಮೀಸಲಾಗಿದ್ದ ಜಗತ್ತಾರಿಣಿ ಸ್ವರ್ಣಪದಕವನ್ನು ಕೊಲ್ಕತ್ತ ವಿಶ್ವವಿದ್ಯಾಲಯ ಈತನಿಗೆ ಕೊಡಲು ತೀರ್ಮಾನಿಸಿತು. 1934ರಂದು ಈತನನ್ನು ವಂಗೀಯ ಸಾಹಿತ್ಯ ಪರಿಷತ್ತು ವಿಶೇಷ ಸದಸ್ಯನಾಗಲು ಆಹ್ವಾನಿಸಿತು. 1936ರಲ್ಲಿ ಈತನ ಹುಟ್ಟಿದ ಹಬ್ಬದ ದಿವಸ ರವೀಂದ್ರನಾಥ ಠಾಕೂರರು ಈತನನ್ನು ಅಭಿನಂದಿಸಿ ಕಾಗದ ಬರೆದರು. ಅದೇ ವರ್ಷ ಢಾಕ ವಿಶ್ವವಿದ್ಯಾಲಯ ಡಿ.ಲಿಟ್. ಪ್ರಶಸ್ತಿ ನೀಡಿತು.

ನಾನಾ ವರ್ಗದ ನಾನಾ ಸ್ಥಿತಿಗತಿಯ ನಾನಾ ಜಾಯಮಾನದ ಪಾತ್ರಗಳ ನಿರ್ಮಾಣ ಶರತ್‌ಚಂದ್ರನ ಮುಖ್ಯ ಲಕ್ಷಣ; ಅವುಗಳ ಆಂತರ್ಯದಲ್ಲಿ ಎದ್ದು ಕುದಿಯುವ ತುಯ್ತ ತಿಕ್ಕಾಟ, ಆಶೆ, ನಿರಾಸೆ, ಸಂತೋಷ ಅಸಂತೋಷಗಳ ಜಾಲವನ್ನು ಆತ ಮನವೊಪ್ಪುವಂತೆಯೂ ಹೃದಯಸ್ಪರ್ಶಿಯಾಗಿಯೂ ಚಿತ್ರಿಸಬಲ್ಲ; ಸ್ತ್ರೀಪಾತ್ರಸೃಷ್ಟಿಯಲ್ಲಿ ಪ್ರವೀಣನೆಂಬ ಕೀರ್ತಿ ಆತನಿಗೆ ಸಂದಿದೆ. ಆತ ಸೃಜಿಸಿದ ಸ್ತ್ರೀಪಾತ್ರಗಳು ಜೀವಂತವಾದವು; ಅನುಕಂಪೆ ಅಚ್ಚರಿ ಕೊನೆಗೆ ಅನುರಾಗ–ಇವನ್ನು ಪ್ರಚೋದಿಸತಕ್ಕವು. ಆದರೆ ಸಾವಿತ್ರಿ, ಅಚಲಾ, ಕಿರಣ್ಮಯಿ ಮುಂತಾದ ಅಪೂರ್ವ ವನಿತೆಯರನ್ನು ಕುರಿತು ವಿಚಾರಗೈಯುವಾಗ ಅವುಗಳ ಒಂದೆರಡು ಘಟಕಾಂಶ ನಾರೀಸಹಜವಲ್ಲವೇನೊ ಎಂಬ ಶಂಕೆ ಉಂಟಾಗುತ್ತದೆ. ಬಹುಶಃ ಆತ್ಮೀಯತೆಯ ಅತಿರೇಕಕ್ಕೆ ಪಕ್ಕಾಗಿ ಶರತ್‌ಚಂದ್ರ ತಾನೇ ಅವುಗಳಾಗಿ ನಡೆನುಡಿ ನಡೆಸಿದಂತೆ ಭಾಸವಾದರೂ ಆಗಬಹುದು.

ಕಥಾಸಂವಿಧಾನ ಒಟ್ಟಿನಲ್ಲಿ ಸಮರ್ಪಕವಾಗಿದ್ದರೂ ಆಗ ಈಗ ಜರಗುವ ಅನಿರೀಕ್ಷಿತ ಆಗಮನ ನಿರ್ಗಮನ ಸ್ವಲ್ಪಮಟ್ಟಿಗೆ ಕೃತಕವಾಗಿ ತೋರುತ್ತವೆ. ಶರತ್‌ಚಂದ್ರ ವಾಸ್ತವಿಕತೆಯ ಹಿಂಬಾಲಕನಾದ್ದರಿಂದ ಈ ಮಾತನ್ನು ಆಡಲೇಬೇಕು.

ಶರತ್‌ನ ಬಹುಪಾಲು ಕಥೆ ಕಾದಂಬರಿಗಳು ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಿಗೆ ಅನುವಾದವಾಗಿವೆ. (ಎಸ್.ವಿ.ಆರ್.)

**ಚತುಃಸ್ವಾತಂತ್ರ್ಯಗಳು :** ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷರಾಗಿದ್ದ ಫ್ರ್ಯಾಂಕ್‌ಲಿನ್ ಡಿ. ರೂಸ್‌ವೆಲ್ಟರು ಎರಡನೆಯ ಮಹಾಯುದ್ಧದ ಸಮಯದಲ್ಲಿ 1941 ಜನವರಿ 6ರಂದು, ತಮ್ಮ ದೇಶದ ಕಾಂಗ್ರೆಸಿಗೆ ಕಳುಹಿಸಿದ ವಾರ್ಷಿಕ ಸಂದೇಶದಲ್ಲಿ ಪ್ರತಿಪಾದಿಸಿದ ಸ್ವಾತಂತ್ರ್ಯಗಳು. ಶತ್ರುಗಳ ಆಕ್ರಮಣಗಳಿಗೆ ಒಳಗಾಗಿದ್ದ ಗ್ರೇಟ್ ಬ್ರಿಟನ್ ಮತ್ತು ಚೀನಗಳಿಗೆ ಸಹಾಯ ಮಾಡುವ ಆವಶ್ಯಕತೆಯನ್ನು ಒತ್ತಿ ಹೇಳುವುದೇ ಇದರ ತತ್‌ಕ್ಷಣದ ಉದ್ದೇಶವಾಗಿತ್ತು. ಈ ಸಂದರ್ಭದಲ್ಲಿ ರೂಸ್ವೆಲ್ಟರು ಪ್ರಥಮತಃ ತಮ್ಮ ದೇಶದ ಜನರ, ಅಂತಿಮವಾಗಿ ಇಡೀ ವಿಶ್ವದ ಜನರ ಗುರಿಯಾಗಿ ನಾಲ್ಕು ಮೂಲ ಮಾನವೀಯ ಸ್ವಾತಂತ್ರ್ಯಗಳನ್ನು ಆಧರಿಸಿದ ಒಂದು ಸುಭದ್ರ ವ್ಯವಸ್ಥೆಯನ್ನು ರೂಪಿಸಿದರು. ಅವರು ನೀಡಿದ ಸ್ವಾತಂತ್ರ್ಯದ ಪರಿಕಲ್ಪನೆ ಸಮಗ್ರವೂ ಪ್ರೌಢವೂ ಆದ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ದಾರಿದ್ರ್ಯದಿಂದ ಸ್ವಾತಂತ್ರ್ಯ (ವಿಮೋಚನೆ) ಮತ್ತು ಭಯದಿಂದ ಸ್ವಾತಂತ್ರ್ಯ (ವಿಮೋಚನೆ)– ಈ ಸ್ವಾತಂತ್ರ್ಯಗಳು ವ್ಯಕ್ತಿಗಳಿಗಷ್ಟೇ ಅಲ್ಲದೆ ರಾಷ್ಟ್ರಗಳಿಗೂ ಅನ್ವಯಿಸತಕ್ಕದ್ದೆಂದು ಅವರು ಬಯಸಿದರು. ರಾಷ್ಟ್ರಗಳು ಸ್ವತಂತ್ರವೂ ಸಮೃದ್ಧವೂ ಆಗಿರುವುದಷ್ಟೇ ಅಲ್ಲದೆ ವಿಶ್ವವ್ಯಾಪಿಯಾದ ನಿಶ್ಶಸ್ತ್ರೀಕರಣದ ಮೂಲಕ ಆಕ್ರಮಣಭಯರಹಿತವಾಗಿರುವ ದಿನವನ್ನು ನೋಡಲು ಅವರು ಕಾತುರರಾಗಿದ್ದರು. ಪ್ರಪಂಚದ ಯಾವ ಮೂಲೆಯಲ್ಲೇ ಆಗಲಿ, ಯಾವ ರಾಷ್ಟ್ರವೇ ಆಗಲಿ ತನ್ನ ನೆರೆರಾಜ್ಯದ ಮೇಲೆ ಆಕ್ರಮಣ ನಡೆಸಲು ಸಾಧ್ಯವಿಲ್ಲದಂಥ ಪರಿಸ್ಥಿತಿ ಏರ್ಪಡಬೇಕೆಂಬುದು ಅವರ ಹಂಬಲವಾಗಿತ್ತು. ಎರಡನೆಯ ಮಹಾಯುದ್ಧ 1945ರಲ್ಲಿ ಕೊನೆಗೊಂಡಿತು. ಅನಂತರ ಅನೇಕ ಅಧೀನ ರಾಷ್ಟ್ರಗಳು ಸ್ವಾತಂತ್ರ್ಯ ಗಳಿಸಿದುವಾದರೂ ರೂಸ್ವೆಲ್ಟರ ಕನಸು ಇನ್ನೂ ಪೂರ್ತಿ ನನಸಾಗಿಲ್ಲ. (ಎಂ.ಯು.ಎಂ.)

**ಚತುರೋಕ್ತಿ :** ಬುದ್ಧಿಯನ್ನು ಸಾಮಾನ್ಯಬುದ್ಧಿ, ಚತುರಬುದ್ಧಿ ಎಂದು ವಿಂಗಡಿಸುವುದು ಹಿಂದಿನಿಂದಲೂ ಬಂದಿರುವ ವಾಡಿಕೆ. ಬುದ್ಧಿಚಾತುರ್ಯದ ಮಾತುಗಳಿಗೆ ಚತುರೋಕ್ತಿ (ವಿಟ್) ಎಂಬ ಹೆಸರು ಸಲ್ಲುತ್ತದೆ. ಗಾತ್ರ ಹಾಗೂ ಪ್ರಮಾಣದ ದೃಷ್ಟಿಯಿಂದ ಚತುರಬುದ್ಧಿ ಅಸಾಧಾರಣವೆಂದೂ ಪ್ರತಿಭೆಗೆ (ಜೀನಿಯಸ್) ಹತ್ತಿರವೆಂದೂ ಕೆಲವು ಕಾಲ ಬಗೆದಿದ್ದರು.

ಅದು ಕೆಲಸಮಾಡುವ ಚೂಟಿಯನ್ನು ಲಕ್ಷ್ಯದಲ್ಲಿರಿಸಿಕೊಂಡು ಕ್ಷಿಪ್ರತೆ ಅದರ ಮುಖ್ಯಲಕ್ಷಣವೆಂದು ನಿರ್ದೇಶಿಸುವ ಅಭ್ಯಾಸ ಜಾರಿಗೆ ಬಂತು. ಈಗಲೂ ಬುದ್ಧಿಚಾತುರ್ಯಕ್ಕೆ ಮಿಂಚು ಉಪಮೆ, ಹಾಗೆಯೇ ಕತ್ತಿಯ ಅಲಗಿನ ಸಾದೃಶ್ಯದ ಮೂಲಕ ಅದನ್ನು ಹರಿತ, ತೀಕ್ಷ್ಣ ಎಂದು ವರ್ಣಿಸುವುದೂ ಉಂಟು. ಮಾತುಬಲ್ಲವರಲ್ಲಿ ಹಿರಿಮೆಯುಳ್ಳವನೇ ಕವಿ ಎಂಬ ತತ್ತ್ವ ಅಂಗೀಕೃತವಾಗಿದ್ದುದರಿಂದ ಕವಿತಾಶಕ್ತಿಗೂ ಚತುರೋಕ್ತಿಗೂ ವ್ಯತ್ಯಾಸ ಅಳಿಸಿಹೋಯಿತು. 17, 18ನೆಯ ಶತಮಾನ ಪೂರ್ತ ಕವಿಯೆ ಚತುರಮತಿ, ಚತುರಮತಿಯೇ ಕವಿ.

ಬುದ್ಧಿಚಾತುರ್ಯವನ್ನು ತಾರ್ಕಿಕವಾಗಿ ವಿಶ್ಲೇಷಿಸಿ, ಹುಸಿ ಚಾತುರ್ಯಕ್ಕೂ (ಫಾಲ್ಸ್ ವಿಟ್) ನಿಜ ಚಾತುರ್ಯಕ್ಕೂ (ಟ್ರೂ ವಿಟ್) ಅಂತರವನ್ನು ಗೊತ್ತು ಮಾಡಿದರು. ಶಬ್ದ, ಅರ್ಥ ಎರಡರಲ್ಲಿ ಶಬ್ದಕ್ಕೇ ಹೆಚ್ಚು ಕಡಿಮೆ ಎಲ್ಲ ಪ್ರಾಧಾನ್ಯವನ್ನೂ ಕೊಟ್ಟು ತಯಾರಿಸುವ ಕ್ರಾಸರಚನೆ ಹುಸಿ ಚಾತುರ್ಯವೆಂಬ ಖಂಡನೆಗೆ ಒಳಗಾಯಿತು. 12 ವಿಧದ ಹುಸಿ ಚಾತುರ್ಯವನ್ನು ಲಾಕ್ಷಣಿಕರು ಬೆರಳಿಟ್ಟು ತೋರಿಸುತ್ತಿದ್ದರು; ಒಂದು ಸ್ವರವನ್ನೊ ವ್ಯಂಜನವನ್ನೊ ಪದವನ್ನೊ ಬಳಸದೆ ಬರೆದ ಪದ್ಯ; ಪದಾರ್ಥದ ಆಕೃತಿಯಂತೆ ಮುದ್ರಣರೂಪನ್ನು ತಾಳುವ ಕವನ; ಪ್ರತಿಧ್ವನಿ ಪದ್ಯ; ಒಂದೇ ಪದವನ್ನು ಮತ್ತೆ ಮತ್ತೆ ಉಪಯೋಗಿಸುವ ಪದ್ಯ; ಪ್ರಾಸದೊಡನೆ ಆಟವಾಡುವ ಕ್ರಮ; ಬರಿ ಪ್ರಾಸಗಳ ಪಟ್ಟಿ; ಮೊದಲಿನಿಂದ ಓದಿದರೆ ಒಂದರ್ಥ, ಕೊನೆಯಿಂದ ಹಿಂದುಮುಂದಾಗಿ ಓದಿದರೆ ವಿರುದ್ಧಾರ್ಥ ಸೂಚನೆ; ನಾನಾ ತೆರದ ಒಗಟು; ಕ್ಲಿಷ್ಟೋಚ್ಚಾರಣೆಯ ವಾಕ್ಯಜಾಲ–ಇಂಥವು ಕ್ಷುದ್ರ ಕವಿತ್ವವೆಂದು ತಿರಸ್ಕಾರಕ್ಕೆ ಅರ್ಹವಾದವು. ನಿಜಚಾತುರ್ಯದ ಗುಣಗಳನ್ನು ಹೀಗೆ ತಪಶೀಲು ಮಾಡಿದರು: 1 ಬೇಟೆ ನಾಯಿಯ ಸುಟಿ ಚಲನೆ; 2 ಅಪೂರ್ವವೂ ಗೂಢವೂ ಆದ ಹೋಲಿಕೆಯ ಅರಿವು; 3. ಚಕಿತಗೊಳಿಸುವಿಕೆ :4. ವಿವೇಚನೆಯ ಹತೋಟಿ; 5 ಅರ್ಥಪ್ರಾಧಾನ್ಯದ ಸತ್ತ್ವ.

ಎಂದರೆ ಹುಸಿ ಯಾವುದು, ನಿಜ ಯಾವುದು ಎಂಬುದನ್ನು ಖಂಡಿತವಾಗಿ ನಿಷ್ಕರ್ಷಿಸಿಬಿಡುವುದು ಸಾಹಿತ್ಯಲೋಕದಲ್ಲಿ ಅಷ್ಟೊಂದು ಸುಲಭವಲ್ಲ. ಕವಿ ಉಪಯೋಗಿಸುವ ಶಬ್ದಸಾಧನಗಳಲ್ಲಿ ಒಂದಾದ ಶ್ಲೇಷೆಯನ್ನು (ಪನ್) ತೆಗೆದುಕೊಳ್ಳೋಣ. ಕೊಡಿಸು ಸಾಕ್ಕೈದೂರನವರಿಗೆ ತಡೆಯದಾನೆರಡೂರ ಕೊಂಬೆನು ಕೌರವೇಂದ್ರನಲಿ; ಅರಮನೆಯೆಂಬರ್ ಪೂರ್ಣಗೃಹವನು, ನುಡಿ ನಿಂದೆಯನೆಂಬರ್ ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ–ಇವುಗಳಲ್ಲಿ ಹೆಚ್ಚು ಸ್ವಾರಸ್ಯವಿಲ್ಲ; ಸಾಮಾನ್ಯಬುದ್ಧಿಗೂ ಗೋಚರವಾಗಬಲ್ಲ ಅಂಶಗಳೇ ಹೊರತು ಇವು ಹೆಚ್ಚಿನವಲ್ಲ. ಆದರೆ ದ್ವಿಜವರ ಎಂಬುದನ್ನು ದ್ವಿ + ಜವರ ಎಂದೂ ಒಬ್ಬಟ್ಟು ಎಂಬುದನ್ನು ಒಬ್ಬ + ಅಟ್ಟು ಎಂದೂ ಬಿಡಿಸಿ ಹಾಸ್ಯ ಮಾಡಿದರೆ ಅದು ಕೇವಲ ಚಮತ್ಕಾರವಲ್ಲ, ದಿಟವಾದ ಬುದ್ಧಿಚಾತುರ್ಯ. ಹಾಗೆಯೇ ಪ್ರತ್ಯುತ್ತರ (ರಿಪಾರ್ಟಿ) ಎಷ್ಟೋ ಬಾರಿ ಅರ್ಥವತ್ತಾಗುತ್ತದೆ. 'ಹೋಮರ್ ವರ್ಜಿಲರನ್ನು ಮರೆತಮೇಲೆ ಖಂಡಿತ ಜನ ತನ್ನ ಕೃತಿಗಳನ್ನು ಓದುತ್ತಾರೆ' ಎಂದು ಎರಡನೆಯ ದರ್ಜೆಯ ಕವಿಯೊಬ್ಬ ಜಂಬ ಕೊಚ್ಚಿದಾಗ ಅಲ್ಲಿದ್ದ ವಿದ್ವಾಂಸ ಪೋರ್ಸನ್ 'ನಿಜ, ನಿಜ!' ಎಂದು ಇಷ್ಟೇ ಹೇಳಿದನಂತೆ. ಅವರನ್ನು ಮರೆತ ಮೇಲೆ ತಾನೆ ಇವರನ್ನು ಓದುವುದು! ಅಂಥ ಕಾಲ ಎಂದಿಗೂ ಬಾರದು ಎಂಬ ವ್ಯಂಗ್ಯ ಈ ಉತ್ತರದಲ್ಲಿದೆ. ಪಾನಲೋಲುಪನೊಬ್ಬ ಹೋಟೇಲು ಮಾಣಿಗೆ ಹೇಳಿದನಂತೆ; 'ಈ ಲೋಟ ಬಹಳ ದೊಡ್ಡದಾಗಿದೆ. ಅದನ್ನು ತೆಗೆದುಕೊಂಡು ಹೋಗು. ನಾನು ಸೀಸೆಯಿಂದಲೇ ಕುಡಿಯುತ್ತೇನೆ.' ನುರಿತ ವಕೀಲನಾದ ಕರ್‌ನ್ ಎಂಬಾತನಿಗೆ ಅಗೌರವ ಮಾಡಲೋಸುಗ ಒಬ್ಬ ನ್ಯಾಯಾಧೀಶ ತನ್ನೊಡನೆ ಬಂದಿದ್ದ ನಾಯಿಯನ್ನು ಮುದ್ದಿಸತೊಡಗಿದ; ಕರ್‌ನ್ ತಕ್ಷಣ ತನ್ನ ಭಾಷಣವನ್ನು ನಿಲ್ಲಿಸಿದ. ಏತಕ್ಕೆ ನಿಲ್ಲಿಸಿದೆ ಎಂಬ ಪ್ರಶ್ನೆಗೆ ಕರ್‌ನ್ ಇತ್ತ ಜವಾಬು; 'ಕ್ಷಮಿಸಿ, ನ್ಯಾಯಾಧೀಶರು ಸಹೋದರ ನ್ಯಾಯಾಧೀಶನೊಂದಿಗೆ ಮಂತ್ರಾಲೋಚನೆ ನಡೆಸುತಿದ್ದೀರಿ; ಅದಕ್ಕೋಸ್ಕರ ನಾನು ಸುಮ್ಮನಾದೆ.' ಗಾಢಾರ್ಥದ ಜೊತೆಗೆ ಹೊಸತನದ ಕಾಂತಿಯೂ ಸೇರಿಕೊಂಡರೆ ಚತುರೋಕ್ತಿ ಉತ್ತಮವಾಗುತ್ತದೆ, ರುಚಿಕರವಾಗುತ್ತದೆ.

ಬುದ್ಧಿಚಾತುರ್ಯ ನಿರ್ದ್ರವವಾದದ್ದು, ದಾಕ್ಷಿಣ್ಯವಿಲ್ಲದ್ದು, ಮರುಕಶೂನ್ಯವಾದದ್ದು ಎಂದು ನುಡಿದಿದ್ದಾರೆ. ಧ್ವಂಸ ಮಾಡುವುದೇ ಅದರ ಪ್ರಿಯ ವ್ಯಾಪಾರವಂತೆ. ದಿಟ್ಟ ಕ್ರೂರ ಭರ್ತ್ಸನೆ, ಕರುಳು ಬಗಿಯುವ ಕಟಕಿ, ಹೊಡೆದು ಕೆಡಹುವ ಗೇಲಿ ಮುಂತಾದುದರ ಕಡೆಗೇ ಅದರ ಒಲುವೆ ಅಧಿಕ. ಯಾವನೋ ಒಬ್ಬ ನನ್ನ ತಲೆ ಕುಲಾವಿಯಲ್ಲಿ ಏನಾದರೂ ನಗೆಪಾಟಲಾದ ಕೊರತೆ ಕಾಣಿಸುತ್ತಿದೆಯೇ? ಎಂದು ಕೇಳಿದಾಗ, ಪರಿಹಾಸಪ್ರವೀಣ ಉತ್ತರ ಹೇಳಿದನಂತೆ. 'ಏನೂ ಇಲ್ಲ, ತಲೆ ವಿನಾ!' ಕೌರವ ಕೃಷ್ಣನನ್ನು ನಿಂದಿಸುವ ರೀತಿ ಇದು; 'ಪನ್ನೊಂದನೆಯದು ಸೂತಾವತಾರಮುಂ ಹರಿಗಾಯ್ತೆ?' ಮಹೋತ್ಸವ ಮುಗಿಯಿತೆ?–ಎಂಬ ಪ್ರಶ್ನೆಗೆ ಉತ್ತರ: ಇಲ್ಲ ಕವಿಸ್ತುತಿಯಲ್ಲಿ ಅದಕ್ಕೆ ಇನ್ನೊಂದು ದಿವಸದ ಆಯುಸ್ಸಿದೆ.' ಬಿರುಸಿನಲ್ಲಿ ಅಲ್ಪಸ್ವಲ್ಪ ಭೇದವಿದ್ದರೂ ಪರುಷಚತುರೋಕ್ತಿ ಪರುಷವೇ.

18ನೆಯ ಶತಮಾನದ ಕೊನೆ, 19ನೆಯ ಶತಮಾನದ ಪ್ರಾರಂಭದಲ್ಲಿ ವಿಮರ್ಶಕರಿಗೂ ತತ್ತ್ವಶಾಸ್ತ್ರಜ್ಞರಿಗೂ ಬುದ್ಧಿಚಾತುರ್ಯವನ್ನು (ವಿಟ್) ಹಾಸ್ಯದಿಂದ (ಹ್ಯೂಮರ್) ಪ್ರತ್ಯೇಕಿಸಿ ವರ್ಗೀಕರಣ ಮಾಡುವ ಹಂಗು ಇದ್ದಂತಿತ್ತು. ಅವರ ಚರ್ಚೆಯಿಂದ ಎದ್ದು ಬಂದ ಮುಖ್ಯಾಂಶವೇನೆಂದರೆ ಅದು ಸಹಾನುಭೂತಿಗೆ ನನ್ನ ಬಳಿಗೆ ಬರಬೇಡ ಎನ್ನುತ್ತದೆ, ಇದು ನನ್ನ ಬಳಿಗೆ ಬಾ ಎನ್ನುತ್ತದೆ; ಅದು ನೀನು! ಎಂದು ಗುಡುಗಿದರೆ, ಇದು ನೀನು ಮತ್ತು ನಾನು ಎಂಬ ಮೆಲ್ಲುಲಿ ಆಡುತ್ತದೆ. ಬುದ್ಧಿಚಾತುರ್ಯ ಜುವೆನಲ್ ಮತ್ತು ಸ್ವಿಫ್ಟರಂತೆ ಕಠಿಣವೂ ಕರ್ಕಶವೂ ಆಗಬಹುದು; ಸಾಹಿತ್ಯ ಪ್ರಪಂಚದ ಹೆಗ್ಗುರುತು ಅದರ ಆಕರ್ಷಣೀಯ ವೈವಿಧ್ಯ.

19ನೆಯ ಶತಮಾನದ ಎರಡನೆಯ ಭಾಗದಲ್ಲಿ ಬುದ್ಧಿಚಾತುರ್ಯಕ್ಕೂ ಹುಡುಗಾಟಕ್ಕೂ ಬಾಂಧವ್ಯವೆಂಬ ಅಭಿಪ್ರಾಯ ತಲೆಯೆತ್ತಿತ್ತು. ಚತುರೋಕ್ತಿಗೆ ಮನಸೋತ ಸಾಹಿತಿ ಎಂದಿಗೂ ಗಂಭೀರವಾಗಿರಲಾರ, ಗಹನ ವಿಷಯವನ್ನು ಗ್ರಹಿಸಲಾರ, ಪ್ರತಿಪಾದಿಸಲಾರ ಎಂದು ಸೂತ್ರಿಸಲಾರಂಭಿಸಿದರು. ಅದು ಕಾಣುವುದು ಒಂದು ಕೋನದಿಂದ ಕಂಡ ಅರೆಕೊರೆ ನಿಜಾಂಶವನ್ನು, ಅಷ್ಟೆ–ಎಂದವರ ಅಭಿಪ್ರಾಯ. ಬುದ್ಧಿಚಾತುರ್ಯ ಗಂಭೀರವಾಗಿರುವುದೊಂದೇ ಅಲ್ಲ, ಗಹನ ಸತ್ಯಾಂಶವನ್ನೂ ಹೃದಯಸ್ಪರ್ಶಿಯಾಗಿ ಬೋಧಿಸಬಲ್ಲುದು–ಎಂಬ ವಿಷಯವನ್ನು ಈಗ ಎಲ್ಲರೂ ಒಪ್ಪಿಕೊಂಡಿದ್ದಾರೆ. ಆಸ್ಕರ್ ವೈಲ್ಡ್‌ನ 'ಕಲೆ ಪ್ರಕೃತಿಯನ್ನು ಅನುಕರಿಸುವುದಿಲ್ಲ; ಪ್ರಕೃತಿ ಕಲೆಯನ್ನು ಅನುಕರಿಸುತ್ತದೆ' ಎಂಬ ಚಾಟೂಕ್ತಿಯಲ್ಲಿ ಮನನೀಯವಾದ ಮನವೊಪ್ಪಿಸುವ ಚಿಂತನೆ ಮನೆಮಾಡಿಕೊಂಡಿದೆ. ಕಿಂಗ್ ಲಿಯರ್ ನಾಟಕದ ವಿದೂಷಕ ಪರಿಹಾಸ ಪಟಾಕಿಯನ್ನು ಹಾರಿಸುವ ನಕಲಿಯವನಲ್ಲ, ಬುದ್ಧಿಚಮತ್ಕಾರದವನಲ್ಲ, ದೊಡ್ಡ ಮಟ್ಟದ ಬುದ್ಧಿಶಾಲಿ, ಧರ್ಮವಾದಿ, ದಾರ್ಶನಿಕ.

ಚತುರೋಕ್ತಿಯು ಊಟಕ್ಕೆ ಅತ್ಯಗತ್ಯವಾದ ಉಪ್ಪು ಅಷ್ಟೇ ಹೊರತು ಅದೇ ಎಂದಿಗೂ ಊಟವಾಗಲಾರದು–ಎಂಬ ಎಚ್ಚರಿಕೆ ಇರಬೇಕಾದ್ದು ಅಗತ್ಯದ ಸಂಗತಿ. (ಎಸ್.ವಿ.ಆರ್.)

**ಚತುರೋಪಾಯಗಳು :** ಕಾರ್ಯಸಿದ್ಧಿಗಾಗಿ ರಾಜ ಅನುಸರಿಸಬೇಕಾದ ನಾಲ್ಕು ಉಪಾಯಗಳು, ಅನುಕ್ರಮವಾಗಿ 1 ಸಾಮ, 2 ದಾನ, 3 ಭೇದ ಮತ್ತು 4. ದಂಡ. ಭಾರತೀಯ ರಾಜನೀತಿಶಾಸ್ತ್ರದಲ್ಲಿ ರಾಜರ ಪರಸ್ಪರ ಸಂಬಂಧವನ್ನು ಕುರಿತ ತತ್ತ್ವಗಳನ್ನು ವಿವೇಚಿಸುವಾಗ ಇವುಗಳ ಉಲ್ಲೇಖವನ್ನು ಪ್ರಾಯಿಕವಾಗಿ ನೋಡುತ್ತೇವೆ. ಕೌಟಿಲ್ಯನ ಅರ್ಥಶಾಸ್ತ್ರ, ಮನುಧರ್ಮಶಾಸ್ತ್ರ, ಯಾಜ್ಞವಲ್ಕ್ಯ ಸ್ಮೃತಿ, ಕಾಮಂದಕೀಯ ನೀತಿಸಾರ ಮುಂತಾದ ಶಾಸ್ತ್ರಗ್ರಂಥಗಳಲ್ಲಿ ಮಾತ್ರವಲ್ಲ, ಮಹಾಭಾರತದ ಶಾಂತಿಪರ್ವದಲ್ಲಿ ಬರುವ ರಾಜಧರ್ಮಪರ್ವ ಮತ್ತು ಅಗ್ನಿಪುರಾಣ, ಮತ್ಸ್ಯಪುರಾಣ ಮುಂತಾದ ಪುರಾಣಗಳಲ್ಲೂ ಈ ವಿಷಯ ವಿವೇಚಿಸಲ್ಪಟ್ಟಿದೆ.

ಮಿಕ್ಕ ರಾಜರನ್ನು ತನ್ನ ಹಿತಾನುಸಾರ ಇಟ್ಟುಕೊಳ್ಳಲು ಭೂಪತಿಯಾದವ ಮೊದಲು ಸಾಮವನ್ನು ಮಾತ್ರ ಬಳಸಿನೋಡಬೇಕು. ಸಾಮವೆಂದರೆ ಒಳ್ಳೆಯ ಮಾತಿನ ಸಂಧಾನ, ಉಪಕಾರಸ್ಮರಣೆ, ಮೃದುಮಧುರಭಾಷಣ, ಸತ್ಕಾರ, ನಿನ್ನವನೇ ನಾನೆಂದು ಹಿತೈಷಿಯಂತೆ ಹೇಳುವಿಕೆ–ಇವೆಲ್ಲ ಸಾಮದ ಚಾತುರ್ಯ ಪ್ರಕಾರಗಳು. ಸಾಧುಗಳೊಡನೆ ತಥ್ಯವಾದ ಮಾತುಕತೆಗಳನ್ನೇ ಬಳಸಿದರೆ ಅಸಾಧುಗಳೊಡನೆ ಅತಥ್ಯ ಅಥವಾ ಸುಳ್ಳಾದ ನಂಬಿಕೆ ಹುಟ್ಟಿಸಿದರೂ ತಪ್ಪಲ್ಲ. ಆದರೆ ಅಸಾಧುಗಳು ಸಾಮಕ್ಕೆ ಬಗ್ಗದಿರುವುದೇ ಹೆಚ್ಚು.

ಆಗ ಎರಡನೆಯ ಉಪಾಯವಾದ ದಾನವನ್ನು ಪ್ರಯೋಗಿಸಬೇಕು. ಸಾಧುಗಳಿರಲಿ, ಅಸಾಧುಗಳಿರಲಿ, ದಾನಕ್ಕೆ ಒಲಿಯುವುದು ಸಹಜವೇ. ಹಿಂದೆ ವಶಪಡಿಸಿಕೊಂಡ ಧನದ ಮರುಪಾವತಿ ಅಥವಾ ಪ್ರತಿದಾನ, ಹೊಸದಾಗಿ ಅವನ ಮನವೊಲಿಸಲು ಕೊಡುವ ಧನಕನಕಾದಿಗಳು, ಯಾವುದೋ ನಿಬಂಧನೆಗೆ ಒಳಪಟ್ಟು ಅವನಿಗೆ ಕೊಡುವ ವಿಶೇಷ ಸವಲತ್ತು–ಇವೆಲ್ಲ ದಾನೋಪಾಯದಲ್ಲಿ ಸೇರ್ಪಡೆಯಾಗುತ್ತವೆ.

ಸಾಮ, ದಾನಗಳೆರಡರಿಂದಲೂ ಸಾಧಿಸಲಾಗದುದಕ್ಕೆ ಭೇದವನ್ನು ಪ್ರಯೋಗಿಸಬೇಕು. ಭೇದವೆಂದರೆ ಒಡಕನ್ನು ಉಂಟು ಮಾಡುವುದು, ಸ್ನೇಹವನ್ನು ತಪ್ಪಿಸುವುದು. ಇಬ್ಬರಲ್ಲಿ ಒಂದಿಲ್ಲೊಂದು ರೀತಿಯಿಂದ ಕಲಹ ಉಂಟುಮಾಡುವುದು, ಶತ್ರುವಿನ ಅನುಚರರಿಗೂ ಪ್ರಭುವಿಗೂ ತಂತಮ್ಮಲ್ಲಿಯೇ ವೈಮನಸ್ಯ ಬೆಳೆಸುವುದು–ಇವೇ ಮುಂತಾದವು ಭೇದೋಪಾಯದ ಪರಿಗಳು. ಮುದ್ರಾರಾಕ್ಷಸ ನಾಟಕದಲ್ಲಿ ಚಾಣಕ್ಯ ರಾಕ್ಷಸರಿಬ್ಬರೂ ಭೇದೋಪಾಯವನ್ನು ಹೆಚ್ಚಾಗಿ ಆಶ್ರಯಿಸುತ್ತಾರೆ.

ಈ ಮೂರಕ್ಕೂ ಸಗ್ಗದ ವೈರಿಯನ್ನು ದಾರಿಗೆ ತರಲು ನಾಲ್ಕನೆಯದಾದ ದಂಡೋಪಾಯವೇ ಗತಿ. ದಂಡ ಎಂದರೆ ದಂಡನೆ ಎಂದರ್ಥ. ಅರ್ಥಹರಣ, ಪರಿಪರಿಯ ಕ್ಲೇಶವನ್ನು ತಂದೊಡ್ಡುವುದು, ಯುದ್ಧದಲ್ಲಿ ಸೋಲಿಸುವುದು, ಕೊಲೆ–ಇವೆಲ್ಲ ದಂಡದ ಪ್ರಕಾರಗಳು. ದುಷ್ಟರನ್ನು ಹತೋಟಿಯಲ್ಲಿಡಲು ದಂಡವೇ ಅಗತ್ಯ. ದಂಡಯೋಗ್ಯನಿಗೆ ಸಾಮದಾನಗಳನ್ನು ಬಳಸುವುದು ತಪ್ಪಾಗುತ್ತದೆ. (ಕೆ.ಕೆ.)

**ಚತುರ್ಥಕ ವಿಚಲನೆ :** ಹಲವಾರು ಅವೇಕ್ಷಿತ ಬೆಲೆಗಳ ಮಧ್ಯಮವನ್ನು (ಮೀನ್) ಕುರಿತಂತೆ ವೈಯಕ್ತಿಕ ಬೆಲೆಗಳ ಚದರಿಕೆಯನ್ನು (ಡಿಸ್ಪರ್ಷನ್) ಅಳತೆ ಮಾಡಲು ಬಳಸುವ ಮಾನಗಳ ಪೈಕಿ ಒಂದು (ಕ್ವಾರ್ಟೈಲ್ ಡೀವಿಯೇಷನ್). ಉದಾಹರಣೆಗೆ A ಮತ್ತು B ಎನ್ನುವ ಇಬ್ಬರು ಆಟಗಾರರು 10 ಕ್ರಿಕೆಟ್ ಆಟಗಳಲ್ಲಿ ಈ ರೀತಿ ಓಟಗಳನ್ನು ಗಳಿಸಿದರೆಂದು ಭಾವಿಸೋಣ :

| | | | | | | | | | | |
|---|---|---|---|---|---|---|---|---|---|---|
| A | 40 | 14 | 77 | 55 | 69 | 73 | 62 | 42 | 38 | 30 |
| B | 29 | 32 | 1 | 60 | 71 | 109 | 96 | 83 | 4 | 15 |

ಪ್ರತಿಯೊಬ್ಬನ ಸರಾಸರಿ ಓಟ 50. ಆದರೆ A ಯ ಗಳಿಕೆ ಹೆಚ್ಚು ಸುಸಂಗತ ; B ಯದಾದರೋ ಅಡ್ಡೇಟು ಹೊಡೆದಂತೆ ಯದ್ವಾತದ್ವಾ. A ಗಳಿಸಿದ ಓಟಗಳ ವ್ಯಾಪ್ತಿ 30ರಿಂದ 77ರ ವರೆಗಿದೆ: B ಯ ವ್ಯಾಪ್ತಿ 1 ರಿಂದ 109ರ ವರೆಗಿದೆ. ಇವುಗಳಿಂದ ಕನಿಷ್ಠತಮ ಬೆಲೆಗಳನ್ನೂ ಗರಿಷ್ಠತಮ ಬೆಲೆಗಳನ್ನೂ ತೆಗೆದುಹಾಕಿ ಉಳಿಯುವ ಭಾಗದ ವ್ಯಾಪ್ತಿಯನ್ನು ಪರಿಗಣಿಸುವುದು ಉತ್ತಮ. ಇದರ ಮೇಲೆ ಎರಡು ತುದಿಗಳಲ್ಲೂ ಕಾಲಂಶದಷ್ಟನ್ನು ತೆಗೆದುಹಾಕೋಣ. ಅಂದರೆ ಕನಿಷ್ಠತಮ ಎರಡು ಬೆಲೆಗಳನ್ನೂ ಗರಿಷ್ಠತಮ ಎರಡು ಬೆಲೆಗಳನ್ನೂ ತೆಗೆದುಹಾಕಲಾಗಿದೆ. ಆಗ A ಯ ಓಟಗಳ ವ್ಯಾಪ್ತಿ 38ರಿಂದ 60ರವರೆಗೂ B ಯ ಓಟಗಳ ವ್ಯಾಪ್ತಿ 15ರಿಂದ 83ರವರೆಗೂ ಇರುವುದು. ಹೀಗೆ ವ್ಯಾಪ್ತಿಯನ್ನು ಅಳತೆಗೋಲಾಗಿ ಇಟ್ಟುಕೊಳ್ಳುವುದು ಕಚ್ಚಾ ಪದ್ಧತಿ. ಇದನ್ನು ಸಂಸ್ಕರಿಸಿ ಚತುರ್ಥಕ ವಿಚಲೆಯನ್ನು ಬಳಸುತ್ತೇವೆ. (ಎಂ.ವಿ.ಜೆ.)

**ಚತುರ್ದಂಡೀ :** ಕರ್ನಾಟಕ ಸಂಗೀತದ ಶಾಸ್ತ್ರೀಯ ಗಾನಸಂಪ್ರದಾಯ. ಹಿಂದಕ್ಕೆ ಚತುರ್ದಂಡೀ ಗಾನವೆಂದು ಕರೆಯಲ್ಪಡುತ್ತಿತ್ತು. ದಂಡಿ ಎಂದರೆ ಒಂದಕ್ಕೊಂದು ಎಣೆಯಾಗಿ ಮೇಳೈಸಿಕೊಂಡಿರುವುದು ಎಂದರ್ಥ. ರಾಗಾಲಾಪನೆ, ತಾಯ, ಗೀತ, ಪ್ರಬಂಧಗಳೆಂಬ ನಾಲ್ಕು ಅಂಗಗಳು ಶಾಸ್ತ್ರೋಕ್ತ ವಿಧಾನದಿಂದ ಸಮನ್ವಯವಾಗಿ ಸೇರಿಕೊಂಡಿರುವುದೇ ಚತುರ್ದಂಡೀ ಗಾನ. ಈ ಒಂದೊಂದು ಅಂಗಗಳಿಗೂ ಶಾಸ್ತ್ರದಲ್ಲಿ ವಿಶಿಷ್ಟ ಲಕ್ಷಣಗಳು ನಿರೂಪಿಸಲ್ಪಟ್ಟಿವೆ. ಪ್ರ.ಶ.17ನೆಯ ಶತಮಾನದ ಮಧ್ಯಕಾಲದಲ್ಲಿ ತಂಜಾವೂರಲ್ಲಿ ಆಳಿದ ವಿಜಯರಾಘವ ನಾಯಕನ ಆಶ್ರಿತನಾಗಿದ್ದ ವೆಂಕಟಮುಖಿ (ವೆಂಕಟೇಶ್ವರ ದೀಕ್ಷಿತ) ತಾನು ರಚಿಸಿದ ಸಂಗೀತಶಾಸ್ತ್ರ ಗ್ರಂಥಕ್ಕೆ 'ಚತುರ್ದಂಡೀಪ್ರಕಾಶಿಕೆ' ಎಂದೇ ಹೆಸರು ಕೊಟ್ಟಿರುತ್ತಾನೆ. ಮತ್ತು ಅದರ ನಾಲ್ಕು ಅಧ್ಯಾಯಗಳಲ್ಲಿ ಪ್ರತ್ಯೇಕವಾಗಿ ಈ ನಾಲ್ಕು ಅಂಗಗಳ ಲಕ್ಷಣಗಳನ್ನು ವಿಸ್ತಾರವಾಗಿ ಕೊಟ್ಟಿರುತ್ತಾನೆ. ಅನಂತರ ಪ್ರಶ. 1729–35ರಲ್ಲಿ ತಂಜಾವೂರನ್ನು ಆಳಿದ ತುಳಜೀ ಮಹಾರಾಜ ತನ್ನ ಸಂಗೀತಸಾರಾಮೃತವೆಂಬ ಶಾಸ್ತ್ರಗ್ರಂಥದಲ್ಲಿ ಚತುರ್ದಂಡೀ ಗಾನದ ವಿಶಿಷ್ಟ ಲಕ್ಷಣಗಳನ್ನು ಸೋದಾಹರಣವಾಗಿ ನಿರೂಪಿಸಿರುತ್ತಾನೆ. ಆರೋಹಾವರೋಹಮೂರ್ಛನಾತಾನಯೋರಯಂ ಸಂದರ್ಭೋತ್ರ ಸವಂಗಚ್ಛತೇ ಅಯಂ ಸಂದರ್ಭೋ ನ ಸಂಗಚ್ಛತ ಇತ್ಯೇತನ್ನಿಶ್ಚಯಾರ್ಥಂ ಪ್ರಾಚೀನ ಗೀತಪ್ರಬಂಧತಾಯಾಲಾಪರೂಪಚತುರ್ದಂಡೀ ಸೂಲಾದಿ ಪ್ರಭೃತ್ಯುದಾಹರಣಲೇಖನೇನ ಸ್ಫುಟಂ ಯಥಾ ಭವತಿ ತಥಾ ಲಿಖ್ಯತೇ. ಈ ಗ್ರಂಥಗಳಲ್ಲಿ ಹೇಳುವ ಪ್ರಕಾರ ಆ ಲಕ್ಷಣಗಳು ಸಂಕ್ಷೇಪವಾಗಿ ಹೀಗಿರುತ್ತವೆ.

ಸ್ವರಗಳು–ಅನುಮಂದ್ರ ಸ್ಥಾನದ ಧೈವತ ಸ್ವರದಿಂದ ತಾರಾಸ್ಥಾನದ ಷಡ್ಜದವರೆಗೆ ಹದಿನೇಳು ಸ್ವರಗಳು ಮಾತ್ರ ಚತುರ್ದಂಡೀಗಾನದಲ್ಲಿ ಪ್ರಯೋಜ್ಯಗಳಾಗಿರುವವೆಂದು ವೆಂಕಟಮುಖಿ ಹೇಳುತ್ತಾನೆ ;

ಗಾಯಕಾಸ್ತು ಸ್ವರಾನ್ ಸಪ್ತ ಮಂದ್ರಸ್ಥಾನಸಮುದ್ಭವಾನ್।
ಮಧ್ಯಸ್ಥಾನಸ್ವರಾನ್ ಸಪ್ತ ತಾರಾಷಡ್ಜಂ ತಥಾಪರಮ್ ।
ಧನೀಚೈವಾನುಮಂದ್ರಸ್ಥಾನೇವಂ ಸಪ್ತದಶಸ್ವರಾನ್ ।
ಸಮಾದಾಯ ಚತುರ್ದಂಡೀ ಗಾನಂ ಸರ್ವೇಪಿ ಕುರ್ವತೇ ।

ಆಲಾಪ–ಆಕ್ಷಿಪ್ತಿಕೆ, ರಾಗವರ್ಧಿನಿ, ಪ್ರಥಮ ವಿದಾರಿ, ದ್ವಿತೀಯ ವಿದಾರಿ ಎಂದು ನಾಲ್ಕು ಹಂತಗಳಲ್ಲಿ ದಂಡೀಗಾನದ ಆಲಾಪನೆ ಪರಿಪೂರ್ಣವಾಗುತ್ತದೆ. ದೇಶೀ ರೂಢಿಯಲ್ಲಿ ಇವಕ್ಕೆ ಕ್ರಮವಾಗಿ ಆಯತ್ತ, ವಿಡುಪ್ಪು, ಒಂದನೆಯ ಮುಕ್ತಾಯಿ, ಎರಡನೆಯ ಮುಕ್ತಾಯಿ ಎಂಬ ಸಂಜ್ಞೆಗಳಿವೆ. ಈ ಒಂದೊಂದು ವಿಧಾನದಲ್ಲಿಯೂ ಮಾಡತಕ್ಕ ವಿಶಿಷ್ಟ ಸ್ವರಸಂಚಾರಗಳಿಗೆ ತಾನಗಳೆಂದು ಹೆಸರು. ಈ ತಾನಗಳಲ್ಲಿ ಯಾವುದೊಂದು ಸ್ವರವನ್ನು ಆಧಾರವಾಗಿಟ್ಟುಕೊಳಲಾಗುವುದೋ ಅದಕ್ಕೆ ಸ್ಥಾಯಿಯೆಂದು ಹೆಸರು. ರಾಗಾರಂಭದ ಆಕ್ಷಿಪ್ತಿಕೆಯಲ್ಲಿ ಮೊದಲಾಗಿ ಮಧ್ಯಸ್ಥಾನದ ಷಡ್ಜಸ್ವರವನ್ನು ಸ್ಥಾಯಿಯಾಗಿಟ್ಟುಕೊಂಡು ತಾರ ಷಡ್ಜದವರೆಗಿನ ಎಂಟು ಸ್ವರಗಳಲ್ಲಿ ಆರೋಹ ಕ್ರಮದ ಗಮಕಾಲಂಕಾರಪ್ರಯೋಗಗಳನ್ನು ಮಾಡಿ ಅದೇ ಸ್ವರಸೋಪಾನಗಳಲ್ಲಿ ಕೆಳಗಿಳಿದು ಮಧ್ಯ ಷಡ್ಜದಲ್ಲಿ ನ್ಯಾಸಗೊಳಿಸುವುದು. ಅನಂತರ ಅವರೋಹಕ್ರಮದಲ್ಲಿ ಮಂದ್ರ ಷಡ್ಜವರೆಗೆ ಸಂಚರಿಸಿ ಪುನಃ ಮೇಲಕ್ಕೇರಿ ಮಧ್ಯ ಷಡ್ಜದಲ್ಲೇ ವಿರಮಿಸುವುದು. ಅನಂತರ ಇದೇ ರೀತಿ ಮಂದ್ರನಿಷಾದ ಮತ್ತು ಧೈವತಗಳನ್ನು ಸ್ಥಾಯಿಯನ್ನಾಗಿಟ್ಟುಕೊಂಡ ಮೇಲೆ ಕೆಳಗೆ ಎಂಟು ಸ್ವರಗಳಲ್ಲಿ ತಾನ ವಿಸ್ತಾರ ಮಾಡಿ ಮಧ್ಯ ಷಡ್ಜದಲ್ಲಿ ಮುಕ್ತಾಯಗೊಳಿಸಿದಲ್ಲಿಗೆ ರಾಗದ ಸ್ಥೂಲ ಚಿತ್ರಣವಾಗುವುದು.

ರಾಗವರ್ಧಿನಿ (ಎಡುಪ್ಪು)–ಇದರಲ್ಲಿ ಮಂದ್ರಷಡ್ಜವನ್ನು ಸ್ಥಾಯಿಯಾಗಿಟ್ಟುಕೊಂಡು ಮೇಲಕ್ಕೆ ತಾರಷಡ್ಜದವರೆಗೆ ಹಂತಹಂತವಾಗಿ ತಾನಗಳನ್ನು ವಿಸ್ತರಿಸುತ್ತ ರಾಗದ ಅಂಗೋಪಾಂಗಗಳನ್ನು ಚಿತ್ರಿಸಿ ತರಂಗಿತ ಸಂಚಾರಗಳಿಂದ ಕೆಳಗಿಳಿದು ಮಧ್ಯ ಷಡ್ಜದಲ್ಲಿ ನ್ಯಾಸ ಮಾಡುವುದು. ಈ ನ್ಯಾಸವಿಧಾನವನ್ನೇ ಎರಡನೆಯ ಮುಕ್ತಾಯಿಯೆಂದು ಕರೆಯಲಾಗಿದೆ. ಆಕ್ಷಿಪ್ತಿಕೆಯ ಕೊನೆಯಲ್ಲಿ ಮಾಡುವ ಸ್ವರನ್ಯಾಸ ವಿಧಾನ ಒಂದನೆಯ ಮುಕ್ತಾಯಿಯೆಂದು ಕರೆಯಲ್ಪಡುತ್ತದೆ.

ರಾಗದ ಒಂದೊಂದೂ ಅವಯವವನ್ನು ಬೇರೆಬೇರೆಯಾಗಿ ಬಿಡಿಸಿ ತೋರಿಸುವುದಕ್ಕೆ ತಾಯ ಎಂದು ಹೆಸರು. ಆದುದರಿಂದಲೇ ರಾಗಸ್ವಾಯವಃ ಸ್ಥಾಯಃ–ಎಂದು ಶಾಸ್ತ್ರದಲ್ಲಿ ಇದರ ಲಕ್ಷಣವನ್ನು ಹೇಳಲಾಗಿದೆ. ಸಂಸ್ಕೃತದ ಸ್ಥಾಯವೇ ದೇಶಿಯಲ್ಲಿ ತಾಯವೆಂದು ವ್ಯವಹರಿಸಲ್ಪಟ್ಟಿದೆ. ಇದರಲ್ಲಿ ಆಯಾ ರಾಗಕ್ಕೆ ನಿರ್ದಿಷ್ಟವಾದ ಸ್ವರಗಳಲ್ಲಿ ಯಾವುದನ್ನಾದರೂ ಸ್ಥಾಯಿಯಾಗಿ ಕಲ್ಪಿಸಿಕೊಂಡು ಅದರ ಹಿಂದೆ ಮುಂದೆ ನಾಲ್ಕು ಸ್ವರಗಳಲ್ಲಿ ಮಾತ್ರ ಖಂಡಖಂಡವಾಗಿ ತಾನವಿತಾನಗಳನ್ನು ರಚಿಸಲಾಗುವುದು. ಒಂದರ ಮೇಲೊಂದರಂತೆ ಬೇರೆ ಬೇರೆ ಸ್ವರಗಳನ್ನು ಸ್ಥಾಯಿಯಾಗಿಟ್ಟುಕೊಂಡು ವಿಸ್ತರಿಸಲ್ಪಡುವ ಈ ತಾಯಗಳು ಅನವಧಿ ಸಂಖ್ಯೆಯಲ್ಲಾಗುತ್ತವೆ. ಇವುಗಳಲ್ಲಿ ಹೆಚ್ಚಿನವು ಹಲವು ರಾಗಗಳಿಗೆ ಸಾಮಾನ್ಯವಾಗಿ ಸಲ್ಲುವುದುಂಟು.

ಗೀತ–ಗಾನದಲ್ಲಿ ಮೊದಲಾಗಿ ಆಲಾಪ ತಾಯಗಳನ್ನು ವಿಸ್ತರಿಸಿದ ಅನಂತರ ಗೀತಗಳನ್ನು ಹಾಡುವುದು ಕ್ರಮ. ಗೀತಗಳೆಂದರೆ ಧ್ರುವಾದಿ ಸಾಲಗ (ಸೂಳ)ತಾಳದ ರಚನೆಗಳು. ಇವು ಸ್ವರ ಪಾಟಾದಿಕೂಟಗಳಿಲ್ಲದೆ ಹಿತಮಿತವಾದ ವರ್ಣಾಲಂಕಾರಗಳಿಂದ ಸರಳವಾಗಿ ಹಾಡಲ್ಪಡತಕ್ಕಂಥವು. ಇವು ಅಕ್ಷರ ಸಾಂದ್ರತೆಯುಳ್ಳವಾಗಿ ಸಾಹಿತ್ಯಪ್ರಧಾನವಾದ ರಚನೆಗಳಾಗಿರುತ್ತವೆ. ಇವುಗಳ ಮಧ್ಯದಲ್ಲಿ ನಾದವಿಸ್ತಾರಕ್ಕೆ ಅವಕಾಶವಿರುವುದಿಲ್ಲ. ಚರಣದ ಕೊನೆಯಲ್ಲಿಯಾದರೂ ರಾಗವಿಸ್ತಾರ ಮಾಡುವ ಸಂಪ್ರದಾಯವಿಲ್ಲ. ತಾಳಭೇದಗಳಿಂದ ಈ ಗೀತಗಳು ಅನೇಕ ವಿಧವಾಗಿವೆ ಮತ್ತು ಆಯಾ ತಾಳಗಳ ಹೆಸರಿನಿಂದಲೇ ಕರೆಯಲ್ಪಡುತ್ತವೆ. ಈ ತಾಳಗಳು ಧ್ರುವ, ಮಟ್ಟ, ಪ್ರತಿಮಟ್ಟ, ನಿಸ್ಸಾರು, ಅಟ್ಟ, ರಾಸ, ಏಕ ಎಂದು ಏಳು ವಿಧ. ಧ್ರುವಗೀತದಲ್ಲಿ 16 ಭೇದಗಳೂ ಮಟ್ಟ ಅಥವಾ ಮಂಠ ಗೀತದಲ್ಲಿ 6, ಪ್ರತಿಮಟ್ಟದಲ್ಲಿ 4, ನಿಸ್ಸಾರುವಿನಲ್ಲಿ 6, ಅಟ್ಟಗೀತದಲ್ಲಿ 6, ರಾಸಗೀತದಲ್ಲಿ 6, ಏಕತಾಲಿಯಲ್ಲಿ 3–ಹೀಗೆ ಅವಾಂತರ ಭೇದಗಳಿರುತ್ತವೆ. ಅವುಗಳ ಪ್ರತ್ಯೇಕ ಹೆಸರುಗಳು ಈ ಕೆಳಗಿನಂತಿವೆ;

ಧ್ರುವ–ಜಯಂತ, ಶೇಖರ, ಉತ್ಸಾಹ, ಮಧುರ, ಕುಂತಲ, ನಿರ್ಮಲ, ಕೋಮಲ, ಚಾರ, ನಂದನ, ಚಂದ್ರಶೇಖರ, ಕಾಮದ, ವಿಜಯ, ಕಂದರ್ಪ, ಜಯಮಂಗಲ, ತಿಲಕ, ಲಲಿತ.

ಮಟ್ಟ–ಜಯಪ್ರಿಯ, ಮಂಗಲ, ಸುಂದರ, ವಲ್ಲಭ, ಕಲಾಪ, ಕಮಲ.

ಪ್ರತಿಮಟ್ಠ–ಅಮರ, ತಾರ, ವಿಚಾರ, ಕುಂತ.

ನಿಸ್ಸಾರು–ವೈಕುಂದ, ಆನಂದ, ಕಾಂತಾರ, ಸಮರ, ವಾಂಛಿತ, ವಿಶಾಲ,

ಅಟ್ಟ–ನಿಶ್ಶಂಕ, ಶಂಖ, ಲೀಲ, ಚಾರ, ಮಕರಂದ, ವಿಜಯ.

ರಾಸ– ವಿನೋದ, ವರದ, ನಂದ, ಕಂಬುಜ.

ಏಕ–ರಮಾ, ಚಂದ್ರಿಕಾ, ವಿಪುಲಾ.

ಪ್ರಬಂಧ–ಚತುರ್ಧಾತುಗಳಿಂದಲೂ ಷಡಂಗಳಿಂದಲೂ ನಿಬದ್ಧವಾದ ರಚನೆಯಾದರೆ ಅದನ್ನು ಪ್ರಬಂಧವೆಂದು ಕರೆಯಲಾಗುವುದು. ಧಾತುಗಳೆಂದರೆ ಈಗ ಪ್ರಚಲಿತವಾಗಿರುವ ಸಂಗೀತದ ಕೀರ್ತನೆಗಳಲ್ಲಿ ಪಲ್ಲವಿ, ಅನುಪಲ್ಲವಿ, ಮಧ್ಯದ ಚರಣ, ಕೊನೆಯ ಚರಣವೆಂದು ಕರೆಯಲ್ಪಡುವಂಥ ನಾಲ್ಕು ಭಾಗಗಳಾಗಿರುತ್ತವೆ. ಅವಕ್ಕೆ ಕ್ರಮವಾಗಿ ಉದ್ಗ್ರಾಹ, ಮೇಲಾಪಕ, ಧ್ರುವ, ಆಭೋಗಗಳೆಂದು ಹೆಸರು. ಉದ್ಗ್ರಾಹವೆಂಬುದು ಪ್ರಬಂಧದ ಮೊದಲ ಭಾಗ, ಎತ್ತುಗಡೆಯ ಚರಣವೆಂದೂ ಇದನ್ನು ಕರೆಯುವುದುಂಟು. ಎರಡನೆಯ ಮೇಲಾಪಕವೆಂದರೆ ಉದ್ಗ್ರಾಹವನ್ನೂ ಮುಂದಿನ ಧ್ರುವಚರಣವನ್ನೂ ಮೇಳೈಸುವ, ಎಂದರೆ ಒಂದಾಗಿ ಸೇರಿಸುವ ಮಧ್ಯಂತರದ ಸೊಲ್ಲು ಎಂದರ್ಥ ; ಅನುಪಲ್ಲವಿ , ಹಾಗೂ ಸಂಧಿವಾಕ್ಯವೆಂದೂ ಇದಕ್ಕೆ ಹೆಸರುಂಟು. ಧ್ರುವವೆಂದರೆ ಮಧ್ಯದ ಚರಣ. ಇದು ಮಿಕ್ಕವುಗಳಿಗಿಂತ ದೊಡ್ಡದು ಮತ್ತು ಮುಖ್ಯಾರ್ಥವನ್ನು ಪ್ರತಿಪಾದಿಸುವಂಥದ್ದು. ಆಭೋಗವೆಂಬುದು ಕೊನೆಯ ಚರಣ. ಇದರಲ್ಲಿ ಪ್ರಬಂಧಕರ್ತೃವಾದ ವಾಗ್ಗೇಯಕಾರನ ಅಂಕಿತ, ಬಿರುದಾವಳಿ ಹಾಗೂ ಅವನ ಇಷ್ಟದೇವತೆಯ ಹೊಗಳಿಕೆ ಇರುತ್ತವೆ. ಇದನ್ನು ಹಾಡಿದಲ್ಲಿಗೆ ಪ್ರಬಂಧಗಾನ ಕೊನೆಗೊಳ್ಳುವುದು.

ಪ್ರಬಂಧದ ಷಡಂಗಗಳೆಂದರೆ ಕ್ರಮವಾಗಿ ಸ್ವರ, ಬಿರುದ, ಪದ, ತಾಲ, ತೇನ, ಪಾಟಗಳು. ಸ್ವರವೆಂದರೆ ಆಯಾ ರಾಗಕ್ಕೆ ನಿರ್ದಿಷ್ಟವಾದ ಸರಿಗಮಪದನಿ ಎಂಬ ಸ್ವರಾಕ್ಷರಗಳು. ಬಿರುದವೆಂದರೆ ಧೈರ್ಯಶೌರ್ಯಾದಿ ಗುಣಕೀರ್ತನೆ. ಯಾರ ಗುಣಕೀರ್ತನೆಯಾಗಿ ಆ ಪ್ರಬಂಧ ರಚಿಸಲ್ಪಟ್ಟಿದೆಯೋ ಆ ವ್ಯಕ್ತಿಯನ್ನು ಅಥವಾ ದೇವರನ್ನು ಸಂಬೋಧಿಸುವ ಒಂದು ಸೊಲ್ಲೂ ಇದರಲ್ಲಿ ಸೇರಿಕೊಂಡಿರಬೇಕೆಂಬ ನಿಯಮವಿದೆ. ಪದವೆಂದರೆ ಕ್ರಿಯಾಕಾರಕ ರೂಪದಲ್ಲಿರುವ ಅರ್ಥಪ್ರತಿಪಾದಕವಾದ ವಾಕ್ಯ ಅಥವಾ ಪದರಚನೆ. ತೇನವೆಂದರೆ ಆಲಾಪ ರೂಪದನಾದವಿಸ್ತಾರದಲ್ಲಿ ಮಧ್ಯಮಧ್ಯ ಉಚ್ಚರಿಸಲಾಗುವ ತ, ದ, ರಿ, ನ, ತೇನ, ತೋನ್ನ, ಎಂಬಂಥ ಅಕ್ಷರಗಳು. ಓಂ ತತ್ಸತ್, ತತ್ತ್ವಮಸಿ ಎಂಬ ಬ್ರಹ್ಮಸೂಚಕವಾದ ವೇದಾಂತವಾಕ್ಯದ

ಸಂಕ್ಷಿಪ್ತಚಿಹ್ನೆಯಾಗಿ ಈ ಅಕ್ಷರಗಳು ಉಚ್ಚರಿಸಲ್ಪಡುವುವೆಂದು ಶಾಸ್ತ್ರದಲ್ಲಿ ಹೇಳಲಾಗಿದೆ. ಪಾಟವೆಂದರೆ ವೀಣೆ ಮೃದಂಗಾದಿ ವಾದ್ಯ ಧ್ವನಿಗಳ ಅನುಕರಣೆಯಾಗಿ ಬಾಯಲ್ಲಿ ಉಚ್ಚರಿಸುವ ತಕದಿಮಿ, ಜಣತಕ, ತಿನ್ನಕ, ದಿಂನ್ನಾಂ, ಇತ್ಯಾದಿ ಪಾಟಾಕ್ಷರಗಳು. ರೂಢಿಯಲ್ಲಿ ಇದಕ್ಕೆ ಬಾಯಿತಾಳ, ಕೊನುಗೋಲ್ ಎಂದೂ ಹೆಸರುಂಟು. ತಾಳವೆಂದರೆ ಗುರುಲಘ್ವಾದಿ ಕಾಲನಿಯಮದಿಂದ ಕೈಯ ಬೆರಳೆಣಿಕೆ, ಘಾತ, ಪಾತಗಳ ಮೂಲಕ ನಿರೂಪಿಸಲ್ಪಡುವ ಶುದ್ಧ ಸಾಲಗ ಹಾಗೂ ಮಾರ್ಗದೇಶೀ ಎಂಬ ಎರಡು ವಿಧದ ತಾಳಭೇದಗಳು.

ಪ್ರಬಂಧವೆಂಬುದರಲ್ಲಿ ಈ ನಾಲ್ಕು ಧಾತುಗಳಲ್ಲಿ, ಷಡಂಗಗಳಲ್ಲಿ ಎಲ್ಲವೂ ಇದ್ದೇ ತೀರಬೇಕೆಂಬ ನಿಯಮವಿರುವುದಿಲ್ಲ. ಪ್ರಧಾನವಾದ ಕೆಲವಕ್ಕೆ ಮಾತ್ರ ಲೋಪವಿರಬಾರದೆಂದು ಹೇಳಲಾಗಿದೆ. ಧಾತುಗಳಲ್ಲಿ ಉದ್ಗ್ರಾಹ, ಧ್ರುವ ಇವೆರಡು ಇರಲೇಬೇಕು. ಅಂಗಗಳಲ್ಲಿ ಪದ, ತಾಲಗಳೆಂಬ ಎರಡು ಮುಖ್ಯವಾದುವು. ಸ್ವರ, ಪಾಟ, ತೇನಗಳು ರಚನೆಯಲ್ಲಿಲ್ಲದಿದ್ದರೆ ಹಾಡುವಾಗ ಗಾಯಕ ತನ್ನ ಮನೋಧರ್ಮದಿಂದ ಬೇಕಾದುವನ್ನು ರಚಿಸಿಕೊಳ್ಳಬಹುದೆಂದೂ ತಾತ್ಪರ್ಯ. ಹೀಗೆ ರಚನೆಯಲ್ಲಿ ಅಂಗಗಳ ನ್ಯೂನತೆಯಿರುವುದನ್ನು ಹೊಂದಿಕೊಂಡು ಪ್ರಬಂಧಗಳು ಐದು ಜಾತಿಗಳಾಗಿ ವರ್ಗೀಕರಿಸಲ್ಪಟ್ಟಿವೆ. ಎರಡನೆಯ ಅಂಗಗಳಿರುವುದಾದರೆ ಅದಕ್ಕೆ ತಾರಾವಲೀಜಾತಿಯೆಂದೂ 'ಮೂರು ಅಂಗಗಳಿರುವುದಕ್ಕೆ ಭಾವನೀ ಜಾತಿಯೆಂದೂ' ನಾಲ್ಕು ಅಂಗಗಳಿರುವುದಾದರೆ ದೀಪನೀಜಾತಿಯೆಂದೂ, ಐದು ಅಂಗಗಳಿರುವುದಕ್ಕೆ ಆನಂದಿನೀಜಾತಿಯೆಂದೂ ಆರೂ ಅಂಗಗಳು ಸಂಪೂರ್ಣವಾಗಿದ್ದರೆ ಅದಕ್ಕೆ ಮೇದಿನೀಜಾತಿಯೆಂದೂ ಹೆಸರು. ಈ ಒಂದೊಂದು ಜಾತಿಗಳಲ್ಲಿ ಪ್ರಸಿದ್ಧವಾದ ಪ್ರಬಂಧಗಳ ಹೆಸರುಗಳು ಈ ಮುಂದೆ ಕೊಟ್ಟಂತಿರುತ್ತವೆ.

ಮೇದಿನೀಜಾತಿ–ಶ್ರೀರಂಗ, ಶ್ರೀವಿಲಾಸ, ಪಂಚಭಂಗಿ, ಪಂಚಾನನ, ಉಮಾತಿಲಕ, ಕರಣ, ಸಿಂಹಲೀಲಕ–7.

ಆನಂದಿನೀಜಾತಿ–ಸಪಂಚತಾಲೇಶ್ವರ, ವರ್ಣಸ್ವರ, ವಸ್ತು, ವಿಜಯ, ತ್ರಿಪದ, ಹರವಿಲಾಸ, ಚತುರ್ಮುಖ, ಪದ್ಧಡಿ, ಶ್ರೀವರ್ಧನ, ಹರ್ಷವರ್ಧನ–10.

ದೀಪನೀಜಾತಿ–ಸುದರ್ಶನ, ಸ್ವರಾಂಕ, ತ್ರಿಭಂಗಿ, ಕಂದುಕ, ವದನ–5.

ಭಾವನೀಜಾತಿ–ವರ್ಣ, ಗದ್ಯ, ಕಂದ, ಕೈವಾಡ, ಅಂಕಚಾರಿಣೀ, ವರ್ತನೀ, ಆರ್ಯಾ, ಗಾಥಾ, ಕ್ರೌಂಚಪದ, ಕಲಹಂಸ, ತ್ರೋಟಕ, ಹಂಸಲೀಲ, ಚತುಷ್ಪದಿ, ವೀರಶ್ರೀ, ಮಂಗಲಾಚಾರ, ದಂಡಕ–16.

ತಾರಾವಲೀಜಾತಿ–ಏಲಾ, ಡೇಂಕೀ, ಜೋಬಡ, ಲಂಭ, ರಾಸ, ಏಕತಾಲಿಕ, ಚಕ್ರವಾಕ, ಸ್ವರಾರ್ಥ, ಮಾತೃಕಾ, ಧ್ವನಿಕುಟ್ಟನೀ, ತ್ರಿಪದಿ, ಷಟ್ಪದಿ, ಝಂಪಡ, ಚಚ್ಚರೀ, ಚರ್ಯಾ, ರಾಹಡೀ, ಧವಲ, ಮಂಗಲ, ಓವೀ, ಲೋಲ್ಲೀ, ಡೋಲ್ಲರಿ, ದಂತಿ–22.

ಈ ಜಾತಿಗಳಲ್ಲಿಯೂ ದ್ವಿಧಾತುಕ, ತ್ರಿಧಾತುಕ, ಚತುರ್ಧಾತುಕವೆಂಬ ವಿಭಿನ್ನ ಲಕ್ಷಣಗಳಿರುವುದರಿಂದ ಅನೇಕ ಅವಾಂತರಭೇದಗಳನ್ನು ಹೇಳಲಾಗಿದೆ. (ಕೆ.ಕೆ.ಐ.)

**ಚತುರ್ಮುಖ ಬೊಮ್ಮರಸ** : ರೇವಣಸಿದ್ಧೇಶ್ವರಪುರಾಣ ಮತ್ತು ಸೌಂದರ ಪುರಾಣ ಎಂಬ ಎರಡು ಕನ್ನಡ ಗ್ರಂಥಗಳ ಕರ್ತೃ. 16ನೆಯ ಶತಮಾನದಲ್ಲಿದ್ದ ಆಸ್ಥಾನಕವಿಯಾಗಿದ್ದ ಈತ ವೀರಶೈವ. ಭಾರವಿ, ಕಾಳಿದಾಸ, ಮಲುಹಣ, ಬಾಣ, ಮಯೂರಾದಿ ಸಂಸ್ಕೃತ ಕವಿಗಳನ್ನೂ ಹಂಪೆಯ ಹರೀಶ್ವರ, ರಾಘವಾಂಕ, ಮೊಗ್ಗೆಯ ಮಾಯಿದೇವ, ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ ಮೊದಲಾದ ಕನ್ನಡ ಕವಿಗಳನ್ನೂ ಸ್ತುತಿಸಿದ್ದಾನೆ.

ಈತ ಚತುರಾಸ್ಯಮಾಯಣನ ತನುಜಾತ. ತನ್ನನ್ನು ಸರಸಕವಿ, ಶೈವಭೂದೇವ ಕುಲತಿಲಕ, ವರ್ಣನ ಕವೀಂದ್ರ, ಕವಿಸಭಾಮಾಣಿಕ್ಯದೀಪ, ಕರ್ನಾಟ ದೇಶವಿಶೇಷ ಭಾಷಾಪ್ರವೀಣ, ಕವಿಬ್ರಹ್ಮ, ಸರಸಗೀರ್ವಾಣ ಭಾಷಾಯುಕ್ತ, ಶೈವಾಗಮಜ್ಞ ಎಂದು ಮೊದಲಾಗಿ ಕರೆದುಕೊಂಡಿದ್ದಾನೆ.

ವಿಶ್ವನಾಥಾಚಾರ್ಯ ಹಾಗೂ ಬಾಲಸಿದ್ಧೇಶ್ವರರು ಈತನ ಗುರುಗಳಾಗಿದ್ದಂತೆ ತಿಳಿದುಬರುತ್ತದೆ.

ಸೌಂದರಪುರಾಣ 63 ಜನ ಶೈವಪುರಾತನರಲ್ಲಿ ಒಬ್ಬನಾದ ನಂಬಿಯಣ್ಣನನ್ನು ಕುರಿತ ಕಾವ್ಯ. 565 ವಾರ್ಧಕಷಟ್ಪದಿಗಳಿರುವ 13 ಸಂಧಿಗಳ ಈ ಕಾವ್ಯವನ್ನು ವಸ್ತುಕ ರೂಪದಲ್ಲಿ, ಚಿಕ್ಕವೀರಣಾರ್ಯನ ಆಜ್ಞಾನುಸಾರವಾಗಿ, ರಚಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ. ಸೂರ್ಯಚಂದ್ರರು ಹಾಗೂ ಶಿವತತ್ತ್ವಗಳು ಇರುವವರೆಗೆ ಈ ಕಾವ್ಯವು ವಿರಾಜಿಸುತ್ತಿರಲಿ ಎಂಬುದು ಈತನ ಆಶಯ. ಹರಿಹರ, ಭೀಮಕವಿ, ಸುರಂಗಕವಿ ಮೊದಲಾದವರು ಸಂಕ್ಷೇಪವಾಗಿ ಹೇಳಿರುವ ಕಥೆಯನ್ನೇ ಸಮಗ್ರವಾಗಿ ರೂಪಿಸಲು ಶರಣರು ಕೇಳಿಕೊಂಡಿದ್ದರಿಂದ ಕವಿ ಇದನ್ನು ರಚಿಸಿದನಂತೆ. ಹರಿಹರನ ನಂಬಿಯಣ್ಣನ ರಗಳೆಗೆ ಹೋಲಿಸಿದರೆ ಕಾವ್ಯದೃಷ್ಟಿಯಿಂದ ಇದೇನೂ ಅಂಥ ಗಮನಾರ್ಹವಾದ ಕೃತಿಯಲ್ಲ ಎನ್ನಬಹುದು.

19 ಸಂಧಿಗಳಿರುವ ರೇವಣಸಿದ್ಧೇಶ್ವರ ಪುರಾಣ 1145 ವಾರ್ಧಕ ಷಟ್ಪದಿಗಳ ನ್ನೊಳಗೊಂಡಿದೆ. ಗುರುಬಾಲಸಿದ್ಧೇಶ್ವರನ ಆಜ್ಞೆಯಿಂದ ರಚಿಸಿದ ಈ ಕೃತಿಯನ್ನು ಶಾಂತಮಲ್ಲೇಶನಿಗೆ ಕವಿ ಅಂಕಿತ ಮಾಡಿದ್ದಾನೆ. ಈ ಕೃತಿಯನ್ನು ರಸಿಕರ ರತ್ನರಸಾಯನ, ಮಹಾಕಾವ್ಯ, ಅಮರ್ದಗಾಲುವೆ, ರಸದಾಳೆ, ರಸದ ಪೆರ್ಬೊನಲು ಎಂದು ಹೇಳಿಕೊಂಡಿದ್ದಾನೆ. ಕಾವ್ಯದೃಷ್ಟಿಯಿಂದ ಗಮನಾರ್ಹವಾದ ಅಂಶಗಳು ಕಡಿಮೆ. ರೇವಣಸಿದ್ಧೇಶ್ವರರನ್ನು ಕುರಿತ ಪುರಾಣರೂಪದ ಕಥೆ ಮಾತ್ರ ಇಲ್ಲಿದೆ.

ವೀರಶೈವ ಸಾಹಿತ್ಯದ ಪುನರುಜ್ಜೀವನ ಕಾಲದಲ್ಲಿ ಹಿಂದಿನ ಕವಿಗಳು ಬರೆದಿದ್ದ ರೇವಣಸಿದ್ಧ ಹಾಗೂ ನಂಬಿಯಣ್ಣ ಇವರ ಕಥೆಗಳನ್ನು ಷಟ್ಪದಿಗಳ ಯುಗದಲ್ಲಿ ಬಂದ ಈತ ವಾರ್ಧಕಷಟ್ಪದಿಗಳಲ್ಲಿ ಬರೆದಿದ್ದಾನೆನ್ನುವುದಷ್ಟೇ ಈತನ ಹಿರಿಮೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಸಂಬಂಧವನ್ನು ಕುರಿತು ಹೇಳಿರುವ ಈತನ ಹೊಂದಾಣಿಕೆಯ ಮಾತುಗಳು ಗಮನಾರ್ಹವಾಗಿವೆ.

ಸೌಂದರಪುರಾಣ ಹಾಗೂ ರೇವಣಸಿದ್ಧೇಶ್ವರಪುರಾಣಗಳನ್ನು ಬರೆದ ಕವಿಗಳು ಬೇರೆ ಬೇರೆ ಎಂಬುದು ಕೆಲವರ ಮತ. ಆದರೆ ಇದನ್ನು ಒಪ್ಪುವುದಕ್ಕೆ ಆಧಾರಗಳು ಸಾಲವು. (ಜಿ.ಎಸ್.ಎಸ್.ಎಲ್.)

**ಚತುರ್ವಿಧ ಸಾಧನಗಳು** : ಅರಿಷಡ್ವರ್ಗಗಳನ್ನು ಗೆದ್ದು ಬ್ರಹ್ಮಜ್ಞಾನ ಪಡೆಯಲು ಸಹಾಯಕವಾಗಿರುವ ನಾಲ್ಕು ಸಾಧನಗಳು. 1. ನಿತ್ಯಾನಿತ್ಯವಸ್ತುವಿವೇಕ–ನಿತ್ಯವಾದ ವಸ್ತು ಯಾವುದು, ಅನಿತ್ಯವಾದದ್ದು ಯಾವುದು ಎಂದು ವಿವೇಚಿಸಿ ತಿಳಿಯುವುದು. 2. ಇಹಾಮುತ್ರ ಫಲಭೋಗವಿರಾಗ–ಈ ಲೋಕದಲ್ಲಿ ಹಾಗೂ ಪರಲೋಕದಲ್ಲಿ ಕರ್ಮಫಲಗಳನ್ನು ಅನುಭವಿಸುವ ಬಯಕೆ ತೊರೆಯುವುದು; 3. ಶಮ (ಮನಸ್ಸಿನ ಹತೋಟಿ), ದಮ (ಬಾಹ್ಯೇಂದ್ರಿಯಗಳ ಹತೋಟಿ), ಉಪರತಿ (ಎಲ್ಲ ಕರ್ಮಗಳನ್ನೂ ಬಿಟ್ಟು ಶಾಂತಸ್ಥಿತಿಯಲ್ಲಿರುವಿಕೆ). ತಿತಿಕ್ಷಾ (ಹಸಿವು, ಬಾಯಾರಿಕೆ, ಶೀತೋಷ್ಣ ಮೊದಲಾದ ದ್ವಂದ್ವಗಳನ್ನು ಗೆಲ್ಲುವುದು), ಸಮಾಧಾನ (ಮನಸ್ಸಿನ ಏಕಾಗ್ರತೆ), ಶ್ರದ್ಧಾಭಕ್ತಿ–ಈ ಆರು ಗುಣಗಳನ್ನು ಸಂಪಾದಿಸುವುದು; 4 ಮುಮುಕ್ಷುತ್ವ–ಮೋಕ್ಷ ಪಡೆಯುವ ಇಚ್ಛೆ. ಇವನ್ನು ಸಾಧನಚತುಷ್ಟಯ ಎಂದೂ ಕರೆಯುತ್ತಾರೆ. (ಆರ್.ಎಸ್.ಎಸ್.)

**ಚತುರ್ವೇದಿ, ಬನಾರಸಿದಾಸ್** : 1892–1985 ಆಧುನಿಕ ಹಿಂದೀಸಾಹಿತ್ಯದಲ್ಲಿನ ಗದ್ಯಶೈಲಿಯ ನಿರ್ಮಾಪಕರಲ್ಲೊಬ್ಬರು. ಅಂತೆಯೇ ಹಿಂದೀ ಪತ್ರಿಕೋದ್ಯಮದ ಭೀಷ್ಮರು. ಸಾಹಿತ್ಯಸೃಷ್ಟಿ ಹಾಗೂ ಸಮಾಜಸೇವೆ ಇವರ ಬದುಕಿನ ಎರಡು ಕಣ್ಣುಗಳು. ಆಚಾರ್ಯ ಚತುರ್ವೇದಿ ಅವರು ತಾವು ನಂಬಿದ ಮತ್ತು ಆಲೋಚಿಸಿದ ಕ್ರಿಯಾತ್ಮಕ ಆಲೋಚನೆಗಳಿಗೆ ಮೂರ್ತರೂಪವನ್ನಿತ್ತು ಕಾರ್ಯರೂಪಕ್ಕಿಳಿಸುವ ಅಪ್ರತಿಮ ಕ್ರಿಯಾಶೀಲರಾಗಿರುವಂತೆಯೇ ಆಗತಾನೆ ರೂಪುಗೊಳ್ಳುತ್ತಿದ್ದ ಪತ್ರಿಕೋದ್ಯಮ ಹಾಗೂ ಸಾಹಿತ್ಯದ ನಾನಾ ಪ್ರಕಾರಗಳಿಗೆ ನಿಶ್ಚಿತ ರೂಪವೊಂದನ್ನು ಕೊಟ್ಟ ಕರ್ತಾರರು.

ಸಮಾಜಸೇವೆಯ ಆದರ್ಶವನ್ನೇ ಮುಂದಿಟ್ಟುಕೊಂಡ ಇವರಿಗೆ ಜೀವನದಲ್ಲಿ ನಾನಾ ಎಡರುತೊಡರುಗಳು ಎದುರಾದುವಾದರೂ ನಂಬಿದ ಉದ್ದೇಶಕ್ಕಾಗಿ ಇದ್ದ ನೌಕರಿಯನ್ನೂ ಬಿಟ್ಟುಬಿಡುವಷ್ಟು ನಿಷ್ಠೆ ನಂಬಿಕೆಗಳನ್ನಿವರು ತೋರಿದರು. ಈ ಉದ್ದೇಶಗಳಿಗೆ ಇಂಬುಕೊಟ್ಟಂತೆ ಗಣೇಶ ಶಂಕರ್ ವಿದ್ಯಾರ್ಥಿ, ಶ್ರೀನಿವಾಸಶಾಸ್ತ್ರಿ, ಸಿ.ಎಫ್. ಆ್ಯಂಡ್ರೂಸ್ ಮೊದಲಾದ ನಾನಾ ಶ್ರೇಷ್ಠರುಗಳೊಡನೆ ಸಂಪರ್ಕ ಇವರದಾಯಿತು. ಇದರ ಪರಿಣಾಮವೆಂದರೆ ನಾಡು ನುಡಿಗಳಿಗಾಗಿ ಜೀವ ತೆತ್ತವರ ಮೇಲೆ ಮಮತೆ ಹಾಗೂ ಅಭಿಮಾನ ಹೆಚ್ಚಿದವು.

ಹಾಗೆ ನೋಡಿದರೆ, ಚತುರ್ವೇದಿ ಗದ್ಯಸಾಹಿತ್ಯದ ನಾನಾಭಾಗಗಳಲ್ಲಿ ಉಲ್ಲೇಖನೀಯ ಕೆಲಸ ಮಾಡಿದ್ದರೂ ಪ್ರಮುಖವಾಗಿ ಪತ್ರಿಕೋದ್ಯಮಿಗಳಿಗೆ ಚಿರಪರಿಚಿತರು. 'ವಿಶಾಲ ಭಾರತ' ಹಾಗೂ 'ಮಧುಕರ' ಇವರು ಸಂಪಾದಿಸಿದ ಮುಖ್ಯವಾದ ಎರಡು ಪತ್ರಿಕೆಗಳು. ಇವರು ಯಾವುದೇ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿರಲಿ, ಆ ಪತ್ರಿಕೆಯನ್ನು ಜನಪ್ರಿಯಗೊಳಿಸುವುದರಲ್ಲಿ ಪತ್ರಿಕೆಗಳ ಆವಶ್ಯಕತೆಯನ್ನು ಜನತೆಗೆ ಅರ್ಥೈಸುವುದರಲ್ಲಿ ಸಫಲರಾಗಿದ್ದಾರೆ.

ಹಿಂದಿ, ಸಂಸ್ಕೃತ ಹಾಗೂ ಭಾರತೀಯ ಸಾಹಿತ್ಯ ಅಧ್ಯಯನಕ್ಕಷ್ಟೇ ಇವರ ಪಾಂಡಿತ್ಯ ಸೀಮಿತವಾಗಿರದೆ ಪಾಶ್ಚಾತ್ಯ ಸಂಸ್ಕೃತಿಯ ಹಾಗೂ ಅಲ್ಲಿನ ಭಾಷೆಗಳ ಅಭ್ಯಾಸದತ್ತಲೂ ಹರಿದಿದೆ. ವಿಸ್ತೃತ ಅನುಭವ, ಅಪಾರ ವಿದ್ವತ್ತು, ತೀವ್ರ ಆಲೋಚನಾಶಕ್ತಿ–ಇವು ಸಂಗಮಿಸಿರುವ ಇವರ ಸಾಹಿತ್ಯ ಒಂದು ಜೇಂಗೊಡ. ಇವರ ಬರೆಹಗಳು ಕೃತ್ರಿಮ ಸೃಷ್ಟಿಯಾಗಿರದೆ ಚೇತನಶೀಲವಾಗಿರಲು ಮುಖ್ಯ ಕಾರಣವೆಂದರೆ ಅಲ್ಲಿರುವ ಆತ್ಮೀಯತೆ ಹಾಗೂ ಅನುಭೂತಿ. ಇವರು ರಚಿಸಿರುವ ವ್ಯಕ್ತಿಚಿತ್ರ, ಜೀವನಚರಿತ್ರೆ, ಪ್ರವಾಸಸಾಹಿತ್ಯ ಹೀಗೆ ಒಂದೊಂದರಲ್ಲೂ ಒಂದೊಂದು ವಿಶೇಷ ಅನುಭವವಿದೆ. ರೇಖಾಚಿತ್ರ, ಸಾಹಿತ್ಯ ಮತ್ತು ಜೀವನ, ಗಣೇಶ ಶಂಕರ್ ವಿದ್ಯಾರ್ಥಿ, ರಾಷ್ಟ್ರಭಾಷಾ, ಕವಿರತ್ನ ಸತ್ಯನಾರಾಯಣ್ ಕೀ ಜೀವನಿ, ಸಂಸ್ಮರಣ್–ಇವು ಇವರ ಕೆಲವು ಸಾಹಿತ್ಯಕ ಕೃತಿಗಳು.

ಚತುರ್ವೇದಿ ಅವರ ದಿನಚರಿ ಹಾಗೂ ಪತ್ರಗಳು ನಿಜಕ್ಕೂ ಆಧುನಿಕ ಹಿಂದೀ ಸಾಹಿತ್ಯದ ಅಮೂಲ್ಯ ಸಂಪತ್ತುಗಳಷ್ಟೇ ಅಲ್ಲ, ಆ ಪ್ರಕಾರದ ಸಾಹಿತ್ಯಕ್ಕೇ ಮಾದರಿಗಳೂ ಅಮೂಲ್ಯ ಕಾಣಿಕೆಗಳೂ ಆಗಿವೆ. ಮುಂದೆ ಪ್ರಕಟಿಸುವ ಯಾವ ಅಭೀಪ್ಸೆಯೂ

ಇಲ್ಲದಿದ್ದುದರಿಂದ ಇವರು ಬರೆದ ಪತ್ರಗಳಲ್ಲಿ ಅಂತರಂಗ ಸ್ಪಂದನವಿದೆ, ಮಾನವೀಯ ದೃಷ್ಟಿ ಇದೆ. ಚರ್ಚಿಸುವ, ಬರೆಯುವ ವಿಚಾರಗಳ ಬಗೆಗೆ ಇವರದೇ ಆದ ದೃಷ್ಟಿಕೋನವಿದೆ. ಇತ್ತೀಚೆಗೆ ಇವರ ಸಾಕಷ್ಟು ಪತ್ರಗಳನ್ನು ಡಾ. ಬನಾರಸಿದಾಸ್‌ಜೀ ಕೇ ಪತ್ರ್ ಎಂಬ ಹೆಸರಿನಿಂದ ಶ್ರೀ ವೃಂದಾವನ್‌ದಾಸ್ ಅವರು ಪ್ರಕಟಿಸಿ ಈ ಸಾಹಿತ್ಯಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಚತುರ್ವೇದಿ ಅವರ ದಿನಚರಿ, ರಷ್ಯನ್ ಲೇಖಕರ ಸಂಘದ ಆಹ್ವಾನದ ಮೇರೆಗೆ ರಷ್ಯ ಪ್ರವಾಸ ಮುಗಿಸಿಬಂದು ಬರೆದಿರುವ ಪ್ರವಾಸ ಲೇಖನ–ಈ ಬಗೆಯ ಅಪೂರ್ವ ಸಾಹಿತ್ಯಗಳಾಗಿವೆ.

ಚತುರ್ವೇದಿಯವರ ಕಾರ್ಯಕ್ಷೇತ್ರ ವಿಸ್ತಾರವಾದುದು. ರಾಜ್ಯಸಭೆ, ಸಂಸತ್, ಹಿಂದೀ ಪರಿಷತ್, ದಿಲ್ಲಿ ಹಿಂದೀ ಸಾಹಿತ್ಯ ಪರಿಷತ್, ಹಿಂದೀ ಪತ್ರಿಕೋದ್ಯಮಿಗಳ ಸಂಘ–ಇವುಗಳ ಸಕ್ರಿಯ ಕಾರ್ಯಕರ್ತರೂ ಸದಸ್ಯರೂ ಆಗಿ, ಅಖಿಲ ಭಾರತ ಪತ್ರಿಕೋದ್ಯಮಿಗಳ ಸಂಘದ ಅಧ್ಯಕ್ಷರಾಗಿ ಇವರು ದುಡಿದಿದ್ದಾರೆ. ದೆಹಲಿಯಲ್ಲಿ ಹಿಂದೀ ಭವನದ ಸ್ಥಾಪನೆಯ ಕೀರ್ತಿ ಇವರಿಗೆ ಸಲ್ಲಬೇಕು. ದೇಶದ ಹುತಾತ್ಮರ ನೆನಪನ್ನು ಸದಾ ಹಸಿರಾಗಿರಿಸಲು ಇವರು ಹುತಾತ್ಮರ ಗ್ರಂಥಮಾಲೆಯ ಮೂಲಕ ಸಲ್ಲಿಸಿರುವ ಸೇವೆ ಮಿಗಿಲಾದದ್ದು. ಸಾಹಿತ್ಯವಾರಿಧಿ, ಸಾಹಿತ್ಯವಾಚಸ್ಪತಿ ಮುಂತಾದ ಬಿರುದುಗಳಿಂದಲೂ ಡಿ.ಲಿಟ್. ಮುಂತಾದ ಗೌರವ ಪದವಿಗಳಿಂದಲೂ ನಾಡು ಇವರನ್ನು ಗೌರವಿಸಿದೆ. (ಎಂ.ಆರ್.ಎ.)

**ಚತುರ್ವೇದಿ, ಮಾಖನ್‌ಲಾಲ್ :** 1880–1968. ಆಧುನಿಕಯುಗದ ಪ್ರಮುಖ ಹಿಂದೀ ಕವಿ. ಅಗ್ರಗಣ್ಯ ಗಾಂಧೀವಾದಿಗಳು, ಭಾರತ ಸ್ವಾತಂತ್ರ್ಯ ಸಮರದ ಯೋಧರು. ಪತ್ರಿಕೋದ್ಯಮದ ಆಚಾರ್ಯರು, ಕುಶಲ ರಾಜಕಾರಣಿಗಳು. ಒಳ್ಳೆಯ ವಾಗ್ಮಿಗಳು. ಮಧ್ಯಪ್ರದೇಶದ ಹೊಶಂಗಾಬಾದ್ ಜಿಲ್ಲೆಯ ಬಾಬಯಿಾ ಈ ಗ್ರಾಮದಲ್ಲಿ ಹುಟ್ಟಿದರು. ನಾರ್ಮಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಧ್ಯಾಪಕ ವೃತ್ತಿಯನ್ನು ಅವಲಂಬಿಸಿ ಬಾಳನ್ನು ಪ್ರಾರಂಭಿಸಿದರು. ಮೊದಲು ಗಣೇಶಶಂಕರ ವಿದ್ಯಾರ್ಥಿ ಅವರೊಡನೆ ಪ್ರತಾಪ್ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. 'ಪ್ರಭಾ' ಮತ್ತು 'ಕರ್ಮವೀರ'ದ ಸಂಪಾದಕರಾಗಿದ್ದರು. ತರುಣರಾಗಿದ್ದಾಗ ಕ್ರಾಂತಿಕಾರಿಗಳಲ್ಲಿ ಮುಖ್ಯರೆನಿಸಿಕೊಂಡಿದ್ದರು. ಲೋಕಮಾನ್ಯ ತಿಲಕ್ ಮತ್ತು ಹಿಂದೂ ಮುಸ್ಲಿಮರ ಏಕತೆಗಾಗಿ ಪ್ರಾಣವನ್ನೇ ತೆತ್ತ ಗಣೇಶ ಶಂಕರ ವಿದ್ಯಾರ್ಥಿ ಅವರಿಂದ ಪ್ರಭಾವಿತರಾಗಿ 1913ರಲ್ಲಿ ಪ್ರಮುಖ ಗಾಂಧೀವಾದಿಗಳಲ್ಲಿ ಒಬ್ಬರಾದರು. ಏಕ್ ಭಾರತೀಯ ಆತ್ಮ ಎನ್ನುವ ಹೆಸರಿನಲ್ಲಿ ಕವನಗಳನ್ನು ಬರೆದರು. ಮಧ್ಯಪ್ರದೇಶದ ಅನೇಕ ಕವಿಗಳು ಇವರಿಂದ ಸ್ಫೂರ್ತಿಪಡೆದವರು ಇಲ್ಲವೆ ಇವರ ನೇರ ಶಿಷ್ಯರು. ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ್ದರಿಂದ ಇವರು ಎಷ್ಟೋ ಬಾರಿ ಜೈಲಿಗೆ ಹೋದುದೂ ಉಂಟು. ಹಿಂದೀಯಲ್ಲಿ ಇವರೇ ಮೊದಲ ಗಾಂಧೀವಾದಿ ಕವಿ. ಇವರ ಸಾಹಿತ್ಯಸೇವೆ ಮತ್ತು ಪಾಂಡಿತ್ಯಕ್ಕೆ ಮೆಚ್ಚಿ ಸಾಗರ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್. ಪದವಿ ಕೊಟ್ಟಿತು. ಭಾರತ ಸರ್ಕಾರ ಪದ್ಮಭೂಷಣ ಬಿರುದನ್ನು ಕೊಟ್ಟು ಗೌರವಿಸಿತು. ಇವರ ಕೃತಿಗಳಲ್ಲಿ ಬಹುಭಾಗ ಜೈಲಿನಲ್ಲೇ ರಚಿತವಾದುದು. ಇವರ ಮೊದಲ ಕವನಸಂಗ್ರಹ ಹಿಮಕಿರೀಟಿನೀ (1942). ಇದಕ್ಕೆ ದೇವ ಪುರಸ್ಕಾರ ದೊರೆತಿದೆ. ಇದರಲ್ಲಿ 1913–40ರ ನಡುವೆ ಇವರು ಬರೆದ ಕವನಗಳಿವೆ. ಇವರ ಮೊದಲ ಕವನ ಗಾಂಧಿಯ ಮೇಲೆ ಬರೆದುದು–'ನಿಃಶಸ್ತ್ರ ಸೇನಾನಿ'– ಗಾಂಧಿಯ ಸತ್ತ್ವವನ್ನು, ಮಾಹಾತ್ಮ್ಯವನ್ನು ಸೂಕ್ಷ್ಮವಾಗಿ ಬಣ್ಣಿಸುತ್ತದೆ. ಪ್ರಪಂಚವೇ ಬೇಕಾದರೆ ಹಿಮ್ಮೆಟ್ಟಲಿ, ಈ ಕೈಗಳಲ್ಲಿ ಕತ್ತಿಯನ್ನು ಮುಟ್ಟುವುದಿಲ್ಲ; ಪ್ರೀತಿ?–ಆ ಬೇಡಿಗಳ ಮೇಲೆ, ಮತ್ತು ಕೃಷ್ಣನ ಜನ್ಮಸ್ಥಳದ ಮೇಲೆ ಪ್ರೀತಿ; ಹಾರ!– ಭುಜಗಳನ್ನು ಚುಚ್ಚುವ, ವಿಚಿತ್ರ ಸರಪಣಿಯೇ ಹಾರ–ಇಲ್ಲಿನ ಇಂಥ ಭಾವಪೂರ್ಣ ವಾಕ್ಯಗಳು ಓದುಗರ ಮನಸ್ಸನ್ನು ಸೆಳೆಯುತ್ತವೆ. ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದ ಇವರ ಕೃತಿ ಹಿಮತರಂಗಿಣೀ (1947), ಸ್ವಾತಂತ್ರ್ಯೋತ್ತರ ಹಿಂದೀ ಕೃತಿಗಳಲ್ಲಿ ಶ್ರೇಷ್ಠವಾದುದು, ಮಾತಾ (1951), ಯುಗ್ ಚರಣ್ (1956), ಸಮರ್ಪಣ್ (1956), ವೇಣು ಲೋ ಗೂಂಜೇಧರಾ (1960), ಆಧುನಿಕ ಕವಿ, ಭಾಗ 6 (1961) ಮತ್ತು ಮರಣ್ ಜ್ವಾರ್ (1963) ಇವರ ಇತರ ಕವನಸಂಗ್ರಹಗಳು. ಇವರ ನಾಟಕ ಕೃಷ್ಣಾರ್ಜುನ ಯುದ್ಧ್ ನೂತನ ಭಾಗಗಳಿಂದ ಕೂಡಿದ ಉತ್ತಮ ಕೃತಿ. ಇವರ ಕವನಗಳಲ್ಲಿ ಕೈದಿ ಔರ್ ಕೋಕಿಲ್, ಯುಗ್‌ಪುರುಷ್, ಫರ್ ಮೇರಾ ಹೈ, ನಿಃಶಸ್ತ್ರ ಸೇನಾನಿ, ಪುಷ್ಪ್ ಕೀ ಅಭಿಲಾಷಾ, ಸೌದಾ–ಇವು ಬಹು ಪ್ರಸಿದ್ಧವಾದುವು. ಓಜಸ್ಸಿನಿಂದ ಕೂಡಿದ ಇವರ ಶೈಲಿ ಓದುಗರ ಮನಸ್ಸಿನ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡಬಲ್ಲದು. ಇವರ ವೈಚಾರಿಕ ಗದ್ಯಶೈಲಿಗೆ 'ಶಕ್ತಿಪೂಜಾ' ಎಂಬ ಪ್ರಬಂಧ ಒಂದು ಉತ್ತಮ ನಿದರ್ಶನ. (ಎನ್.ಎಸ್.ಡಿ.)

**ಚತುಷ್ಪಾದಿಗಳು :** ವರ್ಟಿಬ್ರೇಟ ಉಪವಿಭಾಗದ ಅಧಿವರ್ಗಗಳಲ್ಲೊಂದಾದ ಟೆಟ್ರಾಪೊಡಕ್ಕೆ ಸೇರಿದ ಕಶೇರುಕಗಳು. ಅವಯವಯಗಳನ್ನು (ಕೈಕಾಲು) ಪಡೆದಿರುವುದು ಇವುಗಳ ವಿಶಿಷ್ಟ ಲಕ್ಷಣ. ಈ ಲಕ್ಷಣದಲ್ಲಿ ಇವು ಇನ್ನೊಂದು ಅಧಿವರ್ಗವಾದ ಪಿಸೀಸ್‌ನಿಂದ (ಮೀನುಗಳ ಗುಂಪು) ಭಿನ್ನವೆನಿಸಿವೆ. ಮೀನುಗಳಿಗೆ ಕೈಕಾಲುಗಳ ಬದಲಾಗಿ ಈಜುರೆಕ್ಕೆಗಳಿವೆ. ಅಲ್ಲದೆ ಮೀನುಗಳು ಸಂಪೂರ್ಣವಾಗಿ ಜಲವಾಸಿಗಳಾಗಿದ್ದರೆ ಟೆಟ್ರಾಪೊಡ ಗುಂಪಿಗೆ ಸೇರಿದ ಪ್ರಾಣಿಗಳು ತಮ್ಮ ಜೀವನವನ್ನು ಸಂಪೂರ್ಣವಾಗಿ ಇಲ್ಲವೆ ಭಾಗಶಃ ಭೂಮಿಯ ಮೇಲೆ ಕಳೆಯುತ್ತವೆ. ಟೆಟ್ರಾಪೊಡ ಅಧಿವರ್ಗದಲ್ಲಿ ಉಭಯ ಜೀವಿ (ಆ್ಯಂಫಿಬಿಯ) (ಕಪ್ಪೆ, ಸ್ಯಾಲಮ್ಯಾಂಡರುಗಳು), ಸರೀಸೃಪ (ರೆಪ್ಟೀಲಿಯ) (ಹಲ್ಲಿ, ಮೊಸಳೆ, ಹಾವು, ಆಮೆ ಇತ್ಯಾದಿ), ಪಕ್ಷಿಗಳು/ಹಕ್ಕಿಗಳು ಏವೀಸ್ ಹಕ್ಕಿಗಳು ಮತ್ತು ಮ್ಯಾಮೇಲಿಯ (ಸ್ತನಿಗಳು) ಎಂಬ ನಾಲ್ಕು ವರ್ಗಗಳನ್ನು ಸೇರಿಸಲಾಗಿದೆ. ನಾಲ್ಕು ಕೈಕಾಲುಗಳಿರುವುದೇ ಸಾಮಾನ್ಯವಾದರೂ (ಈ ಪದ ಗ್ರೀಕಿನಿಂದ ಬಂದುದಾಗಿದ್ದು ನಾಲ್ಕು ಪಾದಗಳು ಎಂಬ ಅರ್ಥ ಕೊಡುತ್ತದೆ) ಕೆಲವು ಪ್ರಾಣಿಗಳಲ್ಲಿ ಕೇವಲ ಎರಡೇ ಕಾಲುಗಳಿರಬಹುದು. ಕೆಲವಲ್ಲಿ ಕೈಕಾಲುಗಳೇ ಇರದಿರಬಹುದು (ಹಾವುಗಳು). ಆದರೆ ಇಂಥ ಪ್ರಾಣಿಗಳು ಸಹ ನಾಲ್ಕು ಕಾಲುಗಳುಳ್ಳ ಪೂರ್ವಜಪ್ರಾಣಿಗಳಿಂದ ವಿಕಾಸವಾಗಿವೆ. ಅಲ್ಲದೆ ಕೆಲವು ಪ್ರಾಣಿಗಳಲ್ಲಿ ಕೈಕಾಲುಗಳು ಬೇರೆ ರೀತಿಯ ಅಂಗಗಳಾಗಿ ಮಾರ್ಪಾಡಾಗಿರುವುದುಂಟು. ಉದಾಹರಣೆಗೆ, ಹಕ್ಕಿಗಳಲ್ಲಿ ಮುಂದಿನ ಎರಡು ಕಾಲುಗಳು ರೆಕ್ಕೆಗಳಾಗಿ ಮಾರ್ಪಾಡಾಗಿವೆ. ಹಾಗೆಯೇ ತಿಮಿಂಗಿಲಗಳಲ್ಲಿ ಮುಂದಿನ ಕಾಲುಗಳು ಈಜುರೆಕ್ಕೆಗಳಾಗಿ ಬದಲಾಗಿವೆ. ಇದರಿಂದಾಗಿ ವರ್ಟಿಬ್ರೇಟ ಉಪವಿಭಾಗವನ್ನು ಟೆಟ್ರಾಪೊಡ ಮತ್ತು ಪಿಸೀಸ್ ಎಂದು ವಿಭಾಗಿಸಿರುವುದು ಅಭ್ಯಾಸದ ಅನುಕೂಲಕ್ಕಾಗಿ ಮಾತ್ರವೇ ವಿನಾ ಇನ್ನಾವುದಕ್ಕೂ ಅಲ್ಲ. (ಜಿ.ಎಂ.ಬಿ.)

**ಚತುಷ್ಫಲಕ :** ನಾಲ್ಕು ಫಲಕಗಳು ಇರುವ ಒಂದು ಬಹುಫಲಕ (ಟೆಟ್ರಹೆಡ್ರನ್). ಇದರ ಒಂದೊಂದು ಫಲಕವೂ ಒಂದೊಂದು ತ್ರಿಭುಜ. ಆದ್ದರಿಂದ ಚತುಷ್ಫಲಕವನ್ನು ತ್ರಿಭುಜದ ಮೇಲೆ ನಿಂತಿರುವ ಪಿರಮಿಡ್ ಎಂದು ಭಾವಿಸುವುದೂ ಉಂಟು. ಎಲ್ಲ ಫಲಕಗಳೂ ಸಮಭುಜತ್ರಿಭುಜಗಳಾದಾಗ ದೊರೆಯುವ ಘನಾಕೃತಿಗೆ ಕ್ರಮ ಚತುಷ್ಫಲಕ (ರೆಗ್ಯುಲರ್ ಟೆಟ್ರಹೆಡ್ರನ್) ಎಂದು ಹೆಸರು. ಚತುಷ್ಫಲಕಕ್ಕೆ ನಾಲ್ಕು ಶೃಂಗಗಳು(v), ನಾಲ್ಕು ಫಲಕಗಳು (f) ಮತ್ತು ಆರು ಅಂಚುಗಳು (e) ಇವೆ. ಇವು

$$v+f-e=2$$

ಎಂಬ ಆಯ್ಲರನ ಸೂತ್ರವನ್ನು ತಾಳೆ ಮಾಡುತ್ತವೆ ಎನ್ನುವುದು ಸ್ಪಷ್ಟ. ಶೃಂಗಗಳು ಸಮತಲೀಯವಾಗಿಲ್ಲ. ಒಂದೊಂದು ಜೊತೆ ಎದುರು ಅಂಚುಗಳೂ ಅತಲೀಯವಾಗಿವೆ (ಸ್ಕ್ಯೂ). ಅತಲೀಯ ಅಂಚುಗಳ ನಡುಬಿಂದು ಜೋಡಣೆಗಳು ಏಕಬಿಂದುಸ್ಥವಾಗಿವೆ ಮತ್ತು ಆ ಬಿಂದುವಿನಲ್ಲಿ ಅವು ಪರಸ್ಪರ ಸಮದ್ವಿಭಾಗಿಸುತ್ತವೆ. ಈ ಬಿಂದು ಘನ ಚತುಷ್ಫಲಕದ ಗುರುತ್ವಕೇಂದ್ರವೂ ಹೌದು. ಪ್ರತಿಯೊಂದು ಶೃಂಗವನ್ನೂ ಎದುರುಫಲಕದ ಕೇಂದ್ರಕ್ಕೆ (ಸೆಂಟ್ರಾಯಿಡ್) ಜೋಡಿಸುವ ರೇಖೆ ಗುರುತ್ವಕೇಂದ್ರದ ಮೂಲಕ ಹಾಯುತ್ತದೆ;




ಮತ್ತು ಆ ಬಿಂದುವಿನಲ್ಲಿ 3 : 1 ನಿಷ್ಪತ್ತಿಯಲ್ಲಿ ಖಂಡಿಸಲ್ಪಡುತ್ತದೆ. ಚಿತ್ರದಲ್ಲಿ ABCD ಚತುಷ್ಫಲಕ. AB, CD, ; AC, BD ; AD, BC ಮೂರು ಜೊತೆ ಅತಲೀಯ ಅಂಚುಗಳು. ಇವುಗಳ ನಡುಬಿಂದುಗಳು ಅನುಕ್ರಮವಾಗಿ P, M ; Q, N ; R, L. ಇವುಗಳ ಜೋಡಣೆಗಳು–ಅಂದರೆ PM, QN, RL¯G ಬಿಂದುವಿನಲ್ಲಿ ಪರಸ್ಪರ ಅರ್ಧಿಸುತ್ತವೆ. Gಯು ಚತುಷ್ಫಲಕದ ಗುರುತ್ವಕೇಂದ್ರ. ಅಲ್ಲದೆ AG, BG, CG, DG ಗಳು ಎದುರುಫಲಕಗಳನ್ನು ಆಯಾ ಫಲಕದ ಕೇಂದ್ರಕದಲ್ಲಿ ಸಂಧಿಸುತ್ತವೆ. ಒಂದು ಚತುಷ್ಫಲಕದ ನಾಲ್ಕು ಲಂಬಗಳೂ (ಯಾವುದೇ ಶೃಂಗದಿಂದ ಎದುರು ಫಲಕಕ್ಕೆ ಇಳಿದ ಲಂಬ) ಸಾಮಾನ್ಯವಾಗಿ ಏಕಬಿಂದುಸ್ಥವಾಗುವುದಿಲ್ಲ. ದತ್ತ ಆರು ಅಂಚು ಗಳಿರುವ (ಅಂದರೆ AB, AC, AD, BC, CD, DB ಗಳೆಲ್ಲವೂ ದತ್ತವಾಗಿರುವಾಗ) 30 ಭಿನ್ನ ಚತುಷ್ಫಲಕಗಳಿವೆ. ಇವುಗಳಲ್ಲಿ ಯಾವುದೇ ಎರಡು ಸರ್ವಸಮವಾಗಿರುವುದಿಲ್ಲ–ದೃಢ ಚಲನೆಯಿಂದಾಗಲಿ ಒಂದು ತಲದ ಮೇಲೆ ಪ್ರತಿಫಲಿಸುವದರಿಂದಾಗಲಿ ಇವನ್ನು ಅಧ್ಯಾರೋಪಿಸಲು ಸಾಧ್ಯವಾಗುವುದಿಲ್ಲ. ವಿಶ್ಲೇಷಣ ಜ್ಯಾಮಿತಿಯಲ್ಲಿ A, B, C, D ಶೃಂಗಗಳ ನಿರ್ದೇಶಕಗಳು ಅನುಕ್ರಮವಾಗಿ= $x_r y_r z_r$, r r = 1, 2, 3, 4 ಆಗಿದ್ದರೆ ಆಗ *ABCD* ಚತುಷ್ಫಲಕದ ಘನಗಾತ್ರ *V* ಯನ್ನು

$$V = \frac{1}{6} \begin{vmatrix} x_1 & y_1 & z_1 & 1 \\ x_2 & y_2 & z_2 & 1 \\ x_3 & y_3 & z_3 & 1 \\ x_4 & y_4 & z_4 & 1 \end{vmatrix}$$

ಸೂತ್ರ ನೀಡುತ್ತದೆ. (ಸಿ.ಎನ್.ಎಸ್.; ಬಿ.ಬಿ.ಬಿ.)

**ಚತ್ತಾಣ :** ಒಂದು ಬಗೆಯ ಕಾವ್ಯ. ಇದರ ಹೆಸರು ಮೊದಲು ಕಣ್ಣಿಗೆ ಬೀಳುವುದು 9ನೆಯ ಶತಮಾನದ ಕವಿರಾಜಮಾರ್ಗದಲ್ಲಿ. ಆ ಹೊತ್ತಿಗೆ ಕನ್ನಡದಲ್ಲಿ ಅಂಥ ಕಾವ್ಯಜಾತಿಗಳು ಹುಟ್ಟಿ ಪ್ರಸಿದ್ಧವಾಗಿದ್ದುವೆಂದು ಕವಿರಾಜಮಾರ್ಗಕಾರ ಹೇಳುತ್ತಾನೆ–ನುಡಿಗೆಲ್ಲಂ ಸಲ್ಲದ ಕನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ । ಗಡಿನ ನೆಗಳ್ತೆಯ ಕಬ್ಬದೊ । ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್ ॥ ಇದರ ಜೊತೆಯಲ್ಲಿ ಕಾಣಿಸಿಕೊಳ್ಳುವ ಇನ್ನೊಂದು ಕಾವ್ಯಪ್ರಕಾರ ಬೆದಂಡೆ–ಆದರೆ ಬೆದಂಡೆಯಾಗಲಿ, ಚತ್ತಾಣವಾಗಲಿ ನಮಗೆ ಒಂದೂ ದೊರೆಕಿಲ್ಲವಾದ ಕಾರಣ ಅವುಗಳ ಸ್ವರೂಪವೇನಿದ್ದಿರಬಹುದೆಂಬುದನ್ನು ಕವಿರಾಜ ಮಾರ್ಗದಲ್ಲಿ ಮತ್ತು ಈಚಿನ ಆಕರಗಳಲ್ಲಿ ದೊರಕುವ ಉಲ್ಲೇಖಗಳನ್ನು ಆಶ್ರಯಿಸಿ ಊಹಿಸಬೇಕಾಗಿದೆ.

13ನೆಯ ಶತಮಾನದ ಜನ್ನನಲ್ಲಿ ಬರುವ ಚಿತ್ರಾಯತನ ಎಂಬ ಮಾತು ಚತ್ತಾಣದ ಸಂಸ್ಕೃತ ಸಮಾನ ರೂಪವೆಂಬುದರಲ್ಲಿ ಅನುಮಾನವಿಲ್ಲ. ಆದರೆ ಯಾವುದು ಮೂಲರೂಪ, ಯಾವುದರಿಂದ ಯಾವುದು ಬಂದಿದೆ ಎಂಬುದನ್ನು ನಿರ್ಣಯಿಸುವುದು ಕಷ್ಟ. ಕವಿರಾಜಮಾರ್ಗಕಾರನ ಪ್ರಕಾರ ಚತ್ತಾಣದಲ್ಲಿ ಕಂದಪದ್ಯಗಳೇ ಹೆಚ್ಚು, ಮಧ್ಯೆ ಅಲ್ಲಲ್ಲಿ ವೃತ್ತಗಳು, ಅಕ್ಕರ ಚೌಪದಿ, ಗೀತಿಕೆ, ತ್ರಿಪದಿಗಳು ಬರಬೇಕು. ಎಂದರೆ ಚತ್ತಾಣದಲ್ಲಿ ವೃತ್ತವೈವಿಧ್ಯವಿರುತ್ತದೆ. ಎರಡನೆಯ ನಾಗವರ್ಮ ತನ್ನ ಕಾವ್ಯಾವಲೋಕನದಲ್ಲಿ ಬೆದಂಡೆಯ ಲಕ್ಷಣವನ್ನು ಹೇಳಿದ ಬಳಿಕ, ಬಾಜನೆಗಬ್ಬದ ಲಕ್ಷಣವನ್ನು ಹೇಳುತ್ತಾನೆ ; ಚತ್ತಾಣದ ಹೆಸರನ್ನು ಹೇಳುವುದಿಲ್ಲ. ಬಾಜನೆಗಬ್ಬದಲ್ಲಿ ಹಲವು ರೀತಿಯ ಪದ್ಯಗಳಿರಬೇಕೆಂಬ ಅವನ ಮಾತನ್ನು ನೋಡಿದರೆ (ಪಲತೆಱದ ಪದ್ಯದಿಂದಂ......), ಬಾಜನೆಗಬ್ಬವೂ ಚತ್ತಾಣವೂ ಒಂದೇ ಆಗಿರುವಂತೆ ತೋರುತ್ತದೆ ಎಂದು ತೀ.ನಂ ಶ್ರೀಕಂಠಯ್ಯನವರು ಊಹಿಸಿದ್ದಾರೆ. ಬೆದಂಡೆಯ ಉಲ್ಲೇಖನಗಳನ್ನು ನೋಡಿದರೆ ಅದೊಂದು ಹಾಡುಗಬ್ಬವಾಗಿತ್ತೆಂದು ತಕ್ಕಮಟ್ಟಿಗೆ ಖಚಿತವಾಗಿಯೇ ಹೇಳಬಹುದು. ಬೆದಂಡೆ ಹಾಡುಗಬ್ಬವಾದರೆ, ಚತ್ತಾಣ ಓದುಗಬ್ಬವಾಗಿರಬೇಕೆಂಬ ಕಲ್ಪನೆ ಸಹಜವಾಗಿಯೇ ಮೂಡುತ್ತದೆ. ಚತ್ತಾಣವೂ ಬಾಜನೆಗಬ್ಬವೂ ಒಂದೇ ಎಂದು ಒಪ್ಪಿಕೊಳ್ಳುವುದಾದರೆ, ಬಾಜನೆ ಎಂಬುದು ವಾಚನದ ತದ್ಭವವಾಗಿರುವುದರಿಂದ, ಚತ್ತಾಣ ವಾಚನಕ್ಕೆ ಅರ್ಹವಾದುದು. ಅದು ಒಂದು ಓದುಗಬ್ಬ ಎಂಬ ಊಹೆ ಸಮರ್ಥನೆ ಪಡೆಯುತ್ತದೆ. ಬೆದಂಡೆ ಹ್ರಸ್ವವಾದ ಕಾವ್ಯವೆಂದು ಹೇಳಲು ಅವಕಾಶವಿದೆ. ಚತ್ತಾಣದಲ್ಲಿ (ಬಾಜನೆಗಬ್ಬದಲ್ಲಿ) ವರ್ಣನೆಗಳಿರಬೇಕೆಂಬ ಕಾವ್ಯಾವಲೋಕನದ ಮಾತನ್ನು ನೋಡಿದರೆ, ಅದು ಬೆದಂಡೆಗಿಂತ ಗಾತ್ರದಲ್ಲಿ ದೊಡ್ಡದಾದ ಕಾವ್ಯವಾಗಿದ್ದಿರಬೇಕೆಂದು ತೀ.ನಂ.ಶ್ರೀಕಂಠಯ್ಯನವರ ತೀರ್ಮಾನ.

ಚತ್ತಾಣ ಮತ್ತು ಬೆದಂಡೆ ಕಾವ್ಯಗಳ ಒಂದೆರಡಾದರೂ ಮಾದರಿಗಳು ನಮಗೆ ದೊರಕುವವರೆಗೆ ಮೇಲಿನ ಲಕ್ಷಣಗಳನ್ನು ನಿರ್ಣಯವೆಂಬಂತೆ ಭಾವಿಸಬಾರದು. ಆ ಕಾವ್ಯಭೇದಗಳ ಬಗ್ಗೆ ಚರ್ಚೆ ನಡೆಸಿರುವ ವಿದ್ವಾಂಸರೂ ಸಂದೇಹಗಳೊಡನೆಯೇ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. (ಎಂ.ಸಿ.)

**ಚದರಿಕೆ :** ಒಂದು ಭೌತವಸ್ತು ಮತ್ತು ಒಂದು ವಿಕಿರಣದ ನಡುವೆ ಅಂತರಕ್ರಿಯೆ (ಇಂಟರ್‌ಆ್ಯಕ್ಷನ್) ಜರಗಿದಾಗ ಆ ವಿಕಿರಣದ ಮೂಲಪಥದ ದಿಶೆಯಲ್ಲಾಗುವ ವ್ಯತ್ಯಾಸ (ಸ್ಕ್ಯಾಟರಿಂಗ್). ಉದಾಹರಣೆಗೆ ಒಂದು ನ್ಯೂಕ್ಲಿಯಸಿನೊಡನೆ ಇಲ್ಲವೇ ಎಲೆಕ್ಟ್ರಾನಿನೊಡನೆ ಅಂತರಕ್ರಿಯೆಗೆ ಒಳಪಡುವ ಒಂದು ಮೂಲಕಣದ ಇಲ್ಲವೇ ಒಂದು ಫೋಟಾನಿನ ಮೂಲಪಥದ ದಿಶೆಯಲ್ಲಾಗುವ ಬದಲಾವಣೆ. ಈ ಅಂತರಕ್ರಿಯೆಯ ಪರಿಣಾಮವಾಗಿ ನ್ಯೂಕ್ಲಿಯಸಿನಲ್ಲಿ ಉದ್ರೇಕ ಉಂಟಾಗುತ್ತದೆ. ಆಗ ಪ್ರೋಟಾನ್ ತನ್ನ ಶಕ್ತಿಯನ್ನು ಕಳೆದುಕೊಂಡರೆ ಆ ವಿದ್ಯಮಾನಕ್ಕೆ ಅಪುಟಿತ ಚದರಿಕೆ (ಇನ್‌ಇಲಾಸ್ಟಿಕ್ ಸ್ಕ್ಯಾಟರಿಂಗ್) ಎಂದೂ ಶಕ್ತಿಯನ್ನು ಕಳೆದುಕೊಳ್ಳದಿದ್ದರೆ ಆ ವಿದ್ಯಮಾನಕ್ಕೆ ಪುಟಿತ (ಇಲಾಸ್ಟಿಕ್) ಚದರಿಕೆ ಎಂದೂ ಹೆಸರು.

ಪ್ರಸಕ್ತ ಲೇಖನವನ್ನು ಈ ಕೆಳಗಿನ ಮೂರು ಮುಖ್ಯ ಶೀರ್ಷಿಕೆಗಳ ಅನುಸಾರ ಅಳವಡಿಸಿದೆ :

ಚದರಿಕೆಯ ಪ್ರಯೋಗಗಳು, ಆಣ್ವಿಕ ಮತ್ತು ಪರಮಾಣ್ವಿಕ

ಚದರಿಕೆಯ ಪ್ರಯೋಗಗಳು, ವಿದ್ಯುತ್ಕಾಂತ ವಿಕಿರಣದ

ಚದರಿಕೆಯ ಪ್ರಯೋಗಗಳು, ನ್ಯೂಕ್ಲಿಯರ್

**1. ಚದರಿಕೆಯ ಪ್ರಯೋಗಗಳು, ಆಣ್ವಿಕ ಮತ್ತು ಪರಮಾಣ್ವಿಕ :** ಚದರಿಕೆಗೆ ಕಾರಣವಾಗುವ ಅಂತರಕ್ರಿಯೆಗಳಲ್ಲಿನ (ಸಂಘರ್ಷ) ವೈವಿಧ್ಯಗಳಲ್ಲಿ ಹಲವಾರು ಪ್ರಕಾರಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ.

1. ಎಲೆಕ್ಟ್ರಾನ್ ಮತ್ತು ಅನಿಲ ಪರಮಾಣುಗಳ ನಡುವಿನ ಪುಟಿತ ಅಂತರಕ್ರಿಯೆ ; ಮತ್ತು ಪರಮಾಣು ಉದ್ರಿಕ್ತಸ್ಥಿತಿಗೆ ಬರುವ ಇಲ್ಲವೆ ಅಯಾನೀಕರಣಕ್ಕೊಳಗಾಗುವಂಥ ಸಂಘರ್ಷಗಳು.

2. ಎಲೆಕ್ಟ್ರಾನುಗಳು ಅನಿಲದ ಅಣುಗಳೊಂದಿಗೂ ಸೇರಿ ಅಂತರಕ್ರಿಯೆಗಳಿಗೆ ಒಳಗಾಗುವ ಪುಟಿತ ಸಂಘರ್ಷ; ಮತ್ತು ಅಣುವಿನ ಕಂಪನ ಮತ್ತು/ಅಥವಾ ಭ್ರಮಣದ ಉದ್ರೇಕದಿಂದಾಗಿ ಅಣುಗಳ ನಡುವೆ ಉಂಟಾಗುವ ಅಪುಟಿತ ಸಂಘರ್ಷ.

3. ಪರಮಾಣು–ಪರಮಾಣುಗಳ ನಡುವೆ ಉಂಟಾಗುವ ಪುಟಿತ ಮತ್ತು ಅಪುಟಿತ ಸಂಘರ್ಷಗಳು. ಈ ಪರಮಾಣುಗಳು ಭೂಸ್ಥಿತಿಯಲ್ಲಿದ್ದಾಗ (ಗ್ರೌಂಡ್ ಸ್ಟೇಟ್) ಯಾವುದಾದರೊಂದು ಇಲ್ಲವೇ ಎರಡೂ ಪರಮಾಣುಗಳು ಉದ್ರಿಕ್ತ ಸ್ಥಿತಿಗೆ ಬರುವುದರಿಂದಲೋ ಇಲ್ಲವೇ ಆಯಾನೀಕರಣಗೊಳ್ಳುವುದರಿಂದಲೋ ಉ ಂಟಾಗುವ ಅಪುಟಿತ ಸಂಘರ್ಷಗಳು.

4. ಅಯಾನುಗಳ ಮತ್ತು ಪರಮಾಣುಗಳ ನಡುವಣ ಪುಟಿತ ಸಂಘರ್ಷ ಮತ್ತು ವಿದ್ಯುದಾವೇಶದ ವರ್ಗಾವಣೆಯ ಸಾಧ್ಯತೆಯಿಂದ ಲಭಿಸುವ ಅಪುಟಿತ ಸಂಘರ್ಷಗಳು.

5. ಅಣುಗಳ ನಡುವೆ ಪುಟಿತ ಮತ್ತು ಅಣುವಿನ ಕಂಪನ ಮತ್ತು/ಅಥವಾ ಗಿರಕಿ ಶಕ್ತಿಯ ವರ್ಗಾವಣೆಯ ಸಾಧ್ಯತೆಯಿಂದ ಲಭಿಸುವ ಅಪುಟಿತ ಸಂಘರ್ಷಗಳು.

6. ಅಣು ಮತ್ತು ಪರಮಾಣುಗಳೊಡನೆ ಮಂದವೇಗದಿಂದ ಚಲಿಸುವ ಪಾಸಿಟ್ರಾನ್ ಪುಟಿತ ರೀತ್ಯಾ ಇಲ್ಲವೆ ಅಪುಟಿತ ರೀತ್ಯಾ ಸಂಘರ್ಷಕ್ಕೆ ಒಳಗಾಗುವುದು. ಪಾಸಿಟ್ರಾನ್ ಎಲೆಕ್ಟ್ರಾನಿನೊಡನೆ ಸೇರಿ ಪಾಸಿಟ್ರೋನಿಯಮ್ ಆಗೀ ಅದು ಅಣು ಮತ್ತು ಪರಮಾಣುವಿನೊಡನೆ ಕೂಡಿದಾಗ ಉದ್ಭವಿಸುವ ಪುಟಿತ ಮತ್ತು ಅಪುಟಿತ ಸಂಘರ್ಷಗಳು.

7. ಕಡಿಮೆ ವೇಗದಿಂದ ಚಲಿಸುವ ಮೇಸಾನುಗಳು ಅಣು ಮತ್ತು ಪರಮಾಣುಗಳೊಡನೆ ಉಂಟುಮಾಡುವ ಪುಟಿತ ಮತ್ತು ಅಪುಟಿತ ಸಂಘರ್ಷಗಳು.

8. ಕಾಂತ ಭ್ರಮಣಾಂಕವಿರುವ ನ್ಯೂಟ್ರಾನುಗಳು ಅಧಿಕ ಕಾಂತಭ್ರಮಣಾಂಕಗಳಿರುವ ಪರಮಾಣುಗಳೊಡನೆ ಉಂಟುಮಾಡುವ ಪುಟಿತ ಮತ್ತು ಅಪುಟಿತ ಸಂಘರ್ಷಗಳು.

ಈ ಮೇಲಿನ ಸಂಘರ್ಷಗಳು ಗುಣಧರ್ಮಗಳನ್ನು ಅವಲಂಬಿಸಿರುವ ಪ್ರಯೋಗಗಳ ವಿಶ್ಲೇಷಣೆಯನ್ನು ಇಲ್ಲಿ ಕೊಟ್ಟಿದೆ. ಪ್ರತಿಯೊಂದು ಬಗೆಯ ಅಂತರಕ್ರಿಯೆಯಲ್ಲೂ ಬಂದು ತಾಗುವ ವಿದ್ಯುದಾವಿಷ್ಟ ಕಣಗಳ ಕೋನಸಂವೇಗ ಮತ್ತು ಶಕ್ತಿಗಳಿಗೆ ಅನುಸಾರವಾಗಿ ನಿರ್ದಿಷ್ಟ ಚದರಿಕೆಯ ಸಂಭಾವ್ಯತೆ ಉಂಟು. ಚದರಿಕೆಯನ್ನು ಕುರಿತ ಪ್ರಯೋಗಗಳಲ್ಲಿ ನಿರ್ಧರಿಸುವುದು ಈ ಸಂಭಾವ್ಯತೆಯನ್ನೇ.

ತಾತ್ತ್ವಿಕ ವಿವರಣೆ : ಆಕರವೊಂದರಿಂದ ಹೊರಬಂದು ಲಕ್ಷ್ಯದ (ಟಾರ್ಗೆಟ್) ಮೇಲೆ ಬೀಳುವ ಕಣದೂಲದ (ಪಾರ್ಟಿಕಲ್ ಬೀಮ್) ಹೊನಲು (ಅಭಿವಾಹ ; ಫ್ಲಕ್ಸ್) I ಆಗಿರಲಿ. ಈ ಹೊನಲು 1 ಚದರ. ಸೆಂ.ಮೀ. ನಲ್ಲಿ 1 ಸೆಕೆಂಡಿನ ಅವಧಿಯಲ್ಲಿ ಪಾತಕಣದೂಲದಲ್ಲಿನ ಸಂಭಾವ್ಯತೆಗೆ ಸಮ. ಪತನಕಣ ಪ್ರತಿಸೆಕೆಂಡಿಗೂ ಎಲ್ಲ ದಿಶೆಗಳಲ್ಲೂ ಚದರುವ ಸಂಭಾವ್ಯತೆಯನ್ನು S ಎಂದು ಇಟ್ಟುಕೊಂಡರೆ

$$S=\sigma I \quad ......(1)$$

ಎಂದಾಗುತ್ತದೆ. ಇಲ್ಲಿ σ ಚದರುವ ಒಟ್ಟು ಅಡ್ಡಕೊಯ್ತವನ್ನು ಸೂಚಿಸುತ್ತದೆ. ಪಾತಕಣ ಪ್ರತಿಸೆಕೆಂಡಿನಲ್ಲೂ θ ಕೋನದಲ್ಲಿ ಚದರುವುದರ ಸಂಭಾವ್ಯತೆಯನ್ನು S(θ) ಎಂದು ಬರೆದರೆ

$$S(\theta) = \frac{d\sigma}{d\Omega} I \quad .........(2)$$

ಎಂದು ಸಂಬಂಧ ಲಭಿಸುತ್ತದೆ. ಇಲ್ಲಿ $\frac{d\sigma}{d\Omega}$ ಎಂಬುದು θ ಕೋನದಲ್ಲಿ ಚದುರುವ ವ್ಯತ್ಯಸ್ತ ಅಡ್ಡಕೊಯ್ತವನ್ನು ಅಥವಾ θ ಕೋನದಲ್ಲಿ ಏಕಮಾನ ಘನಕೋನದೊಳಕ್ಕೆ ಚದರುವ ಸಂಭಾವ್ಯತೆಯನ್ನು ಸೂಚಿಸುತ್ತದೆ. Ω= ಏಕಮಾನ ಘನಕೋನ. I ಎಂಬುದು ಕಣದೂಲದಲ್ಲಿ ಕಣಗಳ ನೇರಕ್ಕೆ ಲಂಬವಾಗಿರುವ ಏಕಮಾನ ಸಲೆಯನ್ನು ಪ್ರತಿ ಸೆಕೆಂಡಿಗೂ ಹಾದುಹೋಗುವ ಕಣಗಳ ಸಂಖ್ಯೆ ; ಮತ್ತು S ಎಲ್ಲ ದಿಶೆಗಳಲ್ಲೂ ಚದುರಿದ ಕಣಗಳ ಸಂಖ್ಯೆ, θ ಕೋನದಲ್ಲಿ ಚದರಿದ ಕಣಗಳ ಒಟ್ಟು ಸಂಖ್ಯೆ S(θ). ಪ್ರಯೋಗದಲ್ಲಿ S ಅಥವಾ S(θ) ಮತ್ತು ಅಥವಾ ds/dW ಗಳನ್ನು ಗಣಿಸುವುದರಿಂದ ಪತನಕಣಗಳು

ಮತ್ತು ಲಕ್ಷ್ಯದಲ್ಲಿರುವ ಪರಮಾಣುಗಳ ನಡುವಿನ ವಿವಿಧ ಅಂತರಕ್ರಿಯೆಗಳ ಸಂಭಾವ್ಯತೆ ಲಭಿಸುತ್ತದೆ. ಪ್ರಯೋಗರೀತ್ಯಾ ಲಭಿಸಿದ ಸಂಭಾವ್ಯತೆಯನ್ನು ಸೈದ್ಧಾಂತಿಕ ರೀತ್ಯಾ ಲಭಿಸಿದ ಸಂಭಾವ್ಯತೆಯೊಡನೆ ಹೋಲಿಸುವುದರಿಂದ ಕಣಗಳ ಚದರಿಕೆಗೆ ಮೂಲಕಾರಣವಾದ ಚದರಿಸುವ ವಿಭವದ (ಸ್ಕ್ಯಾಟರಿಂಗ್ ಪೊಟೆನ್ಷಿಯಲ್) ಸ್ವರೂಪವನ್ನು ತಿಳಿಯಬಹುದು. ಕಣಗಳ ಚದರಿಕೆಯನ್ನು ಕ್ವಾಂಟಮ್ ಸಿದ್ಧಾಂತರೀತ್ಯಾ ವಿವರಿಸಲಾಗಿದೆ.

ಸೈದ್ಧಾಂತಿಕ ಬೆಳೆವಣಿಗೆ ; ಪತನಕಣಗಳ ಶಕ್ತಿ [ಇದು ಪತನಕಣಗಳನ್ನು ಪ್ರತಿನಿಧಿಸುವ ದ್ರವ್ಯ ಅಲೆಗಳ (ಮ್ಯಾಟರ್ ವೇವ್ಸ್) ಅಲೆಯುದ್ದವೆಂದೇ ಭಾವಿಸಲಾಗಿದೆ] ಚದರಿಸುವ ವಿಭವದ ಪರಿಮಾಣಕ್ಕಿಂತ ಅಧಿಕವಾಗಿದ್ದರೆ $\sigma$ ಮತ್ತು $d\Omega / d\sigma$ ಗಳ ಸನ್ನಿಹಿತ ಮೌಲ್ಯಗಳನ್ನು ಬಾರ್ನ್ ಸನ್ನಿಹಿತತೆ (ಬಾರ್ನ್ ಅಪ್ರಾಕ್ಸಿಮೇಷನ್) ವಿಧಾನದಿಂದ ಲೆಕ್ಕ ಹಾಕಬಹುದು. ಪತನದ್ರವ್ಯ ಅಲೆಯನ್ನು ಒಂದು ಮಟ್ಟಸ ಅಲೆಯೆಂದು ಪರಿಗಣಿಸುವುದರ ಜೊತೆಗೆ ಚದರಿಸುವ ವಿಭವ ಗೋಳೀಯ ಸಮಾಂಗತೆಯನ್ನು (ಸ್ಫೆರಿಕಲ್ ಸಿಮಿಟ್ರಿ) ಪಡೆದಿದೆಯೆಂದೂ ಭಾವಿಸಿಕೊಂಡರೆ

$$\frac{d\sigma}{d\Omega} = \frac{\mu}{2\pi\hbar^2}\left[\int V(r)\exp i(k-k')r.d\tau\right] \times \left[\int V(r)\exp\left\{-i(k-k').r\right\}d\tau\right]$$

ಎಂಬ ಸಂಬಂಧ ಲಭಿಸುತ್ತದೆ. ಇಲ್ಲಿ $k = \frac{\mu v}{\hbar}$; $k' = \frac{\mu v'}{\hbar}$;

$v$= ಕಣದ ಪ್ರಾರಂಭಿಕ ವೇಗ, $v'$ = ಕಣದ ಅಂತಿಮ ವೇಗ, $\mu$= ಇಳಿಸಿದ ದ್ರವ್ಯಾಂಶ, V(r) = ಚದರಿಸುವ ವಿಭವ, r = ಕೇಂದ್ರದಿಂದ ಕಣಕ್ಕಿರುವ ದೂರ, h = ಪ್ಲಾಂಕನ ನಿಯತಾಂಕ, = ಗಾತ್ರ ತುಣುಕು.




ಚಿತ್ರ 1

$d\sigma/d\Omega$ ವನ್ನು ಎಲ್ಲ ದಿಶೆಗಳಲ್ಲೂ ಅನುಕಲಿಸಿದರೆ ಲಭಿಸುತ್ತದೆ. ಚದರಿದ ವಿಭವ V(r) ನ ವಿವಿಧ ರೂಪಗಳನ್ನು ಕಲ್ಪಿಸಿಕೊಂಡು $d\sigma/d\Omega$ ಅಥವಾ. ವನ್ನು ಲೆಕ್ಕ ಹಾಕಿ ಪ್ರಾಯೋಗಿಕ ರೀತಿ ದೊರೆತ ಮೌಲ್ಯಗಳೊಡನೆ ತಾಳೆ ನೋಡಿದಾಗ V (r)ನ ಸ್ವರೂಪ ಗೊತ್ತಾಗುತ್ತದೆ.




ಚಿತ್ರ 2

ಚಿತ್ರ 1ರಲ್ಲಿ ಚದರಿಸುವ ವಿಭವ (V) ಮತ್ತು ಕೇಂದ್ರದಿಂದ ಕಣಕ್ಕಿರುವ ದೂರ (r) ಇವುಗಳ ನಡುವಣ ಸಂಬಂಧವನ್ನು ತೋರಿಸಿದೆ. ಬಾರ್ನ್ ಸನ್ನಿಹಿತತೆಯ ರೀತ್ಯಾ $d\sigma/d\Omega$ ಯಾವ ರೀತಿ θಕ್ಕೆ ಅನುಗುಣವಾಗಿ ವ್ಯತ್ಯಾಸ ಹೊಂದುತ್ತದೆ ಎಂಬುದನ್ನು ಚಿತ್ರದಲ್ಲಿ ತೋರಿಸಿದೆ. ಚಿತ್ರ 3ರಲ್ಲಿ ಆಕರ್ಷಕ ವಿಭವಕ್ಕೆ ಸಂಬಂಧಿಸಿದಂತೆ $d\sigma/d\Omega$ ಮತ್ತು θ ಗಳ ನಡುವಣ ವ್ಯತ್ಯಾಸವನ್ನು ಕಾಣಬಹುದು. ಇಲ್ಲಿ $V(r) = -V_o, r < R$

$V(r) = 0, r > R$, R = ನಿರ್ದಿಷ್ಟ ದೂರ

$d\sigma/d\Omega$ ಶೂನ್ಯವಾಗುವ ಮೊಟ್ಟಮೊದಲ ಕೋನ θ' ಕಣಗಳ ಶಕ್ತಿ ಅಧಿಕವಾದಂತೆಲ್ಲ θ' ಕಡಿಮೆಯಾಗುತ್ತದೆ. ಇಂಥ ಸೈದ್ಧಾಂತಿಕ ಮುನ್ಸೂಚನೆಗಳನ್ನು ಪ್ರಾಯೋಗಿಕವಾಗಿ ಸಮರ್ಥಿಸುವುದು ಸಾಧ್ಯವಾಗಿದೆ.




ಚಿತ್ರ 3

ಪತನಕಣಗಳ ಎಲ್ಲ ಶಕ್ತಿಗಳಿಗೂ ಅನ್ವಯಿಸುವ, ಅದರಲ್ಲೂ ಕಡಿಮೆ ಶಕ್ತಿಯಿರುವ ಚದರಿಕೆಗೆ ಉಪಯುಕ್ತವಾದ, ಪಾರ್ಶ್ವ ಅಲೆ ವಿಶ್ಲೇಷಣೆ (ಪಾರ್ಷಿಯಲ್ ವೇವ್ ಅನ್ಯಾಲಿಸಿಸ್) ಎಂಬ ಮತ್ತೊಂದು ವಿಧಾನದಿಂದ ಚದರಿಕೆಯ ಗುಣಧರ್ಮಗಳನ್ನು ಅಧ್ಯಯನ ಮಾಡಲಾಗಿದೆ. ಶಬ್ದದ ಅಲೆಗಳ ಚದರಿಕೆಯನ್ನು ವಿಶ್ಲೇಷಿಸಲು ರ‍್ಯಾಲೆ (1842–1919) ಎಂಬ ಇಂಗ್ಲೆಂಡಿನ ಭೌತವಿಜ್ಞಾನಿ 19ನೆಯ ಶತಮಾನದಲ್ಲಿ ಬೆಳೆಸಿದ ವಿಧಾನವನ್ನು 1927ರಲ್ಲಿ ಫ್ಯಾಕ್ಸನ್ ಮತ್ತು ಹೋಲ್ಟ್ಸ್‌ಮಾರ್ಕ್ ಎಂಬ ಭೌತವಿಜ್ಞಾನಿಗಳು ಕ್ವಾಂಟಮ್ ಬಲವಿಜ್ಞಾನದ ರೀತ್ಯಾ ದ್ರವ್ಯ ಅಲೆಗಳ ಚದರಿಕೆಗೆ ಅಳವಡಿಸಿದ್ದಾರೆ. ಈ ಎರಡು ಸೈದ್ಧಾಂತಿಕ ವಿಧಾನಗಳಿಂದ ಅಣು, ಪರಮಾಣು ಮತ್ತು ನ್ಯೂಕ್ಲಿಯಸುಗಳಿಂದ ವಿವಿಧ ಪತನಕಣಗಳ ಚದರಿಕೆಯನ್ನು ಅಭ್ಯಾಸ ಮಾಡಬಹುದು.

ಎಲೆಕ್ಟ್ರಾನ್–ಪರಮಾಣು ಸಂಘರ್ಷ : ಪರಮಾಣುವನ್ನು ಉದ್ರಿಕ್ತಸ್ಥಿತಿಗೆ ತರಲು ಒಂದು ಕನಿಷ್ಠ ಪರಿಮಾಣದ ಶಕ್ತಿ ಅಗತ್ಯ. ಈ ಶಕ್ತಿಯಲ್ಲಿ ಕಾಣಬರುವ ವ್ಯತ್ಯಾಸಗಳಿಂದ ಪುಟಿತ ಇಲ್ಲವೆ ಅಪುಟಿತ ಚದರಿಕೆಗಳು ಒದಗುತ್ತವೆ. ಇಂಥವನ್ನು ಇಲ್ಲಿ ವಿವೇಚಿಸಿದೆ.

1. ಎಲೆಕ್ಟ್ರಾನ್ ದೂಲಪ್ರವಾಹ ಅನಿಲಗಳ ಮೂಲಕ ಹಾದುಹೋಗುವಾಗ ಆ ಪ್ರವಾಹದ ಶಕ್ತಿ ಎಷ್ಟು ಕಡಿಮೆಯಾಗುತ್ತದೆ ಎಂಬುದನ್ನು ತಿಳಿದು ಒಟ್ಟು ಅಡ್ಡಕೊಯ್ತವನ್ನು ಕಂಡುಹಿಡಿಯಬಹುದು. ಅನಿಲದ ಏಕಮಾನ ಗಾತ್ರದಲ್ಲಿ N ಅಣುಗಳೊ ಇಲ್ಲವೆ ಪರಮಾಣುಗಳೊ ಇರುವಾಗ ಎಲೆಕ್ಟ್ರಾನ್ ದೂಲ $x$ ದೂರದಷ್ಟು ಮುಂದೆ ಚಲಿಸಿದರೆ (ಒಂದಕ್ಕಿಂತ ಹೆಚ್ಚಿನ ಎಲೆಕ್ಟ್ರಾನುಗಳು ಸಂಘರ್ಷಿಸುವ ಸಂಭಾವ್ಯತೆ ಕಡಿಮೆಯಿರುವಂತೆ ಪ್ರಯೋಗದ ಪೂರ್ವಭಾವೀ ವ್ಯವಸ್ಥೆಯಾಗಿದ್ದಿರಬೇಕು) ದೂಲಪ್ರವಾಹ exp (-Nsx) ನಷ್ಟು ಕಡಿಮೆಯಾಗುವುದು. ವಿವಿಧ ವೇಗದಿಂದ ಚಲಿಸುವ ಎಲೆಕ್ಟ್ರಾನುಗಳನ್ನು ಸಂಘರ್ಷಿಸಿ ಬೇರೆ ಬೇರೆ ಮೌಲ್ಯಗಳನ್ನು ಕಂಡುಹಿಡಿಯುವ ಕ್ರಮವೂ ಉಂಟು. ಒಟ್ಟು ಅಡ್ಡಕೊಯ್ತದಲ್ಲಿ ಪುಟಿತ ಅಡ್ಡಕೊಯ್ತವನ್ನು ಕಳೆದು ಅಪುಟಿತ ಅಡ್ಡಕೊಯ್ತದ ಮೌಲ್ಯವನ್ನು ಗಣಿಸುವುದು ರೂಢಿ.

2. $\theta$ ಕೋನದಲ್ಲಿ ಶಕ್ತಿವ್ಯಯವಾಗದೆ ಚದರುವ ಎಲೆಕ್ಟ್ರಾನುಗಳ ಸಂಖ್ಯೆಯಿಂದ ಪುಟಿತ ಸಂಘರ್ಷದ ಮತ್ತು ಶಕ್ತಿವ್ಯಯದಿಂದಾಗಿ ಚದರುವ ಎಲೆಕ್ಟ್ರಾನುಗಳ ಸಂಖ್ಯೆಯಿಂದ ಅಪುಟಿತ $d\sigma/d\Omega$ ದ ಮೌಲ್ಯವನ್ನು ಗಣಿಸಬಹುದು. ವಿವಿಧ ಪರಮಾಣುಗಳೊಡನೆ ಸಂಘರ್ಷಿಸುವ ಕಡಿಮೆ ವೇಗದ ಎಲೆಕ್ಟ್ರಾನುಗಳ ಒಟ್ಟು ಅಡ್ಡಕೊಯ್ತಗಳು ಎಲೆಕ್ಟ್ರಾನ್ ವೇಗನವನ್ನು ಅನುಸರಿಸಿ ವ್ಯತ್ಯಾಸಗೊಳ್ಳುವುವು. ವ್ಯತ್ಯಸ್ತ ಪುಟಿತ ಹಾಗೂ ಅಪುಟಿತ ಅಡ್ಡಕೊಯ್ತಗಳು ಈ ಶಕ್ತಿಯ ಪರಿಮಿತಿಯಲ್ಲಿದ್ದು ನಮನದಿಂದಾಗಿ (ಡಿಫ್ರ್ಯಾಕ್ಷನ್) ಗರಿಷ್ಠತಮ ಮತ್ತು ಕನಿಷ್ಠತಮ ವರ್ತನೆಗಳನ್ನು ಪ್ರದರ್ಶಿಸುತ್ತದೆ. ಈ ರೀತಿಯ ಕಡಿಮೆ ವೇಗದ ಎಲೆಕ್ಟ್ರಾನುಗಳ ಚದರಿಕೆಯನ್ನು ಕ್ವಾಂಟಮ್ ಬಲವಿಜ್ಞಾನದ ನೆರವಿನಿಂದ ಲೆಕ್ಕ ಹಾಕಲು ಪತನ ಎಲೆಕ್ಟ್ರಾನ್ ದೂಲ ಮತ್ತು ಪರಮಾಣುಗಳ ನಡುವಿನ ಧ್ರುವೀಕರಣ (ಪೋಲರೈಸೇಷನ್) ಮುಂತಾದ ಗುಣಲಕ್ಷಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಪರಮಾಣುವಿನ ಧ್ರುವೀಕರಣದಿಂದಾಗಿ ಕಡಿಮೆ ಕೋನಗಳಲ್ಲಿ ಚದರಿಕೆ ಅಧಿಕವಾಗಿರುವುದು ಕಾಣಬಹುದು.

ಅಣುದೂಲ ಪ್ರಯೋಗಗಳು: ಟಂಗ್‌ಸ್ಟನ್ ಒಲೆಯಿಂದ (ಆಕರ) ಹೊರಬರುವ ಅಣುದೂಲದ ಮುಂದೆ ಒಂದು ವೇಗ ನಿಯಂತ್ರಕವನ್ನಿಟ್ಟು ಅಣುದೂಲದ ವೇಗವನ್ನು ನಿಯಂತ್ರಿಸಿ, ಒಂದು ನಿರ್ದಿಷ್ಟ ವೇಗದ ಅಣುಗಳು ಮಾತ್ರ ಕಿಂಡಿಯೊಂದರ ಮೂಲಕ

ಹೊರಬರುವಂತೆ ಮಾಡಲಾಗುತ್ತದೆ. ಕಿಂಡಿಯಿಂದ ಹೊರಬರುವ ಅಣುದೂಲದ ನೇರಕ್ಕೆ ಲಂಬದಿಶೆಯಲ್ಲಿ ಎಲೆಕ್ಟ್ರಾನ್ ದೂಲ ಅಣುದೂಲವನ್ನು ಹಾದುಹೋಗುವಂತೆ ವ್ಯವಸ್ಥೆ ಇರುತ್ತದೆ. ಸಂಘರ್ಷದಿಂದಾಗಿ ಚದರುವ ಎಲೆಕ್ಟ್ರಾನುಗಳ ಸಂಖ್ಯೆಯನ್ನು ಒಂದು ಗೊತ್ತಾದ ದಿಕ್ಕಿನಲ್ಲಿ ಇರುವ ಗಣಕದ (ಕೌಂಟರ್) ಸಹಾಯದಿಂದ ಎಣಿಸಬಹುದು. ಒಂದು ದ್ರವ್ಯರಾಶಿ ರೋಹಿತಮಾಪಕವನ್ನು (ಮಾಸ್ ಸ್ಪೆಕ್ಟ್ರಾಮೀಟರ್) ಬಳಸಿ, ಅಣುದೂಲ ಮತ್ತು ಎಲೆಕ್ಟ್ರಾನುಗಳ ನಡುವೆ ಆಗುವ ಸಂಘರ್ಷದಿಂದಾಗಿ ವಿಘಟನೆಗೊಳ್ಳುವ ಅಣುಗಳ ಸಂಖ್ಯೆಯನ್ನು ಗಣಿಸಬಹುದು. ಜೊತೆಗೆ $d\sigma/d\Omega$ ಮತ್ತು $\sigma$ ಗಳನ್ನೂ ತಿಳಿಯಬಹುದು. ಅಣುಗಳ ವಿಘಟನಾಂಕವನ್ನು (ಡಿಗ್ರಿ ಆಫ್ ಡಿಸೋಸಿಯೇಷನ್) ತಿಳಿದು ವನ್ನು ಕಂಡುಹಿಡಿಯಲಾಗುತ್ತದೆ.

ಹೀಲಿಯಮ್ ಪರಮಾಣುಗಳನ್ನು ಬಳಸಿ ಚದರಿಕೆಯನ್ನು ಅಭ್ಯಸಿಸಿದಾಗ ಪುಟಿತ ಚದರಿಕೆಯ ಮೌಲ್ಯ $d\sigma/d\Omega$ ಎಲೆಕ್ಟ್ರಾನುಗಳ ವಿನಿಮಯವನ್ನು ಗಣನೆಗೆ ತೆಗೆದುಕೊಂಡು ಚದರಿಕೆಯನ್ನು ಅಭ್ಯಸಿಸಿದಾಗ ಒದಗುವ ಚದರಿಕೆಯ ಮೌಲ್ಯ ದೊಡನೆ ಹೊಂದಿಕೊಳ್ಳುವುದೆಂಬುದನ್ನು ಅರಿಯಲಾಗಿದೆ.

ಅಯಾನೀಕರಣ ಮತ್ತು ಉದ್ರಿಕ್ತ ಅಡ್ಡಕೊಯ್ತಗಳು : ಎಲೆಕ್ಟ್ರಾನ್ ಮತ್ತು ಅಣು–ಪರಮಾಣುಗಳ ನಡುವಿನ ಅಯಾನೀಕರಣದ ಸಂಘರ್ಷದಲ್ಲಿ ಸಾಮಾನ್ಯವಾಗಿ ಧನ ಅಯಾನುಗಳ ಪ್ರವಾಹವನ್ನು ಪತ್ತೆ ಹಚ್ಚಲಾಗುತ್ತದೆ. ಅಯಾನುಗಳ ದ್ರವ್ಯರಾಶಿ ಮತ್ತು ಧನವಿದ್ಯುದಾವೇಶವನ್ನು ಗಣನೆಗೆ ತೆಗೆದುಕೊಳ್ಳದೆ ಒಟ್ಟು ಅಯಾನ್ ಪ್ರವಾಹವನ್ನು ಅಳತೆ ಮಾಡಿ ಸಾಪೇಕ್ಷ ಅಡ್ಡಕೊಯ್ತ $\sigma$ ವನ್ನು ($\sigma'=\sigma_1 + 2\sigma_2 + 3\sigma_3 + ..$) ಕಂಡುಹಿಡಿಯಬಹುದು. ಈ ಶ್ರೇಣಿಯಲ್ಲಿ $s_n$ಎಂಬುದು $n_n$ ಸಲದಷ್ಟು ಅಯಾನೀಕರಣಗೊಂಡು ಅಯಾನುಗಳನ್ನು ಉತ್ಪಾದಿಸುವ ಎಲ್ಲ ಕ್ರಿಯೆಗಳ ಅಡ್ಡಕೊಯ್ತಗಳ ಮೊತ್ತವನ್ನು ಸೂಚಿಸುತ್ತದೆ.

ಕಾದ ತಂತುವೊಂದರಿಂದ (ಹೀಟೆಡ್ ಫಿಲಮೆಂಟ್) ಹೊರಹೊಮ್ಮಿದ ಎಲೆಕ್ಟ್ರಾನುಗಳನ್ನು ವೇಗೋತ್ಕರ್ಷಿಸಿ, ಅನಂತರ ಅವನ್ನು ವೇಗಾಪಕರ್ಷಕ ವಿಭವ ಪ್ರದೇಶದ (ರಿಟಾರ್ಡಿಂಗ್ ಪೊಟೆನ್ಷಿಯಲ್ ರೀಜನ್) ಮೂಲಕ ಹಾಯುವಂತೆ ಮಾಡಿ ಅವುಗಳ ವೇಗದ ಹಂಚಿಕೆಯನ್ನು ನಿಯಂತ್ರಿಸುತ್ತ ಅವನ್ನು ಅಣು/ಪರಮಾಣುಗಳೊಡನೆ ಸಂಘರ್ಷಿಸುವುದರಿಂದ ಅಯಾನುಗಳನ್ನು ಉತ್ಪಾದಿಸಬಹುದು. ಹೀಗೆ ಉತ್ಪತ್ತಿಯಾದ




ಚಿತ್ರ 4

ಅಯಾನುಗಳ ಸಂಖ್ಯೆಯನ್ನು ವ್ಯತ್ಯಾಸ ಮಾಡುತ್ತ ಹೋಗಿ ದ್ರವ್ಯರಾಶಿ ರೋಹಿತಮಾಪಕವನ್ನು ಬಳಸಿ, ನಿರ್ದಿಷ್ಟ ವಿದ್ಯುದಾವೇಶ ಮತ್ತು ದ್ರವ್ಯರಾಶಿ ಇರುವ ಅಯಾನುಗಳ ಅಡ್ಡಕೊಯ್ತವನ್ನು ಕಂಡುಹಿಡಿಯಲಾಗುತ್ತದೆ. ಜೊತೆಗೆ ಸಾಪೇಕ್ಷತಾ ಅಡ್ಡಕೊಯ್ತವನ್ನೂ ಲೆಕ್ಕ ಹಾಕಬಹುದಾಗಿದೆ. ಇದಕ್ಕೆ ವೇಗಾಪಕರ್ಷಕ ವಿಭವಾಂತರ ವಿಧಾನ (ರಿಟಾರ್ಡಿಂಗ್ ಪೊಟೆನ್ಷಿಯಲ್ ಡಿಫರೆನ್ಸ್ ಮೆಥಡ್) ಎಂದು ಹೆಸರು. ಯಾವ ಯಾವ ಅಯಾನುಗಳು ಯಾವ ಯಾವ ಎಲೆಕ್ಟ್ರಾನಿಕ್ ಸ್ಥಿತಿಗಳಲ್ಲಿವೆಯೆಂಬುದನ್ನು ತಿಳಿಯಲು ಈ ವಿಧಾನದಿಂದ ನೆರವು ದೊರೆಯುತ್ತದಲ್ಲದೆ ಅಯಾನೀಕರಣ ಅಡ್ಡಕೊಯ್ತ ದೇಹಲಿಗಳಿಗಿಂತ (ಥ್ರೆಷೋಲ್ಡ್) ಹೆಚ್ಚಿನ ಶಕ್ತಿಗಳಲ್ಲಿ ಹೇಗೆ ವ್ಯತ್ಯಾಸ ಹೊಂದುತ್ತವೆ ಎಂಬುದೂ ತಿಳಿಯುತ್ತದೆ. ಈ ವ್ಯತ್ಯಾಸ ನಕ್ಷಾ ನಿರೂಪಣೆಯನ್ನು ಚಿತ್ರ 4ರಲ್ಲಿ ತೋರಿಸಿದೆ.




ಚಿತ್ರ 5




ಚಿತ್ರ 6

ಎಲೆಕ್ಟ್ರಾನುಗಳು ಅಣು/ಪರಮಾಣುಗಳೊಡನೆ ಸಂಘರ್ಷ ಹೊಂದಿದಾಗ ನಿರ್ದಿಷ್ಟ ಶಕ್ತಿ ವ್ಯಯಗೊಂಡು ಚದರಿದ ಎಲೆಕ್ಟ್ರಾನುಗಳ ಸಂಖ್ಯೆಯನ್ನು ಎಣಿಸುವುದರಿಂದಲೂ ಉದ್ರಿಕ್ತ ಅಣು/ಪರಮಾಣುಗಳು ಹೊರಸೂಸುವ ವಿಕಿರಣದಿಂದಲೂ ಉದ್ರಿಕ್ತ ಅಡ್ಡಕೊಯ್ತವನ್ನು ಕಂಡುಹಿಡಿಯಬಹುದು. ಹೊರಬಂದ ವಿಕಿರಣದ ಶಕ್ತಿ ಮತ್ತು ತೀವ್ರತೆಗಳನ್ನು ತಿಳಿದು ಅಡ್ಡಕೊಯ್ತವನ್ನು ಲೆಕ್ಕ ಹಾಕಬಹುದು. ವಿವಿಧ ಎಲೆಕ್ಟ್ರಾನ್ ಶಕ್ತಿಗಳಿಗೆ ಸಂಬಂಧಿಸಿದಂತೆ ಉದ್ರಿಕ್ತ ದ ಮೌಲ್ಯವನ್ನು ಕಂಡುಹಿಡಿಯಲಾಗಿದೆ. ಹೀಲಿಯಮ್ ಅಣು ಮತ್ತು ನೈಟ್ರೋಜನ್ ಅಣುಗಳಿಗೆ ಸಂಬಂಧಪಟ್ಟಂತೆ ಎಲೆಕ್ಟ್ರಾನ್ ಶಕ್ತಿ ಮತ್ತು ಉದ್ರೇಕ $\sigma$ ಗಳ ನಡುವಿನ ಸಂಬಂಧವನ್ನು ಅನುಕ್ರಮವಾಗಿ ಚಿತ್ರದಲ್ಲಿ (5 ಮತ್ತು 6) ಕಾಣಿಸಿದೆ.

ವಿದ್ಯುದಾವೇಶ ವರ್ಗಾವಣೆಯ ಸಂಘರ್ಷಗಳು : ಈ ಮುಂದಿನ ಅಯಾನ್ ಕ್ರಿಯೆಗಳಿಗೆ ವಿದ್ಯುದಾವೇಶ ವರ್ಗಾವಣೆಯ ಸಂಘರ್ಷಗಳೆಂದು ಹೆಸರು.

(i) ಏಕ ವಿದ್ಯುದಾವೇಶ ವರ್ಗಾವಣೆ : $A^{+}+B \rightarrow A+B^{+}$

(ii) ವರ್ಗಾವಣೆ ಅಯಾನೀಕರಣ : $A^{+}+B \rightarrow A+B^{++}+$

(iii) ಕಳಚಿಕೆ (ಸ್ಟ್ರಿಪ್ಪಿಂಗ್) : $A^{+}+B \rightarrow A^{++}+e+B$

(iv) ಉದ್ರಿಕ್ತ ಸ್ಥಿತಿಗೆ ವಿದ್ಯುದಾವೇಶ ವರ್ಗಾವಣೆ :

$A^{+}+B \rightarrow A^{*}+B^{+}$

$A^{+}+B \rightarrow A+B^{+*}$

(*ಚಿಹ್ನೆ ಅಯಾನಿನ ಉದ್ರಿಕ್ತಸ್ಥಿತಿಯನ್ನು ಸೂಚಿಸುತ್ತದೆ)

(v) ತಟಸ್ಥ ಪರಮಾಣುವಿನಿಂದ ಹಿಡಿತ : $A+B \rightarrow A^{-}+B^{+}$

ಪತನ ವಿದ್ಯುದಾವಿಷ್ಟ ಕಣ ಒಂದು ಅಥವಾ ಹೆಚ್ಚಿನ ಎಲೆಕ್ಟ್ರಾನುಗಳನ್ನು ಸ್ವೀಕರಿಸುವ ಇಲ್ಲವೆ ಕಳೆದುಕೊಳ್ಳುವ ವಿದ್ಯುದಾವೇಶ ವರ್ಗಾವಣೆಯ ಕ್ರಿಯೆಯಿಂದಾಗಿ ಆ ಕಣದ ವೇಗ ಕಡಿಮೆಯಾಗುತ್ತದೆ. ಪತನ ವಿದ್ಯುದಾವಿಷ್ಟ ಕಣದೂಲ ಪ್ರವಾಹ $I_b$ ಇದ್ದು ಬಹಳ ಕಡಿಮೆ ಒತ್ತಡದಲ್ಲಿರುವ ಅನಿಲದ ಮೂಲಕ ಹಾಯುವಾಗ (ಕಣ ಅನಿಲದ ಅಣು/ಪರಮಾಣುಗಳ ಜೊತೆ ಅಧಿಕ ಸಂಘರ್ಷಗಳನ್ನು ಮಾಡದಿರುವಷ್ಟರ ಮಟ್ಟಿಗೆ ಒತ್ತಡ ಕಡಿಮೆ ಇರಬೇಕಾದುದು ಅಗತ್ಯ) ಉಂಟಾಗುವ ವಿದ್ಯುದಾವಿಷ್ಟ ಕಣಗಳ ದೂಲದ ಪ್ರವಾಹ $I_s$ನ್ನು

$$I_s = I_b N \sigma$$

ಎಂಬ ಸಮೀಕರಣದಿಂದ ಕಂಡುಹಿಡಿಯಬಹುದು. ಇಲ್ಲಿ N ಎಂಬುದು ಅನಿಲದಲ್ಲಿ ಕಣಪಥಕ್ಕೆ ಲಂಬ ನೇರದಲ್ಲಿ ಏಕಮಾನ ಸಲೆಯಲ್ಲಿರುವ ಅಣು/ಪರಮಾಣುಗಳ ಸಂಖ್ಯೆಯನ್ನೂ $\sigma$ ಎಂಬುದು ವಿದ್ಯುದಾವೇಶ ವರ್ಗಾವಣೆ ಅಡ್ಡಕೊಯ್ತವನ್ನೂ ಸೂಚಿಸುತ್ತವೆ. ಪ್ರಾಯೋಗಿಕವಾಗಿ $I_s$ ಮತ್ತು I ಗಳ ಬೆಲೆಗಳನ್ನು ದ್ರವ್ಯರಾಶಿ ರೋಹಿತಮಾಪಕ ವಿಧಾನಗಳ ರೀತ್ಯಾ ಕಂಡುಹಿಡಿಯಲು ಸಾಧ್ಯವಿದೆ.

ನ್ಯೂಟ್ರಾನ್–ಅಣು/ಪರಮಾಣು ಸಂಘರ್ಷ : ಅಣು/ಪರಮಾಣುಗಳಿಂದ ನ್ಯೂಟ್ರಾನ್ ಚದರಲು ಅವುಗಳ ಕಾಂತ ಭ್ರಮಣಾಂಕ ಅಂತರಕ್ರಿಯೆ ಕಾರಣವೆಂದು ತಿಳಿದಿದೆ. ನ್ಯೂಟ್ರಾನ್ ಚದರಿಕೆಯ ವಿಧಾನದಿಂದ ಕೆಲವು ಭೌತವಸ್ತುಗಳ ಕಾಂತೀಯ ರಚನೆ ಮತ್ತು ವಿನ್ಯಾಸಗಳನ್ನು ಅಭ್ಯಸಿಸಲಾಗಿದೆ. ಇದರಿಂದಾಗಿ ಪ್ರತಿಫೆರೋಕಾಂತೀಯಗಳು ಮತ್ತು ಫೆರೈಟುಗಳೆಂಬ ಸ್ವರೂಪವಿರುವ ಹೊಸ ಹೊಸ ಭೌತವಸ್ತುಗಳ ರಚನೆಯ ವಿಶ್ಲೇಷಣೆ ಸಾಧ್ಯವಾಗಿದೆ.

**(ನೋಡಿ– ನ್ಯೂಟ್ರಾನ್–ನಮನ)** (ಪಿ.ವಿ.)

**2. ಚದರಿಕೆಯ ಪ್ರಯೋಗಗಳು, ವಿದ್ಯುತ್ಕಾಂತ ವಿಕಿರಣದ :** ಒಂದು ಆವಿಷ್ಟ ಕಣಕ್ಕೆ ಚಾರ್ಜ್‌ಡ್ ಪಾರ್ಟಿಕಲ್) ಅಥವಾ ವಿಕಿರಣಕ್ಕೆ (ರೇಡಿಯೇಷನ್) ನ್ಯೂಕ್ಲಿಯಸ್ ಅಥವಾ ಎಲೆಕ್ಟ್ರಾನಿನೊಂದಿಗೆ ಅಂತರಕ್ರಿಯೆ (ಇಂಟರ್‌ಆ್ಯಕ್ಷನ್) ನಡೆದಾಗ ಆಗುವ ದಿಕ್ಪಲ್ಲಟ. ಈ ತರಹದ ಚದರಿಕೆಯನ್ನು ವಿದ್ಯುತ್ಕಾಂತ ವಿಕಿರಣದಲ್ಲಿ ಕೂಡ ಕಾಣಬಹುದು. ಆವಿಷ್ಟ ಕಣಗಳಾದ $\alpha$ ಮತ್ತು $\beta$ ಕಣಗಳು ನ್ಯೂಕ್ಲಿಯಸ್ ಅಥವಾ ಎಲೆಕ್ಟ್ರಾನಿನೊಂದಿಗೆ ಅಂತರಕ್ರಿಯೆ ನಡೆಸಿದಾಗಲೂ ಚದರಿಕೆಯನ್ನು ಗಮನಿಸಬಹುದು.

ಚದರಿಕೆ ಉಂಟಾದಾಗ ಪತನ ಕಣದ ಅಥವ ವಿಕಿರಣ ಶಕ್ತಿಯಲ್ಲಿ ಬದಲಾವಣೆ ಆದರೆ ಅಂಥ ಚದರಿಕೆಗೆ ಅಪುಟಿತ (ಇನ್‌ಇಲಾಸ್ಟಿಕ್) ಚದರಿಕೆಯೆಂದೂ, ಚದರಿಕೆಯಲ್ಲಿ ಕಣದ ಅಥವಾ ವಿಕಿರಣದ ಶಕ್ತಿ ಬದಲಾಗದೆ ಇದ್ದರೆ ಅಂಥ ಚದರಿಕೆಗೆ ಪುಟಿತ (ಇಲಾಸ್ಟಿಕ್) ಚದರಿಕೆಯೆಂದೂ ಹೆಸರು. ಅಪುಟಿತ ಚದರಿಕೆಯಲ್ಲಿ ಕಣದ ಅಥವಾ ವಿಕಿರಣದ ಶಕ್ತಿ ನ್ಯೂಕ್ಲಿಯಸ್ ಅಥವಾ ಎಲೆಕ್ಟ್ರಾನನ್ನು ಉದ್ರೇಕಗೊಳಿಸಲು (ಕೆಳಗಿನ ಉದ್ದೀಪ್ತಸ್ಥಿತಿಯಿಂದ ಉನ್ನತ ಉದ್ದೀಪ್ತಸ್ಥಿತಿಗೆ ಕಳುಹಿಸಲು) ವಿನಿಯೋಗಿಸಲ್ಪಡುವುದಾದ್ದರಿಂದ ಚದರಿದ ಕಣ ಅಥವಾ ವಿಕಿರಣದ ಶಕ್ತಿ ಪತನಕಣ ಅಥವಾ ಎಲೆಕ್ಟ್ರಾನ್ ಕೆಳಗಿನ ಉದ್ದೀಪ್ತಸ್ಥಿತಿಗೆ ಬರುವಾಗ ವಿದ್ಯುತ್ಕಾಂತ ವಿಕಿರಣ ಉತ್ಸರ್ಜಿತವಾಗುತ್ತದೆ.

ಫೋಟಾನುಗಳ ಸಮೂಹಗಳನ್ನು ಒಳಗೊಂಡಿರುವ ಕಿರಣಗಳೇ ವಿದ್ಯುತ್ಕಾಂತ ವಿಕಿರಣಗಳು. ಇವುಗಳ ಅಲೆಯುದ್ದದ ಅಥವಾ ಆವರ್ತಾಂಕದ ಆಧಾರದ ಮೇಲೆ ಇವನ್ನು ವಿಂಗಡಿಸಿ ಬೇರೆ ಬೇರೆ ಹೆಸರುಗಳನ್ನು ಕೊಡಲಾಗಿದೆ :

| ವಿಕಿರಣದ ಅಲೆಯುದ್ದ ($\overset{o}{A}$) | | ವಿಕಿರಣದ ಹೆಸರು |
|---|---|---|
| 8000 – 4000 | ... | ದೃಗ್ಗೋಚರ ಬೆಳಕು |
| 4000–100 | ... | ಅತಿನೇರಿಳೆ ವಿಕಿರಣ |
| 100–0,06 | ... | ಎಕ್ಸ್ ಕಿರಣಗಳು |
| 1–0.01 | ... | ಗ್ಯಾಮ ಕಿರಣಗಳು |

ಆದ್ದರಿಂದ ಕಣ್ಣಿಗೆ ಗೋಚರವಾಗುವ ಬೆಳಕು, ಅತಿನೇರಿಳೆ ವಿಕಿರಣ, ಸಂತತ ಎಕ್ಸ್‌ಕಿರಣಗಳು (ಕಂಟಿನ್ಯುಯಸ್ ಎಕ್ಸ್ ರೇಸ್) ಅಥವಾ ಬ್ರೆಮ್‌ಸ್ಟ್ರಾಲುಂಗ್ ಮತ್ತು ಗ್ಯಾಮಕಿರಣಗಳೆಲ್ಲವೂ ವಿದ್ಯುತ್ಕಾಂತ ವಿಕಿರಣಗಳು. ಬ್ರೆಮ್‌ಸ್ಟ್ರಾಲುಂಗ್ ಅಥವಾ ಸಂತತ ಎಕ್ಸ್‌ಕಿರಣಗಳು ಆವಿಷ್ಟ ಕಣ ಅಥವಾ ಅನಿರ್ಬಂಧಿತ ಎಲೆಕ್ಟ್ರಾನುಗಳ ವೇಗೋತ್ಕರ್ಷ ಇಲ್ಲವೇ ವೇಗಾಪಕರ್ಷದಿಂದ ಉದ್ಭವವಾಗುತ್ತವೆ. ಲಾಕ್ಷಣಿಕ (ಕ್ಯಾರೆಕ್ಟರಿಸ್ಟಿಕ್) ಎಕ್ಸ್‌ಕಿರಣಗಳು ಪರಮಾಣುವಿನ K, L, M.., ಕಕ್ಷಕಗಳಲ್ಲಿ ಉಂಟಾಗುವ ಎಲೆಕ್ಟ್ರಾನುಗಳ ಅಂತರನೆಗೆತದಿಂದ ಉತ್ಪತ್ತಿಯಾಗುತ್ತವೆ. ವಿನಾಶ ವಿಕಿರಣ (ಅನಿಹಿಲೇಷನ್) ಪಾಸಿಟ್ರಾನ್ ಮತ್ತು ಎಲೆಕ್ಟ್ರಾನುಗಳ ಸಂಯೋಗದಿಂದ (ಅಂದರೆ ವಿನಾಶದಿಂದ) ಉತ್ಪತ್ತಿಯಾಗುತ್ತದೆ. ಈ ಎಲ್ಲ ವಿಕಿರಣದ ಕ್ವಾಂಟಮಿನ ಶಕ್ತಿ $E = h\nu$ ಇಲ್ಲಿ $\nu$ ವಿಕಿರಣದ ಆವರ್ತಾಂಕ ಮತ್ತು h ಪ್ಲಾಂಕನ ನಿಯತಾಂಕ. ಈ ಎಲ್ಲ ವಿಕಿರಣದಲ್ಲಿನ ಫೋಟಾನುಗಳ ಪ್ರಕ್ರಿಯೆ ವಸ್ತುಗಳೊಂದಿಗೆ ನಡೆಯುವಾಗ ಫೋಟಾನುಗಳು ಹೊಂದಿರುವ ಶಕ್ತಿಯನ್ನು (ಆವರ್ತಾಂಕ ಅಥವಾ ಅಲೆಯುದ್ದ) ಗಣನೆಗೆ ತೆಗೆದುಕೊಳ್ಳಬೇಕೇ ವಿನಾ ಅವು ಉತ್ಪತ್ತಿಯಾದ ರೀತಿಯನ್ನಲ್ಲ. ಈ ಫೋಟಾನುಗಳು ಪಡೆದಿರುವ ಶಕ್ತಿಯ ಆಧಾರದ ಮೇಲೆ ಅವುಗಳ ಚದರಿಕೆ ಉಂಟಾಗುತ್ತದೆ. ಶಕ್ತಿಗೆ ಅನುಗುಣವಾಗಿ ವಿಂಗಡಿಸಿರುವ ಚದರಿಕೆಗಳು : 1. ರ್‍ಯಾಲೆ ಚದರಿಕೆ, 2. ಥಾಮ್ಸನ್ ಚದರಿಕೆ, 3. ಕಾಂಪ್ಟನ್ ಚದರಿಕೆ, 4. ಡೆಲ್‌ಬ್ರುಕ್ ಚದರಿಕೆ ಮತ್ತು 5. ನ್ಯೂಕ್ಲಿಯರ್ ಅನುರಣನ ಚದರಿಕೆ (ನ್ಯೂಕ್ಲಿಯಸಿನ ರೆಸೊನೆನ್ಸ್ ಸ್ಕ್ಯಾಟರಿಂಗ್).

ರ್‍ಯಾಲೇ ಚದರಿಕೆ : ದೃಗ್ಗೋಚರ ಬೆಳಕಿನ ಕಿರಣಗಳು ವಸ್ತುಮಾಧ್ಯಮದ ಮೂಲಕ ಹಾಯುವಾಗ ಚದರುತ್ತವೆ. ಕಿರಣಗಳ ಚದರಿಕೆ ಎರಡು ವಿಧದಲ್ಲಿ ಉಂಟಾಗಬಹುದೆಂದು ಊಹಿಸಲಾಗಿದೆ : (i) ಕಿರಣಗಳ ಯಾದೃಚ್ಛಿಕ (ರ್‍ಯಾಂಡಮ್) ಪ್ರತಿಫಲನದಿಂದ, ಅಂದರೆ ವಸ್ತುಮಾಧ್ಯಮದಲ್ಲಿರುವ ಸಣ್ಣ ಸಣ್ಣ ಕಣಗಳು ಸಣ್ಣ ದರ್ಪಣಗಳಂತೆ ವರ್ತಿಸಿ ಯಾದೃಚ್ಛಿಕ ಪ್ರತಿಫಲವನ್ನು ಉಂಟುಮಾಡಿ ಬೆಳಕಿನ ಕಿರಣಗಳನ್ನು ಚದರಿಸುತ್ತವೆ. ಈ ತರಹೆಯ ಚದರಿಕೆ ವಸ್ತುಮಾಧ್ಯಮದಲ್ಲಿರುವ ಕಣಗಳ ಗಾತ್ರ ವಿಕಿರಣದ ಅಲೆಯುದ್ದಕ್ಕಿಂತ ಜಾಸ್ತಿಯಿದ್ದಾಗ ಸಂಭವಿಸುತ್ತದೆ. (ii) ನಮನದಿಂದ (ಡಿಫ್ರ್ಯಾಕ್ಷನ್). ಅಂದರೆ ವಸ್ತುಮಾಧ್ಯಮದಲ್ಲಿರುವ ಪ್ರತಿಯೊಂದು ಕಣವೂ ಒಂದೊಂದು ವಿಕಿರಣಕೇಂದ್ರವಾಗಿ ಪರಿಣಮಿಸಿ ಬೆಳಕಿನ ಕಿರಣಗಳನ್ನು ಎಲ್ಲ ದಿಶೆಗಳಲ್ಲಿಯೂ ಚದರಿಸುತ್ತದೆ. ಇಂಥ ಚದರಿಕೆಯಲ್ಲಿ ಚದರಿಕೆಯ ಪರಿಮಾಣ ಬೆಳಕಿನ ಕಿರಣಗಳ ಆವರ್ತಾಂಕದ ನಾಲ್ಕನೆಯ ಘಾತದ ಅನುಪಾತದಲ್ಲಿರುವುದು. ಆದ್ದರಿಂದ ಅಧಿಕ ಅವರ್ತಾಂಕ ಬಣ್ಣಗಳು ಕಡಿಮೆ ಆವರ್ತಾಂಕದ ಬಣ್ಣಗಳಿಗಿಂತ ಹೆಚ್ಚು ಚದರುತ್ತವೆ. ಸೂರ್ಯನ ರಶ್ಮಿ ವಾಯುಮಂಡಲದ ಅಣುಗಳಿಂದ ಚದುರಿಸಲ್ಪಟ್ಟಾಗ ಅಧಿಕ ಆವರ್ತಾಂಕದ ನೀಲಿಬಣ್ಣ ಹೆಚ್ಚು ಚದರುವುದು ಆಕಾಶ ನೀಲಿಬಣ್ಣವಾಗಿ ಕಾಣಲು ಒಂದು ಕಾರಣವಿರಬಹುದು. ಬೆಳಕಿನ ಈ ಪರಿಣಾಮವನ್ನು ರ್‍ಯಾಲೆ ಮೊದಲಿಗೆ ವಿವರಿಸಿದ.

V ಗಾತ್ರವುಳ್ಳ ಚದರಿಸುವ ಕಣದಿಂದ ಚದರಿದ ಬೆಳಕಿನ ಪಾರ (ಆ್ಯಂಪ್ಲಿಟ್ಯೂಡ್) (ದೂರದಲ್ಲಿ) $a\,AV = /r\lambda^2$ ಎಂಬುದನ್ನು ಲಾರ್ಡ್ ರ್‍ಯಾಲೆ ತೋರಿಸಿದ. ಮೇಲಿನ ಸಮೀಕರಣದಲ್ಲಿ A ಪತನ ಬೆಳಕಿನ ಪಾರ, $\lambda$ ಬೆಳಕಿನ ಅಲೆಯುದ್ದ. ಬೆಳಕಿನ ತೀವ್ರತೆ (ಇಂಟೆನ್ಸಿಟಿ) ಪಾರದ ವರ್ಗಕ್ಕೆ ಅನುಪಾತೀಯವಾಗಿರುತ್ತದೆ. ಆದ್ದರಿಂದ ಚದರಿದ ಬೆಳಕಿನ ತೀವ್ರತೆ ಅಲೆಯುದ್ದದ ನಾಲ್ಕನೆಯ ಘಾತದ ವ್ಯಸ್ತಾನುಪಾತದಲ್ಲಿರುವುದು ಎಂಬುದನ್ನು ಮೇಲಿನ ಸಮೀಕರಣದಲ್ಲಿ ಗಮನಿಸಬಹುದು. ಆಕಾಶವು ನೀಲಿಯಾಗಿ ಕಾಣುವುದಕ್ಕೆ ರ್‍ಯಾಲೆ ಕಾರಣವನ್ನು ನೀಡಿದ್ದು ಇದರ ಸಹಾಯದಿಂದಲೇ. ಆತನ ಈ ಸಿದ್ಧಾಂತವನ್ನು ಟಿಂಡಾಲ್ ಎಂಬ ವಿಜ್ಞಾನಿ ಕೃತಕವಾಗಿ ಮೋಡಗಳನ್ನು ಉತ್ಪತ್ತಿಮಾಡಿ, ಅದರ ಮೂಲಕ ಬೆಳಕನ್ನು ಹಾಯಿಸಿ, ಪ್ರಾಯೋಗಿಕವಾಗಿ ಸ್ಥಿರಪಡಿಸಿದ **(ನೋಡಿ– ಟಿಂಡಾಲ್–ಪರಿಣಾಮ)**. ರ್‍ಯಾಲೆಯೇ ಮುಂದುವರಿದು, ಚದರದಿರುವ ಸೂರ್ಯನ ಬೆಳಕಿನ ರೋಹಿತವನ್ನೂ ವಾಯುಮಂಡಲದಿಂದ ಚದರಿದ ಬೆಳಕಿನ ರೋಹಿತವನ್ನೂ ಹೋಲಿಸಿ ನೋಡಿದ. ಅವೆರಡರಲ್ಲೂ ಬೆಳಕಿನ ಅಲೆಯುದ್ದದಲ್ಲಿ ಬದಲಾವಣೆ ಇರಲಿಲ್ಲ. ಆದ್ದರಿಂದ ಚದರಿಕೆಯ ಪರಿಣಾಮವಾಗಿ ಬೆಳಕಿನ ಅಲೆಯುದ್ದದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಆದರೆ ಬೆಳಕಿನ ತೀವ್ರತೆ ಮಾತ್ರ ವ್ಯತ್ಯಾಸ ಆಗುತ್ತದೆಂದು ಸ್ಪಷ್ಟಪಡಿಸಿದ. ಪಾರದರ್ಶಕ ಮಾಧ್ಯಮದ ಮೂಲಕ ಹಾದು ಚದರಿದ ಬೆಳಕಿನಲ್ಲಿ ಪತನ ಬೆಳಕಿನಲ್ಲಿಲ್ಲದ ಆವರ್ತಾಂಕ ಇದೆ ಎಂಬುದನ್ನು ಕ್ವಾಂಟಮ್ ಸಿದ್ಧಾಂತ ರೀತ್ಯಾ ಎ. ಸ್ಮೆಕಲ್ ಪ್ರತಿಪಾದಿಸಿದ (1923). ಬೆಳಕು ದ್ರವಗಳ ಮೂಲಕ ಹಾದು ಚದರಿದಾಗ ಪತನ ಬೆಳಕಿನಲ್ಲಿ ಇಲ್ಲದ ಆವರ್ತಾಂಕದ ವಿಕಿರಣ ಚದರಿದ ಬೆಳಕಿನಲ್ಲಿ ಇದೆ ಎನ್ನುವುದನ್ನು ಸಿ.ವಿ.ರಾಮನ್ ಪ್ರಾಯೋಗಿಕವಾಗಿ ತೋರಿಸಿದರು (1928). ಇದೇ ರಾಮನ್ ಪರಿಣಾಮ **(ನೋಡಿ)**. ಇದಾದ ಕೆಲವು ವಾರಗಳ ತರುವಾಯ, ಇದೇ ಪರಿಣಾಮ ಬೆಣಚು ಹರಳಿನಿಂದ ಬೆಳಕು ಚದರಿಸಲ್ಪಟ್ಟಾಗಲೂ ಉಂಟಾಗುವುದೆಂಬುದನ್ನು ಲ್ಯಾಂಡ್‌ಬರ್ಗ್ ಮತ್ತು ಮ್ಯಾಂಡಲ್ ಸ್ಟಾಮ್ ಪ್ರಚುರಪಡಿಸಿದರು.

ಬೆಳಕು ವಸ್ತುಮಾಧ್ಯಮದ ಮೂಲಕ ಹಾದು ಅದರಲ್ಲಿರುವ ಅಣುಗಳಿಂದ ಚದರಿಸಲ್ಪಡುತ್ತದೆ ಎಂದಿಟ್ಟುಕೊಳ್ಳೋಣ. ಚದರಿಕೆಯ ಮುನ್ನ ಅಣುವಿನ ಶಕ್ತಿಸ್ಥಿತಿ Ep ಮತ್ತು ಬೆಳಕಿನ ಕ್ವಾಂಟಮಿನ ಶಕ್ತಿ $hv$ ಆಗಿರಲಿ. ಚದರಿದ ಅನಂತರ ಅಣುವಿನ ಶಕ್ತಿಸ್ಥಿತಿಯಲ್ಲಿ ಬದಲಾವಣೆ ಉಂಟಾಗಿ ಅದು E ಆಗಿರಲಿ. ಶಕ್ತಿನಿತ್ಯತ್ವ ನಿಯಮದ ಪ್ರಕಾರ ಬೆಳಕಿನ ಕ್ವಾಂಟಮಿನ ಶಕ್ತಿಯಲ್ಲಿ ಬದಲಾವಣೆ ಉಂಟಾಗಲೇ ಬೇಕು. ಹೀಗೆ ಬದಲಾಯಿಸಿದ ಕ್ವಾಂಟಮಿನ ಶಕ್ತಿ $hv$ ಆಗಿರಲಿ. ಪುನಃ ಶಕ್ತಿನಿತ್ಯತ್ವ ನಿಯಮದ ಪ್ರಕಾರ ಚದರಿಕೆಯ ಮೊದಲಿನ ಶಕ್ತಿಮೊತ್ತ ಚದರಿಕೆಯ ತರುವಾಯದ ಶಕ್ತಿಮೊತ್ತಕ್ಕೆ ಸಮ.

ಆದ್ದರಿಂದ $E_P + hv = E_Q + hv'$

ಇಲ್ಲಿ $v$ ಮತ್ತು $v'$ ಗಳು ಚದರಿಕೆಯ ಮೊದಲಿನ ಮತ್ತು ತರುವಾಯದ ಬೆಳಕಿನ ಆವರ್ತಾಂಕಗಳು.

ಆದ್ದರಿಂದ ಚದರಿದ ಬೆಳಕಿನ ಆವರ್ತಾಂಕ

$$v' = v - \frac{E_Q - E_P}{h}$$

. ಈ ಸಮೀಕರಣದಿಂದ ಮೂರು ವಿಧವಾದ ಪರಿಣಾಮಗಳನ್ನು ಗಮನಿಸಬಹುದು.

1. $E_Q > E_P$ ಆದಾಗ $v' < v$ ಆಗುತ್ತದೆ. ಅಂದರೆ ಚದರಿದ ಬೆಳಕಿನ ಆವರ್ತಾಂಕ ಪತನ ಬೆಳಕಿನ ಆವರ್ತಾಂಕಕ್ಕಿಂತ ಕಡಿಮೆಯಿರುತ್ತದೆ. ಅಂದರೆ ಬೆಳಕಿನ ಕ್ವಾಂಟಮಿನ ಶಕ್ತಿಯನ್ನು ಅದು ಉದ್ರೇಕಗೊಳ್ಳಲು ಉಪಯೋಗಿಸಿಕೊಳ್ಳುತ್ತದೆ ಎಂದಾಯಿತು. ಹೀಗೆ ಅಣು ಉದ್ರೇಕಗೊಂಡು ಕೆಲವು ಕ್ಷಣದಲ್ಲಿಯೇ ಉನ್ನತ ಉದ್ದೀಪ್ತ ಸ್ಥಿತಿಯಿಂದ ಭೂಸ್ಥಿತಿಗೆ ಬರುತ್ತದೆ. ಆಗ ಕ್ವಾಂಟಮಿನಿಂದ ಪಡೆದ ಶಕ್ತಿಯನ್ನು ವಿಕಿರಣದ ರೂಪದಲ್ಲಿ ಉತ್ಸರ್ಜಿಸುತ್ತದೆ.

2. $E_Q < E_P$ ಆದಾಗ $v' > v$ ಆಗುತ್ತದೆ. ಅಂದರೆ ಚದರಿದ ಬೆಳಕಿನ ಆವರ್ತಾಂಕ ಪತನ ಬೆಳಕಿನ ಆವರ್ತಾಂಕಕ್ಕಿಂತ ಜಾಸ್ತಿ ಇರುವುದೆಂದಾಯಿತು. ಹೀಗಾಗಬೇಕಾದರೆ ಚದರಿಕೆಗಿಂತ ಮೊದಲು ಅಣು ಉನ್ನತ ಶಕ್ತಿಮಟ್ಟದಲ್ಲಿದ್ದು ಚದರಿಕೆಯ ವೇಳೆಯಲ್ಲಿ ಕೆಳಗಿನ ಶಕ್ತಿ ಮಟ್ಟಕ್ಕೆ ಬರುವಾಗ ಹೊರಬರುವ ಶಕ್ತಿಯನ್ನು ಕ್ವಾಂಟಮ್ ಪಡೆಯುತ್ತದೆ.

3. $E_Q = E_P$ ಆದಾಗ $v' = v$. ಅಂದರೆ ಚದರಿದ ಬೆಳಕಿನ ಕ್ವಾಂಟಮಿನ ಶಕ್ತಿಯಲ್ಲಿ ಯಾವ ಬದಲಾವಣೆಯೂ ಕಂಡುಬರುವುದಿಲ್ಲವೆಂದಾಯಿತು. ಈ ಪರಿಣಾಮವನ್ನು ರ‍್ಯಾಲೆ ಚದರಿಕೆ ಮತ್ತು ಥಾಮ್ಸನ್ ಚದರಿಕೆಗಳಲ್ಲಿ ಕಾಣುತ್ತೇವೆ.

ರ‍್ಯಾಲೆ ಚದರಿಕೆಯನ್ನು ಗಮನಿಸಿದಲ್ಲಿ ಫೋಟಾನುಗಳು ಪರಮಾಣು ಎಲೆಕ್ಟ್ರಾನ್ ಜೊತೆ ಪ್ರಕ್ರಿಯೆ ನಡೆಸುವುದರಿಂದ ಪುಟಿತ ಚದರಿಕೆಯುಂಟಾಗಿ ಚದರಿಕೆಯ ಕೋನ ಅತಿ ಚಿಕ್ಕದಾಗಿರುತ್ತದೆ. ತೂಕವಾದ ಧಾತುವಿನ ಪರಮಾಣುವಿನ ಖಂಡಿತ ಎಲೆಕ್ಟ್ರಾನುಗಳಲ್ಲೂ 0.1 MeV ಮತ್ತು ಹೆಚ್ಚಿನ ಶಕ್ತಿಯ ಪೋಟಾನುಗಳ ಚದರಿಕೆ ಉಂಟಾಗುತ್ತದೆ. ರ‍್ಯಾಲೆ ಚದರಿಕೆಯಲ್ಲಿ ಚದರಿದ ಫೋಟಾನುಗಳ ಶಕ್ತಿ ಚದರದಿರುವ ಫೋಟಾನುಗಳ ಶಕ್ತಿಗೆ ಸಮವಾಗಿರಬೇಕಾಗಿರುವುದರಿಂದ ಚದರಿಕೆಯ ವೇಳೆಯಲ್ಲಿ ಪರಮಾಣು ಉದ್ರೇಕಗೊಳ್ಳಬಾರದು ಅಥವಾ ಅಯಾನೀಕರಣಗೊಳ್ಳಬಾರದು. 60%-70% ಭಾಗ ರ‍್ಯಾಲೆ ಚದರಿಕೆಗಳಲ್ಲಿ ಚದರಿಕೆಯ ಕೋನ ಚಿಕ್ಕದಾಗಿದ್ದು ಈ ಕೆಳಗಿನಂತಿರುವವು :

| ವಸ್ತುಮಾಧ್ಯಮ | ಫೋಟಾನ್ | ಶಕ್ತಿ | (MeVಗಳಲ್ಲಿ) |
|---|---|---|---|
| | 0.1 | 1.0 | 10.0 |
| 1. ಅಲ್ಯೂಮಿನಿಯಮ್ | 15° | 2° | 0.5° |
| 2. ಕಬ್ಬಿಣ | 20⁰ | 3° | 0.8° |
| 3. ಸೀಸ | 30° | 4° | 1.0° |

ಚದರಿಕೆಯಿಂದ ಬೆಳಕಿನ ಧ್ರುವೀಕರಣ : ಒಂದು ಬೆಳಕಿನ ಅಲೆ ಪಾರದರ್ಶಕ ವಸ್ತುವಿನ ಮೇಲೆ ಪತನವಾದಾಗ ಆ ವಸ್ತುವಿನಲ್ಲಿರುವ ಎಲೆಕ್ಟ್ರಾನುಗಳು ಪತನ ಕಿರಣದ ವಿದ್ಯುತ್ ಸದಿಶಕ್ಕೆ ಅನುಗುಣವಾಗಿ ಆವರ್ತಿಸುತ್ತವೆ. ಮಾಧ್ಯಮದ ಮೂಲಕ ಹಾಯುವ ಅಲೆ ಪತನಅಲೆ ಮತ್ತು ಕಂಪಿಸುವ ಎಲೆಕ್ಟ್ರಾನಿನಿಂದ ಪ್ರಸರಿಸಿದ ವಿಕಿರಣಗಳ ಫಲಿತ. ಚದರಿದ ಕಿರಣಗಳ ತೀವ್ರತೆ ಪತನ ಕಿರಣದ ನೇರದಲ್ಲಿ ಅತ್ಯಧಿಕವಾಗಿರುತ್ತದೆ. ಅಕ್ಕಪಕ್ಕದ ಚದರಿಕೆ ಕಡಿಮೆ ಪರಿಮಾಣವುಳ್ಳದ್ದು. ಬೆಳಕು ಒಂದು ಅನಿಲದ ಮೂಲಕ ಹಾದಾಗ ಅದು ಪತನದಿಶೆಯಿಂದ ಬೇರೆ ದಿಶೆಯಲ್ಲಿ ಚದರುವುದನ್ನು ಕಾಣಬಹುದು. ಅಂದರೆ ಬೆಳಕು ಅಕ್ಕಪಕ್ಕಕ್ಕೆ ಹೆಚ್ಚಾಗಿ ಚದರುತ್ತದೆ. ಈ ಕ್ರಿಯೆಯಲ್ಲಿ ಕಂಪಿಸುವ ಪರಮಾಣು ಎಲೆಕ್ಟ್ರಾನುಗಳಿಗಿರುವ ಪರಸ್ಪರ ಅಂತರ ಘನವಸ್ತುವಿನ ಪರಮಾಣುಗಳಲ್ಲಿನ ಎಲೆಕ್ಟ್ರಾನುಗಳಿಗಿರುವ ಪರಸ್ಪರ ಅಂತರಕ್ಕಿಂತ ಹೆಚ್ಚಾಗಿರುವುದರಿಂದ ಅನಿಲದಲ್ಲಿ ಪರಮಾಣು ಎಲೆಕ್ಟ್ರಾನುಗಳು ಅನಿರ್ಬಂಧಿತ ಎಲೆಕ್ಟ್ರಾನುಗಳಂತೆ ವರ್ತಿಸಿ ಅಕ್ಕಪಕ್ಕದ ಚದರಿಕೆಯನ್ನು ಉಂಟು ಮಾಡುತ್ತವೆ. ಹೀಗೆ ಬೆಳಕು ಅನಿಲದಿಂದ ಚದರಿಸಲ್ಪಟ್ಟಾಗ ಪೂರ್ಣ ಅಥವಾ ಭಾಗಶಃ ಧ್ರುವೀಕೃತವಾಗುತ್ತದೆ. ಚಿತ್ರ 7ರಲ್ಲಿರುವಂತೆ ಅಧ್ರುವೀಕೃತ ಕಿರಣವೊಂದು ಚಿ ಯಲ್ಲಿರುವ ಪರಮಾಣುವಿನೊಂದಿಗೆ ಪ್ರಕ್ರಿಯೆ ನಡೆಸಿದಾಗ ಪರಮಾಣು ಎಲೆಕ್ಟ್ರಾನುಗಳು ಪತನ ಕಿರಣದಲ್ಲಿರುವ ವಿದ್ಯುತ್ ಅಂಗಕ್ಕೆ ಅನುಗುಣವಾಗಿ ಕಂಪಿಸುತ್ತವೆ; 2 ಮತ್ತು ಈ ಕಂಪನ ಎರಡು ಕಂಪಿಸುವ ದ್ವಿಧ್ರುವಗಳನ್ನು ಹೋಲುತ್ತದೆ. ಒಂದು ದ್ವಿಧ್ರುವದ ಕಂಪನಾಕ್ಷವನ್ನು ಬಾಣದ ಗುರುತಿನಿಂದಲೂ ಇನ್ನೊಂದು ಕಂಪನಾಕ್ಷವನ್ನು ಚುಕ್ಕಿಯಿಂದಲೂ a ಯಲ್ಲಿ ಪ್ರತಿನಿಧಿಸಿದೆ. ಯಾವುದೇ ದ್ವಿಧ್ರುವವೂ ಅದು ವರ್ತಿಸುವ ನೇರದಲ್ಲಿ ವಿಕಿರಣವನ್ನು ಪ್ರಸರಿಸುವುದಿಲ್ಲ. ಆದ್ದರಿಂದ a ಯಲ್ಲಿ ಬಾಣದ ಗುರುತಿನಿಂದ ಪ್ರತಿನಿಧಿಸಿರುವ ದ್ವಿಧ್ರುವದಿಂದ




ಚಿತ್ರ 7

ab ನೇರದಲ್ಲಿ ವಿಕಿರಣ ಪ್ರಸಾರವಾಗುವುದಿಲ್ಲ. ab ನೇರದಲ್ಲಿ ಬರುವ ವಿಕಿರಣವೆಲ್ಲ a ಯಲ್ಲಿ ಚುಕ್ಕಿಯಿಂದ ಪ್ರತಿನಿಧಿಸಿರುವ ದ್ವಿಧ್ರುವದಿಂದ ಮಾತ್ರವಾದ್ದರಿಂದ ab ನೇರದಲ್ಲಿ ಕಿರಣಗಳು ಸಮತಲ ಧ್ರುವೀಕೃತ (ಪ್ಲೇನ್ ಪೋಲರೈಸ್ಡ್) ಕಿರಣಗಳಾಗಿರುತ್ತವೆ. ಈ ಧ್ರುವಿಕಿರಣದ ಸಮತಲ a,b ಗಳ ಮೂಲಕ ಹಾದುಹೋಗುತ್ತದೆ ಮತ್ತು ಚಿತ್ರದ ತಲಕ್ಕೆ ಲಂಬವಾಗಿರುತ್ತದೆ. ac ಮತ್ತು ad ನೇರಗಳಲ್ಲಿ ಎರಡೂ ದ್ವಿಧ್ರುವಗಳಿಂದ ಸ್ವಲ್ಪ ಸ್ವಲ್ಪ ವಿಕಿರಣ ಪ್ರಸರಣವಾಗುವುದರಿಂದ ಆ ನೇರಗಳಲ್ಲಿ ಬೆಳಕು ಭಾಗಶಃ ಧ್ರುವೀಕೃತವಾಗಿರುತ್ತದೆ. ಪತನ ಬೆಳಕಿನ ನೇರದಲ್ಲಿ (ac) a ಯಲ್ಲಿರುವ ಎರಡೂ ದ್ವಿಧ್ರುವಗಳು ಸಮವಾದ ವಿಕಿರಣವನ್ನು ಪ್ರಸರಿಸುವುದರಿಂದ ಬೆಳಕಿನ ಧ್ರುವೀಕರಣ ಪರಿಣಾಮ ಕಂಡುಬರುವುದಿಲ್ಲ.

**ಗ್ಯಾಮಕಿರಣಗಳ ಚದರಿಕೆ :** ಗ್ಯಾಮಕಿರಣಗಳು ವಸ್ತುಮಾಧ್ಯಮದಿಂದ ಚದರುವ ಕ್ರಿಯೆಗಳಲ್ಲಿ ನಾಲ್ಕು ವಿಧಗಳಿವೆ :

1. ಪರಮಾಣು ಎಲೆಕ್ಟ್ರಾನಿನ ಜೊತೆ ಪ್ರಕ್ರಿಯೆ ನಡೆಸಿ ಚದರುವುದು– ಥಾಮ್ಸನ್ ಎಲೆಕ್ಟ್ರಾನ್ ಚದರಿಕೆ _ಪುಟಿತ ಚದರಿಕೆ.
2. ನ್ಯೂಕ್ಲಿಯಾನುಗಳ ಜೊತೆ ಪ್ರಕ್ರಿಯೆ ನಡೆಸಿ ಚದರುವುದು–ಥಾಮ್ಸನ್ ನ್ಯೂಕ್ಲಿಯಸ್ ಚದರಿಕೆ_ಪುಟಿತ ಚದರಿಕೆ.
3. ನ್ಯೂಕ್ಲಿಯಸಿನ ವಿದ್ಯುತ್ ಕ್ಷೇತ್ರದೊಂದಿಗೆ ಪ್ರಕ್ರಿಯೆ ನಡೆಸಿ ಚದರುವುದು_ಅಪುಟಿತ ಚದರಿಕೆ.
4. ನ್ಯೂಕ್ಲಿಯಸನ್ನು ಆವರಿಸಿರುವ ಮೆಸಾನ್ ಕ್ಷೇತ್ರದಿಂದ ಚದರುವುದು.

**ಥಾಮ್ಸನ್ ಎಲೆಕ್ಟ್ರಾನ್ ಚದರಿಕೆ :** ಗ್ಯಾಮಕಿರಣಗಳು ಪರಮಾಣುವಿನ ಜೊತೆ ಪ್ರಕ್ರಿಯೆ ನಡೆಸಿದಾಗ, ಗ್ಯಾಮ ಫೋಟಾನುಗಳ ಶಕ್ತಿ ಕಡಿಮೆಯಿದ್ದಾಗ, ಸುಲಭವಾಗಿ ಬಂಧಿತವಾಗಿರುವ ಎಲೆಕ್ಟ್ರಾನುಗಳು, ಫೋಟಾನನ್ನು ಚದರಿಸುತ್ತವೆ. ಇದು ಪುಟಿತ ಚದರಿಕೆ. ಜೆ.ಜೆ. ಥಾಮ್ಸನ್ (1856–1940) ಅಭಿಜಾತ ವಿದ್ಯುದ್ಗತಿಶಾಸ್ತ್ರ (ಕ್ಲ್ಯಾಸಿಕಲ್ ಎಲೆಕ್ಟ್ರೊಡೈನಮಿಕ್ಸ್) ರೀತ್ಯಾ ಪ್ರಾಥಮಿಕ ಎಕ್ಸ್‌ಕಿರಣಗಳು ತೆಳುವಾದ ತಾಟುಗಳ ಮೂಲಕ ಹಾಯುವಾಗ ಉಂಟಾಗುವ ಚದರಿಕೆಯನ್ನು ವಿವರಿಸಿದ. ಈ ಸಿದ್ಧಾಂತದ ಪ್ರಕಾರ ಆವಿಷ್ಟಕಣಗಳ ಮೇಲೆ ವಿಕಿರಣ ಪತನವಾದಾಗ ಅನಿರ್ಬಂಧಿತ ಅಥವಾ ಸುಲಭವಾಗಿ ಬಂಧಿತವಾಗಿರುವ ಕಣಗಳು

ವೇಗೋತ್ಕರ್ಷಗೊಂಡು ವಿದ್ಯುತ್ಕಾಂತ ವಿಕಿರಣವನ್ನು ಹೊರಸೂಸುತ್ತವೆ. ಈ ಕ್ರಿಯೆಯಲ್ಲಿ ಭಾರವಾದ ನ್ಯೂಕ್ಲಿಯಸಿಗೆ ಉಂಟಾಗುವ ವೇಗೋತ್ಕರ್ಷ ಕಡಿಮೆಯಾಗಿರುವುದರಿಂದ ಅದನ್ನು ಕಡೆಗಣಿಸಬಹುದು. ಪರಮಾಣು ಎಲೆಕ್ಟ್ರಾನುಗಳು ಗ್ಯಾಮ ಫೋಟಾನುಗಳ ಶಕ್ತಿಯನ್ನು ಹೀರಿಕೊಂಡು ಪುನಃ ವಿಕಿರಣ ಅಥವಾ ಚದರಿಕೆಯನ್ನು ಉಂಟುಮಾಡುತ್ತವೆ. ಇದಕ್ಕೆ ಥಾಮ್ಸನ್ ಎಲೆಕ್ಟ್ರಾನ್ ಚದರಿಕೆ ಎಂದು ಹೆಸರು. ಸಾಮಾನ್ಯ ಗಡಸು (ಮಾಡರೇಟ್ ಹಾರ್ಡ್) ಎಕ್ಸ್‌ಕಿರಣಗಳು ಕಡಿಮೆ ಪರಮಾಣು ತೂಕವುಳ್ಳ ವಸ್ತುಗಳಿಂದ ಚದರಿಸಲ್ಪಟ್ಟಾಗ ಚದರಿದ ಮತ್ತು ಪತನದಿಕ್ಕುಗಳಲ್ಲಿ ವ್ಯತ್ಯಾಸವುಂಟಾಗುತ್ತದೆಯೇ ವಿನಾ ಎಕ್ಸ್‌ಕಿರಣಗಳ ಅಲೆಯುದ್ದದಲ್ಲಿ ಯಾವ ವ್ಯತ್ಯಾಸವೂ ಉಂಟಾಗುವುದಿಲ್ಲ. ಥಾಮ್ಸನನ ಪ್ರಕಾರ, ಸಡಿಲವಾಗಿ ಬಂಧಿತವಾದ ಎಲೆಕ್ಟ್ರಾನಿನಿಂದ ಉಂಟಾದ ಶಕ್ತಿಯ ಚದರಿಕೆ.

$$I = \frac{8\pi}{3}\left(\frac{e^2}{mc^2}\right)^2 i_0$$

ಈ ಸಮೀಕರಣದಲ್ಲಿ $I_0$ ಎಂಬುದು ಶಕ್ತಿಯ ಏಕಮಾನ ಚದರ ಸೆಂ.ಮೀ. ನಲ್ಲಿ ಪತನ ವಿಕಿರಣದ ತೀವ್ರತೆ, $e$ ಎಲೆಕ್ಟ್ರಾನ್ ವಿದ್ಯುದಾವೇಶ. $m$ ಎಲೆಕ್ಟ್ರಾನ್ ದ್ರವ್ಯರಾಶಿ, $c$ ಬೆಳಕಿನ ವೇಗ, $I$ ಚದರಿದ ಒಟ್ಟು ಶಕ್ತಿ. $(I/I_0)$ ಸಲೆಯ ಆಯಾಮವನ್ನು ಹೊಂದಿದೆ. ಇದಕ್ಕೆ ಮುಕ್ತ ಎಲೆಕ್ಟ್ರಾನಿನ ಅಭಿಜಾತ ಚದರಿಕೆಯ ಗುಣಾಂಕ (ಕ್ಲ್ಯಾಸಿಕಲ್ ಸ್ಕ್ಯಾಟರಿಂಗ್ ಕೋಎಫಿಷಂಟ್ ಆಫ್ ಫ್ರೀ ಎಲೆಕ್ಟ್ರಾನ್) ಎಂದು ಹೆಸರು. ಕೆಲವು ಸಾರಿ $\Phi_0$ ಎಂದೂ ಇದನ್ನು ಸೂಚಿಸುವರು.

**ಥಾಮ್ಸನ್ ನ್ಯೂಕ್ಲಿಯಸಿನ ಚದರಿಕೆ :** ಗ್ಯಾಮ ಫೋಟಾನಿನ ಶಕ್ತಿ ಮೇಲೆ ಹೇಳಿರುವುದಕ್ಕಿಂತ ಸ್ವಲ್ಪ ಹೆಚ್ಚಿಗೆ ಇದ್ದು ಪರಮಾಣುವಿನ ಜೊತೆ ಪ್ರಕ್ರಿಯೆ ನಡೆಸಿದಾಗ, ಫೋಟಾನುಗಳು ನ್ಯೂಕ್ಲಿಯಸಿನಿಂದಲೂ ಚದರಿಸಲ್ಪಡುತ್ತವೆ. ಇದಕ್ಕೆ ಥಾಮ್ಸನ್ ನ್ಯೂಕ್ಲಿಯಸಿನ ಚದರಿಕೆ ಎಂದು ಹೆಸರು. ಇದು ಕೂಡ ಪುಟಿತ ಚದರಿಕೆಯಾದ್ದರಿಂದ ವಿಸರಣೆಯ ಅಲೆಯುದ್ದ ಚದರಿದ ತರುವಾಯವೂ ವ್ಯತ್ಯಾಸವಾಗುವುದಿಲ್ಲ. ಏಕ ಅಲೆಯುದ್ದವುಳ್ಳ ಎಕ್ಸ್‌ಕಿರಣಗಳು ಹಗುರವಾದ ಧಾತುಗಳಿಂದ ಚದರಿಸಲ್ಪಟ್ಟಾಗ ವಿಕಿರಣದಲ್ಲಿ ಎರಡು ಅಂಗಗಳಿದ್ದು ಒಂದು ಅಂಗದ ಅಲೆಯುದ್ದ ಮೂಲ ಕಿರಣಗಳ ಅಲೆಯುದ್ದದಷ್ಟೇ ಇದ್ದು ಇನ್ನೊಂದು ಅಂಗದ ಅಲೆಯುದ್ದ ಹೆಚ್ಚಿಗೆ ಇರುವುದನ್ನು ಎ.ಎಚ್. ಕಾಂಪ್ಟನ್ ತೋರಿಸಿದ (1923). **(ನೋಡಿ- ಕಾಂಪ್ಟನ್-ಪರಿಣಾಮ)**

**ಡೆಲ್‌ಬ್ರುಕ್ ಚದರಿಕೆ :** ನ್ಯೂಕ್ಲಿಯಸಿನ ಕೂಲಂಬ್ ಕ್ಷೇತ್ರದಿಂದ ಫೋಟಾನಿನ ಪುಟಿತ ಚದರಿಕೆ ಉಂಟಾಗುತ್ತದೆ. ನ್ಯೂಕ್ಲಿಯಸ್ ಕ್ಷೇತ್ರ ಮತ್ತು ಫೋಟಾನುಗಳಿಗೆ ಪ್ರಕ್ರಿಯೆ ಉಂಟಾದಾಗ ಮಿಥ್ಯಾ ಎಲೆಕ್ಟ್ರಾನ್-ಪಾಸಿಟ್ರಾನ್ ಜೋಡಿ ಉತ್ಪತ್ತಿಯಾಗುತ್ತದೆ. ತತ್‌ಕ್ಷಣವೇ




**ಚಿತ್ರ 8**

ಈ ಮಿಥ್ಯಾ ಜೋಡಿಕಣಗಳು ವಿನಾಶವಾಗಿ (ಅನಿಹಿಲೇಷನ್) ವಿಕಿರಣವನ್ನು ಹೊರ ಸೂಸುತ್ತವೆ. ಹೀಗೆ ಹೊರಬರುವ ವಿಕಿರಣದ ಅಲೆಯುದ್ದ ಪತನ ವಿಕಿರಣದ ಅಲೆಯುದ್ದಕ್ಕೆ ಸಮವಾಗಿರುತ್ತದೆ. ಈ ಚದರಿಕೆಯನ್ನು ಡೆಲ್‌ಬ್ರುಕ್ ಎಂಬ ವಿಜ್ಞಾನಿ ವಿವರಿಸಿದ್ದರಿಂದ ಇದಕ್ಕೆ ಡೆಲ್‌ಬ್ರುಕ್ ಚದರಿಕೆ ಎಂಬ ಹೆಸರುಂಟು. ನ್ಯೂಕ್ಲಿಯಸಿನ ಅನುರಣನ ಚದರಿಕೆ (ನ್ಯೂಕ್ಲಿಯರ್ ರೆಸೊನೆನ್ಸ್ ಸ್ಕ್ಯಾಟರಿಂಗ್) ; ಈ ವಿಧದ ಚದರಿಕೆಯಲ್ಲಿ ಪತನ ಫೋಟಾನ್ ನ್ಯೂಕ್ಲಿಯಸನ್ನು ಉದ್ರೇಕಗೊಳಿಸಿ ಉಚ್ಚಶಕ್ತಿ ಮಟ್ಟಕ್ಕೆ ಕಳುಹಿಸುತ್ತದೆ. ಉದ್ರೇಕಗೊಂಡ ನ್ಯೂಕ್ಲಿಯಸ್ ತತ್‌ಕ್ಷಣದಲ್ಲಿಯೇ ಉಚ್ಚಶಕ್ತಿಮಟ್ಟದಿಂದ ಮೊದಲಿನ ಶಕ್ತಿಮಟ್ಟಕ್ಕೆ ಬರುತ್ತದೆ. ಆಗ ಶಕ್ತಿ ಬಿಡುಗಡೆಯಾಗಿ ವಿಕಿರಣದ ರೂಪದಲ್ಲಿ ಹೊರಬರುವುದು. ಇದಕ್ಕೆ ನ್ಯೂಕ್ಲಿಯಸಿನ ಅನುರಣನ ಚದರಿಕೆ ಎಂದು ಹೆಸರು. ಈ ತರಹದ ಚದರಿಕೆಯನ್ನು ಅನೇಕ ಅನ್ವೇಷಣೆಯ ಬಳಿಕ ಕಂಡುಹಿಡಿಯಲಾಯಿತು. ನ್ಯೂಕ್ಲಿಯಸಿನ ಕೂಲಂಬ್ ಕ್ಷೇತ್ರದಿಂದ ಉಂಟಾಗುವ ವಿದ್ಯುತ್‌ಕಾಂತ ವಿಕಿರಣದ ಚದರಿಕೆ ಪ್ರಾಯೋಗಿಕ ದೃಷ್ಟಿಯಿಂದ ಅಲ್ಲದಿದ್ದರೂ ಸೈದ್ಧಾಂತಿಕ ದೃಷ್ಟಿಯಿಂದ ಪ್ರಾಮುಖ್ಯವಾದುದು. ಈ ಚದರಿಕೆಯ ಪರಿಮಾಣ ಚಿಕ್ಕದಾಗಿರುವುದರಿಂದ ಪ್ರಾಯೋಗಿಕವಾಗಿ ಇದನ್ನು ಗಮನಿಸುವುದು ಅತಿಶ್ರಮದ ಕೆಲಸ.

ಎಕ್ಸ್‌ಕಿರಣಗಳ ಇಮ್ಮಡಿ ಚದರಿಕೆ (ಡಬಲ್ ಸ್ಕ್ಯಾಟರಿಂಗ್): ಅಧ್ರುವೀಕೃತ ಎಕ್ಸ್‌ಕಿರಣಗಳು $P_l$ ಮೊದಲನೆಯ ಚದರಿಸುವ ವಸ್ತು $S_2$ನ್ನು ತಾಕಿದಾಗ ವಸ್ತುವಿನಲ್ಲಿರುವ ಎಲೆಕ್ಟ್ರಾನುಗಳು ಆವರ್ತಿಸುವಂತೆ ಮಾಡುತ್ತವೆ (ಚಿತ್ರ 8). ಆಗ ಪತನ ಎಕ್ಸ್‌ಕಿರಣಗಳಿಗೆ ಲಂಬನೇರದಲ್ಲಿ ಕಿರಣಗಳು ಚದರುತ್ತವೆ. ಇವು ಸಮತಲ ಧ್ರುವೀಕೃತ ಕಿರಣಗಳು. ಈ ಕಿರಣಗಳು $P_L$ ಎರಡನೆಯ ಚದರಿಸುವ ವಸ್ತು $S_2$ ರ ಕಡೆಗೆ ಚಲಿಸಿ ಪುನಃ ಎರಡನೆಯ ಚದರಿಸುವ ವಸ್ತುವಿನಿಂದ ಚದರಿಸಲ್ಪಡಲಿ. ಕಿರಣಗಳು $S_2$ ರಲ್ಲಿ ಚದರಿಸಲ್ಪಟ್ಟಾಗ ಚದರಿದ ವಿಕಿರಣದ ತೀವ್ರತೆ ಸಮತಲ ಧ್ರುವೀಕೃತ ಕಿರಣಗಳ ತಲಕ್ಕೆ ಲಂಬತಲದಲ್ಲಿ ಅತ್ಯಧಿಕವಾಗಿಯೂ ಚಿತ್ರದ ತಲಕ್ಕೆ ಲಂಬತಲದಲ್ಲಿ ಶೂನ್ಯವಾಗಿಯೂ ಇರುತ್ತದೆ. ಈ ಚದರಿಕೆಯ ಪ್ರಯೋಗದಿಂದ 1906ರಲ್ಲಿ ಚಾರ್ಲ್ಸ್ ಗ್ಲೋವರ್ ಬಾರ್ಕ್‌ಲಾ (1877-1940) ಎಂಬ ವಿಜ್ಞಾನಿ ಎಕ್ಸ್ ಕಿರಣಗಳು ಅಡ್ಡಲೆಗಳು ಮತ್ತು ಅವು ವಿದ್ಯುತ್ಕಾಂತ ರೋಹಿತದ ಭಾಗಗಳೆಂದು ಸ್ಪಷ್ಟಪಡಿಸಿದ. **(ಸಿ.ಟಿ.ಎಸ್.)**

**3. ಚದರಿಕೆಯ ಪ್ರಯೋಗಗಳು ನ್ಯೂಕ್ಲಿಯರ್ :** ಎಲೆಕ್ಟ್ರಾನ್, ನ್ಯೂಕ್ಲಿಯಾನ್, ಕಣ ಮತ್ತು ಮೇಸಾನುಗಳಂಥ ಕಣಗಳು ಪರಮಾಣು ನ್ಯೂಕ್ಲಿಯಸಿನೊಡನೆ ಸಂಘರ್ಷದಿಂದ ಪಥಭ್ರಷ್ಟಗೊಳ್ಳುವುದರ ಪರಿಶೀಲನೆ. ಚದರಿಸುವ ಕೇಂದ್ರಗಳನ್ನೂ ಅವುಗಳ ನಡುವಿನ ಬಲಗಳನ್ನೂ ಕುರಿತು ಅಪಾರ ಜ್ಞಾನ ಇಂಥ ಪ್ರಯೋಗಗಳಿಂದ ಲಭಿಸುತ್ತದೆ. ವಿಶಾಲ ದೃಷ್ಟಿಯಲ್ಲಿ ಸಮಸ್ತ ನ್ಯೂಕ್ಲಿಯರ್ ಪ್ರತಿಕ್ರಿಯೆಗಳೂ ಚದರಿಕೆಗೆ ಉದಾಹರಣೆಗಳು. ಆದರೆ ಪ್ರಸಕ್ತ ಲೇಖನದಲ್ಲಿ ವಿವರಣೆಯನ್ನು ಮೊದಲ ವಾಕ್ಯದಲ್ಲಿ ನೀಡಿರುವ ವ್ಯಾಖ್ಯೆಗೆ ಸೀಮಿತಗೊಳಿಸಿದೆ.

ಕಣಗಳು ತೆಳು ಲೋಹದ ತಗಡಿನಿಂದ ಹೇಗೆ ಚದರಿಸಲ್ಪಡುತ್ತವೆ ಎನ್ನುವುದನ್ನು ಮೊದಲಿಗೆ ಅರ್ನ್‌ಸ್ಟ್ ರುದರ್‌ಫರ್ಡ್ ಅವಲೋಕಿಸಿದಂದಿನಿಂದ (1911) ಇಂಥ ಪ್ರಯೋಗಗಳು ಬಹುಮುಖವಾಗಿ ಬೆಳೆದುಬಂದಿವೆ. ಪರಮಾಣುವಿನ ಮತ್ತು ನ್ಯೂಕ್ಲಿಯಸ್ಸಿನ ರಚನೆಗಳನ್ನೂ ಪ್ರೋಟಾನ್ ಮತ್ತು ನ್ಯೂಟ್ರಾನುಗಳ ಸ್ವರೂಪಗಳನ್ನೂ ಅರಿಯಲು ಚದರಿಕೆಯ ಪ್ರಯೋಗಗಳು ಬಳಕೆಯಲ್ಲಿವೆ. ಈ ಪ್ರಯೋಗಗಳಲ್ಲಿ ಅಳೆಯಬಹುದಾದ ಪರಿಮಾಣಗಳೆಂದರೆ

1. ಚದರಿಕೆಯ ಒಟ್ಟು ಅಡ್ಡಕೊಯ್ತ
2. ವಿಭೇದಕ ಅಡ್ಡಕೊಯ್ತ (ಡಿಫರೆನ್ಶಿಯಲ್ ಕ್ರಾಸ್ ಸೆಕ್ಷನ್)

ಒಂದು ನಿರ್ದಿಷ್ಟ ಸಂಘರ್ಷ ಪ್ರಕ್ರಿಯೆ (ಕೊಲಿಷನ್ ಪ್ರೋಸೆಸ್) ಸಂಭವಿಸುವ ಸಂಭಾವ್ಯತೆಯ (ಪ್ರಾಬಬಿಲಿಟಿ) ಮೇಲೆ ಅಡ್ಡಕೊಯ್ತದ ಪರಿಕಲ್ಪನೆ ಅವಲಂಬಿಸಿದೆ. ಲಕ್ಷ್ಯಪರಮಾಣುವಿನ (ಟಾರ್ಗೆಟ್ ಆ್ಯಟಮ್) ಪ್ರಭಾವದಿಂದ, ಪತನದಂಡದ (ಇನ್ಸಿಡೆಂಟ್ ಬೀಮ್) ಎಷ್ಟು ವಿಸ್ತೀರ್ಣದಲ್ಲಿ ಚದರಿಕೆಯ ಪ್ರಕ್ರಿಯೆಯನ್ನು ನಾವು ಕಾಣಬಲ್ಲೆವೋ ಅಷ್ಟು ವಿಸ್ತೀರ್ಣಕ್ಕೆ ಚದರಿಕೆಯ ಅಡ್ಡಕೊಯ್ತ (ಸ್ಕ್ಯಾಟರಿಂಗ್ ಕ್ರಾಸ್‌ಸೆಕ್ಷನ್) ಎಂದು ಹೆಸರು. ಇದು ಲಕ್ಷ್ಯ ಕಣದ ಭೌತಾಕಾರವನ್ನು ಅವಲಂಬಿಸಿಲ್ಲ. ಬದಲು ಅದು ಲಕ್ಷ್ಯ ಕಣದಿಂದ ಪತನ ಕಣದ ಮೇಲೆ ಪ್ರಯುಕ್ತವಾಗುವ ಬಲದ ಪರಿಮಾಣವನ್ನು ಪ್ರತಿನಿಧಿಸುವುದು.

$N$ ಕಣಗಳಿರುವ ಒಂದು ದಂಡವನ್ನು ದಪ್ಪ $t$ ಇರುವ ಹಾಗೂ ಏಕಮಾನ ಘನಗಾತ್ರಕ್ಕೆ $n$ ಕಣಗಳಿಂದ ಒಂದು ವಸ್ತುವಿನ ಮೂಲಕ ಹಾಯಿಸಿದಾಗ $N_S$ ಕಣಗಳು $\theta$ ಅಥವಾ ಅದಕ್ಕಿಂತ ಹೆಚ್ಚಿನ ಕೋನಕ್ಕೆ ಚದರಿಸಲ್ಪಟ್ಟರೆ ಆಗ ಚದರಿಕೆಯ ಅಡ್ಡಕೊಯ್ತ

$\sigma_S = \frac{N_S}{N_{nt}}$ ಆಗುತ್ತದೆ. ಇದನ್ನು ಅಳೆಯಲು ಬಳಸುವ ಏಕಮಾನದ ಹೆಸರು ಬಾರ್ನ್. ಇದರ ಬೆಲೆ $10^{-24}$ ಸೆಂ.ಮೀ. $^2$. ಈಗ ವಿಭೇದಕ ಚದರಿಕೆಯ ಅಡ್ಡಕೊಯ್ತ $d\sigma_S$; ಇದು $\theta$ ಮತ್ತು $\theta + d\theta$ ಕೋನದ ವ್ಯಾಪ್ತಿಯಲ್ಲಿ ಒಂದು ಕಣ ಚದರಿಸಲ್ಪಡುವ ಸಂಭಾವ್ಯತೆಯನ್ನು ಅಳೆಯುವುದು.

ಪುಟಿತ ಮತ್ತು ಅಪುಟಿತ ಚದರಿಕೆ : ಚದರಿಕೆಯ ಎರಡು ವಿಂಗಡಣೆಗಳಿವು ಪುಟಿತ ಚದರಿಕೆಯಲ್ಲಿ ಲಕ್ಷ್ಯ ಕಣ ಸಂಘರ್ಷಪೂರ್ವ ಆಂತರಿಕಸ್ಥಿತಿಯಲ್ಲೇ ಇರುತ್ತದೆ. ಅದು ಬಿಲಿಯರ್ಡ್ ಚೆಂಡಿನಂತೆ ಹಿಂದಕ್ಕೆ ಪುಟನೆಗೆಯುವುದು. ಅಪುಟಿತ ಚದರಿಕೆಯಲ್ಲಾದರೋ ಲಕ್ಷ್ಯ ಕಣ ವಿಘಟನೆಗೊಳ್ಳುವುದು (ಡಿಸ್‌ಇಂಟಿಗ್ರೇಟ್) ಇಲ್ಲವೇ ತನ್ನ ಮೊದಲಿನ ಸ್ಥಿತಿಗಿಂತ ಭಿನ್ನವಾದ ಸ್ಥಿತಿಗೆ ಏರಿಸಲ್ಪಡುವುದು.

ಸಂಸಕ್ತ ಮತ್ತು ಅಸಂಸಕ್ತ ಚದರಿಕೆ ; ಈ ರೀತಿಯಾಗಿ ಚದರಿಕೆಯನ್ನು ವಿಂಗಡಿಸುವುದು ಉಪಯುಕ್ತ. ಚದರಿಸಲ್ಪಟ್ಟ ದ ಬ್ರಾಗ್ಲೀ ಅಲೆಗೆ ಪತನ ಅಲೆಯೊಡನೆ ವ್ಯತಿಕರಣಗೊಳ್ಳುವ (ಇಂಟರ್‌ಫರೆನ್ಸ್) ಸಾಮರ್ಥ್ಯವಿದ್ದರೆ ಆ ಚದರಿಕೆಗೆ ಸಂಸಕ್ತ ಚದರಿಕೆ (ಕೊಹೆರೆಂಟ್ ಸ್ಕ್ಯಾಟರಿಂಗ್) ಎಂದೂ ಇಲ್ಲದಿದ್ದರೆ ಅದಕ್ಕೆ ಅಸಂಸಕ್ತ (ಇನ್‌ಕೊಹೆರೆಂಟ್) ಚದರಿಕೆ ಎಂದೂ ಹೆಸರು. ಅಪುಟಿತ ಚದರಿಕೆ ಯಾವಾಗಲೂ ಅಸಂಸಕ್ತ. ಪುಟಿತ ಚದರಿಕೆಯಾದರೋ ಅಸಂಸಕ್ತವಾಗಿರುವ ಸಂದರ್ಭವೂ ಉಂಟು.

ವಿಭವ ಪ್ರತಿರೂಪ (ಪೊಟೆನ್ಷಿಯಲ್ ಮಾಡೆಲ್) : ಚದರಿಕೆಯ ಪ್ರಯೋಗಗಳ ಸೈದ್ಧಾಂತಿಕ ವಿಶ್ಲೇಷಣೆಗಾಗಿ ಲಕ್ಷ್ಯ ಹಾಗೂ ವಿಕ್ಷೇಪಗಳ (ಟಾರ್ಗೆಟ್ ಅಂಡ್ ಪ್ರೊಜೆಕ್ಟೈಲ್ಸ್) ವಿಭವಶಕ್ತಿಯನ್ನು ವಿಭವ ಪ್ರತಿರೂಪಗಳ ಉಪಯೋಗದಿಂದ ಸಾಮಾನ್ಯವಾಗಿ ವಿವರಿಸುವುದುಂಟು. ಉದಾಹರಣೆಗೆ ವಿಭವ ಕೂಪ ಪ್ರತಿರೂಪ, ದ್ಯುತಿ ಪ್ರತಿರೂಪ, ಇತ್ಯಾದಿ.

ರುದರ್ಫರ್ಡನ ಪ್ರಯೋಗ : ಚದರಿಕೆಯ ಸಮಸ್ತ ಪ್ರಯೋಗಗಳೂ ಸರಿಸುಮಾರಾಗಿ ರುದರ್ಫರ್ಡನ ಮೂಲ ಪ್ರಯೋಗವನ್ನು ಹೋಲುತ್ತವೆ. ಈ ಪ್ರಯೋಗದಲ್ಲಿ ರುದರ್ಫರ್ಡ್ ಮತ್ತು ಸಹೋದ್ಯೋಗಿಗಳಾದ ಹ್ಯಾನ್ಸ್ ಗೈಗರ್ ಹಾಗೂ ಅರ್ನೆಸ್ಟ್ ಮಾರ್ಸ್‌ಡೆನ್ ಉಪಯೋಗಿಸಿದ ಉಪಕರಣವನ್ನು ಚಿತ್ರದಲ್ಲಿ ಕಾಣಿಸಿದೆ. ನಿರ್ವಾತ ಕೋಷ್ಠದಲ್ಲಿರಿಸಿದ




**ಚಿತ್ರ 9. ರುದರ್ಫರ್ಡ್ ಮತ್ತು ಆತನ ಸಹೋದ್ಯೋಗಿಗಳು ಉಪಯೋಗಿಸಿದ ಮೂಲ ಉಪಕರಣ : 1. ಸೂಕ್ಷ್ಮದರ್ಶಕ, 2. ಜಿಂಕ್ ಸಲ್ಫೈಡ್ ಪರದೆ, 3. ಲಕ್ಷ್ಯ ತಗಡು, 4. $\alpha$–ಕಣಗಳ ದಂಡ, 5. ಆಲ್ಫ ಕಣಗಳ ಆಕರ, 6. ಸೀಸದ ಪೆಟ್ಟಿಗೆ, 7. ತಿರುಗುವ ಜೋಡಣೆ, 8. ವಾಯುರೇಚಕಕ್ಕೆ**

ನೈಸರ್ಗಿಕ ಉತ್ಸರ್ಜಕದಿಂದ ಹೊರಸೂಸುವ $\alpha$ –ಕಣಗಳು ಸಮಾಂತರಕಾರಕವನ್ನು (ಕಾಲಿಮೇಟರ್) ಹಾದು ಲೋಹದ ತಗಡಿನ ಲಕ್ಷ್ಯವನ್ನು ಘಾತಿಸುತ್ತವೆ. ಲಕ್ಷ್ಯದ ಇನ್ನೊಂದು ಬದಿಯಲ್ಲಿ ಸ್ಫುರಣಶೀಲ ಸತುವಿನ ಸಲ್ಫೈಡ್ ಪರದೆ (ಸಿಂಟಿಲೇಂಟಿಂಗ್ ಜಿಂಕ್ ಸಲ್ಫೈಡ್ ಸ್ಕ್ರೀನ್) ಉಂಟು. ಈ ಪರದೆಯನ್ನು ಬೇರೆಬೇರೆ ಕೋನಗಳಿಗೆ ತಿರುಗಿಸಿ ಬೇರೆ ಬೇರೆ ಕೋನಗಳಿಗೆ ಚದರಿಸಲ್ಪಟ್ಟ ಕಣಗಳನ್ನು ಪಡೆಯಬಹುದು. ಅಲ್ಪ ಸಾಮರ್ಥ್ಯದ ಸೂಕ್ಷ್ಮದರ್ಶಕವೊಂದನ್ನು ಉಪಯೋಗಿಸಿ ಸ್ಫುರಣಗಳನ್ನು ಒಂದೊಂದರಂತೆ ಗಣಿಸಬಹುದು. ಹೀಗೆ ಪ್ರಯೋಗವನ್ನು ಮಾಡಿ ವೀಕ್ಷಣೆಗಳನ್ನು ಗಮನಿಸಿದಾಗ ಒಂದು ಹೊಸ ಸಂಗತಿ ತಿಳಿಯಿತು. ಚದರಿಕೆ ಕೋನವನ್ನು ಕುರಿತಂತೆ ಅಂದು ಪ್ರಚಲಿತವಿದ್ದ ಭಾವನೆಗಿಂತ ಅದೆಷ್ಟೊ ದೊಡ್ಡದಾದ ಕೋನಗಳಲ್ಲಿ $\alpha$ ಕಣಗಳು ಚದರುವುದು ವೇದ್ಯವಾಯಿತು. ಈ ಪ್ರಯೋಗದ ಆಧಾರದ ಮೇಲೆ ರುದರ್ಫರ್ಡ್‌ನು ಪರಮಾಣುವಿನ ರಚನೆಯನ್ನು ವಿವರಿಸಿದ; ಅದರ ಧನವಿದ್ಯುದಾವೇಶ ಒಂದು ಚಿಕ್ಕ ಕೇಂದ್ರದಲ್ಲಿ ಸಾರೀಕೃತವಾಗಿದೆ, ಇದರ ನಿಷ್ಪತ್ತಿಕಾರಿಕ (ಕಾಂಪೆನ್ಸೇಟಿಂಗ್) ಋಣವಿದ್ಯುದಾವೇಶ ಪರಮಾಣುವಿನ ತ್ರಿಜ್ಯಕ್ಕೆ ಸಮಾವಾದ ತ್ರಿಜ್ಯವಿರುವ ಗೋಳದಲ್ಲಿ ಹರಡಲ್ಪಟ್ಟಿದೆಯೆಂದೂ ರುದರ್ಫರ್ಡ್ ತೀರ್ಮಾನಿಸಿದ.; ಮತ್ತು ಒಂದು ಬಿಂದು –ವಿದ್ಯುದಾವೇಶ (ಪಾಯಿಂಟ್ ಚಾರ್ಜ್) ಇನ್ನೊಂದು ಬಿಂದು–ವಿದ್ಯುದಾವೇಶದಿಂದ




**ಚಿತ್ರ 10. ರುದರ್ಫರ್ಡನ ಚದರಿಕೆಯ ಸಾಂಕೇತಿಕ ಚಿತ್ರಣ**

ಚದುರಿಸಲ್ಪಡುವ ವಿದ್ಯಮಾನದ ಗಣಿತೀಯ ಸಿದ್ಧಾಂತವನ್ನು ಕೂಡ ಪಡೆದ. (ಚಿತ್ರ 10) ವಿದ್ಯುದಾವಿಷ್ಟಕಣಗಳೆರಡರ ನಡುವಿನ ಬಲವನ್ನು ಕೂಲಂಬ್ ನಿಯಮದಿಂದ ತಿಳಿಯಬಹುದು ಎಂದು ಭಾವಿಸಿಕೊಂಡು ಆ ನಿಯಮವನ್ನೂ ನ್ಯೂಟೋನಿಯನ್ ಚಲನನಿಯಮಗಳನ್ನೂ ಅಳವಡಿಸಿಕೊಂಡು ರುದರ್ಫರ್ಡ್ ಒಂದು ನಿರ್ದಿಷ್ಟ ಶಕ್ತಿಯ ಪತನಕಣ ಒಂದು ದತ್ತಕೋನಕ್ಕೆ ಚದರಿಸಲ್ಪಡುವ ಸಂಭಾವ್ಯತೆಯನ್ನು ನಿಷ್ಕರ್ಷಿಸಿದ.

ದ್ವಿಕಣ ವ್ಯವಸ್ಥೆಯಂಥ (ಟು–ಪಾರ್ಟಿಕಲ್ ಸಿಸ್ಟಮ್) ಸರಳ ನ್ಯೂಕ್ಲಿಯರ್ ವ್ಯವಸ್ಥೆಯನ್ನು ಅಧ್ಯಯಿಸುವುದರಿಂದ ನ್ಯೂಕ್ಲಿಯರ್ ಬಲದ ವಿಚಾರ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ಆದ್ದರಿಂದಲೇ ಪ್ರೋಟಾನಿನಿಂದ ನ್ಯೂಟ್ರಾನ್ ಮತ್ತು ಪ್ರೋಟಾನುಗಳ ಚದರಿಕೆ ನ್ಯೂಕ್ಲಿಯರ್ ಭೌತವಿಜ್ಞಾನದಲ್ಲಿ ಹೆಚ್ಚಿನ ಮಹತ್ತ್ವವನ್ನು ಪಡೆದಿದೆ.

**n-p ಚದರಿಕೆ (ಅಲ್ಪಶಕ್ತಿ):** ಪ್ರೋಟಾನಿನಿಂದ ನ್ಯೂಟ್ರಾನುಗಳ ಚದರಿಕೆ ಹೆಚ್ಚಿನ ಮಟ್ಟಿಗೆ ನ್ಯೂಟ್ರಾನ್ ಶಕ್ತಿಯನ್ನು ಅವಲಂಬಿಸಿದೆ. ಅಲ್ಪಶಕ್ತಿಯ n-p ಚದರಿಕೆಯನ್ನು ಎರಡು ವಿಭಾಗಗಳಲ್ಲಿ ಅಧ್ಯಯಿಸಬಹುದು. ಒಂದು $E_n$<1 e V, ಇನ್ನೊಂದು, 1eV<$E_n$ <10MeV. ನ್ಯೂಟ್ರಾನ್ ಶಕ್ತಿಯ (En) ಈ ಪರಿಮಿತಿಗಳನ್ನು ಮುಂದಿನಂತೆ ನಿಷ್ಕರ್ಷಿಸಬಹುದು. ಪ್ರೋಟಾನುಗಳು ಸದಾ ಅಣುವಿನಲ್ಲಿ ಬಂಧಿತವಾಗಿವೆ. ಆದರೆ ಈ ಆಣ್ವಕ ಬಂಧಕಶಕ್ತಿ (ಮಾಲಿಕ್ಯುಲರ್ ಬೈಡಿಂಗ್ ಎನರ್ಜಿ) ಅತ್ಯಲ್ಪ, ≈ 0.1eV. ಆದ್ದರಿಂದ ಪತನ ನ್ಯೂಟ್ರಾನ್ ಶಕ್ತಿ ಸಾಧಾರಣ 1eV ಗಿಂತ ಹೆಚ್ಚಿದ್ದಲ್ಲಿ ಪ್ರೋಟಾನುಗಳನ್ನು ಸ್ವತಂತ್ರವೆಂದು ತಿಳಿಯಬಹುದು. ಇದು ನ್ಯೂಟ್ರಾನಿನ ಶಕ್ತಿಗೆ ಒಂದು ಪರಿಮಿತಿಯನ್ನು ನಿರ್ಧರಿಸುತ್ತದೆ. ಒಂದು ದ್ರವ್ಯರಾಶಿಕೇಂದ್ರ ವ್ಯವಸ್ಥೆಯಲ್ಲಿ 10Me V ಶಕ್ತಿಗಿಂತ ಕೆಳಗೆ ನ್ಯೂಟ್ರಾನಿನ ಬ್ರಾಗ್ಲೀ ಅಲೆಯುದ್ದ ನ್ಯೂಕ್ಲಿಯರ್ ಬಲಗಳ ವ್ಯಾಪ್ತಿಗಿಂತ ವಿಸ್ತೃತವಾಗಿರುವುದು. ಆದ್ದರಿಂದ ಸೊನ್ನೆಗಿಂತ ಹೆಚ್ಚು ಕಕ್ಷಕ ಕೋನಸಂವೇಗವಿರುವ (ಆರ್ಬಿಟಲ್ ಆ್ಯಂಗ್ಯುಲರ್ ಮೊಮೆಂಟಮ್) ನ್ಯೂಟ್ರಾನುಗಳು ಪ್ರೋಟಾನಿನಿಂದ ಗಣನೀಯ ಪರಿಮಾಣದಲ್ಲಿ ಚದರಿಸಲ್ಪಡುವಷ್ಟು ಪ್ರೋಟಾನಿನ ಹತ್ತಿರ ಸರಿಯುವುದಿಲ್ಲ. ಹೀಗಾಗಿ l=0 ನ್ಯೂಟ್ರಾನುಗಳು ಮಾತ್ರ ಗಮನಾರ್ಹವಾಗಿ ಚದರಿಸಲ್ಪಡುತ್ತವೆ ಎಂದು ತಿಳಿಯಬೇಕಾದರೆ ನ್ಯೂಟ್ರಾನ್ ಶಕ್ತಿಯ ಉಚ್ಚ ಪರಿಮಿತಿ 10 MeV ಆಗಿರಬೇಕು.

l eV<$E_n$< 10 Me V ಶಕ್ತಿಪರಿಮಿತಿಯಲ್ಲಿ ಚದರಿಕೆ : ಭಾರ ಹೈಡ್ರೊಜನ್ನಿನ ನ್ಯೂಕ್ಲಿಯಸ್ ಆದ ಡ್ಯೂಟ್ರಾನ್ ಒಂದು ಪ್ರೋಟಾನ್ ಮತ್ತು ನ್ಯೂಟ್ರಾನಿನಿಂದ ರಚಿತವಾಗಿದೆಯೆಂದೂ ನ್ಯೂಟ್ರಾನ್ ಮತ್ತು ಪ್ರೋಟಾನುಗಳ ನಡುವಣ ಬಲದ ವ್ಯಾಪ್ತಿ ಅತಿ ಕಿರಿದು ಎಂದೂ ಭಾವಿಸಿ, ಜೊತೆಗೆ ಡ್ಯೂಟ್ರಾನಿನಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನುಗಳ ಬಂಧಕಶಕ್ತಿಯ ಅಳೆದ ಬೆಲೆಗಳನ್ನು ಉಪಯೋಗಿಸಿಕೊಂಡು, *n-p* ಚದರಿಕೆಯ ಅಡ್ಡಕೊಯ್ತವನ್ನು ಗಣಿಸಲಾಯಿತು. (2.33 ಬಾರ್ನುಗಳು ≤σΣ≤9.32 ಬಾರ್ನುಗಳು). ಆದರೆ ಡ್ಯೂಟ್ರಾನಿನ ಕಣಗಳ ನಡುವಿನ ಬಲವೇ ಸ್ವತಂತ್ರ ನ್ಯೂಟ್ರಾನ್ ಮತ್ತು ಪ್ರೋಟಾನುಗಳ ನಡುವೆಯೂ ವರ್ತಿಸುವುದೆಂದು ಭಾವಿಸಿ ಅಂದಾಜು ಮಾಡಿದ ತರುವಾಯದ n-p ಚದರಿಕೆಯ ಅಡ್ಡಕೊಯ್ತ ಪ್ರಾಯೋಗಿಕವಾಗಿ ಅಳೆದ ಅಡ್ಡಕೊಯ್ತಕ್ಕಿಂತ (σs=20.36±0.1

ಬಾರ್ನುಗಳು) ಬಲು ಕಡಿಮೆ. ಈ ಕೊರೆಯನ್ನು ಸರಿಪಡಿಸಲು. ಇ. ವಿಗ್ನರ್ ಎಂಬ ವಿಜ್ಞಾನಿ *n-p* ಅಂತರಕ್ರಿಯೆ ಆಂತರಿಕ ಗಿರಕಿಯನ್ನು (ಸ್ಪಿನ್) ಅವಲಂಬಿಸಿದೆ ಎಂಬ ಊಹೆಯನ್ನು ಮಂಡಿಸಿದ. ಪ್ರೋಟಾನ್ ಮತ್ತು ನ್ಯೂಟ್ರಾನುಗಳು $\frac{1}{2}$ ಆಂತರಿಕ ಗಿರಕಿಯನ್ನು (ಅಂದರೆ ಅವುಗಳ ನೈಜ ಕೋನಸಂವೇಗ $=\frac{1}{2}\frac{h}{2\pi}=\frac{\hbar}{2}$; ಇಲ್ಲಿ $h$ ಪ್ಲಾಂಕನ ನಿಯತಾಂಕ) ಪಡೆದಿರುವುದಿರಿಂದ ಈ ವಿವರಣೆ ಸಾಧ್ಯವಾಗಿದೆ. ಕ್ವಾಂಟಮ್ ಬಲವಿಜ್ಞಾನದ ಪ್ರಕಾರ ಎರಡು ಆಂತರಿಕ ಗಿರಕಿ S1 ಮತ್ತು S2 ಗಳು ಸದಿಶೀಯವಾಗಿ ಒಟ್ಟುಗೂಡಿದಾಗ ಫಲಿತ $s = s_1 + s_2$, $s_1 + s_2 -1$, ............... $s_1 - s_2$ 1 ಬೆಲೆಗಳನ್ನು ಮಾತ್ರ ಪಡೆಯಲು ಸಾಧ್ಯ. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಫಲಿತ ಆಂತರಿಕ ಗಿರಕಿ 0 ಅಥವಾ 1. ಮೊದಲನೆಯ ಸಂದರ್ಭಕ್ಕೆ ಏಕಕ (ಸಿಂಗ್ಲೆಟ್) ಸ್ಥಿತಿಯೆಂದೂ, ಎರಡನೆಯ ಸಂದರ್ಭಕ್ಕೆ ತ್ರಿಕ (ಟ್ರಿಪ್ಲೆಟ್) ಸ್ಥಿತಿಯೆಂದೂ ಹೆಸರು. ಹೇಗೆ ವೀಕ್ಷಿಸಿದರೂ ಒಂದೇ ತೆರನಾಗಿ ಕಾಣುವ ಸಮಗ್ರ ನುಣುಪಾದ ಗೋಳಾಕಾರದ ವಸ್ತುವಿನಂತೆ ಏಕಕಸ್ಥಿತಿ ವರ್ತಿಸುವುದರಿಂದ ಅದು S = 0 ಸ್ಥಿತಿಯೊಂದನ್ನು ಮಾತ್ರ ಉಂಟುಮಾಡುತ್ತದೆ. ಆದರೆ s=1 ಮೂರು ಬೇರೆ ಬೇರೆ ಆಂತರಿಕ ಗಿರಕಿ ದಿಶೆಗಳನ್ನು ಪಡೆದಿದೆ. ಆಕಾಶದಲ್ಲಿ (ಸ್ಪೇಸ್) ಆಯ್ದ ಒಂದು ನಿರ್ದಿಷ್ಟ ಅಕ್ಷದ ಮೇಲೆ ಇದರ ವಿಕ್ಷೇಪವನ್ನು ತೆಗೆದುಕೊಂಡರೆ ಅದು *?* ಮಾನದಲ್ಲಿ ಮೂರು ಬೆಲೆಗಳನ್ನು ಮಾತ್ರ ಕೊಡಬಲ್ಲುದು (1, 0,-1). ಯಾದೃಚ್ಛಿಕ ಆಂತರಿಕ ಗಿರಕಿದಿಶೆಯನ್ನು ಪಡೆದಿರುವ ನ್ಯೂಟ್ರಾನುಗಳು ಯಾದೃಚ್ಛಿಕ ಆಂತರಿಕ ಗಿರಕಿದಿಶೆಯನ್ನು ಪಡೆದಿರುವ ಪ್ರೋಟಾನುಗಳನ್ನು ಘಾತಿಸಿದಾಗ ತ್ರಿಕಸ್ಥಿತಿ ಏಕಕ ಸ್ಥಿತಿಗಿಂತ ಮೂರು ಪಾಲು ಹೆಚ್ಚಾಗುವುದು. ಆದ್ದರಿಂದ ಪೂರ್ಣ ಚದರಿಕೆ ಅಡ್ಡಕೊಯ್ತ

$$\sigma_{sc} = \frac{3}{4}\sigma_t + \frac{1}{4}\sigma_s$$

ಈ ಸೂತ್ರ ಪ್ರಾಯೋಗಿಕ ಅಡ್ಡಕೊಯ್ತಕ್ಕೆ ವಿವರಣೆಯನ್ನು ಕೊಡಬಲ್ಲುದು. ಆದ್ದರಿಂದ ನ್ಯೂಕ್ಲಿಯರ್ ಬಲ ಆಂತರಿಕ ಗಿರಕಿಯನ್ನು ಅವಲಂಬಿಸಿದೆ. ಎಂದರೆ ಅದು ಅಂತರಕ್ರಿಯೆ ಎಸಗುವ ಕಣಗಳ ಆಂತರಿಕ ಗಿರಕಿಯ ಪರಸ್ಪರ ದಿಶೆಯನ್ನು ಹೊಂದಿಕೊಂಡಿದೆ ಎಂದು ತಿಳಿದಹಾಗಾಯಿತು.

ಮಂದಗಾಮಿ ನ್ಯೂಟ್ರಾನಿನ ಸಂಸಕ್ತ ಚದರಿಕೆ (0.0008 eV<En< 0.0025 eV): ಒಂದೇ ನ್ಯೂಟ್ರಾನ್ ಅಲೆಯನ್ನು ಬಹಳ ಹತ್ತಿರವಿರುವ, ಅಂದರೆ ನ್ಯೂಟ್ರಾನಿನ ದ ಬ್ರಾಗ್ಲೀ ಅಲೆಯುದ್ದಕ್ಕಿಂತಲೂ ಹತ್ತಿರವಿರುವ, ಒಂದಕ್ಕಿಂತ ಹೆಚ್ಚು ಚದರಿಕೆಯ ಕೇಂದ್ರಗಳನ್ನು ಘಾತಿಸುವಂತೆ ಮಾಡಿದರೆ ಗಮನಾರ್ಹ ವ್ಯತಿಕರಣ ಪ್ರಯೋಗಗಳಂತೆ ಪ್ರತೀಕ್ಷಿಸಬಹುದು. ಆದರೆ ಪ್ರೋಟಾನುಗಳು ಸಾಧಾರಣವಾಗಿ $10^{-8}$ ಸೆ.ಮೀ.ನಷ್ಟು ದೂರ ವಿಯೋಜಿಸಲ್ಪಟ್ಟಿರುವುದರಿಂದ ವ್ಯತಿಕರಣ ಪರಿಣಾಮವನ್ನು ಅತಿಮಂದಗಾಮಿ ನ್ಯೂಟ್ರಾನಿನಿಂದ [0.0008 eV ( ~100 K) ಯಿಂದ 0.0025 eV (30°K) ಶಕ್ತಿ ಇರುವ] ಪಡೆಯಬಹುದು. ಈ ದಿಶೆಯಲ್ಲಿ ಮೊತ್ತಮೊದಲಿನ ಪ್ರಯೋಗವನ್ನು ಟೆಲ್ಲರ್ ಮತ್ತು ಶ್ವಿಂಗರ್ ಸೂಚಿಸಿದರು. ಇದರಲ್ಲಿ ನ್ಯೂಟ್ರಾನನ್ನು ಹೈಡ್ರೊಜನ್ನಿನ ಅಣುವಿನಿಂದ ಚದರಿಸಲಾಗುವುದು. ಹೈಡ್ರೊಜನ್ನಿನ ಅಣುವೊಂದು ಎರಡು ಭೂಸ್ಥಿತಿಗಳಲ್ಲಿ (ಗ್ರೌಂಡ್ ಸ್ಟೇಟ್) ಇರುವುದು ಸಾಧ್ಯ. ಒಂದು ಸ್ಥಿತಿಯಲ್ಲಿ ಎರಡು ಪ್ರೋಟಾನುಗಳ ಆಂತರಿಕ ಗಿರಕಿಗಳು ಸಮಾಂತರವಾಗಿರುವುವು (ಆರ್ಥೋ ಹೈಡ್ರೊಜನ್) : ಇನ್ನೊಂದು ಸ್ಥಿತಿಯಲ್ಲಿ ಪ್ರೋಟಾನುಗಳ ಆಂತರಿಕ ಗಿರಕಿ ಪ್ರತಿಸಮಾಂತರ (ಆ್ಯಂಟಿಪ್ಯಾರಲಲ್) ಆಗಿದೆ (ಪ್ಯಾರಹೈಡ್ರೊಜನ್). ಆರ್ಥೋ ಹೈಡ್ರೊಜನ್ನಿನ ಶಕ್ತಿ ಹೆಚ್ಚಾದರೂ ಪ್ಯಾರಹೈಡ್ರೊಜನ್ನಿಗೆ ಪರಿವರ್ತನೆ ಅತಿ ನಿಧಾನವಾಗಿ ನಡೆಯುತ್ತದೆ. ಸಾಮಾನ್ಯ ಉಷ್ಣತೆಯಲ್ಲಿ ಹೈಡ್ರೊಜನ್ನು ಇವೆರಡರ 3:1 ಪ್ರಮಾಣದ ಮಿಶ್ರಣ. ಅತಿನಿಮ್ನ ಉಷ್ಣತೆಯಲ್ಲಿ (≈20°)ನಮಗೆ ಬಲುಮಟ್ಟಿಗೆ ಶುದ್ಧ ಪ್ಯಾರಾಹೈಡ್ರೊಜನ್ ದೊರೆಯುತ್ತದೆ. 20°K ಯಲ್ಲಿ ನ್ಯೂಟ್ರಾನಿನ ದ ಬ್ರಾಗ್ಲೀ ಅಲೆಯುದ್ದ $\lambda = 7 \times 10\text{-}8$ ಸೆಂ.ಮೀ. ಇದು ಹೈಡ್ರೊಜನ್ನಿನ ಅಂತರ ಪರಮಾಣು ದೂರಕ್ಕಿಂತ (0.74 x 10-8 ಸೆಂ.ಮೀ.) ಗಮನಾರ್ಹವಾಗಿ ಹೆಚ್ಚು. ಆದ್ದರಿಂದ ನ್ಯೂಟ್ರಾನುಗಳು ಪ್ಯಾರಹೈಡ್ರೊಜನ್ನಿನಿಂದ ಚದರಿಸಲ್ಪಟ್ಟರೆ, ಅದರಲ್ಲಿರುವ ಎರಡು ಪ್ರೋಟಾನುಗಳಿಂದ ಚದರಿಸಲ್ಪಟ್ಟ ಅಲೆಗಳು ಸಂಸಕ್ತವಾಗಿವೆ. ಹೀಗಾಗಿ ಇಲ್ಲಿ ವ್ಯತಿಕರಣ ಪರಿಣಾಮವನ್ನು ನೋಡಬಹುದು. ಉನ್ನತ ಉಷ್ಣತೆಯಲ್ಲಿ ಹೈಡ್ರೊಜನ್ನಿನಿಂದ ಆಗುವ ನ್ಯೂಟ್ರಾನಿನ ಅಸಂಸಕ್ತ ಚದರಿಕೆಯ ಜ್ಞಾನವನ್ನು ಉಪಯೋಗಿಸಿಕೊಂಡು ಶುದ್ಧ ಆರ್ಥೋಹೈಡ್ರೊಜನ್ನಿನ ಫಲಿತಾಂಶಗಳನ್ನು ಪಡೆಯಬಹುದು. ಆರ್ಥೋ ಮತ್ತು ಪ್ಯಾರಹೈಡ್ರೊಜನ್ನಿನಿಂದ ಆಗುವ ನ್ಯೂಟ್ರಾನಿನ ಅಸಂಸಕ್ತ ಚದರಿಕೆಯ ಜ್ಞಾನವನ್ನು ಉಪಯೋಗಿಸಿಕೊಂಡು ಶುದ್ಧ ಆರ್ಥೋಹೈಡ್ರೊಜನ್ನಿನ ಫಲಿತಾಂಶಗಳನ್ನು ಪಡೆಯಬಹುದು. ಆರ್ಥೋ ಮತ್ತು ಪ್ಯಾರಹೈಡ್ರೊಜನ್ನಿನ ಫಲಿತಾಂಶಗಳು ತೀರ ಬೇರೆ ಬೇರೆ. ಏಕೆಂದರೆ ಪ್ಯಾರಹೈಡ್ರೊಜನ್ನಿನ ಚದರಿಕೆ ಒಂದು ಪ್ರೋಟಾನ್ನಿಗೆ ತ್ರಿಕವಾಗಿಯೂ ಇನ್ನೊಂದಕ್ಕೆ ಏಕಕವಾಗಿಯೂ ಉಂಟು; ಆದರೆ ಆರ್ಥೋ ಹೈಡ್ರೋಜನ್ನಿನಲ್ಲಿ ಅದು ಎರಡು ಪ್ರೋಟಾನುಗಳಿಗೂ ಏಕಕ ಇಲ್ಲವೇ ಅವೆರಡಕ್ಕೂ ತ್ರಿಕವಾಗಿ ಇದೆ. ವಿಗ್ನರನ ನ್ಯೂಟ್ರಾನ್–ಪ್ರೋಟಾನ್ ಬಲ ಆಂತರಿಕ ಗಿರಕಿಯನ್ನು ಅವಲಂಬಿಸಿದೆ ಎಂಬ ಊಹೆಯನ್ನು ನ್ಯೂಟ್ರಾನಿನ ಸಂಸಕ್ತ ಚದರಿಕೆ ಪ್ರಮಾಣೀಕರಿಸುವುದು. ಈಗ ವಿಗ್ನರನ ಊಹೆಯನ್ನು ಸಾಧಿಸಲು ಆರ್ಥೋಹೈಡ್ರೊಜನ್ನಿನ ಅಡ್ಡಕೊಯ್ತ ಪ್ಯಾರಹೈಡ್ರೊಜನ್ನಿನ ಅಡ್ಡಕೊಯ್ತಕ್ಕಿಂತ ಹೆಚ್ಚು ಎಂದು ತೋರಿಸಿದರೆ ಸಾಕು. ಅಂಥ ಪ್ರಯೋಗಗಳನ್ನು ಫಲಪ್ರದವಾಗಿ ಮಾಡಲಾಗಿದೆ. ಇಲ್ಲಿ ಹೈಡ್ರೊಜನ್ ಅನಿಲ ಲಕ್ಷ್ಯವನ್ನು ಒಂದು ನಳಿಗೆಯಲ್ಲಿ ದ್ರವ ಹೈಡ್ರೊಜನ್ ಉಷ್ಣತೆಯಲ್ಲಿ ಇರಿಸಲಾಗುವುದು. ಬೆರಿಲಿಯಮ್ ಲಕ್ಷ್ಯವನ್ನು ಸೈಕ್ಲೊಟ್ರಾನಿನ ಡ್ಯೂಟ್ರಾನಿನಿಂದ ಘಾತಿಸುವುದರ ಮೂಲಕ ಹೆಚ್ಚಿನ ಶಕ್ತಿಯ ನ್ಯೂಟ್ರಾನುಗಳನ್ನು ಪಡೆಯಲಾಗುತ್ತದೆ. ಈ ನ್ಯೂಟ್ರಾನುಗಳನ್ನು ದ್ರವವಾಯು ಉಷ್ಣತೆಯಲ್ಲಿ ತಂಪಾಗಿರಿಸಿದ ಪ್ಯಾರಫಿನ್ನಿನಿಂದ ಮಂದಗಾಮಿಗಳನ್ನಾಗಿ ಮಾಡಲಾಗುವುದು. ಹೀಗೆ ಮಾಡಿದಾಗ ದೊರೆತ ಫಲಿತಾಂಶಗಳು ಸೈದ್ಧಾಂತಿಕ ವಿವರಣೆಗೆ ಅನುಗುಣವಾಗಿಯೇ ಇವೆ.

σಆರ್ಥೋ = 128 ಬಾರ್ನುಗಳು

σಪ್ಯಾರ = 4 ಬಾರ್ನುಗಳು

ಹೈಡ್ರೊಜನ್ನಿನ ಪರಮಾಣುಗಳು ಜಾಲಕದಲ್ಲಿರುವ (ಲ್ಯಾಟಿಸ್) ಸ್ಫಟಿಕಗಳಿಂದ ಮಂದಗಾಮಿ ನ್ಯೂಟ್ರಾನುಗಳನ್ನು ಚದರಿಸುವ ವಿದ್ಯಮಾನ ಸಂಸಕ್ತ ಚದರಿಕೆಯನ್ನು ಅಧ್ಯಯಿಸಲು ಉಪಯುಕ್ತವಾದ ಇನ್ನೊಂದು ವಿಧಾನ.

p-p ಚದರಿಕೆ (ಅಲ್ಪಶಕ್ತಿ < 10 Mev) : ಸಾಧಾರಣ 10 Mev ಶಕ್ತಿ ಪ್ರೋಟಾನನ್ನು ಒಂದು ಭಾರವಾದ ನ್ಯೂಕ್ಲಿಯಸಿನಿಂದ ಬೇರ್ಪಡಿಸಲು ಬೇಕಾಗುವ ಶಕ್ತಿ. ಆದ್ದರಿಂದ ಎರಡು ಪ್ರೋಟಾನುಗಳ ನಡುವಣ ಬಲದ ಪ್ರಮುಖ ವೈಶಿಷ್ಟ್ಯಗಳಲ್ಲಿ ಹೆಚ್ಚಿನವು ಈ ಶಕ್ತಿಪ್ರಾಂತದಲ್ಲಿ (ಎನರ್ಜಿ ಡೋಮೇನ್) ಅಡಕವಾಗಿರಬೇಕು. ಆದ್ದರಿಂದ ಪ್ರೋಟಾನ್ ಶಕ್ತಿಗೆ 10 MeV ಶಕ್ತಿ ಉಚ್ಚಪರಿಮಿತಿ. p-p ಚದರಿಕೆ ಗಣಿತೀಯವಾಗಿ n-p ಚದರಿಕೆಗಿಂತ ಹೆಚ್ಚು ಕ್ಲಿಷ್ಟಕರವಾಗಿರಬೇಕು. ಏಕೆಂದರೆ (i) ಪ್ರೋಟಾನುಗಳ ವಿದ್ಯುದಾವೇಶಗಳಿಂದ ಆಗುವ ಕೂಲಂಬ್ ಚದರಿಕೆ ನ್ಯೂಕ್ಲಿಯರ್ ಚದರಿಕೆಯ ಮೇಲೆ ಹೊರಿಸಲ್ಪಟ್ಟಿದೆ ; (ii) ನಮ್ಮ ವ್ಯವಹಾರ ನಡೆಯುವುದು ಸರ್ವಸಮ (ಐಡೆಂಟಿಕಲ್) ಕಣಗಳೊಡನೆ.

ಉತ್ತಮವಾಗಿ ಸಮಾಂತರೀಕೃತವಾದ (ಕಾಲಿಮೇಟೆಡ್) ಏಕವರ್ಣೀ (ಮಾನೋಕ್ರೊಮ್ಯಾಟಿಕ್) ಪ್ರೋಟಾನ್ ದಂಡವನ್ನು ಸುಲಭವಾಗಿ ಪಡೆಯಬಹುದು ; ಅಲ್ಲದೆ ಚದರಿಸಲ್ಪಟ್ಟ ಪ್ರೋಟಾನುಗಳನ್ನು ಸುಲಭದಲ್ಲಿ ಅವುಗಳ ಅಯಾನೀಕರಣದಿಂದ ಪತ್ತೆ ಹಚ್ಚಬಹುದು. ಆದ್ದರಿಂದ p-p ಚದರಿಕೆಯನ್ನು n-p ಚದರಿಕೆಗಿಂತ ಹೆಚ್ಚಿನ ನಿಖರತೆಯಿಂದ ಅಳೆಯಬಹುದು. p-p ಮತ್ತು n-p ಏಕಕ ಅಂತರಕ್ರಿಯೆಯ ಪ್ರಾಚಲಗಳು (ಪ್ಯರಾಮೀಟರ್ಸ್) ಹೆಚ್ಚಿನಮಟ್ಟಿಗೆ ಸಮವಾಗಿವೆ ಎಂಬುದಾಗಿ p-p ಚದರಿಕೆಯ ಅಧ್ಯಯನ ತೋರಿಸಿತು. ಈ ಸಮತೆ ಒಂದು ಹೊಸ ಊಹೆಗೆ ಎಡೆಮಾಡಿಕೊಟ್ಟಿತು; p-p, p-n ಮತ್ತು n-n ಸಂದರ್ಭಗಳಲ್ಲಿ ಸ್ಥಿರ ವೈದ್ಯುತ ಕೂಲಂಬ್ ನಿರಾಕರಣ ಬಲದೊಡನೆ ಅನುಬಂಧವಾಗಿ (ಇನ್ ಅಡಿಷನ್) ವರ್ತಿಸುವ ನ್ಯೂಕ್ಲಿಯರ್ ಬಲ ಒಂದಕ್ಕೊಂದು ಸಮ ; ನ್ಯೂಕ್ಲಿಯರ್ ಬಲ ವಿದ್ಯುದಾವೇಶವನ್ನು ಅವಲಂಬಿಸಿಲ್ಲ ಎಂದು ಇದರ ಅರ್ಥ. ಪ್ರಾಯೋಗಿಕ ನಿಖರತೆಯ ಪರಿಮಿತ ಮತ್ತು ಸೈದ್ಧಾಂತಿಕ ವಿವರಣೆಯ ಅನಿಶ್ಚಿತತೆಗಳ ಪರಿಣಾಮವಾಗಿ ಈ ಊಹೆಯನ್ನು ಪೂರ್ಣ ನಿಖರತೆಯಿಂದ ಸ್ಥಾಪಿಸುವುದು ಸಾಧ್ಯವಾಗಿಲ್ಲ.

**ಅತಿಶಕ್ತಿ n-p ಮತ್ತು p-p ಚದರಿಕೆ :** ಅತಿಶಕ್ತಿಯ ಮೂಲ ನ್ಯೂಕ್ಲಿಯರ್ ಕಣಗಳ ಬೆದರಿಕೆ ನ್ಯೂಕ್ಲಿಯಾನುಗಳ ನಡುವಣ ಬಲದ ಸವಿವರ ಶೋಧನೆಗೆ ಒಂದು ಉತ್ಕೃಷ್ಟ ಸಾಧನ. ಅತಿಶಕ್ತಿ ವೇಗೋತ್ಕರ್ಷಕಗಳ (ಹೈ ಎನರ್ಜಿ ಆಕ್ಸಲರೇಟರ್ಸ್) ವಿಕಾಸದಿಂದ ನ್ಯೂಟ್ರಾನ್–ಪ್ರೋಟಾನ್ ಮತ್ತು ಪ್ರೋಟಾನ್–ಪ್ರೋಟಾನ್ ಚದರಿಕೆಯ ಶಕ್ತಿವ್ಯಾಪ್ತಿಯನ್ನು (ಅಂದರೆ ಅವುಗಳ ಸಾಪೇಕ್ಷ ಚಲನೆಯ ದ ಬಾಗ್ಲೀ ಅಲೆಯುದ್ದ) ನ್ಯೂಕ್ಲಿಯರ್ ಬಲದ ವ್ಯಾಪ್ತಿಗಿಂತಲೂ ಗಮನಾರ್ಹವಾಗಿ ಚಿಕ್ಕದಿರುವಂತೆ ಮಾಡಬಹುದಾಗಿದೆ. ಆದ್ದರಿಂದ ಅತಿಶಕ್ತಿ ಪ್ರಯೋಗಗಳು, ಅಂತರಕ್ರಿಯೆಯ ವಿವರ, ದೂರದ ಮೇಲೆ ಅದರ ಅವಲಂಬನೆ ಇತ್ಯಾದಿ ವಿಷಯಗಳ ಹೆಚ್ಚು ಸಂವೇದನಶೀಲ (ಸೆನ್ಸಿಟಿವ್) ಫಲಿತಾಂಶಗಳನ್ನು 10MeV ಶಕ್ತಿ ಪ್ರಯೋಗಗಳಿಗಿಂತ ಉತ್ತಮವಾಗಿ ಕೊಡಬಲ್ಲುವು. ಚಿತ್ರದಲ್ಲಿ ಚದರಿಕೆ ಪ್ರಯೋಗಗಳ ಫಲಿತಾಂಶಗಳನ್ನು ತೋರಿಸಿದೆ. ಸಾಧಾರಣ 14 MeV ನ್ಯೂಟ್ರಾನ್ ಶಕ್ತಿಯವರೆಗೆ ವಿಭೇದಕದ

ಅಡ್ಡಕೊಯ್ತ ಹೆಚ್ಚು ಕಡಿಮೆ ಸ್ಥಿರವೆಂದು ತಿಳಿದುಬರುವುದು. ಆದರೆ ಹೆಚ್ಚಿನ ಶಕ್ತಿಗಳಲ್ಲಿ ವಿಭೇದಕದ ಅಡ್ಡಕೊಯ್ತ (ದ್ರವ್ಯರಾಶಿ ಕೇಂದ್ರ ವ್ಯವಸ್ಥೆಯಲ್ಲಿ) $90^0$ ಯ ಹತ್ತಿರದಲ್ಲಿ ಕನಿಷ್ಠತಮವನ್ನು ತೋರಿಸುತ್ತದೆ. ನ್ಯೂಟ್ರಾನ್ ಶಕ್ತಿ ಹೆಚ್ಚಿದಂತೆ ಈ ಕನಿಷ್ಠತಮ ಹೆಚ್ಚು




ಚಿತ್ರ 11. *n-p* ಚದರಿಕೆಯಲ್ಲಿ ಪ್ರಾಯೋಗಿಕ ವಿಭೇದಕ ಅಡ್ಡಕೊಯ್ತ

ಹೆಚ್ಚು ಪ್ರಾಧಾನ್ಯ ಪಡೆಯುವುದು. ಇತ್ತೀಚಿನ ದ್ವಿ ಮತ್ತು ತ್ರಿ–ಚದರಿಕೆ ಪ್ರಯೋಗಗಳಿಂದ ನ್ಯೂಕ್ಲಿಯರ್ ಅಂತರಕ್ರಿಯೆಯ ಹೆಚ್ಚಿನ ವಿವರಗಳು ದೊರೆಯುತ್ತಿವೆ. ಅತಿಶಕ್ತಿ p-p




ಚಿತ್ರ 12. ಅತಿಶಕ್ತಿ *p-p* ಚದರಿಕೆಯಲ್ಲಿ ಪ್ರಾಯೋಗಿಕ ವಿಭೇದಕ ಅಡ್ಡಕೊಯ್ತ

ಚದರಿಕೆಯ ವಿಶ್ಲೇಷಣೆ ಅಷ್ಟೊಂದು ತೃಪ್ತಿದಾಯಕವಾಗಿಲ್ಲ. ಇಲ್ಲಿ ನಮ್ಮ ನಿರೀಕ್ಷಣೆಗೆ ವಿರುದ್ಧವಾಗಿ, ಕೂಲಂಬ್ ಚದರಿಕೆ ಪ್ರಧಾನವಾಗಿರುವ ಚಿಕ್ಕ ಕೋನ ಪ್ರಾಂತವನ್ನು ಹೊರತಾಗಿ ಕೋನೀಯ ಹಂಚಿಕೆ ಸಾಧಾರಣ 400MeV ಶಕ್ತಿಯವರೆಗೆ ಹೆಚ್ಚು ಕಡಿಮೆ ಸಮದೈಶಿಕ (ಐಸೋಟ್ರ್ಯಾಪಿಕ್) ಆಗಿದೆ ; ಅಂದರೆ ಅದು ಚದರಿಕೆ ಕೋನವನ್ನು ಅವಲಂಬಿಸಿಲ್ಲ ಚಿತ್ರ (12). ಒಟ್ಟು ಅಡ್ಡಕೊಯ್ತದ ಶಕ್ತ್ಯವಲಂಬನೆ ಇನ್ನಷ್ಟು ಸಮಸ್ಯಾತ್ಮಕವಾಗಿದೆ. **(ಚಿತ್ರ 13)**. 150 ರಿಂದ 400 MeV ವರೆಗೆ ಅದು ಹೆಚ್ಚು ಕಡಿಮೆ ಸ್ಥಿರವಾಗಿರುವುದು. ಈ ಪ್ರಾಯೋಗಿಕ ಫಲಿತಾಂಶಗಳ ವಿಶ್ಲೇಷಣೆಯನ್ನು ಅಲ್ಪಶಕ್ತಿಯ ಪ್ರಾಂತದ ವಿಶ್ಲೇಷಣೆಯಷ್ಟು ನಂಬುವುದು ಸಾಧ್ಯವಿಲ್ಲ. ಆದ್ದರಿಂದ ನ್ಯೂಕ್ಲಿಯರ್ ಬಲ ವಿದ್ಯುದಾವೇಶವನ್ನು ಅವಲಂಬಿಸಿಲ್ಲ ಎಂಬ ಊಹೆಯನ್ನು ಕೈಬಿಡುವುದು ಅವಶ್ಯವೆಂದೆನಿಸಿಲ್ಲ. ಅಂತರಕ್ರಿಯೆಯ ಅತ್ಯಲ್ಪ ದೂರಗಳಲ್ಲಿ ಪ್ರಬಲ ವಿಕರ್ಷಣೆಯ (ರಿಪಲ್ಸಿವ್) ಪ್ರಾಂತವೊಂದರ (ಹಾರ್ಡ್‌ಕೋರ್, ಅಂದರೆ ಕಠಿಣ ತಿರುಳು) ಇರುವಿಕೆಯ ಬಗ್ಗೆ ಪುರಾವೆಗಳು ದೊರೆತಿವೆ. ಪ್ರಾಯೋಗಿಕ ದತ್ತಾಂಶಗಳ ಸೈದ್ಧಾಂತಿಕ ವಿವರಣೆಗಳನ್ನು ಕೊಡಲು, ಕೆಲವು ವಿಜ್ಞಾನಿಗಳು, ಒಟ್ಟು ಆಂತರಿಕ ಗಿರಕಿ ಕಕ್ಷಕ ಕೋನ ಸಂವೇಗಗಳ ಮೇಲೆ ಅವಲಂಬಿಸಿರುವ ನ್ಯೂಕ್ಲಿಯರ್ ವಿಭವವನ್ನೂ, ಇನ್ನು ಕೆಲವು ವಿಜ್ಞಾನಿಗಳು, ಎರಡು ಚಿಕ್ಕ ಕಾಂತಗಳ ನಡುವೆ ಇರುವ ವಿಭವದ




ಚಿತ್ರ 13. ಅತಿಶಕ್ತಿ *n-p* ಮತ್ತು *p-p* ಚದರಿಕೆಯ ಪ್ರಾಯೋಗಿಕ ಒಟ್ಟು ಅಡ್ಡಕೊಯ್ತ

ಗಣಿತೀಯ ಸ್ವರೂಪದಂತಿರುವ ಟೆನ್ಸಾರ್ ವಿಭವವನ್ನೂ ಸೂಚಿಸಿದ್ದಾರೆ. 440MeV ಗಿಂತ ಹೆಚ್ಚಿನ ಶಕ್ತಿಯಲ್ಲಿ ಮೇಸಾನ್ ಉತ್ಪನ್ನ ಪ್ರಮುಖವಾದದ್ದು. ಈ ಪ್ರಯೋಗಗಳ ದತ್ತಾಂಶಗಳನ್ನು ಸಾಮಾನ್ಯವಾಗಿ ದೃಕ್‌ಪ್ರತಿರೂಪದಿಂದ ವಿವರಿಸುತ್ತಾರೆ.

**n-n ಚದರಿಕೆ :** ಇದನ್ನು ಕುರಿತ ಪ್ರಯೋಗಗಳು ವ್ಯಾವಹಾರಿಕ ದೃಷ್ಟಿಯಿಂದ ಸಾಧ್ಯವಲ್ಲದವು. ಏಕೆಂದರೆ ನಮಗೆ ದೊರೆಯುವ ಅತಿಸಾಂದ್ರ ನ್ಯೂಟ್ರಾನ್ ದಂಡದಲ್ಲಿನ ನ್ಯೂಟ್ರಾನ್ ಸಾಂದ್ರತೆ ಪ್ರಯೋಗಕ್ಕೆ ಅವಶ್ಯವಾದ ಸಾಂದ್ರತೆಗಿಂತ ಅದೆಷ್ಟೋ ಪಾಲು ಕಡಿಮೆ ಉಂಟು. ಆದರೂ ಹಾರ್ಟ್‌ಸಾಫ್, ಹಿಲ್ ಮತ್ತು ಪೊವೆಲ್ ಎಂಬ ವಿಜ್ಞಾನಿಗಳು ಮೇಘಮಂದಿರದ ಪ್ರಯೋಗವೊಂದನ್ನು ವಿವರಿಸಿದ್ದಾರೆ. ಇದರಲ್ಲಿ ಅತಿಶಕ್ತಿ ನ್ಯೂಟ್ರಾನಿನಿಂದ ಡ್ಯೂಟ್ರಾನನ್ನು ಘಾತಿಸಲಾಗುವುದು. ಇದು n-n ಚದರಿಕೆಯ ಒಟ್ಟು ಅಡ್ಡಕೊಯ್ತವನ್ನು $\sigma_{nn}$ ಕುರಿತಾದ ನೇರ ಮಾಹಿತಿಯನ್ನು ಕೊಡಲು ಶಕ್ತವಾಗಿದೆ. ಈ ಪ್ರಯೋಗಗಳ ದತ್ತಾಂಶಗಳು, ಸೈದ್ಧಾಂತಿಕವಾಗಿ ನಿರೀಕ್ಷಿಸಬಹುದಾದ p-p ಅಡ್ಡಕೊಯ್ತ ಮತ್ತು n-n ಅಡ್ಡಕೊಯ್ತದ ಸಮತೆಯ ಊಹೆಗೆ ಅನುಗುಣವಾಗಿವೆ.

**ಎಲೆಕ್ಟ್ರಾನ್–ನ್ಯೂಕ್ಲಿಯಾನ್ ಚದರಿಕೆ ಪ್ರಯೋಗಗಳು :** ನ್ಯೂಟ್ರಾನ್ ಮತ್ತು ಪ್ರೋಟಾನುಗಳೊಳಗಿನ ವಿದ್ಯುದಾವೇಶ ವಿತರಣೆ ಮತ್ತು ಕಾಂತಭ್ರಮಣಾಂಕದ ವಿತರಣೆಗಳನ್ನು ಅಧ್ಯಯಿಸಲು ಪ್ರಬಲ ಸಲಕರಣೆಗಳಿವು. ಹೈಡ್ರೋಜನ್ನಿನಿಂದ ಎಲೆಕ್ಟ್ರಾನುಗಳ ಚದರಿಕೆ ಎಲೆಕ್ಟ್ರಾನ್–ಪ್ರೋಟಾನುಗಳ ಅಂತರಕ್ರಿಯೆಯನ್ನು ಕುರಿತಾದ ಮಾಹಿತಿಗಳನ್ನು ಕೊಡಬಲ್ಲದು. ಪ್ರೋಟಾನಿನ ವಿದ್ಯುದಾವೇಶವೂ ನೈಜ ಕಾಂತಭ್ರಮಣಾಂಕವೂ ನಿರ್ದಿಷ್ಟಗಾತ್ರದಲ್ಲಿ ಹರಡಲ್ಪಟ್ಟಿವೆ ಎಂಬ ಮೂಲ ಪರಿಕಲ್ಪನೆಯನ್ನು ಈ ಚದರಿಕೆಯ ವಿಭೇದಕದ ಅಡ್ಡಕೊಯ್ತದ ವಿಚರಣೆಯ (ವೇರಿಯೇಷನ್) ಅಳತೆಗಳು ಮುಂದಿರಿಸುವಂತೆ ಮಾಡಿವೆ. ಈಗಿನ ಪ್ರಾಯೋಗಿಕ ದತ್ತಾಂಶಗಳು ಇವೆರಡರ ವಿತರಣೆಯ ಪ್ರತಿರೂಪಗಳು ಸದೃಶವಾಗಿವೆ ಎಂಬ ಊಹೆಯ ಕಡೆಗೆ ಒಲವನ್ನು ತೋರಿಸುತ್ತವೆ. ಈ ಪರಿಮಾಣಗಳ ಶೋಧನೆಗೆ ಉಪಯುಕ್ತವಾದ ಶಕ್ತಿ ಪ್ರಾಂತ 290–500 Me. V. ಇಂದಿನ ಪ್ರಯೋಗಗಳಿಂದ ಪ್ರೋಟಾನಿನ ಒಳಗಿರುವ ವಿದ್ಯುದಾವೇಶದ ವಿತರಣೆಯ ಸಂಪೂರ್ಣ ಜ್ಞಾನ ದೊರೆತಿದೆ ಎಂದೇನೂ ಹೇಳುವಂತಿಲ್ಲ. ಇತರ ಪ್ರಯೋಗಗಳಿಂದ ದೊರೆತ ಫಲಿತಾಂಶಗಳಂತೆಯೇ ಚದರಿಕೆಯ ಪ್ರಯೋಗಗಳು ಕೂಡ ನ್ಯೂಟ್ರಾನ್ ಆಕ್ರಮಿಸುವ ಗಾತ್ರದೊಳಗೆ ವಿದ್ಯುದಾವೇಶ ಸಾಂದ್ರತೆ ಇಲ್ಲವೆಂದು ತೋರಿಸುತ್ತವೆ. ಸ್ಟ್ಯಾನ್‌ಫರ್ಡ್ ಲೀನಿಯರ್ ಆ್ಯಕ್ಸಲರೇಟರ್ ಸೆಂಟರ್ ಎಂಬಲ್ಲಿ 21 BeV ಶಕ್ತಿಯ ಎಲೆಕ್ಟ್ರಾನುಗಳಿಂದ ಮಾಡಿದ ಇತ್ತೀಚಿನ ಶೋಧನೆಗಳಿಂದ ಪ್ರೋಟಾನ್ ಮತ್ತು ನ್ಯೂಟ್ರಾನಿನ ರಚನೆಯನ್ನು ಕುರಿತ ಮಹತ್ತ್ವದ ಸಂಗತಿಗಳು ಹೊರಬಂದಿವೆ. ಅತಿಶಕ್ತಿ ಎಲೆಕ್ಟ್ರಾನುಗಳು ಯಾರೂ ಪ್ರವಾದಿಸದ ರೀತಿಯಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳಿಂದ ಚದರಿಸಲ್ಪಟ್ಟುವು. ಈ ಚದರಿಕೆಗೆ ಫೈನ್‌ಮಾನ್ ಎಂಬ ವಿಜ್ಞಾನಿ ಒಂದು ವಿವರಣೆ

ನೀಡಿದ್ದಾನೆ : ಈಗ ಪಾರ್ಟೊನ್ ಎಂಬುದಾಗಿ ಹೆಸರಿಸಿರುವ, ಬಿಂದುಗಳಂತಿರುವ ಕಣಗಳಿಂದಾದ ಜಟಿಲ ಆಂತರಿಕ ರಚನೆಗಳು ನ್ಯೂಕ್ಲಿಯಾನುಗಳಿಗೆ ಇರಬಹುದು. ಈ ಮೊದಲೇ ಹೆಸರಿಸಲಾಗಿರುವ ಕ್ವಾರ್ಕುಗಳ (**ನೋಡಿ**) ಎಂಬ ಕಾಲ್ಪನಿಕ ಕಣಗಳಿಗೆ ಆರೋಪಿಸಿರುವ ಹಲವಾರು ಗುಣಗಳು ಪಾರ್ಟೊನುಗಳಿಗೂ ಇವೆ ಎಂದು ತಿಳಿದುಬಂದಿದೆ. ಈ ಪಾರ್ಟೊನ್ ಪ್ರತಿರೂಪ ಸದ್ಯಕ್ಕೆ ಅತಿಶಕ್ತಿ ಎಲೆಕ್ಟ್ರಾನ್–ನ್ಯೂಕ್ಲಿಯಾನುಗಳ ಚದರಿಕೆಯನ್ನು ಸೈದ್ಧಾಂತಿಕವಾಗಿ ವಿವರಿಸಬಲ್ಲುದಾದರೂ ಈ ಪ್ರತಿರೂಪ ನಮಗೆ ನ್ಯೂಕ್ಲಿಯಾನಿನ ರಚನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಬಲ್ಲುದೇ ಅಥವಾ ಬೇರೆ ಒಂದು ಊಹೆಯನ್ನು ಮಂಡಿಸಬೇಕಾದೀತೇ ಎಂಬುದನ್ನು ಕಾಲವೇ ನಿರ್ಧರಿಸಬೇಕಷ್ಟೆ.

ಮೇಸಾನ್– ನ್ಯೂಕ್ಲಿಯಾನ್ ಚದರಿಕೆ : ಪರಮಾಣು ಭೌತವಿಜ್ಞಾನದಲ್ಲಿ ಎಲೆಕ್ಟ್ರಾನು ಬೆಳಕಿನ ಚದರಿಕೆಯಲ್ಲಿ ಯಾವ ಪಾತ್ರ ವಹಿಸುವುದೋ ಅದೇ ಪಾತ್ರವನ್ನು ನ್ಯೂಕ್ಲಿಯರ್ ಭೌತವಿಜ್ಞಾನದಲ್ಲಿ ನ್ಯೂಕ್ಲಿಯಸ್ ಮೇಸಾನುಗಳ ಚದರಿಕೆಯಲ್ಲಿ ವಹಿಸುತ್ತದೆ. ಯೋಗ್ಯ ಲಕ್ಷ್ಯವನ್ನು (ಟಾರ್ಗೆಟ್)ಪ್ರೋಟಾನಿನಿಂದ ತಾಡಿಸಿ ಚದರಿಕೆಗೆ ಬೇಕಾದ π ಮೇಸಾನನ್ನು ಪಡೆಯಲಾಗುವುದು. ಹೈಡ್ರೋಜನ್ನಿನಿಂದ π ಮೇಸಾನಿನ ಚದರಿಕೆ ಮೇಸಾನ್ ಮತ್ತು ಪ್ರೋಟಾನುಗಳ ನಡುವಣ ಬಲವನ್ನು ಕುರಿತ ಮಾಹಿತಿಯನ್ನು ನೀಡುವುದು. ಇತರ ಮೆಸಾನುಗಳು ಉತ್ಪನ್ನವಾಗುವ ಶಕ್ತಿಗಿಂತ ಕೆಳಗಿನ ಶಕ್ತಿಗಳಲ್ಲಿ π+ ಮೇಸಾನುಗಳಿಂದ ಘಟಿತ ಚದರಿಕೆ ಮಾತ್ರ ಉಂಟಾಗುವುದು. ಆದರೆ π–ಮೇಸಾನುಗಳಿಗೆ ಎರಡು ವಿಧಾನಗಳು ಸಾಧ್ಯ.

$$\pi^- + P \rightarrow \pi^- + P$$

ಅಥವಾ

$$\pi^- + P \rightarrow \pi^o + N$$

ಮೊದಲನೆಯದು ಘಟಿತ ಚದರಿಕೆ. ಎರಡನೆಯದಕ್ಕೆ ವಿದ್ಯುದಾವೇಶ ವಿನಿಮಯ ಚದರಿಕೆ ಎಂದು ಹೆಸರು. ಇದರಲ್ಲಿ ಉತ್ಪನ್ನವಾಗುವ ಎರಡು ಕಣಗಳೂ ಶೋಧನೆಗೆ ಕಷ್ಟಕರವಾದ ವಿದ್ಯುದಾವೇಶರಹಿತ ಕಣಗಳಾದ್ದರಿಂದ ಇದೊಂದು ಕ್ಲಿಷ್ಟ ವಿಧಾನ. ಈ ಪ್ರಯೋಗಗಳ ವೃತ್ತಾಂತಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸಿ ನ್ಯೂಕ್ಲಿಯರ್ ಬಲವನ್ನು ಕುರಿತ ಉಪಯುಕ್ತ ಮಾಹಿತಿಗಳನ್ನು ಪಡೆಯಲಾಗಿದೆ. ಪ್ರಾಯೋಗಿಕವಾಗಿ ಒಂದು ಮೇಸಾನನ್ನು ಸ್ವತಂತ್ರವಾದ ಇನ್ನೊಂದು ಮೇಸಾನಿನಿಂದ ಚದರಿಸುವುದು ಸಾಧ್ಯವಿಲ್ಲ. κ-ಮೇಸಾನುಗಳು ನ್ಯೂಕ್ಲಿಯಾನುಗಳೊಡನೆ ಪ್ರಬಲವಾಗಿ ವರ್ತಿಸುವುವಾದರೂ ಅವುಗಳ ಪ್ರಯೋಗಗಳಿಂದ ದೊರೆತ ಫಲಿತಾಂಶಗಳು ಪೂರ್ಣಚಿತ್ರವನ್ನು ನೀಡುವುದಿಲ್ಲ.

ಮೂಲಭೂತಕಣ–ಪರಮಾಣು ನ್ಯೂಕ್ಲಿಯಸ್ ಚದರಿಕೆ : ಅತಿ ಸಂಕೀರ್ಣ ಧಾತುಗಳನ್ನು ಲಕ್ಷ್ಯಗಳನ್ನಾಗಿ ಉಪಯೋಗಿಸಿ ಅತಿಶಕ್ತಿ ಎಲೆಕ್ಟ್ರಾನ್, ಮೇಸಾನ್ ಮತ್ತು ನ್ಯೂಕ್ಲಿಯಾನ್‍ಗಳ ಚದರಿಕೆಯ ಹಲವು ಪ್ರಯೋಗಗಳನ್ನು ಮಾಡಲಾಗಿದೆ. ಹೆಚ್ಚಾಗಿ ಸ್ಫುರಣ ಗುಣಕಗಳನ್ನು (ಸಿಂಟಿಲೇಷನ್ ಕೌಂಟರ್ಸ್) ಚದರದ ಕಣಗಳ ಶೋಧನೆಗೆ ಉಪಯೋಗಿಸಲಾಗುವುದು. ಹಲವು ಸಂಕೀರ್ಣ ನ್ಯೂಕ್ಲಿಯಸುಗಳಿಂದ ಪ್ರೋಟಾನ್ ಮತ್ತು ನ್ಯೂಟ್ರಾನುಗಳ ಚದರಿಕೆಯ ಅಡ್ಡಕೊಯ್ತವನ್ನು ಅಳೆಯಲಾಗಿದೆ. ಚದರಿಕೆಯಿಂದ ಉಂಟಾದ ಧ್ರುವೀಕರಣದ ಅಳತೆಗಾಗಿ ದ್ವಿಚದರಿಕೆ (ಡಬಲ್ ಸ್ಕ್ಯಾಟರಿಂಗ್) ಪ್ರಯೋಗಗಳನ್ನು ಕೂಡ ಮಾಡಲಾಗಿದೆ. ಹೆಚ್ಚಿನ ಪ್ರಯೋಗಗಳನ್ನು ಸೈದ್ಧಾಂತಿಕವಾಗಿ ದ್ಯುತಿ ಪ್ರತಿರೂಪವನ್ನು ಉಪಯೋಗಿಸಿ ಸಫಲವಾಗಿ ನಿರ್ವಹಿಸಲಾಗಿದೆ. ಈ ಪ್ರತಿರೂಪಕ್ಕೆ ಮೇಘಸ್ಫಟಿಕ ಚಂಡು (ಕ್ಲೌಡ್ ಕ್ರಿಸ್ಟಲ್ ಬಾಲ್) ಎಂಬ ಹೆಸರುಂಟು.

ಎಲೆಕ್ಟ್ರಾನುಗಳು ನ್ಯೂಕ್ಲಿಯಸಿನ ವಿದ್ಯುದಾವೇಶದಿಂದ ಚದರಿಸಲ್ಪಡುತ್ತವೆ. ಆದ್ದರಿಂದ ಅವನ್ನು ನ್ಯೂಕ್ಲಿಯಸಿನ ಗಾತ್ರದೊಳಗೆ ವಿದ್ಯುದಾವೇಶದ ವಿತರಣೆಯನ್ನು ಕುರಿತ ಅಧ್ಯಯನ ಮಾಡಲು ಉಪಯೋಗಿಸಲಾಗಿದೆ. ಈಗ ನ್ಯೂಕ್ಲಿಯರ್ ವಿದ್ಯುದಾವೇಶ ಒಂದು ಬಿಂದುವಿನಲ್ಲಿ ಕೇಂದ್ರೀಕೃತವಾಗಿದ್ದ ಪಕ್ಷದಲ್ಲಿ ಎಲೆಕ್ಟ್ರಾನುಗಳು ರುದರ್ಫರ್ಡನ ಸರಳ ನಿಯಮದಂತೆ ಚದರಿಸಲ್ಪಡುತ್ತಿದ್ದುವು. ಆದರೆ ಪ್ರೋಟಾನುಗಳು, ಆದ್ದರಿಂದ ವಿದ್ಯುದಾವೇಶವೂ, ನ್ಯೂಕ್ಲಿಯಸಿನೊಳಗೆ ಹರಡಲ್ಪಟ್ಟಿರುವುದರಿಂದ ಈ ನಿಯಮದ ಪ್ರಕಾರ ವಿಚಲನೆ (ಡೀವಿಯೇಷನ್) ಆಗಿರುವುದು ಕಂಡುಬಂದಿದೆ. ಈ ವಿಚಲನೆಯನ್ನು ಅಳತೆಮಾಡಿ ವಿದ್ಯುದಾವೇಶದ ವಿತರಣೆಯನ್ನು ಕುರಿತ ಜ್ಞಾನವನ್ನು ಪಡೆಯಬಹುದು. ನ್ಯೂಟ್ರಾನ್ ಮತ್ತು ಪ್ರೋಟಾನುಗಳು ನ್ಯೂಕ್ಲಿಯಸ್ಸಿನಲ್ಲಿ ಸಮವಾಗಿ ಹಂಚಲ್ಪಟ್ಟಿದೆ ಎಂಬುದಾಗಿ ಕಲ್ಪಿಸಿ ನ್ಯೂಕ್ಲಿಯಸಿನ ಗಾತ್ರ ಮತ್ತು ಸಾಂದ್ರತೆಯ ವಿತರಣೆಯನ್ನು ಪಡೆಯಬಹುದು.

ಮೇಸಾನ್–ನ್ಯೂಕ್ಲಿಯಾನುಗಳ ಅಂತರಕ್ರಿಯೆಯನ್ನು ಕುರಿತಾದ ಶೋಧನೆಗೆ ಪರಮಾಣು ನ್ಯೂಕ್ಲಿಯಸಿನಿಂದ ಮೇಸಾನುಗಳ ಚದರಿಕೆ ಅತಿ ಸರಳವಿಧಾನ. ಆದ್ದರಿಂದ ಈ ಪ್ರಯೋಗಗಳಿಗೆ ಹೆಚ್ಚಿನ ಮಹತ್ವ ಉಂಟು. ಮೇಸಾನುಗಳೆಂದು ಕರೆಯಲಾಗುವ ಮೂರು ಕಣಗಳಲ್ಲಿ π,μ,κ ಮೇಸಾನ್) p ಮೇಸಾನ್ ಚದರಿಕೆಯನ್ನು ಹೆಚ್ಚು ಅಧ್ಯಯನ ಮಾಡಲಾಗಿದೆ. m ಮೇಸಾನ್ ಭಾರವಾದ ಒಂದು ಎಲೆಕ್ಟ್ರಾನಿನಂತೆ ಕಾಣುವುದರಿಂದ ಅದರಿಂದ ನಾವು ಅವಲೋಕಿಸುವ ಚದರಿಕೆ ಕೇವಲ ವಿದ್ಯುತ್ಕಾಂತೀಯ ಅಂತರಕ್ರಿಯೆಯಿಂದಾದದ್ದು. K ಮೇಸಾನುಗಳ ಚದರಿಕೆಯನ್ನು ಕುರಿತಾದ ಪ್ರಾಯೋಗಿಕ ಫಲಿತಾಂಶಗಳು ಒಂದು ನಿರ್ದಿಷ್ಟ ಚಿತ್ರಣವನ್ನು ಕೊಡುತ್ತಿಲ್ಲ. (ಐ.ವಿ.)

**ಚದರಿಸುವ ಸ್ತರಗಳು :** ಶಬ್ದದ ಅಲೆಗಳನ್ನು ಚದರಿಸಿ ಪ್ರತಿಫಲಿಸಬಲ್ಲ ಮತ್ತು ಸಮುದ್ರದ ನಿರ್ದಿಷ್ಟ ಆಳಗಳಲ್ಲಿ ಕಂಡು ಬರುವ ಜೀವಿಸಮೂಹಗಳು (ಸ್ಕ್ಯಾಟರಿಂಗ್ ಲೇಯರ್ಸ್). ಇವು ಪ್ರತಿಫಲಿಸಿದ ಶಬ್ದತರಂಗಗಳನ್ನು ಪ್ರತಿಧ್ವನಿ ಗ್ರಾಹಕ ಸಲಕರಣೆಗಳ ನೆರವಿನಿಂದ ವಿಶ್ಲೇಷಿಸಿ ನೋಡಿದಾಗ ಈ ಜೀವಿಸಮೂಹಗಳು ಸಮುದ್ರತಳದಿಂದ ಮೇಲುಗಡೆ ಹೆಚ್ಚು ಕಡಿಮೆ ಕ್ಷಿತಿಜೀಯವಾಗಿ ಒಂದು ಸ್ತರದಂತೆ ಹರಡಿಕೊಂಡಿರುವಂತೆ ಕಾಣುತ್ತದೆ. ಅದ್ದರಿಂದ ಅವಕ್ಕೆ ಈ ಹೆಸರು. ಈ ಜೀವಿಗಳು ಸಮುದ್ರದ ತೆಟ್ಟೆ (ಷ್ಯಾಲೊ)ಪ್ರದೇಶಗಳಲ್ಲೂ ಕಂಡುಬಂದಿವೆ; ಆಳವಾದ ಪ್ರದೇಶಗಳಲ್ಲೂ ಕಂಡುಬಂದಿವೆ. ಖಂಡಗಳ ಕರೆಯ ಸನಿಹದಲ್ಲಿ ಖಂಡೀಯ ಬಡು (ಕಾಂಟಿನೆಂಟಲ್ ಷೆಲ್ಫ್) ಇದೆಯಷ್ಟೆ. ಅದರ ಆಳ 200 ಮೀಟರಿಗೂ ಕಡಿಮೆ. ಈ ಪ್ರದೇಶಗಳಲ್ಲಿ ಚದರಿಸುವ ಜೀವಿಗಳು ಮತ್ತು ಜೀವಿಸಮೂಹಗಳು ಅಷ್ಟು ಕ್ರಮಬದ್ಧ ಸ್ತರವಾಗಿ ರೂಪುಗೊಂಡಿರುವುದಿಲ್ಲ. ಇನ್ನೂ ಆಳವಾದ ಪ್ರದೇಶಗಳಲ್ಲಿಯಾದರೋ ಜೀವಿಸಮೂಹಗಳ ಹಲವಾರು ನಿರ್ದಿಷ್ಟ ಸ್ತರಗಳನ್ನು ಗುರುತಿಸುವುದು ಸಾಧ್ಯವಾಗಿದೆ. 3 ರಿಂದ 60 KHZ ಆವರ್ತಾಂಕದ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪ್ರತಿಧ್ವನಿಗ್ರಾಹಕ ಸಲಕರಣೆಗಳಿಂದ ಅವನ್ನು ಗುರುತಿಸಬಹುದು. ಆಳ ಪ್ರದೇಶಗಳಲ್ಲಿರುವ ಈ ಸ್ತರಗಳು ಸಾಮಾನ್ಯವಾಗಿ ದ್ಯುತಿಸಾಂದ್ರತೆಯನ್ನು ಅವಲಂಬಿಸಿದಂತೆ ಕಡಿಮೆ ಆಳದಿಂದ ಹೆಚ್ಚು ಆಳಕ್ಕೂ ಹೆಚ್ಚು ಆಳದಿಂದ ಕಡಿಮೆ ಆಳಕ್ಕೂ ವಲಸೆ ಹೋಗುವುದುಂಟು. ಉದಾಹರಣೆಗೆ, ಹಗಲಿನಲ್ಲಿ 70 ರಿಂದ 1000 ಮೀ. ಆಳದಲ್ಲಿರುವ ಈ ಸ್ತರಗಳು ರಾತ್ರಿಯ ವೇಳೆಯಲ್ಲಿ ಸಮುದ್ರದ ಮೇಲ್ಮೈ ಸಮೀಪಕ್ಕೆ ವಲಸೆ ಬಂದುಬಿಡುತ್ತವೆ. ಬೆಳದಿಂಗಳ ರಾತ್ರಿ ಅಷ್ಟು ಮೇಲ್ಗಡೆಗೆ ಬರುವುದಿಲ್ಲ: ಮೋಡ ಕವಿದಂದು ಹಗಲಿನಲ್ಲಿ ಅಷ್ಟು ಆಳಕ್ಕೆ ಹೋಗುವುದಿಲ್ಲ.

ಅನೇಕ ಜಲಚರ ಪ್ರಾಣಿಗಳು ಮತ್ತು ಸಸ್ಯಗಳಿಗೆ ಅವು ತೇಲಲು ಅನುಕೂಲ ಮಾಡಿಕೊಡುವ ವಾಯುತುಂಬಿದ ಅಂಗಗಳಿರುವುದುಂಟು. ಈ ಅಂಗಗಳು ದೇಹದ ಇತರ ಭಾಗಗಳಿಗಿಂತ ಹೆಚ್ಚಾಗಿ ಶಬ್ದವನ್ನು ಚದರಿಸುತ್ತವೆ. ಚದರಿಸುವ ಸ್ತರಗಳು ಬಹುಮಟ್ಟಿಗೆ ಈ ಬಗೆಯ ಜೀವಿಗಳಿಂದ ಆದವು. (ಜೆ.ಆರ್.ಎಲ್.)

**ಚದುರಂಗ[1] :** ವಿಶಿಷ್ಟವಾದ ಹಾಸು ಮತ್ತು ಕಾಯಿಗಳನ್ನು ಉಪಯೋಗಿಸಿಕೊಂಡು ಇಬ್ಬರು ಕುಳಿತು ಆಡುವ ಒಂದು ಒಳಾಂಗಣ ಆಟ (ಚೆಸ್). ಹಿಂದಿಯಲ್ಲಿ ಇದನ್ನು ಶತರಂಜ್ ಎಂದೂ ಮರಾಠಿಯಲ್ಲಿ ಬುದ್ಧಿವಂತರ ಆಟ ಎಂತಲೂ ಕರೆಯುವರು. ಬಹು ಜಾಣತನದ ಆಟವಾದ್ದರಿಂದ ಇದನ್ನು ಕೇವಲ ಬುದ್ಧಿವಂತರ ಆಟವೆಂತಲೂ ರಾಜಮಹಾರಾಜರುಗಳಲ್ಲಿ ಪ್ರಚಲಿತವಿದ್ದ ಕಾರಣ ರಾಜಮಹಾರಾಜರ ಆಟವೆಂತಲೂ ಕರೆಯುವುದುಂಟು. ಈ ಆಟದ ತವರುಮನೆ ಭಾರತವೋ ಪರ್ಷಿಯವೋ ಎಂಬ ಬಗ್ಗೆ ವಿವಾದಗಳಿದ್ದರೂ 7ನೆಯ ಶತಮಾನದಲ್ಲಿ ಇಲ್ಲವೆ ಅದಕ್ಕೂ ಪೂರ್ವದಲ್ಲಿಯೇ ಭಾರತದಲ್ಲಿ ಈ ಆಟದ ಬಗ್ಗೆ ಇಂಗ್ಲಿಷಿನಲ್ಲಿ ಬಳಸುವ ಚೆಕ್‍ಮೇಟ್ (ಆಟದ ಅಂತ್ಯ) ಎಂಬ ಪದಕ್ಕೂ ಪರ್ಷಿಯದ ಶಾಹ್‍ಮತ್‍ಗೂ ಸಾಮ್ಯವನ್ನು ಕಾಣಬಹುದು. ಶಾಹ ಅಂದರೆ ದೊರೆ ಹಾಗೂ ಮತ್ ಎಂದರೆ ಮರಣ ಎಂದು ಅರ್ಥ. ನಿಯಮದ ಪ್ರಕಾರ ರಾಜನ ಸೆರೆಯಾಳ್ತನದಿಂದ ಆಟ ಕೊನೆಗೊಳ್ಳುವ ಬಗ್ಗೆ ಈ ಶಬ್ದ ಬಳಕೆಯಲ್ಲಿದೆ. ರಾಜಕಾರಣಕ್ಕೂ ಚದುರಂಗದ ಆಟಕ್ಕೂ ವಿಶೇಷ ಸಾಮ್ಯವಿದೆ. ಭಾರತೀಯ ಸಾಹಿತ್ಯದಲ್ಲಿ ಬರುವ ಚತುರಂಗ ಬಲದಿಂದ ಕೂಡಿದ ಇಬ್ಬರು ರಾಜರುಗಳ ನಡುವೆ ನಡೆಯುವ ಕಾಲ್ಪನಿಕ ಯುದ್ಧವೇ ಚದುರಂಗ. ದೊರೆ ಅಕ್ಬರ್ ಈ ಆಟಕ್ಕೆಂದೇ ಒಂದು ವಿಶೇಷ ಕೋಣೆಯನ್ನು ಕಟ್ಟಿಸಿ ಅಲ್ಲಿ ನಿರ್ಜೀವ ಕಾಯಿಗಳ ಬದಲಾಗಿ ಸ್ತ್ರೀ ಪುರುಷರನ್ನು ಕಾಯಿಗಳಂತೆ ಬಳಸಿ ಆಟವಾಡುತ್ತಿದ್ದನೆನ್ನಲಾಗಿದೆ. ಆತ ಹಾಗೆ ಉಪಯೋಗಿಸುತ್ತಿದ್ದ ಚದರಂಗದ ಹಾಸು ಇದ್ದ ಕೋಣೆಯನ್ನು ಇಂದಿಗೂ ಕಾಣಬಹುದು.

ಚದುರಂಗವನ್ನು ಕುರಿತ ಈ ಲೇಖನದ ವಿನ್ಯಾಸ ಹೀಗಿದೆ :

I ಚದುರಂಗದ ಆಟ

1. ಆಟವಾಡುವ ಹಾಸು
2. ಕಾಯಿಗಳು
3. ಸಂಕೇತಗಳು
4. ಆಟದ ಉದ್ದೇಶ
5. ಕಾಯಿಗಳ ಮೌಲ್ಯ
6. ಸಮವಾದ ಆಟಗಳು (ಡ್ರಾನ್ ಗೇಮ್ಸ್)

II ಆಟದ ನಿಯಮಗಳು
III ಇತಿಹಾಸ
1. ಚದುರಂಗದ ಮೂಲ
2. ಪ್ರಾಚೀನ ಮತ್ತು ಮಧ್ಯಯುಗ
3. ಆಟದ ಬೆಳವಣಿಗೆ
4. ಜಾಗತಿಕ ಶರ್ಯತ್ತು
5. ಫೆಡರೇಷನ್ ಇಂಟರ್‌ನ್ಯಾಷನಲ್ ಡಿ ಎಚೆಕ್
6. ಸಾಹಿತ್ಯ
IV ಆಟದ ಸಿದ್ಧಾಂತಗಳು
V ಆಟದ ನಿದರ್ಶನಗಳು
VI ಆಟದ ಕೆಲವು ಸಮಸ್ಯೆಗಳು

**1. ಚದುರಂಗದ ಆಟ :** 1. ಹಾಸು. ಇದು ಕ್ರಮಾಗತವಾಗಿ ಕಪ್ಪು-ಬಿಳುಪು ಬಣ್ಣಗಳಿಂದೊಡಗೂಡಿದ 64 ಮನೆಗಳುಳ್ಳ (ಚೌಕ) ಮಣೆ (ಬೋರ್ಡು). ಆಟಗಾರರಿಬ್ಬರೂ ಇದಿರು-ಬದಿರಾಗಿ ಕುಳಿತುಕೊಳ್ಳುವರು. ಕಪ್ಪುಬಣ್ಣದ ಕಾಯಿಗಳು ಒಬ್ಬನವಾದರೆ ಬಿಳಿಯವು ಇನ್ನೊಬ್ಬನವು. ಈ ಆಟವನ್ನು ಚಿತ್ರಗಳಲ್ಲಿ ಕಾಣಿಸುವಾಗ ಕಪ್ಪುಬಣ್ಣದ ಕಾಯಿಗಳ ಮೂಲಸ್ಥಾನವನ್ನು ಚಿತ್ರದ ಮೇಲ್ಭಾಗದಲ್ಲಿ ತೋರಿಸುವುದು ಪದ್ಧತಿ. ಪ್ರತಿ ಆಟಗಾರ ಬಲಬದಿಯ ಮೂಲೆಯ ತುದಿಯ ಚೌಕ ಬಿಳಿಯದಾಗಿರುವಂತೆ ಹಾಸನ್ನು ಇಟ್ಟುಕೊಳ್ಳಲಾಗುವುದು. ಪ್ರತಿ ಆಟಗಾರನ ಇದಿರು ಸಮಾಂತರವಾಗಿ ಅಡ್ಡಡ್ಡವಾಗಿರುವ ಎಂಟು ಸಾಲುಗಳನ್ನು ಅಂತಸ್ತುಗಳಾಗಿಯೂ (ರ್‍ಯಾಂಕ್ಸ್) ನೇರವಾಗಿರುವ ಎಂಟನ್ನು ಉದ್ದಸಾಲುಗಳಾಗಿಯೂ (ಫೈಲ್ಸ್) ಪರಿಗಣಿಸುವರು.



ಚಿತ್ರ 1. ಚದುರಂಗದ ಹಾಸು ಮತ್ತು ಕಾಯಿಗಳು

2. ಕಾಯಿಗಳು : ಚದುರಂಗದ ಕಾಯಿಗಳಲ್ಲಿ 500 ಕ್ಕಿಂತ ಹೆಚ್ಚು ನಮೂನೆಗಳನ್ನು ಕಾಣಬಹುದು. ಅವರವರ ಅಭಿರುಚಿಗೆ ತಕ್ಕಂತೆ ಇವುಗಳ ಆಕಾರ ಮತ್ತು ವರ್ಣನೆಯಲ್ಲಿ ಬದಲಾವಣೆ ಮಾಡಿಕೊಳ್ಳಲಾಗಿದೆ. ಯೂರೋಪಿನಲ್ಲಿ ಮೊದಮೊದಲು ಇದನ್ನು ಅತಿ ಉತ್ಕೃಷ್ಟವಾದ ಲೋಹವೆನಿಸಿದ ಬೆಳ್ಳಿ ಬಂಗಾರಗಳಿಂದ ಮಾಡಿ ರತ್ನದ ಕುಂದಣ ಕೂಡಿಸಿ, ರಾಜರಾಣಿ ಕಾಯಿಗಳಿಗೆ ದಿವ್ಯಾಂಬರಗಳ ತೊಡಿಗೆಯನ್ನು ಉಡಿಸುತ್ತಿದ್ದರು. 18ನೆಯ ಶತಮಾನದ ಕಾಲಕ್ಕೆ ಅಂದು ಪ್ರಸಿದ್ಧವಾದ ಯಾವುದೇ ಎರಡು ವಿರೋಧಿಗಳ ಗುಂಪನ್ನು ಪ್ರತಿನಿಧಿಸುತ್ತಿರುವಂತೆ ಕಾಯಿಗಳ ಅಲಂಕಾರವಿರುತ್ತಿತ್ತು. 1830ರ ವರೆಗೆ ಆ ಕಾಲದ ಹಿಂದೂಸ್ಥಾನದ ಸಾಮ್ರಾಜ್ಯಶಾಹಿಯನ್ನೂ ಈಸ್ಟ್ ಇಂಡಿಯಾ ಕಂಪನಿಯನ್ನೂ ಪ್ರತಿನಿಧಿಸುವಂತೆ ಕಾಣುವ ಅಲಂಕಾರಗಳಿದ್ದ ಕೆಂಪು ಹಾಗೂ ಬಿಳಿ ವರ್ಣದ ಕಾಯಿಗಳನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಂಡಿತು. ಕಲ್ಪನೆಗೆ ನಿಲುಕಬಹುದಾದ ಎಲ್ಲ ರೀತಿಯ ಅಲಂಕಾರಗಳನ್ನು ಹೊತ್ತುಕೊಂಡು ಚದುರಂಗದ ಕಾಯಿಗಳು ಶೋಭಿಸತೊಡಗಿದುವು.

ಚದುರಂಗ ಹೆಚ್ಚೆಚ್ಚು ಜನಪ್ರಿಯವಾದಂತೆ, ಕಡಿಮೆ ಅಲಂಕಾರವುಳ್ಳ ಕಾಯಿಗಳ ಬೇಡಿಕೆ ಹೆಚ್ಚಾಯಿತು. ಈಗ ಸಾಮಾನ್ಯವಾಗಿ ಬಳಕೆಯಲ್ಲಿರುವ ಕಾಯಿಗಳನ್ನು (ಸ್ಟಾನ್‌ರಾನ್ ಪೀಸಸ್) 20ನೆಯ ಶತಮಾನದ ಮನೋಭಾವಕ್ಕೆ ತಕ್ಕಂತೆ ತಯಾರಿಸಿ ಅಳವಡಿಸಲಾಗಿದೆ.

ಈಗ ಪ್ರತಿ ಆಟಗಾರನ ಕಡೆಗೂ 16 ಕಾಯಿಗಳಿರುತ್ತವೆ. ಆಟದ ಪ್ರಾರಂಭದಲ್ಲಿ ಚಿತ್ರದಲ್ಲಿ ತೋರಿಸಿದಂತೆ ಕಾಯಿಗಳನ್ನು ಅವುಗಳ ಸ್ಥಾನದಲ್ಲಿಡಲಾಗಿರುತ್ತದೆ. ಕಾಯಿಗಳು ಅವುಗಳ ಆಕಾರಕ್ಕೆ ತಕ್ಕಂತೆ ಆರು ಜಾತಿಯವುಗಳಾಗಿ ವಿಂಗಡಿಸಲ್ಪಡುತ್ತವೆ ; ಕಿಂಗ್, ಕ್ವೀನ್, ರೂಕ್, ಬಿಷಪ್, ನೈಟ್, ಪಾನ್. ಭಾರತೀಯ ಪದ್ಧತಿಯಂತೆ ಇವನ್ನು ಅನುಕ್ರಮವಾಗಿ ರಾಜ, ಮಂತ್ರಿ, ಆನೆ (ಕೋಟೆ), ಒಂಟೆ, ಕುದುರೆ, ಪ್ಯಾದೆ(ಕಾಲಾಳು) ಎಂಬುದಾಗಿ ಕರೆಯುವರು.

ಚಿತ್ರ 2. ಭಾರತೀಯ ಚದುರಂಗದ ಕಾಯಿಗಳು. ದಂತದ ಈ ಕಾಯಿಗಳಿಗೆ ಬಣ್ಣ ಹಾಕಲಾಗಿದೆ. ಸು. 1830. ಈಸ್ಟ್ ಇಂಡಿಯ ಕಂಪನಿ ಮತ್ತು ಭಾರತೀಯರನ್ನು ಪ್ರತಿನಿಧಿಸುತ್ತವೆ

ರೂಢಿಯಲ್ಲಿ ಬಿಳಿಯ ಕಾಯಿಗಳನ್ನುಳ್ಳ ಆಟಗಾರ ಆಟವನ್ನು ಪ್ರಾರಂಭಿಸುತ್ತಾನೆ. ಇದೇ ಸಾಮಾನ್ಯ ಕ್ರಮ ಅಥವಾ ಇದಿರಾಳಿಯ ಒಪ್ಪಿಗೆಯಿಂದ ಕಪ್ಪುಕಾಯಿಗಳನ್ನು ನಡೆಸುವಾತನೂ ಆಟದ ಪ್ರಾರಂಭ ಮಾಡಬಹುದಾಗಿದೆ. ಆ ತರುವಾಯ ಒಬ್ಬನ ಅನಂತರ ಒಬ್ಬನಂತೆ ಒಂದು ಸಾರಿಗೆ ಒಂದೇ ಕಾಯಿಯನ್ನು ಒಮ್ಮೆ ನಡೆಸುವ ಪರಿಪಾಟದಿಂದ ಆಟ ಮುಂದುವರಿಯುತ್ತದೆ. ಕಾಯಿಗಳನ್ನು ಈ ಕೆಳಗಿನಂತೆ ನಡೆಸಬಹುದಾಗಿದೆ. ಒಂದೊಂದು ಕಾಯಿಗೂ ಅದಕ್ಕೆ ವಿಶಿಷ್ಟವಾದ ನಡೆ ಉಂಟು. ರಾಜ ಯಾವುದೇ ದಿಕ್ಕಿನಲ್ಲಿ ಚಲಿಸಬಲ್ಲ. ಆದರೆ ಒಂದು ಸಲಕ್ಕೆ ಸಂಲಗ್ನದಲ್ಲಿದ್ದ ಯಾವುದೇ ಒಂದು ಚೌಕಕ್ಕೆ ಮಾತ್ರ ಆತ ಸಾಗಬಹುದು. ಮಂತ್ರಿ, ಆನೆ ಹಾಗೂ ಒಂಟೆಗಳು ಮಧ್ಯದಲ್ಲಿ ಅಡೆ-ತಡೆಯಾಗಿ ಯಾವುದೇ ಕಾಯಿಗಳಿಲ್ಲದ ಸಂದರ್ಭದಲ್ಲಿ ಎಷ್ಟು ದೂರ ಬೇಕಾದರೂ ಸಾಗಬಲ್ಲ ಸಾಮರ್ಥ್ಯವುಳ್ಳವು. ಆನೆ ಕೇವಲ ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಅಂತಸ್ತು ಮತ್ತು ಸಾಲುಗಳಲ್ಲಿ ಸಾಗುವ ಸಾಮರ್ಥ್ಯವುಳ್ಳದ್ದು. ಒಂಟೆ ಅದೇ ಬಣ್ಣದ ಕೋನದಲ್ಲಿ ಮಾತ್ರ ಸಾಗಬಲ್ಲದು. ಮಂತ್ರಿ ಮಾತ್ರ ಆನೆ ಮತ್ತು ಒಂಟೆ ಇವೆರಡರ ಸಾಮರ್ಥ್ಯವನ್ನೂ ಹೊಂದಿ ಉದ್ದವಾಗಿ, ಅಡ್ಡವಾಗಿ ಇಲ್ಲವೆ ಕೋನದಲ್ಲಿ ಯಾವುದೇ ಸಾಲಿನಲ್ಲಿಯೂ ಚಲಿಸಬಲ್ಲ. ಕುದುರೆ ಇಡುವ ಹೆಜ್ಜೆ ಎರಡು, ಮತ್ತು ಎರಡೂ ಬೇರೆ ವಿಧಾನದಲ್ಲಿ. ಅಂದರೆ ಎರಡು ಮನೆ ನೇರವಾಗಿಯೂ ಒಂದು ಮನೆ ಸಮಕೋನದಲ್ಲಿಯೂ ಚಲಿಸುತ್ತದೆ. ಕುದುರೆಯ ಹೆಜ್ಜೆಯಲ್ಲಿನ ಒಂದು ವೈಶಿಷ್ಟ್ಯ ಎಂದರೆ, ಇದರ ಚಲನೆಯ ದಾರಿಯಲ್ಲಿರುವ ಕಾಯಿಗಳು ಇದಕ್ಕೆ ಅಡ್ಡಿಯಾಗಲಾರವು. ಪೇದೆಯನ್ನು ಹೊರತುಪಡಿಸಿ ಉಳಿದೆಲ್ಲ ಕಾಯಿಗಳೂ ಅವುಗಳ ಚಲನೆಯ ದಿಶೆಯಲ್ಲಿರುವ ಪ್ರತಿಪಕ್ಷದ ಕಾಯಿಗಳನ್ನು ಬಲಿ ತೆಗೆದುಕೊಳ್ಳುವವು. ಬಲಿಯಾದ ಕಾಯಿಯ ಮನೆಯಲ್ಲಿ ಬಲಿತೆಗೆದುಕೊಂಡ ಕಾಯಿ ಕೂಡುತ್ತದೆಯಲ್ಲದೆ ಬಲಿಯಾದ ಕಾಯಿಯನ್ನು ಹಾಸಿನಿಂದ ಹೊರಗೆ ತೆಗೆದುಹಾಕಲಾಗುತ್ತದೆ. ಪೇದೆ ಅನೇಕ ರೀತಿಯಲ್ಲಿ ವಿಲಕ್ಷಣವಾದದ್ದು. ಇದರ ಚಲನೆ ಸಾಲಿನಗುಂಟ ನೇರವಾಗಿ ಮಾತ್ರ, ಎದುರಾಳಿಯನ್ನು ಬಲಿ ತೆಗೆದುಕೊಳ್ಳುವಾಗ ಮಾತ್ರ ಇದು ಒಂಟೆಯಂತೆ ಚಲಿಸಿ ಅದರ ಇದಿರುಗಡೆಯ ಕೋನದಲ್ಲಿದ್ದ ಯಾವುದೇ ಮನೆಗೆ ಹೋಗಬಹುದಾಗಿದೆ. ಹಾಸಿನಲ್ಲಿ ಎರಡನೆಯ ಸಾಲಿನ ತನ್ನ ಮೂಲಸ್ಥಾನದಿಂದ ಪ್ರಪ್ರಥಮವಾಗಿ ಕದಲುವಾಗ ಮಾತ್ರ ಇದು ಒಮ್ಮೆಲೇ ಎರಡು ಹೆಜ್ಜೆಯನ್ನು ಇಷ್ಟವೆನಿಸಿದರೆ ಇಡಬಹುದಾಗಿದೆ. ಅನಂತರ ಒಂದೊಂದೇ ಮನೆಯನ್ನು ಕ್ರಮಿಸಬೇಕು. ತನ್ನ ಮಾಲಿಕ ಆಟಗಾರನ ವಿರುದ್ಧ ದಿಕ್ಕಿನ ಎಂಟನೆಯ ಮನೆಯನ್ನು ತಲುಪಿದ ಕೂಡಲೇ ಪೇದೆ

ಆಟಗಾರನ ಇಚ್ಛೆಯಂತೆ ತನ್ನದೇ ಬಣ್ಣದ ಮಂತ್ರಿ, ಆನೆ, ಕುದುರೆ ಅಥವಾ ಒಂಟೆಯಾಗಿ ಪರಿವರ್ತಿತವಾಗುತ್ತದೆ. ಇದಕ್ಕೆ ಮಂತ್ರಿಯನ್ನು ಹುಟ್ಟಿಸುವುದು (ಕ್ವೀನಿಂಗ್) ಎಂದು ಹೇಳುತ್ತಾರೆ. ಏಕೆಂದರೆ, ಸರ್ವೇಸಾಮಾನ್ಯವಾಗಿ ಎಂಟನೆಯ ಮನೆಯನ್ನು ತಲುಪಿದ ಪೇದೆಯನ್ನು, ಮಂತ್ರಿಯಾಗಿಯೇ ಪರಿವರ್ತಿಸುತ್ತಾರೆ. ಈ ರೀತಿ ಆಟಗಾರನೊಬ್ಬ ಒಂದೇ ಸಲಕ್ಕೆ ಮಂತ್ರಿಯೊಡನೆ ಎರಡು, ಮೂರು ಮಂತ್ರಿಗಳನ್ನು ಹುಟ್ಟಿಸಿಕೊಳ್ಳಬಹುದಾಗಿದೆ.

ಕೋಟೆ ಕಟ್ಟುವುದು : ರಾಜ ಮತ್ತು ಯಾವುದೇ ಒಂದು ಆನೆ ಒಂದೇ ಕಾಲಕ್ಕೆ ಸಂಯುಕ್ತವಾಗಿ ಕ್ರಮಿಸುವ ಒಂದು ಹೆಜ್ಜೆಗೆ ಈ ಹೆಸರಿದೆ. ಇದನ್ನು ಆಟವೊಂದರಲ್ಲಿ ಒಂದೇ ಒಂದು ಬಾರಿಗೆ ಬಳಸಬಹುದಾಗಿದೆ. ಕೋಟೆ ಕಟ್ಟುವುದಕ್ಕೆ ಮೊದಲು ರಾಜನಾಗಲೀ ಆನೆಯಾಗಲೀ ಒಮ್ಮೆಯೂ ಚಲಿಸಿರತಕ್ಕದ್ದಲ್ಲ ; ರಾಜ ಮತ್ತು ಚಲಿಸಬೇಕಾದ ಆನೆಯ ಮಧ್ಯದಲ್ಲಿ ಯಾವುದೇ ಕಾಯಿಗಳೂ ಇರತಕ್ಕದ್ದಲ್ಲ ; ವಿಜಾತೀಯ ಕಾಯಿಗಳು ರಾಜ ಚಲಿಸುವ ಮನೆ ಹಾಗೂ ಮಧ್ಯದ ಮನೆಗಳ ಮೇಲೆ ಹೆಜ್ಜೆಯಿಡಲು ಬರುವಂತಿರಬಾರದು. ರಾಜನಿಗೆ ಬಂಧನವಾದಾಗಲೂ (ಚೆಕ್) ಕೋಟೆ ಕಟ್ಟುವಂತಿಲ್ಲ. ರಾಜನನ್ನು ಅವನ ಎಡ




ಚಿತ್ರ 3. ಕೋಟೆ ಕಟ್ಟುವ ಬಗೆಗಳು : ಕೋಟೆ ಕಟ್ಟುವ ಮೊದಲು ಕಾಯಿಗಳ ಸ್ಥಾನವನ್ನು A ಚಿತ್ರದಲ್ಲೂ ಮಂತ್ರಿಯ ಕಡೆಯ ಆನೆಯಿಂದ ಕೋಟೆ ಕಟ್ಟುವುದನ್ನು B ಚಿತ್ರದಲ್ಲೂ ರಾಜನ ಕಡೆಯ ಆನೆಯಿಂದ ಕೋಟೆ ಕಟ್ಟುವುದನ್ನು C ಚಿತ್ರದಲ್ಲೂ ತೋರಿಸಿದೆ

ಇಲ್ಲವೆ ಬಲ ಭಾಗದ ಎರಡನೆಯ ಮನೆಗೂ ಆನೆಯನ್ನು ರಾಜನನ್ನು ದಾಟಿ ಅವನ ಪಕ್ಕದ ಮನೆಗೂ ಚಲಿಸವುದರಿಂದ ಕೋಟೆ ಕಟ್ಟಿದಂತಾಗುವುದು. ರಾಜನ ಕಡೆಯ ಆನೆಯನ್ನಾಗಲೀ (KR) ಅಥವಾ ಮಂತ್ರಿಯ ಕಡೆಯ ಆನೆಯನ್ನಾಗಲೀ (QR) ಈ ರೀತಿ ಚಲಿಸಬಹುದಾಗಿದೆ.

3. ಸಂಕೇತಗಳು : ಪ್ರತಿಯೊಂದು ಉದ್ದನೆಯ ಸಾಲೂ ಆಯಾ ಸಾಲಿಗೆ ಮೂಲತಃ ಸೇರಿದ ಕಾಯಿಯ ಹೆಸರನ್ನು ಹೊಂದಿರುತ್ತದೆ. ಅಂತಸ್ತುಗಳನ್ನು ಪ್ರತಿ ಆಟಗಾರನ ಕಡೆಯಿಂದ ಅವರವರ ವಿರುದ್ಧ ದಿಕ್ಕಿಗೆ ಅನುಕ್ರಮವಾಗಿ ಒಂದನೆಯ ಸಾಲು ಎರಡನೆಯ ಸಾಲು–ಹೀಗೆ ಎಂಟರವರೆಗೆ ನಿಗದಿ ಮಾಡಿರುತ್ತಾರೆ. ಈ ಪ್ರಕಾರ ಪ್ರತಿಯೊಂದು ಮನೆಗೂ ಆಯಾ ಕಾಯಿಗಳ ಬಣ್ಣಕ್ಕನುಸಾರವಾಗಿ ಎರಡು ಸಂಕೇತಾರ್ಥವಿರುತ್ತವೆ. ಉದಾಹರಣೆಗೆ– P-QB4 ಎಂದರೆ ಚಲಿಸುತ್ತಿರುವ ಕಾಯಿಯ ಸಂಕೇತಾರ್ಥವನ್ನು ಮೊದಲು ಸೂಚಿಸಿ (ಇಲ್ಲಿ P ಎಂದರೆ ಪಾನು) ಅದು ಚಲಿಸಿದ ಚೌಕದ ಮನೆಯ ಸಂಜ್ಞೆಯನ್ನು (QB4) ಅದರ ಮುಂದೆ ಬರೆದಂತೆ ಆಯಿತು. ನೈಟ್‌ನ (Kt) ಸಂಕೇತಾರ್ಥವನ್ನು ಅನೇಕ ಬಾರಿ S ಅಥವಾ N ನಿಂದಲೂ ಸೂಚಿಸುವುದುಂಟು. ಸಂದೇಹಕ್ಕೆಡೆಯಿರದ ಸಂದರ್ಭದಲ್ಲಿ ರಾಜನ ಕಡೆಯ ಕಾಯಿಗಳು ಹಾಗೂ ರಾಣಿಯ (ಮಂತ್ರಿ) ಕಡೆಯ ಕಾಯಿಗಳು ಎಂದು ಪ್ರತ್ಯೇಕವಾಗಿ ಹೇಳುವ ಆವಶ್ಯಕತೆಯಿರುವುದಿಲ್ಲ. ಉದಾಹರಣೆಗೆ_B-B4 ಎಂದಾಗ ಯಾವುದೇ ಒಂದು ಒಂಟೆ ಮಾತ್ರ B4 ಮನೆಯನ್ನು ಆಕ್ರಮಿಸುವುದು ಸಾಧ್ಯವಿರುವಾಗ ಯಾವ ಒಂಟೆ ಎಂದು ವಿವರಿಸಿ ಹೇಳುವ ಅಗತ್ಯವಿಲ್ಲ. ಗುಣಾಕಾರದ ಚಿಹ್ನೆ (X) ಒಂದು ಕಾಯಿ ಇನ್ನೊಂದು ಪರಜಾತಿಯ ಕಾಯಿಯನ್ನು ಬಲಿ ತೆಗೆದುಕೊಂಡಿತು ಎಂಬರ್ಥದಲ್ಲಿ ಉಪಯೋಗಿಸಲ್ಪಡುವುದು. P x P ಎಂದರೆ ಒಂದು ಪೇದೆ ಇನ್ನೊಂದು ಪೇದೆಯನ್ನು ಬಲಿ ತೆಗೆದುಕೊಂಡಿತು ಎಂದು ಅರ್ಥ.

ಬೀಜಗಣತೀಯ ಸಂಕೇತ ಪದ್ಧತಿಯಲ್ಲಿ ಉದ್ದಸಾಲುಗಳು ಬಿಳಿಯ ಕಾಯಿಗಳ ಆಟಗಾರನ ಎಡದಿಂದ ಬಲಕ್ಕೆ A-H ಅಕ್ಷರಗಳ ವರೆಗೆ ಸೂಚಿಸಲ್ಪಡುವುವು. ಅಡ್ಡಸಾಲುಗಳು ಬಿಳಿಯ ಕಾಯಿಗಳ ಆಟಗಾರನ ಕಡೆಯಿಂದ ಕಪ್ಪುಕಾಯಿಗಳ ಆಟಗಾರನ ಕಡೆಯವರೆಗೆ 1 ರಿಂದ 8ರ ವರೆಗಿನ ಸಂಖ್ಯೆಯಲ್ಲಿ ಸೂಚಿಸಲ್ಪಡುವುವು. ಈ ಪ್ರಕಾರ ಬೋರ್ಡಿನಲ್ಲಿರುವ ಎಲ್ಲ 64 ಮನೆಗಳಿಗೂ ಅದರದೇ ಆದ ಒಂದು ಸಂಖ್ಯೆ ಹಾಗೂ ಒಂದು ಅಕ್ಷರದ ಸಂಕೇತವಿರುತ್ತದೆ. ಈ ಪ್ರಕಾರ ಆಟದ ಒಂದು ಹೆಜ್ಜೆಯನ್ನು Pc2-c4 ಎಂದು ಸೂಚಿಸಿದರೆ ನಡೆಸಿದ ಕಾಯಿ (ಪಾನು) ಯಾವ ಮನೆಯಿಂದ ಯಾವ ಮನೆಗೆ ಚಲಿಸಿತು ಎಂದು ವಿವರಿಸಿದಂತೆ ಆಯಿತು. ಪೇದೆಯ ಮಟ್ಟಿಗೆ ಅದರ ಮೂಲಸಂಕೇತವಾದ Pಯನ್ನು

| | A | B | C | D | E | F | G | H | |
|---|---|---|---|---|---|---|---|---|---|
| 8 | QR1 QR8 | QN1 QN8 | QB1 QB8 | Q1 Q8 | K1 K8 | KB1 KB8 | KN1 KN8 | KR1 KR8 | 8 |
| 7 | QR2 QR7 | QN2 QN7 | QB2 QB7 | Q2 Q7 | K2 K7 | KB2 KB7 | KN2 KN7 | KR2 KR7 | 7 |
| 6 | QR3 QR6 | QN3 QN6 | QB3 QB6 | Q3 Q6 | K3 K6 | KB3 KB6 | KN3 KN6 | KR3 KR6 | 6 |
| 5 | QR4 QR5 | QN4 QN5 | QB4 QB5 | Q4 Q5 | K4 K5 | KB4 KB5 | KN4 KN5 | KR4 KR5 | 5 |
| 4 | QR5 QR4 | QN5 QN4 | QB5 QB4 | Q5 Q4 | K5 K4 | KB5 KB4 | KN5 KN4 | KR5 KR4 | 4 |
| 3 | QR6 QR3 | QN6 QN3 | QB6 QB3 | Q6 Q3 | K6 K3 | KB6 KB3 | KN6 KN3 | KR6 KR3 | 3 |
| 2 | QR7 QR2 | QN7 QN2 | QB7 QB2 | Q7 Q2 | K7 K2 | KB7 KB2 | KN7 KN2 | KR7 KR2 | 2 |
| 1 | QR8 QR1 | QN8 QN1 | QB8 QB1 | Q8 Q1 | K8 K1 | KB8 KB1 | KN8 KN1 | KR8 KR1 | 1 |
| | A | B | C | D | E | F | G | H | |

ಚಿತ್ರ 4. ಸಂಕೇತಗಳು : ವರ್ಣನಾತ್ಮಕ QR 1, ಇತ್ಯಾದಿ ; ಬೀಜಗಣಿತೀಯ–ABC ಮತ್ತು 1 2 3 ಇತ್ಯಾದಿ. ತೆಳು ಅಕ್ಷರದ ಸಂಕೇತಗಳು ಕಪ್ಪುಕಾಯಿಗಳವನ ಕಡೆಯಿಂದ ಕಾಣುವ ವ್ಯವಸ್ಥೆಯನ್ನು ತೋರಿಸುತ್ತವೆ. ದಪ್ಪಕ್ಷರದ ಸಂಕೇತಗಳು ಬಿಳಿಯ ಕಾಯಿಗಳವನ ಕಡೆಯಿಂದ ಕಾಣುವ ವ್ಯವಸ್ಥೆಯನ್ನು ಸೂಚಿಸುತ್ತವೆ

ಬಿಟ್ಟರೂ ಆಗುತ್ತದೆ. ಅದರಂತೆ ಅದು ಚಲಿಸುವ ಪೂರ್ವದಲ್ಲಿದ್ದ ಮನೆಯ ಸಂಕೇತವನ್ನು ಕೂಡ. ಈ ರೀತಿಯಲ್ಲಿ ಮೇಲಿನ ಆಟದ ಹೆಜ್ಜೆಯ ಸಂಖ್ಯೆಯನ್ನು ಅತಿ ಸಂಕ್ಷೇಪವಾದ ರೀತಿಯಲ್ಲಿ c 4 ಎಂದಷ್ಟೇ ಹೇಳಬಹುದು. ಉಳಿದ ಸಂಕೇತಗಳು ಹೀಗಿವೆ. x ಇಲ್ಲವೇ: = ಬಲಿ ತೆಗೆದುಕೊಂಡಿತು; 0–0= ರಾಜನ ಕಡೆಗೆ ಕೋಟೆ ಕಟ್ಟಲ್ಪಟ್ಟಿತು. 0–0–0= ರಾಣಿಯ ಭಾಗದಲ್ಲಿ ಕೋಟೆ ಕಟ್ಟಲಾಯಿತು. : † ಇಲ್ಲವೇ + = ಚೆಕ್; ‡ ಸಂಕೇತಗಳು ಇಲ್ಲವೆ ╫ = ಚೆಕ್ ಮೇಟ್ (ಆಟದ ಅಂತ್ಯ) :!= ಉತ್ತಮ ಅಥವಾ ಒಳ್ಳೆಯ ಹೆಜ್ಜೆ:?= ಸಂಹೇಹಾಸ್ಪದ ಅಥವಾ ಉಪಯೋಗವಿಲ್ಲದ ಹೆಜ್ಜೆ : !? = ಒಳ್ಳೆಯ ಹೆಜ್ಜೆಯೇ? ಉಪಯೋಗವಾಗಬಲ್ಲದೇ?

ಈ ಮೆಲಿನಂತೆ ಚದುರಂಗದ ಆಟವೊಂದರ ಪ್ರಾರಂಭದಿಂದ ಅಂತ್ಯದವರೆಗಿನ ಎಲ್ಲ ಹೆಜ್ಜೆಗಳ–ಹಂತಗಳ ದಾಖಲೆಯನ್ನು ಲಿಖಿತರೂಪದಲ್ಲಿಡಬಹುದಾಗಿದೆ. ಇಂಥ ದಾಖಲೆಗಳ ಟಿಪ್ಪಣಿಯನ್ನು ಕೆಳಗೆ ತೋರಿಸಿದೆ. ಇವನ್ನು ವರಸೆಯಾಗಿ ಕಾಲುಗಳಲ್ಲಿ ಬರೆಯುತ್ತಾರೆ. ಮೊದಲ ಹೆಜ್ಜೆ ಸಾಮಾನ್ಯವಾಗಿ ಬಿಳಿ ಕಾಯಿಗಳದು, ಅನಂತರ ಪ್ರತಿ ಒಬ್ಬನೂ ಒಂದು ಹೆಜ್ಜೆಯಂತೆ ಆಟ ಸಾಗುವುದನ್ನು ನಮೂದಿಸುತ್ತಾನೆ. ಒಬ್ಬ ಆಟಗಾರನ ಹೆಜ್ಜೆಗೆ ಪ್ರತ್ಯುತ್ತರವಾಗಿ ಮಾಡಿದ ಇನ್ನೊಬ್ಬನ ಹೆಜ್ಜೆಯೂ ಸೇರಿದಂತೆ ಅನುಕ್ರಮವಾಗಿ ಅವುಗಳಿಗೆ ಸಂಖ್ಯೆಯನ್ನು ನೀಡಲಾಗುವುದು.

| ವರ್ಣನಾತ್ಮಕ | | | ಬೀಜಗಣಿತೀಯ | | |
|---|---|---|---|---|---|
| | ಬಿಳಿ | ಕಪ್ಪು | | ಬಿಳಿ | ಕಪ್ಪು |
| 1 | P-K4 | P-K4 | 1 | e2-e4 | e7-e5 |
| 2 | Kt-KB3 | Kt-QB | 2 | 2Sg1-f3 | Sb8-e6 |
| 3 | B-B4 | B-B4 | 3 | Bf1-c4 | Bf8-c3 |
| 4 | P-B3 | Kt-B3! | 4 | c2-c3 | Sg8-f6! |
| 5 | P-Q4 | P × P | 5 | d2-d4 | e5-d4: |
| 6 | P × P | B -Kt5ch | 6 | c3-d4 | Bc5-b4. |

ಆಟದ ಟಿಪ್ಪಣಿಗಳಲ್ಲಿ, ಮೇಲಿನ ಹೆಜ್ಜೆಗಳನ್ನು ಸಾಲಾಗಿ ಈ ರೀತಿ ಬರೆಯುತ್ತಾರೆ.

ವರ್ಣಾನಾತ್ಮಕ :

1. P-K4, P-K4 ; 2. Kt-KB3, Kt-QB3 ;

2. B-B4, B-B4 ; 4. P-QKt4, BxP ; 5. P-B3

ಬೀಜಗಣಿತೀಯ :

1. e4, e5; 2. Sf3. Sc6; 3. Bc4, Bc5; 4. b4, Bb4; 5. c3

ಕೆಲವೊಮ್ಮೆ ವರ್ಣಾನಾತ್ಮಕ ಸಂಜ್ಞೆಗಳನ್ನು ವಿಂಗಡಿಸಿ, ಬಿಳಿಯ ಹೆಜ್ಜೆಗಳನ್ನು ಮೇಲೆ ಹಾಗೂ ಕಪ್ಪು ಹೆಜ್ಜೆಗಳನ್ನು ಕೆಳಗೆ ಬರೆಯುವರು.

1. $\frac{P-K4}{P-K4}$ 2. $\frac{Kt-KB3}{Kt-QB3}$

4. ಆಟದ ಉದ್ದೇಶ : ಎದುರಾಳಿಯ ರಾಜನನ್ನು ಸೆರೆಹಿಡಿಯುವುದೇ ಆಟದ ಗುರಿ. ಸೆರೆಹಿಡಿಯುವುದೆಂದರೆ ಅವನಿಗೆ ಓಡಾಡಲು ಆಸ್ಪದವಿಲ್ಲದಂತೆ ಮಾಡುವುದು.

ಎದುರಾಳಿಯ ರಾಜನನ್ನು ಸೆರೆಹಿಡಿಯುವ ಬೆದರಿಕೆ ತೋರಿಸುವ ಹೆಜ್ಜೆಯೇ ಅಡ್ಡಿ (ಚೆಕ್). ಇಂಥ ಅಡ್ಡಿ ಬಂದಾಗ ಅದನ್ನು ತಪ್ಪಿಸಿಕೊಳ್ಳತಕ್ಕದ್ದು. ಇಲ್ಲವೇ ಆಟವನ್ನು ಬಿಟ್ಟುಕೊಡತಕ್ಕದ್ದು. ಚೆಕ್ ಬಂದಾಗ ಸರಿಯಾದ ಪ್ರತ್ಯುತ್ತರವೆಂದರೆ ರಾಜನನ್ನು ಚೆಕ್ ತಪ್ಪಿಸಿ ಸರಿಪಡಿಸುವುದು, ಇಲ್ಲವೇ ದಾಳಿ ಮಾಡಿದ ಕಾಯಿಯನ್ನು ಬಲಿತೆಗೆದುಕೊಳ್ಳುವುದು. ಅಥವಾ ದಾಳಿ ಮಾಡುವ ಕಾಯಿಗೆ ಯಾವುದೇ ಬಗೆಯಿಂದ ಅಡ್ಡಿಯುಂಟುಮಾಡುವುದು.

5. ಕಾಯಿಗಳ ಮೌಲ್ಯಗಳು : ಕಾಯಿಯೊಂದರ ಮೌಲ್ಯ ಎದುರಾಳಿಯ ರಾಜನನ್ನು ಬಂಧಿಯಾಗಿಸುವ ಅದರ ಸಾಮರ್ಥ್ಯದ ಮೇಲೆ ನಿಂತಿದೆ. ಯಾವುದೇ ಒಬ್ಬ ಆಟಗಾರನ ಹತ್ತಿರವಿರುವ ರಾಣಿ ಇಲ್ಲವೇ ಮಂತ್ರಿ, ಆನೆ ಇಲ್ಲವೆ ಎರಡು ಒಂಟೆಗಳು ಪ್ರತಿಸ್ಪರ್ಧಿಯ ರಾಜನನ್ನು ಸೆರೆಹಿಡಿಯಬಹುದಾಗಿದೆ. ಕೇವಲ ಎರಡು ಕುದುರೆಗಳಿಂದ ಇದು ಸಾಧ್ಯವಿಲ್ಲ; ಒಂದು ಕುದುರೆ, ಒಂದು ಒಂಟೆಯಿಂದ ಸಾಧ್ಯ. ಇನ್ನುಳಿದ ಚಿಲ್ಲರೆ ಕಾಯಿಗಳಿಂದಲೂ ಸಾಧ್ಯವಾಗದು. ಎದುರಾಳಿಯ ರಾಜನ ಸಂಗಾತಿಯಾಗಿ ಪೇದೆಯೊಂದು ಇದ್ದು ರಾಜನ ರಕ್ಷಣೆಗಿಂತ ಅವನ ಚಲನೆಗೆ ಅಡಚಣೆಯುಂಟು ಮಾಡುವಂಥದ್ದಾದರೆ, ಅಂಥ ರಾಜನನ್ನು ಸೆರೆಹಿಡಿಯಲು ಕೇವಲ ಕುದುರೆ ಅಥವಾ ಒಂಟೆಯೊಂದೇ ಸಾಕು. ಪೇದೆಯೊಂದೇ ಆ ಕೆಲಸ ಮಾಡಲಾರದು; ಆದರೆ 8ನೆಯ ಮನೆಯನ್ನು ಮುಟ್ಟಲು ಸಾಧ್ಯವಾದರೆ ಮಂತ್ರಿಯಾಗಿ ಪುನರುಜ್ಜೀವಿತಗೊಂಡು ಅದು ಗುರಿ ಸಾಧಿಸಬಲ್ಲದು. ಎರಡು ಆನೆಗಳು ಮಂತ್ರಿಗೆ ಸಾಮಾನ್ಯವಾಗಿ ಸಮಬಲವಾಗಿ ನಿಲ್ಲಬಲ್ಲುವು–ಕೆಲವೊಮ್ಮೆ ಗೆಲ್ಲಲೂ ಬಲ್ಲವು. ಆದರೆ ಎರಡು ಒಂಟೆಗಳು ಮಂತ್ರಿಗೆ ಕೇವಲ ಸಮಬಲ. ಆದರೆ ಮಂತ್ರಿಯೊಬ್ಬನೇ ಆನೆಯೊಂದರ ವಿರುದ್ಧ ಇಲ್ಲವೆ ಕುದುರೆಯಾಗಲೀ ಇನ್ನಾವುದೇ ಚಿಲ್ಲರೆ ಕಾಯಿಗಳು ಎರಡರ ವಿರುದ್ಧ ಗೆಲ್ಲುವ ಸಾಮರ್ಥ್ಯವುಳ್ಳವು.

ಎಲ್ಲ ಕಾಯಿಗಳೂ ಸಮವಾಗಿದ್ದಾಗ, ಒಬ್ಬ ಆಟಗಾರನ ಹತ್ತಿರವಿದ್ದ ಒಂದೇ ಹೆಚ್ಚಿನ ಪೇದೆಯೂ ಪಂದ್ಯ ಗೆಲ್ಲುವ ಅಂತಃಶಕ್ತಿಯುಳ್ಳದ್ದಾಗುವುದು.

ಪೇದೆಗೆ ಅದರ ಶಕ್ತಿಯನ್ನವಲಂಬಿಸಿ 1 ಗುಣವನ್ನು ಹಿಡಿದಿದ್ದಾದರೆ ಅದೇ ಪ್ರಮಾಣದಂತೆ ಉಳಿದ ಕಾಯಿಗಳ ಹೋರಾಡುವ ಶಕ್ತಿಯನ್ನು ಈ ರೀತಿ ಅಂದಾಜು ಮಾಡಬಹುದು; ಕುದುರೆ 3, ಒಂಟೆ 3, ಆನೆ 5, ಮಂತ್ರಿ ಅಥವಾ ರಾಣಿ 9. ಆಟದಲ್ಲಿ ಬಲಾಬಲಗಳ ಒಂದು ತುಲನಾತ್ಮಕ ಸಂಖ್ಯೆ ಈ ಗುಣಗಳಿಂದಾಗಿ ಒಂದು ನಿರ್ದಿಷ್ಟ ಅಂದಾಜಿಗೆ ಬರುವಂತೆ ಇದೆ. ಹೆಚ್ಚು ಗುಣಗಳುಳ್ಳ ಅಂದರೆ ಹೆಚ್ಚು ಶಕ್ತಿಯ ಕಾಯಿಯೊಂದು ಕಡಿಮೆ ದರ್ಜೆಯ ಕಾಯಿಗೆ ಬಲಿಯಾಗಿ ಹೋದರೆ ಆ ಆಟಗಾರನ ಬಲ ದುರ್ಬಲವಾದಂತೆ ಲೆಕ್ಕ. ಅಂಥ ಸಂದರ್ಭದಲ್ಲಿ ಆಟದ ತುಲನಾತ್ಮಕ ಪರಿಸ್ಥಿತಿಯ ಮೇಲಿನಿಂದ ಆದ ಲಾಭವೇ ನಿರ್ಣಾಯಕವಾಗಿ ಪರಿಣಮಿಸುತ್ತದೆ.

ಆಟದಲ್ಲಿ ಪರಿಸ್ಥಿತಿಯ ಮೇಲಿನ ಹಿಡಿತ ಇನ್ನೂ ಪ್ರಾಮುಖ್ಯವಾದದ್ದು. ಆಯಕಟ್ಟಿನ ನಿಯಂತ್ರಣವಿದ್ದ ಆಟಗಾರನ ಕಾಯಿಗಳ ಹಾನಿಯನ್ನು ನಿರ್ಲಕ್ಷಿಸಬಹುದಾಗಿದೆ. ಕಾಯಿಗಳನ್ನು ಕಳೆದುಕೊಂಡ ಮಾತ್ರದಿಂದಲೇ ಆಟ ಹೋಯಿತೆಂದು ತಿಳಿಯಲಾಗದು. ಈ ಮಟ್ಟಿಗೆ ಗುಣಾಂಕಗಳು ಬೇರೀಜು–ವಜಾಬಾಕಿ ನಿರ್ದಿಷ್ಟ ಲಾಭ–ಹಾನಿಯ ಕೋಷ್ಟಕವಾಗಲಾರದು, ಉದಾ: ಆನೆಯೊಂದರ ಬಗ್ಗೆ ಐದು ಕಾಲಾಳುಗಳ ಲೆಕ್ಕ ಹಿಡಿಯಲು ಬಾರದು. ಆಟದಲ್ಲಿ ಒಳ್ಳೆ ಹಿಡಿತ ಸಿಗುವ ಪರಿಸ್ಥಿತಿಯೊದಗುವುದಾದರೆ ಕಾಯಿಗಳನ್ನು ಬುದ್ಧ್ಯಾ ಬಲಿ ಕೊಡಬಹುದಾಗಿದೆ. ಕುದುರೆ ಮತ್ತು ಒಂಟೆಯನ್ನು ಗುಣಾಂಕಗಳಲ್ಲಿ ಸಮ–ಸಮವೆಂದು ತಿಳಿಯಲಾಗುತ್ತದೆ. ಆದರೆ ಅವುಗಳ (ಕ್ರಮಾಗತ) ಸ್ಥಾನದ ಮೇಲಿನಿಂದ ಹೇಳುವುದಾದರೆ ಕುದುರೆಗಿಂತ ಒಂಟೆಯನ್ನೇ ಹೆಚ್ಚು ಬಯಸುವರು. ಕಾರಣ, ಎರಡು ಒಂಟೆಗಳು ಯಾವ ಕಾಲಕ್ಕೂ ಎರಡು ಕುದುರೆಗಳಿಗಿಂತ ಹೆಚ್ಚು ಬಲಶಾಲಿಯಾದವು. ತನ್ನ ಹೆಜ್ಜೆಯ ಮಧ್ಯದಲ್ಲಿರುವ ಕಾಯಿಗಳ ಅಡೆತಡೆ ಕುದುರೆಗಿಲ್ಲವಾದ್ದರಿಂದ ಈ ಮಟ್ಟಿಗೆ ಅದಕ್ಕೆ ಅನುಕೂಲಕರ ಪರಿಸ್ಥಿತಿಯಿದೆಯೆನ್ನಬಹುದು. ಗುಣಾಂಕಗಳು ಏನೇ ಇದ್ದಾಗ್ಯೂ ಆಯಾ ಜಾತಿಯ ಕಾಯಿಗಳ ಪರಮಾವಧಿ ಉಪಯೋಗ ತೆಗೆದುಕೊಳ್ಳುವುದು ಆಟಗಾರನ ಮನೋಭಾವ, ಚಾತುರ್ಯ, ಬುದ್ಧಿಶಕ್ತಿಯನ್ನೇ ಅವಲಂಬಿಸಿದೆ.

6. ಸಮವಾದ ಆಟಗಳು : ಈ ಕೆಳಗಿನ ಯಾವುದೇ ಕಾರಣಕ್ಕಾಗಿ ಆಟ ಸಮ–ಸಮವೆಂದೆಣಿಸಿದಾಗ ಅರ್ಧಕ್ಕೆ ಆಟವನ್ನು ನಿಲ್ಲಿಸಬಹುದಾಗಿದೆ.

i. ಕಾಯಿಗಳ ಕೊರತೆ : ದುರ್ಬಲ ಕಾಯಿಗಳಿಂದಾಗಿ ಅಥವಾ ರಾಜನನ್ನು ಸೆರೆಹಿಡಿಯಲು ಸಾಕಷ್ಟು ಕಾಯಿಗಳು ಇಬ್ಬರೂ ಆಟಗಾರರ ಹತ್ತಿರ ಇಲ್ಲವಾದಲ್ಲಿ, ಆಟ ಸಮವಾದಂತೆ.

ii. ಸ್ತಬ್ಧ ಆಟ : ಯಾವುದೇ ಒಬ್ಬ ಆಟಗಾರನ ರಾಜ ಚೆಕ್‌ನಲ್ಲಿಲ್ಲದಿದ್ದರೂ ಅವನ ಪಾಳಿಯ ಹೆಜ್ಜೆ ನಡೆಸಲು ಅವನಿಗೆ ಸಾಧ್ಯವೇ ಇಲ್ಲದಾಗ ಪಂದ್ಯ ಸಮ.

iii. ಸತತ ಚೆಕ್ ಕೊಡುವುದು : ಆಟಗಾರನೊಬ್ಬ ಅವನ ಇದಿರಾಳಿಗೆ ಒಂದೇ ಸಮನೆ ಚೆಕ್ ಕೊಡುತ್ತಲೇ ಇದ್ದು, ತಾನು ಅದೇ ರೀತಿ ಮುಂದುವರಿಸುವೆನೆಂದು ತಿಳಿಸಿದರೆ, ಆ ಆಟ ಸಮವೆಂದು ಸಾರಬಹುದು.

iv. ಪರಸ್ಪರ ಒಪ್ಪಿಗೆಯಿಂದ : ಆಟಗಾರರಿಬ್ಬರೂ ಆಟವನ್ನು ಮುಂದುವರಿಸದೆ ಅಲ್ಲಿಗೆ ಆಟ ಸಮವಾಯಿತೆಂದು ಒಪ್ಪಿದಾಗ.

v. ನಡಿಗೆಯ ಪುನರಾಚರಣೆ : ಇಬ್ಬರು ಆಟಗಾರರೂ ಒಂದೇ ಸಮನೆ ಮೂರು ಸಲ ಅದೇ ಅದೇ ಹೆಜ್ಜೆಯ ಪುನರಾವೃತ್ತಿ ಮಾಡಿದರೆ ಮೂರನೆಯ ಬಾರಿ ಹಾಗೆ ಮಾಡುತ್ತಿರುವ ಆಟಗಾರ ಅದು ಸಮವಾದ ಆಟವೆಂದು ಸಾರುವ ಹಕ್ಕು ಪಡೆಯುತ್ತಾನೆ.

vi. ಐವತ್ತು ಹೆಜ್ಜೆಗಳ ನಿಯಮ: ಆಟದ ಪ್ರಾರಂಭದಿಂದ ಮುಂದಿನ ಯಾವುದೇ ಕಾಯಿಯನ್ನು ಯಾರೊಬ್ಬರೂ ಬಲಿ ತೆಗೆದುಕೊಂಡಿಲ್ಲವೆಂಬುದು ಖಚಿತವಾದರೆ ಯಾವುದೇ ಪೇದೆಯನ್ನು ಚಲಿಸದೇ ಇಡಲಾಗಿದೆಯೆಂದು ಸಿದ್ಧಪಡಿಸಲು ಸಾಧ್ಯವಾದರೆ ಆಟ ಸಮವಾದಂತೆ. ಪರಸ್ಪರ ಒಪ್ಪಿಗೆಯಿಂದ ಈ ನಿಯಮವನ್ನು ಐವತ್ತು ಹೆಜ್ಜೆಗಳಿಗೇ ಸೀಮಿತಗೊಳಿಸದೆ, ಹೆಚ್ಚಿಗೆ ಮಾಡಿಕೊಳ್ಳಲೂ ಬಹುದಾಗಿದೆ. ಉದಾ: ಎದುರಾಳಿ ಸ್ತಬ್ಧ ಆಟವನ್ನು ತಪ್ಪಿಸಿಕೊಳ್ಳುವಂತೆ ಅವನ ರಾಜನ ಹತ್ತಿರ ಒಂದು ಪೇದೆಯಾದರೂ ಇದೆಯೆಂದಾದರೆ 66 ಹೆಜ್ಜೆಗಳಲ್ಲಿ ಎರಡು ಕುದುರೆಗಳಿಂದ ಪ್ರತಿಸ್ಪರ್ಧಿಯ ರಾಜನನ್ನು ಸೆರೆಹಿಡಿಯಬಹುದಾಗಿದೆ.

II. ಚದುರಂಗದ ನಿಯಮಗಳು: ಚದುರಂಗ ಅತಿ ನಿಯಮಬದ್ಧ ಆಟ. ನಿಯಮಬದ್ಧತೆಯಲ್ಲಿಯೇ ಅದರ ಸೊಗಸು ಅಡಗಿದೆ. ಬೇರೆ ಬೇರೆ ದೇಶಗಳ ಬೇರೆ ಬೇರೆ ರೀತಿಯ ಆಟ ನಿಯಮಗಳನ್ನು ಜಾಗತಿಕ ಚದುರಂಗ ಸಂಸ್ಥೆ ಅಂತಿಮವಾಗಿ ನಿರ್ದುಷ್ಟಪಡಿಸಿದೆ. ಕೆಲವೊಂದು ಪೌರಸ್ತ್ಯ ದೇಶಗಳನ್ನು ಬಿಟ್ಟು ಉಳಿದೆಲ್ಲ ದೇಶಗಳಲ್ಲಿ ಈ ನಿಯಮಗಳಂತೆಯೇ ಚದುರಂಗವನ್ನು ಈಗ ಆಡಲಾಗುತ್ತಿದೆ. ಈ ನಿಯಮಗಳು ಆಟದ ಮೂಲಭೂತ ನಿಯಮಗಳನ್ನಷ್ಟೇ ಅಲ್ಲ ಅಧಿಕೃತ, ಪಂದ್ಯಾಟಗಳನ್ನು ನಡೆಸುವ ಬಗ್ಗೆ ವಿಶಿಷ್ಟ ನಿಯಮಗಳನ್ನೂ ಒಳಗೊಂಡಿವೆ. ಮುಖ್ಯವಾದ ನಿಯಮಗಳು ಹೀಗಿವೆ:

ಪ್ರತಿಸ್ಪರ್ಧಿಗೆ ಪೂರ್ವಸೂಚನೆ ನೀಡದೆ ಆಟಗಾರನೊಬ್ಬ ಅವನದೇ ಪಾಳಿಯ ಆಟವಿದ್ದರೂ ಅವನ ಕಾಯಿಗಳನ್ನು ಮುಟ್ಟಿ ಸರಿಪಡಿಸಿಕೊಳ್ಳುವುದು, ವಗೈರೆ ಮಾಡತಕ್ಕದ್ದಲ್ಲ, ಪೂರ್ವಭಾವಿಯಾಗಿ ಸೂಚನೆ ನೀಡದೆ ಅವನು ಹಾಗೆ ಒಂದು ಅಥವಾ ಹೆಚ್ಚಿಗೆ ಕಾಯಿಗಳನ್ನು ಮುಟ್ಟಿದ್ದಾದರೆ, ಹಾಗೆ ಪ್ರಥಮತಃ ಮುಟ್ಟಿದ ಕಾಯಿಯನ್ನೇ ನಡೆಸಬೇಕು, ಅದು ನಿಯಮಬದ್ಧವಾಗಿ ನಡೆಸಲು ಬಾರದಂತಿದ್ದರೆ ಅದನ್ನು ತೆಗೆದಿಡತಕ್ಕದ್ದು.

ಆಟದ ನಿಯಮದಂತೆ ಪರಿಪೂರ್ಣವಾಗಿ ಇಟ್ಟ ಹೆಜ್ಜೆಯನ್ನು ಹಿಂತೆಗೆದುಕೊಳ್ಳಲಾಗದು. ಹೆಜ್ಜೆ ಪೂರ್ಣವಾಯಿತೆಂದು ತಿಳಿಯಲು ಈ ನಿಯಮಗಳು ಅಗತ್ಯ: 1 ಕಾಯಿಯೊಂದನ್ನು ಉದ್ದೇಶಿತ ಮನೆಯೊಂದಕ್ಕೆ ಸರಿಸಿ ಇಟ್ಟು ಆ ಕಾಯಿಯ ಮೇಲಿನಿಂದ ಕೈಯನ್ನು ತೆಗೆದಕೂಡಲೆ; 2. ಆಹುತಿ ತೆಗೆದುಕೊಂಡ ಕಾಯಿಯನ್ನು ಹಾಸಿನಿಂದ ತೆಗೆದಿಟ್ಟು, ತನ್ನ ಕಾಯಿಯನ್ನು ಆ ಸ್ಥಾನದಲ್ಲಿಟ್ಟು ಆ ಕಾಯಿಯ ಮೇಲಿನಿಂದ ಕೈ ತೆಗೆದಕೂಡಲೆ; 3 ಕೋಟೆ ಕಟ್ಟುವಾಗ, ಆನೆಯನ್ನು ಸರಿಸಿ ರಾಜನ ಪಕ್ಕದ ಮನೆಯಲ್ಲಿಟ್ಟ ಕೂಡಲೆ ಆನೆಯ ಮೇಲಿನಿಂದ ಕೈಯನ್ನು ತೆಗೆದಾಗ. ಆದರೆ ರಾಜನನ್ನೇ ಮೊದಲು ಸರಿಸಿದಾಗ ಹೆಜ್ಜೆ ಪೂರ್ತಿಯಾಗಲಾರದು. ಆದರೆ ಅಂಥ ಸಂದರ್ಭದಲ್ಲಿ ಆಟಗಾರ ಕೋಟೆ ಕಟ್ಟುವುದನ್ನು ಬಿಟ್ಟು ಬೇರೆ ಹೆಜ್ಜೆಯನ್ನು ಇಡಲಾರ; 4. ಪೇದೆಯೊಂದನ್ನು ಮುಂದುವರಿಸುತ್ತಿರುವಾಗ 8ನೆಯ ಮನೆಯಲ್ಲಿ ಅದು ಮಂತ್ರಿಯೋ ಇಲ್ಲವೆ ಇನಾವುದೋ ಆಗಿ ಪರಿವರ್ತನೆಗೊಳ್ಳುವಾಗ ಪೇದೆಯನ್ನು ಹಾಸಿನಿಂದ ಹೊರಗೆ ತೆಗೆದಿಟ್ಟು, ಹೊಸ ಕಾಯಿಯನ್ನು ಆ ಮನೆಯಲ್ಲಿಟ್ಟು ಅದರಿಂದ ಅವನ ಕೈ ತೆಗೆದಾಗ; ಇಂಥ ಸಂದರ್ಭದಲ್ಲಿ ಆಟಗಾರ ಈ 8ನೆಯ ಮನೆಗೆ ಪೇದೆಯನ್ನು ಸರಿಸಿ, ಕೈತೆಗೆದುಬಿಟ್ಟರೆ ಹೆಜ್ಜೆ ಪೂರ್ತಿಯಾದಂತಾಗಲಿಲ್ಲ, ಆದರೆ ಅವನು ಆ ಪೇದೆಯ ಆಟವನ್ನು ಬಿಟ್ಟು ಬೇರೇನನ್ನೂ ಆಡಲಾರ.

ಆಟವೊಂದರ ಮಧ್ಯದಲ್ಲಿ ನಿಯಮಬಾಹಿರವಾದ ಹೆಜ್ಜೆಯೊಂದು ಇಡಲ್ಪಟ್ಟರೆ, ಅದನ್ನು ರದ್ದುಪಡಿಸಿ ಹೊಸದಾಗಿ ಆಡಬಹುದು. ಹಾಗೆ ಮಾಡುವಾಗಲೂ ಹೆಜ್ಜೆಯನ್ನು ಬದಲಾಯಿಸಬಹುದೇ ವಿನಾ ಕಾಯಿಯನ್ನಲ್ಲ.

ಆಟದ ಪ್ರಾರಂಭದಲ್ಲಿಯೇ ಕಾಯಿಗಳನ್ನು ಸರಿಯಾದ ಸ್ಥಾನದಲ್ಲಿಟ್ಟಿರಲಿಲ್ಲವೆಂಬುದು ಸ್ಪಷ್ಟವಾದರೆ ಸ್ವಲ್ಪ ಮುಂದುವರಿದಿದ್ದರೂ ಆ ಆಟವನ್ನು ರದ್ದುಪಡಿಸತಕ್ಕದ್ದು. ಹಾಸನ್ನು ಸರಿಯಾಗಿ ಇಟ್ಟಿಲ್ಲವೆಂದು ತಿಳಿದಾಗಲೂ ಇದೇ ನಿಯಮ.

ಪ್ರತಿಯೊಬ್ಬ ಆಟಗಾರನೂ ತನಗೆ ನಿಗದಿಯಾದಷ್ಟು ವೇಳೆಯ ಮಿತಿಯಲ್ಲಿ ನಿಗದಿ ಮಾಡಿದಷ್ಟು ಹೆಜ್ಜೆಗಳನ್ನು ಇಡಬೇಕು. ಇವುಗಳ ಮಿತಿಯನ್ನು ಆಟದ ಪ್ರಾರಂಭದಲ್ಲಿಯೇ ನಿರ್ಧರಿಸುತ್ತಾರೆ.

ಪಂದ್ಯದ ಆಯಾ ದಿವಸ ನಿಗದಿಮಾಡಿದ ಅವಧಿಯಲ್ಲಿ ಆಟವೊಂದು ಮುಗಿಯದಿದ್ದರೆ, ಅದನ್ನು ಮರುದಿನ ಅಥವಾ ಮುಂದೆ ಯಾವುದಾದರೂ ಒಂದು ದಿನಕ್ಕೆ ಮುಂದುವರಿಸಲಾಗುವುದು.

ನಿಗದಿಪಡಿಸಿದ ಅವಧಿಯಲ್ಲಿ ನಿಗದಿ ಮಾಡಿದಷ್ಟು ಹೆಜ್ಜೆಗಳನ್ನು ಇಡಲಾಗದ ಆಟಗಾರ ಸೋತಂತೆ. ಅಂತೆಯೇ ಆಟಕ್ಕೆ ಒಂದು ಗಂಟೆಗಿಂತಲೂ ಹೆಚ್ಚು ತಡವಾಗಿ ಬಂದವನು, ನಿಯಮಕ್ಕೆ ಬದ್ಧನಾಗಿ ಆಡದವನು ಸೋತಂತೆಯೇ ಲೆಕ್ಕ.

**III. ಇತಿಹಾಸ :** 1 ಚದುರಂಗದ ಮೂಲ : ಆಟದ ಮೂಲಸ್ಥಾನ ಯಾವುದೆಂಬುದು ಖಚಿತವಾಗಿ ತಿಳಿದಿಲ್ಲ. ಗ್ರೀಕರು, ರೋಮನ್ನರು, ಬ್ಯಾಬಿಲೋನಿಯನ್ನರು, ಸಿಥಿಯನ್ನರು, ಈಜಿಪ್ಷಿಯನ್ನರು, ಯೆಹೂದಿಗಳು, ಪರ್ಷಿಯನ್ನರು, ಚೀನಿಯರು, ಹಿಂದುಗಳು, ಅರಬರು, ಆರಕೇನಿಯನ್ನರು, ಐರಿಷ್ ಹಾಗೂ ವೆಲ್ಷ್ ಮುಂತಾದವರಲ್ಲಿ ಯಾರೂ ಇದರ ಮೂಲಪುರುಷರಾಗಿರಲಿಕ್ಕೆ ಸಾಕು. ನಿರ್ದಿಷ್ಟ ವ್ಯಕ್ತಿಯೊಬ್ಬನಿಂದ ಈ ಆಟದ ಜನನವಾಯಿತೆಂದು ಇನ್ನು ಕೆಲವರ ಹೇಳಿಕೆ ; ಪ್ರಮುಖವಾಗಿ ಜಾಫೀತ್, ಷೆಮ್, ದೊರೆ ಸಾಲೊಮನ್, ರಾವಣನ ಪತ್ನಿ ಮಂಡೋದರಿ, ಜರ್ಕ್‌ಸೀಜ್, ಪಾಲಾಮೀಡ್ಸ್, ಅರಿಸ್ಟಾಟಲ್, ಸಿಮಿರಾಮಿಸ್, ಜಿನೋಬಿಯ, ಆಟಾಲಸ್, ಹಾನ್–ಸಿಂಗ್, ಪರ್ಷಿಯದ ಖಗೋಳಶಾಸ್ತ್ರಜ್ಞನೆನಿಸಿಕೊಂಡ ಬ್ರಾಹ್ಮನ್ ಸಿಸಾ ಹಾಗೂ ಶತ್ರೇಂಶ್ಚಾ– ಇವರ ಹೆಸರುಗಳು ಕೇಳಿಬರುತ್ತವೆ. ಇವಾವುದನ್ನೂ ಖಚಿತವಾಗಿ ನಂಬುವಂತಿಲ್ಲ.

ಎನ್. ಬ್ಲ್ಯಾಂಡ್ (1850) ಎಂಬಾತ ತನ್ನ ಪರ್ಷಿಯನ್ ಚೆಸ್ ಎಂಬ ಪುಸ್ತಕದಲ್ಲಿ ಪರ್ಷಿಯನ್ನರೇ ಚದುರಂಗದ ಸಂಶೋಧಕರೆಂದು ಸಾಧಿಸಲು ಪ್ರಯತ್ನಿಸಿದ್ದಾನೆ. ಅವನ ಹೇಳಿಕೆಯಂತೆ ಪರ್ಷಿಯದಲ್ಲಿ ಹುಟ್ಟಿದ ಈ ಆಟ ಬಹುಕಾಲ ಹಿಂದೂಸ್ಥಾನದಲ್ಲಿ ಮನೆಮಾಡಿಕೊಂಡಿದ್ದು ಪುನಃ ಪರ್ಷಿಯಕ್ಕೆ ಮರಳಿತು. ಭಾರತದಲ್ಲಿ ಈ ಆಟ ಹುಟ್ಟಿ ಬೆಳೆದು ಬಂದಿತೆಂಬ ವಿಷಯವನ್ನು ಸದ್ಯಕ್ಕೆ ಬಹುಜನ ಒಪ್ಪಿದ್ದಾರೆ. ಚದುರಂಗದಲ್ಲಿ ಬಹುಕಾಲದಿಂದ ಆಸ್ಥೆ, ಪ್ರಾವೀಣ್ಯಗಳನ್ನು ಪಡೆದುಬಂದಿರುವ ರಷ್ಯನ್ನರು ಇತ್ತೀಚೆಗೆ(1934) ಭಾರತವೇ ಚದುರಂಗದ ತವರುಮನೆಯೆಂದು ಸಾರಿದ್ದಾರೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಥಾಮಸ್ ಹೈಡ್ ಎಂಬಾತ ಪ್ರಪ್ರಥಮವಾಗಿ ಈ ಅಭಿಪ್ರಾಯವನ್ನು ಪ್ರತಿಪಾದಿಸಿದಂತೆ ಕಾಣುತ್ತದೆ. ಆದರೆ ಅವನಿಗೇ ಆಟದ ಪರಿಚಯವಿದ್ದಂತಿಲ್ಲ. ಆ ಕಾಲಕ್ಕೆ ಸಂಸ್ಕೃತದ ದಾಖಲೆಗಳು ಅವನಿಗೆ ದೊರೆತಂತೆ ಕಾಣುವುದಿಲ್ಲ. ಸು. 1783–89ರ ಸುಮಾರಿಗೆ ಸರ್ ವಿಲಿಯಂ ಜೋನ್ಸ್ ಎಂಬಾತ ಏಷ್ಯಾಟಿಕ್ ರಿಸರ್ಚಸ್ ಎರಡನೆಯ ಸಂಪುಟದಲ್ಲಿ ಬರೆದ ಪ್ರಬಂಧವೊಂದರಲ್ಲಿ ಈ ಅಭಿಪ್ರಾಯವನ್ನು ಎತ್ತಿ ಹಿಡಿದಿದ್ದಾನೆ. ಅವನ ಹೇಳಿಕೆಯಂತೆ ಈ ಆಟ ಭಾರತದಲ್ಲಿ ಅನಾದಿಕಾಲದಿಂದಲೂ ಇತ್ತು. ಚತುರಂಗ ಅಥವಾ ಚದುರಂಗವೆಂಬ ಇದರ ಹೆಸರಿನಲ್ಲಿ ಆನೆ, ಕುದುರೆ, ರಥ, ಕಾಲಾಳುಗಳ ಸಂಕೇತವಿದೆ. ಚತುರಂಗ ಬಲ ಎಂಬ ಪದಪ್ರಯೋಗ ಭಾರತದ ಪುರಾಣ ಕವಿಗಳಲ್ಲಿ ಸರ್ವೇಸಾಮಾನ್ಯ. ಜೋನ್ಸನ ಈ ಪ್ರಬಂಧ ಭವಿಷ್ಯ ಪುರಾಣದಲ್ಲಿ ವರ್ಣಿಸಲಾದ, ನಾಲ್ಕು ಕೈಗಳಿಂದ ದಾಳ ಹಾಕಿ ಆಡುವ ಆಟದ ಭಾಷಾಂತರವಿದ್ದಂತೆ ಇದೆ. ರಾಧಾಕಾಂತನೆಂಬ ಪಂಡಿತಶ್ರೇಷ್ಠ ಜೋನ್ಸನಿಗೆ ಈ ಆಟದ ಪ್ರಾಚೀನತೆಯ ಬಗ್ಗೆ ವಸ್ತುವನ್ನು ಒದಗಿಸಿದನಂತೆ. ತ್ರೇತಾಯುಗದಲ್ಲಿ ಮಂಡೋದರಿ ಲಂಕಾ ದ್ವೀಪವನ್ನು ರಾಮ ಆಕ್ರಮಿಸುತ್ತಿರುವಾಗ ರಾವಣನ ಮನೋರಂಜನೆಗಾಗಿ ಈ ಆಟವನ್ನು ಕಂಡುಹಿಡಿದಳೆನ್ನಲಾಗಿದೆ. ಇದು ಒಂದು ವೇಳೆ ನಿಜವೇ ಆಗಿದ್ದರೆ ಈ ಚದುರಂಗದ ಆಟ 4000 ದಿಂದ 5000ವರ್ಷಗಳಿಗೂ ಹೆಚ್ಚು ಕಾಲದಿಂದ ಅಸ್ತಿತ್ವದಲ್ಲಿದೆ ಯೆನ್ನಬಹುದು. ಜೋನ್ಸ್ ಈ ಮೇಲಿನ ಆಧಾರಗಳಿಗಿಂತಲೂ ಹೆಚ್ಚಾಗಿ ಪರ್ಷಿಯನ್ನರ ಹೇಳಿಕೆಯ ಆಧಾರಗಳನ್ನು ಅವಲಂಬಿಸಿ ವಾದಿಸಿದ್ದಾನಾದರೂ ಚದುರಂಗ ಭಾರತದಲ್ಲೇ ಹುಟ್ಟಿದ್ದನ್ನು ಬೆಂಬಲಿಸುವುದಷ್ಟೇ ಅಲ್ಲ, ಪರ್ಷಿಯನ್ನರು ಹೇಳುವ ಆಟಕ್ಕಿಂತ ಇದು ಭಿನ್ನ ಎಂಬುದನ್ನು ತಿಳಿಸುತ್ತಾನೆ. ಅವನ ಹೇಳಿಕೆಯಂತೆ ಚೆಸ್‌ನ ಮೂಲ ಸಂಸ್ಕೃತ ಶಬ್ದ ಪ್ರ.ಶ. 6ನೆಯ ಶತಮಾನದಲ್ಲಿ ಭಾರತದಿಂದ ಪರ್ಷಿಯಕ್ಕೆ ರವಾನೆ ಮಾಡಲ್ಪಟ್ಟಿತು; ಉಚ್ಚಾರದೋಷದಿಂದಾಗಿ ಇದು ಚಿತ್ರಂಗವಾಗಿ ತದ್ಭವವಾಯಿತು. ಆನಂತರದಲ್ಲಿ ಪರ್ಷಿಯವನ್ನು ಆಕ್ರಮಿಸಿದ ಅರಬರ ಭಾಷೆಯಲ್ಲಿ ಚ. ವಾಗಲೀ ಗ ವಾಗಲೀ ಇಲ್ಲದ ಕಾರಣ ಅವರು ಇದನ್ನೇ ಶತರಂಜ ಎಂದು ಪರಿವರ್ತಿಸಿದರು. ಇದೇ ಶಬ್ದ ಕಾಲಕ್ರಮದಲ್ಲಿ, ಬಹುಶಃ ಮೊಘಲರ ಸಂಗಡ, ಭಾರತವನ್ನು ಪ್ರವೇಶಿಸಿತು. ಎಚ್. ಜೆ. ಆರ್. ಮರೆ ತನ್ನ ಚದುರಂಗದ ಇತಿಹಾಸ (1913) ಎಂಬ ಪುಸ್ತಕದಲ್ಲಿ ಈ ಆಟ ಭಾರತದಲ್ಲಿ 7ನೆ ಶತಮಾನದಲ್ಲಿ ಆಡಲ್ಪಡುತ್ತಿದ್ದ ಆಟವೊಂದರ ಪ್ರತಿರೂಪ ಎಂಬ ನಿರ್ಣಯಕ್ಕೆ ಬಂದಿದ್ದಾನೆ. ಈ ತಿಳುವಳಿಕೆ ಹಾಗೂ ನಿರ್ಣಯಕ್ಕೆ, ಆಟದ ಹೆಸರು ಹಾಗೂ ಕಾಯಿಗಳ ಹೆಸರುಗಳು ಪುಷ್ಟಿಕೊಡುತ್ತವೆ. ಪೌರಸ್ತ್ಯ ದೇಶಗಳ ಬಗ್ಗೆ ಅಧಿಕಾರಯುತವಾಗಿ ಹೇಳಬಲ್ಲ ಬ್ರಿಟಿಷನಾದ ಡಂಕನ್ ಫೋರ್ಬ್ಸ್ ಎಂಬಾತನ 'ಚದುರಂಗದ ಇತಿಹಾಸ' (1860) ಎಂಬ ಪುಸ್ತಕದಲ್ಲಿ ಎತ್ತಿ ಹೇಳಿದಂತೆ, ಶತರಂಜ ಶಬ್ದ ಪರ್ಷಿಯನ್ನರಿಗಾಗಲೀ, ಅರಬರಿಗಾಗಲೀ ಪರಕೀಯವಾದದ್ದು. ಆದರೆ ಚತುರಂಗವೆಂಬ ಶಬ್ದದಿಂದ ಅದರ ವ್ಯುತ್ಪತ್ತಿಯನ್ನು ಗುರುತಿಸುವುದು ಹೆಚ್ಚು ಸಹಜ ಹಾಗೂ ನೈಸರ್ಗಿಕ. ಅರಬ್ಬಿಯಂತೆ ಅಲ್–ಫಿಲ್ ಎಂದು ಒಂಟೆಗೆ ಹೇಳುವುದರ ಅರ್ಥ ಆನೆಯೆಂದು ಆಗುತ್ತದೆ, ಇಲ್ಲವೇ ಅಲ್‌ಫಿಂಡ್ ಎಂದರೆ ಭಾರತದ ಹೋರಿಯೆಂದು ಆಗುತ್ತದೆ. ಮಸೂದಿ ಎಂಬ ಅರಬನೇ ಚದುರಂಗದ ಬಗ್ಗೆ ಅಧಿಕೃತವಾಗಿ ಪ್ರಪ್ರಥಮವಾಗಿ ಬರೆದ ಲೇಖಕ (ಸು.950). ಅವನ ಹೇಳಿಕೆಯಂತೆ ಶತರಂಜ ಅವನ ಕಾಲಕ್ಕಿಂತಲೂ ಬಹುಕಾಲದ ಮೊದಲೇ ಅಸ್ತಿತ್ವದಲ್ಲಿತ್ತು.

2. ಪ್ರಾಚೀನ ಮತ್ತು ಮಧ್ಯಯುಗ : ಚದುರಂಗದ ಮೂಲವೆಷ್ಟು ಅಸ್ಪಷ್ಟವಾಗಿದೆಯೋ ಅಷ್ಟೇ ಸಂದಿಗ್ಧವಾಗಿದೆ, ಅದರ ಮುಂದಿನ ಚರಿತ್ರೆ. ಪರ್ಷಿಯದ ಕವಿ ಫಿರ್ದೂಸಿ ಅವನ ಐತಿಹಾಸಿಕ ಮಹಾಕಾವ್ಯ ಶಹಾನಾಮಾದಲ್ಲಿ ಶತರಂಜ ಆಟದ ಬಗ್ಗೆ ಉಲ್ಲೇಖ ಮಾಡಿದ್ದಾನೆ. ಆ ಕಾಲದ ಪರ್ಷಿಯನ್ ದೊರೆ ಖುಸ್ರು I ಅನುಶಿರ್ವಾನನ (531–79) ಆಸ್ಥಾನಕ್ಕೆ ಆ ಕಾಲದ ಭಾರತ ಸಾರ್ವಭೌಮನ ಕಡೆಯಿಂದ ರಾಯಭಾರಿಗಳು ಚದುರಂಗದ ಕಾಯಿ ಮತ್ತು ಹಾಸುಮಣೆಯನ್ನು ತಂದಿದ್ದರಂತೆ. ತಂದವರು ಅವನ್ನು ಅರಸನಿಗೆ ತೋರಿ ಚದುರಂಗದ ಆಟದ ಗತ್ತನ್ನು ತಿಳಿಸಬೇಕೆಂದು ಕೋರಿದರಂತೆ. ದೊರೆ ಈ ಬಗ್ಗೆ ಏಳು ದಿವಸಗಳ ಗಡುವನ್ನು ಪಡೆದುಕೊಂಡನಾದರೂ ಅವನ ಆಸ್ಥಾನವಿದ್ವಾಂಸರಿಗೆ ಆಟದ ಗುಟ್ಟನ್ನು ಕಂಡುಹಿಡಿಯಲಾಗಲಿಲ್ಲ. ಕೊನೆಗೆ ಅವನ ಮಂತ್ರಿ ಒಂದು ಹಗಲು ಒಂದು ರಾತ್ರಿ ವಿಚಾರ ಮಾಡಿ ಅದರ ಗುಟ್ಟನ್ನು ಕಂಡುಹಿಡಿದನಾಗಿ ಫಿರ್ದೂಸಿ ಹೇಳುತ್ತಾನೆ. ಅಲ್ಲದೆ ಆ ಮಂತ್ರಿ ಭಾರತಕ್ಕೆ ಬಂದು ತಾನೇ ಕಂಡುಹಿಡಿದ ನಾರ್ದ್ ಎಂಬ ಆಟವನ್ನು ಹಿಂದೂಗಳೆದುರು ಇಟ್ಟಾಗ ಅವರಿಗೆ ಅದರ ಗುಟ್ಟನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲವೆಂದೂ ವರದಿ ಮಾಡಿದ್ದಾನೆ.

ಉಳಿದ ಪರ್ಷಿಯನ್ ಹಾಗೂ ಅರಬ್ಬಿ ಲೇಖಕರು ಕೂಡ ಸಾಧಾರಣವಾಗಿ ಒಮ್ಮತದಿಂದ ಶತರಂಜ್ ಹಿಂದೂಸ್ಥಾನದಿಂದಲೇ ತಮ್ಮ ದೇಶಕ್ಕೆ ಬಂದಿತ್ತೆಂದು ಒಪ್ಪುತ್ತಾರೆ. ಈ ರೀತಿ ಪರ್ಷಿಯಕ್ಕೆ ಬಂದ ಚದುರಂಗ ಬಹುಶಃ 10ನೆಯ ಶತಮಾನದಲ್ಲಿ ನೇರವಾಗಿಯೋ ಪರ್ಯಾಯವಾಗಿಯೋ ಯುರೋಪಿನ ಬೇರೆ ಬೇರೆ ಭಾಗಗಳಿಗೂ ಅಲ್ಲಿಂದ ಜಗತ್ತಿನ ಇತರ ಪ್ರದೇಶಗಳಿಗೂ ಹಬ್ಬಿತು.

ಕ್ರಮೇಣ ಆಟದಲ್ಲಿಯ ಹೆಜ್ಜೆಗಳಲ್ಲಿ ಅನೇಕ ಬದಲಾವಣೆಗಳಾದವು. ರಾಜನ ಹೆಜ್ಜೆ ಹೆಚ್ಚು ಕಡಿಮೆ ಈಗಿನಂತೆಯೇ ಆದರೆ ರಾಜ ಮತ್ತು ಆನೆಗಳ ಕೋಟೆ ಕಟ್ಟುವ ಹೆಜ್ಜೆ ಯುರೋಪಿನ ಕಾಣಿಕೆ. ಅದಕ್ಕೆ ಮೊದಲು ರಾಜ ಒಮ್ಮೆಲೆ ಎರಡು–ಮೂರು ಹಾಗೂ ಕೆಲವೊಮ್ಮೆ Kt2 ಹೆಜ್ಜೆಯನ್ನೂ ಇಡಬಲ್ಲವನಾಗಿದ್ದ. ಯುರೋಪಿನ ಆಟದ ರಾಣಿಯೇ ಭಾರತದ ಆಟದ ಮಂತ್ರಿ. ಈ ಕಾಯಿ ಮಾತ್ರ ದೇಶದಿಂದ ದೇಶಕ್ಕೆ ಕಾಲದಿಂದ ಕಾಲಕ್ಕೆ ಲಿಂಗದಲ್ಲಿ ಹಾಗೂ ಅದರ ಪ್ರಭಾವ ಶಕ್ತಿಗಳಲ್ಲಿ ತೀವ್ರತರ ಬದಲಾವಣೆಯನ್ನು ಹೊಂದಿದೆ. ಒಂದು ಕಾಲಕ್ಕೆ ಈ ಮಂತ್ರಿ ಕೋನದಲ್ಲಿ ಚಲಿಸುತ್ತಿದ್ದು ಒಂದು ಸಲಕ್ಕೆ ಒಂದೇ ಹೆಜ್ಜೆಯನ್ನು ಹಾಕುತ್ತ ಅತಿ ದುರ್ಬಲ ಕಾಯಿಯಾಗಿತ್ತು. 15ನೆಯ ಶತಮಾನದ ಅನಂತರವೇ ಈ ಕಾಯಿಗೆ ಈಗಿನ ಶಕ್ತಿ ಬಂದಂತೆ ಕಾಣುತ್ತದೆ. ಹಳೆಯ ಪದ್ಧತಿಯಂತೆ ಎರಡು ಮಂತ್ರಿಗಳೂ ಬೇರೆ ಬೇರೆ ಬಣ್ಣದ ಮನೆಗಳಲ್ಲಿ ತಿರುಗುತ್ತಿದ್ದು, ಒಂದನ್ನೊಂದು ಪರಸ್ಪರ ಭೇಟಿಯಾಗುತ್ತಲೇ ಇರಲಿಲ್ಲ. ಒಂಟೆಯಾದರೂ ಕೇವಲ ಸೀಮಿತವಾದ ಶಕ್ತಿಯನ್ನು ಹೊಂದಿದ್ದು, ಕೋನದಲ್ಲಿ ಕೇವಲ ಎರಡು ಮನೆ ಮಾತ್ರ ಚಲಿಸುತ್ತಿತ್ತು, ಹಾಗೂ ಮಧ್ಯದಲ್ಲಿ ಕಾಯಿಗಳಿರಲಿ ಇಲ್ಲದಿರಲಿ ಅವುಗಳ ಮೇಲೆ ಹಾದು ಮಾತ್ರ ಹೋಗುತ್ತಿತ್ತೇ ವಿನಾ ಮಧ್ಯದ ಮನೆಗಳ ಮೇಲೆ ಹತೋಟಿಯಿರಲಿಲ್ಲ. ಚದುರಂಗದ ಹಾಸುಗಳಲ್ಲಿ ಕೇವಲ ಚೌಕಗಳು ಇರುತ್ತಿದ್ದುವೇ ಹೊರತು ಬಣ್ಣವಿರುತ್ತಿರಲಿಲ್ಲ. 13ನೆಯ ಶತಮಾನದಲ್ಲಿ ಯುರೋಪಿನಲ್ಲಿ ಮಾತ್ರ ಎರಡು ಬಣ್ಣದ ಮನೆಗಳುಳ್ಳ ಚದುರಂಗದ ಹಾಸುಗಳ ಉಪಯೋಗ ಇತ್ತು ಎನ್ನಲಾಗಿದೆ.

**3. ಆಟದ ಬೆಳೆವಣಿಗೆ :** ಇಂದು ನಾವು ಕಾಣುತ್ತಿರುವ, ಆಡುವ ಚದುರಂಗದ ವಿಧಾನ ಹಳೆಯ ಪದ್ಧತಿಗಿಂತ ತೀರ ವಿಭಿನ್ನವಾಗಿದ್ದು ಈ ಹೊಸ ಆವಿಷ್ಕಾರ ಬಹುಶಃ ಫ್ರಾನ್ಸ್‌ನಲ್ಲಿ ಆದಂತೆ ಕಾಣುತ್ತದೆ. ಬಹುಶಃ 15ನೆಯ ಶತಮಾನದ ಸುಮಾರಿಗೆ ಸ್ಪೇನ್ ಮತ್ತು ಇಟಲಿಯನ್ನು ಈ ಹೊಸ ವಿಧಾನ ಪ್ರವೇಶಿಸಿತು.

18ನೆಯ ಶತಮಾನದ ಮಧ್ಯಭಾಗ ಚದುರಂಗದಲ್ಲಿ ಹೊಸ ಅಧ್ಯಾಯವನ್ನೇ ಪ್ರಾರಂಭಿಸಿತು. ಫಿಲಿಡೋರ್ ಎಂಬಾತ ಈ ದಿಶೆಯಲ್ಲಿ ಮುಂಚೂಣಿಯಲ್ಲಿದ್ದ (1726–95). 11ನೆಯ ಶತಮಾನದಲ್ಲಿ ಪರ್ಷಿಯನ್ನರು ಹಾಗೂ ಅರಬರು ಪ್ರದರ್ಶಿಸುತ್ತಿದ್ದ ಕಣ್ಣು ಕಟ್ಟಿಕೊಂಡು ಆಡುವ ವಿಧಾನವನ್ನು ಫಿಲಿಡೋರ್ ಪುನಃ ಪ್ರಾರಂಭಿಸಿದ. ಏಕಕಾಲಕ್ಕೆ ಮೂವರು ಆಟಗಾರರೊಂದಿಗೆ ಮೂರು ಆಟಗಳನ್ನು, ಕಣ್ಣು ಕಟ್ಟಿಕೊಂಡು, ಆಟಗಾರರನ್ನಾಗಲಿ, ಆಟದ ಮಣೆಯನ್ನಾಗಲಿ ನೋಡದೆ ಅವನು ಆಡಬಲ್ಲವನಾಗಿದ್ದ.

19ನೆಯ ಶತಮಾನದಲ್ಲಿ ಜೆ.ಎಚ್. ಸರತ್ ಎಂಬಾತ ಇಂಗ್ಲಿಷರ ಹೊಸ ಚೆಸ್‌ನ ವಿಚಾರಧಾರೆಯನ್ನು ಪ್ರಾರಂಭಿಸಿದ. 1824ರಲ್ಲಿ ಕ್ಯಾಪ್ಟನ್ ಡಬ್ಲ್ಯೂ. ಡಿ. ಎವಾನ್ಸ್ ಎಂಬಾತ ಎವಾನ್ಸ್ ಗ್ಯಾಂಬಿಟ್ ಎಂಬ ಒಂದು ಆಟದ ವರಸೆಯನ್ನು ಕಂಡುಹಿಡಿದ. 19ನೆಯ ಶತಮಾನದ 5ನೆಯ ದಶಕದ ತರುವಾಯ ಇಂಥ ವರಸೆಗಳ ಪರಂಪರೆ ಫ್ರಾನ್ಸಿನಿಂದ ಇಂಗ್ಲೆಂಡಿಗೆ ಬಂತು.

ಫಿಲಿಡೋರನ ಕಾಲಮಾನದಲ್ಲಿ ಏಕಕಾಲದಲ್ಲಿ ಮೂವರು ಆಟಗಾರರೊಂದಿಗೆ ಮೂರು ಬೇರೆ ಬೇರೆ ಆಟಗಳನ್ನು ಕಣ್ಣು ಕಟ್ಟಿಕೊಂಡು ಆಡುವುದು ನಂಬಲಸಾಧ್ಯವಾದ ಮಹಾಸಾಧನೆಯೆಂದು ತಿಳಿಯಲ್ಪಡುತ್ತಿದ್ದರೆ, ಲೂಯಿಸ್ ಪಾಲ್ಸನ್, ಮೊದಲಾದವರು ಇಂಥ ಕಣ್ಣು ಕಟ್ಟಿ ಆಡುವ 10–12 ಆಟಗಳನ್ನು ಏಕಕಾಲಕ್ಕೆ ಆಡಬಲ್ಲವರಾಗಿದ್ದರು. ಅಲೆಕ್ಸಾಂಡರ್ ಇಂಥ 28–29 ಆಟಗಳನ್ನು ಆಡುತ್ತಿದ್ದ. 1933ರಲ್ಲಿ ಅಲೆಖೈನ್ ಹೀಗೆ 32 ಆಟಗಳನ್ನು ಆಡಿದರೆ ಜಿ.ಕೋಲ್ವನೋವ್‌ಸ್ಕಿ ಎಂಬಾತ 1937ರಲ್ಲಿ 34 ಆಟಗಳನ್ನು ಆಡಿದ. 1943ರಲ್ಲಿ ಮಿಗುಯೆಲ್ ನಜ್‌ಡಾರ್ಫ್ ಎಂಬಾತ ಆ ಮೊದಲಿನ ಎಲ್ಲ ವಿಕ್ರಮಗಳ ದಾಖಲೆಯನ್ನೂ ಮುರಿದು ಒಂದೇ ಸಲಕ್ಕೆ 40 ಆಟಗಳನ್ನೂ ಆಡಿದ. ಅವನೇ ಮತ್ತೆ 1947ರಲ್ಲಿ 45 ಆಟಗಳನ್ನು ಆಡಿ ಹೊಸ ದಾಖಲೆಯನ್ನು ಸ್ಥಾಪಿಸಿದ.

1930ರ ವರೆಗೂ ಜರ್ಮನಿ ಹಾಗೂ ಮಧ್ಯ ಯುರೋಪಿನ ದೇಶಗಳು ಈ ಆಟದ ದಾಖಲೆಗಳ ಮುಂಚೂಣಿಯಲ್ಲಿದ್ದುವು; ಆದರೆ 1931–37ರ ಅವಧಿಯಲ್ಲಿ ನಡೆದ ಎಲ್ಲ ನಾಲ್ಕು ಸ್ಪರ್ಧೆಗಳಲ್ಲೂ ಅಮೆರಿಕ ವಿಜಯಗಳಿಸಿತು. ಅದೇ ಸುಮಾರಿಗೆ ರಷ್ಯದಲ್ಲಿ ಚದುರಂಗಕ್ಕೆ ಸರ್ಕಾರದ ಬೆಂಬಲವು ದೊರೆತು ಕೆಲವು ಅತ್ಯುತ್ತಮ ಆಟಗಾರರೂ ಅಲ್ಲಿ ತಯಾರಾದರು. ಸು.1945 ರಲ್ಲಿ ರಷ್ಯ ಚದುರಂಗ ಜಗತ್ತಿನಲ್ಲಿ ಅತ್ಯಂತ ಪ್ರಬಲ ರಾಷ್ಟ್ರವೆನಿಸಿಕೊಂಡಿತು. ಅದರ ಶ್ರೇಷ್ಠತಮ ಆಟಗಾರರಾದ ಮಿಕ್‌ಹೇಲ್ ಬಾಟವಿನಿಕ್, ವ್ಯಾಸಿಲಿ ಸ್ಮೈಸ್‌ಲೋವ್, ಡೇವಿಡ್ ಬ್ರಾನ್‌ಸ್ಟೀನ್, ಅಲೆಕ್ಸಾಂಡರ್ ಕೋಟೋಫ್, ಐಸಾಕ್ ಬೋಲ್‌ಲೆಸ್ಲಾವ್‌ಸ್ಕಿ ಮೊದಲಾದವರು ಬಹಳ ಪ್ರಸಿದ್ಧಿ ಹೊಂದಿದರು. ರಷ್ಯ ಮತ್ತು ಅಮೆರಿಕೆಯ ನಡುವೆ ನಡೆದ ರೇಡಿಯೋ ಮ್ಯಾಚ್‌ನಲ್ಲಿ ರಷ್ಯ ಅಮೆರಿಕವನ್ನು 15 – 4 ಪಾಯಿಂಟ್‌ಗಳಿಂದ ಸೋಲಿಸಿ ತನ್ನ ಶ್ರೇಷ್ಠತೆಯನ್ನು (1973 ವರೆಗೂ) ಉಳಿಸಿಕೊಂಡಿತು. ಕಾಲಕ್ರಮೇಣ ರಷ್ಯದಲ್ಲಿ ಎ. ಗೆಲ್ಲರ್, ಟಿ. ಪೆಟ್ರೋಸಿಯನ್, ಎಂ. ಟೈಮನೋವ್, ಬಿ.ಸ್ಪಾಸ್ಕಿ, ಎಂ. ಟಾಲ್ ಮೊದಲಾದ ಶ್ರೇಷ್ಠದರ್ಜೆಯ ಆಟಗಾರರು ತಯಾರಾದರು.

**4. ಜಾಗತಿಕ ಶರ್ಯತ್ತು ;** ಚದುರಂಗದ ಅತಿ ಬಲಶಾಲೀ ಆಟಗಾರರಾಗಿ ಜಾಗತಿಕ ವಿಕ್ರಮ ಸ್ಥಾಪಿಸಿದವರಲ್ಲಿ ಪ್ರಮುಖರು ಈ ಕೆಳಗಿನಂತಿದ್ದಾರೆ :

| | |
|---|---|
| 1747–95 | ಫಿಲಿಡೋರ್ (ಫ್ರಾನ್ಸ್) |
| 1815–20 | ಡೆಷಾಪೆಲ್ಲೀಸ್ (ಫ್ರಾನ್ಸ್) |
| 1820–40 | ಲಾ ಬೂರ್ಡನಾಯ್ಸ್ (ಫ್ರಾನ್ಸ್) |
| 1843–51 | ಸ್ಟಾನ್‌ಟನ್ (ಇಂಗ್ಲೆಂಡ್) |
| 1851–58 | ಆ್ಯಂಡರ್‌ಸನ್ (ಜರ್ಮನಿ) |
| 1858–59 | ಮಾರ್ಫಿ (ಅ.ಸಂ.ಸಂ.) |
| 1862–66 | ಅಡಾಲ್ಫ್ ಆ್ಯಂಡರ್ ಸನ್ (ಜರ್ಮನಿ) |
| 1866 –1878 | ವಿಲ್‌ಹೆಲ್ಮ್ ಸ್ಟೇನಿಟ್ಸ್(ಆಸ್ಟ್ರಿಯ) |
| 1878 –1886 | ಜೊಹಾನೀಸ್ ಸೂಕರ್‌ಟಾರ್ಟ್(ಪ್ರಷ್ಯ) |
| 1886 –1894 | ವಿಲ್‌ಹೆಲ್ಮ್ ಸ್ಟೇನಿಟ್ಸ್ (ಆಸ್ಟ್ರಿಯ) |
| 1894 –1921 | ಇಮ್ಯಾನ್ಯುಅಲ್ ಲಸ್ಕರ್ (ಜರ್ಮನ್ ಎಂಪೈರ್) |
| 1921 –1927 | ಜೋಸ್ ರೌಲ್ ಕಾಪಬ್ಲಾಂಕ (ಜರ್ಮನ್ ಎಂಪೈರ್) |
| 1927 –1935 | ಅಲೆಕ್ಸಾಂಡರ್ ಅಲೆಖೈನ್, (ಫ್ರಾನ್ಸ್) |
| 1937 –1946 | ಅಲೆಕ್ಸಾಂಡರ್ ಅಲೆಖೈನ್, (ಫ್ರಾನ್ಸ್) |
| 1935–1937 | ಮ್ಯಾಕ್ಸ್ ಇವೇ(ನೆದರ್‌ಲ್ಯಾಂಡ್ಸ್) |
| 1948–1957 | ಮಿಖಿಲ್ ಬಾಟ್ವಿನಿಕ್ (ಸೋವಿಯತ್ ಯೂನಿಯನ್) |
| 1957–1958 | ವಾಸಿಲಿ ಸ್ಮೈಸ್ಲೋವ್ (ಸೋವಿಯತ್ ಯೂನಿಯನ್) |
| 1958–1960 | ಮಿಖಿಲ್ ಬಾಟ್ವಿನಿಕ್ (ಸೋವಿಯತ್ ಯೂನಿಯನ್) |
| 1961–1963 | ಮಿಖಿಲ್ ಬಾಟ್ವಿನಿಕ್ (ಸೋವಿಯತ್ ಯೂನಿಯನ್) |
| 1960–1960 | ಮಿಖಾಇಲ್ ತಾಲ್ (ಸೋವಿಯತ್ ಯೂನಿಯನ್) |
| 1963–1969 | ಟಿಗ್ರಾನ್ ಪೆಟ್ರೋಸಿಯನ್ (ಸೋವಿಯತ್ ಯೂನಿಯನ್) |
| 1969–1972 | ಬೋರಿಸ್ ಸ್ಪಾಸ್ಕಿ.( ಸೋವಿಯತ್ ಯೂನಿಯನ್) |
| 1972–1975 | ಬಾಬಿ ಫಿಷರ್ (ಅಮೆರಿಕ) |
| 1975–1985 | ಅನತೊಲಿ ಕಾರ್ಪೋವ್ (ಸೋವಿಯತ್ ಯೂನಿಯನ್) |
| 1985–1993 | ಗ್ಯಾರಿ ಕ್ಯಾಸ್ಪರೋವ್ (ರಷ್ಯ) |
| 1993–1999 | ಅನತೊಲಿ ಕಾರ್ಪೋವ್(ರಷ್ಯ) |
| 1999–2000 | ಅಲೆಕ್ಸಾಂಡರ್ ಖಲೀಫ್‌ಮನ್ (ರಷ್ಯ) |
| 2000–2002 | ವಿಶ್ವನಾಥನ್ ಆನಂದ್ (ಭಾರತ) |
| 2002–2004 | ರೂಸ್ಲನ್ ಪಾನಮಾರಿಯೊವ್ (ಯೂಕ್ರೇನ್) |
| 2004–2005 | ರುಸ್ತಂ ಕಸಿಂಡ್ ಸನೋವ್ (ಉಸ್‌ಬೆಕಿಸ್ತಾನ್) |
| 2005–2006 | ವೆಸೆಲಿನ್ ತೊಪಹೊವ್ (ಬಲ್ಗೇರಿಯ) |
| 2006–2007 | ವ್ಲಾಡಿಮಿರ್ ಕ್ರಮ್ನಿಕ್ (ರಷ್ಯ) |
| 2007– | ವಿಶ್ವನಾಥನ್ ಆನಂದ್ (ಭಾರತ) |

1866ರಲ್ಲಿ ಆ್ಯಂಡರ್‌ಸನ್ನನನ್ನು ಆಸ್ಟ್ರಿಯದ ಸ್ಟೈನಿಟ್ಜ್ ಎಂಬಾತ ಸೋಲಿಸಿ ನಿಜಕ್ಕೂ ಜಾಗತಿಕ ಚಾಂಪಿಯನ್ ಪಟ್ಟಕ್ಕೆ ಅರ್ಹನೆಂದೆನಿಸಿಕೊಂಡ. ಸ್ಟೈನಿಟ್ಜ್‌ನ ವಿಕ್ರಮ 1854ರವರೆಗೆ ಆಖಂಡ 28 ವರ್ಷಗಳ ಪರ್ಯಂತ ಅಭೇದ್ಯವಾಗಿತ್ತು. 1894ರಲ್ಲಿ ಎಳೆಯ ವಯಸ್ಸಿನ ಜರ್ಮನಿಯ ಚೆಸ್ ಆಟಗಾರ ಇಮಾನ್ಯುಅಲ್ ಲಾಸ್ಕರ್ ಎಂಬುವನಿಂದ ಈತ ಸೋಲನ್ನನುಭವಿಸಬೇಕಾಯಿತು. ಲಾಸ್ಕರ್ ಕೂಡ ಸ್ಟೈನಿಟ್ಜ್‌ನಂತೆಯೇ ದೀರ್ಘಾವಧಿಯ ವಿಕ್ರಮ ಹೊಂದಿದ. 1914 ರಿಂದ 21ರವರೆಗೆ ಜಾಗತಿಕ ಚೆಸ್ ಚಾಂಪಿಯನ್‌ಷಿಪ್ ಪಂದ್ಯಗಳು ನಡೆಯಲಿಲ್ಲ. 1921ರಲ್ಲಿ ಕ್ಯೂಬದ ಕಾಪಾಬ್ಲಾಂಗ್‌ಕಾ ಎಂಬುವನೊಡನೆ ಲಾಸ್ಕರ್ ಆಡಿದ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 4–0 ಪಾಯಿಂಟಿನಿಂದ ಮೊದಲ್ಗೊಂಡು 10 ಸಮವಾದ ಪಂದ್ಯಗಳಿಂದಾಗಿ ಈತ ಕಾಪಾಬ್ಲಾಂಕಾಗೆ ಸೋಲನ್ನೊಪ್ಪಿಸಿಕೊಂಡು ಶರಣಾಗತನಾದ.

ದಕ್ಷಿಣ ಅಮೆರಿಕದ ಬ್ಯೋನಸ್ ಐರಿಸ್‌ನಲ್ಲಿ ಸತತವಾಗಿ ಮೂರು ತಿಂಗಳ ಪರ್ಯಂತ ನಡೆದ ಪಂದ್ಯದಲ್ಲಿ ತೀವ್ರ ಹೋರಾಟದ ಅನಂತರ ಕಾಪಾಬ್ಲಾಂಗ್‌ಕಾ ರಷ್ಯದ ಅಲ್ಯೆಕೈನ್ ಎಂಬುವನಿಗೆ ಆರು ವರ್ಷಗಳಿಂದ ತಾನು ಕಾದುಕೊಂಡು ಬಂದ ತನ್ನ ವಿಶ್ವಚಾಂಪಿಯನ್‌ಷಿಪ್ಪನ್ನು ವಹಿಸಿಕೊಟ್ಟ. ಇವರಿಬ್ಬರ ನಡುವಿನ ಆಟದ ಸ್ಕೋರು 6–3 ಆಗಿತ್ತಲ್ಲದೆ ಆ ಆಟ 25 ಸಮನಾದ ಪಂದ್ಯಗಳದ್ದಾಗಿದ್ದು ಆ ಕಾಲದ ಅತಿ ದೀರ್ಘವಾದ ಪಂದ್ಯಾಟವಾಗಿತ್ತು.

ಫ್ರಾನ್ಸಿನ ಪೌರತ್ವವನ್ನು ಪಡೆದ ಅಲ್ಯೆಕೈನ್‌ನನ್ನು 1935ರಲ್ಲಿ ನೆದರ್‌ಲ್ಯಾಂಡಿನ ಮ್ಯಾಕ್ಸ್ ಯೂವೇ ಎಂಬಾತ 9–8 ಹಾಗೂ 13 ಸಮನಾದ ಪಂದ್ಯಗಳಿಂದ ಸೋಲಿಸಿದ.

ಈ ರೀತಿ ನಡೆಯುತ್ತಿದ್ದ ಪಂದ್ಯಾಟಗಳಿಗೆ ಜಾಗತಿಕ ಚೆಸ್ ಫೆಡರೇಷನ್ ಸ್ಥಾಪನೆಯಾಗುವ ವರೆಗೂ ಒಂದು ನಿರ್ದಿಷ್ಟ ಮೂರ್ತಸ್ವರೂಪವಿರಲಿಲ್ಲ. ಅದು ಈ ಬಗ್ಗೆ ಹೆಣಗಾಡುತ್ತಿದ್ದ ಐದು ಪ್ರತಿಸ್ಪರ್ಧಿಗಳಲ್ಲಿ ಪಂದ್ಯಾಟವನ್ನೇರ್ಪಡಿಸಿದಾಗ ರಷ್ಯದ ಬಾಟ್‌ವಿನಿಕ್ ನಿಚ್ಚಳವಾದ 14 ಪಾಯಿಂಟ್‌ಗಳಿಂದ ವಿಶ್ವ ಚಾಂಪಿಯನ್‌ಷಿಪ್ ಪ್ರಶಸ್ತಿ ಗಳಿಸಿಕೊಂಡ. ಜಾಗತಿಕ ಚೆಸ್ ಫೆಡರೇಷನ್ 3 ವರ್ಷಗಳಿಗೊಂದಾವರ್ತಿಯಂತೆ ಈ ಪಂದ್ಯಾಟಗಳನ್ನು ನಡೆಸುತ್ತಿತ್ತು. ಆವರೆಗೂ ಕ್ರಮಬದ್ಧವಾಗಿರದ ಈ ಶರ್ಯತ್ತುಗಳಲ್ಲಿ ಚಾಂಪಿಯನ್‌ಷಿಪ್ ಪ್ರಶಸ್ತಿ ಪಡೆದಾತ ತನ್ನ ಪ್ರತಿಸ್ಪರ್ಧಿಯನ್ನು ತಾನೇ ಆರಿಸಿಕೊಂಡು ಅಂಥ ಆಹ್ವಾನವನ್ನು ಆ ಪ್ರತಿಸ್ಪರ್ಧಿ ನಿರಾಕರಿಸಲಾರದ ರೀತಿಯಲ್ಲಿ ಪಂದ್ಯ ನಡೆಯುವ ಕ್ರಮ ಜಾರಿಯಲ್ಲಿತ್ತು. ಮೂರು ವರ್ಷಕ್ಕೊಮ್ಮೆ ನಡೆಸುವ ಜಾಗತಿಕ ಶರ್ಯತ್ತಿನಲ್ಲಿ ಮೊದಲನೆಯ ವರ್ಷದಲ್ಲಿ ಜಗತ್ತಿನಾದ್ಯಂತ ವಲಯ ಟೂರ್ನಮೆಂಟುಗಳನ್ನು ನಡೆಸಲಾಗುತ್ತಿತ್ತು. ಇವುಗಳಲ್ಲಿ ಆರಿಸಿ ಬಂದವರು ಅಂತರವಲಯ ಟೂರ್ನಮೆಂಟುಗಳಲ್ಲಿ ಭಾಗವಹಿಸಬೇಕಿತ್ತು. ಮೂರನೆಯ ವರ್ಷ ವೈಯಕ್ತಿಕ ಸ್ಪರ್ಧೆಗಳು ನಡೆದು, ಅದಕ್ಕೆ ಮುಂಚಿತವಾಗಿ ಚಾಂಪಿಯನ್‌ಷಿಪ್ ಪ್ರಶಸ್ತಿ ಪಡೆದಾತನ ಆಹ್ವಾನವನ್ನು ಎದುರಿಸಬೇಕಾಗಿತ್ತು.

1950ರಲ್ಲಿ ಬುಡಪೆಸ್ಟ್‌ನಲ್ಲಿ ನಡೆದ ಶರ್ಯತ್ತಿನಲ್ಲಿ ಬ್ರನ್‌ಟೈನ್, 1951ರಲ್ಲಿ ರಷ್ಯದಲ್ಲಿ ಈತನನ್ನು ಆಹ್ವಾನಿಸಿದ ಬಾಟ್‌ವಿನಿಕ್, 1953ರಲ್ಲಿ ಝುರಿಕ್‌ನಲ್ಲಿ ನಡೆದ ಶರ್ಯತ್ತಿನಲ್ಲಿ (ವೈಯಕ್ತಿಕ) ಸ್ಮಿಸ್‌ಲೋವ್ ಎಂಬುವರು ಚಾಂಪಿಯನ್‌ಗಳಾದರು. 1956ರಲ್ಲಿ ಆಂಸ್ಟರ್‌ಡ್ಯಾಮಿನಲ್ಲಿ ನಡೆದ ಟೂರ್ನಮೆಂಟಿನಲ್ಲಿ ಸ್ಮಿಸ್‌ಲೋವ್ ಜಯಗಳಿಸಿದ. 1957ರಲ್ಲಿ ರಷ್ಯದ ಬಾಟ್‌ವೆನಿಕ್‌ನೊಡನೆ ಆಟವಾಡಿ ಅವನನ್ನು ಸೋಲಿಸಿ ವಿಶ್ವ ಚಾಂಪಿಯನ್‌ಷಿಪ್ ಗಳಿಸಿದ. 1958ರಲ್ಲಿ ಅಮೆರಿಕದ 14 ವರ್ಷದ ರಾಬರ್ಟ್ ಫಿಷರ್ ಎಂಬಾತ ಅವನ ಸಮೀಪದ ಪ್ರತಿಸ್ಪರ್ಧಿ ಸಾಮ್ಯುಯೆಲ್ ರಿಷ್‌ವ್‌ಸ್ಕಿಯನ್ನು ಸೋಲಿಸಿ ಅಮೆರಿಕದ ರಾಷ್ಟ್ರೀಯ ಚೆಸ್ ಪ್ರಶಸ್ತಿಯನ್ನು ಪಡೆದುಕೊಂಡ.

**5. ಫೆಡರೇಷನ್ ಇಂಟರ್‌ನ್ಯಾಷನಲ್ ಡಿ ಎಚೆಕ್ಸ್ :** ಜಾಗತಿಕ ಚೆಸ್ ಫೆಡರೇಷನ್ ನಡೆಸಿದ ಇನ್ನೆರಡು ಪಂದ್ಯಾಟಗಳು ಜಾಗತಿಕ ಮಹಿಳಾ ಚಾಂಪಿಯನ್‌ಷಿಪ್ ಹಾಗೂ ಬಾಲಕರ (21ರ ಕೆಳಗೆ) ಚಾಂಪಿಯನ್‌ಷಿಪ್ ಆಟಗಳಾಗಿದ್ದವು. ಜಾಗತಿಕ ಚೆಸ್ ಫೆಡರೇಷನ್ (ಇದನ್ನು ಸಾಮಾನ್ಯವಾಗಿ ಫ್ರೆಂಚ್‌ನ ಮೊದಲಕ್ಷರಗಳಲ್ಲಿ F.I.D.E. ಎಂದು ಸೂಚಿಸುವುದು ರೂಢಿ) ನಡೆಸುವ ಟೂರ್ನಮೆಂಟುಗಳಲ್ಲಿ ಮೊದಮೊದಲಿಗೆ ಸೋವಿಯತ್‌ರಷ್ಯ ಭಾಗವಹಿಸುತ್ತಿರಲಿಲ್ಲ. 1952ರಲ್ಲಿ ರಷ್ಯದ ಚದುರಂಗದಾಟದ ಸಂಸ್ಥೆಗಳು F.I.D.E.ಯ ಸದಸ್ಯತ್ವ ಪಡೆದವು. ಆವರೆಗಿನ ಒಂಬತ್ತು ಪಂದ್ಯಾಟಗಳಲ್ಲಿ ರಷ್ಯ ಭಾಗವಹಿಸಲಿಲ್ಲ. ಮೊದಲನೆಯ ಚೆಸ್ ಒಲಿಂಪಿಕ್ ಪಂದ್ಯ 1927ರಲ್ಲಿ ಲಂಡನಿನಲ್ಲಿ ನಡೆಯಿತು.

ಜಾಗತಿಕ ಚೆಸ್ ಫೆಡರೇಷನಿನಲ್ಲಿ ಸಾಮಾನ್ಯವಾಗಿ ಯೂರೋಪು ಮತ್ತು ಉತ್ತರ ಹಾಗೂ ದಕ್ಷಿಣ ಅಮೆರಿಕವನ್ನೊಳಗೊಂಡು ಎಲ್ಲ ರಾಷ್ಟ್ರಗಳೂ ಸದಸ್ಯತ್ವವನ್ನು ಹೊಂದಿವೆ. ಎಲ್ಲ ಜಾಗತಿಕ ಚದುರಂಗದ ಪಂದ್ಯಾಟಗಳನ್ನೂ ಹತೋಟಿಯಲ್ಲಿಟ್ಟುಕೊಂಡಿರುವುದೇ ಅಲ್ಲದೆ, ಆಟದ ನಿಯಮಗಳ ಪರಿಷ್ಕರಣೆ ಹಾಗೂ ಇನ್ನಿತರ ಸಂಶೋಧನೆಯ ಹಕ್ಕು ಇದಕ್ಕಿದೆ.

ಪ್ರತಿವರ್ಷವೂ ಈ ಸಂಸ್ಥೆ ಜಾಗತಿಕ ಅಧಿವೇಶನವೊಂದನ್ನು ನಡೆಸುತ್ತಿದ್ದು ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸುವರು. ಎರಡು ವರ್ಷಕ್ಕೊಮ್ಮೆ ಈ ಸಂಸ್ಥೆ ವಿಶ್ವ ಚಾಂಪಿಯನ್‌ಷಿಪ್ ಆಟಗಳನ್ನು ನಡೆಸುತ್ತಿದೆ. ಎಲ್ಲ ಸದಸ್ಯದೇಶಗಳೂ ತಮ್ಮ ತಮ್ಮ ನಾಲ್ಕು ಅತ್ಯುತ್ತಮ ಆಟಗಾರರನ್ನು (ಹಾಗೂ ಇಬ್ಬರು ಕಾದಿರಿಸಿದ ಆಟಗಾರರನ್ನು) ಇದಕ್ಕೆ ಕಳಿಸಬಹುದಾಗಿದೆ. 1927ರಲ್ಲಿ ನಡೆದ ಪಂದ್ಯಾಟದಲ್ಲಿ ಹಂಗರಿ, ಡೆನ್ಮಾರ್ಕ್ ಮತ್ತು ಇಂಗ್ಲೆಂಡ್‌ಗಳು ಪ್ರಮುಖವಾಗಿ ಭಾಗವಹಿಸಿ ಜಯಗಳಿಸಿದವು. ಆನಂತರ ನಡೆದ ಅಂತಾರಾಷ್ಟ್ರೀಯ ಟೂರ್ನಮೆಂಟುಗಳ ವಿವರಗಳನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

ಈವರೆಗಿನ ಎಲ್ಲ ಚದುರಂಗದ ಪಂದ್ಯಾಟಗಳನ್ನು ಮೀರಿಸಿ ಜಗತ್ತಿನ ಲಕ್ಷ್ಯವನ್ನೆಲ್ಲ ತನ್ನೆಡೆಗೆ ಸೆಳೆದ, ಈ ಶತಮಾನದ ಸುಪ್ರಸಿದ್ಧ ಜಾಗತಿಕ ಚಾಂಪಿಯನ್‌ಷಿಪ್‌ನ ಆಟ ಐಸ್ಲೆಂಡಿನ ರೇಕ್ಯಾವೀಕ್‌ನಲ್ಲಿ 1972ರಲ್ಲಿ ಅಮೆರಿಕದ ಬಾಬಿ ಫಿಷರ್ ಹಾಗೂ ರಷ್ಯದ ಬೋರಿಸ್ ಇವರ ನಡುವೆ ನಡೆಯಿತು. ಅತ್ಯಂತ ಕುತೂಹಲಕಾರಿ ರೀತಿಯಲ್ಲಿ 24 ಆಟಗಳ ಈ ಪಂದ್ಯದಲ್ಲಿ ವಿಶ್ವ ಚೆಸ್ ಪ್ರಶಸ್ತಿಯನ್ನು ಅಮೆರಿಕದ ಫಿಷರ್ ರಷ್ಯದ ಸ್ಪಾಸ್ಕಿಯ ವಿರುದ್ಧ ಅಂತಿಮವಾಗಿ ಅತಿ ನಿರ್ಣಾಯಕ ರೀತಿಯಲ್ಲಿ ಪಡೆದರು.

**ಭಾರತದಲ್ಲಿ ಚದುರಂಗ :** ಬಹುಕಾಲ ಚದುರಂಗ ಭಾರತದಲ್ಲಿ ಒಂದು ವಿಶಿಷ್ಟ ನಿಯಮಗಳನ್ನು ಹೊಂದಿ ಆಡಲ್ಪಡುತ್ತಿತ್ತು. ಇಂದಿನ F.I.D.E. ನಿಯಮಗಳಿಗೆ ಈ ಆಟ ಹೊರತಾಗಿತ್ತು. ಈ ಆಟದಲ್ಲಿ ಯಾವುದೇ ಜಾತಿಯ ಕಾಯಿಯನ್ನೂ ಅದಕ್ಕೆ ಬೆಂಬಲವಾಗಿ ಇನ್ನೊಂದು ಕಾಯಿಯಿದ್ದರೆ–ಅದು ಕಾಲಾಳೇ ಇರಬಹುದು.–ಇದಿರಾಳಿ ಬಲಿ ತೆಗೆದುಕೊಳ್ಳುವುದು ನಿಯಮಬಾಹಿರವಾಗಿತ್ತು. ಉದಾ : ಆನೆಯೊಂದಕ್ಕೆ ಬೆಂಬಲವಾಗಿ ಒಂಟೆಯೊಂದಿದೆಯೆಂದರೆ, ಆ ಆನೆಯನ್ನು ಬಲಿತೆಗೆದುಕೊಂಡ ಕೂಡಲೇ ಅಂಥ ಬಲಿತೆಗೆದುಕೊಂಡ ಕಾಯಿಯನ್ನು ಹೊಡೆದು ಬಲಿಕೊಳ್ಳುವ ರೀತಿಯಲ್ಲಿ ಒಂಟೆಯ ಹೆಜ್ಜೆಯಿದೆಯೆಂದಾಗ, ಆನೆಗೆ ಬೆಂಬಲವಾಗಿ ರಕ್ಷಣೆಗೊಂಡು ಕಾಯಿಯಿದೆಯೆಂದಾಯಿತು. ಇಂಥ ರಕ್ಷಣೆ ಇರುವವರೆಗೂ ಆನೆಯನ್ನು ಬಲಿತೆಗೆದುಕೊಳ್ಳಲು ವಿಜಾತೀಯ ಕಾಯಿಗಳಿಗೆ ಆಗುವುದಿಲ್ಲ. ಈ ನಿಯಮದ ಮೂಲಕ ಆಟದಲ್ಲಿ ಆಕ್ರಮಣಕ್ಕಿಂತ ರಕ್ಷಣೆಯೇ ತುಂಬ ಬಲಯುತವಾಗಿರುತ್ತಿತ್ತು. ಇದಕ್ಕೆ ಒಂದೇ ಅಪವಾದವೆಂದರೆ, ರಕ್ಷಕ ಕಾಯಿ ಅದರ ಜಾತಿಯ ರಾಜನಿಗೆ ಮರೆಯಾಗಿ ಚಲಿಸಲು ಸಾಧ್ಯವಾಗದಂತಿದ್ದಾಗ ಮಾತ್ರ –ಇಂಥ ಸಂದರ್ಭ ಅತಿವಿರಳವಾಗಿರುತ್ತಿತ್ತು. ರಕ್ಷಣೆಯ ಪ್ರಾಬಲ್ಯವಿರುವುದರಿಂದಾಗಿ ಆಟ ಶೀಘ್ರದಲ್ಲಿ ಮುಗಿಯುತ್ತಿರಲಿಲ್ಲ. ದಿನಗಟ್ಟಲೆ–ವಾರಗಟ್ಟಲೆ ಕೆಲವೊಮ್ಮೆ ತಿಂಗಳುಗಟ್ಟಲೆ ಇಂಥ ಆಟವಾಡಿದ ಅಪೂರ್ವ ಕಥೆಗಳಿವೆ. ಈ ಆಟದ ಇನ್ನೊಂದು ನಿಯಮದಂತೆ ಎದುರಾಳಿಯ ರಾಜನನ್ನು **'ಪೇದೆಶಹಾ'** ಮಾಡಬಹುದಿತ್ತು. ಎಂದರೆ ಕೇವಲ ಪೇದೆಯಿಂದ ಮಾತ್ರವೇ ಕೊನೆಯ ಚೆಕ್ ಕೊಟ್ಟು ರಾಜನನ್ನು ದಿಗ್ಬಂಧಿಸಬಹುದಿತ್ತು. ಉಳಿದ ಕಾಯಿಗಳು ರಾಜನ ಸುತ್ತಮುತ್ತಲಿನ ಮನೆಗಳ ಮೇಲೆ ನಿಯಂತ್ರಣವಿಟ್ಟಾಗಲೂ ಅವು ರಾಜನನ್ನು ಕೈಸೆರೆ ಹಿಡಿಯುವ ಪದ್ಧತಿಯಿರಲಿಲ್ಲ. ಆ ಕೊನೆಯ ಮೇಟ್ ಮಾಡುವ ಚೆಕ್ ಮಾತ್ರ ಪೇದೆಯಿಂದಲೇ ಆಗಬೇಕಾಗಿತ್ತು. ಹಳೆಯ ತಲೆಮಾರಿನ ಜನ ಹೇಳುವಂತೆ, ಆಗ ಅವರು ವಿರೋಧಿಯ ರಾಜನನ್ನು ಇಂಥದೇ ಕಾಲಾಳಿನಿಂದ ಮೇಟ್ ಮಾಡುವುದಾಗಿ ಪಣತೊಟ್ಟು, ಗುರುತಿಗೆ ಆ ನಿರ್ದಿಷ್ಟ ಪೇದೆಕಾಯಿಗೆ ಸುಣ್ಣ ಹಚ್ಚಿಕೊಂಡು ಆಡುತ್ತಿದ್ದರಂತೆ. ಈ ಮೇಲಿನ ನಿಯಮಾನುಸಾರ ಅದು ಸಾಧ್ಯವೂ ಆಗುತ್ತಿತ್ತು. **'ಪೇದೆಶಹಾ'** ನಿಯಮದ ಕಾರಣದಿಂದಾಗಿ ಎದುರಾಳಿಯ ಎಲ್ಲ ಕಾಯಿಗಳನ್ನೂ ಬಲಿ ತೆಗೆದುಕೊಂಡರೂ ರಾಜನೊಬ್ಬನನ್ನೇ ಇಡುವಂತಿರಲಿಲ್ಲ. –ಅವನ ಸಂಗಡ ಒಂದಾದರೂ ಕಾಲಾಳು ಹಾಸಿನ ಮೇಲೆ ಇರಲೇಬೇಕಿತ್ತು. ಸಮವಾದ ಪಂದ್ಯಗಳು ವಿರಳವಾಗಿದ್ದುವು. ಕಾಲಾಳುಗಳು ಮೊದಲ ಹೆಜ್ಜೆ ಒಂದೇ ಮನೆ ಮಾತ್ರ ನಡೆಯಬಹುದಿತ್ತು. ಕೆಲವೆಡೆಗೆ ರಾಜ–ಮಂತ್ರಿ ಹಾಗೂ ಆನೆಗಳ ಮನೆಯ ಮುಂದಿದ್ದ ಕಾಲಾಳು ಮಾತ್ರ ಮೊದಲ ಹೆಜ್ಜೆ ಎರಡು ಮನೆ ನಡೆಸುವ ಪದ್ಧತಿಯಿತ್ತು. ಕೋಟೆಕಟ್ಟುವ ವಿಧಾನ ವಿದೇಶೀಯವಾದದ್ದು. ಆದರೆ ರಾಜನಿಗೆ ತನ್ನ ಮೊದಲ ಹೆಜ್ಜೆಯನ್ನು ಕುದುರೆಯಂತೆ ಇಡುವ ಅವಕಾಶವಿತ್ತು ಎನ್ನುತ್ತಾರೆ. ಅದರಂತೆ ಆನೆಗಳಿಗೆ ಸಹ ಆ ಅವಕಾಶವಿತ್ತು ಎನ್ನುವರು. ಕಾಲಾಳು ಎಂಟನೆಯ ಮನೆಯವರೆಗೆ ಹೋಗಲು ಸಾಧ್ಯವಾದರೆ, ರಾಜ ಮತ್ತು ಮಂತ್ರಿಯ ಮನೆಯ ಕಾಲಾಳುಗಳಿಗೆ ಮಾತ್ರ ಮಂತ್ರಿಯಾಗಿ ಪರಿವರ್ತನೆ ಹೊಂದುವ ಅವಕಾಶವಿತ್ತು. ಉಳಿದ ಮನೆಯ ಕಾಲಾಳುಗಳು ಅವು ಯಾವ ಯಾವ ಜಾತಿಯ ಕಾಯಿಗಳ ಎದುರಿನಿಂದ ಹೊರಟಿದ್ದವೋ ಅದೇ ಕಾಯಿಗಳಾಗಿ ಪರಿವರ್ತಿತ–ವಾಗಬಲ್ಲವಾಗಿದ್ದವು. ಅಂದರೆ ಕುದುರೆಯ ಮನೆಯ ಮುಂದಿನ ಕಾಲಾಳು 8ನೆಯ ಮನೆಯ ಚೌಕ ಸೇರಿದೊಡನೆ ಕುದುರೆ ಮಾತ್ರವೇ ಆಗಿ ಹೊರಡಬಹುದು. ಇಂಥ ರೀತಿಯ ಆಟಕ್ಕೆ ಬಲಾಬಲಿ ಎಂದೆನ್ನುತ್ತಿದ್ದರು. ಆಟ ತುಂಬ ಕ್ಲಿಷ್ಟವಷ್ಟೇ ಅಲ್ಲ, ಆಟಗಾರರ ತಾಳ್ಮೆಯ ಒರೆಗಲ್ಲಾಗಿತ್ತು. ಇಂದಿಗೂ ಕನ್ನಡ ನಾಡಿನ ಅನೇಕ ಹಳ್ಳಿಗಳಲ್ಲಿ ಇದೇ ನಿಯಮಗಳನ್ನುಸರಿಸಿ ಚದುರಂಗ ಆಡುವುದನ್ನು ಕಾಣಬಹುದು.

ಚದುರಂಗದ ಆಟ ನಿರ್ವಿವಾದವಾಗಿ ವಿಶ್ವಕ್ಕೆ ಭಾರತದ ಕೊಡುಗೆಯಾದರೂ ಅದರ ಬೆಳೆವಣಿಗೆ ಹಾಗೂ ಪ್ರಗತಿಯಲ್ಲಿ ಭಾರತದಲ್ಲಿ ಪಾಲು ಎಷ್ಟು ಎಂಬುದರ ಬಗ್ಗೆ ದಾಖಲೆಗಳು ತೀರ ದುರ್ಲಭ. ರಾಜಾಶ್ರಯವಿದ್ದ ಕಾಲದಲ್ಲಿ ಈ ಆಟ ಚೆನ್ನಾಗಿ ಬೆಳೆಯಿತೆನ್ನಲು ಕೆಲವು ದಾಖಲೆಗಳು ಮಾತ್ರ ದೊರೆಯುತ್ತವೆ. ಸೋವಿಯೆತ್ ಒಕ್ಕೂಟದಲ್ಲಿದ್ದಂತೆ ಈ ಆಟಕ್ಕೆ ಸರ್ಕಾರದ ಬೆಂಬಲ ಪ್ರೋತ್ಸಾಹಗಳಾಗಲೀ ಸ್ವಾಯತ್ತ ಸಂಸ್ಥೆಗಳ ಉದಾರಾಶ್ರಯವಾಗಲೀ ಇಲ್ಲಿ ಸಾಕಷ್ಟು ಇಲ್ಲವಾಗಿರುವುದೇ ಇದರ ಬೆಳೆವಣಿಗೆ ಕುಂಠಿತವಾಗಲು ಕಾರಣವೆಂದು ತೋರುತ್ತದೆ. ರಾಜ್ಯಮಟ್ಟದ ಅಥವಾ ರಾಷ್ಟ್ರೀಯ ಮಟ್ಟದ ಪಂದ್ಯಾಟಗಳು ನಡೆದರೂ ಅದರಲ್ಲಿ ಎದ್ದು ಕಾಣುವ ಪರಿಣತಿಯ ಪರಾಕಾಷ್ಠೆಯಾಗಲೀ, ಅಂತಾರಾಷ್ಟ್ರೀಯ ಟೂರ್ನಮೆಂಟ್‌ಗಳಲ್ಲಿ ಗುರುತಿಸಲ್ಪಡುವ ಪ್ರಾವೀಣ್ಯವನ್ನಾಗಲೀ ಭಾರತ ತೋರಿಸಲು 1975 ರವರೆಗಂತೂ ಸಾಧ್ಯವಾದಂತಿಲ್ಲ. ಮದ್ರಾಸಿನ ಮ್ಯಾನ್ಯುಯೆಲ್ ಅರನ್, ಮಹಾರಾಷ್ಟ್ರದ ಸಪ್ರೆ, ಉತ್ತರ ಭಾರತದ ಗುಪ್ತ ಮೊದಲಾದ ಕೆಲವರು ಮಾತ್ರ ಆಗೊಮ್ಮೆ ಈಗೊಮ್ಮೆ ಹೆಸರು ಮಾಡಿದ್ದು ಕೇಳಿಬರುವುದು. 1972ರ ಜಾಗತಿಕ ಚಾಂಪಿಯನ್‌ಷಿಪ್‌ನ ಫಿಷರ್–ಸ್ಪಾಸ್ಕಿಯರ ಆಟದ ಪ್ರಭಾವ ಭಾರತದ ಮೇಲೂ ಸಾಕಷ್ಟು ಆಗಿದೆಯಾಗಿ ಈ ಆಟದ ಬಗ್ಗೆ ಹಿಂದಿಗಿಂತ ಹೆಚ್ಚಿನ ಆಸಕ್ತಿ ಕಾಣತೊಡಗಿದೆ.

**6. ಸಾಹಿತ್ಯ :** ಬೇರೆ ಯಾವ ಆಟದ ವಿಷಯದಲ್ಲೂ ಕಾಣಸಿಗದಷ್ಟು ಸಾಹಿತ್ಯ ಚದುರಂಗದ ವಿಷಯದಲ್ಲಿ ಸಿಕ್ಕುತ್ತದೆ. ಬಹುಶಃ ಉಳಿದೆಲ್ಲ ಆಟಗಳ ಬಗ್ಗೆ ಸಿಗುವ ಒಟ್ಟು ಸಾಹಿತ್ಯಕ್ಕಿಂತಲೂ ಹೆಚ್ಚಿನ ಸಾಹಿತ್ಯ ಕೃತಿಗಳು, ಲೇಖನಗಳು ಈ ಒಂದು ಆಟದ ಬಗ್ಗೆಯೇ ಸಿಗುವಂತಿದೆ. ಈ ಆಟವನ್ನು ಕ್ರಮಬದ್ಧವಾಗಿ ಸಂಕೇತಾಕ್ಷರಗಳ ಮೂಲಕ ಬರೆದಿಡುವ ಸಾಧ್ಯತೆಯೇ ಈ ಆಟದ ಬಗ್ಗೆ ಇಷ್ಟು ಸವಿಸ್ತಾರ ಸಾಹಿತ್ಯ ಹೊಮ್ಮಲು ಕಾರಣವೆಂಬುದು ಸ್ಪಷ್ಟ.

17ನೆಯ ಶತಮಾನದ ಆದಿಯಿಂದ ಈವರೆಗೆ ಚದುರಂಗದ ಮೇಲೆ, ಆಟದ ಬೇರೆ ಬೇರೆ ಹಂತಗಳ ಬಗ್ಗೆ, ಪ್ರಾರಂಭ, ಮಧ್ಯ ಮತ್ತು ಆಟದ ಕೊನೆಯ ಬಗ್ಗೆ ಬೇರೆ ಬೇರೆ ದೃಷ್ಟಿಕೋನದಿಂದ ಅನೇಕ ಗತ್ತುಗಳನ್ನು ತಿಳಿಸುವ ಪುಸ್ತಕಗಳು ಅವಿರತವಾಗಿ ಹುಟ್ಟಿವೆ. ಅವುಗಳಲ್ಲಿ ಮುಖ್ಯವಾದವು ಇವು:

i. ದಿ ಚೆಸ್ ಪ್ಲೇಯರ್ಸ್ ಹ್ಯಾಂಡ್ ಬುಕ್ (1847)
ii. ದಿ ಚೆಸ್ ಪ್ಲೇಯರ್ಸ್ ಕಂಪ್ಯಾನಿಯನ್ (1849)
iii. ಚೆಸ್ ಪ್ರಾಕ್ಸಿಸ್ (1860)
iv. ಸ್ಟಾಂಟನ್ನನ ಕೃತಿಗಳು

ಇವು 20ನೆಯ ಶತಮಾನದ ಆದಿಯವರೆಗೂ ಜನಪ್ರಿಯವಾಗಿದ್ದವು. ಇಂಥ ಜನಪ್ರಿಯ ಪುಸ್ತಕಗಳ ಸಾಲಿನಲ್ಲಿ ಆ ಮೊದಲಿನ ಲೇಖಕರಾದ ಸ್ಟಾಮ, ಕಾರ್ಲೊಕಾಜ್ಜಿಯೊ, ಲಾಲಿ ಮತ್ತು ಪಾಂಜಿಯಾನಿ ಎಂಬುವರನ್ನು ಮರೆಯುವಂತಿಲ್ಲ. ಆಟದ ವೈವಿಧ್ಯದ ಬಗ್ಗೆ ಅಧಿಕೃತವಾಗಿ ಬರೆದ ಫಿಲಿಡೋರನ ಕೃತಿಗಳು ಇಂದಿಗೂ ಮುಖ್ಯವೆನಿಸಿವೆ.

ಸ್ಟೈನಿಟ್ಜ್ ತನ್ನ ಎರಡು ಸಂಪುಟಗಳ ಮಾಡರ್ನ್ ಚೆಸ್ ಇನ್‌ಸ್ಟ್ರಕ್ಟರ್‌ನಲ್ಲಿ ಆಧುನಿಕ ಚದುರಂಗದ ಬಗ್ಗೆ ವಿವರವಾಗಿ ಅಧಿಕಾರಯುತವಾಗಿ ಬರೆದಿದ್ದಾನೆ (1880–95). ಇವನ ವಿಧಾನಗಳನ್ನು ಲಾಸ್ಕರ್ ಎಂಬಾತ ವಿವರಣೆಗಳೊಂದಿಗೆ ತನ್ನ ಕಾಮನ್ ಸೆನ್ಸ್ ಇನ್ ಚೆಸ್ ಎಂಬ ಪುಸ್ತಕದಲ್ಲಿ ಹೆಚ್ಚು ಜನಪ್ರಿಯವಾಗಿದ್ದಾನೆ. ಇದಲ್ಲದೆ ಅನೇಕ ರೀತಿಯ ಆಟಗಳ ವಿಧಾನ, ಪ್ರಯೋಗ ಮೊದಲಾದವೂ ವೈಯಕ್ತಿಕ ಸಂಗ್ರಹಗಳು ಟೂರ್ನಮೆಂಟುಗಳ ಸವಿವರ ದಾಖಲೆಗಳೂ ವಿಪುಲವಾಗಿ ಸಿಗುತ್ತವೆ.

ಅಮೆರಿಕ, ಇಂಗ್ಲೆಂಡ್, ಜರ್ಮನಿ, ಸೋವಿಯತ್ ಒಕ್ಕೂಟ ಮೊದಲಾದ ದೇಶಗಳಲ್ಲಿ ಈ ಆಟಕ್ಕೇ ಮೀಸಲಾದ ನಿರ್ದಿಷ್ಟ ನಿಯತಕಾಲಿಕಗಳಿವೆ.

**IV.** ಆಟದ ಸಿದ್ಧಾಂತಗಳು : ಚದುರಂಗವು ಕೇವಲ ಬುದ್ಧಿಜೀವಿಗಳ ಮನೋರಂಜನೆ. ಎರಡು ಚದುರಂಗ ಸೇನೆಗಳು 64 ಮನೆಗಳ ಓಡಾಟದಲ್ಲಿ ದಾಳಿ ಮಾಡುವ ಮತ್ತು ರಕ್ಷಣೆ ಮಾಡಿಕೊಳ್ಳುವ ಇಲ್ಲಿನ ವೈವಿಧ್ಯ ಬೆರಗುಗೊಳಿಸುವಂಥದು. ಆದರೂ ದಾಳಿ ಮಾಡುವ ವಿಧಾನ, ರಕ್ಷಣೆ ಮಾಡಿಕೊಳ್ಳುವ ರೀತಿಗಳು, ಮುಂದುವರಿಯುವ ಕಾಯೊಂದನ್ನು ಹಿಮ್ಮೆಟ್ಟಿಸುವುದು, ವ್ಯೂಹರಚನೆ, ವ್ಯೂಹ ಭೇದಿಸುವುದು, ಆಯಕಟ್ಟಿನ ಸ್ಥಳಗಳನ್ನು ಹಿಡಿದಿಟ್ಟುಕೊಳ್ಳುವುದು ಮೊದಲಾದವುಗಳ ಬಗ್ಗೆ ಅನೇಕ ಚದುರಂಗ ಚತುರರು ತಮ್ಮದೇ ಆದ ವಿಧಾನಗಳನ್ನು ತಿಳಿಸಿದ್ದಾರೆ. ಆದಾಗ್ಯೂ ಆಸ್ಟ್ರಿಯದ ಸ್ಟೈನಿಟ್ಜನಂಥ ವಿಶ್ವ ಚಾಂಪಿಯನ್ ರಾದ ಆಟಗಾರರು ಸಾಂಪ್ರದಾಯಿಕ ರೀತಿ ವಿಧಾನ ತತ್ತ್ವಗಳನ್ನೆಲ್ಲ ಬದಿಗಿರಿಸಿ ತಮ್ಮದೇ ಆದ ರೀತಿಯಲ್ಲಿ ಆಡಿ ಯಶಸ್ವಿಯಾಗಿದ್ದಾರೆ. ವಿಶ್ವಚಾಂಪಿಯನ್ ಆದ ಅಮೆರಿಕದ ಬಾಬಿ ಫಿಷರ್ ಕೂಡ ಇದೇ ಸಾಲಿಗೆ ಸೇರಿದವ. ಇಷ್ಟಿದ್ದರೂ ಆಟದ ಕೆಲವು ಮೂಲತತ್ತ್ವಗಳು ಎಂದಿಗೂ ಬದಲಾಗವು. ಉದಾ: ಕಾಯಿಗಳನ್ನು ಸರಿಯಾಗಿ ಮುಂದುವರಿಸಿಕೊಳ್ಳದೆ ಆಕ್ರಮಣ ಮಾಡುವುದು, ಸರಿಯಾದ ಸನ್ನಾಹವಿಲ್ಲದೆ ಎದುರಾಳಿಯ ರಾಜನನ್ನು ಸೆರೆ ಹಿಡಿಯಲು ಪ್ರಯತ್ನಿಸುವುದು–ಇವೇ ಮೊದಲಾದವುಗಳ ಕೆಲವು ಇಡಬಾರದ ತಪ್ಪು ನಡೆಗಳು.

ಆಧುನಿಕ ಚದುರಂಗದ ವರಸೆಗಳಲ್ಲಿ ಮುಖ್ಯವೆನಿಸುವ ಪ್ರಸಂಗವೆಂದರೆ, ಸಾಂಪ್ರದಾಯಿಕ ಚದುರಂಗಕ್ಕಿಂತ ತೀರ ವಿಭಿನ್ನವಾಗಿ, ಕಾಯಿಗಳನ್ನು ಬಲಿಕೊಡುವುದು. ಈಗ ಇದು ಹೆಚ್ಚು ಜನಪ್ರಿಯವಾಗುತ್ತಲಿದೆ.

ಸು.1858–59ರಲ್ಲಿ ಮಾರ್ಫಿ ಎಂಬ ಆಟಗಾರ ಎಲ್ಲ ಸಾಂಪ್ರದಾಯಿಕ ನಡಿಗೆಗಳನ್ನು ಗಾಳಿಗೆ ತೂರಿ ತನ್ನದೇ ಒಂದು ಆಟದ ವಿಧಾನವನ್ನು ಪ್ರಾರಂಭಿಸಿದ. ಆತ ಎಲ್ಲ ಪ್ರವೀಣ ಆಟಗಾರರನ್ನೂ ಪ್ರಥಮ 12 ನಡಿಗೆಗಳ ಅನಂತರ ಯಶಸ್ವಿಯಾಗಿ ಸೋಲಿಸಲು ಪ್ರಾರಂಭಿಸಿದ. ಅವನ ವಿಧಾನ ತೀರ ಸರಳವಾದ್ದು. ಮಧ್ಯದ KP ಮತ್ತು QP– ಎರಡು ಕಾಲಾಳುಗಳನ್ನು ಒಂದೇ ಬಾರಿ ಮಾತ್ರ ಚಲಿಸಿ, ಅದರಂತೆ ಎರಡು ಒಂಟೆ ಹಾಗೂ ಕುದುರೆಗಳನ್ನು ಒಂದು ಸಲಕ್ಕೆ ಮಾತ್ರ ಚಲಿಸಿ, ಮಂತ್ರಿಯನ್ನು ಒಳ್ಳೆ ರಕ್ಷಣೆಯಿದ್ದಲ್ಲಿ ಇಟ್ಟುಕೊಂಡು, ರಾಜನನ್ನು ಭದ್ರವಾಗಿ ಕೋಟೆ ಕಟ್ಟಿ ಇಟ್ಟುಬಿಡುವುದು ಮತ್ತು ಅನಂತರ ಎದುರಾಳಿಯ ಮೇಲೆ ಕ್ರಮಬದ್ಧ ದಾಳಿ ಮಾಡುವುದು. ಆದರೆ ಇದು ಹೇಳಿದಷ್ಟು ಸುಲಭದ್ದಲ್ಲ. ಚದುರಂಗದ ಆಟದಲ್ಲಿ ಪ್ರತಿಯೊಂದು ಹೆಜ್ಜೆಗೂ ನೂರಾರು ನಡಿಗೆಗಳುಂಟು. ನಮ್ಮ ನಡಿಗೆಗಳನ್ನಷ್ಟೇ ಅಲ್ಲದೆ ಅದಕ್ಕಿಂತ ಮುಖ್ಯವಾಗಿ ಎದುರಾಳಿಯ ನಡಿಗೆಗಳನ್ನು ಪರೀಕ್ಷಿಸಿ, ವಿಶ್ಲೇಷಿಸಿ ನಿರ್ದಿಷ್ಟವಾಗಿ ಅಲ್ಲದಿದ್ದರೂ ಸಾಧಾರಣವಾಗಿಯಾದರೂ ಅವನ ಅನಂತರದ ನಡಿಗೆಯನ್ನು ನಿರ್ಣಯಿಸುವುದರಲ್ಲಿಯೇ ಜಾಣ್ಮೆಯಿದೆ – ಆಟ ಗೆಲ್ಲುವ ಗುಟ್ಟು ಇರುವುದೇ ಇಲ್ಲಿ. ಈ ಬಗ್ಗೆ ಆಟಗಾರ ಯಾವ ತತ್ತ್ವ ಅನುಸರಿಸಿದರೂ ಎದುರಾಳಿ ತನ್ನ ಇಚ್ಛೆಯಂತೆ ಆಡುವ ಹಾಗೆ ಮಾಡಿ ಅವನ ರಾಜನನ್ನು ದಿಗ್ಬಂಧನಕ್ಕೆ ಗುರಿ ಮಾಡುವ ತಂತ್ರ ನಿಜಕ್ಕೂ ಯುದ್ಧಚಾತುರ್ಯವೇ ಸರಿ.

**V. ಆಟದ ನಿದರ್ಶನಗಳು** : ಅನೇಕ ಬಗೆಯ ನಿದರ್ಶನಾತ್ಮಕ ಆಟಗಳನ್ನು ಉದಾಹರಿಸಬಹುದಾದರೂ ಈ ಶತಕದ ಅತ್ಯಂತ ಕುತೂಹಲಕಾರಿ ಪಂದ್ಯಾಟವಾದ ಫಿಷರ್–ಸ್ಪಾಸ್ಕಿಗಳ ಮಧ್ಯೆನಡೆದ 24 ಆಟಗಳಲ್ಲಿ ಒಂದರ ವಿವರ ಕೊಟ್ಟರೆ ಸಾಕೆನಿಸುತ್ತದೆ. ಫಿಷರ್–ಸ್ಪಾಸ್ಕಿಗಳ ತಕರಾರಿನ ಆಟಕ್ಕೆ ಮುದ್ದಾಂ ತಡವಾಗಿ ಬರುವುದು, ಬೆಳಕಿನ ವ್ಯವಸ್ಥೆಯ ಬಗ್ಗೆ ತಕರಾರು ಮಾಡುವುದು, ಕ್ಯಾಮೆರ, ಟೆಲಿವಿಷನ್‌ಗಳಿಗೆ ಆಕ್ಷೇಪವೆತ್ತುವುದು, ಊಟ, ಠಿಕಾಣಿ ವ್ಯವಸ್ಥೆಯ ಬಗ್ಗೆ ಗೊಣಗುವುದು–ಇವೇ ಮುಂತಾದವುಗಳಿಂದ ಸ್ಪಾಸ್ಕಿಯ ಮನೋಬಲದ ಮೇಲೆ ಪರಿಣಾಮ ಬೀರಿ ಆತ ಆಟದಲ್ಲಿ ತಪ್ಪುಗಳನ್ನು ಮಾಡುವಂತೆ ಮಾಡಿ, ತಾನು ವಿಜಯಿಯಾದನೆಂಬ ಆಕ್ಷೇಪಗಳಿದ್ದರೂ 14ನೆಯ ವಯಸ್ಸಿಗೇ ಆಟದಲ್ಲಿ ಪ್ರೌಢಿಮೆಯನ್ನು ಗಳಿಸಿ ಚದುರಂಗವನ್ನೇ ತನ್ನ ಜೀವನ ಸರ್ವಸ್ವವನ್ನಾಗಿಸಿಕೊಂಡ ಫಿಷರ್ ನಿರ್ವಿವಾದವಾಗಿ ಅತ್ಯುತ್ತಮ ಆಟಗಾರನೆಂಬುದು ಅನೇಕ ನಿರೀಕ್ಷಕರ ಅಭಿಮತ. ಈ ಕೆಳಗಿನದು ಫಿಷರ್–ಸ್ಪಾಸ್ಕಿಯರ ನಡುವೆ ಆದ (24–7–1972) ಆರನೆಯ ಆಟದ ವಿವರ. 41 ನೆಯ ನಡಿಗೆಗೆ ಸ್ಪಾಸ್ಕಿ ಸೋತು ಶರಣಾಗಬೇಕಾಯಿತು.

| **ಫಿಷರ್** | **ಸ್ಪಾಸ್ಕಿ** |
|---|---|
| (ಬಿಳುಪು) | (ಕಪ್ಪು) |
| 1. P-QB4 | P-K3 |
| 2. Kt-QB3 | P-Q4 |
| 3. P-Q4 | Kt-Kb3 |

ಪ್ರಾರಂಭದ ಆಟ ಇಂಗ್ಲಿಷ್ ಪದ್ಧತಿಯಂತೆ ಇದ್ದುದು ಮಂತ್ರಿಯ ಕಡೆಯ ಬಲೆಯನ್ನು ನಿರಾಕರಿಸಿದ (ಕ್ವೀನ್ಸ್ ಗ್ಯಾಂಬಿಟ್ ಡಿಕ್ಲೈನ್ಡ್) ರೂಪಕ್ಕೆ ಪರಿವರ್ತಿತವಾಗಿದೆ.

| | | |
|---|---|---|
| 4 | Kt-B3 | B-K2 |
| 5 | B-Kt5 | 0-0 |
| 6. | P-K3 | P-KR3 |
| 7. | B-R4 | P-QKT3 |
| 8. | P X P | Kt x P |
| 9. | B X B | Q X B |
| 10 | Kt X Kt | P X Kt |
| 11 | R-BI | B-K3 |
| 12 | Q-R4 | P-QB4 |

ಆಟ ಟಾರ್ಟಕೋವರ್ ವೇರಿಯೇಷನ್ ರೀತಿಯಲ್ಲಿ ಮುಂದುವರಿಯಿತು. ಇದರ ವಿಧಾನದಂತೆ ಬಿಳಿಯ ಕಾಯಿಗಳಿಗೆ, ಕಪ್ಪುಕಾಯಿಗಳ ಮಂತ್ರಿಯ ಭಾಗದ ಮೇಲೆ ಹೆಚ್ಚು ಒತ್ತಡ ಹೇರಲು ಸಾಧ್ಯವಾಗುತ್ತದೆ.

| | | |
|---|---|---|
| 13 | Q-R3 | R-QB1 |
| 14 | B-Kt5 | P-QR3 |
| 15 | PXP | P X P |
| 16 | 0-0 | R-R2 |
| 17 | B-K2 | Kt-Q2 |
| 18 | Kt-Q4 | Q-B1 |
| 19 | KtXB | P X Kt |
| 20 | P-K4 | P-Q5 |



**ಚಿತ್ರ 5. ಒಂಟೆ ಬಲಿಕೊಟ್ಟು ಒಡ್ಡುವ ಸಮಸ್ಯೆ ಪರಿಹಾರ :**

ಇಲ್ಲಿಯವರೆಗೆ ಪ್ರತಿಯೊಬ್ಬ ಆಟಗಾರನೂ ತೆಗೆದುಕೊಂಡ ವೇಳೆ : ಫಿಷರ್–45 ನಿಮಿಷಗಳು, ಸ್ಪಾಸ್ಕಿ 70 ನಿಮಿಷಗಳು.

| | | |
|---|---|---|
| 21 | P-B4 | Q-K2 |
| 22 | P-K5 | R-Kt1 |
| 23 | B-B4 | K-R1 |
| 24 | Q-R3 | Kt-KB1 |
| 25 | P-QKt3 | P-QR4 |
| 26 | P-B5 | PXP |
| 27 | R X P | Kt-R2 |
| 28 | R(BI)KB1 | Q-Q1: |

ಬಿಳಿಯ ಕಾಯಿಗಳಿಗೆ ಪರಿಸ್ಥಿತಿಯ ಸಂಪೂರ್ಣ ಹತೋಟಿ ದೊರಕಿದ್ದರಿಂದ ಈಗ ಪ್ರಬಲ ದಾಳಿಗೆ ಸನ್ನದ್ಧವಾಗಿದೆ.

| | | |
|---|---|---|
| 29 | Q-Kt3 | R-K2: |
| 30 | P-KR4 | R(Kt1)-kt2 |

| | | |
|---|---|---|
| 31 | P-K6 | R(KTW)-BW: |
| 32 | Q-k5 | Q-K1: |
| 33 | P-R4 | Q-Q1 |

ಮಂತ್ರಿಯ ಭಾಗದಲ್ಲಿ ಮರುದಾಳಿಯನ್ನು ತಪ್ಪಿಸಿಕೊಳ್ಳುವುದಷ್ಟೇ ಅಲ್ಲದೇ ಪರಿಸ್ಥಿತಿಯ ಮೇಲಿದ್ದ ಕಪಿಮುಷ್ಟಿಯನ್ನು ಇನ್ನೂ ಬಿಗಿ ಮಾಡುವುದು.

| | | |
|---|---|---|
| 34 | R(B1)-B2 | Q-K1 |
| 35 | R(B2)-B3 | Q-Q1: |
| 36 | B-Q3 | Q-K1: |

ಈಗ ಕಪ್ಪು ಕಾಯಿಗಳನ್ನಾಡುತ್ತಿರುವ ಸ್ಪಾಸ್ಕಿಯು ವೇಳೆಯ ವಿರುದ್ಧವೂ ಹೋರಾಡಬೇಕಾಯಿತು. ಯಾಕೆಂದರೆ ಅವನ ಉಳಿದ 4 ನಡಿಗೆಗಳ ಬಗ್ಗೆ ಅವನಿಗೆ ಕೇವಲ 13 ನಿಮಿಷಗಳ ಅವಕಾಶ ಉಳಿದಿದೆ. ಆಟ ಹೀಗೆ ಮುಂದುವರಿಯಿತು:

| | | |
|---|---|---|
| 37 | Q-K4 | Kt-B3 |
| 38 | RXKt | P X R |
| 39 | R X P | K-Kt1: |
| 40 | B-B4 | K-R1: |
| 41 | Q-B4 | ಆಟದಿಂದ ನಿವೃತ್ತಿ |



ಚಿತ್ರ 6. ಚದುರಂಗದ ಒಂದು ಸಮಸ್ಯೆ : ಕಪ್ಪುಕಾಯಿಗಳ ನಡಿಗೆಯಿಂದ ಪ್ರಾರಂಭಿಸಿ ಸಮಸ್ಯೆಯನ್ನು ಪರಿಹರಿಸತಕ್ಕದ್ದು. ಪರಿಹಾರ :

**1 ... N(kt)-B7Ch !**

**2 Qxkt Qxkt. Ch. † ಮೇಟ್ !!**

| (ಬಿಳುಪು) | (ಕಪ್ಪು) | | (ಬಿಳುಪು) | (ಕಪ್ಪು) |
|---|---|---|---|---|
| 1. P-K4 | P-K4 | 18 | P XP | B-K6!! |
| 2 P-KB4 | P XP | 19 | N-B3 | B x B |
| 3 B-B4 | N-K2 | 20 | N-KN5! | P-KR3 |
| 4 Q-R5 | N-N3 | 21 | Q X N | P X N |
| 5 N-KB3 | Q-K3 | 22 | N x Q5! | Q X P! |
| 6 P-Q4 | N-B3 | 23 | N-K7Ch | K-R1 |
| 7 N-B3 | Q-N5 | 24 | Q X P/N5 | Q-KR3 |
| 8 Q-Q5 | N-Q1 | 25 | Q-QB5 | N-K3 |
| 9 P-QR3 | Q-K2 | 26 | B x N | B X B |
| 10 O-O | P-Q3 | 27 | R-K5 | B-K6! |
| 11 Q-KR5 | P-QB3 | 28 | Q-N5 | P-KN3! |
| 12 B-Q2 | …. | 29 | Q x P | K-N2 |
| 12 …. | N-K3 | 30 | Q-B3 | QR-Q1 |
| 13 QR-K1! | Q-B2! | 31 | P-R3 | Q-R5 |
| 14 P-Q5 | N-Q1 | 32 | N-B6 | B-5! |
| 15 P-K5 | AP X P! | 33 | Q X Qb | Q X Q |
| 16 N X P | B-B4CH! | 34 | P X Q | R-R1CH |
| 17 K-R1 | O_O | 35 | R-KR5 | P X R |

ಆಟದಿಂದ ನಿವೃತ್ತಿ

1 . . . . . N(kt)_B7Ch!

2 Q X kt Q x kt. Ch. †ಮೇಟ್!!

**ಆಟದ ಕೆಲವು ಸಮಸ್ಯೆಗಳು :** ಕೆಲವು ಬಗೆಯ ಸಮಸ್ಯೆಗಳನ್ನು ಒಡ್ಡಿ ಇಂತಿಷ್ಟೇ ಕಾಲದಲ್ಲಿ ಇಷ್ಟೇ ನಡೆಯಲ್ಲಿ ಬಿಡಿಸಿ ಎಂದು ಕೇಳುವುದುಂಟು. ಈ ವಿನೋದಕ್ಕೆ ಇಬ್ಬರು ಬೇಕಿಲ್ಲ. ಎರಡು ಕಡೆಯ ನಡಿಗೆಗಳನ್ನು ಒಬ್ಬನೇ ನಿರ್ವಹಿಸಬಹುದು. ಇಂಥ ಸಮಸ್ಯೆಗಳನ್ನು ಪ್ರಥಮತಃ ಅರಬ್ಬಿ ಮನ್‌ಸುಬಾತ್‌ಗಳಲ್ಲಿ ಗುರುತಿಸಲಾಯಿತು. ಅನೇಕ ಚೆಸ್ ಪತ್ರಿಕೆಗಳಲ್ಲಿಯೂ ಇತರ ನಿಯತಕಾಲಿಕ ಪತ್ರಿಕೆಗಳಲ್ಲಿಯೂ ಓದುಗರ ವಿನೋದಕ್ಕಾಗಿ ಇವನ್ನು ಪ್ರಕಟಿಸುತ್ತಾರೆ.

(ಬಿ.ಡಿ.ಎಚ್.)

**ಚದುರಂಗ**[2] **:** 1916–98. ಚದುರಂಗ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕನ್ನಡ ಸಾಹಿತಿ, ಸಣ್ಣ ಕಥೆಗಾರ, ಕಾದಂಬರಿಕಾರ, ನಾಟಕಕಾರ. ಇವರ ನಿಜನಾಮ ಎಂ.ಎಸ್. ಸುಬ್ರಹ್ಮಣ್ಯರಾಜೇ ಅರಸ್. ಇವರು ಮೈಸೂರು ಜಿಲ್ಲೆಯ ಹುಣಸೂರು



ತಾಲ್ಲೂಕು ಕಲ್ಲಹಳ್ಳಿಯಲ್ಲಿ 1916 ಜನವರಿ 1ರಂದು ಜನಿಸಿದರು. ಜಯನೃಪಕಾವ್ಯ, ಸೂಪಶಾಸ್ತ್ರ – ಮುಂತಾದ ಕೃತಿಗಳನ್ನು ರಚಿಸಿದ ಮಂಗರಸ ಕವಿ ಚದುರಂಗರ ವಂಶದ ಪೂರ್ವಿಕರಲ್ಲಿ ಒಬ್ಬನೆಂದು ಹೇಳಲಾಗುತ್ತದೆ. ಇವರ ಹಿರಿಯ ಅಣ್ಣ ನವರಿಗೆ ಮೈಸೂರು ರಾಜಮನೆ ತನದ ಸಂಬಂಧವಿದ್ದದ್ದ ರಿಂದ ಇವರಿಗೆ ಸಹಜ ವಾಗಿಯೇ ಅರಮನೆಯ ಸಂಪರ್ಕ ಒದಗಿತ್ತು. ಮೈಸೂರಿನ ರಾಯಲ್ ಶಾಲೆ, ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜು, ಮೈಸೂರು ಮಹಾರಾಜ ಕಾಲೇಜು ಗಳಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದ ಇವರು ಕಾನೂನು ಮತ್ತು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಪುಣೆಗೆ ಹೋದರು. ಆದರೆ ಶಿಕ್ಷಣವನ್ನು ಪೂರ್ಣಗೊಳಿಸಲಿಲ್ಲ.

ಸ್ವಾತಂತ್ರ್ಯ ಚಳವಳಿ, ಗಾಂಧಿವಾದ, ಮಾರ್ಕ್ಸ್‌ವಾದ, ಎಂ.ಎನ್. ರಾಯ್ ವಿಚಾರಧಾರೆ, ಡೋಂಗಿ ಬಾಬಾಗಳ ವಿರುದ್ಧದ ಚಳವಳಿಗಳು ಮುಂತಾದ ಸಂಘಟನೆಗಳೂ ತತ್ತ್ವಗಳೂ ಇವರ ಮೇಲೆ ತುಂಬ ಪ್ರಭಾವ ಬೀರಿದವು. ಇವರು ಖಾದಿಪ್ರೇಮಿಯಾಗಿ ಅರಮನೆಯ ಪರಿಸರದ ಅಸಮಾಧಾನಕ್ಕೂ ಕಾರಣರಾದರು. ಸಂಪ್ರದಾಯಕ್ಕೆ ವಿರುದ್ಧವಾಗಿ ತಾವು ಮೆಚ್ಚಿದವರನ್ನು ವಿವಾಹವಾದರು. ಮೈಸೂರನ್ನು ಬಿಟ್ಟು ಸ್ವಂತಸ್ಥಳ ಕಲ್ಲಹಳ್ಳಿಯನ್ನು ಸೇರಿ (1952) ಕೃಷಿಕ ಜೀವನವನ್ನು ಆರಂಭಿಸಿದರು.

ಬಾಲ್ಯದ ದಿನಗಳಲ್ಲಿ ಅರಮನೆಯ ಮಹಿಳಾ ಕಾರ್ಯಕರ್ತೆಯರು ಹೇಳುತ್ತಿದ್ದ ಕಥೆಗಳನ್ನು ಆಲಿಸುತ್ತಿದ್ದ ಇವರಿಗೆ ಕಥೆಗಾರಿಕೆ ಸಹಜವಾಗಿಯೇ ಸಿದ್ಧಿಸಿತು. ಇವರ ತಾಯಿಯವರೂ ಇವರಿಗೆ ಎಷ್ಟೋ ಕಥೆಗಳನ್ನು ಹೇಳುತ್ತಿದ್ದರು. ಚದುರಂಗರು ಮೊದಮೊದಲು ಕವಿತೆಗಳನ್ನು ಬರೆದರು. ಕಾಲೇಜು ಪತ್ರಿಕೆಗಳಲ್ಲಿ ಇವರ ಕವಿತೆಗಳು ಬೆಳಕು ಕಂಡವು. ನವೋದಯದ ಪ್ರಸಿದ್ಧ ಬರೆಹಗಾರರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪ್ರಭಾವದಿಂದಾಗಿ ಇವರ ಮನಸ್ಸು ಗದ್ಯದತ್ತ ತಿರುಗಿತು. ಗ್ರಾಮೀಣ ಪರಿಸರದ ಬದುಕಿನ ಬಗ್ಗೆ ವಿಶೇಷ ಒಲವು ಉಂಟಾಯಿತು. ಮುಖ್ಯವಾಗಿ ಟಾಲ್‌ಸ್ಟಾಯ್, ಮ್ಯಾಕ್ಸಿಂ ಗಾರ್ಕಿ, ದಾಸ್ತೋವಸ್ಕಿ, ಬಾಲ್ಜಾಕ್, ಆಲ್ಬರ್ಟ್ ಕಾಮೂ ಮೊದಲಾದ ಬರೆಹಗಾರರೂ ಪ್ರಭಾವ ಬೀರಿದರು.

ಬೆಂಗಳೂರಿನ 'ಛಾಯಾ' ಪತ್ರಿಕೆಯಲ್ಲಿ ಕಥೆಗಳನ್ನು ಪ್ರಕಟಿಸುವುದರ ಮೂಲಕ ಚದುರಂಗರು ಕನ್ನಡಿಗರ ಗಮನ ಸೆಳೆದರು. 'ಸ್ವಪ್ನಸುಂದರಿ' ಕಥಾಸಂಕಲನ 1948ರಲ್ಲಿ ಪ್ರಕಟವಾಯಿತು. ಶವದ ಮನೆ (1950), ಇಣುಕುನೋಟ (1950), ಬಂಗಾರದ ಗೆಜ್ಜೆ (1951), ಮೀನಿನ ಹೆಜ್ಜೆ (1958), ಕ್ವಾಟೆ (1992), ಮೃಗಯಾ (1998), ಬಣ್ಣದ ಬೊಂಬೆ – ಇವು ಇವರ ಇತರ ಕಥಾಸಂಕಲನಗಳು. ನವೋದಯದಿಂದ ಹಿಡಿದು ದಲಿತ ಬಂಡಾಯದವರೆಗಿನ ಸಾಹಿತ್ಯದ ಎಲ್ಲ ಪಂಥಗಳನ್ನೂ ಚಳವಳಿಗಳನ್ನೂ ಚದುರಂಗರು ಕಂಡಿದ್ದರಾದರೂ ಇವರು ಯಾವೊಂದು ನಿರ್ದಿಷ್ಟ ಪಂಥಕ್ಕೆ ಕಟ್ಟುಬೀಳಲಿಲ್ಲ. ಆ ಎಲ್ಲ ಪ್ರಭಾವಗಳನ್ನೂ ಜೀರ್ಣಿಸಿಕೊಂಡರು. 'ಶವದ ಮನೆ' ಇವರ ಅತ್ಯಂತ ಜನಪ್ರಿಯ ಕಥೆಗಳಲ್ಲಿ ಒಂದು. ಆಸ್ಪತ್ರೆಗಳು ಬಡವರ ಪಾಲಿಗೆ ಶವದ ಮನೆಗಳಾಗಿಬಿಟ್ಟಿರುವುದರಿಂದ ಬದುಕುವುದಕ್ಕಿಂತ ಸಾಯುವುದೇ ಮೇಲು ಎಂಬ ನಿರ್ಧಾರಕ್ಕೆ ಬರುವಂತೆ ಪರಿಸ್ಥಿತಿ ಉಂಟಾಗುತ್ತದೆ. ಹಾಸ್ಯದ ಹೊನಲಿನಲ್ಲಿ ತೀವ್ರ ವಿಡಂಬನೆ ಇಲ್ಲಿ ಸಾಧ್ಯವಾಗಿದೆ. 'ನಾಲ್ಕು ಮೊಳ ಭೂಮಿ' ಕಥೆಯೂ ಕಥೆಯೊಳಗೊಂದು ಕಥೆಯ ತಂತ್ರದಿಂದ ಆಕರ್ಷಕವಾಗಿದೆ.

ಕಾದಂಬರಿ ಕ್ಷೇತ್ರದಲ್ಲೂ ಇವರ ಸಾಧನೆ ಗಣನೀಯವಾದುದು. ಸರ್ವಮಂಗಳ (1950), ಉಯ್ಯಾಲೆ (1960), ವೈಶಾಖ (1981), ಹೆಜ್ಜಾಲ (1998)–ಈ ಕಾದಂಬರಿಗಳು ಇವರಿಗೆ ಕೀರ್ತಿಯನ್ನು ತಂದುಕೊಟ್ಟವು. ಮಾನವೀಯ ಸಂಬಂಧದ ವಸ್ತುವಿನಿಂದಾಗಿ ಪ್ರಾದೇಶಿಕ ಹಿನ್ನೆಲೆಯನ್ನೊಳಗೊಂಡ 'ಸರ್ವಮಂಗಳ' ಹೊಸ ಅಲೆಯ ಕಾದಂಬರಿ ಎನಿಸಿ ಅದ್ಭುತ ಪ್ರಚಾರ ಪಡೆದುಕೊಂಡಿತು. ಇದರಲ್ಲಿನ ನಾಯಕಿ ಸರ್ವಮಂಗಳ ತನ್ನ ಇಚ್ಛೆಗೆ ವಿರುದ್ಧವಾಗಿ ವಿವಾಹವಾದ ಮುಗ್ಧ ಗಂಡನ ಅಭಿವೃದ್ಧಿಯನ್ನೂ ಬಯಸುತ್ತಾಳೆ. ಅದೇ ರೀತಿಯಲ್ಲಿ ತಾನು ಪ್ರೀತಿಸಿದ ನಟರಾಜನನ್ನು ವಿವಾಹವಾದ ದುರ್ಗಿಯ ಶ್ರೇಯಸ್ಸನ್ನೂ ಬಯಸುವುದರಿಂದ ಅವಳ ಪಾತ್ರ ಉದಾತ್ತವಾಗಿ ಕಾಣಿಸುತ್ತದೆ. ಜೊತೆಗೆ ಅವಳ ಸ್ವಭಾವ ಉಳಿದೆಲ್ಲ ಪಾತ್ರಗಳ ಮೇಲೂ ಬೆಳಕುಚೆಲ್ಲುತ್ತದೆ. ಕೇಂದ್ರ ಪಾತ್ರವಾದ ಸರ್ವಮಂಗಳೆಯ ಉದಾತ್ತ ವ್ಯಕ್ತಿತ್ವವನ್ನು ಎತ್ತಿಹಿಡಿಯುವ ಈ ಕಾದಂಬರಿಯಲ್ಲಿ ಸ್ವಾತಂತ್ರ್ಯ ಚಳವಳಿ ಮತ್ತಿತರ ಹೋರಾಟಗಳ ನಿರೂಪಣೆಯೂ ಇದೆ. ಅಂತಿಮವಾಗಿ ಸರ್ವಮಂಗಳೆ ಮತ್ತು ನಟರಾಜನ ಬದುಕಿನ ದುರಂತವನ್ನು ನಿರೂಪಿಸುವುದೇ ಕಾದಂಬರಿಯ ಮುಖ್ಯ ಉದ್ದೇಶ ಎನ್ನಬಹುದು.

ರವೀಂದ್ರನಾಥ ಠಾಕೂರರ 'ಚಾರುಲತಾ' ಕಾದಂಬರಿಯನ್ನು ಹೋಲುವ 'ಉಯ್ಯಾಲೆ' ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಗಂಡು ಹೆಣ್ಣುಗಳ ಸೂಕ್ಷ್ಮ ಚಿತ್ರಣವಾಗಿರುವ ಉಯ್ಯಾಲೆ ಎಂಬ ಶೀರ್ಷಿಕೆ ಮಾನಸಿಕ ತುಯ್ದಾಟದ ಸಂಕೇತವಾಗಿದೆ. 'ವೈಶಾಖ' ಹೆಚ್ಚು ವಿಮರ್ಶೆಗೆ ಗುರಿಯಾದ ಕಾದಂಬರಿ. ಹೊಲೆಯರ ಲಕ್ಕ ಮತ್ತು ವೈದಿಕರ ರುಕ್ಮಿಣಿ – ಇವರ ಮೂಲಕ ಸಾಗುವ ಕಾದಂಬರಿಯ ಕಥೆ ವಿಶಿಷ್ಟ ತಂತ್ರದಿಂದ ಕೂಡಿದುದಾಗಿದೆ. ವಸ್ತುವನ್ನು ನಿರ್ವಹಿಸುವಲ್ಲಿ, ನಿರೂಪಿಸುವಲ್ಲಿ ವಿಶಿಷ್ಟವೆನಿಸುವ ಈ ಕಾದಂಬರಿ ಭಾಷಾದೃಷ್ಟಿಯಿಂದಲೂ ಗಣನೀಯವಾದುದು.

'ಹೆಜ್ಜಾಲ' ಕಾದಂಬರಿಯಲ್ಲಿ ತಂದೆಯಿಲ್ಲದ ಕಾಲೂರನ ಹುಟ್ಟಿನ ಅನ್ವೇಷಣೆ ನಡೆಯುತ್ತಿದೆಯೋ ಎಂಬಂತೆ ಕಥೆಯ ಘಟನಾವಳಿಗಳು ಹರಡಿಕೊಂಡಿವೆ. ಈ ಅನ್ವೇಷಣೆ ಲೇಖಕರ ಜೀವಪರ ದೃಷ್ಟಿಯ ಸಂಕೇತವಾಗಿದೆ. ಇದು ಚದುರಂಗರ ಕೊನೆಯ ಕಾದಂಬರಿ. ಇದರಲ್ಲಿ ಇವರ ಅನುಭವಗಳು ಪರಿಪಕ್ವಗೊಂಡ ಸ್ಥಿತಿಯನ್ನು ಕಾಣಲು ಸಾಧ್ಯವಿದೆ. ಮಾದೇವಮ್ಮ, ಪುಟ್ಟೀರಿ ಮೊದಲಾದ ಪಾತ್ರಗಳ ಮೂಲಕ ವ್ಯವಸ್ಥೆಯ ಕ್ರೌರ್ಯ ಮತ್ತು ಅಹಂಕಾರವನ್ನು ಪ್ರಶ್ನಿಸುವ ಕಲಾತ್ಮಕತೆಯ ಸೃಜನಶೀಲತೆ ಕಾದಂಬರಿಯ ಆಂತರ್ಯದಲ್ಲಿದೆ. ಮಾಯಮ್ಮ, ಅಜ್ಜಮ್ಮ, ಕಾಲೂರ ಯಾವ ಪಾತ್ರವೂ ಕಾಲ್ಪನಿಕ ಎನಿಸುವುದಿಲ್ಲ. ಅಜ್ಜಮ್ಮನ ಮರಣ, ನಾಯಿಯ ಬಗೆಗೆ ಕಾಲೂರ ತೋರುವ ಪ್ರೀತಿ, ಹಾವಿನಿಂದ ಕಚ್ಚಿಸಿಕೊಂಡ ಮಾದೇವಮ್ಮನನ್ನು ನಾಟಿಔಷಧಿಯಿಂದ ಗುಣಪಡಿಸುವುದು – ಅಖಂಡ ಜೀವನ ಪ್ರೀತಿಯ ಅಭಿವ್ಯಕ್ತಿ ಮೂಡಿಸುವಂಥವು. ಗ್ರಾಮಜೀವನದ ಇಂಥ ದಟ್ಟ ಅನುಭವಗಳು ಕಲೆಯಾಗಿ ಅರಳಿರುವುದರಿಂದ ಕಾದಂಬರಿಗೆ ವಿಶಿಷ್ಟಸ್ಥಾನ ಸಂದಿದೆ.

ಕುಮಾರರಾಮ (1966), ಇಲಿಬೋನು (1972), ಬಿಂಬ (1990) – ಈ ನಾಟಕಗಳನ್ನು ಬರೆಯುವುದರ ಮೂಲಕ ಚದುರಂಗರು ನಾಟಕಕಾರರೆನಿಸಿದರು. ಇಲಿಬೋನು ಒಂದು ಅಸಂಗತ ನಾಟಕ. ಚದುರಂಗರು ಉತ್ತರ ರಾಮಾಯಣದ ವಸ್ತುವನ್ನು ಪ್ರತ್ಯೇಕ ನೆಲೆಯಲ್ಲಿ ಸೃಜಿಸುವ ಕೆಲಸವನ್ನು 'ಬಿಂಬ' ನಾಟಕದಲ್ಲಿ ಮಾಡಿದ್ದಾರೆ. 1951ರಲ್ಲಿ ಪ್ರಕಟವಾದ 'ನನ್ನ ರಸಿಕ' ಚದುರಂಗರ ಗದ್ಯಗೀತೆಯಾದರೆ, ಅಲೆಗಳು (1981) ಹನಿಗವನಗಳ ಸಂಗ್ರಹವಾಗಿದೆ. ಚದುರಂಗರಿಗೆ ಚಲನಚಿತ್ರ ಕ್ಷೇತ್ರದಲ್ಲಿಯೂ ಪ್ರವೇಶವಿತ್ತು. ಪುಣೆಯಲ್ಲಿ ಸಿನಿಮಾ ತಂತ್ರದ ಬಗ್ಗೆ ಅಧ್ಯಯನ ಮಾಡಿದ್ದರು. 1948ರಲ್ಲಿ ಸಿದ್ಧವಾದ 'ಭಕ್ತ ಕುಂಬಾರ' ಚಿತ್ರಕ್ಕೆ ಕಥಾಲೇಖಕರಾಗಿದ್ದರು. ವಿದೇಶಿ ಚಿತ್ರ ಸಂಸ್ಥೆ ಎಂ.ಜಿ.ಎಂ. ತಯಾರಿಸಿದ ಇಂಗ್ಲಿಷಿನ 'ಮಾಯಾ' ಚಿತ್ರದ ಸಹನಿರ್ದೇಶಕರಾಗಿದ್ದರು. ಇವರೇ ನಿರ್ಮಿಸಿದ 'ಸರ್ವಮಂಗಳಾ' ಚಿತ್ರಕ್ಕೆ ರಾಜ್ಯ ಚಲನಚಿತ್ರ ಪ್ರಶಸ್ತಿ ದೊರಕಿತ್ತು (1967–68). 'ಉಯ್ಯಾಲೆ' ಚಿತ್ರಕ್ಕಾಗಿ ಇವರಿಗೆ ಉತ್ತಮ ಚಿತ್ರಕಥಾಲೇಖಕ ಪ್ರಶಸ್ತಿಯೂ ದೊರಕಿತು.

ಸಾಹಿತ್ಯಕ ಸಾಧನೆಗಾಗಿ ಇವರಿಗೆ ದೊರಕಿದ ಪ್ರಶಸ್ತಿಗಳು ಹಲವಾರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1978 ಮತ್ತು 1994), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1982, ವೈಶಾಖ ಕಾದಂಬರಿಗೆ), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ–ಇವು ಮುಖ್ಯವಾದುವು. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ (1993). ಇವರು 63ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (1994). ಇವರು 1998 ಅಕ್ಟೋಬರ್ 19ರಂದು ನಿಧನರಾದರು. (ಜಿ.ಆರ್.ಟಿ.)

**ಚನ್ನಂಗಿ :** ಲೆಗ್ಯೂಮಿನೋಸೀ ಕುಟುಂಬದ ಫ್ಯಾಬೇಸೀ (ಪ್ಯಾಪಿಲಿಯೋನೇಸೀ) ಉಪಕುಟುಂಬಕ್ಕೆ ಸೇರಿದ ಒಂದು ಧಾನ್ಯಸಸ್ಯ. ಲೆನ್ಸ್ ಕ್ಯುಲಿನಾರಿಸ್ ಇದರ ಶಾಸ್ತ್ರೀಯ ಹೆಸರು. ಇಂಗ್ಲಿಷಿನಲ್ಲಿ ಲೆಂಟಿಲ್ ಎಂದು ಕರೆಯಲಾಗುತ್ತದೆ. ಇದು 15–17 ಸೆಂ.ಮೀ. ಎತ್ತರಕ್ಕೆ ಬೆಳೆಯುವ ಸಣ್ಣ ಮೂಲಿಕೆ. ಗಿಡದ ಮೇಲೆ ಮೃದುವಾದ ರೋಮಗಳಿವೆ. ಎಲೆಗಳು ಸಂಯುಕ್ತ ರೀತಿಯವು. ಹೂಗಳು ಬಿಳಿ, ಗುಲಾಬಿ, ಕೆಂಪು ಅಥವಾ ಕೆನ್ನೀಲಿ ಬಣ್ಣದವು. ಫಲ ಪಾಡ್ ಮಾದರಿಯದು. ಒಳಗೆ ಎರಡು ಬೀಜಗಳಿವೆ. ಬೀಜಗಳ ಬಣ್ಣ ನಸುಪಾಟಲದಿಂದ ಪ್ರಷ್ಯನ್ ಕೆಂಪಿನವರೆಗೆ ವ್ಯತ್ಯಾಸವಾಗುತ್ತದೆ. (ಜಿ.ಆರ್.ಎಸ್.)

ಬಹಳ ಹಿಂದಿನಿಂದಲೂ ಚನ್ನಂಗಿ ಒಂದು ಉತ್ತಮ ಆಹಾರಧಾನ್ಯವೆನಿಸಿಕೊಂಡಿದೆ. ಏಷ್ಯ ಮೈನರ್, ಗ್ರೀಸ್ ಇಲ್ಲವೆ ಈಜಿಪ್ಟ್ ಇದರ ತವರು ಎಂದು ಹೇಳಲಾಗಿದೆ. ಸ್ಪೇನ್, ಫ್ರಾನ್ಸ್, ಇಟಲಿ, ಈಜಿಪ್ಟ್, ಆಲ್ಜೀರಿಯ, ಇಥಿಯೋಪಿಯ, ಜಾರ್ಡನ್, ಸಿರಿಯ, ತುರ್ಕಿ, ಭಾರತ, ಪಾಕಿಸ್ತಾನಗಳಲ್ಲಿ ಇದನ್ನು ಬೆಳೆಸುತ್ತಾರೆ. ಪ್ರಪಂಚದ ಬೇರಾವ ದೇಶಗಳಿಗಿಂತಲೂ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಇದರ ಬೇಸಾಯ ಹೆಚ್ಚು. ಇತ್ತೀಚೆಗೆ ಚಿಲಿ, ಅರ್ಜೆಂಟೀನ ಗಳಲ್ಲೂ ಉತ್ತರ ಅಮೆರಿಕದಲ್ಲೂ ಚನ್ನಂಗಿಯನ್ನು ಬೆಳೆಸಲು ಆರಂಭಿಸಿ ದ್ದಾರೆ. ಭಾರತದಲ್ಲಿ ಇದರ ಬೇಸಾಯ ಬಹಳ ಹಿಂದಿನಿಂದ ಇದೆಯಾದರೂ ಉತ್ತರ ಭಾರತದಲ್ಲಿ ಮಾತ್ರ ಇದು ಜನಪ್ರಿಯ ವಾಗಿದೆ. ಭಾರತದಲ್ಲಿ ಒಟ್ಟು 52,000 ಹೆಕ್ಟೇರಿಗೂ ಹೆಚ್ಚು ಪ್ರದೇಶದಲ್ಲಿ ಇದರ ಬೆಳೆ ಉಂಟು. ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ, ಬಂಗಾಳ, ಪಂಜಾಬ್ ರಾಜ್ಯಗಳು ಚನ್ನಂಗಿ ಬೇಸಾಯಕ್ಕೆ ಪ್ರಸಿದ್ಧವಾಗಿವೆ. ಚನ್ನಂಗಿಯನ್ನು ದೊಡ್ಡ ಗಾತ್ರದ ಬೀಜದವು (ಮ್ಯಾಕ್ರೊಸ್ಪರ್ಮೀ) ಮತ್ತು ಚಿಕ್ಕಗಾತ್ರದ ಬೀಜದವು (ಮೈಕ್ರೊಸ್ಪರ್ಮೀ) ಎಂಬ ಎರಡು ಉಪ ಪ್ರಭೇದಗಳಾಗಿ ವಿಂಗಡಿಸ ಲಾಗಿದೆ. ಮೊದಲನೆಯ ಬಗೆಯದನ್ನು ಆಫ್ರಿಕ ಮತ್ತು ಮೆಡಿಟರೇನಿಯನ್ ದೇಶಗಳಲ್ಲೂ ಎರಡನೆಯದನ್ನು ಪಶ್ಚಿಮ ಹಾಗೂ ನೈರುತ್ಯ ಏಷ್ಯದ ದೇಶಗಳಲ್ಲೂ ಬೆಳೆಸಲಾಗುತ್ತದೆ. ಎರಡನೆಯ ಬಗೆಯಲ್ಲಿ ಅನೇಕ ಭೌಗೋಳಿಕ ರೂಪಗಳಿವೆ. ಎರಡು ಉಪಪ್ರಭೇದಗಳ ಕ್ರೋಮೊಸೋಮು ಸಂಖ್ಯೆ ಒಂದೇ ಆಗಿದ್ದರೂ ಇವೆರಡನ್ನೂ ಅಡ್ಡ ಹಾಯಿಸಿದಾಗ ಬಂಜೆ ತಳಿಗಳು ಉತ್ಪತ್ತಿಯಾಗುತ್ತವೆ. ಹೂಗಳ ಬಣ್ಣ, ಕಾಯಿಗಳ ಆಕಾರ, ಬೀಜಗಳ ರಚನೆ, ವಿವಿಧ ರೀತಿಯ ಮಣ್ಣು ಹಾಗೂ ವಾತಾವರಣಗಳಿಗೆ ಇವು ತೋರುವ ಹೊಂದಾಣಿಕೆ– ಮುಂತಾದ ಗುಣ ಲಕ್ಷಣಗಳಲ್ಲಿ ಚನ್ನಂಗಿಯ ವಿವಿಧ ಬಗೆಗಳು ಭಿನ್ನತೆಯನ್ನು ಪ್ರದರ್ಶಿಸುತ್ತವೆ. (ಎಂ.ಬಿ.ಟಿ.)



ಚನ್ನಂಗಿ ಗಿಡದ ಒಂದು ರೆಂಬೆ

ಭಾರತದಲ್ಲಿ ಬೆಳೆಯುವ ಚನ್ನಂಗಿ ಬಗೆಗಳನ್ನು ವ್ಯಾಪಾರ ದೃಷ್ಟಿಯಿಂದಲೂ ದಪ್ಪ ಬೀಜದವು (ಮಸೂರ್ ಅಥವಾ ಮಲ್ಕ ಮಸೂಲ್) ಮತ್ತು ಸಣ್ಣ ಬೀಜದವು (ಮಸ್ರಿ) ಎಂಬ ಎರಡು ಮುಖ್ಯ ಗುಂಪುಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಸು. 66 ವಿವಿಧ

ರೀತಿಯ ಶುದ್ಧ ತಳಿಗಳನ್ನು ಗುರುತಿಸಿರುವುದುಂಟು. ಇವುಗಳ ಹೂವಿನ ಬಣ್ಣ, ಬೀಜಗಳ ಬಣ್ಣ, ಗಾತ್ರ ಹಾಗೂ ಗುರುತುಗಳು, ಹೂ ಅರಳುವ ಕಾಲ, ಎಲೆ ಹಾಗೂ ಕಾಂಡಗಳ ಬಣ್ಣ, ಸಸ್ಯರೂಪ–ಮುಂತಾದ ಲಕ್ಷಣಗಳಲ್ಲಿ ವ್ಯತ್ಯಾಸಗಳಿವೆ. ಭಾರತದ ಬಗೆಗಳಲ್ಲಿ ಮುಖ್ಯವಾದವು ಎನ್.ಪಿ. 11, ಎನ್.ಪಿ. ಹೈಬ್ರಿಡ್ 1, ಟೈಪ್ 3, ಟೈಪ್ 36, ನಂ. 15 ಮತ್ತು ನಂ. 20 ಮುಖ್ಯವಾಗಿವೆ. ಇವುಗಳಲ್ಲಿ ಟೈಪ್ 3 ಮತ್ತು ಟೈಪ್ 36 ಇಳುವರಿಯ ಮೊತ್ತದ ದೃಷ್ಟಿಯಿಂದ ಪ್ರಮುಖವೆನಿಸಿವೆ.

ಬೇಸಾಯ : ಭಾರತದಲ್ಲಿ ಚನ್ನಂಗಿಯನ್ನು ಸಮುದ್ರ ಮಟ್ಟದಿಂದ ಹಿಡಿದು 3,500 ಮೀ. ಎತ್ತರದ ಬೆಟ್ಟಪ್ರದೇಶಗಳ ವಿವಿಧ ರೀತಿಯ ವಾಯು ಪರಿಸ್ಥಿತಿಗಳಲ್ಲಿ ಬೆಳೆಸಲಾಗುತ್ತದೆ. ಚನ್ನಂಗಿಗೆ ವಿವಿಧ ಬಗೆಯ ಮಣ್ಣುಗಳಿಗೆ ಹೊಂದಿಕೊಂಡು ಬೆಳೆಯಬಲ್ಲ ಸಾಮರ್ಥ್ಯವೂ ಇದೆ. ಉತ್ತರಭಾರತದ ಮೆಕ್ಕಲು ಭೂಮಿಯಲ್ಲಿ ಬೆಳೆದಷ್ಟು ಹುಲುಸಾಗಿ ದಕ್ಷಿಣ ಭಾರತದ ಎರೆಮಣ್ಣಿನಲ್ಲೂ ಪಂಜಾಬಿನ ಕೆಳಮಟ್ಟದ ಪ್ರದೇಶಗಳಾದ ಸಾಯ್ಲಾಬಗಳಲ್ಲೂ ಇದು ಬೆಳೆಯಬಲ್ಲದು. ಸಾಮಾನ್ಯವಾಗಿ ಚನ್ನಂಗಿ ಚಳಿಗಾಲದ ಬೆಳೆ (ಬಿತ್ತನೆಯ ಕಾಲ ಅಕ್ಟೋಬರ್–ನವೆಂಬರ್). ಇದನ್ನು ಬಾರ್ಲಿ, ಸಾಸಿವೆ ಅಥವಾ ಹರಳುಗಳೊಂದಿಗೆ (ಔಡಲ) ಮಿಶ್ರಬೆಳೆಯಾಗಿ ಬೆಳೆಸುವುದಿದೆ. ಭೂಮಿಯನ್ನು ಆಳವಾಗಿ ಉಳಬೇಕಾಗಿಲ್ಲ. ಬೀಜಗಳನ್ನು ಸುಮ್ಮನೆ ಚೆಲ್ಲುತ್ತಾರೆ, ಇಲ್ಲವೆ ಸಾಲುಗಳಲ್ಲಿ ಬಿತ್ತುತ್ತಾರೆ. ಬಿತ್ತನೆಯ ರೀತಿಯನ್ನು ಅನುಸರಿಸಿ ಒಂದು ಎಕರೆಗೆ ಸು. 10–40 ಕಿ.ಗ್ರಾ. ಬೀಜ ಬೇಕಾಗುತ್ತದೆ. ಸುಮಾರು 1/2 ತಿಂಗಳ ಅನಂತರ ಫಸಲು ಕುಯ್ಲಿಗೆ ಬರುತ್ತದೆ. ಗಿಡಗಳನ್ನು ನೆಲದ ಮಟ್ಟಕ್ಕೆ ಕತ್ತರಿಸಿ ಇಲ್ಲವೆ ಬೇರುಸಹಿತ ಕಿತ್ತು, ಕಂತೆಕಟ್ಟಿ ಒಣಗಿಸಲಾಗುತ್ತದೆ. ಆಮೇಲೆ ಬಡಿದು ಕಾಳುಗಳನ್ನು ಬೇರ್ಪಡಿಸಲಾಗುತ್ತದೆ.

ಚನ್ನಂಗಿಯ ಎಕರೆವಾರು ಇಳುವರಿ ಬೇಸಾಯಕ್ರಮಗಳನ್ನು ಅವಲಂಬಿಸಿ 140 ಕಿ.ಗ್ರಾ. ಯಿಂದ 340 ಕಿ.ಗ್ರಾ. ಯವರೆಗೆ ವ್ಯತ್ಯಾಸವಾಗುತ್ತದೆ. ಚನ್ನಂಗಿಯನ್ನು ಶುದ್ಧಬೆಳೆಯಾಗಿ ಇಲ್ಲವೆ ನೀರಾವರಿ ಬೆಳೆಯಾಗಿ ಬೆಳೆಸಿದಾಗ ಇಳುವರಿ ಹೆಚ್ಚಾಗಿಯೂ ಮಿಶ್ರಬೆಳೆಯಾಗಿ ಅಥವಾ ಖುಷ್ಕಿ ಜಮೀನಿನ ಬೆಳೆಯಾಗಿ ಬೇಸಾಯ ಮಾಡಿದಾಗ ಇಳುವರಿ ಕಡಿಮೆಯಾಗಿಯೂ ಇರುತ್ತದೆ. ಹೆಚ್ಚು ಇಳುವರಿ ಕೊಡುವ ಬಗೆಗಳನ್ನು ಬೆಳೆಸಿದಾಗ ಉತ್ಪನ್ನದ ಮೊತ್ತ ಸಹಜವಾಗಿಯೇ ಹೆಚ್ಚುತ್ತದೆ. ಉದಾಹರಣೆಗೆ ಕಾನ್ಪುರದ ಕೃಷಿ ಸಂಶೋಧನ ಕೇಂದ್ರದಲ್ಲಿ ಬೆಳೆಸಿದ ಟೈಪ್–3 ಬಗೆ ಎಕರೆಗೆ 60 ಕಿ.ಗ್ರಾ. ಇಳುವರಿ ನೀಡಿದೆ. ಮಾರಕವಾದ ರೋಗಗಳಾಗಲೀ ಕೀಟಗಳಾಗಲೀ ಚನ್ನಂಗಿಗೆ ಬರುವುದಿಲ್ಲ. ಯೂರೋಮೈಸಿಸ್ ಫ್ಯಾಬೀ ಎಂಬ ಶಿಲೀಂಧ್ರದಿಂದ ಉಂಟಾಗುವ ಎಲೆತುಕ್ಕು ರೋಗವೂ ಫ್ಯೂಸೇರಿಯಮ್ ಆರ್ತೊಸಿರಾಸ್ ಎಂಬುದರಿಂದ ಉಂಟಾಗುವ ವಿಲ್ಟ್ ರೋಗವೂ ಲಘು ಪ್ರಮಾಣದಲ್ಲಿ ನಷ್ಟವನ್ನುಂಟುಮಾಡುತ್ತವೆ.

ಉಪಯೋಗಗಳು : ಇಡಿಯ ಕಾಳಿಗಿಂತ ಬೇಳೆಯೇ ಹೆಚ್ಚು ಬಳಕೆಯಲ್ಲಿದೆ. ಬೇಳೆಯನ್ನು ಮುಖ್ಯವಾಗಿ ಸಾರು, ಕಿಚಡಿ ಮುಂತಾದವನ್ನು ತಯಾರಿಸಲು ಉಪಯೋಗಿಸುತ್ತಾರೆ. ಎಳೆಯ ಕಾಯಿಗಳನ್ನು ತರಕಾರಿಯಂತೆ ಬಳಸುವುದಂಟು. ಹಿಟ್ಟನ್ನು ಬಾರ್ಲಿ ಮತ್ತು ಇತರ ಬಗೆಯ ಹಿಟ್ಟು ಹಾಗೂ ಉಪ್ಪಿನೊಂದಿಗೆ ಬೆರೆಸಿ ಪೌಷ್ಟಿಕ ಆಹಾರವೊಂದನ್ನು ತಯಾರಿಸಿ ಉಪಯೋಗಿಸುವ ಕ್ರಮ ಯೂರೋಪಿನಲ್ಲಿದೆ. ಚನ್ನಂಗಿಯಲ್ಲಿ ಅಧಿಕ ಪ್ರಮಾಣದ ಪ್ರೋಟೀನ್ ಉಂಟು. ಕೆಲವು ಬಗೆಗಳಲ್ಲಿ ಪ್ರೋಟೀನು ಮೊತ್ತ ಶೇ. 30 ವರೆಗೂ ಇರುವುದುಂಟು. ಚನ್ನಂಗಿಯ ಪ್ರೋಟೀನಿನಲ್ಲಿ ಆವಶ್ಯಕ ಅಮೈನೋ ಆಮ್ಲಗಳಾದ ಆರ್ಜಿನೀನ್, ಹಿಸ್ಟಿಡೀನ್, ಮೇಥೈಯನೀನ್, ಲೈಸೀನ್, ವ್ಯಾಲೀನ್, ಫೀನೈಲ್ ಅಲನೀನ್, ಟ್ರಿಪ್ಟೋಫ್ಯಾನ್, ಲ್ಯೂಸಿನ್, ಐಸೋಲ್ಯೂಸಿನ್ ಮತ್ತು ಥ್ರಿಯನೀನ್ ಇವೆ. ಬೇರೆ ಬೇಳೆಗಳಂತೆ ಚನ್ನಂಗಿ ಬೇಳೆಯೂ ವಿಟಮಿನುಗಳ ಉತ್ತಮ ಆಗರ ಎನಿಸಿಕೊಂಡಿದೆ. ವಿಟಮಿನ್ ಬಿ ಗುಂಪಿಗೆ ಸೇರಿದ ಥೈಯಮೀನ್, ರೈಬೋಫ್ಲೇವಿನ್, ನಿಕೋಟಿನಿಕ್ ಆಮ್ಲ, ಕೋಲೀನ್, ಫೋಲಿಕ್ ಆಮ್ಲ, ಇನೋಸಿಟಾಲ್, ಬಯೋಟಿನ್, ಪ್ಯಾಂಟಥೆನಿಕ್ ಆಮ್ಲ, ಪಿರಿಡಾಕ್ಸಿನುಗಳೂ ವಿಟಮಿನ್ ಕೆ ಮತ್ತು ಆಸ್ಕಾರ್ಬಿಕ್ ಆಮ್ಲಗಳೂ ಇದರಲ್ಲಿ ಅಧಿಕ ಪ್ರಮಾಣದಲ್ಲಿವೆ. ಚನ್ನಂಗಿಯಲ್ಲಿ ಅನೇಕ ಬಗೆಯ ಖನಿಜಗಳು ಉಂಟು. ಕ್ಯಾಲ್ಸಿಯಮ್, ರಂಜಕ, ಕಬ್ಬಿಣ, ಗಂಧಕ, ಕ್ಲೋರೀನ್, ಅಯಡೀನ್, ಬ್ರೋಮೀನ್, ಮ್ಯಾಂಗನೀಸ್, ಅಲ್ಯುಮಿನಿಯಮ್, ತಾಮ್ರ, ಸತು ಮುಂತಾದವು ಮುಖ್ಯವಾಗಿವೆ. ಈ ಎಲ್ಲ ವಸ್ತುಗಳಿಂದಾಗಿ ಚನ್ನಂಗಿ ಒಳ್ಳೆಯ ಪುಷ್ಟಿಕರ ಆಹಾರವೆನಿಸಿದೆ. ಪೌಷ್ಟಿಕ ಮೌಲ್ಯದ ದೃಷ್ಟಿಯಿಂದ ಉದ್ದನ್ನು ಬಿಟ್ಟರೆ ಚನ್ನಂಗಿಯೇ ಪ್ರಮುಖವಾದುದು.

ಚನ್ನಂಗಿ ಬೇಳೆಯಿಂದ ಪಿಷ್ಟವನ್ನು ತೆಗೆಯುವುದೂ ಉಂಟು. ಈ ಪಿಷ್ಟವನ್ನು ಬಟ್ಟೆ ಹಾಗೂ ಕ್ಯಾಲಿಕೊ ಮುದ್ರಣ ಕೈಗಾರಿಕೆಗಳಲ್ಲಿ ಬಳಸುತ್ತಾರೆ. ಪಿಷ್ಟ ತೆಗೆದ ಅನಂತರ ಉಳಿಯುವ ಹಿಂಡಿಯನ್ನೂ ಬೀಜದಿಂದ ಬೇರ್ಪಡಿಸಲಾಗುವ ಹೊಟ್ಟು ಮತ್ತು ಸಿಪ್ಪೆಗಳನ್ನೂ ದನದ ಮೇವಾಗಿ ಬಳಸುವುದುಂಟು. ಚನ್ನಂಗಿಯ ಹೊಟ್ಟು ಗೋಧಿಯ ಹೊಟ್ಟಿಗಿಂತ ಉತ್ತಮವಾದುದೆಂದು ಹೇಳಲಾಗಿದೆ. ಇದೇ ರೀತಿ ಚನ್ನಂಗಿ ಸೊಪ್ಪು ಕೂಡ ದನಕರುಗಳಿಗೆ ಒಳ್ಳೆಯ ಆಹಾರ. ಚನ್ನಂಗಿಯನ್ನು ಭಾರತದ ಕೆಲವೆಡೆ ಹಸಿರು ಗೊಬ್ಬರಕ್ಕಾಗಿ ಬೆಳೆಸುವುದುಂಟು. (ಜಿ.ಆರ್.ಎಸ್.)

**ಚನ್ನಕೇಶವ ಅಯ್ಯಂಗಾರ್, ಎಚ್. :** 1880–1959. ಕನ್ನಡ ಭಾಷಾಸಾಹಿತ್ಯಗಳನ್ನು ರೂಢಿಸಿದ ಹಳಬರಲ್ಲಿ ಒಬ್ಬರು. ಚಿಕ್ಕಮಗಳೂರು ಜಿಲ್ಲೆಯ ಹಿರೇಮಗಳೂರು ಗ್ರಾಮದಲ್ಲಿ ಹುಟ್ಟಿದರು. ಎಂ.ಒ.ಎಲ್. ಪದವಿಯನ್ನು ಪಡೆದ ಕನ್ನಡಿಗರಲ್ಲಿ ಇವರೇ ಮೊದಲಿಗರು. ಮೈಸೂರು ಅಧ್ಯಾಪಕರ ಶಿಕ್ಷಣ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ರಾಗಿದ್ದರು. ಆಮೇಲೆ

ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿದರು. ತದನಂತರ ಮದ್ರಾಸು ವಿಶ್ವವಿದ್ಯಾಲಯದ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಕನ್ನಡ ವಿಭಾಗದ ಪ್ರಧಾನ ಅಧ್ಯಾಪಕರಾಗಿ 1936 ರಿಂದ 1939ರ ವರೆಗೆ ಸೇವೆ ಸಲ್ಲಿಸಿದರು. ಇವರು ಮುಂಬೈ, ಮದ್ರಾಸು ವಿಶ್ವ ವಿದ್ಯಾಲಯಗಳ ಸೆನೆಟ್ ಸದಸ್ಯರೂ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರೂ ಆಗಿದ್ದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿಯೂ (1915–33), ಪರಿಷತ್ತಿನ ಸಾಹಿತ್ಯ ವಿಭಾಗದ ಕಾರ್ಯದರ್ಶಿಯಾಗಿಯೂ (1917–19), ಕೆಲಕಾಲ ಪರಿಷತ್ ಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದರು. ಇವರು ಕನ್ನಡ ನುಡಿಗನ್ನಡಿ, ವಿಕಟಪ್ರತಾಪ ಮತ್ತು ಅರ್ಥಸಾಧಕ ಪತ್ರಿಕೆಗಳ ಸಂಪಾದಕರಾಗಿದ್ದರು.

ಕಳೆದ ತಲೆಮಾರಿನ ಪ್ರಸಿದ್ಧ ವಿದ್ವಾಂಸರಾದ ಬಿ.ಎಂ. ಶ್ರೀಕಂಠಯ್ಯ, ರಾವ್ ಬಹಾದೂರ್, ಆರ್. ನರಸಿಂಹಾಚಾರ್, ಕರ್ನಾಟಕ ಕಲಾನಿಧಿ ಸಂಪಾದಕ ಎಂ.ಎ. ರಾಮಾನುಜ ಅಯ್ಯಂಗಾರ್, ಎಸ್. ಜಿ. ನರಸಿಂಹಾಚಾರ್ ಇವರೆಲ್ಲ ಚನ್ನಕೇಶವ ಅಯ್ಯಂಗಾರ್ಯರ ಸಮಕಾಲೀನರು, ಸಹೋದ್ಯೋಗಿಗಳು, ಸುಪ್ರಸಿದ್ಧ ಕವಿ ನಂದಳಿಕೆ ಲಕ್ಷ್ಮೀನಾರಣಪ್ಪನವರನ್ನು ಚೆನ್ನಾಗಿ ತಿಳಿದಿದ್ದು ಅವರೊಡನೆ ಪತ್ರವ್ಯವಹಾರ ನಡೆಸಿದ ಕೆಲವೇ ಹಿರಿಯರಲ್ಲಿ ಇವರೊಬ್ಬರು. ನಂದಳಿಕೆಯವರ ಅದ್ಭುತ ರಾಮಾಯಣದ ಮೂಲಪ್ರತಿಯ ಫೋಟೋಸ್ಟ್ಯಾಟ್ ಪ್ರತಿ ಇವರಲ್ಲಿತ್ತು. ಮಾತ್ರವಲ್ಲದೆ ಇವರಲ್ಲಿ ಇತರ ಅಪೂರ್ವ ಗ್ರಂಥಸಂಗ್ರಹವೂ ಇತ್ತು ಎಂದು ತಿಳಿದುಬಂದಿದೆ.

ಕನ್ನಡ ಸಾಹಿತ್ಯ ವಿಷಯವನ್ನು ಕುರಿತು ಇವರು ಬರೆದ ಲೇಖನಗಳು ಆನಲ್ಸ್ ಆಫ್ ಓರಿಯಂಟಲ್ ರಿಸರ್ಚ್ ಪತ್ರಿಕೆಯಲ್ಲಿ ಅಚ್ಚಾಗಿವೆ. ತಮಗಿಂತ ಹಿಂದೆ ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಧಾನ ಅಧ್ಯಾಪಕರಾಗಿದ್ದ ಅಲೆಮನೆ ವೆಂಕಟರಾಯರು ಮತ್ತು ತಮ್ಮ ಸಹೋದ್ಯೋಗಿ ಎಚ್. ಶೇಷ ಅಯ್ಯಂಗಾರರು ಸಂಪಾದಿಸಿದ ಶಬ್ದಮಣಿದರ್ಪಣದ ಕೊನೆಯ ಅನುಬಂಧಗಳನ್ನು ಇವರು ಪರಿಶೀಲಿಸಿ, ಪರಿಷ್ಕರಿಸಿ, ತಮ್ಮದೇ ಒಂದು ಹೊಸ ಅನುಬಂಧವನ್ನು ಕೊಟ್ಟು, ಪ್ರಕಾಶಪಡಿಸಿದ್ದಾರೆ (1938). ಶಬ್ದಮಣಿದರ್ಪಣದ ಅವತರಣಿಕೆಯನ್ನು ಪರಿಶೀಲಿಸಿ, ಹೆಚ್ಚಿನ ವಿವರಗಳನ್ನು ಸೇರಿಸಿ, ಪರಿಷ್ಕರಿಸಿ, ಅದರ ಉಪಯುಕ್ತತೆಯನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. (ಎ.ಎಸ್.ಕೆ.)

**ಚನ್ನಗಿರಿ :** ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು; ಆ ತಾಲ್ಲೂಕಿನ ಮುಖ್ಯ ಸ್ಥಳ, ಜಿಲ್ಲೆಯ ಪೂರ್ವಭಾಗದಲ್ಲಿದೆ. ಚನ್ನಗಿರಿ ತಾಲ್ಲೂಕಿನ ಪಶ್ಚಿಮದಲ್ಲಿ ಹೊನ್ನಾಳಿ ಮತ್ತು ಭದ್ರಾವತಿ ತಾಲ್ಲೂಕುಗಳು, ಉತ್ತರ ಮತ್ತು ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ಮತ್ತು ಹೊಳಲ್ಕೆರೆ ತಾಲ್ಲೂಕು, ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು–ಇವು ತಾಲ್ಲೂಕಿನ ಮೇರೆಗಳು. ತಾಲ್ಲೂಕಿನ ವಿಸ್ತೀರ್ಣ 1197.7 ಚ.ಕಿಮೀ. ಇದರಲ್ಲಿ 4 ಹೋಬಳಿಗಳೂ 246 ಹಳ್ಳಿಗಳೂ ಇವೆ. ಜನಸಂಖ್ಯೆ 18, 517(2001).

ತಾಲ್ಲೂಕಿನ ದಕ್ಷಿಣ ಹಾಗೂ ಪಶ್ಚಿಮಭಾಗದಲ್ಲಿ ಬೆಟ್ಟಗಳ ಸಾಲುಗಳಿವೆ. ಇವುಗಳಿಂದ ಹರಿದುಬರುವ ತೊರೆಗಳು ಶಾಂತಿಸಾಗರ (ಸೂಳೆಕೆರೆ) ಎನ್ನುವ 64 ಕಿಮೀ ಸುತ್ತಳತೆಯುಳ್ಳ ಕೆರೆಯನ್ನು ಸೇರುತ್ತದೆ. ಇಲ್ಲಿಂದ ಹರಿದು ಪರಿಹರದ ಬಳಿಯಲ್ಲಿ ತುಂಗಭದ್ರಾ ನದಿಯನ್ನು ಸೇರುವ ಹೊಳೆಗೆ ಹರಿದ್ರಾ ಎಂದು ಹೆಸರು. ಈ ತಾಲ್ಲೂಕಿನ ಉಳಿದ ಪ್ರದೇಶ ಮೈದಾನ. ಇಲ್ಲಿ ವಿಸ್ತಾರವಾದ ಹುಲ್ಲುಗಾವಲುಗಳುಂಟು. ಆದುದರಿಂದ ಶಿವಮೊಗ್ಗ ಜಿಲ್ಲೆಯ ಇತರ ಕಡೆಗಳಿಗಿಂತ ಈ ತಾಲ್ಲೂಕಿನ ದನಕರುಗಳು ಉತ್ತಮವಾದವು. ಈ ತಾಲ್ಲೂಕಿನ ಉತ್ತರದಲ್ಲಿ ತೋಟಗಳೂ ಕಬ್ಬಿನ ಗದ್ದೆಗಳೂ ಇವೆ. ಶಾಂತಿಸಾಗರದ ಸುತ್ತಮುತ್ತಲ ಪ್ರದೇಶವನ್ನು ಬಹಳ ವರ್ಷಗಳವರೆಗೆ ನಿರ್ಲಕ್ಷಿಸಲಾಗಿತ್ತು. ಆದರೆ ಇತ್ತೀಚೆಗೆ ಕಪ್ಪು ಮತ್ತು ಕೆಂಪು ಮಣ್ಣು ಇರುವ ಪ್ರದೇಶಗಳನ್ನು ವ್ಯವಸಾಯಕ್ಕಾಗಿ ಉತ್ತಮಗೊಳಿಸಲಾಗಿದೆ. ಹತ್ತಿರದಲ್ಲಿರುವ

ಭದ್ರಾ ಜಲಾಶಯಕ್ಕೂ ಶಾಂತಿಸಾಗರಕ್ಕೂ ಸಂಬಂಧವೇರ್ಪಡಿಸಿರುವುದರಿಂದ ನೀರಾವರಿ ಸೌಲಭ್ಯ ಅಧಿಕವಾಗಿ ಲಭ್ಯವಾಗಿ, ವ್ಯವಸಾಯ ವಾಣಿಜ್ಯಗಳಲ್ಲಿ ಈ ತಾಲ್ಲೂಕಿನ ಪ್ರಾಮುಖ್ಯ ಹೆಚ್ಚಾಗತೊಡಗಿದೆ.

ಹೊಳಲ್ಕೆರೆ ರೈಲ್ವೆ ನಿಲ್ದಾಣದಿಂದ ಪಶ್ಚಿಮಕ್ಕೆ 22.5 ಕಿಮೀ ಮತ್ತು ಶಿವಮೊಗ್ಗದ ಈಶಾನ್ಯಕ್ಕೆ ಭದ್ರಾವತಿ–ಚಿತ್ರದುರ್ಗ ರಸ್ತೆಯಲ್ಲಿ 53 ಕಿಮೀ ದೂರದಲ್ಲಿ ಉ.ಅ. $14^{0}1'$ ಮತ್ತು ಪೂರೇ. $75^{0}59'$ ಮೇಲಿರುವ ಚನ್ನಗಿರಿ ಪಟ್ಟಣದ ವಿಸ್ತೀರ್ಣ 53 ಕಿಮೀ (5.23 ಚ.ಕಿಮೀ) ಇಲ್ಲಿ ಪುರಸಭೆಯಿದೆ. ಟೀಪುವಿನ ಸೈನ್ಯದಲ್ಲಿದ್ದು, 1857ರ ಬಂಡಾಯಕ್ಕೆ ಹಿಂದೆ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದವರಲ್ಲೊಬ್ಬನಾದ ಧೋಂಡಿಯ ವಾಘ್ ಚನ್ನಗಿರಿಯವನು.

ಈಗಿನ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಅಸುಂಡಿಯಿಂದ ಇದರ ಆಡಳಿತ ನಡೆಯುತ್ತಿತ್ತು. ಈ ಪ್ರದೇಶವೆಲ್ಲ ಗಂಗರ ಆಳ್ವಿಕೆಗೆ ಒಳಪಟ್ಟಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. 12ನೆಯ ಶತಮಾನದಲ್ಲಿ ಇದು ಚಾಳುಕ್ಯ ಚಕ್ರಾಧಿಪತ್ಯದ ಒಂದು ಭಾಗವಾಗಿ ನೊಣಂಬವಾಡಿ 32 ಸಾಸಿರ ಪ್ರಾಂತ್ಯದಲ್ಲಿತ್ತು. ಇದನ್ನು ಆಳುತ್ತಿದ್ದವನು ಉಚ್ಚಂಗಿಯ ಪಾಂಡ್ಯ. 16ನೆಯ ಶತಮಾನದಲ್ಲೂ ಈ ಪ್ರದೇಶ ಉಚ್ಚಂಗಿಯ ಜಿಲ್ಲೆಯ ಭಾಗವಾಗಿತ್ತು.; ಸಂತೆಬೆನ್ನೂರಿಗೆ ಸೇರಿತ್ತು. ಚನ್ನಗಿರಿ ಪಟ್ಟಣ 17ನೆಯ ಶತಮಾನದ ಅಂತ್ಯದಲ್ಲಿ ಬಿದನೂರು ರಾಜ್ಯದ ವಶಕ್ಕೆ ಬಂತು. ಅದರ ರಾಣಿ ಚೆನ್ನಮ್ಮಾಜಿ ಇಲ್ಲೊಂದು ಕೋಟೆಯನ್ನು ಕಟ್ಟಿಸಿ ಈ ಪಟ್ಟಣಕ್ಕೆ ತನ್ನ ಹೆಸರನ್ನಿಟ್ಟು ಇದನ್ನು ತನ್ನ ತಂಗಿಗೆ ಜಹಗೀರಿಯಾಗಿ ಕೊಟ್ಟಳು.

ಇಲ್ಲಿಯ ಕಲ್ಲೇಶ್ವರ ದೇವಾಲಯ ಹೊಯ್ಸಳ ಶೈಲಿಯ ಹಳೆಯ ಕಟ್ಟಡವೆಂದು ಕಾಣುತ್ತದೆ. ಈ ದೇವಾಲಯ ದಕ್ಷಿಣಾಭಿಮುಖವಾಗಿದೆ. ಇದರ ಎರಡು ಗರ್ಭಗೃಹಗಳ ಪೈಕಿ ಒಂದು ದಕ್ಷಿಣಾಭಿಮುಖವಾಗಿದೆ. ಇದರಲ್ಲಿ 1.5 ಮೀ. ಎತ್ತರದ ಕೇಶವ ವಿಗ್ರಹವಿದೆ. ಇನ್ನೊಂದು ಪೂರ್ವಾಭಿಮುಖವಾಗಿದೆ. ಅಲ್ಲಿ ಲಿಂಗವಿದೆ.

ನಗರದ ನೈರುತ್ಯ ಮೂಲೆಯಲ್ಲಿ ಇರುವ ಸಣ್ಣಬೆಟ್ಟದ ಮೇಲೆ ಕೋಟೆಯೊಂದುಂಟು. ಇದೇ ಚೆನ್ನಮ್ಮಾಜಿ ಕಟ್ಟಿಸಿದ್ದು. ಬೆಟ್ಟದ ತುದಿಯಲ್ಲಿರುವ ದೇವಸ್ಥಾನ ಬೇಟೆ ರಂಗನಾಥಸ್ವಾಮಿಯದು. ಈ ಸ್ಥಳದಿಂದ ಕಾಣುವ ಸುತ್ತಲಿನ ದೃಶ್ಯ ಸುಂದರವಾದ್ದು. ಉತ್ತರದ ಕಡೆಗೆ 19 ಕಿಮೀ ದೂರದಲ್ಲಿರುವ ಸೂಳೆಕೆರೆ ರಮ್ಯವಾಗಿ ಕಾಣಿಸುತ್ತದೆ. ಬೇಟೆ ರಂಗನಾಥ ಸ್ವಾಮಿಯ ದೇವಾಲಯದ ಮೂಲವಿಗ್ರಹದ ಎತ್ತರ 1 ಮೀ. ಶಂಖ, ಚಕ್ರ, ಬಿಲ್ಲು ಬಾಣಗಳಿಂದ ಅಲಂಕೃತವಾಗಿರುವ ಈ ಮೂರ್ತಿ ಬೇಟೆಗಾರನ ಉಡುಪು ತೊಡವುಗಳಿಂದ ಕೂಡಿದೆ.

ಕಲ್ಲುಮಠ ಎನ್ನುವ ಒಂದು ವೀರಶೈವ ಮಠವೂ ಇಲ್ಲುಂಟು. ಇಲ್ಲಿರುವ ಶಾಸನಗಳ ಅಕ್ಷರಗಳು ಮಾಸಿವೆ. ಇಲ್ಲಿಯ ದೊಡ್ಡ ಮಸೀದಿಯಲ್ಲಿ ಮೊಹಬ್ಬತ್–ಷಾ–ಮಸ್ತಾನ್ ಖಾದ್ರಿ ಎನ್ನುವವರ ಗೋರಿಯುಂಟು. ಇದು 1636ರಲ್ಲಿ ಟೀಪು, ದಿವಾನ್ ಪೂರ್ಣಯ್ಯ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು ಈ ಮಸೀದಿಗೆ ಸನ್ನದುಗಳನ್ನು ನೀಡಿದ್ದರೆಂದು ತಿಳಿದುಬರುತ್ತದೆ.

ಚನ್ನಗಿರಿಯಿಂದ ಭದ್ರಾವತಿ, ಹೊಳಲ್ಕೆರೆಗಳಿಗೂ ಶಿವನಿ, ಹೊಳೆಹೊನ್ನೂರು, ನಲ್ಲೂರು, ಬಸವಾಪಟ್ಟಣ, ಕಕನೂರು, ಸಂತೆಬೆನ್ನೂರು, ತ್ಯಾವಣಗಿ, ಬಾಡಗಳ ಕಡೆಗೂ ರಸ್ತೆಗಳುಂಟು. ಬಸ್ಸು ಸೌಕರ್ಯವಿದೆ. ಭದ್ರಾವತಿ–ಚಿತ್ರದುರ್ಗ ರಸ್ತೆ ಈ ಪಟ್ಟಣದ ಮೂಲಕ ಸಾಗುತ್ತದೆ. ಬೆಂಗಳೂರು–ಪುಣೆ ರೈಲುಮಾರ್ಗ ಚನ್ನಗಿರಿ ತಾಲ್ಲೂಕಿನ ಪೂರ್ವದ ಅಂಚಿನಲ್ಲಿ ಹಾದುಹೋಗುತ್ತದೆ. (ಕೆ.ಆರ್.ಆರ್.)

**ಚನ್ನಪಟ್ಟಣ :** ಕರ್ನಾಟಕ ರಾಜ್ಯದಲ್ಲಿ ರಾಮನಗರ ಜಿಲ್ಲೆಯ ಒಂದು ತಾಲ್ಲೂಕು: ಆ ತಾಲ್ಲೂಕಿನ ಕಸಬೆ (ಆಡಳಿತ ಕೇಂದ್ರ). ತುಮಕೂರು ಜಿಲ್ಲೆಯ ಕುಣಿಗಲ್, ಬೆಂಗಳೂರು ಜಿಲ್ಲೆಯ ರಾಮನಗರಂ ಮತ್ತು ಕನಕಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳು ಚನ್ನಪಟ್ಟಣ ತಾಲ್ಲೂಕನ್ನು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 1287 ಚ.ಕಿಮೀ. ಜನಸಂಖ್ಯೆ 71, 912.

ತಾಲ್ಲೂಕಿನ ಉತ್ತರ ಭಾಗ ಬೆಟ್ಟಗಳಿಂದ ಕೂಡಿದೆ. ದಕ್ಷಿಣ ಭಾಗ ಮೈದಾನ. ಈ ಭಾಗದಲ್ಲಿ ಹಳ್ಳಿಗಳು ಹೆಚ್ಚು. ಇಲ್ಲಿ ಹಲವು ದೊಡ್ಡ ಕೆರೆಗಳಿವೆ. ತಾಲ್ಲೂಕಿನ ಮುಖ್ಯ ನದಿ ಕಣ್ವ. ಇದು ಮಳೂರಿನ ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಬೆಟ್ಟಗಳಿಂದ ಜಿಗಿದು ವಿಶಾಲವೂ ಫಲವತ್ತೂ ಆದ ಕಣಿವೆ ಪ್ರದೇಶದಲ್ಲಿ ಹರಿಯುತ್ತದೆ. ಅಬ್ಬೂರಿನ ಬಳಿ ಈ ನದಿಗೆ ಅಣೆಕಟ್ಟನ್ನು ಕಟ್ಟಿ ಹಲವು ಕೆರೆಗಳಿಗೆ ಇದರಿಂದ ನೀರನ್ನು ಒದಗಿಸಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಮಣ್ಣು ವೈವಿಧ್ಯಮಯವಾದ್ದು. ತಾಲ್ಲೂಕಿನ ಹಲವು ಕಡೆ, ನೀರಿನ ಆಸರೆ ಇರುವಲ್ಲಿ, ಬತ್ತ, ಕಬ್ಬು, ಬಾಳೆ, ತೆಂಗು, ಅಡಕೆ , ಮಾವು ಬೆಳೆಯುತ್ತವೆ. ಕಣ್ವ ನದಿಯ ಕೆಳದಂಡೆಗಳ ಮೇಲೆ ತೆಂಗಿನ ತೋಟಗಳು ಸುಂದರವಾಗಿ ಹಬ್ಬಿವೆ. ಇಲ್ಲಿಯ ಮಣ್ಣು ತೆಂಗಿನ ಬೆಳೆಗೆ ತುಂಬ ಪ್ರಶಸ್ತವಾದ್ದು. ನೀರಿನ ಸೌಕರ್ಯ ಹೆಚ್ಚಾಗಿಲ್ಲದ ಎಡೆಗಳಲ್ಲಿ ರಾಗಿ, ಜೋಳ ಮುಂತಾದವನ್ನು ಬೆಳೆಯುತ್ತಾರೆ. ರೇಷ್ಮೆ ಹುಳುಗಳನ್ನು ಸಾಕುವುದೂ, ಎಲೆ ತೆಗೆಯುವುದೂ ತಾಲ್ಲೂಕಿನ ಜನರ ಒಂದು ಮುಖ್ಯ ಕಸುಬು. ರೇಷ್ಮೆ ಹುಳುಗಳಿಗೆ ಆಹಾರವಾದ ಉಪ್ಪುನೇರಳೆ ಇಲ್ಲಿ ಬೆಳೆಯುತ್ತದೆ. ರೇಷ್ಮೆ ವ್ಯವಸಾಯಕ್ಕೆ ಇಲ್ಲಿಯ ಹವಾಮಾನ ತುಂಬ ಅನುಕೂಲಕರವಾದ್ದು. ತಾಲ್ಲೂಕಿನ ಹಲವು ಎಡೆಗಳಲ್ಲಿ ಹತ್ತಿ ಬಟ್ಟೆ ನೇಯುತ್ತಾರೆ.

ಚನ್ನಪಟ್ಟಣದಲ್ಲಿ ಬಣ್ಣದ ವಸ್ತುಗಳ ತಯಾರಿಕೆ

ಚನ್ನಪಟ್ಟಣದ ಇತಿಹಾಸವನ್ನು ಸು. 13 ಶತಮಾನಗಳಷ್ಟು ಹಿಂದಿನಿಂದ ಗುರುತಿಸಬಹುದು. ಪುರಾಣಗಳ ಸಂಗತಿಗಳೊಂದಿಗೂ ಚನ್ನಪಟ್ಟಣದ ಹೆಸರು ಹೆಣೆದುಕೊಂಡಿದೆ. ಕೃತಯುಗದಲ್ಲಿ ವಿಜಯಪಾಲರೂ (ತ್ರೇತಾಯುಗದಲ್ಲಿ ಕಣ್ವ ಮಹರ್ಷಿಗಳೂ) ದ್ವಾಪರದಲ್ಲಿ ಲಂಬಕರ್ಣರೂ ಕಲಿಯುಗದ ವಿಜ್ಞಾನೇಶ್ವರರೂ ಇಲ್ಲಿದ್ದರೆಂದು ಜನರ ನಂಬಿಕೆ. ಸುಂದರ ತಾಣವಾದ ಚನ್ನಪಟ್ಟಣಕ್ಕೆ ವ್ಯಾಸತೀರ್ಥರ ಕಾಲದಲ್ಲಿ ಚೆಂದಪಟ್ಟಣವೆಂದು ಹೆಸರಾಯಿತೆಂದೂ ಅನಂತರ ಇದು ಚನ್ನಪಟ್ಟಣ ಎಂದಾಯಿತೆಂದೂ ಹೇಳಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಪ್ರದೇಶ ಗಂಗ ರಾಜ್ಯಕ್ಕೆ ಸೇರಿತ್ತು. ಇದರ ಪಶ್ಚಿಮ ಭಾಗ ಚಿಕ್ಕ ಗಂಗವಾಡಿಯ ಭಾಗವಾಗಿತ್ತು. ಅದರ ಮುಖ್ಯಪಟ್ಟಣ ಹೊಂಗನೂರು, ಚೋಳ ದೊರೆಗಳ ಕಾಲದಲ್ಲಿ ಮಾಲೂರು ಪಟ್ಟಣ ಮತ್ತು ಕೊಡಲೂರು ಮುಖ್ಯ ಸ್ಥಳಗಳಾಗಿದ್ದುವು. ಅನಂತರ ಈ ಪ್ರದೇಶ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಮೂರನೆಯ ಪೆನುಗೊಂಡ ಯುದ್ಧದಲ್ಲಿ ಅಸಾಧಾರಣ ಶೌರ್ಯ ಪ್ರದರ್ಶಿಸಿದ ಜಗದೇವರಾಯನ ಸೇವೆಯನ್ನು ಮೆಚ್ಚಿ ಶ್ರೀರಂಗರಾಯ ಇವನಿಗೆ ಘನಗಿರಿ ರಕ್ಷಕನೆಂಬ ಬಿರುದನ್ನೂ ಚನ್ನಪಟ್ಟಣ ಸೀಮೆಯನ್ನೂ ಕೊಟ್ಟನಲ್ಲದೆ ತನ್ನ ಮಗಳನ್ನು ಜಗದೇವರಾಯನ ಮಗನಿಗೆ ಕೊಟ್ಟು ಮದುವೆ ಮಾಡಿದನೆಂದು ಹೇಳಲಾಗಿದೆ. ಜಗದೇವರಾಯ ಚನ್ನಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಜಗದೇವರಾಯನ ಮರಣದ ಅನಂತರ ಅವನ ಮಗ ಕುಮಾರ ಜಗದೇವರಾಯ ಆಳಿದ. 1630ರಲ್ಲಿ ಮೈಸೂರಿನ ಅರಸರು ಚನ್ನಪಟ್ಟಣವನ್ನು ಆಕ್ರಮಿಸಿಕೊಂಡರು. ಕನ್ನಡ ಬಾಲಬೋಧೆ

ಮೊದಲ್ಗೊಂಡು ಅನೇಕ ಕನ್ನಡ ಕೃತಿಗಳನ್ನು ರಚಿಸಿದ ಚ. ವಾಸುದೇವಯ್ಯನವರೂ ಕಥೆ, ನಾಟಕ, ವಿಮರ್ಶೆ ಮುಂತಾದ ನಾನಾ ಸಾಹಿತ್ಯ ಪ್ರಕಾರಗಳಲ್ಲಿ ಕೃತಿರಚನೆ ಮಾಡಿ ಆಧುನಿಕ ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿದ ಸಿ.ಕೆ. ವೆಂಕಟರಾಮಯ್ಯನವರೂ ಚನ್ನಪಟ್ಟಣದವರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ್ದ ಸಾಹಿತಿ ದೇ.ಜವರೇಗೌಡರು ಈ ತಾಲ್ಲೂಕಿನ ಚಿಕ್ಕರೆ ಗ್ರಾಮದವರು. ತಾಲ್ಲೂಕಿನ ಕಸಬೆಯಾಗಿರುವ ಚನ್ನಪಟ್ಟಣ ಬೆಂಗಳೂರಿಗೆ ನೈಋತ್ಯದಲ್ಲಿ, ಬೆಂಗಳೂರು–ಮೈಸೂರು ರಸ್ತೆಯಲ್ಲಿ, ಉ.ಅ. $12^{0}$ 38′ ಮತ್ತು ಪೂ.ರೇ. $77^{0}$ 13′ ಮೇಲಿದೆ. ಬೆಂಗಳೂರು–ಮೈಸೂರು ರೈಲುಮಾರ್ಗ ಈ ಊರನ್ನು ಹಾದುಹೋಗುತ್ತದೆ. ಜನಸಂಖ್ಯೆ 63,561 (2001).

ಬಣ್ಣದ ವಸ್ತುಗಳು

ಇಲ್ಲಿಯ ಕೋಟೆಯನ್ನು 1580ರಲ್ಲಿ ಜಗದೇವರಾಯ ಕಟ್ಟಿಸಿರಬೇಕು. 1630ರಲ್ಲಿ ಚಾಮರಾಜ ಒಡೆಯರು ಬಹುಕಾಲ ಮುತ್ತಿಗೆ ಹಾಕಿ ಇದನ್ನು ವಶಪಡಿಸಿಕೊಂಡರು. 1759ರಲ್ಲಿ ಮರಾಠಾ ಸೇನೆ ಇದರ ಸುಮಾರು ಅರ್ಧ ಭಾಗವನ್ನು ನಾಶಪಡಿಸಿತು. ಆ ಮುತ್ತಿಗೆಯನ್ನು ಹೈದರ್ ಅಲಿ ನಿವಾರಿಸಿದ. ದಿವಾನ್ ಪೂರ್ಣಯ್ಯ ಇದನ್ನು ದುರಸ್ತುಗೊಳಿಸಿದ. ಈ ಕೋಟೆಯ ಸ್ವಲ್ಪ ಭಾಗ ಮಾತ್ರ ಉಳಿದಿದೆ.

ಪಟ್ಟಣದ ದಟ್ಟವಾದ ಜನವಸತಿಯಿರುವುದು ಶುಕ್ರವಾರಪೇಟೆಯಲ್ಲಿ. ಇದು ಕೋಟೆ ಪ್ರದೇಶದ ಈಶಾನ್ಯಕ್ಕೆ ಇದೆ. ಮೃದುವಾದ ಆಲೆಮರದಿಂದ ಜಗತ್ಪ್ರಸಿದ್ಧವಾದ ಬಣ್ಣದ ಸಾಮಾನುಗಳು ತಯಾರಾಗುವುದು ಇಲ್ಲಿ. ಇವು ಇಂದಿಗೂ ಹೊರ ದೇಶಗಳಿಗೆ ರಫ್ತಾಗುತ್ತವೆ. ವೀಣೆಯ ತಂತಿಗಳೂ, ಗಾಜಿನ ಬಳೆಗಳೂ ಹಿಂದೆ ಇಲ್ಲಿ ತಯಾರಾಗುತ್ತಿದ್ದುವು. ಈಗ ಅವಕ್ಕೆ ಬೇಡಿಕೆ ಇಲ್ಲವಾದ್ದರಿಂದ ಆ ಕೈಗಾರಿಕೆಗಳು ನಶಿಸಿವೆ.

ಪೇಟೆಯ ಉತ್ತರಕ್ಕೆ ಎರಡು ಮುಸ್ಲಿಂ ಗೋರಿಗಳ ಪೈಕಿ ಒಂದು ಟಿಪ್ಪುವಿನ ಧಾರ್ಮಿಕ ಗುರುವಾಗಿದ್ದ ಅಕಿಲ್ ಷಾ ಕಾದ್ರಿಯದು. ಇನ್ನೊಂದು, ಟಿಪ್ಪುವಿನ ಬೆಂಗಳೂರು ಸೈನ್ಯದ ದಳಪತಿ ಸೈಯಿದ್ ಇಬ್ರಾಹಿಂನದು. ಟಿಪ್ಪುವಿನಿಂದ ಬಂಧನಕ್ಕೆ ಒಳಗಾಗಿದ್ದ ಬ್ರಿಟಿಷರ ಬಗ್ಗೆ ಅನುಕಂಪ ತೋರಿಸಿದನೆಂದು ಈತ ಪ್ರಸಿದ್ಧನಾಗಿದ್ದಾನೆ. ಕೋಟೆಯ ಆಂಜನೇಯ ಸ್ವಾಮಿ ಮತ್ತು ವರದರಾಜಸ್ವಾಮಿ ದೇವಾಲಯಗಳು, ಪೇಟೆಯ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನ–ಇವುಗಳಲ್ಲದೆ ಚನ್ನಪಟ್ಟಣದಲ್ಲಿ ಮಸೀದಿಗಳೂ ಚರ್ಚುಗಳೂ ಇವೆ. ಪೇಟೆ ಪ್ರದೇಶದಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದಾರೆ. ಚನ್ನಪಟ್ಟಣದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳೂ ಜೂನಿಯರ್ ಕಾಲೇಜೂ ಅಲ್ಲದೆ ಕರ್ನಾಟಕ ರಾಜ್ಯ ಪೊಲೀಸ್ ತರಬೇತು ಶಾಲೆ, ತಾಂತ್ರಿಕ ಶಿಕ್ಷಣ ಶಾಲೆ ಮತ್ತು ಗ್ರಾಮೀಣ ಕರಕುಶಲಿಗಳ ತರಬೇತು ಕೇಂದ್ರ ಇವೆ. ಸ್ಪನ್ ರೇಷ್ಮೆ ಕಾರ್ಖಾನೆ ಇಲ್ಲಿಯ ದೊಡ್ಡ ಕೈಗಾರಿಕೆ. ತೆಂಗಿನ ತೋಟಗಳ ಮಡಿಲಿನಂತಿರುವ ಚನ್ನಪಟ್ಟಣ ತನ್ನ ಹೆಸರನ್ನು ಸಾರ್ಥಕ ಪಡಿಸಿಕೊಂಡಿದೆ. ಇದಕ್ಕೊಂದು ಪುರಸಭೆಯುಂಟು. ಇದೊಂದು ವ್ಯಾಪಾರ ಸ್ಥಳ.

ಚನ್ನಪಟ್ಟಣದ ಉತ್ತರಕ್ಕೆ 8 ಕಿಮೀ ದೂರದಲ್ಲಿ ಕಣ್ವ ನದಿಯ ದಡದಲ್ಲಿರುವ ಅಬ್ಬೂರು ಮಾಧ್ವ ಕೇಂದ್ರ. ಇಲ್ಲಿ ಶ್ರೀ ಬ್ರಹ್ಮಣ್ಯತೀರ್ಥರ ಬೃಂದಾವನ ಇದೆ. ಇವರ ಗುರುಗಳಾದ ಪುರುಷೋತ್ತಮ ತೀರ್ಥರು ಇದರ ಬಳಿಯಲ್ಲಿ ಸಶರೀರವಾಗಿ ಗುಹಾಪ್ರವೇಶ ಮಾಡಿದರೆಂದು ಹೇಳಲಾಗಿದೆ. ವ್ಯಾಸರಾಯರು ಇಲ್ಲೇ ನೆಲಸಿದ್ದರೆಂದೂ ಶ್ರೀಪಾದರಾಯರು ತಮ್ಮ ಬಾಲ್ಯವನ್ನು ಇಲ್ಲೇ ಕಳೆದರೆಂದೂ ತಿಳಿದುಬರುತ್ತದೆ. ಚನ್ನಪಟ್ಟಣದ ಪಶ್ಚಿಮಕ್ಕೆ 2 ½ ಕಿಮೀ ದೂರದಲ್ಲಿರುವ ಗ್ರಾಮ ಮಳೂರು. ಹಿಂದೆ ಇದಕ್ಕೆ ರಾಜೇಂದ್ರಸಿಂಹನಗರ ಎಂಬ ಹೆಸರಿತ್ತೆಂದೂ ಸಾರಂಗಧರನಿಗೆ ಇಲ್ಲಿ ಕೈಗಳು ಮೊಳೆತುದರಿಂದ ಈ ಸ್ಥಳಕ್ಕೆ ಮೊಳತೂರು ಎಂಬ ಹೆಸರು ಬಂತೆಂದೂ ಹೇಳಲಾಗಿದೆ. ಇಲ್ಲಿ ಅಪ್ರಮೇಯ ಸ್ವಾಮಿಯ ದೇವಸ್ಥಾನವಿದೆ. ಪುರಂದರದಾಸರು ಈ ದೇವರನ್ನು ಸ್ತುತಿಸಿದ್ದಾರೆ. ಜಗದೇವರಾಯ ಈ ದೇವಸ್ಥಾನಕ್ಕೆ ಪ್ರಾಕಾರ ಕಟ್ಟಿಸಿದ.

ಮಾನಕುಂದ ಒಂದು ಇತಿಹಾಸಪ್ರಸಿದ್ಧ ಸ್ಥಳ. ಇದು ಚನ್ನಪಟ್ಟಣಕ್ಕೆ 10 ಕಿಮೀ ದೂರದಲ್ಲಿದೆ. ಇದಕ್ಕೆ ಹಿಂದೆ ಮಾಕುಂದ ಎಂಬ ಹೆಸರಿತ್ತು. ಇದು ಗಂಗವಂಶದ ಭೂವಿಕ್ರಮ ಮತ್ತು ಶಿವಮಾರರ ರಾಜಧಾನಿಯಾಗಿತ್ತು. ಚೋಳರ ದಾಳಿಗೆ ತುತ್ತಾಗಿತ್ತು. ಜಗದೇವರಾಯನ ತಮ್ಮ ಯುವರಾಜ ಅಂಕುಶರಾಯ ಇಲ್ಲಿ ಸ್ವಲ್ಪ ಕಾಲ ಇದ್ದ.

ಹೊಂಗನೂರು ಚನ್ನಪಟ್ಟಣದ ದಕ್ಷಿಣಕ್ಕೆ 8 ಕಿಮೀ ದೂರದಲ್ಲಿದೆ. ಇದು ಗಂಗರ ಕಾಲದಲ್ಲಿ ಚಿಕ್ಕ ಗಂಗವಾಡಿಯ ಮುಖ್ಯ ಪಟ್ಟಣವಾಗಿತ್ತು. ಅನಂತರ ಹೊಯ್ಸಳ ರಾಜ್ಯಪಾಲ ಇಲ್ಲಿ ವಾಸಿಸುತ್ತಿದ್ದ.

ಕೂಡಲೂರು ಕಣ್ವ ನದಿಯ ಎಡದಂಡೆಯಲ್ಲಿರುವ ಗ್ರಾಮ, ಚನ್ನಪಟ್ಟಣಕ್ಕೆ 6.5 ಕಿಮೀ ದೂರದಲ್ಲಿದೆ. ಚೋಳರ ಕಾಲದಲ್ಲಿ ಇದು ರಾಜರಾಜ ಚತುರ್ವೇದಿ ಮಂಗಳ ಎನಿಸಿಕೊಂಡಿತ್ತು. ಹೈದರಾಲಿ ಈ ಗ್ರಾಮವನ್ನು ಫಕೀರನೊಬ್ಬನಿಗೆ ಇನಾಂ ಕೊಟ್ಟನೆಂದು ಹೇಳಲಾಗಿದೆ.

ಚನ್ನಪಟ್ಟಣದ ಉತ್ತರಕ್ಕೆ 13 ಕಿಮೀ ದೂರದಲ್ಲಿ ನಿರ್ಮಿಸಲಾಗಿರುವ ಕಣ್ವ ಜಲಾಶಯ ಒಂದು ಪ್ರೇಕ್ಷಣೀಯ ಸ್ಥಳ. ಇದರ ಬಲನಾಲೆಯ ಉದ್ದ 24 ಕಿಮೀ, ಎಡನಾಲೆಯದು 11 ಕಿಮೀ. ಇವುಗಳ ಅಚ್ಚುಕಟ್ಟು ಅನುಕ್ರಮವಾಗಿ 2400 ಮತ್ತು 800 ಎಕರೆಗಳು.

ನಾಗವಾರ, ಮೈಲನಾಯಕನಹಳ್ಳಿ, ಮಂಗಳವಾರಪೇಟೆ, ಅಕ್ಕೂರು, ಇಗ್ಗಲೂರು, ಸೋಗಲ, ಚಕ್ಕರೆ, ಬೇವೂರು–ಇವು ತಾಲ್ಲೂಕಿನ ಇತರ ಕೆಲವು ಗ್ರಾಮಗಳು. ತಾಲ್ಲೂಕನ್ನು ಮೂರು ಹೋಬಳಿಗಳಾಗಿ ವಿಂಗಡಿಸಲಾಗಿದೆ. ತಾಲ್ಲೂಕಿನಲ್ಲಿ ಒಟ್ಟು 145 ಗ್ರಾಮಗಳಿವೆ.

(ವಿ.ಜಿ.ಕೆ.; ಎ.ಕೆ.)

**ಚನ್ನಪ್ಪ, ಉತ್ತಂಗಿ :** 1881–1962. ಚನ್ನಪ್ಪ ಉತ್ತಂಗಿಯವರ ಪೂರ್ಣ ಹೆಸರು ರೆವರೆಂಡ್ ಚೆನ್ನಪ್ಪ ದಾನಿ ಯೇಲಪ್ಪ ಉತ್ತಂಗಿ. ಇವರು ಕ್ರೈಸ್ತ ಧರ್ಮದ ಬೋಧಕರಾಗಿದ್ದರು. ಅಸ್ತವ್ಯಸ್ತಗೊಂಡು ತಾರುಮಾರಾಗಿದ್ದ ಸರ್ವಜ್ಞನ ವಚನಗಳನ್ನು ಶಾಸ್ತ್ರೀಯವಾಗಿ ಅಣಿಗೊಳಿಸಿದ, ಅವನ ಸೊಲ್ಲನ್ನು ಕನ್ನಡಿಗರ ಮನೆಮನೆಗೆ ತಲುಪಿಸಿ ಅವನ ಸಮಗ್ರ ದರ್ಶನವನ್ನು ಮಾಡಿಸಿದ ಕೀರ್ತಿ ಇವರದು. ಇವರ ಕಾವ್ಯನಾಮ ತಿರುಳ್ಗನ್ನಡ ತಿರುಕ.



ಉದಾರಚರಿತರೂ ವಿದ್ಯೆ ವಿನಯ, ಶೀಲಸಂಪನ್ನರೂ ಆಗಿ ಸಮಕಾಲೀನ ಸಾಹಿತಿ ಗಳೆಲ್ಲರ ಮೆಚ್ಚುಗೆ ಗಳಿಸಿದ್ದರು. ಕಲ್ಬುರ್ಗಿಯಲ್ಲಿ 1949ರಲ್ಲಿ ನಡೆದ 32ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ ಹಿರಿಯರು ಬಳ್ಳಾರಿ ಜಿಲ್ಲೆಯ ಉತ್ತಂಗಿಯವರು; ಕಾರಣಾಂತರದಿಂದ ವೀರಶೈವ ಧರ್ಮದಿಂದ ಕ್ರೈಸ್ತ ಧರ್ಮಕ್ಕೆ ಪರಿವರ್ತನ ಗೊಂಡು ಕಾಲಕ್ರಮೇಣ ಧಾರವಾಡದಲ್ಲಿ ನೆಲಸಿದರು. ತಮ್ಮ 18ನೆಯ ವಯಸ್ಸಿನಲ್ಲಿ ಚನ್ನಪ್ಪನವರಿಗೆ ಜ್ಞಾನ ವಿಜ್ಞಾನಕ್ಕೆ ಸಂಬಂಧಿಸಿದ ಸಕಲ ವಿಷಯಗಳನ್ನೂ ಸೂಕ್ಷ್ಮವಾಗಿ ಶಾಸ್ತ್ರೀಯವಾಗಿ ಅರಿತುಕೊಳ್ಳಬೇಕೆಂಬ ಹಂಬಲ ಹುಟ್ಟಿತು. ಮಂಗಳೂರಿನ ದೈವಜ್ಞ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು, ಅಲ್ಲಿನ ಅಂಧಶ್ರದ್ಧೆಯ ವ್ಯಾಖ್ಯಾನ ಹಿಡಿಸದೆ ತಮ್ಮದೇ ಆದ ದಾರಿ ಹಿಡಿದರು. ಯಾವ ವಾದವಿವಾದಕ್ಕೂ ಹೋಗದೆ ಸ್ವತಂತ್ರವಾಗಿ ಗ್ರಂಥಾಭ್ಯಾಸ ನಡೆಸಿದರು. ತತ್ತ್ವಶಾಸ್ತ್ರ ಇವರಿಗೆ ಬಹು ಪ್ರಿಯವಾದ ವಿಷಯ. 25 ವರ್ಷ ಪ್ರಾಚ್ಯ ಹಾಗೂ ಪಾಶ್ಚಾತ್ತ್ಯ ತತ್ತ್ವದರ್ಶನಗಳ ವ್ಯಾಸಂಗ ಮಾಡಿದರು. ಅನುಭಾವದ ಆಗರಗಳಾದ ಉಪನಿಷತ್ತು, ಭಗವದ್ಗೀತೆ, ವಚನಶಾಸ್ತ್ರಗಳೊಂದಿಗೆ ಪ್ಲೇಟೋ, ಕಾಂಟ್, ಬ್ರಾಡ್ಲೆ, ವಿಲಿಯಮ್ ಜೇಮ್ಸ್ ಮೊದಲಾದವರ ಗ್ರಂಥಗಳನ್ನೂ ಓದಿದರು. ಚನ್ನಪ್ಪನವರು ಕ್ರೈಸ್ತ ಉಪದೇಶಕರಾಗಿ 1908ರಲ್ಲಿ ಹುಬ್ಬಳ್ಳಿಯಲ್ಲಿ ರೆ. ಕೆ. ಮಾಯರರ ಕೆಳಗೆ ಸೇವೆಯನ್ನು ಆರಂಭಿಸಿ 1908–10 ಹುಬ್ಬಳ್ಳಿಯಲ್ಲಿ ಉಪದೇಶಕ, 1911–12 ಧಾರವಾಡ ವಿದ್ಯಾರ್ಥಿನಿಲಯದ ಮುಖ್ಯಾಧಿಕಾರಿ,

1913–16 ಬೆಟಗೇರಿಯ ಅನಾಥ ಶಾಲೆಯ ಮುಖ್ಯಾಧಿಕಾರಿ, 1917–20 ಮಂಡರಗಿಯಲ್ಲಿ, 1920–26 ಧಾರವಾಡದ ಮಿಷನ್ ಶಾಲೆಯಲ್ಲಿ ಬೈಬಲ್ ಶಿಕ್ಷಕ, 1926–33ರಲ್ಲಿ ಹಾವೇರಿ ಮತ್ತು 1933–41ರ ವರೆಗೆ 23 ವರ್ಷಗಳ ಕಾಲ ಬಾಸೆಲ್ ಮಿಷನ್ನಿನ ಸೇವೆ ಸಲ್ಲಿಸಿ 1 ಜನವರಿ 1942ರಲ್ಲಿ ನಿವೃತ್ತರಾದರು.

ಕ್ರೈಸ್ತಧರ್ಮದ ಉಪದೇಶಕರಾಗಿ ಚನ್ನಪ್ಪನವರು ತೋರಿದ ದಾರಿ ವಿಭಿನ್ನವಾದುದು. ತಮ್ಮ ಧರ್ಮವನ್ನು ಬೋಧಿಸುವಾಗ ಇವರು ಇತರ ಧರ್ಮವನ್ನು ಎಂದಿಗೂ ಹಳಿಯಲಿಲ್ಲ. ಶ್ರೇಷ್ಠ ಕ್ರೈಸ್ತಧರ್ಮ ಉಪದೇಶಕರಾಗಿದ್ದಂತೆಯೇ ಇವರು ಶ್ರೇಷ್ಠ ಸಾಹಿತಿ ಹಾಗೂ ಸಂಶೋಧಕರೂ ಆಗಿದ್ದರು. ಇವರು ಕನ್ನಡದ ಸೇವೆಗೆ ದುಮುಕಿದುದು ಒಂದು ಆಕಸ್ಮಿಕ ದೈವಪ್ರೇರಣೆ. ಕನ್ನಡ ಮತ್ತು ಇಂಗ್ಲಿಷಿನಲ್ಲಿ ದೊಡ್ಡ ಪಂಡಿತರಾಗಿದ್ದ ಇವರು ವಿದೇಶೀಯ ರೆವರೆಂಡ್ ಜೆ.ಜೆ. ವುರ್ನ್ಸರ್ ಅವರಿಗೆ ಕನ್ನಡವನ್ನು ಕಲಿಸುವಾಗ ಸರ್ವಜ್ಞನನ್ನು ಪಾಠ ಹೇಳಬೇಕಾಯಿತು. ಈ ಸಂದರ್ಭದಲ್ಲಿ ವುರ್ನ್ಸರರಿಗೆ ಎದ್ದ ಸಂದೇಹಗಳು ಮತ್ತು ಬಂಗಾಳೀ ಗೆಳೆಯನೊಬ್ಬ ಹಾಕಿದ ಪ್ರಶ್ನೆಗಳು ಇವರು ಸರ್ವಜ್ಞನನ್ನು ಆಳವಾಗಿ ಅಭ್ಯಸಿಸುವಂತೆ ಮಾಡಿದವು. ಸರ್ವಜ್ಞನ ಸ್ವತಂತ್ರ ವ್ಯಕ್ತಿತ್ವ, ಜೀವನಾನುಭವ, ಸತ್ಯಸಾಧನೆಯ ಹೋರಾಟ ಮತ್ತು ಅಭಿವ್ಯಕ್ತಿ ರೀತಿ–ಇವುಗಳಿಂದ ಈ ತಿರುಳ್ಗನ್ನಡ ತಿರುಕ ಮರುಳನಾದ. ಹೀಗೆ 1915ರಲ್ಲಿ ಸಾಹಿತ್ಯಸೇವೆಗೆ ತೊಡಗಿದ ಇವರ ಒಟ್ಟು ಕೃತಿಗಳ ಸಂಖ್ಯೆ 15. ಕನ್ನಡದಲ್ಲಿ 10, ಇಂಗ್ಲಿಷಿನಲ್ಲಿ 5.. ಇವರ ಕೃತಿಗಳನ್ನು 2 ವಿಭಾಗ ಮಾಡಬಹುದು. 1 ಕ್ರೈಸ್ತಧರ್ಮಕ್ಕೆ ಸಂಬಂಧಿಸಿದುದು, 2 ಕನ್ನಡ ಸಾಹಿತ್ಯ, ಸಂಸ್ಕೃತಿ ಹಾಗೂ ಭಾರತೀಯ ಧರ್ಮಗಳಿಗೆ ಸಂಬಂಧಿಸಿದುದು. ಈ ಎಲ್ಲದರ ಘನ ಉದ್ದೇಶ ಸತ್ಯಾರಾಧನೆ.

ಚನ್ನಪ್ಪನವರು ಕನ್ನಡಿಗರಿಗೆ ಅರ್ಪಿಸಿದ ಮೊದಲ ಕೃತಿಯಾದ ಬನಾರಸಕ್ಕೆ ಬೆತ್ಲೆಹೇಮಿನ ವಿನಂತಿ (1921) ಶಾಸ್ತ್ರೀಯ ದೃಷ್ಟಿಯಿಂದ ಕ್ರಿಸ್ತನ ಜೀವನವನ್ನು ವಿವರಿಸುತ್ತದೆ. ಅದೇ ವರ್ಷ ಹೊರಬಂದ ಇವರ ಹಿಂದೂಸಮಾಜದ ಹಿತಚಿಂತಕ (1921) ಎಂಬುದು ಭಾರತದ ಕುತ್ತಾದ ಜಾತೀಯತೆಯನ್ನು ತೊಡೆದು ಆ ಅಭಿಮಾನವನ್ನು ರಾಷ್ಟ್ರಭಕ್ತಿಯನ್ನಾಗಿ ಉದ್ದೀಪನಗೊಳಿಸುವ ಕೃತಿ. ಮಕ್ಕಳ ಶಿಕ್ಷಣ ಪಟ (1923) ಎಂಬುದು ಹಾವೇರಿಯಲ್ಲಿದ್ದಾಗ ಭಾರತದ ಮಕ್ಕಳ ಶಿಕ್ಷಣದ ಪರಿಪಾಟಲನ್ನು ಕಂಡು, ಕನಿಕರಗೊಂಡು ಅವರು ಬೇಗ ವಿದ್ಯಾವಂತರಾಗಿ ಬಾಳಲೆಂಬ ಹಾರೈಕೆಯ ಪ್ರಯತ್ನದ ಫಲವಾಗಿ ರಚನೆಗೊಂಡದ್ದು.

ಸರ್ವಜ್ಞ ವಚನಗಳು (1924) ಎಂಬ ಇವರ ಸಂಪಾದಿತ ಕೃತಿ ಇವರನ್ನು ಕನ್ನಡದ ಸೇವೆಗೆ ಸೆಳೆದು ತಂದುದಲ್ಲದೆ ಇವರಿಗೆ ಸಾಹಿತ್ಯರಂಗದಲ್ಲಿ ಶಾಶ್ವತ ಸ್ಥಾನ ಮತ್ತು ಕೀರ್ತಿಯನ್ನು ಗಳಿಸಿಕೊಟ್ಟಿತು. ಇದರ ಪರಿಷ್ಕರಣಕಾರ್ಯ 1915–1924ರವರೆಗೂ ಸಾಗಿತು. 9 ವರ್ಷ ಕಾಲ ಎಲ್ಲ ಎಡರುತೊಡರುಗಳನ್ನು ಮೀರಿ 2000 ವಚನಗಳನ್ನು ಪರಿಷ್ಕರಿಸಿದರು. ತಮ್ಮ 108 ಪುಟಗಳ ಉಪೋದ್ಘಾತದಲ್ಲಿ ಸರ್ವಜ್ಞನ ಪೂರ್ವೋತ್ತರ ಸಾಂಗವಾಗಿ ಜನತೆಗೆ ತಿಳಿಯುವ ಹಾಗೆ (1) ಮೂಲ ಪ್ರತಿಗಳ ವಿಚಾರ, (2) ಮುದ್ರಣ ಪ್ರತಿಗಳ ವಿಚಾರ, (3) ಜನ್ಮವಿಚಾರ, (4) ದೇಶವಿಚಾರ, (5) ಕಾಲವಿಚಾರ, (6) ಪದ್ಯಸಂಗ್ರಹ ವಿಚಾರ, (7) ಭಾಷಾವಿಚಾರ, (8) ಸರ್ವಜ್ಞಮೂರ್ತಿ ವಿಚಾರ, (9) ವಚನಸಾರ, (10) ಉಪಸಂಹಾರವೆಂಬ ತಲೆಬರಹಗಳಲ್ಲಿ ಪರಿಶೀಲಿಸಿದ್ದಾರೆ. ಸರ್ವಜ್ಞನ ವಚನಗಳನ್ನು ಪಾರಮಾರ್ಥಿಕ ನೈತಿಕ, ಲೌಕಿಕ ವಿಚಾರಗಳೆಂದು ವಿಭಾಗಿಸಿ ಅಣಿಗೊಳಿಸಿದ್ದಾರೆ. ಚನ್ನಪ್ಪನವರಿಂದ ಈ ಕೃತಿಯ ಸ್ವಾಮ್ಯವನ್ನು ಮೈಸೂರು ಸರ್ಕಾರದವರು ಪಡೆದು ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಯೋಜನೆಯನ್ವಯ ಸುಲಭ ಬೆಲೆಯ ಆವೃತ್ತಿಗಳ ಸರಣಿಯಲ್ಲಿ ಇದನ್ನು ಪ್ರಕಟಿಸಿದ್ದಾರೆ. 18 ಪುಟಗಳ ಲಘು ಟಿಪ್ಪಣಿ 130 ಪುಟಗಳ ವಿಶೇಷ ಟಿಪ್ಪಣಿ ಮತ್ತು ಸರ್ವಜ್ಞನ ವಚನಗಳ ಅಕಾರಾದಿಯನ್ನು ಇದು ಒಳಗೊಂಡಿದೆ. ವಿವಿಧ ವರ್ಗದ ಜನರ ಅಗತ್ಯ, ಆವಶ್ಯಕತೆಗಳನ್ನು ಗಮನಿಸಿ ಪ್ರಕಟಣೆಗೊಂಡ ಏಕೈಕ ಕೃತಿಯಿದು. ಸಾಹಿತ್ಯ ಆವೃತ್ತಿ (1924), ಜೇಬಿನ ಆವೃತ್ತಿ (1935), ಜನಪದ ಆವೃತ್ತಿ (1935), ಅಗ್ಗದ ಆವೃತ್ತಿ (1941) ಹೀಗೆ ನಾಲ್ಕು ಆವೃತ್ತಿಗಳಲ್ಲಿ ಇದು ಪ್ರಕಟಗೊಂಡಿದೆ. ಆರ್. ನರಸಿಂಹಾಚಾರ್ಯರಿಗೆ ಸಮರ್ಪಿತವಾದ ಈ ಗ್ರಂಥದ ಉಪೋದ್ಘಾತ ಗ್ರಂಥ ಸಂಪಾದಕನ ಹೊಣೆ ಮತ್ತು ವಿಮರ್ಶನ ಸಿದ್ಧಿಯನ್ನು ಸಾರುತ್ತದೆ. ಇವರ ಜೀವಿತದ ಒಂದು ಘಟನೆಯನ್ನು ಒಳಗೊಂಡ ಅವತರಣಿಕೆ ಓದುಗನ ಅನುಕಂಪವನ್ನು ಸಹಜವಾಗಿ ಸೆಳೆಯುವಂತಿದೆ. ಇಲ್ಲಿ ಇವರ ಬರೆಹದ ದೇಸಿ, ಉಪಮಾ ವೈಖರಿ ಮತ್ತು ತಿಳಿಹಾಸ್ಯದ ಸೊಗಸನ್ನು ಕಾಣಬಹುದು.

ಚನ್ನಪ್ಪನವರು ಹಾವೇರಿಯಲ್ಲಿ ರಚಿಸಿದ ನಾರಾಯಣ ವಾಮನ ಟಿಳಕರ ಜೀವನ ಚರಿತ್ರೆ (1927)ಯು ಜೆ.ಸಿ. ವಿನ್ಸ್ಲೊ ಅವರ ಇಂಗ್ಲಿಷ್ ಕೃತಿಯ ಅನುವಾದ. ತಮ್ಮ ಪತ್ನಿಗೆ ಅರ್ಪಿಸಿದ ಈ ಕೃತಿ ಮಹಾರಾಷ್ಟ್ರದ ಪ್ರಸಿದ್ಧ ಕವಿ, ಭಾರತೀಯ ಕ್ರೈಸ್ತ ಹಾಗೂ ಉಜ್ವಲ ದೇಶಾಭಿಮಾನಿಯೊಬ್ಬನ ಜೀವನ ಚರಿತ್ರೆ, ಭಾರತೀಯರು ಕ್ರೈಸ್ತರಾದಾಕ್ಷಣ ಅವರ ನಿಷ್ಠೆ ಅನ್ಯರಾಷ್ಟ್ರದ್ದಾಗಿರಬಾರದೆಂಬ ಉದ್ದೇಶದಿಂದ ಬಂದು ಸ್ವಾತಂತ್ರ್ಯ ಆಂದೋಲನದ ಸಮಯದಲ್ಲಿ ಭಾರತೀಯರ ಕಣ್ಣು ತೆರೆಸಿ ಉಜ್ವಲ ರಾಷ್ಟ್ರಾಭಿಮಾನವನ್ನು ಮೆರೆಯುವಂತೆ ಮಾಡಿದ ಸಾಮಯಿಕ ಕೃತಿ. ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ (1933) ಎಂಬ ಕೃತಿ ಮಹಾತ್ಮ ಗಾಂಧಿಯವರಿಗೆ ಅರ್ಪಿಸಲ್ಪಟ್ಟಿದೆ. ಭಾರತದ ಉದ್ಧಾರಕ್ಕೆ ಅಸ್ಪೃಶ್ಯತಾ ನಿವಾರಣೆ ದಾರಿಯೆಂದೂ ಸಮಯಸಾಧಕರು ಈ ಬಗ್ಗೆ ವೇದಿಕೆಗಳ ಮೇಲೆ ಉಜ್ವಲ ಭಾಷಣ ಮಾಡಿ ಆಚರಣೆಗೆ ತರದಿರುವುದನ್ನು ಎತ್ತಿ ತೋರಿಸಿ ಬಸವಣ್ಣನವರು ನಡೆಸಿದ ಅಸ್ಪೃಶ್ಯೋದ್ಧಾರ ಮತ್ತು ಅದರ ಆಚರಣೆಯ ಆವಶ್ಯಕತೆಯನ್ನು ಇದು ತಿಳಿಸುತ್ತದೆ. ಸಾಧು ಸುಂದರಸಿಂಗರ ಅನುಭವಸಾರ ಇಲ್ಲವೆ ದೃಷ್ಟಾಂತದರ್ಪಣ (1939) ಭಾರತದ ಪಾಲ್ ಎಂದು ಪ್ರಸಿದ್ಧರಾದ ಸುಂದರಸಿಂಗರ ಬಗ್ಗೆ ಪ್ರತಿ ಬುಧವಾರ ಹುಬ್ಬಳ್ಳಿಯಲ್ಲಿ ಒಂದು ವರ್ಷಕಾಲ ನೀಡಿದ ಉಪದೇಶ ಭಾಷಣದ ಸಾರ. ಸುಂದರಸಿಂಗರ ಬಗ್ಗೆ ಬಂದಿದ್ದ 13 ಪುಸ್ತಕಗಳನ್ನು ಪರಿಶೀಲಿಸಿ, 500 ದೃಷ್ಟಾಂತಗಳನ್ನು ಸಂಗ್ರಹಿಸಿ, 12 ಅಧ್ಯಾಯಗಳಲ್ಲಿ ಇಲ್ಲಿ ಅಳವಡಿಸಲಾಗಿದೆ.

ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು (1950), ಆದಯ್ಯನ ವಚನಗಳು, ಸಿದ್ಧರಾಮ ಸಾಹಿತ್ಯ ಸಂಗ್ರಹಗಳು ಇವರು ಸಂಗ್ರಹಿಸಿ, ಸಂಪಾದಿಸಿ, ದೀರ್ಘ ಉಪೋದ್ಘಾತ ಮತ್ತು ವಿಮರ್ಶೆಗಳೊಂದಿಗೆ ಪ್ರಕಟಿಸಿದ ಕೃತಿಗಳು.

ಮೃತ್ಯುಂಜಯ ಎಂಬುದು ಚನ್ನಪ್ಪನವರ ಕಡೆಯ ಕೃತಿ. ಹಲವು ಮಿತ್ರರ ಸಾಹಸದ ಫಲವಾಗಿ ಜನವರಿ 1962 ರಿಂದ ಆಗಸ್ಟ್ 1962ರ ಅವಧಿಯಲ್ಲಿ ರೂಪುಗೊಂಡದ್ದು. ತಮ್ಮ 18ನೆಯ ವರ್ಷದಿಂದ 60ನೆಯ ವರ್ಷದವರೆಗೆ ತಾವು ಅರಿಯಲು ಪ್ರಯತ್ನಿಸಿದ ಕ್ರಿಸ್ತನ ಜೀವನ ರಹಸ್ಯವನ್ನು ಇದು ತಿಳಿಸುತ್ತದೆ. ಇದರಲ್ಲಿ ಕ್ರಿಸ್ತನ ಕೊನೆಯ ದಿನಗಳ ವಿಸ್ತೃತ ವರ್ಣನೆಯಿದೆ. ಕ್ರಿಸ್ತನು ಮರಣವನ್ನು ಗೆದ್ದು ಮೃತ್ಯುಂಜಯನಾಗಿ ವಿಜೃಂಭಿಸಿದ ಕಥೆ ಇದರ ವಸ್ತು.

ಚನ್ನಪ್ಪನವರು 5 ಕೃತಿಗಳನ್ನು ಇಂಗ್ಲಿಷಿನಲ್ಲಿ ರಚಿಸಿದ್ದಾರೆ. ‘ಕಂಪ್ಲೀಟ್ ಕನ್‌ಕಾರ್ಡನ್ಸ್ ಟು ದಿ ಭಗವದ್ಗೀತ’ ಎಂಬುದು ಎಚ್. ಜಿ. ಬೆಂಗೇರಿಯವರೊಡನೆ ಸಿದ್ಧಗೊಂಡದ್ದು. ಇಲ್ಲಿ ಭಗವದ್ಗೀತೆಯ ವಿಶ್ಲೇಷಾತ್ಮಕ ಮತ್ತು ಸಂಯೋಜನಾತ್ಮಕ ವಿವೇಚನೆಯಿದೆ. ಜಗತ್ತಿನ ಹಲವು ಭಾಷೆಗಳಿಗೆ ಅನುವಾದವಾಗಬಹುದಿದ್ದ ಈ ಕೃತಿ ಪ್ರಕಟವಾಗಿಲ್ಲ. ಲಿಂಗಾಯಿತಿಸಮ್–ಎ ಫೇಯ್ತ್, ಫಿಲಾಸಫಿ ಅಂಡ್ ರಿಲಿಜನ್ ಎಂಬುದು ಆ ವಿಷಯವನ್ನು ವಿವರವಾಗಿ ತಿಳಿಸುತ್ತದೆ. ಬಸವ ಅಂಡ್ ಅನುಭವ ಮಂಟಪ (1932) ಎಂಬ ಕೃತಿ ಆಲೂರ ವೆಂಕಟರಾಯರ ಅನುಭವ ಮಂಟಪದ ಐತಿಹಾಸಿಕತೆಯೆಂಬುದರ ಅನುವಾದವಾಗಿದೆ. ಅನುಭವ ಮಂಟಪದ ಅಸ್ತಿತ್ವದ ಬಗ್ಗೆ ಎದ್ದ ವಾದವಿವಾದಗಳನ್ನಿಲ್ಲಿ ಪರಿಶೀಲಿಸಲಾಗಿದೆ. ವಂಡರ್‌ಫುಲ್ ಚೈಲ್ಡ್ ಆಫ್ ಗಾಡ್ ಎಂಬ ಕೃತಿಯಲ್ಲಿ ಪ್ರೇಮ, ತ್ಯಾಗ ಬೇರೆಬೇರೆಯೆಂದು ಕಂಡರೂ ಒಂದೇ ಸಂಗತಿಯ ಎರಡು ಮುಖವೆಂದೂ ಸೃಷ್ಟಿ, ಬೈಬಲ್ ಮತ್ತು ಕ್ರಿಸ್ತನ ಜೀವನ ಒಂದೇ ತಳಹದಿಯ ಮೇಲೆ ನಿಂತಿದೆಯೆಂದೂ ತಿಳಿಸಲಾಗಿದೆ. ಎಲ್ಲಮ್ಮ, ಎ ಗಾಡೆಸ್ ಆಫ್ ಸೌತ್ ಇಂಡಿಯ ಎಂಬ ಪುಸ್ತಕದಲ್ಲಿ ಎಲ್ಲಮ್ಮನ ಗುಡಿ, ಅದರ ಆಡಳಿತ, ಸಂಸ್ಕೃತ ಸಾಹಿತ್ಯದಲ್ಲಿ ರೇಣುಕ (ಎಲ್ಲಮ್ಮ), ಜನಪದ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯದಲ್ಲಿ ಎಲ್ಲಮ್ಮ, ಎಲ್ಲಮ್ಮನನ್ನು ಕುರಿತ ದಂತಕಥೆ ಮತ್ತು ಅದರ ವಿವರಣೆ, ಎಲ್ಲಮ್ಮ ಮತ್ತು ಎಲ್ಲಮ್ಮನ ಭಕ್ತರ ಬಗ್ಗೆ ಸಂಗ್ರಹಿಸಿದ ಕತೆಗಳು ಮತ್ತು ಆಕೆಯ ಪೂಜೆಪುನಸ್ಕಾರಗಳ ಬಗ್ಗೆ ಇರುವ ರೂಢಿ ಹಾಗೂ ಪದ್ಧತಿಗಳನ್ನು ಸಾಂಗವಾಗಿ ವಿವರಿಸಲಾಗಿದೆ.

ಹೀಗೆ ಹಲವು ಮುಖವಾಗಿ ಕ್ರೈಸ್ತಧರ್ಮ, ರಾಷ್ಟ್ರ ಮತ್ತು ಸಾಹಿತ್ಯಗಳ ಸೇವೆಯನ್ನು ಸು. 65 ವರ್ಷಗಳ ಕಾಲ ನಡೆಸಿದ ಚನ್ನಪ್ಪನವರು ತಮ್ಮ 81ನೆಯ ವಯಸ್ಸಿನಲ್ಲಿ ಧಾರವಾಡದಲ್ಲಿ ನಿಧನರಾದರು. (ಜಿ.ಜಿ.ಎಂ.)

**ಚನ್ನಪ್ಪ ವೀರಭದ್ರಪ್ಪ ಕರಡಿ :** 1927– ಕರ್ನಾಟಕದ ಜನಪದ ಕಲೆಯ ಒಂದು ಪ್ರಕಾರವಾದ ‘ಕರಡಿ ಮಜಲು’ ಕಲೆಯನ್ನು ಉಳಿಸಿ, ಬೆಳೆಸಲು ನಿರಂತರ ಶ್ರಮಿಸುತ್ತಿರುವ ಒಬ್ಬ ಹಿರಿಯ ಕಲಾವಿದ ಚನ್ನಪ್ಪ ವೀರಭದ್ರ ಕರಡಿ. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಮಹಾಲಿಂಗಪುರ ಇವರ ಹುಟ್ಟೂರು. 1927 ಜನವರಿ 8 ರಂದು ಜನನ. ತಂದೆ ವಿರಭದ್ರಪ್ಪ ರುದ್ರಪ್ಪ ಕರಡಿ, ಪ್ರತಿಭಾವಂತ ಕರಡಿ (ಒಂದು ಸಂಗೀತ ವಾದ್ಯ) ಮಜಲು ಕಲಾವಿದ ತಾಯಿ ವಿ. ಗೌರವ್ವ ಗೃಹಿಣಿ. ಕನ್ನಡ ಮುಲ್ಕಿ ಪರೀಕ್ಷೆಯವರೆಗಿನ ಶಿಕ್ಷಣ. ಹದಿನೈದನೇ ವಯಸ್ಸಿನಲ್ಲಿ ತಂದೆ ಕಲಾಜ್ಯೋತಿ ವೀರಭದ್ರಪ್ಪ ಕರಡಿಯವರಿಂದಲೇ ಜಾನಪದ ಕಲೆಯಲ್ಲಿ ಮಾರ್ಗದರ್ಶನ. ಶ್ರದ್ಧೆಯಿಂದ ಅಭ್ಯಾಸ. ತಮ್ಮ ವಂಶಪಾರಂಪರ್ಯವಾಗಿ ಬೆಳೆದು ಬಂದ ಕಲೆಯನ್ನು ಪೋಷಿಸಿ, ಬೆಳೆಸುವ ಸಂಕಲ್ಪ ಮಾಡಿರುವ ಚನ್ನಪ್ಪ ಕರಡಿ, ದೇಶ, ವಿದೇಶಗಳಲ್ಲಿ ಪ್ರದರ್ಶಿಸಿದ್ದಾರೆ. ಚನ್ನಪ್ಪ ಕರಡಿಯವರ ಕಲಾಯಂತ್ರ ಆರಂಭವಾದುದು 1960ರಲ್ಲಿ, ದೆಹಲಿಯಲ್ಲಿ. ದೆಹಲಿಯಲ್ಲೇ 1960, 1968ರಲ್ಲಿ ಪ್ರದರ್ಶನಗಳನ್ನಿತ್ತರು.

ರಾಜಸ್ಥಾನ್, ಗುಜರಾತ್, ಪಶ್ಚಿಮ ಬಂಗಾಲ, ಅಸ್ಸಾಂ, ಮಣಿಪುರ, ಜಮ್ಮು ಕಾಶ್ಮೀರ, ಮಹಾರಾಷ್ಟ್ರದ ಮುಂಬೈ, ಪುಣೆ, ನಾಗಪುರ, ಒರಿಸ್ಸ, ತಮಿಳುನಾಡು, ಆಂಧ್ರ, ಕೇರಳ ಹೀಗೆ ದೇಶದ ಉದ್ದಗಲಗಳಲ್ಲಿ ಪ್ರವಾಸ ಮಾಡಿ ಪ್ರದರ್ಶನಗಳನ್ನಿತ್ತಿದ್ದಾರೆ, ಜನಮನ ಗೆದ್ದಿದ್ದಾರೆ, ಕನ್ನಡ ನಾಡಿನ ಈ ಗಂಡು ಕಲೆಗೆ ಒಂದು ಗೌರವ ಸ್ಥಾನ ಕಲ್ಪಿಸಿದ್ದಾರೆ. ರಾಷ್ಟ್ರನಾಯಕರಾದ ಬಾಬು ರಾಜೇಂದ್ರಪ್ರಸಾದ್, ಜವಾಹರಲಾಲ್ ನೆಹರು, ಇಂದಿರಾಗಾಂಧಿ, ಶಂಕರದಯಾಳ ಶರ್ಮ, ರಾಜೀವ್ ಗಾಂಧಿ ಮತ್ತು ರಾಜ್ಯದ ಎಲ್ಲ ವರಿಷ್ಠರ ಮುಂದೆ ತಮ್ಮ ಹಾಗೂ ತಮ್ಮ ತಂಡದ ಕಲಾಕೌಶಲವನ್ನು ಪ್ರದರ್ಶಿಸಿ ಮೆಚ್ಚುಗೆಗಳಿಸಿದ್ದಾರೆ.

ಕರಡಿ ಮಜಲನ್ನು ಒಂದು ಅಭಿವ್ಯಕ್ತಿ ಮಾಧ್ಯಮವಾಗಿ ನಿರೂಪಿಸಿ, ಅದಕ್ಕೊಂದು ಗಣ್ಯ ಸ್ಥಾನ ದೊರಕಿಸುವುದರಲ್ಲಿ ಸಫಲರಾಗಿರುವ ಚನ್ನಪ್ಪ ಕರಡಿಯವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ. ಇವರು 2010 ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲೂ ದಾಖಲೆ ಸ್ಥಾಪಿಸಿದ್ದಾರೆ. ಕರ್ನಾಟಕ ಸರ್ಕಾರದ 2004ನೆಯ ಸಾಲಿನ ಜಾನಪದಶ್ರೀ ಪ್ರಶಸ್ತಿಯಿಂದಲೂ ಪುರಸ್ಕೃತರಾಗಿದ್ದಾರೆ. (ಎಂ.ಬಿ.ಎಸ್)

**ಚನ್ನಬಸವಾಂಕ :** ಸು. 1550. ವೀರಶೈವ ಕವಿ; ಮಹಾದೇವಿಯಕ್ಕನ ಪುರಾಣವನ್ನು ಬರೆದಿದ್ದಾನೆ. ಈತನ ಪಿತಾಮಹ ಬಸವಾಂಕ. ಪಿತಾಮಹಿ ಗಂಗಾಂಬೆ. ತಂದೆ ರುದ್ರಕವಿ ನಾಗಭೂಷಣಾಚಾರ್ಯ. ಗುರು ವ್ಯಾಘ್ರಾಜಿನಾಂಬರದ ಕಥೆಯ ಚಿದಾನಂದ ಯತಿಪ ಬಸವರಾಜ. ಪ್ರೌಢದೇವನಿಗೆ ಹೇಮಕೂಟದ ವಿರಕ್ತರ ಗುಣವನರಿಪಿದ ಕರಸ್ಥಲದ ನಾಗಿದೇವನನ್ನೂ (ಸು. 1430) ಅಮಲಬಸವಪುರಾಣಕರ್ತೃವಾದ ಶೃಂಗೀರಾಜನನ್ನೂ (ಸು. 1500) ಸ್ಮರಿಸುವುದರಿಂದ ಕವಿಯ ಕಾಲ ಸು. 1550 ಆಗಿರಬಹುದೆಂದು ಊಹಿಸಲಾಗಿದೆ. ಹರಿಯರಸ, ರಾಘವ, ಕೆರೆಯ ಪದ್ಮರಸ, ಕೇಶಿರಾಜ, ಭೀಮರಸ ಇವರು ಈತ ಸ್ಮರಿಸಿರುವ ಇತರ ಕವಿಗಳು.

ಅಕ್ಕಮಹಾದೇವಿಯನ್ನು ಕುರಿತ ಮಹಾದೇವಿಯಕ್ಕನ ಪುರಾಣ ನಾನಾ ಷಟ್ಪದಿಗಳಲ್ಲಿದೆ. ನಡುನಡುವೆ ಕೆಲವು ಸಾಂಗತ್ಯಗಳು ಇವೆ. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿನಂದಿ, ಭೃಂಗಿ, ವೀರಭದ್ರ ಇವರುಗಳನ್ನು ಸ್ತುತಿಸಿ ಸಿದ್ಧರಾಮನೇ ಮೊದಲಾದ ಪುರಾತನರನ್ನು ಸ್ಮರಿಸಿದ್ದಾನೆ. ಮಹಾದೇವಿಯಕ್ಕನ ಚರಿತೆಯನ್ನು ಹರೀಶ್ವರ ರಘಟಾರೂಪದಿಂದ ಬರೆದಿದ್ದಾನೆ. ನೀನು ಷಟ್ಪದಿಯಾಗಿ ಬರೆ ಎಂದು ತನ್ನ ಗುರು ಬಸವರಾಜ ಆಜ್ಞಾಪಿಸಲು ಈ ಗ್ರಂಥವನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ.

ಈತನ ಬಂಧ ಹೃದಯಂಗಮವಾಗಿದೆ. ವರ್ಣನೆಗಳು ಸಮಯನಿಷ್ಠವಾಗಿವೆ. ಗ್ರಂಥ ದೊಡ್ಡದಾದರೂ ಕಾವ್ಯದೃಷ್ಟಿಯಿಂದ ಚೆನ್ನಾಗಿಲ್ಲದಿಲ್ಲ. ನಾಯಕಿಯು ಪಟ್ಟ ಅನೇಕ ತೊಂದರೆಗಳು ಹೃದ್ಯವಾಗಿ ವರ್ಣಿತವಾಗಿವೆ. (ಎಂ.ಎಸ್.ಬಿ.ಆರ್.)

**ಚನ್ನಮ್ಮ, ಸರ್ವಶೀಲೆ :** ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿ ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕು ಕಳ್ಳೆಯದ ಬೆಟ್ಟದಲ್ಲಿ ವಾಸವಾಗಿದ್ದಳು ಎನ್ನಲಾದ ಒಬ್ಬ ಶಿವಶರಣೆ. ವೀರಶೈವಧರ್ಮದಲ್ಲಿ ಉಕ್ತವಾಗಿರುವ 63 ಶೀಲಗಳನ್ನು ಚಾಚೂ ತಪ್ಪದಂತೆ ಈಕೆ ಆಚರಿಸಿದುದರಿಂದ ಸರ್ವಶೀಲೆಯಾದಳು. ಕವಿ ಪಾಲ್ಕುರಿಕೆ ಸೋಮನಾಥ ಆಂಧ್ರದಿಂದ ಇಲ್ಲಿಗೆ ಬಂದು ಈಕೆಯ ಆಶೀರ್ವಾದಕ್ಕೆ ಪಾತ್ರನಾಗಿ ಈಕೆಯಿಂದ ಅನುಭವ ಬೋಧಿಕೆಯನ್ನು ಪಡೆದು ಕಳ್ಳೆಯದಲ್ಲೇ ಐಕ್ಯನಾದನೆಂದು ಪಾಲ್ಕುರಿಕೆ ಸೋಮೇಶ್ವರಪುರಾಣದಿಂದ ತಿಳಿದುಬರುತ್ತದೆ. ಈಕೆಯ ಸಮಾಧಿ ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಹತ್ತಿರ ಎರಡು ಹಳ್ಳಗಳು ಕೂಡುವ ಸಂಗಮಸ್ಥಳದಲ್ಲಿದೆ. ಅದನ್ನು ಚನ್ನಮ್ಮನ ಮಂಟಪ ಎಂದು ಕರೆಯುತ್ತಾರೆ. (ಬಿ.ಎಸ್.)

**ಚನ್ನರಾಯಪಟ್ಟಣ :** ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಒಂದು ತಾಲ್ಲೂಕು; ಅದರ ಆಡಳಿತ ಕೇಂದ್ರ. ಉತ್ತರದಲ್ಲಿ ಅರಸೀಕೆರೆ ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು, ಪೂರ್ವದಲ್ಲಿ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು, ದಕ್ಷಿಣದಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು, ನೈಋತ್ಯ ಮತ್ತು ಪಶ್ಚಿಮಗಳಲ್ಲಿ ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕುಗಳು ಚನ್ನರಾಯನಪಟ್ಟಣ ತಾಲ್ಲೂಕನ್ನು ಸುತ್ತುವರಿದಿವೆ. ವಿಸ್ತೀರ್ಣ 1,042.26ಚ.ಕಿಮೀ, ಜನಸಂಖ್ಯೆ 2,78,112 (2001), ತಾಲ್ಲೂಕಿನಲ್ಲಿ ಚನ್ನರಾಯಪಟ್ಟಣ, ದಂಡಿಗನಹಳ್ಳಿ, ಬಾಗೂರು, ನುಗ್ಗೇಹಳ್ಳಿ, ಹಿರೇಸಾವೆ ಮತ್ತು ಶ್ರವಣಬೆಳಗೊಳ ಹೋಬಳಿಗಳಿವೆ. ಜನವಸತಿಯಿರುವ ಗ್ರಾಮಗಳ ಸಂಖ್ಯೆ 365.

ತಾಲ್ಲೂಕು ಉತ್ತರದಿಂದ ದಕ್ಷಿಣದ ಕಡೆಗೆ ಸಾಮಾನ್ಯವಾಗಿ ಇಳಿಜಾರಾಗಿದೆ. ಹೇಮಾವತಿಯ ಕಡೆಗೆ ಹರಿಯುವ ನೀರಿಗೆ ಅಡ್ಡಲಾಗಿ ಅಲ್ಲಲ್ಲಿ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಲಾಗಿದೆ. ಉತ್ತರದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಎತ್ತರದ ಬೆಟ್ಟದ ಶ್ರೇಣಿಯೊಂದು ಹಬ್ಬಿದೆ. ಅದರಿಂದ ಕೆಲವು ತೊರೆಗಳು ಉತ್ತರಕ್ಕೂ ಪೂರ್ವಕ್ಕೂ ಹರಿದು ಶಿಂಷಾನದಿಯನ್ನು ಸೇರುತ್ತವೆ. ತಾಲ್ಲೂಕಿನ ಪಶ್ಚಿಮದ ಎಲ್ಲೆಯ ಬಳಿ ತಗ್ಗಿನ ಬೆಟ್ಟವೊಂದಿದೆ. ಶ್ರವಣಬೆಳಗೊಳದಲ್ಲಿ ತಕ್ಕಮಟ್ಟಿನ ಎತ್ತರದ ಬೆಟ್ಟಗಳು ಒಂಟೊಂಟಿಯಾಗಿ ನಿಂತಿವೆ. ಅವುಗಳ ಪೈಕಿ ಇಂದ್ರಗಿರಿಯ ಎತ್ತರ 1,020 ಮೀ. ಜಗತ್ಪ್ರಸಿದ್ಧವಾದ ಗೊಮ್ಮಟ್ಟ ವಿಗ್ರಹ ಇರುವುದು ಇದರ ಮೇಲೆಯೇ. ಮಿಕ್ಕಂತೆ ಈ ತಾಲ್ಲೂಕು ಅಷ್ಟೇನೂ ಎತ್ತರವಾಗಿಲ್ಲ. ಅಲೆಯಂತೆ ನೆಲ ಏರಿಳಿದು ಸಾಗಿದೆ.

ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದ ಗೋಡೆಯ ಮೇಲಿನ ಕೋದಂಡರಾಮ

ಚನ್ನರಾಯಪಟ್ಟಣ ತಾಲ್ಲೂಕಿನ ಮಣ್ಣು ಸಾಮಾನ್ಯವಾಗಿ ಫಲವತ್ತಾದ್ದು. ತರಿ ಮತ್ತು ಖುಷ್ಕಿ ಬೆಳೆಗಳನ್ನು ಸಾಮಾನ್ಯವಾಗಿ ಬೆಳೆಯಬಹುದು. ಪಶ್ಚಿಮದ ಎಲ್ಲೆಯ ಬಳಿಯ ನೆಲದ ಮಣ್ಣು ಆಳವಾಗಿಲ್ಲ. ಅಲ್ಲದೆ ಅದು ಕಲ್ಲುಮಿಶ್ರಿತ. ಉಳಿದೆಡೆ ಮರಳಿನಿಂದ ಕೂಡಿದ ತೆಳುಕೆಂಪು ಮಣ್ಣು ಸಾಮಾನ್ಯ. ಅದರಲ್ಲಿ ಹೆಚ್ಚಿನ ವೈವಿಧ್ಯವೇನೂ ಇಲ್ಲ. ನುಗ್ಗೇಹಳ್ಳಿಯ ಬಳಿ ಮಾತ್ರ ಕಪ್ಪುಮಣ್ಣು ಇದೆ. ಹೊಳೆನರಸೀಪುರದ ಬಳಿ ಹೇಮಾವತಿಗೆ ಕಟ್ಟಿರುವ ಶ್ರೀರಾಮದೇವರ ಅಣೆಕಟ್ಟಿನ ಉತ್ತರ ನಾಲೆಯಿಂದ ಚನ್ನರಾಯನಪಟ್ಟಣ ತಾಲ್ಲೂಕಿಗೆ ಸ್ವಲ್ಪ ನೀರಾವರಿ ಸೌಲಭ್ಯ ಒದಗಿದೆ. ಈ ನಾಲೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ. ಚನ್ನರಾಯನಪಟ್ಟಣ ತಾಲ್ಲೂಕಿನಲ್ಲಿ 49 ದೊಡ್ಡ ಕೆರೆಗಳೂ 17 ಸಣ್ಣ ಕೆರೆಗಳೂ 11 ಇತರ ಕೆರೆಗಳೂ ಇವೆ. ಇವುಗಳು ಒಟ್ಟು ಅಚ್ಚುಕಟ್ಟು 13,93.37 ಎಕರೆ. ತಾಲ್ಲೂಕಿನಲ್ಲಿರುವ ಅನಾದಿ ಕೆರೆ ಹಾಸನ ಜಿಲ್ಲೆಯ ಎರಡು ಅತ್ಯಂತ ದೊಡ್ಡ ಕೆರೆಗಳ ಪೈಕಿ ಒಂದು. ಇದರ ಅಚ್ಚುಕಟ್ಟಿನ ಪ್ರದೇಶದ ವಿಸ್ತೀರ್ಣ 690.38 ಎಕರೆ. ತಾಲ್ಲೂಕಿನಲ್ಲಿ ಸಾಗುವಳಿಗೆ ಒಳಪಟ್ಟಿರುವ ಒಟ್ಟು ನೆಲ 1,63200 ಎಕರೆ. ಇದರಲ್ಲಿ 23,958 ಎಕರೆಗಳು (ಸಾಗುವಳಿ ನೆಲದ ಶೇ. 8.56) ನೀರಾವರಿಗೆ ಒಳಪಟ್ಟಿವೆ.

ತಾಲ್ಲೂಕಿನ ಮುಖ್ಯ ಬೆಳೆಗಳು ರಾಗಿ (22.715 ಹೆಕ್ಟೇರುಗಳಲ್ಲಿ), ಬತ್ತ (10,530 ಎಕರೆಗಳಲ್ಲಿ), ಜೋಳ (1,192 ಹೆಕ್ಟೇರುಗಳಲ್ಲಿ), ನೆಲಗಡಲೆ (3,857 ಎಕರೆಗಳಲ್ಲಿ), ಕಬ್ಬು (1,412 ಹೆಕ್ಟೇರುಗಳಲ್ಲಿ). ಇತರ ಬೆಳೆಗಳು ಮೆಣಸಿನಕಾಯಿ, ಹರಳು, ಎಳ್ಳು, ಹತ್ತಿ, ತೆಂಗು, ಅಡಕೆ, ಆಲೂಗೆಡ್ಡೆ.

ಚನ್ನರಾಯನಪಟ್ಟಣ ತಾಲ್ಲೂಕು ಹಾಸನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಗೆ ಒಳಪಟ್ಟಿದೆ. ಚನ್ನರಾಯನಪಟ್ಟಣದಲ್ಲಿ ಮುನ್ಸಿಫ್ ಮ್ಯಾಜಿಸ್ಟ್ರೇಟರು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಿಸುತ್ತಾರೆ. 1959ರ ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮದ ಪ್ರಕಾರ ಗ್ರಾಮಪಂಚಾಯಿತಿಗಳಿವೆ. ತಾಲ್ಲೂಕು ಅಭಿವೃದ್ಧಿ ಮಂಡಲಿ ಚನ್ನರಾಯಪಟ್ಟಣದಲ್ಲಿದೆ.

1970ರಲ್ಲಿ ತಾಲ್ಲೂಕಿನಲ್ಲಿದ್ದ ಜೂನಿಯರ್ ಪ್ರಾಥಮಿಕ ಶಾಲೆಗಳು (1 – 4ನೆಯ ತರಗತಿ) 217, ಉನ್ನತ ಪ್ರಾಥಮಿಕ ಶಾಲೆಗಳು 16, ಹೊಸ ಮಾದರಿ ಮಾಧ್ಯಮಿಕ ಶಾಲೆಗಳು 11, ಜಿಲ್ಲಾ ಮತ್ತು ತಾಲ್ಲೂಕು ಮಂಡಲಿ ಪ್ರೌಢಶಾಲೆಗಳು ಬಾಗೂರು, ನುಗ್ಗೇಹಳ್ಳಿ, ಶ್ರವಣಬೆಳಗೊಳ, ಉದಯಪುರಗಳಲ್ಲಿವೆ. ಚನ್ನರಾಯಪಟ್ಟಣದಲ್ಲಿ ಪ್ರೌಢಶಾಲೆಯೂ ಶ್ರವಣಬೆಳಗೊಳದಲ್ಲಿ ಗೋಮ್ಮಟೇಶ್ವರ ಕಾಲೇಜೂ ಉಂಟು.

ಚನ್ನರಾಯಪಟ್ಟಣದಲ್ಲಿ ನವೋದಯ ವಿದ್ಯಾಸಂಸ್ಥೆ, ಸರ್ಕಾರಿ ಡಿಗ್ರಿ ಕಾಲೇಜು, ಆದಿಚುಂಚನಗಿರಿ ವಿದ್ಯಾಸಂಸ್ಥೆ ಹಾಗೂ ಇತರ ಹಲವಾರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿವೆ. ಆಸ್ಪತ್ರೆಗಳು ಉದಯಪುರ, ಮುತ್ತನವಿಲೆ, ಚನ್ನರಾಯನಪಟ್ಟಣ, ಬಾಗೂರು, ದಿಡಿಗ, ಹಿರೇಸಾವೆ, ನುಗ್ಗೇಹಳ್ಳಿ, ಶ್ರವಣಬೆಳಗೊಳ, ಕಾರೇಹಳ್ಳಿ–ಈ ಊರುಗಳಲ್ಲಿವೆ.

ಚನ್ನರಾಯಪಟ್ಟಣದಲ್ಲಿ ಶನಿವಾರವೂ ಹಿರೇಸಾವೆಯಲ್ಲಿ ಗುರುವಾರವೂ ನುಗ್ಗೇಹಳ್ಳಿಯಲ್ಲಿ ಶುಕ್ರವಾರವೂ ಸಂತೆಗಳು ಕೂಡುತ್ತವೆ. ತಾಲ್ಲೂಕಿನ ಮುಖ್ಯ ಜಾತ್ರೆಗಳಿವು: ಚನ್ನರಾಯಪಟ್ಟಣದಲ್ಲಿ ಚಂದ್ರಶೇಖರಸ್ವಾಮಿ ಜಾತ್ರೆ (ಏಪ್ರಿಲ್), ಶ್ರವಣಬೆಳಗೊಳದಲ್ಲಿ

ಜೈನಮಠ ಜಾತ್ರೆ (ಮಾರ್ಚ್–ಏಪ್ರಿಲ್), ಗೋಮ್ಮಟೇಶ್ವರ ಮಹಾಮಸ್ತಕಾಭಿಷೇಕ (12 ವರ್ಷಗಳಿಗೊಮ್ಮೆ), 3. ಬೂಕನ ಬೆಟ್ಟದಲ್ಲಿ ರಂಗಸ್ವಾಮಿ ಜಾತ್ರೆ (ಜನವರಿ), 4. ನುಗ್ಗೇಹಳ್ಳಿಯಲ್ಲಿ ಲಕ್ಷ್ಮೀನರಸಿಂಹ ಸ್ವಾಮಿ ಜಾತ್ರೆ (ಮಾರ್ಚ್– ಏಪ್ರಿಲ್) 5. ನವಲೆಯಲ್ಲಿ ನಾಗೇಶ್ವರಸ್ವಾಮಿ ಜಾತ್ರೆ (ಏಪ್ರಿಲ್), 6. ಕತ್ತಿಘಟ್ಟದಲ್ಲಿ ಅಮ್ಮನವರ ರಥ (ಸೆಪ್ಟೆಂಬರ್), 7. ತೆಜ್ಜೆಗೆರೆಯಲ್ಲಿ ತೆಜ್ಜೆಗೆರೆ ಅಮ್ಮನ ತೇರು (ಫೆಬ್ರುವರಿ), 8. ಜಂಬೂರಿನಲ್ಲಿ ಚಕ್ರೇಶ್ವರಸ್ವಾಮಿ ರಥ (ಫೆಬ್ರವರಿ) 9. ಅಣಿಕೆರೆಯಲ್ಲಿ ಅಮ್ಮದೇವರ ರಥ (ಮಾರ್ಚ್), 10 ಬಾಗೂರಿನಲ್ಲಿ ಸಂತೆಕಾಳಮ್ಮನ ರಥ (ಮಾರ್ಚ್).

ಚನ್ನರಾಯಪಟ್ಟಣ ತಾಲ್ಲೂಕಿನ ಕಸಬೆ (ಆಡಳಿತಕೇಂದ್ರ) ಚನ್ನರಾಯನಪಟ್ಟಣ. ಹಾಸನ–ಬೆಂಗಳೂರು ರಸ್ತೆಯಲ್ಲಿ ಹಾಸನದಿಂದ 37 ಕಿಮೀ. ಪೂರ್ವಕ್ಕೆ ಮತ್ತು ಬೆಂಗಳೂರಿನಿಂದ 148 ಕಿಮೀ ದೂರದಲ್ಲಿ. ಉ.ಅ. $12^{0}$. 54′ ಮತ್ತು ಪೂ.ರೇ.76″ ಮೇಲಿದೆ. ಇದರ ಹಿಂದಿನ ಹೆಸರು ಕೊಲತೂರು. ಆಗ ಇಲ್ಲಿ ಒಂದು ಅಗ್ರಹಾರ ಮಾತ್ರ ಇತ್ತು. ಮಾಚಲದೇವಿ ಮತ್ತು ಶಾಂತಲದೇವಿ ಎಂಬ ಇಬ್ಬರು ಇದರ ಈಶಾನ್ಯದಲ್ಲಿರುವ ವಿಶಾಲವಾದ ಕೆರೆಯನ್ನು ಕಟ್ಟಿಸಿದರೆಂದು ಹೇಳಲಾಗಿದೆ. ಸು. 1600ರಲ್ಲಿ ಹೊಳೆನರಸೀಪುರದ ಪಾಳೆಯಗಾರ ಲಕ್ಷ್ಮಪ್ಪನಾಯಕ ಇದನ್ನು ಪಟ್ಟಗಿರಿ ರಾಜನಿಂದ ಪಡೆದುಕೊಂಡು ತನ್ನ ಮಗ ಚನ್ನರಾಯನಿಗೆ ಜಹಗೀರಾಗಿ ಕೊಟ್ಟ. ಚನ್ನಿಗರಾಯ ದೇವಾಲಯದಿಂದ ಊರಿಗೆ ಚನ್ನರಾಯಪಟ್ಟಣ ಎಂಬ ಹೆಸರು ಬಂತು. ಇಲ್ಲಿ ದೊಡ್ಡ ಬಸವಯ್ಯನೆಂಬ ಪಾಳೆಯಗಾರ ಕಟ್ಟಿಸಿದ ಹಳೆಯ ಕೋಟೆಯನ್ನು ಹೈದರ್ ಅಲಿ ಪುನರ್ನಿರ್ಮಿಸಿದ. ಚನ್ನರಾಯನಪಟ್ಟಣ ಪ್ರಮುಖ ಬಸ್ ನಿಲ್ದಾಣ. ಮೈಸೂರಿನಿಂದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗಗಳಿಗೆ ಹೋಗುವ ಬಸ್ಸುಗಳೂ ಬೆಂಗಳೂರಿನಿಂದ ಹಾಸನ, ಮಂಗಳೂರು, ಚಿಕ್ಕಮಗಳೂರು ಕಡೆಗೆ ಹೋಗುವ ಬಸ್ಸುಗಳೂ ಈ ಮೂಲಕ ಹೋಗುತ್ತವೆ. ಚನ್ನರಾಯನಪಟ್ಟಣದಲ್ಲಿ 1918ರಲ್ಲಿ ಪುರಸಭೆ ಸ್ಥಾಪಿತವಾಯಿತು. ಪಟ್ಟಣದ ಜನಸಂಖ್ಯೆ 34,502 (2001).

ಶ್ರವಣಬೆಳಗೊಳ ಈ ತಾಲ್ಲೂಕಿನ ಅತ್ಯಂತ ಪ್ರಸಿದ್ಧ ಸ್ಥಳ. ಇದು ಜೈನರ ಮುಖ್ಯ ಯಾತ್ರಾಸ್ಥಳ. ಚನ್ನರಾಯಪಟ್ಟಣಕ್ಕೆ 13 ಕಿಮೀ ದೂರದಲ್ಲಿದೆ. ಶಾಸನಗಳಲ್ಲಿ ಇದನ್ನು ವೆಳಗೊಳ, ದೇವರಬೆಳಗೊಳ, ಶ್ವೇತಸರೋವರ, ಧವಳಸರೋವರ, ಗೋಮ್ಮಟಪುರ ಎಂದು ಮುಂತಾಗಿಯೂ ಕರೆಯಲಾಗಿದೆ. ದಕ್ಷಿಣ ಕಾಶಿ ಎಂದು ಇದು ಪ್ರಸಿದ್ಧವಾಗಿದೆ. ಜೈನಮುನಿ ಭದ್ರಬಾಹುವೂ ಚಂದ್ರಗುಪ್ತ ಮೌರ್ಯನೂ ಇಲ್ಲಿಗೆ ಬಂದಿದ್ದರೆಂದು ಹೇಳಲಾಗಿದೆ. ಶ್ರವಣಬೆಳಗೊಳ ಊರು ಇಂದ್ರಗಿರಿ ಅಥವಾ ವಿಂಧ್ಯಗಿರಿ ಮತ್ತು ಚಂದ್ರಗಿರಿ ಎಂಬ ಎರಡು ಬೆಟ್ಟಗಳ ನಡುವೆ ಇದೆ. ಈ ಬೆಟ್ಟಗಳಿಗೆ ಅನುಕ್ರಮವಾಗಿ ದೊಡ್ಡಬೆಟ್ಟ ಮತ್ತು ಚಿಕ್ಕಬೆಟ್ಟ ಎಂಬ ಹೆಸರುಗಳೂ ಉಂಟು. ದೊಡ್ಡಬೆಟ್ಟದ ಎತ್ತರ ಸುಮುದ್ರಮಟ್ಟದಿಂದ 1020 ಮೀ.(ಊರಿನಿಂದ 143 ಮೀ.ಎತ್ತರ). 17.3 ಮೀ ಎತ್ತರದ ಗೊಮ್ಮಟನ ಏಕಶಿಲಾವಿಗ್ರಹ ಇರುವುದು ಇದರ ಮೇಲೆಯೇ. ಚಿಕ್ಕಬೆಟ್ಟದ ಎತ್ತರ 930 ಮೀ. ಇದರ ಮೇಲೆ ಕೆಲವು ಬಸದಿಗಳೂ ಶಾಸನಗಳೂ ಇವೆ. ಶ್ರವಣಬೆಳಗೊಳದ ಜನಸಂಖ್ಯೆ 8079 (1971). **(ನೋಡಿ– ಇಂದ್ರಗಿರಿ, ಗೊಮ್ಮಟೇಶ್ವರ, ಚಂದ್ರಗಿರಿ,–ಶ್ರವಣಬೆಳಗೊಳ)**

ಚನ್ನರಾಯನಪಟ್ಟಣಕ್ಕೆ 40 ಕಿಮೀ ದೂರದಲ್ಲಿ ತಿಪಟೂರು–ಚನ್ನರಾಯನ ಪಟ್ಟಣ ರಸ್ತೆಯಲ್ಲಿರುವ ಊರು ಅಗ್ರಹಾರ ಬೆಳಗುಳಿ. ಇಲ್ಲಿಯ ಕೇಶವೇಶ್ವರ ದೇವಾಲಯವನ್ನು 1210ರಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳನ ದಂಡನಾಯಕ ಕೇಶವ ದಣ್ಣಾಯಕ ಕಟ್ಟಿಸಿದ. ಇನ್ನೊಂದು ದೇವಾಲಯ ಸೋಮೇಶ್ವರನದು. ಇದನ್ನು ಮೂಲತಃ 1154ರಲ್ಲಿ ಕಟ್ಟಿಸಲಾಯಿತು. 17ನೆಯ ಶತಮಾನದಲ್ಲಿ ಇದನ್ನು ಪೂರ್ತಿಯಾಗಿ ಪುನರ್ನಿಮಿಸಲಾಯಿತೆಂದು ಹೇಳಲಾಗಿದೆ. ಈಗ ಇದು ಜೀರ್ಣವಾಗಿದೆ.

ಚನ್ನರಾಯಪಟ್ಟಣಕ್ಕೆ 6 ಕಿಮೀ ದೂರದಲ್ಲಿ ಚನ್ನರಾಯಪಟ್ಟಣ–ತಿಪಟೂರು ರಸ್ತೆಯಲ್ಲಿರುವ ಊರು ದಿಂಡಗೂರು. ಇದಕ್ಕೆ ಹಿಂದೆ ಮಲ್ಲಿಕಾರ್ಜುನಪುರ ಅಗ್ರಹಾರವೆಂಬ ಹೆಸರಿತ್ತು. ಇದನ್ನು ಪಂಡಿತ ದಂಡನಾಥ 13ನೆಯ ಶತಮಾನದಲ್ಲಿ ಕಟ್ಟಿಸಿದ. ಇಲ್ಲಿ ಕೇಶವ ಮತ್ತು ಈಶ್ವರ ದೇವಾಲಯಗಳಿವೆ. ಹಳೆಬೆಳಗೊಳ ಬೆಂಗಳೂರು–ಮಂಗಳೂರು ರಸ್ತೆಯಲ್ಲಿ ಚನ್ನರಾಯಪಟ್ಟಣಕ್ಕೆ 29 ಕಿಮೀ ದೂರದಲ್ಲಿದೆ. ಇಲ್ಲಿ ಹೊಯ್ಸಳ ಮಾದರಿಯ ಜೈನ ದೇವಾಲಯವೊಂದುಂಟು. ಇದು ಶಿಥಿಲಾವಸ್ಥೆಯಲ್ಲಿದೆ. ಇದನ್ನು ನಿರ್ಮಿಸಿದ ಕಾಲ ಸು. 1094 ಇರಬಹುದು. ಕೇಶವ ಮತ್ತು ಶಿವ ದೇವಾಲಯಗಳೂ ಇವೆ. ಹೆಬ್ಬಳಲು ಚನ್ನರಾಯಪಟ್ಟಣಕ್ಕೆ 32 ಕಿಮೀ ದೂರದಲ್ಲಿ ಹಿರೇಸಾವೆ ರಸ್ತೆಯಲ್ಲಿದೆ. ಇಲ್ಲಿರುವ ಸಿಂಗೇಶ್ವರ ದೇವಾಲಂಸು. 1200ರಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಕಟ್ಟಿಸಿದ್ದು. ಜಿನನಾಥಪುರ ಗ್ರಾಮ ಕಾಂತರಾಜಪುರ–ಶ್ರವಣಬೆಳಗೊಳ ರಸ್ತೆಯಲ್ಲಿ ಚನ್ನರಾಯಪಟ್ಟಣಕ್ಕೆ 14 ಕಿಮೀ ದೂರದಲ್ಲಿದೆ. 1117ರಲ್ಲಿ ವಿಷ್ಣುವರ್ಧನನ ದಂಡನಾಯಕ ಗಂಗರಾಜ ಸ್ಥಾಪಿಸಿದನೆಂದು ಹೇಳುವ ಒಂದು ಶಾಸನ ಇಲ್ಲಿದೆ. ಇಲ್ಲಿರುವ ಶಾಂತಿನಾಥ ಬಸ್ತಿ ಸು. 1200ರಲ್ಲಿ ನಿರ್ಮಿತವಾದ್ದು. ಇದು ಹೊಯ್ಸಳ ಶೈಲಿಗೆ ಉತ್ತಮ ನಿದರ್ಶನ. ಅರೆಗಲ್ ಬಸ್ತಿಯಲ್ಲಿ ಪಾರ್ಶ್ವನಾಥ **(ನೋಡಿ– ಜಿನನಾಥಪುರ)** ವಿಗ್ರಹವಿದೆ.

ಚನ್ನರಾಯಪಟ್ಟಣಕ್ಕೆ 20 ಕಿಮೀ ದೂರದಲ್ಲಿರುವ ಕುಂದೂರಿನಲ್ಲಿ ಚಾಮುಂಡೇಶ್ವರಿ, ರಂಗನಾಥ ಮತ್ತು ಸುಬ್ರಹ್ಮಣೇಶ್ವರ ದೇವಾಲಯಗಳಿವೆ. ಇಲ್ಲೊಂದು ಒಕ್ಕಲಿಗರ ಮಠ ಉಂಟು. ಹಳ್ಳಿಯ ಬಳಿ ಕುಡ್ಲುಕಲ್ಲು ಎಂಬ ಸ್ತಂಭವೊಂದಿದೆ.

ಚನ್ನರಾಯಪಟ್ಟಣಕ್ಕೆ 20 ಕಿಮೀ ದೂರದಲ್ಲಿರುವ ಒಂದು ಹೋಬಳಿ ಕೇಂದ್ರ ನುಗ್ಗೇಹಳ್ಳಿಯು ಚನ್ನರಾಯಪಟ್ಟಣ–ತಿಪಟೂರು ರಸ್ತೆಯಲ್ಲಿರುವ ಪ್ರಾಚೀನ ಗ್ರಾಮ. ಇಲ್ಲಿ ಚೋಳರು ಕಟ್ಟಿಸಿದ ಜಯಗೊಂಡೇಶ್ವರ ದೇವಾಲಯವಿದೆ. 1121ರಲ್ಲಿ ವಿಷ್ಣುವರ್ಧನ ಇದಕ್ಕೆ ದತ್ತಿಗಳನ್ನು ನೀಡಿದ. ಹೊಯ್ಸಳ ಸೋಮೇಶ್ವರನ ದಂಡನಾಯಕ ಬೊಮ್ಮಣ್ಣ ಇಲ್ಲಿ ಒಂದು ಅಗ್ರಹಾರವನ್ನೂ ಲಕ್ಷ್ಮೀನರಸಿಂಹ ದೇವಾಲಯವನ್ನೂ ಕಟ್ಟಿಸಿದನೆಂದು ಶಾಸನವೊಂದು ತಿಳಿಸುತ್ತದೆ. ಇಲ್ಲಿರುವ ಸದಾಶಿವ ದೇವಾಲಯವೂ ಹೊಯ್ಸಳ ಮಾದರಿಯದು. **(ನೋಡಿ– ನುಗ್ಗೆಹಳ್ಳಿ)** (ಪಿ.ಜಿ.ಕೆ.; ಎ.ಕೆ.)

**ಚನ್ನವೀರ ಕಣವಿ :** 1928–. ಪ್ರಸಿದ್ಧ ಕವಿ, ವಿಮರ್ಶಕ. 1928ರ ಜೂನ್ 28ರಂದು ಧಾರವಾಡ ಜಿಲ್ಲೆ ಹೊಂಬಳ ಗ್ರಾಮದಲ್ಲಿ ಜನಿಸಿದರು. ತಂದೆ ಸಕ್ರಪ್ಪ, ತಾಯಿ



ಪಾರ್ವತವ್ವ ಗದಗ, ಧಾರವಾಡಗಳಲ್ಲಿ ವಿದ್ಯಾಭ್ಯಾಸ ನಡೆಸಿದರು. 1950ರಲ್ಲಿ ಬಿ.ಎ., 1952ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪೂರೈಸಿದರು. 1952ರಲ್ಲಿ ಆ ವಿಶ್ವವಿದ್ಯಾಲಯದ ಪ್ರಸಾರಾಂಗದ ಕಾರ್ಯದರ್ಶಿಯಾಗಿ ಅನಂತರ ಅದರ ನಿರ್ದೇಶಕರಾಗಿ (1958) ಸೇವೆ ಸಲ್ಲಿಸಿ ನಿವೃತ್ತ ರಾದರು. ಇವರು ಕಾವ್ಯ, ವಿಮರ್ಶೆ ಈ ಎರಡೂ ಕ್ಷೇತ್ರಗಳಲ್ಲೂ ವ್ಯವಸಾಯ ಮಾಡಿದವರಾದರೂ ಇವರ ಒಲವು ಕಾವ್ಯದ ಕಡೆಗೇ. ಹಾಗೆಂದು ವಿಮರ್ಶೆಯನ್ನು ಕಡೆ ಗಣಿಸಿದವರಲ್ಲ. ಇವರ ಕಾವ್ಯದ ಹಿನ್ನೆಲೆಯಲ್ಲಿ ವಿಮರ್ಶನ ಪ್ರಜ್ಞೆ ಇದ್ದರೂ ಅದು ಹಾಲಿ ನಲ್ಲಿ ಬೆರೆತ ಸಕ್ಕರೆ ಯಂತೆ ಸುಪ್ತವಾಗಿದ್ದು ತನ್ನ ಪ್ರಭಾವವನ್ನು ಬೀರುತ್ತದೆ. ಪ್ರಜ್ಞೆ ಪ್ರತಿಭೆಗಳ ಹದವಾದ ಕೂಡುವಿಕೆಯ ಫಲ ಇವರ ಕವಿತೆ ಎನ್ನಬಹುದು.

ಕಾವ್ಯಾಕ್ಷಿ ಇವರ ಪ್ರಥಮ ಕವನ ಸಂಕಲನ (1949). ಇದಕ್ಕೂ ಮೊದಲು ನಾಲ್ಕೈದು ವರ್ಷಗಳ ಕಾಲ ಕವನ ರಚನೆಯಲ್ಲಿ ಗಂಭೀರವಾಗಿ ತೊಡಗಿದ್ದರು. ಅನಂತರ ಕಾವ್ಯ ವ್ಯವಸಾಯ ಸಮೃದ್ಧಿಯಾಗುತ್ತಾ ಹೋಯಿತು. ಅನೇಕ ಕವನ ಸಂಕಲನಗಳನ್ನು ಪ್ರಕಟಿಸಿದರು. ಕಾವ್ಯಮಾರ್ಗದಲ್ಲಿ ಇವರ ಗಂಭೀರ ನಡಿಗೆ, ಅತಿಯಾದ ಏರಿಳಿತಗಳಾಗಲಿ, ವಿವಿಧ ಕಾವ್ಯ ಮಾರ್ಗಗಳ ಹೊಯ್ದಾಟಗಳಾಗಲೀ, ಅವುಗಳ ತೀವ್ರ ಪ್ರಭಾವವಾಗಲೀ ಎಲ್ಲೂ ಎದ್ದು ಕಾಣುವಂತಿರಲಿಲ್ಲ, ಅತಿರೇಕ ಎನಿಸುವಂತಿರಲಿಲ್ಲ. ಇವರು ಕಾವ್ಯರಚನೆಯಾರಂಭಿಸಿದಾಗ ಕನ್ನಡದಲ್ಲಿ ನವೋದಯ ಕಾವ್ಯ ಪರಾಕಾಷ್ಠೆಯ ಸ್ಥಿತಿ ಪಡೆದಿತ್ತು. ಅನಂತರ ಕೆಲವೇ ವರ್ಷಗಳಲ್ಲಿ ನವ್ಯಕಾವ್ಯದ ಉರುಬು ಆರಂಭವಾಯಿತು. ಇವರು ಆ ಹಂತದಲ್ಲಿ ನವ್ಯತೆಯ ಕಡೆಗೆ ವಾಲಿದಂತೆ ಕಂಡರೂ ಬಹು ಎಚ್ಚರದಿಂದ ಕಾವ್ಯರಚನೆಯಲ್ಲಿ ತೊಡಗಿದರು. ಇವರು ಮುಖ್ಯವಾಗಿ ಭಾವನಾಪ್ರಧಾನ ಕವಿ ಎಂಬುದು ಕುರ್ತುಕೋಟಿಯವರ ಅಭಿಪ್ರಾಯ.

ಇವರ ದೀಪದಾರಿ (1956) ಕವನ ಸಂಕಲನದಲ್ಲಿ ಕೆಲವು ನವ್ಯಕಾವ್ಯ ಮಾರ್ಗದ ಹಲವು ಅಂಶಗಳನ್ನು ಓದುಗರು ಕಾಣಬಹುದಾದರೂ ಆ ಮಾರ್ಗದಲ್ಲಿ ನಡೆದ ಯಶಸ್ವಿ ಪ್ರಯೋಗಗಳೆಂದು ತಾವು ಇದನ್ನು ಕರೆಯುತ್ತಿಲ್ಲವೆಂದೂ ಆಧುನಿಕ ಭಾವಗೀತೆ ಹಾಗೂ ನವ್ಯಮಾರ್ಗಗಳ ನಡುವೆ ನಿರ್ಮಾಣಗೊಂಡಿರುವ ಕಂದರಕ್ಕೆ ಇದು ಸೇತುವೆಯಾದೀತೆಂಬ ನಮ್ರ ಭಾವನೆ ತಮಗಿದೆಯೆಂದೂ ಕಣವಿಯವರು ಆ ಸಂಕಲನದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಇವೆರಡೂ ಮಾರ್ಗಗಳ ನಡುವೆ ಇದೊಂದು ಸೇತುವೆಯಾದೀತೆಂಬ ಮಾತನ್ನು ವಿಮರ್ಶಕರು ಗಮನಿಸಿ ಇವರನ್ನು, 'ಸಮನ್ವಯ ಕವಿ' ಎಂದು ವರ್ಣಿಸ ತೊಡಗಿದರು. ನವೋದಯವಾಗಲಿ, ನವ್ಯವಾಗಲಿ ಮೂಲತಃ ಅದು ಕಾವ್ಯವಾಗಿರಬೇಕಾದ್ದು ಮುಖ್ಯ ಎಂಬುದು ಕಣವಿಯವರ ನಂಬಿಕೆ. ವಿವಿಧ ಕಾವ್ಯಪ್ರಕಾರಗಳಿಗೆ ಸಾಮಾನ್ಯವಾದ ಹಲವು ಅಂಶಗಳಿರುತ್ತವೆ. ಒಂದೊಂದು ಪ್ರಕಾರದಲ್ಲಿ ಕೆಲಕೆಲವು ಅಂಶಗಳಿಗೆ ಒತ್ತು ಬೀಳುತ್ತದೆ. ಇದೊಂದು ಸಹಜ ಪ್ರತಿಕ್ರಿಯೆ ಎನ್ನಬಹುದಾಗಿದೆ. ನಾನು ಯಾವ ಪಂಥದ

ಕವಿಯೋ ನನಗೆ ತಿಳಿದಿಲ್ಲ. ಆ ಕುರಿತು ಚರ್ಚೆ ಮಾಡುವವರು ಮಾಡಿಕೊಳ್ಳಲಿ. ಒಟ್ಟಿನಲ್ಲಿ ನಾನು ಕವಿ ಎಂಬುದಷ್ಟೇ ಮುಖ್ಯವಾದದ್ದು, ಅಷ್ಟು ಸಾಕು ಎಂಬ ಅಭಿಪ್ರಾಯವನ್ನು ಕಣವಿಯವರು ವ್ಯಕ್ತಪಡಿಸಿದ್ದುಂಟು. ಪ್ರಕೃತಿಲೀಲೆ, ಪ್ರಣಯ, ದಾಂಪತ್ಯ, ವಾತ್ಸಲ್ಯ ಮುಂತಾದ ರಮ್ಯ ಪರಂಪರೆಯ ವಿಷಯಗಳೊಡನೆ ನವ್ಯ ವಿಷಯಗಳೂ ಕಣವಿಯವರ ಕೃತಿಗಳಲ್ಲಿ ಸೇರಿರುತ್ತದೆ ಒಂದೊಂದಕ್ಕೂ ತಾಕಲಾಟವಿಲ್ಲ. ಸಮಾನ ಭೂಮಿಕೆ ಅವನ್ನು ಸುತ್ತ ಹೊಂದಿಸುತ್ತದೆ ಎಂಬುದು ಮುಗಳಿಯವರ ಅಭಿಪ್ರಾಯ.

ಕಣವಿಯವರ ಕವಿತಾ ಸಂಕಲನಗಳು ಇವು: ಕಾವ್ಯಾಕ್ಷಿ (1949), ಭಾವಜೀವಿ (1950), ಆಕಾಶಬುಟ್ಟಿ (1953), ಮಧುಚಂದ್ರ (1954), ದೀಪಧಾರಿ (1956), ಮಣ್ಣಿನ ಮೆರವಣಿಗೆ (1960), ನೆಲಮುಗಿಲು (1965), ನಗರದಲ್ಲಿ ನೆರಳು (1974), ಜೀವಧ್ವನಿ (1980), ಕಾರ್ತಿಕಮೋಡ (1986), ಜೀನಿಯಾ (1989), ಶಿಶಿರದಲ್ಲಿ ಬಂದ ಸ್ನೇಹಿತ (1994), ಹಕ್ಕಿಪುಚ್ಚ (1985). ಚಿರಂತನದಾಹ (1975) ಇವರ ಆಯ್ದ ಕವನಗಳ ಸಂಕಲನ. ಇವರ ಸಮಗ್ರಕಾವ್ಯ 1996ರಲ್ಲಿ ಪ್ರಕಟವಾಯಿತು. ಹಕ್ಕಿಪುಚ್ಚ ಎಂಬುದು ಮಕ್ಕಳ ಕವಿತೆಗಳ ಸಂಗ್ರಹ.

ಇವರು ಸಾನೆಟ್ ಅಥವಾ ಸುನೀತಕ್ಕೆ ಒಂದು ರೂಪವನ್ನು ನೀಡಿದ್ದಾರೆ. ವ್ಯಕ್ತಿ ಚಿತ್ರಗಳ ರಚನೆಗೆ ಈ ಪ್ರಕಾರವನ್ನು ಮುಖ್ಯವಾಗಿ ಬಳಸಿಕೊಂಡಿದ್ದಾರೆ.

ಬೆಳಕಿಗಾಗಿ ತುಡಿಯುವುದು, ಬೆಳಕಿನತ್ತ ಸಾಗುವುದು ಇವರ ಕಾವ್ಯದ ನಿತ್ಯ ಹಂಬಲ ಎಂದು ಹೇಳಬಹುದು. ಅದು ಒಂದು ರೀತಿಯಲ್ಲಿ ಇವರ ಕಾವ್ಯನಿರ್ಮಾಣ ಪ್ರಕ್ರಿಯೆಯ ಉದ್ದಕ್ಕೂ ಧಾರೆಯಂತೆ ಹರಿದು ಬಂದಿದೆ. ಇವರ ಆಯ್ದ ಕವನಗಳ ಸಂಕಲನದ ಚಿರಂತನದಾಹವೂ ಇದನ್ನೇ ಸಂಕೇತಿಸುತ್ತದೆ. ಇವರ ದಾಹಜ್ಞಾನದ ಬೆಳಕಿಗಾಗಿ, ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ, ಎನಿತು ಮಾನವನೆದೆಯ ಆಳ ಅಗಲ ಎಂಬುದಾಗಿ ಇವರ ಕವಿಹೃದಯ ಹಂಬಲಿಸುತ್ತದೆ. ಇವರ ಮೊದಲನೆಯ ಕಾವ್ಯಸಂಕಲನವಾದ ಕಾವ್ಯಾಕ್ಷಿಯ ಮೊದಲನೆಯ ಕವಿತೆ ಇದನ್ನೇ ಕುರಿತದ್ದು. ನೀನು ಪೇಳ್ದ ಕವಿತೆಯ ತಂತ್ರ ಸವಿಯ ಹಾಡಲೊರೆದ ಮಂತ್ರ, ಬಾಳಹಣತೆಯಲ್ಲಿ ತಾಯೆ ಬೆಳಕು ಚಿಮ್ಮಿತು ಎನ್ನುತ್ತಾರೆ ಕವಿ. ಯುಗಯುಗಾಂತ್ಯದವರೆಗೆ ಜಗವ ಬೆಳಗಿಸಬಲ್ಲ ಎಲೆ ಚಿರಂತನ ಬೆಳಕೆ ನೀನೆ ಬೇಕು ಎಂಬುದು ಇನ್ನೊಂದು ಕವನದಲ್ಲಿಯ ಪ್ರಾರ್ಥನೆ.

ಕಣವಿಯವರ ಕಾವ್ಯಕರ್ಮದ ವಿಕಾಸದ ಹಾದಿಯ ಹಲವು ಘಟ್ಟಗಳನ್ನು ಇವರ ಕವನಗಳಲ್ಲಿ ಗುರುತಿಸುವುದು ಸಾಧ್ಯ. ಇವರ ಪ್ರಾರಂಭದ ಕವಿತೆಗಳಲ್ಲಿ ಕುವೆಂಪು, ಬೇಂದ್ರೆ, ಪುತಿನ, ಮಧುರಚೆನ್ನ ಮೊದಲಾದವರ ಕಾವ್ಯ ಪ್ರಭಾವವನ್ನು ಕಾಣಬಹುದು. ಭಾವಜೀವಿ ಎಂಬ ಕವನ ಇವರ ಆತ್ಮಕಥನ. ಅದರ ಮೇಲೆ ಮಧುರಚೆನ್ನರ 'ನನ್ನ ನಲ್ಲ' ಕವಿತೆಯ ಪ್ರಭಾವವಿದೆ ಎಂದು ವಿಮರ್ಶಕರು ಗುರುತಿಸಿದ್ದಾರೆ. ಪ್ರಕೃತಿಗೀತೆಗಳ ರಚನೆಯೂ ಬೇಂದ್ರೆ, ಕುವೆಂಪು ರಚನೆಗಳಿಂದ ಪ್ರಭಾವಿತವಾಗಿರುವುದು ಕಂಡುಬರುತ್ತದೆ.

ಕಣವಿಯವರು ಕ್ರಮೇಣ ಅನುಕರಣೆಯ ಹಾದಿ ಬಿಟ್ಟು ಸ್ವತಂತ್ರ ಮನೋಧರ್ಮದ ಗರಿಕೂಡಿಸಿಕೊಂಡು ಕಾವ್ಯಾಕಾಶದಲ್ಲಿ ಉಡ್ಡಯನ ಮಾಡಿದ್ದರ ಲಕ್ಷಣಗಳು ಅನಂತರದ ಕವನಗಳಲ್ಲಿ ಕಾಣಬರುತ್ತವೆ. ಕಣವಿಯವರು ಬದುಕನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಕಾಣತೊಡಗುತ್ತಾರೆ, ಸ್ವೋಪಜ್ಞತೆಯನ್ನು ಮೆರೆಯುತ್ತಾರೆ, ಸಮಾಜದ ದೋಷಗಳ ಮೇಲೆ ಬೆಳಕು ಚೆಲ್ಲುತ್ತಾರೆ, ಅದನ್ನು ಟೀಕಿಸುತ್ತಾರೆ. ವ್ಯಂಗ್ಯದ ಬಾರುಕೋಲುಗಳನ್ನು ಬೀಸುತ್ತಾರೆ, ಪ್ರಗತಿಶೀಲ ಚಳವಳಿಯ ಮತ್ತು ಆ ಮನೋಧರ್ಮದ ಲೇಖಕರ ಪ್ರಭಾವಕ್ಕೆ ಇವರು ಒಳಗಾಗದಂತೆ ಕಾಣುತ್ತಾರೆ. ಒಮ್ಮೊಮ್ಮೆ ಕಾವ್ಯಗುಣ ಹಿಂದಕ್ಕೆ ಸರಿಯಿತೋ, ಕವಿತೆ ವಾಚ್ಯವಾಗುತ್ತಿದೆಯೋ ಎನಿಸಿದರೂ ಅದೊಂದು ದೋಷವೆಂದು ಗುರುತಿಸಲಾಗದಷ್ಟು ತೆಳ್ಳಗಿರುತ್ತದೆ. ಒಂದು ರೀತಿಯಲ್ಲಿ ರಮ್ಯಕಾವ್ಯ ಪ್ರಭಾವದಿಂದ ಬಿಡುಗಡೆ ಹೊಂದದ ಇದೊಂದು ಸಾಧನವಾಗಿ ಪರಿಣಮಿಸಿದ್ದಿರಬಹುದು. ಆದರೆ ದೂರ ಹೋಗಬಹುದಾದ ಅಪಾಯಕ್ಕೆ ಇವರು ಸಿಲುಕದೆ ವಿಕಾಸದ ಹಾದಿಯಲ್ಲಿ ಮುನ್ನಡೆಯುತ್ತಾರೆ.

ಆ ವೇಳೆಗೆ ನವ್ಯಕಾವ್ಯದ ಯುಗದ ಉದಯವಾಗುತಿತ್ತು. ಅಡಿಗರ ಏರುದನಿ, ಪರಿಸರಕ್ಕೆ ಅವರ ತೀವ್ರ ಪ್ರತಿಕ್ರಿಯೆ, ಸಮಾಜಮುಖಿಯಾಗುವುದಕ್ಕಿಂತ ವ್ಯಕ್ತಿಗತವಾಗಿ ಚಿಂತನೆಯ ಹರಿವು, ಭಾಷೆ, ಲಯ ಮುಂತಾದವನ್ನೂ ಹೊಸದುಗೊಳಿಸಿಕೊಳ್ಳುವ ಕಾಳಜಿ, ಅವಕ್ಕೆ ಹೊಸದಾಗಿ ಶಕ್ತಿಪೂರಣ ಮಾಡುವ ಪ್ರಯತ್ನ, ಪ್ರತಿಮೆ ಸಂಕೇತಗಳನ್ನು ಅಂದಿನ ಸಂದರ್ಭದ ಅನುಭವಗಳ ಹಂದರದ ಮೇಲೆ ಹೆಣೆಯುವ ಪ್ರಯತ್ನ, ಆಗಾಗ್ಗೆ ಕಾಮದ ಅತಿರೇಕ, ಒಂಟಿತನದ ಅಳಲು ಅಸಹನೆ ಇವೇ ಪ್ರಧಾನವಾಗಿ ಕಂಡುಬಂದ ನವ್ಯಮಾರ್ಗದೊಂದಿಗೆ ಕಣವಿಯವರಾಗಲೀ, ಅವರಂಥ ಅವರ ಸಮಕಾಲೀನ ಕವಿಗಳಾಗಲೀ ನೇರವಾಗಿ ಹೋರಾಟದ ಕಣಕ್ಕೆ ಇಳಿಯಲಿಲ್ಲವಾದರೂ ಅದರಲ್ಲಿಯ ಕೆಲವು ಲಕ್ಷಣಗಳನ್ನು ಗುರುತಿಸಿ ಅವನ್ನು ತಮ್ಮ ಕಾವ್ಯದಲ್ಲಿ ಬೆಸುಗೆ ಮಾಡಿಕೊಳ್ಳುವುದರ ಜೊತೆಗೆ ಇದೊಂದು ಬಗೆಯ ಸಮನ್ವಯ ಪ್ರಯತ್ನವೋ ನವೋದಯ ನವ್ಯಮಾರ್ಗಗಳ ಸೇತುಬಂಧವೋ ಎನಿಸುವ ಮಟ್ಟಿಗೆ ಇವರು ಕಾವ್ಯರಚನೆ ಮಾಡಿದರು. ಪ್ರಾರಂಭದಲ್ಲಿ ಇವರು ನವೋದಯ ಕಲಿಕೆಯ ಮಾರ್ಗಕ್ಕೆ ಸಂಪೂರ್ಣವಾಗಿ ತೆತ್ತುಕೊಂಡು, ಆಗ ಗಟ್ಟಿಯಾಗಿ ನಿರ್ಮಿಸಿಕೊಂಡ ಮನೋಧರ್ಮದ ಬಲದಿಂದಾಗಿ ಪ್ರಗತಿದೃಷ್ಟಿಗೂ ಸಂಪೂರ್ಣವಾಗಿ ಮಾರುಹೋಗದೆ, ನವ್ಯಮಾರ್ಗವನ್ನು ತಮ್ಮ ಸ್ವಭಾವಕ್ಕೆ ತಕ್ಕಂತೆ ಹೊಂದಿಸಿಕೊಂಡು, ಅರಗಿಸಿಕೊಂಡು, ಒಂದು ರೀತಿಯಲ್ಲಿ ನವೋದಯ ಕಾವ್ಯದ ಪಾತ್ರವನ್ನು ವಿಸ್ತರಿಸಲು ನಡೆಸಿದ ಯತ್ನ ಇವರ ಕವಿತೆಗಳಲ್ಲಿ ನಮಗೆ ಕಾಣುತ್ತದೆ.

ಚೆನ್ನವೀರ ಕಣವಿ ಸಾರ್ಥಕ ಕವಿ. ಕವಿತಾರಚನೆಯೇ ಅಲ್ಲದೆ ವಿಮರ್ಶೆಯ ಹಾದಿಯಲ್ಲೂ ಇವರು ನಡೆದು ಬಂದಿದ್ದಾರೆ. ಸಾಹಿತ್ಯ ಚಿಂತನ, ಕಾವ್ಯಾನುಸಂಧಾನ, ಸಮಾಹಿತ, ಸಮತೋಲನ, ಮಧುರಚೆನ್ನ, ಶುಭನುಡಿಯೆ ಹಕ್ಕಿ ಮುಂತಾದ ಕೃತಿಗಳಲ್ಲಿ ಕವಿ ಕೃತಿ ದರ್ಶನ, ವಿವೇಚನ, ನೆನಪಿನ ಚಿತ್ರಗಳು ಮತ್ತು ವಚನಗಳ ಹಾಗೂ ಜನಪದ ಗೀತೆಗಳ ವಿಶ್ಲೇಷಣೆಗಳೂ ಇವೆ. ಇವರ ಇತರ ಕೃತಿಗಳಿವು: ನವಿಲೂರ ಮನೆಯಿಂದ, ನವ್ಯಧ್ವನಿ, ನೈವೇದ್ಯ, ನಮ್ಮೆಲ್ಲರ ನೆಹರು, ಜೀವನಸಿದ್ಧಿ, ಸಿದ್ಧಿವಿನಾಯಕ. 'ಬಾಬಾ ಫರೀದ್' ಎಂಬುದು ಅನುವಾದ. ಇವರಿಗೆ ಹಲವಾರು ಪ್ರಶಸ್ತಿಗಳು ಬಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1981), ಜೀವನದ ಒಟ್ಟಾರೆ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1985), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1989), ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಸಂಸ್ಕೃತಿ ವಿಭಾಗದ ಎಮೆರಿಟಸ್ ಫೆಲೋಷಿಪ್ (1996–98), ಪಂಪ ಪ್ರಶಸ್ತಿ (1999) ಇವು ಕೆಲವು. ಇವರು 1996ರಲ್ಲಿ ಹಾಸನದಲ್ಲಿ ನಡೆದ 65ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ ಕೆಲವು ಕವನಗಳು ಧ್ವನಿಸುರಳಿಯಲ್ಲಿ ಬಂದಿವೆ.

ಇವರ ಪತ್ನಿ ಶಾಂತಾದೇವಿ. ಇವರಿಗೆ ಐವರು ಮಕ್ಕಳು ನಾಲ್ವರು ಗಂಡು, ಒಂದು ಹೆಣ್ಣು. ಕಣವಿಯವರ ಧಾರವಾಡದ ಕಲ್ಯಾಣನಗರದಲ್ಲಿನ ನಿವಾಸದ ಹೆಸರು 'ಚೆಂಬೆಳಕು'. ಇವರ ಸಮಗ್ರ ಕಾವ್ಯದ ಹೆಸರು 'ಹೊಂಬೆಳಕು'. ಕಣವಿಯವರು ಈಗ ಧಾರವಾಡದಲ್ಲಿ ನೆಲೆಸಿದ್ದಾರೆ. (ಎಚ್.ಎಸ್.ಕೆ.)

**ಚಪ್ಪಟೆ ಮೀನುಗಳು :** ಪ್ಲೂರೊನೆಕ್ಟಿಫಾರ್ಮೀಸ್ (ಹೆಟಿರೋಸೊಮೇಟ) ಗಣದ ಬೋತಿಡೀ, ಪ್ಲೂರೊನೆಕ್ಟಿಡೀ, ಸೋಲೈಯಿಡೀ ಮತ್ತು ಸೈನೋಗ್ಲಾಸಿಡೀ ಕುಟುಂಬಗಳಿಗೆ ಸೇರಿದ, ನಂಗು, ಟರ್ಬಟ್, ಹ್ಯಾಲಿಬಟ್ ಮುಂತಾದ ಸಾಗರವಾಸಿ ಮೀನುಗಳಿಗಿರುವ ಸಾಮಾನ್ಯ ಹೆಸರು (ಫ್ಲಾಟ್ ಫಿಷ್). ಹೆಸರೇ ಸೂಚಿಸುವಂತೆ ಚಪ್ಪಟೆಯಾಗಿರುವ ಇದಕ್ಕೆ ಎರಡು ಕಣ್ಣುಗಳು ತಲೆಯ ಒಂದೇ ಪಾರ್ಶ್ವದಲ್ಲಿರುವುದರಿಂದ ಇವು ಇತರ ಮೀನುಗಳಿಗಿಂತ ಭಿನ್ನವಾಗಿವೆ. ಪ್ರೌಢಜೀವಿಗಳು ಕಣ್ಣಿರುವ ಪಾರ್ಶ್ವವನ್ನು ಮೇಲ್ಮುಖ ಮಾಡಿಕೊಂಡು ನೀರಿನ ತಳದಲ್ಲಿ ವಾಸಿಸುತ್ತವೆ. ದೇಹದ ಈ ಪಾರ್ಶ್ವದಲ್ಲಿ ವಿವಿಧ ಬಣ್ಣಗಳನ್ನು ಕಾಣಬಹುದು. ಇವು ಸಾಧಾರಣವಾಗಿ ಸಾಗರತಳದ ಬಣ್ಣವನ್ನೇ ಹೋಲುತ್ತವೆ. ನೆಲದ ಕಡೆ ತಿರುಗಿರುವ ಪಾರ್ಶ್ವ ಬಿಳುಪಾಗಿರುತ್ತದೆ. ಈ ಭಾಗವನ್ನು ಬೆಳಕಿಗೆ ಒಡ್ಡಿದಾಗ ಅಲ್ಲಿ ಸ್ವಲ್ಪಮಟ್ಟಿನ ಬಣ್ಣ ಕಾಣಿಸಿಕೊಳ್ಳುವುದುಂಟು.

ಮೊಟ್ಟೆಯೊಡೆದು ಬರುವ ಮರಿಮೀನುಗಳು ಇತರ ಜಾತಿಯ ಮೀನಿನ ಮರಿಗಳಂತೆಯೇ ಒಂದೊಂದು ಪಾರ್ಶ್ವದಲ್ಲೂ ಒಂದೊಂದು ಕಣ್ಣನ್ನು ಹೊಂದಿದ್ದು ಸಮರೂಪದ್ದಾಗಿರುತ್ತವೆ. ಇವು ಮೊದಮೊದಲು ನೀರಿನಲ್ಲಿ ಈಜಾಡುತ್ತ ಕಾಲ ಕಳೆಯುತ್ತವೆ. ಕಾಲಕ್ರಮದಲ್ಲಿ ಒಂದು ಪಾರ್ಶ್ವದ ಕಣ್ಣು, ತಲೆಯನ್ನು ಸುತ್ತುವರಿದುಕೊಂಡು ಇನ್ನೊಂದು ಪಾರ್ಶ್ವಕ್ಕೆ ಸಾಗಿ ಬರುತ್ತದೆ; ಕೆಲವು ರೆಕ್ಕೆಗಳು ಸ್ಥಾನ ಬದಲಾಯಿಸುತ್ತವೆ. ಕಡೆಗೆ, ಮೀನುಗಳು ಎರಡು ಕಣ್ಣುಗಳಿರುವ ಪಾರ್ಶ್ವವನ್ನು ಮೇಲ್ಮುಖ ಮಾಡಿಕೊಂಡು ನೀರಿನ ತಳ ಸೇರುತ್ತವೆ. ಅನೇಕ ಚಪ್ಪಟೆ ಮೀನುಗಳಲ್ಲಿ ಬೆನ್ನಿನ ರೆಕ್ಕೆ ತಲೆಯ ತನಕ ಮುಂದಕ್ಕೆ ಚಾಚಿ ಬೆಳೆದುಕೊಳ್ಳುತ್ತದೆ. ಕಣ್ಣುಗಳು ತಲೆಯ ಒಂದೇ ಪಾರ್ಶ್ವದಲ್ಲಿದ್ದರೂ ಬೇರೆ ಬೇರೆ ದಿಕ್ಕಿನಲ್ಲಿ ಸ್ವತಂತ್ರವಾಗಿ ತಿರುಗಬಲ್ಲವು. ಚಪ್ಪಟೆಮೀನುಗಳ ಹೆಚ್ಚಿನ ವಿವರಗಳಿಗೆ **(ನೋಡಿ ಟರ್ಬಟ್, ನಂಗು)**

(ಆರ್.ಎಲ್.)

**ಚಪ್ಪರದವರೆ :** ಲೆಗ್ಯೂಮಿನೋಸೀ ಕುಟುಂಬದ ಫ್ಯಾಬೇಸೀ ಉಪಕುಟುಂಬಕ್ಕೆ ಸೇರಿದ ಒಂದು ಜನಪ್ರಿಯ ತರಕಾರಿ ಸಸ್ಯ. ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಬೋನವಿಸ್ಟ್ ಬೀನ್, ಹಯಸಿಂತ್ ಬೀನ್, ಇಂಡಿಯನ್ ಬಟರ್‌ಬೀನ್ ಎಂಬ ಹೆಸರುಗಳಿವೆ. ಅವರೆಯೂ ಇದೂ ಬಹು ಹತ್ತಿರದ ಸಂಬಂಧಿಗಳು. ಇವೆರಡರ ಜಾತಿ ಹಾಗೂ ಪ್ರಭೇದ ನಿರ್ದೇಶಕ

ಶಾಸ್ತ್ರೀಯ ಹೆಸರುಗಳೂ ಒಂದೇ– ಡಾಲಿಕಾಸ್ ಲ್ಯಾಬ್‍ಲ್ಯಾಬ್ ಎಂದು. ಆದರೆ ಬಗೆಗಳು ಮಾತ್ರ ಬೇರೆ ಬೇರೆ. ಅವರೆ ಲಿಗ್ನೋಸಸ್ ಎಂಬ ಬಗೆಯದು, ಚಪ್ಪರದವರೆಯು ಟಿಪಿಕಸ್ ಎಂಬ ಬಗೆಯದು. ಇವೆರಡರ ಗುಣಲಕ್ಷಣಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ಅವರೆ ನೆಟ್ಟಗೆ ಬೆಳೆಯುವ ಪೊದೆ. ಇದರ ಬೀಜಗಳು, ಕಾಯಿಯ ಎರಡು ಸಿಪ್ಪೆಗಳು ಒಂದುಗೂಡಿ ಸೇರುವ ರೇಖೆಗೆ ಲಂಬಕೋನದಲ್ಲಿ ಜೋಡಣೆಗೊಂಡಿವೆ. ಚಪ್ಪರದವರೆ ಆಸರೆಗಳನ್ನು ಅವಲಂಬಿಸಿ ಬೆಳೆಯುವ ಬಳ್ಳಿ. ಇದರ ಬೀಜಗಳು ಕಾಯಿಸಿಪ್ಪೆಗಳ ಸೇರುವ ರೇಖೆಗೆ ಸಮಾಂತರವಾಗಿ ಜೋಡಣೆಗೊಂಡಿವೆ. ಚಪ್ಪರದವರೆಯ ಬೇಸಾಯ ಏಷ್ಯ, ಆಫ್ರಿಕ ಮತ್ತು ಅಮೆರಿಕಗಳ ಉಷ್ಣ ಹಾಗೂ ಸಮಶೀತೋಷ್ಣ ಪ್ರದೇಶಗಳಲ್ಲೆಲ್ಲ ಇದೆ. ಭಾರತದಲ್ಲಿ ಇದನ್ನು ಮನೆ ತೋಟಗಳಲ್ಲಿಯೂ ನಗರಗಳ ಹೊರವಲಯಗಳ ಸಣ್ಣ ತೋಟಗಳಲ್ಲಿಯೂ ಬೆಳೆಸಲಾಗುತ್ತದೆ. ಇದೊಂದು ಬಳ್ಳಿ. ಸ್ವಭಾವತಃ ಬಹುವಾರ್ಷಿಕವಾದರೂ ಬೇಸಾಯದಲ್ಲಿ ಏಕವಾರ್ಷಿಕ ಸಸ್ಯವಾಗಿ ಪರಿಗಣಿಸಲಾಗಿದೆ. ಆಸರೆಗಳನ್ನು ಸುತ್ತಿಕೊಂಡು ಗಿಡ ಬೆಳೆಯುತ್ತದೆ. ಎಲೆಗಳು ತಲಾ ಮೂರು ಕಿರುಎಲೆಗಳನ್ನು ಪಡೆದಿರುವ ಸಂಯುಕ್ತ ಬಗೆಯವು. ಹೂಗಳು ಸಾಮಾನ್ಯವಾಗಿ ಬಿಳಿಬಣ್ಣದವು. ಕೆಲವು ಬಗೆಯ ಊದಾ ಬಣ್ಣದ ಹೂಗಳಿರುವುದುಂಟು. ಹೂಗಳು ರೇಸೀಮ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಕಾಯಿಗಳು ಬಿಳಿ ಅಥವಾ ಹಸಿರು ಬಣ್ಣದವು. ಕೆಲವಲ್ಲಿ ಕಾಯಿಗಳ ಅಂಚು ಊದಾ ಬಣ್ಣಕ್ಕಿರುವುದಿದೆ. ಬೀಜಗಳು ಬಿಳಿ, ಹಳದಿ, ಕಂದುಮಿಶ್ರಿತ ಊದಾ, ಕಪ್ಪು – ಹೀಗೆ ಹಲವಾರು ಬಣ್ಣಗಳನ್ನು ತೋರುತ್ತವೆ.

ಚಪ್ಪರದವರೆಯಲ್ಲಿ ಅನೇಕ ಸ್ವಾಭಾವಿಕ ರೂಪಭೇದಗಳಿವೆ. ಅಲ್ಲದೆ ಕೊಯಮತ್ತೂರಿನ ಕೃಷಿ ಸಂಶೋಧನಾಲಯದಲ್ಲಿ ಅಭಿವೃದ್ಧಿಪಡಿಸಿದ ಉತ್ತಮ ಬಗೆಗಳೂ ಉಂಟು. ಇವುಗಳಲ್ಲಿ ಮುಖ್ಯವಾದವು :

1. ಡಿಎಲ್. 453 : ದಕ್ಷಿಣ ಭಾರತದಲ್ಲೆಲ್ಲ ಬಲು ಸಾಮಾನ್ಯವಾಗಿ ಕಾಣಬರುವ ಬಗೆ. ವರ್ಷವಿಡೀ ಇದನ್ನು ಬೆಳೆಸಬಹುದು. ಹೂಗಳು ಊದಾಬಣ್ಣದವು. ಹುಲುಸಾಗಿ ಕಾಯಿಬಿಡುತ್ತದೆ.
2. ಡಿಎಲ್. 692 : ಇದರ ಹೂಗಳು ಬಿಳಿಬಣ್ಣದವು. ಕಾಯಿಗಳ ಬಣ್ಣ ಹಳದಿಮಿಶ್ರಿತ ಹಸಿರು. ಬೀಜಗಳು ಚಾಕೊಲೆಟ್ ಬಣ್ಣಕ್ಕಿವೆ.
3. ಡಿಎಲ್. 269 : ಇದರ ಹೂಗಳು ಕಡು ಊದಾಬಣ್ಣದವು. ಬೀಜಗಳು ಕಪ್ಪು. ಕಾಯಿಗಳು ಹಸಿರು, ಅಗಲ ಮತ್ತು ಉಳಿದ ಬಗೆಗಳಿಗಿಂತ ಹೆಚ್ಚು ರಸಭರಿತ.
4. ಡಿಎಲ್. 250 : ನಸು ಹಸಿರು ಬಣ್ಣದ ಕಾಯಿಗಳನ್ನು ಬಿಡುವ ಇನ್ನೊಂದು ಬಗೆ. ಕಾಯ ಅಂಚುಗಳು ಊದಾಬಣ್ಣಕ್ಕಿವೆ. ಬೀಜಗಳು ಕಪ್ಪು. ಇದು ಕೂಡ ಇಳುವರಿಗೆ ಹೆಸರಾಗಿದೆ.
5. ಡಿಎಲ್ 259 : ಕಿರಿಯಗಲದ ನಸು ಹಸಿರುಬಣ್ಣದ ಕಾಯಿಗಳನ್ನು ಬಿಡುತ್ತದೆ. ಹೂಗಳು ಬಿಳಿ, ಬೀಜ ಕಂದು.
6. ಡಿಎಲ್. 244 : ಬಿಳಿ ಹೂ, ಸ್ವಲ್ಪ ಚಪ್ಪಟೆಯಾದ ಬಿಳಿಬಣ್ಣದ ಕಾಯಿ ಬಿಡುವ ಬಗೆಯದು. ಬೀಜ ಕಂದು.

ಚಪ್ಪರದವರೆಯನ್ನು ಬೀಜಗಳನ್ನು ಹಾಕಿ ಬೆಳೆಸುತ್ತಾರೆ. ಮೂರು ಘನ ಅಡಿ ಗುಂಡಿಗಳನ್ನು ತೆಗೆದು ಸ್ವಲ್ಪ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನೊಡನೆ ಮಿಶ್ರಮಾಡಿ ಗುಂಡಿಗೆ ತುಂಬಬೇಕು. ಬೀಜಗಳನ್ನು ಜುಲೈ–ಆಗಸ್ಟ್ ತಿಂಗಳುಗಳಲ್ಲಿ ನೆಡಬೇಕು. ಅವು 5–8 ದಿವಸಗಳಲ್ಲಿ ಮೊಳೆತು ಬೆಳೆಯಲು ಪ್ರಾರಂಭಿಸುತ್ತವೆ. ಸಸಿ ಸ್ವಲ್ಪ ಎತ್ತರ ಬೆಳೆದ ಮೇಲೆ ಅದಕ್ಕೆ ಆಧಾರವನ್ನು ಕೊಟ್ಟು ಹಬ್ಬಿಸಬೇಕು. ಬಳ್ಳಿ ಹುಲುಸಾಗಿ ಬೆಳೆದು ನವೆಂಬರ್ ತಿಂಗಳಲ್ಲಿ ಹೂ ಬಿಡಲಾರಂಭಿಸಿ ಡಿಸೆಂಬರ್ ಹೊತ್ತಿಗೆ ಕಾಯಿಗಳನ್ನು ಬಿಡುತ್ತದೆ. ಮಾರ್ಚ್–ಏಪ್ರಿಲ್ ತಿಂಗಳವರೆಗೆ ಕಾಯಿಗಳನ್ನು ಪಡೆಯಬಹುದು.

ಚಪ್ಪರದವರೆಗೆ ಹೇನು ಮತ್ತು ಅವರೆಯ ತಿಗಣೆಗಳು ಹತ್ತುವುದುಂಟು. ಇವು ಸಸ್ಯದ ಎಳೆಯ ಭಾಗಗಳಿಂದ ರಸವನ್ನು ಹೀರಿ ಹಾನಿಯುಂಟುಮಾಡುತ್ತವೆ. ಇದರಿಂದ ಇಳುವರಿ ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ. ಶೇ. 40 ನಿಕೋಟಿನಿಕ್ ಸಲ್ಫೇಟ್ ದ್ರಾವಣವನ್ನು ಅಥವಾ ಒಂದು ಪೌಂಡು ಮೀನೆಣ್ಣೆಯ ಸಾಬೂನನ್ನು 8 ಗ್ಯಾಲನ್ ನೀರಿನಲ್ಲಿ ಕರಗಿಸಿ ಸಿಂಪಡಿಸುವುದರಿಂದ ಈ ಕೀಟಗಳನ್ನು ತಡೆಗಟ್ಟಬಹುದು. ತಿಗಣೆಗಳನ್ನು ಕೈಯಿಂದ ತೆಗೆದು ನಾಶಪಡಿಸಬಹುದು. (ಬಿ.ಎ.ಸಿ.)

**ಚಪ್ಪಲಿಮೀನು :** ನೋಟಾಪ್ಟರಿಡೀ ಕುಟುಂಬದ, ನೋಟಾಪ್ಟರಸ್ ಜಾತಿಯ ನೋಟಾಪ್ಟರಸ್ ಮತ್ತು ಚಿತಾಲ ಎಂಬ ಎರಡು ಮತ್ಸ್ಯಪ್ರಭೇದಗಳಿಗೆ ಇರುವ ಸಾಮಾನ್ಯ ಹೆಸರು. ಸಿಹಿನೀರಿನ ಮೀನುಗಳಾದ ಇವೆರಡೂ ಭಾರತ ಹಾಗೂ ಮಲಯಗಳ ನದಿಗಳು, ಕೆರೆಗಳು ಮತ್ತು ಜಲಾಶಯಗಳಲ್ಲಿ ಕಾಣಸಿಗುತ್ತವೆ. ಕೆಲವು ಸಲ ಅಳಿವೆಗಳಲ್ಲಿನ ಉಪ್ಪುನೀರಿನಲ್ಲೂ ವಾಸಿಸುವುದುಂಟು.

$1\frac{1}{2}'$ –4ಉದ್ದಕ್ಕೆ ಬೆಳೆಯುವ ಮೀನುಗಳಿವು. ದೇಹದ ಬಣ್ಣ ಬೆಳ್ಳಿಯಂತೆ. ಚಿತಾಲ ಪ್ರಭೇದದಲ್ಲಿ ಬೆನ್ನುಭಾಗ ಬೂದು ಇಲ್ಲವೆ ಕಂದುಮಿಶ್ರಿತ ತಾಮ್ರವರ್ಣದ್ದಾದರೆ ನೋಟಾಪ್ಟರಸ್ ಬಗೆಯಲ್ಲಿ ಬೂದುಬಣ್ಣದ ಮಚ್ಚೆಗಳುಂಟು. ಎರಡು ಬಗೆಗಳಲ್ಲೂ ಒಂದೇ ಒಂದು ಚಿಕ್ಕ ಬೆನ್ನು ಈಜುರೆಕ್ಕೆ. ಒಟ್ಟಿಗೆ ಸೇರಿಕೊಂಡಿರುವ ಗುದದ ಈಜುರೆಕ್ಕೆ ಹಾಗೂ ಬಾಲದ ಈಜುರೆಕ್ಕೆಗಳು ಮತ್ತು ಚಿಕ್ಕಗಾತ್ರದ ಉದರದ ಈಜುರೆಕ್ಕೆಗಳು ಇವೆ. ಚಿತಾಲ ಬಗೆಯ



ಚಪ್ಪಲಿಮೀನಿನ ಬೆನ್ನು ಗೂನುರೀತಿಯಲ್ಲಿ ಬಾಗಿದೆ. ಎರಡು ಬಗೆಗಳಲ್ಲೂ ಮೇಲ್ದವಡೆ ಮತ್ತು ಕೆಳದವಡೆಗಳಲ್ಲಿ ಎರಡು ಸಾಲಿನಲ್ಲಿ ಜೋಡಣೆಗೊಂಡ ಹಲ್ಲುಗಳಿವೆ. ಬಾಯಂಗಳಲ್ಲೂ ನಾಲಗೆಯ ಮೇಲೂ ಹಲ್ಲುಗಳಿರುವುದುಂಟು. ದೇಹದ ಮೇಲೆಲ್ಲ ಸೈಕ್ಲಾಯ್ಡ್ ಮಾದರಿಯ ಶಲ್ಕಗಳಿವೆ. ತಲೆ ಹಾಗೂ ಕಪೋಲದ ಮೇಲಿನ ಶಲ್ಕಗಳು ದೇಹದ ಇನ್ನಿತರ ಭಾಗಗಳ ಶಲ್ಕಗಳಿಗಿಂತ ಚಿಕ್ಕವು. ಉದರದ ಏಣಿನ ಮೇಲೆ 29–51 ಹಲ್ಲುಗಳಿರುವುದರಿಂದ ಈ ಭಾಗ ಗರಗಸದಂತೆ ಕಾಣುತ್ತದೆ.

ಚಪ್ಪಲಿಮೀನು ಮಾಂಸಾಹಾರಿ. ಇತರ ಜಾತಿಯ ಮೀನುಗಳನ್ನು ತಿಂದು ಜೀವಿಸುತ್ತದೆ. ಇದರಿಂದಾಗಿ ಬೇರೆ ಜಾತಿಯ ಮೀನುಗಳನ್ನು ಸಾಕುವಾಗ ಈ ಮೀನು ಇರದಂತೆ ನೋಡಿಕೊಳ್ಳಬೇಕು. ಚಪ್ಪಲಿಮೀನಿನ ಸಂತಾನೋತ್ಪತ್ತಿಯ ಶ್ರಾಯ ಮಳೆಗಾಲ. ಒಂದು ಹೆಣ್ಣು ಒಂದು ಸಲಕ್ಕೆ 200–1000 ಮೊಟ್ಟೆಗಳನ್ನಿಡುತ್ತದೆ.

ಚಪ್ಪಲಿಮೀನನ್ನು ಹಸಿಯಾಗಿ ಇಲ್ಲವೆ ಒಣಗಿಸಿ ತಿನ್ನುತ್ತಾರೆ. ಇದರಿಂದ ತಯಾರಿಸಲಾಗುವ ಸಾರನ್ನು ದಡಾರದಿಂದ ನರಳುವವರಿಗೆ ಕೊಡಲಾಗುತ್ತದೆ. (ಬಿ.ಎಚ್.ಎಂ.; ಬಿ.ಎಸ್.)

**ಚಪ್ಪೆರೋಗ :** ಮೆಲಕುಹಾಕುವ ಪ್ರಾಣಿಗಳಲ್ಲಿ ಕಾಣಬರುವ ತೀವ್ರ ಬಗೆಯ ಅಂಟುಜಾಡ್ಯ (ಬ್ಲ್ಯಾಕ್ ಕ್ವಾರ್ಟರ್; ಬ್ಲ್ಯಾಕ್ ಲೆಗ್). ಮುಂಗಾರು ಮಳೆಯ ಆರಂಭದ ಕಾಲದಲ್ಲಿ ಕಾಣಿಸಿಕೊಳ್ಳುತ್ತದೆ. ಆರು ತಿಂಗಳಿನಿಂದ ಮೂರು ವರ್ಷ ವಯಸ್ಸಿನ ಪ್ರಾಣಿಗಳು ಈ ರೋಗಕ್ಕೆ ಬಲುಬೇಗ ಒಳಗಾಗುತ್ತವೆ. ಆಕ್ಸಿಜನ್ ರಹಿತ ಸ್ಥಿತಿಗಳಲ್ಲಿ ಬೆಳೆಯುವ ಕ್ಲಾಸ್ಟ್ರಿಡಿಯಮ್ ಚಾವಿಯೈ ಎಂಬ ಬ್ಯಾಕ್ಟೀರಿಯ ಈ ರೋಗವನ್ನು ಉಂಟುಮಾಡುತ್ತದೆ. ಪ್ರಪಂಚದಾದ್ಯಂತ ಇದರ ವ್ಯಾಪ್ತಿ ಉಂಟು. ಬರಿಯ ಹಸು, ಎಮ್ಮೆಗಳಲ್ಲದೆ ಕುರಿ, ಮೇಕೆ, ಹಂದಿ, ಒಂಟೆ, ಜಿಂಕೆಗಳಲ್ಲೂ ಇದು ಕಂಡುಬರುತ್ತದೆ. $\frac{1}{2}$

ರೋಗಪೀಡಿತ ಪ್ರಾಣಿಯ ಭುಜ, ಕತ್ತು ಮತ್ತು ಪೃಷ್ಠ ಭಾಗಗಳಲ್ಲಿ ಅನಿಲ ಶೇಖರಣೆ, ಬಾವು, ಕುಂಟು ಮತ್ತು ಜ್ವರ ಇವು ಚಪ್ಪೆರೋಗದ ಮುಖ್ಯಲಕ್ಷಣಗಳು. ಬಾತಿರುವ ಭಾಗ ಬೆಚ್ಚಗಿದ್ದು ತುಂಬ ನೋವನ್ನು ಉಂಟುಮಾಡುತ್ತದೆ. ಕೆಲವು ಗಂಟೆಗಳಲ್ಲಿ ಒಳಗಿನ ಕೀವು ಹೊರಬೀಳುವುದಲ್ಲದೆ ಆ ಭಾಗದ ಸ್ಪರ್ಶವೇದಿತ್ವ ಕಡಿಮೆಯಾಗುತ್ತದೆ. ಬರಬರುತ್ತ ಆ ಭಾಗ ತಣ್ಣಗೂ ವೇದನಾರಹಿತವೂ ಆಗುತ್ತದೆ. ಪ್ರಾಣಿ ನಡೆಯಲು ಅಸಮರ್ಥವಾಗುತ್ತದೆ. ರೋಗಪೀಡಿತ ಭಾಗದಲ್ಲಿ ಒಳಗಿನ ಸ್ನಾಯುವಿನ ಅಂಗಾಂಶಗಳೆಲ್ಲ ಸತ್ತುಹೋಗಿ ಕೊಳೆಯತೊಡಗುತ್ತವೆ. ಇಂಥ ಸ್ನಾಯು ಕಪ್ಪಗಿರುತ್ತದಲ್ಲದೆ ಹಳಸಲು ಬೆಣ್ಣೆಯಂತೆ ನಾರುತ್ತದೆ. ರೋಗಕಾರಕ ಜೀವಿಯ ಬೀಜಾಣುಗಳಿಂದ ಕೂಡಿದ ನೀರು ಮತ್ತು ಆಹಾರದ ಮೂಲಕ ರೋಗ ಹರಡುತ್ತದೆ. ಅಲ್ಲದೆ ಇಂಥ ಬೀಜಾಣುಗಳಿರುವ ಹುಲ್ಲಿನಲ್ಲಿ ನಡೆದಾಡುವ ಪ್ರಾಣಿಗಳ ಮೈಮೇಲೆ ಗಾಯಗಳಿದ್ದರೆ ಅವುಗಳ ಮೂಲಕ ಕೂಡ ರೋಗಾಣುಗಳು ಪ್ರಾಣಿಗಳ ದೇಹವನ್ನು ಸೇರಬಲ್ಲವು. ದೇಹವನ್ನು ಹೊಕ್ಕ 1–5 ದಿವಸಗಳ ಅನಂತರ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ರೋಗಪೀಡಿತ ಪ್ರಾಣಿ ಒಂದೆರಡು ದಿವಸಗಳಲ್ಲಿಯೇ ಸತ್ತುಹೋಗುತ್ತದೆ.

ಚಿಕ್ಕ ವಯಸ್ಸಿನ ಪ್ರಾಣಿಗಳಿಗೆ ದೇವಿ ಹಾಕುವುದರ ಮೂಲಕ ರೋಗವನ್ನು ತಡೆಗಟ್ಟಬಹುದು. ರೋಗಪೀಡಿತ ಪ್ರಾಣಿಗಳ ಬಳಿ ಇತರ ಪ್ರಾಣಿಗಳನ್ನು ಸೇರಿಸಬಾರದು. ಇದಕ್ಕೆ ಪೆನಿಸಿಲಿನ್ ಮದ್ದನ್ನೂ ಕೊಡಬಹುದು. ಕೊನೆಯ ಪಕ್ಷ ವರ್ಷಕ್ಕೊಮ್ಮೆ ದೇವಿ ಹಾಕುತ್ತಿರಬೇಕು. ಚಪ್ಪೆರೋಗದಿಂದ ಸತ್ತ ಪ್ರಾಣಿಗಳ ದೇಹವನ್ನು ಸುಟ್ಟುಹಾಕಬೇಕು ಇಲ್ಲವೆ ಹೂಳಬೇಕು. ಇದರಿಂದ ರೋಗದ ಹರಡುವಿಕೆಯನ್ನು ಯಶಸ್ವಿಯಾಗಿ ನಿಯಂತ್ರಿಸಬಹುದು. ಪ್ರಾಣಿಗಳನ್ನು ಹೂಳಿದ ಸ್ಥಳದ ಮೇಲೆಲ್ಲ ಹುಲ್ಲನ್ನು ದಪ್ಪ ಪದರವಾಗಿ ಹಾಕಿದರೆ ಒಳ್ಳೆಯದು. (ಎಸ್.ಎಂ.ಬಿ.)

**ಚಫ್ :** ಕಾರ್ವಿಡೀ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಹಕ್ಕಿ. ಯುರೋಪ್ ಮತ್ತು ನೈರುತ್ಯ ಏಷ್ಯದ ಪರ್ವತಶ್ರೇಣಿಗಳ ಶಿಖರಗಳಲ್ಲಿ ವಾಸಿಸುತ್ತದೆ. ಕಾಗೆಗೆ ಹತ್ತಿರಸಂಬಂಧಿ. ಚಫ್ ಜಾತಿಯ ವೈಜ್ಞಾನಿಕ ಹೆಸರು ಪಿರೋಕೊರ್‍ಯಾಕ್ಸ್. ಇದರಲ್ಲಿ ಎರಡು ಪ್ರಭೇದಗಳಿವೆ. ಒಂದು ಯುರೋಪಿನ ಸಮುದ್ರತೀರದ ಪ್ರಪಾತಗಳಲ್ಲಿ ಕಾಣದೊರೆಯುವ ಸಾಮಾನ್ಯ ಚಫ್ (ಪಿರೋಕೊರ್‍ಯಾಕ್ಸ್ ಪಿರೋಕೊರ್‍ಯಾಕ್ಸ್), ಇನ್ನೊಂದು ಆಲ್ಪ್ಸ್ ಪರ್ವತಗಳಲ್ಲಿ ವಾಸಿಸುವ ಆಲ್ಪೈನ್ ಚಫ್ (ಪಿರೋಕೊರ್‍ಯಾಕ್ಸ್ ಗ್ರ್ಯಾಕ್ಯುಲಸ್). ಎರಡು ಬಗೆಯವೂ ಕಾಗೆಯಂತೆಯೇ ಕಪ್ಪುಬಣ್ಣದವು. ಆದರೆ ಗಾತ್ರದಲ್ಲಿ ಮಾತ್ರ ಚಿಕ್ಕವು. ಚಫ್‌ಗಳ ಕೊಕ್ಕು ಬೇರೆ ರೀತಿಯದು. ಇದು ತೆಳುವಾಗಿ ಚೂಪಾಗಿರುವುದಲ್ಲದೆ ಕೆಳಮುಖನಾಗಿ ಬಾಗಿದೆ. ಕೊಕ್ಕಿನ ಬಣ್ಣ ಸಾಮಾನ್ಯ ಚಫ್ ಹಕ್ಕಿಯಲ್ಲಿ ಕೆಂಪು ಮತ್ತು ಆಲ್ಪೈನ್ ಚಫ್ ಹಕ್ಕಿಯಲ್ಲಿ ಹಳದಿ. ತಮ್ಮ ಹಾರುವ ಸಾಮರ್ಥ್ಯದಿಂದ ಎರಡು ಬಗೆಗಳೂ ಆಗಸದ ದೊಂಬರು ಎನಿಸಿಕೊಂಡಿವೆ. ಒಂಟೊಂಟಿಯಾಗಿ ಇಲ್ಲವೇ ಗುಂಪುಗಳಲ್ಲಿ ತಾವು ವಾಸಿಸುವ ಪ್ರಪಾತಗಳ ಸುತ್ತ ಚಕ್ರಾಕಾರದಲ್ಲಿ ಸುತ್ತುವುದು, ಸರ್ರನೆ ಮೇಲೇರುವುದು, ರೆಕ್ಕೆಗಳನ್ನು ಮುಚ್ಚಿಕೊಂಡು ಥಟ್ಟನೆ ದುಮುಕಿ ಕೆಳಗಿಳಿಯುವುದು, ಲಾಗಹಾಕುವುದು ಮುಂತಾದವನ್ನೆಲ್ಲ ಮಾಡುತ್ತ ಹಾರಾಡುತ್ತವೆ. ಚಫ್‌ಗಳು ಕೀಟಾಹಾರಿಗಳು.

ಇವು ಪರ್ವತಗಳ ಬಂಡೆದೊಗರುಗಳಲ್ಲಿ ಗೂಡುಕಟ್ಟಿ ಮೊಟ್ಟೆಯಿಡುತ್ತವೆ. ಮೊಟ್ಟೆಯಿಡುವ ಕಾಲ ಏಪ್ರಿಲ್–ಮೇ ತಿಂಗಳು. ಮೊಟ್ಟೆಗಳ ಸಂಖ್ಯೆ 3–6. ಮೊಟ್ಟೆಯೊಡೆದು ಹೊರಬರುವ ಮರಿಗಳೂ 35–40 ದಿವಸಗಳ ಅನಂತರ ತಾಯಿಯಿಂದ ಬೇರೆಯಾಗಿ ವಾಸಿಸತೊಡಗುತ್ತವೆ. ಚಫ್‌ಗಳ ಆಯಸ್ಸು 15 ವರ್ಷಗಳು. (ಎಚ್.ಎಚ್.ಎಸ್.)

**ಚಬ್ ಮೀನು :** ಸಿಪ್ರಿನಿಫಾರ್ಮಿಸ್ ಗಣದ ಸಿಪ್ರಿನಿಡೆ ಕುಟುಂಬಕ್ಕೆ ಸೇರಿದ ಅನೇಕ ಜಾತಿಯ ಮೀನುಗಳಿಗಿರುವ ಸಾಮಾನು ಹೆಸರು. ಇವು ಸಿಹಿ ನೀರು ಮೀನುಗಳು; ಸಣ್ಣಪುಟ್ಟ ನದಿಗಳಲ್ಲಿಯೂ ಝರಿಗಳಲ್ಲಿಯೂ ವಾಸಿಸುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನದ ಮಧ್ಯಭಾಗ, ಯೂರೋಪ್ ಮುಂತಾದೆಡೆಗಳಲ್ಲೂ ಇವೆ. ತೆಳು ಶರೀರ, ಮೋಟು ತಲೆ, ಗಟ್ಟಿಯಾದ ದವಡೆಗಳು, ಗಂಟಲ ಹಲ್ಲುಗಳು (ಫ್ಯಾರಿಂಜಿಯಲ್ ಟೀತ್), ದವಡೆಯ ಹಿಂಭಾಗದಲ್ಲಿ ತೆಳುವಾದ ಸ್ಪರ್ಶರೋಮಗಳು (ಬಾರ್ಬಲ್ಸ್), ಮುಳ್ಳುಗಳಿಲ್ಲದ ಈಜುರೆಕ್ಕೆ,



ಉದ್ದವಾದ ಮತ್ತು ಚೂಪಾಗಿ ಕಾಣುವ ಎದೆಯ ಈಜುರೆಕ್ಕೆ. ಕವಲೊಡೆದ ಬಾಲದ ಈಜುರೆಕ್ಕೆ, ಮೈತುಂಬ ಹುರುಪೆಗಳು – ಇವು ಈ ಮೀನುಗಳ ಪ್ರಮುಖ ಲಕ್ಷಣಗಳು. ಇವು ನಮ್ಮ ದೇಶದ ಗೆಂಡೆ ಮೀನುಗಳನ್ನು ಹೋಲುತ್ತವೆ. ಸು. 4'–12' ಬೆಳೆಯುತ್ತವೆ.

ಕೀಟ ಡಿಂಬಗಳು, ಸಣ್ಣಗಾತ್ರದ ಇತರೆ ಮೀನುಗಳು ಮತ್ತು ಹಲವು ಬಗೆಯ ಜಲ ಸಸ್ಯಗಳು ಈ ಮೀನುಗಳ ಆಹಾರ. ಕೆಲವೊಮ್ಮೆ ತಮ್ಮ ಮರಿಗಳನ್ನೇ ತಿನ್ನುವುದುಂಟು. ಸಂತಾನೋತ್ಪತ್ತಿಯ ಕಾಲದಲ್ಲಿ ಹೆಣ್ಣುಮೀನುಗಳ ಪಾರ್ಶ್ವ ಮತ್ತು ಉದರ ಭಾಗ ಕೆಂಪುಬಣ್ಣಕ್ಕೆ ತಿರುಗುತ್ತದೆ. ಸರೋವರ ಇಲ್ಲವೆ, ಕೊಳದ ಅಂಚಿನಲ್ಲಿ ಅಥವಾ ನದಿಗಳ ನಿಂತ ನೀರಿನ ಮಡುಗಳಲ್ಲಿ ತಳಭಾಗದಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನಿಟ್ಟು ಅದರ ಮೇಲೆ ಮೊಟ್ಟೆಗಳನ್ನಿಡುವುದು ಇದರ ಕ್ರಮ. ಸಾಮಾನ್ಯವಾಗಿ ವಸಂತ ಋತು ಈ ಮೀನುಗಳ ಸಂತಾನೋತ್ಪತ್ತಿಯ ಕಾಲ.

ಚಬ್ ಮೀನುಗಳಲ್ಲಿ ಅನೇಕ ಪ್ರಭೇದಗಳಿವೆ. ಸೆಮಾಟಲಸ್ ಅಟ್ರೊಮ್ಯಾಕ್ಯುಲೇಟಸ್, ಸೆ. ಕಾರ್ಪೊರಾಲಿಸ್, ಜಾತಿಯ ಮೀನುಗಳು ಸಾಮಾನ್ಯವಾಗಿ ಬೆಟ್ಟದ ಝರಿಯ ಚಬ್ (ಫಾಲ್ ಫಿಷ್) ಎಂದು ಕರೆಯಲಾಗುತ್ತದೆ. ಸಣ್ಣ ನದಿಗಳಲ್ಲಿ, ಕಲ್ಲುಗಳಿಂದ ಕೂಡಿದ ತಳವಿರುವ ಮಡುಗಳಲ್ಲಿ, ಇವು ವಾಸಿಸುತ್ತವೆ. ಇದು ಒಂದು ಒಳ್ಳೆಯ ಬೇಟೆ ಮೀನು (ಗೇಮ್ ಫಿಷ್). ಟ್ರೌಟ್ ಮೀನಿನ ಅಭಾವದಲ್ಲಿ ಇವುಗಳನ್ನು ಬೇಟೆಯಾಡುವುದುಂಟು. ವಸಂತದಲ್ಲಿ ಇವುಗಳ ತಲೆಯಮೇಲೆ ಗಂತಿಗಳು ಬೆಳೆಯುತ್ತವೆ. ನಿಶೇಚಿತ ಅಂಡಗಳ ಸುತ್ತ ಗಂಡುಮೀನು ಜಲ್ಲಿಯಿಂದ ಗೂಡನ್ನು ನಿರ್ಮಿಸುತ್ತದೆ.

ಬರ್ಮುಡ ಚಬ್ ಮೀನು ಸ್ವಚ್ಛವಾದ ಝರಿಗಳಲ್ಲಿ ಕಾಣಸಿಗುವ ಮೀನುಗಳು. ಹೆರಿಂಗ್ ಮೀನುಗಳ ಗುಂಪಿನಲ್ಲಿ ಸಾಮಾನ್ಯವಾಗಿ ಸುತ್ತಾಡುತ್ತಿದ್ದರೂ ಅವುಗಳನ್ನು ಬೇಟೆಯಾಡುವುದಿಲ್ಲ. ಸುಮ್ಮನೆ ಕುತೂಹಲದಿಂದ ಹೆರಿಂಗ್ ಮೀನುಗಳನ್ನು ಹಿಂಬಾಲಿಸುತ್ತವೆ.

ಸಾಕ್ರೊಮೆಂಟೊ ಚಬ್ (ದಪ್ಪವಾದ ಚಬ್), ಇದು ಕ್ಯಾಲಿಫೋರ್ನಿಯಾ ಕಣಿವೆಯ ನದಿಗಳಲ್ಲಿ ಧಾರಾಳವಾಗಿ ಸಿಗುತ್ತವೆ. ಪೆಸಿಫಿಕ್ ಡ್ರೈನೇಜ್‌ನಲ್ಲಿ ಕಂಡುಬರುವ ಮಿನೊ ಕುಟುಂಬದ ಕೆಲವೇ ಮೀನುಗಳಲ್ಲಿ ಇದೂ ಒಂದು. ಇದರ ಹುರುಪೆಗಳ ಮೇಲೆ ಗಾಢ ಬಣ್ಣದ ಮಚ್ಚೆಗಳಿವೆ. ಇದರ ಉದ್ದ ಸು. 12" ಬಣ್ಣ ಮಬ್ಬು ಕಂದು. ಕೊಲಂಬಿಯದ ಮೈಲೊಕಿಲಸ್ ಕಾರಿನಸ್, ಯೂರೋಪ್‌ನ ಲ್ಯೂಯಿಸ್ಕಸ್ ಸಿಫಾಲಸ್, ಉತ್ತರ ಅಮೆರಿಕದ ಹೈಬಾಪ್ಸಿಸ್, ಗಿಲ್ ಮತ್ತು ಪಿಫ್‌ಟೆಲಿಸ್, ಅಮೆರಿಕ ಸಂಯುಕ್ತ ಸಂಸ್ಥಾನದ ನಾಕೊಮಿಸ್ ಇವು ಪ್ರಮುಖ ಬಗೆಯ ಚಬ್ ಮೀನುಗಳು.

ಎಲ್ಲ ಚಬ್ ಮೀನುಗಳೂ ಒಳ್ಳೆಯ ಎರೆ ಪ್ರಾಣಿಗಳಾಗಿ ಉಪಯುಕ್ತವೆನಿಸಿವೆ. ದೊಡ್ಡಗಾತ್ರಕ್ಕೆ ಬೆಳೆಯುವ ಚಬ್‌ಗಳನ್ನು ವಿನೋದಕ್ಕಾಗಿ ಅಥವಾ ಆಹಾರಕ್ಕಾಗಿ ಬೇಟೆಯಾಡುತ್ತವೆ. (ಎ.ಎಸ್.ಎಚ್.; ಟಿ.ಎಸ್.ವಿಶ್ವನಾಥ್)

**ಚಮಚಮುಖಿ :** ಕಬ್ಬಾರೆ, ಕ್ರೌಂಚ (ಹೆರನ್), ಕೆಂಪು ಕೊಕ್ಕರೆ, ಮತ್ತು ಐಬಿಸ್‌ಗಳಿಗೆ ಹತ್ತಿರ ಸಂಬಂಧಿಯಾದ ಮತ್ತು ನೀರಿನಲ್ಲಿ ನಡೆದಾಡುವ ಒಂದು ದೊಡ್ಡಹಕ್ಕಿ (ಸ್ಪೂನ್‌ಬಿಲ್). ಇದರಲ್ಲಿ ಸುಮಾರು 6 ಪ್ರಭೇದಗಳಿವೆ. ಇವು ಸಿಕೋನೈಯಿಫಾರ್ಮೀಸ್ ಗಣದ

ಥ್ರೆಸ್ಕಿಯಾರ್ನಿತಿಡೀ ಕುಟುಂಬಕ್ಕೆ ಸೇರಿವೆ. ಜೌಗುಪ್ರದೇಶಗಳ ಬಳಿಯೇ ಇವುಗಳ ವಾಸ. ಕೊಕ್ಕು ಉದ್ದವಾಗಿಯೂ ತುದಿಯಲ್ಲಿ ಚಮಚದಂತೆ ಅಗಲವಾಗಿಯೂ ಇರುವುದರಿಂದ ಇವಕ್ಕೆ ಈ ಹೆಸರು. ಇಂಥ ಕೊಕ್ಕಿರುವುದರಿಂದ ತಮ್ಮ ಆಹಾರವಾದ ಕಪ್ಪೆ, ಮೀನು, ಏಡಿ, ಕಠಿಣಚರ್ಮಿಗಳು, ಕೀಟಗಳು ಮುಂತಾದ ಜಲಚರ ಪ್ರಾಣಿಗಳನ್ನು ಹಿಡಿದು ತಿನ್ನಲು ಅನುಕೂಲ. ನೀರಿನಲ್ಲಿ ನಡೆದಾಡಲು ಸಹಾಯವಾಗುವಂತೆ ಇವುಗಳ ಕಾಲುಗಳು ಬಲು ಉದ್ದವಾಗಿವೆ. ತಮ್ಮ ಕೊಕ್ಕನ್ನು ಭಾಗಶಃ ತೆರೆದುಕೊಂಡು, ನೀರಿನಲ್ಲಿ ಮುಳುಗಿಸಿ ತಲೆಯನ್ನು ಅತ್ತಿತ್ತ ಆಡಿಸುತ್ತ ಆಹಾರವನ್ನರಸಿಕೊಂಡು ಅಲೆದಾಡುತ್ತವೆ. ಆಹಾರಸೇವನೆಯ ಕಾಲ ಬೆಳಗ್ಗೆ ಮತ್ತು ಸಂಜೆ.

ಚಮಚಮುಖಿಗಳ ದೇಹದ ಗಾತ್ರ ಹೆಚ್ಚುಕಡಿಮೆ ಬಾತು ಹಕ್ಕಿಯಷ್ಟು. ಭಾರತದಲ್ಲಿ ಕಾಣದೊರೆಯುವ ಪ್ಲಾಟೇಲಿಯ ಲ್ಯೂಕೊರಾಡಿಯ ಪ್ರಭೇದದ ಚಮಚಮುಖಿಯ ದೇಹದ ಬಣ್ಣ ಅಚ್ಚಬಿಳಿ, ಕಾಲುಗಳು ಕಪ್ಪು. ಅಮೆರಿಕ ಸಂಯುಕ್ತ ಸಂಸ್ಥಾನ, ವೆಸ್ಟ್‌ಇಂಡೀಸ್, ಅರ್ಜಂಟೀನ ಮುಂತಾದೆಡೆ ವಾಸಿಸುವ ಅಜಾಯಿಯ ಅಜಾಜ (ರೋಸಿಯೇಟ್ ಸ್ಪೂನ್ ಬಿಲ್) ಎಂಬ ಪ್ರಭೇದದ ಚಮಚಮುಖಿಯ ದೇಹದ ಬಣ್ಣ ಗುಲಾಬಿ, ಕಾಲುಗಳು ಕೆಂಪು. ಭಾರತದ ಬಗೆಯಲ್ಲಿ ಹೆಗ್ಗತ್ತಿನ ಮೇಲೆ ಪುಕ್ಕ ಮಕುಟವೊಂದಿದೆ. ಅಮೆರಿಕದ ಚಮಚಮುಖಿಯ ಎದೆಯ ಭಾಗದಲ್ಲಿ ಪುಕ್ಕಗಳ ಗುಚ್ಛವಿದೆ.

ಚಮಚಮುಖಿಗಳು ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ. V-ಆಕಾರದ ಸಾಲುಗಳಲ್ಲಿ ಹಾರುವುದು ಇವುಗಳ ವಿಶೇಷ ಲಕ್ಷಣ. ನೀರಿನಲ್ಲಿ ಬೆಳೆಯುವ ಜೊಂಡು, ಸಣ್ಣಗಾತ್ರದ ಮರ ಮುಂತಾದುವುಗಳಲ್ಲಿ ಒರಟುಕಡ್ಡಿಗಳನ್ನೂ, ಎಲೆಗಳನ್ನು ಬಳಸಿಕೊಂಡು ಗೂಡುಕಟ್ಟುತ್ತವೆ. ಮೆಲ್ದನಿಯ ವಟಗುಟ್ಟುವಿಕೆ ಅಥವಾ ಕೊಕ್ಕುಗಳನ್ನು ಪರಸ್ಪರ ತಾಡಿಸಿದಾಗ ಉಂಟಾಗುವ ಲಟಪಟಶಬ್ದಗಳನ್ನು ಬಿಟ್ಟರೆ ಇನ್ನಾವ ರೀತಿಯ ಸದ್ದನ್ನೂ ಇವು ಮಾಡುವುದಿಲ್ಲ.

ಇವು ಮೊಟ್ಟೆಯಿಡುವ ಕಾಲ ಜುಲೈ–ನವೆಂಬರ್, ಮೊಟ್ಟೆಗಳ ಬಣ್ಣ ಮಾಸಲು ಬಿಳಿ; ಮೇಲೆಲ್ಲ ಕಂದುಮಚ್ಚೆಗಳುಂಟು; ಸಂಖ್ಯೆ 4–5.

ಮೇಲೆ ಹೇಳಿದ ಎರಡು ಬಗೆಗಳಲ್ಲದೆ ಇನ್ನಿತರ ಚಮಚಮುಖಿಗಳ ವ್ಯಾಪ್ತಿ ಈ ರೀತಿ ಇದೆ: ಪ್ಲಾಟಿಬಿಸ್ ಫ್ಲೇವಿಪಸ್–ಆಸ್ಟ್ರೇಲಿಯದಲ್ಲಿ ವಾಸಿಸುತ್ತದೆ; ಪ್ಲಾಟೇಲಿಯ ರೀಜಿಯ–ಆಸ್ಟ್ರೇಲಿಯ, ನ್ಯೂಜೀಲೆಂಡ್, ನ್ಯೂಗಿನಿ ಮುಂತಾದೆಡೆ ಕಾಣದೊರೆಯುತ್ತವೆ; ಪ್ಲಾ. ಮೈನರ್–ಕೊರಿಯ, ದಕ್ಷಿಣ ಜಪಾನ್, ದಕ್ಷಿಣ ಚೀನ, ಫಿಲಿಪೀನ್ಸುಗಳಲ್ಲಿ ಜೀವಿಸುತ್ತದೆ; ಪ್ಲಾ, ಅಲ್ಬ–ಆಫ್ರಿಕದ ಸಹರಾ ಮರುಭೂಮಿಯ ದಕ್ಷಿಣ ಭಾಗ ಮತ್ತು ಮಡಗಾಸ್ಕರ್‌ಗಳಲ್ಲಿ ವಾಸಿಸುತ್ತದೆ.

ಅಮೆರಿಕದ ಗುಲಾಬಿ ಚಮಚಮುಖಿಯನ್ನು ಚೆಲುವಾದ ರೆಕ್ಕೆಪುಕ್ಕಗಳಿಗಾಗಿ ಬೇಟೆಯಾಡುತ್ತಿದ್ದುದರಿಂದ ಅದು ನಿರ್ವಂಶವಾಗುವ ಸ್ಥಿತಿಗೆ ಬಂದಿತ್ತು. ಆದರೆ ಈಗೀಗ ಕಾನೂನಿನ ರಕ್ಷಣೆ ದೊರೆತಿರುವುದರಿಂದ ಫ್ಲಾರಿಡದ ಕೆಲವು ಪ್ರದೇಶಗಳಲ್ಲಿ ಸಣ್ಣಪುಟ್ಟ ಗುಂಪುಗಳನ್ನು ಕಾಣಬಹುದು. (ಕೆ.ವಿ.ಆರ್.ಜಿ.)

**ಚಮತ್ಕಾರೋಕ್ತಿ :** ಚಮತ್ಕಾರದ ಮಾತು, ಚಿಕ್ಕ ಪದ್ಯ. ಪಾಶ್ಚಾತ್ಯರು ಇದನ್ನು ಎಪಿಗ್ರಂ ಎಂದು ಕರೆದಿದ್ದಾರೆ. ಇದಕ್ಕೆ ನಮ್ಮಲ್ಲಿ ಮುಕ್ತಕ, ಸುಭಾಷಿತ, ಚಾಟೂಕ್ತಿ, ಚಾಟುಪದ್ಯ ಎನ್ನಲಾಗುತ್ತದೆ; ವಚನ ಎಂದು ಕರೆದರೂ ತಪ್ಪಾಗುವುದಿಲ್ಲ. ಬೆಚ್ಚನಾ ಮನೆಯಾಗಿ

ವೆಚ್ಚಕ್ಕೆ ಹೊನ್ನಾಗಿ ಇಚ್ಛೆಯನ್ನರಿವ ಸತಿಯಾಗೆ, ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ–ಇದು ದಿಟವಾಗಿ ಎಪಿಗ್ರಂ. ತನ್ನ ಒಂದು ವಿಶಿಷ್ಟ ಚಮತ್ಕಾರದಿಂದ ಅದು ಕೇಳಿದವರ ಆಂತರ್ಯಕ್ಕೆ ನಾಟಿ ನಿಲ್ಲುವುದರಿಂದ ಇಂಥ ಉಕ್ತಿಗೆ ನಾಟುನುಡಿ ಎಂಬ ಅಂಕಿತವೂ ಸಮರ್ಪಕ. ಚಿಕ್ಕ ಶರೀರದಲ್ಲಿ ದೊಡ್ಡ ಚಮತ್ಕಾರವನ್ನು ಬಯಿಟ್ಟಿರುವುದೇ ಇದರ ಹಿರಿಮೆ. ಇದು ಜೇನುಹುಳುವಿನಂತೆ ಮಕರಂದ ಶೇಖರಿಸುವುದರ ಜೊತೆಗೆ ಮೂತಿಯ ತುದಿಯ ಮುಳ್ಳಿನಿಂದ ಚುಚ್ಚುವುದೂ ಉಂಟು. ಮಾತಿನ ಕೊನೆಯಲ್ಲಿ ಬರುವ ಚುಚ್ಚು, ಕಟಕಿ ಚಮತ್ಕಾರ ಬೆರಗುಗೊಳಿಸುವಂತಿರುತ್ತದೆ.

ಬ್ವಾಲೊವಿನ ಈ ಶ್ಲೋಕವನ್ನು ಪರೀಕ್ಷಿಸಿ:

ಈ ಶಿಲೆಯ ಕೆಳಗೆ ಮಲಗಿದ್ದಾಳೆ ನನ್ನ ಕಾಂತೆ
ಅವಳಿಗೀಗ ನಿಶ್ಚಿಂತೆ – ನನಗೂ ಅಂತೆ.

ಇದು ಬ್ವಾಲೊ ತಾನು ನೋಡಿದ ಒಂದು ಸಮಾಧಿಲೇಖದ ಆಧಾರದ ಮೇಲೆ ಕಟ್ಟಿದ್ದು. ಮೊದಲನೆಯ ಪಂಕ್ತಿ ಕೇವಲ ಸಾಂಪ್ರದಾಯಿಕ ರೀತಿಯಲ್ಲಿ ಸಂಗತಿಯನ್ನು ವರದಿಗೈಯುತ್ತದೆ. ಎರಡನೆಯ ಅರ್ಧಪಂಕ್ತಿ ಅವಳಿಗೀಗ ನಿಶ್ಚಿಂತೆ–ಎಂಬುದನ್ನು ನಾವು ಆಲಿಸಿ, ಪಾಪ, ಗೃಹಿಣಿ ಬಾಳಿನುದ್ದಕ್ಕೂ ಎಷ್ಟು ಕಷ್ಟನಷ್ಟ ಅನುಭವಿಸಿದಳೊ ಸತ್ತಮೇಲೆಯೇ ಆಕೆಗೆ ಶಾಂತಿ!– ಎಂದು ಅನುಕಂಪೆ ತಾಳುತ್ತೇವೆ. ನನಗೂ ಅಂತೆ ಎಂಬ ಸಮಾಪ್ತಿಯ ಉದ್ಗಾರ ಆ ಹೆಂಗಸು ಎಂಥ ಚಂಡಿಯಾಗಿದ್ದಳೊ ಎಂಬ ಊಹೆಯನ್ನು ಹುಟ್ಟಿಸಿ ನಮ್ಮ ಅನುಕಂಪೆಯೆಲ್ಲ ಸಹಿಷ್ಣು ಗಂಡನ ಕಡೆಗೆ ಹರಿಯುವಂತೆ ಮಾಡುತ್ತದೆ. ಅಮರುಕನ ಈ ಮುಕ್ತಕವನ್ನು ನೋಡಬಹುದು:

ಹುಬ್ಬುಗಂಟಿಕ್ಕುವುದ ಕಲಿತು ಬಂದಿರುವೆ; ಕಣ್ಣು
ಮುಚ್ಚಲು ಅಭ್ಯಾಸ ನಿಂದಿರುವೆ;
ತಕ್ಷಣ ಮೂಡಲೆಳಸುವ ಮಂದಹಾಸವ ತಡೆದು
ನಿಲ್ಲಿಸಲು ಶಿಕ್ಷಣ ಹೊಂದಿರುವೆ;
ಮೌನ ತಾಳುವುದ ಬಳಕೆಗೆ ತಂದಿರುವೆ; ಚಿತ್ತಕ್ಕೆ
'ಚಪಲಿ, ಎಚ್ಚರಿಕೆ' ಎಂದಿರುವೆ;
ಸ್ವಾಭಿಮಾನದ ಹಗ್ಗದಿಂದೆಲ್ಲವನು ಕಟ್ಟಿನೊಳಕ್ಕೆ
ತಂದಿರುವೆ: ಸಿದ್ಧಿ ದೈವೇಚ್ಛೆ!

ಒಳ್ಳೆಯ ದಾಂಪತ್ಯದ ಅನ್ಯೋನ್ಯ ಪ್ರೇಮಕ್ಕೆ ಯಾವಾಗಲೂ ಇದೇ ಕಥೆ, ಇದೇ ಶುಚಿ ತಂತ್ರ, ಇದೇ ಸುಗಂಧ, ಸೊಗಸು!

ಈ ಸ್ವರೂಪದ ನಾಟುನುಡಿಯೇ ಪ್ರಸಿದ್ಧವಾಗಿದ್ದರೂ ನಾಟುನುಡಿಯ ಆರಂಭವೂ ಪ್ರಾಚೀನ ಗ್ರೀಕರ ಮಧ್ಯೆ ಅದರ ಬೆಳವಣಿಗೆಯೂ ಕೊಂಚ ಬೇರೆಯಾಗಿತ್ತು. ದೇವತೆಗೆ ಮುಡಿಪು ಒಪ್ಪಿಸುವಾಗ ಆ ಪದಾರ್ಥದ ಮೇಲೆ ಈ ಕಾರಣಕ್ಕಾಗಿ ಈ ದಿವಸ ಇದನ್ನು ಇಂಥವನು ಅರ್ಪಿಸಿದ ಎಂದು ಲಿಪಿ ಕೊರೆಸುವುದೇ ಎಪಿಗ್ರಂ (ಎಪಿ–ಮೇಲೆ, ಗ್ರಮ್ಮಾ–ಬರೆಹ) ಆಗಿತ್ತು. ದೇವೋತ್ತಮ ಜ್ಯೂಸನ ವಿಗ್ರಹದ ಪೀಠದಲ್ಲಿ ಕೆತ್ತಿದ ವಾಕ್ಯ: "ಫೀಡಿಯಸ್, ಕಾರ್ಮಿಡೀಸನ ಮಗ, ಅಥೆನ್ಸಿನ ಪೌರ, ನನ್ನನ್ನು ಮಾಡಿದ." ಹಾಗೆಯೇ ಗೋರಿ ಗೋಪುರ ಸ್ಮಾರಕ ಸ್ತಂಭ ಮೊದಲಾದುವುಗಳನ್ನೂ ಎಪಿಗ್ರಂ ಆಕ್ರಮಿಸಿತು. ಕೊರೆದು ಬರೆದದ್ದು, ಬಹುಕಾಲ ಉಳಿಯತಕ್ಕದ್ದು ಎಂಬ ಅದರ ಹುಟ್ಟುಗುಣ ಈಗಲೂ ಅಂಟಿಕೊಂಡಿದೆ ಅದಕ್ಕೆ, ಅದರ ರೂಪ ಎಷ್ಟೇ ಬೇರೆಯಾದರೂ. ಎಲಿಜಿಯಾಕ್ ದ್ವಿಪದಿ ಹುಟ್ಟಿ ಬಂದ ತರುವಾಯ ಅದೇ ಚಮತ್ಕಾರೋಕ್ತಿಗೆ ವಾಹಕವಾಯಿತು. ಗ್ರೀಕರ ಎಪಿಗ್ರಂ ಎಲ್ಲವೂ ಭಾವಪೂರ್ಣವಾದ ಉತ್ಕೃಷ್ಟಭಾವನೆಯನ್ನು ಅಡಕವಾಗಿ, ಸುಂದರವಾಗಿ ನಿರೂಪಿಸಿರುವ ಸುಭಾಷಿತ; ಕೊನೆಗೊಂದು ಚಮತ್ಕಾರ ಸ್ಫುರಿಸಬೇಕಾಗಿಲ್ಲ. ಯಾವ ವಿಷಯ ಯಾವ ರಸವನ್ನಾದರೂ ಅವು ಪರಿಪೋಷಿಸಬಹುದಾಗಿತ್ತು.

ಗರ್ವದಲಿ ಯಾರು ಗ್ರೀಸನ್ನು ಕಡೆಗಣಿಸಿ ನಕ್ಕಳೊ,
ಯಾರ ಬಾಗಿಲಲಿ ವಿಟತಂಡ ನಿಟ್ಟುಸಿರು ಬಿಟ್ಟಿತೊ
ಆ ಲೇಯಿಸು – ಈ ದರ್ಪಣವ ವಿನಸ್ಸಳಿಗೆ ಕೊಟ್ಟೆ.
ನಾನಿದುವರೆ ಎಂತಿರುವೆನೆಂಬುದ ನೋಡಲಾರೆ;
ಇನ್ನು ಮುಂದೆ ಎಂತಿರುವೆನೆಂಬುದ ನೋಡಲೊಲ್ಲೆ.
"ಕೇಳಿ, ಕುರುಬರೆ! ಹರ್ಮಿಸನ ಒಲಿಸುವುದು
ಸುಲಭವೇ ಸರಿ;
ಕೊಂಚ ಮಧುವನ್ನೊ ಹಾಲನ್ನೊ ಮೀಸಲಿಟ್ಟರೆ
ಅವನಿಗೆ ಸಾಕು.
ಆ ತೆರನಲ್ಲ ಆಲ್ಕೆಡೀಸು : ಅವನಿಗೆ ಟಗರೇ
ಬೇಕು,
ಒಂದು ಪೂರ್ತಿ; ಕನಿಷ್ಠಪಕ್ಷ ಒಂದು ಕೊಬ್ಬಿದ
ಕುರಿಮರಿ.
ತೋಳಗಳ ತಡೆಯುತ್ತಾನೆ, ದಿಟ. ಎರಡೂ ಒಂದೆ
ಎನ್ನುವೆ ನಾನು:
ಕುರಿ ಮಂದೆಯನು ತೋಳ ತಿಂದರೇನು ಆತ
ತಿಂದರೇನು!
ಸ್ಮೃತಿದೇವತೆಗೆ ಅತಿಬೆರಗು ಬಡಿಯಿತು
ಸ್ಯಾಫೋಳ ಮಧುಮಧುರ ಗೀತವ ಕೇಳಿ;
ನುಡಿದಳು: ನರವರ್ಗವೆಂತು ಪಡೆಯಿತು
ಹತ್ತನೆಯ ಕಲಾದೇವಿಯನು ಹೇಳಿ!

ಶಾಲೆಮಾಸ್ತರ ಮಗಳು ಕದ್ದೋಡಿದಳೊಬ್ಬ ನಲ್ಲನ ಸಂಗ: ಹುಟ್ಟಿದ ಶಿಶುಗೆ ಪುಲ್ಲಿಂಗ ಸ್ತ್ರೀಲಿಂಗ ನಪುಂಸಕ ಲಿಂಗ!

ಪ್ರಾಚೀನ ರೋಮನರ ಲಘು ಕಾವ್ಯಗಳಲ್ಲಿ ವೈಯಕ್ತಿಕತೆಯೂ ಸ್ವಂತರಾಗಗಳ ಆವೇಶವೂ ಸ್ವಚ್ಛಂದತೆಯೂ ಹೆಚ್ಚಾಗಿ ಕಂಡುಬರುತ್ತವೆ. ಕ್ಯಾಟಲಸ್ ಎಂಬ ಕವಿಶ್ರೇಷ್ಠ ಈ ಧ್ಯೇಯವನ್ನು ಸಾರಿದ:

"ನೈಜ ಕವಿಗಳು ಶುಚಿರ್ಭೂತರಾಗಿರಬೇಕು, ಗೊತ್ತು;
ಅವರ ಪಂಕ್ತಿಗಳ ಬಂಧಿಸಲೇಕೆ ಅದೇ ವಿಧಿಯನಿತ್ತು ?"

ಅವನ ಮನೋರಥದ ಹಲವು ಮುಖಗಳನ್ನು ಈ ಚುತುಷ್ಪದಿಯಲ್ಲಿ ನೋಡಬಹುದು:

ಹಲಕೆಲರು ಓದುಗರು ಪ್ರಾಯಶಃ ಸಿಕ್ಕುವರೆನಗೆ.
ಅವರನಂಜಿಸದು ನಾನೀ ಅಸಂಬದ್ಧ ಹಾಡಿದ್ದು,
ನನ್ನ ಮಸಿಯನಿಂತು ನಾ ಹಾಳು ಮಾಡಿದ್ದು.
ಮನಕಿದನು ತಾರದೆ ದಯದಿ ಕ್ಷಮೆಯಿಕ್ಕುವರೆನಗೆ.

ಕ್ಯಾಟಲಸ್ ಗೀತಕವಿ. ಮಾರ್ಷ್ಲ್ ಆದರೋ ಅಪ್ಪಟ ನಾಟುನುಡಿಯ ಕವಿ. 1171 ನಾಟುನುಡಿಗಳ ಜನಕ ಅವನು. ಅಶ್ಲೀಲಪಟುವೆಂದು ಅವನನ್ನು ಅವಧಿ ಅವಧಿಗಳಲ್ಲಿ ಶಿಷ್ಟ ಮಂದಿ ಆಕ್ಷೇಪಿಸಿ ಬಹಿಷ್ಕರಿಸಿದರು. ಆದರೆ ನಾಚಿಕೆ ಹುಟ್ಟಿಸುವ ಭಾಗ ಅವನ ಒಟ್ಟು ಬರವಣಿಗೆಯ ಆರನೇ ಒಂದರಷ್ಟು, ಅಥವಾ ಐದನೇ ಒಂದರಷ್ಟು ಮಾತ್ರ. ಉಳಿದದ್ದಾವುದೂ ದೂಷಣೀಯವಲ್ಲ. ಅವನೇ ಒಮ್ಮೆ ಹೀಗೆ ಹೇಳಿದ:

ಖಂಡನೆಯ ಮಾತ ಆಡದಿರಲಿ ಎನ್ನ ನಿರಪರಾಧಿ ವಿನೋದದ ವಿರುದ್ಧ;
ಎನ್ನ ಪುಟಗಳಲ್ಲಿ ಚೆಲ್ಲಾಟವಿದ್ದರು ಎನ್ನ ಬಾಳು ಪರಿಶುದ್ಧ.

ಹಿಂದೆ ಬಣ್ಣಿಸಿದ ಚುಚ್ಚುಮುಳ್ಳಿನ ನಾಟುನುಡಿಯನ್ನು ಬಳಕೆಗೆ ತಂದವ ಮಾರ್ಷ್ಲ್; ನಾಟುನುಡಿಯೆಂದೇ ಅದಕ್ಕೆ ಅಡ್ಡ ಹೆಸರು ಬಂದುಬಿಟ್ಟಿದೆ. ಇವು ಮೂರನ್ನು ಪರಿಶೀಲಿಸಿ:

ನನ್ನ ವರಿಸಲು ಪಾಲಳಿಗೆ ಅಪೇಕ್ಷೆ;
ನನಗಾದರೊ ಅವಳ ಕುರಿತು ಉಪೇಕ್ಷೆ,
ಆಕೆ ವೃದ್ಧೆ. ಬಹುಶಃ ಒಪ್ಪುತ್ತಿದ್ದೆ
ಅವಳಾಗಿದ್ದಲ್ಲಿ ಇನ್ನೂ ವೃದ್ಧೆ.

ದೊಡ್ಡವರಿಂದ ಅಲ್ಪವಸ್ತುವನು ಬೇಡುವೆ ಎಂದು;
ಅದಕೂಡ ಆ ದೊಡ್ಡ ಜನ ನಿನಗೆ ನೀಡರು ತಂದು.
ಬರಲೆಂದು, ಮ್ಯಾಥೊ ಆದಷ್ಟು ಕಡಮೆ ಅವಮಾನ
ಅವರ ಬಳಿ ಹೋಗಿ ಕೇಳಿನೋಡೊಂದು ದೊಡ್ಡ ದಾನ.

ಕವಿ ಥಿಯೋಡರನ ನಿಲಯ ಪೂರ್ತಿ ನಾಶಹೊಂದಿತು ಬೆಂಕಿಯಿಂದ.
ಅದು ನಿಮಗೆ ಸಂತಸವೆ, ಕಲಾದೇವಿಯರೆ, ಸ್ವಾಮಿ ಫೀಬಸನೆ?
ಎಂತ ಘನಪಾತಕ, ಅನ್ಯಾಯ, ದೈವಾಪವಾದವಾಯಿತು, ನೋಡಿ:
ಅಯ್ಯೊ, ಬೆಂದು ಬೂದಿಯಾಗಲಿಲ್ಲ ಮನೆಯೊಡನೆ ಯಜಮಾನ!

ಹೀಗೆ ಸುಭಾಷಿತ, ಚುಚ್ಚುನುಡಿ ಎಂಬ ಎರಡು ಬಗೆಯ ಮುಕ್ತಕವೂ ಪಾಶ್ಚಾತ್ಯ ಸಾಹಿತಿಗಳಿಗೆ ಮಾದರಿಯಾದುವು. ಎರಡು ಬಗೆಯನ್ನೂ ಅವರು ಆಸಕ್ತಿಯಿಂದ ಬಿತ್ತಿ ಹುಲುಸು ಬೆಳೆ ತೆಗೆದಿದ್ದಾರೆ. ಹಿಂದಿನವರನ್ನು ಸರಿಗಟ್ಟಿದ್ದಾರೆ, ಅಲ್ಲಲ್ಲಿ ಮೀರಿಸಿದ್ದಾರೆ. ಲೆಸ್ಸಿಂಗನ ಒಂದೇ ಪಂಕ್ತಿಯ ನಾಟುನುಡಿಯನು ನೋಡಿ: ಗಲ್ಲಿಗೇರಿಸಿರುವ ಕೊಲೆಪಾತಕಿಯನ್ನು ಕುರಿತದ್ದು, ಈ ನುಡಿ.

ಶಾಂತಿಯಲಿ ಅವಗೆ ವಿಶ್ರಾಂತಿ–ಗಾಳಿ ಬೀಸದೆ ನಿಂತಾಗ.

ಫ್ರೆಂಚರ ಪೀರೋನ್ ಅಕಾಡೆಮಿಯ ಸದಸ್ಯನಾಗಲು ಪ್ರಯತ್ನಪಟ್ಟರೂ ವಿಜಯಿಯಾಗಲಿಲ್ಲ. ರೋಸಿ ಹೋಗಿ ತನ್ನನ್ನೇ ಕುರಿತು ಸುಳ್ಳು ಸಮಾಧಿಲೇಖವನ್ನು ಕಟ್ಟಿ ಪ್ರಚಾರಮಾಡಿದ:

ಇಲ್ಲಿ ಮಲಗಿರುವ ಪೀರೋನ್, ಅವನಾವೊತ್ತೂ ಅಕಾಡೆಮಿಯ ಸದಸ್ಯನಲ್ಲ.
ಈ ಮಾತಿನ ವ್ಯಂಗ್ಯ, ರಸೋತ್ಕರ್ಷ ಇಡೀ ಪ್ಯಾರಿಸ್ ಪಟ್ಟಣವನ್ನೇ ಕುಣಿದಾಡಿಸಿದಂತೆ.
ವಾಲ್ಟೇರನ ಗ್ರಂಥಗಳ ತುಂಬ ನಾಟುನುಡಿಗಳು ತುಂಬಿಕೊಂಡಿವೆ:

ನನ್ನ ಮಿತ್ರರಿಂದ ನನ್ನನ್ನು ರಕ್ಷಿಸಲಿ ದೇವರು:
ನನ್ನ ಶತ್ರುಗಳನ್ನು ನಾನೇ ನೋಡಿಕೊಳ್ಳಬಲ್ಲೆ.
ದೇವರು ಒಂದು ಪಕ್ಷ ಇಲ್ಲದಿದ್ದರೆ ಅವನನ್ನು
ಕಲ್ಪಿಸಿಕೊಳ್ಳಲೇಬೇಕು ನಾವು!

ಯಾವುದನ್ನು ಬೇಕಾದರೂ ಸಮರ್ಥಿಸಬಹುದೆಂಬುದನ್ನು ಸಮರ್ಥಿಸುತ್ತದೆ ಚರಿತ್ರೆ.

ಫ್ರಾನ್ಸಿನ ಜನರು, ಅವರ ಭಾಷೆ ಅವರ ಸಾಹಿತ್ಯ ಎಲ್ಲವೂ ನಾಟುನುಡಿಯಂತೆ ಹ್ರಸ್ವ ಅರ್ಥಪೂರ್ಣ, ಅನ್ಯಾದೃಶ. ಸೈತಾನ ಪರಿಶುದ್ಧ ಎಂಬ ಬೆಂಕಿಮಾತು ಫ್ರೆಂಚರಿಗೇ ಸಾಧ್ಯ.

ನಾಟುನುಡಿಯ ಮೂಲಕ ಬಿಡಿ ವ್ಯಕ್ತಿಗಳ ಆತ್ಮೀಯ ಪರಿಚಯವನ್ನೂ ಜನಾಂಗಗಳ ಮುಖ್ಯ ಲಕ್ಷಣಗಳ ನಿಕಟ ಪರಿಚಯವನ್ನೂ ಪಡೆದುಕೊಳ್ಳಬಹುದು. ರಾಬರ್ಟ್ ಬರ್‍ನ್ಸ್ ಕತ್ತಿಹಿರಿದ ಯೋಧನಂತೆ ಈ ಮಾತನ್ನಾಡುತ್ತಾನೆ:

ನಿನ್ನ ವಂಶ ನಡೆಯಿತು, ಗ್ಯಾಲೊವೆ, ಪ್ರಕಾಶ ತೋರಿ,
ಬಹು ವಿಖ್ಯಾತ ಪೂರ್ವಜರು ಹೆಚ್ಚೆ.
ಅಂತೆ ನಡೆಯಿತು ಬಹು ವಿಖ್ಯಾತ ರೋಮನ್ ಹೆದ್ದಾರಿ.
ತನ್ನ ಕೊನೆಯಲದು ಮುಟ್ಟಿತು ಕೊಚ್ಚೆ.

ಷಿಲರ್ ಕವಿಯ ವಾಣಿ:

ಜೀವವುಳ್ಳ ಭಾವವುಳ್ಳ ಪ್ರಪಂಚದಲ್ಲಿ ಎಲ್ಲಿ
ಹುಡುಕಿದರು ನವ್ಯತೆ ಮೆರೆವ
ಪದಾರ್ಥವೊಂದಿಲ್ಲ, ಹೂವನ್ನು ಬಿಟ್ಟು,
ಅದೇ ಜೀವನದ ಶ್ರೇಷ್ಠ ಸೃಷ್ಟಿ;
ನನ್ನ ಮತಧರ್ಮ ಯಾವುದೆಂದು ಕೇಳುವೆಯ?
ನೀ ಹೆಸರಿಸುವುದೊಂದೂ ಅಲ್ಲ.
ನಾ ಹೆಸರಿಸುವುದೊಂದೂ ಅಲ್ಲವೆ! ಏತಕ್ಕೆ?
ಏತಕ್ಕೆ: ಮತಧರ್ಮಕೋಸುಗ.

ಆಸ್ಕರ್ ವೈಲ್ಡನ ವಿರೋಧಾಭಾಸದ ವಚನ ಶೈಲಿ ಇದು:

ಒರಟುತನವೆನ್ನುವುದು ಇತರರ ನಡತೆ
ಮುಖಕ್ಕಿಂತ ಹೆಚ್ಚು ಸಂಗತಿಯನ್ನು ನಮಗೆ
ಸೂಚಿಸುತ್ತದೆ. ಮುಖವಾಡ
ಸುಂದರ ವಸ್ತುಗಳೆಲ್ಲ ಒಂದೇ ಅವಧಿಗೆ ಸೇರಿದುವು.

ಚೆಸ್ಟರ್‌ಟನ್ನನ ಮಾತು :

ಯಾಂತ್ರಿಕ ನಾಗರಿಕತೆಯನ್ನು ಮೆಚ್ಚಬೇಕಾದರೆ
ರೋಮ್ಯಾಂಟಿಕ್ ನೇತ್ರ ಆವಶ್ಯಕ
ಸರಿಯಾದದ್ದು ಸರಿಯೆ, ಯಾರೂ ಅದನ್ನು ಮಾಡದಿದ್ದರೂ
ಹಣವೊಂದು ಅತೀಂದ್ರಿಯ ರಹಸ್ಯ

ಆಯಾ ನಾಡಿನವರ ಸ್ವಭಾವವನ್ನು ಸ್ವಲ್ಪಮಟ್ಟಿಗೆ ಸ್ಥೂಲವಾಗಿ ಗುರುತಿಸುವುದಕ್ಕೆ ನಾಟುನುಡಿಯಿಂದ ಸಹಾಯ ದೊರಕೀತು. ಆಂಧ್ರದೇಶದ ಈ ಪದ್ಯಗಳನ್ನು ಪರಿಗಣಿಸಿ: ನೀರಿಲ್ಲದೆ ಧಾವಂತಪಡುತ್ತಿದ್ದಾಗ ಶ್ರೀನಾಥ ಕವೀಶ್ವರ ಆಡಿದ ದ್ವಂದ್ವಾರ್ಥದ ಚಮತ್ಕಾರೋಕ್ತಿ ಇದು:

ಸಿರಿವಂತನಿಗೆ ಸರಿಯಹರು ಹದಿನಾರು ಸಹಸ್ರ
ತರುಣಿಯರು ಹೆಂಡತಿಯರು।
ತಿರುಕನಿಗೆ ಹೆಂಡರಿಬ್ಬರೆ ಪರಮೇಶಾ, ಗಂಗೆ
ಯನು ಬಿಡು ಪಾರ್ವತಿ ಸಾಕು॥

ಇದರ ಖಡಾಖಂಡಿತವನ್ನೂ ಬಿರುಸನ್ನೂ ನೋಡಿ.

ಆಡಿದ ಮಾತ ತಪ್ಪಿದನ
ನೋಡಿದವರು ಕತ್ತೆಯ ಮಗನೆಂದರು ಅಯ್ಯೋ।
ಪಾಡೆ, ಮಗನಿವನೇ? ಎಂದು
ಕೂಡೆ ಅತ್ತಿತಂತೆ ಕತ್ತೆ ಘನಸಂಪನ್ನಾ॥

ತಮಿಳುನಾಡಿನ ಕೆಲವು ವಚನ ಮಾಣಿಕ್ಯಗಳಿವು:

ನಾಡಾಗು ಇಲ್ಲಿ ಕಾಡಾಗು ಅಲ್ಲಿ.
ಹಳ್ಳವಾಗಿಲ್ಲಿ ತಿಟ್ಟಾಗು ಅಲ್ಲಿ:
ಎಲ್ಲಿ ಮಂದಿ ಒಳ್ಳಿದರೊ ನೀನಲ್ಲಿ
ಒಳ್ಳಿದಳು, ಬೇರಲ್ಲ. ಬಾಳು, ಭೂಮಿ!
ಎಸೆದ ಭಲ್ಲೆಯವ ಹುಡುಕ ಹೋಗಿ ಆನೆಮೆಯ್ಯಿಂ ಭಲ್ಲೆ ಕಿತ್ತು ನಗುವ.
ಇರುವೆನೆಂಬುದಾದರೆ ಹೇಳೆನಗೆ, ಬೇಗ ಹಿಂತಿರುಗುವೆನೆಂಬುದ
ಜೀವಂತರಿಗೆ ಹೇಳು.
ವೇಣು ಇನಿದು ವಾದ್ಯ ಇನಿದು ಎನ್ನುವರು ಮಕ್ಕಳಾಡುವ ತೊದಲ್ನುಡಿಯ
ಕೇಳದವರು.

ಪರ್ಷಿಯದ ಕವಿಗಳ ಕೆಲವು ಸಾಲಂಕೃತ ಪದ್ಯಗಳಿವು:

ನನ್ನ ಕಣ್ಣಿನ ಪಾಪೆ ತನ್ನ ಗೂಡೆಂದು
ಆಲೋಚಿಸಿತು ನಿದ್ದೆಹಕ್ಕಿ ನೋಡಿಂದು:
ಅಲ್ಲಿ ರೆಪ್ಪೆ ಕಾಣಿಸಲು ಕೆದರಿ

ನಡುನಡುಗಿತು ಬಲೆಯೆಂದು ಬೆದರಿ
ಒರೆಯೊಳಗಿರುವ ಚಿಕ್ಕ ನದಿ ಖಡ್ಗ: ಅದರ
ತೀರವ ಪಾರಿ
ಮೃತ್ಯು ತಾ ಬರುವುದು ಬಾಯಾರಿ.
ಭರ್ಜಿಯೆ ಕೊಂಬೆ: ಅದರಿಂದ ಸುರಿಯುವುದು
ಕೆಂಪಗೆ ತೋರುತ್ತ
ಹಾಲು ಹಣ್ಣು ರಕ್ತ ಸೋರುತ್ತ.

ಜಪಾನೀಯರ ಹಾಯ್ಕು ಎಂಬ ನಾಟುನುಡಿಯ ನಮೂನೆಯಿದು.

ಪುರಾತನವಾದ ಕುಂಟೆ
ಕಪ್ಪೆಯೊಂದು ಕುಪ್ಪಳಿಸುತ್ತದೆ
ಜಲದ ಸಪ್ಪುಳ.

ಗುಡಿಯ ಘಂಟೆಯ ಮೇಲೆ
ವಿಶ್ರಾಂತಗೊಳುತ, ಮಲಗಿಹುದು
ಒಂದು ಚಿಟ್ಟೆ

ಈಗಿರುವನೆ, ಎನಗೆ ಕುತೂಹಲ,
ಕೈಯಿನಲ್ಲಿ ಲೇಖನಿ ಪಿಡಿಯದಿಹ ಓರ್ವ ಮನುಷ್ಯ–
ಚಂದ್ರ, ಈ ರಾತ್ರಿ!

ಇದು ಜಪಾನೀಯರಿಗೆ ಒಗ್ಗಿಬಂದ ಕಾವ್ಯಪ್ರಕಾರ, ನಿಜವಾಗಿ ಅನುಕರಣೀಯ. ಅಮೆರಿಕ ಸಂಯುಕ್ತಸಂಸ್ಥಾನದ ಕೆಲವು ಕವಿಗಳು ಎಪಿಗ್ರಮ್‌ಅನ್ನು ತಮ್ಮ ಭಾಷೆಗೆ ತಂದುಕೊಳ್ಳಲು ಶ್ರಮವಹಿಸಿದರು. ಅವರು ಸೋತುಹೋಗಿದ್ದಾರೆಂದೇ ಬಲ್ಲವರ ಅಭಿಮತ.

ನಾಟುನುಡಿಯ ಮೂಲಗುಣವನ್ನು ಕಂಡುಹಿಡಿದು ಅದರ ದೃಷ್ಟಿಯಿಂದ ಸಮಂಜಸ ವರ್ಗೀಕರಣವನ್ನು ಸ್ಥಾಪಿಸುವುದಕ್ಕೆ ವಿಮರ್ಶಕರು ಪ್ರಯತ್ನಿಸಿದರು. ಸ್ಕ್ಯಾಲಿಜರ್ ಐದು ಗುಂಪಾಗಿ ವಿಂಗಡಿಸಿದ: ಮೆಲ್–ಸಿಹಿ, ಫೆಲ್–ಕಡುಕಹಿ, ಆಸಿಟಮ್–ಹುಳಿ, ಸ್ಯಾಲ್–ಉಪ್ಪು, ಮಲ್ಟಿಪ್ಲೆಕ್ಸ್–ಸಮ್ಮಿಶ್ರ. ಹರ್ಡರ್ ಎಂಬ ಮಹಾಮೇಧಾವಿ ಏಳು ವಿಶೇಷಣಗಳ ಮೂಲಕ ನಾಟುನುಡಿಗಳನ್ನು ಹೀಗೆ ವಿಭಾಗಿಸಿದ: ವಿವರಣಾತ್ಮಕ, ಮಾದರಿ ಕ್ರಮದ, ಚಿತ್ರಾತ್ಮಕ, ರಾಗೋದ್ರೇಕದ, ಕಲಾತಂತ್ರಪೂರಿತ, ಭ್ರಾಂತಿಕಾರಕ ಮತ್ತು ತ್ವರಿತ. ಇಂಥ ವಿಶ್ಲೇಷಣೆಗಳು ಕೂದಲು ಸೀಳಿಕೆಯ ಪಾಂಡಿತ್ಯವನ್ನು ಪ್ರದರ್ಶಿಸುತ್ತವೆ, ಅಷ್ಟೆ.

(ಎಸ್.ವಿ.ಆರ್.)

**ಚಯಾಪಚಯ** : ಜೀವಿಯಲ್ಲಿ ಆರೋಗ್ಯ ಸ್ಥಿತಿಯ ಜೈವಿಕ ಕ್ರಿಯೆಯಾಗಿ ನಿರಂತರ ಜರಗುವ ಸಮಸ್ತ ರಾಸಾಯನಿಕ ಕ್ರಿಯೆಗಳು ಮತ್ತು ಶಕ್ತಿಯ ಬಿಡುಗಡೆ, ಸಂಚಯನ ಹಾಗೂ ವಿನಿಯೋಗಕ್ಕೆ ಸಂಬಂಧಿಸಿದ ಕ್ರಿಯೆಗಳ ಹೆಸರು (ಮೆಟಬಾಲಿಸಮ್). ಈ ಕ್ರಿಯೆಗಳಿಂದ ಜೀವಂತ ಮತ್ತು ವ್ಯವಸ್ಥಿತವಾದ ವಸ್ತುಗಳು ಉತ್ಪತ್ತಿಯಾಗಿ ವಿಶಿಷ್ಟ ಪರಿವರ್ತನೆಯಿಂದ ಜೀವಿಯ ಉಪಯೋಗಕ್ಕೆ ಬೇಕಾಗುವ ಶಕ್ತಿ ಒದಗುವುದಲ್ಲದೆ ಜೀವಿಯ ಆರೋಗ್ಯಕ್ಕೆ ಅತ್ಯಗತ್ಯವಾದ ಒಳಾವರಣದ ನಿರಾಂದೋಳನಸ್ಥಿತಿಯ (ಹೋಮಿಯೋಸ್ಟೇಸಿಸ್) ಧಾರಣೆ ಕೂಡ ಸಾಧ್ಯವಾಗಿದೆ. ಸಾಮಾನ್ಯವಾಗಿ ಶಕ್ತಿಯ ಜೈವಿಕ ಪರಿವರ್ತನೆಯನ್ನು ಬೇರೆಯಾಗಿಯೇ ಗಣಿಸಿ, ಚಯಾಪಚಯವೆಂದರೆ ದೇಹದಲ್ಲಾಗುವ ರಾಸಾಯನಿಕ ಬದಲಾವಣೆಗಳೆಂದು ವ್ಯವಹರಿಸುವುದೇ ರೂಢಿ. ಹೀಗಾಗಿ ಜೀವಕೋಶಗಳ ಹಾಗೂ ಊತಕಗಳ ಒಳಗೆ ಸದಾ ಕಾಲವೂ ನಡೆಯುತ್ತಿರುವ ಕಟ್ಟುವಿಕೆ, ಒಡೆಯುವಿಕೆ ಮತ್ತು ಕ್ರಿಯಾಶೀಲತೆಗೆ ಅನ್ವಯಿಸುವಂಥ ಎಲ್ಲ ಜೀವರಾಸಾಯನಿಕ ಪ್ರತಿಕ್ರಿಯೆಗಳೂ ಚಯಾಪಚಯದಲ್ಲಿ ಅಡಕವಾಗಿವೆ. ಕಿರಿಯಣುಗಳು ಸಂಯೋಗಗೊಂಡು ಬೃಹದಣುಗಳಾಗಿ

ಉಪಯೋಗಿಸಲ್ಪಡುವ ಕ್ರಿಯೆಗಳಿಗೆ ಉಪಚಯ (ಅನಬಾಲಿಸಮ್) ಎಂದು ಹೆಸರು. ಇದರ ವಿಪರ್ಯಯವಾದ ಒಡೆಯುವ ಕ್ರಿಯೆ ಎಂದರೆ ಬೃಹದಣುಗಳು ಕಿರಿಯಣುಗಳಾಗಿ ಪರಿವರ್ತಿತವಾಗುವ ಕ್ರಿಯೆಗಳಿಗೆ ಅಪಚಯ (ಕೆಟಬಾಲಿಸಮ್) ಎಂದು ಹೆಸರು.



ಚಿತ್ರ 1. ಆಮ್ಲಜನಕರಹಿತ ಪಥ : ಎಂಬ್ಡೆನ್ ಮೇಯರ್ ಹೋಫ್ ಪಥ

ಚಯಾಪಚಯಗಳೆರಡೂ ಸಮತೋಲನದಲ್ಲಿದ್ದರೆ ಊತಕ ದ್ರವ್ಯರಾಶಿ ಸ್ಥಿರವಾಗಿರುತ್ತದೆ. ಉಪಚಯ ಅಪಚಯಕ್ಕಿಂತ ಹೆಚ್ಚಾಗಿದ್ದರೆ ಊತಕ ದ್ರವ್ಯರಾಶಿಯೂ ಹೆಚ್ಚಿ ಬೆಳವಣಿಗೆ, ಇಲ್ಲವೆ ತೂಕ ವೃದ್ಧಿ ಆಗುತ್ತದೆ. ಅಪಚಯ ಉಪಚಯಕ್ಕಿಂತ ಹೆಚ್ಚಾಗಿದ್ದರೆ ಊತಕ ದ್ರವ್ಯರಾಶಿ ಕುಗ್ಗಿ ಬೆಳವಣಿಗೆ ನಿಂತು ತೂಕ ಕಡಿಮೆ ಆಗುತ್ತದೆ. ಅನೇಕ ರೋಗಸ್ಥಿತಿಗಳಲ್ಲಿ ಅಥವಾ ದೀರ್ಘಕಾಲಿಕ ಉಪವಾಸ ಮಾಡುತ್ತಿರುವಾಗ ಈ ರೀತಿ ಆಗುವುದನ್ನು ನೋಡಬಹುದು.

ಪ್ರಸಕ್ತ ಲೇಖನದಲ್ಲಿ ಚಯಾಪಚಯಕ್ರಿಯೆಯನ್ನು, ಅದು ಒಂದು ನಿರ್ದಿಷ್ಟ ಕ್ರಿಯೆ ಎಂಬ ದೃಷ್ಟಿಯಿಂದ ನೋಡಿ ಚಯಾಪಚಯಕ್ರಿಯೆಗಳ ರೂಪ, ವಿಶೇಷ ಚಕ್ರೀಯ ಅಥವಾ ಸರಪಣಿಮಾರ್ಗಗಳು, ಈ ಕ್ರಿಯೆಗಳ ಪ್ರಾಮುಖ್ಯ ಇತ್ಯಾದಿಗಳನ್ನು ತೋರಿಸಲೂ ವ್ಯಾಸಂಗ ಮಾರ್ಗಗಳನ್ನು ವಿವರಿಸಲೂ ಕೆಲವು ಉದಾಹರಣೆಗಳನ್ನು ಕೊಟ್ಟು ಚಯಾಪಚಯ ಕ್ರಿಯೆಯ ಸ್ಥೂಲಪರಿಚಯ ಮಾತ್ರ ಮಾಡಿಕೊಡಲಾಗಿದೆ. ವಿಶೇಷ ವಿಷಯಗಳಾದ ಯೂರಿಯಾ ಚಕ್ರ, ಸಿಟ್ರಿಕ್ ಆಮ್ಲ ಚಕ್ರ, ಕೋಡಾನುಗಳು, ಕಿಣ್ವಗಳು, ಪ್ರೋಟೀನುಗಳು, ಫ್ಯಾಟಿ ಆಮ್ಲಗಳು, ಲೈಸಿಡ್ಡುಗಳು, ಪ್ಯೂರಿನ್ ಪಿರಮಿಡಿನುಗಳು, ಲವಣಗಳು ಇವನ್ನು ಜೀವರಸಾಯನ ವಿಜ್ಞಾನವೆಂಬ (**ನೋಡಿ**) ಶೀರ್ಷಿಕೆ ಯಲ್ಲಿ ಪ್ರಸ್ತಾವಿಸಿದೆ.

ಸಂಶ್ಲೇಷಣ ಕಾರ್ಯಗಳಿಗೆ ಉಪಚಯವೆಂದೂ ವಿಶ್ಲೇಷಣ ಕಾರ್ಯಗಳಿಗೆ ಅಪಚಯವೆಂದೂ ಇವೆರಡರ ಒಕ್ಕೂಟವೇ ಚಯಾಪಚಯಕ್ರಿಯೆ ಎಂದೂ ಮೇಲೆ ಹೇಳಿದೆ. ಉದಾಹರಣೆಗೆ ನಮ್ಮ ಆಹಾರದಲ್ಲಿನ ಹಿಟ್ಟು ಅರಗಿ ಸುಲಭ ರಾಸಾಯನಿಕ ವಸ್ತುವಾದ ಗ್ಲೂಕೋಸ್ ಆಗಿ ರಕ್ತದ ಮುಖಾಂತರ ಯಕೃತ್ತಿಗೆ ಹೋಗಿ ಅಲ್ಲಿ ಗ್ಲೈಕೊಜೆನ್ ಎಂಬ ಬೃಹದಣು ತಯಾರಾಗಿ ಶೇಖರವಾಗುತ್ತದೆ. ಇದು ಗ್ಲೂಕೋಸಿಗೆ ಸಂಬಂಧಿಸಿದ ಒಂದು ಉಪಚಯಕ್ರಿಯೆ. ದೇಹಕ್ಕೆ ಗ್ಲೂಕೋಸಿನ ಆವಶ್ಯಕತೆ ಉಂಟಾದಾಗ ಗ್ಲೈಕೊಜೆನ್ ಬೃಹದಣು ಒಡೆದು ಮತ್ತೆ ಗ್ಲೂಕೋಸಾಗಿ ಪರಿವರ್ತಿತವಾಗುತ್ತದೆ. ಇದು ಗ್ಲೂಕೋಸಿಗೆ ಸಂಬಂಧಿಸಿದ ಒಂದು ಅಪಚಯ ಕ್ರಿಯೆ. ಇವೆರಡೂ ಇನ್ನೂ ಇಂಥವೂ ಸೇರಿ ಗ್ಲೂಕೋಸಿನ ಚಯಾಪಚಯ ಕ್ರಿಯೆ ಆಗುವುದು. ಇದೇ ರೀತಿ ಅಮೈನೋ ಆಮ್ಲಗಳು, ನ್ಯೂಕ್ಲಿಯಿಕ್ ಆಮ್ಲಗಳು, ಕೊಬ್ಬಿನ ಪದಾರ್ಥಗಳು ಮುಂತಾದವುಗಳ ಚಯಾಪಚಯ ಕ್ರಿಯೆಗಳು ಜರಗುತ್ತವೆ. ಇವೇ ಪ್ರತಿಯೊಂದು ಜೀವಕೋಶದಲ್ಲಿಯೂ ನಡೆಯುವ ಎಲ್ಲ ಜೀವಕ್ರಿಯೆಗಳ ಮೂಲವಾಗಿವೆ.

ಒಂದು ಜೀವರಾಸಾಯನಿಕದ ಸಂಶ್ಲೇಷಣೆ ಅಷ್ಟು ಸುಲಭ ಅಲ್ಲ. ಈ ಕಾರ್ಯಕ್ಕೆ ಎಂದರೆ ಉಪಚಯಕ್ಕೆ ಬೇಕಾಗುವ ಎಲ್ಲ ರಾಸಾಯನಿಕಗಳಿದ್ದರೂ ಅವನ್ನು ಜೋಡಿಸುವ ರಾಸಾಯನಿಕ ಕ್ರಿಯೆಗಳಿಗೆ ವೇಗೋತ್ಕರ್ಷಕವಾಗಿ ಕೆಲಸ ಮಾಡುವ ಎಂಜೈಮುಗಳು (ಕಿಣ್ವಗಳು) ಸಾಕಷ್ಟು ಇರಬೇಕು. ನಿಯಂತ್ರಣ ಕಾರ್ಯದಲ್ಲಿ ಹಾರ್ಮೋನುಗಳು ಭಾಗವಹಿಸುತ್ತವೆ. ಅಲ್ಲದೆ ಸಾಧಾರಣವಾಗಿ ಈ ರೀತಿಯ ಸಂಶ್ಲೇಷಣ ಕಾರ್ಯಗಳಿಗೆ ಶಕ್ತಿ ಬೇಕಾಗಿರುವುದರಿಂದ ಅಗಾಧ ರಾಸಾಯನಿಕ ಶಕ್ತಿಯನ್ನು ಸುಲಭವಾಗಿ ಪೂರೈಸಬಲ್ಲ ರಾಸಾಯನಿಕಗಳೂ ಸಾಕಷ್ಟು ಇರಬೇಕು. ಇಂಥ ವಸ್ತುಗಳಲ್ಲಿ ಮುಖ್ಯವಾದುದು ಅಡೆನೋಸೀನ್ ಟ್ರೈಫಾಸ್ಫೇಟ್ (ಎಟಿಪಿ) ಎಂದು ಪರಿಚಿತವಾಗಿರುವ ನ್ಯೂಕ್ಲಿಯೋಟೈಡ್. ಉಳಿದ ಶಕ್ತಿದಾನಿಗಳಾದ ಯುಟಿಪಿ, ಸಿಟಿಪಿ ಮುಂತಾದವು ಎಟಿಪಿಯ ಗುಂಪಿಗೆ ಸೇರಿವೆ. ವಿಪರ್ಯಯ ದಿಶೆಯ ಕಾರ್ಯಕ್ಕೆ, ಎಂದರೆ ವಿಭಜನೆ ಇಲ್ಲವೆ ಅಪಚಯಕ್ಕೆ, ಇದೇ ರೀತಿಯ ಅನುಕೂಲತೆಗಳು ಅವಶ್ಯ. ವಿಭಜನೆ ಅಂದರೆ ಬೃಹದಣುಗಳು ಸುಲಭ

ಅಣುಗಳಾಗುವುದು ಅಷ್ಟೇ ಅಲ್ಲ. ಉದಾಹರಣೆಗೆ ಗ್ಲೈಕೊಜೆನ್ನು, ಗ್ಲೂಕೋಸ್ ಆಗಿ, ಅನಂತರ ಅದು ಉತ್ಕರ್ಷಣೆಗೊಂಡು ಇಂಗಾಲಾಮ್ಲ ಅನಿಲ ಆಗುವುದು. ವಿಶ್ಲೇಷಣ ಕ್ರಿಯೆಯ ಫಲ ರಾಸಾಯನಿಕವಾದ ಗ್ಲೂಕೋಸ್ ಅಣುವಿನಲ್ಲಿರುವ ಭೌತಶಕ್ತಿಯ ಬಿಡುಗಡೆ ಮತ್ತು ಶಕ್ತಿಸಂಚಯನ, ಉಳಿದ ವಿಶ್ಲೇಷಣ ಕ್ರಿಯೆಗಳಲ್ಲಿ ದೇಹದಿಂದ ಸುಲಭವಾಗಿ ಹೊರದೂಡಲು ಅನುಕೂಲವಾಗಿರುವ ಯೂರಿಯ, ಯೂರಿಕ್ ಆಮ್ಲ ಮುಂತಾದ ರಾಸಾಯನಿಕಗಳ ತಯಾರಿಕೆ ಮುಖ್ಯವಾದುದು. ಒಂದು ವಸ್ತು ಇನ್ನೊಂದು ವಸ್ತುವಾಗಿ ಪರಿವರ್ತಿತವಾಗುವಾಗ ವಿಶ್ಲೇಷಣೆ ಸಂಶ್ಲೇಷಣೆಗಳೆರಡೂ ಆಗುವುದು ಸಾಮಾನ್ಯ.

ಚಿತ್ರ 2. ಶ್ವಾಸಕ್ರಿಯೆಯಲ್ಲಿ ಎಲೆಕ್ಟ್ರಾನು ಸಾಗಣೆ ಸರಣಿ ಮತ್ತು ಶಕ್ತಿ ಸಂಚಯನ



ಚಿತ್ರ 3. ಜಿಡ್ಡಿನ ಆಮ್ಲಗಳ ಉತ್ಕರ್ಷಣೆ

ಸಂಶ್ಲೇಷಣ ಕಾರ್ಯವೇ ಆಗಲಿ ವಿಶ್ಲೇಷಣ ಕಾರ್ಯವೇ ಆಗಲಿ ಅದು ನಡೆಯುವುದು ಒಂದು ಅಥವಾ ಕೆಲವೇ ರಾಸಾಯನಿಕ ಕಾರ್ಯಗಳಿಂದಲ್ಲ. ಅದು ಸಾಧಾರಣವಾಗಿ ಹಲವಾರು ರಾಸಾಯನಿಕ ಕಾರ್ಯಗಳ ಸರಣಿ. ಇದು ಸರಪಳಿರೂಪದಲ್ಲಿ ಇರಬಹುದು ಇಲ್ಲವೇ ವರ್ತುಲರೂಪದಲ್ಲಿ ಇರಬಹುದು. ಈ ಕ್ರಿಯೆಗಳು ವರ್ತುಲ ರೂಪದಲ್ಲಿ ಇರುವುದು ಹಲವು ಚಯಾಪಚಯ ಕ್ರಿಯೆಗಳಲ್ಲಿರುವ ವಿಶೇಷ ಮಾರ್ಗ. X ಎಂಬ ರಾಸಾಯನಿಕದ ಉತ್ಕರ್ಷಣೆಯನ್ನು ಉದಾಹರಣೆಯನ್ನಾಗಿ ತೆಗದುಕೊಳ್ಳ ಬಹುದು. ಇದು Aಯೊಂದಿಗೆ ರಾಸಾಯನಿಕವಾಗಿ ಕೂಡಿ ಮೊದಲು B ತರುವಾಯ C,D ಮುಂತಾದ Aಯ ಜನ್ಯವಸ್ತುಗಳಾಗಿ ಕಡೆಗೆ A ಬಿಡುಗಡೆ ಯಾಗುತ್ತದೆ ಮತ್ತು ಈ ಕಾರ್ಯಗಳಲ್ಲಿ X ಸಂಪೂರ್ಣವಾಗಿ ಉತ್ಕರ್ಷಣಗೊಂಡು ಉತ್ಪನ್ನ ರಾಸಾಯನಿಕಗಳು ಬಿಡುಗಡೆಯಾಗುತ್ತವೆ. ಈಗ A ಪುನಃ ಇನ್ನೊಂದು Xನ ಉತ್ಕರ್ಷಣ ಕ್ರಿಯೆಯಲ್ಲಿ ಭಾಗವಹಿಸಲು ಸಿದ್ಧವಾಗುತ್ತದೆ. ಈ ರೀತಿಯ ವರ್ತುಲಮಾರ್ಗ ಹೆಚ್ಚು ಉಪಯುಕ್ತವಾದುದು. ಹಂತಹಂತವಾಗಿ ಬದಲಾವಣೆ ಆಗುವುದರಿಂದ ಇದರ ವೇಗವೂ ಹೆಚ್ಚು ಲಾಭವೂ ಹೆಚ್ಚು. ಈ ರೀತಿಯ ವರ್ತುಲ ಮಾರ್ಗದ ಉದಾಹರಣೆಗಳಲ್ಲಿ ಮುಖ್ಯ ವಾದವೆಂದರೆ ಕ್ರೆಬ್ಸ್ ಸಿಟ್ರಿಕ್ ಆಮ್ಲ ಚಕ್ರ, ಯೂರಿಯ ತಯಾರಿಕಾ ಚಕ್ರ, ಕೊಬ್ಬಿನ ಆಮ್ಲದ ತಯಾರಿಕೆಯ ಮತ್ತು ಬೀಟ ಉತ್ಕರ್ಷಣೆಯ ಚಕ್ರ. ಜೀವಕೋಶ ದಲ್ಲಿರುವ ಇನ್ನೊಂದು ಮಾರ್ಗ ಸರಪಣಿ ರಾಸಾಯನಿಕ ಮಾರ್ಗ. ಶಕ್ತಿಸಂಚಯನ ಕಾರ್ಯದ ಎಲೆಕ್ಟ್ರಾನ್ ಸಾಗಣೆ ಸರಣಿ ಇದಕ್ಕೆ ಉತ್ತಮ ಉದಾಹರಣೆ.

ಒಂದು ರಾಸಾಯನಿಕದ ಚಯಾಪಚಯವನ್ನು ಹಲವಾರು ನಿರ್ದಿಷ್ಟ ಭಾಗಗಳಾಗಿ ವಿಂಗಡಿಸಬಹುದು. ಇಂಥ ಭಾಗಗಳಿಗೆ ಮಧ್ಯವರ್ತಿ ಚಯಾಪಚಯ (ಇಂಟರ್‌ಮೀಡಿಯರಿ ಮೆಟಬಾಲಿಸಮ್) ಎಂದು ಹೆಸರು. ಇವನ್ನೆಲ್ಲ ಬಿಡಿಬಿಡಿಯಾಗಿ ವ್ಯಾಸಂಗಿಸಿ, ಅರ್ಥವಿಸಿ, ಆ ರಾಸಾಯನಿಕದ ಸಂಪೂರ್ಣ ಚಯಾಪಚಯವನ್ನು ತಿಳಿದುಕೊಳ್ಳ ಬೇಕಷ್ಟೆ. ಇದನ್ನು ನಡೆಸಲು ಅನೇಕ ಮಾರ್ಗಗಳಿವೆ. ಜೀವಕೋಶವನ್ನು ಅರೆದು ಕಣರಹಿತಸಾರವನ್ನು (ಹೊಮೊಜಿನೇಟ್) ಅಪಕೇಂದ್ರಕದಿಂದ (ಸೆಂಟ್ರಿಫ್ಯೂಜ್) ಬೇರ್ಪಡಿಸಿ ಬಂದ ಬೇರೆ ಬೇರೆ ಭಾಗಗಳನ್ನು ಪರಿಶೋಧನೆಗೆ ಒಳಪಡಿಸು ತ್ತಾರೆ. ಹೀಗೆ ಮಾಡುವುದರಿಂದ ಜೀವಕೋಶದ ಯಾವ ಯಾವ ಭಾಗಗಳಲ್ಲಿ ಏನೇನು ರಾಸಾಯನಿಕ ಕಾರ್ಯಗಳು ನಡೆಯುತ್ತವೆ, ಅವು ಕ್ರಮಪ್ರಕಾರ ಸಂಭವಿಸಲು ಬೇಕಾದ ಆವಶ್ಯಕತೆಗಳೇನು ಎಂಬೆಲ್ಲ ವಿವರಗಳು ದೊರೆಯುತ್ತವೆ. ವಿಕಿರಣಪಟು ಐಸೊಟೋಪುಗಳ ಪ್ರಯೋಗದಿಂದ ಚಯಾಪಚಯ ವನ್ನು ನಿಖರವಾಗಿ ಅನ್ವೇಷಿಸುವುದು ಈಚೆಗೆ ಸಾಧ್ಯವಾಗಿದೆ. ಈ ಐಸೊಟೋಪುಗಳು ಎಷ್ಟೇ ಕಡಿಮೆ ಮೊತ್ತದಲ್ಲಿ ಇರಬಹುದು, ಎಲ್ಲಿಯೇ ಇರಬಹುದು, ಯಾವುದೇ ರಾಸಾಯನಿಕಗಳೊಡನೆ ಸೇರಿಕೊಂಡಿರ ಬಹುದು–ಹಾಗಿದ್ದರೂ ಅವು ಎಲ್ಲಿ ಇವೆ, ಎಷ್ಟು ಮೊತ್ತದಲ್ಲಿ ಇವೆ ಎನ್ನುವುದನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಆದ್ದರಿಂದ ಮಧ್ಯವರ್ತಿ ಚಯಾಪಚಯ ಸಂಶೋಧನೆಯಲ್ಲಿ ವಿಕಿರಣ ದೊರೆತಿರುವ ಇನ್ನೊಂದು ಸಾಧನವೆಂದರೆ ಸೋಸು ಕಾಗದವನ್ನು ಬಳಸುವ ಕ್ರೋಮಟಾಗ್ರಫಿ ತಂತ್ರ (**ನೋಡಿ– ಕ್ರೋಮಟಾಗ್ರಫಿ**). ರಾಸಾಯನಿಕಗಳು ಅತಿ ಕಡಿಮೆ ಮೊತ್ತದಲ್ಲಿದ್ದರೂ ಈ ತಂತ್ರದಲ್ಲಿ, ಸೂಕ್ತವಾದ ವಿಷಗಳನ್ನು ಉಪಯೋಗಿಸುತ್ತಾರೆ. ಇವು ಗೊತ್ತಾದ ಎಂಜೈಮುಗಳ ಸಾಮರ್ಥ್ಯವನ್ನು ನಾಶ ಮಾಡುವುದರಿಂದ ರಸಾಯನಕಾರ್ಯ ಮುಂದೆ ಸಾಗದೆ ಮಧ್ಯವರ್ತಿ ರಾಸಾಯನಿಕಗಳು ಶೇಖರವಾಗುವುವು. ಇವು ಯಾವುವು ಎಂಬುದನ್ನು ಕಂಡುಹಿಡಿಯುವುದರ ಮೂಲಕ ಚಯಾಪಚಯದ ವಿವರಗಳನ್ನು ತಿಳಿಯಬಹುದು. ಫ್ಲೋರೋ ಅಸಿಟೇಟ್, ಮೆಲನೇಟ್,

ಅರ್ಸಿನೇಟ್ ಮುಂತಾದ ಎಂಜೈಮ್ ವಿಷಗಳನ್ನು ಬಳಸಿ ಸಿಟ್ರಿಕ್ ಆಮ್ಲ ಚಕ್ರದ ವಿವರಗಳನ್ನು ಶೋಧಿಸಿದ್ದಾರೆ. ಇಂಥ ಸಂಶೋಧನೆಗೆ ಮನುಷ್ಯನ ಜೀವಕೋಶಗಳೇ ಬೇಕೆಂಬುದೇನೂ ಇಲ್ಲ. ಅಲ್ಲಿ ನಡೆಯುವ ಅನೇಕ ಕ್ರಿಯೆಗಳು ಇಲಿ, ಮೊಲ ಮುಂತಾದ



ಚಿತ್ರ 4. ಜಿಡ್ಡಿನ ಆಮ್ಲಗಳ ತಯಾರಿಕೆ

ಪ್ರಾಣಿಗಳಲ್ಲಿಯೂ ಕಡೆಗೆ ಬ್ಯಾಕ್ಟೀರಿಯ ಮತ್ತು ಬೂಷ್ಟುಗಳಲ್ಲಿಯೂ ನಡೆಯುತ್ತವೆ. ವಿವರಗಳಲ್ಲಿ ಭಿನ್ನತೆ ಇರಬಹುದು, ಅಷ್ಟೆ. ಆದ್ದರಿಂದ ಎಲ್ಲ ಜೀವಿಗಳ ಕೋಶಗಳನ್ನೂ ಸಂಶೋಧನೆಗೆ ಉಪಯೋಗಿಸಿಕೊಳ್ಳುತ್ತಾರೆ. ಯೀಸ್ಟಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳನ್ನು ಅರ್ಥವಿಸಿ ನಿರ್ವಾಯು ಶರ್ಕರ ಪಥವನ್ನು ಕಂಡುಹಿಡಿದರು. ಈ ಪಥ ಮಾನವರಲ್ಲಿಯೂ ಕಂಡುಬರುತ್ತದೆ. ಚಯಾಪಚಯದಲ್ಲಿ ಆರ್ಗ್ಯಾನಿಕ್ ರಾಸಾಯನಿಕಗಳು ಮಾತ್ರ ಭಾಗವಹಿಸುವುದಲ್ಲ. ಖನಿಜ ರಾಸಾಯನಿಕಗಳಾದ ಕಬ್ಬಿಣ, ಕ್ಯಾಲ್ಸಿಯಮ್, ಸೋಡಿಯಮ್, ಪೊಟ್ಯಾಸಿಯಮ್, ಫಾಸ್ಫೇಟ್, ಕ್ಲೋರೈಡ್ ಮುಂತಾದವು ಕೂಡ ಭಾಗವಹಿಸುತ್ತವೆ. ಮೂಳೆಯ ರಚನೆಯಲ್ಲಿ ಕ್ಯಾಲ್ಸಿಯಮ್ ಭಾಗವಹಿಸುತ್ತದೆ. ಆಕ್ಸಿಜನ್ನನ್ನು ಸರಬರಾಜು ಮಾಡುವ ಹೇಮೋಗ್ಲೋಬಿನ್ನಿ ನಲ್ಲಿಯೂ ಜೀವಕೋಶದ ಎಲೆಕ್ಟ್ರಾನುಗಳ ಸಾಗಾಣಿಕೆಯಲ್ಲಿಯೂ ಕಬ್ಬಿಣದ ಪಾತ್ರ ಉಂಟು. ಕಬ್ಬಿಣವಿರುವ ಇತರ ರಾಸಾಯನಿಕಗಳೆಂದರೆ ಫೆರ್ರಿಟಿನ್ (ಕರುಳಿನಿಂದ ಹೀರಿಕೊಳ್ಳುವ ಮತ್ತು ಸಂಗ್ರಹಣೆಯ ಮಿತಿಯನ್ನು ಇದು ಹತೋಟಿಯಲ್ಲಿಡುತ್ತದೆ) ಮತ್ತು ಟ್ರಾನ್ಸ್‌ಫೆರಿನ್ (ಕಬ್ಬಿಣದ ಸಾಗಣೆಗಾಗಿ). ಈ ಲೋಹಗಳಲ್ಲದೆ ಕೋಬಾಲ್ಟ್ (ರಕ್ತಕಣಗಳ ಬೆಳವಣಿಗೆಗೆ), ಸತು (ಕಾರ್ಬಾಕ್ಸಿಪೆಪ್ಟಿಡೇಸಿನ ಭಾಗವಾಗಿ), ಮೆಗ್ನೀಸಿಯಮ್ ಮುಂತಾದ ಲೋಹಗಳು ಚಯಾಪಚಯದಲ್ಲಿ ಅವುಗಳ ಅಯಾನುರೂಪಗಳಲ್ಲಿ ಭಾಗವಹಿಸುತ್ತವೆ. ಚಯಾಪಚಯದ ವಿವರ ಹಾಗೂ ಮಾರ್ಗಗಳಲ್ಲಿ ಮುಖ್ಯವಾದವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಆಕ್ಸಿಜನ್‌ರಹಿತ ಶರ್ಕರ ಪಥ–ಎಂಬ್ಡೆನ್ ಮೈಯರ್ ಹೋಪ್ ಪಥ: ವ್ಯಕ್ತಿ ಹಠಾತ್ತನೆ ವೇಗವಾಗಿ ಓಡುವುದು ನೆಗೆಯುವುದು ಮುಂತಾದ ಕೆಲಸಮಾಡಬೇಕಾದಾಗ ದೇಹದ ಸ್ನಾಯುಗಳಲ್ಲಿ ಕ್ರಿಯೆ ನಡೆಯುವುದು ಈ ಪಥದಲ್ಲಿ. ಸ್ನಾಯುಗಳಿಗೆ ರಕ್ತದ ಮೂಲಕ ಬೇಕಾಗುವಷ್ಟು ಆಕ್ಸಿಜನ್‌ಅನ್ನು ಸರಬರಾಜು ಮಾಡಲು ಸಾಕಷ್ಟು ಕಾಲ ಇರುವುದಿಲ್ಲವಾದ್ದರಿಂದ ಗ್ಲೈಕೊಜೆನ್‌ನಿಂದ ಬಂದ ಪೈರುವೇಟ್ ಇದೇ ಸಂದರ್ಭದಲ್ಲಿ ಉತ್ಪತ್ತಿಯಾದ ಅಪಕರ್ಷಿತರೂಪದ ಕೋಎಂಜೈಮ್‌ಅನ್ನು ಮತ್ತೆ ಸಾಮಾನ್ಯರೂಪಕ್ಕೆ ಹಿಂತಿರುಗಿಸಿ ಅದು ಲ್ಯಾಕ್ಟಿಕ್ ಆಮ್ಲ ಆಗುತ್ತದೆ. ಹೀಗಾದ ಸಾಮಾನ್ಯರೂಪದ ಕೋಎಂಜೈಮ್ ಮತ್ತೆ ಗ್ಲೈಕೋಜನ್ ಪೈರುವೇಟ್ ಬದಲಾವಣೆಯಲ್ಲಿ ಪಾತ್ರ ವಹಿಸಲು ಸಾಧ್ಯವಾಗುತ್ತದೆ. ಆಕ್ಸಿಜನ್ನಿನ ಸರಬರಾಜಿಗೆ ಸಾಕಾದಷ್ಟು ಕಾಲ ಇರುವಾಗ ಪೈರುವೇಟು ಸಿಟ್ರಿಕ್‌ಆಮ್ಲ ಚಕ್ರವನ್ನು ಪ್ರವೇಶಿಸಿ ಸಂಪೂರ್ಣವಾಗಿ ಇಂಗಾಲಾಮ್ಲಕ್ಕೆ ಉತ್ಕರ್ಷಣ ಹೊಂದುವುದು. ಅಪಕರ್ಷಿತ ರೂಪದ ಕೋಎಂಜೈಮ್ ಸಮೃದ್ಧಿಯಾಗಿ ಸರಬರಾಜಾದ ಆಕ್ಸಿಜನ್‌ನಿಂದ ವಿಶಿಷ್ಟ ಕ್ರಮದಲ್ಲಿ ಉತ್ಕರ್ಷಣಗೊಂಡು ಪುನಃ ಸಾಮಾನ್ಯ ರೂಪಕ್ಕೆ ಬರುತ್ತದೆ. ಆಕ್ಸಿಜನ್‌ರಹಿತ ಪಥದಲ್ಲಿ ಗ್ಲೈಕೊಜನ್‌ನಲ್ಲಿನ ಒಂದು ಗ್ಲೂಕೋಸ್ ಅಣುವಿನಿಂದ ಶಕ್ತಿಯ ಕೊಡುತರುಗಳಲ್ಲಿ ಭಾಗವಹಿಸುವ ಎರಡು ಎಟಿಪಿ ಅಣುಗಳು ಮಾತ್ರ ಬಿಡುಗಡೆಯಾಗುವುವು. 1 ಗ್ರಾಮ್‌ಸಮಾನ ಗ್ಲೂಕೋಸಿನಿಂದ 16 ಕಿಲೋ ಕೆಲೊರಿ ಶಕ್ತಿ ಬಿಡುಗಡೆಯಾಗುತ್ತದೆ. ಆಕ್ಸಿಜನ್ ಒದಗಿದರೆ ಕೋಎಂಜೈಮ್ ಉತ್ಕರ್ಷಣೆಯಿಂದ ಮತ್ತು ಪೈರೂವೇಟ್ ಸಿಟ್ರಿಕ್ ಆಮ್ಲಚಕ್ರವನ್ನು ಸೇರುವುದರಿಂದ ಎಲೆಕ್ಟ್ರಾನ್ ಸಾಗಣೆ ಸರಣಿಯಲ್ಲಿ ಸುಮಾರು ಮೂವತ್ತಾರು ಎಟಿಪಿ ಅಣುಗಳು ಬಿಡುಗಡೆಯಾಗುವುವು.

**ಪೆಂಟೋಸ್‌ಫಾಸ್ಫೇಟ್ ಚಕ್ರ :** ಸಿಟ್ರಿಕ್ ಆಮ್ಲ ಚಕ್ರದ ಸಹಾಯವಿಲ್ಲದೆ ಗ್ಲೂಕೋಸಿನ ಉತ್ಕರ್ಷಣಕ್ರಿಯೆ ನಡೆಯುವ ಇನ್ನೊಂದು ಮಾರ್ಗವಿದು. ಈ ಚಕ್ರ ಕೆಲಸಮಾಡಲು ಆಕ್ಸಿಜನ್ ಇರಲೇಬೇಕು. ಗ್ಲೂಕೋಸ್ ಫಾಸ್ಫೇಟಿನ ಆರು ಅಣುಗಳಿಂದ ಆರಂಭವಾದ

ಈ ಚಕ್ರದಲ್ಲಿ ಒಟ್ಟಾಗಿ ಮೂರು ಇಂಗಾಲದ ಪರಮಾಣು ಹೊಂದಿರುವ ಗ್ಲಿಸರಾಲ್ಡಿಹೈಡ್ ಫಾಸ್ಫೇಟಿನ ಹತ್ತು ಅಣುಗಳು ಬಂದು ಅವು ಸೇರಿ ಮತ್ತೆ ಐದು ಗ್ಲೂಕೋಸ್ ಫಾಸ್ಫೇಟಿನ ಅಣುಗಳಾಗುತ್ತವೆ. ಆದ್ದರಿಂದ ಒಂದು ಚಕ್ರದಲ್ಲಿ ಗ್ಲೂಕೋಸ್ ಫಾಸ್ಫೇಟಿನ ಒಂದು ಅಣು ಉತ್ಕರ್ಷಣಗೊಂಡು ಇಂಗಾಲಾಮ್ಲ ಅನಿಲದ ಆರು ಅಣುಗಳು ಬಿಡುಗಡೆಯಾದಂತಾಯಿತು. ಈ ಕ್ರಿಯೆಯಲ್ಲಿ ಭಾಗವಹಿಸುವ ಕೋಎಂಜೈಮುಗಳು : ಜೀವಸತ್ತ್ವದ ಗುಂಪಿನ ನಿಕೊಟಿನಿಕ್ ಆಮ್ಲದ ಜನ್ಯವಸ್ತುಗಳು. ಯಕೃತ್ ಮುಂತಾದ ಹೆಚ್ಚು ಶಕ್ತಿ ಬೇಕಾದ ಅಂಗಗಳಲ್ಲಿ ಈ ಮಾರ್ಗ ಇರುತ್ತದೆ.




ಚಿತ್ರ 5. ಪೆಂಟೋಸ್ ಫಾಸ್ಫೇಟ್ ಪಥ

ಶ್ವಾಸಕ್ರಿಯೆಯಲ್ಲಿನ ಎಲೆಕ್ಟ್ರಾನ್ ಸಾಗಣೆ ಸರಣಿ: ಉತ್ಕರ್ಷಣೆ ಹೊಂದಿದಾಗ ಶಕ್ತಿ ಬಿಡುಗಡೆಯಾಗುವುದು ಈ ಪಥದಲ್ಲಿಯೇ. ಅಪಕರ್ಷಿತ ರೂಪದಲ್ಲಿರುವ ಕೋಎಂಜೈಮುಗಳು ಉತ್ಕರ್ಷಣಕಾರ್ಯದಲ್ಲಿ ಬಿಡುಗಡೆಯಾಗುವುವು. ಇವು ಮೂರು ರಾಸಾಯನಿಕಗಳು. ಮೊದಲನೆಯದರಲ್ಲಿ ರೈಬೋಫ್ಲೇವಿನ್ ಮತ್ತು ಉಳಿದೆರಡರಲ್ಲಿ ನಿಕೊಟಿನಿಕ್ ಆಮ್ಲ




ಚಿತ್ರ 6. ಪ್ರೋಟೀನಿನ ತಯಾರಿಕೆ

ಉಂಟು. ಈ ಎರಡು ವಸ್ತುಗಳೂ B ಜೀವಸತ್ತ್ವಗಳ ಗುಂಪಿಗೆ ಸೇರಿವೆ. ಸೈಟೊಕ್ರೋಮುಗಳು ಜೀವಕೋಶಗಳಲ್ಲಿರುವ ಮೈಟೊಕಾಂಡ್ರಿಯ ಘಟಕಗಳಲ್ಲಿರುವ ಎಲೆಕ್ಟ್ರಾನುಗಳನ್ನು ಪಡೆದು ಕಡೆಗೆ ಆಕ್ಸಿಜನ್ನಿಗೆ ಕೊಟ್ಟು ಉತ್ಕರ್ಷಣ ಕ್ರಿಯೆಯನ್ನು ಪೂರ್ಣಗೊಳಿಸುತ್ತವೆ. ಬಿಡುಗಡೆಯಾಗುವ ಶಕ್ತಿಸಂಚಯನಕಾರ್ಯದಲ್ಲಿ ಕೋಎಂಜೈಮ್ ಕ್ಯೂ ಅಥವಾ ಯೂಬಿಕ್ವಿನೋನ್ ಎಂಬ ರಾಸಾಯನಿಕ ವಸ್ತು ಭಾಗವಹಿಸುತ್ತದೆ.

ಜಿಡ್ಡಿನ ಆಮ್ಲಗಳ (ಫ್ಯಾಟಿ ಆ್ಯಸಿಡ್ಸ್) ಉತ್ಕರ್ಷಣೆ : ಇದಕ್ಕೆ ಬೀಟ ಉತ್ಕರ್ಷಣೆ ಎಂದು ಹೆಸರು. ಜಿಡ್ಡಿನ ಆಮ್ಲವನ್ನು ಒಂದು ಸಂಪೂರ್ಣ ಉತ್ಕರ್ಷಣಚಕ್ರಕ್ಕೆ ಒಳಪಡಿಸಿದಾಗ ಇಂಗಾಲದ ಎರಡು ಪರಮಾಣುಗಳಿರುವ ಅಸಿಟೈಲ್ ಕೋಎಂಜೈಮಿನ ಒಂದು ಅಣು ಬಿಡುಗಡೆಯಾಗುತ್ತದೆ. ಅಂದರೆ ಇಂಗಾಲದ ಹದಿನೆಂಟು ಪರಮಾಣುಗಳಿರುವ ಸ್ಟಿಯರಿಕ್ ಆಮ್ಲ ಉತ್ಕರ್ಷಣಹೊಂದಲು ಎಂಟು ಚಕ್ರ ಬೇಕು. ಆಗ ಅಪಕರ್ಷಿತರೂಪದ ಹದಿನಾರು ಕೋಎಂಜೈಮುಗಳು ಬಿಡುಗಡೆಯಾಗುತ್ತವೆ. ಮತ್ತು ಅವುಗಳಿಂದ ನಲವತ್ತೆಂಟು ಎಟಿಪಿ ಅಣುಗಳು ಎಲೆಕ್ಟ್ರಾನ್ ಸಾಗಣೆ ಸರಣಿಯಲ್ಲಿ ಬರುತ್ತವೆ. ಈ ಚಕ್ರದಲ್ಲಿ ಬಿಡುಗಡೆಯಾದ ಅಸಿಟೈಲ್ ಕೋಎಂಜೆಮ್–ಎ, ಸಿಟ್ರಿಕ್ ಆಮ್ಲಚಕ್ರದಲ್ಲಿ ಸಂಪೂರ್ಣವಾಗಿ ಉತ್ಕರ್ಷಣ ಹೊಂದುತ್ತದೆ.

**ಜಿಡ್ಡಿನ ಆಮ್ಲಗಳ ತಯಾರಿಕೆ :** ಇವುಗಳ ತಯಾರಿಕೆಗೆ ಪ್ರಾರಂಭದ ವಸ್ತುವೆಂದರೆ ಪೈರುವೇಟನಿಂದ ಬಂದ ಅಸಿಟೈಲ್ ಕೋಎಂಜೈಮ್–ಎ.

ಇದರಲ್ಲಿ B ಜೀವಸತ್ತ್ವದ ಗುಂಪಿನ ಪ್ಯಾಂಟೊಥೆನಿಕ್ ಆಮ್ಲದ ಜನ್ಯವಸ್ತು ಉಂಟು, ಚಿತ್ರದಲ್ಲಿ ತೋರಿಸಿರುವಂತೆ ಪ್ರತಿಯೊಂದು ಚಕ್ರ ಪೂರ್ತಿಯಾದಾಗಲೂ ಇಂಗಾಲದ ಎರಡು ಪರಮಾಣುಗಳಿರುವ ಅಸಿಟೈಲ್ ಗುಂಪು ಪ್ರಾರಂಭದ ಫ್ಯಾಟಿ ಆಮ್ಲದೊಂದಿಗೆ ಸೇರಿಕೊಂಡು ಅದರ ಉದ್ದವನ್ನು ಹೆಚ್ಚಿಸುತ್ತದೆ.

ಅಸೈಲ್ ಕ್ಯಾರಿಯರ್ ಪ್ರೋಟೀನ್ ಬಿಡುಗಡೆಯಾಗಿ ಮುಂದಿನ ಚಕ್ರದಲ್ಲಿ ಭಾಗವಹಿಸಲು ಸಿದ್ಧವಾಗುತ್ತದೆ. ಕೆಲವೊಂದು ವಿವರಗಳನ್ನು ಬಿಟ್ಟರೆ ಇದು ಬೀಟ ಉತ್ಕರ್ಷಣದಂತೆಯೇ, ಆದರೆ ವಿರುದ್ಧ ದಿಶೆಯಲ್ಲಿ, ಎಂಬುದನ್ನು ನೋಡಬಹುದು. ಈ ಸಂಶ್ಲೇಷಣ ಕಾರ್ಯದಲ್ಲಿ ಇನ್ಸುಲಿನ್ ಪಾತ್ರವಹಿಸುವಂತೆ ಕಾಣುತ್ತದೆ.

ಪ್ರೋಟೀನ್ ತಯಾರಿಕೆ : ಆಹಾರದಲ್ಲಿ ಪ್ರೋಟೀನ್ ಅರಗಿ ಅಮೈನೋ ಆಮ್ಲಗಳ ಅಣುಗಳಾಗುತ್ತವೆ. ಇವು ಕರುಳಿನಲ್ಲಿ ಹೀರಲ್ಪಟ್ಟು ರಕ್ತದ ಮುಖಾಂತರ ಜೀವಕೋಶಗಳನ್ನು ಸೇರುತ್ತವೆ. ಇವು ಹಾಗೂ ಜೀವಕೋಶದಲ್ಲಿಯೇ ತಯಾರಾಗುವ ಅಮೈನೋ ಆಮ್ಲಗಳು ಪ್ರೋಟೀನಿನ ತಯಾರಿಕೆಯ ಪ್ರಾರಂಭ ವಸ್ತುಗಳು. ಪ್ರತಿಯೊಂದು ಅಮೈನೋ ಆಮ್ಲಕ್ಕೂ ಒಂದೊಂದು ಅಣುವಾಹಕ ಆರ್‌ಎನ್‌ಎ ಉಂಟು. ಸಂಕೇತವಾಹಕದಲ್ಲಿರುವ ನ್ಯೂಕ್ಲಿಯೊಟೈಡುಗಳು ಒದಗಿಸುವ ನಕ್ಷೆಯಂತೆ ಅಮೈನೋ ಆಮ್ಲಗಳು ಅನುಕ್ರಮವಾಗಿ ಸೇರಿಕೊಂಡು ಪ್ರೋಟೀನಿನ ಅಣುವಾಗುವುವು. (ಎ.ಎಸ್.ಆರ್.)

**ಚಯಾಪಚಯೀ ರೋಗಗಳು :** ದೇಹದಲ್ಲಿ ನಿರಂತರವಾಗಿಯೂ ವ್ಯವಸ್ಥಿತವಾಗಿಯೂ ನಡೆಯಬೇಕಾಗಿರುವ ರಾಸಾಯನಿಕ ಪರಿವರ್ತನೆಗಳ ಏರುಪೇರುಗಳೇ ಪ್ರಧಾನವಾಗಿ ಕಂಡುಬರುವ ರೋಗಸ್ಥಿತಿಗಳು (ಮೆಟಬಾಲಿಕ್ ಡಿಸೀಸಸ್). ಜೀವವನ್ನು ಗುರುತಿಸುವ ಸಂತಾನ ಉತ್ಪತ್ತಿ, ಬೆಳವಣಿಗೆ, ಚಲನೆ ಮುಂತಾದ ಎಲ್ಲ ಜೀವಕ್ರಿಯೆಗಳ ಮೂಲ ರಸಾಯನ ಕ್ರಿಯೆ. ಜೀವಕ್ರಿಯೆಗಳು ಲಕ್ಷಾಂತರ ರಾಸಾಯನಿಕ ಕ್ರಿಯೆಗಳ ವ್ಯವಸ್ಥೆಯ ಫಲ; ಇಂಥ ಕಾರ್ಯಗಳ ಚಯಾಪಚಯ ಕ್ರಿಯೆ ಬಹುವಾಗಿ ವ್ಯವಸ್ಥಿತ ರಸಾಯನಕಾರ್ಯಗಳ ಸರಣಿಗಳಾಗಿರುತ್ತವೆ. ಈಗ, ಆವಶ್ಯಕವಾದ ಒಂದು ರಸಾಯನ ಕಾರ್ಯದ ವೇಗ ಹೆಚ್ಚುಕಡಿಮೆಯಾದಾಗ ಅದು ರೋಗದಲ್ಲಿ ಪರ್ಯವಸಾನವಾಗುವುದು ಸಾಧ್ಯ. ಅಲ್ಲದೆ ಅನೇಕ ರೋಗಗಳಲ್ಲೂ ರೋಗದಿಂದಾಗಿಯೇ ಈ ರೀತಿ ವೇಗ ವ್ಯತ್ಯಾಸವಾದ ರಸಾಯನ ಕ್ರಿಯೆ ಇರುತ್ತದೆ. ಅಂದರೆ ಕಾರ್ಯಕಾರಣಗಳು ಯಾವುವೇ ಇರಲಿ, ಎಲ್ಲ ಕಾಯಿಲೆಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಚಯಾಪಚಯ ವ್ಯತ್ಯಾಸವಾಗಿ ಇದ್ದೇ ಇರುತ್ತದೆ ಎಂದೆನ್ನಬಹುದು.

ರಸಾಯನಕಾರ್ಯ ಸಾಧ್ಯವಾಗಲು ಕನಿಷ್ಠ ಮೂರು ಆವಶ್ಯಕ ವಸ್ತುಗಳು ಬೇಕು: ರಾಸಾಯನವಸ್ತುಗಳು, ರಾಸಾಯನಕ್ರಿಯೆಗಳ ವೇಗೋತ್ಕರ್ಷಕಗಳು ಮತ್ತು ಈ ಕಾರ್ಯಗಳ ನಿಯಂತ್ರಣ ಕಾರ್ಯಭಾರ ಹೊಂದಿರುವ ದೂತ ವಸ್ತುಗಳು. ಇವು ಮೂರೂ ಇದ್ದಾಗ ರಸಾಯನವಸ್ತುಗಳು ಬದಲಾವಣೆ ಹೊಂದಿ ಉದ್ದೇಶಿತ ವ್ಯವಸ್ಥೆಯ ಸರಣಿಯಲ್ಲಿ ಪಾಲ್ಗೊಳ್ಳುವುದು ಸಾಧ್ಯ. ಈ ಆವಶ್ಯಕ ವಸ್ತುಗಳಲ್ಲಿ ಯಾವುದಾದರೊಂದು ಹೆಚ್ಚು ಕಡಿಮೆಯಾದರೂ ರಸಾಯನ ಕಾರ್ಯವೇಗ ಕುಂಠಿತವಾಗಿ ರೋಗ ಪ್ರಾರಂಭವಾಗಬಹುದು. ಹೀಗೆ ಚಯಾಪಚಯೀ ರೋಗಗಳು ಮೂರು ರೀತಿಯವಾಗಿವೆ: ಪೌಷ್ಟಿಕಗಳ ಕೊರತೆಯಿಂದಾದವು, ಆಜನ್ಮವಾಗಿ ಕಿಣ್ವ ಕೊರತೆಯಿಂದಾದವು ಮತ್ತು ನಿಯಂತ್ರಿಸುವ ರಸದೂತಗಳ ಕೊರತೆಯಿಂದಾದವು.

ಇವಲ್ಲದೆ ಅವ್ಯಕ್ತ ಕಾರಣಗಳಿಂದಲೂ ಚಯಾಪಚಯೀ ರೋಗಗಳುಂಟಾಗಬಹುದು. ಒಗ್ಗದಿಕೆ (ಅಲರ್ಜಿ), ಸಂಧಿವಾತ ಇತ್ಯಾದಿಗಳು ಆಹಾರದಲ್ಲಿರಬೇಕಾದ ಕಾರ್ಬೋಹೈಡ್ರೇಟುಗಳು, ಕೊಬ್ಬು, ಪ್ರೋಟೀನ್, ಜೀವಸತ್ತ್ವ, ಲವಣ ಮುಂತಾದವು ಸಾಕಷ್ಟು ಇರದೆ ತಲೆದೋರಬಹುದು. ಆಹಾರದಲ್ಲಿ ಉತ್ತಮ ಪ್ರೋಟೀನ್ ಬೇಕಾಗಿರುವಷ್ಟು ಇಲ್ಲದೆ ಬರುವ ಕ್ವಾಷಿಯಾರ್ಕರ್ ಎಂಬ ಕೈಕಾಲು ಸಣ್ಣ ಹೊಟ್ಟೆ ದಪ್ಪವಾದ ಊದಿದ

ಪಟ್ಟಿ 1. ಜೀನಿನ ಲೋಪದೋಷಗಳಿಂದ ಬರುವ ರೋಗಗಳು

| ಹೆಸರು | ಲೋಪವಾದ ಅಥವಾ ದೋಷಪೂರಿತವಾದ ಎಂಜೈಮ್, ಪ್ರೋಟೀನ್ ಅಥವಾ ವಿವರಣೆ |
|---|---|
| ಹೀಮಫಿಲೀಯ | ರಕ್ತ ಹೆಪ್ಪುಗಟ್ಟಲು ಬೇಕಾಗುವ ಗ್ಲೋಬಿಲಿನ್ನಿನ (8ನೆಯ ಅಂಶ) ಅಭಾವ |
| ಹೀಮಗ್ಲೋಬಿನೊಪತೀಸ್ | ವಿಶೇಷ ಹೀಮಗ್ಲೋಬಿನ್ನುಗಳು |
| ಪಾರ್ಫೀರೀಯ | ಯೂರೊಪಾರ್ಫೈರಿನಿನ ಹೆಚ್ಚಿದ ವಿಸರ್ಜನೆ |
| ಮೆಥಮೊಗ್ಲೋಬಿನೀಮಿಯ | ಮೆಥೆ ಮೊಗ್ಲಾಬಿನ್ ರಿಡಕ್ಟೇಸ್ |
| ಕ್ರಿಗ್ಲರ್–ನಜ್ಜಾರ್ ಕಾಯಿಲೆ | ಬಿಲಿರುಬಿನನ್ನು ಗ್ಲೂಕರೊನೈಡನ್ನಾಗಿಸುವ ಕಿಣ್ವ |
| ಸಿಸ್ಟಿನ್‌ಯೂರಿಯ | ಮೂತ್ರದಲ್ಲಿ ಸಿಸ್ಟೀನ್, ಲೈಸೀನ್, ಆರ್ನಿಥೀನ್ ಅಮೈನೋ ಆಮ್ಲಗಳ ಹೆಚ್ಚಿದ ವಿಸರ್ಜನೆ |
| ಫಾನ್ಕೊನೀ ಕಾಯಿಲೆ | ಅಮೈನೋ ಆಮ್ಲಗಳ ಹೆಚ್ಚಿದ ವಿಸರ್ಜನೆ |
| ಹೊಮೊಸಿಸ್ಟೀನ್ ಯೂರಿಯ | ಸಿಸ್ಟಥಯೋನ್ ತಯಾರಿಕಾ ಕಿಣ್ವ |
| ಮೇಪಲ್ ಪಾಕರೂಪದ ಮೂತ್ರದ ಕಾಯಿಲೆ | ಅಮೈನೋ ಆಮ್ಲ ಡಿಕಾರ್ಬಾಕ್ಸಿಲೇಸ್ |
| ಹೈಪೊಫಾಸ್ಫಟೇಸಿಯ | ಆಲ್ಕಲೈನ್ ಫಾಸ್ಫಟೇಸ್ |
| ಜ಼ಾನ್‌ತೀನ್ ಯೂರಿಯ | ಜ಼ಾನ್‌ತೀನ್ ಆಕ್ಸಿಡೇಸ್ |
| ಅನಾಲ್ಬಮಿನಿಮಿಯ | ವಸೆಯಲ್ಲಿನ ಆಲ್ಬುಮಿನ್ |
| ಗೌಚರ್ ಕಾಯಿಲೆ | ಅಂಗಾಂಶಗಳಲ್ಲಿ ಸೆರಿಬ್ರೊಸೈಡಿನ ಶೇಖರಣೆ |
| ನೀಮನ್–ಪಿಕ್ ಕಾಯಿಲೆ | ಅಂಗಾಂಶಗಳಲ್ಲಿ ಸ್ಫಿಂಗೊಮೈಲಿನ್ ಶೇಖರಣೆ |
| ಟೆ–ಸಾಕ್ಸ್ ಕಾಯಿಲೆ | ಗ್ಯಾಂಗ್ಲಿಯೊಸೈಡಿನ ಶೇಖರಣೆ |
| ಗಾರ್‌ಗಾಯ್‌ಲಿಸಮ್ (ಹರ್ಲರ್ ಕಾಯಿಲೆ) | ಕಾನ್ಡ್ರಾಯ್ಟಿನ್ ಸಲ್ಫೇಟ್ B–ಯ ವಿಸರ್ಜನೆ |
| ಪೆಂಟೋಸ್ ಯೂರಿಯ | ಕ್ಸೈಲುರೋಸ್ ಡಿ ಹೈಡ್ರೋಜಿನೇಸ್ |
| ಫ್ರಕ್ಟೋಸ್ ಯೂರಿಯ | ಫಕ್ಟೊಕೈನೇಸ್ |
| ಗ್ಲೈಕೊಜನ್ ಶೇಖರಣೆಯ ಕಾಯಿಲೆಗಳು | |
| 1. ಫಾನ್‌ಗಿಯರ್ಕೆ ಕಾಯಿಲೆ | ಗ್ಲೂಕೋಸ್–6–ಫಾಸ್ಫಟೇಸ್ |
| 2. ಹರ್ಸ್ ಕಾಯಿಲೆ | ಯಕೃತ್ತಿನ ಗ್ಲೈಕೊಜನ್ ಫಾಸ್ಫಾರಿಲೇಸ್ |
| 3. ಪಾಂಪೆ ಕಾಯಿಲೆ | ಅಮೈಲೊ ಗ್ಲೂಕೋಸಿಡೇಸ್ |
| 4. ಆ್ಯಂಡರ್‌ಸನ್ ಕಾಯಿಲೆ | ಗ್ಲೈಕೊಜೆನ್ ತಯಾರಿಕೆಗೆ ಬೇಕಾದ ಟ್ರಾನ್ಸ್‌ಗ್ಲೈಕೊಸಿಲೇಸ್ |

ಯಕೃತ್ (ಲಿವರ್) ಮುಂತಾದ ರೋಗ ಚಿಹ್ನೆಗಳಿರುವ ಚಿಕ್ಕಮಕ್ಕಳ ಕಾಯಿಲೆ, ಜೀವಸತ್ತ್ವಗಳ ಅಭಾವದಿಂದ ಆಗುವ ಹಕ್ಕಿಕಡಸು, ಚರ್ಮರೋಗಗಳು ಮೊ.ವು. ಈ ಗುಂಪಿಗೆ ಸೇರಿದವು. ಜೀವರಸಾಯನ ಕಾರ್ಯಗಳ ವೇಗವನ್ನು ಹೆಚ್ಚಿಸುವ ಕಿಣ್ವಗಳು ಪ್ರೋಟೀನುಗಳು. ಆದ್ದರಿಂದ ಅವುಗಳ ತಯಾರಿಕೆ ತತ್ಸಂಬಂಧ ಆಲೇಖ್ಯವನ್ನು ಒದಗಿಸುವ ನ್ಯೂಕ್ಲಿಯಿಕ್ ಆಮ್ಲದ ಗುಂಪಿಗೆ ಸೇರಿರುವ ಜೀನುಗಳನ್ನು ಅವಲಂಬಿಸಿದೆ. ಒಂದು ಪ್ರೋಟೀನಿಗೆ ಅಥವಾ ಅದರ ಭಾಗವಾದ ಒಂದು ಪಾಲಿಪೆಪ್ಟೈಡಿಗೆ ಒಂದು ಜೀನ್ ಎಂಬುದು ಬಹುಪಾಲು ಸತ್ಯ. ಈ ಜೀನ್ ತಂದೆತಾಯಿಯರಿಂದ ಅವರ ಸಂತಾನಕ್ಕೆ ಬರುತ್ತದೆ. ಆದ್ದರಿಂದ ಸಂತಾನದ ಕ್ರೋಮೊಸೋಮಿನಲ್ಲಿ ಯಾವುದಾದರೊಂದು ಜೀನ್ ಇಲ್ಲದಿದ್ದರೆ ಅದರಿಂದಲೇ ಉತ್ಪತ್ತಿಯಾಗಬೇಕಾಗಿದ್ದ ಕಿಣ್ವ ಪ್ರೋಟೀನಿನ ತಯಾರಿಕೆ ನಡೆಯುವುದಿಲ್ಲ. ತತ್ಪರಿಣಾಮವಾಗಿ ಈ ಕಿಣ್ವ ವೇಗೋತ್ಕರ್ಷಕವಾಗಿ ಮಾಡಬೇಕಾದ ರಸಾಯನಕಾರ್ಯದ ವೇಗದಲ್ಲಿ ವ್ಯತ್ಯಾಸ ಉಂಟಾಗಿ ಚಯಾಪಚಯ ಕ್ರಿಯೆಯ ವ್ಯವಸ್ಥೆ ಏರುಪೇರಾಗಬಹುದು ಮತ್ತು ಕಾಯಿಲೆ ಬರಬಹುದು. ತಂದೆತಾಯಿಯರಿಂದ ದತ್ತವಾಗಿ ಬರುವ ಈ ರೀತಿಯ ಕಾಯಿಲೆ ಬಲು ಅಪರೂಪ. ಸೋದರಿಕೆಯ ಸಂಬಂಧದ ಸಂತಾನಗಳಲ್ಲಿ ಈ ಲೋಪಗಳು ಮೇಲೇಳುವುದು ಹೆಚ್ಚು ಸಾಧ್ಯ. ಆದ್ದರಿಂದಲೇ ಸೋದರಿಕೆ ಸಂಬಂಧ ಈ ದೃಷ್ಟಿಯಲ್ಲಿ ಅಷ್ಟು ಯೋಗ್ಯವಲ್ಲ.

ಜೀನುಗಳ ಲೋಪದೋಷಗಳಿಂದಾಗುವ ರೋಗಗಳು ತೀರ ಅಪರೂಪವಾದರೂ ಆ ರೀತಿಯ ನೂರಾರು ಕಾಯಿಲೆಗಳು ಆಗಲೇ ಬೆಳಕಿಗೆ ಬಂದಿವೆ. ಫೀನೈಲ್ ಅಲನೀನ್ ಎಂಬ ಅಮೈನೋ ಆಮ್ಲವನ್ನು ಟೈರೋಸೀನ್ ಆಗಿ ಪರಿವರ್ತಿಸುವ ಕಿಣ್ವದ ಅಭಾವದಿಂದ ಫೀನೈಲ್ ಪೈರುವಿಕ್ ಆಮ್ಲ ದೇಹದಲ್ಲಿ ಶೇಖರಣೆ ಆಗಿ ಮೂತ್ರದಲ್ಲಿ ಹೊರಟುಹೋಗುತ್ತಿರುವುದು; ಫೀನೈಲ್ ಪೈರೂವಿಕ್ ಆಮ್ಲದ ಶೇಖರಣೆಯಿಂದಾಗಿ ಬೌದ್ಧಿಕ ಬೆಳೆವಣಿಗೆ ಕುಂಠಿತವಾಗುವುದು; ಚರ್ಮ, ಕೂದಲು, ಕಣ್ಣುಗಳಲ್ಲಿ ವರ್ಣಾಭಾವದಿಂದ ಬಿಳಿಚಿಕೊಂಡಿರುವ ಆಲ್ಬಿನೋಗಳಿಗೆ ಕಾರಣ ಈ ರೀತಿಯ ಜೀನಿನ ಅಭಾವವೇ. ಇಂಥ ರೋಗಿಗಳಲ್ಲಿ ಚರ್ಮದ ಬಣ್ಣದ ತಯಾರಿಕೆಗೆ ಬೇಕಾಗುವ ಕಿಣ್ವದ ಅಭಾವವಿರುತ್ತದೆ. ಕೆಲವರಲ್ಲಿ ಅವರ ಮೂತ್ರವನ್ನು ವಾಯುವಿಗೆ ತೆರೆದಿಟ್ಟಾಗ ಅದು ಸ್ವಲ್ಪ ಹೊತ್ತಿನಲ್ಲಿಯೇ ಕಂದು ಬಣ್ಣ ತಳೆಯುವುದು. ಇಂಥವರಲ್ಲಿ ಹೋಮೊಜೆಂಟಿಸಿಕ್ ಆಮ್ಲದ ಉತ್ಕರ್ಷಣೆಗೆ ಬೇಕಾದ ಕಿಣ್ವ ಇಲ್ಲದೆ, ದೇಹದಲ್ಲಿ ಅದು ವಿಲೇವಾರಿ ಆಗದೆ ಶೇಖರಣೆಯಾಗಿ ಈ ರಸಾಯನವಸ್ತು ಮೂತ್ರದಲ್ಲಿ ಹೋಗುವುದು. ಇದು ವಾಯುಸಂಪರ್ಕದಲ್ಲಿ ಕಂದುಬಣ್ಣದ ವಸ್ತುವಾಗುತ್ತದೆ. ಈ ರೋಗದಿಂದ ಅಂಥ ತೊಂದರೆಯಿಲ್ಲ. ಆದರೆ ಹಾಲಿನ ಸಕ್ಕರೆಯಾದ ಲ್ಯಾಕ್ಟೋಸಿನಲ್ಲಿ ಒಂದು ಅಂಶವಾಗಿರುವ ಗೆಲಾಕ್ಟೋಸ್ ಎಂಬ ಸಕ್ಕರೆಯನ್ನು ಗ್ಲೂಕೋಸಾಗಿ ಪರಿವರ್ತನೆಮಾಡಲು ಬೇಕಾಗುವ ಕಿಣ್ವದ ಅಭಾವವಿದ್ದರೆ ಬರುವ ಕಾಯಿಲೆ ಬಲು ಅಪಾಯಕಾರಿ. ಅಂಥ ಮಕ್ಕಳ ಬುದ್ಧಿಯ ಬೆಳೆವಣಿಗೆ ಕಡಿಮೆಯಾಗಿ ಕಣ್ಣಿನ ಪರೆ ತನ್ನ ಪಾರಕತೆಯನ್ನು ಕಳೆದುಕೊಂಡು ಕುರುಡಾಗಬಹುದು. ಇವಲ್ಲದೆ ಸಿಸ್ಟೀನ್ ಅಮೈನೋ ಆಮ್ಲವನ್ನೂ ಪೆಂಟೋಸ್ ಮುಂತಾದ ಕಾರ್ಬೊಹೈಡ್ರೇಟುಗಳನ್ನೂ ಉಪಯೋಗಿಸಿ ಕೊಳ್ಳಲಾಗದೆ ಮೂತ್ರದಲ್ಲಿ ಕಳೆದುಕೊಳ್ಳುವ ರೋಗಗಳೂ ರಕ್ತ ಹೆಪ್ಪುಗಟ್ಟಲು ಬೇಕಾದ ರಸಾಯನ ವಸ್ತುಗಳ ಅಭಾವ, ಸ್ಟಿರಾಯ್ಡ್ ಗುಂಪಿಗೆ ಸೇರಿದ, ಅತ್ಯಾವಶ್ಯಕ ಹಾರ್ಮೋನುಗಳ ಸಿದ್ಧತೆಗೆ ಬೇಕಾದ ಕಿಣ್ವಗಳ ಲೋಪದಿಂದಾಗುವ ರೋಗಗಳೂ ಮೇಲೆ ಹೇಳಿದ ಕಾಯಿಲೆಗಳ ಗುಂಪಿಗೆ ಸೇರಿದವು. ಈ ರೀತಿಯ ಜೀನಿನ ಲೋಪದೋಷಗಳ ಪರಿಣಾಮದಿಂದ ಉಂಟಾದ ಕೆಲವು ರೋಗಗಳ ಪಟ್ಟಿಯನ್ನು **(ಪಟ್ಟಿ 1 ಪುಟ 176)** ಕೊಟ್ಟಿದೆ. ಮೊದಲು ವಿವರಿಸಿದ ರೋಗಗಳನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲ.

ರಸಾಯನಕಾರ್ಯದ ನಿಯಂತ್ರಣದಲ್ಲಿ ಏರುಪೇರು ಆದಾಗ ಬರುವ ರೋಗಗಳು ಮೂರನೆಯ ಗುಂಪಿಗೆ ಸೇರಿದವು. ಈ ನಿಯಂತ್ರಣವ್ಯವಸ್ಥೆಯ ಕಾರ್ಯ ಮುಖ್ಯವಾಗಿ ಹಾರ್ಮೋನುಗಳಿಗೆ ಸೇರಿದ್ದು, ಮೇದೋಜೀರಕಾಂಗದ ಅಂತಃಸ್ರಾವವಾದ ಇನ್ಸುಲಿನ್ ಕಡಿಮೆಯಾದರೆ ಬರುವ ಸಕ್ಕರೆ ಕಾಯಿಲೆ, ಥೈರಾಯಿಡ್ ಗ್ರಂಥಿಯ ಸ್ರವಿಕೆಯ ಕೊರತೆಯಿಂದ ಕುಬ್ಜತನದೊಂದಿಗಿರುವ ಹೆಡ್ಡತನ ಮತ್ತು ಮಿಕ್ಸಡೀಮ ಎಂಬ ವಯಸ್ಕರ ಕಾಯಿಲೆ, ಪಿಟ್ಯುಟರಿ ಗ್ರಂಥಿಯ ಮತ್ತು ಲೈಂಗಿಕ ಹಾರ್ಮೋನುಗಳ ತಯಾರಿಕೆ ಹೆಚ್ಚುಕಡಿಮೆಯಾದಾಗ ಬರುವ ಕಾಯಿಲೆಗಳು–ಇವೆಲ್ಲವೂ ಈ ಚಯಾಪಚಯ ರೋಗಗಳ ಗುಂಪಿಗೆ ಸೇರಿವೆ. ವಿಷಕ್ರಿಮಿಗಳು ತರುವ ರೋಗಗಳಲ್ಲೂ ಹೀಗೆಯೇ. ಅವು ಬೆಳೆಯುವಾಗ ನೇರವಾಗಿ ಅಥವಾ ಪರೋಕ್ಷವಾಗಿ ಒಂದು ಅಥವಾ ಹಲವಾರು ರಸಾಯನಕಾರ್ಯಗಳ ವೇಗವನ್ನು ಹೆಚ್ಚುಕಡಿಮೆ ಮಾಡಿ ವಿಶಿಷ್ಟವಾದ ರೋಗಲಕ್ಷಣಗಳನ್ನು ಉಂಟುಮಾಡುತ್ತವೆ. ಇವಲ್ಲದೆ ಮೇಲೆ ಹೇಳಿದ ನಿರ್ದಿಷ್ಟ ಗುಂಪಿಗೆ ಸೇರದ, ಹೃದಯ ಮತ್ತು ರಕ್ತನಾಳಗಳ ಕಾಯಿಲೆಗಳು, ಅಲರ್ಜಿ, ಏಡಿಗಂತಿ ರೋಗಗಳು, ಆರ್ಥ್ರೈಟಿಸ್ ಮುಂತಾದವುಗಳೂ ಚಯಾಪಚಯೀ ರೋಗಗಳು.

ಅಂಗದೋಷರೋಗಗಳ ಮೂಲವೂ ಈ ರೀತಿ ಏರುಪೇರಾದ ಚಯಾಪಚಯ ಕ್ರಿಯೆಯೇ ಆಗಿರುತ್ತದೆ. ಜೀವಕೋಶದಲ್ಲಿನ ಘಟಕಗಳೂ ಅವುಗಳ ಹೊರಮೈ ಮತ್ತು ಜೀವಕೋಶಗಳ ಸಮುದಾಯದ ವ್ಯವಸ್ಥೆ ಹೊಂದಿರುವ ಯಕೃತ್ತು, ಮೂತ್ರಜನಕಾಂಗ, ಹೃದಯ, ರಕ್ತನಾಳಗಳು ಮುಂತಾದ ಅಂಗಾಂಗಗಳೂ ಅವುಗಳ ಬೆಳೆವಣಿಗೆ ಮತ್ತು ಆರೋಗ್ಯ ಸಹಜವಾಗಿಯೇ ರಸಾಯನಕಾರ್ಯಗಳನ್ನು ಅವಲಂಬಿಸಿವೆ. ಆದ್ದರಿಂದ ರಸಾಯನಕಾರ್ಯವೇಗ ಹೆಚ್ಚು ಅಥವಾ ಕಡಿಮೆಯಾದ ಪರಿಸ್ಥಿತಿ ಉತ್ತಮಗೊಳ್ಳದೆ, ವಾಸಿಯಾಗದೆ ಇದ್ದರೆ ಅಂಗರಚನೆಯಲ್ಲಿ ದೋಷಬಂದು ಅಂಗ ದೋಷರೋಗಗಳಿಗೆ ಬಲಿಯಾಗಬೇಕಾಗಬಹುದು (ಎ.ಎಸ್.ಆರ್.; ಸಿ.ಎಸ್.ಎನ್.)

**ಚರ (ಮೊಬೈಲ್) ದೂರವಾಣಿ :** ಚರ (ಮೊಬೈಲ್) ದೂರವಾಣಿ ಬಳಕೆ ಇಂದು ಸರ್ವೇ ಸಾಮಾನ್ಯವಾಗಿದೆ. ಶಾಲೆಗೆ ಹೋಗುವ ಮಕ್ಕಳಿಂದ ಹಿಡಿದು ದೊಡ್ಡ ಸಂಸ್ಥೆಯ ಅಧ್ಯಕ್ಷರವರೆಗೆ ಎಲ್ಲರೂ ಚರ ದೂರವಾಣಿ ಬಳಸುತ್ತಾರೆ. ಪ್ರತಿಯೊಂದು ಚರ ದೂರವಾಣಿಗೂ ಅದರದೇ ಆದ ಒಂದು ಗುರುತಿನ ಸಂಖ್ಯೆ ಇರುತ್ತದೆ. ಈ ಗುರುತಿನ ಸಂಖ್ಯೆಗೆ ಕರೆ ನೀಡಿದಾಗ ಆ ಕರೆ ಉದ್ದೇಶಿತ ಚರ ದೂರವಾಣಿಯನ್ನು ತಲುಪುತ್ತದೆ. ಆ ಮೊಬೈಲಿನ ಪಕ್ಕದಲ್ಲಿ ನೂರಾರು ಚರ ದೂರವಾಣಿಗಳಿದ್ದರೂ ಒಳ ಬರುವ ಆ ಕರೆಗೆ ಯಾವುದೇ ತೊಂದರೆಯಾಗುವುದಿಲ್ಲ.

ಒಂದು ಚರ ದೂರವಾಣಿ ಚೆನ್ನಾಗಿ ಕೆಲಸ ನಿರ್ವಹಿಸಬೇಕು ಎಂದರೆ ಅದಕ್ಕೆ ಎರಡು ಮುಖ್ಯ ಅಂಶಗಳು ಅಗತ್ಯ. ಮೊದಲನೆಯದು ಇಂಧನ. ಇದು ಚರ ದೂರವಾಣಿಯಲ್ಲಿ ಅಳವಡಿಸಿರುವ ಬ್ಯಾಟರಿಯಿಂದ ದೊರೆಯುತ್ತದೆ. ಎರಡನೆಯದು ಸಂಕೇತಗಳು (ಸಿಗ್ನಲ್). ಈ ಸಂಪರ್ಕಜಾಲದ ಸಂಕೇತಗಳು (ನೆಟ್‌ವರ್ಕ್ ಸಿಗ್ನಲ್) ಅತ್ಯಗತ್ಯ. ನಗರದ ತುಂಬಾ ಈ ಸಂಕೇತಗಳನ್ನು ಪ್ರಸರಿಸುವ ಗೋಪುರಗಳ ದೊಡ್ಡ ಜಾಲವೇ ಹರಡಿರುತ್ತದೆ. ಒಂದು ಚರ ದೂರವಾಣಿ ಕಂಪನಿ ಮೊದಲಿಗೆ ಊರಿನ ಎತ್ತರದ ಸ್ಥಳಗಳಲ್ಲಿ ಈ ಚರ ದೂರವಾಣಿ ಸಂಕೇತ ಗೋಪುರಗಳನ್ನು ಸ್ಥಾಪಿಸುತ್ತದೆ. ಇಂಥ ಒಂದು ಗೋಪುರ ಸುತ್ತಣ ಸುಮಾರು 2 ರಿಂದ 8 ಕಿ.ಮೀ. ಪರಿಧಿಯಲ್ಲಿ ತನ್ನ ಸಂಕೇತಗಳನ್ನು ಪ್ರಸಾರ ಮಾಡಬಲ್ಲದ್ದಾಗಿರುತ್ತದೆ.. ಮೊಬೈಲ್‌ಗಳ ಸಾಂದ್ರತೆ ಹಾಗೂ ಗೋಪುರದ ಪ್ರಸಾರ ಸಾಮರ್ಥ್ಯವನ್ನು ಅವಲಂಬಿಸಿ ಈ ಪರಿಧಿ ವ್ಯತ್ಯಾಸ ಹೊಂದುತ್ತದೆ. ಅಂದರೆ ಊರಿನ ಮಧ್ಯದಲ್ಲಿರುವ ಗೋಪುರ ಒಂದು ಕಿ.ಮೀ. ಪರಿಧಿಯ ಎಲ್ಲ ಮೊಬೈಲ್‌ಗಳಿಗೆ ಸಂಕೇತಗಳನ್ನು ನೀಡಿದರೆ ಊರಾಚೆಯ ಗೋಪುರ 4 ರಿಂದ 5 ಕಿ.ಮೀ. ದೂರದಲ್ಲಿ ಬರುತ್ತಿರುವ ಕೆಲವು ಮೊಬೈಲ್‌ಗಳಿಗೆ ಸಂಕೇತಗಳನ್ನು ನೀಡಬಲ್ಲದು.

ಈ ರೀತಿ ಚಾಲನೆಗೊಂಡು ಚೆನ್ನಾಗಿ ಕೆಲಸ ಮಾಡುತ್ತಿರುವ ನೂರಾರು ಮೊಬೈಲ್‌ಗಳು ಒಂದಕ್ಕೊಂದು ಸಂಪರ್ಕಿಸಲು ಹಾಗೂ ಆ ಸಂಪರ್ಕವನ್ನು ಮುಂದುವರೆಸಿಕೊಂಡು ಹೋಗಲು ಬೇಕಾದ ಇನ್ನೊಂದು ಪರಿಕರ ಎಂದರೆ ಚರ ದೂರವಾಣಿ ಮಾತೃ ಗಣಕ. ಅಂದರೆ MTSO (Mobile Telephone Switching Office).

ಈ ಮಾತೃ ಗಣಕ MTSO ದಲ್ಲಿ ಯಾವ ಚರ ದೂರವಾಣಿ ಊರಿನ ಯಾವ ಭಾಗದಲ್ಲಿ ಸಂಚರಿಸುತ್ತದೆ ಎಂಬುದನ್ನು ಬೇಕಾದಾಗ ತಿಳಿಯಬಹುದು. ಯಾವುದೇ ಚರ ದೂರವಾಣಿ ಆರಂಭ(ಆನ್)ವಾದ ಕೂಡಲೇ ಮೊದಲು ಮಾಡುವ ಕೆಲಸ ಎಂದರೆ ತನ್ನ ಹತ್ತಿರದ ಸಂಕೇತಗೋಪುರಕ್ಕೆ ಸಂಪರ್ಕಿಸುವುದು. ಅದರಿಂದ ಸಂಪರ್ಕ ಪಡೆದು ತನ್ನ ಇರುವಿಕೆಯ ಬಗ್ಗೆ ಚರ ದೂರವಾಣಿದಾಖಲಿಸುತ್ತದೆ. ಒಂದು ವೇಳೆ ಸನಿಹದಲ್ಲಿ ಎಲ್ಲೂ ಅಂಥ ಸಂಕೇತಗೋಪುರ (signal tower) ಸಿಗದೆ ಹೋದಾಗ ಚರ ದೂರವಾಣಿ ಕೆಲಸ ಮಾಡುವುದಿಲ್ಲ. ಆಗ ನಾವು "ಇಲ್ಲಿ ಸಂಪರ್ಕಜಾಲ (ನೆಟ್‌ವರ್ಕ್) ಇಲ್ಲ" ಎಂದು ಮಾತನಾಡಿಕೊಳ್ಳುತ್ತೇವೆ.

**ಕರೆ ಸ್ಥಿರಗೊಳ್ಳುವ ರೀತಿ:** ಈಗ ಮಲ್ಲೇಶ್ವರದಲ್ಲಿರುವ A ಎಂಬ ವ್ಯಕ್ತಿ ಜಯನಗರದಲ್ಲಿರುವ B ಎಂಬ ವ್ಯಕ್ತಿಗೆ ಚರ ದೂರವಾಣಿ ಕರೆ ನೀಡುತ್ತಾನೆ. ಈ ಕರೆ ಹೇಗೆ ಕೆಲಸ ಮಾಡುತ್ತದೆ ನೋಡೋಣ:

ತನ್ನ ಚರ ದೂರವಾಣಿಯನ್ನು ತೆಗೆದು ತನಗೆ ಬೇಕಾದ ಸಂಖ್ಯೆಯನ್ನು ಒತ್ತಿ ಕರೆ ಮಾಡುತ್ತಾನೆ. ಹಾಗೆ ಅವನು ತನಗೆ ಬೇಕಾದ ಸಂಖ್ಯೆಯನ್ನು ಒತ್ತಿದಾಗ ಚರ ದೂರವಾಣಿ ತಾನು ಸಂಪರ್ಕ ಹೊಂದಿರುವ ಸಮೀಪದ ಸಂಪರ್ಕ ಗೋಪುರಕ್ಕೆ ಈ ಮಾಹಿತಿ ರವಾನೆ ಮಾಡುತ್ತದೆ. ಸಂಪರ್ಕಗೋಪುರ ಈ ಮಾಹಿತಿಯನ್ನು ಅಂದರೆ 'B' ಯ ನಂಬರನ್ನು ಮಾತೃಗಣಕ (MTSO)ಕ್ಕೆ ತಲುಪಿಸುತ್ತದೆ. MTSO ತನ್ನಲ್ಲಿ 'B' ಎಲ್ಲಿದ್ದಾನೆ ಎಂಬ ಮಾಹಿತಿ ಇದ್ದರೆ ಕೂಡಲೇ ಕರೆಯನ್ನು ಅಲ್ಲಿಗೆ ರವಾನಿಸುತ್ತದೆ. ಇಲ್ಲದಿದ್ದಲ್ಲಿ ಎಲ್ಲ ಗೋಪುರಗಳಿಗೆ 'B' ಯ ಸಂಖ್ಯೆಯನ್ನು ಕಳಿಸುತ್ತದೆ. ಪತ್ತೆ ಮಾಡಲು 'B' ಇರುವ ಪ್ರದೇಶದಿಂದ – ಅಂದರೆ ಜಯನಗರದಿಂದ ಅಲ್ಲಿರುವ ಗೋಪುರದಿಂದ ಮಾಹಿತಿ ಬಂದಾಗ ಕರೆಯನ್ನು ಅಲ್ಲಿಗೆ ರವಾನಿಸುತ್ತದೆ. 'A' ಕರೆ ಜಯನಗರದ ಗೋಪುರದ ಮೂಲಕ B ಯ ಮೊಬೈಲಿಗೆ ತಲುಪುತ್ತದೆ. ಹೀಗೆ A ಯ ಚರ ದೂರವಾಣಿ ಮೂಲಕ ಹೊರಟ ಕರೆ ಮಲ್ಲೇಶ್ವರದ ಸಂಕೇತಗೋಪುರ ತಲುಪಿ, ಅಲ್ಲಿಂದ ಜಯನಗರದ

ಸಂಕೇತ ಗೋಪುರದ ಮೂಲಕ 'B' ಯ ಚರ ದೂರವಾಣಿಯನ್ನು ತಲುಪುತ್ತದೆ. ತನ್ನ ಚರ ದೂರವಾಣಿಯಲ್ಲಿ ಕರೆ ಬಂದುದನ್ನು ಗಮನಿಸಿದಾಗ 'B' ಉತ್ತರಿಸುತ್ತಾನೆ. A ಹಾಗೂ B ಯ ಮಧ್ಯೆ ಮಾತುಕತೆ ಶುರುವಾಗುತ್ತದೆ.

ಈಗ B ಜಯನಗರದಿಂದ ಮಾತನಾಡುತ್ತ ಬನಶಂಕರಿಯ ಕಡೆಗೆ ಹೋಗುತ್ತಿದ್ದಾನೆ ಎಂದುಕೊಳ್ಳೋಣ. ಅಂದರೆ ಒಂದು ಬಡಾವಣೆಯಿಂದ ಪಕ್ಕದ ಬಡಾವಣೆಗೆ ಹೋಗುತ್ತಿದ್ದಾನೆ. ಆಗ ಕರೆ ಹೇಗೆ ಮುಂದುವರಿಯುವುದು ಎಂದು ಗಮನಿಸೋಣ.

A ಯ ಜೊತೆ ಮಾತನಾಡುತ್ತ B ಬನಶಂಕರಿಯ ಕಡೆಗೆ ಹೋಗುತ್ತಿದ್ದಂತೆ ಬನಶಂಕರಿಯ ಸಂಕೇತಗೋಪುರಕ್ಕೂ 'B' ಸಂಪರ್ಕ ಸಂಕೇತಗಳು ಬರುತ್ತವೆ. ಯಾಕೆಂದರೆ ಚರ ದೂರವಾಣಿ ತನ್ನ ಸುತ್ತಲಿನ ಎಲ್ಲ ಗೋಪುರಗಳಿಗೆ ಸಂಪರ್ಕ ಸಂಕೇತಗಳನ್ನು ಕಳಿಹಿಸುತ್ತಲೇ ಇರುತ್ತದೆ. ಹೇಗೆ B ಬನಶಂಕರಿಯತ್ತ ಚಲಿಸುತ್ತಿರುತ್ತಾನೋ ಹಾಗೆ ಅವನ ಚರ ದೂರವಾಣಿ ಸಂಕೇತಗಳೂ ಚಲಿಸಿ ಒಂದು ಹಂತದಲ್ಲಿ ಜಯನಗರದ ಸಂಕೇತಗೋಪುರದ ಮೂಲಕ ನಡೆಯುತ್ತಿರುವ ಸಂಭಾಷಣೆ ಬನಶಂಕರಿಯ ಸಂಕೇತ ಗೋಪುರಕ್ಕೆ ಬದಲಾವಣೆ ಹೊಂದುತ್ತದೆ.

ಒಂದು ವೇಳೆ Bಯು ಜಯನಗರದಲ್ಲಿ ಇರದೇ ಹುಬ್ಬಳ್ಳಿಯಲ್ಲೋ ದಾವಣಗೆರೆಯಲ್ಲೋ ಇದ್ದರೆ, ಮಲ್ಲೇಶ್ವರದಿಂದ ಹೊರಟ ಸಂಕೇತಗಳು ಬೆಂಗಳೂರು MTSO ದಿಂದ ಹುಬ್ಬಳ್ಳಿ MTSO ತಲುಪಿ, ಅಲ್ಲಿ B ಇರುಬಹುದಾದ ಪ್ರದೇಶದಿಂದ (ಉದಾ: ದುರ್ಗದ ಬೈಲ್) ಅಲ್ಲಿಯ ಸಂಕೇತ ಗೋಪುರದಿಂದ ಉತ್ತರ ಪಡೆಯಬಹುದು.

ಆದರೆ ಅದೇ Bಯು ಚಲಿಸುತ್ತ ಚಲಿಸುತ್ತ ಬೆಂಗಳೂರಿನ ಹೊರಗೆ ಹೋದರೆ ಕೆಲಸಮಯಾನಂತರ ಸಂಪರ್ಕ ಕಡಿಯುತ್ತದೆ. ಏಕೆಂದರೆ ಬೆಂಗಳೂರಿನ ತುದಿಯಲ್ಲಿರುವ ಸಂಕೇತ ಗೋಪುರ ಊರಿಂದ ಹೊರಗೆ 6 ರಿಂದ 8 ಕಿ.ಮೀ. ದೂರದವರೆಗೆ ತನ್ನ ಸಂಕೇತಗಳನ್ನು ಕಳಿಸಬಹುದು. ಅದಕ್ಕಿಂತ ದೂರದಲ್ಲಿದ್ದಾಗ ಸಂಕೇತಗಳು ಸಿಗದೆ ಸಂಪರ್ಕ ಮೊಬೈಲ್‌ಗೆ ಸಿಗದೆ ಮಾತುಕತೆ ನಿಂತು ಹೋಗುತ್ತದೆ. ಚರ ದೂರವಾಣಿ ಪರದೆಯ ಮೇಲೆ ನೋ ಸಿಗ್ನಲ್ – ಅಂದರೆ ಸಂಪರ್ಕ ಸಂಕೇತಗಳಿಲ್ಲ ಎಂದು ಮೂಡಿಬರುತ್ತದೆ.

ಮೊಬೈಲ್‌ಗಳು ಬಳಸುವ ತಂತ್ರಜ್ಞಾನದಲ್ಲಿ ಎರಡು ಬಗೆಯವು.

ಜಿ ಎಸ್ ಎಂ ತಂತ್ರಜ್ಞಾನ (ಗ್ಲೋಬಲ್ ಸಿಸ್ಟಮ್ ಫಾರ್ ಮೊಬೈಲ್)

ಸಿ ಡಿ ಎಂ ಎ ತಂತ್ರಜ್ಞಾನ (ಕೋಡ್ ಡಿವಿಸಿಬಲ್ ಮಲ್ಟಿಪಲ್ ಆ್ಯಕ್ಸೆಸ್)

ತಂತ್ರಜ್ಞಾನ ಯಾವುದೇ ಇದ್ದರೂ ವ್ಯಕ್ತಿಗೆ ಮೊಬೈಲ್ ಬಳಸುವಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದರೂ ಎರಡೂ ತಂತ್ರಜ್ಞಾನಗಳ ಮೂಲ ವ್ಯತ್ಯಾಸವನ್ನು ತಿಳಿಯುವುದು ಮುಖ್ಯ.

ಜಿ ಎಸ್ ಎಂ ತಂತ್ರಜ್ಞಾನದಲ್ಲಿ ಸಿಮ್ (ಎಸ್ ಐ ಎಂ) ಎಂಬ ಪುಟ್ಟ ವಿದ್ಯುನ್ಮಾನ ಕಾರ್ಡ್ ಒಂದನ್ನು ಚರ ದೂರವಾಣಿ ಸೆಟ್ ಒಳಗೆ ಒಂದು ನಿರ್ಧಾರಿತ ಜಾಗದಲ್ಲಿ ಸೇರಿಸಿರುತ್ತಾರೆ. ಈ ಪುಟ್ಟ ಕಾರ್ಡಿನಲ್ಲಿರುವ ಪುಟ್ಟ ಸರ್ಕೀಟ್ ಒಂದು ವಿದ್ಯುತ್ ಕಾಂತೀಯ ಅಲೆಗಳನ್ನು ಸಂಕೇತಗೋಪುರಕ್ಕೆ ಕಳುಹಿಸುವ ಹಾಗೂ ವಾಪಸ್ ಪಡೆಯುವ ಕೆಲಸ ಮಾಡುತ್ತದೆ. ಈ ಕಾರ್ಡಿನ ಆಧಾರದ ಮೇಲೆ ಆ ಮೊಬೈಲಿನ ಸಂಖ್ಯೆ ನಿರ್ಧಾರವಾಗುತ್ತದೆ. ಗ್ರಾಹಕ ತನ್ನ ಚರ ದೂರವಾಣಿಯನ್ನು ಬದಲಿಸಬೇಕು ಎಂದರೆ ಹೊಸ ಚರ ದೂರವಾಣಿ ಸೆಟ್ ಒಂದನ್ನು ಕೊಂಡು ಈ ಪುಟ್ಟ ಸಿಮ್ ಕಾರ್ಡನ್ನ (ಇದು 5 ರೂ. ಅಂಚೆ ಚೀಟಿಯ ಅರ್ಧದಷ್ಟು ಆಕಾರದಲ್ಲಿ ಇರುತ್ತದೆ) ಅದಕ್ಕೆ ಬದಲಾಯಿಸಿದರೆ ಸಾಕು. ನಿಮ್ಮ ಹೊಸ ಮೊಬೈಲ್ ಸೆಟ್‌ಗಳ ಸಂಖ್ಯೆಯೊಂದಿಗೆ ಕೆಲಸ ಆರಂಭಿಸುತ್ತದೆ.

ಇನ್ನು ಸಿ ಡಿ ಎಂ ಎ ತಂತ್ರಜ್ಞಾನದಲ್ಲಿ ಈ ರೀತಿ ಸಿಮ್ ಇರುವುದಿಲ್ಲ. ಅದರಲ್ಲಿ ನಿಮಗೆ ಕೊಟ್ಟ ಚರ ದೂರವಾಣಿ ಪರಿಕರ (ಹ್ಯಾಂಡಸೆಟ್)ದಲ್ಲಿ ನಿಮಗೆ ನಿಗದಿಯಾದ ಸಂಖ್ಯೆಯನ್ನು ಅಳವಡಿಸಲಾಗಿತ್ತದೆ. ನೀವು ನಿಮ್ಮ ಚರ ದೂರವಾಣಿ ಪರಿಕರ (ಹ್ಯಾಂಡ್‌ಸೆಟ್) ಬದಲಿಸಬೇಕು ಎಂದರೆ ಸಂಪರ್ಕದಾತ (ಸರ್ವಿಸ್ ಪ್ರೊವೈಡರ್) ಸಂಸ್ಥೆಗೆ ಹೋಗಿ ಬದಲಿಸಬೇಕು.

ನಮ್ಮ ರಾಜ್ಯದಲ್ಲಿ ಏರ್‌ಟೆಲ್, ಸ್ಪೈಸ್ ಹಾಗೂ ಹಚ್ ಸಂಸ್ಥೆಗಳ ಜಿ ಎಸ್ ಎಂ ತಂತ್ರಜ್ಞಾನ ಬಳಸಿದರೆ ಟಾಟಾ ಇಂಡಿಕಾಮ್ ಹಾಗೂ ರಿಲಯನ್ಸ್ ಸಂಸ್ಥೆಗಳು ಸಿ ಡಿ ಎಂ ಎ ತಂತ್ರಜ್ಞಾನವನ್ನು ಬಳಸುತ್ತವೆ. (ಆರ್. ಕೆ)

**ಚರಂಡಿ ಮತ್ತು ಚರಂಡಿ ವ್ಯವಸ್ಥೆ :** ಗ್ರಾಮಸಾರ, ರೊಚ್ಚು, ರಾಡಿ, ಮಳೆ ನೀರು ಮುಂತಾದವುಗಳ ಹರಿವನ್ನು ವ್ಯವಸ್ಥೆಗೊಳಿಸಲು ಮಾಡಿದ ನಾಲೆ ಮತ್ತು ಅಂಥ ನಾಲೆಗಳ ಒಟ್ಟು ಸಮೂಹ (ಸ್ಯೂವರ್ ಅಂಡ್ ಸ್ಯೂವರೇಜ್ ಸಿಸ್ಟಮ್). ಜನವಸತಿ ಸಾಂದ್ರವಾಗಿ ಇರುವಂಥ ಕೇರಿ, ಹಳ್ಳಿ, ನಗರಗಳಲ್ಲೆಲ್ಲ ಚರಂಡಿ ವ್ಯವಸ್ಥೆ ಅನಿವಾರ್ಯ. ಇಲ್ಲವಾದಲ್ಲಿ ಗ್ರಾಮಸಾರ ಸಿಕ್ಕಾಪಟ್ಟೆ ಹರಡಿಕೊಂಡು ಆರೋಗ್ಯಮಾರಕವಾಗುತ್ತದೆ. ನಗರದ ಪ್ರಸಕ್ತ ವ್ಯಾಪ್ತಿ, ಭೌಗೋಳಿಕ ಸನ್ನಿವೇಶ, ಭವಿಷ್ಯದಲ್ಲಿ ನಗರದ ವಿಸ್ತರಣೆ ಮುಂತಾದ ಎಲ್ಲ ಸಾಧ್ಯತೆಗಳನ್ನು ಪರಿಗಣಿಸಿ ಸಮಗ್ರವಾದ ಚರಂಡಿ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ರೂಪಿಸಬೇಕಾಗುತ್ತದೆ. ಇದಕ್ಕೆ ಹೊಂದಿಕೊಂಡು, ಎಂದರೆ ಪೂರಕವಾಗಿ, ಮನೆಗಳ, ಕೇರಿಗಳ ಮತ್ತು ಬಡಾವಣೆಗಳ ಉಪಚರಂಡಿ ವ್ಯವಸ್ಥೆಗಳು ಇರಬೇಕು. ಸಮಗ್ರವಾಗಿ ಹೇಳುವುದಾದರೆ ಕೊಳಾಯಿ ವ್ಯವಸ್ಥೆ ಒಂದು ನಗರದ ಅಪಧಮನಿಗಳಾದರೆ (ಶುದ್ಧ ನೀರಿನ ನಾಲೆಗಳು) ಚರಂಡಿ ವ್ಯವಸ್ಥೆ ಆ ನಗರದ ಅಭಿಧಮನಿಗಳು (ಮಲಿನ ನೀರಿನ ನಾಲೆಗಳು).

ಚರಂಡಿಗಳನ್ನು ಮುಖ್ಯವಾಗಿ ಮೂರು ವರ್ಗಗಳಾಗಿ ವಿಭಾಗಿಸಬಹುದು:

1 ಸಂಯುಕ್ತ ಚರಂಡಿ : ಇದರಲ್ಲಿ ಮಳೆಯಿಂದ ಹರಿದುಬರುವ ನೀರು ಹಾಗೂ ಹೊಲಸುನೀರು ಎರಡೂ ಒಟ್ಟಿಗೆ ಹರಿದು ಸಂಸ್ಕರಣವಾಗುವ ಜಾಗಕ್ಕೆ ಹೋಗಿ ಬೀಳುವುದು.

2 ಪ್ರತ್ಯೇಕ ಚರಂಡಿ ವ್ಯವಸ್ಥೆ : ಹೊಲಸು ನೀರು ಹಾಗೂ ಮಳೆಯ ನೀರು ಬೇರೆ ಬೇರೆ ಚರಂಡಿಗಳಲ್ಲಿ ಹರಿದು ಹೋಗುವ ಏರ್ಪಾಡು. ಹೊಲಸು ನೀರು ಸಂಸ್ಕರಣವಾಗುವ ಕಡೆಗೆ ಹರಿದುಹೋಗುವುದು. ಮಳೆಯ ನೀರು ಸಮುದ್ರ, ನದಿ ಅಥವಾ ಕೆರೆಗಳಿಗೆ ಹೋಗಿ ಸೇರುವುದು.

3 ಆಂಶಿಕವಾಗಿ ಪ್ರತ್ಯೇಕ ಚರಂಡಿ ವ್ಯವಸ್ಥೆ : ಮನೆಗಳ ಮುಂಭಾಗದ ಅಂಗಳ ಹಾಗೂ ಮಾಡಿನ ನೀರು ಮಳೆಯ ನೀರು ಹರಿದು ಹೋಗುವ ಚರಂಡಿಯಲ್ಲಿಯೇ ಹರಿದುಹೋಗುವಂತೆ ಏರ್ಪಾಟುಮಾಡಿರಲಾಗುತ್ತದೆ.

ಚರಂಡಿ ವ್ಯವಸ್ಥೆ ನೆಲದ ಮೇಲಿರಬಹುದು, ನೆಲದ ಒಳಗೆ ಹುದುಗಿ ಇರಬಹುದು. ಮೊದಲಿನದರ ಹೆಸರು ಹೊರಚರಂಡಿ ವ್ಯವಸ್ಥೆ, ಎರಡನೆಯದರ ಹೆಸರು ಒಳಚರಂಡಿ ವ್ಯವಸ್ಥೆ. ಸಾಮಾನ್ಯವಾಗಿ ರಸ್ತೆಯ ಮೇಲ್ಭಾಗದಲ್ಲಿ ಕಟ್ಟುವ ಚರಂಡಿಗಳು (ಎಂದರೆ ಹೊರಚರಂಡಿಗಳು) ಪಟ್ಟಣಗಳಲ್ಲಿ ಮಳೆಯ ನೀರು ಹರಿದುಹೋಗಲು ಅವಕಾಶ ಕೊಡುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೊಲಸು ನೀರನ್ನು ಸಾಗಿಸಲು ಕೂಡ ಹೊರಚರಂಡಿಗಳನ್ನು ಉಪಯೋಗಿಸುವುದುಂಟು. ಇವನ್ನು ರಸ್ತೆಯ ಅಂಚಿನಲ್ಲಿ ಮನೆಗಳಿಗೆ ತಗುಲಿದಂತೆ ನಿರ್ಮಿಸುತ್ತಾರೆ. ಒಳಚರಂಡಿ ವ್ಯವಸ್ಥೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಚರಂಡಿಗಳನ್ನು ರಸ್ತೆಯ ಮಧ್ಯದಲ್ಲಿ ಹತ್ತು ಅಡಿಗಳಿಗಳಿಗಿಂತ ಜಾಸ್ತಿ ಆಳದಲ್ಲಿ ನಿರ್ಮಿಸುತ್ತಾರೆ.

ಚರಂಡಿ ನಿರ್ಮಾಣಕ್ಕೆ ವಸ್ತುಗಳನ್ನು ಆಯುವಾಗ ಈ ಮುಂದಿನ ಅಂಶಗಳನ್ನು ಲಕ್ಷ್ಯದಲ್ಲಿರಿಸಬೇಕು. ನೀರು ಸರಾಗವಾಗಿ ಹರಿದು ಹೋಗಬೇಕು, ಮಾತ್ರವಲ್ಲ ಒಂದಿಷ್ಟೂ ನೆಲದೊಳಕ್ಕೆ ಇಂಗಿಹೋಗಿ ಕುಡಿಯುವ ನೀರಿನೊಡನೆ ಬೆರೆಯಬಾರದು. ಚರಂಡಿಗಳು ಬಾಳಿಕೆ ಬರಬೇಕಾದರೆ ಹೊಲಸಿನಲ್ಲಿರುವ ಆಮ್ಲಗಳು ಚರಂಡಿ ನಿರ್ಮಾಣದಲ್ಲಿ ಉಪಯೋಗಿಸುವ ವಸ್ತುಗಳ ಮೇಲೆ ಯಾವ ರಾಸಾಯನಿಕ ಕ್ರಿಯೆಯನ್ನೂ ಉಂಟುಮಾಡಬಾರದು. ಹೊಲಸು ನೀರಿನಲ್ಲಿ ಹರಿದುಹೋಗುವ ಗಟ್ಟಿ ಪದಾರ್ಥಗಳ ಉಜ್ಜುವಿಕೆಯಿಂದ ಚರಂಡಿಯ ಒಳಮೈ ಹಾಳಾಗಬಾರದು. ಚರಂಡಿಯ ಪೈಪುಗಳು ಸಾಕಷ್ಟು ಸಾಮರ್ಥ್ಯಯುತವಾಗಿದ್ದು ಅವುಗಳ ಮೇಲೆ ಬೀಳುವ ಮಣ್ಣಿನ ಮತ್ತು ಇತರ ಹೊರೆಯ ತೂಕವನ್ನು ತಡೆದುಕೊಳ್ಳುವಂತಿರಬೇಕು. ಒಳಗೆ ಹರಿಯುವ ನೀರಿನ ಒತ್ತಡದಿಂದ ಪೈಪುಗಳಿಗೆ ಯಾವ ಹಾನಿಯೂ ಒದಗಬಾರದು. ಒಂದು ಪೈಪನ್ನು ಇನ್ನೊಂದು ಪೈಪಿಗೆ ಜೋಡಿಸುವ ಕೆಲಸ ಬಹಳ ಬೇಗ ಹಾಗೂ ಉತ್ತಮವಾಗಿ ಆಗಬೇಕು, ಜೋಡಣೆಯ ಜಾಗ ಗಟ್ಟಿಯಾಗಿದ್ದು ಒಳಗಡೆ ಹರಿಯುವ ಪದಾರ್ಥಗಳು ಹೊರಬರದಂತಿರಬೇಕು. ಚರಂಡಿಗಳ ನಿರ್ಮಾಣ ವೆಚ್ಚ ಮಿತಿಯಲ್ಲಿರಬೇಕು.

ನಿರ್ಮಾಣರೀತಿ : ಚರಂಡಿಯನ್ನು ಕಲ್ಲು, ಇಟ್ಟಿಗೆ, ಗಾರೆ, ಸಿಮೆಂಟ್ ಪದಾರ್ಥಗಳನ್ನು ಉಪಯೋಗಿಸಿ ಕಟ್ಟಬಹುದು; ಅಥವಾ ಸಾಮರ್ಥ್ಯಯುತವಾದ ಸಾಕಷ್ಟು ದೊಡ್ಡಗಾತ್ರದ ಪೈಪುಗಳನ್ನು ಉಪಯೋಗಿಸಿಯೂ ಕಟ್ಟಬಹುದು. ಒಳಚರಂಡಿ ಯೋಜನೆ ಪ್ರಚಲಿತವಾಗಿರುವಲ್ಲೆಲ್ಲ ಪೈಪುಗಳ ಬಳಕೆಯೇ ಹೆಚ್ಚು ವ್ಯಾಪಕ. ಈ ಪೈಪುಗಳಲ್ಲಿ ಮೂರು ಬಗೆಗಳಿವೆ: ಪೂರ್ವಸಿದ್ಧ ಪೈಪುಗಳು, ಅರ್ಧಸಿದ್ಧ ಪೈಪುಗಳು, ಚರಂಡಿಯನ್ನು ಕಟ್ಟಬೇಕಾದ ಸ್ಥಳದಲ್ಲೇ ನಿರ್ಮಿಸಿದ ಪೈಪುಗಳು. ಚರಂಡಿಯ ಕೆಲಸದಲ್ಲಿ ಈ ಕೆಳಗಿನ ವಿವಿಧ ರೀತಿಯ ಪೈಪುಗಳನ್ನು ಬಳಸುತ್ತಾರೆ: 1. ಗಾಜಿನಂತೆ ನುಣುಪಾಗಿರುವ ಜೇಡಿಮಣ್ಣಿನ ಪೈಪುಗಳು ಅಥವಾ ಸಿಲಿಕ ಬೆರೆಸಿದ ಜೇಡಿಮಣ್ಣಿನ ಪೈಪುಗಳು. 2. ಸಾಧಾರಣ ಕಾಂಕ್ರೀಟ್ ಪೈಪುಗಳು. 3. ಪ್ರಬಲಿತ ಕಾಂಕ್ರೀಟ್ ಪೈಪುಗಳು. (ಇವುಗಳಿಗೆ ಕಬ್ಬಿಣದ ಸರಳುಗಳ ಒಳಮೈ ಇರುವುದರಿಂದ ಬಹಳ ಗಟ್ಟಿಯಾಗಿರುತ್ತವೆ) 4. ಕಲ್ನಾರು–ಸಿಮೆಂಟ್ ಪೈಪುಗಳು. 5. ತಾಂಡವಾಳದ ಪೈಪುಗಳು. 6. ಉಕ್ಕಿನ ಪೈಪುಗಳು.

ಚರಂಡಿಗಳ ನಿರ್ಮಾಣ ಆಲೇಖ್ಯ : ಎರಡು ಮ್ಯಾನ್‌ಹೋಲ್‌ಗಳ (ಆಳುಗುಂಡಿ) ಅಂತರದಲ್ಲಿ ನಿರ್ಮಿಸುವ ಚರಂಡಿಯ ನಕಾಶೆಯನ್ನು ಮಾನಕಾನುಸಾರ ಮೊದಲು ತಯಾರಿಸಿಕೊಳ್ಳಬೇಕು. ಈ ರೀತಿ ಪ್ರತಿ ಎರಡು ಮ್ಯಾನ್‌ಹೋಲ್‌ಗಳನ್ನು ಜೋಡಿಸುವ

ಎಲ್ಲ ಚರಂಡಿಗಳ ನಕಾಶೆಯನ್ನು ಸಿದ್ಧಪಡಿಸಿ ಇಟ್ಟುಕೊಳ್ಳಬೇಕು. ನಕಾಶೆಯಲ್ಲಿ ಚರಂಡಿಯ ಗಾತ್ರ, ಉದ್ದ ಹಾಗೂ ಚರಂಡಿ ಕಟ್ಟಲು ಉಪಯೋಗಿಸುವ ಪೈಪುಗಳ ಪೂರ್ತಿ ವಿವರಗಳು ಇರಬೇಕು.

ಚರಂಡಿಗಳ ನಿರ್ಮಾಣ : 1 ಮ್ಯಾನ್‌ಹೋಲ್‌ಗಳ ಸ್ಥಳಗಳನ್ನು ಪಟ್ಟಣದ ರಸ್ತೆಗಳಲ್ಲಿ ಗುರುತಿಸಿಕೊಳ್ಳಬೇಕು. ಇವುಗಳ ನಿಖರವಾದ ಸ್ಥಳಗಳನ್ನು ನಕಾಶೆಯಿಂದ ಪಡೆಯಬೇಕು.

2 ಎರಡು ಹತ್ತಿರದ ಮ್ಯಾನ್‌ಹೋಲ್ ಸ್ಥಳಗಳನ್ನು ಒಂದು ನೀಳವಾದ ಗೆರೆಯಿಂದ ಸೇರಿಸಬೇಕು. ಇದು ಚರಂಡಿಯ ಮಧ್ಯೆ ಹಾದುಹೋಗುವ ರೇಖೆಗೆ ಸಮವಾಗಿರಬೇಕು.

3 ಚರಂಡಿಯನ್ನು ಸಂಸ್ಕರಣ ಕೇಂದ್ರದ ಜಾಗದಿಂದ ಕಟ್ಟಲು ಪ್ರಾರಂಭಿಸಬೇಕು. ಇದರಿಂದ ಒಂದು ಅನುಕೂಲತೆ ಉಂಟು. ಒಂದೊಂದು ಬಡಾವಣೆಯಲ್ಲೂ ಕೆಲಸ ಪೂರ್ತಿ ಆದಂತೆ ಅಲ್ಲಿಂದ ಸಂಸ್ಕರಣ ಕೇಂದ್ರದವರೆಗೆ ಚರಂಡಿಯನ್ನು ಉಪಯೋಗಕ್ಕಾಗಿ ಬಿಟ್ಟುಕೊಡಬಹುದು.

4 ಚರಂಡಿಯನ್ನು ಕಟ್ಟುತ್ತ ಹೋದಂತೆ ನಕಾಶೆಯಲ್ಲಿ ಕಾಣಿಸಿರುವ ಓಟಕ್ಕೆ ಬೇಕಾದ ಎತ್ತರವನ್ನು ಕೊಡುತ್ತ ಹೋಗಬೇಕು. ಆಗಾಗ ಮೋಜಣಿ ಮಾಡುವುದರಿಂದ ಇದನ್ನು ಸರಿಯಾದ ರೀತಿಯಲ್ಲಿ ಸಾಧಿಸಬಹುದು. ಚರಂಡಿಗೆ ಎಷ್ಟು ಓಟವಿರಬೇಕು ಎಂಬುದನ್ನು ಅಲ್ಲಲ್ಲಿ ಮ್ಯಾನ್‌ಹೋಲ್‌ಗಳನ್ನು ಸೇರಿಸುವ ರೇಖೆಯ ಮೇಲೆ ಗುರುತಿಸಬೇಕು. ಅನಂತರ ಗುಂಡಿಗಳನ್ನು ಅಗೆಯಲು ಪ್ರಾರಂಭಿಸಬೇಕು. ಚರಂಡಿಯ ತಳಭಾಗವನ್ನು ಚರಂಡಿಗೆ ಸರಿಯಾದ ಓಟವಿರಬೇಕು.

6 ಗುಂಡಿಯನ್ನು ಅಗೆಯುವಾಗ ಅಂತರ್ಜಲ ಸಿಕ್ಕಿದಲ್ಲಿ ಅದನ್ನು ಪಕ್ಕದಲ್ಲಿ ಒಂದು ಸಣ್ಣ ಚರಂಡಿಯನ್ನು ನಿರ್ಮಿಸಿ ಅಥವಾ ಪಂಪನ್ನು ಉಪಯೋಗಿಸಿ ಹೊರಹಾಕಬೇಕು.

7 ಚರಂಡಿಯ ತಳಭಾಗದಲ್ಲಿ 7.5 ರಿಂದ 15 ಸೆಂ.ಮೀ. ದಪ್ಪದ ಕಾಂಕ್ರೀಟ್ ಪದರವನ್ನು ಕಟ್ಟಬೇಕು. ಆದರೆ ನೆಲದಲ್ಲೇ ಬೇಕಾದ ಆಳದಲ್ಲಿ ಕಲ್ಲು ಸಿಕ್ಕಿದರೆ ಕಾಂಕ್ರೀಟ್ ಪದರದ ಅವಶ್ಯಕತೆ ಇಲ್ಲ. ಈ ಕಾಂಕ್ರೀಟ್ ಪದರ ಪೈಪುಗಳಿಗೆ ಒಳ್ಳೆಯ ಅಡಿಪಾಯವಾಗಿದ್ದು ಸಾಕಷ್ಟು ಸಾಮರ್ಥ್ಯವನ್ನು ಒದಗಿಸುತ್ತದೆ.

8 ವೃತ್ತಾಕಾರವಲ್ಲದ ಇತರ ಚರಂಡಿಗಳನ್ನು ಸ್ಥಳದಲ್ಲೇ ಕಟ್ಟಬೇಕು. ಇವನ್ನು ಕಟ್ಟುವಾಗ ಕಾಂಕ್ರೀಟಿನ ಸರಿಯಾದ ಅಡಿಪಾಯ ಹಾಕಿ ಅದರ ಮೇಲೆ ಚರಂಡಿಯ ಒಂದೊಂದೇ ಭಾಗಗಳನ್ನು ಕಟ್ಟುತ್ತ ಹೋಗಬೇಕು.

9 ಕಾಂಕ್ರೀಟ್ ಚರಂಡಿಗಳನ್ನು ಎರಡು ಮ್ಯಾನ್‌ಹೋಲ್‌ಗಳ ಅಂತರದಲ್ಲಿ ಒಟ್ಟಿಗೆ ಒಂದೇ ಸಲ ಕಟ್ಟಬೇಕು. ದೊಡ್ಡ ಚರಂಡಿಗಳಾದರೆ ಮೊದಲು ತಳಭಾಗವನ್ನು ಕಟ್ಟಿ ಅನಂತರ ಪಕ್ಕ ಹಾಗೂ ಮೇಲ್ಭಾಗವನ್ನು ಕಟ್ಟಬೇಕು.

10 ಚರಂಡಿ ನಿರ್ಮಾಣದ ಜೊತೆಗೆ ಮ್ಯಾನ್‌ಹೋಲ್‌ಗಳನ್ನೂ ಕಟ್ಟುತ್ತ ಹೋಗಬೇಕು. ಇದರಿಂದ ಚರಂಡಿ ಹಾಗೂ ಮ್ಯಾನ್‌ಹೋಲ್‌ಗಳು ಒಟ್ಟಿಗೇ ತಯಾರಾಗಿ ಉಪಯೋಗಕ್ಕೆ ಬಿಡಲು ಅನುಕೂಲವಾಗುತ್ತದೆ.

11 ಚರಂಡಿಯ ಭಾಗಗಳನ್ನು ಪೂರ್ತಿಯಾಗಿ ಕಟ್ಟಿದ ಬಳಿಕ ಅವು ಒಟ್ಟಿಗೆ ಹೊಂದಿಕೊಳ್ಳುವಂತೆ ಸ್ವಲ್ಪ ಕಾಲ ಬಿಡಬೇಕು. ಆಗ, ಜೋಡಿಸಿದ ಭಾಗಗಳು ಗಟ್ಟಿಯಾಗಿ ಹರಿಯುವ ನೀರು ಹೊರಬರದಂತೆ ಸಹಾಯಕವಾಗುವುದು.

12 ಚರಂಡಿಗಾಗಿ ತೋಡಿದ ಗುಂಡಿಗಳನ್ನು ಮುಚ್ಚುವ ಮೊದಲು ಚರಂಡಿಯನ್ನು ಸರಿಯಾದ ಪರೀಕ್ಷೆಗೆ ಒಳಪಡಿಸಬೇಕು. ಈ ಪರೀಕ್ಷೆಯಿಂದ ಪೈಪುಗಳನ್ನು ಜೋಡಿಸಿದ ಭಾಗಗಳು ಸರಿಯಾಗಿ ಇವೆಯೇ ಅಥವಾ ಇಲ್ಲವೇ ಎಂಬುದು ತಿಳಿದುಬರುವುದು. ಇದರಿಂದ ಸರಿಯಾಗಿಲ್ಲದ ಪೈಪುಗಳನ್ನು ಪತ್ತೆ ಹಚ್ಚಿ ಅವನ್ನು ತೆಗೆದು ಬೇರೆ ಉತ್ತಮವಾದ ಪೈಪುಗಳನ್ನು ಜೋಡಿಸಬಹುದು.

13 ಈ ಪರೀಕ್ಷೆ ಮುಗಿದ ತರುವಾಯ ಗುಂಡಿಯನ್ನು ತೋಡುವಾಗ ತೆಗೆದ ಮಣ್ಣಿನಿಂದಲೇ ಆ ಗುಂಡಿಯನ್ನು ಹಂತ ಹಂತವಾಗಿ ಮುಚ್ಚಬೇಕು. ಗುಂಡಿ ಮುಚ್ಚಿದ ಮೇಲ್ಭಾಗ ರಸ್ತೆಯ ಸಮಕ್ಕೆ ಬರುವಂತೆ ಇರಬೇಕು.



**ಚಿತ್ರ 1. ವರ್ತುಲಾಕಾರದ ಕಾಂಕ್ರೀಟ್ ಚರಂಡಿಗಳು**

ಚರಂಡಿಯ ವಿವಿಧ ವಿನ್ಯಾಸಗಳು. 1 ವರ್ತುಲಾಕಾರದ ಕಾಂಕ್ರೀಟ್ ಚರಂಡಿಗಳು: 150–1200 ಮಿಮೀ ವ್ಯಾಸದವರೆಗೆ ನಿರ್ಮಿಸಲಾಗುವುದು. ಇವುಗಳಲ್ಲಿ ಉಕ್ಕಿನ ಸರಳುಗಳು ಇರುವುದರಿಂದ ಬಹಳ ಗಟ್ಟಿಯಾಗಿರುತ್ತವೆ.

2. ವರ್ತುಲಾಕೃತಿಯ ಇಟ್ಟಿಗೆ ಅಥವಾ ಕಾಂಕ್ರೀಟ್ ಚರಂಡಿಗಳು : ಬಹಳ ಆಳದಲ್ಲಿ ಚರಂಡಿಗಳನ್ನು ಕಟ್ಟಬೇಕಾದಲ್ಲಿ ಸುರಂಗಗಳನ್ನು ತೋಡಬೇಕಾಗುತ್ತದೆ. ಅಂಥ ಕಡೆ ಈ ರೀತಿಯ ಚರಂಡಿಗಳು ಬಹಳ ಅನುಕೂಲ. ಮೇಲ್ಭಾಗದ ಮಣ್ಣಿನ ತೂಕವನ್ನು ತಡೆಯಲು ಒಂದು ಅಥವಾ ಎರಡು ಪದರಗಳ ಇಟ್ಟಿಗೆಯ ಕಮಾನನ್ನು ಕಟ್ಟಬೇಕು. ಹೀಗೆ ನಿರ್ಮಿಸಿದ ಚರಂಡಿಯನ್ನು ಒಟ್ಟಿನಲ್ಲಿ ಕಾಂಕ್ರೀಟ್ ಆವರಣದಿಂದ ಮುಚ್ಚಬೇಕು.



**ಚಿತ್ರ 2. ವರ್ತುಲಾಕೃತಿಯ ಇಟ್ಟಿಗೆ ಅಥವಾ ಕಾಂಕ್ರೀಟ್ ಚರಂಡಿಗಳು**

3. ಅಂಡಾಕಾರದ ಚರಂಡಿ : ಇದನ್ನು ಕಾಂಕ್ರೀಟಿನ ಒಳ್ಳೆಯ ಅಡಿಪಾಯದ ಮೇಲೆ ಕಟ್ಟುವರು. ಸಾಧಾರಣವಾಗಿ ಕೊಚ್ಚೆನೀರು ಹಾಗೂ ಮಳೆನೀರು ಎರಡನ್ನೂ ಒಟ್ಟಿಗೆ ಸಾಗಿಸಲು ಇವುಗಳ ಉಪಯೋಗ ಉಂಟು.



**ಚಿತ್ರ 3. ಅಂಡಾಕಾರದ ಚರಂಡಿಯ ಮೂರು ಬಗೆಗಳು**



**ಚಿತ್ರ 4. ಕುದುರೆಲಾಳದ ಆಕಾರದ ಚರಂಡಿ**

ಕೆಲವು ಸಲ ಅಂಡಾಕಾರದ ಚರಂಡಿಗಳ ತಳದ ಒಂದು ಭಾಗವನ್ನು ಸ್ವಲ್ಪ ಆಳವಾಗಿ ಕಟ್ಟಲಾಗುವುದು. ಈ ಭಾಗ ಒಣ ಹವೆಯ ಸಮಯದಲ್ಲಿ ಬರಿಯ ಕೊಚ್ಚೆ ನೀರು ಹರಿಯಲು ಬಹಳ ಉಪಯುಕ್ತ.

4. ಕುದುರೆಲಾಳದ ಆಕಾರದ ಚರಂಡಿ: ಚರಂಡಿಯಲ್ಲಿ ಹರಿಯುವ ನೀರು ಹೆಚ್ಚಾಗಿದ್ದಲ್ಲಿ ಈ ಆಕಾರದ ಚರಂಡಿಗಳು ಬಹಳ ಅನುಕೂಲ. ಇವುಗಳಲ್ಲಿ ತಳ ಬಹಳ ಅಗಲವಾಗಿದ್ದು ಹೆಚ್ಚಿನ ನೀರನ್ನು ಸಾಗಿಸಲು ಉಪಯುಕ್ತವಾಗಿದೆ.

ದೊಡ್ಡ ಚರಂಡಿಗಳ ನಿರ್ಮಾಣದಲ್ಲಿ ವರ್ತುಳಾಕಾರದ ಹಾಗೂ ಅಂಡಾಕಾರದ ಚರಂಡಿಗಳ ವಿನ್ಯಾಸ ಅಷ್ಟಾಗಿ ಗಟ್ಟಿಯಾಗಿರುವುದಿಲ್ಲ. ಅಂಥ ದೊಡ್ಡ ಚರಂಡಿಗಳ ನಿರ್ಮಾಣದಲ್ಲಿ ಈ ಕುದುರೆಲಾಳದ ಆಕಾರದವು ಬಹಳ ಗಟ್ಟಿಯಾಗಿರುವುವು.

5 ಆಯಾಕಾರದ ಮತ್ತು U ಆಕಾರದ ಚರಂಡಿಗಳು : ನೀರಿನ ಓಟವನ್ನು ಸ್ವಲ್ಪಮಟ್ಟಿಗೆ ತಡೆಹಿಡಿಯಲು ಚರಂಡಿಗಳು ಬಹಳ ಅನುಕೂಲವಾದವು. ತಳಭಾಗವನ್ನು U ಆಕಾರದಲ್ಲಿ ಕಟ್ಟಿದರೆ ನೀರಿನ ಓಟಕ್ಕೆ ಅನುಕೂಲವಾಗುವುದು.

6 ಅರ್ಧವರ್ತುಳಾಕಾರದ ಚರಂಡಿ : ಇದರ ತಳ ಸಾಕಷ್ಟು ಅಗಲವಾಗಿದ್ದು ದೊಡ್ಡ ದೊಡ್ಡ ಚರಂಡಿಗಳನ್ನು ನಿರ್ಮಿಸುವಲ್ಲಿ ಈ ಆಕಾರ ಬಹಳ ಅನುಕೂಲ.

7 ಪರವಲಯದ ಆಕಾರದ ಚರಂಡಿ : ಈ ರೀತಿಯ ಆಕಾರದ ಚರಂಡಿ ಹೆಚ್ಚಿನ ನೀರನ್ನು ಸಾಗಿಸಲು ಅನುಕೂಲ.

8 ಬುಟ್ಟಿಯ ಹಿಡಿಯ ಆಕಾರದ ಚರಂಡಿ: ಇದು ಮಳೆನೀರು ಹಾಗೂ ಹೊಲಸು ನೀರನ್ನು ಒಟ್ಟಿಗೆ ಸಾಗಿಸಲು ಬಹಳ ಅನುಕೂಲ. ಸ್ವಲ್ಪ ಆಳವಾಗಿರುವ ಇದರ ತಳದ ಭಾಗ ಒಣ ಹವೆಯಲ್ಲಿ ಬರಿಯ ಹೊಲಸು ನೀರನ್ನು ಸಾಗಿಸಲು ಬಹಳ ಉಪಯುಕ್ತ.

9 ಅತಿ ಮೆದುವಾದ ಮಣ್ಣಿನಲ್ಲಿ ದೊಡ್ಡ ಚರಂಡಿಗಳನ್ನು ಕಟ್ಟಬೇಕಾದರೆ ಚರಂಡಿಗಳಿಗೆ ಬಲವಾದ ಅಡಿಪಾಯವಿರಬೇಕು. ಕಾಂಕ್ರೀಟಿನ ಒಡ್ಡುಗಳನ್ನು ಕಟ್ಟಿ ಅವುಗಳ ಮೇಲೆ ಕಾಂಕ್ರೀಟ್ ಚಪ್ಪಡಿಗಳನ್ನು ಕಟ್ಟಿ ಅದರ ಮೇಲೆ ಚರಂಡಿಗಳನ್ನು ನಿರ್ಮಿಸಬೇಕು. ಉದಾಹರಣೆಗಾಗಿ ಒಂದು ವಿಧಾನವನ್ನು ಚಿತ್ರದಲ್ಲಿ ಕಾಣಿಸಿವೆ.



**ಚಿತ್ರ 5. ವಿವಿಧ ಆಕಾರದ ಚರಂಡಿಗಳು : 1. ಆಯಾಕಾರದ ಚರಂಡಿ, 2. ಅರ್ಧವರ್ತುಳಾಕಾರದ ಚರಂಡಿ, 3. ಪರವಲಯದ ಆಕಾರದ ಚರಂಡಿ, 4. ಬುಟ್ಟಿಯ ಹಿಡಿಯ ಆಕಾರದ ಚರಂಡಿ, 5. ಕಾಂಕ್ರೀಟಿನ ಒಡ್ಡುಗಳ ಮೇಲೆ ನಿರ್ಮಿಸುವ ಚರಂಡಿ**

ಮಳೆನೀರಿನ ಚರಂಡಿಗಳು : ಇವುಗಳ ನಿರ್ಮಾಣ ಹಾಗೂ ಆವಶ್ಯಕತೆಗಳನ್ನು ತಿಳಿದುಕೊಳ್ಳುವ ಮೊದಲು ಪ್ರತಿಯೊಂದು ಪ್ರದೇಶದಲ್ಲೂ ಬೀಳುವ ವಾರ್ಷಿಕ ಮಳೆಯ ಮೊತ್ತವನ್ನು ತಿಳಿದಿರಬೇಕು. ಸಾಧಾರಣವಾಗಿ ವರ್ಷದಲ್ಲಿ ಸರಾಸರಿ 76 ಸೆಂ.ಮೀ.ಗಿಂತ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹೊಲಸು ನೀರು ಮತ್ತು ಮಳೆನೀರನ್ನು ಸಾಗಿಸಲು ಒಂದೇ ಚರಂಡಿಯನ್ನು ಉಪಯೋಗಿಸಬಹುದು. ಇವುಗಳ ವಿನ್ಯಾಸವನ್ನು ಹಿಂದೆಯೇ ವಿವರಿಸಿದೆ. ಇದಕ್ಕಾಗಿ ಅಂಡಾಕಾರದ ಚರಂಡಿ, ಅರ್ಧ ವರ್ತುಳಾಕಾರದ ಚರಂಡಿ, ಕುದುರೆಲಾಳದ ಆಕಾರದ ಚರಂಡಿ ಮುಂತಾದವನ್ನು ಉಪಯೋಗಿಸಬಹುದು. ಇವುಗಳ ನಕಾಶೆ ತಯಾರಿಸುವಾಗ ಸಾಮಾನ್ಯವಾಗಿ ಹರಿದುಹೋಗುವ ನೀರಿನ ಮೊತ್ತಕ್ಕಿಂತ ಹೆಚ್ಚಿನ ನೀರು ಹರಿದು ಹೋಗಲು ಅವಕಾಶ ಕಲ್ಪಿಸಿಕೊಡಬೇಕು. ವರ್ಷದಲ್ಲಿ ಸರಾಸರಿ ಮಳೆ 70 ಸೆಂ.ಮೀ. ಗಿಂತ ಹೆಚ್ಚಿರುವ ಕಡೆಗಳಲ್ಲಿ ಹೊಲಸು ನೀರು ಹಾಗೂ ಮಳೆನೀರು ಹರಿದುಹೋಗಲು ಬೇರೆ ಬೇರೆ ಚರಂಡಿಗಳನ್ನು ನಿರ್ಮಿಸಬೇಕು. ಈ ಹಿಂದೆ ಕೊಟ್ಟಿರುವ ಯಾವ ಚರಂಡಿಯ ಮಾದರಿಯನ್ನು ಬೇಕಾದರೂ ಅನುಸರಿಸಿ ರಚಿಸಬಹುದು. ಮಳೆ ನೀರು ಹರಿದು ಹೋಗಲು ಭೂಮಿಯ ಮೇಲೆ ನಿರ್ಮಿಸುವ ಹೊರಚರಂಡಿಗಳನ್ನು ಕೂಡ ಉಪಯೋಗಿಸಬಹುದು. ಇವನ್ನು ಪ್ರತಿಯೊಂದು ರಸ್ತೆಯ ಅಂಚಿನಲ್ಲಿಯೂ ನಿರ್ಮಿಸಬೇಕು.

ಚಿತ್ರ 6ರಲ್ಲಿ ಕಾಣಿಸಿರುವ ಚರಂಡಿಗಳಲ್ಲಿ 1 ರಿಂದ 4 ರವರೆಗೆ ಸಾಧಾರಣ ಮಳೆಯಿರುವ ಕಡೆ ಉಪಯೋಗಿಸುವ ಚರಂಡಿಗಳು. 5, 6 ರಲ್ಲಿ ಕೊಟ್ಟಿರುವ ಚರಂಡಿಗಳನ್ನು ಹೆಚ್ಚಿನ ಮಳೆ ಬರುವ ಕಡೆ ಉಪಯೋಗಿಸಬಹುದು.

ಚರಂಡಿಗಳನ್ನು ಕಾಂಕ್ರೀಟ್ ಅಡಿಪಾಯದ ಮೇಲೆ ಸೈಜು ಕಲ್ಲು ಅಥವಾ ಇಟ್ಟಿಗೆಗಳಿಂದ ಕಟ್ಟಬಹುದು. ರಸ್ತೆಯ ನಿರ್ಮಾಣ ಸರಿಯಾಗಿದ್ದರೆ ಮಳೆ ನೀರು ಚರಂಡಿಗೆ ಸರಾಗವಾಗಿ ಹರಿದುಹೋಗುವುದು. ಕೆಲವು ಸಲ ರಸ್ತೆಯಲ್ಲಿ ಹರಿಯುವ ನೀರು ಮ್ಯಾನ್‌ಹೋಲ್ ಮೂಲಕ ಒಳಚರಂಡಿಯನ್ನು ಸೇರುತ್ತದೆ. ಹೀಗೆ ಹರಿದುಹೋಗುವ ಮಳೆಯ ನೀರು



**ಚಿತ್ರ 6. ಮಳೆಯಿರುವ ಕಡೆ ನಿರ್ಮಿಸಲಾಗುವ ವಿವಿಧ ಬಗೆಯ ಚರಂಡಿಗಳು**

ಸಮುದ್ರ, ನದಿ, ಕೆರೆ ಅಥವಾ ಊರಿನ ಹೊರವಲಯದಲ್ಲಿರುವ ತಗ್ಗು ಪ್ರದೇಶಕ್ಕೆ ಹೋಗಿ ಬೀಳುವಂತೆ ಏರ್ಪಡಿಸಬೇಕು. **(ಕೆ.ಎ.ಆರ್.; ಜಿ.ಟಿ.ಜಿ.)**

**ಚರಕ**[1] **:** ಆಯುರ್ವೇದದಲ್ಲಿ ಸುಪ್ರಸಿದ್ಧ ವೈದ್ಯನೊಬ್ಬನ ಹೆಸರು. ಈತ ರಚಿಸಿದ ಶಾಸ್ತ್ರಗ್ರಂಥಕ್ಕೂ ಇವನ ಹೆಸರೇ ಇದೆ. ಅದನ್ನು ಚರಕಸಂಹಿತೆ ಎಂದೂ ಕರೆಯುತ್ತಾರೆ. ಪ್ರಾಚೀನ ಭಾರತದಲ್ಲಿ ಚರಕ ಎಂಬ ಪದ ವೃತ್ತಿಸೂಚಕವಾಗಿದ್ದಿತೆಂದು ತೋರುತ್ತದೆ. ಕೃಷ್ಣಯಜುರ್ವೇದ ಶಾಖೆಯ ವೈದಿಕರು, ಸಂಚರಣಶೀಲ ಶಾಸ್ತ್ರಬೋಧಕರು, ವ್ಯಾಯಾಮನಿಪುಣರು, ಗೂಢಚಾರರು ಮುಂತಾದವರನ್ನು ಚರಕರೆಂದು ಕರೆಯಲಾಗುತ್ತಿತ್ತು. ಮುಖ್ಯವಾಗಿ ವ್ಯಾಕರಣ, ಜ್ಯೋತಿಷ್ಯ, ಆಯುರ್ವೇದ, ಧನುರ್ವೇದ ಮುಂತಾದ ಶಾಸ್ತ್ರಗಳಲ್ಲಿ ನಿಷ್ಣಾತರಾಗಿ ಶಿಷ್ಯರಿಗೆ ಅವನ್ನು ಬೋಧಿಸುತ್ತ ಸಂಚರಿಸುತ್ತಿದ್ದ ಋಷಿಮುನಿಗಳನ್ನು ಚರಕಾಚಾರ್ಯರೆಂದೇ ಕರೆದಿದ್ದಿರಬಹುದೆಂದು ಊಹಿಸಲಾಗಿದೆ. ಇಂಥವರಲ್ಲಿ ಆಯುರ್ವೇದಶಾಸ್ತ್ರದ ಅತಿಮುಖ್ಯ ಗ್ರಂಥವನ್ನು ರಚಿಸಿದಾತ ಒಬ್ಬ ಚರಕಾಚಾರ್ಯ. ಇವನ ಜನ್ಮಸ್ಥಳ, ವಂಶವೃತ್ತಾಂತ, ಕಾಲ ಮುಂತಾದ ವಿವರಗಳಾವುವೂ ನಿರ್ದಿಷ್ಟವಾಗಿ ತಿಳಿದಿಲ್ಲ. ಪುರಾಣಗ್ರಂಥಗಳಲ್ಲಿ ಇವನನ್ನು ಆದಿಶೇಷನ ಅವತಾರವೆಂದು ವರ್ಣಿಸಲಾಗಿದೆ. ವಾಗ್ಭಟಾಚಾರ್ಯ ಮತ್ತು ಭಾವಮಿಶ್ರರು ಇವನನ್ನು ಮುನಿ ಎಂದು ತಿಳಿಸುತ್ತಾರೆ. ಪಾಣಿನಿಯ ವ್ಯಾಕರಣದ ಮೇಲಿನ ಮಹಾಭಾಷ್ಯದ ಕರ್ತೃವಾದ ಪತಂಜಲಿ ಋಷಿಯೇ ಚರಕಾಚಾರ್ಯನೆಂದೂ ಪತಂಜಲಿ ಆದಿಶೇಷನ ಅವತಾರವೆಂದೂ ವಿಜ್ಞಾನಭಿಕ್ಷು ಮತ್ತು ಭೋಜ ಎಂಬುವರು ವರ್ಣಿಸಿದ್ದಾರೆ. ಚಕ್ರಪಾಣಿ ದತ್ತನೆಂಬ ವ್ಯಾಖ್ಯಾನಕಾರ ಚರಕಸಂಹಿತೆಗೆ ಪತಂಜಲಿಯೇ ಪ್ರಥಮ ಭಾಷ್ಯಕಾರನೆಂದು ಸ್ತುತಿಸಿದ್ದಾನೆ. ಚೀನದೇಶದಲ್ಲಿ ದೊರೆತ ಬೌದ್ಧ ತ್ರಿಪಿಟಿಕ ಗ್ರಂಥಗಳಲ್ಲಿ ಇಂಡೋಸಿಥಿಯನ್ ದೊರೆ ಕಾನಿಷ್ಕನ ಆಸ್ಥಾನದಲ್ಲಿ ಚರಕನೆಂಬ ವೈದ್ಯಾಚಾರ್ಯನಿದ್ದನೆಂದು ತಿಳಿಸಲಾಗಿದೆ. ಚರಕಸಂಹಿತೆಯ ಆಂತರಿಕ ಲಕ್ಷಣ, ಭಾಷಾಶೈಲಿ, ಚಾರಿತ್ರಿಕ ಹಿನ್ನೆಲೆ ಮುಂತಾದ ಆಧಾರಗಳೆಲ್ಲವನ್ನೂ ವಿಮರ್ಶಿಸಿರುವ ಪ್ರಾಚ್ಯವಿದ್ಯಾ

ಸಂಶೋಧಕರ ಅಭಿಪ್ರಾಯದಲ್ಲಿ ಅದರ ಕರ್ತೃವೂ ಮಹಾಭಾಷ್ಯದ ಕರ್ತೃ ಪತಂಜಲಿಯೂ ಭಿನ್ನವ್ಯಕ್ತಿಗಳು; ಕಾನಿಷ್ಕನ ಆಸ್ಥಾನದ ವಸುಮಿತ್ರ ಅಶ್ವಘೋಷ, ನಾಗಾರ್ಜುನ ಮೊದಲಾದವರ ಗ್ರಂಥಗಳಲ್ಲಿ ಕಂಡುಬರುವಂಥ ಬೌದ್ಧಧರ್ಮೀಯ ವಿಷಯಗಳು ಚರಕಸಂಹಿತೆಯಲ್ಲಿ ಕಾಣದಿರುವುದು ಮತ್ತು ಚರಕಸಂಹಿತೆಯ ಶೈಲಿಯ ಭಿನ್ನತೆಗಳು ಚರಕಸಂಹಿತೆಯ ಕರ್ತೃವೂ ರಾಜವೈದ್ಯ ಚರಕನೂ ಭಿನ್ನ ವ್ಯಕ್ತಿಗಳೆಂದು ದೃಢಪಡಿಸುತ್ತವೆ. ಮತ್ತು ಚರಕಸಂಹಿತೆಯ ಕಾಲ ಪ್ರಶ. ಪೂ. 1 ಅಥವಾ 2ನೆಯ ಶತಮಾನಕ್ಕೇ ಸರಿಯಾಗಬಲ್ಲುದು. ಭಾರತದ ವಿಜ್ಞಾನಿಗಳ ರಾಷ್ಟ್ರೀಯ ಸಂಸ್ಥೆ (ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಆಫ್ ಇಂಡಿಯ) ನಡೆಸಿದ ಸಮೀಕ್ಷೆಯ ಪ್ರಕಾರ ಚರಕಸಂಹಿತೆಯ ರಚನೆಯ ಕಾಲ ಪ್ರಶ. 100 ಎಂದಿದೆ. ಚರಕ ಸಂಹಿತೆಯ ಕರ್ತೃ ಚರಕಾಚಾರ್ಯ ಪ್ರಶ.ಪೂ. ಎರಡನೆಯ ಶತಮಾನದಲ್ಲಿದ್ದ ಋಷಿ : ಇವನ ಗ್ರಂಥಕ್ಕೆ ಭಾಷ್ಯವನ್ನು ಬರೆದ (ಪ್ರಶ. ನಾಲ್ಕನೆಯ ಶತಮಾನದಲ್ಲಿದ್ದ ಪ್ರಸಿದ್ಧ ಲೋಹವಿಜ್ಞಾನಿ) ಪತಂಜಲಿ ಎಂಬಾತ, ಕನಿಷ್ಕನ (ಪ್ರಶ. ಎರಡನೆಯ ಶತಮಾನ) ರಾಜವೈದ್ಯ ಚರಕನ ನಾಮಸಾದೃಶ್ಯವುಳ್ಳ ಅನಂತರಕಾಲೀನ ವ್ಯಕ್ತಿ ಎಂಬ ಅಭಿಪ್ರಾಯ ಈಗ ಮಾನ್ಯತೆ ಪಡೆದಿದೆ.

ಚರಕಸಂಹಿತೆ ಚರಕಾಚಾರ್ಯನ ಸ್ವತಂತ್ರಕೃತಿಯಲ್ಲ. ಪ್ರಶ.ಪೂ. ಏಳನೆಯ ಶತಮಾನದ ಮಹರ್ಷಿ ಕೃಷ್ಣಾತ್ರೇಯ ಬೋಧಿಸಿದ ಸಿದ್ಧಾಂತಗಳನ್ನು ಆತನ ಶಿಷ್ಯೋತ್ತಮವಾದ ಅಗ್ನಿವೇಶ ಋಷಿ ಗ್ರಂಥವನ್ನಾಗಿ ರಚಿಸಿದ. ದೇವತೆಗಳಿಂದಲೂ ಶ್ಲಾಘಿಸಲ್ಪಟ್ಟ ಈ ಅಗ್ನಿವೇಶಸಂಹಿತೆ ಆಯುರ್ವೇದ ಅಧ್ಯಯನ ಅಧ್ಯಾಪನಾದಿಗಳಿಗೆ ಆಧಾರಗ್ರಂಥವಾಗಿ ಮುಂದಿನ ಶತಮಾನಗಳಲ್ಲಿ ಮಾನ್ಯತೆ ಪಡೆಯಿತು. ದೇಶದಲ್ಲಿ ಉಂಟಾದ ರಾಜಕೀಯ ಕ್ಷೋಭೆ, ಪರಕೀಯರ ಆಕ್ರಮಣ ಮುಂತಾದ ಹಲವಾರು ಕಾರಣಗಳಿಂದ ಈ ಅಗ್ನಿವೇಶ ಸಂಹಿತೆ ಪ್ರಶ. ಪೂ. ಎರಡನೆಯ ಶತಮಾನದ ವೇಳೆಗೆ ದುಷ್ಪ್ರಾಪ್ಯವೂ ಅಸಮಗ್ರವೂ ಆಗಿದ್ದುದನ್ನು ಕಂಡು ಅದನ್ನು ಪುನಃ ಸಂಪಾದಿಸಿ ಪರಿಷ್ಕರಿಸಿ ಅಧ್ಯಯನಯೋಗ್ಯವನ್ನಾಗಿ ಮಾಡಿದ ಕೀರ್ತಿ ಚರಕಾಚಾರ್ಯನಿಗೆ ಸಲ್ಲುತ್ತದೆ. ಪ್ರತಿಸಂಸ್ಕಾರಾನಂತರ ಈ ಗ್ರಂಥ ಚರಕಸಂಹಿತೆಯೆಂದೇ ಖ್ಯಾತಿ ಪಡೆಯಿತು. ಮುಂದಿನ ಮೂರು ಶತಮಾನಗಳು ಕಳೆಯುವುದರೊಳಗೆ ಇದು ಕೂಡ ಅಸಂಪೂರ್ಣವಾಗಿ ದೊರೆಯುವಂತಾಯಿತು. ಕಾಶ್ಮೀರದ ಪಂಚನಪುರವೆಂಬಲ್ಲಿ ಪ್ರಶ. ನಾಲ್ಕನೆಯ ಶತಮಾನದಲ್ಲಿದ್ದ ಕಪಿಲಬಲನೆಂಬವನ ಪುತ್ರನಾದ ದೃಢಬಲನೆಂಬಾತ ಚರಕಸಂಹಿತೆಯನ್ನು ಪುನಃ ಪರಿಷ್ಕರಿಸಿ ಅಂತ್ಯದ 41 ಅಧ್ಯಾಯಗಳನ್ನು ತಾನೇ ರಚಿಸಿ ಗ್ರಂಥಕ್ಕೆ ಸೇರಿಸಿ ಅದನ್ನು ಸಂಪೂರ್ಣಗೊಳಿಸಿದ. ಇದೇ ನಮಗೆ ಇಂದು ದೊರೆತಿರುವ ಚರಕಸಂಹಿತೆ–ಮಹರ್ಷಿ ಕೃಷ್ಣಾತ್ರೇಯನ ಬೋಧನೆಗಳುಳ್ಳ, ಅಗ್ನಿವೇಶ ಋಷಿಪ್ರಣೀತವಾದ, ಚರಕಾಚಾರ್ಯನಿಂದ ಪ್ರತಿ ಸಂಸ್ಕೃತವಾದ ದೃಢಬಲನಿಂದ ಸಂಪೂರ್ಣಗೊಳಿಸಲ್ಪಟ್ಟ ಆಯುರ್ವೇದ ಶಾಸ್ತ್ರದ ಅತ್ಯಮೂಲ್ಯ ಆಧಾರ ಗ್ರಂಥ.

ಚರಕಸಂಹಿತೆಯಲ್ಲಿ ಅನುಕ್ರಮವಾಗಿ 30 ಅಧ್ಯಾಯಗಳ ಸೂತ್ರಸ್ಥಾನ, ಪ್ರತ್ಯೇಕ 8 ಆಧ್ಯಾಯಗಳ ನಿದಾನ, ವಿಮಾನ ಮತ್ತು ಶಾರೀರಸ್ಥಾನಗಳು, 12 ಅಧ್ಯಾಯಗಳ ಇಂದ್ರಿಯಸ್ಥಾನ, 30 ಅಧ್ಯಾಯಗಳ ಚಿಕಿತ್ಸಾಸ್ಥಾನ, ಪ್ರತ್ಯೇಕ 12 ಅಧ್ಯಾಯಗಳ ಕಲ್ಪ ಮತ್ತು ಸಿದ್ಧಿಸ್ಥಾನಗಳು– ಹೀಗೆ 120 ಅಧ್ಯಾಯಗಳುಳ್ಳ ಎಂಟು ಸ್ಥಾನಗಳಿವೆ. ಆಯುರ್ವೇದದ ಮೂಲಸಿದ್ಧಾಂತಗಳು, ಔಷಧ ಹಾಗೂ ಆಹಾರದ್ರವ್ಯಗಳ ಗುಣಧರ್ಮ ಸ್ವಸ್ಥವೃತ್ತ ಮುಂತಾದವು ಸೂತ್ರಸ್ಥಾನದ ವಿಷಯ. ರೋಗಕಾರಣ ಮತ್ತು ಲಕ್ಷಣಗಳನ್ನು ನಿದಾನಸ್ಥಾನವೂ ಷಡ್ರಸಗಳ ಗುಣಕರ್ಮ, ರೋಗಿಪರೀಕ್ಷೆ, ವೈದ್ಯನೀತಿ ಮುಂತಾದವನ್ನು ವಿಮಾನಸ್ಥಾನವೂ ಸಾಂಖ್ಯದರ್ಶನಾನುಸಾರ ವಿಶ್ವಸೃಷ್ಟಿ, ಶರೀರರಚನೆ, ಅಂಗಾವಯವಗಳ ವಿವರಣೆಯನ್ನು ಶರೀರಸ್ಥಾನವೂ ಮರಣಸೂಚಕ ಲಕ್ಷಣಗಳ ವಿವರಣೆಯನ್ನು ಇಂದ್ರಿಯಸ್ಥಾನವೂ ಹೊಂದಿವೆ. ರೋಗಗಳ ಚಿಕಿತ್ಸಾಕ್ರಮ ಚಿಕಿತ್ಸಾಸ್ಥಾನದಲ್ಲಿದೆ. ಔಷಧಿಗಳನ್ನು ತಯಾರಿಸುವ ಕ್ರಮ ಕಲ್ಪಸ್ಥಾನದಲ್ಲಿದೆ. ಚಿಕಿತ್ಸಾಕಾಲದಲ್ಲಿ ಉಂಟಾಗಬಹುದಾದ ವೈಪರೀತ್ಯಗಳ ಜ್ಞಾನ ಮತ್ತು ನಿವಾರಣೋಪಾಯಗಳನ್ನು ಸಿದ್ಧಿಸ್ಥಾನದಲ್ಲಿ ವಿವರಿಸಲಾಗಿದೆ.

ಆಯುರ್ವೇದದ ಅಷ್ಟಾಂಗಗಳಲ್ಲಿ ಮೊದಲನೆಯದಾದ ಕಾಯಚಿಕಿತ್ಸೆ ಎಂಬ ವಿಭಾಗಕ್ಕೆ ಚರಕಸಂಹಿತೆಯೇ ಆಧಾರಗ್ರಂಥ. ಬಾಹ್ಯ ಪ್ರಪಂಚದಲ್ಲಿರುವಂತೆಯೇ ಶರೀರದಲ್ಲಿಯೂ ಅಗ್ನಿ ಉಂಟು. ಉದರದ ಒಳಭಾಗದಲ್ಲಿರುವ ಅಗ್ನಿ (ಇದಕ್ಕೆ ಜಠರಾಗ್ನಿ, ಕೋಷ್ಠಾಗ್ನಿ, ಔದಾರ್ಯ ತೇಜಸ್, ಪಾಚಕಪಿತ್ತ ಎಂಬ ಬೇರೆ ಸಂಕೇತಗಳೂ ಉಂಟು) ನಾವು ಸೇವಿಸಿದ ಆಹಾರವನ್ನು ಪಾಕ ಮಾಡುತ್ತದೆ. ರಸ, ರಕ್ತ ಮೊದಲಾದ ಸಪ್ತಧಾತುಗಳಲ್ಲಿರುವ ವಿಶಿಷ್ಟ ಅಗ್ನಿಗಳು ಜಠರಾಗ್ನಿಯಿಂದ ಬಲವನ್ನು ಪಡೆದು ತಮ್ಮ ಆಹಾರಾಂಶಗಳನ್ನು ಪಾಕಮಾಡುತ್ತವೆ. ಕೋಷ್ಠಾಗ್ನಿ ಮತ್ತು ಧಾತ್ವಗ್ನಿಗಳು ಪ್ರಾಕೃತವಾಗಿರುವಾಗ ಶರೀರ ಅನೇಕ ರೋಗಗಳಿಗೆ ತುತ್ತಾಗುತ್ತದೆ. ಆ ಸಮಯದಲ್ಲಿ ಅಗ್ನಿಯನ್ನು ಪ್ರಾಕೃತ ಸ್ಥಿತಿಗೆ ತರುವುದೇ ರೋಗನಿವಾರಣೆಯ ಕ್ರಮ. ಕಾಯಚಿಕಿತ್ಸೆ ಎಂದರೆ ಕಾಯಾಗ್ನಿ ಚಿಕಿತ್ಸೆ ಎಂಬುದೇ ಈ ವಿಭಾಗದ ಮೂಲಸಿದ್ಧಾಂತ. ಚರಕಸಂಹಿತೆಯಲ್ಲಿರುವ ಇತರ ಸಿದ್ಧಾಂತಗಳೆಲ್ಲವೂ ಅಗ್ನಿತತ್ತ್ವವನ್ನೇ ಮುಖ್ಯವಾಗಿಟ್ಟುಕೊಂಡು ಬೆಳೆದಿವೆ. ಜಠರಾಗ್ನಿಯನ್ನು ದೀಪನ ಮಾಡುವುದಕ್ಕಾಗಿ ಬಾಯಿಯ ಮೂಲಕವೇ ಔಷಧಿಗಳ ಪ್ರಯೋಗ. ಔಷಧಿಗಳಲ್ಲಿ ಹೆಚ್ಚಿನವು ಗಿಡಮೂಲಿಕೆಗಳಿಂದ ತಯಾರಾದವು. ನಿರುಪದ್ರವಿಯೂ ಯಶಸ್ವಿಯೂ ಆದ ಕಾಯಚಿಕಿತ್ಸಾ ಕ್ರಮವನ್ನು ವಿವರಿಸುವ ಚರಕಸಂಹಿತೆಗೆ ಆಯುರ್ವೇದ ಸಾಹಿತ್ಯದಲ್ಲಿ ಅಗ್ರಸ್ಥಾನ ಉಂಟು. ಋಷಿಪ್ರಣೀತವಾದ್ದರಿಂದ ಶ್ರೇಷ್ಠತೆಯನ್ನು ಪಡೆದ ಈ ಸಂಹಿತೆ ಸರ್ವಮಾನ್ಯವಾಗಿದ್ದಿತೆಂಬುದಕ್ಕೆ ಇದರ ಸುಮಾರು 30ಕ್ಕೂ ಹೆಚ್ಚು ವಿದ್ವತ್ಪೂರ್ಣ ಸಂಸ್ಕೃತ ವ್ಯಾಖ್ಯಾನಗಳೇ ಸಾಕ್ಷಿ. ಪ್ರಶ. ಐದನೆಯ ಶತಮಾನದ ಈಶಾನದೇವ, ಭಟ್ಟಾರ ಹರಿಶ್ಚಂದ್ರರಿಂದ ಪ್ರಾರಂಭಿಸಿ ವಾಷ್ಪಚಂದ್ರ, ಬಕುಳತರ, ಭೀಮದತ್ತ, ನರದತ್ತ, ಜೇಜ್ಜಟ, ಗುಣಾಕಾರ, ಚಕ್ರಪಾಣಿದತ್ತ, ಸ್ವಾಮಿಕುಮಾರ, ಶಿವದಾಸಸೇನ, ಗಂಗಾಧರರಾಯ ಮತ್ತು ಇಪ್ಪತ್ತನೆಯ ಶತಮಾನದ ಯೋಗೇಂದ್ರನಾಥ ಸೇನರ ವರೆಗೆ ಅನೇಕ ಪಂಡಿತರ ವ್ಯಾಖ್ಯಾನಗಳಿವೆ. ಇವುಗಳ ಪೈಕಿ 11ನೆಯ ಶತಮಾನದಲ್ಲಿ ಬಂಗಾಳದ ಗೌಡದೇಶದ ರಾಜ ನಯಪಾಲನ ಆಸ್ಥಾನವೈದ್ಯನೂ ಪಾಠಶಾಲಾಧ್ಯಕ್ಷನೂ ಆಗಿದ್ದ ಚಕ್ರಪಾಣಿದತ್ತ ರಚಿಸಿರುವ ಆಯುರ್ವೇದದ ದೀಪಿಕಾ ವ್ಯಾಖ್ಯಾನ ಅತ್ಯಂತ ವಿದ್ವತ್ಪೂರ್ಣವಾಗಿದ್ದು ಕರ್ತೃವಿಗೆ ಚರಕ ಚತುರಾನನ ಎಂಬ ಪ್ರಶಸ್ತಿಯನ್ನು ಗಳಿಸಿಕೊಟ್ಟಿತು. ಈಗ ಸಮುಗ್ರವಾಗಿ ಲಭ್ಯವಾಗಿರುವ ವ್ಯಾಖ್ಯಾನಗಳಲ್ಲಿ ಇದೇ ಪ್ರಾಚೀನವಾದುದಾಗಿದ್ದು ಇದರ ಮಹತ್ತ್ವವನ್ನು ಮತ್ತಷ್ಟು ಹೆಚ್ಚಿಸಿದೆ. ಚರಕಸಂಹಿತೆಯ ಖ್ಯಾತಿ ಅನ್ಯದೇಶಗಳಿಗೂ ಹರಡಿದ್ದು ಎಂಟನೆಯ ಶತಮಾನದಲ್ಲೇ ಇದರ ಅರಬ್ಬಿ ಮತ್ತು ಪರ್ಷಿಯನ್ ಭಾಷಾಂತರಗಳು ದೊರೆಯುತ್ತಿದ್ದುವಂತೆ. ಈಚೆಗೆ ಇದರ ಆಂಗ್ಲಭಾಷಾನುವಾದವೂ ರಚಿತವಾಗಿದೆ. (ಕೆ.ಆರ್.ಎಸ್.)

**ಚರಕ :** ಹತ್ತಿಯಿಂದ ನೂಲು ತಗೆಯುವ ಸಾಧನ. ಇದನ್ನು ರಾಟೆಯೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಒಂದು ಕೈಯಿಂದ ತಿರುಗಿಸುವುದು ವಾಡಿಕೆ.



ಬಹುಕಾಲದವರೆಗೆ ಮಾನವನ ನಾಗರಿಕತೆ ವ್ಯವಸಾಯ ಮತ್ತು ನೇಯ್ಗೆಗಳಿಗೆ ಸೀಮಿತವಾಗಿದ್ದಿತೆಂದು ನಾವು ಭಾವಿಸಬಹುದು. ನೇಯ್ಗೆಯಲ್ಲಿ ಮುಖ್ಯ ಭಾಗ ನೂಲು; ನೂಲನ್ನು ಮಾಡಲು ಮನುಷ್ಯ ರಾಟೆಯನ್ನು ಕಂಡುಹಿಡಿದ. ಆಚೆ ಈಚೆ ಪಟ್ಟಿಯ ಮೇಲೆ ನಿಲ್ಲಿಸಿರುವ, ಎರಡು ಮರದ ತುಂಡುಗಳ ನಡುವೆ, ದುಂಡಗಿರುವ ಒಂದು ಮರದ ಚಕ್ರವನ್ನು ನಿಲ್ಲಿಸಿ ಅದಕ್ಕೆ ಒಂದು ದಾರವನ್ನು ಜೋಡಿಸಿ, ಅದನ್ನು ಕದರಿಗೆ ಲಗತ್ತಿಸಿ ಹಿಡಿಯನ್ನು ತಿರುಗಿಸುವುದರಿಂದ ಕದರಿನಲ್ಲಿ ನೂಲನ್ನು ತೆಗೆಯುವ ಸಾಧನವೇ ರಾಟೆ. ಅದರ ಅತಿಪ್ರಾಚೀನ ಮತ್ತು ಪ್ರಥಮ ಅವತಾರವನ್ನು ಇಂದಿನ ಗಾಡಿಚಕ್ರಕ್ಕೆ ಹೋಲಿಸಬಹುದು. ಹತ್ತಿಯಿಂದ ಹಿಂಜಿ ಮಾಡಿ ಅದರಿಂದ ರಾಟೆಯಲ್ಲಿ ನೂಲನ್ನು ನೂತು ಅತಿಪ್ರಾಚೀನ ಕಾಲದಿಂದಲೂ ವಸ್ತ್ರಗಳನ್ನು ತಯಾರಿಸುತ್ತಿದ್ದರು. ರಾಟೆಯಲ್ಲಿ ನೂಲುವುದು ಗೃಹಿಣಿಯ ಅನಿವಾರ್ಯ ಕೆಲಸವಾಗಿತ್ತು. ಮಹಿಳೆಯರು ಅದನ್ನು ಒಂದು ದೊಡ್ಡ ಕುಶಲಕಲೆಯನ್ನಾಗಿ ಮಾಡಿಕೊಂಡು, ಧನಿಕರ ಮನೆಯಲ್ಲಿರಲಿ ಅರಮನೆಯಲ್ಲಿರಲಿ ರಾಟೆಯಲ್ಲಿ ನೂಲುವುದನ್ನು ಮಾತ್ರ ಬಿಡುತ್ತಿರಲಿಲ್ಲ. ತನ್ನ ವಸ್ತ್ರಕ್ಕಾಗಿ ರಾಟೆಯಲ್ಲಿ ನೂಲನ್ನು ನೂಲದವನ ಸ್ವಾವಲಂಬನೆ ಪೂರ್ಣವಾಗುತ್ತಿರಲಿಲ್ಲ. ಪ್ರತಿ ವ್ಯವಸಾಯಗಾರನೂ ಮನೆಯಲ್ಲಿ ರಾಟೆ ಇಟ್ಟುಕೊಂಡು, ಊಟಕ್ಕೆ ಕಾಳನ್ನು ಬೆಳೆಯುವಂತೆ, ಬಟ್ಟೆಗಾಗಿ ಹತ್ತಿಯನ್ನು ಬೆಳೆಯುತ್ತಿದ್ದ. ಅವನ ಹೆಂಡತಿ ನೂಲುತ್ತಿದ್ದಳು. ರಾಟೆಗೆ ಕುಂಟಾರು ಎಂಬ ಅಡ್ಡ ಹೆಸರೊಂದುಂಟು. ಎಂಟಾರು ಇದ್ದರೂ ಕುಂಟಾರು ಇರಬೇಕು ಎಂಬ ನಾಣ್ನುಡಿ ಇದೆ. ಕೋಟಿ ವಿದ್ಯೆಗಿಂತ ರಾಟೆ ವಿದ್ಯೆ ಮೇಲು ಎಂಬುದು ಸರ್ವಜ್ಞನ ಅಭಿಪ್ರಾಯ. ಭಾರತದಲ್ಲಿ ಮಾತ್ರವೇ ಅಲ್ಲ ನೂಲುವುದು, ನೇಯುವುದು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಯಂತ್ರಯುಗ ಬರುವವರೆಗೆ–ಜನತೆಯ ಅನಿವಾರ್ಯ ಕೈಗಾರಿಕೆ, ಕಸುಬು ಆಗಿತ್ತು.

ಪ್ರಾಚೀನ ಭಾರತದಲ್ಲಿ ರಾಟೆ ಮತ್ತು ಕೈಮಗ್ಗದ ಕುಶಲಕಲೆಗಳು ತುಂಬ ಉನ್ನತ ಸ್ಥಿತಿಗೇರಿದ್ದವು. ರಾಮಾಯಣ ಭಾರತಗಳ ಕಾಲದಿಂದಲೂ ಈ ದೇಶದ ಕುಶಲಕಲೆಗಾರರ ವಸ್ತ್ರರಚನಾನೈಪುಣ್ಯ, ವೈವಿಧ್ಯ, ಸಮೃದ್ಧಕಲಾಸೃಷ್ಟಿ ಪ್ರಸಿದ್ಧವಾಗಿವೆ. ರಾಟೆಯಲ್ಲಿ ನೂಲುವ ಕಲೆಯಲ್ಲಿಯಂತೂ ಇಲ್ಲಿಯ ಗ್ರಾಮೀಣ ಮಹಿಳೆಯರು– ಈಚಿನ ಕಾಲದ ಯಂತ್ರಗಳಿಗೂ ಮೀರಿಸಿದ ಸೂಕ್ಷ್ಮತೆಯನ್ನು ರೂಢಿಸಿಕೊಂಡಿದ್ದರು. ದೇಶದ ಎಲ್ಲ ಭಾಗಗಳಲ್ಲಿಯೂ ಇಂಥ ನೂಲುಕಾರರಿದ್ದರು. ಬಂಗಾಲದಲ್ಲಿ ಅವರ ನೂಲುಗಾರಿಕೆ ಅತ್ಯುತ್ತಮ ಮಟ್ಟಕ್ಕೆ ಏರಿ, ಆ ನೂಲಿನಿಂದ ಮಾಡಿದ ಬಟ್ಟೆಗೆ ಢಾಕಾ ಮಸ್ಲಿನ್ ಎಂದೇ ಹೆಸರಾಗಿತ್ತು. ಮೊಗಲ್ ಚಕ್ರವರ್ತಿಗಳೂ ಅಂದಿನ ಕಾಲದ ಇತರ ಎಲ್ಲ ರಾಜಮಹಾರಾಜರೂ ಆ ಬೆಲೆಬಾಳುವ ವಸ್ತ್ರಗಳನ್ನೇ ತೊಡುತ್ತಿದ್ದರು. ಅವು ಎಷ್ಟು ಸೂಕ್ಷ್ಮವೂ ತೆಳುವೂ ಆಗಿದ್ದುವೆಂದರೆ ಇಡೀ ಒಂದು ವಸ್ತ್ರವನ್ನು ಒಂದು ಉಂಗುರದ ಒಳಗೆ ತೂರಿಸಬಹುದಾಗಿದ್ದಿತು. ಢಾಕಾ ಮಸ್ಲಿನ್ನಿನ ನವಿರನ್ನು ತೋರಿಸಲು ಔರಂಗಜೇಬನ ಮಗಳ ವಿಷಯದಲ್ಲಿ ಒಂದು ಕಥೆಯಿದೆ. ಒಂದು ಸಲ ಔರಂಗಜೇಬನು ಮಗಳನ್ನು ನೀನು ಮೈತುಂಬ ಗಂಭೀರವಾಗಿ ಉಡುಪು ಧರಿಸಿಲ್ಲ ಎಂದು ಗದರಿಸದನಂತೆ. ಆಕೆ 'ನಾನು ಏಳು ಢಾಕಾ ಮಸ್ಲಿನ್ ಸೀರೆಗಳನ್ನು ಒಂದರ ಮೇಲೆ ಒಂದನ್ನು ಧರಿಸಿದ್ದೇನೆ. ಆದರೂ ಮೈ ಬಣ್ಣ ಕಾಣುತ್ತಿದೆ'– ಎಂದಳಂತೆ.

ಈಸ್ಟ್ ಇಂಡಿಯ ಕಂಪನಿಯವರು ಭಾರತಕ್ಕೆ ಬಂದ ಅನಂತರ, ಇತರ ಎಲ್ಲ ಗೃಹಕೈಗಾರಿಕೆಗಳಂತೆ ಭಾರತದ ಕೈನೂಲು ಕೈಮಗ್ಗದ ಕೈಗಾರಿಕೆಗಳು ಮೂಲೆಗೆ ಬಿದ್ದವು. ಲ್ಯಾಂಕಷೈರಿನ ಬಟ್ಟೆ ಗಿರಣಿಗಳ ಉದ್ಧಾರಕ್ಕಾಗಿ ಬ್ರಿಟಿಷರು ಭಾರತವನ್ನು ತಮ್ಮ ಬಟ್ಟೆಗಳಿಗೆ ಗಿರಾಕಿ ಮಾಡಿಕೊಂಡರು. ಭಾರತದ ನೇಕಾರರನ್ನೂ ಅತ್ಯಂತ ಕ್ರೂರವಾದ ರೀತಿಯಲ್ಲಿ ನಿರುದ್ಯೋಗಕ್ಕೆ ಸಿಲುಕಿಸಿ ಕೆಲವು ವೇಳೆ ಹಿಂಸೆ ಸಹ ಮಾಡಿ ಆ ಕಸಬನ್ನೂ ಅದನ್ನು ನಡೆಸುವವರನ್ನೂ ನಾಶಮಾಡಿಬಿಟ್ಟರು. ಇಂಗ್ಲೆಂಡಿನ ಬಟ್ಟೆಗಳು ಭಾರತದಲ್ಲಿ ಬಂದು ವಿಜೃಂಭಿಸತೊಡಗಿದುವು. ಭಾರತಕ್ಕೆ ಇಂಗ್ಲೆಂಡ್, ವರ್ಷಕ್ಕೆ ಅರವತ್ತು ಕೋಟಿ ರೂಪಾಯಿಗಳ ಬಟ್ಟೆಗಳನ್ನು ಕಳುಹಿಸುತ್ತಿತ್ತು. ರಾಟೆಯು ದೇಶದಿಂದ ಕಣ್ಮರೆಯಾಯಿತು. ಮತ್ತದು ಬೆಳಕಿಗೆ ಬರಲು ಗಾಂಧಿಯವರ ಅವತಾರವಾಗಬೇಕಾಯಿತು.

ಮಹಾತ್ಮ ಗಾಂಧೀಜಿ ಆಫ್ರಿಕದಲ್ಲಿ ತಮ್ಮ ಸತ್ಯಾಗ್ರಹದ ಅಸ್ತ್ರವನ್ನು ಪ್ರಯೋಗಿಸುತ್ತಿದ್ದಾಗ, ಭಾರತೀಯರ ಅಸ್ವಾತಂತ್ರ್ಯಕ್ಕೂ ಆಫ್ರಿಕದಲ್ಲಿ ಭಾರತೀಯರ ಕಷ್ಟಗಳಿಗೂ ಆಧುನಿಕ ಯಂತ್ರನಾಗರಿಕತೆಯೇ ಮುಖ್ಯ ಕಾರಣವೆಂಬುದನ್ನು ತಿಳಿದರು ; ಪ್ರತಿಯೊಂದು ವಿಷಯದಲ್ಲಿಯೂ ಸ್ವಾವಲಂಬನೆ, ಸ್ವದೇಶಿ–ಇವು ಸ್ವಾತಂತ್ರ್ಯ ಹೋರಾಟಕ್ಕೆ ಆವಶ್ಯಕವೆಂದು ನಿರ್ಧರಿಸಿದರು. ಮುಖ್ಯವಾಗಿ ಆಹಾರ ಮತ್ತು ವಸ್ತ್ರಗಳ ವಿಷಯದಲ್ಲಿ ಸ್ವಾವಲಂಬನೆಗಾಗಿ ಪ್ರಯತ್ನಿಸತೊಡಗಿದರು. ರಾಟೆ ಎಂಬ ಉಪಕರಣವಿದೆಯೆಂದು ಅವರು ಕೇಳಿದ್ದುದಲ್ಲದೆ ಅದರ ವಿಷಯದಲ್ಲಿ ಹಿಂದೆ ಸ್ವರಾಜ್ಯದಲ್ಲಿ ಅದರ ಬಗ್ಗೆ 1905ರಲ್ಲಿಯೇ ಬರೆದಿದ್ದರು. ಆದರೆ ಅವರು 1915ರವರೆಗೆ ರಾಟೆಯನ್ನು ನೋಡಿರಲಿಲ್ಲ. ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿದ ಅನಂತರದ ಅವರ ಸ್ವದೇಶಿ ವ್ರತಕ್ಕೆ ಅನುಗುಣವಾಗಿ, ಕೈಮಗ್ಗದ ಬಟ್ಟೆಯನ್ನು ಧರಿಸುತ್ತಿದ್ದರು. ಆದರೆ ಅದಕ್ಕೆ ಬೇಕಾಗುವ ನೂಲು ಗಿರಣಿಗಳಲ್ಲಿ ತಯಾರಾಗುತ್ತಿತ್ತು. ಗಿರಣಿಗಳ ಮೇಲಿನ ಅವಲಂಬನೆಯನ್ನು ಬಿಡಬೇಕಾದರೆ ಅವರು ನೂಲುವ ರಾಟೆಯನ್ನು ಕಂಡುಹಿಡಿದು ಅದರಲ್ಲಿ ನೂಲು ತೆಗೆಯಬೇಕಾಗಿತ್ತು ; ಗಾಂಧೀಜಿ ಎರಡು ವರ್ಷಗಳ ಕಾಲ ದೇಶದಲ್ಲೆಲ್ಲ ರಾಟೆಗಾಗಿ ವಿಚಾರಿಸಿ, ಕೊನೆಗೆ ಬ್ರೋಚ್‌ನಲ್ಲಿ, ಗಂಗಾಬಹನ್ ಎಂಬುವರ ಮೂಲಕ ರಾಟೆಯನ್ನೂ ನೂಲುವವರನ್ನೂ ಪತ್ತೆ ಹಚ್ಚಿದರು. ರಾಟೆಯನ್ನು ಅವರು ಚರಕ ಎಂದು ಕರೆದರು. ಅನಂತರ ಚರಕ ಸ್ವದೇಶಿ, ಸ್ವರಾಜ್ಯಗಳ ಸಂಕೇತವಾಯಿತು.

ಗಾಂಧೀಜಿಯವರ ದೃಷ್ಟಿಯಲ್ಲಿ ಚರಕ, ಖಾದಿ–ಇವು ಭಾರತದ ಆರ್ಥಿಕ ಮತ್ತು ಅಧ್ಯಾತ್ಮ ಜೀವನದ ಪುನಶ್ಚೇತನಕ್ಕೆ ಸಹಾಯಕವಾದ, ಉಪಕರಣಗಳು. ಅದೊಂದು ಬರಿಯ ಬಟ್ಟೆಯ ಪ್ರಶ್ನೆ ಮಾತ್ರವಲ್ಲ, ಖಾದಿ ಎಂಬುದು ಒಂದು ಜೀವನಕ್ರಮ. (ರಾಟೆ ಅಥವಾ ಚರಕದಲ್ಲಿ ಕೈಯಲ್ಲಿ ನೂತ ದಾರದಿಂದ ಕೈಮಗ್ಗದಲ್ಲಿ ನೆಯ್ದ ಬಟ್ಟೆಗೆ ಖಾದಿ ಅಥವಾ ಖದ್ದರ್ ಎಂದು ಹೆಸರು.) ಇದು ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಒಂದು ಆಯುಧವೂ ಆಯಿತು. ಖಾದಿ ಸ್ವರಾಜ್ಯ ಚಳವಳಿಯ ದೊಡ್ಡ ಅಸ್ತ್ರವಾಯಿತು. ಬ್ರಿಟಿಷರು ಖಾದಿ ಧರಿಸುವುದನ್ನೂ ಒಂದು ರಾಜಕೀಯ ಅಪರಾಧ ಎಂಬ ದೃಷ್ಟಿಯಿಂದ ನೋಡುತ್ತಿದ್ದರು. ಗಾಂಧೀಜಿಯ ಮೇಲೆ, ಬ್ರಿಟಿಷ್ ಸರ್ಕಾರ ರಾಜದ್ರೋಹದ ಆಪಾದನೆಯನ್ನು ಹೊರಿಸಿ ಮೊಕದ್ದಮೆ ಹೂಡಿ ತಮ್ಮ ಕಸುಬು ಯಾವುದು ಎಂದು ಕೇಳಿದಾಗ ಅವರು ವ್ಯವಸಾಯ ಮತ್ತು ನೆಯ್ಗೆ ಎಂದು ಪ್ರತ್ಯುತ್ತರವಿತ್ತರು. ಗಾಂಧೀಜಿ ಮತ್ತು ಕಾಂಗ್ರೆಸ್ಸಿನವರು ದೇಶದಲ್ಲೆಲ್ಲ ಚರಕವನ್ನೂ ಖಾದಿಯನ್ನೂ ಪ್ರಚಾರ ಮಾಡಿ, ಅದರ ವ್ಯವಸ್ಥೆಗಾಗಿ ಅಖಿಲ ಭಾರತ ಚರಕ ಸಂಘ ಎಂಬುದನ್ನು ಸ್ಥಾಪಿಸಿದರು. ಪಂಡಿತ್ ಜವಹರ್‌ಲಾಲ್ ನೆಹರು ಖಾದಿ ಸ್ವಾತಂತ್ರ್ಯದ ಸಮವಸ್ತ್ರ ಎಂದು ಹೇಳಿದರು. ಭಾರತದ ರಾಷ್ಟ್ರಧ್ವಜದಲ್ಲಿ ಚರಕದ ಸಂಕೇತವನ್ನು ಸೇರಿಸಲಾಯಿತು, ಸ್ವಾತಂತ್ರ್ಯಾನಂತರ ಅದು ಚಕ್ರರೂಪದಲ್ಲಿ ಉಳಿದು ಬಂದಿದೆ.

ಚರಕ ಎಂಬುದು ಬಹಳ ಸುಲಭವಾದ ಉಪಕರಣ. ಹಿಂದಿನ ಕಾಲದ ಚರಕ ದೊಡ್ಡದಾದ ಒಂದು ಚಕ್ರವಾಗಿತ್ತು. ಈಚೆಗೆ ಗಾಂಧೀಜಿ ಹೊಸದಾಗಿ ಬಳಕೆಗೆ ತಂದ ಮೇಲೆ, ಅದನ್ನು ಸಾಬರಮತಿ ಚರಕ ಎಂದು ಕರೆದರು. ಅನಂತರ ಅದರ ಮತ್ತೊಂದು ರೂಪವೇ ಸೇವಾಗ್ರಾಮ ಚರಕವೆಂದಾಯಿತು. ಎರಡು ಚಕ್ರಗಳ ಪೆಟ್ಟಿಗೆ ಚರಕಕ್ಕೆ ಯರವಾಡಿ ಚರಕ ಎಂದು ಹೆಸರಾಯಿತು. ಮೈಸೂರಿನಲ್ಲಿ ಮಾರಿಸ್ ಫ್ರೆಡ್‌ಮನ್ ಎಂಬುವರು ಚರಕದಲ್ಲಿ ಕೆಲವು ಹೊಸ ಸೌಲಭ್ಯಗಳನ್ನು ಕಲ್ಪಿಸಿದರು. ಒಂದು ಸಲ ಅಖಿಲ ಭಾರತ ಚರಕ ಸಂಘದವರು ಅತ್ಯುತ್ತಮ ಚರಕವನ್ನು ಕಂಡುಹಿಡಿದವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುವುದಾಗಿ ಪ್ರಕಟಿಸಿದರು. ಆ ಪೈಪೋಟಿಗಾಗಿ ತಯಾರಾದ ಚರಕಗಳಲ್ಲಿ ಸುದರ್ಶನ ಚರಕವೆಂಬುದು ಬಳಕೆಗೆ ಬಂತು. ಈಚೆಗೆ ಅಂಬರ್ ಎಂಬ ಮತ್ತೊಂದು ಚರಕ ಪ್ರಚಾರದಲ್ಲಿದೆ. ಈಚಿನ ಸುಧಾರಣೆಯಿಂದಾಗಿ ಒಂದಿದ್ದ ಕದರು ಒಂಬತ್ತು ಆಯಿತು. ಈಗ ಮೂವತ್ತಾರು ಕದರನ್ನು ಉಪಯೋಗಿಸಿ ಅದಕ್ಕೆ ಬೇಕಾದರೆ ವಿದ್ಯುಚ್ಛಕ್ತಿಯನ್ನೂ ಲಗತ್ತಿಸುವ ಸೌಕರ್ಯವನ್ನು ಏರ್ಪಡಿಸುತ್ತಿದ್ದಾರೆ.

ಹೀಗೆ ಭಾರತದ ಪ್ರಾಚೀನ ಕುಶಲಕಲೆಯಾಗಿದ್ದು, ಅನಂತರ ಕಣ್ಮರೆಯಾಗಿ ಮತ್ತೆ ಗಾಂಧೀಜಿಯ ಪ್ರಯತ್ನದಿಂದ ಪುನರುಜ್ಜೀವನಗೊಂಡು, ಸ್ವಾತಂತ್ರ್ಯ ಸಂಗ್ರಾಮದ ಮುಖ್ಯ ಅಸ್ತ್ರವಾಗಿ ವಿಜೃಂಭಿಸಿದ ಚರಕ ಈಗ ಜನತೆಯ ನಿರುದ್ಯೋಗವನ್ನು ಪರಿಹರಿಸುವ ದಿಕ್ಕಿನಲ್ಲಿ ಹೆಜ್ಜೆಯಿಡುತ್ತಿದೆ. ಸರಿಯಾದ ವ್ಯವಸ್ಥೆಯಿಂದ ಇದು ಗ್ರಾಮಾಂತರ ಜನತೆಯ ಪಾಲಿಗೆ ಆರ್ಥಿಕ ಸೌಲಭ್ಯವನ್ನು ಒದಗಿಸುವ ಕಾಮಧೇನುವಾಗಬಲ್ಲುದು. **(ನೋಡಿ–ಖಾದೀ)** (ಜಿ.ಆರ್.ಎ.)

**ಚರಣದಾಸಿಗಳು :** ಭಾರತೀಯ ವೈಷ್ಣವಮಾರ್ಗಾನುಯಾಯಿಗಳ ಒಂದು ಪಂಥ. ಚರಣದಾಸನೆಂಬಾತ ಈ ಪಂಥದ ಪ್ರವರ್ತಕ (1703–83). ಆದ್ದರಿಂದ ಈತನ ಅನುಯಾಯಿಗಳಿಗೆ ಚರಣದಾಸಿಗಳೆಂಬ ಹೆಸರು. ಚರಣದಾಸನ ಬಾಲ್ಯನಾಮ ರಣಜೀತ್. ಮೇವಾತ್‌ಗೆ (ರಾಜಾಸ್ಥಾನ) ಸೇರಿದ ಡೆಹರಾ ಗ್ರಾಮ ಈತನ ಜನ್ಮ ಸ್ಥಳ. ತಂದೆ ಮುರಲೀಧರ್. ತಾಯಿ ಕುಂಜೊ. ಇವರು ಬನಿಯಾ ಜಾತಿಯ ಢೂಸರ್ ಪಂಗಡಕ್ಕೆ ಸೇರಿದವರು. ಚರಣದಾಸನ ದಾರ್ಶನಿಕ ಜೀವನದೃಷ್ಟಿ ಆತನಿಗೆ ಪೈತೃಕವಾಗಿ ಬಂದುದೆನ್ನಬಹುದು. ಮುರಲೀಧರ ದೈವಭಕ್ತ. ಸದಾ ಧ್ಯಾನಮಗ್ನನಾಗಿರುತ್ತಿದ್ದ. ಗಿರಿ, ವನ, ಕಂದರಾದಿಗಳ ರಮಣೀಯತೆಗೆ ಮಾರುಹೋಗಿದ್ದ ಇವನು ಎಷ್ಟೋ ದಿನ ಮನೆಗೇ ಬರುತ್ತಿರಲಿಲ್ಲ. ಕೊನೆಗೊಮ್ಮೆ ಆತ ಬರಲೇ ಇಲ್ಲ. ಕಂಗಾಲಾದ ತಾಯಿ ಚೊತ್ತಗಾಲಿನ, 19 ಪ್ರಾಯದ ಮಗನನ್ನು ಕರೆದುಕೊಂಡು ತನ್ನ ತಂದೆ ಮನೆಯನ್ನು ಬಿಟ್ಟು ದೆಹಲಿಗೆ ನಡೆದಳು. ದೆಹಲಿ ಚರಣದಾಸನ ಜೀವನವನ್ನೇ ಬದಲಾಯಿಸಿಬಿಟ್ಟಿತು. ಮೊದಲೇ ದೈವಭಕ್ತನಾದ ಈತನಿಗೆ ಶುಕದೇವದಾಸ್ ಎಂಬ ಗುರು ಸಿಕ್ಕಿ ಆತನಿಂದ ರಾಮಮಂತ್ರ ಜಪದ ಉಪದೇಶ ದೊರೆಯಿತು. ಬಾಲಕ ರಣಜೀತ್ ಸಿದ್ಧಿಮಾರ್ಗದ ಭಾವುಕ ಪಥಿಕನಾದ. ರಣಜೀತ್ ಚರಣದಾಸನಾಗಿ ಹನ್ನೆರಡು ವರ್ಷ ದೆಹಲಿಯ ಹತ್ತಿರದ ಗವಿಯೊಂದರಲ್ಲಿ ನಿರಂತರ ರಾಮನಾಮಜಪ ಮತ್ತು ಧ್ಯಾನಗಳಲ್ಲಿ ಮಗ್ನನಾಗಿ ತನ್ನದೇ ಆದ ಭಕ್ತಿಮಾರ್ಗವೊಂದನ್ನು ಹುಟ್ಟುಹಾಕಿದ.

ಆಗಿನ ಕಾಲಕ್ಕೆ ಮೊಗಲರ ಕೊನೆಯ ಪ್ರಬಲ ಚಕ್ರವರ್ತಿ ಔರಂಗಜೇಬ್ ಗತಿಸಿ ಹೋಗಿ ದೆಹಲಿಯ ಸಿಂಹಾಸನಕ್ಕೆ ಕಿತ್ತಾಟ ನಡೆಯುತ್ತಿತ್ತು. ನಾದಿರ್‌ಷಹನ ದಂಡಯಾತ್ರೆಯ (1739) ರಾಕ್ಷಸೀ ಪರಿಣಾಮ ಉತ್ತರಭಾರತದ ಜನತೆಯ ಮನಃಪಟಲವನ್ನು ಕೆಂಡೂಳಿನಿಂದ ಆವರಿಸಿತ್ತು. ಪಂಜಾಬಿನಲ್ಲಿ ಅಹಮದ್ ಷಾ ಅಬ್ದಾಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡು ದಕ್ಷಿಣದಲ್ಲಿ ಅಪ್ರತಿಹತಬಲನಾಗಿ ಉತ್ತರಕ್ಕೆ ವ್ಯಾಪಿಸುತ್ತಿದ್ದ ಮರಾಠರ ಬಾಲಾಜಿ ಬಾಜೀರಾಯನನ್ನು ಪಾಣಿಪಟ್ಟದ ಯುದ್ಧದಲ್ಲಿ (1976) ಸೋಲಿಸಿದ್ದ. ಮತ್ತೊಂದು ಕಡೆಯಿಂದ ಪೂರ್ವ ಬಂಗಾಳದಲ್ಲಿ ಬ್ರಿಟಿಷರು ಪ್ರಬಲರಾಗಿ ಆಗ್ರ, ಅಯೋಧ್ಯೆಗಳ ಕಡೆ ಒತ್ತಿ ಬರುತ್ತಿದ್ದರು. ಮೂರು ಕಡೆಯ ಇಂಥ ಒತ್ತಡ, ಔರಂಗಜೇಬನ ಹಿಂದೂ ಮತ ದ್ವೇಷ, ರಾಜಕೀಯ ದಿಗಂತದಲ್ಲಿ ಅನಿರೀಕ್ಷಿತ, ಅಪರಿಚಿತ ಭಯಂಕರ ಕಾರ್ಮೋಡಗಳ ವಿಜೃಂಭಣೆ– ಇವು ಹಿಂದೂಗಳ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಜೀವನದಲ್ಲಿ ಹಿಂದೆಂದೂ ಇಲ್ಲದ ಕೋಲಾಹಲವನ್ನೆಬ್ಬಿಸಿದ್ದವು. ದೆಹಲಿ ಇಂಥ ಕೋಲಾಹಲದ ಕೇಂದ್ರಸ್ಥಾನವಾಗಿತ್ತು. ಈ ಲೌಕಿಕ ಹಿನ್ನೆಲೆಯಲ್ಲಿ, ನಾನಕ್, ಕಬೀರ್, ರಾಮಾನಂದರೇ ಮೊದಲಾದ ಭಕ್ತಿಮಾರ್ಗಬೋಧಕರ ಬೋಧನೆಗಳು ಜನಸಾಮಾನ್ಯರಲ್ಲಿ ಮಾಸಿಹೋಗುತ್ತಿರುವಂತೆ ಭಾಸವಾಗುತ್ತಿದ್ದ ಸಮಯದಲ್ಲಿ ಚರಣದಾಸ ತನ್ನ ಭಕ್ತಿಮಾರ್ಗವನ್ನು ಉಪದೇಶಿಸಲು ಉಪಕ್ರಮಿಸಿದ. ಆಧ್ಯಾತ್ಮಿಕ ಹಸಿವಿನಿಂದ ಕಂಗಾಲಾದ ಜನರು ಮುನ್ನುಗ್ಗಿ ಬಂದು ಈತನ ಶಿಷ್ಯರಾದರು. ಹೀಗೆ ಆದ ಐವತ್ತೆರಡು ಜನ ಪ್ರಸಿದ್ಧ ಶಿಷ್ಯರಲ್ಲಿ ಗದ್ದೀ, ಯುಕ್ತಾನಂದ ಎಂಬುವರು ಸುಪ್ರಸಿದ್ಧರು. ಸಹಜೂಬಾಯಿ, ದಯಾಬಾಯಿ ಮುಂತಾದವರು ಶಿಷ್ಯೆಯರಲ್ಲಿ ಅತಿ ಪ್ರಸಿದ್ಧರಾಗಿ ಭಾವುಕ ಕವಯಿತ್ರಿಯರೆಂದು ಹೆಸರುಪಡೆದರು.

ಚರಣದಾಸ ಎಷ್ಟೋ ಪವಾಡಗಳನ್ನು ಮೆರೆದನೆಂದು ಪ್ರತೀತಿಯಿದೆ. ಈತ ತನ್ನ ತಾಯಿಗೆ ಭಗವದ್ದರ್ಶನ ಮಾಡಿಸಿದನಂತೆ. ನಾದಿರ್ ಷಹ ಈತನನ್ನು ಹಿಡಿಸಿ ಸರಪಳಿಯಿಂದ ಬಂಧಿಸಿ ಕಾರಾಗೃಹದಲ್ಲಿರಿಸಿದ್ದರೂ ಹೇಗೋ ಎಂತೋ ಇದ್ದಕ್ಕಿದ್ದಂತೆ ನಡುರಾತ್ರಿಯಲ್ಲಿ ಈತ ನಾದಿರ್‌ಷಹ ಮಲಗಿದ್ದ ಕೋಣೆಯಲ್ಲಿ ಪ್ರತ್ಯಕ್ಷನಾಗಿ ಬಲವಾದ ಒದೆತ ಕೊಡಲು ನಾಮದ ಮಾತ್ರದಿಂದಲೇ ದೇಶದೇಶಗಳನ್ನು ತಲ್ಲಣಗೊಳಿಸಿದ್ದ ಷಹ ಈ ಬಡಕಲು ಸಾಧುವಿನ ಕಾಲಿಗೆ ಬಿದ್ದು ಕ್ಷಮೆ ಕೇಳಿಕೊಂಡನಂತೆ. ಇದೇ ರೀತಿ ಅಲಂಗೀರನ ಮರಣವನ್ನೂ (1759) ಈತ ಮೊದಲೇ ಸೂಚಿಸಿದ್ದನಂತೆ.

ವೈಷ್ಣವಭಕ್ತಿಮಾರ್ಗ, ಗುರುವಿಗೆ ಅಲೌಕಿಕವಾದ ಪ್ರಾಮುಖ್ಯ, ಭಗವನ್ನಾಮಸ್ಮರಣೆ ಮತ್ತು ತಾರಕಮಂತ್ರಜಪ ಇವು ಚರಣದಾಸಿ ಪಂಥದ ಕೆಲವು ಮುಖ್ಯ ತತ್ತ್ವಗಳು. ಮೋಕ್ಷವೆಂದರೆ ಭಗವತ್‌ಸಾನ್ನಿಧ್ಯ ಅದು ಅನಂತ, ಆನಂದಮಯ. ಆದರೆ ಜನ್ಮಾಂತರ ಕಳೆದಮೇಲೆ ಅದರ ಪ್ರಾಪ್ತಿ. ಗುರು ಒಂದು ಕೈಯಿಂದ ಧರ್ಮಬಾಹಿರವಾದ ಜೀವಾತ್ಮವನ್ನು ಮೇಲೆತ್ತಿ ಮತ್ತೊಂದು ಕೈಯಿಂದ ಭಗವತ್ ಸನ್ನಿಧಿಗೆ ಮುಟ್ಟಿಸುತ್ತಾನೆ. ಗುರುವೇ ಹರಿ, ರಾಮ, ಕೃಷ್ಣ, ನರಸಿಂಹ. ಅವನೇ ಪ್ರತ್ಯಕ್ಷ ಭಗವಾನ್ ರಾಧಾಕೃಷ್ಣ ಗುರು ಉಪದೇಶಿಸುವ, ತಾರಕಮಂತ್ರ ಸೀಮಾತೀತವಾದುದು (ಅನ್‌ಹದ್). ಅದೇ ಪರಬ್ರಹ್ಮ ಬ್ರಹ್ಮಾಂಡ, ಸೂರ್ಯಚಂದ್ರತಾರಾದಿಗಳನ್ನು ಒಳಗೊಂಡ ವಿಶ್ವ. ಅದು ಅವ್ಯಕ್ತ, ಅಗಮ್ಯ. ಅಂಥ ತಾರಕಮಂತ್ರವನ್ನು ನಿಂತಾಗ, ಕುಳಿತಾಗ, ಚಲಿಸುವಾಗ ಜಪಿಸಿದರೆ ಸಕಲಕರ್ಮಫಲವೂ ದಗ್ಧವಾಗುತ್ತದೆ. ಚರಣದಾಸಿಗಳ ನೈತಿಕ ಭಾವನೆ ಇತರ ತಾತ್ತ್ವಿಕ ಧಾರ್ಮಿಕ ಪಂಥಗಳು ಹೇಳಿರುವಂಥದೇ. ಆದರೆ ನಿಷ್ಠುರ ಆಚರಣೆ ಮುಖ್ಯ. ಅಸತ್ಯ, ಪರನಿಂದೆ, ಕಾಠಿಣ್ಯ, ವಿತಂಡವಾದ ಇತ್ಯಾದಿಗಳು ನಿಷಿದ್ಧ. ನಿರಹಂಕಾರಿತ್ವ, ಅನಸೂಯೆ, ಅಸ್ತೇಯ, ಅಹಿಂಸೆ, ಸದಾಲೋಚನೆ, ಸತ್ಸಂಗ, ಗುರುಭಕ್ತಿ, ಹರಿಭಕ್ತಿ ಇವುಗಳನ್ನು ತಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವುದು, ತನ್ನ ಮಾಮೂಲು ಜೀವನಕ್ರಮದ ಪಾಲನೆ ಮುಂತಾದವು ವಿಧಿನಿಯಮಗಳು. ಜಾತಿಭೇದ, ವರ್ಣಭೇದ, ಲಿಂಗಭೇದವಿಲ್ಲದೆ ಸರ್ವರಿಗೂ ಈ ಪಂಥಕ್ಕೆ ಪ್ರವೇಶವುಂಟು. ಇತ್ತೀಚೆಗೆ ಈ ಪಂಥದವರ ಸಂಖ್ಯೆ ಕಡಿಮೆಯಾಗಿಹೋಗಿದೆ. ಈಗಿನ ಹರಿಯಾಣ, ಉತ್ತರಪ್ರದೇಶ, ರಾಜಸ್ಥಾನದ ಕೆಲವು ಭಾಗಗಳಲ್ಲಿ ಇವರು ಕಂಡುಬರುತ್ತಾರೆ. ಸಾಲಿಗ್ರಾಮಮಣಿ ಇವರ ಪೂಜಾದೈವ. ತುಳಸೀ ವೃಂದಾವನಪೂಜೆಯೂ ರೂಢಿಗೆ ಬಂದಿದೆ. ವೇದ ಪುರಾಣಾದಿಗಳಲ್ಲಿ, ಮೂರ್ತಿಪೂಜೆಯಲ್ಲಿ, ವರ್ಣಾಶ್ರಮ ವ್ಯವಸ್ಥೆಯಲ್ಲಿ, ತೀರ್ಥಯಾತ್ರಾದಿ ಬಾಹ್ಯ ಆಚಾರಗಳಲ್ಲಿ ನಂಬುಗೆ ಇಡದೆ ಗುರುಭಕ್ತಿಯೊಂದನ್ನೇ ಪ್ರಧಾನವೆಂದು ಉಪದೇಶಿಸಿ ನವ್ಯ ಕ್ರಾಂತಿಯೊಂದನ್ನೆಬ್ಬಿಸಿತೋ ಎಂಬಂತಿದ್ದ ಈ ಪಂಥ ಇಂದು ನಾಮಾವಶೇಷವಾಗುವ ಸ್ಥಿತಿಯಲ್ಲಿದೆ. ಈ ಪಂಥದ ಸಾಧುಗಳು ಹಳದಿ ಪತ್ತಲ ಉಟ್ಟು, ಗೋಪೀಚಂದನ ಧರಿಸಿ, ಕೊರಳಲ್ಲಿ ತುಳಸೀಮಾಲೆ ಹಾಕಿಕೊಂಡು, ಶಂಖದಂಥ ಟೋಪಿಯಿಟ್ಟುಕೊಂಡು, ಅದರ ಮೇಲೆ ರುಮಾಲು ಕಟ್ಟಿಕೊಂಡು ಅಡ್ಡಾಡುವುದನ್ನು ಕಾಣಬಹುದು. ಭಕ್ತಿಸಾರ, ಜ್ಞಾನಸರ್ವೋದಯ, ಸಂದೇಹಸಾಗರ, ನಚಿಕೇತೋಪಾಖ್ಯಾನ, ಚರಣದಾಸವಾಣಿ–ಮುಂತಾದುವು ಈ ಪಂಥದ ಹಲವು ಕೃತಿಗಳು. ಅಚ್ಚನ್ನು ಕಾಣದೆ ನಶಿಸಿಹೋಗುತ್ತಿರುವ ಇನ್ನೂ ಎಷ್ಟೋ ಕೃತಿಗಳು ಇವೆ. (ಸಿ.ಜಿ.ಪಿ.)

**ಚರಣವ್ಯೂಹ :** ಆಯಾ ವೇದದ ಶಾಖೆಗಳು, ಅವುಗಳ ಪರಸ್ಪರ ವ್ಯತ್ಯಾಸ– ಇವನ್ನು ಗುರುಪರಂಪರೆಯನ್ನು ಸರಿಸಿ ಬಂದ ಚರಣರೂಪದಲ್ಲಿ ಪ್ರತಿಪಾದಿಸುವ ರಚನೆಯೇ ಚರಣವ್ಯೂಹ. ಉದಾ: ಋಗ್ವೇದಕ್ಕೆ ಸಂಬಂಧಪಟ್ಟ ಒಂದು ಚರಣವ್ಯೂಹ. ಇದರಲ್ಲಿ ಶಾಕಲ, ಬಾಷ್ಕಲ, ಆಶ್ವಲಾಯನ, ಶಾಂಖಾಯನ, ಮಾಂಡೂಕ್ಯ ಎಂಬುದಾಗಿ ಆ ವೇದದ ಐದು ಶಾಖೆಗಳ ವಿಚಾರವಿದೆ. ಒಂದೊಂದು ವೇದವನ್ನೂ ಮಂತ್ರಬ್ರಾಹ್ಮಣಾತ್ಮಕವಾದ ಆಯಾ ಶಾಖೆಯಲ್ಲಿ ಕಲಿಸುವ ಹಾಗೂ ಕಲಿಯುವ ಗುರುಶಿಷ್ಯರ ಗುಂಪಿನ ಒಂದು ಪರಂಪರೆಯೇ ಚರಣ (ಚರಣ ಶಬ್ದಃ ಶಾಖಾವಿಶೇಷಾಧ್ಯಯನಪರೈಕತಾಪನ್ನ ಜನಸಂಘ ವಾಚೀ–ಜಗದ್ಧರನ ಮಾಲತೀಮಾಧವ ವ್ಯಾಖ್ಯೆ). ಸಂಹಿತೆಗಳಿಗೆ, ಬ್ರಾಹ್ಮಣಗಳಿಗೆ ಮತ್ತು ವೇದಾಂಗಗಳಿಗನ್ವಯಿಸುವಂತೆ ಚರಣಗಳಿವೆ. ಶಾಖೆ ಎಂದರೆ ಇಷ್ಟೆ, ಒಂದು ವೇದದ ಮಂತ್ರಬ್ರಾಹ್ಮಣಗಳ ಅಧ್ಯಯನದಲ್ಲಿ ಬೇರೆ ಬೇರೆ ಗುರುಗಳಿದ್ದು, ಅಂಥ ಭಿನ್ನ ಪರಂಪರೆಗಳಲ್ಲಿ ಪರಸ್ಪರವಾಗಿ ಪಾಠಾದಿ ವ್ಯತ್ಯಾಸಗಳು ತೋರಿಬಂದು ಒಂದೊಂದು ಪರಂಪರೆಯೂ ಒಂದೊಂದು ಶಾಖೆಯೆನಿಸಿಕೊಂಡಿದೆ. (ಸ್ವಾಧ್ಯಾಯೈಕದೇಶೋ ಮಂತ್ರಬ್ರಾಹ್ಮಣಾತ್ಮಕಃ ಶಾಖೇತ್ಯುಚ್ಯತೇ– ಮಹಾದೇವನ ಹಿರಣ್ಯಕೇಶಿ ಭಾಷ್ಯ). ಆಯಾ ವೇದದ ಶಾಖೆಗಳಲ್ಲಿ ಕಂಡುಬರುವ ಪರಸ್ಪರ ವ್ಯತ್ಯಾಸಗಳು ಬಾಹ್ಯವೇ ಹೊರತು ಮೂಲಭೂತವಲ್ಲ. ವೈದಿಕ ಸಾಹಿತ್ಯದ ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕ ಉಪನಿಷತ್ತುಗಳು ಶ್ರುತಿಯಲ್ಲೂ ಅವುಗಳ ವಿವರಣೆಗಳನ್ನೊಳಗೊಂಡ ಶಿಕ್ಷಾದಿ ವೇದಾಂಗಗಳು ಸ್ಮೃತಿಯಲ್ಲೂ ಸಾಂಪ್ರದಾಯಿಕವಾಗಿ ಸೇರಿಸಲ್ಪಟ್ಟಿವೆಯಷ್ಟೆ. ವೇದಾಂಗಗಳ ಕಾಲದಲ್ಲೇ ರಚಿತವಾಗಿ ಅವುಗಳ ಜೊತೆಯಲ್ಲಿ ಸಾಮಾನ್ಯವಾಗಿ ಅನುಬಂಧಗಳಂತೆ ಸೇರಿಕೊಂಡು ಬಂದಿರುವ ಪರಿಶಿಷ್ಟಗಳು ಮಂತ್ರ ಮುಂತಾದವುಗಳ ಅಕಾರಾದಿ ಪಟ್ಟಿಗಳಾದ ಅನುಕ್ರಮಣಿಕೆಗಳು ಮತ್ತು ವೇದಶಾಖೆಗಳ ವಿವರಗಳನ್ನೊಳಗೊಂಡ ಚರಣವ್ಯೂಹಗಳು ವೇದವಿವರಣೆಯ ದೃಷ್ಟಿಯಿಂದ ಮಹತ್ತ್ವವನ್ನು ಪಡೆದಿವೆ. (ಬಿ.ಕೆ.ಎಸ್.)

**ಚರಣಸಿಂಹ, ಚೌಧುರಿ :** (1902–1987). ಭಾರತದ ಮಾಜಿಪ್ರಧಾನಿ. 1902ರಲ್ಲಿ ಉತ್ತರಪ್ರದೇಶದ ಮೀರತ್ ಜಿಲ್ಲೆಯ ನೂರ್‌ಪುರದಲ್ಲಿ ಜನಿಸಿದರು. ಇವರು ಮಧ್ಯಮ ವರ್ಗದ ರೈತಕುಟುಂಬ. 1923ರಲ್ಲಿ ವಿಜ್ಞಾನ ಪದವೀಧರರಾಗಿ, 1925ರಲ್ಲಿ ಆಗ್ರಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಗಳಿಸಿದರು. ಜತೆಗೆ ವಕೀಲಿ ವಿದ್ಯಾಭ್ಯಾಸ ನಡೆಸಿ ಗಾಸ್ಸಿಯಾಬಾದ್‌ನಲ್ಲಿ ವಕೀಲಿ ವೃತ್ತಿ ಆರಂಭಿಸಿದರು. 1929ರಲ್ಲಿ ಮೀರತ್‌ಗೆ ಸ್ಥಳಾಂತರಗೊಂಡು, ಅಮೇಲೆ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಪ್ರತಿಭಾವಂತ ಸಂಸದೀಯ ಪಟು, ವಿಚಾರವಂತ ರಾಜಕಾರಣಿ, ರೈತನಾಯಕ ಸರದಾರ್ ಪಟೇಲರ ನಂತರ ಭಾರತದ ಗೃಹಮಂತ್ರಿ ಹುದ್ದೆಗೆ ಮಹಿಮೆ ತಂದುಕೊಟ್ಟವರು ಚೌಧುರಿ ಚರಣಸಿಂಹರು. 1977ರಲ್ಲಿ



ಮೊರಾರ್ಜಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಗೃಹಸಚಿವ, ಅನಂತರ ಉಪಪ್ರಧಾನಿ. ಜನತಾಪಕ್ಷ ವಿಭಜನೆಯ ಹಂತ ಮುಟ್ಟಿದಾಗ ಮೊರಾರ್ಜಿಯವರ ಅನಂತರದ ಅಂದಿನ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿ, ಚರಣಸಿಂಹರನ್ನು ಪ್ರಧಾನ ಮಂತ್ರಿಯಾಗಿ ನೇಮಕ ಮಾಡಿದರು. ಲೋಕಸಭೆಯಲ್ಲಿ ವಿಶ್ವಾಸಮತ ಸಾಬೀತುಪಡಿಸುವಂತೆ ಸೂಚಿಸಿದರು. ಆದರೆ ಸಂಸತ್ತನ್ನು ಎದುರಿಸದೆಯೇ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ, ಲೋಕಸಭೆಗೆ ಹೊಸದಾಗಿ ಚುನಾವಣೆ ಘೋಷಿಸಿದರು. ಹೀನಾಯ ಸೋಲುಂಡರು. ಇಂದಿರಾಗಾಂಧಿಯವರು ಪುನಃ ಗದ್ದುಗೆಗೆ ಮರಳಿ. ಭಾರತೀಯ ಲೋಕ ತಂತ್ರದಲ್ಲಿ ಅನಿಶ್ಚಿತ ಸ್ಥಿತಿಯ ಅಧ್ಯಾಯ ಆರಂಭವಾದದ್ದು ಹೀಗೆ. ಆದರೆ ಹಳ್ಳಿಗಳ ನಾಡಿಮಿಡಿತ ಬಲ್ಲವರಾಗಿದ್ದ ಚರಣಸಿಂಹರಿಗೆ ಹಳ್ಳಿಗಳ ಬದುಕನ್ನು ಉತ್ತಮಪಡಿಸುವ ತಹತಹ ಸದಾಕಾಲ ಇತ್ತು. ಇವರ ಪರಿಶುದ್ಧ ಸಾರ್ವಜನಿಕ ಜೀವನ, ನೇರನಡೆ, ನೇರನುಡಿ. ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ಇಂದಿಗೂ ಅವರ ಪ್ರಭಾವದ ಛಾಪಿದೆ.

ಮೊಟ್ಟಮೊದಲ ಬಾರಿಗೆ 1937ರಲ್ಲಿ ಛತ್ರೌಲಿ ಕ್ಷೇತ್ರದಿಂದ ಉತ್ತರಪ್ರದೇಶ ವಿಧಾನಸಭೆಗೆ ಆಯ್ಕೆ ಆದರು. ಅನಂತರ 1946, 1952, 1962 ಹಾಗೂ 1967ರಲ್ಲಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 1946ರಲ್ಲಿ ಪಂಡಿತ್ ಗೋವಿಂದವಲ್ಲಭ ಪಂತ್ ಸರ್ಕಾರದಲ್ಲಿ ಸಂಸದೀಯ ಕಾರ್ಯದರ್ಶಿಯಾದರು. ಕಂದಾಯ, ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ, ಕಾನೂನು, ವಾರ್ತಾ ಮತ್ತಿತರ ಖಾತೆಗಳನ್ನು ನಿರ್ವಹಿಸಿದರು. 1951ರಲ್ಲಿ ಸಂಪುಟ ಸಚಿವರಾಗಿ ವಾರ್ತಾ ಹಾಗೂ ನ್ಯಾಯಾಂಗ ಖಾತೆ ನಿರ್ವಹಿಸಿದರು. 1952ರಲ್ಲಿ ಸಂಪೂರ್ಣಾನಂದ್ ಸಂಪುಟದಲ್ಲಿ ಕಂದಾಯ ಹಾಗೂ ಕೃಷಿಸಚಿವರಾಗಿ ನೇಮಕಗೊಂಡು, 1959ರ ಏಪ್ರಿಲ್‌ನಲ್ಲಿ ಅವರು ರಾಜೀನಾಮೆ ನೀಡಿದಾಗ ಕಂದಾಯ ಹಾಗೂ ಸಾರಿಗೆ ಖಾತೆಗಳನ್ನು ನಿರ್ವಹಿಸುತ್ತಿದ್ದರು. 1960ರಲ್ಲಿ ಚಂದ್ರಭಾನುಗುಪ್ತ ಮಂತ್ರಿಮಂಡಲದಲ್ಲಿ ಗೃಹ ಹಾಗೂ ಕೃಷಿ ಸಚಿವರಾಗಿದ್ದರು. 1962–63ರಲ್ಲಿ ಶ್ರೀಮತಿ ಸುಚೇತಾ ಕೃಪಲಾನಿ ಮಂತ್ರಿಮಂಡಲದಲ್ಲಿ ಕೃಷಿ ಹಾಗೂ ಅರಣ್ಯಖಾತೆ ಸಚಿವರಾಗಿದ್ದ ಇವರು 1965ರಲ್ಲಿ ಕೃಷಿಖಾತೆಯನ್ನು ಬಿಟ್ಟುಕೊಟ್ಟರು. 1966ರಲ್ಲಿ ಸ್ಥಳೀಯ ಸಂಸ್ಥೆ ಖಾತೆಯ ಸಚಿವರಾದರು. 1969ರಲ್ಲಿ ಕಾಂಗ್ರೆಸ್ ವಿಭಜನೆಯಾದ ನಂತರ 1970ರ ಫೆಬ್ರವರಿಯಲ್ಲಿ ಎರಡನೆಯ ಬಾರಿಗೆ ಉತ್ತರಪ್ರದೇಶದ ಮುಖ್ಯಮಂತ್ರಿಯಾದರು. ಆಗ ಕಾಂಗ್ರೆಸ್ ಬೆಂಬಲ ನೀಡಿತು. ಆದರೆ 1970ರ ಅಕ್ಟೋಬರ್ 2ರಂದು ಉತ್ತರಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ಬಂತು. ಕಾಂಗ್ರೆಸ್‌ನಿಂದ ಹೊರಬಂದು ಲೋಕದಳ ಕಟ್ಟಿದರು. ಉತ್ತರಪ್ರದೇಶದಲ್ಲಿ ಸಚಿವರಾಗಿದ್ದಾಗ ಆಡಳಿತದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅದಕ್ಷತೆಗಳ ಕಡು ವಿರೋಧಿಗಳಾಗಿ, ವಾಸ್ತವವಾದಿಗಳಾಗಿ ಕಾರ್ಯನಿರ್ವಹಿಸಿದರು.

ಇವರು ಉತ್ತರಪ್ರದೇಶದ ಭೂಸುಧಾರಣೆಗಳ ಶಿಲ್ಪಿ. ಇವರಿಂದಾಗಿಯೇ ಸಚಿವರ ಸಂಬಳ–ಸವಲತ್ತುಗಳು ಕಡಿತಗೊಂಡವು. ಇಂತಹ ಜನನಾಯಕರು ಅಪರೂಪ. ಸಾಮಾಜಿಕ ನ್ಯಾಯದಲ್ಲಿ ಅಚಲ ವಿಶ್ವಾಸವಿದ್ದು, ಲಕ್ಷಾಂತರ ರೈತರ ಆಶೋತ್ತರಗಳಿಗೆ ಸ್ಪಂದಿಸಿದ್ದ ಇವರು ರೈತನಾಯಕರಾಗಿದ್ದರು.

1975ರಲ್ಲಿ ತುರ್ತುಪರಿಸ್ಥಿತಿ ಹೇರಿದಾಗ, ಸೆರೆವಾಸ. 1977ರಲ್ಲಿ ಲೋಕನಾಯಕ ಜೆ. ಪಿ. ಕಟ್ಟಿದ ಜನತಾಪಕ್ಷದ ಪ್ರಮುಖ ಆಧಾರಸ್ತಂಭ. ಜನತಾ ಸರಕಾರದಲ್ಲಿ ಗೃಹಸಚಿವ ಹುದ್ದೆ. ತುರ್ತುಪರಿಸ್ಥಿತಿಯ ಅತಿರೇಕಗಳ ತನಿಖೆಗೆ ಷಾ ಆಯೋಗ ನೇಮಕ ಇವರ ಪ್ರಮುಖ ಕ್ರಮ. ಆರೋಪಗಳನ್ನು ಹೊತ್ತ ಇಂದಿರಾಗಾಂಧಿಯವರನ್ನು ಜೈಲಿಗೆ ಕಳುಹಿಸಲು

ಹಿಂದೇಟು ಹಾಕಲಿಲ್ಲ. ಜನತಾ ಸರಕಾರದಲ್ಲಿ ನಿರಂತರ ಭಿನ್ನಾಭಿಪ್ರಾಯ ತಿಕ್ಕಾಟದಿಂದಾಗಿ ಮೊರಾರ್ಜಿ ಬಹುಮತ ಕಳೆದುಕೊಂಡಾಗ, ಅಂದಿನ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ ಚರಣಸಿಂಹರನ್ನು ಪ್ರಧಾನಿಯಾಗಿ ನೇಮಿಸಿ, ಪ್ರಮಾಣವಚನ ಬೋಧಿಸಿದರು. ಆದರೆ ವಿಶ್ವಾಸಮತ ಸಾಬೀತುಪಡಿಸುವ ಬದಲು ಸಾರ್ವತ್ರಿಕ ಚುನಾವಣೆ ಸಾರಿದರು; ಸೋತರು. ಕಾಂಗ್ರೆಸ್ ಬೆಂಬಲ ನಂಬಿ ಅತಂತ್ರರಾದರು. ರಾಜಕೀಯ ಅಸ್ಥಿರತೆಗೆ ಕಾರಣರಾದರೆಂಬ ಆರೋಪ ಹೊರುವಂತಾಯಿತು.

ಸಾದಾ ಬದುಕಿನ ಚರಣಸಿಂಹರು ವಿರಾಮವೇಳೆಯನ್ನು ಬರವಣಿಗೆಯಲ್ಲಿ ತೊಡಗಿದ್ದರು. ಹಲವಾರು ಪುಸ್ತಕ-ಗಳನ್ನು ಬರೆದರು. 'ಜಮೀನ್ದಾರಿ ರದ್ದು', 'ಸಹಕಾರಿ ಬೇಸಾಯ-ಕ್ಷಕಿರಣ', 'ಭಾರತದ ಬಡತನ ಮತ್ತು ಅದಕ್ಕೆ ಪರಿಹಾರ', ರೈತ ಒಡೆತನ ಅಥವಾ ಶ್ರಮಿಕರಿಗೆ ಭೂಮಿ ಹಾಗೂ ಒಂದು ಕನಿಷ್ಠ ಹಂತದ ಕೆಳಗೆ ಜಮೀನು ಹಿಡುವಳಿ ತಗ್ಗಿಸುವುದನ್ನು ತಡೆಯುವುದು - ಇವರ ಕೆಲವು ಪ್ರಮುಖ ಬರಹಗಳು.

ಚೌಧುರಿ ಚರಣಸಿಂಹರು ತಮ್ಮ 85ನೆಯ ವಯಸ್ಸಿನಲ್ಲಿ 1987ರ ಮೇ 5ರಂದು ನಿಧನ ಹೊಂದಿದರು. (ಕೆ.ಎಸ್.ವಿ)

**ಚರಮಗೀತೆ :** ಶೋಕ, ದುಃಖ, ಅಳಲುಗಳನ್ನು ಅಭಿವ್ಯಕ್ತಿಗೊಳಿಸುವ ಒಂದು ಹಾಡು, ಗೀತೆ(ಎಲಿಜಿ). ಇದಕ್ಕೆ ಸಾವಿಗೆ ಸಂಬಂಧಪಟ್ಟ ಕವನವೆಂಬ ಅರ್ಥ ಬಂದಿರುವುದೂ ಉಂಟು. ಕಾಳಿದಾಸ-ಭೋಜರಾಜ, ಕಂತಿ-ಹಂಪ ಇತ್ಯಾದಿ ಕಟ್ಟುಕಥೆ ಕೇಳಿದವರಿಗೆ ಇದು ಅರ್ಥಾತ್ ಮರಣಗೀತೆಯೆಂದೇ ಭಾಸವಾಗುತ್ತದೆ. ಆ ಭಾವನೆ ತಪ್ಪಲ್ಲ ; ಆದರೆ ಇದು ಅಸಮಗ್ರ ; ಚರಮಗೀತೆಯ ವ್ಯಾಪ್ತಿಯನ್ನದು ಕುಂಠಿತಗೊಳಿಸುತ್ತದೆ. ಪ್ರಾಚೀನ ಗ್ರೀಕರಲ್ಲಿ ಚರಮ ಛಂದಸ್ಸು (ಎಲಿಜೈಯಕ್ ಮೀಟರ್) ಎಂಬುದು ಬಳಕೆಗೆ ಬಂತು ; ಆರು ಗಣಗಳ ಒಂದು ಪಂಕ್ತಿಯೂ ಐದು ಗಣಗಳ ಇನ್ನೊಂದೂ ಸೇರಿ ಆದ ದ್ವಿಪದಿಯೇ ಅದು. ಒಂದು ಪದ್ಯಕ್ಕೆ ಇಷ್ಟೇ ದ್ವಿಪದಿ ಇರಬೇಕೆಂಬ ನಿರ್ಬಂಧ ಇರಲಿಲ್ಲ. ಆದರೂ ಆಳಿದವರನ್ನು ಹೊಗಳುವ ಸಮಾಧಿಲೇಖ ಸಾಮಾನ್ಯವಾಗಿ ಏಕೈಕ ದ್ವಿಪದಿಯಲ್ಲಿ ಅಡಕವಾಗುತ್ತಿತ್ತು.

'ಈ ಬಳಿ ನಡೆವ ದಾರಿಗ, ಸ್ಪಾರ್ಟ ಜನರಿಗೆ ಹೇಳು ನೀ ಹೋಗಿ ;
ನಾವಿಲ್ಲಿ ಮಲಗಿಹೆವು ಅವರ ಕಾಯಿದೆಗಳಿಗೆ ವಿಧೇಯರಾಗಿ'

'ಎನ್ನನೆಂದೆಂದಿಗು ಕನ್ಯೆಯೆಂದೇ ಕರೆಯುವರು ಅಂತು:
ದೇವತೆಗಳಿಂದ ಮದುವೆಯ ಬದಲು ಆ ಹೆಸರು ಬಂತು'

ಕೊಳಲನ್ನು ಶ್ರುತಿಯಾಗಿರಿಸಿಕೊಂಡು ಹಾಡಲು ಬರುತ್ತಿದ್ದ ಚರಮ ದ್ವಿಪದಿಗೆ ಮರಣ ಮಾತ್ರ ವಿಷಯವಾಗಿರಬೇಕೆಂಬ ನಿಯಮ ಕಡ್ಡಾಯವಾಗಿರಲಿಲ್ಲ. ಸಂಗ್ರಾಮ, ಪ್ರೇಮಶೋಕ, ರಾಜಕೀಯ ಮುಂತಾದ ವಿಚಾರಗಳನ್ನೂ ಅದು ಪ್ರತಿಪಾದಿಸಬಹುದಾಗಿತ್ತು.

ಒಳ್ಳೆಯ ಗುರಾಣಿ ಹಿಡಿದು ಈಗೊಬ್ಬ ಥೇಸಿಯ
ದವಗೆ ಅಹಂಕಾರ ;
ಅದು ನನ್ನದು, ಸೋತ ನಾನು ರಣರಂಗದಲಿ
ಬಿಟ್ಟು ಬಂದೆ ಅದನ್ನ,
ಒಳಿತಾಯ್ತು, ನಾನೆನ್ನ ತಲೆಯ ಉಳಿಸಿಕೊಂಡೆ ;
ಹೋಗಲಿ ಆ ಅಲಂಕಾರ,
ಹೊಸದೊಂದ ಹೇಗೊ ಸಂಪಾದಿಸುವೆ, ಹಳೆಯ
ದರಷ್ಟೇ ಅದು ಚೆನ್ನ'
'ಕೇಳಿದೆ ಮಂದಿಗಾಗಿ ಕೊಕ್ಕರೆ ಎಬ್ಬಿಸಿದ
ಒಸಗೆ ಕೂಗ ;
ಹೊತ್ತಾಯ್ತು ಏಳಿ, ನೇಗಿಲ ಹೂಡಿ ಎಂದದರ
ಕಲಕಲ
ಓ ಗೆಳೆಯ, ನನ್ನ ಕೊರಗುವೆಡೆಗೆ ಅದು ತಂದಿತು
ತಳಮಳ ;
ನನ್ನ ಫಲವತ್ತು ಜಮೀನೆಲ್ಲ ಅನ್ಯರ ಕೈವಶ
ಈಗ ;
ಕುದುರೆ ಎತ್ತು ಸಿಂಹಕ್ಕೆ ಕುಂಚ ಹಿಡಿದು ಚಿತ್ರಿಸಬಲ್ಲ
ಶಕ್ತಿಯಿದ್ದಲ್ಲಿ
ದೇವರನ್ನು ನಿರ್ಮಿಸುತ್ತಿದ್ದುವು ತಮ್ಮ ತಮ್ಮಂತೆ ;
ಸಿಂಹ ಎತ್ತು ಕುದುರೆ ದೇವರು!'

ಪ್ರಶ.ಪೂ. 3ನೆಯ ಶತಮಾನದ ಆದಿಯಲ್ಲಿ ಥಿಯೋಕ್ರಿಟಿಸ್ ಎಂಬ ಶಕ್ತ ಕವಿ ಗ್ರಾಮೀಣ ಪದ್ಧತಿ (ಪ್ಯಾಶ್ಟೊರಲ್ ಪೋಯಟ್ರಿ) ಎಂಬುದಕ್ಕೆ ಕಾರಣಕರ್ತನಾದ. ಅವನು ಹೊರತಂದ ಅದರ ಮೂರು ವಿಧಗಳಲ್ಲಿ ರೋದನ (ಡರ್ಜ್) ಎಂಬ ಚರಮಗೀತೆ ಅತ್ಯಂತ ಪ್ರಭಾವ ಬೀರಿ, ಆಮೇಲಣ ಅಂಥ ಕವಿತ್ವವೆಲ್ಲಕ್ಕೂ ಒಂದು ಬಗೆಯಲ್ಲಿ ಮೇಲ್ಪಂಕ್ತಿಯಾಯಿತು. ಅದರಲ್ಲಿ ಕುರಿಗಾಹಿಗಳೇ ಕಥೆ ಹೇಳುವ ಪ್ರೇಮವನ್ನು ವಿವರಿಸುವ, ದುಃಖ ತೋಡಿಕೊಳ್ಳುವ, ಗಾನಗೈಯುವ ಪಾತ್ರವರ್ಗ ; ಅತಿ ಪುರಾತನ ಮೂಲ ಕಥಾವಳಿಯ ಆಡೊನಾಯಿಸ್, ಡಾಫ್ನಿಸ್ ಮೊದಲಾದ ಪ್ರೇಮಸಂತಪ್ತರ ವಿರಹವಿಷಾದದ ಕಥನವೇ ಸಾಮಗ್ರಿ. ನಿರೂಪಣೆಯ ವಿಧಾನದಲ್ಲಿ ಪ್ರಶ್ನಿಸುವ ಕುರುಬ, ಉತ್ತರ ಹೇಳುವ ಕುರುಬ, ಮರುಕ ತೋರಲು ಆಗಮಿಸುವ ನಿಸರ್ಗದೇವಿಯರು ಗಿಡ ಮರ ಗಾಳಿ ನೀರುಗಳ ಸಹಶೋಕ, ನಷ್ಟವನ್ನುಂಟುಮಾಡಿದ ದುಷ್ಟತನದ ಮೇಲೆ ಶಾಪ ಎರಚುವಿಕೆ, ಕೊನೆಗೆ ಸಂತಾಪಕ್ಕೆ ಕಾರಣವಿಲ್ಲ ಎಂಬ ತರ್ಕ- ಇವೆಲ್ಲ ಬರುತ್ತವೆ. ಏತಕ್ಕೆಂದರೆ ಮೃತನು ನಿಜವಾಗಿ ಸತ್ತಿಲ್ಲ. ಬೇರೆ ಸಂತಸಲೋಕದಲ್ಲಿ ಬಾಳುತ್ತಿದ್ದಾನೆ ಎಂಬ ಸಮಾಧಾನದ ಮಾತು ಕೊನೆಯಲ್ಲಿ ಬರುತ್ತದೆ. ಜೊತೆಗೆ ತಿರುತಿರುಗಿ ಬರುವ ಪಲ್ಲವಿ ಉಪಮಾನ ರೂಪಕ ಕಟಕಿ ಇತ್ಯಾದಿ ಅಲಂಕಾರಗಳು, ಪ್ರೌಢ ಭಾಷೆ-ಇವು ಶೈಲಿಯ ಮುಖ್ಯಲಕ್ಷಣ. ಮುಂದೆ ಶತಮಾನಗಟ್ಟಲೆ ಅವು ಶೋಕಗೀತದಲ್ಲಿ ಬಿಡಲಾಗದ ಕಾವ್ಯಸಂಪ್ರದಾಯವಾಗಿ ನಿಂತುಬಿಟ್ಟವು ; ಈಗಲೂ ಪ್ರಾಯಶಃ ಆಗೊಮ್ಮೆ ಈಗೊಮ್ಮೆ ಕಾಣಬರುತ್ತವೆ. ಬಹಳ ದಿವಸ ಚರಮಗೀತೆಯೆಂದರೆ ಗ್ರಾಮೀಣ ಸಂಪ್ರದಾಯದ ಆಧಾರದಮೇಲೆ ಕಟ್ಟಿದ ಶೋಕಪದ್ಯವೆಂದೇ ನಂಬಿಕೆಯಿತ್ತು. ಥಿಯೋಕ್ರಿಟಿಸ್ ತನ್ನ ಕೃತಿಗೆ ಇಟ್ಟ ಹೆಸರು ಎಲಿಜಿ ಎಂದಲ್ಲ. ಇಡಿಲ್ ಎಂದು. ಅದರ ಅರ್ಥ ಸುಖಶಾಂತಿಯಿಂದ ಕೂಡಿದ ಹಳ್ಳಿಗಾಡಿನ ಜೀವನವನ್ನು ಚಿತ್ರಿಸುವ ನೆಮ್ಮದಿ ಹಾಡು.

ರೋಮನ್ನರ ಭವ್ಯ ಕವಿ ವರ್ಜಿಲನ ಕೈಗೆ ಇಡಿಲ್ (ಅಥವಾ ಎಲಿಜಿ) ಬಂದಾಗ ಒಂದು ದೊಡ್ಡ ಮಾರ್ಪಾಟು ಆಯಿತು. ಆತ ಪಟ್ಟಣದ ಕವಿ, ಪೌರ ವ್ಯವಸ್ಥೆಯ ಮಧ್ಯೆ ಬದುಕು ನಡೆಸಬೇಕಾದವ, ನಗರ ಸಂಸ್ಕೃತಿಯಲ್ಲಿ ಸುಶಿಕ್ಷಿತನಾದವ. ಅವನ ಚಿತ್ರಕ್ಕೆ ಹಳ್ಳಿಗಾಡಿನ ಸರಳವೂ ಗಲಭೆಯಿಲ್ಲದ್ದೂ ಮನುಷ್ಯಸಹಜ ಲಾಭನಷ್ಟಗಳಿಂದ ಕೂಡಿದ್ದೂ ಆದ ಜೀವನಮಾರ್ಗ ರಮ್ಯವಾಗಿಯೂ ಆದರ್ಶದಂತೆಯೂ ಕಂಡುಬಂತು. ಅವನ ಪದ್ಯಗಳಲ್ಲಿ ವಾಸ್ತವತೆ ತೀರ ಕಡಿಮೆ, ಕಾಲ್ಪನಿಕತೆ ತಾನೇ ತಾನು. ಅಲ್ಲದೆ, ಕೇಡಿಗರ ಅವಹೇಳನೆ, ಒಳ್ಳೆಯವರ ಪ್ರಶಂಸೆ, ಕಾಲ ಇಳಿಗತಿಗೆ ಬಂತು ಎಂಬ ದುಗುಡ-ಇತ್ಯಾದಿ ವಿವರಗಳೂ ಕವಿತ್ವದೊಳಕ್ಕೆ ಪ್ರವೇಶಿಸಿದವು. ವರ್ಜಿಲನ ಸಾರಸ್ವತ ಅಧಿಕಾರ ಎಲ್ಲೆಲ್ಲೂ ಪ್ರಬಲವಾಗಿ ಏರ್ಪಟ್ಟಿತಾಗಿ, ಅವನ ಜಾಡನ್ನು ಅನುಸರಿಸಿ ಪದ್ಯರಚನೆ ಮಾಡುವುದು ಯಾವುದೇ ದೇಶದ ಉತ್ತಮ ಕವಿಗೂ ಕೃತಕವೆಂದೆನಿಸಲಿಲ್ಲ.

ಹೊಸ ಹುಟ್ಟಿನ ಅವಧಿಯಲ್ಲಿ ಒಬ್ಬಿಬ್ಬರು ಥಿಯೋಕ್ರಿಟಸನ ಪಂಥದವರಾಗಿ ಚರಮಗೀತೆಯಲ್ಲಿ ಕುರುಬ ಪಾತ್ರಗಳು, ಗಾಯನದ ಪೈಪೋಟಿ, ಮೃತನಿಗಾಗಿ ಗೋಳಾಟ, ಭೌತಪ್ರಕೃತಿದೇವಿಯರು, ಅಂತ್ಯದ ಸಾಂತ್ವನ-ಎಲ್ಲವನ್ನೂ ತಂದಿಟ್ಟರು. ಇಂಗ್ಲೆಂಡಿನ ಎಡ್ಮಂಡ್ ಸ್ಪೆನ್ಸರ್ ಇಂಥದಕ್ಕೆ ಹಿರಿಯ ಉದಾಹರಣೆ. 17ನೆಯ ಶತಮಾನದವನಾದ ಜಾನ್ ಮಿಲ್ಟನ್ ತನ್ನ ಸಹಪಾಠಿ ಎಡ್ವರ್ಡ್ ಕಿಂಗ್ ಎಂಬುವನ ಅಕಾಲಮರಣದಿಂದ ಪ್ರೇರಿತನಾಗಿ ರಚಿಸಿದ ಶೋಕಗೀತೆಯ ಹೆಸರು ಲಿಸಿಡಾಸ್ : ಅದು ಪ್ರಾಚೀನ ಗ್ರೀಕರಲ್ಲಿ ಬಳಕೆಯಲ್ಲಿದ್ದ ಹೆಸರು. ಕ್ಲುಪ್ತಾಂಶಗಳ ಜೊತೆಗೆ ಮತಧರ್ಮಕ್ಕೆ ಸಂಬಂಧಿಸಿದ ಕಟು ವಿಡಂಬನವನ್ನು ಮಿಲ್ಟನ್ನನು ರೋಮನ್ ಕವಿಗಳಂತೆ ತಂದು ಸೇರಿಸಿದ್ದಾನೆ. ಇವಾವುದೂ ಯಥಾರ್ಥವಲ್ಲ ಎಂಬ ಟೀಕೆಗೆ ಲಿಸಿಡಾಸ್ ಪಕ್ಕಾಗಿದ್ದರೂ ಅದರಂಥ ಮಹೋನ್ನತ ಕಾವ್ಯ ಮತ್ತೊಂದಿಲ್ಲ; ಚರಮಗೀತೆಯ ಕಿರೀಟ ಅದು, ದಿಟವಾಗಿ. ಅಷ್ಟೇಕೆ, 19ನೆಯ ಶತಮಾನದ ಷೆಲ್ಲಿ ಬರೆದ ಚರಮಗೀತೆಯ ಹೆಸರು ಆಡೊನಾಯಿಸ್. ಕೀಟ್ಸ್ ಯೌವನದಲ್ಲೇ ಮೃತ್ಯುಮುಖನಾದ. ಅವನ ಸಾವಿಗೆ ಅವನನ್ನು ಕುರಿತು ಪ್ರಕಟಗೊಂಡ ಕ್ರೂರ ಖಂಡನಾತ್ಮಕ ಪ್ರಬಂಧಗಳೇ ನಿಮಿತ್ತವೆಂದು ಷೆಲ್ಲಿ ತಿಳಿದುಕೊಂಡು, ತನ್ನ ಆಗ್ರಹವನ್ನೂ ಕನಿಕರವನ್ನೂ ತನ್ನ ಆ ಕವನದಲ್ಲಿ ಅಭಿವ್ಯಕ್ತಿಗೊಳಿಸಿದ್ದಾನೆ.

18ನೆಯ ಶತಮಾನದಲ್ಲಿ ಗ್ರೇ, ಯಂಗ್ ಇತ್ಯಾದಿ ಕೆಲವು ಕವಿಗಳಿಗೆ ಶ್ಮಶಾನಪಂಥ (ದ ಗ್ರೇವ್‌ಯಾರ್ಡ್ ಸ್ಕೂಲ್) ಎಂಬ ನಾಮಧೇಯ ಅಂಟಿಕೊಂಡಿತು. ರುದ್ರಭೂಮಿ, ಗೋರಿಗಳು, ಸಮರಾತ್ರಿ, ಕತ್ತಲು, ಎದೆಯನ್ನು ಅವುಕುವ ದುಮ್ಮಾನ, ಜೀವನದ ಕ್ಷಣಿಕತೆ ಮುಂತಾದ ಆಲೋಚನೆಗಳೇ ಅವರ ಕೃತಿಗಳ ಸರಕು. ಇಷ್ಟಮಿತ್ರರ ಅಳಿವೇ ಚರಮಗೀತೆಯನ್ನು ಪ್ರಚೋದಿಸಬೇಕು ಎಂಬ ಸಂಕುಚಿತ ಸೂತ್ರ ಅನಾವಶ್ಯಕ ಎಂಬುದಕ್ಕೆ ಇಂಥ ಇಹಜೀವನವನ್ನು ಕುರಿತ ವಿಶಾಲ ಸರ್ವವ್ಯಾಪ್ತ ಅಸೌಖ್ಯದ ಪ್ರಕಟನೆ ಸಾಕ್ಷ್ಯ. ಆ ಕಾಲದ ಜರ್ಮನಿಯಲ್ಲಿ ಎಲಿಜಿ ಎಂಬ ಪದಕ್ಕೆ ಸಾವಿಗಾಗಿ ಶೋಕ ಎಂಬ ಅರ್ಥ ಇರಲೇ ಇಲ್ಲ. ಇರುವ ಪರಿಸ್ಥಿತಿಯನ್ನು ತೆಗಳುವ ಕಾವ್ಯ-ವಿಡಂಬನೆ, ಆದರ್ಶ ಪರಿಸ್ಥಿತಿಯನ್ನು

ಬಣ್ಣಿಸುವ ಕಾವ್ಯ–ಇಡಿಲ್. ಘನವಾದ ಧ್ಯೇಯವು ಲೋಕವನ್ನು ಆಳಬೇಕು, ಆದರೆ ಆಳುತ್ತಿಲ್ಲವಲ್ಲ ಎಂಬ ವ್ಯಸನವನ್ನು ಚಿತ್ರಿಸುವ ಕಾವ್ಯ ಚರಮಗೀತೆ (ಎಲಿಜಿ). ಈ ಭಾವನೆ ಕವಿಗಳಿಗೂ ವಿಮರ್ಶಕರಿಗೂ ಗುರುತಾಗಿತ್ತು. ಫ್ರಾನ್ಸಿನಲ್ಲಿ ಬ್ವಾಲೊ ಎಂಬ ಶ್ರೇಷ್ಠ ವಿಮರ್ಶಕ ಚರಮಗೀತೆಯಲ್ಲಿ ಪ್ರೇಮವೂ ಮರಣವೂ ವರ್ಣಿತವಾಗಲೇಬೇಕೆಂದು ಘೋಷಿಸಿದರೂ ಇತರ ಮೃದು ಸಂಗತಿಗಳೂ ಅಸ್ಫುಟ ದುಗುಡವೂ ಅದರೊಳಕ್ಕೆ ನುಗ್ಗಿ ಬಂದುವು.

19ನೆಯ ಶತಮಾನದಲ್ಲಿ ವಾಸ್ತವಿಕತೆ ಮತ್ತು ಸ್ವಾಭಾವಿಕತೆ ತತ್ತ್ವಗಳ ಆಧಿಪತ್ಯ ಸಾಹಿತ್ಯ ಪ್ರಪಂಚದಲ್ಲಿ ಉಂಟಾಯಿತು. ಸತ್ತವನ ಸ್ನೇಹಿತ ಅವನಿಗಾಗಿ ಮಾನವನಂತೆಯೇ ಮಾನವಿಕತೆಯ ಸಂಕಟವನ್ನು ಪ್ರಕಟಿಸುವುದು ಹೆಚ್ಚು ಪ್ರಾಮಾಣಿಕವಲ್ಲವೆ, ಕುರಿಗಾಹಿ, ಕೊಳಲು ಬಾಜನ, ಅಮಾನುಷ ವ್ಯಕ್ತಿಗಳು ಮುಂತಾದ ಸೋಗಿಗೆ ಏನು ಅಗತ್ಯ–ಎಂಬ ಅಭಿಪ್ರಾಯವನ್ನು ಪರಿಪಾಲಿಸುತ್ತ ಅನೇಕ ಕವಿಗಳು ಉತ್ಕೃಷ್ಟ ಚರಮಗೀತೆಯನ್ನು ರಚಿಸಿದರು; ಇಂದೂ ರಚಿಸುತ್ತಿದ್ದಾರೆ. ವಿಟ್ಮನ್ ಕವಿ ಏಬ್ರಹಾಂ ಲಿಂಕನ್ನನ ಮೇಲೂ ಟೆನಿಸನ್ ಕವಿ ವೆಲಿಂಗ್ಟನ್ನನ ಮೇಲೂ ಕಟ್ಟಿದ ಪ್ರಗಾಥಗಳೂ ಅಮರಕಾವ್ಯವಾಗಿವೆ. ಟೆನಿಸನ್ನನ ಇನ್ ಮೆಮೋರಿಯಂ ಪ್ರಖ್ಯಾತ ಶೋಕಗೀತಾಶತಕವೆಂದು ಇತ್ತೀಚಿನವರೆಗೆ ಪರಿಗಣಿತವಾಗಿತ್ತು. ಈಚಿನ ತನಕ. ಈಗ ಅದರ ಭಾವಾತಿರೇಕ ಅನೇಕ ಓದುಗರಿಗೆ ಅರುಚಿಯಾಗಿದೆ ಈ ಪ್ರಸ್ತಾವದಲ್ಲಿ ಚಾಮರಾಜೇಂದ್ರ ಒಡೆಯರ ನಿಧನಕ್ಕಾಗಿ ಎಸ್. ಜಿ. ನರಸಿಂಹಾಚಾರ್ಯರು ಕಟ್ಟಿದ ಷಟ್ಪದಿಗಳನ್ನೂ, ನಾಲ್ವಡಿ ಕೃಷ್ಣರಾಜ ಒಡೆಯರ ನಿಧನಕ್ಕಾಗಿ ಬಿ.ಎಂ. ಶ್ರೀಕಂಠಯ್ಯನವರು ಕಟ್ಟಿದ ಪ್ರಗಾಥವನ್ನೂ ನೆನಸಿಕೊಳ್ಳಬಹುದು.

ಚರಮಗೀತೆ ಎದುರಿಸಿ ಸಮಂಜಸವಾಗಿ ಬಿಡಿಸಬೇಕಾದ ಸಮಸ್ಯೆಗಳಲ್ಲಿ ಭಾವಾತಿರೇಕ (ಸೆಂಟಿಮೆಂಟಲಿಸಂ) ಒಂದು ; ಕಷ್ಟಸಾಧ್ಯವಾದದ್ದು. ಕಣ್ಮರೆಯಾದ ಮಹಾಶಯನ ವಿಚಾರವಾಗಿ ಅಂತ್ಯಸಂಸ್ಕಾರ ಭಾಷಣ (ಫ್ಯೂನರಲ್ ಆರೇಷನ್), ಮರಣವಾರ್ತೆ (ನೆಕ್ರೊಲಜಿ), ವಿಷಾದಗೀತೆ ಮೊದಲಾದ ಗದ್ಯ ಪದ್ಯ ವ್ಯವಹಾರ ಜಗತ್ತಿನಲ್ಲೆಲ್ಲ ವಾಡಿಕೆಯಾಗಿದೆ. ಯಾವುದೇ ಬಗೆಯ ಲೇಖನವಾಗಲಿ ಚಿಕ್ಕದಿರಲಿ ದೊಡ್ಡದಿರಲಿ ದೋಷಗಳನ್ನು ಮರೆಮಾಚದೆ ಗುಣಗಳನ್ನು ಅತಿಶಯಿಸದೆ ಸತ್ಯವೊಂದಕ್ಕೇ ಶರಣಾಗಿ ನಿಷ್ಠುರ ಕೃತಿಯನ್ನು ಬರೆದು ಕೃತಕೃತ್ಯನಾಗುವುದು ಸಾಧ್ಯವೆ? ಅಂಥ ಕೃತಿಯನ್ನು ಅಪೇಕ್ಷಿಸಿ ಮೆಚ್ಚುವ ಸಮಾಜ ಎಲ್ಲಿದೆ? ಸಮಾಧಿಗೀಡಾದವರ ವಿಷಯವಾಗಿ ಆಡಬೇಕಾದರೆ ಒಂದೆರಡು ಒಳ್ಳೆಯ ನುಡಿಯನ್ನೇ ಆಡಿ ಮುಗಿಸು ; ವಿರೋಧ ವೈಷಮ್ಯ ಏನಿದ್ದರೂ ವ್ಯಕ್ತಿಯ ಮರಣದವರೆಗೆ, ಇತ್ಯಾದಿ ನಾಣ್ಣುಡಿಗಳು ಬೇರೂರಿ ನಿಂತಿವೆ. ದುಃಖವನ್ನು ಒಳಗೇ ನುಂಗಿಕೊಳ್ಳತಕ್ಕದ್ದು, ಪ್ರದರ್ಶನ ಮಾಡತಕ್ಕದ್ದಲ್ಲ ಎಂಬುದು ಈಗಿನ ಯುಗಧರ್ಮವಾಗಿದೆ. ಪುರುಷಗೌರವ ಹೀಗಿರುವಾಗ ಒಪ್ಪತಕ್ಕ ಚರಮಗೀತೆ ಹೇಗೆ ಒಡಮೂಡಬೇಕು? ಪರಸ್ಪರ ವಿರೋಧಗಳ ನಡುವೆಯೇ ಬಾಳನ್ನು ಸಾಗಿಸುವ ಹೊಣೆಯನ್ನು ಹೊತ್ತಿರುವ ನರವರ್ಗಕ್ಕೆ ಸಮಸ್ಯೆ ಕಠಿಣವಾದರೂ ನಿವಾರಣೆಗೆ ಸಿಕ್ಕುವಂಥಾದ್ದೆ. ಉತ್ಪ್ರೇಕ್ಷೆ ವೈಪರೀತ್ಯಗಳನ್ನು ದಕ್ಷತೆಯಿಂದ ದೂರಮಾಡಿ, ಒಟ್ಟಿನಲ್ಲಿ ಸತ್ಯಚಿತ್ರಣ ಅನ್ನಿಸುವ ಸೌಹಾರ್ದಯುತ ದುಃಖಗೀತವನ್ನು ನಿರ್ಮಿಸುವ ಸಾಮರ್ಥ್ಯ ಕವಿಗಡಣಕ್ಕೆ ಇಲ್ಲ ಎಂದರೆ ಸುಳ್ಳಾದೀತು. ಅತಿಶಯೋಕ್ತಿಯ ಕಡೆಗೆ ತಿರುಗದೆ, ನಿರ್ದಯೆಯನ್ನು ಅತ್ತ ನೂಕಿ, ಪ್ರೀತಿ ಗೌರವ ಕೂಡಿದ ವ್ಯಕ್ತಿಚಿತ್ರಣವನ್ನು ನಿರ್ಮಿಸುವುದು ಚತುರಮತಿಯಾದ ಕವಿಗೆ ಅಸಾಧ್ಯವಲ್ಲ.

ಕೆಲವು ಕವಿಗಳು ತಮ್ಮ ಚರಮಗೀತವನ್ನು ತಾವೇ ಬರೆದಿಟ್ಟು ಹೋಗಿದ್ದಾರೆ. ಫ್ರಾಸ್ಟ್, ಪಿರಾಂಡೆಲೊ, ಸ್ಟೀವನ್ಸನ್ ಮೊದಲಾದವರ ವಾಕ್ಯಗಳು ಅವರ ಋಜುತ್ವಕ್ಕೂ ವ್ಯಕ್ತಿವರ್ಚಸ್ಸಿಗೂ ಕನ್ನಡಿಯಂತಿವೆ ; ಇತರರಾರೂ ಬರೆಯಲಾರದಂಥ ಸಂಕ್ಷಿಪ್ತ ಜೀವನಚರಿತ್ರೆಗಳಾಗಿವೆ. (ಎಸ್.ವಿ.ಆರ್.)

**ಚರಾಪೂಂಜಿ :** ಭಾರತದ ಮೇಘಾಲಯ ರಾಜ್ಯದಲ್ಲಿ ಖಾಸಿ ಮತ್ತು ಜೈಂತಿಯಾ ಬೆಟ್ಟ ಜಿಲ್ಲೆಯಲ್ಲಿರುವ ಒಂದು ಗ್ರಾಮ. ಉ.ಅ. $25^0$ 15' ಮತ್ತು ಪೂ.ರೇ. $91^\circ$ 44' ಮೇಲೆ, ಶಿಲಾಂಗಿಗೆ 50 ಕಿಮೀ ದಕ್ಷಿಣದಲ್ಲಿ ಇದೆ. ಶಿಲಾಂಗ್ ಪ್ರಸ್ಥಭೂಮಿಯ ದಕ್ಷಿಣ ಅಂಚಿನಲ್ಲಿರುವ ಈ ಸ್ಥಳದ ಎತ್ತರ ಸಮುದ್ರಪಾತಳಿಯಿಂದ 357 ಮೀ. ಅಧಿಕ ಮಳೆ ಬೀಳುವ ಸ್ಥಳವೆಂದು ಚಿರಾಪೂಂಜಿ ಪ್ರಸಿದ್ಧವಾಗಿದೆ. ಇಲ್ಲಿಯ ವಾರ್ಷಿಕ ಸರಾಸರಿ ಮಳೆ 428". ವಾಸ್ತವವಾಗಿ ವರ್ಷದಿಂದ ವರ್ಷಕ್ಕೆ ಮಳೆ ಬಹಳ ವ್ಯತ್ಯಾಸವಾಗುತ್ತಿರುತ್ತದೆ. 1861ರಲ್ಲಿ ಒಟ್ಟು 905"– ಜುಲೈ ತಿಂಗಳಲ್ಲೊಂದರಲ್ಲೇ 366"– ಮಳೆಯಾಯಿತು. 1876ರಲ್ಲಿ ಕೇವಲ 24 ಗಂಟೆಗಳಲ್ಲಿ 41" ಮಳೆಯಾದ ದಾಖಲೆಯಿದೆ. ವಿಶ್ವದಲ್ಲಿ ಅತ್ಯಧಿಕ ಮಳೆಯಾಗುವ ಸ್ಥಳ ಚಿರಾಪೂಂಜಿಗೆ ಹತ್ತಿರದಲ್ಲಿರುವ ಮಾವ್ಸಿನ್ರಾಮ್ ಎಂಬ ಹಳ್ಳಿ. ಅಲ್ಲಿಯ ವಾರ್ಷಿಕ ಸರಾಸರಿ ಮಳೆ 550". ಈ ಸ್ಥಳ ಮಾನ್ಸೂನಿಗೆ ಇದಿರಾಗಿ, ವರ್ತುಲ ಪರ್ವತಪಂಕ್ತಿಯ ಮೇಲಿದೆ.

ಮೊದಲು ಚಿರಾಪುಂಜಿ ಖಾಸಿ ಮತ್ತು ಜೈಂತಿಯಾ ಪರ್ವತಪ್ರದೇಶಗಳ ಆಡಳಿತ ಕೇಂದ್ರವಾಗಿತ್ತು. ಅನಂತರ ಅದನ್ನು ಇಲ್ಲಿಂದ ಶಿಲಾಂಗಿಗೆ ಸ್ಥಳಾಂತರಿಸಲಾಯಿತು. ಇಲ್ಲಿದ್ದ ಸುಂದರವಾದ ಕಟ್ಟಡಗಳೂ ಬಂಗಲೆಗಳೂ 1897ರ ಭೂಕಂಪದಿಂದ ಹಾನಿಗೊಳಗಾದುವು. ಅತಿಶಯವಾದ ಮಳೆಯಿಂದಾಗಿ ವರ್ಷದುದ್ದಕ್ಕೂ ಇಲ್ಲಿಯ ನಿಸರ್ಗ ರಮಣೀಯವಾಗಿರುತ್ತದೆ. ಈ ಪ್ರದೇಶದಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲು ಮತ್ತು ಸುಣ್ಣದ ಕಲ್ಲು ದೊರೆಯುತ್ತವೆ. ಇಲ್ಲಿ 1971ರಲ್ಲಿ ಸಿಮೆಂಟ್ ಕಾರ್ಖಾನೆಯೊಂದು ಸ್ಥಾಪಿತವಾಯಿತು. ಖಾಸಿ ಬುಡಕಟ್ಟಿನ ಜನ ಇಲ್ಲಿ ವಾಸವಾಗಿದ್ದಾರೆ. ಇವರು ಪ್ರೋಟೋ–ಆಸ್ಟ್ರಲಾಯಿಡ್ ಗುಂಪಿನವರು. ಇವರದು ಮಾತೃಯಾಜಮಾನ್ಯ ಪದ್ಧತಿಯ ಸಮಾಜ.

ಇಲ್ಲಿ ಝುಂ (ಸರದಿ ಬೆಳೆ) ಮತ್ತು ಮೆಟ್ಟಿಲು ನೆಲ ವ್ಯವಸಾಯ ಜಾರಿಯಲ್ಲಿದೆ. ಮುಖ್ಯ ಬೆಳೆ ಬತ್ತ, ಬಾಳೆ, ಪ್ಲಂ, ಅನಾನಾಸ್ ಮತ್ತು ಕಿತ್ತಳೆ ಜಾತಿಯ ಹಣ್ಣುಗಳು ಬೆಳೆಯುತ್ತವೆ. ಚಹ ತೋಟಗಳೂ ಸುತ್ತಮುತ್ತ ಇವೆ. (ಬಿ.ಎ.ಎಸ್.)

**ಚರಿತ್ರೆಯ ಬೋಧನಕ್ರಮ:** ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡ ಐತಿಹಾಸಿಕ ವಿಷಯಗಳನ್ನು ಆಸಕ್ತಿಯಿಂದ ಮಕ್ಕಳು ಅರಿತುಕೊಳ್ಳುವಂತೆ ಮಾಡುವುದು ಚರಿತ್ರೆಯ ಬೋಧನೆ ನಿರ್ವಹಿಸಬೇಕಾದ ಕಾರ್ಯ. ಹಿಂದಿನ ಮತ್ತು ಇಂದಿನ ಚರಿತ್ರೆಯ ವ್ಯಾಸಂಗ ನಮ್ಮ ಮುಂದೆ ಎರಡು ವಿಷಯಗಳನ್ನು ಇಡುತ್ತದೆ; ಅದರಲ್ಲಿ ಒಂದು ಆದರ್ಶ ಜೀವನ ಹೇಗಿದೆ, ಹೇಗಿರಬೇಕು ಎಂಬುದು; ಇನ್ನೊಂದು, ಹಾಗಿಲ್ಲದಲ್ಲಿ ಜೀವನ ಹೇಗೆ ಕೆಡುತ್ತದೆ ಎಂಬುದು. ಒಂದು ಅನುಸರಿಸಬೇಕಾದ ಮೇಲ್ಪಂಕ್ತಿ; ಇನ್ನೊಂದು ಹೇಗಿರಬಾರದು ಎಂಬ ಎಚ್ಚರಿಕೆ.

ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಇತಿಹಾಸ ಎಂಬ ಶೀರ್ಷಿಕೆಯ ಅಡಿ ಚರ್ಚಿಸಿದೆ. ಇಲ್ಲಿ ಇತಿಹಾಸ ಅಥವಾ ಚರಿತ್ರೆಯನ್ನು ಬೋಧಿಸುವ ಕ್ರಮಗಳನ್ನು ಕುರಿತು ವಿವೇಚಿಸಲಾಗಿದೆ.

ಉತ್ತಮ ಬೋಧನೆಯ ಕ್ರಮದಿಂದ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ ಸಿದ್ಧಿಸಬೇಕು. ಜ್ಞಾಪಕಶಕ್ತಿ, ಆಲೋಚನೆ, ವಿವೇಚನೆ, ಕಲ್ಪನೆ ಈ ಮನಶ್ಶಕ್ತಿಗಳು ಬೆಳೆಯಬೇಕು. ಅದರಲ್ಲಿ ದೇಶಪ್ರೇಮ, ರಾಷ್ಟ್ರೀಯ ಭಾವನೆ, ಪೌರತ್ವದ ತರಬೇತಿ ಮತ್ತು ಜ್ಞಾನ ಇವು ವೃದ್ಧಿಯಾಗಬೇಕು. ಈ ಉದ್ದೇಶದಿಂದ ರೂಪುಗೊಂಡು ಪ್ರಚಾರದಲ್ಲಿರುವ ಮುಖ್ಯ ಬೋಧನಾಕ್ರಮಗಳನ್ನು ಮುಂದೆ ಪರಿಶೀಲಿಸಿದೆ;

1. ಕಥನಕ್ರಮ : ಮಕ್ಕಳು ಸ್ವಾಭಾವಿಕವಾಗಿ ಕಥೆಗಳನ್ನು ಕೇಳಲು ಇಷ್ಟಪಡುತ್ತಾರೆ. ನಾಯಕ ವ್ಯಕ್ತಿಗಳ ಚರಿತ್ರೆಯನ್ನೂ ಕಥನಕ್ರಮದಿಂದ ಜನಜೀವನವನ್ನೂ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನೂ ಮಕ್ಕಳಿಗೆ ಸುಲಭಗ್ರಾಹ್ಯವಾಗುವಂತೆ ಮಾಡಬಹುದು. ಅವರ ಮಾನಸಿಕ ಮಟ್ಟಕ್ಕೆ ರುಚಿಸುವಂಥ ಇತಿಹಾಸಕ್ಕೆ ಸಂಬಂಧಪಟ್ಟ ಅಂಶಗಳನ್ನು ಆರಿಸಿಕೊಳ್ಳಬೇಕು. ಆ ವಿಷಯಗಳನ್ನು ಮಕ್ಕಳಿಗೆ ಸ್ಪಷ್ಟವಾಗಿ ತಿಳಿಯುವಂತೆ ಮಾಡಲು ತಕ್ಕ ತಂತ್ರಗಳನ್ನು ಬಳಸಬೇಕು. ಕಥೆಗಳು ಅನೇಕ ಘಟನೆಗಳಿಂದಲೂ ವಿಶೇಷ ವಿಚಾರಗಳಿಂದಲೂ ಕೂಡಿದ್ದರೆ ಕಲಿಕೆಯಲ್ಲಿ ಮಕ್ಕಳ ಆಸಕ್ತಿ ಕೇಂದ್ರೀಕೃತವಾಗುತ್ತದೆ. ಕಥೆ ಕೇಳುವ ಅವರ ಆಸಕ್ತಿ ವಿಷಯಗ್ರಹಣಕ್ಕೆ ಪ್ರಚೋದಕವಾಗಬೇಕು. ಪ್ರಾಥಮಿಕ ಮಟ್ಟದಲ್ಲಿ ಈ ಕಥನಕ್ರಮ ಬಹು ಉಪಯುಕ್ತವಾದುದು.

2. ಜೀವನಚರಿತ್ರೆಯ ಕ್ರಮ : ಚರಿತ್ರೆಯ ಘಟನೆಗಳು ಮಹಾವ್ಯಕ್ತಿಗಳ ವಿಚಾರವನ್ನು ಒಳಗೊಂಡಿರುತ್ತವೆ. ಅಂಥ ವ್ಯಕ್ತಿಗಳ ಚರಿತ್ರೆ ಅವರ ಕಾಲದ ಸ್ಥಿತಿಗಳನ್ನೂ ಸಂಸ್ಕೃತಿ ನಾಗರಿಕತೆಗಳನ್ನೂ ತಿಳಿಸುತ್ತದೆ. ಈ ದೃಷ್ಟಿಯಿಂದ ಜೀವನಚರಿತ್ರೆಯ ಮೂಲಕ ಇತಿಹಾಸಬೋಧನೆ ಮಾಡುವುದು ಒಂದು ಆಕರ್ಷಣೀಯ ಕ್ರಮ. ವ್ಯಕ್ತಿಯ ಕಥೆಯನ್ನು ತಿಳಿಯಲು ಮಕ್ಕಳು ಸಹಜವಾಗಿ ಆಸಕ್ತಿ ತೋರುತ್ತಾರೆ. ಆ ಮೂಲಕ ಮಕ್ಕಳಿಗೆ ಕಲಿಕೆಯಲ್ಲಿ ಪ್ರೇರಣೆ ಉಂಟಾಗುತ್ತದೆ. ಜೀವನಚರಿತ್ರೆಯ ಮೂಲಕವೇ ಅಂದಿನ ಸಮಾಜದ, ಸರ್ಕಾರದ ರೀತಿನೀತಿಗಳು, ಆದರ್ಶಗಳು, ವೈಯಕ್ತಿಕ ಶಕ್ತಿಗಳು ಮನವರಿಕೆಯಾಗುತ್ತವೆ. ಅನೇಕ ವ್ಯಕ್ತಿಗಳ ನೈತಿಕ ವಿಚಾರ ಮತ್ತು ದೇಶಭಕ್ತಿ ಮುಂತಾದವುಗಳ ಬಗ್ಗೆ ಅವರಿಗೆ ಶ್ರದ್ಧೆ ಮೂಡುತ್ತದೆ. ಈ ವಿಧಾನವನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಬಳಸಬಹುದು.

3. ಉಪನ್ಯಾಸಕ್ರಮ : ಉಪನ್ಯಾಸ ಕ್ರಮ ಬಹಳ ಕಾಲದಿಂದಲೂ ಬಳಕೆಯಲ್ಲಿದೆ. ನುರಿತ ವಿದ್ವಾಂಸನೊಬ್ಬನ ಹಲವಾರು ವರ್ಷಗಳ ವ್ಯಾಸಂಗದ ಫಲ ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವುದು ಈ ಕ್ರಮದಿಂದಲೇ. ಇತಿಹಾಸದ ಅನೇಕ ಜಟಿಲ ವಿಚಾರಗಳನ್ನು ಅರ್ಥಪೂರ್ಣವಾಗಿ ಪರಿಚಯ ಮಾಡಿಕೊಡಲು ಇದು ಬಹು ಉಪಯುಕ್ತ ವಿಧಾನ. ಒಂದು ವಿಸ್ತಾರವಾದ ವಿಷಯದ ಮುಖ್ಯಾಂಶಗಳನ್ನು ಸಮಗ್ರ ರೀತಿಯಲ್ಲಿ ಪರಿಚಯ ಮಾಡಿಕೊಡಲು ಇದು ನೆರವಾಗುತ್ತದೆ. ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಈ ಕ್ರಮ ಉಪಯುಕ್ತವೆನಿಸಬಲ್ಲದು. ಶಿಕ್ಷಕರು ತಮ್ಮ ಧ್ವನಿ, ಮುಖಭಾವಗಳು ಮತ್ತು ನಟನೆ ಮುಂತಾದುವುಗಳಿಂದ ಕೇವಲ ಗ್ರಂಥಸ್ಥವಾಗಿರುವ ನೀರಸ ಅಂಶಗಳಿಗೂ ಜೀವ ತುಂಬಿ ವಿಷಯ ನಿರೂಪಿಸಬಹುದು. ಮಕ್ಕಳು ನೇರವಾದ ಸಂಪರ್ಕ ಪಡೆಯಬಹುದು. ಬೋಧನೆಯ ವಿಷಯ ಮಕ್ಕಳ ಅಭಿನಂದನೆಗೆ ಪಾತ್ರವಾಗಿದೆಯೇ ಎಂಬುದನ್ನು

ಪರೀಕ್ಷಿಸಬಹುದು. ಹಾಗಲ್ಲದಿದ್ದರೆ ಸೂಕ್ತ ಬದಲಾವಣೆ ಮಾಡಿಕೊಳ್ಳಬಹುದು. ಕೇಳಿ ಕಲಿಯುವ ಮಕ್ಕಳ ಶಕ್ತಿ ಕುದುರುತ್ತದೆ. ಒಳ್ಳೆಯ ಉಪನ್ಯಾಸ ಪ್ರತಿಭಾವಂತ ಮಕ್ಕಳನ್ನು ಉತ್ತಮ ಕಲಿಕೆಗೆ ಪ್ರೇರೇಪಿಸುತ್ತದೆ.

4. ಚರ್ಚಾಕ್ರಮ : ಸಾಮಾಜಿಕ ಮನೋಭಾವನೆಯಿಂದ ಕೂಡಿದ ಈ ಕ್ರಮ ಸಮಸ್ಯಾಪರಿಹಾರಕ್ಕೆ ಅತ್ಯಂತ ಉಪಯುಕ್ತವಾದುದು. ವ್ಯಕ್ತಿಯ ಅಭಿಪ್ರಾಯಸ್ವಾತಂತ್ರ್ಯಕ್ಕೆ ಅವಕಾಶವಿರುತ್ತದೆ. ಸರ್ವಾನುಮತದ ಚರ್ಚೆಯಿಂದ ಒಂದು ಏಕಾಭಿಪ್ರಾಯಕ್ಕೆ ಅವಕಾಶವಾಗುತ್ತದೆ. ಒಂದು ಗುಂಪಿನಲ್ಲಿ ಒಂದು ವಿಷಯ ಹಲವು ರೀತಿಯಲ್ಲಿ ಚರ್ಚಿಸಲ್ಪಡುವುದರಿಂದ ಆಲೋಚನೆಗೂ ವಿಮರ್ಶಾತ್ಮಕ ನಿರ್ಣಯಕ್ಕೂ ಅವಕಾಶವಿರುತ್ತದೆ. ಉಪಯುಕ್ತ ರೀತಿಯಲ್ಲಿ ಚರ್ಚಿಸುವ ಹಾಗೂ ಇತರ ಅಭಿಪ್ರಾಯಗಳನ್ನು ಗೌರವಿಸುವ ಮನೋಭಾವ, ಆಲೋಚನೆಯನ್ನು ಕೆರಳಿಸಿ ಬುದ್ಧಿಶಕ್ತಿಯನ್ನು ಪ್ರಚೋದಿಸುವ ಅವಕಾಶ, ಭಾಷಾಶಕ್ತಿಯ ಅಭಿವೃದ್ಧಿ ಈ ಮುಖ್ಯವಾದ ಸೌಲಭ್ಯಗಳು ಇದರಲ್ಲಿವೆ. ಆದರೆ ಈ ಕ್ರಮ ಯಶಸ್ವಿಯಾಗಬೇಕಾದರೆ ಚರ್ಚೆಯಲ್ಲಿ ಭಾಗವಹಿಸುವವರು ಚರ್ಚೆಯ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಶಿಕ್ಷಕರು ಮಾರ್ಗದರ್ಶನ ನೀಡಬೇಕು. ಚರ್ಚೆ ಶಿಸ್ತಿನಿಂದ ಕೂಡಿರಬೇಕು ; ಕೇವಲ ಒಬ್ಬನೇ ಚರ್ಚೆಯಲ್ಲಿ ಭಾಗವಹಿಸುವಂತಾಗಬಾರದು. ವ್ಯವಸ್ಥಿತವಾದ ಬೋಧನಾಕ್ರಮದಿಂದ ಹುಟ್ಟಿಕೊಂಡಿರುವ ಅನೇಕ ಸಂದೇಹಗಳು ಇದರಿಂದ ನಿವಾರಣೆಯಾಗಬಲ್ಲವು. ಬೇರೆ ವಿಧಾನಗಳಿಂದ ಆಗಲೇ ಬೋಧನೆಯಾಗಿರುವ ಅಥವಾ ವಿದ್ಯಾರ್ಥಿಗಳು ಸ್ವತಃ ಅಭ್ಯಸಿಸಿಕೊಂಡು ಬಂದಿರುವ ವಿಷಯಗಳನ್ನು ಈ ಕ್ರಮದಿಂದ ಪರಿಣಾಮಕಾರಿಯಾಗಿ ಮನದಟ್ಟು ಮಾಡಿಕೊಡಬಹುದು.

5. ಮೂಲಾಧಾರ ಕ್ರಮ : ಚರಿತ್ರೆಯ ಅಂಶಗಳು ಮಕ್ಕಳ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಲು ಪರಿಣಾಮಕಾರಿಯಾದ ಕ್ರಮವೆಂದರೆ ಮೂಲಾಧಾರ ಕ್ರಮ. ನೋಡದ, ಪರಿಚಯವಲ್ಲದ ಗತಕಾಲದ ವಿಚಾರಗಳನ್ನು ತಿಳಿಯಲು ಮೂಲಾಧಾರಗಳು ಆವಶ್ಯಕ. ಸರ್ಕಾರದ ಕಾಗದಪತ್ರಗಳು, ಶಾಸನಗಳು, ಪತ್ರಗಳು, ಸನ್ನದುಗಳು, ಟಿಪ್ಪಣಿಗಳು ಮುಂತಾದವುಗಳಿಂದ ಚರಿತ್ರೆಯ ವಾಸ್ತವಿಕತೆ ಉಂಟಾಗುತ್ತದೆ. ಘಟನೆಗಳು ಸಹಜವೆಂಬಂತೆ ಕಂಡುಬರುತ್ತವೆ. ಹಿಂದಿನವರು ಬಿಟ್ಟುಹೋದ ಗತಕಾಲದ ಗುರುತುಗಳು ಚರಿತ್ರೆಯ ಹಳೆಯ ನೆನಪನ್ನು ಮಾಡಿಕೊಡುತ್ತವೆ. ಈ ಕ್ರಮದಿಂದ ಮಕ್ಕಳು ಚರಿತ್ರೆಯ ಘಟನೆಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ, ಪರೀಕ್ಷಿಸಿ, ವಿಮರ್ಶಿಸಿ ಚಾರಿತ್ರಿಕ ನಿರ್ಧಾರಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಆಸಕ್ತಿ ಬೆಳೆಸಿಕೊಳ್ಳಲು ಸರಿಯಾದ ಆಲೋಚನೆ, ಕಲ್ಪನೆ, ತುಲನೆ, ವಿಶ್ಲೇಷಣೆ, ನಿರ್ಧಾರ ಮತ್ತು ವಿಮರ್ಶೆ ಮುಂತಾದವನ್ನು ಬೆಳೆಸಿಕೊಳ್ಳಲು ಮೂಲಾಧಾರಗಳು ನೆರವಾಗುತ್ತದೆ. ಆದರೆ ಅಗತ್ಯ ಆಧಾರಗಳನ್ನು ಎಲ್ಲ ಪಾಠಗಳಿಗೂ ಹುಡುಕುವುದು ಕಷ್ಟ. ಇದನ್ನು ಮುಖ್ಯವಾಗಿ ಸಂಶೋಧನೆಯ ವಿದ್ಯಾರ್ಥಿವೃಂದಕ್ಕೆ ವಿಶಿಷ್ಟವಾಗಿ ಬಳಸಬೇಕಾಗುತ್ತದೆ. ಎಲ್ಲ ವಿಷಯಗಳನ್ನೂ ಈ ಕ್ರಮದಿಂದ ತಿಳಿಯಲು ಆಗುವುದಿಲ್ಲವಾದ್ದರಿಂದ ಒಂದೆರಡು ವಿಷಯಗಳನ್ನು ಈ ಕ್ರಮದಿಂದ ಬೋಧಿಸಿ ವಿದ್ಯಾರ್ಥಿಗಳಲ್ಲಿರುವ ಸಂಶೋಧನ ಕುತೂಹಲವನ್ನು ಕೆರಳಿಸಬಹುದು.

ಇತರ ಕ್ರಮಗಳು : ಇತಿಹಾಸ ಅಧ್ಯಯನದಿಂದ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಉದ್ದೇಶದಿಂದ ತಜ್ಞರು ಇನ್ನೂ ಅನೇಕ ಕ್ರಮಗಳನ್ನು ಸೂಚಿಸಿದ್ದಾರೆ. ಅವನ್ನು ಮುಂದೆ ಉಲ್ಲೇಖಿಸಬಹುದು:

1. ಅಭಿನಯ ಕ್ರಮ : ಚರಿತ್ರೆಯ ಕೆಲವು ಘಟನೆಗಳನ್ನು ನಾಟಕೀಯವಾಗಿ ಅಭಿನಯಿಸುವ ಅವಕಾಶ ಕಲ್ಪಿಸಿದರೆ ವಿದ್ಯಾರ್ಥಿಗಳ ಆಸಕ್ತಿ ಕುದುರುತ್ತದೆ. ಆಯಾ ಸನ್ನಿವೇಶಗಳನ್ನು ಹೇಗೋ ಹಾಗೆ ಆಯಾ ವ್ಯಕ್ತಿಯ ಅಂದಿನ ಮನೋಭಾವವನ್ನು ವಿದ್ಯಾರ್ಥಿ ತನ್ನದನ್ನಾಗಿ ಮಾಡಿಕೊಳ್ಳುವುದು ಅಭಿನಯದಿಂದ ಸಾಧ್ಯ. ಇದು ಚರಿತ್ರೆಯ ಬೋಧನಕ್ಕೆ ಒಂದು ಪೂರಕ ಕ್ರಮ.

2. ಕಾಲಾನುಗುಣ ವಿಧಾನ : ಚರಿತ್ರೆಯನ್ನು ಕಾಲಕ್ಕನುಗುಣವಾಗಿ ವಿಭಾಗಿಸಿ ಬೋಧಿಸುವುದರಿಂದ ಚಾರಿತ್ರಿಕ ಘಟನೆಗಳ ನೆನಪು ಮಕ್ಕಳ ಮನಸ್ಸಿನಲ್ಲಿ ಅನುಕ್ರಮವಾಗಿಯೂ ಶಾಶ್ವತವಾಗಿಯೂ ಉಳಿಯುತ್ತದೆ.

3. ಉದ್ಯಮ ವಿಧಾನ (ಪ್ರಾಜೆಕ್ಟ್ ವಿಧಾನ) : ಮಕ್ಕಳ ಅನುಭವಶಕ್ತಿಯನ್ನು ವೃದ್ಧಿಗೊಳಿಸಿ ಸಮಾಜಜೀವನಕ್ಕೆ ಹೊಂದಿಸಲು ಈ ಉದ್ಯಮ ವಿಧಾನ ಸಹಾಯಕವಾಗಿವೆ. ಮಕ್ಕಳನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿ ರಚನಾತ್ಮಕ ಶಕ್ತಿಯನ್ನು ಬೆಳೆಸಲು ಇದು ಉತ್ತಮ ವಿಧಾನ.

4. ಸಮಾಜ ವಿಕಸನ ಕ್ರಮ : ಸಮಾಜದ ಸರ್ವತೋಮುಖ ಅಭಿವೃದ್ಧಿಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಚರಿತ್ರೆಯನ್ನು ಬೋಧಿಸುವುದೇ ಈ ಕ್ರಮದ ಉದ್ದೇಶ. ಇದರಿಂದ ಇಂದಿನ ಸಂಸ್ಕೃತಿ ನಾಗರಿಕತೆಗಳ ನಿರ್ಮಾಣದಲ್ಲಿ ಮಾನವ ವರ್ಗ ನಿರ್ವಹಿಸಿದ ಪಾತ್ರ ಪರಿಚಯವಾಗಿ ಹಿಂದಿನವರ ಬಗ್ಗೆ ಗೌರವಾಭಿಮಾನಗಳು ಮಕ್ಕಳಲ್ಲಿ ಮೂಡುತ್ತವೆ.

5. ಡಾಲ್ಟನ್ ಯೋಜನೆ : ಇತಿಹಾಸ ವಿಷಯಕ್ಕೆ ಸಂಬಂಧಪಟ್ಟ ಪುಸ್ತಕ, ಭೂಪಟ, ಚಿತ್ರ ಮುಂತಾದ ಸಲಕರಣೆಗಳನ್ನು ಮಕ್ಕಳಿಗೆ ಕೊಟ್ಟು ಅವರಿಂದಲೇ ವ್ಯಾಸಂಗ ಮಾಡಿಸುವುದು ಈ ಕ್ರಮದ ಅಂತರಾತ್ಮ. ದಾಖಲೆಗಳು, ಪುಸ್ತಕಗಳು, ನಕ್ಷೆಗಳು ಮುಂತಾದವುಗಳನ್ನು ಉಪಯೋಗಿಸಿಕೊಂಡು ಚರಿತ್ರೆಯನ್ನು ಅಭ್ಯಾಸ ಮಾಡಬೇಕು. ಇದರಿಂದ ಮಕ್ಕಳಲ್ಲಿ ಸಂಶೋಧನಾತ್ಮಕ ಶಕ್ತಿಯನ್ನೂ ಸ್ವಾವಲಂಬನಶಕ್ತಿಯನ್ನೂ ಬೆಳೆಸಬಹುದು. ಆದರೆ ಪ್ರಾಥಮಿಕ ಹಂತದಲ್ಲಿ ಇದನ್ನು ಅನುಷ್ಠಾನಕ್ಕೆ ತರುವುದು ಕಷ್ಟ.

6. ಏಕಕೇಂದ್ರೀಯ ವೃತ್ತ ಯೋಜನೆ : ಚರಿತ್ರೆಯ ಪಠ್ಯಭಾಗದ ಒಂದೊಂದು ವಿಷಯವನ್ನೂ ಬೇರೆ ಬೇರೆ ಹಂತಗಳಲ್ಲಿ ವಿಸ್ತರಿಸಿಕೊಂಡು ಹೋಗುತ್ತ ಬೋಧಿಸುವುದು ಈ ಕ್ರಮದ ಮುಖ್ಯ ಉದ್ದೇಶ. ಪ್ರಾರಂಭದಲ್ಲಿ ವಿಷಯವನ್ನು ಸುಲಭವಾಗಿಯೂ ಕ್ರಮಕ್ರಮವಾಗಿ ಕ್ಲಿಷ್ಟವಿವರಗಳನ್ನು ನೀಡುತ್ತಲೂ ಬೋಧಿಸುವುದು ಈ ಕ್ರಮದ ವೈಶಿಷ್ಟ್ಯ. ಇದನ್ನು ಒಂದು ನಿರ್ದಿಷ್ಟ ಬೋಧನಕ್ರಮವೆಂದು ಭಾವಿಸಿದರೂ ನಿಜವಾಗಿ ಇದು ಪಠ್ಯಕ್ರಮದ ಒಂದು ರೀತಿಯ ವ್ಯವಸ್ಥೆ.

7. ಸಾಂಸ್ಕೃತಿಕ ಸೋಪಾನ ಕ್ರಮ : ಮಾನವನ ಸಾಂಸ್ಕೃತಿಕ ಪ್ರಗತಿಯ ಹಂತಗಳನ್ನು ಚರಿತ್ರೆಯಲ್ಲಿ ಮಕ್ಕಳು ತಿಳಿಯಬೇಕಾದಾಗ ಅವರ ಶೈಕ್ಷಣಿಕ ಮತ್ತು ವಯೋಮಟ್ಟಗಳಿಗೆ ಅನುಸಾರವಾಗಿ ಬೋಧಿಸುವುದು ಸಾಂಸ್ಕೃತಿಕ ಸೋಪಾನಕ್ರಮ (ಕಲ್ಚರ್ ಈಪೋಕ್). ಚರಿತ್ರೆ ಮಕ್ಕಳ ಮನಸ್ಸಿನಲ್ಲಿ ವ್ಯವಸ್ಥಿತ ರೂಪದಲ್ಲಿ ಅಷ್ಟು ಚೆನ್ನಾಗಿ ಮೂಡದಿದ್ದರೂ ಈ ಕ್ರಮದಿಂದ ಮಾನವನ ಸಂಸ್ಕೃತಿ ಯಾವ ಯಾವ ಕಾಲದಲ್ಲಿ ಯಾವ ಯಾವ ಪ್ರಭಾವಗಳಿಗೆ ಸಿಕ್ಕಿ ಹೇಗೆ ರೂಪುಗೊಂಡಿತೆಂಬ ಅಂಶವನ್ನು ಸ್ಪಷ್ಟಪಡಿಸಬಹುದು.

8. ಪೂರ್ವಾನ್ವಯ ವಿಧಾನ (ರೆಟ್ರಾಸ್ಪೆಕ್ಟಿವ್ ಪ್ಲ್ಯಾನ್) : ಇಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಕಳೆದುಹೋದ ಘಟನೆಗಳೊಡನೆ ಸಮನ್ವಯ ಮಾಡಿಕೊಂಡು ಬೋಧಿಸುವುದೇ ಪೂರ್ವಾನ್ವಯ ವಿಧಾನದ ಉದ್ದೇಶ. ಇದರಿಂದ ಮಕ್ಕಳು ಹಿಂದಿನವರ ಸಾಧನೆಗಳನ್ನು ಅರಿಯುವುದರ ಜೊತೆಗೆ ಅವರ ಯತ್ನದಲ್ಲಿನ ಲೋಪದೋಷಗಳ ಪರಿಚಯದಿಂದ ಲಾಭ ಪಡೆಯಬಹುದು.

ಇವಿಷ್ಟೂ ಬೋಧನಕ್ರಮಗಳ ವೈಶಿಷ್ಟ್ಯವನ್ನು ಕುರಿತು ಹೇಳುವ ಮಾತಾಯಿತು. ಇನ್ನು ಸಾಮಾನ್ಯವಾಗಿ ಯಾವ ಕ್ರಮವನ್ನು ಅನುಸರಿಸಿದರೂ ಉಪಾಧ್ಯಾಯ ಕೆಲವು ಸಾಧನಗಳನ್ನೂ ಬಳಸಬಹುದು. ಮಾನವಜೀವನವೇ ಚರಿತ್ರೆಯ ವಿಷಯವಾದ್ದರಿಂದ ಅದು ಒಳಗೊಳ್ಳದ ವಿಷಯವಿಲ್ಲ. ವ್ಯಕ್ತಿಗಳ ಚಿತ್ರಗಳು, ನಡೆದ ಘಟನೆಗಳ ಚಿತ್ರಗಳು, ಭೂಪಟಗಳು, ವಸ್ತುಸಂಗ್ರಹಾಲಯದ ವಸ್ತುಗಳು, ದಾಖಲೆಗಳು, ಶಾಸನಗಳ ಪ್ರದರ್ಶನ, ಚರಿತ್ರೆಗೆ ಸಂಬಂಧಿಸಿದ ಕಾವ್ಯನಾಟಕಾದಿಗಳ ವಾಚನ, ಚಲನಚಿತ್ರ ಪ್ರದರ್ಶನ, ಪ್ರವಾಸ– ಈ ಮೊದಲಾದವು ಯಾವ ಪಾಠಕ್ರಮಕ್ಕೂ ಸಹಕಾರಿಗಳೇ. ಆದ್ದರಿಂದ ಸಾಧ್ಯವಾದಲ್ಲೆಲ್ಲ ಇವನ್ನು ಬಳಸುವುದು ಒಳ್ಳೆಯದು. (ಎಂ.ಬಿ.ವಿ.)

**ಚರ್ಚ್ :** ಕ್ರೈಸ್ತ ಧರ್ಮಸಭೆಗೂ ಅದು ಇರುವ ಕಟ್ಟಡಕ್ಕೂ ಇರುವ ಹೆಸರು. ಚರ್ಚ್ ಪದದ ವ್ಯುತ್ಪತ್ತಿ ಸ್ವಾರಸ್ಯವಾಗಿದೆ. ಕಾಹಾಲ್ ಎಂಬ ಹೀಬ್ರು ಪದ ಗ್ರೀಕ್ ಭಾಷೆಯಲ್ಲಿ ಎಕ್ಲೇಸಿಯಾ ಎಂದಾಗಿ ಇಂಗ್ಲಿಷಿನಲ್ಲಿ ಚರ್ಚ್ ಎಂದಾಯಿತು. ಕಾಹಾಲ್ ಎಂದರೆ ದೇವರ ಜನತೆಯ ಒಂದು ಸಭೆ; ದೇವರು ಕರೆ ನೀಡಿದುದರಿಂದ ಈ ಜನತೆ ಒಂದಾಗಿ ಸೇರಿರುವುದು. ಈ ಜನತೆಯ ಐಕ್ಯ, ಉದ್ದೇಶ, ದೇವರ ಉಪಾಸನೆ, ಇವೆಲ್ಲ ಅರ್ಥಗಳು ಮುಖ್ಯವಾಗಿ ಕಾಹಾಲ್ ಪದದಲ್ಲಿ ಅಡಕವಾಗಿವೆ.

ಈ ಲೇಖನದ ವಿನ್ಯಾಸ ಹೀಗಿದೆ:

1. ಚರ್ಚ್ (ಧರ್ಮಸಭೆ)ಪದದ ಅರ್ಥ
2. ಚರಿತ್ರೆ
3. ಕ್ರೈಸ್ತಧರ್ಮದ ತಿರುಳು
4. ಚರ್ಚ್ ವಾಸ್ತು.

**1. ಚರ್ಚ್ (ಧರ್ಮಸಭೆ) ಪದದ ಅರ್ಥ:** ಸೈದ್ಧಾಂತಿಕವಾಗಿ, ಏಕೈಕವಾಗಿರುವ ಕ್ರೈಸ್ತ ಧರ್ಮಸಭೆ ಅವಿಭಾಜ್ಯವಾಗಿದೆ. ಆದರೆ ವಾಸ್ತವಾಗಿ ಹಲವು ಕ್ರೈಸ್ತ ಪಂಥಗಳಿವೆ. ಇವುಗಳಲ್ಲಿ ಆಂತರಿಕ ಐಕ್ಯ ಹಾಗೂ ಗಾತ್ರದ ದೃಷ್ಟಿಯಿಂದ ರೋಮನ್ ಕೆಥೊಲಿಕ್ ಚರ್ಚಿಗೆ ಪ್ರಥಮ ಸ್ಥಾನ ನಿಲ್ಲಬೇಕು, (ಇದರ ಪರಮ ಧರ್ಮಾಧಿಕಾರಿ ರೋಮ್‌ನಲ್ಲಿರುವುದರಿಂದಲೂ ಇತರ ಪ್ರಾದೇಶಿಕ ಚರ್ಚುಗಳಿಂದ ಇದು ಭಿನ್ನವಾಗಿದೆ ಎಂದು ಸೂಚಿಸುವ ಸೌಲಭ್ಯಕ್ಕಾಗಿಯೂ ರೋಮನ್ ಪದ ಇಲ್ಲಿ ಬಳಕೆಯಲ್ಲಿದೆ. ಎಲ್ಲ ದೇಶ, ಕಾಲ, ಜನಾಂಗದವರು ಈ ಚರ್ಚಿನ ಸದಸ್ಯರಾಗಬಹುದು, ಆಗಿದ್ದಾರೆ. ಕೆಥೊಲಿಕ್ ಎಂದರೆ ಇದೇ ಅರ್ಥ). ಅನಂತರ ಪೋಪ್ ಗುರುವಿನ ಅಧಿಕಾರ ಪಾರಮ್ಯವೊಂದನ್ನುಳಿದು ಇತರ ಧರ್ಮ ಸಿದ್ಧಾಂತ, ಆಚಾರಗಳಲ್ಲಿ ಹೆಚ್ಚಿನ ಅಂಶ ಕೆಥೊಲಿಕ್ ಚರ್ಚಿನ ನಿಲುವನ್ನು ತಳೆದ ಈಸ್ಟರ್ನ್ ಅರ್ಥೋಡಾಕ್ಸ್

ಚರ್ಚ್. ಇನ್ನು ಕೆಥೊಲಿಕ್ ಚರ್ಚಿನ ನಿಲುವಿನೊಡನೆ ಹೆಚ್ಚು ಮೂಲಭೂತವಾದ ಭಿನ್ನಾಭಿಪ್ರಾಯಗಳನ್ನುಳ್ಳ ಮತ್ತು ತಮ್ಮ ತಮ್ಮೊಳಗೆ ಚಿಕ್ಕಪುಟ್ಟ ವಿವರಗಳಲ್ಲಿ ವೈಷಮ್ಯವಿದ್ದ ವಿವಿಧ ಪ್ರಾಟೆಸ್ಟೆಂಟ್ ಚರ್ಚ್‌ಗಳಿವೆ. ಕೊನೆಯದಾಗಿ ತೀರ ಇತ್ತೀಚಿನ, ಸ್ವತಂತ್ರವಾದ ಸನಾತನ ಕ್ರೈಸ್ತ ನಂಬಿಕೆಗಳನ್ನು ಇಟ್ಟುಕೊಂಡಿರದ ಘಟಕಗಳಿವೆ. ಈ ಲೇಖನದಲ್ಲಿ ಮುಖ್ಯವಾಗಿ ಕ್ಯಾತೊಲಿಕ್ ಚರ್ಚನ್ನು ಕುರಿತಂತೆ ವಿವರಣೆಗಳಿವೆ.

ಧರ್ಮಸಭೆಯಲ್ಲಿ ಮುಖ್ಯವಾದ ಮತ್ತು ಇತರ ನಂಬಿಕೆಗಳಿಗೆ ತಳಹದಿ ಪ್ರಾಯವಾದ ಎರಡು ನಂಬಿಕೆಗಳೆಂದರೆ 1 ದೇವರು ಒಬ್ಬನೇ. ಅವನಲ್ಲಿ ಮೂವರು ವ್ಯಕ್ತಿಗಳು ಐಕ್ಯರು–ಪಿತನಾದ ದೇವರು, ಸುತನಾದ ದೇವರು ಮತ್ತು ಪವಿತ್ರಾತ್ಮನಾದ ದೇವರು. ಇವರಲ್ಲಿ ಒಬ್ಬೊಬ್ಬನೂ ದೇವರೇ. ಆದರೆ ದೇವರು ಮೂವರಲ್ಲ ಒಬ್ಬನೇ. 2. ಸುತನಾದ ದೇವರು ಪತಿತ ಮಾನವಕುಲದ ರಕ್ಷಣೆಗಾಗಿ ಮನುಷ್ಯರೂಪವನ್ನು ಧರಿಸಿ ನಿಜವಾದ ದೇವರೂ ನಿಜವಾದ ಮನುಷ್ಯನೂ ಆಗಿ ಕಷ್ಟಾವುಗಳನ್ನಪ್ಪಿ ಜೀವಂತವಾಗಿ ಎದ್ದ. ಇವನೇ ನಜರೇತಿನ ಯೇಸು–ಯೇಸು ಕ್ರಿಸ್ತ.

ನಂಬಿಕೆ, ಆಚಾರ, ನೀತಿ, ನಡತೆ ಸೇರಿದಂತೆ ಎಲ್ಲ ಧಾರ್ಮಿಕ ವಿಷಯಗಳಲ್ಲಿ ಪ್ರಮಾಣ ಸ್ವರೂಪಿ ಹಾಗೂ ವಿಧಾಯಕ ಮೂಲವೆಂದರೆ ಪವಿತ್ರ ಗ್ರಂಥವಾದ ಬೈಬಲ್ ಮತ್ತು ಧರ್ಮಸಭೆಯ ಸಂಪ್ರದಾಯ. ಈ ಮೂಲಕ ದೇವರು ಸ್ವತಃ ತನ್ನ ಮತ್ತು ತನ್ನ ಸೃಷ್ಟಿಯನ್ನು ಕುರಿತು ಶಾಶ್ವತ ಸತ್ಯಗಳನ್ನು ಮಾನವನಿಗೆ ತಿಳಿಸುತ್ತಾನೆ. ದೇವರನ್ನು ಪ್ರೀತಿಸು ಮತ್ತು ನಿನ್ನಂತೆ ಪರರನ್ನು ಪ್ರೀತಿಸು ಎಂಬುದರಲ್ಲಿ ಕ್ರೈಸ್ತಧರ್ಮ ಸ್ಥೂಲವಾಗಿ ಅಡಕವಾಗಿದೆ ಎನ್ನಬಹುದು.

ಕ್ರೈಸ್ತರು ಬಹಿರಂಗವಾಗಿ, ಸಾಮೂಹಿಕವಾಗಿ ದೇವರನ್ನು ಆರಾಧಿಸುತ್ತಾರೆ. (ವೈಯಕ್ತಿಕ ಖಾಸಗಿ ಪ್ರಾರ್ಥನೆಯೂ ಇದೆ) ಈ ಆರಾಧನೆ ಮುಖ್ಯವಾಗಿ ದಿವ್ಯ ಬಲಿಪೂಜೆಯ (ಹೋಲಿ ಸ್ಯಾಕ್ರಿಫೈಸ್ ಆಫ್ ದಿ ಮಾಸ್) ರೂಪದಲ್ಲಿ ನಡೆಯುತ್ತದೆ. ತನ್ನ ಸದಸ್ಯರಿಗೆಂದು ಧರ್ಮಸಭೆ ದೇವರ ಮಾತಿನ ಬೋಧನೆಯನ್ನೂ ಕೃಪಾವಾಹಿನಿಯಾದಂಥ ಸಂಸ್ಕಾರಗಳನ್ನೂ ಒದಗಿಸುತ್ತದೆ. ಸಂಸ್ಕಾರಗಳು ಏಳು.

ಬಲಿಪೂಜೆಯನ್ನು ಅರ್ಪಿಸುವ ರೀತಿಯಲ್ಲಾಗಲಿ, ಸಂಸ್ಕಾರಗಳ ಸಂಖ್ಯೆ ಅವುಗಳ ಪ್ರಧಾನ ಕ್ರಮ, ಇವುಗಳೆಲ್ಲವನ್ನು ಉಪಯೋಗಿಸುವ ಬಗೆಗಿರುವ ಕಡ್ಡಾಯಗಳಲ್ಲಾಗಲಿ ವಿವಿಧ ಚರ್ಚುಗಳಲ್ಲಿ ಏಕರೂಪವಿಲ್ಲ.

ಧರ್ಮಸಭೆಯ ಆದೇಶದಂತೆ ಸದಸ್ಯರು ದೇವರಿಗೆ ಸಲ್ಲತಕ್ಕಂಥ ಗೌರವ, ಪೂಜಾದಿಗಳಲ್ಲಿ ನಿಷ್ಠೆ ಇಟ್ಟುಕೊಳ್ಳಬೇಕು. ಮೂಲಭೂತವಾಗಿ ತಮ್ಮ ಜೀವನದಲ್ಲಿ, ನಡೆನುಡಿಯಲ್ಲಿ, ಯೇಸುಕ್ರಿಸ್ತನನ್ನು ಅನುಸರಿಸುವುದೇ ತಮ್ಮ ಮುಖ್ಯ ಗುರಿಯೆಂದು ತಿಳಿದುಕೊಂಡು, ಲೌಕಿಕ–ಧಾರ್ಮಿಕದಲ್ಲಿ ಧಾರ್ಮಿಕದ ಪಾರಮ್ಯ, ಸ್ವಾತಂತ್ರ್ಯ, ಮಾನವ ಪ್ರಾಣ, ಶರೀರವನ್ನು ಪೂಜ್ಯಭಾವದಿಂದ ಕಾಣುವುದು, ಪರರಿಗೆ ನ್ಯಾಯ ನೀತಿಯುಕ್ತವಾಗಿ ಸ್ಥಾಪಿತವಾದ ಲೌಕಿಕ ಅಧಿಕಾರವನ್ನು ಒಪ್ಪುವುದು–ಇವೇ ಮೊದಲಾದ ತತ್ತ್ವಗಳ ಮೇಲೆ ರಚಿತವಾದ ನೀತಿ ನಿಯಮಾವಳಿಗಳನ್ನು ಕ್ರೈಸ್ತರು ಅವಲಂಬಿಸಬೇಕು.

ಧರ್ಮಸಭೆಯ ಸಂಸ್ಥಾಪಕರಾಗಿದ್ದ ಯೇಸುಕ್ರಿಸ್ತನ ಹನ್ನೆರಡು ಮಂದಿ ಶಿಷ್ಯರ ಉತ್ತರಾಧಿಕಾರಿಗಳಾಗಿ ಬಂದ ಧರ್ಮಾಧ್ಯಕ್ಷರ (ಬಿಷಪ್) ಸಭೆ ಧರ್ಮಸಭೆಯಲ್ಲಿ ಅಧಿಕಾರ ನಡೆಸುತ್ತದೆ. ಯೇಸುಕ್ರಿಸ್ತ ಸೇಂಟ್ ಪೀಟರನನ್ನು ತನ್ನ ಶಿಷ್ಯರಲ್ಲಿ ಮುಖಂಡನೆಂದು ನೇಮಿಸಿದ. ಸೇಂಟ್ ಪೀಟರನ ಉತ್ತರಾಧಿಕಾರಿಯಾಗಿದ್ದ ರೋಮ್ ನಗರದ ಧರ್ಮಾಧ್ಯಕ್ಷ. ಪೋಪ್ ಜಗದ್ಗುರುಗಳು, ಧರ್ಮಸಭೆಯಲ್ಲಿ ಸರ್ವಶ್ರೇಷ್ಠ ಅಧಿಕಾರವನ್ನು ಪಡೆದಿರುತ್ತಾರೆ. ಧರ್ಮಾಧ್ಯಕ್ಷರ ಆಡಳಿತ ಕ್ಷೇತ್ರವಾದ ಧರ್ಮಕ್ಷೇತ್ರವನ್ನು ಪಾದ್ರಿಹೋಬಳಿ(ಪ್ಯಾರಿಷ್) ಎಂಬ ಚಿಕ್ಕ ಘಟಕಗಳಾಗಿ ವಿಂಗಡಿಸಿರುತ್ತಾರೆ. ಇದನ್ನು ಧರ್ಮಗುರುಗಳು ನಡೆಸುತ್ತಾರೆ.

ಧರ್ಮಸಭೆ ತನ್ನ ಸದಸ್ಯರಿಗೆ ನಂಬಿಕೆ, ನೀತಿ ಆಚಾರ ಇತ್ಯಾದಿ ವಿಚಾರಗಳಲ್ಲಿ ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ ಕ್ಷೇತ್ರದಲ್ಲಿ ಬೋಧಿಸುವುದಲ್ಲದೆ ತನ್ನಲ್ಲಿರುವ ದಿವ್ಯಜ್ಞಾನ ಇತರರಿಗೂ ಲಭಿಸುವಂತೆ ಮಾಡಲು ಧರ್ಮಪ್ರಚಾರ ಕಾರ್ಯದಲ್ಲಿಯೂ ತೊಡಗಿರುತ್ತದೆ. ಅಲ್ಲದೆ ಶಿಕ್ಷಣ, ದಲಿತೋದ್ಧಾರ, ಸಮಾಜಸೇವೆಗಳನ್ನು ಸಂಸ್ಥೆಗಳ, ವೈಯಕ್ತಿಕ ಕಾರ್ಯಕರ್ತರ ಮೂಲಕ ನೆರವೇರಿಸುತ್ತದೆ. ಲೌಕಿಕ ಮಂಡಲವನ್ನು ಪೂತಗೊಳಿಸಿ, ಅದನ್ನು ಪರಮಾತ್ಮನತ್ತ ಒಯ್ಯುವ ಗುರಿಯನ್ನಿಟ್ಟುಕೊಂಡು ಲೋಕದಲ್ಲಿರುವ ಎಲ್ಲ ಮಾನವೀಯ ಹಿತಾಸಕ್ತಿಗಳನ್ನೂ ಅಭಿವೃದ್ಧಿಗೊಳಿಸುತ್ತ ನ್ಯಾಯ ಪಕ್ಷಪಾತವುಳ್ಳ ಶಾಂತಿ ಸೌಹಾರ್ದಪರವಾದ, ಸಹೋದರಭಾವ ತುಂಬಿದ ವಿಶ್ವ ಸಮಾಜದತ್ತ ಸರಿಯುವ ಎಲ್ಲ ವಿಧದ ಚಟುವಟಿಕೆಗಳಲ್ಲಿ ಸ್ಥಳೀಯ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುತ್ತದೆ.

ಧಾರ್ಮಿಕರು ಎನ್ನಲಾದ ಸಂನ್ಯಾಸ ಸ್ವೀಕರಿಸಿದ ಪುರುಷರ ಸಂಘಗಳು, ಸ್ತ್ರೀಯರ ಸಂಘಗಳು ಧರ್ಮಸಭೆಯಲ್ಲಿವೆ; ಲೌಕಿಕ ಗುರಿಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಬ್ರಹ್ಮಚರ್ಯ, ಬಡತನ, ವಿಧೇಯತೆ ಎಂಬ ಮೂರೂ ಧರ್ಮಪ್ರತಿಜ್ಞೆಗಳಿಂದ ಬದ್ಧರಾಗಿ ಧ್ಯಾನ, ಪರೋಪಕಾರ ಮತ್ತು ಸಾಮಾನ್ಯವಾಗಿ ಧರ್ಮಸಭೆಯ ಲೋಕಹಿತದ ಯಾವುದೇ ಕಾರ್ಯದಲ್ಲಿ ಸಮರ್ಪಕಭಾವದಿಂದ ಇವರು ಕ್ರಿಯಾಶೀಲರಾಗುತ್ತಾರೆ. ಇವರಲ್ಲಿರುವ ವಿವಿಧ ಪಂಗಡಗಳು ತಮ್ಮ ಸಂಸ್ಥಾಪಕರ ವಿಶಿಷ್ಟ ಭಕ್ತಿಪರಂಪರೆ, ಕಾರ್ಯಾಚರಣೆಯ ರೂಢಿಗಳನ್ನು ಉಳಿಸಿಕೊಂಡಿವೆ.

**2. ಚರಿತ್ರೆ :** ವಿಶ್ವದಾದಿಯಿಂದ ಇದ್ದ ಸಜ್ಜನರ ಸಮುದಾಯವನ್ನು ಅದರಲ್ಲೂ ದೇವರು ತನ್ನ ಜನತೆಯೆಂದು ಆರಿಸಿದ ಯೆಹೂದ್ಯ ಜನಾಂಗವನ್ನು ಧರ್ಮಸಭೆ ಪರಿಪೂರ್ಣಗೊಳಿಸುತ್ತದೆ ಮತ್ತು ಮುಂದುವರಿಸುತ್ತದೆ.

ಯೇಸುಕ್ರಿಸ್ತನ ಜೀವನ, ಬೋಧನ ಕಾರ್ಯಗಳಲ್ಲಿ ಮತ್ತು ಔಪಚಾರಿಕವಾಗಿ ಮರಣ ಮತ್ತು ಪುನರುತ್ಥಾನಗಳಲ್ಲಿ ಧರ್ಮಸಭೆಯ ಉಗಮವನ್ನು ಕಾಣಬಹುದು. ಪುನರುತ್ಥಾನದ ಬಳಿಕ ಐವತ್ತನೆಯ ದಿನ ಯೇಸುಕ್ರಿಸ್ತ ವಚನವಿತ್ತಂತೆ ಪವಿತ್ರಾತ್ಮ ತುಂಬುಪ್ರಮಾಣದಲ್ಲಿ ಯೇಸುವಿನ ತಾಯಿ ಮೇರಿ ಮತ್ತು ಯೇಸುವಿನ ಶಿಷ್ಯರ ಮೇಲೆ ಇಳಿದ. ಧರ್ಮಸಭೆ ಬಹಿರಂಗವಾಗಿ ಲೋಕ ತಿಳಿಯುವಂತೆ ಸಂಸ್ಥಾಪನೆಯಾದ ದಿನವಿದು. ಅಂದು ಧರ್ಮಸಭೆಯ ಮೊತ್ತ ಮೊದಲ ಘಟಕ ಈ ಶಿಷ್ಯರ ಸುತ್ತ ರಚಿತವಾಯಿತು. ಈ ಶಿಷ್ಯರು ಲೋಕದಲ್ಲೆಲ್ಲ–ಮುಖ್ಯವಾಗಿ ಅಂದಿನ ರೋಮನ್ ಸಾಮ್ರಾಜ್ಯದಲ್ಲಿ–ಕ್ರಿಸ್ತನ ಸಂದೇಶವನ್ನು ಹರಡಿದರು. ಇವರಲ್ಲಿ ಸೆಂಟ್ ತಾಮಸ್ ಎಂಬಾತ ಭಾರತಕ್ಕೆ ಬಂದಿದ್ದನೆಂಬ ಬಲವಾದ ಪ್ರತೀತಿ ಇದೆ.

ತನ್ನ ಶೈಶವಾವಸ್ಥೆಯಲ್ಲಿ ಅಂದಿನ ರೋಮನ್ ಸಾಮ್ರಾಜ್ಯದಲ್ಲಿ ಮಾತ್ರ ಹರಡಿದ ಧರ್ಮಸಭೆ ಸುಮಾರು ಮೂರು ಶತಕಗಳವರೆಗೆ ಸಾಮ್ರಾಜ್ಯದ ಅಧಿಕಾರಿಗಳ ಕೈಯಲ್ಲಿ ತೀವ್ರ ವಿರೋಧವನ್ನೂ ಉಗ್ರಹಿಂಸೆಗಳನ್ನೂ ಸಹಿಸಬೇಕಾಯಿತು. ಪ್ರಶ. 312ರಲ್ಲಿ ಚಕ್ರಾಧಿಪತಿ ಕಾನ್‌ಸ್ಟಂಟೈನ್ ಕ್ರೈಸ್ತಧರ್ಮವನ್ನು ಸ್ವೀಕರಿಸಿ ಕ್ರೈಸ್ತರಿಗೆ ಧರ್ಮ, ನಂಬಿಕೆ, ಆಚರಣೆಗಳಲ್ಲಿ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟುದುದರ ಫಲವಾಗಿ ಕ್ರೈಸ್ತರ ಸಂಖ್ಯೆ ತೀವ್ರ ಹೆಚ್ಚಳವನ್ನು ಪಡೆಯಿತು. ಪರಿಣಾಮವಾಗಿ ಶ್ರದ್ಧೆ, ಭಕ್ತಿ ಇಳಿಮುಖವಾಯಿತು. ನಂಬಿಕೆಯ ವಿಚಾರಗಳಲ್ಲಿ ಉಂಟಾದ ಹಲವು ವಿವಾದಗಳನ್ನು ಬಗೆಹರಿಸಲು ತಪ್ಪು ಅಭಿಪ್ರಾಯಗಳನ್ನು ಖಂಡಿಸಲು ಸನಾತನ ನಂಬಿಕೆಗಳನ್ನು ಖಚಿತವಾಗಿ ನಮೂದಿಸಲು ಸರ್ವಧರ್ಮಾಧ್ಯಕ್ಷರ ಮಹಾಸಭೆಗಳು ಅಧಿವೇಶನಗಳನ್ನು ನಡೆಸಿದುದು ಇದೇ ಕಾಲದಲ್ಲಿ. ಸಿರಿಯ, ಈಜಿಪ್ಟ್, ಯುರೋಪುಗಳಲ್ಲಿ ಆರಂಭವಾದ ಸಂನ್ಯಾಸಕ್ರಮದ ಮಠಗಳು ಮತ್ತು ಸಂನ್ಯಾಸಿಗಳು ಧರ್ಮಸಭೆಯ ವಿಶಿಷ್ಟ ಗುಣಗಳಲ್ಲೊಂದಾದ ಪಾವಿತ್ರ್ಯದ ಸಾಕ್ಷಿಗಳಾದುವಲ್ಲದೆ ನಾಗರಿಕತೆ, ವಿದ್ಯಾಪ್ರಸಾರಗಳಿಗೂ ತಮ್ಮ ಉತ್ತಮ ಕೊಡುಗೆಯನ್ನು ನೀಡಿದವು. 8ನೆಯ ಶತಮಾನ ಮುಗಿಯುವಷ್ಟರಲ್ಲಿ ಇಡೀ ಯುರೋಪು ಖಂಡ ಕ್ರೈಸ್ತಧರ್ಮವನ್ನು ಸ್ವೀಕರಿಸಿತು.

ಇತ್ತ ಕಾನ್‌ಸ್ಟ್ಯಾಂಟಿನೋಪಲಿನ ಧರ್ಮಾಧ್ಯಕ್ಷರನ್ನು ಅವಲಂಬಿಸಿ ಗ್ರೀಕ್ ಕ್ರೈಸ್ತರಿಗೂ ರೋಮ್ ನಗರದ ಧರ್ಮಾಧ್ಯಕ್ಷರನ್ನು ಅವಲಂಬಿಸಿದ ಲ್ಯಾಟಿನ್ ಕ್ರೈಸ್ತರಿಗೂ ಉಂಟಾದ ಭಿನ್ನಾಭಿಪ್ರಾಯ 1054ರಲ್ಲಿ ಸಂಪೂರ್ಣ ಒಡಕಿನಲ್ಲಿ ಪರ್ಯವಸಾನಗೊಂಡಿತು. ಇಂದಿಗೂ ಕಾಣುತ್ತಿರುವ ಕೆಥೊಲಿಕ್–ಆರ್ಥೋಡಾಕ್ಸ್ ಒಡಕು ಇದೇ. ಕೆಥೊಲಿಕರ ದೃಷ್ಟಿಯಲ್ಲಿ ಧರ್ಮಸಭೆ ಅವಿಭಾಜ್ಯವಾಗಿ ಉಳಿದಿದೆಯಾದರೂ ಕ್ರೈಸ್ತ ಸಮಾಜಕ್ಕೆ ಈ ಒಡಕಿನಿಂದಾಗಿ ಅಪಾರ ನಷ್ಟ ಉಂಟಾಯಿತು ಎಂಬ ಮಾತಂತೂ ನಿಜ.

ಪಾಶ್ಚಾತ್ಯ ಧರ್ಮಸಭೆ ವೈಭವದ ಶಿಖರಕ್ಕೇರಿದುದು ಮಧ್ಯಯುಗದಲ್ಲಿ ಬಾಹ್ಯಪ್ರಭಾವ, ಸಮೃದ್ಧಭಕ್ತಿ, ಭವ್ಯ ದೇವಾಲಯಗಳು, ದೈವಶಾಸ್ತ್ರಸಂಬಂಧಿ ಸಂಹಿತೆಗಳು, ಅಸಂಖ್ಯಾತ ಸಂನ್ಯಾಸಿ ಮಠಗಳು, ಜೊತೆಗೆ ಧರ್ಮಯುದ್ಧಗಳು ಇನ್‌ಕ್ವಿಸಿಷನ್, ಪೋಪ್ ಅರಸುಗಳ ನಡುವೆ ಪೈಪೋಟಿ ಇವು ಈ ಯುಗದಲ್ಲಿ ಕಂಡುಬಂದವು. 13ನೆಯ ಶತಮಾನದಲ್ಲಿ ಕ್ರೈಸ್ತಧರ್ಮದ ಪ್ರಭಾವ ಜನಜೀವನದ ಎಲ್ಲ ಶಾಖೆಗಳಲ್ಲಿ ಪ್ರಸರಿಸಿತು. ಪ್ಯಾರಿಸ್, ಆಕ್ಸ್‌ಫರ್ಡ್ ಮತ್ತಿತರ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಯಿತು. ಶಿಲ್ಪ, ಚಿತ್ರ, ಕಾವ್ಯಗಳಲ್ಲಿ ನವಚೇತನ ಕಂಡುಬಂತು; ಅಸಿಸಿಯ ಫ್ರಾನ್ಸಿಸ್, ತಾಮಸ್ ಆ್ಯಕ್ವಿನಸ್ ಇಂಥ ಮಹಾತ್ಮರ ಹೊಸ ಸಂನ್ಯಾಸಸಂಸ್ಥೆಗಳು ಹುಟ್ಟಿದವು. ಇದೇ ಕಾಲದಲ್ಲಿ ಧರ್ಮಸಭೆಯ ಸದಸ್ಯರು ಲೌಕಿಕ ಶಕ್ತಿ, ಆಯುಧ ಬಲಗಳನ್ನು ಉಪಯೋಗಿಸಿದುದು ಮಾತ್ರ ಧರ್ಮಸಭೆಗೆ ಕೀರ್ತಿ ತರುವಂಥ ವಿಚಾರವಾಗಲಿಲ್ಲ.

ಮಧ್ಯಯುಗದ ಧರ್ಮಸಭೆಯ ತುಂಬುಜೀವನಕ್ಕೆ ತಡೆಯೊಡ್ಡಿದ ಪ್ರಭಾವವೆಂದರೆ ಹೊಸ ಹುಟ್ಟಿನ ಕಾಲದ ಬುದ್ಧಿಪಾರಮ್ಯವಾದ. 1517ರಲ್ಲಿ ಲೂತರ್, ಕ್ಯಾಲ್ವಿನ್, ಜ್ವಿಂಗ್ಲಿ–ಇವರು ಸನಾತನ ಧರ್ಮಸಭೆಯೊಡನೆ ಹಲವು ಭಿನ್ನಾಭಿಪ್ರಾಯಗಳನ್ನು ತಳೆದು, ಪೋಪ್ ಜಗದ್ಗುರುಗಳ ಅಧಿಕಾರವನ್ನು ಒಪ್ಪದೆ ಹೋದುದರಿಂದ ಪಾಶ್ಚಾತ್ಯ ಕ್ರೈಸ್ತ ಜಗತ್ತೇ ಘೋರವಾಗಿ ಇಬ್ಭಾಗವಾಗಿ ಒಡೆಯಿತು. ಆದರೆ ಕೆಥೊಲಿಕ್ ಧರ್ಮಸಭೆ ಹಠಾತ್ತನೆ ಬಂದ ಈ ವಿಘ್ನವನ್ನು ಶಕ್ತಿಯುತವಾಗಿ ಎದುರಿಸಿತು. ಧರ್ಮಸಭೆಯ ಸತ್ಸಂಪ್ರದಾಯಗಳ ರಕ್ಷಣೆ, ಪ್ರಚಾರಗಳನ್ನು ಆಗತಾನೆ ಸ್ಥಾಪನೆಗೊಂಡ ಹೊಸ ಧಾರ್ಮಿಕ ಸಭೆಗಳು ವಿಶ್ವದಾದ್ಯಂತ

ಭರದಿಂದ ಕೈಗೊಂಡವು (ಸುಮಾರು ಇದೇ ಕಾಲದಲ್ಲಿ ಫ್ರಾನ್ಸಿಸ್ ಜೇವಿಯರ್ ಭಾರತಕ್ಕೆ ಬಂದಿದ್ದ) ; ಅನುಭಾವಿ ಸಂತರು ಮತ್ತೊಮ್ಮೆ ಧರ್ಮಸಭೆಯ ಪಾವಿತ್ರ್ಯದ ಕುರುಹಾಗಿ ಮೆರೆದರು. ಟ್ರೆಂಟ್ ಕೌನ್ಸಿಲ್‌ನಲ್ಲಿ (1545–63) ನಂಬಿಕೆ, ಧರ್ಮಾಚರಣೆಯ ಬಗೆಗಿರುವ ಕೆಲವು ಮುಖ್ಯ ವಿಷಯಗಳನ್ನು ಮತ್ತೊಮ್ಮೆ ನಿರೂಪಿಸಿದ ಮೇಲಂತೂ ಕೆಥೊಲಿಕ್ ಚರ್ಚಿನ ಆತ್ಮಪರಿಷ್ಕಾರ, ಧರ್ಮವಿಕಾಸ ಆಶ್ಚರ್ಯಕರವಾದ ವೇಗದಿಂದ ಸಾಗಿತು.

19ನೆಯ ಶತಮಾನ ಧರ್ಮಸಭೆಯಲ್ಲಿ ಮೂಡಿಬಂದ ಹೊಸ ಹುರುಪಿನ ಇನ್ನೊಂದು ಯುಗ. ದಕ್ಷ ಹಾಗೂ ವಿಶ್ವವ್ಯಾಪಿ ಧರ್ಮಪ್ರಸಾರ ಕಾರ್ಯಕ್ರಮಗಳು ಕೆಥೊಲಿಕ್, ಪ್ರಾಟೆಸ್ಟಂಟ್ ಇಬ್ಬರ ಕಡೆಯಿಂದಲೂ ಈ ಯುಗದಲ್ಲಿ ನಡೆದವು.

ವಿವಿಧ ಚರ್ಚುಗಳನ್ನು ಏಕೀಕರಿಸುವ ಪ್ರಯತ್ನ 20ನೆಯ ಶತಮಾನದಲ್ಲಿ ನಡೆದಿದೆ. ಪ್ರಾಟೆಸ್ಟಂಟರಿಂದ ಆರಂಭಗೊಂಡ ಈ ಆಂದೋಲನ ಪರಸ್ಪರ ತಿಳಿವಳಿಕೆ, ಗೌರವಗಳ ಆಧಾರದ ಮೇಲೆ ವಿವಿಧ ಕ್ರೈಸ್ತ ಘಟಕಗಳು ಹತ್ತಿರ ಸರಿದು ಕ್ರಮೇಣ ಒಂದಾಗಬೇಕೆಂಬ. ಉದ್ದೇಶವನ್ನು ಇಟ್ಟುಕೊಂಡಿದೆ. ಕೆಥೊಲಿಕರೂ ಇದರಲ್ಲಿ ಭಾಗವಹಿಸುತ್ತಾರೆ.

ಎರಡನೆಯ ವ್ಯಾಟಿಕನ್ ಮಹಾಸಭೆಯಲ್ಲಿ ಕ್ಯಾತೊಲಿಕ್ ಧರ್ಮಸಭೆಯನ್ನು ನವೀಕರಿಸುವ ಸೂತ್ರಗಳನ್ನು ಘೋಷಿಸಲಾಯಿತು. ಚರ್ಚುಗಳ ಏಕೀಕರಣ ಧರ್ಮಸಭೆಯ ಆಂತರಿಕ ಜೀವನವನ್ನು ಕುರಿತಂತೆ ಹೊಸ ಮತ್ತು ಆಳವಾದ ಪರಿಜ್ಞಾನ, ಅನ್ಯಧರ್ಮಗಳ ಬಗೆಗೆ ರಚನಾತ್ಮಕ ನಿಲುವು, ಇಂದಿನ ತುರ್ತು ಸಮಸ್ಯೆಗಳಾದ ಶಾಂತಿ, ಆರ್ಥಿಕ ಸಾಮಾಜಿಕ ಅಭಿವೃದ್ಧಿ ಇತ್ಯಾದಿಗಳಲ್ಲಿ ಕ್ರೈಸ್ತರಲ್ಲಿರಬೇಕಾದ ಕರ್ತವ್ಯಪ್ರಜ್ಞೆ–ಇಂಥ ಹಲವಾರು ಮಹತ್ತ್ವವುಳ್ಳ ಅಂಶಗಳನ್ನು ಈ ಮಹಾಸಭೆ ಒತ್ತಿಹೇಳಿತು.

**3. ಕ್ರೈಸ್ತಧರ್ಮದ ತಿರುಳು :** ಧರ್ಮಸಭೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಕ್ರೈಸ್ತಧರ್ಮದ ಮೂಲಭೂತ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಆರಂಭವಾಗಬೇಕು. ತ್ರೈಕ ದೇವರು ; ಸುತನಾದ ದೇವರು, ಮಾನವ ರೂಪವನ್ನು ಧರಿಸಿ ತನ್ನ ಮರಣ ಮತ್ತು ಪುನರುತ್ಥಾನಗಳಿಂದ ಧರ್ಮಸಭೆಯನ್ನು ಸ್ಥಾಪಿಸಿದುದು ; ಮುಕ್ತಿಯನ್ನು ಪಡೆಯುವುದಕ್ಕಾಗಿ, ದೇವರ ಹಾಗೂ ಮಾನವನ ನಡುವೆ ಇರುವ ಏಕೈಕ ಮಧ್ಯಸ್ಥ –ಯೇಸುಕ್ರಿಸ್ತ ; ಇವನು ಸಾರ್ವಕಾಲಿಕವಾಗಿ ತನ್ನ ಧರ್ಮಸಭೆಯಲ್ಲಿ ಶಿರೋಪ್ರಾಯವಾಗಿದ್ದು , ತನ್ನ ಜೀವನವನ್ನು ಸತತವಾಗಿ ಅದಕ್ಕೆ ಸಂವಹಿಸುತ್ತಾ, ತನ್ನ ಮಧ್ಯಸ್ಥಿಕೆಯ ಸಾಧನವನ್ನಾಗಿ ಅದನ್ನು ಉಪಯೋಗಿಸುತ್ತಾನೆ ; ಧರ್ಮಸಭೆ ತನ್ನ ಬೋಧನೆ, ಸಂಸ್ಕಾರಗಳ ಮೂಲಕ ದೇವರ ಜನತೆಯನ್ನು ಮುಕ್ತಿಯತ್ತ ಕರೆದೊಯ್ಯುತ್ತದೆ. ಇವು ಮೂಲಭೂತ ನಂಬಿಕೆಗಳು.

ಧರ್ಮಸಭೆಯೆಂದರೆ ಕ್ರಿಸ್ತನ ಮೂಲಕವಾಗಿ ದೇವರ ದಿವ್ಯ ಜೀವದಲ್ಲಿ ಪಾಲ್ಗೊಳ್ಳುವವರ ಒಂದು ಸಂಘಟಿತ ಸಮೂಹ. ಈ ಅರ್ಥದಲ್ಲಿ ಧರ್ಮಸಭೆಯನ್ನು ದೇವರ ವಾಸಸ್ಥಾನವೆಂದೂ ಮತ್ತು ಕ್ರಿಸ್ತನ ಮಾನವಿಕ ಸದ್ಗುಣಗಳಲ್ಲದೆ, ದಿವ್ಯ ಪ್ರಭಾವ ವ್ಯಕ್ತಿತ್ವವನ್ನು ಮೇಲಿನ ಅರ್ಥದಲ್ಲಿ ಹೊಂದಿದ್ದುದರಿಂದ, ಕ್ರಿಸ್ತನ ವಧು ಎಂದು ಕರೆಯುತ್ತಾರೆ. (ದೇವರೂ ಮನುಷ್ಯರೂ ಒಬ್ಬನೇ ವ್ಯಕ್ತಿಯಾಗುತ್ತಾನೆ. ಇಬ್ಬರೂ ಸಂಪೂರ್ಣವಾಗಿ ಐಕ್ಯವಾಗುತ್ತಾರೆ ಎಂಬ ಭಾವನೆಗೆ ಕ್ರೈಸ್ತಧರ್ಮದಲ್ಲಿ ಎಡೆ ಇಲ್ಲ).

ದೇವರ ಜೀವದಲ್ಲಿ ಪಾಲ್ಗೊಳ್ಳುವುದನ್ನು ಕ್ರೈಸ್ತ ಧರ್ಮದಲ್ಲಿ ಕೃಪೆ (ಗ್ರೇಸ್) ಎನ್ನುತ್ತಾರೆ. ದೇವರು ಮನುಷ್ಯನಿಗೆ ಸ್ವೇಚ್ಛೆಯಾಗಿ ಕೊಟ್ಟ ವರವಿದು. ಕೃಪೆಯಿಂದಾಗಿ ಧರ್ಮಸಭೆಯ ಸದಸ್ಯರು ನಿಜವಾದ ಅರ್ಥದಲ್ಲಿ ದೇವರ ಪುತ್ರರಾಗುತ್ತಾರೆ, ಮತ್ತು ಪಾಪಗಳ ಕ್ಷಮೆಯನ್ನು ಪಡೆಯುತ್ತಾರೆ. ಕೃಪೆಯಿಂದಾಗಿ ನಂಬಿಕೆ, ಭರವಸೆ ಮತ್ತು ಪ್ರೀತಿ ಎಂಬ ಸದ್ಗುಣಗಳು ಉದ್ಭವಿಸುತ್ತವೆ. ನಂಬಿಕೆ ಎಂದರೆ ದೇವರು ತನ್ನ ಬಗೆಗೆ ಹೇಳಿರುವ ಸತ್ಯಗಳಿಗೆ ಮನುಷ್ಯನಿಗೆ ತೋರಿಸಿದ ಪ್ರೀತಿಗೆ ಮನುಷ್ಯ ಕೊಡುವ ಜವಾಬು. ದೇವರ ಮಾತನ್ನು ನಂಬಿ, ಅದಕ್ಕೆ ಸೂಕ್ತವಾದ ಪ್ರತಿಪ್ರೀತಿಯನ್ನು ನಡೆನುಡಿಗಳಲ್ಲಿ ತೋರಿಸುವ ಆಶ್ವಾಸನೆ ಇದರಲ್ಲಿ ಅಡಕವಾಗಿದೆ. ಭರವಸೆ ಎಂದರೆ ನಂಬಿಕೆಯಿಂದಾಗಿ ನಾವು ತಿಳಿದುಕೊಂಡಿರುವ ದೇವರನ್ನು ದೃಢಚಿತ್ತದಿಂದ ಎದುರು ನೋಡುವುದು. ದೇವರನ್ನು ತನುಮನ ಧನಗಳಿಂದ ಪ್ರೀತಿಸುವುದು. ಪರರನ್ನು ತನ್ನಂತೆ ಪ್ರೀತಿಸುವುದೇ ಪ್ರೀತಿ. ಕ್ರೈಸ್ತಧರ್ಮದಲ್ಲಿ ಪ್ರೀತಿಯೇ ಪರಮಗುಣ. ನಂಬಿಕೆ, ಭರವಸೆಗಳನ್ನು ಆಧರಿಸಿಕೊಂಡು ಸ್ವರ್ಗದಲ್ಲಿ ದೇವರನ್ನು ಸ್ವತಃ ಅನುಭವಿಸುವುದರಲ್ಲಿ ಪ್ರೀತಿ ಪರಿಪೂರ್ಣಗೊಳ್ಳುತ್ತದೆ. ಈ ಲೋಕದಲ್ಲಿ ಧರ್ಮಸಭೆ ಅನೇಕ ಲೋಕಹಿತ ಕಾರ್ಯಗಳಲ್ಲಿ ತೊಡಗುವುದಕ್ಕೆ ಕಾರಣ ಇದೇ ಪ್ರೀತಿ. ಅಲ್ಲದೆ ತನ್ನ ಧಾರ್ಮಿಕ ನಂಬಿಕೆಗಳನ್ನು ಪ್ರಚಾರ ಮಾಡುವುದಕ್ಕೆ–ಯೇಸು ಕೊಟ್ಟ ಸ್ಪಷ್ಟ ಆಣತಿಯಲ್ಲದೆ–ಎಲ್ಲ ಜನರ ಹಿತಾಸಕ್ತಿಯ ಬಗೆಗೆ ಇರುವ ಪ್ರೀತಿಯೂ ಒಂದು ಬಲವಾದ ಕಾರಣ.

ಕ್ರಿಸ್ತ ತಾನು ಎಲ್ಲ ಕಾಲದಲ್ಲೂ ಧರ್ಮಸಭೆಯೊಡನೆ ಇರುತ್ತೇನೆ ಎಂದು ಮಾತು ಕೊಟ್ಟಿದ್ದಾನೆ. ಕ್ರಿಸ್ತನ ಜೀವವನ್ನು ಪಾಲ್ಗೊಳ್ಳುವ ಮೂಲಕ ಧರ್ಮ ಸಭೆ ಇಹಲೋಕದಲ್ಲಿ ಈಗ ಜೀವಂತವಾಗಿರುವ ಕ್ರಿಸ್ತನ ಶರೀರ. ಕ್ರಿಸ್ತ ಈ ಶರೀರದ ಶಿರ. ಹೀಗೆ ಧರ್ಮಸಭೆಯ ಸದಸ್ಯರು ಪರಸ್ಪರ ಒಂದೇ ಶರೀರದ ಅಂಗಾಂಗಗಳಂತೆ ಸಾವಯವ ಸಂಬಂಧವನ್ನು ಹೊಂದಿದವರು ; ಕ್ರಿಸ್ತನೊಡನೆ ಜೀವಂತ ಸಂಬಂಧ ಇಟ್ಟುಕೊಂಡವರು. ಪಾಪಕೃತ್ಯಗಳ ಮೂಲಕ ಕ್ರಿಸ್ತನನ್ನು ಅಲ್ಲಗಳೆದರೆ ಈ ಸಂಬಂಧ ಕಡಿದುಹೋಗಿ, ಆ ಸದಸ್ಯನ ಆತ್ಮ ಮೃತಾವಸ್ಥೆಯಲ್ಲಿರುತ್ತದೆ.

ಧರ್ಮಸಭೆ ಸಂಸ್ಕಾರಗಳ (ಇವುಗಳಿಂದ ಕೃಪೆ ಲಭಿಸುವುದು ಮತ್ತು ಆಯಾ ಸಂದರ್ಭಕ್ಕೆ ಬೇಕಾದ ವಿಶೇಷ ನೆರವೂ ಲಭಿಸುತ್ತದೆ.) ಮತ್ತು ದೇವರ ಮಾತನ್ನು ಬೋಧಿಸುವುದರ (ಬೈಬಲಿನ ಮಾತುಗಳ ಮೂಲಕ ದೇವರು ಶ್ರೋತೃಗಳಿಗೆ ಹಾಜರಾಗುತ್ತಾನೆ) ಮೂಲಕ ತನ್ನಲ್ಲಿರುವ ದೇವರ ಜೀವ ವರ್ಧಿಸುವಂತೆ ಮಾಡುತ್ತದೆ. ಹೀಗೆ ಕೃಪೆ ವರ್ಧಿಸಿ ಕೊನೆಯ ಹಂತದಲ್ಲಿ ಸ್ವರ್ಗದಲ್ಲಿ ದೇವರ ದರ್ಶನವನ್ನು ಪಡೆಯುವುದೇ ಧರ್ಮಸಭೆಯ ಗುರಿ. ಈ ದರ್ಶನದಲ್ಲಿ ದೇವರನ್ನು ಪ್ರತ್ಯಕ್ಷ ಕಂಡು, ಮಾನವ ಎಲ್ಲ ವಿಧದ ಪರಮ ತೃಪ್ತಿಕರವಾದ ಪರಮಾನಂದವನ್ನು ಪಡೆಯುತ್ತಾನೆ. ಈ ಹಂತದಲ್ಲಿಯೇ ಧರ್ಮಸಭೆ ತನ್ನ ಕಾರ್ಯವೆಲ್ಲವನ್ನೂ ಪೂರೈಸಿ ತನ್ನ ಪರಿಪೂರ್ಣತೆಯನ್ನು ಪಡೆಯುವುದು. (ಈಗಾಗಲೆ ಸ್ವರ್ಗಸ್ಥರಾದ ಸದಸ್ಯರಲ್ಲಿ ಧರ್ಮಸಭೆ ಈ ಪರಿಪೂರ್ಣತೆಯ ಮಟ್ಟವನ್ನು ತಲುಪಿದೆ).

ದೇವರ ಜೀವದಲ್ಲಿ ಮನುಷ್ಯರು ಪಾಲ್ಗೊಳ್ಳುವುದರ ಸ್ವಾಭಾವಿಕ ಫಲ ದೇವರೊಡನೆ **'ಐಕ್ಯ'** ವಾಗುವುದು. ಆದರೂ ಕೃಪೆಯನ್ನು ಸ್ವೀಕರಿಸುವವನ ಪಾಲಿನ ಸಹಕಾರವೂ ಅತ್ಯಗತ್ಯ. ಕೃಪೆಯ ಪರಮ ಪರಿಪೂರ್ಣತೆ ಸ್ವರ್ಗಲೋಕದಲ್ಲಿ ಮಾತ್ರ ಕಾಣಸಿಗುವುದು. ಈ ಲೋಕದಲ್ಲಿ ಯಾತ್ರಿಕಾವಸ್ಥೆಯಲ್ಲಿರುವ ಧರ್ಮಸಭೆಯ ಈ ಪರಿಪೂರ್ಣತೆಯನ್ನು ಪಡೆಯಲು ಸತತ ಪ್ರಯತ್ನ ನಡೆಸುತ್ತದೆ. ಇಹದಲ್ಲಿ, ಧರ್ಮಸಭೆಯ ಸದಸ್ಯರಲ್ಲಿ ಅಧಿಕಾರಿಗಳಲ್ಲಿ ಊನಗಳು ಕಂಡುಬಂದರೆ, ಮಾನವ ಸಹಜ ದೌರ್ಬಲ್ಯವೇ ಇದಕ್ಕೆ ಕಾರಣ. ಧರ್ಮಸಭೆಯ ಸ್ಥಾಪನೆ, ನಡೆವಳಿಕೆ, ಗುರಿಗಳು ಅವಶ್ಯವಾಗಿ ಪಾರಮಾರ್ಥಿಕ ಸ್ವಭಾವದವು ಎಂದೇ ಧರ್ಮಸಭೆ ಅವಶ್ಯವಾಗಿ ಪವಿತ್ರವಾದುದು.

ಧರ್ಮಸಭೆಯ ಆಡಳಿತ ಕ್ರಮ ಅದು ತನ್ನ ಆಂತರಿಕ ಗುರಿಗಳನ್ನು ಪಡೆಯುವುದಕ್ಕಾಗಿ ಇರುವ ಒಂದು ಸ್ಥಾನವಷ್ಟೆ. ಸೇವಾಮನೋಭಾವದಿಂದ ಆಡಳಿತ ಕಾರ್ಯಗಳಲ್ಲಿ ನಿರತರಾದವರು ತಮ್ಮ ವಶಕ್ಕೆ ಒಪ್ಪಿಸಿದ ಭಕ್ತಸಮೂಹ ಕೃಪಾಜೀವನದಲ್ಲಿ ಮುಂದುವರಿದು, ಪರಿಪೂರ್ಣವಾದ ಪ್ರೀತಿಯಲ್ಲಿ ದೇವರ ದರ್ಶನವನ್ನು ಪಡೆಯುವಂತೆ ನಿರ್ದೇಶನ ನೀಡುತ್ತಾರೆ. ಕಾರ್ಯಪಾವಿತ್ರ್ಯದ ದೆಸೆಯಿಂದ ಪುರೋಹಿತ ವರ್ಗದವರು ಮಾತ್ರ ಮಿಕ್ಕೆಲ್ಲರಿಗಿಂತ ಹೆಚ್ಚಿನ ಗೌರವಕ್ಕೆ ಪಾತ್ರರು, ಅಷ್ಟೆ.

ಧರ್ಮಸಭೆಯ ಸದಸ್ಯತ್ವವನ್ನು ಲೌಕಿಕವಾಗಿ ವಿವರಿಸುವುದು ಕಷ್ಟ. ಸಮಸ್ತ ಮಾನವ ಕುಲ ಮುಕ್ತಿಯನ್ನು ಪಡೆಯಬೇಕೆಂದು ದೇವರು ಇಷ್ಟಪಡುತ್ತಾನೆ. ಆದುದರಿಂದ ಎಲ್ಲರೂ ಧರ್ಮಸಭೆಯ ಸದಸ್ಯರಾಗಲು ಆಮಂತ್ರಿತರಾಗಿದ್ದಾರೆ. ಪ್ರಾಮಾಣಿಕವಾಗಿ ದೇವರನ್ನು ಮತ್ತು ಮುಕ್ತಿಯನ್ನು ಶೋಧಿಸುವ ಪ್ರತಿಯೊಬ್ಬ ವ್ಯಕ್ತಿಯೂ ಧರ್ಮಸಭೆಯ ಸದಸ್ಯ ; ಸಂಬಂಧದ ಮಟ್ಟ ಹಾಗೂ ಆಳದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. (ಇ.ಎಸ್.ಎಸ್.ಜಿ.)

**ಚರ್ಚ್ ವಾಸ್ತು :** ಕ್ರೈಸ್ತಧರ್ಮಕ್ಕೆ ಸಂಬಂಧಿಸಿದಂತೆ ಚರ್ಚ್ ಎಂದರೆ ಕ್ರೈಸ್ತಧರ್ಮೀಯರು ಸಾರ್ವಜನಿಕವಾಗಿ ಆರಾಧನೆಯನ್ನು ಸಲ್ಲಿಸುವ ಸ್ಥಳ. ಮೊದಲಲ್ಲಿ ಕ್ರೈಸ್ತರು ಅರಮನೆಯ ಕಟ್ಟಡಗಳಲ್ಲಿ, ಎರಡು ಕಂಬಸಾಲುಗಳುಳ್ಳ ಸಭಾಂಗಣವನ್ನು (ಬಸಲಿಕ) ಇಂಥ ಸ್ಥಳವಾಗಿ

**ಇಸ್ತಾಂಬುಲ್‌ನ ಹಾಜಿಯ ಸೋಫಿಯ ಚರ್ಚು. ಎತ್ತರದ ಮಿನಾರುಗಳು ಇದು ಮಸೀದಿಯಾಗಿ ಪರಿವರ್ತನೆಗೊಂಡ ಮೇಲೆ ಕಟ್ಟಿದಂಥವು**

ಉಪಯೋಗಿಸುತ್ತಿದ್ದರು. ಅವರ ಗುರುವಾದ ಬಿಷಪ್ಪನ ಪೀಠವಿದ್ದ ಕಾರಣ ಕಥೀಡ್ರಲ್ ಕೂಡ ಒಂದು ರೀತಿ ಚರ್ಚ್ ಅನಿಸಿಕೊಂಡಿತ್ತು. ಚರ್ಚ್ ಕಟ್ಟಡದ ಆರಂಭ ಹೇಗಾಯಿತೆಂದು ಖಚಿತವಾಗಿ ಹೇಳುವುದು ಕಷ್ಟ. ಮೂಲತಃ ಸಾಂಪ್ರದಾಯಿಕವಾದ ಭಾವಣೆಯಿರುವ ಮುಖಮಂಟಪ, ಹಾಗೂ ಪಕ್ಕದ ಅಡ್ಡಸ್ನಾಯು ವಿನ್ಯಾಸದಲ್ಲಿರುವ ಇಕ್ಕೆಲದ ಹಜಾರಗಳನ್ನುಳ್ಳ

ರೋಮನರ ಗೃಹಗಳಲ್ಲಿನ ರೂಪವಿನ್ಯಾಸಗಳೇ ಅನಂತರದ ಚರ್ಚ್ ಕಟ್ಟಡಗಳ ಮೂಲವಾದುವೆನ್ನಬಹುದು. ಆರಂಭದಲ್ಲಿ ಕ್ರೈಸ್ತ ಧರ್ಮವನ್ನವಲಂಬಿಸಿದ ಜನ ಗುಟ್ಟಾಗಿ ಇಂಥ ಮನೆಗಳಲ್ಲಿ ಸೇರುತ್ತಿದ್ದರು.

ಕ್ರೈಸ್ತ ಧರ್ಮ ಬಹಿರಂಗವಾಗಿ ಪ್ರಬಲವಾದಾಗ ಸಿರಿಯಾದಲ್ಲಿ ಮೊದಲು ಎರಡು ಕಂಬ ಸಾಲುಗಳುಳ್ಳ ಸಭಾಂಗಣದಂಥ (ಬಸಿಲಿಕ) ಕಟ್ಟಡ ಅಸ್ತಿತ್ವಕ್ಕೆ ಬಂದು ಕ್ರಮೇಣ ಇದು ಇಟಲಿ ದೇಶಕ್ಕೂ ಕಾಲಿಟ್ಟಿತು. ಆರಂಭದ ಹಾಗೂ ಮಧ್ಯಯುಗೀನ ಚರ್ಚ್ ಕಟ್ಟಡಗಳಲ್ಲಿ ಒಳಬಾಗಿಲಿನಿಂದ ಪುರೋಹಿತರು ಅಥವಾ ಗಾಯಕರು ಕೂಡುವ ಸ್ಥಳದವರೆಗೆ ಒಂದು ಮಧ್ಯಾಂಗಣ, ಎರಡು ಅಥವಾ ನಾಲ್ಕು ಇಕ್ಕೆಲದ ಹಜಾರಗಳು, ಅರ್ಧವೃತ್ತಾಕಾರದ ಉಚ್ಚಸ್ಥಾನಗಳಲ್ಲದೆ ಕೆಲವೊಮ್ಮೆ ಶಿಲುಬೆಯಾಕಾರದ ಅಷ್ಟಭಾಗ, ದೇವಾಲಯದ ಮುಖಮಂಟಪದ ತೊಟ್ಟಿಯ ಬಳಿ ಅಂತ್ಯಗೊಳ್ಳುವ ಅರ್ಧವೃತ್ತಾಕಾರದ ಉಚ್ಚಸ್ಥಾನಗಳು ಇರುತ್ತಿದ್ದುವು. ಮೇಲೆ ಮರದ ಮಾಳಿಗೆಗಳು. ಆದರೆ ಉಚ್ಚಸ್ಥಾನಗಳ ಮೇಲೆ ಮಾತ್ರ ಗುಮ್ಮಟಾಕಾರದ ಛಾವಣಿ ಇರುತ್ತಿತ್ತು. ಪ್ರ.ಶ. 6ನೆಯ ಶತಮಾನದಲ್ಲಿ ಕಟ್ಟಲಾದ ರೋಮ್ ದೇಶದ ಕೆಸ್ಮೆಡಿನ್‌ನಲ್ಲಿನ ಸಂತ ಮೇರಿ ಮತ್ತು ಕ್ಲಾಸೆಯಲ್ಲಿನ ಸಂತ ಅಪೋಲ್ಲನರ್ ಚರ್ಚ್‌ಗಳು ಅನೇಕ ಬಾರಿ ಜೀರ್ಣೋದ್ಧಾರಕ್ಕೊಳಗಾಗಿದ್ದರೂ ಇಂಥ ಮೂಲರೂಪವನ್ನು ಮಾತ್ರ ಉಳಿಸಿಕೊಂಡಿವೆ.

ಪ್ರಾಚೀನ ಸಂಪ್ರದಾಯಕ್ಕೂ ಗಾತಿಕ್ ಸಂಪ್ರದಾಯಕ್ಕೂ ನಡುವಣ ರೋಮನ್ ಪ್ರಭಾವಕ್ಕೊಳಗಾಗಿದ್ದ ಶೈಲಿ (ರೋಮನೆಸ್ಕ್) ಮುಂದಿನ ಘಟ್ಟ. ಆದರೆ ಈ ಶೈಲಿಯ ಮೂಲರೂಪವನ್ನೊಳಗೊಂಡ, ಮತ್ತಾವ ಬದಲಾವಣೆಗಳಾಗಲೀ ಸೇರ್ಪಡೆಗಳಾಗಲೀ

ಸಂತ ವಿತಾಲೆ ಚರ್ಚಿನ (547) ಹೊರನೋಟ. ಬಿಜಾಂಟಿನ್ ಶೈಲಿಗೆ ನಿದರ್ಶನ

ಇಲ್ಲದ ಚರ್ಚ್ ಕಟ್ಟಡಗಳು ಇಲ್ಲವೆಂದೇ ಹೇಳಬೇಕು. ಅಲ್ಲದೆ ಯುರೋಪ್ ಖಂಡದಲ್ಲಿ ಈ ಶೈಲಿಯ ಕಟ್ಟಡಗಳ ಎಲ್ಲ ಭಾಗಗಳೂ ಒಂದೇ ತೆರನಾಗಿ, ಸಮರೂಪ ದಲ್ಲಿರಲಿಲ್ಲ. ಪ್ರ.ಶ. 500 ರಿಂದ 1000ದ ವರೆಗಿನ ಐದು ಶತಮಾನಗಳಲ್ಲಿ ಅನಾಗರಿಕ, ರೋಮನ್ ಹಾಗೂ ಕ್ರೈಸ್ತ ಸಂಸ್ಕೃತಿಗಳ ಪರಸ್ಪರ ಒಂದುಗೂಡುವಿಕೆಯಲ್ಲಿ ಬದಲಾವಣೆಯಾಗದೆ ಉಳಿದುದು ಚರ್ಚ್ ಒಂದೇ. ಇಟಲಿ ದೇಶದ ಮಿಲಾನ್ ನಗರದ ಸಂತ ಅಮ್ರಿಗೊ ಕಟ್ಟಡವಿನ್ಯಾಸದಲ್ಲಿ ಮೊದಲಿನ ಛಾವಣಿಯಿರುವ ಮುಖಮಂಟಪವನ್ನು ಉಳಿಸಿಕೊಳ್ಳಲಾಗಿದೆ. ಆದರೆ ಎರಡು ಕಂಬಸಾಲುಗಳ ಸಭಾಂಗಣದ ಇಕ್ಕೆಲಗಳಲ್ಲಿ ಮೊದಲಿದ್ದಂತೆ ಅಡ್ಡನ್ನಾಯು ಹಜಾರಗಳು ಮಾತ್ರ ಇಲ್ಲ. ಆದರೆ ಗುಮ್ಮಟಾಕಾರದ ಛಾವಣಿಗಳಿಗೆ ಆಧಾರವಾಗಿ ಜೋಡಿಸಿರುವ ಕೂಡಂಚುಗಳನ್ನು (ಉಬ್ಬು) ನಾವು ಮೊದಲು ಈ ಕಟ್ಟಡದಲ್ಲಿ ಕಾಣುತ್ತೇವೆ. ಮಧ್ಯಯುಗದಲ್ಲಿ ಆರಂಭವಾದ ಸಭಾಂಗಣದ ಮೇಲಿನ ಮಾಳಿಗೆಗೆ ಉಬ್ಬುಗಳನ್ನು ಕೂಡಿಸುವ ಪದ್ಧತಿ ರೋಮ್, ಗ್ರೀಸ್ ಹಾಗೂ ಸಿರಿಯ ಮುಂತಾದ ಸಮೀಪ ಪ್ರಾಚ್ಯ ದೇಶಗಳಲ್ಲಿ ಹೆಚ್ಚು ಪ್ರಚಲಿತವಾಗದಿದ್ದರೂ ಇಂಥ ಶೈಲಿ ಮುಂದಿನ ಎರಡು ಶತಮಾನಗಳಲ್ಲಿ ಯೂರೋಪಿನಲ್ಲಿ ಔನ್ನತ್ಯವನ್ನು ಪಡೆಯಿತು. ಬಿಷಪ್ಪಿನ ಪೀಠವಿರುವ ಗಾತಿಕ್ ಆರಾಧನ ಮಂದಿರದ ಮಧ್ಯಾಂಗಣ ಎತ್ತರವಾಗಿದ್ದು ಗಾಂಭೀರ್ಯಯುಕ್ತವಾಗಿ ಕಾಣುತ್ತದೆ.

ಇದರಲ್ಲಿಯೂ ಈ ಶತಮಾನಗಳಲ್ಲಿ ನಾಲ್ಕು ಘಟ್ಟಗಳನ್ನು ಗುರುತಿಸಬಹುದು. ಮರದ ಛಾವಣಿಯ ಉಪಯೋಗ ಆರಂಭದ ಬಸಿಲಿಕಗಳಲ್ಲಿ ಕಂಡುಬಂತು. ಪೀಪಾಯಿಗಳನ್ನು ಅಥವಾ ಕೂಡುಕಮಾನುಗಳನ್ನು ಇಟ್ಟಂಥ ಛಾವಣಿ ಅನಂತರದ್ದು. ಬಿಜಾಂಟಿನ್ ಶಿಲ್ಪಿಗಳು ಲೋಲಕಗಳ ಮೇಲೆ ಗುಮ್ಮಟಗಳನ್ನೆಬ್ಬಿಸುವ ಪದ್ಧತಿಯನ್ನಾರಂಭಿಸಿದರು. ಎಂಟು ಮೂಲೆಯ ಗೋಪುರಗಳ ಅಡ್ಡಕಮಾನುಗಳ ಮೇಲೆ ಗುಮ್ಮಟಗಳನ್ನು ಕಟ್ಟುವುದು ನಾಲ್ಕನೆಯ ಘಟ್ಟ.

ಉತ್ತರ ಇಟಲಿಯಲ್ಲಿ ಇದೇ ಕಾಲದಲ್ಲಿ ಹಲವು ನವೀನ ವಾಸ್ತುರೀತಿಗಳನ್ನು ಬಳಕೆಗೆ ತರಲಾಯಿತು. ತೆರೆದ ಕಮಾನುದಾರಿಗಳು, ಕಲಾತ್ಮಕ ದ್ವಾರಮಂಟಪಗಳು, ಚಿತ್ರಕೊರೆತ ಹಾಗೂ ಕುಂದಣ ಶೈಲಿಗಳನ್ನು ಉಪಯೋಗಿಸಲಾಯಿತು. ಮೋಡನ ಆರಾಧನಮಂದಿರದಲ್ಲಿ ಇದನ್ನು ನಾವು ನೋಡಬಹುದು. ರೋಮನ್ ಚರ್ಚುಗಳಲ್ಲಿ ಕಮಾನುದಾರಿಗಳು ವಿಶಿಷ್ಟವಾದುವು. ಸರಳವಾದ ನಯವಿಲ್ಲದ ಬಸಿಲಿಕಗಳ ರಚನೆಯಲ್ಲಿ ಕಂಡುಬಂದ ಕಾಠಿಣ್ಯವನ್ನು ತಗ್ಗಿಸಲು ಇಟಲಿಯ ಶಿಲ್ಪಿಗಳು ಈ ಪದ್ಧತಿಯನ್ನು ಅನುಸರಿಸಿದರು. ಫ್ಲಾರೆನ್ಸಿನ ಜ್ಞಾನಸ್ನಾನಶಾಲೆಯಲ್ಲಿ ತೆರೆದ ಕಮಾನುದಾರಿಗಳೂ ಕಲಾತ್ಮಕ ದ್ವಾರಗಳೂ

ಸಂತ ಸರ್ಜೀಯಸ್ ಮತ್ತು ಸಂತ ಬಾಕಸ್‌ರ ಚರ್ಚಿನ (527–536) ಒಳನೋಟ. ಬಿಜಾಂಟೇನ್ ಶೈಲಿಯ ಮತ್ತೊಂದು ನಿದರ್ಶನ

ಈಗ ಇಲ್ಲ. ಅವುಗಳ ಸ್ಥಳದಲ್ಲಿ ಕೋನಾಕಾರದ, ರೇಖಾವಿನ್ಯಾಸಗಳ ಕೆತ್ತನೆಯ ಮುಂಭಾಗ ಗಳನ್ನು ಜೋಡಿಸಲಾಗಿದೆ. ಲೂಕ್ಕಾದ ಆರಾಧನಾ ಮಂದಿರವಾದ ಸ್ಯಾನ್ ಮಿಷೆಲ್‌ನಲ್ಲಿ ರೋಮನೆಸ್ಕ್ ಶೈಲಿಯ ಆಲಂಕಾರಿಕ ಅಂಗಗಳನ್ನು ಕಾಣಬಹುದು. ತೆರೆದ ಕಮಾನುದಾರಿ ಗಳನ್ನು ಉಪಯೋಗಿಸುವುದರ ಜೊತೆಗೆ ವ್ಯತ್ಯಸ್ತಕಂಬಗಳನ್ನು ಅಳವಡಿಸಲಾಗಿದ್ದು ಕಮಾನಿನ ಮೂಲೆಕಟ್ಟುಗಳಲ್ಲಿ ಮಧ್ಯಾಂಗಣದ ಸುತ್ತಲಿನ ಛಾವಣಿಯ ಹಾದಿಗಳಲ್ಲೂ ರೇಖೆಗಳನ್ನು, ಪ್ರಾಣಿಗಳನ್ನು, ಊಹಾತ್ಮಕ ಚಿತ್ರಗಳನ್ನು ತುಂಬಲಾಗಿದೆ.

ಫ್ರಾನ್ಸಿನ ಉತ್ತರ ಭಾಗವನ್ನು ಆಕ್ರಮಿಸಿದ ನಾರ್ಮನ್ ಜನ ಚರ್ಚ್ ಕಟ್ಟಡಗಳಲ್ಲಿ ಯಾವ ಸ್ವಂತಿಕೆಯನ್ನೂ ಅಳವಡಿಸಲಿಲ್ಲ. ದೀರ್ಘ ಚತುರಸ್ರದ ಗೋಪುರಗಳನ್ನುಳ್ಳ ಸ್ಥೂಲವಾದ ಕಟ್ಟಡಗಳನ್ನು ಮಾತ್ರ ಅವರು ಕಟ್ಟಿದರು. ಡರ್ಹಾಂದಲ್ಲಿನ ಆರಾಧನ ಮಂದಿರ ಇದಕ್ಕೊಂದು ನಿದರ್ಶನ. ಆದರೆ ಜರ್ಮನಿಯಲ್ಲಿ ದ್ವಿಗುಣಿತ ಬೃಹದ್ವ್ಯಾಸದ ಮಂದಿರಗಳನ್ನು ಕಟ್ಟಲಾಯಿತು. ಬ್ಯಾಂಬರ್ಗ್‌ನಲ್ಲಿ ಇಂಥದೊಂದಿದೆ (1185–1274).

ಗಾತಿಕ್ ಶೈಲಿ ಮೊದಲು ಒರಟಾಗಿದ್ದು ಆರ್ಷೇಯವಾದ ಮೂರ್ತಿಶಿಲ್ಪಗಳನ್ನು ಹೊಂದಿದ್ದು ಕ್ರಮೇಣ ಹಗುರಾಗಿ ಆಡಂಬರಯುತವಾಗಿ ಅಲಂಕರಿಸಲ್ಪಟ್ಟು ನೈಸರ್ಗಿಕತೆಯನ್ನು ಪಡೆಯಿತು. ಈ ಶೈಲಿ ಅತ್ಯುನ್ನತ ಮಟ್ಟಕ್ಕೇರಿದುದು ಆರಾಧನ ಮಂದಿರಗಳ ರಚನೆಯಲ್ಲಿ. 1150–1550ರ ನಡುವೆ ಅನೇಕ ನಗರಗಳಲ್ಲಿ ದೊಡ್ಡದಾದ ಭವ್ಯವಾದ ಇಂಥ ಕಟ್ಟಡಗಳು

ಗಾತಿಕ್ ಶೈಲಿಯ ಉತ್ತಮ ನಿದರ್ಶನ. ಪ್ಯಾರಿಸ್ಸಿನಲ್ಲಿರುವ ಸಂತ ಚಾಪೆಲ್‌ನ ಚರ್ಚಿನ ಒಳನೋಟ

ತಲೆ ಎತ್ತಿದವು. ಕಲೆಯ ಪುನರುಜ್ಜೀವನದ ಲೌಕಿಕತೆಯನ್ನು ಈ ಶೈಲಿಯಲ್ಲಿ ಕಾಣ ಬಹುದಾಗಿದೆ. ಗಾತಿಕ್ ಶೈಲಿ ಹೆಚ್ಚಾಗಿ ಫ್ರೆಂಚರ ಕೊಡುಗೆ.

ಚರ್ಚ್ ಕಟ್ಟಡಗಳ ನಿರ್ಮಾಣ ಮತ್ತು ಪುನರ್ನಿರ್ಮಾಣಕಾರ್ಯ 17ನೆಯ ಶತಮಾನದಲ್ಲಿ ಬಹಳಮಟ್ಟಿಗೆ ಆಯಿತು. ಆದರೆ ಮಧ್ಯದ ಗುಮ್ಮಟವನ್ನುಳಿಸಿಕೊಂಡರೂ ಈ ಕಟ್ಟಡಗಳಲ್ಲಿ ಬೀದಿಯ ಕಡೆಗಿರುವ ಮುಂಭಾಗ ಮತ್ತು ಗೋಡೆಕಂಬಗಳ

ಮುಖಮಂಟಪಗಳ ಮೇಲೆ ತ್ರಿಕೋನಾಕೃತಿಯ ರಚನೆ, ಅಲಂಕಾರ ಇತ್ಯಾದಿಗಳನ್ನು ಈ ಕಟ್ಟಡಗಲ್ಲಿ ಹೆಚ್ಚುಹೆಚ್ಚಾಗಿ ಆಗ ಅಳವಡಿಸಲಾಯಿತು. ಜೊತೆಗೆ ಈ ಕಟ್ಟಡಗಳು ನಿಡಿದಾದ ಮಧ್ಯಾಂಗಣ, ಮುಂಭಾಗದ ಜೋಡಣೆ, ಬೋದಿಗೆಗಳಿಂದ ಕೂಡಿದ ಕಂಬಸಾಲುಗಳ ಸೇರ್ಪಡೆಗಳಿಂದ ಆಕಾರ ಹಾಗೂ ವಿಸ್ತೀರ್ಣಗಳಲ್ಲಿ ಅಸಮರೂಪವನ್ನು ತಾಳಿದುವು. ಕ್ರಮೇಣ ಈ ಅಸಮರೂಪ ರಚನೆ ಒಂದು ಶೈಲಿಯಾಗಿ ಉಳಿಯಿತು. (ಎಂ.ಡಿ.ಎಸ್.; ಜಿ.ಬಿ.ಆರ್.)

**ಕರ್ನಾಟಕದಲ್ಲಿ :** ರೋಮನ್ ಕೆಥೊಲಿಕ್ ವೆಸ್ಲಿಯನ್ ಮತ್ತು ಲಂಡನ್ ಮಿಷನ್ ಚರ್ಚುಗಳೇ ತುಂಬ ಪ್ರಸಿದ್ಧವಾದ ಸಂಸ್ಥೆಗಳೆನಿಸಿಕೊಂಡಿವೆ. ರೋಮನ್ ಕೆಥೊಲಿಕ್ ಪಂಥಕ್ಕೆ ಸೇರಿದ ಬೆಂಗಳೂರಿನ ಸೇಂಟ್ ಮೇರಿ ಚರ್ಚ್ (ಪ್ರ.ಶ.1882) ಮತ್ತು ಸೇಂಟ್ ಜೋಸೆಫ್ ಚರ್ಚ್ (ಪ್ರ.ಶ. 1882), ಆನೇಕಲ್ಲಿನಲ್ಲಿರುವ ದಿ ಸೇಕ್ರೆಡ್ (ಪ್ರ.ಶ. 1895), ವೆಸ್ಲಿಯನ್ ಪಂಥಕ್ಕೆ ಸೇರಿದ ಹಡ್ಸನ್ ಮೆಮೋರಿಯಲ್ ಚರ್ಚ್ ಮತ್ತು ಲಂಡನ್ ಮಿಷನ್ ಪಂಥಕ್ಕೆ ಸೇರಿದ ಅನೇಕ ಚರ್ಚುಗಳು ಗಮನಾರ್ಹವಾಗಿವೆ. ಇವುಗಳೇ ಅಲ್ಲದೆ, ಕೋಲಾರದ ಚಿನ್ನದ ಗಣಿ ಪ್ರದೇಶಗಳಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದ ರೋಮನ್ ಕೆಥೊಲಿಕ್ ಪಂಥದವರು ಉಪಯೋಗಿಸುತ್ತಿರುವ ಬೆಂಗಳೂರು ಕೋಟೆಯಲ್ಲಿನ ಸಣ್ಣ ಚರ್ಚನ್ನು ಕೋಲ್ಕತ್ತೆಯ ಧರ್ಮಾಧಿಕಾರಿ ಟರ್ನರ್ ಪ್ರಶ. 1830ರಲ್ಲಿ ಜನತೆಗೆ ಅರ್ಪಿಸಿದರು.

ಸಂತ ಫಿಲೋಮಿನ ಚರ್ಚು, ಮೈಸೂರು

ಬೆಂಗಳೂರಿನಲ್ಲಿರುವ ಸೇಂಟ್ ಜೋಸೆಫ್ ಚರ್ಚು ಬೃಹದಾಕಾರದ ಚರ್ಚುಗಳಲ್ಲಿ ಒಂದಾಗಿದ್ದು ಶಿಲುಬೆಯ ಆಕಾರದ ಯೋಜನೆಯನ್ನು ಹೊಂದಿದೆ. ಮೊದಮೊದಲಿನ ಚರ್ಚುಗಳು ಸಾಮಾನ್ಯವಾಗಿ ಆರಂಭಕಾಲದ ಗಾತಿಕ್ ಶೈಲಿಯಲ್ಲಿ ರಚಿತವಾದವು. ಪ್ರ.ಶ. 12 ಮತ್ತು 15ನೆಯ ಶತಮಾನಗಳ ನಡುವಣ ಅವಧಿಯಲ್ಲಿ ಫ್ರಾನ್ಸ್ ಮತ್ತು ಉತ್ತರ ಯುರೋಪ್‍ಗಳಲ್ಲಿ ಈ ಶೈಲಿ ಪ್ರಚಲಿತವಾಗಿತ್ತು. ಈ ಬಗೆಯ ಚರ್ಚುಗಳು ವಿಶಾಲವಾದ ಕಮಾನುಗಳನ್ನೂ ಬದಿಯ ಒತ್ತುಗೋಡೆಗಳನ್ನೂ ಹೊಂದಿರುತ್ತವೆ. ಈ ಒತ್ತುಗೋಡೆಗಳು ನಾಲ್ಕು ಬೆರಳುಗಾತ್ರದ ಮೇಲು ಫಲಕಗಳನ್ನೂ ಒಂದರ ತರುವಾಯ ಒಂದರಂತೆ ಪರ್ಯಾಯವಾಗಿ ಬರುವ ಪ್ರಾಚೀನ ಮುಖವಾಡದ ಮುಂಭಾಗಗಳನ್ನೂ ಹೊಂದಿರುತ್ತವೆ. ಮಧ್ಯಾಂಗಣ ಸಾಕಷ್ಟು ವಿಶಾಲವಾಗಿರುತ್ತದೆ. ಬದಿಯ ಹಜಾರಗಳು ಕಿರಿದಾಗಿರುತ್ತವೆ. ಬೃಹದಾಕಾರದ ಕಮಾನು ಛಾವಣಿಗಳು ಮತ್ತು ಸ್ತಂಭಗಳು ಸ್ವಲ್ಪ ಎತ್ತರವೆಂದು ತೋರುವ ಛಾವಣಿಗೆ ಆಸರೆಯನ್ನೊದಗಿಸುತ್ತವೆ. ಉತ್ತರ ಗಾತಿಕ್ ಶೈಲಿಯ ಕಟ್ಟಡಗಳಲ್ಲಿ ಚರ್ಚಿನ ವೇದಿಕೆಯ ಹಿನ್ನೆಲೆಯಲ್ಲಿ ಕಲ್ಲಿನ ಕೆತ್ತನೆಯನ್ನುಳ್ಳ ಎತ್ತರವಾದ ಗೋಡೆ ಇರುತ್ತದೆ. ಈ ಕೆತ್ತನೆಯ ಲಂಬರೇಖೆಗಳು ಮುಖ್ಯ ಕಟ್ಟಡದ ರಚನೆಯೊಂದಿಗೆ ಸಮರಸವಾಗಿ ಹೊಂದಿಕೊಂಡಿರುತ್ತವೆ. ಹಾಗೂ ವೇದಿಕೆಯ ಮೇಜಿಗೆ ಆವರಣವನ್ನೊದಗಿಸುತ್ತವೆ.

ಈಚಿನ ಚರ್ಚ್‍ಗಳನ್ನು ಮೂಲ ಗಾತಿಕ್ ಶೈಲಿಯಲ್ಲಿ ಕಟ್ಟಲಾಗಿದೆ. ಉದಾಹರಣೆಗೆ ಮೈಸೂರಿನಲ್ಲಿರುವ ಸೇಂಟ್ ಫಿಲೋಮಿನಾ ಚರ್ಚ್. ಇದು ಅಸ್ತಿತ್ವಕ್ಕೆ ಬರಲು ನಾಲ್ವಡಿ ಮೈಸೂರು ಅರಸರ ಆಪ್ತ ಕಾರ್ಯದರ್ಶಿಗಳಾಗಿದ್ದ ಸರ್ ತಂಬೂ ಚೆಟ್ಟಿಯವರೂ ಹಾಗೂ ಫಾದರ್ ಫ್ಯೂಗ ಅವರ ಶ್ರದ್ಧೆ ಮತ್ತು ಉತ್ಸಾಹಗಳೇ ಕಾರಣವಾದವು. ಈತ ಬೆಂಗಳೂರಿಗೆ ಬಂದ ಮೊದಲ ಕ್ರೈಸ್ತ ಧರ್ಮಾಧಿಕಾರಿ. ಪ್ರ.ಶ. 1933ರಲ್ಲಿ ಅಂದಿನ ಮೈಸೂರು ಮಹಾರಾಜರಾಗಿದ್ದ ಶ್ರೀ ಕೃಷ್ಣರಾಜ ಒಡೆಯರ್ ಅವರು ಚರ್ಚಿನ ಶಂಕುಸ್ಥಾಪನೆ ಮಾಡಿದರು. ಇದು ಒಟ್ಟಾರೆ 50.3 ಮೀ. ಎತ್ತರವಿದ್ದು, ಜೋಡಿಗೋಪುರಗಳೂ ಅಷ್ಟೇ ಎತ್ತರವಾಗಿವೆ. 1938ರಲ್ಲಿ ಇದರ ನಿರ್ಮಾಣಕಾರ್ಯ ಪೂರ್ಣವಾಯಿತು. ಫ್ಯೂಗ ಅವರು ಮೈಸೂರಿನ ಕ್ರೈಸ್ತಧರ್ಮಾಧಿಕಾರಿಯಾದಾಗ (1941) ಕಟ್ಟಡ ಪೂರ್ಣಗೊಂಡಿತು. ಇದು ಮೈಸೂರಿನ ಇತ್ತೀಚಿನ ಹಾಗೂ ಅತ್ಯಂತ ಕಲಾತ್ಮಕವಾದ ಚರ್ಚ್. ಇದರ ನೆಲಮನೆಯಲ್ಲಿರುವ ಸಮಾಧಿ ಗುಹೆಗಳು ಬಹು ಪ್ರಸಿದ್ಧವಾಗಿವೆ. (ಕೆ.ವಿ.ಎಸ್.ಆರ್.)

**ಚರ್ಚ್ ಮತ್ತು ರಾಷ್ಟ್ರ :** ಕ್ರೈಸ್ತ ಧರ್ಮ ಹರಡುವ ಮುನ್ನ ಪಾಶ್ಚಾತ್ಯ ದೇಶಗಳಲ್ಲಿ ಧಾರ್ಮಿಕ ಹಾಗೂ ರಾಜಕೀಯ ಪಂಥಗಳು ನಿರ್ದಿಷ್ಟವಾಗಿ ರೂಪುಗೊಂಡಿರಲಿಲ್ಲ. ಜನರು ತಾವು ವಾಸಿಸುತ್ತಿದ್ದ ರಾಜ್ಯದ ದೇವರುಗಳನ್ನು ಆರಾಧಿಸುತ್ತಿದ್ದು, ಮತಧರ್ಮ ಸರ್ಕಾರದ ಒಂದು ಅಂಗ ಮಾತ್ರವಾಗಿತ್ತು. ಯೆಹೂದ್ಯರ ಪವಿತ್ರ ಗ್ರಂಥಗಳಲ್ಲಿ ವಿದಿತವಾದ ಕಟ್ಟಳೆಗಳು ಅವರ ಕಾನೂನುಗಳಾಗಿ ಮಾರ್ಪಟ್ಟವು. ಕ್ರೈಸ್ತಧರ್ಮದಲ್ಲಿ ಲೌಕಿಕ ಹಾಗೂ ಪಾರಮಾರ್ಥಿಕ ವಿಚಾರಗಳಿಗೆ ಕ್ರಿಸ್ತನ ಮಾತುಗಳು ಆಧಾರವಾದವು. ಸೀಸರನ ವಸ್ತುಗಳನ್ನು ಸೀಸರನಿಗೆ ಕೊಡಿ, ದೇವರಿಗೆ ದೇವರದನ್ನು ನೀಡಿ ಎಂಬ ನುಡಿಯಿಂದಾಗಿ ವಿಭಿನ್ನವಾದ, ಆದರೆ ಸಂಪೂರ್ಣವಾಗಿ ಬೇರೆಯಲ್ಲದ, ಎರಡು ಕಾರ್ಯಕ್ಷೇತ್ರಗಳನ್ನು ಮಾನವ ನಿರ್ಮಿಸಿಕೊಳ್ಳಬೇಕಾಯಿತು. ಕ್ರೈಸ್ತ ವಿಚಾರಸರಣಿ ಮತ್ತು ಬೋಧನೆಗಳಿಗೆ ಎರಡು ಪ್ರಭುತ್ವಗಳ ಸೂತ್ರ ಹಿಂದಿನಿಂದಲೂ ಆಧಾರವಾಯಿತು.

ರೋಮನ್ ಕೆಥೊಲಿಕ್ ಧರ್ಮಗುರುಗಳ ಕಾಲದಲ್ಲಿ ಅನ್ಯಧರ್ಮದ ರಾಜ್ಯಾಡಳಿತದಲ್ಲಿದ್ದ ಈ ಪಂಥೀಯರು, ಆಡಳಿತವರ್ಗಕ್ಕೆ ಗೌರವ ಮತ್ತು ವಿಧೇಯತೆಯನ್ನು ಬೋಧಿಸುತ್ತಿದ್ದರು. ರಾಜ ಒಳ್ಳೆಯವನಲ್ಲದಿದ್ದರೂ ಅವನಿಗೆ ವಿಧೇಯರಾಗಿ ಗೌರವ ನೀಡಬೇಕೆಂದೇ ಅವರು ಉಪದೇಶಿಸುತ್ತಿದ್ದರು. ಆದರೆ ಮಾನವನಿಗೆ ವಿಧೇಯನಾಗಿರುವುದಕ್ಕಿಂತ ದೇವರಿಗೆ ವಿಧೇಯನಾಗಿರುವುದು ಮುಖ್ಯವೆಂದು ಜನ ಭಾವಿಸತೊಡಗಿದರು. ಮಾನವಜೀವನದ ಒಂದು ಭಾಗ–ಅತಿಮುಖ್ಯವಾದ ಭಾಗ–ರಾಜಕೀಯ ಅಧಿಕಾರ ವ್ಯಾಪ್ತಿಯಿಂದ ಹೊರತಾದ, ಅದಕ್ಕಿಂತ ಮಿಗಿಲಾದ, ನ್ಯಾಯನಿಯಮಗಳಿಂದ ಬದ್ಧವಾಗಿತ್ತು.

ಕ್ರೈಸ್ತಧರ್ಮ ಮುಖಂಡರು ಪಾರಮಾರ್ಥಿಕ ಸರ್ವೋತ್ಕೃಷ್ಟತೆಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರು. ಈ ಕ್ರೈಸ್ತಧರ್ಮಭೀರುಗಳು ಕ್ರೈಸ್ತಧರ್ಮವೇ ರಾಜ್ಯದ ಮತಧರ್ಮವಾಗಿದ್ದ ಕಾಲದವರು. ಇವರು ಧರ್ಮಪೀಠದ ಸ್ವಾತಂತ್ರ್ಯ ಅತ್ಯಗತ್ಯವೆಂದು ಒತ್ತಾಯಪಡಿಸುತ್ತಿದ್ದರು. ಐಹಿಕವಾದಿಗಳ ಕಾರ್ಯಚಟುವಟಿಕೆಗಳನ್ನು ಸಮೀಕ್ಷಿಸಿ ತೀರ್ಪು ನೀಡಲು ಧರ್ಮಪೀಠಕ್ಕೆ ಅಧಿಕಾರವಿರಬೇಕೆಂದೂ ಅವರು ವಾದಿಸುತ್ತಿದ್ದರು. ಏಕೆಂದರೆ ಐಹಿಕವಾದಿಯೂ ಚರ್ಚಿನ, ಎಂದರೆ ಧರ್ಮದ, ಮಗನಲ್ಲವೆ? ಬಾಹ್ಯಜೀವನ, ಮಾನವನ ವಿಧಿ. ಇಂದಿನ ಜೀವನವು ಪರೀಕ್ಷೆಯ ಕಾಲ; ಇದು ಮುಂದೆ ಬರಲಿರುವ ಜೀವನಕ್ಕೆ ನಾಂದಿ.

ಆದ್ದರಿಂದ ದೇವಶಾಸ್ತ್ರ ನಿಯಮಗಳು ಮಾನವರೂಪಿತ ಕಾನೂನು ಅಥವಾ ಕಟ್ಟಳೆಗಳಿಗಿಂತ ಬಹಳ ಮಿಗಿಲಾದವು. ಯಾವುದಾದರೊಂದು ಕಟ್ಟಳೆ ಮಾನವರಿಗೆ ಸಹಜವಾಗಿ ಕಂಡುಬಂದರೆ ಅದು ಪ್ರಾಕೃತಿಕವಾದದ್ದು, ದೈವದತ್ತವಾದದ್ದು. ಮಾನವರನ್ನು ಎರಡು ನಿಯಮಗಳು ಆಳುತ್ತವೆ: ಒಂದು ದೈವನಿರ್ಮಿತವಾದದ್ದು; ಮತ್ತೊಂದು ಮಾನವಕೃತ.

ಮಧ್ಯಯುಗ : ಪಶ್ಚಿಮ ಜಗತ್ತಿನಲ್ಲಿ ರೋಮನ್ ಸಾಮ್ರಾಜ್ಯದ ಅವನತಿಯ ಅನಂತರ ಪೌರ ಆಡಳಿತ ಬಂತು ; ಉಳಿದ ಒಂದೇ ಶಿಕ್ಷಿತವರ್ಗವಾದ ಚರ್ಚ್‍ಜನರ ಕೈಸೇರಿತು. ಇದು ಉದ್ದೇಶಪೂರ್ವಕವಲ್ಲ ; ಪರಿಸ್ಥಿತಿಯಿಂದಾಗಿ ಅಗತ್ಯವಾಯಿತು. ಕ್ರೈಸ್ತಧರ್ಮದ ಮಾನವೀಯ ಬೋಧನೆಗಳು ಅನಾಗರಿಕಜನರ ಒರಟುತನವನ್ನು ತೊಡೆದುಹಾಕಿದವು. ಪ್ರಾಚ್ಯಜಗತ್ತಿನಲ್ಲಿ ಪೌರ ಆಡಳಿತ 15ನೆಯ ಶತಮಾನದವರೆಗೆ ಕಾನ್‍ಸ್ಟಾಂಟಿನೋಪಲ್‍ನಲ್ಲಿ ಕೇಂದ್ರೀಕೃತವಾಗಿತ್ತು. ಚಕ್ರವರ್ತಿ ರಾಜ ಮಾತ್ರವಲ್ಲದೆ ಪೋಪ್ ಧರ್ಮಗುರುವೂ ಆಗಿದ್ದ. ಆದರೆ ಪಶ್ಚಿಮದಲ್ಲಿ ಪರಿಸ್ಥಿತಿ ಬೇರೆಯಾಗಿತ್ತು. ಸಾರಸಂಗ್ರಹಪದ್ಧತಿ ಜಾರಿಗೆ ಬಂದಿತು. ಪ್ರ.ಶ.800ರಿಂದ ಷಾರ್ಲಮೇನನ ಆಡಳಿತ ಕಾಲದಲ್ಲೂ ಪಶ್ಚಿಮಕ್ಕೆ ಪುನಃ ಸಾಮ್ರಾಜ್ಯ ಪ್ರಾಪ್ತವಾದ ಅನಂತರವೂ ಶಿಕ್ಷಿತ ವರ್ಗವಾದ ಚರ್ಚ್ ಜನರ ಮುಖ್ಯಸ್ಥರನ್ನು ಸಲಹೆಗಾರರನ್ನಾಗಿ ಪೌರ ಆಡಳಿತ ಆರಿಸಿಕೊಂಡಿತು. ರಾಜರೂ ಸಾಮ್ರಾಟರೂ ತಮ್ಮ

ರಾಜ್ಯದ ಅನೇಕ ಭಾಗಗಳನ್ನು ಬಿಷಪ್‌ಗಳು ಮತ್ತು ಆಬಟ್‌ಗಳ ಆಡಳಿತಕ್ಕೆ ಒಳಪಡಿಸಿದರು. ಪೌರ ಅಧಿಕಾರಿಗಳು ಧರ್ಮಾಧಿಕಾರಿಗಳ ಮೇಲೆ ಹತೋಟಿ ಹೊಂದಲು ಬಯಸಿದ್ದು ಮಾತ್ರವಲ್ಲದೆ, ಅವರನ್ನು ಅಧಿಕಾರದಲ್ಲಿಡುವ ಅಥವಾ ತೆಗೆದುಹಾಕುವ ಹಕ್ಕನ್ನು ಕೇಳತೊಡಗಿದರು. 10ಯ ಶತಮಾನದ ವೇಳೆಗೆ ಅನೇಕ ರಾಜರು ಎರಡು ಹಕ್ಕುಗಳನ್ನೂ ಪಡೆದುಕೊಂಡಿದ್ದರು. ಚರ್ಚ್ ಮುಖಂಡರಿಗೆ ಇದು ಸಂತೋಷಪ್ರದವೇನೂ ಆಗಿರಲಿಲ್ಲ. ಚರ್ಚಿನೊಳಗೆ ಅನೇಕ ಅಪಾತ್ರರು ಅಧಿಕಾರಕ್ಕೆ ಬಂದರು. ಧಾರ್ಮಿಕ ಆಸಕ್ತಿ, ಭಕ್ತಿ ಮತ್ತು ನೈತಿಕ ಮೌಲ್ಯಗಳು ಇಳಿಮುಖವಾಗಿ ಸುಧಾರಣೆಯ ಮನೋಭಾವದ ಕೆಲವು ಪೋಪ್ ಗುರುಗಳು–7ನೆಯ ಗ್ರೆಗೊರಿಯೇ ಮುಂತಾದವರು–ತೀವ್ರ ಕ್ರಮಗಳನ್ನು ಕೈಕೊಂಡರು. 7ನೆಯ ಗ್ರೆಗೊರಿ ಇಂಥ ಕ್ರಮಗಳಿಂದಾಗಿ 4ನೆಯ ಹೆನ್ರಿಯ ವಿರೋಧ ಕಟ್ಟಿಕೊಳ್ಳಬೇಕಾಯಿತು. ಗ್ರೆಗೊರಿಯನ್ನು ಹೆನ್ರಿದೇಶ ಬಿಟ್ಟು ಓಡಿಸಿದ.

ಮುಂದಿನ ಶತಮಾನಗಳಲ್ಲಿ ರಾಜರು ಮತ್ತು ಸಾಮ್ರಾಟರಿಗೂ ಪೋಪ್ ಗುರುಗಳಿಗೂ ಹೋರಾಟ ನಡೆಯಿತು. ಆದರೂ 12 ಮತ್ತು 13ನೆಯ ಶತಮಾನಗಳಲ್ಲಿ ಪೋಪರ ಅಧಿಕಾರವೇ ಹೆಚ್ಚಾಯಿತು. ಕೊನೆಗೆ ರೋಮನ್ ಕಾನೂನುಗಳು ಮತ್ತೆ ಅನುಷ್ಠಾನಕ್ಕೆ ಬಂದವು. ಜನಾಂಗಪ್ರಭುತ್ವ ಪೌರ ಆಡಳಿತಗಾರರಿಗೆ ಹೆಚ್ಚಿನ ಅಧಿಕಾರ ನೀಡಿ, ಪೋಪರಿಗಿಂತ ಮೇಲ್ಮೈಯಾಗುವಂತೆ ಮಾಡಿತು.

13ನೆಯ ಶತಮಾನದಲ್ಲಿ ಆ ಕಾಲದ ಮಹಾ ಪಂಡಿತ ಸೇಂಟ್ ಥಾಮಸ್ ಅಕ್ವೈನಸ್ ಪೌರ ಆಡಳಿತದ ಹಿರಿಮೆಯನ್ನು ಹೆಚ್ಚಿಸಿದ. ರಾಜ್ಯ ಪರಿಪೂರ್ಣ ಸಮಾಜ, ಒಂದು ನಿರ್ದಿಷ್ಟ ಒಳಿತು, ಅತ್ಯಗತ್ಯ ಒಳಿತು–ಎಂದು ಸಾರಿ, ದೇವತೆಗಳಿಗೆ ಕೂಡ ಯಾವುದಾದರೊಂದು ರೀತಿಯ ಸರ್ಕಾರ ಅತ್ಯಾವಶ್ಯಕ ಎಂದು ಹೇಳಿದ.

ಅಧಿಕಾರಕ್ಕಾಗಿ ಹೋರಾಟ 14ನೆಯ ಶತಮಾನದಲ್ಲಿ ಪರಾಕಾಷ್ಠೆ ಮುಟ್ಟಿತು. ಯೂರೋಪಿನ ಮುಖ್ಯ ರಾಷ್ಟ್ರಗಳು ಒಂದುಗೂಡಿ ಬಲಯುತವಾಗಿದ್ದವು. ವಿಶ್ವವಿದ್ಯಾಲಯಗಳಲ್ಲಿ ರೋಮನ್ ಹಾಗೂ ಧಾರ್ಮಿಕ ಕಾನೂನುಗಳನ್ನು ಕಲಿತು ಅನೇಕರು ಪಂಡಿತರಾದರು. ಇದರಿಂದ ಸಾಮಾನ್ಯ ಜನರೂ ರಾಜಮಹಾರಾಜರ ಆಸ್ಥಾನಗಳಲ್ಲಿ ಪ್ರಮುಖ ಸ್ಥಾನಗಳನ್ನು ಪಡೆಯುವಂತಾಯಿತು.

14ನೆಯ ಶತಮಾನದ ಆದಿಭಾಗದಲ್ಲಿ 4ನೆಯ ಫಿಲಿಪ್‌ನ ಆಳ್ವಿಕೆಯಲ್ಲಿ ಫ್ರಾನ್ಸ್ ಅತ್ಯಂತ ಪ್ರಭಾವಶಾಲಿಯಾಗಿತ್ತು. ಆಗ 8ನೆಯ ಬಾನಿಫೇಸ್ ಅತ್ಯಂತ ಪ್ರಭಾವಿ ಪೋಪ್ ಆಗಿದ್ದ. ಇವರಿಬ್ಬರ ನಡುವೆ ವೈಷಮ್ಯ ಬೆಳೆಯಿತು. ಚರ್ಚಿನ ಆಸ್ತಿಪಾಸ್ತಿಗಳ ಮೇಲೆ ಯುದ್ಧಕಾಲದಲ್ಲಿ ತೆರಿಗೆ ಹಾಕಲು ರಾಜನಿಗೆ ಅಧಿಕಾರವುಂಟೆ?– ಎಂಬುದು ಚರ್ಚಿಗೆ ಒಳಗಾದ ವಿಷಯ. ಕ್ರೈಸ್ತಮತದ ವಿಧಿಗಳಲ್ಲಿ (ಕ್ಯಾನನ್) ಇದಕ್ಕೆ ಅವಕಾಶವಿರಲಿಲ್ಲ. ಈ ವಿವಾದ ಅನೇಕ ವರ್ಷಗಳ ಕಾಲ ನಡೆಯಿತು. ಪರಸ್ಪರ ಅಧಿಕಾರವ್ಯಾಪ್ತಿಯ ಎಲ್ಲ ಹಳೆಯ ಪ್ರಶ್ನೆಗಳನ್ನೂ ಎಳೆತಂದಂತಾಯಿತು. ಆದರೆ ದಿನೇ ದಿನೇ ಹಬ್ಬುತ್ತಿದ್ದ ರಾಷ್ಟ್ರೀಯತೆಯ ಮಹತ್ತ್ವವನ್ನು ಯಾರೊಬ್ಬರೂ ಅರಿಯಲಿಲ್ಲ.

ಎಲ್ಲ ಲೌಕಿಕ ಅಧಿಕಾರವೂ ಚರ್ಚಿನಿಂದಲೇ ಬಂದದ್ದೆಂಬ ವಾದವನ್ನು ರೋಮಿನ ಜೈಲ್ಸ್ ಮುಂದೊಡ್ಡಿದ. ಪೋಪ್ ಗುರುಗಳಿಗಿಂತ ರಾಜರ ಅಧಿಕಾರವೇ ಅತಿ ಹೆಚ್ಚಿನದೆಂದು ಸಾಮ್ರಾಜ್ಯಷಾಹಿಯನ್ನೇ ನೆಚ್ಚಿದ್ದ ಪಿಯರಿ ಡುಬ್ವಾ ವಾದಿಸಿದ. ಈ ಎರಡೂ ವಾದಗಳ ಮಧ್ಯೆ ಅನೇಕರು ಚರ್ಚ್ ಮತ್ತು ರಾಜ್ಯಗಳೆರಡೂ ತಮ್ಮ ಅಸ್ತಿತ್ವವನ್ನು ದೇವರಿಂದಲೇ ಪಡೆಯುವುವೆಂದು ವಾದಿಸಿ, ಎರಡಕ್ಕೂ ಪ್ರತ್ಯೇಕವಾದ ಗುರಿಗಳಿವೆಯೆಂದು ಹೇಳುತ್ತಿದ್ದರು. ಚರ್ಚಿಗೆ ಘನತೆಯ ಸರ್ವೋತ್ಕೃಷ್ಟತೆಯುಂಟೇ ವಿನಾ ಅಧಿಕಾರದ ಸರ್ವೋತ್ಕೃಷ್ಟತೆ ಇಲ್ಲ. ಚರ್ಚ್ ಮತ್ತು ರಾಜ್ಯದ ಎಲ್ಲ ಅಧಿಕಾರವೂ ಜನರ ಪ್ರಧಾನ ಸಭೆಯಿಂದಲೇ ಬಂದದ್ದು ಎಂದು ಪ್ಯಾದುವದ ಮಾರ್ಸಿಲಿಯಸ್ ವಾದಿಸಿದ. ಚರ್ಚ್ ಕೂಡ ರಾಜ್ಯದ ಒಂದು ಸಾಮಾಜಿಕ ಸಂಸ್ಥೆ ಎಂಬುದು ಅವನ ವಾದ.

ಈ ವಾದವಿವಾದಗಳು ಪೋಪನ ನಿರ್ಗಮನದೊಂದಿಗೆ ಕೊನೆಗೊಂಡವು. ಫ್ರಾನ್ಸಿನ ಒತ್ತಾಯದ ಮೇರೆಗೂ ಭಿನ್ನಮತೀಯರ ಪ್ರಭಾವದಿಂದಲೂ ಪೋಪನನ್ನು ಆವಿನ್ಯಾನ್‌ಗೆ ಹೊರದೂಡಲಾಯಿತು. ಚರ್ಚಿನ ಶಿಸ್ತಿಗೆ ಭಂಗ ಬಂತು. ಅದರ ಘನತೆ ಭೂಮಿಗೆ ಇಳಿಯಿತು. ಆದರೆ ಪ್ರಜಾರಾಜ್ಯದ ಸೂತ್ರಗಳು ಆಡಳಿತಾಧಿಕಾರಿಗಳ ಕಾನೂನುಬದ್ಧತೆಯನ್ನು ಒಪ್ಪಿಕೊಂಡವು.

**ಸುಧಾರಣೆ** : ಸುಧಾರಣೆಯ ತತ್‌ಕ್ಷಣದ ಪ್ರಭಾವವೆಂದರೆ ಕೆಥೊಲಿಕ್ ಮತ್ತು ಪ್ರಾಟೆಸ್ಟೆಂಟ್ ರಾಜ್ಯಗಳೆರಡರಲ್ಲೂ ಸರ್ಕಾರದ ಅಧಿಕಾರದ ಹೆಚ್ಚಳ. ಕ್ರೈಸ್ತರು ಬಲಾಢ್ಯನಾದ ರಾಜನಿಗೆ ವಿರೋಧ ವ್ಯಕ್ತಪಡಿಸುವುದು ಅಸಾಧ್ಯವಾಯಿತು. ರಾಜರು ಪಾರಮಾರ್ಥಿಕ ಹಕ್ಕುಗಳನ್ನೂ ಕೇಳತೊಡಗಿದರು. ನಿರಂಕುಶ ಪ್ರಭುಗಳಿಗೂ ಸಂಪೂರ್ಣ ವಿಧೇಯತೆಯನ್ನು ಲೂತರ್, ಕ್ಯಾಲ್ವಿನ್–ಇಬ್ಬರೂ ಬೋಧಿಸುತ್ತಿದ್ದರು. ಆದರೆ ದೇವರ ಕಾನೂನುಗಳಿಗೆ ಸಂಬಂಧಿಸಿದ್ದ ವಿಷಯಗಳಿಗೆ ಈ ವಿಧೇಯತೆ ಅನ್ವಯಿಸುತ್ತಿರಲಿಲ್ಲ. ಜರ್ಮನಿಯ ರಾಜ್ಯಗಳಲ್ಲಿ ಮತ್ತು ಜಿನೀವಾದಲ್ಲಿ ಚರ್ಚುಗಳು ರಾಜ್ಯದ ಅಂಗಗಳಾಗಿದುವು. ಇಂಗ್ಲೆಂಡಿನಲ್ಲಿ 8ನೆಯ ಹೆನ್ರಿ ರೋಮಿನೊಡನೆ ಎಲ್ಲ ಸಂಪರ್ಕಗಳನ್ನೂ ತೊಡೆದುಹಾಕಿ, ಇಂಗ್ಲೆಂಡ್ ಚರ್ಚಿನ ಮುಖ್ಯಾಧಿಪತ್ಯವನ್ನು ವಹಿಸಿಕೊಂಡ. ಇದು ಕ್ರಾಂತಿಕಾರಕವಾಗಿ ಕಂಡುಬಂದರೂ ನೀತಿ ನಿಯಮಗಳಲ್ಲಿ ಯಾವ ಪ್ರಮುಖ ಬದಲಾವಣೆಯೂ ಕಂಡುಬರಲಿಲ್ಲ. 6ನೆಯ ಎಡ್ವರ್ಡನ ಕಾಲದಲ್ಲಿ ಬದಲಾವಣೆಗಳಾದವು. 1ನೆಯ ಎಲಿಜಬೆತ್ ಮಧ್ಯಮಾರ್ಗವನ್ನನುಸರಿಸಿದಳು. ಪ್ಯೂರಿಟನ್ನರು ಚರ್ಚಿನಲ್ಲಿ ಸುಧಾರಣೆಗಳನ್ನು ಬಯಸಿದರೂ ಚರ್ಚ್ ಮತ್ತು ಸರ್ಕಾರ ಬೇರೆಯಾಗಬೇಕೆಂದು ಬಯಸಲಿಲ್ಲ.

ಸ್ಟೂಯರ್ಟರ ಕಾಲದಲ್ಲಿ ಧಾರ್ಮಿಕ ಜೀವನಕ್ಕೆ ಧಕ್ಕೆ ಬಂದಾಗ ಚರ್ಚ್ ಸರ್ಕಾರದಿಂದ ಪ್ರತ್ಯೇಕವಾಗಿ, ಸ್ವತಂತ್ರವಾಗಿ ಇರಬೇಕೆಂದು ಪ್ಯೂರಿಟನರು ವಾದಿಸತೊಡಗಿದರು. ಧಾರ್ಮಿಕ ವಿಚಾರದಲ್ಲಿ ಸರ್ಕಾರ ತಾಟಸ್ಥ್ಯನೀತಿ ಅವಲಂಬಿಸಬೇಕೆಂಬ ವಿಷಯ ಹೊಸದಾಗಿತ್ತು.

ಉತ್ತರ ಅಮೆರಿಕದಲ್ಲಿ ಇಂಗ್ಲಿಷ್ ವಸಾಹತುಗಳು ಸ್ಥಾಪಿತವಾದದ್ದು ಧರ್ಮದ ಕಾರಣದಿಂದಲೇ. ಇಂಗ್ಲೆಂಡಿನಲ್ಲಿ 1ನೆಯ ಜೇಮ್ಸನ ಕಾಲದಲ್ಲಿ ಮತೀಯ ಸ್ವಾತಂತ್ರ್ಯವನ್ನು ರಕ್ಷಿಸಲಾಗಲಿಲ್ಲವಾದ್ದರಿಂದ ಹಲವು ಪ್ಯೂರಿಟನ್‌ರು ಆ ದೇಶವನ್ನು ತೊರೆದು ಉತ್ತರ ಅಮೆರಿಕದಲ್ಲಿ ನೆಲಸಿದರು. ಅಲ್ಲಿಯ ಶಾಸನಸಭೆ ಯಾವ ಧರ್ಮವನ್ನೂ ಸ್ಥಾಪಿಸುವ ಹಕ್ಕನ್ನು ಪಡೆದಿಲ್ಲವೆಂದು ಸಂವಿಧಾನ ಸ್ಪಷ್ಟಪಡಿಸಿತು.

20ನೆಯ ಶತಮಾನದಲ್ಲಿ ಧರ್ಮ ಮತ್ತು ರಾಷ್ಟ್ರಗಳ ಸಂಬಂಧದ ಬಗ್ಗೆ ಯಾವ ವಿಧವಾದ ನಿಯಮ ನಿಬಂಧನೆಗಳು ಪ್ರಚಲಿತವಾಗಿವೆ ಎಂದು ಹೇಳುವುದು ಅಸಾಧ್ಯ. ಮುಖ್ಯವಾಗಿ ಧಾರ್ಮಿಕ ವಿಚಾರಗಳಲ್ಲಿ ಸರ್ಕಾರದ ತಾಟಸ್ಥ್ಯ, ಮತೀಯ ವಿಷಯಗಳಲ್ಲಿ ಸ್ವಾತಂತ್ರ್ಯ, ಸಹಕಾರ ಮತ್ತು ಸಹಿಷ್ಣುತೆ–ಇವು ಕಂಡುಬರುತ್ತವೆ. ಭಾರತದಲ್ಲಿ ಈ ತತ್ತ್ವಗಳೇ ಧರ್ಮ ಮತ್ತು ರಾಷ್ಟ್ರದ ಸಂಬಂಧದ ಅಡಿಪಾಯವಾಗಿವೆ. (ಕೆ.ಟಿ.ಆರ್.)

**ಚರ್ಚ್‌ಯಾರ್ಡ್, ಥಾಮಸ್** : 1520–1604. ಇಂಗ್ಲೆಂಡಿನ ಷ್ರೂಸಬರಿಯಲ್ಲಿ ಹುಟ್ಟಿದ ಈತ ಸಾಹಿತ್ಯರಚನೆಯನ್ನು ಆರಂಭಿಸಿದ್ದು ಆರನೇ ಎಡ್ವರ್ಡನ ಕಾಲದಲ್ಲಿ. ಮೊದಲನೇ ಜೇಮ್ಸ್ ಸಿಂಹಾಸನಕ್ಕೆ ಬಂದ ಅನಂತರವೂ ಈತನ ಬರೆವಣಿಗೆ ಮುಂದುವರಿಯಿತು. ಸಾಹಿತ್ಯಿಕ, ಮತೀಯ ಹಾಗೂ ರಾಜಕೀಯ ವಿಷಯಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಅತ್ಯುತ್ಸಾಹದಿಂದ ಗದ್ಯಪದ್ಯಗಳಲ್ಲಿ ಪ್ರಕಟಿಸುತ್ತಿದ್ದ ಈತನಿಗೆ ತನ್ನ ಸಮಕಾಲೀನರಿಂದ ಬಹುಮಟ್ಟಿಗೆ ಸಿಕ್ಕಿದ್ದು ಉಪೇಕ್ಷೆ. ಬಹುಶಃ ಇದರಿಂದಾಗಿ ಈತನ ಮುದ್ರಿತ ಕೃತಿಗಳು ದೊರಕುವುದು ಅಪೂರ್ವ. ತಾನು ಬರೆದಿರುವುದಾಗಿ ಹೇಳಿಕೊಂಡಿರುವ ಕೆಲವು ಕೃತಿಗಳಂತೂ ಅಲಭ್ಯವಾಗಿವೆ.

ಮೊದಲು ಈತ ಸರೆಯ ಶ್ರೀಮಂತ ಹೆನ್ರಿ ಹೊವಾರ್ಡ್‌ನ ಊಳಿಗದಲ್ಲಿದ್ದ. ಅನಂತರ ಯುರೋಪಿನ ನಾನಾ ಭಾಗಗಳಲ್ಲಿ, ಸ್ಕಾಟ್‌ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ಆಗಾಗ್ಗೆ ನಡೆಯುತ್ತಲೇ ಇದ್ದ ಯುದ್ಧಗಳಲ್ಲಿ ಹೆಸರು, ಹಣ ಗಳಿಸುವ ಉದ್ದೇಶದಿಂದ ಭಾಗವಹಿಸಿದ. ಗಣನೀಯ ಪ್ರಮಾಣದಲ್ಲಿ ಈ ಎರಡರಲ್ಲಿ ಯಾವುದನ್ನೂ ಪಡೆಯದೆ ಇಂಗ್ಲೆಂಡಿಗೆ ಹಿಂದಿರುಗಿ ಎಲಿಜಬೆತ್ ರಾಣಿಯ ಕೃಪೆ ಸಂಪಾದಿಸಲು ಪ್ರಯತ್ನಿಸಿದ. ಆದರೆ ಅದರಲ್ಲೂ ಯಶಸ್ಸು ಲಭಿಸಲಿಲ್ಲ. 1579ರಲ್ಲಿ ಈತ ಪ್ರಕಟಿಸಿದ ಜನರಲ್ ರಿಹರ್ಸಲ್ಸ್ ಆಫ್ ವಾರ್ಸ್ ಎಂಬ ಕೃತಿಯ ಕೆಲವು ಭಾಗಗಳು ರಾಣಿಗೆ ಅಪ್ರಿಯವಾಗಿ ಕಂಡದ್ದರಿಂದ ಥಾಮಸ್ ಮೂರು ವರ್ಷ ಸ್ಕಾಟ್‌ಲೆಂಡಿಗೆ ಓಡಿ ಹೋಗಬೇಕಾಯಿತು. 1584ರ ಸಮಯಕ್ಕೆ ರಾಣಿಯ ಕೃಪೆ ದೊರೆತು, ಸಣ್ಣ ಮೊಬಲಗಿನ ವಿಶ್ರಾಂತಿವೇತನ ಲಭ್ಯವಾದರೂ ಈತ 1604ರಲ್ಲಿ ನಿಧನ ಹೊಂದಿದಾಗ ಶ್ರೀಮಂತಿಕೆಗೆ ದೂರವೇ ಉಳಿದಿದ್ದ.

ಈತ ಬರೆದದ್ದು ಸಾಹಿತ್ಯಿಕವಾಗಿ ಮುಖ್ಯ ಎನ್ನುವಂತಿಲ್ಲದಿದ್ದರೂ ಚಾರಿತ್ರಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ಕುತೂಹಲಕರ ಎನ್ನಬಹುದು. ದಿ ಲೆಜೆಂಡ್ ಆಫ್ ಷೋರ್ಸ್ ವೈಫ್ ಎನ್ನುವುದು ಈತನ ಅತಿ ಖ್ಯಾತ ಕವನ ; ಇದು ಬಾಲ್ಡ್‌ವಿನ್‌ನ ಮಿರರ್ ಫಾರ್ ಮ್ಯಾಜಿಸ್ಟ್ರೇಟ್ಸ್ ಎಂಬ ಸಂಗ್ರಹದಲ್ಲಿ ಸೇರಿದೆ. ಚರ್ಚ್‌ಯಾರ್ಡ್ ಚಿಪ್ಸ್ (1575 ಮತ್ತು 1578) ಈತನ ವೈಯಕ್ತಿಕ ಸಾಹಸಗಳನ್ನು ಬಣ್ಣಿಸುವ ದೀರ್ಘಕವನ. ಚರಿತ್ರೆಕಾರರ ಹಾಗೂ ಸಂಶೋಧಕರ ಆಸಕ್ತಿಯನ್ನು ಕೆರಳಿಸುವ ದಿ ವರ್ದೈನ್ಸ್ ಆಫ್ ವೇಲ್ಸ್ 1587ರಲ್ಲಿ ಪ್ರಕಟವಾಯಿತು. (ಡಿ.ಎ.ಎಸ್.)

**ಚರ್ಚ್, ರಿಚರ್ಡ್** : 1893–1972 . ಇಂಗ್ಲಿಷ್ ಕವಿ ಮತ್ತು ಕಾದಂಬರಿಕಾರ. ವಿಮರ್ಶಕ, ಪ್ರವಾಸಲೇಖಕ ಹಾಗೂ ಮಕ್ಕಳ ಕಥೆಗಾರ ಎಂದೂ ಹೆಸರಾಗಿದ್ದಾನೆ. ಲಂಡನ್‌ನಲ್ಲಿ ಹುಟ್ಟಿದ ಈತ ಡಲೆಜ್ ಹ್ಯಾಮ್‌ಲೆಟ್ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದ. ತನ್ನ 16ನೆಯ ವಯಸ್ಸಿನಲ್ಲಿ ಲೋಕಸೇವಾ ಇಲಾಖೆಗೆ ಸೇರಿ 40ನೆಯ ವಯಸ್ಸಿನವರೆಗೂ ಸೇವೆಸಲ್ಲಿಸಿದ. ದಿ ಫ್ಲಡ್ ಆಫ್ ಲೈಫ್ (1917) ಈತನ ಮೊದಲ ಕವನ ಸಂಕಲನ. ಅನಂತರ ಈತನ ಹತ್ತು ಕವನ ಸಂಕಲನಗಳು ಹೊರಬಂದವು. ಅವುಗಳಲ್ಲಿ ದಿ ಗ್ಲಾಸ್ಸ್ ಬ್ಯಾಕ್‌ವರ್ಡ್(1930), ನ್ಯೂಸ್ ಫ್ರಂ ದಿ ಮೌಂಟನ್(1934), ದಿ ಸಾಲಿಟರಿ ಮ್ಯಾನ್(1941)

ಪ್ರಮುಖವಾದವು. 1948ರಲ್ಲಿ ಈತನ ಸಮಗ್ರ ಕವನಗಳ ಸಂಗ್ರಹ ಪ್ರಕಟಗೊಂಡಿತು. ಅನಂತರ ದಿ ಪ್ರಾಡಿಗಲ್(1953), ದಿ ಇನ್‌ಹೆರಿಟರ್ಸ್(1957) ಪ್ರಕಟಗೊಂಡವು. ಆಲಿವರ್ಸ್ ಡಾಟರ್(1930), ಹೈ ಸಮರ್(1931), ದಿ ಪ್ರಾಡಿಗಲ್ ಫಾದರ್(1933), ಆ್ಯಪಲ್ ಆಫ್ ಕನ್‌ಕಾರ್ಡ್ (1935), ದಿ ಪೋರ್ಚ್(1937), ದಿ ಸ್ಟ್ರಾಂಗ್‌ಹೋಲ್ಡ್(1939), ದಿ ರೂಮ್ ವಿದಿನ್(1940), ದಿ ಸ್ಯಾಂಪ್ಲರ್ (1942), ಗ್ರೀನ್ ಟೈಡ್(1944), ದಿ ಡೇಂಜರಸ್ ಯಿಯರ್ಸ್(1956)–ಇವು ಈತನ ಪ್ರಮುಖ ಕಾದಂಬರಿಗಳು.

ಮೇರಿ ಷೆಲ್ಲಿ(1928), ಎಯ್ಟ್ ಫಾರ್ ಇಮ್ಮೊರಾಲಿಟಿ(1941), ಬ್ರಿಟಿಷ್ ಆಥರ್ಸ್(1943), ದಿ ಗ್ರೋತ್ ಆಫ್ ದಿ ಇಂಗ್ಲಿಷ್ ನಾವೆಲ್(1950)–ಇವು ಈತನ ವಿಮರ್ಶಾತ್ಮಕ ಗ್ರಂಥಗಳು. 1945ರಲ್ಲಿ ಎಂ.ಎಂ. ಬೋಝ್‌ಮನ್ನನ ಜೊತೆಗೂಡಿ ಪೋಯೆಮ್ಸ್ ಆಫ್ ಅವರ್ ಟೈಮ್ ಎಂಬ ಗ್ರಂಥವನ್ನು ಸಂಪಾದಿಸಿದ. 1955ರಲ್ಲಿ ಓವರ್ ದ ಬ್ರಿಜ್ ಎಂಬ ಜೀವನಚರಿತ್ರೆಯನ್ನು ಬರೆದು ಪ್ರಕಟಿಸಿದ. ಇದು ಸಂಡೆ ಟೈಮ್ಸ್‌ನ ಸಾಹಿತ್ಯಿಕ ಬಹುಮಾನ ಗಳಿಸಿತು. ಇದರ ಉತ್ತರಾರ್ಧ ದಿ ಗೋಲ್ಡನ್ ಸಾವರಿನ್ 1957ರಲ್ಲಿ ಪ್ರಕಟಗೊಂಡಿತು. ಈತನ ಗದ್ಯ ಮತ್ತು ಪದ್ಯಗಳಲ್ಲಿ ಜನಸಾಮಾನ್ಯರ ಜೀವನಾನುಭವಗಳ ಯಥಾರ್ಥಚಿತ್ರವನ್ನು ಕಾಣಬಹುದಾಗಿದೆ. 1957ರಲ್ಲಿ ಈತನಿಗೆ ಸಿ.ಬಿ.ಇ. ಪ್ರಶಸ್ತಿ ಬಂತು. *

**ಚರ್ಚಿಲ್, ಚಾರಲ್ಸ್ :** 1731–64. ಇಂಗ್ಲಿಷ್ ವಿಡಂಬನಕಾರ. ಆ ಕಾಲದಲ್ಲಿ ವಿಡಂಬನಕ್ಕೆ ಪ್ರಸಿದ್ಧನಾದ ಅಲೆಕ್ಸಾಂಡರ್ ಪೋಪನನ್ನು ಅನುಕರಿಸಿದ್ದಾನೆನ್ನಲಾಗಿದೆ. ತನ್ನ ಬದುಕಿನ ಕೊನೆಯ ನಾಲ್ಕು ವರ್ಷಗಳಲ್ಲಿ ಅತ್ಯಂತ ಪ್ರಭಾವಶಾಲಿ ವಿಡಂಬನಕವಿಯಾಗಿ ಪ್ರಸಿದ್ಧಿ ಪಡೆದ. ತನ್ನ ಸಹಪಾಠಿ ಹಾಗೂ ಹಿಂಬಾಲಕ ಹೊಗಳುಭಟ್ಟ ಕವಿ ರಾಬರ್ಟ್ ಲಾಯ್ಡ್‌ನ ಜೊತೆಯಲ್ಲಿ ಕುಡಿತ, ಹಾದರಗಳ ಸಡಿಲ ಜೀವನವನ್ನು ಸತತವಾಗಿ ನಡೆಸಿದ ಚರ್ಚಿಲ್‌ಗೆ ಯಾವ ಬಗೆಯ ನೈತಿಕ ನಿಯಮಗಳಲ್ಲೂ ನಂಬಿಕೆಯಿರಲಿಲ್ಲ. ವೃತ್ತಿಯಿಂದ ಈತ ಪಾದ್ರಿ. ಈತನ ಮೋಜಿನ ಜೀವನವನ್ನು ಕಂಡು ಜುಗುಪ್ಸೆಗೊಂಡ ಜನ ಇವನಿಗೆ ಬಹಿಷ್ಕಾರ ಹಾಕಲೂ ಸಿದ್ಧರಾಗಿದ್ದರು. ಲಾಯ್ಡನ ಬಗ್ಗೆ ಮಾತ್ರ ಅತ್ಯಂತ ಪ್ರೀತಿನಿಷ್ಠೆಗಳನ್ನು ಕೊನೆಯವರೆಗೂ ತೋರಿದ ಚರ್ಚಿಲ್ ಆತ ಸತ್ತ ಕೆಲವೇ ದಿನಗಳ ಅನಂತರ ಮಿತಿ ಮೀರಿದ ಕುಡಿತದ ಅಮಲಿನಲ್ಲಿ ತೀರಿಕೊಂಡ.

ಚರ್ಚಿಲ್ ಕಟುವಾದ ಬರವಣಿಗೆ, ಹರಿತವಾದ ವಿಡಂಬನೆ, ಇರಿಯುವ ಪದಪ್ರಯೋಗಗಳಿಗೆ ಹೆಸರಾಗಿದ್ದಾನೆ. ಸತ್ಯವನ್ನು, ನೀತಿಯನ್ನು ಹೇಳುವುದಕ್ಕಿಂತಲೂ ಮುಖ್ಯವಾಗಿ ಜನರನ್ನು ನೋಯಿಸುವಂಥ ಪ್ರಭಾವ ಬೀರುವ ಬರೆವಣಿಗೆಯೇ ಇವನ ಗುರಿಯಾಗಿತ್ತು. ಕೊಡತಿಯ ಪೆಟ್ಟಿನಂತೆ ವಿಡಂಬನದ ಏಟು ಬೀಳಬೇಕೇ ಹೊರತು ಅದರಲ್ಲಿ ನಯಗಾರಿಕೆ ಸಲ್ಲದೆಂದು ಇವನ ಅಭಿಪ್ರಾಯ. ಮೂರ್ಖರೇ ವಿಡಂಬನೆಗೆ ಗುರಿ – ಎಲ್ಲೇ ಇದ್ದರೂ ಅವರನ್ನು ಬೇಟೆಯಾಡಲೇ ಬೇಕೆಂದು ತನ್ನ ಕಾವ್ಯದ ವ್ಯಾಪ್ತಿಯನ್ನು ಸಾರಿದ ಚರ್ಚಿಲ್ 1761ರಲ್ಲಿ ದಿ ರೋಸಿಯಡ್ ಎಂಬ ವಿಡಂಬನಕಾವ್ಯ ಬರೆದು ತತ್‌ಕ್ಷಣ ಪ್ರಸಿದ್ಧಿ ಪಡೆದ. ಇದು ಅಲೆಕ್ಸಾಂಡರ್ ಪೋಪನ ಡನ್ಸಿಯಡ್‌ನ ಅನುಕರಣೆಯಾದರೂ ತನ್ನದೇ ಹರಿತ, ಚೂಪುಮಾತು, ಚುಚ್ಚುನುಡಿಗಳಿಂದ ತುಂಬಿ ಜನರಿಗೆ ತುಂಬ ಆನಂದ ಕೊಟ್ಟಿತು. ಇದು ಆ ಕಾಲದ ನಾಟಕಕಾರರು ಹಾಗೂ ನಟರ ಮೇಲಿನ ಅದ್ಭುತ ವಿಡಂಬನೆ. ಆದರೆ ಇದರಲ್ಲಿ ಬರುವ ಎಲ್ಲ ನಟರನ್ನೂ ಈಗ ನೆನಪಿಸಿಕೊಳ್ಳುವುದು ಅಸಾಧ್ಯ. ನಟ ನಟಿಯರ ಹಾವಭಾವಗಳು, ವ್ಯಕ್ತಿತ್ವ, ರೀತಿ, ಕಲೆಯನ್ನು ಅವರು ಕೊಲೆಮಾಡುತ್ತಿದ್ದ ರೀತಿಗಳನ್ನು ವಿಡಂಬನೆಗೆ ಗುರಿಮಾಡಿದ ಈ ಕಾವ್ಯದಲ್ಲಿ ಚರ್ಚಿಲ್ ಪ್ರತಿಯೊಬ್ಬ ವ್ಯಕ್ತಿಯನ್ನೂ ಸ್ಪಷ್ಟವಾಗಿ ಅವನ ಓರೆಕೋರೆಗಳೊಂದಿಗೆ ಜೀವಂತವಾಗಿ ಚಿತ್ರಿಸಿದ್ದಾನೆ. ಆದರೆ ಇದರಲ್ಲಿ ತುಂಬಿರುವ ವ್ಯಕ್ತಿದ್ವೇಷ, ಎಲ್ಲರ ಮೇಲೂ ಕೃತಿಕಾರ ಕಾರಿರುವ ಕಪಿ ಸಮದರ್ಶಿ ಓದುಗರ ದೃಷ್ಟಿಯಲ್ಲಿ ಅತಿರೇಕವೆನಿಸುತ್ತದೆ. ವ್ಯಕ್ತಿಯ ಅವಹೇಳನವೇ ಉದ್ದೇಶವಾದ ರೋಸಿಯಡ್‌ನಲ್ಲಿ ಅಲ್ಲಲ್ಲಿ ಸುಂದರವಾದ ಸಾಲುಗಳೂ ಬರುತ್ತವೆ. ಉದಾಹರಣೆಗೆ ವಿಮರ್ಶಕರು

> "ಬಡಪಾಯಿ ಬಂಟರು
> ತಪ್ಪುಗಳ ಕಾಣದೆಯೆ ಗುಣವನೇ ಹೊಗಳುವರು
> ಹಳಬರಿಗೆ ಸಲ್ಲಿಸುವ ಕುರುಡು ಕಾಣಿಕೆಯನ್ನು
> ಗ್ರೀಸಿಗಪ್ಪಟಭಕ್ತಿ, ನಿಯಮಗಳಿಗಂಥ ಗುಲಾಮ"

ರಾಗಿದ್ದಾರೆಂದು ಹಳಿಯುತ್ತಾನೆ.

ಚರ್ಚಿನ ವ್ಯಕ್ತಿದ್ವೇಷದ ಈ ಕೃತಿಗೆ ಪ್ರತಿಯಾಗಿ ಅವನನ್ನು ಅವಹೇಳನಕ್ಕೆ ಗುರಿಮಾಡುವ ಒಂದು ಲೇಖನ ಪ್ರಕಟವಾಯಿತು. ದಿ ಕ್ರಿಟಿಕಲ್ ರೆವ್ಯೂ ಪತ್ರಿಕೆಯ ಈ ಲೇಖನಕ್ಕುತ್ತರವಾಗಿ 'ದಿ ಅಪಾಲಜಿ' ಎಂಬ ಮತ್ತೊಂದು ವಿಡಂಬನಕಾವ್ಯವನ್ನು ಚರ್ಚಿಲ್ ರಚಿಸಿದ. ಇದು ದೊಡ್ಡ ನಟರನ್ನು ಕುರಿತುದೇ ಆದರೂ ಮೊದಲ ಕೃತಿಗಿಂತ ಇದರಲ್ಲಿ ವ್ಯಕ್ತಿನಿಂದೆ ಹಾಗೂ ಕಪಿ ಕಡಿಮೆಯಿದ್ದು ಉತ್ತಮ ವಿಡಂಬನೆಯೆನ್ನಿಸಿಕೊಂಡಿದೆ. ಹೊಗಳುಬಂಟನಾಗದ ಜಂಬ, ಸುಳ್ಳು ಹೇಳದ ಪ್ರಾಮಾಣಿಕತೆ, ಮೆಚ್ಚಿಸಲಾರದ ನೇರತನ ಹಾಗೂ ಹಿರಿಮೆ ಗಳಿಸಲಾಗದ ನಿಷ್ಠೆ–ಇವೇ ತನ್ನ ಗುಣಗಳೆಂದು ಕವಿ ಹೇಳಿಕೊಂಡಿದ್ದರೂ ಬದುಕಿನಲ್ಲಿ ಅವನ್ನು ತೋರದಿದ್ದುದರಿಂದ ಇವನ ಬಗ್ಗೆ ಜನರಿಗೆ ಸದಭಿಪ್ರಾಯ ಮೂಡಿಬರಲಿಲ್ಲ. (ಎಸ್.ಎ.ಎನ್.)

**ಚರ್ಚಿಲ್, ವಿನ್‌ಸ್ಟನ್ :** 1871–1947. ಅಮೆರಿಕದ ಕಾದಂಬರಿಕಾರ. ಸೇಂಟ್ ಲೂಯಿಯಲ್ಲಿ ಜನಿಸಿ ಅಲ್ಲಿನ ಪಬ್ಲಿಕ್ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿ, ಅನ್ನಪಾಲಿಸ್‌ನ ನೌಕಾ ಅಕಾಡೆಮಿಯಲ್ಲಿ ಪದವಿ ಪಡೆದ (1894). ಕೆಲವು ಕಾಲ ಆರ್ಮಿ ಅಂಡ್ ನೇವಿ ಜರ್ನಲ್‌ನಲ್ಲಿ ಲೇಖಕನಾಗಿಯೂ ಅನಂತರ ಕಾಸ್ಮೊಪಾಲಿಟನ್ ಮ್ಯಾಗಜೀನಿನ ಕಾರ್ಯ ನಿರ್ವಾಹಕ ಸಂಪಾದಕನಾಗಿಯೂ ಕೆಲಸ ಮಾಡಿದ. 1900–1905ರ ಅವಧಿಯಲ್ಲಿ ನ್ಯೂ ಹ್ಯಾಂಪ್‌ಷೈರ್‌ನ ಗವರ್ನರ್ ಪದವಿಗೆ ಪ್ರಗತಿಶೀಲ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತ.

ಜೀವನಕ್ಕೆ ಬೇಕಾದ ಅನುಕೂಲಗಳಿದ್ದುದರಿಂದ ಚರ್ಚಿಲ್ ಬರೆವಣಿಗೆಯನ್ನೇ ವೃತ್ತಿಯಾಗಿ ಕೈಗೊಂಡು ಅನೇಕ ಕಾದಂಬರಿಗಳನ್ನು ಬರೆದ. ಮೊದಲ ಕಾದಂಬರಿಯಾದ 'ದಿ ಸೆಲೆಬ್ರಿಟಿ' 1898ರಲ್ಲಿ ಪ್ರಕಟವಾಯಿತು. ರಿಚರ್ಡ್ ಕಾರ್‌ವಾಲ್ (1899) ಕ್ರಾಂತಿಗೊಳಗಾದ ಮೇರಿಲ್ಯಾಂಡನ್ನು ಕುರಿತದ್ದು. ಸುಮಾರು ಹತ್ತು ಲಕ್ಷ ಪ್ರತಿಗಳು ಖರ್ಚಾದುದು ಇದರ ಜನಪ್ರಿಯತೆಗೆ ಸಾಕ್ಷಿ. ಮುಂದೆ ಪ್ರಕಟವಾದ 'ದಿ ಕ್ರೈಸಿಸ್' (1901), 'ದಿ ಕ್ರಾಸಿಂಗ್' (1904) ಮೊದಲಾದವು ಅಮೆರಿಕ ದೇಶದ ಅಂತರ್ಯುದ್ಧದ ಹಿನ್ನೆಲೆಯನ್ನು ವಸ್ತುವನ್ನಾಗುಳ್ಳ, ಕೆಂಟಕಿ ಸಾಹಸಗಳನ್ನು ನಿರೂಪಿಸುವ ಕಥೆಗಳು. ಕ್ರೈಸಿಸ್ ಪ್ರಕಟವಾದೊಡನೆ ಚರ್ಚಿಲ್ ಅಮೆರಿಕದ ಮುಖ್ಯ ಕಾದಂಬರಿಕಾರರಲ್ಲಿ ಒಬ್ಬನೆಂಬ ಖ್ಯಾತಿಯನ್ನು ಗಳಿಸಿದ. ಕಾನಿಸ್ಟನ್ (1906), ಮಿಸ್ಟರ್ ಕ್ರೂಯಿಸ್ ಕೆರಿಯರ್ (1908) ರಾಜಕೀಯ ಸಮಸ್ಯೆಗಳನ್ನು ಉಳ್ಳಂಥವು. ದಿ ಇನ್‌ಸೈಡ್ ಆಫ್ ದಿ ಕಪ್ (1913), ಎ ಫಾರ್ ಕಂಟ್ರಿ (1915) ಧಾರ್ಮಿಕ ಅಥವಾ ಸಾಮಾಜಿಕ ಪ್ರಶ್ನೆಗಳನ್ನು ವಿಶ್ಲೇಷಿಸುವ ಕಾದಂಬರಿಗಳು. ಎ ಮಾಡರ್ನ್ ಕ್ರಾನಿಕಲ್ (1910), ದಿ ಡ್ವೆಲ್ಲಿಂಗ್ ಪ್ಲೇಸ್ ಆಫ್ ಲೈಟ್ (1917), ದಿ ಅನ್‌ಚಾರ್ಟೆಡ್ ವೇ (1941) ಎಂಬುವು ಇವನ ಇತರ ಕೃತಿಗಳು. ಅಮೆರಿಕದ ಗತಕಾಲದ ಚಿತ್ರಗಳ ಮೂಲಕ ತನ್ನ ನಾಡಿನ ರೋಮಾಂಚಕಾರಿ ಇತಿಹಾಸವನ್ನು ಸೃಷ್ಟಿಸುವುದರಲ್ಲಿ ಯಶಸ್ವಿಯಾದ ಕೆಲವೇ ಲೇಖಕರಲ್ಲಿ ಇವನೂ ಒಬ್ಬ. (ಎಚ್.ಜಿ.ಎಸ್.ಆರ್.)

**ಚರ್ಚಿಲ್, ವಿನ್‌ಸ್ಟನ್ ಲೆನರ್ಡ್ ಸ್ಪೆನ್ಸರ್ :** 1874–1965. ಬ್ರಿಟಿಷ್ ರಾಜನೀತಿಜ್ಞ; ಎರಡನೆಯ ಮಹಾಯುದ್ಧದಲ್ಲಿ ತನ್ನ ದೇಶವನ್ನು ವಿಜಯದ ಹಾದಿಯಲ್ಲಿ ಕೊಂಡೊಯ್ದ ಮಹಾನಾಯಕ. 1874ರ ನವೆಂಬರ್ 30ರಂದು ಆಕ್ಸ್‌ಫರ್ಡ್‌ಷೈರ್‌ನ ಬ್ಲೆನ್‌ಹೀಂ ಅರಮನೆಯಲ್ಲಿ ಜನಿಸಿದರು. ತಂದೆ ಲಾರ್ಡ್ ರ್‍ಯಾಂಡಾಲ್ಫ್ ಚರ್ಚಿಲ್, ತಾಯಿ ಜೀನೆಟ್ ಜೆರೋಂ, ಅಮರಿಕದ ಉದ್ಯಮಿಯೊಬ್ಬನ ಮಗಳು. ಪ್ರಾರಂಭಿಕ ವಿದ್ಯಾಭ್ಯಾಸವಾದ ಮೇಲೆ ಚರ್ಚಿಲ್ ಹ್ಯಾರೊದಲ್ಲಿ ವ್ಯಾಸಂಗ ಮುಂದುವರಿಸಿದರು. ಆದರೆ ಅಲ್ಲಿ ಅಷ್ಟೇನೂ ಸಮರ್ಪಕವಾಗಿ ಮುಂದುವರಿಯಲಿಲ್ಲವಾದ್ದರಿಂದ ತಂದೆ ಇವರನ್ನು ಅಲ್ಲಿಂದ ಬಿಡಿಸಿ ಸ್ಯಾಂಡ್‌ಹರ್ಸ್ಟ್‌ನ ರಾಯಲ್ ಮಿಲಿಟರಿ ಶಾಲೆಗೆ ಸೇರಿಸಿದರು (1893). 1894ರಲ್ಲಿ ಅವರು ಯಶಸ್ವಿಯಾಗಿ ಅಲ್ಲಿಂದ ಹೊರಬಂದರು. ಮರುವರ್ಷ ತಂದೆ ತೀರಿಕೊಂಡರು. ಚರ್ಚಿಲರು ಆ ವರ್ಷ 4ನೆಯ ಹುಸ್ಸಾರ್ ಪಡೆ ಸೇರಿ, ಎರಡು ತಿಂಗಳುಗಳ ಕಾಲ ಕ್ಯೂಬದಲ್ಲಿದ್ದು ಲಂಡನ್‌ನ ಡೇಲಿ ಗ್ರಾಫಿಕ್ ಪತ್ರಿಕೆಗೆ ಆ ದೇಶದ ಸ್ವಾತಂತ್ರ್ಯ ಸಂಗ್ರಾಮ ಕುರಿತು ವರದಿಗಳನ್ನು ಕಳುಹಿಸುತ್ತಿದ್ದರು.

1896ರಲ್ಲಿ ತಮ್ಮ ರೆಜಿಮೆಂಟಿನೊಂದಿಗೆ ಭಾರತಕ್ಕೆ ಬಂದು, ವಾಯವ್ಯ ಗಡಿನಾಡಿನಲ್ಲಿ ನಡೆಯುತ್ತಿದ್ದ ಯುದ್ಧವನ್ನು ಕುರಿತ ವರದಿಗಳನ್ನು ಬರೆಯುವುದರ ಜೊತೆಗೆ, ತತ್ತ್ವಜ್ಞಾನ, ಇತಿಹಾಸ, ಅರ್ಥಶಾಸ್ತ್ರ–ಇವನ್ನು ಇವರು ಅಧ್ಯಯನ ಮಾಡಿದರು. ಇವರ ವರದಿಗಳು ಜನಪ್ರಿಯವಾದವು. ಚರ್ಚಿಲರು ಅಲ್ಲಿಂದ ಮುಂದೆ ಲೇಖನವನ್ನು ತಮ್ಮ ಒಂದು ಮುಖ್ಯ ಹವ್ಯಾಸವಾಗಿ ಇಟ್ಟುಕೊಂಡರು. ರಾಜಕೀಯ ಪ್ರವೇಶ ಮಾಡುವ ಉದ್ದೇಶದಿಂದ 1899ರಲ್ಲಿ ಸೈನಿಕ ಹುದ್ದೆಗೆ ರಾಜೀನಾಮೆ ನೀಡಿದ ಚರ್ಚಿಲರು ಕನ್ಸರ್ವೆಟಿವ್ ಪಕ್ಷದ ಪರವಾಗಿ ಓಲ್ಡ್ ಹ್ಯಾಂನಿಂದ ಉಪಚುನಾವಣೆಯಲ್ಲಿ ಸ್ಪರ್ಧಿಸಿದರು. ಇವರಿಗೆ ಜಯ ಲಭಿಸಲಿಲ್ಲ. ಆದರೆ ಚರ್ಚಿಲ್ ನಿರಾಶರಾಗಲಿಲ್ಲ. ಲಂಡನ್‌ನ 'ಮಾರ್ನಿಂಗ್ ಪೋಸ್ಟ್' ಪತ್ರಿಕೆಗಾಗಿ ದಕ್ಷಿಣ ಆಫ್ರಿಕದ ಯುದ್ಧದ ವರದಿಗಾರರಾಗಿ ಕೆಲಸ ಮಾಡಿದರು. ಬೋಯರರಿಗೆ ಸೆರೆಸಿಕ್ಕಿದ್ದು, ಶಿಬಿರದಿಂದ ತಪ್ಪಿಸಿಕೊಂಡು ಬ್ರಿಟನ್‌ಗೆ ಹಿಂದಿರುಗಿದಾಗ ಚರ್ಚಿಲರು ವೀರರೆಂದು ಖ್ಯಾತಿ ಗಳಿಸಿದ್ದರು. 1900ರಲ್ಲಿ ಓಲ್ಡ್ ಹ್ಯಾಂ ಚುನಾವಣೆಗಳಲ್ಲಿ ಇವರಿಗೆ ಜಯ ಲಭಿಸಿತು. ಇವರು ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಉಪನ್ಯಾಸ ಪ್ರವಾಸಮಾಡಿ, ತಮ್ಮ ಮುಂದಿನ ರಾಜಕೀಯ ಜೀವನಕ್ಕಾಗಿ ಹಣ ಸಂಪಾದಿಸಿದರು.

ಚರ್ಚಿಲ್ ಟೋರಿ ಪಕ್ಷದವರಾಗಿದ್ದರೂ ಆ ಪಕ್ಷದ ನೀತಿಯನ್ನು ಅನೇಕ ವೇಳೆ ಟೀಕಿಸುತ್ತಿದ್ದರು. ಬೋಯೆರರ ಬಗ್ಗೆ ಅವರದು ಉದಾರ ದೃಷ್ಟಿಯಾಗಿತ್ತು. 1904ರಲ್ಲಿ ಅವರು ಆ ಪಕ್ಷವನ್ನು ತ್ಯಜಿಸಿ ಲಿಬರಲ್ ಪಕ್ಷವನ್ನು ಸೇರಿದರು. 1906ರಲ್ಲಿ ಓಲ್ಡ್‌ಹ್ಯಾಂ

ಚುನಾವಣಾ ಕ್ಷೇತ್ರದಲ್ಲಿ ಅವರಿಗೆ ಸೋಲಾಯಿತಾದರೂ ಮ್ಯಾಂಚೆಸ್ಟರಿನಿಂದ ಅವರು ಜಯ ಗಳಿಸಿದರು. ಹೊಸದಾಗಿ ಸ್ಥಾಪಿತವಾದ ಲಿಬರಲ್ ಸರ್ಕಾರದಲ್ಲಿ ಅವರಿಗೆ ವಸಾಹತುಗಳ ಕೆಳ ಕಾರ್ಯದರ್ಶಿಯ ಅಧಿಕಾರ ಪ್ರಾಪ್ತವಾಯಿತು. ಅವರು 1908ರಲ್ಲಿ ಬೋರ್ಡ್ ಆಫ್ ಟ್ರೇಡ್‌ನ ಅಧ್ಯಕ್ಷರಾದರು. ಆ ವರ್ಷ ನಡೆದ ಚುನಾವಣೆಗಳಲ್ಲಿ ಮ್ಯಾಂಚೆಸ್ಟರಿನಲ್ಲಿ ಸೋತರು. ಆದರೆ ಡಂಡೀಯಲ್ಲಿ ಅವರಿಗೆ ಜಯ ಲಭಿಸಿತು. ಚರ್ಚಿಲರಿಗೆ ವಿವಾಹವಾದ್ದು ಆ ವರ್ಷವೇ. ಪತ್ನಿ ಕ್ಲೆಮೆಂಟೇನ್. ಬೋರ್ಡ್ ಆಫ್ ಟ್ರೇಡಿನ ಅಧ್ಯಕ್ಷರಾಗಿ ಅವರು ಕಾರ್ಮಿಕರ ಸ್ಥಿತಿಯನ್ನು ಉತ್ತಮಪಡಿಸುವ ಅನೇಕ ಕ್ರಮಗಳನ್ನು ತಂದರು. 1910ರಲ್ಲಿ ಚರ್ಚಿಲರು ಗೃಹಸಚಿವರಾದರು. ಕಾರಾಗೃಹ ಸುಧಾರಣೆಯಲ್ಲಿ ಅವರು ವಿಶೇಷ ಆಸಕ್ತಿ ವಹಿಸಿದರು. ಆಗ ಸಂಭವಿಸಿದ ಕೈಗಾರಿಕಾ ಅಶಾಂತಿಯಲ್ಲಿ ಚರ್ಚಿಲ್ ವಹಿಸಿದ ಪಾತ್ರದಿಂದ ತೀವ್ರವಾದಿಗಳನೇಕರ ಬೆಂಬಲ ತಪ್ಪಿಹೋಯಿತು. 1911ರಲ್ಲಿ ಅವರು ಅಡ್ಮಿರಲ್ಟಿಯ ಮುಖ್ಯರಾದರು. ನೌಕಾದಳವನ್ನು ಸಜ್ಜುಗೊಳಿಸುವ ಕಾರ್ಯದಲ್ಲಿ ಅವರು ಯಶಸ್ಸು ಗಳಿಸಿದರು. ಸ್ವಲ್ಪಕಾಲದ ಮೇಲೆ ಒಂದನೆಯ ಮಹಾಯುದ್ಧ ಆರಂಭವಾದಾಗ ಅವರು ನೌಕಾಕಾರ್ಯಾಚರಣೆಯ ನಿರ್ದೇಶನದ ಹೊಣೆ ಹೊತ್ತರು. ಡಾರ್ಡನಲ್ಸ್ ಕಾರ್ಯಾಚರಣೆ ವಿಫಲವಾಗಿ, ಮಂತ್ರಿಸಂಪುಟಕ್ಕೂ ಅವರಿಗೂ ಭಿನ್ನಾಭಿಪ್ರಾಯಗಳು ಉದ್ಭವಿಸಿದಾಗ ಅವರು ರಾಜೀನಾಮೆ ಕೊಟ್ಟು ಸರ್ಕಾರದಿಂದ ಹೊರಬಂದು ಯೋಧರಾಗಿ ಯುದ್ಧದಲ್ಲಿ ಭಾಗವಹಿಸಿದರು. 1915ರಲ್ಲಿ ಪಾರ್ಲಿಮೆಂಟಿಗೆ ಹಿಂದಿರುಗಿದರು. 1917ರಲ್ಲಿ ಲಾಯ್ಡ್ ಜಾರ್ಜ್ ಸರ್ಕಾರದಲ್ಲಿ ಅವರಿಗೆ ಯುದ್ಧಸಾಮಗ್ರಿ ಸಚಿವ ಹುದ್ದೆ ದೊರಕಿತು. 1919ರಲ್ಲಿ ಅವರು ಯುದ್ಧ ಸಚಿವರಾದರು. ರಷ್ಯನ್ ಕ್ರಾಂತಿ ಸಂಭವಿಸಿದಾಗ ಬಾಲ್ಷೆವಿಕರ ವಿರುದ್ಧ ಬಿಳಿಯ ರಷ್ಯನರಿಗೆ ನೆರವು ನೀಡುವುದು ಅವರ ಉದ್ದೇಶವಾಗಿತ್ತು. 1920ರಲ್ಲಿ ಪೋಲೆಂಡ್ ಯುಕ್ರೇನಿನ ಮೇಲೆ ಆಕ್ರಮಣ ನಡೆಸಿದಾಗ ಪೋಲೆಂಡ್‌ಗೆ ಅವರು ನೆರವು ನೀಡಿದರು. ಈ ಎಲ್ಲ ಕ್ರಮಗಳಿಂದಾಗಿ ಬ್ರಿಟಿಷ್ ಕಾರ್ಮಿಕ ಪಕ್ಷ ಅವರನ್ನು ಕಟುವಾಗಿ ಟೀಕಿಸಿತು. 1921ರಲ್ಲಿ ವಸಾಹತು ಕಚೇರಿಯ ಮುಖ್ಯರಾಗಿ ಅವರು ಐರ್ಲೆಂಡ್‌ಗೆ ಸ್ವಯಮಾಡಳಿತ ನೀಡುವ ಸಂಧಾನಗಳಲ್ಲಿ ಪ್ರಮುಖ ಪಾತ್ರವಹಿಸಿದರು.

ತಾಯಿಯೊಂದಿಗೆ ಚರ್ಚಿಲ್ (ವಯಸ್ಸು 2)

ಶಾಲಾಬಾಲಕ (1889)


ಮುಂದೆ ಮದುವೆಯಾಗಲಿದ್ದ ಮನದನ್ನೆಯೊಡನೆ

1922ರಲ್ಲಿ ತುರ್ಕಿಯ ವಿರುದ್ಧವಾಗಿ ಲಾಯ್ಡ್ ಜಾರ್ಜ್ ಅನುಸರಿಸಿದ ನೀತಿಯಿಂದಾಗಿ ಅವರ ಸಮ್ಮಿಶ್ರ ಮಂತ್ರಿಮಂಡಲ ಕೊನೆಗೊಂಡಿತು. ಅದರೊಂದಿಗೆ ಚರ್ಚಿಲರೂ ಅಧಿಕಾರ ಕಳೆದುಕೊಂಡರು. ಅನಂತರ ನಡೆದ ಮಹಾ ಚುನಾವಣೆಗಳಲ್ಲಿ ಚರ್ಚಿಲರೂ ಸ್ಪರ್ಧಿಸಿದರು. ಆದರೆ ಅವರು ಅಪೆಂಡಿಸೈಟಿಸ್‌ಗಾಗಿ ಮಾಡಿಸಿಕೊಂಡ ಶಸ್ತ್ರಚಿಕಿತ್ಸೆಯಿಂದಾಗಿ ಪ್ರಚಾರಕಾರ್ಯದಲ್ಲಿ ನಿರತರಾಗಲು ಸಾಧ್ಯವಾಗಲಿಲ್ಲ. ಅವರಿಗೆ ಸೋಲಾಯಿತು. ತಾವು ಅಧಿಕಾರರಹಿತರೂ ಸ್ಥಾನರಹಿತರೂ ಪಕ್ಷರಹಿತರೂ ಅಪೆಂಡಿಕ್ಸ್‌ರಹಿತರೂ ಆಗಿರುವುದಾಗಿ ಅವರೇ ಹೇಳಿಕೊಂಡರು.

ಚರ್ಚಿಲ್‌ರ ಆಗಿನ ಸ್ಥಿತಿ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಉದಾರವಾದದಿಂದ ಇವರು ದೂರ ಸರಿಯುತ್ತಿದ್ದರು. ಕನ್ಸರ್ವೆಟಿವ್ ಪಕ್ಷೀಯರು ಅವರ ಬಗ್ಗೆ ಇನ್ನೂ ಸಂಶಯಗ್ರಸ್ತರಾಗಿದ್ದರು. 1923ರ ಚುನಾವಣೆಯ ಅನಂತರ ಅವರು ಲಿಬರಲ್ ಪಕ್ಷವನ್ನು ತ್ಯಜಿಸಿದರು. ಆಗ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಚರ್ಚಿಲ್‌ರಿಗೆ ಸಮಾಜವಾದದಲ್ಲಿ ನಂಬಿಕೆಯೇನೂ ಇರಲಿಲ್ಲ. ಮುಂದಿನ ಚುನಾವಣೆಯಲ್ಲಿ ಬಾಲ್ಡ್‌ವಿನ್ ಗೆದ್ದುಬಂದರು. ಚರ್ಚಿಲ್‌ರೂ ಸಂವಿಧಾನವಾದಿಯಾಗಿ ಎಸೆಕ್ಸ್‌ನ ಎಪಿಂಗ್ ವಿಭಾಗದಿಂದ ಜಯ ಗಳಿಸಿದರು. ಲಿಬರಲ್ ಕಾರ್ಯಕ್ರಮವನ್ನು ತಿರಸ್ಕರಿಸಲು ಇವರು ಸಿದ್ಧರಿದ್ದರು. ಇವರು ಅದುವರೆಗೂ ಪ್ರತಿಪಾದಿಸುತ್ತಿದ್ದ ಮುಕ್ತ ವ್ಯಾಪಾರನೀತಿಯನ್ನೂ ತೊರೆದರು. ಇವರಿಗೆ ಹಣಕಾಸಿನ ಸಚಿವ ಪದವಿ (ಚಾನ್ಸೆಲರ್ ಆಫ್ ದಿ ಎಕ್ಸ್‌ಚೆಕರ್) ದೊರಕಿತು. ಇವರು ಕನ್ಸರ್ವೆಟಿವ್ ಪಕ್ಷಕ್ಕೆ ಪುನರಾಗಮಿಸಿದರು. ಹಣಕಾಸಿನ ಕ್ಷೇತ್ರದಲ್ಲಿ ಇವರಿಗೇನೂ ಕೌಶಲವಿರಲಿಲ್ಲ. ಬ್ರಿಟನ್‌ನಲ್ಲಿ ಸುವರ್ಣ ಪ್ರಮಿತಿಯನ್ನು ಪುನಃ ಸ್ಥಾಪಿಸಿದ್ದು ಇವರು ಅನುಸರಿಸಿದ ದೊಡ್ಡ ಅವಿವೇಕದ ಕ್ರಮವೆಂದು ಟೀಕಿಸಲಾಗಿದೆ. ಆದರೆ ಆ ತೀರ್ಮಾನ ಕೈಗೊಳ್ಳಲು ಇವರಿಗಿಂತ ಇವರ ಅಧಿಕಾರಿಗಳೇ ಹೆಚ್ಚು ಕಾರಣ. ಆ ಕ್ರಮದ ಫಲವಾಗಿ ದೇಶದಲ್ಲಿ ಬೆಲೆಗಳು ಇಳಿದವು. ಉತ್ಪಾದನೆ ತಗ್ಗಿತು, ನಿರುದ್ಯೋಗ ಹೆಚ್ಚಿತು. ಕಾರ್ಮಿಕರು ಭಾರಿ ಸಂಪು ಹೂಡಿದರು. ಚರ್ಚಿಲ್‌ರು ಆ ಸಂದರ್ಭದಲ್ಲಿ ತಳೆದ ನಿರ್ದಯೆಯ ಧೋರಣೆಯಿಂದಾಗಿ ಕಾರ್ಮಿಕವರ್ಗದ ವಿರೋಧ ಗಳಿಸಿಕೊಂಡರು.

1929ರಲ್ಲಿ ನಡೆದ ಚುನಾವಣೆಗಳಲ್ಲಿ ಕನ್ಸರ್ವೆಟಿವ್ ಪಕ್ಷಕ್ಕೆ ಬಹುಮತ ಬರಲಿಲ್ಲ. ಕಾರ್ಮಿಕ ಪಕ್ಷ ಲಿಬರಲ್ ಪಕ್ಷದ ಬೆಂಬಲದಿಂದ ಮತ್ತೆ ಅಧಿಕಾರಕ್ಕೆ ಬಂತು. ಮುಂದಿನ ಹತ್ತು ವರ್ಷಗಳ ಕಾಲ ಚರ್ಚಿಲ್ ಸ್ವತಂತ್ರವಾದ ಹಾಗೂ ಜನಪ್ರಿಯವಲ್ಲದ ಮಾರ್ಗ ಅನುಸರಿಸಿದರು. ಭಾರತ ಸುಧಾರಣಾ ಮಸೂದೆಯನ್ನು ಇವರು ತೀವ್ರವಾಗಿ ವಿರೋಧಿಸಿದರು. ಆ ಮಸೂದೆಯನ್ನು ತರುವುದರಿಂದ ಗಾಂಧಿಯವರಿಗೆ ಮಣಿದಂತಾದೀತೆಂಬುದು ಇವರ ವಾದ. ಗಾಂಧಿಯವರು ಅರೆನಗ್ನ ಫಕೀರ–ಎಂದು ಇವರ ತಾತ್ಸಾರ. ಎಂಟನೆಯ ಎಡ್ವರ್ಡ್ ದೊರೆ ತನ್ನ ಪ್ರೇಯಸಿಗಾಗಿ ರಾಜ್ಯವನ್ನೇ ತೊರೆಯಬೇಕಾಗಿ ಬಂದ ಪ್ರಸಂಗದಲ್ಲಿ ಆಗಿನ ಪ್ರಧಾನಿ ಬಾಲ್ಡ್ವಿನರ ನೀತಿಯನ್ನು ಚರ್ಚಿಲ್ ವಿರೋಧಿಸಿದರು. ಆ ಸಮಯದಲ್ಲಿ ಜರ್ಮನಿ ಹಿಟ್ಲರನ ನೇತೃತ್ವದಲ್ಲಿ ಶಾಂತಿಗೆ ಮಾರಕವಾಗಿ ಬೇಳೆಯುತ್ತಿತ್ತು. ಮೊದಲಿಂದಲೂ ಚರ್ಚಿಲ್ ಈ ಅಪಾಯದ ಬಗ್ಗೆ ಎಚ್ಚರಿಕೆ ನೀಡುತ್ತಲೇ

ಇದ್ದರು. ಹಿಟ್ಲರ್‌ಅನ್ನು ತಣಿಸುವ ನೀತಿಯನ್ನು ವಿರೋಧಿಸುತ್ತಲೇ ಇದ್ದರು. ಆದರೆ ಇವರ ಮಾತನ್ನು ಸರ್ಕಾರ ಕೇಳಲಿಲ್ಲ. ಜರ್ಮನ್ ಪುನಶ್ಯಸ್ತ್ರೀಕರಣದ ಬಗ್ಗೆ ಇವರು ನೀಡಿದ ಅಂಕಿಅಂಶಗಳನ್ನು ಆಗ ಇವರ ಪಕ್ಷದವರೇ ಸುಳ್ಳೆಂದು ಸಾರಿದರು. ನಾಟ್ಸಿಗಳೂ

ಪ್ರಧಾನಿ ಡೇವಿಡ್ ಲಾಯ್ಡ್ ಜಾರ್ಜ್‌ರೊಂದಿಗೆ–ಯುದ್ಧ ಸಾಮಗ್ರಿ ಸಚಿವರಾಗಿ (1916)



ಪ್ರಧಾನಿ ಬಾಲ್ಡ್‌ವಿನರೊಂದಿಗೆ (1920)

ಇವರನ್ನು ಅವಹೇಳನಕ್ಕೆ ಗುರಿಪಡಿಸಿದರು. ಬ್ರಿಟನ್ನಿನಲ್ಲಿ ಹಲವರು ಇವರನ್ನು ಮಹತ್ವಾಕಾಂಕ್ಷಿಯೆಂದು ಹೇಳಿದರು. ಚರ್ಚಿಲ್‌ರು ಜನಪ್ರಿಯತೆ ಕಳೆದುಕೊಂಡು ಬಹುತೇಕ ಏಕಾಂಗಿಯಾಗಿ ಉಳಿಯಬೇಕಾಯಿತು.

ಚೆಕೊಸ್ಲೊವಾಕಿಯದ ಸುಡೆಟನ್‌ಲ್ಯಾಂಡನ್ನು ಹಿಟ್ಲರ್ ವಶಪಡಿಸಿಕೊಳ್ಳಲು ಬ್ರಿಟನ್ ಒಡಂಬಡಿಕೆ ನೀಡಬೇಕಾಗಿ ಬಂದಾಗ ದೇಶಕ್ಕೆ ಅಪಾಯದ ಅರಿವು ಸ್ವಲ್ಪ ಮಟ್ಟಿಗೆ ಉಂಟಾಯಿತು. ರಷ್ಯ–ಅಮೆರಿಕಗಳೊಂದಿಗೆ ಬ್ರಿಟನ್ ಸ್ನೇಹದ ಒಪ್ಪಂದ ಮಾಡಿಕೊಂಡು ಹಿಟ್ಲರನ ಆಕ್ರಮಣಕಾರಿ ಪ್ರವೃತ್ತಿಗೆ ತಡೆ ಒಡ್ಡಬೇಕೆಂಬುದು ಚರ್ಚಿಲ್‌ರ ಅಭಿಪ್ರಾಯವಾಗಿತ್ತು. 1939ರ ಸೆಪ್ಟೆಂಬರ್ 3ರಂದು ಎರಡನೆಯ ಮಹಾಯುದ್ಧ ಆರಂಭವಾಯಿತು. ಚರ್ಚಿಲ್



1. ಸ್ಯಾಂಡ್‌ಹರ್ಸ್ಟ್‌ನ ರಾಯಲ್ ಮಿಲಿಟರಿ ಅಕಾಡಮಿಯಲ್ಲಿ –ಸೈನಿಕ ಸಮವಸ್ತ್ರಧಾರಿ; 2. ಬೋಯರ್ ಯುದ್ಧ ಬಾತ್ಮೀದಾರ–1899 ; 3. 1940ರಲ್ಲಿ ; 4. ವಾಷಿಂಗ್‌ಟನ್ನಿನಲ್ಲಿ–1953 ; 5. ಭಾಷಣಕಾರ–1941 ; 6. 1964ರಲ್ಲಿ

ಮತ್ತೆ ನೌಕಾಬಲದ ಪ್ರಥಮ ಲಾರ್ಡ್ ಆಗಿ ನೇಮಕವಾದರು. ಕ್ರಮಕ್ರಮವಾಗಿ ಅವರ ಖ್ಯಾತಿ ಅಧಿಕವಾಯಿತು. ಆಗ ಬ್ರಿಟನ್ನಿನ ಪ್ರಧಾನಿಯಾಗಿದ್ದು, ದುರ್ಬಲ ನೀತಿ ಅನುಸರಿಸುತ್ತಿದ್ದ ಚೇಂಬರ್ಲಿನ್‌ರ ಖ್ಯಾತಿ ತಗ್ಗುತ್ತಿತ್ತು. ಜರ್ಮನ್‌ರ ನಾರ್ವೇ ಆಕ್ರಮಣದಿಂದ ಬ್ರಿಟನ್‌ಗೆ ಆದ ಪರಾಭವದ ಪರಿಣಾಮವಾಗಿ ಚೇಂಬರ್ಲಿನ್ ರಾಜೀನಾಮೆ ನೀಡಿದರು. ಆಗ ಪ್ರಧಾನಿಯಾಗಬಹುದಾಗಿದ್ದ ಏಕೈಕ ವ್ಯಕ್ತಿಯೆಂದರೆ ಚರ್ಚಿಲ್. ಆ ವೇಳೆಗೆ ಸರ್ಕಾರದ ಎಲ್ಲ ಮುಖ್ಯ ಶಾಖೆಗಳ ಅನುಭವವನ್ನೂ ಪಡೆದಿದ್ದ ಅವರು 1940ರ ಮೇ 10ರಂದು–ಹಿಟ್ಲರ್‌ನ ಸೇನೆಗಳು ಹಾಲೆಂಡಿನ ಆಕ್ರಮಣದಲ್ಲಿ ತೊಡಗಿದಂದು–ಪ್ರಧಾನಿಯಾದರು. ಧೈರ್ಯದಿಂದ ಕೈಗೊಂಡ ತೀರ್ಮಾನಗಳೇ ವಿವೇಕಪೂರ್ಣವಾದ ತೀರ್ಮಾನಗಳು ಎಂಬುದು ಇವರ ನಂಬಿಕೆ. 'ವಿಜಯ, ಏನೇ ಆಗಲಿ ವಿಜಯ' ಎಂಬುದು ಇವರ ಧ್ಯೇಯವಾಕ್ಯ. ಆಗ ಇವರಿಗೆ 65ರ ಹರೆಯ. ಅವರ ದೃಢನಿಲುವು, ದಿಟ್ಟತನ, ನಾಯಕಗುಣ–ಇವು ಆಗ ಸಂಪೂರ್ಣವಾಗಿ ಪ್ರಕಾಶಕ್ಕೆ ಬಂದುವು. ಇತಿಹಾಸದಲ್ಲಿ ಹಿಂದೆಂದೂ ಬಾರದಿದ್ದಂಥ ದೊಡ್ಡ ಗಂಡಾಂತರದಲ್ಲಿ ರಾಷ್ಟ್ರ ಆಗ ಸಿಲುಕಿತ್ತು. ರಾಷ್ಟ್ರೀಯ ಸರ್ಕಾರದ ನೇತಾರರಾಗಿ ಚರ್ಚಿಲ್ ಅದನ್ನು ಎದುರಿಸಿದರು. ಫ್ರಾನ್ಸ್ ಪತನ ಹೊಂದಿತು. ಡನ್‌ಕರ್ಕ್‌ನಿಂದ ಬ್ರಿಟಿಷ್ ಸೇನೆ ವಾಪಸಾಗಬೇಕಾಯಿತು. ಅಂಥ ದುರ್ದಿನಗಳಲ್ಲಿ ಚರ್ಚಿಲರ ಬಿಚ್ಚುಮಾತೂ

ದಿಟ್ಟತನವೂ ಅಸಾಧಾರಣವಾದಂಥವು. ಯಾವ ಸೇನೆಯೂ ಮಾಡದ ಕೆಲಸವನ್ನು ಅವರ ಮಾತುಗಳು ನಿರ್ವಹಿಸಿದುವು. ವಾಗ್ಮಿಯಾಗಿ, ಲೇಖಕರಾಗಿ ಆ ವೇಳೆಗಾಗಲೇ ಕೀರ್ತಿ ಗಳಿಸಿದ್ದ ಚರ್ಚಿಲ್‌ರು ಬಾನುಲಿಯ ಪ್ರಸಾರ ಭಾಷಣಗಳಿಂದ ಹೊಸ ಬಗೆಯ ಖ್ಯಾತಿ ಸಂಪಾದಿಸಿದರು. ಇವರ ಮಾತುಗಳು ಕೋಟ್ಯಂತರ ದಲಿತ ಜನರಿಗೆ ಆಶಾವಾದದ ಸಂದೇಶಗಳಾಗಿ ಪರಿಣಮಿಸಿದುವು. ಆಕ್ರಮಣವನ್ನು ಪ್ರತಿಭಟಿಸಲು ಜನಕ್ಕೆ ಆ ಮಾತುಗಳು ಧೈರ್ಯ ತುಂಬಿದುವು.

ರಹಸ್ಯದ ತೆರೆಯ ಹಿಂದೆ ಇವರು ಮಾಡಿದ ಕೃತಿಗಳು ವಿಜಯದ ಅಸ್ತಿಭಾರ ನಿರ್ಮಿಸಿದುವು. ತಮ್ಮ ಸಹೋದ್ಯೋಗಿಗಳಲ್ಲಿ ಇವರು ಹುರುಪು ತುಂಬಿದರು. ಕೆಂಪು ಪಟ್ಟಿಯನ್ನು ಕತ್ತರಿಸಿ ಸರ್ಕಾರದ ಯಂತ್ರದ ವೇಗ ಹೆಚ್ಚಿಸಿದರು. ಇವರ ಟಿಪ್ಪಣಿಗಳು ಸಂಗ್ರಹವಾಗಿಯೂ ಶಕ್ತಿಪೂರ್ಣವಾಗಿಯೂ ಇದ್ದುವು. ಭೂ, ವಾಯು, ಜಲ, ಸೇನಾ ದಂಡಾಧಿಕಾರಿಗಳೊಂದಿಗೆ ಇವರ ಸಂಪರ್ಕ ಅತ್ಯಂತ ನಿಕಟವಾದ್ದಾಗಿತ್ತು. ಆ ಅಧಿಕಾರಿಗಳು ಚರ್ಚಿಲರಲ್ಲಿ ನಿಷ್ಠೆಯಿಂದ ನಡೆದುಕೊಂಡರು. ಚರ್ಚಿಲ್‌ರ ಅತ್ಯುತ್ಸಾಹಕ್ಕೆ ಅವರು ಆಗಾಗ ಸಹನೆಯ ಕಡಿವಾಣ ಹಾಕುತ್ತಿದ್ದುಂಟು.

ಇಟ್ಟಿಗೆ ಕೆಲಸದಲ್ಲೂ ಚರ್ಚಿಲರಿಗೆ ಆಸಕ್ತಿ. ಮಗಳೊಂದಿಗೆ ಮನೆ ಕಟ್ಟುತ್ತಿದ್ದಾಗ (1930)

ಅಮೆರಿಕವೂ ರಷ್ಯವೂ ಯುದ್ಧದಲ್ಲಿ ಬ್ರಿಟನ್ನೊಂದಿಗೆ ಕೂಡಿಕೊಳ್ಳಬೇಕೆಂಬುದು ಆರಂಭದ ದಿನಗಳಲ್ಲಿ ಚರ್ಚಿಲ್ ಹೊಂದಿದ್ದ ಆಕಾಂಕ್ಷೆ. 1941ರಲ್ಲಿ ಹಿಟ್ಲರ್‌ನ ಸೇನೆ ರಷ್ಯವನ್ನಾಕ್ರಮಿಸಿದಾಗ, ಜಪಾನ್ ಪರ್ಲ್ ಹಾರ್ಬರಿನ ಮೇಲೆ ಧಾಳಿ ಮಾಡಿದಾಗ ಅವೆರಡೂ ದೇಶಗಳು ಯುದ್ಧಪ್ರವೇಶ ಮಾಡಿದುವು. ಕಮ್ಯೂನಿಸಮನ್ನು ಹಿಂದೆ ಕಟುವಾಗಿ ಟೀಕಿಸಿದ್ದ ಚರ್ಚಿಲ್ ಸ್ವತಃ ತಾನೇ ಈಗ ಆ ಬಗ್ಗೆ ಒಂದು ಚಕಾರವನ್ನೂ ಹಿಂದೆಗೆದುಕೊಳ್ಳದೆ ರಷ್ಯಕ್ಕೆ ಎಲ್ಲ ಬಗೆಯ ನೆರವನ್ನೂ ನೀಡುವುದಾಗಿ ಘೋಷಿಸಿದರು. ಆ ಎರಡೂ ದೇಶಗಳು ಯುದ್ಧಪ್ರವೇಶ ಮಾಡಿದ್ದರಿಂದ ಈಗ ವಿಜಯ ಸಿದ್ಧವಾದಂತೆಂದು ಚರ್ಚಿಲ್ ಬಗೆದರು. ಆದರೂ ಕಷ್ಟದ ದಿನಗಳು ಪೂರೈಸಿರಲಿಲ್ಲ. ಚರ್ಚಿಲ್ ಪದೇ ಪದೇ ಅಟ್ಲಾಂಟಿಕನ್ನು ಕಾಡಿ ಅಮೆರಿಕ ಕೆನಡಗಳಿಗೆ, ಅವುಗಳೊಂದಿಗೆ ಸಮಾಲೋಚನೆ ಮತ್ತು ಅವುಗಳ ಸಹಕಾರಗಳಿಗಾಗಿ, ಭೇಟಿ ನೀಡುತ್ತಿದ್ದರು. ಅದೇ ಸಮಯದಲ್ಲಿ ಯಾವುದಾದರೊಂದು ಪರಾಜಯದ ಘಟನೆ ಕಾದಿರುತ್ತಿತ್ತು. ಚರ್ಚಿಲ್ ಟೀಕೆಗೆ ಒಳಗಾದರು. ಆದರೆ ಇವರ ನಾಯಕತ್ವದಲ್ಲಿ ನಂಬಿಕೆಯನ್ನು ಸಡಿಲಗೊಳಿಸುವಂಥ ವಿರೋಧವೇನೂ ಇರಲಿಲ್ಲ. ಚರ್ಚಿಲ್ ಎರಡು ಬಾರಿ ನ್ಯೂಮೋನಿಯಕ್ಕೆ ತುತ್ತಾದರೂ ಛಲ ಬಿಡದೆ ತಮ್ಮ ಕಾರ್ಯವನ್ನು ಮುಂದುವರಿಸಿದರು.

1942ರಲ್ಲಿ ಮಿತ್ರಸೇನೆಗಳು ಮೇಲುಗೈ ಸ್ಥಾಪಿಸಿದುವು. ಉತ್ತರ ಅಮೆರಿಕದಲ್ಲಿ ಇಂಗ್ಲೆಂಡ್–ಅಮೆರಿಕಗಳ ಕಾರ್ಯಾಚರಣೆ ಆರಂಭವಾಯಿತು. ರಷ್ಯನರು ವೀರಾವೇಶದಿಂದ ಸ್ಟಾಲಿನ್‌ಗ್ರಾಡ್ ರಕ್ಷಣೆಗಾಗಿ ಹೋರಾಡಿದರು. ಪಶ್ಚಿಮ ಯುರೋಪಿನಲ್ಲಿ ಜರ್ಮನಿಯ ವಿರುದ್ಧ ಇನ್ನೊಂದು ಯುದ್ಧಮುಖವನ್ನು ತೆರೆಯಬೇಕೆಂಬುದು ರಷ್ಯದ ಕೇಳಿಕೆಯಾಗಿತ್ತು. ಅಮೆರಿಕವೂ ಇದಕ್ಕೆ ಒಡಂಬಡುತ್ತಿದ್ದರೂ ಕೂಡಲೇ ಅದನ್ನಾರಂಭಿಸಲು ಚರ್ಚಿಲ್ ಒಪ್ಪಲಿಲ್ಲ. 1944ರಲ್ಲಿ ನಾರ್ಮಂಡಿನಲ್ಲಿ ಮಿತ್ರಸೇನೆಗಳ ಆಕ್ರಮಣ ಆರಂಭವಾಯಿತು. 1945ರ ಏಪ್ರಿಲ್ ಅಂತ್ಯದ ವೇಳೆಗೆ ಜರ್ಮನಿಯ ಪತನ ಸಂಪೂರ್ಣವಾಯಿತು. ಮೇ ತಿಂಗಳಲ್ಲಿ ಅದು ಶರಣಾಗತವಾಯಿತು. ಚರ್ಚಿಲರ ಕೀರ್ತಿ ಆಗ ಗರಿಷ್ಠ ಸ್ಥಿತಿ ಮುಟ್ಟಿತ್ತು.

ಆಗ ನಡೆದ ಚುನಾವಣೆಯಲ್ಲಿ ಚರ್ಚಿಲ್‌ರ ಪಕ್ಷಕ್ಕೆ ಬಹುಮತ ಬರಲಿಲ್ಲ. ದೇಶದ ಜನತೆ ಚರ್ಚಿಲ್‌ರ ಬಗ್ಗೆ ಕೃತಘ್ನತೆಯಿಂದ ವರ್ತಿಸಿತೆಂದೇನೂ ಇದರ ಅರ್ಥವಲ್ಲ. ಇವರ ಪಕ್ಷ ಚರ್ಚಿಲ್‌ರ ಖ್ಯಾತಿಯನ್ನೇ ಅವಲಂಬಿಸಿತ್ತು. ಯುದ್ಧದಿಂದ ನೊಂದ ಜನಕ್ಕೆ ಆಗ ಬೇಕಾಗಿದ್ದದ್ದು ಸಾಮಾಜಿಕ ಕಾರ್ಯಕ್ರಮ. ಯಶಸ್ವಿಯಾಗಿ ಯುದ್ಧ ನಿರ್ವಹಿಸಿದ ಚರ್ಚಿಲರಿಗೆ ಶಾಂತಿಕಾಲದ ನಿರ್ಮಾಣಕಾರ್ಯದಲ್ಲಿ ಅಷ್ಟೇ ದಕ್ಷತೆ ಇದ್ದಿತೆಂದು ಜನ ಭಾವಿಸಲಿಲ್ಲ. ಲೇಬರ್ ಪಕ್ಷದ ಸರ್ಕಾರ ಬಂತು. ಭಾರತವೇ ಮುಂತಾದ ಅಧೀನ ದೇಶಗಳಿಗೆ ಸ್ವಾತಂತ್ರ್ಯ ಪ್ರಾಪ್ತವಾಯಿತು. ಸಾಮ್ರಾಜ್ಯ ವಿಸರ್ಜನೆಗೆ ನಾನು ಅಧ್ಯಕ್ಷತೆ ವಹಿಸಲಾರೆ–ಎಂದು ಹೇಳಿದ್ದ ಚರ್ಚಿಲ್‌ರು ತಮ್ಮ ಮುಂದೆಯೇ ಆ ಸಾಮ್ರಾಜ್ಯ ಕರಗುತ್ತಿದ್ದದ್ದನ್ನು ಅಸಹಾಯಕರಾಗಿ ವೀಕ್ಷಿಸಬೇಕಾಯಿತು. ಲೇಬರ್ ಸರ್ಕಾರ ಬ್ರಿಟನ್‌ನಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿತು.

1951ರಲ್ಲಿ ನಡೆದ ಚುನಾವಣೆಗಲ್ಲಿ ಕನ್ಸರ್ವೆಟಿವ್ ಪಕ್ಷ ವಿಜಯ ಗಳಿಸಿತು. ಚರ್ಚಿಲ್ ಮತ್ತೆ ಪ್ರಧಾನಿಯಾದರು. 1953ರಲ್ಲಿ, ಎರಡನೆಯ ಎಲಿಜಬೆತ್ ರಾಣಿಯ ಪಟ್ಟಾಭಿಷೇಕದ ವರ್ಷದಲ್ಲಿ, ಚರ್ಚಿಲ್‌ರಿಗೆ ಸಾಹಿತ್ಯಕ್ಕಾಗಿ ನೊಬೆಲ್ ಪಾರಿತೋಷಕವೂ ನೈಟ್ ಪದವಿಯ ಅತ್ಯುನ್ನತ ಶ್ರೇಣಿಯ (ಗಾರ್ಟರ್) ಗೌರವವೂ ಪ್ರಾಪ್ತವಾದುವು. ಪಶ್ಚಿಮ ಯೂರೋಪ್ ಒಕ್ಕೂಟವನ್ನು ಸ್ಥಾಪಿಸಲು ಇವರು ಕಾರಣರು. 1955ರಲ್ಲಿ ಜಲಜನಕ ಬಾಂಬಿನ ತಯಾರಿಕೆಗೆ ಚರ್ಚಿಲ್‌ರು ಆದೇಶ ನೀಡಿದರು. ನಾಲ್ಕು ರಾಷ್ಟ್ರಗಳ ಶೃಂಗ ಸಭೆ ನಡೆಸಿ ವಿಶ್ವ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಬೇಕೆಂಬುದು ಇವರ ಯೋಚನೆಯಾಗಿತ್ತು. ಆದರೆ ಅವರೇ ಆ ಕೆಲಸ ಮಾಡಲಾಗಲಿಲ್ಲ. 1955ರ ಏಪ್ರಿಲ್ 5ರಂದು ಇವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದರು. ವಯಸ್ಸು ಅವರಿಗೆ ವಿರೋಧವಾಗಿತ್ತು.

ಅಧಿಕಾರ ತ್ಯಜಿಸಿದರೂ ಇವರು ಕಾಮನ್ಸ್ ಸಭೆಯ ಸದಸ್ಯತ್ವವನ್ನು ಬಿಡಲಿಲ್ಲ. ಇವರು ಸಭೆಯ ಪಿತೃ ಎನಿಸಿದರು.

1959ರ ಚುನಾವಣೆಯಲ್ಲೂ ಇವರು ಜಯ ಗಳಿಸಿದರು. 1963ರಲ್ಲಿ ಅಮೆರಿಕದ ಗೌರವ ಪ್ರಜೆಯೆಂದು ಅಲ್ಲಿಯ ಕಾಂಗ್ರೆಸ್ ಅವರಿಗೆ ವಿಶೇಷವಾದ ಮನ್ನಣೆ ನೀಡಿತು. 1965ರ ಜನವರಿ 24ರಂದು ಚರ್ಚಿಲ್ ತೀರಿಕೊಂಡರು.

60ನೆಯ ವಯಸ್ಸಿನಲ್ಲಿ ಚಿತ್ರಕಲಾಸಕ್ತ (1955)

ಇತಿಹಾಸದಲ್ಲಿ ಚರ್ಚಿಲ್‌ರ ಸ್ಥಾನ ಶಾಶ್ವತವಾದದ್ದು. ಎಲ್ಲ ಮಹಾವ್ಯಕ್ತಿಗಳಂತೆ ಅವರಲ್ಲೂ ದೌರ್ಬಲ್ಯಗಳಿದ್ದುವು. ಒಂದು ಕಾಲದಲ್ಲಿ ಅಮೆರಿಕದಲ್ಲಿ ಕೂಡ ಇವರು ಅತ್ಯಂತ ಜನಪ್ರಿಯರಾಗಿದ್ದರು, ಅಧ್ಯಕ್ಷರಾಗಿದ್ದ ರೂಸ್ವೆಲ್ಟರನ್ನು ಮೀರಿಸಿದ್ದರು. ಯುದ್ಧಕಾಲದಲ್ಲಿ ಇವರು ರಷ್ಯದೊಂದಿಗೂ ಒಳ್ಳೆಯ ಸಂಬಂಧ ಬೆಳೆಸಿದ್ದರು. ಸ್ಟಾಲಿನ್‌ಗ್ರಾಡ್‌ನಲ್ಲಿ ರಷ್ಯನರು ವಿಜಯ ಗಳಿಸಿದ ಮೇಲೆ ಈ ಸಂಬಂಧ ತಣ್ಣಗಾಗತೊಡಗಿತು. ರಷ್ಯನರು ಚರ್ಚಿಲರ ಹಿಂದಿನ ನಡತೆ ಹೇಳಿಕೆಗಳನ್ನು ಮರೆತಿರಲಿಲ್ಲ. ರೂಸ್ವೆಲ್ಟರು ಸ್ಟಾಲಿನ್‌ರೊಂದಿಗಿನ ಸಂಧಾನಗಳಲ್ಲಿ ಚರ್ಚಿಲರಿಗೆ ವಿಶೇಷ ಗಮನ ನೀಡುತ್ತಿರಲಿಲ್ಲ. ತಮ್ಮ ಸಾಮ್ರಾಜ್ಯನೀತಿಯಿಂದಾಗಿ ವಸಾಹತುಗಳ ಜನರ ಪ್ರೀತಿವಿಶ್ವಾಸಗಳನ್ನು ಇವರು ಗಳಿಸಲಾರದೆ ಹೋದರು. ಆದರೂ ಚರ್ಚಿಲರ ಯುದ್ಧ ಚಾಕಚಕ್ಯತೆ, ಧೈರ್ಯ ಸಾಹಸ ಅಸದೃಶವಾದಂಥವು. ಇವರು ಎರಡನೆಯ ಮಹಾಯುದ್ಧದ ವಿಜಯಶಿಲ್ಪಿ ಎನಿಸಿದರು. ಇನ್ನೂ ಎರಡು ಕ್ಷೇತ್ರಗಳಲ್ಲಿ ಚರ್ಚಿಲ್‌ರು ವಿಶೇಷ ಖ್ಯಾತಿ ಗಳಿಸಿದರು. ಬರವಣಿಗೆ ಒಂದು ಕ್ಷೇತ್ರ, ವಾಗ್ಮಿತೆಯಲ್ಲಿ ಇವರು ಬರ್ಕನಿಗೆ

ಸಮಾನರು. ಇಂಗ್ಲಿಷ್ ಭಾಷೆ ಉಳಿದಿರುವವರೆಗೂ ಜನ ಇವರ ಭಾಷಣಗಳನ್ನು ಓದುತ್ತಾರೆ, ಇವರ ಗ್ರಂಥಗಳನ್ನು ಪಠಿಸುತ್ತಾರೆ. ಚರ್ಚಿಲ್‌ರಿಗೆ ಸೋಮಾರಿತನವೆಂದರೆ ಆಗದು. ಜೀವನ ಅಂಧಕಾರಮಯವಾಗಿದ್ದಾಗ ಇವರು ಬರೆವಣಿಗೆಯನ್ನು ನೆಮ್ಮಿದರು; ಚಿತ್ರ ಬಿಡಿಸುವುದರಲ್ಲಿ ನಿರತರಾದರು. ಇವರ ಚಿತ್ರಗಳಿಗೆ ರಾಯಲ್ ಅಕಾಡೆಮಿಯಲ್ಲಿ ಸ್ಥಾನ ದೊರಕಿದೆ. ಕೃಷಿಯಲ್ಲಿ ಕೂಡ ಇವರಿಗೆ ಆಸಕ್ತಿ. ಕೆಂಟಿನ ಹೊಲಮನೆಯಲ್ಲಿ ದನ ಸಾಕುವುದರಲ್ಲೂ ತೋಟಗಾರಿಕೆಯಲ್ಲೂ ಇವರು ನಿರತರಾಗಿದ್ದರು. ತಮ್ಮ ತೋಟಕ್ಕೆ ತಾವೇ ಗೋಡೆ ಕಟ್ಟಿದರು.

ವೈಮಾನಿಕ ಚರ್ಚಿಲ್ (1942)

ಚರ್ಚಿಲ್ ಬಹುಬೇಗ ಭಾವಪರವಶರಾಗುತ್ತಿದ್ದುದುಂಟು. ಇವರಿಗೆ ಕೋಪ ಬರುತ್ತಿದ್ದದ್ದು ಬಲು ಬೇಗ. ಆದರೆ ದಯೆಯೂ ಇತ್ತು. ನಾಟಕೀಯತೆಯಲ್ಲಿ ಅವರನ್ನು ಸರಿಗಟ್ಟುವವರಿಲ್ಲ. ರಂಗಭೂಮಿಯನ್ನು ಪ್ರವೇಶಿಸಿದ್ದರೆ ಇವರು ಉತ್ತಮ ನಟರಾಗುತ್ತಿದ್ದರು. ತಮ್ಮ ಜೀವನದ ಕೊನೆಕೊನೆಗೆ ಅವರ ಮನಸ್ಸು ಬಹಳ ಮಾಗಿತ್ತು. ಯುವಕರ ನಡುವೆ ಇವರು ಖುಷಿಯಾಗಿರುತ್ತಿದ್ದರು. ಹಳೆಯ ಕಾಲದ ನಯ-ನಾಜೂಕುಗಳಿಂದ ಯುವಕರನ್ನು ಸಂತೋಷಗೊಳಿಸುತ್ತಿದ್ದರು. ಇವರ ವಿವಾಹಜೀವನ ಅತ್ಯಂತ ಸುಖಮಯವಾಗಿತ್ತು. ಇವರಿಗೆ ಒಬ್ಬ ಮಗ; ಪುತ್ರಿಯರು ಮೂವರು. (ಜೆ.ವಿ.ಎನ್.)

**ಚರ್ಚಿಲ್ ಸಾಹಿತ್ಯ :** ಜಗತ್ಪ್ರಸಿದ್ಧ ಯೋಧ, ಶ್ರೇಷ್ಠ ರಾಜಕಾರಣಿ, ರಾಷ್ಟ್ರನಾಯಕ ಆಗಿದ್ದ ವಿನ್‌ಸ್ಟನ್ ಚರ್ಚಿಲ್ ಒಬ್ಬ ಪ್ರಖ್ಯಾತ ಸಾಹಿತಿಯೂ ಹೌದು. ಆತ್ಮಕಥೆ, ಜೀವನಚರಿತ್ರೆಗಳನ್ನು ಬರೆದರೂ ಇವರ ಕೃತಿಗಳಲ್ಲಿ ಬಹುತೇಕ ತಾವು ಕಂಡ ಸಮಕಾಲೀನ ಜಗತ್ತಿನ ಆಗುಹೋಗುಗಳನ್ನು ಕುರಿತ ಇತಿಹಾಸ ಗ್ರಂಥಗಳೇ ಹೆಚ್ಚು. ತಮ್ಮ ಬಿಡುವಿಲ್ಲದ ಸಾರ್ವಜನಿಕ ಕೆಲಸಕಾರ್ಯಗಳ ನಡುವೆ, ರಾಜಕೀಯ ಜೀವನದ ನಿರಂತರ ಹೋರಾಟದ ಮಧ್ಯೆ ಇವರು ಆಗಾಗ ಅಷ್ಟಿಷ್ಟು ಬಿಡುವು ಸಿಕ್ಕಾಗ ಗಂಭೀರ ವ್ಯಾಸಂಗದಲ್ಲಿ ತೊಡಗಿರುತ್ತಿದ್ದರು. ರಾಜಕೀಯದ ಅಗಚಾಟಲಿನ ನಡುವೆಯೂ ಇವರು ಎಂದೂ ಓದುಬರೆಹದ ಹವ್ಯಾಸವನ್ನು ಮರೆತವರಲ್ಲ. ಇವರ ಬರೆಹದಲ್ಲಿ ಇವರ ಬದುಕಿನ ನಾಡಿಮಿಡಿತವಿದೆ. ಚರ್ಚಿಲ್‌ರ ಗ್ರಂಥಗಳಲ್ಲಿ ಸುಮಾರು ಅರ್ಧ ಶತಮಾನಕ್ಕೂ ಹೆಚ್ಚಿನ ಅವಧಿಯ ಜಗತ್ತಿನ ಇತಿಹಾಸವನ್ನು ಕುರಿತ ವಿವೇಚನಾತ್ಮಕ ಸಮೀಕ್ಷೆ ಇದೆ. ಇವರು ತಮ್ಮ ಬಾಲ್ಯದಿಂದಲೂ ಇಂಗ್ಲಿಷ್ ಭಾಷೆಯ ಚೆಲುವನ್ನೂ ಬೆಡಗನ್ನೂ ಚೆನ್ನಾಗಿ ಅರಿತಿದ್ದು ಅತ್ಯಂತ ಶ್ರಮದಿಂದ, ಶ್ರದ್ಧೆಯಿಂದ, ಆ ಭಾಷೆಯನ್ನು ರೂಢಿಸಿಕೊಂಡಿದ್ದರು. ಇಂಗ್ಲಿಷ್ ನುಡಿಗಟ್ಟುಗಳ ಸೊಬಗನ್ನೂ ಪದಬಂಧಗಳ ಸಮ್ಮಿತಿಯನ್ನೂ ಮಾತಿನ ಔಚಿತ್ಯವನ್ನೂ ತಮ್ಮ ಚಿಕ್ಕಂದಿನಲ್ಲಿ ಒಬ್ಬ ವ್ಯಾಕರಣದ ಉಪಾಧ್ಯಾಯರು ತಮಗೆ ಅರೆದು ಹೊಯ್ದರು ಎಂದು ಒಂದು ಕಡೆ ಹೇಳಿಕೊಂಡಿದ್ದಾರೆ. ಶೈಲಿಯನ್ನು ವಿಷಯಕ್ಕೆ ತಕ್ಕಂತೆ, ಸಂದರ್ಭೋಚಿತವಾಗಿ ರೂಪಿಸುವುದರಲ್ಲಿ ಇವರದು ಎತ್ತಿದ ಕೈ. ಆಫ್ರಿಕ, ಭಾರತ ಮೊದಲಾದ ಕಡೆಗಳಲ್ಲಿ ಪತ್ರಿಕಾವರದಿಗಾರರಾಗಿ ಪಡೆದ ಪರಿಶ್ರಮದಿಂದಾಗಿ ಇವರು ಬರೆವಣಿಗೆಯಲ್ಲಿ ಒಂದು ಅಪೂರ್ವ ಸಾಮರ್ಥ್ಯವನ್ನು ಸಾಧಿಸಿಕೊಂಡಿದ್ದರು. ಇವರು ಮುಖ್ಯವಾಗಿ ಇತಿಹಾಸಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಬರೆದರೂ ಇವರ ಹೆಸರು ಪ್ರಸಿದ್ಧ ಸಾಹಿತಿಗಳ ಸಾಲಿನಲ್ಲಿ ಸೇರಿಹೋಗಿದೆ. 1953ರಲ್ಲಿ ನೊಬೆಲ್ ಸಾಹಿತ್ಯ ಪಾರಿತೋಷಕ ಗಳಿಸಿದ ಚರ್ಚಿಲ್ ಆಧುನಿಕ ಇಂಗ್ಲಿಷ್ ಗದ್ಯಶಿಲ್ಪಿಗಳಲ್ಲೊಬ್ಬರಾಗಿದ್ದಾರೆ. ಅವರ ಗ್ರಂಥಗಳು ಬೇರೆ ಬೇರೆ ಕಾಲದಲ್ಲಿ ಸಂದರ್ಭಗಳಲ್ಲಿ ಬರೆದ ಸಾಮಯಿಕ ಬರೆವಣಿಗೆಗಳಾದರೂ ಅವುಗಳಲ್ಲಿ ಕೆಲವಾದರೂ ನಾಲ್ಕು ಕಾಲ ನಿಲ್ಲಬಲ್ಲ ಕೃತಿಗಳಾಗಿ ಉಳಿದಿವೆ.

ರೂಸ್‌ವೆಲ್ಟ್ ಮತ್ತು ಚರ್ಚಿಲ್ (1941

ತಮ್ಮ ತಂದೆಯ ಇಷ್ಟದಂತೆ ಸೈನಿಕ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಅಲ್ಲಿ ತೇರ್ಗಡೆ ಹೊಂದಿ ಚರ್ಚಿಲ್ ಬ್ರಿಟಿಷ್ ಸೈನ್ಯಕ್ಕೆ ಸೇರಿದರು. ಬ್ರಿಟಿಷ್ ಸೈನಿಕನಾಗಿ ಭಾರತಕ್ಕೆ ಹೋದಾಗ ಇವರಿಗೆ 23 ವರ್ಷ. ಅಲ್ಲಿನ ತಮ್ಮ ಅನುಭವಗಳನ್ನು ಅವರು 1898ರಲ್ಲಿ ಬರೆದ ದಿ ಸ್ಟೋರಿ ಆಫ್ ದಿ ಮಲಾಕಾಂಟ್ ಫೀಲ್ಡ್ ಎಂಬ ಆತ್ಮಕಥನದಲ್ಲಿ ಬಣ್ಣಿಸಿದ್ದಾರೆ. ಇದರಲ್ಲಿ ಅವರ ಅಸಾಧಾರಣ ಧೈರ್ಯಸಾಹಸಗಳ ಅನುದ್ವಿಗ್ನವಾದ, ನಿರಾಡಂಬರವಾದ ನಿರೂಪಣೆ ಇದೆ. 1900ರಲ್ಲಿ ಪ್ರಕಟವಾದ ಸವರೋಲ ಒಂದು ಮನೋರಂಜಕ ರಮ್ಯಕಥೆ. ಇದರಲ್ಲಿ ಚರ್ಚಿಲ್‌ರ ಉಲ್ಲಾಸಕರ ನಿರೂಪಣಾವಿಧಾನದ ಒಂದು ಮುಖವನ್ನು ಕಾಣಬಹುದು. ಇದಕ್ಕಿಂತ ಸ್ವಲ್ಪ ಮುಂಚೆ ಇವರು ಲಾರ್ಡ್ ಹರ್ಬರ್ಟ್ ಕಿಚನರ್ ಎಂಬಾತನ ನೇತೃತ್ವದಲ್ಲಿ

ಆಲ್ಜಿಯರ್ಸ್‌ನಲ್ಲಿ ಜನರಲ್ ಐಸನ್‌ಹೌವರ್ ಜೊತೆಗೆ ಸಮಾಲೋಚನೆ (1943

ಉತ್ತರ ಆಫ್ರಿಕದಲ್ಲಿ ಹೋರಾಡುತ್ತಿದ್ದು ನೈಲ್ ನದಿಯ ದಂಡಯಾತ್ರೆ ಎಂದು ಪ್ರಸಿದ್ಧವಾಗಿರುವ ಕದನದಲ್ಲಿ ಭಾಗವಹಿಸಿದ್ದರಷ್ಟೆ. 1899ರಲ್ಲಿ ಬರೆದ ದಿ ರಿವರ್ ವಾರ್‌ನಲ್ಲಿ ಆ ಯುದ್ಧದ ಸ್ವಾರಸ್ಯಕರ ವರ್ಣನೆ ಇದೆ. ಘಟನೆಗಳ ನಿರೂಪಣೆಯ ನಡುವೆ ಪುಟಿದೇಳುವ ಅಲ್ಲಿನ ನವಿರಾದ ಹಾಸ್ಯ, ಚಿತ್ರಯುಕ್ತವಾದ ವ್ಯಕ್ತಿಚಿತ್ರಣಗಳು ಮನಸೆಳೆಯುವಂತಿವೆ.

ಮೊದಲಿನಿಂದಲೂ ಚರ್ಚಿಲ್‌ರಿಗೆ ತಮ್ಮ ತಂದೆ ಲಾರ್ಡ್ ರ‍್ಯಾಂಡಾಲ್ಫ್ ಚರ್ಚಿಲರ ಬಗ್ಗೆ ಅಪಾರ ಗೌರವ ಪ್ರೀತಿಗಳಿದ್ದುವು. ಬದುಕಿನ ಉದ್ದಕ್ಕೂ ಅಪ್ಪನಿಗೆ ತಕ್ಕ ಮಗನಾಗಬೇಕು ಎಂಬುದೇ ಅವರ ತೀವ್ರ ಕಾಳಜಿ. 1906ರಲ್ಲಿ ಬರೆದ ಸರ್ ರ‍್ಯಾಂಡಾಲ್ಫ್ ಚರ್ಚಿಲ್ ಒಂದು ಶ್ರೇಷ್ಠ ಜೀವನ ಚರಿತ್ರೆ. ಇದನ್ನು ಪರಿಷ್ಕರಿಸಿ ಪುನಃ 1952ರಲ್ಲಿ ಪ್ರಕಟಿಸಲಾಯಿತು.

ಚರ್ಚಿಲ್ ಮತ್ತು ಡ ಗಾಲ್ (1944)

ಐಸನ್‌ಹೌವರ್ ಮತ್ತು ಚರ್ಚಿಲ್

ಚರ್ಚಿಲ್ 1922–24ರ ಅವಧಿಯಲ್ಲಿ, ಬ್ರಿಟಿಷ್ ಮಹಾಚುನಾವಣೆಯಲ್ಲಿ ಪರಾಜಯ ಗೊಂಡಾಗ ಇವರಿಗೆ ರಾಜಕೀಯದಿಂದ ಸ್ವಲ್ಪಕಾಲ ವಿರಾಮ ದೊರೆಯಿತು. ಆ ಸುಮಾರಿನಲ್ಲಿ ಮೂರು ವರ್ಷಗಳ ಕಾಲ ಇವರು ಪಟ್ಟಾಗಿ ಕುಳಿತು ತಮ್ಮ ಉದ್ಗ್ರಂಥ ದಿ ವರ್ಲ್ಡ್ ಕ್ರೈಸಿಸ್ ಎಂಬ ಆರು ಸಂಪುಟಗಳ, ಒಂದನೆಯ ಮಹಾಯುದ್ಧದ ಚರಿತ್ರೆಯನ್ನು ಬರೆದು ಮುಗಿಸಿದರು. 1930ರಲ್ಲಿ ಇನ್ನೊಂದು ಪುರವಣಿ ಸಂಪುಟವನ್ನು ಬರೆದು ಅದಕ್ಕೆ ಸೇರಿಸಿದರು. ಆ ಸುಮಾರಿನಲ್ಲೇ ಇವರು ಮೈ ಅರ್ಲಿ ಲೈಫ್ ಎಂಬ ಆತ್ಮಕಥೆಯನ್ನು ಬರೆದದ್ದು. ಇದರಲ್ಲಿ ಚಿಕ್ಕಂದಿನ, ಪ್ರಸಿದ್ಧ ಹ್ಯಾರೋ ಪಬ್ಲಿಕ್ ಶಾಲೆಯನ್ನು ಕುರಿತ ಸ್ವಾರಸ್ಯವಾದ ವಿವರಗಳಿವೆ. ಮುಂದೆ ಪ್ರಸಿದ್ಧ ರಾಜಕಾರಣಿಗಳಾದ ಬಾಲ್ಯದ ಒಡನಾಡಿಗಳನ್ನು ಕುರಿತ ವ್ಯಂಗ್ಯಹಾಸ್ಯಭರಿತ ಉಲ್ಲೇಖಗಳಿವೆ. 1932ರಲ್ಲಿ ಬಂದ 'ಥಾಟ್ಸ್ ಅಂಡ್ ಅಡ್ವೆಂಚರ್ಸ್' ಬಹುಕಾಲ ಮನೆಮಾತಾಗಿ ಉಳಿದ ಸೊಗಸಾದ ಗದ್ಯಗ್ರಂಥ. ಇದರಲ್ಲಿ 20ನೆಯ ಶತಮಾನದ ಯುಗಪುರುಷರೆಂದು ಪ್ರಸಿದ್ಧರಾದ ಲೆನಿನ್ ಮುಂತಾದವರನ್ನು ಕುರಿತ ರೋಚಕವಾದ ನುಡಿಚಿತ್ರಗಳಿವೆ. ಅವರ ಅಭಿಪ್ರಾಯ ಧೋರಣೆಗಳಲ್ಲಿ ವೈಯಕ್ತಿಕವಾದ ಸಂಕೋಚಗಳು ಕಾಣಿಸಿಕೊಂಡರೂ ಇಲ್ಲಿನ ಅವರ ಮಾತಿನ ಸಮತೂಕ, ವಿಚಾರಗಳ ಹರವು ಮನಸೆಳೆಯುತ್ತವೆ.

ಯಾಲ್ಟದಲ್ಲಿ ತ್ರಿಮೂರ್ತಿ ಸಮ್ಮೇಳನ (1945) : ಚರ್ಚಿಲ್, ರೂಸ್‌ವೆಲ್ಟ್, ಸ್ಟಾಲಿನ್

ಅದೇ ಕಾಲದಲ್ಲಿ ಬೆಳಕು ಕಂಡ ಮತ್ತೊಂದು ದೀರ್ಘ ಗ್ರಂಥ–ಮಾರ್ಲ್‌ಬರೋ ಅಂಡ್ ಹಿಸ್ ಟೈಮ್ಸ್ (1933–38). ಇದರಲ್ಲಿ ಅವರ ಬಂಧು ಡ್ಯೂಕ್ ಆಫ್ ಮಾರ್ಲ್‌ಬರೋ ಮಹಾಶಯನ ಜೀವನಚರಿತ್ರೆ ಇದೆ. ಪ್ರಸಿದ್ಧ ಇಂಗ್ಲಿಷ್ ಚರಿತ್ರಕಾರ ಮಕಾಲೆ ತನ್ನ ಗ್ರಂಥದಲ್ಲಿ ಮಾರ್ಲ್‌ಬರೋವನ್ನು ಕಟುವಾಗಿ ಟೀಕಿಸಿದ್ದ. ಅದಕ್ಕೆ ಪ್ರತ್ಯುತ್ತರವಾಗಿ ತಮಗೆ ಸರಿಯೆಂದು ತೋರಿದ ಸಮಾಧಾನ ನೀಡುವ ಸಲುವಾಗಿ ಚರ್ಚಿಲ್ ಈ ಗ್ರಂಥ ಬರೆಯಲು ಪ್ರಾರಂಭಿಸಿದರು. ಆದರೆ ಗ್ರಂಥದ ಉದ್ದೇಶ, ವ್ಯಾಪ್ತಿಗಳೆರಡೂ ಕ್ರಮೇಣ ಹಿಗ್ಗುತ್ತ ಹೋದಾಗ ಇವರು ನಾಲ್ಕು ಸಂಪುಟಗಳ ಸುದೀರ್ಘ ಚರಿತ್ರೆಯನ್ನೇ ಬರೆದರು. ಯುದ್ಧಕಾಲದ ಬ್ರಿಟಿಷ್ ರಾಜಕಾರಣಿ, ನಾಯಕ ಹೇಗೆ ಅನಿವಾರ್ಯವಾಗಿ ಸಮಗ್ರ ಯುರೋಪಿನ ರಾಜಕೀಯ ಘಟನೆಗಳ ಮೇಲೆ ಪ್ರಭಾವ ಬೀರುತ್ತಾನೆಂಬುದರ ವಿಶ್ಲೇಷಣೆ ಇಲ್ಲಿದೆ. ಯಾವುದೇ ದೇಶಕಾಲಗಳ ಮುತ್ಸದ್ದಿತನ ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಕುರಿತ ವಿಚಾರ ಸಂಹಿತೆ, ಈ ಗ್ರಂಥ.

ಚರ್ಚಿಲ್ ರಚಿಸಿದ ಇತಿಹಾಸಗ್ರಂಥಗಳಲ್ಲಿ ಇವರ ಮೇರುಕೃತಿ ಎಂದು ಹೆಸರಾದದ್ದು–ಆರು ಸಂಪುಟಗಳ 'ಸೆಕೆಂಡ್ ವರ್ಲ್ಡ್ ವಾರ್'. ಇದನ್ನು ಇವರು 1948–54ರ ಆರು ವರ್ಷಗಳ ಅವಧಿಯಲ್ಲಿ ಬರೆದರು. ಎರಡನೆಯ ಮಹಾಯುದ್ಧದ ಅನಂತರ ಬ್ರಿಟನ್ನಿನ ಚುನಾವಣೆಯಲ್ಲಿ ಲೇಬರ್ ಪಕ್ಷ ಪ್ರಚಂಡ ಬಹುಮತ ಗಳಿಸಿ ಅಧಿಕಾರಕ್ಕೆ ಬಂದಾಗ ರಾಜಕಾರಣಿ ಚರ್ಚಿಲ್ ಮತ್ತೊಮ್ಮೆ ಅಧಿಕಾರದಿಂದ ಬಿಡುವು ಪಡೆದರೂ ಸಾಹಿತಿ ಚರ್ಚಿಲ್ ವಿಶ್ರಾಂತನಾಗಲಿಲ್ಲ. 1956–58ರ ನಡುವೆ ಅವರು 'ಎ ಹಿಸ್ಟರಿ ಆಫ್ ದಿ ಇಂಗ್ಲಿಷ್ ಸ್ಪೀಕಿಂಗ್ ಪೀಪಲ್ಸ್' ಎಂಬ ಮತ್ತೊಂದು ಬೃಹತ್ ಇತಿಹಾಸ ಗ್ರಂಥ ಬರೆದರೂ ಇವರಿಗೆ ಉನ್ನತ ಕೀರ್ತಿ ತಂದುಕೊಟ್ಟಿರುವ ಗ್ರಂಥ–ಸೆಕೆಂಡ್ ವರ್ಲ್ಡ್ ವಾರ್. ಈ ಗ್ರಂಥವೊಂದರಿಂದಲೇ ಇವರ ಸಾರಸ್ವತ ಸಾಧನೆಯ ರೂಪರೇಖೆಗಳನ್ನು ಗುರುತಿಸಬಹುದು. ಇತಿಹಾಸದ ಗಂಡಾಂತರ ಕಾಲದಲ್ಲಿನ ಮಹತ್ತರವಾದ ಘಟನೆಗಳಲ್ಲಿ ಭಾಗವಹಿಸಿದವರೇ ನೇರವಾಗಿ ಆಯಾ ಘಟನೆಗಳನ್ನು ಕುರಿತು ವರದಿ ಮಾಡುವಾಗ ಅಂಥ ನಿರೂಪಣೆಗಳು ಸ್ವಲ್ಪಕಾಲವಾದರೂ ಅತ್ಯಂತ ಜನಪ್ರಿಯವಾಗಿರುತ್ತದೆ. ಅಂಥ ಗ್ರಂಥಗಳು ಕೆಲವೊಮ್ಮೆ ಕೇವಲ ಸಾಂದರ್ಭಿಕವಾದ ಮಾನ್ಯತೆಗೆ ಪಾತ್ರವಾಗಿ ಸ್ವಲ್ಪಕಾಲದ ಮೇಲೆ ಆಕರಗ್ರಂಥಗಳ ರಾಶಿಯಲ್ಲಿ ಸೇರಿಬಿಡುತ್ತವೆ. ಅವು ಆಗೊಮ್ಮೆ ಈಗೊಮ್ಮೆ ಅಜ್ಞಾತ ವಿವರಗಳನ್ನು ಹುಡುಕುವ ಸಂಶೋಧಕರ ಪಾಲಿಗೆ ಮಾತ್ರ ಜೀವಂತವಾಗಿ ಉಳಿದುಕೊಂಡಿರುತ್ತವೆ, ಅಷ್ಟೆ. ಆದರೆ ಚರ್ಚಿಲರ ಗ್ರಂಥ ಇದಕ್ಕೆ ಅಪವಾದವೆನ್ನಬಹುದು. ಇತಿಹಾಸಜ್ಞನ ವಿಶಿಷ್ಟ ಶಬ್ದಸಂಪತ್ತು, ಜೀವನಾನುಭವದ ವ್ಯಾಪ್ತಿ ಗ್ರಂಥದಲ್ಲಿ ಕಾಣಸಿಗುವ ಖಚಿತವಾದ ಒಳನೋಟ ಸೀಳನೋಟಗಳು, ನಿರೂಪಣೆಯ ನಾಟಕೀಯತೆ, ಶೈಲಿಯ ಹಾಸುಬೀಸು–ಇವುಗಳಿಂದಾಗಿ ಚರ್ಚಿಲರ ಗ್ರಂಥ ಉತ್ಕೃಷ್ಟವೆನಿಸಿಕೊಂಡಿದೆ. ಸುಮಾರು 50 ವರ್ಷಗಳ ಅವಧಿಯ ಸೈನ್ಯ ಸಂಚಲನೋಪಾಯಗಳು, ಸೈನಿಕ ಕಾರ್ಯಾಚರಣೆಗಳು, ರಾಜಕಾರಣ ಸಂಬಂಧಗಳು, ಪಾರ್ಲಿಮೆಂಟಿನ ಹಾಗೂ ಅಂತಾರಾಷ್ಟ್ರೀಯ ಕಾರ್ಯಕಲಾಪಗಳು–ಇವುಗಳನ್ನು ಕುರಿತು ನಿಕಟ ಅನುಭವವಿದ್ದ ಚರ್ಚಿಲ್ ತಮ್ಮ ಬದುಕಿನಲ್ಲಿ ಕಂಡುಂಡ ಅನುಭವವೆಲ್ಲವನ್ನೂ ಈ ಗ್ರಂಥದ ರಚನೆಯಲ್ಲಿ ಬಳಸಿಕೊಂಡಿದ್ದಾರೆ. ಮೊದಲ ಸಂಪುಟದ ಪೀಠಿಕೆಯಲ್ಲಿ ಹೇಳಿರುವಂತೆ ಇದು ಅವರು ಒಂದನೆಯ ಮಹಾಯುದ್ಧವನ್ನು ಕುರಿತು ಬರೆದ ಮೂರು ಸಂಪುಟಗಳ ಇತಿಹಾಸದ ಮುಂದಿನ ಭಾಗ. ಈ ಒಂಬತ್ತು ಸಂಪುಟಗಳಲ್ಲಿ 1914ರಿಂದ 1945ರ ವರೆಗಿನ ಮೂವತ್ತು ವರ್ಷದ ಯುದ್ಧದ ಕಥೆ ಇದೆ.

ನೈಟ್ ಪದವಿ ಪಡೆದಾಗ (1954)

ಜಪಾನಿನ ವಿರುದ್ಧ ಜಯಘೋಷಣೆ : ರಾಜಕುಮಾರಿ ಎಲಿಜಬೆತ್, ರಾಣಿ ಎಲಿಜಬೆತ್, ಚರ್ಚಿಲ್, ಜಾರ್ಜ್ VI, ರಾಜಕುಮಾರಿ ಮಾರ್ಗರೆಟ್

ಈ ಗ್ರಂಥಗಳನ್ನು ಬರೆಯುವಲ್ಲಿ ಇವರು ಡೇನಿಯಲ್ ಡಫೊ ತನ್ನ ಮೆಮ್ವಾರ್ಸ್ ಆಫ್ ಎ ಕ್ಯವೆಲಿಯರ್ ಎಂಬ ಬಖೈರಿನಲ್ಲಿ ಅನುಸರಿಸಿರುವ ವ್ಯಕ್ತಿನಿಷ್ಠ ರೀತಿಯನ್ನೇ ಅನುಸರಿಸಿದ್ದಾರೆ. ವೈಯಕ್ತಿಕ ಅನುಭವಗಳ ಮೂಲಕ ಲೋಕದ ವ್ಯಾಪಾರವನ್ನು ಸಮೀಕ್ಷಿಸುವ

ಪ್ರಯತ್ನ ಮಾಡಿದ್ದಾರೆ. ಹಲವು ದಶಕಗಳ ಕಾಲ ಬ್ರಿಟಿಷ್ ಸಾರ್ವಜನಿಕ ಜೀವನದಲ್ಲಿದ್ದು, ಯುದ್ಧಕಾಲದಲ್ಲಿ ಬ್ರಿಟನ್ನಿನ ನೇತಾರರಾಗಿದ್ದುದು ಕೃತಿರಚನೆಗೆ ಒಂದು ವರವಾಗಿ ಪರಿಣಮಿಸಿದೆ. ಇಲ್ಲಿನ ಘಟನೆಗಳಲ್ಲಿ, ಕ್ರಿಯೆಯ ನಿರೂಪಣೆಯಲ್ಲಿ ಬೇಕಾದಷ್ಟು ಸಂಕೀರ್ಣತೆ ಇದೆ; ಇತಿಹಾಸದ ಹಿನ್ನೆಲೆಯಲ್ಲಿ ಜಗತ್ತಿನ ನೂರೆಂಟು ವ್ಯಕ್ತಿಗಳು ಸುಳಿದುಹೋಗುತ್ತಾರೆ. ಇತಿಹಾಸದ ಗತಿಯನ್ನೇ ತಿರುಗಿಸಿದ, ಯುದ್ಧಕಾಲದಲ್ಲಿ ಕೈಗೊಳ್ಳಬೇಕಾಗಿ ಬಂದ ನೂರೆಂಟು ಪ್ರಮುಖ ತೀರ್ಮಾನಗಳ ಹಿನ್ನೆಲೆಯನ್ನೂ ಸಂದರ್ಭವನ್ನೂ ವಿವರಿಸುವಾಗ ನಿರೂಪಣೆ ನಾಟಕೀಯತೆಯಿಂದ ತುಂಬಿಕೊಳ್ಳುತ್ತದೆ. ಜಗತ್ತಿನ ಪ್ರಜಾಪ್ರಭುತ್ವ ರಾಷ್ಟ್ರಗಳ ನಡುವೆ ಪರಸ್ಪರ ಸಾಮರಸ್ಯವಾಗಲಿ ನಿಶ್ಚಿತವಾದ ಧೋರಣೆಯಾಗಲಿ ಇಲ್ಲದೆ ಹೋದುದರಿಂದ ಯುದ್ಧ ಅನಿವಾರ್ಯವಾಯಿತು–ಎಂದು ಚರ್ಚಿಲ್ ಒತ್ತಿ ಹೇಳುತ್ತಾರೆ.

ಚರ್ಚಿಲ್ ಕುಟುಂಬ

ಭಾಷಣಕಾರ ಚರ್ಚ್‌ಲ್ಲರ ವ್ಯಕ್ತಿಚಿತ್ರ ನೀಡುತ್ತ ಸಿ. ಪಿ. ಸ್ನೋ ಚರ್ಚಿಲರಿಗೆ ಅತ್ಯಂತ ಪ್ರಬಲವಾದ ಚೇತನಶಕ್ತಿ ಇತ್ತು. ಆದರೆ ಅದು ಭಾವನಾಪ್ರಧಾನವಾದ್ದರಿಂದ (ರೊಮ್ಯಾಂಟಿಕ್) ಅವರು ಲೆಕ್ಕಾಚಾರದ ಸ್ವಭಾವದವರಾಗಿರಲಿಲ್ಲ. ಅವರು ಕೈಕೊಳ್ಳಬೇಕಾದ ಯಾವುದೋ ಒಂದು ಕಾರ್ಯಕ್ರಮ ಕುರಿತು ಸುದೀರ್ಘವಾಗಿ ಯೋಚಿಸುತ್ತಿದ್ದಾಗ, ತಾವೊಬ್ಬರೇ ಅಂತರಂಗದಲ್ಲಿ ಅದರ ಬಗ್ಗೆ ಸ್ಪಷ್ಟಕಲ್ಪನೆ ತಳೆದಾಗ, ಅದನ್ನು ಹೇಗಾದರೂ ಮಾಡಲೇಬೇಕೆಂಬ ಮಹದಭಿಲಾಷೆಗೆ ಪಕ್ಕಾದಾಗ, ಅವರು ಅದು ಕಾರ್ಯಸಾಧ್ಯವೆಂದೇ ನಂಬಿಬಿಡುತ್ತಿದ್ದರು,

ಲೇಖಕ ಚರ್ಚಿಲ್ (1930)

ಸರಿ. ಆಮೇಲೆ ತಮ್ಮ ಅನನ್ಯ ಕಲ್ಪನಾಶಕ್ತಿಯಿಂದ, ವಾಗ್ವೈಖರಿಯಿಂದ, ಎದೆಗಾರಿಕೆಯಿಂದ ಅಂಥ ಕಾರ್ಯಕ್ರಮ ಸುಲಭಸಾಧ್ಯ ಮಾತ್ರವಲ್ಲ, ಮನುಷ್ಯನಾದವನಿಗೆ ಅದನ್ನು ಬಿಟ್ಟು ಅನ್ಯಮಾರ್ಗವೇ ಇಲ್ಲ ಎಂದು ತಮ್ಮ ಶ್ರೋತೃಗಳನ್ನು ಮನವೊಲಿಸಿಬಿಡುತ್ತಿದ್ದರು. ಆದರೆ ದುರ್ದೈವದಿಂದ ಬದುಕಿನ ಕಠೋರ ವಾಸ್ತವಾಂಶಗಳು ಅವರ ಶ್ರೋತೃಗಳಷ್ಟು ಮೆದುವಾಗಿರಲಿಲ್ಲ, ಸುನಮ್ಯವಾಗಿರಲಿಲ್ಲ. ಇಂಥ ಭಾವುಕ ಗೀಳುಗಳು ಅವರ ಬೆನ್ನುಹತ್ತಿದಾಗ, ಯುದ್ಧಕಾಲ ಹಾಗೂ ಶಾಂತಿಕಾಲಗಳೆರಡರಲ್ಲೂ ಚರ್ಚಿಲ್‌ರು ಘೋರವಾದ ತಪ್ಪುಗಳನ್ನು ಮಾಡಿದ್ದುಂಟು. ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ಅವರು ಕೈಕೊಂಡ ನಿಲುವನ್ನು ಪ್ರಸ್ತಾಪಿಸುತ್ತ ಸ್ನೋ ಅವರು ಚರ್ಚಿಲ್‌ರ ಪ್ರಖ್ಯಾತ ಘೋಷಣೆಯನ್ನು ವ್ಯಂಗ್ಯವಾಗಿ ಟೀಕಿಸಿದ್ದಾರೆ : ನಾನು ಬ್ರಿಟನ್ನಿನ ಪ್ರಧಾನಿಯಾಗಿರುವುದು ಬ್ರಿಟಿಷ್ ಚಕ್ರಾಧಿಪತ್ಯದ ವಿಸರ್ಜನೆಯ ಉಸ್ತುವಾರಿ ನಡೆಸುವುದಕ್ಕಲ್ಲ–ಎಂಬ ಚರ್ಚ್‌ಲರ ಘೋಷಣೆ ಮಹೋನ್ನತ ಶೈಲಿಯ ಮಾತುಗಾರಿಕೆಯಾದರೂ ಚರಿತ್ರೆಯ ದೃಷ್ಟಿಯಿಂದ ಪೊಳ್ಳುಮಾತಾಯಿತು. ತಮ್ಮ ಈ

ಅಂತಿಮಯಾತ್ರೆ

ತೆರನಾದ ಅತಿಭಾವುಕತೆಯಿಂದ ಚರ್ಚಿಲ್ ಗಾಂಧೀಜಿ, ನೀಲ್ಸ್ ಬೋರ್ ಮುಂತಾದವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಆದರೆ ಈ ತೆರನಾದ ಭಾವುಕತೆಯೇ ಚರ್ಚಿಲ್‌ಗೆ ಮಹಾಯುದ್ಧದ ಕಾಲದಲ್ಲಿ ಒಂದು ವರವಾಯಿತು. ಅತ್ಯಂತ ಕ್ರೂರ ವಿಪತ್ತಿನ ವಿರುದ್ಧ ಜಗತ್ತಿನ ರಾಷ್ಟ್ರಗಳು ಹೋರಾಡುತ್ತಿದ್ದಾಗ, ಅವರ ಸಂವೇದನಾಶೀಲತೆಯೇ ಅವರಿಗೆ ಸಂಜೀವಿನೀ ಶಕ್ತಿಯಾಯಿತು. ಚರ್ಚಿಲ್‌ರ ಬಖೈರುಗಳು, ಇತಿಹಾಸಗ್ರಂಥಗಳು ಎಷ್ಟೇ ದೋಷಪೂರಿತವಾಗಿರಲಿ, ವಿಮರ್ಶಕರು ಹೇಳುವಂತೆ ಅವು ಉದಾರ ಹೃದಯಿಯೊಬ್ಬನು ಬರೆದ ಕೃತಿಗಳಾಗಿವೆ. (ಎಚ್.ಕೆ.ಆರ್.)

**ಚರ್ಟ್ :** ಚಕಮಕಿ ಕಲ್ಲಿನಂಥ (ನೋಡಿ) ಬೆಣಚುಕಲ್ಲು. ಸಾಮಾನ್ಯವಾಗಿ ಸುಣ್ಣಕಲ್ಲಿನಲ್ಲಿ ಸಿಕ್ಕುತ್ತದೆ. ಪುರಾತನ ಶಿಲಾಯುಧಗಳ ಬಳಕೆಯ ಕಾಲದಲ್ಲಿ ಆಯುಧಗಳನ್ನು ತಯಾರಿಸಲು ಚರ್ಟನ್ನು ಉಪಯೋಗಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಪಶ್ಚಿಮ ಯುರೋಪ್, ಪ್ಯಾಲೆಸ್ಟೀನ್, ಸಿಂಧ್, ಪಶ್ಚಿಮ ರಾಜಾಸ್ತಾನ ಮತ್ತು ಮಸ್ಕಿ (ರಾಯಚೂರು ಜಿಲ್ಲೆ) ಪ್ರದೇಶಗಳಲ್ಲಿ ಚಕಮಕಿ ಕಲ್ಲು ಅಲ್ಲದೆ ಜಾಸ್ಪರ್ ಬೆಣಚುಕಲ್ಲು ಮತ್ತು ಚಾಲ್ಸಿಡೋನಿ ಸಹ ಬಳಕೆಯಲ್ಲಿದ್ದುವಂತೆ. ಟಿ.ನರಸೀಪುರ ಉತ್ಖನನದಲ್ಲಿ ಚರ್ಟನ್ನು ಕೊರೆದು ತೆಗೆದ ಮಧ್ಯಭಾಗ ಸಿಕ್ಕಿದೆ. ಚರ್ಟಿನ ಪ್ರಧಾನ ಘಟಕ ಅಸ್ಫಟಿಕ ಸಿಲಿಕ. ಆದರೆ ಚರ್ಟ್ ಚಕಮಕಿ ಕಲ್ಲಿಗಿಂತ ಹೆಚ್ಚು ಇತರ ಅಶುದ್ಧತೆಗಳನ್ನು ಒಳಗೊಂಡಿರುವುದು. ಹೀಗಾಗಿ ಇದರ ಬಣ್ಣ ಬೂದು, ಕಂದು, ಕಪ್ಪು ಯಾವುದೂ ಆಗಬಹುದು. ಸಾಪೇಕ್ಷವಾಗಿ ಅಧಿಕ ಕಬ್ಬಿಣಾಂಶವನ್ನು ಒಳಗೊಂಡಿರುವ ಚರ್ಟ್‌ಗೆ ಜಾಸ್ಪರ್ (ನೋಡಿ) ಎಂದು ಹೆಸರು. ಚರ್ಟ್ ಕಲ್ಲು ನುಣುಪಾದ ಮೇಲ್ಮೈ ಹೊಂದಿದ್ದು ಆಲಂಕಾರಿಕ ವಸ್ತುಗಳು ಹಾಗೂ ಆಭರಣ ತಯಾರಿಕೆಯಲ್ಲಿ ಉಪಯೋಗಿಸಲ್ಪಡುತ್ತದೆ. ಚಕಮಕಿ ಕಲ್ಲನ್ನು ನಯವಾಗಿ ಉಜ್ಜಿ ಅದನ್ನು ಹೂದಾನಿಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಒಂದು ಕಾಲದಲ್ಲಿ ಚಕಮಕಿ ಕಲ್ಲಿನಿಂದ ನಶ್ಯದ ಡಬ್ಬಿಗಳನ್ನು ತಯಾರಿಸಲಾಗುತ್ತಿತ್ತು.

ಚಕಮಕಿಕಲ್ಲನ್ನು ನೇಗಿಲಸಾಲನ್ನು ತಯಾರಿಸಲೂ ಬಳಸಲಾಗುತ್ತಿತ್ತು. ಬಹಳ ಪ್ರಾಚೀನ ಕಾಲದಲ್ಲಿ ಚಕಮಕಿ ಕಲ್ಲನ್ನು ಅಮೂಲ್ಯ ರತ್ನವಾಗಿ ಬಳಸಲಾಗುತ್ತಿತ್ತು. (ಎಂ.ಎಲ್.ಎಸ್)

**ಚರ್ಮ :** ಕಶೇರುಕಗಳಲ್ಲಿ ದೇಹದ ಹೊರಹೊದಿಕೆಯಾಗಿರುವ ಒಂದು ಅಂಗ (ಸ್ಕಿನ್). ಇದು ದೇಹದ ಒಳಭಾಗವನ್ನು ಹೊರಭಾಗದಿಂದ ಬೇರ್ಪಡಿಸುತ್ತದೆ. ದೇಹದ ನೀರುಲವಣಗಳು ಮತ್ತು ಇತರ ವಸ್ತುಗಳು ತಪ್ಪಿಸಿಕೊಂಡು ಹೊರಹೋಗದಂತೆಯೂ ಹೊರಗಿನಿಂದ ನೀರು, ರಾಸಾಯನಿಕಗಳು ಒಳನುಗ್ಗದಂತೆಯೂ ತಡೆದು ದೇಹದ ಒಳಭಾಗಕ್ಕೆ ರಕ್ಷಣೆ ಒದಗಿಸಲು ಇದು ಸಹಾಯಕ. ಬೆಳಕಿನ ವಿಕಿರಣಗಳ ಪೈಕಿ ?–ಕಿರಣಗಳನ್ನು ಒಳಹಾಯದಂತೆ ತಡೆಯುತ್ತದೆ. ಚರ್ಮ ಗಾಯಗೊಂಡ ಹೊರತು ರೋಗಾಣುಗಳು ಅದನ್ನು ಭೇದಿಸಿ ಒಳಹೊಗಲಾರವು. ಹೀಗೆ ಪ್ರತಿಕೂಲ ಪರಿಸರದ ವಿರುದ್ಧ ದೇಹಕ್ಕೆ ರಕ್ಷಣೆಯನ್ನು ಒದಗಿಸುವುದು ಚರ್ಮದ ಒಂದು ಪ್ರಧಾನಕ್ರಿಯೆ. ಪರವಸ್ತುಗಳೊಡನೆ ಘರ್ಷಿಸಿ ಆಗಬಹುದಾದ ಸಾಮಾನ್ಯ ಪೆಟ್ಟಿನಿಂದ ದೇಹದೊಳಗಿನ ಅಂಗಗಳು ಜರ್ಝರಿತವಾಗದಂತೆಯೂ ಚರ್ಮ ರಕ್ಷಿಸುತ್ತದೆ. ಪಂಚೇಂದ್ರಿಯಗಳ ಪೈಕಿ ಚರ್ಮ ಒಂದು. ಅದರಲ್ಲಿ ನೋವು, ಸ್ಪರ್ಶ, ಒತ್ತಡ, ಕಡಿತ, ಬಿಸಿ, ಶೈತ್ಯ–ಇವುಗಳ ಅರಿವನ್ನುಂಟುಮಾಡುವ ನರಗಳ ತುದಿಗಳು ಹೇರಳವಾಗಿವೆ. ಸಾಮಾನ್ಯವಾಗಿ ಭೂಚರಿಗಳೇ

ಆಗಿರುವ ಸ್ತನಿಗಳಲ್ಲಿ ಚರ್ಮ ದೇಹೋಷ್ಣತೆಯ ನಿಯಂತ್ರಣದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಸೂರ್ಯರಶ್ಮಿಯ ಅತಿನೇರಿಳೆ ಕಿರಣಗಳ ಸಹಾಯದಿಂದ ಚರ್ಮದಲ್ಲಿ ಜೀವಸತ್ತ್ವ D ಉತ್ಪತ್ತಿ ಆಗಿ ದೇಹಕ್ಕೆ ಒದಗುತ್ತದೆ. ಜೀವಿಯ ಚರ್ಮದ ಜೀವಕೋಶ ಮತ್ತು ಊತಕಗಳು ಅದರ ಅನುಬಂಧಿತಗಳಾದ ಸ್ವೇದಗ್ರಂಥಿ. ರೋಮತುಪ್ಪಳಗಳು ಮತ್ತು ಸ್ನೇಹಗ್ರಂಥಿಗಳೂ ನಿರಂತರವಾಗಿ ನಾಶವಾಗುತ್ತಲೂ ಪುನರುತ್ಪತ್ತಿಯಾಗುತ್ತಲೂ ಇರುತ್ತವೆ.

ಹೆಚ್ಚಿನ ವಿವರಗಳಿಗೆ ಈ ಮುಂದಿನ ಶೀರ್ಷಿಕೆಗಳನ್ನು ನೋಡಬಹುದು:

1. ಮಾನವ ಚರ್ಮದ ರಚನೆ
2. ಚರ್ಮದ ಅನುಬಂಧಗಳು
3. ಜ್ಞಾನೇಂದ್ರಿಯವಾಗಿ ಚರ್ಮದ ಕ್ರಿಯೆ
4. ಸ್ತನಿಗಳ ದೇಹೋಷ್ಣತೆಯ ನಿಯಂತ್ರಣದಲ್ಲಿ ಚರ್ಮದ ಪಾತ್ರ
5. ಚರ್ಮದ ಇತರ ಕ್ರಿಯೆಗಳು
6. ಚರ್ಮದ ರಸಾಯನವೃತ್ತಾಂತ

**1. ಮಾನವ ಚರ್ಮದ ರಚನೆ :** ಮಾನವರಲ್ಲಿ ಚರ್ಮ ಸುಮಾರು 2 ಮಿಮೀ. ದಪ್ಪವಿರುವ ಹೊದಿಕೆ. ಕಣ್ಣುರೆಪ್ಪೆ, ಶಿಶ್ನ ಮುಂತಾದ ಕಡೆಗಳಲ್ಲಿ ಇದು ಬಲು ತೆಳು. (1ಮಿಮೀ.ಗಿಂತ ಕಡಿಮೆ) ಮತ್ತು ಸೂಕ್ಷ್ಮವಾಗಿಯೂ ಅಂಗೈ, ಅಂಗಾಲು, ಬೆನ್ನು, ಉದರಗಳಲ್ಲಿ ದಪ್ಪ (3ಮಿಮೀ.ಗಿಂತ ಹೆಚ್ಚು) ಮತ್ತು ಒರಟಾಗಿಯೂ ಇದೆ. ಕೈಕಾಲುಗಳಲ್ಲಿ ಇದಕ್ಕೆ ವಿಶೇಷ ಪುಟಿತತೆ ಉಂಟು. ಅಲ್ಲಿ ಇದು ಮೃದು ಮತ್ತು ಬೇಕಾದ ರೀತಿ ಬಳುಕುವಂತಿರುವುದು. ಇದರ ಮೇಲೆ ವಿಶಿಷ್ಟವಾದ ಗೆರೆಗಳು ಇರುವುದು ಈ ಕಾರಣದಿಂದ. ಬೆರಳಿನಲ್ಲಿರುವ ಗೆರೆಗಳಿಗೆ ವೈಯಕ್ತಿಕ ವೈಶಿಷ್ಟ್ಯ ಇರುವುದರಿಂದ ಬೆರಳಚ್ಚಿನಿಂದ ವ್ಯಕ್ತಿಯ ಗುರುತು ಹಚ್ಚಲು ಇವು ಬಹುಮುಖ್ಯ ಸಾಧನಗಳು. ಚರ್ಮದಲ್ಲಿ ಎಲ್ಲ ಕಡೆಯೂ (ಸ್ವೇದಗ್ರಂಥಿಗಳ) ದ್ವಾರಗಳಾದ ಅತಿ ಸಣ್ಣರಂಧ್ರಗಳು ಕಂಡುಬರುತ್ತವೆ.

ಮಾನವಚರ್ಮದಲ್ಲಿ ಹೊರತ್ವಚೆ (ಎಪಿಡರ್ಮಿಸ್), ನಿಜತ್ವಚೆ (ಡರ್ಮಿಸ್) ಮತ್ತು ತ್ವಚದ ಅಡಿ ಊತಕ (ಸಬ್‌ಕ್ಯುಟೇನಿಯಸ್ ಟಿಷ್ಯೂ) ಎಂಬ ಮೂರು ಭಾಗಗಳನ್ನು ಗುರುತಿಸಬಹುದು:

**ಹೊರತ್ವಚೆ :** ಇದು ನಿಜತ್ವಚೆಯ ಹೊರಕವಚ. ನಿಜತ್ವಚೆಯ ಮೇಲಿರುವ ಉಬ್ಬು ತಗ್ಗುಗಳಿಂದ ಕೂಡಿದ ತಳಹದಿ ಪದರದ (ಬೇಸ್‌ಮೆಂಟ್ ಮೆಂಬ್ರೇನ್) ಮೇಲೆ ಅಳವಡಿಸಲ್ಪಟ್ಟ ಜೀವಕೋಶಗಳು ಏಳೆಂಟು ವರಸೆಗಳಿಂದ ಹೊರತ್ವಚೆ ರಚಿತವಾಗಿದೆ. ಹೀಗಾಗಿ ಹೊರತ್ವಚೆ ಅನೇಕ ಕಡೆ ಬೆರಳಿನಾಕಾರದ ಬೇರುಗಳಂತೆ ನಿಜತ್ವಚೆಯ ಒಳಹೊಕ್ಕಿರುವಂತೆಯೂ, ಇನ್ನು ಕೆಲವು ಕಡೆ ನಿಜತ್ವಚೆ ಹೊರತ್ವಚೆಯೊಳಕ್ಕೆ ಬೆರಳಿನ ಆಕಾರದಲ್ಲಿ ಚಾಚಿಕೊಂಡಿರುವಂತೆಯೂ ಕಾಣುವುದು. ತಳಹದಿಪದರ ನಿಜತ್ವಚೆಗೆ ಹೊರತ್ವಚೆಯನ್ನು ನಿಕಟವಾಗಿ ಅಂಟಿಸಿರುತ್ತದೆ. ಚರ್ಮದ ಸಕಲಕಾರ್ಯಗಳಲ್ಲಿ ಭಾಗವಹಿಸುವ ಬಿಡಿಭಾಗಗಳ ಹಾಗೂ ವಸ್ತುಗಳ ಅವಿಚ್ಛಿನ್ನ ಉತ್ಪಾದನೆ ಹೊರತ್ವಚೆಯ ಕೆಲಸ. ಇದರ ಅತ್ಯಂತ ಕೆಳವರಸೆಯ ಜೀವಕೋಶಗಳ ನಿರಂತರ ವಿಭಜನೆಯಿಂದ ಈ ಉತ್ಪಾದನೆ ಆಗುತ್ತದೆ. ಭ್ರೂಣದ ಬೆಳವಣಿಗೆಯ ಕಾಲದಲ್ಲಿ ಈ ಕೋಶಗಳು ಅದರ ಹೊರಪದರದಿಂದ (ಎಕ್ಟೋಡರ್ಮ್) ಲಭಿಸುತ್ತವೆ. ವಿಭಜನೆಯಿಂದ ಉತ್ಪನ್ನವಾದ ಜೀವಕೋಶಗಳು ತಮ್ಮ ಮೇಲಿನ ಜೀವಕೋಶಗಳನ್ನು ಹೊರಕ್ಕೆ ತಳ್ಳುತ್ತವೆ. ಆದ್ದರಿಂದ ಹೊರತ್ವಚೆಯ ಮೇಲುವರಸೆಗಳು ಹಳೆಯ ಜೀವಕೋಶಗಳಿಂದಾದವು; ಮತ್ತು ಅತ್ಯಂತ ಮೇಲು ವರಸೆಗಳು ಅತ್ಯಂತ ಹಳೆಯ ಜೀವಕೋಶಗಳ ಪ್ರತೀಕವಾದ ನಿರ್ಜೀವ ಹಾಗೂ ಗಡಸುಪದರ ಎಂದು ವ್ಯಕ್ತವಾಗುತ್ತದೆ. ಮೇಲೆ ಹೋದಂತೆಲ್ಲ ಜೀವಕೋಶಗಳಲ್ಲಿ ಕೆಲವು ವ್ಯತ್ಯಾಸಗಳು ಗಮನಾರ್ಹ. ಹೊರತ್ವಚೆಯಲ್ಲಿ ಇವನ್ನು ತೋರುವ ನಾಲ್ಕು ವರಸೆಗಳನ್ನು ನೋಡಬಹುದು. ಅಡಿಕೋಶಗಳ ಮೇಲಿನ ನಾಲ್ಕಾರು ಕೋಶ ದಪ್ಪದ ವರಸೆ ಮುಳ್ಳು ಜೀವಕೋಶಗಳ (ಪ್ರಿಕಲ್ ಸೆಲ್ಸ್) ವರಸೆ. ಈ ಕೋಶಗಳು ಒಂದಕ್ಕೊಂದು ಮುಳ್ಳುಗಳಿಂದ ಅಂಟಿಸಲ್ಪಟ್ಟಿರುವಂತೆ ಸೂಕ್ಷ್ಮದರ್ಶಕದಲ್ಲಿ ಕಂಡುಬರುವುದರಿಂದ ಇವಕ್ಕೆ ಆ ಹೆಸರುಂಟು. ಅಕ್ಕಪಕ್ಕದ ಜೀವಕೋಶಗಳ ಭಿತ್ತಿಯ ಮೇಲೆ ಗಂಟುಗಳಿರುವುದೂ ಇವು ಒಂದಕ್ಕೊಂದು ತಾಕಿ ಮುಳ್ಳಿನಂತೆ ಇರುವುದೂ ವ್ಯಕ್ತವಾಗುತ್ತದೆ; ಕೋಶದೊಳಗೆ ಗಂಟಿನಿಂದ ಗಂಟಿಗೆ ತಂತುಗಳು ಹರಿಯುತ್ತವೆ. ಮುಳ್ಳುಕೋಶಗಳ ಮೇಲಿರುವುದು 2–3 ಕೋಶ ದಪ್ಪವಾದ ಅಲ್ಪಸ್ವಲ್ಪ ಏರುತಗ್ಗುಗಳಿರುವ ಕಣಕೋಶಗಳ (ಗ್ರಾನ್ಯುಲರ್ ಸೆಲ್ಸ್) ವರಸೆ. ಕೋಶಗಳು ಸ್ವಲ್ಪ ಚಪ್ಪಟೆಯಾಗಿ ಇಲೇಯ್ಡಿನ್ ಎಂಬ ವಸ್ತುವಿನ ಸಣ್ಣಸಣ್ಣ ಕಣಗಳಿಂದ ತುಂಬಿವೆ. ಹಳೆಯದಾದಂತೆ ಇಲೇಯ್ಡಿನ್ ಕಿರಾಟೋಹೈಯಲಿನ್ ಆಗಿ ಕೊನೆಗೆ ಕಿರಾಟಿನ್ ಆಗಿ ಪರಿವರ್ತಿತವಾಗುತ್ತದೆ. ಈ ಘಟ್ಟಗಳೇ ಇನ್ನೂ ಹೊರಗಿನ ಎರಡು ವರಸೆಗಳಿಗೆ ಕಾರಣ. ಕಣಕೋಶಗಳ ಹೊರಗೆ ತಿಳಿಪದರ (ಸ್ಟೇಟಮ್ ಲ್ಯುಸಿಡಮ್) ಇದೆ. ಜೀವಕೋಶಗಳು ತಮ್ಮ ಜೈವಿಕಕ್ರಿಯೆಗಳನ್ನು ಕಳೆದುಕೊಂಡು ಅವುಗಳ ರಚನೆ ಹಾಗೂ ಕೇಂದ್ರಬಿಂದು ಅಸ್ಪಷ್ಟವಾಗುವುದರಿಂದ ಇವು ತಿಳಿಪದರವಾಗುತ್ತವೆ. ಇನ್ನೂ ಹಳೆಯವಾಗಿ ಇನ್ನಷ್ಟು ಹೊರಕ್ಕೆ ತಳ್ಳಲ್ಪಟ್ಟಾಗ ಕೋಶಗಳ ಜೀವ ಪೂರ್ಣ ನಾಶವಾಗಿ ಅವು ಕಿರಾಟಿನ್




**ಚಿತ್ರ 1. ಅಂಗಾಲಿನ ರೋಮರಹಿತ ಚರ್ಮದ ಕೊಯ್ತು : A. ಹೊರಗಿನ ಗಡಸುತಟ್ಟೆಗಳು, B. ತಿಳಿಪದರ, C. ಕಣ ಜೀವಕೋಶಗಳು, D. ಅಡಿಜೀವಕೋಶ ಮತ್ತು ಮುಳ್ಳುಜೀವಕೋಶ, E. ಸ್ವೇದಗ್ರಂಥಿನಾಳ, F. ಸ್ವೇದಗ್ರಂಥಿ; 1. ಹೊರತ್ವಚೆ, 2. ನಿಜತ್ವಚೆ**

ಅಡಕವಾಗಿರುವ ಗಡಸುತಟ್ಟೆಗಳಾಗಿ ಮ್ಯೂಕೊಪಾಲಿಸ್ಯಾಕರೈಡುಗಳಿಂದ ಒಂದಕ್ಕೊಂದು ಗಾರೆಹಾಕಿದಂತೆ ಅಂಟಿಕೊಂಡು ಒಂದರಮೇಲೊಂದು ಪೇರಿಸಲ್ಪಟ್ಟ ಪದರಗಳಾಗಿ ನಿರಂತರವಾಗಿ ಸುಲಿದೂ ಹೋಗುತ್ತಿರುತ್ತವೆ. ಕೆರೆದರೆ ಬರುವ ಹುರುಪೆ ಇದೇ. ಅಡಿಕೋಶದ ವಿಭಜನೆಯಿಂದ ಬಂದ ಹೊಸ ಕೋಶ ಹೊರಕ್ಕೆ ನೂಕಲ್ಪಡುತ್ತ ಸುಲಿದುಹೋಗುವುದಕ್ಕೆ ಸುಮಾರು ಒಂದು ತಿಂಗಳಾಗುತ್ತದೆ. ಸೋರೈಆಸಿಸ್(Psoriasis) ಮುಂತಾದ ಕೆಲವು ಚರ್ಮರೋಗಗಳಲ್ಲಿ ಈ ಕಾಲ ಬಲು ಕಡಿಮೆ ಆಗಿ ತೀವ್ರವಿಭಜನೆಯಿಂದ ಕೋಶಗಳು ಶೀಘ್ರವಾಗಿ ಹೊರದಬ್ಬಲ್ಪಟ್ಟು ಕೇಂದ್ರಬಿಂದುವಿರುವ ಕೋಶಗಳೇ ಸುಲಿದು ಹೋಗುವುವು. ಮಾರಕ ಪೆಂಫಿಗಸ್ ರೋಗದಲ್ಲಿ ಮುಳ್ಳುಕೋಶಗಳ ಕೂಡಿಕೆ ಕಡಿದುಹೋಗಿ ಕೋಶಕೋಶಗಳ ಸೇರ್ಪಡೆ ಇಲ್ಲದೆ ಬೊಬ್ಬೆಗಳೇಳುತ್ತವೆ.

ಚರ್ಮದ ನಿರಂತರ ಸುಲಿಯುವಿಕೆ ರೋಗಾಣುಗಳಿಗೆ ಚರ್ಮದ ಮೇಲೆ ನೆಲೆ ಸಿಕ್ಕದಂತೆ ಮಾಡುತ್ತದೆ. ಅಲ್ಲದೆ ಈ ಹೊದಿಕೆಯ ಕೇವಲ ನಿರ್ಜಲ ಸ್ವಭಾವ ಮತ್ತು ಇನ್ನೂ ಕೆಲವು ಅವ್ಯಕ್ತ ಕಾರಣಗಳು ಕೆಲವು ರೋಗಾಣುಗಳಿಗೆ ನಿರೋಧಕವಾಗಿವೆ. ಹೀಗೆ ಇದು ನಿರ್ಜೀವ ಪೊರೆಯಾಗಿದ್ದರೂ ದೇಹಕ್ಕೆ ಅವಶ್ಯ ರಕ್ಷಣೆಯನ್ನು ನೀಡುವ ಹೊದಿಕೆಯಾಗಿರುತ್ತದೆ. ಚರ್ಮ ದಪ್ಪವಾಗಿರುವ ಅಂಗೈ ಅಂಗಾಲುಗಳಲ್ಲಿ ಹೊರತ್ವಚೆಯ ಎಲ್ಲ ಪದರಗಳೂ ಹೆಚ್ಚು ದಪ್ಪವಾಗಿದ್ದರೂ (ಸುಮಾರು 1 ರಿಂದ $1\frac{1}{2}$ ಮಿ.ಮೀ.) ತಿಳಿಪದರ ಮತ್ತು ನಿರ್ಜೀವ ಹೊರಪದರ ಬಹು ದಪ್ಪವಾಗಿವೆ. ತುಟಿ, ಕಣ್ಣುರೆಪ್ಪೆ ಮುಂತಾದ ಕಡೆ ಇರುವ ಅತಿತೆಳುವಾದ ಹೊರತ್ವಚೆಯಲ್ಲಿ (ಸುಮಾರು 0.1ಮಿ.ಮೀ.) ತಿಳಿಪದರ ಪೂರ್ಣವಾಗಿ ಲೋಪವಾಗಿರಬಹುದು ; ನಿರ್ಜೀವ ಪದರ ಬಹು ತೆಳು.

ಹೊರತ್ವಚೆಯ ಕೋಶಗಳಲ್ಲಿರುವ ಹಳದಿಮಿಶ್ರಿತ ಕೆಂಪುಬಣ್ಣದ ಮೆಲನಿನ್ ಎಂಬ ವಸ್ತು ಚರ್ಮದ ಬಣ್ಣಕ್ಕೆ ಕಾರಣ. ಇದು ಅತಿ ಹೆಚ್ಚಾಗಿದ್ದರೆ ನೀಗ್ರೋಗಳಂತೆ ಕಪ್ಪುಬಣ್ಣವೂ ಅತಿ ಕಡಿಮೆಯಾಗಿದ್ದರೆ ಪಾಶ್ಚಾತ್ಯರಂತೆ ತಿಳಿವರ್ಣವೂ ಉಂಟಾಗುತ್ತವೆ. ಅಡಿಕೋಶಗಳ ನಡುವೆ ಅಲ್ಲಲ್ಲಿ ಇರುವ ಮೆಲನೊಸೈಟುಗಳೆಂಬ ಜೀವಕೋಶಗಳಿಂದ ಮೆಲನಿನ್

ಉತ್ಪತ್ತಿಯಾಗುತ್ತದೆ. ಈ ಜೀವಕೋಶಗಳು ಭ್ರೂಣದಲ್ಲಿ ನರದ ಉಬ್ಬೇಣಿನಿಂದ ಬೆಳೆದು ಭ್ರೂಣದ ಹೊರಪದರದ (ಎಕ್ಟೋಡರ್ಮ್) ಕೆಳಭಾಗಕ್ಕೆ ದಾರಿಮಾಡಿಕೊಂಡು ಹೊರತ್ವಚೆಯ ಅಡಿಕೋಶಗಳ ಮಧ್ಯೆ ಬೆಣೆಗಳಂತೆ ತೂರಿಕೊಳ್ಳುವುವಲ್ಲದೆ ಸುತ್ತಲೂ ಇರುವ ಅಡಿಕೋಶ ಮುಳ್ಳುಕೋಶಗಳ ನಡುವೆ ಅನೇಕ ಚಾಚುಗಳನ್ನು ಕೂಡ ಹೊಂದಿರುತ್ತವೆ. ಒಂದು ಚದರ ಮಿಲಿಮೀಟರಿನಲ್ಲಿ 1000–3000 ಮೆಲನೊಸೈಟುಗಳಿರುತ್ತವೆಂದು ಅಂದಾಜು. ಮೆಲನೊಸೈಟುಗಳಂತೆಯೇ ಕಾಣುವ ಲ್ಯಾಂಗರ್‌ಹ್ಯಾನ್ಸಿನ ಜೀವಕೋಶಗಳೂ ಅಲ್ಲಲ್ಲಿ ಇರುತ್ತವೆ. ಆದರೆ ಇವು ಮೆಲನಿನ್ನನ್ನು ಉತ್ಪತ್ತಿಮಾಡುವುದಿಲ್ಲ. ಡೋಪ ಎಂಬ ವಸ್ತುವಿನಿಂದ ವರ್ಣೀಕರಿಸಿದರೆ ಮೆಲನೊಸೈಟುಗಳು ಮಾತ್ರ ವರ್ಣವನ್ನು ತೆಗೆದುಕೊಳ್ಳುತ್ತವೆ. ಲ್ಯಾಂಗರ್‌ಹ್ಯಾನ್ಸಿನ ಜೀವಕೋಶಗಳಿಗೂ ಮೆಲನೊಸೈಟುಗಳಿಗೂ ಏನಾದರೂ ಸಂಬಂಧವಿದೆಯೇ ಎನ್ನುವುದು ತಿಳಿಯದು. ಮೆಲನೊಸೈಟುಗಳಲ್ಲಿರುವ ಟೈರೊಸಿನೇಸ್ ಎಂಬ ಎಂಜೈಮ್ (ಕಿಣ್ವ) ಟೈರೋಸಿನ್ ಎಂಬ ಅಮೈನೋ ಆಮ್ಲದ ಮೇಲೆ ಪ್ರಭಾವಕಾರಿಯಾದ್ದರಿಂದ ಆ ಕೋಶಗಳಲ್ಲಿ ಮೆಲನಿನ್ ಉತ್ಪತ್ತಿ ಆಗುತ್ತದೆ; ಹಾಗೂ ಅವುಗಳ ಚಾಚುಗಳ ಮೂಲಕ ಮುಳ್ಳುಕೋಶಗಳ ನಡುವೆಯೂ ಮುಳ್ಳುಕೋಶಗಳೊಳಗೂ ಮೆಲನಿನ್ ಕಣಗಳು ಶೇಖರವಾಗುತ್ತವೆ. ಕೋಶಗಳೊಳಗಿರುವ ಮೆಲನಿನ್ ಕಣಗಳು ಕೇಂದ್ರಬಿಂದುವಿನ ಸುತ್ತ ಕುಲಾವಿಯ ಆಕಾರದಲ್ಲಿ ನೆಲೆಸಿ ಸೂರ್ಯರಶ್ಮಿಯಲ್ಲಿನ ಅತಿನೇರಿಳೆ ಕಿರಣಗಳಿಂದ ಕೇಂದ್ರಬಿಂದುವನ್ನು ರಕ್ಷಿಸುತ್ತವೆ. ಹುಟ್ಟು ಬಿಳುಪು ಚರ್ಮವಿರುವ ಆಲ್ಬಿನೊಗಳೆಂಬ ಬಿಳಿಚುತನದ ರೋಗಿಗಳಲ್ಲಿ ಕ್ರೋಮೊಸೋಮುಗಳ ದೋಷದಿಂದ ಟೈರೊಸಿನೇಸ್ ಎಂಜೈಮ್ ಲೋಪವಾಗಿರುವುದರಿಂದ ಮೆಲನೊಸೈಟುಗಳಲ್ಲಿ ಮೆಲನಿನ್ ತಯಾರಾಗುವುದಿಲ್ಲ.

**ನಿಜತ್ವಚೆ :** ಹೊರತ್ವಚೆಯ ಒಳಭಾಗದಲ್ಲಿದೆ. ಅದಕ್ಕಿಂತಲೂ ಮಂದವಾಗಿದೆ. ಮತ್ತು ಕ್ರಮೇಣ ಇನ್ನೂ ಒಳಗಿರುವ ತ್ವಚೆಯ ಅಡಿ ಊತಕದೊಂದಿಗೆ ಮಿಲನವಾಗಿಹೋಗುತ್ತದೆ. ನಿಜತ್ವಚೆ ಬಂಧಿಸುವ ಊತಕದಿಂದಾಗಿದೆ ಮತ್ತು ಈ ಊತಕದ ನೆರವಿನಲ್ಲಿ ರಕ್ತನಾಳಗಳು, ದುಗ್ಧರಸನಾಳಗಳು ಮತ್ತು ನರಗಳು ಪಸರಿಸಿಕೊಳ್ಳಲೂ ಅಲ್ಪಸಂಖ್ಯಾತವಾದ ವಿಶಿಷ್ಟರೀತಿಯ ಜೀವಕೋಶಗಳು ಅಡಕವಾಗಿರಲೂ ಅನುವಾಗಿದೆ. ಮೇಲೆ ಹೇಳಿರುವಂತೆ ಹೊರತ್ವಚೆಯೊಳಗೆ ಹೊಕ್ಕಿರುವ ಬೆರಳಿನಾಕಾರದ ನಿಜತ್ವಚೆಯ ಚಾಚುಗಳಲ್ಲಿ ನಾಳಗಳ ಹಾಗೂ ನರಗಳ ಆದಿ ಅಂತ್ಯಗಳನ್ನು ನೋಡಬಹುದು. ಇಂಥ ಚಾಚುಗಳು 1ಮಿಮೀ. ಚದರದಲ್ಲಿ 40–140ರಷ್ಟಿರುತ್ತವೆ.

ಬಂಧಿಸುವ ಊತಕದಲ್ಲಿ ಮೂರು ರೀತಿಯ ಎಳೆಗಳು ಘನವೂ ಅಲ್ಲದ, ದ್ರವವೂ ಅಲ್ಲದ ಒಂದು ವಿಶೇಷ ಮಾಧ್ಯಮದಲ್ಲಿ ಹೆಣೆದುಕೊಂಡಿರುತ್ತವೆ. ಹೆಚ್ಚು ಸಂಖ್ಯೆಯಲ್ಲಿರುವ ಎಳೆಗಳು ಕೊಲಾಜೆನ್ ಎಂಬ ನಾರಿನಂತಿರುವ ಪ್ರೋಟೀನಿನಿಂದ ಆದವು. ಇವು ಬೆಳ್ಳಗಿದ್ದು ತಂತುಗಟ್ಟು, ಸ್ನಾಯುಹುರಿಗಳಲ್ಲಿ (ಲಿಗಮೆಂಟ್ ಮತ್ತು ಟೆಂಡನ್) ಅವುಗಳ ಒಣತೂಕದ 75ರಷ್ಟು ಕೊಲಾಜೆನ್ನಿನಿಂದ ಆಗಿರುತ್ತವೆ. ಕೊಲಾಜೆನ್ನಿನಲ್ಲಿ ಗ್ಲೈಸಿನ್, ಪ್ರೋಲಿನ್ ಮತ್ತು ಹೈಡ್ರಾಕ್ಸಿಪ್ರೋಲಿನುಗಳೆಂಬ ಅಮೈನೋ ಆಮ್ಲಗಳಿರುತ್ತವೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಇದರ ಅಣುಗಳು ಅತಿಲಂಬವಾಗಿಯೂ ಬಳ್ಳಿಯಂತೆ ಸುತ್ತಿಕೊಂಡೂ ನಿರ್ದಿಷ್ಟ ಸ್ಥಳಗಳಲ್ಲಿ ಅಡ್ಡಗೆರೆಗಳನ್ನುಳ್ಳದ್ದಾಗಿಯೂ ಕಂಡುಬರುತ್ತವೆ. ಕೊಲಾಜೆನ್ನಿನಿಂದಾದ ಈ ಬಿಳಿಹುರಿಗಳು ಎಳೆದರೆ ಉದ್ದವಾಗಲಾರವು. ಇವು ಅಗಾಧ ಎಳೆತವನ್ನು ತಡೆಯುವಷ್ಟು ಬಲವಾಗಿರುತ್ತವೆ. ಇಲಾಸ್ಟಿನ್ ಎಂಬ ಇನ್ನೊಂದು ರೀತಿಯ ಪ್ರೋಟೀನಿನಿಂದಾದ ಹಳದಿ ಎಳೆಗಳು ಹುರಿಮಾಡಲ್ಪಡದೆ ಎಳೆ ಎಳೆಯಾಗಿ ಇರುತ್ತವೆ. ಇಲಾಸ್ಟಿನ್ ಮಾಸಲು ಹಳದಿ ಬಣ್ಣವಾಗಿರುವುದರಿಂದ ಈ ಎಳೆಗಳಿಗೆ ಹಳದಿ ಎಳೆಗಳು ಎಂದೂ ಪುಟಿತತೆ ಇದ್ದು ಎಳೆದರೆ ಉದ್ದವಾಗಿ, ಬಿಟ್ಟರೆ ಪುನಃ ಮೊದಲಿನಂತಾಗುವಂತಿರುವುದರಿಂದ ಪುಟಿತ (ಇಲಾಸ್ಟಿಕ್) ಎಳೆಗಳೆಂದೂ ಹೆಸರುಂಟು. ಡೆಸ್ಮೋಸೀನ್ ಎಂಬ ಅಮೈನೋ ಆಮ್ಲ ಎಳೆಗಳ ಪುಟಿತತೆಗೆ ಕಾರಣ. ಮೂರನೆಯ ರೀತಿಯ ಎಳೆ ರೆಟಿಕ್ಯುಲಿನ್ ಎಂಬ ಪ್ರೋಟೀನಿನಿಂದಾದುದು. ಈ ಎಳೆಗಳು ಅತ್ಯಂತ ಸೂಕ್ಷ್ಮವಾಗಿದ್ದು, ಇವುಗಳ ನಿಕಟ ಹೆಣಿಗೆಯಿಂದ ಬಲೆಯ ಕಣ್ಣುಗಳಂತಾಗುವುದರಿಂದ ಇವುಗಳಿಗೆ ರೆಟಿಕ್ಯುಲರ್ ಎಳೆಗಳು, ಅಂದರೆ ಜಾಲಂಧ್ರ ಎಳೆಗಳು, ಎಂದು ಹೆಸರಾಗಿದೆ. ಇವಕ್ಕೆ ಬೆಳ್ಳಿಯ ಲವಣಗಳನ್ನು ಕೂಡುವ ಗುಣವಿರುವುದರಿಂದ ಆ ಲವಣಗಳನ್ನು ಉಪಯೋಗಿಸಿ ಬಣ್ಣಕೊಟ್ಟು ಇವನ್ನು ಸೂಕ್ಷ್ಮದರ್ಶಕದಲ್ಲಿ ನೋಡಬಹುದು. ಮಾಧ್ಯಮವಸ್ತು ಇದಕ್ಕೆ ಅಡಿಪಾಯದ ವಸ್ತು (ಗ್ರೌಂಡ್ ಸಬ್‌ಸ್ಟೆನ್ಸ್) ಎಂದೂ ಹೆಸರುಂಟು] ಮ್ಯೂಕೋಪಾಲಿಸ್ಯಾಕರೈಡುಗಳೆಂಬ ಜಾತಿಯ ರಾಸಾಯನಿಕಗಳಿಂದ ಆಗಿದೆ. ಇವುಗಳಲ್ಲಿ ಹಯಲ್ಯೂರೋನಿಕ್ ಆಮ್ಲ ಮತ್ತು ಡರ್ಮಟಿನ್ ಸಲ್ಫೇಟ್ ಎಂಬ ಎರಡು ರಾಸಾಯನಿಕಗಳು ಮುಖ್ಯ. ಚರ್ಮದೊಳಗೆ ಅಕಸ್ಮಾತ್ ಸೇರಿದ ಹೊರದ್ರವವಸ್ತು ಅಥವಾ ಅಣುಗಳು ಹರಡಿಕೊಳ್ಳದಂತೆ ಅದೇ ಸ್ಥಳಕ್ಕೆ ಸೀಮಿತಗೊಳಿಸುವುದು ಹಯಲ್ಯೂರೋನಿಕ್ ಆಮ್ಲದ ಕ್ರಿಯೆ.

ರಕ್ತನಾಳಗಳು : ನಿಜತ್ವಚೆಯಲ್ಲಿ ಬಹುರಕ್ತನಾಳಗಳಿವೆ. ಅಗತ್ಯಬಿದ್ದಾಗ ಅವುಗಳಲ್ಲಿರುವ ರಕ್ತ ದೇಹದ ಇತರ ಕಡೆಗಳಿಗೆ ಒದಗುವಂತಿದೆ. ಅಲ್ಲದೆ ಈ ರಕ್ತನಾಳಗಳು ದೇಹೋಷ್ಣತೆಯನ್ನು ನಿಯಂತ್ರಿಸುವುದರಲ್ಲಿ ಮುಖ್ಯಪಾತ್ರ ವಹಿಸುತ್ತವೆ. ಧಮನಿಗಳು ಮೂರು ಮಟ್ಟಗಳಲ್ಲಿ ಹೆಣಿಲುಗಳು. ಎಲ್ಲಕ್ಕಿಂತ ಆಳವಾದದ್ದು ತ್ವಚೆಯ ತಳ ಊತಕದಲ್ಲಿಯೂ ಮಧ್ಯದ ಹೆಣಿಲು ತಳಊತಕ ಮತ್ತು ನಿಜತ್ವಚೆಗಳು ಸೇರುವೆಡೆಯಲ್ಲಿಯೂ ಎಲ್ಲಕ್ಕಿಂತ ಮೇಲಿನದು ನಿಜತ್ವಚದ ಬೆರಳಿನಂತಿರುವ ಚಾಚುಗಳಲ್ಲಿಯೂ ಉಂಟು. ಧಮನಿಗಳಿಂದ ಭಿತ್ತಿಯಲ್ಲಿ ಅಧಿಕವಾಗಿ ಸ್ನಾಯುತಂತುಗಳನ್ನು ಹೊಂದಿರುವ ಕಿರುಧಮನಿಗಳೂ ಅವುಗಳಿಂದ ತೆಳುಭಿತ್ತಿಯ ಲೋಮನಾಳಗಳೂ ಕವಲುಗಳಾಗುತ್ತವೆ. ಲೋಮನಾಳಗಳ ಭಿತ್ತಿ ನೀರಿನಲ್ಲಿ ವಿಲೀನವಾಗುವ ಕಲಾಯ್ಡ್ ಅಲ್ಲದ ವಸ್ತುಗಳು ಒಳಗೂ ಹೊರಗೂ ತೂರಿಹೋಗುವಷ್ಟು ಜಾಳಾಗಿರುತ್ತವೆ. ಕಾಲು ಮತ್ತು ಕೈಗಳಲ್ಲಿ ಲೋಮನಾಳಗಳಿಗೂ ಸ್ವಾಭಾವಿಕವಾದ ಸಂಕುಚನ ಸಾಮರ್ಥ್ಯ, ಅವುಗಳಲ್ಲಿ ಸ್ನಾಯುಗಳಿಲ್ಲದಿದ್ದರೂ, ಇರುವುದು ಚೆನ್ನಾಗಿ ವ್ಯಕ್ತವಾಗುತ್ತದೆ. ಅಲ್ಲದೆ ಅನುವೇದನನರಗಳು (ಸಿಂಪಥೆಟಿಕ್ ನರಗಳು) ಕಿರು ಧಮನಿಗಳಿಗೆ ಪೂರೈಕೆ ಆಗುವುದರಿಂದ ಅವು ಅತಿಯಾಗಿಯೋ ಅಲ್ಪವಾಗಿಯೋ ಕುಗ್ಗುವಂತಿರುತ್ತವೆ. ಚಲಿಸುತ್ತಿರುವ ರಕ್ತದಲ್ಲಿರುವ ಅಥವಾ ಸ್ಥಳದಲ್ಲಿ ತಯಾರಾದ ರಾಸಾಯನಿಕ ವಸ್ತುಗಳು ರಕ್ತನಾಳಗಳನ್ನು ಹಿಗ್ಗಿಸಬಲ್ಲುವು ಅಥವಾ ಕುಗ್ಗಿಸಬಲ್ಲುವು. ಅಡ್ರಿನಲಿನ್ ಮತ್ತು ಪಿಟ್ರೆಸಿನುಗಳು ಕಿರುಧಮನಿಗಳನ್ನು ಕುಗ್ಗಿಸುತ್ತವೆ. ಹಿಸ್ಟಮಿನ್, ಕೈನಿನ್ ಮತ್ತು ಅಸಿಟೈಲ್ ಕೋಲಿನುಗಳು ಕಿರುಧಮನಿಗಳನ್ನು ಹಿಗ್ಗಿಸುತ್ತವೆ. ಶೈತ್ಯ ಕುಗ್ಗಿಸುತ್ತದೆ. ಸಾಧಾರಣ ಪೆಟ್ಟು ಚರ್ಮದಲ್ಲಿ ದ್ರವ ತುಂಬಿದ ಹೊಪ್ಪಳೆಯನ್ನು ಏಳಿಸುತ್ತದೆ. ಇದು ಮೂರು ಮಟ್ಟಗಳಲ್ಲಿ ಕಂಡುಬರುವ ಪ್ರತಿಕ್ರಿಯೆ ಎಂದು ಮೊತ್ತಮೊದಲಿಗೆ ತೋರಿಸಿದಾತ ಲೆವಿಸ್. ಇದರಿಂದ ಈ ಪ್ರತಿಕ್ರಿಯೆಗೆ ಲೆವಿಸನ ತ್ರಿವಳಿಪ್ರತಿಕ್ರಿಯೆ (ಟ್ರಿಪಲ್ ರೆಸ್ಪಾನ್ಸ್ ಆಫ್ ಲೆವಿಸ್) ಎಂದು ಹೆಸರಿದೆ. ಮೊದಲು ಪೆಟ್ಟು ತಾಕಿದೆಡೆಯಲ್ಲಿ ಲೋಮನಾಳಗಳು ಹಿಗ್ಗಿ ಪೆಟ್ಟಿನ ಆಕಾರದ ಕೆಂಪುಗೀರು ಕಾಣುತ್ತದೆ. ಒಂದೆರಡು ನಿಮಿಷಗಳಲ್ಲಿ ಸುತ್ತಣ ಚರ್ಮದಲ್ಲಿ ನರಗಳ ಪ್ರತಿಕ್ರಿಯೆಯ ಮೂಲಕ ಆ ಸ್ಥಳದ ಧಮನಿ ಹಿಗ್ಗುವುದರಿಂದ ಸುತ್ತಲೂ ಕೆಂಪಾದ ಬಾಸುಂಡೆ ಏಳುತ್ತದೆ. ಈ ಪ್ರತಿಕ್ರಿಯೆಗೆ ಸ್ಥಳೀಯ ನರಗಳ ಅಖಂಡತೆ ಇರಬೇಕು. ಸುಮಾರು ಹತ್ತು ಮಿನಿಟುಗಳ ಬಳಿಕ ಮೂರನೆಯ ಪ್ರತಿಕ್ರಿಯೆ–ಕೆಂಪುಗೆರೆ ಕಂಡ ಎಡೆಯಲ್ಲಿ ಹಿಸ್ಟಮಿನ್ ಬಿಡುಗಡೆಯಿಂದ ಹಿಗ್ಗಿದ ಲೋಮನಾಳಗಳ ಮೂಲಕ ದ್ರವಸ್ರಾವ–ಆಗಿ ಅಲ್ಲಿ ಚರ್ಮದಲ್ಲಿ ನೀರುತುಂಬಿದ ದದ್ದು ಏಳುವುದು.

ಅಪಧಮನಿಗಳಿಂದ ಅಭಿಧಮನಿಗಳಿಗೆ ರಕ್ತವು ಲೋಮನಾಳಗಳ ಮೂಲಕವೇ ಅಲ್ಲದೆ ನೇರವಾಗಿ ಅಪಧಮನಿ ಅಬಿಧಮನಿಗಳನ್ನು ಜಂಟಿಸುವ ನಾಳಗಳ ಮೂಲಕವೂ ಕೆಲವು ಕಡೆ ಹರಿಯುತ್ತದೆ. ಈ ನಾಳಗಳ ಬಲವಾದ ಸ್ನಾಯು ಸಡಿಲಗೊಂಡಾಗ ರಕ್ತ ಅಪಧಮನಿಯಿಂದ ನೇರವಾಗಿ ಅಭಿಧಮನಿಗೆ ಹರಿಯುವುದರಿಂದ ಉಷ್ಣತೆಯನ್ನು ಕಾಪಾಡಬಹುದು. ನಿಜತ್ವಚೆಯ ಚಾಚುಗಳಲ್ಲಿಯೂ ಬಂಧಿಸುವ ಊತಕದಲ್ಲಿಯೂ ದುಗ್ಧರಸದ ಸೂಕ್ಷ್ಮನಾಳಗಳು ಪ್ರಾರಂಭವಾಗಿ ಅನಂತರ ರಕ್ತನಾಳಗಳ ಜೊತೆಯಲ್ಲೇ ಕ್ರಮಿಸುತ್ತವೆ.

**ನರಗಳು :** ಬಿಳಿ ಮತ್ತು ಬೂದುಬಣ್ಣದ ಎರಡು ಬಗೆಯ ನರಗಳೂ ಚರ್ಮದಲ್ಲಿವೆ. ರಕ್ತನಾಳಗಳಿಗೆ ಮತ್ತು ಸ್ವೇದಗ್ರಂಥಿಗಳಿಗೆ ಬೂದುಬಣ್ಣದ ಕ್ರಿಯಾವಾಹಿ ನರಗಳು ಪೂರೈಕೆ ಆಗುತ್ತವೆ. ಮಿಕ್ಕೆಲ್ಲವೂ ಬಿಳಿಯ ಜ್ಞಾನವಾಹಿ ನರಗಳೇ. ಇವು ಹೊರತ್ವಚೆಯ ಕೆಳಗೆ ಹೆಣಿಗೆಗೊಂಡಿವೆ. ಹೆಣಿಲಿನಿಂದ ಹೊರತ್ವಚೆಗೂ ನಿಜತ್ವಚೆಗೂ ನರಪೂರೈಕೆಯಾಗುತ್ತದೆ. ಅವುಗಳ ಕೊನೆಗಳು–ವಾಸ್ತವವಾಗಿ ಇವು ಜ್ಞಾನವಾಹಿ ನರಗಳಾದ್ದರಿಂದ ಇವನ್ನು ಪ್ರಾರಂಭವೆಂದು ಹೇಳಬೇಕು–ಬಿಳಿ ಹೊದಿಕೆಯನ್ನು ಕಳೆದುಕೊಂಡು ಬೂದುಬಣ್ಣದವಾಗಿರುತ್ತವೆ. ಈ ಕೊನೆಗಳಲ್ಲಿ ಕೆಲವು ತಟ್ಟೆಗಳ ಆಕಾರವಾಗಿ ಹೊರತ್ವಚೆಯ ಜೀವಕೋಶಗಳ ನಡುವೆಯೂ ನಿಜತ್ವಚೆಯಲ್ಲಿಯೂ ಇವೆ. ಇವಕ್ಕೆ ಮೆರ್ಕೆಲನ ತಟ್ಟೆಗಳು ಎಂದು ಹೆಸರು. ಇನ್ನು ಕೆಲವು ಮೀಸ್ನರನ ಕಣಗಳು ಎನ್ನಿಸಿಕೊಂಡು ನಿಜತ್ವಚೆಯ ಚಾಚುಗಳಲ್ಲಿ ಇವೆ. ಕೈಬೆರಳುಗಳಲ್ಲಿ ಇವು ವಿಶೇಷವಾಗಿವೆ. ಇವೆರಡೂ ಸ್ಪರ್ಶಜ್ಞಾನಕ್ಕೆ ಕಾರಣವೆಂದು ನಂಬಲಾಗಿದೆ. ಕೆಲವು ನರತಂತುಗಳು ಕೋಶಗಳ ನಡುವೆ ಹಾಗೂ ಬಂಧಿಸುವ ಊತಕದಲ್ಲಿ ನಗ್ನವಾಗಿವೆ. ಇವು ನೋವಿನ ಅರಿವನ್ನು ಉಂಟುಮಾಡುವುವೆಂದು ನಂಬಲಾಗಿದೆ. ಮಿಕ್ಕ ನರತಂತುಗಳು ಪೆಸಿನಿಕಣಗಳು, ಕೌಸನ ಕೊನೆಬುಡ್ಡೆಗಳು, ರೂಫಿನಿಯ ನರಾಂತ್ಯಾಂಗಗಳು ಎಂಬ ವಿಶಿಷ್ಟ ರಚನೆಗೊಂಡ ಕೊನೆಗಳು. ಇವು ಅನುಕ್ರಮವಾಗಿ ಒತ್ತಡ, ಶೈತ್ಯ, ಉಷ್ಣಗಳ ಅರಿವನ್ನು ಉಂಟುಮಾಡುವುವೆಂಬ ನಂಬಿಕೆ. ಉಷ್ಣ ಶೈತ್ಯ, ನೋವು ಸ್ಪರ್ಶಗಳ ಅರಿವೇ ಅಲ್ಲದೆ ತುರಿಕೆ ಅಥವಾ ಕಡಿತ, ತಿನಿಸು ಇದೂ ಒಂದು ಸ್ಪಷ್ಟ ಅರಿವು ಎನ್ನುವುದಕ್ಕೆ ತಕ್ಕಷ್ಟು ಕಾರಣ ಉಂಟು. ಟ್ರಿಪ್ಸಿನ್, ಪ್ಯಾಂಕ್ರಿಯಾಟಿನ್ ಮುಂತಾದ ಎಂಡೋಪೆಪ್ಟಿಡೇಸ್ ಎಂಬ ಗುಂಪಿಗೆ ಸೇರಿದ ಎಂಜೈಮುಗಳು ಹೊರತ್ವಚೆಯನ್ನು

ಸೇರಿದರೆ ತುರಿಕೆ ಉಂಟಾಗುವುದು. ನಸುಗುನ್ನಿ ಗಿಡದಲ್ಲಿರುವ ಮ್ಯುಕಾನಿನ್ ಎಂಬ ವಸ್ತುವೂ ಕಡಿತವನ್ನು ಉಂಟುಮಾಡುತ್ತದೆ. ಶಿಲೀಂಧ್ರಗಳ ಎಂಜೈಮುಗಳು ಹುಳುಕಡ್ಡಿ, ಇಸಬು ಇತ್ಯಾದಿ ಚರ್ಮರೋಗಗಳ ತುರಿಕೆಗೆ ಕಾರಣ. ಹಿಸ್ಟಮಿನ್, ಅಸಿಟೈಲ್ ಕೋಲಿನ್ ಇವುಗಳೂ ತುರಿಕೆಯನ್ನು ಉಂಟುಮಾಡುತ್ತವೆ. ಆದರೆ ಇವು ದದ್ದನ್ನೂ ಉಂಟುಮಾಡುವುವು. ತುರಿಕೆಗೂ ದದ್ದಿಗೂ ಇರಬಹುದಾದ ಸಂಬಂಧ ತಿಳಿದಿಲ್ಲ.

ಜೀವಕೋಶಗಳು : ನಿಜತ್ವಚೆಯಲ್ಲಿ ಅನೇಕ ಬಗೆಯ ಜೀವಕೋಶಗಳು ವಿರಳವಾಗಿ ಇವೆ. ಇವುಗಳಲ್ಲಿ ಬಹುಪಾಲು ತಂತುಜನಕ ಕೋಶಗಳು. ಇವುಗಳಿಗೆ ಬಿಳಿಯ ಅಥವಾ ಕೊಲಾಜೆನ್ ಎಳೆಗಳೊಡನೆ ನಿಕಟಸಂಬಂಧ ಉಂಟು. ಬಹುಶಃ ತಂತುಗಳಿಗೆ ಬೇಕಾದ ವಿಶಿಷ್ಟ ಪ್ರೋಟೀನುಗಳೂ ಮಾಧ್ಯಮ ವಸ್ತುವೂ ಇವುಗಳ ಚಟುವಟಿಕೆಯಿಂದಲೇ ಒದಗುತ್ತವೆಂದು ಕಾಣಿಸುತ್ತದೆ. ಮಾಸ್ಟ್ ಕೋಶಗಳಲ್ಲಿ ರವೆಯಂಥ ಕಣಗಳಿವೆ. ಇವು ಹೊರಬಂದಾಗ ಹಿಸ್ಟಮಿನ್ ಮತ್ತು ಹೆಪಾರಿನ್ ಆಗುತ್ತವೆ. ರಕ್ತಕಣಗಳಾದ ಮಾನೋಸೈಟ್, ಲಿಂಫೋಸೈಟ್ ಮತ್ತು ಪಾಲಿಮಾರ್ಫುಗಳೂ ನಿಜತ್ವಚೆಯ ಮಧ್ಯವಸ್ತುವಿನಲ್ಲಿ ಅಡಗಿರುತ್ತವೆ. ಇವಲ್ಲದೆ ಹಿಸ್ಟಿಯೋಸೈಟ್ ಮತ್ತು ಪ್ಲಾಸ್ಮಾ ಕೋಶಗಳೆಂಬವೂ ಇವೆ. ಈ ಕೋಶಗಳು ವಿಷಾಣುಗಳ ಸೋಂಕಿನ ವಿರುದ್ಧ ಹಾಗೂ ರೋಗನಿಗ್ರಹ ಕಾರ್ಯದಲ್ಲಿ ತೊಡಗಿರುವುವು.




**ಚಿತ್ರ 2. ನೆತ್ತಿಚರ್ಮದ ನೇರಕೊಯ್ತು : A. ಸ್ನೇಹಗ್ರಂಥಿ, B. ರೋಮಕೂಪದ ಸ್ನಾಯು, C. ಸ್ವೇದ ಗ್ರಂಥಿ, D. ರೋಮದ ಕೊನೆ ಬುಡ್ಡೆ ಮತ್ತು ಮಾತೃಕೆ**

ಸ್ವೇದಗ್ರಂಥಿಗಳು (ಬೆವರುಗ್ರಂಥಿಗಳು) : ಈ ಗ್ರಂಥಿಗಳಲ್ಲಿ ಸ್ರವಿಸುವ ಭಾಗ ಮತ್ತು ವಾಹಕಭಾಗ (ನಾಳ)ಇವೆ. ಸ್ರವಿಸುವ ಭಾಗ ಒಂದೇ ವರಸೆಯ ಲಂಬಕೋಶ (ಕಾಲಮ್ನರ್ ಸೆಲ್ಸ್) ಸುರುಳಿ ಸುತ್ತಿದ ಕೊಳವೆ. ಇದರ ಸುತ್ತ ಅನೈಚ್ಛಿಕಸ್ನಾಯುಗಳೂ ಅವುಗಳ ಸುತ್ತ ತೆಳುವಾದ ತಂತುಗಳೂ ಬುಟ್ಟಿಯಂತೆ ಆವರಿಸಿವೆ. ಇದಕ್ಕೆ ಧಾರಾಳ ರಕ್ತಪೋಷಣೆ ಉಂಟು. ಸ್ವೇದಗ್ರಂಥಿಯ ನಾಳ ಇಷ್ಟೇ ಗಾತ್ರದ ಕೊಳವೆ ಆದರೂ ಎರಡು ಮೂರು ಕೋಶಗಳ ವರಸೆಯಿಂದಾದ ಭಿತ್ತಿಯುಳ್ಳದ್ದಾಗಿರುವುದರಿಂದ ಇದರ ರಂಧ್ರ ಬಹು ಕಿರಿದು. ಈ ನಾಳ ನಿಡುಸುರುಳಿಯಾಗಿ ಹೊರತ್ವಚೆದೆಡೆ ನೇರ ಸಾಗಿ ಅದರ ಚಾಚಿನ ತುದಿಯಲ್ಲಿ ಕೊನೆಗೊಳ್ಳುವುದು. ಅಲ್ಲಿಂದ ಮೇಲೆ ಹೊರತ್ವಚೆಯ ಕೋಶಗಳ ನಡುವೆ ಹಾಯುವ ಸ್ಕ್ರೂ ಆಕಾರದ ಸಂದಾಗಿ ಚರ್ಮದ ಮೇಲ್ಮೈಯಲ್ಲಿ ಒಂದು ರಂಧ್ರವಾಗಿ ಕೊನೆಗೊಳ್ಳುತ್ತದೆ. ಗ್ರಂಥಿಯೂ ಅದರ ನಾಳವೂ ಹೊರತ್ವಚೆಯಿಂದ ಇಳಿಬಿದ್ದ ಬೆಳೆತಗಳು. ಗೋಚರ ಮತ್ತು ಅಗೋಚರವಾಗಿ ದಿವಸದ 24 ಗಂಟೆಗಳಲ್ಲಿ ಸುಮಾರು 600ಮಿ.ಲೀ. ನೀರು ಚರ್ಮದ ಮೂಲಕ ವಿಸರ್ಜಿತವಾಗುತ್ತದೆ. ಇದರಲ್ಲಿ 80% ಅಗೋಚರವಾಗಿ ಸ್ವೇದಗ್ರಂಥಿಯ ರಂಧ್ರಗಳ ಹಾಗೂ ಹೊರತ್ವಚೆಯ ಮೂಲಕ ಆವಿಯಾಗಿ ಕಳೆಯುವ ನೀರು. ಇದು ಸ್ವೇದಗ್ರಂಥಿಗಳಿಂದ ಉತ್ಪತ್ತಿಯಾಗುವ ಸ್ರಾವವಲ್ಲ. ಇದರ ಪ್ರಮಾಣ ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಹೆಚ್ಚು ವ್ಯತ್ಯಾಸವನ್ನು ತೋರಿಸುವುದಿಲ್ಲ. ಸ್ವೇದಗ್ರಂಥಿಗಳ ಚಟುವಟಿಕೆಯಿಂದ ಉತ್ಪತ್ತಿಯಾಗಿ ಮೈಮೇಲೆ ಕಾಣಿಸಿಕೊಳ್ಳುವ ದ್ರವ ಬೆವರು. ಇದು ಮೇಲ್ಮೈಯಿಂದ ಬಾಷ್ಪೀಭವಿಸಿ ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಗೋಚರ ಬೆವರಿನ ಪರಿಮಾಣ ಸ್ವೇದಗ್ರಂಥಿಗಳಿಗೆ ಪೂರೈಕೆ ಆಗುವ ಅನುವೇದನೆ ನರಗಳ ಪ್ರೇರಣೆಯಿಂದ ನಿಯಂತ್ರಿಸಲ್ಪಡುತ್ತದೆ. ದೇಹದ ಉಷ್ಣತೆ ಹೆಚ್ಚಾದ ಸಂದರ್ಭಗಳಲ್ಲಿ ಅದನ್ನು ಸಹಜಸ್ಥಿತಿಗೆ ಇಳಿಸಲು ಇಂಥ ನರಪ್ರೇರಣೆಯಿಂದ ಉಂಟಾದ ಬೆವರು ಆವಿಯಾಗಿ ಹೋಗುವುದರಿಂದ ಸಾಧ್ಯವಾಗುತ್ತದೆ. ಸ್ವೇದಗ್ರಂಥಿಯ ನರಗಳು ಅನುವೇದನ ನರಗಳಾದರೂ ಅವುಗಳ ರಾಸಾಯನಿಕ ನಡುವರ್ತಿ ಅಸಿಟೈಲ್ ಕೋಲಿನ್. ಬೆವರು ಬಣ್ಣವಿಲ್ಲದ ಒಂದು ದ್ರವ. ಅದರಲ್ಲಿ ಭಾಗ ಶೇ. 99% ಭಾಗ ನೀರು. ಅಲ್ಪಸ್ವಲ್ಪ ಉಪ್ಪು, ಅಮೋನಿಯ, ಯೂರಿಯ, ಯೂರಿಕ್ ಆಮ್ಲ, ಕೊಬ್ಬುಗಳೂ ಇದರಲ್ಲಿ ಇವೆ. ಗುದ, ಹೊರ ಪ್ರಜನನಾಂಗಗಳ ದ್ವಾರ, ಕಂಕುಳು, ಸ್ತನಾಗ್ರ ಇವುಗಳ ಸುತ್ತ ವಿಶೇಷ ತೆರನಾದ ಸ್ವೇದ ಗ್ರಂಥಿಗಳಿವೆ. ಇವಕ್ಕೆ ಅಪೋಕ್ರೈನ್ ಗ್ರಂಥಿಗಳೆಂದು ಹೆಸರು. ಕೋಶಗಳ ಭಾಗಗಳೇ ಕಳಚಿ ದ್ರವವಾಗಿ ಸ್ರವಿಸಲ್ಪಡುವುದು ಇವುಗಳ ವಿಶೇಷ. ಈ ಗ್ರಂಥಿಗಳು ಸಾಮಾನ್ಯ ಸ್ವೇದಗ್ರಂಥಿಗಳಿಗಿಂತ ದೊಡ್ಡವು. ಬಿಳಿಯ ಜನರಿಗಿಂತ ಕಪ್ಪು ಜನರಲ್ಲಿ ಇವುಗಳ ಸಂಖ್ಯೆ ಹೆಚ್ಚು. ಅಲ್ಲದೆ ಹೆಂಗಸರಲ್ಲಿ ಗಂಡಸರಿಗಿಂತ ಹೆಚ್ಚಾಗಿದ್ದು ಅಧಿಕವಾಗಿ ಸ್ರವಿಸುತ್ತವೆ. ಗರ್ಭಿಣಿಯರಲ್ಲಿ ಮತ್ತು ಬಹಿಷ್ಠೆಯಾಗಿರುವವರಲ್ಲಿ ಸ್ರಾವ ಇನ್ನೂ ಅಧಿಕ. ಇವುಗಳ ಸ್ರಾವ ಅತಿ ನೀರಾಗಿರುವ ಹಾಲಿನಂತೆ. ಈ ವ್ಯಕ್ತಿಯಲ್ಲಿ ಸ್ವಾಭಾವಿಕವಾಗಿರುವ ಏಕಾಣುಗಳಿಂದ ಮಾರ್ಪಟ್ಟು ಒಂದೊಂದು ವ್ಯಕ್ತಿಯಲ್ಲೂ ಬಹುಶಃ ಒಂದೊಂದು ಜನಾಂಗದಲ್ಲೂ ವಿಶಿಷ್ಟವಾದ ಶಾರೀರಿಕಗಂಧ ಇದಾಗುತ್ತದೆ. ಮಾನವರಲ್ಲಿ ಮತ್ತು ಇತರ ಕೆಲವು ಪ್ರಾಣಿಗಳಲ್ಲಿ ಈ ಗಂಧದಲ್ಲಿ ಲೈಂಗಿಕ ಪ್ರಚೋದಕ ಪ್ರಭಾವವಿರುವುದೂ ಲೈಂಗಿಕ ಕಾರ್ಯಾಚರಣೆಯ ಉನ್ನತಿಯಲ್ಲಿ ಈ ಗ್ರಂಥಿಗಳ ಸ್ರಾವವಾಗುವುದೂ ತಿಳಿದುಬಂದಿದೆ. ಆದರೆ ಇವುಗಳ ಕಾರ್ಯಕಾರಣಸಂಬಂಧ ನಿಷ್ಕೃಷ್ಟವಾಗಿ ತಿಳಿದಿಲ್ಲ. ಸ್ತನಗಳು ವಿಶೇಷ ರೀತಿಯ ಅಪೋಕ್ರೈನ್ ಗ್ರಂಥಿಗಳು.

ನಿಜತ್ವಚೆಯ ಅಡಿ ಊತಕ : ಇದು ಚರ್ಮಕ್ಕೂ ಅದರ ಕೆಳಗಡೆ ಇರುವ ಕೊಬ್ಬಿಗೂ ನಡುವೆ ಇರುವ ವಲಯ. ನಿಜತ್ವಚೆಯ ಬಂಧಿಸುವ ಊತಕ ಇನ್ನೊಂದು ರೀತಿಯ ಕೊಬ್ಬುಶೇಖರಣೆ ಆಗಬಲ್ಲ ಊತಕವಾಗಿ ಕ್ರಮೇಣ ಪರಿವರ್ತನೆ ಆಗುವುದು ಈ ವಲಯದಲ್ಲಿ ಕಾಣಬರುತ್ತದೆ. ಆದ್ದರಿಂದ ನಾರೆಳೆಕೋಶಗಳೂ ಕೊಬ್ಬಿನ ಕೋಶಗಳೂ ಕಂಡುಬರುತ್ತವೆ. ದೊಡ್ಡವಾಗಿರುವ ಸ್ವೇದಗ್ರಂಥಿಗಳ ಸ್ರಾವಕಭಾಗವೂ ಕೆಲವು ರೋಮಕೂಪಗಳೂ ಅಡಿಊತಕದಲ್ಲಿವೆ.

ಚರ್ಮದಲ್ಲಿನ ವ್ಯತ್ಯಾಸಗಳು : ಸ್ತನಿಗಳ ಚರ್ಮದಲ್ಲಿರುವ ಕೆಲವು ವಿಶೇಷಗಳು ಮಾನವರಲ್ಲಿಲ್ಲ. ಅನೇಕ ಚತುಷ್ಪಾದಿಗಳಲ್ಲಿ ಚರ್ಮದ ಅಡಿ–ಮುಖ್ಯವಾಗಿ ಮುಂಡಭಾಗದಲ್ಲಿ–ಒಂದು ತೆಳುವಾದ ಅನೈಚ್ಛಿಕಸ್ನಾಯು ವ್ಯಾಪಕವಾಗಿ ಉಂಟು. ಇದರಿಂದ ಚರ್ಮವನ್ನು ಸ್ಥಳೀಯವಾಗಿ ನಡುಗಿಸಬಲ್ಲ ಸೌಕರ್ಯವಿರುತ್ತದೆ. ಕೀಟಗಳ ಉಪದ್ರವವನ್ನು ನಿವಾರಿಸಲು ಅನುಕೂಲವಾಗುವ ಈ ರಚನೆ ಮಾನವನಲ್ಲಿ ಅನಾವಶ್ಯಕವಾದ್ದರಿಂದ ವಿಕಾಸದ ಯಾವುದೋ ಹಂತದಲ್ಲಿ ಅಳಿದುಹೋಗಿ ಕುತ್ತಿಗೆಯಲ್ಲಿ ಮಾತ್ರ ಇರುವ ಒಂದು ಅವಶೇಷವಾಗಿದೆ. ಮಿಕ್ಕ ಸ್ತನಿಗಳಲ್ಲಿ ಮೈಮೇಲೆಲ್ಲ ರೋಮಗಳಿದ್ದು ದೇಹೋಷ್ಣತೆಯನ್ನು ಕಾಪಾಡಲೂ ಮಳೆಯಲ್ಲಿ ತೊಯ್ದಾಗ ಮೈಮೇಲೆ ಬಿದ್ದ ನೀರು ಸುಲಭವಾಗಿ ಹರಿದುಹೋಗುವಂತೆ ಮಾಡಲೂ ಇರುವ ಅನುಕೂಲತೆ ಮಾನವನಲ್ಲಿ ಉಡುವ ಬಟ್ಟೆ ವಗೈರೆಗಳಿಂದ ಅನಾವಶ್ಯಕವಾಗಿ ಮೈ ಕೂದಲು ಮಿತವಾಗಿದೆ. ಸದಾ ನೀರಿನಲ್ಲಿರುವ ತಿಮಿಂಗಲ ಇತ್ಯಾದಿ ಸ್ತನಿಗಳಲ್ಲೂ ಇದೇ ರೀತಿ ಕೂದಲು ಮಿತಿಗೊಂಡಿರುವುದನ್ನು ನೋಡಬಹುದು. ಆನೆ, ಘೇಂಡಾಮೃಗ, ಕಾಡುಹಂದಿ ಮುಂತಾದವುಗಳಲ್ಲಿ ಚರ್ಮ ಬಹು ಮಂದವಾಗಿಯೂ ಒರಟಾಗಿಯೂ ಇದ್ದು ಈ ಪ್ರಾಣಿಗಳು ಕಾಡಿನ ಮುಳ್ಳುಪೊದೆಗಳ ನಡುವೆ ನೋವಿನಿಂದ ಬಾಧಿತವಾಗದಂತೆ ಓಡಾಡಬಹುದಾಗಿದೆ. ಆರ್ಮಡಿಲೊದಲ್ಲಿ (ಚಿಪ್ಪು ಹಂದಿ) ಚರ್ಮದ ಹೊರಗೆ ಮೂಳೆಗಳಿಂದಾದ ಕವಚ ಉಂಟು.

ಪಕ್ಷಿಗಳಲ್ಲಿ ಚರ್ಮ ಶುಷ್ಕ ಮತ್ತು ತೆಳುವಾಗಿ ಉಂಟು. ಸ್ತನಿಗಳಲ್ಲಿ ವಿಶಿಷ್ಟ ಲಕ್ಷಣವಾಗಿ ಮೈಮೇಲೆ ಎಲ್ಲಿಯೋ ಒಂದು ಚೂರು ಭಾಗದಲ್ಲಿಯಾದರೂ ಕೂದಲು ಇರುವಂತೆ ಪಕ್ಷಿಗಳಲ್ಲಿ ರೆಕ್ಕೆಪುಕ್ಕಗಳು ಇದ್ದೇ ಇರುತ್ತವೆ. ಸರೀಸೃಪಗಳು ಮತ್ತು ಅವುಗಳಿಗಿಂತ ವಿಕಾಸದಲ್ಲಿ ಕೆಳಮಟ್ಟದ ಕಶೇರುಕಗಳು ಎಲ್ಲವೂ ಒಂದೇ ಮಟ್ಟದ ದೇಹೋಷ್ಣತೆ ಉಳ್ಳವಲ್ಲ. ಅವುಗಳ ದೇಹೋಷ್ಣತೆ ಬಾಹ್ಯಾವರಣದ ಉಷ್ಣತೆಯನ್ನು ಅನುಸರಿಸುವುದರಿಂದ ದೇಹೋಷ್ಣತೆಯ ನಿಯಂತ್ರಣಕ್ಕಾಗಿ ಮಾನವರ ಚರ್ಮದಲ್ಲಿ ಇರುವಂತೆ ರಚನೆ ಇವುಗಳಲ್ಲಿ ಕಂಡುಬರುವುದಿಲ್ಲ. ಸರೀಸೃಪಗಳಲ್ಲಿ ಚರ್ಮ ಶುಷ್ಕವಾಗಿರುತ್ತದೆ. ಹೊರತ್ವಚೆಯು ಕೊಂಬಿನಂಥ ವಸ್ತುವಿನಿಂದ ಕೂಡಿದ್ದು ಗಡುಸಾಗಿಯೂ ದಪ್ಪವಾಗಿಯೂ ಇರಬಹುದು. ಆಗಿಂದಾಗ ಇದು ಪೊರೆ ಬಿಟ್ಟಂತೆ ವಿಸರ್ಜನೆ ಆಗುವುದೂ

ಉಂಟು. ಅಪರೂಪಕ್ಕೆ ನಿಜತ್ವಚೆಯಲ್ಲಿ ಅಲ್ಲಲ್ಲಿ ತಟ್ಟೆಯಾದ ಮೂಳೆಯ ಚೂರುಗಳೂ ಕಂಡುಬರಬಹುದು. ಚರ್ಮದಲ್ಲಿ ಮೆಲನಿನ್ ಅಲ್ಲದೆ ಕೆಂಪು, ಹಸಿರು, ಹಳದಿ, ನೀಲಿ ಇತ್ಯಾದಿ ವಸ್ತುಗಳೂ ವಿಶೇಷ ಬೀಜಕಣಗಳಲ್ಲಿ ಉತ್ಪತ್ತಿ ಆಗಿ ಚರ್ಮದಲ್ಲಿ ವಿಶಿಷ್ಟ ವರ್ಣವಿನ್ಯಾಸ ಕಂಡುಬರಬಹುದು. ಗೋಸುಂಬೆಯಲ್ಲಿ (ಕವೂಲಿಯನ್) ಇರುವಂತೆ ರಕ್ಷಣಾಕಾರಣಕ್ಕಾಗಿ ವರ್ಣ ಬದಲಾಗುವಂತೆಯೂ ಇರಬಹುದು.

ದ್ವಿಚರಿಗಳಲ್ಲಿ ಚರ್ಮ ತೆಳುವಾಗಿಯೂ ಒದ್ದೆಯಾಗಿಯೂ ಇರುವುದು. ಇದರಿಂದ ಚರ್ಮದ ಮೂಲಕ ವಾಯು ಹೊರಗೂ ಒಳಗೂ ಹೋಗುವಂತಿದೆ. ಈ ಅನುಕೂಲತೆ ಅವುಗಳ ಉಸಿರಾಟಕ್ಕೆ ಸಹಾಯಕ. ಎಲ್ಲ ಭೂಚರ ಕಶೇರುಕಗಳಂತೆಯೇ ಇವುಗಳಲ್ಲಿಯೂ ಹೊರತ್ವಚೆ ನಿರ್ಜೀವ ಗಡಸುಪೊರೆಯಿಂದ ಕೂಡಿರುತ್ತದೆ ಮತ್ತು ಆಗಿಂದಾಗ್ಗೆ ಪೊರೆ ಉಜ್ಜಿದಂತೆ ವಿಸರ್ಜಿತವಾಗುತ್ತದೆ. ಈ ವಿಸರ್ಜನೆಯನ್ನು ಪಿಟ್ಯುಟರಿ ಮತ್ತು ಥೈರಾಯ್ಡ್ ಗ್ರಂಥಿಗಳು ನಿಯಂತ್ರಿಸುವುವೆಂದು ತಿಳಿದುಬಂದಿದೆ. ನೆಲಗಪ್ಪೆಗಳ (ಟೋಡ್ಸ್) ಚರ್ಮದಲ್ಲಿ ಅಲ್ಲಲ್ಲಿ ಇರುವ ಗಂಟುಗಳೂ (ವಾರ್ಟ್ಸ್) ಹೊರತ್ವಚೆಯ ಗಡಸುಭಾಗಗಳು. ಹೊರತ್ವಚೆಯ ಜೀವಕೋಶಗಳಿಂದಾದ ಗ್ರಂಥಿಗಳು ಲೋಳೆಯಂಥ ದ್ರವವನ್ನು ಸ್ರವಿಸಿ ಚರ್ಮವನ್ನು ಒದ್ದೆಯಾಗಿಟ್ಟು ಚರ್ಮದ ಮೂಲಕ ಉಸಿರಾಟಕ್ಕೆ ಅನುಕೂಲಮಾಡಿಕೊಡುತ್ತವೆ. ಇತರ ಗ್ರಂಥಿಗಳು ಒಂದು ರೀತಿಯ ವಿಷವಸ್ತುವನ್ನು ಸ್ರವಿಸುತ್ತವೆ. ಈ ವಸ್ತು ಕಣ್ಣಿಗಾಗಲಿ ಮೂಗಿಗಾಗಲಿ ತಾಕಿದರೆ ಬಹುವಾಗಿ ಉರಿಯಾಗುವುದಾದರೂ ಮಾನವನ ಕೈಚರ್ಮದ ಮೇಲೆ ಏನೂ ಪ್ರತಿಕೂಲ ಪರಿಣಾಮವನ್ನು ಮಾಡಲಾರದು. ಆದರೆ ಈ ವಿಷವಸ್ತುವಿನ ಭಯದಿಂದ ಕಪ್ಪೆಯನ್ನು ನುಂಗುವ ಪ್ರಾಣಿಗಳು ಟೋಡುಗಳನ್ನು ನುಂಗವು. ಅನೇಕ ಕಪ್ಪೆಗಳಲ್ಲಿ ಉಷ್ಣತಾನಿಯಂತ್ರಣಕ್ಕಾಗಿ ಮೆಲನಿನ್ ಕಣಗಳು ಜೀವಕೋಶಗಳೊಳಗೆ ಗುಂಪುಮಾಡಿಕೊಂಡಿರುವುದೂ ಇನ್ನು ಕೆಲವು ವೇಳೆ ಕೋಶದೊಳಗೆಲ್ಲ ಹರಡಿಕೊಂಡಿರುವುದೂ ಕಾಣಬರುತ್ತದೆ. ಕಣಗಳ ಈ ಚಲನೆ ಪಿಟ್ಯುಟರಿ ಗ್ರಂಥಿಯಿಂದ ನಿಯಂತ್ರಿತವಾಗುವುದು.

ಮೀನುಗಳಲ್ಲಿ ಈಗ ಬಹುಸಂಖ್ಯೆಯಲ್ಲಿ ಕಂಡುಬರುವವು ಟೀಲಿಯಾಸ್ಟ್ ಗುಂಪಿನವು. ಇವುಗಳ ನಿಜತ್ವಚೆಯಲ್ಲಿ ಮೂಳೆಯ ಚೂರುಗಳಿದ್ದು ಅವು ಹೊರತ್ವಚೆಯಿಂದ ಮುಚ್ಚಲ್ಪಟ್ಟಿರುತ್ತವೆ. ಈ ಮೂಳೆಯ ಚೂರುಗಳು ನಿರಂತರವಾಗಿ ಬೆಳೆಯುತ್ತಿರುವುವು. ವೃಕ್ಷಗಳು ದಪ್ಪವಾಗುವಾಗ ಕಂಡುಬರುವ ಬೆಳವಣಿಗೆಯ ಉಂಗುರಗಳಂತೆ ಈ ಮೂಳೆಗಳಲ್ಲೂ ಉಂಗುರಗಳು ಕಂಡುಬಂದು ಮೀನಿನ ವಯಸ್ಸನ್ನು ತಿಳಿಯಬಹುದು. ಹೊರತ್ವಚೆ ಅಧಿಕ ಕೆರಾಟಿನ್ ಸಂಗ್ರಹಣೆಯಿಂದ ಕೊಂಬಿನಷ್ಟು ಗಡುಸಾದ ಪದರ. ಆವರಣದ ಜಲವು ದೇಹದ ಒಳಹೊಗದಂತೆ ತಡೆಯಾಗಿರುವುದು ಇದೇ. ಷಾರ್ಕ್ ಅಂದರೆ ಚೊರೆ ಮೀನುಗಳಂಥ ಕೆಳದರ್ಜೆ ಮೃದ್ವಸ್ಥಿ ಮೀನುಗಳಲ್ಲಿ ಚರ್ಮ ಬಹುಮಂದ. ಇದಕ್ಕೆ ಕೆರಾಟಿನ್ ಸಂಗ್ರಹವಾಗಿರುವ ಹೊರತ್ವಚೆಯೇ ಕಾರಣ. ಹೊರತ್ವಚೆಯ ಮೇಲೆ ಮಾನವನ ಹಲ್ಲುಗಳನ್ನು ಹೋಲುವ ರಚನೆಯುಳ್ಳ ಪ್ಲಕಾಯ್ಡ್ ಹುರುಪೆಗಳು ಎಲ್ಲೆಡೆಯೂ ಇವೆ. ದುಂಡುಬಾಯಿಯ ಅತ್ಯಂತ ಕೆಳದರ್ಜೆ ಮೀನುಗಳಲ್ಲಿ ಚರ್ಮ ನುಣ್ಣಗೆ ಮತ್ತು ತೆಳ್ಳಗೆ ಇದ್ದರೂ ಅದರಲ್ಲಿ ಹೊರ ಮತ್ತು ನಿಜತ್ವಚೆಗಳೆರಡೂ ಇವೆ. ನಿಜತ್ವಚೆಯ ತ್ವಚೆಯ ಅಡಿ ಊತಕದಿಂದ ಹಾಗೂ ವರ್ಣಕೋಶಗಳು ಮತ್ತು ನಾರೆಳೆಗಳಿಂದ ಸ್ಪಷ್ಟವಾಗಿ ಬೇರ್ಪಟ್ಟಿದೆ.

**2 ಚರ್ಮದ ಅನುಬಂಧಗಳು (ಅಪೆಂಡೇಜಸ್) :** ಕೂದಲು ಮತ್ತು ಉಗುರು ಮಾನವನಲ್ಲಿ ಕಂಡುಬರುವ ಚರ್ಮದ ಅನುಬಂಧಗಳು. ಬೇರೆ ಕೆಲವು ಪ್ರಾಣಿಗಳಲ್ಲಿ ದೊಡ್ಡದಾಗಿ ಬೆಳೆದು ರಕ್ಷಣೆಯಾಗುವ ಪಂಜಗಳು ಮಾನವರಲ್ಲಿ ಪ್ರಾಮುಖ್ಯವನ್ನು ಕಳೆದುಕೊಂಡು ಉಗುರುಗಳಾಗಿವೆ. ಸಣ್ಣವಸ್ತುಗಳನ್ನು ಹಿಡಿದುಕೊಳ್ಳುವುದಕ್ಕೂ ಸೂಕ್ಷ್ಮವಾದ ಸಾಮಾನುಗಳಿಂದ ಕೆಲಸಮಾಡುವುದಕ್ಕೂ ಮಾತ್ರ ಇವು ಸಾಧಕಗಳು. ಕೆಲವು ಪ್ರಾಣಿಗಳಲ್ಲಿ ರಕ್ಷಣೆಗಾಗಿ ತಲೆಯ ಮೇಲೆ ಕೊಂಬುಗಳು ಬೆಳೆಯುತ್ತವೆ. ಘೇಂಡಾಮೃಗದಲ್ಲಿ ಕೊಂಬು ಮೂಗಿನ ಮೇಲಿರುವುದು ಸರಿಯಷ್ಟೆ. ಇನ್ನು ಕೆಲವು ಪ್ರಾಣಿಗಳಲ್ಲಿ ಗಟ್ಟಿಯಾದ ನೆಲ ಮತ್ತು ಬಂಡೆಗಳ ಮೇಲೆ ಶೀಘ್ರವಾಗಿ ಓಡಾಡಲು ಅನುಕೂಲವಾಗುವಂಥ ಗೊರಸುಗಳು ಕಂಡುಬರುತ್ತವೆ. ಇವೆಲ್ಲವೂ ಚರ್ಮದ ಅನುಬಂಧಗಳೇ. ಇವಕ್ಕೆ ಸಮವಾಗಿ ಮಾನವರಲ್ಲಿ ಏನೂ ಇಲ್ಲ. ಪಕ್ಷಿಗಳಲ್ಲಿ ಕೂದಲಿಗೆ ಬದಲಾಗಿ ರೆಕ್ಕೆಪುಕ್ಕಗಳು ಚರ್ಮದ ಅನುಬಂಧವಾಗಿರುವುದೆಂದು ಮೇಲೆ ಹೇಳಿದೆ. ಸಸ್ತನಿಗಳಲ್ಲಿ ಕೂದಲಿನೊಡನೆ ಸ್ವೇದಗ್ರಂಥಿ (ಸೆಬೇಷಿಯಸ್ ಗ್ಲಾಂಡ್) ಉಂಟು. ಆದರೆ ಪಕ್ಷಿಗಳಲ್ಲಿ ಪುಕ್ಕಗಳೊಡನೆ ಇಂಥ ಯಾವ ಗ್ರಂಥಿಯೂ ಇರುವುದಿಲ್ಲ. ಆದರೂ ಪಕ್ಷಿಯ ತೋಕೆ ಪ್ರದೇಶದಲ್ಲಿ ಸ್ವೇದಗ್ರಂಥಿಯನ್ನು ಹೋಲುವ ಪ್ರೀನ್ ಎಂಬ ಹೆಸರಿನ ಒಂದು ಗ್ರಂಥಿ ಉಂಟು. ಜಲಚರ ಪಕ್ಷಿಗಳಲ್ಲಿ ಇದು ಬಹುವಾಗಿ ಸ್ರವಿಸುತ್ತದೆ. ಜಿಡ್ಡಾದ ಇದರ ಸ್ರಾವವನ್ನು ಕೊಕ್ಕಿನಿಂದ ತೆಗೆತೆಗೆದು ಹಕ್ಕಿಗಳು ತಮ್ಮ ರೆಕ್ಕೆಪುಕ್ಕಗಳ ಬುಡದಲ್ಲೆಲ್ಲ ಬಳಿದುಕೊಳ್ಳುತ್ತವೆ. ಇದರಿಂದ ಪಕ್ಷಿಗಳ ದೇಹ ಮಳೆ ನೀರಿನಿಂದಲೂ ಆವರಣದ ನೀರಿನಿಂದಲೂ ತೋಯದಂತಿರುವುದು. ರೆಕ್ಕೆಪುಕ್ಕಗಳು ಪಕ್ಷಿಗಳ ಹಾರಾಟಕ್ಕೂ ಕೆಲವು ವೇಳೆ ರಕ್ಷಣೆಗೂ ಇನ್ನು ಕೆಲವು ವೇಳೆ ಲೈಂಗಿಕ ಆಕರ್ಷಣೆಗೂ ಉಪಯೋಗವಾಗುತ್ತವೆ. ಪಕ್ಷಿಗಳ ಕೊಕ್ಕು, ಕಾಲುಗುರುಗಳು ಕೂಡ ಚರ್ಮದ ಅನುಬಂಧಗಳೇ. ಪಕ್ಷಿಗಳ ಪರಿಸರ ಜೀವನಕ್ರಮಗಳಿಗೆ ಅನುಸಾರವಾಗಿ ಇವುಗಳ ವಿನ್ಯಾಸ ಬಹುರೀತಿಯಲ್ಲಿರುವುದು. ಆಹಾರವಿತರಣೆಗೇ ಅಲ್ಲದೆ ರಕ್ಷಣೆಗೂ ಈ ಅನುಬಂಧಗಳು ಅನುಕೂಲವಾಗುತ್ತವೆ.

ಕೂದಲು : ಇದು ಚರ್ಮದೊಳಗೆ ಹುದುಗಿರುವ ರೋಮಕೂಪದಲ್ಲಿ (ಹೇರ್ ಫಾಲಿಕಲ್) ನೆಟ್ಟುಕೊಂಡಿದೆ. ಕೂಪದಲ್ಲಿ ಹುದುಗಿರುವ ಭಾಗ ಕೂದಲಿನ ಬೇರು. ರೋಮಕೂಪ ಮತ್ತು ಕೂದಲು ಎರಡೂ ಹೊರತ್ವಚೆಯ ಕೋಶಗಳಿಂದಾದವೇ. ಹೊರತ್ವಚೆಯ ಒಂದು ಗುಳಿ ನಿಜತ್ವಚೆದೊಳಗೆ ಇಳಿಬಿದ್ದು ಆಳವಾಗಿ ಬೆಳೆದು ನಿಜತ್ವಚೆಯಲ್ಲಿ ರೋಮಕೂಪವಾಗುವುದು. ಇದರ ಕೊನೆ ಬುಡ್ಡೆ (ಬಲ್ಬ್) ಆಕಾರದಲ್ಲಿದೆ. ನಿಜತ್ವಚೆಯ ಊತಕ ಸ್ತನಾಗ್ರದ ಆಕಾರದಲ್ಲಿದೆ. ಇದರ ಮೇಲೆ ಒಂದೇ ವರಸೆಯಾಗಿ ಅಳವಡಿಕೆಗೊಂಡಿರುವ ಹೊರತ್ವಚೆಯ ಗುಳಿಯ ಜೀವಕೋಶಗಳು ಮಾತೃಕೆ ಜೀವಕೋಶಗಳಂತೆ ವರ್ತಿಸುತ್ತವೆ. ಇವುಗಳ ವಿಭಜನೆಯಿಂದ ಕೂದಲು ಬೆಳೆಯುವುದೇ ಅಲ್ಲದೆ ಗಾಯದಿಂದ ಹೊರತ್ವಚೆಯ ನಾಶವಾದಾಗ ಹೊಸ ಹೊರತ್ವಚೆ ನಿರ್ಮಾಣವಾಗಿ ರಿಪೇರಿಯೂ ಸಾಧ್ಯವಾಗುತ್ತದೆ.

ನಿಜತ್ವಚೆಯೊಳಗೆ ಹುದುಗಿರುವ ರೋಮಕೂಪದ ಭಿತ್ತಿಯಲ್ಲಿ ಮೂರು ಪದರಗಳನ್ನು ಗುರುತಿಸಬಹುದು. ಕೂಪದ ಒಳವರಸೆ ನಿರ್ಜೀವಪದರದಿಂದಾಗಿದೆ. ಇದರ ಹೊರಗೆ ಜೀವಕೋಶಗಳ ಎರಡು ಪದರಗಳನ್ನೂ ಇವನ್ನು ಸುತ್ತಲಿನ ನಿಜತ್ವಚೆಯ ಊತಕದಿಂದ ಬೇರ್ಪಡಿಸುವ ತಳಹದಿಪದರವನ್ನೂ ಗುರುತಿಸಬಹುದು. ಕೂದಲ ಬುಡ್ಡೆಯಿಂದ ಬೆಳೆಯುವ ಕೂದಲು ಟೊಳ್ಳಿಲ್ಲದ ತಂತು. ಇದರಲ್ಲೂ ಮೂರು ವರಸೆ ರಚನೆ ಉಂಟು. ಆದರೆ ಇದರ ಹೊರವರಸೆ ನಿರ್ಜೀವಪದರ. ಕೂದಲಿನ ಹೊರವರಸೆ, ರೋಮಕೂಪದ ಒಳವರಸೆ ಎರಡಕ್ಕೂ ಸಣ್ಣ ಮುಳ್ಳುಗಳಂತಿರುವ ಚಾಚುಗಳು ಕೆಳಮುಖವಾಗಿಯೂ ಇದ್ದು, ಇವು ಒಂದರೊಳಗೊಂದು ಸೇರಿಕೊಂಡು ಕೂದಲು ಕೂಪದೊಳಗೆ ಭದ್ರವಾಗಿ ನೆಡಲ್ಪಟ್ಟಿರುತ್ತದೆ. ಹೀಗಾಗಿ ಕಿತ್ತಾಗ ಇದು ಛಿದ್ರಿಸಿ ಬರುವುದೇ ಹೊರತು ಸುಲಭವಾಗಿ ಬುಡಮೂಲವಾಗಿ ಬರುವುದಿಲ್ಲ. ಕೂದಲ ಹೊರವರಸೆ ಕೂಪದಿಂದ ಹೊರಗೆ ಸ್ವಲ್ಪದೂರ ಮಾತ್ರ ಕೂದಲಿನಲ್ಲಿ ಕಂಡುಬರುತ್ತದೆ ಮತ್ತು ಕ್ರಮೇಣ ಇಲ್ಲವಾಗುತ್ತದೆ. ಈ ವರಸೆಯ ಒಳಗಿರುವುದು ಸಮೃದ್ಧಿಯಾಗಿ ಮೆಲನಿನ್ ಕಣಗಳಿರುವ ಜೀವಕೋಶಗಳಿಂದಾದ ಕೂದಲ ರಗಟೆ (ಕಾರ್ಟೆಕ್ಸ್). ಕೂದಲಿನ ಬಣ್ಣ ಈ ಜೀವಕೋಶಗಳಲ್ಲಿರುವ ಮೆಲನಿನ್ ಕಣಗಳ ಪರಿಮಾಣವನ್ನು ಅವಲಂಬಿಸಿದೆ. ಕೂದಲಮಧ್ಯದಲ್ಲಿರುವುದು ಕೂದಲಿನ ತಿಳ್ಳು (ಮೆಡುಲ). ಇದು ಸಹ ಜೀವಕೋಶಗಳಿಂದಾದುದಾದರೂ ಕೂದಲಿನಲ್ಲಿ ಸ್ವಲ್ಪದೂರ ಮಾತ್ರ ಈ ಕೋಶಗಳಿವೆಯಷ್ಟೆ. ಕ್ರಮೇಣ ಇವುಗಳ ಸ್ಥಳದಲ್ಲಿ ಅನಿಲ ಕಂಡುಬರುತ್ತದೆ. ಅನಿಲ ಪರಿಮಾಣದ ಆಧಿಕ್ಯವೂ ಕೂದಲಿನ ರಗಟೆಯಲ್ಲಿ ಮೆಲನಿನ್ನಿನ ಅಭಾವವೂ ಕೂದಲು ಬೆಳ್ಳಗಾಗುವುದಕ್ಕೆ ಕಾರಣ.

ಕೂದಲ ಬೆಳವಣಿಗೆ ಒಂದು ನಿರ್ದಿಷ್ಟ ಕಾಲದವರೆಗೆ ಮಾತ್ರ ಇರುವುದು. ಅನಂತರ ಬೆಳವಣಿಗೆ ಇಲ್ಲದೆ ತಟಸ್ಥವಾಗಿರುವ ಕಾಲ. ಈ ಕಾಲದಲ್ಲಿ ಕ್ರಮೇಣ ಕೂದಲುಕೂಪದ ಅಡಿಯಲ್ಲಿರುವ ಮಾತೃಕೆ ಕೋಶಗಳಿಂದ ಬೇರ್ಪಡುತ್ತದೆ. ವಾಸ್ತವವಾಗಿ ಆಗ ಅದು ಸತ್ತ ಕೂದಲು. ಆದರೂ ಅದು ಇನ್ನೂ ಕೂಪದಲ್ಲೇ ಇರುತ್ತದೆ. ಮುಂದೆ ಕೂಪದ ಭಿತ್ತಿಯಿಂದಲೂ ಕ್ರಮೇಣ ಸಡಿಲಗೊಂಡು, ಕೂದಲು ಬುಡ್ಡೆಯ ಚಟುವಟಿಕೆ ಪುನಃ ಪ್ರಾರಂಭವಾಗಿ ಹೊಸ ಕೂದಲು ಅದೇ ಕೂಪದಿಂದ ಹೊರಬಂದಂತೆ, ಈ ಸತ್ತ ಕೂದಲು ಉದುರಿಹೋಗುತ್ತದೆ. ಹೀಗೆ ಬುಡ್ಡೆಯಿಂದ ಪುನಃಪುನಃ ಕೂದಲು ಹುಟ್ಟಿ ಬೆಳೆದು ಉದುರುತ್ತಲೇ ಇರುವುದು. ಈ ಕ್ರಮದ ಕಾಲಮಿತಿ ದೇಹದ ಬೇರೆ ಬೇರೆ ಕಡೆ ಬೇರೆ ಬೇರೆ. ಕಾಲು ಮತ್ತು ಜನನೇಂದ್ರಿಯಗಳ ಮೇಲಿನ ಕೂದಲು ಹುಟ್ಟಿಬೆಳೆದು ಉದುರುವುದಕ್ಕೆ ಬಹುಕಾಲ ತೆಗೆದುಕೊಳ್ಳುವುವೆಂದು ತಿಳಿದುಬಂದಿದೆ.

ತೀವ್ರವಾದ ಜ್ವರ, ಅಧಿಕ ರಕ್ತಸ್ರಾವ, ಭಾರಿ ಶಸ್ತ್ರಚಿಕಿತ್ಸೆ ಮುಂತಾದ ತೊಡಕುಗಳು ಒದಗಿದಾಗ ಕೂದಲು ಬೆಳವಣಿಗೆ ನಿಂತುಹೋಗಿ ಅದು ಮಾತೃಕೆಯಿಂದ ಬೇರ್ಪಡುವುದಕ್ಕೆ ಪ್ರಾರಂಭವಾಗುತ್ತದೆ. ತಲೆಯಲ್ಲಿ ಎಲ್ಲ ಕೂದಲೂ ತಟಸ್ಥಸ್ಥಿತಿಯಲ್ಲಿದ್ದು ಇಂಥ ತೊಡಕು ಉಂಟಾದ 2–4 ತಿಂಗಳ ಬಳಿಕ ಇನ್ನೊಂದು ಕೂದಲು ಎಲ್ಲ ರೋಮಕೂಪಗಳಿಂದಲೂ ಹುಟ್ಟಲು ತೊಡಗುತ್ತದೆ. ಆಗ ಹಳೆಯ ಕೂದಲು ಒಟ್ಟೊಟ್ಟಿಗೆ ಉದುರಿಹೋಗುವುದು. ಹೆರಿಗೆಯ ತುರುವಾಯ ಬಾಣಂತಿಯರಲ್ಲಿ ಇದೇ ರೀತಿಯ ಬದಲಾವಣೆಯಿಂದ ಕೂದಲು ಉದುರುತ್ತದೆ.

ರೋಮಕೂಪವು ಚರ್ಮದ ತಲಕ್ಕೆ (ಪ್ಲೇನ್) ಲಂಬವಾಗಿರುವುದಿಲ್ಲ; ಸ್ವಲ್ಪ ಓರೆಯಾಗಿರುತ್ತದೆ. ಈ ಓರೆ ದಿಕ್ಕಿಗೆ ಎದುರಾಗಿ ಓರೆಯಾಗಿ ಒಂದು ಪಟ್ಟಿಯಾಕಾರದ ಸ್ನಾಯು ರೋಮಕೂಪದ ಮೇಲ್ಭಾಗದ ಭಿತ್ತಿಯನ್ನೂ ಹೊರತ್ವಚೆಯ ತಳಭಾಗವನ್ನೂ

ಕೂಡಿಸುತ್ತದೆ. ಇದು ಅನೈಚ್ಛಿಕಸ್ನಾಯು. ರೋಮಾಂಚನವಾದಾಗ ಕೂದಲನ್ನು ನಿಮಿರಿಸುವ ಸ್ನಾಯು ಇದೇ. ಸಂಕುಚಿಸಿದಾಗ ಇದು ರೋಮಕೂಪದ ಓರೆಯನ್ನು ಕಡಿಮೆ ಮಾಡುವುದರಿಂದ ಕೂದಲು ನೆಟ್ಟಗೆ ನಿಂತಂತೆ ಆಗುತ್ತದೆ. ಸಂಕುಚನೆ ನರಪ್ರೇರಣೆಯಿಂದ ಮೈಮೇಲೆಲ್ಲ ಇಲ್ಲವೆ ಸ್ವಲ್ಪ ಭಾಗಗಳಲ್ಲಿ ಉಂಟಾಗುತ್ತದೆ. ಈ ರೋಮಾಂಚಕ ಸ್ನಾಯುಗಳಿಗೆ (ಎರೆಕ್ಟೊರಿಸ್ ಪೈಲೋರಮ್) ನರಪೂರೈಕೆ ಅನುವೇದನ ನರಗಳಿಂದಾಗುವುದರಿಂದ ದೇಹದಲ್ಲಿ ಅಡ್ರಿನಲಿನ್ ಬಿಡುಗಡೆ ಆದಾಗಲೆಲ್ಲ ರೋಮಾಂಚನವಾಗುತ್ತದೆ.

ರೋಮಕೂಪಕ್ಕೂ ರೋಮಾಂಚಕ ಸ್ನಾಯುವಿಗೂ ನಡುವೆ ಸಾಮಾನ್ಯವಾಗಿ ಒಂದೋ ಎರಡೋ ಸ್ವೇದಗ್ರಂಥಿಗಳು (ಸಬೇಷಿಯಸ್ ಗ್ಲಾಂಡ್ಸ್) ಇವೆ. ಜಿಡ್ಡಾದ ಸ್ರಾವವನ್ನು ಇವು ತಮ್ಮ ನಾಳಗಳ ಮೂಲಕ ರೋಮಕೂಪದೊಳಕ್ಕೆ ಹಾಯಿಸುತ್ತವೆ. ಬಹುಶಃ ಕೂದಲು ನಿಮಿರಿದಾಗ, ರೋಮಾಂಚಕ ಸ್ನಾಯುಗಳ ಸಂಕುಚನದಿಂದ ಒತ್ತಲ್ಪಟ್ಟ ಸ್ನೇಹಗ್ರಂಥಿಗಳಿಂದ ಹೀಗೆ ಸ್ರಾವ ರೋಮಕೂಪವನ್ನು ಸೇರುವುದಲ್ಲದೆ, ಕೂಪಚಲನದಿಂದ ಅದರ ಹೊರಗೂ ಬರುತ್ತದೆ ಎಂದು ಕಾಣಿಸುತ್ತದೆ. ಹಾಗಿಲ್ಲದಿದ್ದರೂ ರೋಮಕೂಪವನ್ನು ಸೇರಿದ ಈ ಸ್ನಿಗ್ಧಪದಾರ್ಥ ಕೂಪದಿಂದ ಹೊರಬರುತ್ತಿರುವ ಕೂದಲನ್ನೇ ಅನುಸರಿಸಿ ಹೊರಬೀಳುವುದು. ಇದು ಸುತ್ತಲೂ ಚರ್ಮದ ಮೇಲೆ ಹರಡಿಕೊಳ್ಳುವುದಲ್ಲದೆ ಕೂದಲ ಮೇಲೂ ಹರಡಿಕೊಂಡು ಚರ್ಮವನ್ನೂ ಕೂದಲನ್ನೂ ಮೃದುವಾಗಿರುವಂತೆ ಮಾಡುತ್ತದೆ. ಸ್ವೇದಗ್ರಂಥಿಯ ಸ್ರಾವ ಈ ಗ್ರಂಥಿಯ ಜೀವಕೋಶ ಪೂರ್ಣವಾಗಿ ಹೊರಬಿದ್ದು ಜಿಡ್ಡುಪದಾರ್ಥವಾಗಿ ಮಾರ್ಪಡುವುದರಿಂದ ಉಂಟಾದುದು. ಇದು ಕೊಬ್ಬು ಮತ್ತು ಮೇಣದ ಮಿಶ್ರಣ. ಅಲ್ಲದೆ ಕೊಬ್ಬಿನ ಆಮ್ಲಗಳು, ಕೊಲೆಸ್ಟಿರಾಲ್ ಮತ್ತು ಅನೇಕ ಹೈಡ್ರೊಕಾರ್ಬನುಗಳೂ ಇವೆ. ನೀರಿನಲ್ಲಿ ಮುಳುಗಿದಾಗ ಚರ್ಮಕೂದಲುಗಳು ಒದ್ದೆಯಾದರೂ ನೀರು ಅವುಗಳ ಒಳಸೇರದಂತೆಯೂ ಒಣ ವಾತಾವರಣದಲ್ಲಿ ಚರ್ಮ ಒಣಗಿ ಒರಟಾಗಿ ಬಿರಿಯದಂತೆಯೂ ಕೂದಲು ಒರಟಾಗದಂತೆಯೂ ಕಾಪಾಡುವುದು ಈ ಸ್ರಾವದ ಕ್ರಿಯೆ. ಇದಕ್ಕೆ ಕೆಲವು ವಿಷಾಣುಗಳನ್ನೂ ಬೂಷ್ಟುಗಳನ್ನೂ ನಾಶಮಾಡುವ ಸಾಮರ್ಥ್ಯ ಉಂಟೆಂದು ಹೇಳಲಾಗಿದೆ. ಪ್ರಬುದ್ಧತೆಯ ಕಾಲದಲ್ಲಿ ಇವುಗಳ ಚಟುವಟಿಕೆ ಹೆಚ್ಚು ಕೆಲವರಲ್ಲಿ ಈ ಗ್ರಂಥಿಗಳು ಯಾವಾಗಲೂ ಹೆಚ್ಚಾಗಿ ಸ್ರವಿಸುವುದರಿಂದ ಮುಖ ಎಣ್ಣೆ ಬಳಿದಂತೆ ಕನುಗಾಗಿರುತ್ತದೆ. ಸ್ವೇದಗ್ರಂಥಿಗಳ ಸ್ರಾವ ಹೊರಕ್ಕೆ ಬರಲು ಅಡಚಣೆಯಾಗಿ ಸೋಂಕಿನಿಂದ ಊತ ಉಂಟಾದರೆ ಮೊಡವೆ ಏಳುತ್ತದೆ. ಕಣ್ಣುರೆಪ್ಪೆಗಳಲ್ಲಿರುವ ಮೈಬೋಮಿನ ಗ್ರಂಥಿಗಳೂ ಸ್ವೇದಗ್ರಂಥಿಗಳ ಜಾತಿಗೇ ಸೇರಿದವು. ಸ್ವೇದಗ್ರಂಥಿಗಳು ಸಾಮಾನ್ಯವಾಗಿ ರೋಮಕೂಪಗಳಿಗೆ ಸಂಬಂಧಪಟ್ಟಂತೆ ಇರುವುವಾದರೂ ತುಟಿಗಳ ಕೆಂಪಂಚು ಮುಂತಾದ ಕೂದಲು ಬೆಳೆಯದ ಸ್ಥಳಗಳಲ್ಲಿಯೂ ಇವು ಕಂಡುಬರುತ್ತವೆ. ಆದರೆ ಅಂಗೈ ಅಂಗಾಲುಗಳಲ್ಲಿ ಸ್ವೇದಗ್ರಂಥಿಗಳಿರುವುದಿಲ್ಲ. ತುಪ್ಪಳವಿರುವ ಪ್ರಾಣಿಗಳಲ್ಲಿ ತುಪ್ಪಳಗಳಿಗೆ ಸಂಬಂಧಿಸಿದ ಜಿಡ್ಡುಗ್ರಂಥಿಗಳು ನೇರವಾಗಿ ಹೊರಕ್ಕೆ ತಮ್ಮ ಸ್ರಾವವನ್ನು ಸಾಗಿಸಿ ತುಪ್ಪಳದ ಅಧಿಕ ಜಿಡ್ಡಿಗೆ ಕಾರಣವಾಗಿವೆ.

ಉಗುರುಗಳು : ಕೈಕಾಲು ಬೆರಳುಗಳ ತುದಿಯ ಬೆನ್ನುಭಾಗದಲ್ಲಿರುವ ಚರ್ಮದ ಹೊರತ್ವಚೆಯ ಗಡಸು ಹೊರಪೊರೆ ಮಾರ್ಪಾಡಾಗಿ ಉಗುರಾಗುತ್ತದೆ. ಕೆರಾಟಿನ್ ತುಂಬಿದ ಹೊರಪೊರೆಯ ತಟ್ಟೆಕಣಗಳು ಸುಲಿದುಹೋಗದೆ ಒಂದಕ್ಕೊಂದು ಒತ್ತಾಗಿ ಕೂಡಿಕೊಂಡಿರುವುದರಿಂದ ಉಗುರು ಉಂಟಾಗುತ್ತದೆ ಉಗುರಿನ ಬುಡದಲ್ಲಿ ಚರ್ಮದ ಮಡಿಕೆಯ ಹೊದಿಕೆ ಉಂಟು. ಈ ಭಾಗದಲ್ಲಿ ಉಗುರಿನ ಕೆಳಗಿರುವ ಹೊರತ್ವಚೆಯ ಜೀವಕೋಶಗಳು ಉಗುರಿನ ಮಾತೃಕೆಯಾಗಿರುತ್ತವೆ. ಇವುಗಳ ನಿರಂತರ ವಿಭಜನೆಯಿಂದ ಲಭಿಸುವ ಜೀವಕೋಶಗಳು ಶೀಘ್ರವಾಗಿ ಮತ್ತು ಅಧಿಕವಾಗಿ ಕೆರಾಟಿನ್ನನ್ನು ಉತ್ಪತ್ತಿಮಾಡಿ ಸಂಗ್ರಹಗೊಂಡು ನಿರ್ಜೀವ ಉಗುರುವಸ್ತುವಾಗುತ್ತವೆ; ಮತ್ತು ಮುಂಚೆ ಇದೇ ರೀತಿ ಉತ್ಪತ್ತಿಯಾಗಿದ್ದ ಉಗುರನ್ನು ಅದರ ಹಾಸಿಗೆ (ನೆಯ್ಲ್‌ಬೆಡ್) ಭದ್ರವಾಗಿ ಅಂಟಿಸಿರುತ್ತವೆ. ಉಗುರು ಹಾಸಿನಲ್ಲಿರುವ ನಿಜತ್ವಚೆಯ ಚಾಚುಗಳು ಉಗುರಿನ ಬುಡದಿಂದ ತುದಿಯವರೆಗೂ ಕಂಡುಬರುವ ಉದ್ದವಾದ ಸಾಲುಗಳು. ಹೊಸತಾಗಿ ಉತ್ಪತ್ತಿಯಾದ ಉಗುರು ಬೆಳೆದು ಉಗುರಿನ ಕೊನೆ ಮುಟ್ಟುವುದಕ್ಕೆ ಸುಮಾರು 5–6 ತಿಂಗಳುಗಳು ಬೇಕೆಂದು ಅಂದಾಜುಮಾಡಿದ್ದಾರೆ. ಹವಾ ಪರಿಸ್ಥಿತಿಯಂತೆ ಬೆಳವಣಿಗೆಯ ವೇಗದಲ್ಲಿ ವ್ಯತ್ಯಾಸವಾಗುವುದು. ಮಧ್ಯದ ಬೆರಳಿನ ಉಗುರು ಎಲ್ಲಕ್ಕಿಂತ ಹೆಚ್ಚು ವೇಗವಾಗಿಯೂ, ಕಿರುಬೆರಳಿನದು ಎಲ್ಲಕ್ಕಿಂತ ನಿಧಾನವಾಗಿಯೂ ಬೆಳೆಯುವುದು. ಕಾಲಿನ ಉಗುರು ಕೈಬೆರಳಿನ ಉಗುರಿಗಿಂತ ಎರಡರಷ್ಟು ಕಾಲ ತೆಗೆದುಕೊಳ್ಳುತ್ತದೆ. ಈ ಕಾರಣದಿಂದ ಕಾಲುಗುರಿನ ಅಣಬೆರೋಗವನ್ನು ಅಣಬೆ ನಿರೋಧಕ ಮದ್ದುಗಳಿಂದ ಗುಣಪಡಿಸುವುದು ದುಸ್ಸಾಧ್ಯ. ಯಾವೊಂದು ವಿಷಮ ರೋಗದಿಂದಲಾದರೂ ನರಳಿದಾಗ ಉಗುರುಗಳ ಪೋಷಣೆ ತಗ್ಗಿ ಮಾತೃಕೆಯ ಬೆಳವಣಿಗೆ ಕುಗ್ಗಿ ಉಗುರುಗಳಲ್ಲಿ ಅಡ್ಡ ಜಾಡುಗಳಾಗುತ್ತವೆ. ಉಗುರುಗಳ ಮೇಲೆ ಕಾಣಿಸಿಕೊಳ್ಳುವ ಬಿಳಿ ಚುಕ್ಕೆಗಳು ಪೆಟ್ಟುಗಳಿಂದ ಉಂಟಾಗುತ್ತವೆ. ಬಹುಶಃ ಉಗುರುಹಾಸಿನಲ್ಲಿರುವ ಹೊರತ್ವಚೆಯ ಕೋಶಗಳು ಗಾಯಗೊಂಡು ಕೆರಾಟಿನ್ನನ್ನು ಒಳಗೊಂಡಿರುವುದರಿಂದ ಹೀಗೆ ಬಿಳಿ ಚುಕ್ಕೆಯಾಗಿ ಕಾಣಿಸಬಹುದು. (ಡಿ.ಪಿ.ಜಿ.; ಎಸ್.ಆರ್.ಆರ್.)

**3 ಜ್ಞಾನೇಂದ್ರಿಯವಾಗಿ ಚರ್ಮದ ಕ್ರಿಯೆ :** ಚರ್ಮದಲ್ಲಿ ನರತಂತುಗಳು ಹೇರಳವಾಗಿವೆ; ಮತ್ತು ಪಂಚೇಂದ್ರಿಯಗಳಲ್ಲಿ ಚರ್ಮ ಒಂದು ಎಂದು ಮೇಲೆ ಸೂಚಿಸಿದೆ. ಚರ್ಮದ ನೆರವಿನಿಂದ ಲಭಿಸುವ ಜ್ಞಾನಕ್ಕೆ ಪ್ರಾಯಿಕಜ್ಞಾನ (ಜನರಲ್ ಸೆನ್ಸ್) ಎಂದು ಹೆಸರು. ಈ ಜ್ಞಾನ ದೇಹದ ಮೇಲ್ಮೈಯ ಎಲ್ಲ ನೋವಿನ ಅರಿವಿಗೆ ಸಂಬಂಧಪಟ್ಟಿದೆ. ಇದರ ಪರಿಣಾಮವಾಗಿ ಜೀವಿಗೆ ತನ್ನ ಮೈಯನ್ನು ಆವರಿಸಿರುವ ಪರಿಸರಕ್ಕೆ ಹೊಂದಿಕೊಳ್ಳಲೂ, ಅದು ಅಪಾಯಕರವಾಗಿದ್ದರೆ ಅದರ ವಿರುದ್ಧ ರಕ್ಷಣೆಪಡೆಯಲೂ, ತಿಳಿದಂತೆ ಮತ್ತು ತಿಳಿಯದಂತೆ ಉಂಟಾಗಬೇಕಾದ ಪ್ರತಿಕ್ರಿಯೆಗಳನ್ನು ನಿಯಂತ್ರಿಸಲೂ ಸಾಧ್ಯವಾಗಿದೆ. ನೋವಿನ ಅರಿವು ನಗ್ನನರಾಗ್ರಗಳಿಂದ ಆಗುತ್ತದೆ. ಸ್ಪರ್ಶ, ಒತ್ತುವಿಕೆ, ಥಂಡಿ ಮತ್ತು ಬಿಸಿ ಇವುಗಳ ಅರಿವು ವಿಶಿಷ್ಟ ನರಾಗ್ರಗಳಾದ ಮೆಕ್ಕೆಲನ ತಟ್ಟೆ ಹಾಗೂ ಮೀಸ್ನರನ ಕಣಗಳು, ಪೆಸಿನಿಯ ಕಣಗಳು, ಕ್ರೌಸನ ಅಂತ್ಯ ಬುಡ್ಡೆಗಳು ಮತ್ತು ರೂಫಿನಿಯ ನರಾಂತ್ಯಗಳಿಂದ ಆಗುತ್ತದೆ. ವಿವಿಧ ಸಂದರ್ಭದಗಳಲ್ಲಿ ಒಂದೋ ಎರಡೋ ಸಂವೇದನೆಗಳು ಮಾತ್ರ ನಾಶವಾಗಿ ಇತರ ಸಂವೇದನೆಗಳು ಸಹಜವಾಗಿಯೇ ಇರಬಹುದಾದ್ದರಿಂದ, ಹೊರ ಪ್ರಚೋದನೆಗಳ ಸ್ವಭಾವ ವ್ಯತ್ಯಾಸಗಳಲ್ಲದೆ ನರಾಗ್ರಗಳಲ್ಲಿ ಉದ್ಭವವಾಗುವ ನರಪ್ರಚೋದನ ವ್ಯತ್ಯಾಸಗಳೂ ವಿವಿಧಸಂವೇದನೆಗಳ ವಿಶಿಷ್ಟ ಅರಿವು ಮೂಡುವುದಕ್ಕೆ ಕಾರಣ ಎಂದು ತಿಳಿಯಬಹುದು. ಉಸಿರು ಕಟ್ಟಿದಾಗ (ಆಸ್‌ಫಿಕ್ಸಿಯ) ತಾತ್ಕಾಲಿಕವಾಗಿ ಸ್ಪರ್ಶಜ್ಞಾನ ಮೊದಲು ನಾಶವಾಗುತ್ತದೆ. ಅತಿಯಾದ ಚಳಿಯಿಂದ ಮೊದಲು ಥಂಡಿ, ಆಮೇಲೆ ಅನುಕ್ರಮವಾಗಿ ಸ್ಪರ್ಶ, ನೋವು, ಬಿಸಿ–ಇವು ತಿಳಿಯದಂತಾಗುತ್ತವೆ. ಹೀಗೇ ಕೊಕೇನ್ ಎಂಬ ಸಂವೇದನಹಾರಿ ಚುಚ್ಚುಮದ್ದನ್ನು ಕೊಟ್ಟರೆ ಮೊದಲು ತಂಡಿಯ ಅರಿವು ನಾಶವಾಗುತ್ತದೆ. ನರದ ಸುತ್ತ ಆಲ್ಕೊಹಾಲನ್ನು ಚುಚ್ಚುಮದ್ದಿನ ರೀತಿ ಕೊಟ್ಟರೆ ಪ್ರಧಾನವಾಗಿ ನಾಶವಾಗುವುದು ಶೀತೋಷ್ಣಗಳ ಸಂವೇದನೆ. ಸ್ಪರ್ಶ ನೋವುಗಳು ಅಷ್ಟಾಗಿ ವ್ಯತ್ಯಾಸವಾಗುವುದಿಲ್ಲ. ವಿಶಿಷ್ಟ ನರಾಗ್ರಗಳ ರಚನೆ ಹೆಚ್ಚು ಕಡಿಮೆ ಒಂದೇ ರೀತಿಯದಾಗಿದೆ. ನಡುಮಧ್ಯದಲ್ಲಿ ತಿರುಳಿನಂತೆ ನಗ್ನನರಾಗ್ರ ಉಂಟು. ಮೃದುವಾದ ಜೀವಕೋಶಗಳೂ ಅವುಗಳ ಹೊರಗೆ ಪದರಪದರವಾಗಿರುವ ಬಂಧನಾಂಗಾಂಶದ ಕವಚವೂ ಇದನ್ನು ಆವರಿಸಿಕೊಂಡಿವೆ. ವಿವರ ವ್ಯತ್ಯಾಸಗಳಿಂದ ವಿವಿಧ ನರಾಗ್ರಗಳನ್ನು ಗುರುತಿಸಬಹುದಾದರೂ ಅನೇಕವೇಳೆ ವ್ಯತ್ಯಾಸ ಸ್ಪಷ್ಟವಾಗಿರುವುದಿಲ್ಲ. ಮೆಕ್ಕೆಲನ ತಟ್ಟೆಗಳು ಬೆರಳುಗಳ ತುದಿಯಲ್ಲಿಯೂ ತುಟಿ ಬಾಯಿಗಳಲ್ಲಿಯೂ ಇವೆ. ನಿಜತ್ವಚೆಯಲ್ಲಿ ಹಾಗೂ ಹೊರತ್ವಚೆಯ ಕೆಳಭಾಗದ ಜೀವಕೋಶಗಳ ನಡುವೆ ಇವು ಕಂಡುಬರುವುವು. ಮೀಸ್ನರನ ಕಣಗಳು ನಿಜತ್ವಚೆಯ ಬೆರಳಿನಿಂದ ಹೊರಚಾಚುಗಳಲ್ಲಿ ಹುದುಗಿರುವ ಅಂಡಾಕಾರದ ಮೊಗ್ಗುಗಳಂತೆ ಇವೆ. ಇವುಗಳ ತಳದಿಂದ ಜ್ಞಾನವಾಹಿ ನರತಂತು ಹೊರಟು ಇತರ ತಂತುಗಳೊಡಗೂಡಿ ಕೊನೆಗೆ ಮಿದುಳ ಬಳ್ಳಿ ಹಾಗೂ ಮಿದುಳನ್ನು ಸೇರುತ್ತದೆ. ಪೆಸಿನಿಯ ಕಣಗಳು ಆಕಾರ ಮತ್ತು ವಿನ್ಯಾಸಗಳಲ್ಲಿ ನೀರುಳ್ಳಿಯ ಲಂಬಕೊಯ್ತವನ್ನು ಹೋಲುವುವು. ಇವು ಇನ್ನಿತರ ನರಾಗ್ರಗಳಿಗಿಂತ ದೊಡ್ಡವಾಗಿ ದಪ್ಪ ಸಾಸಿವೆಕಾಳಿನ ಗಾತ್ರಕ್ಕೆ ನಿಜತ್ವಚೆಯಲ್ಲಿವೆ. ಕೈಕಾಲುಗಳ ಚರ್ಮದ ಅಡಿ ಊತಕದಲ್ಲಿಯೂ ಸ್ನಾಯುಹುರಿ, ಕೀಲುಕವಚ ಮುಂತಾದ ಕಡೆಯೂ ಪೆಸಿನಿಯ ಕಣಗಳು ಬಹುಸಂಖ್ಯೆಯಲ್ಲಿವೆ. ಒತ್ತುವಿಕೆಯಿಂದ ಆಗುವ ರೂಪಪಲ್ಲಟದಿಂದ ಇವು ಉದ್ರೇಕಗೊಂಡು ಒತ್ತುವಿಕೆಯ ಅರಿವನ್ನು ಉಂಟುಮಾಡುವುವು. ಕ್ರೌಸನ ಅಂತ್ಯಗೋಳಗಳು ತುಟಿ, ನಾಲಗೆ, ಹಾಗೂ ಬಾಹ್ಯ ಪ್ರಜನನಾಂಗಗಳ ಚರ್ಮದಲ್ಲಿ ಹೆಚ್ಚಾಗಿವೆ. ಇವು ಗೋಳಾಕಾರವಾಗಿರುವುದು ಬಿಟ್ಟರೆ ಸ್ಪರ್ಶಕಣಗಳಂತೆಯೇ ಇವೆ. ಚರ್ಮ ತಣ್ಣಗಾದಾಗ ಇವು ಪ್ರಚೋದನೆಗೊಂಡು ತಂಡಿಯನ್ನು ಅರಿವಿಗೆ ತರುವುವು. ರೂಫಿನಿಯ ಅಂತ್ಯಾಂಗಗಳು ಚರ್ಮ ಬಿಸಿಯಾದಾಗ ಪ್ರಚೋದನೆಗೊಳ್ಳುತ್ತವೆ.

ಸಾಮಾನ್ಯವಾಗಿ ಬರಿ ಕಣ್ಣಿಗೆ ಕಾಣಿಸುತ್ತೋ ಇಲ್ಲವೋ ಎನ್ನುವಷ್ಟು ಸಣ್ಣವಾದ ಈ ವಿಶಿಷ್ಟ ನರಾಗ್ರಗಳು ಇರುವ ಬಿಂದು ಕ್ಷೇತ್ರದಲ್ಲಿ (ಸ್ಪಾಟ್) ಆಯಾ ಪ್ರಾಯಿಕ ಜ್ಞಾನದ ಅರಿವು ಉಂಟಾಗುತ್ತದೆಂದು ಪ್ರಯೋಗಪರೀಕ್ಷೆಗಳಿಂದ ಸುಮಾರು 70–80 ವರ್ಷಗಳ ಹಿಂದೆ ವಿಜ್ಞಾನಿಗಳು ಶೋಧಿಸಿದರು. ಆಧುನಿಕ ರೀತಿಯ ಪ್ರಯೋಗಗಳಿಂದಲೂ ಅದು ಹೆಚ್ಚುಕಡಿಮೆ ಸರಿ ಎಂದು ತಿಳಿದುಬಂದಿದೆ. ಆದರೆ ಹಿಂದಿನವರು ಹೇಳಿದಷ್ಟು ಖಚಿತವಾಗಿ ಈ ನರಾಗ್ರಗಳ ರಚನೆ ಇರುವುದೂ ನಿರ್ದಿಷ್ಟ ನರಾಗ್ರಗಳು ನಿರ್ದಿಷ್ಟ ಅರಿವನ್ನೇ ಯಾವಾಗಲೂ ಉಂಟುಮಾಡುವುದೂ ಸಂದೇಹಾಸ್ಪದ. 6 ಚ.ಸೆಂಮೀ. ಚರ್ಮಕ್ಷೇತ್ರದಲ್ಲಿ ಚರ್ಮ ಉಷ್ಣತೆ $25^{0}$ ಸೆಂ. ಇದ್ದಾಗ 17 ಥಂಡಿ ಬಿಂದುಗಳು (ಕೋಲ್ಡ್ ಸ್ಪಾಟ್ಸ್) ಇದ್ದುದನ್ನೂ ಅದೇ ಕ್ಷೇತ್ರದಲ್ಲಿ ಉಷ್ಣತೆ 33°ಸೆ. ಆದಾಗ 93 ತಂಡಿ ಬಿಂದುಗಳು ಇದ್ದುದನ್ನೂ ಬಿಂಗ್ ಮತ್ತು ಸ್ಕೌಬಿ ಎಂಬವರು ಪ್ರಯೋಗದಿಂದ ತೋರಿಸಿದರು (1949). ನಿಜವಾಗಿ 17 ಬಿಂದುಗಳಿರುವುವೋ 93 ಬಿಂದುಗಳಿರುವುವೋ ಇಲ್ಲವೇ ಈ ಬಿಂದುಗಳಿರುವುದೇ ಸುಳ್ಳೋ ಎಂದು ಸಂದೇಹ ಬರುವುದು ಸಹಜವೇ. ಅಲ್ಲದೆ ಚರ್ಮದಲ್ಲಿ ಅಲ್ಲಲ್ಲಿ ಬಿಂದುಗಳಿಗೆ ಎಷ್ಟೇ ಅಧಿಕವಾದ ಥಂಡಿ ತಟ್ಟಿದರೂ ಅದರ ಅರಿವೇ ಉಂಟಾಗುವುದಿಲ್ಲ

ವೆಂಬುದೂ ವ್ಯಕ್ತಪಟ್ಟಿದೆ. ಇದೇ ಬಿಂದುವಿನಲ್ಲಿ ಬೇರೆ ಪ್ರಾಯಿಕಜ್ಞಾನ ಇರಬಹುದಾದ್ದರಿಂದ ಅಲ್ಲಿ ನರಾಗ್ರವಿರುವುದು ಖಚಿತವಾದರೂ ಥಂಡಿಯ ಅರಿವಿಗೆ ಕಾರಣವಾದ ವಿಶಿಷ್ಟ ನರಾಗ್ರವಂತೂ ಇಲ್ಲವೆಂಬುದೂ ಅಷ್ಟೇ ಖಚಿತವಾಗುತ್ತದೆ. ಹೊರಕಿವಿ, ಉದರದ ಕೂದಲಿರುವ ಚರ್ಮದ ಭಾಗ, ಕೈಬೆರಳುಗಳ ಬೆನ್ನುಭಾಗ ಇವುಗಳಲ್ಲಿ ಸ್ಪರ್ಶ ಮತ್ತು ನೋವಿನ ಅರಿವುಗಳನ್ನು ಉಂಟುಮಾಡುವ ನರಾಗ್ರಗಳು ಮಾತ್ರವೇ ಇದ್ದರೂ ಈ ಸ್ಥಳಗಳಲ್ಲಿಯೂ ಥಂಡಿ ಬಿಸಿಗಳ ಅರಿವು ಸಾಧ್ಯ. ಆದ್ದರಿಂದ ಇಂಥ ನರಾಗ್ರ ಇಂಥ ಅರಿವಿಗೇ ಕಾರಣ ಎಂದು ಖಚಿತವಾಗಿ ಹೇಳುವುದು ತಪ್ಪಾದೀತು. ಅಲ್ಲದೆ ಇನ್ನೂ ಕೆಲವು ವಿಷಯಗಳನ್ನು ಗಮನಿಸಬೇಕು. ಚರ್ಮದ ನರತಂತುಗಳು ಪೂರೈಕೆ ಆಗುವ ಕ್ಷೇತ್ರಗಳು ಅನಿರ್ದಿಷ್ಟ. ಒಂದು ನರತಂತುವಿನ ಕವಲುಗಳು ಅನೇಕ ಬಿಂದು ಕ್ಷೇತ್ರಗಳಿಂದ ಪ್ರಾರಂಭವಾಗಿ ಬೇರೆ ಬೇರೆ ನರತಂತುಗಳನ್ನು ಸೇರುವುದೂ ಕಂಡುಬಂದಿದೆ. ಅಕ್ಕಪಕ್ಕ ಕ್ಷೇತ್ರಗಳ ಈ ರೀತಿಯ ಪರಸ್ಪರ ಅಧಿವ್ಯಾಪನೆಯಿಂದ (ಓವರ್‌ಲ್ಯಾಪಿಂಗ್) ಒಂದೆರಡು ನರಗಳು ನಾಶವಾದರೆ ಯಾವ ನಿರ್ದಿಷ್ಟ ಕ್ಷೇತ್ರದ ಸಂವೇದನೆಯೂ ನಾಶವಾಗುವುದಿಲ್ಲ. ಚರ್ಮದಲ್ಲಿ ಸಂವೇದನಗಳ ಅರಿವಿನ ಸೂಕ್ಷ್ಮತೆ ವಿವಿಧ ಕ್ಷೇತ್ರಗಳಲ್ಲಿ ಬೇರೆ ಬೇರೆ. ಈ ವ್ಯತ್ಯಾಸಗಳಿಗೆ ಆಯಾ ಕ್ಷೇತ್ರಕ್ಕೆ ಪೂರೈಕೆಯಾಗುವ ನರಗಳ ಸಂಖ್ಯೆಯ ವ್ಯತ್ಯಾಸ ಕಾರಣವೆಂದು ಹೇಳಲಾಗುವುದಿಲ್ಲ. ನರಗಳ ಸಂಖ್ಯೆ ಕಡಿಮೆ ಆದರೆ ಅವುಗಳಲ್ಲಿ ಬಹಳ ಕವಲುಗಳು ಇರುವುದರಿಂದ ಸಾಮಾನ್ಯವಾಗಿ ಎಲ್ಲ ಕ್ಷೇತ್ರಗಳಲ್ಲೂ ಹೆಚ್ಚುಕಡಿಮೆ ಸಮಾನ ಸಂಖ್ಯೆಯ ನರಾಗ್ರಗಳಿರುತ್ತವೆ. ಬಹುಶಃ ಸೂಕ್ಷ್ಮತೆ ಹೆಚ್ಚಾಗಿರುವ ಸ್ಥಳದಲ್ಲಿನ ನರಾಗ್ರಗಳಿಗೆ ವೈಯಕ್ತಿಕವಾಗಿ ಸೂಕ್ಷ್ಮ ಪ್ರಚೋದನ ಸಾಮರ್ಥ್ಯ ಇರುವುದೆಂದು ತೋರುತ್ತದೆ. ಮುಖದಲ್ಲಿ ಹೆಚ್ಚು ಗಾಯವಾದರೆ ಅತಿ ನೋವು ಉಂಟಾಗುವುದಲ್ಲದೆ ಜ್ಞಾನವೂ ತಪ್ಪಬಹುದು. ಆದರೆ ಮುಖದಂತೆ ಬಹುನರಗಳು ಪೂರೈಕೆ ಆಗುವ ಬೇರೆ ಕಡೆ ಅಷ್ಟೇ ಗಾಯ ಆದಾಗ ನೋವು ಇಷ್ಟು ತೀಕ್ಷ್ಣವಾಗಿರುವುದಿಲ್ಲ. ದೇಹದಲ್ಲೆಲ್ಲ ಬಹು ಹೆಚ್ಚಾಗಿ ನರಗಳ ಪೂರೈಕೆ ಆಗಿರುವ ಸ್ಥಳಗಳಲ್ಲಿ ಹೊರಪ್ರಜನನಾಂಗಗಳಾದ ಶಿಶ್ನಭಗಲಿಂಗಗಳೂ ಉಂಟು. ಆದರೆ ಈ ಸ್ಥಳದಲ್ಲಿ ಪ್ರತ್ಯೇಕ ಬಿಂದುಗಳ ಸ್ಪರ್ಶಸೂಕ್ಷ್ಮತೆಯಾಗಲಿ ಶೀತೋಷ್ಣಗಳ ಅರಿವಿನ ಸೂಕ್ಷ್ಮತೆಯಾಗಲಿ ಹೆಚ್ಚೇನಿಲ್ಲ. ಕೊಯ್ದ ಗಾಯದಿಂದ ಉಂಟಾಗುವ ನೋವು ಮಾತ್ರ ಬೇರೆ ಭಾಗದಲ್ಲಿ ಅಷ್ಟೇ ಗಾಯದಿಂದ ಉಂಟಾಗುವ ನೋವಿಗಿಂತಲೂ ಅಧಿಕವಾಗಿರುತ್ತದೆ. ಯಾವ ನರಾಗ್ರವಾದರೂ ಅತಿಯಾಗಿ ಪ್ರಚೋದಿಸಲ್ಪಟ್ಟಾಗ ನೋವುಂಟಾಗುವುದು. ಆದರೆ ಸ್ಪರ್ಶ, ಶೀತೋಷ್ಣ, ಒತ್ತಡ ಇವುಗಳ ಅರಿವನ್ನು ಉಂಟುಮಾಡುವ ನರಾಗ್ರಗಳ ಮಿತಿಮೀರಿದ ಪ್ರಚೋದನೆಯಿಂದಲೇ ಅನುಭವಕ್ಕೆ ಬರುವ ಸಂವೇದನೆ ನೋವು ಎನ್ನುವುದು ತಪ್ಪು. ಸ್ಪರ್ಶಕ್ಕೆ ಸಂಬಂಧಪಟ್ಟ ರೋಮಗಳನ್ನು ಎಷ್ಟೇ ವೇಗ ಪ್ರಮಾಣದಲ್ಲಿ ಅಲುಗಾಡಿಸಿದರೂ ಸ್ಪರ್ಶಾನುಭವವಾಗುವುದೇ ಹೊರತು ನೋವಾಗುವುದಿಲ್ಲ. ನೋವಿನ ಅರಿವಿಗೆಂದೇ ನರಾಗ್ರಗಳಿರುವುದು ನಿಸ್ಸಂದೇಹ. ವೇದನಾಶಾಮಕ ಔಷಧಿಗಳು(ಅನಾಲ್ಜೆಸಿಕ್ಸ್) ನೋವನ್ನು ಮಾತ್ರ ಅರಿವಿಗೆ ಬರದಂತೆ ತಡೆಯುತ್ತವೆ. ಆದರೆ ಸ್ಪರ್ಶಶೀತೋಷ್ಣಗಳ ಅರಿವು ಇಂಥ ಔಷಧಿಗಳಿಂದ ವ್ಯತ್ಯಾಸವಾಗುದಿಲ್ಲ. ಯಾವ ವಿಶಿಷ್ಟ ರಚನೆಯೂ ಇಲ್ಲದ ನಗ್ನನರಾಗ್ರಗಳು ನೋವಿನ ಅರಿವಿಗೆ ಕಾರಣವೆಂದು ಹೇಳಲಾಗಿದೆ. ಆದರೆ ಕಾರ್ನಿಯ ಎಂಬ ಕಣ್ಣಿನ ಗುಡ್ಡೆಯ ಪಾರಕ ಭಾಗದಲ್ಲಿ ಕೇವಲ ಇಂಥ ನರಾಗ್ರಗಳೇ ಇದ್ದರೂ ಸ್ಪರ್ಶ ಶೀತೋಷ್ಣಗಳ ಅರಿವೂ ಈ ಭಾಗದಲ್ಲಿ ಅನುಭವಕ್ಕೆ ಬರುವುದು ತಿಳಿದಿದೆ. ಈ ಎಲ್ಲ ವಿವರಣೆಗಳಿಂದಲೂ ಗ್ರಹಿಸಬೇಕಾದ್ದೇನೆಂದರೆ ಚರ್ಮದಿಂದ ಸ್ಪರ್ಶಶೀತೋಷ್ಣಗಳು ನೋವು ಎಂಬ ನಾಲ್ಕು ಬಗೆಯ ಸಂವೇದನೆಗಳ ಅರಿವುಂಟಾಗುತ್ತದೆ. ಆ ಅರಿವು ಉಂಟಾಗುವ ಬಿಂದುಕ್ಷೇತ್ರಗಳನ್ನು ಗುರುತಿಸಬಹುದು. ಆದರೆ ನಿರ್ದಿಷ್ಟ ನರಾಗ್ರಗಳಿರುವುವೆಂದೂ ಅವು ನಿರ್ದಿಷ್ಟ ರೀತಿಯಲ್ಲಿ ಕೆಲಸಮಾಡುವುವೆಂದೂ ಹೇಳುವಂತಿಲ್ಲ. ಬಹುಶಃ ಅನೇಕ ನರಾಗ್ರಗಳು ಏಕಕಾಲಿಕವಾಗಿ ಪ್ರಚೋದನೆಗೊಳ್ಳುತ್ತವೆ. ಹೀಗೆ ಪ್ರಚೋದನೆಗೊಳ್ಳುವ ವಿವಿಧ ರೀತಿಯ ನರಾಗ್ರಗಳು ಪ್ರತಿಸಲವೂ ಬೇರೆ ಬೇರೆ ಸಂಖ್ಯೆಯಲ್ಲಿ ಇರುವುದರಿಂದ ಆ ಕಾಲಕ್ಕೆ ತಕ್ಕಂಥ ಮಿಶ್ರಪ್ರಚೋದನೆ ಉಂಟಾಗುತ್ತದೆ. ಈ ಮಿಶ್ರಪ್ರಚೋದನೆ ಮಿದುಳಿನಲ್ಲಿ ಅರ್ಥವಿಸಲ್ಪಟ್ಟಾಗ ವಿಶಿಷ್ಟ ಸಂವೇದನೆಯ ಅರಿವಾಗುತ್ತದೆ.

ಸ್ಪರ್ಶ: ಸ್ಪರ್ಶದಿಂದ ವಸ್ತುಗಳ ಅಳತೆ ಆಕಾರಗಳು, ನಯ, ಒರಟು, ದೃಢತೆ ಇತ್ಯಾದಿಗಳು ತಿಳಿಯುತ್ತವೆ. ನಿರೀಕ್ಷಿಸಬಹುದಾದಂತೆಯೇ ಮೀಸ್ನರನ ಕಣಗಳು ಮತ್ತು ಮೆರ್ಕೆಲನ ತಟ್ಟೆಗಳು ಹೆಚ್ಚಾಗಿರುವ ಕೈಬೆರಳ ತುದಿ, ತುಟಿ, ಸ್ತನಾಗ್ರಗಳು ಮತ್ತು ದೇಹದ ನೈಸರ್ಗಿಕ ದ್ವಾರಗಳು ಇಂಥ ಕಡೆಗಳಲ್ಲಿ ಸ್ಪರ್ಶಸೂಕ್ಷ್ಮತೆ ಹೆಚ್ಚಾಗಿರುತ್ತದೆ. ಅಂಗೈ, ಗಲ್ಲ, ಹಣೆ, ಕೈತೋಳಿನ ಒಳಭಾಗ ಇವುಗಳಲ್ಲಿ ಸ್ಪರ್ಶಸೂಕ್ಷ್ಮತೆ ಕಡಿಮೆ. ತೊಡೆಯ ಮಧ್ಯದ ಮುಂಭಾದಲ್ಲಿ ಸ್ಪರ್ಶಾನುಭವ ಬಹುಮಂದ. ಕೂದಲಿನ ಬುಡದಲ್ಲಿ ನರಾಗ್ರಗಳು ಬುಟ್ಟಿಯಂತೆ ಹೆಣೆದುಕೊಂಡು ಕೂದಲು ಅತ್ಯಲ್ಪವಾಗಿ ಅಲುಗಿದರೂ ಗ್ರಹಿಸಬಲ್ಲವಾಗಿರುವುದರಿಂದಲೂ ಕೂದಲು ಸನ್ನೆಗೋಲಾಗಿ (ಲಿವರ್) ವರ್ತಿಸಬಹುದಾದ್ದರಿಂದಲೂ ಕೂದಲು ಹೆಚ್ಚಾಗಿರುವ ಸ್ಥಳಗಳಲ್ಲಿ ಸ್ಪರ್ಶಸೂಕ್ಷ್ಮತೆ ಹೆಚ್ಚಿನದಾಗಿರುತ್ತದೆ. ಕೆಳತೋಳಿನ (ಫೋರ್ ಆರ್ಮ್) ಹೊರಭಾಗದಲ್ಲಿ ಈ ಕಾರಣದಿಂದಲೇ ಸ್ಪರ್ಶಜ್ಞಾನ ಸೂಕ್ಷ್ಮವಾಗಿರುವುದು. ಇಂಥ ಸ್ಥಳಗಳನ್ನು ಹತ್ತಿಯ ಎಳೆಯಲ್ಲಿ ಬಹು ಹಗುರವಾಗಿ ಸ್ಪರ್ಶಿಸಿದರೂ ವ್ಯಕ್ತಿ ಕಣ್ಣುಮುಚ್ಚಿಕೊಂಡಿದ್ದರೂ ಸ್ಪರ್ಶಿಸಿದ ಸ್ಥಳ ಇಂಥದೇ ಎಂದು ನಿರ್ದಿಷ್ಟವಾಗಿ ಹೇಳಬಹುದು. ಆದರೆ ಒಂದು ವೈಶಿಷ್ಟ್ಯವೇನೆಂದರೆ ಸ್ಪರ್ಶಕಣಗಳು ಶೀಘ್ರವಾಗಿ ಪ್ರಚೋದನೆಗೆ ಒಗ್ಗಿಕೊಂಡು ಸೂಕ್ಷ್ಮತೆಯನ್ನು ಕಳೆದುಕೊಳ್ಳುವುದು. ಇದರಿಂದ ನಾವು ಬಟ್ಟೆ ಧರಿಸಿದ ಮೇಲೆ ಅವುಗಳ ಕಾಯಂ ಸ್ಪರ್ಶ ನಮ್ಮ ಅರಿವಿಗೆ ಬರುವುದಿಲ್ಲ. ಆದರೆ ಹೀಗೆ ಒಗ್ಗಿಕೊಂಡು ಸೂಕ್ಷ್ಮತೆಯನ್ನು ಕಳೆದುಕೊಳ್ಳುವುದನ್ನು ಪೆಸಿನಿಯ ಕಣದಲ್ಲೂ ನೋಡಬಹುದಾಗಿದೆ. ಸ್ಪರ್ಶಿಸಿದ ಎರಡು ಬಿಂದುಗಳನ್ನು ಪ್ರತ್ಯೇಕವಾಗಿ ಗುರುತಿಸಬಲ್ಲ ತಾರತಮ್ಯ ಜ್ಞಾನ (ಡಿಸ್ಕ್ರಿಮಿನೇಷನ್) ನಾಲಿಗೆ ತುದಿಯಲ್ಲಿ ಬಹು ಹೆಚ್ಚಾಗಿದೆ. ಸ್ಪರ್ಶಿಸಿದ 3 ಬಿಂದುಗಳು ಇಲ್ಲಿ 1ಮಿಮೀ. ಅಂತರದಲ್ಲಿದ್ದರೂ ತಿಳಿಯುವುದು. ಬೆರಳು ತುದಿಗಳಲ್ಲಿ ಈ ಅಂತರ 2ಮಿಮೀ. ಗಳಷ್ಟಿರುತ್ತದೆ. ಮೇಲ್ತೋಳು (ಆರ್ಮ್), ತೊಡೆಗಳಲ್ಲಿ ಸ್ಪರ್ಶಿಸಿದ ಎರಡು ಬಿಂದುಗಳು 6–7ಸೆಂ.ಮೀ. ಅಂತರದೊಳಗೆ ಇದ್ದರೆ ಅವು ಬೇರೆ ಬೇರೆ ಎಂದು ಗುರುತಿಸುವುದಕ್ಕಾಗುವುದಿಲ್ಲ, ಸ್ವಾಭಾವಿಕವಾಗಿಯೇ ನರಗಳು ರೋಗಪೀಡಿತವಾದಾಗ ಸ್ಪರ್ಶತಾರತಮ್ಯ ನಾಶವಾಗುತ್ತದೆ. ಸ್ಪರ್ಶತಾರತಮ್ಯವನ್ನು ವಾನ್ ಫ್ರೇ ಎಂಬುವನ ರೋಮಸಂವೇದನಾಮಾಪಕ (ಹೇರ್ ಈಸ್ಥೀಸಿಸಿಯೋಮೀಟರ್) ಎಂಬ ಸಲಕರಣೆಯಿಂದ ತಿಳಿಯಬಹುದು.

ಶೀತೋಷ್ಣಗಳ ಅರಿವು : ದೇಹೋಷ್ಣತೆಗಿಂತ ಕಡಿಮೆ ಅಥವಾ ಹೆಚ್ಚು ಉಷ್ಣತೆ ಇರುವ ವಸ್ತುಗಳು ಥಂಡಿ ಇಲ್ಲವೇ ಬಿಸಿಬಿಂದುಗಳಿರುವ ಚರ್ಮಭಾಗವನ್ನು ಸ್ಪರ್ಶಿಸಿದರೆ ಸ್ಪರ್ಶಜ್ಞಾನವಾಗುವುದು ಮಾತ್ರವಲ್ಲದೆ ಸ್ಪರ್ಶಿಸಿದ ವಸ್ತುವಿನ ಶೈತ್ಯ ಅಥವಾ ಉಷ್ಣಗುಣವೂ ಗೊತ್ತಾಗುತ್ತದೆ. ಸ್ತನಾಗ್ರಗಳು, ಎದೆ, ನಾಸಿಕ, ತೋಳಿನ ಮುಂಭಾಗ ಮತ್ತು ಉದರ–ಈ ಸ್ಥಳಗಳಲ್ಲಿ ಶೀತೋಷ್ಣಗಳ ಅರಿವು ಬಲು ಸೂಕ್ಷ್ಮ. ಬಿಸಿಲುಗಾಳಿಗೆ ಹೆಚ್ಚಾಗಿ ಒಡ್ಡಲ್ಪಡುವ ಮುಖ ಕೈಕಾಲುಗಳಲ್ಲಿ ಈ ಅರಿವು ಮಂದ. ಒಂದು ವಸ್ತು ಇನ್ನೊಂದು ವಸ್ತುವಿಗಿಂತ ತಣ್ಣಗಿರುವುದು ಅಥವಾ ಬಿಸಿಯಾಗಿರುವುದು 27° ಸೆಂ. ನಿಂದ 32° ಸೆಂ. ಉಷ್ಣತಾಮಿತಿಯಲ್ಲಿ ಬಹು ಸೂಕ್ಷ್ಮವಾಗಿ ಅರಿವಿಗೆ ಬರುತ್ತದೆ. ಈ ಮಿತಿಯಲ್ಲಿ 0.2° ಸೆಂ. ವ್ಯತ್ಯಾಸವೂ ಗೊತ್ತಾಗುವುದು. ವಸ್ತುಗಳ ಉಷ್ಣತಾಮಟ್ಟ ಬಹು ಕಡಿಮೆ ಆಗಿದ್ದರೆ ಅಥವಾ ಬಹು ಹೆಚ್ಚಾಗಿದ್ದರೆ ಎರಡು ಪದಾರ್ಥಗಳ ಉಷ್ಣತಾಸ್ಥಿತಿಯಲ್ಲಿನ ವ್ಯತ್ಯಾಸ ಇಷ್ಟು ಸೂಕ್ಷ್ಮವಾಗಿ ಗೊತ್ತಾಗುವುದಿಲ್ಲ. ಸ್ಪರ್ಶ, ಒತ್ತುವಿಕೆಗಳಿಗೆ ಒಗ್ಗಿಕೊಳ್ಳುವಂತೆ ಚರ್ಮ ಉಷ್ಣತೆಗೂ ಒಗ್ಗಿಕೊಳ್ಳುವುದೆಂಬುದನ್ನು ಒಂದು ಸುಲಭ ಪ್ರಯೋಗದಿಂದ ತೋರಿಸಬಹುದು. ಒಂದು ಬೋಗುಣಿಯಲ್ಲಿ ಬಿಸಿನೀರು, ಇನ್ನೊಂದರಲ್ಲಿ ತಣ್ಣೀರು, ಮೂರನೆಯದರಲ್ಲಿ ಉಗುರುಬೆಚ್ಚಗಿನ ನೀರು ತೆಗೆದುಕೊಳ್ಳುವುದು; ಒಂದು ಕೈಯನ್ನು ಬಿಸಿನೀರಿನಲ್ಲೂ ಇನ್ನೊಂದು ಕೈಯನ್ನು ತಣ್ಣೀರಿನಲ್ಲೂ ಸ್ವಲ್ಪ ಹೊತ್ತು ಇಟ್ಟು ಬಳಿಕ ಎರಡು ಕೈಗಳನ್ನೂ ಉಗುರುಬೆಚ್ಚಗಿನ ನೀರಿನಲ್ಲಿಡುವುದು; ಹೀಗೆ ಮಾಡಿದಾಗ ತಣ್ಣೀರಿನಲ್ಲಿದ್ದ ಕೈಗೆ ಬೆಚ್ಚಗಾದ ಅನುಭವವೂ ಬಿಸಿನೀರಿನಲ್ಲಿದ್ದ ಕೈಗೆ ತಣ್ಣಗಾದ ಅನುಭವವೂ ಉಂಟಾಗುತ್ತವೆ. ತಣ್ಣೀರಿನಲ್ಲಿ ಸ್ವಲ್ಪ ಹೊತ್ತು ಕೈ ಇಟ್ಟಿದ್ದು ತರುವಾಯ ಬಿಸಿ ನೀರಿನಲ್ಲಿ ಅದ್ದಿದರೆ ತತ್‌ಕ್ಷಣವೇ ಬಿಸಿಯ ಅನುಭವ ಉಂಟಾದರೂ ಆಮೇಲೆ ಕೆಲವು ಸೆಕೆಂಡುಗಳಲ್ಲಿ ಪುನಃ ತಣ್ಣಗಿರುವಂತೆಯೇ ಭಾಸವಾಗುವುದು. ತೂಕದ ಬಟ್ಟು ತಣ್ಣಗೆ ಕೊರೆಯುತ್ತಿದ್ದಾಗ ಅದೇ ತೂಕದ ಬಿಸಿಯಾದ ಬಟ್ಟಿಗಿಂತ ಭಾರವಾಗಿರುವಂತೆ ತೋರುತ್ತದೆ. ಮಂಜಿನ ಗೆಡ್ಡೆಯನ್ನು ಚರ್ಮಕ್ಕೆ ತಾಕಿಸಿದ್ದು ತೆಗೆದುಬಿಟ್ಟಮೇಲೂ ಕೆಲವು ಸೆಕೆಂಡುಗಳ ಕಾಲ ತಣ್ಣಗೆ ಕೊರೆಯುವ ಅನುಭವ ಮುಂದುವರಿಯುವುದು. ಇವಕ್ಕೆಲ್ಲ ಸರಿಯಾದ ಕಾರಣ ತಿಳಿದಿಲ್ಲ. ಮೆಂಥಾಲ್ ಎಂಬ ವಸ್ತುವಿರುವ ಶುಂಠಿ ಪೆಪ್ಪರ್‌ಮಿಂಟನ್ನು ತಿಂದು ಬಾಯಲ್ಲಿ ಉಸಿರಾಡಿದರೆ ತಣ್ಣಗಾಗುವುದು ಸಾಮಾನ್ಯವಾಗಿ ಎಲ್ಲರ ಅನುಭವ. ಬಹುಶಃ ಮೆಂಥಾಲ್ ನಾಲಿಗೆಯಲ್ಲಿ ಥಂಡಿಯ ಅರಿವಿಗೆ ಕಾರಣವಾದ ನರಾಗ್ರದ ತಾರತಮ್ಯಜ್ಞಾನವನ್ನು ಅಧಿಕಗೊಳಿಸುವುದರಿಂದ ಸ್ವಾಭಾವಿಕವಾಗಿ ಉಸಿರಾಡುವ ವಾಯುವೂ ತಣ್ಣಗಿರುವಂತೆ ಅನಿಸುತ್ತದೆ. ತಂಪಾಗಿರುವಂತೆ ತೋರುವುದು ಅಥವಾ ಬಿಸಿಯಾಗಿರುವಂತೆ ತೋರುವುದು ಸಾಮಾನ್ಯವಾಗಿ ಆ ಸ್ಥಳದಲ್ಲಿ ಚರ್ಮದ ಉಷ್ಣತೆ ಕಡಿಮೆಯಾಗುವುದರಿಂದ ಅಥವಾ ಹೆಚ್ಚಾಗುವುದರಿಂದ. ಪರಿಸರಕ್ಕೆ ಒಡ್ಡಿದ ಚರ್ಮ ತಣ್ಣಗಾಗುವುದರಿಂದ ಚಳಿಯೂ ಬಿಸಿಯಾಗುವುದರಿಂದ ಸೆಖೆಯೂ ಉಂಟಾಗುವುವು. ದೇಹೋಷ್ಣತೆ ಕಡಿಮೆ ಆಗುವುದರಿಂದ ಅಥವಾ ಹೆಚ್ಚಾಗುವುದರಿಂದ ಸಾಮಾನ್ಯವಾಗಿ ಇಂಥ ಅನುಭವ ಉಂಟಾಗುತ್ತದೆ. ಆದರೆ ಕೆಲವು ವೇಳೆ ಇದು ತಿರುಗುಮುರುಗಾಗುವುದುಂಟು. ಮದ್ಯಪಾನ ಮಾಡಿದವರಲ್ಲಿ ದೇಹೋಷ್ಣ ಅಧಿಕವಾಗಿ ಕಳೆದು ಹೋಗುತ್ತಿರುವುದರಿಂದ ಅವರ ದೇಹೋಷ್ಣತೆ ಸಹಜ ಮಟ್ಟಕ್ಕಿಂತ ಸ್ವಲ್ಪ ಕಡಿಮೆಯೇ ಇರುವುದು. ಆದರೆ ಅವರಿಗೆ ತಾವು ಬೆಚ್ಚಗಿದ್ದೇವೆಂಬ ಅನುಭವವೇ ಇರುತ್ತದೆ. ಬಹುಶಃ ಮದ್ಯಸಾರದಿಂದ ಚರ್ಮದ ಧಮನಿಗಳು ಹಿಗ್ಗಿ ಹೆಚ್ಚು ರಕ್ತಸಂಚಾರದಿಂದ ಚರ್ಮ

ಶಾಖಗೊಳ್ಳುವುದರಿಂದ ಈ ಅನುಭವ ಉಂಟಾಗುವುದಾಗಿರಬಹುದು. ಆದರೆ ಮಲೇರಿಯ ಜ್ವರದಿಂದ ನರಳುತ್ತಿರುವವರ ಚರ್ಮ ಅಧಿಕ ಜ್ವರದಿಂದ ಸುಡುತ್ತಿದ್ದರೂ ಅವರಿಗೆ ತಡೆಯಲಾರದಷ್ಟು ಚಳಿಯಾಗುತ್ತಿರುವುದು. ಇವೆಲ್ಲವೂ ಶೀತೋಷ್ಣಗಳ ಅರಿವು ಹೀಗೆ ಎಂದೂ ಎಲ್ಲರಲ್ಲೂ ಒಂದೇ ಎಂದು ಖಚಿತವಲ್ಲವೆಂಬುದನ್ನು ತೋರಿಸುತ್ತವೆ.

ನೋವು : ಈ ಅನುಭವ ಸ್ಪರ್ಶಶೀತೋಷ್ಣಗಳಿಗಿಂತ ಅನೇಕ ವಿಧಗಳಲ್ಲಿ ಭಿನ್ನವಾಗಿದೆ. ಸ್ಪರ್ಶಶೀತೋಷ್ಣಗಳು ಚರ್ಮದಿಂದ ಮಾತ್ರ ಅನುಭವಕ್ಕೆ ಬರುವ ಸಂವೇದನೆಗಳು. ಆದರೆ ನೋವು ಚರ್ಮದಲ್ಲಿಯೇ ಅಲ್ಲದೆ ದೇಹದ ಒಳ ಅಂಗಗಳಲ್ಲೂ ಉಂಟಾಗಬಹುದು. ಸ್ಪರ್ಶಶೀತೋಷ್ಣಗಳು ಸಂದರ್ಭಾನುಸಾರ ಹಿತಕರವಾಗಿರಬಹುದು; ಇಲ್ಲವೇ ಅಹಿತಕರ ವಾಗಿರಬಹುದು. ಆದರೆ ನೋವು ಯಾವಾಗಲೂ ಅಹಿತಕರವೇ. ಸ್ಪರ್ಶಶೀತೋಷ್ಣಗಳಿಗೆ ವ್ಯಕ್ತಿ ಒಗ್ಗಿಕೊಳ್ಳಬಹುದಾಗಿ ಸ್ವಲ್ಪ ಕಾಲಾನಂತರ ಇವು ಗಮನದಿಂದ ಅಳಿಸಿಹೋಗಬಹುದು. ಆದರೆ ನೋವು ಒಗ್ಗಿಕೊಳ್ಳುವ ಸಂವೇದನೆ ಅಲ್ಲವೇ ಅಲ್ಲ. ಮುಳ್ಳು ಚುಚ್ಚಿಕೊಂಡು ನೋಯುತ್ತಿದ್ದರೆ ಮುಳ್ಳು ಇರುವಷ್ಟು ಕಾಲವೂ ಬಿಡದೆ ನೋಯುತ್ತಿರುತ್ತದೆ. ಅನುಭವವಿಲ್ಲದಿರುವವರಿಗೆ ನೋವಿನ ಸ್ವಭಾವವನ್ನು ವಿವರಿಸಿ ತಿಳಿಯಪಡಿಸುವುದು ಸಾಧ್ಯವಿಲ್ಲ. ಅಲ್ಲದೆ ವೈಯಕ್ತಿಕವಾಗಿ ನೋವಿನ ತೀವ್ರತೆ ಬೇರೆ ಬೇರೆ ಇರುವುದರಿಂದ ನೋವಿನ ಮಾಪನ ಸಾಧ್ಯವಿಲ್ಲ. ಆದರೂ ತತ್‌ಕ್ಷಣದಲ್ಲೇ ಮುದುರಿಕೊಳ್ಳುವ, ಬೆವರುವ, ರಕ್ತದ ಒತ್ತಡ ವ್ಯತ್ಯಾಸದ, ಗುಂಡಿಗೆಯ ಮಿಡಿತ ವೇಗವ್ಯತ್ಯಾಸದ ಪ್ರಮಾಣಗಳಿಂದ ನೋವಿನ ತೀವ್ರತೆಯನ್ನು ತಕ್ಕಮಟ್ಟಿಗೆ ಅಳೆಯಬಹುದು. ದೇಹಕ್ಕೆ ಘಾಸಿಯಾದಾಗ ಅಗತ್ಯವಾಗಿ ಕಂಡುಬರುವ ನೈಸರ್ಗಿಕ ರಕ್ಷಣಕ್ರಮದೊಂದಿಗೆ ಯಾವಾಗಲೂ ಜೊತೆಗೊಂಡಿರುವ ಮನಃಸ್ಥಿತಿಯೇ ನೋವು ಎಂದು ಷೆರಿಂಗ್‌ಟನ್ ಎಂಬ ವಿಜ್ಞಾನಿ ಅದರ ಲಕ್ಷಣನಿರೂಪಣೆಯನ್ನು ಮಾಡಿದ್ದಾನೆ. ರಕ್ಷಣಕ್ರಮ ನೋವಿನಿಂದ ಖಾತರಿಯಾಗಿ ಏರ್ಪಟ್ಟು ಘಾಸಿಯಾಗಬಹುದಾದ ಸನ್ನಿವೇಶಗಳಲ್ಲಿ ಆಗುವ ಅಪಾಯ ಸಾಧ್ಯವಾದಷ್ಟು ಮಿತಿಗೊಳಿಸಲ್ಪಡುತ್ತದೆ. ಸೂಜಿ ಚುಚ್ಚಿದಾಗ, ಬಿಸಿ ತಗುಲಿದಾಗ ನೋವು ಉಂಟಾಗಿ ತತ್‌ಕ್ಷಣವೇ ಆ ಭಾಗ ಅನೈಚ್ಛಿಕವಾಗಿ ಮುದುರಿಕೊಳ್ಳುವುದರಿಂದ (ವಿತ್‌ಡ್ರಾಯಲ್ ರಿಫ್ಲೆಕ್ಸ್) ಈ ಸಂದರ್ಭಗಳಲ್ಲಿ ಆಗಬಹುದಾದ ಗಾಯ ಮಿತಿಗೊಳಿಸಲ್ಪಡುತ್ತದೆ. ಗುಂಡಿಗೆಯ ರಕ್ತಪೂರೈಕೆ ತೃಪ್ತಿಕರವಾಗಿಲ್ಲದಿದ್ದಾಗ ಶ್ರಮಕೆಲಸಗಳಿಂದ ತೀವ್ರ ಎದೆನೋವು ಉಂಟಾಗುವುದು. ಈ ನೋವಿನಿಂದ ಇಂಥ ಕೆಲಸವನ್ನು ಮುಂದುವರಿಸಬಾರದು ಎನ್ನುವ ಅರಿವು ಹಾಗೂ ಪರಿಸ್ಥಿತಿ ಉಂಟಾಗುತ್ತವೆ. ಊತಗೊಂಡಾಗ ಉಂಟಾಗುವ ನೋವು ನಿಶ್ಚಲವಾಗಿರುವುದು ದೇಹಸೌಖ್ಯಕ್ಕೆ ಅನುಕೂಲವೆಂದು ಮನಗಾಣಿಸುತ್ತದೆ. ಆದರೂ ನೋವು ಇಂಥ ರಕ್ಷಣೆಯ ನಿಶ್ಚಯತೆಗೆ ಏರ್ಪಟ್ಟ ಸಂವೇದನೆ ಎಂದು ಹೇಳುವಂತಿಲ್ಲ. ಕೆಲವು ಏಡಿಗಂತಿಗಳಲ್ಲಿ ಚಿಕಿತ್ಸಾತೀತ ಮಟ್ಟ ಮುಟ್ಟುವವರೆಗೂ ನೋವೇ ಕಾಣಬರದೆ ಅಗಾಧ ಹಾನಿಯಾಗಬಹುದು. ಅಲ್ಲದೆ ಅನಂತರ ಕಾಣಬರುವ ತೀವ್ರ ಹಾಗೂ ನಿರಂತರ ನೋವು ರೋಗಿಗೆ ಯಾವ ಅನುಕೂಲತೆಗೋಸ್ಕರ ಏರ್ಪಟ್ಟಿದೆ ಎಂದೂ ಅರ್ಥವಾಗುವಂತಿಲ್ಲ. ನೋವಿನಿಂದ ಉಂಟಾಗುವ ಮಾನಸಿಕ ಸೌಖ್ಯನಾಶ ಹಾಗೂ ರಕ್ತ ಪರಿಚಲನೆ ಮತ್ತು ಶ್ವಾಸಕ್ರಮಗಳ ಏರುಪೇರುಗಳು ಆರೋಗ್ಯಸ್ಥಿತಿಗೆ ಪ್ರತಿಕೂಲಿಗಳಾಗಿರುತ್ತವೆ.

ಗುಂಡಿಗೆ ಸ್ನಾಯುಗಳಲ್ಲಿ ಆಕ್ಸಿಜನ್ನಿನ ಕೊರತೆಯಿಂದ ಉಂಟಾಗುವ ನೋವು, ಟೊಳ್ಳು ಅಂಗಗಳಿಂದ ಉಂಟಾಗುವ ಶೂಲೆ ಮತ್ತು ಚರ್ಮದ ಅಡಿ ಊತಕಗಳಿಂದ ಉಂಟಾಗುವ ನಿರಂತರ ಯಾತನೆಗಳು ಚರ್ಮದ ಅರಿವಿಗೆ ಬರುವ ನೋವಿಗಿಂತ ತೀರ ಭಿನ್ನವಾದವು. ಚರ್ಮದಿಂದ ಅನುಭವವಾಗುವ ನೋವನ್ನು ಚುಚ್ಚಿದಂತೆ, ಕತ್ತರಿಸಿದಂತೆ, ಜಜ್ಜಿದಂತೆ ಇತ್ಯಾದಿ ಎಂದೂ ವರ್ಣಿಸಲಾಗಿದೆ. ಅಲ್ಲದೆ ತುಡಿತ, ಉರಿ, ಹೆಚ್ಚುಕಡಿಮೆ ಆಗುತ್ತಿರುವ ನೋವು ಏರಿಳಿತವಿಲ್ಲದ ನಿರಂತರ ಯಾತನೆ, ಮೂಗುನೋವು, ಕಿವಿನೋವು ಇವನ್ನು ಗುರುತಿಸಬಹುದು. ನೋವನ್ನು ತಿಳಿಸುವ ನರಾಗ್ರಗಳು ಉಷ್ಣವನ್ನು ತಿಳಿಸುವ ನರಾಗ್ರಗಳು, ಎರಡೂ ಏಕಕಾಲಿಕವಾಗಿ ಪ್ರಚೋದನೆಗೊಳ್ಳುವುದರಿಂದ ಉರಿನೋವು (ಬರ್ನಿಂಗ್ ಪೇನ್) ಉಂಟಾಗುತ್ತದೆ. ಗಾಯದಿಂದ ಊತ ಉಂಟಾಗಿ ಸ್ಥಳೀಯವಾಗಿ ಧಮನಿಗಳು ಹಿಗ್ಗಿ ರಕ್ತಪರಿಚಲನೆಯೂ ಸ್ಥಳೀಯವಾಗಿ ಹೆಚ್ಚುವುದರಿಂದ ಅಲ್ಲಿ ನಾಡಿಮಿಡಿತ ಕಂಡುಬರುತ್ತದೆ. ಪ್ರತಿಯೊಂದು ನಾಡಿಮಿಡಿತದೊಡನೆ ರಕ್ತಾಧಿಕ್ಯವಾಗಿ ಗಾಯಗೊಂಡ ಭಾಗ ಹಿಗ್ಗಿಸಲ್ಪಡುವುದರಿಂದ ಅಲ್ಲಿರುವ ಸ್ಪರ್ಶಕಣಗಳೂ ಉದ್ರೇಕಗೊಂಡು ಅಂಥ ಪ್ರತಿಯೊಂದು ಸಮಯದಲ್ಲೂ ನೋವು ಹೆಚ್ಚಾಗುವಂತೆ ತೋರುತ್ತದೆ. ಇದೇ ತುಡಿತ. ಬಹುಶಃ ನೋವಿನ ನರಾಗ್ರಗಳ ಸೂಕ್ಷ್ಮತೆಯೂ ಇಂಥ ಸಂದರ್ಭಗಳಲ್ಲಿ ಅಧಿಕಗೊಂಡಿರುತ್ತದೆ.

ಸೂಜಿಯಿಂದ ಚರ್ಮವನ್ನು ಚುಚ್ಚಿದರೆ ಅದರ ಮೊನೆ ಚರ್ಮದೊಳಕ್ಕೆ ಹೋಗುವವರೆಗೂ ನೋವಾಗುವುದಿಲ್ಲ. ಅನಂತರ ತತ್‌ಕ್ಷಣದ ಚುಚ್ಚುನೋವಿನ ಅನುಭವವಾಗುತ್ತದೆ. ಇದು ಅಷ್ಟಾಗಿ ನೋವು ಎಂದು ಹೇಳುವಂತಿರುವುದಿಲ್ಲ. ಆದರೆ ಚುಚ್ಚಿದ ಅರಿವು ಉಂಟಾಗುತ್ತದೆ. ಕೆಲವು ಕ್ಷಣಗಳಾದ ಬಳಿಕ ನಿಧಾನವಾಗಿ ಪ್ರತ್ಯಕ್ಷ ನೋವಿನ ಅರಿವು ಉಂಟಾಗುವುದು. ಕಾಲಮೇಲೆ ಚುಚ್ಚಿದರೆ ತತ್‌ಕ್ಷಣದ ವೇಗಯಾತನೆಗೂ (ಫಾಸ್ಟ್ ಪೇನ್) ಅನಂತರದ ನಿಧಾನ ಯಾತನೆಗೂ (ಸ್ಲೋ ಪೇನ್) ಇರುವಷ್ಟು ಕಾಲಾಂತರ ಕೈಮೇಲೆ ಅಥವಾ ಮುಖದ ಮೇಲೆ ಚುಚ್ಚಿದರೆ ಇರುವುದಿಲ್ಲ. ಕೊಕೇನ್ ಚುಚ್ಚುಮದ್ದು ಮಾಡಿ ಅನಂತರ ಸೂಜಿಯಿಂದ ಚುಚ್ಚಿದರೆ ವೇಗಯಾತನೆ ಕಾಣಬರುವುದಿಲ್ಲ. ಆದರೆ ನಿಧಾನಯಾತನೆ ತೀವ್ರವಾಗಿಯೂ ಬಹುಕಾಲಿಕವಾಗಿಯೂ ಇರುತ್ತದೆ. ವಿಕಿರಣ ಅಥವಾ ವಿಸರಿತ ಉಷ್ಣ (ರೇಡಿಯಂಟ್ ಹೀಟ್) ಚರ್ಮಕ್ಕೆ ತಾಗಿದರೆ ಮೊದಲು ಚುರುಕ್ ಎಂಬ ನೋವು ಆ ಕ್ಷಣದಲ್ಲಿ ಮಾತ್ರ ಅನುಭವವಾಗಿ ಅನಂತರ ನಿಧಾನವಾಗಿ ಉರಿ ಪ್ರಾರಂಭವಾಗುತ್ತದೆ. ಕೊಕೇನ್ ಉಪಯೋಗದಿಂದ ಈ ಉರಿಯ ಅನುಭವ ಆಗಲಾರದ್ದರಿಂದ ವಿಸರಿತ ಉಷ್ಣದಿಂದ ಚರ್ಮವನ್ನು ಸುಟ್ಟು ಹಾಕಬಹುದು. ಒಂದು ಸ್ಥಳದ ನೋವು ಇನ್ನೊಂದು ಸ್ಥಳದಲ್ಲಿ ಅದಕ್ಕಿಂತ ತೀವ್ರವಾದ ನೋವು ಉಂಟಾದಾಗ ಲಕ್ಷ್ಯದಿಂದ ತಪ್ಪಿಹೋಗುತ್ತದೆ. ನೋವಾದಾಗ ಭದ್ರವಾಗಿ ತುಟಿ ಕಚ್ಚಿಕೊಳ್ಳುವುದೂ ಬಿಗಿಯಾಗಿ ಕೈಕೈಹಿಸುಕಿಕೊಂಡು ಮುಷ್ಟಿ ಬಿಗಿದುಕೊಳ್ಳುವುದೂ ಈ ಕಾರಣಕ್ಕಾಗಿ, ನೋವು ಶಮನಕ್ಕೆ ಪ್ರತಿನೋವಿನ (ಕೌಂಟರ್ ಇರಿಟೇಷನ್) ಗುಟ್ಟು ಇದೇ.

ನರಗಳ ಭೌತ ಅಥವಾ ರಾಸಾಯನಿಕ ಪ್ರಚೋದನೆಗಳಿಂದ ನೋವು ಉಂಟಾಗುತ್ತದೆ. ಭೌತವಾಗಿ ಅಗಾಧ ಉಷ್ಣಶೀತಗಳನ್ನು ಉಂಟುಮಾಡುವಿಕೆ, ವಿದ್ಯುತ್ಪ್ರಚೋದನೆ, ವಸ್ತುಗಳ ಘರ್ಷಣೆ ಇವುಗಳಿಂದ ಆಗುವ ಗಾಯದಿಂದ ನೋವು ಉಂಟಾಗುತ್ತದೆ. ಮೊಣಕಾಲಿನ ಮೇಲೆಯೋ ತಲೆಯ ಮೇಲೆಯೋ ಏಟು ಬಿದ್ದಾಗ ಇಲ್ಲವೆ ಕೂದಲನ್ನು ಎಳೆದು ಚರ್ಮವನ್ನು ಹಿಗ್ಗಿಸಿದಾಗ ನೋವು ಉಂಟಾಗುತ್ತದೆ. ಸೂಜಿಯಿಂದ ಚುಚ್ಚಿದಾಗ ಉಂಟಾಗುವ ಕ್ಷಣಿಕ ನೋವಿನ ಸಂದರ್ಭದಲ್ಲಿ ನೋವಿಗೆ ರಾಸಾಯನಿಕ ಕಾರಣಗಳು ಇರುತ್ತವೋ ಇಲ್ಲವೋ ಖಚಿತವಾಗಿಲ್ಲ. ಆದರೆ ಬಾಸುಂಡೆ ಬರಿಸುವ ಬಿರುಸಾದ ಏಟು, ಬೊಬ್ಬೆ ಬರಿಸುವಂಥ ಸುಡುಗಾಯ ಇಂಥ ಕ್ಷಣಿಕವಾಗಲ್ಲದೆ ಬಹುಕಾಲಿಕವಾಗಿಯೂ ನೋವು ಇರುವ ಸಂದರ್ಭಗಳಲ್ಲಿ ಬಹುಕಾಲಿಕವಾದ ನೋವಿಗಂತೂ ರಾಸಾಯನಿಕಗಳು ಕಾರಣವೆಂದು ನಂಬಲಾಗಿದೆ. ಎಕ್ಸ್‌ಕಿರಣ ಮತ್ತು ಅತಿನೇರಿಳೆ ಕಿರಣಗಳಿಂದ ಉಂಟಾದ ಸುಟ್ಟಗಾಯಗಳಲ್ಲಿ ಕಿರಣಗಳು ತಾಕಿದ ಕ್ಷಣದಲ್ಲಿ ನೋವಿನ ಅರಿವು ಉಂಟಾಗದಿದ್ದರೆ ಸ್ವಲ್ಪ ಕಾಲ ಕಳೆದ ಮೇಲೆ ದೀರ್ಘಕಾಲೀನ ನೋವು ಉಂಟಾಗುವುದು. ಆ ಕಿರಣಗಳಿಂದ ಚರ್ಮದ ಅಡಿ ಊತಕಗಳಲ್ಲಿ ಬಿಡುಗಡೆ ಮಾಡಲ್ಪಟ್ಟ ರಾಸಾಯನಿಕಗಳೇ ಇದಕ್ಕೂ ಕಾರಣ. ಶಕ್ತಿಯುತ ಆಮ್ಲಗಳು, ಕ್ಷಾರಗಳು ಹಾಗೂ ಕ್ಲೋರೋಫಾರಮ್ ಇವು ಚರ್ಮಕ್ಕೆ ಸೋಕಿದರೂ ನೋವು ಉಂಟಾಗುತ್ತದೆ. ಚರ್ಮವನ್ನು ಇವು ನಾಶಪಡಿಸುವುದೇ ಇದರ ಕಾರಣ. ಶರೀರ ದ್ರವದ (ಬಾಡಿ ಫ್ಲೂಯಿಡ್) ಲವಣಾಂಶಕ್ಕಿಂತ ಬಹುಕಡಿಮೆ ಅಥವಾ ಹೆಚ್ಚು ಲವಣಾಂಶವಿರುವ ದ್ರವವನ್ನು ಆರ್ಸೆನಿಕ್ ಮತ್ತು ಪಾದರಸದ ಆರ್ಗ್ಯಾನಿಕ್ ಸಂಯುಕ್ತಗಳನ್ನು ಚುಚ್ಚುಮದ್ದಿನ ರೀತಿ ಚರ್ಮದೊಳಕ್ಕೆ ಕೊಟ್ಟರೂ ನೋವಾಗುತ್ತದೆ. ತುರುಚೆ, ನಸುಗುನ್ನಿಯಂಥ ಸಸ್ಯಗಳ ಹಾಗೂ ಕಂಬಳಿಹುಳುವಿನ ಸ್ಪರ್ಶ, ಜೇನು, ಕಣಜ ಚೇಳುಗಳ ವಿಷ ಇವು ನೋವನ್ನು ಉಂಟುಮಾಡುತ್ತವೆ. ಆದರೆ ಚರ್ಮದಲ್ಲೇ ಉತ್ಪತ್ತಿಯಾಗುವ ಅಥವಾ ಬಿಡುಗಡೆಯಾಗುವ ರಾಸಾಯನಿಕಗಳು ಮುಖ್ಯ– ಚರ್ಮದಲ್ಲಿ ಒಂದು ಬೊಬ್ಬೆಯನ್ನು ಉಂಟುಮಾಡಿ ಅದನ್ನು ಒಡೆದು ಹಸಿಗಾಯದ ಮೇಲೆ ರಾಸಾಯನಿಕಗಳನ್ನು ಸೋಕಿಸಿ ಅವು ನೋವನ್ನು ಉಂಟುಮಾಡಬಲ್ಲವೇ ಎಂದು ಪರೀಕ್ಷಿಸಲಾಗಿದೆ. ಆಗ 1ಮಿಲೀ.ನಲ್ಲಿ 10 ಮೈಕ್ರೋಗ್ರಾಮಿಗೆ ಮೇಲ್ಪಟ್ಟು ಅಸಿಟೈಲ್‌ಕೋಲಿನ್, 10 ಮೈಕ್ರೋಗ್ರಾಮಿಗೆ ಮೇಲ್ಪಟ್ಟು ಹಿಸ್ಟಮಿನ್, 0.1 ಮೈಕ್ರೋಗ್ರಾಮಿಗೆ ಮೇಲ್ಪಟ್ಟು ಸೀರೋಟೋನಿನ್, 3 ಮಿಲಿಗ್ರಾಮಿಗೆ ಕಡಿಮೆ ಇಲ್ಲದೆ ಅಥವಾ 30 ಮಿಲಿಗ್ರಾಮಿಗೆ ಹೆಚ್ಚಾಗಿ ಸೋಡಿಯಮ್ ಕ್ಲೋರೈಡ್, 100 ಮಿಲಿಗ್ರಾಮಿಗೆ ಹೆಚ್ಚಾಗಿ ಪೊಟ್ಯಾಸಿಯಮ್ ಕ್ಲೋರೈಡ್ ಇರುವ ದ್ರವಗಳು ನೋವನ್ನು ಉಂಟುಮಾಡುವುವೆಂದು ಕಂಡುಬಂದಿದೆ. ಅಲ್ಲದೆ ಬೊಬ್ಬೆಯೊಳಗಿನ ದ್ರವ, ಊತಗಾಯಗಳ ಸ್ರಾವ, ಪ್ಲಾಸ್ಮ ಇವನ್ನು ಗಾಜಿನ ಪಾತ್ರೆಯೊಳಗಿಟ್ಟಿದ್ದರೆ ಅವೂ ವೇದನಾಕಾರಕಗಳಾಗುತ್ತವೆ. ಬಹುಶಃ ಈ ಸಂದರ್ಭದಲ್ಲಿ ವೇದನಾಕಾರಿ ವಸ್ತುಗಳ ಗಾಜಿನ ಸಂಪರ್ಕದಿಂದ ಪ್ರಾರಂಭಗೊಂಡ ರಾಸಾಯನಿಕ ಕ್ರಿಯೆಗಳಿಂದ ತಮ್ಮ ಮಾತೃರಾಸಾಯನಿಕಗಳಿಂದ (ಮದರ್ ಸಬ್‌ಸ್ಟೆನ್ಸ್) ಉತ್ಪತ್ತಿಯಾಗುತ್ತವೆ. ಪ್ಲಾಸ್ಮಕೈನಿನುಗಳೆಂಬ ಈ ವಸ್ತುಗಳನ್ನು ಬ್ರಾಡಿಕೈನಿನ್, ಲೆವಿಸ್ಸಿನ P ಎಂಬ ವಸ್ತು ಇತ್ಯಾದಿಗಳಾಗಿ ಗುರುತಿಸಿದ್ದಾರೆ. ಗಾಯಗೊಂಡಾಗ ಸ್ರವಿಸಿದ ರಕ್ತದಿಂದ ಇವು ಉತ್ಪತ್ತಿಯಾಗುವುವಲ್ಲದೆ ರಕ್ತಕಣಗಳು ಛಿದ್ರಿಸುವುದರಿಂದ ಹಿಸ್ಟಮಿನ್ ಮತ್ತು ಸೀರೋಟೋನಿನುಗಳೂ ಬಿಡುಗಡೆ ಆಗುತ್ತವೆ. ಇವೆಲ್ಲವೂ ಸೇರಿ ನೋವನ್ನು ಉಂಟುಮಾಡುವುವು. ನಸುಗುನ್ನಿ, ತುರುಚೆ, ವಗ್ಗೆರೆಗಳಲ್ಲಿರುವ ವೇದನಾಕಾರಿಗಳಲ್ಲಿ ತಕ್ಕಷ್ಟು ಅಸಿಟೈಲ್ ಕೋಲಿನ್, ಹಿಸ್ಟಮಿನ್ ಮತ್ತು ಸೀರೋಟೋನಿನುಗಳು ಇರುತ್ತವೆ. ಕಣದ ವಿಷದಲ್ಲಿ ಅಧಿಕವಾಗಿ ಹಿಸ್ಟಮಿನ್ ಸೀರೋಟೋನಿನುಗಳೂ ಪ್ಲಾಸ್ಮಕೈನಿನ್ನಿನಂಥ ವಸ್ತುವೂ ಇರುವುದು ಕಂಡುಬಂದಿದೆ. ವಾಸ್ತವವಾಗಿ ಹಿಸ್ಟಮಿನ್, ಸೀರೋಟೋನಿನ್ ಪ್ಲಾಸ್ಮಕೈನಿನುಗಳ ಮಿಶ್ರಣ ಅತ್ಯಂತ ತೀಕ್ಷ್ಣವಾದ ವೇದನಾಕಾರಕ.

ಚರ್ಮದಲ್ಲಿ ಅರಿವಾಗುವ ನೋವು ಸ್ಥಳೀಯ ಕಾರಣಗಳಿಂದಲ್ಲದೆ ಗಮನ ಸೆಳೆಯುವ ನೋವು ಕೂಡ (ರೆಫರ್ಡ್ ಪೇನ್) ಆಗಿರಬಹುದು. ಗಮನ ಸೆಳೆಯುವ ನೋವು ವಾಸ್ತವವಾಗಿ ದೇಹದ ಒಳ ಅಂಗದ ಘಾತದಿಂದ ಉಂಟಾಗಿ ಭ್ರೂಣಾವಸ್ಥೆಯಲ್ಲಿ ಆ ಅಂಗಕ್ಕೆ ಸಂಬಂಧ ಪಟ್ಟಿರುವ ಚರ್ಮ ಕ್ಷೇತ್ರದಲ್ಲಿ (ಡರ್ಮಟೋಮ್) ಕಾಣಿಸಿಕೊಳ್ಳುವುದರಿಂದ ಅದಕ್ಕೆ ಈ ಹೆಸರಿದೆ. (ಗಮನ ಸೆಳೆಯುವ ನೋವು ಉಂಟಾದ ಸ್ಥಳದಲ್ಲಿ ಪ್ರತಿವೇದನೆಯನ್ನು ಉಂಟುಮಾಡಿದರೆ ಮೂಲ ನೋವು ಶಮನವಾಗುವುದು ಕಂಡುಬಂದಿದೆ.) ಸಾಮಾನ್ಯವಾಗಿ ನೋವನ್ನು ಉಂಟುಮಾಡದ ಪ್ರಚೋದನೆಗಳು ನೋವನ್ನು ಉಂಟುಮಾಡುವ ಇಲ್ಲವೆ ಸಾಮಾನ್ಯ ವೇದನಾಕಾರಿಗಳು ಅತೀವವಾಗಿ ನೋವನ್ನು ಉಂಟುಮಾಡುವ ಸಂದರ್ಭಕ್ಕೆ ಅತೀವ ಸಂವೇದನೆ (ಹೈಪರ್ ಆಲ್ಜೀಸಿಯ) ಎಂದು ಹೆಸರು. ಗಾಯದಿಂದ ಊತ ಉಂಟಾಗಿ ಊದಿಕೊಂಡಿರುವ ಸ್ಥಳದಲ್ಲಿ ಕೆಲವು ವೇಳೆ ಅದರ ಸುತ್ತಲೂ ಇಂಥ ಸಂವೇದನೆ ಇರುತ್ತದೆ.

ಕಡಿತ : ಇದನ್ನು ನವೆ, ತಿನಸು ಎಂದೂ ಧಾರವಾಡದ ಕಡೆ ತಿಂಡಿ ಎಂದೂ ಕರೆಯುತ್ತಾರೆ (ಇಚ್). ಬಹುಶಃ ಇದೇ ಪ್ರತ್ಯೇಕವಾದ ಸಂವೇದನೆ. ಹೊರತ್ವಚೆಯನ್ನು ತೆಗೆದು ಹಾಕಿದರೆ ಬೇರೆ ಸಂವೇದನೆಗಳು ಇರಬಹುದಾದರೂ ಕಡಿತವಿರುವುದಿಲ್ಲ. ಕಡಿತವೂ ನೋವೂ ಸ್ವಲ್ಪಮಟ್ಟಿಗೆ ಪರಸ್ಪರ ಹೋಲುತ್ತವೆ. ಮಿದುಳುಬಳ್ಳಿಯಲ್ಲಿ ನೋವಿನ ನರತಂತುಗಳನ್ನು ಕತ್ತರಿಸಿದರೆ ನೋವಿನೊಡನೆ ಕಡಿತವೂ ಸಾಮಾನ್ಯವಾಗಿ ನಾಶವಾಗುತ್ತದೆ. ಅಲ್ಪ ವಿದ್ಯುತ್ಪ್ರಚೋದನೆ, ಅಲ್ಪ ಉಷ್ಣ ಇವುಗಳಿಂದ ಕಡಿತವನ್ನೂ ಅತ್ಯಧಿಕ ಪ್ರಚೋದನೆಯಿಂದ ನೋವನ್ನೂ ಉಂಟುಮಾಡಬಹುದು. ಕಡಿತ ಏಕಕಾಲಿಕವಾಗಿ ನೋವು ಮತ್ತು ಸ್ಪರ್ಶಗಳ ಸಂವೇದನೆ ಉಂಟಾಗುವುದರಿಂದ ಎಂಬ ಅಭಿಪ್ರಾಯವೂ ಇದೆ. ಆದರೆ ಕೆಲವು ವಿಷಯಗಳನ್ನು ಗಮನಿಸಬಹುದು. ಕಡಿಯುವ ಸ್ಥಳವನ್ನು ಬಹಿರಂಗಿಸಿ ಕಡಿತವನ್ನು ಶಮನಮಾಡಿಕೊಳ್ಳಲು ಕೆರೆದುಕೊಳ್ಳಲಾಗುತ್ತದೆ. ನೋಯುವ ಸ್ಥಳವನ್ನು ಹುದುಗಿಸಿ ರಕ್ಷಿಸಬೇಕೆನ್ನಿಸುವುದು. ಕೆರೆದರೆ ನೋವು ಜಾಸ್ತಿಯಾದರೆ ಉಗುರುಬೆಚ್ಚಗಿನ ಶಾಖದಿಂದ ಅದು ಶಮನವಾಗುತ್ತದೆ. ನೋವು, ಅದರಲ್ಲೂ ಉರಿನೋವು ಶಾಖದಿಂದ ಅಧಿಕವಾಗುತ್ತದೆ. ಮಾರ್ಫಿನ್ ಚುಚ್ಚುಮದ್ದಿನಿಂದ ನೋವು ಕಡಿಮೆ ಆಗುತ್ತದೆ; ಆದರೆ ಕಡಿತ ಹೆಚ್ಚುತ್ತದೆ. ಹಿಸ್ಟಮಿನ್ ನಸುಗುನ್ನಿ ಇತ್ಯಾದಿಗಳು ಮೊದಲು ಉಂಟು ಮಾಡುವುದು ಕಡಿತ, ಅನಂತರ ಉರಿನೋವು. ಪ್ರಚೋದನೆ ಕಡಿಮೆಯಾಗಿದ್ದರೆ ಬರೀ ಕಡಿತದಲ್ಲೇ ಪರ್ಯವಸಾನವಾಗಬಹುದು. ಮಿದುಳುಬಳ್ಳಿಯಲ್ಲಿ ನೋವಿನ ನರಗಳನ್ನು ಛಿದ್ರಿಸಿದರೆ ಹಿಸ್ಟಮಿನ್ನಿನಿಂದ ನೋವಾಗುವುದು ತಪ್ಪುತ್ತದೆ. ಆದರೆ ಕಡಿತವಿದ್ದೇ ಇರುತ್ತದೆ. ಇವೆಲ್ಲವುಗಳಿಂದ ಕಡಿತ ಪ್ರತ್ಯೇಕ ಸಂವೇದನೆಯೋ ನೋವು ಸ್ಪರ್ಶಗಳ ಮಿಶ್ರಿತ ಸಂವೇದನೆಯೋ ಎಂದು ಗೊತ್ತಾಗುವಂತಿಲ್ಲ (ಕಾಮಾಲೆ, ಮಧುಮೇಹ ಮುಂತಾದ ರೋಗಗಳಲ್ಲಿ ಅವ್ಯಕ್ತ ಕಾರಣಗಳಿಂದ ಕಡಿತ ಉಂಟಾಗಬಹುದು).

ಕಚಗುಳಿ : ಬಹು ಹಗುರವಾಗಿ ಸ್ಪರ್ಶಿಸುವ ವಸ್ತು ದೇಹದ ಮೇಲೆ ಚಲಿಸಿದಾಗ ಇಲ್ಲವೇ ಚಲಿಸಲ್ಪಟ್ಟಾಗ ಉಂಟಾಗುವ ಸಂವೇದನೆ. ಇದರ ಅರಿವನ್ನು ಉಂಟುಮಾಡುವ ನರಗಳೂ ಕಡಿತದ ನರಗಳಂತೆಯೇ ನೋವು ನರಗಳ ಜೊತೆಯೇ ಕ್ರಮಿಸಿ ಮಿದುಳನ್ನು ತಲಪುತ್ತವೆ. ಕಡಿತದಂತೆಯೇ ಕಚುಗುಳಿ ಆದಾಗಲೂ ಕೆರೆದುಕೊಳ್ಳಬೇಕೆನ್ನಿಸುತ್ತದೆ. (ಬಹುಶಃ ಕಡಿತದಂತೆಯೇ ಕಚಗುಳಿಯೂ ಸ್ಪರ್ಶನೋವುಗಳ ಸಂಯುಕ್ತ ಸಂವೇದನೆ ಎಂದು ಕಾಣಿಸುತ್ತದೆ.) ಮಿದುಳು ಬಳ್ಳಿಯಲ್ಲಿ ನೋವಿನ ನರಗಳನ್ನು ಕಡಿದರೆ ಕಚಗುಳಿ ಉಂಟಾಗುವುದು ನಿಂತುಹೋಗುತ್ತದೆ. ಹಾಗೇ ಚರ್ಮಕ್ಕೆ ಪೂರೈಕೆಯಾಗುವ ರಕ್ತವನ್ನು ಪ್ರಾಯೋಗಿಕವಾಗಿ ಕಡಿಮೆ ಮಾಡಿದರೆ ಸ್ಪರ್ಶಜ್ಞಾನ ಮಂದವಾಗಿ ಕಚಗುಳಿ ಉಂಟಾಗುವುದೂ ಲೋಪವಾಗುತ್ತದೆ. ಆದರೆ ನೋವು ಇದರಿಂದ ಮಾರ್ಪಾಡಾಗುವುದಿಲ್ಲ.

**ನೋವಿನ ಸಂವೇದನಾ ಲೋಪಸ್ಥಿತಿ (ಅನಾಲ್ಜೆಸಿಯ) :** ಇದು ಅಪರೂಪವಾಗಿ ಆಜನ್ಮವಾಗಿ ಕಂಡುಬರುವ ಸ್ಥಿತಿ. ಇದರಿಂದ ವ್ಯಕ್ತಿಯ ಆರೋಗ್ಯಕ್ಕೆ ಸಾಮಾನ್ಯವಾಗಿ ಕುಂದಿರುವುದಿಲ್ಲ. ಇಂಥ ಒಬ್ಬ ವ್ಯಕ್ತಿಯಲ್ಲಿ ಚರ್ಮವನ್ನು ಚುಚ್ಚಿದರೆ, ಸುಟ್ಟರೆ, ಸ್ನಾಯುಗಳ ರಕ್ತಪೂರೈಕೆಗೆ ಅಡ್ಡಿಪಡಿಸಿದರೆ, ವೃಷಣಗಳನ್ನು ಬಲವಾಗಿ ಅವುಕಿದರೆ, ಹಿಸ್ಟಮಿನ್ನನ್ನು ಚುಚ್ಚುಮದ್ದಾಗಿ ಕೊಟ್ಟರೆ ಯಾವ ಸಂದರ್ಭದಲ್ಲೂ ನೋವು ಉಂಟಾಯಿತೆಂಬುದಕ್ಕೆ ಸೂಚನೆ ಕಾಣಲಿಲ್ಲ. ವೃಷಣಗಳನ್ನು ಅಮುಕಿದಾಗ ಹೊಟ್ಟೆತೊಳಸು, ವಾಕರಿಕೆಗಳುಂಟಾದುವೇ ಹೊರತು ಮಿಕ್ಕ ಸಂದರ್ಭಗಳಲ್ಲಿ ಬೆವರುವುದಾಗಲಿ, ರಕ್ತದ ಒತ್ತಡದ ಬದಲಾವಣೆ ಆಗಲಿ, ಗುಂಡಿಗೆಯ ಮಿಡಿತ ಶ್ವಾಸಕ್ರಮದ ಬದಲಾವಣೆಯಾಗಲಿ ಕಂಡುಬರಲಿಲ್ಲ. ಈತನಲ್ಲಿ ಸ್ಪರ್ಶ ಶೀತೋಷ್ಣಗಳ ಸಂವೇದನೆ ಸಹಜವಾಗಿಯೇ ಇದ್ದಿತು. ಬಹುಶಃ ನೋವಿನ ನರಾಗ್ರಗಳು ಮಿದುಳಿನಲ್ಲಿ ಸಂಪರ್ಕಗೊಳ್ಳದೆ ಸಂವೇದನೆಯ ಅರಿವು ನಾಶ ವಾಗಿರುತ್ತದೆ ಎಂದು ತೋರುವುದು.

4 ಸ್ತನಿಗಳ ದೇಹೋಷ್ಣತೆಯ ನಿಯಂತ್ರಣದಲ್ಲಿ ಚರ್ಮದ ಪಾತ್ರ : ಸ್ತನಿಗಳ ದೇಹೋಷ್ಣತೆ ಹೊರಾವರಣದ ಶೀತೋಷ್ಣಗಳಿಂದ ವ್ಯತ್ಯಾಸಗೊಳ್ಳದೆ ಒಂದೇ ಮಟ್ಟ ದಲ್ಲಿರುವುದು ಅವುಗಳ ಒಂದು ಪ್ರಮುಖ ಲಕ್ಷಣ. ಇದು ಸತತ ದೇಹಕಾರ್ಯಗಳಿಂದಾಗುವ ಉಷ್ಣೋತ್ಪತ್ತಿ ಮತ್ತು ಸಾಧಾರಣವಾಗಿ ದೇಹಕ್ಕಿಂತ ತಂಪಾಗಿರುವ ಬಾಹ್ಯಾವರಣದ ಸಂಪರ್ಕದಿಂದ ಸ್ವಾಭಾವಿಕ ಭೌತ ಕಾರಣಗಳಿಗೆ ಅನುಸಾರವಾಗಿ ಆಗುವ ಉಷ್ಣ ನಷ್ಟ ಇವುಗಳ ಸಮತೋಲದಿಂದ ಲಭಿಸುವ ಸ್ಥಿತಿ. ಬಾಹ್ಯಾವರಣವು ದೇಹಕ್ಕಿಂತ ತಂಪಾಗಿಲ್ಲದಿದ್ದಾಗ ಉಷ್ಣನಷ್ಟ ಕಡಿಮೆ ಆಗಿ ಈ ಸಮತೋಲ ಸಾಧ್ಯವಿಲ್ಲದೆ ದೇಹೋಷ್ಣತೆ ಹೆಚ್ಚುವಂಥ ಪ್ರಮೇಯವೂ ಬಾಹ್ಯಾವರಣ ಅತಿ ಶೀತವಾಗಿದ್ದರೆ ದೇಹೋಷ್ಣತೆ ಕಡಿಮೆಯಾಗುವಂಥ ಪ್ರಮೇಯವೂ ಉಂಟಾಗುತ್ತದೆ. ಇದನ್ನು ನಿವಾರಿಸಲು ಚರ್ಮ ಎರಡು ಬಗೆಯ ಪ್ರತಿಕ್ರಿಯೆಗಳನ್ನು ತೋರಿಸುತ್ತದೆ. ಮೊದಲನೆಯದು ಚರ್ಮದ ರಕ್ತವಾಹಿನಿಯಲ್ಲಿ ಆಗುವ ವ್ಯತ್ಯಾಸ. ಎರಡನೆಯದು ಸ್ವೇದಗ್ರಂಥಿ ರೋಮಗಳು ವಹಿಸುವ ಪಾತ್ರ. ಪ್ರಧಾನವಾಗಿ ಈ ಪ್ರತಿಕ್ರಿಯೆಗಳು ಚರ್ಮದಿಂದಲೇ ಒದಗುವ ದೇಹೋಷ್ಣತೆಯ ಅಲ್ಪತೆ ಆಧಿಕ್ಯಗಳ ಜ್ಞಾನದಿಂದ ನರಗಳ ಮೂಲಕ ಉಂಟಾಗುತ್ತವೆ. ಹೊರಗಡೆ ಚಳಿ ಹೆಚ್ಚಾಗಿ ದೇಹದಿಂದ ಹೆಚ್ಚು ಉಷ್ಣ ನಷ್ಟವಾಗುವಂತಿದ್ದರೆ ಚರ್ಮದಲ್ಲಿ ಚಳಿಯಿಂದ ಉಂಟಾಗುವ ನರಪ್ರಚೋದನೆಯಿಂದ ಚರ್ಮದ ಧಮನಿಗಳು ಕುಗ್ಗುತ್ತವೆ. ಅಲ್ಲದೆ ನೇರ ಸಂಪರ್ಕನಾಳಗಳ ಮೂಲಕ ರಕ್ತ ಅಭಿಧಮನಿಗಳಿಂದ ಅಪಧಮನಿಗಳಿಗೆ ಹರಿಯುತ್ತದೆ. ಇದರಿಂದ ಚರ್ಮದಲ್ಲಿ ರಕ್ತಪರಿಚಲನೆ ಕಡಿಮೆಯಾಗಿ ರಕ್ತಶೀತಕ್ಕೆ ಒಡ್ಡಲ್ಪಡುವುದರಿಂದ ಆಗುವ ಉಷ್ಣನಷ್ಟವೂ ಕಡಿಮೆ ಆಗುತ್ತದೆ. ಅಲ್ಲದೆ ಅದೇ ನರಪ್ರಚೋದನೆಯಿಂದ ಚಳಿಯಾದಾಗ ರೋಮಾಂಚನವಾಗುವುದರಿಂದ ನಿಮಿರಿದ ಕೂದಲುಗಳ ನಡುವೆ ಹೆಚ್ಚು ವಾಯು ಬಂಧಿಸಲ್ಪಟ್ಟು, ಅದೇ ಹೊದಿಕೆಯಾಗಿ ವರ್ತಿಸಿ ದೇಹದಿಂದ ಆವರಣಕ್ಕೆ ಆಗಬಹುದಾದ ಉಷ್ಣ ವರ್ಗಾವಣೆಯನ್ನು ತಡೆಯುತ್ತದೆ. ಚಳಿಯಿಂದ ಅಡ್ರಿನಲ್ ಗ್ರಂಥಿಯೂ ನರಗಳ ಮೂಲಕ ಪ್ರಚೋದನೆಗೊಂಡು ಅಡ್ರಿಲಿನ್ನನ್ನು ಬಿಡುಗಡೆ ಮಾಡುತ್ತದೆ. ಇದೂ ಚರ್ಮದಲ್ಲಿ ಮೇಲೆ ಹೇಳಿದ ಎರಡು ರೀತಿಯಲ್ಲೂ ಪ್ರವರ್ತಿಸಿ ಉಷ್ಣನಷ್ಟವನ್ನು ಮಿತಗೊಳಿಸುತ್ತದೆ.

ಬಾಹ್ಯಾವರಣದ ಉಷ್ಣಮಟ್ಟ ದೇಹೋಷ್ಣತೆಗೆ ಸಮೀಪವಾಗಿದ್ದರೆ ಇಲ್ಲವೆ ಹೆಚ್ಚಾಗಿದ್ದರೆ ದೇಹದಿಂದ ಉಷ್ಣನಷ್ಟವಾಗಲಾರದೆ ದೇಹೋಷ್ಣತೆ ಹೆಚ್ಚುತ್ತದೆ. ಚರ್ಮದ ನರತಂತುಗಳಿಂದ ಇದರ ಅರಿವುಂಟಾಗಿ ಅದರಿಂದ ಸೂಕ್ತ ನರಪ್ರಚೋದನೆ ಏರ್ಪಟ್ಟು ಸ್ವೇದಗ್ರಂಥಿಗಳು ಬೆವರನ್ನು ಸ್ರವಿಸಲು ಪ್ರಾರಂಭಿಸುತ್ತವೆ. ಬೆವರು ಹೊರಬಂದು ಆವಿಯಾಗಿ ಹೋಗುತ್ತದೆ. ಹೀಗೆ ಆವಿಯಾಗುವಾಗ ಇದಕ್ಕೆ ಬೇಕಾದ ಉಷ್ಣ ದೇಹದಿಂದಲೇ ಒದಗುವುದರಿಂದ ದೇಹೋಷ್ಣತೆ ಕಡಿಮೆಯಾಗುತ್ತದೆ. ದೇಹೋಷ್ಣತೆಯ ಸಹಜ ನಿಯಂತ್ರಣದ ಆವಶ್ಯಕತೆ ಮಾನವರಲ್ಲಿ ಸಾಮಾನ್ಯವಾಗಿ ಕಾಣಬರುವುದು ಇಂಥ ಸಂದರ್ಭಗಳಲ್ಲೇ. ಏಕೆಂದರೆ ಚಳಿಯ ವಿರುದ್ಧ ದೇಹದ ಉಷ್ಣನಷ್ಟವನ್ನು ಕಡಿಮೆ ಮಾಡಿಕೊಳ್ಳಲು ಮಾನವ ಬಟ್ಟೆ ಬರೆ ಮುಂತಾದ ಸುಲಭ ಮತ್ತು ಕೃತಕ ಸಾಧನಗಳನ್ನು ಮಾಡಿಕೊಂಡಿದ್ದಾನೆ. ಆದರೆ ಸೆಖೆಯ ವಿರುದ್ಧ ಇಂಥ ಸುಲಭೋಪಾಯಗಳಿಲ್ಲ. ಬೀಸಣಿಗೆ ಹಾಕಿಕೊಂಡರೂ ಅದೂ ಸಹಜ ಜೈವಿಕ ಕ್ರಮವಾಗಿ ಉತ್ಪತ್ತಿಯಾದ ಬೆವರನ್ನು ಕೃತಕವಾಗಿ ಶೀಘ್ರವಾಗಿ ಆವಿಯಾಗುವಂತೆ ಮಾಡುವುದು ಮಾತ್ರವೇ ಆಗಿದೆ. ಆವಿಯಾಗಿ ಶರೀರವನ್ನು ತಂಪಾಗಿ ಮಾಡಲು ಸ್ವೇದಗ್ರಂಥಿಗಳು ಎಷ್ಟು ಮಟ್ಟಿಗೂ ಚಟುವಟಿಕೆಯನ್ನು ತೋರಿಸಲು ಸಮರ್ಥವಾಗಿರುತ್ತವೆ. ಅಗತ್ಯ ಬಿದ್ದಾಗ ಗಂಟೆಗೆ ಒಂದು ಲೀಟರಿಗೆ ಮೇಲ್ಪಟ್ಟು ಬೆವರು ಸ್ರಾವವಾಗಿ ಆವಿಯಾಗಿ ಹೋಗುವುದು ತಿಳಿದಿದೆ. ಇಷ್ಟು ಅಧಿಕವಾಗಿ ಬೆವರನ್ನು ಸ್ರವಿಸಲು ಅನುಕೂಲವಾಗುವಂತೆ ಸ್ವೇದಗ್ರಂಥಿಗಳಿಗೆ ತಕ್ಕಷ್ಟು ಅಧಿಕವಾಗಿಯೇ ರಕ್ತಪೂರೈಕೆ ಖಾತರಿಯಾಗಿರುವಂತೆ ಏರ್ಪಟ್ಟಿದೆ. ಸ್ವೇದಗ್ರಂಥಿಗಳ ಚಟುವಟಿಕೆಯ ಪರಿಣಾಮವಾಗಿ ಸ್ಥಳೀಯವಾಗಿ ಬ್ರಾಡಿಕೈನಿನ್ ಎಂಬ ವಸ್ತು ಉತ್ಪತ್ತಿಯಾಗುವುದು. ಅದು ಸ್ಥಳೀಯ ಕಿರುಧಮನಿಗಳನ್ನು ಹಿಗ್ಗಿಸುವುದರಿಂದ ಹೆಚ್ಚು ರಕ್ತ ಹರಿಯಲು ಅವಕಾಶವಾಗುತ್ತದೆ.

**5. ಚರ್ಮದ ಇತರ ಕ್ರಿಯೆಗಳು :** ಚರ್ಮದ ಹೊರತ್ವಚೆ ವಿಷವಸ್ತುಗಳಿಂದ ದೇಹವನ್ನು ರಕ್ಷಿಸುತ್ತದೆ. ಚರ್ಮ ಅಖಂಡವಾಗಿದ್ದಲ್ಲಿ ವಿಷವಸ್ತುಗಳ ಮೇಲೆ ನಾವು ನಿರ್ಯೋಚನೆಯಿಂದ ಕೈ ಆಡಿಸಬಹುದು. ಅದೇ ವಿಷಚರ್ಮದಲ್ಲಿ ಅತ್ಯಲ್ಪ ಗಾಯವಿದ್ದರೂ ಅಪಾಯಕರವಾಗಿ ಪರಿಣಮಿಸಬಹುದು. ಚರ್ಮ ಬೆವರನ್ನು ಸ್ರವಿಸುವುದು ದೇಹೋಷ್ಣತೆಯ ನಿಯಂತ್ರಣಕ್ಕಾಗಿಯಾದರೂ ಅದು ವಿಸರ್ಜನೆ ಮಾರ್ಗವೂ ಹೌದು. ಯೂರಿಯ, ಲ್ಯಾಕ್ಟಿಕ್ ಆಮ್ಲ ಮತ್ತು ಇತರ ವಿಸರ್ಜನ ವಸ್ತುಗಳೂ ಇಂಗಾಲದ ಡೈಆಕ್ಸೈಡೂ ಈ ಮಾರ್ಗವಾಗಿ ಸ್ವಲ್ಪಮಟ್ಟಿಗೆ ವಿಸರ್ಜಿತವಾಗುತ್ತವೆ. ಮಾನವನಲ್ಲಿ ಇಂಗಾಲದ ಡೈಆಕ್ಸೈಡಿನ ವಿಸರ್ಜನೆ ಚರ್ಮದ ಮೂಲಕ ಆಗುವುದು ಅಗಣನೀಯವಾಗಿದ್ದರೂ ಕಪ್ಪೆಯಲ್ಲಿ ಅದು ಅಧಿಕವಾಗಿಯೇ ಇದೆ. ಕಪ್ಪೆಯ ಪುಪ್ಪುಸಗಳನ್ನು ತೆಗೆದು ಹಾಕಿದರೂ ಚರ್ಮದ ಮೂಲಕ ಆಕ್ಸಿಜನ್ನಿನ ಪೂರೈಕೆಯೂ ಇಂಗಾಲದ ಡೈಆಕ್ಸೈಡಿನ ವಿಸರ್ಜನೆಯೂ ಸಾಕಾದಷ್ಟು ಆಗಿ ಕಪ್ಪೆ ಜೀವಂತವಾಗಿರಲು ಸಾಧ್ಯವಾಗಿದೆ. ಮಾನವರಲ್ಲಿಯೂ ಚರ್ಮದ ವಿಸರ್ಜನ ಸಾಮರ್ಥ್ಯ ರೋಗಸ್ಥಿತಿಗಳಲ್ಲಿ ಗಣನೀಯವಾಗಿರುವುದು. ಕಾಮಾಲೆಯಲ್ಲಿ (ಜಾಂಡೀಸ್) ಪಿತ್ತರಸ ವರ್ಣಗಳು (ಬೈಲ್ ಪಿಗ್‌ಮೆಂಟ್ಸ್) ಚರ್ಮದಿಂದ ವಿಸರ್ಜಿಸಲ್ಪಟ್ಟು ತೊಟ್ಟ ಬಟ್ಟೆ ಹಳದಿ

ಯಾಗುವುದು ಕಂಡುಬಂದಿದೆ. ಮಧುಮೇಹರೋಗಿಗಳ ಬೆವರಿನಲ್ಲಿ ಗ್ಲೂಕೋಸ್ ಇರುವುದೂ ತಿಳಿದಿದೆ. ಯುರೀಮಿಯ ರೋಗಸ್ಥಿತಿಯಲ್ಲಿ ಚರ್ಮದಿಂದ ಅಧಿಕವಾಗಿ ಯೂರಿಯ ವಿಸರ್ಜಿತವಾಗಿ ರೋಗಿಯ ವಿಶಿಷ್ಟ ಗಂಧಕ್ಕೆ ಕಾರಣವಾಗಿದೆ. ಚರ್ಮದಲ್ಲಿ ಕೂದಲು ನಿಮಿರುವುದು ಉಷ್ಣತಾನಿಯಂತ್ರಣಕ್ಕಾಗಿ ಮಾತ್ರವಲ್ಲ. ಕೆಲವು ಪ್ರಾಣಿಗಳಲ್ಲಿ ಇದು ರಕ್ಷಣಮಾರ್ಗವಾಗಿ ಕೂಡ ಇರುತ್ತದೆ. ಕೂದಲು ನಿಮಿರಿದ್ದಾಗ ಈ ಪ್ರಾಣಿಗಳು ಸ್ವಾಭಾವಿಕ ಆಕಾರಕ್ಕಿಂತ ದೊಡ್ಡವಾಗಿ ಕಂಡುಬರುವುದರಿಂದ ಶತ್ರುಗಳು ಹಿಮ್ಮೆಟ್ಟಬಹುದು. ಅಲ್ಲದೆ ಕೋಪಗೊಂಡಾಗಲೂ ರೋಮಾಂಚನವಾಗುವುದರಿಂದ ಪ್ರಾಣಿ ತನ್ನ ಕೋಪವನ್ನು ವ್ಯಕ್ತಪಡಿಸುವ ಸಾಧನವಾಗಿದೆ.

ಚರ್ಮದ ವರ್ಣವಿನ್ಯಾಸ ಅನೇಕ ವೇಳೆ ಪರಿಸರಕ್ಕೆ ಹೊಂದಿಕೊಳ್ಳುವಂತೆ ಇರುತ್ತದೆ. ಇದರಿಂದ ಪ್ರಾಣಿಗಳು ಶತ್ರುಗಳಿಂದ ಮರೆಯಾಗಲೂ ಕಣ್ಣು ತಪ್ಪಿಸಿ ಬೇಟೆಯನ್ನು ಹಿಡಿಯಲೂ ಅನುಕೂಲವಾಗುತ್ತದೆ. ಸಿಂಹದ ಮೈಬಣ್ಣ, ಹುಲಿಯ ಪಟ್ಟೆಗಳು, ಶೀತವಲಯದ ಕರಡಿಯ ಮೈಬಿಳುಪು, ಗೋಸುಂಬೆಯ ಬಣ್ಣ ಬದಲಾಯಿಸುವ ಸಾಮರ್ಥ್ಯ ಇವೆಲ್ಲ ಇದಕ್ಕೆ ನಿದರ್ಶನಗಳು. ಅನೇಕ ವಿಷಪೂರಿತ ಹಾವುಗಳು ಎಚ್ಚರಿಕೆ ಕೊಡುವುದಕ್ಕಾಗಿಯೇ ಎನ್ನಿಸುವಂತೆ ಚರ್ಮದಲ್ಲಿ ಗಾಢವರ್ಣವಿನ್ಯಾಸ ಉಳ್ಳವಾಗಿರುತ್ತವೆ. ಕೆಲವು ನಿರುಪದ್ರವಿ ಹಾವುಗಳು ಇವುಗಳಂತೆಯೇ ವರ್ಣವಿನ್ಯಾಸ ಹೊಂದಿ ಶತ್ರುಗಳನ್ನು ವಂಚಿಸಿ ಪಾರಾಗುತ್ತವೆ. ಕೆಲವು ಪಕ್ಷಿಗಳಲ್ಲಿ ವರ್ಣವಿನ್ಯಾಸ ಸಂತಾನಾಭಿವೃದ್ಧಿಯ ಕಾಲದಲ್ಲಿ ಸಂಗಾತಿಯನ್ನು ಕೆರಳಿಸಬಲ್ಲ ವಿಶೇಷ ಮಾರ್ಪಾಡಾಗಿರುತ್ತದೆ.

ಹೊರಕಿವಿನಾಳದ ಚರ್ಮದಲ್ಲಿ ಗುಗ್ಗೆ ಗ್ರಂಥಿಗಳು ಇವೆ. ಇವು ಸ್ರವಿಸುವ ಗುಗ್ಗೆಯ ಕ್ರಿಮಿನಾಶಕ ಮತ್ತು ಅಣುನಾಶಕ. ಕ್ರಿಮಿಕೀಟಗಳು ಕಿವಿಯ ಒಳಗೆ ಹಾನಿ ಮಾಡುವುದರ ವಿರುದ್ಧ ಗುಗ್ಗೆ ರಕ್ಷಣೆ ಒದಗಿಸುತ್ತದೆ. ಕೆಲವು ಪ್ರಾಣಿಗಳ ಚರ್ಮದಲ್ಲಿ ಕೆಂಪು ಗ್ರಂಥಿಗಳಿವೆ. ಇವಿರುವುದು ಸಾಮಾನ್ಯವಾಗಿ ಹೊರ ಪ್ರಜನನಾಂಗ ಮತ್ತು ಗುದದ್ವಾರಗಳಲ್ಲಿ. ಇವುಗಳ ಸ್ರಾವಕ್ಕೆ ವಿಶಿಷ್ಟ ಕಂಪು ಉಂಟು. ಲೈಂಗಿಕ ಪ್ರಾಮುಖ್ಯ ಇದ್ದು ಗಂಡುಹೆಣ್ಣುಗಳು ಲೈಂಗಿಕ ಕ್ರಿಯೆಗಾಗಿ ಸಂಗಾತಿಗಳನ್ನು ಅರಸಲೂ ತಾವು ಲೈಂಗಿಕಕ್ರಿಯೆಗೆ ಸಿದ್ಧವೆಂದು ತಿಳಿಸಲು ಸಹಾಯಕವಾಗಿವೆ. ಪುನುಗಿನ ಬೆಕ್ಕಿನಲ್ಲಿ ಒಸರುವ ಪುನುಗಿಗೂ ಕಸ್ತೂರಿಮೃಗದ ಕಸ್ತೂರಿಗೂ ಬಹುಶಃ ಇಂಥ ಪ್ರಾಮುಖ್ಯವೇ ಇರುವುದಾದರೂ ಮಾನವ ಅವುಗಳಿಂದ ಬೇರೆ ಪ್ರಯೋಜನ ಹೊಂದಿದ್ದಾನೆ.

ಅಖಂಡ ಚರ್ಮದ ಮೂಲಕ ವಸ್ತುಗಳನ್ನು ರಕ್ತಗತ ಮಾಡಿಸುವುದು ಸಾಧ್ಯವಲ್ಲದಿದ್ದರೂ ಅಸಾಧ್ಯವೇನಲ್ಲ. ನೀರು ಮತ್ತು ಆರ್ಗ್ಯಾನಿಕ್ ದ್ರಾವಕ ಎರಡರಲ್ಲೂ ವಿಲೀನವಾಗುವ ವಸ್ತುಗಳನ್ನು ಚರ್ಮದ ಮೇಲೆ ಹಚ್ಚುವುದರಿಂದ ಮತ್ತು ಉಜ್ಜುವುದರಿಂದ ಅವನ್ನು ರಕ್ತಗತವಾಗಿಸಬಹುದು. ಯಾವುದಾದರೂ ಒಂದರಲ್ಲೇ ವಿಲೀನವಾಗುವ ವಸ್ತುಗಳು ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ರಕ್ತಗತವಾಗಬಲ್ಲವು. ಯಾವುದರಲ್ಲೂ ವಿಲೀನವಾಗದ ವಸ್ತುಗಳು ಅಖಂಡ ಚರ್ಮದೊಳಗೆ ಹೊಗಲಾರವು. ಸ್ಯಾಲ್‌ವರ್‌ಸಾನನ್ನು ಕಂಡುಹಿಡಿಯುವುದಕ್ಕೆ ಮುಂಚೆ ಪರಂಗಿ ರೋಗಕ್ಕೆ (ಸಿಫಿಲಿಸ್) ಪಾದರಸ ಸಂಯುಕ್ತಗಳನ್ನು ಈ ರೀತಿ ದೇಹದೊಳಹೊಗಿಸಿ ಚಿಕಿತ್ಸೆ ಮಾಡಲಾಗುತ್ತಿತ್ತು. ಕಾಡ್‌ಮೀನಿನ ಎಣ್ಣೆಯನ್ನು ಕುಡಿಯಲು ಅಸಹ್ಯಪಟ್ಟು ಮೈಗೆ ಹಚ್ಚಿಕೊಂಡು ನೀವಿಕೊಳ್ಳುತ್ತ ಎಣ್ಣೆಯಲ್ಲಿರುವ ಜೀವಸತ್ತ್ವಗಳ ಅನುಕೂಲತೆಯನ್ನು ಸ್ವಲ್ಪ ಮಟ್ಟಿಗಾದರೂ ಪಡೆಯುತ್ತಿದ್ದುದೂ ಉಂಟು. ಟೆಸ್ಟೋಸ್ಟೀರೋನ್ ಎಂಬ ಪುರುಷರ ಲೈಂಗಿಕ ಹಾರ್ಮೋನನ್ನು ಮುಲಾಮಿನ ರೂಪದಲ್ಲಿ ಚರ್ಮದ ಮೇಲೆ ಪ್ರಯೋಗಿಸುವುದು ರೂಢಿಯಲ್ಲಿದೆ.

ಚರ್ಮದ ಬಂಧನಾಂಗಾಂಶ (ಕನೆಕ್ಟಿವ್ ಟಿಷೂ) ದ್ರವ, ಮೇದಸ್ಸುಗಳ ಜಮಾವಣೆಗೆ ಬಹು ಯೋಗ್ಯಸ್ಥಳ. ನೀರು, ಲವಣ ಮತ್ತು ಆಹಾರಗಳನ್ನು ಬಾಯಿಂದ ಸೇವಿಸಲಾಗದಾಗ ಚರ್ಮದೊಳಗೆ ಚುಚ್ಚುಮದ್ದಾಗಿ ಪ್ರಯೋಗಿಸಿ ರಕ್ತಗತವಾಗುವಂತೆ ಮಾಡಲಾಗುತ್ತದೆ. ಪ್ರತಿಯೊಂದು ಸ್ಥಳದಲ್ಲೂ ಸುಮಾರು 50ಮಿಲೀ. ಗಳಷ್ಟು ದ್ರವವನ್ನು ಮೂರು ನಾಲ್ಕು ಕಡೆ ಪ್ರಯೋಗಿಸಬಹುದು. ಇಷ್ಟು ಅಧಿಕ ಪ್ರಮಾಣದಲ್ಲಿ ದ್ರವ ಸ್ಥಳೀಯವಾಗಿ ದಪ್ಪವಾದ ಉಬ್ಬನ್ನು ಉಂಟು ಮಾಡಿ ಸುಮಾರು ಅರ್ಧ ಗಂಟೆಯೊಳಗೆ ಅದು ರಕ್ತಗತವಾಗಿ ಉಬ್ಬು ಇಳಿದು ಹೋಗುತ್ತದೆ. ತೊಟ್ಟು ತೊಟ್ಟಾಗಿ ದ್ರವವನ್ನು ಚರ್ಮದ ಊತಕಕ್ಕೆ ಸೂಜಿಮದ್ದಾಗಿ ಸೇರಿಸಿ ಆ ಕ್ಷಣದಲ್ಲೇ ಅದು ರಕ್ತಗತವಾಗುವಂತೆ ಮಾಡಲು ದ್ರವಕ್ಕೆ ಸ್ವಲ್ಪ ಹಯಲ್ಯೂರೋನಿಡೇಸ್ ಎಂಬ ಕಿಣ್ವ ಸೇರಿಸಲಾಗುವುದು. ಹುದುಗಿಸಿದ ದ್ರವ ಇದರ ನೆರವಿನಿಂದ ಊತಕದಲ್ಲಿ ವ್ಯಾಪಕವಾಗಿ ಹರಡಿ ಶೀಘ್ರವಾಗಿ ರಕ್ತಗತವಾಗುತ್ತದೆ. ಯಥೇಚ್ಛವಾಗಿ ಆಹಾರ ದೊರಕಿದಾಗ ಹೆಚ್ಚಿಗೆ ಆಹಾರ ಮೇದಸ್ಸಾಗಿ ಮಾರ್ಪಟ್ಟು ಚರ್ಮದಲ್ಲಿ ಸಂಗ್ರಹವಾಗುವುದು. ಅತ್ಯಧಿಕವಾಗಿ ಜಮಾವಣೆ ಆದಲ್ಲಿ ಬೊಜ್ಜು ಉಂಟಾಗುತ್ತದೆ. ಜಮಾಯಿಸಿದ ಮೇದಸ್ಸಿಗೆ, ಆಹಾರ ಲಭಿಸದ ಕಾಲದಲ್ಲಿ, ಉಪಯೋಗ ಉಂಟು. ನೈಸರ್ಗಿಕವಾಗಿ ಚರ್ಮದ ಅಡಿ ಅಧಿಕ ಮೇದಸ್ಸು ಜಮಾವಣೆ ಆಗಿ ನಿರಾಹಾರ ಸಮಯದಲ್ಲಿ ಅದು ಉಪಯೋಗವಾಗುವಂತಿರುವುದು ಚಳಿ ನಿದ್ರೆ (ಹೈಬರ್‌ನೇಷನ್) ಮಾಡುವ ಪ್ರಾಣಿಗಳಲ್ಲಿ ಕಂಡುಬರುತ್ತದೆ. ಸ್ಕಂಧಾಸ್ಥಿಗಳ (ಸ್ಕ್ಯಾಪುಲ) ಮಧ್ಯ ಬೆನ್ನುಚರ್ಮದಲ್ಲಿ ಶೈಶವದಲ್ಲಿ ಒಂದು ವಿಶಿಷ್ಟ ಮಾಸಲು ಬಣ್ಣದ ಮೇದಸ್ಸು (ಬ್ರೌನ್ ಫ್ಯಾಟ್) ಇರುತ್ತದೆ. ಇದು ಶಿಶುಗಳ ದೇಹೋಷ್ಣತೆಯ ನಿಯಂತ್ರಣದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆಂದು ತಿಳಿದುಬಂದಿದೆ.

**6. ಚರ್ಮದ ರಸಾಯನ ವೃತ್ತಾಂತ:** ರಾಸಾಯನಿಕ ದೃಷ್ಟಿಯಿಂದ ಚರ್ಮದಲ್ಲಿ ಮುಖ್ಯವಾಗಿ ಡರ್ಮಾಟಿನ್ ಸಲ್ಫೇಟ್ ಎಂಬ ಬಹುಶರ್ಕರವೂ ಕೊಲಾಜೆನ್ ಎಂಬ ವಿಶಿಷ್ಟ ರೀತಿಯ ಪ್ರೋಟೀನೂ ಸ್ನಿಗ್ಧ ಪದಾರ್ಥಗಳೂ ಇವೆ. ಅಲ್ಲದೆ ಇನ್ನೂ ಇತರ ಪ್ರೋಟೀನುಗಳೂ ಇವೆ. ಡರ್ಮಾಟಿನ್ ಸಲ್ಫೇಟ್ ಅಥವಾ ಕಾಂಡ್ರಾಯಿಟಿನ್ ಸಲ್ಫೇಟ್




**ಚಿತ್ರ 3. ಡರ್ಮಾಟಿನ್ ಸಲ್ಫೇಟಿನಲ್ಲಿ ಪುನರುಕ್ತಿಯಾಗುವ ಮಾನ**

B ಎಂಬ ಬಹುಶರ್ಕರದಲ್ಲಿ N–ಅಸಿಟೈಲ್ D–ಕಾಂಡ್ರಾಸಮೀನ್ (2–ಅಸಿಟಮಿಡೋ–2 ಡೀ ಆಕ್ಸಿ ಗ್ಯಲಾಕ್ಟೋಸ), ಹೆಕ್ಸ್ ಯೂರೋನಿಕ್ ಆಮ್ಲ ಮತ್ತು ಸಲ್ಫ್ಯೂರಿಕ್ ಆಮ್ಲಗಳು ಸಮಪರಿಮಾಣಗಳಲ್ಲಿರುತ್ತವೆ. ಹೆಕ್ಸ್ ಯೂರೋನಿಕ್ ಆಮ್ಲದ ಪ್ರಕೃತಿ ಇಡ್‌ಯೂರೋನಿಕ್ ಆಮ್ಲ ಎಂದು ಗುರುತಿಸಲಾಗಿದೆ. ಸಲ್ಫ್ಯೂರಿಕ್ ಆಮ್ಲದ ಅಂಶ ಇಡ್‌ಯೂರೋನಿಕ್ ಆಮ್ಲದ ನಾಲ್ಕನೆಯ ಇಂಗಾಲದ ಪರಮಾಣುವಿಗೆ ಕೂಡಿಕೊಂಡಿರುತ್ತದೆ.

ಕಾಂಡ್ರಾಸಮೀನ್ ಮತ್ತು ಇಡ್‌ಯೂರೋನಿಕ್ ಆಮ್ಲಗಳ ಅಂಶಗಳು ಪರ್ಯಾಯವಾಗಿ ಜೋಡಿಸಲ್ಪಟ್ಟು ಯೂರೋನಿಕ್ ಆಮ್ಲದ ನಾಲ್ಕನೆಯ ಇಂಗಾಲ, ಕಾಂಡ್ರಾಸಮೀನಿನ ಮೂರನೆಯ ಇಂಗಾಲಕ್ಕೆ ಗ್ಲೈಕಾಸಿಡಿಕ್ ಬಂಧಗಳ ಮೂಲಕ ಕೂಡಿಕೊಂಡಿರುತ್ತದೆ.(**ಚಿತ್ರ 3**). ಕಾಂಡ್ರಾಯಿಟಿನ್ ಸಲ್ಫೇಟಿನ ವಿಶಿಷ್ಟ ಗುಣವೆಂದರೆ ತನ್ನ ಕುಟುಂಬಕ್ಕೆ ಸೇರಿದ ಬಹುಶರ್ಕರಗಳಂತಲ್ಲದೆ ಇದು ಯಾವುದೇ ಮೂಲದಿಂದ ಪಡೆದ ಹಯಾಲ್ ಯೂರೋನಿಡೇಸ್ ಕಿಣ್ವದಿಂದ ಜೀರ್ಣವಾಗುವುದಿಲ್ಲ. ಚರ್ಮದಲ್ಲಿನ ಅತಿಮುಖ್ಯ ಪ್ರೋಟೀನ್ ಆದ ಕೊಲಾಜೆನ್ ಪಶುವರ್ಗದ ಎಲ್ಲ ಜೀವಿಗಳಲ್ಲಿಯೂ (ಮಾನವನೂ ಸೇರಿದಂತೆ) ಪ್ರಮುಖವಾದ ರಚನಾತ್ಮಕ (ಸ್ಟ್ರಕ್ಚರಲ್) ಪ್ರೋಟೀನ್. ಪ್ರಪಂಚದಲ್ಲಿ ಒಟ್ಟು ಸುಮಾರು $10^{12}$ ಕಿಲೋಗ್ರಾಮುಗಳಷ್ಟು ಕೊಲಾಜೆನ್ ಇರಬಹುದೆಂದು ಅಂದಾಜು ಮಾಡಲಾಗಿದೆ.

ಚರ್ಮ, ಮೃದ್ವಸ್ಥಿ ಮತ್ತು ಇತರ ಕಡೆಗಳಿಂದ ಬೇರ್ಪಡಿಸಲ್ಪಟ್ಟ ಕೊಲಾಜೆನ್ ತಂತುಗಳು ಬೆಳ್ಳಗಿವೆ. ಇವು ಪಾರಕಗಳಲ್ಲ. ವ್ಯಾನ್ ಗೀಸನ್ನಿನ ಆಮ್ಲೀಯ ಫುಕ್ಸಿನ್ನಿನಿಂದ ವಿಶಿಷ್ಟ ರೀತಿಯಲ್ಲಿ ಕೆಂಪು ಬಣ್ಣದಿಂದ ರಂಜಿತವಾಗುತ್ತವೆ. ಈ ಗುಣದಲ್ಲಿ ಹೇಗೋ ಹಾಗೆಯೇ ಎಳೆದರೆ ಉದ್ದವಾಗದ ಗುಣ, ಆಮ್ಲ ಮತ್ತು ಪ್ರತ್ಯಾಮ್ಲಗಳಲ್ಲಿ ಮುಳುಗಿಸಿದಾಗ ಉಬ್ಬುವ ಸ್ವಭಾವ ಮತ್ತು ಅಧಿಕ ಉಷ್ಣತೆಯಲ್ಲಿ ಉದ್ದ ಕುಗ್ಗುವ ಗುಣ ಇವೆಲ್ಲದರಲ್ಲಿ ಕೊಲಾಜೆನ್ ಇಲಾಸ್ಟಿನ್ನಿನಿಂದ ಭಿನ್ನವಾಗಿದೆ. ಆದರೂ ಎಕ್ಸ್‌ಕಿರಣ ವಿವರ್ತನ ಮತ್ತು ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳಿಂದ ಕೊಲಾಜೆನ್ನನ್ನು ಗುರುತಿಸುವುದು ಉತ್ತಮ ವಿಧಾನ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ಪರಿಶೀಲಿಸಿದಾಗ ಕೊಲಾಜೆನ್ನಿನ ಸೂಕ್ಷ್ಮತಂತುಗಳ (ಫೈಬ್ರಿಲ್ಸ್) ನಿರ್ದಿಷ್ಟ ಸ್ಥಾನಗಳಲ್ಲಿ ಪಟ್ಟೆಗಳಿರುವಂತೆ ಕಂಡುಬರುವುದು. ನೀರು, ಪ್ರೋಟೀನುಗಳು, ಮ್ಯೂಕೋ ಬಹುಶರ್ಕರಗಳು ಮತ್ತು ಇತರ ಸಣ್ಣ ಅಣುಗಳ ಚೌಕಟ್ಟಿನೊಳಗೆ ಚರ್ಮದಲ್ಲಿರುವ ಕೊಲಾಜೆನ್ ಸೇರಿಹೋಗಿರುತ್ತದೆ. ಚರ್ಮದಲ್ಲಿ ಈ ಬಗೆಯ ವ್ಯವಸ್ಥೆ ಇತರ ಊತಕಗಳಿಗಿಂತ ಹೆಚ್ಚು ಒತ್ತಾಗಿ ಉಂಟು. ಕೊಲಾಜೆನ್ ತಂತುಗಳು ಈ ವ್ಯವಸ್ಥೆಯ ಪರ್ಯಂತ ಹಾಸುಹೊಕ್ಕಾಗಿ ಯದ್ವಾತದ್ವಾ ಹರಡಿಕೊಂಡಿರುತ್ತವೆ.

ಜೈವಿಕ ವ್ಯವಸ್ಥೆಯಲ್ಲಿ ಕೊಲಾಜೆನ್ ಲಂಬವಾದ ಮತ್ತು ಪ್ರತ್ಯೇಕಿತವಾಗಿರುವ ಸೂಕ್ಷ್ಮತಂತುಗಳ ಸಮುದಾಯ. ಇದರ ಅಡ್ಡಳತೆ ಆಕರವನ್ನು (ಸೋರ್ಸ್) ಅವಲಂಬಿಸಿದೆ. ತಂತುಗಳ ವ್ಯವಸ್ಥೆ, ಚರ್ಮದಲ್ಲಿ ಇರುವಂತೆ, ಗೊತ್ತುಗುರಿಯಿಲ್ಲದೆ ಹೆಣೆದುಕೊಂಡಿರಬಹುದು ಅಥವಾ ಸ್ನಾಯು ರಜ್ಜುವಿನಲ್ಲಿ ಇರುವಂತೆ ಸಮಾನಾಂತರವಾಗಿರಬಹುದು. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ವಿಶ್ಲೇಷಣೆಯಿಂದ ಸೂಕ್ಷ್ಮತಂತುಗಳಲ್ಲಿ 700 Å ಅಂತರದಲ್ಲಿ ಪಟ್ಟೆಗಳು ಕಂಡುಬರುತ್ತವೆ. ಈ ಅಂತರ ಸೂಕ್ಷ್ಮತಂತುಗಳಲ್ಲಿ ಅಣುಮಾನಗಳ ವಿಶಿಷ್ಟ ಜೋಡಣೆಯಿಂದ

ಉದ್ಭವವಾಗುತ್ತದೆ ಎಂದು ಪರಿಗಣಿಸಲಾಗಿದೆ. ಕೊಲಾಜೆನ್ನನ್ನು ಆಮ್ಲೀಯ ಬಫರುಗಳಲ್ಲಿ ವಿಲೀನ ಮಾಡಿ ಪಡೆದ ವೈಯಕ್ತಿಕ ಅಣುಗಳನ್ನು ಪರಿಶೀಲಿಸಿ ಸಂಗ್ರಹಿಸಿದ ಸಂಗತಿಗಳಿಂದ ಕೊಲಾಜೆನ್ ಅಣು ಸುಮಾರು 3000 Å ಗಳಷ್ಟು ಉದ್ದವಾಗಿದೆ ಎಂದು ತಿಳಿದುಬಂದಿದೆ. ಅಣುವಿನ ಅಸಮಪಕ್ಷತೆ ಅಧಿಕ. FLS ಎಂಬ ಕೊಲಾಜೆನ್ನಿನ ಒಂದು ಮಾರ್ಪಾಡಿನಲ್ಲಿ ಸಹ ಅಣುವಿನ ಉದ್ದ ಸುಮಾರು 2800 Å.

ಕೊಲಾಜೆನ್ನಿನ ರಚನೆ : ಕೊಲಾಜೆನ್ನಿನ ರಚನೆಯ ನಾನಾ ವಿವರಗಳನ್ನು ಕೆಳಗೆ ತೋರಿಸಲಾಗಿದೆ. ಪ್ರಾಥಮಿಕ ರಚನೆಯಲ್ಲಿ ಗಮನಿಸಬೇಕಾದ ಅಂಶವೆಂದರೆ ಗ್ಲೈಸಿನ್, ಪ್ರೋಲಿನ್ ಮತ್ತು ಹೈಡ್ರಾಕ್ಸಿ ಪ್ರೋಲಿನ್ ಅಮೈನೋ ಆಮ್ಲಗಳ ಬಾಹುಳ್ಯ. ಗ್ಲೈಸಿನ್ನಿನ ಪರಿಮಾಣ ಒಟ್ಟು ಅಮೈನೋ ಆಮ್ಲಗಳ ಪರಿಮಾಣದ ಸುಮಾರು 1/3 ರಷ್ಟು, ಪ್ರೋಲಿನ್ ಮತ್ತು ಹೈಡ್ರಾಕ್ಸಿ ಪ್ರೋಲಿನುಗಳ ಪರಿಮಾಣ ಸುಮಾರು ¼ ರಷ್ಟು.

1 ಮಾದರಿ ಅನುಕ್ರಮ.

–ಗ್ಲೈಸಿನ್–X-Y–ಗ್ಲೈಸಿನ್–ಪ್ರೋಲಿನ್–Y–ಗ್ಲೈಸಿನ್–X-..ಹೈಡ್ರಾಕ್ಸಿ ಪ್ರೋಲಿನ್–ಗ್ಲೈಸಿನ್–ಪ್ರೋಲಿನ್–ಹೈಡ್ರಾಕ್ಸಿ ಪ್ರೋಲಿನ್.

2 ಕೊಲಾಜೆನ್ನಿನಲ್ಲಿ ಮೂರು ಶ್ರೇಣಿಗಳಿವೆ. ಪ್ರತಿ ಒಂದು ಶ್ರೇಣಿಯೂ α–ಕುಂಡಲಿನಿ(α–ಹೆಲಿಕ್ಸ್) ಆಕಾರದಲ್ಲಿದೆ.




ಚಿತ್ರ 4. ಮೂಲಭೂತ ಕುಂಡಲಿನಿ

3 ಮೂರು ಶ್ರೇಣಿಗಳೂ ಪರಸ್ಪರವಾಗಿ ಹೆಣೆದುಕೊಂಡು ಮುಪ್ಪುರಿಯಾದ ಒಂದು ಅತಿ α–ಕುಂಡಲಿನಿ(ಸೂಪರ್ α–ಹೆಲಿಕ್ಸ್) ರೂಪಿತವಾಗುತ್ತದೆ.




ಚಿತ್ರ 5. ಅತಿ α – ಕುಂಡಲಿನಿ



ಚಿತ್ರ 6. ಅಣ್ವಕ ಪ್ರತಿರೂಪವೊಂದರ ಚಿತ್ರ

4 ಅಣು: ಈ ಅಣುವನ್ನು ನೀಳವಾದ ದಂಡದಂತೆ ತೋರಿಸಲಾಗಿದೆ. ದಂಡದ ಉದ್ದ 3000 Å. ಅಗಲ 11 (ಚಿತ್ರ 7). ಇದರಲ್ಲಿ ಮೂರು α–ಕುಂಡಲಿನಿಗಳಿದ್ದು ಅವು ದಂಡದ ಉದ್ದಕ್ಕೂ ವಿಸ್ತೃತವಾಗಿವೆ. ಅಮೈನೋ ಆಮ್ಲಗಳ ಸಂಘಟನೆ ಮತ್ತು ಅನುಕ್ರಮದ ಪರಿಶೀಲನೆಯಿಂದ ಮೂರು ಶ್ರೇಣಿಗಳಲ್ಲಿ ಎರಡು ಬಗೆಯ ಶ್ರೇಣಿಗಳಿವೆ ($\alpha_1$ ಮತ್ತು $\alpha_2$) ಎಂದು ಗೊತ್ತಾಗಿದೆ. ಇದುವರೆಗೆ ಅಭ್ಯಸಿಸಿರುವ ಕೊಲಾಜೆನ್ನುಗಳಲ್ಲಿ ಎರಡು $\alpha_2$




ಚಿತ್ರ 7

ಶ್ರೇಣಿಗಳು ಒಂದು $\alpha_2$ ಶ್ರೇಣಿಯೂ ಇವೆ ಎಂದು ಗೊತ್ತಾಗಿದೆ. ಅಣು ಬಹುಮಟ್ಟಿಗೆ α–ಕುಂಡಲಿನಿಯ ಆಕಾರದಲ್ಲಿದೆ. ಆದರೆ N–ಅಂತ್ಯದಲ್ಲಿ ಮತ್ತು ಕಾರ್ಬಾಕ್ಸಿ ಅಂತ್ಯದಲ್ಲಿ (C) ಈ ಕ್ರಮಬದ್ಧ ಆಕಾರವಿಲ್ಲದ ಪ್ರದೇಶಗಳಿರಬಹುದು. ಶ್ರೇಣಿಗಳ ನಡುವೆ ಏರ್ಪಡುವ ಹೈಡ್ರೋಜನ್ ಬಂಧಗಳು (ಬಾಂಡ್ಸ್) ಅಣುವಿಗೆ ಸ್ಥಿರತೆಯನ್ನು ನೀಡುತ್ತವೆ. ಪ್ರತಿ ತ್ರಿವಳಿಗೆ ಒಂದರಂತೆ ಹೈಡ್ರೋಜನ್ ಬಂಧಗಳಿರಬಹುದೆಂದು ಊಹಿಸಲಾಗಿದೆ. ಇದಲ್ಲದೆ N–ಅಂತ್ಯದಲ್ಲಿ ಅಡ್ಡ ಕೊಂಡಿಗಳು (ಕ್ರಾಸ್ ಲಿಂಕೇಜಸ್) ರೂಪಿತವಾಗುತ್ತವೆ.

5 ಪ್ರಕೃತಿಯಲ್ಲಿ ಕೊಲಾಜೆನ್ ಕ್ರಮಬದ್ಧ ರೀತಿಯಲ್ಲಿ ವ್ಯವಸ್ಥಿತವಾಗಿರುವ ಅಣುಗಳಿಂದ ರೂಪಿತವಾದ ತಂತುಗಳಂತೆ ಇದೆ. ಅಣುಗಳು ಸಾಪೇಕ್ಷವಾಗಿ ವ್ಯವಸ್ಥಿತವಾಗಿರುವ ರೀತಿಯನ್ನು ಚಿತ್ರ 8ರಲ್ಲಿ ತೋರಿಸಿದೆ. ಅಣುಗಳನ್ನು ಬಾಣದಂತೆ ತೋರಿಸಿ ಪರಸ್ಪರ ಅತಿವ್ಯಾಪನೆಯಾಗುವ ಪ್ರದೇಶಗಳನ್ನು ಸೂಚಿಸಿದೆ. ಅಣುವನ್ನು ಏಕಮಾನಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಏಕಮಾನವನ್ನು D ಎಂಬ ಪ್ರತೀಕದಿಂದ ಸೂಚಿಸುವ ಪದ್ಧತಿ ಉಂಟು. ಒಂದೊಂದು ಅಣುವಿನಲ್ಲಿಯೂ 4.4 ಏಕಮಾನಗಳಿವೆ. ಇವು ಜೋಡಣೆಯಾಗಿರುವ ರೀತಿಯನ್ನು ವಿವರವಾಗಿ ಅರಿಯಲು ಸಾಧ್ಯವಾಗಿಲ್ಲ. ಅಣುವಿನಲ್ಲಿ ಅತಿವ್ಯಾಪನೆ ಪ್ರದೇಶಗಳೂ ರಂಧ್ರ ಪ್ರದೇಶಗಳೂ ಇವೆ. ಇವನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣುವುದು ಸಾಧ್ಯ.




ಚಿತ್ರ 8

ಕೊಲಾಜೆನ್ನಿನ ಅಮೈನೋ ಆಮ್ಲಗಳ ಅನುಕ್ರಮ ಈವರೆಗೆ ಅಭ್ಯಸಿಸಲಾಗಿರುವ ಆರು ಪ್ರಾಣಿಗಳಲ್ಲಿ ಬಹುಮಟ್ಟಿಗೆ ಸಾದೃಶ್ಯವನ್ನು ತೋರಿಸುತ್ತದೆ. ಗಮನಿಸಬೇಕಾದ ಮುಖ್ಯ ಅಂಶಗಳಿವು :

1 N–ಅಂತ್ಯದಿಂದ 9ನೆಯ ಸ್ಥಾನದಲ್ಲಿ ಲೈಸಿನ್ ಅಮೈನೋ ಆಮ್ಲದ ಅಂಶ ಉಂಟು. ಇದು ಭಾಗಶಃ ಹೈಡ್ರಾಕ್ಸಿಲೀಕರಣಕ್ಕೆ ಒಳಗಾಗುತ್ತದೆ. ಲೈಸಿನ್ ರೂಪದಲ್ಲೇ ಆಗಲಿ, ಹೈಡ್ರಾಕ್ಸಿಲೈಸಿನ್ನಿನ ರೂಪದಲ್ಲೇ ಆಗಲಿ ಇದು ಕೊಲಾಜೆನ್ನಿನಲ್ಲಿ ಇರುವ ಅಡ್ಡ ಕೊಂಡಿಗಳಿಗೆ ಕಾರಣವಾಗುತ್ತದೆ.

2 ಇಲಿಯ ಚರ್ಮದ ಕೊಲಾಜೆನ್ನಿನ N–ಅಂತ್ಯದ ಮೊದಲನೆಯ 15 ಅಮೈನೋ ಆಮ್ಲಗಳನ್ನು ಬಿಟ್ಟರೆ ಉಳಿದ ಅಮೈನೋ ಆಮ್ಲಗಳ ಪೈಕಿ ಪ್ರತಿ ಮೂರನೆಯ ಅಂಶ ಗ್ಲೈಸಿನ್ನಿನದು. ಈ ಸಂಗತಿಯಿಂದಲೇ ಕೊಲಾಜೆನ್ನಿಗೆ ಮುಪ್ಪುರಿ ಕುಂಡಲಿನಿಯ ರೂಪ ದೊರೆಯುತ್ತದೆ.

3 ತ್ರಿವಳಿಯಲ್ಲಿ ಗ್ಲೈಸಿನ್ನನ್ನು ಸೇರಿಸಿ ಎಣಿಸಿದರೆ ಗ್ಲೈಸಿನ್ ಅಮೈನೋ ಅಂಶದಿಂದ ಮೂರನೆಯ ಸ್ಥಾನದಲ್ಲಿ ಹೈಡ್ರಾಕ್ಸಿಪ್ರೋಲಿನ್ ಇದೆ. ಇದು ಪ್ರೋಲಿನ್ನಿನ ವ್ಯುತ್ಪನ್ನವಾದ್ದರಿಂದ ಪ್ರಾರಂಭದಲ್ಲಿ ಪ್ರೋಲಿನ್ ಇದ್ದಲ್ಲೆಲ್ಲ ಕೆಲವು ಕಡೆ ಹೈಡ್ರಾಕ್ಸಿಲೀಕರಣದ ಪರಿಣಾಮವಾಗಿ ಹೈಡ್ರಾಕ್ಸಿಪ್ರೋಲಿನ್ ಒದಗಿ ಬಂತು ಎಂದು ತೋರುತ್ತದೆ. ಎಲ್ಲ ಪ್ರೋಲಿನ್ನುಗಳೂ ಈ ರೀತಿ ಪರಿವರ್ತಿತವಾಗಬೇಕಾದ ಪ್ರಮೇಯವಿಲ್ಲ. ಪರಿವರ್ತನೆ ಶೇ.10 ರಿಂದ ಶೇ.20, ಶೇ.30, ಶೇ.50, ಶೇ.100ರಷ್ಟಿರಬಹುದು.

ಕೊಲಾಜೆನ್ನಿನ ಅಡ್ಡಕೊಂಡಿಗಳು ಏರ್ಪಡುವ ಪೂರ್ವಭಾವಿಯಾಗಿ ಲೈಸೈಲ್ ಅಥವಾ ಹೈಡ್ರಾಕ್ಸಿ ಲೈಸೈಲ್ ಅಂಶಗಳು ಆಲ್ಡಿಹೈಡಾಗಿ ಪರಿವರ್ತಿತವಾಗುತ್ತವೆ.

ಪೆಪ್ಟೈಡ್ ಶ್ರೇಣಿ–$CH_2$-CH2. CH2. $NH_2$ ಪೆಪ್ಟೈಡ್ ಶ್ರೇಣಿ–$CH_2$. $CH_2$. $CH_2$. CHO ಅಡ್ಡಕೊಂಡಿಗಳು ಎರಡು ಅಣುಗಳ ನಡುವೆ (ಎಂದರೆ ಅಣ್ವಾಂತರವಾಗಿ) ಹಾಗೂ ಒಂದೇ ಅಣುವಿನ ಎರಡು ಕುಂಡಲಿನಿಗಳ ನಡುವೆ (ಎಂದರೆ ಅಂತರಾಣುವಾಗಿ) ಏರ್ಪಡಬಹುದು. ಈಗ ತಿಳಿದಿರುವ ಮಟ್ಟಿಗೆ ಹೇಳುವುದಾದರೆ N–ಅಂತ್ಯದಲ್ಲಿರುವ ಮತ್ತು ಕಾರ್ಬಾಕ್ಸಿ ಅಂತ್ಯದಲ್ಲಿರುವ ಲೈಸಿನ್ ಅಂಶಗಳು ಅಡ್ಡಕೊಂಡಿಯಲ್ಲಿ ಭಾಗವಹಿಸುತ್ತವೆ. ಎರಡು ಕುಂಡಲಿನಿಗಳ ನಡುವೆ ಏರ್ಪಡುವ ಅಡ್ಡಕೊಂಡಿಗಳು ಎರಡು ಲೈಸಿನ್ ಅಂಶಗಳ ಆಲ್ಡಿಹೈಡ್ (-CHO) ಪುಂಜಗಳ ನಡುವೆ ಅಲ್ಡಾಲ್ ಸಂಘನನದಿಂದ ಏರ್ಪಡುತ್ತವೆ.

$$\text{ಪೆಪ್ಟೈಡ್} - CH_2 - CH_2 - CH_2 - \underset{OH}{\underset{|}{CH}} - \underset{CHO}{\underset{|}{CH}}.\ CH_2.\ CH_2.\text{ಪೆಪ್ಟೈಡ್}$$

ಕೊಲಾಜೆನ್ ಅಣುಗಳ ನಡುವೆ ಏರ್ಪಡುವ ಅಡ್ಡಕೊಂಡಿಗಳಲ್ಲಿ ಡೀ ಹೈಡ್ರೋಲೈಸಿನ್ ಮತ್ತು ನಾರ್‌ಲ್ಯೂಸಿನುಗಳು ಭಾಗವಹಿಸಬಹುದು. ಎಲಾಸ್ಟಿನ್ನಿನಲ್ಲಿ ಈ ಬಗೆಯ ಬಂಧಗಳಿವೆ. ಕೊಲಾಜೆನ್ನಿನಲ್ಲಿ ಹೈಡ್ರಾಕ್ಸಿಲೈಸಿನ್ ಆಲ್ಡಿಹೈಡ್ ಅಥವಾ $NH_2$ ಪುಂಜದೊಂದಿಗೆ (ಅಮೈನೋ ಪುಂಜ) ಅಡ್ಡಕೊಂಡಿಗಳನ್ನು ರಚಿಸಬಹುದು.

$$\text{ಪೆಪ್ಟೈಡ್} - CH_2 - \underset{OH}{\underset{|}{CH_2}} - CH - CH_2.\ N = CH.\ CH_2.CH_2.CH_2.CH_2OH$$

ಪೆಪ್ಟೈಡ್ ಕೊಲಾಜೆನ್ ತಂತುವಿನಲ್ಲಿ ಅಂತರಾಣು ಹಾಗೂ ಅಣ್ವಂತರವಾಗಿ ಏರ್ಪಡಬಹುದಾದ ಅಡ್ಡಕೊಂಡಿಗಳನ್ನು ಚಿತ್ರ 10ರಲ್ಲಿ ಕಾಣಬಹುದು. ಅಂತರಣ್ವಕ ಬಂಧಗಳು N–ಅಂತ್ಯದಲ್ಲಿ ಮತ್ತು ಅಣ್ವಂತರವಾಗಿ ಏರ್ಪಡುವ ಬಂಧಗಳು ಒಂದು ಅಣುವಿನ N–ಅಂತ್ಯ ಮತ್ತು ನೆರೆಹೊರೆಯ ಅಣುವಿನ α–ಕುಂಡಲಿನಿ ಪ್ರದೇಶದ ಒಂದು ಭಾಗದ ನಡುವೆ ಏರ್ಪಡಬಹುದು.



ಚಿತ್ರ 9

ಕೊಲಾಜೆನ್ನಿನ ಶರ್ಕರಾಂಶವಾದ ಗ್ಲೂಕೋಸಿಲ್ ಗ್ಯಲಾಕ್ಟೋಸ್ $\alpha_1$ ಶ್ರೇಣಿಯ ಹೈಡ್ರಾಕ್ಸಿಲೈಸಿನ್ ಅಂಶಕ್ಕೆ ಬದ್ಧವಾಗಿದೆ. $\alpha_2$ ಶ್ರೇಣಿಯಲ್ಲಿಯೂ ಶರ್ಕರಾಂಶವಿದೆ. ಆದರೆ ಇದು ಪೆಪ್ಟೈಡ್ ಶ್ರೇಣಿಗೆ ಬದ್ಧವಾಗಿರುವ ಸ್ಥಾನವಿನ್ನೂ ಗೊತ್ತಾಗಿಲ್ಲ.




ಚಿತ್ರ 10

ಕೊಲಾಜೆನ್ನಿನ ಜೀವರಾಸಾಯನಿಕ ವೃತ್ತಾಂತ, ಸಂಶ್ಲೇಷಣೆ: ಕೊಲಾಜೆನ್ನು ಕೋಶಗಳಲ್ಲಿ ಸಂಶ್ಲೇಷಣೆಯಾಗಿ ಅದರ ಕಾರ್ಯಸ್ಥಾನಗಳಾದ ಚರ್ಮ, ಮೃದ್ವಸ್ಥಿ ಇತ್ಯಾದಿ ಊತಕಗಳಿಗೆ ರವಾನೆಯಾಗುತ್ತದೆ. ಇದರ ಸಂಶ್ಲೇಷಣೆಯ ಕ್ರಿಯಾವಿಧಾನ ಇತರ ಪ್ರೋಟೀನುಗಳ ಸಂಶ್ಲೇಷಣೆಯದರಂತೆಯೇ. ರೈಬೊಸೋಮುಗಳ ಮೇಲೆ ಅಮೈನೋ ಆಮ್ಲಗಳು ಕ್ರಮಬದ್ಧವಾಗಿ ಜೋಡಣೆಯಾದ ತರುವಾಯ ಪ್ರೋಲಿನ್ ಮತ್ತು ಲೈಸಿನ್ನುಗಳ ಹೈಡ್ರಾಕ್ಸಲೀಕರಣವಾಗುತ್ತದೆ. ಇದಾದ ಬಳಿಕ ಕುಂಡಲಿನಿಯ ರೂಪ ಒದಗುವುದು. ಶರ್ಕರಾಂಶಗಳ ಸೇರ್ಪಡೆ ಮುಂದಿನ ಕ್ರಿಯೆ. ಅನಂತರ ಕೋಶದಿಂದ ಕೊಲಾಜೆನ್ ಸ್ರವನವಾಗಿ, ಬೆಳೆಯುತ್ತಿರುವ ತಂತುವಿಗೆ ರವಾನೆಯಾಗುತ್ತದೆ. ದೇಹದ ಪರಿಸರದಲ್ಲಿರುವ ಸ್ಥಿತಿಯಲ್ಲಿ ಕೊಲಾಜೆನ್ ವಿಲೀನವಾಗುವುದಿಲ್ಲ. ಎಂದರೆ ಸಾಗಾಣಿಕೆ ಯಾವುದೋ ಒಂದು ವಿಶಿಷ್ಟ ರೀತಿಯಿಂದಾಗಬೇಕು. ಕೊಲಾಜೆನ್ ಬಹುಶಃ ಅದರ ಪೂರ್ವಜ (ಪ್ರಿಕರ್ಸರ್) ಪ್ರೋಕೊಲಾಜೆನ್ ರೂಪದಲ್ಲಿ ರವಾನೆಯಾಗುತ್ತದೆ ಎಂದು ಭಾವಿಸಲಾಗಿದೆ. ಅನಂತರ ಲೈಸಿನ್ನಿನ ಆಲ್ಡಿಹೈಡ್ ಪುಂಜಗಳು ರೂಪಿತವಾಗಿ ಕೊಲಾಜೆನ್ ತನ್ನ ಕ್ರಿಯಾಶೀಲ ರೂಪವನ್ನು ತಳೆಯುವುದು.

ಜೈವಿಕ ಚಟುವಟಿಕೆ : ಚರ್ಮದಲ್ಲಿ ಇತರ ಕೋಶಗಳಲ್ಲಿರುವಂತೆಯೇ ನಾನಾ ಬಗೆಯ ಜೀವರಾಸಾಯನಿಕ ಕ್ರಿಯೆಗಳು ಜರಗುತ್ತವೆ. ಚರ್ಮದಲ್ಲಿ ಪ್ರತಿ 100ಗ್ರಾಮಿಗೆ (ಒದ್ದೆ ತೂಕ) 47ರಿಂದ 82ಮಿ.ಗ್ರಾಮ್ ಗ್ಲೂಕೋಸ್ ಶೇಖರಿತವಾಗಿರುತ್ತದೆ. ಚರ್ಮದಲ್ಲಿರುವ ಗ್ಲೂಕೋಸಿನ ಪರಿಮಾಣಕ್ಕೂ ರಕ್ತದಲ್ಲಿನ ಅದರ ಮಟ್ಟಕ್ಕೂ ನೇರವಾಗಿ ಸಂಬಂಧ ಉಂಟು. ಗ್ಲೂಕೋಸಿನ ಸೇವನೆಯಿಂದ ಚರ್ಮ ಮತ್ತು ರಕ್ತದಲ್ಲಿ ಗ್ಲೂಕೋಸಿನ ಮಟ್ಟ ಏರುವುದು. ಆದರೆ ರಕ್ತದಲ್ಲಿ ಈ ಮಟ್ಟ ಶೀಘ್ರವಾಗಿ ಇಳಿಯಲು ಪ್ರಾರಂಭಿಸುತ್ತದೆ; ಚರ್ಮದಲ್ಲಿ ಇಳಿಕೆ ನಿಧಾನ. ಆದ್ದರಿಂದ ಚರ್ಮ ದೇಹದ ಗ್ಲೂಕೋಸಿನ ಮಟ್ಟವನ್ನು ನಿಯಂತ್ರಿಸುವ ಸಾಧನವಾಗಿರಬಹುದು.

ಚರ್ಮದಲ್ಲಿ ಗ್ಲೂಕೋಸ್ ನಾನಾ ವಸ್ತುಗಳಿಗೆ–ಉದಾಹರಣೆಗೆ ಲ್ಯಾಕ್ಟಿಕ್ ಆಮ್ಲ, ಇಂಗಾಲದ ಡೈಆಕ್ಸೈಡ್, ತೈಲಾಮ್ಲಗಳು ಮತ್ತು ಸ್ಟೆರಾಲುಗಳಾಗಿ–ಪರಿವರ್ತಿತವಾಗುತ್ತದೆ. ಗ್ಲೂಕೋಸನ್ನು ಗ್ಲೈಕೋಜಿನ್ ರೂಪದಲ್ಲಿ ಶೇಖರಿಸಿಡಲು ಸಹಾಯ ಮಾಡುವ ಕಿಣ್ವ ಸಮೂಹಗಳೂ ಚರ್ಮದಲ್ಲಿವೆ.

ಸಾಧಾರಣವಾಗಿ ಮಾನವನ ಚರ್ಮ ತೈಲಗಳ ತೆಳುವಾದ ಒಂದು ಪೊರೆಯಿಂದ ಆವೃತವಾಗಿರುತ್ತದೆ. ಬೆವರು ಅಥವಾ ನೀರು ಇವನ್ನು ಚರ್ಮದ ಮೇಲೆ ಹರಡುತ್ತವೆ. ಈ ಪದಾರ್ಥಗಳ ಉತ್ಪತ್ತಿ ಆಗುವುದು ಸೆಬೇಷಿಯಸ್ ಗ್ರಂಥಿಗಳಿಂದ. ಚರ್ಮವನ್ನು ಮೃದುವಾಗಿಡುವುದು ಇವುಗಳ ಕೆಲಸ. ಅಲ್ಲದೆ ಈ ತೈಲಗಳಲ್ಲಿರುವ ತೈಲಾಮ್ಲಗಳಿಗೆ ಬ್ಯಾಕ್ಟೀರಿಯ ಮತ್ತು ಶಿಲೀಂಧ್ರಗಳನ್ನು ವಿರೋಧಿಸುವ ಗುಣ ಉಂಟು ಎಂದು ಊಹಿಸಲಾಗಿದೆ. ಉದಾಹರಣೆಗೆ ಕಾಲ್ಬೆರಳಿನ ಸಂದಿಯಲ್ಲಿ ತೋರಿಬರುವ ಸೋಂಕಿಗೆ ಕಾರಣಗಳಾದ ಟ್ರೈಕೋಫೈಟಾನ್ ಮೆಂಟಗ್ರೋಫೈಟಸ್ ಮತ್ತು ಟಿ.ರುಬ್ರಮ್ ಎಂಬ ಶಿಲೀಂಧ್ರಗಳ ಬೆಳವಣಿಗೆಯನ್ನು ಸೀಬಮ್ಮಿನಲ್ಲಿರುವ ಬಿಡಿ ತೈಲಾಮ್ಲಗಳು ತಡೆಗಟ್ಟುತ್ತವೆ. ಆದರೆ ಚರ್ಮದಲ್ಲಿರುವ ಅಥವಾ ಸೀಬಮ್ಮಿನ ತೈಲಾಮ್ಲಗಳಿಗೆ ಎಲ್ಲ ಬ್ಯಾಕ್ಟೀರಿಯಗಳನ್ನೂ ಎಲ್ಲ ಶಿಲೀಂಧ್ರಗಳನ್ನೂ ನಿರೋಧಿಸಬಲ್ಲ ಸಾಮರ್ಥ್ಯ ಉಂಟು ಎಂಬುದಕ್ಕೆ ಪ್ರಾಯೋಗಿಕ ಪುರಾವೆಗಳು ದೊರೆತಿಲ್ಲ.

ಚರ್ಮದ ಮೇಲ್ಮೈಯಲ್ಲಿರುವ ತೈಲಗಳು (ಲಿಪಿಡ್ಸ್) ಮುಖ್ಯವಾಗಿ ಟ್ರೈಗ್ಲಿಸರೈಡುಗಳನ್ನು(ಶೇ.20–ಶೇ.44), ಬಿಡಿ ತೈಲಾಮ್ಲಗಳನ್ನು (ಶೇ.2–30), ಮೇಣ ಮತ್ತು ಸ್ಟೆರಾಲ್ ಎಸ್ಟರುಗಳನ್ನು (ಶೇ.23–ಶೇ.25) ಮತ್ತು ಸ್ಕ್ವಾಲೀನನ್ನು (ಶೇ.8–ಶೇ.12) ಒಳಗೊಂಡಿರುತ್ತವೆ. ಡೈಗ್ಲಿಸರೈಡುಗಳು (ಶೇ.5–ಶೇ.14), ಮಾನೋಗ್ಲಿಸರೈಡುಗಳು (ಶೇ.2) ಮತ್ತು ಬಹುಶಃ ಫಾಸ್ಫೋತೈಲಗಳು (ಶೇ.2–ಶೇ.8) ಅಲ್ಪ ಪರಿಮಾಣಗಳಲ್ಲಿರುತ್ತವೆ. ಇವು ನಾಲ್ಕು ಮೂಲಗಳಿಂದ ದೊರೆಯುತ್ತವೆ : 1. ಹಚ್ಚಿಕೊಳ್ಳುವ ಸುಗಂಧ ತೈಲಗಳು, 2. ಸೆಬಾಷಿಯಸ್ ಗ್ರಂಥಿಗಳು, 3. ಹೊರತ್ವಚೆಯ ಕೊಡುಗೆ, 4. ಕೆರಾಟಿನ್ನುಗಳು. ಈ ನಾಲ್ಕು ಮೂಲಗಳಿಂದ ದೊರೆಯುವ ತೈಲಗಳು ಪರಿಮಾಣದಲ್ಲಿ ಸಾಪೇಕ್ಷವಾಗಿ ಬದಲಾವಣೆಯಾಗುತ್ತವೆಯಾಗಿ ಆ ಪದಾರ್ಥಗಳ ಸಂಘಟನೆಯಲ್ಲಿ ವ್ಯತ್ಯಾಸ ಸಹಜವಾಗಿಯೇ ಉಂಟಾಗುತ್ತದೆ. ಚರ್ಮದ ತೈಲಾಮ್ಲಗಳಲ್ಲಿ ಅಪರ್ಯಾಪ್ತ ತೈಲಾಮ್ಲಗಳ ಪರಿಮಾಣವೇ ಹೆಚ್ಚು. ದೀರ್ಘ ಸರಣಿಯ ತೈಲಾಮ್ಲಗಳ ಬಾಹುಳ್ಯವೇ ಹೆಚ್ಚು. ಚರ್ಮದಲ್ಲಿರುವ ಸ್ಟೆರಾಲುಗಳು ಜೀವರಾಸಾಯನಿಕ ಕ್ರಿಯೆಗಳಿಗೆ ಒಳಗಾಗುತ್ತವೆ. ಜೀವಸತ್ತ್ವದ ಪೂರ್ವಜಾತ ವಸ್ತುಗಳು ಸೂರ್ಯನ ಬೆಳಕಿನ ಅತಿನೇರಿಳೆ ಕಿರಣಗಳಿಂದ ಪ್ರಭಾವಿತವಾಗಿ ಜೀವಸತ್ತ್ವವಾಗಿ ಪರಿವರ್ತಿತವಾಗುತ್ತವೆ.

ಚರ್ಮದಲ್ಲಿ ತೈಲಾಮ್ಲಗಳ ಸಂಶ್ಲೇಷಣೆಯೂ ಜರಗುವುದು. ಸಿಹಿಮೂತ್ರ ರೋಗಿಯ ಚರ್ಮದಲ್ಲಿ ಈ ಸಂಶ್ಲೇಷಣೆ ಎಂದಿನಂತೆ ಕುಂಠಿತವಾಗುತ್ತದೆ. ಇನ್ಸುಲಿನ್ನಿನಿಂದ ಚಿಕಿತ್ಸೆ ಮಾಡಿದಾಗ ಸಂಶ್ಲೇಷಣೆ ಎಂದಿನಂತೆ ನಡೆಯುವುದು. ಆಹಾರದ ಕೊರತೆಯಲ್ಲಿ ಸಹ ಸಂಶ್ಲೇಷಣೆ ಮಂದಗತಿಯಲ್ಲಿ ನಡೆಯುತ್ತದೆ. ಪ್ರಾಣಿಗಳ ಚರ್ಮದಲ್ಲಿ ಸ್ಟೆರಾಲುಗಳ ಸಂಶ್ಲೇಷಣೆ ನಡೆಯುವುದು ಎರಡು ಮಾರ್ಗಗಳಲ್ಲಿ. ಇವೆರಡಕ್ಕೆ ಲ್ಯಾನೋಸ್ಟೆರಾಲಿನಿಂದ ಕೊಲೆಸ್ಟೆರಾಲ್ ಉತ್ಪತ್ತಿಯಾಗುವ ಮಾರ್ಗದಲ್ಲಿ ಸಂಶ್ಲೇಷಿತವಾಗುವ ಮಧ್ಯವರ್ತಿ ಸಂಯುಕ್ತಗಳಲ್ಲಿ ಭಿನ್ನತೆ ಉಂಟು. ಬ್ಲಾಕ್ ಕಂಡುಹಿಡಿದ ಮಾರ್ಗದಲ್ಲಿ ಡೆಸ್ಮೋಸ್ಟೆರಾಲ್ ಸಂಯುಕ್ತ ಕೊಲೆಸ್ಟೆರಾಲಿಗೆ ಪರಿವರ್ತನೆಯಾಗುವಾಗ ಅಂತ್ಯಘಟ್ಟದಲ್ಲಿ ಪಾರ್ಶ್ವ ಸರಣಿಯ ದ್ವಿಬಂಧ ಅಪಕರ್ಷಿತವಾಗುತ್ತದೆ. ಈ ಕ್ರಿಯೆ ಸ್ಟೆರಾಲಿನ ನ್ಯೂಕ್ಲಿಯಸ್ ರೂಪಿತವಾದ ಅನಂತರವೇ ನಡೆಯುವುದು. ರಸೆಲ್ ಕಂಡುಹಿಡಿದ ಮಾರ್ಗದಲ್ಲಿ ಸ್ಟೆರಾಲಿನ ನ್ಯೂಕ್ಲಿಯಸ್ ರೂಪಿತವಾಗುವ ಮೊದಲೇ ದ್ವಿಬಂಧ ಅಪಕರ್ಷಿತವಾಗಿರುತ್ತದೆ. ಈ ಮಾರ್ಗದಲ್ಲಿರುವ ಒಂದು ಮಧ್ಯವರ್ತಿ 7–ಡೀಹೈಡ್ರೋ ಕೊಲೆಸ್ಟೆರಾಲ್ ಸೂರ್ಯನ ಬೆಳಕಿನಿಂದ D ಜೀವಸತ್ತ್ವವಾಗಿ ಪರಿವರ್ತಿತವಾಗುತ್ತದೆ ಎಂಬ ವಿಷಯ ಚರ್ಮದಲ್ಲಿ ಈ ಕ್ರಿಯಾಪಥದ ಮಹತ್ತ್ವವನ್ನು ಎತ್ತಿ ತೋರಿಸುತ್ತದೆ. ಚರ್ಮದಲ್ಲಿ ಲಿಂಗ ಹಾರ್ಮೋನುಗಳು ಕೊಲೆಸ್ಟೆರಾಲಿನ ಸಂಶ್ಲೇಷಣೆಯನ್ನು ಹತೋಟಿಯಲ್ಲಿಡುತ್ತವೆ. ಟೆಸ್ಟೋಸ್ಟೆರೋನ್ ಮತ್ತು ಪ್ರೋಜೆಸ್ಟೆರೋನುಗಳು ಕೊಲೆಸ್ಟೆರಾಲಿನ ಸಂಶ್ಲೇಷಣೆಯನ್ನು ಹೆಚ್ಚಿಸುತ್ತವೆ. (ಎಚ್.ಎಸ್.ಎಸ್.)

**ಚರ್ಮದ ಕೈಗಾರಿಕೆ :** ಮಾನವ ಜಾತಿಯ ಉಗಮದಿಂದಲೂ ನಾಗರಿಕತೆಯ ಆದಿಯಿಂದಲೂ ಚರ್ಮದ ವಿವಿಧ ರೀತಿಯ ಉಪಯೋಗಗಳನ್ನು ಕಾಣಬಹುದು. ಆದಿಮಾನವ ತನ್ನ ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದ. ಮಾಂಸವನ್ನು ತಿಂದ ಬಳಿಕ ಉಳಿದ ಚರ್ಮವನ್ನು ಉಡುಪಾಗಿ ಬಳಸಲಾರಂಭಿಸಿದ. ಕ್ರಮೇಣ ಚರ್ಮ

ಆದಿವಾಸಿಗಳ ಪಾದರಕ್ಷೆಗಳಾಗಿಯೂ ಅಲಂಕರಣ ಸಾಮಗ್ರಿಗಳಾಗಿಯೂ ಉಪಯೋಗಕ್ಕೆ ಬರತೊಡಗಿತು. ಬಾಯಾರಿದ ಆದಿಮಾನವ ನೀರನ್ನು ಸಂಗ್ರಹಿಸಿಡಲು ಚರ್ಮದ ಚೀಲಗಳನ್ನು ಬಳಸಲಾರಂಭಿಸಿದ. ಅವನ ವಾಸಸ್ಥಾನಗಳಿಗೆ ಚರ್ಮ ಹೊದಿಕೆಯಾಯಿತು. ಪ್ರಪಂಚದ ಪ್ರತಿಯೊಂದು ಜನಾಂಗದ ಸಂಸ್ಕೃತಿಯ ಪ್ರಾರಂಭದಲ್ಲೂ ಚರ್ಮದ ವಿವಿಧ ರೀತಿಯ ಬಳಕೆಯನ್ನು ಕಾಣಬಹುದು. ಸುಮಾರು 3,000 ವರ್ಷಗಳಷ್ಟು ಹಿಂದೆಯೇ ಈಜಿಪ್ಟಿನಲ್ಲಿ ಚರ್ಮದ ಕೆಲಸಗಾರರು ಕೆಲಸದಲ್ಲಿ ನಿರತರಾಗಿದ್ದ ದೃಶ್ಯವನ್ನು ಕೆತ್ತನೆಗಳಲ್ಲಿ ಇಂದೂ ಕಾಣಬಹುದಾಗಿದೆ. ಬ್ರಿಟಿಷ್ ಮ್ಯೂಸಿಯಮ್‌ನಂಥ ವಸ್ತುಸಂಗ್ರಹಾಲಯಗಳಲ್ಲಂತೂ ಅತ್ಯಂತ ಪುರಾತನ ನಮೂನೆಯ ಪಾದರಕ್ಷೆಗಳೇ ಮೊದಲಾದ ಅಪೂರ್ವ ಚರ್ಮದ ವಸ್ತುಗಳು ಉಂಟು. ಚರ್ಮದ ಕೆಲಸ ಪ್ರಚಲಿತವಾಗಿದ್ದ ಒಂದು ಕಲೆ ಹಾಗೂ ವ್ಯಾಪಾರವಾಗಿತ್ತೆಂಬ ಅಂಶವನ್ನು ಯವನದೇಶದ ಅಭಿಜಾತ ಸಾಹಿತ್ಯ ಹಾಗೂ ಇತಿಹಾಸಗಳಲ್ಲಿ ಕಾಣಬಹುದು. ಕೆಲವು ಜಾತಿಯ ಮರಗಳ ತೊಗಟೆಗಳನ್ನು ಬಳಸಿ ಚರ್ಮ ಹದಮಾಡುವುದರ ತಿಳಿವಳಿಕೆ ಚರಿತ್ರಪೂರ್ವ ಮಾನವನಿಗೂ ಇತ್ತೆಂಬುದಕ್ಕೆ ಆಧಾರಗಳಿವೆ. ರೋಮನರ ಕಾಲದಲ್ಲಿ ಮರದ ತೊಗಟೆಯನ್ನು ಉಪಯೋಗಿಸಿ ಚರ್ಮವನ್ನು ಹದಮಾಡುತ್ತಿದ್ದರೆಂಬುದು ಪ್ಲೈನಿಯಿಂದ ತಿಳಿದುಬರುತ್ತದೆ. ಮಧ್ಯ ಶತಮಾನಗಳಲ್ಲಂತೂ ಚರ್ಮ ಹದಮಾಡುವ ಕಲೆ ಮಧ್ಯಪ್ರಾಚ್ಯ ದೇಶಗಳಲ್ಲಿ ಚೆನ್ನಾಗಿ ಅಭಿವೃದ್ಧಿಗೊಂಡು ಅನೇಕ ನಮೂನೆಯ ಚರ್ಮದ ಪದಾರ್ಥಗಳು ಮೂರ್ ಜನರ ಮೂಲಕ ಯುರೋಪಿಗೆ ಬಂತು. ಒಂದು ದಾಖಲೆಯ ಪ್ರಕಾರ ಮೊದಲು ಈಜಿಪ್ಷಿಯನರು ಹೀಬ್ರೂಗಳಿಗೆ ಚರ್ಮದ ವಸ್ತುಗಳನ್ನು ತಯಾರಿಸಿ ಅವನ್ನು ಬಳಸುವುದರ ಬಗ್ಗೆ ಹೇಳಿಕೊಟ್ಟರೆಂದೂ ತಿಳಿಸಲಾಗಿದೆ. ಚರ್ಮವನ್ನು ಉಡುಪು ತಯಾರಿಸಲು, ನೆಲಕ್ಕೆ ಹಾಸಲು ಹಾಗೂ ರಕ್ಷಣೆಗಾಗಿ ಆಯುಧಗಳನ್ನು ತಯಾರಿಸಲು ಬಳಸುತ್ತಿದ್ದರೆಂದು ಪ್ರವಾದಿಗಳ ಹೇಳಿಕೆಯಿಂದ ತಿಳಿದಿದೆ. ಈಜಿಪ್ಟಿನ ಪಿರಮಿಡ್ಡುಗಳಲ್ಲಿ ದೊರೆತಿರುವ ದಾಖಲೆಗಳಂತೂ ಚರ್ಮದ ಇತಿಹಾಸ ಹಾಗೂ ಬಳಕೆಯನ್ನು ಕುರಿತ ಅತ್ಯಂತ ಪುರಾತನ ಹಾಗೂ ಪ್ರಾಮಾಣಿಕ ಇತಿವೃತ್ತಗಳೇ ಆಗಿವೆ. ಈ ದಾಖಲೆಗಳು ಸುಮಾರು 5,000 ವರ್ಷಗಳಷ್ಟು ಹಿಂದಿನವೆಂಬುದು ಗಮನಾರ್ಹ. ಮಧ್ಯ ಶತಮಾನಗಳಲ್ಲಿ ಮೊರಾಕೊ ಚರ್ಮ ಎಂಬುದು ಇಡೀ ಯುರೋಪ್ ಖಂಡದಲ್ಲೆಲ್ಲ ಖ್ಯಾತಿವೆತ್ತದ್ದಾಗಿತ್ತು. ಸುಮಾರು 15ನೆಯ ಶತಮಾನದ ಹೊತ್ತಿಗಾಗಲೇ ಚರ್ಮದ ಕೈಗಾರಿಕೆ ಇನ್ನೂ ಚೆನ್ನಾಗಿ ಅಭಿವೃದ್ಧಿಗೊಂಡಿದ್ದು ಪ್ರಮುಖ ನಗರಗಳಲ್ಲಿ ಇದಕ್ಕಾಗಿಯೇ ಹಲವಾರು ಸಂಘಸಂಸ್ಥೆಗಳು ಜನಿಸಿದ್ದುವು. ಸಸ್ಯಸಂಜಾತ ಟ್ಯಾನಿನನ್ನು ಉಪಯೋಗಿಸಿ ಚರ್ಮ ಹದಮಾಡುವ ವಿಶಿಷ್ಟ ಉಪಕರಣಗಳು 18ನೆಯ ಶತಮಾನದ ಹೊತ್ತಿಗಾಗಲೇ ಬಳಕೆಗೆ ಬಂದಿದ್ದವು. ರಾಸಾಯನಿಕ ದೃಷ್ಟಿಯಿಂದ ಟ್ಯಾನಿಕ್ ಆಮ್ಲದ ಪೂರ್ಣ ಪರಿಚಯ ಅಂದಿನ ವಿಜ್ಞಾನಿಗಳಿಗೆ ಇದ್ದಿಲ್ಲವಾದರೂ ಓಕ್ ಮರದ ತೊಗಟೆ, ಸೂಮಾರ್, ವೆಲೋನಿಯಾ, ಹೆಮ್ಲೊಕ್ ಮೊದಲಾದ ಸಸ್ಯಸಂಬಂಧವಾದ ಪದಾರ್ಥಗಳನ್ನು ಚರ್ಮ ಹದಮಾಡಲು ಬಳಸಲಾಗುತ್ತಿತ್ತು. 19ನೆಯ ಶತಮಾನದಿಂದೀಚೆಗೆ ವಿದ್ಯುಚ್ಚಾಲಿತ ಯಂತ್ರೋಪಕರಣಗಳು ಬಳಕೆಗೆ ಬಂದುವು. ಚರ್ಮದ ತಂತ್ರವಿಜ್ಞಾನದ ಬಗ್ಗೆ ರಸಾಯನ, ಜೀವ ಹಾಗೂ ಚರ್ಮಸಂಬಂಧವಾದ ಇತರ ವಿಜ್ಞಾನಗಳು ದೀರ್ಘ ಮತ್ತು ವ್ಯವಸ್ಥಿತವಾದ ಅಧ್ಯಯನಮಾಡಿ ಸಾಕಷ್ಟು ಜ್ಞಾನ ಹಾಗೂ ಮಾಹಿತಿಗಳನ್ನು ಒದಗಿಸಿವೆ. ಚರ್ಮದ ಕೈಗಾರಿಕೆಯಲ್ಲಿ ಕಳೆದ ಶತಮಾನದಲ್ಲೆಲ್ಲ ಆದ ಅತಿ ಮುಖ್ಯ ಬದಲಾವಣೆಯೆಂದರೆ ಕ್ರೋಮ್ ಲವಣಗಳ ಉಪಯೋಗ. ವಾರಗಟ್ಟಲೆ ಕಾಲ ಬೇಡುತ್ತಿದ್ದ ಪ್ರಕ್ರಿಯೆಗಳನ್ನು ಇದರಿಂದಾಗಿ ದಿನಗಳಿಗೆ ಇಳಿಸಲಾಯಿತು. ಕೇವಲ ಕೆಲವೇ ಸಿದ್ಧಹಸ್ತರ ಕಲೆಯಾಗಿದ್ದ ಚರ್ಮದ ತಯಾರಿಕೆ ಭಾರಿ ಕೈಗಾರಿಕೆಯಾಗಿ ಅಭಿವೃದ್ಧಿಗೊಂಡಿತು. ಕಚ್ಚಾವಸ್ತುಗಳು ದೊರಕುವೆಡೆಗಳಲ್ಲೆಲ್ಲ ಚರ್ಮದ ಕೈಗಾರಿಕೆಯನ್ನು ಸ್ಥಾಪಿಸುವಂತಾಯಿತು.

ಚರ್ಮ ಎಂಬ ಶಬ್ದಕ್ಕೆ ಪರ್ಯಾಯವಾಗಿ ಇಂಗ್ಲಿಷಿನಲ್ಲಿ ಸ್ಕಿನ್ ಮತ್ತು ಹೈಡ್ ಎಂಬ ಎರಡು ಪದಗಳು ಬಳಕೆಯಲ್ಲಿವೆ. ಸ್ಕಿನ್ ಪದ ಸಾಮಾನ್ಯವಾಗಿ ಚಿಕ್ಕ ಚಿಕ್ಕ ಪ್ರಾಣಿಗಳ (ಉದಾಹರಣೆಗೆ ಆಡು, ಕುರಿ, ಹಂದಿ, ಕರು)ಚರ್ಮಕ್ಕೆ ಅನ್ವಯಿಸುತ್ತದೆ. ಹೈಡ್ ಪದ ವಿಶೇಷವಾಗಿ ದೊಡ್ಡ ದೊಡ್ಡ ಪ್ರಾಣಿಗಳ (ಉದಾಹರಣೆಗೆ ಹಸು, ಕುದುರೆ, ಒಂಟೆ) ಚರ್ಮಕ್ಕೆ ಬಳಸಲಾಗುತ್ತಿದೆ. ತುಪ್ಪಳದಿಂದ ಕೂಡಿದ ಚರ್ಮಕ್ಕೆ ಫರ್ ಎಂದು ಹೆಸರು. ಕಚ್ಚಾ ಚರ್ಮಕ್ಕೆ ಹಲವೆಡೆ ಪೆಲ್ಟ್ ಎಂದೂ ಅಂತಿಮವಾಗಿ ಸಂಸ್ಕರಿಸಿ ಸಿದ್ಧಪಡಿಸಿದ ಚರ್ಮಕ್ಕೆ ಲೆದರ್ ಎಂದೂ ಹೆಸರುಂಟು.

ಚರ್ಮದ ಮುಖ್ಯ ವಿಧಗಳು : ಚರ್ಮದ ಕೈಗಾರಿಕೆ ಕೇವಲ ಒಂದು ಕೈಗಾರಿಕೆ ಮಾತ್ರವಲ್ಲ, ಕಡೇಪಕ್ಷ ಹತ್ತಾರು ಕೈಗಾರಿಕೆಗಳ ಸಮನ್ವಯ. ಸಾಮಾನ್ಯವಾಗಿ ದಪ್ಪ ಚರ್ಮ ಅಥವಾ ತೆಳು ಚರ್ಮಕ್ಕೇ ಸಂಬಂಧಿಸಿದ ಭಿನ್ನ ಭಿನ್ನ ಕೈಗಾರಿಕೆಗಳು, ಒಂದೊಂದು ಪ್ರಾಣಿಯ ಚರ್ಮಕ್ಕೇ ಸಂಬಂಧಿಸಿದ ಕೈಗಾರಿಕೆಗಳು ಬೇರೆ ಬೇರೆಯಾಗಿಯೇ ಇವೆ. ಅಮೆರಿಕದ ಚರ್ಮ ಹದಮಾಡುವವರ ಸಮಿತಿ ಪ್ರಚುರಪಡಿಸಿರುವ ಪದಕೋಶವೊಂದರ ಪ್ರಕಾರ ಕಚ್ಚಾಚರ್ಮವನ್ನು ಸಾಮಾನ್ಯವಾಗಿ ಮುಂದೆ ಕಾಣಿಸಿರುವಂತೆ ವಿಭಾಗ ಮಾಡಬಹುದು: 1. ದನಕರು ವಿಭಾಗ, 2. ಕುರಿ ಮೇಕೆ ವಿಭಾಗ, 3. ಆಡು ವಿಭಾಗ, 4. ಕುದುರೆ ವಿಭಾಗ, 5. ಹಂದಿ ವಿಭಾಗ, 6. ಜಿಂಕೆ ವಿಭಾಗ, 7.ಎಮ್ಮೆ ವಿಭಾಗ, 8.ಕಾಂಗರೂ-ವಲಾಬಿ ಕಾಂಗರೂ ವಿಭಾಗ, 9. ಜಲಚರ ವಿಭಾಗ ಮತ್ತು 10. ಗೌಣ ವಿಭಾಗ.

ಹಸು, ಹೋರಿಗಳ ಚರ್ಮವನ್ನು ಪಾದರಕ್ಷೆಗಳ ಅಟ್ಟೆ ಹಾಗೂ ಮೇಲ್ಭಾಗ, ಕುದುರೆಗಳ ಜೀನು, ಲಗಾಮು, ಪ್ರಯಾಣಿಕರ ಚೀಲಗಳು, ಸೂಟ್‌ಕೇಸುಗಳು, ಬ್ರೀಫ್‌ಕೇಸುಗಳು, ಕೈಗವಸುಗಳು, ಯಂತ್ರಗಳ ಬೆಲ್ಟುಗಳು ಮುಂತಾದವನ್ನು ಮಾಡಲು ಬಳಸುವುದಲ್ಲದೆ ವಾಹನ ಪೀಠೋಪಕರಣ ಮುಂತಾದ ಸಜ್ಜುಗಾರಿಕೆ ಸಾಮಗ್ರಿಗಳನ್ನು ತಯಾರಿಸಲು ಕೂಡ ಉಪಯೋಗಿಸುತ್ತಾರೆ. ಇವೇ ಅಲ್ಲದೆ ಅಲಂಕರಣ ಚರ್ಮ ಸಾಮಗ್ರಿ, ಪುಸ್ತಕದ ರಕ್ಷಾಕವಚ, ಕ್ರೀಡಾಸಾಮಗ್ರಿ ಇತ್ಯಾದಿಗಳಿಗೂ ಚರ್ಮವನ್ನು ಬಳಸುವುದುಂಟು. ಮುದ್ರಣಕಲೆಯಲ್ಲೂ ಕೆಲಮಟ್ಟಿಗೆ ಚರ್ಮದ ಪಾತ್ರ ಉಂಟು. ಚಿಕ್ಕ ತಳಿಯ ದನಕರುಗಳ ಚರ್ಮವನ್ನು (ಇದಕ್ಕೆ ಕಿಪ್‌ಸ್ಕಿನ್ ಎಂಬ ಹೆಸರುಂಟು) ಬೂಟುಗಳ ಮೇಲ್ಭಾಗ, ಪ್ರಸಾಧನ ವಸ್ತುಗಳು ಹಾಗೂ ಕೈಗವಸುಗಳನ್ನು ತಯಾರಿಸಲು ಬಳಸುತ್ತಾರೆ. ಕರುಗಳ ಚರ್ಮವನ್ನು ವಿಶೇಷವಾಗಿ ಮಿಲಿಟರಿ ಶಿರಸ್ತ್ರಾಣಗಳಿಗೆ ಅಪಾಯಕಾರಿ ಅನಿಲಗಳ ವಿರುದ್ಧ ಬಳಸುವ ತಲೆಮುಚ್ಚುಗೆಗಳಿಗೆ ಹಾಗೂ ಕೈಕೆಲಸಗಳಿಗೆ ಉಪಯೋಗಿಸುವರು. ಉಳಿದ ಪ್ರಾಣಿಗಳ ಚರ್ಮವನ್ನು ಸಾಮಾನ್ಯವಾಗಿ ಪಾದರಕ್ಷೆಗಳಿಗೂ ಸಾರಿಗೆ ಚೀಲಗಳಿಗೂ ಬಳಸುತ್ತಾರೆ. ಅಲಂಕರಣ ಸಾಮಗ್ರಿಗಳಲ್ಲಿ ಎಲ್ಲ ರೀತಿಯ ತೆಳುಚರ್ಮಗಳನ್ನು ಬಳಸಲಾಗುತ್ತದೆ. ಕುರಿಮೇಕೆಗಳ ಚರ್ಮ, ಉಣ್ಣೆಚರ್ಮ, ತುಪ್ಪಳ ಚರ್ಮಗಳನ್ನು ವಿಶೇಷವಾಗಿ ಉಡುಪುಗಳನ್ನು ತಯಾರಿಸಲು ಹಾಗೂ ಖೇಚರರ ಉಡುಪುಗಳು, ಹ್ಯಾಟುಗಳು ಪಾರ್ಚ್‌ಮೆಂಟುಗಳು ಹಾಗೂ ಕೆಲವು ವಾದ್ಯಗಳನ್ನು ತಯಾರಿಸಲು ಬಳಸುತ್ತಾರೆ. ಉಷ್ಟ್ರಪಕ್ಷಿ, ಒಂಟೆ, ಲಾಮ, ಅಲ್ಪಾಕ ಮತ್ತು ಯಾಕ್ ಪ್ರಾಣಿಯ ಚರ್ಮಗಳನ್ನು ಪ್ರಸಾಧನ ವಸ್ತುಗಳಿಗಾಗಿ ಉಪಯೋಗಿಸುತ್ತಾರೆ. ಹಲ್ಲಿ, ಉಡ, ಹಾವು, ಕತ್ತೆ ಮೊದಲಾದವುಗಳ ಚರ್ಮ ಸೂಕ್ಷ್ಮ ಪದಾರ್ಥಗಳನ್ನು ತಯಾರಿಸಲು ಉಪಯೋಗಕ್ಕೆ ಬರುತ್ತದೆ.

ಒದ್ದೆಯಾದ ಚರ್ಮ ಕ್ರಮೇಣ ದಂಡಾಣುಜೀವಿಗಳ ಇಲ್ಲವೆ ಸೂಕ್ಷ್ಮಾಣುಜೀವಿಗಳ ದೆಸೆಯಿಂದ ಕೊಳೆಯತೊಡಗುತ್ತದೆ. ಇದನ್ನು ತಡೆಯಲು ಚರ್ಮವನ್ನು ಟ್ಯಾನಿಂಗ್ ಎಂಬ ರಾಸಾಯನಿಕ ಸಂಸ್ಕರಣಕ್ಕೆ ಒಳಪಡಿಸಿ ಸ್ಥಿರವಾದ ಹಾಗೂ ಕೊಳೆಯದಂಥ ಸ್ಥಿತಿಗೆ ತರಲಾಗುತ್ತದೆ. ಟ್ಯಾನಿಂಗ್ ಪ್ರಕ್ರಿಯೆಗೆ ಚರ್ಮ ಹದ ಮಾಡುವುದು ಎಂದು ಹೆಸರು. ಹದಮಾಡುವುದರಿಂದ ಚರ್ಮದಲ್ಲಿ ತನ್ನ ಸಾಮರ್ಥ್ಯ, ನಮ್ಯತೆ, ಪುಟಿತತೆ, ಘರ್ಷಣನಿರೋಧ ಮೊದಲಾದ ವಿಶೇಷ ಗುಣಗಳು ಉಂಟಾಗುತ್ತವೆ. ಅಲ್ಲದೆ ಅಧಿಕೋಷ್ಣತೆಗಳಲ್ಲೂ ಕರಗಿ ಹೋಗದಂಥ ರಾಸಾಯನಿಕ ಗುಣ ಒದಗಿಬರುತ್ತದೆ. ಹದಮಾಡದ ಚರ್ಮ ಸಾಮಾನ್ಯವಾಗಿ $140^{0}$ಫ್ಯಾ ಉಷ್ಣತೆಯ ನೀರಿನಲ್ಲಿ ಕರಗಿ ಹೋಗುತ್ತದೆ. ಹದಮಾಡಿದ ಅನೇಕ ರೀತಿಯ ಚರ್ಮಗಳು ಮರಳುವ ನೀರಿನಲ್ಲಿ ಕೂಡ ಕರಗುವುದಿಲ್ಲ. ಚರ್ಮದ ಮತ್ತೊಂದು ಮುಖ್ಯ ಗುಣವೆಂದರೆ ಅದಕ್ಕಿರುವ ನೀರಾವಿ ಪಾರಗಮ್ಯತಾಗುಣ. ಅದರ ಎಳೆಗಳ ನಡುವಣ ಅಂತರ ಲೋಮನಾಳ ಕ್ರಿಯೆಯಿಂದ ಈ ಗುಣ ಚರ್ಮಕ್ಕೆ ಲಭ್ಯವಾಗುತ್ತದೆ. ಹಾಗಾಗಿ ಒಂದು ರೀತಿಯಲ್ಲಿ ರಂಧ್ರಮಯವಾಗಿರುವ ಚರ್ಮಕ್ಕೆ ಹೆಚ್ಚಿನ ಉಷ್ಣವಹನ ಸಾಮರ್ಥ್ಯ ಇರುವುದಿಲ್ಲ.

ಚರ್ಮವನ್ನು ಕಾಪಾಡುವಿಕೆ : ಪ್ರಾಣಿಯ ಹತ್ಯೆ ನಡೆದ ಬಳಿಕ ಉತ್ತಮ ದರ್ಜೆಯ ಚರ್ಮವನ್ನು ಹೊರ ತೆಗೆದು ಪರಿಶುದ್ಧವಾದ ಉಪ್ಪನ್ನು ಅದಕ್ಕೆ ಸೇರಿಸಿ ಸಂಸ್ಕರಿಸಬೇಕು. ಈ ಪ್ರಕ್ರಿಯೆಗೆ ಕ್ಯೂರಿಂಗ್ ಎಂದು ಹೆಸರು. ತರುವಾಯ ಇಂಥ ಸಂಸ್ಕರಿತ ಚರ್ಮವನ್ನು ಹದಮಾಡಲು ಕಾರ್ಖಾನೆಗಳಿಗೆ ಭಾರಿ ಮೊತ್ತದಲ್ಲಿ ಪೂರೈಸಲಾಗುತ್ತದೆ. ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ದನಗಳ ಚರ್ಮ ಸಂಸ್ಕರಿಸುವ ಒಂದು ಹೊಸ ವಿಧಾನವನ್ನು ಅಭಿವೃದ್ಧಿಪಡಿಸಿದ್ದಾರೆ. ಇದರಲ್ಲಿನ ಮುಖ್ಯ ಪ್ರಕ್ರಮಗಳೆಂದರೆ (i) ಚರ್ಮದಲ್ಲಿರುವ ರಕ್ತ ಹಾಗೂ ಕಶ್ಮಲಗಳನ್ನು ದೂರಮಾಡುವುದು; (ii) ಚರ್ಮಕ್ಕೆ ಅಂಟಿಕೊಂಡಿರುವ ಮಾಂಸ, ಕೊಬ್ಬು, ಬಂಧಕ ಊತಕಗಳೇ ಮೊದಲಾದವನ್ನು ಹೆರೆದುಹಾಕುವುದು; (iii) ಸಂತೃಪ್ತ ದ್ರಾವಣದಲ್ಲಿ 24-48 ಗಂಟೆಗಳವರೆಗೆ ಚರ್ಮದ ಪಟ್ಟಿಗಳನ್ನು ಮುಳುಗಿಸಿರುವುದು; (iv) ಸ್ವಲ್ಪ ಪ್ರಮಾಣದ ಉತ್ತಮ ದರ್ಜೆಯ ಉಪ್ಪನ್ನು ಅದಕ್ಕೆ ಸವರುವುದು. ಈ ರೀತಿ ಸಂಸ್ಕರಿಸಿದ ಚರ್ಮ ಮೂರು ದಿವಸಗಳಷ್ಟು ಅಥವಾ ಇನ್ನೂ ಕಡಿಮೆ ಕಾಲದಲ್ಲಿ ಪ್ರಕ್ರಿಯೆಗೆ ಒಳಗಾಗಿ ಪೂರ್ಣವಾಗಿ ಸಂಸ್ಕರಣಗೊಂಡು ಸಾಗಣೆಗೆ ತಕ್ಕುದಾಗುತ್ತದೆ.

ಚರ್ಮದ ಊತಕ ಜ್ಞಾನ : ಚರ್ಮವನ್ನು ವಿಭಿನ್ನ ಪ್ರಕ್ರಿಯೆಗಳಿಗೆ ಗುರಿಪಡಿಸಿದಾಗ ಯಾವ ಯಾವ ರೀತಿಯ ಬದಲಾವಣೆಗಳುಂಟಾಗುತ್ತವೆ ಎಂಬುದನ್ನು ಅರಿಯಲು ಚರ್ಮದ ಊತಕಜ್ಞಾನವನ್ನು (ಹಿಸ್ಟಾಲಜಿ) ತಿಳಿಯುವುದು ಆವಶ್ಯಕ. ಪ್ರಾಣಿಗಳ ಚರ್ಮದಲ್ಲಿ ಅನೇಕಾನೇಕ ರಾಸಾಯನಿಕ ಘಟಕಗಳಿವೆ: ಜೀವಂತ ಕೋಶಗಳು, ತಂತುಗಳು ಹಾಗೂ

ಮೃತಕೋಶಗಳು. ಚರ್ಮದಲ್ಲಿ ಮುಖ್ಯವಾಗಿ ಮೂರು ಪದರಗಳಿವೆ; ಹೊರತ್ವಚೆ, ನಿಜತ್ವಚೆ ಮತ್ತು ಒಳತ್ವಚೆ. ರಚನೆಯ ದೃಷ್ಟಿಯಿಂದ ಇವು ಮೂರು ಬೇರೆ ಬೇರೆಯಾದವು. ಮೊದಲನೆಯದು ತೆಳ್ಳನೆಯ ಪೊರೆಯಾಗಿದ್ದು ಇದರ ಕೆಳಗೆ ಸ್ವಲ್ಪ ದಪ್ಪವಾದ ನಿಜತ್ವಚೆ

ಸುಲಿದ ಚರ್ಮದ ಮೇಲಿನ ಕೂದಲನ್ನು ತೆಗೆಯುವುದು

ಉಂಟು. ಚರ್ಮದ ಕೆಳಭಾಗದಲ್ಲಿ ಮೂರನೆಯ ಪದರವಾಗಿ ಕೊಬ್ಬಿನ ಊತಕಗಳಿವೆ (ಇದನ್ನೇ ಮಾಂಸ ಎನ್ನುತ್ತೇವೆ). ಚರ್ಮವನ್ನು ಹದ ಮಾಡುವ ಮುನ್ನ ಹೊರತ್ವಚೆಯನ್ನು ಪೂರ್ತಿಯಾಗಿ ತೆಗೆದುಹಾಕಬೇಕು. ವಾಸ್ತವವಾಗಿ ನಿಜತ್ವಚೆಯನ್ನೇ ಹದಮಾಡಿದ ಚರ್ಮವಾಗಿ ಪರಿವರ್ತಿಸುವುದು. ಚರ್ಮದಲ್ಲಿನ ಎಳೆಗಳ ರಚನೆಯನ್ನು ಆಧರಿಸಿ ಚರ್ಮದ ಸಾಮರ್ಥ್ಯ ಹಾಗೂ ಅನಮ್ಯತೆಗಳನ್ನು ನಿರ್ಧರಿಸಬಹುದು. ಈ ಬಿಳಿಯ ಎಳೆಗಳು ಕುಂದಿಲ್ಲದಂತೆ ಒಂದಕ್ಕೊಂದು ಎಷ್ಟು ಚೆನ್ನಾಗಿ ಬೆರ್ಪಟ್ಟಿರುವುವೊ ಅಷ್ಟು ಚೆನ್ನಾಗಿ ಸಿದ್ಧಪಡಿಸಿದ ಚರ್ಮ ಸುಂದರವಾಗಿರುತ್ತದೆ. ನಿಜತ್ವಚೆಯ ಭಾಗದಲ್ಲಿ ಬಂಧಕ ಊತಕಗಳಿದ್ದು ವಿಭಿನ್ನವಾಗಿ ಹರಡಿರುವ ಕೊಬ್ಬಿನ ಜೀವಕೋಶಗಳಿರುತ್ತವೆ. ಕೊಲಾಜಿನ್ ಎಳೆಗಳ ನಡುವೆ ಹೆಚ್ಚಿನ ಸಂಖ್ಯೆಯ ಕೊಬ್ಬಿನ ಜೀವಕೋಶಗಳು ಹಂಚಿ ಹೋಗಿದ್ದರೆ ಚರ್ಮ ಮೃದುವಾಗಿ ಸ್ಪಂಜಿನಂತಾಗುವುದು. ಕೊಲಾಜಿನಿನ ಬಿಳಿಯ ಎಳೆಗಳೇ ಅಲ್ಲದೆ ಇದಕ್ಕೂ ವಿಭಿನ್ನವಾದ ರಾಸಾಯನಿಕ ಸಂಘಟನೆಯುಳ್ಳ ಹಳದಿ ಎಳೆಗಳೂ ಇರುವುದುಂಟು. ಇವು ಪ್ರೋಟೀನ್ ಎಲಾಸ್ಟಿನುಗಳಿಂದ ಕೂಡಿವೆ. ಅಂತಿಮವಾಗಿ ಇವು ಚರ್ಮದ ಗುಣಗಳ ಮೇಲೆ ಪ್ರಭಾವ ಬೀರುವುವು.

ಚರ್ಮದಲ್ಲಿ ಸಾಮಾನ್ಯವಾಗಿ ಇರುವ ಅಂಶಗಳೆಂದರೆ – ನೀರು, ಪ್ರೋಟೀನುಗಳು, ಕೊಬ್ಬಿನ ಅಂಶ, ಕಾರ್ಬೊಹೈಡ್ರೇಟುಗಳು ಹಾಗೂ ಖನಿಜಾಂಶಗಳು. ಬೇರೆ ಬೇರೆ ಜೀವಿಗಳ ವಯಸ್ಸು, ಲಿಂಗ, ಆಹಾರಪದ್ಧತಿ, ಪರಿಸರದ ವಾಯುಗುಣ ಇವನ್ನು ಆಧರಿಸಿ ಈ ಪ್ರಮಾಣಗಳು ಬೇರೆ ಬೇರೆಯಾಗಿರುವುದು ಸಹಜವೇ. ಇವೇ ಅಲ್ಲದೆ ಚರ್ಮದಲ್ಲಿ ಕಿಣ್ವಗಳೂ ದಂಡಾಣುಜೀವಿಗಳೂ ಇರುವುದುಂಟು. ದನಕರುಗಳ ಒಳತ್ವಚೆಯಲ್ಲಂತೂ ಪ್ರೋಟೀನ್ ಅಂಶದ ಶೇ.35 ಭಾಗ ಕೊಲಾಜಿನ್ ಇರುತ್ತದೆ. ಕೊಬ್ಬಿನ ಅಂಶದಲ್ಲಿ ಗ್ಲಿಸರೈಡುಗಳೇ ಅಲ್ಲದೆ ಇನ್ನೂ ಅನೇಕ ಪದಾರ್ಥಗಳಿವೆ. ಚರ್ಮದಲ್ಲಿರುವ ಗ್ರೀಸಿನ ಭಾಗ ಸಾಮಾನ್ಯವಾಗಿ ಕಡಿಮೆಯಾಗಿದ್ದು ಅದನ್ನು ಸುಣ್ಣ ಸಾಬೂನುಗಳಾಗಿ ಪರಿವರ್ತಿಸಿ ಅವು ತೇಲಿಕೊಂಡು ಹೊರಟುಹೋಗುವಂತೆ ಮಾಡಲಾಗುತ್ತದೆ. ಗ್ರೀಸ್ ಭಾಗ ಹೆಚ್ಚಿದ್ದಲ್ಲಿ ಅಂತಿಮವಾಗಿ ಸಿದ್ಧಪಡಿಸಿದ ಚರ್ಮದಲ್ಲೂ ಅದು ಕಂಡುಬರುತ್ತದೆ. ಖನಿಜಾಂಶದಲ್ಲಿ ಮುಖ್ಯವಾಗಿ ಸೋಡಿಯಮ್ ಕ್ಲೋರೈಡ್ ($NaCl$) ಇದ್ದು ಅದರ ಜೊತೆಗೆ ಕಡಿಮೆ ಪ್ರಮಾಣದಲ್ಲಿ ಕ್ಯಾಲ್ಸಿಯಮ್, ಮೆಗ್ನೀಸಿಯಮ್ ಮತ್ತು ಪೊಟ್ಯಾಸಿಯಮ್‌ಗಳ ಸಲ್ಫೇಟ್, ಕ್ಲೋರೈಡ್ ಮತ್ತು ಫಾಸ್ಫೇಟುಗಳಿರುತ್ತವೆ. ಕಾರ್ಬೊಹೈಡ್ರೇಟುಗಳ ಪೈಕಿ ಪ್ರಧಾನವಾಗಿ ಗ್ಲೈಕೊಜಿನ್ ಇರುವುದು ಕಂಡುಬರುತ್ತದೆ. ಚರ್ಮಕ್ಕೆ ತುರ್ತುಬೇಡಿಕೆ ಇಲ್ಲದಿದ್ದಾಗ ಇಲ್ಲವೆ ವ್ಯಾಪಾರದಲ್ಲಿ ವಿನಿಮಯ ಮಾಡಿಕೊಳ್ಳಬೇಕಾದ ಸಂದರ್ಭವೊದಗಿದಾಗ ಅದನ್ನು ಶೈತ್ಯಾಗಾರದಲ್ಲಿ 30° ಫ್ಯಾ. ಉಷ್ಣತೆಯಲ್ಲಿಟ್ಟು ಸಂರಕ್ಷಣೆ ಮಾಡಬಹುದು. ಈ ರೀತಿಯಾಗಿ ಕಚ್ಚಾ ಚರ್ಮವನ್ನು ಕಡೆಯ ಪಕ್ಷ ಐದು ವರ್ಷಗಳವರೆಗಾದರೂ ಸಂರಕ್ಷಿಸಿ ಇಡಬಹುದು. ಹೆಚ್ಚೆಂದರೆ ಅವುಗಳ ಮೇಲೆ ಕೆಲವು ಕಲೆಗಳಾಗಬಹುದಷ್ಟೆ.

ಹದಮಾಡುವಿಕೆ (ಟ್ಯಾನಿಂಗ್): ಹದಮಾಡುವ ಪೂರ್ವಭಾವಿ ಕ್ರಮಗಳಲ್ಲಿ ಮೊದಲನೆಯದು ನೆನೆಹಾಕುವುದು. ಚರ್ಮವನ್ನು ಸೀಳುಗುಂಡಿಯಿರುವ ತೆರೆದ ಕೊಳಗಳಲ್ಲಿ ಹಾಕುತ್ತಾರೆ. ಟೊಳ್ಳು ಇರಚಿಯಿಂದ ನೀರು ಹರಿಯುತ್ತಿರುವಂತೆಯೆ ಇದನ್ನು ತಿರುಗಿಸಲಾಗುತ್ತದೆ. ಕೊಳಗದ ತೆರೆದ ಜಾಗಗಳಿಂದ ಕೊಳೆ ನೀರೆಲ್ಲ ಹೊರಗೆ ಹೋಗುತ್ತಿರುವುದು. ತಿರುಗಣೆ ಕೆಲಸವನ್ನು ಬಹಳ ನಿಧಾನವಾಗಿ ಎಚ್ಚರಿಕೆಯಿಂದ ನಡೆಸಬೇಕು. ಇಲ್ಲದಿದ್ದರೆ ತೇವವಾಗಿಲ್ಲದ ಚರ್ಮದ ಭಾಗಗಳಲ್ಲಿ ಶೀಘ್ರಚಲನೆಯಿಂದ ಒಡಕುಗಳುಂಟಾಗಿ ಚರ್ಮ ಬಿರಿದು ತನ್ನ ಗುಣಗಳನ್ನೆಲ್ಲ ಕಳೆದುಕೊಂಡು ಅಳ್ಳಕವಾಗುತ್ತದೆ. ಮೊದಲ ತೊಳೆತದ ಅನಂತರ ಚರ್ಮವನ್ನು ಬೇರೊಂದು ಹುಟ್ಟು ಇರುವಂಥ ಕೊಳಗಕ್ಕೆ ರವಾನಿಸುತ್ತಾರೆ. ಇಲ್ಲಿ ಅದನ್ನು ಚೆನ್ನಾಗಿ ತಣಿವು ಮಾಡುತ್ತಾರೆ. ಚರ್ಮ ಅಗತ್ಯಕ್ಕಿಂತ ಹೆಚ್ಚು ಒಣಗಿಹೋಗಿದ್ದಲ್ಲಿ ಮೆದುಮಾಡಲು ಸೋಡಿಯಮ್ ಸಲ್ಫೈಡ್, ಸೋಡಿಯಮ್ ಪಾಲಿಸಲ್ಫೈಡ್ ಅಥವಾ ಸೋಡಾ ಬೂದಿಯಂಥ ಕ್ಷಾರಗಳನ್ನು ಬಳಸುವರು. ತೂಕರೀತ್ಯಾ ಒಂದು ಭಾಗ ಚರ್ಮಕ್ಕೆ ನಾಲ್ಕು ಭಾಗ ತೇವವಿದ್ದರೆ ಚರ್ಮ ಅತ್ಯುತ್ತಮವೆಂದೂ ಕುರಿ, ಆಡಿನಂಥ ಒಣಗಿದ ಚರ್ಮಗಳಿಗೆ 1:8 ಪ್ರಮಾಣ ಅತ್ಯುತ್ತಮವೆಂದೂ ಪ್ರಯೋಗದಿಂದ ತಿಳಿದುಬಂದಿದೆ. ಇಲ್ಲಿಯೂ ಚರ್ಮ ಅನೇಕ ವಿಧದ ದಂಡಾಣುಜೀವಿಗಳಿಂದ ಕಲುಷಿತಗೊಂಡಿರಬಹುದಾದ್ದರಿಂದ ಈ ಹಂತದಲ್ಲಿ ಇನ್ನೊಂದು ಸ್ವಲ್ಪ ಪೂತಿನಾಶಕವನ್ನು ನೆನೆಹಾಕುವ ನೀರಿಗೆ ಸೇರಿಸಲಾಗುತ್ತದೆ. ಮೊದಲ ತೊಳೆತದಲ್ಲಿ ಸಂಸ್ಕರಣ ಲವಣದ ಒಂದು ಭಾಗವನ್ನು ತೆಗೆದು ಹಾಕಲಾಗುವುದು; ಆದರೆ ಇದು ಸ್ವಲ್ಪ ಪ್ರಮಾಣದಲ್ಲಿ ಇರುವುದು ಆವಶ್ಯಕ. ಏಕೆಂದರೆ ಕೆಲವು ಎಳೆಗಳ ನಡುವೆ ಇರಬಹುದಾದ ಗೋಳೀಯ ಪ್ರೋಟೀನುಗಳು ಉಪ್ಪಿನ ದ್ರಾವಣದಲ್ಲಿ ಕರಗಿಹೋಗಿ ಚರ್ಮದ ಹೊರಲಕ್ಷಣಗಳು ಚೆನ್ನಾಗುವಂತೆ ಮಾಡುವುವು. ನೇರವಾಗಿ ಉಪ್ಪಿನ ದ್ರಾವಣದಿಂದ ಸಂಸ್ಕರಿಸಿದ ಚರ್ಮಗಳನ್ನು ಇನ್ನೂ ಕಡಿಮೆ ಕಾಲ ನೆನೆಹಾಕುವುದು ಒಳ್ಳೆಯದು. ಅನಂತರ ನಡೆಸುವ ಕೂದಲು ತೆಗೆಯುವ ಕ್ರಿಯೆಗೆ ಬಾಧಕವಾಗದ ಪ್ರಮಾಣದಲ್ಲಿ ಮಾತ್ರ ನೆನೆಹಾಕುವ ಕ್ರಿಯೆಯನ್ನು ನಡೆಸಬೇಕು. ಹೊಸದಾದ ಕಚ್ಚಾ ಚರ್ಮವನ್ನು ಮೂರು ನಾಲ್ಕು ಗಂಟೆಗಳ ಕಾಲ ಉಪ್ಪು ನೀರಿನ ತೊಟ್ಟಿಯಲ್ಲಿ ನೆನೆಹಾಕಿ ಸಂಸ್ಕರಣವಾದ ಬಳಿಕ ಸುಣ್ಣದ ದ್ರಾವಣದ ಕ್ರಿಯೆಗೆ ಅದನ್ನು ಯೋಗ್ಯವನ್ನಾಗಿ ಮಾಡುವರು.

ನೆನೆಹಾಕಿದ ಚರ್ಮವನ್ನು ಸುಣ್ಣದ ತೊಟ್ಟಿಗಳಲ್ಲಿ ಹಾಕಿ ತುಳಿಯುವುದು

ಫರ್ ಅಥವಾ ಕೆಲವು ಯಾಂತ್ರಿಕ ಚರ್ಮಗಳನ್ನು ಬಿಟ್ಟರೆ, ಮಿಕ್ಕೆಲ್ಲ ನಮೂನೆಯ ಚರ್ಮಗಳನ್ನೂ ಕೂದಲು ತೆಗೆದು ಹದಮಾಡಲಾಗುವುದು. ನೆನೆಹಾಕಿದ ಚರ್ಮದ ಪಟ್ಟಿಗಳನ್ನು ಸುಣ್ಣದ ತೊಟ್ಟಿಯಲ್ಲಿ ಹಾಕಿ ಕೂದಲನ್ನು ತೆಗೆಯಲಾಗುವುದು. ಚರ್ಮದ ತೂಕವನ್ನು ಆಧರಿಸಿ ಇದರ ಶೇ.10 ರಿಂದ ಶೇ.12ರಷ್ಟು ಜಲೀಯ ಸುಣ್ಣದೊಡನೆ ಅದನ್ನು ಕೂಡಿಸಿಟ್ಟಲ್ಲಿ 5–8 ದಿವಸಗಳಲ್ಲಿ ಚರ್ಮದ ಮೇಲಿನ ಎಲ್ಲ ಕೂದಲುಗಳೂ ಸಡಿಲವಾಗುವುವು. ಈ ಅವಧಿಯನ್ನು ಕಡಿಮೆಮಾಡಿ ಕ್ರಿಯೆ ಕ್ಷಿಪ್ರವಾಗಿ ನಡೆಯುವಂತೆ ಮಾಡಲು ಸಲ್ಫೈಡ್, ಅಮೈನ್ ಅಥವಾ ಸಯನೈಡುಗಳನ್ನು ಬಳಸುವರು. ಈ ಸುಣ್ಣ ಸಂಸ್ಕರಣದಲ್ಲಿ ಉಷ್ಣತೆ 70° –75°F. ಇರುವುದು ಅಗತ್ಯ. ಸುಣ್ಣದ ಪ್ರಕ್ರಿಯೆಯಿಂದ ಕೂದಲನ್ನು ಸರಿಯಾಗಿ ಸಡಿಲಮಾಡಿದ ಮೇಲೆ ಚರ್ಮದ ಪಟ್ಟಿಗಳನ್ನು ಸುಣ್ಣದ ತೊಟ್ಟಿಗಳಿಂದ ಹೊರತೆಗೆದು ಯಂತ್ರಗಳ ಸಹಾಯದಿಂದ ಕೂದಲುಗಳನ್ನು ಹೆರೆದು ತೆಗೆಯಲಾಗುವುದು. ಯಂತ್ರದಿಂದಲೇ ಬಹಳಷ್ಟು ಕೂದಲೆಲ್ಲ ಉದುರಿಹೋಗುವುದು, ಉಳಿದವನ್ನು ದಂಡದಿಂದ ಹೊಡೆದು ಕೈಗಳಿಂದಲೇ ತೆಗೆಯಲಾಗುತ್ತದೆ. ಕೂದಲನ್ನು ತೊಳೆದು ಒಣಗಿಸಿ ತೂಕಮಾಡಿ ಒಂದು ಉಪೋತ್ಪನ್ನವಾಗಿ ಮಾರುತ್ತಾರೆ. ಕೆಲವೆಡೆಗಳಲ್ಲಿ ಚರ್ಮದ ಪಟ್ಟಿಗಳನ್ನು ಹುಟ್ಟು ಇರುವ ಪೀಪಾಯಿಗಳಲ್ಲಿ ಹಾಕಿ ಪ್ರಬಲವಾದ ಸೋಡಿಯಮ್ ಸಲ್ಫೈಡ್ ದ್ರಾವಣದ

ಜೊತೆ ಕ್ರಿಯೆ ನಡೆಸುವರು. ಆದರೆ ಇಲ್ಲಿ ಕೂದಲು ನಾಶಗೊಂಡು ಒಳ್ಳೆಯ ಉಪೋತ್ಪನ್ನ ಹೊರಬರಲಾರದು. ಕೂದಲಿನ ಜೊತೆಯಲ್ಲಿ ಚರ್ಮದ ಮೇಲ್ಭಾಗ ಹಾಳಾಗದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ.

ಹದಮಾಡುವ ಮೊದಲು ಚರ್ಮವನ್ನು ಇನ್ನೂ ಕೆಲವು ಹಂತಗಳಲ್ಲಿ ಸಜ್ಜುಗೊಳಿಸುವುದು ಅಗತ್ಯ. 60°–70°F. ಉಷ್ಣತೆಯ ಹರಿವ ನೀರಿನ ಮೂಲಕ ಹಾಯಿಸುವುದರಿಂದ ಮೇಲಣ ತಲದ ಸುಣ್ಣವನ್ನೂ ಕೆಲವು ಪ್ರೋಟೀನ್ ವಿಭಜನ ಉತ್ಪನ್ನಗಳನ್ನೂ ತೊಡೆದು ಹಾಕಲಾಗುವುದು. ಸಂಪೂರ್ಣ ನಿಯಂತ್ರಣದಲ್ಲಿ ಆಮ್ಲೀಯ ದ್ರಾವಣಗಳನ್ನೊಳಗೊಂಡ ಪೀಪಾಯಿಗಳಲ್ಲಿ ನೆನೆಸಿ ಹುಟ್ಟು ಹಾಕುವುದರಿಂದ ಸುಣ್ಣದ ಭಾಗವನ್ನು ಸಾಕಷ್ಟು ಪೂರ್ತಿಯಾಗಿ ತೆಗೆದುಹಾಕಲಾಗುವುದು. ಹದಮಾಡಬೇಕಾದ ಮೊದಲಿಗೆ ಚರ್ಮದಲ್ಲಿ ಆವಶ್ಯಕವಾಗಿ ಇರಬೇಕಾದ ಲಘು ಆಮ್ಲ ಸಮತೋಲನೆ ಇದರಿಂದ ಉಂಟಾಗುತ್ತದೆ. ಹೊರಬರಬೇಕಾದ ಚರ್ಮದ ಗುಣಮಟ್ಟಗಳು ಯಾವ ರೀತಿ ಇರಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಸುಣ್ಣ ತೆಗೆಯುವ ಪ್ರಕ್ರಿಯೆಯಲ್ಲಿ PH ಮೌಲ್ಯವನ್ನು ಆರಿಸಿಕೊಳ್ಳಬಹುದು. ಅಟ್ಟೆಗಳು, ಬೆಲ್ಟುಗಳು ಹಾಗೂ ಕೈಗಾರಿಕೆ ಬಳಕೆಯ ಚರ್ಮದ ವಸ್ತುಗಳನ್ನು ತಯಾರಿಸಬೇಕಾದಾಗ ಮೇಲ್ಭಾಗದ ಕ್ಷಾರದ ಅಂಶವನ್ನು ತೊಡೆದುಹಾಕಿದರಷ್ಟೇ ಸಾಕು. ಹಗುರವಾದ ಚರ್ಮಗಳಲ್ಲಿ ಚರ್ಮದ ಅಡ್ಡಛೇದಗಳಲ್ಲಿ ಏಕರೀತಿಯ pH ಇರುವಂತೆ ಆಮ್ಲೀಕರಣ ಪ್ರಕ್ರಿಯೆಯನ್ನು ನಡೆಸಲಾಗುವುದು. ಸುಣ್ಣಹಾಕುವ ಪ್ರಕ್ರಿಯೆಯಲ್ಲಿ ಅನೇಕ ಭೌತ ಹಾಗೂ ರಾಸಾಯನಿಕ ಬದಲಾವಣೆಗಳು ತಮಗೆ ತಾವೇ ಉಂಟಾಗುವುವು. ಕ್ಷಾರೋದಕದಲ್ಲಿ ನೆನೆಹಾಕುವ (ಬೇಟಿಂಗ್) ಮುಂದಿನ ಪ್ರಕ್ರಿಯೆಯಲ್ಲಿ ಚರ್ಮದ ಪಟ್ಟೆಗಳನ್ನು

ಸುಣ್ಣದ ಸಂಸ್ಕಾರವನ್ನು ಪಡೆದ ಚರ್ಮವನ್ನು ಮೊದಲು ಹರಡಿಕೊಂಡು ಹತ್ಯಾರೊಂದನ್ನು ಬಳಸಿ ಸಜ್ಜುಗೊಳಿಸಲಾಗುವುದು. ಸಜ್ಜುಗೊಂಡ ಚರ್ಮವನ್ನು ಬಳಿಕ ಒಣಗಿಸಲಾಗುತ್ತದೆ

ಅಮೋನಿಯಮ್ ಸಲ್ಫೇಟ್ ಅಥವಾ ಕ್ಲೋರೈಡ್ ಹಾಗೂ ಆರಿಸಿ ಪ್ರೋಟೀನುಗಳನ್ನು ತೆಗೆದುಹಾಕುವ ಕೆಲವು ಕಿಣ್ವಗಳಿರುವ ಪೀಪಾಯಿಗಳಲ್ಲಿ ಇರಿಸಲಾಗುವುದು. ಕ್ಷಾರೋದಕದಲ್ಲಿ ನೆನೆಹಾಕುವುದರಿಂದಾಗಿ ಚರ್ಮದ ಮೇಲಣ ಭಾಗದ ನ್ಯೂನತೆಗಳೆಲ್ಲ ನಾಶಹೊಂದಿ ಎಲಾಸ್ಟಿನ್ ಎಳೆಗಳು ಜಲಸಂಯೋಜನಗೊಳ್ಳುವುವು. PH ಬೆಲೆಗಳು ನಿಯಂತ್ರಣಗೊಂಡು ಚರ್ಮದಿಂದ ಸುಣ್ಣ ತೆಗೆಯುವ ಪ್ರಕ್ರಿಯೆಗೆ ಅನುವಾಗುವುದು. ಸಾಮಾನ್ಯವಾಗಿ ಅನೇಕ ನಮೂನೆಯ ಚರ್ಮಗಳನ್ನು ಕ್ಷಾರೋದಕದಲ್ಲಿ ನೆನೆಹಾಕಿ ಗಲಬರಿಸಿದ ಅನಂತರ ನೇರವಾಗಿಯೇ ಹದಮಾಡುವೆಡೆಗಳಿಗೆ ಕಳುಹಿಸಿಬಿಡುವರು. ಆದರೆ ಕೆಲವು ರೀತಿಯ ಚರ್ಮಗಳನ್ನು, ವಿಶೇಷವಾಗಿ ಕ್ರೋಮ್ ವಿಧಾನದಲ್ಲಿ ಹದಮಾಡಬೇಕಾದ ಚರ್ಮಗಳನ್ನು, ಆಮ್ಲದ್ರಾವಣ ಸಂಸ್ಕರಣಕ್ಕೆ(ಪಿಕ್ಲಿಂಗ್) ಗುರಿಮಾಡಬೇಕಾಗುತ್ತದೆ. ಈ ಪ್ರಕ್ರಿಯೆ ಸಲ್ಫ್ಯೂರಿಕ್ ಆಮ್ಲ ಹಾಗೂ ನಿರ್ದಿಷ್ಟ ಸಾರತೆಯ ಲವಣದ ತೊಟ್ಟಿಯಲ್ಲಿ ಚರ್ಮದ ಪಟ್ಟೆಗಳನ್ನು ಸಮತೋಲನ ಸ್ಥಿತಿಗೆ ತರುವಲ್ಲಿ ಅನುವಾಗುತ್ತದೆ. ಇಂಥ ದ್ರಾವಣದಲ್ಲಿ ಚರ್ಮವನ್ನು ಕ್ರಿಯೆಗೆ ಒಳಪಡಿಸುವುದರಿಂದ ಅದರಲ್ಲಿ ಏಕರೀತಿಯ ಆಮ್ಲೀಯ ಗುಣ ಉಂಟಾಗಿ ಚರ್ಮ ಇನ್ನೂ ಶುದ್ಧಿಗೊಂಡು ಮೃದುವಾಗುತ್ತದೆ.

ಹೀಗೆ ಚರ್ಮವನ್ನು ಸಿದ್ಧಪಡಿಸಿಕೊಂಡ ಬಳಿಕ ಅದನ್ನು ಹದಮಾಡುವರು (ಟ್ಯಾನಿಂಗ್). ಮೊದಲಿಗೆ ಚರ್ಮ ಹದಮಾಡಲು ಟ್ಯಾನಿನ್ ಅಥವಾ ಟ್ಯಾನಿಕ್ ಆಮ್ಲವನ್ನು ಒಳಗೊಂಡ ಸಸ್ಯಗಳನ್ನು ಬಳಸುತ್ತಿದ್ದರು. ಆದರೆ ಈಚೆಗೆ ಚರ್ಮದ ತಯಾರಿಕೆಯ ತಾಂತ್ರಿಕ ಜ್ಞಾನ

ಚರ್ಮದ ದಪ್ಪವನ್ನು ಕಡಿಮೆ ಹಾಗೂ ಏಕರೀತಿ ಇರುವಂತೆ ಮಾಡುವ ಯಂತ್ರ

ಹೆಚ್ಚಿದಂತೆ ಅನೇಕ ರಾಸಾಯನಿಕಗಳನ್ನೂ ವೈಜ್ಞಾನಿಕ ಪ್ರಕ್ರಿಯೆಗಳನ್ನೂ ಉಪಯೋಗಿಸಿ ಚರ್ಮ ಹದ ಮಾಡಬಹುದಾಗಿದೆ. ಆದರೂ ಕೆಲವು ದರ್ಜೆಯ ಚರ್ಮಗಳನ್ನು ತಯಾರಿಸಲು ಸಸ್ಯಸಂಬಂಧವಾದ ಈ ವಿಧವೇ ಸೂಕ್ತವಾಗಿದೆ. ಕ್ರೋಮ್ ಸಂಯುಕ್ತಗಳನ್ನು ಉಪಯೋಗಿಸಿ ಹದ ಮಾಡುವ ಪ್ರಕ್ರಿಯೆ ಉತ್ಪಾದನೆಯ ಪರಿಮಾಣದ ದೃಷ್ಟಿಯಿಂದ ಅತ್ಯಂತ ಮಹತ್ತ್ವಪೂರ್ಣವಾದುದು. ಆಧುನಿಕ ಹದ ಮಾಡುವ ವಿಧಾನಗಳಲ್ಲಿ ಫೀನಾಲ್ ಹಾಗೂ ಹೈಡ್ರೊಕಾರ್ಬನ್ನುಗಳನ್ನು ಒಳಗೊಂಡ ಅನೇಕ ಸಂಶ್ಲೇಷಿತ ಪದಾರ್ಥಗಳನ್ನು ಬಳಕೆಗೆ ತರಲಾಗುತ್ತಿದೆ. ಈ ಪದಾರ್ಥಗಳಲ್ಲಿ ಚರ್ಮ ಹದ ಮಾಡುವ ವಿಶೇಷ ಗುಣಗಳಿವೆ. ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಫೀನೊ–ಸಲ್ಫಾನಿಕ್ ಆಮ್ಲಗಳೊಡನೆ ಫಾರ್ಮಾಲ್ಡಿಹೈಡನ್ನು ಬೆರೆಸುವುದರ ಮೂಲಕ ಸಾಮಾನ್ಯವಾಗಿ ಈ ರೀತಿಯ ಉತ್ಪನ್ನಗಳನ್ನು ತಯಾರಿಸುತ್ತಾರೆ. ಈ ಉತ್ಪನ್ನಗಳನ್ನು ಸಿಂಟಾನುಗಳೆಂದು ಕರೆಯುವುದುಂಟು. ಇವನ್ನು ಸ್ವಾಭಾವಿಕವಾದ ಸಸ್ಯಸಂಜಾತ ಹದ ಮಾಡುವ ಪ್ರಕ್ರಿಯೆಗಳಲ್ಲಿ ಮತ್ತೆ ಮತ್ತೆ ಹದಮಾಡಲು ಬಳಸುತ್ತಾರೆ. ಹದಮಾಡಲು ಸಿಂಟಾನುಗಳನ್ನು ಸಹಾಯಕ ವಸ್ತುಗಳಾಗಿ ಬಳಸಿದಲ್ಲಿ ಉತ್ತಮವಾಗಿ ಬೇರೂರಿದ ಬಣ್ಣ, ಗ್ರೀಸಿನ ಇಳಿತ ಮೊದಲಾದ ಗುಣಗಳು ಉಂಟಾಗುವುವು. ಸಿಂಟಾನುಗಳೇ ಅಲ್ಲದೆ ರೆಸಿನ್ ಅಥವಾ ರಾಳ ವರ್ಗಕ್ಕೆ ಸೇರಿದ ಕೆಲವು ಪದಾರ್ಥಗಳನ್ನು ಬಳಸಿ ಹದ ಮಾಡುವ ಪದ್ಧತಿ ಅಷ್ಟು ಬೃಹತ್ ಪ್ರಮಾಣದಲ್ಲಿ ಅಲ್ಲದಿದ್ದರೂ ಸುಮಾರಾಗಿ ಬಳಕೆಗೆ ಬರುತ್ತಿದೆ.



ಒಣಗಿದ ಚರ್ಮವನ್ನು ಯಾಂತ್ರಿಕವಾಗಿ ನಯಮಾಡಿ ಹದಗೊಳಿಸುವುದು

ಸಾಮಾನ್ಯವಾಗಿ ನಾಲ್ಕು ಭಿನ್ನಭಿನ್ನ ವಿಧಾನಗಳಿಂದ ಚರ್ಮವನ್ನು ಹದ ಮಾಡಬಹುದು: 1. ಸಸ್ಯಸಂಜಾತ ಪದಾರ್ಥಗಳಿಂದ ಹದ ಮಾಡುವಿಕೆ; 2. ಖನಿಜ ಸಂಜಾತ ಪದಾರ್ಥಗಳಿಂದ ಹದ ಮಾಡುವಿಕೆ (ಕ್ರೋಮ್ ಹದ ಮಾಡುವಿಕೆ); 3. ಎಣ್ಣೆಯಿಂದ ಹದ ಮಾಡುವಿಕೆ; 4. ವಿಲೇಯಕದಿಂದ ಹದ ಮಾಡುವಿಕೆ.

1. ಮೊದಲ ಪ್ರಕ್ರಿಯೆಯಲ್ಲಿ ಟ್ಯಾನಿನ್ ಹೊಂದಿರುವ ಮರದ ಕಾಂಡ ಅಥವಾ ತೊಗಟೆಗಳನ್ನು ಕಚ್ಚಾ ಚರ್ಮದ ಮೇಲೆ ಪ್ರಕ್ರಿಯೆ ಉಂಟು ಮಾಡಲು ಬಿಡುವರು. ಟ್ಯಾನಿಂಗ್ ವಸ್ತುಗಳಲ್ಲಿರುವ ಫೀನಾಲ್ ಮತ್ತು ಹೈಡ್ರಾಕ್ಸಿಲ್ ಗುಚ್ಛಗಳು ಚರ್ಮದ ವಸ್ತುವಿನಲ್ಲಿರುವ ಪ್ರೋಟೀನುಗಳೊಡನೆ ಪ್ರತಿಕ್ರಿಯೆಗೊಳಗಾಗುವುವು. ಸಸ್ಯಸಮುದಾಯದಲ್ಲಿ ಟ್ಯಾನಿನ್‌ಅನ್ನು ಒಳಗೊಂಡಿರುವ ಅನೇಕ ಸಸ್ಯಗಳಿದ್ದರೂ ಮೊದಲಿಗೆ ಓಕ್ ಮರದ ತೊಗಟೆಯನ್ನು ಟ್ಯಾನಿನ್‌ಗಾಗಿ ಬಳಸುತ್ತಿದ್ದುದುಂಟು.

ದಪ್ಪ ಚರ್ಮಗಳನ್ನು ಈ ವಿಧಾನದ ಮೂಲಕ ಹದ ಮಾಡುವ ಪ್ರಕ್ರಿಯೆ ಸಾಮಾನ್ಯವಾಗಿ ಮೂರು ಹಂತಗಳಲ್ಲಿ ನಡೆಯುತ್ತದೆ. ಮೊದಲಿಗೆ ಚರ್ಮದ ಪಟ್ಟಿಗಳನ್ನು ಕ್ರಮವಾಗಿ ಸಾರತೆ ಹೆಚ್ಚುತ್ತಿರುವ ಸಾರರಿಕ್ತ ದ್ರಾವಣಗಳ ಒಂದು ಶ್ರೇಣಿಯಲ್ಲಿ ತೂಗುಹಾಕಿ ಬಣ್ಣ ಕೊಡುವರು. ಈ ಹಂತದಲ್ಲಿ ಚಲಿಸುವ ಇಲ್ಲವೆ ಆಂದೋಲಿಸುವ ಪೀಪಾಯಿಗಳನ್ನು ಉಪಯೋಗಿಸುವರು. ಎರಡನೆಯದಾಗಿ ಹದ ಮಾಡುವ ಪ್ರಕ್ರಿಯೆ ಮುಂದುವರಿಯುತ್ತಿದ್ದಂತೆ ಸಾರತೆ ಕ್ರಮವಾಗಿ ಹೆಚ್ಚುತ್ತಿರುವ ಸಾರ ದ್ರಾವಣಗಳ ಶ್ರೇಣಿಯಲ್ಲಿ ಪ್ರಕ್ರಿಯೆ ನಡೆಸಲಾಗುವುದು. ಮೂರನೆಯದಾಗಿ ಸಾಪೇಕ್ಷವಾಗಿ ಅವನ್ನು ಹೆಚ್ಚು ಕಾಲ ಸಾರ ದ್ರಾವಣದಿಂದ ಪೀಪಾಯಿಯಲ್ಲಿ ಹಾಕಿ ಸ್ವಲ್ಪ ಘನ ಟ್ಯಾನಿಂಗ್ ವಸ್ತುವನ್ನು ಅದರಲ್ಲಿ ಸಿಂಪಡಿಸಿಬಿಡುವರು. ಈ ಅವಧಿಯಲ್ಲಿ ಪೀಪಾಯಿಗಳಲ್ಲಿನ ಅವುಗಳ ಸ್ಥಾನವನ್ನು ದಿನಕ್ಕೆ ಒಂದೆರಡಾವರ್ತಿ ಬದಲಾಯಿಸುತ್ತ ಕೆಲವು ದಿವಸಗಳವರೆಗೆ ನಡೆಸುವರು. ಹೀಗೆಯೇ ಕೆಲವು ಉಪಪ್ರಕ್ರಿಯೆಗಳಿಂದ ಅವು ಟ್ಯಾನಿನ್ ದ್ರಾವಣದಿಂದ ಸಂಸ್ಕರಣಗೊಂಡ ಅನಂತರ ಅವುಗಳ ಮೇಲೆ ಸ್ವಲ್ಪ ಮಿಮೋಸಾ ತೊಗಟೆಯ ಪುಡಿಯನ್ನೊ ವಲೋನಿಯಾ ಪುಡಿಯನ್ನೊ ಸಿಂಪಡಿಸುವರು. ಈ ಹೊತ್ತಿಗಾಗಲೆ ಚರ್ಮ ಬಹುಮಟ್ಟಿಗೆ ಹದಕ್ಕೆ ಬಂದಿರುತ್ತದೆ. ಇದನ್ನು ಮತ್ತೆ ಉಪಯೋಗವಾಗದ ಟ್ಯಾನಿನ್ ದ್ರಾವಣದ ಉಳಿಕೆಯಿಂದಾದ ಸಾರ ದ್ರಾವಣದಲ್ಲಿ ಅದಕ್ಕೆ ಚೆಸ್ಟ್‌ನಟ್ ಇಲ್ಲವೆ ಓಕ್ ತೊಗಟೆಯ ಸಾರವನ್ನು ಸೇರಿಸಿ ಅದರೊಳಗೆ ಇಡಲಾಗುವುದು. ಈ ಸ್ಥಿತಿಯಲ್ಲಿ ಒಂದೆರಡು ವಾರಗಳಿಗೆ ಒಂದಾವರ್ತಿ ಇನ್ನೂ ಹೆಚ್ಚು ಸಾರತೆಯ ದ್ರಾವಣ ಸೇರಿಸಬಹುದು. ಅನಂತರ ಚರ್ಮದ ಪಟ್ಟಿಗಳನ್ನು ಹೊರತೆಗೆದು, ಸ್ವಲ್ಪ ವಾಯುವಿಗೆ ಒಡ್ಡಿ, ಮೇಲ್ಭಾಗದ ಬೇಡವಾದ ನಿಕ್ಷೇಪವನ್ನು ಕೆರೆದು ತೆಗೆದು ಪ್ರಕ್ರಿಯೆಯನ್ನು ಪೂರ್ಣ–ಗೊಳಿಸಲಾಗುವುದು. ಈ ವಿಧಾನದಿಂದುಂಟಾದ ಹದ ಮಾಡಿದ ಚರ್ಮದ ಗುಣಗಳನ್ನು ಕ್ರೋಮ್ ವಿಧಾನದಿಂದ ಹದ ಮಾಡಿದ ಚರ್ಮಕ್ಕೆ ಸೇರಿಸುವುದುಂಟು. ಕ್ರೋಮ್ ವಿಧಾನದಿಂದ ಹದ ಮಾಡಿದ ಚರ್ಮವನ್ನು ಸಸ್ಯಸಂಜಾತ ಸಾರಗಳಿಂದ ಪುನಃ ಹದ ಮಾಡುವುದರಿಂದ ಈ ಎರಡು ವಿಧಾನಗಳ ಗುಣಗಳೂ ಚರ್ಮಕ್ಕೆ ದೊರೆಯುತ್ತವೆ. ಇವುಗಳಲ್ಲಿ ಪ್ರತಿಯೊಂದಕ್ಕೂ ತಮ್ಮದೇ ಆದ ವಿಶಿಷ್ಟ ಗುಣಗಳುಂಟು. ಸಂಯುಕ್ತ ಹದಮಾಡುವಿಕೆ ವಿಧಾನದಿಂದ ಚರ್ಮಕ್ಕೆ ಕ್ರೋಮ್ ವಿಧಾನದ ಉಜ್ಜುವಿಕೆ ನಿರೋಧ ಗುಣ ಮತ್ತು ಸಸ್ಯಸಾರ ವಿಧಾನದ ಹೆಚ್ಚಿನ ದಪ್ಪ ಎರಡೂ ದೊರೆಯುತ್ತವೆ.

2. ಖನಿಜ ಸಂಜಾತ ಪದಾರ್ಥಗಳಿಂದ ಹದ ಮಾಡುವ ವಿಧಾನದಲ್ಲಿ ಸೋಡಿಯಮ್ ಅಥವಾ ಪೊಟ್ಯಾಸಿಯಮ್ ಬೈಕ್ರೋಮೇಟುಗಳಂಥ ಖನಿಜ ಲವಣಗಳನ್ನು ಉಪಯೋಗಿಸಿ ತೆಳು ಚರ್ಮಗಳನ್ನು ಉತ್ತಮವಾಗಿ ಹದ ಮಾಡಬಹುದು. ಬಹುಮಟ್ಟಿಗೆ ಪಾದರಕ್ಷೆಗಳ ಮೇಲಣ ಭಾಗಗಳನ್ನು ಕ್ರೋಮ್ ಹದ ಮಾಡುವಿಕೆ ವಿಧಾನದಿಂದ ತಯಾರಿಸುತ್ತಾರೆ. ಖನಿಜಲವಣವನ್ನು ಉಪಯೋಗಿಸಿ ಹದ ಮಾಡುವ ಅತ್ಯಂತ ಹಳೆಯ ವಿಧಾನವೆಂದರೆ ಆಲಮ್ ವಿಧಾನ. ಈಗಲೂ ಕೆಲವು ರೀತಿಯ ಕೈಗವಸುಗಳನ್ನು ತಯಾರಿಸಲು ಈ ವಿಧಾನ ಬಳಕೆಯಲ್ಲಿದೆ. ಆ್ಯಲಮ್, ಲವಣ, ಹಿಟ್ಟು, ಕೋಳಿಮೊಟ್ಟೆಯ ಲೋಳೆ ಇವನ್ನು ಇಲ್ಲಿ ಬಳಸುತ್ತಾರೆ. ಕ್ರೋಮ್ ಹದ ಮಾಡುವಿಕೆಯನ್ನು ಎರಡು ವಿಧಾನಗಳಲ್ಲಿ ಮಾಡುತ್ತಾರೆ. ಮೊದಲ ವಿಧಾನದಲ್ಲಿ ಚರ್ಮವನ್ನು ಹೈಡ್ರೊಕ್ಲೋರಿಕ್ ಅಥವಾ ಸಲ್ಫ್ಯೂರಿಕ್ ಆಮ್ಲದಿಂದ ಆಮ್ಲೀಕರಿಸಿದ ಸಾರರಿಕ್ತ ಪೊಟ್ಯಾಸಿಯಮ್ ಅಥವಾ ಸೋಡಿಯಮ್ ಬೈಕ್ರೊಮೇಟ್ ದ್ರಾವಣದಿಂದ ಸಂಸ್ಕರಿಸುವರು. ದ್ರಾವಣವನ್ನು ಚರ್ಮ ಹೀರಿಕೊಂಡ ಬಳಿಕ ಅದನ್ನು ಸೋಡಿಯಮ್ ಥಯೊಸಲ್ಫೇಟ್ (ಹೈಪೊ) ಇರುವ ಬಾನೆಗೆ ರವಾನಿಸುವರು. ಅಪಕರ್ಷಣ ಕ್ರಿಯೆ ಮುಂದುವರಿಯುತ್ತಿದ್ದಂತೆ ಇದಕ್ಕೆ ಹೈಡ್ರೋಕ್ಲೋರಿಕ್ ಆಮ್ಲ ಅಥವಾ ಸಲ್ಫ್ಯೂರಿಕ್ ಆಮ್ಲ ಸೇರಿಸುತ್ತ ಹೋಗುವರು. ಉತ್ಪತ್ತಿಯಾದ ಸಲ್ಫ್ಯೂರಸ್ ಆಮ್ಲ ಬೈಕ್ರೊಮೇಟ್ ದ್ರಾವಣದ ಮೇಲೆ ಆಮ್ಲದಿಂದುಂಟಾಗುವ ಕ್ರೋಮಿಕ್ ಆಮ್ಲವನ್ನು ಅಪಕರ್ಷಣಗೊಳಿಸಿ ಪ್ರತ್ಯಾಮ್ಲೀಯ ಕ್ರೋಮಿಯಮ್ ಕ್ಲೋರೈಡ್ ಅಥವಾ ಕ್ರೋಮಿಯಮ್ ಸಲ್ಫೇಟ್ ಉಂಟುಮಾಡಬಹುದು. ಅಪಕರ್ಷಣ ಕ್ರಿಯೆಯಲ್ಲಿ ಥಯೊಸಲ್ಫೇಟ್ ಉತ್ಕರ್ಷಣಗೊಂಡು ಸೋಡಿಯಮ್ ಟೆಟ್ರಾ ಥಯೊನೇಟ್ ಹಾಗೂ ಸೋಡಿಯಮ್ ಸಲ್ಫೇಟ್ ಉಂಟಾಗುವುವು. ಅದೇ ಅವಧಿಯಲ್ಲಿ ಚರ್ಮದ ಎಳೆಗಳ ನಡುವೆ ಹಾಗೂ ಮೇಲೆ ಸಲ್ಫರ್ ನಿಕ್ಷೇಪ ಉಂಟಾಗುತ್ತದೆ. ಈ ನಿಕ್ಷೇಪದಿಂದಾಗಿ ಅದನ್ನು ಯಾವ ರೀತಿಯಲ್ಲಿ ಕ್ರೋಮ್ ಹದ ಮಾಡಿದೆ ಎಂದು ತಿಳಿದುಬರುತ್ತದೆ. ಆಧುನಿಕ ವಾಣಿಜ್ಯ ವಿಧಾನಗಳಲ್ಲಿ ಮೊದಲು ಚರ್ಮವನ್ನು ಸಲ್ಫ್ಯೂರಿಕ್ ಆಮ್ಲ ಮತ್ತು ಸೋಡಿಯಮ್ ಬೈಕ್ರೋಮೇಟ್ ಮತ್ತು ಆಮ್ಲ ದ್ರಾವಣದಲ್ಲಿ ಪ್ರಕ್ರಿಯೆಗೆ ಒಳಪಡಿಸುವರು. ಈ ಕ್ರಿಯೆಯಿಂದ ಉಂಟಾಗುವ ಕ್ರೋಮಿಕ್ ಆಮ್ಲವನ್ನು ಚರ್ಮ ಎಷ್ಟು ಚೆನ್ನಾಗಿ ಹೀರುವುದೋ ಅದು ಅಷ್ಟು ಸುಂದರವಾಗಿ ಪೂರ್ತಿಗೊಂಡು ಹೊರಬರುವುದು. ಕ್ರೋಮಿಕ್ ಆಮ್ಲ ಹೀರಿದ ಚರ್ಮ ಬಣ್ಣದಲ್ಲಿ ಕಿತ್ತಲೆ ಹಳದಿಯಾಗಿರಬೇಕು. ಅದನ್ನು ದ್ರಾವಣದಿಂದ ಹೊರತೆಗೆದು ಕನಿಷ್ಠ 24 ಗಂಟೆಗಳವರೆಗಾದರೂ ಒಣಗಿಸುವರು. ಅನಂತರ ಯಂತ್ರವೊಂದರ ಸಹಾಯದಿಂದ ಸುಕ್ಕುಗಳೆಲ್ಲ ಹೋಗುವಂತೆ ನೇರ ಮಾಡುವರು. ಕರುವಿನ ಚರ್ಮದಂಥ ತೆಳುಚರ್ಮಗಳನ್ನು ಹದಮಾಡಲು ಇನ್ನೊಂದು ವಿಧದ ಕ್ರೋಮ್ ವಿಧಾನವನ್ನು ಬಳಸುತ್ತಾರೆ. ಇದು ಮೇಲೆ ಹೇಳಿದ ವಿಧಾನಕ್ಕಿಂತ ಹೆಚ್ಚು ಪ್ರಚಲಿತವಾದುದು. ಅನಿಷ್ಟಪ್ರಷ್ಟ ಫಲಿತಾಂಶಗಳು ಈ ವಿಧಾನದಲ್ಲಿ ಸಾಮಾನ್ಯವಾಗಿ ಬರಲಾರವು. ಈ ಎರಡು ವಿಧಾನಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಮೊದಲ ವಿಧಾನದಲ್ಲಿ ಕ್ರೋಮಿಯಮ್‌ನ ಪ್ರತ್ಯಾಮ್ಲೀಯ ಲವಣದ ಪ್ರಭಾವ ಚರ್ಮದ ಎಳೆಗಳ ಮೇಲೆ ರೂಪುಗೊಳ್ಳುವಂತೆ ಮಾಡಲಾಗುತ್ತದೆ. ಆದರೆ ಎರಡನೆಯ ವಿಧಾನದಲ್ಲಿ ಸಾರತೆ ಹೆಚ್ಚುತ್ತಿರುವ ದ್ರಾವಣಗಳಲ್ಲಿ ಕ್ರೋಮಿಯಮ್‌ನ ಪ್ರತ್ಯಾಮ್ಲೀಯ ಲವಣದ ಪ್ರಭಾವವನ್ನು ನೇರವಾಗಿಯೇ ಒಳಹೊಗಿಸಲಾಗುವುದು. ಸಸ್ಯಸಾರಗಳ ವಿಧಾನದಿಂದ ಹದ ಮಾಡುವ ವಿಧಾನಕ್ಕೆ ಹೋಲಿಸಿದರಂತೂ ಕ್ರೋಮ್ ವಿಧಾನದಿಂದ ಚರ್ಮವನ್ನು ಕೆಲವು ವಾರಗಳಿಗೆ ಬದಲಾಗಿ ಕೆಲವು ದಿನ ಅಥವಾ ಗಂಟೆಗಳಲ್ಲಿ ಹದ ಮಾಡಲು ಸಾಧ್ಯ. ಪ್ರಕ್ರಿಯೆಯನ್ನು ಅತ್ಯಂತ ನಿಷ್ಕೃಷ್ಟವಾಗಿ ನಡೆಸಬಹುದು. ಕ್ರೋಮ್ ವಿಧಾನದಿಂದ ಹದಮಾಡಿದ ಚರ್ಮಗಳು ಬಾಳಿಕೆ ಬರುವಂಥವು. ಅವುಗಳ ತನನಸಾಮರ್ಥ್ಯ ಹೆಚ್ಚಿದ್ದು, ರಾಸಾಯನಿಕ ಪ್ರತಿವರ್ತಕಗಳಿಗೆ ನಿರೋಧ ಹೊಂದಿರುತ್ತವೆ. ಯಾವುದೇ ತೊಂದರೆಯಿಲ್ಲದೆ ಶೀತ ಹಾಗೂ ಉಷ್ಣ ಪರಿಸರಗಳಲ್ಲಿ ಅಧಿಕ ಉಷ್ಣತೆಯಲ್ಲಿ ತಡೆದು ಬರುವಂಥದಾಗಿರುತ್ತವೆ.

3. ಎಣ್ಣೆ ಅಥವಾ ಕೊಬ್ಬಿನ ಪದಾರ್ಥಗಳನ್ನು ಬಳಸಿ ಕಚ್ಚಾ ಚರ್ಮವನ್ನು ಹದ ಮಾಡುವ ಕ್ರಮ ಬಹಳ ಹಳೆಯ ಪ್ರಕ್ರಿಯೆಗಳಲ್ಲಿ ಒಂದಾಗಿದೆ. ಚರ್ಮದ ಎಳೆಗಳಲ್ಲಿರುವ ತೇವಕ್ಕೆ ಬದಲಾಗಿ ಸೂಕ್ತವಾದ ಒಂದು ಮೀನಿನ ಎಣ್ಣೆಯನ್ನು ಪ್ರತಿಸ್ಥಾಪಿಸುವುದೇ ಈ ಪ್ರಕ್ರಿಯೆಯ ಉದ್ದೇಶ. ಮೊದಲು ಚರ್ಮವನ್ನು ಒಣಗಿಸಿ ಒತ್ತಿ ಸಾಧ್ಯವಾದಷ್ಟು ತೇವವನ್ನು ಹೊರತೆಗೆಯಲಾಗುವುದು. ಸ್ವಲ್ಪಮಟ್ಟಿಗೆ ಒಣಗುವಂತೆ ಅವನ್ನು ನೇತು ಹಾಕಲಾಗುವುದು. ಅದು ತುಂಬ ಒಣಗಿ ಹೋಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಇಲ್ಲದಿದ್ದರೆ ಅದು ಎಣ್ಣೆಯನ್ನು ಹೀರಲಾರದು. ಅನಂತರ ಯಂತ್ರವೊಂದರ ಸಹಾಯದಿಂದ ಚರ್ಮವನ್ನು ಬಡಿದು ಪುನಃ ತೇವ ತೆಗೆದು ಮೀನೆಣ್ಣೆಯನ್ನು ಅದರ ಮೇಲೆ ಸಿಂಪಡಿಸಲಾಗುವುದು. ತೇವವೆಲ್ಲ ಎಣ್ಣೆಯಿಂದ ಪ್ರತಿಸ್ಥಾಪನೆಗೊಂಡ ಬಳಿಕ ಉಷ್ಣವನ್ನು ಒದಗಿಸಿ ಎಳೆಗಳ ಮೇಲೆ ಎಣ್ಣೆಯ ಅಂಶವನ್ನು ಅದು ಚರ್ಮಗತವಾಗುವಂತೆ ವಿಭಜಿಸಲಾಗುವುದು. ಈಗಿನ ದಿನಗಳಲ್ಲಿ ಮಾಂಸ ತೆಗೆದ ಕುರಿಯ ಚರ್ಮವನ್ನೂ ಜಿಂಕೆ, ಚಿಗರೆಯಂಥ ಪ್ರಾಣಿಗಳ ಚರ್ಮವನ್ನೂ ಹದ ಮಾಡಲು ಈ ವಿಧಾನವನ್ನು ಉಪಯೋಗಿಸುವರು.

**ಚರ್ಮಕ್ಕೆ ಬಣ್ಣ ಕೊಟ್ಟು ಕೊಬ್ಬಿನ ಪದಾರ್ಥಗಳ ಸಂಸ್ಕರಣಕ್ಕೆ ಒಳಪಡಿಸುವುದು**

4. ಹದ ಮಾಡುವ ವಸ್ತುಗಳ ಜಲೀಯ ದ್ರಾವಣಗಳಿಗೆ ಬದಲಾಗಿ ಅಸಿಟೋನಿನಂಥ ವಿಲೇಯಕಗಳನ್ನು ನೇರವಾಗಿ ಬಳಸುವ ವಿಧಾನ ರೂಢಿಗೆ ಬಂದಿದೆ. ಚರ್ಮದ ಎಳೆಗಳ ಒಳಗೆ ವಿಲೇಯಕ ಸರಾಗವಾಗಿಯೂ ನೇರವಾಗಿಯೂ ಹೋಗುವುದರಿಂದ ಪ್ರಕ್ರಿಯೆಗಳನ್ನು ಬಹಳ ಬೇಗ ನಡೆಸಬಹುದಾಗಿದೆ. ಕಳೆದ ಶತಮಾನದಲ್ಲಿ ಕ್ರೋಮ್ ವಿಧಾನ ಬಳಕೆಗೆ ಬಂದಾಗ ಚರ್ಮದ ಕೈಗಾರಿಕೆಯಲ್ಲಿ ಮೂಲಭೂತವಾದ ಬದಲಾವಣೆಯಾಗುವುದೆಂದು ನಿರೀಕ್ಷಿಸಲಾಗಿತ್ತು. ಈ ಶತಮಾನದಲ್ಲಿ ಈ ವಿಲೇಯಕ ವಿಧಾನದಿಂದ ಕೂಡ ಅಂಥ ನಿರೀಕ್ಷೆಯೇ ಇದೆ. ಇದರಲ್ಲೂ ಚರ್ಮದಿಂದ ತೇವವನ್ನು ಪೂರ್ತಿಯಾಗಿ ತೆಗೆದು ಸಾಮಾನ್ಯವಾದ ಕೆಲವು ಹಂತಗಳ ಅನಂತರ ವಿಲೇಯಕದ ದ್ರಾವಣವನ್ನೂ ಹದ ಮಾಡುವ ಮತ್ತೊಂದು ವಸ್ತುವನ್ನೂ ಬಳಸಿ ಸಂತೃಪ್ತಗೊಳ್ಳುವವರೆಗೆ ಹದ ಮಾಡಲಾಗುವುದು.

ಹದಗೊಳಿಸಿದ ಅನಂತರದ ಪೂರಣ ಪ್ರಕ್ರಿಯೆಗಳು : ಇಷ್ಟೆಲ್ಲ ಸಂಸ್ಕರಣಗಳು ನಡೆದಮೇಲೂ ಚರ್ಮ ಕಚ್ಚಾ ರೀತಿಯಲ್ಲಿ ಹದ ಮಾಡಿದ ಚರ್ಮವಾಗಿರುತ್ತದಷ್ಟೆ. ಇದಕ್ಕೆ ಅಂತಿಮವಾಗಿ ಮೆರುಗನ್ನು ಕೊಡಲು ಇನ್ನೂ ಅನೇಕ ಹಂತಗಳನ್ನು ಅನುಸರಿಸ ಬೇಕಾಗುವುದು. ಈ ಪೂರಣ ಪ್ರಕ್ರಿಯೆಗಳಿಂದ ಚರ್ಮಕ್ಕೆ ಆವಶ್ಯಕವಾದ ಸಾಂದ್ರತೆ ಹಾಗೂ ನಮ್ಯತೆ ದೊರೆತು, ನಷ್ಟ ಹೊಂದಿದ ಸ್ವಾಭಾವಿಕ ತೈಲಗಳು ಒಳಸೇರುವುವು. ಚರ್ಮಕ್ಕೆ ಬೇಕಾದ ಬಣ್ಣವನ್ನೂ ಹಾಕಲಾಗುವುದು. ಈ ಹಂತಗಳನ್ನು ಮುಂದೆ ವಿವೇಚಿಸಲಾಗಿದೆ. ಚರ್ಮವನ್ನು ಅಂತಿಮವಾಗಿ ಸಿದ್ಧಪಡಿಸುವುದರಲ್ಲಿ ಮೊದಲಿಗೆ ಹದ ಮಾಡಿದ ಚರ್ಮವನ್ನು ಚೆನ್ನಾಗಿ ಒಣಗಿಸಬೇಕು. ಹೀಗೆ ಒಣಗಿಸುವಲ್ಲಿ ಆರ್ದ್ರತೆ ಹಾಗೂ ಉಷ್ಣತೆಗಳನ್ನು ನಿಯಂತ್ರಿಸುವುದು ಬಹಳ ಮುಖ್ಯ. ಇಲ್ಲದಿದ್ದರೆ ಚರ್ಮದ ಮೇಲುಭಾಗದ ಎಳೆಗಳು ಏಕಪ್ರಕಾರವಾಗಿ ಪ್ರಕ್ರಿಯೆಗೆ ಒಳಗಾಗುವಂಥ ಪರಿಸ್ಥಿತಿ ಒದಗುವುದು. ಹದ ಮಾಡಿದ ಚರ್ಮದ ಪಟ್ಟೆಗಳನ್ನು ಸಾಲಾಗಿ ಕಂಬಿಗಳಿಗೆ ನೇತುಹಾಕಿ ಗಾಳಿಯ ಪ್ರವಾಹವನ್ನು ಏಕಪ್ರಕಾರವಾಗಿ ಹರಿಯಬಿಡುವರು. ಅವು ಮಿತಿಮೀರಿ ಒಣಗದಿರಲೆಂದು ಸ್ವಲ್ಪ ಎಣ್ಣೆಯ ಲೇಪನವನ್ನೂ ಕೊಡುವುದುಂಟು. ಈ ರೀತಿಯಲ್ಲಿ ಸರಿಯಾಗಿ ಒಣಗಿಸುವುದರ ಮೇಲೆಯೇ

ಹದಮಾಡಿದ ಚರ್ಮದ ಉಗ್ರಾಣ

ಬಣ್ಣ ಹಾಗೂ ಹದ ಏಕಪ್ರಕಾರವಾಗಿರುತ್ತವೆ. ದಪ್ಪ ಚರ್ಮವನ್ನು ತೆಳು ಚರ್ಮಕ್ಕಿಂತ ಇನ್ನೂ ನಿಧಾನವಾಗಿ ಒಣಗಿಸುವುದು ಉತ್ತಮ. ಸಸ್ಯಸಾರಗಳಿಂದ ಹದಗೊಳಿಸಿದ ಚರ್ಮವನ್ನು ಕ್ರೋಮ್ ವಿಧಾನದಿಂದ ಹದಗೊಳಿಸಿದ ಚರ್ಮಕ್ಕಿಂತ ಕಡಿಮೆ ದರದಲ್ಲಿ ಒಣಗಿಸಬೇಕು. ಒಣಗಿಸಲು ಇನ್ನೂ ಒಂದು ವಿಧಾನವನ್ನು ಬಳಸುವುದುಂಟು. ಆರ್ದ್ರತೆ ಹಾಗೂ ಉಷ್ಣತೆಗಳನ್ನು ನಿಯಂತ್ರಿಸಿರುವ ಕೊಳಾಯಿಗಳ ಮೂಲಕ ಚರ್ಮದ ಪಟ್ಟೆಗಳನ್ನು ಹಾಯಿಸುವುದರ ಮೂಲಕ ಅಗತ್ಯವಾದ ಮಟ್ಟಕ್ಕೆ ಈ ವಿಧಾನದಲ್ಲಿ ಚರ್ಮವನ್ನು ಒಣಗಿಸುತ್ತಾರೆ. ಇತ್ತೀಚೆಗೆ ಅತಿರಕ್ತ ದೀಪಗಳನ್ನು ಉಪಯೋಗಿಸಿ ಒಣಗಿಸುವ ಪ್ರಕ್ರಿಯೆಯನ್ನು ನಡೆಸುವುದುಂಟು. ಚರ್ಮವನ್ನು ಹದ ಮಾಡಿ ಒಣಗಿಸಿದ ಮೇಲೆ ಕೂಡ ಅದು ಒರಟಾಗಿಯೂ ಗಟ್ಟಿಯಾಗಿಯೂ ಇರುವುದು. ಅದರಲ್ಲಿ ಅನಮ್ಯತೆ, ಸ್ನಿಗ್ಧತೆ, ಪರಿಪೂರ್ಣತೆ ಮೊದಲಾದ ಗುಣಗಳಿರುವುದಿಲ್ಲ. ಮೃದುತ್ವವನ್ನು ಉಂಟುಮಾಡಲು ಕೆಲವು ಮಿಶ್ರಿತ ತೈಲಗಳನ್ನೂ ಗ್ರೀಸನ್ನೂ ಬಳಿಯಬೇಕಾಗುತ್ತದೆ. ಇದರಿಂದಾಗಿ ಚರ್ಮ ಮೃದುವಾಗಿ ಅದರ ಬಾಳಿಕೆ, ತಡೆತ ಹೆಚ್ಚಾಗಿ ಅದು ಬೇಗ ಸೀಳು ಬಿಡುವುದಿಲ್ಲ. ಎಣ್ಣೆ ಎಮಲ್ಷನುಗಳನ್ನು ನೀರಿನಲ್ಲಿ ತಯಾರಿಸಿ ಅವು ಚರ್ಮದ ಎಳೆಗಳಲ್ಲಿ ಏಕಪ್ರಕಾರವಾಗಿ ಒಳಹೊಗುವಂತೆ ಮಾಡುತ್ತಾರೆ. ಎಣ್ಣೆಗಳು ಸಾಮಾನ್ಯವಾಗಿ ನೀರಿನಲ್ಲಿ ಕರಗದಿರುವುದರಿಂದ, ಎಮಲ್ಷನುಗಳನ್ನು ತಯಾರಿಸಲು ಸಾಬೂನುಗಳನ್ನು ಬಳಸುವುದುಂಟು. ನಮಗೆ ಯಾವ ನಮೂನೆಯ, ಎಂಥ ದರ್ಜೆಯ ಚರ್ಮ ಬೇಕೊ ಅದಕ್ಕೆ ಅನುಗುಣವಾದ ಎಣ್ಣೆಯನ್ನು ಬಳಸಬೇಕು. ಕೆಲವು ದರ್ಜೆಯ ಚರ್ಮಗಳನ್ನು ತಯಾರಿಸುವಲ್ಲಿ ಆವಶ್ಯಕತೆಗಿಂತ ಹೆಚ್ಚು ಗ್ರೀಸ್ ಅಥವಾ ಎಣ್ಣೆಯ ಪೂರೈಕೆ ಆಗಬೇಕಾಗುತ್ತದೆ. ಇದಕ್ಕಾಗಿ ಹೆಚ್ಚುವರಿ ಗ್ರೀಸ್ ಅಥವಾ ಎಣ್ಣೆಯನ್ನು ಸೇರಿಸಿ ಚರ್ಮವನ್ನು ಉಜ್ಜಿ ನಯ ಮಾಡುತ್ತಾರೆ. ದೊಡ್ಡ ದೊಡ್ಡ ಯಂತ್ರಗಳ ಬೆಲ್ಟುಗಳೇ ಮೊದಲಾದವನ್ನು ಹೀಗೆ ತಯಾರಿಸಬೇಕಾಗುತ್ತದೆ. ಇನ್ನೂ ಹಗುರವಾದ ಚರ್ಮಗಳಿಗೆ ಉತ್ತಮ ಅನಮ್ಯತೆ ಹಾಗೂ ಜಲನಿರೋಧಸಾಮರ್ಥ್ಯ ಉಂಟಾಗುವಂತೆ ಮಾಡಲು ಸೂಕ್ಷ್ಮ ಸ್ಫಟಿಕೀಯ ಗ್ರೀಸುಗಳನ್ನು ಒತ್ತಾಗಿ ತುಂಬಿ ಅದುಮಬೇಕು. ದಪ್ಪ ಮತ್ತು ಭಾರವಾದ ಚರ್ಮದ ಪಟ್ಟೆಗಳನ್ನು ಸಾಮಾನ್ಯವಾಗಿ ಪ್ಯಾರಫಿನ್ ಮೇಣದ ಗ್ರೀಸ್‌ದ್ರವದಲ್ಲಿ ಅದ್ದುವರು. ಚರ್ಮಗಳಿಗೆ ಬಣ್ಣ ಸೇರಿಸುವುದರಿಂದ ಇಲ್ಲವೆ ಮೇಲಣ ಭಾಗಕ್ಕೆ ವರ್ಣದ್ರವ್ಯಗಳನ್ನು ಲೇಪನ ಮಾಡುವುದರಿಂದ ವರ್ಣಸಂಯೋಜನೆ ಮಾಡುತ್ತಾರೆ. ಕೆಲವು ಬಾರಿ ಮೊದಲು ಮೂಲವರ್ಣವೊಂದರ ಸಂಯೋಜನ ನಡೆಸಿ ಅನಂತರ ವರ್ಣದ್ರವ್ಯಗಳನ್ನು ಸೇರಿಸುತ್ತಾರೆ. ಚರ್ಮದ ಮೆರುಗು ಹೆಚ್ಚಿ ಬಣ್ಣ ಗಾಢವಾಗಿ ಕೂಡುವಂತೆ ಮಾಡಲು ವಿಶೇಷವಾಗಿ ಅನಿಲಿನ್ ವರ್ಣಗಳನ್ನು ಬಳಸುತ್ತಾರೆ. ಇದಕ್ಕೂ ಹಲವು ವಿಧಾನಗಳುಂಟು. ಒಂದು ವಿಧಾನದಲ್ಲಿ ಸೂಕ್ತವಾದ ಉಷ್ಣತೆಯಲ್ಲಿ ವರ್ಣದ್ರವ್ಯಗಳ ಸಂಯುಕ್ತಗಳನ್ನು ಒಳಗೊಂಡ ತಿರುಗುತ್ತಿರುವ ಪೀಪಾಯಿಗಳಲ್ಲಿ ಚರ್ಮದ ಪಟ್ಟೆಗಳನ್ನು ಇಳಿಯಬಿಟ್ಟು ಬಣ್ಣ ಹಾಕುವರು. ನಮಗೆ ಬೇಕಾದ ನಮೂನೆ ಹಾಗೂ ದರ್ಜೆಯ ಚರ್ಮಕ್ಕೆ ಅನುಗುಣವಾಗಿ ಆಮ್ಲೀಯ ಇಲ್ಲವೆ ಕ್ಷಾರೀಯ ಬಣ್ಣಗಳನ್ನು ಉಪಯೋಗಿಸಬಹುದು. ಇನ್ನೊಂದು ವಿಧಾನದಲ್ಲಿ ನಿರ್ದಿಷ್ಟ ಒತ್ತಡದಲ್ಲಿ ವರ್ಣದ್ರವ್ಯಗಳನ್ನು ತುಂತುರು ತುಂತುರಾಗಿ ಚರ್ಮದ ಮೇಲೆ ಸಿಂಪಡಿಸಲಾಗುವುದು. ಚರ್ಮದ ಮೇಲೆ ಕರಗಿ ಹೋಗದಂತಿರುವ ಹೆಚ್ಚುವರಿ ಬಣ್ಣಗಳ ಲೇಪನ ಮಾಡಲೂ ಸಿಂಪಡಿಕೆ ವಿಧಾನವನ್ನು ಬಳಸುವುದುಂಟು. ವರ್ಣದ್ರವ್ಯ ಸಂಯುಕ್ತಗಳಿಗೆ ಕೆಸೀನ್, ಷೆಲಾಕ್, ಲಾಕ್ವರ್ ಮುಂತಾದ ಬಂಧಕಗಳನ್ನು ಸೇರಿಸಬಹುದು. ದಪ್ಪವಾದ ಚರ್ಮಗಳಿಗೆ ಕುಂಚದಿಂದ ಬಣ್ಣ ಹಾಕುವ ಪದ್ಧತಿಯೂ ಉಂಟು.

ಇಷ್ಟೆಲ್ಲ ಪ್ರಕ್ರಿಯೆಗಳು ನಡೆದ ಮೇಲೂ ಕಾರ್ಖಾನೆಯಿಂದ ಹೊರಬರುವ ಮೊದಲು ಚರ್ಮಕ್ಕೆ ಇನ್ನೂ ಕೆಲವು ಸಂಸ್ಕಾರಗಳನ್ನು ನಡೆಸಬೇಕಾಗುತ್ತದೆ. ಪಾದರಕ್ಷೆಗಳ ಅಟ್ಟೆಗಳನ್ನು ಹದಮಾಡುವ ಕೇಂದ್ರಗಳಿಂದ ಹೊರಗೆ ಕಳಿಸುವ ಮೊದಲು ಅವುಗಳ ಮೇಲೆ ಚೆನ್ನಾಗಿ ಒತ್ತಡ ಹೇರುವರು. ಕೆಲವೆಡೆಗಳಲ್ಲಿ ಸ್ವಲ್ಪ ತೇವವಾಗಿರುವ ಹಂತದಲ್ಲೇ ಒಂದು ಬಾರಿ, ಒಣಗಿದ ಅನಂತರ ಮತ್ತೊಂದು ಬಾರಿ ಒತ್ತಡ ಹೇರುವುದೂ ಉಂಟು. ಮುಂದುವರಿದ ದೇಶಗಳಲ್ಲಿ ಇತ್ತೀಚೆಗೆ ಒತ್ತಡವನ್ನು ಹೇರಲು ವಾಯುರಂಧ್ರಗಳುಳ್ಳ ಯಂತ್ರೋಪಕರಣಗಳನ್ನು ಬಳಸುತ್ತಾರೆ. ದನಕರುಗಳ ದಪ್ಪ ಚರ್ಮವನ್ನು ಎರಡು ಭಾಗವಾಗಿ ಸೀಳಿ ತೆಳು ಚರ್ಮಗಳನ್ನು ತಯಾರಿಸುವುದೂ ರೂಢಿಯಲ್ಲಿದೆ. ಸಾಕಷ್ಟು ತಾಳಿಕೆ, ಬಾಳಿಕೆ, ಬಿಸಿಲಿನ ತಡೆತ, ಘರ್ಷಣೆಯ ವಿರುದ್ಧ ತಡೆತ ಇವನ್ನು ಉಂಟುಮಾಡಲು ಇದೇ ರೀತಿಯ ಅನೇಕ ಪ್ರಕ್ರಿಯೆಗಳನ್ನು ನಡೆಸುವರು. ಕೇಸಿನ್, ಆಲ್ಬುಮಿನ್, ಮೇಣಗಳಿಂದ ಹಿಡಿದು ಕ್ಲಿಷ್ಟವಾದ ರೆಸಿನ್ನುಗಳವರೆಗೆ ವಿವಿಧ ಹಂತಗಳಲ್ಲಿ ಬಳಸುವರು. ಅತ್ಯಂತ ಹೊಳಪಿನ ಚರ್ಮ ಬೇಕಾದಲ್ಲಿ ಉಷ್ಣ ಹಾಗೂ ಘರ್ಷಣೆ ಉಂಟುಮಾಡುವ ಒಂದು ದೊಡ್ಡ ಗಾಜಿನ ಉರುಳೆ ಚರ್ಮದ ಮೇಲೆ ಪದೇ ಪದೇ ವೇಗವಾಗಿ ಹಾಯುವಂತೆ ಮಾಡುವರು. ಇದರಿಂದಾಗಿ ಚರ್ಮ ಪ್ಲಾಸ್ಟಿಕ್ಕಿನಂತೆ ಮಿರಮಿರನೆ ಮಿನುಗತೊಡಗುವುದು. ಚರ್ಮದ ಮೇಲೆ ಯಾವುದೇ ಚಿತ್ರ ಇಲ್ಲದೆ ಆಕೃತಿ ಬಿಡಿಸಬೇಕಾದರೆ ಅಂತಿಮವಾಗಿ ಸಿದ್ಧಪಡಿಸಬೇಕಾದ ಹಂತದಲ್ಲಿ ಅಥವಾ ಅದಕ್ಕೆ ಸ್ವಲ್ಪ ಮುಂಚೆ ಬೇಕಾದ ಆಕೃತಿಯನ್ನು ಕೆತ್ತಿದ ತಟ್ಟೆಯೊಂದರ ಮೇಲೆ ಬಹಳ ಹೆಚ್ಚಿನ ಒತ್ತಡದಲ್ಲಿ ಒತ್ತುವರು. ಅಗತ್ಯವಾದ ಉಷ್ಣ ಹಾಗೂ ಹೆಚ್ಚಿನ ಒತ್ತಡಗಳ ಸಂಯೋಗದಿಂದ ಆಕೃತಿ ಚರ್ಮದ ಮೇಲೆ ಶಾಶ್ವತವಾಗಿ ಉಳಿಯುವುದು. ಯೂರೆಥೇನ್ ಪೂರಕ ಸಂಯುಕ್ತಗಳನ್ನು ಬಳಸಿ ಉಜ್ಜುವಿಕೆಯಿಂದಾಗಬಹುದಾದ ಸವೆತವನ್ನು ತಡೆಯಲಾಗುತ್ತಿದೆ.

ಪಾದರಕ್ಷೆಗಳ ಅಟ್ಟೆಗಳಿಗೆ ಉಪಯೋಗಿಸುವ ಹದಮಾಡಿದ ಚರ್ಮಕ್ಕೆ ಒತ್ತಡ ಕೊಡುವುದು

ಭಾರತದಲ್ಲಿ ಚರ್ಮದ ಕೈಗಾರಿಕೆ : ಭಾರತದಲ್ಲಿ ವಿದೇಶಿ ವಿನಿಮಯವನ್ನು ಗಳಿಸುವ ಪ್ರಮುಖ ಕೈಗಾರಿಕೆಗಳಲ್ಲಿ ಚರ್ಮದ ಕೈಗಾರಿಕೆ ಬಹುಶಃ ನಾಲ್ಕನೆಯದು. ಉತ್ತರಪ್ರದೇಶ ಭಾರತದಲ್ಲೆಲ್ಲ ಅತ್ಯಂತ ಹೆಚ್ಚು ಚರ್ಮ ಉತ್ಪಾದನೆ ಮಾಡುವ ರಾಜ್ಯ. ವರ್ಷಕ್ಕೆ ಸುಮಾರು 33 ಲಕ್ಷಕ್ಕಿಂತಲೂ ಹೆಚ್ಚು ಚರ್ಮದ ಪಟ್ಟೆಗಳು ಇಲ್ಲಿ ಸಿದ್ಧವಾಗುತ್ತವೆ. ಉತ್ತರ ಪ್ರದೇಶವನ್ನು ಬಿಟ್ಟರೆ ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ, ರಾಜಸ್ತಾನ ಹಾಗೂ ತಮಿಳುನಾಡು ಅನುಕ್ರಮವಾಗಿ ಮುಖ್ಯವಾದ ಚರ್ಮ ಉತ್ಪಾದಕ ರಾಜ್ಯಗಳು. ಭಾರತದಲ್ಲಿ ತಯಾರಾಗುವ ಬಹಳಷ್ಟು ಚರ್ಮವನ್ನು ಪಾದರಕ್ಷೆಗಳಿಗಾಗಿ ಬಳಸಲಾಗುತ್ತದೆ. ಇದು ಸಣ್ಣ ಗಾತ್ರದ ಕೈಗಾರಿಕೆಯೇ ಆಗಿದ್ದರೂ ಚೆನ್ನೈ, ಕಾನ್ಪುರ, ಕೋಲ್ಕತ ಹಾಗೂ ಮುಂಬಯಿಗಳಲ್ಲಿ ಚರ್ಮ ಹದ ಮಾಡುವ ಕೆಲವು ಬೃಹತ್ ಕೇಂದ್ರಗಳಿವೆ. ಹದ ಮಾಡುವ ಚಿಕ್ಕಪುಟ್ಟ ಕೇಂದ್ರಗಳೆಲ್ಲವನ್ನೂ ಸೇರಿಸಿದರೆ ಭಾರತದಲ್ಲಿ ಇಂದು ಸುಮಾರು 730ಕ್ಕೂ ಹೆಚ್ಚು ಇವೆ. ಕ್ರೋಮ್ ಹದ ಮಾಡಿದ ಚರ್ಮ, ಆಮ್ಲ ಸಂಸ್ಕರಿತ ಆಡಿನ ಚರ್ಮ. ಹದ ಮಾಡಿದ

ಉರಗವರ್ಗದ ಪ್ರಾಣಿಗಳ ಚರ್ಮ, ಆಡುಗಳ ಕೂದಲು ಹಾಗೂ ಹದಮಾಡಲು ಉಪಯೋಗಿಸಲಾಗುವ ಪದಾರ್ಥಗಳ ರಫ್ತಿನಿಂದ 1968–69 ರಲ್ಲಿ 5,379.56 ಲಕ್ಷ ರೂಪಾಯಿಗಳಷ್ಟಿದ್ದ ಆದಾಯ 2011–12 ರಲ್ಲಿ 971811 ಲಕ್ಷ ಆಗಿದೆ.

ಭಾರತದಲ್ಲಿ ಪಶುಸಂಪತ್ತು ಸುಮಾರು 20 ಕೋಟಿ (ಅಮೆರಿಕದ ಸಂಯುಕ್ತ ಸಂಸ್ಥಾನಗಳ ಮೂರರಷ್ಟು). ಇದರಿಂದ ವರ್ಷಕ್ಕೆ ಎರಡು ಕೋಟಿಗಳಷ್ಟು ಸಿದ್ಧಪಡಿಸಿದ ಚರ್ಮದ ಪಟ್ಟಿಗಳು ತಯಾರಾಗುತ್ತವೆ. ಭಾರತದಲ್ಲಿರುವ ಸುಮಾರು 7.5 ಕೋಟಿ ಆಡುಗಳು ಹಾಗೂ 4 ಕೋಟಿ ಕುರಿಗಳಿಂದ 3.5 ಕೋಟಿ ಆಡಿನ ಚರ್ಮಗಳೂ 1.7 ಕೋಟಿ ಕುರಿಯ ಚರ್ಮಗಳೂ ಲಭಿಸುತ್ತವೆ. ಇಲ್ಲಿ ಚರ್ಮ ಹದಮಾಡುವಿಕೆ ಒಂದು ಸಣ್ಣ ಕೈಗಾರಿಕೆ ಮಾತ್ರ. ಚರ್ಮದ ಕೈಗಾರಿಕೆ ಬಗ್ಗೆ ತರಬೇತು ನೀಡಲು ಮುಂಬಯಿ, ಚೆನ್ನೈ, ಕೊಲ್ಕತ್ತ, ರಾಜಕೋಟೆ ಹಾಗೂ ಜಲಂಧರಗಳಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು ಇವೆ. ಮದ್ರಾಸಿನಲ್ಲಿ ಸೆಂಟ್ರಲ್ ಲೆದರ್ ರಿಸರ್ಚ್ ಇನ್ಸ್‌ಟಿಟ್ಯೂಟ್ ಎಂಬ ಸಂಸ್ಥೆಯನ್ನು ಕೂಡ ಸ್ಥಾಪಿಸಲಾಗಿದೆ (1953). ವಿವಿಧ ನಮೂನೆಗಳ ಚರ್ಮ ತಯಾರಿಸುವ ಬಗ್ಗೆ, ಚರ್ಮಕ್ಕೆ ಬೇಕಾಗುವ ಇನ್ನಿತರ ವಸ್ತುಗಳನ್ನು ತಯಾರಿಸುವ ಬಗ್ಗೆ ಹಾಗೂ ಸಂಬಂಧಪಟ್ಟ ಯಂತ್ರೋಪಕರಣಗಳ ಬಗ್ಗೆ ಈ ಸಂಸ್ಥೆ ಸಂಶೋಧನೆ ನಡೆಸುತ್ತದೆ. ಚರ್ಮದ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಕೋಲ್ಕತ ವಿಶ್ವವಿದ್ಯಾಲಯದಲ್ಲಿ ಪದವಿ ಹಾಗೂ ಡಿಪ್ಲೊಮ ಶಿಕ್ಷಣಗಳೂ ಚೆನ್ನೈ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣವೂ ಉಂಟು. *

**ಚರ್ಮಪತ್ರ :** ಪ್ರಾಚೀನ ಕಾಲದಲ್ಲಿ ಬರೆವಣಿಗೆಗಾಗಿ ಚರ್ಮಪತ್ರಗಳನ್ನು ಬಳಸಲಾಗುತ್ತಿತ್ತು. ಪ್ರ.ಶ.ಪೂ. 2ನೆಯ ಶತಮಾನದಲ್ಲಿ ಎರಡನೆ ಪರ್ಗ್‌ಮಮ್ ಯೊಮನಸ್ ಎಂಬಾತ ವ್ಯವಹಾರಕ್ಕಾಗಿ ಚರ್ಮಪತಗಳನ್ನು ಬಳಸತೊಡಗಿದ. ಇದರ ಪರಿಚಯ ಜನರಿಗೆ ಈ ಮೊದಲೇ ಇತ್ತೆನ್ನುತ್ತಾರೆ. ಅಂದು ಅಲೆಗ್ಸಾಂಡ್ರಿಯಾದಲ್ಲಿ ಇದ್ದ ಗ್ರಂಥಾಲಯದಂಥ ದೊಡ್ಡ ಗ್ರಂಥಾಲಯವನ್ನು ಸ್ಥಾಪಿಸಬೇಕೆಂಬ ಇಚ್ಛೆಯಾದಲ್ಲಿ ಇದ್ದ ಗ್ರಂಥಾಲಯದಂಥ ದೊಡ್ಡ ಗ್ರಂಥಾಲಯವನ್ನು ಸ್ಥಾಪಿಸಬೇಕೆಂಬ ಇಚ್ಛೆಯಿಂದ ಆತ ಚರ್ಮಪತ್ರದಲ್ಲಿ ಗ್ರಂಥಗಳನ್ನು ಬರೆಸತೊಡಗಿದ. ಪಾಪಾಯಿರಸ್ ಆಗ ಲಭ್ಯವಿಲ್ಲದ್ದರಿಂದ ಆಡು, ಹಂದಿ, ಕುರಿಗಳ ಚರ್ಮಗಳನ್ನು ಈ ಕಾರ್ಯಕ್ಕೆ ಉಪಯೋಗಿಸಿದರು. ಆಗ ಇದನ್ನು ಚಾರ್ಟರ್ ಪರ್ಗ್‌ಮಮ್ ಎಂದೇ ಕರೆಯುತ್ತಿದ್ದರು. ಚರ್ಮಪತ್ರಗಳ ಎರಡೂ ಕಡೆಗಳಲ್ಲಿ ಬರೆದು ಅದನ್ನು ಪುಸ್ತಕರೂಪದಲ್ಲಿ ಸೇರಿಸಿ ಕಟ್ಟಿಡಲಾಗುತ್ತಿತ್ತು. ಈಗಲೂ ಕೃತಕ ಚರ್ಮಪತ್ರಗಳ ಬಳಕೆಯುಂಟು. ಇವನ್ನು ವನಸ್ಪತಿ ಚರ್ಮಪತ್ರ ಎನ್ನುವುದುಂಟು. ಇದು ಒಂದು ರೀತಿಯ ಕಾಗದವಷ್ಟೆ. ಇದನ್ನು ಉಪ್ಪಿನಕಾಯಿ, ಮುರಬ್ಬ ಮೊದಲಾದ ಖಾದ್ಯ ಪದಾರ್ಥಗಳ ಮೇಲೆ ಮುಚ್ಚಲು ಬಳಸುತ್ತಾರೆ. ಇದರ ಮೂಲಕ ಎಣ್ಣೆಯಾಗಲಿ, ನೀರಾಗಲಿ ಒಳಹೊಗಲು ಸಾಧ್ಯವಾಗುವುದಿಲ್ಲ. ಚರ್ಮದ ಉದ್ಯಮದಲ್ಲಿ ಚರ್ಮ ಪ್ರಧಾನವಾಗಿದ್ದು ಕೂದಲು, ಮಾಂಸಲವಾದ ಭಾಗಗಳು ಉಪೋತ್ಪನ್ನಗಳು, ಮಾಂಸಲ ಭಾಗದಿಂದ ಜಿಲೆಟಿನ್ ಎಂಬ ಪ್ರೋಟೀನ್ ಪದಾರ್ಥ ದೊರೆಯುತ್ತದೆ. ಜಮಖಾನೆ, ಫೆಲ್ಟ್, ಕಂಬಳಿಗಳು ಧ್ವನಿ ಅವಾಹಕ ಪದಾರ್ಥಗಳನ್ನು ತಯಾರಿಸಲು ಕೂದಲನ್ನು ಬಳಸಲಾಗುತ್ತದೆ. ಸೌಂದರ್ಯವರ್ಧಕ ಪ್ರಸಾಧನ ಸಾಮಗ್ರಿಗಳು, ಸಾಬೂನುಗಳು ಹಾಗೂ ವಿಘರ್ಷಕ ತೈಲಗಳನ್ನು ತಯಾರಿಸಲು ಎಣ್ಣೆ ಹಾಗೂ ಜಿಡ್ಡು ಪದಾರ್ಥಗಳು ಬಳಕೆಗೆ ಬರುತ್ತವೆ. ಉಳಿದ ಚೂರುಪಾರು ಚರ್ಮ ರಸಗೊಬ್ಬರಗಳ ತಯಾರಿಕೆಗೆ ಒಳ್ಳೆಯ ಕಚ್ಚಾ ಪದಾರ್ಥ. (ಎಸ್.ಎಲ್.ಎ.)

**ಚರ್ಮರೋಗಗಳು :** ಆಯುರ್ವೇದದಲ್ಲಿ ಚರ್ಮರೋಗಗಳನ್ನು ಮಹಾಕುಷ್ಠ ಮತ್ತು ಕ್ಷುದ್ರಕುಷ್ಠಗಳೆಂದು ವಿಭಜಿಸಿದ್ದಾರೆ. ಆಧುನಿಕ ವೈದ್ಯದಲ್ಲಿ (ಅಲೋಪತಿ) ಚರ್ಮರೋಗಗಳನ್ನು ರೋಗಮೂಲ ಮತ್ತು ಇತರ ಪ್ರಮುಖ ಲಕ್ಷಣಗಳನ್ನು ಅವಲಂಬಿಸಿ ವಿವಿಧವಾಗಿ ವಿಭಜನೆ ಮಾಡಲಾಗಿದೆ.

1. ಆಜನ್ಮರೋಗಗಳು: ಇವುಗಳಲ್ಲಿ ಮುಖ್ಯವಾಗಿ ಮೀನ್ದೊಗಲು (ಇಚ್ಥಿಯೋಸಿನ್), ಪಾಂಡುರೋಗ ಅಥವಾ ತೊನ್ನು (ವಿಟಲಿಗೊ, ಲ್ಯೂಕೊಡರ್ಮ), ಎಪಿಡರ್ಮೊಲೈಸಿಸ್ ಬುಲ್ಲೋಸ, ಡಾರಿಯರಿನ ರೋಗ, ಸ್ಕ್ಲೀರೋಡರ್ಮ ಪಿಗ್ಮೆಂಟೋಸ ಮತ್ತು ಇತರ ವರ್ಣವ್ಯತ್ಯಾಸಗಳನ್ನು ತೋರುವ ರೋಗಗಳು – ಇವನ್ನು ಉದಾಹರಿಸಬಹುದು. ಈ ರೋಗಗಳು ಆನುವಂಶಿಕವಾಗಿ ಬರುತ್ತವೆ. ಮೈಯೆಲ್ಲ ಹರಡಿ ವಿಕಾರಗೊಳಿಸಬಹುದು. ಕೆಲವು ಸಂದರ್ಭಗಳಲ್ಲಿ ಇವು ಮಾರಕ ರೋಗಗಳಾಗಿಯೂ ಇರುತ್ತವೆ.

2. ವಿಷಾಣುಕೃತ ರೋಗಗಳು (ವೈರಲ್ ಡಿಸೀಸಸ್): ಇವುಗಳಲ್ಲಿ ಸಿಡುಬು (ಸ್ಮಾಲ್ ಪಾಕ್ಸ್), ಸೀತಾಳೆಸಿಡುಬು (ಚಿಕನ್‌ಪಾಕ್ಸ್) ಮತ್ತು ದಡಾರಗಳ ವಿವರ ಬೇರೆ ಕಡೆ ಕೊಟ್ಟಿದೆ. ಹರ್ಪಿಸ್ ಸಿಂಪ್ಲೆಕ್ಸ್, ಹರ್ಪಿಸ್ ಸಾಸ್ಟರ್, ಮೊಲಸ್ಕಮ್ ಕನ್‌ಟೇಜಿಯೋಸಮ್, ಕಾಲು ಬಾಯಿರೋಗ (ಫುಟ್ ಅಂಡ್ ಮೌತ್ ಡಿಸೀಸ್) ಹುಲ್ಲುರಿ(ವಾರ್ಟ್), ಬೆಕ್ಕು ಕೆರೆತದ ರೋಗ ಇವು ಇನ್ನಿತರ ಮುಖ್ಯ ರೋಗಗಳು. ಇವು ಅಲ್ಪವಾಗಿ ಇಲ್ಲವೆ ಅಧಿಕವಾಗಿ ದೇಹಬಾಧೆಯನ್ನು ಉಂಟುಮಾಡುತ್ತವೆ. ಒಂದು ಸಲ ರೋಗದಿಂದ ಚೇತರಿಸಿಕೊಂಡರೆ ಸಾಮಾನ್ಯವಾಗಿ ಪುನಃ ರೋಗ ಅಂಟುವುದಿಲ್ಲ.

3. ಏಕಾಣುಕೃತ ರೋಗಗಳು (ಬ್ಯಾಕ್ಟೀರಿಯಲ್ ಡಿಸೀಸಸ್) : ಉರಿಯೂತ, ಬಾವುಗಳಿಂದ ಉಲ್ಬಣಗೊಂಡು ಕಾಣಿಸಿಕೊಳ್ಳುವ ರೋಗಗಳಿವು. ಸಾಮಾನ್ಯವಾದ ಕೀವುಕುರುಗಳು, ರಕ್ತಕುರುಗಳು ಇಂಥವು. ಕ್ಷಯರೋಗ, ಕುಷ್ಠರೋಗ, ಸಿಫಿಲಿಸ್ ಮತ್ತು ಡಿಫ್ತೀರಿಯಾ ರೋಗಕ್ರಿಮಿಗಳು ಅನೇಕ ರೀತಿಯ ಕುರು ಮತ್ತು ಹುಣ್ಣುಗಳನ್ನು ಉಂಟು ಮಾಡುತ್ತವೆ.

4. ಅಣಬೆ ಬೂಷ್ಟುಕೃತ ರೋಗಗಳು (ಫಂಗಲ್ ಡಿಸೀಸಸ್) : ಮಧುರಾ ಪಾದ (ಮಧುರಾ ಫುಟ್) ಎಂಬುದು ಇವುಗಳಲ್ಲಿ ಮುಖ್ಯ. ಅಂಗಾಲು ದಪ್ಪವಾಗಿ ಗುಳ್ಳೆಗಳಾಗಿ, ಗುಳ್ಳೆಗಳು ಒಡೆದು ಕಂಡಿಬಿದ್ದು ವಿಕಾರವಾಗುವುದು ಇದರ ಲಕ್ಷಣ. ಹುಳುಕಡ್ಡಿಯೂ (ರಿಂಗ್‌ವರ್ಮ್) ಒಂದು ತರಹದ ಬೂಷ್ಟಿನಿಂದ ಉಂಟಾಗುವ ರೋಗವೇ.

5. ಪರಾವಲಂಬಿ ರೋಗಗಳು (ಪ್ಯಾರಾಸೈಟಿಕ್ ಡಿಸೀಸಸ್) : ತುರಿ (ಸ್ಕೇಬೀಸ್), ಕಜ್ಜಿ (ಇಂಪೆಟಿಗೂ), ಇಸಬು (ಎಕ್ಸಿಮಾ), ಸರ್ಯೆಅಸಿಸ್ (Psoriasis) ಇತ್ಯಾದಿ.

ಇವಲ್ಲದೆ ಜಿಡ್ಡುಗ್ರಂಥಿಗಳ ಊತದಿಂದ ಉಂಟಾಗುವ ಮೊಡವೆ (ಪಿಂಪಲ್ಸ್), ಏಡಿಗಂತಿ ಮತ್ತಿತರ ಗೆಡ್ಡೆಗಳು, ಮಚ್ಚೆಗಳು (ಮೋಲ್ಸ್), ನೀಲಿಗಟ್ಟುವಿಕೆ (ಪರ್ಪುರ), ನೀರ್ಗುಳ್ಳೆ ರೋಗಗಳು (ಪೆಂಫಿಗಸ್), ರೋಮರೋಗಗಳು, ಉಗುರು ರೋಗಗಳು, ಜೀವಸತ್ತ್ವ ಕೊರತೆಯಿಂದ ಉಂಟಾಗುವ ಚರ್ಮ ವ್ಯತ್ಯಾಸಗಳು ಇತ್ಯಾದಿ ಚರ್ಮರೋಗಗಳೂ ಉಂಟು. ಅವ್ಯಕ್ತ ಕಾರಣದಿಂದ ಚರ್ಮ ಶೈಥಿಲ್ಯಗೊಂಡೂ ಚರ್ಮರೋಗ ಉಂಟಾಗಬಹುದು. ಕ್ರಮಾಗತ ಅಧ್ಯಯನ ಮತ್ತು ಅನುಭವದಿಂದ ಚರ್ಮರೋಗಪ್ರವೀಣ ಸರಿಯಾಗಿ ರೋಗನಿರ್ಣಯ ಮಾಡಿ ಯಶಸ್ವಿಯಾಗಿ ಚಿಕಿತ್ಸೆ ಮಾಡಬಹುದಲ್ಲದೆ ಪ್ರತಿಬಂಧಕ ಕ್ರಮಗಳನ್ನೂ ಸಮಯೋಚಿತವಾಗಿ ಉಪಯೋಗಿಸಬಹುದು. ಕೆಲವು ಚರ್ಮರೋಗಗಳ ಹೆಚ್ಚು ವಿವರಗಳನ್ನು ಕೆಳಗೆ ಕೊಡಲಾಗಿದೆ. (ಎನ್.ಕೆ.ಎಂ.)

ಮೀನ್ದೊಗಲು : ಹೊರತ್ವಚೆಯ ಕೊಂಬಿನಂಥ ಪದರ ಅತಿಯಾಗಿ ಶುಷ್ಕ, ಒರಟು ಹಾಗು ಕಾಂತಿಹೀನವಾದ ಬೂದು ಬಣ್ಣದ್ದಾಗಿ, ಅಲ್ಲಲ್ಲಿ ಸೀಳಿ, ಪೊರೆಗಳು ನಿರಂತರವಾಗಿ ಹುರುಪೇಳುತ್ತಿರುವ ಚರ್ಮರೋಗ, ಮುಂಡ ಮತ್ತು ಕೈಕಾಲುಗಳ ಹಿಂಭಾಗದ ಚರ್ಮ ರೋಗದಿಂದ ಆವೃತವಾಗುವುದೇ ಹೆಚ್ಚು. ರೋಗ ತಗುಲಿದ ಚರ್ಮ ಮೀನಿನ ಚರ್ಮದಂತೆ ಕಾಣುವುದರಿಂದ ಈ ಹೆಸರು ಬಂದಿದೆ. ರೋಗಗ್ರಸ್ತ ಚರ್ಮದಲ್ಲಿ ಸ್ವೇದಗ್ರಂಥಿಗಳಾಗಲಿ ಜಿಡ್ಡುಗ್ರಂಥಿಗಳಾಗಲಿ ಇರುವುದಿಲ್ಲ. ರೋಗದ ಕಾರಣ ಗೊತ್ತಿಲ್ಲ. ಇದು ಆನುವಂಶಿಕವಾಗಿ ಬರುವುದೆಂದು ಮಾತ್ರ ಗೊತ್ತಿದೆ. ಆದ್ದರಿಂದ ಬಹುಶಃ ಜೀನುಗಳ ಕಾರಣವಿರಬಹುದು. ಹುಟ್ಟಿದ ಮೇಲೆ ಸ್ವಲ್ಪ ಕಾಲದಲ್ಲಿ ರೋಗ ಸಾಮಾನ್ಯವಾಗಿ ಕಂಡುಬರುವುದಾದರೂ ಹುಟ್ಟುವಾಗಲೇ ರೋಗವಿದ್ದು ಹುಟ್ಟುವುದೂ ವಯಸ್ಸಾದ ಮೇಲೆ ರೋಗ ಹೊಮ್ಮುವುದೂ ಉಂಟು. ರೋಗ ತೀವ್ರವಾಗಿದ್ದಲ್ಲಿ ಮಗು ಸತ್ತು ಜನಿಸುತ್ತದೆ. ಇಲ್ಲವೆ ಚಕ್ಕಳದಂಥ ಚಕ್ಕೆಗಳು ಚರ್ಮದಲ್ಲಿ ಕಂಡುಬಂದು ಅವುಗಳಲ್ಲಿ ಬಿರುಕು ಉಂಟಾಗಿರುತ್ತದೆ. ಇಂಥ ಮಕ್ಕಳ ತುಟಿ, ಕಣ್ಣು, ರೆಪ್ಪೆಗಳು ಹೀಗಾಗಿರುವುದು ಸಾಮಾನ್ಯ. ಕೆಲವೇ ದಿವಸಗಳಲ್ಲಿ ಮಗು ಸತ್ತು ಹೋಗುತ್ತದೆ. ಆದರೆ ಸಾಧಾರಣವಾಗಿ ರೋಗ ಸೌಮ್ಯವಾಗಿರುವುದು. ಕಡಿತ ಬಿರುಕುಗಳಿಂದಾಗುವ ಬಾಧೆ ಚಳಿಗಾಲದಲ್ಲಿ ಹೆಚ್ಚು. ದೇಹದ ಇತರ ಆರೋಗ್ಯಸ್ಥಿತಿಗೆ ಕುಂದಿರುವುದಿಲ್ಲ. ಚರ್ಮವನ್ನು ಮೆತುಗೊಳಿಸುವ ಲೇಪನಗಳನ್ನು ಬಿಟ್ಟರೆ ಇದಕ್ಕೆ ಬೇರೆ ಮದ್ದೇ ಇಲ್ಲ. ಇದಕ್ಕೆ ಒಣದೊಗಲು (ಸ್ಕೀರೊಡರ್ಮ), ಮೊಸಳೆ ಚರ್ಮ ಎಂದೂ ಹೆಸರಿದೆ.

ತೊನ್ನು : ಇದು ಆನುವಂಶಿಕವಾದ ಇನ್ನೊಂದು ಚರ್ಮರೋಗ. ಹುಟ್ಟುವಾಗ ಕಾಣಬರದಿದ್ದರೂ ಆಮೇಲೆ ಯಾವಾಗಲಾದರೂ ವ್ಯಕ್ತವಾಗಿ ಚರ್ಮವು ಬಣ್ಣವನ್ನು ಕಳೆದುಕೊಂಡು ಮೈಯೆಲ್ಲ ಅಲ್ಲಲ್ಲಿ ಬೆಳ್ಳಗಾಗಿ ವಿಕಾರ ಕಲೆಗಳು ಉಂಟಾಗುತ್ತವೆ. ಮುಖ ಕೈಗಳಲ್ಲಿ ಮೊದಲು ಪ್ರಾರಂಭವಾಗಬಹುದು. ಚರ್ಮದಲ್ಲಿ ಮೆಲನಿನ್ ಎಂಬ ಬಣ್ಣದ ಕಣಗಳು ತಯಾರಾಗದಿರುವುದೇ ತೊನ್ನಿಗೆ ಕಾರಣ. ತೊನ್ನು ಅಂಟುರೋಗವಲ್ಲ. ಸೋರೇಲಿನ್ ಎಂಬ ಮಾತ್ರೆಗಳನ್ನು ಸೇವಿಸುವುದರಿಂದಾಗಲಿ ಸೋರೇಲಿನ್ ಮುಲಾಮನ್ನು ಲೇಪಿಸಿ ಅತಿನೇರಿಳೆ ಕಿರಣಗಳಿಗೆ ಒಡ್ಡುವುದರಿಂದಾಗಲಿ ಬಿಳಿಯ ಕಲೆಗಳಲ್ಲಿ ಬಣ್ಣ ಹುಟ್ಟುವಂತೆ ಮಾಡಬಹುದು.

ಮಚ್ಚೆ (ಮೋಲ್) : ಚರ್ಮದ ಬೆಳವಣಿಗೆಯ ನ್ಯೂನತೆಯಿಂದ ಉಂಟಾಗುವ ರೋಗ. ಹುಟ್ಟಿದಾಗ, ಬಾಲ್ಯದಲ್ಲಿ ಅಥವಾ ದೊಡ್ಡವರಾದ ಮೇಲೆ ಯಾವಾಗಲಾದರೂ ಹೊರದೋರಬಹುದು. ಮಚ್ಚೆಗಳಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಮೇಲ್ಪೊರೆಯ ಮಚ್ಚೆಗಳು, ರಕ್ತನಾಳದ ಮಚ್ಚೆಗಳು, ವರ್ಣಕದ ಮಚ್ಚೆಗಳು.

ಮೇಲ್ಪೊರೆಯ ಮಚ್ಚೆಗಳು ಹೊರತ್ವಚೆಯಿಂದ ಅಥವಾ ಹೊರತ್ವಚೆಯ ಕೂಡಿಕೆಗಳಿಂದ ಬೆಳೆಯಬಹುದು. ಚರ್ಮವರ್ಣದ ಮಿಟ್ಟಿದದ್ದೆ ಮತ್ತು ಬಿಲ್ಲೆಗಳಾಗಿ ಕಾಣಿಸುವುವು. ಇವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯಬೇಕಾಗುತ್ತದೆ. ರಕ್ತನಾಳದ ಮಚ್ಚೆಗಳಲ್ಲಿ ಎರಡು ವಿಧ : ಒಂದು

ಕಗ್ಗೆಂಪು ಮಚ್ಚೆ, ಇನ್ನೊಂದು ನೆಲಮುಳ್ಳಿ ಮಚ್ಚೆ. ಕಗ್ಗೆಂಪು ಮಚ್ಚೆಗಳು ಚಪ್ಪಟೆಯಾಗಿರುತ್ತವೆ. ಇವು ಹೆಚ್ಚಾಗಿ ಮುಖ ಮತ್ತು ಎದೆಯ ಮೇಲಿರುವುವು. ಇವುಗಳ ಚಿಕಿತ್ಸೆ ಅನಾವಶ್ಯಕ. ನೆಲಮುಳ್ಳಿ ಮಚ್ಚೆಗಳು ಉಬ್ಬಿರುತ್ತವೆ. ಹುಟ್ಟುವಾಗಲೇ ಇಲ್ಲವೆ ಹುಟ್ಟಿದ ಕೆಲವು ತಿಂಗಳುಗಳಲ್ಲೆ ಇವು ಗೋಚರಿಸಬಹುದು. ಇವು ನೇರಿಳೆ ಬಣ್ಣಕ್ಕಿರುತ್ತವೆ. ಹೆಚ್ಚಾಗಿ ಮುಖ ಮತ್ತು ಕತ್ತಿನ ಮೇಲೆ ಕಾಣಿಸುವುವು. 6–10ರ ವಯಸ್ಸಿನಲ್ಲಿ ಈ ಮಚ್ಚೆಗಳು ತಾವಾಗಿಯೇ ಅದೃಶ್ಯವಾಗುತ್ತವೆ. ಇಳಿ ಬಣ್ಣದ ಮಚ್ಚೆಗಳು ಹುಟ್ಟುವಾಗಲೇ ಅಥವಾ ಹುಟ್ಟಿದ ಕೆಲವು ದಿವಸಗಳಲ್ಲೇ ಕಾಣಬಹುದು. ಇವನ್ನು ತೊನ್ನೆಂದು ತಪ್ಪು ತಿಳಿಯುತ್ತಾರೆ. ಇವಕ್ಕೆ ಚಿಕಿತ್ಸೆ ಅನಗತ್ಯ. ವರ್ಣಕದ ಮಚ್ಚೆಗಳು ಚಪ್ಪಟೆಯಾಗಿರಬಹುದು. ತೊಟ್ಟಿಲ್ಲದಿರಬಹುದು, ತೊಟ್ಟು ಗಾಲಿಕೆಯಾಗಿರಬಹುದು, ದೇಹದ ಯಾವ ಭಾಗದಲ್ಲಿಯಾದರೂ ಕಾಣಿಸಬಹುದು. ಸಾಮಾನ್ಯವಾಗಿ ಇವು ಕಪ್ಪಗಿರುತ್ತವೆ. ಬಹುಮಂದಿಗೆ ಒಂದು ಅಥವಾ ಕೆಲವು ವರ್ಣಕದ ಮಚ್ಚೆಗಳಿರುತ್ತವೆ. ಇವು ನಿರುಪದ್ರವಿಯಾಗಿದ್ದು ಇವಕ್ಕೆ ಯಾವ ಚಿಕಿತ್ಸೆಯೂ ಬೇಕಾಗುವುದಿಲ್ಲ. ಆದರೆ ಕೆಲವು ವಿಷಮ ಪರಿವರ್ತನೆ ಹೊಂದಿದಲ್ಲಿ ಶಸ್ತ್ರಚಿಕಿತ್ಸೆ ಮಾಡಬೇಕಾಗುವುದು. ಇದ್ದಕ್ಕಿದ್ದ ಹಾಗೆ ದೊಡ್ಡದಾಗುವುದು, ಬಣ್ಣದಲ್ಲಿ ಬದಲಾವಣೆ, ನೋವು, ರಕ್ತ ಸುರಿಯುವುದು ಒಡೆದು ಹುಣ್ಣಾಗುವುದು ಇವು ವಿಷಮ ಪರಿವರ್ತನೆಯನ್ನು ಸೂಚಿಸುತ್ತವೆ.

ಸರ್ಪಸುತ್ತು : ಸರ್ಪಸುತ್ತು ಮತ್ತು ಸೀತಾಳೆಸಿಡುಬು (ಚಿಕನ್‌ಪಾಕ್ಸ್) ಒಂದೇ ವಿಷಕಣದಿಂದ ಉಂಟಾಗುತ್ತವೆ. ಪ್ರಥಮ ವಿಷಕಣ ಸೋಂಕಿನಿಂದ ಸೀತಾಳೆಸಿಡುಬು ಉಂಟಾಗುತ್ತದೆ. ಆ ತರುವಾಯ ವಿಷಕಣಗಳು ನರಗಂಟುಗಳಲ್ಲಿ (ನರ್ವ್ ಗ್ಯಾಂಗ್ಲಿಯ) ಚೇತನರಹಿತವಾಗಿರುತ್ತವೆ. ದುರ್ಬಲತೆ, ಏಡಿಗಂತಿ, ಎಕ್ಸ್‌ಕಿರಣ ಚಿಕಿತ್ಸೆ, ಕಾರ್ಟಿಕೋಸ್ಟೀರಾಯ್ಡ್ ಚಿಕಿತ್ಸೆ ಮತ್ತು ಪ್ರತಿರಕ್ಷೆಯಿಂದ ಹತ್ತಿಕ್ಕುವ (ಇಮ್ಯುನೋ ಸಪ್ರೆಸ್ಸಿವ್) ಔಷಧ ಚಿಕಿತ್ಸೆಗಳಿಂದ ಎದುರುಬಲ ಕಡಿಮೆಯಾದಾಗ ವಿಷಕಣಗಳು ಚೇತನಗೊಳ್ಳುತ್ತವೆ. ಕೆಂಪು ನೀರ್ಗುಳ್ಳೆಗಳ ಗುಂಪುಗಳು ನರಗಳುದ್ದಕ್ಕೂ ಕಂಡುಬರುತ್ತವೆ. ರೋಗಿ ನರದುರಿಯ ಬೇನೆಯಿಂದ ನರಳುತ್ತಾನೆ. ಕೆರಟೈಟಿಸ್ ಬೇನೆ ವಿಕಸಿಸಬಹುದು. ಈ ನೀರ್ಗುಳ್ಳೆಗಳು 2–4 ವಾರಗಳಲ್ಲಿ ಒಣಗಿಹೋಗುತ್ತವೆ. ವೃದ್ಧರಲ್ಲಿ ನರುದುರಿ ಬಹಳ ಕಾಲವಿರುತ್ತದೆ.

ಹುಲ್ಲುರಿ (ವಾರ್ಟ್): ಮಕ್ಕಳಲ್ಲಿ ಹೆಚ್ಚು, ಪ್ರಾಯದವರಲ್ಲೂ ಇರುವುದುಂಟು. ಚರ್ಮಸಂಪರ್ಕದಿಂದ ವಿಷಕಣಗಳು ಒಬ್ಬರಿಂದೊಬ್ಬರಿಗೆ ಹರಡುತ್ತವೆ. ಈ ರೋಗದಲ್ಲಿ ಚಪ್ಪಟೆಯಾದ ನವಿರೆಳೆಯ, ಕಾರಳ್ಳಾದ (ವಾರ್ಟಿ) ಮಿಟ್ಟಿದದ್ದುಗಳು ಏಳುತ್ತವೆ. ಇವು ಚರ್ಮದ ಎಲ್ಲ ಭಾಗಗಳಲ್ಲಿಯೂ ಬೆಳೆಯಬಹುದು. ಅಂಗಾಲುಗಳ ವಿನಾ ಇತರ ಭಾಗಗಳಲ್ಲಿ ಹುಲ್ಲುರಿಯಿಂದ ಯಾವ ತೊಂದರೆಯೂ ಆಗುವುದಿಲ್ಲ. ಸಾಮಾನ್ಯವಾಗಿ ಇವು ತಾವಾಗಿಯೇ ಅದೃಶ್ಯವಾಗುತ್ತವೆ. ಚಿಕಿತ್ಸೆಯೂ ಉಂಟು.

ಮೆಲುಗಂತಿ (ಮೊಲಸ್ಕಮ್ ಕಂಟೇಜಿಯೋಸಮ್). ಇದು ವಿಶೇಷವಾಗಿ ಮಕ್ಕಳಲ್ಲಿ ಕಾಣುತ್ತದೆ. ಚರ್ಮಸಂಪರ್ಕದಿಂದ ಇದರ ವಿಷಕಣಗಳು ಒಬ್ಬರಿಂದೊಬ್ಬರಿಗೆ ಹರಡುತ್ತವೆ. ಅರೆಗುಂಡಾಕಾರದ ಗುಳಿಬಿದ್ದ ಮುಸುಕು ಮಿಟ್ಟಿದದ್ದೆಗಳು ಮೆಲುಗಂತಿಯ ಲಕ್ಷಣಗಳು. ಇವು ತಾವಾಗಿಯೇ ಅದೃಶ್ಯವಾಗಬಹುದು.

ಕಜ್ಜಿ (ಇಂಪೆಟಿಗೊ): ಸ್ಟ್ಯಾಫಿಲೋಕಾಕೈ ಮತ್ತು ಸ್ಟ್ರೆಪ್ಟೋಕಾಕೈ ಎಂಬ ಸೂಕ್ಷ್ಮಜೀವಿಗಳಿಂದ ಉಂಟಾಗುವ ಅಂಟುಜಾಡ್ಯವಿದು. ಇದು ಹೆಚ್ಚಾಗಿ ಮಕ್ಕಳ ಜಾಡ್ಯ. ಚರ್ಮದ ಎಲ್ಲ ಭಾಗಗಳಲ್ಲಿ ಅದರಲ್ಲೂ ಹೆಚ್ಚಾಗಿ ಮುಖದ ಮೇಲೆ ಕಾಣಿಸುತ್ತದೆ. ಕೆಂಪು ನೀರ್ಗುಳ್ಳೆಗಳು ಮತ್ತು ಕೀವ್ಗುಳ್ಳೆಗಳು ಬೆಳೆಯುತ್ತವೆ. ಇವು ಒಡೆದು ಕೀವು, ರಸಿಕೆ ಸುರಿದು ಒಣಗಿ ಜೇನುತುಪ್ಪ ಬಣ್ಣದ ಹೆಕ್ಕಳಿಕೆಗಳು ಕಟ್ಟುತ್ತವೆ. ಜೀವಿರೋಧಕ ಔಷಧಿಗಳ ಸೇವನೆ ಇಲ್ಲವೆ ಮುಲಾಮುಗಳನ್ನು ಹಚ್ಚುವುದೇ ಇದರ ಚಿಕಿತ್ಸೆ.

ತುರಿ (ಸ್ಕೇಬೀಸ್): ಸಾರ್ಕಾಪ್ಟಿಸ್ ಸ್ಕೇಬಿ ಎಂಬ ಕೀಟದಿಂದ ಉಂಟಾಗುವ ಸಾಂಕ್ರಾಮಿಕ ರೋಗ. ಇದರಿಂದ ನರಳುತ್ತಿರುವ ಮನುಷ್ಯನ ಅಥವಾ ಪ್ರಾಣಿಯ ಸಂಪರ್ಕದಿಂದ ಇದು ಪ್ರಸರಿಸುತ್ತದೆ. ತುರಿ ಎಲ್ಲರಿಗೂ ಅಂಟಬಹುದು, ಆದರೆ ಹೆಚ್ಚಾಗಿ ಇದು ಅಸ್ವಚ್ಛ ಮಕ್ಕಳ ರೋಗ. ತೀವ್ರ ಕಡಿತ ಅದರಲ್ಲೂ ರಾತ್ರಿಯಲ್ಲಿ, ಮೈಮೇಲೆ ಡೊಗರೆಗಳು, ನೀರ್ಗುಳ್ಳೆಗಳು, ಮಿಟ್ಟಿದದ್ದೆಗಳು, ಹೆಕ್ಕಳಿಕೆಗಳು ಮತ್ತು ಕೆರೆದ ಗುರುತುಗಳು ಇದರ ಲಕ್ಷಣ. ಬೊಕ್ಕೆಗಳು ಹೆಚ್ಚಾಗಿ ಬೆಟ್ಟುಗಳ ಸಂದಿಗಳಲ್ಲಿ, ಮಣಿಕಟ್ಟು, ಮೊಣಕೈ, ಕಂಕಳು, ಮೊಲೆಗಳು, ಸೊಂಟ, ಬಾಹ್ಯಜನನಾಂಗಗಳು ಮತ್ತು ಮೇಲು ತೊಡೆಗಳ ಮೇಲೆ ಏಳುತ್ತವೆ. ಬೊಕ್ಕೆಗಳ ಮೇಲೆ ಕೀವಾಣುಗಳು ಬೆಳೆದು ಕೀವು ತುಂಬಬಹುದು. ಇದರಿಂದ ಮಕ್ಕಳಲ್ಲಿ ಮೂತ್ರಜನಕಾಂಗಗಳ ಉರಿ ಉತ್ಪನ್ನವಾಗಬಹುದು.

ನಾಪಿತನ ವ್ರಣ (ಬಾರ್ಬರ್ಸ್ ಇಚ್): ಕ್ಷೌರ ಮಾಡಿಕೊಳ್ಳುವ ಗಡ್ಡ ಮೀಸೆಗಳ ಕೂದಲ ಕೋಶಿಕಗಳಿಗೆ ಕ್ರಿಮಿ ಇಲ್ಲವೇ ಬೂಜು ಆವರಿಸುವುದರಿಂದ ಆಗುವ ಚರ್ಮದ ಬದಲಾವಣೆ. ಕ್ಷೌರ ಅಥವಾ ಕ್ಷೌರಿಕನೇ ಇದಕ್ಕೆ ಯಾವಾಗಲೂ ಕಾರಣವಲ್ಲ. ಆದ್ದರಿಂದ ಈ ಹೆಸರು ಸರಿಯಲ್ಲ. ಬೂಜೂ ಕ್ರಿಮಿಗಳೂ ಕೂದಲ ಕೋಶಿಕದ ಆಳದಲ್ಲಿ ಆವರಿಸಿ ಸುಲಭವಾಗಿ ಜಗ್ಗದ ಉರಿಯೂತವಾಗಿಸುವುವು. ಸೋಂಕು ಹತ್ತಿದ ಕೂದಲ ಕೋಶಿಕದಲ್ಲಿ ಕೀವು ಸೇರುತ್ತ ಬರುವುದು. ಮೊದಲಿಗೆ ಕೆಂಪು ಮೊಡವೆಯಂತೆ ಕಂಡು ಅನಂತರ ಕೀವುಗುಳ್ಳೆಯ ಮಧ್ಯೆ ಕೂದಲು ಎದ್ದು ಕಾಣುವುದು. ಸಾಕಷ್ಟು ನೋವು ಕೂಡ ಇರುತ್ತದೆ. ಕ್ಷೌರ ಮಾಡಿಕೊಳ್ಳುವುದು ಕಷ್ಟ. ಇಂಥ ಚರ್ಮದ ಮೇಲೆ ಕ್ರಿಮಿನಾಶಕ ಔಷಧಿಗಳನ್ನು ಹಚ್ಚುವುದರಿಂದ ಪ್ರಯೋಜನವಿಲ್ಲ. ಏಕೆಂದರೆ ಮೇಲೆ ಹಚ್ಚುವ ಔಷಧಿಗಳು ಆಳದಲ್ಲಿರುವ ರೋಗಾಣುಗಳನ್ನು ತಟ್ಟುವುದಿಲ್ಲ. ಚರ್ಮವನ್ನು ಸಾಬೂನು ನೀರಿನಿಂದ ತೊಳೆದು ಚೊಕ್ಕಗೊಳಿಸಿ, ಬಿಸಿನೀರಿನಿಂದ ಶಾಖ ಕೊಡುವುದರಿಂದ ಉರಿಯೂತವೂ ನೋವೂ ತಗ್ಗುವುವು. ಜೊತೆಗೆ ಪೆನಿಸಿಲಿನ್ ಮೊದಲಾದ ಸೂಕ್ತ ಕ್ರಿಮಿನಾಶಕ ಔಷಧಿಗಳನ್ನು ಕೊಡಬೇಕು.

ಇಸಬು: ಚರ್ಮರೋಗಗಳಲ್ಲಿ ಇದೇ ಅರ್ಧಪಾಲಿನಷ್ಟಿರುತ್ತದೆ. ಚರ್ಮದ ಉರಿತದಿಂದಾಗುವ ಬದಲಾವಣೆಗಳು ಗೊತ್ತಾದ ಕ್ರಮದಲ್ಲಾದರೂ ಇಸಬು ಹುಟ್ಟಿ ಬೆಳೆಯಲು ಕಾರಣಗಳು ಅನೇಕ. ಚರ್ಮದ ಕೋಶಗಳಲ್ಲೂ ಅವುಗಳ ಕಿಣ್ವಗಳಲ್ಲೂ ಆಗುವ ಬದಲಾವಣೆಗಳೆಲ್ಲವೂ ಇನ್ನೂ ಸರಿಯಾಗಿ ತಿಳಿದಿಲ್ಲ. ಆದರೂ ರಾಸಾಯನಿಕ ಸ್ಪರ್ಶದಿಂದ ಆಗುವ ಚರ್ಮದ ಉರಿತದಲ್ಲಿ ಈ ಅಂಶಗಳು ಎದ್ದು ಕಾಣುತ್ತವೆ. ಇಸಬು ಎನ್ನುವ ಪದಕ್ಕೆ ಗೊತ್ತಾದ ಒಂದು ಅರ್ಥವಿಲ್ಲ. ಒಬ್ಬೊಬ್ಬ ವೈದ್ಯನೂ ಬೇರೆ ಬೇರೆ ಅರ್ಥಹೇಳುವನು. ಅದರಿಂದಾಗಿ ಈ ಪದಕ್ಕೆ ವೈದ್ಯಕೀಯ ಪ್ರಾಮುಖ್ಯವಿಲ್ಲ. ಹಲವಾರು ತೆರನ ಬೇರೂರಿದ ಚರ್ಮದ ಉರಿತಗಳಿಗೆ ಬಳಸುವ ಸಾಮಾನ್ಯ ಹೆಸರಿದು. ಇದನ್ನು ಜನಸಾಮಾನ್ಯರ ಬಳಕೆಗೆ ಬಿಟ್ಟು ವೈದ್ಯರಲ್ಲಿ ಹಸುಗೂಸುಗಳ ಬೇರೂರಿದ ಚರ್ಮದ ಉರಿತಕ್ಕೆ ಮಾತ್ರ ಅನ್ವಯಿಸುವುದು ಸೂಕ್ತವಾಗಬಹುದು. ಇಸಬಿನಲ್ಲಿ ಒಳಜನಿತ ಮತ್ತು ಹೊರಜನಿತವೆಂಬ ಬಗೆಗಳಿವೆ. ಒಳಜನಿತ ಇಸುಬಿಗೆ, ಚಿಕ್ಕವಯಸ್ಸಿನಲ್ಲೇ ತಲೆದೋರುವ ಏಟೋಪಿ ಎಂಬ ಒಗ್ಗದಿರುವಿಕೆಯ (ಅಲರ್ಜಿಯ) ತೊಂದರೆ, ಮೈಜಿಡ್ಡುಸುರಿತ, ನಿಲುವಿನ ಚರ್ಮದುರಿತ, ಹೀಗೆ ಅನೇಕ ಕಾರಣಗಳಿರಬಹುದು. ಹೊರಜನಿತ ಇಸಬಿಗೆ, ಸೋಂಕು, ಸ್ಪರ್ಶದುರಿತ (ಕಾಂಟ್ಯಾಕ್ಟ್ ಡರ್ಮಟೈಟಿಸ್) ಮೊದಲಾದ ಕಾರಣಗಳಿರಬಹುದು. ಸ್ಪರ್ಶದುರಿತ, ಕುಂಕುಮ, ಕನ್ನಡಕ, ಪಾದರಕ್ಷೆ, ಮೊದಲಾದವುಗಳನ್ನು ಧರಿಸುವುದರಿಂದ, ಹಾಗೂ ಮನೆಗೆಲಸ ಮಾಡುವಾಗ ಸಾಬೂನು, ಪುಡಿಗಳ ಸ್ಪರ್ಶದಿಂದ ಕೆಲವರಲ್ಲಿ ಉಂಟಾಗುತ್ತದೆ. ಆನುವಂಶಿಕ ಇಸಬು ಚಿಕ್ಕವಯಸ್ಸಿನಲ್ಲಿ ಪ್ರಾರಂಭವಾಗಿ ಜೀವನಪರ್ಯಂತ ಬಿಟ್ಟು ಬಿಟ್ಟು ಬರುತ್ತದೆ. ಆರ್ಜಿತ ಇಸಬು ಕೆರಳಿಸುವ ಪದಾರ್ಥಗಳಿಂದ ಉಂಟಾಗುತ್ತದೆ. ಆಹಾರ ಪದಾರ್ಥಗಳ ಸೇವನೆಯಿಂದ ಇಲ್ಲವೆ ಉಸಿರಾಡುವುದರಿಂದ, ಕುಂಕುಮ, ಕನ್ನಡಕ, ಪಾದರಕ್ಷೆ ಮುಂತಾದವುಗಳ ಸ್ಪರ್ಶದಿಂದ ಇಸಬು ಬರಬಹುದು. ಇವು ಸಾಮಾನ್ಯವಾಗಿ ಮನುಷ್ಯನಿಗೆ ಹಾನಿಯನ್ನು ಉಂಟು ಮಾಡುವುದಿಲ್ಲವಾದ ಕಾರಕಗಳೇ ಆದರೂ ವ್ಯಕ್ತಿಯಲ್ಲಿ ಇವಕ್ಕೆ ಸೂಕ್ಷ್ಮಪ್ರತಿಕ್ರಿಯೆ ಉತ್ಪನ್ನವಾಗಿ ಇಸಬು ಬರುತ್ತದೆ. ಇಸಬು ದೀರ್ಘಕಾಲವಿದ್ದಲ್ಲಿ ಚರ್ಮ ಪದರು ಪದರಾಗಿ ದಪ್ಪವಾಗಿ ಕಪ್ಪಾಗಿ ಒರಟಾಗುತ್ತದೆ.

ಚರ್ಮದ ಉರಿತದಲ್ಲಿ ಕಾಣಬರುವ ರೂಪವ್ಯತ್ಯಾಸಗಳು ಇತರ ಚರ್ಮ ಬದಲಾವಣೆಗಳಿಗಿಂತಲೂ ಸ್ಪಷ್ಟವಾದವು. ಈ ಬದಲಾವಣೆಗಳ ಕ್ರಮ ಹೀಗಿದೆ : ಕೆಂಗಂದೆ ಮತ್ತು ಚರ್ಮದ ಊತದೊಂದಿಗೆ ಮೊದಲಾಗುತ್ತವೆ ; ಕೆಲತಾಸುಗಳಲ್ಲಿ ತರುವಾಯ ನೀರ್ಗುಳ್ಳೆಯಾಗಿ ಅವುಗಳಿಂದ ರಸಿಕೆ ಸುರಿವುದು ; ಕೆಲವು ದಿವಸಗಳ ಮೇಲೆ ಹೊಟ್ಟು ಮತ್ತು ಸಿಪ್ಪೆಗಟ್ಟುವುದು–ಇದಿಷ್ಟೂ ಕೂರಾದ ಚರ್ಮದ ಉರಿತದಲ್ಲಿ ಕಾಣುವುದು. ಆದರೆ ಉರಿತ ಹೀಗೆಯೇ ಮುಂದುವರಿದರೆ ಕೆರೆತದಿಂದಲೋ ಉಜ್ಜುವುದರಿಂದಲೋ ಚರ್ಮ ಮಂದವಾಗಿ ಕಲೆಯ ಗುರುತು ಕಾಣಿಸುವುದು. ಬಣ್ಣವೇರುತ್ತ ಬಂದು ಕೆರೆದುಕೊಳ್ಳುವುದರಿಂದ ಮಿಟ್ಟಿದದ್ದುಗಳೆದ್ದು ಚರ್ಮ ಮಂದಗಟ್ಟುವುದು. ಉರಿತ ಬೇರೂರಿದಂತೆಲ್ಲ ಈಚಿನ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಇಸಬು ಮತ್ತು ಚರ್ಮದ ಉರಿತಗಳನ್ನು ಕೇವಲ ಸಾಮಾನ್ಯ ಲಕ್ಷಣಗಳಿಂದ ವಿಂಗಡಿಸುವುದಾಗದು. ಆದರೂ ಗೊತ್ತಾದ ಕಾರಣಗಳಿಂದ ಆದವನ್ನು ಅವುಗಳ ಚಿಹ್ನೆ ಲಕ್ಷಣಗಳಿಂದ, ರೋಗಿಯಲ್ಲಿ ಹೇಗೆ ಹರಡಿಕೊಂಡು ಹೇಗೆ ಕೊನೆಗಾಣಬಹುದೆಂದು ಮುಂಗಾಣಬಹುದು.

ಚರ್ಮದ ಉರಿತದ ಕೆಲವು ಮುಖ್ಯರೂಪಗಳು : 1 ಕೂರಾದ ತಾಕು ಚರ್ಮದ ಉರಿತ : ದೈನಂದಿನ ಜೀವನದಲ್ಲಿ ಚರ್ಮಕ್ಕೆ ತಾಕುವ ಅನೇಕ ಬಗೆಗಳ ಬಳಕೆಯ ವಸ್ತುಗಳು, ಚರ್ಮದಲ್ಲಿ ಸೂಕ್ಷ್ಮತೆಯನ್ನುಂಟುಮಾಡಿಯೋ ಚರ್ಮವನ್ನೇ ಕೆರಳಿಸುವುದರಿಂದಲೋ ತಾಕಿದೆಡೆಯಲ್ಲಿ ಉರಿತವೇಳಿಸುತ್ತವೆ. ಇಂಥ ಸ್ಥಿತಿಗಳಲ್ಲಿ ಉರಿತದ ನಿಜವಾದ ಕಾರಣವನ್ನು ಕಂಡುಹಿಡಿಯಬಹುದು. ಕಾರಣ ತಪ್ಪಿಸುವಂತಿದ್ದರೆ ಇದರ ಚಿಕಿತ್ಸೆಯೂ ಸುಲಭ, ತೃಪ್ತಿಕರ.

2. ಹಸುಗೂಸುಗಳ ಇಸಬು. ಇದು ಸಾಮಾನ್ಯವಾಗಿ ಏಟೋಪಿಯ ಚರ್ಮದುರಿತವಾಗಿರುತ್ತದೆ. ಏಟೋಪಿ ಎಂದರೆ, ಅನುವಂಶಿಕವಾಗಿ ಒಗ್ಗದಿರುವಿಕೆ (ಅಲರ್ಜಿ)ಯಾಗುವ ಸಾಧ್ಯತೆಯಿರುವುದೆಂದು ಅರ್ಥ. ಚರ್ಮ, ಶ್ವಾಸನಾಳ, ಮತ್ತು ಮೂಗಿನ ಲೋಳೆಪೊರೆಗಳು

ಕೆಲವು ವಸ್ತುಗಳಿಗೆ ಹುಟ್ಟಿನಿಂದಲೇ ಸಂವೇದಕತೆ ಪಡೆದಿದ್ದು ಚರ್ಮದಲ್ಲಿ ಇಸಬಾಗಿಯೋ ಶ್ವಾಸನಾಳದ ಕುಗ್ಗುವಿಕೆಯಿಂದ ಗೂರಲು ಕೆಮ್ಮಾಗಿಯೋ ಮೂಗಿನ ಲೋಳೆಪೊರೆಯ ಉರಿತದಿಂದ ನೆಗಡಿಯಾಗಿಯೋ ಯಾವುದಾದರೂ ಒಂದು ರೂಪದಲ್ಲಿ ಹೊರ ತೋರಬಹುದು. ಇಂಥ ಇಸಬಿನ ಲಕ್ಷಣಗಳು ಗೊತ್ತಾಗಿರುತ್ತವೆ. ಮುಂದೆ ಹೀಗೆಯೇ ಆಗುವುದೆಂದು ಹೇಳಲಾಗದಿದ್ದರೂ ಸಾಮಾನ್ಯವಾಗಿ ಇದರ ಕಾಟ ಬಹುಕಾಲದ್ದು. ಹಸುಗೂಸಿನ ಇಸಬು ಸಾಮಾನ್ಯವಾಗಿ ಕೆನ್ನೆ, ಕುತ್ತಿಗೆಗಳ ಮೇಲೆ ತುರಿಸುವ ಕೆಂಪು ಕಲೆಗಳಾಗಿ ಕಾಣುತ್ತದೆ. ಇದು, ಮೂರು ತಿಂಗಳು ವಯಸ್ಸಿನಿಂದ ಎರಡು ವರ್ಷಗಳ ವರೆಗಿರುತ್ತದೆ. ಇದು, ಮಕ್ಕಳ ಹಂತಕ್ಕೆ ಮುಂದುವರೆಯಬಹುದು, ಇಲ್ಲವೇ ಮಕ್ಕಳ ಹಂತವೇ ಮೊದಲು ಬರಬಹುದು. ಇದು, 2 ರಿಂದ 12 ವರ್ಷಗಳವರೆಗಿರುತ್ತದೆ, ಹಾಗೂ ಈ ಅವಧಿಯಲ್ಲಿ ಮೊಣಕೈ ಮೊಣಕಾಲುಗಳ ಹಿಂಭಾಗದಲ್ಲಿ ಇಸಬು ಸಾಮಾನ್ಯ. 12 ರಿಂದ 23 ವರ್ಷದಲ್ಲಿ ವಯಸ್ಕ ಹಂತ–ಇಲ್ಲಿ, ಚರ್ಮ ಒರಟಾಗಿ ಕಪ್ಪಾಗುತ್ತದೆ. ಎಲ್ಲಾ ಹಂತಗಳಲ್ಲೂ ತುರಿಸುವಿಕೆ, ಒಣಗುವಿಕೆ ಬಹಳ ಸಾಮಾನ್ಯ.

3. ಮೈ ಜಿಡ್ಡು ಸುರಿವ ಚರ್ಮದ ಉರಿತ : ಮೈಜಿಡ್ಡುಗ್ರಂಥಿಗಳ ಸುರಿಕೆ ಅತಿಯಾಗಿರುವವರಲ್ಲಿ ಗ್ರಂಥಿಗಳು ಹೆಚ್ಚಾಗಿರುವ ಭಾಗಗಳಲ್ಲಿ ಕಾಣುವುದಲ್ಲದೆ ಅಣುಜೀವಿಗಳ ಸೋಂಕಿಗೆ ಸುಲಭವಾಗಿ ಈಡಾಗುವ ಬೇನೆಯಿದು.

4. ನಾಣ್ಯರೂಪ ಚರ್ಮದ ಉರಿತ : ಇದರಲ್ಲಿ ಮೈಮೇಲಿನ ಅನೇಕ ಕಡೆ ಚರ್ಮದ ಉರಿತ ಗುಂಡುಗುಂಡಾಗಿ ಕಾಣಬರುವುದು. ಇದಕ್ಕೆ ಕಾರಣ ತಿಳಿದಿಲ್ಲ.

5. ಬೇರೂರಿದ ಮಂದಗಟ್ಟಿದ ಚರ್ಮ ಉರಿತ : ಎಷ್ಟೋ ವರ್ಷಗಳು ಜಗ್ಗದೆ ಬೇರೂರಿ ನಿಂತಿರುವ ಚರ್ಮದ ಉರಿತದಿಂದ ಚರ್ಮ ದಪ್ಪವಾಗಿರುವ ರೂಪ.

6. ನಿಲುವಿನ ಚರ್ಮದ ಉರಿತ : ಕಾಲಿನ ಉಡಿಕಟ್ಟಿದ ಸಿರಗಳ ನಿರ್ಬಲತೆಯಿಂದ ರಕ್ತದ ಹರಿವು ಸರಿಯಾಗಿ ಆಗದ ಕಾರಣ, ಕೋಲಾಣುಗಳ ಸೋಂಕಿಗೆ ಸುಲಭವಾಗಿ ಈಡಾಗಿ ಆಗುವ ಉರಿತವಿದು.

7. ಬೇರೂರಿದ ಇಸಬಿನ ಚರ್ಮದ ಉರಿತ : ಗೊತ್ತುಮಾಡಲಾಗದ ಅನೇಕ ಕಾರಣಗಳಿಂದಾದ ಬೇರೂರಿದ ಚರ್ಮದ ಉರಿತವಿದು.

8. ಕೈಕಾಲುಗಳ ಬೇರೂರದ ಚರ್ಮದ ಉರಿತ : ಬೆವರು ಕಟ್ಟುವುದರಿಂದಲೂ ಅಣುಜೀವಿಗಳಿಂದಾಗುವ ಮರುಚಲದ ಸೋಂಕಿನ ಚರ್ಮದ ಉರಿತ ಇಲ್ಲವೇ ಚಿಕಿತ್ಸೆಗಾಗಿ ಬಳಸುವ ಮದ್ದುಗಳಿಂದಲೂ ಆಗುವ ತಾಕು ಚರ್ಮದ ಉರಿತವಿದು.

ಚರ್ಮತವೆ : ಚರ್ಮ ಸವೆದುಹೋಗುವುದು ಎಂದು ಅರ್ಥ. ಅನೇಕ ರೋಗಗಳಿಂದ ಈ ರೀತಿ ಆಗಬಹುದು. ಇವುಗಳಲ್ಲಿ ಮುಖ್ಯವಾದವು :

1. ಸಾಮಾನ್ಯ ಚರ್ಮತವೆ; 2. ಕೆಂಗಂದೆ ಚರ್ಮತವೆ.

1. ಸಾಮಾನ್ಯ ಚರ್ಮತವೆ: ಮೈಗೆ ಹತ್ತಿದ ಕ್ಷಯರೋಗ ಚರ್ಮಕ್ಕೆ ಹರಡಿ, ಅದರಲ್ಲಿ ಸಣ್ಣ ಸಣ್ಣ ಗಂಟುಗಳಾಗಿ ಬರಬರುತ್ತ ಅವು ಒಟ್ಟುಗೂಡಿ ಹುಣ್ಣಾಗಿ, ಮಾಯುವಾಗ ತೀವ್ರ ವಿಕಾರ ಮಾಡುವ ಬೇರೂರಿದ ಚರ್ಮರೋಗವಿದು. ಅನೇಕರಲ್ಲಿ ಮುಖ ಮತ್ತು ಕತ್ತನ್ನು ಆವರಿಸುವುದು. ಚರ್ಮತವೆಯ ಗಂಟುಗಳು ನಿಜತ್ವಚೆಯಲ್ಲಿರುತ್ತವೆ. ಹೊಸಗಂಟುಗಳ ಮಧ್ಯೆ ಒತ್ತಾಗಿ ಸೇರಿಸಿದ ಒಳಪೊರೆ ಕೋಶಗಳೂ ಅವುಗಳ ಜೊತೆಗೆ ಕೆಲವೇ ಲ್ಯಾಂಗರ್‌ಹ್ಯಾನ್ಸ ಭೂತಕೋಶಗಳೂ ಇರುತ್ತವೆ. ಬಾಹ್ಯಾವರಣದಲ್ಲಿ ಉರಿತದ ದುಗ್ಧರಸತೆರನ ಮಂಡಲವಿರುವುದು. ಸಾಮಾನ್ಯವಾಗಿ ಲೋಮನಾಳಗಳು ಕಾಣದಂತಾಗಿ ಗಂಟುಗಳಲ್ಲಿ ರಕ್ತನಾಳಗಳಿರುವುದಿಲ್ಲ. ಅಂಟುಜನಕ ಪೂರ್ತಿ ಕಳಲಾಗಿ ಮತ್ತು ಎಲ್ಯಾಸ್ಟಿನ್ ಬಲ ತಗ್ಗಿ ನುಚ್ಚುನೂರಾಗುವುದು. ಕೆಲವು ವೇಳೆ ಹುಣ್ಣಾಗಬಹುದು ಅಥವಾ ಗಂಟು ಕರಗಿ ಹೋಗಬಹುದು. ಗಂಟುಗಳಿಂದ ತಪ್ಪದೆ ಬೆಳ್ಳನೆಯ ಮೆತುವಾದ ಕಲೆ ನಿಲ್ಲುವುದು. ಈ ರೋಗ ಸಾಮಾನ್ಯವಾಗಿ ಮಕ್ಕಳಲ್ಲಿ ಕಾಣಬರುತ್ತದೆ. ಕೆನ್ನೆ, ತುಟಿ, ಬಾಯಿ, ಮೂಗಿನ ಲೋಳೆಪೊರೆಗಳ ಮೇಲೆ ಅಂಕುರಿಸುವುದು. ಚಿಕಿತ್ಸೆಮಾಡದಿದ್ದರೆ ಹೆಚ್ಚು ಹೆಚ್ಚು ಗಂಟುಗಳು ಹರಡುತ್ತ ಮಧ್ಯದಲ್ಲಿ ಹಿಂಗುತ್ತ ಕಲೆ ಬೀಳುವುದು. ಅನೇಕರಲ್ಲಿ ಸೂಕ್ತ ಚಿಕಿತ್ಸೆಯಿಂದ ರೋಗವನ್ನು ಗುಣಪಡಿಸಬಹುದು. ಈ ರೋಗದ ಕಲೆಗಳಲ್ಲಿ ಏಡಿಗಂತಿ ಏಳಬಹುದೆಂಬುದನ್ನು ಮರೆಯಬಾರದು. ಚಿಕಿತ್ಸೆಯಾಗಿ ಪ್ಯಾರ ಅಮೈನೋ ಸ್ಯಾಲಿಸಿಲಿಕ್ ಆಮ್ಲ ಮತ್ತು ನಿಕೋಟಿನಿಕ್ ಆಮ್ಲ, ಹೈಡ್ರೋಸೈಡ್ ಮದ್ದುಗಳನ್ನೂ ಒಟ್ಟಾಗಿ ಚಿಹ್ನೆಗಳು ಹೋದಮೇಲೂ 6 ತಿಂಗಳು ಕೊಡಬೇಕು.

2 ಕೆಂಗಂದೆ ಚರ್ಮತವೆ : ಇದು ಸೂರ್ಯಕಿರಣಗಳಿಂದ ಉಲ್ಬಣಿಸುವ ರೋಗ. ಕಾರಣ ತಿಳಿದಿಲ್ಲ. ಮೂಗು, ಕೆನ್ನೆ ಮತ್ತು ನೆತ್ತಿಗಳ ಮೇಲೆ ಬೇರೂರಿದ ಚರ್ಮತವೆಯಲ್ಲಿ ಕೆಂಪು ಕಲೆಗಳಾಗುತ್ತವೆ. ಅವುಗಳ ಅಂಚಿನಲ್ಲಿ ಕಂದುಬಣ್ಣದ ಹುರುಕು ಅಗಲಿಸಿದ ಕೂಪಗಳ ಬಾಯಿಗಳೊಳಗೆ ಹೊಕ್ಕಿರುತ್ತವೆ. ಮಾದು ನಿಂತ ಕಲೆಗಳೂ ಇರಬಹುದು. ಮಲೇರಿಯ ರೋಗದಲ್ಲಿ ಬಳಸುವ ಕೃತಕ ರಾಸಾಯನಿಕ ಮದ್ದುಗಳಾದ ಅಟೆಬ್ರಿನ್ ಮತ್ತು ಕ್ಲೋರೋಕ್ವಿನ್ ಈ ರೋಗಚಿಕಿತ್ಸೆಯಲ್ಲಿ ಗುಣಕಾರಿಗಳಾಗಿವೆ. ಇದಕ್ಕೂ ವಿಷಮವಾದ ರೂಪವೆಂದರೆ ಕೂರಾದ ಚರ್ಮತವೆ. ಇದು ದೇಹದಾದ್ಯಂತ ಇರುವ ಕೂಡಿಸುವ ಊತಕ ಮತ್ತು ರಕ್ತನಾಳಗಳಲ್ಲೆಲ್ಲ ಇರುವ ಅಂಟುಜನಕದ ರೋಗ. ಊತಕಗಳಿಂದಾಗಬಹುದಾದ ಪರಿಣಾಮಗಳಾದ ಜ್ವರ, ಕೀಲುನೋವು ಮುಂತಾದವು ಮುಖ, ಎದೆ ಮತ್ತು ಕೈಗಳ ಮೇಲೆ ಚರ್ಮದಲ್ಲಿ ಕೆಂಪುಕಲೆಗಳೂ ಕಾಣಬಹುದು. ರೋಗ ಅನೇಕರಲ್ಲಿ ಮಾರಕವಾಗುವುದುಂಟು. ಕಾರ್ಟಿಕೋ ಸ್ಟೀರಾಯಿಡ್ ಗುಂಪಿನ ಮದ್ದುಗಳಿಂದ ಈ ರೋಗದ ಲಕ್ಷಣಗಳನ್ನು ಮಾತ್ರ ಶಮನಮಾಡಬಹುದು.

ಮೊಡವೆ : ಇದು ಹರೆಯದ ಕಾಯಿಲೆ. ಮುಖದ ಮೇಲೆ ಗ್ರಂಥಿನಾಳದ ತುದಿಯಲ್ಲಿ ಜಿಡ್ಡುಕೂಡಿ ಕಪ್ಪಾದ ಕಲೆಯಂತಿರುವುದೇ ಮೊಡವೆ (ಮಡಮೆ). ಮಿಟ್ಟಿದದ್ದೆ ಮತ್ತು ಕುರುಗಳು ಇದರ ಲಕ್ಷಣಗಳು. ಇವು ವಿಶೇಷವಾಗಿ ಮುಖ, ಎದೆ ಮತ್ತು ತೋಳುಗಳ ಮೇಲೆ ಏಳುತ್ತವೆ. ಮೊಡವೆಯುಳ್ಳವರ ಚರ್ಮದ ಮೇಲೆ ಜಿಡ್ಡು ಹೆಚ್ಚಾಗಿರುತ್ತದೆ. ಮೈ ಜಿಡ್ಡಿನ ಗ್ರಂಥಿಗಳು ಜನನ ಗ್ರಂಥಿಗಳ ಹಾರ್ಮೋನುಗಳಿಗೆ ಹರೆಯದಲ್ಲಿ ಚುರುಕಾಗಿರುವುದೇ ಮೊಡವೆಗಳಿಗೆ ಕಾರಣ. ಸಾಮಾನ್ಯವಾಗಿ ಇವು ಮೂವತ್ತನೆಯ ವಯಸ್ಸಿನಲ್ಲಿ ಗುಣವಾಗುತ್ತವೆ. ಕೆಲವರಲ್ಲಿ ಸ್ವಲ್ಪಮಾತ್ರವೇ ಇದ್ದರೆ ಇತರರಲ್ಲಿ ಅಧಿಕ ಪ್ರಮಾಣದಲ್ಲಿದ್ದು ಒಡೆದು ಗಂಟಾಗಿ ಕಲೆಗಳು ಉಳಿದು ಮುಖವನ್ನು ವಿಕಾರಗೊಳಿಸಬಹುದು. ನೀರು ಮತ್ತು ಸಾಬೂನಿನಿಂದ ತೊಳೆದು ಮೊಡವೆಯ ಪೂಸುದ್ರವವನ್ನು (ಲೋಷನ್) ಹಚ್ಚುವುದರಿಂದ ಇವನ್ನು ಶಮನಗೊಳಿಸಬಹುದು.

ನೀರ್ಗುಳ್ಳಿಕ : ಇದು ಬೇರೂರಿದ ಮರುಕಳಿಸುವ ಮಾರಕರೋಗ. ಇದರ ಕಾರಣ ತಿಳಿದಿಲ್ಲ. ತಾಮರವಣೆ ರೋಗವೆಂದು ಹೇಳುತ್ತಾರೆ. ಇದರಲ್ಲಿ ನಾಲ್ಕು ಬಗೆಗಳಿವೆ–ಪೆಂಫಿಗಸ್ ವಲ್ಗೇರಿಸ್, ಪೆಂಫಿಗಸ್ ವೆಜಿಟಾನ್, ಪೆಂಫಿಗಸ್ ಫೋಲಿಯೇಸಿಯಸ್ ಮತ್ತು ಪೆಂಫಿಗಸ್ ಎರಿಥಿಮೆಟೋಸಸ್. ಇವುಗಳಲ್ಲಿ ಪೆಂಫಿಗಸ್ ವಲ್ಗೇರಿಸ್ ಅತಿ ಸಾಮಾನ್ಯವಾದದ್ದು. ಇದು ಹೆಚ್ಚಾಗಿ ಮಧ್ಯವಯಸ್ಕರಲ್ಲಿ ತಲೆದೋರುತ್ತದೆ. ಬಾಯಿಯ ಲೋಳೆಪೊರೆ ಹಾಗೂ ಚರ್ಮದ ಮೇಲೆ ಕೆಂಪಿಲ್ಲದೆ ನೀರ್ಗುಳ್ಳೆಗಳು ಏಳುತ್ತವೆ. ಈ ಗುಳ್ಳೆಗಳು ಒಡೆಯಬಹುದು ಇಲ್ಲವೆ ಒಡೆದು ಹೆಪ್ಪುಗಟ್ಟಬಹುದು. ಒಣಗಿದಮೇಲೆ ಕಪ್ಪು ಬಣ್ಣದ ಕಲೆಗಳು ಉಳಿಯುತ್ತವೆ. ಆಗಾಗ್ಗೆ ನೀರ್ಗುಳ್ಳೆಗಳು ಮರುಕಳಿಸುತ್ತವೆ. ನುಂಗುವಾಗ ಲೋಳೆಪೊರೆಯಲ್ಲಿನ ಗುಳ್ಳೆಗಳು ನೋವನ್ನು ಉಂಟುಮಾಡುತ್ತವೆ. ಇದಕ್ಕೆ ಚಿಕಿತ್ಸೆ ಮಾಡದಿದ್ದಲ್ಲಿ ಎರಡು ವರ್ಷಗಳಲ್ಲಿಯೇ ಮಾರಕವಾಗಬಹುದು. ರಗಟೆ ಸ್ಟೀರಾಯ್ಡ್ ಮಾತ್ರೆಗಳನ್ನು ಸೇವಿಸುವುದರಿಂದ ಈ ನೀರ್ಗುಳ್ಳೆಗಳು ಏಳುವುದನ್ನು ತಡೆಗಟ್ಟಬಹುದು.

ಬಿರಿತ : ಮೇಲ್ಚರ್ಮದ ಕೋಡಿನ ಪದರ ಅತಿ ಹೆಚ್ಚಾಗಿ ನೀರು ಕಳೆದುಕೊಳ್ಳುವುದರಿಂದ ಚರ್ಮ ಬಿರಿಯುತ್ತದೆ. ಚಳಿಗಾಲದಲ್ಲಿ ಗಾಳಿಯ ತೇವ ಕಡಿಮೆಯಾಗಿ ಕೋಡಿನ ಪದರದಿಂದ ನೀರು ಹೆಚ್ಚಾಗಿ ಹೊರಬರುವುದರಿಂದ ಮತ್ತು ಬೇಸಿಗೆಯಲ್ಲಿ ಹೆಚ್ಚಾಗಿ ನೀರು ಸಾಬೂನು ಬಳಸುವುದರಿಂದ ಚರ್ಮ ಬಿರಿಯುತ್ತದೆ. ಚರ್ಮ ಒಣಗಿ ಒಡೆದು ಪೊರೆಬಿಡುತ್ತದೆ. ಇದರಿಂದ ಸ್ವಲ್ಪ ಕಡಿತವಾಗುವುದು.

ಆಣಿ : ಹೊರತ್ವಚೆಯ ಕೋಡಿನ ಪದರದಲ್ಲಿ ನೆಲೆಸಿದ ಹೆಬ್ಬೆಳೆತವಿದು. ಕೋಡಿನ ಪದರ ದಪ್ಪಗೆ ಶಂಖಾಕಾರವಾಗಿರುತ್ತದೆ. ಇದರ ತುದಿ ಒಳಮುಖವಾಗಿದ್ದು ಆಗಾಗ್ಗೆ ಇದರ ಮೇಲೆ ಬೀಳುವ ಒತ್ತಡದಿಂದ ಆಣಿ ಉಂಟಾಗುತ್ತದೆ. ಆದ್ದರಿಂದ ಬಿಗಿಯಾದ ಪಾದರಕ್ಷೆಗಳನ್ನು ಬಳಸಬಾರದು. ಸ್ಯಾಲಿಸೈಲಿಕ್ ಆಮ್ಲದ ಮುಲಾಮು ಹಚ್ಚುವುದರಿಂದ ಆಣಿ ಮೆತ್ತಗಾಗುತ್ತದೆ. ಅನಂತರ ಇದನ್ನು ಸುಲಿಯಬೇಕು.

ದ್ಯುತಿಸಂವೇದಕತೆ (ಫೋಟೋಸೆನ್ಸಿಟಿವಿಟಿ): ಅತಿನೇರಿಳೆ ಕಿರಣಗಳಿಗೆ ಚರ್ಮದ ಅಸಹಜ ಪ್ರತಿಕ್ರಿಯೆಯೇ ದ್ಯುತಿಸಂವೇದಕತೆ. ಮೂರು ಕಾರಣಗಳಿಂದ ಇವು ಉಂಟಾಗಬಹುದು : 1 ಇಯೋಸಿನ್ (ಲಿಪ್‌ಸ್ಟಿಕ್), ಬೆರ್ಗಮೆಟ್ ಎಣ್ಣೆ (ಸೆಂಟುಗಳು, ಯು–ಡಿ–ಕಲೋನ್), ಡಾಂಬರ್ ಎಣ್ಣೆ ಮೊದಲಾದ ರಾಸಾಯನಿಕ ಪದಾರ್ಥಗಳನ್ನು ಚರ್ಮದ ಮೇಲೆ ಲೇಪಿಸುವುದರಿಂದ ; 2 ಸಲ್ಫನಮೈಡ್ ಟೆಟ್ರಸೈಕ್ಲಿನ್, ಶಾಮಕ (ಟ್ರಾಂಕ್ವಿಲೈಸರ್) ಮುಂತಾದ ಔಷಧಿಗಳನ್ನು ಸೇವಿಸುವುದರಿಂದ ; 3 ಪಾರಫೀರಿಯ, ಪೆಲಗ್ರಾ ಎಂಬ ಚಯಾಪಚಯೀ ರೋಗಗಳಿಂದ. ಈ ರೋಗಿಗಳು ಸೂರ್ಯನ ಬೆಳಕಿಗಾಗಲಿ ಕೃತಕ ಅತಿನೇರಿಳೆ ಕಿರಣಗಳಿಗಾಗಲಿ ಮೈ ಒಡ್ಡಿದರೆ ಚರ್ಮದ ಮೇಲೆ ಇಸಬು ಮಿಟ್ಟಿದದ್ದೆಗಳು, ನೀರ್ಗುಳ್ಳೆಗಳು ಮತ್ತು ತುರಿದದ್ದೆಗಳು ಕಂಡುಬರುವುವು. (ಕೆ.ಎಂ.ಆರ್.; ಡಿ.ಪಿ.ಜಿ.)

**ಚಲನಚಿತ್ರ :** ಆಧುನಿಕ ಅಭಿವ್ಯಕ್ತಿ ತಂತ್ರಗಳಲ್ಲಿ ಒಂದು (ಮೋಷನ್ ಪಿಕ್ಚರ್). ಪ್ರಾರಂಭದಲ್ಲಿ ಇದನ್ನು ಬಯೊಸ್ಕೋಪ್ ಎಂದೂ ಅನಂತರ ಸಿನಿಮಾ, ಫಿಲ್ಮ್, ಪಿಕ್ಚರ್ ಎಂದೂ ಕರೆಯತೊಡಗಿದರು. ಮೊದಲಿಗೆ ಮೂಕಚಿತ್ರವಾಗಿ (ಸೈಲೆಂಟ್ ಪಿಕ್ಚರ್) ತೆರೆಕಂಡ ಚಲನಚಿತ್ರ ಕ್ರಮೇಣ ವಾಕ್‌ಚಿತ್ರವಾಗಿ (ಟಾಕಿ) ವರ್ಣರಂಜನೆ ಪಡೆದು ಹೇಗೆ ವೈವಿಧ್ಯಮಯವಾಗಿ ಬೆಳೆಯಿತು ಎಂಬ ವಿಷಯ ಇಲ್ಲಿ ಪ್ರಸ್ತಾಪಿಸಿದೆ. 20ನೆಯ ಶತಮಾನದ

ಆದಿಯವರೆಗೂ ಪ್ರದರ್ಶನ ಉದ್ಯಮಗಳಲ್ಲಿ (ಷೋ ಬಿಸನೆಸ್) ಪ್ರಮುಖವೆನಿಸಿದ್ದ ನಾಟಕ, ಅಪೇರ ಮೊದಲಾದುವನ್ನು ಹಿನ್ನೆಲೆಗೆ ಸರಿಸಿ ಚಲನಚಿತ್ರ ಹೇಗೆ ಪ್ರಾಮುಖ್ಯಕ್ಕೆ ಬಂತು ಎಂಬ ವಿಷಯ ಆಶ್ಚರ್ಯಜನಕವೂ ಕುತೂಹಲಕಾರಿಯೂ ಆಗಿದೆ. ಪ್ರಸ್ತುತ ಲೇಖನದ ವಿನ್ಯಾಸ ಹೀಗಿದೆ:

I ಚಲನಚಿತ್ರದ ಚರಿತ್ರೆ
- (A) ಹುಟ್ಟು ಮತ್ತು ಮೊದಲ ದಿನಗಳು
- (B) ಬೆಳವಣಿಗೆ 1914–18
- (C) ಬೆಳವಣಿಗೆ 1919–29
- (D) ವಾಕ್‌ಚಿತ್ರಗಳು: 1930–40; 1940–60; 1960 ರಿಂದ ಈಚೆಗೆ

II ಸಣ್ಣ ಪ್ರಮಾಣದ ಚಿತ್ರಗಳು
- 1 ವಾರ್ತಾಚಿತ್ರಗಳು
- 2 ದಾಖಲೆಚಿತ್ರಗಳು
- 3 ಶೈಕ್ಷಣಿಕ ಚಿತ್ರಗಳು
- 4 ಪ್ರಚಾರ ಚಿತ್ರಗಳು
- 5 ಶುದ್ಧ ಸಾಕ್ಷ್ಯಚಿತ್ರಗಳು
- 6 ವ್ಯಂಗ್ಯಚಿತ್ರಗಳು
- 7 ಮಕ್ಕಳ ಚಿತ್ರಗಳು

III ಚಲನಚಿತ್ರ ನಿರ್ಮಾಣ ತಂತ್ರ

## I ಚಲನಚಿತ್ರದ ಚರಿತ್ರೆ

**(A) ಹುಟ್ಟು ಮತ್ತು ಮೊದಲ ದಿನಗಳು :** ನಮ್ಮ ಕಣ್ಣುಗಳಿಗೆ ಒಂದು ವಿಶೇಷ ಗುಣ ಇದೆ. ಒಂದು ವಸ್ತುವನ್ನು ನಾವು ನೋಡಿದ ಮೇಲೆ ಅದರ ಚಿತ್ರಣ ನಮ್ಮ ಕಣ್ಣುಗಳ ಮುಂದೆ ಒಂದು ಅರೆಕ್ಷಣವಾದರೂ ಉಳಿಯುತ್ತದೆ. ಆದ್ದರಿಂದ ಒಂದು ಘಟನೆಯ ವಿವರಗಳನ್ನು ಬಿಡಿಬಿಡಿಯಾಗಿ ರಚಿಸಿ ಅವನ್ನು ಸಕ್ರಮವಾಗಿ, ಸಾಕಷ್ಟು ವೇಗವಾಗಿ ನಮ್ಮ ಮುಂದೆ ಹಾಯಿಸಿದರೆ ಘಟನೆ ಸಹಜವಾಗಿ ನಮ್ಮ ಮುಂದೆ ನಡೆದಂತೆ ಭಾಸವಾಗುತ್ತದೆ. ಇದರ ಮೂಲವನ್ನು ಹಲವು ಶತಮಾನಗಳ ಹಿಂದೆ ಕಾಣಿಸಿಕೊಂಡ, ಮಕ್ಕಳಾಟದ ಗಿರ್ರನೆ ತಿರುಗುವ ಬುಗುರಿ–ಯಲ್ಲಿಯೂ ಮುಂದೆ 1830ರಲ್ಲಿ ಪ್ರಚಾರಕ್ಕೆ ಬಂದ ಇನ್ನೊಂದು ಮಕ್ಕಳಾಟದ ವಸ್ತುವಾದ ಝೋಯಿಟ್ರೋಪ್‌ನಲ್ಲಿಯೂ ಕಾಣಬಹುದು. ವಿಲಿಯಂ ಹಾರ್ನರ್ ಎಂಬಾತ ರೂಪಿಸಿದ ಡೀಡಲಿಯಮ್ ಎಂಬುದು ಇಂಥದೇ ಮತ್ತೊಂದು ಉಪಕರಣ. ಚಲನಚಿತ್ರಗಳಿಗೂ ಇದೇ ವೈಜ್ಞಾನಿಕ ಸತ್ಯ ಮೂಲಾಧಾರವಾಗಿದೆ.

ವಿಲಿಯಮ್ ಹಾರ್ನರನ ಡೀಡಲಿಯಮ್ ಉಪಕರಣ

ಮುಂದೆ ಛಾಯಾಗ್ರಹಣದ ವಿಧಾನ ಬಳಕೆಗೆ ಬಂದ ಮೇಲೆ ಮಾಯಾಲಾಂದ್ರದ ಮುಖಾಂತರ ಪರದೆಯ ಮೇಲೆ ಚಲನಚಿತ್ರಗಳನ್ನು ತೋರಿಸಲು ಎಡ್ವರ್ಡ್ ಮ್ಯೂಬ್ರಿಜ್ ಎಂದಾತ ಭಗೀರಥ ಪ್ರಯತ್ನ ಮಾಡಿದ. 1872ರಲ್ಲಿ ಅವನು ಇದಕ್ಕಾಗಿ ಛಾಯಾಗ್ರಹಣದ ಶೀಘ್ರ ವಿಧಾನಗಳನ್ನು ಕಂಡುಹಿಡಿದು, 1880ರಲ್ಲಿ ಪರದೆಯ ಮೇಲೆ ಕುದುರೆಗಳ ಓಡಾಟವನ್ನೂ ಜಟ್ಟಿಗಳ ಮಲ್ಲಯುದ್ಧವನ್ನೂ ತೋರಿಸಿದ. ಲೋಕದಲ್ಲೇ ಇವು ಮೊದಲ ಚಲನಚಿತ್ರಗಳಾದವು. ಆದರೆ ಆ ಕಾಲದಲ್ಲಿ ಛಾಯಾ–ಗ್ರಹಣಕ್ಕೂ ಛಾಯಾಪ್ರತೀಕಕ್ಕೂ ಗಾಜಿನ ಫಲಕಗಳನ್ನು ಉಪಯೋಗಿಸುತ್ತಿದ್ದುದರಿಂದ ಅವನ ಈ ಸಾಧನೆ ಚಲನಚಿತ್ರಗಳ ಬೆಳವಣಿಗೆಗೆ ಬಹಳ ಗಡುಸಾಗಿ ಪರಿಣಮಿಸಿತು. ಮುಂದೆ 1890ರ ಸುಮಾರಿಗೆ ಛಾಯಾ–ಗ್ರಹಣಕ್ಕೆ ಗಾಜಿನ ಬದಲು ಸೆಲ್ಯುಲಾಯ್ಡಿನ ಪಟಲವನ್ನು ಉಪಯೋಗಿಸಲು ಸಾಧ್ಯ–ವಿದೆಯೆಂದು ತಿಳಿದುಬಂದ ಮೇಲೆ, ಎಡಿಸನ್, ಮಾರೇ, ರೈನೋ, ಫ್ರೀಸೀಗ್ರೀನ್, ಟೂರ್ನಿಯರ್ ಮೊದಲಾದ ಪ್ರಸಿದ್ಧ ವಿಜ್ಞಾನಿಗಳು ಮ್ಯೂಬ್ರಿಜ್‌ನ ಸಾಹಸಗಳನ್ನು ಮುಂದುವರಿಸಿ, ಚಲನಚಿತ್ರಗಳಿಗೆ ಒಂದು ಭದ್ರವಾದ ಅಸ್ತಿವಾರ ಹಾಕಿದರು. ಚಲನಚಿತ್ರಗಳ ಮುಂದಿನ 70 ವರ್ಷಗಳ ತಾಂತ್ರಿಕ ಬೆಳವಣಿಗೆ, ವಿಜ್ಞಾನಿಗಳೂ ಶಾಸ್ತ್ರತಂತ್ರಜ್ಞರೂ ಕೂಡಿ ಅವಿಶ್ರಾಂತವಾಗಿ ದುಡಿದುದರ ಫಲವಾಗಿದೆ. ಬೆಂಕಿ ಶೀಘ್ರವೇ ತಗಲುವ ಸೆಲ್ಯುಲಾಯ್ಡಿನ ಪಟಲದ ಬದಲು ಬೆಂಕಿ ತಗಲದ ಪಟಲದ ಪ್ರಯೋಗದಿಂದ (1910) ಹಿಡಿದು, ಈಗಿನ ಶಬ್ದಚಿತ್ರ, ವರ್ಣಚಿತ್ರ, 3 ಆಯಾಮಗಳ ಚಿತ್ರ (3ಡಿ ಚಿತ್ರ), ಅಗಲ ಪರದೆ ಚಿತ್ರ (ಸಿನಿಮಾಸ್ಕೋಪ್), ಸಿನೇರಮ (ವಿಸ್ಟಾವಿಷನ್), ಪರ್ಸ್‌ಪೆಕ್ಟಾ–ಸ್ಟೀರಿಯೊಫೋನಿಕ್ ವಿಧಾನ, ಅಲ್ಟ್ರಾಫೆಕ್ಸ್– ಇತ್ಯಾದಿಗಳವರೆಗೆ ಈ ಬೆಳವಣಿಗೆ ನಡೆದಿದೆ.



ಮಾಯಾಲಾಂದ್ರ

ಅಮೆರಿಕ ಚಲನಚಿತ್ರಗಳ ತಾಯಿನಾಡೆಂಬ ಭಾವನೆ ನಮ್ಮಲ್ಲಿ ಸಾಮಾನ್ಯವಾಗಿದ್ದರೂ ಅಲ್ಲಿ ಚಲನಚಿತ್ರದ ಸಾರ್ವತ್ರಿಕ ತಯಾರಿಕೆ ಮತ್ತು ಪ್ರದರ್ಶನ 1905ರ ವರೆಗೆ ಆಗಿದ್ದಿಲ್ಲ. ಆದರೆ ಇಂಗ್ಲೆಂಡಿನಲ್ಲಿ 1896ರಲ್ಲೇ ಸಿಸಿಲ್ ಹೆಪ್‌ವರ್ತ್ ಎಂಬಾತ ಈ ಉದ್ಯಮವನ್ನು ಪ್ರಾರಂಭಿಸಿ ಸಮಾಚಾರ ಚಿತ್ರಗಳನ್ನು ತೆಗೆಯುವುದರಲ್ಲಿ ಮೊದಲಿಗ–ನಾಗಿದ್ದ. 1904ರಲ್ಲಿ ಆತ 7 ಮಿನಿಟು ಪ್ರದರ್ಶಿಸಬಹುದಾದ ಒಂದು ಚಿಕ್ಕ ಮನೋರಂಜನೆಯ ಚಿತ್ರವನ್ನೂ ನಿರ್ಮಿಸಿದ. ಫ್ರಾನ್ಸಿನಲ್ಲಿಯೂ ಜೋರ್ಜಸ್ ಮೆಲಿಯ ಎಂಬಾತ 1896ರಲ್ಲೇ ಚಲನಚಿತ್ರ ಉದ್ಯಮವನ್ನು ಪ್ರಾರಂಭಿಸಿದ್ದ. ಮುಖ್ಯವಾಗಿ ಆತ ಚಮತ್ಕಾರಭರಿತ ವಾದ ಛಾಯಾ–ಚಿತ್ರಗಳನ್ನೊಳಗೊಂಡ, ಕಾಲ್ಪನಿಕ ಹಾಗೂ ಮನೋರಂಜಕ ಚಿತ್ರಗಳನ್ನು ನಿರ್ಮಿಸಿದ. ಇವುಗಳಲ್ಲಿ ಚಂದ್ರ–ಲೋಕಕ್ಕೆ ಪ್ರಯಾಣ, ಸೈತಾನನ ವಿನೋದಲೀಲೆಗಳು, ಧ್ರುವವಿಜಯ ಮುಖ್ಯವಾಗಿದ್ದುವು. ಚಲನಚಿತ್ರ ಕ್ಷೇತ್ರದಲ್ಲಿ ಕಲ್ಪನಾ–ಶಕ್ತಿಯೊಂದಿಗೆ ಪ್ರತಿಭೆಯನ್ನೂ ತೋರಿದ ಮೊದಲ ನಿರ್ಮಾಪಕನೆಂದರೆ ಇವನೇ.

ಎಮೀಲ್ ರೇನಾಡನ ಪ್ರಾಕ್ಸಿನೋಸ್ಕೋಪ್ ಉಪಕರಣದ ಪರಿಷ್ಕೃತ ರೂಪ

ಚಿತ್ರಗಳ ತಯಾರಿಕೆ ಮಾತ್ರವಲ್ಲ, ಅವುಗಳ ಸಾರ್ವತ್ರಿಕ ಪ್ರದರ್ಶನವೂ ಇವೆರೆಡು ದೇಶಗಳಲ್ಲಿ 1896ರಲ್ಲೇ ಪ್ರಾರಂಭವಾಯಿತು. ಇದಕ್ಕೆ ಸಾಹಸಿಗಳಾದ ಲುಮಿಯೇರ ಸಹೋದರರು ಕಾರಣರಾದರು. ಭಾರತಕ್ಕೂ ಚಲನಚಿತ್ರಗಳ ಮೊದಲ ಪರಿಚಯವನ್ನು ಇವರೇ ಮಾಡಿಕೊಟ್ಟರು. 1896ನೆಯ ಜುಲೈ 13ರಂದು ಇವರ ಸಹಾಯಕರು ಮುಂಬಯಿಯ ವೊಟ್‌ಸನ್ಸ್ ಹೊಟೆಲಿನಲ್ಲಿ ಮೊದಲ ಪ್ರದರ್ಶನವನ್ನೇರ್ಪಡಿಸಿ ಪ್ರೇಕ್ಷಕರನ್ನೆಲ್ಲ ದಂಗುಬಡಿಸಿದರು. ಒಂದೆರಡು ದಿನಕ್ಕೆಂದು ಏರ್ಪಡಿಸಿದ ಪ್ರದರ್ಶನ ಜನರ ಆಗ್ರಹದ ಮೇರೆಗೆ ಏಳೆಂಟು ದಿನಗಳ ವರೆಗೆ ನಡೆಯಬೇಕಾಯಿತು. ಪ್ರದರ್ಶನದಲ್ಲಿ ಮುಖ್ಯವಾಗಿ ಬೆಂಕಿ ಆರಿಸುವ ಯಂತ್ರಗಳ ಓಡಾಟ, ಹರಿವ ನೀರಿನ ಓಟ, ಬಿಸಿಲಿನಲ್ಲಿ ಜನರ ಅಲೆದಾಟ, ರೈಲುಬಂಡಿ ನಿಲ್ದಾಣದಲ್ಲಿ ಬಂದು ನಿಲ್ಲುವುದು ಇತ್ಯಾದಿ ದೃಶ್ಯಗಳಿದ್ದುವು.

ಈ ಪ್ರದರ್ಶನವನ್ನು ಪ್ರತಿದಿನವೂ ತಪ್ಪದೆ ನೋಡುತ್ತಿದ್ದ ಸಾವೆ ದಾದಾ (ಹರಿಶ್ಚಂದ್ರ ಸಖಾರಾಮ ಭಟ್ವಾಡೇಕರ್) ಅದರಿಂದ ವಿಶೇಷವಾಗಿ ಪ್ರಚೋದಿಸಲ್ಪಟ್ಟು, 1897ರಲ್ಲೇ ಲಂಡನ್ನಿನಿಂದ ಒಂದು ಚಲನಚಿತ್ರ ಕ್ಯಾಮರವನ್ನು ತರಿಸಿಕೊಂಡು, ಅದರ ಮೂಲಕ ಜಟ್ಟಿಗಳ ಮಲ್ಲಯುದ್ಧದ ಒಂದು ಚಿತ್ರವನ್ನೂ, ಕೋತಿಗಳ ತರಬೇತು ಎಂಬ ಹಾಸ್ಯಮಯ ಚಿತ್ರವೊಂದನ್ನೂ ತೆಗೆದು, ಸಂಸ್ಕರಣಕ್ಕಾಗಿ ಅವನ್ನು ಲಂಡನ್ನಿಗೆ ಕಳುಹಿಸಿ, ವರ್ಷ ಕೊನೆಯಾಗುವುದರೊಳಗಾಗಿಯೇ ಅವನ್ನು ಭಾರತದಲ್ಲಿ ಪ್ರದರ್ಶಿಸುವ ಸಾಹಸ ಮಾಡಿದರು. ಅಲ್ಲದೆ ಲ್ಯುಮಿಯೇರ್ ಸಹೋದರರು ಒದಗಿಸಬಹುದಾದ ಚಿತ್ರಗಳ ಪ್ರದರ್ಶನ ಕಾರ್ಯವನ್ನೂ ಕೈಗೊಂಡರು. ಮುಂದೆ 1901ರಲ್ಲಿ, ದೇಶದ ಮೊದಲ ಸೀನಿಯರ್ ರ್‍ಯಾಂಗ್ಲರ್ ಆದ ಆರ್. ಪಿ. ಪರಾಂಜಪೆಗೋಸ್ಕರ ಏರ್ಪಡಿಸಿದ ಸತ್ಕಾರ ಸಮಾರಂಭದ ಚಿತ್ರವನ್ನು ತೆಗೆದರು. ಸಾಕ್ಷ್ಯಚಿತ್ರಗಳನ್ನು ತೆಗೆಯುವುದರಲ್ಲಿ ದಾದಾ ಮೊದಲಿಗರಾದರು. ದಾದಾಸಾಹೇಬ ಫಾಲ್ಕೆ ಚಲನಚಿತ್ರ ಕ್ಯಾಮರವನ್ನು ಕೈಯಲ್ಲಿ ಹಿಡಿಯುವ 11 ವರ್ಷಗಳ ಮೊದಲೇ ಇದು ನಡೆದುದು ಎಂಬುದನ್ನು ಮರೆಯಲಾಗದು.



ಲ್ಯುಮ್ಯೇರ್ ಸಹೋದರರಲ್ಲಿ ಕಿರಿಯವನಾದ ಲೂಯಿ ಲ್ಯುಮ್ಯೇರ್. ಚಲನಚಿತ್ರ ಕ್ಯಾಮರ ಮತ್ತು ಪ್ರಕ್ಷೇಪಕಗಳನ್ನು ಸೃಜಿಸುವಲ್ಲಿ ಮಾತ್ರವಲ್ಲದೆ ಮೈಕ್ರೊಸ್ಕೋಪಿಯಲ್ಲೂ ಈತನಿಗೆ ಅಭಿರುಚಿ ಇತ್ತು

ಅಮೆರಿಕದಲ್ಲಿ ಚಲನ ಚಿತ್ರೋದ್ಯಮ 1905ರ ಸುಮಾರಿಗೆ ಪ್ರಾರಂಭವಾಗಿ ರಭಸದಿಂದ ಪ್ರಗತಿ ಹೊಂದಿತು. ಆಗಿನ ಚಿತ್ರಗಳಲ್ಲಿ ಕಥಾವಸ್ತು ವಿಶೇಷವಾಗಿದ್ದಿಲ್ಲ. ಪರದೆಯ ಮೇಲೆ ಬೀಳುವ ಚಿತ್ರಗಳ ಚಲನೆಯೇ ಆಗಿನ ಪ್ರೇಕ್ಷಕರನ್ನು ವಿಸ್ಮಯಗೊಳಿಸುತ್ತಿತ್ತು. ಮೂಲಕಥೆ ಸತ್ತ್ವಹೀನವಾಗಿದ್ದರೂ ನೀರಿನ ಹರಿದಾಟ, ರೈಲುಬಂಡಿಯ ಓಟ, ಜನರ ಹುಚ್ಚುಹುಚ್ಚು ಹಾರಾಟ, ಒಬ್ಬರನ್ನೊಬ್ಬರು ಅಟ್ಟಿಕೊಂಡು ಹೋಗುವುದು, ಹಾಸ್ಯಕ್ಕಾಗಿ ಒಬ್ಬರ ಮೇಲೊಬ್ಬರು ಕಡುಬನ್ನು ಎಸೆಯುವುದು ಇವೇ ಮೊದಲಾದುವು ಪೋಷಕವಾಗಿರುತ್ತಿದ್ದುವು. ಛಾಯಾಚಿತ್ರಗ್ರಹಣ ಬಿಸಿಲಿದ್ದಾಗ ಮಾತ್ರ, ಮಾಡುಗಳಿಲ್ಲದ ದೊಡ್ಡ ಪಡಸಾಲೆಗಳಲ್ಲಾಗಲಿ ಬಯಲು ಪ್ರದೇಶಗಳಲ್ಲಾಗಲಿ ನಡೆಯುತ್ತಿತ್ತು. ಕ್ಯಾಮರದಲ್ಲಿಯೂ ಪ್ರಕ್ಷೇಪಕ ಯಂತ್ರದಲ್ಲಿಯೂ ಚಿತ್ರಪಟಲವನ್ನು ಕೈಯಿಂದಲೇ ತಿರುಗಿಸಬೇಕಾಗಿತ್ತು.

ಅಂದಿನ ಕಾಲದಲ್ಲಿ ರಂಗಭೂಮಿಯ ಪ್ರಭಾವ ಜನತೆಯ ಮೇಲೆ ವಿಶೇಷವಾಗಿದ್ದುದರಿಂದ ರಸಿಕ ಜನರೆಲ್ಲ ಮನೋರಂಜನೆಯ ಈ ನೂತನ ವಿಧಾನವನ್ನು ಬಹು ಹೀನಾಯವಾಗಿ ನೋಡುತ್ತಿದ್ದರು. ಆದರೂ ಚಲನಚಿತ್ರಗಳ ಪ್ರೇಕ್ಷಕರ ಸಂಖ್ಯೆ ದಿನೇದಿನೇ ಹೆಚ್ಚುತ್ತ ಬಂತು. ಚಿತ್ರನಿರ್ಮಾಪಕರು ಕಥೆಗಳಿಗೆ ಹೆಚ್ಚು ಪ್ರಾಧಾನ್ಯ ಕೊಡುತ್ತ ಬಂದು, ಜನತೆಯನ್ನು ಚಲನಚಿತ್ರಗಳತ್ತ ಮತ್ತಷ್ಟು ಆಕರ್ಷಿಸಿದರು. ಕ್ಯಾಮರಾದಲ್ಲಿಯೂ ಪ್ರಕ್ಷೇಪಕದಲ್ಲಿಯೂ (ಪ್ರೊಜೆಕ್ಟರ್) ತಾಂತ್ರಿಕ ಸುಧಾರಣೆಗಳು ತಲೆದೋರಿದವು. ಹೀಗಾಗಿ 1910ರೊಳಗೆ ಚಲನಚಿತ್ರಗಳನ್ನು ಕಡೆಗಾಣಿಸುತ್ತಿದ್ದವರೂ ಅವನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿದರು. ಆಗ ಷಿಕಾಗೋದಲ್ಲಿನ ಎರಡು ದೊಡ್ಡ ಚಲನಚಿತ್ರ ಸಂಸ್ಥೆಗಳು ವಾರಕ್ಕೆ 10ರಂತೆ ಚಿತ್ರಗಳನ್ನು ತಯಾರಿಸುತ್ತಿದ್ದುವು. 1913ರ ಒಳಗೆ ಅಮೆರಿಕದಲ್ಲಿ 30,000ಕ್ಕಿಂತಲೂ ಹೆಚ್ಚಾಗಿ ನಿಕಲೋಡೀಯನ್‌ಗಳು (ಚಲನಚಿತ್ರ ಪ್ರದರ್ಶನಮಂದಿರಗಳು) ಇದ್ದುವು. ಈ ಸುಮಾರಿಗೆ ಅಲ್ಲಿ ಹೆಸರಾಂತ ಚಿತ್ರಗಳು ಯಾವುವೆಂದರೆ ಯೂನಿವರ್ಸಲ್ ಸಂಸ್ಥೆಯ ಟ್ರ್ಯಾಫಿಕ್ ಇನ್‌ಸೋಲ್ಸ್, ವಿಟಾಗ್ರಾಫ್ ಸಂಸ್ಥೆಯ ದಿ ಕ್ರಿಶ್ಚನ್, ಎಕ್ಲರ್ ಸಂಸ್ಥೆಯ ಯೋಧನ ಮಕ್ಕಳು–ಇತ್ಯಾದಿ. ಚಲನಚಿತ್ರ ನಿರ್ಮಾಣಸಂಸ್ಥೆಗಳು ಶ್ರೇಷ್ಠ ಕಥೆಗಾರರನ್ನೂ ಕಾದಂಬರಿಕಾರರನ್ನೂ ಒತ್ತಾಯಪಡಿಸಿ ಅವರಿಂದ ತಮ್ಮ ಚಿತ್ರಗಳಿಗಾಗಿ ಒಳ್ಳೆಯ ಕಥೆಗಳನ್ನು ಬರೆಸಲು ಮೊದಲು ಮಾಡಿದಂದಿನಿಂದ ಚಲನಚಿತ್ರದ ಭವಿಷ್ಯ ಕಳೆಯೇರಿತು.

ಈ ಅವಧಿಯಲ್ಲಿ ಇಂಗ್ಲೆಂಡ್, ಫ್ರಾನ್ಸ್‌ಗಳಲ್ಲದೆ, ಜರ್ಮನಿ, ಇಟಲಿ, ಸ್ವೀಡನ್ ಮೊದಲಾದ ದೇಶಗಳಲ್ಲಿಯೂ ಚಲನಚಿತ್ರ ಉದ್ಯಮ ಸಾಕಷ್ಟು ಬೆಳೆದು, ಅನೇಕ ಉತ್ತಮ ಚಿತ್ರಗಳು ನಿರ್ಮಾಣವಾಗಿದ್ದುವು. ಪ್ರಸಿದ್ಧ ಅಭಿನಯಗಾರ್ತಿ ಸಾರಾಬರ್ನ್‌ಹಾರ್ಟಳು ಅಭಿನಯಿಸಿದ ರಾಣಿ ಎಲಿಜ಼ಬೆತ್ (4 ರೀಲು) ಪ್ರಸಿದ್ಧ ಚಿತ್ರವಾಗಿತ್ತು (1912). ಇದೇ ಸುಮಾರಿಗೆ ಇಟಲಿಯಲ್ಲಿ ತಯಾರಾದ ಕೋ ವಾಡಿಸ್ ಎಂಬ ಚಿತ್ರ (8 ರೀಲುಗಳು) ವಿಶೇಷ ಪ್ರಶಸ್ತಿಯನ್ನು ಪಡೆಯಿತು. ಜರ್ಮನಿಯ ಪಾಲ್ ವೆಗೆನರ್ 1913ರಲ್ಲಿ ಸೃಷ್ಟಿಸಿದ ದಿ ಸ್ಟೂಡೆಂಟ್ ಆಫ್ ಪ್ರಾಗ್ ಎಂಬುದು ಚಲನಚಿತ್ರದಲ್ಲಿ ಕಲೆಯ ಸ್ಥಾನವೇನು ಎಂಬುದನ್ನು ಮೊದಲ ಬಾರಿ ತೋರಿಸಿತು. ದೆಹಲಿಯಲ್ಲಿ ಜರುಗಿದ 5ನೆಯ ಜಾರ್ಜ್ ಅರಸನ ಪಟ್ಟಾಭಿಷೇಕದ ವರ್ಣಚಿತ್ರ (ಇಂಗ್ಲೆಂಡಿನ ತಯಾರಿಕೆ, ಪ್ರದರ್ಶನಕಾಲ 3 ತಾಸು) ಯೂರೋಪಿನಲ್ಲೆಲ್ಲ ಬಹು ಜನಾದರವನ್ನು ಪಡೆಯಿತು.



ತಾಮಸ್ ಆಲ್ವ ಎಡಿಸನನ ಕೈನೆಟೊಸ್ಕೋಪ್ ಪ್ರಕ್ಷೇಪಕ

ಈ ಹಿನ್ನೆಲೆಯಲ್ಲಿಯೇ 1912ರ ಸುಮಾರಿನಲ್ಲಿ ಭಾರತ ಚಲನಚಿತ್ರ ತಯಾರಿಕೆಯ ಉದ್ಯಮವನ್ನು ಶ್ರದ್ಧಾಯುಕ್ತವಾಗಿ ಕೈಗೊಂಡಿತು. ಮುಂಬಯಿ ಪ್ರಾಂತ್ಯದ ದಾದಾಸಾಹೇಬ ಫಾಲ್ಕೆ ಭಾರತದ ಮನೋರಂಜಕ ಚಲನಚಿತ್ರೋದ್ಯಮಕ್ಕೆ ಮೂಲಪುರುಷನೆನ್ನಬಹುದು. ಅವರು ಸಂಸ್ಕೃತ ಪಂಡಿತರೊಬ್ಬರ ಮಗ. ಚಿತ್ರ ಬರೆಯುವ, ಚಿತ್ರ ಕೆತ್ತುವ ಕಲೆಗಳ ನೈಪುಣ್ಯ ಪಡೆದವರು. 1912ರಲ್ಲಿ ನಾಸಿಕದಲ್ಲಿ ಆಡಂಬರವಿಲ್ಲದ ಒಂದು ಚಿಕ್ಕ ಚಲನಚಿತ್ರ ಸ್ಟುಡಿಯೋವನ್ನು ಮಾಡಿಕೊಂಡು, 18 ತಿಂಗಳು ಅವಿಶ್ರಾಂತವಾಗಿ ದುಡಿದು 1913ರಲ್ಲಿ ರಾಜಾ ಹರಿಶ್ಚಂದ್ರ ಚಿತ್ರವನ್ನು ಅವರು ಪ್ರದರ್ಶನಕ್ಕಾಗಿ ಸಿದ್ಧಪಡಿಸಿದರು.

**(B) ಬೆಳವಣಿಗೆ (1914–18)** : ಒಂದನೆಯ ಮಹಾಯುದ್ಧದ ಈ ಕಾಲದಲ್ಲಿ ಚಲನಚಿತ್ರ ಪ್ರಪಂಚದಲ್ಲಿ ಅನೇಕ ಮಹತ್ತ್ವದ ಬದಲಾವಣೆಗಳಾದವು. ಐರೋಪ್ಯ ದೇಶಗಳಲ್ಲೆಲ್ಲ ಯುದ್ಧದ ಅವಾಂತರದಿಂದಾಗಿ ಚಲನಚಿತ್ರ ಉದ್ಯಮ ಹಿಮ್ಮೆಟ್ಟಿತು. ಈ ಸಂದರ್ಭ ಅಮೆರಿಕದ ಚಲನಚಿತ್ರ ಉದ್ಯಮಕ್ಕೆ ಇಡೀ ಪ್ರಪಂಚದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಲು ಅನುಕೂಲವಾಯಿತು. ಚಿತ್ರ ಕಾರ್ಯಕ್ಷೇತ್ರ ಷಿಕಾಗೋದಿಂದ ಕ್ಯಾಲಿಫೋರ್ನಿಯದ ಹಾಲಿವುಡ್ (ನೋಡಿ) ಆಯಿತು. ಅಂದಿನವರೆಗೆ ಇಲ್ಲದ ಒಂದು ಉಲ್ಬಣ ಅಲ್ಲಿ ಕಾಣತೊಡಗಿತು. ತಾರೆಯರು, ನಿರ್ದೇಶಕರು ಪ್ರಾಮುಖ್ಯಕ್ಕೆ ಬಂದರು. ಬಡಕಲಾಗಿದ್ದ ಚಿತ್ರಮಂದಿರಗಳು ಅರಮನೆಗಳಾದವು.

ಪ್ರತಿಭಾವಂತ ಹಾಸ್ಯನಟ ಚಾರ್ಲಿ ಚಾಪ್ಲಿನ್ ಜಗದ್ವಿಖ್ಯಾತಿಯನ್ನು ಪಡೆದದ್ದು ಈ ಅವಧಿಯಲ್ಲೇ, ಫ್ಲೋರ್ ವಾಕರ್, ಟೆಲ್ಲೀಸ್ ಪಂಕ್ಚರ್ಡ್ ರೊಮಾನ್ಸ್ ದಿ ಟ್ರ್ಯಾಂಪ್, ಕಾರ್ಮನ್, ದಿ ಪಾನ್‌ಷಾಪ್ ಷೋಲ್ಡರ್, ಆರಮ್ಸ್–ಇವೇ ಮೊದಲಾದವು ಅವನ ಆಗಿನ

ಪ್ರಸಿದ್ಧ ಚಿತ್ರಗಳು (1918ರ ನಂತರ ಅವರ ದಿ ಗೋಲ್ಡ್‌ರಷ್, ದಿ ಗ್ರೇಟ್ ಡಿಕ್ಟೇಟರ್ ಮೊದಲಾದ ಚಿತ್ರಗಳು ತಯಾರಾದವು). ಆಗ್ಗೆ ಚಿತ್ರಗಳಿಗೆ ಈಗಿರುವಂತೆ ಒಂದು ನಿಶ್ಚಿತವಾದ ಉದ್ದವಿರಲಿಲ್ಲ. ಕಥೆಗನುಸಾರವಾಗಿ ಸಾಮಾನ್ಯವಾಗಿ ಒಂದು ರೀಲಿನಿಂದ ಐದು ರೀಲುಗಳವರೆಗೆ ಅವುಗಳ ಉದ್ದವಿರುತ್ತಿತ್ತು. ಅವುಗಳ ಜತೆಯಲ್ಲಿ ಧಾರಾವಾಹಿ ಚಲನಚಿತ್ರಗಳೂ ಅನುಕ್ರಮ ಭಾಗಗಳಲ್ಲಿ ಪ್ರದರ್ಶಿಸಲ್ಪಡುತ್ತಿದ್ದುವು. ಇವು ಜನತೆಯನ್ನು ವಿಶೇಷವಾಗಿ ಆಕರ್ಷಿಸುತ್ತಿದ್ದುವು. ಇವುಗಳಲ್ಲಿ ಪರ್ಲ್ ಹ್ವೈಟ್ ಅಭಿನಯಿಸಿದ ಪೆರಿಲ್ಸ್ ಆಫ್ ಪಾಲಿನ್ ಎಂಬುದು ವಿಶೇಷ ಪ್ರಸಿದ್ಧಿಪಡೆಯಿತು. ವಿನ್ಸರ್ ಮೆಕೇಯ ಗರ್ಟಿ ಕಾರ್ಟೂನ್ ಚಿತ್ರಗಳೂ ಜಾನಿ ವೀಸ್‌ಮುಲ್ಲರ್ ಅಭಿನಯಿಸಿದ ಮೊದಲಿನ ಟಾರ್ಜಾನ್ (ನೋಡಿ) ಚಿತ್ರವೂ ಮಕ್ಕಳನ್ನೇ ಪಾತ್ರವರ್ಗದಲ್ಲಿ ಕೂಡಿಸಿಕೊಂಡು ತೆಗೆದ ಅವರ್ ಗ್ಯಾಂಗ್ ಕಾಮೆಡೀಸ್ ಎಂಬ ಒಂದೊಂದು ರೀಲಿನ ಹಾಸ್ಯಮಯ ಚಿತ್ರಗಳೂ ಈ ಅವಧಿಯಲ್ಲಿ ಪ್ರಸಿದ್ಧವಾಗಿದ್ದುವು.

ಆದರೆ ಎಲ್ಲಕ್ಕೂ ಮಿಗಿಲಾಗಿ, ಚಲನಚಿತ್ರಕಲೆಯ ದೃಷ್ಟಿಯಿಂದಲೂ ಚಲನಚಿತ್ರಕ್ಕೆ ಆರಿಸುವ ಕಥೆಯ ದೃಷ್ಟಿಯಿಂದಲೂ ಡಿ. ಡಬ್ಲ್ಯು. ಗ್ರಿಫಿತ್(ನೋಡಿ)1915ರಲ್ಲಿ ನಿರ್ದೇಶಿಸಿದ ದಿ ಬರ್ತ್ ಆಫ್ ಎ ನೇಷನ್ ಮತ್ತು 1916ರಲ್ಲಿ ನಿರ್ದೇಶಿಸಿದ ಇನ್‌ಟಾಲರೆನ್ಸ್ ಎಂಬ ಎರಡು ಚಿತ್ರಗಳು ತುಂಬ ಕ್ರಾಂತಿಕಾರಿಯಾದವು. ಈ ಚಿತ್ರಗಳ ಪರಿಣಾಮ ಪ್ರೇಕ್ಷಕರ ಮೇಲೆ ವಿಶೇಷವಾಗಿ ಸಫಲವಾಗುವಂತೆ, ಚಿತ್ರನಿರ್ಮಾಣದಲ್ಲಿ ಅಂದಿನವರೆಗೆ ಯಾರೂ ಸಾಧಿಸದಿರುವ ಎರಡು ಮುಖ್ಯ ಪ್ರಯೋಗಗಳನ್ನು ಗ್ರಿಫಿತ್ ಈ ಚಿತ್ರಗಳಲ್ಲಿ ಪ್ರಥಮತಃ ಕಲ್ಪಿಸಿ ಉಪಯೋಗಿಸಿದ್ದ. ಇವುಗಳಲ್ಲಿ ಒಂದು ಕ್ಲೋಸ್ ಅಪ್ ಪದ್ಧತಿ. ಹತ್ತಿರದಿಂದ ತೆಗೆದ ಛಾಯಾಚಿತ್ರ ತೆರೆಯ ಮೇಲೆ ಬೃಹದಾಕಾರ ಪಡೆಯುವಂತೆ ಮಾಡುವುದು. ಇದರಿಂದ ಪ್ರೇಕ್ಷಕರ ಅವಧಾನ ಚಿತ್ರದ ಯಾವ ವಸ್ತುವಿಗೆ ಹೋಗಬೇಕೋ ಆ ವಸ್ತುವಿಗೇ ಸೆಳೆಯಲ್ಪಟ್ಟು ಚಿತ್ರದಲ್ಲಿನ ರಂಜಕತೆ ಮತ್ತಷ್ಟು ಹೆಚ್ಚುವುದು. ಅಂದಿನಿಂದ ಎಲ್ಲ ಚಿತ್ರಗಳಲ್ಲಿ ಈ ಕ್ಲೋಸ್‌ಅಪ್ ರೀತಿ ಸರ್ವತ್ರವಾಗಿ ರೂಢಿಗೆ ಬಂತು. ಗ್ರಿಫಿತ್‌ನ ಎರಡನೆಯ ಪ್ರಯೋಗ ಯಾವುದೆಂದರೆ, ಚಿತ್ರ ಪ್ರದರ್ಶಿಸುವ ಭಾವನೆಗೆ ಸರಿಯಾಗಿ ಪ್ರೇಕ್ಷಕರಲ್ಲಿ ಕನಿಕರ, ವ್ಯಾಕುಲ, ಉತ್ಸುಕತೆ, ಉದ್ವೇಗ, ಆವೇಶ ಮೊದಲಾದ ರಸಭಾವಗಳನ್ನು ಆದಷ್ಟು ಹೆಚ್ಚಿಸಲು ಚಿತ್ರಸಂಪಾದನೆಯಲ್ಲಿ ಅವರು ಸಾಧಿಸಿದ ಅದ್ಭುತ ಚಾತುರ್ಯ. ಗ್ರಿಫಿತ್ ದಾರಿ ತೋರಿಸಿದ ಈ ಪದ್ಧತಿಯನ್ನೇ ಮುಂದೆ 1925–30ರಲ್ಲಿ ರಷ್ಯದ ಸುಪ್ರಸಿದ್ಧ ಚಿತ್ರನಿರ್ಮಾಪಕರಾದ ಪುಡೊವ್‌ಕಿನ್, ಐಸೆನ್‌ಸ್ಟೈನ್ ಮೊದಲಾದವರು ವಿಶೇಷವಾಗಿ ಬೆಳೆಸಿಕೊಂಡು ಉತ್ಕೃಷ್ಟವಾದ ಕೆಲವು ಚಿತ್ರಗಳನ್ನು ನಿರ್ಮಿಸಿದರು. ಚಿತ್ರಸಂಪಾದನೆಯ ಈ ವಿಶಿಷ್ಟ ರೀತಿಗೆ ಮಾಂಟೇಜ್ ಎಂಬ ಹೆಸರಿದೆ. ಕ್ಯಾಮರದಲ್ಲಿ ತೆಗೆದ ಪ್ರತಿಯೊಂದು ಪ್ರತ್ಯೇಕ ಚಿತ್ರವನ್ನೂ ಬೇರೆ ಬೇರೆಯಾಗಿರಿಸಿ, ಅವುಗಳಲ್ಲಿ ಬೇಕಾದವನ್ನು ಆರಿಸಿ, ಪ್ರದರ್ಶನದಲ್ಲಿ ಆದಷ್ಟು ಹೆಚ್ಚು ಪರಿಣಾಮಕಾರಿ–ಯಾಗುವ ರೀತಿಯಲ್ಲಿ ಅವನ್ನು ಪುನಃ ಜೋಡಿಸುವ ವಿಧಾನವೇ ಇದು.

ಡಿ. ಡಬ್ಲ್ಯು ಗ್ರಿಫಿತ್

ಚಿತ್ರಗಳಲ್ಲಿ ಕಥೆಯನ್ನಾರಿಸುವ ವಿಷಯದಲ್ಲಿಯೂ ಗ್ರಿಫಿತ್ ಇತರರಿಗೆ ಒಂದು ದೊಡ್ಡ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ತನ್ನೆರಡು ಚಿತ್ರಗಳಲ್ಲಿಯೂ ಅವರು ಸಾಮಾಜಿಕ ಪ್ರಶ್ನೆಗಳನ್ನೇ ನಿರೂಪಿಸಿ, ಇಂಥ ಚಿತ್ರಗಳ ರಚನೆಯಲ್ಲಿಯೂ ಮೊದಲಿಗರಾದರು.

ದಾದಾಸಾಹೇಬ ಫಾಲ್ಕೆ ಭಾರತದಲ್ಲಿ 1918ರೊಳಗೆ 23 ಚಿತ್ರಗಳನ್ನು ನಿರ್ಮಿಸಿದರು. ಇವೆಲ್ಲವೂ ಜನರ ಪ್ರೀತಿಯ ಪೌರಾಣಿಕ ಕಥೆಗಳಾಗಿದ್ದುವು. ಶ್ರೀಕೃಷ್ಣಜನ್ಮ, ಭಸ್ಮಾಸುರಮೋಹಿನಿ, ಸತಿ ಸಾವಿತ್ರಿ, ಕಾಳೀಯಮರ್ದನ–ಮೊದಲಾದವು ತುಂಬ ಆದರಣೀಯವಾದುವು. ಇವೆಲ್ಲ ಪುರಾಣಕಥೆಗಳಾದುದರಿಂದ ಇವುಗಳಲ್ಲಿ ಚಮತ್ಕಾರದ ಛಾಯಾಚಿತ್ರಗ್ರಹಣವನ್ನು ಧಾರಾಳವಾಗಿ ಉಪಯೋಗಿಸಲಿಕ್ಕೂ ಫಾಲ್ಕೆಗೆ ಅನುಕೂಲವಾಯಿತು.

ಈ ಚಿತ್ರಗಳ ಯಶಸ್ಸಿನಿಂದಾಗಿ ಹಣವಂತರಲ್ಲಿ ಕೆಲವರು ಧೈರ್ಯದಿಂದ ಮುಂದೆ ಬಂದು ಚಲನಚಿತ್ರ ತಯಾರಿಕೆಯ ಸಂಸ್ಥೆಗಳನ್ನು ಸ್ಥಾಪಿಸುವಂತಾದರು. ಕೊಲ್ಕತದ ಶ್ರೀಮಂತ ಜೆ. ಎಫ್. ಮದನ್ ಒಂದು ಕೋಟಿ ರೂಪಾಯಿ ಬಂಡವಾಳವಿರುವ ಮದನ್ ಥಿಯೇಟರ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ದೇಶದ ಪ್ರಮುಖ ನಗರಗಳಲ್ಲಿ ಚಿತ್ರಮಂದಿರಗಳನ್ನು ಸ್ಥಾಪಿಸಿದುದೂ ಅಲ್ಲದೆ ಈ ಕಂಪನಿ ಮುಂದೆ ಶ್ರೀಲಂಕ, ಬರ್ಮ (ಈಗಿನ ಮಾಯನ್ಮಾರ್), ಮಲಯ, ಸಿಂಗಪುರದವರೆಗೂ ತನ್ನ ಕಾರ್ಯಭಾರವನ್ನು ವಿಸ್ತರಿಸಿತು. ಈ ಕಂಪನಿಯ ಮೊದಲ ಚಿತ್ರ ನಳದಮಯಂತಿ.

ಡಿ. ಡಬ್ಲು. ಗ್ರಿಫಿತ್‌ನ ದಿ ಬರ್ತ್ ಆಫ್ ಎ ನೇಷನ್ (1915) ಎಂಬ ಚಲನಚಿತ್ರದಲ್ಲಿ ಏಬ್ರಹಂ ಲಿಂಕನ್ನನ ಕೊಲೆಯ ದೃಶ್ಯ

ಹೀಗೆ ಈ ಅವಧಿಯಲ್ಲಿ ಸಂಸ್ಕೃತಿ ಮತ್ತು ಕಲೆಯ ದೃಷ್ಟಿಯಿಂದ ದಾದಾಸಾಹೇಬ ಫಾಲ್ಕೆ, ವ್ಯಾಪಾರೀ ದೃಷ್ಟಿಯಿಂದ ಜೆ. ಎಫ್. ಮದನ್ ಇವರು ಭಾರತದಲ್ಲಿ ಚಲನಚಿತ್ರ ಉದ್ಯಮದ ತಳಹದಿಯನ್ನು ಭದ್ರವಾಗಿ ಹಾಕಿದರು.

**(C) ಬೆಳವಣಿಗೆ (1919–29)** : 1920ರ ಒಳಗೆ ಚಲನಚಿತ್ರ ಪ್ರಪಂಚ ಇಡೀಲೋಕದಲ್ಲಿ ಇತರ ಎಲ್ಲ ಮನೋರಂಜನೆಯ ವಿಧಾನಗಳನ್ನು ಹಿಮ್ಮೆಟ್ಟಿಸಿ ಜನರ ಪ್ರೋತ್ಸಾಹದಲ್ಲಿ ಅಗ್ರಗಣ್ಯಸ್ಥಾನವನ್ನು ಪಡೆಯಿತು. ಛಾಯಾಗ್ರಹಣದಲ್ಲಿಯೂ ಛಾಯಾಪ್ರಕ್ಷೇಪಣದಲ್ಲಿಯೂ (ಪ್ರೊಜೆಕ್ಷನ್) ಮತ್ತಷ್ಟು ತಾಂತ್ರಿಕ ಸುಧಾರಣೆಗಳುಂಟಾಗಿ, ಹೊರಬಿದ್ದ ನೂರಾರು ಚಿತ್ರಗಳು ಆ ದೃಷ್ಟಿಯಿಂದಲೂ ಬಹು ಉತ್ತಮವಾದುವು. ಚಲನಚಿತ್ರ ಛಾಯಾಗ್ರಹಣ ಕೂಡ ಒಂದು ಶ್ರೇಷ್ಠಕಲೆಯೆಂದು ಎನ್ನಿಸಿಕೊಂಡುದು ಈ ಅವಧಿಯಲ್ಲಿಯೇ. ಚಿತ್ರಗಳ ದೃಶ್ಯಸಂವಿಧಾನಕಲೆಯೂ ಪ್ರಮುಖ ಸ್ಥಾನವನ್ನು ಪಡೆಯಿತು. ಕಥಾವಸ್ತುಗಳಲ್ಲಿ ಹೆಚ್ಚು ಹೆಚ್ಚಾದ ನಾವೀನ್ಯ ಬಂದು, ಚಿತ್ರಿಸಲ್ಪಡುವ ವಿಷಯಗಳ ಕ್ಷೇತ್ರ ಎಲ್ಲ ದಿಕ್ಕಿಗೂ ವ್ಯಾಪಿಸಿತು. ಅನೇಕ ಪ್ರತಿಭಾವಂತ ಚಿತ್ರನಿರ್ಮಾಪಕರೂ ನಿರ್ದೇಶಕರೂ ಕೂಡಿ ಹೊಸ ಹೊಸ ರೀತಿ, ಕಲ್ಪನೆಗಳಿಂದ ಚಿತ್ರಕಲೆಯ ಬಹುತರವಾದ ಪ್ರಗತಿಯನ್ನು ಸಾಧಿಸಿದರು. ಈ ದಿಶೆ ಅಂತ್ಯಗೊಳ್ಳುವುದರೊಳಗೆ ಪಾಶ್ಚಾತ್ಯ ದೇಶಗಳಲ್ಲಿ ಮೂಕ ಚಿತ್ರಗಳು ಮಾಯವಾಗಿ ವಾಕ್ ಚಿತ್ರಗಳು ತಲೆದೋರಿದುವು.

ಈ ದಿಶೆಯಲ್ಲಿ ಹಾಲಿವುಡ್‌ನಿಂದ, ಎಂದಿನಂತೆ, ಶುಭ್ರವಾದ, ಸುಂದರವಾದ, ಉತ್ತಮ ತಂತ್ರವುಳ್ಳ ಬಹಳ ಆಕರ್ಷಕವಾದ ಚಿತ್ರಗಳು ಒಂದೇ ಸಮನೆ ಹೊರ ಬರಲಾರಂಭಿಸಿದುವು. ಮೆಟ್ರೋ ಗೋಲ್ಡ್‌ವಿನ್–ಮೇಯರ್, ಯುನೈಟೆಡ್ ಆರ್ಟಿಸ್ಟ್ಸ್, ಯೂನಿವರ್ಸಲ್, ಫಸ್ಟ್ ನ್ಯಾಷನಲ್, ವಾರ್ನರ್ ಬ್ರದರ್ಸ್, ಫಾಕ್ಸ್,ಪ್ಯಾರಮೌಂಟ್, ಕೊಲಂಬಿಯ–ಇತ್ಯಾದಿ ಚಿತ್ರಸಂಸ್ಥೆಗಳು ತಮ್ಮತಮ್ಮೊಳಗೆ ತುಂಬ ಪೈಪೋಟಿಯಿಂದ ಕೆಲಸ ಮಾಡಿದುವು. ಕಥೆ ಕಾದಂಬರಿಗಳ ಚಿತ್ರಣಸ್ವಾಮ್ಯಕ್ಕಾಗಿ ಹೇರಳ ಹಣವನ್ನು ಸುರಿದುವು. ಪ್ರತಿಯೊಂದು ಸಂಸ್ಥೆ ತನ್ನದೇ ಆದ, ಜನಪ್ರಿಯ ತಾರಾಗಣ ಸಮೂಹವೊಂದನ್ನು ನಂಬಲಾಗದ ವೇತನದ ಮೇಲೆ ಇಟ್ಟುಕೊಂಡಿತು. ಈ ತಾರಾಗಣದಲ್ಲಿ, ಪ್ರಖ್ಯಾತ ನಟಿ ಗ್ರೀಟಾ ಗಾರ್ಬೊ (ನೋಡಿ) ಎದುರು ನಟಿಸುತ್ತಿದ್ದ ಜಾನ್ ಗಿಲ್ಬರ್ಟ್ ಒಂದು ಕಾಲದಲ್ಲಿ ವಾರಕ್ಕೆ 10,000 ಡಾಲರ್ ವೇತನ ಪಡೆಯುತ್ತಿದ್ದ. ಹಾಲಿವುಡ್ಡಿನ ಇತರ ಕಾರ್ಯಕಲಾಪಗಳೂ ಇದೇ ಅದ್ದೂರಿಯ ರೀತಿಯಲ್ಲಿದ್ದು, ಹಾಲಿವುಡ್ಡೆಂಬುದು ಇಂದ್ರಲೋಕವೊ ಚಂದ್ರಲೋಕವೊ ಎಂಬ ಭ್ರಾಂತಿಯನ್ನು ಲೋಕದಾದ್ಯಂತ ಹುಟ್ಟಿಸಿತು.

ಒಂದನೆಯ ಮಹಾಯುದ್ಧದ ಅನಂತರ ಜರ್ಮನಿ, ರಷ್ಯ, ಫ್ರಾನ್ಸ್ ಮೊದಲಾದ ಐರೋಪ್ಯ ದೇಶಗಳು ಚಲನಚಿತ್ರ ಉದ್ಯಮದಲ್ಲಿ ಪುನಃ ತಲೆಯೆತ್ತಿ ವಿಶಿಷ್ಟ ಯೋಗ್ಯತೆಯುಳ್ಳ ಅನೇಕ ಚಿತ್ರಗಳನ್ನು ನಿರ್ಮಿಸಲಾರಂಭಿಸಿದುವು. ಇದರಿಂದ ಹಾಲಿವುಡ್ಡಿನ ಚಿತ್ರಸಂಸ್ಥೆಗಳು ತಮ್ಮ ಉದ್ಯಮಕ್ಕೆ ಧಕ್ಕೆ ತಗಲಬಹುದೆಂದು ಭೀತಿಗೊಂಡೋ ಇಲ್ಲವೆ ತಮ್ಮ ಚಿತ್ರಗಳು

ಐರೋಪ್ಯ ಚಿತ್ರಗಳಿಗಿಂತ ಮೇಲ್ಮೆಯನ್ನು ಸಾಧಿಸಲೆಂದೊ ಯುರೋಪಿನ ಪ್ರಸಿದ್ಧ ನಿರ್ದೇಶಕರನ್ನೂ ನಟನಟಿಯರನ್ನೂ ವಿಶೇಷ ವೇತನದ ಮೇಲೆ ತಮ್ಮ ಬಳಿ ಬರುವಂತೆ ಮಾಡಿದುವು. ಈ ರೀತಿ ಹಾಲಿವುಡ್ಡಿಗೆ ಆಗಮಿಸುವುದರಲ್ಲಿ ಪ್ರಸಿದ್ಧ ನಿರ್ದೇಶಕರಾಗಿದ್ದ ಪಾಲ್ ಲೆನಿ, ಲೂಯಿಸ್ ಮೈಲ್‌ಸ್ಟೋನ್, ಎರಿಕ್ ಫಾನ್ ಸ್ಟ್ರೋಹೈಮ್, ಅರ್ನ್‌ಸ್ಟ್ ಲ್ಯೂಬಿಚ್ ಮೊದಲಾದವರೂ ಪ್ರಸಿದ್ಧ ನಟನಟಿಯರಲ್ಲಿ ಗ್ರೇಟಾ ಗಾರ್ಬೊ, ಮಾರ್ಲೀನ್ ಡೀಟ್ರಿಕ್, ಕಾನ್ರಾಡ್ ಹೈಟ್, ಎಮಿಲ್ ಜೆನಿಂಗ್ಸ್, ಮೊರಿಸ್ ಷೆವಲ್ಯ–ಮೊದಲಾದವರೂ ಇದ್ದರು.

ಹಾಲಿವುಡ್ಡಿನ ಇವೆಲ್ಲ ಸಾಧನೆಗಳಿಂದಾಗಿ ಈ 10–12 ವರ್ಷಗಳಲ್ಲಿ ಸಾವಿರಕ್ಕೂ ಮೇಲಾಗಿ ಉತ್ತಮ ಚಿತ್ರಗಳು ಹೊರಬಂದವು. ಅವುಗಳಲ್ಲಿ ಮುಖ್ಯವಾದವು ಹೀಗಿವೆ:

**1 ಹಾಸ್ಯಚಿತ್ರಗಳು :** ಹೆರಾಲ್ಡ್ ಲಾಯ್ಡ್‌ನ ಗ್ರ್ಯಾಂಡ್ ಮಾಸ್ ಬಾಯ್, ದಿ ಫ್ರೆಷ್ ಮೆನ್, ಸೇಫ್ಟಿ ಲಾಸ್ಟ್, ಇತ್ಯಾದಿ ಅಚಲ ಮುಖಭಂಗಿಯ ಬಸ್ಟರ್ ಕೀಟನ್, ಕೂಸುಮುಖದ ಎಚ್. ಲ್ಯಾಂಗ್‌ಡನ್ ಮೊದಲಾದವರ ಚಿತ್ರಗಳು. 2. ಚಾರ್ಲಿ ಚಾಪ್ಲಿನ್ನನ ಮಹೋತ್ತರವಾದ ಹಾಸ್ಯಕರುಣರಸಭರಿತ ಚಿತ್ರಗಳು–ದಿ ಕಿಡ್, ದಿ ಪಿಲ್ಗ್ರಿಮ್, ದಿ ಗೋಲ್ಡ್ ರಷ್, ದಿ ಸರ್ಕಸ್–ಇತ್ಯಾದಿ. ಇವುಗಳೆಲ್ಲ ಅವನೇ ಬರೆದು, ಅಭಿನಯಿಸಿ, ನಿರ್ದೇಶಿಸಿದ ಚಿತ್ರಗಳು.



ದಿ ಟೆನ್ ಕಮ್ಯಾಂಡ್‌ಮೆಂಟ್ಸ್‌ನ ಚಿತ್ರೀಕರಣದ ಸಮಯ. ಇಲ್ಲಿ ಅದರ ನಿರ್ಮಾಪಕ–ನಿರ್ದೇಶಕ ಸೆಸಿಲ್ ಬಿ. ಡಿಮಿಲ್–ವಿಸ್ತಾವಿಷನ್ ಕ್ಯಾಮರದೊಂದಿಗೆ. ಸೌಂಡ್‌ಮನ್ ಕ್ಲ್ಯಾರೆನ್ಸ್ ಸೆಲ್ಫ್ ಮತ್ತು ಕ್ಯಾಮರ ಆಪರೇಟರ್ ಪಾಲ್ ಹಿಲ್ ಇವರನ್ನೂ ಕಾಣಬಹುದು

3 ಗ್ರಿಫಿತ್‌ನ ಬ್ರೋಕನ್ ಬ್ಲಾಸಮ್ಸ್, ದಿ ಆರ್ಫನ್ ಆಫ್ ದಿ ಸ್ಟಾರಮ್, 4 ದೃಶ್ಯದೇಖಾವೆಗಳ ಮತ್ತು ವೇಷಭೂಷಣಗಳ ಚಿತ್ರಗಳು–ಡಗ್ಲಾಸ್ ಫೇರ್‌ಬ್ಯಾಂಕ್ಸ್ ಅಭಿನಯಿಸಿದ ದಿ ಮಾರ್ಕ್ ಆಫ್ ಝೋರೊ, ದಿ ಸನ್ ಆಫ್ ಝೋರೊ, ರಾಬಿನ್‌ಹುಡ್, ಥೀಫ್ ಆಫ್ ಬಾಗ್ದಾದ್; ರೇಮನ್ ನೊವಾರೋ ಅಭಿನಯಿಸಿದ ಬೆನ್‌ಹರ್, ಪ್ರಸಿದ್ಧ ನಿರ್ದೇಶಕ ಸಿಸಿಲ್ ಡಿ. ಡಿ ಮಿಲ್ ಅವರ ಟೆನ್ ಕಮ್ಯಾಂಡ್‌ಮೆಂಟ್ಸ್, ದಿ ಕಿಂಗ್ ಆಫ್ ಕಿಂಗ್ಸ್–ಇತ್ಯಾದಿ. 5 ಅರ್ನ್‌ಸ್ಟ್ ಲೂಬಿಚ್ ನಿರ್ದೇಶಿಸಿದ ಮನೋರಂಜನೆಯ ಸರಳ ವಿಡಂಬನೆಯ, ಹರ್ಷಚಿತ್ರಗಳು– ದಿ ಫರ್ಬಿಡನ್ ಪ್ಯಾರಡೈಸ್, ದಿ ಮ್ಯಾರೇಜ್ ಸರ್ಕಲ್, ಲೇಡಿ ವಿಂಡರ್‌ಮಿಯರ್ಸ್ ಫನ್, ದಿ ಸ್ಟೂಡೆಂಟ್ ಪ್ರಿನ್ಸ್– ಇತ್ಯಾದಿ. 6 ವಾಲ್ ಡಿಸ್ನಿಯ ಮಿಕ್ಕಿ ಮೌಸ್ ಮತ್ತು ಇತರ ಚಲನಚಿತ್ರ ಕಾರ್ಟೂನುಗಳು. 7 ಸಾವಿರ ಮುಖದವ ಎನಿಸಿಕೊಂಡ ಲಾನ್ ಚಾನಿ ಅಭಿನಯಿಸಿದ ಫ್ಯಾಂಟಮ್ ಆಫ್ ದಿ ಆಪೆರ, ದಿ ಹಂಚ್‌ಬ್ಯಾಕ್ ಆಫ್ ನಾಟ್ರಡೇಮ್, ಲಾಫ್ ಕ್ಲೌನ್, ಲಾಫ್–ಇತ್ಯಾದಿ. 8 ಜರ್ಮನಿಯ ಪ್ರಸಿದ್ಧ ನಟರಾದ ಎಮಿಲ್ ಜೆನಿಂಗ್ಸ್ ಮತ್ತು ಕಾನ್ರಾಡ್ ಹೈಟ್‌ರ ಚಿತ್ರಗಳು. 9 ಗ್ರೀಟ ಗಾರ್ಬೊ ಮತ್ತು ಜಾನ್ ಗಿಲ್ಬರ್ಟ್ ಕೂಡಿ ಅಭಿನಯಿಸಿದ ಚಿತ್ರಗಳು. 10 ಕಿಂಗ್ ವಿಡೋರ್ ನಿರ್ದೇಶಿಸಿದ ದಿ ಬಿಗ್ ಪರೇಡ್, ಒಂದನೆಯ ಮಹಾಯುದ್ಧವನ್ನು ಕುರಿತು ರಚಿಸಲ್ಪಟ್ಟ ಎಲ್ಲ ಶಬ್ದರಹಿತ ಚಿತ್ರಗಳಲ್ಲಿ ಇದು ಅತ್ಯಂತ ಶ್ರೇಷ್ಠವಾದುದು. ಇದೇ ನಿರ್ದೇಶಕನ ದಿ ಕ್ರೌಡ್. 11 ಎರಿಕ್ ಫಾನ್ ಸ್ಟ್ರೋಹೈಮ್ ನಿರ್ದೇಶಿಸಿದ ಗ್ರೀಡ್ ಮತ್ತು ದಿ ವೆಡಿಂಗ್ ಮಾರ್ಚ್. 12 ಅಮೆರಿಕದಲ್ಲಿನ ದಾಸ್ಯ ಪದ್ಧತಿಯನ್ನು ನಿಲ್ಲಿಸಲು ಪ್ರಚೋದಿಸಿದ ಅಂಕಲ್ ಟಾಮ್ಸ್ ಕ್ಯಾಬಿನ್ ಎಂಬ ಮಹಾಕಾದಂಬರಿಯ ಚಲಚ್ಚಿತ್ರ ರೂಪಾಂತರ. 13 ಹಾಲಿವುಡ್ಡಿನ ವಿಶಿಷ್ಟ ಕೃತಿಗಳಾದ ವೆಸ್ಟರ್ನ್‌ಸ್. 14 ಒಂದೆರಡು ರೀಲಿನ ಲೆಕ್ಕವಿಲ್ಲದಷ್ಟು ಚುಟುಕಚಿತ್ರಗಳು ಇವೆಲ್ಲ ಮನೋರಂಜನೆಯ ಚಿತ್ರಗಳಾಗಿ ಹಾಸ್ಯಪ್ರಧಾನವಾಗಿದ್ದುವು. ಯೂನಿವರ್ಸಲ್ ಸಂಸ್ಥೆಯ ಸೆಂಚುರಿ ಕಾಮಿಕ್ಸ್, ಸ್ನೂಕಮ್ಸ್, ಬಸ್ಟರ್ ಬ್ರೌನ್ ಚಿತ್ರಗಳು ವಿಶೇಷ ಜನಪ್ರಿಯವಾಗಿದ್ದುವು.

1919ರಲ್ಲಿ ಜರ್ಮನಿಯಲ್ಲಿ ಕಾನ್ರಾಡ್ ಹೈಟ ಅವರ ಅದ್ಭುತ ಅಭಿನಯದಿಂದಾಗಿ ರಾಬರ್ಟ್ ವಿಯೆನ ನಿರ್ಮಿಸಿದ ದಿ ಕ್ಯಾಬಿನೆಟ್ ಆಫ್ ಡಾ ಕ್ಯಾಲಿಗಾರಿ ಎಂಬ ಚಲನಚಿತ್ರ ಇಡೀ ಜಗತ್ತನ್ನೇ ಬೆರಗುಗೊಳಿಸಿತು. ಈ ಚಿತ್ರದ ಅನಂತರ ಜರ್ಮನಿಯಲ್ಲಿ ನಿರ್ಮಿತವಾದ ಮುಖ್ಯ ಚಿತ್ರಗಳು ಯಾವುವೆಂದರೆ–ಪಾಲ್ ಲೆನಿಯ ವ್ಯಾಕ್ಸ್ ವರ್ಕ್ಸ್(1924), ಮರ್ನೊನ ದಿ ಲಾಸ್ಟ್ ಲಾಫ್ (1925), ಡೂಪೊಂಟನ ವಾದವಿಲ್ (1925), ಗೆಲೀನನ ದಿ ಸ್ಟೂಡೆಂಟ್ ಆಫ್ ಪ್ರಾಗ್ (1926), ಪೆಬ್ಸ್ಟನ ಸೀಕ್ರೆಟ್ಸ್ ಆಫ್ ದಿ ಸೋಲ್ (1926), ಫ್ರಿಟ್ಸ್ ಲ್ಯಾಂಗ್ ಅವರ ಮೆಟ್ರೋಪೋಲಿಸ್ (1926) ಮೊದಲಾದವು. ಇವೆಲ್ಲವೂ ಜರ್ಮನಿಯ ಪ್ರಸಿದ್ಧ ಚಲನಚಿತ್ರ ಉಫಾದ(UFA) ತಯಾರಿಕೆಗಳು. ಇವುಗಳಲ್ಲಿ ಮಾಂಟೇಜ್ ಪದ್ಧತಿಯ ಉಪಯೋಗ ವಿಶೇಷವಿಲ್ಲದಿದ್ದರೂ ಇವೆಲ್ಲ ಶ್ರೇಷ್ಠ ದೃಶ್ಯಸಂವಿಧಾನ ಕಲೆಯಿಂದಲೂ ಉತ್ತಮ ನಿರ್ದೇಶನದಿಂದಲೂ ನಟವರ್ಗದ ಅತ್ಯುತ್ತಮ ಅಭಿನಯದಿಂದಲೂ ಚಲನಚಿತ್ರ ಪ್ರಪಂಚದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿವೆ.

1919 ರಲ್ಲಿ ರಷ್ಯದ ಹಳೆಯ ರಾಜ್ಯಾಡಳಿತ ಪೂರ್ಣ ಅಳಿದುಹೋಗಿ ಪ್ರಜಾಸ್ವಾಮ್ಯದ ಆಡಳಿತ ಏರ್ಪಡತೊಡಗಿತು. ಹೀಗಾಗಿ 1919ರಲ್ಲೇ ಅಲ್ಲಿ ಚಲಚ್ಚಿತ್ರ ಉದ್ಯಮ ರಾಷ್ಟ್ರೀಯ ಉದ್ಯಮವಾಗಿ ಪರಿವರ್ತಿಸಲ್ಪಟ್ಟಿತು. ರಾಜ್ಯದ ಹೊಸ ಆಡಳಿತ ಪ್ರತಿಭಾವಂತ ನಿರ್ದೇಶಕರಿಗೆಲ್ಲ ಚಲಚ್ಚಿತ್ರ ಕಲೆಯಲ್ಲಿ ಬೇಕಾದಷ್ಟು ಪ್ರಯೋಗಗಳನ್ನು ಮಾಡಿ, ಇಚ್ಛೆಯಂತೆ ವಿಹರಿಸಲು ಪೂರ್ಣ ಸ್ವಾತಂತ್ರ್ಯ ಕೊಟ್ಟಿತು. ಮುಂದಿನ ನಾಲ್ಕೈದು ವರ್ಷ ಅಲ್ಲಿಯ ಚಲಚ್ಚಿತ್ರ ಕಲಾವಿದರು ಕಲೆಯ ನಾನಾ ಬಗೆಯ ಶೋಧನೆಯ ಕೆಲಸದಲ್ಲಿ ಮಗ್ನರಾದರು. ವರ್ಟೋಫ್ ಎಂಬಾತ ಚಲಚ್ಚಿತ್ರ ಕ್ಯಾಮರದ ಹಲವಾರು ದೃಷ್ಟಿಕೋನಗಳ ಪ್ರಯೋಗಮಾಡಿ ನೋಡಿದ. ಕುಲೆಶೋಫ್ ಚಿತ್ರಸಂಪಾದನೆಯ ವಿಧಾನಗಳನ್ನು ಶೋಧನೆ ಮಾಡುತ್ತ, ಗ್ರಿಫಿತ್ ಸೂಚಿಸಿದ ಮಾಂಟೇಜ್ ಪದ್ಧತಿಯನ್ನು ಮುಂದೆ ಸಾಗಿಸಿ ಅದರಿಂದ ಆಶ್ಚರ್ಯಕರವಾದ ಪರಿಣಾಮಗಳನ್ನುಂಟುಮಾಡುವ ಎಷ್ಟೋ ನವೀನ ವಿಧಿವಿಧಾನಗಳನ್ನು ಕಂಡುಹಿಡಿದರು. ಈ ತೆರನ ಮಾಂಟೇಜ್ ವಿಧಾನವೇ ರಷ್ಯದ ಮುಂದಿನ ಎಲ್ಲ ಚಿತ್ರಗಳ ಒಂದು ಪ್ರಮುಖ ವೈಶಿಷ್ಟ್ಯವಾಯಿತು.

ಇಂಥ ವೈಶಿಷ್ಟ್ಯವನ್ನೊಳಗೊಂಡ ರಷ್ಯದ ಮೊದಲ ಪ್ರಮುಖ ಚಿತ್ರವೆಂದರೆ ಸುಪ್ರಸಿದ್ಧ ನಿರ್ದೇಶಕ ಐಸೆನ್‌ಸ್ಟೈನನ ದಿ ಬ್ಯಾಟಲ್‌ಷಿಪ್ ಪೊಟೆಮ್‌ಕಿನ್ (1925). ಇದು ರಷ್ಯದ 1905ರ ಕ್ರಾಂತಿಯ ಒಂದು ಚಿತ್ರ. ಇದರಲ್ಲಿ ಬರುವ ಒಡೆಸ್ಸಾ ಮೆಟ್ಟಿಲು ಶ್ರೇಣಿಯಲ್ಲಿ ನಡೆಯುವ ಆರು ಮಿನಿಟಿನ ದೃಶ್ಯ ಚಲಚ್ಚಿತ್ರ ಚರಿತ್ರೆಯಲ್ಲೇ ಅತ್ಯಂತ ಪರಿಣಾಮಕಾರಿಯಾದ 'ಆರು ಮಿನಿಟುಗಳು' ಎಂದು ಹೆಸರಾಗಿದೆ. ಐಸೆನಸ್ಟೈನರ ಅಕ್ಟೋಬರ್ (1928) ಮತ್ತು ದಿ ಓಲ್ಡ್ ಅಂಡ್ ನ್ಯೂ (1929), ಕೂಡ ಕಲೆಯಲ್ಲಿ ತುಂಬ ಮೇಲ್ಮೆಯನ್ನು ಸಾಧಿಸಿದ ಚಿತ್ರಗಳಾಗಿವೆ.

ರಷ್ಯದ ಮತ್ತೊಬ್ಬ ಪ್ರತಿಭಾಶಾಲಿ ನಿರ್ದೇಶಕ ಪ್ರಖ್ಯಾತ ವಿ. ಐ. ಪುಡೋಕಿನ್. ಇವರ ಮದರ್ (1926), ದಿ ಎಂಡ್ ಆಫ್ ಸೇಂಟ್ ಪೀಟರ್ಸ್‌ಬರ್ಗ್ (1927), ಸ್ಟಾರ್ಮ್ ಓವರ್ ಏಷ್ಯ (1929) ಮೊದಲಾದ ಚಿತ್ರಗಳು ಚಲಚ್ಚಿತ್ರ ಚರಿತ್ರೆಯನ್ನು ನಿರ್ಮಿಸಿವೆ. ಇವರು ಫಿಲ್ಮ್ ಟೆಕ್ನಿಕ್ ಮತ್ತು ಫಿಲ್ಮ್ ಆಕ್ಟಿಂಗ್ ಎಂಬ ಪುಸ್ತಕಗಳನ್ನು ಬರೆದರು. ರಷ್ಯದ ಮೂಲಕ ಚಲಚ್ಚಿತ್ರರಂಗದಲ್ಲಿ ಹೀಗೆಯೇ ಪ್ರಸಿದ್ಧಿ ಪಡೆದ ಇನ್ನಿತರ ನಿರ್ದೇಶಕರೆಂದರೆ ವರ್ಟೋಫ್, ಕುಲೆಶೋಫ್, ಡೊವ್‌ಜೆಂಕೊ, ಟೂರಿನ್, ಅಲೆಕ್ಸಾಂಡ್ರೊಫ್, ಆರ್ಮ್ಲರ್ ಟ್ರೊಬರ್ಗ್ ಮೊದಲಾದವರು.

ಭಾರತದಲ್ಲಿ 1919ರ ಸುಮಾರಿಗೆ ಬಾಬುರಾವ್ ಪೇಯಿಂಟರ್ ಕೊಲ್ಹಾಪುರದಲ್ಲಿ ತಮ್ಮದೇ ಆದ ಮಹಾರಾಷ್ಟ್ರ ಫಿಲ್ಮ್ ಕಂಪನಿಯನ್ನು ಸ್ಥಾಪಿಸಿ, ಸೈರಂಧ್ರಿ, ಸಿಂಹಗಡ (ಶಿವಾಜಿಯ ವೀರಸಾಹಸಗಳ ಚಿತ್ರ), ಸತೀ ಪದ್ಮಿನಿ, ಸಹಕಾರದ ಪಾಶ ಇತ್ಯಾದಿ 16 ಚಿತ್ರಗಳನ್ನು ನಿರ್ಮಿಸಿದ. ಇವೆಲ್ಲ ಶ್ರದ್ಧಾಪೂರ್ವಕ ಕಾರ್ಯನಿರ್ವಹಣೆಯಿಂದಾಗಿ ಉತ್ತಮ ಚಿತ್ರಗಳಾಗಿದ್ದುವು. ಚರಿತ್ರೆಯ ವೀರಸಾಹಸಗಳನ್ನು ಚಿತ್ರಿಸಿದ್ದುದರಿಂದ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಅವು ಕಂಡೂ ಕಾಣದಂತೆ ಬೆಂಬಲವನ್ನು ನೀಡಿದವು. ಉದ್ಯಮದಲ್ಲಿ ಬಾಬುರಾವ್ ಇತರ ಸುಧಾರಣೆಗಳನ್ನೂ ಸಾಧಿಸಿದ: ಕಥೆಯ ಕಾಲಕ್ಕೆ ಒಪ್ಪುವಂತೆ

ಪಾತ್ರಧಾರಿಗಳ ಪೋಷಾಕು ಮತ್ತು ಹಿನ್ನೆಲೆ ದೃಶ್ಯಗಳ ವ್ಯವಸ್ಥೆ, ಬಣ್ಣದ ಪರದೆಗಳ ಬದಲು ಕಟ್ಟಿದ ಆವರಣಗಳ ಉಪಯೋಗ, ಯುದ್ಧ ಮೊದಲಾದ ಜನರ ಗುಂಪಿನ ದೃಶ್ಯಗಳಲ್ಲಿ ನೂರಾರು ಉಪ ಅಭಿನಯಕಾರರ ಉಪಯೋಗ ಇತ್ಯಾದಿ. ಈತನಿಂದ ತರಬೇತು ಪಡೆದ ವಿ.ಶಾಂತಾರಾಮ್, ಬಾಬುರಾವ್ ಪೆಂಡಾರ್‌ಕರ್, ಶೇಕ್‌ಫತೇಲಾಲ್ ಮತ್ತು ದಾಮ್ಲೆ ಇವರು ಮುಂದೆ 1929ರಲ್ಲಿ ದಿ ಪ್ರಭಾತ್ ಫಿಲ್ಮ್ ಕಂಪನಿ ಎಂಬ ಸಂಸ್ಥೆಯನ್ನು ಕೊಲ್ಹಾಪುರದಲ್ಲಿಯೇ ಸ್ಥಾಪಿಸಿ, ಗೋಪಾಲಕೃಷ್ಣ, ಚಂದ್ರಸೇನಾ, ಉದಯಕಾಲ ಮೊದಲಾದ ಉತ್ತಮ ಚಿತ್ರಗಳನ್ನು ನಿರ್ಮಿಸಿದರು.

ಶಿವಾಜಿಯ ಪಾತ್ರದಲ್ಲಿ ಶಾಂತಾರಾಮ್.
ಮೂಕಚಿತ್ರ – ಉದಯಕಾಲ್ (1930)

ಚಲನಚಿತ್ರ ಉದ್ಯಮವು ಮುಂಬಯಿ, ಕೊಲ್ಕತ, ಲಾಹೋರ್ ಮೊದಲಾದ ಶಹರಗಳಿಗೂ ಹರಡಿತು. 1925ರ ಸುಮಾರಿಗೆ ಲಾಹೋರಿನ ದಿ ಗ್ರೇಟ್ ಈಸ್ಟರ್ನ್ ಕಾರ್ಪೋರೇಷನ್ ಸಂಸ್ಥೆ ಜರ್ಮನಿಯ ಎಮೆಲ್ಕಾ ಫಿಲ್ಮ್ ಕಂಪನಿಯ ಸಹಾಯದಿಂದ ಲೈಟ್ ಆಫ್ ಏಷ್ಯ ಎಂಬ ಚಿತ್ರವನ್ನು ನಿರ್ಮಿಸಿತು. ಇದು ಎಡ್ವಿನ್ ಆರ್ನಲ್ಡರ ಪ್ರಖ್ಯಾತ ಕವಿತೆಯನ್ನು ಆಧರಿಸಿಕೊಂಡು ಬುದ್ಧನ ಜೀವನವನ್ನು ಚಿತ್ರಿಸುತ್ತದೆ. ಈ ಚಿತ್ರ 10 ವಾರ ಲಂಡನ್ನಿನಲ್ಲಿ ಪ್ರದರ್ಶಿಸಲ್ಪಟ್ಟು, ಆ ವರ್ಷದ ಚಿತ್ರಗಳಲ್ಲಿ ಅತ್ಯುತ್ತಮವಾದುದೆಂದು ಚಿತ್ರವಿಮರ್ಶಕರಿಂದ ಪ್ರಶಸ್ತಿ ಪಡೆಯಿತು. ಈ ಚಿತ್ರದಲ್ಲಿ ಹಿಮಾಂಶುರಾಯ್ ಸಹನಿರ್ದೇಶಕರಾಗಿ ಬುದ್ಧನ ಪಾತ್ರವನ್ನು ವಹಿಸಿದ್ದರು.

ಆದರೆ ಇಷ್ಟರೊಳಗೆ ಸ್ಥಾಪಿತವಾದ ಅನೇಕ ವ್ಯಾಪಾರೀ ಸಂಸ್ಥೆಗಳು ಭಾರತೀಯ ಚಲಚ್ಚಿತ್ರೋದ್ಯಮದಲ್ಲಿ ಸಾಧಿಸಲ್ಪಟ್ಟ ಈ ಸುಧಾರಣೆಗಳನ್ನೆಲ್ಲ ಅಲಕ್ಷಿಸಿ, ಶೀಘ್ರ ಲಾಭಗಳಿಕೆ ಮತ್ತು ಕೈಗೆ ಎಟಕಿದ ಘಟಕಾಂಶಗಳ ತ್ವರಿತ ಬಳಕೆ ಇವೇ ಮೊದಲಾದ ಮಾರ್ಗಗಳಿಂದ ಜನತೆಯ ಮೇಲೆ ಯಾವ ಉಚ್ಚ ಪರಿಣಾಮವನ್ನೂ ಮಾಡದೆ ಹೋದುವು.

ಇಂಥ ಸನ್ನಿವೇಶದಲ್ಲಿಯೂ ಪ್ರಸಿದ್ಧ ಬರೆಹಗಾರರ ಕತೆಗಳನ್ನು ಚಿತ್ರಿಸಲು ಯತ್ನ ಮತ್ತು ಭಾರತೀಯ ಜೀವನದಲ್ಲಿನ ವಿಷಯಗಳನ್ನು ಪ್ರತಿಪಾದಿಸಲು ಆತುರ, ಇವುಗಳ ಫಲವಾಗಿ ರವೀಂದ್ರನಾಥ ಠಾಕೂರರ ಕತೆಯೊಂದರ ಆಧಾರದ ಮೇಲೆ ಬಲಿದಾನ, ಹಾಗೆಯೇ ಶರತ್‌ಚಂದ್ರ ಚಟರ್ಜಿಯವರ ಕತೆಯೊಂದರ ಆಧಾರದ ಮೇಲೆ ಅಂಧಾರೆ ಆಲೋ ಮೊದಲಾದ ಉತ್ತಮ ಚಿತ್ರಗಳು ನಿರ್ಮಿತವಾದವು.

1926ರಲ್ಲಿ ಕೊಲ್ಕತದಲ್ಲಿ ಧೀರೇಂದ್ರನಾಥ ಗಂಗೋಪಾಧ್ಯಾಯ 'ಇಂಗ್ಲೆಂಡ್ ರಿಟರ್ನ್ಡ್' ಎಂಬ ಉತ್ತಮ ಚಿತ್ರವೊಂದನ್ನು ನಿರ್ಮಿಸಿದರು. 1928ರೊಳಗೆ ಮಹಾತ್ಮ ಗಾಂಧೀಜಿಯವರ ಉಪದೇಶಗಳು ದೇಶದಲ್ಲೆಲ್ಲ ವ್ಯಾಪಿಸಿದ್ದವು. ಮುಖ್ಯವಾಗಿ ಹಿಂದೂ ಮುಸ್ಲಿಮರ ಬಾಂಧವ್ಯಕ್ಕಾಗಿ ಅವರು ಆಗ್ಗೆ ಅಸಾಧಾರಣವಾಗಿ ಶ್ರಮಪಡುತ್ತಿದ್ದರು. ಈ ವಿಷಯವನ್ನೇ ಮುಂಬಯಿಯ ಇಂಪೀರಿಯಲ್ ಫಿಲ್ಮ್ ಕಂಪನಿ ಧೈರ್ಯದಿಂದ ಆರಿಸಿ, ಕ್ರೋಧ್ ಎಂಬ ಚಿತ್ರವನ್ನೂ ಪ್ರಭಾತ್ ಸಂಸ್ಥೆ ಅದೇ ಸುಮಾರಿಗೆ ಸ್ವರಾಜ್ಯದ ತೋರಣ್ ಎಂಬ ಚಿತ್ರವನ್ನೂ ನಿರ್ಮಿಸಿದುವು.

ಇದೇ ಅವಧಿಯಲ್ಲಿ ಮೋಹನ ಭವನಾನಿ ಪ್ರಖ್ಯಾತ ಸಂಸ್ಕೃತ ನಾಟಕ ಮೃಚ್ಛಕಟಿಕವನ್ನು ವಸಂತಸೇನಾ ಎಂಬ ಹೆಸರಿನಲ್ಲಿ ಉತ್ತಮ ಚಿತ್ರವನ್ನಾಗಿ ನಿರ್ಮಿಸಿದರು. ಇದರಲ್ಲಿ ಪ್ರಸಿದ್ಧ ಕನ್ನಡ ನಾಟಕಕಾರ ಟಿ. ಪಿ. ಕೈಲಾಸಂ ಸಂಸ್ಥಾನಕನ ಪಾತ್ರದಲ್ಲಿ ಶ್ರೇಷ್ಠ ಅಭಿನಯ ನೀಡಿದರು. ಚಿತ್ರ ಯೂರೋಪಿನಲ್ಲಿ ಅನೇಕ ಕಡೆ ಪ್ರದರ್ಶಿಸಲ್ಪಟ್ಟು, ಫ್ರಾನ್ಸಿನಲ್ಲಿಯೂ ಜರ್ಮನಿಯಲ್ಲಿಯೂ ತುಂಬ ಜನಾದರಣೆಯನ್ನು ಪಡೆಯಿತು.

**(D) ವಾಕ್ ಚಿತ್ರಗಳು** : 1930ರಿಂದ 1940ರ ವರೆಗೆ : 1923ರ ಆದಿಯಲ್ಲೇ ಲಿ. ಡಿ. ಫಾರೆಸ್ಟ್ ಎಂಬ ವಿಜ್ಞಾನಿ, ಚಲಚ್ಚಿತ್ರಪಟಲದಲ್ಲಿ ಶಬ್ದಜೋಡಣೆಯ ವಿಧಾನದ ಮೂಲಕ ಮೂಕ ಹಾಲಿವುಡ್ ಇನ್ನು ಹೇಗೆ ಮಾತಾಡಲು ಪ್ರಾರಂಭಿಸಬಹುದೆಂಬುದನ್ನು ಪ್ರತ್ಯಕ್ಷ ಪ್ರಯೋಗದಿಂದ ತೋರಿಸಿಕೊಟ್ಟರು. ಮುಂದಿನ ಎರಡು ವರ್ಷಗಳಲ್ಲಿ ಈ ಪ್ರಯೋಗವನ್ನು ದೋಷರಹಿತವಾಗುವಂತೆ ಸಂಸ್ಕರಿಸಲಾಯಿತು.

ಹಾಲಿವುಡ್‌ನ ವಾರ್ನರ್ ಸಹೋದರರು ಈ ಅದ್ಭುತ ಪ್ರಯೋಗದಿಂದ ವಿಟಾಫೋನ್ ಕಂಪನಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಈ ಪ್ರಯೋಗದ ಸ್ವಾಮ್ಯವನ್ನು ಪಡೆದ ವೆಸ್ಟರ್ನ್ ಎಲೆಕ್ಟ್ರಿಕ್ ಸಂಸ್ಥೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡು, 1926ರ ಆಗಸ್ಟ್ 6ರಂದು ತಮ್ಮ ಮೊದಲ ವಾಕ್‌ಚಿತ್ರ ಪ್ರದರ್ಶನವನ್ನು ನಡೆಸಿದರು. ಅದರಲ್ಲಿ ಜಾನ್ ಬ್ಯಾರಿಮೋರನ ಡಾನ್‌ವಾನ್ ಚಿತ್ರವಲ್ಲದೆ ಅನೇಕ ಸಂಗೀತ ದೃಶ್ಯಗಳೂ ಇದ್ದುವು. ಪ್ರದರ್ಶನ ಪ್ರೇಕ್ಷಕರಲ್ಲಿ ವಿಪರೀತ ಉತ್ಸಾಹವನ್ನುಂಟುಮಾಡಿತು.

ಮುಂದಿನ ಎರಡು ವರ್ಷ, ಹಾಲಿವುಡ್ ಮೂಕಚಿತ್ರಗಳನ್ನು ಬಿಡಲಾರದೆ, ವಾಕ್‌ಚಿತ್ರಗಳನ್ನು ಅಲಕ್ಷಿಸಲಾರದೆ, ಒಂದು ವಿಶೇಷ ಗೊಂದಲದಲ್ಲಿ ಸಿಕ್ಕಿಕೊಂಡಿತು. ಕಟ್ಟಕಡೆಗೆ ಪ್ರಗತಿಯ ಒತ್ತಡವನ್ನು ತಡೆಯಲಾರದೆ, 1929 ಮುಗಿಯುವುದರೊಳಗೆ ಮೂಕ ಹಾಲಿವುಡ್‌ಗೆ ಪೂರ್ಣ ಮಾತು ಬಂದು, ವಾಕ್‌ಚಿತ್ರಗಳ ತಯಾರಿಕೆಯಲ್ಲಿಯೇ ಅದು ಪೂರ್ಣ ನಿರತವಾಯಿತು.

ಇದರ ಪರಿಣಾಮವಾಗಿ ಮೂಕಚಿತ್ರಗಳ ಪ್ರಥಮ ಶ್ರೇಣಿಯ ಅನೇಕ ನಟನಟಿಯರು ಭಾಷೆಯ ಪರಿಚಯವಿಲ್ಲದೆ, ಇಲ್ಲವೆ ಮಾತಿನ ಸ್ಪಷ್ಟತೆಯಿಲ್ಲದೆ, ಇಲ್ಲವೆ ಮಾತಿನ ಸ್ವರ ಮೈಕಿಗೆ ಯೋಗ್ಯವಾಗದೆ ಚಲಚ್ಚಿತ್ರರಂಗದಿಂದ ಅದೃಶ್ಯರಾದರು. ಇಂಥವರಲ್ಲಿ ಹೆರಾಲ್ಡ್ ಲಾಯ್ಡ್, ಬಸ್ಟರ್ ಕೀಟನ್, ಜಾನ್ ಗಿಲ್ಬರ್ಟ್, ಗ್ಲೋರಿಯಾ ಸ್ವೋನ್‌ಸನ್, ಗ್ರೀಟಾ ಗಾರ್ಬೊ(ಒಂದೆರಡು ಚಿತ್ರಗಳ ಅನಂತರ), ಲೋರಾ ಲಾ ಪ್ಲಾಂಟ, ಸಾವಿರ ಮುಖಗಳ ಲಾನ್ ಚಾನಿ (ನಾನು ಸಾವಿರ ಮುಖಗಳನ್ನು ಧರಿಸಬಲ್ಲೆ, ಆದರೆ ಸ್ವರಗಳಿಂದ ಮಾತನಾಡಲಾರೆ) ಮೊದಲಾದವರಿದ್ದರು. ಚಿತ್ರಗಳಿಗೆ ಸೇರುವ ಮೊದಲೇ ನಾಟಕರಂಗದಲ್ಲಿ ಅಲ್ಪಸ್ವಲ್ಪ ಅನುಭವವಿದ್ದವರು ಮಾತ್ರ ವಾಕ್‌ಚಿತ್ರಗಳ ನಟವರ್ಗದಲ್ಲಿ ಉಳಿದರು. ಚಾರ್ಲಿ ಚಾಪ್ಲಿನ್‌ನ ವೈಶಿಷ್ಟ್ಯ ಮೂಕ ನಟನೆಯ ಕಲೆಯೇ ಆಗಿದ್ದುದರಿಂದ ಅವರ ಶಬ್ದಚಿತ್ರಗಳ ಆಗಮನವನ್ನು ಮೆಚ್ಚಲಿಲ್ಲ. ಆದರೆ ತಮ್ಮ ಅದ್ಭುತ ಪ್ರತಿಭೆಯಿಂದಾಗಿ ಮುಂದೆ ಶಬ್ದವನ್ನೂ ತಮ್ಮ ಕಲೆಗೆ, ಒಂದಿಷ್ಟೂ ಚ್ಯುತಿಯಿಲ್ಲದಂತೆ ಬಳಸಲು ಶಕ್ತರಾದರು.

ಮೂಕಚಿತ್ರ ನಾಟಕವನ್ನು ಮೆಟ್ಟಿತ್ತು. ಈಗ ಶಬ್ದಚಿತ್ರ ತನ್ನ ಯಶಸ್ವಿಗಾಗಿ ನಾಟಕ ರಂಗವನ್ನೇ ಮರೆಹೊಗಬೇಕಾಯಿತು. ನಾಟಕರಂಗದ ಅಭಿನಯಕಾರರೇ ಅದರ ಯಶಸ್ಸನ್ನು ಕಾಪಾಡಬೇಕಾಯಿತು. ನಾಟಕರಂಗದ ನಾಟಕಗಳೇ ಅದರ ಆಹಾರವಾಗಬೇಕಾಯಿತು. ಇದರಿಂದ ಚಲಚ್ಚಿತ್ರ ಕಲೆಗೆ ಮೊದಮೊದಲು ವಿಶೇಷ ಕೆಡುಕೇ ಉಂಟಾಯಿತು. ಚಲಚ್ಚಿತ್ರಗಳಲ್ಲಿ ಚಲನ ಮಾಯವಾಗಿ ಅವು ಬರೀ ರಂಗಭೂಮಿಯ ನಾಟಕಗಳ ಪ್ರತೀಕಗಳಾದವು. ಹೀಗಾಗದಂತೆ ಅಲ್ಲಿಯ ಕೆಲವು ನಿರ್ದೇಶಕರಾದರೂ ಪ್ರಯಾಸಪಟ್ಟು ವಾಕ್‌ಚಿತ್ರ ರಂಗಭೂಮಿಯ ನಾಟಕವಾಗದೆ ಚಲಚ್ಚಿತ್ರ ನಾಟಕವಾಗಲು ದುಡಿದರು.

ಚಿತ್ರಗಳಿಗೆ ಶಬ್ದದ ಜೋಡಣೆ ಬಂದೊಡನೆ ಸಂಗೀತವೂ ಒಂದೇ ಸಮನೆ ರಭಸದಿಂದ ಅವುಗಳಲ್ಲಿ ಸೇರುವಂತಾಯಿತು. ಪ್ರತಿ ಚಿತ್ರದಲ್ಲಿ ಹಾಡುಗಳನ್ನು ಅವಶ್ಯವಾಗಿ ಸೇರಿಸಬೇಕಾಗಿ ಬಂತು. ಸಂಗೀತಪ್ರಧಾನವಾದ ವಿಷಯಗಳಲ್ಲಿ ಮಾತ್ರ ಅವು ಸಹಜವಾಗಿ ವಿಶೇಷವಾಗಿದ್ದವು. ಇಲ್ಲಿಯೂ ಹದವಿತ್ತು. ಚಿತ್ರಗಳಲ್ಲಿನ ನಾಲ್ಕೈದು ಹಾಡುಗಳೂ ಕ್ರಮೇಣ ಕಡಿಮೆಯಾಗುತ್ತ ಬಂದು, ಸ್ವಲ್ಪ ಸಮಯ ಥೀಮ್‌ಸಾಂಗ್ ಅಥವಾ ವಿಷಯವನ್ನು ಸಂಕೇತವಾಗಿ ಸೂಚಿಸುವ ಹಾಡು ಮಾತ್ರ ಉಳಿಯಿತು. ಇದೂ ಸ್ವಲ್ಪ ಸಮಯದಲ್ಲೇ ಮಾಯವಾಗಿ, ಚಿತ್ರ ಪ್ರಚೋದಿಸುತ್ತಿರುವ ಭಾವಗಳಿಗೆ ರಸಪುಷ್ಟಿ ಕೊಡುವಂತೆ ಮಾತ್ರ ಸಂಗೀತದ ಪ್ರಯೋಗ ಪ್ರಚಾರಕ್ಕೆ ಬಂತು–ಅಂದರೆ, ಸಂಗೀತ ಹಿನ್ನೆಲೆಯಲ್ಲಿ ಮಾತ್ರ ಉಳಿಯಿತು. ಸಹಜವಾಗಿ ಹೀಗೆ ಆಗಬೇಕಾದುದೇ; ಏಕೆಂದರೆ ಚಲಚ್ಚಿತ್ರ ಪ್ರಥಮತಃ ದೃಶ್ಯಕಲೆಯೇ.

ಈ ದಿಶೆಯ 10 ವರ್ಷಗಳಲ್ಲಿ ಹಾಲಿವುಡ್ 2,000ಕ್ಕೂ ಮೀರಿದ ಚಿತ್ರಗಳನ್ನು ನಿರ್ಮಿಸಿರಬಹುದು. ಅವುಗಳಲ್ಲಿ 1,000 ಚಿತ್ರಗಳಾದರೂ ತುಂಬ ಜನಾದರಣೆಯನ್ನು ಪಡೆದಿದ್ದಿರಬೇಕು. ನೂರಿನ್ನೂರು ಆದರೂ ಪ್ರಥಮ ಶ್ರೇಣಿಯ ಚಿತ್ರಗಳಾಗಿದ್ದಿರಬೇಕು. ಇವುಗಳ ವಿಷಯ ಸ್ಥೂಲವಾಗಿ ಕೂಡ ಇಲ್ಲಿ ಹೇಳುವುದು ಕಷ್ಟ. ಮುಖ್ಯವಾಗಿ ಶಬ್ದ ಬಂದ ಅನಂತರ, ಹಾಲಿವುಡ್ಡಿನ ಚಿತ್ರಗಳು ಹೆಚ್ಚುಹೆಚ್ಚಾಗಿ ಸಾಮಾಜಿಕವಾಗಿದ್ದು ಜೀವನದ ಎಲ್ಲ ಅಂತಸ್ತುಗಳನ್ನೂ ಬಹುತರವಾಗಿ ಚಿತ್ರಿಸಲು ಪ್ರಯತ್ನಿಸಿದವು. ಈ ಚಿತ್ರಗಳ ಬಹುಮುಖತೆ ಅವುಗಳ ಹೆಸರುಗಳಿಂದಲಾದರೂ ವಿದಿತವಾಗಲಿ ಎಂದು ಕೆಲವೇ ಪ್ರಮುಖ ಚಿತ್ರಗಳ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ.

ಲೂಯಿಸ್ ಮೈಲ್‌ಸ್ಟೋನ್ ಅವರ ಆಲ್ ಕ್ವಯಟ್ ಆನ್ ದಿ ವೆಸ್ಟರ್ನ್ ಫ್ರಂಟ್ (1930ರಲ್ಲಿ ಹೊರಬಂದ ಈ ಅಮೋಘ ಚಿತ್ರ ಇಂದಿಗೂ ಯುದ್ಧಚಿತ್ರಗಳಲ್ಲೆಲ್ಲ ಅತಿ ಶ್ರೇಷ್ಠಚಿತ್ರವೆಂದು ಪರಿಗಣಿಸಲ್ಪಟ್ಟಿದೆ). ಅವರದೇ ಆದ ಫ್ರಂಟ್ ಪೇಜ್ (1931) ಮತ್ತು ಆಫ್ ಮೈಸ್ ಅಂಡ್ ಮೆನ್ (1940), ವೆಸ್ಲಿ ರಗ್ಗಲ್ಸರ ಸಿಮರನ್ (1930). ಚಾರ್ಲಿ ಚಾಪ್ಲಿನ್ನರ ಸಿಟಿ ಲೈಟ್ಸ್ (1931), ಮಾಡರ್ನ್ ಟೈಮ್ಸ್ (1936) ಮತ್ತು ದಿ ಗ್ರೇಟ್ ಡಿಕ್ಟೇಟರ್ (1940), ಅರ್ನಸ್ಟ್ ಲೂಬಿಚ್‌ರ ಲವ್ ಪೆರೇಡ್ (1930), ವನ್ ಅವರ್ ವಿದ್

ಯೊ (1932), ಟ್ರಬಲ್ ಇನ್ ಪ್ಯಾರಡೈಸ್ (1932) ಮತ್ತು ದಿ ಮೆರಿ ವಿಡೊ (1934), (ಇವೆಲ್ಲ ಕೆಲವು ಜೀವನರೀತಿಗಳ ಲಘು ವಿಮರ್ಶೆಗಳಾಗಿದ್ದು ಹರ್ಷದಾಯಕ ಚಿತ್ರಗಳಾಗಿವೆ). ಗ್ರೆಗರಿ ಲಾ ಕಾವಾ ಅವರ ಗೇಬ್ರಿಯಲ್ ಓವರ್ ದಿ ಹ್ವೈಟ್ ಹೌಸ್ (1932). ಮರ್ವಿನ್ ಲ ರಾಯ್ ಅವರ ಐ ಆ್ಯಮ್ ಎ ಫ್ಯೂಜಿಟಿವ್ ಫ್ರಮ್ ಎ ಚೇನ್ ಗ್ಯಾಂಗ್ (1932). ರೊಬೆನ್ ಮೆಮೌಲಿಯನ್ ಅವರ ಡಾಕ್ಟರ್ ಜೆಕಿಲ್ ಅಂಡ್ ಮಿಸ್ಟರ್ ಹೈಡ್ (1933). ಫ್ರಾಂಕ್ ಕಾಪ್ರಾ ಅವರ ಲೇಡಿ ಫಾರ್ ಎ ಡೇ (1933), ಇಟ್ ಹ್ಯಾಪನ್ಡ್ ಒನ್ ನೈಟ್ (1934), ಮಿಸ್ಟರ್ ಡೀಡ್ಸ್ ಗೋಸ್ ಟು ಟೌನ್ (1936) ಮತ್ತು ಲಾಸ್ಟ್ ಹೊರೈಸನ್ (1937). ಸಿಸಿಲ್ ಡಿ ಮಿಲ್ಸ್‌ನ ಸೈನ್ ಆಫ್ ದಿ ಕ್ರಾಸ್ (1932) ಮತ್ತು ದಿ ಪ್ಲೇನ್ಸ್‌ಮನ್ (1937), ಮೈಕೆಲ್ ಕರ್ಟಿಸ್ ಅವರ ಬ್ಲ್ಯಾಕ್ ಫ್ಯೂರಿ (1935). ವಿಲಿಯಂ ಡಿಯೆಟರ್ಲನ ಲ್ಯೂಯಿ ಪಾಸ್ಚರ್ (1936). ಮತ್ತು ಎಮಲಿ ಜ಼ೋಲ (1937). ಫ್ರಿಟ್ಸ್ ಲ್ಯಾಂಗನ ಫ್ಯೂರಿ (1936). ಸಿಡ್ನಿ ಫ್ರಾಂಕ್ಲಿನ್ನನ ಗುಡ್ ಅರ್ತ್ (1937). ಎರಿಕ್ ಫಾನ್ ಸ್ಟ್ರೊಹಿಮನ ಗ್ರೀಡ್ (1923), ಕಿಂಗ್ ವಿಡೋರನ ಅವರ್ ಡೇಲಿ ಬ್ರೆಡ್ (1934) ಮತ್ತು ದಿ ಸಿಟಡಲ್ (1938). ಮಾರ್ಕ್ಸ್ ಸಹೋದರರ ನೈಟ್ ಎಟ್ ದಿ ಆಪೇರ (1936) ಮತ್ತು ರೂಮ್ ಸರ್ವಿಸ್ (1938). ವಾಲ್ಟ್ ಡಿಸ್ನೆಯ ಸ್ನೊ ವೈಟ್ ಅಂಡ್ ದಿ ಸೆವೆನ್ ಡ್ವಾರ್ಫ್ಸ್ (1938) ಮತ್ತು ಪಿನೋಕಿಯೊ (1940). ಈ ನಿರ್ದೇಶಕರಲ್ಲಿ ಹಲವರು ಮೂಕಚಿತ್ರಗಳ ಕಾಲದಲ್ಲಿ ವಿಶೇಷ ಪ್ರಸಿದ್ಧಿ ಪಡೆದವರಾಗಿದ್ದರು.

ಅಮೆರಿಕದ ಯುನಿವರ್ಸಲ್ ಕಂಪನಿಯ ಮೆಲಡಿ ಆಫ್ ಲವ್ ಎಂಬ ಚಿತ್ರ ಮೊದಲ ವಾಕ್‌ಚಿತ್ರವಾಗಿ ಭಾರತದಲ್ಲಿ 1929ರಲ್ಲಿ ಪ್ರದರ್ಶಿಸಲ್ಪಟ್ಟಿತ್ತು. ಭಾರತದಲ್ಲಿ ಮೊದಲು ಚಿತ್ರಕ್ಕೆ ಶಬ್ದ ಜೋಡಿಸಿದ್ದು ಕೊಲ್ಕತದ ಮದನ್ ಥಿಯೇಟರ್ಸ್ ಅವರು. 1931ನೆಯ ಫೆಬ್ರುವರಿ 4ರಂದು ಈ ಸಂಸ್ಥೆ ಮುಂಬಯಿಯ ಎಂಪೈರ್ ಸಿನೆಮ ಮಂದಿರದಲ್ಲಿ ಎರಡು ಚಿಕ್ಕ ಶಬ್ದಚಿತ್ರಗಳನ್ನು ಪ್ರದರ್ಶಿಸಿತು. ಇವುಗಳಲ್ಲಿ ಪ್ರಸಿದ್ಧ ಗಾಯಕಿ ಮುನ್ನಿಬಾಯಿ ಹಾಡಿದ ಅಪ್ನಾ ಮೌಲಾ ಕಿ ಜಗನ್ ಬನಿ ಎಂಬ ಹಾಡೂ ಮಾಸ್ಟರ್ ಮೋಹನ್, ಮಾಸ್ಟರ್ ನಿಸ್ಸಾರ್ ಮೊದಲಾದವರು ಹಾಡಿದ ಹಾಡುಗಳೂ ಇದ್ದುವು. ಅಲ್ಲದೆ ಕೆಲವು ನೃತ್ಯಗಳು, ನಾಟಕ ದೃಶ್ಯಗಳು. ತಬಲವಾದನ, ಸಿತಾರ್‌ವಾದನ ಮೊದಲಾದುವೂ ಇದ್ದುವು.

ಆದರೆ ಭಾರತದಲ್ಲಿ ಪೂರ್ಣ ಉದ್ದದ ವಾಕ್‌ಚಿತ್ರವನ್ನು ಮೊದಲು ತಯಾರಿಸಿ ಪ್ರದರ್ಶಿಸಿದ ಪ್ರಶಸ್ತಿ ಮುಂಬಯಿಯ ಇಂಪೀರಿಯಲ್ ಫಿಲ್ಮ್ ಸಂಸ್ಥೆಗೆ ಸೇರುತ್ತದೆ. ಈ ಸಂಸ್ಥೆ 1931ರ ಮಾರ್ಚ್ 14ರಂದು ವೆಸ್ಟರ್ನ್ ಎಲೆಕ್ಟ್ರಿಕ್ ಸೌಂಡ್ ಸಿಸ್ಟಮನ್ನು ಉಪಯೋಗಿಸಿ ತಯಾರಿಸಿದ ತನ್ನ ಮೊದಲ ವಾಕ್‌ಚಿತ್ರವಾದ ಆಲಂ ಆರಾವನ್ನು ಮುಂಬಯಿಯ ಮೆಜಸ್ಟಿಕ್ ಸಿನೆಮ ಮಂದಿರದಲ್ಲಿ ಪ್ರದರ್ಶಿಸಿತು. ಇದರಲ್ಲಿ ಮಿಸ್ ಜ಼ುಬೇದ ಮಾಸ್ಟರ್ ವಿಠಲ್, ಪೃಥ್ವೀರಾಜ್, ಜಿಲ್ಲೂಬಾಯಿ, ಜಗದೀಶಶೇಠಿ ಮೊದಲಾದವರು ಅಭಿನಯಿಸಿದ್ದರು. ಛಾಯಾಗ್ರಹಣವನ್ನು ಆದಿ ಇರಾನಿ, ಶಬ್ದಸಂಯೋಜನೆಯನ್ನು ಅರ್ದೇಶಿರ್ ಇರಾನಿ ನಿರ್ವಹಿಸಿದ್ದರು. ಕಥೆಯಲ್ಲಿ ವಿಶೇಷ ಹುರುಳಿಲ್ಲದಿದ್ದು, ಬರೀ ಹಾಡುಗಳನ್ನು ಮತ್ತು ದೃಶ್ಯಗಳನ್ನು ಪೋಣಿಸಲು ಮಾತ್ರ ಅದನ್ನು ಬಳಸಲಾಗಿತ್ತು. ಭಾರತದ ಮೊದಲ ವಾಕ್‌ಚಿತ್ರವಾದುದರಿಂದ ಅದು ಅಪಾರವಾದ ಪ್ರಶಸ್ತಿಯನ್ನೂ ಹಣವನ್ನೂ ಗಳಿಸಿತು. ದೇಶದ ಹೊರಗೂ ಹೋಗಿ ನೆರೆದೇಶಗಳ ಜನರ ಆದರವನ್ನೂ ಪಡೆಯಿತು. ಆಲಂ ಆರಾವನ್ನು ಶೀಘ್ರವೇ ಹಿಂಬಾಲಿಸಿ ಮದನ್ ಥಿಯೇಟರ್ಸ್ ಅವರ ಮೊದಲ ಪೂರ್ಣ ಉದ್ದದ ವಾಕ್‌ಚಿತ್ರ ಷಿರಿನ್ ಫರ್‌ಹಾದ್ ಬಂತು. ಇದರಲ್ಲಿ ಮಿಸ್ ಜಹಾನರಾ ಕಜ್ಜನ್ ಮತ್ತು ಮಾಸ್ಟರ್ ನಿಸ್ಸಾರ್ ಅಭಿನಯಿಸಿದ್ದರು. ಕಥೆ ಪರ್ಷಿಯದ ಪುರಾತನ ಪ್ರಣಯಕಥೆಯೊಂದನ್ನು ಅವಲಂಬಿಸಿದ್ದು ; ಚಿತ್ರದಲ್ಲಿ 42 ಹಾಡುಗಳಿದ್ದವು. ತಾಂತ್ರಿಕ ದೃಷ್ಟಿಯಿಂದ ಇದು ಆಲಂ ಆರಾಗಿಂತ ಉತ್ತಮವಾಗಿತ್ತು.

ಪ್ರಾಂತೀಯ ಭಾಷೆಗಳಲ್ಲೂ ವಾಕ್‌ಚಿತ್ರಗಳ ನಿರ್ಮಾಣಕ್ಕೆ ವಿಳಂಬವಾಗಲಿಲ್ಲ. ಮುಂಬಯಿ, ಕೊಲ್ಕತ, ಲಾಹೋರ್, ಚನ್ನೈ, ಪುಣೆ, ಕೊಯಮತ್ತೂರು, ಸೇಲಂ ಮೊದಲಾದ ಶಹರುಗಳಲ್ಲಿ ಅಂಥ ಚಿತ್ರಗಳನ್ನು ತಯಾರಿಸಲು ಸಂಸ್ಥೆಗಳು ಸ್ಥಾಪಿತವಾದವು. ಮೊದಲು ಬಂದ ಚಿತ್ರಗಳು ಯಾವುವೆಂದರೆ–ಮರಾಠಿಯಲ್ಲಿ ಪ್ರಭಾತ್ ಸಂಸ್ಥೆಯ ಅಯೋಧ್ಯಾಚಾ ರಾಜಾ, ಗುಜರಾತಿಯಲ್ಲಿ ಸಾಗರ್ ಸಂಸ್ಥೆಯ ನರಸೀ ಮೆಹತಾ, ಕನ್ನಡದಲ್ಲಿ ಸೌತ್ ಇಂಡಿಯಾ ಮೂವಿಟೋನ್ ಅವರ ಸತೀ ಸುಲೋಚನಾ, ತಮಿಳಿನಲ್ಲಿ ಇಂಪೀರಿಯಲ್ ಸಂಸ್ಥೆಯ ಕಾಳಿದಾಸ, ಬಂಗಾಳಿಯಲ್ಲಿ ಮದನ್ ಸಂಸ್ಥೆಯ ಜಮಾಯ್ ಶಷ್ಟಿ, ಮತ್ತು ಪಂಜಾಬಿಯಲ್ಲಿ ಹಿಂದ್ ಮಾತಾ ಸಿನೆಟೋನ್‌ರವರ ಮಿರ್ಜ಼ಾ ಸಾಹಿಬಾ.

ವ್ಯಾಪಾರ ದೃಷ್ಟಿಯಿಂದ ಚಲಚ್ಚಿತ್ರ ಉದ್ಯಮ ಮುಂದಿನ ಕೆಲವು ವರ್ಷಗಳಲ್ಲಿ ವಿಶೇಷ ಪ್ರಗತಿಯನ್ನು ಹೊಂದಿತು. ಅನೇಕ ಹೊಸ ಚಲಚ್ಚಿತ್ರ ಸ್ಟುಡಿಯೋಗಳೂ ಪ್ರದರ್ಶನ–ಮಂದಿರಗಳೂ ನಿರ್ಮಾಣವಾದವು. 1934ರೊಳಗೆ ದೇಶದಲ್ಲಿ 50ಕ್ಕಿಂತ ಹೆಚ್ಚು ವಾಕ್‌ಚಿತ್ರ ನಿರ್ಮಾಪಕ ಸಂಸ್ಥೆಗಳಿದ್ದುವು. ಅದೇ ವರ್ಷ ಹಿಮಾಂಶು ರಾಯ್ ಬಾಂಬೆ ಟಾಕೀಸ್ ಸಂಸ್ಥೆಯನ್ನು 25 ಲಕ್ಷ ರೂಪಾಯಿ ಬಂಡವಾಳ ಹಾಕಿ ಸ್ಥಾಪಿಸಿದರು. 1931ರಲ್ಲಿ 28 ವಾಕ್‌ಚಿತ್ರಗಳು ನಿರ್ಮಿತವಾದವು; ಅವನ್ನು ಪ್ರದರ್ಶಿಸಲು 400 ಪ್ರದರ್ಶನ ಮಂದಿರಗಳಾದುವು. 1935ರಲ್ಲಿ ಇವುಗಳ ಸಂಖ್ಯೆ ಕ್ರಮವಾಗಿ 233 ಮತ್ತು 700ಕ್ಕೆ ಏರಿತು. ಅಂದಿನವರೆಗೆ ಯಾವ ವರ್ಷವೂ ಭಾರತದಲ್ಲಿ ಅಷ್ಟು ಚಿತ್ರಗಳು ನಿರ್ಮಾಣವಾಗಿರಲಿಲ್ಲ.

ಒಂದಿಷ್ಟೂ ಸಾಮಾಜಿಕ ಧ್ಯೇಯ ಅಥವಾ ಕಲಾವಂತಿಕೆಯಿಲ್ಲದ ಚಿತ್ರಗಳ ಬಿಗಿತದಿಂದ ಉದ್ಯಮವನ್ನು ಸ್ವಲ್ಪಮಟ್ಟಿಗೆ ತಪ್ಪಿಸಿ ಮೇಲಂತಸ್ತಿಗೆ ಕೊಂಡು ಹೋದವರು ಮುಖ್ಯವಾಗಿ ನಮ್ಮ ನಾಲ್ಕು ಮಂದಿ ಹೆಸರಾಂತ ಚಿತ್ರನಿರ್ಮಾಪಕರು ವಿ. ಶಾಂತಾರಾಮ್, ದೇವಕಿ ಬೋಸ್, ಪಿ. ಸಿ ಬರುವ ಮತ್ತು ನಿತಿನ್ ಬೋಸ್.

ವಿ. ಶಾಂತಾರಾಮ್ 1934ರಲ್ಲಿ ಅಮೃತ್ ಮಂಥನ್ ಚಿತ್ರವನ್ನು ನಿರ್ಮಿಸಿ ಭಾರತದ ವಾಕ್‌ಚಿತ್ರಗಳಿಗೆ ಅಂಟಿದ ರಂಗಭೂಮಿಯ ಜಾಡ್ಯವನ್ನು ದೂರಮಾಡಿದರು. ಆಮೇಲೆ ಕೆಲವು ಸಾಮಾಜಿಕ ಸಮಸ್ಯೆಗಳ ನೋವು ಕಾವುಗಳನ್ನು ತಮ್ಮ ಚಿತ್ರಗಳಲ್ಲಿ ನಿವೇದಿಸಿ, ಚಿತ್ರಕಲೆಯ ಒಂದು ಮುಖ್ಯ ಉದ್ದೇಶವನ್ನು ಸಾಧಿಸಿದರು. 1936ರಲ್ಲಿ ನಿರ್ಮಿಸಿದ ಅಮರ್‌ಜ್ಯೋತಿ, 1937ರ ದುನಿಯಾ ನ ಮಾನೆ, 1939ರ ಆದ್ಮೀ, 1940–41ರ ಪಡೋಸಿ–ಇವು ಚಿತ್ರಕಲೆಯ ಉತ್ತಮ ಕೃತಿಗಳು. ಶಾಂತಾರಾಮ್‌ನ ಮೇಲ್ವಿಚಾರಣೆಯಲ್ಲಿ ದಾಮ್ಲೆ ಮತ್ತು ಫತೇಲಾಲ್ 1936ರಲ್ಲಿ ನಿರ್ಮಿಸಿದ ಸಂತ ತುಕಾರಾಮ್ ಸಾಧುಸಂತರ ಜೀವನಚರಿತ್ರೆಯನ್ನು ನಿರೂಪಿಸಿರುವ ಚಿತ್ರಗಳಲ್ಲೆಲ್ಲ ಅತಿ ಶ್ರೇಷ್ಠವಾದುದು. ದಾಮ್ಲೆ ಮತ್ತು ಫತೇಲಾಲ್ 1940ರಲ್ಲಿ ರಚಿಸಿದ ಇನ್ನೊಂದು ಮಹಾಚಿತ್ರವೆಂದರೆ ಸಂತ ಜ್ಞಾನೇಶ್ವರ್.

ಕೆ.ಎಲ್. ಸೈಗಲ್

ಬಂಗಾಳದ ದೇವಕಿ ಬೋಸ್ 1932ರ ಸುಮಾರಿಗೆ ಬಂಗಾಳಿಯಲ್ಲಿ ಚಂಡೀದಾಸ್, 1933ರಲ್ಲಿ ಪೂರಣ್ ಭಗತ್ ಚಿತ್ರಗಳನ್ನು ನಿರ್ಮಿಸಿ ದೇಶದಲ್ಲೆಲ್ಲ ಪ್ರಸಿದ್ಧಿ ಪಡೆದ ಅವನು ತನ್ನ ಚಿತ್ರಗಳ ಕಥಾವಸ್ತುಗಳಾಗಿ ಭಾರತದ ಸಂಸ್ಕೃತಿಯನ್ನೂ ಧರ್ಮವನ್ನೂ ಬೆಳಗಿಸಿದ ಕೆಲವು ಪ್ರಸಿದ್ಧ ವಿಷಯಗಳನ್ನೇ ಹೆಚ್ಚಾಗಿ ಆರಿಸುತ್ತಿದ್ದ. ಆತ 1934ರಲ್ಲಿ ರಚಿಸಿದ ಸೀತಾ ಪೌರಾಣಿಕ ಚಿತ್ರಗಳಲ್ಲೆಲ್ಲ ಅತ್ಯುತ್ತಮವೆನಿಸಿತು. ಅವನ ಇನ್ನೊಂದು ಪ್ರಸಿದ್ಧ ಚಿತ್ರವೆಂದರೆ, 1937ರಲ್ಲಿ ರಚನೆಗೊಂಡ ವಿದ್ಯಾಪತಿ 1939ರಲ್ಲಿ ಸಪೇರಾ ಚಿತ್ರದಲ್ಲಿ ಅರಣ್ಯವಾಸಿಗಳಾದ ಹಾವಾಡಿಗರ ಜೀವನ ಕಥಾವಸ್ತುವನ್ನು ವಿವರಿಸಿದ್ದಾರೆ.

ಪಿ. ಸಿ ಬರುವ 1935ರಲ್ಲಿ ಶರತ್‌ಚಂದ್ರ ಚಟರ್ಜಿಯವರ ಕಾದಂಬರಿಯ ಆಧಾರದ ಮೇಲೆ ದೇವದಾಸ್ ಚಿತ್ರವನ್ನು ರಚಿಸಿ ಖ್ಯಾತಿಗೊಂಡರು. ಅವರ ಇತರ ಚಿತ್ರಗಳಾದ ಜ಼ಿಂದಗಿ, ಮುಕ್ತಿ, ಮಂಜ಼ಿಲ್ ಮತ್ತು ಅಧಿಕಾರ್ ಭಾರತದ ಚಲಚ್ಚಿತ್ರ ರಂಗದಲ್ಲಿ ಒಂದು ಹೊಸ ದೃಷ್ಟಿಯನ್ನು ಮೂಡಿಸಿದುವು. ದೇವದಾಸದಲ್ಲಿಯೂ ಅವರ ಇತರ ಚಿತ್ರಗಳಲ್ಲಿಯೂ ಅಭಿನಯಿಸಿ ಹಾಡಿದ ಸೈಗಲ್ ದೇಶದಲ್ಲೆಲ್ಲ ಅನುಪಮ ಖ್ಯಾತಿಯನ್ನು ಪಡೆದರು.

ದೇವಕಿ ಬೋಸ್ ಮತ್ತು ಬರುವರವರ ಚಿತ್ರಗಳಲ್ಲಿನ ಉತ್ತಮ ವೈಶಿಷ್ಟ್ಯಗಳನ್ನು ನಿತಿನ್ ಬೋಸ್ ತಮ್ಮ ಚಿತ್ರಗಳಲ್ಲಿ ಅನುಸರಿಸಿದರು. 1935ರಲ್ಲಿ ಅವರ ಹಿಂದೀ ಚಿತ್ರ ಚಂಡೀದಾಸ್ ಪ್ರದರ್ಶನಕ್ಕೆ ಬಂದು ತುಂಬ ಜನಪ್ರಿಯವಾಯಿತು. 1937ರಲ್ಲಿ ಬಂದ ಪ್ರೆಸಿಡೆಂಟ್ ಎಂಬ ಚಿತ್ರ ಕ್ಷಯರೋಗದ ಭೀಕರತೆಯನ್ನು ವರ್ಣಿಸಿ ವಿಶೇಷ ಜನಾದರಣೆಗೆ ಪಾತ್ರವಾಯಿತು.

ಮಾಸ್ಟರ್ ವಿನಾಯಕನ ಹಂಸ ಪಿಕ್ಚರ್ಸ್ ಸಂಸ್ಥೆ ನಿರ್ಮಿಸಿದ ಛಾಯಾ (1936), ಜ್ವಾಲಾ (1938), ಬ್ರಹ್ಮಚಾರಿ ಮತ್ತು ಬ್ರಾಂಡಿ ಚಿ ಬಾತಲ್ (1939) ಒಳ್ಳೆಯ ಚಿತ್ರಗಳಾಗಿದ್ದವು. ಇದೇ ಸಮಯ ಕೊಲ್ಕತದ ನ್ಯೂ ಥಿಯೇಟರ್ಸ್ ಸಂಸ್ಥೆಯಲ್ಲಿ ಕೆಲವು ತರುಣ ನಿರ್ದೇಶಕರು ಮುಂದೆ ಬಂದು ಕೋಟ್ಯಾಧಿಪತಿ ಮತ್ತು ಅನಾಥಾಶ್ರಮ, (ಹೇಮಚಂದ್ರ, 1937), ಬಡಿ ದೀದಿ, (ಅಮರ ಮಲ್ಲಿಕ್ 1939) ಮತ್ತು ಸ್ಟ್ರೀಟ್ ಸಿಂಗರ್ (ಪಿ. ಮಜುಂದಾರ್, 1938) ಎಂಬ ಒಳ್ಳೆಯ ಚಿತ್ರಗಳನ್ನು ತಯಾರಿಸಿದರು. ಅಲ್ಲದೆ ಮುಂಬಯಿಯ ಬಾಂಬೆ ಟಾಕೀಸ್ ಸಂಸ್ಥೆಯಿಂದ 1936ರಲ್ಲಿ ಅಚ್ಯುತ್ ಕನ್ಯಾ ಎಂಬ ಉತ್ತಮ ಚಿತ್ರ ಹೊರಬಂತು.

ವ್ಯಾಪಾರೀ ಸಂಸ್ಥೆಗಳಲ್ಲಿಯೂ ಕುಶಲರಾದ ಕೆಲವರು ಚಿತ್ರನಿರ್ಮಾಪಕರಿದ್ದು, ಅವರಿಂದಲೂ ತುಂಬ ಯೋಗ್ಯತೆಯುಳ್ಳ ಕೆಲವು ಚಿತ್ರಗಳು ಹೊರಬಂದವು. ನ್ಯಾಷನಲ್ ಸ್ಟುಡಿಯೋಗಾಗಿ ಮೆಹಬೂಬ್ ಖಾನ್ 1940ರಲ್ಲಿ ರಚಿಸಿದ ಔರತ್ ವಿಶೇಷವಾಗಿ

ಭಾವೋದ್ರೇಕದ ಚಿತ್ರವಾಗಿತ್ತು. ಷೇಕ್ಸ್‌ಪಿಯರನ ನಾಟಕಗಳಲ್ಲಿ ಪ್ರಸಿದ್ಧ ಅಭಿನಯಕಾರನಾದ ಸೊಹ್ರಾಬ್ ಮೋದಿ 1939ರಲ್ಲಿ ಪುಕಾರ್ ಎಂಬ ಮಹತ್ತರವಾದ ಚಿತ್ರವನ್ನು ರಚಿಸಿ, ಚಾರಿತ್ರಿಕ ಚಿತ್ರಗಳ ನಿರ್ಮಾಣದಲ್ಲಿ ಇಡೀ ಭಾರತದಲ್ಲಿ ಅದ್ವಿತೀಯನಾದ. ಎ. ಆರ್. ಕಾರ್ದಾರ್ ಕೂಡ ಈ ದಿಶೆಯಲ್ಲಿ ಅನೇಕ ಉತ್ತಮ ಚಿತ್ರಗಳನ್ನು ನಿರ್ಮಿಸಿದರು.

ವಾಕ್‌ಚಿತ್ರಗಳು 1940–1960 : ಎರಡನೆಯ ಮಹಾಯುದ್ಧ ಲೋಕದಲ್ಲೆಲ್ಲ ತಂದೊಡ್ಡಿದ ಅಪ್ರತಿಮ ಕಷ್ಟನಷ್ಟಗಳನ್ನು ಕೊಂಚ ಸಮಯಕ್ಕಾದರೂ ಮರೆಯಲು ಜನಸಾಮಾನ್ಯರು ವಿಶೇಷವಾಗಿ ಮನೋರಂಜನೆಗೆ ಹಾತೊರೆಯಲಾರಂಭಿಸಿದರು. ಅಮೆರಿಕದಲ್ಲೂ ಭಾರತದಲ್ಲೂ ಈ ಅವಧಿಯಲ್ಲಿ ಜನ ನೋಡಿದಷ್ಟು ಚಲನಚಿತ್ರಗಳನ್ನು ಮತ್ತಾವಾಗಲೂ ನೋಡಿದ್ದಿಲ್ಲ. ಅಮೆರಿಕದಲ್ಲಿ ಇದರಿಂದಾಗಿ ಕೇವಲ ಲಘು ವಿನೋದ ಚಿತ್ರಗಳು ವಿಶೇಷ ಜನದಾರಣೆಯನ್ನು ಪಡೆಯುವಂತಾದುವು. ಇಂಥ ಚಿತ್ರಗಳಲ್ಲಿ ಅಭಿನಯಿಸಿದ ಬಡ್ ಆಬಟ್ ಮತ್ತು ಲೂ ಕಾಸ್ಟೆಲೊ, ಬಾಬ್ ಹೋಪ್, ಮಿಕ್ಕಿ ರೂನಿ ಮೊದಲಾದವರು ಜನಸಾಮಾನ್ಯರ ಮೆಚ್ಚಿನ ಅಭಿನೇತರಾದರು. 1943ರೊಳಗೆ ಉದ್ಯಮದಲ್ಲಿದ್ದ ಅನೇಕ ಪ್ರಮುಖ ಅಭಿನಯಕಾರರು ಸೇನೆಯನ್ನು ಸೇರುವಂತಾದರು. ಆದರೂ ಈ ಅವಧಿಯಲ್ಲಿ ಹಾಲಿವುಡ್ ಅನೇಕ ಮೊದಲ ಶ್ರೇಣಿಯ ಚಿತ್ರಗಳನ್ನು ತಯಾರಿಸಿತು. ಅವುಗಳಲ್ಲಿ ಇವು ಕೆಲವು ಮುಖ್ಯವಾಗಿದ್ದುವು : 1 ಜಾನ್ ಫೋರ್ಡ್ ಅವರ ಗ್ರೇಪ್ಸ್ ಆಫ್ ರಾತ್ (1940), ಮತ್ತು ಹೌ ಗ್ರೀನ್ ವಾಸ್ ಮೈ ವ್ಯಾಲಿ (1942), 2 ಆರ್ಸನ್ ವೆಲ್ಸ್‌ನ ಸಿಟಿಜ಼ನ್ ಕೇನ್ (1941), 3 ವಿಲಿಯಂ ವೆಲ್‌ಮನನ ದಿ ಆಕ್ಸ್‌ಬೊ ಇನ್ಸಿಡೆಂಟ್ (1943), ಅಮೆರಿಕದಲ್ಲಿ ಕಾನೂನು ವಿರುದ್ಧ ಇರುವ ಲಿಂಚಿಂಗ್ ಪದ್ಧತಿಯನ್ನು ಖಂಡಿಸಿದ ಚಿತ್ರದಲ್ಲಿ ಬಿಲ್ಲಿ ವೈಲ್ಡರ್ ಅವರ ದಿ ಲಾಸ್ಟ್ ವೀಕ್‌ಎಂಡ್ (1945. ಕುಡಿತದ ವಿರುದ್ಧ ಬಂದ ಪ್ರಮುಖ ಚಿತ್ರ). 5 ಜೆನಿಫರ್ ಜೋನ್ಸ್ ಅಭಿನಯಿಸಿದ ಸಾಂಗ್ ಆಫ್ ಬರ್ನಡೆಟ್. 6 ಪಾಲ್ ಲ್ಯುಕಾಸ್ ಅಭಿನಯಿಸಿದ ವಾಚ್ ಆನ್ ದಿ ರೈನ್. 7 ಅರ್ನೆಸ್ಟ್ ಹೆಮಿಂಗ್ ವೇ ಕೃತಿಯಾದ ಫಾರ್ ಹೂಮ್ ದಿ ಬೆಲ್ ಟೋಲ್ಸ್. 8 ಫ್ರಾಂಕ್ ಕಾಪ್ರಾ ಅವರ ಆರ್ಸೆನಿಕ್ ಎಂಡ್ ಓಲ್ಡ್ ಲೇಸ್ (1944). 9 ಅರ್ನೆಸ್ಟ್ ಲ್ಯುಬಿಚ್ ಅವರ ಹೆವನ್ ಕ್ಯಾನ್ ವೇಯ್ಟ್ (1943). 10 ಜೇಮ್ಸ್ ಡನ್ ಅಭಿನಯಿಸಿದ ಎ ಟ್ರೀ ಗ್ರೋಸ್ ಇನ್ ಬ್ರೂಕ್‌ಲಿನ್ (1945). 11 ವಾಲ್ಟ್ ಡಿಸ್ನೆಯ ಫ್ಯಾಂಟಾಸಿಯ (1941), ಬ್ಯಾಂಬಿ (1942), ಡಂಬೊ (1942), ದಿ ತ್ರೀ ಕೆಬೆಲೆ ರೋಸ್ (1945) 12 ಗ್ರೀರ್ ಗಾರ್ಸನ್ ಅಭಿನಯಿಸಿದ ಮಿಸೆಸ್ ಮಿನೀವರ್.

ನರ್ಗೀಸ್

ಮೀನಾಕುಮಾರಿ

ಮೇಲೆ ಹೇಳಿದವರಲ್ಲದೆ ಈ ಸಮಯದಲ್ಲಿ ಅಮೆರಿಕದಲ್ಲಿ ಪ್ರಸಿದ್ಧರಾಗಿದ್ದ ಕೆಲವು ನಟರ ಹೆಸರುಗಳಿವು : ಗ್ಯಾರಿ ಕೂಪರ್, ಬೆಟಿ ಡೇವಿಸ್, ಡೊರೊತಿ ಲ್ಯಾಮರ್, ಸ್ಪೆನ್ಸರ್ ಟ್ರೇಸಿ, ಬಿಂಗ್ ಕ್ರಾಸ್‌ಬಿ, ರೇ ಮಿಲ್ಯಾಂಡ್, ಡ್ಯಾನಿ ಕೇ, ಕ್ಲಾರ್ಕ್ ಗೇಬಲ್, ಫ್ರಾಂಕ್ ಸಿನಾತ್ರ.

ಭಾರತ 1941ರಲ್ಲಿ ಚಿತ್ರ ತಯಾರಿಕೆಯ ಪ್ರಪಂಚದಲ್ಲಿ ಮೂರನೆಯ ಸ್ಥಾನವನ್ನು ಗಳಿಸಿತು.

1941ರಲ್ಲಿ ಭಾರತದಲ್ಲಿ ಹೊರಬಂದ ಚಿತ್ರಗಳಲ್ಲಿ ಅಹಿಂಸಾತತ್ತ್ವಗಳನ್ನು ವಿವೇಚಿಸಿ ದೇವಕಿ ಬೋಸ್ ನಿರ್ಮಿಸಿದ ಅಪ್ನಾ ಘರ್ ಮತ್ತು ಸೊಹ್ರಾಬ್ ಮೋದಿಯವರ ಚಾರಿತ್ರಿಕ ಚಿತ್ರ ಸಿಕಂದರ್ ಗಮನಾರ್ಹವಾಗಿದ್ದುವು. ಎರಡನೆಯ ಮಹಾಯುದ್ಧದ ದೆಸೆಯಿಂದಾಗಿ ಸರ್ಕಾರದವರು ಯಾವ ಚಿತ್ರದ ಉದ್ದವಾದರೂ 11,000 ಮೀರಬಾರದೆಂದು ಕಟ್ಟಪ್ಪಣೆ ಮಾಡಿದರು. ಇದರಿಂದ ಚಿತ್ರಗಳಿಗೆ ಕ್ಷೇಮವೇ ಆಯಿತು. ಮೂರು ನಾಲ್ಕು ತಾಸು ಚಿತ್ರ ನಡೆಯಬೇಕೆಂಬ ದುರಭಿಲಾಷೆಯಿಂದ ಚಿತ್ರನಿರ್ಮಾಪಕರು ಅದರಲ್ಲಿ ತುಂಬಿಸುತ್ತಿದ್ದ ಅನಾವಶ್ಯಕವಾದ ಸಂಗತಿಗಳು ಮಾಯವಾಗಿ, ಚಿತ್ರಗಳಲ್ಲಿ ಒಂದು ಹೊಸ ಬಿಗುಪು, ತೀಕ್ಷ್ಣತೆ ಬರಲು ಅನುಕೂಲವಾಯಿತು. ಅಲ್ಲದೆ 1940ರಲ್ಲಿ, ಪ್ರತಿಯೊಂದು ಪ್ರದರ್ಶನ ಮಂದಿರವೂ ತನ್ನ ಚಿತ್ರಪ್ರದರ್ಶನಗಳಲ್ಲಿ, ಸರ್ಕಾರ ಆಗತಾನೇ ಯುದ್ಧ ಪ್ರಚಾರದ ಒಂದು ಸಂಸ್ಥೆಯಾಗಿ ಸ್ಥಾಪಿಸಿದ ಫಿಲ್ಮ್ ಅಡ್ವೈಸರಿ ಬೋರ್ಡ್ ಮತ್ತು ಇನ್‌ಫರ್ಮೇಷನ್ ಫಿಲ್ಮ್ಸ್ ಆಫ್ ಇಂಡಿಯ ತಯಾರಿಸಿದ ಯುದ್ಧಪ್ರಚಾರ ಚಿತ್ರಗಳ 2,000ಅಡಿ ದೃಶ್ಯಗಳನ್ನಾದರೂ ತೋರಿಸಬೇಕೆಂದು ಕಾನೂನು ಜಾರಿಗೆ ಬಂತು. ಈ ಕಾನೂನು ಮುಂದೆ ಭಾರತೀಯ ಸಾಕ್ಷ್ಯಚಿತ್ರಗಳ ಬೆಳವಣಿಗೆಗೆ ತುಂಬ ಸಹಕಾರಿಯಾಯಿತು. 1943ರಲ್ಲಿ ಚಿತ್ರ ನಿರ್ಮಾಪಕರು ಚಿತ್ರತಯಾರಿಕೆಗೆ ಸರ್ಕಾರದ ಪರವಾನೆ ಪಡೆಯಬೇಕೆಂದೂ ಅವರು ಒಂದು ವರ್ಷದಲ್ಲಿ ಮೂರಕ್ಕಿಂತ ಹೆಚ್ಚು ಚಿತ್ರಗಳನ್ನು ನಿರ್ಮಿಸಬಾರದೆಂದೂ ಅವುಗಳಲ್ಲೊಂದಾದರೂ ಯುದ್ಧ ಪ್ರಚಾರದ ಚಿತ್ರವಾಗಬೇಕೆಂದೂ ಸರ್ಕಾರ ಕಟ್ಟಾಜ್ಞೆ ಹೊರಡಿಸಿತು.

ಕಿಶೋರ್ ಸಾಹು

ವಾಹಿನಿಯವರ ಪೋತನ ಮತ್ತು ಸ್ವರ್ಗಸೀಮಾ ಪ್ರಸಿದ್ಧಿ ಪಡೆದುವು. 1944ರಲ್ಲಿ ನ್ಯೂ ಥಿಯೇಟರ್ಸ್ ಪರವಾಗಿ ಬಿಮಲ್ ರಾಯ್ ನಿರ್ದೇಶಿಸಿದ ಹಮ್‌ರಾಹೀ ಮುಂಬೆಳಗಿನ ಒಂದು ಆಶಾಕಿರಣವಾಗಿ ಮೂಡಿತು. ಪ್ರಭಾತ್ ಸಂಸ್ಥೆ ನಿರ್ಮಿಸಿದ ರಾಮಾಶಾಸ್ತ್ರೀ ಚಿತ್ರವೂ ವಿಖ್ಯಾತಿ ಪಡೆಯಿತು. 1942ರಲ್ಲಿ ಬಂಗಾಲದಲ್ಲಿ ಸಂಭವಿಸಿದ ಮಾನವಕೃತ ಭೀಕರ ಕ್ಷಾಮವನ್ನು ಯೋಗ್ಯ ರೀತಿಯಿಂದ ವರ್ಣಿಸಿ ಕಥಾವಸ್ತುವನ್ನಾಗಿ ಮಾಡಿದ ಧರ್ತಿ ಕೆ ಲಾಲ್ ಎಂಬ ಚಿತ್ರ IPTA ಅವರ ಹೊಣೆ–ಗಾರಿಕೆಯಲ್ಲಿ 1946ರಲ್ಲಿ ಹೊರಬಂತು. ಅದೇ ವರ್ಷ ಚೇತನ್ ಆನಂದರ ನೀಚನಗರ್ ಪ್ರದರ್ಶಿಸಲ್ಪಟ್ಟಿತು. ಇದು ಆ ವರ್ಷದ ಕ್ಯಾನ್ ಚಲನ–ಚಿತ್ರೋತ್ಸವದಲ್ಲಿ ಗಾನ್ ಪ್ರಿ ಪಾರಿತೋಷಕವನ್ನು ಗಳಿಸಿ, ಭಾರತದ ಚಲಚ್ಚಿತ್ರ ಉದ್ಯಮಕ್ಕೆ ಲೋಕದಲ್ಲಿ ಒಂದು ಗಣ್ಯ ಸ್ಥಾನವನ್ನು ದೊರಕಿಸಿಕೊಟ್ಟಿತು. ಪೌರಾಣಿಕ ಚಿತ್ರಗಳಲ್ಲಿ ವಿಜಯಭಟ್ಟ ಅವರ ಭರತ್ ಮಿಲಾಪ್, ರಾಮರಾಜ್ಯ ಮೊದಲಾದುವು ಉತ್ತಮ ಚಿತ್ರಗಳಾಗಿದ್ದುವು.

ಎರಡನೆಯ ಮಹಾಯುದ್ಧ ಮುಗಿದ ಅನಂತರ ಅಮೆರಿಕದ ಚಲಚ್ಚಿತ್ರ ಪ್ರೇಕ್ಷಕರ ಒಲವು ಹೆಚ್ಚಾಗಿ ಮನೋವಿಶ್ಲೇಷಣದ ರೋಮಾಂಚನಕಾರಿ ಕಥೆಗಳ ಕಡೆಗೆ ಬಾಗಿತ್ತು. ಆದುದರಿಂದ ಇಂಥ ಕಥೆಗಳಿಗಿರುವ ಚಿತ್ರಗಳನ್ನೇ ಹಾಲಿವುಡ್ ನಿರ್ಮಿಸಲು ಪ್ರಾರಂಭಿಸಿತು. ಇಂಥ ಅನೇಕ ಚಿತ್ರಗಳಲ್ಲಿ ಎರಡರ ಹೆಸರನ್ನು ಇಲ್ಲಿ ಉದಾಹರಣೆಯಾಗಿ ಕೊಡಬಹುದು: ಲೀವ್ ಹರ್ ಟು ಹೆವನ್ ಮತ್ತು ಸ್ನೇಕ್ ಪಿಟ್. ಮೊದಲನೆಯ ಚಿತ್ರದಲ್ಲಿ ಒಬ್ಬ ಕೆಟ್ಟ ಹೆಂಗಸಿನ ಕೆಟ್ಟತನವನ್ನೂ ಅದರ ಹಿಂದಿನ ಮನೋಭಾವವನ್ನೂ ಚಿತ್ರಿಸಲಾಗಿತ್ತು. ಎರಡನೆಯ ಚಿತ್ರದಲ್ಲಿ ಉನ್ಮಾದ ಸ್ಥಿತಿಗೆ ಎಳೆದೊಯ್ಯುವ ಮಾನಸಿಕ ದೌರ್ಬಲ್ಯದ ಭೀಕರ ಚಿತ್ರಣವಿತ್ತು. ಇಂಥ ಚಿತ್ರಗಳಲ್ಲದೆ ಹಾಲಿವುಡ್ ಇತರ ಜಾತಿಯ ಕೆಲವು ಶ್ರೇಷ್ಠ ಚಿತ್ರಗಳನ್ನೂ ನಿರ್ಮಿಸಿತು. ಇವುಗಳಲ್ಲಿ ಗಾನ್ ವಿತ್ ದಿ ವಿಂಡ್, ದಿ ಬೆಸ್ಟ್ ಇಯರ್ಸ್ ಆಫ್ ಅವರ್ ಲೈವ್ಸ್, ಅನಾ ಅಂಡ್ ದಿ ಕಿಂಗ್ ಆಫ್ ಸಯಾಮ್, ದಿ ಯೀರ್ಲಿಂಗ್, ದಿ ಔಟ್‌ಲ್, ಬೆಲ್ಸ್ ಆಫ್ ಸೇಂಟ್ ಮೇರಿ, ಫರ್ ಎವರ್ ಅಂಬರ್–ಮೊದಲಾದುವು ತುಂಬ ಪ್ರಖ್ಯಾತಿಗೊಂಡವು.

ಈ ಅವಧಿಯಲ್ಲಿ ಹಾಲಿವುಡ್‌ನ ಚಲಚ್ಚಿತ್ರೋದ್ಯಮಕ್ಕೆ ಧಕ್ಕೆ ಬರಲಾರಂಭಿಸಿತು. ಅಮೆರಿಕದಲ್ಲಂತೂ ಚಿತ್ರೋದ್ಯಮಕ್ಕೆ ಸರಿದೊರೆಯಾಗಿ ಸ್ಪರ್ಧಿಸಲು ಪ್ರಾರಂಭಿಸಿದ್ದು ಟೆಲಿವಿಷನ್ ಉದ್ಯಮ. ಇದನ್ನು ನಿವಾರಿಸಲು ಅಮೆರಿಕ ಚಿತ್ರರಂಗದಲ್ಲಿ ಹೊಸ ಹೊಸ ವಿಧಾನಗಳನ್ನೂ ಆಕರ್ಷಣೆಗಳನ್ನೂ ಬಳಕೆಗೆ ತರಬೇಕಾಯಿತು. ಹೊರಗಿನ ದೇಶಗಳಲ್ಲಿ ತನ್ನ ಉದ್ಯಮ ಪುನಃ ಪ್ರತಿಷ್ಠೆಗೊಳ್ಳುವಂತೆ ಹಾಲಿವುಡ್ ಭಗೀರಥ ಪ್ರಯತ್ನ ಮಾಡಿ, ತನ್ನ ಚಿತ್ರಗಳನ್ನೆಲ್ಲ ವರ್ಣಚಿತ್ರಗಳನ್ನಾಗಿಯೂ ಅಗಲಪರದೆ ಚಿತ್ರಗಳನ್ನಾಗಿಯೂ (ಸಿನೆರಮಾ, ವಿಸ್ಟಾವಿಷನ್, ಸಿನೆಮಾಸ್ಕೋಪ್ ಇತ್ಯಾದಿ) ಮಾಡಲು ಪ್ರಾರಂಭಿಸಿತು. ಹಾಲಿವುಡ್ ಸಾಧಿಸಿದುದನ್ನು–ಇತರ ದೇಶಗಳೂ ಸಾಧಿಸಲು ತೊಡಗಿದುವು. ವರ್ಣಚಿತ್ರ ಮತ್ತು ಅಗಲಪರದೆಯ ಚಿತ್ರ ಈಗ ಎಲ್ಲ ದೇಶಗಳಲ್ಲಿ ಎಂಬಂತೆ ಚಲಚ್ಚಿತ್ರ ಪ್ರಪಂಚದ ವೈಶಿಷ್ಟ್ಯಗಳಾಗಿವೆ.

ಈ 10–12 ವರ್ಷಗಳಲ್ಲಿ ಚಲಚ್ಚಿತ್ರ ಸಂಗೀತಕ್ಕೆ ಎಂದೂ ಇಲ್ಲದ ಪ್ರಾಧಾನ್ಯ ಬಂದಿದೆ. ಮೂಕಚಿತ್ರಗಳು ವಾಕ್‌ಚಿತ್ರಗಳಾದೊಡನೆ ಅವುಗಳಲ್ಲಿ ಸಂಗೀತ ತುಂಬಿಹೋದುದರಲ್ಲಿ ಆಶ್ಚರ್ಯವಿಲ್ಲ. ಈಗಿನ ಚಿತ್ರಗಳಲ್ಲಿ ಐದಾರು ಹಾಡುಗಳಿರುವುದು ಸರ್ವಸಾಮಾನ್ಯವಾಗಿದೆ. ಮೊದಮೊದಲು, ಹಾಡಲು ಬರುವ ನಟನಟಿಯರೇ ಚಿತ್ರಗಳಲ್ಲಿ ಅಭಿನಯಿಸುತ್ತಿದ್ದರು. ಆದರೆ ಬರಬರುತ್ತ ಅಭಿನಯ, ಹಾಡುಗಾರಿಕೆ ಮತ್ತು ರೂಪಲಾವಣ್ಯ ಒಂದೇ ವ್ಯಕ್ತಿಯಲ್ಲಿ ಕೂಡಿಬರುವುದು ಅಪರೂಪವಾಗುತ್ತ ಬಂದು ಚಿತ್ರದಲ್ಲಿನ ಹಾಡಿನ ಪೂರೈಕೆಗಾಗಿ ಬೇರೊಂದು ವಿಧಾನವನ್ನೇ ಸಾಧಿಸ ಬೇಕಾಯಿತು. ಇದೇ ಪ್ಲೇಬ್ಯಾಕ್ ವಿಧಾನ. ಇದನ್ನು ಮೊದಲು ನಿತಿನ್ ಬೋಸ್ ಸೂಚಿಸಿದರು; ಪ್ರಸಿದ್ಧ ಸಂಗೀತ ನಿರ್ದೇಶಕ ಆರ್.ಸಿ. ಬೊರಾಲ್ ಮೊದಲು ಕಾರ್ಯರೂಪಕ್ಕೆ ತಂದ. ಕೂಡಲೇ ಈ ವಿಧಾನ ದೇಶದಾದ್ಯಂತ ಚಲಚ್ಚಿತ್ರ ಉದ್ಯಮಕ್ಕೆ ವ್ಯಾಪಿಸಿ, ಹಿನ್ನೆಲೆ ಗಾಯಕರ ಕೂಟ ವೊಂದು ನಿರ್ಮಾಣವಾಯಿತು. ಇವರಲ್ಲಿ ಜನಾದರಣೆಯ ಶಿಖರ ವನ್ನು ಮುಟ್ಟಿದವರು ಯಾರೆಂದರೆ, ಚಲಚ್ಚಿತ್ರ ಉದ್ಯಮದಲ್ಲೇ ಒಂದು ಘಟನೆಯಾಗಿ ಪರಿಣಮಿಸಿದ ಲತಾ ಮಂಗೇಷ್ಕರ್. ದೇಶದ ಆದ್ಯಂತ ಈಕೆಯ ಕೋಕಿಲ ಸ್ವರವನ್ನು ಕೇಳದವರಿಲ್ಲ. ಸಾಧಾರಣ ಈಕೆ ಯಷ್ಟೇ ಪ್ರಸಿದ್ಧಿಗೆ ಬಂದ ಇನ್ನೊಬ್ಬ ಹಾಡುಗಾರ್ತಿ ಗೀತಾದತ್ (ಮೊದಲು ಗೀತಾ ರಾಯ್). ಸರಸ್ವತಿ, ಪಿ.ಲೀಲಾ, ಮಹಮ್ಮದ್ ರಫೀ, ಪಂಕಜ್ ಮಲ್ಲಿಕ್, ಮುಖೇಶ್, ತಲತ್ ಮುಹಮ್ಮದ್ ಇವರು ಇತರ ಪ್ರಸಿದ್ಧರು.

**ಲತಾ ಮಂಗೇಶ್ಕರ್**



**ಮಹಮ್ಮದ್ ರಫೀ**

**ಆಶಾ ಭೋಂಸ್ಲೆ**

1949ರಲ್ಲಿ ಭಾರತ ಸರ್ಕಾರ ಚಲನಚಿತ್ರ ಉದ್ಯಮದ ಹಲವು ಸಮಸ್ಯೆಗಳನ್ನು ವಿಚಾರಿಸಲು ಒಂದು ಸಮಿತಿಯನ್ನು ಏರ್ಪಡಿಸಿತು. ಇದು ಎರಡು ವರ್ಷ ದೇಶದಲ್ಲೆಲ್ಲ ವಿಚಾರಣೆ ನಡೆಸಿ, ಅಕ್ಟೋಬರ್ 1951ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿತು. ಇದರಲ್ಲಿ ಸರ್ಕಾರದ ಪರಿಶೀಲನೆಗೆ ಸೂಚಿಸಿದ್ದ ಹಲವು ಸಲಹೆಗಳಲ್ಲಿ ಇವು ಕೆಲವು ಮುಖ್ಯವಾಗಿದ್ದವು: 1 ಉದ್ಯಮದ ಸರ್ವ–ಕಲ್ಯಾಣವನ್ನು ಸಾಧಿಸಲು ಸರ್ಕಾರ ಒಂದು ಚಲನ ಚಿತ್ರ ಮಂತ್ರಾಲೋಚನ ಸಂಸ್ಥೆಯನ್ನು ರಚಿಸಬೇಕು. 2 ಚಿತ್ರನಿರ್ಮಾಪಕರಿಗೆ ಧನಸಹಾಯ ನೀಡಲು ಕೇಂದ್ರ ಸರ್ಕಾರ, ಪ್ರಾಂತೀಯ ಸರ್ಕಾರಗಳು ಮತ್ತು ಚಲನಚಿತ್ರ ಉದ್ಯಮದ ಸಂಸ್ಥೆಗಳು ಕೂಡಿ, ಒಂದು ಕೋಟಿ ರೂಪಾಯಿ ಪ್ರಾರಂಭ ಬಂಡವಾಳವಿರುವ ಹಣಕಾಸಿನ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕು. 3 ದೇಶದಲ್ಲಿ ನಿರ್ಮಿತವಾಗುವ ಚಿತ್ರಗಳ ಹೊರ ಮಾರಾಟ–ವನ್ನು ಉತ್ತೇಜಿಸಲಿಕ್ಕೂ ಅದನ್ನು ನಿರ್ವಹಿಸಲಿಕ್ಕೂ ಒಂದು ಹೊರ ಮಾರಾಟದ ಸಂಸ್ಥೆಯನ್ನು ಸ್ಥಾಪಿಸಬೇಕು. 4 ಉದ್ಯಮಕ್ಕೆ ಅಗತ್ಯವಿರುವ ಕಚ್ಚಾ ಫಿಲ್ಮ್ ಮತ್ತು ಇತರ ಸಲಕರಣೆಗಳ ತಯಾರಿಕೆ ದೇಶದಲ್ಲೇ ಆಗುವಂತೆ ಸರ್ಕಾರ ಏರ್ಪಾಡು ಮಾಡಬೇಕು. 5 ಹೊರಗಿನಿಂದ ಬರುವ ಚಿತ್ರಗಳ ಸಂಖ್ಯೆಗೆ ಸರ್ಕಾರ ಒಂದು ನಿರ್ದಿಷ್ಟ ಮಿತಿಯನ್ನು ಇಡಬೇಕು. ಮತ್ತು 6 ಚಲನಚಿತ್ರ ಉದ್ಯಮಕ್ಕೆ ಬೇಕಾಗಿರುವ ತಂತ್ರಜ್ಞರನ್ನೂ ಕಲೆಗಾರರನ್ನೂ ತರಬೇತು ಮಾಡುವ ಸಂಸ್ಥೆಗಳನ್ನು ಸರ್ಕಾರ ಸ್ಥಾಪಿಸಬೇಕು. ಉಳಿದ ಸಲಹೆಗಳು ಮನೋರಂಜನೆಯ ತೆರಿಗೆ, ಪರವಾನೆಯ ತೆರ, ಚಿತ್ರಗಳ ಉದ್ದ, ಪ್ರದರ್ಶನ ಮಂದಿರಗಳ ನಿರ್ಮಾಣಕ್ಕೆ ಸೌಕರ್ಯಗಳು, ಉತ್ತಮ ಚಿತ್ರಗಳಿಗೆ ಬಹುಮಾನ ಕೊಡುವ ವ್ಯವಸ್ಥೆಗಳು–ಇತ್ಯಾದಿಗಳನ್ನು ಕುರಿತು ಇದ್ದುವು. ಇವುಗಳಲ್ಲಿ ಅನೇಕ ಸಲಹೆಗಳನ್ನು ಸರ್ಕಾರ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಸ್ವೀಕರಿಸಿ ಕ್ರಮೇಣ ಜಾರಿಗೆ ತಂದಿತು.

**ರಾಜ್‌ಕಪೂರ್, ನರ್ಗೀಸ್ – ಜಾಗ್‌ತೇ ರಹೋ ಚಿತ್ರದಲ್ಲಿ**

1955ರ ಫೆಬ್ರುವರಿ 27ರಂದು ದೆಹಲಿಯ ಸಂಗೀತ ನಾಟಕ ಅಕಾಡೆಮಿಯ ಆಶ್ರಯದಲ್ಲಿ ದೇಶದ ಪ್ರಸಿದ್ಧ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು, ಕಲಾವಿದರು, ಶಾಸ್ತ್ರತಂತ್ರಜ್ಞರು, ಪ್ರದರ್ಶನಕಾರರು, ಸಂಸ್ಥೆಗಳ ಮಾಲಿಕರು ಮೊದಲಾದವರೆಲ್ಲ ಕೂಡಿ ಒಂದು ಚಲಚ್ಚಿತ್ರ ಮಂತ್ರಾಲೋಚನಾ ಸಭೆಯನ್ನು ಏಳು ದಿನಗಳವರೆಗೆ ಜರುಗಿಸಿ, ಉದ್ಯಮಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಮುಚ್ಚುಮರೆಯಿಲ್ಲದೆ ಕೂಲಂಕಷವಾಗಿ ಚರ್ಚಿಸಿದರು. ಈ ಸಭೆ ಹೊರಡಿಸಿದ ಸುಮಾರು 350 ಪುಟಗಳ ವರದಿ ಭಾರತದ ಚಲಚ್ಚಿತ್ರ ಉದ್ಯಮದ ಎಲ್ಲ ಸಮಸ್ಯೆಗಳನ್ನೂ ಸರ್ಕಾರಕ್ಕೂ ಜನಸಾಮಾನ್ಯರಿಗೂ ವಿಶದಗೊಳಿಸುವ ಒಂದು ಅಮೂಲ್ಯ ಗ್ರಂಥವಾಗಿದೆ.

ಈ 10–12 ವರ್ಷಗಳಲ್ಲಿ ನಿರ್ಮಿತವಾದ ಮುಖ್ಯ ಚಲಚ್ಚಿತ್ರಗಳನ್ನು ವೀಕ್ಷಿಸುವಾಗ ಪ್ರಸಿದ್ಧ ನರ್ತಕ ಉದಯಶಂಕರ್ ನೃತ್ಯವನ್ನೇ ಮುಖ್ಯ ವಿಷಯವನ್ನಾಗಿಟ್ಟುಕೊಂಡು ರಚಿಸಿದ ಕಲ್ಪನಾ (1948) ಎಂಬ ಚಿತ್ರ ನಮಗೆ ಮೊದಲು ಕಾಣಬರುವುದು. ಸಾಧಾರಣ ಇದೇ ಸಮಯ ವಿ. ಶಾಂತಾರಾಮ್, ಮಹಾರಾಷ್ಟ್ರದ 19ನೆಯ ಶತಮಾನದ ಪ್ರಸಿದ್ಧ ಕವಿ ಹೋನಾಜಿಯನ್ನು ಕುರಿತು, ಅಮರ ಭೂಪಾಲಿ ಎಂಬ ಉತ್ತಮ ದರ್ಜೆಯ ಚಿತ್ರವನ್ನು ನಿರ್ಮಿಸಿದರು. ಪ್ರೇಕ್ಷಣೀಯವಾದ ಹಲವಾರು ಇಂಥ ಚಿತ್ರಗಳಲ್ಲಿ ದೃಶ್ಯಗಾಂಭೀರ್ಯದ ದೃಷ್ಟಿಯಿಂದ ಜೆಮಿನಿಯ ಚಂದ್ರಲೇಖಾ ಶ್ರೇಷ್ಠವಾಗಿತ್ತು. ಈ ಚಿತ್ರದ ಅನುಕರಣದಿಂದ ಮುಂದೆ ಮೆಹಬೂಬ ಅವರ ಆನ್ ಮತ್ತು ಫಿಲ್ಮಿಸ್ತಾನದ ಶಬ್ನಂ ಹುಟ್ಟಿದುವು.

ಇಟಲಿ ದೇಶದ ಪ್ರಸಿದ್ಧ ಚಿತ್ರ ಬೈಸಿಕಲ್ ತೀಫ್ ಭಾರತದಲ್ಲಿ ಸಾರ್ವತ್ರಿಕವಾಗಿ ಪ್ರದರ್ಶನಗೊಂಡ ಕೂಡಲೇ ಅಂಥ ಅನೇಕ ಚಿತ್ರಗಳ ತಯಾರಿಕೆ ಪ್ರಾರಂಭವಾಯಿತು. ಆದರೆ ಸಾಮಾಜಿಕ ಸಮಸ್ಯೆಗಳನ್ನು ನೇರವಾಗಿ, ಸತ್ಯತೆಯ ದೃಷ್ಟಿಯಿಂದಲೂ ಕಲಾತ್ಮಕವಾಗಿಯೂ ಪರಿಣಾಮಕಾರಿಯಾಗಿಯೂ ಆ ಬೈಸಿಕಲ್ ತೀಫ್‌ನಂತೆ ಚಿತ್ರಿಸುವ ಬದಲು, ಈ ಸಮಸ್ಯೆಗಳಿಗೆ ಅತ್ಯುತ್ಪ್ರೇಕ್ಷೆಯ ಒಂದು ಕೃತಕ ಆವರಣವನ್ನು ಕಲ್ಪಿಸಿಕೊಟ್ಟು, ಅವು ಮನೋರಂಜನೆಯನ್ನು ಸಾಧಿಸುವಂತೆ ಚಿತ್ರಗಳ ನಿರ್ಮಾಣವಾಯಿತು. ಇದಲ್ಲದೆ ಇದೇ ಸಮಯ ಭಾರತೀಯ ಸಂಸ್ಕೃತಿಗೆ ವಿಲಕ್ಷಣವಾದ ಲೈಂಗಿಕ ರಂಜನೆಯ ಮತ್ತು ದುಷ್ಕಾರ್ಯ ಪ್ರವೃತ್ತಿಯ ಚಿತ್ರಗಳೂ ನಿರ್ಮಾಣವಾಗಲಿಕ್ಕೆ ತೊಡಗಿದವು. ಹಮ್ ಲೋಗ್,

ಫುಟ್‌ಪಾತ್, ಹಮ್‌ಸಫರ್, ಸಂಸಾರ್, ಬೂಟ್ ಪಾಲಿಷ್, ಟ್ಯಾಕ್ಸಿ ಡ್ರೈವರ್, ರಿಕ್ಷಾವಾಲಾ, ಬಾಜೀ, ಜಾಲ್ ಮೊದಲಾದುವು ಇವೆರಡು ಜಾತಿಯ ಚಿತ್ರಗಳಿಗೆ ಉದಾಹರಣೆಗಳಾಗಿವೆ. ಸಾಮಾನ್ಯ ವ್ಯಕ್ತಿಗಳ ಸಹಜವಾದ ಜೀವನವನ್ನೂ ಅವರ ಜೀವನದಲ್ಲಿರುವ ಸಮಸ್ಯೆಗಳನ್ನೂ ಸಾಕಷ್ಟು ಯಥಾರ್ಥವಾಗಿ, ಪರಿಣಾಮಕಾರಿಯಾಗಿ, ಚಿತ್ರಿಸುವ ಮನಃಪೂರ್ವಕ ಪ್ರಯತ್ನಗಳೂ ನಡೆದಿವೆ. ಉದಾಹರಣೆಗೆ ರಾಜ್‌ಕಪೂರರ ಜಾಗ್ ತೇರ ಹೋ, ಕೆ. ಎ. ಅಬ್ಬಾಸ್ ಅವರ ರಾಹೀ ಮತ್ತು ಮುನ್ನಾ, ಗುರುದತ್ತ ಅವರ ಚೌದ್‌ವಿನ್ ಕಾ ಚಾಂದ್ ಮತ್ತು ಬಿಮಲ್ ರಾಯ್ ಅವರ ದೋ ಬಿಘಾ ಜಮೀನ್. ಗುರುದತ್ತ ಅವರ ಕಾಗಜ್ ಕೆ ಫೂಲ್, ಭಾರತದ ಮೊದಲ ಸಿನಿಮಾಸ್ಕೋಪ್ ಚಿತ್ರವಾಗಿದೆ.

**ಕಾಗಜ್ ಕೆ ಫೂಲ್ ಸಿನಿಮಾಸ್ಕೋಪ್ ಹಿಂದಿ ಚಿತ್ರದಲ್ಲಿ ಗುರುದತ್**

ಅನೂರಾಧಾ, ವಿ. ಶಾಂತಾರಾಮ್ ಅವರ ದೋ ಆಂಖೇ ಬಾರಾ ಹಾತ್, ರಾಜ್‌ಕಪೂರ ಅವರ ಜಿಸ್ ದೇಶ್ ಮೇ ಗಂಗಾ ಬೆಹತೀ ಹೈ– ಈ ಚಿತ್ರಗಳಲ್ಲಿ ಸಾಮಾಜಿಕ ವಿಷಯಗಳನ್ನು ಹೃದಯಂಗಮವಾಗಿ ನಿರೂಪಿಸಲಾಗಿದೆ. ಈ ಪ್ರಸಂಗದಲ್ಲಿ ಸಾಮಾಜಿಕ ಚಿತ್ರವಲ್ಲವಾದರೂ ಬಹು ಉತ್ತಮ ಚಾರಿತ್ರಿಕ ಚಿತ್ರವಾದ ಪ್ರಸಿದ್ಧ ನಿರ್ದೇಶಕ ಸೊಹ್ರಾಬ್ ಮೋದಿಯ ಝಾನ್ಸಿ ಕೀ ರಾಣಿಯನ್ನು ಉಲ್ಲೇಖಿಸದೆ ಇರಲು ಸಾಧ್ಯವಿಲ್ಲ. ಇದು ವರ್ಣರಂಜಿತ ಚಿತ್ರವಾಗಿ (ಟೆಕ್ನಿಕಲರ್) ಇಡೀ ದೇಶದಲ್ಲಿ ವಿಶೇಷ ಜನಾದರಣೆ ಪಡೆಯಿತು.

ಎಲ್ಲಕ್ಕೂ ಮಿಗಿಲಾಗಿ 1955ರಲ್ಲಿ ಸತ್ಯಜಿತ್ ರಾಯ್ ಬಂಗಾಲಿ ಭಾಷೆಯಲ್ಲಿ ನಿರ್ಮಿಸಿದ ಪಥೇರ್ ಪಾಂಚಾಲಿ ಇಡೀ ಪ್ರಪಂಚದ ಚಲಚ್ಚಿತ್ರ ಉದ್ಯಮವನ್ನೇ ತನ್ನ ಅಪ್ರತಿಮ ಕಲಾಶಕ್ತಿಯಿಂದ ಬೆರಗುಗೊಳಿಸಿತು. 1956ನೆಯ ಕ್ಯಾನ್ ಚಿತ್ರೋತ್ಸವದಲ್ಲಿ ಅದು ಪ್ರದರ್ಶಿಸಲ್ಪಟ್ಟಾಗ ಜಗತ್ತಿನಲ್ಲೇ ಅದು ಅತ್ಯುತ್ತಮವಾದುದೆಂದು ಎಲ್ಲರೂ ಸಾರಿದರು. ಅಂದಿನವರೆಗೆ ಅಮೆರಿಕದಲ್ಲಿ ಪರಭಾಷೆಯ ಯಾವ ಚಿತ್ರವೂ ಅಷ್ಟು ದೀರ್ಘಕಾಲದ ಪ್ರದರ್ಶನಯೋಗ್ಯತೆ ಹೊಂದಿದ್ದಿಲ್ಲ.

**ರೈತಕುಟುಂಬದ ಕಥಾವಸ್ತುವನ್ನು ಚಿತ್ರಿಸುವ ಚಿತ್ರ ದೋ ಬಿಘಾ ಜಮೀನ್ (1953). ನಿರೂಪ ರಾಯ್, ರತನ್ ಕುಮಾರ್, ಬಲರಾಜ್ ಸಾಹನಿ ಮತ್ತು ನಾನಾ ಫಾಲ್‌ಸೇಕರ್ ಉತ್ತಮ ಅಭಿನಯ ನೀಡಿದ್ದಾರೆ**

ಪಥೇರ್ ಪಾಂಚಾಲಿ ಸತ್ಯಜಿತ್ ರಾಯ್‌ನ ಮೊದಲನೆಯ ಚಿತ್ರವಾದ ಕಾರಣ ಆತನ ಪರಿಚಯ ಯಾರಿಗೂ ಇರಲಿಲ್ಲ. ಚಿತ್ರ ನಿರ್ಮಾಣಕ್ಕಾಗಿ ಆತ ಹೇರಳ ಹಣವನ್ನು ವೆಚ್ಚ ಮಾಡಿರಲಿಲ್ಲ. ಚಿತ್ರದಲ್ಲಿ ಪ್ರಣಯ ಕಥೆಯಾಗಲಿ, ಲೈಂಗಿಕ ರಂಜನೆಯ ದೃಶ್ಯಗಳಾಗಲಿ ಇರಲಿಲ್ಲ. ಒಂದು ನೃತ್ಯ, ಒಂದು ಹಾಡು ಕೂಡ ಇರಲಿಲ್ಲ. ಪಾತ್ರವರ್ಗದಲ್ಲಿ ಹೆಸರಾದ ಒಬ್ಬರಾದರೂ ಅಭಿನಯ–ಕಾರರಿರಲಿಲ್ಲ. ಅಭಿನಯಿಸಿದವರಲ್ಲಿ ಹೆಚ್ಚು ಮಂದಿ ಈ ಚಿತ್ರದಲ್ಲೇ ಮೊಟ್ಟ ಮೊದಲು ಕ್ಯಾಮರವನ್ನು ಎದುರಿಸಿದುದು. ಅಭಿನಯಕಾರರಿಗೆ ಚಿತ್ರಣಕ್ಕಾಗಿ ಪ್ರಸಾಧನಗಳ (ಮೇಕ್ ಅಪ್) ಉಪಯೋಗ ಕೂಡ ಇರಲಿಲ್ಲ. ಅವರೆಲ್ಲ ತಮ್ಮ ನೈಜ ಸ್ಥಿತಿಯಲ್ಲೇ ತಮ್ಮ ಎಂದಿನ ಪೋಷಾಕಿನಲ್ಲೇ ಅಭಿನಯಿಸಿದ್ದರು. ಚಿತ್ರದಲ್ಲಿ ಕಥೆ ಕೂಡ ವಿಶೇಷವಾಗಿದ್ದಿಲ್ಲ. ಅದು, ಬಂಗಾಳದ ಒಂದು ಬಡ ಕುಟುಂಬದ ನೈಜ ಜೀವನದ ಒಂದು ಚಿತ್ರಣವಷ್ಟೆ. ಛಾಯಾಗ್ರಹಣದ ಪ್ರತಿಯೊಂದು ಚಿತ್ರವೂ ಅಭಿನಯಕಾರರ ಬಾಹ್ಯಾಭಿನಯನವನ್ನು ಮಾತ್ರವಲ್ಲ, ಅವರ ಆಂತರಿಕವನ್ನೇ ಸೀಳಿ ತೆರೆದು ತೋರಿಸುವಂತಿತ್ತು. ರವಿಶಂಕರರ ಸಂಗೀತ, ಇತರ ಅನೇಕ ಚಿತ್ರಗಳಲ್ಲಿರುವಂತೆ ನಿಸ್ತೇಜವಾಗಿ ಹಿನ್ನೆಲೆಯಲ್ಲಿಯೇ ಇರದೆ, ಚಿತ್ರದ ಸನ್ನಿವೇಶಗಳಿಗೆ ಕ್ಷಣ ಕ್ಷಣಕ್ಕೂ ಮಹತ್ತರವಾದ ಪುಷ್ಟಿಯನ್ನು ಕೊಡುತ್ತಿತ್ತು.

ಸತ್ಯಜಿತ್ ರಾಯ್ ತಮ್ಮ ಈ ಚಿತ್ರವನ್ನು ಒಂದು ಚಿತ್ರತ್ರಯದ ಮೊದಲನೆಯ ಭಾಗವನ್ನಾಗಿ ರಚಿಸಿದ್ದರು. 1956ರ ತಮ್ಮ ಅಪರಾಜಿತೋ ಚಿತ್ರದಲ್ಲಿ ಆತ ಈ ಕಥೆಯನ್ನು ಮುಂದುವರಿಸಿದರು. ಅದನ್ನೂ ಮುಂದುವರಿಸಿ 1959ರಲ್ಲಿ ಅಪೂರ ಸಂಸಾರ್ ಚಿತ್ರವನ್ನು ನಿರ್ಮಿಸಿ ಚಿತ್ರತ್ರಯವನ್ನು ಮುಕ್ತಾಯಗೊಳಿಸಿದರು.

**ದೋ ಆಂಖೇ ಬಾರಾ ಹಾತ್ ಚಿತ್ರದಲ್ಲಿ ಸಂಧ್ಯಾ – ನೃತ್ಯಭಂಗಿಯಲ್ಲಿ**

ಅಶಿತ್ ಸೇನ್, ತಪನ್ ಸಿನ್ಹ, ರಿತ್ವಿಕ್ ಘಾಟಕ್ ಮುಂತಾದವರು ಒಳ್ಳೆಯ ಹೊಸ ಕೆಲಸ ಮಾಡಿದ್ದಾರೆ. ಅವರ ಚಲಾಚಲ್, ಕಾಬೂಲಿವಾಲಾ, ಅಚಾಂತ್ರಿಕ್ ಮೊದಲಾದ ಚಿತ್ರಗಳು ಭಾರತದ ಚಲಚ್ಚಿತ್ರಗಳ ಮುಂದಿನ ಬೆಳವಣಿಗೆಗೆ ಸಹಾಯವಾಗಿವೆ. ಈಗ ದೇಶದ 13–14 ಮುಖ್ಯ ಪ್ರಾದೇಶಿಕ ಭಾಷೆಗಳಲ್ಲಾಗುತ್ತಿರುವ ಚಿತ್ರಗಳು ದಿನೇದಿನೇ ಯೋಗ್ಯತೆಯಲ್ಲಿ ಉತ್ತಮವಾಗುತ್ತ ಹಿಂದೀ, ಹಿಂದುಸ್ತಾನಿ ಚಿತ್ರಗಳ ಪ್ರಾಮುಖ್ಯವನ್ನು ಅಪಹರಿಸುತ್ತ ಬಂದಿವೆ. ಬಂಗಾಳಿಯಲ್ಲಿ ಪಥೇರ್ ಪಾಂಚಾಲಿಯ ಮೊದಲೇ ಅನೇಕಾನೇಕ

ಉತ್ತಮ ಚಿತ್ರಗಳಾಗಿವೆ. ಹಾಗೆಯೇ ಮರಾಠಿಯಲ್ಲಿ ಸಂತ ತುಕಾರಾಮ್, ಜ್ಞಾನೇಶ್ವರ, ಅಮರ ಭೂಪಾಲಿ, ಇತ್ಯಾದಿ ಚಿತ್ರಗಳು ಅವುಗಳ ಹಿಂದುಸ್ತಾನಿ ರೂಪಾಂತರಗಳಿಗಿಂದ ಎಷ್ಟೋ ಉತ್ತಮವಾಗಿದ್ದುವು. ಇತ್ತೀಚೆಗೆ ಮರಾಠಿಯಲ್ಲಿ ರಚಿಸಲ್ಪಟ್ಟ ವಹನೀಂಚ್ಯಾ ಬಾಂಗ್ಡ್ಯಾ, ಸೇವ್ಗ್ಯಾ ಚಾ ಶೇಂಗಾ, ಶಾಮ್‌ಚೀ ಆಯೀ, ಮಹಾತ್ಮಾ ಫುಲೆ ಮೊದಲಾದುವು ಬಹು ಉತ್ತಮ ಚಿತ್ರಗಳಾಗಿವೆ. ಇತ್ತೀಚೆಗೆ ಕನ್ನಡ ಚಿತ್ರಗಳೂ ಆಶಾಜನಕವಾದ ಮೇಲ್ಮೈಯನ್ನು ಸಾಧಿಸುತ್ತಿವೆ. ಬೇಡರ ಕಣ್ಣಪ್ಪ, ಸ್ಕೂಲ್ ಮಾಸ್ಟರ್, ಭಕ್ತ ಕನಕದಾಸ, ಕಿತ್ತೂರು ಚೆನ್ನಮ್ಮ ಮೊದಲಾದುವು ಉತ್ತಮ ಚಿತ್ರಗಳಾಗಿವೆ. ಇದೇ ರೀತಿ ಮಲಯಾಳಿಯಲ್ಲೂ ಚಿತ್ರಗಳ ತಯಾರಿಕೆ ಭರದಿಂದ ಸಾಗುತ್ತಿದೆ. ತೆಲುಗು ತಮಿಳಿನಲ್ಲಿ ಚಲನಚಿತ್ರ ಉದ್ಯಮ ಈ ಮೊದಲೇ ಭದ್ರವಾಗಿ ಬೇರೂರಿದೆ.

1. ಇಟಲಿ ಈ ಶತಮಾನದ ಆದಿಯಿಂದಲೇ ಚಲನಚಿತ್ರ ಉದ್ಯಮವನ್ನು ಪ್ರಾರಂಭಿಸಿತ್ತು. 1912ರ ಸುಮಾರಿಗೆ ಅಮೆರಿಕ ಮತ್ತು ಇತರ ದೇಶಗಳು ಎರಡು ಮೂರು ರೀಲಿನ ಚಿತ್ರಗಳನ್ನು ನಿರ್ಮಿಸುತ್ತಿದ್ದಾಗ, ಇಟಲಿ 8 ರೀಲಿನ ಕೋ ವಾಡಿಸ್ ಎಂಬ ಪ್ರಸಿದ್ಧ ಚಿತ್ರಗಳನ್ನು ನಿರ್ಮಿಸಿತ್ತು. ಯುದ್ಧ ಮುಗಿದ ಅನಂತರ ಉದ್ಯಮ ಮೆಲ್ಲಗೆ ತಲೆಯೆತ್ತಲು ಪ್ರಾರಂಭಿಸಿ, ಈಗ ಅಮೆರಿಕ, ಭಾರತ, ಜಪಾನ್ ದೇಶಗಳೊಡನೆ ಸರಿದೊರೆಯಾಗಿ

ಪ್ರಸಿದ್ಧ ಇಟ್ಯಾಲಿಯನ್ ನಿರ್ದೇಶಕ ವಿಟ್ಟೋರಿಯೊ ಡಿ ಸಿಕನ ದಿ ಬೈಸಿಕಲ್ ತೀಫ್ (1949) ಎಂಬ ಚಿತ್ರದ ಒಂದು ದೃಶ್ಯ

ನಿಂತಿದೆ. 1960ರಲ್ಲಿ ಅದು ಜಗತ್ತಿನಲ್ಲಿ ಎರಡನೆಯ ಸ್ಥಾನವನ್ನು ಪಡೆಯಿತು. ಬೈಸಿಕಲ್ ತೀಫ್ ಅಲ್ಲಿಯ ಉದ್ಯಮದ ಒಂದು ಮುಖವಾಗಿತ್ತು. ಆಮೇಲೆ ಆ ಮುಖ ಬಹುಮಟ್ಟಿಗೆ ಮಾಯವಾಗಿ, ಉದ್ಯಮ ಮತ್ತೊಂದು ಪ್ರಬಲವಾದ ಮುಖವನ್ನು ತಾಳಿತು. ಬೈಬಲ್ ಕಥೆಗಳ ಮತ್ತು ಪುರಾತನ ಚಾರಿತ್ರಿಕ ಸಂಗತಿಗಳ ಅದ್ದೂರಿ ಚಿತ್ರಗಳ ತಯಾರಿಕೆಯಲ್ಲಿ ಮಗ್ನವಾಯಿತು. ಅಮೆರಿಕದ ಸಿಸಿಲ್ ಬಿ. ಡಿ ಮಿಲೆ ಅವರ ಸಾಹಸಗಳನ್ನೂ ಮೀರಿಸುವ ಪ್ರಯತ್ನದಲ್ಲಿದೆ. ರೋಮನ್ನರ ಹಳೆ ಖಡ್ಗಮಲ್ಲರ ಸಾಹಸಗಳು, ಟ್ಯೂಟಾನ್ ಜನಾಂಗದವರ ಅನಾಗರಿಕ ಕೃತ್ಯಗಳು, ಮಧ್ಯಯುಗದ ದರೋಡೆಕೋರರ ದುಷ್ಕೃತ್ಯಗಳು, ಈಜಿಪ್ಟಿನ ರಾಣಿಯರ ವೈಭವಗಳು, ಫ್ರಾನ್ಸ್ ದೇಶದ ಅರಸರ ಕಾರುಬಾರುಗಳು, ಮಂಗೋಲಿಯ, ಬ್ಯಾಬಿಲೋನಿಯ ಮೊದಲಾದ ದೇಶಗಳ ಪ್ರಾಚೀನ ವೈಭವಗಳು, ಗ್ರೀಕರ ಆರ್ಗೊನಾಟರ ಮತ್ತು ಫಿನೀಷಿಯನ್ನರ ಸಾಹಸ ಕಾರ್ಯಗಳು-ಇವೇ ಮೊದಲಾದವು, ಅಲ್ಲಿಯ ಚಲಚ್ಚಿತ್ರಗಳ ವಿಷಯಗಳಾಗಿದ್ದುವು. ಅಗಲ ಪರದೆ ಮತ್ತು ವರ್ಣ ಇಂಥ ಚಿತ್ರಗಳಿಗೆ ವಿಶೇಷ ಶೋಭೆಯನ್ನು ಕೊಟ್ಟವು. ಆದರೆ ವಿಷಯವೇನಿದ್ದರೂ ಕಥೆಯೇನಿದ್ದರೂ ಇಂಥ ಚಿತ್ರಗಳ ರೂಪಾಕೃತಿ ಒಂದೇ ಆಗಿದೆ-ರಣರಂಗದಲ್ಲಿ ಹೊಡೆದಾಟ, ಸ್ವಚ್ಛಂದ ಸಂಭ್ರಮದ ದೃಶ್ಯಗಳು ಮತ್ತು ಕಥಾನಾಯಕಿಗೆ ಒಂದಾದರೂ ಹಾಲಿನ ಸ್ನಾನ (ಆಕೆಯ ಅಭಿನಯಕ್ಕಾಗಿಯಲ್ಲ ಅಂಗಪ್ರದರ್ಶನಕ್ಕಾಗಿ) ಇಂಥ ದೃಶ್ಯಗಳು ಸಾಮಾನ್ಯವಾಗಿ ಇದ್ದೇ ಇದ್ದವು. ಜಿಲೊ ಅಲೆನ್ಸೊ ಎಂಬಾಕೆ ಇಂಥ 14 ಚಿತ್ರಗಳಲ್ಲಿ ಈಗಾಗಲೇ ಅಭಿನಯಿಸಿದ್ದಾಳೆ.

ಅನೇಕ ವರ್ಷಗಳಿಂದ ಕುಸಿದುಬಿದ್ದಿದ್ದ ಉದ್ಯಮ ಇಂಥ ಚಿತ್ರಗಳ ತಯಾರಿಕೆಯಿಂದ ಪುನರುಜ್ಜೀವನಹೊಂದಿತು. ಹರ್ಕ್ಯುಲಿಸ್, ಕ್ಲಿಯೋಪಾತ್ರಾಳ ಸೈನ್ಯಗಳು, ರಾತ್ರಿ-ಮೊದಲಾದವು ಇಂಥ ಚಿತ್ರಗಳಿಗೆ ಉದಾಹರಣೆಗಳಾಗಿವೆ. ಇವುಗಳಲ್ಲಿ ರಾತ್ರಿ ಎಂಬುದು ಪ್ರತಿಭೆಯಿಂದ ಕೂಡಿದ ಚಿತ್ರವಾಗಿ, ವಿಮರ್ಶಕರ ಮತ್ತು ಪ್ರೇಕ್ಷಕರ ವಿಶೇಷ ಆದರಣೆಗೆ ಪಾತ್ರವಾಯಿತು.

ದೇವದಾಸ ಹಿಂದಿ ಚಿತ್ರದಲ್ಲಿ ವೈಜಯಂತಿಮಾಲಾ ಮತ್ತು ದಿಲೀಪ್‌ಕುಮಾರ್. ನೃತ್ಯದಿಂದ ಆಕರ್ಷಿಸುವ ಪ್ರಯತ್ನ

2. ಮಾನವತೆ ಮತ್ತು ಯಥಾರ್ಥತೆಗಳ ಯೋಗ್ಯ ಮಿಲನದಿಂದ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಸಾಧಿಸಿ, ಫ್ರಾನ್ಸ್ ಎರಡನೆಯ ಮಹಾಯುದ್ಧದ ಮೊದಲೇ ಲೋಕದಲ್ಲೆಲ್ಲ ಚಲಚ್ಚಿತ್ರ ಉದ್ಯಮದಲ್ಲಿ ಪ್ರಸಿದ್ಧಿಗೊಂಡಿತ್ತು. ಈ ಪ್ರಸಿದ್ಧಿಗೆ ಮುಖ್ಯ ಕಾರಣರು ಯಾರೆಂದರೆ, ಜಾನ್ ಬೆನ್ವಾ ಲೆವಿ, ಜಾನ್ ರೆನ್ವಾರ್, ಮಾರ್ಸೆಲ್ ಕಾರ್ನೇ, ರೆನೆ ಕ್ಲೇರ್, ಜೂಲಿಯಾ ದುವಿವಿಯೆ, ಜಾಕ್ ಪ್ರೆವರ್ ಮೊದಲಾದ ಮೇಧಾವಿ ನಿರ್ದೇಶಕರು. ಮತ್ತು ರ್‍ಯಾಮೂ, ಲೂವಿ ಜುವೇ, ಜಾನ್ ಲೂವಿ ಬಾರೋಮಿಶೆಲ್ ಸಿಮೊ, ಜಾನ್ ಗಾಬೇ, ಹೆರ್‍ರಿಬೋರ್, ಪಿಯರ್ ಬ್ರಾಸರ್ ಮೊದಲಾದ ಉತ್ತಮ ಅಭಿನಯಕಾರರು.

ಕಾರ್ನೇ ಮತ್ತು ಜಾಕ್ ಪ್ರೆವರ್ ಇವರ ಕೆ ದೆ ಬ್ರೂಮ್, ಲಜಾರ್ ಸಲೆವ್, ಲೆ ಜಾಂಫಾ ದ್ಯೂ ಪಾರಾದಿ ಮತ್ತು ಲೆವಿಸೀತರ್ ದ್ಯೂ ಸ್ವಾರ್, ರೆನ್ವೊರನ ಲಾ ಗ್ರಾಂಡ್ ಇಲ್ಯೂಸೊ ಮತ್ತು ದುವಿವಿಯೇ ಅವರ ಲಾ ಬೆಲ್ ಎಕ್ವಿಪ್-ಮೊದಲಾದವು ಇಂಥ ಚಿತ್ರಗಳಿಗೆ ಒಳ್ಳೆಯ ಉದಾಹರಣೆಗಳಾಗಿವೆ.

ಕವಿ ಕಾಳಿದಾಸ್ ಹಿಂದಿ ಚಿತ್ರದ ಒಂದು ದೃಶ್ಯ. ಕಾಳಿದಾಸನಾಗಿ ಭರತ್‌ಭೂಷಣ್

3. ಇಂಗ್ಲೆಂಡಿನಲ್ಲಿ: ಚಲಚ್ಚಿತ್ರದ ಮೊದಲ ದಿನಗಳಲ್ಲಿ ಇಂಗ್ಲೆಂಡಿನ ಚಿತ್ರಗಳೇ ಇತರ ದೇಶಗಳಲ್ಲಿ ಹೆಚ್ಚಾಗಿ ಪ್ರದರ್ಶಿಸಲ್ಪಡುತ್ತಿದ್ದವು. 1940ರ ಅನಂತರ ಉದ್ಯಮ ಸರಿಯಾಗಿ ತಲೆಯೆತ್ತಿ ಒಳ್ಳೆಯ ಚಿತ್ರಗಳನ್ನು ತಯಾರಿಸಲು ಪ್ರಾರಂಭಿಸಿತು. ಮಹಾಯುದ್ಧದ ಮೊದಲೇ ಹೆಸರುವಾಸಿಯಾದ ಕೆಲವು ನಿರ್ದೇಶಕರು- ಆಂತೋನಿ ಆಸ್ಕ್ವಿತ್, ಆಲ್ಬರ್ಟೊ ಕ್ಯಾವಲ್ಕ್ಯಾಂಟಿ, ಲೆಸ್ಲೀ ಹೊವಾರ್ಡ, ಮೈಕೆಲ್ ಬೊಲ್ಕನ್, ಆಲ್‌ಫ್ರೆಡ್ ಹಿಚ್‌ಕಾಕ್ ಮೊದಲಾದವರು-ಹೊಸ ಹುರುಪಿನಿಂದ ಕೆಲಸ ಮಾಡತೊಡಗಿದರು. ಮೈಕೆಲ್ ಪೊವೆಲ್,

ಕೆರೊಲ್ ರೀಡ್, ಡೆವಿಡ್ ಲೀನ್, ಜಾನ್ ಮತ್ತು ರಾಯ್ ಬೌಲ್ಟಿಂಗ್, ಫ್ರ್ಯಾಂಕ್ ಲಾಂಡರ್ ಮೊದಲಾದ ಹೊಸ ನಿರ್ದೇಶಕರು ಉದ್ಯಮವನ್ನು ಸೇರಿ, ಅದರ ಪ್ರಗತಿಯನ್ನು ಸಾಧಿಸಿದರು. ಸಾಕ್ಷ್ಯ ಮತ್ತು ಶೈಕ್ಷಣಿಕ ಚಿತ್ರಗಳ ನಿರ್ಮಾಣದಲ್ಲಿ ಬ್ರಿಟನ್ನಿಗೆ ಲೋಕದಲ್ಲಿ ಅಗ್ರಗಣ್ಯ ಸ್ಥಾನವಿದೆಯೆಂಬುದನ್ನು ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ.

4. ರಷ್ಯದಲ್ಲಿ: ಚಲಚ್ಚಿತ್ರ ಕಲೆ ಎಲ್ಲ ಲಲಿತಕಲೆಗಳಿಂದ ಶ್ರೇಷ್ಠವಾದುದು ಎಂದು ಲೆನಿನ್ ಹೇಳಿದ. ಚಲಚ್ಚಿತ್ರ ಕಲೆ, ನಮ್ಮ ಕೈಯಲ್ಲಿ ಒಂದು ಮಹತ್ತರವಾದ ಶಕ್ತಿಸಾಧನೆಯಾಗಿದೆ ಎಂದು ಸ್ಟ್ಯಾಲಿನ್ ಹೇಳಿದ. ಈ ಮಾತುಗಳನ್ನನುಸರಿಸಿಯೇ ಅಲ್ಲಿನ ಚಿತ್ರೋದ್ಯಮ ಮುಂದೆ ಸಾಗುತ್ತಿದೆ. ಇತರ ದೇಶಗಳಲ್ಲಿರುವಂತೆ ಚಲಚ್ಚಿತ್ರ ಅಲ್ಲಿ ಬರೇ ಮನೋರಂಜನೆಯ ಒಂದು ಸಾಧನವಲ್ಲ. ಅದೊಂದು ಸಾಂಸ್ಕೃತಿಕ ಕಾರ್ಯವಾಗಿದೆ; ಜನರ ಮೇಲ್ಮೆಯನ್ನು

ಮೊಗಲ್-ಎ-ಆಜಮ್ ಚಿತ್ರದಲ್ಲಿ ಪೃಥ್ವಿರಾಜ ಕಪೂರ್ (ಅಕ್ಬರ್) ಮತ್ತು ದಿಲೀಪ್‌ಕುಮಾರ್ (ಸಲೀಮ್)

ಸಾಧಿಸುವ ಒಂದು ಪ್ರಚಾರಸಾಧನವಾಗಿದೆ. ಈ ಉದ್ದೇಶದಿಂದಾಗಿ ಉದ್ಯಮ ರಾಷ್ಟ್ರದ ಒಂದು ಸ್ವತ್ತಾಗಿದೆ. ಚಲಚ್ಚಿತ್ರ ಉದ್ಯಮಕ್ಕೆ ಅಗತ್ಯವಿರುವ ನಿರ್ಮಾಪಕರು, ನಿರ್ದೇಶಕರು, ಅಭಿನಯಕಾರರು, ತಂತ್ರಜ್ಞರು ಮೊದಲಾದವರಿಗೆಲ್ಲ ತರಬೇತು ಕೊಡಲು ಅಲ್ಲಿ ಉತ್ತಮ ಸರ್ಕಾರಿ ಸಂಸ್ಥೆಗಳಿವೆ. ಈ ತರಬೇತನ್ನು ಕುಶಲರಾದ ತರುಣ ತರುಣಿಯರು ಉಚಿತವಾಗಿ ಪಡೆಯಬಹುದಲ್ಲದೆ, ತರಬೇತಿನ ಅವಧಿಯಲ್ಲಿ ನಿರ್ದಿಷ್ಟ ವೇತನವನ್ನೂ ಪಡೆಯಬಹುದಾಗಿದೆ. ತರಬೇತಿಯ ಅನಂತರ ಉದ್ಯಮದಲ್ಲಿ ಕೆಲಸ ಮಾಡಲು ಅವರಿಗೆ ಸಾಕಷ್ಟು ಅನುಕೂಲತೆಗಳನ್ನೂ ಆಡಳಿತ ಒದಗಿಸಿಕೊಡುತ್ತದೆ. ರಾಷ್ಟ್ರದ ಆಡಳಿತದ ಒಂದು ಪ್ರಮುಖ ಅಂಗವಾದ ಕುಶಲ ವಿದ್ಯೆಗಳ ಮಂಡಲಿ ಅಲ್ಲಿಯ ಚಲಚ್ಚಿತ್ರ ಉದ್ಯಮದ ಮೇಲ್ವಿಚಾರಣೆಯನ್ನು ನಡೆಸುತ್ತದೆ.

5. ಸ್ವೀಡನಿನಲ್ಲಿ : ಸ್ವೀಡನ್ ತನ್ನ ವಿಸ್ತೀರ್ಣಕ್ಕೂ ಜನಸಂಖ್ಯೆಗೂ ಮೀರಿ ಚಲಚ್ಚಿತ್ರಕಲೆಗೆ ಕಾಣಿಕೆ ಸಲ್ಲಿಸಿದೆ. ಉದ್ಯಮ ಅಲ್ಲಿ 1912ರಲ್ಲೇ ನಿಶ್ಚಿತತೆಯಿಂದ ಪ್ರಾರಂಭವಾಗಿ 1925ರ ವರೆಗೆ ಸರಾಗವಾಗಿ ನಡೆಯಿತು. 1942ರಲ್ಲಿ ಸ್ಯೋಬರ್ಗ ಎಂಬ ನಿರ್ದೇಶಕ ಫ್ರೆಂಜಿ ಎಂಬ ಶಕ್ತಿಯುತ ಚಿತ್ರವನ್ನು ನಿರ್ಮಿಸಿ, ಉದ್ಯಮ ಪುನಃ ಎಚ್ಚರಗೊಳ್ಳುವಂತೆ ಮಾಡಿದ ಅನಂತರ ಅವರು ಬಾರಬ್ಬಾಸ್, ಕಾರಿನ್ ಮಾನ್ಸ್ ಡೊಟರ್, ಮಿಸ್ ಜ್ಯೂಲಿ ಮೊದಲಾದ ಚಿತ್ರಗಳನ್ನು ತಯಾರಿಸಿ, ಲೋಕದ ಚಲಚ್ಚಿತ್ರರಂಗದಲ್ಲಿ ಸ್ವೀಡನ್ನಿಗೂ ಒಂದು ಪ್ರಮುಖ ಸ್ಥಾನವನ್ನು ಮಾಡಿಕೊಟ್ಟ. ಇವನ ಸಾಹಸಗಳನ್ನು ಇಂಗ್ಮಾರ್ ಬರ್ಗ್‌ಮನ್ ಮತ್ತಷ್ಟು ಮುಂದುವರೆಸಿಕೊಂಡು ಹೋದ. ಬರ್ಗ್‌ಮನ್ ರಚಿಸಿದ ಸೆವೆನ್ತ್ ಸೀಲ್, ದಿ ಫೇಸ್ ತುಂಬ ಪ್ರಸಿದ್ಧಿ ಹೊಂದಿವೆ. ಮಾನವನ ಆಂತರಿಕ ಜೀವನ ಮತ್ತು ಅವನ ಆಧ್ಯಾತ್ಮಿಕ ಶೋಧನೆಯ ಪ್ರವೃತ್ತಿಗಳನ್ನು ಬರ್ಗ್‌ಮನ್ನನ ಚಿತ್ರಗಳಲ್ಲಿ ವಿಶೇಷವಾಗಿ ಕಾಣಬಹುದು. ಚಲನಚಿತ್ರಗಳಿಗೆ ಹೀಗೆ ಒಂದು ಆಧ್ಯಾತ್ಮಿಕದ ಒಲವನ್ನು ಕೊಟ್ಟಿರುವುದು ಸ್ವೀಡನ್ನಿನ ಮುಖ್ಯ ವೈಶಿಷ್ಟ್ಯವೆಂದು ಹೇಳಬಹುದು.

ಸಾಕ್ಷ್ಯಚಿತ್ರದ ರೀತಿಯನ್ನು ತಮ್ಮ ಚಿತ್ರಗಳಲ್ಲಿ ಯಶಸ್ವಿಯಾಗಿ ಉಪಯೋಗಿಸುವುದರಲ್ಲಿ ಗೊಸ್ಟಾ ವರ್ನರ್ ಮತ್ತು ಆರ್ನೆ ಸ್ಯಾಕ್ಸಡಾರ್ಫ ತುಂಬ ಪ್ರಸಿದ್ಧಿ ಹೊಂದಿದ್ದಾರೆ. ಸ್ಯಾಕ್ಸಡಾರ್ಫ 1950ರಲ್ಲಿ ಗಾಳಿ ಮತ್ತು ನದಿ (ಕಾಶ್ಮೀರದ ಚಿತ್ರ) ಮತ್ತು ಹಿಂದೂದೇಶದ ಒಂದು ಹಳ್ಳಿ ಎಂಬ ಎರಡು ಸಣ್ಣ ಚಿತ್ರಗಳನ್ನು ಭಾರತದಲ್ಲಿ ಚಿತ್ರೀಕರಿಸಿದರು. ಇಂಥ 17 ಸಣ್ಣ ಚಿತ್ರಗಳ ನಿರ್ಮಾಣದ ಅನಂತರ ತನ್ನ ದೊಡ್ಡ ಚಿತ್ರವಾದ 'ಮಹತ್ತರ ಸಾಹಸ'ವನ್ನು ರಚಿಸಿ ಲೋಕಮನ್ನಣೆಯನ್ನು ಪಡೆದರು. ಅವರ 'ಒಂದು ನಗರದ ಸೌಂದರ್ಯ ಲಹರಿ' ಎಂಬುದು ಮುತ್ತೊಂದು ಪ್ರಖ್ಯಾತವಾದ ಚಿತ್ರವಾಗಿದೆ. 1956ರಲ್ಲಿ ಇವರು ಭಾರತದ ಬಸ್ತಾರ ಪ್ರಾಂತ್ಯದ ಮರಿ ಆದಿವಾಸಿಗಳನ್ನು ಕುರಿತು ಒಂದು ಚಿತ್ರವನ್ನು ತಯಾರಿಸಿ ಅದಕ್ಕೆ 'ಮುರಲಿ ಮತ್ತು ಬಾಣ'ವೆಂದು ಹೆಸರಿಟ್ಟರು. ಇದು ಅನುಕಂಪವನ್ನು ಹುಟ್ಟಿಸುವ ಬಹು ಸುಂದರವಾದೊಂದು ಚಿತ್ರವಾಗಿದೆ.

**ಚಲಚ್ಚಿತ್ರದಲ್ಲಿ ಕೆಲವು ಆಧುನಿಕ ಸುಧಾರಣೆಗಳು:**

1 ವರ್ಣಚಿತ್ರಗಳು : ನೀಲಿ, ಹಸುರು ಮತ್ತು ಕೆಂಪು-ಈ ಮೂರು ಮೂಲವರ್ಣಗಳ ಮಿಶ್ರಣದಿಂದ ಬೆಳಕಿನ ಎಲ್ಲ ಬಣ್ಣಗಳನ್ನೂ ಪಡೆಯಬಹುದು. ಈ ವೈಜ್ಞಾನಿಕ ಸತ್ಯದ ಮೂಲಕ ಚಲಚ್ಚಿತ್ರಗಳಿಗೆ ನೈಜಬಣ್ಣವಿರುವಂತೆ ಮಾಡಲು ಉದ್ಯಮದ ಮೊದಲ ದಿನಗಳಿಂದಲೂ ವಿಜ್ಞಾನಿಗಳು ಪ್ರಯತ್ನಿಸಿ, ಎರಡು ರೀತಿಯ ವಿಧಾನಗಳನ್ನು ಕಂಡುಹಿಡಿದಿದ್ದಾರೆ : ಒಂದು-ಸಂಕಲನ ವಿಧಾನ, ಇನ್ನೊಂದು-ವ್ಯವಕಲನ ವಿಧಾನ. ಸಂಕಲನ ವಿಧಾನದಲ್ಲಿ ಚಿತ್ರ ತೆಗೆಯುವ ಕ್ಯಾಮರದಲ್ಲಿಯೂ ಚಿತ್ರ ಪ್ರಕ್ಷೇಪಕದಲ್ಲಿಯೂ ಸಹಜವಾಗಿರುವ ಮಸೂರಗಳ ಜೊತೆಯಲ್ಲಿ ಬಣ್ಣದ ಮಸೂರಗಳನ್ನು ಉಪಯೋಗಿಸ ಬೇಕಾಗುತ್ತದೆ. ವ್ಯವಕಲನ ವಿಧಾನದಲ್ಲಿ ಬಣ್ಣವನ್ನು ಚಿತ್ರಪಟಲದಲ್ಲಿಯೇ ಬರುವಂತೆ ಮಾಡುತ್ತಾರೆ. ಮೊದಲ ವಿಧಾನ ಬಹು ಜಟಿಲವಾಗಿರುವುದರಿಂದ ಎರಡನೆಯ ವಿಧಾನವನ್ನೇ ಈಗ ಹೆಚ್ಚಾಗಿ ಉಪಯೋಗಿಸುತ್ತಾರೆ. ಈ ವಿಧಾನದಲ್ಲಿ ಟೆಕ್ನಿಕಲರ್ ರೀತಿ ಬಹು ಯಶಸ್ವಿಯಾಗಿದೆ. 1913 ರಿಂದ 1933ರವರೆಗೆ ಅಮೆರಿಕದ ವಿಜ್ಞಾನಿಗಳಾದ ಡಿ. ಎಫ್. ಕೊಮ್‌ಸ್ಟೊಕ್, ಎಚ್. ಟಿ. ಕಾಲ್ಮಸ್ ಮತ್ತು ಡಬ್ಲ್ಯು. ಬಿ. ವೆಸ್ಕಟ್ ನಡೆಸಿದ ಶೋಧನೆಯ ಫಲವಾಗಿ ಈ ವಿಧಾನ ಯಶಸ್ವಿಯಾಗಿದೆ. ಇವರು ಈ ಶೋಧನೆಯನ್ನು ಮೆಸಾಚುಸೆಟ್ಸ್ ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟಿನಲ್ಲಿ ಮಾಡಿರುವುದರಿಂದ ಅದಕ್ಕೆ ಟೆಕ್ನಿಕಲರ್ ಎಂಬ ಹೆಸರು ಬಂದಿದೆ. ವಾಲ್ಟ್ ಡಿಸ್ನೆ ಈ ವಿಧಾನವನ್ನು 1933ರಲ್ಲಿ ತಮ್ಮದೊಂದು ಬಣ್ಣದ ಕಾರ್ಟೂನ್ ಚಿತ್ರಕ್ಕೆ ಪ್ರಥಮವಾಗಿ ಉಪಯೋಗಿಸಿದರು.



ಮೊಗಲ್-ಎ-ಆಜಮ್ ಚಿತ್ರದಲ್ಲಿ ಮಧುಬಾಲಾ ಮತ್ತು ದಿಲೀಪ್‌ಕುಮಾರ್

ಈ ವಿಧಾನದಲ್ಲಿ ಛಾಯಾಗ್ರಹಣಕ್ಕೆ ಟೆಕ್ನಿಕಲರ್ ಕ್ಯಾಮರವನ್ನು ಉಪಯೋಗಿಸ ಬೇಕಾಗುವುದು. ಈ ಕ್ಯಾಮರದಲ್ಲಿರಿಸಿದ ಬಂಗಾರದ ಒಂದು ಅರೆಪಾರದರ್ಶಕ ಪ್ರಿಸ್ಮ್ ಕ್ಯಾಮರದೊಳಗೆ ಹೋಗುವ ಕಿರಣಜಾಲವನ್ನು ವಕ್ರೀಭವನಗೊಳಿಸುವುದು. ಹೀಗೆ ವಕ್ರೀಭವನಗೊಂಡ ಕಿರಣಜಾಲಕ್ಕೆ ಮೂರು ಫಿಲ್ಮ್ ಪಟಲಗಳು ಏಕಕಾಲಿಕವಾಗಿ ಒಡ್ಡಲ್ಪಡುತ್ತವೆ. ಇವುಗಳಲ್ಲೊಂದರ ಪಟಲ ನೀಲಿವರ್ಣಸಮೂಹವನ್ನೂ ಇನ್ನೊಂದು ಪಟಲ ಹಸಿರುವರ್ಣ ಸಮೂಹವನ್ನೂ ಮೂರನೆಯದು ಕೆಂಪುವರ್ಣ ಸಮೂಹವನ್ನೂ ದಾಖಲೆ ಮಾಡಿಕೊಳ್ಳುತ್ತದೆ. ಅನಂತರ ಈ ಮೂರು ಪಟಲಗಳನ್ನೂ ಅನೇಕ ರಾಸಾಯನಿಕ ಸಂಸ್ಕಾರ ಪರಂಪರೆಗಳಿಗೆ ಒಳಪಡಿಸಿ, ಅವುಗಳಲ್ಲಿ ದಾಖಲೆಗೊಂಡ ವರ್ಣಗಳೆಲ್ಲ ಒಂದೇ ಪಟಲದಲ್ಲಿ ಬರುವಂತೆ ಮಾಡುತ್ತಾರೆ. ಈ ರೀತಿ ತಯಾರಿಸಲ್ಪಟ್ಟ ಪಟಲ ಸಾಮಾನ್ಯ ಚಿತ್ರ ಪ್ರಕ್ಷೇಪಕದಲ್ಲಿ ನೇರವಾಗಿ ಉಪಯೋಗಿಸಲು ಬರುತ್ತದೆ. ಪ್ರಕ್ಷೇಪಕದಿಂದ ಹೊರಡುವ ಚಿತ್ರ ಮೂಲದೃಶ್ಯಗಳಲ್ಲಿದ್ದ ಬಣ್ಣಗಳನ್ನೆಲ್ಲ ಪರದೆಯ ಮೇಲೆ ತೋರಿಸುವುದು. ಟೆಕ್ನಿಕಲರಿನಲ್ಲಿ ಚಿತ್ರ ತೆಗೆಯುವ ವಿಧಾನ ಭಾರತದಲ್ಲಿ ಇನ್ನೂ ರೂಢಿಯಾಗಿ ಬಂದಿಲ್ಲ. ಚಿತ್ರ ತೆಗೆಯಲಿಕ್ಕೆ

ಟೆಕ್ನಿಕಲರ್ ಕ್ಯಾಮರಗಳನ್ನೇ ಉಪಯೋಗಿಸಬೇಕಾಗಿದೆ. ಅಲ್ಲದೆ, ದೇಶದಲ್ಲಿನ ರಾಸಾಯನಿಕ ಸಂಸ್ಕರಣ ಪ್ರಯೋಗಶಾಲೆಗಳಲ್ಲಿ ಟೆಕ್ನಿಕಲರ್ ಚಿತ್ರಗಳ ತಯಾರಿಕೆಗೆ ಅವಶ್ಯವಿದ್ದ ರಾಸಾಯನಿಕ ಸಂಸ್ಕಾರಗಳನ್ನು ಮಾಡಲು ಸಾಕಷ್ಟು ಸಲಕರಣೆಗಳೂ ಇರಲಿಲ್ಲ.

2 ಅಗಲ ಪರದೆಯ ಚಿತ್ರಗಳು :

(a) ಸಿನೆರಾಮಾ : ದೃಶ್ಯವೈಶಾಲ್ಯವನ್ನು ತೋರಿಸುವ ವಕ್ರಾಕೃತಿಯ ದೊಡ್ಡ ಪರದೆ ಇದರ ಒಂದು ಮುಖ್ಯ ವೈಶಿಷ್ಟ್ಯವಾಗಿದೆ. ಲಂಡನ್ನಿನ ಕ್ಯಾಸಿನೊ ಚಿತ್ರಮಂದಿರದಲ್ಲಿನ ವಕ್ರಾಕೃತಿಯ ಪರದೆ 19.5. ಮೀ. ಅಗಲ 7 ಮೀ. ಎತ್ತರವಿದೆ. ಮಂದಿರದೊಳಗೆ ಎಲ್ಲಿ ಕುಳಿತರೂ ಕಣ್ಣಿನ ದೃಶ್ಯಕ್ಷೇತ್ರವನ್ನು ಈ ದೊಡ್ಡ ಪರದೆ ಪೂರ್ಣವಾಗಿ ಆವರಿಸಿಕಂಡು ಪ್ರೇಕ್ಷಕರೇ ದೃಶ್ಯದೊಳಗೆ ಸೇರಿಕೊಂಡಿರುವಂತೆ ಭಾಸವಾಗುತ್ತದೆ. ಚಿತ್ರದ ಘನನಾದದ ವ್ಯವಸ್ಥೆ ಪ್ರೇಕ್ಷಕರಲ್ಲಿ ಈ ಭಾವನೆಯನ್ನು ಮತ್ತಷ್ಟು ಪ್ರಬಲಗೊಳಿಸುತ್ತದೆ. ಇಷ್ಟು ದೊಡ್ಡ ಪರದೆಯನ್ನು ತುಂಬಿಸತಕ್ಕ ಚಿತ್ರಗಳನ್ನು ತೆಗೆಯಲು ಸಾಮಾನ್ಯ ಚಲಚ್ಚಿತ್ರ ಕ್ಯಾಮರ ಸಾಕಾಗದೆ ವಿಶಿಷ್ಟವಾದ ಒಂದು ಕ್ಯಾಮರವನ್ನು ನಿರ್ಮಿಸಬೇಕಾಯಿತು. ಇದನ್ನು ಫ್ರೆಡ್ ವ್ಯಾಲರ್ ಎಂಬ ತಂತ್ರಜ್ಞ ಸಾಧಿಸಿದ. ಇದರಲ್ಲಿ ಮೂರು ಸಾಮಾನ್ಯ ಚಲಚ್ಚಿತ್ರ ಕ್ಯಾಮರಗಳು ಒಟ್ಟಿಗೆ ಸೇರಿದಂತಾಗಿ, ಮೂರು ಬೇರೆ ಬೇರೆ ಮಸೂರಗಳ ಮೂಲಕ ಮೂರು ಬೇರೆ ಬೇರೆ ಪಟಲಗಳ ಮೇಲೆ ಏಕಕಾಲದಲ್ಲಿ ಚಿತ್ರ ತೆಗೆಯಲು ಸಾಧ್ಯವಿದೆ. ಈ ಮೂರು ಮಸೂರಗಳೂ ಒಂದಕ್ಕೊಂದು $48^0$ ಅಂತರದಲ್ಲಿದ್ದು ದೃಶ್ಯದ ಮೂರನೆಯ ಒಂದು ಭಾಗವನ್ನಷ್ಟೇ ಒಂದೊಂದು ಮಸೂರವು ತೆಗೆಯುವುದು. ನಮ್ಮ ಎಡದಿಕ್ಕಿನ ಮಸೂರವು ದೃಶ್ಯದ ಎಡಭಾಗವನ್ನೂ, ನಮ್ಮ ಬಲದಿಕ್ಕಿನದು ದೃಶ್ಯದ ಬಲಭಾಗವನ್ನೂ, ಮಧ್ಯದ್ದು ದೃಶ್ಯದ ಮಧ್ಯ ಭಾಗವನ್ನೂ ಗ್ರಹಿಸುವುದು.

ಚಿತ್ರವನ್ನು ಪರದೆಯ ಮೇಲೆ ಪ್ರದರ್ಶಿಸಲು ಏಕಕಾಲದಲ್ಲಿ ಮೂರು ಬೇರೆ ಬೇರೆ ಪ್ರಕ್ಷೇಪಕಗಳು ಬೇಕಾಗುವುವು. ಒಂದೊಂದು ಪ್ರಕ್ಷೇಪಕ ಚಿತ್ರದ ಮೂರನೆಯ ಒಂದೊಂದು ಅಂಶವನ್ನು ಪರದೆಯ ಮೇಲೆ ಬೀಳಿಸಿ, ಮೂರು ಪ್ರಕ್ಷೇಪಕಗಳೂ ಕೂಡಿ ಪೂರ್ಣದೃಶ್ಯವನ್ನು ಒದಗಿಸಿಕೊಡುವುವು. ಪರದೆಗೆ ವಕ್ರಾಕಾರವಿರುವುದರಿಂದ, ಅದರ ಒಂದು ಭಾಗದ ಮೇಲೆ ಬೀಳುವ ಚಿತ್ರ ಇನ್ನೊಂದು ಭಾಗದ ಮೇಲೆ ಪ್ರತಿಚ್ಛಾಯೆಯನ್ನು ಬೀರಿ, ಇಡೀ ಚಿತ್ರದ ಪರಿಣಾಮ ಕೆಟ್ಟುಹೋಗುವ ಸಂಭವವಿದೆ. ಹೀಗೆ ಆಗದ ಹಾಗೆ ಈ ಬೃಹದಾಕಾರದ ಪರದೆಯನ್ನು ಒಂದೇ ಬಟ್ಟೆಯಿಂದ ಮಾಡದೆ, ಸಾಲುರಂಧ್ರಗಳಿರುವ ಸಾವಿರಾರು ಕಿರಿ ಅಗಲದ ಪಟ್ಟಿಗಳನ್ನು ಲಂಬವಾಗಿ ಒಂದರ ಹಿಂದೆ ಇನ್ನೊಂದನ್ನು ನಿಲ್ಲಿಸಿ ಮಾಡಿರುತ್ತಾರೆ. ಹೀಗೆ ಮಾಡಿರುವುದರಿಂದ ಬೆಳಕಿನ ಪ್ರತಿಚ್ಛಾಯೆ ಒಂದು ಪಟ್ಟಿಯಿಂದ ಇನ್ನೊಂದು ಪಟ್ಟಿಯ ಹಿಂದುಗಡೆ ಹಾರಿಹೋಗಿ, ಒಟ್ಟು ಚಿತ್ರ ಪರದೆಯ ಮೇಲೆ ಸ್ಪಷ್ಟವಾಗಿ ಕಾಣುತ್ತದೆ. ದೂರದಿಂದ ಇಂಥ ಪರದೆ ಒಂದೇ ಬಟ್ಟೆಯಿಂದ ಮಾಡಿದ ಪರದೆಯ ಹಾಗೆ ಕಾಣುತ್ತದೆ.

ಧರ್ಮೇಂದ್ರ

ಪ್ರವಾಸ ದೃಶ್ಯಗಳಂಥ ದೊಡ್ಡ ದೊಡ್ಡ ದೃಶ್ಯಗಳನ್ನು ತೋರಿಸಲು ಸಿನೇರಾಮಾ ಅತ್ಯುತ್ಕೃಷ್ಟ ಸಾಧನವಾಗಿದೆ. ಆದರೆ ಅದರಲ್ಲಿ ಕ್ಲೋಸ್ ಅಪ್ ರೀತಿ ಸಾಧ್ಯವಿಲ್ಲ. ಮಾತ್ರವಲ್ಲ, ಅಂಥ ಚಿತ್ರಗಳನ್ನು ನಿರ್ಮಿಸಲಿಕ್ಕೂ ಪ್ರದರ್ಶಿಸಲಿಕ್ಕೂ ವಿಶೇಷ ತೊಂದರೆ ತೊಡರುಗಳಿರುವುದರಿಂದ ಅವು ಸರ್ವಸಾಮಾನ್ಯವಾಗುವುದು ಅಸಂಭವ.

(b) ಸಿನೆಮಾಸ್ಕೋಪ್: ಈ ಅಗಲ ಪರದೆಯ ವಿಧಾನ ಎಲ್ಲ ದೇಶಗಳಲ್ಲಿ ಸರ್ವಸಾಮಾನ್ಯವಾಗಿದೆ. ಟ್ವೆಂಟಿಯತ್ ಸೆಂಚುರಿ ಫಾಕ್ಸ್ ಸಂಸ್ಥೆ ಇದನ್ನು ತನ್ನ ಚಿತ್ರಗಳಲ್ಲಿ ಮೊದಲು ಬಳಕೆಗೆ ತಂದಿತು. ಸಾಮಾನ್ಯ ಚಲಚ್ಚಿತ್ರ ಪರದೆಯ ದರ್ಶನ ಪ್ರಮಾಣ 1.33:1 ಆಗಿರುತ್ತದೆ. ಅಂದರೆ, ಪರದೆಯ ಎತ್ತರ 12 ಅಡಿ ಇದ್ದರೆ, ಅದರ ಅಗಲ 1.33 x 12. ಅಂದರೆ 16 ಅಡಿ ಆಗುವುದು. ಸಿನೆಮಸ್ಕೋಪ್ ದೃಶ್ಯದ ಪ್ರಮಾಣ 2.55:1 ಇರುತ್ತದೆ. ಅಂದರೆ ಪರದೆಯ ಎತ್ತರ ಅದೇ 12 ಅಡಿಯಿದ್ದರೆ, ಅದರ ಅಗಲ 2.55 x 12 ಅಂದರೆ 30 ಅಡಿ 7 ಇಂಚು ಆಗುವುದು. ಇಂಥ ಚಿತ್ರಗಳಿಗೆ ಸಾಮಾನ್ಯವಾಗಿ ಉಪಯೋಗಿಸುವ 35 ಮಿಮೀ. ಪಟಲವನ್ನೇ ಛಾಯಾಗ್ರಹಣಕ್ಕೂ ಛಾಯಾಪ್ರಕ್ಷೇಪಕ್ಕೂ ಉಪಯೋಗಿಸ ಬಹುದಾಗಿದೆ. ಆದುದರಿಂದ ಇಂಥ ಚಿತ್ರಗಳನ್ನು ನಿರ್ಮಿಸಲಿಕ್ಕೂ ಪ್ರದರ್ಶಿಸಲಿಕ್ಕೂ ವಿಶೇಷ ತೊಂದರೆ ತೊಡಕುಗಳಿಲ್ಲ. ಪ್ರದರ್ಶನ ಮಂದಿರಗಳು ಮಾತ್ರ ಅಗಲಪರದೆಯನ್ನು ಉಪಯೋಗಿಸಬೇಕಾಗಿದೆ. ಈ ಪರದೆ ಸಾಮಾನ್ಯವಾಗಿ ಹತ್ತಿಬಟ್ಟೆಯದ್ದೇ ಆಗಿದ್ದು, ಅದರ ಮೇಲೆ ಪ್ಲಾಸ್ಟಿಕ್ಕಿನ ಒಂದು ಲೇಪವನ್ನು ಸವರಿರುತ್ತಾರೆ. ಪರದೆಯ ಮೇಲೆ ಚಿತ್ರಕ್ಕೆ ಇರಬಹುದಾದ ಪ್ರತಿಚ್ಛಾಯೆಯನ್ನು ಪ್ರೇಕ್ಷಕರ ಕಡೆಗೇ ತಿರುಗಿಸಲು, ಪರದೆಗೆ ಲೋಹದ ಒಂದು ತೆಳ್ಳನೆಯ ಉಬ್ಬುಲೇಪವನ್ನೂ ಕೊಡುತ್ತಾರೆ.

ಛಾಯಾಗ್ರಹಣಕ್ಕೆ ಸಾಮಾನ್ಯ ಚಲಚ್ಚಿತ್ರ ಕ್ಯಾಮರವನ್ನು ಉಪಯೋಗಿಸಬಹುದಾದರೂ ಕ್ಯಾಮರದೊಳಗೆ ಒಂದು ಅನಮಾರ್ಫಿಕ್ ಉಪಯೋಗಿಸಬೇಕಾಗಿದೆ. ಇದು ರೂಢಿಯಲ್ಲಿರುವ ಗೋಳಾಕಾರದ ಮಸೂರವಾಗದೆ, ವರ್ತುಲ ಸ್ತಂಭಾಕೃತಿಯದಾಗಿರುತ್ತದೆ. ಇದರ ಉಪಯೋಗವನ್ನು ಫ್ರೆಂಚ್ ವಿಜ್ಞಾನಿ ಹೆನ್ರಿ ಕ್ರೆಟಿಯೆ ಕಂಡುಹಿಡಿದ. ಈ ಮಸೂರ ವಿಶಾಲದೃಶ್ಯವನ್ನು ಒತ್ತುಗುಂಪಾಗಿ ಅಂದರೆ ಸಂಕೋಚಸ್ಥಿತಿಯಲ್ಲಿ, ಪಟಲದಲ್ಲಿ ಸೇರಿಸುತ್ತದೆ. ಉದಾಹರಣೆಗಾಗಿ, 7 ಅಡಿ ಎತ್ತರ 3 ಅಡಿ ಅಗಲವಿರುವ ಒಂದು ಬಾಗಿಲು ಇದ್ದರೆ ಅದನ್ನು ಈ ಮಸೂರ 7 ಅಡಿ ಎತ್ತರ 1ಅಡಿ ಅಗಲದ ಬಾಗಿಲಾಗಿ ಚಿತ್ರಪಟದಲ್ಲಿ ತೋರಿಸುವುದು. ಆದುದರಿಂದ ವಿಶಾಲವಾದ ದೃಶ್ಯಗಳ ಅಂಚು ಕೂಡ ಸ್ವಲ್ಪವೂ ಅಸ್ಪಷ್ಟತೆಯಿಲ್ಲದೆ 35 ಮಿಮೀ.ನ ಪಟಲದೊಳಗೆ ಸೇರಿಬಿಡುವುದು. ಚಿತ್ರ ಪ್ರಕ್ಷೇಪಕ್ಕೆ, ಪ್ರಕ್ಷೇಪಕದೊಳಗೆ ಚಿತ್ರವನ್ನು ವಿಸ್ತರಿಸುವ ಇನ್ನೊಂದು ರೀತಿಯ ಅನಮಾರ್ಫಿಕ್ ಮಸೂರ ಇರಬೇಕಾಗುತ್ತದೆ. ಇದು ಸಂಕೋಚ ಸ್ಥಿತಿಗೊಂಡಿರುವ ಚಿತ್ರವನ್ನು ವಿಸ್ತರಿಸಿ, ಅದಕ್ಕಿರುವ ನೈಜ ಪರಿಣಾಮವನ್ನು ಪರದೆಯ ಮೇಲೆ ಕೊಡುತ್ತದೆ. ಅಂದರೆ ವಿಶಾಲ ದೃಶ್ಯ ಪರದೆಯ ಮೇಲೆ ವಿಶಾಲವಾಗಿಯೇ ಶುಭ್ರವಾಗಿ ಕಾಣಬರುವುದು. ಈಗೀಗ ಸಿನೆಮಾಸ್ಕೋಪ್ ಚಿತ್ರಗಳಿಗೆ 35 ಮಿಮಿ. ಪಟಲದ ಬದಲು 55.625ಮಿಮಿ. ಅಗಲದ ಪಟಲವನ್ನು ಉಪಯೋಗಿಸಿಲಿಕ್ಕೆ ಪ್ರಾರಂಭಿಸಿದ್ದಾರೆ. ಇದರಿಂದ ಪರದೆಯ ಮೇಲಿನ ಚಿತ್ರ ಮತ್ತಷ್ಟು ನಿರ್ದುಷ್ಟವಾಗಿಯೂ ಶುಭ್ರವಾಗಿಯೂ ಕಾಣುವುದು.

ರೆಹನಾ ಸುಲ್ತಾನ್

(c) ವಿಸ್ಟಾವಿಷನ್ : ಈ ವಿಧಾನವನ್ನು ಪ್ಯಾರಮೌಂಟ್ ಫಿಲ್ಮ್ ಸಂಸ್ಥೆ ಮೊದಲು ಬಳಕೆಗೆ ತಂದಿತು. ಈ ವಿಧಾನದಲ್ಲಿ ಛಾಯಾಗ್ರಾಹಕದಲ್ಲಿಯೂ ಛಾಯಾಪ್ರಕ್ಷೇಪಕದಲ್ಲಿಯೂ 35 ಮಿಮೀ.ನ ಪಟಲವನ್ನು ಲಂಬವಾಗಿ ಉಪಯೋಗಿಸದೆ, ಸಮತಲವಾಗಿ ಹಾದುಹೋಗುವಂತೆ ಮಾಡುತ್ತಾರೆ. ಹೀಗೆ ಮಾಡುವುದರಿಂದ ಚಿತ್ರಕ್ಕೆ 2ಪಾಲಷ್ಟು ಹೆಚ್ಚಿನ ಪರಿಮಾಣ ಸಿದ್ಧಿಸುತ್ತದೆ. ಪ್ರದರ್ಶನದ ಸಮಯ ಚಿತ್ರಕ್ಕೆ ವಿಶೇಷ ವಿಸ್ತರಣೆ ಅಗತ್ಯವಿಲ್ಲದೆ, ಪರದೆಯ ಮೇಲಿನ ಚಿತ್ರ ವಿಶೇಷವಾಗಿ ಸ್ಪಷ್ಟವಾಗಿಯೂ ಶುಭ್ರವಾಗಿಯೂ ಕಾಣಬರುತ್ತದೆ. ಈಗೀಗ ಈ ವಿಧಾನದಲ್ಲಿಯೂ 55.625 ಮಿ.ಮೀ. ಅಗಲದ ಪಟಲವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿ ಅಗಲ ಪರದೆಯ ಮೇಲಿನ ಚಿತ್ರಕ್ಕೆ ಇನ್ನಷ್ಟು ಸ್ವಚ್ಛತೆ ಬರುವಂತೆ ಮಾಡುತ್ತಿದ್ದಾರೆ. ಆದರೆ ಈ ವಿಧಾನಕ್ಕೆ ಪಟಲ ಸಮತಲವಾಗಿ ಹಾದುಹೋಗುವಂತೆ ಅನುಕೂಲಿಸುವ ಹೊಸ ಮಾದರಿಯ ಛಾಯಾಗ್ರಾಹಕಗಳೂ ಛಾಯಾ-ಪ್ರಕ್ಷೇಪಕಗಳೂ ಬೇಕಾಗಿವೆ.

(d) ಟಾಡ್-KN (Todd-AO) : ಇದು ಅಗಲ ಪರದೆಯ ಚಿತ್ರಗಳಲ್ಲಿ ಮತ್ತೊಂದು ವಿಧಾನ. ಇದರಲ್ಲಿ 65 ಮಿಮೀ ಅಗಲದ ಪಟಲವನ್ನು ಉಪಯೋಗಿಸುತ್ತಾರೆ. ಸಿನೆಮಾಸ್ಕೋಪ್ ಮತ್ತು ವಿಸ್ಟಾವಿಷನ್ ವಿಧಾನಗಳಲ್ಲಿರುವಂತೆ ಇಲ್ಲಿಯೂ ಛಾಯಾಗ್ರಹಣಕ್ಕೆ ಮತ್ತು ಚಿತ್ರಪ್ರದರ್ಶನಕ್ಕೆ ಒಂದೇ ಕ್ಯಾಮರ ಮತ್ತು ಒಂದೇ ಪ್ರಕ್ಷೇಪಕ ಸಾಕಾಗುತ್ತದೆ. ಆದರೆ ಅವುಗಳಲ್ಲಿ 65 ಮಿಮೀ. ಅಗಲದ ಪಟಲ ಹಾದು ಹೋಗಲು ಅನುಕೂಲವಾಗುವಂತೆ ಅವುಗಳ ನಿರ್ಮಾಣ ಆಗಬೇಕಾಗಿದೆ. ಪರದೆ ಸಿನೇರಾಮಾದಲ್ಲಿದ್ದಂತೆ ವಕ್ರಾಕೃತಿಯುಳ್ಳದ್ದಾಗಿದೆ. ಅದು 25 ಅಡಿ ಎತ್ತರವಾಗಿದ್ದು, ಅದರ ಅಗಲ, ಒಂದು ಬದಿಯಿಂದ ಇನ್ನೊಂದು ಬದಿಗೆ ನೇರವಾಗಿ 56 ಅಡಿ ಇರುತ್ತದೆ. ವಕ್ರಾಕಾರದ ರೇಖೆಯ ಪ್ರಕಾರ ಅದರ ಅಗಲ 65 ಅಡಿ ಇರುತ್ತದೆ. ಮಧ್ಯದಲ್ಲಿ 15 ಅಡಿ ಆಳವಿರುತ್ತದೆ. ವರ್ಣಚಿತ್ರಕ್ಕೆ ಈಸ್ಟ್‌ಮನ್ ಧನ ಮತ್ತು ಋಣ ವರ್ಣ ಪಟಲಗಳನ್ನು ಉಪಯೋಗಿಸುತ್ತಾರೆ. ಘನನಾದದ ಹೆಚ್ಚಿನ ಸಾಲುಗಳು ಪಟಲದಲ್ಲಿ ಸೇರುವಂತೆ 70 ಮಿಮಿ.ನ ಪಟಲವನ್ನು ಉಪಯೋಗಿಸಬೇಕಾಗಿದೆ. ಈ ವಿಧಾನದಲ್ಲಿ ಪರದೆಯ ಮೇಲೆ ಬೀಳುವ ವರ್ಣಚಿತ್ರಗಳು ವಿಶೇಷವಾಗಿ ಸ್ಪಷ್ಟವಾಗಿಯೂ ಶುಭ್ರವಾಗಿಯೂ ಕಾಣುತ್ತವೆ.

3. 3–ಡಿ ಚಿತ್ರಗಳು : ಇವು ಮೂರು ಆಯಾಮಗಳ ಚಿತ್ರಗಳು. ನಾವು ಬಲಗಣ್ಣನ್ನು ಮುಚ್ಚಿ ಒಂದು ದೃಶ್ಯವನ್ನು ನೋಡಿ, ಆಮೇಲೆ ನಮ್ಮ ಎಡಗಣ್ಣನ್ನು ಮುಚ್ಚಿ ನಮ್ಮ ಬಲಗಣ್ಣಿಂದ ಆ ದೃಶ್ಯವನ್ನು ನೋಡಿದರೆ, ಆ ಎರಡು ದೃಶ್ಯಗಳೂ ಒಂದೇ ಆದರೂ ಅವುಗಳಲ್ಲಿ ಸ್ವಲ್ಪಮಟ್ಟಿನ ಸ್ಥಾನಪಲ್ಲಟದ ವ್ಯತ್ಯಾಸವಿರುವುದು. ಈ ಸ್ಥಾನಪಲ್ಲಟ ನಮ್ಮ ಕಣ್ಣುಗಳ ಮಧ್ಯವಿರುವ ಅಂತರವನ್ನು ಹೊಂದಿಕೊಂಡಿದೆ. ಈ ಅಂತರವನ್ನಷ್ಟೇ ಇಟ್ಟುಕೊಂಡಿರುವ ಎರಡು ಮಸೂರಗಳ ಮೂಲಕ ಆ ದೃಶ್ಯದ ಛಾಯಾಗ್ರಾಹಕವನ್ನು ಮಾಡಿದರೆ, ನಮಗೆ ಆ ದೃಶ್ಯದ ಎರಡು ಚಿತ್ರಗಳು ದೊರಕುವುವು. ಈ ಚಿತ್ರಗಳಲ್ಲಿ ಒಂದು ನಾವು ಎಡಗಣ್ಣಿಂದ ಮಾತ್ರ ನೋಡಿದಂತೆಯೂ ಇನ್ನೊಂದು ಬಲಗಣ್ಣಿಂದ ಮಾತ್ರ ನೋಡಿದಂತೆಯೂ ಇರುತ್ತದೆ. ಈ ಎರಡೂ ಚಿತ್ರಗಳನ್ನು ಅಕ್ಕಪಕ್ಕದಲ್ಲಿಟ್ಟುಕೊಂಡು, ಅವನ್ನು ಎರಡು ಮಸೂರಗಳ ಮುಖಾಂತರ ಒಂದೊಂದು ಕಣ್ಣಿಗೂ ಚಿತ್ರಕ್ಕೂ ಒಂದೊಂದು ಲೆನ್ಸಿನ ಪ್ರಕಾರ–ನೋಡಿದರೆ, ಆ ಎರಡು ಚಿತ್ರಗಳೂ ಮಿಲನವಾಗಿ, ಆ ದೃಶ್ಯ ನೈಜದಲ್ಲಿದ್ದಂತೆ ಮೂರು ಆಯಾಮಗಳುಳ್ಳ ಚಿತ್ರವಾಗಿ ಕಾಣುತ್ತದೆ. ಇದು ನಮಗೆಲ್ಲರಿಗೂ ಪರಿಚಿತವಾದ ಸ್ಟೀರಿಯೋಸ್ಕೋಪ್ ಅಥವಾ ಘನರೂಪದರ್ಶಕವಾಗಿದೆ. ಇದನ್ನು ಸರ್ ಚಾರ್ಲ್ಸ್ ವೀಟ್‌ಸ್ಟೋನ್ 1838ರಲ್ಲಿ ಮೊದಲು ಕಂಡುಹಿಡಿದ.

ಈ ಸ್ಥಾಯೀ ದೃಶ್ಯದಂತೆಯೇ ಚಲಿಸುವ ದೃಶ್ಯಗಳನ್ನೂ ನಮ್ಮ ಕಣ್ಣುಗಳ ಮಧ್ಯದಲ್ಲಿರುವ ಅಂತರವಷ್ಟನ್ನೇ ಇಟ್ಟುಕೊಂಡಿರುವ ಎರಡು ಮಸೂರಗಳ ಮುಖಾಂತರ ಎರಡು ಚಲಚ್ಚಿತ್ರ ಛಾಯಗ್ರಾಹಕಗಳಿಂದ ಚಿತ್ರರೂಪವಾಗಿ ತೆಗೆಯಬಹುದು. ಆದರೆ ಹೀಗೆ ತೆಗೆಯಲ್ಪಟ್ಟ ಎರಡು ಚಿತ್ರಗಳನ್ನೂ ಪರದೆಯ ಮೇಲೆ ಒಂದಾಗಿ ಬೀಳಿಸಿದರೆ, ಅದೊಂದು ಅಸ್ಪಷ್ಟವಾದ ಮುದ್ದೆ ಚಿತ್ರವಾಗಿ ನಮಗೆ ಕಾಣಿಸುವುದು. ಆದರೆ ಈ ಮುದ್ದೆ ಚಿತ್ರದಲ್ಲಿ ಕೂಡಿರುವ ಎರಡು ಚಿತ್ರಗಳನ್ನು ನಮ್ಮ ಕಣ್ಣುಗಳು ಬೇರ್ಪಡಿಸಿ, ಅವನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೋಡಲು ಸಾಧ್ಯವಿದ್ದರೆ, ಅವು ಸ್ವಚ್ಛತೆಯನ್ನು ತಾಳಿ ನಮಗೆ ಘನರೂಪದ ಒಂದೇ ದೃಶ್ಯವನ್ನು ಕೊಡುವುವು. ಆದುದರಿಂದ ಚಲಚ್ಚಿತ್ರದಲ್ಲಿ ಈ ಘನರೂಪವನ್ನು ನಾವು ಕಾಣಬೇಕಾದರೆ, ಪರದೆಯ ಮೇಲಿನ ಮುದ್ದೆಚಿತ್ರವನ್ನು ನಮ್ಮ ಕಣ್ಣುಗಳು ಬೇರ್ಪಡಿಸುವ ವಿಧಾನವೊಂದು ಬೇಕಾಗಿದೆ. ಅದನ್ನು ಅನಗ್ಲಿಫ್ ಎನ್ನುತ್ತಾರೆ.

ಈ ವಿಧಾನದಲ್ಲಿ, ಎರಡು ಚಲಚ್ಚಿತ್ರ ಕ್ಯಾಮರಗಳಿಂದ, ಮೇಲೆ ಹೇಳಿದಂತೆ ತೆಗೆದ ಎರಡು ಚಿತ್ರಪಟಲದಲ್ಲಿ ಒಂದಕ್ಕೆ ಹಸಿರು ಬಣ್ಣವನ್ನೂ ಮತ್ತೊಂದಕ್ಕೆ ಕೆಂಪು ಬಣ್ಣವನ್ನೂ ಕೊಟ್ಟು, ಆಮೇಲೆ ಅವೆರಡನ್ನೂ ಎರಡು ಪ್ರಕ್ಷೇಪಕಗಳ ಮೂಲಕ ಪರದೆಯ ಮೇಲೆ ಬೀಳಿಸುತ್ತಾರೆ. ನಾವು ಆ ಚಲಚ್ಚಿತ್ರವನ್ನು ಬರಿಯ ಕಣ್ಣಿಂದ ನೋಡಿದರೆ ಅದೊಂದು ಕೆಂಪು, ಹಸುರು ಮಿಶ್ರಿತ ಒಂದು ಮುದ್ದೆಚಿತ್ರವಾಗಿ ಕಾಣುವುದು. ಆದರೆ ಒಂದು ಕಣ್ಣಿಗೆ ಹಸಿರು ವರ್ಣದ ಮಸೂರ, ಇನ್ನೊಂದು ಕಣ್ಣಿಗೆ ಕೆಂಪು ವರ್ಣದ ಮಸೂರ ಇರುವ ಕನ್ನಡಕವನ್ನಿಟ್ಟುಕೊಂಡು ಅದೇ ಚಿತ್ರವನ್ನು ನೋಡಿದರೆ, ಚಿತ್ರ ಆ ಕ್ಷಣವೇ ಶುಭ್ರವಾಗಿ, ನೈಜಸ್ಥಿತಿಯಲ್ಲಿರುವಂತೆಯೇ ಘನರೂಪವನ್ನು ತಾಳಿದಂತೆ ಕಾಣಿಸುವುದು. ಇದೇಕೆಂದರೆ, ನಮ್ಮ ಕನ್ನಡಕದ ಎಡದಿಕ್ಕಿನ ಹಸಿರುವರ್ಣ, ಮುದ್ದೆಚಿತ್ರದಲ್ಲಿರುವ ಹಸುರುಭಾಗವನ್ನು ಸೋಸಿಬಿಡುತ್ತದಾಗಿ ಎಡದಿಕ್ಕಿನ ಕ್ಯಾಮರ ತೆಗೆದ ಚಿತ್ರವನ್ನೇ ನಾವು ಕಾಣುವೆವು. ಹಾಗೆಯೇ ನಮ್ಮ ಕನ್ನಡಕದ ಬಲ ದಿಕ್ಕಿನ ಕೆಂಪುವರ್ಣ, ಆ ಕೆಂಪುವರ್ಣದ ಚಿತ್ರವನ್ನು ಸೋಸಿಬಿಡುತ್ತದಾಗಿ ಬಲದಿಕ್ಕಿನ ಕ್ಯಾಮರ ತೆಗೆದ ಚಿತ್ರವನ್ನೇ ನಾವು ಕಾಣುತ್ತೇವೆ. ಹೀಗೆ ಆ ಮುದ್ದೆಚಿತ್ರದಲ್ಲಿನ ಎರಡು ಚಿತ್ರಗಳೂ ನಮ್ಮ ಕಣ್ಣುಗಳಿಗೆ ಬೇರೆ ಬೇರೆಯಾಗಿ ಒಂದೇ ಸಲ ಕಾಣಬರುತ್ತವೆ. ಈ ಸ್ಥಿತಿ ನಾವು ಎಲ್ಲ ವಸ್ತುಗಳನ್ನು ನೋಡುವಂತೆಯೇ ಆಗಿದ್ದು, ನಾವು ನೋಡುತ್ತಿರುವ ಚಲಚ್ಚಿತ್ರ ಘನರೂಪವನ್ನು ತಾಳಿದಂತೆ ನಮಗೆ ಭಾಸವಾಗುವುದು.

ಹೃಷೀಕೇಶ್ ಮುಖರ್ಜಿ

ಕೆಂಪು ಮತ್ತು ಹಸುರು ವರ್ಣಗಳ ಅನಗ್ಲಿಫ್ ವಿಧಾನದ ಬದಲು ಈಗೀಗ 3–ಡಿ ಚಿತ್ರಗಳನ್ನು ತೆಗೆಯಲು ಪೋಲರೈಸ್ಡ್ ಬೆಳಕನ್ನು, ಅಂದರೆ ಬೆಳಕಿನ ಕಿರಣಗಳ ತರಂಗಕಂಪನಗಳಿಗೆ ಒಂದು ನಿರ್ದಿಷ್ಟ ರೂಪ ಕೊಡುವ ಕಾರ್ಯರೀತಿಯನ್ನು, ಉಪಯೋಗಿಸುತ್ತಾರೆ. ದೃಶ್ಯದ ಎರಡು ಚಿತ್ರಗಳನ್ನೂ ಪರದೆಯ ಮೇಲೆ ಬೀಳಿಸುವಾಗ, ಅವುಗಳಲ್ಲೊಂದರ ಬೆಳಕಿನ ತರಂಗಕಂಪನಗಳು ಪರದೆಯ ಮೇಲ್ಭಾಗದ ಬಲದಿಕ್ಕಿನಿಂದ ಕೆಳಗಿನ ಎಡಭಾಗಕ್ಕೆ ಅಡ್ಡಹಾಯುವಂತೆಯೂ ಇನ್ನೊಂದರ ಬೆಳಕಿನ ತರಂಗಕಂಪನಗಳು ಇದಕ್ಕೆ ವಿರುದ್ಧ ರೀತಿಯಲ್ಲಿ, ಅಂದರೆ ಪರದೆಯ ಮೇಲ್ಭಾಗದ ಎಡದಿಕ್ಕಿನಿಂದ ಕೆಳಗಿನ ಬಲಭಾಗಕ್ಕೆ ಅಡ್ಡ ಹಾಯುವಂತೆಯೂ ಮಾಡುತ್ತಾರೆ. ಪ್ರಕ್ಷೇಪಕಗಳಲ್ಲಿ ಪೋಲರೈಸಿಂಗ್ ಸೋಸಕಗಳನ್ನಿಟ್ಟು ಈ ರೀತಿ ಮಾಡಲು ಸಾಧ್ಯವಿದೆ. ಪರದೆಯ ಮೇಲೆ ಬಿದ್ದ ತರಂಗಕಂಪನಗಳಿಗನುಸಾರವಾಗಿ ಮಸೂರಗಳಿರುವ ಕನ್ನಡಕವನ್ನು (ಪೋಲರೈಸ್ಡ್ ಗ್ಲ್ಯಾಸಸ್) ಇಟ್ಟುಕೊಂಡರೆ, ಪರದೆಯ ಮೇಲೆ ಮಿಲನಗೊಂಡಿದ್ದ ಎರಡು ಚಿತ್ರಗಳು ಬೇರೆಬೇರೆಯಾಗಿ ಒಂದೇ ಸಮಯ ಕಾಣಬಂದು ಅವು ಘನರೂಪವನ್ನು ತಾಳಿಕೊಂಡ ಒಂದೇ ಚಿತ್ರವಾಗಿ ತೋರುವುದು. ಈ ವಿಧಾನ ಹಳೆಯ ಅನಗ್ಲಿಫ್ ವಿಧಾನ ಕೊಡುವುದಕ್ಕಿಂತ ಹೆಚ್ಚು ಶುಭ್ರವಾದ ಚಿತ್ರಗಳನ್ನು ನಮಗೆ ಒದಗಿಸಿಕೊಡುತ್ತದೆ. ಅಲ್ಲದೆ, ಅನಗ್ಲಿಫ್ ವಿಧಾನದಲ್ಲಿ ವರ್ಣಚಿತ್ರಗಳು ಸಾಧ್ಯವಿಲ್ಲ. ಈ ವಿಧಾನದಲ್ಲಿ ಅವು ಸಾಧ್ಯವಾಗಿವೆ

ರಾಜೇಶ್ ಖನ್ನಾ

ಚಲಚ್ಚಿತ್ರದ ಇತರ ಯಾವ ಸುಧಾರಣೆಯೂ ಸಾಧಿಸದಿರುವ ತೀರ ಬೆಡಗಿನ ಅನುಭವವನ್ನು ಪ್ರೇಕ್ಷಕರು 3–ಡಿ ಚಿತ್ರಗಳಿಂದ ಪಡೆಯುತ್ತಾರೆ. ಈ ಚಿತ್ರಗಳು ಎಷ್ಟು ನೈಜವಾಗಿ ಕಾಣುತ್ತವೆಯೆಂದರೆ ಚಿತ್ರಗಳಲ್ಲಿರುವ ಒಂದು ಹಾವು ಇಲ್ಲವೆ ಓಡುವ ಕುದುರೆ ಪ್ರೇಕ್ಷಕರ ಕಡೆಗೆ ಬರುವಂತಾದರೆ, ಅವರು ಹೆದರಿಕೊಂಡು ಚೀರಿ, ಕುಳಿತಲ್ಲಿಂದ ಎದ್ದು ಹೋಗಲು ಪ್ರಯತ್ನಿಸುತ್ತಾರೆ; ಈ 3–ಡಿ ವಿಧಾನವೇನೂ ಹೊಸತಲ್ಲ. 70–80 ವರ್ಷಗಳ ಹಿಂದೆಯೇ ಅದು ಕಂಡುಹಿಡಿಯಲ್ಪಟ್ಟಿತ್ತು. ಆದರೆ ಅವನ್ನು ನೋಡಲು ಪ್ರತಿಯೊಬ್ಬ ಪ್ರೇಕ್ಷಕನಿಗೆ ಆ ಹಸುರು ಮತ್ತು ಕೆಂಪು ಲೆನ್ಸುಗಳಿರುವ ಇಲ್ಲವೆ ಪೋಲರೈಸ್ಡ್ ಮಸೂರಗಳಿರುವ ಕನ್ನಡಕವನ್ನು ಒದಗಿಸಿ ಕೊಡಬೇಕಾಗಿದೆ. ಇದೊಂದು ವಿಪರೀತ ತೊಂದರೆಯ ಕೆಲಸವಾಗಿ ಈಗ 3–ಡಿ ಚಿತ್ರಗಳು ರೂಢಿಯಲ್ಲಿಲ್ಲ. ಅಲ್ಲದೆ ಈ ಚಿತ್ರಗಳು ಸಾಧಿಸುವ ಪರಿಣಾಮವನ್ನು ಬಹುಮಟ್ಟಿಗೆ ಈಗಿನ ಅಗಲ ಪರದೆ ಚಿತ್ರಗಳು ಸಾಧಿಸುತ್ತಿವೆ.

4. ಪರ್ಸಪೆಕ್ಟಾ–ಸ್ಟೀರಿಯೊಫೋನಿಕ್ ಸೌಂಡ್ : ನಮ್ಮ ಎರಡೂ ಕಣ್ಣುಗಳಿಂದ ನಾವೊಂದು ದೃಶ್ಯವನ್ನು ನೋಡಿದರೆ, ಆ ದೃಶ್ಯಕ್ಕೆ ಹೇಗೆ ಘನರೂಪ ಬರುವುದೋ ಹಾಗೆಯೇ ನಮ್ಮ ಎರಡೂ ಕಿವಿಗಳು ಒಂದು ಸದ್ದನ್ನು ಕೇಳಿದರೆ ಆ ಸದ್ದಿಗೆ ಒಂದು ವಿಶೇಷ ಪುಷ್ಟಿ ಬರುವುದು. ಆದುದರಿಂದ ಚಲಚ್ಚಿತ್ರ ಪಟಲದ ಬದಿಯಲ್ಲಿರುವ ಶಬ್ದಜಾಡಿನಿಂದ ಹೊರಡುವ ಸದ್ದನ್ನು ಒಂದು ಕೃತಕ ಮೂಲದಿಂದ ಎರಡು ಪ್ರವಾಹಮಾರ್ಗಗಳಿಂದ ಹೋಗುವಂತೆ ಮಾಡಿ, ಅವುಗಳಲ್ಲೊಂದು ಪರದೆಯ ಹಿಂದೆ ಒಂದು ಪಕ್ಕದಲ್ಲಿಟ್ಟಿರುವ ಧ್ವನಿವರ್ಧಕವನ್ನು ಸೇರುವಂತೆಯೂ ಇನ್ನೊಂದು ಹಾಗೆಯೇ ಪರದೆಯ ಇನ್ನೊಂದು ಪಕ್ಕದಲ್ಲಿಟ್ಟಿರುವ ಧ್ವನಿವರ್ಧಕವನ್ನು ಸೇರುವಂತೆಯೂ ಮಾಡಿದರೆ, ಆ ಎರಡು ಧ್ವನಿವರ್ಧಕಗಳಿಂದ ಹೊರಡುವ ಸದ್ದು ವಿಶೇಷ ಪುಷ್ಟಿಯನ್ನು ತಾಳುವುದು. ಏಕೆಂದರೆ ಆ ಸದ್ದಿನ ಪ್ರವಾಹ ಮಾರ್ಗಗಳಲ್ಲೊಂದು ನಮ್ಮ ಬಲಕಿವಿಯ ಆಚೆಯಿಂದಲೂ ಇನ್ನೊಂದು ನಮ್ಮ ಎಡಕಿವಿಯ ಆಚೆಯಿಂದಲೂ ಬರುವಂತಾಗುವುದು. ಈ ಧ್ವನಿವರ್ಧಕಗಳ ಅಂತರ ಆದಷ್ಟು ಹೆಚ್ಚು ಇರುವುದು ಒಳ್ಳೆಯದು. ಪಟಲದ ಶಬ್ದಜಾಡಿನ ಕೃತಕ ಮೂಲದಿಂದ ಮತ್ತೊಂದು ಪ್ರವಾಹಮಾರ್ಗ ಸಾಧ್ಯವಾದರೆ, ಅದನ್ನು ಪರದೆಯ ಹಿಂದುಗಡೆ ಮಧ್ಯದಲ್ಲಿಟ್ಟಿರುವ ಧ್ವನಿವರ್ಧಕವನ್ನು ಸೇರುವಂತೆ ಮಾಡಬಹುದು. ಹೀಗೆ ಉಂಟುಮಾಡುವ ಸದ್ದಿಗೆ ಸ್ಟೀರಿಯೋಫೋನಿಕ್ ನಾದ ಅಥವಾ ಘನನಾದವೆಂದು ಕರೆಯುತ್ತಾರೆ. ಇದು ಬರೇ ದೊಡ್ಡ ಸದ್ದು ಅಥವಾ ಗಟ್ಟಿ ಶಬ್ದವಲ್ಲ; ಇದು ಪುಷ್ಟಿಹೊಂದಿದ ಸದ್ದು, ಘನ ಗುಣವನ್ನು ಪಡೆದ ಸದ್ದು. ಸದ್ದಿಗೆ ಇನ್ನಷ್ಟು ಪುಷ್ಟಿ ಬರುವಂತೆ, ಪ್ರೇಕ್ಷಕರ ಮೇಲ್ಗಡೆಯಲ್ಲಿಯೂ ಹಿಂದುಗಡೆಯಲ್ಲಿಯೂ ಧ್ವನಿವರ್ಧಕಗಳನ್ನಿಡುವುದುಂಟು. ಆದರೆ ಇವನ್ನು ಹೆಚ್ಚಾಗಿ ಭೂಕಂಪ, ಯುದ್ಧ, ಜಂಝಾವಾರುತ, ಕೋಲಾಹಲ ಮೊದಲಾದುವನ್ನು ಚಲಚ್ಚಿತ್ರದಲ್ಲಿ ತೋರಿಸುವಾಗ ಮಾತ್ರ ಸಕ್ರಿಯಗೊಳಿಸುತ್ತಾರೆ.

ಚಲನಚಿತ್ರಗಳಿಗೆ ಅಗಲ ಪರದೆ ಬಂದಾಗ ಶಬ್ದವ್ಯವಸ್ಥೆಯಲ್ಲಿ ಮತ್ತೊಂದು ಸುಧಾರಣೆಯನ್ನು ಕೈಕೊಳ್ಳಬೇಕಾಯಿತು. ಪರದೆ ಸಣ್ಣದಿರುವಾಗ ಚಿತ್ರದ ಯಾವ ಭಾಗದಿಂದ ಒಂದು ಸದ್ದು ಬಂದರೂ ಅದು ಆ ಭಾಗದಿಂದಲೇ ಬರುವಂತಾಗಿದೆ ಎಂಬ ಭಾವನೆ ನಮ್ಮಲ್ಲಿ ಉಂಟಾಗುತ್ತದೆ. ಆದರೆ ಅಗಲಪರದೆಯ ಚಿತ್ರಗಳಲ್ಲಿ ನಾವು ಈ ರೀತಿ

ಭ್ರಮೆಗೊಳ್ಳುವುದು ಕಷ್ಟವಾಗುತ್ತದೆ. ವಿಶಾಲವಾದ ಅಗಲಪರದೆಯ ಚಿತ್ರದ ಬಲದಿಕ್ಕಿನ ಒಂದು ಮೂಲೆಯಿಂದ ಒಂದು ಸದ್ದು ಅಥವಾ ಮಾತು ಬರುವಂತಾದರೆ, ಅದು ಚಿತ್ರದ ಆ ಕಡೆಯಿಂದಲೇ ಬರುವಂತೆ ನಮಗೆ ಭಾಸವಾಗುತ್ತದೆ. ಇಡೀ ಚಿತ್ರದೊಳಗಿನ ಆ ಸದ್ದು ಬಂದ ಹಾಗೆ ನಮಗೆ ಕಂಡರೆ, ಚಿತ್ರದ ಇಡೀ ಪರಿಣಾಮ ಕೆಟ್ಟುಹೋಗುತ್ತದೆ. ಆದುದರಿಂದ ಈಗ ಅಗಲಪರದೆಯ ಚಿತ್ರಗಳಿಗೆ ಮುಂಚಿನ ಚಿತ್ರಪಟಲಗಳಿದ್ದಂತೆ ಒಂದು ಇಲ್ಲವೆ ಎರಡು ಶಬ್ದ ಜಾಡುಗಳು ಮಾತ್ರ ಇರುವುದಿಲ್ಲ. ಅವು 4 ರಿಂದ 7ರ ವರೆಗೂ ಇರುತ್ತವೆ. ಇವುಗಳಲ್ಲಿನ ಒಂದೊಂದು ಜಾಡೂ, ಪರದೆಯ ಹಿಂದುಗಡೆ, ಇಲ್ಲವೆ ಬಳಿಯಲ್ಲಿ, ಇಲ್ಲವೆ ಪ್ರೇಕ್ಷಾಗೃಹದೊಳಗೆ ಇರಿಸಿದ, ಮತ್ತು ಅದಕ್ಕೆ ಸರಿಹೋಗುವ, ಧ್ವನಿವರ್ಧಕಗಳನ್ನು ಮಾತ್ರ ಚೇತನಗೊಳಿಸುತ್ತದೆ. ಹೀಗೆ ಪರದೆಯ ಮೇಲೆ ಚಿತ್ರದ ಯಾವ ಕಡೆಯಿಂದ ಸದ್ದು ಬರಬೇಕಾಗುವುದೋ ಅದೇ ಕಡೆಯಿಂದ ಅದು ಬರುವಂತೆ ಮಾಡಲು ಸಾಧ್ಯವಿದೆ. ಈ ರೀತಿ ಮಾಡುವುದರಿಂದ ಚಿತ್ರದ ನೈಜತೆ ಮತ್ತಷ್ಟು ಹೆಚ್ಚುತ್ತದೆ. ಈ ರೀತಿ ಸಾಧಿಸಲ್ಪಡುವ ಸದ್ದನ್ನು ಪರ್ಸ್‌ಪೆಕ್ಟಾ ಸದ್ದು ಎಂತಲೂ ಡೈರೆಕ್ಷನಲ್ ಸದ್ದು ಎಂತಲೂ ಕರೆಯುತ್ತಾರೆ. ಈ ದಿಸೆಯಲ್ಲಿನ ಮುಂದಿನ ಹೆಜ್ಜೆ. ಡಾಲ್ಬಿ, ಡಿ.ಟಿ.ಎಸ್ ವ್ಯಾಪಾರಿ ನಾಮಗಳಿಂದ ಬಳಕೆಯಲ್ಲಿರುವ ಡಿಜಿಟಲ್ ತಂತ್ರಜ್ಞಾನದ ಉಪಕರಣಗಳು.

5. ಅಲ್ಟ್ರಾಫೆಕ್ಸ್ : ಚಲಚ್ಚಿತ್ರ ಉದ್ಯಮದಲ್ಲಿ ಮತ್ತೊಂದು ವಿಶೇಷವಾದ ಸುಧಾರಣೆ ಎಷ್ಟೋ ವರ್ಷಗಳಿಂದ (1951–52ರಿಂದ) ಪ್ರಯೋಗಕ್ಕೆ ಸಿದ್ಧವಿದೆ. ಟೆಲಿವಿಷನ್ ಪಾಶ್ಚಾತ್ಯ ದೇಶಗಳಲ್ಲಿ ಈಗ ಸರ್ವ ಸಾಮಾನ್ಯವಾಗಿದೆ. ಭಾರತದಲ್ಲೂ ಕಾಲಿಟ್ಟಿದೆಯಷ್ಟೆ. ಆದರೆ ಟೆಲಿವಿಷನ್‌ನಲ್ಲಿ ಬರುವ ದೃಶ್ಯಗಳು ತೀರ ಚಿಕ್ಕ ಪರಿಮಾಣಗಳುಳ್ಳವು. 1951–52ರ ಸುಮಾರಿಗೆ ಅಮೆರಿಕದ ವಾಷಿಂಗ್ಟನಿನಲ್ಲಿ ಮುಚ್ಚುಮರೆಯಿಂದ ನಡೆಯಿಸಿದ ಒಂದು ಪ್ರಯೋಗದಲ್ಲಿ ಒಂದು ಚಲಚ್ಚಿತ್ರ ಸ್ಟೂಡಿಯೊ ತನ್ನದೊಂದು ಇಡೀ ಚಿತ್ರವನ್ನು ಶಬ್ದಪೂರ್ಣವಾಗಿಯೂ ಪೂರ್ಣ–ಪರಿಮಾಣವುಳ್ಳದ್ದಾಗಿಯೂ ಒಂದು ಮಂದಿರದಲ್ಲಿ ಚಲಚ್ಚಿತ್ರಗಳು ತಯಾರಾಗುವ ಸ್ಟೂಡಿಯೋ ಗಳಿಂದಲೇ ಅವನ್ನು ನೇರವಾಗಿ ಸಾವಿರಾರು ಚಲಚ್ಚಿತ್ರ ಮಂದಿರಗಳಲ್ಲಿ ಏಕಕಾಲದಲ್ಲಿ ಪೂರ್ಣಪರಿಣಾಮ ದಲ್ಲಿ ಬಿತ್ತರಿಸಲು ಸಾಧ್ಯವಿದೆಯೆಂದು ಈ ಪ್ರಯೋಗ ನಿಸ್ಸಂಶಯವಾಗಿ ತೋರಿಸಿಕೊಟ್ಟಿತು. ಈ ಪ್ರಯೋಗ ಇನ್ನೂ ರೂಢಿಯಲ್ಲಿ ಬಾರದಿರುವುದ ರಿಂದ ಅದಕ್ಕೆ ನಿರ್ದಿಷ್ಟವಾದು ದೊಂದು ಹೆಸರಿಲ್ಲ. ಅದಕ್ಕೆ ತಾತ್ಕಾಲಿಕ ವಾಗಿ ಅಲ್ಟ್ರಾಫೆಕ್ಸ್ ಎಂದು ಹೆಸರಿಟ್ಟಿದ್ದಾರಷ್ಟೆ. ಈ ಪ್ರಯೋಗ ನಡೆದು ನಾಲ್ಕು ದಶಕಗಳಾದರೂ ಅದು ಇನ್ನೂ ಪ್ರಚಾರಕ್ಕೆ ಬಾರದಿರವ ಕಾರಣ ಇಷ್ಟೇ–ಚಲಚ್ಚಿತ್ರ ಉದ್ಯಮ ಈ ಸುಧಾರಣೆಯನ್ನು ಈಗ ಕೈಕೊಂಡರೆ, ಉದ್ಯಮದಲ್ಲಿರುವ ಲೋಕದ ಸಾವಿರಾರು ಚಿತ್ರ ಹಂಚಿಕೆಗಾರರ ಗತಿಯೇನು? ಹಾಗೆಯೇ ಪ್ರತಿ ದೇಶದಲ್ಲಿರುವ ಅನೇಕಾನೇಕ ಚಲಚ್ಚಿತ್ರ ರಾಸಾಯನಿಕ ಪ್ರಯೋಗಶಾಲೆಗಳ ಗತಿಯೇನು? ಉದ್ಯಮದಲ್ಲಿ ಈ ಸುಧಾರಣೆ ಮಹಾಕ್ರಾಂತಿಕಾರಕ ಬದಲಾವಣೆಗಳನ್ನು ತಂದೊಡ್ಡುವುದರಲ್ಲಿ ಸಂಶಯವಿಲ್ಲ. ಹಾಯಾಗಿ ಸಾಗಿಹೋಗುತ್ತಿರುವ ನಾವೆಯನ್ನು ಅಲುಗಾಡಿಸಲೇಕೆ? ಇಂಥ ವಿಚಾರಗಳಿಂದಲೇ ಚಲಚ್ಚಿತ್ರ ಉದ್ಯಮ 1924–25 ರಲ್ಲಿ ವಾಕ್ ಚಿತ್ರದ ಆಗಮನವನ್ನು ಐದು ವರ್ಷಗಳವರೆಗೆ ಅದುಮಿ ಇಟ್ಟುಕೊಂಡಿತ್ತು. ಏನಿದ್ದರೂ ಈ ಪ್ರಯೋಗ ಚಲಚ್ಚಿತ್ರ ಉದ್ಯಮದ ಮುಂದಿನ ಪ್ರಗತಿಯ ರೇಖಾರೂಪವನ್ನು ನಿಸ್ಸಂಶಯವಾಗಿ ತೋರಿಸುತ್ತದೆ.

ಶರ್ಮಿಳಾ ಟಾಗೋರ್

1960 ರಿಂದ ಈಚೆಗೆ: 1960ರಿಂದ ಈಚೆಗೆ ಚಲನಚಿತ್ರರಂಗದಲ್ಲಿ ಹಿಂದೊಂದೂ ಕಾಣದ ಉತ್ಕರ್ಷವನ್ನು ನೋಡಬಹುದಾಗಿದೆ. ಅಮೆರಿಕ ಮತ್ತು ಇಂಗ್ಲೆಂಡುಗಳ ಜೊತೆ ಇತರ ಐರೋಪ್ಯ ರಾಷ್ಟ್ರಗಳಾದ ಫ್ರಾನ್ಸು, ಇಟಲಿ, ಜರ್ಮನಿ, ಸೋವಿಯೆತ್ ದೇಶ, ಸ್ವೀಡನ್, ಸ್ಪೇನ್, ಗ್ರೀಸ್, ಡೆನ್‌ಮಾರ್ಕ್, ಹಂಗರಿ, ಪೋಲೆಂಡ್, ಚೆಕೊಸ್ಲೊವಾಕಿಯ, ಆಸ್ಟ್ರಿಯ, ಸ್ವಿಟ್ಜರ್‌ಲೆಂಡ್, ಮೊದಲಾದವೂ ಜಪಾನ್, ಕೆನಡ, ಭಾರತ, ಬ್ರಜಿಲ್ ಮೊದಲಾದವೂ ಚಲನಚಿತ್ರ ಪ್ರಪಂಚದಲ್ಲಿ ಗಮನಾರ್ಹವಾದ ಕೆಲಸ ಮಾಡುತ್ತಿವೆ. ಭಾರತದ ಚಿತ್ರಗಳಿಗೆ ಅಂತಾರಾಷ್ಟ್ರೀಯ ಪ್ರಶಂಸೆಯೂ ಮಾರುಕಟ್ಟೆಯೂ ದೊರೆಯುತ್ತಿದೆ. ಮುಂಬಯಿ ಭಾರತದ ಹಾಲಿವುಡ್. ಎಂಬ ಖ್ಯಾತಿಯನ್ನು ಗಳಿಸಿದೆ. ಇದನ್ನು ಈಗ ಬಾಲಿವುಡ್ ಎಂದೂ ಕರೆಯುತ್ತಾರೆ. ಇದರೊಡನೆ ಸ್ಪರ್ಧಿಸಬಲ್ಲ ಇನ್ನೊಂದು ಕ್ಷೇತ್ರವೆಂದರೆ ಚೆನ್ನೈ. ಒಟ್ಟಿನಲ್ಲಿ ಪ್ರಪಂಚದ ಇಂದಿನ ಚಿತ್ರರಂಗದ ಮುಖ್ಯ ರೂಪರೇಷೆಗಳನ್ನು ಹೀಗೆ ಸಂಗ್ರಹಿಸಬಹುದು. ಲೈಂಗಿಕ ವಿಷಯಗಳು, ಗೂಢಚರ್ಯೆ, ಕೊಲೆ ದರೋಡೆಗಳು, ಸಾಂಸಾರಿಕ ಜೀವನದ ನಿಗೂಢ ಸಮಸ್ಯೆಗಳು, ಸುಪ್ತಮಾನಸದ ವಿಚಿತ್ರ ವರ್ತನೆಗಳ ಚಿತ್ರಣ, ನಿರಂಕುಶಾಧಿಕಾರದ ವಿರುದ್ಧ ಬಂಡಾಯ ಹೂಡಿದ ಮಹಾಪುರುಷರ ಜೀವನವೃತ್ತಾಂತ– ಈ ವಿಷಯಗಳ ನ್ನೊಳಗೊಂಡ ಚಿತ್ರಗಳಿಗೆ ಪ್ರಾಶಸ್ತ್ಯ ಬರುತ್ತಿದೆ. ಮೂರು ಆಯಾಮಗಳ ಚಿತ್ರ ಅನೇಕ ಕಾರಣಗಳಿಂದಾಗಿ ಚಾಲನೆ ಕಳೆದುಕೊಂಡಿದೆ. ಅಗಲಪರದೆ, ಟೆಕ್ನಿಕಲರ್ ಚಿತ್ರಗಳು ಅಪಾರ ಯಶಸ್ಸುಗಳಿಸುತ್ತಿವೆ. ನಗ್ನತೆ, ಪ್ರಣಯ, ಸಂಭೋಗ, ವಿಕೃತರತಿ, ಪ್ರಣಯದಲ್ಲಿ ಕ್ರೌರ್ಯ, ಮಾತ್ಸರ್ಯ–ಇವನ್ನು ನೋಡಬೇಕೆಂಬ ಜನಚಾಪಲ್ಯವನ್ನು ತೃಪ್ತಿಪಡಿಸಲು ಚಲನಚಿತ್ರ ದಿನಕ್ಕೊಂದು ಬಗೆಯ ಹೊಸ ಚಿತ್ರವನ್ನು, ತಂತ್ರವನ್ನು ಹುಡುಕುವಂತೆ ಕಾಣುತ್ತಿದೆ.

ಪದ್ಮಿನಿ ಪಿಕ್ಚರ್ಸ್‌ರವರ ಶ್ರೀಕೃಷ್ಣದೇವರಾಯ ಕನ್ನಡ ಚಿತ್ರದಲ್ಲಿ ರಾಜಕುಮಾರ್

**II ಸಣ್ಣ ಪ್ರಮಾಣದ ಚಿತ್ರಗಳು**

ಚಲಚ್ಚಿತ್ರ ಕ್ಷೇತ್ರ ಬರವಣಿಗೆಯ ಕ್ಷೇತ್ರದಂತೆ ಬಲು ವಿಸ್ತಾರವಾದುದು. ಅದು ಈ ವರೆಗೆ ಸಾಧಿಸಿದ ಮತ್ತು ಸಾಧಿಸುತ್ತಿರುವ ಕಾರ್ಯ ಸಂಪತ್ತನ್ನು ಸ್ಥೂಲವಾಗಿ ಮೂರು ವಿಧವಾಗಿ ವಿಂಗಡಿಸಬಹುದು: 1 ಮನೋರಂಜನೆಗಾಗಿ ಪ್ರಯೋಗ, 2 ದಾಖಲೆ ಕಾರ್ಯಗಳಿಗಾಗಿ ಪ್ರಯೋಗ ಮತ್ತು 3 ವಾಸ್ತವತೆಯನ್ನು ಸೃಷ್ಟಿಕಾರಕ ರೀತಿಯಲ್ಲಿ ಪ್ರತಿಪಾದನೆ ಮಾಡುವ ಪ್ರಯೋಗ. ಚಲಚ್ಚಿತ್ರ ವಾಹಕದ ಮೊದಲ ಪ್ರಯೋಗವನ್ನು ಕುರಿತು ಒಂದನೆಯ ಭಾಗದಲ್ಲಿ ಹೇಳಿದೆ. ಎರಡನೆಯ ಮತ್ತು ಮೂರನೆಯ ಪ್ರಯೋಗಗಳು ಈ ಬಗೆಯ ಚಿತ್ರಗಳನ್ನು ಒಳಗೊಂಡಿವೆ : 1 ವಾರ್ತಾ–ಚಿತ್ರಗಳು, 2 ದಾಖಲೆ ಚಿತ್ರಗಳು, 3 ಶೈಕ್ಷಣಿಕ ಚಿತ್ರಗಳು, 4 ಪ್ರಚಾರ ಚಿತ್ರಗಳು ಮತ್ತು 5 ಶುದ್ಧ ಡಾಕ್ಯುಮೆಂಟರಿಗಳು. ಇವೆಲ್ಲವೂ ಹೆಚ್ಚಾಗಿ ಸಣ್ಣ ಪ್ರಮಾಣದ ಚಿತ್ರಗಳು. ಒಂದು ಅಥವಾ ಎರಡು ರೀಲು ಇರುತ್ತವೆ; ತಪ್ಪಿದರೆ, ಮೂರು ರೀಲು. ಇವುಗಳಲ್ಲಿ ಶುದ್ಧ ಡಾಕ್ಯುಮೆಂಟರಿಗಳು ಮಾತ್ರ ಒಂದೊಂದು ಸಲ ಪೂರ್ಣ ಉದ್ದದ ಚಿತ್ರಗಳಾಗಿ 8 ರಿಂದ 12 ರೀಲುಗಳವರೆಗೆ ಹೋಗಬಹುದು; ಹೆಚ್ಚಾಗಿ ಒಂದೆರೆಡು ರೀಲು ಮಾತ್ರ ಇರುವುವು. ಸಣ್ಣ ಪ್ರಮಾಣದ ಚಿತ್ರಗಳಲ್ಲಿ 6 ಕಾರ್ಟೂನ್ ಚಿತ್ರಗಳನ್ನೂ 8 ಮಕ್ಕಳ ಚಿತ್ರಗಳನ್ನೂ ಸೇರಿಸಬಹುದು. ಇವೆರೆಡು ಹೆಚ್ಚಾಗಿ ಮನೋರಂಜನೆಯ ಚಿತ್ರಗಳಾಗಿವೆ. ಆದರೆ ಅವುಗಳ ಚಿಕ್ಕ ಪರಿಮಾಣದ ದೆಸೆಯಿಂದ ಅವನ್ನು ಕುರಿತು ಇಲ್ಲಿ ಹೇಳಲಾಗಿದೆ.

ಮೊದಲಿನ ಆರು ಬಗೆಯ ಚಿತ್ರಗಳನ್ನು ಒಟ್ಟಿಗೇ ಪ್ರಚಲಿತ ವಿಷಯಕ ಚಿತ್ರಗಳು (ಟಾಪಿಕಲ್ ಫಿಲ್ಮ್ಸ್) ಎಂದು ಹಿಂದೆ ಕರೆಯುತ್ತಿದ್ದರು. ಆಮೇಲೆ ಅವುಗಳಿಗೆ ಡಾಕ್ಯುಮೆಂಟರಿ ಗಳು ಎಂಬ ಹೆಸರು ರೂಢಿಗೆ ಬಂತು. ಇಲ್ಲವೇ ಅವೆಲ್ಲವನ್ನೂ ಸಣ್ಣ ಚಿತ್ರಗಳು ಎಂದೂ

ಕರೆಯುತ್ತಾರೆ. ಈ ದೃಷ್ಟಿಯಲ್ಲಿ ಡಾಕ್ಯುಮೆಂಟರಿ ಎಂಬುದು ಒಂದು ಪಾರಿಭಾಷಿಕ ಶಬ್ದವಾಗುತ್ತದಾಗಿ, ಅದಕ್ಕೆ ಸಮಾನಪದವಾಗಿ ದಾಖಲೆ ಅಥವಾ ಸಾಕ್ಷಿ ಎಂಬ ಪದವನ್ನೂ ಬಳಸುತ್ತೇವೆ.

**1 ವಾರ್ತಾಚಿತ್ರಗಳು :** ಇಂಗ್ಲೆಂಡಿನಲ್ಲಿ ಚಲಚ್ಚಿತ್ರ ಉದ್ಯಮ 1896 ರಲ್ಲಿ ಮೊದಲಾದುದೇ ವಾರ್ತಾಚಿತ್ರಗಳ ತಯಾರಿಕೆಯಿಂದ. ಮೊದಮೊದಲು ಕೆಲವು ನಿರ್ದಿಷ್ಟ ಸನ್ನಿವೇಶಗಳ ಚಿತ್ರಗಳು ಮಾತ್ರ ತೆಗೆಯಲ್ಪಡುತ್ತಿದ್ದುವು–1897ರಲ್ಲಿ ವಿಕ್ಟೋರಿಯ ರಾಣಿಯ ಆಳ್ವಿಕೆಯ 60ನೆಯ ವಾರ್ಷಿಕೋತ್ಸವ, 1901ರಲ್ಲಿ ಆಕೆಯ ಶವಸಂಸ್ಕಾರ–ಇತ್ಯಾದಿ. 1910ರಲ್ಲಿ ಚಾರ್ಲ್ಸ್ ಪಾತೆ ವಾರದ ವಾರ್ತಾಚಿತ್ರಗಳನ್ನು ಕ್ರಮವಾಗಿ ತೆಗೆದು ಪ್ರದರ್ಶಿಸಲಾರಂಭಿಸಿದ. ಅಂದಿನಿಂದ ವಾರ್ತಾಚಿತ್ರಗಳ ಪ್ರಸಾರ, ಎಲ್ಲ ದೇಶಗಳಲ್ಲಿ ಸರಾಗವಾಗಿ ನಡೆದಿದೆ. ಯೂನಿವರ್ಸಲ್ ನ್ಯೂಸ್, ಬ್ರಿಟಿಷ್ ನ್ಯೂಸ್, ಪಾತೆ ನ್ಯೂಸ್, ಫಾಕ್ಸ್ ಮೂವಿಟೋನ್ ನ್ಯೂಸ್, ಪ್ಯಾರಮೌಂಟ್ ನ್ಯೂಸ್ ಮೊದಲಾದ ವಾರ್ತಾಚಿತ್ರ ತಯಾರಿಕೆಯ ಸಂಸ್ಥೆಗಳು ಲೋಕಕ್ಕೆಲ್ಲ ಕ್ಲುಪ್ತ ಸಮಯದಲ್ಲಿ ವಾರ್ತಾಚಿತ್ರಗಳನ್ನು ಒದಗಿಸಿಕೊಡುತ್ತವೆ. ಭಾರತದಲ್ಲಿ 1940ರ ವರೆಗೆ ಈ ಸಂಸ್ಥೆಗಳ ವಾರ್ತಾಚಿತ್ರಗಳನ್ನೇ ಮುಖ್ಯವಾಗಿ ನೋಡುತ್ತಿದ್ದೆವು. 1940ರಲ್ಲಿ ಭಾರತದ ಆಗಿನ ಬ್ರಿಟಿಷ್ ಸರ್ಕಾರ ಫಿಲ್ಮ್ ಅಡ್ವೈಸರಿ ಬೋರ್ಡ್ ಮತ್ತು ಇನ್ಫರ್ಮೆಷನ್ ಫಿಲ್ಮ್ಸ್ ಆಫ್ ಇಂಡಿಯಾಗಳು ವಾರ್ತಾಚಿತ್ರಗಳನ್ನೂ ಯುದ್ಧಪ್ರಚಾರವನ್ನು ಕುರಿತು ಸಣ್ಣ ಚಿತ್ರಗಳನ್ನೂ ತಯಾರಿಸಲು ಪ್ರಾರಂಭಿಸಿದವು. ಹೀಗೆ ತಯಾರಿಸಲ್ಪಟ್ಟ ಚಿತ್ರಗಳನ್ನಾಗಲಿ ಇಲ್ಲವೆ ಸರ್ಕಾರದ ಶಿಫಾರಸು ಪಡೆದ ಚಿತ್ರಗಳನ್ನಾಗಲಿ, 200 ಅಡಿಗೆ ಕಡಿಮೆಯಾಗದಂತೆ ಪ್ರತಿಯೊಂದು ಪ್ರದರ್ಶನ ಮಂದಿರ ಕಡ್ಡಾಯವಾಗಿ ತೋರಿಸ ಬೇಕಾಯಿತು. ದೇಶ ಸ್ವಾತಂತ್ರ್ಯವನ್ನು ಪಡೆದ ಮರುವರ್ಷದಲ್ಲಿ ಸರ್ಕಾರ ಈ ಸಂಸ್ಥೆಯನ್ನು ಪುನಾರಚಿಸಿ ಅದನ್ನು ತನ್ನ ಸಮಾಚಾರ ಮತ್ತು ಪ್ರಚಾರ ಇಲಾಖೆಯ ಒಂದು ಅಂಗವನ್ನಾಗಿ ಮಾಡಿತು.

ಅಂದಿನಿಂದ ಸರ್ಕಾರದ ಈ ಚಲಚ್ಚಿತ್ರ ಅಂಗ ವಾರಕ್ಕೆ ಸರಾಸರಿ ಎರಡರಂತೆ ವಾರ್ತಾಚಿತ್ರಗಳನ್ನೂ ತಿಂಗಳಿಗೆ ಎರಡು ಮೂರು ಸಣ್ಣ ಚಿತ್ರಗಳನ್ನೂ ತಯಾರಿಸಿ, ದೇಶದ 4,500 ಚಿತ್ರಪ್ರದರ್ಶನ ಮಂದಿರಗಳಿಗೆ ಒದಗಿಸಿಕೊಡುತ್ತಿದೆ. ಈ ಚಿತ್ರಗಳಿಗೆ ಈಗ ದೇಶದ ಎಲ್ಲ ಮುಖ್ಯ ಭಾಷೆಗಳಲ್ಲಿ ವ್ಯಾಖ್ಯೆಯಿದೆ. ಕರ್ನಾಟಕ ರಾಜ್ಯ ಸರಕಾರದ ವಾರ್ತಾ ಇಲಾಖೆ ಕೂಡ ವಾರ್ತಾಚಿತ್ರಗಳನ್ನೂ, ಸಾಕ್ಷ್ಯಚಿತ್ರಗಳನ್ನೂ ನಿರ್ಮಿಸುತ್ತದೆ.

**2. ದಾಖಲೆ ಚಿತ್ರಗಳು :** ಇವು ಹೆಸರೇ ಸೂಚಿಸುವಂತೆ, ನೆನಪಿಗಾಗಿ ಅಥವಾ ಪರಾಮರ್ಶೆಗಾಗಿ, ಅಥವಾ ಯಾವುದಾದರೊಂದು ವಿಷಯವನ್ನು ಶಾಶ್ವತ ರೂಪದಲ್ಲಿಡುವುದಕ್ಕಾಗಿ ತೆಗೆಯಲ್ಪಡುವ ಚಿತ್ರಗಳು. ಒಂದು ದೃಷ್ಟಿಯಿಂದ ನೋಡಿದರೆ ಎಲ್ಲ ವಾರ್ತಾಚಿತ್ರಗಳು ದಾಖಲೆ ಚಿತ್ರಗಳೇ. ಆದರೆ ವಾರ್ತಾಚಿತ್ರಗಳ ಪ್ರಯೋಜನ ಕ್ಷಣಿಕ (ದೈನಂದಿನ ವಾರ್ತಾಪತ್ರಿಕೆಯಂತೆ), ದಾಖಲೆ ಚಿತ್ರಗಳ ಉಪಯೋಗ ಬಹುಕಾಲದವರೆಗೆ. 1910ರ ಸುಮಾರಿಗೇನೇ ಡಾ. ಡಾಯೆನ್ಸ್ ತೆಗೆದ ಕೆಲವು ಶಸ್ತ್ರಚಿಕಿತ್ಸೆಗಳ ಚಿತ್ರಗಳೂ 1924ರಿಂದ ಡಾ. ಆರ್. ಜಿ. ಕಾಂಟಿ ಸೂಕ್ಷ್ಮದರ್ಶಕವನ್ನು ಚಲಚ್ಚಿತ್ರ ಛಾಯಾಗ್ರಾಹಕರೊಂದಿಗೆ ಸೇರಿಸಿ ತೆಗೆದ ಜೀವಂತ ಅಂಗಾಂಶಗಳ ಬೆಳವಣಿಗೆಯ ಚಿತ್ರಗಳೂ ಇಂಗ್ಲೆಂಡಿನ ಬ್ರಿಟಿಷ್ ಕೌನ್ಸಿಲ್ ತೆಗೆದ ಎದೆರೋಗದಲ್ಲಿ ಶಸ್ತ್ರಚಿಕಿತ್ಸೆ ಎಂಬ ಚಿತ್ರದಲ್ಲಿ ಬರುವ ಶ್ವಾಸಕೋಶದ ಶಸ್ತ್ರಚಿಕಿತ್ಸೆಯ ಭಾಗವೂ ಹೀಗೆಯೇ ಅನೇಕ ವೈಜ್ಞಾನಿಕ ಪ್ರಯೋಗಗಳ ಚಿತ್ರಗಳೂ ರಾಕೆಟ್ ತನ್ನ ಪ್ರಯಾಣದಲ್ಲಿ ತಾನೇ ತಾನಾಗಿ ತೆಗೆಯುವಂತೆ ಮಾಡಬಹುದಾದ ಚಿತ್ರಗಳೂ ಹಾಗೆಯೇ ರಷ್ಯದವರ ಕೃತಕ ಉಪಗ್ರಹಗಳು ವಿಶ್ವದಲ್ಲಿ ಭೂಮಿಯ ಸುತ್ತಲೂ ಬಹು ಎತ್ತರದಲ್ಲಿ ತಿರುಗುತ್ತಿರುವಾಗ ತೆಗೆದು ಭೂಮಿಗೆ ಮರುಕಳುಹಿಸಿದ ಚಿತ್ರಗಳೂ–ಎಲ್ಲಕ್ಕೂ ಮೇಲಾಗಿ, ರಷ್ಯದ ವಿಜ್ಞಾನಿಗಳ ಅದ್ಭುತ ಸಾಹಸಗಳ ಫಲವಾಗಿ ನಮಗೆಂದೆಂದಿಗೂ ವಿಮುಖವಾಗಿರುವ ಚಂದ್ರನ ಮತ್ತೊಂದು ಅರ್ಧಭಾಗದ ಪರಿಚಯವನ್ನು ಮಾಡಿಕೊಟ್ಟಿರುವ ಚಿತ್ರಗಳೂ ದಾಖಲೆಚಿತ್ರಗಳಿಗೆ ಶ್ರೇಷ್ಠ ಉದಾಹರಣೆಗಳಾಗಿವೆ. ಹಾಗೆಯೇ ಡಾ. ಕಾಂಟಿ ಮಾಡಿದಂತೆ ಸೂಕ್ಷ್ಮದರ್ಶಕದೊಂದಿಗೆ ಚಲಚ್ಚಿತ್ರ ಕ್ಯಾಮರವನ್ನು (ಮುಖ್ಯವಾಗಿ 16 ಮಿ.ಮೀ.ಚಿತ್ರಗಳದ್ದು) ಜೋಡಿಸಿ ಅಗೋಚರವಾದರೂ ಅದ್ಭುತವಾಗಿರುವ ಜಗತ್ತನ್ನೂ ಗೋಚರವಾದರೂ ಬಹುಸೂಕ್ಷ್ಮವಾಗಿರುವ ವಸ್ತುಗಳನ್ನೂ ಸರಿಯಾಗಿ ಮತ್ತು ದೊಡ್ಡದಾಗಿ ನಮಗೆ ಕಾಣಿಸುವಂತೆ ತೆಗೆಯುವ ಚಲಚ್ಚಿತ್ರಗಳೂ ದಾಖಲೆ ಚಿತ್ರಗಳು. ಸಸ್ಯ ಮತ್ತು ಪ್ರಾಣಿಶಾಸ್ತ್ರಗಳಲ್ಲಿಯೂ ಭೌತ ಮತ್ತು ರಸಾಯನ ಶಾಸ್ತ್ರಗಳಲ್ಲಿಯೂ ಕೈಗಾರಿಕೆ ಮತ್ತು ಯಂತ್ರಸಾಧನಗಳಲ್ಲಿಯೂ ಈ ರೀತಿ ತೆಗೆಯಲ್ಪಟ್ಟ ದಾಖಲೆಚಿತ್ರಗಳೂ ಅನೇಕ ವೈಜ್ಞಾನಿಕ ಸಂಗತಿಗಳನ್ನು ವಿಶೇಷವಾಗಿ ಸ್ಪಷ್ಟೀಕರಿಸುತ್ತವೆ, ಇಲ್ಲವೆ ಹೊಸತಾಗಿ ಸೂಚಿಸುತ್ತವೆ.

ಜನಸಾಮಾನ್ಯ ಜೀವನದಲ್ಲಿ ದಾಖಲೆ ಚಿತ್ರಗಳನ್ನು ನಿರ್ಮಿಸಲು ಬೇಕಾದಷ್ಟು ಸನ್ನಿವೇಶಗಳಿವೆ. ಒಬ್ಬ ತನ್ನ ಚಿಕ್ಕ ಮಗುವಿನ ಓಡಾಟದ ಚಿತ್ರಗಳನ್ನು, ಇಲ್ಲವೇ ತನ್ನ ಮಗಳ ಮದುವೆ ಸಮಾರಂಭದ ಚಿತ್ರಗಳನ್ನು ತೆಗೆದರೆ– ಇದಕ್ಕೆ ಹೆಚ್ಚಾಗಿ 16 ಮಿ.ಮೀ. ಚಲಚ್ಚಿತ್ರ ಕ್ಯಾಮರ ಉಪಯೋಗಿಸಲ್ಪಡುತ್ತದೆ. ಅವು ದಾಖಲೆಚಿತ್ರಗಳಾವುವು–ಮುಂದಿನ ನೆನಪಿಗಾಗಿ. ಸಾರ್ವತ್ರಿಕ ಪ್ರದರ್ಶನಕ್ಕಾಗಿಯೂ ದಾಖಲೆಚಿತ್ರಗಳನ್ನು ತೆಗೆಯುವ ರೂಢಿ ಸರ್ವಸಾಮಾನ್ಯವಾಗಿದೆ. ಭಾರತ ಸರ್ಕಾರದ ಫಿಲ್ಮ್ಸ್ ಡಿವಿಷನ್ ಅನೇಕ ಅಂಥ ದಾಖಲೆಚಿತ್ರಗಳನ್ನು ತೆಗೆದಿದೆ. ಉದಾಹರಣೆಗೆ ಪಂಡಿತ ಜವಾಹರಲಾಲ್ ನೆಹರೂರವರ ಅಮೆರಿಕದ ಪ್ರವಾಸಚಿತ್ರಗಳು, ಹಾಗೂ ಅವರ ಚೀನಾದೇಶ, ಇಂಡೋನೇಷ್ಯ, ಸೋವಿಯೇತ್ ಒಕ್ಕೂಟ, ಸೌದಿ ಅರೇಬಿಯ ಮೊದಲಾದ ದೇಶಗಳಲ್ಲಿ ಮಾಡಿದ ಪ್ರವಾಸದ ಬೇರೆ ಬೇರೆ ಚಿತ್ರಗಳು, ಹೊರದೇಶಗಳ ಪ್ರಭೃತಿಗಳು ಭಾರತಕ್ಕೆ ಆಗಮಿಸಿದಾಗ ಅವರ ಪ್ರವಾಸಚಿತ್ರಗಳು, ಜಯಪುರದ ಕಾಂಗ್ರೆಸ್ ಅಧಿವೇಶನದ ಚಿತ್ರ, ಏರ್ ಇಂಡಿಯ ಇಂಟರ್‌ನ್ಯಾಷನಲ್ ಸಂಸ್ಥೆಯ ಬೆಂಗಾಲ್ ಪ್ರಿನ್ಸೆಸ್ ಎಂಬ ವಿಮಾನದ ಮೊದಲನೆಯ ಟೋಕಿಯೊ ಪ್ರಯಾಣದ ಚಿತ್ರ, ಭಾರತ ಚಲಚ್ಚಿತ್ರ ಉದ್ಯಮದ ಜನಕರಾದ ದಾದಾಸಾಹೇಬ ಫಾಲ್ಕೆಯವರ ಸಾಹಸಗಳನ್ನು ಕುರಿತು ಅವರೇ ದಾಖಲೆ ಚಿತ್ರಗಳನ್ನಾಗಿಟ್ಟುಕೊಂಡಿದ್ದ ಕೆಲವು ಚಿತ್ರಗಳು ಆಧಾರದಿಂದ ರಚಿಸಲ್ಪಟ್ಟ ಮೂಕಚಿತ್ರದಿಂದ ಶಬ್ದಚಿತ್ರಕ್ಕೆ ಎಂಬ ದಾಖಲೆ ಚಿತ್ರ–ಮೊದಲಾದವು.

ಭಾರತದಲ್ಲಿ 1901ರಲ್ಲೇ ಸಾವೆ ದಾದಾ ತೆಗೆದ ಒಂದು ದಾಖಲೆಚಿತ್ರವನ್ನು ತೆಗೆದರು. 1920ರಲ್ಲಿ ಸುಚೇತ ಸಿಂಗ್ ಲೋಕಮಾನ್ಯ ತಿಲಕರ ಶವಸಂಸ್ಕಾರದ ಚಿತ್ರವನ್ನು ತೆಗೆದ. ಅದೇ ಸಮಯ ಪಾಟಣಕರ್ ಚಲಚ್ಚಿತ್ರ ಸಂಸ್ಥೆಯ ಪಾಟಣಕರ್ ಮತ್ತು ದೇವಾರೆಯವರು ಅನೇಕ ಸಣ್ಣಮಟ್ಟ ದಾಖಲೆಚಿತ್ರಗಳನ್ನು ತೆಗೆಯಲಾರಂಭಿಸಿದರು. ಮದನ್ ಥಿಯೇಟರ್ಸಿನ ಜೆ.ಎಫ್.ಮದನ್, ಮದ್ರಾಸಿನ ಡಾ. ಪಿ.ವಿ.ಪತಿ., ಆರ್ ಪ್ರಕಾಶ ಮತ್ತು ರಂಗಯ್ಯ ಇವರೂ ಅನೇಕ ದಾಖಲೆಚಿತ್ರಗಳನ್ನು ತೆಗೆದು ತಮ್ಮ ಬಳಿ ಸುರಕ್ಷಿತವಾಗಿಟ್ಟುಕೊಂಡರು. ಈ ಎಲ್ಲ ದಾಖಲೆಚಿತ್ರಗಳನ್ನೂ ಲೋಕದಲ್ಲಿ ಇತರ ಕಡೆಗಳಲ್ಲಿ ತೆಗೆದಿರಿಸಿದ ಕೆಲವು ಪ್ರಾಸಂಗಿಕ ದಾಖಲೆಚಿತ್ರಗಳನ್ನೂ ಡಾ. ಪಿ.ವಿ.ಪತಿ ಮತ್ತು ಎ.ಕೆ. ಚೆಟ್ಟಿಯಾರರು 1945ರ ಸುಮಾರಿಗೆ ಶೇಖರಿಸಿ, ಅವನ್ನು ಯೋಗ್ಯ ರೀತಿಯಿಂದ ಸಂಪಾದಿಸಿ, ಮಹಾತ್ಮ ಗಾಂಧೀಜಿಯವರ ಜೀವನಚರಿತ್ರೆಯನ್ನು 11 ರೀಲುಗಳಲ್ಲಿ ಘನೀಕರಿಸಿ, ಒಂದು ಶ್ರೇಷ್ಠ ದಾಖಲೆಚಿತ್ರವನ್ನು ನಿರ್ಮಿಸಿದರು. ಇದರಂತೆಯೇ 1947ರಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸರ ಜೀವನಚರಿತ್ರೆಯನ್ನು ಚಲಚ್ಚಿತ್ರ ರೂಪದಲ್ಲಿ ಭಾರತದ ಚಲಚ್ಚಿತ್ರ ನಿರ್ಮಾಪಕರ ಸಂಘ ತೆಗೆದಿದೆ. ಇದರಲ್ಲಿ ಬೋಸರು ಬರ್ಮಾದಲ್ಲಿ (ಇಂದಿನ ಮಾಯನ್ಮಾರ್) ಭಾರತ ಸ್ವಾತಂತ್ರ್ಯದ ಯುದ್ಧಕ್ಕಾಗಿ ರಚಿಸಿದ ಪ್ರಸಿದ್ಧ ರಾಷ್ಟ್ರೀಯ ಸೈನ್ಯದ ಅನೇಕ ಚಿತ್ರಿತ ದಾಖಲೆಗಳು ಅನುಪಮವಾಗಿವೆ.

**3. ಶೈಕ್ಷಣಿಕ ಚಿತ್ರಗಳು :** ಕಲಿಯುವವರಿಗೆ ಅನುಕೂಲವಾಗುವಂತೆ ಪಾಕವಿಧಾನದಿಂದ ಹಿಡಿದು ಅಟಾಮಿಕ್ ರಿಯಾಕ್ಟರ್‌ವರೆಗಿನ ಯಾವುದೇ ವಿಷಯವನ್ನು ಕುರಿತ ಚಿತ್ರಗಳಿವು. ಉದಾಹರಣೆಗೆ ಒಂದು ಯಂತ್ರದ ವಿವಿಧ ಭಾಗಗಳ, ಅವುಗಳ ಬಿಡಿಯಾದ ಕಾರ್ಯಸಾಧನೆ ಮತ್ತು ಉಪಯೋಗ, ಯಂತ್ರದಲ್ಲಿ ಅವುಗಳ ಸಂಘಟನೆ, ಇಡೀ ಯಂತ್ರದ ಕಾರ್ಯಗತಿ, ಯಂತ್ರ ನಡೆಯದಿದ್ದರೆ ಅದನ್ನು ಸರಿಪಡಿಸುವ ವಿಧಾನ ಇವೆಲ್ಲವುಗಳ ಸೂಕ್ಷ್ಮಪರಿಚಯ. ಇಂಥ ಚಿತ್ರಗಳು ಅಯಾಯ ಕಸಬಿನವರಿಗೆ ರುಚಿಸುವದಲ್ಲದೆ ಇತರರಿಗೆ ರುಚಿಸದು. ಚಿತ್ರವನ್ನು ನೋಡಿದ ಮೇಲೆ ಚಿತ್ರ ಕೊಟ್ಟ ಅನುಭವವನ್ನು ಪ್ರೇಕ್ಷಕ ತಾನೇ ಪ್ರತ್ಯಕ್ಷವಾಗಿ ಕಾರ್ಯರೂಪದಲ್ಲಿ ಸಾಧಿಸುವಂತಾಗಬೇಕು. ಪಾಶ್ಚಾತ್ಯ ದೇಶಗಳ ಯುದ್ಧಖಾತೆಗಳಲ್ಲಿ ಸೈನ್ಯದ ತರಬೇತಿಗಾಗಿಯೂ ಇಂಥ ಚಿತ್ರಗಳು ತಯಾರಿಸಲ್ಪಟ್ಟು ಪ್ರಚಾರದಲ್ಲಿವೆ. ಈ ಚಿತ್ರಗಳ ಪ್ರಯೋಗದಿಂದಾಗಿ ಅಲ್ಲಿ ಸೈನ್ಯದ ತರಬೇತಿಯ ಅವಧಿ ಅರ್ಧಕ್ಕರ್ಧ ಕಡಿಮೆಯಾಗಿರುವುದಂತೆ. ಭಾರತದಲ್ಲೂ ಸೈನ್ಯದ ತರಬೇತಿಗಾಗಿ ಇಂಥ ಚಿತ್ರಗಳು ಪ್ರಚಾರದಲ್ಲಿದ್ದು ಎರಡು ವರ್ಷಗಳ ತರಬೇತಿಯ ಅವಧಿಯನ್ನು 10 ತಿಂಗಳಿಗೆ ಇಳಿಸಲಾಗಿದೆಯಂತೆ.

ವಿಷಯಗಳ ಸೂಕ್ಷ್ಮ ಮಾಹಿತಿ ಅಲ್ಲದಿದ್ದರೂ ಅವುಗಳ ಸಾಮಾನ್ಯ ತಿಳಿವಳಿಕೆಯನ್ನು ಕೊಡುವ ಚಿತ್ರಗಳನ್ನೂ ಈ ವರ್ಗದಲ್ಲಿ ಸೇರಿಸಬಹುದು. ಜನಜೀವನಕ್ಕೆ ಸಂಬಂಧಪಟ್ಟ ಅನೇಕಾನೇಕ ವಿಷಯಗಳನ್ನು ಇವು ಅಳವಡಿಸಿಕೊಂಡಿರುವುದರಿಂದ ಜನಸಾಮಾನ್ಯರು ಇವನ್ನು ಕುತೂಹಲದಿಂದ ನೋಡಿ ಸಂತೋಷಪಡುತ್ತಾರೆ. ಆದುದರಿಂದ ಅವರ ಸಾಮಾನ್ಯಜ್ಞಾನದ ಮಟ್ಟವನ್ನು ಏರಿಸಲು ಇವು ಸುಲಭ ಸಾಧನಗಳಾಗಿವೆ. ಈ ಕಾರಣದಿಂದ ಭಾರತದ ಫಿಲ್ಮ್ಸ್ ಡಿವಿಷನ್ ತಯಾರಿಸುವ ಚಿತ್ರಗಳಲ್ಲಿ ಮುಕ್ಕಾಲು ಪಾಲಿಗಿಂತ ಹೆಚ್ಚು ಇಂಥ ಚಿತ್ರಗಳೇ ಆಗಿವೆ. ಉದಾಹರಣೆಗೆ ರೇಷ್ಮೆ ಹುಳುವಿನ ಬಾಳಿನ ಗುಟ್ಟು ಲಾಕ್ಷಾದಿಂದ ಲಕ್ಷ (ಅರಗಿನ ಉತ್ಪತ್ತಿ ಮತ್ತು ಕೈಗಾರಿಕೆ). ನಮ್ಮ ದೇಶದ ಸಂಗೀತ ವಾದ್ಯಗಳು, ಮಹಾರಾಷ್ಟ್ರದ ಜನಪದ ಗೀತೆಗಳು, ಕಲ್ಪವೃಕ್ಷ (ತೆಂಗಿನ ಮರದ ವಿಷಯ), ಕೊಡವರ ಬೀಡು (ಕೊಡಗಿನ ಜನಜೀವನವನ್ನು ಕುರಿತದ್ದು), ಪವಿತ್ರ ಹಿಮಾಲಯ, ಸುವರ್ಣನದಿ (ಕಾವೇರಿ ನದಿಯನ್ನು ಕುರಿತದ್ದು), ಕೈಗಾರಿಕೆಗಳ ಮೈಸೂರು, ಹೆಂಗಸರ ವೇಷಭೂಷಣಗಳು–ಇತ್ಯಾದಿ. ಫಿಲ್ಮ್ಸ್ ಡಿವಿಷನ್ ತಯಾರಿಸಿದ ಇಂಥ ಅನೇಕ ಚಿತ್ರಗಳು ಉತ್ತಮ ಡಾಕ್ಯುಮೆಂಟರಿಗಳೂ ಆಗಿದ್ದು ಹೊರದೇಶಗಳಲ್ಲೂ ಪ್ರಶಸ್ತಿ ಪಡೆದಿವೆ.

ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮಾತ್ರ ಉಪಯೋಗಿಸಲ್ಪಡುವ ಚಿತ್ರಗಳು ಅನೇಕ ಇವೆ. ಇವು ಕೇವಲ ಅವರ ಮನೋರಂಜನೆಗಾಗಿ ಅಲ್ಲ. ಶಿಕ್ಷಣಸಂಸ್ಥೆಗಳಲ್ಲಿ ಪ್ರದರ್ಶನದ ಅನುಕೂಲತೆಗಾಗಿ. ಇವು ಹೆಚ್ಚಾಗಿ 16 ಮಿ.ಮೀ. ನ ಚಿತ್ರಗಳಾಗಿವೆ. ಶಿಕ್ಷಣಕಾರ್ಯದಲ್ಲಿ ಇವು ಶಿಕ್ಷಕನಿಗೆ ನೆರವಾಗಬಲ್ಲವೇ ಹೊರತು ಶಿಕ್ಷಕನ ಸ್ಥಾನವನ್ನು ಅಪಹರಿಸುವುದಿಲ್ಲ. ಇವುಗಳ ಪ್ರದರ್ಶನ ಸಮಯದಲ್ಲಿ ಇವು ಹೇಳುವ ಪಾಠವನ್ನು ವಿದ್ಯಾರ್ಥಿಗಳು ಸರಿಯಾಗಿ ಗ್ರಹಿಸಿಕೊಳ್ಳಲು ವ್ಯಾಖ್ಯಾನದ ಅಗತ್ಯವಿದ್ದಲ್ಲಿ ಶಿಕ್ಷಕ ಅನಿವಾರ್ಯ ವಾಗುತ್ತಾನೆ. ಶಿಕ್ಷಕರ ಬಳಿ ಕರಿಹಲಗೆ ಮತ್ತು ಸೀಮೆಸುಣ್ಣದ ಕಡ್ಡಿ ಇದ್ದಂತೆ ಈ ಚಿತ್ರಗಳು. ಸಾಮಾನ್ಯವಾಗಿ ಇಂಥ ಒಂದೊಂದು ಚಿತ್ರದ ಪ್ರದರ್ಶನ ಕಾಲ 10–12 ಮಿನಿಟುಗಳಿದ್ದು, ಅವನ್ನು ಆಯಾಯ ಪಾಠಕ್ಕನುಸಾರವಾಗಿ ಆರಿಸಿ, ಆಯಾಯ ಪಾಠದ ಸಮಯದಲ್ಲಿಯೇ ಪ್ರದರ್ಶಿಸಬೇಕಾಗುವುದು.

ಇಂಗ್ಲೆಂಡ್, ಜರ್ಮನಿ, ರಷ್ಯ, ಅಮೆರಿಕ, ಕೆನಡ ಮುಂತಾದ ಮುಂದುವರಿದ ದೇಶಗಳಲ್ಲಿ, ಆಯಾಯ ದೇಶದ ಸರ್ಕಾರ ಇಲ್ಲವೆ ಸರ್ಕಾರದ ಆರ್ಥಿಕ ಬೆಂಬಲ ಪಡೆದ ಚಲಚ್ಚಿತ್ರ ಸಂಸ್ಥೆಗಳು, ಶಾಲಾಕಾಲೇಜುಗಳಲ್ಲಿ ಕೊಡುವ ಶಿಕ್ಷಣದ ಪಾಠಗಳಿಗನುಸಾರವಾಗಿ ಎಲ್ಲ ವಿಷಯಗಳ ಮೇಲೆ ಶೈಕ್ಷಣಿಕ ಚಿತ್ರಗಳನ್ನು ತಯಾರಿಸುತ್ತವೆ. ಎಲ್ಲ ಹಂತದ ಎಲ್ಲ ವಿಷಯಗಳನ್ನು ಕುರಿತ ಅಸಂಖ್ಯಾತ ಚಿತ್ರಗಳು ಆ ದೇಶಗಳಲ್ಲಿ ಪ್ರಚಲಿತವಿವೆ.

ಭಾರತದಲ್ಲಿ ಇಂಥ ಚಿತ್ರಗಳನ್ನು ಶಿಕ್ಷಣಸಂಸ್ಥೆಗಳಿಗೆ ಸದ್ಯಕ್ಕೆ ಅಲ್ಪ ಪರಿಮಾಣದಲ್ಲಿ ಒದಗಿಸಲು ಕೆಲವು ಸಂಸ್ಥೆಗಳಿವೆ. ಸರ್ಕಾರದ ಕೇಂದ್ರ ಶೈಕ್ಷಣಿಕ ಚಲಚ್ಚಿತ್ರಾಲಯ, ಫಿಲ್ಮ್ಸ್ ಡಿವಿಷನ್ನಿನ ಚಿತ್ರಾಲಯ, ಯು. ಎನ್. ಓ. ಚಿತ್ರಾಲಯ, ದೇಶದ ಅನೇಕ ಮುಖ್ಯ ಶಹರುಗಳಲ್ಲಿರುವ ಬ್ರಿಟಿಷ್ ಕೌನ್ಸಿಲ್, ಯುನೈಟೆಡ್ ಸ್ಟೇಟ್ಸ್ ಇನ್‌ಫರ್ಮೇಷನ್, ಬರ್ಮಾ ಷೆಲ್ ಮೊದಲಾದ ಸಂಸ್ಥೆಗಳು–ಇವೆಲ್ಲ ತೀರ ಮಿತ ಬಾಡಿಗೆಯ ಮೇಲೆ, ಇಲ್ಲವೆ ಯಾವ ಪ್ರತಿಫಲವನ್ನೂಅಪೇಕ್ಷಿಸದೆ ದೇಶದ ಶಿಕ್ಷಣ ಸಂಸ್ಥೆಗಳಿಗೆ ಶೈಕ್ಷಣಿಕ ಚಿತ್ರಗಳನ್ನು ಒದಗಿಸಲು ಯಾವಾಗಲೂ ಸಿದ್ಧವಿವೆ.

**4. ಪ್ರಚಾರಚಿತ್ರಗಳು :** ಬರೆದ ಇಲ್ಲವೆ ಹೇಳಿದ ನೂರು ಮಾತುಗಳಿಗಿಂತ ಒಂದು ಚಿತ್ರ ಲೇಸು ಎಂದು ಚೀನಿಯರ ಒಂದು ಹಳೆಯ ನಾಣ್ಣುಡಿ ಇದೆ. ಇದು ಚಲಚ್ಚಿತ್ರಗಳಿಗೆ ಅಕ್ಷರಶಃ ಅನ್ವಯಿಸುತ್ತದೆ. ಆದುದರಿಂದಲೇ ಒಂದು ಕಥೆಯನ್ನು ಹೇಳುವುದಕ್ಕಾಗಲಿ, ಒಂದು ಸಂಗತಿಯನ್ನು ತಿಳಿಸುವುದಕ್ಕಾಗಲಿ, ಒಂದು ಘಟನೆಯನ್ನು ದಾಖಲೆ ಮಾಡುವುದಕ್ಕಾಗಲಿ, ಒಂದು ವಿಷಯವನ್ನು ಕುರಿತು ಜ್ಞಾನವನ್ನು ಕೊಡುವುದಕ್ಕಾಗಲಿ, ಇಲ್ಲವೆ ಜನಜೀವನದ ಒಂದು ಚಿತ್ರವನ್ನು ತಮ್ಮ ಕಣ್ಣ ಮುಂದೆ ಕಟ್ಟಿ ನಿಲ್ಲಿಸುವುದಕ್ಕಾಗಲಿ, ಚಲಚ್ಚಿತ್ರಗಳು ಅಷ್ಟು ಶಕ್ತಿಯುತವಾಗಿವೆ. ಹೀಗಿರುವಾಗ ಪ್ರಚಾರಕಾರ್ಯದಲ್ಲಿಯೂ ಚಲಚ್ಚಿತ್ರಗಳು ಇತರ ಎಲ್ಲ ಸಾಧನ ವಿಧಾನಗಳಿಗಿಂತ ಅತ್ಯಧಿಕ ಪರಿಣಾಮವನ್ನುಂಟು ಮಾಡುವುದರಲ್ಲಿ ಆಶ್ಚರ್ಯವಿಲ್ಲ. ಇದನ್ನರಿತೇ ಲೋಕದ ಅನೇಕ ಸರ್ಕಾರಗಳೂ ಸಮಾಜಹಿತೈಷಿ ಸಂಸ್ಥೆಗಳೂ ವ್ಯಾಪಾರಿಸಂಸ್ಥೆಗಳೂ ತಮ್ಮ ತಮ್ಮ ಪ್ರಚಾರಕಾರ್ಯಕ್ಕಾಗಿ ಚಲಚ್ಚಿತ್ರ ಮಾಧ್ಯಮವನ್ನು ಬಹಳವಾಗಿ ಬಳಸುತ್ತಿದ್ದಾರೆ.

ಚಲಚ್ಚಿತ್ರಗಳು ಎರಡು ರೀತಿಯಿಂದ ಪ್ರಚಾರಕಾರ್ಯವನ್ನು ಮಾಡಬಲ್ಲವು: ಒಂದು–ನೇರವಾಗಿ, ಇನ್ನೊಂದು–ಗಮ್ಯವಾಗಿ. ನೇರವಾದ ಪ್ರಚಾರ ಪ್ರೇಕ್ಷಕನ ಮನಸ್ಸಿನಲ್ಲಿ ತಾತ್ಕಾಲಿಕ ಪರಿಣಾಮವನ್ನುಂಟುಮಾಡಬಹುದು. ಅಲ್ಲದೆ ನೇರವಾದ ಪ್ರಚಾರ ಪ್ರೇಕ್ಷಕರಲ್ಲಿ ಅನೇಕ ವೇಳೆ ಜುಗುಪ್ಸೆಯನ್ನು ತಂದರೂ ಆಶ್ಚರ್ಯವಿಲ್ಲ. ಆದರೆ ಪ್ರೇಕ್ಷಕರಿಗೆ ತಮ್ಮ ಮುಂದೆ ಒಂದು ಪ್ರಚಾರಕಾರ್ಯ ನಡೆಯುತ್ತಿದೆಯೆಂದು ತಿಳಿಯದ ಹಾಗೆ ಗಮ್ಯ ಮಾರ್ಗದಿಂದ ಅಂಥ ಪ್ರಚಾರ ಕಾರ್ಯವನ್ನು ನಡೆಸಿದರೆ ಅದು ಅವರಲ್ಲಿ ವಿಶೇಷವಾದ ಪರಿಣಾಮವನ್ನುಂಟುಮಾಡುವ ಸಂಭವವಿದೆ.

ಸರ್ಕಾರಗಳು ಚಲಚ್ಚಿತ್ರಗಳ ಮುಖಾಂತರ ಎರಡು ಬಗೆಯ ಪ್ರಚಾರಕಾರ್ಯಗಳನ್ನು ಮುಖ್ಯವಾಗಿ ಸಾಧಿಸುತ್ತವೆ. ಒಂದು–ರಾಜಕೀಯ ; ಇನ್ನೊಂದು–ಸಾಮಾಜಿಕ., ಸೋವಿಯೆತ್ ದೇಶದ ಜಸ್ಟಿಸ್ ಈಸ್ ಕಮಿಂಗ್ ಎಂಬ ಚಿತ್ರ ಇಂಥದಾಗಿತ್ತು. ಜರ್ಮನಿಯಲ್ಲಿ ನಾಟ್ಸಿಗಳು ತಮ್ಮ ರಾಜಕೀಯಕ್ಕಾಗಿಯೂ ಯುದ್ಧ ಪ್ರಚಾರಕ್ಕಾಗಿಯೂ ಅನೇಕ ಪ್ರಬಲ ಪರಿಣಾಮದ ಚಿತ್ರಗಳನ್ನು ಹೊರಗೆಡಹುತ್ತಿದ್ದರು. ಅವುಗಳಲ್ಲಿ ಬ್ಯಾಪ್ಟಿಸಂ ಆಫ್ ಫೈರ್, ಇಂಗ್ಲೆಂಡಿನ ಬ್ರಿಟನ್ ಕೆನ್ ಟೇಕ್ ಇಟ್ ಎಂಬುವು ಅತ್ಯಂತ ಪರಿಣಾಮಕಾರಿಯಾದ ಚಿತ್ರಗಳು.

ಶಾಂತದಿನಗಳಲ್ಲಿ ಸರ್ಕಾರಗಳ ಪ್ರಚಾರಚಿತ್ರಗಳು ಸಹಜವಾಗಿ ಸಮಾಜಕಲ್ಯಾಣವನ್ನು ಸಾಧಿಸುತ್ತವೆ. ಬೇಸಾಯ, ಜಾನುವಾರುಗಳ ಆರೈಕೆ ಮತ್ತು ಅಭಿವೃದ್ಧಿ, ಆರೋಗ್ಯಪಾಲನೆ, ರೋಗನಿವಾರಣೆ, ಕೈಗಾರಿಕೆ, ದೇಶದ ಕಲೆ ಮತ್ತು ಸಾಂಸ್ಕೃತಿಕ ಸಂಪತ್ತು, ಸಾಹಚರ್ಯ ಕಾರ್ಯಗಳ ಮೇಲ್ಮೆ, ನದೀ ಯೋಜನೆಗಳು, ವಿದ್ಯಾಪ್ರಸಾರ ಮೊದಲಾದುವನ್ನು ಕುರಿತು ಎಲ್ಲ ದೇಶಗಳೂ ಅನೇಕ ಉತ್ತಮ ಪ್ರಚಾರಚಿತ್ರಗಳನ್ನು ತಯಾರಿಸಿವೆ. ಇಂಥ ಅನೇಕ ಚಿತ್ರಗಳಲ್ಲದೆ, ಭಾರತ ಸರ್ಕಾರ ತನ್ನ ಫಿಲ್ಮ್ಸ್ ಶಾಖೆಯ ಮೂಲಕ ಭಾರತದ ಪಂಚವಾರ್ಷಿಕ ಯೋಜನೆಗಳನ್ನು ಕುರಿತೂ ಕೆಲವು ಚಿತ್ರಗಳನ್ನು ಹೊರಡಿಸಿದೆ. ಅಲ್ಲದೆ, ಯುವಕರು ಸೇನೆಯ ಮೂರು ವಿಭಾಗಗಳಲ್ಲಿಯೂ ಹೆಚ್ಚುಹೆಚ್ಚಾಗಿ ಸೇರುವಂತೆ ಅನೇಕ ಪ್ರಚಾರಚಿತ್ರಗಳನ್ನು ತಯಾರಿಸಿದೆ.

ಭಾರತ ಸರ್ಕಾರದ ಪ್ರಚಾರಚಿತ್ರಗಳಿಗೆ ಕೆಲವು ಉದಾಹರಣೆಗಳು : ನಮ್ಮ ಜಾನುವಾರು ಸಂಪತ್ತು, ತುಂಗಭದ್ರಾ, ನಳಿಗೆ ಬಾವಿಗಳು, ಸಮೃದ್ಧಿಗಾಗಿ ಸಾಧನೆ, ವೈರಿಯನ್ನು ನಿರ್ಮೂಲಗೊಳಿಸಿ(ಕ್ಷಯರೋಗ ನಿವಾರಣೆ), ಕತ್ತಲೆಯಲ್ಲಿ ಬೆಳಕು (ಕುರುಡರಿಗೆ ವೃತ್ತಿಶಿಕ್ಷಣ), ನಮ್ಮ ನೌಕಾಬಲ, ನ್ಯಾಷನಲ್ ಡಿಫೆನ್ಸ್ ಅಕಾಡಮಿ ಇತ್ಯಾದಿ.

ಸರ್ಕಾರವಲ್ಲದೆ ದೇಶದಲ್ಲಿ ಅನೇಕ ಖಾಸಗೀ ಸಂಸ್ಥೆಗಳೂ–ಬರ್ಮಾ ಷೆಲ್, ಆರ್ಟ್ ಫಿಲ್ಮ್ಸ್ ಆಫ್ ಏಷ್ಯ, ಹನ್ನಾರ್ ಫಿಲ್ಮ್ಸ್ ಮೊದಲಾದವು–ಪ್ರಚಾರಚಿತ್ರಗಳನ್ನು ತಯಾರಿಸುತ್ತವೆ. ಇವುಗಳಲ್ಲಿ ಮಗು, ಜೀವನಕ್ಕಾಗಿ ಶಿಕ್ಷಣ, ತ್ಯಜಿಸಲ್ಪಟ್ಟ ಅನಾಥೆಯರು, ಲಾರಿ ಡ್ರೈವರ್ (ಬರ್ಮಾ ಷೆಲ್ಲಿನ ಸೀಮೆಎಣ್ಣೆಯ ಪ್ರಚಾರ), ತಾಯಿ (ಮದುವೆಯಾಗದೆ ತಾಯಿಯಾದ ಮಹಿಳೆಯ ಜೀವನ), ನೇಯ್ಗೆ ಉದ್ಯಮ, ಸಂತಪುರುಷ ಮತ್ತು ಒಕ್ಕಲಿಗ (ಭೂದಾನ ಮತ್ತು ಸರ್ವೋದಯವನ್ನು ಕುರಿತು) ಮೊದಲಾದುವು ತಮ್ಮ ಯೋಗ್ಯತೆಯಿಂದ ದೇಶದಲ್ಲಿ ಮಾತ್ರವಲ್ಲ, ಹೊರದೇಶಗಳಲ್ಲೂ ಪ್ರಖ್ಯಾತಿಗಳಿಸಿವೆ. ಆದರೆ ಭಾರತದಲ್ಲಿ ಹೀಗೆ ಖಾಸಗಿಯಾಗಿ ನಿರ್ಮಿಸಲ್ಪಟ್ಟ ಚಿತ್ರಗಳಿಗೆ ಸರ್ಕಾರದ ಚಿತ್ರಗಳಿಗಿರುವಷ್ಟು ಪ್ರದರ್ಶನ ಸೌಕರ್ಯಗಳಿಲ್ಲ.

ಪ್ರಚಾರಕೆಲಸಗಳಿಗೆ ಅಂಥ ಅದ್ಭುತ ಶಕ್ತಿಯುಳ್ಳ ಚಲಚ್ಚಿತ್ರ ಮಾಧ್ಯಮವನ್ನು ಸರಕು ನಿರ್ಮಾಪಕರೂ ವ್ಯಾಪಾರಿಗಳೂ ಮರೆಯುವಂತಿಲ್ಲ ; ಒಂದು ವಾರದಲ್ಲಿ ಕೋಟ್ಯಂತರ ಜನ ಸಿನೆಮಾ ನೋಡುತ್ತಾರೆಂದು ಎಣಿಸಲಾಗಿದೆ. ಹೀಗಿರುವಾಗ, ಒಂದರ್ಧ ನಿಮಿಷದ ಚಲಚ್ಚಿತ್ರ ಜಾಹೀರಾತಾದರೂ ಲಕ್ಷಗಟ್ಟಲೆ ಭಾವೀ ಗಿರಾಕಿಗಳ ಲಕ್ಷ್ಯವನ್ನು ಸೆಳೆಯಬಲ್ಲುದು.

ಇಂಥ ಚತುರ ಜಾಹೀರಾತು ಚಲಚ್ಚಿತ್ರಗಳು ಹೆಚ್ಚಾಗಿ ಉಡಿಗೆತೊಡಿಗೆ, ದೈಹಿಕ ಅಲಂಕಾರ, ಗೃಹಾಲಂಕಾರ ಮೊದಲಾದವುಗಳಿಗೆ ಸಂಬಂಧಪಟ್ಟ ಸರಕುಗಳ ಗುಣಗಾನವನ್ನು ಮಾಡುತ್ತಿರುವುದರಿಂದಲೂ ಚಲಚ್ಚಿತ್ರ ತಾರಾಗಣದ ಆಕರ್ಷಕ ವೇಷಭೂಷಣಗಳು ಪ್ರತಿದಿನ ಪ್ರೇಕ್ಷಕರ ಮುಂದೆ ತಾಂಡವಾಡುತ್ತಿರುವುದರಿಂದಲೂ ಜನಸಾಮಾನ್ಯರ ಜೀವನದಲ್ಲಿ ಬದಲಾವಣೆಗಳು ಆಗುತ್ತಲೇ ಇವೆ. ಹೀಗೆಲ್ಲ ಆಗಬೇಕಾದುದೇ. ಚಲಚ್ಚಿತ್ರಗಳ ಪ್ರಭಾವ ಅಷ್ಟಿದೆ. ಬಾಹ್ಯದಲ್ಲಿ ಆದಂತೆ ಆಂತರ್ಯದಲ್ಲಿಯೂ ಜನಸಾಮಾನ್ಯರಲ್ಲಿ ಚಲಚ್ಚಿತ್ರಗಳ ದೆಸೆಯಿಂದ ಅನೇಕ ಬದಲಾವಣೆಗಳು ಆಗುತ್ತಿವೆ. ಒಂದು ಜನಾಂಗದಲ್ಲಿ ಚಲಚ್ಚಿತ್ರಗಳು ಎಂಥ ಮೇಲ್ಮೈಯನ್ನೂ ಸಾಧಿಸಬಹುದು, ಹಾಗೆಯೇ ಅವು ಎಂಥ ಕೀಳಮಟ್ಟಕ್ಕೂ ಒಂದು ಜನಾಂಗವನ್ನು ಇಳಿಸಬಹುದು. ಆದುದರಿಂದ ಚಲಚ್ಚಿತ್ರ ನಿರ್ಮಾಪಕರ ಮೇಲೆ ಯಾವಾಗಲೂ ಒಂದು ಬಹು ದೊಡ್ಡ ಹೊಣೆಗಾರಿಕೆ ಇದೆ.

**5. ಶುದ್ಧ ಡಾಕ್ಯುಮೆಂಟರಿ ಚಿತ್ರಗಳು :** 1922ರಲ್ಲಿ ನ್ಯೂಯಾರ್ಕಿನ ಫರ್ ಕಂಪನಿಯೊಂದರ ಹೊಣೆಗಾರಿಕೆಯ ಮೇಲೆ ರಾಬರ್ಟ್ ಫ್ಲ್ಯಾಹರ್ಟಿ (**ನೋಡಿ–ಫ್ಲ್ಯಾಹರ್ಟಿ,–ರಾಬರ್ಟ್**) ಸೃಷ್ಟಿಸಿದ ನಾನೂಕ್ ಆಫ್ ದಿ ನಾರ್ತ್ ಎಂಬ ಚಲಚ್ಚಿತ್ರದ ಪ್ರದರ್ಶನವಾಯಿತು. ಚಿತ್ರ ಉತ್ತರದ ಹಿಮಗಡ್ಡೆಯ ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಎಸ್ಕಿಮೋ ಕುಟುಂಬ ಆಹಾರಕ್ಕಾಗಿ ಪಡುವ ಪಡಿಪಾಟಲನ್ನು ಚಿತ್ರಿಸಿತ್ತು. ಇಷ್ಟು ಮಾತ್ರ ಹೇಳಿದರೆ ಅದೊಂದು ಬರೇ ವಾರ್ತಾಚಿತ್ರವೊ ದಾಖಲೆಚಿತ್ರವೊ ಆಗಿರಬೇಕೆಂದು ಯಾರಿಗಾದರೂ ಅನ್ನಿಸಬಹುದು. ಆದರೆ ವಿಷಯಪ್ರತಿಪಾದನೆಯ ನಾವೀನ್ಯದಿಂದಾಗಿ ಅದು ಎಲ್ಲ ವಿಧದಿಂದಲೂ ಇತರ ಮನೋರಂಜನೆಯ ಚಿತ್ರಗಳಿಂದ ಬೇರೆಯಾಗಿತ್ತು. ಪ್ರೇಕ್ಷಕರನ್ನು ವಿಶೇಷವಾಗಿ ಕೌತುಕಗೊಳಿಸಿತ್ತು. ಚಿತ್ರವಿಮರ್ಶಕರು ಅದೊಂದು ಚಿತ್ರಕಲೆಯ ಹೊಸಮುಖವೆಂದು ಹೊಗಳಿದರು. ಕಾರಣವಿಷ್ಟೇ. ಚಿತ್ರಣಕ್ಕಾಗಿ ಆ ಎಸ್ಕಿಮೋ ಕುಟುಂಬದ ದಿನನಿತ್ಯದ ಜೀವನದ ಸನ್ನಿವೇಶಗಳನ್ನು ಬಹು ಎಚ್ಚರಿಕೆಯಿಂದ ಆರಿಸಲಾಗಿತ್ತು. ಅವುಗಳ ಕ್ರಮಾನುಗತಿಯ ವಿವರದಲ್ಲಿ ಒಂದು ವಿಶಿಷ್ಟ ರೀತಿಯ ಆತ್ಮೀಯತೆ ಇತ್ತು.

ಒಂದು ವಾರ್ತೆ ಅಥವಾ ದಾಖಲೆ ಚಿತ್ರಕ್ಕೂ ಈ ನಾನೂಕ್ ಚಿತ್ರಕ್ಕೂ ಇರುವ ಭೇದವಿಷ್ಟೇ–ಎರಡೂ ವಾಸ್ತವಿಕ ಚಿತ್ರಗಳನ್ನು ಒದಗಿಸುತ್ತವೆ ; ಆದರೆ ವಾರ್ತೆ ಅಥವಾ ದಾಖಲೆಚಿತ್ರ ವಾಸ್ತವತೆಯನ್ನು ಇದ್ದಂತೆ ದಾಖಲೆ ಮಾಡುತ್ತದೆ. ನಾನೂಕ್ ಒಂದು ವಾಸ್ತವಿಕ ಸಂಗತಿಯ ಜೀವಾಳವನ್ನೇ ನಮ್ಮ ಮುಂದೆ ತರೆದಿಡುತ್ತದೆ. ಇಂಥ ಪರಿಣಾಮವನ್ನು ತನ್ನ ಚಿತ್ರದಲ್ಲಿ ಸಾಧಿಸಲು, ಚಿತ್ರ ತೆಗೆಯುವ ಎರಡು ವರ್ಷ ಮೊದಲೇ ರಾಬರ್ಟ್ ಫ್ಲ್ಯಾಹರ್ಟಿ ಆ ಎಸ್ಕಿಮೋ ಜನರೊಡನೆ ವಾಸಿಸತೊಡಗಿದ್ದರು. ಅವರೊಡನೆ ತೀರ ಆತ್ಮೀಯತೆಯಿಂದ ಕಲೆತು, ಅವರೊಡನೆ ಅವರಂತೆಯೇ ದುಡಿದು, ಅವರ ಕಷ್ಟಸುಖಗಳಲ್ಲೆಲ್ಲ ಭಾಗಿಯಾಗಿ, ಅವರ ಜೀವನದ ಎಲ್ಲಾ ಮುಖಗಳ ಪ್ರತ್ಯಕ್ಷ ಅನುಭವವನ್ನು ಪಡೆದುಕೊಂಡಿದ್ದರು. ಇಂಥ ಸಾಹಸದ ಫಲವೇ ನಾನೂಕ್ ಆಯಿತು. ಆಮೇಲೆ ಫ್ಲ್ಯಾಹರ್ಟಿ ಭಾರತದ ಆಗ್ನೇಯದಲ್ಲಿರುವ ದ್ವೀಪಗಳಿಗೆ ಹೋಗಿ, ಅಲ್ಲಿ ಎರಡು ವರ್ಷ ನಿಂತಿದ್ದರ ಫಲವಾಗಿ, ಅಲ್ಲಿಯ ಮುಖವನ್ನು ಟಾಬೂ ಎಂಬ ಚಿತ್ರದಲ್ಲೂ ನಿರೂಪಿಸಿದರು. 1934ರಲ್ಲಿ

ಒಂದು ಬ್ರಿಟಿಷ್ ಕಂಪನಿಗಾಗಿ ಮೆನ್ ಆಫ್ ಆರಾನ್ ಎಂಬ ಚಿತ್ರವನ್ನು ನಿರ್ಮಿಸಿ, ಅದೇ ಕಂಪನಿಯ ಪರವಾಗಿ ಭಾರತಕ್ಕೆ ಬಂದು, ಬೆಂಗಳೂರು ಮೈಸೂರುಗಳಲ್ಲಿದ್ದು, ಮೈಸೂರಿನ ಸಾಬೂ ಎಂಬ ನಟನನ್ನು ತಮ್ಮ ಎಲಿಫೆಂಟ್ ಬಾಯ್ ಚಿತ್ರಕ್ಕಾಗಿ ಕರೆದುಕೊಂಡು ಹೋದರು. ಚಲಚ್ಚಿತ್ರ ಪ್ರಪಂಚದಲ್ಲಿ ಫ್ಲ್ಯಾಹರ್ಟಿ ನಡೆಸಿದ ಈ ಸಾಹಸಗಳು ಶುದ್ಧ ಡಾಕ್ಯುಮೆಂಟರಿಗಳಿಗೆ ಒಂದು ರೂಪವನ್ನು ಕೊಟ್ಟವು.

ಇಂಗ್ಲೆಂಡಿನ ಜಾನ್ ಗ್ರೀಯರ್ಸನ್ ಇನ್ನೊಬ್ಬ ಪ್ರಖ್ಯಾತ ಡಾಕ್ಯುಮೆಂಟರಿ ಚಿತ್ರಗಾರ. ಅವರು 1929ರಲ್ಲಿ ತಮ್ಮ ಮೊದಲನೆಯ ಡಾಕ್ಯುಮೆಂಟರಿಯಾದ ಡ್ರಿಫ್ಟರ್ಸ್ (ಕೊಚ್ಚುಬಲೆ ಹಾಕಿ ಮೀನು ಹಿಡಿಯುವ ದೋಣಿಗಳು) ಎಂಬ ಚಿತ್ರವನ್ನು ಇಂಗ್ಲೆಂಡಿನ ಎಂಪೈರ್ ಮಾರ್ಕೆಟಿಂಗ್ ಬೋರ್ಡಿಗಾಗಿ ನಿರ್ಮಿಸಿದರು. ಇದು ಹೆರಿಂಗ್ ಮೀನು ಹಿಡಿಯುವವರ ಸಾಹಸದ ಚಿತ್ರ. ಇದೊಂದು ಕೇವಲ ದಾಖಲೆ ಚಿತ್ರವಾಗಿರದೆ ಫ್ಲ್ಯಾಹರ್ಟಿಯ ಚಿತ್ರಗಳಂತೆ ಮೀನುಗಾರರ ಒಂದು ಆತ್ಮೀಯ ಚಿತ್ರಣವಾಗಿದ್ದು, ಸಮಾಜಕ್ಕೂ ಅವರಿಗೂ ಇರುವ ನಿಕಟಸಂಬಂಧವನ್ನು ಒತ್ತಿಹೇಳುತ್ತಿತ್ತು. ಈ ಚಿತ್ರದಲ್ಲಿ ಮಾಂಟಾಜ್ ರೀತಿಯನ್ನು ಗ್ರಿಯರ್ಸನ್ ವಿಶೇಷವಾಗಿ ಅನುಸರಿಸಿ ಚಿತ್ರದ ಪರಿಣಾಮ ಪ್ರಬಲವಾಗುವಂತೆ ಮಾಡಿದರು. ಈ ಚಿತ್ರ ಬ್ರಿಟಿಷರ ಡಾಕ್ಯುಮೆಂಟರಿ ಸಾಹಸದಲ್ಲಿ ಮೊದಲನೆಯದಾಯಿತು. ಆಮೇಲೆ ಗ್ರಿಯರ್ಸನ್ ಇಂಗ್ಲೆಂಡಿನ ಮಾರ್ಕೆಟಿಂಗ್ ಬೋರ್ಡಿನ ಪರವಾಗಿಯೂ ಹಲವಾರು ಉತ್ತಮ ಡಾಕ್ಯುಮೆಂಟರಿಗಳನ್ನು ನಿರ್ಮಿಸಿದರು. 1933ರಲ್ಲಿ ಫ್ಲ್ಯಾಹರ್ಟಿಯ ಜೊತೆಯಲ್ಲಿ ಇಂಡಸ್ಟ್ರಿಯಲ್ ಬ್ರಿಟನ್ ಎಂಬ ಚಿತ್ರವನ್ನೂ ತಯಾರಿಸಿದ.

ಡಾಕ್ಯುಮೆಂಟರಿ ಎಂಬ ಪದವನ್ನು ಹಲವರು ಹಲವಾರು ರೀತಿಯಿಂದ ತಿಳಿದುಕೊಳ್ಳುತ್ತಿದ್ದರು. ಈ ಪದಕ್ಕೆ ಗ್ರಿಯರ್ಸನ್ ಒಂದು ನಿರ್ದಿಷ್ಟ ಲಕ್ಷಣನಿರೂಪಣೆಯನ್ನು ಕೊಟ್ಟು, ವಾಸ್ತವತೆಯ ಸೃಷ್ಟಿಕಾರಿ ಪ್ರತಿಪಾದನೆ ಮಾಡುವ ಚಿತ್ರವೇ ಡಾಕ್ಯುಮೆಂಟರಿ, ಸೃಷ್ಟಿಕಾರಿ ಪ್ರತಿಪಾದನೆಯಿಲ್ಲದ ವಾಸ್ತವದ ಚಿತ್ರ ಕೇವಲ ದಾಖಲೆಚಿತ್ರ ಅಥವಾ ವಾರ್ತಾಚಿತ್ರವಾಗುತ್ತದೆ–ಎಂದು ಸಾರಿದರು. ಈ ಭಾವನೆಯನ್ನೇ ಇಂಗ್ಲೆಂಡಿನ ಮತ್ತೊಬ್ಬ ಪ್ರಖ್ಯಾತ ಡಾಕ್ಯುಮೆಂಟರಿ ಚಿತ್ರತಯಾರಿಕರೂ ಚಲಚ್ಚಿತ್ರ ವಿಮರ್ಶಕರೂ ಆದ ಪಾಲ್ ರೋತ (ನೋಡಿ) ವಿಶೇಷವಾಗಿ ಪುಷ್ಟೀಕರಿಸಿದರು. ಅವರು ನಿರ್ಮಿಸಿದ ಕೆಲವು ಉತ್ತಮ ಡಾಕ್ಯುಮೆಂಟರಿಗಳಲ್ಲಿ ದಿ ಫೇಸ್ ಆಫ್ ಬ್ರಿಟನ್, ಷಿಪ್‌ಯಾರ್ಡ್ ಕಾಂಟ್ರ್ಯಾಕ್ಟ್–ಮೊದಲಾದವು ಇವೆ. ಹೀಗೆ ಫ್ಲ್ಯಾಹರ್ಟಿ ಗ್ರೀಯರ್ಸನ್, ಪಾಲ್ ರೋತ ಮತ್ತು ಇಂಗ್ಲೆಂಡಿನ ಇತರ ಕೆಲವು ಪ್ರಖ್ಯಾತ ಚಿತ್ರನಿರ್ಮಾಪಕರು ಡಾಕ್ಯುಮೆಂಟರಿಗಳಿಗೆ ಚಲಚ್ಚಿತ್ರರಂಗದಲ್ಲಿ ಒಂದು ಭದ್ರವಾದ ತಳಹದಿಯನ್ನು ಹಾಕಿದರು.

ಭಾರತದಲ್ಲಿ ಡಾಕ್ಯುಮೆಂಟರಿಗಳ ಉತ್ಸುಕ ನಿರ್ಮಾಪಕ ಪಾಲ್ ಜಿಲ್ಸ್. ಜರ್ಮನಿಯಿಂದ ಬಂದು ಭಾರತದಲ್ಲಿ ನೆಲೆಸಿದವರು. ದೇಶದ ಆದಿ ದಾಖಲೆ ಚಿತ್ರಗಾರರಲ್ಲಿ ಪ್ರಖ್ಯಾತವೆನಿಸಿದ ಡಾ. ಪಿ. ವಿ. ಪತಿಯ ಉತ್ಸಾಹಪೂರ್ಣ ಬೆಂಬಲದಿಂದ ನೌಕಾಭಿವೃದ್ಧಿಗಾಗಿ ಇಂಡಿಯದ ಸಾಹಸ ಎಂಬ ಅರ್ಧ ತಾಸು ಪ್ರದರ್ಶಕಾಲದ ಚಿತ್ರವನ್ನು ಸಿಂಧಿಯಾ ಸ್ಟೀಮ್ ನ್ಯಾವಿಗೇಷನ್ ಸಂಸ್ಥೆಗಾಗಿ ನಿರ್ಮಿಸಿದರು. ಇದು 1947ರ ಸ್ವಾತಂತ್ರ್ಯದಿನದಲ್ಲಿ ಪಂಡಿತ ಜವಹಾರಲಾಲ್ ನೆಹರು ಮತ್ತು ಇತರ ಧುರೀಣರ ಸಮಕ್ಷಮದಲ್ಲಿ ಪ್ರದರ್ಶಿಸಲ್ಪಟ್ಟು, ದೇಶದಲ್ಲಿ ತುಂಬ ಮನ್ನಣೆ ಪಡೆಯಿತು. 1949ರ ಸುಮಾರಿಗೆ ಮೀನೂ ಮಸಾನಿಯವರ ಪ್ರಖ್ಯಾತ ಗ್ರಂಥವಾದ ಅವರ್ ಇಂಡಿಯಾದ ಚಿತ್ರಣಸ್ವಾಮ್ಯವನ್ನು ಪಡೆದು ಅದರ ಪೂರ್ಣ ಉದ್ದದ ಚಿತ್ರಣವನ್ನು ಜಿಲ್ಸ್ ಪ್ರಾರಂಭಿಸಿದರು.

ಅನಂತರ ಆರ್ಟ್ ಫಿಲ್ಮ್ ಆಫ್ ಏಷ್ಯ (AFA) ಎಂಬ ತಮ್ಮ ಚಿಕ್ಕ ಸಂಸ್ಥೆಯನ್ನು ಸಣ್ಣ ಪ್ರಮಾಣದ ಡಾಕ್ಯುಮೆಂಟರಿ ಚಿತ್ರಗಳಿಗಾಗಿಯೇ ಮೀಸಲಾಗಿರಿಸಿ, ಯು.ಎಸ್.ಓ.ದ ಡಾಕ್ಯುಮೆಂಟರಿ ವಿಭಾಗದ ಪರವಾಗಿಯೂ ಬರ್ಮಾ ಷೆಲ್ ಮತ್ತು ಇನ್ನಿತರ ಖಾಸಗೀ ಸಂಸ್ಥೆಗಳ ಪರವಾಗಿಯೂ ತಾವೇ ಸ್ವಂತವಾಗಿಯೂ ಅನೇಕ ಉತ್ತಮ ಚಿತ್ರಗಳನ್ನು ನಿರ್ಮಿಸಿ ಸರ್ಕಾರದ ಫಿಲ್ಮ್ಸ್ ಡಿವಿಷನ್‌ನ ಜೊತೆಯಲ್ಲಿ ಭಾರತದಲ್ಲಿ ಡಾಕ್ಯುಮೆಂಟರಿ ಚಿತ್ರಗಳ ಭದ್ರ ವಾತಾವರಣವನ್ನು ನಿರ್ಮಿಸಿದರು. ಮಗು, ಕುರವಂಡಿ ರಸ್ತೆ, ಒಂದು ಅಲ್ಪಜೀವಿಯಿಂದ ಮರಣ (ಮಲೇರಿಯ ರೋಗವನ್ನು ಕುರಿತು), ಉಜಲ (ಗೊಂಬೆಯಾಟದ ನೃತ್ಯನಾಟಕ), ನೇಯ್ಗೆ ಉದ್ಯಮ, ತಾಯಿ, ಸ್ಥಾನಾಂತರಗೊಂಡ ಅನಾಥರು, ಶಾಲೆ, ಅಳಿದುಹೋಗುತ್ತಿರುವ ಜನ (ನೀಲಗಿರಿಯ ತೋಡರು), ತಿರುವಾಂಕೂರಿನ ಒಂದು ಹಳ್ಳಿ, ಬೆಂಗಳೂರಿನ ಒಂದು ಕುಟುಂಬ–ಮೊದಲಾದವು ಅವರ ಮುಖ್ಯ ಚಿತ್ರಗಳು. ಇವುಗಳಲ್ಲಿ ಅನೇಕವು ಲೋಕದ ಅನೇಕ ಕಡೆಗಳಲ್ಲಾಗುವ ಚಲಚ್ಚಿತ್ರೋತ್ಸವಗಳಲ್ಲಿ ಪಾರಿತೋಷಕಗಳನ್ನೂ ಮನ್ನಣೆಯನ್ನೂ ಪಡೆದಿವೆ. ತಿರುವಾಂಕೂರಿನ ಒಂದು ಹಳ್ಳಿಗೆ ಕೊರ್ಕ್ ಶಹರದ ಚಲಚ್ಚಿತ್ರೋತ್ಸವದಲ್ಲಿ 1956ರ ಅತ್ಯುತ್ತಮ ಡಾಕ್ಯುಮೆಂಟರಿಯೆಂದು ಪಾರಿತೋಷಕ ಸಿಕ್ಕಿದೆ.

ಭಾರತ ಸರ್ಕಾರದ ಫಿಲ್ಮ್ಸ್ ಡಿವಿಷನ್ 1949ರಿಂದ ಡಾಕ್ಯುಮೆಂಟರಿಗಳನ್ನು ತೆಗೆಯಲು ಪ್ರಾರಂಭಿಸಿತು. ಅಂದಿನಿಂದ ಇಂದಿನವರೆಗೆ ಹಲವಾರು ಸಣ್ಣ ಚಿತ್ರಗಳನ್ನು ಅದು ನಿರ್ಮಿಸಿದೆ. ನಮ್ಮ ಜನಜೀವನ, ಪ್ರಕೃತಿಜೀವನ, ಸಾಂಸ್ಕೃತಿಕ ಜೀವನಗಳ ಅನೇಕ ಮುಖಗಳು ಈ ಚಿತ್ರಗಳಲ್ಲಿ ಕಾಣಬರುತ್ತವೆ. ಉಚ್ಚರೀತಿಯ ಪ್ರತಿಪಾದನೆಯಿಂದ ಇವುಗಳಲ್ಲಿ ಅನೇಕವು ಡಾಕ್ಯುಮೆಂಟರಿಗಳಾಗಿವೆ; ಲೋಕದ ಅನೇಕ ಚಿತ್ರೋತ್ಸವಗಳಲ್ಲಿಯೂ ಇತರ ಕಡೆಗಳಲ್ಲಿಯೂ ಪಾರಿತೋಷಕಗಳನ್ನೂ ಜನಾದರಣೆಯನ್ನೂ ಪಡೆದಿವೆ. ಈ ರೀತಿ ಹೆಸರು ಗಳಿಸಿದ ಚಿತ್ರಗಳಲ್ಲಿ ಕೆಲವು : ಅಮ್ಮೆಂಬಳ ಭಾಸ್ಕರರಾಯರ ಕಲ್ಪವೃಕ್ಷ ಮತ್ತು ಧರ್ತಿ ಕೀ ಝಂಕಾರ್, ಟಿ.ಎ. ಏಬ್ರಹಾಂರ ದಿ ಸಿಂಫೊನಿ ಆಫ್ ಲೈಫ್ (ಇದಕ್ಕೆ ಯಾವ ರೀತಿಯ ಭಾಷ್ಯವೂ ಇಲ್ಲ), ರವಿಪ್ರಕಾಶರ ಕಾಶ್ಮೀರದಲ್ಲಿ ವಸಂತಾಗಮನ, ಎಂ. ವಾಧ್ವಾನಿಯವರ ಖಜುರಾಹೋ ಮತ್ತು ಕಥಕಳಿ, ಎಂ. ಭವನಾನಿಯವರ ಖೆಡ್ಡಾ ಆಪರೇಷನ್, ಹಿಮಾಲಯನ್ ಟೇಪೆಸ್ಟ್ರಿ ಮತ್ತು ಕಾಶ್ಮೀರದ ನೇಕಾರರ ಕೌಶಲ ತೋರಿಸುವ ಚಿತ್ರ ; ಜೆ. ಎಸ್, ಭವನಾಗ್ರಿಯವರ ರಾಧಾಕೃಷ್ಣ (ಇದು ಪ್ರಸಿದ್ಧ ರಜಪೂತ ವರ್ಣಚಿತ್ರಗಳಿಂದಲೇ ಪೋಣಿಸಿದ ಕಥೆ), ಅರುಣಕುಮಾರ ಚೌಧುರಿಯವರ ಬೆಟ್ಟದ ಕರೆ, ಮುಶೀರ್ ಅಹಮ್ಮದ್‌ರ ತಾಜ್‌ಮಹಲ್, ಎಫ್. ಆರ್. ಎಸ್. ಪಿಳ್ಳೆಯವರ ಮಲಬಾರಿನ ಸಮರ ನೃತ್ಯಗಳು–ಮೊದಲಾದವು. ಫಿಲ್ಮ್ಸ್ ಡಿವಿಷನ್ ಚಿತ್ರಗಳನ್ನು ತಯಾರಿಸುವುದಲ್ಲದೆ, ಚಲಚ್ಚಿತ್ರ ಉದ್ಯಮದಲ್ಲಿ ಆಸಕ್ತಿಯಿರುವವರಿಗೆ ಉದ್ಯಮದ ಎಲ್ಲ ವಿಷಯಗಳಲ್ಲಿಯೂ ಆವಶ್ಯಕವಾದ ತರಬೇತಿಯನ್ನು ಕೊಟ್ಟು ಉದ್ಯಮದ ಮುಂದಿನ ಪ್ರಗತಿಯನ್ನು ಸಾಧಿಸುತ್ತಿದೆ.

ಡಾಕ್ಯುಮೆಂಟರಿ ಚಿತ್ರಗಳು ಸಾಮಾಜಿಕ ಸಮಸ್ಯೆಗಳ ಯಥಾವತ್ತಾದ ಅರಿವನ್ನು ಕೊಡಬಲ್ಲವು. ಅವನ್ನು ಸೂಕ್ಷ್ಮರೀತಿಯಿಂದಲೂ ವಿವೇಚಿಸಬಲ್ಲವು. ತನ್ನ ಮತ್ತು ತನ್ನ ದೇಶದ ಕಲ್ಯಾಣಕ್ಕಾಗಿ ಮಾಡುವ ಸಾಹಸಗಳನ್ನು ಶಕ್ತಿಯುತವಾಗಿ ಚಿತ್ರಿಸಬಲ್ಲವು, ಮಾತಿನಿಂದ ಬಣ್ಣಿಸಲಾಗದ ನೈಸರ್ಗಿಕ ದೃಶ್ಯಗಳನ್ನು ಅವರ್ಣನೀಯವಾಗಿ ನಮ್ಮ ಕಣ್ಣು ಮುಂದೆ ತಂದು ನಿಲ್ಲಿಸಬಲ್ಲವು. ಅನೇಕ ವಿಷಯಗಳಿಗೆ ಭಾವಗೀತೆಯಂಥ ರಮ್ಯತೆಯನ್ನು ಕೊಡಬಲ್ಲವು, ಜನಜೀವನದ ಪ್ರಕೃತಿಜೀವನದ, ಸಾಂಸ್ಕೃತಿಕ ಜೀವನದ ಸಾರ್ವಕಾಲಿಕ ಅಂಶವನ್ನು ಉಜ್ವಲವಾಗಿ ಸ್ಫುಟಗೊಳಿಸಬಲ್ಲವು. ಹೀಗಾಗಿ ಚಲನಚಿತ್ರರಂಗದಲ್ಲಿ ಡಾಕ್ಯುಮೆಂಟರಿಗಳಿಗೆ ಒಂದು ಉನ್ನತ ಸ್ಥಾನವಿದೆ. ಭಾರತ ಸರ್ಕಾರದ ಚಲನಚಿತ್ರ ವಿಭಾಗದ ಚಿತ್ರಭಂಡಾರದಲ್ಲಿ ಸುದ್ದಿಚಿತ್ರಗಳು, ಸಾಕ್ಷ್ಯಚಿತ್ರಗಳು, ಕಥಾಚಿತ್ರಗಳು ಆ್ಯನಿಮೇಷನ್ ಚಿತ್ರಗಳು ಸೇರಿದಂತೆ, 8000 ಉಪಯುಕ್ತ ಚಲನಚಿತ್ರಗಳ ಸಂಗ್ರಹವಿದೆ. ಕೆಲವು ಶೈಕ್ಷಣಿಕ ಚಿತ್ರಗಳು, ವಿಡಿಯೋ ಹಾಗೂ ಅಡಕಮುದ್ರಿಕೆಗಳ ರೂಪದಲ್ಲಿ ಲಭ್ಯವಿವೆ. ಸಾಕ್ಷ್ಯಚಿತ್ರಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಪ್ರತಿವರ್ಷ ಮುಂಬೈನಲ್ಲಿ ಡಾಕ್ಯುಮೆಂಟರಿ ಫಿಲ್ಮ್ ಮತ್ತು ವಿಡಿಯೋ ಚಿತ್ರಗಳ ಉತ್ಸವ ನಡೆಸುತ್ತಿದೆ. ಉತ್ತಮ ಚಿತ್ರಗಳಿಗಾಗಿ 26ಲಕ್ಷ ರೂಪಾಯಿಗಳಷ್ಟು ನಗದು ಬಹುಮಾನ ನೀಡುತ್ತಿದೆ. ಸುದ್ದಿ ಮತ್ತು ಸಾಕ್ಷ್ಯಚಿತ್ರಗಳ ನಿರ್ಮಾಣದಲ್ಲಿ ಜೀವಿತಾವಧಿ ಸಾಧನೆಗಾಗಿ ನೀಡುವ ಪ್ರಶಸ್ತಿಯ ಮೊತ್ತ 2ಲಕ್ಷ 60ಸಾವಿರ ರೂಪಾಯಿ.

**ಕಾರ್ಟೂನ್ ಚಿತ್ರಗಳು** : ಪ್ರತಿಯೊಂದು ಚಲಚ್ಚಿತ್ರ ಪ್ರದರ್ಶನದ ಮೊದಲಲ್ಲಿ ಸಾಧಾರಣವಾಗಿ ಒಂದಾದರೂ ಕಾರ್ಟೂನ್ ಚಿತ್ರ ಇರುತ್ತದೆ. ನೋಟಕ್ಕೆ ಅದೊಂದು ತೀರಾ ಸರಳವಾದ, ಸುಲಭವಾದ, ಹರ್ಷದಾಯಕ ಚಿತ್ರವಾದರೂ ಅದನ್ನು ತಯಾರಿಸುವ ವಿಧಾನದಲ್ಲಿ ಅತ್ಯಧಿಕ ಶ್ರಮವನ್ನೂ ತಾಳ್ಮೆಯನ್ನೂ ವಹಿಸಬೇಕಾಗಿದೆ. ಹತ್ತು ನಿಮಿಷ ಪ್ರದರ್ಶನಕಾಲದ ಚಿತ್ರಕ್ಕೆ 6" x 8" ಅಳತೆಯಿರುವ 12,000– 16,000 ಚಿತ್ರಗಳನ್ನು ಬಿಡಿಸಲಾಗುತ್ತದೆ. ಕಾರ್ಟೂನ್ ಚಿತ್ರಗಳ ತಯಾರಿಕೆಯಲ್ಲಿ ಅನೇಕ ಯಂತ್ರಸಾಮಗ್ರಿಗಳ ಉಪಯೋಗವಿದ್ದರೂ ಈ 12,000–16000 ಚಿತ್ರಗಳನ್ನು ಕೈಯಿಂದಲೇ ಬಿಡಿಸಲಾಗುತ್ತದೆ. ಇಷ್ಟೂ ಚಿತ್ರಗಳನ್ನು ಬಿಡಿಸಿದ ಮೇಲೆ ಅವುಗಳನ್ನು ಒಂದೊಂದಾಗಿ ಪಾರದರ್ಶಕ ಸೆಲ್ಯುಲಾಯ್ಡಿನ ಫಲಕಗಳ ಮೇಲೆ ರೇಖಿಸಿ ಅವುಗಳ ಪ್ರತಿಗಳನ್ನು ಮಾಡುತ್ತಾರೆ. ಅನಂತರ ಪ್ರತಿಯೊಂದು ಚಿತ್ರಕ್ಕೆ ಬಣ್ಣ ಕೊಡುವುದಲ್ಲದೆ, ಚಲಿಸುವ ಈ ಚಿತ್ರಗಳಿಗೆ 80–100 ಹಿನ್ನೆಲೆ ದೃಶ್ಯಗಳನ್ನು ಬೇರೆಬೇರೆಯಾಗಿ ಬಿಡಿಸಿ ಒದಗಿಸಿಕೊಡುತ್ತಾರೆ. ಈ ಹಿನ್ನೆಲೆ ದೃಶ್ಯಗಳು ಸ್ಥಾಯಿಕವಾಗಿರುತ್ತವಾಗಿ ಅವುಗಳಿಗೆ ಕೊಡುವ ಬಣ್ಣವನ್ನು ಬಹಳ ಜಾಗರೂಕತೆಯಿಂದ ನಿಶ್ಚಯಿಸಬೇಕಾಗುತ್ತದೆ. ಏಕೆಂದರೆ ಈ ಹಿನ್ನೆಲೆಯ ಚಿತ್ರಗಳ ಮುಂದೆ ಚಲಿಸುವ ಬಣ್ಣದ ವ್ಯಕ್ತಿಗಳು ಯಾವ ಆವರಣದಲ್ಲಿದ್ದರೂ ಅವು ಸ್ಪಷ್ಟವಾಗಿ ಕಾಣಿಸಬೇಕು. ಆಮೇಲೆ ಪ್ರತಿಯೊಂದು ಸೆಲ್ಯುಲಾಯ್ಡ್ ಚಿತ್ರಪ್ರತಿಯ ಕೆಳಗೆ ಅದಕ್ಕೆ ತಕ್ಕುದಾದ ಹಿನ್ನೆಲೆ ದೃಶ್ಯದ ಚಿತ್ರವನ್ನಿಟ್ಟು, ಈ ರೀತಿ ಸಂಯೋಜನೆಗೊಂಡ ಚಿತ್ರದ ಛಾಯಾಪ್ರತೀಕವನ್ನು ಕಾರ್ಟೂನ್ ಕ್ಯಾಮರದ ಮೂಲಕ ಚಿತ್ರಪಟಲದಲ್ಲಿ ತೆಗೆಯಬೇಕು. ಈ ಕ್ಯಾಮರ ವಿಶಿಷ್ಟ ರೀತಿಯದಾಗಿದ್ದು ಅದರಲ್ಲಿ ಒಂದೊಂದು ಸಲ ಒಂದೊಂದೇ ಛಾಯಾಚಿತ್ರವನ್ನು ತೆಗೆಯಲು ಬರುವುದು. ಆದುದರಿಂದ ಇದನ್ನು ಸ್ಥಾಯಿಯಾಗಿಟ್ಟು, ಸಂಯೋಜನೆ ಹೊಂದಿದ ಚಿತ್ರಗಳು ಒಂದೊಂದಾಗಿ ಕ್ರಮವಾಗಿ ಅದರ ಮುಂದೆ ಹಾದುಹೋಗುವಂತೆ ಮಾಡುತ್ತಾರೆ. ಇಷ್ಟೆಲ್ಲ ಒಂದೇ ವ್ಯಕ್ತಿ ಮಾಡುವುದಾದರೆ ಅವನಿಗೆ 6 ತಿಂಗಳ ಕಾಲಾವಕಾಶವಾದರೂ ಬೇಕಾಗುವುದು. ಒಮ್ಮೆ ಕ್ಯಾಮರದ ಚಲಚ್ಚಿತ್ರಪಟಲದಲ್ಲಿ ಈ 12,000–16,000 ಚಿತ್ರಗಳ ಛಾಯಾಪ್ರತೀಕಗಳು ಬಂದುವೆಂದಾದರೆ, ಅನಂತರ ಅವುಗಳಿಗೆ ಇತರ ಚಲಚ್ಚಿತ್ರಗಳಂತೆ

ರಾಸಾಯನಿಕ ಮತ್ತು ಇತರ ಎಲ್ಲ ಸಂಸ್ಕಾರಗಳೂ ಆಗಬೇಕು. ಶಬ್ದಬಂದ ಅನಂತರ ಚಿತ್ರಗಳಿಗೆ ಶಬ್ದವನ್ನೂ ಮಾತನ್ನೂ ಸಂಗೀತವನ್ನೂ ಸೇರಿಸುವುದು ಅತ್ಯಂತ ಕಷ್ಟದ ಕೆಲಸ. ಹೆಚ್ಚಾಗಿ, ಚಿತ್ರದಲ್ಲಿ ಯಾವ ಶಬ್ದ, ಮಾತು, ಸಂಗೀತ ಯಾವ ಸಂದರ್ಭದಲ್ಲಿ ಬರಬೇಕು ಎಂದು ಮೊದಲೇ ಜಾಗ್ರತೆಯಿಂದ ನಿಶ್ಚಯಿಸಿ, ಬಳಿಕ ಚಿತ್ರಗಳನ್ನು ಬಿಡಿಸುವುದು ರೂಢಿ. ಇಷ್ಟೆಲ್ಲ ಕಠಿಣ ಸಾಧನೆಗಳಿಂದ ತಯಾರಾದ ಚಲಚ್ಚಿತ್ರ ಪರದೆಯ ಮೇಲೆ ಕೇವಲ 10 ನಿಮಿಷಗಳೊಳಗೆ ಸಾಗಿಹೋಗುವುದು.



ವಾಲ್ಟ್ ಡಿಸ್ನೆಯ ಕಾರ್ಟೂನ್ ಚಿತ್ರಗಳಿಂದ ಆಯ್ದವು : 1. ಸ್ನೋ ಹ್ವೈಟ್ ಅಂಡ್ ದಿ ಸೆವೆನ್ ಡ್ವಾರ್ಫ್ಸ್‌ನ ಒಂದು ದೃಶ್ಯ, 2. ಪಿನೋಕಿಯೊ, 3. ಬ್ಯಾಂಬಿ, 4. ಡಂಬೊ, 5. ಮಿಕ್ಕಿಮೌಸ್, 6. ದಿ ತ್ರಿ ಕೆಬೆಲ್ಲರೋಸ್

ಕಾರ್ಟೂನ್ ಚಿತ್ರಗಳನ್ನು ನಿರ್ಮಿಸಿದ ಈ ವಿಧಾನವನ್ನು ಎಮಿಲ್ ಕೊಹ್ಲ್ 1904ರಲ್ಲೇ ಕಂಡುಹಿಡಿದಿದ್ದರು. ಚಿತ್ರದ ಎಲ್ಲ ಅವಸ್ಥೆಗಳನ್ನೂ ಅವರೊಬ್ಬರೇ ಸಾಧಿಸಿದ್ದರು. ಮೂರು ನಿಮಿಷದ ಚಿತ್ರನಿರ್ಮಾಣಕ್ಕೆ ಅವರಿಗೆ ಮೂರು ತಿಂಗಳು ಬೇಕಾದವು. ಆಗ ಚಿತ್ರವೂ ತುಂಬ ಸರಳವಾಗಿದ್ದು, ಶಬ್ದರಹಿತವೂ ಆಗಿತ್ತು. ಈಗ ಒಂದು ಕಾರ್ಟೂನ್ ಚಿತ್ರ ಸ್ಟೂಡಿಯೋದಲ್ಲಿ 20 ರಿಂದ 40ರ ರಷ್ಟು ಚಿತ್ರಗಾರರೂ ತಂತ್ರಜ್ಞರೂ ಇರುತ್ತಾರೆ. ಚಿತ್ರ ತಯಾರಿಕೆಯ ಪ್ರತಿಯೊಂದು ವಿಭಾಗ–ಕಥೆ, ಚಲಿಸುವ ವ್ಯಕ್ತಿಗಳ ಸೃಷ್ಟಿ ಮತ್ತು ಚಲನೆಯ ರೀತಿ, ಚಿತ್ರ ಬಿಡಿಸುವಿಕೆ, ಸೆಲ್ಯುಲಾಯ್ಡಿನ ಫಲಕಗಳ ಮೇಲೆ ಅವುಗಳ ಪ್ರತಿ ತೆಗೆಯುವಿಕೆ, ಬಣ್ಣದ ಪ್ರಯೋಗ, ಹಿನ್ನೆಲೆ ದೃಶ್ಯಗಳ ಚಿತ್ರಗಳು, ಛಾಯಾಪ್ರತೀಕ, ಶಬ್ದಜೋಡಣೆ ಇತ್ಯಾದಿ–ಆಯಾ ವಿಭಾಗದಲ್ಲಿ ನುರಿತ ಕಲೆಗಾರರ ವಶದಲ್ಲಿರುತ್ತದೆ. ಈ ರೀತಿಯ ವ್ಯವಸ್ಥೆಯಿಂದ ಈಗ 10 ನಿಮಿಷದ ಚಿತ್ರವನ್ನು 2–3 ತಿಂಗಳೊಳಗೆ ಮುಗಿಸಬಹುದಾಗಿದೆ. ಮಾತ್ರವಲ್ಲ, ಅದೇ ಸಮಯದಲ್ಲಿ 3–4 ಬೇರೆ ಬೇರೆ ಚಿತ್ರಗಳ ತಯಾರಿಕೆಯನ್ನೂ ಕೈಗೊಳ್ಳಬಹುದಾಗಿದೆ.

ಅಮೆರಿಕದಲ್ಲಿ ವಿನ್ಸರ್ ಮೆಕೆ ಎಂಬಾತ 1911ರಲ್ಲಿ ಕಾರ್ಟೂನ್ ಚಿತ್ರ ತೆಗೆಯುವ ವಿಧಾನವನ್ನು ಸ್ವತಂತ್ರವಾಗಿ ಕಂಡುಹಿಡಿದು, ಗರ್ಟೀ ಎಂಬ ಕಾರ್ಟೂನ್ ನಾಯಕವ್ಯಕ್ತಿಯನ್ನು ನಿರ್ಮಿಸಿ ಕಾರ್ಟೂನ್ ಚಿತ್ರಗಳನ್ನು ತಯಾರಿಸಿ ಪ್ರಖ್ಯಾತರಾದರು. ಅನಂತರ ಈ ರಂಗದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿದ ವ್ಯಕ್ತಿಯೆಂದರೆ ಮಿಕ್ಕಿ ಮೌಸ್ ಸೃಷ್ಟಿಕರ್ತ ವಾಲ್ಟ್ ಡಿಸ್ನೆ. ಇವರು ಈ ಶತಮಾನದ ಮೂರರಿಂದ ಏಳನೆಯ ದಶಕದವರೆಗೂ ಈ ರಂಗದಲ್ಲಿ ಅದ್ವಿತೀಯ ಕಲೆಗಾರರಾಗಿ ಮೆರೆದರು. 1914–18ರಲ್ಲಿ ಚಾರ್ಲಿ ಚಾಪ್ಲಿನ್ ಹುಚ್ಚು ಲೋಕದಲ್ಲೆಲ್ಲ ಹರಡಿಕೊಂಡಂತೆ ಮಿಕ್ಕಿ ಮೌಸಿನ ಹುಚ್ಚು ಲೋಕದಲ್ಲೆಲ್ಲ ಹರಡಿತು. ಡಿಸ್ನೆ 1938ರಲ್ಲಿ ಸ್ನೋವೈಟ್ ಅಂಡ್ ದಿ ಸೆವೆನ್ ಡ್ವಾರ್ಫ್ಸ್ ಎಂಬ ದೊಡ್ಡ ಕಾರ್ಟೂನ್ ಚಿತ್ರವನ್ನು ರಚಿಸಿ ಲೋಕದ ಮಕ್ಕಳನ್ನೆಲ್ಲ (ಜೊತೆಗೆ ವಯಸ್ಕರನ್ನೂ) ಸಂತಸಗೊಳಿಸಿದರು. ಹಾಗೆಯೇ 1940ರಲ್ಲಿ ಪಿನೋಕಿಯೊವನ್ನೂ 1941ರಲ್ಲಿ ರಿಲಕ್ಟೆಂಟ್ ಡ್ರ್ಯಾಗನ್ ಅನ್ನೂ 1942ರಲ್ಲಿ ಬ್ಯಾಂಬಿ ಮತ್ತು ಡಂಬೊ ಚಿತ್ರಗಳನ್ನೂ ನಿರ್ಮಿಸಿ, ಚಲಚ್ಚಿತ್ರರಂಗದಲ್ಲಿ ಕಾರ್ಟೂನ್ ಚಿತ್ರಗಳಿಗೆ ಒಂದು ಮಹತ್ತರ ಸ್ಥಾನವನ್ನು ಕಲ್ಪಿಸಿಕೊಟ್ಟರು. 1941ರಲ್ಲಿ ಅವರು ನಿರ್ಮಿಸಿದ ಫ್ಯಾಂಟಾಸಿಯ ಚಿತ್ರ ಒಂದು ಅಪೂರ್ವವಾದ ಕಲಾಸಾಹಸವೆನಿಸಿತು. ಅದರಲ್ಲವರು ಪ್ರಸಿದ್ಧ ಪಾಶ್ಚಾತ್ಯ ಸಂಗೀತ ಕೃತಿಗಳನ್ನು ದೃಗ್ಗೋಚರವಾಗುವಂತೆ ಮಾಡಿದ್ದಾರೆ. ಅವರೇ ಹೇಳುವಂತೆ ಅದರಲ್ಲಿ ಪ್ರೇಕ್ಷಕರು 'ಸಂಗೀತವನ್ನು ನೋಡುತ್ತಾರೆ, ಚಿತ್ರಗಳನ್ನು ಕೇಳುತ್ತಾರೆ.' ಇತ್ತೀಚೆಗೆ ಡಿಸ್ನೆ ಪ್ರವಾಸಚಿತ್ರಗಳನ್ನೂ ಶೈಕ್ಷಣಿಕ ಚಿತ್ರಗಳನ್ನೂ ಪ್ರಾಣಿಜೀವನ ಚಿತ್ರಗಳನ್ನೂ (ಉದಾ : ದಿ ಲಿವಿಂಗ್ ಡೆಸರ್ಟ್), ಡಾಕ್ಯುಮೆಂಟರಿಗಳನ್ನೂ ನಿರ್ಮಿಸಿದ್ದಾರೆ. ಇವೆಲ್ಲವೂ ಬಹು ಸುಂದರವಾದ, ಉತ್ತಮವಾದ ಚಿತ್ರಗಳಾಗಿವೆ. ಕಲಾವಿಮರ್ಶಕರು ಡಿಸ್ನೆಯನ್ನು ಆಧುನಿಕ ಜಾನಪದ ಸಂಪತ್ತಿನ ನಿರ್ಮಾಪಕನೆಂದು ಕರೆದಿದ್ದಾರೆ.

ಭಾರತದಲ್ಲಿ ಸಾಧಾರಣ 50–60 ವರ್ಷಗಳ ಹಿಂದೆ ಕಾರ್ಟೂನ್ ಚಿತ್ರಗಳನ್ನು ತಯಾರಿಸಲು ಕೆಲವು ಸಾಹಸಗಳು ನಡೆದವು. ಆದರೆ ಅವು ಯಾವುವೂ ಯಶಸ್ವಿಯಾಗಲಿಲ್ಲ. ಈಚೆಗೆ ಫಿಲ್ಮ್ಸ್ ಡಿವಿಷನ್ನಿನಲ್ಲಿ ಕಾರ್ಟೂನ್ ಚಿತ್ರಗಳ ಶಾಖೆಯೊಂದು ತೆರೆಯಲ್ಪಟ್ಟು, ಅದರಲ್ಲಿ ಪ್ರಮೋದಪತಿ, ವಿಟ್ಲ ಮೋಹನ್ ರಾವ್ ಮೊದಲಾದವರಿಂದ ಕೂಡಿದ 15–20 ಮಂದಿ ಕಲೆಗಾರರ ಉತ್ಸಾಹೀ ತಂಡವೊಂದು ಕೆಲಸ ಮಾಡಿತು. ಮೊದಮೊದಲು ಫಿಲ್ಮ್ಸ್ ಡಿವಿಷನ್ನಿನ ಚಿತ್ರಗಳಲ್ಲಿ ಬರುವ ರೇಖಾಚಿತ್ರಗಳಿಗೂ ಅಂಕಿಅಂಶಗಳಿಗೂ ಚಲನೆಯನ್ನು ಕೊಡುವ ಕೆಲಸ ಮಾತ್ರ ಈ ಶಾಖೆಯವರಿಗಿತ್ತು. ಈಗ ಈ ಶಾಖೆ, ಈ ಕೆಲಸದ ಜೊತೆಯಲ್ಲಿ, ಒಂದು ಇಲ್ಲವೆ ಎರಡು ರೀಲಿನ ಪೂರ್ಣ ಕಾರ್ಟೂನ್ ಚಿತ್ರಗಳನ್ನು ತಯಾರಿಸಲು ಪ್ರಾರಂಭಿಸಿತು. ಈವರೆಗೆ ಅಂಥ ನಾಲ್ಕಾರು ಚಿತ್ರಗಳನ್ನು ಸಂಸ್ಥೆ ನಿರ್ಮಿಸಿದೆ: 1 ಮೆಟ್ರಿಕ್ ಪದ್ಧತಿ, 2 ಆಲದ ಮರ ಮತ್ತು ಜಿಂಕೆ (ಬೌದ್ಧ ಸಾಹಿತ್ಯದಲ್ಲಿರುವ ಒಂದು ಜಾತಕ ಕಥೆ), 3 ಕನಸುಗಳು ನನಸಾದಾಗ (ಪಂಚವಾರ್ಷಿಕ ಯೋಜನೆಗಳನ್ನು ಕುರಿತು) ಮತ್ತು 4 ಒಂದು ದೊಡ್ಡ ಸಮಸ್ಯೆ (ಕುಟುಂಬ ಯೋಜನೆಯನ್ನು ಕುರಿತು).

ಕಂಪ್ಯೂಟರ್ ಯುಗ ಆರಂಭವಾದ ಮೇಲೆ, ಕಾರ್ಟೂನ್ ಚಿತ್ರಗಳಿಗೆ ಹೊಸ ಆಯಾಮ ಬಂದಿದೆ. ಆ್ಯನಿಮೇಷನ್ ತಂತ್ರಜ್ಞಾನ ಬಳಸಿದ ಕಾರ್ಟೂನ್ ಚಿತ್ರಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಹಾಲಿವುಡ್‌ನಲ್ಲಿರುವ ಅನಿಮೇಷನ್ ತಂತ್ರಜ್ಞರಲ್ಲಿ ಭಾರತೀಯರೇ ಅರ್ಧ ಸಂಖ್ಯೆಯಲ್ಲಿದ್ದಾರೆ. ಭಾರತದಲ್ಲೇ ಮೊದಲು ತಯಾರಾದ ಅನಿಮೇಷನ್ ಚಿತ್ರ ಹನುಮಾನ್.

**7. ಮಕ್ಕಳ ಚಿತ್ರಗಳು :** ಇವು ಶೈಕ್ಷಣಿಕ ಚಿತ್ರಗಳಲ್ಲ, ಮಕ್ಕಳ ಮನೋರಂಜನೆಯ ಚಿತ್ರಗಳು. ದೊಡ್ಡವರು ಆನಂದ ಪಡುವ ಚಿತ್ರಗಳು ಮಕ್ಕಳ ರಂಜನೆಗೆ ಯೋಗ್ಯವಲ್ಲ. ಅಂಥ ಚಿತ್ರಗಳಲ್ಲಿರುವ ಕಥೆಯೂ ಸನ್ನಿವೇಶಗಳೂ ಮಕ್ಕಳಿಗೆ ಅರ್ಥವಾಗದೆ, ಅವು ವಿಶೇಷವಾಗಿ ಬೇಸರಗೊಳ್ಳುತ್ತವೆ. ಅಲ್ಲದೆ, ದೊಡ್ಡವರ ಅನೇಕ ಚಿತ್ರಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ತುಂಬ ಹಾನಿಕಾರಕವಾಗಿರುತ್ತವೆ.

ಆದ್ದರಿಂದ ಮಕ್ಕಳಿಗಾಗಿಯೇ ಪ್ರತ್ಯೇಕ ರಂಜನೆಯನ್ನು ಕೊಡುವ ಚಿತ್ರಗಳನ್ನು ನಿರ್ಮಿಸುವುದು ಅವಶ್ಯವಾಯಿತು. ಇಂಥ ಚಿತ್ರಗಳ ತಯಾರಿಕೆಯಲ್ಲಿ ಇಂಗ್ಲೆಂಡ್ ಮೊದಲ ದೇಶವಾಗಿ ಇತರ ದೇಶಗಳಿಗೆ ಮಾರ್ಗದರ್ಶಕವಾಗಿದೆ. ಅಲ್ಲಿಯ ಚಿತ್ರೋದ್ಯಮದಲ್ಲಿ ಪ್ರಮುಖ ಚಿತ್ರನಿರ್ಮಾಪಕನೂ ಪ್ರದರ್ಶನಕಾರನೂ ಆಗಿರುವ ಜೆ. ಆರ್ಥರ್ ರ‍್ಯಾಂಕ್ 1944ರಲ್ಲಿ ತನ್ನ ಚಿತ್ರಕಾರ್ಯಾಲಯದಲ್ಲಿ ಮಕ್ಕಳಿಗಾಗಿ ಚಿತ್ರಗಳನ್ನು ತಯಾರಿಸಲಿಕ್ಕೆಂದೇ ಒಂದು ದೊಡ್ಡ ಶಾಖೆಯನ್ನು ತೆರೆದು, ಅದರ ಮೂಲಕ ಹೊರಡುವ ಚಿತ್ರಗಳೆಲ್ಲ ದೇಶದಲ್ಲಿ ತನ್ನ ಅಧೀನದಲ್ಲಿರುವ 400 ಪ್ರದರ್ಶನ ಮಂದಿರಗಳಲ್ಲಿ ಪ್ರತ್ಯೇಕವಾಗಿ ಪ್ರದರ್ಶಿಸಲ್ಪಡುವಂತೆ ಅವಕಾಶ ಕಲ್ಪಿಸಿದ. ಇಂಗ್ಲೆಂಡಿನಲ್ಲಿ ಆಗಲೇ ಅನೇಕ ಉತ್ತಮ ಡಾಕ್ಯುಮೆಂಟರಿಗಳನ್ನು ನಿರ್ಮಿಸಿ ಪ್ರಸಿದ್ಧರಾಗಿದ್ದ ಮಿಸ್ ಮೇರಿ ಫೀಲ್ಡ್ ಈ ಶಾಖೆಯ ಮುಖ್ಯಸ್ಥರಾಗಿ, ಈ ರಂಗದಲ್ಲಿ ಅನೇಕ ಶೋಧನೆಗಳನ್ನು ನಡೆಸಿ, 181 ಚಿತ್ರಗಳನ್ನು ನಿರ್ಮಿಸಿದರು. ಇವುಗಳಲ್ಲಿ 27 ನಾಟಕಗಳೂ, 27 ಧಾರಾವಾಹೀ ಕಥೆಗಳೂ, 9 ಮಾಹಿತಿ ಚಿತ್ರಗಳೂ, 60 ಚಿತ್ರಸಂಕೀರ್ಣಗಳೂ, 17 ಪ್ರವಾಸ ಚಿತ್ರಗಳೂ, 27 ಪ್ರಕೃತಿವಿಜ್ಞಾನಕ್ಕೆ ಸಂಬಂಧಿಸಿದ ಚಿತ್ರಗಳೂ ಇವೆ.

1951ರಲ್ಲಿ ಆರ್ಥರ್ ರ‍್ಯಾಂಕನ ಮಕ್ಕಳಚಿತ್ರಗಳ ಶಾಖೆ ರದ್ದುಗೊಂಡು, ಅದರ ಸ್ಥಾನದಲ್ಲಿ ಚಿಲ್ಡ್ರನ್ಸ್ ಫಿಲ್ಮ್ ಫೌಂಡೇಷನ್ ಎಂಬ ಸಂಸ್ಥೆ ಹುಟ್ಟಿಕೊಂಡಿತು. ಇದು ಲಾಭನಿರೀಕ್ಷೆಯಿಲ್ಲದ ಸಂಸ್ಥೆಯಾಗಿದ್ದು, ಚಿತ್ರಗಳ ತಯಾರಿಕೆ, ಹಂಚಿಕೆ, ದೇಶವಿದೇಶಗಳಲ್ಲಿ ಅವುಗಳ ಪ್ರದರ್ಶನ,

ಮೊದಲಾದವುಗಳ ಪೂರ್ಣ ಹೊಣೆಯನ್ನು ವಹಿಸಿಕೊಂಡಿದೆ. ಆರ್ಥಿಕ ಕಾರಣಗಳಿಂದ ಸಂಸ್ಥೆ ಕಷ್ಟಪಡದಂತೆ, ಬ್ರಿಟಿಷ್ ಫಿಲ್ಮ್ ಫಂಡ್ ಇದಕ್ಕೆ ಧಾರಾಳ ಹಣಕಾಸಿನ ಸಹಾಯವನ್ನು ಒದಗಿಸುತ್ತದೆ. ಮೊದಲನೆಯ 4 ವರ್ಷಗಳಲ್ಲಿ ಇದು 15 ಪೂರ್ಣ ಚಿತ್ರಗಳನ್ನೂ, 12 ಎರಡೆರಡು ರೀಲುಗಳ ಚಿತ್ರಗಳನ್ನೂ ಪ್ರವಾಸಚಿತ್ರಗಳನ್ನೂ, 12 ಒಂದೊಂದು ರೀಲಿನ ಚಿತ್ರಸಂಕೀರ್ಣಗಳನ್ನೂ ನಿರ್ಮಿಸಿ ಪ್ರದರ್ಶನಕಾರರಿಗೆ ಒದಗಿಸಿ ಕೊಟ್ಟಿತು. ಈ ಸಂಸ್ಥೆ ತನ್ನ ಅನುಭವವನ್ನು ಇತರ ದೇಶಗಳಿಗೆ ಕೊಡಲು ಸಿದ್ಧವಿದೆ.

ಸೋವಿಯೆತ್ ದೇಶದಲ್ಲೂ ಮಕ್ಕಳಿಗಾಗಿ ಚಲನಚಿತ್ರಗಳ ತಯಾರಿಕೆ ರಭಸದಿಂದ ಸಾಗುತ್ತಿದೆ. ಭಾರತದಲ್ಲಿ ಮಾತ್ರ ಇದು ಇನ್ನೂ ಹೇಳಿಕೊಳ್ಳುವಷ್ಟು ಪ್ರಮಾಣದಲ್ಲಿ ಪ್ರಾರಂಭವಾಗಿಲ್ಲ. ಇಂಥ ಉದ್ಯಮ ಸುಲಭವಲ್ಲ. ಮಕ್ಕಳಿಗೆ ರುಚಿಸುವಂಥ ಇಲ್ಲವೆ ಯೋಗ್ಯವಾಗಿರುವ ವಿಷಯಗಳ ಆಯ್ಕೆ ಮತ್ತು ಮಕ್ಕಳ ಮನಸ್ಸಿಗೆ ಒಪ್ಪುವಂಥ ರೀತಿಯಲ್ಲಿ ಆರಿಸಿದ ವಿಷಯಗಳ ಯೋಗ್ಯ ನಿರೂಪಣೆ ಆಗಬೇಕಾದರೆ ಮಕ್ಕಳ ಮನಶ್ಶಾಸ್ತ್ರದ ವಿಶೇಷ ಜ್ಞಾನ ಅಗತ್ಯ.

ದೆಹಲಿಯ ಸಾಂಸ್ಕೃತಿಕ ಚಲನಚಿತ್ರ ಸಂಸ್ಥೆ (ಇದೊಂದು ಖಾಸಗಿ ಸಂಸ್ಥೆ) 1952ರಲ್ಲಿ ಮಕ್ಕಳ ಚಿತ್ರಗಳ ಒಂದು ಉತ್ಸವವನ್ನು ಮೊದಲು ನೆರವೇರಿಸಿತು. ಇದರ ಫಲವಾಗಿ ದೆಹಲಿ, ಚೆನ್ನೈ, ಮುಂಬಯಿಗಳಲ್ಲಿ ಮಕ್ಕಳ ಚಿತ್ರಮಂದಿರಗಳು ಸ್ಥಾಪಿತವಾದುವು. (ಇವುಗಳಲ್ಲಿ ಒಳ್ಳೆಯ ಡಾಕ್ಯುಮೆಂಟರಿಗಳೂ ಪ್ರದರ್ಶಿಸಲ್ಪಡುತ್ತವೆ). ಅನಂತರ ಇನ್ನೆರಡು ಮಕ್ಕಳ ಚಲನಚಿತ್ರೋತ್ಸವಗಳು ನಡೆದುವು. ಮಕ್ಕಳ ಚಿತ್ರಗಳ ತಯಾರಿಕೆಯನ್ನು ಸಹಜವಾಗಿ ಫಿಲ್ಮ್ಸ್ ಡಿವಿಷನ್ ಕೈಕೊಳ್ಳಬಹುದಾಗಿತ್ತು. ಆದರೆ ಅದರ ಕಾರ್ಯವಿಸ್ತಾರ ಆಗಲೇ ಹೆಚ್ಚಿದ್ದುದರಿಂದ ಸರ್ಕಾರ 1955ರಲ್ಲಿ ಈ ಕಾರ್ಯಕ್ಕಾಗಿ ಬಾಲಚಿತ್ರಸಮಿತಿ ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ಮಾತ್ರವಲ್ಲ, ಈ ಕ್ಷೇತ್ರದಲ್ಲಿ ಬಹಳ ಕೆಲಸ ಮಾಡಿ ಹೆಸರು ಪಡೆದ ಇಂಗ್ಲೆಂಡಿನ ಮಿಸ್ ಮೇರಿ ಫೀಲ್ಡ್‌ರನ್ನು ಈ ದೇಶಕ್ಕೆ ಬರಮಾಡಿಕೊಂಡು ಅವರಿಂದ ಅನೇಕ ಉತ್ತಮ ಸಲಹೆಗಳನ್ನು ಪಡೆದುಕೊಂಡಿತು. ಬಾಲಚಿತ್ರಸಮಿತಿ ಈಗ 6 ರಿಂದ 11 ವರ್ಷದ ಮಕ್ಕಳಿಗೂ 11ರಿಂದ16 ವರ್ಷದ ಮಕ್ಕಳಿಗೂ ಸರಿಹೋಗುವಂತೆ ಎರಡು ಅಂತಸ್ತಿನ ಚಿತ್ರಗಳನ್ನು ತಯಾರಿಸುವ ಹೊಣೆ ಹೊತ್ತಿದೆ. ಈವರೆಗೆ ದೇಶದಲ್ಲಿ ನಿರ್ಮಿಸಲ್ಪಟ್ಟ ಇಂಥ ಚಿತ್ರಗಳು ಯಾವುವೆಂದರೆ–ಚಾರ್ ದೋಸ್ತ್ (ಇಬ್ಬರು ಹುಡುಗರೂ ಇಬ್ಬರು ಹುಡುಗಿಯರೂ ಕೂಡಿ ಒಂದು ಕರಡಿಯ ಮೇಲಿಟ್ಟ ಮಮತೆಯನ್ನು ಕುರಿತು), ಬಾಲರಾಮಾಯಣ (ದೊಡ್ಡವರ ಚಲನಚಿತ್ರಗಳಿಂದ ರಾಮಾಯಣಕಥೆಯ ಸನ್ನಿವೇಶಗಳನ್ನು ಆರಿಸಿ ಸಂಯೋಜಿಸಿದ ಚಿತ್ರ), ರಾಮಾಶಾಸ್ತ್ರೀ ಕಾ ನ್ಯಾಯ್ (ಒಬ್ಬ ಹಳ್ಳಿಯ ಹುಡುಗ ಬೆಳೆದು ಪೇಶ್ವೆಯರ ಆಳಿಕೆಯಲ್ಲಿ ಶ್ರೇಷ್ಠ ನ್ಯಾಯಾಧೀಶನಾಗಿ ನ್ಯಾಯವಿತರಣೆಯನ್ನು ಹೇಗೆ ಮಾಡುತ್ತಿದ್ದನೆಂದು ವಿವರಿಸುವ ಚಿತ್ರ. ಇದು ವೆನಿಸಿನ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಮೊದಲ ಬಹುಮಾನ ಪಡೆದಿದೆ), ಮತ್ತು ಸ್ಕೌಟ್ ಕ್ಯಾಂಪ್, ಅಕ್ಬರನ ಬಾಲ್ಯವನ್ನು ಚಿತ್ರಿಸುವ ಗುಲಾಬ್ ಕಾ ಫೂಲ್ ಚಿತ್ರ, ಮತ್ತು ಹರಿಯಾ, ಗಂಗಾ ಕೀ ಲಹರೇ ಎಂಬ ಚಿತ್ರಗಳು ಸಿದ್ಧವಿವೆ. ವಿ. ಶಾಂತಾರಾಮ್ ಅವರೂ ಫೂಲ್ ಔರ್ ಕಲಿಯಾ (ಹೂ ಮತ್ತು ಮೊಗ್ಗೆಗಳು) ಎಂಬ ಮಕ್ಕಳ ಚಿತ್ರವನ್ನು ನಿರ್ಮಿಸಿದ್ದಾರೆ.

ಈಚೆಗೆ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಮಕ್ಕಳಿಗಾಗಿಯೇ ಬಾಲಭವನದಲ್ಲಿ ಚಿತ್ರಗಳನ್ನು ತರಿಸಿ ಪ್ರದರ್ಶಿಸುವ ವ್ಯವಸ್ಥೆ ಏರ್ಪಟ್ಟಿದೆ. (ಪಿ.ಆರ್‌ಎ.)

## III ಚಲನಚಿತ್ರ ನಿರ್ಮಾಣ ತಂತ್ರ

ಚಲನಚಿತ್ರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು : 1 ಕಥಾ ನಿರೂಪಣೆ ಉಳ್ಳವು, 2 ಕಥೆಯನ್ನೇ ಪ್ರಧಾನವಾಗಿ ಅವಲಂಬಿಸದೆ ಇರುವಂಥವು. ಸಾಕ್ಷಿಚಿತ್ರಗಳು, ಶೈಕ್ಷಣಿಕ ಚಿತ್ರಗಳು, ವಾರ್ತಾಚಿತ್ರಗಳು ಇಂಥವು ಎರಡನೆಯ ವರ್ಗಕ್ಕೆ ಸೇರಿದುವು.

ಕಥಾನಿರೂಪಣೆಯುಳ್ಳ ಚಲನಚಿತ್ರಗಳ ಪ್ರಧಾನ ಉದ್ದೇಶ ಮನರಂಜನೆಯಾದರೆ ಎರಡನೆಯ ವರ್ಗದ ಚಿತ್ರಗಳ ಮುಖ್ಯ ಗುರಿ ಜ್ಞಾನಪ್ರಸಾರ. ಉದ್ದೇಶಭಿನ್ನತೆಯಿಂದಾಗಿ ಇವುಗಳ ರಚನಾತಂತ್ರದಲ್ಲೂ ವ್ಯತ್ಯಾಸಗಳು ಏರ್ಪಟ್ಟಿವೆ.

ಕಥಾಚಿತ್ರದಲ್ಲಿ – ಅದರ ಹೆಸರೇ ಸೂಚಿಸುವಂತೆ – ಕಥೆಯು ಪ್ರಧಾನ ಅಂಶ: ಯಾವುದಾದರೊಂದು ಕಥಾವಸ್ತುವನ್ನು ಅವಲಂಬಿಸಿ ಅದರ ನಿರ್ಮಾಣ. ಇಂಥ ಚಿತ್ರದ ಕಥೆ ಹೊಸದಾಗಿ ಕಲ್ಪಿಸಿದ್ದಿರಬಹುದು ಇಲ್ಲವೆ ಪೂರ್ವಪ್ರಚಲಿತ ಕಥೆಯಾಗಿರಬಹುದು. ಅಂದರೆ ಪರಂಪರಾಗತ ಪುರಾಣ, ದಂತಕಥೆಗಳನ್ನವಲಂಬಿಸಿರಬಹುದು, ಅಥವಾ ಪ್ರಕಟಿತ ಕಥೆ ಕಾದಂಬರಿ, ನಾಟಕ, ಕಥನಕವನ, ಪ್ರಸಿದ್ಧ ವ್ಯಕ್ತಿಯ ಜೀವನಚರಿತ್ರೆ ಆಗಿರಬಹುದು.

ಹೀಗೆ ಯಾವ ವರ್ಗಕ್ಕೇ ಸೇರಿದ್ದಾಗಿರಲಿ ಅದು ಚಲನಚಿತ್ರಕ್ಕೆ ಆಕರವಾಗಬಹುದು. ಈ ಆಕರದ ಆಧಾರದ ಮೇಲೆ ಕಥೆಯ ಹಂದರವನ್ನು ಚಲನಚಿತ್ರ ನಿರ್ಮಾಣಕ್ಕೆ ಒದಗುವಂತೆ ಅಳವಡಿಸಿಕೊಳ್ಳಬೇಕಾಗುತ್ತದೆ.

ಚಲನಚಿತ್ರ ನಿರ್ಮಾಣದಲ್ಲಿ ಕಥೆಯ ಆಯ್ಕೆ ಒಂದು ಮುಖ್ಯ ಘಟ್ಟ. ಚಿತ್ರಕ್ಕೆ ಆರಿಸಿಕೊಳ್ಳುವ ಕಥೆ ಇಂಥ ರೀತಿಯದೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ಆದರೂ ತಾನು ನಿರ್ಮಿಸಲಿರುವ ಚಿತ್ರಕ್ಕೆ ಕಥೆಯನ್ನು ಆರಿಸುವಾಗ ಚಲನಚಿತ್ರ ನಿರ್ಮಾಪಕ ಕೆಲವು ಅಂಶಗಳನ್ನು ಲಕ್ಷ್ಯದಲ್ಲಿಟ್ಟು–ಕೊಳ್ಳಬೇಕಾಗುತ್ತದೆ. ಏಕೆಂದರೆ ಕಥಾಚಿತ್ರಗಳನ್ನು ತಯಾರಿಸುವುದು ಪ್ರಧಾನವಾಗಿ ಲಾಭಾರ್ಜನೆಯ ದೃಷ್ಟಿಯಿಂದ. ಇದು ಸಹಜವೇ. ಕಾರಣ ಇಂಥ ಚಲನಚಿತ್ರದ ತಯಾರಿಕೆಗಾಗಿ ದೊಡ್ಡ ಪ್ರಮಾಣ–ದಲ್ಲಿ ಬಂಡವಾಳವನ್ನು ಹೂಡ ಬೇಕಾಗುತ್ತದೆ. ಆದ್ದರಿಂದ ಚಲನಚಿತ್ರ ನಿರ್ಮಾಪಕ ಆ ಬಂಡವಾಳ ಮತ್ತು ಅದರ ಮೇಲೆ ತಕ್ಕಷ್ಟು ಲಾಭ ದೊರೆಯುವುದಕ್ಕೆ ಸಹಾಯಕವಾದ ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಮುಂದುವರಿಯುತ್ತಾನೆ.

ಆದ್ದರಿಂದ ಅವನು ತನ್ನ ಚಿತ್ರ ಪ್ರದರ್ಶಿತವಾಗಲಿರುವ ಪ್ರದೇಶದಲ್ಲಿನ ಜನರ ಅಭಿರುಚಿ, ಮನೋವೃತ್ತಿ, ಅವರಿಗೆ ಪ್ರಿಯವಾದ, ಅಪ್ರಿಯವಾದ ಅಂಶಗಳು ಮುಂತಾದುವನ್ನು ಗಮನಿಸಿ ಅವರಿಗೆ ಹಿಡಿಸಬಹುದಾದ ಕಥೆಯನ್ನು ಆರಿಸಿಕೊಳ್ಳುತ್ತಾನೆ. ಇದು ಸಾಮಾನ್ಯ ನಿಯಮವಾದರೂ ಇದಕ್ಕೆ ಅಪವಾದವೆನಿಸುವಂಥ ಕಥೆಗಳ ಆಯ್ಕೆಯೂ ಒಮ್ಮೊಮ್ಮೆ ನಡೆಯುವುದುಂಟು. ಇಂಥ ಕಥೆಗಳನ್ನಾಧರಿಸಿದ ಚಲನಚಿತ್ರಗಳು ಒಮ್ಮೊಮ್ಮೆ ಲಾಭದಾಯಕವಾಗುವುದೂ ಉಂಟು.

ಜ್ವಕ್ಕ ಕನ್ನಡ ಚಿತ್ರದಲ್ಲಿ ಯಶರಾಜ್.
ಟಾರ್ಝಾನ್ ಚಿತ್ರಗಳ ಅನುಕರಣೆಯನ್ನಿಲ್ಲಿ ಕಾಣಬಹುದು

ಕಥೆಯನ್ನು ಆರಿಸಿದ ಮೇಲೆ ಮುಂದಿನ ಕಾರ್ಯ ಅದನ್ನು ಚಲನಚಿತ್ರಕ್ಕೆ ಅಳವಡಿಸುವುದು. ಈ ಅಳವಡಿಕೆಯನ್ನು ಚಲನಚಿತ್ರನಾಟಕ (ಸ್ಕ್ರೀನ್ ಪ್ಲೇ) ಎಂದು ಕರೆಯುತ್ತಾರೆ. ಚಲನಚಿತ್ರ ರಚನೆಯಲ್ಲಿ ಇದರ ಸ್ಥಾನ – ಒಂದು ಕಟ್ಟಡದ ನಿರ್ಮಾಣದಲ್ಲಿ ನೀಲನಕಾಶೆಗೆ ಇರುವ ಸ್ಥಾನಕ್ಕೆ ಸಮಾನವಾದುದು. ಅಂತಿಮ ರೂಪದಲ್ಲಿ ಚಲನಚಿತ್ರ ಹೇಗೆ ಇರಬೇಕು ಎಂಬುದರ ಸ್ಪಷ್ಟನಿರೂಪಣೆ ಇದರಲ್ಲಿ ಇರುತ್ತದೆ. ಇದನ್ನು ಸಿದ್ಧಗೊಳಿಸುವಾಗ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ಚಲನಚಿತ್ರ ನಿರ್ಮಾಣಕ್ಕಾಗಿ ತೊಡಗಿಸಬಹುದಾದ ಒಟ್ಟು ಬಂಡವಾಳದ ಮೊತ್ತ; ಇನ್ನೊಂದು ಅಂಶ–ಚಿತ್ರನಿರ್ಮಾಣದ ಸಂಬಂಧದಲ್ಲಿ ಒದಗಿಸಬಹುದಾದ ತಾಂತ್ರಿಕ ಸೌಲಭ್ಯಗಳು; ಹಾಗೆಯೇ ದೊರೆಯಬಹುದಾದ ನಟನಟಿಯರ ವ್ಯಕ್ತಿತ್ವ, ಕಲಾನೈಪುಣ್ಯ.

ಚಲನಚಿತ್ರನಾಟಕ ರಚನೆ ಸಾಮಾನ್ಯವಾಗಿ ಮೂರು ಹಂತಗಳಲ್ಲಿ ನಡೆಯುತ್ತದೆ. ಅದರ ರೂಪರೇಖೆಯನ್ನು ನಿರ್ಧರಿಸುವುದು ಮೊದಲ ಹಂತ. ಅಂದರೆ ಚಲನಚಿತ್ರಕ್ಕಾಗಿ ಆರಿಸಿದ ಕಥಾವಸ್ತುವನ್ನು ಆಧಾರವಾಗಿಟ್ಟುಕೊಂಡು ಕಥೆಯ ಕ್ರಿಯೆ, ಘಟನಾವಳಿಗಳಿಗೆ ವಿಶೇಷ ಲಕ್ಷ್ಯ ಕೊಟ್ಟು ಚಲನಚಿತ್ರನಾಟಕದ ಸ್ವರೂಪ – ಇವನ್ನು ನಿರ್ಧರಿಸಬೇಕು.

ಎರಡನೆಯ ಹಂತ – ಈ ರೂಪರೇಖೆಯ ವಿವರವಾದ ನಿರೂಪಣೆ. ಅಂತಿಮವಾಗಿ ಚಿತ್ರ ಯಾವ ರೂಪವನ್ನು ತಾಳುತ್ತದೆ ಎಂಬುದರ ಮುನ್ನೋಟ ಇದರಲ್ಲಿರುತ್ತದೆ.

ಮೂರನೆಯ ಹಂತವೇ ಸಿದ್ಧ ಚಲನಚಿತ್ರನಾಟಕ. ನಿರೂಪಣೆಯಲ್ಲಿರುವ ಅಂಶಗಳ ಚಿತ್ರಣ ಹೇಗೆ ನಡೆಯಬೇಕು ಎಂಬುದರ ವಿವರವೆಲ್ಲ ಇದರಲ್ಲಿರುತ್ತದೆ. ಅಂದರೆ ದೃಶ್ಯ, ಉಪದೃಶ್ಯ ವಿಭಜನೆ, ಕ್ರಿಯಾಸ್ಥಾನಗಳ ವಿವರ, ಅವುಗಳಲ್ಲಿ ಬರುವ ಪಾತ್ರಗಳು, ಆ ಪಾತ್ರಗಳ ಸಂಭಾಷಣೆ, ರಂಗಚಲನೆ, ಪಾತ್ರಗಳ ಅಭಿನಯಕ್ಕೆ ಸಂಬಂಧಿಸಿದ ಸೂಚನೆಗಳು, ಚಿತ್ರೀಕರಣದ ಸ್ವರೂಪ, ಘಟನೆಗಳ ಭಾವಪೋಷಣೆಗೆ ಸಹಕಾರಿಯಾದ ಅಂಶಗಳು ಮುಂತಾದ ನಾನಾ ಅಂಶಗಳ ಸ್ಪಷ್ಟ ಉಲ್ಲೇಖ ಇದರಲ್ಲಿ ಇರುತ್ತವೆ. ಅಂದರೆ ಚಿತ್ರನಿರ್ಮಾಣ ಹೇಗೆ ನಡೆಯಬೇಕೆಂಬುದರ ಬಗೆಗೆ ಅದರ ವಿವಿಧ ಶಾಖೆಗಳಿಗೆ ಉಪಯುಕ್ತವಾದ

ಸೂಚನೆಗಳೆಲ್ಲವೂ ಇದರಲ್ಲಿ ಅಡಕವಾಗಿರುತ್ತದೆ. ಆದ್ದರಿಂದ ಇದನ್ನು ಚಿತ್ರನಿರ್ಮಾಣ ಕೈಪಿಡಿ ಅಥವಾ ಚಿತ್ರನಿರ್ಮಾಣ ಸೂಚಿ ಎನ್ನಬಹುದು. ಇದರ ರಚನೆ ಸುಲಭವಾದ ಕೆಲಸವಲ್ಲ. ಇದೊಂದು ಕಲ್ಪನಾಶೀಲ ಕಲಾಸೃಷ್ಟಿ. ಸಂಭಾಷಣೆ, ಅಭಿನಯ, ಚಲನೆ, ಕ್ರಿಯಾಕ್ಷೇತ್ರ ಸಜ್ಜಿಕೆ, ದೀಪ್ತಿ, ಚಿತ್ರೀಕರಣ, ಧ್ವನಿಮುದ್ರಣ ಮುಂತಾದ ಹಲವಾರು ಅಂಶಗಳ ಪರಸ್ಪರ ಸಮನ್ವಯವನ್ನು ಪರಿಭಾವಿಸಿಕೊಂಡು ಚಲನಚಿತ್ರ ನಾಟಕವನ್ನು ರಚಿಸ ಬೇಕಾಗುತ್ತದೆ. ಆದ್ದರಿಂದ ಇದನ್ನು ರಚಿಸುವವನಿಗೆ ಸಾಹಿತ್ಯದಲ್ಲಿ ಪರಿಣತಿ, ಚಲನಚಿತ್ರ ಕಲೆ, ತಂತ್ರಗಳ ತಿಳಿವಳಿಕೆಗಳು ಮಾತ್ರವಲ್ಲದೆ, ಕಲ್ಪನಾಶಕ್ತಿಯೂ ಇರಬೇಕಾಗುತ್ತದೆ. ಈ ಎಲ್ಲ ಅರ್ಹತೆಗಳು ಇದ್ದರೂ ಚಲನಚಿತ್ರ ನಾಟಕವನ್ನು ರಚಿಸುವವನು ತನ್ನ ಕಾರ್ಯ-ನಿರ್ವಹಣೆಯಲ್ಲಿ ನಿರ್ಮಾಪಕ, ನಿರ್ದೇಶಕ ಮತ್ತು ವಿವಿಧ ತಾಂತ್ರಿಕ ಶಾಖೆಗಳ ನೆರವನ್ನು ಪಡೆಯುವುದು ಅನೇಕ ಸಂದರ್ಭಗಳಲ್ಲಿ ಅನಿವಾರ್ಯವಾಗುತ್ತದೆ.

ಕಥಾಚಿತ್ರ ನಿರ್ಮಾಣದ ಸಂಬಂಧದಲ್ಲಿ, ಪೂರ್ವಭಾವಿಯಾಗಿ, ಚಲನಚಿತ್ರ ನಾಟಕವನ್ನು ಸಿದ್ಧಪಡಿಸುವುದು ಪದ್ಧತಿ. ಆದರೆ ಸಾಕ್ಷ್ಯಚಿತ್ರಗಳ ನಿರ್ಮಾಣದ ವೈಖರಿಯೇ ಬೇರೆ. ಅವುಗಳ ನಿರ್ಮಾಪಕ, ನಿರ್ದೇಶಕ, ತಂತ್ರಜ್ಞರು ತಮ್ಮ ಚಿತ್ರವಸ್ತುವಿಗೆ ಸಂಬಂಧಿಸಿದ ಸ್ಥಳಗಳಿಗೆ ಹೋಗಿ ಅಲ್ಲಿ ತಾವು ಕಂಡ ದೃಶ್ಯ, ಸನ್ನಿವೇಶ, ಜನಜೀವನ ಪರಿಸ್ಥಿತಿ ಮುಂತಾದುವನ್ನು ಚಿತ್ರಿಸಿಕೊಂಡು, ಅವಶ್ಯವೆನಿಸುವ ಧ್ವನಿ, ಮಾತುಗಳನ್ನು ಮುದ್ರಿಸಿಕೊಂಡು ಬರುತ್ತಾರೆ. ಅನಂತರ ತಮಗೆ ದೊರೆತ ಎಲ್ಲ ಸರಕನ್ನೂ ಪರಿಶೀಲಿಸಿ, ಅದಕ್ಕೆ ಒಂದು ರೂಪ ಕೊಟ್ಟು, ಸಂದರ್ಭೋಚಿತವಾದ ವ್ಯಾಖ್ಯಾನವನ್ನು ಸೇರಿಸಿ ಚಿತ್ರವನ್ನು ರೂಪಿಸುತ್ತಾರೆ. ಇಂಥ ಚಿತ್ರಗಳಗೆ ಪ್ರಕೃತಿಸಿದ್ಧ ನೈಜತೆಗೆ ಪ್ರಾಧಾನ್ಯವಿದೆ.

ಕಥಾಚಿತ್ರಗಳಲ್ಲಿ ಮೂಲಕಥಾನಕವನ್ನು ಅಥವಾ ಕಥಾವಸ್ತುವನ್ನು ಚಲನಚಿತ್ರಕ್ಕೆ ಅಳವಡಿಸುವಾಗ ಲಕ್ಷ್ಯದಲ್ಲಿಟ್ಟುಕೊಂಡಿರಬೇಕಾದ ಕೆಲವು ಅಂಶಗಳಿವೆ. ಅವುಗಳಲ್ಲಿ ಮುಖ್ಯವಾದುವು ಎಂದರೆ ಚಲನಚಿತ್ರದಲ್ಲಿ ನಿರಂತರ ಕ್ರಿಯೆಗೆ ಅವಕಾಶವಿರಬೇಕು, ಕಥೆಯ ಬೆಳವಣಿಗೆಯ ಧಾಟಿ ಪ್ರೇಕ್ಷಕರಲ್ಲಿ ಕುತೂಹಲವನ್ನು ಕೆರಳಿಸುತ್ತಿರಬೇಕು ಎಂಬ ಎರಡು ಅಂಶಗಳು. ಪ್ರೇಕ್ಷಕರ ಗಮನವನ್ನು ಸೆಳೆದು ಹಿಡಿದಿಟ್ಟಿರಲು ಈ ಲಕ್ಷಣಗಳು ಸಹಕಾರಿಯಾಗುತ್ತವೆ.

'ಬೂತಯ್ಯನ ಮಗ ಅಯ್ಯು' ಕನ್ನಡ ಚಿತ್ರದ ಹೊರಾಂಗಣ ಚಿತ್ರೀಕರಣ

ಚಿತ್ರನಿರ್ಮಾಣದಲ್ಲಿ ನಿರ್ದೇಶಕ ಕೇಂದ್ರವ್ಯಕ್ತಿ, ಅಷ್ಟು ಮಾತ್ರವಲ್ಲ, ಅವನು ಚಲನಚಿತ್ರಬ್ರಹ್ಮ. ಪ್ರದರ್ಶನಕ್ಕೆ ಸಿದ್ಧವಾದಾಗ ತನ್ನ ಚಿತ್ರ ಯಾವ ಅಂತಿಮ ರೂಪವನ್ನು ತಾಳಿರುತ್ತದೆ ಎಂಬುದರ ಕಲ್ಪನೆಯನ್ನು ಅವನು ಸ್ಪಷ್ಟವಾಗಿ, ಖಚಿತವಾಗಿ ರೂಪಿಸಿಕೊಂಡಿರುತ್ತಾನೆ. ಚಿತ್ರ ಖಂಡ ಖಂಡವಾಗಿ ರೂಪುಗೊಳ್ಳುತ್ತಿರುವಾಗಲೇ ಇಡೀ ಚಿತ್ರದಲ್ಲಿ ಆ ಖಂಡದ ಸ್ಥಾನವೇನು, ಪ್ರಾಶಸ್ತ್ಯವೇನು ಎಂಬುದರ ಅರಿವು ಅವನಿಗೆ ಇರುತ್ತದೆ. ಆದ್ದರಿಂದ ಒಂದೊಂದು ಚಿತ್ರಖಂಡವನ್ನೂ ಧ್ವನಿಖಂಡವನ್ನೂ ತನ್ನ ಇಡೀ ಚಿತ್ರದ ಕಲ್ಪನೆಗೆ ಹೊಂದಿಕೊಳ್ಳುವಂತೆ ರೂಪಿಸುವುದು ಅವನ ಕೆಲಸ. ಇದರಿಂದಾಗಿ ಇಡೀ ಚಿತ್ರನಿರ್ಮಾಣಕಾರ್ಯ, ಅದರ ವಿವಿಧ ಹಂತಗಳಲ್ಲಿ, ವಿವಿಧ ಶಾಖೆಗಳಲ್ಲಿ ಅವನ ನಿರ್ದೇಶನ, ನಿಯಂತ್ರಣಗಳಿಗೆ ಒಳಪಟ್ಟು ನಡೆಯುತ್ತದೆ.

ಚಲನಚಿತ್ರ ನಾಟಕ ಸಿದ್ಧವಾಗುತ್ತಿರುವಾಗ ಅಥವಾ ಅದು ಸಿದ್ಧವಾದ ಮೇಲೆ ಚಿತ್ರದಲ್ಲಿ ಬರುವ ವಿವಿಧ ಪಾತ್ರಗಳಿಗೆ ನಟನಟಿಯರನ್ನು ಆರಿಸುವುದರಲ್ಲಿ ನಿರ್ದೇಶಕನ ಪಾತ್ರ ಹಿರಿದು. ಚಿತ್ರನಿರ್ಮಾಪಕನೂ ಈ ಸಂಬಂಧದಲ್ಲಿ ತನ್ನ ಪ್ರಭಾವವನ್ನು ಬೀರುತ್ತಾನೆ.

ಚಿತ್ರಕ್ಕೆ ಸಂಬಂಧಿಸಿದಂತೆ ನಟನಟಿಯರಿಗೆ ಆಂಗಿಕ ವಾಚಿಕಾಭಿನಯಗಳಲ್ಲಿ ತರಬೇತಿ ಕೊಡುವುದು; ಚಿತ್ರಕಥೆಯ ಕಾಲ ಸ್ಥಳ ಸನ್ನಿವೇಶಗಳಿಗೆ ಅನುಗುಣವಾಗಿರುವಂತೆ ಕ್ಷೇತ್ರಸಜ್ಜಿಕೆ, ನಿರ್ಮಾಣಕ್ಕೆ ಸೂಚನೆ ಕೊಡುವುದು, ಹೊರಾಂಗಣ ಕ್ಷೇತ್ರ ಚುನಾವಣೆ, ಪಾತ್ರಧಾರಿಗಳು ಸಂದರ್ಭೋಚಿತವಾಗಿ ಧರಿಸಬೇಕಾದ ಉಡುಗೆ ತೊಡುಗೆ, ಆಭರಣ, ಅಲಂಕಾರ ಮುಂತಾದುವುಗಳ ವಿವರಗಳ ನಿರ್ಣಯ-ಇವೆಲ್ಲ ನಿರ್ದೇಶಕನ ಕಾರ್ಯರಂಗಕ್ಕೆ ಸೇರಿದ ಕರ್ತವ್ಯಗಳು.

ಹಾಗೆಯೇ ಚಲನಚಿತ್ರದ ವಿವಿಧ ಭಾಗಗಳಲ್ಲಿ ಪ್ರೇಕ್ಷಕರ ಮೇಲೆ ತಾನು ಉಂಟುಮಾಡಬಯಸುವ ಪರಿಣಾಮ ಏನು ಎಂಬುದನ್ನು ನಟನಟಿಯರಿಗೂ ತಂತ್ರಜ್ಞರಿಗೂ ಸ್ಪಷ್ಟವಾಗಿ ತಿಳಿಯಹೇಳಿ ಅವರು ಅಂಥ ಪರಿಣಾಮ ಸಾಧನೆಯಲ್ಲಿ ತನ್ನೊಡನೆ ಸಹಕರಿಸುವಂತೆ ಮಾಡುವುದೂ ನಿರ್ದೇಶಕನ ಕರ್ತವ್ಯ. ಹೀಗೆ ವಿವಿಧ ವೃತ್ತಿ ಮನೋವೃತ್ತಿಗಳ ಹಲವಾರು ಜನ ತಮ್ಮ ತಮ್ಮ ಕೆಲಸಗಳನ್ನು ತಾನು ಅಪೇಕ್ಷಿಸುವ ರೀತಿಯಲ್ಲಿ ಸಕಾಲದಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸುವಂತೆ ಪ್ರೇರೇಪಿಸುವ ವ್ಯಕ್ತಿತ್ವ, ಚಾಕಚಕ್ಯ ನಿರ್ದೇಶಕನಿಗೆ ಇರಬೇಕು. ಹಾಗೆಯೇ ತನ್ನ ತಂಡದ ವಿವಿಧ ವ್ಯಕ್ತಿಗಳಲ್ಲಿ ಪರಸ್ಪರ ಸಹಕಾರ, ಸಾಮರಸ್ಯಗಳನ್ನು ಸಾಧಿಸುವ ಶಕ್ತಿ ದಕ್ಷತೆಗಳು ಕೂಡ ಅವನಲ್ಲಿ ಇರಬೇಕಾದದ್ದು ಅಗತ್ಯ.

ನಿರ್ದೇಶಕ ತನ್ನ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಅವನಿಗೆ ನೆರವು ನೀಡಲು ಹಲವಾರು ಜನರಿರುತ್ತಾರೆ : ಕ್ಷೇತ್ರಸಜ್ಜಿಕೆ ನಕ್ಷೆಗಳನ್ನು ರಚಿಸಿ ಸಜ್ಜಿಕೆಗಳನ್ನು ರಚಿಸಲು ಕಲಾನಿರ್ದೇಶಕ, ಚಿತ್ರಣಕ್ಕೆ ಕ್ಯಾಮರಮ್ಯಾನ್, ಸಂಗೀತನಿರ್ವಹಣೆಗೆ ಸಂಗೀತ ನಿರ್ದೇಶಕ ; ಪ್ರಸಾಧನ ನಿರ್ವಹಣಕ್ಕಾಗಿ ಮೇಕಪ್ ಮ್ಯಾನ್, ಉಡುಗೆತೊಡುಗೆಗಳ ಸಂಬಂಧದಲ್ಲಿ ಕಾಸ್ಟ್ಯೂಮ್ ಮ್ಯಾನ್-ಹೀಗೆ. ಆದರೂ ಇವರೆಲ್ಲರ ಕೆಲಸದ ಬಗ್ಗೆ ಸರಿಯಾದ ಸಲಹೆಸೂಚನೆಗಳನ್ನು ಕೊಡುವುದು, ಮೇಲ್ವಿಚಾರಣೆ ನಡೆಸುವುದು ಕೂಡ ನಿರ್ದೇಶಕನ ಹೊಣೆ.

ಆದ್ದರಿಂದ ಚಿತ್ರನಿರ್ಮಾಣದ ವಿವಿಧ ಶಾಖೆಗಳಲ್ಲಿ, ವಿವಿಧ ಹಂತಗಳಲ್ಲಿ ಯಾವ ಕೆಲಸ ಹೇಗೆ ಆಗಬೇಕು ಎಂಬುದರ ಸ್ಪಷ್ಟ, ಖಚಿತ ತಿಳಿವಳಿಕೆಯೂ ಎಲ್ಲ ಕಾರ್ಯಗಳನ್ನೂ ತಾನು ನಿರ್ಧರಿಸಿದ ರೀತಿಯಲ್ಲಿ ರೂಪುಗೊಳಿಸುವ ಶಕ್ತಿಸಾಮರ್ಥ್ಯಗಳೂ ನಿರ್ದೇಶಕನಿಗಿರಬೇಕು.

ಚಿತ್ರಣ, ಧ್ವನಿಮುದ್ರಣಗಳು ನಡೆಯುವಾಗ ಹಾಗೂ ಚಿತ್ರದ ಪ್ರದರ್ಶನ ಪ್ರತಿಯನ್ನು ಸಿದ್ಧಗೊಳಿಸಲು ಚಿತ್ರ ಮತ್ತು ಧ್ವನಿಖಂಡಗಳ ಸಂಕಲನ ನಡೆಯುವಾಗ, ಧ್ವನಿಪಟ್ಟಿಕೆಗಳ ಪುನರ್ಧ್ವನಿಲೇಖನ ನಡೆಯುವಾಗ ನಿರ್ದೇಶಕ ಅವುಗಳ ಮೇಲ್ವಿಚಾರಣೆ ನಡೆಸುವುದೂ ಅವಶ್ಯ ಸಂದರ್ಭಗಳಲ್ಲಿ ಮಾರ್ಗದರ್ಶನ ಮಾಡುವುದೂ ಅಗತ್ಯ.

ಹೀಗೆ ಚಿತ್ರದ ಮೂಲಕಥೆಯನ್ನು ಆರಿಸುವುದರಿಂದ ಆರಂಭಿಸಿ ಚಿತ್ರ ಮೂಲ ಪ್ರದರ್ಶನ ಪ್ರತಿ ಸಿದ್ಧವಾಗುವವರೆಗೆ ಎಲ್ಲ ಹಂತಗಳಲ್ಲೂ ವಿವಿಧ ಕಾರ್ಯಗಳು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುವುದು ನಿರ್ದೇಶಕನ ಕರ್ತವ್ಯವಾಗುತ್ತದೆ.

ದ್ವಿಮುಖ ವ್ಯಕ್ತಿತ್ವ ನಿರ್ದೇಶಕನದು ಮೊದಲನೆಯದಾಗಿ ಅವನು ಸೃಜನಶೀಲ ಕಲಾವಿದ. ಈ ನಿಲುವಿನಲ್ಲಿ ಅವನು ತಾನು ರೂಪಿಸಬೇಕಾದ ಚಿತ್ರದ ಪೂರ್ಣಸ್ವರೂಪವನ್ನು ಕುರಿತು ಸ್ಪಷ್ಟಕಲ್ಪನೆಯನ್ನು ರೂಢಿಸಿಕೊಳ್ಳುತ್ತಾನೆ. ಚಲನಚಿತ್ರದ ರೂಪದಲ್ಲಿ ಆ ಕಲ್ಪನೆಗೆ ಮೂರ್ತರೂಪ ಕೊಡುತ್ತಾನೆ. ಎರಡನೆಯದಾಗಿ ಅವನು ಹರಿತವಾದ ವಿಮರ್ಶಕಶಕ್ತಿಯುಳ್ಳ ಹಾಗೂ ರಸಜ್ಞನಾದ ಪ್ರೇಕ್ಷಕ; ಚಲನಚಿತ್ರದ ಭಾವೀಪ್ರೇಕ್ಷಕವರ್ಗದ ಉತ್ತಮ ಪ್ರತಿನಿಧಿ. ಈ ಪಾತ್ರದಲ್ಲಿ ಅವನು ಚಿತ್ರದ ವಿವಿಧ ಭಾಗಗಳು, ವಿವಿಧ ಅಂಗಗಳು ಪ್ರೇಕ್ಷಕವರ್ಗದ ಮೇಲೆ ಉಂಟುಮಾಡಬಹುದಾದ ಪರಿಣಾಮವೇನು, ಪ್ರತಿಕ್ರಿಯೆಯೇನು ಎಂಬುದನ್ನು ಆಲೋಚಿಸಿ ಅದು ತನ್ನ ಮೂಲಕಲ್ಪನೆಗೆ, ನಿರೀಕ್ಷೆಗೆ ಸರಿಯಾಗಿದೆಯೇ, ಇಲ್ಲವೆ ಎಂಬುದನ್ನು ವಿವೇಚಿಸುತ್ತಾನೆ. ಅಸಮರ್ಪಕವೆನಿಸಿದಾಗ ಅದನ್ನು ಮತ್ತೆ ಸಮರ್ಪಕವಾಗಿ ರೂಪಿಸಲು ಪ್ರಯತ್ನಿಸುತ್ತಾನೆ.

ನಿರ್ದೇಶಕನನ್ನು ಕುರಿತು ಈವರೆಗೆ ಹೇಳಿರುವ ವಿವರಣೆಯಿಂದ ಅವನು ಬಹುಶ್ರುತನೂ ಕಲಾಭಿಜ್ಞನೂ ವಿಮರ್ಶಕ ಮನೋವೃತ್ತಿಯವನೂ ಕಾರ್ಯದಕ್ಷನೂ ಆಗಿರಬೇಕೆಂಬುದು ಸ್ಪಷ್ಟ.

ಚಿತ್ರರಚನೆಗೆ ಸಂಬಂಧಿಸಿದ ಪೂರ್ವಭಾವಿ ವ್ಯವಸ್ಥೆಗಳಾದ ಮೇಲೆ, ಚಿತ್ರೀಕರಣ ಅಂದರೆ ಚಿತ್ರನಾಟಕದ ದೃಶ್ಯ, ಉಪದೃಶ್ಯಗಳನ್ನು ಚಿತ್ರಕ್ಯಾಮರದ ಮೂಲಕ ಚಿತ್ರಿಸಿಕೊಳ್ಳುವುದು- ಆರಂಭವಾಗುತ್ತದೆ. ಈ ಚಿತ್ರೀಕರಣ ನಡೆಯುತ್ತಿರುವಾಗಲೇ ಸಂಬಂಧಿಸಿದ ದೃಶ್ಯ, ಉಪದೃಶ್ಯಗಳಲ್ಲಿ ಬರುವ ಮಾತುಗಳ ಧ್ವನಿಮುದ್ರಣವೂ ನಡೆಯುತ್ತದೆ.

ಚಿತ್ರಗ್ರಹಣ ಯಂತ್ರ, ಧ್ವನಿಮುದ್ರಣ ಯಂತ್ರ ಇವೆರಡನ್ನೂ ಏಕಕಾಲದಲ್ಲಿ ಚಾಲು ಮಾಡಿದಾಗ ಇವುಗಳಲ್ಲಿರುವ ಫಿಲ್ಮ್ ಸುರುಳಿಗಳು ಏಕವೇಗದಲ್ಲಿ ನಡೆಯುತ್ತವೆ. ಇದರಿಂದಾಗಿ ನಟನಟಿಯರು ಮಾತನಾಡುವಾಗ ಉಂಟಾಗುವ ತುಟಿಗಳ ಚಲನೆ ಮತ್ತು ಅವರ ಬಾಯಿಂದ ಹೊರಬೀಳುವ ಮಾತುಗಳ ಉಚ್ಚಾರ ಶಬ್ದಕ್ಕೂ ಸಾಮರಸ್ಯ ಏರ್ಪಡುತ್ತದೆ.

ಇವೆರಡು ಫಿಲ್ಮ್‌ಗಳನ್ನೂ ಸರಿಯಾಗಿ ಜೋಡಿಸಿ ತಯಾರಿಸಿದ ಸಂಲಗ್ನಪ್ರತಿಯನ್ನು ತೆರೆಯ ಮೇಲೆ ಪ್ರದರ್ಶಿಸಿದಾಗ ಅಭಿನಯಿಸುತ್ತಿರುವವರು ಮಾತನಾಡಿದಂತೆ ಪ್ರೇಕ್ಷಕರಿಗೆ ತೋರುತ್ತದೆ.

ಚಲನಚಿತ್ರಗಳಲ್ಲಿ ನಟನಟಿಯರು ಅಭಿನಯಿಸುತ್ತ ಓಡಾಡುತ್ತ ಹಾಡುವುದನ್ನೂ ನಾವು ನೋಡುತ್ತೇವೆ. ಇಂಥ ದೃಶ್ಯಗಳ ಚಿತ್ರಣ ಸಂಭಾಷಣಾ ದೃಶ್ಯಗಳಿಂದ ಸ್ವಲ್ಪ ಭಿನ್ನವಾಗಿರುತ್ತದೆ. ಸಂಭಾಷಣಾ ದೃಶ್ಯಗಳಲ್ಲಿ ನಟನಟಿಯರ ಮಾತು ಅಭಿನಯ ಒಟ್ಟಿಗೆ ನಡೆಯುತ್ತದೆ. ಆದರೆ ಹಾಡುಗಾರಿಕೆಯನ್ನುಳ್ಳ ದೃಶ್ಯಗಳಲ್ಲಿ ಹಾಗಲ್ಲ, ಪಾತ್ರಧಾರಿ ಅಥವಾ ಹಿನ್ನೆಲೆಯ ಗಾಯಕರಿಂದ ಹಾಡನ್ನು ಪೂರ್ವಭಾವಿಯಾಗಿ ಹಾಡಿಸಿ ಅದರ ಧ್ವನಿಮುದ್ರಿಕೆಯನ್ನು ರಚಿಸಿಕೊಳ್ಳುತ್ತಾರೆ. ದೃಶ್ಯದ ಚಿತ್ರೀಕರಣ ನಡೆಯುವ ಸಂದರ್ಭದಲ್ಲಿ ಆ ಧ್ವನಿಮುದ್ರಿಕೆಯನ್ನು ಹಾಕುತ್ತಾರೆ. ಹಾಡಿನ ಸಾಹಿತ್ಯವನ್ನು ಬಾಯಿಪಾಠ ಮಾಡಿಕೊಂಡಿರುವ ಪಾತ್ರಧಾರಿ ಅಭಿನಯಿಸುತ್ತ ಆ ಹಾಡನ್ನು, ಧ್ವನಿಮುದ್ರಿಕೆಯಲ್ಲಿ ಮೂಡಿರುವ ರೀತಿಯಲ್ಲಿ ಉಚ್ಚರಿಸುತ್ತಾನೆ. ಆಗ ಪಾತ್ರಧಾರಿಯ ಅಭಿನಯದ ಚಿತ್ರಣ ಮಾತ್ರ ನಡೆಯುತ್ತದೆ. ಅನಂತರ ಹಾಡಿನ ಧ್ವನಿಮುದ್ರಿಕೆ ಮತ್ತು ದೃಶ್ಯಚಿತ್ರಣಗಳ ಸಂಲಗ್ನಪ್ರತಿಯನ್ನು ರೂಪಿಸಿಕೊಳ್ಳುತ್ತಾರೆ.

ದೃಶ್ಯಚಿತ್ರಣ ಮಾಡಿಕೊಳ್ಳುವುದಕ್ಕಾಗಿ ಉಪಯೋಗಿಸುವ ಯಂತ್ರ, ಸಿನಿ ಕ್ಯಾಮರ, ಅದರ ಚಾಲನೆ ನಿಯಂತ್ರಣ ಚಿತ್ರಗ್ರಾಹಕನ ಕೆಲಸ. ಈ ಕಾರ್ಯನಿರ್ವಹಣೆಯಲ್ಲಿ ಅವನು ನಿರ್ದೇಶಕನ ಸಲಹೆ ಸೂಚನೆಗಳನ್ನು ಅನುಸರಿಸಿ ನಡೆಯುತ್ತಾನೆ.

ಒಂದು ದೃಶ್ಯದ ಚಿತ್ರಣ ಹೇಗೆ ನಡೆಯುತ್ತದೆ ಎಂಬುದನ್ನು ಕುರಿತು ನಾಲ್ಕು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದು ಉಚಿತ.

ಒಂದು ದೃಶ್ಯದ ಕಥಾಭಾಗ ಒಂದು ಕೊಠಡಿಯಲ್ಲಿ ನಡೆಯುತ್ತದೆಯೆಂದು ಇಟ್ಟುಕೊಳ್ಳೋಣ. ಅದು ಶ್ರೀಮಂತರೊಬ್ಬರ ಮನೆಯ ಕೊಠಡಿ; ಶ್ರೀಮಂತನ ಮಗನಾದ ಕಥಾನಾಯಕನ ಉಪಯೋಗಕ್ಕೆ ಮೀಸಲಾದದ್ದು ಎನ್ನಿ.

'ಬೃಂದಾವನ' ಕನ್ನಡ ಚಿತ್ರದ ಚಿತ್ರೀಕರಣದ ದೃಶ್ಯ

ಚಿತ್ರನಿರ್ಮಾಣ ಕೇಂದ್ರದ ವಿಶಾಲ ಅಂಗಣದಲ್ಲಿ ಇಂಥ ಕೊಠಡಿಯನ್ನು ನಿರ್ಮಿಸುತ್ತಾರೆ – ಚಿತ್ರಣದ ಆವಶ್ಯಕತೆಗಳನ್ನು ಅನುಸರಿಸಿ. ಸಾಮಾನ್ಯವಾಗಿ ಇಂಥ ಕೊಠಡಿಗೆ ಸೂರು ಇರುವುದಿಲ್ಲ. ಮೂರು ಭಾಗದ ಗೋಡೆಗಳು ಮಾತ್ರ ಇರುತ್ತವೆ. ನಾಲ್ಕನೆಯ ಗೋಡೆ ಇರಬೇಕಾದ ಸ್ಥಳ ತೆರವಾಗಿದ್ದು ಆ ಪಕ್ಕದಲ್ಲಿ ಕ್ಯಾಮರವನ್ನಿಟ್ಟು ಕೊಠಡಿಯಲ್ಲಿ ನಡೆಯುವ ಅಭಿನಯವನ್ನು ಆ ಬದಿಯಿಂದ ಚಿತ್ರಿಸಿಕೊಳ್ಳುತ್ತಾರೆ. ಚಿತ್ರಣಕ್ಕಾಗಿ ಉಪಯೋಗಿಸುವ ಇಂಥ ನಿರ್ಮಾಣಗಳನ್ನು ಸಜ್ಜಿಕೆ (ಸೆಟ್) ಎನ್ನುತ್ತಾರೆ. ಇದು ಕೊಠಡಿಯದಾಗಿರಬಹುದು, ನಾಟ್ಯಗೃಹದ್ದಾಗಿರಬಹುದು, ಉದ್ಯಾನದ ಒಂದು ಭಾಗದ್ದಾಗಿರಬಹುದು ಅಥವಾ ಮತ್ತಿನ್ನಾವುದಾದರೂ ಸ್ಥಳದ ಅನುಕರಣೆಯಾಗಿರಬಹುದು – ದೃಶ್ಯದ ಆವಶ್ಯಕತೆಗೆ ಅನುಸಾರವಾಗಿ.

ಚಿತ್ರಣವನ್ನು ಆರಂಭಿಸುವುದಕ್ಕೆ ಮೊದಲು ಸಜ್ಜಿತ ಸ್ಥಳದ ಮೇಲೆ ಹಲವಾರು ದಿಕ್ಕುಗಳಿಂದ ಬೆಳಕನ್ನು ಬಿಡುತ್ತಾರೆ. ಕಥಾಕ್ರಿಯೆ ನಡೆಯುವ ಕಾಲ (ಹಗಲು, ರಾತ್ರಿ ಹೀಗೆ), ಸಂದರ್ಭಗಳಿಗೆ ಅನುಗುಣವಾಗಿ ಬೆಳಕಿನ ವ್ಯವಸ್ಥೆಯಿರುತ್ತದೆ.

ಸಜ್ಜಿಕೆ ಮತ್ತು ಬೆಳಕಿನ ವ್ಯವಸ್ಥೆ ಸಮರ್ಪಕವಾಗಿದೆಯೆಂದೆನಿಸಿದ ಮೇಲೆ ನಿರ್ದೇಶಕ ದೃಶ್ಯದ ಚಿತ್ರಣವನ್ನು ಕೈಗೊಳ್ಳುತ್ತಾನೆ. ಆ ದೃಶ್ಯದಲ್ಲಿ ಅಭಿನಯಿಸಬೇಕಾಗಿರುವ ನಟನಟಿಯರನ್ನು ಬರಮಾಡಿಕೊಳ್ಳುತ್ತಾನೆ. ಅವರೆಲ್ಲರೂ ತಮ್ಮ ಪಾತ್ರಗಳಿಗೆ ತಕ್ಕಂತೆ ವೇಷಭೂಷಣಗಳನ್ನು ಧರಿಸಿರುತ್ತಾರೆ. ಅವರು ಚಿತ್ರಣಕ್ಷೇತ್ರವನ್ನು ಹೇಗೆ ಪ್ರವೇಶಿಸಬೇಕು. ಅಥವಾ ಚಿತ್ರಣ ಆರಂಭವಾಗುವಾಗ ಎಲ್ಲಿರಬೇಕು, ಹೇಗೆ ಚಲಿಸಬೇಕು, ಹೇಗೆ ಅಭಿನಯಿಸಬೇಕು, ತಮ್ಮ ಮಾತುಗಳನ್ನು ಹೇಗೆ ನುಡಿಯಬೇಕು ಮುಂತಾದುವುಗಳ ವಿಚಾರವಾಗಿ ನಿರ್ದೇಶಕ ಅವರಿಗೆ ಸೂಚನೆ ಕೊಡುತ್ತಾನೆ. ಅವರು ಆ ಸೂಚನೆಗಳಂತೆ ನಡೆಯುವರೆಂಬುದನ್ನು ಖಚಿತ ಮಾಡಿಕೊಳ್ಳಲು ಕೆಲವು ಬಾರಿ ಅಭ್ಯಾಸ ನಡೆಯುತ್ತದೆ. ಅಭಿನಯಕ್ಕೆ ಸಂಬಂಧಿಸಿದ

ಹಳಿಗಳ ಮೇಲೆ ಚಲಿಸುವ ಆಧುನಿಕ ಚಲನಚಿತ್ರ ಕ್ಯಾಮರ

ಎಲ್ಲ ಅಂಶಗಳೂ ಸಮರ್ಪಕವಾಗಿ ರೂಪುಗೊಂಡಿವೆ ಎಂದು ಎನಿಸಿದ ಮೇಲೆ ಚಿತ್ರಣ ಅಥವಾ ಚಿತ್ರೀಕರಣ (ಷೂಟಿಂಗ್) ಆರಂಭವಾಗುತ್ತದೆ. ಅವಶ್ಯವಾದ ದೀಪಗಳನ್ನೆಲ್ಲ ಬೆಳಗಿಸಿ, ಕ್ಯಾಮರ ಮತ್ತು ಧ್ವನಿಮುದ್ರಣ ಯಂತ್ರಗಳ ಚಾಲನೆಯನ್ನು ಆರಂಭಿಸುವಂತೆ ನಿರ್ದೇಶಕ ಆಜ್ಞೆ ಮಾಡುತ್ತಾನೆ. ದೃಶ್ಯಾಭಿನಯ ನಡೆಯುತ್ತಿದ್ದಂತೆ ಚಿತ್ರಣ, ಧ್ವನಿಮುದ್ರಣಗಳು ನಡೆಯುತ್ತವೆ. ಪ್ರದರ್ಶನ ಪ್ರತಿಯಲ್ಲಿ ಒಂದು ದೃಶ್ಯ ಸುಮಾರು ಎರಡು ನಿಮಿಷದಷ್ಟು ಕಾಲ ನಡೆಯುತ್ತದೆಯೆಂದಿಟ್ಟುಕೊಳ್ಳೋಣ. ಇದಿಷ್ಟನ್ನೂ ನಿರಂತರವಾಗಿ ಒಮ್ಮೆ ಚಿತ್ರಿಸಿಕೊಳ್ಳುವುದಿಲ್ಲ. ಒಂದು ದೀರ್ಘದೃಶ್ಯವನ್ನು ಉಪದೃಶ್ಯಗಳನ್ನಾಗಿ ವಿಂಗಡಿಸಿಕೊಂಡು ಖಂಡ ಖಂಡವಾಗಿ ಚಿತ್ರಿಸಿಕೊಳ್ಳುತ್ತಾರೆ, ಧ್ವನಿಮುದ್ರಿಸಿಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ, ಒಂದೇ ದೃಶ್ಯವನ್ನು ಬೇರೆ ಬೇರೆ ನಿಲುವಿನಿಂದ, ಕೋನದಿಂದ, ಹತ್ತಿರದಿಂದ ದೂರದಿಂದ, ಇವೆರಡಕ್ಕೂ ನಡುವಣ ಸ್ಥಾನದಿಂದ ಚಿತ್ರಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಚಿತ್ರಣದಲ್ಲಿ ವೈವಿಧ್ಯ ಮೂಡುತ್ತದೆ. ಅತಿಸಮೀಪದಿಂದ ಚಿತ್ರಿಸಿಕೊಳ್ಳುವಾಗ, ಪಾತ್ರದ ಭಾವ ಪ್ರತಿಕ್ರಿಯೆಗಳನ್ನು ಸ್ಫುಟವಾಗಿ ತೋರಿಸಬಹುದಾದ ಅವಕಾಶ ಏರ್ಪಡುತ್ತದೆ ; ದೂರ ಮತ್ತು ನಡುವಣ ಸ್ಥಾನದಿಂದ ಚಿತ್ರಗ್ರಹಣ ಮಾಡಿದಾಗ, ಹಿನ್ನೆಲೆಯೂ ಸೇರಿದಂತೆ ಇಡೀ ದೃಶ್ಯದ ಸಮಗ್ರ ಚಿತ್ರ ಪ್ರೇಕ್ಷಕನಿಗೆ ದೊರೆಯುತ್ತದೆ ; ಕ್ಯಾಮರ ದೂರದಿಂದ ದೃಶ್ಯದ ಸಮೀಪಕ್ಕೆ ನಡೆದಾಗ ಪ್ರೇಕ್ಷಕ ತಾನೇ ದೃಶ್ಯದ ಹತ್ತಿರಕ್ಕೆ ಬಂದ ಭಾವನೆ ಮೂಡುತ್ತದೆ ; ಇದು ದೃಶ್ಯದ ವಿವರಗಳನ್ನು ಗಮನಿಸುವುದಕ್ಕೆ ಸಹಾಯವಾಗುತ್ತದೆ. ಚಲನಚಿತ್ರದ ಚಿತ್ರಭಾಗದಲ್ಲಿ ಏಕತಾನವೂ ಬೇಸರವೂ ತಲೆದೋರದಂತೆ ಮಾಡಲು ಇಂಥ ಚಿತ್ರಣ ವೈವಿಧ್ಯ ಸಹಕಾರಿ.

ಈವರೆಗೆ ಹೇಳಿರುವ ವಿವರಗಳಿಂದ, ಒಂದು ಚಲನಚಿತ್ರ ಮೊದಲು ಸಿದ್ಧವಾಗುವುದು ಸಾವಿರಾರು ಖಂಡಗಳಲ್ಲಿ–ಚಿತ್ರಖಂಡ, ಧ್ವನಿಮುದ್ರಣ ಖಂಡಗಳಲ್ಲಿ–ಎಂಬುದು ವ್ಯಕ್ತವಾಗುತ್ತದೆ. ಚಿತ್ರನಿರ್ಮಾಣಸೂಚಿಯಲ್ಲಿ ಯಾವ ಯಾವ ದೃಶ್ಯ, ಉಪದೃಶ್ಯಗಳಲ್ಲಿ ಎಷ್ಟು ಖಂಡಗಳು ಇರುತ್ತವೆ, ಅವುಗಳಲ್ಲಿ ನಡೆಯುವ ಕ್ರಿಯೆ ಏನು, ಸಂಭಾಷಣೆ ಏನು ಅವನ್ನು ಯಾವ ರೀತಿ ಚಿತ್ರಿಸಿಕೊಳ್ಳಬೇಕು ಮುಂತಾದುವನ್ನು ನಿರೂಪಿಸಿರುತ್ತಾರೆ ಮತ್ತು ಈ ಖಂಡಗಳಿಗೆ ಅನುಕ್ರಮ ಸಂಖ್ಯೆಯನ್ನೂ ಕೊಟ್ಟಿರುತ್ತಾರೆ. ಒಂದೊಂದು ಖಂಡದ ಚಿತ್ರಣ ಮತ್ತು ಧ್ವನಿಮುದ್ರಣವನ್ನು ಮಾಡಿಕೊಳ್ಳುವ ಮೊದಲು, ಚಿತ್ರದ ಹೆಸರು, ದೃಶ್ಯ, ಉಪದೃಶ್ಯಗಳ ಸಂಖ್ಯೆ ಮುಂತಾದ ವಿವರಗಳನ್ನು ಒಂದು ಹಲಗೆಯ ಮೇಲೆ ಬರೆದು ಇಟ್ಟುಕೊಂಡಿರುತ್ತಾರೆ. ಈ ಹಲಗೆಗೆ ಕೀಲಿನಿಂದ ಜೋಡಿಸಿದ ಒಂದು ಮರದ ತುಂಡು ಇರುತ್ತದೆ. ಇದನ್ನು ಹಲಗೆಯ ಅಂಚಿಗೆ ಬಡಿದಾಗ ಶಬ್ದವಾಗುತ್ತದೆ. ಚಲನಚಿತ್ರ ಕ್ಯಾಮರ ಮತ್ತು ಧ್ವನಿಮುದ್ರಣ ಯಂತ್ರಗಳ ಚಾಲನೆಯಾದೊಡನೆಯೇ ಈ ಶಬ್ದಫಲಕವನ್ನು ಆ ದೃಶ್ಯ ಅಥವಾ ಉಪದೃಶ್ಯಗಳಲ್ಲಿ

ಅಭಿನಯಿಸಲಿರುವ ನಟ ಅಥವಾ ನಟಿಯ ಮುಂದೆ ಹಿಡಿದು, ಅದನ್ನು ಬಡಿದು ಶಬ್ದಮಾಡುತ್ತಾರೆ. ಫಲಕದ ಚಿತ್ರಣ ಹಾಗು ಅದನ್ನು ಬಡಿದ ಶಬ್ದದ ಧ್ವನಿಮುದ್ರಣ ಎರಡೂ ನಡೆಯುತ್ತದೆ. ಅನಂತರ ಫಲಕವನ್ನು ಕ್ಯಾಮರ ಕ್ಷೇತ್ರದಿಂದ ಹೊರಗೆ ಹಾಕಲಾಗುತ್ತದೆ. ಆಮೇಲೆ ನಟನಟಿಯರು ಅಭಿನಯನವನ್ನಾರಂಭಿಸುತ್ತಾರೆ. ಇದರಿಂದ ಚಿತ್ರಣ ಯಾವ ದೃಶ್ಯ, ಉಪದೃಶ್ಯಕ್ಕೆ ಸಂಬಂಧಿಸಿದ್ದು ಎಂಬುದನ್ನು ಗುರುತಿಸಲೂ ತುಟಿಗಳ ಚಲನೆಗೆ ಸರಿಯಾಗಿ ಶಬ್ದವನ್ನು ಜೋಡಿಸಲೂ ಅನುಕೂಲವಾಗುತ್ತದೆ.

ಚಲನಚಿತ್ರನಿರ್ಮಾಣ ಖಂಡಖಂಡವಾಗಿ ನಡೆಯುವುದಾದರೂ ಪ್ರೇಕ್ಷಕರು ಅದನ್ನು ಅಖಂಡವಾಗಿ ನೋಡುತ್ತಾರೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಚಿತ್ರಣದಲ್ಲಿ ಆಭಾಸಗಳು ತಲೆದೋರದಂತೆ ನೋಡಿಕೊಳ್ಳುವುದು ಆವಶ್ಯಕ. ಇಂಥ ಅಭ್ಯಾಸಗಳು ಹೇಗೆ ಏರ್ಪಡಬಹುದೆಂಬುದಕ್ಕೆ ಒಂದು ಉದಾಹರಣೆ ಕೊಡಬಹುದು. ಗಂಡ ಹೆಂಡತಿಯರ ನಡುವೆ ಬಿರುಸಾದ ಮಾತು ನಡೆದು, ಆಕೆ ಕೋಪಗೊಂಡು ಕೊಠಡಿಯಿಂದ ಸರ್ರನೆ ಹೊರಟು ಹೋಗುತ್ತಾಳೆ; ಅನಂತರ ಗಂಡ ಅವಳನ್ನು ಹಿಂಬಾಲಿಸುತ್ತಾನೆ. ಕೊಠಡಿಯಿಂದ ಹೊರಗೆ ಬಂದು ನೋಡಿದಾಗ ಹೆಂಡತಿ ಮನೆ ಮುಂದಿನ ತೋಟ ದಲ್ಲಿ ಆಲೋಚನಾಮಗ್ನಳಾಗಿ ನಿಂತಿರುವುದು ಕಾಣುತ್ತದೆ. ಅವಳನ್ನು ಸಮಾಧಾನಪಡಿಸಲು ಅಲ್ಲಿಗೆ ಹೋಗುತ್ತಾನೆ ಎಂದಿಟ್ಟುಕೊಳ್ಳೋಣ.

ಮನ್ನಾಡೇ – ಹಿನ್ನೆಲೆ ಗಾಯಕ

ಇಲ್ಲಿ ಕಥಾಕ್ರಿಯೆ ನಡೆಯುವುದು ನಿರಂತರವಾಗಿ ಆದರೂ, ಅದು ಎರಡು ಕ್ಷೇತ್ರಗಳಲ್ಲಿ ನಡೆಯುತ್ತದೆ–ಕೊಠಡಿಯೊಳಗೆ ಮತ್ತು ಕೈದೋಟದಲ್ಲಿ. ಈ ಎರಡೂ ಕ್ಷೇತ್ರಗಳಲ್ಲಿನ ಕ್ರಿಯಾಚಿತ್ರಣ ಬೇರೆ ಬೇರೆ ದಿನಗಳಲ್ಲಿ ನಡೆಯಬಹುದು. ಏಕೆಂದರೆ ಕೊಠಡಿಯ ಸಜ್ಜಿಕೆಯನ್ನು ಸಿದ್ಧಪಡಿಸಿದ ಮೇಲೆ, ಕಥೆಗೆ ಸಂಬಂಧಿಸಿದಂತೆ ಆ ಕೊಠಡಿಯಲ್ಲಿ ನಡೆಯುವ ಎಲ್ಲಾ ಕ್ರಿಯೆಗಳನ್ನು ಅವು ಬೇರೆ ಬೇರೆ ಕಾಲಗಳಲ್ಲಿ ನಡೆಯುವುದಾದರೂ–ಒಂದಾದ ಮೇಲೆ ಒಂದರಂತೆ ಚಿತ್ರಿಸಿಕೊಂಡು ಅನಂತರ ಕೊಠಡಿಯ ಸಜ್ಜಿಕೆಯನ್ನು ಕಿತ್ತುಹಾಕಿಬಿಡುತ್ತಾರೆ. ಹಾಗೆಯೇ ಕೈದೋಟದ ಇಲ್ಲವೆ ಹೊರಾಂಗಣ ಕ್ಷೇತ್ರದಲ್ಲಿ ಅಲ್ಲಿ ನಡೆಯುವ ಭಿನ್ನ ಭಿನ್ನ ಕ್ರಿಯೆಗಳನ್ನು ಒಂದಾದಮೇಲೊಂದರಂತೆ ಚಿತ್ರಿಸಿಕೊಳ್ಳುತ್ತಾರೆ– ಅದು ಬೇರೆ ಇನ್ನೊಂದು ದಿನ, ಎನ್ನೋಣ. ಆದರೆ ಚಿತ್ರದ ಪ್ರೇಕ್ಷಕನಿಗೆ ಮೇಲೆ ಹೇಳಿದ ಕೊಠಡಿಯ ಘಟನೆಯ ಮುಂದುವರಿಕೆಯೇ ಕೈದೋಟದ ಘಟನೆ. ಅವೆರಡು ಘಟನೆಗಳ ನಡುವೆ ಸಾಕಷ್ಟು ಕಾಲ ಗತಿಸಿಲ್ಲ; ಆದ್ದರಿಂದ ಉಡುಪು, ಅಲಂಕಾರ ಬದಲಾವಣೆಗೂ ಅವಕಾಶವಿಲ್ಲ. ಅಂದರೆ ಪಾತ್ರಗಳು ಕೊಠಡಿಯ ದೃಶ್ಯದಲ್ಲಿ ಯಾವ ವೇಷಭೂಷಣಗಳನ್ನು ಧರಿಸಿದ್ದರೋ ಕೈತೋಟದ ದೃಶ್ಯದಲ್ಲೂ ಅದೇ ವೇಷಭೂಷಣಗಳನ್ನು ಹೊಂದಿರು ವುದು ಸಹಜ, ಆವಶ್ಯಕ. ಹಾಗಲ್ಲದೆ ಅವುಗಳಲ್ಲಿ ಬದಲಾವಣೆಯಾದಲ್ಲಿ

ಹಿನ್ನೆಲೆ ಗಾಯಕ ಕಿಶೋರ್ ಕುಮಾರ್

ಅಭಾಸವಾಗುತ್ತದೆ. ಕೊಠಡಿಯಲ್ಲಿದ್ದಾಗ ಗಂಡ ಹಾಕಿಕೊಂಡಿದ್ದ ಬಿಳಿ ಅಂಗಿ ಕೋಟು ಕೊಠಡಿಯ ಬಾಗಿಲು ದಾಟಿದೊಡನೆಯೇ ಥಟ್ಟನೆ ಚೆಕ್‌ಬಟ್ಟೆಯ ಅಂಗಿ ಆಗುವುದನ್ನೂ ಕೊಠಡಿಯಲ್ಲಿದ್ದಾಗ ಹೆರಳಾಗಿದ್ದ ಹೆಂಡತಿಯ ಕೇಶಾಲಂಕಾರ ಕೈತೋಟದಲ್ಲಿ ಥಟ್ಟನೆ ತುರುಬಾಗಿ ಬದಲಾಗುವುದನ್ನೂ ತೆರೆಯ ಮೇಲೆ ಕಂಡಾಗ ಪ್ರೇಕ್ಷಕರು ಅಚ್ಚರಿಗೊಳ್ಳುತ್ತಾರೆ, ನಗುತ್ತಾರೆ. ಇದು ರಸಾಭಾಸಕ್ಕೆ ಎಡೆಕೊಡುತ್ತದೆ. ಆದ್ದರಿಂದ ಒಂದೊಂದು ದೃಶ್ಯದಲ್ಲಿಯೂ ನಟನಟಿಯರು ಉಪಯೋಗಿಸುವ ಬಟ್ಟೆಬರೆ, ಆಭರಣ, ಗಡ್ಡ, ಮೀಸೆ ಮುಂತಾದವುಗಳ ವಿವರಗಳನೆಲ್ಲಾ ಬರೆದಿಟ್ಟುಕೊಂಡು ಅಥವಾ ಫೋಟೋ ತೆಗೆದಿಟ್ಟುಕೊಂಡು ಸಂಬಂಧಪಟ್ಟ ದೃಶ್ಯಗಳಲ್ಲೆಲ್ಲಾ ಅವನ್ನೇ ಉಪಯೋಗಿಸುತ್ತಾರೆ.

ಖಂಡಖಂಡವಾಗಿ ರಚಿಸಿಕೊಂಡ ಚಿತ್ರ ಮತ್ತು ಧ್ವನಿಮುದ್ರಿಕೆಗಳ ಪಟ್ಟಿಕೆಯನ್ನು ಕಥಾಸರಣಿಗೆ ಅನುಗುಣವಾಗಿ, ಕಲಾತ್ಮಕವಾಗಿ ಜೋಡಿಸುವವನು ಚಿತ್ರಸಂಪಾದಕ. ಇವನ ಕೆಲಸ ಕೇವಲ ಯಾಂತ್ರಿಕವಾದುದಲ್ಲ. ಇದು ಒಂದು ಕಲಾಸೃಷ್ಟಿ. ಇವನು ಅದಕ್ಷನಾಗಿದ್ದು, ಇವನ ಕೆಲಸ ಅಸಮರ್ಪಕವಾದಲ್ಲಿ ನಿರ್ದೇಶಕ ಮತ್ತು ನಟನಟಿಯರ ಉತ್ತಮ ಸಾಧನೆ ವಿಫಲವಾಗಬಹುದು. ಇವನು ಪ್ರತಿಭಾವಂತನೂ ತಂತ್ರಕುಶಲಿಯೂ ಆಗಿದ್ದಲ್ಲಿ ಸಾಧಾರಣ ಚಿತ್ರಣ, ಅಭಿನಯಗಳು ಕೂಡ ಇವನ ಕೈಯಲ್ಲಿ ಉತ್ತಮ ಗುಣಮಟ್ಟಕ್ಕೇರುವುದು ಸಾಧ್ಯ.

ಒಂದು ಚಲನಚಿತ್ರದ ಪ್ರದರ್ಶನ ಪ್ರತಿಯ ಉದ್ದ ಸುಮಾರು ಹನ್ನೆರಡು ಹದಿಮೂರು ಸಾವಿರ ಅಡಿಯಷ್ಟು ಇದೆಯೆಂದುಕೊಳ್ಳೋಣ. ಈ ಚಿತ್ರದ ಸಂಬಂಧದಲ್ಲಿ ರಚಿಸಿಕೊಂಡ ಚಿತ್ರಪಟ್ಟಿಕೆ ಮತ್ತು ಧ್ವನಿಪಟ್ಟಿಕೆಗಳ ಉದ್ದ ಅದಕ್ಕಿಂತ ತುಂಬ ಹೆಚ್ಚು ದೀರ್ಘವಾಗಿರುತ್ತದೆ. ಅಂದರೆ ಅದು ಪ್ರದರ್ಶನ ಚಿತ್ರದ ಮೂರು ನಾಲ್ಕು ಪಟ್ಟಾದರೂ ಉದ್ದವಾಗಿರುತ್ತದೆ. ಇನ್ನೂ ಉದ್ದವಾಗಿರುವುದೂ ಉಂಟು. ಒಂದು ದೃಶ್ಯ ಅಥವಾ ಉಪದೃಶ್ಯದ ಚಿತ್ರೀಕರಣ ತಾನು ಅಪೇಕ್ಷಿಸುವಷ್ಟು ಸಮರ್ಪಕವಾಗಿಲ್ಲ ಎನಿಸಿದಾಗ ನಿರ್ದೇಶಕ ಅದೇ ದೃಶ್ಯ ಅಥವಾ ಉಪದೃಶ್ಯವನ್ನು ಮತ್ತೆ ಚಿತ್ರಿಸಿಕೊಳ್ಳುತ್ತಾನೆ. ಧ್ವನಿಮುದ್ರಿಕೆ ಮಾಡಿಕೊಳ್ಳುತ್ತಾನೆ. ಚಿತ್ರನಿರ್ಮಾಣ ಸೂಚಿಯನ್ನನುಸರಿಸಿ ಒಂದು ದೃಶ್ಯ ಅಥವಾ ಉಪದೃಶ್ಯದ ಚಿತ್ರೀಕರಣ ನಡೆದ ಮೇಲೆ ಅದರಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿ ಇನ್ನೊಂದು ರೀತಿಯಲ್ಲಿ ಅದನ್ನು ಚಿತ್ರಿಸಿಕೊಂಡರೆ ಪರಿಣಾಮ ಉತ್ತಮಗೊಳ್ಳಬಹುದು ಎಂದು ನಿರ್ದೇಶಕನಿಗೆ ಅನಿಸಬಹುದು. ಅಂಥ ಸಂದರ್ಭಗಳಲ್ಲಿ ಕೂಡ ಅವನು ಪುನಃ ಚಿತ್ರೀಕರಣ, ಧ್ವನಿಮುದ್ರಣ ನಡೆಸುತ್ತಾನೆ.

ಹೀಗೆ ತೆಗೆದ ಎಲ್ಲಾ ಚಿತ್ರಪಟ್ಟಿಕೆಗಳು ಧ್ವನಿಪಟ್ಟಿಕೆಗಳು ಮುದ್ರಿತ ಪ್ರತಿಗಳು ಸಂಪಾದಕನ ಕಡೆಗೆ ಬರುತ್ತವೆ. ನಿರ್ದೇಶಕನ ಸಲಹೆ ಸೂಚನೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಅಭಿನಯ ಮತ್ತು ತಾಂತ್ರಿಕತೆಯ ದೃಷ್ಟಿಯಿಂದ ಉತ್ತಮವಾದುದೆಂದು ತೋರುವ ಪಟ್ಟಿಗಳನ್ನು ಆರಿಸುವುದು, ಬೇರೆ ಬೇರೆ ಪಟ್ಟಿಕೆಗಳಲ್ಲಿ ಉತ್ತಮವಾಗಿ ಮೂಡಿರುವ ಭಾಗಗಳನ್ನು ಆರಿಸಿಕೊಂಡು ಅವನ್ನು ಒಟ್ಟುಗೂಡಿಸಿ ಹೆಚ್ಚು ಪರಿಣಾಮಕಾರಿಯಾದ ಪಟ್ಟಿಕೆಯನ್ನು ಸಿದ್ಧಗೊಳಿಸುವುದು ಸಂಪಾದಕನ ಕೆಲಸ. ಚಲನಚಿತ್ರ ನಿರ್ಮಾಣ ಸೂಚಿಯಿಂದ ಸಂಪಾದಕನಿಗೆ ಪ್ರಧಾನ ಮಾರ್ಗದರ್ಶನ ದೊರೆಯುತ್ತಾದರೂ ಅವನ ರಸಜ್ಞತೆ, ಕಲಾಭಿಜ್ಞತೆ, ವಿಮರ್ಶಕನ ದೃಷ್ಟಿಗಳು ಅವನ ಕೆಲಸ ಸಮರ್ಪಕವಾಗಲು ನೆರವಾಗುತ್ತವೆ. ತೀರ ಸಪ್ಪೆ, ಪರಿಣಾಮಹೀನವೆನಿಸುವಂಥ ಅಭಿನಯವುಳ್ಳ ಚಿತ್ರಪಟ್ಟಿಕೆ ಕೂಡ ಅವನ ಸಂಸ್ಕರಣ ಚಾತುರ್ಯದಿಂದ ಚಿತ್ರಖಂಡಗಳ ಜೋಡಣೆಯ ಕ್ರಮದಲ್ಲಿ ಅವನು ತೋರುವ ಚಾತುರ್ಯದಿಂದ ಹೊಸ ಚೈತನ್ಯ, ಪುಷ್ಟಿ, ಅರ್ಥಗಳನ್ನು ಪಡೆಯುತ್ತದೆ, ಕಲಾತ್ಮಕವಾಗುತ್ತದೆ. ಮುದ್ದೆ ಮುದ್ದೆಯಾದ ಆಕಾರದಲ್ಲಿರುವ ವಿಗ್ರಹವನ್ನು ತನ್ನ ಕಲ್ಪನಾಚಾತುರ್ಯ, ಕೈಚಳಕಗಳಿಂದ ಶಿಲ್ಪಿ ಸುಂದರವಿಗ್ರಹವನ್ನಾಗಿ ಮಾಡುವಂತೆ, ಪ್ರತಿಭಾವಂತನೂ ತಂತ್ರಕುಶಲನೂ ಆದ ಚಲನಚಿತ್ರ ಸಂಪಾದಕ ಕಚ್ಚಾ ಚಿತ್ರಪಟ್ಟಿಕೆಗಳಿಂದ ಸುಂದರ ಚಲನಚಿತ್ರವನ್ನು ರೂಪಿಸಬಲ್ಲ.

ಭಾರತೀಯ ಚಲನಚಿತ್ರಗಳಲ್ಲಿ ಸಂಗೀತಕ್ಕೆ ಪ್ರಾಧಾನ್ಯವಿದೆ. ಚಲನಚಿತ್ರ ಸಂಗೀತ ಎರಡು ಬಗೆಯದು. ಒಂದು ಪಾತ್ರಗಳ ಹಾಡುಗಾರಿಕೆ, ಎರಡನೆಯದು ಹಿನ್ನೆಲೆ ಸಂಗೀತ: ಇದು ಪ್ರಧಾನವಾಗಿ ವಾದ್ಯಸಂಗೀತ. ಪಾತ್ರಗಳ ಹಾಡುಗಾರಿಕೆ, ನಾಟಕಗಳಿಂದ ಚಲನಚಿತ್ರಕ್ಕೆ ಬಂದ ಬಳುವಳಿ. ಪಾತ್ರಧಾರರಿಗೆ ಒಳ್ಳೆ ಕಂಠಸಂಪತ್ತಿ, ಸಂಗೀತ ಜ್ಞಾನ ಇದ್ದರೆ ಆತ ಅಥವಾ ಆಕೆ ತನ್ನ ಪಾತ್ರದ ಹಾಡುಗಳನ್ನು ತಾನೇ ಹಾಡಬಹುದು. ಹಾಗಿಲ್ಲದಿದ್ದಲ್ಲಿ ಆ ಹಾಡುಗಳನ್ನು ಬೇರೆಯವರು ಹಾಡುತ್ತಾರೆ. ಇವರನ್ನು ಹಿನ್ನೆಲೆ ಗಾಯಕರು ಎನ್ನುತ್ತಾರೆ. ಚಲನಚಿತ್ರದ ಸಂಗೀತ ನಿರ್ದೇಶಕನ ಸೂಚನೆಯನ್ನನುಸರಿಸಿ ಇವರು ಹಾಡುಗಳನ್ನು ಅಭ್ಯಾಸ ಮಾಡಿ ಹಾಡುತ್ತಾರೆ. ಅನಂತರ ಅದರ ಧ್ವನಿಮುದ್ರಣ ನಡೆಯುತ್ತದೆ. ಈ ಮೊದಲು ಸೂಚಿಸಿರುವ ರೀತಿಯಲ್ಲಿ ಅದನ್ನು ಚಿತ್ರಕ್ಕೆ ಸೇರಿಸಿದಾಗ ಪಾತ್ರಧಾರಿಯೇ ಹಾಡುತ್ತಿರುವಂತೆ ಭಾಸವಾಗುತ್ತದೆ.

ಹಿನ್ನೆಲೆ ಸಂಗೀತದ ಪ್ರಧಾನ ಉದ್ದೇಶ ರಸಪೋಷಣೆ ಹಾಗು ಕಥಾಸನ್ನಿವೇಶಕ್ಕೆ ಅನುಗುಣವಾದ ವಾತಾವರಣ ಸೃಷ್ಟಿ ಔಚಿತ್ಯವರಿತು ಜೋಡಿಸುವ ಹಿನ್ನೆಲೆ ಸಂಗೀತ ಪ್ರೇಕ್ಷಕರಲ್ಲಿ ಭಾವಪ್ರಚೋದನೆ ಮಾಡಲು ಸಹಕಾರಿ. ಹಿನ್ನೆಲೆ ಸಂಗೀತವನ್ನು ರಚಿಸುವುದು ಕೂಡ ಸಂಗೀತ ನಿರ್ದೇಶಕನ ಜವಾಬ್ದಾರಿ. ಹಿನ್ನಲೆ ಸಂಗೀತದ ಸ್ವರಸಂಯೋಜನೆ, ವಾದ್ಯವೃಂದದ ವಿವಿಧ ವಾದ್ಯಗಳು ಅವನ್ನು ಹೇಗೆ, ಯಾವಾಗ, ಎಷ್ಟು ಹೊತ್ತು ನುಡಿಸಬೇಕು ಎಂಬುದು ನಿರ್ಧಾರವಾದ ಮೇಲೆ ಅಭ್ಯಾಸ ನಡೆಯುತ್ತದೆ. ಚಲನಚಿತ್ರದ ಯಾವ ಭಾಗಕ್ಕೆ ಹಿನ್ನೆಲೆ ಸಂಗೀತವನ್ನು ಸೇರಿಸಬೇಕೋ ಆ ಭಾಗದ ಸಂಪಾದಿತ ಚಿತ್ರಭಾಗವನ್ನು ಧ್ವನಿಮುದ್ರಣಶಾಲೆಯ ತೆರೆಯ ಮೇಲೆ ಪ್ರದರ್ಶಿಸುತ್ತಾರೆ. ವಾದ್ಯವಾದಕರು ಚಿತ್ರಪ್ರದರ್ಶನವನ್ನು ನೋಡುತ್ತಾ ಸಂಬಂಧಿಸಿದ ಹಿನ್ನೆಲೆ ಸಂಗೀತವನ್ನು ನುಡಿಸುತ್ತಾರೆ. ದೃಶ್ಯದ ವಾತಾವರಣ ಕ್ರಿಯೆಗಳಿಗೂ ಹಿನ್ನಲೆ ಸಂಗೀತಕ್ಕೂ ಹೊಂದಾಣಿಕೆ ಸಾಧಿತವಾದ ಮೇಲೆ ಅದನ್ನು ಧ್ವನಿಮುದ್ರಿಸಿಕೊಳ್ಳುತ್ತಾರೆ.

ಖಂಡಖಂಡವಾಗಿ ರಚಿಸಿಕೊಂಡ ಚಿತ್ರಪಟ್ಟಿಕೆಗಳನ್ನು ಅನುಕ್ರಮವಾಗಿ ಜೋಡಿಸುವಂತೆ ಖಂಡಖಂಡವಾಗಿ ಮುದ್ರಿಸಿಕೊಂಡ ಧ್ವನಿಪಟ್ಟಿಕೆಗಳನ್ನು ಅನುಕ್ರಮವಾಗಿ ಜೋಡಿಸ ಬೇಕಾಗುತ್ತದೆ. ಈ ಧ್ವನಿಪಟ್ಟಿಕೆಗಳಲ್ಲಿ ಸಂಭಾಷಣೆ, ಹಾಡುಗಾರಿಕೆ, ಹಿನ್ನೆಲೆಸಂಗೀತ ಹಾಗು

ಶಬ್ದವಿಶೇಷದ(ಕಾರು ಬಂದ ಸದ್ದು, ನಾಯಿ ಬೊಗಳಿದ ಸದ್ದು, ಗುಂಪುಗಳ ಗದ್ದಲ, ಕೋಲಾಹಲ ಇತ್ಯಾದಿ) ಪಟ್ಟಿಕೆಗಳು ಇರುತ್ತವೆ. ಇವನ್ನು ಅನುಕ್ರಮವಾಗಿ ಜೋಡಿಸಿದ ಮಾತ್ರಕ್ಕೆ ಇವುಗಳಿಗೆ ಸಂಬಂಧಿಸಿದ ಕೆಲಸ ಮುಗಿಯುವುದಿಲ್ಲ. ಇದಕ್ಕೆ ಒಂದು ವಿಶೇಷ ಪರಿಷ್ಕರಣೆ ಅಗತ್ಯ. ಸಾಮರಸ್ಯ ಸಾಧನೆ ಈ ಪರಿಷ್ಕರಣದ ಉದ್ದೇಶ. ಪ್ರದರ್ಶನ ಪ್ರತಿಯಲ್ಲಿ ಒಂದು ಧ್ವನಿಖಂಡ ಎಲ್ಲಿ ಬರುತ್ತದೆ, ಆ ಸಂದರ್ಭದಲ್ಲಿ ಅದರ ಘಾತ ಎಷ್ಟಿರಬೇಕು ಎಂಬುದನ್ನು ನಿರ್ಧರಿಸಿ ಈ ಪರಿಷ್ಕರಣವನ್ನು ನಡೆಸಬೇಕಾಗುತ್ತದೆ. ಒಂದು ಉದಾಹರಣೆ ಹೇಳುವುದಾದರೆ, ಒಂದು ದೃಶ್ಯದಲ್ಲಿ ಸಂಭಾಷಣೆ, ಹಿನ್ನೆಲೆ ಸಂಗೀತ ಎರಡೂ ಇರಬೇಕು ಎಂದಿಟ್ಟುಕೊಳ್ಳೋಣ. ಇಂಥ ಸಂದರ್ಭದಲ್ಲಿ ಸಂಭಾಷಣೆ ಪ್ರಮುಖವಾದದ್ದಾದರೆ ಹಿನ್ನೆಲೆ ಸಂಗೀತ, ಸಂಭಾಷಣೆಯನ್ನು ಮುಳುಗಿಸದಂತೆ ಇರಬೇಕಾಗುತ್ತದೆ. ಹೀಗೆ ಯಾವ ದೃಶ್ಯದಲ್ಲಿ ಯಾವ ಧ್ವನಿಗೆ ಎಷ್ಟು ಪ್ರಾಧಾನ್ಯ ಇರಬೇಕೆಂಬುದನ್ನು ನಿರ್ಣಯಿಸಿ ಅದರಂತೆ ಧ್ವನಿಪರಿಷ್ಕರಣ ನಡೆಯುತ್ತದೆ. ಇಂಥ ಪರಿಷ್ಕೃತ, ಸಂಪಾದಿತ ಧ್ವನಿವಾಹಿನಿ ಸಿದ್ಧವಾದ ಮೇಲೆ ಅದನ್ನು ಅನುಕ್ರಮ ಚಿತ್ರಮಾಲೆಯೊಂದಿಗೆ ಸರಿಯಾಗಿ ಜೋಡಿಸಿ ಚಿತ್ರ, ಧ್ವನಿಗಳೆರಡನ್ನೂ ಉಳ್ಳ ಸಂಲಗ್ನ ಪ್ರತಿಯನ್ನು ರೂಪಿಸಿಕೊಳ್ಳುತ್ತಾರೆ. ಇದೇ ಪ್ರದರ್ಶನ ಪ್ರತಿ. ಇದನ್ನು ಮಾದರಿಯಾಗಿಟ್ಟುಕೊಂಡು, ಚಿತ್ರ ಮತ್ತು ಧ್ವನಿಗಳ ಮೂಲಪಟ್ಟಿಕೆಯನ್ನು (ನೆಗೆಟಿವ್) ಸಂಸ್ಕರಿಸಿ ಅದರಿಂದ ತಮಗೆ ಬೇಕಾದಷ್ಟು ಪ್ರದರ್ಶನ ಪ್ರತಿಗಳನ್ನು ಮುದ್ರಿಸಿಕೊಳ್ಳುತ್ತಾರೆ.

ಈ ಪ್ರತಿಗಳನ್ನು ಚಿತ್ರಮಂದಿರಗಳಲ್ಲಿ ಸಾರ್ವಜನಿಕರಿಗೆ ತೋರಿಸುವ ಮೊದಲು ಅದನ್ನು ದೋಷವಿಮರ್ಶನ ಮಂಡಳಿಯ (ಸೆನ್ಸಾರ್ ಬೋರ್ಡ್) ಮುಂದೆ ಪ್ರದರ್ಶಿಸಿ ಅವರ ಒಪ್ಪಿಗೆ ಪಡೆಯಬೇಕೆಂಬ ನಿಯಮವು ಭಾರತದಲ್ಲಿದೆ. ಚಿತ್ರದ ಯಾವ ಭಾಗ ಅಥವಾ ಮಾತು ಅಸಭ್ಯ, ಸಾರ್ವಜನಿಕ ಹಿತದೃಷ್ಟಿಯಿಂದ ನಿಷಿದ್ಧ ಎಂದು ಮಂಡಳಿ ಸೂಚಿಸಿದರೆ ಅದನ್ನು ಪ್ರದರ್ಶನ ಪ್ರತಿಯಿಂದ ಕತ್ತರಿಸಿ ಹಾಕಬೇಕಾಗುತ್ತದೆ. ಚಿತ್ರದ ವಸ್ತು ಸಾರ್ವಜನಿಕ ಶಾಂತಿಗೆ ಭಂಗ ತರುವಂಥದಾದಲ್ಲಿ ಕೂಡ ಇಡೀ ಚಿತ್ರದ ಪ್ರದರ್ಶನವನ್ನು ಮಂಡಳಿ ನಿಷೇಧಿಸಬಹುದು.

ಚಲನಚಿತ್ರದ ನಿರ್ಮಾಣ ಒಂದು ವಿಶಿಷ್ಟ ಕಲೆ. ಪ್ರತಿಭೆ, ತಂತ್ರಜ್ಞಾನಗಳೆರಡಕ್ಕೂ ಅದರಲ್ಲಿ ಸಮಾನ ಸ್ಥಾನವಿದೆ. ಅವು ಒಂದಕ್ಕೊಂದಕ್ಕೆ ಪೋಷಕವಾದಾಗ ಉತ್ತಮ ಚಲನಚಿತ್ರ ನಿರ್ಮಾಣ ಸಾಧ್ಯ. (ಎಂ.ಎನ್.ಸಿ.ಎಚ್.)

**ಚಲನಚಿತ್ರ ಶಿಕ್ಷಣ ತರಬೇತಿ :** ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ (ಎಫ್.ಟಿ.ಐ.ಟಿ) : ಪುಣೆಯಲ್ಲಿ ಸ್ಥಾಪನೆಗೊಂಡ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಚಿತ್ರಜಗತ್ತಿಗೆ ಅಗತ್ಯವಾದ ಕಲಾವಿದರು ಹಾಗೂ ತಾಂತ್ರಿಕ ತಜ್ಞರಿಗೆ ಶಿಕ್ಷಣ ಹಾಗೂ ತರಬೇತಿ ನೀಡುತ್ತಿದೆ. ಅಭಿನಯವಷ್ಟೇ ಅಲ್ಲದೆ ಛಾಯಾಗ್ರಹಣ, ಸಂಕಲನ, ನಿರ್ದೇಶನ, ಚಿತ್ರನಾಟಕ ರಚನೆ ಮತ್ತಿತರ ತಾಂತ್ರಿಕ ವಿಭಾಗಗಳಲ್ಲಿ ತರಬೇತಿ ನೀಡುತ್ತಿದ್ದು, ಅನೇಕ ತಂತ್ರಜ್ಞರು ಇಲ್ಲಿ ರೂಪುಗೊಂಡಿದ್ದಾರೆ. ಚಿತ್ರರಂಗದಲ್ಲಿ ಹೆಸರಾದ ಅನೇಕ ಕಲಾವಿದರು ಹಾಗೂ ತಂತ್ರಜ್ಞರು ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದು ಪದವೀಧರರಾದವರು.

ಕನ್ನಡ ಚಿತ್ರರಂಗದಲ್ಲಿಯೂ ಈ ಸಂಸ್ಥೆಯಿಂದ ತರಬೇತಿ ಪಡೆದು ಪದವೀಧರರಾಗಿ ಬಂದ ಹಲವರು ಮಹತ್ವದ ಸಾಧನೆಗಳ ದಾಖಲೆ ಮಾಡಿದ್ದಾರೆ. ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಕೆ.ಎಂ.ಶಂಕರಪ್ಪ, ಛಾಯಾಗ್ರಾಹಕರಾದ ಯು.ಎಂ.ಎನ್.ಷರೀಫ್, ಎಸ್ ರಾಮಚಂದ್ರ, ತಾರೆ ಜಯಲಕ್ಷ್ಮಿ, ಸಂಕಲನಕಾರ ಉಮೇಶ್ ಕುಲಕರ್ಣಿ ಹೀಗೆ ಅನೇಕರು ಈ ಸಂಸ್ಥೆಯಿಂದ ಪದವೀಧರರಾಗಿ ಕನ್ನಡ ಚಿತ್ರರಂಗದ ಮೌಲ್ಯ ವರ್ಧಿಸಿದ್ದಾರೆ.

ಚಿತ್ರನಿರ್ಮಾಣ, ನಿರ್ದೇಶನ, ಸಂಕಲನ, ಅಭಿನಯ, ಛಾಯಾಗ್ರಹಣ ಮತ್ತಿತರ ವಿಭಾಗಗಳಲ್ಲಿ ಶಿಕ್ಷಣ ನೀಡುತ್ತಿರುವ ಈ ಸಂಸ್ಥೆಯಲ್ಲಿ ಟೆಲಿವಿಷನ್ ಮಾಧ್ಯಮದ ಬಗ್ಗೆಯೂ ತರಬೇತಿ ನೀಡಲಾಗುತ್ತಿದೆ. ಮೂರು ವರ್ಷಗಳ ಪದವಿ ಶಿಕ್ಷಣ ಹಾಗೂ ಒಂದು ವರ್ಷದವಧಿಯ ಸರ್ಟಿಫಿಕೇಟ್ ಕೋರ್ಸ್‌ಗಳಿವೆ.

2004–05 ಸಾಲಿನಿಂದ ಎರಡು ವರ್ಷಗಳ ಡಿಪ್ಲೊಮಾ ಕೋರ್ಸ್‌ನ್ನು ಅಭಿನಯ ವಿಭಾಗದಲ್ಲಿ ಆರಂಭಿಸಲಾಗಿದ್ದು, ಒಂದು ವರ್ಷದವಧಿಯ ಟೆಲಿವಿಷನ್ ಕೋರ್ಸ್, ಒಂದು ವರ್ಷದ ಅವಧಿಯ ಚಿತ್ರನಾಟಕ ರಚನೆಯ ಕೋರ್ಸ್‌ಗಳು ಈ ಇನ್‌ಸ್ಟಿಟ್ಯೂಟ್‌ನಲ್ಲಿವೆ. ಇದುವರೆಗೂ ಸುಮಾರು ಐದು ಸಾವಿರಕ್ಕೂ ಹೆಚ್ಚು ಮಂದಿ ದೂರದರ್ಶನದ ಶಿಬಿರಾರ್ಥಿಗಳಿಗೆ ತರಬೇತಿ ನೀಡಿದೆ. ಈ ಸಂಸ್ಥೆಯ ವಿದ್ಯಾರ್ಥಿಗಳು ಸೃಷ್ಟಿಸಿದ ಚಿತ್ರಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶಿತವಾಗಿ ಮೆಚ್ಚುಗೆ ಪಡೆದಿವೆ. ಪ್ರತಿವರ್ಷವೂ ಪುಣೆಯಲ್ಲಿರುವ ನ್ಯಾಷನಲ್ ಫಿಲ್ಮ್ ಆರ್ಕೈವ್ ಆಫ್ ಇಂಡಿಯಾ ಸಹಯೋಗದೊಂದಿಗೆ ಈ ಸಂಸ್ಥೆಯ ನಾಲ್ಕು ವಾರಗಳವಧಿಯ ಫಿಲಂ ಅಪ್ರೀಸಿಯೇಷನ್ ಕುರಿತ ಬೇಸಿಗೆ ಕೋರ್ಸ್ ಈ ಸಂಸ್ಥೆಯ ಒಂದು ಹೆಗ್ಗಳಿಕೆಯಾಗಿದೆ.

**ಸತ್ಯಜಿತ್ ರೇ ತರಬೇತಿ ಸಂಸ್ಥೆ :** ಪುಣೆಯ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್‌ನಂತೆಯೇ ಕೊಲ್ಕತ್ತದಲ್ಲಿ ಸತ್ಯಜಿತ್ ರೇ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ 1995ರಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಡಿಯಲ್ಲಿ ಪಶ್ಚಿಮ ಬಂಗಾಲದಲ್ಲಿ ನೊಂದಾಯಿತಗೊಂಡ ಸಂಸ್ಥೆ. ಚಲನಚಿತ್ರ ನಿರ್ದೇಶನ, ಚಿತ್ರನಾಟಕ ರಚನೆ, ಛಾಯಾಗ್ರಹಣ, ಫಿಲಂ ಹಾಗೂ ವಿಡಿಯೋ ಸಂಕಲನ ಹಾಗೂ ಶಬ್ದಗ್ರಹಣ ವಿಭಾಗಗಳಲ್ಲಿ 3 ವರ್ಷಗಳವಧಿಯ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತಿದೆ. ಈ ಸಂಸ್ಥೆಯ ವಿದ್ಯಾರ್ಥಿಗಳು ಸೃಷ್ಟಿಸಿದ "ಸುಂದರ್ ಜೀಬಾನ್"–ಡಿಪ್ಲೊಮ ಫಿಲಂ 50ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೆ ಪಾತ್ರವಾಗಿದೆ. ಮತ್ತೊಂದು ಡಿಪ್ಲೊಮಾ ಚಿತ್ರ "ಖೋಜ್" 8ನೇ ಮುಂಬೈ ಚಿತ್ರೋತ್ಸವ ಪ್ರಶಸ್ತಿ ಪಡೆದಿದೆ. ಈ ಸಂಸ್ಥೆಯ ವಿದ್ಯಾರ್ಥಿಗಳ ಚಿತ್ರಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಆಹ್ವಾನಿತ ಚಿತ್ರಗಳಾಗಿ ಪ್ರದರ್ಶನ ಕಂಡಿವೆ.

**ತಮಿಳುನಾಡಿನಲ್ಲಿ :** ಪುಣೆಯ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್‌ನಿಂದ ಸ್ಫೂರ್ತಿಪಡೆದು ಮುಂಬೈನಲ್ಲಿಯೇ ಹಲವು ಮಂದಿ ಚಿತ್ರೋದ್ಯಮದ ವ್ಯಕ್ತಿಗಳು ಫಿಲಂ ಇನ್‌ಸ್ಟಿಟ್ಯೂಟ್‌ಗಳನ್ನು ಸ್ಥಾಪಿಸಿದರು. ಹಾಗೆಯೇ ಚೆನ್ನೈನಲ್ಲಿರುವ ದಕ್ಷಿಣಭಾರತ ಚಲನಚಿತ್ರ ವಾಣಿಜ್ಯಮಂಡಳಿಯೂ ಫಿಲಂ ಇನ್‌ಸ್ಟಿಟ್ಯೂಟೊಂದನ್ನು ತೆರೆಯಿತು. ಈ ಶಿಕ್ಷಣ ತರಬೇತಿ ಸಂಸ್ಥೆಯ ಮೂಲಕವೂ ಅನೇಕ ಮಂದಿ ಕಲಾವಿದರು ಹಾಗೂ ತಂತ್ರಜ್ಞರು ಚಿತ್ರರಂಗದಲ್ಲಿ ಹೆಸರಾದರು. ಅವರಲ್ಲಿ ಕನ್ನಡಿಗರ ಸಂಖ್ಯೆಯೇನೂ ಕಡಿಮೆ ಇಲ್ಲ. ತಮಿಳಿನ ಸೂಪರ್‌ಸ್ಟಾರ್ ಎನಿಸಿರುವ ಕನ್ನಡಿಗ ರಜನೀಕಾಂತ್ ತರಬೇತಿಪಡೆದುದೂ ಇಲ್ಲಿಯೇ. ಕನ್ನಡ ನಟ ಅಶೋಕ್, ನಟಿ ಹೇಮಾಚೌಧರಿ, ನಿರ್ದೇಶಕ ರವೀಂದ್ರನಾಥ್ ಮತ್ತು ಅನೇಕರು ಈ ಸಂಸ್ಥೆಯಲ್ಲಿ ಶಿಕ್ಷಣ ತರಬೇತಿ ಪಡೆದರು. ಕನ್ನಡದ ಜನಪ್ರಿಯ ನಟ ಶಿವರಾಜಕುಮಾರ್ ಕೂಡ ಈ ಶಾಲೆಯ ಹಳೆಯ ವಿದ್ಯಾರ್ಥಿ.

**ಬೆಂಗಳೂರಿನಲ್ಲಿ :** ಬೆಂಗಳೂರು ಮಹಾನಗರದಲ್ಲಿ ಏಳೆಂಟು ದಶಕಗಳ ಹಿಂದೆಯೇ ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್–ವೃತ್ತಿಶಿಕ್ಷಣ ಶಾಲೆಯಲ್ಲಿ ಚಲನಚಿತ್ರ ಛಾಯಾಗ್ರಹಣ ಹಾಗೂ ಶಬ್ದಗ್ರಹಣ ವಿಭಾಗಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಬೆಂಗಳೂರಿನ ಆ ಎಸ್.ಜೆ.ಪಿ.ಯಲ್ಲಿ ಶಿಕ್ಷಣ ಪಡೆದ ಹಲವರು ಭಾರತದ ವಿವಿಧ ಭಾಷಾ ಚಿತ್ರರಂಗಗಳಲ್ಲಿ ಹೆಸರಾದ ತಂತ್ರಜ್ಞರೆನಿಸಿದ್ದಾರೆ. ಹಿಂದಿ ಚಿತ್ರಜಗತ್ತಿನ ಜಗದ್ವಿಖ್ಯಾತ ಛಾಯಾ ಗ್ರಾಹಕ ವಿ.ಕೆ.ಮೂರ್ತಿ, ಡಿ.ವಿ.ರಾಜಾರಾಂ, ಆರ್.ಎನ್.ಕೆ.ಪ್ರಸಾದ್, ಗೌರೀಶಂಕರ್, ಆರ್. ಮಂಜುನಾಥ್, ಎನ್.ಜಿ.ರಾವ್ ಮತ್ತಿತರರು ಈ ಶಾಲೆಯ ಡಿಪ್ಲೊಮಾ ಪದವೀಧರರು. ಚಿತ್ರನಿರ್ದೇಶಕ ಹಾಗೂ ಆರ್.ಎನ್.ಜಯಗೋಪಾಲ್ ಈ ಶಾಲೆಯ ಸೌಂಡ್ ಎಂಜಿನಿಯರಿಂಗ್ ಡಿಪ್ಲೊಮಾ ಪಡೆದರು. ಕಾಲಾನಂತರದಲ್ಲಿ ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಎಂದು ಹೆಸರಾಗಿದ್ದ ಈ ಸಂಸ್ಥೆಯು ಶ್ರೀ ಜಯ ಚಾಮರಾಜೇಂದ್ರ ಪಾಲಿಟೆಕ್ನಿಕ್ ಎಂದಾಯಿತು. ಅಲ್ಲದೆ ಕರ್ನಾಟಕ ರಾಜ್ಯಸರ್ಕಾರವು "ಚಿತ್ರನಗರಿ" ನಿರ್ಮಾಣಕ್ಕೆಂದು ಹೆಸರಘಟ್ಟದಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಈ ಸಂಸ್ಥೆಯ ಚಲನಚಿತ್ರ ವಿಭಾಗ ಸಂಪೂರ್ಣವಾಗಿ ಹೆಸರಘಟ್ಟಕ್ಕೆ ಸ್ಥಳಾಂತರವಾಯಿತು. ಇದೀಗ ಅಲ್ಲಿ "ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್" ರೂಪುಗೊಂಡು, ಯಶಸ್ವಿಯಾಗಿ ನಡೆಯುತ್ತಿದೆ.

**ಸುಚಿತ್ರ ಫಿಲ್ಮ್ ಸೊಸೈಟಿ :** ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಯುಗ ಉನ್ನತಿಯಲ್ಲಿದ್ದಾಗ ಬೆಂಗಳೂರಿನಲ್ಲಿ ಚಲನಚಿತ್ರ ಸಮಾಜಗಳೂ ಹುಟ್ಟಿಕೊಂಡವು. ಸುಚಿತ್ರ ಫಿಲಂ ಸೊಸೈಟಿ ಅತ್ಯಂತ ಸುವ್ಯವಸ್ಥಿತವಾಗಿ ಬೆಳೆದು ಬಂದಿರುವ ಚಿತ್ರಸಮಾಜವೆನಿಸಿದೆ. ದೇಶ–ವಿದೇಶಗಳ ಉತ್ತಮ ಚಿತ್ರಗಳನ್ನು ಪ್ರದರ್ಶಿಸುತ್ತಿರುವ ಸುಚಿತ್ರ ಫಿಲಂ ಸೊಸೈಟಿ ತನ್ನದೇ ಆದ ಚಿತ್ರಪ್ರದರ್ಶನಮಂದಿರವನ್ನು ಹೊಂದಿದ್ದು, ಚಲನಚಿತ್ರಗಳ ಸೆನ್ಸಾರ್ ಮಂಡಳಿಯವರೂ ಆ ಥಿಯೇಟರನ್ನು ಬಳಸಿಕೊಳ್ಳುತ್ತಿದ್ದಾರೆ. ಚಲನಚಿತ್ರ ಪ್ರದರ್ಶನ ಮಾತ್ರವಲ್ಲದೆ, ಸಂವಾದ–ಪರಿಚಯ ಮತ್ತಿತರ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ಸುಚಿತ್ರಾ ತನ್ನದೇ ಆದ, ಇನ್ ಹೌಸ್ ನಿಯತಕಾಲಿಕ ಪತ್ರಿಕೆಯನ್ನು ಪ್ರಕಟಿಸುತ್ತಿದೆ.

ಆರಂಭದಲ್ಲಿ ಬೆಂಗಳೂರಿನಲ್ಲಿ ಹಲವಾರು ಚಿತ್ರಸಮಾಜಗಳು ಹುಟ್ಟಿಕೊಂಡವಾದರೂ ಅವುಗಳ ಚಟುವಟಿಕೆ ಗಣನೀಯವಾದುದೇನಲ್ಲ. ಎಷ್ಟೋ ಫಿಲಂ ಸೊಸೈಟಿಗಳು ಸ್ಥಗಿತವಾಗಿರುವುದೂ ಉಂಟು.

ಮೂಲಭೂತ ಕಾರ್ಯಗಳು : ಚಲನಚಿತ್ರೋದ್ಯಮದ ಮೂಲಭೂತ ಸೌಕರ್ಯಗಳಲ್ಲಿ ಚಲನಚಿತ್ರ ನಿರ್ಮಾಣಕ್ಕೆ ಅಗತ್ಯವಾದ ಸ್ಟುಡಿಯೋಗಳು, ರೆಕಾರ್ಡಿಂಗ್ ಹಾಗೂ ರೀರೆಕಾರ್ಡಿಂಗ್ ಸ್ಟುಡಿಯೋಗಳೂ ಪ್ರಮುಖವಾದವು. ಮೈಸೂರಿನಲ್ಲಿ ಏಳು ಫ್ಲೋರುಗಳ ಬೃಹತ್ ಸ್ಟುಡಿಯೋವೆನಿಸಿ ಅನೇಕ ಚಿತ್ರಗಳ ಸೃಷ್ಟಿಗೆ ಅವಕಾಶವಿದ್ದ ಪ್ರಿಮಿಯರ್ ಸ್ಟುಡಿಯೋ ಇದೀಗ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ಅಲ್ಲಿ ಬೇರೆ ಉದ್ದಿಮೆ ನೆಲೆಗೊಂಡಿದೆ. (ಎಸ್.ಕೆ)

**ಚಲನಚಿತ್ರ ಸಮಾಜಗಳು (Film Socities) :** ಚಲನಚಿತ್ರಗಳ ಬಗ್ಗೆಗೆ ಆಸಕ್ತಿ, ಒಲುಮೆ ಇಟ್ಟುಕೊಂಡು, ಅವುಗಳ ಬಗೆಗೆ ಅಧ್ಯಯನ ಮಾಡಲು ಇಚ್ಛೆಯಿರುವ ಸ್ನೇಹಿತರು ಒಟ್ಟಾಗಿ ಸೇರಿ, ಹಿಂದಿನ ವರ್ಷಗಳಲ್ಲಿ ತಯಾರಾಗಿರುವ ಹಾಗೂ ಪ್ರಸಕ್ತ ಸನ್ನಿವೇಶದಲ್ಲಿ ತಯಾರಾಗಿ ಬರುತ್ತಿರುವ, ಅಸಂಖ್ಯಾತ ಚಲನಚಿತ್ರಗಳ ಪೈಕಿ ನಮಗೆ

ಬೇಕೆನಿಸಿದ ಚಿತ್ರವನ್ನು ಆಯ್ದುಕೊಂಡು, ವೀಕ್ಷಿಸಿ ಅದರ ಬಗ್ಗೆ ಚರ್ಚೆ, ವಿಮರ್ಶೆ, ಬರವಣಿಗೆ ಮಾಡುವ ಹವ್ಯಾಸವನ್ನು ಇಟ್ಟುಕೊಂಡಿರುವ ಸಂಸ್ಥೆಗಳಿಗೆ ಚಲನಚಿತ್ರಸಮಾಜಗಳು ಎಂದು ಕರೆಯುತ್ತಾರೆ.

**ಆವಶ್ಯಕತೆ :** 1920ರ ದಶಕದಲ್ಲಿ, ಬ್ರಿಟನ್ನಿನಲ್ಲಿ, ವ್ಯಾಪಾರೀ ದೃಷ್ಟಿಯಿಂದ, ಲಾಭಗಳಿಸುವ ಸಲುವಾಗಿ, ಎಲ್ಲ ಸಾರ್ವಜನಿಕ ಚಿತ್ರಮಂದಿರಗಳಲ್ಲಿ, ಮನರಂಜನೆಗೆ ಸೀಮಿತಗೊಂಡ ಚಿತ್ರಗಳಿಗೆ ಮಾತ್ರ ಪ್ರದರ್ಶನಾವಕಾಶ ದೊರೆಯುತ್ತಿತ್ತು. ಹೀಗಾಗಿ ಅನೇಕ ಉತ್ತಮ ಚಿತ್ರಗಳಿಗೆ, ಮನರಂಜನೆಗೆ ಬೇಕಾದ ಅಂಶಗಳು ಇಲ್ಲವಾದ ಕಾರಣ, ಪ್ರದರ್ಶನಾವಕಾಶ ಸಿಕ್ಕದೆ ಡಬ್ಬಗಳಲ್ಲಿ ಕೊಳೆಯಬೇಕಾಗಿ ಬಂತು. ಕ್ರಾಂತಿಕಾರಿ ವಸ್ತುಗಳನ್ನು ಹಾಗೂ ಗಂಭೀರ ವಿಷಯಗಳನ್ನು ಅಳವಡಿಸಿಕೊಂಡು ತಯಾರುಮಾಡಿದ ಚಿತ್ರಗಳಿಗೆ ಸಾರ್ವಜನಿಕವಾಗಿ ಪುರಸ್ಕಾರ ದೊರೆಯುವುದು ದುರ್ಲಭವಾಗಿಬಿಟ್ಟಿತ್ತು. ಬ್ಯಾಟಲ್‌ಷಿಪ್ ಪೊಟೆಂಕಿನ್ ಅಂತಹ ಅದ್ಭುತ ರಷ್ಯನ್ ಚಿತ್ರಕ್ಕೆ ಅವಕಾಶ ಸಿಕ್ಕದೆ ಇದ್ದಾಗ, ಈ ಚಿತ್ರದ ಉತ್ತಮ ಗುಣಗಳ ಬಗ್ಗೆ ವಿಷಯ ತಿಳಿದಿದ್ದ ಕೆಲವು ಬುದ್ಧಿಜೀವಿಗಳು ಒಟ್ಟಿಗೆ ಸೇರಿ, ತಮ್ಮನ್ನು ಚಲನಚಿತ್ರ ಸಮಾಜದ ಸದಸ್ಯರು ಎಂದು ಕರೆದುಕೊಂಡು, ಸಾರ್ವಜನಿಕ ಪ್ರದರ್ಶನಗಳು ಇಲ್ಲದ ವೇಳೆಯಲ್ಲಿ, ಚಿತ್ರಮಂದಿರಗಳನ್ನು ಬಾಡಿಗೆಗೆ ತೆಗೆದುಕೊಂಡು ವೀಕ್ಷಿಸಿ ಅದರ ಬಗ್ಗೆ ಅಧ್ಯಯನ ಮಾಡಲು ಪ್ರಾರಂಭಿಸಿದರು. ಈ ಒಂದು ಹವ್ಯಾಸವನ್ನು ಉದ್ದೇಶವಾಗಿಟ್ಟುಕೊಂಡು ಸ್ಥಾಪನೆಯಾದ ಸಂಸ್ಥೆಗಳಿಗೆ ಚಲನಚಿತ್ರ ಸಮಾಜಗಳು ಎಂಬ ಹೆಸರು ಚಾಲನೆಗೆ ಬಂತು. 1925ರ ಅಕ್ಟೋಬರ್ 25ರಂದು, ಲಂಡನ್ನಿನಲ್ಲಿ ಮೊಟ್ಟಮೊದಲ ಚಲನಚಿತ್ರಸಮಾಜ ಪ್ರಾರಂಭವಾಯಿತು. ಆಂಥೊನಿ ಅಸ್ಕಿತ್, ಸಿಡ್ನಿ ಬರ್ನ್ಸ್ ಸ್ಟಿನ್, ಎಚ್.ಜಿ.ವೆಲ್ಸ್, ಜಾರ್ಜ್ ಬರ್ನಾರ್ಡ್ ಷಾ, ಆಗಸ್ಟಸ್ ಜಾನ್, ಮೈನಾರ್ಡ್ ಕೇನ್ಸ್ ಇವರುಗಳು, ಈ ಚೊಚ್ಚಲು ಚಿತ್ರಸಮಾಜದ ಸಂಸ್ಥಾಪಕರುಗಳಾಗಿದ್ದರು.

ಈ ಒಂದು ಹವ್ಯಾಸ, ಕ್ರಮೇಣವಾಗಿ ಚಳವಳಿಯಾಗಿ ರೂಪುಗೊಂಡಿತು, 1930ರ ವೇಳೆಗೆ, ಬ್ರಿಟನ್ನಿನ ಅನೇಕ ಪಟ್ಟಣಗಳಲ್ಲಿ ಇಂತಹ ಚಿತ್ರಸಮಾಜಗಳು ಉದ್ಭವಗೊಂಡು ಕಾರ್ಯನಿರತವಾದವು. ಅನಂತರದ ವರ್ಷಗಳಲ್ಲಿ ಪ್ರಪಂಚದ ಎರಡನೆಯ ಮಹಾಯುದ್ಧದ ಕಾರಣದಿಂದಾಗಿ ಈ ಚಳವಳಿ ಸ್ಥಗಿತಗೊಂಡು, ಯುದ್ಧದ ನಂತರ ಮತ್ತೆ ಪ್ರಾರಂಭವಾಯಿತು. ಆದರೆ, ಸಾರ್ವಜನಿಕ ಚಿತ್ರಮಂದಿರಗಳಲ್ಲಿ ಪ್ರದರ್ಶನದ ಶುಲ್ಕ ಕ್ರಮೇಣವಾಗಿ ಹೆಚ್ಚಿದ್ದರಿಂದ, ಹಾಗೂ ಪ್ರದರ್ಶನಕ್ಕೆ ತಕ್ಕ ವೇಳೆ ಸಿಕ್ಕದೆ ತೊಂದರೆಯಾದ್ದರಿಂದ, ಆರ್ಥಿಕವಾಗಿ ಅಶಕ್ತವಾಗಿದ್ದ ಚಿತ್ರಸಮಾಜಗಳು ಮುಗ್ಗಟ್ಟಿನ ಪರಿಸ್ಥಿತಿ ಎದುರಿಸಬೇಕಾಯಿತು. ಈ ಸಂದರ್ಭದಲ್ಲಿ ತಾಂತ್ರಿಕ ವಿಕಾಸದ ಬಳುವಳಿಯಾಗಿ 35.ಮಿಮೀ. ಚಿತ್ರಗಳನ್ನು 16.ಮಿಮೀ. ಗೆ ಪರಿವರ್ತಿಸಿ, 16 ಮಿಮೀ. ಪ್ರೊಜೆಕ್ಟರ್‌ಗಳಲ್ಲಿ ಚಾಲನೆಮಾಡಿ ಪ್ರದರ್ಶನಮಾಡುವ ತಂತ್ರ ಬಳಕೆಗೆ ಬಂತು. ಈ ಒಂದು ಸೌಲಭ್ಯ ಒದಗಿದಮೇಲೆ, ಚಿತ್ರ ಸಮಾಜಗಳ ಸಂಖ್ಯೆ ಶತಕಗಳಿಂದ, ಸಾವಿರಗಳಿಗೆ ಹೆಚ್ಚಿತು. 16.ಮಿಮೀ. ನಲ್ಲಿ ಚಿತ್ರಗಳನ್ನು ವಿತರಣೆ ಮಾಡುವ ಸಂಸ್ಥೆಗಳೂ ಹುಟ್ಟಿಕೊಂಡವು. ಚಿತ್ರಸಮಾಜದ ಹವ್ಯಾಸ ಪಟ್ಟಣಗಳಿಂದ ಗ್ರಾಮಗಳಿಗೂ ಹರಿಯಿತು. ಸುಲಭವಾಗಿ ಒಂದು 16.ಮಿಮೀ.ಪ್ರೊಜೆಕ್ಟರ್‌ನ್ನು ಬಾಡಿಗೆಗೊ ಅಥವಾ ಕೊಂಡೋ, ಸದಸ್ಯರುಗಳು ಒಂದಾಗಿ ಸೇರಿ ಒಂದು ಪುಟ್ಟ ಸಭಾಂಗಣದಲ್ಲಿ ಚಿತ್ರಗಳನ್ನು ತಾವೇ ಚಾಲನೆ ಮಾಡುವ ಯಂತ್ರದ ಮೂಲಕ ಪ್ರದರ್ಶನಮಾಡಿ ವೀಕ್ಷಿಸಿ ಆಧ್ಯಯನ ಮಾಡುವ ಪರಿಪಾಠ ವ್ಯಾಪಕವಾಗಿ ಬೆಳೆಯಿತು. ಈ ಒಂದು ಚಳವಳಿ ಯೂರೋಪಿನ ಮತ್ತಿತರ ದೇಶಗಳಿಗೂ ಹರಡಿತು. 1925ರಲ್ಲೇ ಫ್ರಾನ್ಸಿನಲ್ಲಿ ಕೂಡ ಈ ಚಳುವಳಿ ಪ್ರಾರಂಭಗೊಂಡು ಅತಿವೇಗವಾಗಿ ಬೆಳೆಯಿತು. ಚಲನಚಿತ್ರ ಸಮಾಜಗಳು ವ್ಯಾಪಕವಾಗಿ ಬೆಳೆದ ಕಾರಣದಿಂದಾಗಿ, ಅವುಗಳ ಚಟುವಟಿಕೆಗಳನ್ನು ನಿಯಂತ್ರಿಸುವ ಸಲುವಾಗಿ, 1937ರಲ್ಲಿ ಬ್ರಿಟಿಷ್ ಫೆಡರೇಷನ್ ಆಫ್ ಫಿಲ್ಮ್ ಸೊಸೈಟೀಸ್ ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂತು.

**ಭಾರತದಲ್ಲಿ ಚಲನಚಿತ್ರ ಸಮಾಜಗಳ ಬೆಳವಣಿಗೆ :** ಭಾರತದಲ್ಲಿ ಮೊದಲ ಬಾರಿಗೆ, ಮುಂಬಯಿಯಲ್ಲಿ 1937ರಲ್ಲಿ ಆ್ಯಮಚರ್ ಸಿನಿ ಸೊಸೈಟಿ ಎಂಬ ಸಂಸ್ಥೆಯನ್ನು, ಸಾಕ್ಷ್ಯಚಿತ್ರಗಳ (Documentary films) ತಯಾರಕರ ತಂಡವೊಂದು ಪ್ರಾರಂಭಿಸಿತು. ಈ ತಂಡದಲ್ಲಿ ಹೆಸರಾಂತ ಚಿತ್ರ ತಯಾರಕರಾದ ಪಿ.ವಿ.ಪತಿ, ಅಂಬಾಲಾಲ್, ಬಿ.ಬಿ.,ಯೋಧ್, ಎಜ್ರ ಮೀರ್, ಭವನಾನಿ, ಫೆರೆನೆಕ್ ಬೊರ್ಕೊ ಮುಂತಾದ ಅನೇಕ ಗಣ್ಯವ್ಯಕ್ತಿಗಳಿದ್ದರು. ಈ ಸೊಸೈಟಿ ಹೆಚ್ಚಾಗಿ ಸಾಕ್ಷ್ಯ ಚಿತ್ರಗಳನ್ನು ತಯಾರು ಮಾಡುವ ಬಗ್ಗೆ ಶಿಕ್ಷಣ ಕೊಡುವುದು, ತರಬೇತಿ ಶಿಬಿರಗಳನ್ನು ನಡೆಸುವುದು, ಮುಂತಾದ ಚಟುವಟಿಕೆಗಳಿಗೆ ಮಾತ್ರ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿತ್ತು.

1943ರಲ್ಲಿ, ಫೆರ್ನೆಕೊ ಬೊರ್ಕೊ, ಎಂಬ ಹಂಗರಿಯ ಛಾಯಾಚಿತ್ರಗ್ರಾಹಕರು ಬಾಂಬೆ ಫಿಲಂ ಸೊಸೈಟಿಯನ್ನು ಸ್ಥಾಪಿಸಿದರು. ಈ ಚಿತ್ರಸಮಾಜ ಭಾರತದಲ್ಲಿ ಹುಟ್ಟಿದ ಮೊಟ್ಟಮೊದಲ ಅಧಿಕೃತ ಚಲನಚಿತ್ರ ಸಮಾಜವೆಂದು ಪರಿಗಣಿಸಲು ಅರ್ಹತೆ ಪಡೆಯಿತು. ಈ ಚಿತ್ರಸಮಾಜ ವರ್ಷಕ್ಕೆ 12 ರೂಪಾಯಿ ಶುಲ್ಕ ವಿಧಿಸಿ, ಎರೋಸ್ ಚಿತ್ರಮಂದಿರದಲ್ಲಿ ಚಿತ್ರಪ್ರದರ್ಶನಗಳನ್ನು ಮಾಡಿ, ಅನಂತರ ಉತ್ಸಾಹಕರ ಚರ್ಚಾಕೂಟಗಳನ್ನು ಚಿತ್ರಮಂದಿರದ ಒಂದು ಕೊಠಡಿಯಲ್ಲಿ ನಡೆಸುತ್ತಿತ್ತು. In which we serve, Blithe Spirit, Citizen Kane, Miracle at Milan, The River, Heera Moti ಮುಂತಾದ ಉತ್ತಮ ಚಿತ್ರಗಳನ್ನು ಪ್ರದರ್ಶಿಸಿ ಹೆಸರು ಮಾಡಿತು. 1960ರ ಹೊತ್ತಿಗೆ ಸುಮಾರು 60 ಮಂದಿ ಸದಸ್ಯರನ್ನು ಹೊಂದಿ ಅಚ್ಚುಕಟ್ಟಾಗಿ ಕೆಲಸಮಾಡುತ್ತಿತ್ತು. ಈ ಸಂಸ್ಥೆಯಲ್ಲಿ ಚಲನಚಿತ್ರ ಕ್ಷೇತ್ರದಲ್ಲಿ ಹೆಸರು ಮಾಡಿದ, ಆರ್.ಇ.ಹಾಕಿನ್ಸ್, ಜಗಮೋಹನ್, ಕೆ.ಎಲ್. ಖಾಂಡಪುರೆ, ಎಮ್.ವಿ.ಕೃಷ್ಣಸ್ವಾಮಿ ಮುಂತಾದ ಗಣ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರು.

**ಕಲ್ಕತ್ತ ಫಿಲ್ಮ್ ಸೊಸೈಟಿ :** ಚಲನಚಿತ್ರ ಸಮಾಜಗಳಿಗೆ ಭದ್ರವಾದ ಬುನಾದಿ ಹಾಕುವ ಕಾರ್ಯ, 1947ರ ಅಕ್ಟೋಬರ್, 5 ರಂದು, ಕೊಲ್ಕತದಲ್ಲಿ, ಕಲ್ಕತ್ತ ಫಿಲಂ ಸೊಸೈಟಿ ಸ್ಥಾಪನೆಯ ಮೂಲಕ ಜರುಗಿತು. ಭಾರತದ ಚಲನಚಿತ್ರದ ಮೇರು ವ್ಯಕ್ತಿಯೆನಿಸಿಕೊಂಡ ಸತ್ಯಜಿತ್ ರಾಯ್, ಹೆಸರಾಂತ ವಿಮರ್ಶಕ ಚಿದಾನಂದದಾಸ್ ಗುಪ್ತ, ಹಿರಣ್ ಕುಮಾರ್ ಸನ್ಯಾಲ್, ಬನ್ಸಿ ಚಂದ್ರಗುಪ್ತ, ಹರಿ ದಾಸ್ ಗುಪ್ತ, ಮೋಹನ ಭಟ್ಟಾಚಾರ್ಯ ಮತ್ತು ಅವರ ಸ್ನೇಹಿತರುಗಳು ಕೂಡಿಕೊಂಡು ಈ ಸಂಸ್ಥೆಯನ್ನು ಪ್ರಾರಂಭಿಸಿದರು. ಪ್ರಪಂಚದ ಶ್ರೇಷ್ಠ ಚಿತ್ರಗಳನ್ನು ಬ್ರಿಟಿಷ್ ಫಿಲಂ ಇನ್ಸ್ಟಿಟ್ಯೂಟ್ ಸಹಾಯದಿಂದ ತರಿಸಿ, ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ ಸಂಸ್ಥೆಯಾಯಿತು. ಆದರೂ 1952 ರವರೆಗೆ ಸದಸ್ಯತ್ವದ ಸಂಖ್ಯೆ 60 ಕ್ಕಿಂತ ಹೆಚ್ಚು ಏರಲೇ ಇಲ್ಲ. ಮತ್ತು ಈ ಸಂಸ್ಥೆ ಕುಂಟುತ್ತಲೇ ಮುಂದುವರೆಯಿತು. 1952ರಲ್ಲಿ ರಾಯ್‌ರವರು ತಮ್ಮ ಪಥೇರ್ ಪಾಂಚಾಲಿ ಚಿತ್ರದ ನಿರ್ಮಾಣದಲ್ಲಿ ಪೂರ್ಣವಾಗಿ ತೊಡಗಿಕೊಂಡದ್ದರಿಂದ ಚಿತ್ರಸಮಾಜ ಪೂರ್ಣ ಸ್ಥಗಿತಗೊಂಡಿತು. 1956ರ ಅನಂತರದಲ್ಲಿ, ಬ್ರಿಟನ್ನಿನ ಹೆಸರಾಂತ ಚಿತ್ರ ವಿಮರ್ಶಕರಾಗಿದ್ದ ಮೇರಿ ಸೀಟನ್ ಎಂಬ ಮಹಿಳೆ ಭಾರತಕ್ಕೆ ಬಂದು ಕೊಲ್ಕತದಲ್ಲಿ ತಂಗಿ, ಪಥೇರ್ ಪಾಂಚಾಲಿ ಚಿತ್ರದ ಬಿಡುಗಡೆಯಿಂದ ಸ್ಫೂರ್ತಿಗೊಂಡು, ಮತ್ತೆ ಕೊಲ್ಕತ್ತ ಫಿಲಂ ಸೊಸೈಟಿಯನ್ನು ಜೀರ್ಣೋದ್ಧಾರ ಮಾಡಿ, ಉತ್ತಮ ಚಿತ್ರಗಳ ಪ್ರೋತ್ಸಾಹಕ್ಕೆ ಚಲನಚಿತ್ರ ಸಮಾಜಗಳ ಆವಶ್ಯಕತೆಯನ್ನು ಭಾರತ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು, ಈ ಒಂದು ಚಳುವಳಿಗೆ ಹೊಸ ಚೈತನ್ಯವನ್ನು ಕೊಟ್ಟರು. ಕಲ್ಕತ್ತ ಫಿಲಂ ಸೊಸೈಟಿ ಮತ್ತೆ ಹುರುಪಿನಿಂದ ಕಾರ್ಯ ಪ್ರಾರಂಭಿಸಿತು. ಮೃಣಾಲ್ ಸೇನ್, ಋತ್ವಿಕ್ ಘಟಕ್, ಬಿ.ಎನ್.ಸರ್ಕಾರ್, ಆರ್.ಸಿ.ಬೋರಾಲ್ ಮುಂತಾದ ಅನೇಕ ಗಣ್ಯರು ಚಿತ್ರಸಮಾಜಗಳ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು, ಈ ಚಳುವಳಿಗೆ ಒಂದು ಹೊಸ ಆಯಾಮವನ್ನು ಕೊಟ್ಟರು. ಇದರಿಂದ ಸ್ಫೂರ್ತಿಗೊಂಡ ಅನೇಕ ವ್ಯಕ್ತಿಗಳು, ಕೊಲ್ಕತದಲ್ಲೇ ಅಲ್ಲದೆ ಭಾರತದ ಇನ್ನಿತರ ಪಟ್ಟಣಗಳಲ್ಲಿ ಕೂಡ ಚಿತ್ರಸಮಾಜಗಳನ್ನು ಸ್ಥಾಪಿಸಿದರು.

ದೆಹಲಿಯಲ್ಲಿ ದೆಹಲಿ ಫಿಲಂ ಸೊಸೈಟಿ, ಚೆನ್ನೈನಲ್ಲಿ ದಿ ಮದ್ರಾಸ್ ಫಿಲಂ ಸೊಸೈಟಿ, ಪಟ್ನಾ ಫಿಲಂ ಸೊಸೈಟಿ, ಮುಂಬಯಿಯಲ್ಲಿ ಆನಂದಂ ಫಿಲಂ ಸೊಸೈಟಿ, ಫಿಲಂ ಫೋರಂ, ಮುಂತಾದ ಅನೇಕ ಚಿತ್ರಸಮಾಜಗಳು ಹುಟ್ಟಿಕೊಂಡವು.

ಚಲನಚಿತ್ರಸಮಾಜಗಳ ಇತಿಹಾಸದಲ್ಲಿ, 1959 ರ, ಡಿಸೆಂಬರ್, 13 ಒಂದು ಸ್ಮರಣೀಯ ದಿವಸ. ಅಂದು, ಕಲ್ಕತ್ತ ಫಿಲಂ ಸೊಸೈಟಿ, ದೆಹಲಿ ಫಿಲಂ ಸೊಸೈಟಿ, ದಿ ಮದ್ರಾಸ್ ಫಿಲಂ ಸೊಸೈಟಿ, ರೂರ್ಕಿ ಫಿಲಂ ಸೊಸೈಟಿ, ಬೊಂಬಾಯಿ ಫಿಲಂ ಸೊಸೈಟಿ ಹಾಗೂ ಪಟನಾ ಫಿಲಂ ಸೊಸೈಟಿ, ಈ ಚಿತ್ರಸಮಾಜಗಳ ಪ್ರತಿನಿಧಿಗಳು, ದೆಹಲಿಯಲ್ಲಿ ಸಭೆ ಸೇರಿ, ಭಾರತದ ಚಲನಚಿತ್ರ ಸಮಾಜಗಳ ಒಕ್ಕೂಟ (Federation of film societies of India), ಎಂಬ ಒಂದು ಹೊಸ ಸಂಸ್ಥೆಯನ್ನು ಪ್ರಾರಂಭಿಸಲು ತಮ್ಮ ಹೆಸರುಗಳನ್ನು ದಾಖಲೆ ಮಾಡಿಸಿದರು. ಈ ಸಂಸ್ಥೆ ಭಾರತದ ಎಲ್ಲ ಚಿತ್ರಸಮಾಜಗಳ ಚಟುವಟಿಕೆಗಳನ್ನು ನಿಯಂತ್ರಿಸಿ, ಅವುಗಳಿಗೆ ಸೂಕ್ತ ಮಾರ್ಗದರ್ಶನ ಮಾಡುವ ಕಾರ್ಯವನ್ನು ವಹಿಸಿಕೊಂಡಿತು. ಅಂದು ತಮ್ಮ ಹೆಸರುಗಳನ್ನು ನೊಂದಾಯಿಸಿದ ಆದ್ಯ ಪ್ರವರ್ತಕ ವ್ಯಕ್ತಿಗಳ ಹೆಸರುಗಳು : ಶ್ರೀಮತಿ ವಿಜಯ ಮೂಳೆ (ದೆಹಲಿ), ಅರುಣಾ ರಾಯ್ ಚೌಧುರಿ (ಪಟನಾ), ತ್ರಿಯಂಬಕ ಪಾಠಕ್ (ರೂರ್ಕಿ), ರಾಬರ್ಟ ಹಾಕಿನ್ಸ್, (ಮುಂಬಯಿ) ಸಾಮ್ಯುಎಲ್ (ಚೆನ್ನೈ), ಹಿರಣ್ ಕುಮಾರ್ ಸನ್ಯಾಲ್ ಮತ್ತು ಚಿದಾನಂದ ದಾಸ್ ಗುಪ್ತ (ಕೊಲ್ಕತ). ಈ ಸಂಸ್ಥೆ ಭಾರತದ ಮೊದಲ ಚಿತ್ರಸಮಾಜ ಹುಟ್ಟಿದ 17 ವರ್ಷಗಳ ಅನಂತರ ಅಸ್ತಿತ್ವಕ್ಕೆ ಬಂತು. ಅಂದಿನಿಂದೀಚೆಗೆ 1959 ರಲ್ಲಿ 6, 1964 ರಲ್ಲಿ 24, 1971 ರಲ್ಲಿ 111, 1980 ರಲ್ಲಿ 216, ಮತ್ತು 2000 ದ ಹೊತ್ತಿಗೆ 253, ಹೀಗೆ ಚಿತ್ರಸಮಾಜಗಳ ಸಂಖ್ಯೆ ಏರಿತು.

ಚಿತ್ರಸಮಾಜಗಳ ಒಕ್ಕೂಟಕ್ಕೆ, ಭಾರತ ಸರ್ಕಾರದ ಮನ್ನಣೆಯೂ ದೊರಕಿದೆ, ವಾರ್ಷಿಕ ಅನುದಾನವೂ ಬರುತ್ತಿದೆ. ಪ್ರಪಂಚದಲ್ಲಿ ಎಲ್ಲಡೆ ತಯಾರಾಗುವ, ಹಾಗೂ ಭಾರತದಲ್ಲಿಯೂ ತಯಾರಾಗುವ ಪ್ರಶಸ್ತಿವಿಜೇತ ಚಿತ್ರಗಳನ್ನು ತರಿಸಿ, ಸದಸ್ಯರಿಗೆ ಪ್ರದರ್ಶಿಸಿ, ಅವುಗಳ ಮೇಲೆ ವಿಮರ್ಶೆ ಮಾಡಿ, ಲೇಖನಗಳನ್ನು ಬರೆದು ಪ್ರಕಟಿಸಿ, ಚರ್ಚಾಕೂಟಗಳು, ವಿಚಾರ ಸಂಕಿರಣಗಳು, ಮುಂತಾದ ಕಾರ್ಯಗಳನ್ನು ಸತತವಾಗಿ ನಡೆಸಿಕೊಂಡು ಬರುತ್ತಿರುವ

ಈ ಚಳುವಳಿ, ಎಲ್ಲ ಚಟುವಟಿಕೆಗಳಂತೆ ಏರುಪೇರುಗಳನ್ನು ಎದುರಿಸಿಕೊಂಡು ಇಂದಿಗೂ ಜೀವಂತವಾಗಿ ಉಳಿದುಕೊಂಡಿದೆ. ಚಲನಚಿತ್ರ ಸಮಾಜಗಳ ಬೆಳವಣಿಗೆ, ಪಶ್ಚಿಮ ಬಂಗಾಲದಲ್ಲಿ, ಹಾಗೂ ಕೇರಳದಲ್ಲಿ ಸಾಕಷ್ಟು ವ್ಯಾಪಕವಾಗಿ ಬೆಳೆದು, ಉತ್ತಮ ಚಿತ್ರಗಳ ಬಗೆಗೆ ಪ್ರಚಾರ ಹಾಗೂ ಪ್ರೋತ್ಸಾಹ ನೀಡುವ ದಿಶೆಯಲ್ಲಿ ಹೆಚ್ಚಿನ ಪ್ರಭಾವ ಬೀರಿದೆ.

ಇತ್ತೀಚಿನ ದಶಕದಲ್ಲಿ, ಕೋಲ್ಕತದಲ್ಲಿ ಸೈನ್ ಕ್ಲಬ್ ಆಫ್ ಕೊಲ್ಕತ್ತ, ಸಿನಿ ಸೆಂಟ್ರಲ್ ಕಲ್ಕತ್ತ, ಸಿನಿ ಅಕಾಡೆಮಿ, ಕೊಲ್ಕತ್ತ, ಬರ್ಧ್ವಾಂಪುರ್ ಫಿಲಂ ಸೊಸೈಟಿ ಕಲ್ಕತ್ತ, ಪ್ರಭಾತ್ ಚಿತ್ರ ಮಂಡಲಿ, ಮುಂಬೈ, ಸಿನಿ ಸೊಸೈಟಿ ಮುಂಬೈ, ಆಶಯ್ ಫಿಲಂ ಕ್ಲಬ್, ಪುಣೆ, ದಿ ಮದ್ರಾಸ್ ಫಿಲಂ ಸೊಸೈಟಿ, ಚೆನ್ನೈ, ಐ.ಸಿ.ಎ. ಫೋರಂ, ಚೆನ್ನೈ, ಹೈದರಾಬಾದ್ ಫಿಲಂ ಕ್ಲಬ್, ಕರೀಂನಗರ್ ಫಿಲಂ ಸೊಸೈಟಿ, ನ್ಯೂ ಲುಕ್ ಫಿಲಂ ಸೊಸೈಟಿ, ತಿರುಪ್ಪುರ್, ಯಥಾರ್ಥ, ಮಧುರೈ, ತಮಿಳುನಾಡು ತಿರುಪ್ಪಾದ ಇಯಕ್ಕಮ್, ಚೆನ್ನೈ, ಚಲಚಿತ್ರ, ತಿರುವನಂತಪುರ, ಸುಚಿತ್ರ ಫಿಲಂ ಸೊಸೈಟಿ, ಬೆಂಗಳೂರು, ಬೆಂಗಳೂರು ಫಿಲಂ ಸೊಸೈಟಿ, ಬೆಂಗಳೂರು, ಕಲೆಕ್ಟಿವ್ ಕೇಆಸ್ (collective chaos) ಬೆಂಗಳೂರು, ಚಿತ್ರ ಫಿಲಂ ಸೊಸೈಟಿ, ಧಾರವಾಡ, ದೆಹಲಿ ಫಿಲಂ ಸೊಸೈಟಿ, ದೆಹಲಿ, ದೆಹಲಿ ಮಲಯಾಳೀ ಫಿಲಂ ಸೊಸೈಟಿ, ದೆಹಲಿ, ಚಂದಿಗರ್ ಫಿಲಂ ಸೊಸೈಟಿ ಚಂದಿಗರ್, ಫಿಲಂ ಸೊಸೈಟಿ ಆಫ್ ಜೋಧಪುರ್– ಜೋಧಪುರ, ಇನ್ನೂ ಹಲವಾರು ಚಿತ್ರಸಮಾಜಗಳು ಕಾರ್ಯೋನ್ಮುಖವಾಗಿ ಕೆಲಸ ಮಾಡುತ್ತಿವೆ,

ಈ ಒಂದು ಚಳವಳಿಗೆ 1970 ಹಾಗೂ 80ರ ದಶಕಗಳಲ್ಲಿದ್ದ ಲವಲವಿಕೆ, ಹುರುಪು, ಟಿವಿ ಛಾನೆಲ್‌ಗಳ ಪ್ರಭಾವದಿಂದಾಗಿ 1990ರ ದಶಕದಲ್ಲಿ ಕಡಿಮೆಯಾಗುತ್ತ ಬಂತು. 2000 ದಿಂದೀಚೆಗೆ, ಪರಿಸ್ಥಿತಿ ಮತ್ತೆ ಆಶಾದಾಯಕವಾಗಿ ಕಾಣುತ್ತಿದೆ. ಪ್ರಪಂಚದ ಎಲ್ಲ ದೇಶಗಳ ಶ್ರೇಷ್ಠ ಚಿತ್ರಗಳ ಪ್ರತಿಗಳು ಈಗ ಡಿ.ವಿ.ಡಿ ಗಳಲ್ಲಿ ಬರುತ್ತಿರುವುದರಿಂದ ಚಿತ್ರಸಮಾಜಗಳಿಗೆ ಎಲ್.ಸಿ.ಡಿ ಪ್ರೊಜೆಕ್ಟರ್‌ಗಳನ್ನು ಉಪಯೋಗಿಸಿಕೊಂಡು ಚಿತ್ರಗಳನ್ನು ಪ್ರದರ್ಶಿಸಬಹುದಾಗಿದೆ. ಇದರಿಂದಾಗಿ, ಮುಂಚಿನಂತೆ ದೊಡ್ಡ ದೊಡ್ಡ ಡಬ್ಬಗಳಲ್ಲಿ ಚಿತ್ರದ ಪ್ರತಿಗಳನ್ನು ಹೊತ್ತು ಸಾಗಿಸಿ, ಸಾರ್ವಜನಿಕ ಚಿತ್ರಮಂದಿರಗಳಿಗೆ ದುಂಬಾಲು ಬಿದ್ದು ಪ್ರದರ್ಶಿಸಬೇಕಿದ್ದ ತೊಂದರೆಗಳು ತಪ್ಪಿದೆ, ಮತ್ತೆ ಚಿತ್ರಸಮಾಜಗಳು ಬೆಳೆಯಬಹುದು ಎಂಬ ವಿಶ್ವಾಸ ಹೆಚ್ಚುತ್ತಿದೆ.

ಹೊಸ ಹೊಸ ತಾಂತ್ರಿಕ ಬೆಳವಣಿಗೆಗೆ ಸ್ಪಂದಿಸಿ, ಚಲನಚಿತ್ರಸಮಾಜಗಳಿಗೆ ಸಾಕಷ್ಟು ಉತ್ತೇಜನ, ಪೋಷಣೆ ಹಾಗೂ ಪ್ರೋತ್ಸಾಹ ಕೊಡಬೇಕೆಂದು ಚಲನಚಿತ್ರಗಳ ಒಕ್ಕೂಟ (FFSI) ಈಗ ಕಾರ್ಯೋನ್ಮುಖವಾಗಿದೆ. ಈ ಒಕ್ಕೂಟಕ್ಕೆ 1959 ರಿಂದ 1992 ರವರೆಗೆ, ಸತ್ಯಜಿತ್ ರಾಯ್‌ರವರು ಸಂಸ್ಥಾಪಕ ಅಧ್ಯಕ್ಷರಾಗಿ ಕೆಲಸ ಮಾಡಿದರು. ಪ್ರಸಕ್ತ ಸಾಲಿನಿಂದ ಖ್ಯಾತ ಚಿತ್ರನಿರ್ದೇಶಕ ಶ್ಯಾಮ್ ಬೆನೆಗಲ್ ರವರು ಅಧ್ಯಕ್ಷರಾಗಿದ್ದಾರೆ. ದಕ್ಷಿಣ ವಲಯದಿಂದ ಎಚ್.ಎನ್.ನರಹರಿ ರಾವ್, ಪಶ್ಚಿಮದಿಂದ ಕಿರಣ ಶಾಂತಾರಾಂ, ಉತ್ತರದಿಂದ ಪ್ರೊಫೆಸರ್ ಮಹೇಶ್ವರಿ, ಹಾಗೂ ಪೂರ್ವದಿಂದ ತಪನ್‌ರಾಯ್‌ರವರುಗಳು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ, ಅಜಯ ಸೇನ್ ಗುಪ್ತ, ರಾಧಾಕೃಷ್ಣನ್, ಸುಧೀರ್ ನಂದಗಾಂವ್ಕರ್, ಹಾಗೂ ಪ್ರಕಾಶ್ ರೆಡ್ಡಿ ಅವರುಗಳು ಕಾರ್ಯದರ್ಶಿಗಳಾಗಿ ಕೆಲಸಮಾಡುತ್ತಿದ್ದಾರೆ. ಈ ಒಕ್ಕೂಟದ ಬಗ್ಗೆಗೆ ಹೆಚ್ಚು ಮಾಹಿತಿ ಬೇಕಿದ್ದಲ್ಲಿ www.ffsico.org ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಎಚ್.ಎನ್. ನರಹರಿರಾವ್ ರಚಿಸಿರುವ Film Society Handbook ಮತ್ತು My Days with the Film Society Movement, ಈ ಎರಡು ಪುಸ್ತಕಗಳಲ್ಲಿ ಚಿತ್ರಸಮಾಜಗಳನ್ನು ಸ್ಥಾಪಿಸಿ ಕಾರ್ಯನಿರ್ವಹಿಸುವ ಬಗ್ಗೆ ಮತ್ತು ಚಲನಚಿತ್ರ ಸಮಾಜಗಳ ಚಳುವಳಿಗಳ ಬಗ್ಗೆ ಸಂಕ್ಷಿಪ್ತ ಇತಿಹಾಸ ಪಡೆಯಬಹುದು.

ಸುಮಾರು 5 ದಶಕಗಳಿಗೂ ಹೆಚ್ಚಿನ ಅಸ್ತಿತ್ವವಿರುವ ಈ ಚಟುವಟಿಕೆಗಳು ಇದುವರೆಗೆ ಸಾಧಿಸಿರುವ ಕಾರ್ಯಗಳೇನು? ಎಂಬುದು ಸಂಗತವಾದ ಪ್ರಶ್ನೆ. ಈ ಒಂದು ನಿಟ್ಟಿನಲ್ಲಿ ಸಮೀಕ್ಷೆ ಮಾಡಿದಾಗ ಈ ಕೆಳಕಂಡ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ:

1. ಪ್ರಪಂಚದ ಎಲ್ಲ ದೇಶಗಳಿಂದ ಸಹಸ್ರಾರು ಶ್ರೇಷ್ಠ ಚಿತ್ರಗಳನ್ನು ತರಿಸಿ ಸದಸ್ಯರಿಗೆ ಪ್ರದರ್ಶನ ಮಾಡಿರುವುದು ಒಂದು ಹೆಮ್ಮೆಯ ವಿಷಯ. ಇಲ್ಲದಿದ್ದಲ್ಲಿ ಈ ಚಿತ್ರಗಳು ನಮಗೆ ತಲುಪುವ ಯಾವ ಸೌಲಭ್ಯವೂ ನಮಗಿರಲಿಲ್ಲ. ಫೆಲ್ಲಿನಿಡಿಸಿಕ, ಬರ್ಗ್‌ಮನ್, ರೆನ್ವಾರ್, ಟ್ರುಫಾ, ಗೊಡಾರ್ಡ, ಹರ್ಜ್ರೋಗ್, ಫಾಸ್ ಬಿಂಡರ್, ಸತ್ಯಜಿತ್ ರಾಯ್, ಜಾನುಸಿ ವಾಜ್ಡ, ಕೈಸ್ಲೋವ್‌ಸ್ಕಿ, ಕುರೋಸಾವ, ಓಜು, ಜಾಬೊ ಮುಂತಾದ ಅನೇಕ ವಿಶ್ವವಿಖ್ಯಾತ ಚಿತ್ರ ನಿರ್ದೇಶಕರುಗಳ ಚಿತ್ರಗಳನ್ನು ಚಿತ್ರಸಮಾಜಗಳು ತರಿಸಿ ತೋರಿಸಿವೆ. ಸಾಮಾನ್ಯವಾಗಿ ಹೊರದೇಶಗಳ ಚಿತ್ರಗಳೆಂದರೆ ನಮಗೆ ಸಾರ್ವಜನಿಕ ಚಿತ್ರಮಂದಿರಗಳಲ್ಲಿ ಸಿಗುವುದು ಅಮೆರಿಕದ ಚಿತ್ರಗಳು ಮಾತ್ರ, ಟಿವಿಗಳಲ್ಲಿ ಕೂಡ ಅಮೆರಿಕಮಯವೇ. ಚಿತ್ರಸಮಾಜಗಳು ಮಾತ್ರ ಯೂರೋಪ್, ದಕ್ಷಿಣ ಅಮೆರಿಕ, ಏಷಿಯ, ಆಸ್ಟ್ರೇಲಿಯ ಮುಂತಾದ ಭಾಗಗಳ ಎಲ್ಲ ದೇಶಗಳ ಚಿತ್ರಗಳನ್ನು ನೋಡುವ ಅವಕಾಶವನ್ನು ಸದಸ್ಯರಿಗೆ ಒದಗಿಸಿವೆ.

2. ಚಿತ್ರಸಮಾಜಗಳ ಸದಸ್ಯರುಗಳಾದ ಸತ್ಯಜಿತ್ ರಾಯ್, ಮೃಣಾಲ್ ಸೆನ್, ರಿತ್ವಿಕ್ ಘಟಕ್, ಶ್ಯಾಮ್ ಬೆನಗಲ್, ಬಸು ಚಟರ್ಜಿ, ಬಸು ಭಟ್ಟಾಚಾರ್ಯ, ಅಡೂರ್ ಗೋಪಾಲ ಕೃಷ್ಣನ್, ಗಿರೀಶ್ ಕಾಸರವಳ್ಳಿ ಮುಂತಾದವರು ಚಿತ್ರಸಮಾಜಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ನಂತರ ಉತ್ತಮಚಿತ್ರಗಳನ್ನು ನಿರ್ದೇಶಿಸುವುದರಲ್ಲಿಯೂ ಯಶಸ್ವಿಯಾಗಿದ್ದಾರೆ.

3. ಚಿತ್ರವಿಮರ್ಶೆ ಕ್ಷೇತ್ರದಲ್ಲಿ ಕೂಡ ಚಿತ್ರಸಮಾಜಗಳು ಸಾಕಷ್ಟು ಪ್ರಭಾವ ಬೀರಿವೆ.

4. ಭಾರತದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ, ತಿರುವನಂತಪುರ, ಕೋಲ್ಕತ, ಮುಂಬೈ, ಪುಣೆ, ಚೆನ್ನೈ, ಬೆಂಗಳೂರು ಮುಂತಾದ ಪಟ್ಟಣಗಳಲ್ಲಿ ನಡೆಯುವ ಚಿತ್ರೋತ್ಸವಗಳಲ್ಲಿ ಚಲನಚಿತ್ರ ಸಮಾಜಗಳ ಸದಸ್ಯರುಗಳು ಸಕ್ರಿಯವಾಗಿ ಭಾಗವಹಿಸುತ್ತಾರೆ. ಈ ಚಿತ್ರೋತ್ಸವಗಳನ್ನು ಸಂಘಟಿಸುವಲ್ಲಿ ಕೂಡ ಹಲವಾರು ಕ್ಷೇತ್ರಗಳಲ್ಲಿ ಚಿತ್ರಸಮಾಜಗಳು ಪಾಲ್ಗೊಳ್ಳುತ್ತವೆ.

ಮುಂದಿನ ದಿನಗಳಲ್ಲಿ, ತಾಂತ್ರಿಕ ಬೆಳವಣಿಗೆಯಿಂದ ಉದ್ಭವಿಸುವ ಸವಾಲುಗಳನ್ನು ಚಿತ್ರಸಮಾಜಗಳು ಹೇಗೆ ಎದುರಿಸುತ್ತವೆ ಎಂಬುದು ಕುತೂಹಲಕಾರಿ ಪ್ರಶ್ನೆ.

(ಎಚ್.ಎನ್.ಎನ್.)

**ಚಲನಚಿತ್ರೋದ್ಯಮ, ಪೂರಕ ಸಂಸ್ಥೆಗಳು :** ಭಾರತದಲ್ಲಿ 1912–13ರಿಂದಲೂ ಕಥಾ (ಫೀಚರ್ ಫಿಲಂ) ಚಿತ್ರಗಳ ನಿರ್ಮಾಣವಾಗುತ್ತಿದೆ. ಆರ್.ಜಿ.ತೋರ್ನೆ ಮತ್ತು ಎನ್.ಜಿ. ಚಿತ್ರ ಅವರು ತಯಾರಿಸಿದ ಪುಂಡಲೀಕ ಆ ನಿಟ್ಟಿನಲ್ಲಿ ಪ್ರಥಮ ಪ್ರಯತ್ನ. ಅನಂತರ ದುಂಡಿರಾಜ್ ಗೋವಿಂದ್ ಫಾಲ್ಕೆ ರಾಜಾಹರಿಶ್ಚಂದ್ರ ಚಿತ್ರವನ್ನು ನಿರ್ಮಿಸಿ, ಭಾರತೀಯ ಚಲನಚಿತ್ರ ಇತಿಹಾಸದಲ್ಲಿ ಶಕಪುರುಷರೆನಿಸಿದರು. ದಾದಾ ಸಾಹೇಬ್ ಫಾಲ್ಕೆಯವರ ಹೆಸರಿನಲ್ಲಿ ಚಿತ್ರರಂಗದಲ್ಲಿನ ಅವಿಸ್ಮರಣೀಯ ಸೇವೆಗಾಗಿ ಭಾರತದಲ್ಲಿಯೇ ಅತ್ಯಂತ ಶ್ರೇಷ್ಠ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಈ ಪ್ರತಿಷ್ಠಿತ ಪ್ರಶಸ್ತಿಗೆ ಪಾತ್ರರಾದ ಕನ್ನಡ ಚಿತ್ರರಂಗದ ಏಕೈಕ ವ್ಯಕ್ತಿಯೆಂದರೆ ಕನ್ನಡದ ಮೇರು ನಟ ರಾಜಕುಮಾರ್. ಭಾರತದಲ್ಲಿ ಆರಂಭದಲ್ಲಿ ಮೂಕಿಯಾಗಿದ್ದ ಚಲನಚಿತ್ರರಂಗ ಆರ್ದೇಶಿಕ್ ಇರಾನಿಯವರ ಆಲಂ ಆರಾ ಚಿತ್ರದ ಮೂಲಕ ಮಾತನಾಡುವ ಚಲನಚಿತ್ರವಾಯಿತು. ಅಂದಿನಿಂದಲೂ ಭಾರತವು ಫೀಚರ್ ಫಿಲಂಗಳ ವಾರ್ಷಿಕ ಉತ್ಪಾದನೆಯಲ್ಲಿ ವಿಶ್ವದಲ್ಲಿಯೇ ಪ್ರಮುಖ ಸ್ಥಾನದಲ್ಲಿದೆ.

**ಫಿಲಂಸ್ ಡಿವಿಜನ್:** ಭಾರತ ಸರ್ಕಾರದ ವಾರ್ತಾ ಇಲಾಖೆಯಲ್ಲದೆ ಚಲನಚಿತ್ರ ವಿಭಾಗವೂ 1948ರಿಂದಲೂ ಕಾರ್ಯನಿರತವಾಗಿದೆ. ಸೆಲ್ಯುಲಾಯ್ಡ್‌ನಲ್ಲಿನ ಸ್ವತಂತ್ರ ಭಾರತದ ಸಾಧನೆಗಳನ್ನು ಸಂಗ್ರಹಿಸಿಡುವುದಲ್ಲದೆ ಅವುಗಳನ್ನು ದಾಖಲಿಸಿ, ರಾಷ್ಟ್ರಾದ್ಯಂತ ಪ್ರಸಾರ ಮಾಡುವುದು ಈ ಫಿಲಂ ಡಿವಿಷನ್‌ನ ಕರ್ತವ್ಯ. ಜನತೆ ಹಾಗೂ ಸರ್ಕಾರದ ಮಧ್ಯೆ ಸೇತುವಾಗಿ ಸಾಕ್ಷ್ಯಚಿತ್ರಗಳ ಆಂದೋಲನವನ್ನೇ ನಡೆಸಿರುವ ಈ ವಿಭಾಗವು ವಾರ್ತಾಚಿತ್ರಗಳು, ಸಾಕ್ಷ್ಯಚಿತ್ರಗಳು ಹಾಗೂ ಕಾರ್ಟೂನ್ (ಆ್ಯನಿಮೇಷನ್) ಚಿತ್ರಗಳ ನಿರ್ಮಾಣ ಹಾಗೂ ವಿತರಣೆಯನ್ನು ಭಾರತದಾದ್ಯಂತವಷ್ಟೇ ಅಲ್ಲ, ವಿಶ್ವದ ವಿವಿಧ ಭಾಗಗಳಿಗೂ ಕೊಂಡೊಯ್ದಿದೆ. ಅಲ್ಲದೆ ಕಥೆಯನ್ನಾಧಾರಿಸಿದ ಕಿರುಚಿತ್ರಗಳು, ಶೈಕ್ಷಣಿಕ ಚಿತ್ರಗಳನ್ನು ನಿರ್ಮಿಸುವುದಲ್ಲದೆ ಭಾರತ ಸರ್ಕಾರದ ಹಾಗೂ ರಾಜ್ಯಸರ್ಕಾರಗಳ ವಿವಿಧ ಸಚಿವಾಲಯಗಳಿಗಾಗಿಯೂ ರಾಷ್ಟ್ರದ ಪ್ರಗತಿಗೆ ಸಂಬಂಧಿಸಿದಂತೆ ಮಾಹಿತಿ ಚಿತ್ರಗಳನ್ನು ನಿರ್ಮಿಸಿ ಕೊಡುತ್ತಿದೆ. ಕಾರ್ಟೂನ್ ಫಿಲಂ ಯೂನಿಟ್ ಒಂದನ್ನು ಡಿಸ್ನಿ ಆ್ಯನಿಮೇಷನ್ ಸ್ಟುಡಿಯೋ ಹಾದಿಯಲ್ಲಿ ಹೊಂದಿದ್ದು ರಂಜನೀಯ– ಶೈಕ್ಷಣಿಕ ಆ್ಯನಿಮೇಷನ್ ಚಿತ್ರಗಳ ನಿರ್ಮಾಣದಲ್ಲಿಯೂ ತೊಡಗಿಕೊಂಡಿದೆ. ಆರೋಗ್ಯದಿಂದ ಹಿಡಿದು ಅಂತರಿಕ್ಷಯಾನದವರೆಗೆ ಫಿಲಂ ಡಿವಿಷನ್ ಇದುವರೆಗೆ 7000ಕ್ಕೂ ಹೆಚ್ಚು ವಾರ್ತಾಚಿತ್ರಗಳನ್ನು, ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದೆ. ಅವುಗಳ ಅಡಕಮುದ್ರಿಕೆ ಹಾಗೂ ವಿಡಿಯೋ ಕ್ಯಾಸೆಟ್ ರೂಪದಲ್ಲಿ ಶಾಲಾಕಾಲೇಜುಗಳಿಗೆ ಸಾರ್ವಜನಿಕರಿಗೆ ಲಭ್ಯವಿವೆ. ರಾಷ್ಟ್ರದ ಪ್ರತಿಯೊಂದು ಭಾಷೀಯರಿಗೂ ದೇಶದ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳನ್ನು ಕುರಿತಂತೆ ಸುಲಭವಾಗಿ ತಿಳಿಯಲು ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಮಾತ್ರವಲ್ಲದೆ ಆಯಾ ಪ್ರಾಂತೀಯ ಭಾಷೆಗಳಿಗೂ ತನ್ನ ಚಿತ್ರಗಳನ್ನು ಮಾಡಿಕೊಡುತ್ತಿದೆ. ರಾಷ್ಟ್ರದ ಅನೇಕ ಪ್ರಮುಖ ನಗರಗಳಲ್ಲಿ ತನ್ನ ಶಾಖಾ ಕಚೇರಿಯನ್ನು ಹೊಂದಿರುವ ಈ ವಿಭಾಗವು ಫಿಲಂ ಆರ್ಕೈವ್‌ಗಳನ್ನು ತೆರೆದಿದ್ದು, ಅನೇಕ ಚಿತ್ರಗಳನ್ನು ಸಂಗ್ರಹಿಸಿಟ್ಟಿದೆ. ಸಾಕ್ಷ್ಯ, ಕಿರು ಹಾಗೂ ಆ್ಯನಿಮೇಷನ್ ಚಿತ್ರಗಳಿಗಾಗಿ 1990ರಲ್ಲಿ ಅಂತಾರಾಷ್ಟ್ರೀಯ ಚಿತ್ರೋತ್ಸವವನ್ನು ಆರಂಭಿಸಿದ್ದು ಪ್ರತಿ ಎರಡು ವರ್ಷಕ್ಕೊಮ್ಮೆ ಈ ಚಿತ್ರೋತ್ಸವ ನಡೆಸುತ್ತಿದೆ. ಡಾ. ವಿ. ಶಾಂತಾರಾಂ ಪ್ರಶಸ್ತಿಯನ್ನೂ ನೀಡುತ್ತಿದೆ.

**ಸೆನ್ಸಾರ್ ಮಂಡಳಿ :** 1952ರ ಸಿನಿಮಾಟೋಗ್ರಾಫ್ ಕಾಯ್ದೆಯಡಿ ರಚಿತವಾದ ಭಾರತದ ಕೇಂದ್ರ ಫಿಲಂ ಸೆನ್ಸಾರ್ ಬೋರ್ಡ್‌ನ್ನು ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್ ಎಂದು ಬದಲಾಯಿಸಲಾಯಿತು. ಭಾರತದಲ್ಲಿ ತಯಾರಾಗುವ ಯಾವುದೇ ಭಾಷೆಯ ಚಿತ್ರಗಳು ಆಯಾ ಪ್ರಾದೇಶಿಕ ಕಚೇರಿಯಲ್ಲಿ ಪರಿಶೀಲನೆಗೆ ಒಳಪಟ್ಟು ಪ್ರದರ್ಶನಾರ್ಹ ಸರ್ಟಿಫಿಕೇಟ್ ಪಡೆದ ಅನಂತರವೇ ಸಾರ್ವಜನಿಕವಾಗಿ ಚಲನಚಿತ್ರಮಂದಿರಗಳಲ್ಲಿ

ಪ್ರದರ್ಶಿತವಾಗಬೇಕು. ಆಮದಾದ ವಿದೇಶೀ ಚಿತ್ರಗಳೂ ಭಾರತದಲ್ಲಿ ಸೆನ್ಸಾರ್ ಆದ ನಂತರವೇ ಪ್ರದರ್ಶಿತವಾಗಬೇಕು. ಈ ಮಂಡಳಿಯಲ್ಲಿ ಕೇಂದ್ರ ಸರ್ಕಾರದಿಂದ ನಿಯಮಿತರಾದ ಒಬ್ಬ ಅಧ್ಯಕ್ಷ ಹಾಗೂ 12ರಿಂದ 26ರ ಒಳಗಿನ ಸಂಖ್ಯೆ ಅಧಿಕಾರೇತರ ಸದಸ್ಯರು ಇರುತ್ತಾರೆ. ಮುಂಬೈನಲ್ಲಿ ಕೇಂದ್ರ ಮಂಡಳಿ ಇದ್ದು, ಬೆಂಗಳೂರು, ಮುಂಬೈ, ಕೊಲ್ಕತ್ತ, ಹೈದರಾಬಾದ್, ಚೆನ್ನೈ, ತಿರುವನಂತಪುರಂ, ನವ ದೆಹಲಿ, ಕಟಕ್ ಹಾಗೂ ಗುವಾಹಟಿ–ಈ ಒಂಬತ್ತು ಸ್ಥಳಗಳಲ್ಲಿ ಪ್ರಾಂತೀಯ ಮಂಡಳಿಗಳು ಕಾರ್ಯಮಗ್ನವಾಗಿವೆ. ಭಾರತದಲ್ಲಿ 14 ಪ್ರಮುಖ ಭಾಷೆಗಳಲ್ಲಿ ಚಿತ್ರಗಳ ನಿರ್ಮಾಣವಾಗುತ್ತಿದ್ದು ಕೇವಲ 9 ಪ್ರಾಂತೀಯ ಮಂಡಳಿಗಳು ಸ್ಥಾಪಿತವಾಗಿರುವುದರಿಂದ ಗುಜರಾತಿ, ಪಂಜಾಬಿ, ರಾಜಾಸ್ತಾನಿ ಮುಂತಾದ ಭಾಷಾ ಚಿತ್ರಗಳ ಪರಿಶೀಲನೆ ಮುಂಬೈನಲ್ಲಿ ನಡೆಯುತ್ತಿದೆ. ಶೈಕ್ಷಣಿಕ ತಜ್ಞರು ಕಲಾವಿಮರ್ಶಕರು, ಪತ್ರಕರ್ತರು, ಸಮಾಜಸೇವಕರು, ಮನೋವಿಜ್ಞಾನ ತಜ್ಞರು, ಪ್ರಮುಖರುಗಳ ಸಲಹಾ ಸಮಿತಿಯ ಸಹಕಾರದೊಂದಿಗೆ ಪ್ರಾಂತೀಯ ಶಾಖಾ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವರು. 1952ರ ಸಿನಿಮಟೋಗ್ರಾಫ್ ಕಾಯಿದೆ ಹಾಗೂ 1983ರ ಸಿನಿಮಟೋಗ್ರಾಫ್ (ಸರ್ಟಿಫಿಕೇಷನ್) ರೂಲ್ಸ್ (ನಿಯಮಾವಳಿ) ಈ ಕಾಯಿದೆಗಳಿಗನುಗುಣವಾಗಿ ಈ ಮಂಡಳಿ ಚಲನಚಿತ್ರಗಳ ಪ್ರದರ್ಶನಾರ್ಹತೆಯನ್ನು ನಿರ್ಧರಿಸುತ್ತದೆ. ಈ ಮಂಡಳಿಯ ನಿರ್ಧಾರವನ್ನು ಪ್ರಶ್ನಿಸಿ ಚಲನಚಿತ್ರ ನಿರ್ಮಾಪಕರು ಪುನರ್ವಿಮರ್ಶನ ಸಮಿತಿಯ ಮೊರೆಹೋಗಬಹುದು. ಅಲ್ಲಿಯೂ ಸಾಧ್ಯವಾಗದಿದ್ದರೆ ಹೊಸ ದೆಹಲಿಯಲ್ಲಿ 1984ರಲ್ಲಿ ಸ್ಥಾಪಿಸಲಾಗಿರುವ "ಫಿಲಂ ಸರ್ಟಿಫಿಕೇಷನ್ ಅಪೆಲೇಟ್ ಟ್ರಿಬ್ಯೂನಲ್"ನ ಮೊರೆಹೋಗಬಹುದಾಗಿದೆ.

**ನ್ಯಾಷನಲ್ ಫಿಲ್ಮ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ಲಿ.:** ಮೊದಲು ಫಿಲಂ ಫೈನಾನ್ಸ್ ಕಾರ್ಪೋರೇಷನ್ ಎಂಬ ಹೆಸರಿನಲ್ಲಿ ಕೇಂದ್ರ ಸರ್ಕಾರವು ಸ್ಥಾಪಿಸಿದ ನಿಗಮವು ಸದಭಿರುಚಿಯ ಉತ್ತಮ ಚಿತ್ರಗಳಿಗೆ (ಎಲ್ಲಾ ಭಾರತೀಯ ಭಾಷೆಗಳಿಗೂ) ಚಿತ್ರನಿರ್ಮಾಣಕ್ಕೆ ಆರ್ಥಿಕ ನೆರವು ನೀಡುತ್ತಿತ್ತು. (ಕನ್ನಡದಲ್ಲಿಯೂ ಎರಡು ಚಿತ್ರಗಳು ಈ ಎಫ್. ಎಫ್. ಸಿ ಯಿಂದ ಸಾಲ ಪಡೆದಿದ್ದವು). 1975ರಲ್ಲಿ ಎಫ್.ಎಫ್.ಸಿ.ಯನ್ನು ನ್ಯಾಷನಲ್ ಫಿಲಂ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ಎಂದು ಬದಲಿಸಲಾಯಿತು. 1980ರಲ್ಲಿ ಭಾರತೀಯ ಚಲನಚಿತ್ರಗಳ ನಿರ್ಯಾತ ನಿಗಮ(ಇಂಪೆಕ್)ವನ್ನು ಎನ್.ಎಫ್.ಡಿ.ಸಿ.ಯೊಂದಿಗೆ ವಿಲೀನಗೊಳಿಸಲಾಯಿತು. ದೃಶ್ಯ ಶ್ರವಣ ಮಾಧ್ಯಮ ಹಾಗೂ ಸಂಬಂಧಿಸಿದ ರಂಗಗಳಲ್ಲಿ ಕಲಾತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ಸಿನಿಮಾದಲ್ಲಿ ಶ್ರೇಷ್ಠತೆಯನ್ನು ಸಾಧಿಸುವ ಉದ್ದೇಶ ಹೊಂದಿದ್ದ ಎನ್.ಎಫ್.ಡಿ.ಸಿ. ಪ್ರಯೋಗಾತ್ಮಕ, ಕಲಾತ್ಮಕ ಚಿತ್ರಗಳಿಗೆ ಆರ್ಥಿಕ ನೆರವು ನೀಡುವುದಲ್ಲದೆ, ತಾನೇ ಅಂತಹ ಚಿತ್ರಗಳ ನಿರ್ಮಾಣಪೂರ್ವ ಹಾಗೂ ನಿರ್ಮಾಣೋತ್ತರ ಅತ್ಯಾಧುನಿಕ ತಂತ್ರಜ್ಞಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು ಮುಂತಾದ ಹಲವು ಹತ್ತು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಅಲ್ಲದೆ ಫಿಲಂ ಸೊಸೈಟಿಗಳು, ರಾಷ್ಟ್ರೀಯ ಫಿಲಂ ಸರ್ಕಲ್‌ಗಳು ಹಾಗೂ ಭಾರತೀಯ ಮತ್ತು ವಿದೇಶಿ ಚಿತ್ರಗಳಿಗೆ ಸಂಬಂಧಿಸಿದ ಸಂಸ್ಥೆಗಳ ಸಹಯೋಗದಲ್ಲಿ ಚಲನಚಿತ್ರ ಸಪ್ತಾಹ, ಭಾರತೀಯ ಚಲನಚಿತ್ರ ಪನೋರಮಾ ಹಾಗೂ ಚಲನಚಿತ್ರೋತ್ಸವಗಳನ್ನು ಏರ್ಪಡಿಸುವ ಮೂಲಕ ನಾಡಿನ ಸಾಂಸ್ಕೃತಿಕ ವೈಭವ ವೈವಿಧ್ಯವನ್ನು ಮೆರೆಸುವುದು ಈ ನಿಗಮದ ಗುರಿಯಾಗಿದೆ.

ಅತ್ಯುನ್ನತ ಸಾಮಾಜಿಕ ಮೌಲ್ಯಗಳನ್ನುಳ್ಳ, ಉತ್ತಮ ಗುಣಮಟ್ಟದ ಅಲ್ಪ ವೆಚ್ಚದ ಚಿತ್ರಗಳ ಸೃಷ್ಟಿ ಯೋಜನೆಗೆ ನೆರವಾಗುವುದೂ ಎನ್.ಎಫ್.ಡಿ.ಸಿ.ಯ ಉದ್ದೇಶವಾಗಿದೆ. ಕೊಲ್ಕತ್ತದಲ್ಲಿ ಚಿತ್ರನಿರ್ಮಾಣ ಹಾಗೂ ನಿರ್ಮಾಣೋತ್ತರ ಸೌಲಭ್ಯಗಳನ್ನು ಹೊಂದಿದ್ದ 16 ಮಿಮೀ. ಫಿಲಂ ಸೆಂಟರ್, ಪೂರ್ವ ಭಾಗದಲ್ಲಿ ಧ್ವನಿ ಎಂಬ ವೀಡಿಯೋ ಸ್ಟುಡಿಯೋ ಹಾಗೂ ಮುಂಬೈನಲ್ಲಿ ಲೇಸರ್ ಸಬ್ ಟೈಟಲಿಂಗ್ ಯೂನಿಟ್‌ನ್ನು ಎನ್.ಎಫ್.ಡಿ.ಸಿ ಸ್ಥಾಪಿಸಿದ್ದು, ಚಲನಚಿತ್ರೋದ್ಯಮದ ಈ ಅಗತ್ಯಗಳನ್ನು ಪೂರೈಸುತ್ತಿದೆ. ಅಲ್ಲದೆ ಸಿನಿ ಆರ್ಟಿಸ್ಟ್ಸ್ ವೆಲ್‌ಫೇರ್ ಫಂಡ್ ಆಫ್ ಇಂಡಿಯಾ ಸಂಸ್ಥೆಯನ್ನೂ ಸ್ಥಾಪಿಸಿದ್ದು, ನಿವೃತ್ತಿವೇತನ ಹಾಗೂ ಆರ್ಥಿಕ ಸಹಾಯವನ್ನು ಚಲನಚಿತ್ರ ಕಲಾವಿದರಿಗೆ ನೀಡುತ್ತಿದೆ.

**ಡೈರೆಕ್ಟೊರೇಟ್ ಆಫ್ ಫಿಲಂ ಫೆಸ್ಟಿವಲ್:**

ಭಾರತದಲ್ಲಿ ಚಲನಚಿತ್ರೋತ್ಸವಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥೆ ಮಾಡಲು, ಆ ಮೂಲಕ ಉತ್ತಮ ಚಿತ್ರಗಳನ್ನು ಪ್ರೋತ್ಸಾಹಿಸಲು 1973ರಲ್ಲಿ ಸ್ಥಾಪಿತವಾದ ಸಂಸ್ಥೆ ಡೈರೆಕ್ಟೋರೇಟ್ ಆಫ್ ಫಿಲಂ ಫೆಸ್ಟಿವಲ್. ಈ ಸಂಸ್ಥೆ ಪ್ರತಿವರ್ಷ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಭಾರತೀಯ ಚಿತ್ರರಂಗದ ಶ್ರೇಷ್ಠ ಕಲಾವಿದರಿಗೆ ನೀಡುವ ಮೂಲಕ ಉತ್ತಮ ಚಿತ್ರಗಳಿಗೆ ಒಂದು ವೇದಿಕೆಯನ್ನು ಒದಗಿಸಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗು ಗೆಳೆತನ ವೃದ್ಧಿಯಾಗಲು ಈ ಸಂಸ್ಥೆ ಶ್ರಮಿಸುತ್ತಿದೆ. ಚಲನಚಿತ್ರೋತ್ಸವಗಳಲ್ಲಿ ಏಷಿಯನ್ ಸ್ಪರ್ಧಾತ್ಮಕ ಚಿತ್ರಗಳು ವಿಶ್ವದ ಸಿನಿಮಾ, ಸಿನಿಮಾ ಮತ್ತು ಸಾಹಿತ್ಯ ವಿಭಾಗಗಳೊಂದಿಗೆ ಭಾರತೀಯ ಚಿತ್ರವಿಭಾಗವೂ ಇದ್ದು, ಟೆಕ್ನಿಕಲ್ ರೆಟ್ರಾಸ್ಪೆಕ್ಟಿವ್ ಹೊಸದಾಗಿ ಸೇರ್ಪಡೆಯಾಗಿದೆ. ದೇಶ ವಿದೇಶಗಳ ಚಿತ್ರಗಳ ಪ್ರದರ್ಶನವೇರ್ಪಡಿಸಿ ಪರಸ್ಪರ ಅರಿವು ಮೂಡಿಸುವ ಪ್ರಯತ್ನ ಈ ಚಿತ್ರೋತ್ಸವದ ಗುರಿಯಾಗಿದೆ.

**ಚಲನಚಿತ್ರಗಳ ರಾಷ್ಟ್ರೀಯ ಭಂಡಾರ:** ಭಾರತದ ರಾಷ್ಟ್ರೀಯ ಚಲನಚಿತ್ರ ಭಂಡಾರವು 1964ರಲ್ಲಿ ಸ್ಥಾಪನೆಯಾಯಿತು. ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದಡಿಯಲ್ಲಿ ಮಾಧ್ಯಮ ಯೂನಿಟ್ ಆಗಿ ಸ್ಥಾಪನೆಗೊಂಡ ಈ ಫಿಲಂ ಆರ್ಕೈವ್‌ನ ಮುಖ್ಯ ಉದ್ದೇಶ ಭಾರತೀಯ ಸಿನಿಮಾ ಪರಂಪರೆಯನ್ನು ರಕ್ಷಿಸಿಡುವುದು ಹಾಗೂ ನಾಡಿನಲ್ಲಿ ಆರೋಗ್ಯಕರ ಸಿನಿಮಾ ಸಂಸ್ಕೃತಿಯನ್ನು ಬೆಳೆಸುವ ಕೇಂದ್ರವಾಗಿರುವುದೇ ಆಗಿದೆ. ಸಿನಿಮಾದ ವಿವಿಧ ಆಯಾಮಗಳಲ್ಲಿ ಸಂಶೋಧನೆ ನಡೆಸುವುದಲ್ಲದೆ ವಿದ್ಯಾರ್ಥಿವೇತನ ಒದಗಿಸುವುದೂ ಇದರ ಗುರಿಯಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ವಿಶ್ವದ ಎಲ್ಲೆಡೆಯ ಪ್ರೇಕ್ಷಕರ ಬಳಿಗೇ ಭಾರತೀಯ ಸಿನಿಮಾವನ್ನು ಒಯ್ಯುವ ಗುರುತರ ಹೊಣೆಯೂ ಈ ಸಂಸ್ಥೆಯದಾಗಿದೆ. ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಫಿಲಂ ಆರ್ಕೈವ್‌ನ ಸದಸ್ಯತ್ವ ಪಡೆದಿರುವ ಈ ಸಂಸ್ಥೆಯು ಅತ್ಯುತ್ತಮ ಭಾರತೀಯ ಚಿತ್ರಗಳ ಭಂಡಾರವಷ್ಟೇ ಆಗಿರದೆ, ಚಲನಚಿತ್ರಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳು, ಹಾಡಿನ ಪುಸ್ತಕಗಳು, ಭಿತ್ತಿಪತ್ರಗಳು, ಕರಪತ್ರಗಳು ಮತ್ತಿತರ ಪ್ರಚಾರ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟು ದಾಖಲಿಸುವ ಕರ್ತವ್ಯವೂ ಈ ಸಂಸ್ಥೆಯದು. ಬೆಂಗಳೂರಲ್ಲದೆ ರಾಷ್ಟ್ರದ ಒಂಬತ್ತು ಪ್ರಮುಖ ನಗರಗಳಲ್ಲಿ ಈ ಸಂಸ್ಥೆಯ ಕೇಂದ್ರಗಳಿವೆ. ಫಿಲ್ಮ್ ಸೊಸೈಟಿಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಸಂಘಗಳಿಗೆ ದೇಶ–ವಿದೇಶಗಳ ಚಿತ್ರಗಳನ್ನು ವಿತರಿಸಿ ಪ್ರದರ್ಶನವೇರ್ಪಡಿಸುವ ಮೂಲಕ ಜಾಗತಿಕ ಸಿನಿಮಾದ ಮೌಲ್ಯ ದರ್ಶನ ಮಾಡಿಸುವ ಈ ಸಂಸ್ಥೆ ನಾಲ್ಕು ವಾರಗಳ ಅವಧಿಯ ವಾರ್ಷಿಕ ಚಲನಚಿತ್ರ ರಸಗ್ರಹಣ ಶಿಬಿರಗಳನ್ನು ಪುಣೆಯಲ್ಲಿ, ಅಲ್ಲಿನ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್‌ನ ಸಹಯೋಗದಲ್ಲಿ ಏರ್ಪಡಿಸುವ ಮೂಲಕ ಸಿನಿಮಾ ಜಾಗೃತಿ ಮೂಡಿಸುವಲ್ಲಿ ಮುಖ್ಯ ಪಾತ್ರವಹಿಸಿದೆ.

**ಮಕ್ಕಳ ಚಿತ್ರ ಸಮಾಜ :** 1955ರಲ್ಲಿ ಸ್ಥಾಪನೆಯಾದ ನ್ಯಾಷನಲ್ ಸೆಂಟರ್ ಆಫ್ ಫಿಲಂಸ್ ಫಾರ್ ಚಿಲ್ಡ್ರನ್ ಅಂಡ್ ಯಂಗ್ ಪೀಪಲ್ (ಎನ್.ಸಿ.ವೈ.ಪಿ) ಯೇ ನಂತರದಲ್ಲಿ ಮಕ್ಕಳ ಚಿತ್ರ ಸಮಾಜ (ಚಿಲ್ಡ್ರನ್ಸ್ ಫಿಲಂ ಸೊಸೈಟಿ–ಸಿ.ಎಫ್.ಎಸ್.ಐ) ಆಗಿ ಪರಿವರ್ತನೆಗೊಂಡಿತು. ಮಕ್ಕಳಿಗೆ ಮೌಲ್ಯಾಧಾರಿತ ಮನರಂಜನೆಯನ್ನು ಚಲನಚಿತ್ರ ಮಾಧ್ಯಮದ ಮೂಲಕ ಒದಗಿಸುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶ. ಮುಂಬೈನಲ್ಲಿ ಮುಖ್ಯ ಕಚೇರಿಯನ್ನು ಹೊಂದಿರುವ ಈ ಸಂಸ್ಥೆಯ ಶಾಖೆಗಳು ಹೊಸ ದೆಹಲಿ ಹಾಗೂ ಚೆನ್ನೈಗಳಲ್ಲಿ ಶಾಖಾಕಚೇರಿಗಳನ್ನು ಹೊಂದಿದ್ದು, ಮಕ್ಕಳಿಗಾಗಿ ಚಲನಚಿತ್ರಗಳ ನಿರ್ಮಾಣ, ವಿತರಣೆ, ಪ್ರದರ್ಶನಗಳನ್ನು ನಾಡಿನಾದ್ಯಂತ ಮಕ್ಕಳ ಚಿತ್ರೋತ್ಸವಗಳನ್ನು ಏರ್ಪಡಿಸುವ ಮೂಲಕ ನಡೆಸಿಕೊಂಡು ಬರುತ್ತಿದೆ. ಈ ಸಂಸ್ಥೆಯು ತನ್ನ ಚಿತ್ರಗಳನ್ನು ವಿಡಿಯೋ ಕ್ಯಾಸೆಟ್‌ಗಳ ರೂಪದಲ್ಲಿಯೂ, ಅಡಕಮುದ್ರಿಕೆಗಳ ರೂಪದಲ್ಲಿಯೂ ಪೂರೈಸುತ್ತಿದೆ. ವಿವಿಧ ಕಿರುತೆರೆ ಚಾನೆಲ್‌ಗಳ ಮುಖಾಂತರ ಪ್ರದರ್ಶಿಸುತ್ತಿದೆ. ಅಲ್ಲದೆ, ಹಲವಾರು ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿಯೂ ಭಾಗವಹಿಸುತ್ತಿರುವ ಈ ಸಂಸ್ಥೆಯು ಹಲವಾರು ಬಹುಮಾನಗಳನ್ನೂ ತನ್ನದನ್ನಾಗಿಸಿಕೊಂಡ ಹಿರಿಮೆಯನ್ನು ಹೊಂದಿದೆ. ಮಕ್ಕಳ ಚಲನಚಿತ್ರಗಳನ್ನು ಕುರಿತ ವಿಚಾರ ಸಂಕಿರಣವನ್ನು ಏರ್ಪಡಿಸುವುದು, ಶಾಲಾ ಮಕ್ಕಳಿಗಾಗಿ ರಸಪ್ರಶ್ನೆ ಕಾರ್ಯಕ್ರಮ ವ್ಯವಸ್ಥೆ ಮಾಡುವುದು ಹಾಗೂ ಹವ್ಯಾಸಿ ಬಾನುಲಿ ಪ್ರಸಾರ ಪ್ರಶಿಕ್ಷಣ, ಮಕ್ಕಳ ಚಲನಚಿತ್ರ ನಿರ್ಮಾಣ, ಆ್ಯನಿಮೇಷನ್ ತಂತ್ರ ಕುರಿತಂತೆ ಕಾರ್ಯಾಗಾರಗಳನ್ನು ಏರ್ಪಡಿಸುವುದು ಮುಂತಾದವು ಭಾರತೀಯ ಮಕ್ಕಳ ಚಿತ್ರಸಮಾಜದ ಇತರೆ ಕಾರ್ಯ ಚಟುವಟಿಕೆಗಳು. (ಎಸ್.ಕೆ)

**ಚಲನಶಕ್ತಿ :** ಒಂದು ವಸ್ತು ತನ್ನ ಚಲನೆಯ ಪರಿಣಾಮವಾಗಿ ಒಳಗೊಂಡಿರುವ ಶಕ್ತಿ; ಮತ್ತು ಇದರ ಅದಿಶ ಮಾಪನ(ಕೈನೆಟಿಕ್ ಎನರ್ಜಿ) ಕಾರ್ಯವನ್ನು ಮಾಡಬಲ್ಲ ಸಾಮರ್ಥ್ಯವಿರುವ ವಸ್ತುವಿನಲ್ಲಿ ಶಕ್ತಿ ಇದೆ ಎನ್ನುತ್ತೇವೆ. ಬೇರೆಬೇರೆ ಕಾರಣಗಳಿಂದಾಗಿ ವಸ್ತು ಶಕ್ತಿಯನ್ನು ಪಡೆದಿರಬಹುದು?ಸ್ಥಾನ, ಸ್ಥಿತಿ, ಚಲನೆ ಇತ್ಯಾದಿ. ಇವುಗಳ ಪೈಕಿ ತನ್ನ ಚಲನೆಯ ಕಾರಣ ವಸ್ತು ಪಡೆದಿರುವ ಶಕ್ತಿಯೇ ಚಲನಶಕ್ತಿ. ಇದರ ಅಳತೆ ವಸ್ತುವಿನ ತೂಕ ಮತ್ತು ವೇಗಗಳನ್ನು ಅವಲಂಬಿಸಿದೆ. $M$ ತೂಕದ ವಸ್ತು $V$ ಜವದಿಂದ ಚಲಿಸುತ್ತಿದ್ದರೆ ಅದರ ಚಲನಶಕ್ತಿ $\frac{1}{2}Mv^2$ ಆಗಿರುತ್ತದೆ. ಆದ್ದರಿಂದ ನಿಶ್ಚಲ ಸ್ಥಿತಿಯಲ್ಲಿರುವ ವಸ್ತುವಿನ ಚಲನಶಕ್ತಿ ಶೂನ್ಯ ಎಂಬುದು ಸ್ಪಷ್ಟ. $V$ ಜವದಿಂದ ಚಲಿಸುತ್ತಿರುವ ವಸ್ತುವಿನ ಚಲನಶಕ್ತಿ $T$ ಆಗಿರಲಿ. ಚಲನೆಗೆ ವಿರುದ್ಧವಾಗಿ $F$ ಬಲ ವರ್ತಿಸಿ ವಸ್ತುವನ್ನು ನಿಶ್ಚಲ ಸ್ಥಿತಿಗೆ ತಂದರೆ

ಆಗ ವಸ್ತು ಬಲಕ್ಕೆ ವಿರುದ್ಧವಾಗಿ ಕಾರ್ಯಮಾಡಿ ತನ್ನ ಶಕ್ತಿಯನ್ನೆಲ್ಲಾ ಕಳೆದುಕೊಳ್ಳುತ್ತದೆ. ಆದ್ದರಿಂದ ವಸ್ತು ಮಾಡುವ ಕಾರ್ಯ ಅದರ ಮೊದಲಿನ ಚಲನಶಕ್ತಿ $T$ ಗೆ ಸಮ ಎಂದಾಗುತ್ತದೆ. ವಸ್ತು ನಿಶ್ಚಲಸ್ಥಿತಿಯನ್ನು ತಲುಪುವ ಮುನ್ನ  ದೂರ ಚಲಿಸಿದರೆ ಅದು ಮಾಡುವ ಕಾರ್ಯ $Fs$ ಆಗುತ್ತದೆ. ವಸ್ತುವಿನ ತೂಕ $M$ಮತ್ತು ಬಲ ಅದರ ಮೇಲೆ ಉಂಟುಮಾಡುವ ವೇಗಾಪಕರ್ಷ $a$ ಆಗಿದ್ದರೆ ನ್ಯೂಟನ್ನನ ಎರಡನೆಯ ನಿಯಮದ ಪ್ರಕಾರ $F=Ma$ \T=$F_S$=Mas

ಈಗ $V^2-u^2= -2fx$ ¸ಸೂತ್ರದಲ್ಲಿ,

$V=0, u=v, f=a, x=s \quad \therefore \; -v^2=-2as$

$as=\frac{v^2}{2}$ ಬೆಲೆಯನ್ನು $T=Mas$ ಸಮೀಕರಣದಲ್ಲಿ $T=\frac{1}{2}Mv^2$ ಆಗುತ್ತದೆ.

ಆವರ್ತಿಸುತ್ತಿರುವ(ರೊಟೇಟಿಂಗ್) ವಸ್ತುವಿನಲ್ಲೂ ಚಲನಶಕ್ತಿ ಇರುತ್ತದೆ. ಆವರ್ತನಾಕ್ಷಕ್ಕೆ ಸಂಬಂಧಿಸಿದಂತೆ ವಸ್ತುವಿನ ಜಡತ್ವದ ಭ್ರಮಣಾಂಕ (ಮೊಮೆಂಟ್ ಆಫ್ ಇನರ್ಷಿಯ)

$I$ ಮತ್ತು ಕೋನವೇಗ $\omega$ ಆಗಿದ್ದರೆ ಆಗ ವಸ್ತುವಿನ ಚಲನಶಕ್ತಿ $\frac{1}{2}I\omega^2$.

ಚಲನಶಕ್ತಿಯನ್ನು ಇತರ ರೂಪಗಳಿಗೆ ಪರಿವರ್ತಿಸಬಹುದು. ಇಂಥ ಪರಿವರ್ತನಗಳಲ್ಲೆಲ್ಲ ಶಕ್ತಿಯ ಒಟ್ಟು ಪರಿಣಾಮ ನಿತ್ಯವಾಗಿರುತ್ತದೆ. ಈ ತೀರ್ಮಾನಕ್ಕೆ ಶಕ್ತಿನಿತ್ಯತ್ವ ನಿಯಮ ಎಂದು ಹೆಸರು. ಮೇಲಿಂದ ಭೂಮಿಯ ಕಡೆಗೆ ಸರಾಗವಾಗಿ ಬೀಳುತ್ತಿರುವ ವಸ್ತುವನ್ನು ತೆಗೆದುಕೊಂಡರೆ, ಅದರ ವಿಭವಶಕ್ತಿ ಕಡಿಮೆಯಾಗುತ್ತಲಿದ್ದು ಅದೇ ಪರಿಮಾಣದಲ್ಲಿ ಅದರ ಚಲನಶಕ್ತಿ ಹೆಚ್ಚುತ್ತಿರುತ್ತದೆ. ಆದರೆ ವಿಭವಶಕ್ತಿ ಮತ್ತು ಚಲನಶಕ್ತಿಗಳ ಮೊತ್ತ ನಿಯತವಾಗಿರುತ್ತದೆ. ಇದೇ ರೀತಿ ಶಕ್ತಿ ಬೇರೆ ರೂಪಗಳಿಗೆ ಪರಿವರ್ತನವಾದಾಗಲೂ ಅದರ ಒಟ್ಟು ಪರಿಮಾಣ ನಿಯತವಾಗಿರುತ್ತದೆ.

ವಸ್ತುವಿನ ವೇಗ ಬೆಳಕಿನ ವೇಗ $c$ ಗೆ ಸಾಪೇಕ್ಷವಾಗಿ ಸಾಕಷ್ಟು ಕಡಿಮೆ ಇದ್ದಾಗ ಚಲನಶಕ್ತಿಗೆ ಸಂಬಂಧಿಸಿದ $T=\frac{1}{2}Mv^2$ ಸೂತ್ರ ಸಿಂಧುವಾಗಿರುತ್ತದೆ. ಅದರೆ ವಸ್ತುವಿನ ವೇಗ ಬೆಳಕಿನ ವೇಗಕ್ಕೆ ಸಾಟಿಯಾಗುವಂತಿದ್ದರೆ ಅಂಥ ಸಂಧರ್ಭಗಳಲ್ಲಿ ಐನ್‌ಸ್ಟೈನನ ಸಾಪೇಕ್ಷತಾವಾದದ ಪ್ರಕಾರ ವಸ್ತುವಿನ ನಿಶ್ಚಲ ಸ್ಥಿತಿ ದ್ರವ್ಯರಾಶಿ (ರೆಸ್ಟ್ ಮಾಸ್) Mo

ಆಗಿದ್ದರೆ $$T = M_o c^2 \left[ \frac{1}{\sqrt{1-\frac{v^2}{c2}}} - 1 \right]$$

$v<<c$ ಇದ್ದಾಗ ಮೇಲಿನ ಸಮೀಕರಣ $T=\frac{1}{2}Mv^2$ ಆಗುತ್ತದೆ. ಈ ಸಮೀಕರಣವನ್ನು $T = \frac{M_o}{\sqrt{1-\frac{v^2}{c^2}}}c^2 - M_o c^2$ಎಂದು ಬರೆಯಬಹುದು. ವಸ್ತು ಚಲಿಸುತ್ತಿದ್ದಾಗ ಅದರ

ದ್ರವ್ಯರಾಶಿ $M = \frac{M_O}{\sqrt{1-\frac{v^2}{c^2}}}$ ಆಗಿರುವುದರಿಂದ $T = Mc^2 - M_o c^2 =$ $(M - M_o)c^2$ ಅಥವಾ $M - M_0 = \frac{T}{c^2}$ ಆದ್ದರಿಂದ ವಸ್ತುವಿನ ಚಲನಶಕ್ತಿ ಹೆಚ್ಚಿದಂತೆ ಅದರ ದ್ರವ್ಯರಾಶಿ ಹೆಚ್ಚುತ್ತದೆ ಎಂದಾಯಿತು. ಅಂದರೆ ದ್ರವ್ಯರಾಶಿ ಮತ್ತು ಶಕ್ತಿ ಪರಸ್ಪರ ಸಾಮ್ಯ ಹಾಗೂ ಪರಸ್ಪರ ಪರಿವರ್ತನೀಯ ಎನ್ನಬಹುದು. ದ್ರವ್ಯರಾಶಿ–ಶಕ್ತಿ ಸಾಮ್ಯಕ್ಕೆ ಸಂಬಂಧಿಸಿದ ಈ ತೀರ್ಮಾನವನ್ನು ಸಾರ್ವತ್ರೀಕರಿಸಿ ಶಕ್ತಿಯ ಎಲ್ಲ ರೂಪಗಳಿಗೆ ಅನ್ವಯಿಸುವಂತೆ $E = (M - M_o)c^2 = \Delta Mc^2$ ಎಂದು ಬರೆಯಬಹುದು. **(ಕೆ.ಎಸ್.ಆರ್.ಐ.)**

**ಚಲನೆ :** ಭೌತಕಾಯಗಳ ಪರಸ್ಪರ ಸ್ಥಾನವಿನ್ಯಾಸ ಕಾಲ ಸರಿದಂತೆ 4ವ್ಯತ್ಯಸ್ತವಾಗುವ ಒಂದು ಮೂಲಭೂತ ವಿದ್ಯಮಾನ. ಮಾನವಪ್ರಜ್ಞೆಗೆ ಚಲನೆಯ ಪರಿಚಯ ಹೊಸತೇನಲ್ಲವಾದರೂ ಇತ್ತೀಚಿನ ಗೆಲಿಲಿಯೋ ಗೆಲಿಲೀ (1564–1642), ಯೋಹಾನ್ ಕೆಪ್ಲರ್ (1571–1630) ಮತ್ತು ಐಸ಼ಾಕ್ ನ್ಯೂಟನ್ (1642–1727) ಇವರ ಅಸಾಮಾನ್ಯ ಪ್ರತಿಭೆಯಿಂದ ಮಾತ್ರ ಅದನ್ನು ಕುರಿತ ಚಿಂತನೆಗಳಿಗೆ ನಿರ್ದಿಷ್ಟ ವೈಜ್ಞಾನಿಕ ತಿರುವು ದೊರಕಲು ಸಾಧ್ಯವಾಯಿತು. ನಿಶ್ಚಲವಾಗಿರುವುದಷ್ಟೇ ಕಾಯಗಳ ಸ್ವಾಭಾವಿಕ ವರ್ತನೆ ಎಂದೂ ಈ ಸ್ವಾಭಾವಿಕ ಪರಿಸ್ಥಿತಿಯನ್ನು ತಪ್ಪಿಸಿ ಕಾಯವೊಂದನ್ನು ಬಲಾತ್ಕಾರವಾಗಿ ದೀರ್ಘಾವಧಿ ಚಲನೆಯಲ್ಲಿ ತೊಡಗಿಸಬೇಕಾದರೆ ಶಕ್ತಿಯ ನಿರಂತರ ಸರಬರಾಜು (ಕಂಟಿನ್ಯುವಲ್ ಸಪ್ಲೈ ಆಫ್ ಎನರ್ಜಿ) ಆವಶ್ಯಕ ಎಂದೂ, ಶಕ್ತಿಪೂರೈಕೆ ನಿಂತರೆ ಚಲನೆಯೂ ಕ್ರಮೇಣ ನಿಂತುಹೋಗುತ್ತದೆ ಎಂದೂ ಆ ಮುನ್ನ ಜನ ಭಾವಿಸಿದ್ದರು. ಅಂದಿನ ಜೀವನದ ಅನುಭವಗಳೆಲ್ಲವೂ ಭೂಮೇಲ್ಮೈಯಲ್ಲಿರುವ ದೃಗ್ಗೋಚರ ಕಾಯಗಳಿಗೆ ಮಾತ್ರ ಸೀಮಿತವಾಗಿದ್ದುದರಿಂದ ಇಂಥ ಅಭಿಪ್ರಾಯಗಳು ಆ ಕಾಲಕ್ಕೆ ಸಹಜವೇ ಆಗಿದ್ದವು. ಆದರೆ ಆಕಾಶದಲ್ಲಿ ಚಂದ್ರ, ಗ್ರಹ ಮುಂತಾದ ಕಾಯಗಳು ಹೆಚ್ಚು ಕಡಿಮೆ ಶಾಶ್ವತವಾಗಿ ಚಲಿಸುತ್ತಲೇ ಇವೆ. ಅವುಗಳ ಚಲನೆಯನ್ನು ಪೋಷಿಸಲು ಎಲ್ಲಿಂದಲೋ ಶಕ್ತಿಯ ಸರಬರಾಜು ಆಗುತ್ತಿದೆ ಎಂದು ನಂಬುವುದಕ್ಕೆ ಯಾವ ಆಧಾರಗಳೂ ಇಲ್ಲ. ಅಂದಮೇಲೆ ಕಾಯಗಳ ಪಾಲಿಗೆ ಚಲನೆ ಅಸ್ವಾಭಾವಿಕವಾದುದೇನಲ್ಲ. ಕಾಯಗಳು ಸದಾ ಚಲಿಸುತ್ತಲೂ ಇರಬಲ್ಲವೆಂದು ತಿಳಿಸುವ ನ್ಯೂಟನ್ನನ ಪ್ರಥಮ ಚಲನ ನಿಯಮಕ್ಕೆ ಈ ಹೊಸ ಪ್ರಜ್ಞೆ ಹಾದಿ ಕಲ್ಪಿಸಿತು. ಇತ್ತ ನಮ್ಮ ಭೂಮಿಯ ಮೇಲೆಯೇ ಇರುವ ವಾಹನಗಳಂಥ ಇಂದ್ರಿಯ ಗೋಚರ ಕಾಯಗಳಿಗಾದರೂ ನಿಶ್ಚಲತೆಯೆಡೆಗೆ ತೆರಳುವ ಸ್ವಯಂ ಪ್ರವೃತ್ತಿಯೇನೂ ಇಲ್ಲವೆಂಬುದಕ್ಕೆ ಸ್ಪಷ್ಟ ಪುರಾವೆಗಳನ್ನು ಗೆಲಿಲಿಯೋ ಒದಗಿಸಿದ್ದ. ಚಲನೆಯ ವಿರುದ್ಧ ರಸ್ತೆ, ವಾಯು ಮೊದಲಾದ ಸಾಮಗ್ರಿಗಳು ಒಡ್ಡುವ ಅನಿವಾರ್ಯ ಪ್ರತಿರೋಧವೇ ಪ್ರಾಣಿ/ಯಂತ್ರಗಳ ಸಹಾಯವಿಲ್ಲದಿರುವಾಗ ವಾಹನಗಳು ಭೂ ಮೇಲ್ಮೈಯಲ್ಲಿ ನಿಂತುಹೋಗಲು ನಿಜವಾದ ಕಾರಣ. ಇಂಥ ಚಲನಪ್ರತಿರೋಧಕ ಸಾಮಗ್ರಿಗಳು ಚರಕಾಯಗಳ ಚಲನಶಕ್ತಿಯನ್ನು **(ನೋಡಿ)** ಅಪಹರಿಸಿ ಅನ್ಯವಿಧಾನಗಳಲ್ಲಿ ವಿತರಿಸುತ್ತವೆ. ಅಂದಮೇಲೆ ಭೂಮೇಲ್ಮೈಯ ಬಳಿ ಕೂಡ ರಸ್ತೆ, ವಾಯು, ಜಲರಾಶಿ ಮುಂತಾದ ವಸ್ತುಗಳ ಸಂಪರ್ಕವಿಲ್ಲದೆ ಇಂದ್ರಿಯಗೋಚರ ಕಾಯಗಳು ಚಲಿಸಲು ಸಾಧ್ಯವಾದಲ್ಲಿ ಅಂಥ ಕಾಯಗಳ ಚಲನೆ ನಿರಂತರ ಶಕ್ತಿ ಪೂರೈಕೆ ಇಲ್ಲದಿರುವಾಗಲೂ, ಗ್ರಹಗಳ ಚಲನೆಯಂತೆ, ಶಾಶ್ವತವಾಗಬಲ್ಲದು ಎಂದಾಯಿತು. ಇಂದಿನ ಮಾನವನಿರ್ಮಿತ ಉಪಗ್ರಹಗಳು ಈ ಮಾತನ್ನು ಪೂರ್ಣವಾಗಿ ಪುರಸ್ಕರಿಸಿವೆ. ಇನ್ನು ಇಂದ್ರಿಯಗೋಚರವಲ್ಲದ ಎಲೆಕ್ಟ್ರಾನ್, ಫ಼್ರೋಟಾನ್, ಫ಼್ರೋಟಾನು–ಗಳಂಥ ಅತಿಸೂಕ್ಷ್ಮ ಕಾಯಗಳನ್ನು ಪರಿಶೀಲಿಸಿದರೆ (ಇವು ಆಕಾಶಕಾಯಗಳೇನೂ ಆಗಬೇಕಿಲ್ಲವಷ್ಟೆ) ಇವು ಸಹ ತಮ್ಮ ನಡುವಣ ಪರಸ್ಪರ ಚಲನೆಗಳ ಪೋಷಣೆಗೆ ಯಾವ ಬಾಹ್ಯ ಆಕರಗಳನ್ನೂ ಆಶ್ರಯಿಸುವುದಿಲ್ಲವೆಂಬ ಅಂಶ ಬೆಳಕಿಗೆ ಬರುತ್ತದೆ. ಇಂಥ ಬಿಡಿಬಿಡಿ ಮೂಲಕಣಗಳ ಒಟ್ಟಾರೆ ಚಲನೆ ಗ್ರಹಚಲನೆಗಿಂತಲೂ ಹೆಚ್ಚು ಶಾಶ್ವತ. ಎಂತಲೇ ಚಲನೆಯ ಮೂಲಭೂತ ಸಮಸ್ಯೆ ಅದರ ಸೃಷ್ಟಿಯಾಗಲಿ, ಪೋಷಣೆಯ ವಿಧಾನವಾಗಲಿ ಅಲ್ಲ. ಚಲನೆಗೆ ಸೃಷ್ಟಿ, ಪೋಷಣೆಗಳು ಅನಗತ್ಯ. ಕಾಯಗಳು ಚಲಿಸುವಾಗ ಸಾಮಾನ್ಯವಾಗಿ ಅವುಗಳ ಪೈಕಿ ಒಂದಕ್ಕೂ ಇನ್ನೊಂದಕ್ಕೂ ಹಾಗೂ ಅವಕ್ಕೂ ಅವುಗಳ ನೆರೆಯ ಆಕಾಶಕ್ಕೂ (ಸ್ಪೇಸ್) ನಡುವೆ ಶಕ್ತಿಯ ವಿನಿಮಯಗಳು ಜರುಗುತ್ತವೆ. ಇಂಥ ಶಕ್ತಿವಿನಿಮಯಗಳ ವಿನ್ಯಾಸವೇ ವೈಜ್ಞಾನಿಕ ಬಲವಿಜ್ಞಾನದ ಅಧ್ಯಯನವಸ್ತು. ಕಾಯಗಳು ಚಲಿಸುವ ವೈಖರಿಯಾದರೂ ಮೂಲತಃ ಆ ವಿನ್ಯಾಸವನ್ನೇ ಅವಲಂಬಿಸುತ್ತದೆ.

**ಅಭಿಜಾತ ಬಲವಿಜ್ಞಾನ** (ಆದಿಮರೂಪ) : ನ್ಯೂಟನ್ ಪ್ರಾರಂಭಿಸಿದ ಅಭಿಜಾತ ಬಲವಿಜ್ಞಾನದಲ್ಲಿ (ಕ್ಲ್ಯಾಸಿಕಲ್ ಮೆಕ್ಯಾನಿಕ್ಸ್) ಚಲನೆಯ ರಹಸ್ಯಭೇದನೆಗಾಗಿ ಬಲ (ಫೋರ್ಸ್) ಎಂಬೊಂದು ಪರಿಕಲ್ಪನೆಯನ್ನು ಗಮನಾರ್ಹ ಚತುರತೆಯಿಂದ ಬಳಸಿಕೊಳ್ಳಲಾಯಿತು. ನ್ಯೂಟನ್ನಿನ ಸೈದ್ಧಾಂತಿಕ ಸ್ಪಷ್ಟನೆಗೆ ಮುನ್ನ, ಕಾಯಗಳಲ್ಲಿ ಚಲನೆಯನ್ನು ಉಂಟುಮಾಡುವ ಕಾರಕ ಎಂಬ ಅಭಿಪ್ರಾಯದಲ್ಲಿ ಜನ ಬಲವನ್ನು ಕಲ್ಪಸಿಕೊಳ್ಳುತ್ತಿದ್ದರು. ಈ ದೃಷ್ಟಿ ತಿರಸ್ಕರಣೀಯವೆಂದು ಮೇಲೆ ಮನಗಂಡಿದ್ದೇವೆ. ವಾಸ್ತವತಃ ಬಹುತೇಕ ಕಾಯಗಳಿಗೆ ಚಲನೆ ಸ್ವಾಭಾವಿಕವೇ ವಿನಾ ಹೊಸದಾಗಿ ಉಂಟುಮಾಡಬೇಕಾದ ವಿದ್ಯಮಾನವಲ್ಲ. ಇದರ ಜೊತೆಗೆ ಅಂದಿನ ಬಲದ ಪರಿಕಲ್ಪನೆ ಶಕ್ತಿಯ ಪರಿಕಲ್ಪನೆಯೊಂದಿಗೆ ಅಭೇದ್ಯ ಗೊಂದಲದಲ್ಲಿ ಸಿಲುಕಿತ್ತು. ಇಂಥ ಅಸ್ಪಷ್ಟ ವಾತಾವರಣದಲ್ಲಿ ಬಲಕ್ಕೂ ಚರಕಾಯಗಳ ವೇಗಕ್ಕೂ ಸಂಬಂಧ ಕಲ್ಪಿತವಾಗಿ ಹೆಚ್ಚು ವೇಗ ಫಲಿಸಲು ಹೆಚ್ಚು ಬಲ ಬೇಕೆಂಬ ತರ್ಕಕ್ಕೆ ಮಾನ್ಯತೆ ದೊರಕಿತ್ತು. ಇವೆಲ್ಲ ಭಾವನೆಗಳಲ್ಲಿರುವ ದೋಷಗಳನ್ನು ಗುರುತಿಸಿ ವೇಗದ ಬದಲಾಗಿ ವೇಗೋತ್ಕರ್ಷದೊಂದಿಗೆ (ನಿಖರವಾಗಿ ಹೇಳುವುದಾದರೆ ಸಂವೇಗೋತ್ಕರ್ಷ

ದೊಂದಿಗೆ) ಬಲವನ್ನು ಸಂಬಂಧಗೊಳಿಸಿದ್ದೇ ನ್ಯೂಟನ್ ಸಿದ್ಧಾಂತದ ಪ್ರಧಾನ ಸಾಧನೆ. ನ್ಯೂಟನ್ನನ ಚಲನ ನಿಯಮಗಳಲ್ಲಿ ಹೇಳಿರುವಂತೆ, ಬಲದ ಪಾತ್ರ ಕಾಯಗಳ ಚಲನೆಯನ್ನು ಮಾರ್ಪಡಿಸುವುದೇ ವಿನಾ ಕಾಯಗಳನ್ನು ಚರಸ್ಥಿತಿಯಲ್ಲಿಟ್ಟಿರುವುದಲ್ಲ. ಈ ಬಲ ಕಾಯಗಳ ವೇಗವನ್ನು ಹೆಚ್ಚಿಸಲೂ ಬಲ್ಲದು, ತಗ್ಗಿಸಲೂಬಲ್ಲದು ; ಚರಕಾಯಗಳನ್ನು ನಿಶ್ಚಲಸ್ಥಿತಿಗೂ ಬೇರೊಂದು ದಿಕ್ಕಿಗೆ ತಿರುಗಿಸುವ ಹೊಣೆಗಾರಿಕೆಯನ್ನು ಸಹ ನ್ಯೂಟನ್ ಸಿದ್ಧಾಂತ ಬಲದ ಪಾಲಿಗೇ ವಹಿಸಿಕೊಡುವುದು. ಚರ ಕಾಯಗಳ ಮೇಲೆ ಅವುಗಳ ಸನಿಹದಲ್ಲಿರುವ ಎಲ್ಲ ಚರ ಹಾಗೂ ನಿಶ್ಚಲ ಕಾಯಗಳು ಬೀರಬಹುದಾದ ಸಾಮೂಹಿಕ ಪ್ರಭಾವವನ್ನು ಅಭಿವ್ಯಕ್ತಿಸುವುದೇ ಹೀಗೆ ಪ್ರಸ್ತಾವಿತವಾದ ಬಲ ಪರಿಕಲ್ಪನೆಯ ಮೂಲ ಉದ್ದೇಶವಾಗಿದ್ದಿತು. ಪ್ರಸಕ್ತ ಲೇಖನದಲ್ಲಿ ಇದೇ ಉದ್ದೇಶವನ್ನು ಸಾಧಿಸಲು ಬಲಗಳಿಗೇ ಸಮಾನವಾದ (ಆದರೆ ಬಲ ಪರಿಕಲ್ಪನೆಯೊಂದಿಗೆ ಪೂರ್ಣವಾಗಿ ಐಕ್ಯವಾಗದ) ವೇಗೋತ್ಕರ್ಷಕ್ಷೇತ್ರಗಳನ್ನು (ಆ್ಯಕ್ಸಲರೇಷನ್ ಫೀಲ್ಡ್ಸ್) ಬಳಸಿಕೊಳ್ಳುತ್ತೇವೆ.

ಯಾವುದಾದರೂ ಕಾಲಾವಧಿಯೊಳಗೆ ಕಾಯವೊಂದರ ರಚನೆ, ಆಕಾರ, ಗಾತ್ರ ಇವಾವುವೂ ಬದಲಾಗದಿದ್ದರೆ ಆದಷ್ಟು ಅವಧಿಯಲ್ಲಿ ಆ ಕಾಯ ಒಂದು ದೃಢಕಾಯವೆನಿಸಿಕೊಳ್ಳುತ್ತದೆ (ರಿಜಿಡ್ ಬಾಡಿ). ನಮ್ಮ ವಿವೇಚನೆಗಳಲ್ಲಿ ದೃಢಕಾಯಗಳಿಗೇ ವಿಶೇಷ ಪ್ರಾಮುಖ್ಯವಿರುವುದರಿಂದ ಇನ್ನು ಮುಂದೆ ಅನ್ಯತಃ ತಿಳಿಸದಿದ್ದಲ್ಲಿ ಕಾಯವೆಂದರೆ ದೃಢಕಾಯವೆಂದೇ ಅರ್ಥಮಾಡಿಕೊಳ್ಳಬೇಕು. ಸರಳತೆಯ ದೃಷ್ಟಿಯಿಂದ ಪ್ರಾರಂಭ ದಶೆಯಲ್ಲಿ ನಾವು ಪರಿಶೀಲಿಸುವ ಕಾಯಗಳೆಲ್ಲವೂ ಯಾವುದೇ ರೀತಿಯ ಪರಸ್ಪರ ಗಿರಕಿಗಳೂ ಇಲ್ಲದಂತೆ (ಆ್ಯಬ್ಸೆನ್ಸ್ ಆಫ್ ಮ್ಯೂಚುವಲ್ ಸ್ಪಿನ್ಸ್ ) ಕೇವಲ ಒಂದು ಸರಳರೇಖೆಯ ಮೇಲೆ ಚಲಿಸುತ್ತವೆಂದು ಭಾವಿಸುವುದೊಳ್ಳಿತು. (ಚಿತ್ರ 1) ಅಂದ ಮೇಲೆ ಈ ಕಾಯಗಳೊಂದೊಂದರ ಮೇಲೂ ಒಂದೊಂದು ಸೂಕ್ತವಾದ $A_0, A_1, A_2$ ಇತ್ಯಾದಿ ಬಿಂದುಗಳನ್ನು ಶಾಶ್ವತವಾಗಿ ಗುರುತಿಸಿದ್ದರೆ ಆ ಬಿಂದುಗಳೆಲ್ಲವೂ ಸದಾ ಸರಳರೇಖಸ್ಥವಾಗಿಯೇ (ಕೊಲಿನಿಯರ್) ಇರುತ್ತವೆ ಹಾಗೂ ಚಲಿಸುವಾಗ ಯಾವ ಕಾಯದ ಭಂಗಿಯೂ (ಒರಿಯೆಂಟೇಷನ್) ವ್ಯತ್ಯಸ್ತವಾಗುವುದಿಲ್ಲ ಎಂಬುದು ನಮ್ಮ ಗ್ರಹಿಕೆ. ಈ ಪರಿಸ್ಥಿತಿಯಲ್ಲಿ ಕಾಯಗಳ ಪೈಕಿ




**ಚಿತ್ರ 1. ಗಿರಕಿರಹಿತ ಸರಳರೇಖಾ ಸಂವೃತ ವ್ಯವಸ್ಥೆ. ನಿರ್ದಿಷ್ಟತೆಗಾಗಿ ಕಾಯಗಳು ಸೂಜಿಗಲ್ಲುಗಳಂತೆ ಒಂದನ್ನೊಂದು ಆಕರ್ಷಣೆ ವಿಕರ್ಷಣೆಗಳಿಗೆ ಗುರಿಪಡಿಸುತ್ತ ಚಲಿಸುತ್ತಿವೆಯೆಂದು ಭಾವಿಸಬಹುದು. ಗಿರಕಿ ಚಲನೆಯ ಸಾಧ್ಯತೆಯನ್ನು ತಪ್ಪಿಸಲು ಪರಿಪೂರ್ಣ ನುಣುಪಿನ ಎರಡು ದೃಢ ಮಾರ್ಗದರ್ಶಕ ಸರಳುಗಳಿಗೆ ಕಾಯಗಳನ್ನು ಪೋಣಿಸಲಾಗಿದೆ.**

ಯಾವುದಾದರೂ ಒಂದರ ಮೇಲಿರುವ $A_0$ ಗುರುತನ್ನು ಮೂಲಬಿಂದುವನ್ನಾಗಿ ಆಯ್ಕೆ ಮಾಡಿದರೆ ಉಳಿದ ಕಾಯಗಳ ಮೇಲಿನ ಗುರುತುಗಳು $A_0$ ಯಿಂದ ಎಷ್ಟೆಷ್ಟು ದೂರಗಳಲ್ಲಿವೆಯೆಂಬ ಮಾಹಿತಿ ಕಾಯಗಳ ಪರಸ್ಪರ ಸ್ಥಾನಗಳೆಲ್ಲವನ್ನೂ ಸಂಪೂರ್ಣವಾಗಿ ಅಭಿವ್ಯಕ್ತಿಸಬಲ್ಲದಷ್ಟೆ ಎಂತಲೇ $A_0A_1 = q_1$ ದೂರವನ್ನು $A_1$ ಕಾಯದ ಸ್ಥಾನನಿರ್ದೇಶಕ ಎಂದು ಕರೆಯುತ್ತೇವೆ. (ಕೋಆರ್ಡಿನೇಟ್ : ಸಂಕ್ಷಿಪ್ತನಾಮ ಸ್ಥಾನ ; ಎಡಬಲಗಳ ಸಂದಿಗ್ಧತೆ ತಪ್ಪಲು ಈ $q_1$ ನಿರ್ದೇಶಕ ಚಿಹ್ನಾಯುಕ್ತವಾಗಿರಬೇಕು: $A_1$ ಬಿಂದು $A_0$ ಯ ಎಡಗಡೆ $q_1$ ಇದ್ದರೆ ಋಣಾತ್ಮಕ, ಬಲಗಡೆ ಇದ್ದರೆ ಅದು ಧನಾತ್ಮಕ). ಕಾಲ ಸರಿದಂತೆ $A_1$ ಬೇರೆ ಬೇರೆ ಸ್ಥಳಗಳಿಗೆ ಚಲಿಸಬಹುದಾದ ಕಾರಣ ಕಾಲವನ್ನು $t$ಯಿಂದ ಸೂಚಿಸುವುದಾದರೆ $t$ ವ್ಯತ್ಯಾಸವಾದ ಹಾಗೆಲ್ಲ $A_1$ ರ ಸ್ಥಾನನಿರ್ದೇಶಕ $q_1$ ಸಹ ವ್ಯತ್ಯಸ್ತವಾಗುವುದು. ಅಲ್ಲಿಗೆ $A_1$ ರ ಚಲನೆ $q_1$ನ್ನು $t$ಯ ಒಂದು ನಿರ್ದಿಷ್ಟ ಉತ್ಪನ್ನವನ್ನಾಗಿ (ಫಂಕ್ಷನ್) ವ್ಯಾಖ್ಯಿಸುತ್ತದೆಯೆಂದಾಯಿತು. $q_1 = q_1(t)$. ಕಾಲಕ್ರಮದಲ್ಲಿ $A_1$ರ ಸ್ಥಾನ ನಿರ್ದೇಶಕ $q_1$ ಏರುತ್ತ ಹೋಗುವ ದರವನ್ನು $q_1(t)$ ಉತ್ಪನ್ನದ ಪ್ರಥಮ ಅವಕಲನಾಂಕ $\dot{q}1 = \dot{q}1^{(t)} = \frac{dq_1}{dt}$ ಸೂಚಿಸಿದರೆ ಮತ್ತೆ ಈ ಏರಿಕೆಯ ದರವೇ ಏರುತ್ತ ಹೋಗುವ ದರವನ್ನು ಆ ಉತ್ಪನ್ನದ ದ್ವಿತೀಯ ಅವಕಲನಾಂಕ $\ddot{q}1 = \ddot{q}1(t) = \frac{d\dot{q}}{dt} = \frac{d^2q}{dt^2}$ ಸೂಚಿಸುವುದು. (ಫಸ್ಟ್ ಅಂಡ್ ಸೆಕೆಂಡ್ ಡಿರೈವೆಟಿವ್ಸ್). $\dot{q}1$ ಮತ್ತು $\ddot{q}1$ ಗಳಿಗೆ ಅನುಕ್ರಮವಾಗಿ $A_1$ ಕಾಯದ ವೇಗ ಮತ್ತು ವೇಗೋತ್ಕರ್ಷ ಎಂದು ಹೆಸರು (ವೆಲಾಸಿಟಿ ಅಂಡ್ ಆ್ಯಕ್ಸಲರೇಷನ್). ಸ್ಥಾನ, ವೇಗ ಹಾಗೂ ವೇಗೋತ್ಕರ್ಷ ಪ್ರಾಚಲಗಳನ್ನು (ಪ್ಯರಾಮಿಟರ್ಸ್) $A_1$ಕ್ಕೆ ಗೊತ್ತುಮಾಡಿದ ರೀತಿಯಲ್ಲೇ $A_2, A_3$ ಮುಂತಾದ ಇತರ ಕಾಯಗಳಿಗೂ ಗೊತ್ತುಮಾಡಬಹುದು. $A_k$ ಕಾಯವನ್ನು ಕುರಿತ ಈ ಪ್ರಾಚಲಗಳನ್ನು ಅನುಕ್ರಮವಾಗಿ $qk, \dot{q}k, \ddot{q}k$ ಪ್ರತೀಕಗಳಿಂದ ಸೂಚಿಸುತ್ತೇವೆ. ($k = 0, 1, 2$ ಇತ್ಯಾದಿ ; $A_0$ ಮೂಲಬಿಂದುವಾಗಿರುವುದರಿಂದ ಶಾಶ್ವತವಾಗಿ $q_0 = \dot{q}_0 = \ddot{q}_0 = 0$ ಆಗುವುವು; ಅಂದರೆ ನಮ್ಮ ಆಯ್ಕೆಯಂತೆ $A_0$ ಕಾಯ ಸದಾ ನಿಶ್ಚಲವೆಂದಾಯಿತು). ಅಭಿಜಾತ ಬಲವಿಜ್ಞಾನದ ತರ್ಕಮಾರ್ಗಕ್ಕೆ ಮೂಲತಃ ಎರಡು ಎಣಿಕೆಗಳು ಹಿನ್ನೆಲೆಯಾಗಿವೆ. ಪ್ರತಿಯೊಂದು ಕಾಯದ ಮೇಲೂ ಅದರ ಸಮೀಪದಲ್ಲಿರುವ ಎಲ್ಲ ನಿಶ್ಚಲ ಹಾಗೂ ಚರ ಕಾಯಗಳು ಒಂದಲ್ಲ ಒಂದು ಬಗೆಯ ಪ್ರಭಾವ ಬೀರುತ್ತಲಿರಬೇಕು ಎಂಬುದು ಮೊದಲನೆಯದು ; ಇಂಥ ಪ್ರಭಾವಗಳ ಸಮಷ್ಟಿ ವಿನ್ಯಾಸದಿಂದ ಅವೆಲ್ಲ ಕಾಯಗಳ ಚಲನಕ್ರಮಗಳನ್ನು ನಿಸ್ಸಂದಿಗ್ಧವಾಗಿ ಗೊತ್ತು ಮಾಡಲು ಶಕ್ಯವಾಗಬೇಕು ಎಂಬುದು ಎರಡನೆಯದು. ಈ ಎಣಿಕೆಗಳ ಪ್ರಕಾರ $A_1$ ಕಾಯವೊಂದನ್ನೇ ಒಂಟಿಯಾಗಿ ಪರಿಶೀಲಿಸಿದಾಗ ಅದು ಚಲಿಸುವ ವೈಖರಿಯಲ್ಲಿ ಯಾವ ಕ್ರಮಬದ್ಧತೆಯೂ ಗೋಚರಿಸದೆ ಆ ಕಾಯದ ನಡೆವಳಿಕೆ ಒಂದು ಒಗಟಾಗಿಯೇ ಉಳಿಯಬಲ್ಲದು. $A_1$ರ ಮೇಲೆ $A_2$ರಂಥ ಇತರ ಕಾಯಗಳ ಪ್ರಭಾವವಿರುವುದೇ ಇದಕ್ಕೆ ಕಾರಣ. $A_1, A_2$ ಎರಡು ಕಾಯಗಳ ಚಲನೆಗಳನ್ನೂ ಒಟ್ಟಾಗಿ ಪರಿಶೀಲಿಸಿದಾಗ ಪರಿಸ್ಥಿತಿ ಸ್ವಲ್ಪ ಉತ್ತಮಗೊಳ್ಳುವ ಸಾಧ್ಯತೆ ಇದೆ. $A_1, A_2$ ಗಳನ್ನು ಒಟ್ಟಾಗಿ ಅಭ್ಯಸಿಸಿದಾಗಲೂ ಚಲನೆಗಳು ಕ್ರಮರಹಿತವಾಗಿ ಕಂಡುಬಂದರೆ ಇವೆರಡೂ $A_3$ರಂಥ ಮತ್ತಿತರ ಕಾಯಗಳ ಪ್ರಭಾವಕ್ಕೆ ಸಿಲುಕಿವೆ ಎಂದು ಅರ್ಥ. ಹೀಗಾದಾಗ $A_3$ಯನ್ನೂ ನಮ್ಮ ಅಧ್ಯಯನವ್ಯಾಪ್ತಿಗೆ ಸೇರಿಸಿಕೊಳ್ಳಬೇಕು. ಇದೇ ರೀತಿ ಮುಂದುವರಿದರೆ ಯಾವುದೋ ಒಂದು ಘಟ್ಟವನ್ನು ಮುಟ್ಟಿದಾಗ ಪರಿಶೀಲಿತ ಕಾಯಗಳ ಚಲನೆಗಳಲ್ಲಿ ಸಾಕಷ್ಟು ತೃಪ್ತಿಕರವಾದ ಒಂದು ನಮೂನೆ ಕಾಣಿಸಿಕೊಳ್ಳಬಹುದಷ್ಟೆ. ಆ ಘಟ್ಟದಲ್ಲಿ ನಮ್ಮ ಅಧ್ಯಯನವ್ಯಾಪ್ತಿಗೆ ಒಳಪಡುವ ಕಾಯಗಳ ಒಟ್ಟು ಸಮುದಾಯ ಒಂದು ಸಂವೃತ ವ್ಯವಸ್ಥೆ (ಐಸೊಲೇಟೆಡ್ ಸಿಸ್ಟಮ್) ಎಂದೆನಿಸಿಕೊಳ್ಳುವುದು. ಇಂಥ ಯಾವುದೇ ಸಂವೃತ ಚಲನವ್ಯವಸ್ಥೆಯ ಒಳಗಿರುವ ಕಾಯಗಳ ಮೇಲೆ ಹೊರಗಿನ ಕಾಯಗಳು ಬೀರಬಹುದಾದ ಪ್ರಭಾವ ಉಪೇಕ್ಷಣೀಯ ಎಂದಾಯಿತು. (ಕೊನೆಯ ಪಕ್ಷಕ್ಕೆ ಇದೊಂದು ತಾತ್ಕಾಲಿಕ ವ್ಯಾಖ್ಯಾನವೆಂದಿಟ್ಟುಕೊಳ್ಳಬಹುದು. ಶಕ್ತಿಯ ಪರಿಕಲ್ಪನೆ ಮುಂದೆ ನಮ್ಮ ಹಿಡಿತಕ್ಕೆ ಸಿಕ್ಕಿದಾಗ ಒಳಗಿನಿಂದ ಹೊರಕ್ಕಾಗಲಿ ಹೊರಗಿನಿಂದ ಒಳಕ್ಕಾಗಲಿ ಶಕ್ತಿಯ ಪ್ರವಹನವಿಲ್ಲದ ವ್ಯವಸ್ಥೆಗಳೇ ಸಂವೃತ ವ್ಯವಸ್ಥೆಗಳ ಸ್ಥಾನ ನಿಜಕ್ಕೂ ಬಲು ಮಹತ್ತ್ವಪೂರ್ಣ ; ಸಾಪೇಕ್ಷತಾ (ರಿಲೆಟಿವಿಟಿ) ಹಾಗೂ ಕ್ವಾಂಟಮ್ ಸಿದ್ಧಾಂತಗಳು ಅಭಿಜಾತ ಸಿದ್ಧಾಂತದಿಂದ ಒಮ್ಮೆಗೇ ಬೇರ್ಪಟ್ಟು ದೂರ ಸಿಡಿದುಹೋಗಿರುವಂತೆ ತೋರಲು ಸಂವೃತತೆಯ ವಿಶಿಷ್ಟ ಪ್ರಾಮುಖ್ಯವನ್ನು ಅಷ್ಟಾಗಿ ಗಮನಿಸದಿರುವುದೂ ಒಂದು ಕಾರಣವಾಗಿದೆ.

ಸಂವೃತವ್ಯವಸ್ಥೆಗಳಲ್ಲಿ ಚರ ಕಾಯಗಳಷ್ಟನ್ನೇ ಅಲ್ಲದೆ ಅವುಗಳ ಸನಿಹದಲ್ಲಿರುವ $A_0$ಯಂಥ ಎಲ್ಲ ನಿಶ್ಚಲ ಕಾಯಗಳನ್ನೂ ಸೇರಿಸಿಕೊಳ್ಳುತ್ತೇವೆಂಬ ಅಂಶವನ್ನು ವಿಶೇಷತಃ ಗಮನಿಸಬೇಕು. ಈಗ ಸಂವೃತ ವ್ಯವಸ್ಥೆಯ $A_k$ ಕಾಯದ ಚಲನೆ ಅದೇ ವ್ಯವಸ್ಥೆಯ ಎಲ್ಲ ಕಾಯಗಳೂ ಸೇರಿ $A_k$ಯ ಒಂದಲ್ಲ ಒಂದು ವಿಶಿಷ್ಟ ಪ್ರಾಚಲವನ್ನು ಏಕೈಕ ರೀತಿಯಲ್ಲಿ ನಿರ್ಧರಿಸುತ್ತವೆಂದು ನಿರೀಕ್ಷಿಸುವುದು ಸ್ವಾಭಾವಿಕ. ಹಾಗೆ ನಿರ್ಧರಿತವಾಗುವ ಪ್ರಾಚಲ ಯಾವುದು? ಚಲನೆಯ ಸಂಬಂಧದಲ್ಲಿ ಎಲ್ಲರ ದೃಷ್ಟಿಗೂ ಮೊದಲು ನಾಟುವ ಪ್ರಾಚಲವೆಂದರೆ ವೇಗ. ಆದರೆ ಪ್ರಸಕ್ತ ಪ್ರಶ್ನೆಗೆ ಉತ್ತರ ವೇಗ ಅಲ್ಲವೆಂಬುದನ್ನು ಪತ್ತೆ ಹಚ್ಚಿದ್ದೇ ಚಲನೆಯನ್ನು ಅರ್ಥಮಾಡಿಕೊಳ್ಳುವ ದಿಶೆಯಲ್ಲಿ ಮಾನವನಿಟ್ಟ ಮೊಟ್ಟ ಮೊದಲ ದಿಟ್ಟ ಹೆಜ್ಜೆ. ಎಲ್ಲ ಕಾಯಗಳ ಸಾಮೂಹಿಕ ಪ್ರಭಾವ ಯಾವುದೇ ಬಿಡಿ ಕಾಯದ ಚಲನೆಯನ್ನು ಕುರಿತಂತೆ ನಿಸ್ಸಂದಿಗ್ಧವಾಗಿ ನಿಷ್ಕರ್ಷಿಸುವ ಪ್ರಾಚಲ ನಿಜಕ್ಕೂ ಆ ಬಿಡಿ ಕಾಯದ ವೇಗೋತ್ಕರ್ಷವೇ ವಿನಾ ವೇಗವಲ್ಲ. ಈಗಾಗಲೇ ಸೂಚನೆ ನೀಡಿರುವಂತೆ ಆಶ್ಚರ್ಯಕರವಾದ ಈ ಸತ್ಯಾಂಶ ನ್ಯೂಟನ್ನನ ಚಲನ ನಿಯಮಗಳಲ್ಲಿ ಅಡಕವಾಗಿದೆ. ಅಲ್ಲಿಗೆ $A^0, A^1, A^2$ ಮೊದಲಾದ

ಕಾಯಗಳೆಲ್ಲವೂ ಸೇರಿ $A_k$ಯ ವೇಗೋತ್ಕರ್ಷ $\ddot{q}_k$ ಗೆ ಸಲ್ಲಬೇಕಾದ ನಿರ್ದಿಷ್ಟ ಬೆಲೆಯನ್ನು ಕ್ಷಣಕ್ಷಣಕ್ಕೂ ನಿಷ್ಕರ್ಷಿಸುತ್ತಿರುತ್ತವೆ ಎಂದಾಯಿತು. $A_0, A_1, A_2$ ಮುಂತಾದವುಗಳ ಕೆಲವಷ್ಟು ಪ್ರಾಚಲಗಳ ಬೆಲೆಯನ್ನು ಕೊಟ್ಟೊಡನೆಯೇ ಅದನ್ನು ಉಪಯೋಗಿಸಿಕೊಂಡು $\ddot{q}_k$ ವೇಗೋತ್ಕರ್ಷದ ಬೆಲೆಯನ್ನು ಸಹ ಲೆಕ್ಕಹಾಕಿಬಿಡಬಹುದು ಎಂಬುದೇ ಈ ಮಾತಿನ ಅರ್ಥ. $\ddot{q}_k$ಯ ಲೆಕ್ಕಾಚಾರಕ್ಕೆ ಅವಶ್ಯವಾಗುವ $A_0, A_1, A_2$ ಇತ್ಯಾದಿಗಳ ನಿರ್ದಿಷ್ಟ ಪ್ರಾಚಲಗಳನ್ನು ನ್ಯೂಟನ್ ಪ್ರಕಟವಾಗಿ ಹೆಸರಿಸಲಿಲ್ಲವಾದರೂ ಬಲವಿಜ್ಞಾನದ ಬೆಳವಣಿಗೆಯಾದಂತೆ ಕಾಯಗಳ ಸ್ಥಾನಗಳ ($q_0, q_1, q_2$ ಇತ್ಯಾದಿ) ಹಾಗೂ ವೇಗಗಳೇ ($q_0, q_1, q_2$ ಇತ್ಯಾದಿ) ಆ ಪ್ರಾಚಲಗಳು ಎಂಬ ಅಂಶ ಸ್ಪಷ್ಟವಾಯಿತು. ಅಂದ ಮೇಲೆ

$$\dot{q}_k = \alpha_k(q_0, q_1, q_2 \text{ ಇತ್ಯಾದಿ; } q_0, q_1, q_2 \text{ ಇತ್ಯಾದಿ})\quad k = 0, 1, 2 \text{ ಇತ್ಯಾದಿ} \quad \ldots [1]$$

ಇಲ್ಲಿಯ $\alpha_k$ ಗಳು $q_0, q_0, q_1, q_1, q_2, q_2$ ಮುಂತಾದವುಗಳಿಂದ $\dot{q}_k$ಯನ್ನು ಕಂಡುಹಿಡಿಯುವಲ್ಲಿ ಅನುಸರಿಸಬೇಕಾದ ಲೆಕ್ಕಾಚಾರವಿಧಾನವನ್ನು ನಿರ್ದೇಶಿಸುವ ಸೂಕ್ತವಾದ ಜ್ಞಾತ ಉತ್ಪನ್ನಗಳು (ನೋನ್ ಫಂಕ್ಷನ್ಸ್). $\alpha_k$ ಉತ್ಪನ್ನಗಳೇ ನ್ಯೂಟನ್ ಸಿದ್ಧಾಂತದಲ್ಲಿನ ಬಲ ಪರಿಕಲ್ಪನೆಯ ಮೂಲ ತಿರುಳು. ಕಾಯಗಳ ಸ್ಥಾನ ಮತ್ತು ವೇಗಗಳನ್ನು ಪರಸ್ಪರ ಸ್ವತಂತ್ರವಾದ ಚರಗಳನ್ನಾಗಿ ಒಳಗೊಳ್ಳುವ ಈ ಉತ್ಪನ್ನಗಳು ಉತ್ಕರ್ಷ ಘಟಕಗಳು (ಆ್ಯಕ್ಸಲರೇಷನ್ ಫೀಲ್ಡ್ ಕಾಂಪೊನೆಂಟ್ಸ್) ಎಂಬುದಾಗಿ ಕರೆಯೋಣ. ಪರಿಶೀಲನೆಯಲ್ಲಿರುವ ಸಂವೃತ ಚಲನವ್ಯವಸ್ಥೆಯ $a_0, a_1, a_2$ ಇತ್ಯಾದಿ ಎಲ್ಲ ಉತ್ಕರ್ಷ ಘಟಕಗಳ ಒಟ್ಟು ಗುಂಪು ಈ ವ್ಯವಸ್ಥೆಯ ಉತ್ಕರ್ಷ ಕ್ಷೇತ್ರ (ಆ್ಯಕ್ಸಲರೇಷನ್ ಫೀಲ್ಡ್) ಎಂದೆನಿಸಿಕೊಳ್ಳುತ್ತದೆ. ಒಂದೊಂದು ಸಂವೃತ ವ್ಯವಸ್ಥೆಗೂ ಅನುರೂಪವಾಗಿ ಒಂದೊಂದು ಉತ್ಕರ್ಷ ಕ್ಷೇತ್ರವಿರುತ್ತದೆ ಹಾಗೂ ಬೇರೆ ಬೇರೆ ಸಂವೃತ ವ್ಯವಸ್ಥೆಗಳ ಉತ್ಕರ್ಷ ಕ್ಷೇತ್ರಗಳು ಸಹಜವಾಗಿಯೇ ಬೇರೆ ಬೇರೆ ರೀತಿಯ $\alpha_k$ ಉತ್ಪನ್ನಗಳನ್ನು ಉತ್ಕರ್ಷಘಟಕಗಳನ್ನಾಗಿ ಒಳಗೊಳ್ಳುತ್ತವೆ. ಎಲ್ಲ ಸಂದರ್ಭಗಳಲ್ಲೂ ಉತ್ಕರ್ಷಘಟಕಗಳು [1] ಸಮೀಕರಣಗಳಲ್ಲಿರುವಂತೆ ಚಲನವ್ಯವಸ್ಥೆಯ ಒಳಗಿರುವ ಕಾಯಗಳ ಸ್ಥಾನ ಮತ್ತು ವೇಗವನ್ನು ಮಾತ್ರವೇ ಚರಗಳನ್ನಾಗಿ ಒಳಗೊಳ್ಳುವ ಉತ್ಪನ್ನಗಳಾಗಬೇಕು ಎಂಬ ನಿಬಂಧನೆ ಸಂವೃತ ವ್ಯವಸ್ಥೆಗಳನ್ನು ವಿಶಿಷ್ಟೀಕರಿಸುತ್ತದೆ. ಅಸಂವೃತ ವ್ಯವಸ್ಥೆಗಳ ಸಂಬಂಧದಲ್ಲಾದರೋ ಚಲನೆಯ ನಿಷ್ಕರ್ಷೆಗಾಗಿ ವ್ಯವಸ್ಥೆಯ ಹೊರಗಿರುವ ಕಾಯಗಳ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುವ ಕಾರಣ ಒಳಕಾಯಗಳ ವೇಗೋತ್ಕರ್ಷಗಳನ್ನು ಕೇವಲ ಒಳಕಾಯಗಳ ಸ್ಥಾನ, ವೇಗಗಳಿಂದಲೇ ಲೆಕ್ಕಹಾಕುವುದು ಅಸಾಧ್ಯ.

[1] ಸಮೀಕರಣಗಳು ಸಂವೃತ ವ್ಯವಸ್ಥೆಯ ಬಿಡಿ ಕಾಯಗಳ ಚಲನೆಗಳಿಗೂ ಇಡೀ ಕಾಯ ಸಮುದಾಯದ ಸ್ಥಾನ ಹಾಗೂ ವೇಗಗಳ ಒಟ್ಟು ವಿನ್ಯಾಸಕ್ಕೂ ಇರುವ ನಿಕಟ ಸಂಬಂಧವನ್ನು ವ್ಯಕ್ತಪಡಿಸುತ್ತವೆ. ಇವು ಕಾಲ $t$ಯನ್ನು ಸ್ವತಂತ್ರ ಚರವನ್ನಾಗಿ ಉಳ್ಳ ದ್ವಿತೀಯ ದರ್ಜೆಯ ಅವಕಲ ಸಮೀಕರಣಗಳ ಒಂದು ಸಮುದಾಯ (ಸಿಸ್ಟಮ್ ಆಫ್ ಸೆಕೆಂಡ್ ಆರ್ಡರ್ ಡಿಫರೆನ್ಷಿಯಲ್ ಈಕ್ವೇಷನ್ಸ್) ಎಂಬುದನ್ನು ಗಮನಿಸಬೇಕು. ಯಾವುದಾದರೊಂದು ಗೊತ್ತಾದ ಕಾಲದಲ್ಲಿ [$t=t_0$] ಸಂವೃತ ವ್ಯವಸ್ಥೆಯ ಎಲ್ಲ ಕಾಯಗಳ ಸ್ಥಾನಗಳೂ $[q_0(t_0), q_1(t_0), q_2(t_0)]$ ಇತ್ಯಾದಿ ಜೊತೆಗೆ ವೇಗಗಳೂ $[\dot{q}_0(t_0), \dot{q}_1(t_0), \dot{q}_2(t_0)]$ ಇತ್ಯಾದಿ ತಿಳಿದಿರುವುದಾದರೆ ಈ ಸಮೀಕರಣಗಳನ್ನು ಏಕೈಕ ರೀತಿಯಲ್ಲಿ ಪರಿಹರಿಸಿ (ಯುನೀಕ್ ಸೊಲ್ಯೂಷನ್) $q_k$ಗಳೆಲ್ಲವನ್ನೂ $t$ಯ ಪ್ರಕಟ ಉತ್ಪನ್ನಗಳನ್ನಾಗಿ ಅಭಿವ್ಯಕ್ತಿಸಲು ಸಾಧ್ಯವಾಗುವುದು: $q_k= q_k(t)$, [$k$=0, 1, 2, ಇತ್ಯಾದಿ]. ಇದರಿಂದ ಭೂತಕಾಲ ಹಾಗೂ ಭವಿಷ್ಯತ್ಕಾಲಗಳ ಎಲ್ಲ ಬೇರೆ ಬೇರೆ ವೇಳೆಗಳಲ್ಲೂ ವ್ಯವಸ್ಥೆಯ ಕಾಯಗಳು ಎಲ್ಲೆಲ್ಲಿರುತ್ತವೆ (ಹಾಗೂ ಎಷ್ಟೆಷ್ಟು ವೇಗಗಳಿಂದ ಚಲಿಸುತ್ತಿರುತ್ತವೆ) ಎಂಬುದನ್ನು ತತ್ತ್ವಶಃ ಸಂಪೂರ್ಣವಾಗಿ ನಿರ್ಧರಿಸಿಬಿಡಬಹುದು. ಇದೇ ಅಭಿಜಾತ ಚಲನಸಿದ್ಧಾಂತದ ನಿಶ್ಚಿತತಾ ತತ್ತ್ವ (ಡಿಟರ್ಮಿನಿಸಮ್). ನಿಶ್ಚಿತತಾ ತತ್ತ್ವದ ಫಲವಾಗಿ ಅಭಿಜಾತ ಬಲವಿಜ್ಞಾನದ ಆಯಕಟ್ಟಿನೊಳಗೆ ಸ್ವಂತೇಚ್ಛೆಯ ಚಲನೆಗೆ ಎಳ್ಳಷ್ಟೂ ಅವಕಾಶ ಉಳಿಯುವಂತಿಲ್ಲವಷ್ಟೆ. ಹೀಗೆ ಈ ಶಾಸ್ತ್ರ ಪ್ರಾಣಿ ಪಕ್ಷಿಗಳೆಲ್ಲವಿಂದಲೂ ಅಪಹರಿಸಿಕೊಂಡ ಸಂಚಾರ ಸ್ವಾತಂತ್ರ್ಯವನ್ನು ತಾತ್ತ್ವಿಕವಾಗಿ ಅವಕ್ಕೆ ಮರಳಿಸಲು ಆಧುನಿಕ ಕ್ವಾಂಟಮ್ ಸಿದ್ಧಾಂತದ ನೆರವೂ ಸಾಲದಾಗುವುದು. ಸದ್ಯದಲ್ಲಿ ಪ್ರಾಣಿ ಪಕ್ಷಿಗಳ ನಿದರ್ಶನದಿಂದ ನಿಶ್ಚಿತತಾತತ್ತ್ವದ ಅನ್ವಯಿಕತೆಗೆ ಪರಿಮಿತಿಗಳಿರಲೇಬೇಕೆಂಬ ಅಂಶವಂತೂ ಸ್ಪಷ್ಟವಾಗುತ್ತದೆ. ಬಹುಶಃ ಇನ್ನೂ ಸೋಜಿಗದ ಸಂಗತಿಯೆಂದರೆ ಇಷ್ಟೆಲ್ಲ ಖಚಿತ ಧ್ವನಿಯಲ್ಲಿ ನಿಶ್ಚಿತತಾ ತತ್ತ್ವವನ್ನೂ ಉಚ್ಚರಿಸಿದ ಅಭಿಜಾತ ಶಾಸ್ತ್ರವೇ ಈ ತತ್ತ್ವಕ್ಕೆ ಉದ್ದೇಶತಃ ಭಂಗವನ್ನು ಉಂಟುಮಾಡುವ ಶಕ್ಯತೆಯನ್ನೂ ಆಶ್ರಯಿಸಿ ನಿಂತಿದೆ ಎಂಬುದು. ಉದಾಹರಣೆಗೆ ನಿಶ್ಚಿತತಾ ತತ್ತ್ವದ ಮೇರೆಗೆ ತ್ರಿಕಾಯ ಸಂವೃತ ವ್ಯವಸ್ಥೆಯೊಂದರಲ್ಲಿ ಕಾಲ $t$ ಆಗಿರುವಾಗ $A_0, A_1, A_2$ ಕಾಯಗಳ ಸ್ಥಾನಗಳು ಅನುಕ್ರಮವಾಗಿ $q_0(t) \equiv 0, q_1(t) = 1+t_2, q_2(t) = -(1+t_2)$ ಆಗಿರಬಹುದು. (ಎಂದಿನಂತೆ ಮೂಲ ಬಿಂದುವಿನ ಸ್ಥಾನವನ್ನು ಗುರುತಿಸುವ A0 ಕಾಯ ಈ ವ್ಯವಸ್ಥೆಯಲ್ಲಿ ಚಿರನಿಶ್ಚಲ; ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು A0 ಯ ಪ್ರಾಚಲಗಳು ಪ್ರತ್ಯಕ್ಷವಾಗಿ ಗೋಚರಕ್ಕೆ ಬಾರದಿರುವ ರೀತಿಯಲ್ಲಿ ಮುಂದಿನ ಲೆಕ್ಕಾಚಾರಗಳನ್ನು ರೂಪಿಸಲಾಗಿದೆ). ಹಾಗಿದ್ದಲ್ಲಿ ಕೊನೆಯ ಎರಡು ದತ್ತಾಂಶಗಳ ಪ್ರಕಾರ ವ್ಯವಸ್ಥೆಯ ಚರ ಕಾಯಗಳ ವೇಗಪ್ರಾಚಲಗಳು $\dot{q}_1(t) = 2t, \dot{q}_2(t) = -2t$ ಆಗಿಯೂ ವೇಗೋತ್ಕರ್ಷ ಪ್ರಾಚಲಗಳು $\ddot{q}_1(t) = 2, \ddot{q}_2(t) = -2t$ ಆಗಿಯೂ ಇರುತ್ತವೆ. ಹೀಗೆ ನಿಶ್ಚಿತವಾಗುವ ವೇಗೋತ್ಕರ್ಷಗಳನ್ನು [1] ಸಮೀಕರಣಗಳ ಮಾದರಿಯಲ್ಲಿ ಕಾಯಗಳ ಸ್ಥಾನ $q_0, q_1, q_2$ ಮತ್ತು ಕಾಯಗಳ ವೇಗ $\dot{q}_0, \dot{q}_1, \dot{q}_2$ ಗಳ ಉತ್ಪನ್ನಗಳಾಗಿ ಅಭಿವ್ಯಕ್ತಿಸಲು ಅಸಂಖ್ಯಾತ ಪರ್ಯಾಯ ಮಾರ್ಗಗಳಿವೆ. ಹಾಗೂ ಅಂಥ ಮಾರ್ಗಗಳ ಪೈಕಿ ಎರಡನ್ನು ನಿದರ್ಶಾತ್ಮಕವಾಗಿ ಕೆಳಗೆ ಬರೆದು ತೋರಿಸಿದ್ದೇವೆ:

[ಮಾರ್ಗ 1] : $$\ddot{q}_1 = \alpha_1(q_0, q_1, q_2; \dot{q}_0, \dot{q}_1, \dot{q}_2) \equiv 2$$

$$\ddot{q}_2 = \alpha_2(q_0, q_1, q_2; \dot{q}_0, \dot{q}_1, \dot{q}_2) \equiv -2$$

[ಮಾರ್ಗ 2] : $$\ddot{q}_1 = \alpha_1(q_0, q_1, q_2; \dot{q}_0, \dot{q}_1, \dot{q}_2) \equiv -2\frac{1}{2}(q_1 + q_2)$$

$$\ddot{q}_2 = \alpha_2(q_0, q_1, q_2; \dot{q}_0, \dot{q}_1, \dot{q}_2) \equiv -2 - \frac{1}{2}(q_1 + q_2)$$

$\alpha_k$ ಉತ್ಪನ್ನಗಳಿಗೆ ಅಭಿಜಾತ ಬಲವಿಜ್ಞಾನ (ನ್ಯಾಯವಾಗಿಯೇ) ವಿಶಿಷ್ಟ ಪ್ರಮುಖ್ಯವನ್ನು ನೀಡಿರುವುದರಿಂದ ಇಂಥ ಎಲ್ಲ ಅಭಿವ್ಯಕ್ತಿ ಮಾರ್ಗಗಳಲ್ಲಿ ಒಂದು ಮಾತ್ರವೇ ಮಹತ್ತ್ವಪೂರ್ಣವಾರಬೇಕೆಂದು ನಿರೀಕ್ಷಿಸುವುದು ಸ್ವಾಭಾವಿಕ. ಅಂದ ಮೇಲೆ ಉಳಿದ ಮಾರ್ಗಗಳ $\alpha_k$ಗಳಿಗೂ $\ddot{q}_k$ಗಳಿಗೂ ಏರ್ಪಟ್ಟಿರುವ ಹೊಂದಾಣಿಕೆ ಕೇವಲ ಕಾಕತಾಳೀಯ ಎಂದಾಯಿತು. ಇಂಥ ಕಾಕತಾಳೀಯತೆಗಳ ವಿವರ ತನಿಖೆಗಾಗಿ ಮೇಲಿನ ಅವಕಲ ಸಮೀಕರಣಗಳ ಅನುರೂಪ ಪರಿಹಾರಗಳನ್ನು ಕಂಡು ಹಿಡಿದು ಕೆಳಗೆ ಬರೆಯಲಾಗಿದೆ.[ಇಲ್ಲಿ $q_k(t_0)$ ಮತ್ತು $\dot{q}_k(t_0)$ ಪ್ರಾಚಲಗಳು ಯಾವುದಾದರೂ ಗೊತ್ತಾದ ಒಂದು t=t0 ಕಾಲಕ್ಕೆ ಅನ್ವಯಿಸುವ ಸ್ಥಾನ ಮತ್ತು ವೇಗಗಳು : k = 1, 2]:

(ಪರಿಹಾರ 1) :

$$q_k = q_k(t) = q_k(t_0) + (t - t_0)\dot{q}_k(t_0) + (-)l^{k+1}(t - t_0)^2$$

(ಪರಿಹಾರ 2) :

$$q_k = q_k(t) = (-1)^{k+1}\,(t - t_0)^2 + \frac{1}{2}\{(-1)^k$$

$$[q_2(t_0) - q_1(t_0)] + (-1)^k\,(t - t_0)[\dot{q}_2(t_0)$$

$$\dot{q}_1(t_0)] + [\cos(t - t_0)]\,[q_2(t_0) + q_1(t_o)]$$

$$+[\sin\,(t - t_0)]\,[\dot{q}_2(t_0) - \dot{q}_1(t_0)]\}$$

ಆದಿಯಲ್ಲೇ ನಾವು ಅಂಗೀಕರಿಸಿರುವ ದತ್ತಾಂಶಗಳಂತೆ

$$q_1(t_0) = 1 + t_0{}^2\ ,\ \ q_2(t_0) = -1(1 + t_0{}^2).$$

$$\dot{q}_1(t_0) = 2t_0,\ \ \dot{q}_2(t_0)\ =\ =\ -2t_0$$

ಈ ಬೆಲೆಗಳನ್ನು ಆದೇಶಿಸಿ ನೋಡಿದಾಗ ಮೇಲಿನ ಪರಿಹಾರಗಳು ಒಂದರೊಡನೊಂದು ಐಕ್ಯವಾಗಿ ಎರಡೂ $q_1 = 1 + t^2, q_2 = -(1 + t^2)$ ಎಂಬ ಫಲಗಳನ್ನೇ ನೀಡುತ್ತವೆ. ಅಲ್ಲಿಗೆ ಕಾಯಗಳು ಪೂರ್ವನಿಶ್ಚಿತ ವೈಖರಿಯಲ್ಲೇ ಚಲಿಸುತ್ತಿದ್ದರೆ ಮಾರ್ಗ 1 ಕಾಕತಾಳಿಯವೋ ಮಾರ್ಗ 2 ಕಾಕತಾಳೀಯವೋ ಎಂಬ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಎಂದೆಂದಿಗೂ ಸಾಧ್ಯವಾಗುವುದೇ ಇಲ್ಲ. ಅದೂ ಅಲ್ಲದೆ $\ddot{q}_k$ಗಳಂತೆಯೇ $\dot{q}_k$ಗಳನ್ನು ಕೂಡ $q_k$ಗಳ ಉತ್ಪನ್ನಗಳನ್ನಾಗಿ ಬರೆಯಲು ಸಾಧ್ಯವಿರುವುದರಿಂದ [ಉದಾ:ಗೆ $2t = \ddot{q}_1 = q_1 + q_2 + 2\sqrt{q1^{-1}}; -2t = \dot{q}_2 = q_1 + q_2 - 2\sqrt{q1^{-1}}$] ಚಲನೆಗಳ ಅನಿಶ್ಚಿತ ವಾತಾವರಣದಲ್ಲಿ ಇಂಥ ಅಭಿವ್ಯಕ್ತಿಗಳ ಕಾಕತಾಳೀಯತೆಯನ್ನೂ ಪತ್ತೆಹಚ್ಚಲು ಸಾಧ್ಯವಾಗುವುದಿಲ್ಲ. ಹೀಗಿರುವಾಗ ಬಿಡಿ ಕಾಯದ ಮೇಲೆ ಕಾಯಗಳ ಸಮುದಾಯದ ಪ್ರಭಾವ ವ್ಯಕ್ತವಾಗುವುದು ಆ ಬಿಡಿ ಕಾಯದ ವೇಗೋತ್ಕರ್ಷ $\ddot{q}_k$ಯಲ್ಲೇ ವಿನಾ ವೇಗ $\dot{q}_k$ಯಲ್ಲಲ್ಲವೆಂಬ ಮಾತಿಗೆ ಯಾವ ಅರ್ಥವೂ ಉಳಿಯುವುದಿಲ್ಲ. ಪರಿಶೀಲನೆಯಲ್ಲಿರುವ ತ್ರಿಕಾಯ ವ್ಯವಸ್ಥೆಯ ವರ್ಣನೆಗೆ ಮಾರ್ಗ 1 ಸೂಕ್ತವೋ ಮಾರ್ಗ 2 ಸೂಕ್ತವೋ ಎಂಬುದನ್ನು ತೀರ್ಮಾನಿಸಲು ನಿಜಕ್ಕೂ ಈ ವ್ಯವಸ್ಥೆಯ ಚಲನೆಯನ್ನು ನಿಶ್ಚಿತ ಜಾಡಿನಿಂದ ಕದಲಿಸಬೇಕು. ಉದಾಹರಣೆಗೆ ನಿಶ್ಚಿತ ಚಲನೆಯ ಪ್ರಕಾರ $t_0 = \pi$ ವೇಳೆಗೆ $q_1(\pi) = 1 + \pi^2, q_2(\pi) = -(1 + \pi^2), \dot{q}_1(\pi) = 2\pi,\ \dot{q}_2(\pi) = -2\pi$ ಎಂಬ ಬೆಲೆಗಳನ್ನು ಗಳಿಸಿಕೊಳ್ಳಲಿರುವ ಪ್ರಾಚಲಗಳನ್ನು ಹೇಗಾದರೂ ಮಾಡಿ $q_1(\pi) = 1 + 3\pi^2, q_2(\pi) = -(1 + 3\pi^2), \dot{q}_1(\pi) = 6\pi, \dot{q}_2(\pi) = 0$ ಆಗುವಂತೆ ಪಲ್ಲಟಗೊಳಿಸದಿರೆ ಅಲ್ಲಿಂದ ಮುಂದಕ್ಕೆ (ಅಂದರೆ $t \geq \pi$ ಆದಾಗ) ಪರಿಹಾರ 1 ಮತ್ತು ಪರಿಹಾರ 2 ಕೆಳಗೆ ಸೂಚಿಸಿರುವ ಭಿನ್ನ ರೂಪಗಳನ್ನು ತಾಳುತ್ತವೆ (ಇವನ್ನು ತಾಳೆನೋಡಲು ಹಿಂದಿನ ಪರಿಹಾರೋಕ್ತಿಗಳಲ್ಲಿ $t_0 = \pi$ ಬೆಲೆ ಆದೇಶಿಸಬೇಕು):

(ಪರಿಹಾರ 1) : $$q_1 = q_1(t) = 1 + t^2 + 4\pi t - 2\pi^2$$
$$q_2 = q_2(t) = -(1 + t^2 - 2\pi t + 4\pi^2)$$

(ಪರಿಹಾರ 2) : $$q_1 = q_1(t) = 1 + t^2 - 3\pi \sin t + \pi t + \pi^2$$
$$q_2 = q_2(t) = -(1 + t^2 + 3\pi \sin t + \pi t + \pi^2)$$

ಈಗ ವ್ಯವಸ್ಥೆಯ ಪಲ್ಲಟೋತ್ತರ ನಡೆವಳಿಕೆ ಪರಿಹಾರ 1ಕ್ಕೆ ಅನುಗುಣವಾಗಿದೆಯೋ ಇಲ್ಲವೆ ಪರಿಹಾರ 2ಕ್ಕೆ ಅನುಗುಣವಾಗಿದೆಯೋ (ಅಥವಾ ಬೇರಾವುದಾದರೂ ಪರಿಹಾರಕ್ಕೆ ಹೊಂದಿಕೊಳ್ಳಬಲ್ಲದೋ) ಎಂಬುದನ್ನು ಸುಲಭವಾಗಿ ನಿಷ್ಕರ್ಷಿಸಬಹುದು. ಎಂತಲೇ ಒಂದು ಕಡೆ ನಿಶ್ಚಿತತಾ ತತ್ತ್ವವನ್ನು ಪ್ರತಿಪಾದಿಸಿದ ಅಭಿಜಾತ ಬಲವಿಜ್ಞಾನ ಮತ್ತೊಂದು ಕಡೆ ಆ ನಿಶ್ಚಿತತೆಯನ್ನೇ ಪಲ್ಲಟಗೊಳಿಸುವ ಸಾಧ್ಯತೆಯನ್ನೂ ಅವಲಂಬಿಸಿದೆ. ಈ ಸಿದ್ಧಾಂತದ ನಿರ್ಮಾತೃಗಳು ಚಲನವ್ಯವಸ್ಥೆಗಳಿಗೆ ಹೊರತಾಗಿಯೇ ಚಿತ್ರಿಸಿಕೊಳ್ಳುವ ಪರಿಪಾಠವನ್ನಿಟ್ಟುಕೊಂಡಿದ್ದುದರಿಂದ ಚರ್ಚೆಯಲ್ಲಿರುವ ಸನ್ನಿವೇಶದ ವಿರೋಧಾಭಾಸ ಅವರಿಗೆ ಮನವರಿಕೆಯಾಗದೆಹೋಯಿತು. ಆದರೆ ಸಂವೃತ ವ್ಯವಸ್ಥೆಗಳ ವ್ಯಾಖ್ಯೆಯಂತೆ ಈ ವ್ಯವಸ್ಥೆಗಳ ಮೇಲೆ ಪ್ರಭಾವ ಬೀರಬಲ್ಲ ಎಲ್ಲ (ಸಜೀವ ಹಾಗೂ ನಿರ್ಜೀವ) ಸಾಧನಗಳನ್ನೂ ಇವು ಮೊದಲೇ ಒಳಗೊಂಡಿರಬೇಕಾಗುವುದು. ಅಂದ ಮೇಲೆ ನಿಶ್ಚಿತತೆಯ ಪಲ್ಲಟ ಅಭಿಜಾತ ಬಲವಿಜ್ಞಾನಿಗಳು ನಂಬಿದ್ದಂತೆ ಕೇವಲ ಕೃತಕವಾದ ಹೊರಗಿನ ಹಸ್ತಕ್ಷೇಪಗಳ ಫಲವಾಗುವ ಬದಲು ಸಂವೃತ ವ್ಯವಸ್ಥೆಗಳ ಒಂದು ಅನಿವಾರ್ಯ ಆಂತರಿಕ ವಿದ್ಯಮಾನವೇ ಆಗಿರಬೇಕಾದ ತಾತ್ತ್ವಿಕ ಅಗತ್ಯತೆ ಇದೆ. ನಿಸರ್ಗವಾದರೂ ಇಂಥ ಅಗತ್ಯತೆಯನ್ನು ಪೂರೈಸಿಯೇ ಇದೆಯೆಂಬುದಕ್ಕೆ ಪ್ರಸಕ್ತ ಶತಮಾನದಲ್ಲಿ ಬೆಳಕಿಗೆ ಬಂದ ಕ್ವಾಂಟಮ್ ಪರಿಣಾಮಗಳು ಸೂಚ್ಯ ಪುರಾವೆಗಳಾಗಿವೆ. ನಿಶ್ಚಿತತೆಯ ಪರಿಕಲ್ಪನೆ ಹೀಗೆ ಸಡಿಲಗೊಂಡಾಗ [1] ಸಮೀಕರಣಗಳು ವೇಗೋತ್ಕರ್ಷ ಪ್ರಾಚಲಗಳ ಅತ್ಯಂತ ಸಂಭಾವ್ಯ ಬೆಲೆಗಳನ್ನು (ಮೋಸ್ಟ್ ಪ್ರಾಬಬಲ್ ವ್ಯಾಲ್ಯೂಸ್) ಮಾತ್ರವೇ ವ್ಯಕ್ತಪಡಿಸಬಲ್ಲವೆಂದು ಭಾವಿಸಬೇಕಾತ್ತದೆ. ಈ ಸಮೀಕರಣಗಳಲ್ಲಿ ಉತ್ಕರ್ಷಘಟಕಗಳನ್ನು ಸರಿಯಾಗಿ ಆಯ್ಕೆ ಮಾಡಿರುವಾಗಲೂ ಸಂವೃತ ವ್ಯವಸ್ಥೆಯ $\alpha_k$ ವಾಸ್ತವ ನಡೆವಳಿಕೆಗೂ ಸಮೀಕರಣಗಳ ಪರಿಹಾರಗಳಿಗೂ ಕಾಲಕ್ರಮೇಣ ಅಲ್ಪಸ್ವಲ್ಪ ವ್ಯತ್ಯಾಸಗಳು ನೈಸರ್ಗಿಕವಾಗಿಯೇ ತಲೆದೋರುತ್ತಲಿದ್ದು ಆಯ್ದ $\alpha_k$ ಉತ್ಪನ್ನಗಳು ನಿಜಕ್ಕೂ ಕಾಕತಾಳೀಯವಲ್ಲವೆಂದು ಹೆಜ್ಜೆಹೆಜ್ಜೆಯಲ್ಲೂ ಸ್ಥಿರಪಡಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡುತ್ತವೆ. ಇಂಥ ನೈಸರ್ಗಿಕ ಅನಿಶ್ಚಿತತೆಯ ಉಪಯೋಗವನ್ನು ಪಡೆದುಕೊಳ್ಳುವುದರಿಂದಲೇ ಜೈವಿಕ ಕಣಸಮುದಾಯಗಳಿಗೆ ಪರಿಮಿತ ಸ್ವಂತೇಚ್ಛೆಯ ಚಲನ ಸಾಮರ್ಥ್ಯವನ್ನು ಗಳಿಸಲು ಸಾಧ್ಯವಾಗಿರಬೇಕು.

ಬಲವಿಜ್ಞಾನದ ಅಧ್ಯಯನದಲ್ಲಿ ಪ್ರಾಚಲಗಳ ಪರಿವರ್ತನೆಗಳು (ಕೋಆರ್ಡಿನೇಟ್ ಟ್ರಾನ್ಸ್‌ಫಾರ್ಮೇಷನ್ಸ್) ಒಂದು ಮುಖ್ಯ ಪರಿಕಲ್ಪನೆ. ಕಾಯಗಳ ಚಲನೆಗಳನ್ನು ಇದುವರೆಗೆ $q_0, q_1, q_2$ ಇತ್ಯಾದಿ ಸ್ಥಾನಪ್ರಾಚಲಗಳಿಂದಲೂ $q_0, q_1, q_2$ ಇತ್ಯಾದಿ ವೇಗಪ್ರಾಚಲಗಳಿಂದಲೂ ಆಭಿವ್ಯಕ್ತಿಸುವ ಪ್ರಯತ್ನ ನಡೆಸಿದ್ದೇವಷ್ಟೆ. ಆದರೆ ಚಲನ ವ್ಯವಸ್ಥೆಯೊಂದರ ಸ್ಥಿತಿಗತಿಗಳನ್ನು $q_k, \dot{q}_k$ ಗಳಷ್ಟೇ ನಿಸ್ಸಂದಿಗ್ಧವಾಗಿ ಪ್ರತಿನಿಧಿಸಬಲ್ಲ ಇನ್ನೂ ಅನೇಕ ಇತರ ಪ್ರಾಚಲಗಳೂ ಇವೆ. ಇದನ್ನು ಮನಗಾಣಲು $q_0, q_0, q_1\ q_1\ q_2\ q_2$ ಮೊದಲಾದ ಸ್ಥಾನ. ವೇಗಗಳೆಲ್ಲವನ್ನೂ ಚರಗಳನ್ನಾಗಿ ಒಳಗೊಳ್ಳುವ ಸಾಕಷ್ಟು ಸಂಖ್ಯೆಯ ಸೂಕ್ತ $f_k$ ಉತ್ಪನ್ನಗಳನ್ನು ಆಯ್ದು

$$\bar{q}_k = \bar{f}_k(q_0, q_1, q_2, \text{ಇತ್ಯಾದಿ});\ \ (\dot{q}_0, \dot{q}_1, \dot{q}_2, \text{ಇತ್ಯಾದಿ})\ k{=}0,1,2$$

ಇತ್ಯಾದಿ ...... (2)

ಎಂಬ ಸಮೀಕರಣಗಳ ಮೂಲಕ ಹೊಸ ಪ್ರಾಚಲ $\ddot{q}_k$ ಗಳನ್ನು ವ್ಯಾಖ್ಯಿಸಬೇಕು. ಈಗ ಈ ಸಮೀಕರಣಗಳನ್ನು ಕಾಲ t ಯನ್ನು ಕುರಿತು ಅವಕಲಿಸಿದರೆ (ಡಿಫರೆನ್ಷಿಯೇಟ್)

$$q_k = \frac{dq_k}{dt} = \frac{dq_0}{dt}\frac{\bar{\partial} f_k}{\bar{\partial} q_0} + \frac{dq_k}{dt}\frac{\bar{\partial} f_k}{\bar{\partial} q_1} + \text{ಇತ್ಯಾದಿ} + \frac{dq_0}{dt}\frac{\bar{\partial} f_k}{\bar{\partial} q_0} + \frac{d\dot{q}1}{dt}\frac{\partial \bar{f}_k}{\partial \dot{q}_1} +$$

$$\text{ಇತ್ಯಾದಿ} = \sum_{(l)}\left(\dot{q}l\frac{\partial \bar{f}_k}{\partial q_l} + \ddot{q}l\frac{\partial \bar{f}_k}{\partial \dot{q}_l}\right)$$ ಸಂವೃತ ವ್ಯವಸ್ಥೆಯ $\alpha l(q_0, q_1,$ ಇತ್ಯಾದಿ; $\dot{q}_0, \dot{q}_1,$ ಇತ್ಯಾದಿ) ಉತ್ಕರ್ಷಘಟಕವನ್ನು $\alpha_l$ ಎಂಬ ಸಂಕ್ಷೇಪ ರೂಪದಲ್ಲಿ ಬರೆದಾಗ (1) ಸಮೀಕರಣಗಳ ಪ್ರಕಾರ $\ddot{q}_l = \alpha_l$ ಆಗುವುದರಿಂದ

$$\ddot{q}_k = \sum_{(l)}\left(\dot{q}_l\frac{\partial \bar{f}_k}{\partial q_l} + \alpha_l\frac{\partial \bar{f}_k}{\partial \dot{q}_l}\right) = \bar{q}_k\ (q_0, q_1, q_2, \text{ಇತ್ಯಾದಿ};\ \ q_0,\ \ q_1,$$
$q_2$,ಇತ್ಯಾದಿ) $q_0, q_1, q_2$, ಇತ್ಯಾದಿ ಆಗಲಿ ........[3]

$\bar{f}_k$ ಉತ್ಪನ್ನಗಳ ಆಯ್ಕೆ ಸಮರ್ಪಕವಿರುವಾಗ [2], [3] ಸಮೀಕರಣಗಳನ್ನು ಪರಿಹರಿಸಿ ಹಳೆಯ *qk*, $\dot{q}$ kಪ್ರಾಚಲಗಳನ್ನು ಹೊಸ $\bar{q}_k, \dot{\bar{q}}_k,$ ಪ್ರಾಚಲಗಳ ಮಾಧ್ಯಮದಲ್ಲೂ ವ್ಯಕ್ತಪಡಿಸಲು ಸಾಧ್ಯವಾಗುವುದು:

$$q_k = f_k(\bar{q}_0, \bar{q}_1, \bar{q}_2, \text{ಇತ್ಯಾದಿ};\ \dot{\bar{q}}_0, \dot{\bar{q}}_1, \dot{\bar{q}}_2\ \text{ಇತ್ಯಾದಿ});$$
$$\dot{q}_k = g_k\,(\bar{q}_0, \bar{q}_1, \bar{q}_2, \text{ಇತ್ಯಾದಿ};\ \dot{\bar{q}}_0, \dot{\bar{q}}_1, \dot{\bar{q}}_2\ \text{ಇತ್ಯಾದಿ});$$

*k*=0,1,2 ಇತ್ಯಾದಿ ....... 4]

[2], [3], [4] ಸಮೀಕರಣಗಳಿಂದ $q_l, \dot{q}_l$ ಕೊಟ್ಟಾಗ $\bar{q}_k$, $\dot{\bar{q}}_k$ ಗಳನ್ನೂ, ವಿಲೋಮತಃ $\bar{q}_1, \dot{\bar{q}}_1$ ಕೊಟ್ಟಾಗ $qk$, $\dot{q}$ k ಗಳನ್ನೂ ಲೆಕ್ಕಹಾಕಬಹುದಾದ ಕಾರಣ ಸಂವೃತ ವ್ಯವಸ್ಥೆಯ ಸ್ಥಿತಿಗತಿಗಳನ್ನು $\bar{q}_k$, $\dot{\bar{q}}_k$ ಗಳು ಸಹ $q_k, \dot{q}_k$ ಗಳಷ್ಟೇ ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತವೆ. ಎಂತಲೇ $\bar{q}_k$ ಗಳನ್ನು ಸಾರ್ವತ್ರೀಕೃತ ಸ್ಥಾನ ನಿರ್ದೇಶಕಗಳೆಂದೂ $\dot{\bar{q}}_k$ಗಳನ್ನು ಸಾರ್ವತ್ರೀಕೃತ ವೇಗನಿರ್ದೇಶಕಗಳೆಂದೂ (ಜನರಲೈಸ್ಡ್ ಕೋಆರ್ಡಿನೇಟ್ಸ್ ಅಂಡ್ ವೆಲಾಸಿಟೀಸ್) ಕರೆಯುತ್ತೇವೆ. ನಿರ್ದೇಶಕಗಳನ್ನು ಕುರಿತಂತೆ ನಮ್ಮ ಸ್ಫೂರ್ತಿ ಕೇವಲ ಚಿತ್ರ (1) ರಿಂದಲೇ ಉಗಮಿಸುವಾಗ A0 ಕಾಯವೊಂದರ ಸ್ಥಾನ ಗೊತ್ತಾದ ಬಳಿಕ A1ರ ಸ್ಥಾನವನ್ನು ನಿಷ್ಕರ್ಷಿಸಲು ಒಂಟಿ ನಿರ್ದೇಶಕ $q_1$=A0A2 ಮಾತ್ರವೇ ಸಾಕು, A2ರ ಸ್ಥಾನವನ್ನು ನಿಷ್ಕರ್ಷಿಸಲು $q_2$=A0A2 ಮಾತ್ರವೇ ಸಾಕು ಎಂದೆಲ್ಲ ಅನ್ನಿಸುವುದು ಸಹಜ. ಸಾರ್ವತ್ರೀಕೃತ ನಿರ್ದೇಶಕಗಳಾದರೋ ಕಾಯಗಳ ಸ್ಥಾನ ಮತ್ತು ವೇಗಗಳನ್ನು ಹೀಗೆ ಬಿಡಿಬಿಡಿಯಾಗಿ ಪ್ರತಿನಿಧಿಸಬೇಕಾದುದೇನಿಲ್ಲ. ಉದಾಹರಣೆಗೆ A2ರ ಸ್ಥಾನ ನಿರ್ದೇಶನಕ್ಕೆ ಸಾರ್ವತ್ರೀಕೃತ ಪ್ರಾಚಲ $\bar{q}_2$ರ ಜೊತೆಗೆ $\bar{q}_0, \dot{q}_0, q_1, \dot{\bar{q}}_1, \dot{\bar{q}}_2, q_3, \dot{\bar{q}}_3$, ಮುಂತಾದವೆಲ್ಲವೂ ಅವಶ್ಯವಾಗಬಹುದು. (ನಿಜಕ್ಕೂ A2ಕ್ಕೂ $\bar{q}_2$ಕ್ಕೂ ಯಾವ ವಿಶಿಷ್ಟ ಸಂಬಂಧವೂ ಇಲ್ಲದಿರಬಹುದು.) ಅಂದಮೇಲೆ ಸಾರ್ವತ್ರೀಕೃತ ನಿರ್ದೇಶಕಗಳೆಲ್ಲವೂ ಒಟ್ಟಾಗಿ ಸೇರಿ ಚಲನವ್ಯವಸ್ಥೆಯ ಸ್ಥಿತಿಗತಿಗಳ ಸಮಷ್ಟಿ ವಿನ್ಯಾಸವನ್ನು ಸೂಚಿಸುತ್ತವೆಂದಾಯಿತು. ಈಗ (3) ಸಮೀಕರಣಗಳನ್ನು ಮತ್ತೆ ಅವಕಲಿಸಿ $\ddot{q}_l$ಗೆ a$\ell$ನ್ನು ಆದೇಶಿಸಿದರೆ

$$\ddot{\bar{q}}k = \sum_{(l)}\left(\dot{q}l\frac{\partial \bar{g}_k}{\partial ql} + \alpha l\frac{\partial \bar{g}_k}{\partial \dot{q}l}\right)$$

ಎಂದಾಗುವುದು. (4) ಸಮೀಕರಣಗಳು ನೀಡುವ $ql$, $\dot{q}l$ ಗಳ ಬೆಲೆಗಳನ್ನು ಈ ಕೊನೆಯ ಸಮೀಕರಣದಲ್ಲಿ ಆದೇಶಿಸಿದಾಗ $\ddot{\bar{q}}_k$ ಪ್ರಾಚಲ (ಇದಕ್ಕೆ ಸಾರ್ವತ್ರೀಕೃತ ವೇಗೋತ್ಕರ್ಷವೆಂದು ಹೆಸರು) $\bar{q}_0, \dot{q}_0, \bar{q}_1, \dot{\bar{q}}_1$, ಇತ್ಯಾದಿಗಳ ಒಂದು ಉತ್ಪನ್ನವಾಗಿ ಅಭಿವ್ಯಕ್ತವಾಗುತ್ತದೆ :

$$\ddot{\bar{q}}_k = \alpha_k\ (\bar{q}_0, \bar{q}_1, \bar{q}_2, \text{ ಇತ್ಯಾದಿ; } \dot{\bar{q}}_0, \dot{\bar{q}}_1, \dot{\bar{q}}_2, \text{ ಇತ್ಯಾದಿ} \quad ......[5]$$

(1) ಹಾಗೂ (5) ಸಂಬಂಧಗಳಿಗಿರುವ ಸಾದೃಶ್ಯ ಸುಸ್ಪಷ್ಟ. ಸಾರ್ವತ್ರೀಕೃತ ವೇಗೋತ್ಕರ್ಷಗಳು ಕೂಡ ಸಾರ್ವತ್ರೀಕೃತ ಸ್ಥಾನ ಹಾಗೂ ಸಾರ್ವತ್ರೀಕೃತ ವೇಗಗಳ ನಿರ್ದಿಷ್ಟ ಉತ್ಪನ್ನಗಳಾಗುತ್ತವೆ. $\bar{\alpha}_0, \bar{\alpha}_1, \bar{\alpha}_2$ ಇತ್ಯಾದಿ ಉತ್ಪನ್ನಗಳಿಗೆ ಸಾರ್ವತ್ರೀಕೃತ ಉತ್ಕರ್ಷ ಘಟಕಗಳೆಂದೂ ಅವುಗಳ ಒಟ್ಟು ಗುಂಪಿಗೆ ಸಂವೃತ ವ್ಯವಸ್ಥೆಯ ಸಾರ್ವತ್ರೀಕೃತ ಉತ್ಕರ್ಷಕ್ಷೇತ್ರವೆಂದೂ ಹೆಸರು. ಪ್ರಾಚಲ ಪರಿವರ್ತನೆಗಳ ಬಗ್ಗೆ ಮೇಲೆ ತಿಳಿಸಿರುವ ವಿಚಾರಗಳ ಸ್ಪಷ್ಟನೆಗಾಗಿ ಈಗ ಒಂದು ಸರಳ ಉದಾಹರಣೆಯನ್ನು ಕೊಡುತ್ತೇವೆ. ಇದಕ್ಕಾಗಿ ತ್ರಿಕಾಯ ಸಂವೃತ ವ್ಯವಸ್ಥೆಯೊಂದರ ಮೂಲ ಉತ್ಕರ್ಷಘಟಕಗಳು ಕೆಳಗೆ ವ್ಯಾಖ್ಯಿಸಿರುವಂತೆ ಇವೆಯೆಂದು ಭಾವಿಸಬೇಕು. :

$$\dot{q}_0 = \alpha_0 \equiv 0\ ; \ddot{q}_1 = \alpha_1 \equiv 2 - \frac{1}{2}(q_1 + q_2) + q_0$$

$$\ddot{q}_2 = \alpha_2 \equiv -2 - \frac{1}{2}(q_1 + q_2) + q_0$$

($q_0$=0 ಆದೇಶಿಸಿದರೆ ಇವು ಹಿಂದೆ ಚರ್ಚಿಸಿದ ತ್ರಿಕಾಯ ವ್ಯವಸ್ಥೆಯನ್ನು ಕುರಿತ ವರ್ಣನಾಮಾರ್ಗ 2ಕ್ಕೆ ಸರಿಹೊಂದುತ್ತವೆ.) ವ್ಯವಸ್ಥೆಯ ಮೂಲ ಪ್ರಾಚಲ $qk$, $\dot{q}_k$ ಗಳನ್ನು $\bar{q}_k, \dot{\bar{q}}_k$ ಗಳಿಗೆ ಪರಿವರ್ತಿಸಲು ಕೆಳಗಿನ ಸಮೀಕರಣಗಳನ್ನು ಬಳಸಿಕೊಳ್ಳುತ್ತೇವೆ:

$$\bar{q}_0 = \bar{f}_0 \equiv q_0 + \dot{q}_1 ; \bar{q}_1 = \bar{f}_1 = q_1 + \dot{q}_1 ; \bar{q}_2 = \bar{f}_2 = q_2 + \dot{q}_1 \quad ...(2)$$

ಇವನ್ನು ಅವಕಲಿಸಿ $\ddot{q}_1 = \alpha_1$ ಆದೇಶಿಸಿದರೆ

$$\dot{\bar{q}}_0 = \bar{g}_0 \equiv \dot{q}_0 + 2 - \frac{1}{2}(q_1 + q_2) + q_0$$

$$\dot{\bar{q}}_0 = \bar{g}_1 + \dot{q}_1\ 2 - \frac{1}{2}(q_1 + q_2) + q_0 \quad ....(3)$$

$$\dot{\bar{q}}_2 = \bar{g}_2 + \dot{q}_2\ 2 - \frac{1}{2}(q_1 + q_2) + q_0$$

$qk$, $\dot{q}_k$ ಗಳಿಗಾಗಿ [2'] [3'] ಗಳನ್ನು ಪರಿಹರಿಸಿದಲ್ಲಿ

$$q_0 = f_0 \equiv 2 + 2\bar{q}_0 - \frac{1}{2}(\bar{q}_1 + \bar{q}_2) - \dot{\bar{q}}_1$$

$$q_1 = f_1 \equiv 2 + \bar{q}_0 + \frac{1}{2}(\bar{q}_1 - \bar{q}_2) - \dot{\bar{q}}_1$$

$$q_2 = f_2 \equiv 2 + \bar{q}_0 - \frac{1}{2}(\bar{q}_1 - \bar{q}_2) - \dot{\bar{q}}_1$$

$$\dot{q}_0 = g_0 \equiv -2 - \bar{q}_0 + \frac{1}{2}(\bar{q}_1 + \bar{q}_2) + \dot{\bar{q}}_0$$

$$\dot{q}_1 = g_1 \equiv -2 - \bar{q}_0 + \frac{1}{2}(\bar{q}_1 + \bar{q}_2) + \dot{\bar{q}}_1$$

$$\dot{q}_2 = g_2 \equiv -2 - \bar{q}_0 + \frac{1}{2}(\bar{q}_1 + \bar{q}_2) + \dot{\bar{q}}_2$$

ಪುನಃ [3']ಸಮೀಕರಣಗಳನ್ನು ಅವಕಲಿಸಿ ಅನಂತರ $\ddot{q}_l = \alpha_l$ ಬೆಲೆಗಳನ್ನೂ [4] ಸಮೀಕರಣಗಳಲ್ಲಿರುವ $qk$, $\dot{q}_k$ ಗಳ ಬೆಲೆಗಳನ್ನೂ ಆದೇಶಿಸಿದರೆ ಪರಿವರ್ತಿತ $\bar{\alpha}_k$ ಉತ್ಕರ್ಷಘಟಕಗಳು ಕೆಳಗೆ ತೋರಿಸಿರುವಂತೆ ಲಭ್ಯವಾಗುತ್ತವೆ:

$$\ddot{\bar{q}}_0 = \bar{\alpha}_0 \equiv \dot{\bar{q}} - \frac{1}{2}(\dot{\bar{q}}_1 + \dot{\bar{q}}_2)$$

$$\ddot{\bar{q}}_1 = \bar{\alpha}_1 \equiv 2 + \bar{q}_0 + \dot{\bar{q}}_0 - \frac{1}{2}(\bar{q}_1 + \bar{q}_2 + \dot{\bar{q}}_1 + \dot{\bar{q}}_2)$$

$$\ddot{\bar{q}}_2 = \bar{\alpha}_2 \equiv -2 + \bar{q}_0 + \dot{\bar{q}}_0 - \frac{1}{2}(\bar{q}_1 + \bar{q}_2 + \dot{\bar{q}}_1 + \dot{\bar{q}}_2) ......[5']$$

ಈ ಉದಾಹರಣೆಯಲ್ಲಿ ಮೂಲ ಉತ್ಕರ್ಷಘಟಕ akಗಳು qk ಸ್ಥಾನಪ್ರಾಚಲಗಳಷ್ಟನ್ನೇ ಒಳಗೊಂಡಿದ್ದವೇ ಹೊರತು ವೇಗಪ್ರಾಚಲ $\dot{q}_k$ ಗಳನ್ನು ಒಳಗೊಂಡಿರಲೇ ಇಲ್ಲ. ಪರಿವರ್ತಿತ ಉತ್ಕರ್ಷಘಟಕ $\bar{\alpha}_k$ ಗಳಾದರೋ ಸ್ಥಾನಪ್ರಾಚಲ, $\bar{q}$ k ವೇಗಪ್ರಾಚಲ $\dot{\bar{q}}_k$ ಗಳೆರಡನ್ನೂ ಒಳಗೊಂಡಿವೆ. ಅಂದರೆ ಇಲ್ಲಿಯ ಪರಿವರ್ತನೆ ಉತ್ಕರ್ಷಘಟಕಗಳನ್ನು ಮುಂಚೆ ಇದ್ದುದಕ್ಕಿಂತಲೂ ಹೆಚ್ಚು ಸಂಕೀರ್ಣಗೊಳಿಸಿದಂತಾಯಿತು. ಆದರೆ ಇದಕ್ಕೆ ವಿಪರ್ಯಯ ದಿಶೆಯಲ್ಲಿ ಉತ್ಕರ್ಷಘಟಕಗಳನ್ನು ಸರಳತರ ರೂಪಗಳಿಗೆ ಕೊಂಡೊಯ್ಯಬಲ್ಲ ಅದೃಷ್ಟಕರ ಪರಿವರ್ತನೆಗಳೂ ಇರಲು ಶಕ್ಯವಿದೆ. ಎಲ್ಲ ಪರಿವರ್ತನೆಗಳಿಗೂ ಯೂಕ್ಲಿಡೀಯ ಜ್ಯಾಮಿತಿಯ ಚೌಕಟ್ಟಿನೊಳಗೆ ವ್ಯಾಖ್ಯಾನ (ಯೂಕ್ಲಿಡಿಯನ್ ಇಂಟರ್ಪ್ರಿಟೇಷನ್) ನೀಡಲು ಸಾಧ್ಯವಾಗುವುದಿಲ್ಲ. ಈ ಮಾತಿಗೆ ಅಪವಾದವಾಗುವ ಕೆಲವೇ ಪರಿವರ್ತನೆಗಳ ಪೈಕಿ ಮೇಲಿನ [2] ಕೂಡ ಒಂದು. ಇದನ್ನು ಗ್ರಹಿಸಲು A0 ಗುರುತಿನಿಂದ $\dot{q}_1$ 1 ದೂರದಷ್ಟು ಹಿಂದೆ A ಎಂಬ ಬಿಂದುವನ್ನು ಕಲ್ಪಿಸಿಕೊಳ್ಳಬೇಕು. (ಚಿತ್ರ 1) ಆಗ ಹಳೆಯ qk=ಸಚಿಹ್ನ ದೂರ $A_0A_k$ ಆಗಿದ್ದ ಪ್ರಕಾರವೇ ಹೊಸ $\bar{q}$ $k$=ಸಚಿಹ್ನದೂರ $AA_k$ ಆಗುವುವು ($k$=0,1,2). ಆದಾಗ್ಯೂ ಈ ವ್ಯಾಖ್ಯಾನದಲ್ಲಿನ A ಬಿಂದು ಕೇವಲ ಕಾಲ್ಪನಿಕವೆಂಬುದನ್ನು

ಮರೆಯಲಾಗದು. $A$ ಬಳಿ ಯಾವ ಕಾಯವೂ ಇರಬೇಕಿಲ್ಲದ ಕಾರಣ $A$ಯ ಅಸ್ತಿತ್ವ ಅನಿವಾರ್ಯವಾಗಿ $A_0$ ಕಾಯದ ಅಸ್ತಿತ್ವವನ್ನೇ ಅವಲಂಬಿಸಬೇಕಾಗುವುದು. ಕೊನೆಯದಾಗಿ $A_kA_l$ ಗಳ ನಡುವೆ ಇರುವ ದೂರದ ಬೆಲೆ ಹಳೆಯ ಪ್ರಾಚಲಗಳ ಮಾಧ್ಯಮದಲ್ಲಿ ಅಭಿವ್ಯಕ್ತಿವಾದಾಗ ಯಾವ ರೂಪವನ್ನು ತಾಳುತ್ತದೋ ಹೊಸ ಪ್ರಾಚಲಗಳಲ್ಲಿ ಅಭಿವ್ಯಕ್ತಿಸಿದಾಗಲೂ ಅದೇ ರೂಪವನ್ನು ತಾಳುವುದು:

$$\text{ದೂರ} \quad A_k\ A_l = |q_k - q_l| = |\bar{q}_k - \bar{q}_l|$$

ಈ ಲಕ್ಷಣವಿರುವ ಪರಿವರ್ತನೆಗಳಿಗೆ ಐಸೊಮಾಪನಗಳೆಂದು ಹೆಸರು (ಐಸೋಮಿಟ್ರೀಸ್). ಐಸೋಮಾಪನಗಳಿಗೆ [2'] ಒಂದು ಸರಳ ನಿದರ್ಶನ. ಆಗಲೇ ತಿಳಿಸಿರುವಂತೆ ಸಾರ್ವತ್ರಿಕ ಪರಿವರ್ತನೆಗಳಲ್ಲಿ ಹೊಸ ಸ್ಥಾನನಿರ್ದೇಶಕ $\bar{q}\ k$ಗೂ $A_k$ ಕಾಯಕ್ಕೂ ಯಾವುದೇ ರೀತಿಯ ವಿಶೇಷ ಸಂಬಂಧವೂ ಇಲ್ಲದಿರಬಹುದು. ಐಸೊಮಾಪನಗಳಲ್ಲಿ ಮಾತ್ರ $\bar{q}\ k$, $A_k$ ಗಳ ನಡುವೆ ಒಂದು ರೀತಿಯ ವಿಶೇಷ ಸಂಬಂಧ ಇನ್ನೂ ಉಳಿದುಕೊಂಡಿರುತ್ತದೆ. ($A_0$ಯ ಸ್ಥಾನವನ್ನೂ $\bar{q}$ 'ನ್ನೂ ಕೊಟ್ಟಾಗ $A_1$ರ ಸ್ಥಾನವನ್ನು ಗೊತ್ತುಮಾಡಬಹುದು ಎಂಬ ಅಭಿಪ್ರಾಯದಲ್ಲಿ ಈ ಮಾತನ್ನು ಹೇಳಿಲ್ಲ; ನಿಜಕ್ಕೂ (4') ಸಮೀಕರಣಗಳಿಂದ ಸ್ಪಷ್ಟವಾಗುವಂತೆ $A_1$ರ ಸ್ಥಾನ ತಿಳಿಯಲು $\bar{q}_1$ರ ಜೊತೆಗೆ $\bar{q}_0, \bar{q}_2$ ಹಾಗೂ $\dot{\bar{q}}_1$ ಇವಿಷ್ಟೂ ಅವಶ್ಯವಾಗುತ್ತವೆ).

ಇದುವರೆಗಿನ ನಮ್ಮ ವಿಶ್ಲೇಷಣೆಯಲ್ಲಿ ಸಂವೃತ ವ್ಯವಸ್ಥೆಯೊಂದರ ಉತ್ಕರ್ಷ ಘಟಕಗಳನ್ನು ಅದರೊಳಗಿನ ಕಾಯಗಳ ಸ್ಥಾನ ಮತ್ತು ವೇಗಗಳನ್ನು ಅವಲಂಬಿಸುವ ಯಾವುದೇ ಒಂದಷ್ಟು ಉತ್ಪನ್ನಗಳು ಎಂದು ಮಾತ್ರ ಚಿತ್ರಿಸಿಕೊಂಡಿದ್ದೇವೆ. ಆದರೆ ನಿಸರ್ಗದಲ್ಲಿ ಇಂಥ ಉತ್ಪನ್ನಗಳಿಗೆ ಯಾದೃಚ್ಛಿಕ ರಚನೆ (ಆರ್ಬಿಟ್ರರಿ ಸ್ಟ್ರಕ್ಚರ್) ಇರುವುದು ಅಸಾಧ್ಯ ಎಂಬ ವಿಚಾರ ನ್ಯೂಟನ್ನನ ಪ್ರತಿಭೆಗೆ ಸ್ಫುರಿಸಲು ಹೆಚ್ಚು ಕಾಲವೇನೂ ಹಿಡಿದಿರಲಾರದು. ಹಾಗಿದ್ದ ಮೇಲೆ ನಿಸರ್ಗಮಾನ್ಯ ಉತ್ಕರ್ಷಘಟಕಗಳ ರಚನೆ ಯಾವ ನಿರ್ದಿಷ್ಟ ನಿಬಂಧನೆಗಳಿಗೆ ಒಳಪಟ್ಟಿರಬೇಕು? ಈ ಪ್ರಶ್ನೆಗೆ ಉತ್ತರವನ್ನು ಸಹ ನ್ಯೂಟನ್ ಪರಿಪೂರ್ಣವಾಗಿ ಅಲ್ಲದಿದ್ದರೂ ಅಂದಿನ ಕಾಲದಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೆ ಒದಗಿಸಿಕೊಟ್ಟನೆಂಬುದು ಗಮನಾರ್ಹ. ಈ ದಿಶೆಯಲ್ಲಿ ನ್ಯೂಟನ್ನನ ವಿಚಾರಸರಣಿಯ ಮೊದಲ ಹೆಜ್ಜೆ ಅಧ್ಯಾರೋಪಣ ತತ್ತ್ವ (ಸೂಪರ್‌ಪೊಸಿಷನ್ ಪ್ರಿನ್ಸಿಪಲ್) ಎಂಬುದಾಗಿ ಹೆಸರುಗಳಿಸಿದೆ. ಪ್ರತಿಯೊಂದು ಉತ್ಕರ್ಷಘಟಕವನ್ನೂ ಸಂವೃತ ವ್ಯವಸ್ಥೆಯಲ್ಲಿರುವ ಬಿಡಿಬಿಡಿ ಕಾಯಗಳ ಪ್ರತ್ಯೇಕ ಪ್ರತ್ಯೇಕ ಪ್ರಭಾವಗಳಿಂದ ಜನ್ಯವಾಗಿರುವಂತೆ ಏಕೈಕ ರೀತಿಯಲ್ಲಿ ವಿಶ್ಲೇಷಿಸಿಕೊಳ್ಳಬಹುದೆಂಬ ನಂಬಿಕೆ ಈ ತತ್ತ್ವಕ್ಕೆ ಹಿನ್ನೆಲೆಯಾಗಿದೆ. ಆದರೆ ವ್ಯವಸ್ಥೆಯ ಕಾಯಗಳ ಸ್ಥಾನ ಹಾಗೂ ವೇಗ ವಿನ್ಯಾಸಗಳನ್ನು ಮೂಲ ಪ್ರಾಚಲ $q_k, \dot{q}_k$ಗಳ ಮುಖಾಂತರ ವ್ಯಕ್ತಪಡಿಸಿದಲ್ಲಿ ಈ ನಂಬಿಕೆ ಸತ್ಯಕ್ಕೆ ಬಲು ದೂರವಾಗುವ ಸಂಭವವೇ ಹೆಚ್ಚು. ಆದ್ದರಿಂದ ಅಧ್ಯಾರೋಪಣ ತತ್ತ್ವದ ಅನ್ವಯಕ್ಕೆ ಮುನ್ನ $q_k, \dot{q}_k$ಗಳನ್ನು ಒಂದಲ್ಲ ಒಂದು ಐಸೊಮಾಪನಕ್ಕೆ ಗುರಿಪಡಿಸಿ ಸೂಕ್ತವಾದ ಹೊಸ ಪ್ರಾಚಲ $\bar{q}_k, \dot{\bar{q}}_k$ ಗಳಾಗಿ ಪರಿವರ್ತಿಸಿಕೊಳ್ಳಬೇಕು ಎಂಬ ನಿಬಂಧನೆಯನ್ನೂ ನ್ಯೂಟನ್ ಸಿದ್ಧಾಂತದಲ್ಲಿ ಅಂಗೀಕರಿಸಲಾಗಿದೆ. $q_k$ ಸ್ಥಾನನಿರ್ದೇಶಕಗಳನ್ನು ವ್ಯಾಖ್ಯಿಸುವಾಗ $A_0$ ಕಾಯವನ್ನು ಮೂಲ ಬಿಂದುವನ್ನಾಗಿ ಆಯ್ದ ಕಾರಣ $q_0 = 0$ ಆಗಿ $A_0$ ಚಿರನಿಶ್ಚಲವಾಯಿತಷ್ಟೆ. ಈ ಪ್ರಕಾರ ಯಾದೃಚ್ಛಿಕವಾಗಿ $A_0$ಗೆ ನಿಶ್ಚಲತೆಯನ್ನು ಆರೋಪಿಸಿದ್ದೇ $q_k, \dot{q}_k$ ನಿರ್ದೇಶಕಗಳ ದೋಷವೆಂದೂ ಸಂಸ್ಕರಿತ $\bar{q}_k, \dot{\bar{q}}_k$ ಗಳಾದರೋ ನಿಜವಾದ ಆಕಾಶದಲ್ಲಿ $A_0$ಗೂ ಇರಬಹುದಾದ ನಿರಪೇಕ್ಷ ಚಲನೆಯನ್ನು (ಆ್ಯಬ್ಸಲ್ಯೂಟ್ ಮೋಷನ್) ಪ್ರತಿಬಿಂಬಿಸಬಲ್ಲವೆಂದೂ ನ್ಯೂಟನ್ ಬಗೆದ. $A_0$ಯಂಥ ಕಾಯಗಳಾವುವನ್ನೂ ಅವಲಂಬಿಸದಿರುವ ನಿಜವಾದ ಆಕಾಶವೊಂದಿದೆ. $\bar{q}_k, \dot{\bar{q}}_k$ ಗಳು ಆ ನೈಜ ಆಕಾಶದ ಪ್ರತೀಕಗಳು ಎಂಬ ನಂಬಿಕೆಗೆ ಆಕಾಶದ ನಿರಪೇಕ್ಷತಾ ತತ್ತ್ವ (ಪ್ರಿನ್ಸಿಪಲ್ ಆಫ್ ಆ್ಯಬ್ಸಲ್ಯೂಟ್ ಸ್ಪೇಸ್) ಎಂದು ಹೆಸರು. ಈ ತತ್ತ್ವ ಕೇವಲ ಭ್ರಾಂತಿಜನ್ಯವೆಂದು ಪ್ರಸಕ್ತ ಶತಮಾನದ ಆದಿಭಾಗದಲ್ಲಿ ಆಲ್ಬರ್ಟ್ ಐನ್‌ಸ್ಟೈನ್ (1879–1955) ತೋರಿಸಿಕೊಟ್ಟ. $\bar{q}_k, \dot{\bar{q}}_k$ ಗಳಾದರೂ $q_k, \dot{q}_k$ಗಳಿಂದಲೇ ವ್ಯಾಖ್ಯಿತವಾಗುವ ಕಾರಣ (ಸಮೀಕರಣ) [2], [3]ಗಳನ್ನು ಗಮನಿಸಬೇಕು) $q_k, \dot{q}_k$ ಗಳ ಅಸ್ತಿತ್ವಕ್ಕೂ ಕಾಯಗಳ ಆಸರೆ ಬೇಕೇ ಬೇಕು. ಆದಾಗ್ಯೂ ಸೂಕ್ತ $\bar{q}_k, \dot{\bar{q}}_k$ ಗಳ ಮಾಧ್ಯಮದಲ್ಲಿ ಅಧ್ಯಾರೋಪಣ ತತ್ತ್ವವೂ, ಜೊತೆಗೆ ನಾವು ಇಷ್ಟರಲ್ಲೇ ನಿರೂಪಿಸಲಿರುವ ಪ್ರತಿಕ್ರಿಯಾ ಹಾಗೂ ದೂರಸಂವೇದನಾತತ್ತ್ವಗಳೂ ಅನೇಕ ವೇಳೆ ಬಹುಮಟ್ಟಿಗೆ ಸತ್ಯವಾಗುವುದರಿಂದ ಅಂಥ ನಿರ್ದೇಶಕಗಳಿಗೆ ವಿಶಿಷ್ಟವಾದ ಒಂದು ಹೆಸರನ್ನು ಪಡೆಯುವ ಅರ್ಹತೆ ಇದೆ. ಈ ಅರ್ಹತೆಯನ್ನು ಲಕ್ಷಿಸಿ ಅಧ್ಯಾರೋಪಣಾದಿ ತತ್ತ್ವಗಳಿಗೆ ಸರಿಹೊಂದಬಲ್ಲ $\bar{q}_k, \dot{\bar{q}}_k$ ಗಳನ್ನು ಜಡತಾ ನಿರ್ದೇಶಕಗಳೆಂದೂ ಅವು ಪ್ರತಿನಿಧಿಸುವ ಆಕಾಶಕ್ಕೆ ಜಡತಾಕಾಶವೆಂದೂ (ಇನರ್ಷಿಯಲ್ ಕೋ ಆರ್ಡಿನೇಟ್ಸ್/ಸ್ಪೇಸ್) ಹೆಸರಿಸುತ್ತೇವೆ. ಸೂಕ್ತ ಜಡತಾ ನಿರ್ದೇಶಕಗಳನ್ನು ಬಳಸಿದಾಗ ಕಾಯದ ಉತ್ಕರ್ಷಘಟಕ $\bar{\alpha}_k$ ಯನ್ನು $A_0, A_1, A_1$ ಇತ್ಯಾದಿ ಬಿಡಿ ಬಿಡಿ ಕಾಯಗಳ ಪ್ರತ್ಯೇಕ ಪ್ರಭಾವಗಳನ್ನು ಸೂಚಿಸುವ, $\bar{\alpha}_{k0}, \bar{\alpha}_{k1}, \bar{\alpha}_{k2}$ ಮುಂತಾದ ಹಲವಾರು ಭಿನ್ನಪದಗಳ ಮೊತ್ತವನ್ನಾಗಿ ಅಭಿವ್ಯಕ್ತಿಸಬಹುದು ಹಾಗೂ $\bar{\alpha}_{kl} = \alpha_{kl}\ (\bar{q}_k; \bar{q}_l)$ ಪದ (ಇದನ್ನು $A_k$ಯ ಮೇಲೆ $A_l$ ನ ಪ್ರಭಾವದ ಪ್ರತೀಕವೆಂದು ಗಣಿಸಬೇಕು) ಎಲ್ಲ ವೇಗ ಪ್ರಾಚಲಗಳಿಂದಲೂ ವಿಮುಕ್ತವಾಗಿದ್ದು $A_k$, $A_l$ ಎರಡು ಕಾಯಗಳ ಸ್ಥಾನ ಪ್ರಾಚಲಗಳನ್ನು ಮಾತ್ರವೇ ಒಳಗೊಳ್ಳುತ್ತದೆ ಎಂಬುದು ನಾವು ಪರಿಶೀಲಿಸುತ್ತಿರುವಂಥ ಗಿರಕಿರಹಿತ ಸರಳರೇಖಾಸಂವೃತ ವ್ಯವಸ್ಥೆಯನ್ನು ಕುರಿತಂತೆ ಅಧ್ಯಾರೋಪಣ ತತ್ತ್ವದ ನಿಖರ ನಿರೂಪಣೆ: ಅಂದ ಮೇಲೆ ಇದರ ಪ್ರಕಾರ

$$\bar{\alpha}_k \equiv \bar{\alpha}_{k0}(\bar{q};\bar{q}_0) + \bar{\alpha}_{k1}(\bar{q}_k;\bar{q}_1) + \bar{\alpha}_{k2}(\bar{q}_k;\bar{q}_2) + \text{ ಇತ್ಯಾದಿ}$$

$$= \sum_{(l)} \bar{\alpha}_{kl}(\bar{q}_k;\bar{q}_l);\ k = 0,1,2 \text{ ಇತ್ಯಾದಿ} \qquad .......[6]$$

ಆಗುವಂತೆ $q_k, \dot{q}_k$ ಗಳ ಒಂದು ಐಸೊಮಾಪನ $\bar{q}_k, \dot{\bar{q}}_k$ ಯನ್ನು ಕಂಡುಹಿಡಿಯಲು ಶಕ್ಯವಾಗಬೇಕು ಎಂದಾಯಿತು. ನ್ಯೂಟನ್ ವಿಚಾರಸರಣಿಯ ಎರಡನೆಯ ಹೆಜ್ಜೆ ಪ್ರತಿಕ್ರಿಯಾ ತತ್ತ್ವ (ರಿಆ್ಯಕ್ಷನ್ ಪ್ರಿನ್ಸಿಪಲ್) ಅಥವಾ ತೃತೀಯ ಚಲನ ನಿಯಮ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. $\bar{q}_k, \dot{\bar{q}}_l$ ಗಳ ಎಲ್ಲ ಬೆಲೆಗಳಿಗೂ (ಆ ಬೆಲೆಗಳಿಗೆ ಅನುರೂಪವಾದ ¸ÁÜ£ÀUÀ¼À°è $A_k$, $A_l$ ಕಾಯಗಳಿರಲಿ, ಬಿಡಲಿ)

$$m_k \bar{\alpha}_{kl}(\bar{q}_k;\bar{q}_l) + m_l \bar{\alpha} l_k(q_l;\bar{q}_k) = 0 \qquad ........[7]$$

ಆಗುವಂತೆ $m_0, m_1, m_2$ ಇತ್ಯಾದಿ ಅಶೂನ್ಯ ನಿಯಂತಾಂಕಗಳನ್ನು (ನಾನ್‌ಜ಼ೀರೋ ಕಾನ್‌ಸ್ಟಂಟ್ಸ್ ) ಕಂಡು ಹಿಡಿಯಲು ಶಕ್ಯವಾಗುತ್ತದೆ ಎಂಬುದೇ ಈ ತೃತೀಯ ಚಲನ ನಿಯಮದ ನಿರೂಪಣೆ. ನಿಯತಾಂಕ $m_K$ ಗೆ $A_K$ ಕಾಯದ ದ್ರವ್ಯರಾಶಿ (ಮ್ಯಾಸ್) ಎಂದು ಹೆಸರು. ಪ್ರಯೋಗಕಾರನೊಬ್ಬನಿಗೆ ಕಾಯಗಳನ್ನು ಮನಬಂದಂತೆ ಕದಲಿಸುವ ಸೌಲಭ್ಯವಿರುವಾಗ $A_K$ಯನ್ನೂ ಶಿಷ್ಟರಚನೆಯ ಇತರ ಕೆಲವು ಕಾಯಗಳನ್ನೂ ನಿಯಂತ್ರಿತ ವಿನ್ಯಾಸಗಳಲ್ಲಿ ಜೋಡಿಸಿ ಆ ಮೂಲಕ ಮೂಲ ವ್ಯವಸ್ಥೆಯ ಒಂದು ಸಂವೃತ ಉಪವ್ಯವಸ್ಥೆಯನ್ನು ರೂಪಿಸಲು ಶಕ್ಯವಾಗಬಹುದು. ಹಾಗಿದ್ದಲ್ಲಿ ರೂಪಿತ ಉಪವ್ಯವಸ್ಥೆಯ ವಿದ್ಯಮಾನಗಳಿಂದ $A_K$ಗೆ ಅನುಗುಣವಾದ $m_K$ ದ್ರವ್ಯರಾಶಿ ಹೆಚ್ಚಿನ ಲೆಕ್ಕಾಚಾರಗಳ ಅಗತ್ಯವಿಲ್ಲದೆಯೇ ಪತ್ತೆಯಾಗಿಬಿಡುವುದುಂಟು. $m_K$ ಯ ನಿಷ್ಕರ್ಷೆಗಾಗಿ ರೂಪಿಸಬಹುದಾದ ಈ ಬಗೆಯ ಸಂವೃತ ಉಪವ್ಯವಸ್ಥೆಗಳು ತ್ರಾಸು ಅಥವಾ ತಕ್ಕಡಿಗಳೆನಿಸಿಕೊಳ್ಳುತ್ತವೆ (ಬ್ಯಾಲನ್ಸ್/ಸ್ಕೇಲ್ಸ್). ಸೌರವ್ಯೂಹದಂಥ ಸಂವೃತ ವ್ಯವಸ್ಥೆಗಳ ಬೃಹತ್ಕಾಯಗಳನ್ನಾದರೋ (ಸೂರ್ಯ, ಗ್ರಹ ಮೊದಲಾದವು) ಇಚ್ಛೆ ಬಂದಂತೆ ಕದಲಿಸುವ ಸೌಲಭ್ಯವಿಲ್ಲವಷ್ಟೆ; ಇಂಥ ಸಂದರ್ಭಗಳಲ್ಲಿ ಇಡೀ ಮೂಲ ವ್ಯವಸ್ಥೆಯನ್ನೂ ಅದರೊಳಗೆ ನೈಸರ್ಗಿಕವಾಗಿ ಒದಗಿಬರಬಹುದಾದ ಕೆಲ ಉಪವ್ಯವಸ್ಥೆಗಳನ್ನೂ (ಉದಾಹರಣೆಗೆ ಭೂಮಿ, ಚಂದ್ರ) ಸಂಕೀರ್ಣ ತ್ರಾಸುಗಳನ್ನಾಗಿ ಬಳಸಿಕೊಂಡು $m_K$ ಗಳನ್ನು [6] [7] ರಂಥ ಸಮೀಕರಣ ಗಳಿಂದಲೇ ನೇರವಾಗಿ ಲೆಕ್ಕ ಹಾಕಬೇಕಾಗುವುದು. (ಸೌರವ್ಯೂಹ ಚಿತ್ರದಲ್ಲಿ ಸೂಚಿಸಿರುವಂಥ ಸರಳರೇಖಾ ವ್ಯವಸ್ಥೆಯಲ್ಲವೆಂಬುದೇನೋ ನಿಜ. ಆದರೆ ಗಿರಕಿರಹಿತ ಸರಳರೇಖಾ ವ್ಯವಸ್ಥೆಗಳನ್ನು ಕುರಿತಂತೆ ನಾವು ಇದುವರೆಗೆ ಉಚ್ಚರಿಸಿರುವ ತತ್ತ್ವಗಳನ್ನು ಸಾಕಷ್ಟು ಶ್ರಮಪಡುವುದೇ ಆದರೆ ಮೂರು ಆಯಾಮಗಳ ಆಕಾಶದಲ್ಲಿ (ತ್ರೀ ಡೈಮೆನ್ಷನಲ್ ಸ್ಪೇಸ್)

ಚಲಿಸುವ ಗಿರಕಿಸಹಿತವಾದ ವ್ಯವಸ್ಥೆಗಳಿಗೂ ಸೂಕ್ತವಾಗಿ ವಿಸ್ತರಿಸಿಕೊಳ್ಳಬಹುದು.) ಸಮೀಕರಣ [7] ರ ಎಡಪಾರ್ಶ್ವದಲ್ಲಿರುವ ಎರಡು ಪದಗಳ ಪೈಕಿ ಯಾವುದಾದರೂ ಒಂದನ್ನು ಕ್ರಿಯೆ (ಆ್ಯಕ್ಷನ್) ಎಂದೂ ಇನ್ನೊಂದನ್ನು ಪ್ರತಿಕ್ರಿಯೆ (ರಿಆ್ಯಕ್ಷನ್) ಎಂದೂ ಕರೆಯುವುದು ವಾಡಿಕೆ. ಕ್ರಿಯೆ ಪ್ರತಿಕ್ರಿಯೆಗಳು ಪರಿಮಾಣತಃ ಸಮ, ಆದರೆ ಚಿಹ್ನೆಯಲ್ಲಿ ವ್ಯತಿರಿಕ್ತ : $m_k \bar{\alpha}_{kl} = -m_l \bar{\alpha}_{lk}$. ನಿಸರ್ಗಮಾನ್ಯ ಉತ್ಕರ್ಷಘಟಕಗಳ ಶೋಧನೆಯಲ್ಲಿ ಆದಿಮ ಬಲವಿಜ್ಞಾನದ ಆಯಕಟ್ಟಿನೊಳಗೆ ಇಡಲು ಸಾಧ್ಯವಾದ ಕಟ್ಟಕಡೆಯ ಹೆಜ್ಜೆಯೇ ದೂರ ಸಂವೇದನಾ ತತ್ತ್ವ (ಪ್ರಿನ್ಸಿಪಲ್ ಆಫ್ ಡಿಸ್ಟನ್ಸ್ –ಸೆಂಟ್ರಲ್ ಫೋರ್ಸಸ್). ಈ ತತ್ತ್ವದ ಪ್ರಕಾರ $A_K$ ಕಾಯದ ಮೇಲೆ $A_l$ ಕಾಯದ ಪ್ರಭಾವವನ್ನು ಸೂಚಿಸುವ $\bar{\alpha}_{kl}(\bar{q}_k;\bar{q}_l)$ ಉತ್ಪನ್ನ $A_K, A_l$ ಗಳ ನಡುವೆ ಇರುವ ದೂರವನ್ನು ಮಾತ್ರವೇ ಅವಲಂಬಿಸಬೇಕು. (ಚಿತ್ರ1)ರ ಪ್ರಕಾರ ದೂರ $A_kA_l=q_k-q_l$ (ಸೌಲಭ್ಯಕ್ಕಾಗಿ ಇದನ್ನು ಚಿಹ್ನಾಯುಕ್ತವಾಗಿ ತೆಗೆದುಕೊಂಡಿದ್ದೇವೆ), ಹಾಗೂ ಐಸೋವರ್ಮಾಪನಗಳ ಲಕ್ಷಣದಂತೆ $\bar{q}_k - \bar{q}_l = \pm(\bar{q}_k;\bar{q}_l)$ ಆಗುವ ಕಾರಣ ದೂರ ಸಂವೇದನಾ ತತ್ತ್ವದ ಗಣಿತೀಯ ನಿರೂಪಣೆ

$$\bar{\alpha}_{kl}(\bar{q}_k;\bar{q}_l) \equiv \bar{\beta}_{kl}(\bar{q}_k - \bar{q}_l) \text{........[ 8]}$$

ಎಂಬ ರೂಪವನ್ನು ತಾಳುವುದು. $\bar{\beta}_{kl}$ ಇಲ್ಲಿ ಒಂದು ಏಕಚರ ಉತ್ಪನ್ನ (ಫಂಕ್ಷನ್ ಆಫ್ ಒನ್ ವೇರಿಯಬಲ್); $\bar{\alpha}_{kl}$ ಆದರೋ $\bar{q}_k;\bar{q}_l$) ಗಳನ್ನು ಬೇರೆ ಬೇರೆಯಾಗಿ ಒಳಗೊಳ್ಳುವ ಒಂದು ದ್ವಿಚರ ಉತ್ಪನ್ನವಾಗಬಹುದಿತ್ತು ಎಂಬುದನ್ನು ಗಮನಿಸಬೇಕು. ಅಲ್ಲಿಗೆ ಆದಿಮ ಅಭಿಜಾತ ಬಲವಿಜ್ಞಾನದ ಪ್ರಕಾರ [6], [7], [8] ಸಮೀಕರಣಗಳು ನಿಸರ್ಗಮಾನ್ಯ ಉತ್ಕರ್ಷಘಟಕಗಳನ್ನು ವಿಶಿಷ್ಟೀಕರಿಸುತ್ತವೆಂದಾಯಿತು.

ಅಧ್ಯಾರೋಪಣ ತತ್ತ್ವ, ಪ್ರತಿಕ್ರಿಯಾ ತತ್ತ್ವ ಹಾಗೂ ದೂರಸಂವೇದನಾತತ್ತ್ವಗಳು ಎಲ್ಲ ಸನ್ನಿವೇಶಗಳಲ್ಲೂ ಫಲಕಾರಿಯಾಗಲೇಬೇಕಾದ ಸಾರ್ವತ್ರಿಕ ನಿಸರ್ಗ ನಿಯಮಗಳೇನೂ ಅಲ್ಲ. ಆದಾಗ್ಯೂ ಸೌರವ್ಯೂಹದಂಥ ಮಿತವ್ಯಾಪ್ತಿಯ ಸಂವೃತ ವ್ಯವಸ್ಥೆಗಳ ಅಧ್ಯಯನದಲ್ಲೂ ಇದುವರೆಗೆ ಮಾನವನ ಕೈಗೆಟುಕಿರುವ ಸಮಸ್ತ ಎಂಜಿನಿಯರಿಂಗ್ ತಂತ್ರಗಳಲ್ಲೂ ಈ ತತ್ತ್ವಗಳಿಗೆ ಲಭಿಸಿರುವ ಯಶಸ್ಸು ನಿಜಕ್ಕೂ ಎಷ್ಟೊಂದು ಅದ್ಭುತವೆಂದರೆ ಇಂಥ ಅನ್ವಯಗಳ ಎಲ್ಲೆಯೊಳಗೆ ಅಧ್ಯಾರೋಪಣಾದಿ ತತ್ತ್ವಗಳನ್ನು ಸಂಸ್ಕರಿಸುವ ಅಗತ್ಯವೇ ಕಂಡುಬರುವುದಿಲ್ಲ. ಸದ್ಯದಲ್ಲಿ ನಾವು ಮೇಲಿನ [6], [7], [8], ಸಮೀಕರಣಗಳನ್ನು ಇದ್ದಂತೆಯೇ ಅಂಗೀಕರಿಸಿ ಬಲವಿಜ್ಞಾನದ ಮುಂದಿನ ಎಲ್ಲ ಪ್ರಗತಿಗೂ ದಾರಿದೀಪಗಳಾದ ಮೂರು ವಿಶಿಷ್ಟ ಉತ್ಪನ್ನಗಳನ್ನು ಅಧ್ಯಾರೋಪಣಾದಿ ತತ್ತ್ವಗಳ ಹಂಗಾಮಿ ಆಧಾರದ ಮೇಲೆ ರಚಿಸುತ್ತೇವೆ:

$$\bar{V} = \bar{V}(\bar{q}_0, \bar{q}_1, \bar{q}_2, \text{ಇತ್ಯಾದಿ})$$

$$\equiv -\frac{1}{2}\sum_{(k)} m_k \left\{ \sum_{(l)} \int \bar{\beta}_{kl}(\bar{q}_k - \bar{q}_l) d(\bar{q}_k - \bar{q}_l) \right\}$$

$$\bar{T} = \bar{T}(\dot{\bar{q}}_0, \dot{\bar{q}}_1, \dot{\bar{q}}_2, \text{ ಇತ್ಯಾದಿ } \equiv \frac{1}{2}\sum_k m_k \dot{\bar{q}}_k^{\,2}$$

$$\bar{E} = \bar{E}(\bar{q}_0, \bar{q}_1, \bar{q}_2, \text{ ಇತ್ಯಾದಿ } \dot{\bar{q}}_0, \dot{\bar{q}}_1, \dot{\bar{q}}_2, \text{ ಇತ್ಯಾದಿ})$$

$$\equiv V(\bar{q}_0, \bar{q}_1, \bar{q}_2, \text{ಇತ್ಯಾದಿ } + \bar{T}(\dot{\bar{q}}_0, \dot{\bar{q}}_1, \dot{\bar{q}}_2, \text{ ಇತ್ಯಾದಿ}) \text{ .........[9]}$$

ಮೇಲಿನ ಮೂರು ಉತ್ಪನ್ನಗಳಿಗೆ ಅನುಕ್ರಮವಾಗಿ ಸಂವೃತ ವ್ಯವಸ್ಥೆಯ ವಿಭವೋತ್ಪನ್ನ, ಚಲನೋತ್ಪನ್ನ ಮತ್ತು ಶಕ್ತಿ ಉತ್ಪನ್ನಗಳೆಂದು ಹೆಸರು (ಪೊಟೆನ್ಷಿಯಲ್ ಫಂಕ್ಷನ್, ಕೈನೆಟಿಕ್ ಎನರ್ಜಿ ಫಂಕ್ಷನ್, ಟೋಟಲ್ ಎನರ್ಜಿ ಫಂಕ್ಷನ್), $\bar{q}$ kಯನ್ನು ಕುರಿತು ($-\bar{V}$ )ಯನ್ನು ಅಂಶತಃ ಅವಕಲಿಸಿದರೆ (ಪಾರ್ಷಿಯಲ್ ಡಿಫರೆನ್ಷಿಯೇಷನ್)

$$-\frac{\partial \bar{V}}{\partial \bar{q}_k} = \frac{1}{2}\sum_{(l)} m_k \bar{\beta}_{kl}(\bar{q}_k - \bar{q}_l) - \frac{1}{2}\sum_{(l)} m_l \bar{\beta}_{lk}(\bar{q} - \bar{q}_k)$$

ಎಂದಾಗುವುದು. [8], [7], [6] ಸಂಬಂಧಗಳ ಸಹಾಯದಿಂದ ಇದರ ಬಲ ಪಾರ್ಶ್ವವನ್ನು ಸರಳಗೊಳಿಸಿದಾಗ

$$-\frac{\partial \bar{V}}{\partial \bar{q}_k} = \frac{1}{2}\sum_{(l)} m_k \bar{\alpha}_{kl}(\bar{q}_k;\bar{q}_l) - \frac{1}{2}\sum_{(l)} m_l \bar{\alpha}_{lk}(\bar{q}_l;\bar{q}_k)$$

$$= m_k \sum_{(l)} \bar{\alpha}_{k}(\bar{q}_k;\bar{q}_l) = m_k \bar{\alpha}_k \qquad \text{.........[10]}$$

ಎಂದು ತಿಳಿದುಬರುತ್ತದೆ. $-\frac{\partial \bar{V}}{\partial \bar{q}_k} = m_k \bar{\alpha}_k$ಗೆ $A_k$ ಕಾಯದ ಮೇಲೆ ವರ್ತಿಸುವ (ಅಭಿಜಾತ) ಬಲ ಎಂದು ಹೆಸರು(ಕ್ಲ್ಯಾಸಿಕಲ್ ಫೋರ್ಸ್). ಪ್ರಾಣಿಗಳು ತಮ್ಮ ಶರೀರದೊಳಗಿನ ಅಣು ಪರಮಾಣುಗಳೇ ಮೊದಲಾದ ಸೂಕ್ಷ್ಮ ಕಣಗಳ ಚಲನಾತ್ಮಕ ವಿನ್ಯಾಸಕ್ಕೆ ಅನಿಶ್ಚಿತ ಕದಲಿಕೆಗಳನ್ನು ನೀಡುವುದರ ಮೂಲಕ ಪರಿಸರದ ಕಾಯವೊಂದರ ಉತ್ಕರ್ಷಘಟಕ

$$\bar{\alpha}_k = \bar{\alpha}_k(\bar{q}_0, \bar{q}_1, \text{ಇತ್ಯಾದಿ} ; \dot{\bar{q}}_0, \dot{\bar{q}}_1, \text{ ಇತ್ಯಾದಿಯ ಬೆಲೆಯನ್ನು}$$

($\bar{\alpha}_k$ ಒಳಗೊಳ್ಳುವ ಕೆಲವಷ್ಟು $\bar{q}$ ,$\dot{\bar{q}}$ ಪ್ರಾಚಲಗಳು ಪ್ರಾಣಿಶರೀರಕ್ಕೆ ಆಂತರಿಕವಾದವು) ಒಂದು ಪರಿಮಿತಿಯೊಳಗಡೆ ತಮಗೆ ಇಷ್ಟ ಬಂದ ರೀತಿಯಲ್ಲೆಲ್ಲ ನಿಯಂತ್ರಿಸುತ್ತ ಹೋಗಿ ಇಡೀ ಪರಿಸರದ ಚಲನೆಗಳ ಅನಿಶ್ಚಿತತೆಯನ್ನು ಅದ್ಭುತ ಪ್ರಮಾಣದಲ್ಲಿ ವರ್ಧಿಸಿಬಿಡುತ್ತವೆ. ಹೀಗೆ ಮಾಡುವಾಗ ಅವುಗಳ ಸ್ನಾಯುಗಳು ನೇರವಾಗಿ ಸಂವೇದಿಸುವುದು $m_k\bar{\alpha}_k$ ಯ ಬೆಲೆಯನ್ನೇ ವಿನಾ $\bar{\alpha}_k$ ಯದನ್ನಲ್ಲ. (ಹುಲ್ಲುಕಡ್ಡಿ ಸರಿಸುವುದು ಸುಲಭ, ಕಲ್ಲುಬಂಡೆ ಕದಲಿಸುವುದು ಕಷ್ಟ.) ಐತಿಹಾಸಿಕವಾಗಿ ಬಲದ ಕಲ್ಪನೆಗೆ ಮೂಲಸ್ಫೂರ್ತಿ ಒದಗಿ ಬರುವುದಕ್ಕೂ ಅನಂತರ ಬಲವಿಜ್ಞಾನಿಗಳು ಅದಕ್ಕೆ ವಿಶೇಷ ಆದ್ಯತೆಯನ್ನು ನೀಡುವುದಕ್ಕೂ ಈ ಜೈವಿಕ ಸನ್ನಿವೇಶವೇ ಸಂಪೂರ್ಣ ಹಿನ್ನೆಲೆ. (ಎಂತಲೇ ಗ್ರಹಗಳ ಮೇಲೆ ಸೂರ್ಯನಂಥ ನಿರ್ಜೀವ ಕಾಯವೊಂದು ಬಲಗಳನ್ನು ಪ್ರಯೋಗಿಸುತ್ತಲಿದೆ ಎಂಬ ರೂಢಿಯ ರೂಪಕೋಕ್ತಿಯನ್ನು ಅಕ್ಷರಶಃ ಪರಿಗ್ರಹಿಸುವುದು ತಪ್ಪು. ಗ್ರಹಗಳ ಸಂಬಂಧದಲ್ಲಿ $m_k\bar{\alpha}_k$ ಪದ $\bar{\alpha}_k$ ಯಂತೆಯೇ ಕೇವಲ ಒಂದು ಗಣಿತೀಯ ಉತ್ಪನ್ನದ ಬೆಲೆಯನ್ನು ಸೂಚಿಸುತ್ತದೆ. ಬಲವೆಂದು ಕರೆದಾಗ್ಯೂ ಸೂರ್ಯನಾಗಲಿ ಬೇರಾವುದೇ ಕಾಯವಾಗಲಿ ಅದನ್ನು ಸಂವೇದಿಸುವುದಿಲ್ಲ. ನಿಶ್ಚಿತ ಜಾಡಿನ ಚಲನೆಗಳಿಗೆ ಸಂವೇದಿತ ಬಲ ಅನಗತ್ಯ.) ಈಗ ನಮ್ಮ ದೃಷ್ಟಿಯನ್ನು ವಿಭವೋತ್ಪನ್ನದಿಂದ ಚಲನೋತ್ಪನ್ನದತ್ತ ಹೊರಳಿಸಿದಲ್ಲಿ $-\frac{\partial \bar{V}}{\partial \bar{q}_k} = m_k\bar{\alpha}_k$ ಆದಂತೆಯೇ $\frac{\partial \bar{T}}{\partial \dot{\bar{q}}} = m_k \dot{\bar{q}}$ ಆಗುವುದನ್ನೂ ಗಮನಿಸಬಹುದು; $\frac{\partial \bar{T}}{\partial \dot{\bar{q}}_k}$ ಆಂಶಿಕಾವಕಲನಾಂಕಕ್ಕೆ $A_k$ ಕಾಯದ (ಅಭಿಜಾತ) ಸಂವೇಗ (ಕ್ಲ್ಯಾಸಿಕಲ್ ಮೊಮೆಂಟಮ್= $m_k \dot{\bar{q}}$ k =ದ್ರವ್ಯರಾಶಿ X ವೇಗ) ಎಂದು ಹೆಸರು. ಕಾಲಕ್ರಮೇಣ $A_k$ಯ ಸಂವೇಗ ಏರುತ್ತ ಹೋಗುವ $\frac{d(m_k \dot{\bar{q}}_k)}{dt}$ ದರವೇ $A_k$ ಕಾಯದ (ಅಭಿಜಾತ) ಸಂವೇಗೋತ್ಕರ್ಷ (ರೇಟ್ ಆಫ್ ಇನ್‌ಕ್ರೀಸ್ ಆಫ್ ಕ್ಲ್ಯಾಸಿಕಲ್ ಮೊಮೆಂಟಮ್). ಪ್ರತಿಕ್ರಿಯಾ ತತ್ತ್ವದ ನಿರೂಪಣೆಯ ಪ್ರಕಾರ $m_k$ ಒಂದು ನಿಯತಾಂಕವಾಗಬೇಕಾದ ಕಾರಣ ಈ ಸಂವೇಗೋತ್ಕರ್ಷ $m_k \frac{d\dot{\bar{q}}_k}{dt} = m_k \ddot{\bar{q}}_k$ ಗೆ ಸಮವಾಗುತ್ತದೆ. $A_k$

ಕಾಯ ನಿಶ್ಚಿತತಾ ತತ್ತ್ವಕ್ಕೆ ತಲೆಬಾಗಿ [5] ಸಮೀಕರಣಗಳ $\ddot{\bar{q}}_k = \bar{\alpha}_k$ ಎಂಬ ಆದೇಶಕ್ಕೆ ಅನುಸಾರವಾಗಿಯೇ ಚಲಿಸುವುದಾದರೆ $m_k \ddot{\bar{q}}_k = m_k \bar{\alpha}_k$ ಆಗಬೇಕಷ್ಟೆ. ಸಂವೇಗೋತ್ಕರ್ಷ=ಬಲ ಎಂದು ತಿಳಿಸುವ ಈ ಸಮೀಕರಣ ನ್ಯೂಟನ್ನನ ದ್ವಿತೀಯ ಚಲನ ನಿಯಮ ಎಂದೆನಿಸಿಕೊಂಡಿದೆ. ವ್ಯವಸ್ಥೆಯಲ್ಲಿರುವ ಎಲ್ಲ ಕಾಯಗಳೂ ನಿಶ್ಚಿತತೆಗೆ ಒಳಪಡುವುದಾದರೆ ಶಕ್ತಿ ಉತ್ಪನ್ನ $\bar{E}$ ನ ಕಾಲ ಸಾಪೇಕ್ಷ ಅವಕಲನಾಂಕ

$$\frac{d\bar{E}}{dt} = \frac{d\bar{V}}{dt} + \frac{d\bar{T}}{dt} = \sum_{(k)} \frac{d\bar{q}_k}{dt}\frac{\partial \bar{V}}{\partial \bar{q}_k} + \sum_{(k)} \frac{d\dot{\bar{q}}_k}{dt}\frac{\partial \bar{T}}{\partial \dot{\bar{q}}_k}$$

$$\sum_{(k)} \dot{\bar{q}}_k (-m_k \bar{a}_k + \sum_{(k)} \ddot{\bar{q}}_k m_k \dot{\bar{q}}_k$$

$$= -\sum_{(k)} \dot{\bar{q}}_k m_k \ddot{\bar{q}}_k + \sum_{(k)} \ddot{\bar{q}}_k m_k \dot{\bar{q}}_k = 0 \qquad \ldots(11)$$

ಆಗುವುದು. ಇದರಿಂದ ಸಂವೃತ ವ್ಯವಸ್ಥೆಯ ಕಾಯಗಳ ಚಲನೆ ಮುಂದುವರಿದಂತೆ ಅವುಗಳ ಸ್ಥಾನ ಮತ್ತು ವೇಗಗಳನ್ನೊಳಗೊಳ್ಳುವ ಶಕ್ತಿ ಉತ್ಪನ್ನ $\bar{E}$ ನ ಬೆಲೆ ಸದಾ ಕಾಲದಲ್ಲೂ ಇದ್ದಷ್ಟೇ ಇರುತ್ತದೆಂದು ತಿಳಿದುಬರುತ್ತದೆ. ಹೀಗೆ ಲಭ್ಯವಾಗುವ $\bar{E}$ ಉತ್ಪನ್ನದ ನಿಯತ ಬೆಲೆಗೆ ಸಂವೃತ ವ್ಯವಸ್ಥೆಯ ಶಕ್ತಿ (ಎನರ್ಜಿ) ಎಂದು ಹೆಸರು. ಇದೇ ಸಂಬಂಧದಲ್ಲಿ $\bar{V}$ ಮತ್ತು $\bar{T}$ ಉತ್ಪನ್ನಗಳ ಚರ ಬೆಲೆಗಳನ್ನು ಅನುಕ್ರಮವಾಗಿ ವ್ಯವಸ್ಥೆಯ ವಿಭವಶಕ್ತಿ ಮತ್ತು ಚಲನಶಕ್ತಿ ಎಂದು ಕರೆಯುವ ರೂಢಿಯಿದೆ (ಪೊಟೆನ್ಷಿಯಲ್ ಎನರ್ಜಿ, ಕೈನೆಟಿಕ್ ಎನರ್ಜಿ).

ವೇಗೋತ್ಕರ್ಷ ಪ್ರಾಚಲದ ಮೂಲಭೂತ ಪ್ರಾಮುಖ್ಯವನ್ನು ಕಂಡುಕೊಂಡ ಅನಂತರ ಅಧ್ಯಾರೋಪಣ ತತ್ತ್ವ, ಪ್ರತಿಕ್ರಿಯಾ ತತ್ತ್ವ, ದೂರ ಸಂವೇದನಾ ತತ್ತ್ವಗಳ ಅಸ್ಪಷ್ಟ ಮಾರ್ಗದಲ್ಲಿ ಹೇಗೋ ತಡವರಿಸುತ್ತ ಸಾಗಿದ ಅಭಿಜಾತ ಬಲವಿಜ್ಞಾನ ನಿಸರ್ಗದ ಆಗುಹೋಗುಗಳಲ್ಲಿ ನಿಜಕ್ಕೂ ಹಾಸುಹೊಕ್ಕಾಗಿರುವ ಮತ್ತೊಂದು ಮಹತ್ತ್ವಪೂರ್ಣ ವಿದ್ಯಮಾನದ ಇಣುಕುನೋಟವನ್ನು ಕಡೆಗೂ ಶಕ್ತಿಯ ಅವಿಷ್ಕಾರದಲ್ಲಿ ಗಳಿಸಿಯೇ ಗಳಿಸಿತು. ಪ್ರತಿಯೊಂದು ಸಂವೃತ ಚಲನ ವ್ಯವಸ್ಥೆಗೂ ಅನುರೂಪವಾಗಿ $\bar{E}$ ನಂಥ ಒಂದು ಶಕ್ತಿ ಉತ್ಪನ್ನ ಇದ್ದೇ ಇರುತ್ತದೆ, ಮತ್ತು ವ್ಯವಸ್ಥೆಯ ಪ್ರಾಚಲಗಳ ವಾಸ್ತವ ಬೆಲೆಗಳು ನಿರ್ಣಯಿಸುವ ಆ ಉತ್ಪನ್ನದ ಬೆಲೆ ಸದಾ ಕಾಲದಲ್ಲೂ ನಿಯತವಾಗಿರುತ್ತದೆ ಎಂಬ ತತ್ತ್ವಕ್ಕೆ ಶಕ್ತಿನಿತ್ಯತೆಯ ನಿಯಮ (ಕನ್ಸರ್ವೇಷನ್ ಆಫ್ ಎನರ್ಜಿ) ಎಂದು ಹೆಸರು. ಆದರೆ ಮೇಲಿನ ವಿವರಣೆಗಳಿಂದ ಸ್ಪಷ್ಟವಾಗುವಂತೆ ಶಕ್ತಿನಿತ್ಯತೆಯ ನಿಯಮವನ್ನು ಆದಿಮ ಬಲವಿಜ್ಞಾನ ಅಧ್ಯಾರೋಪಣವೇ ಮೊದಲಾದ ಪ್ರಯೋಗಾತ್ಮಕ ತತ್ತ್ವಗಳ ನೆರವಿನಿಂದಲೂ ಜೊತೆಗೆ ಕಾಯಗಳು ಯಾವಾಗಲೂ ನಿಖರವಾಗಿ [1], [5] ರಂಥ ಸಮೀಕರಣಗಳಿಗೆ ಅನುಸಾರವಾಗಿಯೇ ಚಲಿಸಬೇಕೆಂಬ ನಿಶ್ಚಿತತಾ ಮನೋಭಾವದ ಆಸರೆಯಿಂದಲೂ ಸಾಧಿಸಲು ಯತ್ನಿಸುತ್ತದೆ. ವಾಸ್ತವ ನೈಸರ್ಗಿಕ ಪರಿಸ್ಥಿತಿಯನ್ನು ಗಮನಿಸಿದಾಗ ಇಂಥ ಕಾರ್ಯಕ್ರಮದ ವಿಪರ್ಯಾಸ ಬೆಳಕಿಗೆ ಬರಲು ಹೆಚ್ಚು ಕಾಲವೇನೂ ಬೇಕಿಲ್ಲ. ಶಕ್ತಿ ನಿಯಮ ಅಧ್ಯಾರೋಪಣಾದಿ ಅಪರಿಪೂರ್ಣ ಹಂಗಾಮಿ ಪರಿಕಲ್ಪನೆಗಳೆಲ್ಲವನ್ನೂ ಮೀರಿ ನಿಲ್ಲುವ ಶಾಶ್ವತವಾದ ಒಂದು ಮೂಲ ಸತ್ಯ. ಅದೂ ಅಲ್ಲದೆ ಅಧ್ಯಾರೋಪಣಾದಿ ತತ್ತ್ವಗಳಿಗೆ ತಾತ್ಕಾಲಿಕ ಆದ್ಯತೆಯನ್ನು ಸಲ್ಲಿಸುವುದಾದರೂ ಹಿಂದೆಯೇ ನಾವು ಸೂಚನೆ ನೀಡಿರುವಂತೆ [1], [5] ಸಮೀಕರಣಗಳಿಗೂ ಕಾಯಗಳ ವಾಸ್ತವಿಕ ಚಲನೆಗಳಿಗೂ ಅಲ್ಪಸ್ವಲ್ಪ ವ್ಯತ್ಯಾಸಗಳು ತಲೆದೋರಲು ಶಕ್ಯವಿದೆ. ಇಂಥ ಅನಿಶ್ಚಿತ ವ್ಯತ್ಯಾಸಗಳ ಎದುರಿನಲ್ಲಂತೂ ಶಕ್ತಿನಿಯಮದ ಮೇಲಿನ ಸಾಧನೆ ಒಂದು ಅಣಕವಾಗಿ ಪರಿಣಮಿಸದಿರದು. ಆದರೆ ಸಾಧನೆ ಕುಸಿದರೂ ನಿಯಮ ಕುಸಿಯದಿರುವುದೇ ಇಲ್ಲಿರುವ ಅಚ್ಚರಿ. ಈಗಾಗಲೇ ನಾವು ಬಹಳಷ್ಟು ಸಲ ಗಮನಿಸಿರುವಂತೆ ಜೈವಿಕ ವ್ಯವಸ್ಥೆಗಳು ನಿಶ್ಚಿತತಾ ತತ್ತ್ವವನ್ನು ಅವುಗಳ ಕೈಲಾದಮಟ್ಟಿಗೆ ಉಲ್ಲಂಘಿಸಿಯೇ ಉಲ್ಲಂಘಿಸುತ್ತವೆ. ಆದಾಗ್ಯೂ (ಕೇವಲ ಮಂತ್ರೋಚ್ಚಾರಣೆಯಿಂದ ಎಲ್ಲಿಗೆಂದರಲ್ಲಿಗೆ ಕೊಂಡೊಯ್ಯಬಲ್ಲ ಮಾಯಾ ಚಾಪೆಗಳು, ಪೆಟ್ರಲ್ ತೊಟ್ಟಿಯಲ್ಲಿ ಬರಿಯ ನೀರು ತುಂಬಿದರೂ ದ್ವಿಗುಣಿತ ವೇಗದಿಂದ ಧಾವಿಸುವ ಕಾರುಗಳು ಇವೇ ಮುಂತಾದ ಕನಸಿನ ಕಲ್ಪನಾ ವಿಲಾಸಗಳ ಹೊರತಾಗಿ) ಶಕ್ತಿನಿಯಮವನ್ನು ಉಲ್ಲಂಘಿಸಲು ಮಾತ್ರ ಅವು ಎಂದೂ ಸಮರ್ಥವಾಗಿಲ್ಲ. ಅಂದಮೇಲೆ ಶಕ್ತಿನಿಯಮ ಅನಿಶ್ಚಿತ ಚಲನೆಗಳಿಗೂ ಅನ್ವಯಿಸುತ್ತದೆಂದಾಯಿತು. ಹಿಂದೆ ಪರಿಶೀಲಿಸಿದ ತ್ರಿಕಾಯದ ಸಂವೃತ ವ್ಯವಸ್ಥೆಯನ್ನು ಉದಾಹರಣೆಗಾಗಿ ಮತ್ತೆ ಈಗ ಸ್ಮರಿಸಿಕೊಳ್ಳುವುದಾದರೆ ಮೂಲ $q_k$ ನಿರ್ದೇಶಕಗಳಲ್ಲಿ ಅದರ ಉತ್ಕರ್ಷಘಟಕಗಳು

$$\ddot{q} = \alpha_0 \equiv 0; \ddot{q}_l = \alpha_l \equiv (-1)^{l+1}\, 2 - \frac{1}{2}(q_1 + q_2) + q_0, l = 1,2.....[12]$$

ಆಗಿವೆಯೆಂದು ಭಾವಿಸಬಹುದು. $q_0 \equiv 0$ ಆದಕಾರಣ ವ್ಯವಸ್ಥೆಯನ್ನು ಕುರಿತಂತೆ ನಾವು ಉಲ್ಲೇಖಿಸಿದ ವರ್ಣನಾಮಾರ್ಗ 2ಕ್ಕೆ ಇವು ಹೊಂದಿಕೊಳ್ಳುತ್ತವೆ; ಜಡತಾ ನಿರ್ದೇಶಕ $\bar{q}$ 7 ಗಳ ಸೃಷ್ಟಿಯನ್ನು ಸಾಧ್ಯಗೊಳಿಸುವುದೇ ಈ ಹೆಚ್ಚುವರಿ ಪದ $q_0$ ಯ ಉದ್ದೇಶ. ಜಡತಾ ನಿರ್ದೇಶಕಗಳನ್ನು ವ್ಯಾಖ್ಯಿಸುವಲ್ಲಿ ಕೆಳಗೆ ಸೂಚಿಸಿರುವ ಐಸೊಮಾಪನವನ್ನು ಪ್ರಯೋಗಾತ್ಮಕವಾಗಿ ಪರಿಶೀಲಿಸಬಹುದು:

$$\bar{q}_k = q_k - x(q_1 + q_2), k = 0,1,2 \qquad ...........[13]$$

$x \neq \frac{1}{2}$ ಆದಾಗ ಈ ಸಮೀಕರಣಗಳನ್ನು ಪರಿಹರಿಸಿ $q_k$ ಗಳನ್ನು $\bar{q}_k$ ಗಳ ಮಾಧ್ಯಮದಲ್ಲಿ ವ್ಯಕ್ತಪಡಿಸಲು ಸಾಧ್ಯವಾಗುವುದು. $\bar{q}_k$ ನಿರ್ದೇಶಕಗಳಲ್ಲಿ ವ್ಯವಸ್ಥೆಯ ಉತ್ಕರ್ಷಘಟಕಗಳನ್ನು ಲೆಕ್ಕಹಾಕಿ ನೋಡಿದರೆ ಅವು

$$\ddot{\bar{q}}_0 = \bar{a}_0 \equiv x\left\{(\bar{q}_1 - \bar{q}_0) + (\bar{q}_2 - \bar{q}_0)\right\}$$

$$\ddot{\bar{q}}_1 = \bar{a}_1 \equiv (2x-1)(\bar{q}_1 - \bar{q}_0) + \left\{2 + (x\frac{1}{2})(\bar{q}_2 - \bar{q}_0)\right\}$$

$$\ddot{\bar{q}}_2 = \bar{a}_2 \equiv (2x-1)(\bar{q}_2 - \bar{q}_0) + \left\{2 + (x\frac{1}{2})(\bar{q}_2 - \bar{q}_1)\right\} \qquad ...(14)$$

ಎಂಬ ರೂಪಗಳನ್ನು ತಾಳುತ್ತವೆ. $A_0, A_1, A_2$ ಕಾಯಗಳ ದ್ರವ್ಯರಾಶಿಗಳನ್ನು ಅನುಕ್ರಮವಾಗಿ $m_0 = (1-2x)/x, m_1 = 1, m_2 = 1$ ಎಂದು ಅಂಗೀಕರಿಸಿದಲ್ಲಿ $\bar{q}_k$ ನಿರ್ದೇಶಕಗಳ ಅಸ್ತಿತ್ವದ ಫಲವಾಗಿ ಚರ್ಚೆಯಲ್ಲಿರುವ ಚಲನವ್ಯವಸ್ಥೆ ಅಧ್ಯಾರೋಪಣ, ಪ್ರತಿಕ್ರಿಯಾ ಹಾಗೂ ದೂರ ಸಂವೇದನಾ ತತ್ತ್ವಗಳೆಲ್ಲವನ್ನೂ ಪರಿಪಾಲಿಸುತ್ತದೆಂಬ ಅಂಶ ಮೇಲಿನ ಸಮೀಕರಣಗಳಿಂದ ಬೆಳಕಿಗೆ ಬರುವುದು. ಅಂದ ಮೇಲೆ ಪ್ರಯೋಗಾತ್ಮಕವಾಗಿ ರಚಿಸಿದ $\bar{q}_k$ ಗಳು ನಿಜಕ್ಕೂ ಜಡತಾ ನಿರ್ದೇಶಕಗಳೆಂದಾಯಿತು. ಆದರೆ ಪರಿವರ್ತನ ಸಮೀಕರಣಗಳಲ್ಲಿ ಕಾಣಿಸಿಕೊಂಡಿರುವ $x$ ಅಜ್ಞಾತ (ಅನ್‌ನೋನ್) ಜಡತಾ ನಿರ್ದೇಶಕಗಳ ಆಯ್ಕೆ ಸಂದಿಗ್ಧತೆಯ ಪರಿಣಾಮವಾಗಿ $A_0$ಯ ದ್ರವ್ಯರಾಶಿ $M_0$ಯೂ ಅಜ್ಞಾತವಾಗಿ ಉಳಿದು ಹೋಗಿದೆ. ($A_0, A_1$ ಇಲ್ಲವೆ $A_0, A_2$, ಎರಡು ಕಾಯಗಳನ್ನೇ ಒಳಗೊಳ್ಳುವ ಸಂವೃತ ಉಪವ್ಯವಸ್ಥೆಯೊಂದರ ತಾತ್ಕಾಲಿಕ ಸೃಷ್ಟಿ ನೈಸರ್ಗಿಕವಾಗಿಯೋ ಕೃತಕವಾಗಿಯೋ ಸಾಧ್ಯವಿದ್ದಲ್ಲಿ ಆ ಉಪವ್ಯವಸ್ಥೆಯ ವಿದ್ಯಮಾನಗಳಿಂದ $M_0$ಯನ್ನು ನಿಷ್ಕರ್ಷಿಸಬಹುದಿತ್ತು. ಇಂಥ ಸಾಧ್ಯತೆ ಸೌರವ್ಯೂಹದಲ್ಲಿ ನೈಸರ್ಗಿಕವಾಗಿ ಇದೆ; ಭೂಮಿಯ ಮೇಲಿರುವ ದೃಗ್ಗೋಚರ ಕಾಯಗಳ ಸಂಬಂಧದಲ್ಲಿ ಅದು ಮಾನವನಿರ್ಮಿತ ತ್ರಾಸುಗಳಿಂದ ಒದಗಿಬರುತ್ತದೆ; ಪರಿಶೀಲನೆಯಲ್ಲಿರುವ ಚಲನವ್ಯವಸ್ಥೆಯನ್ನು ಕುರಿತಾದರೋ ಮೇಲಿನ [12] ಸಮೀಕರಣಗಳು ಈ ಸಾಧ್ಯತೆಯನ್ನು ಕಲ್ಪಿಸಿಕೊಡಲಾರದೆ ಹೋಗುತ್ತವೆ.) ಹೀಗಾದ್ದಾಗ್ಯೂ $m_0 = (1-2x)/x$ ಎಂದಷ್ಟೇ ಪರಿಗಣಿಸಿ [9], [14]

ಸಮೀಕರಣಗಳಿಂದ ವ್ಯವಸ್ಥೆಯ ಶಕ್ತಿ ಉತ್ಪನ್ನ $\overline{E}$ ನ್ನು ಲೆಕ್ಕ ಹಾಕಬಹುದು:

$$\overline{E} = (x-\frac{1}{2})\{\frac{1}{2}(\overline{q}_2-\overline{q}_1)^2-(\overline{q}_1-\overline{q}_0)^2-(\overline{q}_2-\overline{q}_0)^2\}$$

$$+2(\overline{q}_2-\overline{q}_1)+(1/2x)\{(1-2x)\dot{\overline{q}}_0{}^2+x\dot{\overline{q}}_1{}^2+x\dot{\overline{q}}_2{}^2\}$$

[13] ಸಮೀಕರಣಗಳ ನೆರವಿನಿಂದ ಇದೇ ಉತ್ಪನ್ನ $\overline{E}$ ನ್ನುಮೂಲ $q_k$, $\dot{q}_k$ ನಿರ್ದೇಶಕಗಳಲ್ಲಿ ವ್ಯಕ್ತಪಡಿಸಿ q0=0 ಬೆಲೆಯನ್ನು ಆದೇಶಿಸಿದಾಗ ಅದು

$$E = \frac{1}{4}(1-2x)(q_1+q_2)^2+2(q_2-q_1)$$

$$+\frac{1}{2}(1-x)(\dot{q}_1{}^2+\dot{q}_2{}^2)-x\dot{q}_1\dot{q}_2 \qquad .......[15]$$

ಎಂಬ ರೂಪವನ್ನು ತಾಳುತ್ತದೆ. ವ್ಯವಸ್ಥೆಯ ಪಲ್ಲಟಪೂರ್ವ ಚಲನೆ $q_l=(-1)^{l+1}(1+t^2)$, $l=1,2$ ಸಮೀಕರಣಗಳಿಗೆ ಅನುಸಾರವಾಗಿರುತ್ತದೆಂದು ಭಾವಿಸಿದ್ದೆವಷ್ಟೆ. ಚಲನೆಯ ಈ ನಿಶ್ಚಿತ ಜಾಡಿನಲ್ಲಿ $E$=-4 ಆಗುವುದು. ಕಾಯಗಳು ಹೀಗೆ ಚಲಿಸುತ್ತಿರುವ ಸಮಯದಲ್ಲಿ ಅವುಗಳ ಪ್ರಾಚಲಗಳನ್ನು $q_l=(-1)^{l+1}(1+3\pi^2), l=1, 2$ ; $\dot{q}_1=6\pi$, $\dot{q}_2=0$ ಆಗುವಂತೆ ಪಲ್ಲಟಗೊಳಿಸುವ ಆಲೋಚನೆ ನಮ್ಮ ಚರ್ಚೆಯ ಮಧ್ಯೆ ಮೂಡಿಬಂದದ್ದನ್ನು ಈಗ ನೆನಪುಮಾಡಿಕೊಳ್ಳಬಹುದು. ಈ ಪಲ್ಲಟದ ಫಲವಾಗಿ $E=6\pi^2(1-3x)-4$ ಆಗಬೇಕಾಗುವುದು. ಶಕ್ತಿನಿತ್ಯತೆಯ ನಿಯಮದಂತೆ ಪ್ರಸ್ತಾವಿತ ಪಲ್ಲಟ ಸಂವೃತ ವ್ಯವಸ್ಥೆಯ ಒಂದು ಆಂತರಿಕ ವಿದ್ಯಮಾನವಾಗಿ ಉದ್ಭವಿಸಬೇಕಿದ್ದರೆ ಶಕ್ತಿ ಉತ್ಪನ್ನದ ಬೆಲೆ ಪಲ್ಲಟದ ಬಳಿಕವೂ ಮುಂಚೆ ಇದ್ದಷ್ಟೇ ಇರಬೇಕು. ಅಂದ ಮೇಲೆ $x=\frac{1}{3}$ (ಹಾಗೂ ತತ್ಫಲವಾಗಿ $m_O$=1) ಆಗಿದ್ದರೆ ಮಾತ್ರ ಪ್ರಸ್ತಾವಿತ ಪಲ್ಲಟ ವ್ಯವಸ್ಥೆಯೊಳಗಿನಿಂದಲೇ ಸಂಭವಿಸಲು ಸಾಧ್ಯವಾಗುತ್ತದೆ. ಈ ಪ್ರಕಾರ ಉತ್ಕರ್ಷಘಟಕಗಳಷ್ಟನ್ನೇ ಅಲ್ಲದೆ ಸಂವೃತ ವ್ಯವಸ್ಥೆಗಳ ಶಕ್ತಿ ಉತ್ಪನ್ನಗಳನ್ನು ತಾಳೆ ನೋಡುವುದಕ್ಕೂ ಕಾಯಗಳ ಅನಿಶ್ಚಿತ ಕದಲಿಕೆಗಳು ಆವಶ್ಯಕವಾಗುತ್ತವೆ. $x=\frac{1}{3}$ ಎಂಬುದು ಸತ್ಯವಾದಲ್ಲಿ ನಾವು ಉಲ್ಲೇಖಿಸಿದ ಆಂತರಿಕ ಪಲ್ಲಟ ಅನಿಶ್ಚಿತ, ಆದರೆ ಸಾಧ್ಯ; ಅದಕ್ಕೆ ಪ್ರತಿಯಾಗಿ

$$q_l = (-1)^{l+1}(1+3\pi^2), l=1,2; \dot{q}_1=5\pi, \dot{q}2=0$$ ಎಂಬ

ಆಂತರಿಕ ಪಲ್ಲಟ( $x=\frac{1}{3}$ ಆಗಿರುವಾಗ) ಸಂವೃತ ವ್ಯವಸ್ಥೆಯ ಶಕ್ತಿಯನ್ನೇ ಬದಲಿಸಲು ಯತ್ನಿಸುವುದರಿಂದ ನೂರಕ್ಕೆ ನೂರು ಭಾಗ ಅಸಾಧ್ಯ. ಚಲನವ್ಯವಸ್ಥೆಗಳ ನಿಶ್ಚಿತತೆಯ ಕದಲಿಕೆ ಕೇವಲ ಹೊರಗಿನ ಹಸ್ತಕ್ಷೇಪಗಳ ಪರಿಣಾಮ ಎಂದೇ ಬಗೆದ ಅಭಿಜಾತ ಬಲವಿಜ್ಞಾನದವಾದರೋ (ಆ ಹಸ್ತಕ್ಷೇಪಗಳು ವ್ಯವಸ್ಥೆಗಳ ಶಕ್ತಿಗಳನ್ನೂ ಕದಲಿಸಬಹುದಾದ ಕಾರಣ) ಇಂಥ ಎರಡು ಪಲ್ಲಟಗಳ ನಡುವೆ ಯಾವ ತಾತ್ತ್ವಿಕ ಭೇದವನ್ನೂ ಗುರುತಿಸಲಿಲ್ಲ. ಅಂದ ಮೇಲೆ ನಿಶ್ಚಿತತಾ ತತ್ತ್ವಕ್ಕೆ ಶಕ್ತಿನಿಯಮದಷ್ಟೇ ಮಟ್ಟದ (ಅಥವಾ ಅದಕ್ಕೂ ಹೆಚ್ಚಿನ) ವಾಸ್ತವತೆಯನ್ನು ಆರೋಪಿಸಿದ್ದು ಅಭಿಜಾತ ಬಲವಿಜ್ಞಾನದ ಒಂದು ದೋಷವಾಯಿತು ಎನ್ನಲಡ್ಡಿಯಿಲ್ಲ. ಇವೆಲ್ಲ ಪರಿಸ್ಥಿತಿಗಳನ್ನೂ ಗಣನೆಗೆ ತೆಗೆದುಕೊಂಡಲ್ಲಿ ಶಕ್ತಿನಿಯಮ ಐತಿಹಾಸಿಕವಾಗಿ ಶಾಸ್ತ್ರಜ್ಞರು ಅಷ್ಟೇನೂ ಸರಿಯಾದ ದಾರಿಯಲ್ಲಿ ನಡೆಯದಿದ್ದಾಗ್ಯೂ ಬೆಳಕಿಗೆ ಬಂದೇ ಬಂದ ಒಂದು ಉಜ್ಜ್ವಲ ಸತ್ಯ ಎಂದು ನಮಗೆ ಸ್ಫುರಿಸದಿರದು.

**ಅಭಿಜಾತ ಬಲವಿಜ್ಞಾನ (ಸಂಪಾದಿತ ರೂಪ)** : ಇದುವರೆಗಿನ ನಮ್ಮ ಚರ್ಚೆಗಳಿಗೆ ಮೂರ್ತ ಆಸರೆಯಾಗಿ ಚಿತ್ರದಲ್ಲಿ ಸೂಚಿಸಿರುವಂಥ ಗಿರಕಿರಹಿತ ಸರಳರೇಖಾ ವ್ಯವಸ್ಥೆಯೊಂದನ್ನು ಮಾತ್ರವೇ ವಿಶಿಷ್ಟತಃ ಆಯ್ಕೆ ಮಾಡಿಕೊಂಡಿದ್ದೇವಷ್ಟೆ.. ಈ ಬಗೆಯ ಕೃತಕ ನಿರ್ಬಂಧಗಳಿಂದ ಪರಿವೃತವಾದ ವ್ಯವಸ್ಥೆಗಳ ಅಧ್ಯಯನ ಯಾವ ಲಾಭವನ್ನು ತಾನೇ ಗಳಿಸಿಕೊಡಬಲ್ಲದು ಎಂಬ ಸಂಶಯ ತಲೆದೋರುವುದು ಸಹಜ. ಆದರೆ ಬಲು ಸರಳವಾದ ಒಂದು ಉಪಾಯದಿಂದ ಕೃತಕ ನಿರ್ಬಂಧಗಳ ಇಡೀ ತೆರೆ ಇದ್ದಕ್ಕಿದ್ದಂತೆ ಮಾಯವಾಗಿ ಅದರ ಹಿಂದೆಯೇ ಅಡಗಿರುವ ಪೂರ್ಣ ಸಾರ್ವತ್ರಿಕತೆಯ ಚಲನ ವ್ಯವಸ್ಥೆಗಳು ಬೆಳಕಿಗೆ ಬರುತ್ತವೆ. ಮೊದಲಾದ ನಿರ್ದೇಶಕಗಳ ಬಗ್ಗೆ ಕೇವಲ ನಮ್ಮ ದೃಷ್ಟಿಕೋನವನ್ನು ಮಾರ್ಪಡಿಸಿಕೊಳ್ಳುವುದಷ್ಟರಲ್ಲೇ ಈ ಸುಲಭ ತಂತ್ರ ಅಡಕವಾಗಿದೆ. ಉದಾಹರಣೆಗೆ $A_0, A_1, A_2$ ಇತ್ಯಾದಿ (ದೃಢ) ಕಾಯಗಳು ಒಂದೇ ಸರಳರೇಖೆಯಲ್ಲಿ ($AB$) ಸಂಚರಿಸುತ್ತಲಿದ್ದಾಗ್ಯೂ ಆ ರೇಖೆಯ ಸುತ್ತ ಗಿರಕಿ ಚಲನೆಯನ್ನು ಗಳಿಸಿ ಕೊಳ್ಳುತ್ತವೆಂದು ಮೊದಲ ಹೆಜ್ಜೆಯಲ್ಲಿ ಭಾವಿಸಬಹುದು. ಹೀಗಾದಾಗ ಚಿತ್ರ(1)ರ $q_0$,




ಚಿತ್ರ 2. ಈಗ ಮೇಲಿನ ಸರಳನ್ನು ತೆಗೆದಿರುವುದರಿಂದ ಕಾಯಗಳು ಕೆಳಗಿನ ಸರಳಿನ ಸುತ್ತ ಗಿರಕಿ ಚಲನೆಯನ್ನು ಗಳಿಸಿಕೊಳ್ಳಬಲ್ಲವು

$q_1$, $q_2$ ಇತ್ಯಾದಿ ದೂರನಿರ್ದೇಶಕಗಳು ಕಾಯಗಳ ಪರಸ್ಪರ ಸ್ಥಾನವಿನ್ಯಾಸವನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸಲಾರದೆ ಹೋಗುತ್ತವೆಂಬುದು ಸುಸ್ಪಷ್ಟ. ಆದ್ದರಿಂದ ಹೊಸ ಪರಿಸ್ಥಿತಿಯಲ್ಲಿ (ಚಿತ್ರ 2) $A_0A_1$, $A_0$, $A_2$, $A_0$, $A_3$ ಮೊದಲಾದ ದೂರಗಳನ್ನು ಅನುಕ್ರಮವಾಗಿ $q_2, q_4, q_6$ ಎಂದು ಮುಂತಾಗಿಯೂ $A_0$ ಕಾಯಕ್ಕೆ ಸಾಪೇಕ್ಷವಾಗಿ $AB$ ರೇಖೆಯ ಸುತ್ತ $A_1, A_2, A_3$ ಇತ್ಯಾದಿ ಕಾಯಗಳು ತಿರುಗಿರುವ ಕೋನಗಳನ್ನು ಅನುಕ್ರಮವಾಗಿ $q_3, q_5, q_7$ ಇತ್ಯಾದಿ ಪ್ರತೀಕಗಳಿಂದಲೂ ಸೂಚಿಸುತ್ತೇವೆ. ಅಂದ ಮೇಲೆ ಈಗ ಒಂದೊಂದು ಕಾಯಕ್ಕೂ ಅನುರೂಪವಾಗಿ ಎರಡೆರಡು ನಿರ್ದೇಶಕಗಳನ್ನು ವ್ಯಾಖ್ಯಿಸಿದಂತಾಯಿತು. $A_l$ ಕಾಯದ ದೂರ ನಿರ್ದೇಶಕ $q2l$, ಕೋನ ನಿರ್ದೇಶಕ $q2l+1'$ ($l$=0,1,2, ಇತ್ಯಾದಿ; ಮೂಲ ಕಾಯವನ್ನಾಗಿ ಆಯ್ಕೆ ಮಾಡಲಾಗಿರುವ $A_0$ ಯನ್ನು ಕುರಿತಂತೆ $q0^o q1^o0$). ಈ $q_0, q_1$, $q_2$ $q_3$,;$q_4$, $q_5$, ಇತ್ಯಾದಿ ನಿರ್ದೇಶಕಗಳು (ಅಥವಾ ಇವನ್ನು ಸೂಕ್ತ ಪರಿವರ್ತನೆಗಳಿಗೆ ಗುರಿಪಡಿಸಿ ವ್ಯಾಖ್ಯಿಸಬಹುದಾದ ಇಷ್ಟೇ ಸಂಖ್ಯೆಯ ಇತರ ಯಾವುದೇ ನಿರ್ದೇಶಕಗಳು) ಚಿತ್ರ(2)ರ ಚಲನವ್ಯವಸ್ಥೆಯ ಸ್ಥಾನವಿನ್ಯಾಸವನ್ನು ಸಂಪೂರ್ಣವಾಗಿ ವ್ಯಕ್ತಪಡಿಸುತ್ತವೆ. ಕಾಲ $t$ ವ್ಯತ್ಯಾಸವಾದಂತೆ ನಿರ್ದೇಶಕ $q_k$ ಗಳೂ ವ್ಯತ್ಯಸ್ತವಾಗುವ ಕಾರಣ ವ್ಯವಸ್ಥೆಯ ಚಲನೆ ಒಂದೊಂದು $q_k$ಯನ್ನೂ $t$ಯ ಒಂದೊಂದು ಉತ್ಪನ್ನವನ್ನಾಗಿ ವ್ಯಾಖ್ಯಿಸುತ್ತದೆ: $q_k=q_k(t)$. ಎಂದಿನಂತೆ

$\dot{q}_k=\dot{q}_k(t) \quad = d\dot{q}_k/dt$ ಗಳನ್ನು ವೇಗ ಪ್ರಾಚಲಗಳೆಂದೂ

$\ddot{q}_k=\ddot{q}_k(t)=d\dot{q}_k/dt \quad = d^2q_k/dt^2$ ಗಳನ್ನು ವೇಗೋತ್ಕರ್ಷ ಪ್ರಾಚಲಗಳೆಂದೂ ಕರೆಯುತ್ತೇವೆ. ( $\dot{q}_k$ ಹಿಂದೆ $A_k$ ಕಾಯದ ವೇಗವಾಗಿತ್ತು; ಆದರೆ ಈಗ ಒಂದೊಂದು ಕಾಯ $A_l$ ಗೂ ಎರಡೆರಡು ವೇಗಗಳಿರುತ್ತವೆ: ರೇಖೀಯ ವೇಗ $\dot{q}_{2l}$, ಕೋನೀಯ ವೇಗ $\dot{q}_{2l+1}$; ಕಾಯಗಳ ಮಾತನ್ನು ಮರೆತು $\dot{q}_k$ ಯನ್ನು $q_k$ ನಿರ್ದೇಶಕದ ವೇಗವೆಂದು ಪರಿಗಣಿಸಿದಲ್ಲಿ ಈ ಬಗೆಯ ತೊಡಕುಗಳನ್ನು ನಿವಾರಿಸಿದಂತಾಗುವುದು; ವೇಗೋತ್ಕರ್ಷ $\ddot{q}_k$ ಯ ವಿಚಾರವೂ ಹೀಗೆಯೇ.) ಚಿತ್ರ(1)ರ ವ್ಯವಸ್ಥೆಗೆ ಸಂಬಂಧಿಸಿದ $q_0, \dot{q}_0, q_1, \dot{q}_1, q_2, \dot{q}_2$ ಇತ್ಯಾದಿ ಸ್ಥಾನ ಹಾಗೂ ವೇಗ ಪ್ರಾಚಲಗಳ ಬೆಲೆಗಳಿಂದ ಆ ವ್ಯವಸ್ಥೆಯ ವೇಗೋತ್ಕರ್ಷ ಪ್ರಾಚಲ $\ddot{q}_k$ ಗಳ (ಅತ್ಯಂತ ಸಂಭಾವ್ಯ) ಬೆಲೆಗಳನ್ನು ಲೆಕ್ಕ ಹಾಕಬಹುದಿತ್ತಷ್ಟೆ:

$$\ddot{q}_k = \alpha_k(q_0, q_1, q_2, \text{ ಇತ್ಯಾದಿ } \dot{q}_0, \dot{q}_1, \dot{q}_2, \text{ ಇತ್ಯಾದಿ } \ldots\ldots\ldots.[1]$$

ಇಂಥ ಸಾಧ್ಯತೆ ಚಿತ್ರ(1)ರ ವ್ಯವಸ್ಥೆಗೆ ಮಾತ್ರವೇ ಸೀಮಿತವಾಗಿದ್ದಲ್ಲಿ ಅದೊಂದು ಬಗೆಯ ವ್ಯವಸ್ಥೆಯನ್ನೇ ಪ್ರಮುಖತಃ ಆಶ್ರಯಿಸಿರುವ ಇಲ್ಲಿಯವರೆಗಿನ ನಮ್ಮ ದೀರ್ಘ ಚರ್ಚೆಯಿಂದ ಕಾಲದ ಅಪವ್ಯಯವಾಗಿರುತ್ತಿತ್ತು. ಆದರೆ [1] ಸಮೀಕರಣಗಳು ವ್ಯಕ್ತಪಡಿಸುವ ಲೆಕ್ಕಾಚಾರ ಸಾಧ್ಯತೆ ಗಿರಕಿಸಹಿತ ವ್ಯವಸ್ಥೆಗೆ ಕೂಡ ಅನ್ವಯಿಸಿಯೇ ಅನ್ವಯಿಸುತ್ತದೆಂದು ಕಂಡುಬಂದಿದೆ. (ಇನ್ನೂ ಹೆಚ್ಚು ಸಾರ್ವತ್ರಿಕತೆಯ ವ್ಯವಸ್ಥೆಗಳನ್ನು ಕುರಿತಂತೆಯೂ ಇದೇ ಸಾಧ್ಯತೆ ಇದ್ದೇ ಇರುತ್ತದೆ.) ಅಂದ ಮೇಲೆ ಸೂಕ್ತ $\alpha_k$ ಉತ್ಪನ್ನಗಳ ನೆರವಿನಿಂದ ಚಿತ್ರ 2ರಲ್ಲಿರುವಂಥ (ಅಥವಾ ಇನ್ನೂ ಹೆಚ್ಚು ಸಾರ್ವತ್ರಿಕತೆಯ ಯಾವುದೇ) ವ್ಯವಸ್ಥೆಯ ಸಂಬಂಧದಲ್ಲೂ $\dot{q}_k$ ಗಳನ್ನೂ $q, \dot{q}_0, q_l, \dot{q}_1, q_2, \dot{q}_2$ ಇತ್ಯಾದಿಗಳಿಂದ ಲೆಕ್ಕ ಹಾಕಬಹುದೆಂದಾಯಿತು. ಎಂತಲೇ ಗಣಿತೀಯ ವಿಶ್ಲೇಷಣೆಯ ದೃಷ್ಟಿಯಿಂದ ಚಿತ್ರ 1ರಲ್ಲಿ ಸೂಚಿಸಿರುವಂಥ ಸರಳ ವ್ಯವಸ್ಥೆಗಳಿಗೂ ಚಿತ್ರದಲ್ಲಿರುವಂಥ ತುಸು ಸಂಕೀರ್ಣತರ ವ್ಯವಸ್ಥೆಗಳಿಗೂ ಇವೆರಡಕ್ಕಿಂತ ಇನ್ನೂ ಜಟಿಲ ರಚನೆಯಿರಬಹುದಾದ ಇತರ ವ್ಯವಸ್ಥೆಗಳಿಗೂ ಮೂಲಭೂತವಾದ ತಾತ್ತ್ವಿಕ ಭೇದವೇನೂ ಇಲ್ಲ. (ಆದಾಗ್ಯೂ ಬೇರೆ ಬೇರೆ ಚಲನವ್ಯವಸ್ಥೆಗಳಿಗೆ ಬೇರೆ ಬೇರೆ $\alpha_k$ ಉತ್ಪನ್ನಗಳಿರುತ್ತವೆಂಬ ಅಂಶವನ್ನು ನೆನಪಿನಲ್ಲಿಡಬೇಕು; ಚಿತ್ರದ ವ್ಯವಸ್ಥೆಯ $\alpha_k$ ಗಳು ಎಷ್ಟು ಚರಗಳನ್ನು ಒಳಗೊಳ್ಳುತ್ತವೋ ಅದರ ಇಮ್ಮಡಿ ಸಂಖ್ಯೆಯಷ್ಟು ಚರಗಳನ್ನು ಚಿತ್ರ(1)ರ ವ್ಯವಸ್ಥೆಯ $\alpha_k$ ಗಳು ಒಳಗೊಳ್ಳುತ್ತವೆ.) ಎಲ್ಲ ಸಂದರ್ಭಗಳಲ್ಲೂ $\alpha_k$ ಉತ್ಪನ್ನಗಳನ್ನು ಪರಿಶೀಲಿತ ವ್ಯವಸ್ಥೆಯ ಉತ್ಕರ್ಷಘಟಕಗಳೆಂದೂ ಅವುಗಳ ಒಟ್ಟು ಗುಂಪನ್ನು ಆ ವ್ಯವಸ್ಥೆಯ ಉತ್ಕರ್ಷಕ್ಷೇತ್ರವೆಂದೂ ಎಂದಿನಂತೆಯೇ ವರ್ಣಿಸುತ್ತೇವೆ.

ಅಲ್ಲಿಗೆ ಸೂಕ್ತ ರೀತಿಗಳಲ್ಲಿ ನಿರ್ದೇಶಕಗಳನ್ನು ವ್ಯಾಖ್ಯಿಸುವುದರ ಮೂಲಕ ಸರಳ ಹಾಗೂ ಸಂಕೀರ್ಣ ಚಲನವ್ಯವಸ್ಥೆಗಳೆಲ್ಲವನ್ನೂ (1) ಸಮೀಕರಣಗಳ ನೆರವಿನಿಂದಲೇ ವಿಶ್ಲೇಷಿಸಲು ಸಾಧ್ಯವಾಗುತ್ತದೆಂದಾಯಿತು. ಈ ಪ್ರಕಾರ ಕಾಯಗಳ ಚಲನೆಗಳು ಎಷ್ಟೇ ವೈವಿಧ್ಯಮಯವಿರಲಿ, ಅವೆಲ್ಲ ವೈಖರಿಯ ಚಲನೆಗಳಿಗೂ (1) ಸಮೀಕರಣಗಳು ಒಂದು ಸರ್ವಸಾಮಾನ್ಯ ಗಣಿತೀಯ ಚೌಕಟ್ಟನ್ನು ರೂಪಿಸಿಕೊಡುತ್ತವೆ. ಹೆಚ್ಚು ಹೆಚ್ಚು ವೈವಿಧ್ಯದ ಚಲನೆಗಳಿಗೆ ಅವಕಾಶ ಕಲ್ಪಿಸುವ ಕಾರ್ಯಕ್ರಮದ ಮತ್ತೊಂದು ಹೆಜ್ಜೆಯಾಗಿ $A_0, A_1, A_2$ ಮುಂತಾದ (ದೃಢ) ಕಾಯಗಳು ಚಿತ್ರದಲ್ಲಿರುವಂಥ $AB$ ಸರಳರೇಖೆಗೆ ಪೋಣಿಸಿ ಕೊಂಡೇ ಚಲಿಸಬೇಕೆಂಬ ನಿರ್ಬಂಧವನ್ನು ಸಹ ಈಗ ತೆಗೆದುಬಿಡಬಹುದು. ತತ್ಪರಿಣಾಮವಾಗಿ ಕಾಯಗಳ ಮೇಲಿರುವ $A_0, A_1, A_2$ ಇತ್ಯಾದಿ ಗುರುತುಗಳು ಮೂರು ಆಯಾಮಗಳ ಆಕಾಶದಲ್ಲಿ ಎಡ, ಬಲ, ಹಿಂದೆ, ಮುಂದೆ, ಮೇಲೆ, ಕೆಳಗೆ, ಹೇಗೆ ಬೇಕಾದರೂ ಕದಲಬಲ್ಲವು, ಹಾಗೂ ಪ್ರತಿಯೊಂದು ಕಾಯದ ಒಟ್ಟು ಭಂಗಿ ಸಹ ಹೇಗೆ ಬೇಕಾದರೂ ವ್ಯತ್ಯಸ್ತವಾಗಬಲ್ಲದು. ಈ ಪರಿಸ್ಥಿತಿಯಲ್ಲಿ ಕಾಯಗಳ ಸಂಪೂರ್ಣ ಸ್ಥಾನವಿನ್ಯಾಸಗಳನ್ನು ಸೂಚಿಸಲು ಒಂದೊಂದು ಕಾಯಕ್ಕೂ ಆರು ಆರು ನಿರ್ದೇಶಕಗಳು ಅವಶ್ಯವಾಗುತ್ತವೆ. [ಉದಾಹರಣೆಗೆ l ಕ್ರಮಸಂಖ್ಯೆಯ ಕಾಯದ ಮೇಲಿರುವ $A_l$ ಗುರುತು ಎಲ್ಲಿದೆ ಎಂಬ ಮಾಹಿತಿಯನ್ನು ನೀಡುವ ಮೂರು $q_{6l}, q_{6l}+1, q_{6l}+2$ ದೂರ ನಿರ್ದೇಶಕಗಳು, ಆ ಕಾಯ ಯಾವ ಭಂಗಿಯನ್ನು ತಾಳಿದೆ ಎಂಬುದನ್ನು ತಿಳಿಸುವ ಮೂರು $q_{6l}+3', q_{6l}+4', q_{6l}+5$ ಕೋನ ನಿರ್ದೇಶಕಗಳು ($\ell$=0,1,2 ಇತ್ಯಾದಿ; ಮೂಲ ಕಾಯ $A_0$ಯನ್ನು ಕುರಿತಂತೆ $q_0=q_1=q_2=q_3=q_4=q_5 \equiv 0$)]. ಆದರೆ ನಿರ್ದೇಶಕಗಳ ಸಂಖ್ಯೆ ಎಷ್ಟೇ ಇದ್ದರೂ [1] ಸಮೀಕರಣಗಳ ಆನ್ವಯಿಕತೆಗೆ ಕುಂದು ಬಾರದಿರುವ ಕಾರಣ ದೃಢ ಕಾಯಗಳ ಇಂಥ ಪೂರ್ಣ ಅನಿರ್ಬಂಧಿತ ವ್ಯವಸ್ಥೆಯನ್ನು ಕೂಡ ಅದೇ ಸಮೀಕರಣಗಳ ಆಯಕಟ್ಟಿನೊಳಗೆ ಅಭ್ಯಸಿಸಲು ಸಾಧ್ಯವಾಗುವುದು. ಇಷ್ಟೇ ಅಲ್ಲದೆ ನಿರ್ದೇಶಕಗಳ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸುವುದರ ಮೂಲಕ ತಂತಿಯ ಸುರುಳಿಗಳಂಥ (ಸ್ಪ್ರಿಂಗ್ಸ್) ನಿರ್ದಿಷ್ಟ ಪುಟಿತ ಲಕ್ಷಣಗಳಿರುವ ಕಾಯಗಳ ಸಮುದಾಯಗಳನ್ನು ಸಹ (ಇಲಾಸ್ಟಿಕ್ ಬಾಡೀಸ್) [1] ಸಮೀಕರಣಗಳ ವ್ಯಾಪ್ತಿಗೆ ಒಳಪಡಿಸಬಹುದು. ಚಿತ್ರ(1)ರ ವ್ಯವಸ್ಥೆಯನ್ನೇ ಆಶ್ರಯಿಸಿದ ನಮ್ಮ ಮೂಲ ಚರ್ಚೆ ಮೇಲ್ನೋಟಕ್ಕೆ ತೀರ ಪರಿಮಿತವೆಂದೆನಿಸಿರಬಹುದಾದರೂ ಸತ್ತ್ವತಃ ಅದು ಎಲ್ಲ ಬಗೆಯ ವ್ಯವಸ್ಥೆಗಳನ್ನೂ ಒಳಗೊಂಡೇ ಇದ್ದಿತೆಂಬ ಸೋಜಿಗಪೂರ್ಣ ಸತ್ಯಾಂಶವನ್ನು ಮೇಲಿನ ಪರಿಶೀಲನೆಗಳು ಸ್ಪಷ್ಟಪಡಿಸುತ್ತವೆ. ಸಂವೃತ ವ್ಯವಸ್ಥೆಯೊಂದರ ಚಲನೆಯನ್ನು [1] ಸಮೀಕರಣಗಳ ಆಯಕಟ್ಟಿನೊಳಗೆ ಅಭ್ಯಸಿಸಲು ಅಗತ್ಯವಾಗುವ ನಿರ್ದೇಶಕಗಳ ಕನಿಷ್ಠ ಸಂಖ್ಯೆಗೆ ಆ ವ್ಯವಸ್ಥೆಯ ಆಯಾಮಾಂಕ ಎಂದು ಹೆಸರು (ಡೈಮೆನ್ಷನ್ ಆಫ್ ಕಾನ್‌ಫಿಗರೇಷನ್ ಸ್ಪೇಸ್/ನಂಬರ್ ಆಫ್ ಡಿಗ್ರೀಸ್ ಆಫ್ ಫ್ರೀಡಮ್). ಚಿತ್ರ(1)ರ ವ್ಯವಸ್ಥೆಯಲ್ಲಿ $A_0, A_1, A_2$ ಮೂರೇ ಕಾಯಗಳಿರುವುದಾದರೆ ಅದನ್ನು $q_1, q_2$ ಎಂಬ ಎರಡೇ ನಿರ್ದೇಶಕಗಳ ಮಾಧ್ಯಮದಲ್ಲಿ ಅಭ್ಯಸಿಸಬಹುದು ($q_0 \equiv 0$ ಆದಕಾರಣ ವ್ಯವಸ್ಥೆಯ ವಿಶ್ಲೇಷಣೆಗೆ $q_0$ ನಿರ್ದೇಶಕ ಅನಗತ್ಯ); ಆದ್ದರಿಂದ ಅಂಥ ವ್ಯವಸ್ಥೆಯ ಆಯಾಮಾಂಕ 2. ಇದೇ ಮೇರೆಗೆ ಚಿತ್ರ 2ರ ವ್ಯವಸ್ಥೆಯಲ್ಲಿ ಮೂರು ಕಾಯಗಳು ಮಾತ್ರ ಇರುವಾಗ ಆ ವ್ಯವಸ್ಥೆಯ ಆಯಾಮಾಂಕ 4 ಆಗುತ್ತದೆ. [ಕೆಲವು ಸಂದರ್ಭಗಳಲ್ಲಿ ಚಲನ ವ್ಯವಸ್ಥೆಗಳ ವರ್ಣನೆಗಾಗಿ ಅಗತ್ಯವಿರುವುದಕ್ಕಿಂತ ಹೆಚ್ಚು ನಿರ್ದೇಶಕಗಳನ್ನು ಬಳಸುವುದುಂಟು. ಚಿತ್ರ 1ರ ಮಾದರಿಯ ತ್ರಿಕಾಯ ವ್ಯವಸ್ಥೆಯನ್ನು ಕುರಿತಂತೆ [14] ಸಮೀಕರಣಗಳ ರಚನೆಗಾಗಿ $\bar{q}_0, \bar{q}_1, \bar{q}_2$ ಎಂಬ ಮೂರು (ಜಡತಾ) ನಿರ್ದೇಶಕಗಳನ್ನು ಸೃಷ್ಟಿಸಿರುವುದು ಇದಕ್ಕೆ ಒಂದು ನಿದರ್ಶನ. ಪ್ರಸ್ತಾವಿತ ನಿರ್ದೇಶಕಗಳ ಒಟ್ಟು ಸಂಖ್ಯೆಯನ್ನು ಇಂಥ ಸನ್ನಿವೇಶಗಳಲ್ಲಿ ಚಲನ ವ್ಯವಸ್ಥೆಯ ವರ್ಧಿತ ಆಯಾಮಾಂಕವೆಂದು ಕರೆಯಬಹುದು. [13], [14] ಸಮೀಕರಣಗಳ $\bar{q}_0, \bar{q}_1, \bar{q}_2$ ಗಳು ನಿಜಕ್ಕೂ $(1-2x)\bar{q}_0 + x(\bar{q}_1 + \bar{q}_2) = (1-2x)q_0 \equiv 0$ ಎಂಬ ಸಂಬಂಧಕ್ಕೆ ಒಳಪಟ್ಟಿವೆಯೆಂದು ಸುಲಭವಾಗಿ ತಾಳೆ ನೋಡಬಹುದು; ಆದ್ದರಿಂದ ಅವು ಸ್ವತಂತ್ರ ನಿರ್ದೇಶಕಗಳಲ್ಲ.] ದ್ರವ ಹಾಗೂ ಅನಿಲಗಳನ್ನು ದ್ರವ್ಯದ ಅವಿಚ್ಛಿನ್ನ ವಿತರಣೆಗಳೆಂದು ಪರಿಗಣಿಸುವ ಪಕ್ಷದಲ್ಲಿ (ಕಂಟಿನ್ಯುಯಸ್ ಡಿಸ್ಟ್ರಿಬ್ಯೂಷನ್ಸ್ ಆಫ್ ಮ್ಯಾಟರ್) ಇಂಥ ದ್ರವ್ಯಗಳನ್ನು ಒಳಗೊಳ್ಳುವ ಚಲನವ್ಯವಸ್ಥೆಗಳ ಸ್ಥಾನವಿನ್ಯಾಸವನ್ನು ಅಭಿವ್ಯಕ್ತಿಸಲು ಅನಂತ ಸಂಖ್ಯೆಯಷ್ಟು ನಿರ್ದೇಶಕಗಳು ಅವಶ್ಯವಾಗುತ್ತವೆ (ಆಯಾಮಾಂಕ ಅನಂತ); ಆದರೆ ಸರಳತೆಯ ದೃಷ್ಟಿಯಿಂದ ಪ್ರಸಕ್ತ ಲೇಖನದ ಚರ್ಚೆಗಳನ್ನು ಸಾಂತ ಆಯಾಮಾಂಕಗಳಿರುವ (ಫೈನೆಟ್ ಡೈಮನ್ಷನಲ್ ಕಾನ್‌ಫಿಗರೇಷನ್ ಸ್ಪೇಸ್) ಸಂವೃತ ಚಲನ ವ್ಯವಸ್ಥೆಗಳಿಗೆ ಮಾತ್ರ ಸೀಮಿತಗೊಳಿಸುತ್ತೇವೆ. ಕೊನೆಯದಾಗಿ $q_0, q_1, q_2$ ಇತ್ಯಾದಿ ನಿರ್ದೇಶಕಗಳ ಬಗ್ಗೆ ಒಂದು ವಿಶಿಷ್ಟ ಸ್ಪಷ್ಟನೆಯ ಅಗತ್ಯವಿದೆ. ಮೇಲಿನ ಉದಾಹರಣೆಗಳಲ್ಲಿ ಇವುಗಳ ಪೈಕಿ ಕೆಲವನ್ನು ದೂರಗಳೆಂದೂ ಇನ್ನು ಕೆಲವನ್ನು ಕೋನಗಳೆಂದೂ ವರ್ಣಿಸಿರುವುದು ದೂರ ಹಾಗೂ ಕೋನಗಳ ಬಗ್ಗೆ ಎಲ್ಲರಿಗೂ ಇರುವ ವ್ಯಾಪಕ ಪರಿಚಯದ ಸೌಕರ್ಯವನ್ನು ಉಪಯೋಗಿಸಿಕೊಳ್ಳುವ ಉದ್ದೇಶದಿಂದ ಮಾತ್ರವೇ. ಎಲ್ಲ ಸಂದರ್ಭಗಳಲ್ಲೂ ಸ್ಥಾನ ನಿರ್ದೇಶಕಗಳು ಕಾಯವೊಂದರ ದೂರವನ್ನಾಗಲಿ, ಕೋನೀಯ ಭಂಗಿಯನ್ನಾಗಲಿ ಸೂಚಿಸಬೇಕೆಂಬ ಸಾರ್ವತ್ರಿಕ ನಿಯಮವೇನೂ ಇಲ್ಲ. ಸೌರವ್ಯೂಹದ ನಿದರ್ಶನವನ್ನೇ ತೆಗೆದುಕೊಂಡಲ್ಲಿ ($A_0, A_1, A_2$) ಇತ್ಯಾದಿಗಳನ್ನು ಈಗ ಭೂಮಿ, ಸೂರ್ಯ ಹಾಗೂ ಇತರ ಗ್ರಹಗಳೆಂದು ಭಾವಿಸಬೇಕು) $q_k$ ನಿರ್ದೇಶಕಗಳು ಮೂಲತಃ ಭೂಮಿಯ ಮೇಲೆಯೇ ಸ್ಥಾಪಿತವಾಗಿರುವ ದೂರದರ್ಶಕ ಮುಂತಾದ ವೀಕ್ಷಣೋಪಕರಣಗಳ (ಅಥವಾ ಅವುಗಳಿಂದ ತೆಗೆದ ಛಾಯಾಚಿತ್ರಗಳ) ಕೆಲವಷ್ಟು ವಾಚನಗಳಾಗಿರಬಹುದೇ ವಿನಾ (ಇನ್ಸ್ಟ್ರುಮೆಂಟ್ ರೀಡಿಂಗ್ಸ್) ಟೇಪಿನಿಂದ ಅಳೆದ ಅಂತರಗ್ರಹ ದೂರಗಳಾಗಿರಲು ಸಾಧ್ಯವೇ ಇಲ್ಲ. ಇಂಥ ಉಪಕರಣವಾಚನಗಳನ್ನು ನಿರ್ದಿಷ್ಟ ವಿಧಿಗಳ ಒಂದಲ್ಲ ಒಂದು ಪರಿವರ್ತನೆಗೆ ಗುರಿಪಡಿಸಿದಾಗ ([2]–[5] ಸಮೀಕರಣಗಳನ್ನು ಗಮನಿಸಬೇಕು) ಫಲಿಸುವ ಹೊಸ $\bar{q}_k$ ಪರಿಮಾಣಗಳನ್ನು ಗ್ರಹಗಳ ದೂರ ಹಾಗೂ ಕೋನೀಯ ಭಂಗಿಗಳೆಂದು ಅಂಗೀಕರಿಸುತ್ತೇವೆ. ಈ ಅಂಗೀಕೃತ ದೂರ ಹಾಗೂ ಕೋನ $\bar{q}_k$ ಗಳ ಮಾಧ್ಯಮದಲ್ಲಿ ವ್ಯಕ್ತಪಡಿಸಲು ಶಕ್ಯವಿರುವ ಸೌರವ್ಯೂಹದ ಯಾವುದೇ ಚಲನೆಯನ್ನು (ಸಮೀಕರಣ ಸಮುದಾಯ [5]) ಅದಕ್ಕೂ ಮುಂಚೆ ಭೂಮಿಯ ಮೇಲಿರುವ ಉಪಕರಣಗಳ ಮೂಲ $\bar{q}_k$ ವಾಚನಗಳ ಮಾಧ್ಯಮದಲ್ಲೇ ಅಭಿವ್ಯಕ್ತಿಸಿಬಿಡಬಹುದು (ಸಮೀಕರಣ ಸಮುದಾಯ [1] ಎಂಬ ಅಂಶವನ್ನು ಗ್ರಹಿಸಿದಾಗ ನಿರ್ದೇಶಕಗಳ ಅರ್ಥ ನಿಜಕ್ಕೂ ಯಾವ ಮಟ್ಟಕ್ಕೆ ಹಿಗ್ಗಬಲ್ಲದೆಂಬ ಬಗ್ಗೆ ಒಂದು ಉಪಯುಕ್ತ ಕಲ್ಪನೆ ನಮ್ಮ ಮನದಲ್ಲಿ ಮೂಡುತ್ತದೆ.

ಅಭಿಜಾತ ಬಲವಿಜ್ಞಾನದ ಸಂಪಾದಿತ ರೂಪವನ್ನು ಸಮೀಕ್ಷಿಸಲು ಅವಶ್ಯ ಸಿದ್ಧತೆ ಮೇಲಿನ ಪೀಠಿಕೆಯಿಂದ ಇದೀಗ ನಮಗೆ ಒದಗಿ ಬಂದಿದೆ. ಸಾಂತ ಆಯಾಮಾಂಕದ ಯಾವುದಾದರೊಂದು ಸಂವೃತ ಚಲನವ್ಯವಸ್ಥೆಯ ನಿರ್ದೇಶಕಗಳನ್ನು $q_0, q_1, q_2$ ಇತ್ಯಾದಿ ಪ್ರತೀಕಗಳಿಂದ ಸೂಚಿಸಿದಲ್ಲಿ (ಇವು ಮೇಲೆ ಹೇಳಿದ ರೂಪಗಳಾಗಿರಬಹುದು) $q_k$ ನಿರ್ದೇಶಕದ ವೇಗೋತ್ಕರ್ಷ $d^2q_k/'dt^2 = \ddot{q}_k$ ಯ ಅತ್ಯಂತ ಸಂಭಾವ್ಯ ಬೆಲೆಯನ್ನು [1] ಸಮೀಕರಣಗಳು ವ್ಯಕ್ತಪಡಿಸುತ್ತವಷ್ಟೆ. (ಪರಿಶೀಲಿತ ಚಲನ ವ್ಯವಸ್ಥೆ ಈಗ [1] [2] ಚಿತ್ರಗಳಲ್ಲಿ ತೋರಿಸಿರುವಂಥ ಸರಳರೇಖಾ ವ್ಯವಸ್ಥೆಯಾಗಬೇಕಾದುದೇನಿಲ್ಲ.) ಈ ಸಮೀಕರಣಗಳು ದತ್ತ ವ್ಯವಸ್ಥೆಯ ಚಲನೆಯನ್ನು ವರ್ಣಿಸುವಲ್ಲಿ $\alpha_0, \alpha_1, \alpha_2$

ಇತ್ಯಾದಿ ಅನೇಕ ಭಿನ್ನ ಭಿನ್ನ ಉತ್ಪನ್ನಗಳನ್ನು ಅವಲಂಬಿಸುತ್ತವೆ. ಉತ್ಕರ್ಷ ಘಟಕಗಳೆನಿಸಿಕೊಳ್ಳುವ ಇವೆಲ್ಲ ಉತ್ಪನ್ನಗಳನ್ನೂ ಕೇವಲ ಒಂದೇ ಉತ್ಪನ್ನದಿಂದ ಲೆಕ್ಕಹಾಕಲು ಸಾಧ್ಯವಾಗಬೇಕು ಎಂಬ ಎಣಿಕೆ ಅಭಿಜಾತ ಬಲವಿಜ್ಞಾನದ ಸಂಪಾದಿತ ರೂಪಕ್ಕೆ ಪ್ರಧಾನ ಹಿನ್ನೆಲೆಯಾಗಿದೆ. ಸಂವೃತ ಚಲನವ್ಯವಸ್ಥೆಯೊಂದು ಆದಿಮ ಬಲವಿಜ್ಞಾನದ ಅಧ್ಯಾರೋಪಣ ತತ್ತ್ವ, ಪ್ರತಿಕಿಯಾ ತತ್ತ್ವ ಮತ್ತು ದೂರ ಸಂವೇದನಾತತ್ತ್ವಗಳನ್ನು ಪರಿಪಾಲಿಸುವುದಾದರೆ [9] ಸಮೀಕರಣಗಳ ಪ್ರಕಾರ ಆ ವ್ಯವಸ್ಥೆಗೆ ಅನುರೂಪವಾಗಿ ಜಡತಾ ನಿರ್ದೇಶಕ $q_k, q_k$ ಗಳನ್ನು ಒಳಗೊಳ್ಳುವ (ಮತ್ತು ವ್ಯವಸ್ಥೆಯ ನಿಶ್ಚಿತ ಹಾಗೂ ಅನಿಶ್ಚಿತ ಚಲನೆಗಳಿಂದ ಬೆಲೆ ವ್ಯತ್ಯಸ್ತವಾಗದ) ಒಂದು ಶಕ್ತಿ ಉತ್ಪನ್ನ $\overline{\mathrm{E}}$ ನ್ನು ರಚಿಸಬಹುದೆಂದು ಈಗಾಗಲೇ ಅರಿತಿದ್ದೇವೆ:

$$\overline{E} = \overline{T} + \overline{V} = \frac{1}{2}\sum_{(k)} m_k \dot{\overline{q}}_k^{\ 2} - \frac{1}{2}\sum_{(k)} m_k$$

$$\{\sum_{(l)} \int \overline{\beta}_{kl}(\overline{q}_k - \overline{q}_l) \times d(\overline{q}_k - \overline{q}_l)\} \text{.......[16]}$$

ಇದೇ ಸಂದರ್ಭದಲ್ಲಿ ವ್ಯಾಖ್ಯಿಸಲಾದ (ಅಭಿಜಾತ) ಸಂವೇಗ $\partial \overline{T} / \partial \dot{\overline{q}} = m_k \dot{\overline{q}}_K$ ಯನ್ನು ಈಗ $\overline{p}_k$ ಎಂಬ ಪ್ರತೀಕದಿಂದ ಸೂಚಿಸಿದರೆ

$$\overline{p}_k = m_k \ \dot{\overline{q}}_k ; \dot{\overline{q}}_k = \overline{p}_k / m_k, \ \ k = 0,1,2 \text{ ಇತ್ಯಾದಿ ....[17]}$$

ಈ ಸಂಬಂಧಗಳನ್ನು ಉಪಯೋಗಿಸಿಕೊಂಡು $\overline{q}_k, \dot{\overline{q}}_k$ ಚರಗಳ ಒಂದೊಂದು ಉತ್ಪನ್ನಕ್ಕೂ ಅನುರೂಪವಾಗಿ $\overline{q}_k, \overline{p}_k$ ಚರಗಳ ಒಂದೊಂದು ಉತ್ಪನ್ನಕ್ಕೂ ಅನುರೂಪವಾಗಿ $\overline{q}_k, \dot{\overline{q}}_k$ ಚರಗಳ ಒಂದೊಂದು ಸಮಾನ ಉತ್ಪನ್ನವನ್ನು ರಚಿಸಲು ಶಕ್ಯವಾಗುವುದು. ಮೇಲಿನ ಶಕ್ತಿ ಉತ್ಪನ್ನ $\overline{E} = \overline{T}(\dot{\overline{q}}_0, \dot{\overline{q}}_1,$ ಇತ್ಯಾದಿ) + $\overline{V}(\overline{q}_0, \overline{q}_1,$ಇತ್ಯಾದಿ)ಗೆ ಅನುರೂಪವಾಗಿ $\overline{q}_k, \overline{p}_k$ ಮಾಧ್ಯಮದಲ್ಲಿ ಹೀಗೆ ರಚಿಸಬಹುದಾದ ಸಮಾನ ಉತ್ಪನ್ನವನ್ನು $\overline{\mathrm{H}}$ ಪ್ರತೀಕದಿಂದ ಸೂಚಿಸಿದರೆ

$$\overline{H} = \overline{H}(\overline{q}_0, \overline{q}_1, \overline{q}_2, \text{ ಇತ್ಯಾದಿ } ; \overline{p}_0, \overline{p}_1, \overline{p}_2, \text{ ಇತ್ಯಾದಿ})$$

$$= \overline{T}(\overline{p}_0/m_0, \overline{p}_1/m_1, \text{ ಇತ್ಯಾದಿ } + \overline{V}(\overline{q}_0, \overline{q}_1, \text{ ಇತ್ಯಾದಿ})$$

$$= \frac{1}{2}\sum_{(k)} (\overline{p}^2 k / m_k) - \frac{1}{2}\sum_{(k)} m_k \{\sum_{(l)} \int \beta_{kl}(\overline{q}_k - \overline{q}_l)$$

$$\times d(\overline{q}_k - \overline{q}_l)\} \quad \text{........[18]}$$

ಇಂಥ ಉತ್ಪನ್ನವನ್ನು ಮೊಟ್ಟಮೊದಲಿಗೆ ಬಳಕೆಗೆ ತಂದ ಡಬ್ಲ್ಯು.ಆರ್.ಹ್ಯಾಮಿಲ್ಟನ್ (1805–1865) ಎಂಬಾತನ ಗೌರವಾರ್ಥವಾಗಿ $\overline{H}$ ಉತ್ಪನ್ನಕ್ಕೆ ಪರಿಶೀಲಿತ ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ ಉತ್ಪನ್ನವೆಂದು ಹೆಸರಿಸಲಾಗಿದೆ. (ಈ ನಾಮಕರಣಕ್ಕೆ ಅನುರೂಪವಾಗಿ ಮೊದಲಿನ $\overline{q}_k, \dot{\overline{q}}_k$ ಚರಗಳ $\overline{\mathrm{E}}$ ಉತ್ಪನ್ನವನ್ನು ಕಾರ್ಲ್ ಗೂಸ್ಟಫ್ ಯಾಕೋಪ್ (1804–1852) ಎಂಬಾತನ ಹೆಸರಿನಲ್ಲಿ ವ್ಯವಸ್ಥೆಯ ಜೆಕೊಬಿಯನ್ ಅನುಕೂಲವೆಂದೂ ಕರೆಯುವ ವಾಡಿಕೆ ಉಂಟು (ಜಾಕೊಬಿಯನ್ ಇಂಟೆಗ್ರಲ್). [18]ಸಮೀಕರಣಗಳ ನೇರ ಆಂಶಿಕ ಅವಕಲನದಿಂದ

$$\partial \overline{H} / \partial \overline{p}_k = \overline{p}_k / m_k = \dot{\overline{q}} k, \partial \overline{H} / \partial \dot{\overline{q}}_k = \partial \overline{V} / \partial \overline{q}_k$$

ಎಂಬ ಫಲಗಳು ದೊರಕುತ್ತವೆ. ಮೇಲಾಗಿ [10], [5] ಸಮೀಕರಣಗಳಿಂದ

$$\partial \overline{V} / \partial \overline{q}_k = -m_k \overline{a}_k = -m_k \ddot{q}_k \quad = -d(m_k \dot{q}_k) dt$$

$$= -d - p_k / dt = -\dot{\overline{p}}_k$$

ಆಗಬೇಕಾಗುವುದು. ತತ್ಫಲವಾಗಿ ಅಧ್ಯಾರೋಪಣಾದಿ ತತ್ತ್ವಬದ್ಧ ಸಂವೃತ ಚಲನವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಜಡತಾ ನಿರ್ದೇಶಕಗಳಲ್ಲಿ

$$\dot{\overline{q}}^{\,k} = \frac{\partial \overline{H}}{\partial \overline{p}_k}, \dot{\overline{p}}_k = \frac{\partial \overline{H}}{\partial \overline{q}_k}; k = 0,1,2, \text{ ಇತ್ಯಾದಿ} \quad \text{.......[19]}$$

ಅಂದವಾದ ಈ ಸೂತ್ರಗಳಿಗೆ ಹ್ಯಾಮಿಲ್ಟನ್ ವಿಹಿತ ಸಮೀಕರಣಗಳು (ಕನಾನಿಕಲ್ ಈಕ್ವೇಷನ್ಸ್) ಎಂದು ಹೆಸರು. $\overline{H}$ ಉತ್ಪನ್ನ ಜ್ಞಾತವಿರುವಾಗ ಈ ವಿಹಿತ ಸಮೀಕರಣಗಳಿಂದಲೇ ವ್ಯವಸ್ಥೆಯ (ಅತ್ಯಂತ ಸಂಭಾವ್ಯ) ಚಲನ ವೈಖರಿಯನ್ನು ಸಂಪೂರ್ಣವಾಗಿ ಗೊತ್ತುಮಾಡಲು ಸಾಧ್ಯವಾಗುವುದು. ವಿಶೇಷತಃ

$$\overline{\alpha}_k = \ddot{\overline{q}}_k = \frac{d}{dt}\left(\frac{\partial \overline{H}}{\partial \overline{p}_k}\right) = \sum_{(l)}\left(\frac{d\overline{q}_l}{dt}\frac{\partial^2 \overline{H}}{\partial \overline{q}_l \ \partial \overline{p}_k} + \frac{d\overline{p}_l}{dt}\frac{\partial^2 \overline{H}}{\partial \overline{p}_l \ \partial \overline{p}_k}\right)$$

$$= \sum_{(l)}\left(\frac{\partial \overline{H}}{\partial \overline{p}_l}\frac{\partial^2 \overline{H}}{\partial \overline{q}_l \ \partial \overline{p}_k} - \frac{\partial \overline{H}}{\partial \overline{q}_l}\frac{\partial^2 \overline{H}}{\partial \overline{p}_l \ \partial \overline{p}_k}\right)$$

ಆಗುವುದರಿಂದ ಜಡತಾ ನಿರ್ದೇಶಕಗಳಲ್ಲಿ ವ್ಯವಸ್ಥೆಯ ಎಲ್ಲ ಉತ್ಕರ್ಷಘಟಕ $\overline{\alpha}_k$ ಗಳನ್ನು $\overline{H}$ ಉತ್ಪನ್ನವೊಂದರಿಂದಲೇ ಲೆಕ್ಕಹಾಕಲೂಬಹುದು. ಅಭಿಜಾತ ಬಲವಿಜ್ಞಾನದ ಸಂಪಾದಿತ ರೂಪದಲ್ಲಿ ಇದೇ ಪರಿಸ್ಥಿತಿಗಳ ಮಾದರಿಯನ್ನು ಅನುಸರಿಸಿ ಅಧ್ಯಾರೋಪಣಾದಿ ತತ್ತ್ವಗಳಿಗೆ ಬದ್ಧವಾಗಿರಬೇಕಿಲ್ಲದ ವ್ಯವಸ್ಥೆಗಳಿಗೆ ಸಹ (ತತ್ಫಲವಾಗಿ ಜಡತಾ ನಿರ್ದೇಶಕಗಳಾಗದಿರುವ $q_k, \dot{q}_k$ ಗಳಿಗೆ ಕೂಡ) ಸೂಕ್ತ ವ್ಯಾಖ್ಯೆಗಳೊಂದಿಗೆ ವಿಹಿತ ಸಮೀಕರಣಗಳು ಅನ್ವಯಿಸಿಯೇ ಅನ್ವಯಿಸಬೇಕೆಂದು ನಿರೀಕ್ಷಿಸುತ್ತೇವೆ. ಈ ಸಂಬಂಧದಲ್ಲಿ ನಮ್ಮ ಗ್ರಹಿಕೆಗಳು ನಿಷ್ಕೃಷ್ಟವಾಗಿ ಇಂತಿವೆ: ಮೊದಲನೆಯದಾಗಿ ಒಂದು ದತ್ತ ಸಂವೃತ ವ್ಯವಸ್ಥೆಯನ್ನು ಕುರಿತಂತೆ ಅದರ ಯಾವುದೇ ಸ್ಥಾನ ಮತ್ತು ವೇಗ ನಿರ್ದೇಶಕ $q_k, \dot{q}_k$ ಗಳನ್ನು ಚರಗಳನ್ನಾಗಿ ಒಳಗೊಳ್ಳುವ (ಮತ್ತು ವ್ಯವಸ್ಥೆಯ ಚಲನೆಗಳಿಂದ ಬೆಲೆ ವ್ಯತ್ಯಸ್ತವಾಗದ)ಒಂದು ಶಕ್ತಿ ಉತ್ಪನ್ನ $E$ ಯನ್ನು ರಚಿಸಲು ಶಕ್ಯವಾಗಬೇಕು:

$$E = E(q_0, q_1, q_2, \text{ ಇತ್ಯಾದಿ } E = E(q_0, q_1, q_2, \text{ ಇತ್ಯಾದಿ})$$

[16] ಸಮೀಕರಣದಲ್ಲಿ ಕಂಡುಬಂದಿರುವ ರೂಪವೇ Eಗೂ ಇರಬೇಕೆಂಬ ನಿಬಂಧನೆಯೇನಿಲ್ಲ; ಉದಾಹರಣೆಗೆ ವೇಗ $\dot{q}_k$ ಗಳನ್ನು ಮಾತ್ರವೇ ಒಳಗೊಳ್ಳುವ ಯಾವುದೇ ಒಂದು ಚಲನೋತ್ಪನ್ನ $T$ ಹಾಗೂ ಸ್ಥಾನ $q_k$ ಗಳನ್ನು ಮಾತ್ರವೇ ಒಳಗೊಳ್ಳುವ ಯಾವುದೇ ಒಂದು ವಿಭವೋತ್ಪನ್ನ $V$ ಇವುಗಳ ಮೊತ್ತವನ್ನಾಗಿ $E$ಯನ್ನು ವ್ಯಕ್ತಪಡಿಸಲು ಸಾಧ್ಯವಾಗದೆ ಇರಬಹುದು); ಎರಡನೆಯದಾಗಿ H($q_0, q_1,$ ಇತ್ಯಾದಿ); $p_0, p_1$ ಇತ್ಯಾದಿ) =E ($q_0, q_1,$ ಇತ್ಯಾದಿ; $\dot{\overline{q}}_0, \dot{\overline{q}}_1,$ ಇತ್ಯಾದಿ) ಎಂಬ ಸಮಾನತೆಯಿಂದ ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ ಉತ್ಪನ್ನ $H$ನ್ನು ವ್ಯಾಖ್ಯಿಸಿದಾಗ ವ್ಯವಸ್ಥೆಯ ನಿಶ್ಚಿತ ಜಾಡಿನ ಚಲನೆಗಳಿಗೆ ದ್ವಿತೀಯ ವಿಹಿತ

$$\dot{q} k = -\frac{\partial H}{\partial q_k}, k = 0,1,2, \text{ ಇತ್ಯಾದಿ} \quad \text{....[20]}$$

ಸಮೀಕರಣಗಳು ಸಿಂಧುವಾಗುವಂತೆ $p_0, p_1, p_2$ ಮುಂತಾದ (ಸಾರ್ವತ್ರೀಕೃತ) ಸಂವೇಗಗಳನ್ನು $q_l, \dot{q}_l$ ಗಳ ನಿರ್ದಿಷ್ಟ ಉತ್ಪನ್ನಗಳನ್ನಾಗಿ ರಚಿಸಲು ಶಕ್ಯವಾಗಬೇಕು (ಜೆನರಲೈಸ್ ಮೊಮೆಂಟ);

$$p_k = p_k(q_0, q_1, q_2 \text{ ಇತ್ಯಾದಿ}; \dot{q}_0, \dot{q}_1, \dot{q}_2 \text{ ಇತ್ಯಾದಿ}) \; ; k = 0, 1, 2, \text{ ಇತ್ಯಾದಿ} \qquad ....[21]$$

(ಇಂಥ ಸಾರ್ವತ್ರಿಕ ಸನ್ನಿವೇಶದಲ್ಲಿ $p_k = m_k q_k$ ಸಮೀಕರಣಗಳನ್ನು ಸಿದ್ಧಪಡಿಸಬಲ್ಲ ನಿಯತ ತೂಕ $m_k$ ಅಸ್ತಿತ್ವವಿರಬೇಕಾಗಿಲ್ಲ; ಸಾರ್ವತ್ರೀಕೃತ ಸಂವೇಗ ತೂಕದ ಪರಿಕಲ್ಪನೆಯನ್ನು ಆಧರಿಸಿಲ್ಲ; $p_k$ ಸಂವೇಗ ನಿಜಕ್ಕೂ ಕೇವಲ $\dot{q}$k ಒಂದು ವೇಗವನ್ನೇ ಅಲ್ಲದೆ ಉಳಿದ ವೇಗ $\dot{q}_\ell$ ಗಳನ್ನೂ ಜೊತೆಗೆ ಎಲ್ಲ ಸ್ಥಾನ ನಿರ್ದೇಶಕ $q_l$ ಗಳನ್ನೂ ಒಳಗೊಳ್ಳಬಹುದು); ಕೊನೆಯದಾಗಿ [21] ಸಮೀಕರಣಗಳನ್ನು ಪರಿಹರಿಸಿ ವೇಗ $\dot{q}$k ಗಳನ್ನು ಸ್ಥಾನ $q_l$ ಮತ್ತು ಸಂವೇಗ $p_t$ ಗಳ ಮಾಧ್ಯಮದಲ್ಲಿ ಅಭಿವ್ಯಕ್ತಿಸಲು ಸಾಧ್ಯವಾಗಬೇಕು; ಮತ್ತು ಹಾಗೆ ಅಭಿವ್ಯಕ್ತಿಸುವುದರಿಂದ ಫಲಿಸುವ ನಿತ್ಯ ಸಮತೆಗಳೇ ಪ್ರಥಮ ವಿಹಿತ

$$\dot{q}k \equiv \frac{\partial H}{\partial p_k}, k = 0, 1, 2, \text{ ಇತ್ಯಾದಿ} \qquad ....[22]$$

ಸಮೀಕರಣಗಳಾಗಬೇಕು. [21], [22] ಸಂಬಂಧಗಳ ಫಲವಾಗಿ ದತ್ತ ವ್ಯವಸ್ಥೆಯ ಚಲನ ವಿನ್ಯಾಸವನ್ನು $q_k, p_k$ಗಳೂ $q_k, \dot{q}_k$ ಗಳಷ್ಟೇ ನಿಸ್ಸಂದಿಗ್ಧವಾಗಿ ನಿರ್ದೇಶಿಸುವಂತಾಗುವುದು. $q_k, p_k$ ಗಳಿಗೆ ಹ್ಯಾಮಿಲ್ಟನ್ ವಿಹಿತ ಸಂಯುಗ್ಮಿ ಚರಗಳು (ಕನಾನಿಕಲಿ ಕಾಂಜುಗೇಟ್ ವೇರಿಯಬಲ್ಸ್) ಎಂದು ಹೆಸರು. ಈಗ $F$, $G$ ಎಂಬವು $q_k, p_k$ ಚರಗಳ ಯಾವುದೇ ಉತ್ಪನ್ನಗಳಾದಲ್ಲಿ

$$(F, G) \equiv \sum_{(k)} \left( \frac{\partial F}{\partial q_k} \frac{\partial G}{\partial p_k} - \frac{\partial F}{\partial q_k} \frac{\partial G}{\partial q_k} \right) \qquad ........[23]$$

ಎಂಬ ಸಂಯೋಜನೆಗೆ ವಿಶೇಷ ಮಹತ್ತ್ವವಿರುವುದನ್ನು ಗಮನಿಸಿ ಎಸ್.ಡಿ.ಪ್ವಾಸಾಂವ್ (1781–1840) ಇಂಥ ಉಕ್ತಿಗಳನ್ನು ವ್ಯಾಪಕವಾಗಿ ಬಳಕೆಗೆ ತಂದ. $(F,G)$ಗೆ $F,G$ ಗಳ ಪ್ವಾಸಾಂವ್ ಆವರಣವೆಂದು (ಪ್ವಾಸಾಂವ್ ಬ್ರ್ಯಾಕೆಟ್) ಹೆಸರು. $(F,G)=-(G,F)$, $(F,F)=0$ ಎಂಬ ನಿತ್ಯಸಮತೆಗಳನ್ನು ಗಮನಿಸಬೇಕು. ಪ್ವಾಸಾಂವ್ ಆವರಣದ ನೆರವಿನಿಂದ ವ್ಯವಸ್ಥೆಯ ನಿಶ್ಚಿತ ಚಲನೆಗಳಿಗೆ ಅನುರೂಪವಾಗಿ ಈ ಉತ್ಪನ್ನದ ಬೆಲೆ ಕಾಲಕ್ರಮದಲ್ಲಿ ಏರುತ್ತ ಹೋಗುವ ದರ $dF/dt$ ಯನ್ನು ಕೇವಲ $q_k, p_k$ ಗಳನ್ನು ಕುರಿತ ಆಂಶಿಕಾವಕಲನಾಂಕಗಳ ಮಾಧ್ಯಮದಲ್ಲೇ ವ್ಯಕ್ತಪಡಿಸಬಹುದು:

$$\frac{dF}{dt} = \sum_{(k)} \left( \frac{dq_k}{dt} \frac{\partial F}{\partial q_k} + \frac{dp_k}{dt} \frac{\partial F}{\partial p_k} \right) = \sum_{(k)} \left( \frac{\partial H}{\partial p_k} \frac{\partial F}{\partial q_k} - \frac{\partial H}{\partial q_k} \frac{\partial F}{\partial p_k} \right) = (F, H)$$

ಈ ಸೂತ್ರದ ಪ್ರಕಾರ $dH/dt=(H,H)=0$ ಆಗುವುದರಿಂದ ದತ್ತ ವ್ಯವಸ್ಥೆಯ ನಿಶ್ಚಿತ ಜಾಡಿನ ಚಲನೆಗಳಿಗೆ ಹ್ಯಾಮಿಲ್ಟೋನಿಯನ್ ಉತ್ಪನ್ನ $H$ನ ಬೆಲೆ (ಹಾಗೂ ತತ್ಸಮವಾದ ಶಕ್ತಿ ಉತ್ಪನ್ನ $E$ಯ ಬೆಲೆ) ಒಮ್ಮೆ ಎಷ್ಟಿರುತ್ತದೋ ಸದಾ ಕಾಲವೂ ಅಷ್ಟೇ ಇರಬೇಕೆಂದು ಸಿದ್ಧಪಡುತ್ತದೆ. ಆದರೆ ಇಷ್ಟೇ ಅಲ್ಲದೆ ವ್ಯವಸ್ಥೆಯ ಅನಿಶ್ಚಿತ ಕದಲಿಕೆಗಳು ಸಹ $H=E$ಯ ಬೆಲೆಯನ್ನು ವ್ಯತ್ಯಸ್ತಗೊಳಿಸಲಾರವೆಂದು ನಾವು ಭಾವಿಸುತ್ತೇವೆ. $H=E$ಯ ಬೆಲೆಗೆ ವ್ಯವಸ್ಥೆಯ ಶಕ್ತಿ ಎಂದು ಹೆಸರು; ಇದು ನಿಯತವಾಗಿರಬೇಕೆಂಬ ತತ್ತ್ವವೇ ಸಂವೃತ ವ್ಯವಸ್ಥೆಗಳ ಶಕ್ತಿನಿತ್ಯತೆಯ ನಿಯಮ (ಕನ್ಸರ್ವೇಷನ್ ಆಫ್ ಎನರ್ಜಿ).

[20], [22] ವಿಹಿತ ಸಮೀಕರಣಗಳನ್ನು ಸಿಂಧುಗೊಳಿಸಬೇಕೆಂಬ ನಿಬಂಧನೆ (21)ಸೂತ್ರಗಳ $p_k$ ಸಂವೇಗೋತ್ಪನ್ನಗಳನ್ನು ಏಕೈಕ ರೀತಿಯಲ್ಲಿ ನಿಷ್ಕರ್ಷಿಸುತ್ತದೆಂದು ¨sÁ¸ÀÄUÀÄÀ(£Árï AiÀiÁ¤ÀÄÀÄ). ¤dPÀÌ $F(q_0,q_1)$ ಎಂಬುದು ದತ್ತ ಚಲನ ವ್ಯವಸ್ಥೆಯ ಸ್ಥಾನ ನಿರ್ದೇಶಕಗಳನ್ನು ಮಾತ್ರವೇ ಒಳಗೊಳ್ಳುವ ಯಾವುದೊಂದು ಉತ್ಪನ್ನವಾದರೂ $p_k$ಗಳಿಗೆ ಬದಲಾಗಿ $p_k + F/q_k$ಗಳನ್ನು ಸಹ ಸಂವೇಗೋತ್ಪನ್ನಗಳನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಆದರೆ ಸಂವೇಗೋತ್ಪನ್ನಗಳನ್ನು ಒಮ್ಮೆ ಆಯ್ಕೆ ಮಾಡಿದ ಬಳಿಕ ಗಣಿತೀಯ ವಿಶ್ಲೇಷಣೆಗಳ ಅಂತ್ಯದವರೆಗೂ ಅದೇ ಆಯ್ಕೆಯನ್ನು ಮುಂದು ವರಿಸುವುದು ಅನಿವಾರ್ಯ. ಸಂವೇಗೋತ್ಪನ್ನಗಳ ಯಾವುದಾದರೊಂದು ಆಯ್ಕೆಗೆ ಅನುರೂಪವಾಗಿ

$$M \equiv M(q_0, q_1, \text{ ಇತ್ಯಾದಿ}; \; p_0, p_1, \text{ ಇತ್ಯಾದಿ}) = -H + \sum_{(k)} p_k \frac{\partial H}{\partial p_k}$$

ಎಂಬ ಉತ್ಪನ್ನವನ್ನು ವ್ಯಾಖ್ಯಿಸಿ [21],[22] ಸಮೀಕರಣಗಳ ಸಹಾಯದಿಂದ $M$ಗೆ ಸಮವಾದ ಇನ್ನೊಂದು ಉತ್ಪನ್ನ ∝ನ್ನು ವ್ಯವಸ್ಥೆಯ ಸ್ಥಾನ $q_k$ ಮತ್ತು ವೇಗ $\dot{q}_k$ ಗಳ ಮಾಧ್ಯಮದಲ್ಲಿ ರಚಿಸಬಹುದು:

$$L \equiv L(q_0, q_1, \text{ಇತ್ಯಾದಿ}; \; \dot{q}_0, \dot{q}_1, \text{ಇತ್ಯಾದಿ}) = M \; (q_0, q_1, \text{ ಇತ್ಯಾದಿ}; \; p_0, p_1, \text{ಇತ್ಯಾದಿ})$$

ದತ್ತ ಚಲನವ್ಯವಸ್ಥೆಯನ್ನು ಕುರಿತಂತೆ ಹೀಗೆ ರಚಿಸಿದ $L$ ಉತ್ಪನ್ನಕ್ಕೆ ($p_k$ ಸಂವೇಗಗಳಿಗೆ ಅನುಗುಣವಾದ) ಲಗ್ರಾಂಜಿಯನ್ ಉತ್ಪನ್ನವೆಂದು ಹೆಸರು. ಐತಿಹಾಸಿಕ ಅನುಕ್ರಮದಲ್ಲಿ ಜೋಸೆಫ್ ಲೂಯಿ ಲಗ್ರಾಂಜ್ (1736–1813) ಎಂಬಾತ ಇದೇ $L$ ಉತ್ಪನ್ನವನ್ನು ಬೇರೆ ವಿಧಾನಗಳಿಂದ $H$ ಉತ್ಪನ್ನಕ್ಕಿಂತ ಪೂರ್ವಭಾವಿಯಾಗಿಯೇ ರಚಿಸಿ ಬಳಕೆಗೆ ತಂದಿದ್ದ. ಚಲನವ್ಯವಸ್ಥೆ ಅಧ್ಯಾರೋಪಣಾದಿ ತತ್ತ್ವಗಳಿಗೆ ಬದ್ಧವಾಗಿದ್ದು ಸಂವೇಗಗಳನ್ನು $\overline{p}_k = m_k \dot{\overline{q}}_k$ (ಅಂದರೆ ಸಂವೇಗ=ದ್ರವ್ಯರಾಶಿ $X$ ವೇಗ) ಸೂತ್ರಗಳಿಂದ ವ್ಯಾಖ್ಯಾನಿಸಿದಾಗ ವ್ಯವಸ್ಥೆಯ ಅನುರೂಪ ಲಗ್ರಾಂಜಿಯನ್ ಉತ್ಪನ್ನ ಚಲನೋತ್ಪನ್ನ ಮತ್ತು ವಿಭವೋತ್ಪನ್ನಗಳ ವ್ಯತ್ಯಾಸಕ್ಕೆ ಸಮವಾಗಿರುತ್ತದೆಂದು ತೋರಿಸಬಹುದು: $\overline{L} = \overline{T} - \overline{V}$. ಲಗ್ರಾಂಜಿಯನ್ ಉತ್ಪನ್ನದ ಲಕ್ಷಣಗಳನ್ನು ಆವಿಷ್ಕರಿಸುವ ಸಲುವಾಗಿ $q_k, \dot{q}_k$ ಚರಗಳಿಗೆ ಯಾದೃಚ್ಛಿಕ ಶೂನ್ಯಗಾಮಿ ಏರಿಕೆ $dq_k, d\dot{q}_k$ ಗಳನ್ನು ಸಲ್ಲಿಸಿದಾಗ (ಆರ್ಬಿಟ್ರರಿ ಇನ್‌ಫಿನಿಟೆಸಿಮಲ್ ಇನ್‌ಕ್ರಿಮೆಂಟ್ಸ್) $p_k$, $M$ ಹಾಗೂ $L$ ಉತ್ಪನ್ನಗಳ ಬೆಲೆಗಳು dpk,dM ಹಾಗೂ dL ಗಳಷ್ಟು ಏರುತ್ತವೆಂದು ಭಾವಿಸಬೇಕು. ಆಗ L=M ಆದಕಾರಣ dL=dM ಆಗಬೇಕಾಗುವುದು:

$$\sum_{(k)} \left( dq_k \frac{\partial L}{\partial q_k} + d\dot{q}_k \frac{\partial L}{\partial \dot{q}_k} \right) = dL = dM$$

$$= -dH + d\sum_{(k)} p_k \frac{\partial H}{\partial p_k} = -\sum_{(k)} \left( dq_k \frac{\partial H}{\partial q_k} + dp_k \frac{\partial H}{\partial p_k} \right)$$

$$+ \sum_{(k)} dp_k \frac{\partial H}{\partial p_k} + \sum_{(k)} p_k \; d\left( \frac{\partial H}{\partial p_k} \right)$$

$$= \sum_{(k)} \left\{ dq_k \left( \frac{-\partial H}{\partial q_k} \right) + (d\dot{q}_k) \, p_k \right\}$$

ಈ ಸಮೀಕರಣ ಸರಣಿಯಲ್ಲಿ ನಿತ್ಯಸಮತೆಯಾದ ಪ್ರಥಮ ವಿಹಿತ ಸೂತ್ರ $\dot{q}_k = \partial H / \partial p_k$ ಯನ್ನು ಬಳಸಲಾಗಿದೆಯೇ ವಿನಾ ವ್ಯವಸ್ಥೆಯ ನಿಶ್ಚಿತ ಚಲನೆಯ ಜಾಡಿಗೆ ಸಂಬಂಧಪಟ್ಟ ದ್ವಿತೀಯ ವಿಹಿತ ಸೂತ್ರ $\overline{p}_k = -\partial H / \partial q_k$ ಯನ್ನಲ್ಲ; ಎಂತಲೇ ಸರಣಿಯ ಆದಿ ಹಾಗೂ ಅಂತ್ಯಪದಗಳನ್ನು ಹೋಲಿಸಿದಾಗ

$$\frac{\partial L}{\partial q_k} = -\frac{\partial H}{\partial q_k}; \frac{\partial L}{\partial \dot{q}_k} = p_k$$

ಎಂಬ ನಿತ್ಯಸಮತೆಗಳು ಫಲಿಸುತ್ತವೆ. ಈಗ $\dot{p}_k = dp_k/dt$ ಆದಕಾರಣ ದ್ವಿತೀಯ ವಿಹಿತ ಸೂತ್ರವನ್ನೂ ಉಪಯೋಗಿಸಿಕೊಂಡರೆ ದತ್ತ ವ್ಯವಸ್ಥೆಯ ಚಲನವೈಖರಿ

$$\frac{d}{dt}\left(\frac{\partial L}{\partial \dot{q}_k}\right) = \frac{\partial L}{\partial q_k}, \qquad k = 0,1,2, \text{... ಇತ್ಯಾದಿ}$$

ಎಂಬ ಸಮೀಕರಣಗಳಿಗೆ ಅನುಗುಣವಾಗಿರಬೇಕೆಂದು ಗೊತ್ತಾಗುವುದು. ಇವಕ್ಕೆ ಲಗ್ರಾಂಜ್ ಚಲನ ಸಮೀಕರಣಗಳೆಂದು ಹೆಸರು. $p_k = \partial L/\partial \dot{q}_k$ ಗಳನ್ನು ವ್ಯವಸ್ಥೆಯ ಸಾರ್ವತ್ರೀಕೃತ ಸಂವೇಗಗಳೆಂದು ಕರೆದಂತೆಯೇ $\dot{p}_k = \partial L/\partial q_k \equiv -\partial H/\partial q_k$ ಗಳನ್ನು ಆ ಸಂವೇಗಗಳಿಗೆ ಅನುರೂಪವಾದ ಸಾರ್ವತ್ರೀಕೃತ ಬಲಗಳೆಂದೂ (ಜನರಲೈಸ್ಡ್ ಫ಼ೋರ್ಸಸ್) ಕರೆಯುವ ರೂಢಿ ಉಂಟು. ಈ ಪರಿಭಾಷೆಯ ಚೌಕಟ್ಟಿನಲ್ಲಿ ಲಗ್ರಾಂಜ್ ಚಲನ ಸಮೀಕರಣಗಳೂ ಹ್ಯಾಮಿಲ್ಟನ್ ದ್ವಿತೀಯ ವಿಹಿತ ಸಮೀಕರಣಗಳೂ ನ್ಯೂಟನ್ ದ್ವಿತೀಯ ಚಲನ ನಿಯಮಕ್ಕೆ ಸದೃಶವಾಗಿ ಯಾವುದೇ ಸಂವೇಗದ ಏರಿಕೆಯ ದರ ಅನುರೂಪ ಸಾರ್ವತ್ರೀಕೃತ ಬಲಕ್ಕೆ ಸಮವಾಗಿರುತ್ತದೆಂದು ತಿಳಿಸುತ್ತವೆ.

ಬಲವಿಜ್ಞಾನದ ಆದಿಮ ರೂಪದಲ್ಲಿ ಚಲನವ್ಯವಸ್ಥೆಗಳ ವರ್ಣನೆಗಾಗಿ ಅಧ್ಯಾರೋಪಣಾದಿ ತತ್ತ್ವಗಳೂ ಅವನ್ನು ಸಿಂಧುಗೊಳಿಸಬಲ್ಲ ವಿಶೇಷ ಜಡತಾ ನಿರ್ದೇಶಕಗಳೂ ಅವಶ್ಯ ವಾಗುತ್ತವಷ್ಟೆ. ಅಲ್ಲಿಗೆ ಜಡತಾ ನಿರ್ದೇಶಕಗಳ ಆಸರೆಯಿಲ್ಲದೆ ಆದಿಮ ಬಲವಿಜ್ಞಾನದ ನಿರೂಪಣೆ ಅಸಾಧ್ಯವೆಂದಾಯಿತು. ಸಂಪಾದಿತ ಬಲವಿಜ್ಞಾನವನ್ನು ಕುರಿತ ನಮ್ಮ ಈವರೆಗಿನ ನಿರೂಪಣೆಯಾದರೂ ಒಂದು ಗೊತ್ತಾದ ನಿರ್ದೇಶಕ ವ್ಯವಸ್ಥೆ $q_k, \dot{q}_k$ ಗಳ ಮಾಧ್ಯಮ ದಲ್ಲಷ್ಟೇ ಸಾಗಿಬಂದಿದೆ. ಆದರೆ ನಿರ್ದೇಶಕಗಳ ಆಯ್ಕೆಯಲ್ಲಿ ಅಧಿಕತರ ಸ್ವಾತಂತ್ರ್ಯವಿರ ಬೇಕೆಂಬುದು ಸಂಪಾದಿತ ಶಾಸ್ತ್ರದ ಒಂದು ಮುಖ್ಯ ಉದ್ದೇಶ. ಆದ್ದರಿಂದ $q_k, \dot{q}_k$ ಗಳನ್ನು (ಹಿಂದಾಗಲೇ ಪ್ರಸ್ತಾವಿಸಿರುವಂತೆ [2],[3],[4] ಸಮೀಕರಣಗಳ ಅನುಸಾರ) ಹೊಸ $\bar{q}_k, \dot{\bar{q}}_k$ ನಿರ್ದೇಶಕಗಳನ್ನಾಗಿ ಪರಿವರ್ತಿಸಿದಾಗ (ಈಗಿನ $\bar{q}_k, \dot{\bar{q}}_k$ ಗಳನ್ನು ಜಡತಾ ನಿರ್ದೇಶಕಗಳೆಂದು ಗ್ರಹಿಸಕೂಡದು) [20], [22] ಹ್ಯಾಮಿಲ್ಟನ್ ಸೂತ್ರಗಳ ವಿಹಿತತೆ ಇದ್ದಂತೆಯೇ ಸಂರಕ್ಷಿತವಾಗಲು ಅವಶ್ಯವಾದ ನಿಬಂಧನೆಗಳ ಬಗ್ಗೆ ಇದೀಗ ವಿವೇಚಿಸಬೇಕಾಗುವುದು. ಅಂದರೆ ಹೊಸ $\bar{q}_k, \dot{\bar{q}}_k$ ನಿರ್ದೇಶಕಗಳಿಗೆ ಅನುಗುಣವಾದ ಹ್ಯಾಮಿಲ್ಟೋನಿಯನ್ ಹಾಗೂ ಸಂವೇಗೋತ್ಪನ್ನಗಳನ್ನು $\bar{H} = \bar{H}(q_0, q_1,$ ಇತ್ಯಾದಿ; $\bar{p}_0, \bar{p}_1,$ ಇತ್ಯಾದಿ) ಹಾಗೂ

$$\bar{p}_k = \bar{p}_k(\bar{q}_0, \bar{q}_1, \text{ಇತ್ಯಾದಿ}; \; \bar{p}_0, \bar{p}_1, \text{ ಇತ್ಯಾದಿ}) \qquad \text{.......[24}$$

ಎಂಬುದಾಗಿ ಸೂಚಿಸಿದಲ್ಲಿ ವ್ಯವಸ್ಥೆಯ ಚಲನ ಸಮೀಕರಣಗಳು

$$\dot{\bar{p}}_k = -\frac{\partial \bar{H}}{\partial \bar{q}_k} \qquad \text{.......... .[25]}$$

$$\dot{\bar{q}}_k \equiv \frac{\partial \bar{H}}{\partial \bar{p}_k} \qquad \text{.......... .[26]}$$

ಎಂದಾಗಬೇಕೆಂದು ಅಪೇಕ್ಷಿಸುತ್ತೇವೆ. ಈ ಲಕ್ಷಣವಿರುವ ಪರಿವರ್ತನೆಗಳನ್ನು ವಿಹಿತತಾ ಸಂರಕ್ಷಕ ಪರಿವರ್ತನೆಗಳು ಎಂದು ಕರೆಯಬಹುದು. ವಿಹಿತತಾ ಸಂರಕ್ಷಣೆಗೆ ಹೊಸ ಹಾಗೂ ಹಳೆಯ ಹ್ಯಾಮಿಲ್ಟೋನಿಯನ್ ಉತ್ಪನ್ನಗಳ ನಡುವೆ

$$\bar{H}(q_0, q_1, \text{ಇತ್ಯಾದಿ}; \; \bar{p}_0, \bar{p}_1, \text{ಇತ್ಯಾದಿ}) = H(q_0, q_1, \text{ ಇತ್ಯಾದಿ } p_0, p_1, \text{ಇತ್ಯಾದಿ}) \qquad \text{....[27]}$$

ಎಂಬ ಅಚರತೆ (ಇನ್‌ವೇರಿಯನ್ಸ್) ಏರ್ಪಡಬೇಕಾದುದೇನಿಲ್ಲ; ಆದಾಗ್ಯೂ [27] ಸಮತೆಗೆ ಬದ್ಧವಾಗಿರುವ ವಿಹಿತತಾ ಸಂರಕ್ಷಕ ಪರಿವರ್ತನೆಗಳಿಗೆ ವಿಶೇಷ ಸರಳತೆ ಇರುವುದರಿಂದ ನಮ್ಮ ಪ್ರಸಕ್ತ ಚರ್ಚೆಯನ್ನು ಇಂಥವಕ್ಕೆ ಮಾತ್ರವೇ ಸೀಮಿತಗೊಳಿಸಿ ಇವನ್ನು ಸರಳ ವಿಹಿತತಾ ಸಂರಕ್ಷಕ ಪರಿವರ್ತನೆಗಳೆಂದು ಕರೆಯುತ್ತೇವೆ. [2], [3], [4], [21], [22], [24], [26] ಸಂಬಂಧಗಳನ್ನು ಗಮನಿಸಿದಾಗ $\bar{q}_k, \bar{p}_k$ ಗಳನ್ನು $q_l, p_l$ ಗಳ ಮಾಧ್ಯಮದಲ್ಲೂ ವಿಲೋಮತಃ $q_k, p_k$ ಗಳನ್ನು $\bar{q}_l, \bar{p}_l$ ಗಳ ಮಾಧ್ಯಮದಲ್ಲೂ ಅಭಿವ್ಯಕ್ತಿಸಬಹುದೆಂದು ತಿಳಿದುಬರುವುದು:

$$\bar{q}k = \bar{Q}k(q_0, q_1, \text{ಇತ್ಯಾದಿ}; \; p_0, p_1, \text{ಇತ್ಯಾದಿ})$$

$$\bar{p}_k = \bar{P}_k(q_0, q_1, \text{ಇತ್ಯಾದಿ}; p_0, p_1, \text{ಇತ್ಯಾದಿ}) \qquad \text{.......[28]}$$

$$q_k = Q_k(\bar{q}_0, \bar{q}_1, \text{ಇತ್ಯಾದಿ}; \bar{p}_0, \bar{p}_1, \text{ಇತ್ಯಾದಿ})$$

$$p_k = P_k(\bar{q}_0, \bar{q}_1, \text{ಇತ್ಯಾದಿ}; \; \bar{p}_0, \bar{p}_1 \text{ ಇತ್ಯಾದಿ})$$

(ಇಲ್ಲಿ $\bar{Q}_k, \bar{P}_k, Q_k, P_k$ ಜ್ಞಾತ ಉತ್ಪನ್ನಗಳು). ಇನ್ನು ಮುಂದೆ [2], [3], [4] ಸಮೀಕರಣಗಳನ್ನು ಮರೆತು [28]ನ್ನೇ ಚರ್ಚೆಯಲ್ಲಿರುವ ಪರಿವರ್ತನ ಸಮೀಕರಣಗಳೆಂದು ಭಾವಿಸಬಹುದು. $x, y$ ಅಕ್ಷರಗಳು $\bar{q}_0, \bar{q}_1$ ಇತ್ಯಾದಿ $\bar{p}_0, \bar{p}_1$ ಇತ್ಯಾದಿ ಚರಗಳ ಪೈಕಿ ಯಾವುದಾದರೂ ಎರಡನ್ನು ಸೂಚಿಸಿದಲ್ಲಿ ಕೆಳಗಿನ ಉಕ್ತಿಯನ್ನು $x, y$ ಚರಗಳ ಲಗ್ರಾಂಜ್ ಆವರಣವೆಂದು (ಲಗ್ರಾಂಜ್ ಬ್ರ್ಯಾಕೆಟ್) ಕರೆಯುತ್ತೇವೆ:

$$[x,y] = \sum_{(j)}\left(\frac{\partial Q_j}{\partial x}\frac{\partial P_j}{\partial y} - \frac{\partial Q_j}{\partial y}\frac{\partial P_j}{\partial x}\right) = -[y,x] \qquad \text{.........[29]}$$

ಈ ಸಂಬಂಧದಲ್ಲಿ

$$[x,y] = \sum_{(j)}\left\{\frac{\partial}{\partial y}\left(P_j\frac{\partial Q_j}{\partial x}\right) - \frac{\partial}{\partial y}\left(P_j\frac{\partial Q_j}{\partial y}\right)\right\} \qquad \text{....[30]}$$

ಸಹ ಆಗುವುದನ್ನು ಗಮನಿಸಬಹುದು. $X, Y$ ಗಳು $\bar{Q}_0, \bar{Q}_1$ ಇತ್ಯಾದಿ, $\bar{P}_0, \bar{P}_1$ ಇತ್ಯಾದಿ ಉತ್ಪನ್ನಗಳ ಪೈಕಿ ಯಾವುದಾದರೂ ಎರಡನ್ನು ಸೂಚಿಸಿದಲ್ಲಿ [23] ವ್ಯಾಖ್ಯೆಯ ಪ್ವಾಸಾಂವ್ ಆವರಣ $(X,Y)$ ಗಳಿಗೂ [29] ವ್ಯಾಖ್ಯೆಯ ಲಗ್ರಾಂಜ್ ಆವರಣ $[x,y]$ ಗಳಿಗೂ ಕೆಳಗಿನ ಸಂಬಂಧಗಳಿರುತ್ತವೆಂದು ತೋರಿಸಬಹುದು (ಇವುಗಳಲ್ಲಿ ಕ್ರಾನೆಕರ್ ಡೆಲ್ಟ ಎಂಬ ಹೆಸರಿನ $\delta_{kl}$ ಪ್ರತೀಕದ ಅರ್ಥವನ್ನು $k \neq l$ ಆದಾಗ $\delta_{kl}$ =0 ಎಂದೂ $k=l$ ಆದಾಗ $\delta_{kl}$ =1 ಎಂದೂ ಗ್ರಹಿಸಬೇಕು):

$$\sum_{(j)}\{[\bar{q}_l, \bar{q}_j](\bar{P}_k, \bar{Q}_j) + [\bar{q}_l, \bar{q}_j](\bar{P}_k, \bar{P}_j) \} = 0$$

$$\sum_{(j)}\{[\bar{q}_l, \bar{q}_j](\bar{Q}_k, \bar{Q}_j) + [\bar{q}_l, \bar{q}_j](\bar{Q}_k, \bar{P}_j)\}$$

$$= \sum_{(j)}\{ \; [\bar{p}_l, \bar{q}_{j]}(\bar{P}_k, \bar{Q}_l) + [\bar{p}_l, \bar{p}_j](\bar{P}_k, \bar{P}_j) \; \}\partial_{kl}$$

$$k, l = 0,1,2. \quad \text{ಇತ್ಯಾದಿ} \qquad \text{........[31]}$$

ಈಗ ವ್ಯವಸ್ಥೆಯ ನಿಶ್ಚಿತ ಜಾಡಿನ ಚಲನೆ ಹಳೆಯ $q_k, p_k$ ನಿರ್ದೇಶಕಗಳಲ್ಲಿ [20], [22] ವಿಹಿತ ಸೂತ್ರಗಳಿಗೆ ಬದ್ಧವಾಗಿರುತ್ತವಷ್ಟೆ. ಈ ಸೂತ್ರಗಳನ್ನು ಉಪಯೋಗಿಸಿಕೊಂಡು ಇಂಥ ಚಲನೆಯ ನಿಶ್ಚಿತ ಜಾಡಿನಲ್ಲಿ ಹೊಸ ನಿರ್ದೇಶಕಗಳಿಗೆ ಅನುರೂಪವಾಗಿ [27] ಅಚರತೆಯಂತೆ $\bar{H} = H$ ಆದಾಗ)

$$\dot{\bar{q}}_k = \sum_{(l)}\{(\bar{Q}_k, \bar{Q}_l)\frac{\partial \bar{H}}{\partial \bar{q}_l} + (\bar{Q}_k, \bar{P}_l)\frac{\partial \bar{H}}{\partial \bar{p}_l} \; \}$$

$$\dot{\bar{p}} = \sum_{(l)}\{(\bar{P}_k, \bar{Q}_l)\frac{\partial \bar{H}}{\partial \bar{q}_l} + (\bar{P}_k, \bar{P}_l)\frac{\partial \bar{H}}{\partial \bar{p}_l} \; \}$$

$k$=0,1,2, ಇತ್ಯಾದಿ.....

ಆಗಬೇಕೆಂದು ಲೆಕ್ಕ ಹಾಕಬಹುದು. ಹೀಗೆ ದೊರೆಯುವ $\dot{\bar{q}}_k, \dot{\bar{p}}_k$ ಗಳ ಬೆಲೆಯನ್ನು ಅಪೇಕ್ಷಿತ [25] [26] ಸಮೀಕರಣಗಳಲ್ಲಿರುವ ಬೆಲೆಗಳೊಂದಿಗೆ ಸಮೀಕರಿಸಿದರೆ

$$\sum_{(l)} \left\{ (\bar{Q}_k, \bar{Q}_l) \frac{\partial \bar{H}}{\partial \bar{q}_l} + (\bar{Q}_k, \bar{P}_l) \frac{\partial \bar{H}}{\partial \bar{p}_l} - \partial_{kl} \frac{\partial \bar{H}}{\partial \bar{p}_l} \right\} = 0$$

$$\sum_{(l)} \left\{ \partial kl \frac{\partial \bar{H}}{\partial \bar{q}_l} + (\bar{P}_k, \bar{Q}_l) \frac{\partial \bar{H}}{\partial \bar{q}_l} + (\bar{P}_k, \bar{P}_l) \frac{\partial \bar{H}}{\partial \bar{p}_l} \right\} = 0$$

$$k = 0, 1, 2, \text{ಇತ್ಯಾದಿ} \qquad \text{....[32]}$$

ಅಲ್ಲಿಗೆ ವ್ಯವಸ್ಥೆಯ ಚಲನೆಯ ಯಾವುದೇ ನಿಶ್ಚಿತಜಾಡಿನ ಉದ್ದಕ್ಕೂ [32] ಸಮೀಕರಣಗಳು ಸಿಂಧುವಾಗಬೇಕೆಂಬುದೇ [28] ಸಮೀಕರಣಗಳು ಒಂದು ಸರಳ ವಿಹಿತತಾ ಸಂರಕ್ಷಕ ಪರಿವರ್ತನೆಯನ್ನು ವ್ಯಾಖ್ಯಿಸುವಂತಾಗಲು ಬೇಕಾದ ಮತ್ತು ಸಾಕಾದ ನಿರ್ಬಂಧ (ನೆಸಸರಿ ಅಂಡ್ ಸಫಿಷೆಂಟ್ ಕಂಡಿಷನ್) ಎಂದಾಯಿತು. ಈ ಪ್ರಕಾರ ಸಿದ್ಧಿಸುವ ವಿಹಿತತಾ ಸಂರಕ್ಷಣೆ ವ್ಯವಸ್ಥೆಯ ಅನಿಶ್ಚಿತ ಕದಲಿಕೆಗಳಿಂದ ನಾಶವಾಗದಿರಬೇಕಾದರೆ [32] ಸಂಬಂಧಗಳನ್ನು ಶಕ್ತಿನಿಯಮಕ್ಕೆ ಬದ್ಧವಾಗಿರುವ ಎಲ್ಲ $\bar{q}_j, \bar{p}_j$ ಗಳೂ ಪರಿಪಾಲಿಸಬೇಕಾಗುತ್ತದೆ.

ಚಲನ ಸಮೀಕರಣಗಳ ವಿಹಿತತಾ ಸಂರಕ್ಷಣೆಯ ಬಗ್ಗೆ ಮೇಲೆ ನಡೆಸಿರುವ ತನಿಖೆ ಒಂದು ನಿರ್ದಿಷ್ಟ ಹ್ಯಾಮಿಲ್ಟೋನಿಯನ್ ಉತ್ಪನ್ನ $H=\bar{H}$ನ್ನು ಮಾತ್ರ ಕುರಿತಿರುವ ಅಂಶವನ್ನು ವಿಶೇಷತಃ ಗಮನಿಸಬಹುದಾಗಿದೆ. ಒಂದು ವಿಶಿಷ್ಟವರ್ಗದ ಸರಳ ವಿಹಿತತಾ ಸಂರಕ್ಷಕ ಪರಿವರ್ತನೆಗಳಾದರೋ ಎಲ್ಲ ಹ್ಯಾಮಿಲ್ಟೋನಿಯನ್ ಉತ್ಪನ್ನಗಳನ್ನು ಕುರಿತಂತೆಯೂ ಚಲನಸಮೀಕರಣಗಳನ್ನು ವಿಹಿತ ಸ್ಥಿತಿಯಲ್ಲೇ ಉಳಿಸಬಲ್ಲವು. ಇಂಥ ಪರಿವರ್ತನೆಗಳಿಗೆ (ಕಾಲ ನಿರವಲಂಬಿ) ವಿಹಿತ ಪರಿವರ್ತನೆಗಳು (ಟೈಮ್–ಇಂಡಿಪೆಂಡೆಂಟ್) ಕನಾನಿಕಲ್/ಕ್ಯಾಂಟ್ಯಾಕ್ಟ್ ಟ್ರಾನ್ಸ್‌ಫರ್ಮೇಷನ್ಸ್) ಎಂದು ಹೆಸರು. ಅಲ್ಲಿಗೆ ವಿಹಿತ ಪರಿವರ್ತನೆಗಳು ವಿಹಿತತಾ ಸಂರಕ್ಷಕ ಪರಿವರ್ತನೆಗಳ ಒಂದು ವಿಶೇಷ ಪ್ರಸಂಗವಾದಂತಾಯಿತು. [32] ಸಮೀಕರಣಗಳಲ್ಲಿ $\bar{H}$ ಉತ್ಪನ್ನ ಯಾದೃಚ್ಛಿಕವಾದರೆ (ಆರ್ಬಿಟ್ರರಿ)

$$(Q_k, Q_l) = (P_k, P_l) = 0; (Q_k, P_l) = \partial_{kl},$$

$$k, l = 0, 1, 2, \text{ಇತ್ಯಾದಿ}$$

ಎಂಬ ನಿರ್ಬಂಧಗಳು ಫಲಿಸುತ್ತವೆ. [28] ಸಮೀಕರಣಗಳು ಒಂದು (ಕಾಲ ನಿರವಲಂಬಿ) ವಿಹಿತ ಪರಿವರ್ತನೆಯನ್ನು ರೂಪಿಸುವಂತಾಗಲು ಸಾಕಾದ ಮತ್ತು ಬೇಕಾದ ನಿರ್ಬಂಧವೇ ಈ [33] ಸಮೀಕರಣ ಸಮುದಾಯ. ಇದರಿಂದ ಲಭ್ಯವಾಗುವ ಪ್ವಾಸಾಂವ್ ಆವರಣಗಳ ಬೆಲೆಗಳನ್ನು [31] ಸಂಬಂಧಗಳಲ್ಲಿ ಆದೇಶಿಸಿದರೆ ಲಗ್ರಾಂಜ್ ಆವರಣಗಳ ಬಗ್ಗೆಯೂ ಇದೇ ನಮೂನೆಯ ನಿರ್ಬಂಧಗಳು ಸಿದ್ಧಪಡುತ್ತವೆ :

$$[\bar{q}_k, q_l] = [\bar{p}_k, \bar{p}_l] = 0; [\bar{q}_k, \bar{p}_l] = \delta_{kl} \qquad \text{....[34]}$$

ಈಗ $X_k = -\bar{p}_k + \sum_{(j)} P_j \; \partial Q_j / \partial \bar{q}$ ಹಾಗೂ $Y_k = \sum_{(j)} P_j \; \partial Q_j / \partial \bar{p}_k$ ಎಂದು ವ್ಯಾಖ್ಯಿಸಿದರೆ [30] ಹಾಗೂ [34] ಸಂಬಂಧಗಳ ಫಲವಾಗಿ ಎಲ್ಲ $k, l$ಗಳಿಗೂ

$$\frac{\partial X_k}{\partial \bar{q}_l} = \frac{\partial X_l}{\partial \bar{q}_k}; \frac{\partial Y_k}{\partial \bar{p}_l} = \frac{\partial Y_l}{\partial \bar{p}_k}; \frac{\partial X_k}{\partial \bar{p}_l} = \frac{\partial Y_l}{\partial \bar{q}_k} \qquad \text{.......[ 35]}$$

ಆಗಬೇಕಾಗುವುದು. $\sum_{(k)} (X_k \; dq_k + Y_k \; d\bar{p}_k) = dF$ ಆಗುವಂತೆ $\bar{q}_k$, $\bar{p}_k$ ಚರಗಳ ಒಂದು $F$ ಉತ್ಪನ್ನ ಅಸ್ತಿತ್ವದಲ್ಲಿರಬೇಕೆಂಬುದೇ [35] ಸಮೀಕರಣಗಳ ಗಣಿತೀಯ ಸಾರಾಂಶ. ಆದರೆ $X_k, Y_k$ ಗಳ ವ್ಯಾಖ್ಯೆಯಂತೆ $\sum_{(k)} (X_k \; d\bar{q}_k + Y_k \, d\bar{p}_k)$ $= \sum_{(k)} (P_k \; dQ_k - \bar{p}_k \; d\bar{q}_k)$ ಆಗುತ್ತದೆ. ಆದ್ದರಿಂದ [28] ಸಮೀಕರಣಗಳು ಒಂದು ವಿಹಿತ ಪರಿವರ್ತನೆಯನ್ನು ವ್ಯಾಖ್ಯಿಸಬೇಕಾದರೆ

$$dF = \sum_{(k)} (P_k \; dQ_k - \bar{p}_k \; d\bar{q}_k) \qquad \text{.......... [36 ]}$$

ಆಗುವಂತೆ $F = F(\bar{q}_0, \bar{q}_1, \text{ ಇತ್ಯಾದಿ}; \; \bar{p}_0, \bar{p}_1, \text{ ಇತ್ಯಾದಿ})$ ಎಂಬ ಒಂದು ಉತ್ಪನ್ನವಿರಬೇಕಾಗುವುದು. ವಿಲೋಮತಃ [36] ಪರಿಪಾಲಿತವಾದಾಗ [34] ಹಾಗೂ ಆ ಮೂಲಕ [33] ಸಹ ಪಾಲಿತವಾಗಿ ಪರಿಶೀಲಿತ ಪರಿವರ್ತನೆ ಒಂದು ವಿಹಿತ ಪರಿವರ್ತನೆಯಾಗುತ್ತದೆ. $F$ ಉತ್ಪನ್ನಕ್ಕೆ ಚರ್ಚೆಯಲ್ಲಿರುವ ವಿಹಿತ ಪರಿವರ್ತನೆಯ ಜನಕ ಉತ್ಪನ್ನವೆಂದು (ಜೆನರೇಟರ್) ಹೆಸರು. ಜನಕ ಉತ್ಪನ್ನಗಳನ್ನು ವಿವಿಧ ರೀತಿಗಳಲ್ಲಿ ಆಯ್ಕೆ ಮಾಡುವುದರಿಂದ ಬಗೆಬಗೆಯ ವಿಹಿತ ಪರಿವರ್ತನೆಗಳನ್ನು ನಿಯೋಜಿಸಲು ಸಾಧ್ಯವಾಗುವುದು. ದತ್ತ ಚಲನವ್ಯವಸ್ಥೆಯ ಹ್ಯಾಮಿಲ್ಟೋನಿಯನ್ ಉತ್ಪನ್ನ ಯಾವುದೇ ಆಗಿರಲಿ, ಈ ಪರಿವರ್ತನೆಗಳು ಸೃಷ್ಟಿಸುವ ಎಲ್ಲ ನಿರ್ದೇಶಕಗಳಲ್ಲೂ ವ್ಯವಸ್ಥೆಯ ಚಲನಸಮೀಕರಣಗಳು [20], [22], [25], [26] ಸೂತ್ರಗಳ ವಿಹಿತ ನಮೂನೆಯಲ್ಲೇ ಉಳಿದುಕೊಳ್ಳುತ್ತವೆ. ವಿಹಿತತಾ ಸಂರಕ್ಷಕ ಪರಿವರ್ತನೆಗಳನ್ನು ನಾವು [27] ಆಚರತೆಯ ಚೌಕಟ್ಟಿನೊಳಗೇ ಚರ್ಚಿಸಿರುವುದರಿಂದ ಇವು ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ ಉತ್ಪನ್ನವನ್ನು ರೂಪದಲ್ಲಿ ಬದಲಿಸುತ್ತವೆಯೇ ವಿನಾ ಬೆಲೆಯಲ್ಲಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಇಲ್ಲಿ ವ್ಯಾಖ್ಯಿಸಲಾಗಿರುವ (ಕಾಲ ನಿರವಲಂಬಿ) ವಿಹಿತ ಪರಿವರ್ತನೆಗಳು ಸಂವೃತ ಚಲನ ವ್ಯವಸ್ಥೆಗಳ ಅನುರೂಪ ಲಗ್ರಾಂಜಿಯನ್ ಉತ್ಪನ್ನಗಳನ್ನು ಬೆಲೆಯಲ್ಲೂ ವ್ಯತ್ಯಸ್ತಗೊಳಿಸಬಹುದೆಂಬ ವಿಚಾರವನ್ನು ಈ ಸಂಬಂಧದಲ್ಲಿ ಪ್ರಾಸಂಗಿಕವಾಗಿ ಅರಿತಿರುವುದೊಳ್ಳಿತು. ಅಂದರೆ $\bar{q}_k, \bar{p}_k$ ನಿರ್ದೇಶಕಗಳಿಗೆ ಅನುರೂಪವಾದ $\bar{L} = -H + \sum_{(k)} p_k \; \partial \bar{H} / \partial \bar{p}_k$ ಲಗ್ರಾಂಜಿಯನ್ ಉತ್ಪನ್ನ (ಇದನ್ನು $\bar{q}_k, \dot{\bar{q}}_k$ ಗಳ ಮಾಧ್ಯಮದಲ್ಲಿ ಅಭಿವ್ಯಕ್ತಿಸಬೇಕು). $q_k, p_k$ ನಿರ್ದೇಶಕಗಳ ಲಗ್ರಾಂಜಿಯನ್ $L = -H + \sum_{(k)} \bar{p}_k \; \partial \bar{H} / \partial \bar{p}_k$ ಗೆ ಸಮನಾಗಬೇಕಾಗಿಲ್ಲ ($L$ನ್ನು $q_k, \dot{q}_k$ ಗಳ ಮಾಧ್ಯಮದಲ್ಲಿ ವ್ಯಕ್ತಪಡಿಸಬೇಕು). (28) ಪರಿವರ್ತನ ಸಮೀಕರಣಗಳ $Q_l$ ಉತ್ಪನ್ನಗಳು ಎಲ್ಲ $\bar{p}_k$ ಗಳಿಂದಲೂ ವಿಮುಕ್ತವಾಗಿರುವುದಾದರೆ $\bar{p}_k = \sum_{(l)} p_l \; \partial Q_l / \partial \bar{q}_k$ ಎಂಬುದಾಗಿ ವ್ಯಾಖ್ಯಿಸಿ $\bar{L} = -\bar{H} + \sum_{(k)} \bar{p}_k \; \dot{\bar{q}}_k = -H + \sum_{(k)} p_k \; \dot{q}_k = L$ ಆಗುವಂತೆ ಏರ್ಪಡಿಸಬಹುದು. ಆದರೆ ಈ ಪ್ರಸಂಗ ಒಂದು ಅಪವಾದವೇ ವಿನಾ ನಿಯಮವಲ್ಲ.

ಕೊನೆಯದಾಗಿ ಬಲವಿಜ್ಞಾನದ ಸಾಹಿತ್ಯದಲ್ಲಿ ಅನೇಕ ವೇಳೆ ಲಗ್ರಾಂಜಿಯನ್ ಹಾಗೂ ಹ್ಯಾಮಿಲ್ಟೋನಿಯನ್ ಉತ್ಪನ್ನಗಳೊಳಗೆ ಸ್ಥಾನ $q_k$, ವೇಗ $\dot{q}_k$ ಸಂವೇಗ $p_k$ ಗಳ ಜೊತೆಗೆ ಕಾಲಚರ $t$ ಯನ್ನು ಸಹ ಅಳವಡಿಸುವ ರೂಢಿ ಇರುವುದನ್ನು ಇಲ್ಲಿ ಉಲ್ಲೇಖಿಸುತ್ತೇವೆ; ಈ ಹೊಸ ಬಗೆಯ ಉತ್ಪನ್ನಗಳನ್ನು $L^*, H^*$ ಪ್ರತೀಕಗಳಿಂದ ಸೂಚಿಸಿದರೆ

$$L^* = L^*(q_0, q_1, \text{ ಇತ್ಯಾದಿ}; \; \dot{q}_0, \dot{q}_1, \text{ಇತ್ಯಾದಿ}; t)$$

$$H^* = H^*(q_0, q_1, \text{ಇತ್ಯಾದಿ}; p_0, p_1, \text{ಇತ್ಯಾದಿ}; t)$$

$t$ ಚರವನ್ನು $L^*, H^*$ ಗಳಲ್ಲಿ ಹೀಗೆ ಸೇರಿಸುವ ಅಗತ್ಯತೆ ಸಂವೃತ ಚಲನವ್ಯವಸ್ಥೆಗಳ ಬದಲಿಗೆ ಅಸಂವೃತ ವ್ಯವಸ್ಥೆಗಳನ್ನು ಪರಿಶೀಲಿಸುವುದರಿಂದ ಉದ್ಭವಿಸುತ್ತದೆ. ಉದಾಹರಣೆಗೆ $q_0, q_1, q_2$ ಸ್ಥಾನ ನಿರ್ದೇಶಕ ಹಾಗೂ $p_0, p_1, p_2$ ಸಂವೇಗ ನಿರ್ದೇಶಕಗಳನ್ನು ಒಳಗೊಳ್ಳುವ (ಆಯಾಮಾಂಕ 3) ಸಂವೃತ ಚಲನವ್ಯವಸ್ಥೆಯೊಂದರ ಒಂದು ಭಾಗವಷ್ಟನ್ನೇ $q_0, p_0, q_1, p_1$ ಇವೆರಡು ಜೊತೆ ನಿರ್ದೇಶಕಗಳು ಪ್ರತಿನಿಧಿಸಬಹುದು. ಪೂರ್ಣವ್ಯವಸ್ಥೆಯ ಚಲನ ಸಮೀಕರಣಗಳನ್ನು ಪರಿಹರಿಸಿದಾಗ ಪ್ರತಿಯೊಂದು ನಿರ್ದೇಶಕವೂ $t$ಯ ಒಂದು ಉತ್ಪನ್ನವಾಗಿ ಅಭಿವ್ಯಕ್ತವಾಗುತ್ತದಷ್ಟೆ: $q_k = q_k(t), \; p_k = p_k(t), \; k = 0,1,2,$ ಒಟ್ಟು ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ $H = H(q_0, q_1, q_2; p_0, p_1, p_2)$ ರಲ್ಲಿ $q_2, p_2$ ಗಳಿಗೆ $q_2(t), p_2(t)$ ಬೆಲೆಗಳನ್ನು ಆದೇಶಿಸಿದಾಗ ಫಲಿಸುವ

$$H^*(q_0, q_1; p_0, p_1, (t) \equiv H(q_0, q_1 q_2(t); p_0, p_1; p_2(t)$$

ಉತ್ಪನ್ನವನ್ನು $q_0, p_0, q_1, p_1$ ಎರಡು ಜೊತೆ ನಿರ್ದೇಶಕಗಳೇ ಪ್ರತಿನಿಧಿಸುವ ಅಸಂವೃತ

ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ ಉತ್ಪನ್ನವೆಂದು ಅಂಗೀಕರಿಸಬಹುದು. ಹೀಗೆ ಮಾಡಿದಾಗ ಅಸಂವೃತ ವ್ಯವಸ್ಥೆಯನ್ನು ಕುರಿತಂತೆಯೂ ವಿಹಿತ ಸಮೀಕರಣಗಳು ಸಿಂಧುವಾಗಲೇಬೇಕಷ್ಟೆ.

$$\dot{q}k = \frac{\partial H^*}{\partial p_k}; \dot{p}_k = -\frac{\partial H^*}{\partial q_k}, k = 0,1,$$

ಈ ವಿಹಿತತೆಯ ಫಲವಾಗಿ

$$\frac{dH^*}{dt} = \sum_{(k)}\left(\dot{q}_k \frac{\partial H^*}{\partial q_k} + \dot{p}_k \frac{\partial H^*}{\partial p_k}\right) + \frac{dH^*}{dt} = \frac{dH^*}{dt}$$

$f=f(t)$ ಎಂಬುದು ಕಾಲಚರ $t$ಯನ್ನು ಮಾತ್ರವೇ ಒಳಗೊಳ್ಳುವ ಯಾವುದಾದರೊಂದು ಉತ್ಪನ್ನವಾದಲ್ಲಿ $H^*$ ಕ್ಕೆ ಬದಲು $H^{**}=H^*+f(t)$ ಯನ್ನು ಸಹ ಅಸಂವೃತ ವ್ಯವಸ್ಥೆಯ ಪರ್ಯಾಯ ಹ್ಯಾಮಿಲ್ಟೋನಿಯನ್ ಉತ್ಪನ್ನವನ್ನಾಗಿ ಅಂಗೀಕರಿಸಬಹುದು. ಆದಕಾರಣ ಅಸಂವೃತ ವ್ಯವಸ್ಥೆಗಳ ಹ್ಯಾಮಿಲ್ಟೋನಿಯನ್‌ಗಳು $t$ ಕಾಲದಲ್ಲಿ ಆ ವ್ಯವಸ್ಥೆಗಳೊಳಗೆ ಅಡಕವಾಗಿರಬಹುದಾದ ಶಕ್ತಿಯನ್ನು ಪ್ರತಿನಿಧಿಸಬೇಕಾದುದೇನಿಲ್ಲ. ನಿಜಕ್ಕೂ ಅಸಂವೃತ ವ್ಯವಸ್ಥೆಗಳಿಂದ ಹೊರಗಡೆಗಾಗಲಿ ಹೊರಗಿನಿಂದ ಆ ವ್ಯವಸ್ಥೆಗಳ ಒಳಕ್ಕಾಗಲಿ ಶಕ್ತಿ ಸಂಚರಿಸುತ್ತಿರಬಲ್ಲುದು. ಇದಕ್ಕೆ ವ್ಯತಿರಿಕ್ತವಾಗಿ ಶಕ್ತಿಯ ಆಗಮನ ನಿರ್ಗಮನಗಳಿಗೆ ಎಡೆಯಿಲ್ಲದಿರುವುದೇ ಸಂವೃತ ಚಲನವ್ಯವಸ್ಥೆಗಳ ವೈಶಿಷ್ಟ್ಯ. ಸಂವೃತ ವ್ಯವಸ್ಥೆಗಳ ಶಕ್ತಿ ನಿಯತವಾಗಿ ಉಳಿಯಲು ಇದೇ ಕಾರಣ. ಪ್ರಸಕ್ತ ಲೇಖನದಲ್ಲಿನ ನಮ್ಮ ವಿವೇಚನೆ ಸಂವೃತ ವ್ಯವಸ್ಥೆಗಳಿಗೇ ಸೀಮಿತವಾಗಿರುವುದರಿಂದ ಇಲ್ಲಿ ಪ್ರಸ್ತಾಪಿಸಿರುವ ಹ್ಯಾಮಿಲ್ಟೋನಿಯನ್ ಹಾಗೂ ಲಗ್ರಾಂಜಿಯನ್ ಉತ್ಪನ್ನಗಳಲ್ಲಿ ಕಾಲಚರ $t$ಯನ್ನು ಅಳವಡಿಸಿಲ್ಲ.

ಸಂವೃತ ಚಲನವ್ಯವಸ್ಥೆಗಳಿಗೆ ಎರಡು ಮೂರ್ತ ಉದಾಹರಣೆಗಳನ್ನು ಸೂಚಿಸಿ ಸಂಪಾದಿತ ಅಭಿಜಾತ ಬಲವಿಜ್ಞಾನವನ್ನು ಕುರಿತ ನಮ್ಮ ಚರ್ಚೆಯನ್ನು ಸಮಾಪ್ತಗೊಳಿಸುತ್ತೇವೆ. $H_1 = (p_0^2/2m) + (\mu q_0^2/2)$ ಎಂಬುದು ಸ್ಥಾನ $q_0$ ಮತ್ತು ಅನುರೂಪ ಸಂವೇಗ $p_0$ಗಳಿಂದ ನಿರ್ದೇಶಿತವಾಗುವ ಸಂವೃತ ವ್ಯವಸ್ಥೆಯೊಂದರ ಹ್ಯಾಮಿಲ್ಟೋನಿಯನ್ ಉತ್ಪನ್ನವಾಗುತ್ತದೆ. ಈ ಉತ್ಪನ್ನದಲ್ಲಿ ಒಂದು ಜೊತೆ ಚರಗಳು ಮಾತ್ರವೇ ಇರುವುದರಿಂದ ಇದು ವರ್ಣಿಸುವ ವ್ಯವಸ್ಥೆಯ ಆಯಾಮಾಂಕ 1. $H_1$ ಪ್ರತಿನಿಧಿಸುವ ವ್ಯವಸ್ಥೆಗೆ ರೇಖೀಯ ಸರಳ ಸಂಗತ ಆಂದೋಳಕ (ಲೀನಿಯರ್ ಹಾರ್ಮಾನಿಕ್ ಆಸಿಲೇಟರ್) ಎಂದು ಹೆಸರು. ಅಲ್ಪ ಪಾರಗಳಲ್ಲಿ ಸ್ಪಂದಿಸುವ ಸಾಮಾನ್ಯ ಲೋಲಕ ಇಂಥ ಆಂದೋಳಕಕ್ಕೆ ಒಂದು ನಿದರ್ಶನ (ಸಿಂಪಲ್ ಪೆಂಡ್ಯುಲಮ್ ಆಫ್ ಸ್ಮಾಲ್ ಆಂಪ್ಲಿಟ್ಯೂಡ್); ಈ ಸಂದರ್ಭದಲ್ಲಿ $\mu=mg/\lambda$, $m=$ ಲೋಲಕದ ಗುಂಡಿನ ತೂಕ, $\lambda=$ಲೋಲಕದ ಉದ್ದ, $g=$ ಗುರುತ್ವ ವೇಗೋತ್ಕರ್ಷ, $q_O=$ ಮಧ್ಯ ಸ್ಥಾನದಿಂದ ಗುಂಡು ಚಲಿಸಿರುವ (ಸಚಿಹ್ನ) ಕ್ಷಿತಿಜೀಯ ದೂರ (ಹಾರಿಸ಼ಾಂಟಲ್ ಡಿಸ್‌ಪ್ಲೇಸ್‌ಮೆಂಟ್) ಮತ್ತು $p_0 = m\dot{q}_0$ ಅಭಿಜಾತ ಸಂವೇಗ. ವಿಹಿತ ಸೂತ್ರಗಳ ಪ್ರಯೋಗದಿಂದ $dp_0/dt = -\partial H_1/\partial q_0 = -\mu q_0; dq_0/dt = \partial H_1/\partial p_0 = p_0/m;$ ಹಾಗೂ $d^2q_0/dt^2 = dp_0/(m\ dt) = -\mu q_0/m$. ಕೊನೆಯ ಅವಕಲ ಸಮೀಕರಣದ ಪರಿಹಾರ $q_0 = A\sin(\mathrm{B}+ t\sqrt{\mu}/\sqrt{m}$ ಎಂದಾಗುವುದು (A,B ಸೂಕ್ತ ನಿಯತಾಂಕಗಳು). ಇದು Aಯಷ್ಟು ಪಾರದ ನಿಯತಕಾಲಿಕ $2\pi\sqrt{m}/\sqrt{\mu}$ (=ಸಾಮಾನ್ಯ ಲೋಲಕದ ಪ್ರಸಂಗದಲ್ಲಿ $2\pi\sqrt{l}/\sqrt{g}$ ಅವಧಿಯಲ್ಲಿ ನಡೆಯುವ ಆಂದೋಳನಗಳನ್ನು ಸೂಚಿಸುತ್ತದೆ (ಪೀರಿಯಾಡಿಕ್ ಆಸಿಲೇಷನ್ಸ್). $p_0 = mdq_0/dt = A\sqrt{\mu m}\cos(\mathrm{B}+t/\sqrt{\mu}\sqrt{m}$ ಆಗುವ ಕಾರಣ $H_1$ ರಲ್ಲಿ $p_0,q_0$ಗಳ ಬೆಲೆಗಳನ್ನು ಆದೇಶಿಸಿ ಆಂದೋಳನ ವ್ಯವಸ್ಥೆಯ ಶಕ್ತಿ = $H_1$ರ ಬೆಲೆ $g=A_2/(2^{.00})$ [=ಸಾಮಾನ್ಯ ಲೋಲಕದ ನಿದರ್ಶನದಲ್ಲಿ $A^2mg/(2l)$] ) ಎಂದು ತೀರ್ಮಾನಿಸಲು ಶಕ್ಯವಾಗುತ್ತದೆ; ಆಂದೋಲನಗಳ ಪಾರದ ವರ್ಗಕ್ಕೆ ಈ ಶಕ್ತಿ ಅನುಪಾತೀಯವಾಗಿರುವುದನ್ನು ಗಮನಿಸಬಹುದು. ಈಗ ಎರಡನೆಯ ಉದಾಹರಣೆಯಾಗಿ ನ್ಯೂಟನ್ನನ ಗುರುತ್ವಾಕರ್ಷಣ ನಿಯಮದ ಅನುಸಾರ ಸ್ಥಿರತಲವೊಂದರಲ್ಲಿ ಚಲಿಸುವ ಒಂದು ದೃಢ ಸೂರ್ಯ ಹಾಗೂ ಒಂದು ದೃಢ ಗ್ರಹ (ರಿಜಿಡ್ ಸನ್, ರಿಜಿಡ್ ಪ್ಲ್ಯಾನೆಟ್) ಇವೆರಡು ಕಾಯಗಳಿಗೆ ರಚಿತವಾಗುವ ಸಂವೃತ ವ್ಯವಸ್ಥೆಯನ್ನು ಪರಿಶೀಲಿಸುತ್ತೇವೆ. ಈ ಕಾಯಗಳಿಗೆ ಇರಬಹುದಾದ ಗಿರಕಿ ಚಲನೆಯನ್ನು ಸಂಪೂರ್ಣವಾಗಿ ಉಪೇಕ್ಷಿಸುವುದಾದರೆ ಇಂಥ ವ್ಯವಸ್ಥೆಯ ಹ್ಯಾಮಿಲ್ಟೋನಿಯನ್ ಉತ್ಪನ್ನ $H_2 = H_2(q_0,q_1;p_0,p_1) = \frac{1}{2}\left(\frac{1}{m}+\frac{1}{\mu}\right)$ $\left(p_0^2+\frac{p_1^2}{q_0^2}\right)-\frac{\gamma\mu m}{q_0}$ ಆಗುತ್ತದೆಂದು ಅಧ್ಯಾರೋಪಣಾದಿ ತತ್ತ್ವಗಳ ಆಧಾರದಿಂದ ನಿಷ್ಕರ್ಷಿಸಬಹುದು. ಇಲ್ಲಿ $g$ ಗುರುತ್ವಾಕರ್ಷಣ ನಿಯತಾಂಕ (=6.67x10$^{-11}$ newton meter$^2$ kg$^{-2}$) $m$, $\mu$ ಸೂರ್ಯ, ಗ್ರಹಗಳ ತೂಕಗಳು; $q_0$ ಇವೆರಡು ಕಾಯಗಳ ನಡುವಿನ ದೂರ; $q_1$ ಸೂರ್ಯನ ಸುತ್ತ ಗ್ರಹದ ಚಲನೆಯ ಕೋನ ನಿರ್ದೇಶಕ; $p_0,p_1$ ಗಳು $q_0,q_1$ ಸ್ಥಾನ ನಿರ್ದೇಶಕಗಳಿಗೆ ಅನುರೂಪವಾದ ಸಂವೇಗಗಳು; $q_k,p_k$ ಗಳು ಜಡತಾನಿರ್ದೇಶಕಗಳಲ್ಲ. ಮೇಲಿನ $H_2$ ಕ್ಕೆ ಅನುರೂಪವಾದ ವಿಹಿತ ಸಮೀಕರಣಗಳನ್ನು ಪರಿಹರಿಸಿ $H_2$ರ ಬೆಲೆ ಋಣಾತ್ಮಕವಾದಲ್ಲಿ ಸೂರ್ಯನ ಸುತ್ತ ಗ್ರಹದ ಚಲನಕಕ್ಷೆ ( $\gamma\mu m/$ $H_2$ರ ಬೆಲೆ) ಯಷ್ಟು ಪ್ರಧಾನಾಕ್ಷದ (ಮೇಜರ್ ಆ್ಯಕ್ಸಿಸ್) ಒಂದು ದೀರ್ಘವೃತ್ತ (ಎಲಿಪ್ಸ್) ಆಗುತ್ತದೆಂದು ತೋರಿಸಬಹುದು (ಪ್ರಥಮ ಕೆಪ್ಲರ್ ನಿಯಮ). ಈ ಸಂದರ್ಭದಲ್ಲಿ $H_2$ ಉತ್ಪನ್ನ $q_1$ ಚರದಿಂದ ವಿಮುಕ್ತವಾಗಿರುವ ಪರಿಸ್ಥಿತಿಯನ್ನು ಗಮನಿಸಬಹುದು. ಎಂತಲೇ $H_2$ರಲ್ಲಿ $q_1$ ಒಂದು ಸುಪ್ತ ನಿರ್ದೇಶಕ ಎಂದೆನಿಸಿಕೊಳ್ಳುತ್ತದೆ (ಇಗ್ನೋರೆಬಲ್/ಸೈಕ್ಲಿಕ್ ಕೋಆರ್ಡಿನೇಟ್). ತತ್ಫಲವಾಗಿ ಅಥವಾ $dp_1/dt = -\partial H_2/\partial q_1 = 0$ ಅಥವಾ $p_1=$ ಒಂದು ನಿಯತಾಂಕ ಎಂದಾಗುವುದು. ಇದೇ ಕೋನೀಯ ಸಂವೇಗ $p_1$ರ ನಿತ್ಯತಾನಿಯಮ (ಕನ್ಸರ್ವೇಷನ್ ಆಫ್ ಆ್ಯಂಗ್ಯುಲರ್ ಮೊಮೆಂಟಮ್). $\dot{q}_1 = \partial H_2/\partial p_1 = (m^{-1}+\mu^{-1})p_1/q_0^2$ ಆದಕಾರಣ $p_1$ ಸಂವೇಗ $q_0^2\dot{q}_1$ ಗೆ ಅನುಪಾತೀಯವಾಗಿರುವುದು. $q_0^2\dot{q}_1$ ಆದರೋ ಸೂರ್ಯನ ಸುತ್ತ ಗ್ರಹಚಲನೆಯ ಸಲೆವೇಗಕ್ಕೆ ಅನುಪಾತೀಯವಾಗಿರುತ್ತದೆ (ಏರಿಯಲ್ ವೆಲಾಸಿಟಿ). ಈ ಕಾರಣಗಳಿಂದ ಗ್ರಹದ ಕಕ್ಷಾಚಲನೆಯ ಸಲೆವೇಗ ಒಮ್ಮೆ ಎಷ್ಟಿರುತ್ತದೋ ಸದಾ ಅಷ್ಟೇ ಇರಬೇಕಾಗುವುದು (ದ್ವಿತೀಯ ಕೆಪ್ಲರ್ ನಿಯಮ). ಇದೇ ಸಂಬಂಧದಲ್ಲಿ ಗ್ರಹದ ಕಕ್ಷಾಪರಿಭ್ರಮಣಾವಧಿಯ ವರ್ಗ

$$\frac{\pi^2\gamma^2\mu^3m^3}{2(\mu+m)(-H^2\text{ರ ಬೆಲೆ})^3} = \frac{\pi^2(\text{ಕಕ್ಷೆಯ ಪ್ರಧಾನಾಕ್ಷ})^3}{2\gamma(\mu+m)}$$

ಆಗುತ್ತದೆಂದು ತೋರಿಸಬಹುದು. ಎಂತಲೇ ಭಾರಿ ದ್ರವ್ಯರಾಶಿಯ ಒಂದು ಸೂರ್ಯನ ಸುತ್ತ ಅನೇಕ ಹಗುರ ಗ್ರಹಗಳು ಸುತ್ತುತ್ತಲಿರುವಾಗ ಆ ಗ್ರಹಗಳ ಪರಿಭ್ರಮಣಾವಧಿಗಳ ವರ್ಗಗಳು ಆಯಾ ಕಕ್ಷೆಗಳ ಪ್ರಧಾನಾಕ್ಷಗಳ ಘನಗಳಿಗೆ ಸರಿಸುಮಾರಾಗಿ ಅನುಪಾತೀಯವಾಗಿರುತ್ತವೆ (ತೃತೀಯ ಕೆಪ್ಲರ್ ನಿಯಮ).

**ಕ್ವಾಂಟಮ್ ಮತ್ತು ಸಾಪೇಕ್ಷತಾ ವಿದ್ಯಮಾನಗಳ ಸ್ಥೂಲ ಸಮೀಕ್ಷೆ :** ಯಾವುದಾದರೊಂದು ದತ್ತ ವೇಳೆ $t$ ಯಲ್ಲಿ ಸಂವೃತ ಚಲನವ್ಯವಸ್ಥೆಯೊಂದರ ವಿಹಿತ ಸಂಯುಗ್ಮಿ ಚರಗಳಾದ ಸ್ಥಾನ $q_k$ ಹಾಗೂ ಸಂವೇಗ $p_k$ ಗಳ ನಿಖರ ಬೆಲೆಗಳು ಗೊತ್ತಾದರೆ ಸೂಕ್ತ ಚಲನಸಮೀಕರಣಗಳನ್ನು ಪರಿಹರಿಸಿ ಎಲ್ಲ ಇತರ ವೇಳೆಗಳಲ್ಲಿ ಈ ಚರಗಳು ಗಳಿಸಿಕೊಳ್ಳಬಹುದಾದ ಅತ್ಯಂತ ಸಂಭಾವ್ಯ ಬೆಲೆಗಳನ್ನು ನಿಷ್ಕರ್ಷಿಸಲು ಶಕ್ಯವಾಗಬೇಕೆಂದು ಅಭಿಜಾತ ಬಲವಿಜ್ಞಾನ ನಿರೀಕ್ಷಿಸುತ್ತದಷ್ಟೆ. ಆದರೆ ಅಣು ಪರಮಾಣುಗಳಂಥ ಸೂಕ್ಷ್ಮ ಕಣಗಳನ್ನು ಕುರಿತಂತೆ ವಿಹಿತ ಸಂಯುಗ್ಮಿ ಚರಗಳ ಏಕಕಾಲೀಯ ನಿಖರ ಬೆಲೆಗಳನ್ನು ಪತ್ತೆಹಚ್ಚುವುದು ತತ್ತ್ವಶಃ ಅಸಾಧ್ಯವೆಂಬ ವಿಚಾರವನ್ನು ವರ್ನೆರ್

ಹೈಸೆನ್‌ಬರ್ಗ್ 1927ರಲ್ಲಿ ಪ್ರಕಾಶಪಡಿಸಿದ. ಕ್ವಾಂಟಮ್ ಸಿದ್ಧಾಂತವೊಂದನ್ನು 1925ರಲ್ಲಿ ಇದೇ ವಿಜ್ಞಾನಿ ಮಾತೃಕೆಗಳ ಆಧಾರದ ಮೇಲೆ ರಚಿಸಿದ್ದ (ಮ್ಯಾಟ್ರಿಕ್ಸ್ ಫಾರ್ಮ್ಯುಲೇಷನ್). ಉಷ್ಣ ನಿಸ್ಸರಣೆಯ ಬಗ್ಗೆ ಮ್ಯಾಕ್ಸ್ ಪ್ಲ್ಯಾಂಕನ ಸಂಶೋಧನೆಗಳಿಂದ 1900ರಲ್ಲೇ ಜನಿಸಿ ಹೆಚ್ಚು ಕಡಿಮೆ ಹಂಗಾಮಿ ಜಾಡುಗಳಲ್ಲೇ ಸಾಗಿ ಬಂದಿದ್ದ ಕ್ವಾಂಟಮ್ ಪರಿಕಲ್ಪನೆಗಳು ಹೈಸೆನ್‌ಬರ್ಗನ ಈ ಕೃತಿಯಲ್ಲಿ ಅಚ್ಚುಕಟ್ಟಾದ ಒಂದು ಶಾಸ್ತ್ರಿಯ ಆಯಕಟ್ಟನ್ನು ಗಳಿಸಿಕೊಂಡವು. ಫೋಟಾನುಗಳಂತೆ ದ್ರವ್ಯಕಣಗಳಿಗೆ ಸಹ ಕಣ ಸ್ವರೂಪದ ಜೊತೆಗೆ ಅಲೆ ಸ್ವರೂಪ ಕೂಡ ಇರಬೇಕೆಂದು 1924ರಲ್ಲಿ ಲೂಯಿದ್ ಬ್ರಾಗ್ಲಿ ಪ್ರತಿಪಾದಿಸಿದ್ದ (ಪಾರ್ಟಿಕಲ್–ವೇವ್ ಡ್ಯುಯಾಲಿಟಿ). ಈ ವಾದಕ್ಕೆ ಡೇವಿಸನ್ ಮತ್ತು ಜರ್ಮರ್ 1927ರಲ್ಲೂ, ಜೆ.ಪಿ.ಥಾಮ್ಸನ್ 1928ರಲ್ಲೂ ಪ್ರಾಯೋಗಿಕ ಸಮರ್ಥನೆಯನ್ನು ಒದಗಿಸಿದರು. 1926ರಲ್ಲಿ ಎರ್ವಿನ್ ಶ್ರೋಡಿಂಗರ್ ಮಂದಗಾಮಿ ಸೂಕ್ಷ್ಮಕಣಗಳಿಗೆ ಅನ್ವಯವಾಗುವ ಕ್ವಾಂಟಮ್ ಬಲವಿಜ್ಞಾನದ ಒಂದು ಹೊಸ ಯಶಸ್ವಿರೂಪವನ್ನು ಇಂಥ ಅಲೆ ಪರಿಕಲ್ಪನೆಯ ಆಧಾರದ ಮೇಲೆ ಸೃಷ್ಟಿಸಿ ಅದಕ್ಕೂ ಹೈಸೆನ್‌ಬರ್ಗನ ಮಾತೃಕಾ ನಿರೂಪಣೆಗೂ ಇರುವ ಸಮಾನತಾ ಸಂಬಂಧವನ್ನು ಸಂಸ್ಥಾಪಿಸಿದ. ಶ್ರೋಡಿಂಗರ್ ಕ್ವಾಂಟಮ್ ಸಿದ್ಧಾಂತದಲ್ಲಿ ವ್ಯವಸ್ಥೆಗಳ ಚಲನ ವಿದ್ಯಮಾನವನ್ನು ವರ್ಣಿಸುವುದಕ್ಕಾಗಿ ಅಲೆ ಉತ್ಪನ್ನಗಳೆಂದು (ವೇವ್ ಫಂಕ್ಷನ್ಸ್) ಕರೆಯಲಾಗುವ ಒಂದು ವಿಶಿಷ್ಟ ವರ್ಗದ ಉತ್ಪನ್ನಗಳನ್ನು ಬಳಸಿಕೊಳ್ಳಬೇಕಾಗುವುದು. ಚಲನ ವ್ಯವಸ್ಥೆಯೊಂದರ ಕ್ವಾಂಟಮ್ ಅಲೆಉತ್ಪನ್ನದ ಬೆಲೆಗಳು ಹ್ಯಾಮಿಲ್ಟೋನಿಯನ್ ಹಾಗೂ ಲಗ್ರಾಂಜಿಯನ್ ಉತ್ಪನ್ನಗಳಂತೆ ಕೇವಲ ನೈಜಸಂಖ್ಯಾ ಕ್ಷೇತ್ರಕ್ಕೆ (ರಿಯಲ್ ನಂಬರ್ ಫೀಲ್ಡ್) ಸೀಮಿತವಾಗಿರದೆ ಸಮ್ಮಿಶ್ರಸಂಖ್ಯೆಗಳೂ (ಕಾಂಪ್ಲೆಕ್ಸ್ ನಂಬರ್ಸ್) ಆಗಿರಬಲ್ಲವು. ಆದರೆ ಈ ಅಲೆ ಉತ್ಪನ್ನ ಸ್ಥಾನ ನಿರ್ದೇಶಕ $q_k$ ಗಳ ಜೊತೆಗೆ ಕಾಲಚರ $t$ ಯೊಂದನ್ನು ಮಾತ್ರ ಒಳಗೊಳ್ಳುತ್ತದೆಯೇ ವಿನಾ ವೇಗ $\dot{q}_k$ ಗಳನ್ನಾಗಲಿ ಸಂವೇಗ $p_k$ ಗಳನ್ನಾಗಲಿ ಒಳಗೊಳ್ಳುವುದಿಲ್ಲ. ಅಂದ ಮೇಲೆ ಅಲೆಉತ್ಪನ್ನದ ಪ್ರತೀಕ $\psi$ ಆದರೆ $\psi = \psi$ ನೈಜಭಾಗ + $i\psi$ ಕಾಲ್ಪನಿಕ ಭಾಗ = $\psi$ ($t; q_0, q_1, q_2$ ಇತ್ಯಾದಿ), $\left(i = \sqrt{-1}\right)$

$\psi$ ಉತ್ಪನ್ನದ ಸಮ್ಮಿಶ್ರ ಸಂಯುಗ್ಮಿಯನ್ನು (ಕಾಂಪ್ಲೆಕ್ಸ್ ಕಾಂಜುಗೇಟ್) $\bar{\psi}$ ಪ್ರತೀಕದಿಂದ ಸೂಚಿಸುತ್ತೇವೆ (ಈಗಿನ ತಲೆಗೀಟು ನಿರ್ದೇಶಕ ಪರಿವರ್ತನೆಗಳಿಗೆ ಸಂಬಂಧಿಸಿದುದಲ್ಲ):

$\bar{\Psi} = \psi$ ನೈಜಭಾಗ $- i\psi$ ಕಾಲ್ಪನಿಕಭಾಗ; $\Psi\bar{\Psi} = \psi^2$ ನೈಜಭಾಗ+ $\psi^2$ ಕಾಲ್ಪನಿಕಭಾಗ =ಒಂದು ನೈಜ ಉತ್ಪನ್ನ.

ದತ್ತ ಚಲನವ್ಯವಸ್ಥೆಗೆ ಸಂಬಂಧಿಸಿದಂತೆ ಅದರ ಅಲೆಉತ್ಪನ್ನ $\psi$ ಪ್ರತಿನಿಧಿಸುವ ವಿದ್ಯಮಾನ ನಿಜಕ್ಕೂ ಸಂಭಾವ್ಯತೆಗಳನ್ನು ಕುರಿತದ್ದೇ ವಿನಾ ನಿಶ್ಚಿತತೆಯನ್ನಲ್ಲ (ಪ್ರಾಬಬಿಲಿಟೀಸ್). ವಿಶಿಷ್ಟವಾಗಿ, $q_0, q_1, q_2$ ಇತ್ಯಾದಿ ನಿರ್ದೇಶಕಗಳ ಬೆಲೆಗಳು t ಕಾಲದಲ್ಲಿ

$Q_k - \frac{1}{2}dQ_k < q_k < Q_k + \frac{1}{2}dQ_k$, ($k = 0, 1, 2,$ಇತ್ಯಾದಿ) ಅಂತರಗಳ ಒಳಗಡೆ ಇರಬಹುದಾದ ಸಂಭಾವ್ಯತೆ

$\bar{\bar{\Psi}}(t; Q_0, Q_1$ ಇತ್ಯಾದಿ) X $\Psi(t; Q_0 - Q_1$ ಇತ್ಯಾದಿ) X $dQ_0 - dQ_1$ ಇತ್ಯಾದಿ).....[37]

ಆಗುವುದೆಂದು ಭಾವಿಸುತ್ತೇವೆ (ಮ್ಯಾಕ್ಸ್ ಬಾರ್ನ್, 1926–27). ಚಲನ ವ್ಯವಸ್ಥೆಗಳ ಒಂದೊಂದು ಸ್ಥಿತಿಗೂ ಅನುರೂಪವಾಗಿ ಒಂದೊಂದು ಅಲೆ ಉತ್ಪನ್ನ ಅಸ್ತಿತ್ವದಲ್ಲಿರಬೇಕು ಎಂಬುದು ಕ್ವಾಂಟಮ್ ಬಲವಿಜ್ಞಾನದ ಒಂದು ಮೂಲಭೂತ ಗ್ರಹಿಕೆ. ಚಲನವ್ಯವಸ್ಥೆಗಳ ಸ್ಥಿತಿಗಳನ್ನು ನಿಷ್ಕರ್ಷಿಸುವ ಹಲವಾರು ಪ್ರಭಾವಗಳ ಪೈಕಿ ವೀಕ್ಷಕನೊಬ್ಬ ಆ ವ್ಯವಸ್ಥೆಗಳ ಬಗ್ಗೆ ಅಧ್ಯಯನ ನಡೆಸಲು ಮಾಡಿರಬಹುದಾದ ಏರ್ಪಾಡುಗಳೂ ಸೇರಿಕೊಳ್ಳುತ್ತವೆ; ಈ ಏರ್ಪಾಡುಗಳು ಬದಲಾದಂತೆ ವ್ಯವಸ್ಥೆಗಳ ಸ್ಥಿತಿಗಳೂ ಬದಲಾಗಿ ಅವುಗಳ ವರ್ಣನೆಗೆ ಬೇರೆ ಬೇರೆ ಅಲೆ ಉತ್ಪನ್ನಗಳೇ ಅವಶ್ಯವಾಗುವುವು. ಗೊತ್ತಾದ ಸ್ಥಿತಿಯೊಂದರಲ್ಲಿರುವ ಒಂದು ಚಲನವ್ಯವಸ್ಥೆಯ ಅಲೆ ಉತ್ಪನ್ನವನ್ನು ಕಂಡುಹಿಡಿಯಲು ಕೆಲವು ನಿರ್ದಿಷ್ಟ ವಿಧಿಗಳನ್ನು ರೂಪಿಸಲಾಗಿದೆ. ಮೊದಲನೆಯದಾಗಿ $H = H(q_0, q_1$, ಇತ್ಯಾದಿ, $p_0, p_1$ ಇತ್ಯಾದಿ,) ಎಂಬುದು ವ್ಯವಸ್ಥೆಯ ಎಂದಿನ ಹ್ಯಾಮಿಲ್ಟೋನಿಯನ್ ಉತ್ಪನ್ನವಾದರೆ ಈ$H$ನ್ನು $q_k, p_k$ ಗಳ ಒಂದು (ಪ್ರಾಯಶಃ ಅನಂತ) ಘಾತ ಶ್ರೇಣಿಯನ್ನಾಗಿ (ಪವರ್ ಸೀರೀಸ್) ಅಭಿವ್ಯಕ್ತಿಸಿ ಆ ಶ್ರೇಣಿಯಲ್ಲಿ ಕಾಣಿಸಿಕೊಳ್ಳುವ ಪ್ರತಿಯೊಂದು $pk^j$ ಘಾತವನ್ನೂ $(h/2\pi i)^j \partial^j / \partial q^j$ ಎಂಬ ಆಂಶಿಕ ಅವಕಲ ಪರಿಕರ್ಮಿಯನ್ನಾಗಿ (ಪಾರ್ಷಿಯಲ್ ಡಿಫರೆನ್ಷಲ್ ಅಪರೇಟರ್) ಮಾರ್ಪಡಿಸಬೇಕು; ಇಲ್ಲಿ h(=6.626 x $10^{-34}$ ಜೌಲ್/ ಸೆಕೆಂಡ್) ಎಂಬುದು ಪ್ರಖ್ಯಾತ ಪ್ಲ್ಯಾಂಕ್ ನಿಯತಾಂಕದ ಪ್ರತೀಕ. ಹೀಗೆ ಮಾಡಿದಾಗ ಒಟ್ಟು $H$ ಉತ್ಪನ್ನವೇ ಒಂದು ಪರಕರ್ಮಿ $H$ ಆಗಿ ರೂಪಾಂತರಿತವಾಗುವುದು: $H = H(q_0, q_1$, ಇತ್ಯಾದಿ; $(h/2\pi i)\,\partial/\partial q_0$, $(h/2\pi i)\partial/\partial q_1$ ಇತ್ಯಾದಿ. ಎರಡನೆಯದಾಗಿ $H$ ಪರಿಕರ್ಮಿಗೆ $(h/2\pi i)\,\partial/\partial t$ ಎಂಬ ಮತ್ತೂ ಒಂದು ಪದವನ್ನು ಸೇರಿಸಬೇಕು; ಈ ವಿಧಿಯಿಂದ ಫಲಿಸುವ ಪರಿಕರ್ಮಿಯನ್ನು $S$ ಎಂದು ಸೂಚಿಸುತ್ತೇವೆ:

$$S \equiv H + \left(h/2\pi i\right)\partial/\partial t = H\left(q_0, q_1, \text{ಇತ್ಯಾದಿ}; \frac{h}{2\pi i}\frac{\partial}{\partial q_0},\right.$$

$$\left.\frac{h}{2\pi i}\frac{\partial}{\partial q_1}, \text{ಇತ್ಯಾದಿ}\right) + \frac{h}{2\pi i}\frac{\partial}{\partial t}$$

ಮೂರನೆಯದಾಗಿ

ಶ್ರೋಡಿಂಗರ್ ಅಲೆ ಸಮೀಕರಣ :$S\Psi = 0$

ಎಂಬ ಆಂಶಿಕ ಅವಕಲ ಸಮೀಕರಣ ಪರಿಹಾರಗಳನ್ನು ಕಂಡುಹಿಡಿಯಬೇಕು. ಕೊನೆಯದಾಗಿ ಹೀಗೆ ಕಂಡುಹಿಡಿದ ಪರಿಹಾರಗಳಲ್ಲಿ ದತ್ತವ್ಯವಸ್ಥೆಯ ವಿದ್ಯಮಾನಗಳಿಗೆ ಸರಿಹೊಂದುವ $\Psi$ಯನ್ನು ಆ ವ್ಯವಸ್ಥೆಯ ಅಲೆ ಉತ್ಪನ್ನವನ್ನಾಗಿ ಅಂಗೀಕರಿಸಬೇಕು. ಈ ವಿವರಣೆಯನ್ನು ಉದಾಹರಿಸುವ ಸಲುವಾಗಿ ಏಕ ಆಯಾಮಾಂಕದ ಸರಳ ವ್ಯವಸ್ಥೆಯೊಂದರ ಹ್ಯಾಮಿಲ್ಟೋನಿಯನ್ $H = \frac{4\pi^2 p_0{}^2}{a^2 h^2}$ ಆಗಿದೆಯೆಂದು ಭಾವಿಸುತ್ತೇವೆ (ಇಲ್ಲಿ $a$ ಒಂದು ನಿಯತಾಂಕ; $q_0$ ಸುಪ್ತ ನಿರ್ದೇಶಕ; $p_0$ ವಿಹಿತ ಸಂಯುಗ್ಮಿ ಸಂವೇಗ); ಬೇರೆ ಕಾಯಗಳ ಅಡ್ಡಿ ಆತಂಕ ಅಥವಾ ಯಾವುದೇ ಬಗೆಯ ಪ್ರಭಾವಗಳಿಲ್ಲದೆ ಒಂಟಿಯಾಗಿ ಚಲಿಸುವ ಕಣವನ್ನು ಈ $H$ ಪ್ರತಿನಿಧಿಸುತ್ತದೆ. ಮೊದಲನೆಯ ವಿಧಿ $H$ ಉತ್ಪನ್ನವನ್ನು $H = -\left(1/a^2\right)\partial^2/\partial q_0{}^2$ ಪರಿಕರ್ಮಿಯನ್ನಾಗಿ ರೂಪಾಂತರಿಸುತ್ತದೆ. ಎರಡನೆಯ ವಿಧಿಯ ಪ್ರಕಾರ $\mathbf{S} = -(1/a^2)\partial^2/\partial q_0^2 + (h/2\pi i)\partial/\partial t$ ಆಗಿ $S\psi = 0$ ಅಲೆ ಸಮೀಕರಣ $(1/a^2)\partial^2\psi/\partial q_0{}^2 = (h/2\pi i)\partial\psi/\partial t$ ಎಂಬ ರೂಪವನ್ನು ತಾಳುವುದು. ಇದರ ಪರಿಹಾರಗಳ ಪೈಕಿ ಮೊದಲು $\psi\ (t;q_0) = f(t)g(q_0)$ ಎಂಬ ರೂಪದಲ್ಲಿರುವುದನ್ನು ಮಾತ್ರವೇ ಪರಿಶೀಲಿಸಿದರೆ

$$\frac{1}{g}\frac{d^2 g}{dq_0{}^2} = \frac{a^2 h}{2\pi i f}\frac{\partial f}{\partial t} = \frac{a^2 h}{2\pi i}\frac{d \log f}{dt}$$

ಎಂದಾಗುತ್ತದೆ. ಕೊನೆಯ ಸಮೀಕರಣಸರಣಿಯಲ್ಲಿ ಆದಿಪದ ಕೇವಲ $q_0$ ಯನ್ನೂ – ಅಂತಿಮ ಪದ $t$ ಮಾತ್ರವನ್ನೂ ಅವಲಂಬಿಸಿರುವ ಕಾರಣ ಎರಡು ಪದಗಳೂ ಒಂದೇ ನಿಯತಾಂಕಕ್ಕೆ ಸಮವಿರಬೇಕಾಗುವುದು. ಈ ನಿಯತಾಂಕವನ್ನು $-a^2b^2h^2$ ಎಂದಿಟ್ಟು ಕೊಂಡರೆ $g(q_0) = A \sin abhq_0 + B \cos abhq_0$, $f(t) = exp(-2pib^2ht)$ ಎಂಬ ಸಂಬಂಧಗಳು ಲಭಿಸಿ ಅಲೆ ಸಮೀಕರಣ $S\psi = 0$ಗೆ ಕೆಳಗಿನ ಉತ್ಪನ್ನ ಒಂದು ಪರಿಹಾರವೆಂದು ಗೊತ್ತಾಗುವುದು:

$\psi A, B, b=(a \sin abhq_0+b \cos abhq_0) \exp(-2\pi ib^2ht)$ ($A, B, b$ ನಿಯತಾಂಕಗಳು). ಇಂಥ ಅನೇಕ ಪರಿಹಾರಗಳನ್ನು ಕೂಡಿ $S\psi=0$ಗೆ ಬದ್ಧವಾಗಿರುವ ಹೆಚ್ಚು ಸಾರ್ವತ್ರಿಕ ರೂಪದ ಪರಿಹಾರಗಳನ್ನು ರಚಿಸಬಹುದು. ಇಂಥವುಗಳ ಪೈಕಿ ಯಾವುದೋ ಒಂದು ಮಾತ್ರ ದತ್ತ ವ್ಯವಸ್ಥೆಯ ಕ್ವಾಂಟಮ್ ಸ್ಥಿತಿಯನ್ನು ವ್ಯಕ್ತಪಡಿಸಬಲ್ಲ ಅಲೆ ಉತ್ಪನ್ನವಾಗಬಲ್ಲದು. ಉದಾಹರಣೆಗೆ ಚರ್ಚೆಯಲ್ಲಿರುವ $q_0$ ನಿರ್ದೇಶಕ $-Q<q_0<Q$ ಅಂತರದಲ್ಲೇ ಉಳಿಯುವಂತೆ ಏರ್ಪಾಡು ಮಾಡಿರುವುದಾದರೆ (ಮೇಲೆ ಉಲ್ಲೇಖಿಸಿದ ಕಣ q=$^{238}_{93}$Q ಎಲ್ಲೆಗಳಾಚೆಗೆ ಚಲಿಸದಂತೆ ಆ ಎಲ್ಲೆಗಳ ಬಳಿ ದೃಢ ಪ್ರತಿಬಂಧಕಗಳನ್ನು ಸ್ಥಾಪಿಸಿರುವಂತೆ ಭಾವಿಸಬಹುದು) $\psi(t, \pm Q)=0$ ಮತ್ತು $\int_{-Q}^{Q} \overline{\psi}(t,Q_0)\cdot \psi(t,Q_0)\,\mathrm{d}Q_0 +$[$q_0$ಯ ಬೆಲೆ $\pm Q$ಗಳ ನಡುವೆ ಇರುವ ಸಂಭ್ಯಾವತೆ]=1 ಆಗುವಂತೆ ವ್ಯವಸ್ಥೆಯ ಅಲೆ ಉತ್ಪನ್ನ $\psi$ ಯನ್ನು ಆಯ್ಕೆಮಾಡಿಕೊಳ್ಳುವುದು ಸೂಕ್ತವಾಗುತ್ತದೆ. (ಇಲ್ಲಿ ಸಂಭಾವ್ಯತೆಯ ಸೂತ್ರ [37]ನ್ನೂ ಯಾವುದೇ ಖಚಿತ ವಿದ್ಯಮಾನದ ಸಂಭಾವ್ಯತೆ 1 ಎಂಬ ತಿಳಿವಳಿಕೆಯನ್ನೂ ಬಳಸಿಕೊಂಡಿದ್ದೇವೆ). ಇಂಥ ಆಯ್ಕೆಗೆ ಒಂದು ನಿದರ್ಶನ

$$\psi(t,Q_0)=\frac{1}{5\sqrt{Q}}\{3\sin\frac{\pi q_0}{Q}\exp(-2i\pi^3 t/hd^2Q^2)+ 4\cos\frac{\pi q_0}{2Q}\exp(-i\pi^3 t/2\,\mathrm{h}\,a^2Q^2)\}\ldots[38]$$

ಸಂದರ್ಭದಲ್ಲಿ ಇನ್ನೂ ಅನೇಕ ಇತರ ನಿದರ್ಶನಗಳನ್ನೂ ಸುಲಭವಾಗಿ ರಚಿಸಬಹುದು. [38] ಸಮೀಕರಣ $-Q<q_0<Q$ ಅಂತರದಲ್ಲಿ $\psi$ ಬೆಲೆಗಳ ಒಂದು ಅಲೆ ಪ್ರರೂಪವನ್ನು (ವೇವ್ ಪ್ಯಾಟರ್ನ್)ಪ್ರತಿನಿಧಿಸುತ್ತದೆ; ಈ ಸಮೀಕರಣ ಪರಿಶೀಲಿತ ವ್ಯವಸ್ಥೆಯ ಕ್ವಾಂಟಮ್ ಸ್ಥಿತಿಯನ್ನು ವಾಸ್ತವತಃ ಅಭಿವ್ಯಕ್ತಿಸುವುದೇ ಆದರೆ ವ್ಯವಸ್ಥೆಯಲ್ಲಿರುವ ಕಣಕ್ಕೆ ಸಂಬಂಧಪಟ್ಟಿದೆ, ಬ್ರಾಗ್ಲಿ ತರಂಗವನ್ನು ಇದು ಪ್ರತಿನಿಧಿಸುತ್ತದೆ.

ಕ್ವಾಂಟಮ್ ಬಲವಿಜ್ಞಾನದಲ್ಲಿ ಸಂವೇಗ, ಶಕ್ತಿ ಮೊದಲಾದ ಕೆಲವೊಂದು ವಿಶಿಷ್ಟ ವರ್ಗದ ಪ್ರಾಚಲಗಳ ಅಳತೆಗಳಿಂದ ಲಭ್ಯವಾಗಬಹುದಾದ ಅಂಕಿಅಂಶಗಳನ್ನು ಸಹ ನಿರ್ದಿಷ್ಟ ಸಂಭಾವ್ಯತೆಗಳಿಗೆ ಒಳಪಟ್ಟಿರುವಂತೆ ಪರಿಗಣಿಸಬೇಕಾಗುವುದು. ಈ ಸಂಬಂಧದಲ್ಲಿ ಅಂಗೀಕೃತವಾಗಿರುವ ವಿಧಿಗಳ ಪ್ರಕಾರ ಇಂಥ ಒಂದೊಂದು ಪ್ರಾಚಲ y ಯ ಅಳತೆಗೂ ಅನುರೂಪವಾಗಿ ಒಂದೊಂದು ವಿಶಿಷ್ಟ ಅವಕಲ ಪರಿಕರ್ಮಿ **Y**ಯನ್ನು ರಚಿಸಬಹುದು. ಉದಾಹರಣೆಗೆ ಶಕ್ತಿ r ಗೆ ಸಂಬಂಧಿಸಿದ ಪರಿಕರ್ಮಿ $\mathbf{R}=(-h/2\pi i)\,\partial/\partial^t$, ಸಂವೇಗ $pk$ಗೆ ಅನುಗುಣವಾದ ಪರಿಕರ್ಮಿ $\boldsymbol{P_k=(h/2\pi i)\partial/\partial q_k}$. ಈಗ 2)21 ಎಂಬುದು ಯಾವುದಾದರೊಂದು ನಿಯತಾಂಕವೂ $\phi=\phi(t;q_0,q_1$, ಇತ್ಯಾದಿ) ಎಂಬುದು ಸೂಚಿತ ಚರಗಳ ಯಾವುದಾದರೊಂದು ಉತ್ಪನ್ನವೂ ಆಗಿರಲಿ. ಒಂದು ಪ್ರಾಚಲ yಗೆ ಸಂಬಂಧಿಸಿದ ಪರಿಕರ್ಮಿ **Y**ಯನ್ನು ಈ $\phi$ ಉತ್ಪನ್ನದ ಮೇಲೆ ಪ್ರಯೋಗಿಸಿದಾಗ $\psi\phi$↼2)21$\phi$ ಆಗುವುದಾದರೆ $\phi$ಯನ್ನು **Y** ಪರಿಕರ್ಮಿಯ ಒಂದು ಐಗೆನ್ ಉತ್ಪನ್ನವೆಂದೂ 2)21ವನ್ನು ಈ $\phi$ಗೆ ಅನುರೂಪವಾದ **Y**ಯ ಐಗೆನ್ ಬೆಲೆಯೆಂದೂ ವರ್ಣಿಸುತ್ತೇವೆ. ಇದರ ಜೊತೆಗೆ ಆಕಾಶದ ಪರಿಶೀಲಿತ ಎಲ್ಲೆಗಳ ಬಳಿ $\phi=0$ ಹಾಗೂ ಆ ಎಲ್ಲೆಗಳ ಮಧ್ಯೆ ಇರುವ ಪ್ರದೇಶವನ್ನು ಕುರಿತಂತೆ

$\int\int_{\text{ಇತ್ಯಾದಿ}} \bar{\phi}\phi\, dq_0\, dq_1$ ಇತ್ಯಾದಿ $=1$ ಆಗುವ ಪಕ್ಷದಲ್ಲಿ $\phi$ ಉತ್ಪನ್ನ $\psi$ ಈ ಪರಿಕರ್ಮಿಯ ಒಂದು ಏಕಾನುಕಲ ಐಗೆನ್ ಉತ್ಪನ್ನ (ನಾರ್ಮಲೈಸ್ಡ್ ಐಗೆನ್ ಫಂಕ್ಷನ್) ಎನಿಸಿಕೊಳ್ಳುತ್ತದೆ. [ಎಲ್ಲೆಗಳ ಬಳಿ $\phi=0$ ಆಗಬೇಕೆಂಬ ಸೀಮಾ ನಿಬಂಧನೆ (ಬೌಂಡರಿ ಕಂಡಿಷನ್) ಇದೇ ಎಲ್ಲೆಗಳ ಬಳಿ ವ್ಯವಸ್ಥೆಯ ಅಲೆ ಉತ್ಪನ್ನ $\psi$↼ ಆಗಬೇಕೆಂಬುದಕ್ಕೆ ಹೊಂದಿಕೊಳ್ಳುತ್ತದೆ; ಈ ಸೀಮಾನಿಬಂಧನೆಗಳನ್ನು ಬೇರೆ ನಮೂನೆಗಳಿಗೆ ಮಾರ್ಪಡಿಸಲೂಬಹುದು; $\bar{\phi}$ ಎಂಬುದು $\phi$ ಉತ್ಪನ್ನದ ಸಮ್ಮಿಶ್ರ ಸಂಯುಗ್ಮಿ]. ದತ್ತ ಚಲನ ವ್ಯವಸ್ಥೆಯ ಯಾವುದಾದರೊಂದು y ಪ್ರಾಚಲವನ್ನು ಅಳತೆಮಾಡಿದಾಗ ಲಭಿಸುವ ಫಲ ಈ **Y** ಗೆ ಸಂಬಂಧಪಟ್ಟ **Y** ಪರಿಕರ್ಮಿಯ ಐಗೆನ್ ಬೆಲೆಗಳ ಪೈಕಿಯೇ ಒಂದಲ್ಲ ಒಂದು ಆಗಿರಬೇಕು (ಅಳತೆಗೆ ಎಟುಕುವ ಪ್ರಾಚಲಗಳನ್ನು ಕುರಿತ ಪರಿಕರ್ಮಿಗಳಿಗೆ ನೈಜ ಐಗೆನ್ ಬೆಲೆಗಳು ಮಾತ್ರ ಇರುತ್ತವೆ) ಎಂಬುದು ಕ್ವಾಂಟಮ್ ಸಿದ್ಧಾಂತದ ಒಂದು ಮೂಲಭೂತ ಗ್ರಹಿಕೆ. ಸೂಕ್ತ ನೈಜ ಅಥವಾ ಸಮ್ಮಿಶ್ರ ಗುಣಾಂಕ $\mu_k$ ಗಳನ್ನು ಬಳಸಿ (k=0,1,2 ಇತ್ಯಾದಿ) ದತ್ತ ವ್ಯವಸ್ಥೆಯ ಅಲೆ ಉತ್ಪನ್ನ $\psi$ ಯನ್ನು $\psi=\mu_0\phi_0+\mu_1\phi_1+\mu_2\phi_2+$ ಇತ್ಯಾದಿ ಎಂಬುದಾಗಿ **Y** ಪರಿಕರ್ಮಿಯ ಹಲವಷ್ಟು ಏಕಾನುಕಲ $\phi_k$ ಐಗೆನ್ ಉತ್ಪನ್ನಗಳ ಅಪವರ್ತ್ಯ ಶ್ರೇಣಿಯನ್ನಾಗಿ ವಿಸ್ತರಿಸಿದಲ್ಲಿ $t$ ವೇಳೆಗೆ ಎಸಗಬಹುದಾದ ಅನುರೂಪ $y$ ಪ್ರಾಚಲದ ಅಳತೆಯ ಫಲಿತಾಂಶ $\phi_k$ ಗೆ ಅನುಗುಣವಾದ ಐಗೆನ್ ಬೆಲೆ 2)21$k$ ಆಗುವ ಸಂಭಾವ್ಯತೆ $\overline{\mu_k}\ \mu_k$ ಯಷ್ಟಿರುತ್ತದೆ. ಈ ಪರಿಸ್ಥಿತಿಯನ್ನು ಉದಾಹರಿಸುವ ಸಲುವಾಗಿ

$$\phi_0=\frac{1}{\sqrt{Q}}\sin\frac{\pi q_0}{Q}\exp(-2i\pi^3 t/ha^2Q^2)$$

$$\phi_1=\frac{1}{\sqrt{Q}}\cos\frac{\pi q_0}{2Q}\exp(-i\pi^3 t/2ha^2Q^2)$$

ಇವೆರಡೂ $R=(-h/2\pi i)(\partial/\partial t)$ ಶಕ್ತಿಪರಿಕರ್ಮಿಯ ಏಕಾನುಕಲ ಐಗೆನ್ ಉತ್ಪನ್ನಗಳೆಂಬ ಅಂಶವನ್ನು ಗಮನಿಸುತ್ತೇವೆ. $q_0=\pm Q$ ಎಲ್ಲೆಗಳಲ್ಲಿ ಶೂನ್ಯವಾಗುವ ಈ ಉತ್ಪನ್ನಗಳಿಗೆ ಅನುರೂಪವಾದ Rನ ಐಗೆನ್ ಬೆಲೆಗಳು

$$\lambda_0=\frac{\pi^2}{a^2Q^2},\lambda_1=\frac{\pi^2}{4a^2Q},$$

ಆಗುತ್ತವೆ. ಚಲನ ವ್ಯವಸ್ಥೆಯೊಂದರ ಕ್ವಾಂಟಮ್ ಸ್ಥಿತಿಯನ್ನು ಮೇಲಿನ (38) ಸಮೀಕರಣದ ಅಲೆ ಉತ್ಪನ್ನ, ಚಲನ ವ್ಯವಸ್ಥೆಯೊಂದರ ಕ್ವಾಂಟಮ್ ಸ್ಥಿತಿಯನ್ನು ಮೇಲಿನ [38] ಸಮೀಕರಣಗಳ ಅಲೆಉತ್ಪನ್ನ

$$\psi(t;q)=(3/5)\phi_0+(4/5)\phi_1$$

ವ್ಯಕ್ತಪಡಿಸುವುದಾದರೆ ಇದರ ಶಕ್ತಿಯ ಅಳತೆ 2)210, 2)211 ಗಳ ಪೈಕಿ ಒಂದಲ್ಲ ಒಂದು ಆಗಿರಬೇಕಾಗುವುದು. ಈ ಶಕ್ತಿಯನ್ನು ಅಳೆದಾಗ 4)122/($a^2Q^2$) ಫಲಿತಾಂಶ ದೊರಕುವ ಸಂಭಾವ್ಯತೆ $\bar{\mu}_0\mu_0=(3/5)^2=$ ಶೇಕಡ 36 ಭಾಗ; ಅದಕ್ಕೆ ಬದಲಾಗಿ 4)122/($4a^2Q^2$) ಫಲಿತಾಂಶ ದೊರಕುವ ಸಂಭಾವ್ಯತೆ $\bar{\mu}_1\mu_1=(4/5)^2$ ಶೇಕಡಾ 64 ಭಾಗ. ಕೊನೆಯದಾಗಿ ಯಾವುದೇ ಅಲೆಉತ್ಪನ್ನ $\Psi$ ನಿಂದ ವರ್ಣಿತವಾಗುವ ಕ್ವಾಂಟಮ್ ಚಲನವ್ಯವಸ್ಥೆಯೊಳಗೆ ಯಾವುದಾದರೊಂದು Y ಪ್ರಾಚಲವನ್ನು ಅಳತೆ ಮಾಡಿದಾಗ ಲಭಿಸಬಹುದಾದ ಅತ್ಯಂತ ಸಂಭಾವ್ಯ ಫಲ $\iint_{\text{ಇತ್ಯಾದಿ}}\overline{\psi}\ \mathrm{Y}\ \psi\ dq_0dq_1$ ಇತ್ಯಾದಿ ಆಗುತ್ತದೆಂದು ತೋರಿಸಬಹುದು. ಇಲ್ಲಿಯ ಅನುಕಲನವನ್ನು (ಇಂಟಿಗ್ರೇಷನ್) ಆಕಾಶದ ಪರಿಶೀಲಿತ ಎಲ್ಲೆಗಳ ಮಧ್ಯೆ ಇರುವ ಪ್ರದೇಶದಲ್ಲಿ ನಿರ್ವಹಿಸಬೇಕು; y ಎಂಬುದು ಶಕ್ತಿ ಇಲ್ಲವೇ ಸಂವೇಗಗಳಂಥ ಪ್ರಾಚಲವಾದರೆ ಮೇಲೆ ತಿಳಿಸಿರುವಂತೆ Y ಅದಕ್ಕೆ ಅನುರೂಪವಾದ ಅವಕಲ ಪರಿಕರ್ಮಿ ಆಗುವುದು; ಆದರೆ y ಕೇವಲ ಒಂದು ಸ್ಥಾನ ಪ್ರಾಚಲವಾದಾಗ (ಅಂದರೆ $y=q_k$ಗಳಲ್ಲೊಂದು) $\mathbf{Y}^4_8$y ಎಂದು ಪರಿಗಣಿಸಬೇಕು. ಇಂಥ ಅತ್ಯಂತ ಸಂಭಾವ್ಯ ಬೆಲೆಗಳ ನಡವಳಿಕೆ ಅಭಿಜಾತ ಬಲವಿಜ್ಞಾನದ ಹ್ಯಾಮಿಲ್ಟನ್ ವಿಹಿತ ಸಮೀಕರಣಗಳಿಗೆ (ಅಥವಾ ತತ್ಸಮಾನವಾದ ಇತರ ಚಲನ ಸಮೀಕರಣಗಳಿಗೆ) ಕರಾರುವಾಕ್ಕಾಗಿ ಹೊಂದಿಕೊಳ್ಳುವುದು. ಸೌರವ್ಯೂಹದಂಥ ವ್ಯವಸ್ಥೆಗಳ ಚಲನೆ ಈ ಬಗೆಯ ಗರಿಷ್ಠ ಸಂಭಾವ್ಯತೆಯ ಜಾಡಿನಿಂದ ಅಳೆಯಲೂ ಸಾಧ್ಯವಾಗದಷ್ಟು ಸೂಕ್ಷ್ಮ ಪ್ರಮಾಣಗಳಲ್ಲಿ

ಕದಲುವುದರಿಂದ ಇಂಥ ಬೃಹದ್ವ್ಯವಸ್ಥೆಗಳ ಅಧ್ಯಯನಕ್ಕೆ ಕ್ವಾಂಟಮ್ ಬಲವಿಜ್ಞಾನ ಅನವಶ್ಯವಾಗುತ್ತದೆ. ಅಣುಪರಮಾಣುಗಳೇ ಮೊದಲಾದ ಸೂಕ್ಷ್ಮಕಣಗಳ ಚಲನೆಯನ್ನು ಅರ್ಥಮಾಡಿಕೊಳ್ಳುವಲ್ಲಿಯಾದರೋ ಕ್ವಾಂಟಮ್ ಸಿದ್ಧಾಂತದ ಸಂಭಾವ್ಯತಾ ಪರಿಕಲ್ಪನೆಗಳು ನಿಜಕ್ಕೂ ಅನಿವಾರ್ಯ.

ಪ್ರಸಕ್ತ ಶತಮಾನದ ಭೌತವಿಜ್ಞಾನ ಕ್ಷೇತ್ರಾದ್ಯಂತ ಕ್ರಾಂತಿಕಾರಕ ಪ್ರಭಾವವನ್ನು ಬೀರಿದ ಆವಿಷ್ಕಾರಗಳಲ್ಲಿ ಒಂದು ಕ್ವಾಂಟಮ್ ಬಲವಿಜ್ಞಾನವಾದರೆ, ಇನ್ನೊಂದು ಆಲ್ಬರ್ಟ್ ಐನ್‌ಸ್ಟೈನ್ ಪ್ರತಿಪಾದಿಸಿದ ಸಾಪೇಕ್ಷತಾ ಸಿದ್ಧಾಂತ (ರಿಲೆಟಿವಿಟಿ ಥಿಯರಿ; ವಿಶೇಷ ಸಿದ್ಧಾಂತ 1905, ಸಾರ್ವತ್ರೀಕೃತ ಸಿದ್ಧಾಂತ 1915). (ಮೇಲೆ ಸೂಚಿಸಿರುವ ಕ್ವಾಂಟಮ್ ಸಿದ್ಧಾಂತದಲ್ಲಿ ನಿಜಕ್ಕೂ ಸಾಪೇಕ್ಷತಾ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಸಾಪೇಕ್ಷತಾ ಪರಿಣಾಮಗಳನ್ನು ಸಹ ಒಳಗೊಂಡಿರುವ ಕ್ವಾಂಟಮ್ ಸಿದ್ಧಾಂತದ ಒಂದು ವಿಸ್ತೃತರೂಪವೂ ಅಸ್ತಿತ್ವದಲ್ಲಿದೆ. ಆದರೆ ಅದರ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗುವುದಿಲ್ಲ). ಅಭಿಜಾತ ಬಲವಿಜ್ಞಾನದಲ್ಲಿ ಸ್ಥಾನನಿರ್ದೇಶಕ $q_k$ ಗಳಿಂದ ಪೂರ್ಣತಃ ಪ್ರತ್ಯೇಕಿತವಾದ ಒಂದು ವಿಶೇಷ ಸ್ತರದಲ್ಲಿ ಕಾಲಚರ $t$ ಯನ್ನು ಅಳವಡಿಸಲಾಗಿದೆಯಷ್ಟೆ. ಸ್ಥಾನ ಮತ್ತು ಕಾಲ ಚರಗಳ ನಡುವಿನ ಇಂಥ ಭೇದಕಲ್ಪನೆ ಕೇವಲ ಕೃತಕವೆಂಬ ಅರಿವು ಸಾಪೇಕ್ಷತಾ ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳಲು ಅವಶ್ಯವಾದ ಸಿದ್ಧತೆಯ ಪ್ರಥಮ ಹೆಜ್ಜೆ. ಗಡಿಯಾರಗಳ ನಿದರ್ಶನವನ್ನೇ ತೆಗೆದುಕೊಂಡರೆ ನಾವು ಕಾಲವೆಂದು ಪರಿಗಣಿಸುವ ಚರ ವಾಸ್ತವವಾಗಿ ಒಂದಲ್ಲ ಒಂದು ಮುಳ್ಳಿನ ಸ್ಥಾನವೇ ಹೊರತು ಬೇರೇನಲ್ಲ. ಯಾವುದೋ ತಾತ್ತ್ವಿಕ ಸಂಸ್ಕೃತಿಯ ಫಲವಾಗಿ ಈ ಸುಸ್ಪಷ್ಟ ವಿಚಾರ ನಾಗರಿಕ ಪ್ರಜ್ಞೆಯಿಂದ ಇಂದು ನಿಜಕ್ಕೂ ಅಚ್ಚರಿಪಡಬೇಕಾದ ರೀತಿಯಲ್ಲಿ ಜಾರಿಹೋಗಿದೆ. ಗಡಿಯಾರಗಳ ಉಪಜ್ಞೆಗೆ (ಇನ್‌ವೆನ್ಷನ್) ಮುನ್ನ ಕಾಲವನ್ನು ಜನರು ಸೂರ್ಯಾದಿ ಆಕಾಶಕಾಯಗಳ ಸ್ಥಾನಗಳಿಂದ ತಿಳಿಯುತ್ತಿದ್ದರಷ್ಟೆ; ಬಹುಶಃ ಅಂದಿನ ಪರಿಸ್ಥಿತಿಯೊಳಗೆ ಕಾಲ ಕೂಡ ಚಲನವ್ಯವಸ್ಥೆಗಳ ಒಂದು ಸ್ಥಾನ ನಿರ್ದೇಶಕವೇ ಎಂಬ ಅಭಿಮತಕ್ಕೆ 20ನೆಯ ಶತಮಾನದ ಆದಿಭಾಗದಲ್ಲಿ ಕಂಡುಬಂದಷ್ಟು ಕ್ರಾಂತಿಕಾರಕ ಧ್ವನಿ ಇರುತ್ತಿರಲಿಲ್ಲ. ಸಂವೃತ ವ್ಯವಸ್ಥೆಯೊಂದರ ಚರ ಸ್ಥಾನನಿರ್ದೇಶಕ $q_k$ ಗಳ ಪೈಕಿಯೇ ನಿರ್ದಿಷ್ಟವಾದ ಯಾವುದಾದರೂ ಒಂದು $q_n{}^4_8 t$ ಯನ್ನು ಆ ಚಲನ ವ್ಯವಸ್ಥೆಯ ಕಾಲಚರವನ್ನಾಗಿ ಅಂಗೀಕರಿಸಬಹುದು. ಹೀಗೆ ಅಂಗೀಕರಿಸಿದ $t$ ಚರ ದತ್ತ ವ್ಯವಸ್ಥೆಯ ಒಂದು ಆಂತರಿಕ ಕಾಲಚರವೆನಿಸಿಕೊಳ್ಳುತ್ತದೆ. ಇಂಥದೊಂದು ಆಂತರಿಕ ಕಾಲಚರವನ್ನು ಆಧರಿಸಿ ರಚಿಸಿದ ಚಲನ ಸಮೀಕರಣಗಳು ನೇರವಾಗಿ $\dot{q}k = dq_k / dt$ (ಅತ್ಯಂತ ಸಂಭಾವ್ಯ) ಬೆಲೆಗಳನ್ನು ನೀಡುವಂತೆ ಭಾವಿಸಬಹುದು:

$$\dot{q}_k = \alpha_k(q_0, q_1, q_2)\text{ಇತ್ಯಾದಿ } q_n(\equiv t), k = 0,1,2\text{ಇತ್ಯಾದಿ}....(39)$$

$q_0, q_1, q_2$ ಇತ್ಯಾದಿ ನಿರ್ದೇಶಕಗಳನ್ನು ಪರಿವರ್ತಿಸಿ $\overline{q}_0, \overline{q}_1, \overline{q}_2$ ಇತ್ಯಾದಿ ಹೊಸ ನಿರ್ದೇಶಕಗಳನ್ನು ರಚಿಸುವ ಬಗ್ಗೆ ಹಿಂದೆ ಆಗಲೇ ಪ್ರಸ್ತಾಪಿಸಿದ್ದೇವೆ; ಆದರೆ ಈಗ $q_k$ ಗಳ ಪೈಕಿ $t \equiv q_n$ ಆಂತರಿಕ ಕಾಲಚರವನ್ನೂ ಸೇರಿಸಿಕೊಳ್ಳಬೇಕಾಗುವುದು. ಇಂಥ ಯಾವುದೇ ಪರಿವರ್ತನೆಯಿಂದ ಲಭಿಸುವ $n$ನೆಯ ಹೊಸ ನಿರ್ದೇಶಕ $\overline{q}_n \equiv \overline{t}$ ನ್ನು ವ್ಯವಸ್ಥೆಯ ಪರಿವರ್ತಿತ ಆಂತರಿಕ ಕಾಲಚರವನ್ನಾಗಿ ಸ್ವೀಕರಿಸುತ್ತೇವೆ. ಎಲ್ಲ ಹೊಸ ನಿರ್ದೇಶಕಗಳೂ ಹಳೆಯ ನಿರ್ದೇಶಕಗಳ ಉತ್ಪನ್ನಗಳೆಂಬುದನ್ನು ಸ್ಮರಿಸಿದಲ್ಲಿ $\overline{t}$ ಕಾಲಚರ ಹಳೆಯ $t[\equiv q_n]$ ಕಾಲಚರವೊಂದನ್ನೇ ಅಲ್ಲದೆ ಇತರ ಎಲ್ಲ ಸ್ಥಾನ ನಿರ್ದೇಶಕ $q_k$ ಗಳನ್ನೂ (k=0,1,2, ಇತ್ಯಾದಿ) ಅವಲಂಬಿಸಬಹುದೆಂಬ ಅಂಶ ಸ್ಪಷ್ಟವಾಗುತ್ತದೆ. ಈಗ $B, A, \overline{A}$ ಎಂಬ ಮೂರು ದೃಢಕಾಯಗಳು ಒಂದು ಸಂವೃತ ವ್ಯವಸ್ಥೆಯನ್ನು ರೂಪಿಸುತ್ತವೆಂದೂ $A, \overline{A}$ ಕಾಯಗಳು ಗಿರಕಿರಹಿತವಾಗಿ ಒಂದೇ ಸರಳರೇಖೆಯಲ್ಲಿ ಚಲಿಸುತ್ತಿವೆಯೆಂದೂ ಭಾವಿಸುತ್ತೇವೆ. $A, \overline{A}$ ಗಳ ಮೇಲೆ ವಾಸವಾಗಿರುವ ವೀಕ್ಷಕರು B ಕಾಯದ ಸ್ಥಾನವನ್ನು ಗಮನಿಸಿ ಆ ಸ್ಥಾನದ ಆಧಾರದ ಮೇಲೆ ಅವರವರಿಗೆ ಸರಿಹೊಂದುವ ಆಂತರಿಕ ಕಾಲ $t, \overline{t}$ ಗಳನ್ನು ಲೆಕ್ಕ ಹಾಕಿಕೊಳ್ಳುತ್ತಾರೆ. $A, \overline{A}$ ಸರಳರೇಖೆಯ ಮೇಲೆ ಸಂಭವಿಸಬಹುದಾದ ಯಾವುದಾದರೊಂದು ಘಟನೆ (ಈವೆಂಟ್) A ವೀಕ್ಷಕನ ಅಳತೆಗಳ ಪ್ರಕಾರ A ಯಿಂದ $\overline{A}$ ದಿಕ್ಕಿಗೆ q ನಷ್ಟು ದೂರದಲ್ಲಿ t ವೇಳೆಯಲ್ಲೂ $\overline{A}$ ವೀಕ್ಷಕನ ಅಳತೆಗಳಂತೆ $\overline{A}$ ನಿಂದ A ದಿಕ್ಕಿಗೆ $\overline{q}$ ನಷ್ಟು ದೂರದಲ್ಲಿ $\overline{t}$ ವೇಳೆಯಲ್ಲೂ ಜರುಗುತ್ತದೆಂದು ಭಾವಿಸೋಣ ( $q, \overline{q}$ ಚಿಹ್ನೆಯುಕ್ತ). ಹೀಗಿದ್ದಲ್ಲಿ $\overline{q}$, $\overline{t}$ ಗಳನ್ನು $q, t$ ಗಳ ಒಂದಲ್ಲ ಒಂದು ಪರಿವರ್ತನೆಯ ಫಲಗಳೆಂದು ನಿರೀಕ್ಷಿಸಬಹುದು:

$$\overline{q} = \overline{f}_0(q,t); \qquad \overline{t} = \overline{f}_1(q,t)$$
$$\overline{q} = f_0(\overline{q},\overline{t}); \qquad t = f_1(\overline{q},\overline{t}) \quad .......[40]$$

$A$ ವೀಕ್ಷಕನ ಶೋಧನೆಗಳಂತೆ ಯಾವುದಾದರೂ $t_0, t_1$ ಕಾಲಗಳಲ್ಲಿ $A, \overline{A}$ ಕಾಯಗಳ $q$ ಅಳತೆಗಳು (ಇವೆರಡು ಕಾಯಗಳು ಗೋಚರಕ್ಕೆ ಬಂದಿದ್ದೇ ಈ ಸಂಬಂಧದಲ್ಲಿನ ಅನುರೂಪ ಘಟನೆಗಳು) ಅನುಕ್ರಮವಾಗಿ

$q_0 \equiv q_0(t_0) = AA \equiv 0; q_1 \equiv q_1(t_1) = A\overline{A}$ ಆಗಿರಲಿ. ಇದೇ ಪ್ರಕಾರ $\overline{A}$ ವೀಕ್ಷಕನ ಪ್ರಕಾರ $\overline{t}_0, \overline{t}_1$ ಕಾಲಗಳಲ್ಲಿ $A, \overline{A}$ ಕಾಯಗಳ ಅನುಕ್ರಮ $\overline{q}$ ಅಳತೆಗಳು

$$\overline{q}_0 \equiv \overline{q}_0(\overline{t}_0) = \overline{A}A \quad \equiv ; \overline{q}_1 \equiv \overline{q}_1(\overline{t}_1) = \overline{A}\overline{A} \equiv 0$$

ಆಗಿರುವುವು. ಇಂಥ ಸನ್ನಿವೇಶದಲ್ಲಿ $B, A, \overline{A}$ ಕಾಯ ಸಮುದಾಯವನ್ನು $q_0, q_1, \overline{t}$ ನಿರ್ದೇಶಕಗಳಿಂದಾಗಲಿ, ಪರ್ಯಾಯತಃ $\overline{q}_0, \overline{q}_1, \overline{t}$ ನಿರ್ದೇಶಕಗಳಿಂದಾಗಲಿ ( $t, \overline{t}$ ಗಳು ಉಗಮಿಸುವುದು $B$ ಕಾಯದ ವೀಕ್ಷಣೆಯಿಂದ ಎಂಬುದನ್ನು ಮರೆಯಲಾಗದು) ವರ್ಣಿತವಾಗುವ ಒಂದು ಸಂವೃತ ಚಲನವ್ಯವಸ್ಥೆಯೆಂದು ಪರಿಗಣಿಸಹುದು. ಇವುಗಳ ನಡುವಿನ ಪರಿವರ್ತನೆಗಳು [40] ಸಮೀಕರಣಗಳ ನಮೂನೆಯಂತೆ

$$\overline{q}_k = \overline{f}_0(q_k, t_k); \overline{t}_k = \overline{f}_1(q_k, t_k);$$
$$q_k = f_0(\overline{q}_k, \overline{t}_k); t_k = f_1(\overline{q}_k, \overline{t}_k), [k = 0,1]$$

ಎಂಬ ಸಂಬಂಧಗಳಿಗೆ ಅನುಗುಣವಾಗಿರುತ್ತವೆಂದು ಭಾವಿಸುತ್ತೇವೆ. ವ್ಯವಸ್ಥೆಯ ಚಲನ ಸಮೀಕರಣಗಳಾದರೋ [39] ಸಮೀಕರಣಗಳ ಮಾದರಿಯಲ್ಲಿ $A$ ವೀಕ್ಷಕನಿಗೆ ಅನುಗುಣವಾಗಿ

$$\frac{dq_0}{dq_0} \equiv 0; \frac{dq_1}{dq_1} = \alpha(q_0, q_1, q_2).....(41) \quad f_k, \overline{f}_k$$

ಆಗಿಯೂ $\overline{A}$ ವೀಕ್ಷಕನ ಪಾಲಿಗೆ

$$\frac{d\overline{q}_0}{d\overline{t}_0} \equiv \overline{\alpha}(\overline{q}_1, \overline{q}_0, \overline{t}_0); \; \frac{d\overline{q}_1}{dt_1} \equiv 0 \quad .......[42]$$

ಆಗಿಯೂ ಇರಬೇಕಾಗುವುದು. [40] ಸಮೀಕರಣಗಳಲ್ಲಿನ $f_k, \overline{f}_k$ ಉತ್ಪನ್ನಗಳೂ (k=0,1) [41], [42] ಸಮೀಕರಣಗಳಲ್ಲಿನ $\alpha, \overline{\alpha}$ ಉತ್ಪನ್ನಗಳೂ ಒಂದೇ ರೂಪದಲ್ಲಿರುವುದಾದರೆ ಚಲನೆಯ ನಿಸರ್ಗ ನಿಯಮಗಳನ್ನು ಅವ್ಯತ್ಯಸ್ತ ನಮೂನೆಯಲ್ಲಿ ಅಭಿವ್ಯಕ್ತಿಸಬಲ್ಲ ಒಂದೇ ಸ್ವರೂಪದ ದೂರಚರ $q, \overline{q}$ ಗಳನ್ನೂ ಕಾಲಚರ $t, \overline{t}$ ಗಳನ್ನೂ $A, \overline{A}$ ವೀಕ್ಷಕರೀರ್ವರೂ ಬಳಸಿಕೊಳ್ಳುತ್ತಿದ್ದಾರೆಂಬುದು ಖಚಿತಪಡುವುದು. ಈ ಪರಿಸ್ಥಿತಿಗೆ ಅವಶ್ಯವಾಗುವ ನಿಬಂಧನೆಗಳನ್ನು $f_k, \overline{f}_k$ ಗಳು ರೇಖೀಯ ಉತ್ಪನ್ನಗಳಾಗಿಯೂ (ಲೀನಿಯರ್ ಫಂಕ್ಷನ್) $\alpha, \overline{\alpha}$ ಗಳು ನಿಯತಾಂಕಗಳಾಗಿಯೂ ಇರುವ ವಿಶೇಷ ಪ್ರಸಂಗದಲ್ಲಿ ಸುಲಭವಾಗಿ ಕಂಡುಹಿಡಿಯಬಹುದು (ವಿಶೇಷ ಸಾಪೇಕ್ಷತಾ ಸಿದ್ಧಾಂತ):

$$\overline{q} = \overline{f}_o(q,t) = aq + bt; \overline{t} = \overline{f}_1(q,t) = a'q + b't$$

$$q = f_o(\overline{q}, \overline{t}) = \frac{b'q - b\overline{t}}{ab' - a'b}; t = f_1(\overline{q}, \overline{t}) = \frac{a\overline{t} - a'\overline{q}}{ab' - a'b} \qquad [43]$$

ಹಾಗೂ

$$\frac{dq_0}{dt_0} = \frac{d\bar{q}_1}{d\bar{t}_1} = 0; \frac{dq_1}{dt_1} = \frac{d\bar{q}_0}{d\bar{t}_0} = v$$

($a,b,a',b',v$ ನಿಯತಾಂಕಗಳು). $f_k, \bar{f}_k$ ಉತ್ಪನ್ನಗಳಿಗೆ ಅವ್ಯತ್ಯಸ್ತ ರೂಪವಿರಲು $b'=-a$ ಹಾಗೂ $a'=-(a^2-1)/b$ ಆಗಬೇಕೆಂದು ಮೊದಲ ನಾಲ್ಕು ಸಂಬಂಧಗಳಿಂದ ಗೊತ್ತಾಗುತ್ತದೆ. ಅಲ್ಲದೆ $\bar{q}_0 = aq_0 + bt_0$, $\bar{t}_0 = a'q_0 + b't_0$ ಸಮೀಕರಣಗಳ ಅವಕಲನದಿಂದ

$$V = d\bar{q}_0 / d\bar{t}_0 = [a(dq_0/dt_0)+b]/[a'(dq_0/dt_0)b'] = b/b' /$$

ಅಥವಾ $b=b'v$ ಎಂದಾಗುವುದು. ತತ್ಫಲವಾಗಿ

$b = -av;\ a' = (a^2-1)/av;\ b' = -a$ …………[44]

ಅಲ್ಲಿಗೆ ಮೇಲಿನ ಪರಿವರ್ತನ ಸಮೀಕರಣಗಳಲ್ಲಿ ಒಂದೇ ಒಂದು ಗುಣಾಂಕ (a) ಅಜ್ಞಾತವಾಗಿ ಉಳಿದುಕೊಂಡಂತಾಯಿತು. a ನಿಯತಾಂಕಕ್ಕೆ ಯಾವ ಬೆಲೆಯನ್ನು ಕೊಟ್ಟರೂ $A, \bar{A}$ ವೀಕ್ಷಕರು ಆವಿಷ್ಕರಿಸುವ ಅನ್ಯೋನ್ಯ ಚಲನ ಸಮೀಕರಣಗಳು ಒಂದೇ ಸ್ಥಿರ ನಮೂನೆಯಲ್ಲಿ ಇರುತ್ತವೆ. ಅಭಿಜಾತ ಬಲವಿಜ್ಞಾನದಲ್ಲಿ $a=-1$ ಎಂಬ ಬೆಲೆಯನ್ನು ಅಂಗೀಕರಿಸಿ $b = v,\ a' = 0,\ b' = 1,\ \bar{q} = bt - q, \bar{t} = t$ ಆಗುವಂತೆ ಏರ್ಪಡಿಸಲಾಗಿದೆ (ಕೊನೆಯ ಎರಡು ಸೂತ್ರಗಳಿಗೆ ಗೆಲಿಲಿಯನ್ ಪರಿವರ್ತನ ಸೂತ್ರಗಳೆಂದು ಹೆಸರು). ಸಾಪೇಕ್ಷತಾ ಸಿದ್ಧಾಂತದಲ್ಲಾದರೋ a ಬೆಲೆಯನ್ನು ನಿಷ್ಕರ್ಷಿಸಲು ಅಭಿಜಾತ ಬಲವಿಜ್ಞಾನದಲ್ಲೆಲ್ಲೂ ಕಂಡುಬಾರದ ಒಂದು ಹೊಸ ತತ್ತ್ವವನ್ನೇ ಬಳಸಿಕೊಳ್ಳಬೇಕಾಗುತ್ತದೆ. ಪ್ರಸಿದ್ಧ ಮೈಕೆಲ್‌ಸನ್–ಮಾರ್ಲೆ ಪ್ರಯೋಗದಿಂದ (1881) ನಿಸ್ಸಂದಿಗ್ಧವಾಗಿ ಶ್ರುತಪಟ್ಟ ಬೆಳಕಿನ ವೇಗದ ಅವ್ಯತ್ಯಸ್ತತೆಯೇ ಈ ಹೊಸ ತತ್ತ್ವ. ಇದರ ಮೇರೆಗೆ ನಿರ್ವಾತದಲ್ಲಿ ಬೆಳಕಿನ ವೇಗವನ್ನು $A, \bar{A}$ ವೀಕ್ಷಕರ ಪೈಕಿ ಯಾರೇ ಅಳೆದರೂ ಒಂದೇ ಬೆಲೆ ಲಭ್ಯವಾಗಬೇಕು. ಆ ಬೆಲೆಯನ್ನು c ಪ್ರತೀಕದಿಂದ ಸೂಚಿಸಿದರೆ A ಯ ನಿರ್ದೇಶಕಗಳಲ್ಲಿ ಬೆಳಕು $dq=c\,dt$ ಅವಕಲ ಸಮೀಕರಣಕ್ಕೆ ಅನುಸಾರವಾಗಿ $\bar{A}$ ದಿಕ್ಕಿಗೆ ಪ್ರವಹಿಸುತ್ತದೆ. $\bar{A}$ ವೀಕ್ಷಕನ ಅಳತೆಗಳು ವಿರುದ್ಧವಾದ A ದಿಕ್ಕಿನಲ್ಲಿರುವುದರಿಂದ ಇದೇ ಬೆಳಕಿನ ಪ್ರವಹನ $\bar{A}$ ವೀಕ್ಷಕನ ನಿರ್ದೇಶಕಗಳಲ್ಲಿ $d\bar{q} = -cd\bar{t}$ ಎಂಬ ಸಮೀಕರಣದಿಂದ ಅಭಿವ್ಯಕ್ತವಾಗುವುದು. $d\bar{q} = -cd\bar{t}$ ನ್ನು [43] ಸಮೀಕರಣಗಳ ಪ್ರಕಾರ ಪರಿವರ್ತಿಸಿ dq, dt ಗಳಲ್ಲಿ ಅಭಿವ್ಯಕ್ತಿಸಿದಾಗ ಅದು $(a + ca')dq = -(b + cb')dt$ ಎಂಬ ರೂಪವನ್ನು ತಾಳುತ್ತದೆ; ಇದನ್ನು dq=cdt ಯೊಂದಿಗೆ ಹೋಲಿಸಿದರೆ

$$a = \pm 1/\sqrt{1-(v^2/c^2)} \qquad ……..[45]$$

ಎಂದು ಸಿದ್ಧಪಡುವುದು. ಅಂತಿಮವಾಗಿ [45], [44] ಸಮೀಕರಣಗಳಿಂದ ಲಭ್ಯವಾಗುವ a, b, a′, b′ ಗುಣಾಂಕಗಳ ಬೆಲೆಗಳನ್ನು [43] ಪರಿವರ್ತನ ಸಮೀಕರಣಗಳಲ್ಲಿ ಆದೇಶಿಸಿದರೆ

$$\bar{q} = \frac{vt - q}{\sqrt{1-\frac{v^2}{c^2}}}; \qquad \bar{t} = \frac{t - vq/c^2}{\sqrt{1-\frac{v^2}{c^2}}}$$

$$q = \frac{v\bar{t} - \bar{q}}{\sqrt{1-\frac{v^2}{c^2}}}; \qquad t = \frac{\bar{t} - v\bar{q}/c^2}{\sqrt{1-\frac{v^2}{c^2}}} \qquad [46]$$

ಎಂಬ ಗಮನಾರ್ಹ ಸೂತ್ರಗಳು ಫಲಿಸುತ್ತವೆ. $q, \bar{q}$ ಅಳತೆಗಳು ವಿರುದ್ಧ ದಿಶೆಯಲ್ಲಿರುವುದರಿಂದ ಬೆಲೆಗಳನ್ನು ಆದೇಶಿಸುವಾಗ [45] ಸಮೀಕರಣದಲ್ಲಿ ಋಣ ಚಿಹ್ನೆಯನ್ನು ಆಯ್ಕೆ ಮಾಡಿಕೊಂಡಿದ್ದೇವೆ. [46] ಸೂತ್ರಗಳಿಗೆ ಲೊರೆನ್ಸ್ ಪರಿವರ್ತನ ಸೂತ್ರಗಳು ಎಂದು ಹೆಸರು. ಆಗಲೇ ಸೂಚನೆ ನೀಡಿರುವಂತೆ ಘಟನೆಗಳ ಬಗ್ಗೆ $A, \bar{A}$ ವೀಕ್ಷಕರು ಅಳತೆ ಮಾಡುವ ಕಾಲಗಳೂ ದೂರಗಳೂ ಈ ಸೂತ್ರಗಳೊಳಗೆ ಪ್ರತ್ಯೇಕಿಸಲು ಸಾಧ್ಯವಾಗದ ರೀತಿಯಲ್ಲಿ ಮಿಶ್ರವಾಗಿ ಹೋಗಿವೆ. ಆದರೆ ಕಾಲ ಕೂಡ ಕಾಯಗಳನ್ನು ಕುರಿತ ಒಂದು ಸ್ಥಾನನಿರ್ದೇಶಕ ಎಂಬ ಅಂಶವನ್ನು ನೆನೆದಾಗ ಇಂಥ ವಿದ್ಯಮಾನ ಅಸ್ವಾಭಾವಿಕವೆನಿಸಲಾರದು.

$dq_1/dt_1 = d\bar{q}_0/d\bar{t}_0 = v$ ಎಂಬ ಚಲನ ಸಮೀಕರಣಗಳಲ್ಲಿನ $v$ ನಿಯತಾಂಕ $A, \bar{A}$ ಕಾಯಗಳ ಪರಸ್ಪರ ಸಾಪೇಕ್ಷ ವೇಗವನ್ನು ಸೂಚಿಸುತ್ತದೆ. ಬೆಳಕಿನ ವೇಗ c ಗೆ ಹೋಲಿಸಿದಾಗ $A, \bar{A}$ ಕಾಯಗಳ ಈ v ವೇಗ ತೀರ ಅಲ್ಪವಾಗಿರುವ ಪ್ರಸಂಗಗಳಲ್ಲಿ ಸರಿಸುಮಾರಾಗಿ $v/c=0$ ಎಂದು ಬರೆಯಬಹುದು. ತತ್ಫಲವಾಗಿ ಇಂಥ ಸಂದರ್ಭಗಳಲ್ಲಿ ಹೆಚ್ಚು ಕಡಿಮೆ $a=-1$ ಹಾಗು $\bar{t} = t$ ಆಗಿ ಪರಿಣಮಿಸಿ ಅಭಿಜಾತ ಬಲವಿಜ್ಞಾನದ ದೋಷ ಮುಚ್ಚಿಹೋಗುವುದು. ಬೆಳಕಿನ ವೇಗಕ್ಕೆ ಹೋಲಿಸಬಲ್ಲ ವೇಗಗಳಿಂದ ಕಾಯಗಳು ಚಲಿಸುವ ಸನ್ನಿವೇಶಗಳಲ್ಲಾದರೂ $t, \bar{t}$ ಕಾಲಚರಗಳ ಅಸಮತೆಯ ಪರಿಣಾಮಗಳು ಉಲ್ಬಣಿಸಿ ಅಭಿಜಾತ ಶಾಸ್ತ್ರ ನಿಷ್ಪ್ರಯೋಜಕವಾಗುತ್ತದೆ. ಅಲ್ಲಿಗೆ ಮಂದಗಾಮಿ ಚಲನೆಗಳನ್ನು ಕುರಿತ ವಿವೇಚನೆಗೆ ಅಭಿಜಾತ ಬಲವಿಜ್ಞಾನ ಸಾಕು, ಕ್ಷಿಪ್ರಗಾಮಿ ಚಲನೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಸಾಪೇಕ್ಷತಾ ಸಿದ್ಧಾಂತವೇ ಬೇಕು ಎಂದಾಯಿತು. ಈಗ

$$ds^2 = c^2\,dt^2 - dq^2$$

$$d\bar{s}^2 = c^2\,d\bar{t}^2 - d\bar{q}^2$$

ಎಂಬ ಸಮೀಕರಣಗಳಿಂದ ds ಹಾಗೂ $d\bar{s}$ ಪರಿಮಾಣಗಳನ್ನು ವ್ಯಾಖ್ಯಿಸಿದರೆ ಯಾವುದೇ ಲೊರೆನ್ಸ್ ಪರಿವರ್ತನೆಯ ಫಲವಾಗಿ $ds = d\bar{s}$ ಎಂಬ ಅವ್ಯತ್ಯಸ್ತತೆ ಏರ್ಪಡುತ್ತದೆ. ಈ ಅವ್ಯತ್ಯಸ್ತತೆಯನ್ನು ಉಪಯೋಗಿಸಿಕೊಂಡು ವಿಶೇಷ ಸಾಪೇಕ್ಷತಾ ಸಿದ್ಧಾಂತದಲ್ಲಿ ಕಾಯಗಳ ಚಲನೆಗಳನ್ನು ವರ್ಣಿಸಲು $dt \neq d\bar{t}$ ಕಾಲಾವಧಿಗಳಿಗೆ ಬದಲಾಗಿ $ds = d\bar{s}$ ಮಿಶ್ರಾವಧಿಯನ್ನು ಬಳಸಿಕೊಂಡು ಲೊರೆನ್ಸ್ ಪರಿವರ್ತನೆಗಳಿಂದ ರೂಪ ವ್ಯತ್ಯಾಸವಾಗದ ಅವಕಲ ಸಮೀಕರಣಗಳನ್ನು ರಚಿಸಲಾಗುವುದು. $A, \bar{A}$ ಕಾಯಗಳನ್ನು ಭೌತ ಪ್ರಯೋಗಾಲಯಗಳೆಂದು ಪರಿಗಣಿಸುವುದಾದರೆ ವಿಶೇಷ ಸಾಪೇಕ್ಷತಾ ಸಿದ್ಧಾಂತದ ಚಲನ ಸಮೀಕರಣಗಳು ಇಂಥ ಪ್ರಯೋಗಾಲಯಗಳ ಮೂಲ ಚಲನವೈಖರಿಯನ್ನು ಗಣನೀಯವಾಗಿ ಕದಲಿಸದೆ ಚಲಿಸಬಲ್ಲ ಕಿರಿದಾದ ಕಾಯಗಳಿಗೆ (ಅವುಗಳ ವೇಗ ಎಷ್ಟೇ ಅಧಿಕವಿರಲಿ) ಅನ್ವಯಿಸುತ್ತವೆ. ವಿಶೇಷ ಸಾಪೇಕ್ಷತಾ ಸಿದ್ಧಾಂತದ ಚಲನ ಸಮೀಕರಣಗಳ ವಿಶ್ಲೇಷಣೆಯಿಂದ ಯಾವುದೇ ಕಾಯದ ದ್ರವ್ಯರಾಶಿ ಅದರ ಶಕ್ತಿಯ ಪ್ರತೀಕವೆಂದೂ $m$ ಪರಿಮಾಣದಷ್ಟು ದ್ರವ್ಯರಾಶಿಗೆ $mc^2$ ಪರಿಮಾಣದಷ್ಟು ಶಕ್ತಿಯನ್ನು ಆರೋಪಿಸಬಹುದೆಂದೂ ಕಾಯಗಳ ವೇಗವರ್ಧನೆಯಿಂದ ಶಕ್ತಿವರ್ಧನೆಯೂ ಆಗಿ ಅವುಗಳ ದ್ರವ್ಯರಾಶಿ ಏರುತ್ತ ಹೋಗುವುದೆಂದೂ ತರ್ಕಿಸಲು ಸಾಧ್ಯವಾಗುವುದು. ಈ ದ್ರವ್ಯರಾಶಿಗಳೆಲ್ಲಕ್ಕೂ ಪ್ರಾಯೋಗಿಕ ಸಮರ್ಥನೆ ದೊರಕಿದೆ. ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದಲ್ಲಿ $dq_1/dt_1=v$ ಯಂಥ ಸಮೀಕರಣಗಳಿಂದ ವ್ಯಕ್ತಪಡುವ $A, \bar{A}$ ಪ್ರಯೋಗಾಲಯಗಳ ಚಲನೆ ಇತರ ಕಾಯಗಳ ಚಲನೆಗಳಿಂದ ಕದಲಬಾರದೆಂಬ ನಿಬಂಧನೆಯನ್ನು ಸಹ ವರ್ಜಿಸಲಾಗುವುದು. ಆಗ $A,\bar{A}$ ಗಳ ಸಾಪೇಕ್ಷ ವೇಗ $v$ ನಿಯತವಾಗಿರಬೇಕಾಗಿಲ್ಲ, ಹಾಗೂ $A,\bar{A}$ ಗಳು ಗಿರಕಿಸಹಿತವಾಗಿ ವಕ್ರಪಥಗಳಲ್ಲಿ ಚಲಿಸಬಹುದು. ಈ ಬಗೆಯ ಸಾರ್ವತ್ರೀಕೃತ ವಿಶ್ಲೇಷಣೆ $A, \bar{A}$ ಗಳಂಥ ಬೇರೆ ಬೇರೆ ಚರ ಪ್ರಯೋಗಾಲಯಗಳಿಗೆ ಅನುರೂಪವಾದ ನಿರ್ದೇಶಕಗಳನ್ನು ಕುರಿತ ಪರಿವರ್ತನೆಗಳಿಗೂ ಗುರುತ್ವಕ್ಷೇತ್ರಗಳಿಗೂ ನಿಕಟ ಸಂಬಂಧವಿರುವ ಅಂಶವನ್ನು ಬೆಳಕಿಗೆ ತಂದು ಕೊಟ್ಟಿತು. ಎಂತಲೇ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ಗುರುತ್ವ ಕ್ಷೇತ್ರಗಳ ಸಿದ್ಧಾಂತವೂ ಹೌದು. ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದ ಮೇರೆಗೆ ಸೂರ್ಯನ ಸುತ್ತ ಗ್ರಹಗಳ ಚಲನೆಯನ್ನು ನಿಷ್ಕರ್ಷಿಸುವುದರಿಂದ ಲಭಿಸುವ ಗ್ರಹಕಕ್ಷೆಗಳು (ಪ್ಲಾನೆಟರಿ ಆರ್ಬಿಟ್ಸ್) ಸರಳ ನ್ಯೂಟನ್ ಸಿದ್ಧಾಂತ ಸೂಚಿಸಿದ್ದ ಕಕ್ಷೆಗಳಿಂದ ಹೆಚ್ಚೇನೂ ಭಿನ್ನವಾಗುವುದಿಲ್ಲ. ಆದರೆ ನ್ಯೂಟನ್ ಸಿದ್ಧಾಂತದಿಂದ ಪೂರ್ಣ ಪ್ರಮಾಣದಲ್ಲಿ ವಿವರಿಸಲು ಸಾಧ್ಯವಾಗದೆ ಹೋಗಿದ್ದ ಬುಧ ಗ್ರಹಕಕ್ಷೆಯ ನೀಚ ಬಿಂದುವಿನ ಮುನ್ಸರಿಯುವಿಕೆಯನ್ನು (ಅಡ್ವಾನ್ಸ್ ಆಫ್ ಪೆರಿಹಿಲಿಯನ್) ಸಾಪೇಕ್ಷತಾ ಗುರುತ್ವ ಸಿದ್ಧಾಂತದ ನೆರವಿನಿಂದ ನಿಖರವಾಗಿ

ಲೆಕ್ಕಹಾಕಲು ಶಕ್ಯವಾಗಿದೆ. ಸಾಪೇಕ್ಷತಾ ಗುರುತ್ವ ಸಿದ್ಧಾಂತದ ಸ್ಫೂರ್ತಿಯಿಂದ ಆವಿಷ್ಕೃತವಾದ ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಸೂರ್ಯನಂಥ ಬೃಹತ್ಕಾಯಗಳ ಸನಿಹದಲ್ಲಿ ಹಾದು ಹೋಗುವಾಗ ಬೆಳಕಿನ ಕಿರಣಗಳ ವೇಗ ತುಸು ತಗ್ಗಿ ಅವು ವಕ್ರೀಭವನಕ್ಕೆ ಗುರಿಯಾಗುತ್ತವೆಂಬುದು. ಪೂರ್ಣ ಸೂರ್ಯಗ್ರಹಣದ ಸಮಯದಲ್ಲಿ ಸೂರ್ಯಬಿಂಬದ ಅಂಚಿನ ಬಳಿ ವೀಕ್ಷಿಸಬಹುದಾದ ನಕ್ಷತ್ರಸ್ಥಾನಗಳ ಅಳತೆಗಳಿಂದ ಈ ಪರಿಣಾಮವನ್ನು ಸಹ ಸಮರ್ಪಕವಾಗಿ ತಾಳೆ ನೋಡಲಾಗಿದೆ. (ಎಸ್.ಆರ್.ಎಂ.)

**ಚಲನೆಯ ನರಳಿಕೆ :** ಪ್ರವಾಸ ಕಾಲದಲ್ಲಿ ಬಹುಜನರಲ್ಲಿ ತೋರಿ ಬರಬಹುದಾದ ದೈಹಿಕ ಸಂಕಟ (ಮೋಷನ್ ಸಿಕ್‌ನೆಸ್), ಹಡಗು, ವಿಮಾನ, ಮೋಟಾರು ಇಲ್ಲವೆ ರೈಲಿನಲ್ಲಿ ಕುಳಿತು ಚಲಿಸುವ ಸಂದರ್ಭದಲ್ಲಿ, ನೇರ ಇಲ್ಲವೇ ವಕ್ರಗತಿಯಲ್ಲಿ ವೇಗವರ್ಧನೆ ನಡೆಯುತ್ತಿರುವಾಗ, ಒಳಗಿವಿಯ ಪಡಸಾಲೆಯೊಳಗಿರುವ (ವೆಸ್ಟಿಬ್ಯೂಲ್) ಅರ್ಧವೃತ್ತ ನಾಳಗಳಲ್ಲಿನ ಗ್ರಾಹಕಗಳ ಮೇಲೆ ಅದರ ಪರಿಣಾಮವಾಗಿ ಅವು ಉದ್ದೀಪನಗೊಳ್ಳುತ್ತವೆ. ಪದೇ ಪದೇ ಉರುಳುವ, ತಿರುಗುವ ಇಲ್ಲವೇ ಮೇಲೆ ಕೆಳಗೆ ಉಂಟಾಗುವ ಚಲನೆ ಇದಕ್ಕೆ ಬಹುಮುಖ್ಯ ಕಾರಣ. ಉಯ್ಯಾಲೆಯಾಡುವುದು, ಅಪ್ಪಾಲೆತಿಪ್ಪಾಲೆ ತಿರುಗುವುದು, ಜಾತ್ರೆ ವಸ್ತು ಪ್ರದರ್ಶನಗಳಲ್ಲಿ ಸಾಮಾನ್ಯವಾಗಿರುವ ರಂಕರಾಟಣಗಳಲ್ಲಿ ಕುಳಿತು ಚಲಿಸುವುದು ಇಂಥ ಸಂದರ್ಭಗಳಲ್ಲೂ ಇದು ಕಂಡುಬರುತ್ತದೆ.

ಕಿವುಡ–ಮೂಗರಿಗೂ ಕಿವಿಯ ಪಡಸಾಲೆ ನಾಶ ಮಾಡಲ್ಪಟ್ಟವರಿಗೂ ಈ ರೋಗ ಬರಲಾರದು. ತೀರ ಎಳೆಯರು ಮತ್ತು ವೃದ್ಧರು ಚಲನೆಯ ನರಳಿಕೆಯನ್ನು ಅಷ್ಟಾಗಿ ಅನುಭವಿಸುವುದಿಲ್ಲ. ತೀವ್ರತರನಾದ ಅರೆತಲೆನೋವಿರುವವರು ಈ ನರಳಿಕೆಯನ್ನು ಪ್ರವಾಸ ಆರಂಭವಾಗುತ್ತಿದ್ದಂತೆಯೇ ಅನುಭವಿಸತೊಡಗುವರು. ಅದರ ಬಗ್ಗೆ ಇರುವ ಭೀತಿ ನರಳಿಕೆಯನ್ನು ಮತ್ತಷ್ಟು ಹೆಚ್ಚಿಸುವುದು.

ಚಲನೆ ಪ್ರಾರಂಭವಾದ ಕೆಲವೇ ಮಿನಿಟುಗಳಲ್ಲಿ ಇಲ್ಲವೆ ಗಂಟೆಗಳಲ್ಲಿ ನರಳಿಕೆಯ ಲಕ್ಷಣಗಳು ತಲೆದೋರಿ ತೀವ್ರತೆ ಏರಿ ವ್ಯಕ್ತಿ ಬಿಳಿಚಿಕೊಂಡು ಬೆವರುತ್ತಾನೆ. ವಿಪರೀತ ಜೊಲ್ಲು ಬರುತ್ತ ಮೇಲೆ ಅದನ್ನು ನುಂಗುತ್ತ ಓಕರಿಕೆ ಉಂಟಾಗಿ ತಡೆಯುವುದಕ್ಕಾಗದೆ ಅವನಿಗೆ ಪದೇ ಪದೇ ವಾಂತಿ ಬಂದಂತಾಗುವುದು. ವಾಂತಿ ಮಾಡಲೂಬಹುದು. ವಿಪರೀತ ತಲೆ ಸುತ್ತುವಿಕೆ ತಲೆದೋರಿ ಮಂಪರು ಕವಿಯುವುದು, ತಲೆನೋವು ಕೂಡ ಬರುವುದು. ನರಳಿಕೆಯಲ್ಲಿ ಕಾಣಿಸಿಕೊಳ್ಳುವ ಓಕರಿಕೆ ಮತ್ತು ವಾಂತಿ ಕೆಲವು ಗಂಟೆಗಳವರೆಗೆ ಸಾಮಾನ್ಯವಾಗಿ ಇರಬಲ್ಲದು. ಸಮುದ್ರಯಾನದಲ್ಲಿ ಅದು ಕೆಲವು ದಿವಸಗಳವರೆಗೆ ಕೂಡ ಉಳಿಯಬಲ್ಲದು. ಚಲನೆಯ ತೀವ್ರತೆ ಮತ್ತು ಕಾಲಾವಧಿಯನ್ನು ಅವಲಂಬಿಸಿ ಗುಣಲಕ್ಷಣಗಳು ತೋರಿಬರುತ್ತವೆ. ಈ ತೊಡಕಿನಿಂದ ಬಳಲುವಾತ ಕ್ರಮೇಣ ಚಲನೆಗೆ ಹೊಂದಿ ಕೊಳ್ಳುವುದುಂಟು. ಚಲನೆಯ ನಿಲುಗಡೆಯಾದಾಗ ರೋಗಲಕ್ಷಣಗಳು ಮಾಯವಾಗುವುವು.

ಈ ನರಳಿಕೆಯನ್ನು ಅನುಭವಿಸುವವರು ಪ್ರವಾಸವನ್ನು ಕೈಕೊಳ್ಳುವ ಮುನ್ನ ಹೆಚ್ಚು ಆಹಾರ ಮತ್ತು ಪಾನೀಯಗಳನ್ನು ಸೇವಿಸಬಾರದು. ಪ್ರವಾಸಕಾಲದಲ್ಲಿ ವೇದನೆ ಬರಬಹುದೆಂದು ತೋರಿಬಂದರೆ ತಲೆಯನ್ನು ದಿಂಬಿಗಾನಿಸಿ ಕಣ್ಣು ಮುಚ್ಚಬಹುದು; ಇಲ್ಲವೆ ಮಲಗಿಕೊಂಡು ವಾಂತಿಯನ್ನು ತಡೆಗಟ್ಟಬಹುದು; ಅಥವಾ ದೂರದ ವಸ್ತುವಿನತ್ತ ದೃಷ್ಟಿಯನ್ನು ಕೇಂದ್ರೀಕರಿಸುವುದರಿಂದ ಇಲ್ಲವೇ ತಂಗಾಳಿಗೆ ಮುಖ ತಿರುಗಿಸಿ ಉಸಿರಾಡುವುದರಿಂದ ಬಳಲಿಕೆ ಕಡಿಮೆ ಮಾಡಿಕೊಳ್ಳಬಹುದು. ನಿಂಬೆಯ ಹಣ್ಣನ್ನು ಮೂಸುವುದರಿಂದ, ಅದರ ರಸವನ್ನು ನೇರ ನಾಲಗೆಯ ಮೇಲೆ ಬಿಟ್ಟುಕೊಳ್ಳುವುದರಿಂದ ಓಕರಿಕೆ, ವಾಂತಿ ಬಹಳಷ್ಟು ಕಡಿಮೆಯಾಗುತ್ತದೆ. ಸ್ಕೋಪಾಲಮೀನ್ ಇಲ್ಲವೆ ಹಿಸ್ಟಮಿನ್ ರೋಧಕ ಔಷಧಿಗಳನ್ನು ಪ್ರವಾಸದ ಅರ್ಧ ಗಂಟೆಯ ಮೊದಲು ಇಲ್ಲವೆ ದೀರ್ಘಾವಧಿ ಪ್ರವಾಸ ಕಾಲದಲ್ಲಿ ಆಗಾಗ್ಗೆ ಸೇವಿಸಿ ಚಲನೆಯ ನರಳಿಕೆಯನ್ನು ತಡೆಗಟ್ಟಬಹುದು. ಹೈಯೊಸೀನ್, ಡಿ–ಆಂಫೆಟಮಿನ್, ಮೆಕ್ಲಿಜಿನ್, ಸೈಕ್ಲಿಜಿನ್, ಡೈಮೆನ್ ಹೈಡ್ರಿನೇಟ್, ಸಿನಾರಿಜಿನ್, ಪ್ರೊಮೆಥಜಿನ್ ಮುಂತಾದ ಗುಳಿಗೆಗಳು ನರಳಿಕೆಯನ್ನು ಹೆಚ್ಚು ಜನರಲ್ಲಿ ತಡೆಗಟ್ಟಲು ಸಹಾಯಕವಾಗಿವೆ. (ಪಿ.ಎಸ್.ಎಸ್.)

**ಚಲುವೆ ಕ್ರಿಯೆ :** ಹತ್ತಿ, ಉಣ್ಣೆ ಅವುಗಳಿಂದ ತೆಗೆದ ನೂಲುಗಳು ಮತ್ತು ತಯಾರಿಸಿದ ಬಟ್ಟೆಗಳ ಸಹಜ ಕಂದು, ಕಪ್ಪು, ಹಳದಿ ಮುಂತಾದ ಬಣ್ಣಗಳನ್ನು ಹೋಗಲಾಡಿಸಲು ರಾಸಾಯನಿಕಗಳ ಉಪಯೋಗದಿಂದ ಮಾಡುವ ಕ್ರಿಯೆ (ಬ್ಲೀಚಿಂಗ್). ಹೀಗೆ ಬಿಳಿಚಿಸಿದ ಬಳಿಕ ಅವುಗಳಿಗೆ ಆಕರ್ಷಕ ಬಣ್ಣಗಳನ್ನು ಕೊಡುತ್ತಾರೆ. ಹತ್ತಿ ನೂಲು ಮತ್ತು ಉಣ್ಣೆ ನೂಲುಗಳನ್ನು ಚಲುವೆ ಮಾಡುವ ಕ್ರಮಗಳು ಭಿನ್ನವಾಗಿವೆ.

ಹತ್ತಿ ನೂಲುಗಳು : ಹತ್ತಿಯಲ್ಲಿ ಶೇ. 6 – ಶೇ 11 ಭಾಗ ಕಶ್ಮಲ ಉಂಟು. ಇದರಲ್ಲಿ ಸಸಾರಜನಕ ಪದಾರ್ಥ, ಲವಣಗಳು, ಮೇಣಗಳು, ರಾಳ ಪದಾರ್ಥಗಳು ಮತ್ತು ಬಣ್ಣಗಳಿರುವುವು. ಕೆಲವನ್ನು ನೀರಿನಲ್ಲಿ ನೆನೆಸಿ ತೆಗೆಯಬಹುದು. ಕೆಲವನ್ನು ಕ್ಷಾರದ್ರವದಲ್ಲಿ ಕುದಿಸಿ ಮತ್ತೆ ಕೆಲವನ್ನು ಆಮ್ಲಗಳನ್ನು ಬಳಸಿ ತೆಗೆಯಬಹುದು. ಮೇಣಗಳನ್ನು ತೆಗೆಯುವುದು ಎಲ್ಲಕ್ಕಿಂತ ಕಷ್ಟವಾದುದು. ಕ್ಷಾರದಲ್ಲಿ ಪುನಃ ಪುನಃ ಕದಡಿ ಇವನ್ನು ತೆಗೆಯಬೇಕು. ಚಲುವೆ ಮಾಡುವ ಮೊದಲು ಮೇಲೆ ತಿಳಿಸಿದ ಸ್ಕೋರಿಂಗನ್ನು (ಅಂದರೆ ತೊಳೆಯುವ ಕ್ರಮಗಳನ್ನು) ಅನುಸರಿಸಬೇಕಾಗುತ್ತದೆ. ನೂಲನ್ನು ಮೊದಲು ನೀರಿನಲ್ಲಿ ಕುದಿಸಿ, ತೊಳೆದು ಪುನಃ ಸಾರರಿಕ್ತ ಆಮ್ಲ ದ್ರಾವಣದಲ್ಲಿ ಸಂಸ್ಕರಿಸಿ, ತೊಳೆದು ಮತ್ತೆ ಬಿಸಿ ಕ್ಷಾರದ್ರವದಲ್ಲಿ ನೆನೆಸಬೇಕು. ಕ್ಷಾರದ್ರವವನ್ನು ವಾಯುಸಂಪರ್ಕರಹಿತವಾಗಿ ನೂಲಿನ ಮೂಲಕ ಪುನಃಪುನಃ ಹಾಯಿಸಲಾಗುತ್ತದೆ. ವಾಯು ಬೆರೆತರೆ ಅಲ್ಲಿ ಆಕ್ಸಿಸೆಲ್ಯುಲೋಸ್ ಎಂಬ ಅನಪೇಕ್ಷಿತ ಪದಾರ್ಥ ಉಂಟಾಗುತ್ತದೆ. ಕಾದ ಲೋಹದ ಸಂಪರ್ಕವಾದರೆ ಬಟ್ಟೆಯಲ್ಲಿ ಇಲ್ಲವೇ ನೂಲಿನಲ್ಲಿ ಕಪ್ಪು ಸುಟ್ಟ ಕಲೆಗಳಾಗುತ್ತವೆ. ಈ ಸಂಸ್ಕಾರವಾದ ಬಳಿಕ ಪದಾರ್ಥವನ್ನು ಶುದ್ಧವಾಗಿ ತೊಳೆದಿಡಬೇಕು.

ಹೈಪೊಕ್ಲೋರೈಟ್ ವಿಧಾನದಿಂದ ಚಲುವೆ ಕ್ರಿಯೆ: ಹತ್ತಿ ನೂಲನ್ನು ಬಿಳುಪು ಮಾಡಲು ಈ ವಿಧಾನವನ್ನು ಎಲ್ಲ ಕಡೆ ಉಪಯೋಗಿಸುತ್ತಾರೆ. ಕ್ಯಾಲ್ಸಿಯಮ್ ಅಥವಾ ಸೋಡಿಯಮ್ ಹೈಪೊಕ್ಲೋರೈಟ್ ಇದಕ್ಕಾಗಿ ಉಪಯೋಗಿಸುವ ಮುಖ್ಯ ರಾಸಾಯನಿಕಗಳು. ಕ್ಲೋರಿನ್ ಅನಿಲವನ್ನು ಸುಣ್ಣದ ತಿಳಿಯಲ್ಲಿ ಹಾಯಿಸುವುದರಿಂದ ಕ್ಯಾಲ್ಸಿಯಮ್ ಹೈಪೊಕ್ಲೋರೈಟ್ ಬರುತ್ತದೆ. ಹೆಚ್ಚು ಸುಣ್ಣ ಇದ್ದರೆ ಅದು ಕ್ಲೋರೈಟ್ ಪದಾರ್ಥ ಪುನಃ ವಿಭಜನೆಗೊಳ್ಳುವುದನ್ನು ತಡೆಯುತ್ತದೆ. ಹೈಪೊಕ್ಲೋರೈಟ್ ಪದಾರ್ಥವನ್ನು ನೀರಿನಲ್ಲಿ ಕದಡಿದಾಗ ಸುಣ್ಣಗಷ್ಟಿನಂತೆ ತಳದಲ್ಲಿ ನಿಲ್ಲುವುದು. ಮೇಲಿನ ತಿಳಿಯಲ್ಲಿ ಕ್ಯಾಲ್ಸಿಯಮ್ ಹೈಪೊಕ್ಲೋರೈಟ್ ವಿಲೀನವಾಗಿರುತ್ತದೆ. ಇದನ್ನು ಚಲುವೆ ಮಾಡಲು ಹಾಗೆಯೇ ಉಪಯೋಗಿಸಬಹುದು. ಅಥವಾ ಸೋಡವನ್ನು ಸೋಡಿಯಮ್ ಕಾರ್ಬೊನೇಟ್ ಬೆರೆಸಿ ಉಪಯೋಗಿಸಬಹುದು. ಸೋಡವನ್ನು ಬೆರೆಸಿದಾಗ ಸೋಡಿಯಮ್ ಹೈಪೊಕ್ಲೋರೈಟ್ ಉತ್ಪತ್ತಿಯಾಗಿ ಸುಣ್ಣಕಲ್ಲು ಬೇರ್ಪಡುತ್ತದೆ. ಉಪ್ಪುನೀರಿನಲ್ಲಿ ವಿದ್ಯುತ್ತನ್ನು ಪ್ರವಹಿಸು ವುದರಿಂದಲೂ ಸೋಡಿಯಮ್ ಹೈಪೊಕ್ಲೋರೈಟ್ ರಾಸಾಯನಿಕವನ್ನು ಪಡೆಯಬಹುದು. ಕ್ಲೋರೀನ್ ಧನ ಎಲೆಕ್ಟ್ರೋಡ್ ಬಳಿಯೂ, ಸೋಡಿಯಂ ಹೈಡ್ರಾಕ್ಸೈಡ್ ಋಣ ಎಲೆಕ್ಟ್ರೋಡ್ ಬಳಿಯೂ ಉತ್ಪತ್ತಿಯಾಗಿ ಬೆರೆತು ಹೈಪೊಕ್ಲೋರೈಟ್ ಆಗುತ್ತದೆ. ಕ್ಯಾಲ್ಸಿಯಮ್ ಅಥವಾ ಸೋಡಿಯಮ್ ಹೈಪೊಕ್ಲೋರೈಟ್ ಈ ಎರಡು ರಾಸಾಯನಿಕಗಳೂ ನೀರಿನ ಜೊತೆ ಹೈಪೊಕ್ಲೋರಸ್ ಆಮ್ಲ ಕೊಡುತ್ತವೆ. ಇದು ನಿಧಾನವಾಗಿ ವಿಭಜಿಸಲ್ಪಟ್ಟು ಆಕ್ಸಿಜನ್ ಬರುತ್ತದೆ. ಹೆಚ್ಚು ಕ್ಷಾರವಿದ್ದರೆ ಈ ಕ್ರಿಯೆ ತಡವಾಗಿ ಸಾಗುತ್ತದೆ. ಆಕ್ಸಿಜನ್ನಿನೊಡನೆ ಸಂಯೋಗವಾದಾಗ ಬಟ್ಟೆ ಅಥವಾ ನೂಲು ಬಿಳಿಚಿಕೊಳ್ಳುತ್ತದೆ. ಈ ಆಕ್ಸಿಜನ್ ಬರುವುದು ಹೈಪೊಕ್ಲೋರಸ್ ಆಮ್ಲದಿಂದ. ಇದರ ಉತ್ಪತ್ತಿಯ ಪ್ರಮಾಣ ಒಟ್ಟು ದ್ರವದ ಆಮ್ಲತ್ವವನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಆಮ್ಲತ್ವ PH 5 ರಿಂದ 9 ಪ್ರಮಾಣದಲ್ಲಿ ಚಲುವೆ ಕ್ರಿಯೆ ನಡೆಯುತ್ತದೆ. ಹತ್ತಿ ಬಟ್ಟೆ ಅಥವಾ ನೂಲಿನ ಸೆಲ್ಯುಲೋಸ್ PH7ರಲ್ಲಿ ಜಾಗ್ರತೆಯಾಗಿ ಆಕ್ಸಿಜನ್ನಿನೊಂದಿಗೆ ಸಂಯೋಜನೆ ಹೊಂದಿ ಕೆಡುತ್ತದೆ. ಇದನ್ನು ತಡೆಗಟ್ಟಲು ಚಲುವೆ ಸಂಸ್ಕರಣವನ್ನು PH 7ರ ಕೆಳಗೆ ಮಾಡುವುದು ಒಳ್ಳೆಯದು. ಬಣ್ಣ ಮತ್ತು ಸೆಲ್ಯುಲೋಸ್ ಪದಾರ್ಥ ಎರಡೂ ಆಕ್ಸಿಜನ್ನಿನಿಂದ ಉತ್ಕರ್ಷಣ ಹೊಂದುತ್ತವೆ. ಹೆಚ್ಚು ಬಿಳಿಚಿಕೊಂಡರೆ ಅದರ ಜೊತೆಗೆ ನೂಲು ಕೆಟ್ಟು ಅದರ ಸಾಮರ್ಥ್ಯ ಕುಗ್ಗುತ್ತದೆ. ಹೆಚ್ಚು ಹಾನಿ ಚಲುವೆ ಕ್ರಿಯೆಯ ಅಂತ್ಯದಲ್ಲೇ ಆಗುವುದು. ಇದನ್ನು ಪರಿಹರಿಸಲು ಒಂದು ಉಪಾಯವೆಂದರೆ ಚಲುವೆ ಸಂಸ್ಕರಣ ಪೂರ್ತಿಯಾಗುವ ಮೊದಲೇ ನೂಲನ್ನು ಹೊರತೆಗೆದು ವಾಯುವಿನಲ್ಲಿ ಆರಲು ತೂಗುಹಾಕುವುದು. ಆಗ ವಾಯುವಿನಲ್ಲಿರುವ ಇಂಗಾಲಾಮ್ಲ ನಿಧಾನವಾಗಿ ಚಲುವೆ ಕ್ರಿಯೆಯನ್ನು ಸಂಪೂರ್ಣಗೊಳಿಸುತ್ತದೆ. ಉತ್ಪತ್ತಿಯಾದ ಸೋಡ ಮತ್ತು ಸುಣ್ಣಕಲ್ಲು ಆಮ್ಲದಿಂದ ವಿಭಜನೆಯಾಗುವುದನ್ನು ನಿಧಾನವಾಗಿಸುತ್ತವೆ.

ಅಸಿಟೇಟ್ ರೇಯಾನ್ ನೂಲು ಹೆಚ್ಚು ಉಷ್ಣ ಮತ್ತು ಕ್ಷಾರದಿಂದ ಕೆಡುತ್ತದೆ. ಆದ್ದರಿಂದ PH 4.5ರಿಂದ 5.5ರ ಒಳಗಿರಬೇಕು.

ಕ್ಲೋರೈಟನಿಂದ ಚಲುವೆ ಕ್ರಿಯೆ : ಹತ್ತಿನೂಲಿಗೆ ಚಲುವೆ ಮಾಡಲು ಸೋಡಿಯಮ್ ಕ್ಲೋರೈಟನ್ನು ಉಪಯೋಗಿಸುತ್ತಾರೆ. ಇದು ಕ್ಲೋರಿನ್ ಆಕ್ಸೈಡನ್ನು ಬಿಡುಗಡೆ ಮಾಡುತ್ತದೆ. ಹೆಚ್ಚು ಅಮ್ಲತ್ವ (ಕಡಿಮೆ PH), ಹೆಚ್ಚು ಉಷ್ಣತೆ ಮತ್ತು ಸಾಂದ್ರತೆಗಳಲ್ಲಿ ಇದು ಕೆಲಸ ಮಾಡಬಲ್ಲುದು. ಇಂಥ ಸ್ಥಿತಿಯಲ್ಲೂ ಅಂದರೆ ಬಿಸಿ ಆಮ್ಲ ದ್ರವದಲ್ಲೂ ನೂಲಿನ ಸೆಲ್ಯುಲೋಸ್ ಪದಾರ್ಥಕ್ಕೆ ಯಾವ ಹಾನಿಯೂ ಆಗುವುದಿಲ್ಲ.

ಪೆರಾಕ್ಸೈಡಿನಿಂದ ಚಲುವೆ ಕ್ರಮ: ಹೈಡ್ರೊಜನ್ ಪೆರಾಕ್ಸೈಡಿನಿಂದ ಚಲುವೆ ಮಾಡುವುದು ದಿನೇ ದಿನೇ ಜನಪ್ರಿಯವಾಗುತ್ತಿದೆ. ಇದನ್ನು ಎಲ್ಲ ಜಾತಿಯ ನೂಲುಗಳಿಗೂ ಉಪಯೋಗಿಸ ಬಹುದು. ಈ ರಾಸಾಯನಿಕವನ್ನು ಸೋಡಿಯಮ್ ಪೆರಾಕ್ಸೈಡ್ ರೂಪದಲ್ಲಿ ಅಥವಾ ಸಾಂದ್ರೀಕರಿಸಿದ ರೂಪದಲ್ಲಿ ಪಡೆಯಬಹುದು. ಉಪಯೋಗಿಸುವಾಗ ನೀರು ಬೆರೆಸಿ ಸಾರರಿಕ್ತಗೊಳಿಸಬಹುದು. ಸೋಡಿಯಮ್ ಪೆರಾಕ್ಸೈಡಿನಿಂದ ಬೆಂಕಿ ಅನಾಹುತವಾಗುವ ಸಂಭವ ಉಂಟು. ಆದ್ದರಿಂದ ಹೈಡ್ರೊಜನ್ ಪೆರಾಕ್ಸೈಡ್ ಹೆಚ್ಚು ಉಪಯೋಗದಲ್ಲಿದೆ.

ಇದನ್ನು 10–20–100–130 ಸಾಂದ್ರತೆಯಲ್ಲಿ ಪಡೆಯಬಹುದು. ದ್ರವದಿಂದ ಎಷ್ಟು ಆಕ್ಸಿಜನ್ನನ್ನು ಪಡೆಯಬಹುದು ಎನ್ನುವುದನ್ನು ಈ ಸಂಖ್ಯೆಗಳು ತಿಳಿಸುತ್ತವೆ. 100 ಘನಗಾತ್ರ ಸಾಂದ್ರತೆಯ ದ್ರವವೆಂದರೆ ಒಂದು ಘನ ಅಳತೆಯ ದ್ರವದಿಂದ ಅದರ ನೂರುಪಟ್ಟು ಆಕ್ಸಿಜನ್ ಪಡೆಯಬಹುದೆಂದು ಅರ್ಥ. ಈ ದ್ರವವನ್ನು ತಂಪಾದ ಸ್ಥಳದಲ್ಲಿ ಬೆಳಕುತಾಕದಂತೆ ಇಡಬೇಕು. ಆಮ್ಲಗಳನ್ನು ಬೆರೆಸುವುದರಿಂದ ದ್ರವ ಕೆಟ್ಟು ಆಕ್ಸಿಜನ್ ಹೊರಟುಹೋಗುವುದನ್ನು ತಡೆಗಟ್ಟಬಹುದು. ಪೆರಾಕ್ಸೈಡಿನಿಂದ ನಡೆಸುವ ಚಲುವೆ ಕ್ರಿಯೆ ಹೆಚ್ಚು ಉಷ್ಣತೆಯಲ್ಲಿ ಸರಿಯಾಗಿ ಆಗುತ್ತದೆ. ಉಷ್ಣತೆ 80°-85° ಸೆಂ. ಇರಬೇಕು. ಇದಕ್ಕಿಂತ ಕಡಿಮೆಯಿದ್ದರೆ ವರ್ತನೆ ನಿಧಾನವಾಗುತ್ತದೆ. ಹೆಚ್ಚಿದ್ದರೆ ಆಕ್ಸಿಜನ್ ಬೇಗ ಹೊರಟುಹೋಗುತ್ತದೆ. ಸೋಡಿಯಮ್ ಸಿಲಿಕೇಟ್ ಕ್ಷಾರಸ್ಥಿತಿಯಲ್ಲೂ ಪೆರಾಕ್ಸೈಡ್ ವಿಭಜಿಸುವುದನ್ನು ನಿಧಾನಗೊಳಿಸುತ್ತದೆ. ಪೆರಾಕ್ಸೈಡ್ ಕೆಲವು ಲೋಹಗಳಿಗೆ, ತಾಮ್ರ ಅಥವಾ ಅದರ ಸಂಯುಕ್ತಗಳಿಗೆ ಸುಲಭವಾಗಿ ಪ್ರತಿಕ್ರಿಯೆ ತೋರಿಸುತ್ತದೆ. ಆದರೆ ಸಿಲಿಕೇಟ್ ಇದ್ದರೆ ಕಬ್ಬಿಣ, ಸೀಸ ಅಥವಾ ಅಲ್ಯೂಮಿನಿಯಮ್ ಪಾತ್ರೆಗಳನ್ನು ಪೆರಾಕ್ಸೈಡ್ ಚಲುವೆ ಕ್ರಿಯೆಗೆ ಉಪಯೋಗಿಸಬಹುದು. ಉತ್ತಮ ಪರಿಣಾಮಕಾರಿಯಾದ ಒಂದು ಮಿಶ್ರಣದಲ್ಲಿ ಶೇ.0.5%-1% ಪೆರಾಕ್ಸೈಡ್ ದ್ರವವನ್ನು ಸಿಲಿಕೇಟ್ ಮತ್ತು ಸೋಡಿಯಮ್ ಹೈಡ್ರಾಕ್ಸೈಡ್ ಕ್ಷಾರದ (NaOH)ಜೊತೆಗೆ ಬೆರೆಸಿ 85°ಸೆಂ. ಉಷ್ಣತೆಯಲ್ಲಿ ಉಪಯೋಗಿಸಲಾಗುತ್ತದೆ. ಚಲುವೆ ಮಾಡಿದ ಮೇಲೆ ನೂಲನ್ನು ಚೆನ್ನಾಗಿ ತೊಳೆದರೆ ಅದರ ಸಾಮರ್ಥ್ಯಕ್ಕೆ ಯಾವ ಕುಂದೂ ಬರುವುದಿಲ್ಲ.

ಕೆಲವು ವಿಧಾನಗಳಲ್ಲಿ ನೂಲನ್ನು ನೆನೆಸಿ ಚಲುವೆ ಮಾಡುವುದು ತಡೆಯಿಲ್ಲದೆ ನಡೆಯುತ್ತದೆ. ಒಟ್ಟು ಎರಡು ಗಂಟೆಗಳಲ್ಲಿ ಕಂದು ಬಣ್ಣದ ಬಟ್ಟೆ ಸಂಪೂರ್ಣವಾಗಿ ಬಿಳಿಚಿಕೊಳ್ಳುವಂತೆ ಮಾಡಬಹುದು. ಮೊದಲು ಶೇ.3% ಸೋಡಿಯಮ್ ಹೈಡ್ರಾಕ್ಸೈಡ್ ದ್ರಾವಣದಲ್ಲಿ ನೂಲನ್ನು ಅದ್ದಿ, ಹಿಂಡಿ, ಅನಂತರ 100° ಸೆಂ. ಉಷ್ಣತೆಯಲ್ಲಿ ಹಬೆಯಿಂದ ಸ್ವಲ್ಪ ಹೊತ್ತು ಕಾಯಿಸಲಾಗುವುದು. ಈಗ ನೂಲನ್ನು 0.5 ಘನಗಾತ್ರ ಪೆರಾಕ್ಸೈಡ್ ದ್ರವದಲ್ಲಿ ಅದ್ದಿ ಪುನಃ 100°ಸೆಂ. ಉಷ್ಣತೆಗೆ ಒಂದು ಗಂಟೆ ಹೊತ್ತು ಹಾಗೆಯೇ ಬಿಡಲಾಗುವುದು. ಅನಂತರ ತೊಳೆದು ಒಣಗಿಸುವರು.

ಉಣ್ಣೆ ನೂಲು: ಹತ್ತಿನೂಲಿಗಿಂತ ಉಣ್ಣೆ ನೂಲಿಗೆ ಬೇಕಾಗುವ ಚಲುವೆ ಕ್ರಿಯೆ ಬಹಳ ಕಡಿಮೆಯಾದದ್ದು. ಹೈಪೊಕ್ಲೋರೈಟ್ ಉಪಯೋಗಿಸಿದರೆ ನೂಲು ಹಳದಿಯಾದಾಗುವುದಲ್ಲದೆ ಕೆಟ್ಟು ಹೋಗುವುದು ಕೂಡ. ಉಣ್ಣೆ ನೂಲಿನ ಬಣ್ಣವನ್ನು ಎರಡು ವಿಧಾನಗಳಿಂದ ತೆಗೆಯಲಾಗುವುದು: ಸಲ್ಫರ್ ಡೈಆಕ್ಸೈಡ್ ಅಥವಾ ಪೆರಾಕ್ಸೈಡುಗಳಿಂದ ಸಂಸ್ಕರಿಸುವುದು. ಸಲ್ಫರ್ ಡೈಆಕ್ಸೈಡಿನಿಂದ ಸಂಸ್ಕರಿಸುವ ಕ್ರಿಯೆಗೆ ಸ್ಟೋವಿಂಗ್ ಎಂದು ಹೆಸರು. ಇದರಲ್ಲಿ ತೇವವಿರುವ ಮಾಲನ್ನು ಮರದ ಗೂಟಗಳ ಮೇಲೆ ಹರಡಲಾಗುವುದು. ಗೂಟಗಳನ್ನು ಸಲ್ಫ್ಯೂರಿಕ್ ಆಮ್ಲ ತುಂಬಿದ ಕೋಣೆಯಲ್ಲಿ ಇರಿಸಿರುತ್ತದೆ. ಕೋಣೆಯ ನೆಲದ ಮೇಲೆ ಸಲ್ಫರನ್ನು ಉರಿಸಿ ಅನಲವನ್ನು ಉತ್ಪತ್ತಿ ಮಾಡಲಾಗುತ್ತದೆ. ಕೋಣೆಯ ಬಾಗಿಲನ್ನು 12 ಗಂಟೆಗಳ ಕಾಲ ಮುಚ್ಚಿರಲಾಗುತ್ತದೆ. ನೂಲಿನಲ್ಲಿರುವ ತೇವ ಹೆಚ್ಚಾಗಕೂಡದು. ತೂಗಹಾಕಿದ ನೂಲಿನ ತಳಭಾಗದಲ್ಲಿ ತೇವ ಹೆಚ್ಚಾಗಬಾರದು. ಹಾಗಾದರೆ ಅದು ಬಿಳಿಚಿಕೊಳ್ಳುವುದು ಒಂದೇ ಸಮವಾಗಿರುವುದಿಲ್ಲ. ಮೊದಲು ಹೊಳಪಿನ ಬಿಳಿಬಣ್ಣ ಕಂಡರೂ ಅದು ಬೇಗ ಹಳದಿಗೆ ತಿರುಗುತ್ತದೆ. ಪೆರಾಕ್ಸೈಡನ್ನು ಉಪಯೋಗಿಸಿದರೆ ಅಷ್ಟು ಬಿಳುಪು ಬರುವುದಿಲ್ಲ. ಆದರೆ ಹೆಚ್ಚು ಕಾಲ ನಿಲ್ಲುತ್ತದೆ. ಮೊದಲು ತಿಳಿ ಕೆಂಪು ಮಿಶ್ರಿತ ಬಿಳಿಬಣ್ಣ ಬರುತ್ತದೆ. ಅನಂತರ ಸಲ್ಫ್ಯೂರಿಕ್ ಆಮ್ಲ ಅಥವಾ ಬೈಸಲ್ಫೇಟ್ ದ್ರಾವಣದಲ್ಲಿ ಸಂಸ್ಕರಿಸಿದರೆ ಬಣ್ಣ ಇನ್ನೂ ಉತ್ತಮವಾಗುತ್ತದೆ. ಪೆರಾಕ್ಸೈಡ್ ಚಲುವೆ ಕ್ರಮವನ್ನು ಯಾವಾಗಲೂ ಕ್ಷಾರಸ್ಥಿತಿಯಲ್ಲಿ ಮಾಡಲಾಗುವುದು. ಪೆರಾಕ್ಸೈಡ್ ದ್ರಾವಣವನ್ನು ಸೋಡಿಯಮ್ ಸಿಲಿಕೇಟ್ ಉಪಯೋಗಿಸಿ ಕ್ಷಾರತ್ವ 7.2–9ರ ವರೆಗೆ ಬರುವಂತೆ ಮಾಡಿ 1–2 ಘನಗಾತ್ರ ಆಕ್ಸಿಜನ್ ಬರುವ ಪ್ರಮಾಣದಲ್ಲಿ ಉಪಯೋಗಿಸಲಾಗುವುದು. 50ಲಿಸೆಂ. ಉಷ್ಣತೆಯಲ್ಲಿ ಸಂಸ್ಕರಿಸಿ ಒಂದು ರಾತ್ರಿ ಹಾಗೇ ಬಿಡುತ್ತಾರೆ. ಹೆಚ್ಚು ಸಾಮರ್ಥ್ಯದ ಪೆರಾಕ್ಸೈಡನ್ನು ಉಪಯೋಗಿಸಿದರೆ (4 ಘನ ಗಾತ್ರಕ್ಕಿಂತ ಹೆಚ್ಚು) ಉಣ್ಣೆ ನೂಲು ಜೆಲಟಿನನಂತೆ ಅಂಟಂಟಾಗಿ ಕೆಡುತ್ತದೆ. ಉಷ್ಣತೆ 50ಸೆಂ. ಗಿಂತ ಹೆಚ್ಚಾದರೆ ನೂಲು ಸಂಪೂರ್ಣವಾಗಿ ಕೆಟ್ಟು ಹೋಗುತ್ತದೆ. (ವೈ.ಎಸ್.ಎಲ್.)

**ಚಷ್ಟನ :** ಪ್ರಶ.ಸು. 125–135 ಕಾರ್ದಮಕ ವಂಶದ ಸಾಮಂತ ಅರಸು. ಕುಷಾಣ ವಂಶದ ಚಕ್ರವರ್ತಿಗಳ ಪ್ರಾಂತ್ಯಾಧಿಪತಿಯಾಗಿ ಪಶ್ಚಿಮ ಭಾರತದಲ್ಲಿ ಆಳಿದ. ಕಾರ್ದಮಕ ಎಂಬ ಹೆಸರು ಪ್ರದೇಶವಾಚಕವಾಗಿರಬಹುದು. ಈತನ ತಂದೆ ಝಾಮೋತಿಕ ಸಾಮಾನ್ಯ ವ್ಯಕ್ತಿಯಾಗಿದ್ದ. ಚಷ್ಟನ ಮೊದಲು ಮಂಡಲಾಧಿಕಾರಿಯ ದ್ಯೋತಕವಾಗಿ ಕ್ಷತ್ರಪ ಎಂಬ ಪದವಿಯನ್ನೂ ರಾಜ ಎಂಬ ಬಿರುದನ್ನೂ ಧರಿಸಿದ್ದ. ಮುಂದೆ ಮೇಲಿನ ಪದವಿ ಪಡೆದು ಮಹಾಕ್ಷತ್ರಪ ಎಂದು ಕರೆಯಿಸಿಕೊಂಡ. ಈತನ ಕಾಲದಲ್ಲಿ ಸಾತವಾಹನ ವಂಶದ ಗೌತಮೀಪುತ್ರ ಸಾತಕರ್ಣಿ ಊರ್ಜಿತನಾಗಿ, ಶಕ ಮತ್ತು ಇತರ ಪರಕೀಯ ಪ್ರಾದೇಶಿಕ ರಾಜರ ಮೇಲೆ ಸಮರ ಹೂಡಿ, ಕ್ಷಹರಾತ ಕುಲದ ನಹಪಾನ ಎಂಬ ನಾಯಕನನ್ನು ಪರಾಜಯಗೊಳಿಸಿ ವಧಿಸಿದ. ಬಳಿಕ ಚಷ್ಟನನಿಗೆ ನಹಪಾನನ ಅಧಿಕಾರಕ್ಕೆ ಒಳಪಟ್ಟಿದ್ದ ಪ್ರದೇಶದ ಮೇಲಧಿಕಾರವನ್ನೂ ವಹಿಸಿಕೊಡಲಾಯಿತು. ಚಷ್ಟನ ಇದನ್ನು ವಹಿಸಿಕೊಂಡ ಮೇಲೆ ಗೌತಮೀಪುತ್ರ ಸಾತಕರ್ಣಿಯನ್ನು ವಿರೋಧಿಸಿ, ಆತ ಶಕರಿಂದ ಗೆದ್ದುಕೊಂಡಿದ್ದ ಆಕರ, ಅವಂತಿ, ಅನೂಪ, ಅಪರಾಂತ, ಸೌರಾಷ್ಟ್ರ, ಆನರ್ತ ಮೊದಲಾದ ಪ್ರದೇಶಗಳನ್ನು ಮರಳಿ ಪಡೆದ. ಈತನ ರಾಜಧಾನಿ ಉಜ್ಜಯಿನಿ ಆಗಿತ್ತು. ರಾಜ್ಯಾಡಳಿತ ನಿರ್ವಹಿಸುವಲ್ಲಿ ಈತ ತನ್ನ ಪ್ರಬುದ್ಧ ಮೊಮ್ಮಗನಾದ ಕ್ಷತ್ರಪ ರುದ್ರದಾಮನ ಸಹಕಾರ ಪಡೆದ. ಚಷ್ಟನ ತನ್ನವೇ ಆದ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದ. ಅವುಗಳ ಒಂದು ಬದಿಯಲ್ಲಿ ನಕ್ಷತ್ರಗಳಿಂದ ಕೂಡಿದ ಕೋರೆಚಂದ್ರ ಚಿತ್ರವಿದೆ. (ಐ.ಬಿ.ಡಿ.)

**ಚಹಾ :** ತೀಯೇಸೀ (ಟರ್ನ್‌ಸ್ಟ್ರೋಮಿಯೇಸೀ) ಕುಟುಂಬದ ತೀಯ ಸೈನೆನ್ಸಿಸ್ ಅಥವಾ ಕೆಮೆಲಿಯ ಸೈನೆನ್ಸಿಸ್ ಜಾತಿಯ ಉಷ್ಣವಲಯ ನಿವಾಸಿಯಾದ ನಿತ್ಯಹರಿದ್ವರ್ಣದ ಪುಟ್ಟ ಮರ. ಇದರ ಎಳೆಚಿಗುರಿನಿಂದ ತಯಾರಿಸಲಾಗುವ ಪಾನೀಯಕ್ಕೂ ಇದೇ ಹೆಸರಿದೆ. ಈ ಸಸ್ಯದಲ್ಲಿ ಸುಮಾರು 45 ಬಗೆಗಳಿವೆ.

ಚಹಾ ಗಿಡ

ಚಹಾ ಗಿಡದ ಹುಟ್ಟಿನ ಬಗ್ಗೆ ಅನೇಕ ಕತೆಗಳಿವೆ. ಜಪಾನೀಯರ ದಂತಕಥೆಯೊಂದು ಹೀಗೆ ಹೇಳುತ್ತದೆ. ಬೋಧಿದರಿನ ಎಂಬ ಬೌದ್ಧ ಸನ್ಯಾಸಿಯೊಬ್ಬ ಒಂಬತ್ತು ವರ್ಷಗಳ ಕಾಲ ತಪಸ್ಸಿನಲ್ಲಿದ್ದು, ಆಕಸ್ಮಾತ್ ತಪಸ್ಸಿನ ಮಧ್ಯದಲ್ಲಿ ನಿದ್ದೆ ಹೋದನಂತೆ. ಇದರಿಂದ ಪಶ್ಚಾತ್ತಾಪಗೊಂಡ ಈತ ಕೂಡಲೇ ತನ್ನ ಕಣ್ಣಿನ ರೆಪ್ಪೆಗಳನ್ನು ಕತ್ತರಿಸಿ ನೆಲಕ್ಕೆ ಎಸೆದನಂತೆ. ಈ ರೆಪ್ಪೆಗಳೇ ಚಹಾಗಿಡಗಳಾಗಿ ಬೆಳೆದವಂತೆ.

ಇಂದು ಲಭ್ಯವಿರುವ ಸಾಕ್ಷ್ಯಾಧಾರಗಳ ಪ್ರಕಾರ ಚಹಾಗಿಡದ ತವರು ಚೀನ. ಸುಮಾರು 2000–3000 ವರ್ಷಗಳಿಂದಲೂ ಇದು ಅಲ್ಲಿ ಪಾನೀಯಸಸ್ಯವಾಗಿ ಉಪಯೋಗದಲ್ಲಿದೆ. ಅದಕ್ಕೂ ಮುಂಚೆ ಇದನ್ನು ಬಹುಶಃ ಔಷಧಿಸಸ್ಯವಾಗಿ ಬಳಸುತ್ತಿದ್ದರೆಂಬ ಅಭಿಪ್ರಾಯವೂ ಉಂಟು. ಬಹು ಹಿಂದೆಯೇ ಇದು ಜಪಾನಿಗೆ ಕಾಲಿಟ್ಟಿತು. ಇನ್ನು ಕೆಲವು ಅಭಿಪ್ರಾಯಗಳ ಪ್ರಕಾರ ಚಹಾಗಿಡ ಭಾರತದ ಅಸ್ಸಾಂ ಮತ್ತು ಸುತ್ತಮುತ್ತಲಿನ ರಾಜ್ಯಗಳಲ್ಲಿ ಪ್ರಥಮವಾಗಿ ಹುಟ್ಟಿಕೊಂಡಿತು. ಅಲ್ಲಿಂದ ಕಾಲಕ್ರಮೇಣ ಪ್ರಪಂಚದ ಉಷ್ಣವಲಯದಲ್ಲಿನ ಇತರ ದೇಶಗಳಿಗೂ ಹರಡಿ ಇಂದು ಚೀನ, ಜಪಾನ್, ಫಾರ್ಮೋಸ, ಜಾವ, ಸುಮಾತ್ರ, ಪೂರ್ವ ಆಫ್ರಿಕ, ಶ್ರೀಲಂಕ ಮತ್ತು ಭಾರತಗಳಲ್ಲಿ ಬೇಸಾಯದಲ್ಲಿದೆ. ಇದೊಂದು ಬೆಟ್ಟಸೀಮೆಗಳ ಬೆಳೆ. ಭಾರತದಲ್ಲಿ ಸಮುದ್ರಮಟ್ಟದಿಂದ ಸುಮಾರು 2150 ಮೀ. ಎತ್ತರದ ಪರ್ವತ ಪ್ರದೇಶಗಳಲ್ಲಿ ಇದರ ಬೇಸಾಯ ಇದೆ. ಬ್ರಹ್ಮಪುತ್ರ ಕಣಿವೆ, ಡಾರ್ಜಿಲಿಂಗ್, ರಾಂಚಿ, ಡೆಹ್ರಾಡೂನ್, ಕಾಂಗ್ರಾ, ತಮಿಳುನಾಡಿನ ನೀಲಗಿರಿ ಬೆಟ್ಟಗಳು, ಅಣ್ಣಾಮಲೈ, ಕೇರಳದ ತಿರುವಾಂಕೂರು ಜಿಲ್ಲೆ, ವೈನಾಡು, ಕರ್ನಾಟಕದ ಕೆಲವು ಭಾಗಗಳು ಚಹಾಗಿಡವನ್ನು ಬೆಳೆಸುವ ಮುಖ್ಯ ಪ್ರದೇಶಗಳು.

ಚಹಾ ಗಿಡದ ಹೂಗಳು

ಸಸ್ಯಶಾಸ್ತ್ರೀಯ ವಿವರಣೆ : ಚಹಾ ಗಿಡ ಸುಮಾರು 15ಮೀ. ಎತ್ತರಕ್ಕೆ ಬೆಳೆಯುವ ಮರ. ಚಹಾ ತೋಟಗಳಲ್ಲಿ ಸಾಮಾನ್ಯವಾಗಿ ಎಲೆಗಳನ್ನು ಕತ್ತರಿಸಲು ಅನುಕೂಲವಾಗುವಂತೆ ಅಗಾಗ್ಗೆ ಸವರಿ ಇದು 0.5–1.5ಮೀ. ಎತ್ತರಕ್ಕೆ ಪೊದೆಯಂತೆ ಬೆಳೆಸಲಾಗುತ್ತದೆ. ಎಲೆಗಳು ಸರಳ. ಪರ್ಯಾಯ ಮಾದರಿಯಲ್ಲಿ ಜೋಡಣೆ–ಗೊಂಡಿವೆ. ಇವುಗಳ ಆಕಾರ ದೀರ್ಘವೃತ್ತದಂತೆ; ಅಂಚು ಗರಗಸದಂತಿದೆ. ಎಲೆಯ ಮೇಲ್ಭಾಗ ರೋಮರಹಿತ ಹಾಗೂ ಹೊಳಪುಳ್ಳದ್ದು; ತಳಭಾಗ ಮಾತ್ರ ಬಿಡಿ ಬಿಡಿಯಾದ ಕೂದಲುಗಳಿಂದ ಕೂಡಿದೆ. ಎಲೆಗಳ ಗಾತ್ರ ವಿವಿಧ ಬಗೆಗಳಲ್ಲಿ ವಿವಿಧ ರೀತಿಯದು. ಉದಾಹರಣೆಗೆ ಕಚಾರ್ ಸ್ಥಳೀಯ ಬಗೆಯ ಎಲೆಗಳ ಉದ್ದ 30–35 ಸೆಂ.ಮೀ. ಅಗಲ 15–18 ಸೆಂ.ಮೀ. ನಾನಾ ಬಗೆಯ ಎಲೆಗಳ ಉದ್ದ 15–18 ಸೆಂ.ಮೀ. ಅಗಲ 5–9 ಸೆಂ.ಮೀ. ಮಣಿಪುರಿ ಹಾಗೂ ಅಸ್ಸಾಮ್ ಬಗೆಯ ಎಲೆಗಳ ಉದ್ದ 15–20 ಸೆಂ.ಮೀ.. ಅಗಲ 8–10 ಸೆಂ.ಮೀ. ಚೀನೀ ಬಗೆಯ ಎಲೆಗಳ ಉದ್ದ 5–8 ಸೆಂ.ಮೀ. . ಅಗಲ 1 ಸೆಂ.ಮೀ.. ಎಲ್ಲ ಬಗೆಯ ಚಹಾ ಎಲೆಗಳೂ ನಿತ್ಯಹಸಿರಾಗಿರುತ್ತವೆ. ಚಹಾಗಿಡದ ಹೂಗಳು ದ್ವಿಲಿಂಗಿಗಳು. ಎಲೆಗಳ ಕಂಕುಳಲ್ಲಿ ಒಂಟೊಂಟಿಯಾಗಿ ಇಲ್ಲವೆ 2–4 ಹೂಗಳ ಗುಂಪುಗಳಲ್ಲಿ ಸಮಾವೇಶಗೊಂಡಿವೆ. ಒಂದೊಂದರಲ್ಲೂ 5 ಪುಷ್ಪ ಪತ್ರಗಳು, 5 ದಳಗಳು, ಅಸಂಖ್ಯಾತ ಕೇಸರಗಳು, 3 ಕಾರ್ಪೆಲುಗಳ ಉಚ್ಚ ಸ್ಥಾನದ ಅಂಡಾಶಯ ಇವೆ. ಅಂಡಕೋಶದಲ್ಲಿ 3 ಕೋಣೆಗಳಿವೆ. ಒಂದೊಂದು ಕೋಣೆಯಲ್ಲೂ 4–6 ಅಂಡಕಗಳುಂಟು. ಫಲ ಸಂಪುಟ ಮಾದರಿಯದು. ಇದರ ಗಾತ್ರ 1.5–2 cm.; ಬಣ್ಣ ಕಂದುಮಿಶ್ರಿತ ಹಸಿರು. ಕಾಯಿಯ ಮೇಲ್ಮೈಯಲ್ಲಿ 3 ಮುಖ್ಯ ಉಬ್ಬುಗಳನ್ನು ಕಾಣಬಹುದು. ಕಾಯ ಒಳಗೆ 3–6 ಬೀಜಗಳಿವೆ.

ಚಹಾ ಗಿಡದ ಹಣ್ಣುಗಳು

ಚಹಾ ತೋಟ

ವರ್ಗೀಕರಣ ಮತ್ತು ಬಗೆಗಳು : ಚಹಾಗಿಡದ ವಿವಿಧ ಬಗೆಗಳನ್ನು ಚೀನ ಚಹಾ ಮತ್ತು ಅಸ್ಸಾಮ್ ಚಹಾ ಎಂಬ ಎರಡು ಮುಖ್ಯ ಗುಂಪುಗಳಾಗಿ ವಿಂಗಡಿಸಲಾಗಿದೆ.

1. ಚೀನ ಚಹಾ ಬಗೆಯ ವೈಜ್ಞಾನಿಕ ಹೆಸರು ಸೈನೆನ್ಸಿಸ್ ಎಂದು. ಇದು ಬಲು ನಿಧಾನವಾಗಿ ಬೆಳೆಯು–ವಂಥದು. ಗಾತ್ರವೂ ಕುಳ್ಳು, ಎಲೆಗಳು ಸಣ್ಣವು; ಕಿರಿದಾಗಿ ತುಂಬ ದಂತಿತವಾಗಿ ಇವೆ. ಹೂಗಳು ಒಂಟೊಂಟಿಯಾಗಿ ಸ್ಥಿತವಾಗಿವೆ. ಚಳಿಯನ್ನೂ ಕಠಿಣ ಪರಿಸ್ಥಿತಿಗಳನ್ನೂ ಚೆನ್ನಾಗಿ ಎದುರಿಸಬಲ್ಲದು. ಆದರೆ ಇಳುವರಿ ಕಡಿಮೆ.

2. ಅಸ್ಸಾಮ್ ಚಹಾ ಗುಂಪಿನಲ್ಲಿ ಅಸ್ಸಾಮಿಕ ಮತ್ತು ಮ್ಯಾಕ್ರೊಫಿಲ ಎಂಬ ಎರಡು ಮುಖ್ಯ ಬಗೆಗಳಿವೆ. ಇವುಗಳಲ್ಲಿ ಮೊದಲನೆಯದು ಎತ್ತರವಾಗಿ ಹಾಗೂ ಶೀಘ್ರವಾಗಿ ಬೆಳೆಯುವ ರೀತಿಯದು. ಎಲೆಗಳು ದೊಡ್ಡವು; ಇಳಿಬಿದ್ದಿರುತ್ತವೆ. ಹೂಗಳು 2–4ರ ಗೊಂಚಲಿನಲ್ಲಿ ಸಮಾವೇಶಗೊಂಡಿವೆ. ಇದರಲ್ಲೂ ತಿಳಿ ಹಸುರು ಬಣ್ಣದ ಎಲೆಗಳುಳ್ಳ ಅಸ್ಸಾಮ್ ತಳಿ ಹಾಗೂ ಕಡು ಹಸುರು ಬಣ್ಣದ ಎಲೆಗಳುಳ್ಳ ಮಣಿಪುರಿ ತಳಿ ಎಂಬ ಎರಡು ತಳಿಗಳಿವೆ. ಮ್ಯಾಕ್ರೊಫಿಲ ಎಂಬುದು ಜಪಾನಿನಲ್ಲಿ ಬೆಳೆಯುವಂಥದು. ಇದರ ಎಲೆಗಳು ದೊಡ್ಡಗಾತ್ರದವು. ಇದರಿಂದ ತಯಾರಿಸಲಾಗುವ ಕಷಾಯ ಬಲು ಕಹಿಯಾಗಿರುತ್ತದೆ. ಚೀನ ಹಾಗೂ ಅಸ್ಸಾಮ್ ಗುಂಪುಗಳ ಬಗೆಗಳನ್ನು ಕಸಿಮಾಡಿ ಪಡೆಯಲಾದ ಕೆಲವು ಅಡ್ಡತಳಿಗಳೂ ಇವೆ. ಭಾರತದ ಡಾರ್ಜಿಲಿಂಗ್‌ನ ಸುತ್ತಮುತ್ತಣ ಪ್ರದೇಶಗಳಲ್ಲಿ ಇಂಥ ತಳಿಗಳು ಕಾಣದೊರೆಯುತ್ತವೆ.

ತೋಟಗಾರಿಕೆ : ಕಾಫಿ ತೋಟಗಾರಿಕೆಯಂತೆಯೇ ಚಹಾಗಿಡದ ಬೇಸಾಯವೂ ಪ್ರಪಂಚದ ಉಷ್ಣ ಹಾಗೂ ಉಪೋಷ್ಣವಲಯಗಳ ಬೆಟ್ಟಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ. ಸಮಭಾಜಕ ವೃತ್ತದ ಬಳಿಯ ಪ್ರದೇಶಗಳಲ್ಲಿ ಸಮುದ್ರಮಟ್ಟಕ್ಕೆ 1250–2200 ಮೀ. ಎತ್ತರದ ಬೆಟ್ಟಗಳಲ್ಲಿ ಇದನ್ನು ಬೆಳೆಸಲಾಗುತ್ತದೆ. ಇದರ ಬೇಸಾಯಕ್ಕೆ 60–75 ವಾರ್ಷಿಕ ಮಳೆ ಬೀಳುವ ಹಾಗೂ ವರ್ಷದ ಬಹುಕಾಲ ಹೆಚ್ಚು ಆರ್ದ್ರತೆ ಇರುವ ಸ್ಥಳಗಳು ಉತ್ತಮ. ಹವೆ ತಂಪಾಗಿದ್ದಷ್ಟೂ ಒಳ್ಳೆಯದು. ಹೀಗೆ ತಂಪು ಹವೆಯುಳ್ಳ ಪ್ರದೇಶಗಳಲ್ಲಿ (ಉದಾಹರಣೆಗೆ ಈಶಾನ್ಯ ಭಾರತದ ಹಿಮಾಲಯದ ತಪ್ಪಲಿನ ಬೆಟ್ಟಗಳಲ್ಲಿ) ಬೆಳೆದ ಚಹಾದ ಗುಣಮಟ್ಟ ಉತ್ಕೃಷ್ಟವಾಗಿರುತ್ತದೆ. ಉಷ್ಣತೆ 55°F ಗಿಂತ ಕಡಿಮೆಯಾಗಲೀ $85^0$Fಗಿಂತ ಹೆಚ್ಚಾಗಲೀ ಇರಬಾರದು. ಚಹಾಗಿಡ ಕಡು ಚಳಿಯನ್ನು ತಡೆದು ಕೊಳ್ಳಲಾರದು. ಚಹಾ ತೋಟದ ಮಣ್ಣು ಪಾರಗಮ್ಯವಾಗಿಯೂ ಮಳೆಯ ನೀರು ಸುಲಭವಾಗಿ ಹರಿದುಹೋಗುವಂಥದೂ ಆಗಿರಬೇಕು. ಕೆಂಪು ಅಥವಾ ಕಂದು ಗೋಡು ಅಥವಾ ಲ್ಯಾಟರೈಟ್ ಮಣ್ಣು ಉತ್ತಮ ಬಗೆಯದು. ಮಣ್ಣು ಆಮ್ಲೀಯವಾಗಿರಬೇಕಲ್ಲದೆ ಸಾಕಷ್ಟು ಮೊತ್ತದಲ್ಲಿ ಅಲ್ಯೂಮಿನಿಯಮ್ ಧಾತುವನ್ನು ಕೂಡ ಪಡೆದಿರಬೇಕು.

ಚಹಾ ಗಿಡವನ್ನು ಸಾಮಾನ್ಯವಾಗಿ ಬೀಜಗಳಿಂದ ಬೆಳೆಸಲಾಗುತ್ತದೆ. ಬೀಜಗಳನ್ನು ಪಡೆಯಲೆಂದೇ ಇಳುವರಿ ಹಾಗೂ ಗುಣಮಟ್ಟದ ದೃಷ್ಟಿಯಿಂದ ಉತ್ತಮ ಎನಿಸುವ ಕೆಲವು ಗಿಡಗಳನ್ನು ಪ್ರತ್ಯೇಕವಾಗಿ ಎಕರೆಗೆ 70–100 ಗಿಡಗಳ ತೋಟಗಳಲ್ಲಿ ಬೆಳೆಸುವ ಕ್ರಮ ಉಂಟು. ಹೀಗೆ ಬೆಳೆಸಿದ ಗಿಡಗಳಿಗೆ ಒಂದೊಂದಕ್ಕೂ $1\frac{1}{2}$ ಕಿ.ಗ್ರಾಂ. ಅಮೋನಿಯಮ್ ಸಲ್ಫೇಟ್, $\frac{1}{2}$ ಕಿ.ಗ್ರಾಂ. ಸೂಪರ್ ಫಾಸ್ಫೇಟ್ ಮತ್ತು $\frac{1}{2}$ ಕಿ.ಗ್ರಾಂ. ಮ್ಯೂರಿಯೇಟ್ ಆಫ್ ಪೊಟ್ಯಾಷ್ ಗೊಬ್ಬರಗಳನ್ನು ಹಾಕಲಾಗುತ್ತದೆ. ಇಂಥ ಪ್ರದೇಶಗಳಲ್ಲಿ ಯಾವ ತೆರನ ಕಳೆಯೂ ಬೆಳೆಯದಂತೆ ನೋಡಿಕೊಳ್ಳಲಾಗುತ್ತದೆ. ಇದರಿಂದ ಹಾಕಿದ ಗೊಬ್ಬರದ ಪೌಷ್ಟಿಕಾಂಶಗಳೆಲ್ಲ ಚಹಾಗಿಡಗಳಿಗೆ ಒದಗುವುವಲ್ಲದೆ ಕಾಯಿಗಳು ಬಲಿತು ಬಿರಿದಾಗ ಸಿಡಿಯುವ ಬೀಜಗಳನ್ನು ಸಂಗ್ರಹಿಸುವುದಕ್ಕೂ ಅನುಕೂಲವಾಗುತ್ತದೆ. ಹೀಗೆ ಸಂಗ್ರಹಿಸಿದ ಬೀಜಗಳನ್ನು ಪ್ರತ್ಯೇಕ ನರ್ಸರಿಗಳ ಮರಳುಭೂಮಿಯಲ್ಲಿ ಮೊಳೆಯಿಸಲಾಗುತ್ತದೆ. ಇವನ್ನು ಬಿಸಿಲು ಹಾಗೂ ಗಾಳಿಗಳಿಂದ ರಕ್ಷಿಸಲು ಇವುಗಳ ಮೇಲೆ ನೀರಿನಲ್ಲಿ ನೆನೆಸಿದ ಗೋಣಿತಾಟನ್ನು ಮುಚ್ಚಲಾಗುತ್ತದೆ. ಮೊಳಕೆಯೊಡೆದು ಹೊರಬರುವ ಎಳೆಯ ಸಸಿಗಳನ್ನು ಬಿದಿರುಬುಟ್ಟಿಗಳಿಗೆ ಇಲ್ಲವೆ ಪಾಲಿತೀನ್ ಚೀಲಗಳಿಗೆ ವರ್ಗಾಯಿಸಿ ನೆರಳಿನಲ್ಲಿ ಇಡಲಾಗುತ್ತದೆ. 6–12 ತಿಂಗಳ ಅನಂತರ ಈ ಸಸಿಗಳನ್ನು ಅವುಗಳ ಶಾಶ್ವತ ಸ್ಥಳಗಳಿಗೆ ವರ್ಗಾಯಿಸಬಹುದು. ಹೀಗೆ ಮಾಡುವಾಗ ಗಿಡಗಳನ್ನು ಬುಟ್ಟಿಯಿಂದ ಪೂರ್ಣವಾಗಿ ಹೊರತೆಗೆಯುವುದಿಲ್ಲ. ಈ ರೀತಿ ಮಾಡಿದರೆ ಸಸಿ ಸತ್ತುಹೋಗುವ ಸಂಭವ ಉಂಟು. ಕೆಲವು ಸಲ ಸಸಿಗಳನ್ನು 3 ವರ್ಷ ವಯಸ್ಸಾಗುವವರೆಗೂ ನರ್ಸರಿಯಲ್ಲೇ ಬಿಟ್ಟಿದ್ದು ಅನಂತರ ಶಾಶ್ವತ ಸ್ಥಳಗಳಿಗೆ ವರ್ಗಾಯಿಸುವುದುಂಟು. ಸಸಿಗಳನ್ನು ವರ್ಗಾಯಿಸುವ ಮೊದಲು ತೋಟಕ್ಕೆ ಆರಿಸಲಾದ ಭೂಮಿಯನ್ನು ಹದಗೊಳಿಸುವುದು ಅತ್ಯವಶ್ಯ. ಕಾಡು ಕಡಿದು ಹದಗೊಳಿಸಿದ ಸ್ಥಳವೇ ಅತ್ಯುತ್ತಮವಾದರೂ ಹುಲ್ಲುಗಾವಲು ಇಲ್ಲವೆ ಬೇರೆ ಬೆಳೆಯನ್ನು ಕೃಷಿ ಮಾಡಿದ ಸ್ಥಳಗಳೂ ಒಳ್ಳೆಯವೇ. ಹುಲ್ಲನ್ನಾಗಲಿ, ಕಾಡುಗಿಡಗಳನ್ನಾಗಲಿ ಕತ್ತರಿಸಿ ತೆಗೆಯಬೇಕೇ ವಿನಾ ಬೆಂಕಿಯಿಂದ ಸುಟ್ಟು ಅಲ್ಲ. ಏಕೆಂದರೆ ಚಹಾ ಗಿಡ ಬೂದಿಯಿರುವಂಥ ಸ್ಥಳಗಳಲ್ಲಿ ಚೆನ್ನಾಗಿ ಬೆಳೆಯದು. ನೀರು ಚೆನ್ನಾಗಿ ಹರಿದುಹೋಗುವಂತೆ ಸೂಕ್ತವಾದ ಹರಿಗಾಲುವೆಗಳನ್ನು ನಿರ್ಮಿಸಿ, ಸಣ್ಣ ದಬ್ಬೆಹುಲ್ಲು, ಹೊಂಬಾಳೆಹುಲ್ಲು, ಶುಂಠಿಹುಲ್ಲು ಮುಂತಾದ ಗೆಡ್ಡೆಗಳಿರುವ ಹುಲ್ಲು ಕಳೆಗಳನ್ನು ಕಿತ್ತು ಹಾಕಿ, ಚೆನ್ನಾಗಿ ಉತ್ತು ಹದಗೊಳಿಸಬೇಕು. ಅನಂತರ 1ಮೀ. ಸುತ್ತಳತೆಯ ಹಾಗೂ 1/3ಮೀ . ಆಳದ ಗುಂಡಿಗಳನ್ನು ತೋಡಲಾಗುತ್ತದೆ. ಗುಂಡಿಗಳು ಮೀ. ಅಂತರದ ಸಾಲುಗಳಲ್ಲಿರುತ್ತವೆ. ಒಂದು ಸಾಲಿನಲ್ಲಿ ಒಂದು ಗುಂಡಿಯಿಂದ ಇನ್ನೊಂದಕ್ಕೆ $1\frac{1}{4}$-$1\frac{1}{2}$ ಮೀ. ಅಂತರವಿರುವುದು ಉತ್ತಮ. ಕಾಫಿ ಗಿಡಗಳಿಗೆ ಬೇಕಾಗುವಷ್ಟು ನೆರಳು ಚಹಾಗಿಡಗಳಿಗೆ ಬೇಕಿಲ್ಲವಾದರೂ ಗಿಡಗಳು ಎಳೆಯವಿರುವಾಗ ಸಾಕಷ್ಟು ನೆರಳು ಆವಶ್ಯಕ. ಸಸಿಗಳು ಚಿಕ್ಕವಿರುವಾಗ ಕೆಲವು ಬಗೆಯ ಜರೀ ಗಿಡಗಳನ್ನು, ಕ್ರೊಟಲೇರಿಯ,

ಟೆಫ್ರೋಸಿಯ, ಕಾಡುಜೋಳ ಮುಂತಾದ ಗಿಡಗಳನ್ನು ನೆರಳೀಯುವ ಗಿಡಗಳಾಗಿ ಬೆಳೆಸುವುದುಂಟು. ಗಿಡಗಳು ದೊಡ್ಡವಾದಂತೆ ಬಾಗೆ, ಬಿಲ್ವಾರ, ಹಾಲುವಾಣ, ಗ್ಲಿರಿಸಿಡಿಯ, ನಾಟಿ ಓಕ್ ಮರ ಮುಂತಾದವನ್ನು ನೆರಳುಸಸ್ಯಗಳಾಗಿ ಬೆಳೆಸುತ್ತಾರೆ. ಇವುಗಳಿಂದ ನೆರಳು ಸಿಗುವುದೊಂದೇ ಅಲ್ಲದೆ ಚಹಾಗಿಡ ಬೆಳೆಯುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಇರುವ ಗಾಳಿಯ ರಭಸವನ್ನು ತಡೆಯುವ ಅನುಕೂಲವೂ ಇದೆ. ಚಹಾ ತೋಟದಲ್ಲಿ ನಿಯತ ರೀತಿಯ ಅಗೆಯುವಿಕೆ, ಕಳೆ ಕೀಳುವಿಕೆ ಮುಂತಾದವನ್ನು ನಡೆಸುವುದು ಅತ್ಯವಶ್ಯ. ಆದರೆ ಆಳವಾಗಿ ಅಗೆಯುವುದು ಸಲ್ಲದು. ಹೀಗೆ ಮಾಡಿದರೆ ಭೂಮಿಯ ಮೇಲ್ಭಾಗದಲ್ಲಿ ಹರಡಿರಬಹುದಾದ ಚಹಾಗಿಡದ ಬೇರುಗಳು ಹಾಳಾಗುವ ಸಂಭವವುಂಟು. ಕಳೆಗಳನ್ನು ತೆಗೆಯಲು ಬೇಕಾಗುವಷ್ಟು ಮಾತ್ರ ಮಣ್ಣನ್ನು ಕೆದರುವುದು ಒಳ್ಳೆಯದು. ಇತ್ತೀಚೆಗೆ ಕಳೆನಾಶಕಗಳ ಬಳಕೆ ಹೆಚ್ಚು ಜನಪ್ರಿಯವಾಗುತ್ತಿದೆ. ಚಹಾ ತೋಟಕ್ಕೆ ವ್ಯವಸ್ಥಿತ ರೀತಿಯಲ್ಲಿ ಸಾಕಷ್ಟು ಮೊತ್ತದ ಗೊಬ್ಬರ ಹಾಕುವುದೂ ಅಗತ್ಯ. ಚಹಾ ತೋಟದಲ್ಲಿ ನೆರಳುಗಿಡಗಳು ಹೆಚ್ಚಾಗಿರುವುದಿಲ್ಲವಾದ್ದರಿಂದ ಭೂಮಿಯ ಮೇಲೆ ಎಲೆ ಮುಂತಾದವು ಬೀಳುವುದಿಲ್ಲ. ಇದರಿಂದ ಸಾವಯವ (ಆರ್ಗ್ಯಾನಿಕ್) ವಸ್ತುಗಳ ಅಗತ್ಯ ಇಲ್ಲಿ ಹೆಚ್ಚು. ಇವನ್ನು ಕೊಟ್ಟಿಗೆ ಗೊಬ್ಬರ, ಹಸಿರು ಗೊಬ್ಬರ, ಕಾಂಪೋಸ್ಟುಗಳ ರೂಪದಲ್ಲಿ ಒದಗಿಸಬಹುದು. ಇವುಗಳಲ್ಲೆಲ್ಲ ಹಸಿರು ಗೊಬ್ಬರವೇ ಅತ್ಯುತ್ತಮ. ಇದಕ್ಕಾಗಿ ಸಾಮಾನ್ಯವಾಗಿ ಎಲ್ಲ ಚಹಾ ತೋಟಗಳಲ್ಲೂ ಟೆಪ್ರೋಸಿಯ, ಕ್ರೋಟಲೇರಿಯ, ಸೆಸ್ಬೇನಿಯ (ಮುಳ್ಳುಜೀನಂಗಿ) ಮುಂತಾದ ಗಿಡಗಳನ್ನು ಬೆಳೆಸುವ ಕ್ರಮ ಉಂಟು. ಇದಲ್ಲದೆ ಚಹಾಗಿಡಗಳಿಗೆ ಸೇಂಗಾ ಹಿಂಡಿ, ಅಮೋನಿಯಮ್ ಫಾಸ್ಫೇಟ್, ಸೂಪರ್ ಫಾಸ್ಫೇಟ್, ಪೊಟ್ಯಾಸಿಯಮ್ ಸಲ್ಫೇಟ್ ಮುಂತಾದ ರಸಗೊಬ್ಬರಗಳೂ ಅತ್ಯಂತ ಆವಶ್ಯಕ. ಚಹಾಸೊಪ್ಪಿನ ಇಳುವರಿಗೂ ಗಿಡದ ನೈಟ್ರೋಜನ್ ಆವಶ್ಯಕತೆಗೂ ಅತ್ಯಂತ ನಿಕಟ ಸಂಬಂಧವಿರುವುದರಿಂದ ಆದಷ್ಟು ಹೆಚ್ಚು ಮೊತ್ತದಲ್ಲಿ ನೈಟ್ರೋಜನ್ ಒದಗಿಸುವುದು ಅತ್ಯಗತ್ಯ.

ಕುಡಿ ಚಿವುಟುವುದು ಮತ್ತು ಸವರಿಕೆ : ಚಹಾ ಗಿಡವನ್ನು ಅದರ ಎಳೆಚಿಗುರಿಗಾಗಿ ಬೆಳೆಸುವುದರಿಂದ ಆದಷ್ಟು ಹೆಚ್ಚು ಕುಡಿಗಳು ಹೊಮ್ಮುವಂತೆ ಮಾಡಬೇಕು. ಕೈಯಿಂದ ಚಿವುಟಲು ಅನುಕೂಲವಾಗುವಂತೆ ಅದರ ಎತ್ತರ ಕಡಿಮೆ ಇರುವುದೂ ಆವಶ್ಯಕ. ಇವನ್ನು ಸವರಿಕೆಯ ಮುಖಾಂತರ ಸಾಧಿಸಬಹುದು. ಮೊದಲ ಸವರಿಕೆಯನ್ನು ಚಹಾಗಿಡ 2/3–1ಮೀ. ಎತ್ತರ ಬೆಳೆದಾಗ ಮಾಡಲಾಗುತ್ತದೆ. ಎರಡನೆಯ ವರ್ಷ ಮುಖ್ಯ ಕಾಂಡ ಮತ್ತು ಕವಲುಗಳನ್ನು ಸುಮಾರು 1/2 ಮೀ. ಎತ್ತರಕ್ಕೆ ಸಮವಾಗಿಯೂ ಮೂರನೆಯ ವರ್ಷ ಹಿಂದಿನ ವರ್ಷಕ್ಕಿಂತ 7ಮೀ. ಹೆಚ್ಚು ಬಿಟ್ಟೂ ಸವರಲಾಗುತ್ತದೆ. ಅನಂತರ ಪ್ರತಿವರ್ಷ 3–7ಸೆಂ.ಮೀ. ಬಿಟ್ಟು ಸವರುತ್ತಾರೆ. ಇಳುವರಿ ಕಡಿಮೆಯಾಗಲು ಪ್ರಾರಂಭವಾದಾಗ ನೆಲದಿಂದ 30–45 ಸೆಂ.ಮೀ. ಎತ್ತರದಲ್ಲಿ ತುಂಬು ಸವರಿಕೆ ಮಾಡುವುದು ರೂಢಿಯಲ್ಲಿರುವ ಕ್ರಮ.

ಚಹಾ ತಯಾರಿಕೆಗಾಗಿ ಚಹಾ ಎಲೆ ಬಿಡಿಸುವುದು ಗಿಡಕ್ಕೆ 3 ವರ್ಷ ವಯಸ್ಸಾದ ಬಳಿಕ ಪ್ರಾರಂಭವಾಗುತ್ತದೆ. ಕೆಲವು ಕಡೆ ಇದಕ್ಕೂ ಮೊದಲೇ ಲಘು ಪ್ರಮಾಣದಲ್ಲಿ ಚಿವುಟುವುದುಂಟು. 3 ವರ್ಷಕ್ಕೆ ಗಿಡ 1ಮೀ. ಎತ್ತರ ಹಾಗೂ 1ಮೀ. ಅಗಲ ಇರುತ್ತದೆ. ಬಿಸಿ ಹವೆಯಿದ್ದು ಆಗಾಗ ಮಳೆ ಬೀಳುತ್ತಿದ್ದರೆ ವರ್ಷದ ಎಲ್ಲ ಕಾಲದಲ್ಲೂ ಎಲೆಗಳನ್ನು ಚಿವುಟಬಹುದು. ಕುಡಿಯನ್ನು ಮತ್ತು ಅನಂತರ ಎರಡು ಎಲೆಗಳನ್ನು ಚಿವುಟಿ, ಕೆಳಗಿನ ಹಳೆಯ 2–3 ಎಲೆಗಳನ್ನು ಹಾಗೆಯೇ ಬಿಡಬೇಕು. ವರ್ಷಕ್ಕೆ 10 ರಿಂದ 15 ಸಲ ಹೊಸ ಚಿಗುರು ಬರುತ್ತದೆ. ಎಲ್ಲ ಚಿಗುರುಗಳೂ ಒಂದೇ ಸಲಕ್ಕೆ ಬರುವುದಿಲ್ಲವಾದ್ದರಿಂದ ಸಾಮಾನ್ಯವಾಗಿ ವರ್ಷದಲ್ಲಿ 30ಕ್ಕಿಂತಲೂ ಹೆಚ್ಚು ಸಲ ಎಲೆ ಚಿವುಟುವುದುಂಟು.

ಚಹಾ ಇಳುವರಿ : ಚಹಾ ಎಲೆಯನ್ನು ಬಿಡಿಸುವ ಕೆಲಸದ ಪ್ರಾರಂಭ ಗಿಡಗಳನ್ನು ಬೆಳೆಸಿದ ರೀತಿಯನ್ನು ಅವಲಂಬಿಸಿದೆ. ಕಾಂಡತುಂಡುಗಳಿಂದ ಬೆಳೆಸಿದ್ದರೆ ತುಂಡುಗಳನ್ನು ನೆಟ್ಟ 2 ವರ್ಷಗಳ ಅನಂತರವೂ ಬೀಜಗಳ ಮೂಲಕ ವೃದ್ಧಿಸಿದ್ದರೆ ಗಿಡಕ್ಕೆ 4 ವರ್ಷ ವಯಸ್ಸಾದ ಅನಂತರವೂ ಈ ಕಾರ್ಯ ಆರಂಭವಾಗುತ್ತದೆ. ಇದೇ ರೀತಿ ಬೆಟ್ಟಗಳ ಕೆಳಮಟ್ಟದಲ್ಲಿರುವ ತೋಟಗಳಲ್ಲಿ ಗಿಡಗಳು ಚಿಕ್ಕ ವಯಸ್ಸಿನವಾಗಿರುವಾಗಲೂ ಉನ್ನತಮಟ್ಟಗಳಲ್ಲಿನ ತೋಟಗಳಲ್ಲಿ ಗಿಡಗಳು ಕೊಂಚ ದೊಡ್ಡವಾದ ಮೇಲೂ ಈ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಎಲೆ ಚಿವುಟುವ ಕೆಲಸ ಮುಖ್ಯವಾಗಿ ಹೆಂಗಸರದ್ದು. ಇವರು ತಮ್ಮ ಬೆನ್ನಿಗೆ ಬಿದಿರಿನ ದೊಡ್ಡ (ಸುಮಾರು 7–8 ಕೆ.ಜಿ. ಹಸಿ ಎಲೆ ಹಿಡಿಯುವಷ್ಟು ದೊಡ್ಡದಾದ) ಬುಟ್ಟಿಗಳನ್ನು ಕಟ್ಟಿಕೊಂಡು ತಮ್ಮ ಹೆಬ್ಬೆರಳು ಮತ್ತು ತೋರುಬೆರಳುಗಳ ಸಹಾಯದಿಂದ ತುದಿಮೊಗ್ಗುಗಳನ್ನೂ ಅವುಗಳೊಂದಿಗೆ ಇರುವ ಅತ್ಯಂತ ಚಿಕ್ಕ ಎಲೆಗಳನ್ನೂ ಚಿವುಟಿ ತೆಗೆಯುತ್ತ ಬುಟ್ಟಿಗೆ ಹಾಕುತ್ತ ಸಾಗುತ್ತಾರೆ. ಹೀಗೆ ದಿನವೊಂದಕ್ಕೆ ಸುಮಾರು 15–40ಕೆ.ಜಿ, ಹಸಿಎಲೆಯನ್ನು ಇವರು ಬಿಡಿಸುವುದುಂಟು. ಎಲೆ ಬಿಡಿಸುವ ಕಾರ್ಯ ಉಷ್ಣ ಹವೆಯಲ್ಲಿ ಇಲ್ಲವೆ ಕೆಳಮಟ್ಟದ ತೋಟಗಳಲ್ಲಿ 7–10 ದಿವಸಗಳಿಗೊಮ್ಮೆ ಮತ್ತು ಚಳಿ ಹವೆಯಲ್ಲಿ 14 ದಿವಸಗಳಿಗೊಮ್ಮೆ ನಡೆಯುತ್ತದೆ. ಇತ್ತೀಚೆಗೆ ಕೆಲವೆಡೆ ಯಾಂತ್ರಿಕ ಸಾಧನಗಳನ್ನು ಉಪಯೋಗಿಸಿ ಎಲೆ ಚಿವುಟ ಪಡೆಯುವ ಕಾರ್ಯವನ್ನು ನಡೆಸಲಾಗುತ್ತಿದೆ. ಬುಟ್ಟಿಗಳಲ್ಲಿ ಸಂಗ್ರಹವಾಗುತ್ತ ಹೋಗುವ ಚಹಾ ಎಲೆಗಳು ಅದುಮದ ಹಾಗೆ ಎಚ್ಚರ ವಹಿಸಲಾಗುತ್ತದೆ. ಹೀಗಾದರೆ ಶಾಖ ಉತ್ಪತ್ತಿಯಾಗುತ್ತದೆ. ಅಲ್ಲದೆ ಎಲೆಗಳ ಮೇಲೆ ಕೊಂಚ ತೇವವಿರುವುದರಿಂದ ಕೆಲವು ಬಗೆಯ ಸೂಕ್ಷ್ಮಾಣುಗಳು ವೃದ್ಧಿಯಾಗಿ ಚಹಾಸೊಪ್ಪಿನ ಆಖೈರು ಗುಣ ಇಳಿಯುವ ಸಂಭವವುಂಟು. ಚಹಾ ಗಿಡದ ವಯಸ್ಸು, ಬಗೆ ಮುಂತಾದವನ್ನು ಅವಲಂಬಿಸಿ ಇಳುವರಿಯ ಮೊತ್ತ ವ್ಯತ್ಯಾಸವಾಗುತ್ತದೆ. ಗಿಡ ಚಿಕ್ಕ ವಯಸ್ಸಿನದಾಗಿದ್ದಾಗ ಇಳುವರಿ ಕಡಿಮೆ. ಇದು ವರ್ಷಂಪ್ರತಿ ಏರುತ್ತ ಹೋಗಿ ಗಿಡಕ್ಕೆ 6–7 ವರ್ಷ ವಯಸ್ಸಾದಾಗ ಗರಿಷ್ಠ ಪರಿಮಾಣವನ್ನು ತಲುಪಿ ಅನಂತರ ಹಲವಾರು ವರ್ಷಗಳ ಕಾಲ ಹಾಗೆಯೇ ಮುಂದುವರಿಯುತ್ತದೆ. ಒಂದು ವಯಸ್ಕ ಗಿಡದಿಂದ ವರ್ಷಕ್ಕೆ ಸುಮಾರು 1ಕಿ.ಗ್ರಾಂ. ಹಸಿ ಎಲೆಯನ್ನು ಪಡೆಯಬಹುದು. ಸುಮಾರು 2 ಕಿ.ಗ್ರಾಂ. ಎಲೆಗಳಿಂದ 0.5 ಕಿ.ಗ್ರಾಂ. ಸಿದ್ಧ ಚಹಾ ಸೊಪ್ಪು ದೊರೆಯುತ್ತದೆ. ಈ ಲೆಕ್ಕದಂತೆ ಒಂದು ಎಕರೆಗೆ ಸುಮಾರು 500 ಕಿ.ಗ್ರಾಂ. ಸಿದ್ಧ ಚಹಾ ಸೊಪ್ಪನ್ನು ಪಡೆಯಬಹುದು. ಭಾರತದ ವಿವಿಧ ಭಾಗಗಳಲ್ಲಿ ಇಳುವರಿಯ ಮೊತ್ತದಲ್ಲಿ ವ್ಯತ್ಯಾಸಗಳಿವೆ. ಉದಾಹರಣೆಗೆ ಡಾರ್ಜಿಲಿಂಗಿನ ತೋಟಗಳಲ್ಲಿನ ಇಳುವರಿ ಎಕರೆಗೆ 225 ಕಿ.ಗ್ರಾಂ. ಆದರೆ ಅಸ್ಸಾಮಿನಲ್ಲಿ ಇದು ಎಕರೆಗೆ 550–1000 ಕಿ.ಗ್ರಾಂ. ಇದೆ. ಇಳುವರಿಯ ದೃಷ್ಟಿಯಿಂದ ಚಹಾ ಗಿಡದ ಆಯಸ್ಸು 30–50 ವರ್ಷಗಳಾದರೂ ಭಾರತ ಹಾಗೂ ಶ್ರೀಲಂಕಾಗಳಲ್ಲಿ 70–100 ವರ್ಷ ವಯಸ್ಸಿನ ಗಿಡಗಳಿಂದಲೂ ಚಹಾ ಪಡೆಯಬಹುದಾಗಿದೆ. ಜಪಾನಿನಲ್ಲಿ 100–200 ವರ್ಷದ ಗಿಡಗಳೂ ಆರ್ಥಿಕವಾಗಿ ಲಾಭದಾಯಕ ರೀತಿಯಲ್ಲಿ ಇಳುವರಿಯನ್ನು ಕೊಡುತ್ತವೆ. ಸಾಮಾನ್ಯವಾಗಿ ಗಿಡಗಳು ಮುದಿಯಾದಂತೆಲ್ಲ ಅವನ್ನು ತೆಗೆದುಹಾಕಿ ಬೇರೆ ಗಿಡಗಳನ್ನು ಅವುಗಳ ಜಾಗದಲ್ಲಿ ಹಾಕುವ ಕ್ರಮ ಉಂಟು. ಹೀಗೆ ಬದಲಿಸಲು ಕೆಲವು ನಿರ್ದಿಷ್ಟ ಕ್ರಮಗಳನ್ನು ಅನುಸರಿಸಲಾಗುತ್ತದೆ. ಸಾಮಾನ್ಯವಾಗಿ ಎಲ್ಲ ಚಹಾ ತೋಟಗಳಲ್ಲೂ ಬದಲಾವಣೆಗೆ ಬೇಕಾಗುವ ಗಿಡಗಳನ್ನು ಬೆಳೆಸಲೆಂದು ಮೀಸಲಿರಿಸಿದ ಸ್ಥಳಗಳುಂಟು. ಇಂಥಲ್ಲಿ ಬೆಳೆದ 3 ವರ್ಷ ವಯಸ್ಸಿನ ಗಿಡಗಳನ್ನು ಆಯ್ದು ವರ್ಗಾಯಿಸುತ್ತಾರೆ.

ಚಹಾ ಸೊಪ್ಪಿನ ದರ್ಜೆಗಳು ಹಾಗೂ ಗುಣ : ಸಿದ್ಧಗೊಳಿಸಿದ ಚಹಾ ಸೊಪ್ಪಿನ ಗುಣದಲ್ಲಿ ಅನೇಕ ವ್ಯತ್ಯಾಸಗಳನ್ನು ಗುರುತಿಸಬಹುದು. ಈ ವ್ಯತ್ಯಾಸಗಳಿಗೆ ಮುಖ್ಯ ಕಾರಣ ಚಿವುಟ ತೆಗೆಯುವ ಎಲೆಯ ಬಗೆ. ಚಿವುಟಿದ ಭಾಗ ತುದಿ ಮೊಗ್ಗನ್ನೂ ಮೇಲಿನ 1/4
ಎರಡು ಎಲೆಗಳನ್ನೂ ಒಳಗೊಂಡಿದ್ದರೆ ಅದರಿಂದ ಬರುವ ಚಹಾಸೊಪ್ಪು ಉತ್ಕೃಷ್ಟ ದರ್ಜೆಯದು. ತುದಿಮೊಗ್ಗಿನೊಂದಿಗೆ 3 ಎಲೆಗಳಿದ್ದರೆ ಉನ್ನತ ಮಧ್ಯಮ ದರ್ಜೆಯದು. ತುದಿಮೊಗ್ಗು ಹಾಗೂ 4 ಎಲೆಗಳಿದ್ದರೆ ಅದರಿಂದ ಬರುವ ಉತ್ಪನ್ನ ಒರಟು ದರ್ಜೆಯದು. ಉತ್ಕೃಷ್ಟ ದರ್ಜೆಯ ಚಹಾ ಸೊಪ್ಪಿಗೆ 'ಪೆಕೋಸ್' ಎಂಬ ಹೆಸರಿದೆ. ಇದರಲ್ಲೂ ಫ್ಲವರಿ ಮತ್ತು 'ಆರಿಂಜ್' ಎಂಬ ಎರಡು ಉಪದರ್ಜೆಗಳುಂಟು. ಮಧ್ಯಮ ಹಾಗೂ ಒರಟುದರ್ಜೆಗಳಲ್ಲಿ 'ಸೂಚಾಂಗ್ಸ್' ಮತ್ತು 'ಕಾಂಗೂಸ್' ಎಂಬ ಉಪದರ್ಜೆಗಳಿವೆ. ವಿವಿಧ ದರ್ಜೆಯ ಚಹಾಗಳನ್ನು ಸಂಸ್ಕರಿಸಿ ಸಿದ್ಧಗೊಳಿಸುತ್ತಿರುವಾಗ ಅವನ್ನು 'ಬ್ರೋಕನ್ಸ್' 'ಡಸ್ಟ್' ಹಾಗೂ 'ಫ್ಯಾನಿಂಗ್ಸ್' ಎಂಬ ಇನ್ನೂ ಕೆಲವು ವರ್ಗಗಳಾಗಿ ವಿಂಗಡಿಸುವುದುಂಟು.

ಮಾರುಕಟ್ಟೆಗೆ ಚಹಾ ಸೊಪ್ಪನ್ನು ಸಿದ್ಧಪಡಿಸುವುದು : ಗಿಡಗಳಿಂದ ಕುಡಿ ಮತ್ತು ಎಲೆಗಳನ್ನು ಬಿಡಿಸಿದ ತರುವಾಯ ಅವನ್ನು ಚಹಾ ಕಾರ್ಖಾನೆಗೆ ಪರಿಷ್ಕರಣಕ್ಕಾಗಿ ಸಾಗಿಸುತ್ತಾರೆ. ಮಾರುಕಟ್ಟೆಗೆ ಬರುವುದರಲ್ಲಿ ಕಪ್ಪು ಚಹಾ ಮತ್ತು ಹಸಿರು ಚಹಾ ಎಂಬ ಎರಡು ವಿಧಗಳಿವೆ. ಇವಲ್ಲದೆ ಊಲಾಂಗ್ ಮತ್ತು ಇಟ್ಟಿಗೆ ಚಹಾ ಎಂಬೆರಡು ಬಗೆಗಳೂ ಇವೆ.

ಕಪ್ಪು ಚಹಾ : ಕಪ್ಪು ಚಹಾಸೊಪ್ಪನ್ನು ಸಂಸ್ಕರಿಸುವುದರಲ್ಲಿ ಬಾಡಿಸುವುದು, ಅರೆಯುವುದು, ಹುಳಿಸುವುದು, ಒಣಗಿಸುವುದು ಎಂಬ ನಾಲ್ಕು ಹಂತಗಳಿವೆ.

1. ಬಾಡಿಸುವುದು : ಗಿಡದಿಂದ ಬಿಡಿಸಿದ ಎಲೆಗಳನ್ನು ತೆಳುವಾಗಿ ಒಣಗಲು ಬಿಡುತ್ತಾರೆ. ಹಾಗೆ ಬಿಟ್ಟಾಗ ಅವು ಸುಮಾರು ಅರ್ಧ ಭಾಗ ತೇವವನ್ನು ಕಳೆದುಕೊಂಡು, ಸ್ವಲ್ಪ ಒರಟಾಗುವುದಲ್ಲದೆ ತಿರುಚಿಕೊಳ್ಳುತ್ತವೆ. ಕೆಲವು ಸಲ ಈ ಕಾರ್ಯಕ್ಕೆ ಸಹಾಯಕವಾಗುವಂತೆ ಬಿಸಿಗಾಳಿಯನ್ನು ಬಿಡುವುದೂ ಉಂಟು. ಎಲೆಗಳನ್ನು ಸಾಮಾನ್ಯವಾಗಿ 18 ಗಂಟೆಗಳ ಕಾಲ ಬಾಡಿಸಲಾಗುವುದು. ಚಹಾ ಸೊಪ್ಪಿನಲ್ಲಿ ಹೆಚ್ಚು ತೇವವಿದ್ದರೆ ಅರೆಯುವಾಗ ಮುದ್ದೆಯಾಗಿಬಿಡುತ್ತದೆ. ಹರಡಲು ಅನುಕೂಲವಾಗಲು ದೊಡ್ಡ ಕೊಠಡಿಗಳಲ್ಲಿ ಒಂದರ ಮೇಲೊಂದರಂತೆ ಅಟ್ಟಗಳನ್ನು ಮಾಡಿ ಅವುಗಳ ಮೇಲೆ ಗೋಣಿಚೀಲ ಹಾಕಿ ಅವುಗಳ ಮೇಲೆ ಎಲೆಗಳನ್ನು $2\frac{1}{2}$–$7\frac{1}{2}$ ಸೆಂ.ಮೀ. ದಪ್ಪವಾಗಿ ಹರಡುತ್ತಾರೆ.

2. ಅರೆಯುವುದು : ಬಾಡಿಸಿದ ಚಹಾಸೊಪ್ಪನ್ನು ಗ್ರಾನೈಟ್ ಚಕ್ರಗಳ ಸಹಾಯದಿಂದ ಅರೆಯುವುದು ಈ ಹಂತದ ಕೆಲಸ. ದೊಡ್ಡ ದೊಡ್ಡ ಅರೆಯುವ ಯಂತ್ರಗಳಲ್ಲಿ ಎಲೆಗಳನ್ನು ತುಂಬಲು ಅನುಕೂಲವಾಗುವಂತೆ ದೊಡ್ಡ ಆಲಿಕೆಗಳು, ತಿರುಗುವ ಚಕ್ರಗಳು ಮತ್ತು

ಅರೆಯಲಾದ ಎಲೆಗಳನ್ನು ಹೊರಕ್ಕೆ ತೆಗೆಯಲು ಬಾಗಿಲುಗಳು ಇರುತ್ತವೆ. ಚಕ್ರಗಳ ಒತ್ತಡವನ್ನು ಹೆಚ್ಚು ಕಡಿಮೆ ಮಾಡಲು ಅನುಕೂಲಗಳುಂಟು. ಎಲೆಗಳ ಕೋಶಗಳು ಒಡೆದು ಒಳಗಿರುವ ಮುಖ್ಯ ಅಂಶವಾದ ಎಣ್ಣೆ ಮತ್ತು ಇತರ ವಸ್ತುಗಳು ಹೊರಬಂದು ಎಲ್ಲ ಭಾಗವನ್ನೂ ಆವರಿಸುತ್ತವೆ. ಇದರಿಂದ ಮುಂದಿನ ಹಂತವಾದ ಹುಳಿಸುವಿಕೆಗೆ ಅನುಕೂಲವಾಗುತ್ತದೆ. ಅರೆಯುವಾಗ ಉಷ್ಣತೆ ಹೆಚ್ಚದಂತೆ ನೋಡಿಕೊಳ್ಳಲಾಗುತ್ತದೆ. ಇಲ್ಲದಿದ್ದರೆ ಹುಳಿಸುವಿಕೆ ಅಪಕ್ವಸ್ಥಿತಿಯಲ್ಲೇ ನಡೆದುಹೋಗುತ್ತದೆ. ಅರೆಯುವುದನ್ನು 10–30 ಮಿನಿಟುಗಳ ಕಾಲ ಮಾಡಿದ ಅನಂತರ ಅದನ್ನು ಜರಡಿ ಹಿಡಿದು ಮೇಲುಳಿಯುವ ಒರಟು ಭಾಗವನ್ನು ಮತ್ತೆ ಹೆಚ್ಚು ಒತ್ತಡದಿಂದ ಅರೆಯಲಾಗುತ್ತದೆ.

3. ಹುಳಿಸುವುದು : ಅರೆಯುವ ಯಂತ್ರದಿಂದ ಹೊರಬಂದ ಎಲೆಗಳನ್ನು ಸಿಮೆಂಟ್, ಉಕ್ಕು, ಇಲ್ಲವೆ ತಗಡಿನ ಮೇಲೆ $2\frac{1}{2}$–10 ಸೆಂ.ಮೀ. ದಪ್ಪವಿರುವಂತೆ ಹರಡಲಾಗುತ್ತದೆ. ಕೊಠಡಿಯನ್ನು ತಂಪಾಗಿಟ್ಟಿರಲು ನೆಲದ ಮೇಲೆ ನೀರು ಸಿಂಪಡಿಸಿರುವುದುಂಟು. ಕೊಠಡಿಯ ಉಷ್ಣತೆ 75–80° ಈ ಇರುತ್ತದೆ. ಸಾಮಾನ್ಯವಾಗಿ 4–6 ಗಂಟೆಗಳಲ್ಲಿ ಹುಳಿಸುವ ಕಾರ್ಯ ಮುಕ್ತಾಯಗೊಳ್ಳುತ್ತದೆ. ಎಲೆಯ ಬಣ್ಣ ಮತ್ತು ವಾಸನೆಯಿಂದ ಹುಳಿಸುವುದು ಮುಗಿದಿದೆ ಎಂದು ಕಂಡುಕೊಳ್ಳಬಹುದು. ಹಸಿರು ಬಣ್ಣದ ಎಲೆಗಳು ಕೆಂಪು ಮಿಶ್ರಿತ ತಾಮ್ರ ಬಣ್ಣವನ್ನು ತಳೆಯುತ್ತವೆ. ಹುಳಿಸುವುದು ಹೆಚ್ಚಾದರೆ ಎಲೆಗಳು ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಸಿದ್ಧಪಡಿಸಿದ ಚಹಾದ ಗುಣ, ಬಣ್ಣ, ತೀಕ್ಷ್ಣತೆ, ಬಲ ಮತ್ತು ಸುವಾಸನೆ ಈ ಹಂತವನ್ನು ಅವಲಂಬಿಸಿವೆ.

4. ಒಣಗಿಸುವುದು : ಹುಳಿಯುವಿಕೆ ಮುಂದುವರಿಯುವುದನ್ನು ನಿಲ್ಲಿಸಲು ಈ ಕಾರ್ಯ ಆವಶ್ಯಕ. ಆದರೆ ಚಹಾ ಸೊಪ್ಪಿನಲ್ಲಿರುವ ಎಣ್ಣೆ ಆವಿಯಾಗದ ಹಾಗೆ ಉಷ್ಣತೆಯನ್ನು 230–280° F. ವರೆಗೆ ಮಿತಿಗೊಳಿಸುತ್ತಾರೆ. ಬರಬರುತ್ತ 200° F. ಗೆ ಇಳಿಸಲಾಗುತ್ತದೆ. ಎಲೆ ಒಣಗಲು ಸುಮಾರು 30–40 ಮಿನಿಟುಗಳು ಬೇಕಾಗುತ್ತವೆ. ಚೆನ್ನಾಗಿ ಒಣಗಿದ ಮೇಲೆ ತೇವಾಂಶ 3%–6% ಇರುತ್ತದೆ. ಒಣಗಿದ ಎಲೆಗಳು ಗರಿಗರಿಯಾಗಿ, ಮುಟ್ಟಿದರೆ ಹುಡಿಯಾಗುವಂತಿರುತ್ತವೆ. ಅನಂತರ ಒಣಗಿದ ಎಲೆಗಳನ್ನು ಶುಚಿಮಾಡಿ, ಜರಡಿ ಹಿಡಿದು ವಿವಿಧ ದರ್ಜೆಗಳಾಗಿ ವಿಂಗಡಿಸಲಾಗುತ್ತದೆ.

ಸಂಸ್ಕರಿಸಿದ ಚಹಾವನ್ನು ಪ್ಲೈವುಡ್ ಪೆಟ್ಟಿಗೆಗಳಲ್ಲಿ ತುಂಬಿ ಸಗಟು ಮಾರಾಟಕ್ಕೆ ಕಳುಹಿಸುತ್ತಾರೆ. ಪೆಟ್ಟಿಗೆಯ ಅಳತೆ ಸಾಮಾನ್ಯವಾಗಿ 60x47. 5x47.5 ಸೆ.ಮೀ. ಒಳಗೆ ಅಲ್ಯೂಮಿನಿಯಮ್ ಪದರದ ಆವರಣವೊಂದಿದೆ. ಮಾರುಕಟ್ಟೆಗೆ ಕಳುಹಿಸುವ ಮೊದಲು ಆಯಾ ಸಂಸ್ಥೆಗಳು ತಮ್ಮವೇ ಆದ ವಿಶಿಷ್ಟ ಸುವಾಸನೆಗಳನ್ನು ಸೇರಿಸಿ ಸಣ್ಣ ಸಣ್ಣ ಪೊಟ್ಟಣಗಳಲ್ಲಿ ತುಂಬುವುದುಂಟು.

ಕಾರ್ಖಾನೆಗಳಲ್ಲಿ ಚಹಾದ ಗುಣವನ್ನು ಕಂಡುಹಿಡಿಯಲು ಚಹಾದ ರುಚಿನೋಡುವವರಿರುತ್ತಾರೆ. ಅವರು ಪ್ರತಿರಾಶಿಯಿಂದಲೂ ತೆಗೆದ ಮಾದರಿಯಿಂದ ಚಹಾ ಮಾಡಿ ರುಚಿ ನೋಡಿ ಅನಂತರ ಮಾರಾಟಕ್ಕೆ ಬಿಡುಗಡೆ ಮಾಡುತ್ತಾರೆ.

ಹಸುರು ಚಹಾ : ಭಾರತದಲ್ಲಿ ಇದರ ಉಪಯೋಗ ಅಷ್ಟಾಗಿ ಇಲ್ಲ. ಅಮೆರಿಕ, ಚೀನ ಮತ್ತು ಜಪಾನ್‍ಗಳಲ್ಲಿ ಮಾತ್ರ ಇದು ಬಹಳ ಬಳಕೆಯಲ್ಲಿದೆ. ಹಸುರು ಚಹಾ ಸಿದ್ಧಗೊಳಿಸುವಿಕೆಯಲ್ಲಿ ಬಾಡಿಸುವ ಮತ್ತು ಹುಳಿಸುವ ಹಂತಗಳಿರುವುದಿಲ್ಲ. ಅರೆಯುವಾಗ ಎಲೆಗಳ ಕೋಶಗಳು ಒಡೆದು ಅದರೊಳಗಿನ ಪದಾರ್ಥಗಳು ಚಹಾ ಸೊಪ್ಪಿನ ಮೇಲೆ ಹರಡಿ ಹಾಗೆಯೇ ಉಳಿಯುವುದರಿಂದ ಚಹಾ ಪಾನೀಯ ತಯಾರಿಸುವಾಗ ಸುಲಭವಾಗಿ ಸೇರುತ್ತವೆ.

ಊಲಾಂಗ್ ಚಹಾ : ಇಲ್ಲಿ ಚಹಾ ಅರ್ಧ ಹುಳಿಸಲ್ಪಡುತ್ತದೆ. ಇದನ್ನು ಅಮೆರಿಕ ಮತ್ತು ಫಾರ್ಮೋಸಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಈಗ ಇದಕ್ಕೆ ಬೇಡಿಕೆ ಬಹಳ ಕಡಿಮೆಯಾಗಿದೆ.

ಇಟ್ಟಿಗೆ ಚಹಾ : ಇದನ್ನು ಟಿಬೆಟ್ ಮತ್ತು ಮಧ್ಯ ಏಷ್ಯಗಳಲ್ಲಿ ಬಹಳ ಉಪಯೋಗಿಸುತ್ತಾರೆ. ಇದರಲ್ಲಿ ಎಲೆಗಳನ್ನು ಹಬೆಯಲ್ಲಿ ಸ್ವಲ್ಪಕಾಲ ಇಟ್ಟು ಅನಂತರ ಫ್ಯಾನ್ ಮಾಡುತ್ತಾರೆ. ಇದರಿಂದ ಎಲೆಗಳು ಮೃದುವಾಗಿ, ಆಲಿವ್ ಹಸಿರು ಬಣ್ಣವನ್ನು ತಳೆಯುತ್ತವೆ. ಅನಂತರ 1/2 ಗಂಟೆಯ ಕಾಲ ಇವನ್ನು ಯಂತ್ರಗಳಿಂದ ಅರೆದು ಸಿಮೆಂಟ್ ನೆಲ ಅಥವಾ ಚಾಪೆಗಳ ಮೇಲೆ 15 ಸೆಂ.ಮೀ. ಇಲ್ಲವೆ 5–7.5 ಸೆಂ.ಮೀ. ದಪ್ಪವಾಗಿ ಹಾಕಿ ಮೇಲೆ ಟಾರ್‍ಪಾಲಿನ್ ಮುಚ್ಚಿ 4–5 ದಿವಸಗಳ ಕಾಲ ಬಿಡುತ್ತಾರೆ. ಅನಂತರ ಎಲೆಗಳನ್ನು ಒಣಗಿಸಿ ಆರಿಸಿ ದರ್ಜೆಗಳಾಗಿ ವಿಂಗಡಿಸುತ್ತಾರೆ. ಆಮೇಲೆ ಇದನ್ನು ಗಂಜಿಯಲ್ಲಿ ಬೆರೆಸಿ $1\frac{1}{2}$ ಮಿನಿಟ್ ಹವೆಯಲ್ಲಿ ಬೇಯಿಸಿ ಅಚ್ಚುಗಳಲ್ಲಿ ಒತ್ತಿಡುತ್ತಾರೆ. ಈ ಚಹಾದಲ್ಲಿ ಟ್ಯಾನಿನ್ ಅಂಶ ಕಡಿಮೆ ಇರುತ್ತದೆ.

ಚಹಾದ ಹಸಿರು ಎಲೆಯಲ್ಲಿ ವಿವಿಧ ಅಂಶಗಳು ಈ ರೀತಿ ಇವೆ : ಒರಟು ನಾರು 24.00%, ಪಾಲಿಫಿನಾಲ್ (ಟ್ಯಾನಿನ್) 22.00%, ಸಸಾರಜನಕ ಪದಾರ್ಥಗಳು (ಪ್ರೋಟೀನ್) 17.00%, ಕೊಬ್ಬು 8.00%, ಅಮೈನೋ ಆಮ್ಲ 7.00%, ಪೆಕ್ಟಿನ್ 6.50%, ಬೂದಿ 5.00%, ಕೆಫೀನ್ 4.00%, ಸಕ್ಕರೆ 3.00%, ಆರ್ಸಾನಿಕ್ ಆಮ್ಲ 3.00%, ಪಿಷ್ಟ 0.50%, ಅಲ್ಲದೆ ರೈಬೋಫ್ಲೇವಿನ್, ಕ್ಯಾರೊಟೀನ್, ನಿಕೋಟಿನಿಕ್ ಆಮ್ಲ, ಪ್ಯಾಂಟೋತಿನಿಕ್ ಆಮ್ಲ ಮತ್ತು ಆಸ್ಕಾರ್ಬಿಕ್ ಆಮ್ಲ ಕೂಡ ಇವೆ.

ಚಹಾ ಗಿಡದ ರೋಗಗಳು ಮತ್ತು ಕೀಟಗಳು : ಕೀಟಗಳಲ್ಲಿ ಮುಖ್ಯವಾದವು ಸೊಳ್ಳೆಮಚ್ಚೆ ಮತ್ತು ಕೆಂಪು ಜೇಡ. ಸೊಳ್ಳೆ ಮಚ್ಚೆ ಹಾಲೋಪೆಲ್ಟಿಸ್ ಎಂಬ ತಿಗಣೆಯಿಂದ ಉಂಟಾಗುತ್ತದೆ. ಪ್ರಾಯಕ್ಕೆ ಬಂದ ಹುಳು ಹಾರುವಾಗ ಸೊಳ್ಳೆಯ ಹಾಗೆ ಕಾಣುವುದರಿಂದ ಅದಕ್ಕೆ ಸೊಳ್ಳೆಮಚ್ಚೆ ಎಂಬ ಹೆಸರು ಬಂದಿದೆ. ವಯಸ್ಕ ತಿಗಣೆ ಎಲೆಗಳನ್ನು ಕೊರೆದು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳಿಂದ ಹೊರಬರುವ ಡಿಂಭಗಳು ಎಲೆಯ ಅಂಗಾಂಶಗಳನ್ನು ತಿನ್ನುತ್ತವೆ. ದೊಡ್ಡವಾದಂತೆ ಎಲೆಯ ಹೊರಪದರವನ್ನು ತೂತು ಮಾಡಿ ರಸ ಹೀರ ತೊಡಗುತ್ತವೆ. ಈ ರೀತಿ ಎಲೆಗಳ ಮೇಲೆ ಅನೇಕ ತೂತುಗಳಾಗುವುದರಿಂದ ಎಲೆಗಳು ಸುರುಟಿಕೊಂಡು ಕಪ್ಪಾಗುತ್ತವೆ. ಇದಕ್ಕೆ ಪರಿಣಾಮಕಾರಿ ಔಷಧಿಗಳಿಲ್ಲ. ಕೀಟನಾಶಕಗಳನ್ನು ಬಳಸಬಹುದಾದರೂ ಇವು ಎಲೆಗಳನ್ನು ಕೆಡಿಸುವುದಲ್ಲದೆ, ತಿಗಣೆಗಳು ಬೀಳುವ ಸಮಯದಲ್ಲಿ ವಿಪರೀತ ಮಳೆಯೂ ಇರುವುದರಿಂದ ಹಾಕಿದ ನಾಶಕ ತೊಳೆದುಹೋಗುವ ಸಂಭವ ಉಂಟು. ಪ್ರಾರಂಭದಲ್ಲಿ ಬಲೆಗಳಿಂದ ಪ್ರೌಢ ತಿಗಣೆಗಳನ್ನು ಹಿಡಿಯಬಹುದು. ನವೆಂಬರ್‍ನಿಂದ ಫೆಬ್ರವರಿವರೆಗೆ ಸವರಿಕೆಯನ್ನು ಕೈಗೊಂಡು ಚಿಗುರು ಬೇಗ ಬರುವಂತೆ ಮಾಡುವುದರಿಂದ ಸ್ವಲ್ಪ ಮಟ್ಟಿಗೆ ಈ ತಿಗಣೆಗಳ ಕಾಟ ತಡೆಯಬಹುದು.

ಕೆಂಪು ಜೇಡ(ಟೆಟ್ರಾನಿಕಸ್ ಬಯೋಕ್ಯುಲೇಟಸ್) : ಕೆಂಪು ಬಣ್ಣದ ಅತಿ ಸಣ್ಣ ಜೇಡ. ಎಲೆಗಳ ಸಾರವನ್ನು ಹೀರುತ್ತದೆ. ಎಲೆಗಳ ಮೇಲೆ ಅಪಾರ ಸಂಖ್ಯೆಯಲ್ಲಿ ಗುಂಪುಗೂಡುವುದರಿಂದ ಎಲೆಗಳೆಲ್ಲ ಕೆಂಪುಬಣ್ಣದವಾಗಿ ಕಾಣುತ್ತವೆ. ಮೊದಲ ಮಳೆ ಬೀಳುವವರೆಗೆ ಇವುಗಳ ಹಾವಳಿ ಅಪಾರ. ಅನಂತರ ಜೇಡಗಳು ಕಾಣೆಯಾಗುತ್ತವೆ. ಈ ಜೇಡಗಳ ಹಾವಳಿಗೆ ತುತ್ತಾದ ಗಿಡಗಳು ಬಲಹೀನವಾಗುವುದರಿಂದ ಪರಾವಲಂಬಿಗಳಿಗೆ ಸುಲಭವಾಗಿ ಬಲಿಯಾಗುತ್ತವೆ. ಬೂದಿಮಿಶ್ರಿತ ಗಂಧಕದ ಪುಡಿಯನ್ನು ಸಿಂಪಡಿಸುವುದರಿಂದ ಈ ಕೀಟವನ್ನು ಹತೋಟಿಗೆ ತರಬಹುದು. ದೂಳು ಹಾಕುವ ಮೊದಲು ಗಿಡಗಳ ಮೇಲೆ ನೀರನ್ನು ಸಿಂಪಡಿಸಿದರೆ ಧೂಳು ಚೆನ್ನಾಗಿ ಅಂಟಿಕೊಳ್ಳುತ್ತದೆ.

ಇವೆರಡು ಕೀಟ ಪಿಡುಗುಗಳಲ್ಲದೆ ಚಹಾಗಿಡಗಳಿಗೆ ನುಸಿ, ಹಸುರು ನೊಣ, ಪಿಂಕ್ ಜೇಡ ಮತ್ತು ಕೊರೆಯುವ ಹುಳಗಳ ಹಾವಳಿಯೂ ಉಂಟು. ಆದರೆ ಇವು ಅಷ್ಟು ಅಪಾಯಕಾರಿಗಳಲ್ಲ. ಚಹಾ ಗಿಡದ ಬೇರು, ಕಾಂಡ ಮತ್ತು ಎಲೆಗಳನ್ನು ಬಾಧಿಸುವ ಅನೇಕ ರೋಗಗಳೂ ಉಂಟು. ಇವುಗಳಲ್ಲಿ ಅತಿ ಮುಖ್ಯವಾದುದು ಬೇರಿಗೆ ಬರುವ ಮೋಟು ಕೊಳೆತ. ಇದರಿಂದ ಎಲೆಗಳು ಒಣಗಿ ಗಿಡಗಳು ಬಹು ಬೇಗ ಸಾಯುತ್ತವೆ. ರೋಗಪೀಡಿತ ಗಿಡದ ಬೇರುಗಳನ್ನು ಅಗೆದು ನೋಡಿದರೆ ಅವು ಮರಳು, ಮಣ್ಣು ಮತ್ತು ಶಿಲೀಂಧ್ರಗಳಿಂದ ಕೂಡಿ ಮುದ್ದೆಯಾಗಿರುವುದನ್ನು ಗಮನಿಸಬಹುದು. ಈ ರೋಗ ಉಸ್ಟುಲೂನ ಜೊನೇಟ ಮತ್ತು ರೋಸೆಲಿನಿಯ ಶಿಲೀಂಧ್ರಗಳಿಂದ ಬರುತ್ತದೆ. ಇದು ಮಣ್ಣಿನ ಮೂಲಕ ಹಾಗೂ ಇತರ ಗಿಡಗಳ ಮೋಟುಗಳ ಮೂಲಕ ಹರಡುತ್ತದೆ. ರೋಗಪೀಡಿತ ಗಿಡಗಳನ್ನು ಕಿತ್ತು ಸುಡಬೇಕು. ಚಹಾಗಿಡದ ಇನ್ನೊಂದು ರೋಗವಾದ ಕಾಂಡ, ರೆಂಬೆ ಮತ್ತು ಎಲೆಗಳಿಗೆ ಬರುವ ಕೆಂಪು ತುಕ್ಕುರೋಗ ಬಹಳ ಅಪಾಯಕಾರಿಯಾದುದು. ಇದು ಸೆಫಲ್ಯೂರಸ್ ಮೈಕಾಯ್ಡಿಯ ಎಂಬ ಪರೋಪಜೀವಿ ಪಾಚಿಯಿಂದ ಉಂಟಾಗುತ್ತದೆ. ಬಹಳ ಕಾಲ ಉಪೇಕ್ಷ ಮಾಡಿದರೆ ಈ ರೋಗದಿಂದ ಗಿಡಗಳು ಸಾಯುತ್ತವೆ. ಇದು ಗಾಳಿ ಮತ್ತು ನೀರಿನ ಮೂಲಕ ಹರಡುತ್ತದೆ. ಗಿಡಗಳನ್ನು ಸವರಿದ ಅನಂತರ ಬೋರ್ಡೊ ದ್ರಾವಣವನ್ನು ಸಿಂಪಡಿಸುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ಇವಲ್ಲದೆ ಕಂದುಮಚ್ಚೆ ರೋಗ ಮತ್ತು ದಾರಮಚ್ಚೆ ರೋಗಗಳೂ ಚಹಾ ಗಿಡಗಳಲ್ಲಿ ಕಂಡುಬರುತ್ತವೆ. ಸವರುವುದರ ಮೂಲಕ ಎರಡನೆಯದನ್ನೂ ತಡೆಯಬಹುದು.

**ಚಹಾ ಪಾನೀಯ :** ಸಿದ್ಧಪಡಿಸಿದ ಚಹಾ ಪುಡಿಯಿಂದ ಚಹಾಪಾನೀಯ ತಯಾರಿಸಿ ಕುಡಿಯುವುದು ಎಲ್ಲರಿಗೂ ತಿಳಿದದ್ದೇ. ಇದಕ್ಕೆ ಸಕ್ಕರೆ, ಹಾಲು ಸೇರಿಸಿ ಕುಡಿಯುತ್ತಾರೆ. ಕೆಲವರು ಸಕ್ಕರೆ ಇಲ್ಲದೆ ಸೇವಿಸುವುದೂ ಉಂಟು. ಕೆಲವು ಕಡೆ ಚಹಾ ಪಾನೀಯಕ್ಕೆ ಸುಗಂಧಗಳನ್ನು ಇಲ್ಲವೆ ಮಾದಕ ಪಾನೀಯಗಳನ್ನು ಬೆರೆಸಿ ಕುಡಿಯುವ ರೂಢಿ ಇದೆ. ಇತ್ತೀಚೆಗೆ ಒಂದು ಬಟ್ಟಲಿಗೆ ಬೇಕಾಗುವಷ್ಟು ಪುಡಿಯನ್ನು ಸಣ್ಣ ಬಟ್ಟೆ ಚೀಲಗಳಲ್ಲಿಟ್ಟು 'ಟೀಬ್ಯಾಗ್' ಮಾರುವುದುಂಟು. ಒಂದು ಬಟ್ಟಲಿಗೆ ಕುದಿಯುವ ನೀರು ಹಾಕಿ, ಇಂಥ ಒಂದು ಚೀಲವನ್ನು, ಮುಳುಗಿಸಿ, ಕೆಲವು ಕಾಲದ ನಂತರ ಚೀಲ ತೆಗೆದು ಹಾಕಿ

ಪಾನೀಯ ಬಳಸಬಹುದು. ಇದರಿಂದ ಸೋಸುವ ಕೆಲಸ ತಪ್ಪುತ್ತದೆ. ಈಗೀಗ ಕ್ಷಿಪ್ರ ಚಹಾವನ್ನೂ ತಯಾರಿಸಿದ್ದಾರೆ. ಕುದಿಯುವ ನೀರಿಗೆ ಈ ಪುಡಿ ಹಾಕಿ ಸಕ್ಕರೆ, ಹಾಲು ಸೇರಿಸಿದರೆ ಪಾನೀಯ ಕುಡಿಯಲು ಸಿದ್ಧವಾಗುತ್ತದೆ.

ಚಹಾಪುಡಿಯ ವೈದ್ಯಕೀಯ ಗುಣಗಳು : ಚಹಾ ಪಾನೀಯದಂತೆ ಬಳಸಲು ಮುಖ್ಯವಾದ ಅಂಶವೆಂದರೆ ಅದರಲ್ಲಿರುವ ತೀಯೀನ್ (ಆಲ್‌ಕಲಾಯ್ಡ್ ಕೆಫೀನ್). ಒಣಗಿದ ಚಹಾದಲ್ಲಿ 2–5% ತೀಯೀನ್ ಇರುತ್ತದೆ. ಇದು ಹೃದಯದ ಕ್ರಿಯೆಯನ್ನು ಪ್ರಚೋದಿಸುತ್ತದೆ. ಇದರಲ್ಲಿರುವ ಟ್ಯಾನಿನ್ ಚಹಾಕ್ಕೆ ಬಂಧಕ (ಅಸ್ಟ್ರಿಂಜೆಂಟ್) ಗುಣ ಕೊಡುತ್ತದೆ. ತೀಯೀನ್ ಸಣ್ಣ ಮಿದುಳಿಗಿಂತ ಮಾಂಸಖಂಡಗಳಿಗೆ ಹೆಚ್ಚು ಪ್ರಚೋದಕವಾಗಿದೆ. ಸಾಧಾರಣ ಪ್ರಮಾಣದಲ್ಲಿ ಚಹಾವನ್ನು ಸೇವಿಸಿದರೆ ದೇಹದ ದಣಿವು ಪರಿಹಾರವಾಗುತ್ತದೆ. ಚಹಾ ಮೂತ್ರಸ್ರಾವವನ್ನು ಉತ್ತೇಜಿಸುತ್ತದೆ. ಆದರೆ ಹೆಚ್ಚಾಗಿ ಸೇವಿಸಿದರೆ ಜೀರ್ಣಾಂಗಗಳನ್ನು ಘಾಸಿಪಡಿಸುತ್ತದೆ. ಕಣ್ಣಿನ ಚರ್ಮದ ಊತ ಬಾಧೆ ನಿವಾರಿಸಲು ಚಹಾ ಎಲೆಯ ಕಷಾಯವನ್ನು ಬಳಸುತ್ತಾರೆ. (ಕೆ.ಆರ್.ಜಿ.ಎ.; ಪಿ.ಕೆ.ಆರ್.ಎ.)

**ಚಳ್ಳಕೆರೆ :** ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಮುಖ್ಯಸ್ಥಳ. ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದೆ. ಈ ತಾಲ್ಲೂಕಿನ ಪೂರ್ವದಲ್ಲಿ ಆಂಧ್ರ ಪ್ರದೇಶ ಮತ್ತು ಪಾವಗಡ ತಾಲ್ಲೂಕು, ದಕ್ಷಿಣದಲ್ಲಿ ಹಿರಿಯೂರು ತಾಲ್ಲೂಕು, ಪಶ್ಚಿಮದಲ್ಲಿ ಜಗಳೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳು, ಉತ್ತರದಲ್ಲಿ ಬಳ್ಳಾರಿ ಜಿಲ್ಲೆ ಮತ್ತು ಮೊಳಕಾಲ್ಮೂರು ತಾಲ್ಲೂಕು ಇವೆ. ತಾಲ್ಲೂಕಿನ ವಿಸ್ತೀರ್ಣ 792.2 ಚ.ಮೈ. (2.067.4 ಚ.ಕಿಮೀ) 161 ಹಳ್ಳಿಗಳಿಂದಲೂ 2 ಪಟ್ಟಣಗಳಿಂದಲೂ ಕೂಡಿರುವ ಈ ತಾಲ್ಲೂಕಿನ ಜನಸಂಖ್ಯೆ 3,24,822 (2001).

ನಾಯಕನಹಟ್ಟಿಯಲ್ಲಿಯ ತಿಪ್ಪೇರುದ್ರಸ್ವಾಮಿ ಮಠ

1882 ರವರೆಗೆ ಇದಕ್ಕೆ ದೊಡ್ಡೇರಿ ತಾಲ್ಲೂಕು ಎಂಬ ಹೆಸರಿತ್ತು. 1825 ರಿಂದ 1866ರವರೆಗೆ ಮೊಳಕಾಲ್ಮೂರು ತಾಲ್ಲೂಕಿನ ಪ್ರದೇಶ ಇದಕ್ಕೆ ಸೇರಿತ್ತು. ಈ ತಾಲ್ಲೂಕಿನಲ್ಲಿ ಚಳ್ಳಕೆರೆ, ನಾಯಕನಹಟ್ಟಿ, ಪರಶುರಾಮಪುರ ಮತ್ತು ತಳಕು ಎಂಬ ನಾಲ್ಕು ಹೋಬಳಿಗಳಿವೆ.

ಎತ್ತರವಾದ ಹಾಗೂ ಪ್ರಮುಖವಾದ ಯಾವ ಬೆಟ್ಟಗಳ ಸಾಲೂ ಈ ತಾಲ್ಲೂಕಿನಲ್ಲಿಲ್ಲ. ಚದರಿದಂತೆ ಕೆಲವು ಶಿಲಾಮಯ ಬೆಟ್ಟಗಳಿವೆ. ತಾಲ್ಲೂಕಿನ ಉಳಿದ ಭಾಗ ಮೈದಾನ. ಈ ತಾಲ್ಲೂಕಿನ ವಿಸ್ತೃತವಾದ ಅಮೃತಮಹಲ್ ಕಾವಲುಗಳು ಪ್ರಸಿದ್ಧವಾಗಿವೆ. ಸಣ್ಣ ತೊರೆಗಳ ದಡಗಳಲ್ಲಿ, ಕೆರೆಯಂಗಳ ಮತ್ತಿತರ ತಗ್ಗು ಪ್ರದೇಶಗಳಲ್ಲಿ ಖರ್ಜೂರದ ಗಿಡಗಳುಂಟು. ವೇದಾವತಿ ನದಿ ಅತ್ಯಂತ ದಕ್ಷಿಣದ ಅಂಚಿನಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ, ದಕ್ಷಿಣೋತ್ತರವಾಗಿ ಹರಿದು, ಈಶಾನ್ಯ ದಿಕ್ಕಿಗೆ ತಿರುಗಿ ಘಟಪರ್ತಿ ಎಂಬಲ್ಲಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದರ ಉಪನದಿಗಳು ಗರಣಿ ಮತ್ತು ನಾಯಕನ ಹಟ್ಟಿ. ಈ ನದಿಯ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ.

ನಂದಿಹಳ್ಳಿಯಲ್ಲಿ ನಿರ್ಮಾಣವಾಗುವ ಅಣೆಕಟ್ಟಿನಿಂದ ಈ ತಾಲ್ಲೂಕಿಗೆ ಹೇರಳವಾದ ನೀರು ಒದಗುವ ಭರವಸೆಯುಂಟು. ಪಾವಗಡ ತಾಲ್ಲೂಕಿನಲ್ಲಿ ಹುಟ್ಟಿ, ಈ ತಾಲ್ಲೂಕಿನ ಕಡೆಗೆ ಹರಿಯುವ ಮತ್ತೊಂದು ಪುಟ್ಟ ಉಪನದಿ ಈ ತಾಲ್ಲೂಕಿನ ಆಗ್ನೇಯ ಭಾಗಕ್ಕೆ ನೀರಾವರಿ ಒದಗಿಸುತ್ತದೆ. ವಾಯವ್ಯ ಮೂಲೆಯ ಪ್ರದೇಶಗಳಿಗೆ ನೀರಾವರಿಗೆ ಒದಗಿಬಂದಿರುವ ನದಿ ಹಗರಿ. ಇದು ತಾಲ್ಲೂಕಿನ ವಾಯವ್ಯದ ಎಲ್ಲೆ.

ಈ ತಾಲ್ಲೂಕಿನಲ್ಲಿ ಚಳ್ಳಕೆರೆ ಪಟ್ಟಣದ ಪೂರ್ವಕ್ಕೆ, ಉಲ್ಲರ್ವರ್ತಿಕಾವಲ್‌ನಲ್ಲಿ ಮಣ್ಣಿನ ಮೇಲ್ಭಾಗದಲ್ಲಿ ಉರುಳೆಯಾಕಾರದ ಹರಳುಗಳ ರೂಪದಲ್ಲಿ ಪಾಟಲವರ್ಣದ ಕುರುಂದ ಶಿಲೆ ದೊರೆಯುತ್ತದೆ. ಇದನ್ನು ವಾಣಿಜ್ಯದೃಷ್ಟಿಯಿಂದ ವಿಶೇಷವಾಗಿ ತೆಗೆಯುತ್ತಿಲ್ಲ.

ಚಿತ್ರದುರ್ಗ ಜಿಲ್ಲೆಯ ಅತ್ಯಂತ ಕಡಿಮೆ ಮಳೆಯ ತಾಲ್ಲೂಕು ಚಳ್ಳಕೆರೆ. ಸರಾಸರಿ ವಾರ್ಷಿಕ ಮಳೆ 455.5 ಮಿಮೀ. ಮೇ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಹೆಚ್ಚಿನ ಮಳೆ.

ನೀರಾವರಿಗೆ ಒಳಪಟ್ಟಿರುವ ಭೂಮಿ ವಿನಾ ಉಳಿದ ನೆಲ ಅಷ್ಟೇನೂ ಫಲವತ್ತಾಗಿಲ್ಲ. ತಾಲ್ಲೂಕಿನ ನೈರುತ್ಯ ಭಾಗದಲ್ಲಿ ಸ್ವಲ್ಪಮಟ್ಟಿಗೆ ಉತ್ತಮವಾದ ಕಪ್ಪುಮಣ್ಣಿನ ಪ್ರದೇಶವಿದೆ. ಅನೇಕ ಕಡೆಗಳಲ್ಲಿಯ ಮಣ್ಣು ಲವಣಯುಕ್ತವಾದದ್ದು.

ಬೆಂಗಳೂರು–ಬಳ್ಳಾರಿ ಬಾಟಾಮಾರ್ಗ ಈ ತಾಲ್ಲೂಕಿನಲ್ಲಿ ಉತ್ತರ–ದಕ್ಷಿಣವಾಗಿ ಹಾಯ್ದುಹೋಗುತ್ತದೆ. ಚಿತ್ರದುರ್ಗದಿಂದ ಬರುವ ರಸ್ತೆಯೊಂದು ಇದನ್ನು ಚಳ್ಳಕೆರೆಯಲ್ಲಿ ಸಂಧಿಸುತ್ತದೆ. ಚಳ್ಳಕೆರೆಯಿಂದ ಪಾವಗಡ ಮತ್ತು ಜಗಳೂರುಗಳಿಗೆ ರಸ್ತೆಗಳುಂಟು. ಈ ತಾಲ್ಲೂಕಿನಲ್ಲಿ ರೈಲುಮಾರ್ಗವಿಲ್ಲ. ಬಹಳ ಹತ್ತಿರದ ರೈಲುನಿಲ್ದಾಣವೆಂದರೆ ಚಿತ್ರದುರ್ಗ.

ಚಳ್ಳಕೆರೆ ಪಟ್ಟಣ ಬೆಂಗಳೂರು–ಬಳ್ಳಾರಿ ರಸ್ತೆಯಲ್ಲಿ ಚಿತ್ರದುರ್ಗದಿಂದ ಈಶಾನ್ಯ ಮೂಲೆಗೆ 29 ಕಿಮೀ ದೂರದಲ್ಲಿ ಉ.ಅ.14° 18' ಮತ್ತು ಪೂ.ರೇ. 76° 43' ಮೇಲೆ ಇದೆ. ಜನಸಂಖ್ಯೆ 49,065 (2001). ಇಲ್ಲೊಂದು ಪುರಸಭೆಯಿದೆ. ಪ್ರತಿ ಭಾನುವಾರ ಇಲ್ಲಿ ನಡೆಯುವ ಸಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಂತ ಪ್ರಸಿದ್ಧವಾದ್ದು. ಜಿಲ್ಲೆಯ ಎಲ್ಲ ಕಡೆಗಳಿಂದಲೂ ಸುಮಾರು 5,000 ಕ್ಕೂ ಹೆಚ್ಚು ಜನ ಬರುತ್ತಾರೆ. ನೆಲಗಡಲೆ, ಹತ್ತಿ, ಬತ್ತ ಇವು ಇಲ್ಲಿ ವ್ಯಾಪಾರವಾಗುವ ಸರಕುಗಳು. ಚಳ್ಳಕೆರೆ ಪಟ್ಟಣದಲ್ಲಿ ನಿಯಂತ್ರಿತ ಮಾರುಕಟ್ಟೆಯೂ ಉಂಟು. ಈ ಪಟ್ಟಣದ ದೇವತೆ ಚಳ್ಳಕೆರೆ ಅಮ್ಮ. ಇಲ್ಲಿಯ ಪುರ ಪ್ರೌಢಶಾಲೆ ಇಡೀ ಜಿಲ್ಲೆಯಲ್ಲೇ ಹಳೆಯದು. ಚಳ್ಳಕೆರೆಯ ಬಳಿ ಹತ್ತಾರು ಎಣ್ಣೆ ಗಿರಣಿಗಳುಂಟು. ಚಳ್ಳಕೆರೆ ಪಟ್ಟಣದಲ್ಲೂ ತಾಲ್ಲೂಕಿನ ಅನೇಕ ಕಡೆಗಳಲ್ಲೂ ಅನೇಕ ಹತ್ತಿ ಕೈಮಗ್ಗಗಳುಂಟು. (ಕೆ.ಆರ್.ಆರ್.)

**ಚಳ್ಳಾಗುರ್ಕಿ :** ಬಳ್ಳಾರಿ ತಾಲ್ಲೂಕಿನ ಅನಂತಪುರ ರಸ್ತೆಯಲ್ಲಿ ಬಳ್ಳಾರಿಯಿಂದ 26 ಕಿಮೀ ದೂರದಲ್ಲಿರುವ ಗ್ರಾಮ. ಎರ್ರಿತಾತ ಎಂಬ ಮಹಾಪುರುಷನ ಜೀವಸಮಾಧಿ ಇಲ್ಲಿರುವುದರಿಂದ ಪ್ರಸಿದ್ಧ ಯಾತ್ರಾಸ್ಥಳವೆನಿಸಿದೆ. ಈ ಮಹಾಪುರುಷ ಬಡಕುಟುಂಬದಲ್ಲಿ ಜನಿಸಿ ಸಾಕಷ್ಟು ವಿದ್ಯಾಭ್ಯಾಸವೂ ಇಲ್ಲದೆ ಬೆಳೆದು ಉತ್ತಮ ಸಾಧಕನಾಗಿ ತನ್ನ ಆಧ್ಯಾತ್ಮಿಕ ವರ್ಚಸ್ಸಿನಿಂದ ಸಾಧುವಾಗಿ ಮಾರ್ಪಟ್ಟ. 1897ರಲ್ಲಿ ಈತ ಚೆಳ್ಳಾಗುರ್ಕಿಗೆ ಬಂದು ನೆಲಸಿದ. 25 ವರ್ಷ ಅಲ್ಲಿ ವಾಸವಾಗಿದ್ದ. 1922ರಲ್ಲಿ ಸಮಾಧಿಸ್ಥನಾದ. ಅನೇಕ ಪವಾಡಗಳನ್ನೂ, ಮಹಿಮೆಗಳನ್ನೂ ಮೆರೆದ ಖ್ಯಾತಿ ಈತನದು. ಈಗಲೂ ಕರ್ನಾಟಕದ ಮೂಲೆ ಮೂಲೆಗಳಿಂದ ಯಾತ್ರಿಕರು ಬಹುಸಂಖ್ಯೆಯಲ್ಲಿ ಇಲ್ಲಿಗೆ ಬಂದು ಪೂಜೆಸಲ್ಲಿಸಿ ಹೋಗುತ್ತಾರೆ. ವಿಶೇಷವಾಗಿ, ಅಮಾವಾಸ್ಯೆಯ ದಿನಗಳಲ್ಲಿ ಭಕ್ತಸಮೂಹ ಇಲ್ಲಿ ಹೆಚ್ಚಾಗಿರುತ್ತದೆ. ಪ್ರತಿವರ್ಷ ಇಲ್ಲಿ ರಥೋತ್ಸವದ ವೇಳೆಯಲ್ಲಿ ದೊಡ್ಡ ಜಾತ್ರೆ ಸೇರುತ್ತದೆ. ಈ ಕ್ಷೇತ್ರದಲ್ಲಿ ಯಾತ್ರಿಕರಿಗೆ ಊಟವಸತಿಯ ಸೌಕರ್ಯಗಳಿವೆ. ಇಲ್ಲಿನ ಜನರಿಗಾಗಿ ಪ್ರೌಢಶಾಲೆ, ಆಸ್ಪತ್ರೆಗಳನ್ನು ನಡೆಸಲಾಗುತ್ತದೆ. (ಜಿ.ಆರ್.ಪಿ.)

**ಚಾಂಗ್‌ಷಾ :** ಚೀನದ ಒಂದು ನಗರ, ಹೂನಾನ್ ಪ್ರಾಂತ್ಯದ ಮುಖ್ಯ ಪಟ್ಟಣ. ಷಿಯಾಂಗ್ ನದಿಯ ಪೂರ್ವದ ದಂಡೆಯ ಮೇಲೆ ಉ.ಅ. 28° 12' ಮತ್ತು ಪೂ.ರೇ. 112° 59' ರಲ್ಲಿದೆ. ವಿಸ್ತೀರ್ಣ 1819 ಚ.ಕಿಮೀ. ಜನಸಂಖ್ಯೆ ಸುಮಾರು 7,044,118(2010). ಮಧ್ಯ ಯಾಂಗ್ಸ್ ಟೀ ಕಣಿವೆಯ ಮಹಾದ್ವಾರದಂತಿರುವುದರಿಂದ ಹಿಂದಿನಿಂದಲೂ ಇದಕ್ಕೆ ಪ್ರಾಶಸ್ತ್ಯ. ಯಾಂಗ್‌ಸ್ಟೀ ನದಿಯಲ್ಲಿ ಉಗಿ ಜಹಜುಗಳು ಇಲ್ಲಿಯವರೆಗೂ ಸಂಚರಿಸುತ್ತವೆ. ಚೀನದ ಚಹಕ್ಕಾಗಿ ಮತ್ತು ಈ ಸುತ್ತಿನ ಜನರಿಗೆ ತಮ್ಮ ರೇಷ್ಮೆ ಸರಕುಗಳನ್ನು ಮಾರುವುದಕ್ಕಾಗಿ ಪಾಶ್ಚಾತ್ಯ ವ್ಯಾಪಾರಿಗಳು ಇಲ್ಲಿಗೆ ಬರುತ್ತಿದ್ದರು. ರೇಷ್ಮೆ ಕಸೂತಿ ಚಿತ್ರಗಳು,

ಬೆಣ್ಣೆ ಕಾಗದದ ಕೊಡೆಗಳು, ಲಿನನ್, ಕುಂಚ ಲೇಖನಿಗಳು, ಬೊಂಬಿನಲ್ಲಿ ಕಡೆದ ಚಿತ್ರಗಳು – ಇವುಗಳಿಗಾಗಿ ಚಾಂಗ್‌ಷಾ ಪ್ರಸಿದ್ಧ. ಅಕ್ಕಿಗಿರಣಿ, ಮರ ಕೊಯ್ಯುವುದು, ದೋಣಿ ರಚನೆ, ಆಂಟಿಮೊನಿ, ಮ್ಯಾಂಗನೀಸ್, ಸೀಸ ಮತ್ತು ಸತುಗಳನ್ನು ಕರಗಿಸುವುದು – ಇವು ಇಲ್ಲಿದ್ದ ಕೈಗಾರಿಕೆಗಳು. ಈ ಕೈಗಾರಿಕೆಗಳ ಸರಕುಗಳು ಬಹುತೇಕ ರಫ್ತಾಗುತ್ತಿದ್ದುವು. ಯಂತ್ರೋಪಕರಣ, ಗಣಿಗಾರಿಕೆ, ಕೃಷಿ ಸಲಕರಣೆ, ಔಷಧ, ರಸಗೊಬ್ಬರ ಮತ್ತು ರಬ್ಬರ್ ಉತ್ಪನ್ನಗಳ ಕೈಗಾರಿಕೆಗಳು ಈಚೆಗೆ ಆರಂಭವಾಗಿವೆ. ಚಾಂಗ್‌ಷಾದಿಂದ ಚೀನದ ಇತರ ಸ್ಥಳಗಳಿಗೆ ಭೂಜಲ ಸಂಪರ್ಕವುಂಟು. ಪೀಕಿಂಗ್, ಕ್ವಾಂಗ್‌ಜೋ (ಕ್ಯಾಂಟನ್), ಜಜಿಯಾಂಗ್, ಗ್ವೇಜೋಗಳಿಗೆ ರೈಲ್ವೆ ಮಾರ್ಗಗಳಿವೆ. ರಸ್ತೆಗಳ ಪೈಕಿ ಚಾಂಗ್‌ಷಾ–ಸಿಚ್ವಾನ್ ಹೆದ್ದಾರಿ ಮುಖ್ಯವಾದ್ದು.

ಚಾಂಗ್‌ಷಾ ಹಿಂದೆ ಚು ರಾಜ್ಯದ ರಾಜಧಾನಿಯಾಗಿತ್ತು. ಚು ರಾಜ್ಯ ಹ್ಯಾನ್ ಚಕ್ರಾಧಿಪತ್ಯದಲ್ಲಿ ವಿಲೀನವಾದ ಅನಂತರವೂ ಸ್ವತಂತ್ರ ರಾಜನೊಬ್ಬನಿಂದ ಆಳಲ್ಪಡುವ ಮಾನ್ಯತೆ ಪಡೆದಿತ್ತು. ಚಾಂಗ್‌ಷಾ ನಗರದ ಕೋಟೆಯ ಗೋಡೆಗಳ ಹೊರಭಾಗದಲ್ಲಿ ಪ್ರ.ಶ.3 ಮತ್ತು 2ನೆಯ ಶತಮಾನಗಳಿಗೆ ಸೇರಿದ ಕೆಲವು ಸಮಾಧಿಗಳಿವೆ. ಈ ಪ್ರದೇಶದ ಭೂಮಿಯ ತಂಪುಗುಣದಿಂದ ಮರ ಮತ್ತು ಅರಗಿನಿಂದ ಮಾಡಿದ ಅನೇಕ ವಸ್ತುಗಳು ನಾಶಗೊಳ್ಳದೆ ಉಳಿದುಕೊಂಡಿವೆ. ಈ ಸಮಾಧಿಗಳಲ್ಲಿ ದೊರಕಿದ ಅವಶೇಷಗಳು ಪರಸಂಸ್ಕೃತಿಯೊಂದಕ್ಕೆ ಸಂಬಂಧಪಟ್ಟುವೆಂಬುದನ್ನು ಸೂಚಿಸುತ್ತವೆ. ಇದರ ಅನೇಕ ಅಂಶಗಳು ಸೈಬೀರಿಯ ಪ್ರದೇಶದ ಯೂರಲ್ ಅಲ್ಟಾ‌ಯಿ ಜನಾಂಗದ ಪ್ರಾಚೀನ ಮತಪದ್ಧತಿಗಳನ್ನು ಹೋಲುತ್ತವೆ. ಈ ಅವಶೇಷಗಳಲ್ಲಿ ಮುಖ್ಯವಾದವೆಂದರೆ ಮರದ ಪ್ರತಿಮೆಗಳು. ಮಾನವನ ತಲೆ, ಉದ್ದ ನಾಲಗೆ ಮತ್ತು ಗುಡ್ಡೆಗಣ್ಣುಗಳಿರುವಂತೆ ಇವನ್ನು ಕಡೆಯಲಾಗಿದೆ. ಮೃತರ ಸಮಾಧಿಗಳಲ್ಲಿ ಸೇವಕರ ಪ್ರತಿಮೆಗಳೂ ಅರಗಿನ ವಸ್ತುಗಳೂ ಇದ್ದುವು. ಅರಗಿನ ವಸ್ತುಗಳು ಹ್ಯಾನ್ ಕಾರ್ಖಾನೆಗಳಲ್ಲಿ ಮಾಡಿದ್ದವೆಂದು ಊಹಿಸಲು ಆಧಾರಗಳುಂಟು. ಸಮಾಧಿಯೊಂದರಲ್ಲಿ ಅತ್ಯಂತ ಪ್ರಾಚೀನವಾದ ಬರೆಯುವ ಕುಂಚ ದೊರೆತಿದೆ. (ಎಂ.ಎಸ್.ಎನ್.ಎ.)

**ಚಾಂಗದೇವ :** ಪ್ರಸಿದ್ಧ ಹಠಯೋಗಿ. ರಾಜಯೋಗದಲ್ಲಿ ನಿಪುಣನಾದ ಜ್ಞಾನೇಶ್ವರನ ಸಮಕಾಲೀನ, ಮುಕ್ತಾಬಾಯಿಯಿಂದ ಉಪದೇಶ ಪಡೆದವ. ಒಮ್ಮೆ ಚಾಂಗದೇವ ಬರಹವಿಲ್ಲದ ಕಾಗದ ಒಂದನ್ನು ಪತ್ರವೆಂಬಂತೆ ಜ್ಞಾನದೇವನಿಗೆ ಕಳುಹಿಸಿದ. ಅದಕ್ಕೆ ಉತ್ತರವಾಗಿ ಜ್ಞಾನೇಶ್ವರ 'ಚಾಂಗದೇವ ವಾಸಷ್ಟಿ' ಎಂಬ ಪತ್ರವನ್ನು ಕಳಿಸಿದ. ಇದರಿಂದ ಚಾಂಗದೇವನ ಗರ್ವಹರಣವಾಯಿತು. ಹಠಯೋಗವನ್ನು ತೊರೆದು, ಅದಕ್ಕಿಂತ ನೇರ ಪರಮಾತ್ಮನ ಸಾಕ್ಷಾತ್ಕಾರವೇ ಮೇಲೆಂದು ನಂಬಿ ಅದಕ್ಕಾಗಿ ಸಾಧನೆ ಮಾಡಿದ. ಸಂತರಿಗೆ ತಾನು ಶರಣು ಬಂದ ವಿಷಯವನ್ನು ತನ್ನ ಅಭಂಗಗಳಲ್ಲಿ ಚಾಂಗದೇವ ಬಹಳ ಚೆನ್ನಾಗಿ ಹೇಳಿದ್ದಾನೆ: 'ಜ್ಞಾನದೇವ ಹರಿವಾಣದ ತುಂಬ ಮುತ್ತಿನ ನೀರನ್ನು ಕುಡಿದು ತೇಗಿದ. ನಿವೃತ್ತಿನಾಥ ಮೋಡಗಳ ನೆರಳನ್ನೇ ಕೈಯಲ್ಲಿ ಹಿಡಿದು ನಡೆದ. ಸೋಪಾನದೇವ ಹೂವುಗಳ ಹುಡಿಯ ಹಾರವನ್ನು ಧರಿಸಿದ. ಮುಕ್ತಾಬಾಯಿ ಹೀರಕದ ಹುಗ್ಗಿಯನ್ನು ಉಂಡು ತೇಗಿದಳು. ಈ ನಾಲ್ಕು ಜನರ ಮರ್ಮವನ್ನು ಚಾಂಗದೇವ ಸರಿಯಾಗಿ ಅರಿತಿದ್ದಾನೆ. 'ಚಾಂಗದೇವ ಶಾಂತಿಸತಿಯನ್ನು ವರಿಸಲು ನಡೆದಾಗ ಮುಕ್ತಬಾಯಿ ಕಳಸಗಿತ್ತಿಯಾಗಿ ಅರಿಸಿಣ ಹಚ್ಚಿದಳು. ಇದು ಜೀವ ಆತ್ಮರ ಮದುವೆಯೇ ಸರಿ– ಎಂದೂ ತಂಗಳಿಲ್ಲದೆ ನಾನು ಸ್ವರೂಪವನ್ನು ಕಂಡೆ– ಎಂದೂ ತನ್ನ ಅನುಭವವನ್ನು ಚಾಂಗದೇವ ಬಿತ್ತರಿಸಿದ್ದಾನೆ; ಶಬ್ದಗಳು ಕೇಳಿಸುವುವೇ ಹೊರತು ದೇವದೇವ ಕಾಣಿಸುವುದಿಲ್ಲ, ಯಾವಾಗಲೂ ಝುಣ ಝುಣ ಝುಣವೆಂದು ಕಿನ್ನರಿಯ ನಾದ ಹೊರಡುವುದು, ಅದನ್ನು ಕೇಳಿ ಚಾಂಗದೇವ ಆನಂದದಿಂದ ಮೈಮರೆಯುವನು– ಎಂದು ತನ್ನ ಅಂತರಂಗಸಿದ್ಧಿಯ ವಿಷಯದಲ್ಲಿ ಹೇಳಿಕೊಂಡಿದ್ದಾನೆ. (ಎಂ.ಎ.)

**ಚಾಂಡ್ಲರ್, ರೇಮಾಂಡ್ ಥಾರನ್‌ಟನ್ :** 1888–1959. ಅಮೆರಿಕದ ಪತ್ತೇದಾರಿ ಕಾಂದಬರಿಕಾರ, ಷಿಕಾಗೊದಲ್ಲಿ ಹುಟ್ಟಿದ ಈತ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡಿದ. ಒಂದನೆಯ ಮಹಾಯುದ್ಧದಲ್ಲಿ ಕೆನೆಡಿಯನ್ ಸೈನಿಕರೊಂದಿಗೆ ಹೋರಾಡಿ 1919ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಹಿಂತಿರುಗಿದ. ಅಲ್ಲಿ ಹಲವಾರು ವ್ಯವಹಾರಗಳಲ್ಲಿ ತೊಡಗಿ ಹಲವು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯತೊಡಗಿದ. ದಿ ಬಿಗ್ ಸ್ಲೀಪ್ (1939), ಫೇರ್‌ವೆಲ್, ಮೈ ಲವ್ಲೀ(1940) ಕಾದಂಬರಿಗಳು ಪ್ರಕಟಗೊಂಡ ಮೇಲೆ ಕ್ಲಿಷ್ಟ ಹಾಗೂ ಭಯಾನಕ ಪತ್ತೇದಾರಿ ಕಥೆಗಳ ಪ್ರವರ್ತಕನೆಂದು ಹೆಸರಾದ. ಅನಂತರ ದಿ ಹೈ ವಿಂಡೊ (1942), ದಿ ಲೇಡಿ ಇನ್ ದಿ ಲೇಕ್ (1943), ದಿ ಲಿಟ್ಲ್ ಸಿಸ್ಟರ್ (1949) ಪ್ರಕಟಗೊಂಡವು. ಈತನ ಎಲ್ಲ ಕಾಂದಬರಿಗಳಲ್ಲೂ ಫಿಲಿಪ್ ಮಾರ್ಲೊ ಎಂಬ ಖಾಸಗಿ ಪತ್ತೆದಾರ ಕಾಣಿಸಿಕೊಳ್ಳುತ್ತಾನೆ. ಈತನ ಕಥೆಗಳಲ್ಲಿ ದರೋಡೆ, ಸುಲಿಗೆ, ಕೊಲೆ ಮೊದಲಾದ ಅಪರಾಧಗಳೆಲ್ಲ ಬೃಹತ್ ಪ್ರಮಾಣದಲ್ಲಿ ನಡೆಯುತ್ತವೆ. ಹಲವಾರು ಚಲನಚಿತ್ರಗಳಿಗೆ ಚಾಂಡ್ಲರ್ ಸಂಭಾಷಣೆ ಒದಗಿಸಿದ್ದಾನೆ. (ಕೆ.ವಿ.ಎಸ್.ಟಿ.)

**ಚಾಂದ್ ಬೀಬಿ :** ದಕ್ಷಿಣ ಭಾರತದಲ್ಲಿ 1518ರಲ್ಲಿ ಕಲಬುರ್ಗಿಯ ಬಹುಮನೀ ರಾಜ್ಯ ಪತನವಾದಾಗ ಉದಯವಾದ ಐದು ರಾಜ್ಯಗಳ ಪೈಕಿ ಒಂದಾದ ಅಹಮದ್‌ನಗರದ ರಾಜಪುತ್ರಿ, ಈಕೆಯನ್ನು ವಿಜಾಪುರದ ಅಲಿ ಅದಿಲ್‌ಷಹನಿಗೆ ಲಗ್ನ ಮಾಡಿಕೊಡಲಾಯಿತು. ಅಲಿ ಅದಿಲ್‌ಷಹ ಆದರ್ಶ ಅರಸ. ಆತನಿಗೆ ಕನ್ನಡ ಜಾಣ ಎಂಬ ಅಭಿಧಾನವಿತ್ತು.

ಅಲಿ ಆದಿಲ್‌ಷಹ ನಿಧನನಾದಾಗ, ರಾಣಿ ಚಾಂದ್ ಬೀಬಿ ತನ್ನ ಗಂಡನ ತಮ್ಮನ ಮಗನಾದ ಇಬ್ರಾಹಿಮ್ ಷಹನಿಗೆ ಪಟ್ಟಕಟ್ಟಿ ತಾನೇ ಆಡಳಿತಸೂತ್ರ ವಹಿಸಿದಳು. ಈಕೆಯ ಆಳ್ವಿಕೆ ಜನಪ್ರಿಯವಾಯಿತು. ತನ್ನ ವಜೀರ ಪುಂಡನಾಗಿದ್ದುದರಿಂದ ಅವನನ್ನು ತಳ್ಳಿ ಮತ್ತೊಬ್ಬನನ್ನು ವಜೀರನನ್ನಾಗಿ ನೇಮಿಸಿಕೊಂಡಳು. ಆತ ರಾಣಿಯನ್ನು ಕೈಸೆರೆ ಮಾಡಿ, ಸಾತಾರೆಯಲ್ಲಿಟ್ಟ. ಆದರೆ ಜನರು ಬಂಡಾಯ ಹೂಡಿ ಇವಳನ್ನು ಬಂಧಮುಕ್ತಳನ್ನಾಗಿ ಮಾಡಿದರು. (ಎಸ್.ಎಂ.ಎಚ್.)

ಈಕೆಯ ಸೋದರನಾದ ಬುರ್ಹಾನ್ ಉಲ್ ಮುಲ್ಕ್ ಅಹಮದ್‌ನಗರದ ಸುಲ್ತಾನನಾಗಿದ್ದ. ಆತ ತನ್ನ ಮಗ ಇಬ್ರಾಹಿಮ್‌ನನ್ನು ತನ್ನ ಉತ್ತರಾಧಿಕಾರಿಯೆಂದು ನೇಮಿಸಿದಾಗ, ಆ ಆಯ್ಕೆಯನ್ನು ಅವನ ಸೇನಾನಾಯಕ ವಿರೋಧಿಸಿದ. ಪರಿಣಾಮವಾಗಿ ಅವರ ನಡುವೆ ತೀವ್ರ ಹೋರಾಟಗಳುಂಟಾದುವು. ಬುರ್ಹಾನನ ಮರಣಾನಂತರ ಇಬ್ರಾಹಿಮ್ ತನ್ನ ಅತ್ತೆಯಾದ ಚಾಂದ್‌ಬೀಬಿಯ ಸಹಾಯದಿಂದ ಅಧಿಕಾರಾರೂಢನಾದರೂ ವಿಜಾಪುರದ ಅದಿಲ್‌ಷಹನೆ ನಡೆದ ಒಂದು ಕದನದಲ್ಲಿ ಮಡಿದ (1595). ಈತನ ಮಗ ಬಹದೂರನನ್ನು ರಾಜ್ಯದ ವಾರಸುದಾರನೆಂದು ಚಾಂದ್ ಬೀಬಿ ಘೋಷಿಸಿ ಆತನಿಗೆ ಬೆಂಬಲವಾಗಿ ನಿಂತಳು. ಆದರೆ ಅಹಮದ್ ಎಂಬಾತ ಇದನ್ನು ತಿರಸ್ಕರಿಸಿ ಯುದ್ಧಕ್ಕೆ ಅಣಿಯಾದ. ಅಹಮದ್‌ನಗರದ ಈ ಆಂತರಿಕ ಕಲಹಗಳ ಉಪಯೋಗ ಪಡೆದು ಮೊಗಲ್ ರಾಜಕುಮಾರ ಮುರಾದ ಅಹಮದ್‌ನಗರದ ಮೇಲೆ ಏರಿ ಹೋದ. ಆಗ ಚಾಂದ್ ಬೀಬಿ ಸ್ವತಃ ರಣರಂಗಕ್ಕೆ ಇಳಿದಳು. ಕಲಿತನದಿಂದ ಹೋರಾಡಿ ಮೊಗಲ್ ಸೈನ್ಯದ ಒತ್ತಡವನ್ನು ಹಿಮ್ಮೆಟ್ಟಿಸಿದಳು. ಕೋಟೆಯನ್ನು ಭೇದಿಸಲು ಶತ್ರುಗಳು ಹೂಡಿದ ತಂತ್ರಗಳನ್ನು ನಾಶಗೊಳಿಸಿದಳಲ್ಲದೆ, ತನ್ನ ನಂಬುಗೆಯ ಸೇನಾಪತಿಗಳಾದ ಷಾ ಅಲಿ ಮತ್ತು ಅಭಂಗ್ ಖಾನರ ನೆರವಿನಿಂದ ಮೊಗಲರ ಸೈನ್ಯದ ಮೇಲೆ ಆಕ್ರಮಣ ಮಾಡಿದಳು. ಈ ವೇಳೆಗೆ ವಿಜಾಪುರದ ಸೈನ್ಯವೂ ಈಕೆಯ ಸಹಾಯಕ್ಕೆ ಧಾವಿಸಿತು. ಇನ್ನು ಕದನ ಹೂಡಿ ಫಲವಿಲ್ಲವೆಂದು ಬಗೆದ ಮುರಾದ ಒಪ್ಪಂದಕ್ಕೆ ಹಾತೊರೆದ. ಚಾಂದ್ ಬೀಬಿಯೂ ಇದಕ್ಕೆ ಸಿದ್ಧಳಾಗಿದ್ದುದರಿಂದ ತಾತ್ಕಾಲಿಕವಾಗಿ ಇಬ್ಬರ ನಡುವಣ ಹೋರಾಟಗಳು ಕೊನೆಗೊಂಡವು. ಬೀರಾರ್ ಕೋಟೆಯನ್ನು ಈಕೆ ಮೊಗಲರಿಗೆ ಒಪ್ಪಿಸಬೇಕಾಯಿತು.

ಶತ್ರುವಿನ ಮುತ್ತಿಗೆಯ ಕಾಲದಲ್ಲಿ ಅಹಮದ್‌ನಗರದ ರಾಜಮನೆತನದವರ ಅಂತಃಕಲಹಗಳು ಸ್ವಲ್ಪ ಕಾಲ ನಿಂತಿದ್ದುವಾದರೂ, ಈ ಕದನ ನಿಲುಗಡೆ ಒಪ್ಪಂದವೇರ್ಪಟ್ಟ ಕೂಡಲೇ ಹಳೆಯ ವೈಮನಸ್ಯಗಳು ಪುನಃ ತಲೆ ಎತ್ತಿದುವು. ಮೊಗಲರ ಕಾಟದಿಂದ ದೂರವಿರಲು ಈಕೆ ರಾಜಧಾನಿಯನ್ನು ಜುನ್ನಾರ್‌ಗೆ ಸ್ಥಳಾಂತರಿಸಬಯಸಿದಳು. ಆದರೆ ಅಹಮದ್‌ನಗರವನ್ನು ಈಕೆ ಮೊಗಲರಿಗೆ ಹಸ್ತಾಂತರಿಸುತ್ತಿದ್ದಾಳೆಂದು ಈಕೆಯ ವಿರೋಧಿಗಳು ಅಪಪ್ರಚಾರ ಆರಂಭಿಸಿ, ಪ್ರಜೆಗಳು ಇವಳಲ್ಲಿ ಇರಿಸಿದ್ದ ನಂಬುಗೆ ಸಡಿಲಗೊಳ್ಳುವಂತೆ ಮಾಡಿದರು. ನೆಹಂಗ್ ಖಾನ್ ಎಂಬ ಈಕೆಯ ವಿರೋಧಿ ನಾಯಕ ಮೊಗಲರೊಡನೆ ಏರ್ಪಡಿಸಿಕೊಂಡಿದ್ದ ಒಪ್ಪಂದವನ್ನು ಉಲ್ಲಂಘಿಸಿ, ಇವಳ ಅನುಜ್ಞೆಯನ್ನು ಬದಿಗೆ ಸರಿಸಿ ಬೀರಾರಿಗೆ ಮುತ್ತಿಗೆ ಹಾಕಿದ. ಆದರೆ ಮೊಗಲರ ಸೈನ್ಯ ಇವನನ್ನು ಸೋಲಿಸಿ ಹಿಮ್ಮೆಟ್ಟಿಸಿತು.

ಇಷ್ಟಾದರೂ ಚಾಂದ್‌ಬೀಬಿಯ ವಿರೋಧಿಗಳು ಇವಳನ್ನು ದ್ವೇಷಿಸುತ್ತಲೇ ಇದ್ದರು. ರಾಜ್ಯದ ಹಿತಕ್ಕೆ ಮೊಗಲರೊಡನೆ ಸ್ನೇಹ ಆವಶ್ಯಕವೆಂಬ ಇವಳ ಅಭಿಪ್ರಾಯವನ್ನು ಈಕೆಯ ವಿರೋಧಿಗಳು ಅಲ್ಲಗಳೆದರು. 1600ರಲ್ಲಿ ಅಕ್ಬರನ ಸೈನ್ಯ ಅಹಮದ್‌ನಗರವನ್ನು ಮುತ್ತಿದಾಗ, ಈಕೆ ಒಪ್ಪಂದ ಮಾಡಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದಳು. ಇದಕ್ಕೆ ಇವಳ ಪ್ರತಿಪಕ್ಷದವರ ವಿರೋಧವಿತ್ತು. ಕೋಟೆಯನ್ನು ಶತ್ರುಗಳಿಂದ ಕಾಪಾಡಲು ಇವಳು ಎಲ್ಲ ಜಾಗರೂಕತೆಯನ್ನೂ ವಹಿಸಿ ಹೋರಾಡುತ್ತಿದ್ದಾಗ, ಈಕೆಯ ಪಕ್ಷದವನೇ ಆದ ಜಿಲ್ಲಾ ಖಾನನೂ ಅವನ ಅನುಯಾಯಿಗಳೂ ಇವಳನ್ನು ಮೋಸದಿಂದ ಕೊಂದರು. ಇದರ ಫಲವಾಗಿ ನಗರ ಮೊಗಲರ ಕೈಸೇರಿತು. (ಬಿ.ಬಿ.ಆರ್.)

**ಚಾಂದ್ರಮಾನ :** ಚಂದ್ರನ ಗತಿಯನ್ನನುಸರಿಸಿ ಇರುವ ಒಂದು ವಿಧದ ಕಾಲಗಣನೆ; ಚಾಂದ್ರ, ಸೌರ, ನಕ್ಷತ್ರ, ಸಾವನ, ಬಾರ್ಹಸ್ಪತ್ಯವೆಂಬ ಐದು ವಿದ್ಯಮಾನಗಳಲ್ಲಿ ಒಂದು. ತಮ್ಮ ತಮ್ಮ ಕಕ್ಷೆಗಳಲ್ಲಿ ಸಂಚರಿಸುತ್ತಿರುವ ಸೂರ್ಯಚಂದ್ರರು ನಮಗೆ ಒಂದೇ ರೇಖೆಯಲ್ಲಿರುವಂತೆ ಕಾಣುವ ದಿನ ಅಮಾವಾಸ್ಯೆ. ಇದು ಸಾಮಾನ್ಯವಾಗಿ ಮೂವತ್ತು ದಿವಸಗಳಿಗೊಮ್ಮೆ ಸಂಭವಿಸುತ್ತದೆ. ಎರಡು ಅಮಾವಾಸ್ಯೆಗಳ ಮಧ್ಯವರ್ತಿಕಾಲಕ್ಕೆ ಒಂದು ಚಾಂದ್ರಮಾನ ಮಾಸವೆಂದು ಹೆಸರು. ಚಾಂದ್ರಮಾನವರ್ಷ ಚೈತ್ರ ಶುಕ್ಲ ಪ್ರಥಮೆಯ

ದಿವಸ ಪ್ರಾರಂಭವಾಗುತ್ತದೆ. ಅಲ್ಲಿಂದ ಕ್ರಮವಾಗಿ ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತಿಕ, ಮಾರ್ಗಶೀರ್ಷ, ಪುಷ್ಯ, ಮಾಘ, ಫಾಲ್ಗುಣ ಎಂಬ ಹನ್ನೆರಡು ಚಾಂದ್ರಮಾನ ಮಾಸಗಳು ಕ್ರಮವಾಗಿ ಬಂದು ಮತ್ತೆ ಚೈತ್ರಮಾಸ ಬರುತ್ತದೆ. ಈ ಹನ್ನೆರಡು ತಿಂಗಳುಗಳ ಕಾಲಕ್ಕೆ ಒಂದು ಚಾಂದ್ರಮಾನವರ್ಷವೆಂದು ಹೆಸರು. ಈ ವರ್ಷಗಳನ್ನು ಪ್ರಭವ, ವಿಭವ ಮೊದಲಾದ ಅರುವತ್ತು ಹೆಸರುಗಳಿಂದ ಕರೆಯುತ್ತಾರೆ. ಮೂರು ವರ್ಷಗಳಿಗೊಮ್ಮೆ ಚಾಂದ್ರಮಾನ ವರ್ಷದಲ್ಲಿ ಹದಿಮೂರು ತಿಂಗಳುಗಳಿರುತ್ತವೆ. ಅಧಿಕವಾದ ಒಂದು ತಿಂಗಳನ್ನು ಅಧಿಕಮಾಸವೆಂದು ಕರೆಯುತ್ತಾರೆ. ಪ್ರತಿಯೊಂದು ಚಾಂದ್ರಮಾನ ತಿಂಗಳಿನಲ್ಲೂ ಸೂರ್ಯನ ರಾಶ್ಯಂತರ ಸಂಕ್ರಮಣವಿರಬೇಕು. ಯಾವ ಚಾಂದ್ರಮಾನ ತಿಂಗಳಿನಲ್ಲಿ ಸೂರ್ಯ ಸಂಕ್ರಮಣವಿರುವುದಿಲ್ಲವೋ ಆ ಮಾಸ ಅಧಿಕವಾಗುತ್ತದೆ. ಹೀಗೆಯೇ ಒಂದು ಚಾಂದ್ರಮಾನ ಮಾಸದಲ್ಲಿ ಎರಡು ಸೂರ್ಯ ಸಂಕ್ರಮಣಗಳು ಬಂದಲ್ಲಿ ಆಗ ಆ ಚಾಂದ್ರಮಾನ ಮಾಸವನ್ನು ಕ್ಷಯಮಾಸವೆಂದು ಕರೆಯುತ್ತಾರೆ. ಈ ಅಧಿಕ ಮತ್ತು ಕ್ಷಯ ಮಾಸಗಳು ಚಾಂದ್ರಮಾನ ಮಾಸಗಣನೆಯಲ್ಲಿ ಮಾತ್ರ ಸಂಭವಿಸುತ್ತವೆ. ಒಂದು ಚಾಂದ್ರಮಾನ ವರ್ಷದಲ್ಲಿ 360 ತಿಥಿಗಳನ್ನೊಳಗೊಂಡ 354 ದಿವಸಗಳಿರುತ್ತವೆ. ಅಧಿಕಮಾಸ ಬಂದಾಗ 390 ತಿಥಿಗಳನ್ನೊಳಗೊಂಡ 384 ದಿವಸಗಳಿರುತ್ತವೆ. ಚಾಂದ್ರಮಾನ ಮಾಸಾರಂಭದಿಂದಲೇ ಪಕ್ಷ ಮತ್ತು ತಿಥಿಗಳು ಪ್ರಾರಂಭವಾಗುತ್ತವೆ. ಅಮಾವಾಸ್ಯೆಯಾದ ಮರುದಿವಸದಿಂದ ಪೂರ್ಣಿಮ ತಿಥಿ ಪೂರ್ತಿ ಶುಕ್ಲಪಕ್ಷ. ಚಂದ್ರನಲ್ಲಿ ಬೆಳಕು ವೃದ್ಧಿಗೊಳ್ಳುವುದರಿಂದ ಈ ಪಕ್ಷಕ್ಕೆ ಶುಕ್ಲಪಕ್ಷವೆಂಬ ಹೆಸರು ಬಂದಿದೆ. ಪೂರ್ಣಿಮಾ ತಿಥಿಯ ಮಾರನೆಯ ದಿವಸದಿಂದ ಅಮಾವಾಸ್ಯೆವರೆಗೆ ಚಂದ್ರನಲ್ಲಿ ಶೌಕ್ಲ ಕುಂದುತ್ತ ಕಪ್ಪು ಹೆಚ್ಚಾಗುವುದರಿಂದ ಇದಕ್ಕೆ ಕೃಷ್ಣಪಕ್ಷವೆಂಬ ಹೆಸರು ಬಂದಿದೆ. ಚಾಂದ್ರಮಾನ ಮಾಸವನ್ನು ಶುಕ್ಲಪಕ್ಷದಿಂದ ಪ್ರಾರಂಭಮಾಡಿ ಗಣನೆ ಮಾಡುವುದು ಅಧಿಕವಾಗಿ ರೂಢಿಯಲ್ಲಿದೆ. ಉತ್ತರ ಭಾರತದ ಕೆಲವು ದೇಶಗಳಲ್ಲಿ ಕೃಷ್ಣಪಕ್ಷದಿಂದ ಪ್ರಾರಂಭಿಸಿ ಮಾಸಗಣನೆ ಮಾಡುವುದೂ ಉಂಟು.

ಚಾಂದ್ರಮಾನ ಮಾಸ ಗಣನೆ ಮಹಮ್ಮದೀಯರಲ್ಲಿ ಪ್ರಚಲಿತವಾಗಿದೆ. ಚಂದ್ರದರ್ಶನವೇ ಅವರ ಮಾಸಾರಂಭಕ್ಕೆ ಮುಖ್ಯ. ಅಲ್ಲಿಂದ ಮುಂದಿನ ಚಂದ್ರದರ್ಶನದವರೆಗೆ ಒಂದು ಮಾಸದ ಅವಧಿ. ಅಮಾವಾಸ್ಯೆ ಕಳೆದ ಬಳಿಕ ಚಂದ್ರದರ್ಶನವಾದ ಮಾರನೆಯ ದಿವಸ ಒಂದನೆಯ ಚಂದು ಎಂದರೆ ಮಾಸಾರಂಭದ ಮೊದಲ ದಿವಸ. ಹಿಂದೂ ಪದ್ಧತಿಯಲ್ಲಿ ತಿಥಿಗಳಿಂದ ಮಾಸವನ್ನು ವಿಭಾಗಿಸಿದ್ದರೆ ಮಹಮ್ಮದೀಯರಲ್ಲಿ ಚಂದ್ರದರ್ಶನಗಳಿಂದ ವಿಭಾಗಿಸಿದ್ದಾರೆ. ಚಾಂದ್ರಮಾನವನ್ನು ಆಶ್ರಯಿಸಿದ್ದರೂ ಅವರಿಗೆ ಅಧಿಕಮಾಸ ಮತ್ತು ಕ್ಷಯಮಾಸಗಳ ಗಣನೆ ಇಲ್ಲ. (ಎಸ್.ಎನ್.ಕೆ.)

**ಚಾಂಪಿಯನ್ ಸಿರ :** ಸ್ಪಷ್ಟವಾದ ರೂಪುರೇಖೆಯುಳ್ಳ ಮತ್ತು ಸುಸಂಗತವಾಗಿರುವ ಬೆಣಚುಕಲ್ಲು ಹಾಗೂ ಇತರ ಖನಿಜಗಳಿಂದ ತುಂಬಿರುವ ಸೀಳಿನ ಪ್ರದೇಶಗಳ ಪೈಕಿ ಧಾರವಾಡ ಶ್ರೇಣಿಯ ಕೋಲಾರದ ಶಿಸ್ಟ್ ವಲಯದಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿರುವ ಎಳೆ. ಕೋಲಾರದ ಚಿನ್ನದ ಕ್ಷೇತ್ರದಲ್ಲಿ ಕೆಲವೆಡೆಗಳಲ್ಲಿ ಗೋಚರಿಸುವ ಅನೇಕ ಬೆಣಚುಕಲ್ಲಿನ ಬಂಡೆಸಾಲುಗಳ ಪೈಕಿ ಸಿರವೂ ಒಂದು. ಸಿರದ ಒಡಲಿನಲ್ಲಿ ಚಿನ್ನದ ಪರಿಮಾಣ ಹೆಚ್ಚಾಗಿರುವ ಭಾಗಗಳೂ ಚಿನ್ನ ಇಲ್ಲದಿರುವ ಭಾಗಗಳೂ ಇದ್ದುವು. ಚಿನ್ನ ಹೆಚ್ಚಾಗಿದ್ದ ಎಡೆಗಳಿಗೆ, ಎಂದರೆ, ಎಲ್ಲಿ ಗಣಿ ಕೆಲಸ ಲಾಭದಾಯಕವೋ ಆ ಎಡೆಗಳಿಗೆ ಅದಿರಿನ ಪ್ರರೋಹಗಳೆಂದು (ಓರ್ ಷೂಟ್ಸ್) ಹೆಸರು. ಚಾಂಪಿಯನ್ ಸಿರದಲ್ಲಿ ಇಂಥ ಅನೇಕ ಲಾಭದಾಯಕವಾದ ಅದಿರಿನ ಪ್ರರೋಹಗಳಿದ್ದುದರಿಂದ ಕೋಲಾರ ಚಿನ್ನದ ಗಣಿಗಳ ಕ್ಷೇತ್ರದ ಅನೇಕ ಉತ್ಪಾದಕ ಗಣಿಗಳು ಅಲ್ಲಿ ಸ್ಥಾಪಿತವಾಗಿದ್ದುವು. ಈ ಸಿರದ ಕಾರಣವಾಗಿ ಉತ್ಪಾದಕ ಗಣಿಗಳ ಪೈಕಿ ಒಂದಕ್ಕೆ ಚಾಂಪಿಯನ್ ರೀಫ್ ಮೈನ್ ಎಂಬ ಹೆಸರು ಬಂತು. ಇಲ್ಲಿನ ಬೆಣಚುಕಲ್ಲಿನ ಬಣ್ಣ ಕಪ್ಪುನೀಲಿ. ಇದು ತೀಕ್ಷ್ಣ ಕಾಂತಿಯಿಂದ ಬೆಳಗುತ್ತದೆ. ಮುದುರುವಿಕೆ ಮುಂತಾದ ರಚನಾದೋಷಗಳಿಗೆ ಇದರ ರೂಪ ಈಡಾಗಿ ಎಡೆಗಳಲ್ಲಿ ಅದು ಪಟ್ಟಿಗಟ್ಟಿದ ಅಥವಾ ಪದರಗಟ್ಟಿದ ರಚನೆಯನ್ನು ಬೆಳೆಸಿಕೊಂಡು ರಿಬ್ಬನ್ ಹಾಕಿಕೊಂಡಿರುವಂತೆ ಕಾಣುವುದು.

ಚಾಂಪಿಯನ್ ಸಿರದಲ್ಲಿ, ಚಿನ್ನ ಸಾಮಾನ್ಯವಾಗಿ ಅಣುಗಳಂತೆ ಹರಡಿಕೊಂಡಿತ್ತು. ಕಣ್ಣಿಗೆ ನೇರವಾಗಿ ಕಾಣುತ್ತಿರಲಿಲ್ಲ. ಆದರೆ ಉಂಡುಂಡೆಯಾಗಿಯೂ ಫಲಕಗಳಾಗಿಯೂ ಇರುವ ಚಿನ್ನದ ತುಣುಕುಗಳು ಕೆಲವು ಸಲ ಸಿಕ್ಕುತ್ತಿದ್ದುವು. ಚಿನ್ನ ಶುದ್ಧವೇ ಎನ್ನಬಹುದಾದ ರೂಪದಲ್ಲಿತ್ತು ಮತ್ತು ಅದಿರನ್ನು ಅಗೆದು ಸುಲಭವಾಗಿ ಬೇರ್ಪಡಿಸಬಹುದಾಗಿತ್ತು. ಕೆಳಗಿನಿಂದ ಮೇಲಕ್ಕೆದ್ದು ಬಂದು ಶಿಸ್ಟ್‌ಬಂಡೆಗಳ ಬಿರುಕಿನಲ್ಲಿ ತುಂಬಿಕೊಂಡ ಭೂದ್ರವದಿಂದ ಬೆಣಚುಕಲ್ಲು ಚಿನ್ನ ಮುಂತಾದ ಇತರ ಖನಿಜಗಳೂ ತಂಗಿದುದರ ಪರಿಣಾಮವಾಗಿ ಚಾಂಪಿಯನ್ ಸಿರ ರಚಿತವಾಯಿತೆಂದು ಭಾವಿಸಲಾಗಿದೆ. ಇದರ ಫಲವಾಗಿ ತನಗೆ ಆಧಾರವಾಗಿರುವ ಬಂಡೆ ಅಥವಾ ಶಿಸ್ಟಿನ ನಮೂನೆಯನ್ನೇ ಇದೂ ಅನುಸರಿಸಿತು. ಚಾಂಪಿಯನ್ ಸಿರದ ಅಗಲ ಸಹ ಬಿರುಕಿನ ಪರಿಣಾಮದಂತೆಯೇ ಬಗೆಬಗೆಯಾಗಿವೆ. ಈ ಅಗಲ ಕೆಲವು ಅಂಗುಲಗಳಿಂದ ಹಿಡಿದು 9–12 ಮೀಗಳವರೆಗೂ ಹೋಗುವುದು. ಈ ಪ್ರದೇಶದ ಇತರ ಸಿರದ ಹರಿವುಗಳಿಗೆ ಹೋಲಿಸಿ ನೋಡಿದಾಗ ಚಾಂಪಿಯನ್ ಸಿರದ ಅದಿರಿನ ಪ್ರರೋಹಗಳಲ್ಲಿರುವ ಚಿನ್ನ ಅತ್ಯಂತ ಅಧಿಕ ಮೊತ್ತದ್ದಾಗಿತ್ತು. ಒಂದು ಟನ್ ಅದಿರನ್ನು ಅರೆದು ಶೋಧಿಸಿದರೆ ಸರಾಸರಿ ಒಂದು ಔನ್ಸಿಗಿಂತಲೂ ಹೆಚ್ಚಾಗಿ ಚಿನ್ನ ಸಿಕ್ಕುತ್ತಿತ್ತು. ಪ್ರಪಂಚದ ಯಾವ ಸ್ವರ್ಣಕ್ಷೇತ್ರದೊಡನೆ ಹೋಲಿಸಿದರೂ ಇದು ಪುಷ್ಕಳವೆಂದು ಭಾವಿಸಲಾಗಿದೆ. ಕೋಲಾರದ ಚಿನ್ನದ ಗಣಿಗಳ ಪೈಕಿ ಚಾಂಪಿಯನ್ ಸಿರದ ಮೇಲೆ ತೋಡಿದ ಗಣಿಯೇ ಅತ್ಯಂತ ಆಳವಾದದ್ದು (–3230ಮೀ). (ಎಂ.ಎಸ್.ಯು.)

**ಚಾಕ್ :** ಮೃದುವಾದ ಮತ್ತು ಬಿಳಿ ಅಥವಾ ಬೂದು ಬಣ್ಣದ ಒಂದು ರೀತಿಯ ಸರಂಧ್ರ ಸುಣ್ಣಶಿಲೆ. ಇದು ಸಾಮಾನ್ಯವಾಗಿ ಫೊರಮಿನಿಫೆರ, ಕೋಕೊಲಿತ್ ಮುಂತಾದ ಅತಿಸೂಕ್ಷ್ಮ ಜೀವಿಗಳ ಅವಶೇಷಗಳಿಂದಲೂ ಚೂರು ಚೂರಾದ ಇತರ ಪ್ರಾಣಿಗಳ ಚಿಪ್ಪುಗಳಿಂದಲೂ ತುಂಬಿರುವುದು. ಶುದ್ಧ ಚಾಕ್ ನಿಕ್ಷೇಪದಲ್ಲಿ ಶೇ. 99 ಭಾಗ ಕ್ಯಾಲ್ಸೈಟ್ ಖನಿಜ ಉಂಟು. ಹೀಗೆ ಈ ಖನಿಜ ನೇರವಾಗಿ ನಿಕ್ಷೇಪಗೊಂಡಿರುವುದರಿಂದ ಇದರ ಮೂಲಕ ಹರಿಯುವ ಅಂತರ್ಜಲ ಇದನ್ನು ಮಾರ್ಪಾಡು ಮಾಡಲು ಸಾಧ್ಯವಾಗಿಲ್ಲ. ಸಾಧಾರಣವಾಗಿ ಚಾಕ್ ನಿಕ್ಷೇಪದಲ್ಲಿ ಸಿಲಿಕಾಂಶ ಇದ್ದೇ ಇರುತ್ತದೆ. ಇದು ಕೂಡ ರೇಡಿಯೋಲೇರಿಯ, ಸ್ಪಾಂಜ್ ಮುಳ್ಳು ಮುಂತಾದವುಗಳಿಂದ ಆದುದು. ಸಿಲಿಕಾಂಶ ಫ್ಲಿಂಟ್ ಅಥವಾ ಓಪಲ್ ಉಂಡೆಗಳಾಗಿ ನಿಕ್ಷೇಪಗೊಂಡಿದೆ. ಜೇಡು ಬೆರಕೆಯಾದ ಕಡೆಗಳಲ್ಲಿ ಚಾಕ್ ನಿಕ್ಷೇಪ ಜೇಡಿನ ಅಂಶಕ್ಕೆ ಅನುಗುಣವಾಗಿ ಚಾಕ್ ಮಾರಲ್ ನಿಕ್ಷೇಪಕ್ಕೆ ತಿರುಗಿರುತ್ತದೆ. ಗ್ಲಾಕೊನೈಟ್ ಮರಳು ಮತ್ತು ರಂಜಕ ನಿಕ್ಷೇಪಗಳ ಬೆರಕೆಯಿಂದ ಚಾಕ್ ನಿಕ್ಷೇಪದ ಸಂಯೋಜನೆ, ಬಣ್ಣ ಮತ್ತು ರಚನೆಗಳು ಬದಲಾಗುತ್ತವೆ. ಅದು ಮೃದುವಾಗಿದ್ದು ಬಿಡಿಬಿಡಿಯಾಗಿ ಅಥವಾ ರಂಧ್ರಗಳಿಂದ ಕೂಡಿರಬಹುದು. ಇಲ್ಲವೇ ಗಟ್ಟಿಯಾಗಿದ್ದು ಸ್ಫಟಿಕೀಕರಣ ಹೊಂದಿರಬಹುದು. ಚಾಕ್‌ಶಿಲೆ ಕ್ರಿಟೇಷಸ್ ಸ್ತೋಮದ ವಿಶಿಷ್ಟ ಶಿಲೆ. ಆದ್ದರಿಂದಲೇ ಈ ಸ್ತೋಮಕ್ಕೆ ಕ್ರಿಟೇಷಸ್ ಎಂಬ ಹೆಸರು ಬಂದಿರುವುದು. ಇಂಗ್ಲೆಂಡಿನಲ್ಲಿ ಚಾಕ್ ನಿಕ್ಷೇಪ ಡಾರ್ಸೆಟಿನಿಂದ ಯಾರ್ಕ್‌ಷೈರ್ ವರೆಗೆ ಸಂಚಯಗೊಂಡಿದೆ. ಇಂಗ್ಲಿಷ್ ಕಡಲ್ಗಾಲುವೆಯ ಎರಡು ಕಡೆಗಳಲ್ಲಿಯೂ ಹೊರಹೊಮ್ಮಿ ಅಚ್ಚ ಬಿಳಿ ಬಣ್ಣದಿಂದ ಕಂಗೊಳಿಸುತ್ತಿದೆ.

ಚಾಕ್ ನಿಕ್ಷೇಪವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಈ ಭಾಗಗಳು ಅನುಕ್ರಮವಾಗಿ ಸಿನೊಮೇನಿಯನ್, ಟುರೋನಿಯನ್ ಮತ್ತು ಸಿನೋನಿಯನುಗಳಿಗೆ ಸರಿದೂಗುತ್ತವೆ. ಇದರ ಎಲ್ಲ ಭಾಗಗಳು ಎಲ್ಲ ಕಡೆಗಳಲ್ಲೂ ಸಂಚಯನಗೊಂಡಿಲ್ಲ. ಉದಾಹರಣೆಗೆ ಸ್ಕಾಟ್ಲೆಂಡ್ ಮತ್ತು ಐರ್ಲೆಂಡುಗಳಲ್ಲಿರುವ ಚಾಕ್ ಇಂಗ್ಲೆಂಡ್ ಚಾಕ್ ನಿಕ್ಷೇಪದ ಮೇಲ್ಭಾಗಕ್ಕೆ ಮಾತ್ರ ಸರಿದೂಗುತ್ತದೆ. ಭಾರತ ಮತ್ತು ಮೆಡಿಟರೇನಿಯನ್ ಸಾಗರ ಪ್ರಾಂತ್ಯಗಳಲ್ಲಿ ಚಾಕ್ ನಿಕ್ಷೇಪಗಳೇ ಇಲ್ಲ. ಚಾಕ್ ನಿಕ್ಷೇಪವನ್ನು ಕಪ್ಪು ಹಲಗೆಯ ಮೇಲೆ ಬರೆಯುವ ಬಿಳಿ ಮತ್ತು ಬಣ್ಣದ ಸೀಮೆಸುಣ್ಣಗಳನ್ನು ತಯಾರಿಸಲು, ಕ್ರೀಡೆಗಳಲ್ಲಿ ಎಲ್ಲೆ ಗುರುತನ್ನು ಹಾಕಲು, ದರ್ಜಿಗಳು ಬಟ್ಟೆಯ ಮೇಲೆ ಗುರುತು ಮಾಡಲು, ಕ್ರೀಡಾಪಟುಗಳು ಕೈಯಲ್ಲಿನ ಬೆವರನ್ನು ಹೋಗಲಾಡಿಸಲು, ಚಾಕ್ ಅನ್ನು ಬಳಸುತ್ತಾರೆ. ಸುಣ್ಣ, ಸಿಮೆಂಟು, ಗೊಬ್ಬರ ಮುಂತಾದವನ್ನು ತಯಾರಿಸಲೂ ಉಪಯೋಗಿಸಬಹುದು. ಚಾಕನ್ನು ಚೆನ್ನಾಗಿ ಅರೆದು, ಬಂದ ಹಸನಾದ ಪುಡಿಯನ್ನು ಪ್ಯಾರಿಸ್ ವೈಟ್ ತಯಾರಿಸಲು ಉಪಯೋಗಿಸುತ್ತಾರೆ. ಅಲ್ಲದೆ ರಬ್ಬರ್ ಕೈಗಾರಿಕೆ, ಎಣ್ಣೆ, ಬಟ್ಟೆ ಮುಂತಾದವುಗಳ ತಯಾರಿಕೆಯಲ್ಲಿಯೂ ಇದರ ಉಪಯೋಗ ಉಂಟು. ಗಟ್ಟಿ ಜಾತಿಯ ಚಾಕನ್ನು ಕಟ್ಟಡ ಕಟ್ಟಲೂ ಉಪಯೋಗಿಸುತ್ತಾರೆ. (ಡಿ.ಆರ್)

**ಚಾಚು ಏಣಿನ ಜೋಡಣೆ :** ಎರಡು ಫಲಕಗಳಲ್ಲಿ ಒಂದರ ಏಣು ಮತ್ತೊಂದರ ಏಣನ್ನು ದಾಟಿ ಸ್ವಲ್ಪ ಚಾಚಿರುವಂತೆ ಮೇಲಿರಿಸಿ ಅವುಗಳ ನಡುವೆ ರಿವೆಟ್‌ಗಳ ಸಾಲಿನಿಂದ ಬಂಧಿಸಿ ಮಾಡಿದ ರಚನೆ (ಲ್ಯಾಪ್ ಜಾಯಿಂಟ್) ರಿವೆಟ್‌ಗಾಗಿ ಮಾಡಿದ ರಂಧ್ರದ ಅಂಚಿನಿಂದ ಆಚೆಗೆ ಕಡೆಯ ಪಕ್ಷ ರಿವೆಟ್ಟಿನ ವ್ಯಾಸದಷ್ಟಾದರೂ ಫಲಕದಲ್ಲಿ ಅರುಗು ಬಿಟ್ಟಿರಬೇಕೆಂದು ನಿಯಮ. ಫಲಕದ ಏಣಿಗೆ ಸಮಾನಾಂತರ ಸಾಲಿನಲ್ಲಿರುವ ರಿವೆಟ್‌ಗಳ ಒಂದಕ್ಕೊಂದು ನಡುವಿನ ದೂರಕ್ಕೆ 'ಅಂತರಾಲ' ಎಂದು ಹೆಸರು. ಸಾಮಾನ್ಯವಾಗಿ ಇದು ರಿವೆಟ್‌ನ ವ್ಯಾಸದ ಮೂರರಷ್ಟು ಇರುತ್ತದೆ. ಜೋಡಣೆಗೆ ಇರಬೇಕಾದ ಬಲಕ್ಕೆ ತಕ್ಕಂತೆ ಎರಡು ಅಥವಾ ಹೆಚ್ಚು ಸಾಲಿನ ರಿವೆಟ್‌ಗಳಿಂದ ಫಲಕಗಳನ್ನು ಜೋಡಿಸಿರುವಾಗ, ಅಕ್ಕಪಕ್ಕದ ಸಾಲುಗಳ ರಿವೆಟ್ಟುಗಳ ಎದುರುಬದುರಾಗೇ ಇದ್ದರೆ ಅದಕ್ಕೆ ಸರಪಣಿ ಅಥವಾ ಸಮ್ಮುಖೀ ರಿವೆಟನ್ ಎಂದೂ ಅಕ್ಕಪಕ್ಕದ ಸಾಲುಗಳ ರಿವೆಟ್ಟುಗಳು ಒಂದನ್ನೊಂದು ಎದುರಿಸದೆ ತಪ್ಪಿಸಿದಂತಿದ್ದರೆ ಅದಕ್ಕೆ ವಂಕಿ ಅಥವಾ ಅಸಮ್ಮುಖಿ ರಿವೆಟನ್ ಎಂದೂ ಹೆಸರುಂಟು.

ಹೀಗಿರುವ ಎರಡು ರಿವೆಟ್ ಸಾಲುಗಳ ಅಂತರ ಅಸಮ್ಮುಖೀ ರೀತಿಯದರಲ್ಲಿ ರಿವೆಟ್ ವ್ಯಾಸದ ಎರಡರಷ್ಟೂ ಸಮ್ಮುಖೀ ರೀತಿಯದರಲ್ಲಿ ಅದಕ್ಕಿಂತ 6. ಮಿಮೀ.ರನಷ್ಟು ಹೆಚ್ಚಾಗಿಯೂ ಇರುವುದು ವಾಡಿಕೆ, ಚಾಚು ಏಣಿನ ಜೋಡಣೆಗಳು ಎಳೆತಕ್ಕೆ ಒಳಪಟ್ಟರೆ ಪ್ರತಿಕ್ರಿಯೆ ಸರೇಖವಾಗಿಲ್ಲದೆ ಹೋಗುವುದರಿಂದ ಜೋಡಣೆಯ ಜಾಗದಲ್ಲಿ ಬಾಗುತ್ತವೆ. ಒತ್ತಡದ ದ್ರವವನ್ನೊಳಗೊಂಡ ಪಾತ್ರೆಗಳ ಫಲಕಗಳಲ್ಲಿ ಇಂಥ ಜೋಡಣೆಯಿದ್ದಾಗ ದ್ರವ ಸ್ರವಿಸುವುದನ್ನು ನಿವಾರಿಸಲು ಫಲಕದ ಅಂಚಿನ ಮೂಲೆಯಲ್ಲಿ ರಿವೆಟ್ ಶಿರದ ಕೆಳಭಾಗದ ಸುತ್ತಲೂ ಗಿಡಗಿ ಕಾಕನ ಮಾಡುವುದುಂಟು. ಇದಕ್ಕೆ ಅನುಕೂಲಿಸುವಂತೆ ಫಲಕಗಳ ಅಂಚನ್ನು ಲಂಬವಾಗಿರದೆ ತಲಕ್ಕೆ 80° ಇರುವಂತೆ ಹೆರೆದಿರಲಾಗುತ್ತದೆ. (ಬಿ.ಆರ್.ಎನ್.)



ಚಾಚು ಏಣಿನ ಜೋಡಣೆಯ ಎರಡು ಪ್ರರೂಪಗಳು : ಪಾರ್ಶ್ವನೋಟವನ್ನು ಮೇಲಿನ ಚಿತ್ರಗಳಲ್ಲೂ ಎದುರು ನೋಟವನ್ನು ಕೆಳಗಿನ ಚಿತ್ರಗಳಲ್ಲೂ ಕಾಣಬಹುದು.

**ಚಾಚು ತೊಲೆ :** ಒಂದು ಕೊನೆ ಭದ್ರವಾಗಿ ಧರಿಸಲ್ಪಟ್ಟಿದ್ದು ಉಳಿದ ಭಾಗ ವಸ್ತುವನ್ನು ಹೊರಲು ಅಥವಾ ತೂಗು ಹೊರೆಯನ್ನು ಧರಿಸಲು ಮುಕ್ತವಾಗಿರುವ ತೊಲೆ (ಕ್ಯಾಂಟಿಲಿವರ್). ಕಿಟಕಿಗಳ ಮೇಲೆ ಹೊರಚಾಚಿಕೊಂಡಿರುವ ಚಜ್ಜ, ಕಾರ್ಖಾನೆ, ರೈಲ್ವೆ ವಿಮಾನ ನಿಲ್ದಾಣ, ಮುಂತಾದೆಡೆಗಳಲ್ಲಿನ ಚಾವಣಿ, ವಿಶಿಷ್ಟ ನಮೂನೆಯ ಸೇತುವೆಗಳು, ತುಲಾಯಂತ್ರಗಳು ಇತ್ಯಾದಿಗಳನ್ನು ಚಾಚುತೊಲೆ ತತ್ತ್ವವನ್ನು ಆಧರಿಸಿ ನಿರ್ಮಿಸಲಾಗಿದೆ.




ಚಾಚು ತೊಲೆಯ ತತ್ತ್ವ : 1. ಸ್ಥಿರ ಆಧಾರ, 2. ಚಾಚುತೊಲೆ, 3. ಒತ್ತಡ

ಕ್ವಿಬೆಕ್‌ನಲ್ಲಿರುವ ರೈಲು ಮಾರ್ಗದ ಸೇತುವೆ ಪ್ರಪಂಚದಲ್ಲಿನ ಅತಿ ಉದ್ದದ ಚಾಚು ತೊಲೆ ರಚನೆ (1918). ಇದರ ಹರವು (ಸ್ಪ್ಯಾನ್) 548.64ಮೀ. ಜನ ಹಾಗೂ ದೊಡ್ಡ ವಾಹನಗಳ ಅನಿರ್ಬಂಧಿತ ಪ್ರವೇಶ, ನಿರ್ಗಮನ ಅವಿಚ್ಛಿನ್ನವಾಗಿ ನಡೆಯುತ್ತಿರುವಂಥ ರೈಲ್ವೇನಿಲ್ದಾಣ, ವಿಮಾನನಿಲ್ದಾಣ, ಗೋದಾಮುಗಳು, ಕಾರ್ಖಾನೆಗಳು ಮುಂತಾದೆಡೆಗಳಲ್ಲಿ ಚಾಚುತೊಲೆ ತತ್ತ್ವದ ಮೇಲೆ ಆಧರಿಸಿ ರಚಿಸಿದ ಚಾವಣಿಗಳು ಹೆಚ್ಚು ಉಪಯುಕ್ತ. ಈ ತತ್ತ್ವವನ್ನು ವಿಸ್ತರಿಸಿದ್ದೇ ಆದರೆ ಧ್ವಜಸ್ತಂಭ, ಗಡಿಯಾರಕಂಬ ಮುಂತಾದವನ್ನು ಕೂಡ ಊರ್ಧ್ವ ವಿನ್ಯಾಸದ ಚಾಚುತೊಲೆಗಳು ಎಂದು ಪರಿಗಣಿಸಬಹುದು. (ವಿ.ಡಿ.ಪಿ.)

**ಚಾಚುತೊಲೆ ಸೇತುವೆ :** ಎರಡು ದಂಡೆಗಳಿಂದ ಒಳಮುಖವಾಗಿ ಚಾಚಿಕೊಂಡಿರುವ ತೊಲೆಗಳ ಮುಕ್ತ ಕೊನೆಗಳು ಭದ್ರವಾಗಿ ಜೋಡಿಸಲ್ಪಟ್ಟಾಗ ಏರ್ಪಡುವ ಸೇತುವೆ (ಕ್ಯಾಂಟಿಲಿವರ್ ಬ್ರಿಜ್). ಬಾಹ್ಯವಾಗಿ ಹೇರಲ್ಪಟ್ಟ ತೂಕಗಳನ್ನು ಚಾಚು ತೊಲೆಗಳು ತಮ್ಮ ಮೇಲಿನ ಪದರದ ಬಾಗುವಿಕೆಯಿಂದ ಹೊರುತ್ತವೆ. ಇಂಥ ಒಂದು ಸೇತುವೆ ಹೊರಬೇಕಾದ ತೂಕವನ್ನು ಸರಿದೂಗಿಸಲು ಬೇಕಾಗುವ ಸ್ತಬ್ಧತೂಕಗಳನ್ನು ಚಾಚು ತೊಲೆಗಳ ಭದ್ರ ಕೊನೆಗಳಲ್ಲಿ ಹೇರಲಾಗಿರುತ್ತದೆ. ಎರಡು ಚಾಚು ತೊಲೆಗಳು ಎರಡೂ ಕಡೆಗಳಿಂದ ಪರಸ್ಪರ ಅಭಿಮುಖವಾಗಿ ಒಳ ಚಾಚಿದಾಗ ಆಧಾರರಹಿತ ಕೊನೆಗಳು ಕಮಾನಿನ ಮಧ್ಯಂತರದಲ್ಲಿ ನೇರವಾಗಿ ಜಾರುವ ಕೀಲಿನಿಂದ ಕೂಡಿರುತ್ತವೆ (**ಚಿತ್ರ 1**).




ಚಿತ್ರ 1. ಚಾಚುತೊಲೆ ವಿಸ್ತರಣೆ : *m*, *m*–ಪ್ರಧಾನ ಕಮಾನುಗಳು, *C*, *C*– ಚಾಚುತೊಲೆ ವಿಸ್ತರಣೆಗಳು, *C*–ದಡದ ಕಮಾನು, *E*– ದಂಡೆಯ ಇಳಿಜಾರು

ಅಥವಾ ಎರಡೂ ಚಾಚು ತೊಲೆಗಳು, ಚಿಕ್ಕ ತೂಗುಸೇತುವೆಯಂಥದರಲ್ಲಿ, ಸಾಧಾರಣ ಆಧಾರದಿಂದ ತೊಡಗಿ ಮುಕ್ತ ಕೊನೆಗಳಲ್ಲಿ ಆಧರಿತವಾಗಿರುತ್ತವೆ (**ಚಿತ್ರ 2**). ಆಧಾರಗಳಲ್ಲಿ ಹೆಚ್ಚಿನ ಬಗ್ಗುವ ಹೊರೆ ಉಂಟಾಗುವುದರಿಂದ ಚಾಚುತೊಲೆಗಳ ಆಳ ಆಧಾರ ಸ್ಥಳಗಳಲ್ಲಿ ಅತ್ಯಧಿಕವಾಗಿರುವುದು. ಹೆಚ್ಚು ಅಂತರ ಸೇತುವೆ ಕಮಾನು ಇರುವೆಡೆ, ಮಧ್ಯಂತರ ಕಮಾನಿನ ಆಳ ಕಡಿಮೆ ಮಾಡುವ ಉದ್ದೇಶವಿರುವೆಡೆ, ಕೃತಕ ಜೋಡಣೆ ಅಸಾಧ್ಯವಾದೆಡೆ, ಮಿಥ್ಯಾ ಅಡಿಪಾಯದ ಸಂದರ್ಭವಿರುವೆಡೆಯಲ್ಲೆಲ್ಲ ಚಾಚುತೊಲೆ ಸೇತುವೆಗಳನ್ನು ರಚಿಸುತ್ತಾರೆ. ಚಾಚುತೊಲೆ ಸೇತುವೆಗಳನ್ನು ಸಾಧಾರಣವಾಗಿ ಮೂರು ವಿಧವಾಗಿ ವಿಂಗಡಿಸಬಹುದು:

1. ಒಂಟಿ ಚಾಚುತೊಲೆ ಸೇತುವೆ; 2 ಜೋಡಿ ಚಾಚುತೊಲೆ ಸೇತುವೆ; 3 ವಿಸ್ತೃತ ಚಾಚುತೊಲೆ ಸೇತುವೆ.




ಚಿತ್ರ 2. ಉಕ್ಕಿನಿಂದ ಭದ್ರಗೊಳಿಸಿದ ಒಂಟಿ ಚಾಚುತೊಲೆ ಸೇತುವೆ : *C*–ಚಾಚುತೊಲೆ, *W*–ಅಡಗಿಸಲ್ಪಟ್ಟ ಸೇತುವೆ ಕಮಾನು, *F*–ತುಂಬುವಿಕೆ, *S*–ಮಧ್ಯಾಂತರ ತೂಗು ಕಮಾನು, *R*–ರಸ್ತೆ, *P*–ಕೈಪಿಡಿ

1. ಒಂಟಿ ಚಾಚುತೊಲೆ ಸೇತುವೆ : ಒಂಟಿ ಚಾಚುತೊಲೆ ಸೇತುವೆ ಒಂದೇ ದಡದಿಂದ ಆಧಾರಿತವಾಗಿ ಹೊರಚಾಚಲ್ಪಟ್ಟಿರುವುದು. ಭದ್ರ ದಡಗಳಿಲ್ಲದಿರುವೆಡೆಗಳಲ್ಲಿ ಆಧಾರದಿಂದ ಹೊರದೂಡಲ್ಪಟ್ಟ ತೂಕವನ್ನು ಸರಿದೂಗಿಸುವ ಸಲುವಾಗಿ ಚಾಚುತೊಲೆಯ ಮುಂದುವರಿದ ಬಾನೆಯಲ್ಲಿ ಕಲ್ಲು ಅಥವಾ ಮಣ್ಣು ತುಂಬಲ್ಪಡುವುದು. ಈ ಮುಂದುವರಿಕೆಗೆ ಅಡಗಿಸಲ್ಪಟ್ಟ ಸೇತುವೆ ಕಮಾನು ಎಂದು ಹೆಸರು. ಇಂಥ ಮಾದರಿಯನ್ನು ಒಂಟಿ ಕಮಾನು ಸೇತುವೆಯಲ್ಲಿ ಮಾತ್ರ ಬಳಸಬಹುದು. ಎರಡು ಒಂಟಿ ಚಾಚುತೊಲೆಗಳನ್ನು ಎರಡು ಎದುರು ದಂಡೆಗಳಿಂದ ಕೊನರುವೆಡೆಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸಲಾಗುವುದು.




ಚಿತ್ರ 3. ಉಕ್ಕಿನಿಂದ ನಿರ್ಮಿಸಿದ ಜೋಡಿ ಚಾಚುತೊಲೆ ಸೇತುವೆ : *C*–ಚಾಚುತೊಲೆ, *S*–ಮಧ್ಯಾಂತರ ತೂಗು ಕಮಾನು

2. ಜೋಡಿ ಚಾಚುತೊಲೆ ಸೇತುವೆ : ಜೋಡಿ ತೊಲೆಗಳು ಹೊರ ಚಾಚಲ್ಪಟ್ಟು ಸ್ತಬ್ಧತೂಕವನ್ನು ಸರಿದೂಗಿಸಲು ಸೇತುವೆ ಕಮಾನು ಅಂತರವನ್ನು ಎರಡೂ ಕಡೆಯ ಆಧಾರದಿಂದ ತುಂಬುತ್ತವೆ. ಸರಿದೂಗದ ಜೀವ ಹೊರೆ ಆಧಾರಗಳಲ್ಲಿ ಸರಿಹೊಂದುವ ಸ್ಥಿರತೆಯಿಂದಾಗಿ ಅಥವಾ ನಿರ್ಬಂಧವಿಲ್ಲದ ಕೊನೆಯಲ್ಲಿ (ಆರಿಸಿಕೊಂಡ ದಡಗಳ ಬಳಿ) ಸೂಕ್ತವಾದ ಲಂಗರು ಹಾಕುವಿಕೆಯಿಂದ ಸಮತೋಲನವಾಗುತ್ತದೆ. ಈ ತರಹ ಸೇತುವೆಗಳು ಅಧಿಕ ಕಮಾನು ಸೇತುವೆಗಳಿಗೆ ಒಪ್ಪುವುವು ಮತ್ತು ನಿರ್ದಿಷ್ಟವಾಗಿ ಉಕ್ಕಿನಿಂದ ನಿರ್ಮಿತವಾಗುವ ಅತ್ಯಂತ ಹೆಚ್ಚು ಅಂತರ ಕಮಾನು ಸೇತುವೆಗಳಲ್ಲಿ ಹೆಚ್ಚು ಉಪಯುಕ್ತವಾಗುವುವು. ಜೋಡಿ ಚಾಚುತೊಲೆ ಸೇತುವೆಗಳು ಸ್ವಯಂ ಅಂತರ್ಗತವಾದವಾದ್ದರಿಂದ ಇವುಗಳ ರಚನೆ ಮಿತವ್ಯಯದ್ದು.




ಚಿತ್ರ 4. ಉಕ್ಕಿನಿಂದ ಭದ್ರಗೊಳಿಸಿದ ಜೆಲ್ಲಿಕಲ್ಲು ನಿರಂತರ ಸೇತುವೆ : 1, 2–ಚಾಚುತೊಲೆಯ ವಿಸ್ತರಣೆ ಇಲ್ಲದ ಮತ್ತು ವಿಸ್ತರಣೆ ಇರುವ ಭಾಗ, *G*–ತೊಲೆ, *S*–ಚಪ್ಪಡಿ, *C*–ದಡದ ಕೈ, *R*–ರಸ್ತೆ, *D*–ತಡೆಗೋಡೆ

3. ವಿಸ್ತೃತ ಚಾಚುತೊಲೆ ಸೇತುವೆ : ಚಾಚುತೊಲೆಗಳ ವಿಸ್ತರಣೆ ಎರಡು ಅಥವಾ ಹೆಚ್ಚು ಆಧಾರಗಳ ಮೇಲೆ ಆನಿಸಿರಬಹುದು. ಬಹುಶಃ ಒಂಟಿಯಾಗಿಯೂ ಒಂದು ಕಡೆ ಆಧಾರದಿಂದ ಹೊರಚಾಚಿಯೂ ವಿಸ್ತರಿಸಬಹುದು. (ಚಿತ್ರ (1ರಲ್ಲಿ AB ಭಾಗ, ಚಿತ್ರ (4)ರಲ್ಲಿ C ಭಾಗ) ಅಥವಾ ವಿಸ್ತರಣೆ ಎರಡೂ ಕಡೆಯಿಂದ ಇರಬಹುದು (ಚಿತ್ರ 1 ರಲ್ಲಿ

C ಭಾಗ). ಈ ವಿಧವಾದ ಸೇತುವೆ ಹೆಚ್ಚು ಮಿತವ್ಯಯಕಾರಿ ಮತ್ತು ದೃಢ. ಈ ತರದ ಸೇತುವೆಯಲ್ಲಿ ಪ್ರಬಲಿತ ಕಾಂಕ್ರೀಟನ್ನು ಉಪಯೋಗಿಸುತ್ತಾರೆ. ದಡದ ದಿಕ್ಕಿಗೆ ಚಾಚುವಿಕೆ ವಿಸ್ತರಿಸಿದಾಗ ದಡದ ಕೈ (ಚಿತ್ರ 4 ರಲ್ಲಿ C ಭಾಗ) ಏರ್ಪಡುತ್ತದೆ. ಆಗ ಸೇತುವೆಯ ಆನಿಕೆ ಅಗತ್ಯವಿರುವುದಿಲ್ಲ. (ಎಂ.ಜಿ. ಆರ್)

**ಚಾಟರ್‌ಟನ್, ಥಾಮಸ್ :** 1752–70. ಇಂಗ್ಲಿಷ್ ಕವಿ. ಬ್ರಿಸ್ಟಲ್‌ನಲ್ಲಿ ಹುಟ್ಟಿದ ಈತ ಉಪಾಧ್ಯಾಯನೊಬ್ಬನ ಮಗ. ಕೇವಲ ಹದಿನೆಂಟು ವರ್ಷದಲ್ಲೇ ಅಪೂರ್ವ ಪ್ರೌಢಿಮೆ ಸೂಚಿಸುವಂಥ ಕಾವ್ಯಕೃತಿಗಳನ್ನು ರಚಿಸಿ ಅಕಾಲಮರಣವನ್ನು ಅಪ್ಪಿದ. ಈತನ ಪೂರ್ವಜರು ಹಲವಾರು ತಲೆಮಾರುಗಳಿಂದ ಸೇಂಟ್ ಮೇರಿ ರ್‍ಯಾಡ್‌ಕ್ಲಿಫ್ ಚರ್ಚಿನಲ್ಲಿ ಪಾರುಪತ್ತೆಗಾರರಾಗಿದ್ದರು. ಕಲ್ಪನಾಶೀಲನೂ ನಿಶಿತಮತಿಯೂ ಆಗಿದ್ದ ಈ ಬಾಲಕ ಪುರಾತನ ಕಾಲದ ಆ ಅಗಾಧ ಚರ್ಚ್ ಕಟ್ಟಡದ ಸುತ್ತುಮುತ್ತಲೂ ಹಾಗೂ ಅದರೊಳಗಿನ ಪತ್ರಾಗಾರದಲ್ಲಿದ್ದ ಓಬೀರಾಯನ ಕಾಲದ ದಸ್ತಾವೇಜುಗಳ ನಡುವೆಯೂ ಅಡ್ಡಾಡುತ್ತಿದ್ದು ಯಾವಾಗಲೂ ಪ್ರಾಚೀನ ಕಟ್ಟುಕಥೆ ಮತ್ತು ಇತಿಹಾಸ ರಮ್ಯವ್ಯಕ್ತಿಗಳನ್ನು ಕುರಿತು ಚಿಂತಿಸುತ್ತಿದ್ದ. ಜಾನ್ ಲ್ಯಾಂಬರ್ಟ್ ಎಂಬ ವಕೀಲನ ಬಳಿ ತರಬೇತಿ ಪಡೆಯುತ್ತಿದ್ದಾಗಲೂ ಈತನಿಗೆ ಅದೇ ಯೋಚನೆ. ವಿರಾಮ ಸಿಕ್ಕಾಗಲೆಲ್ಲ ಸಾಹಿತ್ಯ, ಇತಿಹಾಸ, ಪುರಾತತ್ತ್ವ ವಸ್ತುಗಳ ಗೀಳಿನಲ್ಲೇ ಇರುತ್ತಿದ್ದ. 1769ರಲ್ಲಿ ಈತ ಪ್ರಾಚೀನ ಶೈಲಿಯಲ್ಲಿ ಕೆಲವು ಕವನಗಳನ್ನು ಬರೆದು, ಅವನ್ನು ಥಾಮಸ್ ರೌಲೆ ಎಂಬ ಹಳೆಯ ಕಾಲದ ಕವಿಯೊಬ್ಬ ಬರೆದುವೆಂದೂ ಅವನ್ನು ತಾನು ಹೊರತೆಗೆದಿರುವುದಾಗಿಯೂ ಕಥೆಕಟ್ಟಿದ. ಆ ಕವನಗಳ ಕಟ್ಟನ್ನು ಅಂದಿನ ಪ್ರಸಿದ್ಧ ಗಾತಿಕ್ ಸಾಹಿತಿ ಹಾರಸ್ ವಾಲ್‌ಪೋಲ್‌ನ ಬಳಿ ಕೊಂಡೊಯ್ದಾಗ ಆತ ಮೊಟ್ಟಮೊದಲು ಅದನ್ನು ನಿಜವೆಂದೇ ತಿಳಿದು ಅವಕ್ಕೆ ಮಾರುಹೋದ. ಆದರೆ ಅನಂತರ ಕವಿ ಥಾಮಸ್ ಗ್ರೇ ಮತ್ತು ಮೇಸನ್‌ರ ಜತೆ ಸಮಾಲೋಚನೆ ನಡೆಸಿದ ಮೇಲೆ ರೌಲೆ ಎಂಬ ಹೆಸರು ಕಾಲ್ಪನಿಕವಿರಬೇಕು ಎನಿಸಿತು. ಇದನ್ನು ಒಪ್ಪಲಾರದ ಚಾಟರ್‌ಟನ್ ಮತ್ತೆ ಮತ್ತೆ ವಾಲ್‌ಪೋಲನ ಬಳಿ ಹೋಗಿ ತನಗೆ ಅವನ ಸಲಹೆ ನೆರವುಗಳು ಬೇಕೆಂದು ಅಂಗಲಾಚಿದ; ಕೊನೆಗೊಮ್ಮೆ ಕವನಗಳ ಕಟ್ಟನ್ನೂ ಬರೆದಿದ್ದ ವಿನಂತಿಪತ್ರಗಳನ್ನೂ ಹಿಂದಕ್ಕೆ ಪಡೆದ.

1770 ಏಪ್ರಿಲ್‌ನಲ್ಲಿ ಚಾಟರ್‌ಟನ್ ಬ್ರಿಸ್ಟಲ್‌ನಿಂದ ಲಂಡನ್ನಿಗೆ ತೆರಳಿದ. ರಿಕ್ತಹಸ್ತನಾದ್ದರಿಂದ ಅಲ್ಲಿ ತನ್ನ ಬರೆಹಗಳಿಂದಲೇ ಜೀವನ ನಡೆಸಲು ನಿರ್ಧರಿಸಿದ. ಕಡುತರ ಕಷ್ಟನಿಷ್ಠುರಗಳಿಗೆ ಸಿಕ್ಕಿ ತೊಳಲಿದ. ಅತೀವ ಮಾನಸಿಕ ವೇದನೆಯಿಂದ 1770 ಏಪ್ರಿಲ್ 24ರಂದು ಹಾಲ್‌ಬರ್ನಿನ ಬ್ರೂಕ್ ಸ್ಟ್ರೀಟ್‌ನಲ್ಲಿದ್ದ ತನ್ನ ಅಟ್ಟದ ಕೋಣೆಯಲ್ಲಿ ವಿಷ ಕುಡಿದು ಸತ್ತ. ಕೇವಲ ಚಿಕ್ಕಂದಿನಲ್ಲೇ ವಿಶೇಷ ಬುದ್ಧಿಶಕ್ತಿ, ಪ್ರತಿಭಾಸಂಪತ್ತುಗಳನ್ನು ಪಡೆದಿದ್ದ ಅಪಕ್ವ ವಯಸ್ಸಿನ ಈ ಬಾಲಕ ಉಗ್ರವಾದ ಅಹಂಭಾವನೆಯುಳ್ಳ ನಿರಾಶಾವಾದಿ ಆಗಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಚಾಟರ್‌ಟನ್ ಸತ್ತ ಕೂಡಲೇ ಸಾಹಿತಿಗಳ ಗೋಷ್ಠಿಯಲ್ಲಿ ದೊಡ್ಡದೊಂದು ಕೋಲಾಹಲವೇ ಉಂಟಾಯಿತು. ರೌಲೆ ಕವನಗಳನ್ನು ಸೃಷ್ಟಿಸಿದವ ಚಾಟರ್‌ಟನ್ನನೇ ಎಂದು ವಾದಿಸಿದವರದು ಒಂದು ಪಕ್ಷವಾಗಿ, ಅವು ಅಸಲೀ ಪುರಾತನ ಕೃತಿಗಳೇ ಎಂಬುವರದು ಪ್ರತಿಪಕ್ಷವಾಗಿ ದೊಡ್ಡ ಜಿಜ್ಞಾಸೆ ಎದ್ದಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಮರಣಾನಂತರ ಈ ಕವಿ ಅಸಾಧಾರಣ ರೀತಿಯಲ್ಲಿ ತನ್ನ ಸಮಕಾಲೀನ ಕವಿಗಳ ಅತಿ ಪ್ರಶಂಸೆಗೆ ಭಾಜನನಾದ. ಕೋಲ್‌ರಿಜ್ ಈತನ ನೆನಪಿಗಾಗಿ ಒಂದು ಶೋಕಗೀತೆ ರಚಿಸಿದ. ವರ್ಡ್ಸ್‌ವರ್ತ್ ತನ್ನ ಲೀಚ್ ಗ್ಯಾದರರ್ ಎಂಬ ಕವನದಲ್ಲಿ ಈತನನ್ನು ಅದ್ಭುತ ಬಾಲಕನೆಂದು ಕರೆದ. ಷೆಲ್ಲಿ ತನ್ನ ಲೋಕವಿಖ್ಯಾತ ಅಡೋನಿಸ್ ಕವನದಲ್ಲಿ ಒಂದು ಪದ್ಯವನ್ನೇ ಈತನಿಗೆ ಮೀಸಲಿಟ್ಟು ಶ್ರದ್ಧಾಂಜಲಿ ಅರ್ಪಿಸಿದ. ಕೀಟ್ಸ್ ತನ್ನ ಎಂಡಿಮಿಯನ್ ಕವನವನ್ನು ಈತನಿಗೆ ಅರ್ಪಿಸುವುದರ ಜೊತೆಗೆ ಈತನ ಕಾವ್ಯದಿಂದ ಬಹಳಷ್ಟು ಪ್ರಭಾವಿತನಾದ. ಫ್ರಾನ್ಸಿನಲ್ಲಿ ಚಾಟರಟನ್ನನನ್ನು ಕುರಿತ ಅತಿರೇಕದ ಆಪೆರಗಳೂ ರಚಿತವಾದವು.

ರೌಲೆ ಎಂಬ ಅಂಕಿತವಿಟ್ಟುಕೊಂಡು ಬರೆದ ಕವನಗಳಲ್ಲದೆ ಈತ ತನ್ನ ಹೆಸರಿನಲ್ಲೇ ಕೆಲವು ತೀರ ಸಾಧಾರಣ ಮಟ್ಟದ ಕೃತಿಗಳನ್ನು ರಚಿಸಿದ್ದುಂಟು. ಅವುಗಳಲ್ಲಿ ಕ್ಯೂ ಗಾರ್ಡನ್ಸ್ ಎಂಬ ವಿಡಂಬನ ಕವನವೂ ಆಫ್ರಿಕನ್ ಎಕ್ಲೋಗ್ಸ್ ಎಂಬ ಅಂತ್ಯಪ್ರಾಸದ ದ್ವಿಪದಿಗಳೂ ಸೇರಿವೆ. ಆದರೆ ಅವುಗಳಲ್ಲಿ ಕಾವ್ಯದ ಕಾವು ಕಡಿಮೆ, ಅನುಕರಣೆಯ ಕೃತಕತೆಯೇ ಹೆಚ್ಚು. ಇವುಗಳಿಗಿಂತ ಮಿಗಿಲಾಗಿ ಈತನ ಪುರಾತನ ಶೈಲಿಯ ಕವನಗಳೇ ಹೆಚ್ಚಾಗಿ ಗಮನ ಸೆಳೆಯುತ್ತವೆ. ಅದರಲ್ಲೂ ಮುಖ್ಯವಾಗಿ ಏಯೆಲ ಗಾಡ್ವಿನ್ ಎಂಬ ನಾಟಕೀಯ ಕವನಗಳು, ಉಪನಾಟಕಗಳು, ದಿ ಬ್ಯಾಟಲ್ ಆಫ್ ಹೇಸ್ಟಿಂಗ್ಸ್ ಎಂಬ ಕಥನಕವನ, ಬ್ರಿಸ್ಟೊವ್ ಟ್ರ್ಯಾಜಡಿ, ಬ್ಯಾಲಡ್ ಆಫ್ ಚ್ಯಾರಿಟಿ ಎಂಬ ಬ್ಯಾಲಡ್ ಮಾದರಿಯ ನೀಳ್ಗವನಗಳೂ ಈತನ ಕಾವ್ಯಪ್ರತಿಭೆಗೆ ಸಾಕ್ಷಿಯಾಗಿವೆ. ಈತ ಪ್ರಾಚೀನ ಹಾಗೂ ಅಜ್ಞಾತ ಕೃತಿಗಳಿಂದ ಎತ್ತಿದ ಚಿತ್ರ ವಿಚಿತ್ರ ಶಬ್ದಪ್ರಯೋಗಗಳು, ಮಾತಿನ ತಿರುವು, ರೂಪಕಗಳ ಬಳಕೆ, ಅಚ್ಚರಿ ಹುಟ್ಟಿಸುವಂತಿವೆ. ಆದರೆ ಕಾವ್ಯದ ಮೂಲಭೂತ ಸರಣಿಗಿಂತ ಹೆಚ್ಚಾಗಿ ಬದುಕಿನ ರಮ್ಯಕಥೆಯಿಂದಲೇ ಚಾಟರ್‌ಟನ್‌ಗೆ ಅಪಾರಕೀರ್ತಿ ಒದಗಿತೆಂಬ ಮಾತು ಸುಳ್ಳಲ್ಲ. ಅದೇನೇ ಇರಲಿ. ಈತನೊಬ್ಬ ಅಪ್ರತಿಮ ಪ್ರತಿಭಾವಂತನೆಂಬುದರಲ್ಲಿ ಸಂದೇಹವಿಲ್ಲ. ಈತನ ಕಾವ್ಯದ ಮಹತ್ತ್ವವನ್ನು ಉತ್ಪ್ರೇಕ್ಷಿಸದೆ ಹೋದರೂ ಈತನ ಕಾಲದ ಇಂಗ್ಲಿಷ್ ಕಾವ್ಯದ ಮೇಲೆ ಈತ ಬೀರಿದ ವ್ಯಾಪಕ ಪರಿಣಾಮವನ್ನು ಉಪೇಕ್ಷಿಸುವಂತಿಲ್ಲ.

ಇಂಗ್ಲಿಷ್ ಕಾವ್ಯದ ಛಂದಸ್ಸು, ಲಯಗಳ ಮೇಲೆ ಚಾಟರ್‌ಟನ್ ಪ್ರಭಾವವಿದೆ. ಉದಾ: ಕೋಲ್‌ರಿಜ್‌ನ 'ಕ್ರಿಸ್ಟಬೆಲ್' ಕಥನ ಕವನದ ಎಂಟು ಸಿಲಬಲ್‌ಗಳ ಛಂದಸ್ಸುಗಳನ್ನು ಚಾಟರ್‌ಟನ್ ಬಳಸಿದ್ದ. (ಎಚ್.ಕೆ.ಆರ್.)

**ಚಾಟಿ ಹಾವು :** ಎಲ್ಯಾಪಿಡೀ ಕುಟುಂಬಕ್ಕೆ ಸೇರಿದ 8 ಬಗೆಯ ಹಾವುಗಳಿಗಿರುವ ಸಾಮಾನ್ಯ ಹೆಸರು (ವ್ಹಿಪ್ ಸ್ನೇಕ್). ಪ್ರಮುಖವಾಗಿ ಮ್ಯಾಸ್ಟಿಕಾಫಿಸ್ ಫ್ಲಾಜೆಲಮ್ ಎಂಬ ಹಾವಿಗೆ ಈ ಹೆಸರು ಅನ್ವಯವಾಗುತ್ತದೆ. ಚರ್ಮವನ್ನು ಹೆಣೆದು ರೂಪಿಸುತ್ತಿದ್ದ ಚಾಟಿಯನ್ನು ಹೋಲುವ ರೀತಿಯಲ್ಲಿ ಈ ಹಾವಿನ ಹುರುಪೆಗಳು ಜೋಡಣೆಗೊಂಡಿರುವುದರಿಂದಲೂ, ಹಾವು ತೆಳುವಾಗಿ ಉದ್ದವಾಗಿ ಇರುವುದರಿಂದಲೂ ಇದಕ್ಕೆ ಚಾಟಿ ಹಾವು ಎಂಬ ಹೆಸರು ಬಂದಿದೆ. ಇದಕ್ಕೆ ಕೋಚ್‌ವ್ಹಿಪ್, ಬ್ಲ್ಯಾಕ್‌ಸ್ನೇಕ್ ಮುಂತಾದ ಹೆಸರುಗಳೂ ಉಂಟು. ಇದರ ಮೂಲ ಅಮೆರಿಕ ಸಂಯುಕ್ತ ಸಂಸ್ಥಾನ. ಪೂರ್ಣ ಬೆಳೆದ ಹಾವು ಸು.8 ಅಡಿಗೂ ಹೆಚ್ಚು ಉದ್ದವಿರುತ್ತದೆ. ದೇಹದ ಬಣ್ಣ ಕಪ್ಪು. ಮರಿಹಾವುಗಳ ಮೈಮೇಲೆ ಅಲ್ಲಲ್ಲಿ ಹಸಿರು, ಕಪ್ಪು ಇಲ್ಲವೆ ನೀಲಿ ಬಣ್ಣದ ಮಚ್ಚೆಗಳಿರುತ್ತವೆ. ಮರಿಗಳು ಬೆಳೆದಂತೆಲ್ಲ ದೇಹದ ಬಣ್ಣ ಸಾಂದ್ರವಾಗುತ್ತದೆ. ಅತ್ಯಂತ ಕ್ಷಿಪ್ರಗತಿಯಲ್ಲಿ ಚಲಿಸಬಲ್ಲ ಈ ಹಾವು, ಗಿಡಗಂಟೆ, ಕಲ್ಲು ಮುಂತಾದವನ್ನು ಲೆಕ್ಕಿಸದೆ ಗಂಟೆಗೆ ಸರಾಸರಿ 8 ಮೈಲಿ ವೇಗದಲ್ಲಿ ಸಾಗುತ್ತದೆ. ಓತಿ ಮುಂತಾದವು ಇದರ ಪ್ರಧಾನ ಆಹಾರ. ಕೆಲವೊಮ್ಮೆ ಸಣ್ಣಪುಟ್ಟ ಸ್ತನಿಗಳನ್ನೂ ಹಕ್ಕಿಗಳನ್ನೂ ತಿನ್ನುವುದುಂಟು. (ಕೆ.ಎಂ.ವಿ.)

**ಚಾಟು ಕವಿತ್ವ :** ಚಾಟು ಎಂದೆ ಪ್ರಿಯವಾದದ್ದು ಎಂದು ಅರ್ಥ. ಪ್ರಿಯವಾದ ಅರ್ಥವುಳ್ಳ ಪದ್ಯಗಳು ಚಮತ್ಕಾರಯುಕ್ತವಾಗಿಯೂ ಇದ್ದರೆ ಸಹಜವಾಗಿ ಪಂಡಿತರ ಮನಸ್ಸಿಗೆ ವಿಶೇಷ ಆಹ್ಲಾದವನ್ನುಂಟುಮಾಡುತ್ತವೆ. ಅವನ್ನು ಅವರು ಇತರರಿಗೂ ಹೇಳಿ ಸ್ವಾರಸ್ಯವನ್ನು ವಿವರಿಸುತ್ತಾರೆ. ಹೀಗೆಯೇ ಅವು ಒಬ್ಬರಿಂದ ಒಬ್ಬರಿಗೆ ಹರಡಿ ಲೋಕಪ್ರಸಿದ್ಧವಾಗುತ್ತವೆ. ಅಂಥ ಪದ್ಯ ಕಟ್ಟುವಿಕೆಯನ್ನು ಚಾಟು ಕವಿತ್ವವೆನ್ನುತ್ತಾರೆ. ಸಂಸ್ಕೃತ ಭಾಷೆಯಲ್ಲಿ ಚಾಟು ಶ್ಲೋಕಗಳು ಅಸಂಖ್ಯಾತವಾಗಿವೆ. ಅವನ್ನು ಸುಭಾಷಿತಗಳೆಂದೂ ಕರೆಯುತ್ತಾರೆ. ಕವಿಗಳು ಹೇಳಿದ ಉತ್ತಮ ಪದ್ಯಗಳೆಂದು ಆ ಮಾತಿಗೆ ಅರ್ಥ. ಬಹುಮಟ್ಟಿಗೆ ಇಂಥ ಶ್ಲೋಕಗಳು ಆಶುಕವಿತೆಗಳು. ಕವಿಗಳು ಯಾವುದೋ ಸನ್ನಿವೇಶದಲ್ಲಿ ಸ್ಫೂರ್ತಿಯಿಂದ ಹೇಳಿದ ಸರಸವಾದ ಪದ್ಯಗಳು ಇವು. ಈ ಪದ್ಯಗಳಲ್ಲಿ ಕವಿಯ ಹೃದಯಾಂತರಾಳದ ತೀವ್ರ ಸಂತೋಷ, ದುಃಖ, ಕೋಪ, ತಿರಸ್ಕಾರಾದಿ ಭಾವಗಳು ವ್ಯಕ್ತವಾಗುತ್ತವೆ. ಜೀವನದ ಹಲವು ಘಟನಾವಳಿಗಳನ್ನು ಗಮನಿಸಿದ ಕವಿಗಳ ಮನಸ್ಸಿನಲ್ಲಿ ಮೂಡಿದ ಸಂವೇದನೆ ಈ ಪದ್ಯಗಳಲ್ಲಿ ಸುವ್ಯಕ್ತವಾಗುವುದರಿಂದ ಅವು ಕೇಳುಗರ ಹೃದಯವನ್ನು ನಲಿಸುತ್ತವೆ; ಅವರ ಮನಸ್ಸನ್ನು ಅರಳಿಸುತ್ತವೆ. ಸಾಮಾನ್ಯವಾಗಿ ಚಾಟು ಪದ್ಯಗಳು ಸ್ವಸಂಪೂರ್ಣವಾದ ಅರ್ಥವುಳ್ಳ ಬಿಡಿ ಪದ್ಯಗಳಾಗಿರುತ್ತವೆ.

ಲೋಕಪ್ರಸಿದ್ಧವಾದ ಇಂಥ ಅನೇಕ ಕವನಗಳಿಗೆ ಕರ್ತೃಗಳು ಯಾರೋ ತಿಳಿಯದು. ಆದರೆ ಶ್ಲೋಕಗಳು ಮಾತ್ರ ರಸಿಕ ಶ್ರೋತೃಗಳ ಹೃದಯಸಿಂಹಾಸನದಲ್ಲಿ ಸುಪ್ರತಿಷ್ಠಿತವಾಗಿವೆ. ಬೇರೆ ಕೆಲವು ಪದ್ಯಗಳ ಕವಿಗಳು ಯಾರೆಂಬುದು ತಿಳಿದಿದೆ. ದೊಡ್ಡ ದೊಡ್ಡ ಕಾವ್ಯಗಳನ್ನು ರಚಿಸಿದ ಮಹಾಕವಿಗಳೂ ಕೆಲವು ವೇಳೆ ಹಾಸ್ಯಪೂರ್ಣವಾದ ಪದ್ಯಗಳನ್ನು ಹೇಳುವುದು ಅಸಂಭವವೇನೂ ಅಲ್ಲ. ತೆಲುಗಿನ ಶ್ರೀನಾಥ, ಅಲ್ಲಸಾನಿ ಪೆದ್ದನ, ಕೃಷ್ಣದೇವರಾಯ, ತೆನಾಲಿ ರಾಮಕೃಷ್ಣ ಮೊದಲಾದ ಹಿರಿಯ ಕವಿಗಳು ಸಮಯಸ್ಫೂರ್ತಿಯಿಂದ ಹೇಳಿದ ಹಲವು ಆಶುಕವಿತೆಗಳು ತೆಲುಗು ದೇಶದಲ್ಲಿ ವಿಶೇಷ ಜನಪ್ರಿಯತೆ ಗಳಿಸಿವೆ. ಇವು ಆ ಕವಿಗಳ ಜೀವನದ ಪ್ರಮುಖ ಘಟನೆಗಳ ವರ್ಣನೆಗಳಾಗಿರುವುದೂ ಉಂಟು. ತನ್ನ ಆಶ್ರಯದಾತನಾದ ಕೃಷ್ಣದೇವರಾಯ ಸ್ವರ್ಗಸ್ಥನಾದ ಮೇಲೂ ಕೊಂಚಕಾಲ ಜೀವಿಸಿದ್ದ ಪೆದ್ದನಾರ್ಯ ಹೇಳಿರುವ ಎರಡು ಸೀಸಪದ್ಯಗಳು ಇತಿಹಾಸಪ್ರಸಿದ್ಧವಾಗಿವೆ. ಅವು ಚಾಟುಪದ್ಯಗಳ ಜಾತಿಗೇ ನಾಯಕರತ್ನಗಳಂತೆ ಶೋಭಿಸುತ್ತಿವೆ. ಅವರ ನಿಕಟ ಸ್ನೇಹದ ಪ್ರತ್ಯಕ್ಷದರ್ಶನ ಆ ಪದ್ಯಗಳಲ್ಲಿ ಲಭಿಸುತ್ತದೆ. ವಾರ್ಧಕ್ಯದಲ್ಲಿ ದಾರಿದ್ರ್ಯಕ್ಕೆ ಸಿಕ್ಕಿ ಕಷ್ಟಪಟ್ಟ ಶ್ರೀನಾಥನ ಕ್ಲೇಶ ಆತ ಹೇಳಿಕೊಂಡಿರುವ ಪದ್ಯಗಳಲ್ಲಿ ವ್ಯಕ್ತವಾಗಿದೆ. ಇಂಥ ಅನೇಕ ಚಾಟುಕವಿತೆಗಳು ಕವಿಗಳ ಆತ್ಮಕಥೆಗಳಾಗಿವೆಯೆಂದರೆ ತಪ್ಪಲ್ಲ.

ಕವಿಗಳು ರಾಜ, ಮಂತ್ರಿ, ಶ್ರೀಮಂತ ಮೊದಲಾದವರಿಂದ ಮನ್ನಣೆ ಪುರಸ್ಕಾರಗಳನ್ನು ಪಡೆದು ಸಂತೋಷಿಸಿ ಅವರನ್ನು ಹೊಗಳಿ ಹೇಳಿದ ಪದ್ಯಗಳು ಈ ಚಾಟು ಕವಿತಾಭಂಡಾರದ ಒಂದು ಭಾಗ. ತಾವು ಬಯಸಿದ ಪುರಸ್ಕಾರ ಲಭಿಸದೆ ನಿರಾಶೆಗೊಂಡ ಕವಿಗಳು ಕೋಪದಿಂದ ರಾಜಾದಿಗಳನ್ನು ಆಕ್ಷೇಪಿಸಿ ಬೈದು ಹೇಳಿದ ಪದ್ಯಗಳದ್ದು ಎರಡನೆಯ ಭಾಗ. ತೆಲುಗಿನಲ್ಲಿ ಇದಕ್ಕೆ ಬೈಗಳ ಕವಿತ್ವ (ತಿಟ್ಟು ಕವಿತ್ವ) ಎಂದೇ ಹೆಸರು. ವೇಮುಲವಾಡ ಭೀಮಕವಿ ಈ ಕ್ಷೇತ್ರದಲ್ಲಿ ಮೇಟಿಯಾದವ. ಇನ್ನೂ ಅನೇಕರು ಈ ಬಗೆಯ ಪದ್ಯಗಳನ್ನು ಕಟ್ಟಿ ಹಾಡಿದ್ದಾರೆ. ಈ ಬೈಗುಳ ಪದ್ಯಗಳಲ್ಲಿಯೂ ಕವಿಯ ಉಕ್ತಿಚಮತ್ಕಾರ ಪ್ರಶಂಸಾರ್ಹವಾಗಿರುತ್ತದೆ.

ಮೂರನೆಯ ಬಗೆಯ ಪದ್ಯಗಳೆಂದರೆ ವ್ಯಂಗ್ಯೋಕ್ತಿಗಳು. ಪ್ರಬಲರನ್ನು ನೇರವಾಗಿ ಖಂಡಿಸುವುದು ದುರ್ಬಲನಿಗೆ ಕ್ಷೇಮವಲ್ಲ. ಆದರೆ ಆ ದುಷ್ಟರ ದುರಾಚಾರಗಳನ್ನು ಸಹಿಸಿಕೊಂಡು ಸುಮ್ಮನಿರುವುದೂ ಸಾಧ್ಯವಿಲ್ಲ. ಅಂಥ ಸಂದರ್ಭಗಳಲ್ಲಿ ಕವಿಗಳು ಅನ್ಯೋಕ್ತಿಗಳನ್ನು ಬಳಸುತ್ತಾರೆ. ರಾಜನ ಸಮೀಪವರ್ತಿಯೊಬ್ಬ ನೀಚನಾಗಿ ಸಜ್ಜನಕಂಟಕನಾದಾಗ ಒಬ್ಬ ಕವಿ ಅವನನ್ನು ಒಂದು ಉಮ್ಮತ್ತಿ ಹೂವಿಗೆ ಹೋಲಿಸಿದ್ದಾನೆ. ಆ ಹೂವು ಶಿವಲಿಂಗದ ಮೇಲೆ ಇರುವುದರಿಂದ ಅದಕ್ಕೆ ಪೂಜ್ಯತೆ. ಇಲ್ಲದಿದ್ದರೆ ಅದನ್ನು ಮೋಹಿಸುವವರು ಯಾರು? ಅದರಲ್ಲೇನು ಆಕರ್ಷಕವಾದ ಪರಿಮಳವೇ, ವರ್ಣಶೋಭೆಯೇ, ಏನಿದೆ? ಯಾವ ಗುಣವೂ ಇಲ್ಲದ ಈ ಉಮ್ಮತ್ತಿ ಹೂ ತಾನು ಅಕಸ್ಮಾತ್ ಒಂದು ದೊಡ್ಡ ಸ್ಥಾನವನ್ನು ಸೇರಿದ ಮಾತ್ರಕ್ಕೆ ಜಂಬ ಪಡಬಹುದೆ? ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ತನ್ನನ್ನು ನಿರ್ಮಾಲ್ಯವೆಂದು ಹೆಸರಿಟ್ಟು ದೂರ ಎಸೆಯುವರೆಂಬ ಪ್ರಜ್ಞೆ ಅದಕ್ಕೆ ಇರಬೇಡವೇ? ಧನ್ಯಾನಿ ಸ್ಥಲವೈಭವೇನ ಕತಿಚಿದ್ವಸ್ತೂನಿ ಎಂಬ ಸಂಸ್ಕೃತ ಶ್ಲೋಕವನ್ನು ಇಲ್ಲಿ ನೆನೆಸಿಕೊಳ್ಳಬಹುದು. ಇಂಥ ವ್ಯಂಗ್ಯೋಕ್ತಿಗಳು ಸಂಸ್ಕೃತದಲ್ಲಿಯೂ ತೆಲುಗಿನಲ್ಲಿಯೂ ವಿಶೇಷವಾಗಿ ಪ್ರಸಿದ್ಧವಾಗಿವೆ.

ಇನ್ನು ಕವಿಗಳು ತಾವು ಕಂಡ ದೇಶ, ನಗರಗಳನ್ನೂ ಜನರನ್ನೂ ವರ್ಣಿಸುವ ಪದ್ಯಗಳು ಹಲವು ಚಾಟುಪದ್ಯಗಳಾಗಿ ಪ್ರಸಿದ್ಧಿಯನ್ನು ಗಳಿಸಿವೆ. ಇವನ್ನು ದೇಶವರ್ಣನಾತ್ಮಕ ಕವಿತೆಗಳೆಂದು ಹೇಳಬಹುದು. ಶ್ರೀನಾಥಕವಿ ಪಲ್ನಾಡು, ರೇನಾಡು ಮುಂತಾದ ಪ್ರಾಂತ್ಯಗಳನ್ನು ಬೊಡ್ಡುಪಲ್ಲಿ (ಕಾಟ್ರಾವುಲಪಲ್ಲಿ) ಮೊದಲಾದ ಗ್ರಾಮಗಳನ್ನು ದಕ್ಷಿಣಾಧೀಶನ ಮುತ್ತಿನ ಓಲಗ ಶಾಲೆಯನ್ನು ಒಂದೊಂದು ಪದ್ಯದಲ್ಲಿಯೇ ಬಹಳ ಸ್ಪಷ್ಟಚಿತ್ರ ಮೂಡುವಂತೆ ಹೇಳಿದ್ದಾನೆ.

ಲೋಕಸ್ವಭಾವವನ್ನು ವರ್ಣಿಸುವ ಚಾಟುಕವಿತೆಗಳು ಅನೇಕವಾಗಿವೆ. ಕಾರ್ಯಸಾಧಕರ ಲಕ್ಷಣವನ್ನು ಒಂದು ಪದ್ಯ ನೀರೆತ್ತುವ ಏತದ ಉಪಮಾನ ಕೊಟ್ಟು ಬಣ್ಣಿಸುತ್ತದೆ. ಶಕ್ತ ತಾನು ಕೈಗೊಂಡ ಮಹತ್‌ಕಾರ್ಯವನ್ನು ಸಾಧಿಸುವುದಕ್ಕಾಗಿ ತಗ್ಗಿ ಬಗ್ಗಿ ನಡೆದುಕೊಳ್ಳುತ್ತಾನೆ; ಆದರೆ ಅಲ್ಪನಾಗುವುದಿಲ್ಲ. ಏತದ ಮರ ಬಾಗುತ್ತದೆಯಾದರೂ ಪಾತಾಳದ ನೀರನ್ನು ಬಯಲಿಗೆ ತಂದು ಚೆಲ್ಲುತ್ತದೆ.

ಕವಿಗಳು ವಿನೋದಕ್ಕಾಗಿ ಹೊಗೆಸೊಪ್ಪು, ಅಗಸ, ಕಜ್ಜಿ, ತಿಗಣೆ, ಇಲಿ, ಬೆಕ್ಕುಗಳ ಮೇಲೆ ಪದ್ಯ ಕಟ್ಟಿರುವುದುಂಟು. ಈ ಪದ್ಯಗಳು ಕೇಳುವುದಕ್ಕೆ ಹಿತವಾಗಿವೆ. ಇವುಗಳ ಭಾವ ರಮಣೀಯವಾಗಿದೆ. ಆದರೆ ಈ ಪದ್ಯಗಳಲ್ಲಿಯೂ ವ್ಯಂಗ್ಯ, ಲೋಕವಿಡಂಬನೆ ಇಲ್ಲದೆ ಹೋಗಿಲ್ಲ.

ಇನ್ನು ಕವಿಗಳಲ್ಲಿ ಪರಸ್ಪರ ಸ್ಪರ್ಧೆ ಹುಟ್ಟಿ ಆಶುವಾಗಿ ಕವಿತೆ ಹುಟ್ಟಿರುವುದುಂಟು. ಅಷ್ಟಾವಧಾನ, ಶತಾವಧಾನಗಳಂತೂ ಆಶುಕವಿತೆಯ ಹಬ್ಬಗಳು. ಇಂದಿಗೂ ತೆಲುಗು ದೇಶದಲ್ಲಿ ಈ 'ಅವಧಾನ' ಲೋಕಪ್ರಿಯವಾಗಿದೆ.

ಕನ್ನಡದಲ್ಲಿಯೂ ಮೊದಲಿಗೆ ಆಶುಕವಿತೆ ವಿಶೇಷವಾಗಿದ್ದಿರಬೇಕೆಂದು ಊಹಿಸಲು ಕಾರಣವಿದೆ. ಆಶುಕವಿನಿಟಿಲಾಕ್ಷನೆಂಬ ಬಿರುದು ಹೊತ್ತ ಒಬ್ಬ ಮಲ್ಲಿದೇವ ಕವಿಯ ಹೆಸರು ಷಿಕಾರಿಪುರದ ಶಾಸನ ಒಂದರಲ್ಲಿ ಬಂದಿದೆ. ಕನ್ನಡ ಭಾಗವತವನ್ನು ರಚಿಸಿರುವನೆಂದು ಪ್ರಸಿದ್ಧನಾಗಿರುವ ಕವಿಗೆ ಚಾಟುವಿಠಲನೆಂಬ ಹೆಸರಿದೆ. ಆದ್ದರಿಂದ ಕನ್ನಡದಲ್ಲಿ ಚಾಟುಕವಿತ್ವ, ಆಶುಕವಿತೆರಚನೆ, ಒಂದು ಕಾಲದಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದ್ದಿತೆಂಬುದರಲ್ಲಿ ಸಂಶಯವಿಲ್ಲ. (ಕೆ.ವಿ.ಇ.)

**ಚಾಟು ವಿಠಲನಾಥ :** ಕನ್ನಡ ಭಾಗವತದ ಹನ್ನೊಂದು, ಹನ್ನೆರಡನೆಯ ಸ್ಕಂಧಗಳನ್ನು ರಚಿಸಿದ ಕವಿ. ಚಾರುವಿಠಲನೆಂದೂ ಕೆಲವು ಪ್ರತಿಗಳಲ್ಲಿ ಹೇಳಿದೆ. ಏಕಾದಶ ಸ್ಕಂಧದ 36 ಸಂಧಿಗಳ 1542 ಪದ್ಯಗಳನ್ನೂ 12ನೆಯ ಸ್ಕಂಧದ ಎರಡು ಸಂಧಿಗಳ ಒಟ್ಟು 88 ಪದ್ಯಗಳನ್ನೂ ರಚಿಸಿದನೆಂದು ಕವಿ ಆಯಾ ಸ್ಕಂಧದ ಕಡೆಯಲ್ಲಿ ಹೇಳಿಕೊಂಡಿದ್ದಾನೆ. ಅಲ್ಲದೆ ಗ್ರಂಥದ ಕೊನೆಯ ಪದ್ಯದಲ್ಲಿ ಭಾಗವತವನ್ನು, 'ಕನ್ನಡಿಸಿದನು ಸತ್ಕವಿ ಚಾಟುವಿಠಲನಾಥನರ್ಥಿಯಲಿ' ಎಂದು ಹೇಳಿಕೊಂಡಿದ್ದಾನೆ. ಇದರಿಂದ ಭಾಗವತದ ಹನ್ನೆರಡು ಸ್ಕಂಧಗಳನ್ನೂ ಚಾಟುವಿಠಲನೆಂಬ ಹೆಸರಿನ ಕವಿಯೇ ಬರೆದನೆಂದು ಭಾವಿಸಬಹುದಾಗಿದೆ. ಆದರೆ ಚಾಟುವಿಠಲನಾಥನೆಂಬ ಹೆಸರು ಕನ್ನಡ ಭಾಗವತದ ಇನ್ನಾವ ಸ್ಕಂಧದಲ್ಲಿಯೂ ಬಂದಿಲ್ಲ. 'ಇದು ಸದಾನಂದಾಖ್ಯಯೋಗಿಯ ತೊದಲು ನುಡಿ, 'ಗೋಪಿನಾಥನು ಮಂಗಳವನೀವನು ಸದಾನಂದಾಖ್ಯಮುನಿವರೆಗೆ', 'ಯೋಗೀಂದ್ರ ನಖಿಳೋದಿತ ಸದಾನಂದ ಮುದರೊಳಭಿವರ್ಣಿಸಿದಂ'– ಎಂಬ ವಾಕ್ಯಗಳು ಕನ್ನಡ ಭಾಗವತದ ಬೇರೆ ಬೇರೆ ಭಾಗಗಳಲ್ಲಿ ಬಂದಿವೆ. ಇದರಿಂದ ಕನ್ನಡ ಭಾಗವತಕಾರನ ಹೆಸರು ಸದಾನಂದನಿರಬಹುದೆಂಬ ಸಂಶಯ ಬರುತ್ತದೆ. ಯೋಗಿ, ಯೋಗೀಂದ್ರ ಎಂದು ಹೇಳಿಕೊಳ್ಳುವುದರಿಂದ ಈತ ಯತಿಯಾಗಿದ್ದಿರಬಹುದು. ಈತನ ಗುರು ಅಚ್ಚುತಾರಣ್ಯನೆಂಬ ಯತಿ. ಆತನ ಸ್ತೋತ್ರ ಭಾಗವತದ ಎಲ್ಲ ಸ್ಕಂಧಗಳಲ್ಲಿಯೂ ಬಂದಿದೆ. ಕನ್ನಡ ಭಾಗವತದ ಪ್ರತಿ ಸಂಧಿಯ ಕೊನೆಯಲ್ಲಿಯೂ ನಿತ್ಯಾತ್ಮನೆಂಬ ಅಂಕಿತವಿದೆ. ನಿತ್ಯಾತ್ಮ ಶಬ್ದದೊಡನೆ ಬೇರೆ ಬೇರೆ ದೇವರ ಹೆಸರುಗಳನ್ನು ಸೇರಿಸಿ ಕವಿ ಬರೆದಿರುವುದರಿಂದ ಕವಿಯ ಅಂಕಿತ ನಿತ್ಯಾತ್ಮನೆಂದೇ ತಿಳಿಯಬೇಕು. ಸದಾನಂದನಿಗೇ ನಿತ್ಯಾತ್ಮನೆಂಬ ಅಂಕಿತವಿದ್ದು ಭಾಗವತ ರಚನೆ ಪೂರೈಸುವ ವೇಳೆಗೆ ಚಾಟು ವಿಠಲನೆಂಬ ಹೆಸರು ಬಂದಿರಬಹುದೇ? ಅಥವಾ ಸದಾನಂದ ಕವಿ ಬರೆಯದೆ ಬಿಟ್ಟಿದ್ದ ಭಾಗವತದ ಕಡೆಯ ಎರಡು ಸ್ಕಂಧಗಳನ್ನು ಅವನ ಶಿಷ್ಯನೋ ಭಕ್ತನೋ ಆದ ಚಾಟುವಿಠಲನೆಂಬ ಕವಿ ಬರೆದಿರಬಹುದೇ? ಇದು ಹೀಗೆಯೇ ಸರಿಯೆಂದು ನಿರ್ಧರಿಸಲು ಈಗ ಸಾಧ್ಯವಿಲ್ಲ. ಚಾಟು ವಿಠಲನ ಹೆಸರಿರುವ ಕೊನೆಯ ಎರಡು ಸ್ಕಂಧಗಳಲ್ಲಿಯೂ ಸದಾನಂದ ಯೋಗಿಯ ಸ್ಮರಣೆಯಿದೆ. ಗೋಪೀನಾಥ ಮಂಗಳವನೀವನು ಸದಾನಂದಾಖ್ಯಮುನಿವರೆಗೆ ಎಂಬ ಮಾತು ಬಂದಿರುವುದರಿಂದ ಚಾಟುವಿಠಲ, ಸದಾನಂದ ಮುನಿ ಇಬ್ಬರೂ ಬೇರೆ ಬೇರೆ ವ್ಯಕ್ತಿಗಳಿರಬಹುದೆಂಬ ಭಾವನೆ ಬರುತ್ತದೆ.

ಸದಮಳಾಚ್ಯುತ ಕೃಷ್ಣರಾಯನ ಹೃದಯವೆನಿಸುವ ಭಾಗವತಶಾಸ್ತ್ರ– ಎಂಬ ಮಾತುಗಳು 12ನೆಯ ಸ್ಕಂಧದ ಕಟ್ಟಕಡೆಯ ಪದ್ಯದಲ್ಲಿ ಬಂದಿರುವುದರಿಂದ ಚಾಟುವಿಠಲನಾಥ ವಿಜಯನಗರದ ಅರಸನಾದ ಕೃಷ್ಣದೇವರಾಯನ ಕಾಲದಲ್ಲಿ ಇದ್ದಿರಬಹುದೆಂದು ತೋರುತ್ತದೆ. ಆದರೆ ಅತ್ಯಂತ ಪ್ರಾಚೀನವೆನಿಸಿದ ತಾಳೆಗರಿ ಪ್ರತಿಯಲ್ಲಿ ಅದು ಶಾಲಿವಾಹನಶಕ 1441ರಲ್ಲಿ, ಅಂದರೆ 1519ರಲ್ಲಿ ಪ್ರತಿ ಮಾಡಲ್ಪಟ್ಟಿತೆಂದು ಹೇಳಿದೆ. ನಕಲು ಮಾಡಿದುದೇ 1519ನೆಯ ವರ್ಷವಾದರೆ ಮೂಲಗ್ರಂಥ ಇನ್ನೂ ಮುಂಚೆಯೇ ಹುಟ್ಟಿರಬೇಕು. ಆ ಪ್ರತಿಯಲ್ಲಿ ಮೊದಲಿನ 9ಸ್ಕಂಧಗಳು ಮಾತ್ರ ಇವೆ. ಆದ್ದರಿಂದ ಅವು ಅಷ್ಟಾದರೂ ಕೃಷ್ಣದೇವರಾಯನ ಕಾಲಕ್ಕಿಂತ ಮುಂಚೆಯೇ ರಚಿತವಾಗಿರಬೇಕು.

ಕನ್ನಡ ಭಾಗವತಕಾರ ಬೇರಾವ ಕವಿಯ ಸ್ಮರಣೆಯನ್ನೂ ಮಾಡಿಲ್ಲ. ಬೇರೆ ಕನ್ನಡ ಕವಿಗಳೂ ಆತನ ಹೆಸರನ್ನು ಸ್ಮರಿಸಿದಂತೆ ತೋರುವುದಿಲ್ಲ. 12,000 ಪದ್ಯಗಳಷ್ಟು ವಿಸ್ತಾರವಾದ ಈ ಬೃಹದ್ಗ್ರಂಥವನ್ನು ರಚಿಸಿದ ಕವಿಯನ್ನು ಬೇರಾರೂ ಹೆಸರಿಸದಿರುವುದು ವಿಸ್ಮಯಕಾರಿಯಾಗಿದೆ.

ಈ ಕವಿಗೆ ಹರಿಗುಣಸ್ತುತಿ, ಹರಿಪಾದಭಕ್ತರ ಚಾರಿತ್ರಕಥನ, ಭಕ್ತಿಮಾರ್ಗನಿರೂಪಣೆ– ಇವು ಮುಖ್ಯವಾದ ಗುರಿಗಳು. ಅಖಿಲಭವರೋಗಹರವೆನಿಸಿದ ಭಾಗವತದರ್ಥವನು ಬಲ್ಲಂದದಲಿ ಹೇಳುವುದಾಗಿ ಪ್ರತಿಜ್ಞೆ ಮಾಡಿ ಕವಿ ಲಲಿತವಾದ ಕನ್ನಡದಲ್ಲಿ ವಿಸ್ತಾರವಾದ ಷಟ್ಪದಿ ಕಾವ್ಯವನ್ನು ರಚಿಸಿದ್ದಾನೆ.

ಮೊದಲಿನ ಎರಡು ಸ್ಕಂಧಗಳು ಪೀಠಿಕಾರೂಪದಲ್ಲಿದ್ದು ಭಾಗವತದ ಉತ್ಪತ್ತಿ ಕಥೆಯನ್ನು ಹೇಳುತ್ತವೆ. ವ್ಯಾಸರು ಉಪದೇಶಿಸಿದ ಭಾಗವತವನ್ನು ಶುಕಮಹರ್ಷಿ ಪರೀಕ್ಷಿತನಿಗೆ ಉಪದೇಶಿಸಲು ಅಲ್ಲಿಯೇ ಇದ್ದು ಕೇಳಿದ ಸೂತಪುರಾಣಿಕ ಯಾಗಕಾರ್ಯವಿಮಗ್ನರಾಗಿದ್ದ ಋಷಿಗಳಿಗೆ ನೈಮಿಷಾರಣ್ಯದಲ್ಲಿ ವಿಸ್ತರಿಸಿ ಹೇಳಿದನಂತೆ. ಇಷ್ಟಕ್ಕೆ ಮೊದಲ ಎರಡು ಸ್ಕಂಧಗಳು ಮುಗಿಯುತ್ತವೆ. 3ನೆಯ ಸ್ಕಂಧದಲ್ಲಿ ಭಾಗವತ ಪ್ರಾರಂಭವಾಗಿ ಕಲ್ಪಾವಸಾನ ಕಥೆಯಿಂದ ತೊಡಗಿ ಹಿರಣ್ಯಕಶಿಪು, ಹಿರಣ್ಯಾಕ್ಷರ ಚರಿತ್ರೆ, ಕಪಿಲ ದೇವಹೂತಿಯರ ಕಥೆ, ದಕ್ಷಯಜ್ಞ ವೃತ್ತಾಂತ, ಗಿರಿಜಾ ಕಲ್ಯಾಣ, ಧ್ರುವ, ಪೃಥು, ಪುರಂಜನರ ಕಥೆಗಳು, ಪ್ರಿಯವತರಾಯ, ಜಡಭರತರ ಕಥೆಗಳು ಕೊನೆಗೊಳ್ಳುವ ವೇಳೆಗೆ 5ಯ ಸ್ಕಂಧ ಮುಗಿಯುತ್ತದೆ. ಆರು ಏಳನೆಯ ಸ್ಕಂಧಗಳು ಅಜಾಮಿಳ, ವೃತ್ರಾಸುರ, ಪ್ರಹ್ಲಾದ ಮತ್ತು ತ್ರಿಪುರಾಸುರರ ಕಥೆಗಳನ್ನು ಹೇಳುತ್ತವೆ. 8ನೆಯ ಸ್ಕಂಧದಲ್ಲಿ ಮನುಮುನಿಗಳ ವರ್ಣನೆ, ಗಜೇಂದ್ರೋಪಾಖ್ಯಾನ, ಸಮುದ್ರಮಥನ ವೃತ್ತಾಂತ, ಮೋಹಿನಿಯ ಅವತಾರ, ವಾಮನ ಮತ್ಸ್ಯಾವತಾರಗಳ ಕಥೆ ಬಂದಿವೆ. ಒಂಬತ್ತನೆಯ ಸ್ಕಂಧ ಇಕ್ಷ್ವಾಕು ವಂಶದ ಕಥೆ, ಪರಶುರಾಮ ವೃತ್ತಾಂತ, ಶ್ರೀರಾಮಚರಿತ್ರೆ ಮುಂತಾದುವುಗಳನ್ನು ಹೇಳುತ್ತದೆ. ಆ ಸ್ಕಂಧದ ಕಡೆಯಲ್ಲಿ ಆರಂಭವಾಗುವ ಯಾದವ ವಂಶವರ್ಣನೆ ದಶಮ ಸ್ಕಂಧದಲ್ಲಿ ಮುಂದುವರಿದು ಯಾದವಶಿರೋಮಣಿಯಾದ ಶ್ರೀಕೃಷ್ಣನ ದಿವ್ಯಚರಿತ್ರೆ ವಿಸ್ತಾರವಾಗಿ ನಿರೂಪಿತವಾಗಿದೆ. ಭಾಗವತದಲ್ಲೆಲ್ಲ ಇದೇ ಅತ್ಯಂತ ದೀರ್ಘವೂ ಸ್ವಾರಸ್ಯವೂ ಜನಪ್ರಿಯವೂ ಆದ ಸ್ಕಂಧ. ಭಾಗವತವೆಂದೊಡನೆ ಜನರಿಗೆ ಶ್ರೀಕೃಷ್ಣಚರಿತಾಮೃತವೇ ನೆನಪಿಗೆ ಬರುತ್ತದೆ. 11ನೆಯ ಸ್ಕಂಧದಲ್ಲಿ ಶ್ರೀಕೃಷ್ಣ ವೈಕುಂಠಕ್ಕೆ ಹಿಂದಿರುಗಿದ ವೃತ್ತಾಂತವಿದೆ. ಕೊನೆಯ ಹನ್ನೆರಡನೆಯ ಸ್ಕಂಧ ಉಳಿದೆಲ್ಲ ಸ್ಕಂಧಗಳಿಗಿಂತ ತೀರ ಚಿಕ್ಕದು. ಇದರಲ್ಲಿ ಭವಿಷ್ಯನ್ನರಪಾಲರ ಚರಿತ್ರೆ ಸಂಕ್ಷೇಪವಾಗಿ ಬಂದಿದೆ. ಶುಕಮಹರ್ಷಿಗಳಿಂದಲೇ ನೇರವಾಗಿ ಭಾಗವತವನ್ನು ಕೇಳಿದ ಪರೀಕ್ಷಿತ ಮಹಾರಾಜ ಸದ್ಗತಿ ಹೊಂದಿದ ಕಥೆ ಈ ಸ್ಕಂಧದಲ್ಲಿ ಬಂದಿದೆ.

ಕನ್ನಡ ಭಾಗವತಕಾರ ಮೂಲ ಸಂಸ್ಕೃತ ಭಾಗವತವನ್ನು ಕ್ರಮವಾಗಿ ಅನುವಾದ ಮಾಡಿದ್ದಾನೆ. ಆದರೂ ಇದು ಸ್ವತಂತ್ರ ಕಾವ್ಯದಂತೆ ಏಕಧಾರೆಯಾಗಿ ಎಲ್ಲಿಯೂ ಕುಂಟದೆ ನಡೆದಿದೆ. ಕವಿಯು ವರ್ಣನೆಗೆ ಪ್ರಾಧಾನ್ಯವಿತ್ತು ಕಥೆಯನ್ನು ಕುಗ್ಗಿಸುವ, ಮರೆಯುವ, ಸಾಹಸಕ್ಕೆ ಎಲ್ಲಿಯೂ ಕೈಹಾಕಿಲ್ಲ. ಅನಗತ್ಯವಾದ, ಸಮಯೋಚಿತವಲ್ಲದ ವರ್ಣನೆ ಕಾವ್ಯದಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ. ಮಾತಿನ ಧೋರಣೆಯಲ್ಲಿ ತಾನಾಗಿ ಬಂದಿರುವ ಶಕ್ತಿ ಚಮತ್ಕಾರಗಳನ್ನು ಕವಿ ತಡೆದಿಲ್ಲವೇ ಹೊರತು ಉದ್ದೇಶಪೂರ್ವಕವಾಗಿ ಅಲಂಕಾರ ಪ್ರಯೋಗಕ್ಕೆ ಆಸೆಪಟ್ಟಿಲ್ಲ. ಪಾಂಡಿತ್ಯ ಪ್ರದರ್ಶನ ಕವಿಯ ಆಶಯವಲ್ಲ. ಹರಿಕೀರ್ತನೆಯೇ ಆತನ ಪರಮ ಧ್ಯೇಯವಾಗಿದ್ದು ಅದನ್ನು ಸಾಧಿಸಿ ಕವಿ ಕೃತಕೃತ್ಯನಾಗಿದ್ದಾನೆ. (ಕೆ.ವಿಇ.)

**ಚಾಟೆಲ್‌ಪೆರಾನಿಯನ್ :** ಯುರೋಪಿನ ಹಳೆಯ ಶಿಲಾಯುಗದ ಅಂತ್ಯಕಾಲಕ್ಕೆ ಸೇರಿದ ಶಿಲೋಪಕರಣಗಳ ಒಂದು ಸಂಸ್ಕೃತಿ. ಇದು ಮಧ್ಯಫ್ರಾನ್ಸಿನ ಅಲಿಯರ್ ಜಿಲ್ಲೆಯಲ್ಲಿರುವ ಚಾಟೆಲ್‌ಪೆರ್ರಾನ್ ಎಂಬಲ್ಲಿ ಮೊತ್ತ ಮೊದಲಿಗೆ ಕಂಡುಬಂದುದರಿಂದ ಈ ಸಂಸ್ಕೃತಿಯನ್ನು ಈ ಹೆಸರಿನಿಂದ ಕರೆಯಲಾಗಿದೆ. ಫ್ರಾನ್ಸಿನ ನೈಋತ್ಯ ಭಾಗದಲ್ಲಿ ಈ ಸಂಸ್ಕೃತಿ ಹೆಚ್ಚು ಬಳಕೆಯಲ್ಲಿತ್ತು. ಈ ಸಂಸ್ಕೃತಿಯ ಮುಖ್ಯ ಉಪಕರಣವೆಂದರೆ ಕಲ್ಲು ಚಕ್ಕೆಯಿಂದ ಅದರ ಒಂದು ಅಂಚನ್ನು ಚೂಪಾಗಿಯೂ ಮತ್ತೊಂದು ಅಂಚನ್ನು ಮೊಂಡಾಗಿಯೂ ಇರುವಂತೆ ಮಾಡಿದ ಚಾಕು. ಇದಲ್ಲದೆ ಕೊರೆಯುವ ಉಳಿ, ಹೆರೆಯುವ ಆಯುಧಗಳು ಮತ್ತು ಮೊನೆಗಳು ಉಪಯೋಗದಲ್ಲಿರುತ್ತಿದ್ದುವು. ಆಧುನಿಕ ಮಾನವ (ಹೊಮೋಸೇಪಿಯನ್) ರೂಢಿಗೆ ತಂದ ಶಿಲಾಯುಗ ಸಂಸ್ಕೃತಿಗಳಲ್ಲಿ ಇದೇ ಮೊದಲನೆಯದು. ಮೂಳೆ, ದಂತ ಮತ್ತು ಕೊಂಬಿನಿಂದ ತಯಾರಿಸಿದ ಉಪಕರಣಗಳ ಉಪಯೋಗವೂ ಪೂರ್ವ ಶಿಲಾಯುಗಕಾಲದ ಕಲೆಯ ಸೃಷ್ಟಿಯೂ ಯೂರೋಪಿನ ಹಲವು ಭಾಗಗಳಲ್ಲಿ ಈ ಸಂಸ್ಕೃತಿಯೊಂದಿಗೆ ಪ್ರಾರಂಭವಾದುವು. ಬಲವಾದ ಮತ್ತು ಚೂಪಾದ ಮೊನೆಯುಳ್ಳ ಬ್ಯೂರಿನ್ ಎಂಬ ಕೆತ್ತುವ ಆಯುಧ ಬಳಕೆಗೆ ಬಂದುದೇ ಇದಕ್ಕೆ ಮುಖ್ಯ ಕಾರಣ. ಬದಲಾಗುತ್ತಿದ್ದ ವಾಯುಗುಣದಿಂದ ಅಸ್ತಿತ್ವಕ್ಕೆ ಬಂದ ಚಾಟಲ್‌ಪೆರಾನಿಯನ್ ಸಂಸ್ಕೃತಿಯ ಕಾಲದಿಂದ ಮಾನವನ ದೈನಂದಿನ ಜೀವನವಿಧಾನದಲ್ಲಿ ಸುಧಾರಣೆ ಯುಂಟಾಯಿತು. ರೇಡಿಯೋಕಾರ್ಬನ್ ವಿಧಾನದ ಮೂಲಕ ಗ್ರೋಟ್ ಡ್ಯು ರೆವೆಯಲ್ಲಿ ಈ ಸಂಸ್ಕೃತಿಯ ಕಾಲಗಳು ಪ್ರ.ಶ.ಪೂ 31,690±250 ಮತ್ತು 31,550±400. ಇದು ಪ್ರ.ಶ.ಪೂ 35,000–34,000 ದಷ್ಟು ಹಿಂದೆಯೇ ಆರಂಭವಾಗಿದ್ದಿರಲೂಬಹುದು. (ಬಿ.ಕೆ.ಜಿ.)



ಚಾಟೆಲ್‌ಪೆರಾನಿಯನ್ ಚಾಕು

**ಚಾಡ್ ಗಣರಾಜ್ಯ :** ಮಧ್ಯ ಆಫ್ರಿಕದ ಒಂದು ಸ್ವತಂತ್ರ ರಾಷ್ಟ್ರ ಫ್ರೆಂಚ್ ಸಮುದಾಯಕ್ಕೆ ಸೇರಿದೆ. ಉ.ಅ. 80°–24° ಮತ್ತು ಪೂ.ರೇ. 14°–24° ನಡುವೆ ಇದೆ. ಚಾಡ್‌ನ ಪೂರ್ವದಲ್ಲಿ ಸೂಡಾನ್, ದಕ್ಷಿಣದಲ್ಲಿ ಮಧ್ಯ ಆಫ್ರಿಕ ಗಣರಾಜ್ಯ, ಪಶ್ಚಿಮದಲ್ಲಿ ಕ್ಯಾಮರೂನ್ ಗಣರಾಜ್ಯ, ನೈಜೀರಿಯ ಮತ್ತು ನೈಜರ್, ಉತ್ತರದಲ್ಲಿ ಲಿಬಿಯ ಇವೆ. ವಿಸ್ತೀರ್ಣ 12,84,000 ಚ.ಕಿಮೀ (4,95,000 ಚ.ಮೈ.) ಜನಸಂಖ್ಯೆ 6,279,921 (1993). ರಾಜಧಾನಿ ಫಾರ್ಲ್ಯಾಮೀ.

**ಮೇಲ್ಮೈ ಲಕ್ಷಣಗಳು :** ಚಾಡ್ ಸರೋವರದ ಉತ್ತರಕ್ಕಿರುವ ಪ್ರದೇಶ ಸಹರ ಪ್ರರೂಪಿ ಮರುಭೂಮಿ. ಈ ಮರುಭೂಮಿಯ ಉತ್ತರ ಮತ್ತು ಪೂರ್ವದಲ್ಲಿ ಟಿಬೆಸ್ಟಿ ಮತ್ತು ಎನ್ನೆಡಿ ಪರ್ವತಗ್ರಂಥಿಗಳಿವೆ. ಇವು ಮರಳುಗಲ್ಲು ಹಾಗೂ ಬೆಣಚುಕಲ್ಲುಗಳಿಂದ ಕೂಡಿವೆ. ಎತ್ತರ 1200–1400 ಮೀ. ದಕ್ಷಿಣದಲ್ಲಿ ಮರಳಿನಿಂದ ತುಂಬಿದ ಪ್ರಸ್ಥಭೂಮಿ ಹಾಗೂ ಇಳಿಜಾರು ಪ್ರದೇಶಗಳಿವೆ. ಅನೇಕ ಸ್ಫಟಿಕಾಕೃತಿಯ ಪದರಗಳಿರುವ ಬಂಡೆಗಳೂ ಎತ್ತರ ಪರ್ವತ ಪಂಕ್ತಿಗಳೂ ದೊಡ್ಡ ಬೆಟ್ಟಗಳೂ ತಗ್ಗು ಪ್ರದೇಶಗಳೂ ಮರಳುದಿಣ್ಣೆಗಳೂ ಇರುವ ಚಾಡ್‌ನ ಪ್ರಮುಖ ನದಿಗಳು ಶಾರಿ ಮತ್ತು ಲೋಗೋನ್. ಜುಲೈ–ನವೆಂಬರ್ ಮಧ್ಯಭಾಗದವರೆಗೆ ಇವು ತುಂಬಿ ಹರಿಯುತ್ತವೆ. ಅವನತ ಪ್ರದೇಶದಲ್ಲಿ ಹರಿಯುವ ತೊರೆಗಳು (ಬಾಹ್ರ್) ಮಳೆಗಾಲದಲ್ಲಿ ಪ್ರಸರಿಸಿ ಸಂಚಾರ ಅಸಾಧ್ಯವಾಗುವಂತೆ ಮಾಡುತ್ತವೆ. ಚಾಡ್‌ನ ನೈಋತ್ಯ ಭಾಗ ಮೆಕ್ಕಲು ಮಣ್ಣಿನ ಜವುಗು ಪ್ರದೇಶ.

**ವಾಯುಗುಣ :** ಚಾಡ್ ಸರೋವರದ ಉತ್ತರದಲ್ಲಿ ಸಹಾರಾ ಪ್ರರೂಪಿ ವಾಯುಗುಣವಿದೆ. ಬೇಸಗೆಯಲ್ಲಿ ಉಷ್ಣತೆ ಬದಲಾಗುತ್ತಿರುತ್ತದೆ. ವಾರ್ಷಿಕ ಮಳೆ ತೀರ ಕಡಿಮೆ; ಎನ್ನೆಡಿ ಪ್ರಸ್ಥಭೂಮಿಯಲ್ಲಿ 2"ಗಿಂತಲೂ ಕಡಿಮೆ. ದಕ್ಷಿಣಕ್ಕೆ ಹೋದಂತೆ ಮಳೆ ಹೆಚ್ಚು, ಉಷ್ಣತೆ ಕಡಿಮೆ. ಇಲ್ಲಿ ಸೂಡಾನ್ ಪ್ರರೂಪಿ ವಾಯುಗುಣವಿದೆ. ಅತಿ ಮಳೆಯಾಗುವ ಮತ್ತು ಅತ್ಯಂತ ಕಡಿಮೆ ಮಳೆಯ ಪ್ರದೇಶಗಳ ನಡುವಿನದು ಸಾಹಿಲಿಯನ್ ಪ್ರರೂಪಿ ಅರೆಮರುಭೂಮಿ ವಾಯುಗುಣ.

**ಸಸ್ಯ ಪ್ರಾಣಿ ಜೀವನ :** ಮರುಭೂಮಿ ಪ್ರದೇಶದಲ್ಲಿ ಕಣಿವೆಗಳಲ್ಲಿ ಪೊದೆಗಳು ಬೆಳೆಯುತ್ತವೆ. ಸಾಹಿಲಿಯನ್ ಪ್ರದೇಶದಲ್ಲಿ ಖರ್ಜೂರ ಮತ್ತು ಇತರ ಮರಗಳಿವೆ. ದಕ್ಷಿಣದ ಸೂಡಾನ್ ಪ್ರರೂಪಿ ವಾಯುಗುಣ ಪ್ರದೇಶದಲ್ಲಿ ವಿಶಾಲವಾದ ಹುಲ್ಲುಗಾವಲುಗಳು ಹಬ್ಬಿವೆ. ಹುಲ್ಲುಗಾವಲಿನ ಪ್ರಾಣಿಗಳು ಆನೆ, ಸಿಂಹ, ಚಿರತೆ ಮತ್ತು ಕಾಡೆಮ್ಮೆ. ಆಮ್ ಟಿಮನ್ ಬಳಿಯಲ್ಲಿರುವ ಜಕೌಮ ರಾಷ್ಟ್ರೀಯ ವನ ಮಧ್ಯಆಫ್ರಿಕದ ಮುಖ್ಯ ಅಭಯಾರಣ್ಯ.

**ಜನಜೀವನ :** ಜನರ ಹಂಚಿಕೆ ಸಮವಾಗಿಲ್ಲ. ಹೆಚ್ಚಿನ ಜನ ಅಲೆಮಾರಿಗಳು, ಕುರುಬರು. ಟಿಬೆಸ್ಟಿಯಲ್ಲಿರುವ ಟೇಡ ಮತ್ತು ಎನ್ನೆಡಿಯಲ್ಲಿರುವ ಡಾಜ ಮುಖ್ಯ ಬುಡಕಟ್ಟುಗಳು. ದಕ್ಷಿಣದಲ್ಲಿ ಸಾಹೆಲ್‌ವರೆಗೂ ಅರಬರು ವಿಸ್ತರಿಸಿದ್ದಾರೆ. ಅವರು ಒಂಟೆ ಮತ್ತು ಜಾನುವಾರುಗಳನ್ನು ಸಾಕುತ್ತಾರೆ. ದಕ್ಷಿಣ ಭಾಗದಲ್ಲಿ ಮೀನು ಹಿಡಿಯುವುದೂ ಒಂದು ಪ್ರಮುಖ ವೃತ್ತಿ. ಬತ್ತ, ರಾಗಿ, ಹತ್ತಿ, ನೆಲಗಡಲೆ ಮತ್ತು ಸಾರ್ಗಂ ಜೋಳವನ್ನು ಬೆಳೆಯುತ್ತಾರೆ. ಮುಖ್ಯ ಭಾಷೆ ಫ್ರೆಂಚ್. ಸ್ಥಳೀಯ ಭಾಷೆಗಳೂ ಬಳಕೆಯಲ್ಲಿವೆ. ಮೀನು ಮುಖ್ಯ ಆಹಾರ. ಮುಸ್ಲಿಮರೂ ಕ್ರೈಸ್ತರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಶೇ.80ರಷ್ಟು ಜನ ಬಡತನ ರೇಖೆಯಿಂದ ಕೆಳಗಿದ್ದಾರೆ. ಇದು ಪ್ರಪಂಚದಲ್ಲೇ ಏಳನೆಯ ಬಡರಾಷ್ಟ್ರ.

**ಇತಿಹಾಸ :** ನವಶಿಲಾಯುಗದಲ್ಲಿ ಇದು ಜನಸಮೃದ್ಧ ಪ್ರದೇಶವಾಗಿತ್ತು. ಇಲ್ಲಿ ನೆಗ್ರಾಯಿಡ್ ಗುಹಾವಾಸಿ ಜನರಿದ್ದರೆಂದು ಊಹಿಸಬಹುದು. 1950ರಲ್ಲಿ ನಡೆಸಿದ ಉತ್ಖನನದಿಂದ ಚಾಡ್‌ನಲ್ಲಿ ಮಧ್ಯಯುಗದ ಉತ್ತಮ ಸಂಸ್ಕೃತಿಯ ಅವಶೇಷಗಳು ಸಿಕ್ಕಿವೆ. ಮಧ್ಯ ಸೂಡಾನಿನ ವಿಶಾಲ ರಾಜ್ಯಗಳನ್ನು ಸಹಾರದಿಂದ ಬಂದ ಬರ್ಬರರು ಕಟ್ಟಿದ್ದರು. ಇವುಗಳಲ್ಲಿ ಮುಖ್ಯವಾದ್ದು ಸೆಫಾವಾ ರಾಜವಂಶದ ಕಾನೆಮ್ ಸಾಮ್ರಾಜ್ಯ. ಇದು ಚಾಡ್ ಸರೋವರದ ವಾಯವ್ಯದಲ್ಲಿತ್ತು. 14ನೆಯ ಶತಮಾನದಲ್ಲಿ ಇದು ಅಂತಃಕಲಹಗಳಿಂದಲೂ ಅದರ ಪೂರ್ವದಲ್ಲಿದ್ದ ಫಿಟ್ರಿಯ ಬುಲಾಲ ರಾಜ್ಯದ ಒತ್ತಡದಿಂದಲೂ ನಾಶವಾಯಿತು. ಈ ರಾಜ್ಯವನ್ನು ಮೈ ಇಡ್ರಿಸ್ ಎಂಬ ಬುಲಾಲ ದೊರೆ ಮತ್ತೆ ಗೆದ್ದ. ಕಾನೆಂ–ಬಾರ್ನು ಪರಮೋನ್ನತಿಯ ದೆಶೆ ಮುಟ್ಟಿದ್ದು ಮೈ ಇಡ್ರಿಸ್ ಅಲೂಮನ (1580–1603) ಕಾಲದಲ್ಲಿ. ಮಧ್ಯಯುಗದ ಕಾನೆಂ ಸಾಮ್ರಾಜ್ಯ ಇಸ್ಲಾಮೀ ಸೂಡಾನೀ ಸಂಸ್ಕೃತಿಯ ಕೇಂದ್ರವಾಗಿತ್ತು.




ಈ ಸಂಸ್ಕೃತಿಯ ಉತ್ಪನ್ನಗಳಾಗಿ 17ನೆಯ ಶತಮಾನದ ಆದಿಯಲ್ಲಿ ಬಗ್ವಿರ್ಮಿ ಮತ್ತು ಉವಾದೈ ರಾಜ್ಯಗಳು ತಲೆಯೆತ್ತಿದುವು. 18ನೆಯ ಶತಮಾನದಲ್ಲಿ ಉವಾದೈ ರಾಜ್ಯ ಪ್ರಬಲವಾಯಿತು, ಇದೂ ಇತರ ರಾಜ್ಯಗಳೂ ಗುಲಾಮ ವ್ಯಾಪಾರದಲ್ಲಿ ನಿರತವಾಗಿದ್ದುವು. 19ನೆಯ ಶತಮಾನದಲ್ಲಿ ಇವು ಕ್ಷೀಣಿಸಿದುವು. ರಾಬಾ ಪ್ರಬಲವಾಯಿತು. ಆ ವೇಳೆಗೆ ಪರಕೀಯರ ಪ್ರಾಬಲ್ಯ ಇಲ್ಲಿ ಬೆಳೆಯಲಾರಂಭಿಸಿತು. 1891ರಲ್ಲಿ ಮೊದಲ ಫ್ರೆಂಚ್ ನಿಯೋಗ ಚಾಡ್‌ಗೆ ಬಂತು. 1900ರಲ್ಲಿ ಫ್ರೆಂಚರು ರಾಬಾ ಆಡಳಿತವನ್ನು ಉರುಳಿಸಿ ಹಳೆಯ ಕಾನೆಂಬು ಮನೆತನದವರಿಗೆ ರಾಜ್ಯ ನೀಡಿದರು. ಫ್ರೆಂಚರ ರಕ್ಷಣೆಯಲ್ಲಿ ಚಾಡ್ ವಸಾಹತು ಅಷ್ಟೇನೂ ಮುಂದುವರಿಯಲಿಲ್ಲ. 1958ರಲ್ಲಿ ಇದು ಫ್ರೆಂಚ್ ಸಮುದಾಯದೊಳಗೆ ಸ್ವಯಮಾಡಳಿತ ಗಣರಾಜ್ಯವಾಗಿ, ಆಗಸ್ಟ್ 11ರಂದು ಸ್ವತಂತ್ರ ಗಣರಾಜ್ಯವಾಯಿತು. ಅದು ಈಗಲೂ ಫ್ರೆಂಚ್ ಸಮುದಾಯದ ಸದಸ್ಯ ರಾಷ್ಟ್ರವಾಗಿದೆ.

**ಆಡಳಿತ :** ಚಾಡ್‍ನ ಆಡಳಿತಮುಖ್ಯಸ್ಥ ಅಧ್ಯಕ್ಷ. ಇವನ ಅಧಿಕಾರಾವಧಿ 7 ವರ್ಷ. ಅಧ್ಯಕ್ಷ ಸರ್ಕಾರದ ಸದಸ್ಯರನ್ನು ಆರಿಸುತ್ತಾನೆ. ಸಚಿವಸಂಪುಟಕ್ಕೆ ಇವನೇ ಅಧ್ಯಕ್ಷ. ರಾಷ್ಟ್ರೀಯ ವಿಧಾನಸಭೆಗೆ ಐದು ವರ್ಷಗಳಿಗೊಮ್ಮೆ ಚುನಾವಣೆ. ರಾಷ್ಟ್ರವನ್ನು 2008 ರಿಂದ 22ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ. ಉಪಪ್ರಾಂತ್ಯ ಜಿಲ್ಲೆ, ಕ್ಯಾಂಟನ್, ಕಮ್ಯೂನ್ ಮತ್ತು ಹಳ್ಳಿಗಳು ಪ್ರಾಂತ್ಯಗಳ ಆಡಳಿತ ವಿಭಾಗಗಳು. ಪ್ರತಿಯೊಂದು ಪ್ರಾಂತ್ಯದಲ್ಲೂ ಅಧ್ಯಕ್ಷನಿಂದ ನೇಮಿತನಾದ ರಾಜ್ಯಪಾಲ (ಗವರ್ನರ್) ಇರುತ್ತಾನೆ.

ಅರ್ಥವ್ಯವಸ್ಥೆ : 1966ರಲ್ಲಿ ಪಂಚವಾರ್ಷಿಕ ಯೋಜನೆ ಪ್ರಾರಂಭವಾಯಿತು. ವಿದ್ಯುಚ್ಛಕ್ತಿಯ ಅಭಾವದಿಂದ ಕೈಗಾರಿಕೆ ಹಿಂದುಳಿದಿದೆ. ಇತ್ತೀಚೆಗೆ ಕೃಷಿ ಪ್ರಗತಿ ಸಾಧಿಸುತ್ತಿದೆ. ವ್ಯಾಪಾರ ವ್ಯವಹಾರ ಆಫ್ರಿಕದೊಳಗೇ – ಮುಖ್ಯವಾಗಿ ಕಾಂಗೋ, ಕ್ಯಾಮರೂನ್, ನೈಜೀರಿಯಗಳೊಡನೆ. ಮುಖ್ಯ ರಫ್ತು : ಮಾಂಸ, ಚರ್ಮ, ಹತ್ತಿ ಮತ್ತು ನೆಲಗಡಲೆ. ಆಮದು : ಯಂತ್ರೋಪಕರಣಗಳು, ಪೆಟ್ರೋಲಿಯಂ, ಕಬ್ಬಿಣ, ಬಟ್ಟೆ, ಉಕ್ಕು, ಸಿಮೆಂಟ್, ಚಹ ಮತ್ತು ಕಾಗದ. ಶೇ 80ರಷ್ಟು ಜನ ಬಡತನ ರೇಖೆಯಿಂದ ಕೆಳಗಿದ್ದಾರೆ. ಇದು ಪ್ರಪಂಚದ ಏಳನೆಯ ಬಡರಾಷ್ಟ್ರ.

ಸಮುದ್ರದಿಂದ ದೂರ ಇರುವ ಚಾಡ್‍ನ ಮುಖ್ಯ ಸಮಸ್ಯೆಯೆಂದರೆ ಸಾರಿಗೆ ಸಂಪರ್ಕ ತೊಂದರೆ. ಕೆಲವು ನದಿಗಳ ಮೇಲೆ ಮಳೆಗಾಲದಲ್ಲಿ ಸಂಚಾರ ಸಾಧ್ಯ. ಹಲವು ತೊರೆಗಳು ಮಳೆಗಾಲದಲ್ಲಿ ವಿಸ್ತರಿಸಿ ಸಂಚಾರಕ್ಕೆ ಅಡಚಣೆ ಮಾಡುತ್ತವೆ. ಚಾಡ್‍ನಲ್ಲಿ ರೈಲು ಮಾರ್ಗಗಳಿಲ್ಲ. ಸುಮಾರ ಸು.12,067 ಕಿಮೀಗಳಷ್ಟು ದೂರದ ಉತ್ತಮ ರಸ್ತೆಗಳಿವೆ. ಫಾರ್‍ಲ್ಯಾಮಿಯಿಂದ ಹೊರದೇಶಗಳಿಗೆ ವಿಮಾನ ಸಂಪರ್ಕವಿದೆ. ಫಾರ್‍ಲ್ಯಾಮೀ ಅಲ್ಲದೆ ಇತರ ಮುಖ್ಯ ನಗರಗಳು ಸಾರ್ (43,700) ಮಂಡೌಲ್ ಅಬೆಚೆ ಮತ್ತು ಕೌಮ್ರ. ಜನಸಂಖ್ಯೆ 637086 (2009). **(ಎಚ್.ಜಿ.ಎ.)**

**ಚಾಡ್ ಸರೋವರ :** ಮಧ್ಯ ಆಫ್ರಿಕದ ಒಂದು ಸರೋವರ. ಉ.ಅ.12°–15'– 14°–10' ಮತ್ತು ಪೂ.ರೇ. 13°–15° ನಡುವೆ ಇದೆ. ನೈಜೀರಿಯ, ನೈಜರ್, ಕ್ಯಾಮರೂನ್ ಮತ್ತು ಚಾಡ್ ಗಣರಾಜ್ಯಗಳ ಎಲ್ಲೆಗಳ ಮೇಲೆ, ಸಮುದ್ರಮಟ್ಟದಿಂದ 280 ಮೀ. ಎತ್ತರದಲ್ಲಿದೆ. ಮರುಭೂಮಿ ಹಾಗೂ ಸವಾನ ಹುಲ್ಲುಗಾಡುಗಳ ನಡುವೆ ಸರೋವರ ಹಬ್ಬಿದೆ. ನೈರುತ್ಯ ಆಗ್ನೇಯ ದಿಕ್ಕುಗಳಿಂದ ಹಲವು ನದಿಗಳು ಸರೋವರದೊಳಕ್ಕೆ ಹರಿದು ಬರುತ್ತವೆ. ಅವುಗಳಲ್ಲಿ ಯೋಬೆ, ಶಾರಿ ನದಿಗಳು ಮುಖ್ಯವಾದವು. ಈ ನದಿಗಳು ಸೇರುವೆಡೆ ತೀರಗಳು ಸಮತಲವಾದ ಜವುಗು ಪ್ರದೇಶಗಳು. ಚಾಡ್ ಸರೋವರದಲ್ಲಿ ವಾಸ್ತವವಾಗಿ ಎರಡು ತಗ್ಗು ಪ್ರದೇಶಗಳು ಕೂಡುತ್ತವೆ. ಇವುಗಳ ನಡುವೆ ಒಂದು ಉದ್ದವಾದ ದಿಬ್ಬವುಂಟು. ಇದರಲ್ಲಿ ಒಂದು ನಾಲೆ ಹರಿಯುತ್ತದೆ. ಕಡಿಮೆ ಮಳೆ ಬೀಳುವುದರಿಂದ ಸರೋವರ ಯಾವಾಗಲೂ ತುಂಬಿರುವುದಿಲ್ಲ. ಉತ್ತರದ ಭಾಗ ಹೆಚ್ಚು ಆಳವಾದರೂ ಅದು ಯಾವಾಗಲಾದರೂ ಬತ್ತಿಹೋಗಬಹುದು. ಏಕೆಂದರೆ ಸರೋವರದ ನಡುವಣ ದಿಬ್ಬದಿಂದಾಗಿ ದಕ್ಷಿಣದ ನೀರು ಆ ಕಡೆಗೆ ಹರಿದು ಬರಲು ಅಡಚಣೆಯಾಗಿದೆ. ಬಾಷ್ಪೀಭವನದಿಂದ ಹಾಗೂ ಮರಳು ಬಂದು ತುಂಬಿಕೊಳ್ಳುವುದರಿಂದ ಈ ಸರೋವರವೇ ಸಂಪೂರ್ಣ ಬತ್ತಿಹೋಗುವ ಅಪಾಯವಿದೆಯೆಂದು ಭಾವಿಸಲಾಗಿದ್ದರೂ ಶಾರಿ ನದಿಯ ಪ್ರವಾಹದಿಂದಾಗಿ ಬಹುಶಃ ಹಾಗಾಗದು.

ಈ ಸರೋವರದ ಆಳ ಮತ್ತು ವಿಸ್ತೀರ್ಣ ಬದಲಾಗುತ್ತಿರುತ್ತವೆ. ಗರಿಷ್ಠ ಆಳ 10.ಮೀ ಅತ್ಯಂತ ಆಳವಾದ ಭಾಗವೂ ಕೆಲವು ಬಾರಿ ಒಣಗಿ ಹೋಗುವುದುಂಟು. ಶಾರಿ ನದಿಯ ಮುಖಪ್ರದೇಶ ಕ್ರಮಕ್ರಮವಾಗಿ ವಿಶಾಲವಾಗುತ್ತಿದೆ.

ಚಾಡ್ ಸರೋವರದ ಇರವನ್ನು ಅವರಿವರ ವರದಿಗಳಿಂದ ಟಾಲಮಿ ಅರಿತುಕೊಂಡಿದ್ದ. ಬಿಳಿಯರು ಇದನ್ನು ಮೊದಲು ಕಂಡದ್ದು 1823ರಲ್ಲಿ. ಇವರು ಟ್ರಿಪೊಲಿ ಮಾರ್ಗವಾಗಿ ಸರೋವರವನ್ನು ತಲುಪಿದರು. 1850ರಲ್ಲಿ ಜೇಮ್ಸ್ ರಿಚರ್ಡ್‍ಸನ್ ತನ್ನಿಬ್ಬರು ಸಂಗಾತಿಗಳೊಂದಿಗೆ ಇಲ್ಲಿಗೆ ಬಂದ. ಚಾಡ್ ಸರೋವರದ ಮೇಲೆ ಯಾನ ಮಾಡಿದ ಮೊತ್ತಮೊದಲ (1851) ನಾವಿಕ ಓವರ್‍ವೆಗ್. ಅನಂತರ 1855 ಮತ್ತು 1870ರಲ್ಲಿ ಅನುಕ್ರಮವಾಗಿ ಎಡ್ವರ್ಡ್ ವೊಗಲ್ ಮತ್ತು ಗುಸ್ತಾವ್ ಸ್ಯಾಕ್ಟಿಗಲ್ ಈ ಸರೋವರವನ್ನು ಸಂದರ್ಶಿಸಿದರು. ಸ್ಯಾಕ್ಟಿಗಲ್ ಈ ಸರೋವರದ ಜಲಶಾಸ್ತ್ರವನ್ನು ಅಭ್ಯಸಿಸಿದ. ಇದರಲ್ಲಿ ಅಪಾರ ಸಂಪತ್ತು ಇದೆಯೆಂಬ ನಂಬಿಕೆಯಿಂದಾಗಿ ಇದರ ಒಡೆತನಕ್ಕಾಗಿ ಯುರೋಪಿನ ರಾಷ್ಟ್ರಗಳಲ್ಲಿ ಪೈಪೋಟಿ ಏರ್ಪಟ್ಟಿತು. 1890–93ರಲ್ಲಿ ಬ್ರಿಟನ್, ಫ್ರಾನ್ಸ್, ಜರ್ಮನಿಗಳು ಒಂದು ಒಪ್ಪಂದದ ಮೂಲಕ ಇದರ ತೀರಪ್ರದೇಶಗಳನ್ನು ಹಂಚಿಕೊಂಡವು. ಈ ರಾಷ್ಟ್ರಗಳಿಂದ ಮುಂದೆ ಈ ಭಾಗದ ಸಂಪೂರ್ಣ ಪರಿಶೋಧನೆ ನಡೆಯಿತು.

ಈ ಸರೋವರದಲ್ಲಿ ಅನೇಕ ಚಿಕ್ಕಪುಟ್ಟ ದ್ವೀಪಗಳಿವೆ. ಇಲ್ಲಿ ಇರುವ ಯೆಡಿನೋ ಬುಡಕಟ್ಟಿನ ಜನ ಬೆಸ್ತರು. ದೋಣಿ ತಯಾರಿಸುವುದೂ ಜಾನುವಾರು ಸಾಕುವುದೂ ಇವರ ಕಸುಬುಗಳು. ಮರಳಿನ ದಿಬ್ಬಗಳಲ್ಲಿ ಕೃಷಿಕರೂ ಗೊಲ್ಲರೂ ಇದ್ದಾರೆ.

ಚಾಡ್ ಸರೋವರದಲ್ಲಿ ಮೀನುಗಳು ಸಮೃದ್ಧವಾಗಿ ಸಿಗುತ್ತವೆ. ಈ ಸರೋವರದ ಮೇಲೆ ಸಂಚಾರಕ್ಕೆ ಅಲೆಗಳೂ ಜಲಸಸ್ಯಗಳೂ ಅಡಚಣೆಗಳಾಗಿವೆ. **(ಎಚ್.ಜಿ.ಎ.)**

**ಚಾಡ್ವಿಕ್, ಸರ್ ಜೇಮ್ಸ್ :** 1891–1974. ಕೇಂಬ್ರಿಜ್‍ನ ಖ್ಯಾತ ಭೌತವಿಜ್ಞಾನಿ. 1891ರ ಅಕ್ಟೋಬರ್ 20ರಂದು ಮ್ಯಾಂಚೆಸ್ಟರಿನಲ್ಲಿ ಜನನ. ಅಲ್ಲಿನ ಸೆಕೆಂಡರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ 1908ರಲ್ಲಿ ವಿಕ್ಟೋರಿಯ ವಿಶ್ವವಿದ್ಯಾಲಯವನ್ನು ಸೇರಿದ. ಅದೇ

ಸುಮಾರಿಗೆ (1910) ಆ ವಿಶ್ವ ವಿದ್ಯಾಲಯದಲ್ಲಿ ಭೌತ–ವಿಜ್ಞಾನದ ಬೋಧಕನಾಗಿದ್ದ ರುದರ್‍ಫರ್ಡನ (1871–1937) ಪರಿಚಯವು ವಾಯಿತು. ಚಾಡ್‍ವಿಕ್ ಸ್ನಾತ ಕೋತ್ತರ ಪದವಿಯನ್ನು ಪಡೆದು ಮುಂದೆ ರುದರ್‍ಫರ್ಡನ ಸಂಶೋಧನಾಲಯವನ್ನು ಪ್ರವೇಶಿಸಿ ಅಲ್ಲಿ ಪರಮಾಣು ಸಂಶೋಧನೆ ಯಲ್ಲಿ ನಿರತನಾದ. ಈತನಿಗೆ 1913ರಲ್ಲಿ ಬರ್ಲಿನಿನ ಚಾರ್ಲ್‍ಟನ್ ಬರ್ಗ್ ವಿದ್ಯಾಸಂಸ್ಥೆಯ ಸಂಶೋಧನೆ ವೇತನ ದೊರೆತದ್ದರಿಂದ ಅಲ್ಲಿಗೆ ತೆರಳಿ ಹ್ಯಾನ್ಸ್ ಗೈಗರನ (1882–1945), **(ನೋಡಿ – ಗೈಗರ್, ಹ್ಯಾನ್ಸ್)** ನಿರ್ದೇಶನದಲ್ಲಿ ವಿಕಿರಣಪಟುತ್ವದ ಬಗ್ಗೆ ಸಂಶೋಧನೆಯನ್ನು ಮುಂದುವರಿಸಿದ. ಆದರೆ ಅದೇ ಸುಮಾರಿಗೆ ಆರಂಭವಾದ ಒಂದನೆಯ ಮಹಾಯುದ್ಧವು (1914–18) ಸಂಶೋಧನೆಯ ಪ್ರಗತಿಗೆ ಬಿರಿ ಹಾಕಿತು. ಯುದ್ಧಾನಂತರ ಚಾಡ್‍ವಿಕ್ ಸ್ವದೇಶಕ್ಕೆ ಮರಳಿ ಕ್ಯಾವೆಂಡಿಷ್ ಪ್ರಯೋಗಶಾಲೆಯಲ್ಲಿ ರುದರ್‍ಫರ್ಡನ ಜೊತೆಗೂಡಿ ಸಂಶೋಧನೆಯನ್ನು ಮುಂದುವರಿಸಿದ. ತತ್ಪರಿಣಾಮವಾಗಿ ಇವನಿಗೆ ಪಿಎಚ್.ಡಿ. ಪದವಿ ದೊರೆಯಿತು (1921).

ರುದರ್‍ಫರ್ಡ್ ಮತ್ತು ಚಾಡ್‍ವಿಕ್ ಜೋಡಿ α– ಕಣಗಳನ್ನು ತಾಡಿಸಿ ಧಾತುಗಳನ್ನು ಪರಿವರ್ತನೆಗೊಳಿಸುವ (ಟ್ರಾನ್ಸ್‌ಮ್ಯುಟೇಷನ್) ಸಮಸ್ಯೆಯನ್ನು ಅಧ್ಯಯಿಸಿತು. ಇದರಿಂದ ಪರಮಾಣು ನ್ಯೂಕ್ಲಿಯದ ಬಗ್ಗೆ ಸಾಕಷ್ಟು ಮಾಹಿತಿ ಲಭಿಸಿತು. ಇದರ ಆಧಾರದ ಮೇಲೆ ರುದರ್‍ಫರ್ಡ್ ಹೈಡ್ರೊಜನ್ ಪರಮಾಣುವಿನ ನ್ಯೂಕ್ಲಿಯಸ್ ಆದ ಪ್ರೋಟಾನನ್ನು ಆವಿಷ್ಕರಿಸಿ ಹಾಗೆಂದು ಹೆಸರಿಸಿದ. ಧಾತುಗಳ ಎಕ್ಸ್‌ಕಿರಣ ರೋಹಿತದ ಅಧ್ಯಯನದ ಬಗೆಗಿನ ನಿಗಮನಗಳನ್ನು (ಡಿಡಕ್ಷನ್ಸ್) ಚಾಡ್‍ವಿಕ್ ಪ್ರಾಯೋಗಿಕವಾಗಿ ಸಮರ್ಥಿಸಿದ.

ಚಾಡ್‍ವಿಕ್ 1923ರಲ್ಲಿ ವಿಶ್ವವಿದ್ಯಾಲಯದ ಉಪನ್ಯಾಸಕನಾಗಿಯೂ ಕ್ಯಾವೆಂಡಿಷ್ ಸಂಶೋಧನಾಲಯದ ಸಹನಿರ್ದೇಶಕನಾಗಿಯೂ ನೇಮಕಗೊಂಡ. ರಾಯಲ್ ಸೊಸೈಟಿಯ ಫೆಲೋ ಆಗಿ 1927ರಲ್ಲಿ ಚುನಾಯಿತನಾದ.

ಜರ್ಮನಿಯ ಭೌತವಿಜ್ಞಾನಿ ವಾಲ್ಟರ್ ಬೋಹ್‍ತೂ (1891–1957) 1930ರಲ್ಲಿಯೂ ಫ್ರೆಂಚ್ ವಿಜ್ಞಾನಿಗಳಾದ ಫ್ರೆಡ್ರಿಕ್ ಜ್ಹೋಲಿಯೊ ಮತ್ತು ಐರೀನ್ ಜ್ಹೋಲಿಯೊ (ನೋಡಿ– ಜೋಲಿಯೋ–ಕ್ಯೂರಿ ದಂಪತಿಗಳು) 1932ರಲ್ಲಿಯೂ ಹಗುರ ಲೋಹ ಬೆರಿಲಿಯಮನ್ನು –ಕಣಗಳಿಂದ ತಾಡಿಸಿ ನಡೆಸಿದ್ದ ಸಂಶೋಧನೆಗಳು ಚಾಡ್‍ವಿಕ್‍ನ ಗಮನವನ್ನು ಸೆಳೆದುವು (1932). ಹೀಗೆ ಬೆರಿಲಿಯಮನ್ನು –ಕಣಗಳಿಂದ ತಾಡಿಸಿದಾಗ ವಸ್ತುಗಳ ಮೂಲಕ ತೂರಬಲ್ಲ ತೀಕ್ಷ್ಣಶಕ್ತಿಯುತ ಕಣಗಳ ಸಮೂಹ ವಿಕಿರಣ ರೂಪದಲ್ಲಿ ಹೊರಬರುತ್ತದೆ ಎಂಬುದನ್ನು ಚಾಡ್‍ವಿಕ್ ಆವಿಷ್ಕರಿಸಿದ. ಹೊರಬರುವ ಪ್ರತಿಯೊಂದು ಕಣದ ದ್ರವ್ಯರಾಶಿ ಹೆಚ್ಚುಕಡಿಮೆ ಪ್ರೋಟಾನಿನಷ್ಟೇ ಇದ್ದು, ಅದರ ವಿದ್ಯುದಾವೇಶ ಮಾತ್ರ ತಟಸ್ಥವಾಗಿರುವುದೆಂಬುದನ್ನು ಪ್ರಕಟಿಸಿ, ಕೆಲವಾರು ವರ್ಷಗಳ ಹಿಂದೆಯೇ ರುದರ್‍ಫರ್ಡ್ ಊಹಿಸಿದ್ದ ನ್ಯೂಟ್ರಾನ್ ಇದೇ ಎಂದು ನಿರ್ಧರಿಸಿದ. ಪರಮಾಣುವಿನ ಮೂರನೆಯ ಕಣದ ಈ ಅನ್ವೇಷಣೆ ಪರಮಾಣು ರಚನೆಯ ಬಗ್ಗೆ ಕೂಲಂಕಷ ಅಧ್ಯಯನ ನಡೆಸಲು ಸಹಕಾರಿಯಾಯಿತು. ಈ ಮಹತ್ಕಾರ್ಯ ಚಾಡ್‍ವಿಕ್‍ನಿಗೆ ಹಗ್ಸ್ ಪಾರಿತೋಷಕವನ್ನೂ (1932) ಭೌತವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಕವನ್ನೂ (1935) ಗಳಿಸಿಕೊಟ್ಟಿತು. ಚಾಡ್‍ವಿಕ್ ಮತ್ತು ಎಂ. ಗೋಲ್ಡಾಬರ್ ವಿಜ್ಞಾನಿಗಳು ಡ್ಯುಟೀರಿಯಮ್ ನ್ಯೂಕ್ಲಿಯಸ್‍ನ್ನು ಕಿರಣಗಳಿಂದ ತಾಡಿಸಿ ಶಿಥಿಲಗೊಳಿಸಬಹುದೆಂದು 1934ರಲ್ಲಿ ಕಂಡುಹಿಡಿದರು.

ಚಾಡ್‍ವಿಕ್ 1935 ರಿಂದ 48ರ ವರೆಗೆ ಲಿವರ್‍ಪೂಲ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ಕೆಲಸಮಾಡಿದ. 1950ರಲ್ಲಿ ಕಾಪ್ಲೆ ಪಾರಿತೋಷಕವನ್ನೂ, 1951ರಲ್ಲಿ ಫ್ರ್ಯಾಂಕ್ಲಿನ್ ಪಾರಿತೋಷಕವನ್ನೂ ಪಡೆದ. ಎರಡನೆಯ ಮಹಾಯುದ್ಧದ ಸಮಯದಲ್ಲಿ

ಬರ್ಕ್‌ಷೈರ್ ಡಿಡ್‌ಕಾಟನ ಪರಮಾಣು ಶಕ್ತಿ ಸಂಶೋಧನಾಕೇಂದ್ರದ ಮುಖ್ಯಸ್ಥನಾಗಿ ಕೆಲಸ ನಿರ್ವಹಿಸಿದ. 1948ರಲ್ಲಿ ಕೇಂಬ್ರಿಜ್‌ನ ಗಾನ್‌ವಿಲ್ಲೆ ಮತ್ತು ಕಾಯಸ್ ಕಾಲೇಜಿನ ಬೋಧಕನಾಗಿ ಆಯ್ಕೆಯಾದ. ಮಹಾಯುದ್ಧದ ಸಮಯದಲ್ಲಿ ಯುರೇನಿಯಮ್ ನ್ಯೂಕ್ಲಿಯಸ್ಸಿನ ವಿದಳನದ ಸರಪಳಿ ಕ್ರಿಯೆಯ ಅಧ್ಯಯನವನ್ನು ಪ್ರಾರಂಭಿಸಿದ. ಈ ಅಧ್ಯಯನ ಪರಮಾಣುಬಾಂಬನ್ನು ತಯಾರಿಸಲು ಸಹಕಾರಿಯಾಯಿತು. ಈತ ವಿಕಿರಣ ಮತ್ತು ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಮೇಲೆ ಕೆಲವು ಲೇಖನಗಳನ್ನು ಪ್ರಕಟಿಸಿದ್ದಾನೆ. ರುದರ್‌ಫರ್ಡ್ ಮತ್ತು ಸರ್ ಚಾರ್ಲ್ಸ್ ಎಲ್ಲಿಸ್ ಇವರೊಡಗೂಡಿ ವಿಕಿರಣಪಟು ವಸ್ತುಗಳಿಂದ ವಿಕಿರಣಗಳು ಎಂಬ ಪುಸ್ತಕವನ್ನು ಬರೆದ (1930). ಅಲ್ಲದೆ ರುದರ್‌ಫರ್ಡ್ ಮತ್ತು ನೆಲ್ಸನ್ ಇವರುಗಳ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾನೆ (1962). ಈತ 1974ರ ಜುಲೈ 24 ರಂದು ಮರಣ ಹೊಂದಿದ. (ಸಿ.ಟಿ.ಎಸ್.)

**ಚಾಣಕ್ಯ: ನೋಡಿ–ಕೌಟಿಲ್ಯ.**

**ಚಾತುರ್ಮಾಸ್ಯ :** ಆಷಾಢಮಾಸದಿಂದ ನಾಲ್ಕು ತಿಂಗಳುಗಳ ಕಾಲ ನಡೆಯುವ ಒಂದು ವ್ರತ. ಈ ವ್ರತನೇಮಗಳ ಪಾಲನೆಯಿಂದ ನಿದ್ರಾಸಕ್ತನಾದ ವಿಷ್ಣು ಸಂತೃಪ್ತನಾಗುತ್ತಾನೆ ಎನ್ನಲಾಗಿದೆ. ಆಷಾಢ ಶುಕ್ಲ ಏಕಾದಶೀ, ದ್ವಾದಶಿ ಹುಣ್ಣಿಮೆ, ಕರ್ಕಾಟಕ ಸಂಕ್ರಮಣ ಇವುಗಳಲ್ಲೊಂದು ದಿವಸ ಈ ವ್ರತವನ್ನು ಪ್ರಾರಂಭಿಸುತ್ತಾರೆ. ಪ್ರಾರಂಭದ ಕಾಲ ಭಿನ್ನವಾಗಿದ್ದರೂ ವ್ರತಸಮಾಪ್ತಿಯ ಕಾಲ ಮಾತ್ರ ಕಾರ್ತಿಕ ಶುಕ್ಲ ದ್ವಾದಶಿಯೇ. ಶೈವ–ವೈಷ್ಣವರಾದಿಯಾಗಿ ಎಲ್ಲರಿಗೂ ವ್ರತದ ವಿಧಿನಿಯಮಗಳು ಸಮಾನ. ಜೈನ ಮತ್ತು ಬೌದ್ಧರಲ್ಲೂ ಇದು ಆಚರಣೆಯಲ್ಲಿದೆ. ಈ ವ್ರತದಲ್ಲಿ ನಿತ್ಯ ಮತ್ತು ಕಾಮ್ಯ ಎಂದು ಎರಡು ವಿಧ.

ತರಕಾರಿ, ಮೊಸರು, ಹಾಲು, ದ್ವಿದಳಧಾನ್ಯ ಇವುಗಳಲ್ಲಿ ಕ್ರಮವಾಗಿ ಒಂದೊಂದನ್ನು ಒಂದೊಂದು ತಿಂಗಳಿನಲ್ಲಿ ಬಳಸದಿರುವುದು ನಿತ್ಯವ್ರತ. ಈ ವ್ರತ ಸಂಕಲ್ಪಕ್ಕೆ ಮೊದಲು ಭಗವಂತನನ್ನು ಪೂಜಿಸಿ 'ನಿನ್ನ ನಿದ್ರೆಯೇ ಜಗತ್ತಿಗೆ ನಿದ್ರೆ, ನಿನ್ನ ಎಚ್ಚರವೇ ಜಗತ್ತಿಗೆ ಎಚ್ಚರ. ಎಲೈ ಅಚ್ಯುತನೇ, ನೀನು ಪ್ರಸನ್ನನಾಗು' ಎಂದು ಪ್ರಾರ್ಥಿಸುತ್ತಾರೆ.

ಬೇರೆ ಬೇರೆ ಫಲಗಳನ್ನುದ್ದೇಶಿಸಿ ಬೆಲ್ಲ, ಎಣ್ಣೆ ಮೊದಲಾದ ಪದಾರ್ಥಗಳನ್ನು ಬಳಸದಿರುವುದು, ಒಂದು ಹೊತ್ತು ಅಥವಾ ದಿನ ಬಿಟ್ಟು ದಿನ ಊಟಮಾಡುವುದು–ಇವೇ ಮೊದಲಾದ ನಿಯಮಗಳಿಂದಿರುವುದು ಕಾಮ್ಯವ್ರತ.

ಹೊಸತಾಗಿ ವ್ರತ ಹಿಡಿಯುವವರು ಗುರ್ವಸ್ತ, ಶುಕ್ರಾಸ್ತ ಮತ್ತು ಸೂತಕ ಕಾಲಗಳಲ್ಲಿ ಈ ವ್ರತವನ್ನು ಪ್ರಾರಂಭಿಸಕೂಡದು. ಆಷಾಢಮಾಸ ಅಧಿಕಬಂದಾಗ ನಿಜ ಆಷಾಢಮಾಸದಲ್ಲೇ ಈ ವ್ರತವನ್ನು ಪ್ರಾರಂಭಿಸಬೇಕು. ಶ್ರಾವಣ, ಭಾದ್ರಪದ, ಆಶ್ವಯುಜ ಮಾಸಗಳಲ್ಲೊಂದು ಅಧಿಕ ಬಂದರೆ ಅಧಿಕ ಮತ್ತು ನಿಜ ಈ ಎರಡು ಮಾಸಗಳಲ್ಲೂ ಆ ತಿಂಗಳಿನ ನಿಯಮವನ್ನೇ ಪಾಲಿಸಬೇಕು. ವ್ರತವನ್ನು ಪ್ರಾರಂಭಿಸಿ ಮುಗಿಸುವುದಕ್ಕೆ ಮೊದಲು ವ್ಯಕ್ತಿ ಮೃತನಾದರೂ ಆತನಿಗೆ ವ್ರತವನ್ನು ಪೂರ್ಣವಾಗಿ ಆಚರಿಸಿದ ಫಲ ಪ್ರಾಪ್ತಿಯಾಗುತ್ತದೆ.

ಚಾತುರ್ಮಾಸ್ಯದ ಕಾಲ ಮಳೆಗಾಲ. ಆಗ ಅನೇಕ ಜಂತುಗಳು ಹಾದಿಬೀದಿಗಳಲ್ಲಿ ಹೆಚ್ಚಾಗಿ ಸಂಚರಿಸುವುದರಿಂದ ಅವು ಕಾಲಿಗೆ ಸಿಕ್ಕಿ ಸಾಯಬಾರದೆಂಬ ಉದ್ದೇಶದಿಂದಲೂ ಮಳೆಗಾಲದಲ್ಲಿ ಸಂಚಾರ ಕಷ್ಟಕರವಾದ್ದರಿಂದಲೂ ಸಂನ್ಯಾಸಿಗಳು ಈ ಕಾಲದಲ್ಲಿ ಸಂಚಾರವನ್ನು ನಿಲ್ಲಿಸಿ ಒಂದೆಡೆ ತಂಗುತ್ತಾರೆ. ಹುಣ್ಣಿಮೆಯಂದು ಯತಿಗಳಾದವರು ಕ್ಷೌರ ಮಾಡಿಸಿಕೊಂಡು ಈ ನಾಲ್ಕು ತಿಂಗಳುಗಳಲ್ಲಿ ಒಂದೆಡೆಯಲ್ಲೇ ವಾಸಿಸುವುದಾಗಿ ಸಂಕಲ್ಪಮಾಡಿ ಶ್ರೀಕೃಷ್ಣ, ವ್ಯಾಸ ಮತ್ತು ಭಾಷ್ಯಕಾರರನ್ನು ಪರಿವಾರದೊಡನೆ ಪೂಜಿಸಿ ಶಾಸ್ತ್ರಪುರಾಣೇತಿಹಾಸಾದಿ ಪ್ರವಚನಗಳನ್ನು ನಡೆಸುತ್ತ ಕಾಲ ಕಳೆಯುತ್ತಾರೆ. ನಾಲ್ಕು ತಿಂಗಳೂ ಒಂದೆಡೆಯಲ್ಲೇ ಇರಲು ಸಾಧ್ಯವಾಗದವರು ಎರಡು ತಿಂಗಳ ಕಾಲವಾದರೂ ಇರುತ್ತಾರೆ. ಆಷಾಢಮಾಸದಲ್ಲಿ ಚಾತುರ್ಮಾಸ್ಯ ಸಂಕಲ್ಪಮಾಡದವರು, ಅಶಕ್ತರು, ಆಶ್ವಯುಜಮಾಸ ಶುಕ್ಲ ದ್ವಾದಶೀ ದಿವಸ ವ್ರತವನ್ನು ಪ್ರಾರಂಭಿಸಿ ಕಾರ್ತಿಕ ಶುಕ್ಲ ದ್ವಾದಶೀ ದಿವಸ ಮುಗಿಸುತ್ತಾರೆ. ಹೆಂಗಸರು ಮದುವೆಯಾದ ವರ್ಷದಿಂದ ಐದು ವರ್ಷಗಳ ಕಾಲ ಈ ನಾಲ್ಕು ತಿಂಗಳುಗಳಲ್ಲಿ ಗೋಪದ್ಮ ವ್ರತವನ್ನು ಮಾಡುತ್ತಾರೆ. ಇಂಥ ವ್ರತಗಳಲ್ಲದೆ ಶ್ರುತಿಯಲ್ಲಿ ವಿಧಿಸಿರುವಂತೆ ಫಾಲ್ಗುಣ ಅಥವಾ ಚೈತ್ರ, ಆಷಾಢ, ಕಾರ್ತಿಕ ಹುಣ್ಣಿಮೆಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ಮಾಡುವ ವೈಶ್ವದೇವ, ವರುಣಪ್ರಘಾಸ, ಸಾಕಮೇಧ ಮತ್ತು ಶುನಾಸೀರೀಯ ಎಂಬ ನಾಲ್ಕು ಚಾತುರ್ಮಾಸ್ಯ ಯಾಗಗಳೂ ಇವೆ. (ಎಸ್.ಎನ್.ಕೆ.)

**ಚಾತುರ್ವರ್ಣ್ಯ : ನೋಡಿ ವರ್ಣಾಶ್ರಮ ಧರ್ಮಗಳು.**

**ಚಾಪೆಹೆಣಿಗೆ :** ಅತಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಗುಡಿ ಕೈಗಾರಿಕೆಗಳಲ್ಲಿ ಚಾಪೆ ಹೆಣಿಗೆಯೂ ಒಂದು. ಎಲ್ಲ ದೇಶದ ಆದಿವಾಸಿಗಳೂ ಇದನ್ನು ಅವಲಂಬಿಸಿದ್ದರು. ಈಗಲೂ ನೀಗ್ರೊಗಳು, ರೆಡ್ ಇಂಡಿಯನ್ನರು, ಭಾರತದಲ್ಲಿನ ಆದಿವಾಸಿಗಳು ಇದರಿಂದಲೇ ತಮ್ಮ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಅತಿ ಹಳೆಯ ಉದ್ಯಮವಾದರೂ ಇದು ಇಂದಿಗೂ ನಶಿಸಿಲ್ಲ. ಬಡವರಿಗೆ ಅಗತ್ಯದ ವಸ್ತುವಾಗಿ, ಶ್ರೀಮಂತರಿಗೆ ಭೋಗದ ವಸ್ತುವಾಗಿ ಚಾಪೆ ಮುಂದುವರಿಯುತ್ತಲೇ ಇದೆ.

ಈ ಕೈಗಾರಿಕೆ ಕರ್ನಾಟಕ, ತಮಿಳುನಾಡು, ಕೇರಳ, ಅಸ್ಸಾಂ ಮತ್ತು ಬಂಗಾಳ ಮುಂತಾದ ರಾಜ್ಯಗಳಲ್ಲಿ ಊರ್ಜಿತಾವಸ್ಥೆಯಲ್ಲಿದೆ. ಕರ್ನಾಟಕದ ಕಡಕೊಳ, ಸೋಮೇಶ್ವರಪುರ, ಚಿಕ್ಕಜೋಗಿಹಳ್ಳಿ ಹಾಗೂ ಇನ್ನಿತರ ಕಡೆಗಳಲ್ಲಿ ಚಾಪೆಗಳನ್ನು ವಿಶೇಷವಾಗಿ ತಯಾರಿಸುತ್ತಾರೆ.



ಚಾಪೆ ಮಗ್ಗ

ವಿವಿಧ ಮಾದರಿಯ ಚಾಪೆಗಳು

ಚಾಪೆಗಳನ್ನು ಬಿದಿರು, ಕಡ್ಡಿಹುಲ್ಲು, ಈಚಲಗರಿ, ತೆಂಗಿನಗರಿ ಮತ್ತು ಓಲೆಗರಿಗಳಿಂದ ನೇಯುವರು. ಹಾಸುವ ಚಾಪೆ, ಪಂಕ್ತಿ ಚಾಪೆ, ಮೇಜುಗಳ ಮೇಲೆ ಹಾಸುವ ಚಾಪೆ, ಬಾಗಿಲಿಗೆ ಹಾಕುವ ಚಾಪೆಯ ಪರದೆಗಳು ಇತ್ಯಾದಿಯಾಗಿ ಚಾಪೆಯಲ್ಲಿ ಬಹು ನಮೂನೆಗಳಿವೆ. ಚಾಪೆಯಿಂದ ಹಣದ ಚೀಲ, ಹ್ಯಾಟುಗಳು, ಕೈಚೀಲ ಮುಂತಾದ ನಯ ನಾಜೂಕಿನ ಬಣ್ಣಬಣ್ಣಗಳಿಂದ ಅಲಂಕೃತವಾದ ದೈನಿಕ ಉಪಯೋಗದ ವಸ್ತುಗಳನ್ನೂ

ತಯಾರಿಸುತ್ತಾರೆ. ಸಾಧಾರಣ ತರದ ಈಚಲ ಚಾಪೆಯನ್ನು ಅನೇಕ ವಸ್ತುಗಳನ್ನು ಕಟ್ಟಲು ಹೇರಳವಾಗಿ ಉಪಯೋಗಿಸುವರು. ನಿಜಕ್ಕೂ ಚಾಪೆ ಜಮಖಾನೆಗಿಂತ ಉತ್ತಮ. ಬೆಲೆ ಕಡಿಮೆ. ಬೇಗ ಮಾಸುವುದಿಲ್ಲ. ತೊಳೆಯುವುದು ಸುಲಭ. ಶೀತವನ್ನು ಹೀರದು.

ಈ ಕೈಗಾರಿಕೆಗೆ ಬೇಕಾಗುವ ಉಪಕರಣಗಳೆಂದರೆ ಮಗ್ಗ, ಬಿದಿರು ಸಲಾಕೆಗಳು ಮತ್ತು ಮೇಲೆ ಹೇಳಿದ ಹುಲ್ಲು ಇತ್ಯಾದಿ ಕಚ್ಚಾ ಸಾಮಗ್ರಿಗಳು. ಚಾಪೆಯ ಅಂದ ಅದರ ಮೂಲವಸ್ತು, ವಿಶಿಷ್ಟವಾದ ನೇಯ್ಗೆ ಮತ್ತು ಬಣ್ಣಗಳ ಸಂಕಲನಗಳಲ್ಲಿದೆ. ಬೇಕಾದ ಚಿತ್ರಗಳನ್ನು ನೇಯ್ಗೆ ಮತ್ತು ಬಣ್ಣಗಳಿಂದ ಚಾಪೆಯ ಮೇಲೆ ಮೂಡಿಸಬಹುದು.

ಚಾಪೆಗೆ ಬೇಕಾದ ಕಚ್ಚಾ ಸಾಮಗ್ರಿಗಳು ಕಡಿಮೆ ಕ್ರಯದಲ್ಲಿ ಬೇಕಾದಷ್ಟು ಸಿಗುವುದರಿಂದ ಮತ್ತು ಮನೆ ಮಂದಿಯೆಲ್ಲ ಕೆಲಸಮಾಡುವುದರಿಂದ ಇದನ್ನೇ ನಂಬಿದವರ ಜೀವನ ನಡೆಯುತ್ತಿದೆ. ಇದು ಇತರ ಸಣ್ಣ ಕೈಗಾರಿಕೆಗಳಂತೆ ವಂಶಪಾರಂಪರ್ಯವಾಗಿ ನಡೆದು ಬಂದಿರುವಂಥದು. ಆದರೆ ಚಾಪೆಗಳಿಗೆ ಸುವ್ಯವಸ್ಥಿತವಾದ ಮಾರುಕಟ್ಟೆಯ ಅಭಾವವಿರುವುದರಿಂದ ಲಾಭದ ದೊಡ್ಡ ಅಂಶ ಮಧ್ಯವರ್ತಿ ವ್ಯಾಪಾರಿಗಳ ಕೈವಶವಾಗಿ ಕೈಗಾರಿಕೆಯಲ್ಲಿ ತೊಡಗಿದವರಿಗೆ ಸಮರ್ಪಕವಾದ ಮತ್ತು ಪರಿಪೂರ್ಣವಾದ ಪ್ರತಿಫಲ ದೊರೆಯುತ್ತಿಲ್ಲ.

ಈ ಕೈಗಾರಿಕೆಯನ್ನು ಅವಲಂಬಿಸಿದ ಜನ ತಮ್ಮದೇ ಆದ ಸಹಕಾರ ಸಂಘಗಳನ್ನು ಸ್ಥಾಪಿಸಿ ಆ ಸಂಘಗಳ ಮೂಲಕ ತಮಗೆ ಆವಶ್ಯಕವಾದ ಕಚ್ಚಾ ಸಾಮಗ್ರಿಗಳನ್ನು ಕೊಳ್ಳುವುದು ಮತ್ತು ತಾವು ಹೆಣೆದ ಚಾಪೆಗಳನ್ನು ಮಾರುವುದರ ಮೂಲಕ ಯುಕ್ತ ಲಾಭ ಪಡೆಯಬಹುದು.

ಜಪಾನ್ ಮುಂತಾದ ದೇಶಗಳಲ್ಲಿ ಬಹು ಅಂದವಾಗಿ ಚಾಪೆ ಹೆಣೆದು ಅದರ ಮೇಲೆ ಕಲಾತ್ಮಕವಾದ ಚಿತ್ರಗಳನ್ನು ಅಚ್ಚು ಒತ್ತುತ್ತಾರೆ. ಇಂಥ ಚಾಪೆಗಳಿಗೆ ಪ್ರಪಂಚಾದ್ಯಂತ ಬೇಡಿಕೆ ಇದೆ. ಈಚೆಗೆ ಕೇರಳದಲ್ಲಿ ಇದೇ ಮಟ್ಟದ ಸುಂದರ ಚಾಪೆಗಳನ್ನು ತಯಾರಿಸುತ್ತಿದ್ದಾರೆ. ಚಾಪೆ ಹೆಣಿಗೆ ಮೊದಲಾದ ಕೈಗಾರಿಕೆಗಳಿಗೆ ಈಚೆಗೆ ಭಾರತ ಸರ್ಕಾರ ಉದಾರ ಸಹಾಯ, ಪ್ರೋತ್ಸಾಹ ನೀಡುತ್ತಿದೆ. (ಪಿ.ಸಿ)

**ಚಾಪ್‌ಮನ್ – ಕಾಲ್ಮೊಗೊರಾಫ್ ಸಮೀಕರಣ :** $\{X_n, n=0,1,2,\ldots\}$ ಒಂದು ಮಾರ್ಕಫ್ ಸರಪಣಿಯಾಗಿರಲಿ (ಚೇನ್). $X_n$ ನ ಬೆಲೆಗಳು ಅಥವಾ ಸ್ಥಿತಿಗಳು $(1, 2, \ldots)$ ಆಗಿರಲಿ. $i$ ಸ್ಥಿತಿಯಿಂದ $j$ ಸ್ಥಿತಿಗೆ ಮಾರ್ಪಾಡಾಗುವ ಸ್ತಬ್ಧ ಸ್ಥಿತ್ಯಂತರ ಸಂಭಾವ್ಯತೆಗಳನ್ನು (ಪ್ರಾಬಬಿಲಿಟೀಸ್) $(i, j=1, 2, \ldots\ldots)$

$$pij = Pr[x_n = j \mid x_{n-1} = i] = Pr)[x_n = j \mid x_{n-1} = i_1, \mathrm{x}_{n-2} = i_2 \ldots, \mathrm{x}_1 = j_{n-1}] \quad \ldots\ldots\ldots\ldots(1)$$

ಎಂಬುದಾಗಿ ಬರೆಯಬಹುದು. ಈ ಮೇಲಿನ ಸಮೀಕರಣ ಮಾರ್ಕಫ್ ಸರಪಣಿಯ ವೈಶಿಷ್ಟ್ಯವನ್ನು ಸೂಚಿಸುತ್ತದೆ. **(ನೋಡಿ – ಮಾರ್ಕಫ್ ಪ್ರಕ್ರಿಯೆ)**

$$pij^{(n)} = P[x_n = j \mid x_0 = i]$$

ಇದು $n$ ಹೆಜ್ಜೆಯ ಸ್ಥಿತ್ಯಂತರ ಸಂಭಾವ್ಯತೆಯನ್ನು ತಿಳಿಸುವುದು. ಒಟ್ಟು ಸಂಭಾವ್ಯತೆಯ ಸೂತ್ರದ ಅನುಸಾರವಾಗಿ ಮತ್ತು ಮಾರ್ಕಫ್ ಸರಪಣಿಯ ಗುಣದಿಂದ

$$P\left[X_{n+m} = j \mid X_m = i\right] = \sum_{k=1}^{\infty} P\left[X_{n+m} = j,\, X_{m+r} = k \mid X_m = i\right]$$

$$= \sum_k P\left[X_{n+m} = j \mid X_{m+r} = k, X_m = i\right] P\left[X_{m+n} = k \mid X_m = i\right]$$

$$= \sum_k P\left[X_{n+m} = j \mid X_{m+r} = k\right] P\left[X_{m+r} = k \mid X_m = i\right] \quad \ldots\ldots\ldots(2)$$

ಆಗಿರುವುದು. ಇದನ್ನು $pij^{(n)} = \sum_{(K)} \mathrm{Pik}^{(r)}\, \mathrm{Pkj}^{(s)}, \mathrm{r+s=n}$ .........(3)

ಎಂಬುದಾಗಿ ಬರೆಯಬಹುದು. ಸಮೀಕರಣ (2)ಕ್ಕೆ ಚಾಪ್‌ಮನ್–ಕಾಲ್ಮೊಗೋರಾಫ್ (ಚಾ–ಕಾ) ಸಮೀಕರಣವೆಂದು ಹೆಸರು. $(pij^{(n)})$ ಮಾತೃಕೆಯನ್ನು $\underset{\sim}{P}(n)$ ಎಂದು ಬರೆದರೆ ಮಾತೃಕಾರೂಪದಲ್ಲಿ ಈ ಮೇಲಿನ ಸಮೀಕರಣವನ್ನು

$$\underset{\sim}{P}(n) = \underset{\sim}{P}(r)\,\underset{\sim}{P}(s, 0 \le r \le n, r+s = n \quad \ldots\ldots.(4)$$

ಎಂಬುದಾಗಿ ಬರೆಯಬಹುದು. ಈ ಸಮೀಕರಣದಲ್ಲಿ $\underset{\sim}{\mathrm{P}}(\mathrm{o}) = \underset{\sim}{\mathrm{I}}$ ಮತ್ತು $\underset{\sim}{\mathrm{P}}(\mathrm{I}) = \underset{\sim}{\mathrm{P}} = (\mathrm{pij})$ ಆಗಿರುವುದರಿಂದ $\underset{\sim}{\mathrm{P}}(\mathrm{n}) = \underset{\sim}{\mathrm{P}}\,\mathrm{n}$ ....(5) ಎಂದು ಕಂಡುಹಿಡಿಯಬಹುದು. ಹೀಗೆ ಚಾ–ಕಾ ಸಮೀಕರಣದ ಸಹಾಯದಿಂದ $n-$ ಹೆಜ್ಜೆಯ ಸ್ಥಿತ್ಯಂತರ ಸಂಭಾವ್ಯತೆಗಳ ಮಾತೃಕೆಯನ್ನು ಒಂದು ಹೆಜ್ಜೆಯ ಸ್ಥಿತ್ಯಂತರ ಸಂಭಾವ್ಯತೆಗಳ ಮಾತೃಕೆಯ ಸಹಾಯದಿಂದ ಪಡೆಯಬಹುದು. ಈ ಮೇಲಿನ ಮಾರ್ಕಫ್ ಸರಪಣಿಯ ಸ್ಥಿತ್ಯಂತರ ಸಂಭಾವ್ಯತೆಗಳು ಸ್ಥಿರವಾಗಿರುವುವು $P[Xn=j \mid Xm=j]$ಯು $i. j, m, n$ಗಳ ಮೇಲೆ ಅವಲಂಬಿಸಿದ್ದರೆ ಅದನ್ನು $pij\,(m,n)$ ಎಂಬುದಾಗಿ ಬರೆಯಬಹುದು. ಮಾತ್ರವಲ್ಲದೆ ಆಗ ಸ್ಥಿತ್ಯಂತರ ಸಂಭಾವ್ಯತೆಗಳು ಸ್ತಬ್ಧವಿರುವುದಿಲ್ಲ (***n-m***ನ ಮೇಲೆ ಮಾತ್ರ ಹೊಂದಿಕೊಂಡಿರುವುದಿಲ್ಲ). ಈ ಸಂದರ್ಭದಲ್ಲಿ ಸಮೀಕರಣ(2)ನ್ನು

$$Pij(m,n) = \sum_{(K)} pik(m,r)\, pkj(\mathrm{r,n})\, m \angle r \angle n \quad \ldots\ldots(6)$$

ಎಂಬುದಾಗಿ ಬರೆಯಬಹುದು.

ಹೀಗೆ ಚಾ–ಕಾ ಸಮೀಕರಣ ಮಾರ್ಕಫ್ ಸರಪಣಿಯ ವೈಶಿಷ್ಟ್ಯವನ್ನು ವಿವರಿಸುವುದು. ಆ ಸರಪಣಿಯ ಸ್ಥಿತ್ಯಂತರ ಸಂಭಾವ್ಯತೆಗಳು ಈ ಸಮೀಕರಣವನ್ನು ಸಂತೃಪ್ತಿಪಡಿಸುವುವಾದರೂ, ವಿಲೋಮವಾಗಿ ಒಂದು ಸರಪಣಿಯ ಸ್ಥಿತ್ಯಂತರ ಸಂಭಾವ್ಯತೆಗಳು ಚಾ–ಕಾ ಸಮೀಕರಣವನ್ನು ಸಂತೃಪ್ತಿಪಡಿಸಿದರೆ ಆ ಸರಪಣಿ ಮಾರ್ಕಫ್‌ನ ಸರಪಣಿಯೆಂದು ಹೇಳಲು ಬರುವುದಿಲ್ಲ. ಆದರೆ ಈ ಸ್ಥಿತ್ಯಂತರ ಸಂಭಾವ್ಯತೆಗಳುಳ್ಳ ಮಾರ್ಕಫ್‌ನ ಸರಪಣಿಯೊಂದು ಇರುವುದೆಂದು ಮಾತ್ರ ಹೇಳಬಹುದು.

ಒಂದು ಮಾರ್ಕಫನ ಪ್ರಕ್ರಿಯೆಯ ಸ್ಥಿತಿಸಮೂಹ ಮೇಲೆ ವಿವರಿಸಿದಂತೆ ವಿರತವಾಗಿರಬೇಕಿಲ್ಲ ; $Xn$ನ ಬೆಲೆಗಳು $R$ ಬಿಂದುಗಳಾಗಿರಲಿ ⁓ ಅದರ ಒಂದು ಭಾಗವಾಗಿರಲಿ, ಮಾರ್ಕಫ್ ಗುಣವನ್ನು

$$P[Xn \in \Gamma \mid X_1 = x_1, \ldots\ldots, x_{n-1} = x_{n-1}] = P[X_n \in \Gamma \mid X_{n-1} = x_{n-1}] \quad \ldots(7)$$

ಎಂಬುದಾಗಿ ಬರೆಯಬಹುದು. ಇದು $n$ನ ಮೇಲೆ ಅವಲಂಬಿಸಿರದಿದ್ದರೆ ಈ ಅಧಿಸಂಭಾವ್ಯತೆ ಮಾರ್ಕಫ್ ಪ್ರಕ್ರಿಯೆಯ ಒಂದು ಹೆಜ್ಜೆಯ ಸ್ತಬ್ಧ ಸ್ಥಿತ್ಯಂತರ ಸಂಭಾವ್ಯತೆಯನ್ನು ತಿಳಿಸುವುದು. (1)ರ ಅನುಗುಣವಾಗಿ ಇದನ್ನು $P^{(1)}(x_{n-1,}\Gamma) = P(x_{n-1,}\Gamma)$ ಎಂದು ಬರೆಯಬಹುದು. ಒಟ್ಟು ಸಂಭಾವ್ಯತೆಯ ಸೂತ್ರದ ಪ್ರಕಾರ ಮಾರ್ಕಫ್ ಗುಣವನ್ನು ಆಧರಿಸಿ ಸಮೀಕರಣ (2) ರ ಅನುಗುಣವಾಗಿ

$$P[X_n \in \Gamma \mid X_0 = x] = P^{(n)}(x, \Gamma)$$

$$= \int P^{(r)}(x, dy)\, P^{(s)}(y, \Gamma) \quad \ldots\ldots.(8)$$

ಎಂಬುದಾಗಿ ಕಂಡುಹಿಡಿಯಬಹುದು. ಇಲ್ಲಿ $P^{(r)}(x, dy)$ ಎಂಬುದು $x$ ನಿಂದ ಹೊರಟು $r$ ಹೆಜ್ಜೆಯಲ್ಲಿ $(y, y+dy)$ ಅಂತರಾಳದಲ್ಲಿರುವ ಸ್ಥಿತ್ಯಂತರ ಸಂಭಾವ್ಯತೆಗಳ ಸಾಂದ್ರತೆಯನ್ನು ತಿಳಿಸುವುದು. ಈ $y$ ಬೆಲೆ $r$ ನ ಯಾವುದೇ ಬೆಲೆ ಯಾಗಿರಬಹುದಾದ್ದರಿಂದ $y$ ಯ ಬೆಲೆಯನ್ನು ಅನುಕಲಿಸಿ (8) ನ್ನು ಪಡೆದುದಾಗಿದೆ. ಇದೇ ಚಾ–ಕಾ ಸಮೀಕರಣದ ಪ್ರಸಕ್ತ ಸ್ವರೂಪ.

ಒಂದು ಮಾರ್ಕಫ್ ಪ್ರಕ್ರಿಯೆ ಸತತವಾಗಿ ಮಾರ್ಪಾಡಾಗುತ್ತ ಹೋಗಬಹುದು. ಆಗ $n$ ಹೆಜ್ಜೆಯ ಸ್ಥಿತ್ಯಂತರ ಸಂಭಾವ್ಯತೆಯ ಬದಲಾಗಿ $t$ ವೇಳೆಯಲ್ಲಾಗಬಹುದಾದ ಸ್ಥಿತ್ಯಂತರ ಸಂಭಾವ್ಯತೆಗಳನ್ನು ತಿಳಿಸಬೇಕಾಗುವುದು. $Xt$ ಯು $t$ ವೇಳೆಯಲ್ಲಿನ ಪ್ರಕ್ರಿಯೆಯ ಬೆಲೆಯಾಗಿದ್ದರೆ $Xt$ ವಿರತವಾಗಿ (1,2,.....) ಬೆಲೆಗಳನ್ನು ಹೊಂದಬಹುದು; ಅಥವಾ $Xt$ ಸತತವಾಗಿ $R$ನಲ್ಲಿನ ಯಾವುದೇ ಬೆಲೆಯನ್ನು ಹೊಂದಬಹುದು. $Xt$ ವಿರತವಾಗಿದ್ದಲ್ಲಿ ಸಮೀಕರಣ (2)ರ ಅನ್ವಯ ಚಾ–ಕಾ ಸಮೀಕರಣವನ್ನು

$$pij\ (t+\tau) = \sum_{k=1}^{\infty} pik\ (t)\, pkj\ (\tau) \quad \ldots\ldots(9)$$

ಎಂಬುದಾಗಿ ಬರೆಯಬಹುದು. $i$ ಸ್ಥಿತಿಯಿಂದ ಹೊರಟು $t$ ವೇಳೆಯಲ್ಲಿ $k$ ಯಲ್ಲಿದ್ದು ಮುಂದೆ $\tau$ ವೇಳೆಯಲ್ಲಿ $j$ ಯನ್ನು ಸಾಧ್ಯವೆಂದೂ $k$ ಯು (1,2.....) ಗಳಲ್ಲಿ ಯಾವುದೇ ಸ್ಥಿತಿ ಆಗಿರಬಹುದೆಂದೂ (9) ಹೇಳುವುದು. $Xt$ ಯ ಬೆಲೆಗಳೂ ಸತತವಾಗಿದ್ದರೆ $P(t)(x,\Gamma\Gamma)$ ವು $x$ನಿಂದ ಹೊರಟ ಪ್ರಕ್ರಿಯೆ $t$ ವೇಳೆಯಲ್ಲಿ $\Gamma$ದಲ್ಲಿರುವ ಸಂಭಾವ್ಯತೆಯನ್ನು ತಿಳಿಸಿದರೆ (9) ಮತ್ತು (8) ರ ಅನ್ವಯ ಚಾ–ಕಾ ಸಮೀಕರಣ

$$P^{(t+\tau)}(x, \Gamma) = \int P^{(t)}(x, dy)\, P^{(\tau)}(y, \Gamma) \quad \ldots(10)$$

ಎಂಬ ಸ್ವರೂಪವನ್ನು ಹೊಂದುವುದು.

$u_o(X_t)$ಯು $X_t$ ಯ ಒಂದು ಉತ್ಪನ್ನವಾಗಿರಲಿ. $x$ನಿಂದ ಹೊರಟ ಮಾರ್ಕಫ್ ಪ್ರಕ್ರಿಯೆಯಲ್ಲಿ $u_o(X_t)$ಯ ನಿರೀಕ್ಷಿತಬೆಲೆ ಏನು ಎಂದು ತಿಳಿಯಬೇಕಾದರೆ

$$u(t,x) = \int P^{(t)}(x,dy)\,u_o(dy) \quad ...(11)$$

ಎಂಬುದನ್ನು ಗಣಿಸಬೇಕಾಗುತ್ತದೆ. ಈಗ (11)ನ್ನು $p(t)uo(x)$ಎಂದು ಪರಿಕರ್ಮಿ (ಆಪರೇಟರ್) ವಿಧಾನದಿಂದ ನಿರೂಪಿಸಿದ ಚಾ–ಕಾ ಸಮೀಕರಣದಿಂದ $p(t)$ಪರಿಕರ್ಮಿ

$$P(t+\tau) = p(t)\,p(\tau) = p(\tau)\,p(t), t, \tau > 0 \quad ...(12)$$

ಎಂಬ ಸಮೀಕರಣವನ್ನು ಸಂತೃಪ್ತಿಗೊಳಿಸುತ್ತದೆ. ಹೀಗೆ ಪರಕರ್ಮಿಗಳು ಒಂದು ಅರೆತಂಡದ (ಸೆಮಿಗ್ರೂಪ್) ಗುಣಗಳನ್ನು ಹೊಂದಿರುವುವು. ಮಾತ್ರವಲ್ಲದೆ ಈ ಪರಿಕರ್ಮಿಗಳನ್ನು ಆಕುಂಚನ ಪರಿಕರ್ಮಿಗಳು ಎಂದು ಸಿದ್ಧಪಡಿಸಬಹುದು. ಈ ಆಧಾರಗಳ ಸಹಾಯದಿಂದ ಗಣಿತಶಾಸ್ತ್ರಜ್ಞರು ಅರೆತಂಡದ ಮೇಲೆ ನಡೆಸಿರುವ ಎಷ್ಟೋ ಸಂಶೋಧನೆಗಳನ್ನು ಇಲ್ಲಿ ಬಳಸಬಹುದು. ಇದೇ ಚಾ–ಕಾ ಸಮೀಕರಣವನ್ನು ಅಭ್ಯಸಿಸುವ ಆಧುನಿಕ ವಿಧಾನ.

ಒಂದು ಮಾರ್ಕಫ್ ಪ್ರಕ್ರಿಯೆಯ ಸ್ಥಿತ್ಯಂತರ ಸಂಭಾವ್ಯತೆಗಳನ್ನು, ಸ್ಥಿದ್ಧ ಸಂಭಾವ್ಯತೆಗಳನ್ನು ಮಾತ್ರವಲ್ಲದೆ ಆ ಪ್ರಕ್ರಿಯೆಯ ಬಗೆಗಿನ ಅನೇಕ ಪ್ರಶ್ನೆಗಳನ್ನು ಕೂಡ, ಉತ್ತರಿಸಲು ಚಾ–ಕಾ ಸಮೀಕರಣ ಸಹಾಯ ಮಾಡುವುದು. $pij\ (\tau, t)$ ಯು ಕೆಲವೊಂದು ವಿಶಿಷ್ಟ ಗುಣಗಳನ್ನು ಹೊಂದಿದ್ದಲ್ಲಿ ಚಾ–ಕಾ ಸಮೀಕರಣದಿಂದ, ಈ ಕೆಳಗಿನ ಅವಕಲ ಸಮೀಕರಣ ಗಳನ್ನು ಪಡೆಯಬಹುದು :

$$\frac{\partial pij(\tau,t)}{\partial t} = -C_i(t)p_{ij}(\tau,t) + \sum_{(K)} p_{ik}(\tau,t)$$

$$\times\ C_k\ (t)_{pkj}\ (t) \quad ...(13)$$

ಇಲ್ಲಿ $h$ ಶೂನ್ಯಗಾಮಿಯಾದಂತೆ

$$\frac{1-P\,ii\,(t,t+h)}{h} \to C_i\ (t) \geq 0$$

$$\frac{P\,ij\,(t,t+h)}{h} \to C_i\ (t)\ pij\ (t), i \neq j \quad ..(14)$$

ಎಂದು ಗ್ರಹಿಸಬೇಕು. ಈ ಸಮೀಕರಣಗಳಿಗೆ ಕಾಲ್ಮೊಗೊರಾಫ್–ಫೆಲ್ಲರರ ಮುಮ್ಮುಖ (ಫಾರ್ವರ್ಡ್) ಅವಕಲ ಸಮೀಕರಣಗಳೆಂದು ಹೆಸರು. ಇವನ್ನು ಪರಿಷ್ಕರಿಸಿ $pij\,(\tau,t)$ಯ ಬೆಲೆಗಳನ್ನು ಕಂಡುಹಿಡಿಯಬಹುದು. $h$ ಶೂನ್ಯಗಾಮಿ ಆದಂತೆ $pij\,(t-h,t)\,/\,h$ನ ಮತ್ತು $[1-pii\,(th,t)\,/\,h$ನ ಪರಿಮಿತಿಯನ್ನು ಪರಿಗಣಿಸಿ, ಚಾ–ಕಾ ಸಮೀಕರಣದ ಸಹಾಯದಿಂದ ಹಿಮ್ಮುಖ ಅವಕಲ ಸಮೀಕರಣಗಳನ್ನು ಪಡೆಯಬಹುದು. ಮುಮ್ಮುಖ ಮತ್ತು ಹಿಮ್ಮುಖ ಅವಕಲ ಸಮೀಕರಣಗಳಿಗೆ ಒಂದೇ ಉತ್ತರ ದೊರೆಯುವುದೆಂದು ಫೆಲ್ಲರ್ ಸಾಧಿಸಿದ್ದಾನೆ. ಜನನ ಮರಣ ಪ್ರಕ್ರಿಯೆ, ಪೋಸೋನ್ ಪ್ರಕ್ರಿಯೆ, ಕವಲೊಡೆಯುವ ಪ್ರಕ್ರಿಯೆ ಮೊದಲಾದ ಮಾರ್ಕಫ್ ಪ್ರಕ್ರಿಯೆಗಳನ್ನು ಅಭ್ಯಸಿಸಲು ಮೇಲಿನ ಅವಕಲ ಸಮೀಕರಣಗಳನ್ನು ಪರಿಷ್ಕರಿಸುವರು.

ಸಮೀಕರಣ (10) ಮತ್ತು (11)ರಲ್ಲಿ ಇರುವಂತೆ $X$ನ ಬೆಲೆಗಳನ್ನು ಅವಿಚ್ಛಿನ್ನವಾಗಿದ್ದರೆ ಮತ್ತು ಸ್ಥಿತ್ಯಂತರ ಸಂಭಾವ್ಯತಾ ಉತ್ಪನ್ನವಾದ $Pt\,(x, \Gamma)$ಈ ಕೆಳಗಿನ ನಿರ್ಬಂಧಗಳನ್ನು ಪಾಲಿಸಿದರೆ ಆಗ $u(t,x)$

$$\frac{\partial u}{\partial t} = \tfrac{1}{2}\,a\,(x)\frac{\partial^2 u}{\partial x} + b\,(x)\frac{\partial u}{\partial u} \quad ...(15)$$

ಎಂಬ ಹಿಮ್ಮುಖ ಅವಕಲ ಸಮೀಕರಣವನ್ನು ಪಾಲಿಸುವುದು. ಈ ನಿರ್ಬಂಧಗಳು ಯಾವುವೆಂದರೆ, $t$ ಶೂನ್ಯಗಾಮಿಯಾದಂತೆ

$$(i)\ \frac{1}{t}\int P_t\,(x,dy) \to 0$$

$$|y-x| \geq \delta$$

$$(ii)\ \frac{1}{t}\int (y-x)\,P_t\,(x_j\,,dy) \to b(x)$$

$$|y-x| < \delta$$

$$(iii)\ \frac{1}{t}\int (y-x)^2\,P_t\,(x\ \ ,dy) \to a(x) > 0 \quad ...(16)$$

$$|y-x| < \delta$$

ಸಮೀಕರಣ (15)ರಲ್ಲಿ $b(x) = 0$ ಆಗಿದ್ದರೆ ನಮಗೆ ಬ್ರೌನಿಯನ್ ಚಲನೆಯ (**ನೋಡಿ**) ಸಮೀಕರಣ ದೊರೆಯುವುದು. $b(x) = \rho\ x$ಆಗಿದ್ದು $(\alpha)x = c$ಆಗಿದ್ದರೆ ಓರ್ನಸ್ಟೈನ್ – ಉಲ್ಲೇನ್‌ಬೆಕ್ಕರ ಪ್ರಕ್ರಿಯೆಯ ಸಮೀಕರಣ ದೊರೆಯುವುದು.

$X_0$ಯ ಬೆಲೆಗಳು $v_0(x)$ ಸಂಭಾವ್ಯತಾವಿತರಣೆಯನ್ನು ಹೊಂದಿದ್ದರೆ, $Xt$ ಯ ವಿತರಣೆ

$$v\,(t,y) = \int v_o\,(x)\,P_t\,(x,dy) \quad ...(17)$$

ಆಗಿರುವುದು. ಆಗ $v\,(t,y)$ ಉತ್ಪನ್ನ ಈ ಕೆಳಗಿನ ಮುಮ್ಮುಖ ಅವಕಲ ಸಮೀಕರಣವನ್ನು ಪಾಲಿಸುವುದು:

$$\frac{\partial v(t,y)}{\partial t} = \tfrac{1}{2}\frac{\partial^2[a\,(y)\,v(t,y)]}{\partial y^2} - \frac{\partial[b\,(y)\,v(t,y)]}{\partial y} \quad ...(18)$$

ಈ ಸಮೀಕರಣ ಫೋಕ್ಕರ್–ಪ್ಲಾಂಕ್ ಸಮೀಕರಣವೆಂದು ಪ್ರಸಿದ್ಧಿಯಾಗಿದೆ. ಇದು ಭೌತವಿಜ್ಞಾನ ಜೀವವಿಜ್ಞಾನ, ರಸಾಯನವಿಜ್ಞಾನ, ಖಗೋಳವಿಜ್ಞಾನ ಇತ್ಯಾದಿ ಅನೇಕ ವಿಜ್ಞಾನಗಳಲ್ಲಿನ ಪ್ರಕ್ರಿಯೆಗಳನ್ನು ವಿವರಿಸಲು ಸಹಾಯಕವಾಗಿದೆ. ಇಂಥ ಎಲ್ಲ ಸಮೀಕರಣಗಳ ಮೂಲ ಚಾ–ಕಾ ಸಮೀಕರಣ. (ಬಿ.ಆರ್.ಬಿ.)

**ಚಾಪ್‌ಮನ್, ಜಾನ್ ಜಾ :** 1862–1933. ಅಮೆರಿಕದ ಕವಿ, ಪ್ರಬಂಧಕಾರ ಮತ್ತು ವಕೀಲ. ಈತ ಹುಟ್ಟಿದ್ದು ನ್ಯೂಯಾರ್ಕ್ ನಗರದಲ್ಲಿ. 1884 ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಪದವೀಧರನಾಗಿ 1888ರಲ್ಲಿ ನ್ಯೂಯಾರ್ಕಿನ ವಕೀಲ ಸಂಘಕ್ಕೆ ದಾಖಲಾದ. 1898ರ ವರೆಗೂ ಸಕ್ರಿಯವಾಗಿ ವಕೀಲಿ ವೃತ್ತಿ ನಡೆಸುತ್ತಿದ್ದ. ಅನಂತರ ಬರೆಯಲು ಮೊದಲು ಮಾಡಿದ. ಈತನ ವೈಶಿಷ್ಟ್ಯಪೂರಿತ ಪ್ರಬಂಧಗಳು ಗಮನವನ್ನು ಸೆಳೆದುವು. ಎಮರ್‌ಸನ್ ಅಂಡ್ ಅದರ್ ಎಸ್ಸೇಸ್ (1898) : ಕಾಸಸ್ ಅಂಡ್ ಕಾನ್‌ಸಿಕ್ವೆನ್ಸ್ (1898) : ದಿ ಮೇಯ್ಡ್ಸ್ ಫರ್‌ಗಿವ್‌ನೆಸ್ (ಕಾವ್ಯ ನಾಟಕ –1908) ; ಲರ್ನಿಂಗ್ ಅಂಡ್ ಅದರ್ ಎಸ್ಸೇಸ್ (1910) ; ದಿ ಟ್ರೀಸನ್ ಅಂಡ್ ಡೆತ್ ಆಫ್ ಬೆನೆಡಿಕ್ಟ್ ಆರ್ನಲ್ಡ್ (ನಾಟಕ –1910) : ವಿಲಿಯಮ್ ಲಾಯ್ಡ್ ಗ್ಯಾರಿಸನ್ (1913) : ನೋಟ್ಸ್ ಆನ್ ರಿಲಿಜನ್ (1915) : ದಿ ಗ್ರೀಕ್ ಜೀನಿಯಸ್ (1915) : ಎ ಗ್ಲಾನ್ಸ್ ಟುವರ್ಡ್ ಷೇಕ್ಸ್‌ಪಿಯರ್ (1922) : ಲೆಟರ್ಸ್ ಅಂಡ್ ರಿಲಿಜನ್ (1924) : ಡಾಂಟೆ (1927)–ಇವು ಈತನ ಕೃತಿಗಳು. (ಕೆ.ವಿ.ಎಸ್.ಟಿ.)

**ಚಾಪ್‌ಮನ್, ಜಾರ್ಜ್ :** 1559–1634. ಎಲಿಜಬೆತ್ ರಾಣಿಯ ಕಾಲದ ಪ್ರಸಿದ್ಧ ಕವಿ, ನಾಟಕಕಾರ ಮತ್ತು ಭಾಷಾಂತರಕಾರ. ಬೈಬಲ್ ಮತ್ತು ಹಲವಾರು ಪುರಾತನ ಮಹಾಕೃತಿಗಳನ್ನು ಇಂಗ್ಲಿಷ್ ಸಾಹಿತ್ಯಕ್ಕೆ ತಂದುಕೊಟ್ಟ ಮಹತ್ತರವಾದ ಆ ಭಾಷಾಂತರಯುಗದಲ್ಲಿ ಈತ ಒಬ್ಬ ಶ್ರೇಷ್ಠ ಭಾಷಾಂತರಕಾರನೆನಿಸಿದ್ದ. ಇಂದಿಗೂ ಈತನ ಹೆಸರು ಉಳಿದಿರುವುದು ಹೋಮರನ ಮಹಾಕಾವ್ಯಗಳ ಭಾಷಾಂತರದಿಂದ.

ಹರ್ಟ್‌ಫರ್ಡ್‌ಷೈರಿನ ಹಿಚಿನ್ ಸಮೀಪದಲ್ಲಿ, ಥಾಮಸ್ ಚಾಪ್‌ಮನ್ನನ ಎರಡನೆಯ ಮಗನಾಗಿ ಈತ ಜನಿಸಿದ. ತಾಯಿ ಜೋನ್ ದೊಡ್ಡ ಮನೆತನದವಳು. ಇವರೆಲ್ಲ ಉತ್ಕಟ ಪ್ರಾಟೆಸ್ಟಂಟ್ ಕ್ರೈಸ್ತರು. ಈತ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಮಾಡಿದನೆಂಬ ವಿಚಾರ ವಿವಾದಾಸ್ಪದವಾಗಿದೆಯಾದರೂ ಪದವೀಧರ ನಂತೂ ಆಗಲಿಲ್ಲವೆಂಬುದು ಖಚಿತ.

ಈತನ ಮೊದಲ ಕೃತಿ, ದಿ ಷ್ಯಾಡೊ ಅಫ್ ನೈಟ್ 1593ರಲ್ಲಿ ಪ್ರಕಟವಾಯಿತು. ಇದರಲ್ಲಿ ಪ್ರಾರ್ಥನಾರೂಪವಾದ ಹಲವಾರು ಹಾಡುಗಳಿವೆ. ದಿ ಬ್ಲೈಂಡ್ ಬೆಗರ್ ಆಫ್ ಅಲೆಕ್ಸಾಂಡ್ರಿಯ 1598ರಲ್ಲಿ ರಂಗದ ಮೇಲೆ ಪ್ರದರ್ಶಿತವಾದ ಮೊದಲ ನಾಟಕ. ಕ್ರಿಸ್ಟೋಫರ್ ಮಾರ್ಲೋ, ಬೆನ್ ಜಾನ್ಸನ್ ಮುಂತಾದ ಪ್ರತಿಭಾಶಾಲಿಗಳ ಸ್ನೇಹವೂ ಪ್ರಿನ್ಸ್ ಆಫ್ ವೇಲ್ಸ್ (ಹೆನ್ರಿ), ಅರ್ಲ್ ಆಫ್ ಸಾಮರ್‌ಸೆಟ್ ಇವರ ಕೃಪಾಶ್ರಯವೂ ಈತನ ಸಾಹಿತ್ಯಪ್ರಗತಿಗೆ ಪ್ರೋತ್ಸಾಹ ಕೊಟ್ಟವು. ಮಾರ್ಲೋನ ಹೀರೊ ಅಂಡ್ ಲಿಯಾಂಡರ್ ಎಂಬ ಅಪೂರ್ಣವಾಗಿದ್ದ ಕಾವ್ಯವನ್ನು ಈತ ಪೂರ್ಣ ಮಾಡಿದನೆಂದು ಹೇಳುತ್ತಾರೆ. ಷೇಕ್ಸ್‌ಪಿಯರನಿಗೂ ಈತನಿಗೂ ತುಂಬ ವೈಮನಸ್ಯವಿತ್ತು. ಷೇಕ್ಸ್‌ಪಿಯರ್ ತನ್ನ ಸಾನೆಟ್ಟೊಂದರಲ್ಲಿ ವರ್ಣಿಸಿರುವ ಪ್ರತಿಸ್ಪರ್ಧಿ ಕವಿ ಈತನೇ ಇರಬೇಕೆಂದು ಕೆಲವರ ಅಭಿಮತ.

ಚಾಪ್‌ಮನ್‌ಗೆ ಸ್ನೇಹಿತರಿಗಿಂತ ವಿರೋಧಿಗಳೇ ಹೆಚ್ಚು. ಹೋಮರನಿಗೆ ಆಶ್ರಯ ಕೊಟ್ಟವರಿಲ್ಲ, ಚಾಪ್‌ಮನ್‌ಗೆ ಸ್ನೇಹಿತರಾದವರಿಲ್ಲ ಎಂದು ಜನ ಒಂದು ಗಾದೆಯನ್ನೇ ಕಟ್ಟಿದ್ದರು.

ಟೈಮನ್ ಆಫ್ ಅಥೆನ್ಸ್, ಎ ಲವರ್ಸ್ ಕಂಪ್ಲೇಂಟ್ ಕೃತಿಗಳನ್ನು ಬರೆದವನು ಚಾಪ್‌ಮನ್, ಷೇಕ್ಸ್‌ಪಿಯರ್ ಅಲ್ಲ ಎಂದು ವಿಮರ್ಶಕ ರಾಬರ್ಟ್‌ಸನ್ನನ ಅಭಿಮತ.

ಈತನ ನಿಜವಾದ ಮಾಧ್ಯಮ ನಾಟಕವಾಗಿರಲಿಲ್ಲ. ಸಾಹಿತಿ ಎನಿಸಿಕೊಳ್ಳಬೇಕಾದರೆ ನಾಟಕ ಬರೆದಿರಬೇಕು ಎಂದು ತಿಳಿದಿದ್ದ ಕಾಲವದು. ಅದರಂತೆ ಈತನೂ ನಾಟಕಗಳನ್ನು ಬರೆದ. ಪ್ರತಿಭಾವಂತನಾದುದರಿಂದ ಕೆಲವು ಒಳ್ಳೆಯ ನಾಟಕಗಳೂ ರಚಿತವಾದುವು. ವಿಷಾದಾಂತ ನಾಟಕಗಳಲ್ಲಿ ಬುಸ್ಸಿ ಡ ಅಂಬೋಯ್, ದಿ ರಿವೆಂಜ್ ಆಫ್ ಬುಸ್ಸಿ ಡ ಅಂಬೋಯ್, ದಿ ಕಾನ್ಸ್‌ಪಿರಸಿ, ಟ್ರ್ಯಾಜಿಡೀಸ್ ಆಫ್ ಚಾರ್ಲ್ಸ್, ಡ್ಯೂಕ್ ಆಫ್ ಬೈರನ್, ದಿ ವಿಡೋಸ್ ಟಿಯರ್ಸ್–ಇವು ಶ್ರೇಷ್ಠವೆನಿಸಿವೆ.

ಹರ್ಷನಾಟಕಗಳಲ್ಲಿ ದಿ ಜಂಟ್ಲ್‌ಮನ್ ಅಷರ್, ದಿ ಬಾಲ್, ದಿ ಮೇ ಡೇ ಹೆಸರಾಗಿವೆ. ಶಬ್ದಾಡಂಬರದ ವಿಷಾದಾಂತ ನಾಟಕಗಳೇ ಚೆನ್ನಾಗಿವೆ. ಈತನ ಎಲ್ಲ ನಾಟಕಗಳಲ್ಲೂ ಅಲ್ಲಲ್ಲಿ ಸೊಗಸಾದ ಕಾವ್ಯವಾಹಿನಿ ಹರಿಯುತ್ತದೆ. ಈತ ಷೇಕ್ಸ್‌ಪಿಯರನಿಗಿಂತ ಶ್ರೇಷ್ಠ ನಾಟಕಕಾರನೆಂದು ಇವನ ಸಮಕಾಲೀನ ಜನತೆ ಭಾವಿಸಿತ್ತು.

ಕವಿಯಾಗಿ ಈತ ಸ್ವತಂತ್ರ ಕೃತಿಗಳಿಂದ ಅಷ್ಟೇನೂ ವಿಖ್ಯಾತನಾಗಲಿಲ್ಲ. ಕೆಲವು ಸ್ತೋತ್ರಗೀತೆಗಳನ್ನೂ ಧಾರ್ಮಿಕ ಕವನಗಳನ್ನೂ ರಚಿಸಿದ್ದಾನೆ. ಆಧ್ಯಾತ್ಮಿಕ (ಮೆಟಫಿಸಿಕಲ್) ಕಾವ್ಯಪಂಥಕ್ಕೆ ಈತನನ್ನೂ ಸೇರಿಸಬಹುದು. ಈತನ ತತ್ತ್ವಬೋಧಕವಾದ ಸೂತ್ರಶೈಲಿಯ ಕವಿತೆಗಳಲ್ಲಿ ಭಾವತೀವ್ರತೆಯಾಗಲೀ, ಗೇಯಮಾಧುರ್ಯವಾಗಲೀ ಇಲ್ಲ. ಕೆಲವು ಬಾರಿ ಎತ್ತರಕ್ಕೆ ಏರಿದರೂ ಅದು ಬುದ್ಧಿಜನ್ಯವಾದ ಔನ್ನತ್ಯ ಮಾತ್ರ.

ಲ್ಯಾಟಿನ್ ಕವಿಗಳಾದ ಪೆಟ್ರಾರ್ಕ್, ಜ್ಯುವನೆಲ್, ಹೆಸಿಯಡ್ ಇವರ ಕೆಲವು ಕೃತಿಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದರೂ ಹೋಮರನ ಇಲಿಯಡ್ ಮತ್ತು ಒಡಿಸಿ ಎಂಬೆರಡು ಮಹಾಕಾವ್ಯಗಳನ್ನು ಭಾಷಾಂತರಿಸಿದುದೇ (1616) ಈತನ ಕಾವ್ಯಜೀವನದ ಮಹತ್ತರವಾದ ಸಾಧನೆ. ಈ ಅನುವಾದ ಕಾರ್ಯ ಮುಗಿದಮೇಲೆ ತನ್ನ ಜನ್ಮೋದ್ದೇಶ ಸಫಲವಾಯಿತು, ಬದುಕು ಸಾರ್ಥಕವಾಯಿತು ಎಂಬ ತೃಪ್ತಿ ಕವಿಗೆ ಬಂತು. ಮೂಲದ ಸರಳತೆ, ಗಾಂಭೀರ್ಯ, ಖಚಿತತೆ, ಚುರುಕಾದ ಓಟ ಭಾಷಾಂತರದಲ್ಲಿ ಬಾರದೆ ಹೋದರೂ ಹೋಮರನ ನಯಗಾರಿಕೆಯ ಮುಂದೆ ಅನುವಾದ ಬಹಳ ರೂಕ್ಷ ಎಂದೆನಿಸಿದರೂ ಎಲ್ಲ ದೋಷಗಳನ್ನೂ ಮರೆಸುವಂಥ ಸತ್ತ್ವ, ತೇಜಗಳನ್ನು ಉಳಿಸಿಕೊಂಡಿರುವುದೇ ಈ ಭಾಷಾಂತರಗಳ ಶ್ರೇಷ್ಠತೆಯನ್ನು ಎತ್ತಿಹಿಡಿದಿದೆ. ಅಲೆಕ್ಸಾಂಡರ್ ಪೋಪ್, ಮ್ಯಾಥ್ಯೂ ಆರ್ನಲ್ಡ್ ಮೊದಲಾದ ಹಿರಿಯ ವಿಮರ್ಶಕರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೀಟ್ಸ್ ಕವಿಯಂತೂ ಚಾಪ್‌ಮನ್ನನ ಈ ಭಾಷಾಂತರಗಳನ್ನು ತನ್ನೊಂದು ಸಾನೆಟ್ಟಿನಲ್ಲಿ ಮೆಚ್ಚಿ ಕೊಂಡಾಡಿದ್ದಾನೆ. ಇಂದಿಗೂ ಈತನ ಭಾಷಾಂತರ ಇಂಗ್ಲಿಷಿನಲ್ಲಿ ಬಂದಿಲ್ಲವೆಂದು ಅನೇಕರ ಅಭಿಪ್ರಾಯ.

ಧಾರ್ಮಿಕ ಪ್ರವೃತ್ತಿಯುಳ್ಳವನೂ, ನಿರ್ವ್ಯಸನಿಯೂ ಆಗಿದ್ದ ಚಾಪ್‌ಮನ್ನನ ಬದುಕು ಚೊಕ್ಕವಾಗಿತ್ತು. ಹಣಕ್ಕಿಂತ ಕೀರ್ತಿಯೇ ಈತನಿಗೆ ವಿಪುಲವಾಗಿ ದೊರೆಯಿತು. ಬದುಕಿನುದ್ದಕ್ಕೂ ಈತ ಯಾವ ಪ್ರಚಲಿತ ವಿಷಯಗಳಲ್ಲೂ ಉತ್ಸಾಹದಿಂದ ಭಾಗಿಯಾಗದೆ ದೂರದೂರದಲ್ಲೇ ಕೇವಲ ಪ್ರೇಕ್ಷಕನಾಗಿ ನಿಂತ. ಆದರೂ ಈಸ್ಟ್‌ವರ್ಡ್ ಹೋ ಎಂಬ ಕೃತಿಯಲ್ಲಿ ಸ್ಕಾಟ್ಲೆಂಡಿನವರನ್ನು ಅವಹೇಳನ ಮಾಡಿದ್ದಾನೆಂಬ ಆರೋಪ ಹೊತ್ತು, ದೊರೆಯ ಆಗ್ರಹಕ್ಕೆ ಗುರಿಯಾಗಿ ಕೆಲವು ಕಾಲ ಸೆರೆಮನೆವಾಸವನ್ನು ಅನುಭವಿಸಬೇಕಾಯಿತು.

ಜೀವಮಾನವನ್ನೆಲ್ಲ ಬಡತನದ ಕಹಿಯುಂಡ ಈತ ಅದೇ ಸ್ಥಿತಿಯಲ್ಲೇ ಸಾವನ್ನಪ್ಪಿದ. ಸೇಂಟ್ ಗೈಲ್ಸ್ ಇನ್ ದಿ ಫೀಲ್ಡ್ ಎಂಬ ಚರ್ಚ್‌ಯಾರ್ಡಿನಲ್ಲಿ ಈತನ ಸಮಾಧಿ ಇದೆ.

(ಕೆ.ಬಿ.ಪಿ.)

**ಚಾಪ್‌ಮನ್, ರಾಬರ್ಟ್ ವಿಲಿಯಂ :** 1881–1960. ಆಧುನಿಕ ಇಂಗ್ಲಿಷ್ ಸಾಹಿತ್ಯ ವಿದ್ವಾಂಸ; ಗ್ರಂಥಸಂಪಾದಕನಾಗಿ ಹೆಸರಾದವ. ಸೇಂಟ್ ಆ್ಯಂಡ್ರ್ಯೂಸ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಮಾಡಿ ಆನರ್ಸ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದ. ಆಕ್ಸ್‌ಫರ್ಡಿನ ಓರಿಯಲ್ ಕಾಲೇಜಿನಲ್ಲಿ ಸಾಹಿತ್ಯ, ಸಾಂಸ್ಕೃತಿಕ ಶಾಸ್ತ್ರಗಳನ್ನು ಆರಿಸಿಕೊಂಡು ಅಲ್ಲಿಯೂ ಪ್ರಥಮಶ್ರೇಣಿಯ ಪದವಿಯನ್ನು ಸಂಪಾದಿಸಿದ. 1915–1919ರವರೆಗೆ ರಾಯಲ್ ರಕ್ಷಣಾಸೇನೆಯ ಫಿರಂಗಿದಳದಲ್ಲಿ ಹಂಗಾಮಿ ದ್ವಿತೀಯ ಲೆಫ್ಟಿನೆಂಟ್ ಆಗಿ ಸೇವೆ ಸಲ್ಲಿಸಿದ. ಈ ಅವಧಿಯ ಕೊನೆಯ 3 ವರ್ಷ ಸಲೋನಿಕಾದ ಕ್ಯಾಪ್ಟನ್ ಸಹ ಆಗಿದ್ದ. 1920–42ರವರೆಗೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನ ನಿಯೋಗವೊಂದರ ಕಾರ್ಯದರ್ಶಿಯಾಗಿದ್ದ. ಈ ಅವಧಿಯಲ್ಲಿ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು ಪ್ರಕಟಗೊಂಡಿತು. ಈ ನಡುವೆ, 1931–47ರ ಅವಧಿಯಲ್ಲಿ ಆಕ್ಸ್‌ಫರ್ಡಿನ ಮ್ಯಾಗ್ಡಲಿನ್ ಕಾಲೇಜಿನಲ್ಲಿ ಫೆಲೊ ಆಗಿದ್ದು 1948ರಲ್ಲಿ ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನಲ್ಲಿ ಕ್ಲಾರ್ಕ್ ದತ್ತಿ ಸ್ಥಾನದಲ್ಲಿ ಅಧ್ಯಾಪಕನಾಗಿ ಅನಂತರ 1950ರಲ್ಲಿ ಯೇಲ್ ವಿಶ್ವವಿದ್ಯಾಲಯದ ಲೇ ಮಾಂಟ್ ದತ್ತಿಸ್ಥಾನದಲ್ಲಿ ಅಧ್ಯಾಪಕನಾಗಿ, ಕೆಲಸ ಮಾಡಿದ. ಬೋಡ್ಲಿಯನ್ ಮಿತ್ರಬಳಗದ ಹಾಗೂ ಆಕ್ಸ್‌ಫರ್ಡ್ ಗ್ರಂಥಸೂಚಿ ಸಂಪಾದಕ ಮಂಡಲಿಯ ಸದಸ್ಯನಾಗಿಯೂ ಕೆಲಸ ಮಾಡಿದ.

ಇಂಗ್ಲಿಷ್ ಸಾಹಿತ್ಯಭಂಡಾರಕ್ಕೆ ಈತನ ಅವಿಸ್ಮರಣೀಯ ಕಾಣಿಕೆಗಳಿಂದರೆ: ಸ್ಯಾಮ್ಯುಯೆಲ್ ಜಾನ್ಸನ್ನನ ಜೀವನ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ ಅಮೂಲ್ಯ ಸಂಗತಿಗಳನ್ನು ಆಯ್ದು, ಸಂಪಾದನೆಯ ಪರಿಷ್ಕಾರ ಕೊಟ್ಟು, ಪ್ರಕಟಿಸಿದುದು; ಜೇನ್ ಆಸ್ಟಿನ್‌ಳ ಕಾದಂಬರಿಗಳನ್ನೂ ಪತ್ರಗಳನ್ನೂ ಸಂಪಾದಿಸಿ ಪ್ರಕಟಿಸಿದುದು.

ಟೈಮ್ಸ್ ಲಿಟರರಿ ಸಪ್ಲಿಮೆಂಟ್ ಎಂಬ ಪ್ರಸಿದ್ಧವಾದ ಇಂಗ್ಲಿಷ್ ಸಾಹಿತ್ಯ ಪತ್ರಿಕೆಗೆ ನಿಯತವಾಗಿ ನೋಟ್ಸ್ ಅಂಡ್ ಕ್ವೆರೀಸ್ ಇತ್ಯಾದಿ ಸಾಹಿತ್ಯ ವಿಮರ್ಶನ ಟಿಪ್ಪಣಿಗಳನ್ನೂ ಅವಲೋಕನಗಳನ್ನೂ ಈತ ಬರೆಯುತ್ತಿದ್ದ. ಈತನಿಗೆ ಸೇಂಟ್ ಆ್ಯಂಡ್ರ್ಯೂಸ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು ಡಾಕ್ಟೊರೇಟ್ ಪದವಿಗಳನ್ನು ನೀಡಿದವು. ಅಲ್ಲದೆ ಈತ ಬ್ರಿಟಿಷ್ ಅಕೆಡಮಿಯ ಸದಸ್ಯನಾಗಿದ್ದ. 1955ರಲ್ಲಿ ಈತನಿಗೆ ಸಿ.ಬಿ.ಇ. ಪದವಿ ಲಭಿಸಿತು.

ಈತನ ಕೃತಿಗಳು: ದಿ ಪೋರ್ಟ್ರೇಟ್ ಆಫ್ ಎ ಸ್ಕಾಲರ್ (1920) ; ಜೇನ್ ಆಸ್ಟಿನ್ಸ್ ನಾವೆಲ್ಸ್ (ಸಂಪಾದಿತ–1923) ; ಜೇನ್ ಆಸ್ಟಿನ್ಸ್ ಲೆಟರ್ಸ್ (1932, 1952) ; ಜಾನ್ಸನ್ಸ್ ಅಂಡ್ ಬಾಸ್ವೆಲ್ಸ್ ಟ್ಯೂರ್ ಟು ದಿ ಹೆಬ್ರಿಡಿಸ್ (1924) ; ಕ್ಯಾನ್ಸೆಲ್ಸ್ (1930); ಸೊಸೈಟಿ ಫಾರ್ ಪ್ಯೂರ್ ಇಂಗ್ಲಿಷ್, ಟ್ರ್ಯಾಕ್ಟ್ಸ್ ಆನ್ ಆಕ್ಸ್‌ಫರ್ಡ್ ಇಂಗ್ಲಿಷ್ (1932) ; ನೇಮ್ಸ್ ಅಂಡ್ ಡೆಸಿಗ್ನೇಷನ್ಸ್ (1936) ; ಅಡ್ಜೆಕ್ಟಿವ್ಸ್ ಫ್ರಂ ಪ್ರಾಪರ್ ನೇಮ್ಸ್ (1939) ; ರಿಟ್ರಾಸ್ಪೆಕ್ಟ್ (1948) ; ಜೇನ್ ಆಸ್ಟಿನ್ : ಫ್ಯಾಕ್ಟ್ಸ್ ಅಂಡ್ ಪ್ರಾಬ್ಲಮ್ಸ್ ; ಜಾನ್ಸನ್ಸ್ ಲೆಟರ್ಸ್ (1952); ಜಾನ್ಸೋನಿಯನ್ ಅಂಡ್ ಅದರ್ ಎಸೇಸ್ (1953) ; ಜೇನ್ ಆಸ್ಟಿನ್–ಎ ಕ್ರಿಟಿಕಲ್ ಬಿಬ್ಲಿಯೋಗ್ರಫಿ (1953).

(ಕೆ.ಬಿ.ಪಿ.)

**ಚಾಪ್ಲಿನ್, ಚಾರ್ಲ್ಸ್ ಸ್ಪೆನ್ಸರ್ :** 1889–1977. ಆಂಗ್ಲ ಚಲನಚಿತ್ರ ನಟ ಮತ್ತು ನಿರ್ದೇಶಕ. ಚಾರ್ಲಿ ಎಂಬ ವಿಶಿಷ್ಟವಾದ ಹಾಸ್ಯಪಾತ್ರವನ್ನು ಸೃಜಿಸಿ ಇಂಗ್ಲಿಷ್ ಚಲನಚಿತ್ರದಲ್ಲಿ ಅದ್ವಿತೀಯವಾಗಿ ಮೆರೆದ ಕಲಾವಿದ. ಈತ ಸೌತ್ ಲಂಡನ್ನಿನಲ್ಲಿ 1889ರ ಏಪ್ರಿಲ್

16ರಂದು ಜನಿಸಿದ. ಈತನ ತಂದೆ ತಾಯಿಗಳು ಚಾರ್ಲ್ಸ್ ಮತ್ತು ಹೆನ್ನ ಚಾಪ್ಲಿನ್ನರು. ವೃತ್ತಿಯಿಂದ ಇಬ್ಬರೂ ನಟರೇ. ಆದರೆ ಇವರು ಇದರಲ್ಲಿ ಕಂಡ ಹಣ, ಸೌಖ್ಯ ಎರಡೂ ಕಡಿಮೆ. ಜೊತೆಗೆ ಚಾಪ್ಲಿನ್ನನ ತಾಯಿ ಮಾನಸಿಕ ರೋಗಿ. ಚಿಕಿತ್ಸೆಗಾಗಿ ಆಗಾಗ್ಗೆ ಆಸ್ಪತ್ರೆ ಹೊಕ್ಕು ಬರುವುದು ನಡೆದೇ ಇತ್ತು. ಸ್ವಲ್ಪ ಕಾಲದಲ್ಲಿ ತಂದೆ ತೀರಿಕೊಂಡ. ಚಾಪ್ಲಿನ್ ಅನಾಥಾಶ್ರಮಗಳಲ್ಲಿ ಬೋರ್ಡಿಂಗ್ ಶಾಲೆಗಳಲ್ಲಿ ವ್ಯಾಸಂಗದ ಶಾಸ್ತ್ರ ಮಾಡಿದ. ಅನಂತರ ತನ್ನ ಮಲ ಅಣ್ಣನ ಜೊತೆ ವಿವಿಧ ವಿನೋದಾವಳಿ ಕಂಪನಿಯೊಂದರಲ್ಲಿ ಹಾಸ್ಯನಟನಾಗಿ ಸೇರಿದ. ಇಲ್ಲಿಂದಲೇ ಈತನ ಕೀರ್ತಿಯ ಕತೆ ಪ್ರಾರಂಭವಾಯಿತು ಎನ್ನಬಹುದು. 1910ರಲ್ಲಿ ಕಾರ್ನೊ ಕಾಮೆಡಿ ಕಂಪನಿಯಲ್ಲಿ ಈತ ಮುಖ್ಯ ಹಾಸ್ಯನಟನಾದ.

ಈ ಕಂಪನಿ ಇಂಗ್ಲೆಂಡಿನಲ್ಲಿ ಪರ್ಯಟನೆ ಮಾಡಿದ ಅನಂತರ ಅಮೆರಿಕಕ್ಕೆ ಹೋಯಿತು. ಇಲ್ಲೇ ಈತ ತನ್ನ ಜೀವನದ ನಿರ್ಣಾಯಕ ತಿರುವನ್ನು ಪಡೆದದ್ದು. ಹಾಸ್ಯಚಿತ್ರಗಳನ್ನು ತಯಾರಿಸುತ್ತಿದ್ದ ಕ್ಯಾಲಿಫೋರ್ನಿಯದ ಕೀಸ್ಟೋನ್ ಕಂಪನಿ ಈತನನ್ನು ವಾರಕ್ಕೆ 150 ಡಾಲರ್ ವೇತನದ ಮೇಲೆ ನಟಿಸಲು ಆಹ್ವಾನಿಸಿತು. ಚಲನಚಿತ್ರ ಜೀವನ ಆರಂಭವಾದ ಅನಂತರ ಚಾಪ್ಲಿನ್ ಎಂದೂ ರಂಗನಾಟಕಗಳತ್ತ ಕಣ್ಣು ಹಾಯಿಸಲಿಲ್ಲ.

ಕೀಸ್ಟೋನ್ ಕಂಪನಿಯೊಡನೆ ಕೆಲಸ ಮಾಡಿದ ಒಂದು ವರ್ಷದ (1914) ಅವಧಿಯಲ್ಲಿ ಚಾಪ್ಲಿನ್ ಮೂವತ್ತೆರಡು ಚಿತ್ರಗಳಲ್ಲಿ ಕಾಣಿಸಿಕೊಂಡ. ಮೇಕಿಂಗ್ ಎ ಲಿವಿಂಗ್ ಮತ್ತು ಕಿಡ್ ಆಟೊ ರೇಸಸ್ ಚಿತ್ರಗಳಲ್ಲಿ ಪ್ರೇಕ್ಷಕರನ್ನು ಈತ ಬಹುವಾಗಿ ಆಕರ್ಷಿಸಿದ. 1915ರಲ್ಲಿ 1250 ಡಾಲರಿನ ವೇತನದ ಮೇಲೆ ಎಸ್ಸಾನ್ ಕಂಪನಿಯನ್ನು ಸೇರಿದ. ಈ ಕಂಪನಿಯಲ್ಲಿದ್ದಾಗಲೆ ಚಾಪ್ಲಿನ್ ತನ್ನ ವಿಶಿಷ್ಟವಾದ ಚಾರ್ಲಿ ಪಾತ್ರವನ್ನು ಸೃಷ್ಟಿಸಿದ್ದು. ಚಾರ್ಲಿ ಒಬ್ಬ ಅಲೆಮಾರಿ. ತೆಳ್ಳನೆಯ, ಸಣ್ಣನೆಯ, ಆರ್ದ್ರದೃಷ್ಟಿಯ ಮನುಷ್ಯ; ಹಿಟ್ಲರ್ ಮೀಸೆ, ದೇಹಕ್ಕೆ ತುಂಬ ಚಿಕ್ಕದು ಅನ್ನಿಸುವ ಕೋಟು, ದೊಗಳೆ ಷರಾಯಿ, ಡಾರ್ಬಿ ಹ್ಯಾಟು,

ಕೈಲಿ ಬೆತ್ತ, ಕಾಲಿಗೆ ತುಂಬ ದೊಡ್ಡದಾದ ಬೂಟು–ಹೀಗೆ ಅಲಂಕೃತನಾದ ಚಾರ್ಲಿ ಅನುಕಂಪಶೀಲ, ಮನುಷ್ಯಪ್ರೇಮಿ. ಆದರೆ ಭಾವುಕನಲ್ಲ. ಬಡತನ ಕಲಿಸಿದ ಹಲವು ಬಗೆಯ ಚಾಲಾಕು ಅವನಲ್ಲಿದೆ; ಹಾಗೆ, ಅವಮಾನದಿಂದ ಬರುವ ಅಹಂಕಾರ ಕೂಡ. ಚಾರ್ಲಿ ನಗುನಗುತ್ತಲೇ ಬಾಳಿನ ವಿಷಮತೆಗಳನ್ನು, ದುರಂತಗಳನ್ನು ಕಾಣಿಸುತ್ತ ಪ್ರೇಕ್ಷಕರ ಕಣ್ಣು ಹನಿಗೂಡುವಂತೆ ಮಾಡುತ್ತಾನೆ.

ಚಾರ್ಲಿ ಪಾತ್ರ ಸೃಷ್ಟಿಯಿಂದಾಗಿ ಚಾಪ್ಲಿನ್ನನ ಜನಪ್ರಿಯತೆ ಅಗಾಧವಾಗಿ ಬೆಳೆಯಿತು; ಅದರ ಜೊತೆಗೆ ಅವನ ವರಮಾನವು ಹೆಚ್ಚಿತು. ದಿ ಮ್ಯೂಚುಅಲ್ ಕಂಪನಿಯೊಡನೆ ಹನ್ನೆರಡು ಚಿತ್ರಗಳಿಗೆ ಸಹಿ ಹಾಕಿದಾಗ ಅವನಿಗೆ ಬಂದ ಹಣ 6ಲಕ್ಷದ 70ಸಾವಿರ ಡಾಲರು. ದಿ ಫಸ್ಟ್ ನ್ಯಾಷನಲ್ ಕಂಪನಿಯೊಡನೆ ಎಂಟು ಚಿತ್ರಗಳಿಗೆ ಒಪ್ಪಿಕೊಂಡಾಗ ಅದು 10ಲಕ್ಷ ಡಾಲರಿಗೆ ಏರಿತು. ಇದಾದ ಅನಂತರಯಾವಕಂಪನಿಯೂ ಈತನನ್ನು ಹಣ ಕೊಟ್ಟು ನಿಯಮಿಸಿಕೊಳ್ಳುವುದು ದುಸ್ಸಾಧ್ಯವಾಯಿತು. 1920ರಲ್ಲಿ ಚಾಪ್ಲಿನ್ ಹಾಲಿವುಡ್‌ನಲ್ಲಿ ಸ್ವಂತ ಸ್ಟುಡಿಯೊವನ್ನು ಕಟ್ಟಿದ.

ಚಾರ್ಲಿ ಪಾತ್ರ ಸೃಷ್ಟಿ

1930ರ ವೇಳೆಗೆ ವಾಕ್ಚಿತ್ರಗಳು ಮೂಕಚಿತ್ರಗಳ ಸ್ಥಾನವನ್ನು ಆಕ್ರಮಿಸಿದರೂ ಚಾಪ್ಲಿನ್ ಮಾತ್ರ ಮೂಕಚಿತ್ರಗಳ ತಯಾರಿಕೆಯನ್ನು ನಿಲ್ಲಿಸಲಿಲ್ಲ. ಸಂಭಾಷಣೆ ಇಲ್ಲದ ಮೂಕಚಿತ್ರಗಳನ್ನು 1930ರ ಅನಂತರವೂ ತಯಾರಿಸಿದ. ಅವುಗಳಲ್ಲಿ ಸಿಟಿ ಲೈಟ್ಸ್ (1931) ಮತ್ತು ಮಾಡರ್ನ್ ಟೈಮ್ಸ್ (1936) ಚಿತ್ರಗಳು ಮುಖ್ಯವಾದವು. 1940ರಲ್ಲಿ ಚಾಪ್ಲಿನ್‌ನ ಮೊದಲ ವಾಕ್ಚಿತ್ರ 'ದಿ ಡಿಕ್ಟೇಟರ್' ಬೆಳಕು ಕಂಡಿತು. ಇದಾದ ಮೇಲೆ ಬಂದ ಮೆಸ್ಯರ್ ವರ್ಡೂ (1947) ಮತ್ತು ಲೈಮ್ ಲೈಟ್(1952)–ಇವು ಚಾರ್ಲಿಯನ್ನು ರಾಜಕೀಯವಾಗಿ ವಿವಾದಾಸ್ಪದ ವ್ಯಕ್ತಿಯನ್ನಾಗಿಸಿದುವು. 1952ರಲ್ಲಿ ವಿಶ್ವ ಪ್ರವಾಸಕ್ಕೆಂದು ಹೊರಟ ಚಾಪ್ಲಿನ್ ಮತ್ತೆ ಅಮೆರಿಕಕ್ಕೆ ವಾಪಸ್ಸಾದದ್ದು ಸುಮಾರು ಎರಡು ದಶಕಗಳ ಅನಂತರ. ಎ ಡಾಗ್ಸ್ ಲೈಫ್ (1918); ಷೋಲ್ಡರ್ ಆರಮ್ಸ್ (1918); ಸನಿ ಸೈಡ್ (1919); ಎ ಡೇಸ್ ಪ್ಲೆಷರ್ (1919); ದಿ ಕಿಡ್ (1921); ದಿ ಐಡ್ಲ್ ಕ್ಲಾಸ್ (1920); ಪೇ ಡೇ (1922); ದಿ ಪಿಲ್‌ಗ್ರಿಂ (1923); ಎ ವುಮನ್ ಆಫ್ ಪ್ಯಾರಿಸ್ (1923); ದಿ ಗೋಲ್ಡ್ ರಷ್ (1925); ದಿ ಸರ್ಕಸ್ (1928); ಸಿಟಿ ಲೈಟ್ಸ್ (1931); ಮಾಡರ್ನ್ ಟೈಮ್ಸ್ (1936); ದಿ ಗ್ರೇಟ್ ಡಿಕ್ಟೇಟರ್ (1940); ಮೆಸ್ಯರ್ ವರ್ಡ್ಯೊ (1947); ಲೈಮ್ ಲೈಟ್ (1952), ಎ ಕಿಂಗ್ ಇನ್ ನ್ಯೂಯಾರ್ಕ್ (1957)– ಇವು ಈತನ ಕೆಲವು ಮುಖ್ಯ ಚಿತ್ರಗಳು.

ಚಾಪ್ಲಿನ್ ನಾಲ್ಕು ಬಾರಿ ಮದುವೆಯಾದ. ಮಿಲ್ಡ್ರೆಡ್ ಹ್ಯಾರಿಸ್ (1918), ಲಿಟಾ ಗ್ರೆ (1924), ಪಾಲೆಟ್ ಗೊಡಾರ್ಡ್ (1936) ಮತ್ತು 1943ರಲ್ಲಿ ಖ್ಯಾತ ನಾಟಕಕಾರ ಓನೀಲ್‌ನ ಮಗಳು ಊನಾ ಓ ನೀಲ್. ಚಾಪ್ಲಿನ್ ತನ್ನ ಆತ್ಮಕಥೆಯನ್ನು 1964ರಲ್ಲಿ ಪ್ರಕಟಿಸಿದ. ಇದು ಎಷ್ಟು ಜನಪ್ರಿಯವಾಯಿತೆಂದರೆ ಅದೇ ವರ್ಷ ಮೊದಲ ಪ್ರಕಟಣೆ ಮುಗಿಯುವ ಒಳಗೆ ಅದು ಮೂರು ಮುದ್ರಣಗಳನ್ನು ಕಂಡಿತು. ಚಾಪ್ಲಿನ್ ಬಹು ಸುಲಭವಾದ ಲಘು ಶೈಲಿಯಲ್ಲಿ ತನ್ನ ಜೀವನದ ಪ್ರಮುಖ ಘಟನೆಗಳನ್ನು ತಾನು ಕಂಡ ಮಹಾಪ್ರಭೃತಿಗಳೊಡನೆ ನಡೆದ ಸಂಭಾಷಣೆಗಳನ್ನೂ ಚಿತ್ರಿಸಿದ್ದಾನೆ. 1972ರಲ್ಲಿ ನ್ಯೂಯಾರ್ಕ್‌ನಗರ ಮತ್ತು ಲಾಸ್ ಏಂಜಲಿಸ್‌ನಲ್ಲಿ ಇವನನ್ನು ಗೌರವಿಸಲು ಏರ್ಪಡಿಸಿದ್ದ ಸಮಾರಂಭದಲ್ಲಿ ಭಾಗವಹಿಸಿದ್ದನು. ಇದೇ ವರ್ಷ ಏಪ್ರಿಲ್‌ನಲ್ಲಿ ಗೌರವ 'ಆಸ್ಕರ್ ಪ್ರಶಸ್ತಿ'ಯನ್ನು ನೀಡಲಾಯಿತು. 1975ರಲ್ಲಿ ಇಂಗ್ಲೆಂಡಿನ ರಾಣಿ ಎಲಿಜಬೆತ್‌ಳು ನೈಟ್‌ಹುಡ್ ಗೌರವ ಪದವಿಯನ್ನು ಅರ್ಪಿಸಿದಳು. ಇವನು 25 ಡಿಸೆಂಬರ್, 1977ರಂದು ನಿಧನ ಹೊಂದಿದನು.

'ಲೈಮ್‌ಲೈಟ್' ಚಲನಚಿತ್ರದಲ್ಲಿ (1952)

(ಡಿ.ಎ.ಎಸ್)

**ಚಾಮ್ ಜನ :** ಪ್ರಾಚೀನ ಚಂಪಾರಾಜ್ಯದ ಸುಸಂಸ್ಕೃತ ಜನ. ಆಸ್ಟ್ರೋನೇಷಿಯನ್ ಬುಡಕಟ್ಟಿಗೆ ಸೇರಿದವರು. ಪ್ರಾಚೀನ ಚಂಪಾರಾಜ್ಯ ಟಾಂ ಕಿನ್ ಮತ್ತು ಕೊ ಚಿನ್ ಚೀನಗಳನ್ನು ಬಿಟ್ಟು ಈಗಿನ ಅನ್ನಾಂ ಪ್ರಾಂತ್ಯವನ್ನು ಒಳಗೊಂಡು 180 ರಿಂದ 100 ವರೆಗೆ ವಿಷುವದ್ವೃತ್ತವನ್ನು ವ್ಯಾಪಿಸಿಕೊಂಡಿದ್ದಿತ್ತು. ಹಿಂದು ವಸಾಹತು ರಾಜ್ಯವಾದ ಚಂಪಾದಿಂದಲೇ ಈ ಜನಕ್ಕೆ ಚಾಮ್ ಜನ, ಚಾಮರು ಎಂಬ ಹೆಸರು ಬಂತು. ಹಿಂದುಗಳ ಸಂಪರ್ಕ ಬೆಳೆಸುವ ಮುನ್ನ ಇವರನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರೆಂಬುದು ತಿಳಿದುಬಂದಿಲ್ಲ. ಅಸಂಸ್ಕೃತರಾದ ಇತರರನ್ನು ಈ ಜನ ಕಿರಾತ ಮುಂತಾದ ಹೆಸರಿನಿಂದ ಕರೆಯುತ್ತಿದ್ದರು. ಪ್ರ.ಶ. ಒಂದನೆಯ ಶತಮಾನದಲ್ಲೇ ಚಾಮರು ಉತ್ತರದಲ್ಲಿ ಕ್ವ್ಯಾಂಗ್ ನಾಮ್‌ವರೆಗೂ ತಮ್ಮ ದಕ್ಷ ಆಧಿಪತ್ಯವನ್ನು ಸ್ಥಾಪಿಸಿದ್ದರು. ಅಲ್ಲದೆ ಚೀನದ ದಕ್ಷಿಣ ಗಡಿಯನ್ನು ಒಂದೇ ಸಮನೆ ಪೀಡಿಸುತ್ತಿದ್ದು, ಚೀನದ ದಾಸ್ಯಕ್ಕೊಳಗಾದ ತಮ್ಮ ಬುಡಕಟ್ಟಿನ ಜನರ ನೆರವು ಹಾಗೂ ಸಹಾನುಭೂತಿಯನ್ನು ಪಡೆಯುತ್ತಿದ್ದರು. ಪ್ರ.ಶ. 100ರಲ್ಲಿ ಸಿಯಾಂಗ್ ಲಿನ್ ಪಟ್ಟಣವಾಸಿಗಳಾದ ಚಾಮ್ ಜನ ಚೀನೀ ಅಧಿಕಾರಿಗಳಿಗೆ ಎದುರುಬಿದ್ದು ಬಹಿರಂಗ ಬಂಡಾಯ ಹೂಡಿ, ಚೀನದ ಸ್ವಾಧೀನದಲ್ಲಿದ್ದ ತಮ್ಮ ದೇಶದ ಉತ್ತರಭಾಗವನ್ನು ಆಕ್ರಮಿಸಿ ಚೀನಿ ಅಧಿಕಾರಿಗಳನ್ನು ಕೊಂದು ಅನೇಕ ಹಳ್ಳಿಗಳನ್ನು ನಾಶಪಡಿಸಿದರು. ಆದರೆ ಚೀನೀ ಸೈನಿಕರ ಕೈ ಮೇಲಾದ್ದರಿಂದ ಹಿಮ್ಮೆಟ್ಟಿದರು. ಪ್ರ.ಶ. 137ರಲ್ಲಿ ಸುಮಾರು ಹತ್ತು ಸಾವಿರ ಚಾಮರು ಚೀನದ ದಕ್ಷಿಣ ಪ್ರಾಂತದ ಕೆಲವು ಜಿಲ್ಲೆಗಳ ಮೇಲೆ ದಾಳಿ ನಡೆಸಿ ಅನೇಕ ಕೋಟೆಗಳನ್ನು ನಾಶಪಡಿಸಿ, ಆ ಪ್ರಾಂತ್ಯವನ್ನು ಕೊಳ್ಳೆಹೊಡೆದರು. ಕಾಲಾನುಕ್ರಮದಲ್ಲಿ ಗರಿಗಟ್ಟಿಕೊಂಡು ಸುಮಾರು ಪ್ರ.ಶ. 192ರಲ್ಲಿ ಸಿಯಾಂಗ್ ಲಿನ್ ವಾಸಿಯಾದ ಕ್ಯೂ ಲಿನ್ ಎಂಬಾತ ನಗರದ ಆಧಿಪತ್ಯವನ್ನು ವಹಿಸಿದ್ದ ಚೀನೀ ಅಧಿಕಾರಿಯನ್ನು ಕೊಂದು ತಾನೇ ರಾಜನೆಂದು ಸಾರಿದ. ಕ್ವೆಂಗ್ ನಾಮ್‌ಗೆ ಸಮೀಪವಾಗಿ ದಕ್ಷಿಣದಲ್ಲಿರುವ ಟ್ರಾಕ್ಯು ನಗರವನ್ನೇ ಚೀನೀಯರು ಸಿಯಾನ್ ಲಿನ್ ಎಂದೂ ಚಾಮರು ಚಂಪಾ ನಗರೀ ಚಂಪಾಪುರ ಹಾಗೂ ಚಂಪಾ ಎಂದೂ ಕರೆಯುತ್ತಿದ್ದರು. ಹೀಗೆ ಮೊದಲ ಬಾರಿಗೆ ಕ್ವ್ಯಾಂಗ್ ನಾಮ್ ಪ್ರದೇಶದಲ್ಲಿ ಚಾಮರು ತಮ್ಮ ರಾಜ್ಯವನ್ನೇ ಸ್ಥಾಪಿಸಿದರೆಂದು ತಿಳಿದುಬರುತ್ತದೆ. ಈ

ಪ್ರಾಂತ್ಯದಲ್ಲಿರುವ ಭವ್ಯ ಹಾಗೂ ಸುಂದರವಾದ ಮಿಸೋನ್ ಮತ್ತು ಡಾಂಗ್–ಡುಆಂಗ್ ದೇವಾಲಯಗಳ ಶ್ರೇಣಿಯೇ ಚಾಮರು ಸ್ಥಾಪಿಸಿದ ಚಂಪಾರಾಜ್ಯದ ಪ್ರತೀಕಗಳಾಗಿವೆ. ಭಾರತೀಯ ಸಂಪರ್ಕದಿಂದ ಉತ್ತೇಜಿತರಾಗಿ, ಚೀನೀ ಪ್ರಾಂತ್ಯಗಳಲ್ಲಿ ಜಯಶಾಲಿ ಆಕ್ರಮಣವನ್ನು ನಡೆಸಿ ಶಕ್ತಿಯುತವಾದ ರಾಜ್ಯವನ್ನು ಸ್ಥಾಪಿಸಿದ ಚಾಮರು ಪ್ರ.ಶ. 2ನೆಯ ಶತಮಾನದಲ್ಲೇ ಸತ್ತ್ವಶಾಲಿ ಜನಾಂಗವಾಗಿದ್ದರೆಂದು ವಿದಿತವಾಗುತ್ತದೆ. ಅಂದಿನಿಂದ ಪ್ರ.ಶ.15ನೆಯ ಶತಮಾನದವರೆಗೆ ಇವರು ದೇಶದ ರಾಜಕೀಯ ಚರಿತ್ರೆಯಲ್ಲಿ ಸ್ಪಷ್ಟವಾದ ತಮ್ಮದೇ ಆದ ಯಾವ ಪಾತ್ರವನ್ನೂ ವಹಿಸಿದಂತೆ ಕಾಣುವುದಿಲ್ಲ. ಇವರು ಭಾರತದ ಸಂಪ್ರದಾಯ, ರೀತಿನೀತಿ, ಭಾಷೆ ಹಾಗೂ ಮತೀಯ ಧರ್ಮಗಳನ್ನು ಪರಿಗ್ರಹಿಸಿ, ಭಾರತದ ಮೂಲಭೂತ ಅಂಶಗಳೊಡನೆ ಬೆರೆತು ತಮ್ಮ ಎರಡೂ ವರ್ಗಗಳೊಳಗೆ ಸಂಪೂರ್ಣ ಹಾಗೂ ಸಮಗ್ರವಾದ ಸಾಂಸ್ಕೃತಿಕ ಕೊಡುಕೊಳೆಯನ್ನು ಸಾಧಿಸಿದರು.

(ಎಸ್.ವಿ.ಎಸ್.ಬಿ.)

**ಚಾಮರಸ :** ಸು. 1430. ನಡುಗನ್ನಡದ ಶ್ರೇಷ್ಠಕಾವ್ಯ ಎಂದು ಪ್ರಸಿದ್ಧವಾಗಿರುವ ಪ್ರಭುಲಿಂಗಲೀಲೆಯ ಕರ್ತೃ. ವೀರಶೈವ ಕವಿ. ವಿಜಯನಗರದ ಪ್ರೌಢ ದೇವರಾಯನ ಕಾಲದ ನೂರೊಂದು ವಿರಕ್ತರಲ್ಲಿ ಗಣನೆಯಾಗಿದ್ದಾನೆ. ವೀರಶೈವಾಚಾರ ಮಾರ್ಗ ಸಾರೋದ್ಧಾರ, ಅನ್ಯಮತಕೋಳಾಹಳ ಎಂಬ ಬಿರುದುಗಳನ್ನು ಪಡೆದಿದ್ದ ಈತನ ಸ್ಥಳ ಗದಗು ಇಲ್ಲವೆ ನಾಗಣಾಪುರ ಎಂದು ಹೇಳಲಾಗಿದೆ.

ಹರಿಹರ ರಾಘವಾಂಕರ ತರುವಾಯ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಕಾವ್ಯ ಬರೆದವರಲ್ಲಿ ಚಾಮರಸ ಅಗ್ರಗಣ್ಯ. 25 ಗತಿಗಳು ಮತ್ತು 1111 ಪದ್ಯಗಳನ್ನು ಒಳಗೊಂಡಿರುವ ಪ್ರಭುಲಿಂಗಲೀಲೆ ಮಧ್ಯಮ ಗಾತ್ರದ ಕಾವ್ಯ. ಪ್ರಭುಲಿಂಗಲೀಲೆ, ಎಂದರೆ ಪ್ರಭುವೇ ಲಿಂಗಲೀಲೆಯಲ್ಲಿ ಮೆರೆದುದು ಎಂಬ ಭಾವ ಬರುವಂತೆ ಹೆಸರಿಸಿ, ಕಾವ್ಯದ ಉದ್ದಕ್ಕೂ ಅದೇ ರೀತಿ ಅಲ್ಲಮನ ಚರಿತ್ರೆಯನ್ನು ಕವಿ ಉಜ್ಜ್ವಲವಾಗಿ ಚಿತ್ರಿಸಿದ್ದಾನೆ. ಕವಿಯ ವಿಷಯವಾಗಿ ಹೆಚ್ಚಿನ ಯಾವ ಮಾಹಿತಿ ಸಿಗದಿದ್ದರೂ ಆತ ಚಿತ್ರಿಸಿರುವ ಅಲ್ಲಮನ ಚರಿತ್ರೆಯನ್ನೇ ಆಧರಿಸಿ ಊಹಿಸುವುದಾದರೆ ಚಾಮರಸನೂ ತನ್ನ ಕಥಾನಾಯಕನಂತೆ ವಿರಕ್ತನೂ ಸಂಯಮಿಯೂ ಸದಾಚಾರಸಂಪನ್ನನೂ ಆಗಿದ್ದನೆಂದು ಊಹಿಸಬಹುದಾಗಿದೆ.

12ನೆಯ ಶತಮಾನದಲ್ಲಿ ಮಾನವಕುಲದ ಉದ್ಧಾರಕ್ಕಾಗಿ ನಡೆದ ಶಿವಶರಣರ ಕ್ರಾಂತಿಯಲ್ಲಿ ಅಲ್ಲಮಪ್ರಭು ಜ್ಞಾನನಿಧಿಯಾಗಿ ವೈರಾಗ್ಯಮೂರ್ತಿಯಾಗಿ ಕಂಗೊಳಿಸಿದ್ದಾನೆ. ಅಂಧಾಭಿಮಾನಕ್ಕೆ ಒಳಗಾಗದೆ ಸಾಧಕರ ಲೋಪದೋಷಗಳ ಮೇಲೆ ಜ್ಞಾನದ ಬೆಳಕನ್ನು ಬೀರಿ ಅವರನ್ನು ಒರೆದು, ಕೆಡೆನುಡಿದು, ದಾರಿ ತೋರಿ ಸಮಸ್ತಜಾತಿಯ ಜಾಲವನ್ನು ಸರ್ವವನು ಕರುಣಿಸಿ, ಉದ್ಧರಿಸುತ್ತ ಸಾಗಿದ ಈ ಮಹಾತ್ಮನ ದಿವ್ಯ ವ್ಯಕ್ತಿತ್ವವನ್ನು ಈ ಕಾವ್ಯ ಅಪೂರ್ವವಾದ ರೀತಿಯಲ್ಲಿ ಚಿತ್ರಿಸುತ್ತದೆ. ಅಲ್ಲಮಪ್ರಭುವಿನ ಚರಿತ್ರೆಯನ್ನು ಮೊಟ್ಟಮೊದಲು ಬರೆದ ಹರಿಹರ ತನ್ನ ಪ್ರಭುದೇವರ ರಗಳೆಯಲ್ಲಿ ಅಲ್ಲಮ ಕಾಮಲತೆಗೆ ಮರುಳಾಗಿ ವಿರಹದಿಂದ ಬೆಂದು ವೈರಾಗ್ಯ ಪಡೆದಂತೆ ಚಿತ್ರಿಸಿದ್ದರೆ 'ಲಲಿತನಿರ್ಮಲ ಚಂದ್ರಕಾಂತದ ಶಿಲೆಯ ಹತ್ತಿರ ಲತೆಯ ದಾವಾನಳನು ಕೊಳಲಾಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ ತಿಳಿಯದಜೆಯದ ಜನಕೆ ಮಾಯೆಯ ತಳಿತ ಕಾಮಜ್ವಾಲೆಯಲ್ಲಮನೊಳಗೆ ಪ್ರತಿಬಿಂಬಿಸಿದುದಾತನೆ ಕಾಮಿಯೆಂಬಂತೆ'–ಎಂದು ಚಾಮರಸ ಅಲ್ಲಮನ ಗುರುಗುಹೇಶ್ವರ ಸ್ವರೂಪದ ದರ್ಶನ ಮಾಡಿಸಿದ್ದಾನೆ. ತನ್ನ ಕಾವ್ಯ 'ಸತ್ತವರ ಕಥೆಯಲ್ಲ ಜನನದ ಕುತ್ತದಲ್ಲಿ ಕುದಿ ಕುದಿದು ಕರ್ಮದ ಕತ್ತಲೆಗೆ ಸಿಲುಕುವರ ಸೀಮೆಯ ಮಾತು ತಾನಲ್ಲ' ಎಂದು ಘೋಷಿಸಿ 'ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು' ಎಂದಿರುವುದು ಕವಿಯ ಉದ್ದೇಶಕ್ಕೆ ಸಾಕ್ಷಿ.

'ಮಲಯಜದ ಮರ ಗಾಳಿ ಸೋಂಕಿನಲುಳಿದ ಮರ ಪರಿಮಳಿಸುವಂತೆ' ಅಲ್ಲಮನ ದಿವ್ಯ ಸಂಪರ್ಕದಿಂದ ಬಸವಣ್ಣ, ಸಿದ್ಧರಾಮ, ಗೊಗ್ಗಯ್ಯ, ಗೋರಕ್ಷ, ಮಾಯಾದೇವಿ, ಮಹಾದೇವಿಯಕ್ಕ, ಮುಕ್ತಾಯಕ್ಕ ಮೊದಲಾದವರು ಕಣ್ಗೆಸೆದರೂ ಆಯಾ ಪಾತ್ರವ್ಯಕ್ತಿಗಳು ತಮ್ಮ ಸತ್ತ್ವದಿಂದಲೇ ಬೆಳೆದು, ತಂತಮ್ಮ ನೆಲೆಯಲ್ಲಿ ನಿಂತು ಅಲ್ಲಮನ ಪಾದಕ್ಕೆ ಬಾಗಿ ಹೂ ಬಿಟ್ಟಿವೆ. ಒಂದು ದೃಷ್ಟಿಯಿಂದ ಪಾರ್ವತಿಯ ತಾಮಸಕಳೆಯಾಗಿ ಬಂದ ಮಾಯೆ ಅವಳಿಗೆ ತಿಳಿವನ್ನು ಕೊಟ್ಟ ವಿಮಳೆ, ಸಾತ್ತ್ವಿಕ ಕಳೆಯಾಗಿ ಬಂದ ಅಕ್ಕಮಹಾದೇವಿ, ಸುಜ್ಞಾನಿ ನಿರಹಂಕಾರರ ಮಗನಾಗಿ ಹುಟ್ಟಿದ ಅಲ್ಲಮ–ಈ ಮುಂತಾದ ಕಥಾರಚನೆಯಲ್ಲಿ ಆಧ್ಯಾತ್ಮಿಕವಾದ ಸಾಂಕೇತಿಕ ಧ್ವನಿಯ ಏಕತೆ ಕಾಣುತ್ತದೆ. 'ಶಿವನ ನಟ ನಾಟಕದ ಮಹಿಮೆ'ಯನ್ನು ತೆರೆದು ತೋರಿಸುವ ಈ ಕಾವ್ಯದಲ್ಲಿ ಎಲ್ಲ ಪಾತ್ರಗಳೂ ಜೀವಕಳೆಯಿಂದ ಕೂಡಿ ಶಿವಕಳೆಯನ್ನು ಬೆಳಗುತ್ತವೆ.

ತಿಳಿಗನ್ನಡದ ತುಂಬಿದ ತೊರೆಯಂತೆ ನಿರರ್ಗಳವಾಗಿ ಹರಿಯುವ ಚಾಮರಸನ ಭಾಮಿನೀ ಷಟ್ಪದಿಯ ಶೈಲಿಯನ್ನು ಕುಮಾರವ್ಯಾಸನೊಡನೆ ಹೋಲಿಸಬಹುದಾದರೂ ಇವನ ಭಾಷೆ ನಯಗಾರಿಕೆಯಿಂದ ಕೂಡಿದೆ. ಆ ಕಾಲದ ಶಿವಶರಣರ ವಚನಗಳನ್ನು ಕವಿ ಚೆನ್ನಾಗಿ ಅಭ್ಯಾಸಮಾಡಿದ್ದ ಎಂಬುದಕ್ಕೆ ಇವನ ವಾಣಿ ಸಾಕ್ಷಿ ಹೇಳುತ್ತದೆ. ಭಾವ ಭಾಷೆಗಳಲ್ಲಿನ ಅಪೂರ್ವವಾದ ಹೊಂದಾಣಿಕೆಯಿಂದಲೂ ಉಜ್ಜ್ವಲವಾದ ಉಪಮೆ ರೂಪಕ ದೃಷ್ಟಾಂತಗಳಿಂದಲೂ ಸಮಯೋಚಿತವಾದ ವರ್ಣನೆ ಮತ್ತು ದೇಶೀಯ ಬೆಡಗಿನ ಪರಿಣಾಮದ ಉತ್ಕಟತೆಯಿಂದಲೂ ಇವನ ಶೈಲಿ ಇವನ ಸ್ವತಂತ್ರ ಕವಿತಾಮಾರ್ಗದ ಮುಖಬಿಂಬದಂತಿದೆ.

ಚಾಮರಸನ ಪ್ರಭುಲಿಂಗಲೀಲೆ ಸಂಸ್ಕೃತ, ತಮಿಳು, ತೆಲುಗು ಹಾಗೂ ಮರಾಠೀ ಭಾಷೆಗಳಿಗೆ ಪರಿವರ್ತನ ಹೊಂದಿ ಕೀರ್ತಿ ಪಡೆದ ಏಕಮಾತ್ರ ಕನ್ನಡ ಕಾವ್ಯವಾಗಿದೆ.

(ಸಿ.ಕೆ.ಎ.)

**ಚಾಮರಾಜ ಒಡೆಯರು :** ಮೈಸೂರು ಸಂಸ್ಥಾನವನ್ನು ಆಳಿದ ಚಾಮರಾಜ ಎಂಬ ಹೆಸರಿನ ಮೈಸೂರಿನ ಒಡೆಯರ ಸಂತತಿಯ ಹತ್ತು ಬೇರೆ ಬೇರೆ ರಾಜರಿದ್ದಾರೆ. ಈ ಸಂತತಿಯ ದೊರೆಗಳ ಆಳ್ವಿಕೆಯ ಪ್ರಾರಂಭದ ಒಂದೆರಡು ಶತಮಾನಗಳ ಕಾಲದಲ್ಲಿದ್ದ ಈ ಹೆಸರಿನ ರಾಜರಿಗೆ ಸಂಬಂಧಿಸಿದ ಸಂಗತಿಗಳು ಬಹಳ ಕಡಿಮೆ ಮತ್ತು ಅಸ್ಪಷ್ಟ. ಒಂದನೆಯ ಚಾಮರಾಜ ಈ ಸಂತತಿಯ ಎರಡನೆಯ ರಾಜ. ಒಂದನೆಯ ಚಾಮರಾಜನನ್ನು ಹಿರೇ ಬೆಟ್ಟದ ಚಾಮರಾಜ ಎಂದು ಕರೆಯಲಾಗಿದೆ. ಒಡೆಯರ ವಂಶಾವಳಿಗೆ ಸಂಬಂಧಿಸಿದಂತೆ ಅರಮನೆಯಲ್ಲಿ ದೊರೆಯುವ ಆಧಾರಗಳ ಪ್ರಕಾರ ಹಿರೇ ಬೆಟ್ಟದ ಚಾಮರಾಜ ಯದುರಾಯನ ತರುವಾಯ 1423–58ರ ವರೆಗೆ ಆಳಿದ. ಈ ವಂಶದ ಮೂಲಪುರುಷರಾದ ಯದುರಾಯ ಮತ್ತು ಕೃಷ್ಣರಾಯ ಎಂಬ ಕ್ಷತ್ರಿಯ ಸಹೋದರರು ಯಾದವ ವಂಶದವರೆಂದೂ ಅವರು ದ್ವಾರಕೆಯಿಂದ ಬಂದು ಇಲ್ಲಿ ರಾಜ್ಯ ಸ್ಥಾಪಿಸಿದರೆಂದೂ ಐತಿಹ್ಯವಿದೆ. ಯದುರಾಯ ಅಥವಾ ವಿಜಯನ ಅನಂತರ ಆಳಿದ ಹಿರೇ ಬೆಟ್ಟದ ಚಾಮರಾಜ (1ನೆಯ ಚಾಮರಾಜ) ಹಿರೇ ಚಾಮರಾಜ ಅಥವಾ ಆರುಬೆರಳು ಚಾಮರಾಜ (2ನೆಯ ಚಾಮರಾಜ 1478–1513) ಮತ್ತು ಬೆಟ್ಟದ ಚಾಮರಾಜ (3ನೆಯ ಚಾಮರಾಜ, 1513–52) ಇವರ ಆಳ್ವಿಕೆಗೆ ಸಂಬಂಧಿಸಿದ ಸಂಗತಿಗಳು ತಿಳಿದುಬರುವುದಿಲ್ಲ. ಬೆಟ್ಟದ ಚಾಮರಾಜನಿಗೆ ತಿಮ್ಮರಾಜ, ಕೃಷ್ಣರಾಜ ಮತ್ತು ಬೋಳ ಚಾಮರಾಜ ಎಂಬ ಮೂವರು ಮಕ್ಕಳಿದ್ದರು. ಬೆಟ್ಟದ ಚಾಮರಾಜ ತನ್ನ ಮೂವರು ಮಕ್ಕಳಿಗೂ ರಾಜ್ಯವನ್ನು ಸಮನಾಗಿ ಹಂಚಿದ್ದ. ಮೈಸೂರು ಪ್ರದೇಶವನ್ನು ಕಿರಿಯನಾದ ಬೋಳ ಚಾಮರಾಜನಿಗೆ ಕೊಡಲಾಗಿತ್ತು. ತಿಮ್ಮರಾಜ ಮತ್ತು ಕೃಷ್ಣರಾಜರಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವರ ಮರಣಾನಂತರ ಅವರ ಆಳ್ವಿಕೆಗೊಳಪಟ್ಟಿದ್ದ ಹೆಮ್ಮನಹಳ್ಳಿ ಮತ್ತು ಕೆಂಬಾಲ ಪ್ರದೇಶಗಳೂ ಬೋಳ ಚಾಮರಾಜನಿಗೇ ಸೇರಿದುವು.

ಹಿರಿಯ ಚಾಮರಾಜ ಒಡೆಯರ್ II

**ಚಾಮರಾಜ IV :** ನಾಲ್ಕನೆಯ ಚಾಮರಾಜ ಅಥವಾ ಬೋಳ ಚಾಮರಾಜ 1571 ರಿಂದ 1576ರವರೆಗೆ ಆಳಿದನೆಂದು ತಿಳಿದುಬರುತ್ತದೆ. 1565ರ ತಾಳಿಕೋಟೆ ಕದನಾನಂತರ ಸಾಮಂತರ ಮೇಲೆ ವಿಜಯನಗರ ಸಾಮ್ರಾಜ್ಯದ ಪರಮಾಧಿಕಾರ ಸಡಿಲಗೊಂಡಿತು. ಆ ಸಂದರ್ಭದಲ್ಲಿ ಬೋಳ ಚಾಮರಾಜ ವರ್ಷಂಪ್ರತಿ ವಿಜಯನಗರಕ್ಕೆ ಕೊಡಲಾಗುತ್ತಿದ್ದ ಪೊಗದಿಯನ್ನು ನಿಲ್ಲಿಸಿದ. ಕಾಡುಪ್ರಾಣಿಗಳಿಂದ ತನ್ನ ರಾಜ್ಯದ ಬೆಳೆ ಹಾಳಾಗುತ್ತಿದೆಯೆಂಬ ನೆಪವೊಡ್ಡಿ ಆಯಕಟ್ಟಿನ ಗಡಿಪ್ರದೇಶದಲ್ಲಿ ಕೋಟೆ ಕಂದಕಗಳನ್ನು ನಿರ್ಮಿಸಿದ. ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ಅನಂತರ ಪೊಗದಿಯನ್ನು ಪಡೆಯಲು ಬಂದಿದ್ದ ವಿಜಯನಗರದ ಅಧಿಕಾರಿಗಳನ್ನು ಬೆದರಿಸಿ ಓಡಿಸಿದ. ಇದರಿಂದ ವಿಜಯನಗರದ ರಾಜಪ್ರತಿನಿಧಿ ಕೆರಳಿ ಚಾಮರಾಜನನ್ನು ಶಿಕ್ಷಿಸಲು ಹಂಚಿಕೆ ಹೂಡಿದ. ಒಮ್ಮೆ ಚಾಮರಾಜ ಶ್ರೀರಂಗಪಟ್ಟಣದ ರಂಗನಾಥ ದೇವಾಲಯದಲ್ಲಿ ಕೈಂಕರ್ಯದಲ್ಲಿ ತೊಡಗಿದ್ದಾಗ ವಿಜಯನಗರದ ಅಧಿಕಾರಿ ಅವನನ್ನು ಹಿಡಿಯಲು ಸಂಚು ನಡೆಸಿದ್ದ ಸುಳಿವನ್ನು ತಿಳಿದ ಚಾಮರಾಜ ಅಲ್ಲಿಂದ ತಪ್ಪಿಸಿಕೊಂಡದ್ದಲ್ಲದೆ ಪೊಗದಿಯನ್ನು ಕೊಡಲು ನಿರಾಕರಿಸಿದ.

**ಚಾಮರಾಜ V :** ಬೆಟ್ಟದ ಚಾಮರಾಜ. ಬೋಳ ಚಾಮರಾಜನ ಎರಡನೆಯ ಮಗ. ಅವನ ಮರಣಾನಂತರ ರಾಜನಾಗಿ 1576 ರಿಂದ 78ರವರೆಗೆ ಆಳಿದ. 5ನೆಯ ಚಾಮರಾಜ ಪರಾಕ್ರಮಿಯಾಗಿದ್ದರೂ ಆಡಳಿತಚತುರನಾಗಿರಲಿಲ್ಲ. ಆದರೆ ಹಿರಿಯನನ್ನು ಬಿಟ್ಟು ಕಿರಿಯನಾದ ಐದನೆಯ ಚಾಮರಾಜ ಸಿಂಹಾಸನಕ್ಕೆ ಬಂದದ್ದಕ್ಕೆ ಕಾರಣವೇನೆಂಬುದು ತಿಳಿದುಬರುವುದಿಲ್ಲ. ಈ ಕಾರಣದಿಂದಲೇ ಇವನ ಆಳ್ವಿಕೆ ಶೀಘ್ರವಾಗಿ ಕೊನೆಗೊಂಡಿರಬಹುದು. ಇವನ ಅಣ್ಣನೂ ಒಡೆಯರ ಸಂತತಿಯ ಪ್ರಸಿದ್ಧ ಪ್ರಭುಗಳಲ್ಲೊಬ್ಬನೂ ಆದ ರಾಜ ಒಡೆಯರ್ ಸಿಂಹಾಸನಕ್ಕೆ ಬಂದ.

**ಚಾಮರಾಜ ಒಡೆಯರ್ VI :** ಆಳ್ವಿಕೆ 1617–1637. ಶ್ರೀರಂಗಪಟ್ಟಣವನ್ನೂ ಅನೇಕ ಪಾಳೆಯಗಾರರನ್ನೂ ಸೋಲಿಸಿ, ಮೈಸೂರು ರಾಜ್ಯವನ್ನು ವಿಸ್ತರಿಸಿ ಆಡಳಿತಕ್ಕೆ ಒಂದು ವಿಶಿಷ್ಟ ರೂಪ ಕೊಟ್ಟು ಧರ್ಮ, ಕಲೆ ಮತ್ತು ಸಾಹಿತ್ಯವನ್ನು ಪೋಷಿಸಿ ಪ್ರಸಿದ್ಧನಾದ ರಾಜ ಒಡೆಯರ ಮೊಮ್ಮಗ. 6ನೆಯ ಚಾಮರಾಜ ತನ್ನ ತಾತನ ಮೇಲ್ಪಂಕ್ತಿಯನ್ನನುಸರಿಸಿ ರಾಜ್ಯವನ್ನು ವಿಸ್ತರಿಸಿದ. ಅವನು ಚನ್ನಪಟ್ಟಣವನ್ನು ವಶಪಡಿಸಿಕೊಂಡದ್ದಲ್ಲದೆ ಜಗದೇವರಾಯನನ್ನು ಸೋಲಿಸಿ ಅವನ ಪ್ರದೇಶಗಳನ್ನೆಲ್ಲ ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಧರ್ಮ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ. ಜೈನಮತಕೇಂದ್ರವಾದ ಶ್ರವಣಬೆಳಗೊಳವನ್ನು ಸಂದರ್ಶಿಸಿ, ಅಲ್ಲಿಯ ಪ್ರಸಿದ್ಧ ಜೈನ ದೇವಾಲಯದ ಆರಾಧನೆ ಸೂಕ್ತವಾಗಿ ಮುಂದುವರಿಯಲು ಅನೇಕ ದಾನದತ್ತಿಗಳನ್ನು ನೀಡಿದ. ಇವನು 1637ರಲ್ಲಿ ಮರಣ ಹೊಂದಿದ. (ಜಿ.ಆರ್.ಆರ್.)

**ಚಾಮರಾಜ ರಚಿಸಿದ ಗ್ರಂಥಗಳು ಎರಡು :** 1 ವಾಲ್ಮೀಕಿ ರಾಮಾಯಣ ಟೀಕೆ, 2 ಬ್ರಹ್ಮೋತ್ತರ ಖಂಡ ಟೀಕೆ. ವಾಲ್ಮೀಕಿ ರಾಮಾಯಣ ಟೀಕೆಯನ್ನು ಚಾಮರಾಜೋಕ್ತಿವಿಲಾಸ ಎಂದೂ ಕರೆಯಲಾಗಿದೆ. ಇದು ಕನ್ನಡದಲ್ಲಿ ಮೂಲ ರಾಮಾಯಣವನ್ನನುಸರಿಸಿ ರಚಿತವಾದ ಪ್ರಥಮ ಗದ್ಯಕೃತಿ. ಗ್ರಂಥದ ಆದಿಯಲ್ಲಿಯೇ ಬರುವ ಒಂದು ಶ್ಲೋಕದಿಂದ ವಿರೂಪಾಕ್ಷನೆಂಬ ಪಂಡಿತ ಇದನ್ನು ರಚಿಸಿದನೆಂಬ ಅಭಿಪ್ರಾಯ ಬರುತ್ತದೆ. ಈತನ ಎರಡನೆಯ ಗ್ರಂಥ ಸ್ಕಾಂದ ಪುರಾಣದ ಬ್ರಹ್ಮೋತ್ತರಖಂಡಕ್ಕೆ ಬರೆದ ಕನ್ನಡ ವ್ಯಾಖ್ಯಾನ. ಇದರಲ್ಲಿ 22 ಅಧ್ಯಾಯಗಳಿವೆ. ಮಣಿಪ್ರಕಾಶ ಎಂದೂ ಈ ಗ್ರಂಥವನ್ನು ಕರೆಯಲಾಗಿದೆ.

ಸ್ವತಃ ಗ್ರಂಥ ರಚಿಸಿದನಲ್ಲದೆ ಚಾಮರಾಜ ಇತರರಿಗೂ ಪ್ರೋತ್ಸಾಹವಿತ್ತು ಶಾಸ್ತ್ರಗ್ರಂಥಗಳನ್ನು ಬರೆಯಿಸಿದ. ಈತನ ಆಶ್ರಯದಲ್ಲಿಯೇ ರಾಮಚಂದ್ರನೆಂಬ ವಿದ್ವಾಂಸ ಅಶ್ವಶಾಸ್ತ್ರವನ್ನೂ ಪದ್ಮಣಪಂಡಿತ ಹಯಸಾರಸಮುಚ್ಚಯ ಎಂಬ ಪದ್ಯಗ್ರಂಥವನ್ನೂ ರಚಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಟೀಕೆ ಗದ್ಯರೂಪದ ವ್ಯಾಖ್ಯಾನಗಳು ಬರಲು ಚಾಮರಾಜನಿಂದ ದೊರೆತ ಪ್ರೋತ್ಸಾಹ ಮುಂದಿನ ವ್ಯಾಖ್ಯಾನ ಗ್ರಂಥಗಳಿಗೆ ನಾಂದಿಯಾಯಿತು. **(ನೋಡಿ– ಒಡೆಯರ–ಕಾಲದ–ಕನ್ನಡ–ಸಾಹಿತ್ಯ)** (ಎಂ.ಆರ್.ಕೆ.)

**ಚಾಮರಾಜ ಒಡೆಯರ್ VII :** (ಆಳ್ವಿಕೆ 1731–34). ದೊಡ್ಡ ಕೃಷ್ಣರಾಜನ ದತ್ತು ಪುತ್ರ. ಮೂಕರಸು ಅಥವಾ ಇಮ್ಮಡಿ ಕಂಠೀರವ ನರಸರಾಜ ಮತ್ತು ಅವನ ಅನಂತರ ಆಳಿದ ದೊಡ್ಡ ಕೃಷ್ಣರಾಜ ಒಡೆಯರ್ ಇವರು ದುರ್ಬಲರಾಗಿದ್ದರಿಂದ ದಳವಾಯಿಗಳು ಪ್ರಬಲರಾಗುತ್ತ ಬಂದರು. ದೊಡ್ಡ ಕೃಷ್ಣರಾಜನಿಗೆ ಮಕ್ಕಳಿರಲಿಲ್ಲವಾದ್ದರಿಂದ ತನ್ನ ಬಂಧುವರ್ಗದ ಚಾಮರಾಜನನ್ನು ದತ್ತುವಾಗಿ ತೆಗೆದುಕೊಂಡ. ಇಮ್ಮಡಿ ಕಂಠೀರವನ ಅನಂತರ ಚಾಮರಾಜ ಪಟ್ಟಕ್ಕೆ ಬಂದ. 7ನೆಯ ಚಾಮರಾಜನ ಆಳ್ವಿಕೆಯಲ್ಲಿ ದಳವಾಯಿಗಳ ಪ್ರಾಬಲ್ಯ ಉನ್ನತಿಗೇರಿ, ನೆಪಮಾತ್ರಕ್ಕೆ ರಾಜನ ಆಳ್ವಿಕೆ ಉಳಿಯಿತು. ದೇವರಾಜಯ್ಯ ಮತ್ತು ಅವನ ಸಂಬಂಧಿ ನಂಜರಾಜಯ್ಯ ಎಂಬ ದಳವಾಯಿಗಳು ಆಡಳಿತ, ಆರ್ಥಿಕ ವ್ಯವಹಾರ ಮತ್ತು ಸೈನ್ಯದ ಮೇಲೆ ತಮ್ಮ ಬಲವಾದ ಹತೋಟಿ ಸ್ಥಾಪಿಸಿದರು. 7ನೆಯ ಚಾಮರಾಜ ದಳವಾಯಿಗಳ ಪ್ರಾಬಲ್ಯವನ್ನು ಮುರಿಯಲು ಯತ್ನಿಸಿದನಾದರೂ ಅವರನ್ನು ಹಿಡಿದು ಶಿಕ್ಷಿಸುವ ಅವಕಾಶ ಲಭಿಸಿದ್ದಾಗ ಉದಾರತೆಯಿಂದ ಅವರನ್ನು ಬಿಟ್ಟುಬಿಟ್ಟ. ಅಧಿಕಾರಚ್ಯುತರಾದ ದಳವಾಯಿಗಳು ರಾಜನ ಮೇಲೆ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದರು. ಈ ಮಧ್ಯೆ ಚಾಮರಾಜ ಹಲವು ಸುಧಾರಣೆಗಳನ್ನು ಜಾರಿಗೆ ತಂದ. ಈ ಸುಧಾರಣೆಗಳಿಂದ ಗೊಂದಲ ಪರಿಸ್ಥಿತಿಯುಂಟಾಯಿತು. ಆ ಸಂದರ್ಭವನ್ನು ಉಪಯೋಗಿಸಿಕೊಂಡು ದಳವಾಯಿಗಳು ಪುನಃ ಪ್ರಬಲರಾದರು. ಸೇಡಿನ ಮನೋಭಾವದಿಂದ ದಳವಾಯಿಗಳು 7ನೆಯ ಚಾಮರಾಜನನ್ನೂ ರಾಣಿಯನ್ನೂ ಅವರ ಆಪ್ತರನ್ನೂ ಬಂಧಿಸಿ ಕಬ್ಬಾಳದುರ್ಗದಲ್ಲಿ ಬಂಧನದಲ್ಲಿಟ್ಟರು. ಅವನು ಅನಾರೋಗ್ಯಕ್ಕೆ ತುತ್ತಾಗಿ ಸ್ವಲ್ಪಕಾಲದಲ್ಲೇ ತೀರಿಕೊಂಡ.

**ಚಾಮರಾಜ VIII :** (ಆಳ್ವಿಕೆ 1770–76). ಇವನಿಗೆ ಬೆಟ್ಟದ ಚಾಮರಾಜನೆಂದು ಹೆಸರು. ನಂಜರಾಜನ ತರುವಾಯ ಪಟ್ಟಕ್ಕೆ ಬಂದ. ಹೈದರ್ ಅತ್ಯಂತ ಪ್ರಬಲನಾಗಿ ಅಧಿಕಾರವನ್ನೆಲ್ಲ ತಾನೇ ವಹಿಸಿಕೊಂಡು ನೆಪಮಾತ್ರಕ್ಕೆ ಚಾಮರಾಜನನ್ನು ಸಿಂಹಾಸನದ ಮೇಲೆ ಕೂಡಿಸಿದ್ದ.

**ಚಾಮರಾಜ IX :** ಎಂಟನೆಯ ಚಾಮರಾಜನ ಉತ್ತರಾಧಿಕಾರಿ. ಎಂಟನೆಯ ಚಾಮರಾಜನಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವನ ಸಂಬಂಧಿಯೂ ಕಾರುಗಳ್ಳಿಯ ಕುಟುಂಬವೊಂದರ ಬಾಲಕನೂ ಆದ ಈತನನ್ನು 1776ರಲ್ಲಿ ಹೈದರ್ ಸಿಂಹಾಸನದ ಮೇಲೆ ಕೂರಿಸಿ ತನ್ನ ಆಡಳಿತವನ್ನು ಮುಂದುವರಿಸಿದ. ಹೈದರನ ಪ್ರಾಬಲ್ಯವನ್ನು ಕೊನೆಗಾಣಿಸಿ ರಾಜಮನೆತನದ ಆಡಳಿತವನ್ನು ಪುನಃ ಸ್ಥಾಪಿಸಲು ಯತ್ನಗಳು ನಡೆದುವಾದರೂ ಫಲಪ್ರದವಾಗಲಿಲ್ಲ. 9ನೆಯ ಚಾಮರಾಜ 1796ರಲ್ಲಿ ಮರಣ ಹೊಂದಿದ. ಅವನ ಕುಟುಂಬದವರನ್ನು ಟಿಪ್ಪುಸುಲ್ತಾನ ಗೃಹಬಂಧನದಲ್ಲಿಟ್ಟ.

**ಚಾಮರಾಜ ಒಡೆಯರ್ X :** ಆಳ್ವಿಕೆ 1881–1894. ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತು ಪುತ್ರ. 1831ರಲ್ಲಿ ಮೈಸೂರು ಸಂಸ್ಥಾನವನ್ನು ಬ್ರಿಟಿಷ್ ಸರ್ಕಾರ ಕಮೀಷನರ ಆಳ್ವಿಕೆಗೆ ವಹಿಸಿಕೊಟ್ಟಿತ್ತು. ಆಡಳಿತವನ್ನು ಒಡೆಯರ ಮನೆತನಕ್ಕೆ ಮತ್ತೆ ವಹಿಸಿಕೊಡಬೇಕೆಂದು ಕೃಷ್ಣರಾಜ ಒಡೆಯರು ಬ್ರಿಟಿಷ್ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸುತ್ತ ಬಂದರು. ಬ್ರಿಟಿಷ್ ಸರ್ಕಾರ ಕೊನೆಗೆ ರಾಜ್ಯವನ್ನು ದೇಶೀಯ ರಾಜರ ಆಳ್ವಿಕೆಗೆ ಒಪ್ಪಿಸಲು ತೀರ್ಮಾನಿಸಿತು. ಬಾಲಕರಾಗಿದ್ದ ಚಾಮರಾಜ ಒಡೆಯರು ಪ್ರಾಪ್ತ ವಯಸ್ಸಿಗೆ ಬಂದ ಕೂಡಲೇ ಅಧಿಕಾರವನ್ನು ಅವರಿಗೆ ವಹಿಸಿಕೊಡುವುದೆಂದೂ ನಿಗದಿಯಾಯಿತು. ಕೃಷ್ಣರಾಜ ಒಡೆಯರ್ 186ರಲ್ಲಿ ಮರಣ ಹೊಂದಿದರು. ಚಾಮರಾಜ ಒಡೆಯರ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಲಾಯಿತು. 1881ರ ಮಾರ್ಚ್ 25ರಂದು ಹದಿನೆಂಟು ವರ್ಷ ತುಂಬಿದ ಚಾಮರಾಜ, ಚಾಮರಾಜೇಂದ್ರ ಒಡೆಯರ್ ಎಂಬ ಹೆಸರಿನಿಂದ ಸಿಂಹಾಸನಾರೋಹಣ ಮಾಡಿ ಅಧಿಕಾರ ವಹಿಸಿಕೊಂಡರು. ಗಾರ್ಡನ್ ಬ್ರಿಟಿಷ್ ರೆಸಿಡೆಂಟಾಗಿಯೂ ಸಿ. ರಂಗಾಚಾರ್ಲು ದಿವಾನ್ ಆಗಿಯೂ ನೇಮಕವಾದರು.

ಚಾಮರಾಜ ಒಡೆಯರ್, ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆಯಲ್ಲಿರುವ ಒಂದು ಕೃತಿ

ಚಾಮರಾಜ ಒಡೆಯರು ಅಧಿಕಾರ ವಹಿಸಿಕೊಂಡ ಅನಂತರ ಬ್ರಿಟಿಷ್ ಸರ್ಕಾರ ಅದುವರೆಗೂ ತನ್ನ ವಶದಲ್ಲಿದ್ದ ಶ್ರೀರಂಗಪಟ್ಟಣವನ್ನು ಬಿಟ್ಟುಕೊಟ್ಟು ಬೆಂಗಳೂರಿನ ದಂಡು ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ದೂರದೃಷ್ಟಿಯ ಮಹಾರಾಜರು ಮತ್ತು ದಿವಾನ್ ರಂಗಾಚಾರ್ಲು ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಆಚರಣೆಗೆ ತಂದರು. ಭಾರತದ ದೇಶೀಯ ಸಂಸ್ಥಾನವೊಂದರಲ್ಲಿ ಪ್ರಪ್ರಥಮವಾಗಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ ಕೀರ್ತಿ ಚಾಮರಾಜೇಂದ್ರ ಒಡೆಯರಿಗೆ ಸಲ್ಲುತ್ತದೆ. 1883ರ ಅಕ್ಟೋಬರ್ ತಿಂಗಳಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಮೊಟ್ಟ ಮೊದಲ ಬಾರಿಗೆ ಸೇರಿತು. ಆ ಸಭೆ ಒಟ್ಟು 144 ಮಂದಿ ಸದಸ್ಯರಿಂದ ಕೂಡಿತ್ತು. ಪ್ರತಿವರ್ಷವೂ ದಸರಾ ಸಮಾರಂಭ ಕಾಲದಲ್ಲಿ ರಾಜ್ಯದ ಆಯವ್ಯಯವನ್ನು ಸಭೆಯ ಮುಂದೆ ಮಂಡಿಸಿ ಅದರ ಅಭಿಪ್ರಾಯವನ್ನು ಪಡೆಯುವ ಪದ್ಧತಿ ಜಾರಿಗೆ ಬಂದಿತು.

1883ರಲ್ಲಿ ಸಿ. ರಂಗಾಚಾರ್ಲು ಮರಣ ಹೊಂದಿದ್ದರಿಂದ ಕೆ. ಶೇಷಾದ್ರಿ ಅಯ್ಯರನ್ನು ದಿವಾನರಾಗಿ ನೇಮಿಸಲಾಯಿತು. ಚಾಮರಾಜ ಒಡೆಯರ ಪ್ರಜಾಹಿತದೃಷ್ಟಿ ಮತ್ತು ದಿವಾನರ ವಿವೇಕ ಹಾಗೂ ಜಾಣ್ಮೆಯಿಂದ ರಾಜ್ಯದಲ್ಲಿ ಪ್ರಗತಿಯುಂಟಾಯಿತು. ವಿದ್ಯಾಭ್ಯಾಸ, ಆರೋಗ್ಯ, ಅರಣ್ಯಸಂಪತ್ತು ಮೊದಲಾಗಿ ಎಲ್ಲ ಕ್ಷೇತ್ರಗಳಲ್ಲೂ ಪ್ರಗತಿಯುಂಟಾಗಿ ರಾಜ್ಯದ ಆದಾಯವೂ ಪ್ರಜೆಗಳ ನೆಮ್ಮದಿಯೂ ಇಮ್ಮಡಿಸಿದುವು. ಆಡಳಿತ ಹುದ್ದೆಗಳಿಗೆ ಪ್ರತಿಭಾವಂತರನ್ನು ಆರಿಸಲು ಸಿವಿಲ್ ಪರೀಕ್ಷೆಯನ್ನು ನಡೆಸುವ ಪದ್ಧತಿಯನ್ನು ಜಾರಿಗೆ ತರಲಾಯಿತು. 1892ರಲ್ಲಿ ಭಾರತದ ವೈಸ್‌ರಾಯ್ ಲಾರ್ಡ್ ಲ್ಯಾನ್ಸ್‌ಡೌನ್ ಮೈಸೂರಿಗೆ ಭೇಟಿ ನೀಡಿ, ಇಲ್ಲಿಯ ಪ್ರಗತಿಯನ್ನು ಕಂಡು ಸುಪ್ರೀತನಾಗಿ ಇಡೀ ಭಾರತದಲ್ಲಿ ಪ್ರಭುವಿಗೂ ಪ್ರಜೆಗಳಿಗೂ ಇಂಥ ಮಧುರಬಾಂಧವ್ಯ ಬೆಳೆದಿರುವುದೂ ಇಂಥ ಸರ್ಕಾರವೇರ್ಪಟ್ಟಿರುವುದೂ ಪ್ರಜಾಕ್ಷೇಮವೇ ಸರ್ಕಾರದ ಪರಮಾದರ್ಶವೆಂಬ ಘನತತ್ತ್ವ ಯಶಸ್ವಿಯಾಗಿರುವುದೂ ಮೈಸೂರಿನಲ್ಲಿ ಮಾತ್ರ ಎಂಬುದಾಗಿ ಪ್ರಶಂಸಿಸಿದ. ಚಾಮರಾಜ ಒಡೆಯರ್ 1894ರಲ್ಲಿ ಭಾರತದ ಪ್ರವಾಸ ಕೈಗೊಂಡು ಮುಂಬಯಿ, ಅಲಹಾಬಾದ್ ಮುಖಾಂತರ ಕಲ್ಕತ್ತ ನಗರವನ್ನು ತಲುಪಿ, ಅನಾರೋಗ್ಯದಿಂದಾಗಿ 1894 ನವೆಂಬರ್ 28ರಂದು ಅಲ್ಲಿ ಮರಣ ಹೊಂದಿದರು.

(ಜಿ.ಆರ್.ಆರ್.)

**ಚಾಮರಾಜನಗರ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಅವುಗಳ ಆಡಳಿತ ಕೇಂದ್ರ. 1997ರಲ್ಲಿ ಕರ್ನಾಟಕ ರಾಜ್ಯದ ಕೆಲವು ಜಿಲ್ಲೆಗಳನ್ನು ಮರುವಿಂಗಡಣೆ ಮಾಡಿದಾಗ ಮೈಸೂರು ಜಿಲ್ಲೆಯಿಂದ ನಾಲ್ಕು ತಾಲ್ಲೂಕುಗಳನ್ನು ಬೇರ್ಪಡಿಸಿ ಚಾಮರಾಜನಗರ ಜಿಲ್ಲೆಯನ್ನು ರಚಿಸಲಾಯಿತು. ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲ ಮತ್ತು ಯಳಂದೂರು– ಇವು ಈ ಜಿಲ್ಲೆಗೆ ಸೇರಿರುವ ತಾಲ್ಲೂಕುಗಳು. ರಾಜ್ಯದ ದಕ್ಷಿಣದ ತುತ್ತತುದಿಯಲ್ಲಿರುವ ಈ ಜಿಲ್ಲೆಯ ಉತ್ತರದಲ್ಲಿ ಮೈಸೂರು, ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳೂ ಪೂರ್ವ ಮತ್ತು ದಕ್ಷಿಣದಲ್ಲಿ ತಮಿಳುನಾಡು ರಾಜ್ಯ, ಪಶ್ಚಿಮಕ್ಕೆ ಕೇರಳ ರಾಜ್ಯಗಳೂ ಇವೆ. ಜಿಲ್ಲೆಯ ವಿಸ್ತೀರ್ಣ 5,685ಚ.ಕಿಮೀ. ಜನಸಂಖ್ಯೆ 9,64,775.



**ಭೂಲಕ್ಷಣ:** ದಕ್ಷಿಣ ಭಾರತ ಪ್ರಸ್ಥಭೂಮಿಯ ದಕ್ಷಿಣದ ತುದಿಯಲ್ಲಿರುವ ಜಿಲ್ಲೆ ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಕೂಡುವೆಡೆಯಲ್ಲಿದೆ. ನೀಲಗಿರಿ ಬೆಟ್ಟಗಳ ಕವಲುಗಳು ಇದರೊಳಕ್ಕೆ ಚಾಚಿವೆ. ಈ ಪ್ರದೇಶ ಸಮುದ್ರಮಟ್ಟಕ್ಕಿಂತ ಸರಾಸರಿ 800ಮೀ. ಎತ್ತರದಲ್ಲಿದೆ. ಜಿಲ್ಲೆಯ ಮೂರು ಕಡೆ ಹಬ್ಬಿರುವ ಬೆಟ್ಟಗಳಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಬೆಟ್ಟ (976 ಮೀ), ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನಬೆಟ್ಟ (1,279ಮೀ.), ಗುಂಡ್ಲುಪೇಟೆ ತಾಲ್ಲೂಕಿನ ಗೋಪಾಲಸ್ವಾಮಿಬೆಟ್ಟ (1,468ಮೀ.) ಇವು ಈ ಜಿಲ್ಲೆಯ ಹೆಗ್ಗುರುತುಗಳಾಗಿವೆ. ಇವಲ್ಲದೆ ಪುಣಜೂರು (1252.7ಮೀ.), ಮತ್‌ಪೋಡ್ (1515.5ಮೀ), ಹೊನ್ನನೆತ್ತಿಕಲ್ (1773.2ಮೀ.), ಕತ್ತರಿ (1816ಮೀ.), ಹೊನಬೆಟ್ಟ (1646ಮೀ.) ಬೆಟ್ಟಗಳಿವೆ.

ಮಹದೇಶ್ವರಬೆಟ್ಟ ಸಾಲಿನಲ್ಲಿ ಆನೆಮಲೆ, ಕಾಡುಮಲೆ, ಜೇನುಮಲೆ ಮೊದಲಾದ 77 ದಟ್ಟಡವಿಗಳಿವೆ. ಬಿಳಿಗಿರಿರಂಗನ ಬೆಟ್ಟದ ಸಾಲು ಬಂಡೀಪುರದವರೆಗೂ ನಿಬಿಡವಾಗಿ ಹಬ್ಬಿದೆ. ಇವು ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ದೊಡ್ಡ ಅಭೇದ್ಯ ಗೋಡೆಗಳಂತೆ ನಿಂತಿವೆ. ಕೇರಳದ ಗಡಿ ಪ್ರದೇಶ ಗುಂಡ್ಲುಪೇಟೆ ತಾಲ್ಲೂಕಿನ ಹಿಮವದ್ ಗೋಪಾಲಸ್ವಾಮಿಬೆಟ್ಟದ ಹತ್ತಿರ ಬರುತ್ತದೆ. ಈ ಇಡೀ ಅರಣ್ಯರಾಶಿಯ ನಡುವೆ ಅತ್ಯಂತ ಪ್ರಸಿದ್ಧವಾದ ಧಾರ್ಮಿಕ ಕ್ಷೇತ್ರಗಳಿರುವುದೊಂದು ವಿಶೇಷ. ಪಶ್ಚಿಮ ಘಟ್ಟಗಳ ಶ್ರೇಣಿಗೆ ಹೋಲಿಸಿದರೆ ಈ ಪ್ರದೇಶದಲ್ಲಿ ಬೀಳುವ ಮಳೆ ಕಡಿಮೆಯೇ. ಆದರೆ ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳ ಅಂಚಿನ ನೆಲಗಳನ್ನು ವಿಸ್ತಾರವಾದ ಅರಣ್ಯ ಆವರಿಸಿದೆ.

ಜಿಲ್ಲೆಯ ಉತ್ತರ ಮತ್ತು ಪೂರ್ವದಲ್ಲಿ ಬಯಲು ಪ್ರದೇಶವಿದೆ. ಕಪಿಲಾ ನದಿಯ ದಂಡೆಯ ಮೇಲೆ ವಿಸ್ತರಿಸಿರುವ ಈ ಭಾಗ ಹೆಚ್ಚಾಗಿ ಕೆಂಪುಮಣ್ಣಿನಿಂದ ಕೂಡಿದ್ದು, ಅಲ್ಲಲ್ಲಿ ಹೆಚ್ಚು ಎತ್ತರವಲ್ಲದ ಗುಡ್ಡಗಳು ಕಂಡುಬರುತ್ತವೆ.

**ಭೂವಿಜ್ಞಾನ:** ಈ ಜಿಲ್ಲೆ ದಕ್ಷಿಣ ಪ್ರಸ್ಥಭೂಮಿಯ ಅಂಚಿನಲ್ಲಿದ್ದರೂ ಪ್ರಸ್ಥಭೂಮಿ ಶಿಲಾರಚನೆಗಿಂತ ಸ್ವಲ್ಪ ಭಿನ್ನವಾಗಿದೆ. ಈ ಭಾಗದಲ್ಲಿ ಧಾರವಾಡ ಶಿಲಾ ರಚನೆ ಕಾಣದಿರುವುದೊಂದು ವಿಶೇಷ. ಇದರ ಬದಲು ಚಾರ್ನೊಕೈಟ್ ಶಿಲೆಗಳು ಕಂಡುಬರುತ್ತವೆ. ಅಲ್ಲಲ್ಲಿ ಹಾರ್ನ್‌ಬ್ಲೆಂಡ್, ಪೈರಾಕ್ಸೆನೈಟ್ ಮ್ಯಾಗ್ನೆಟೈಟ್ ಶಿಲೆಗಳ ಹೊಡೆಸಾಲುಗಳು ಹಬ್ಬಿವೆ. ತೆರಕಣಾಂಬಿಯಲ್ಲಿ ಮಣಿಶಿಲೆ ಇದೆ. ಅಲ್ಲಲ್ಲಿ ಬಂಡೆ ಶ್ರೇಣಿಗಳಲ್ಲಿ ಕಯನೈಟ್ ಮತ್ತು ಸಿಲಿಮನೈಟ್ ಖನಿಜಗಳಿವೆ. ಖನಿಜಸಂಪತ್ತಿನಲ್ಲಿ ಈ ಜಿಲ್ಲೆ ಸಂಪದ್ಭರಿತವಾಗಿದೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ತಾಮ್ರದ ನಿಕ್ಷೇಪವುಂಟು. ಗುಂಡ್ಲುಪೇಟೆ ಸುತ್ತಮುತ್ತ ಕುರಂಗದ ಕಲ್ಲಿದೆ. ಕೊಳ್ಳೇಗಾಲದಲ್ಲಿ ವಾಣಿಜ್ಯ ಪ್ರಮಾಣದಲ್ಲಲ್ಲದಿದ್ದರೂ ಅಲ್ಪ ಪ್ರಮಾಣದಲ್ಲಿ ಚಿನ್ನದ ಅದಿರು ಕಂಡುಬರುತ್ತದೆ. ಕೆಲವಡೆ ಕಬ್ಬಿಣದ ಅಂಶ ಗಣನೀಯವಾಗಿರುವ ಶಿಲೆಗಳುಂಟು. ಈ ಪ್ರದೇಶದಲ್ಲೇ ಮೆಗ್ನೀಷಿಯಂ ಲೋಹನಿಕ್ಷೇಪವೂ ಇದೆ. ಸುಣ್ಣಕಲ್ಲು ನಿಕ್ಷೇಪ ಮತ್ತು ಸಿಲಿಮನೈಟ್ ಖನಿಜಗಳು ಕೆಲವೆಡೆ ಉಂಟು. ಬಿಳಿಗಿರಿರಂಗನ ಬೆಟ್ಟ ಪ್ರದೇಶದಲ್ಲಿ ರೇಷ್ಮೆಯಂತೆ ಹೊಳಪಾದ ಊದಾಬಣ್ಣದ ಚಂದ್ರಶಿಲೆ ಇದೆ. ಕಟ್ಟಡಗಳ ಅಲಂಕಾರಕ್ಕಾಗಿ ಬಳಸಲು ಯೋಗ್ಯವಾದ ನಾನಾ ಬಗೆಯ ಗ್ರಾನೈಟ್ ಶಿಲೆಗಳು ಜಿಲ್ಲೆಯಲ್ಲಿವೆ. ಕಲ್ಲು ತೆಗೆಯುವುದು ಇಲ್ಲಿನ ಒಂದು ಪ್ರಮುಖ ಉದ್ಯಮ. ಅವುಗಳಲ್ಲಿ ಕೆಂಪು, ಹಸುರು ಮತ್ತು ಗುಲಾಬಿ ಬಣ್ಣದ ಈ ಶಿಲೆಗಳು ಜಪಾನ್ ಮೊದಲಾದ ದೇಶಗಳಿಗೆ ರಫ್ತಾಗುತ್ತವೆ. ಕೆಲವು ಗ್ರಾನೈಟ್ ಶಿಲೆಗಳಿಂದ ಜಪಮಣಿ, ಗುಂಡಿಗಳು, ಆಭರಣ ಹರಳುಗಳು, ಮಸಿಕುಡಿಕೆ, ಪಾತ್ರೆಗಳನ್ನು ತಯಾರಿಸುತ್ತಾರೆ.

**ನದಿಗಳು:** ಚಾಮರಾಜನಗರ ಜಿಲ್ಲೆಯಲ್ಲಿ ದೊಡ್ಡ ನದಿಗಳು ಹರಿಯುವುದಿಲ್ಲ. ಆದರೆ ಕಾವೇರಿಯ ಉಪನದಿಯಾದ ಕಪಿಲಾ ಅಥವಾ ಕಬಿನಿ ಈ ಜಿಲ್ಲೆಯ ಉತ್ತರ ಮತ್ತು ಪೂರ್ವ ಭಾಗದ ಸರಹದ್ದಿನಲ್ಲೇ ಹರಿಯುತ್ತವೆ. ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ಬಳಿ ಇದು ಕಾವೇರಿಯನ್ನು ಸೇರುತ್ತದೆ. ಮುಂದೆ ಕಾವೇರಿ ನದಿ ಸ್ವಲ್ಪ ದೂರ ಬೆಂಗಳೂರು ಮತ್ತು ಚಾಮರಾಜನಗರ ಜಿಲ್ಲೆಗಳ ಹಾಗೂ ತಮಿಳುನಾಡು ರಾಜ್ಯದ ಗಡಿಯಾಗಿ ಪರಿಣಮಿಸಿದೆ. ಕಪಿಲಾ ಮತ್ತು ಕಾವೇರಿ ನದಿಗಳನ್ನು ಸೇರುವ ಹಲವಾರು ಉಪನದಿಗಳು ಮತ್ತು ತೊರೆಗಳು ಈ ಜಿಲ್ಲೆಯ ಬೆಟ್ಟಗುಡ್ಡಗಳಲ್ಲಿ ಹುಟ್ಟಿ ಹರಿಯುತ್ತವೆ. ಗೋಪಾಲಸ್ವಾಮಿ ಬೆಟ್ಟದಲ್ಲಿ ಹುಟ್ಟುವ ಮಾವಿನಹಳ್ಳ ಮೈಸೂರು ಜಿಲ್ಲೆಯನ್ನು ಪ್ರವೇಶಿಸಿ ನುಗುಹೊಳೆಯನ್ನು ಸೇರುತ್ತದೆ. ಗುಂಡ್ಲುಹೊಳೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹುಟ್ಟಿ ನಂಜನಗೂಡು ಬಳಿ ಕಪಿಲಾ ನದಿಯನ್ನು ಕೂಡಿಕೊಳ್ಳುತ್ತದೆ.

ತಮಿಳುನಾಡಿನಿಂದ ಹರಿದುಬರುವ ಸುವರ್ಣಾವತಿ (ಹೊನ್ನುಹೊಳೆ), ಬಿಳಿಗಿರಿರಂಗನ ಬೆಟ್ಟದಿಂದ ಬರುವ ಗುಂಡಾಲ್ ಹೊಳೆ, ಹನೂರು ಸಮೀಪದ ಉಡುತೊರೆ ಹಳ್ಳ–ಇವು ಉತ್ತರಾಭಿಮುಖವಾಗಿ ಹರಿದರೆ ಮೋಯರ್ ಹಾಗೂ ಪಾಲಾರ್ ಈ ಜಿಲ್ಲೆ ಸರಹದ್ದಿನಲ್ಲಿ ಹರಿದು ಕಾವೇರಿಯನ್ನು ಸೇರುತ್ತವೆ. ಸುವರ್ಣಾವತಿ ಗಜಹಗಟ್ಟಿ ಕಣಿವೆಯ ಬಳಿ ದಿಂಬಂ ಎಂಬಲ್ಲಿ ಹುಟ್ಟಿ ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಹರಿದು ತಲಕಾಡಿನ ಸಮೀಪ ಕಾವೇರಿಯನ್ನು ಕೂಡಿಕೊಳ್ಳುತ್ತದೆ.

ಚಾಮರಾಜೇಶ್ವರ ದೇವಾಲಯ

ಚಿಕ್ಕಹೊಳೆ ಇದರ ಉಪನದಿ. ಮಹದೇಶ್ವರ ಬೆಟ್ಟದ ಗುಳಿಯಾತನೂರು ಹಳ್ಳ, ಯೇಲಕ್ಕಿಯಾತು ಹಳ್ಳ, ಮೆದುಗನಾಳು ಹಳ್ಳ, ಬಿಳಿಗಿರಿರಂಗನ ಬೆಟ್ಟದ ಉಲಿಕೊಪ್ಪ ಹಳ್ಳ, ತಟ್ಟಿನ ಹಳ್ಳ – ಇವು ಇತರ ತೊರೆಗಳು. ಚಾಮರಾಜನಗರ ಜಿಲ್ಲೆಯಲ್ಲಿ ವಿಸ್ತಾರವಾದ ಅರಣ್ಯಪ್ರದೇಶವೂ ಹೊಳೆತೊರೆಗಳು ಇದ್ದರೂ ಇಲ್ಲಿ ಮಳೆಯ ಪ್ರಮಾಣ ಅಷ್ಟೇನೂ ಇಲ್ಲವಾದ್ದರಿಂದ, ಹೆಚ್ಚಿನ ಜಲಸಂಪತ್ತಿಲ್ಲ. ಒಳ್ಳೆಯ ಮಳೆಯಾದಾಗ ಪರಿಸ್ಥಿತಿ ಸುಧಾರಿಸುತ್ತದೆ. ನೀರಾವರಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಲಾಗುತ್ತಿದೆ.

ಅರಣ್ಯಸಂಪತ್ತಿಗೆ ಸಂಬಂಧಿಸಿದಂತೆ ಈ ಜಿಲ್ಲೆ ಕರ್ನಾಟಕದ ಐದು ಮುಖ್ಯ ಜಿಲ್ಲೆಗಳಲ್ಲೊಂದು. ಜಿಲ್ಲೆಯ ಸು.1/3 ಭಾಗವನ್ನು ಅರಣ್ಯ ಆವರಿಸಿದೆ. ಚಾಮರಾಜನಗರವನ್ನು ಬಿಟ್ಟು ಉಳಿದೆಲ್ಲ ತಾಲ್ಲೂಕುಗಳಲ್ಲಿ ಕಾಡುಗಳಿವೆ. ಮಲೆನಾಡಿನ ಅರಣ್ಯಗಳಂತೆ ಇವು ದಟ್ಟವಾಗಿರದಿದ್ದರೂ ಇಲ್ಲಿ ಉತ್ತಮ ಜಾತಿಯ ಮರಗಳಿವೆ. ತೇಗ, ಬೀಟೆ, ಗಂಧ, ನಂದಿ, ಹೊನ್ನೆ, ಮತ್ತಿ ಮತ್ತು ಕರಿ ಮರಗಳು ಸಾಕಷ್ಟು ಕಂಡುಬರುತ್ತವೆ. ಬಿದಿರು, ಅರಗು, ಮರಗೋಂದು, ನೆಲ್ಲಿ, ಹುಣಿಸೆ, ಮಾವು, ಸೀಗೆ –ಇವು ಇಲ್ಲಿಯ ಉಪೋತ್ಪನ್ನಗಳು. ಜಿಲ್ಲೆಯ ಅರಣ್ಯಪ್ರದೇಶದ ಒಟ್ಟು ವಿಸ್ತೀರ್ಣ 2,75,610 ಹೆಕ್ಟೇರ್ (1998–99). ಅಷ್ಟೇನೂ ಎತ್ತರವಲ್ಲದ ಕಾಡುಗಳು ಮತ್ತು ಪೊದೆಗಳಲ್ಲಿ, ಹುಲ್ಲುಗಾವಲುಗಳಲ್ಲಿ ಹುಲಿ, ಚಿರತೆ, ಕರಡಿ, ಆನೆ, ಜಿಂಕೆ, ಸಾರಂಗ, ಕಾಡುಕೋಣ ಮುಂತಾದ ಪ್ರಮುಖ ವನ್ಯಜೀವಿಗಳನ್ನು ಕಾಣಬಹುದು. ಮೊಲ, ನರಿ, ಕಾಡುಬೆಕ್ಕು, ಅಳಿಲು ಮುಂತಾದವೂ ಉಂಟು. ನವಿಲು ಇಲ್ಲಿನ ಕಾಡುಗಳಿಗೆ ಶೋಭೆ ತಂದಿರುವ ಪಕ್ಷಿ. ಬಂಡೀಪುರ (ನೋಡಿ) ಅಭಯಾರಣ್ಯ ಕಾಡುಪ್ರಾಣಿಗಳ ಸಂರಕ್ಷಣಾ ತಾಣ. ಕಾಡುಗಳ್ಳರ ಹಾವಳಿಯಿಂದಾಗಿ ವೃಕ್ಷಸಂಕುಲ ಹಾಗೂ ಪ್ರಾಣಿಸಂಕುಲಗಳೆರಡಕ್ಕೂ ಹಾನಿಯಾಗುತ್ತಿದೆ.

ನರಸಮಂಗಲದ ರಾಮೇಶ್ವರ ದೇವಾಲಯದ ಗೋಪುರ

**ವ್ಯವಸಾಯ:** ಚಾಮರಾಜನಗರ ಒಂದು ಹಿಂದುಳಿದ ಜಿಲ್ಲೆ. ವ್ಯವಸಾಯ ಇಲ್ಲಿನ ಮುಖ್ಯ ಕಸಬು. ಬತ್ತ, ರಾಗಿ, ಜೋಳ, ಕಬ್ಬು, ಹಿಪ್ಪುನೇರಳೆ, ನೆಲಗಡಲೆ, ಹರಳು, ಹತ್ತಿ, ಬಾಳೆ, ತೆಂಗು, ಅಡಕೆ – ಇವು ಮುಖ್ಯ ಬೆಳೆಗಳು. ವ್ಯವಸಾಯಕ್ಕೆ ನೀರಾವರಿ ಮುಖ್ಯ ಆಧಾರ. ಜಿಲ್ಲೆಯ ಸರಾಸರಿ ಮಳೆ 751ಮಿಮೀ. ಜಿಲ್ಲೆಯಲ್ಲಿ ಭಾರಿ ಜಲಾಶಯಗಳಿಲ್ಲ. ಹಲವಾರು ಮಧ್ಯಮ ಮತ್ತು ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳು ಜಾರಿಗೆ ಬಂದಿವೆ. ಚಿಕ್ಕಹೊಳೆ, ಉಡುತೊರೆ ಹಳ್ಳ, ಸುವರ್ಣಾವತಿ, ಗುಂಡಾಲ್ ಹೊಳೆಗಳಿಗೆ ಅಲ್ಲಲ್ಲಿ ಜಲಾಶಯಗಳನ್ನು ನಿರ್ಮಿಸಿ ನೀರಾವರಿಗೆ ಸೌಲಭ್ಯ ವಿಸ್ತರಿಸಲಾಗುತ್ತಿದೆ. ಕಬಿನಿ ಮತ್ತು ನುಗು ಜಲಾಶಯಗಳಿಂದ ಕೆಲವು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಬರುತ್ತಿದೆ. ಕೊಳವೆ ಬಾವಿಗಳ ಮೂಲಕ ಅಂತರ್ಜಲವನ್ನು ಬಳಸಿಕೊಳ್ಳುವ ಪ್ರಯತ್ನ ನಡೆದಿದೆ.

ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾದ ನೆಲದಲ್ಲಿ 5,69,901 ಹೆಕ್ಟೇರ್ ಜಮೀನು ಬೇಸಾಯಕ್ಕೆ ಒದಗಿ ಬಂದಿದೆ (1998–99). ಕಾಲುವೆಯಿಂದ 11,192 ಹೆಕ್ಟೇರ್, ಕೆರೆಗಳಿಂದ 5,591, ಹೆಕ್ಟೇರ್ ಬಾವಿಗಳಿಂದ 18,799 ಹೆಕ್ಟೇರ್ ಜಮೀನು ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿ ಸಾಕಷ್ಟು ಮಳೆಯನ್ನು ಆಧರಿಸಿದ ಭೂಮಿಯಲ್ಲಿ ರಾಗಿ, ಜೋಳ, ಕಡಲೆ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಹತ್ತಿ ಒಂದು ಪ್ರಮುಖ ವಾಣಿಜ್ಯ ಬೆಳೆ. ರೇಷ್ಮೆ ಸಾಕಣೆಗೆ ಜಿಲ್ಲೆ ಪ್ರಸಿದ್ಧವಾಗಿದೆ.

ಜಿಲ್ಲೆಯಲ್ಲಿ ಆಧುನಿಕ ಮೀನುಗಾರಿಕೆ ಜನಪ್ರಿಯವಾಗಿದೆ. ಕೆರೆಗಳು ಮತ್ತು ಜಲಾಶಯಗಳಲ್ಲಿ ಮೀನುಮರಿಗಳನ್ನು ಬೆಳೆಸಿ ಮೀನು ಉತ್ಪಾದಿಸಲಾಗುತ್ತದೆ. ವಾರ್ಷಿಕ ಉತ್ಪನ್ನ 1508 ಟನ್. ಬೇಡಿಕೆಗೆ ಅನುಗುಣವಾಗಿ ಹೈನುಗಾರಿಕೆ ಬೆಳೆಯುತ್ತಿದೆ. ಹೆಚ್ಚು ಹೆಚ್ಚಾಗಿ ಜಾನುವಾರನ್ನು ಸಾಕಲಾಗುತ್ತಿದೆ. ಪಶುಸಂಗೋಪನೆಗಾಗಿ 11 ಕೃತಕಗರ್ಭಧಾರಣೆ ಕೇಂದ್ರಗಳಿವೆ. 4 ಸಂಚಾರಿ ಪಶು ಚಿಕಿತ್ಸಾಲಯಗಳು ಜಿಲ್ಲೆಯಲ್ಲಿ ಕಾರ್ಯನಿರತವಾಗಿವೆ. ಪಟ್ಟಣಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಅನೇಕ ಕೋಳಿ ಫಾರಂಗಳು ಅಸ್ತಿತ್ವಕ್ಕೆ ಬಂದಿವೆ. ಅಧಿಕ ಮಾಂಸೋತ್ಪನ್ನ ಸಾಧಕಗಳಾದ ಮಿಶ್ರತಳಿ ಕೋಳಿಗಳ ಸಾಕುವಿಕೆ ಅಭಿವೃದ್ಧಿ ಸಾಧಿಸುತ್ತಿದೆ.

ಹಳೆ ಆಲೂರಿನ ಅರ್ಕೇಶ್ವರ ದೇವಾಲಯದ ಒಂದು ನೋಟ

**ಕೈಗಾರಿಕೆ :** ಚಾಮರಾಜನಗರ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದಿದೆ. ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡ ಈ ಜಿಲ್ಲೆಯಲ್ಲಿ ಬೆಳವಣಿಗೆಗೆ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ರೇಷ್ಮೆ ಉದ್ಯಮ, ಹತ್ತಿಗಿರಣಿ ಮತ್ತು ಸಕ್ಕರೆ ಕಾರ್ಖಾನೆಗಳು ಇಲ್ಲಿನ ಮುಖ್ಯ ಉದ್ಯಮಗಳು. ಚಾಮರಾಜನಗರ ಮತ್ತು ಕೊಳ್ಳೇಗಾಲಗಳಲ್ಲಿ ಕೇಂದ್ರೀಯ ರೇಷ್ಮೆ ಸಂಶೋಧನ ಮಂಡಳಿಯ ಪ್ರಾದೇಶಿಕ ಸಂಶೋಧನ ಕೇಂದ್ರಗಳು ಮತ್ತು ತರಬೇತಿ ಸಂಸ್ಥೆಗಳಿವೆ. ರೇಷ್ಮೆ ಬೀಜದ ಕೋಠಿಯೊಂದು ಚಾಮರಾಜನಗರದಲ್ಲಿದೆ. ಇಲ್ಲಿ ಮತ್ತು ಕೊಳ್ಳೇಗಾಲದಲ್ಲಿ ರೇಷ್ಮೆಗೂಡಿನ ಮಾರುಕಟ್ಟೆಗಳೂ ಕೊಳ್ಳೇಗಾಲದಲ್ಲಿ ಸರ್ಕಾರಿ ರೇಷ್ಮೆ ನೂಲು ಸುತ್ತುವ ಕಾರ್ಖಾನೆಯೂ ಇವೆ. ಮಾಂಬಳ್ಳಿಯಲ್ಲಿ ರೇಷ್ಮೆ ಸುತ್ತುವ ಮತ್ತು ನೇಯುವ ಕೇಂದ್ರವೂ ಸಂತೆಮರಳ್ಳಿಯಲ್ಲಿ ಸರ್ಕಾರಿ ರೇಷ್ಮೆ ನೂಲು ಸುತ್ತುವ ಘಟಕವೂ ಉಂಟು. ಅನೇಕ ಕಡೆಗಳಲ್ಲಿ ರೇಷ್ಮೆ ಸಾಕುವವರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಹಿಪ್ಪುನೇರಳೆ ಬೆಳೆಯುವುದು ಮತ್ತು ರೇಷ್ಮೆ ಹುಳು ಸಾಕಣೆ ಒಂದು ಪ್ರಮುಖ ಉಪ ಉದ್ಯಮ.

ಜಿಲ್ಲೆಯಲ್ಲಿ ಹತ್ತಿ ಬೆಳೆಯುವ ಪ್ರದೇಶ 12, 738 ಹೆಕ್ಟೇರ್. ಹಲವೆಡೆಗಳಲ್ಲಿ ಹತ್ತಿಯ ಮತ್ತು ಸ್ಪನ್ ಹತ್ತಿಯ ಕೈಮಗ್ಗಗಳಿವೆ. ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಚಾಮರಾಜನಗರಗಳಲ್ಲಿ ಜವಳಿ ಉದ್ಯಮ ಬೆಳೆದಿದೆ. ಚಾಮರಾಜನಗರ ಮತ್ತು ಅದರ ಬಳಿಯ ಅಂಕಣಸೆಟ್ಟಿಪುರದಲ್ಲಿ ಜವಳಿ ಗಿರಣಿಗಳಿವೆ.

ಕೊಳ್ಳೇಗಾಲದಲ್ಲಿ ಮಹದೇಶ್ವರ ಸಕ್ಕರೆ ಕಾರ್ಖಾನೆಯಿದೆ. ಜಿಲ್ಲೆಯ ಕೆಲವೆಡೆ ಬೆಲ್ಲ ಮತ್ತು ಖಂಡಸಾರಿ ತಯಾರಾಗುತ್ತವೆ. ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲದಲ್ಲಿ ಕಾಗದ ತಯಾರಿಸುವ ಘಟಕವಿದೆ. ಜಿಲ್ಲೆಯಲ್ಲಿ ಮರಕೊಯ್ಯುವ ಉದ್ಯಮಗಳಲ್ಲಿ ಪೀಠೋಪಕರಣ ತಯಾರಿಕಾ ಘಟಕಗಳೂ ಬೀಡಿ ಕಟ್ಟುವ ಕೇಂದ್ರಗಳೂ ಎಂಜಿನಿಯರಿಂಗ್ ಕಾರ್ಯಾಗಾರಗಳೂ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರಗಳೂ ಎಣ್ಣೆ ತೆಗೆಯುವ ಕೇಂದ್ರಗಳೂ ಚರ್ಮ ಹದಗಾರಿಕೆ, ಸುಣ್ಣ ತಯಾರಿಕೆ, ಕಬ್ಬಿಣ ಮತ್ತು ಗ್ರಿಲ್ ಕೆಲಸ, ಮಣ್ಣಿನಿಂದ ಕುಂಡ, ಗಾಡಿ ತಯಾರಿಕೆ ಮುಂತಾದ ಉದ್ಯಮಗಳೂ ಅಲ್ಲಲ್ಲಿ ಉಂಟು. ಒಟ್ಟು 19 ಕಾರ್ಖಾನೆಗಳು, 1 ಕೈಗಾರಿಕಾ ಎಸ್ಟೇಟ್, 24 ಕೈಗಾರಿಕಾ ಷೆಡ್ಡುಗಳು ಜಿಲ್ಲೆಯಲ್ಲಿವೆ. ಒಟ್ಟು 3,482 ಜನರಿಗೆ ಉದ್ಯೋಗ ಒದಗಿಸಿವೆ (2001). ಕೊಳ್ಳೇಗಾಲದಲ್ಲಿ 1962–63ರಲ್ಲಿ ಸರ್ಕಾರಿ ಯಾಂತ್ರಿಕ ಕಾರ್ಯಾಗಾರವನ್ನು ಸ್ಥಾಪಿಸಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನ ಅಂಕಳ್ಳಿಯಲ್ಲಿ ಚರ್ಮಗೆಲಸ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. (1987). ಅದೇ ತಾಲ್ಲೂಕಿನ ಕೋಡಿಹಳ್ಳಿಯಲ್ಲಿ ಚಾಪೆ ನೇಯುವ ತರಬೇತಿ ಕೇಂದ್ರವೂ, ಚಾಮರಾಜನಗರದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯೂ ಉದ್ಯೋಗಾರ್ಥಿಗಳಿಗೆ ತರಬೇತಿ ನೀಡುತ್ತವೆ. ಗ್ರಾನೈಟ್, ಸುಣ್ಣಕಲ್ಲು ಗಣಿಗಾರಿಕೆ ಇಲ್ಲಿನ ಇನ್ನೆರಡು ಉದ್ಯಮಗಳು.

ಶಿಕ್ಷಣಕ್ಷೇತ್ರದಲ್ಲಿ ಈ ಜಿಲ್ಲೆ ಗಮನಾರ್ಹವಾಗಿ ಮುಂದುವರಿಯುತ್ತಿದೆ. ಜೆ.ಎಸ್.ಎಸ್. ವಿದ್ಯಾಸಂಸ್ಥೆ ಸ್ಥಾಪಿಸಿರುವ ಅನೇಕ ಶಾಲಾ ಕಾಲೇಜುಗಳು ಚಾಮರಾಜನಗರದಲ್ಲಿವೆ. ಜಿಲ್ಲೆಯಲ್ಲಿ 119 ಪ್ರೌಢಶಾಲೆಗಳೂ 32 ಕಿರಿಯ ಕಾಲೇಜುಗಳೂ ಇವೆ (2000–01). ಕೊಳ್ಳೇಗಾಲದಲ್ಲಿರುವ ಸರ್ಕಾರಿ ಕಾಲೇಜು ಅತ್ಯಂತ ಹಳೆಯದು. ಇತ್ತೀಚೆಗೆ ಚಾಮರಾಜನಗರದ ಜೆ.ಎಸ್.ಎಸ್. ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಶಿಕ್ಷಣ ಸೌಲಭ್ಯ (ಎಂ.ಎ.) ಕಲ್ಪಿಸಲಾಗಿದೆ (2002).

**ಸಾರಿಗೆ ಸಂಪರ್ಕ:** ರಾಜ್ಯದ ಗಡಿಭಾಗದಲ್ಲಿರುವ ಈ ಜಿಲ್ಲೆಯಲ್ಲಿ ನೆರೆರಾಜ್ಯಗಳೊಂದಿಗೆ ಸಂಪರ್ಕ ಸಾಧಿಸುವ ಪ್ರಮುಖ ರಸ್ತೆಮಾರ್ಗಗಳು ಹಾದುಹೋಗುತ್ತವೆ. 1998–99ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ 160 ಕಿಮೀ. ರಾಷ್ಟ್ರೀಯ ಹೆದ್ದಾರಿ, 106ಕಿಮೀ. ರಾಜ್ಯ ಹೆದ್ದಾರಿ 658ಕಿಮೀ. ಜಿಲ್ಲಾ ರಸ್ತೆ ಮತ್ತು 209ಕಿಮೀ ಇತರ ರಸ್ತೆಗಳಿವೆ. ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಸೇರಿದ ರಸ್ತೆಗಳ ಉದ್ದ 337ಕಿಮೀ. ಅರಣ್ಯ ಇಲಾಖೆಗೆ ಸೇರಿದ ರಸ್ತೆಗಳು 449ಕಿಮೀ ಪುರಸಭೆಗಳ ರಸ್ತೆಗಳು 951ಕಿಮೀ. ಪಂಚಾಯತಿ ರಸ್ತೆಗಳು, 72ಕಿಮೀ. ಮೈಸೂರು–ಊಟಿ ರಸ್ತೆ, ಬೆಂಗಳೂರು–ಕೊಯಮತ್ತೂರು, ಮೈಸೂರು–ಸುಲ್ತಾನ್‌ಬತೇರಿ, ಗುಂಡ್ಲುಪೇಟೆ–ಗೂಡಲೂರು–ಊಟಿ, ಕೊಳ್ಳೇಗಾಲ–ಸತ್ಯಮಂಗಲ ಘಾಟಿ, ಕೊಳ್ಳೇಗಾಲ–ಮಹದೇಶ್ವರ ಬೆಟ್ಟ–ಭವಾನಿ ರಸ್ತೆಗಳು ಈ ಜಿಲ್ಲೆಯಲ್ಲಿ ಹಾದುಹೋಗುವ ಅಂತಾರಾಜ್ಯ ಮಾರ್ಗಗಳು. ಮೈಸೂರು–ಚಾಮರಾಜನಗರ–ಪುಣಜೂರು ಘಾಟಿ, ಹನೂರು–ರಾಮಪುರ, ಗುಂಡ್ಲುಪೇಟೆ–ಚಾಮರಾಜನಗರ ತಿರುಮಕೂಡಲು ನರಸೀಪುರ ರಸ್ತೆಗಳು ಮುಖ್ಯ ಜಿಲ್ಲಾ ರಸ್ತೆ ಮಾರ್ಗಗಳು.

ಮೈಸೂರು–ಚಾಮರಾಜನಗರ ರೈಲುಮಾರ್ಗ ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲೇ ನಿರ್ಮಾಣವಾಯಿತು. ಚಾಮರಾಜನಗರ–ಸತ್ಯಮಂಗಲಂ ರೈಲುಮಾರ್ಗ ನಿರ್ಮಾಣ ಬಹಳ ದೀರ್ಘಕಾಲದಿಂದ ನೆನೆಗುದಿಯಲ್ಲಿದೆ.

ಪದ್ಮಾವತಿ, ಹರವೆ

**ಇತಿಹಾಸ ಮತ್ತು ಸಂಸ್ಕೃತಿ:** ಚಾಮರಾಜನಗರ ಜಿಲ್ಲೆ ದಟ್ಟವಾದ ಅರಣ್ಯದ ಪರಿಧಿಯಲ್ಲಿದ್ದು ಇಲ್ಲಿ ಪ್ರಾಚೀನ ಕಾಲದಿಂದಲೇ ಸಂಸ್ಕೃತಿ ಮತ್ತು ನಾಗರಿಕತೆ ಬೆಳೆದುಬಂದಿವೆ. ಇಲ್ಲಿನ ಬಹುಸಂಖ್ಯೆಯ ಚಿಕ್ಕಪುಟ್ಟ ನದಿಗಳು ಹಾಗೂ ಸರಹದ್ದಿನ ಕಪಿಲಾ, ಕಾವೇರಿ ನದಿ – ಇವು ವ್ಯವಸಾಯ ಸಮುದಾಯಗಳು ಇಲ್ಲಿ ನೆಲಸಲು ಅನುಕೂಲಕರವಾದ ನೀರಿನ ಆಸರೆಯನ್ನು ಒದಗಿಸಿದವು. ಸುತ್ತಲ ಅರಣ್ಯಗಳು ಆದಿವಾಸಿಗಳ ಮತ್ತು ಪರಿಶಿಷ್ಟಪಂಗಡಗಳ ಜನರ ನೆಲೆಸುವಿಕೆಗೆ ಭದ್ರತೆಯನ್ನು ತಂದುಕೊಟ್ಟಿದ್ದುವು. ಅತ್ಯಂತ ಪ್ರಾಚೀನ ನೆಲೆಗಳ ಗುರುತುಗಳು ಹಲವೆಡೆ ಕಂಡುಬಂದಿವೆ. ಕೊಳ್ಳೇಗಾಲ ತಾಲ್ಲೂಕಿನ ಲೊಕ್ಕನಹಳ್ಳಿ, ಹನೂರು, ಬೆಳ್ತೂರು, ಚಿಕ್ಕಯಲಾಪುರ, ಕನ್ನಿಕೆರೆ, ತೆಲ್ನೂರ್, ಯಳಂದೂರು ತಾಲ್ಲೂಕಿನ ಯರಗಂಬಳಿ, ಗುಂಬಳ್ಳಿ, ಶಿವಕಳ್ಳಿ, ದೇವರಹಳ್ಳಿ, ಯರಿಯೂರು, ಗಾಣಿಗನೂರು, ಮಲ್ಲಾರಪಾಳ್ಯ, ಚಾಮರಾಜನಗರ ತಾಲ್ಲೂಕಿನ ಆಲೂರು, ಬೆಟ್ಟಹಳ್ಳಿ, ಚಂದಕವಾಡಿ, ಹೊಂಗನೂರು ಮತ್ತು ನಲ್ಲೂರು, ಹೊಸಹಳ್ಳಿ, ಬೂದಿತಿಟ್ಟು, ಗುಂಡ್ಲುಪೇಟೆ ತಾಲ್ಲೂಕಿನ ಕಳಲೆ, ಪಂಜನಹಳ್ಳಿ, ವೀರನಪುರ, ಹೊಸಹಳ್ಳಿ, ಗುಂಡ್ಲುಪೇಟೆ ಮೊದಲಾದ ಕಡೆಗಳಲ್ಲಿ ಇತಿಹಾಸ ಪೂರ್ವದ ನೆಲೆಗಳ ಶಿಲಾ ಅವಶೇಷಗಳು ದೊರೆತಿವೆ. ಇಲ್ಲೆಲ್ಲ ಶಿಲಾಯುಗದ ಮತ್ತು ಬೃಹತ್ ಶಿಲಾಯುಗದ ಜನರ ಆಯುಧಗಳೂ ಸಮಾಧಿಗಳೂ ಕಂಡುಬಂದಿವೆ.

ಕರ್ನಾಟಕದ ಅತ್ಯಂತ ಪುರಾತನವೆನಿಸಿದ ಪುನ್ನಾಟ ರಾಜ್ಯಕ್ಕೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಕಿತ್ತೂರು (ಕೀರ್ತಿಪುರ) ರಾಜಧಾನಿಯಾಗಿತ್ತು. ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಸ್ಥಾಪಿತವಾಗಿ 6ನೆಯ ಶತಮಾನದವರೆಗೆ ಉಳಿದುಬಂದಿತ್ತು. ಪ್ರಾಚೀನ ದಾಖಲೆಗಳಲ್ಲಿ ಬರುವ 'ಪುಂಟ್' ಎಂಬುದು ಪುನ್ನಾಟವಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮಗಧ ರಾಜ್ಯದಿಂದ ದಕ್ಷಿಣಕ್ಕೆ ವಲಸೆ ಬಂದ ಜೈನಸಂಘವೊಂದು ಭದ್ರಬಾಹುವಿನ ಸೂಚನೆಯಂತೆ ಪುನ್ನಾಟ ದೇಶಕ್ಕೆ ಹೋಯಿತು ಎಂಬ ಪ್ರಸ್ತಾಪ ಹರಿಷೇಣನ ಬೃಹತ್ಕಥಾಕೋಶದಲ್ಲಿ ಬರುತ್ತದೆ. 2ನೆಯ ಶತಮಾನದ ಗ್ರೀಕ್ ಭೂಗೋಳಕಾರ ಟಾಲೆಮಿಯ ಪ್ರಕಾರ ಪೌನ್ನಟ ಎಂಬ ಪ್ರದೇಶ ಪಚ್ಚೆಕಲ್ಲುಗಳಿಗೆ ಪ್ರಸಿದ್ಧವಾಗಿತ್ತು. ಹೆಗ್ಗಡದೇವನ ಕೋಟೆ, ಗುಂಡ್ಲುಪೇಟೆ ವಲಯವು ಪಚ್ಚೆ, ಹರಳು ಮತ್ತು ಪದ್ಮರಾಗಗಳಿಗೆ ಪ್ರಸಿದ್ಧವಾಗಿತ್ತು. ಪೊನ್ನಿನವಾಡು ಎಂಬುದು ಪುನ್ನಾಡು, ಪುನ್ನಾಟು, ಪುನ್ನಾಟ ಆಗಿರಬಹುದೆನ್ನಲಾಗಿದೆ. ಪುನ್ನಾಟದ ಅರಸರು ಕದಂಬ ಮತ್ತು ಗಂಗ ಮನೆತನಗಳೊಂದಿಗೆ ವಿವಾಹಸಂಬಂಧ ಹೊಂದಿದ್ದ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಗಂಗ ದುರ್ವಿನೀತ ಪುನ್ನಾಟ ರಾಜಮನೆತನದ ವಧುವಿನ ಮಗನಾಗಿದ್ದ, ತಾಯಿಯ ಮನೆತನದಲ್ಲಿ ಗಂಡು ಮಕ್ಕಳಿಲ್ಲದ್ದರಿಂದ ಪುನ್ನಾಟ ರಾಜ್ಯವನ್ನು ಗಂಗರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು (6ನೆಯ ಶತಮಾನ). ಈ ರಾಜಮನೆತನದವರ ಬಗ್ಗೆ ದೊರೆಯುವ ಕೆಲವೇ ಶಾಸನಗಳು ಯಳಂದೂರು, ನಂಜನಗೂಡು, ಹೆಗ್ಗಡದೇವನಕೋಟೆಗಳ ಬಳಿ ದೊರೆತಿವೆ. ಇವರು ಗಂಗರು ಮತ್ತು ಕದಂಬರಿಗಿಂತ ಹಿಂದೆಯೇ ಕರ್ನಾಟಕದಲ್ಲಿ ರಾಜ್ಯ ಸ್ಥಾಪಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಗಂಗ ರಾಜ್ಯದ ವಿಸ್ತರಣೆಯಿಂದ ಇವರ ಅಸ್ತಿತ್ವಕ್ಕೆ ಚ್ಯುತಿಯುಂಟಾಯಿತೆಂದು ತೋರುತ್ತದೆ. ಈ ರಾಜವಂಶದ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಆದರೆ ಗಂಗ–ಕದಂಬ ಪೂರ್ವ ಕಾಲದಲ್ಲಿ ಪುನ್ನಾಟ ರಾಜ್ಯ ಕಾವೇರಿ ಪ್ರದೇಶದ ಬಹುಭಾಗದಲ್ಲಿ ವ್ಯಾಪಿಸಿದ್ದಿರ ಬಹುದು.

ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳತೊಡಗಿದ ತಲಕಾಡಿನ ಗಂಗರು ಅಥವಾ ಪಶ್ಚಿಮ ಗಂಗರು 4ನೆಯ ಶತಮಾನದಿಂದ 11ನೆಯ ಶತಮಾನದ ಪ್ರಾರಂಭದವರೆಗೂ ಆಳಿ ಕರ್ನಾಟಕದ ರಾಜಮನೆತನಗಳಲ್ಲೇ ಅತ್ಯಂತ ದೀರ್ಘಕಾಲ ಆಳಿದವರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ವಂಶದ ದುರ್ವಿನೀತನ (ಸು.529–79) ಕಾಲದಿಂದ ಹಿಡಿದು, ಪುನ್ನಾಟ ರಾಜ್ಯ ಗಂಗರಾಜ್ಯದಲ್ಲಿ ಅಂತರ್ಗತವಾದ ಮೇಲೆ ಅವರ ಆಳಿಕೆಯ ಕೊನೆಯವರೆಗೂ ಈ ಜಿಲ್ಲೆ ಗಂಗರ ಅಧೀನದಲ್ಲಿದ್ದಿತು. ಈ ವಂಶದ ದುರ್ವಿನೀತ, ಭೂವಿಕ್ರಮ, ಶ್ರೀಪುರುಷ, ಎರಡನೆಯ ಬೂತುಗ, ಎರಡನೆಯ ಮಾರಸಿಂಹ –ಇವರು ದಕ್ಷ ಪ್ರಭುಗಳಾಗಿದ್ದರು. ಈಗಿನ ತಮಿಳನಾಡಿನ ಭಾಗವಾಗಿರುವ ಕೊಯಮತ್ತೂರು ಮತ್ತು ಸೇಲಂ ಪ್ರದೇಶ ಹಲವು ಶತಮಾನಗಳ ಕಾಲ ಗಂಗರಾಜ್ಯದ ಒಂದು ಪ್ರಾಂತವಾಗಿತ್ತು. ಅದನ್ನು ಕೊಂಗುದೇಶವೆಂದು ಕರೆಯಲಾಗುತ್ತಿತ್ತು. ಇದರಿಂದಾಗಿ ಕನ್ನಡ ಸಂಸ್ಕೃತಿ ಅತ್ತ ಹರಡಿ, ಈಗಿನ ಮೈಸೂರು ಚಾಮರಾಜನಗರ ಜಿಲ್ಲೆಗಳ ಪ್ರದೇಶ ತಮಿಳು ಪ್ರಭಾವದಿಂದ ಮುಕ್ತವಾಗಲು ಸಾಧ್ಯವಾಯಿತು. ಗಂಗರ ಸಮಕಾಲೀನರಾದ ಕದಂಬರು, ಬಾದಾಮಿ ಚಾಳುಕ್ಯರು ಮತ್ತು ರಾಷ್ಟ್ರಕೂಟರ ಕಾಲದಲ್ಲೂ ಗಂಗರೇ ಈ ಪ್ರದೇಶದ ಮುಖ್ಯ ಅಧಿಪತಿಗಳಾಗಿದ್ದರು.

ತಲಕಾಡಿನ ಗಂಗರ ರಾಜ್ಯದ ಹೃದಯಭಾಗವಾಗಿದ್ದ ಈ ಜಿಲ್ಲೆಯಲ್ಲಿ ಅವರ ದೇವಾಲಯಗಳು, ಶಾಸನಗಳು ಹೇರಳವಾಗಿವೆ. ಆ ಕಾಲದಲ್ಲಿ ಕಲ್ಲಿಗಿಂತ ಇಟ್ಟಿಗೆಯಲ್ಲೇ ಹೆಚ್ಚಾಗಿ ದೇವಾಲಯ ಕಟ್ಟುತ್ತಿದ್ದುದರಿಂದ ಅವುಗಳಲ್ಲಿ ಹೆಚ್ಚಿನವು ನಷ್ಟವಾಗಿವೆ, ಇಲ್ಲವೇ ಮಾರ್ಪಾಟ್ಟಿವೆ. ಅವರ ಕಟ್ಟಡಗಳಲ್ಲಿ ಪ್ರಾಚೀನವೂ ಶ್ರೇಷ್ಠವೂ ಆದದ್ದು ಚಾಮರಾಜನಗರ ತಾಲ್ಲೂಕಿನ ನರಸಮಂಗಲದ ರಾಮೇಶ್ವರ ದೇವಾಲಯ. ಇದರ ತಳಹದಿ ಕಗ್ಗಲ್ಲಿನದು. ಮೇಲಿನ ಕಟ್ಟಡ ಇಟ್ಟಿಗೆಯದು. ಗಂಗರ ಕಾಲದ ಹತ್ತಾರು ಸಣ್ಣ ನಿರ್ಮಾಣಗಳೂ ಶಿಲ್ಪಗಳೂ ಇನ್ನೂ ಉಳಿದು ಬಂದಿವೆ.

ಗಂಗರ ಕಾಲದಲ್ಲಿ ರಾಜಕೀಯವಾಗಿ ಅಖಂಡವಾಗಿದ್ದ ಈ ಜಿಲ್ಲೆ 10ನೆಯ ಶತಮಾನದ ಅನಂತರ ರಾಜಕೀಯ ಏರುಪೇರುಗಳಿಗೆ ಒಳಗಾಯಿತು. 11ನೆಯ ಶತಮಾನದ ಪ್ರಾರಂಭದಲ್ಲಿ ಗಂಗರ ಆಳಿಕೆಯನ್ನು ಚೋಳರ ರಾಜರಾಜನು ಕೊನೆಗಾಣಿಸಿ ಈ ಪ್ರದೇಶವನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡ. ಚೋಳರ ಒಂದು ಶತಮಾನದ ಆಳಿಕೆಯಲ್ಲಿ ಇಲ್ಲಿನ ಆಡಳಿತ, ಕಲೆ ಮತ್ತು ವಾಸ್ತು ವಿನ್ಯಾಸದಲ್ಲಿ ಅನೇಕ ಬದಲಾವಣೆಗಳಾದವು. ಈ ಪ್ರದೇಶವೂ ಸೇರಿದಂತೆ ತಮ್ಮ ಅಧೀನದಲ್ಲಿದ್ದ ಪ್ರಾಂತದಲ್ಲಿ ಚೋಳರು ನಾಡುಗಳನ್ನು ರಚಿಸಿದರು. ಈ ಕಾಲಕ್ಕೆ ಸೇರಿದ ಕೆಲವು ಶಾಸನಗಳು ದೊರೆತಿವೆ. ಈ ಕಾಲದಲ್ಲಿ ಅಗ್ರಹಾರಗಳನ್ನೂ ದೇವಾಲಯಗಳನ್ನೂ ನಿರ್ಮಿಸಿದ ಬಗ್ಗೆ ಶಾಸನಗಳಲ್ಲಿ ಆಧಾರಗಳಿವೆ. ಮುಂದೆ ಹೊಯ್ಸಳರು ಪ್ರವರ್ಧಮಾನಕ್ಕೆ ಬಂದರು. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ (1116) ಚೋಳರು ನಿರ್ಣಾಯಕವಾಗಿ ಸೋತರು. ತಲಕಾಡು ಹೊಯ್ಸಳರ ವಶವಾಯಿತು. ಈ ಯುದ್ಧದ ವಿಜಯದಲ್ಲಿ ದಂಡನಾಯಕ ಗಂಗರಾಜ ಪ್ರಮುಖ ಪಾತ್ರ ವಹಿಸಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ.

ಮಲೆಮಹದೇಶ್ವರ ದೇವಸ್ಥಾನ

ಮುಂದೆ ಎರಡೂವರೆ ಶತಮಾನಗಳ ಕಾಲದ ಹೊಯ್ಸಳರ ಆಳಿಕೆಯಲ್ಲಿ ಈ ಜಿಲ್ಲೆ ಹೆಚ್ಚಿನ ಅಭ್ಯುದಯವನ್ನು ಕಂಡಿತು. ತಮಿಳುನಾಡಿನ ಅನೇಕ ಪ್ರದೇಶಗಳನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಂಡಿದ್ದ ಹೊಯ್ಸಳರ ರಾಜ್ಯದಲ್ಲಿ ಇದು ಆಯಕಟ್ಟಿನ ಮಹತ್ತ್ವ ಪಡೆದಿತ್ತು. ಅವರ ಕಾಲದಲ್ಲಿ ಇಲ್ಲಿ ಹಲವಾರು ದೇವಾಲಯಗಳು, ಕೆರೆಕಟ್ಟೆಗಳು, ಕಾಲುವೆಗಳು, ನಿರ್ಮಾಣವಾದವು. ಚಾಮರಾಜನಗರದಲ್ಲಿ ವಿಷ್ಣುವರ್ಧನನ ಮಹಾದಂಡನಾಯಕ ಪುಣಿಸಮಯ್ಯ ಪಾರ್ಶ್ವನಾಥಸ್ವಾಮಿ ಬಸದಿಯನ್ನು ಕಟ್ಟಿಸಿ ಅದಕ್ಕೆ ದಾನದತ್ತಿಗಳನ್ನು ನೀಡಿದನೆಂದು 1116ರ ಶಾಸನ ತಿಳಿಸುತ್ತದೆ. ಈತ ಗಂಗವಾಡಿ ಪ್ರಾಂತದಲ್ಲಿ ಹಲವಾರು ಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿದ. ಪುಣಜನೂರಿಗೆ ಆ ಹೆಸರು ಬರಲು ಅವನು ಕಾರಣನಾಗಿರಬೇಕು. ಎರಡನೆಯ ಬಲ್ಲಾಳ ಯಳಂದೂರು ತಾಲ್ಲೂಕಿನ ಯರಿಯೂರು ಎಂಬಲ್ಲಿ ವಲ್ಲಾಳೇಶ್ವರ ದೇವಾಲಯವನ್ನು ಕಟ್ಟಿಸಿದ. ಗುಂಡ್ಲುಪೇಟೆಯ ಬಿಟ್ಟ ದೇವಾಲಯ ನಿರ್ಮಾಣವಾದುದ್ದು ಇವನ ಕಾಲದಲ್ಲೇ. ಮೂರನೆಯ ವೀರಬಲ್ಲಾಳನ ಕಾಲದಲ್ಲಿ ಮಾಧವ ದಂಡನಾಯಕ ಗುಂಡ್ಲುಪೇಟೆ ತಾಲ್ಲೂಕಿನ ಗೋವರ್ಧನಗಿರಿಯ ಗೋಪೀನಾಥ ದೇವಸ್ಥಾನದಲ್ಲಿ ಒಂದು ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದ.

ಹೊಯ್ಸಳ ಅರಸರ ಮಾಂಡಲಿಕರಾಗಿದ್ದವರದೊಂದು ಮನೆತನ, ಈ ಜಿಲ್ಲೆಯ ಹದಿನಾಲ್ಕುನಾಡು ಅಥವಾ ಕುಡುಗುನಾಡನ್ನು ಮುಕ್ಕಾಲು ಶತಮಾನ ಕಾಲ ಆಳಿತು. ಇದರ ಮೂಲಪುರುಷ ಹೊಯ್ಸಳ ಮೂರನೆಯ ನರಸಿಂಹನ ಸೇನಾನಿ ಪೆರುಮಾಳೆ ದಂಡನಾಯಕ. ಇವನು ನೀಲಗಿರಿ ಮತ್ತು ಕೊಂಗುನಾಡುಗಳ ಮೇಲೂ ತನ್ನ ಸ್ವಾಮ್ಯ ಸಾಧಿಸಿಕೊಂಡಿದ್ದ. ತೆರಕಣಾಂಬಿ ಇವನ ರಾಜಧಾನಿಯಾಗಿತ್ತು. ಗೋಪಾಲಸ್ವಾಮಿ ಬೆಟ್ಟದ ಗೋವರ್ಧನಗಿರಿ ಗೋಪಿನಾಥ ದೇವಾಲಯವನ್ನು 1315ರಲ್ಲಿ ಪೆರುಮಾಳೆಯ ಮಗ ಕಟ್ಟಿಸಿದ. ಹೊಯ್ಸಳರ ಪತನಾನಂತರ ಈ ಅರಸು ಮನೆತನ ಕೊನೆಗೊಂಡಿತು. ವಿಜಯನಗರದ ಸಾಮಂತರಾಗಿದ್ದ ಉಮ್ಮತ್ತೂರಿನ ಪಾಳೆಯಗಾರರು ಇದರ ಸ್ವಾಮ್ಯ ಪಡೆದರು.

ಹೊಯ್ಸಳರ ಅನಂತರ ಇಲ್ಲಿ ವಿಜಯನಗರದ ಅರಸರು ಪ್ರಬಲರಾದರು. 1350ರ ದಶಕದಿಂದ ಇಲ್ಲಿ ವಿಜಯನಗರದ ಶಾಸನಗಳು ಕಾಣಿಸಿಕೊಳ್ಳುತ್ತವೆ. ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆಯ ಬಳಿ ದೊರೆತಿರುವ 1354ರ ಶಾಸನ ಇವುಗಳಲ್ಲಿ ಪ್ರಮುಖವಾದದ್ದು. ವಿಜಯನಗರದ ರಾಜ ಬುಕ್ಕಣ್ಣ ಒಡೆಯನ ಮಗ ಕಂಪಣ್ಣ ಒಡೆಯ ಹಾಕಿಸಿದ ಶಾಸನ ಇದು. ಕಂಪಣ್ಣನ ಮಗ ಕುಮಾರ ನಂಜಣ್ಣ ಗುಂಡ್ಲುಪೇಟೆಯ ರಾಮನಾಥ ದೇವಾಲಯಕ್ಕೆ ತನ್ನ ತಂದೆ ಕಂಪಣ್ಣನ ಸ್ಮರಣಾರ್ಥ ದತ್ತಿಬಿಟ್ಟ ವಿಚಾರ ಶಾಸನಗಳಿಂದ ತಿಳಿದುಬರುತ್ತದೆ. 1380ರವರೆಗೂ ನಂಜಣ್ಣ ಇಲ್ಲಿಯ ಮಾಂಡಲಿಕನಾಗಿದ್ದ. 15ನೆಯ ಶತಮಾನದ ಮಧ್ಯಭಾಗದವರೆಗೂ ವಿಜಯನಗರದ ಅರಸರಿಗೆ ಸೇರಿದ ಹತ್ತಾರು ಶಾಸನಗಳು ಈ ಭಾಗದಲ್ಲಿ ಕಂಡುಬರುತ್ತವೆ. ಇಲ್ಲಿ ಹರಿಹರ, ಒಂದನೆಯ ದೇವರಾಯ, ಎರಡನೆಯ ದೇವರಾಯ, ಮಲ್ಲಿಕಾರ್ಜುನ ಮೊದಲಾದವರ ಶಾಸನಗಳಿವೆ. ವಿಜಯನಗರದ ಸಾಮಂತರಾಗಿದ್ದ ಉಮ್ಮತ್ತೂರು ಪಾಳೆಯಗಾರರು ಮುಂದೆ ಇಲ್ಲಿ ಆಳಿಕೆ ನಡೆಸಿದರು.

1467–82ರ ಕಾಲಕ್ಕೆ ಸಂಬಂಧಿಸಿದ ಇಲ್ಲಿಯ ನಾಯಕರ ಶಾಸನಗಳಲ್ಲಿ ವೀರ ಹನುಮಪ್ಪ ಮತ್ತು ಆತನ ಮಗ ಇಮ್ಮಡಿರಾಯ ಅಥವಾ ಸೋಮಯ್ಯ ಎಂಬ ಹೆಸರುಗಳು ಕಂಡುಬರುತ್ತವೆ. ಅವರು ನಂಜನಗೂಡಿನ ನಂಜುಂಡೇಶ್ವರನಿಗೆ ದಾನ ಮಾಡಿದ ವಿಷಯ ಮುಳ್ಳೂರು ಶಾಸನದಲ್ಲಿದೆ. ಸೋಮಯ್ಯನ ಮಗ ದೇವರಾಯ ಒಡೆಯನೂ ತೆರಕಣಾಂಬಿಯಿಂದ ಕುಡುಗು ನಾಡನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಕುಡುಗು ನಾಡು ಸುಮಾರಾಗಿ ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ. ಅವನು ಹರವೆಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದ. ಈ ಮನೆತನದ ಇಮ್ಮಡಿ ಚಿಕ್ಕರಾಜನೆಂಬವನು ಹದಿನಾಡನ್ನು ಆಳುತ್ತಿದ್ದ. ಆತ ಸಾಲೂರು ವೀರಶೈವ ಮಠಕ್ಕೆ ದತ್ತಿನೀಡಿದ.

ಉಮ್ಮತ್ತೂರಿನ ನಾಯಕರ ವಂಶಾವಳಿ ಮತ್ತು ಅವರ ಚಟುವಟಿಕೆಗಳ ಬಗ್ಗೆ ಖಚಿತವಾದ ಸಮಗ್ರವಾದ ವಿವರಗಳು ತಿಳಿದುಬರುವುದಿಲ್ಲ. ಅವರು ಉಮ್ಮತ್ತೂರಿನಲ್ಲಿ ರಂಗನಾಥ ಮತ್ತು ಭುಜಂಗೇಶ್ವರ ದೇವಸ್ಥಾನಗಳನ್ನು ಕಟ್ಟಿಸಿದರು. ಪೂರ್ವಘಟ್ಟದ ಕೆಳಗೆ ಕೊಯಮತ್ತೂರಿನವರೆಗೂ ಇವರು ಆಧಿಪತ್ಯ ಹೊಂದಿದ್ದಿರಬಹುದೆಂದು ನಂಬಲಾಗಿದೆ. ಕಳಲೆ ಒಡೆಯರಿಗೂ ಇವರಿಗೂ ತೀವ್ರವಾದ ಹಗೆತನವಿದ್ದಿತು. ಕ್ರಮೇಣ ಪ್ರಬಲವಾದ ಈ ನಾಯಕರು ಕೃಷ್ಣದೇವರಾಯನ ಕಾಲದಲ್ಲಿ ಬಂಡೇಳುವ ಪ್ರವೃತ್ತಿ ತೋರಿಸಿದರು. ಆಗ (1512ರಲ್ಲಿ) ಕೃಷ್ಣದೇವರಾಯನೇ ದಂಡನಾಯಕತ್ವ ವಹಿಸಿ ಸೈನ್ಯವನ್ನು ಮುನ್ನಡೆಸಿ ಉಮ್ಮತ್ತೂರಿನ ಪಾಳೆಯಗಾರರನ್ನು ಸೋಲಿಸಿ ಅವರನ್ನು ಅಧಿಕಾರದಿಂದ ಇಳಿಸಿದ. ಈ ಪ್ರಾಂತ್ಯದ ಮೇಲೆ ಆಡಳಿತ ನಡೆಸುವ ಸಲುವಾಗಿ ಸಾಳುವ ಗೋವಿಂದರಾಜನನ್ನು ಮಾಂಡಲಿಕನಾಗಿ ನೇಮಿಸಿದ. ಗುಂಡ್ಲುಪೇಟೆಯ 29ನೆಯ ಶಾಸನ ಉಮ್ಮತ್ತೂರಿನಿಂದ ಆಳುತ್ತಿದ್ದ ವಿಜಯನಗರದ ಒಡೆಯರು ದೇವಾಲಯಕ್ಕೆ ದಾನ ನೀಡಿದ ವಿಷಯ ತಿಳಿಸುತ್ತದೆ. ವಿಜಯನಗರದ ರಾಮರಾಯನ ಸೇವಕ, ಊಳಿಗದ ಬಸವಪ್ಪ ಒಡೆಯ ಇಲ್ಲಿ ಆಳುತ್ತಿದ್ದುದನ್ನು ಗುಂಡ್ಲುಪೇಟೆ ತಾಲ್ಲೂಕಿನ 216ನೆಯ ಶಾಸನ (1562) ದೃಢಪಡಿಸುತ್ತದೆ. ವಡಗೆರೆಯಲ್ಲಿ ದೊರೆತಿರುವ ಯಳಂದೂರಿನ 182ನೆಯ ಶಾಸನ 1582ರಲ್ಲಿ ಹಾಕಿಸಿದ್ದಾಗಿದ್ದು, ಅದು ವಿಜಯನಗರದ ಪರಮಾಧಿಕಾರ ಈ ಭಾಗದಲ್ಲಿ ಮುಂದುವರಿದಿದ್ದುದಕ್ಕೆ ಸಾಕ್ಷಿಯಾಗಿದೆ. ಹದಿನಾಡ ಅರಸರು ವಿಜಯನಗರದ ಪರಮಾಧಿಕಾರವನ್ನು ಒಪ್ಪಿಕೊಂಡು 17ನೆಯ ಶತಮಾನದ ಪ್ರಾರಂಭದವರೆಗೂ ಈ ಜಿಲ್ಲೆಯ ಕೆಲವು ಭಾಗಗಳನ್ನು ಆಳುತ್ತಿದ್ದರು. ಅವರ ಮನೆತನದ ಸಿಂಗಪದೇವನೆಂಬವನು ಯಳಂದೂರಿನ ಗೌರೀಶ್ವರ ದೇವಾಲಯವನ್ನು ಕಟ್ಟಿಸಿದ.

1565ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ಸೈನ್ಯ ಶಾಹಿ ಸುಲ್ತಾನರ ಸಂಯುಕ್ತ ಸೈನ್ಯದೆದುರು ಸೋತಾಗ ಆ ಸಾಮ್ರಾಜ್ಯ ದುರ್ಬಲವಾಗತೊಡಗಿತು. ಮುಂದೆ ಹಂತ ಹಂತವಾಗಿ ಸ್ಥಳೀಯ ಸಾಮಂತರು, ತುಂಡರಸರು ತಮ್ಮ ಶಕ್ತಿ ಸಂಪನ್ಮೂಲಗಳನ್ನು ಬೆಳೆಸಿಕೊಂಡು ಸ್ವತಂತ್ರರಾಗಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಯಶಸ್ವಿಯಾದವರಲ್ಲಿ ಮೈಸೂರು ಅರಸರು (**ನೋಡಿ**) ಸೇರಿದ್ದಾರೆ. 15ನೆಯ ಶತಮಾನದಲ್ಲಿ 33 ಗ್ರಾಮಗಳ ಒಡೆತನದಿಂದ ರಾಜ್ಯವಾಳಲಾರಂಭಿಸಿದ ಇವರು ಚಾಮರಾಜನಗರ ಜಿಲ್ಲೆಯ ನೆರೆಯ ಹದಿನಾಡಿನ ಮೇಲೆ ನಿಯಂತ್ರಣ ಹೊಂದಿದ್ದರು. ಈ ಮನೆತನದವರು ಮೈಸೂರಿಗೆ ತಮ್ಮ ನೆಲೆಯನ್ನು ವರ್ಗಾಯಿಸಿಕೊಂಡರು. ರಾಜ ಒಡೆಯ (1578–1617) ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಪ್ರತಿನಿಧಿ ತಿರುಮಲರಾಯನನ್ನು ಪದಚ್ಯುತಗೊಳಿಸಿ ತಾನೇ ವಿಜಯನಗರದ ಪ್ರತಿನಿಧಿ ಎಂದು ಘೋಷಿಸಿಕೊಂಡ. ಆತ ಮುಂದೆ ಶೀಘ್ರವಾಗಿ ರಾಜ್ಯ ವಿಸ್ತರಣೆ ಮಾಡಿ ತಲಕಾಡು, ಚಾಮರಾಜನಗರ ಮತ್ತು ಉಮ್ಮತ್ತೂರು ಸೇರಿದಂತೆ ಈಗಿನ ಮಂಡ್ಯ, ಹಾಸನ ಮತ್ತು ಬೆಂಗಳೂರು ಜಿಲ್ಲೆಯ ಅನೇಕ ಭಾಗಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡ. ಶ್ರೀರಂಗಪಟ್ಟಣ ಇವನ ರಾಜಧಾನಿಯಾಯಿತು. ಆದರೆ ಇವನು ಮೈಸೂರು ಒಡೆಯನೆಂದೇ ಪರಿಚಿತನಾದ. ಚಾಮರಾಜನಗರ ಜಿಲ್ಲೆ ಒಡೆಯರ ರಾಜ್ಯದ ಖಾಯಂ ಭಾಗವಾಯಿತು. ಈಗಿನ ಚಾಮರಾಜನಗರದಲ್ಲಿ ಮಹಾಪ್ರಭು ಎಂಬ ಸ್ಥಾನಿಕ ಅಧಿಕಾರ ನಿರ್ವಹಿಸುತ್ತಿದ್ದ.

ಮೈಸೂರು ಒಡೆಯರು ತಮಿಳುನಾಡಿನತ್ತಲೂ ರಾಜ್ಯ ವಿಸ್ತರಿಸಿದರು. ಚಾಮರಾಜನಗರ, ಜಿಲ್ಲೆಯ ಆಯಕಟ್ಟಿನ ಪ್ರದೇಶವಾಗಿದ್ದುದರಿಂದ ಅದನ್ನು ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬಂದರು. ಟಿಪ್ಪುಸುಲ್ತಾನ ಬ್ರಿಟಿಷರಿಗೆ ಸಂಪೂರ್ಣವಾಗಿ ಸೋತು ಹತನಾದ ಮೇಲೆ

(1799) ಮೈಸೂರು ರಾಜ್ಯದ ವಿಭಜನೆಯಾದಾಗ ಈ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಮದರಾಸು ಪ್ರಾಂತಕ್ಕೆ ಸೇರಿತು. ಒಡೆಯರ ರಾಜಮನೆತನ ಮೈಸೂರಿನಲ್ಲಿ ನೆಲೆಸಿತು. ಚಾಮರಾಜನಗರ ಪಟ್ಟಣಕ್ಕೆ ಅರಿಕುಠಾರವೆಂಬ ಹೆಸರಿತ್ತು. ಅಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ತಂದೆ ಎಂಟನೆಯ ಚಾಮರಾಜ ಒಡೆಯರು ಜನಿಸಿದ್ದರು. ಅವರ ನೆನಪಿಗಾಗಿ ಕೃಷ್ಣರಾಜ ಒಡೆಯರು 1818ರಲ್ಲಿ ಅರಿಕುಠಾರಕ್ಕೆ ಚಾಮರಾಜನಗರ ಎಂದು ನಾಮಕರಣ ಮಾಡಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಇಲ್ಲಿ ಚಾಮರಾಜೇಶ್ವರ ದೇವಾಲಯವನ್ನು ನಿರ್ಮಿಸಿ ಅದನ್ನು ವಿಸ್ತರಿಸಿದರು. ಈ ಜಿಲ್ಲೆಯಲ್ಲಿ ಹಲವೆಡೆ ಮೈಸೂರು ಒಡೆಯರು ಮತ್ತು ಅವರ ರಾಣಿವಾಸದವರು ಕಟ್ಟಿಸಿದ ದೇವಾಲಯಗಳೂ ಪ್ರತಿಷ್ಠಾಪಿಸಿದ ವಿಗ್ರಹಗಳೂ ಕಟ್ಟಿಸಿದ ಛತ್ರಗಳೂ ಅಗ್ರಹಾರಗಳೂ ಇವೆ.

ಈಗಿನ ಚಾಮರಾಜನಗರ ಜಿಲ್ಲೆ ಪ್ರದೇಶ ಮೈಸೂರು ಸಂಸ್ಥಾನದಲ್ಲೇ ಅತ್ಯಂತ ದೊಡ್ಡದೆನಿಸಿದ್ದ ಮೈಸೂರು ಜಿಲ್ಲೆಯ ಭಾಗವಾಗಿತ್ತು. ಮೈಸೂರು ಜಿಲ್ಲೆಯಿಂದ ಮಂಡ್ಯ ಜಿಲ್ಲೆ 1939ರಲ್ಲಿ ಪ್ರತ್ಯೇಕವಾಯಿತು.

ಮೈಸೂರು ಸಂಸ್ಥಾನದ ಕಾಲದಲ್ಲಿ ಈ ಜಿಲ್ಲೆ ಹೆಚ್ಚಿನ ಅಭಿವೃದ್ಧಿ ಸಾಧಿಸಲಾಗಲಿಲ್ಲ. ಆದರೆ ಇಲ್ಲಿನ ಪ್ರವಾಸಿ ಮತ್ತು ಯಾತ್ರಾ ಸ್ಥಳಗಳು ಪ್ರಸಿದ್ಧವಾಗಿದ್ದುವು. 1926ರಲ್ಲಿ ಮೈಸೂರಿನಿಂದ ಚಾಮರಾಜನಗರದವರೆಗೆ ರೈಲುಮಾರ್ಗ ನಿರ್ಮಾಣವಾಯಿತು. ಇದು ಈ ಭಾಗದ ಸಾರಿಗೆ ಅಭಿವೃದ್ಧಿಗೆ ದೊಡ್ಡ ಕೊಡುಗೆಯಾಯಿತು.

ಸ್ವಾತಂತ್ರ್ಯ ಚಳವಳಿಯಲ್ಲಿ ಈ ಭಾಗದ ಜನರೂ ಭಾಗವಹಿಸಿದ್ದರು. 1928ರಲ್ಲಿ ಸಂಸ್ಥಾನದ ಪ್ರಥಮ ಕಾಂಗ್ರೆಸ್ ಅಧಿವೇಶನ ಮೈಸೂರು ನಗರದಲ್ಲಿ ಜರುಗಿತು. ಅದು ಈ ಭಾಗದ ಜನರಿಗೆ ಕಾಂಗ್ರೆಸ್ ಬಗ್ಗೆ ಒಲವು ಬೆಳೆಯಲು ಪ್ರೇರಕವಾಯಿತು. ಗಾಂಧೀಜಿಯವರು ತಮ್ಮ ಪ್ರವಾಸ ಕಾಲದಲ್ಲಿ ಈ ಜಿಲ್ಲೆಯ ಸರಹದ್ದಿನ ತಗಡೂರು, ಬದನವಾಳು ಮತ್ತು ನಂಜನಗೂಡುಗಳಿಗೆ ಭೇಟಿ ನೀಡಿದ್ದರು. ಸ್ವಾತಂತ್ರ್ಯಾನಂತರ ಭಾಷಾನುಗುಣ ಪ್ರಾಂತ್ಯ ರಚನೆಯಾದಾಗ (1956) ಕೊಳ್ಳೇಗಾಲ ತಾಲ್ಲೂಕು ಮೈಸೂರು ಜಿಲ್ಲೆಗೆ ಸೇರಿತು.

ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸಿ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲದೆ ಇನ್ನೂ ಹಲವಾರು ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ತ್ವದ ಸ್ಥಳಗಳಿವೆ. ಇಲ್ಲಿನ ಎಲ್ಲ ತಾಲ್ಲೂಕು ಕೇಂದ್ರಗಳೂ ಐತಿಹಾಸಿಕ ಮಹತ್ತ್ವ ಪಡೆದಿವೆ. ಇವಲ್ಲದೆ ಅಗರಂ, ಅಮಚವಾಡಿ, ಗಾಣಿಗನೂರು, ಹರದನಹಳ್ಳಿ, ಹೊಳೆ ಆಲೂರು, ಹೊಂಗನೂರು, ಕಂದಗಾಲ, ಕೆಸ್ಲೂರು, ಕೋಟೆಕೆರೆ, ಕುದೇರು, ಕುಂತೂರು, ಮದ್ದೂರುಗಳು ವಿವಿಧ ಕಾರಣಗಳಿಗಾಗಿ ಮಹತ್ತ್ವ ಪಡೆದಿವೆ.

ಈ ಜಿಲ್ಲೆಯಲ್ಲಿ ಇತರೆಡೆಗಳಂತೆ ಎಲ್ಲ ಧರ್ಮದವರೂ ಇದ್ದಾರೆ. ಕೊಂತಿ ಪ್ರಜೆ, ಚೌಡೇಶ್ವರಿ ಜಾತ್ರೆ, ಬಸವನ ಓಕಳಿ, ಅತ್ತಿಗುಳಿ ಹಬ್ಬದಂತಹ ಜನಪದ ಹಬ್ಬಗಳೂ ಜಾತ್ರೆಗಳೂ ನಡೆಯುತ್ತವೆ. ಜನರು ಮಲೆಯ ಮಹದೇಶ್ವರ, ನಂಜನಗೂಡು, ತಿರುಮಕೂಡಲು ನರಸೀಪುರ, ಮೈಸೂರಿನ ಚಾಮುಂಡಿಬೆಟ್ಟಗಳಿಗೆ ಹೆಚ್ಚಾಗಿ ಯಾತ್ರೆ ಹೋಗಿಬರುತ್ತಾರೆ. ಮಲೆಯೂರು ಜೈನ ಯಾತ್ರಾಸ್ಥಳವಾಗಿದೆ.

*

**ತಾಲ್ಲೂಕು:** ಈ ತಾಲ್ಲೂಕು ಪಶ್ಚಿಮ ಮತ್ತು ಉತ್ತರಕ್ಕೆ ಇದೇ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ ನಂಜನಗೂಡು ಹಾಗೂ ತಿರುಮಕೂಡಲು ನರಸೀಪುರ ತಾಲ್ಲೂಕುಗಳನ್ನು, ಪೂರ್ವಕ್ಕೆ ಇದೇ ಜಿಲ್ಲೆಯ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳನ್ನು, ದಕ್ಷಿಣಕ್ಕೆ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯನ್ನು ಮೇರೆಗಳಾಗಿ ಹೊಂದಿದೆ. ಚಾಮರಾಜನಗರ, ಹರದನಹಳ್ಳಿ, ಹರವೆ, ಸಂತೇಮರಳ್ಳಿ, ಚಂದಕವಾಡಿ ಹೋಬಳಿಗಳಿಂದಲೂ ಒಟ್ಟು 189 ಗ್ರಾಮಗಳಿಂದಲೂ ಕೂಡಿರುವ ಈ ತಾಲ್ಲೂಕಿನ ವಿಸ್ತೀರ್ಣ 1235.9ಚ.ಕಿಮೀ. ಜನಸಂಖ್ಯೆ 3,36,893.

ಪೂರ್ವ ಮತ್ತು ದಕ್ಷಿಣ ಎಲ್ಲೆಯಲ್ಲಿ ಬಿಳಿಗಿರಿರಂಗ ಶ್ರೇಣಿಯ ಬೆಟ್ಟಪ್ರದೇಶವಿದೆ. ಈ ಪ್ರದೇಶದಲ್ಲಿ ಸುಮಾರು ದಟ್ಟವಾದ ಪರ್ಣಪಾತಿ ವೃಕ್ಷಗಳಿರುವ ಕಾಡಿದೆ. ಆ ಭಾಗವನ್ನು ಬಿಟ್ಟರೆ ತಾಲ್ಲೂಕು ಬಹುತೇಕ ಮೈದಾನ.

ಇಲ್ಲಿಯ ಮುಖ್ಯ ನದಿ ಹೊನ್ನುಹೊಳೆ ಅಥವಾ ಸುವರ್ಣಾವತಿ. ಇದು ದಕ್ಷಿಣ ಗಡಿಯ ಆಚೆ ನೀಲಗಿರಿ ಬೆಟ್ಟಸಾಲಿನಲ್ಲಿ ದಿಂಬಂ ಎಂಬಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿದು ರಾಮಸಮುದ್ರ ಮತ್ತು ಆಲೂರುಗಳನ್ನು ದಾಟಿ ಯಳಂದೂರಿನತ್ತ ಸಾಗುತ್ತದೆ. ಚಿಕ್ಕ ಹೊಳೆ ಇದರ ಉಪನದಿ.

ಬಿಳಿಗಿರಿರಂಗನ ಬೆಟ್ಟದ ಪ್ರದೇಶ ಚಾರ್ನೋಕೈಟ್ ಶಿಲೆಗಳದು. ತಾಲ್ಲೂಕಿನ ಇತರ ಭಾಗದಲ್ಲಿ ಕಣಶಿಲೆಯೇ ತಳಶಿಲೆ. ತಾಲ್ಲೂಕಿನಲ್ಲಿ ಚಂದ್ರಶಿಲೆ ಮತ್ತು ಅಲಂಕಾರಕ್ಕಾಗಿ ಬಳಸುವ ಗ್ರಾನೈಟ್ ಶಿಲೆಗಳ ಸಂಪತ್ತಿದೆ. ತಾಲ್ಲೂಕಿನಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನಿಂದ ಹಿಡಿದು ನುರುಜು ಮಿಶ್ರಿತ ಮಣ್ಣಿನ ಭೂಮಿ ಇದ್ದು ಸಾಮಾನ್ಯವಾಗಿ ಫಲವತ್ತಾಗಿದೆ. ಸುವರ್ಣಾವತಿಯ ಬಳಿ ಚೌಳು ಮಣ್ಣು ವಿಶೇಷವಾಗಿದೆ. ತಾಲ್ಲೂಕಿನ ಪಶ್ಚಿಮದ ಭಾಗದ ನೆಲ ಹೆಚ್ಚು ಸಾರವತ್ತಾದ್ದಲ್ಲ. ಪೂರ್ವಕ್ಕೆ ಸಾಗಿದಂತೆ ಮಣ್ಣಿನ ಗುಣ ಅಧಿಕ. ಹೊನ್ನುಹೊಳೆ ಕಣಿವೆಯ ಮಣ್ಣು ತುಂಬ ಉತ್ತಮ. ಸುವರ್ಣಾವತಿಗೆ ಅಟುಗುಳಿಪುರದ ಬಳಿ ಕಟ್ಟೆ ಕಟ್ಟಲಾಗಿದೆ. 26ಮೀ. ಎತ್ತರವಿರುವ ಈ ಕಟ್ಟೆಯ ಉದ್ದ ಸು.1158ಮೀ. ಇದರ ಬಲನಾಲೆಯ ಉದ್ದ 23ಕಿಮೀ. ಎಡನಾಲೆ 6.5ಕಿಮೀ. 1971 ರಿಂದ ನೀರಾವರಿಗೆ ಬಳಸಿಕೊಳ್ಳಲಾಗುತ್ತಿರುವ ಇದರ ಒಟ್ಟು ಅಚ್ಚುಕಟ್ಟು 1,000 ಎಕರೆ. ಕೊಯಮತ್ತೂರು ಜಿಲ್ಲೆಯಲ್ಲಿ ಹುಟ್ಟಿ ಚಾಮರಾಜನಗರ ತಾಲ್ಲೂಕಿನಲ್ಲಿ ಸುವರ್ಣಾವತಿಯನ್ನು ಸೇರುವ ಚಿಕ್ಕಹೊಳೆಗೆ ಈ ತಾಲ್ಲೂಕಿನಲ್ಲಿ, ಸುವರ್ಣಾವತಿ ಕಟ್ಟೆಯಿಂದ ಕೆಳಕ್ಕೆ 8ಕಿಮೀ ದೂರದಲ್ಲಿ, ಒಂದು ಮಧ್ಯಮ ವರ್ಗದ ಕಟ್ಟೆ ಕಟ್ಟಲಾಗಿದೆ. ಇವಲ್ಲದೆ ತಾಲ್ಲೂಕಿನಲ್ಲಿ ನೀರಾವರಿಗೆ ಅನುಕೂಲವಾದ ಹಲವು ಕೆರೆಗಳುಂಟು. ತಾಲ್ಲೂಕಿನ ಕೊಳವೆ ಬಾವಿಗಳು ಒಣಪ್ರದೇಶದಲ್ಲಿ ಮುಖ್ಯ ನೀರಾವರಿ ಮೂಲಗಳಾಗಿವೆ. ವಾರ್ಷಿಕ ಸರಾಸರಿ ಮಳೆ 667.59ಮಿಮೀ.

ಬಿಳಿಗಿರಿರಂಗನ ಬೆಟ್ಟದ ರಂಗನಾಥ ದೇವರ ರಥೋತ್ಸವ

ಜೋಳ ಈ ತಾಲ್ಲೂಕಿನ ಮುಖ್ಯ ಬೆಳೆ. ರಾಗಿ, ಹುರುಳಿ ಮತ್ತು ಇತರ ಹಲವು ಖುಷ್ಕಿ ಬೆಳೆಗಳನ್ನೂ ಬೆಳೆಯುತ್ತಾರೆ. ಹತ್ತಿಯನ್ನೂ ಬೆಳೆಯುವುದುಂಟು. ಕೆಲವೆಡೆ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ.

ನೀರಾವರಿ ಸೌಲಭ್ಯ ಇರುವಲ್ಲಿ ಬತ್ತ, ಕಬ್ಬು ಬೆಳೆಯುತ್ತಾರೆ. ಹಿಪ್ಪುನೇರಳೆ ವ್ಯವಸಾಯವೂ ವಿಶೇಷವಾಗಿ ನಡೆಯುತ್ತದೆ. ರೇಷ್ಮೆಹುಳು ಸಾಕುವುದು, ಎಳೆ ತೆಗೆಯುವುದು ತಾಲ್ಲೂಕಿನ ಒಂದು ಮುಖ್ಯ ಕಸಬು. ಹೊನ್ನುಹೊಳೆಯ ದಂಡೆಯ ಮೇಲೆ ಒಳ್ಳೆಯ ಅಡಕೆ, ತೆಂಗು ತೋಟಗಳಿವೆ. ಬಿಳಿಗಿರಿರಂಗನ ಬೆಟ್ಟ ಶ್ರೇಣಿಯಲ್ಲಿ ಕಾಫಿತೋಟಗಳೂ ಉಂಟು.

ತಾಲ್ಲೂಕಿನಲ್ಲಿ ಅಂಚೆ, ತಂತಿ, ವಿದ್ಯುಚ್ಛಕ್ತಿ ಸೌಲಭ್ಯಗಳ ಜೊತೆಗೆ ಶಾಲಾ ಕಾಲೇಜುಗಳೂ ವೈದ್ಯಾಲಯಗಳೂ ಇವೆ. ಸುತ್ತಲ ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ, ನಂಜನಗೂಡುಗಳಿಗೆ ರಸ್ತೆಮಾರ್ಗ ಸಂಪರ್ಕವಿದೆ. ಮೈಸೂರುಚಾಮರಾಜನಗರ ರೈಲ್ವೆ ಮಾರ್ಗವಿದ್ದು ಮುಂದೆ ಇದನ್ನು ವಿಸ್ತರಿಸುವ ಯೋಜನೆ ಇದೆ. ಅಮಚವಾಡಿ, ಬಾಗಳಿ, ಬದನಗುಪ್ಪೆ, ಚಂದಕವಾಡಿ, ಗಣಗನೂರು, ಹೊಂಗನೂರು, ಹರದನಹಳ್ಳಿ, ಹರವೆ, ಜ್ಯೋತಿಗೌಡನಪುರ, ಕಾಗಲವಾಡಿ, ಕೊತ್ತಲವಾಡಿ, ಕಡಲೂರು, ಕುದೇರು, ಮಂಗಲ, ನಾಗವಳ್ಳಿ, ರಾಮಸಮುದ್ರ, ಸರಗೂರು, ಸಂತೇಮರಳ್ಳಿ, ತಮ್ಮಡಹಳ್ಳಿ, ಉಮ್ಮತ್ತೂರು ಈ ತಾಲ್ಲೂಕಿನ ದೊಡ್ಡ ಗ್ರಾಮಗಳು. ಸಂತೇಮರಳ್ಳಿಯ ಸಂತೆ ಪ್ರಸಿದ್ಧವಾದುದು. ಕುದೇರು ಮತ್ತು ಮರಳ್ಳಿಗಳಲ್ಲಿ ರೇಷ್ಮೆ ವ್ಯವಸಾಯ ಉತ್ತಮವಾಗಿದೆ. ಚಾಮರಾಜ ನಗರಕ್ಕೆ 10ಕಿಮೀ

ದೂರದಲ್ಲಿರುವ ಹಳೇ ಆಲೂರಿನಲ್ಲಿ ಪುರಾತನವಾದ ಅರ್ಕೇಶ್ವರ ಗುಡಿಯುಂಟು. ಹರದನಹಳ್ಳಿ (ನೋಡಿ) ಐತಿಹಾಸಿಕ ಸ್ಥಳ. ತೋಂಟದ ಸಿದ್ಧಲಿಂಗರ ಗುರುವಾದ ಗೋಸಲ ಚೆನ್ನಬಸವರು ಇದ್ದ ಗ್ರಾಮವಿದು. ನರಸಮಂಗಲದಲ್ಲಿ ಜೀರ್ಣವಾದ ರಾಮೇಶ್ವರ ಗುಡಿಯೊಂದಿದೆ. ಚಾಮರಾಜ ನಗರಕ್ಕೆ 3ಕಿಮೀ ದೂರದಲ್ಲಿರುವ ರಾಮಸಮುದ್ರದಲ್ಲಿ ಪುರಾತನ ಮಣಿಪುರದ್ದೆಂದು ಹೇಳಲಾದ ಅವಶೇಷಗಳಿವೆ. ಮಲೆಯೂರು ಬೆಟ್ಟದಲ್ಲಿ ಕೆಲವು ಪ್ರಾಚೀನ ಜೈನ ಅವಶೇಷಗಳಿವೆ. ಚಾಮರಾಜನಗರಕ್ಕೆ 16ಕಿಮೀ ದೂರದಲ್ಲಿ ನಂಜನಗೂಡು ಯಳಂದೂರು ರಸ್ತೆಯಲ್ಲಿರುವ ಉಮ್ಮತ್ತೂರು ಗ್ರಾಮ ಪಾಳೆಯಪಟ್ಟಿನ ಕೇಂದ್ರವಾಗಿತ್ತು.

**ಪಟ್ಟಣ:** ಜಿಲ್ಲಾ ಕೇಂದ್ರವಾದ ಚಾಮರಾಜನಗರ ಈ ತಾಲ್ಲೂಕಿನ ಮುಖ್ಯ ಪಟ್ಟಣ. ಮೈಸೂರು ನಗರದ ಆಗ್ನೇಯಕ್ಕೆ 61 ಕಿಮೀ ದೂರದಲ್ಲೂ ನಂಜನಗೂಡಿನಿಂದ 35ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 60,810.

ಬಂಡೀಪುರ ರಾಷ್ಟ್ರೀಯ ಉದ್ಯಾನವನ

ಮೈಸೂರು–ಚಾಮರಾಜನಗರ ರೈಲು ಮಾರ್ಗದ ಕೊನೆಯ ನಿಲ್ದಾಣವಿದು. ನಂಜನಗೂಡಿನಿಂದ ಕೊಯಮತ್ತೂರಿನ ಕಡೆಗೆ ಚಾಮರಾಜನಗರದ ಮೂಲಕ ಸಾಗುವ ಒಂದು ಹೆದ್ದಾರಿಯಿದೆ. ಗುಂಡ್ಲುಪೇಟೆ–ತಿರುಮಕೂಡಲು ನರಸೀಪುರ ರಸ್ತೆ ಈ ಊರಿನ ಮೂಲಕ ಸಾಗುತ್ತದೆ. ಇದೊಂದು ಮುಖ್ಯ ವ್ಯಾಪಾರಸ್ಥಳ. ಇಲ್ಲಿ ಪುರಸಭಾಡಳಿತವಿದೆ. ರೇಷ್ಮೆ ಕೈಗಾರಿಕಾ ಕೇಂದ್ರ, ಶಾಲಾ ಕಾಲೇಜುಗಳೂ ಆಸ್ಪತ್ರೆಗಳೂ ಇವೆ.

ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿದ (1826) ಇಲ್ಲಿನ ಚಾಮರಾಜೇಶ್ವರ ದೇವಸ್ಥಾನ ದೊಡ್ಡ ಪ್ರಾಕಾರ, ಎತ್ತರವಾದ ಮಹಾದ್ವಾರ ಗೋಪುರ ಮತ್ತು ಸುತ್ತಲೂ ಕೈಸಾಲೆ ಇರುವ ದೊಡ್ಡ ದೇವಾಲಯ. ಒಳಗೆ ಮೂರು ಗುಡಿಗಳಿವೆ. ಮಧ್ಯದ ಗುಡಿಯಲ್ಲಿ ಶಿವಲಿಂಗವಿದೆ. ಇದು ಚಾಮರಾಜೇಶ್ವರ. ಎಡಗಡೆ ಗುಡಿಯಲ್ಲಿ ಕೆಂಪನಂಜಾಂಬಾ ವಿಗ್ರಹವೂ ಬಲಗಡೆಯದರಲ್ಲಿ ಚಾಮುಂಡಿ ವಿಗ್ರಹವೂ ಇವೆ. ನವರಂಗದ ಎಡಬಲಗಳಲ್ಲಿ ಆರು ಲಿಂಗಗಳೂ ನವರಂಗದ್ವಾರದ ಒಳಪಕ್ಕಗಳಲ್ಲಿ ಸೂರ್ಯಚಂದ್ರರ ವಿಗ್ರಹಗಳೂ ಉಂಟು. ಪ್ರಾಕಾರದೊಳಗೆ ಸುತ್ತಲೂ ಹಲವು ಲಿಂಗಗಳೂ ಅರುವತ್ತು ಮೂರು ಪುರಾತನರ ವಿಗ್ರಹಗಳೂ ಇವೆ. ಶಿವನ ಕೆಲವು ಲೀಲಾಮೂರ್ತಿಗಳು ಸುಂದರವಾಗಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ, ಅವರ ನಾಲ್ವರು ರಾಣಿಯರ ವಿಗ್ರಹಗಳೂ ಇವೆ. ಈ ಊರಿನ ವೀರಭದ್ರ ಗುಡಿಯೂ ಗಮನಾರ್ಹ. ದೇಗುಲದಲ್ಲಿ ವೀರಭದ್ರ ಮೂರ್ತಿಯ ಮತ್ತು ಭದ್ರಕಾಳಿಯ ವಿಗ್ರಹಗಳು ಮುಖ್ಯವಾದವು. ಪಾರ್ಶ್ವನಾಥ ದೇವಸ್ಥಾನದ ಕೆಲವು ಮೂರ್ತಿಗಳು ತೆರಕಣಾಂಬಿ ಮತ್ತು ಹರಳಕೋಟೆಯಿಂದ ತಂದವೆನ್ನಲಾಗಿದೆ. ಚಾಮರಾಜ ಒಡೆಯರು ಹುಟ್ಟಿದ ಸ್ಥಳದಲ್ಲಿ ಕಟ್ಟಲಾದ ಜನನ ಮಂಟಪ ಸುಂದರವಾಗಿದೆ. ಅದರ ಗೋಡೆಯ ಮೇಲಣ ಚಿತ್ರಗಳು ಆಕರ್ಷಕವಾಗಿವೆ. ಇಲ್ಲಿರುವ ದೊಡ್ಡ ಅರಸಿನಕೊಳ ಕಂಠೀರವ ನರಸರಾಜ ಒಡೆಯರ್ ಕಟ್ಟಿಸಿದ್ದು. *

**ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ :** ಕರ್ನಾಟಕದ ಪ್ರಸಿದ್ಧ ವೃತ್ತಿ ತರಬೇತಿ ಶಾಲೆಗೆ ಹೆಸರಾದ, ಕಲಾಕೇಂದ್ರ. ಕಾವಾ ಎಂದೂ ಪ್ರಸಿದ್ಧ. ಅನೇಕ ಮೇಧಾವಿ ಕುಶಲಕೈಗಾರಿಕಾಪಟುಗಳನ್ನು, ಕಲಾವಿದರನ್ನು ಮತ್ತು ಶಿಲ್ಪಿಗಳನ್ನು ರೂಪಿಸಿರುವ ಈ ಶಾಲೆ ಭಾರತದಲ್ಲಿಯೂ ಹೆಸರಾಗಿದೆ. ಇಲ್ಲಿನ ಕಲಾವಸ್ತುಗಳೂ ಕಲಾಕೃತಿಗಳೂ ವಿಶ್ವಾದ್ಯಂತ ಪ್ರಸರಿಸಿವೆ. ದೇಶವಿದೇಶಗಳಿಂದ ಗಣ್ಯ ಅತಿಥಿಗಳು ಬಂದಾಗ ಸರ್ಕಾರ ಈ ಕಲಾ ಶಾಲೆಯಿಂದ ಅಪೂರ್ವ ಕಲಾಕೃತಿಗಳನ್ನು ಪಡೆದು ಅವರಿಗೆ ಅರ್ಪಿಸುವ ಪರಿಪಾಠ ಇದೆ.

ಈ ಸಂಸ್ಥೆ 1906ರಲ್ಲಿ ಮೈಸೂರು ನಗರದಲ್ಲಿ ಸ್ಥಾಪಿತವಾಯಿತು. ಸಯ್ಯಾಜಿರಾವ್ ರಸ್ತೆಯಲ್ಲಿ ಈಗಿರುವ ಭವ್ಯಕಟ್ಟಡದ ಸ್ಥಳ ಹಿಂದೆ ವಿಶ್ವಕರ್ಮ ಜನಾಂಗದ ಬೀದಿಯಾಗಿತ್ತೆಂದು ತಿಳಿದುಬರುತ್ತದೆ. ಅನಂತರ ಅವರಿಗೆ ಬೇರೆ ಕಡೆಯಲ್ಲಿ ನಿವೇಶನವನ್ನು ನೀಡಿ ಈ ಕಟ್ಟಡಕ್ಕೆ ಉಚಿತ ಸ್ಥಳವನ್ನು ಪಡೆದುಕೊಳ್ಳಲಾಯಿತು. ಈ ನೂತನ ಕಟ್ಟಡಕ್ಕೆ ಬರುವ ಮೊದಲು ವೃತ್ತಿಶಿಕ್ಷಣ ಶಾಲೆ ನಜರಬಾದಿನ ಪುಟ್ಟ ಕಟ್ಟಡವೊಂದರಲ್ಲಿತ್ತು. ಅಲ್ಲಿ ಚಿತ್ರಕಲೆ, ಮರದ ಕೆತ್ತನೆ, ಗಂಧದ ಕೆತ್ತನೆ, ನೇಯ್ಗೆ, ಬೆತ್ತದ ಕೈಗಾರಿಕೆ, ಪುಸ್ತಕಕ್ಕೆ ರಟ್ಟು ಕಟ್ಟುವಿಕೆ ಮುಂತಾದ ಕರಕುಶಲ ಕಲಾಶಿಕ್ಷಣ ನೀಡಲಾಗುತ್ತಿತ್ತು. ಒಮ್ಮೆ ಈ ಪುಟ್ಟ ಕಲಾಶಾಲೆಗೆ ಭೇಟಿ ಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರ ಸಲಹೆಯಂತೆ ಈಗಿನ ಸ್ಥಳಕ್ಕೆ ಆ ಶಾಲೆಯನ್ನು ವರ್ಗಾಯಿಸಲಾಯಿತು.

ಶಿಲೆಯಲ್ಲಿ ಕೆತ್ತನೆ ಕೆಲಸ

ವೃತ್ತಿಶಿಕ್ಷಣದ ಪ್ರಗತಿಗೆ ಸರ್.ಎಂ.ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಸಲಹಾ ಸಮಿತಿಯನ್ನು 1910ರಲ್ಲಿ ನೇಮಿಸಿತು. ಸಮಿತಿಯ ಸಲಹೆಗಳ ಮೇರೆಗೆ ಮೈಸೂರು ನಗರದ ಇಟ್ಟಿಗೆಗೂಡಿನಲ್ಲಿದ್ದ ಎಂಜಿನಿಯರಿಂಗ್ ಶಾಲೆ ಮತ್ತು ನಜರಬಾದಿನಲ್ಲಿದ್ದ ಕೈಗಾರಿಕಾ ಶಾಲೆ ಇವೆರಡನ್ನೂ ಸಮಾವೇಶಗೊಳಿಸಿ ಶ್ರೀಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯಾಗಿ ಪರಿವರ್ತನೆ ಮಾಡಲಾಯಿತು (1913). ಆರಂಭದಲ್ಲಿದ್ದ ಶಾಲೆಗಳಲ್ಲಿ ಎಂಜಿನಿಯರಿಂಗ್, ಕೈಗಾರಿಕೆ ಮತ್ತ ವಾಣಿಜ್ಯ ಶಾಲೆಗಳು ಮುಖ್ಯವಾದವು. ಅನಂತರ ಸಂಸ್ಥೆಯ ಆಡಳಿತವನ್ನು ವಿದ್ಯಾ ಇಲಾಖೆಯಿಂದ ಕೈಗಾರಿಕಾ ಇಲಾಖೆಗೆ 1920–21ರಲ್ಲಿ ವರ್ಗಾಯಿಸಲಾಯಿತಲ್ಲದೆ, ಶಿಕ್ಷಣ ಪದ್ಧತಿಯಲ್ಲಿಯೂ ಸುಧಾರಣೆಗಳನ್ನು ಮಾಡಲಾಯಿತು. ಚಿತ್ರಕಲೆ, ಮಾದರಿಗಳ ತಯಾರಿಕೆ, ಮರಗೆಲಸ, ಮರದ ಕೆತ್ತನೆ, ಲೋಹಗೆಲಸ, ಕೆತ್ತನೆ ತರಗತಿಗಳನ್ನು ತೆರೆಯಲಾಯಿತು. ಈ ಶಿಕ್ಷಣ ಐದು ವರ್ಷಗಳ ಅವಧಿಯಲ್ಲಿ ಮುಗಿಯುವಂತೆಯೂ ಪಠ್ಯಕ್ರಮವನ್ನು ರೂಪಿಸಲಾಯಿತು. ಕ್ರಮೇಣ ಎನ್‌ಗ್ರೇವಿಂಗ್, ಪ್ಲೇಟಿಂಗ್, ಗಂಧ, ದಂತದ ಕೆತ್ತನೆ ಮತ್ತು ಶಿಲ್ಪ ಮುಂತಾದ ಶಾಖೆಗಳನ್ನು ತೆರೆಯಲಾಯಿತು.

ಲೋಹದಿಂದ ವಿಗ್ರಹ ನಿರ್ಮಾಣ

ಶಿಕ್ಷಣ ಪಡೆದ ಅಭ್ಯರ್ಥಿಗಳಲ್ಲಿ ಕೆಲವರನ್ನು ಆರಿಸಿಕೊಂಡು, ಅವರಿಗೆ ನಿಯಮಿತ ವೇತನ ಕೊಟ್ಟು ಕೆಲಸ ಮಾಡಿಸಿಕೊಳ್ಳುವ ಅವಕಾಶವೂ ಇಲ್ಲಿದೆ. ಇವರಿಂದ ರಚಿತವಾದ ಕೃತಿಗಳನ್ನು ಮಾರಾಟ ಮಾಡಲು ಶಾಖೆಯಲ್ಲಿಯೇ ಒಂದು ಪ್ರದರ್ಶನ ಕೇಂದ್ರವನ್ನು ಆರಂಭಿಸಲಾಗಿದೆ. ಶಾಲೆಯ ಹೊರಗೆ ಉಳಿದು ಕಲಾವಿದರು ರೂಪಿಸಿ ತಂದ ಕೃತಿಗಳನ್ನೂ ಆ ಮಾರಾಟದ ಪ್ರದರ್ಶನಾಲಯದಲ್ಲಿರಿಸುವ ಅವಕಾಶವೂ ಇದೆ. ಸರ್ಕಾರ ಇಂಥ ಕಸುಬುದಾರರಿಗೆ ರಿಯಾಯಿತಿ ದರದಲ್ಲಿ ಗಂಧದ ಮರ, ದಂತ ಮುಂತಾದ ಸಾಮಗ್ರಿಗಳನ್ನು ಒದಗಿಸಿ ಪ್ರೋತ್ಸಾಹಿಸುತ್ತಿದೆ. ಈ ನೂತನ ಯೋಜನೆಯಿಂದಾಗಿ ಕರಕುಶಲಿಗರ ಸಂಖ್ಯೆ ಬೆಳೆಯುತ್ತಿದೆ.

ಶಾಲೆಯ ಅಭಿವೃದ್ಧಿಗಾಗಿ ಈ ತನಕ ದುಡಿದ ಮುಖ್ಯಾಧಿಕಾರಿಗಳ ಸೇವೆ ಸ್ಮರಣೀಯ. ಒಬ್ಬೊಬ್ಬರ ಕಾಲದಲ್ಲೂ ಒಂದೊಂದು ರೀತಿಯಲ್ಲಿ ಶಾಲೆ ಅಭಿವೃದ್ಧಿಹೊಂದುತ್ತ ಬಂದಿದೆ. ಮೊಟ್ಟಮೊದಲ ಅಧಿಕಾರಿ ಸುಬ್ಬಸ್ವಾಮಿ ಅಯ್ಯರ್. ಇವರ ಅನಂತರ 1917ರಲ್ಲಿ ಜೆರಾಲ್ಡ್

ಆಲಫಿರ್‌ಟನ್ ಅವರು ಲಂಡನ್ನಿನಿಂದ ಬಂದು ಶಾಲೆಯ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಇವರಿಗೆ ಸಹಾಯಕರಾಗಿ ಬಂಗಾಲದ ಕಲಾವಿದ ಎಸ್.ಕೆ.ದೇವಾಲ್ ಅವರು ಕಲಾವಿಭಾಗವನ್ನು ನೋಡಿಕೊಳ್ಳುತ್ತಿದ್ದರು. ಆರ್.ಟಿ.ರಾಮಕೃಷ್ಣ, ಆರ್.ವೇಣುಗೋಪಾಲ್ ನಾಯುಡು, ಡಿ.ಕೃಷ್ಣಯ್ಯ, ಬಾಲಸುಬ್ರಹ್ಮಣ್ಯಂ, ಕೆ.ಕೇಶವಯ್ಯ, ಎಸ್.ಜಿ.ಟಂಕಸಾಲಿ ಮುಂತಾದವರು ಆ ಸಮಯದಲ್ಲಿ ಶಾಲೆಯ ಕಲಾಧ್ಯಾಪಕರಾಗಿದ್ದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಎಸ್.ರಾಮಸ್ವಾಮಿ ಅಯ್ಯಂಗಾರ್, ಎನ್.ಜಿ.ಪಾವಂಜೆ, ಎಂ.ವೀರಪ್ಪ ಮೊದಲಾದವರೂ ಶಾಲೆಯ ಕೀರ್ತಿಗೆ ಶ್ರಮಿಸಿದ್ದಾರೆ. ಶಿಲ್ಪಿ ತಿನ್ನಾಚಾರ್ಯ ಮತ್ತು ಇವರ ಸಹೋದರರು, ಖ್ಯಾತ ದಂತಶಿಲ್ಪಿ ಎಚ್.ವೆಂಕಪ್ಪ, ಎಸ್.ನಂಜುಂಡಸ್ವಾಮಿ, ವೈ.ಸುಬ್ರಹ್ಮಣ್ಯರಾಜು, ಬಸವಯ್ಯ, ಸೂಫಿ ಮುಂತಾದ ಪ್ರತಿಭಾವಂತ ಕಲಾಕೋವಿದರ ಕರಕುಶಲತೆಗೆ ಹೆಚ್ಚಿನ ಪ್ರೋತ್ಸಾಹ ಸಂಸ್ಥೆಯಿಂದ ದೊರೆಯಿತು.



ಜೇಡಿಮಣ್ಣಿನಿಂದ ಆಕೃತಿ ರಚನೆ

ಮರಗೆಲಸದಲ್ಲೂ ಈ ಶಾಲೆ ಹೆಸರಾಗಿದೆ. ಇದಕ್ಕೆ ಕಾರಣ ಜರ್ಮನಿಯ ಯು.ಜಿ.ಎಕ್ಸರ್ ರಂಥ ನಿಪುಣರ ಸೇವೆಯನ್ನು ಶಾಲೆ ಉಪಯೋಗಿಸಿಕೊಂಡಿದ್ದು. ಆಶೀರ್ವಾದಂ ಮೊದಲಾದವರು ಆ ವಿಭಾಗದಲ್ಲಿ ಮತ್ತೂ ಪ್ರಗತಿಯನ್ನು ತಂದುಕೊಟ್ಟರು.

ಶಾಲೆಯ ಎಲ್ಲ ವಿಭಾಗಗಳ ವಿದ್ಯಾರ್ಥಿಗಳಿಗೂ ಚಿತ್ರಕಲೆಯ ವಿಷಯವನ್ನು ತಿಳಿಯುವ ಅವಕಾಶ ಇದೆ. ವಿದ್ಯಾರ್ಥಿಗಳು ಆಗಾಗ ಮೃಗಾಲಯಕ್ಕೂ ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆಗೂ ಹೋಗಿ ಬರುವ ಅವಕಾಶವನ್ನು ಮಾಡಿಕೊಡಲಾಗಿದೆ.

ಚಿತ್ರಕಲಾ ತರಗತಿ

ಈಗ್ಗೆ ಈ ಸಂಸ್ಥೆಯಿಂದ ಸು.35,000 ಮಂದಿ ಶಿಕ್ಷಣ ಪಡೆದಿದ್ದಾರೆ. ಪ್ರತಿಭಾವಂತ ಹಳೆಯ ವಿದ್ಯಾರ್ಥಿಗಳಲ್ಲಿ ಕೆ.ವೆಂಕಟಪ್ಪ, ಕೆ.ಕೆ. ಹೆಬ್ಬಾರ್, ಎಸ್.ನಂಜುಂಡಸ್ವಾಮಿ, ಎಸ್.ಎ.ಸ್ವಾಮಿ, ಎಂ.ವೀರಪ್ಪ, ವೈ.ನಾಗರಾಜು, ವೈ.ಸುಬ್ರಹ್ಮಣ್ಯರಾಜು, ಎಸ್.ಆರ್. ಅಯ್ಯಂಗಾರ್, ಮೀರ್ ಶೌಕತ್ಆಲಿ, ಸೂಫಿ, ಬಿ.ಎಚ್.ರಾಮಚಂದ್ರ, ಎನ್.ಹನುಮಯ್ಯ, ರುಮಾಲೆ, ಶುದ್ಧೋದನ, ಚಂದ್ರಶೇಖರ, ಸೋಮಸುಂದರ, ಕುಕ್ಕೆ, ಎಂ.ಟಿ.ವಿ.ಆಚಾರ್ಯ, ಪಿ.ಆರ್.ತಿಪ್ಪೇಸ್ವಾಮಿ, ಕಾಳಪ್ಪ, ಶೆಣೈ, ಮರಿಸ್ವಾಮಿ, ಗೋವಿಂದಪ್ಪ, ಕೆ.ಎಲ್.ವೆಂಕಟೇಶ್ ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

1970ರಲ್ಲಿ ಶಾಲೆ ತನ್ನ ಅರುವತ್ತು ವರ್ಷದ ವಜ್ರ ಮಹೋತ್ಸವವನ್ನು ಆಚರಿಸಿತು. ಇದರ ನೆನಪಿಗಾಗಿ ಆರು ಲಕ್ಷ ರೂ.ಗಳ ಅಂದಾಜಿನಲ್ಲಿ ಚಿತ್ರಕಲಾ ವಿಭಾಗದ ಒಂದು ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಶಾಲೆಯ ಆವರಣದಲ್ಲಿ ಆಗಿನ ರಾಜ್ಯಪಾಲರು ನೆರವೇರಿಸಿದರು (1970). ತರುವಾಯ ಈ ಸಂಸ್ಥೆಯ ಚಿತ್ರಕಲಾ ವಿಭಾಗವು ಬೇರ್ಪಡೆಗೊಂಡು ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ ಎಂಬ ಹೆಸರಿನಲ್ಲಿ ಪ್ರತ್ಯೇಕ ಅಸ್ತಿತ್ವಹೊಂದಿ ನಡೆದುಕೊಂಡು ಬರುತ್ತಿದೆ. ಅದು ಕಾವ ಎಂಬ ಹೆಸರಿನಿಂದಲೂ ಪರಿಚಿತವಾಗಿದೆ.

ತಾಂತ್ರಿಕ ಸಂಸ್ಥೆಯು ಕರಕುಶಲ ಕಸಬನ್ನು ಆಧುನಿಕಗೊಳಿಸುವುದು ಹಾಗೂ ಗ್ರಾಮಾಂತರ ಕುಶಲಕರ್ಮಿಗಳಿಗೆ ಆಧುನಿಕ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ನೀಡಿ, ತರಬೇತಿ ನೀಡಿ ಅವರ ಕಸಬನ್ನು ಆರ್ಥಿಕವಾಗಿ ಸಬಲವಾಗುವಂತೆ ಮಾಡುವುದನ್ನು ಮುಖ್ಯ ಚಟುವಟಿಕೆಯಾಗಿ ಹೊಂದಿದೆ. ಇಲ್ಲಿ ತರಬೇತಿ ಪಡೆದ ಅನೇಕ ಪ್ರತಿಭಾವಂತರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅನೇಕರು ಸ್ವಂತ ಉದ್ಯಮಗಳನ್ನೂ ನಡೆಸುತ್ತಿದ್ದಾರೆ.

ಸಂಸ್ಥೆಯು ಹಿಂದೆ 12 ವಿವಿಧ ಕಸುಬುಗಳಲ್ಲಿ ತರಬೇತಿ ನೀಡುತ್ತಿತ್ತು. ಈಗ ಮರಗೆಲಸ, ಯಂತ್ರಾಗಾರ, ಲೋಹದ ಶಿಲ್ಪಕಲೆ, ಬೆತ್ತದ ಕೆಲಸ, ಮಾಡಲಿಂಗ್‌ಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಈ ಸಂಸ್ಥೆಯ ಆಧುನೀಕರಣಕ್ಕೆ ಸರ್ಕಾರದಿಂದ ಯೋಜನೆ ಮಂಜೂರಾಗಿದೆ. ಅದರಂತೆ ಕರಕುಶಲಕಲೆ, ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ತರಬೇತಿ, ಅಪ್ಲೈಡ್ ಡಿಸೈನ್ ಕ್ರಾಫ್ಟ್, ಶಿಲ್ಪಕಲೆ, ಆಭರಣಗಳು ಮುಂತಾದ ವಿಷಯಗಳನ್ನು ಹೊಸದಾಗಿ ಸೇರಿಸುವ ಉದ್ದೇಶ ಹೊಂದಲಾಗಿದೆ. ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣವಾಗಿದೆ. ಈಗ ಸಂಸ್ಥೆಯನ್ನು ಕೈಗಾರಿಕಾ ಇಲಾಖೆಯ ಅಧೀನದಲ್ಲಿ ಉಪನಿರ್ದೇಶಕ ಅಧಿಕಾರಿ ನೋಡಿಕೊಳ್ಳುತ್ತಿದ್ದಾರೆ.

**ಚಾಮರ್ಸ್, ಜಾರ್ಜ್ :** 1742–1825. ಸ್ಕಾಟ್ಲೆಂಡಿನ ಪ್ರಾಚೀನಾನ್ವೇಷಕ ಇತಿಹಾಸಕಾರ, ರಾಜಕೀಯ ಬರೆಹಗಾರ. ಜನಿಸಿದ್ದು ಸ್ಕಾಟ್ಲೆಂಡಿನ ಮರಿ ಕೌಂಟಿಯ ಫೊಕಾಬರ್ಸ್‌ನಲ್ಲಿ. ಆಬರ್‌ಡೀನ್ ಮತ್ತು ಎಡಿನ್‌ಬರೊಗಳಲ್ಲಿ ವಿದ್ಯಾಭ್ಯಾಸ ಮುಗಿಸಿ, 1763ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನದ ಮೇರಿಲ್ಯಾಂಡಿಗೆ ವಲಸೆಹೋಗಿ ವಕೀಲಿವೃತ್ತಿಯಲ್ಲಿ ನಿರತನಾದ. ಅಮೆರಿಕದಲ್ಲಿ ಆಂತರಿಕ ಯುದ್ಧ ಪ್ರಾರಂಭವಾದಾಗ ಇಂಗ್ಲೆಂಡಿಗೆ ಹಿಂತಿರುಗಿದ. ಅನಂತರ ಪೊಲಿಟಿಕಲ್ ಅನಲ್ಸ್ ಆಫ್ ದಿ ಪ್ರೆಸೆಂಟ್ ಯುನೈಟೆಡ್ ಕಾಲೋನೀಸ್ ಎಂಬ ಗ್ರಂಥವನ್ನು ಪ್ರಕಟಿಸಿದ (1780). ಈತ ಪ್ರಸಿದ್ಧನಾದ್ದು ಕ್ಯಾಲೆಡೋನಿಯ: ಆರ್ ಎನ್ ಅಕೌಂಟ್, ಹಿಸ್ಟಾರಿಕಲ್ ಅಂಡ್ ಟೋಪೊಗ್ರಾಫಿಕಲ್ ಆಫ್ ನಾರ್ತ್ ಬ್ರಿಟನ್ ಎಂಬ ಗ್ರಂಥದಿಂದ. ಇದು ಬ್ರಿಟನ್ನಿನ ಪ್ರಾಚೀನ ವಸ್ತು, ವಿಷಯಗಳಿಗೆ ಮೀಸಲಾದ ಹೆಬ್ಬೊತ್ತಗೆ. 1807 ರಿಂದ 24ರ ಅವಧಿಯಲ್ಲಿ ಈ ಗ್ರಂಥದ ಮೂರು ಸಂಪುಟಗಳನ್ನು ಹೊರತಂದ. ಆದರೆ ತನ್ನ ಜೀವಿತಕಾಲದಲ್ಲಿ ಈ ಸರಣಿಯನ್ನು ಮುಗಿಸಲಾಗಲಿಲ್ಲ. ಅನೇಕ ರಾಜಕೀಯ ಗ್ರಂಥಗಳ ಜೊತೆಗೆ ಕೆಲವು ಜೀವನಚರಿತ್ರೆಗಳನ್ನೂ ಈತ ರಚಿಸಿದ್ದಾನೆ, ಡಫೋ (1785), ಅಲನ್ ರ್‍ಯಾಮ್‌ಸೇ (1800), ಸರ್ ಡೇವಿಡ್ ಲಿಂಡ್‌ಸೇ (1806), ಮತ್ತು ಮೇರಿ, ಕ್ವೀನ್ ಆಫ್ ಸ್ಕಾಟ್ಸ್ (1818)–ಇವು ಈತನ ಪ್ರಸಿದ್ಧ ಜೀವನಚರಿತ್ರೆಗಳು. 1786ರಿಂದ ಸಾಯುವ ತನಕ ಚಾಮರ್ಸ್ ಪ್ರಿವಿ ಕೌನ್ಸಿಲಿನ ವಾಣಿಜ್ಯೋದ್ಯಮ ಸಮಿತಿಯ ಮುಖ್ಯ ಕರಣಿಕನಾಗಿ ಕೆಲಸಮಾಡುತ್ತಿದ್ದ. (ಎ.ಎಂ.ಪಿ.)

**ಚಾಮರ್ಸ್, ಥಾಮಸ್ :** 1780–1847. ಸ್ಕಾಟ್ಲೆಂಡಿನ ಪಾದ್ರಿ, ದೇವತಾಶಾಸ್ತ್ರಜ್ಞ ಮತ್ತು ಮಾನವಪ್ರೇಮಿ. ಫೈಫನ ಅನ್‌ಸ್ಟುತರ್‌ನಲ್ಲಿ ಈತ ವ್ಯಾಪಾರಿಯೊಬ್ಬನ ಹದಿನಾಲ್ಕನೆಯ ಮಗನಾಗಿ ಹುಟ್ಟಿದ. ಸೇಂಟ್ ಆಂಡ್ರ್ಯೂಸ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ ಸ್ಕಾಟ್ಲೆಂಡಿನ ಕ್ರೈಸ್ತ ಬೋಧಕರ ಗುಂಪಿಗೆ ಸೇರಿದ. ಮೊದಲಿಗೆ ಪಾದ್ರಿಯಾಡಳಿತಕ್ಕೊಳಪಟ್ಟ ಕಿಲ್ಮನಿ ಪ್ರದೇಶದಲ್ಲಿ ನಿಂತ. ಈತನ ಪ್ರತಿಭೆ ಮತ್ತು ವಾಗ್ಮಿತೆಯನ್ನು ಕಂಡು ಈತನನ್ನು ಗ್ಲ್ಯಾಸ್ಗೋ ನಗರಕ್ಕೆ ಕಳುಹಿಸಲಾಯಿತು. ಅಲ್ಲಿ ಈತ ಸ್ಕಾಟ್ಲೆಂಡಿನಲ್ಲೇ ಉತ್ತಮ ಕ್ರೈಸ್ತ ಬೋಧಕನೆಂದು ಪ್ರಸಿದ್ಧಿ ಗಳಿಸಿದ್ದಲ್ಲದೆ ಬಡಜನತೆಗೆ ಅನುಕೂಲವಾಗುವಂಥ ಅನೇಕ ಯೋಜನೆಗಳನ್ನು ರೂಪಿಸಿದ. 1823ರಲ್ಲಿ ಸೇಂಟ್ ಆಂಡ್ರ್ಯೂಸ್ ಕಾಲೇಜಿನಲ್ಲಿ ನೈತಿಕ ತತ್ತ್ವಶಾಸ್ತ್ರದ ಪ್ರಾಧ್ಯಾಪಕನಾದ. 1828ರಲ್ಲಿ ಎಡಿನ್‌ಬರೋ ಕಾಲೇಜಿನಲ್ಲಿ ದೇವತಾಶಾಸ್ತ್ರದ ಪ್ರಾಧ್ಯಾಪಕನಾದ. 1834ರಲ್ಲಿ ಚರ್ಚ್‌ಗಳ ವಿಸ್ತರಣ ಕಾರ್ಯಗಳ ಯೋಜನೆಯೊಂದನ್ನು ರೂಪಿಸಿದ. ತದಂಗವಾಗಿ 7 ವರ್ಷಗಳಲ್ಲಿ 3,00,000 ಪೌಂಡು ಹಣ ಕೂಡಿಸಿ 220 ಚರ್ಚುಗಳನ್ನು ಕಟ್ಟಲಾಯಿತು. ಅದೇ ವರ್ಷ, ದೇಶ ಮತ್ತು ಚರ್ಚಿಗಿರುವ ಸಂಬಂಧ ಮತ್ತು ಮಾನ್ಯತೆಯ ಬಗ್ಗೆ ವಾದವಿವಾದಗಳೆದ್ದವು. ಇದು 1843ರಲ್ಲಿ ಕೊನೆಗೊಂಡು ಚಾಮರ್ಸ್‌ನ ನೇತೃತ್ವದಲ್ಲಿ 470 ಚರ್ಚುಗಳ ಪಾದ್ರಿಗಳು ತಮ್ಮ ವೃತ್ತಿಗೆ ರಾಜೀನಾಮೆ ನೀಡಿ ಮಹಾಸಭೆಯಿಂದ ದೂರ ಸರಿದು ಸ್ವಾಯತ್ತ ಚರ್ಚಿನ ಸ್ಥಾಪನೆಗೆ ಅನುವು ಮಾಡಿಕೊಟ್ಟರು. ಚಾಮರ್ಸ್ ಇದರ ಪ್ರಥಮ ಅಧ್ಯಕ್ಷನಾದ. ಅನಂತರ ಎಡಿನ್‌ಬರೋದ ವೇದಾಂತ ಕಾಲೇಜಿನ ಪ್ರಥಮ ನಿಯಂತ್ರಕ ಹಾಗೂ ಮುಖ್ಯಸ್ಥನಾಗಿ ನೇಮಕಗೊಂಡ. ತನ್ನ ಕೊನೆಯ ನಾಲ್ಕು ವರ್ಷಗಳನ್ನು

ಚರ್ಚುಗಳ ಸಂಘಟನೆ ಮತ್ತು ಧರ್ಮಕಾರ್ಯಗಳಿಗಾಗಿ ಮೀಸಲಿರಿಸಿದ. ಈತನ ಮುಖ್ಯ ಬರೆಹಗಳನ್ನೆಲ್ಲ ಕಲೆಹಾಕಿ 34 ಸಂಪುಟಗಳಲ್ಲಿ ಹೊರತರಲಾಗಿದೆ. ಅವು–ಪ್ರಾಕೃತ ದೇವತಾಶಾಸ್ತ್ರ, ಕ್ರೈಸ್ತಧರ್ಮದ ಪ್ರಾಮಾಣ್ಯಗಳು, ರಾಜಕೀಯ ಅರ್ಥಶಾಸ್ತ್ರ ಮತ್ತು ಸಾಮಾನ್ಯ ದೇವತಾಶಾಸ್ತ್ರ ಮತ್ತು ವಿಜ್ಞಾನ–ಈ ವಿಷಯಗಳಿಗೆ ಸಂಬಂಧಿಸಿವೆ. ಈತನಿಗೆ ಹಲವಾರು ಡಾಕ್ಟೊರೇಟ್ ಪದವಿಗಳು ದೊರೆತವು.

ಈತನ ಧರ್ಮಬೋಧೆ ಹರಿತವಾದುದು. ಈತನ ಉಪದೇಶ ಹೆಚ್ಚಾಗಿ ಮಾನವ ಸಮಸ್ಯೆಗಳನ್ನು ಕುರಿತಾದುದೇ ಹೊರತು ದೇವರು ಮತ್ತು ಸೃಷ್ಟಿ ಮುಂತಾದ ಕ್ಲಿಷ್ಟವಾದ ಸಮಸ್ಯೆಗಳನ್ನಲ್ಲ. ದೇಶದ ಆರ್ಥಿಕ ವ್ಯವಸ್ಥೆ ಮತ್ತು ಲೋಕೋದ್ಧಾರಕ್ಕೆ ನೀತಿಯುತ ಜೀವನವೇ ಮುಖ್ಯವೆಂದು ಈತನ ಅಭಿಮತ. (ಎ.ಎಂ.ಪಿ.)

**ಚಾಮಲದೇವಿ :** ಕಲ್ಯಾಣ ಚಾಳುಕ್ಯ 1ನೆಯ ಸೋಮೇಶ್ವರನ (1044–68) ಪತ್ನಿಯರಲ್ಲೊಬ್ಬಳು. ಬರ್ಮನ ಮಗಳು. ಈಕೆಯ ಹೆಸರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬಲ್ಲಟ್ಟಿಗೆ ಗ್ರಾಮದ ಶಾಸನದಿಂದ ತಿಳಿದಿದೆ. ಈಕೆ ಕೃಷ್ಣಾ–ತುಂಗಭದ್ರಾ ಸಂಗಮಕ್ಷೇತ್ರದಲ್ಲಿ ಪವಿತ್ರಸ್ನಾನ ಮಾಡಿ, ಪಟೆಮಲೆ ಎಂಬ ನೆಲೆವೀಡಿನಲ್ಲಿದ್ದಾಗ ಭಾಸ್ಕರಶೆಟ್ಟಿ ಎಂಬಾತ ಭೂದಾನಮಾಡಿದನೆಂಬುದಷ್ಟೇ ಈ ಶಾಸನದ ಉಲ್ಲೇಖ.

ಹಾನಗಲ್ಲಿನಲ್ಲಿ ಸಾಮಂತನಾಗಿದ್ದ ಕದಂಬಕುಲದ ಇಮ್ಮಡಿ ತೈಲಪನ (ಸು. 1099–12) ಪತ್ನಿಯ ಹೆಸರೂ ಚಾಮಲದೇವಿ. (ಜಿ.ಜಿ.ಆರ್.)

**ಚಾಮೀರಾಪ್ಸ್ :** ಅರೆಕೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಗ್ರೀಕ್ ಭಾಷೆಯಲ್ಲಿ ಚಾಮೀರಾಪ್ಸ್ ಎಂದರೆ ಕುಳ್ಳಾದ ಪೊದೆ ಎಂದರ್ಥ. ಇದು ತೆಂಗು ಜಾತಿಯ ಸಸ್ಯಗಳಲ್ಲೆಲ್ಲ ಬಲು ಗಟ್ಟಿಮುಟ್ಟಾದುದು. ಇದನ್ನು ಉದ್ಯಾನವನಗಳಲ್ಲಿ ಮತ್ತು ಗಾಜಿನ ಮನೆಗಳಲ್ಲಿ ಬೆಳೆಸಲಾಗುತ್ತದೆ. ಇದರ ಕಾಂಡದಿಂದ ಪಡೆಯಲಾಗುವ ನಾರಿನಿಂದ ಜಮಖಾನ, ಕಾಲೊರಸಿ ಮುಂತಾದುವನ್ನು ತಯಾರಿಸುವುದುಂಟು. ಇದು 1ರಿಂದ 7ಮೀ. ಎತ್ತರದ ಗಿಡ. ಕಾಂಡ ಒಂಟಿಯಾಗಿರುತ್ತದೆ ಇಲ್ಲವೆ ಕವಲೊಡೆದಿರುತ್ತದೆ. ತೆಂಗಿನಲ್ಲಿರುವಂತೆಯೆ ಎಲೆಗಳು (ಗರಿಗಳು) ಕಾಂಡದ ತುದಿಯಲ್ಲಿ ಕಿರೀಟದಂತೆ ಜೋಡಣೆಗೊಂಡಿವೆ. ಒಂದೊಂದು ಎಲೆಯೂ ಬೀಸಣಿಗೆಯಾಕಾರದ್ದು. ಪ್ರತಿಯೊಂದರಲ್ಲೂ ಉದ್ದನೆಯ ಒಂದು ತೊಟ್ಟು, ಅದರ ತುದಿಯಲ್ಲಿ ಕೈಯಲ್ಲಿನ ಬೆರಳುಗಳಂತೆ ಜೋಡಣೆಗೊಂಡಿರುವ ಕವಚಗಳಿಂದ ಆವೃತವಾಗಿದೆ. ಹೂಗಳು ಚಿಕ್ಕ ಗಾತ್ರದವು; ಅವುಗಳ ಬಣ್ಣ ಹಳದಿ. ಹಣ್ಣು ಗೋಳಾಕಾರದ್ದು. ಹಣ್ಣಿನ ಬಣ್ಣ ಹಳದಿ ಇಲ್ಲವೆ ಕೆಂಪು. ಚಾಮೀರಾಪ್ಸ್ ಜಾತಿಯಲ್ಲಿ ಹ್ಯೂಮಿಲಿಸ್ ಮತ್ತು ಎಕ್ಸೆಲ್ಸ ಎಂಬ ಎರಡು ಪ್ರಭೇದಗಳಿವೆ. ಇವನ್ನು ಬೀಜಗಳಿಂದ ಇಲ್ಲವೆ ಮೋಸುಗಳಿಂದ (ಸಕರ್ಸ್) ವೃದ್ಧಿಸಬಹುದು. (ಎನ್.ಆರ್.ಆರ್.)

**ಚಾಮುಂಡಿ :** ಶಿವನ ಅರ್ಧಾಂಗಿಯಾದ ಪಾರ್ವತಿಯ ಅವತಾರಗಳಲ್ಲಿ ಒಂದು. ಭಾರತೀಯ ಶಿಷ್ಟಪುರಾಣಗಳಲ್ಲಿ ಹಾಗೂ ಕನ್ನಡ ಜನಪದ ಪುರಾಣ ಕಾವ್ಯಗಳಲ್ಲಿ ಚಾಮುಂಡಿಯ ಕಥೆಗಳು ಕಂಡುಬರುತ್ತವೆ. ಇವಳಿಗೆ ಆದಿಶಕ್ತಿ, ಸರ್ವಶಕ್ತಿ, ಮಾಹೇಶ್ವರಿ, ಕಾಳಿ, ಕಾತ್ಯಾಯಿನಿ, ಚಂಡಿ, ಅಂಬಾ, ಈಶ್ವರಿ, ಭಗವತಿ, ದುರ್ಗಿ, ಮಹಾದೇವಿ ಮುಂತಾದ ಹೆಸರುಗಳಲ್ಲಿ ಪೂಜೆ ಸಲ್ಲುತ್ತದೆ. ಈ ಎಲ್ಲ ರೂಪಗಳಲ್ಲಿ ಮಹಿಷಾಸುರಮರ್ದಿನಿಯ ರೂಪವನ್ನು ಭಾರತದಲ್ಲಿ ಬಹಳಷ್ಟು ಹಿಂದಿನಿಂದಲೂ ಆರಾಧಿಸಿಕೊಂಡು ಬರಲಾಗಿದೆ. ಆಶ್ವಯುಜ ಶುಕ್ಲಪಕ್ಷದ ನವರಾತ್ರಿಯ ಕಾಲದಲ್ಲಿ ಭಾರತಾದ್ಯಂತ ದುರ್ಗಾರಾಧನೆ ಅತ್ಯಂತ ವೈಭವದಿಂದ ನಡೆಯುತ್ತದೆ. ಮೈಸೂರಿನಲ್ಲಿ ಈ ದಿನಗಳನ್ನು ದಸರಾ ಎಂದು ಕರೆಯುತ್ತಾರೆ. ದಸರೆಯ ಹತ್ತನೆಯ ದಿನವಾದ ವಿಜಯದಶಮಿ ಸಾಂಕೇತಿಕವಾಗಿ ಮಹಿಷನೆಂಬ ರಕ್ಕಸನನ್ನು ದುರ್ಗಿ ಸಂಹರಿಸಿದ ದಿನ. ಈ ದುರ್ಗಾರಾಧನೆ ಅರಿಷಡ್ವರ್ಗಗಳನ್ನು ಗೆದ್ದ ಆತ್ಮನನ್ನು ಸಾಂಕೇತಿಕವಾಗಿ ಸೂಚಿಸುತ್ತದೆ. ಏಕೆಂದರೆ ಅಸುರರು ಅರಿಷಡ್ವರ್ಗಗಳನ್ನು ಪ್ರತಿನಿಧಿಸುತ್ತಾರೆ.

ಚಾಮುಂಡಿಗೆ ಸಂಬಂಧಿಸಿದ ಸಂಗತಿಗಳನ್ನು ಮಾರ್ಕಂಡೇಯಪುರಾಣ, ಕಾಲಿಕಾಪುರಾಣ, ಶ್ರೀದೇವಿಭಾಗವತ, ಸ್ಕಾಂದಪುರಾಣ, ವರಾಹಪುರಾಣ, ವಿಷ್ಣುಧರ್ಮೋತ್ತರಪುರಾಣ, ಸನತ್ಕುಮಾರ ಶಿಲ್ಪರತ್ನ, ಚತುರ್ವರ್ಗಚಿಂತಾಮಣಿ ಹಾಗೂ ಅಭಿಲಷಿತಾರ್ಥಚಿಂತಾಮಣಿ ಮುಂತಾದ ಕೃತಿಗಳು ಅಲ್ಪಸ್ವಲ್ಪ ವ್ಯತ್ಯಾಸಗಳಿಂದ ನಿರೂಪಿಸುತ್ತವೆ. ಆದರೆ ಇವುಗಳೆಲ್ಲದರ ಮೂಲ ಆಶಯ ಒಂದೇ ಆಗಿದೆ. ಅಂದರೆ ದೇವತೆಗಳಿಗೆ ಅಪಜಯವನ್ನುಂಟುಮಾಡಿ ಇಂದ್ರಪದವಿಯನ್ನೇರಿ, ಶಿಷ್ಟರಿಗೆಲ್ಲ ಕಂಟಕ ಪ್ರಾಯನಾಗಿದ್ದ ಮಹಿಷಾಸುರನ ಸಂಹಾರಕ್ಕಾಗಿ ದೇವಾಧಿದೇವತೆಗಳ ಸರ್ವಶಕ್ತಿ ತೇಜಃ ಪುಂಜವಾಗಿ ಹೊರಟು ಸರ್ವಮಂಗಳೆಯಾದ ದೇವಿಯಾಗಿ ಆವಿರ್ಭವಿಸುತ್ತಾಳೆ. ದೇವತೆಗಳ ರಕ್ಷಣಾರ್ಥವಾಗಿ ದೇವಿ ಶಿವಭಕ್ತನಾದ ಮಹಿಷನನ್ನು ವಧಿಸುತ್ತಾಳೆ. ಇದಲ್ಲದೆ ಚಂಡ–ಮುಂಡರನ್ನು ವಧಿಸಿ ಚಾಮುಂಡಿಯಾದಳೆಂಬ ಕಥೆಯೂ ಕಂಡುಬರುತ್ತದೆ. ಶಿಷ್ಟ \ಪುರಾಣಗಳ ಪ್ರಕಾರ ಚಾಮುಂಡಿಯ ಅವತಾರದ ಉದ್ದೇಶವೆಂದರೆ ರಾಕ್ಷಸನ ಸಂಹಾರ, ದೇವತೆಗಳ ರಕ್ಷಣೆ. ಈ ಪ್ರಧಾನ ಉದ್ದೇಶಕ್ಕೆ ಹೊರತಾದ ಯಾವ ಸಂಗತಿಗಳನ್ನೂ ನಾವು ಇಲ್ಲಿ ನಿರೀಕ್ಷಿಸುವಂತಿಲ್ಲ. ಆದರೆ ಕನ್ನಡ ಜನಪದ ಪುರಾಣಕಾವ್ಯಗಳಲ್ಲಿ ಚಾಮುಂಡಿಯ ಜೀವನವೃತ್ತಾಂತ ಅತ್ಯಂತ ಕುತೂಹಲಕಾರಿಯೂ ವರ್ಣರಂಜಿತವೂ ಆಗಿ ಬೆಳೆದಿದೆ.

ಚಾಮುಂಡೇಶ್ವರಿ–ಉತ್ಸವಮೂರ್ತಿ

ಜನಪದ ಮೂಲಗಳ ಪ್ರಕಾರ ಉಜ್ಜಯಿನಿ ದೇಶದ ಬಿಜ್ಜಳರಾಯನಿಗೆ ಏಳು ಜನ ಹೆಣ್ಣುಮಕ್ಕಳಿರುತ್ತಾರೆ. ಅವರಲ್ಲಿ ಪಿರಿಯಾಪಟ್ಟಣದ ಉರಿಮಸಣಿ ಹಿರಿಯವಳು, ಚಾಮುಂಡಿ ಕಿರಿಯವಳು. ಈ ಏಳು ಜನವೂ ಕಾರಣಾಂತರದಿಂದ ಪರಸ್ಪರ ಜಗಳವಾಡಿಕೊಂಡು ಉತ್ತರದಿಂದ ಹೊರಟು ದಕ್ಷಿಣದ ಬೇರೆ ಬೇರೆ ಸ್ಥಳಗಳಲ್ಲಿ ನೆಲೆಗೊಂಡರು. ಕಿರಿಯವಳಾದ ಚಾಮುಂಡಿ ತಾನು ನೆಲೆಗೊಳ್ಳಲು ತಕ್ಕ ಸ್ಥಳಕ್ಕಾಗಿ ಶೋಧನೆ ಮಾಡುತ್ತ ಬರುತ್ತಿರುವಾಗ ಸಂಪದ್ಭರಿತ ಭೂಮಿ ಮಹಿಷಮಂಡಲ ಅವಳ ಕಣ್ಣಿಗೆ ಬಿತ್ತು. ಇದೇ ತನ್ನ ನೆಲೆಗೆ ಯೋಗ್ಯವಾದ ಸ್ಥಳವೆಂದು ನಿರ್ಧರಿಸಿ ಬಂದಾಗ ಈ ಮಂಡಲವನ್ನಾಳುತ್ತಿದ್ದ ಮಹಿಷನೆಂಬ ರಾಕ್ಷಸ ಅವಳನ್ನು ಇದಿರಿಸಲು ಬಂದ. ಬ್ರಹ್ಮನ ವರಬಲದಿಂದ ಕೊಬ್ಬಿದ್ದ ಅವನನ್ನು ಚಾಮುಂಡಿ ಇದಿರಿಸಲು ನಿಂತಾಗ ಅವಳ ಬೆವರಿನಿಂದ ಉತ್ತುನಳ್ಳಿ ಮಾರಮ್ಮ ಹುಟ್ಟಿದಳು. ಈಕೆಯ ಸಹಾಯದಿಂದ ಚಾಮುಂಡಿ ಮಹಿಷನನ್ನು ಸಂಹರಿಸಿ ಮಹಿಷಮಂಡಲವನ್ನು ಸ್ವಾಧೀನಪಡಿಸಿಕೊಂಡು ಬೆಟ್ಟದ ಮೇಲೆ ನೆಲೆಗೊಳ್ಳುತ್ತಾಳೆ. ಮಹಿಷನಾಳುತ್ತಿದ್ದ ಮಹಿಷಮಂಡಲವೇ ಮಹಿಷಪುರಿಯಾಗಿ ಮಹಿಶೂರಾಗಿ ಈಗ ಮೈಸೂರಾಗಿದೆ. ಮೈಸೂರು ನಗರದೇವತೆಯೇ ಚಾಮುಂಡಿ.

ಜನಪದ ಸಾಹಿತ್ಯದಲ್ಲಿ ಚಾಮುಂಡಿಯನ್ನು ಚಾಮರಾಯರ ಮಗಳು ಎಂದೂ ಕರೆಯಲಾಗಿದೆ. 'ಮಲೆಯ ಮಾದೇಶ್ವರ' ಜನಪದ ಮಹಾಕಾವ್ಯದಲ್ಲಿ ಶ್ರವಣ ದೊರೆಯ ಸಂಹಾರಕ್ಕಾಗಿ ಈಶ್ವರ ಭೂಮಿಗೆ ಬಂದಾಗ ಪಾರ್ವತಿಯೂ ಅವನೊಡನೆ ಕೈಲಾಸದಿಂದ ಬರುತ್ತಾಳೆ. ಮೈಸೂರಿಗೆ ಬಂದಾಗ ಮಹಿಷನನ್ನು ವಿಕಾರರೂಪದಿಂದ ಮರ್ದಿಸುತ್ತಾಳೆ. ಆಗ ಮಾದೇಶ್ವರ ಅವಳ ಉಗ್ರರೂಪವನ್ನು ನೋಡಲಾರದೆ ಅವಳನ್ನು ಬಿಟ್ಟು ಮುಂದಕ್ಕೆ

ಹೊರಡುತ್ತಾನೆ. ಬೆಂಬಿಡದೆ ಬಂದ ಪಾರ್ವತಿಯನ್ನು ತಡೆದು, ತನ್ನ ಅಂಶ ನಂಜುಂಡನಾಗಿ ನಂಜನಗೂಡಿನಲ್ಲಿ ಹುಟ್ಟಿರುವುದಾಗಿಯೂ ಆ ಭೋಗನಂಜುಂಡನನ್ನು ಆಕೆ ಸೇರಬೇಕೆಂದೂ ಹೇಳಿ ಅವಳನ್ನು ಹಿಂದಕ್ಕೆ ಕಳಿಸುತ್ತಾನೆ. ಹಿಂತಿರುಗಿ ಬಂದ ಮೇಲಿನ ನಂಜುಂಡ–ಚಾಮುಂಡಿಯರ ಪ್ರಣಯ ಪ್ರಸಂಗದ ರಸವತ್ತಾದ ಕಥೆಯನ್ನು ದೇವರಗುಡ್ಡರು, ನೀಲಗಾರರು, ತಂಬೂರಿಯವರು, ಹೆಳವರು ಹಾಗೂ ಹೆಂಗಸರು ಹಾಡುತ್ತಾರೆ. ಇವರ ಸಾಹಿತ್ಯದ ಆಧಾರದಿಂದ ಚಾಮುಂಡಿಯ ಐತಿಹಾಸಿಕತೆಯನ್ನು ಸುಲಭವಾಗಿ ರೂಪಿಸಬಹುದಾಗಿದೆ.

ಅಲಿಖಿತ ಇತಿಹಾಸದ ಕಡೆಗೆ ಗಮನ ಹರಿಸಿದರೆ ಏಳುಮಲೆಯ ಮಾದೇಶ್ವರನಿಗೂ ನಂಜನಗೂಡಿನ ನಂಜುಂಡೇಶ್ವರನಿಗೂ ಚಾಮುಂಡಿಗೂ ಒಂದಲ್ಲ ಒಂದು ವಿಧದಲ್ಲಿ ಸಂಬಂಧವಿರುವಂತೆ ಕಂಡುಬರುತ್ತದೆ. ಅಲ್ಲದೆ ಇವರೆಲ್ಲರೂ ಸಮಕಾಲೀನರೆಂದೂ ಸ್ಪಷ್ಟವಾಗುತ್ತದೆ. ಚಾಮುಂಡಿ ಮಲೆಯ ಮಾದೇಶ್ವರನ ತಂಗಿಯೆಂದು ತಿಳಿಯುವುದರಿಂದಲೂ ಮಾದೇಶ್ವರ ಮಾದಿಗರವನೆಂದು ತಿಳಿಯುವುದರಿಂದಲೂ ಚಾಮುಂಡಿಯನ್ನು ನಂಜುಂಡನ ಪತ್ನಿಯರಾದ ದೇವೀರಮ್ಮ ಹಾಗೂ ಸೋಮಾಜಮ್ಮರು ಕೋಳಿ ಕುರಿ ತಿನ್ನುವ ಮುಂಡೆಯೆಂದು ಬಯ್ಯುವುದರಿಂದಲೂ ಚಾಮುಂಡಿ ಮಾದಿಗ ಕುಲದವಳು ಎಂಬುದು ಸ್ಪಷ್ಟವಾಗುತ್ತದೆ. ಲಿಂಗಾಯತರವನಾದ ನಂಜುಂಡ ಕುಂತೂರು ಮಠದಲ್ಲಿ ಮಾದೇಶ್ವರನ ಸಹಪಾಠಿ. ಮಾದೇಶ್ವರ ಶ್ರವಣ ದೊರೆಯನ್ನು ಸಂಹರಿಸಿ ಹದಿನಾಡನ್ನು ನಂಜುಂಡನಿಗೆ ಕೊಡುತ್ತಾನೆ. ನಂಜುಂಡ ಮಾದೇಶ್ವರನ ತಂಗಿಯಾದ ಚಾಮುಂಡಿಯೊಡನೆ ಗುಪ್ತಪ್ರಣಯವನ್ನು ಇಟ್ಟುಕೊಂಡಿದ್ದರಿಂದ ಇವರಿಬ್ಬರ ಮುಖದರ್ಶನವೇ ನನಗೆ ಬೇಡವೆಂದು ಮಾದೇಶ್ವರ ಕಂಪಣ ರಾಜ್ಯದ ಮೂಡ್ಲುಮಲೆಯಲ್ಲಿ 'ಏಕಾಂಗಿವಸ್ತು'ವಾಗಿ ನೆಲೆಗೊಳ್ಳುತ್ತಾನೆ. ಈ ಮೂವರೂ ಜನಪದ ಸಾಹಿತ್ಯದ ಪ್ರಕಾರ ಸಮಕಾಲೀನರಾಗಿದ್ದ ವಿಷಯ ಸತ್ಯವಾದುದಾದರೆ 16ನೆಯ ಶತಮಾನದ ಮಾದೇಶ್ವರನ ಕಾಲವೇ ನಂಜುಂಡ, ಚಾಮುಂಡಿಯರ ಕಾಲವೂ ಆಗುತ್ತದೆ.

ಐತಿಹಾಸಿಕ ದೃಷ್ಟಿಯಿಂದ ಅವಲೋಕಿಸಿದಾಗ ಚಾಮುಂಡಿ ಮೈಸೂರು ಅರಸರ ಪರವಾಗಿ ಬಹಳಷ್ಟು ಯುದ್ಧಗಳಲ್ಲಿ ಪಾಲ್ಗೊಂಡ ವೀರವನಿತೆಯಾಗಿದ್ದಿರಬಹುದೆಂದು ಕಾಣುತ್ತದೆ. ಪಿರಿಯಾಪಟ್ಟಣದ ಲಾವಣಿ, ಮಾಗಡಿ ಕೆಂಪೇಗೌಡನ ಲಾವಣಿಗಳಲ್ಲಿ ಈಕೆ ಮೈಸೂರರಸರ ಪರವಾಗಿ ನಂಜುಂಡನೊಡನೆ ಹೋಗಿ ಯುದ್ಧ ಮಾಡುವ ಸಂದರ್ಭಗಳ ವರ್ಣನೆ ಕಂಡುಬರುತ್ತದೆ. ಇವರಿಬ್ಬರ ಶಕ್ತಿಸಾಮರ್ಥ್ಯಗಳಿಗೆ ಕೃತಜ್ಞತೆಯ ರೂಪದಲ್ಲಿ ಮೈಸೂರು ಅರಸರು ತೋರಿಸಿದ ಭಕ್ತಿ ಇವರನ್ನು ದೇವರನ್ನಾಗಿಸಿವೆ. ಐತಿಹಾಸಿಕ ವ್ಯಕ್ತಿಗಳು ಹೀಗೆ ಭಕ್ತಿಗೌರವಗಳ ಪವಿತ್ರಾವರಣದಿಂದ ಪುರಾಣವ್ಯಕ್ತಿಗಳಾಗುವ ಸಂದರ್ಭಗಳು ನಮ್ಮಲ್ಲಿ ವಿರಳವೇನಲ್ಲ. (ಪಿ.ಕೆ.ಆರ್‌ಎ.)

**ಚಾಮುಂಡಿ ಬೆಟ್ಟ :** ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಅದರ ಆಗ್ನೇಯಕ್ಕೆ ಪೂರ್ವಪಶ್ಚಿಮವಾಗಿ ಹಬ್ಬಿ ನಿಂತಿರುವ ಬೆಟ್ಟ, ಸಮುದ್ರಮಟ್ಟದಿಂದ 1063 ಮೀ. ಎತ್ತರವಾಗಿದೆ. ಮೈಸೂರು ಒಡೆಯರ ಮನೆದೇವರಾದ ಚಾಮುಂಡೇಶ್ವರಿಯ ದೇವಾಲಯ ಈ ಬೆಟ್ಟದ ಮೇಲಿದೆ. ಆದ್ದರಿಂದ ಈ ಬೆಟ್ಟಕ್ಕೆ ಆ ದೇವತೆಯ ಹೆಸರೇ ಬಂದಿದೆ. ಸುತ್ತಲೂ ಬಯಲಿದ್ದು, ಒಂಟಿಯಾಗಿ ನಿಂತಿರುವ ಕಡಿದಾದ ಈ ಬೆಟ್ಟ ಬಹುದೂರದವರೆಗೂ ಗೋಚರಿಸುವುದಲ್ಲದೆ, ಬೆಟ್ಟದ ಮೇಲೆ ನಿಂತು ನೋಡಿದಾಗ ಮೈಸೂರಿನ ಹರವು ಮತ್ತು ಸುತ್ತಲಿನ ಪ್ರಕೃತಿ ಸೌಂದರ್ಯ ರಮ್ಯವಾಗಿ ಕಾಣಿಸುತ್ತದೆ. ಮೈಸೂರಿಗೆ ಬರುವ ಪ್ರವಾಸಿಗಳ ಆಕರ್ಷಣೆಗಳಲ್ಲಿ ಇದು ತುಂಬ ಮುಖ್ಯವಾದದ್ದು.

ಚಾಮುಂಡಿ ಬೆಟ್ಟದ ಒಂದು ನೋಟ

ಬೆಟ್ಟದ ಮೇಲ್ಭಾಗವನ್ನು ಹತ್ತನೆಯ ಶತಮಾನದ ಹೊತ್ತಿಗಾಗಲೇ ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿತ್ತು. ಇಲ್ಲಿರುವ ಆ ಕಾಲದ ಶಾಸನಗಳಲ್ಲಿ ಇದನ್ನು ಮಬ್ಬಲದ ತೀರ್ಥ ಅಥವಾ ಮರ್ಬಳದ ತೀರ್ಥ ಎಂದು ಕರೆದಿದೆ. ಇಲ್ಲಿ ಹಲವರು ಸಿದ್ಧಿ ಪಡೆದರೆಂದು ಶಾಸನಗಳು ತಿಳಿಸುತ್ತವೆ. ಈಗ ಇಲ್ಲಿರುವ ಮಹಾಬಲೇಶ್ವರ ದೇವಸ್ಥಾನ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕಿಂತ ಮುಂಚೆಯೇ ನಿರ್ಮಿತವಾಗಿತ್ತು. ವಿಷ್ಣುವರ್ಧನನ ಕಾಲದಲ್ಲಿ 1128ರಲ್ಲಿ ಈ ಮರ್ಬಳದ ತೀರ್ಥಕ್ಕೆ ದತ್ತಿ ಬಿಟ್ಟಿದೆ. ಆದರೆ ಅದರ ಮುಂದಿನ ಮಂಟಪವನ್ನು 17ನೆಯ ಶತಮಾನದಲ್ಲಿ ಕಟ್ಟಿಸಿದುದಾಗಿ ಅದರ ಕಂಬಗಳ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ.

ದೊಡ್ಡದೇವರಾಜ ಒಡೆಯರು ಕಟ್ಟಿಸಿದ ಬೆಟ್ಟದ ಮೆಟ್ಟಲುಗಳು

ಮೈಸೂರರಸರು ಬೆಟ್ಟದ ಮೇಲಿದ್ದ ಮಹಿಷಾಸುರಮರ್ದಿನಿಯನ್ನು ಚಾಮುಂಡೇಶ್ವರಿ ಎಂಬ ಹೆಸರಿನಿಂದ ತಮ್ಮ ಮನೆದೇವರಾಗಿ ಸ್ವೀಕರಿಸಿದ ಮೇಲೆ ಮರ್ಬಳ ತೀರ್ಥಕ್ಕೆ ಚಾಮುಂಡಿ ಬೆಟ್ಟ ಎಂಬ ಹೆಸರು ಬಂದಿರಬೇಕು. ಅನಂತರ ಅಲ್ಲಿದ್ದ ದೇವಿಯ ಆಲಯಕ್ಕೆ

ಚಾಮುಂಡಿ ಬೆಟ್ಟದ ಮೇಲಿರುವ ನಂದಿ

ಪ್ರಾಮುಖ್ಯ ಹೆಚ್ಚಿ ದೇವಾಲಯ ವಿಸ್ತಾರವಾಗುತ್ತ ಹೋಯಿತು. ದೊಡ್ಡ ದೇವರಾಜ ಒಡೆಯರು ಬೆಟ್ಟಕ್ಕೆ ಸಾವಿರ ಮೆಟ್ಟಲುಗಳನ್ನು ಕಟ್ಟಿಸಿದರಲ್ಲದೆ, ಬೆಟ್ಟದ ಮೇಲೆ 700ನೆಯ ಮೆಟ್ಟಲಿನ ಹತ್ತಿರ ಬಹುಶಃ ಅಲ್ಲಿಯೇ ಇದ್ದ ಬಂಡೆಗಲ್ಲೊಂದನ್ನು ಕಡೆದು ಮಾಡಿದ

ಬೃಹದಾಕಾರದ ನಂದಿಯನ್ನು ಪ್ರತಿಷ್ಠೆ ಮಾಡಿದರು. ತಲೆ ಎತ್ತಿ ಮಲಗಿರುವ ಈ ನಂದಿಯ ಮೂರ್ತಿ 4ಮೀ ಎತ್ತರವಾಗಿದೆ; ದಷ್ಟಪುಷ್ಟವಾಗಿರುವಂತೆ ಕಂಡರಿಸಲ್ಪಟ್ಟಿದೆ. ಗಂಟೆಸರ, ಗೆಜ್ಜೆಸರ, ಗವುಸುಗಳಿಂದ ಅಲಂಕೃತವಾಗಿದ್ದು ಸಹಜ ಮುಖಲಕ್ಷಣಗಳಿಂದ ಕೂಡಿರುವ ಈ ನಂದಿ ತನ್ನ ಬೃಹದ್ಗಾತ್ರದಿಂದ ಅತ್ಯಂತ ಆಕರ್ಷಣೀಯವಾಗಿದೆ.

ಚಾಮುಂಡೇಶ್ವರಿಯ ದೇವಾಲಯ ದ್ರಾವಿಡ ಶೈಲಿಯಲ್ಲಿ ಕಟ್ಟಿರುವ, ತಕ್ಕಮಟ್ಟಿಗೆ ದೊಡ್ಡದಾದ ದೇವಾಲಯ. ಮೂಲ ದೇವಾಲಯದ ನಿರ್ಮಾಣಕಾಲವನ್ನು ತಿಳಿಯಲು ಈಗ ಆಧಾರಗಳಿಲ್ಲ. ಮೈಸೂರು ಒಡೆಯರ ಕಾಲದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಇದನ್ನು ನವೀಕರಿಸಿ ಇದರ ಮಹಾದ್ವಾರಕ್ಕೆ ಒಂದು ಸುಂದರವಾದ ಗೋಪುರವನ್ನು ಕಟ್ಟಿಸಿದರು. ನಂಜನಗೂಡು, ಚಾಮರಾಜನಗರ, ಮೈಸೂರುಗಳಲ್ಲಿ ಇವರು ಕಟ್ಟಿಸಿದ ಗೋಪುರಗಳಂತೆಯೇ ಇಟ್ಟಿಗೆ ಗಾರೆಯಲ್ಲಿ ಕಟ್ಟಿರುವ ಈ ಗೋಪುರವೂ ಮೇಲೆ ಹೋಗುತ್ತ ಕಿರಿದಾಗುವ ಏಳು ಅಂತಸ್ತುಗಳಿಂದ ಕೂಡಿ ಉನ್ನತವಾಗಿದೆ. ಹೊರಮೈಯಲ್ಲಿ ಒಂದೊಂದು ಅಂತಸ್ತಿನಲ್ಲೂ ಕಿರುಗೋಪುರಗಳು ತುಂಬಿದ್ದು, ನಡುವಿನ ದ್ವಾರಗಳ ಇಕ್ಕೆಲಗಳಲ್ಲೂ ದ್ವಾರಪಾಲಕರೂ ಗೋಪುರದ ಎರಡೂ ಪಕ್ಕಗಳಲ್ಲಿ ಕುಳಿತಿರುವ ಮೂರ್ತಿಗಳೂ ತುದಿಯಲ್ಲಿ 7 ಕಳಶಗಳುಳ್ಳ ಶಿಖರವೂ ಇವೆ. ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ಇವರ ಪತ್ನಿಯರಾದ ದೇವಾಜಮ್ಮಣ್ಣಿ, ಚೆಲುವಾಜಮ್ಮಣ್ಣಿ ಮತ್ತು ಲಿಂಗಾಜಮ್ಮಣ್ಣಿಯವರ ಭಕ್ತವಿಗ್ರಹಗಳನ್ನು ಈ ದೇವಾಲಯದಲ್ಲಿಯೂ ನಿಲ್ಲಿಸಿದ್ದಾರೆ. ಈ ಮೂರ್ತಿಗಳ ಪೀಠದ ಮೇಲೆ ಅವರ ಹೆಸರುಗಳಿವೆ. ಇವು ಒಡೆಯರ ಕಾಲದ ಮೂರ್ತಿಶಿಲ್ಪಕ್ಕೆ ಮಾದರಿಯಾಗಿವೆ. ಸುಕನಾಸಿ ಮತ್ತು ನವರಂಗಗಳಿಗೆ ಹಾಕಿಸಿರುವ ಹಿತ್ತಾಳೆ ತಗಡುಗಳು, ಸಿಂಹವಾಹನವೇ ಮೊದಲಾದ ಹಲವು ವಾಹನಗಳು, ದೇವಿಯ ಸ್ತೋತ್ರವನ್ನೊಳಗೊಂಡ ನಕ್ಷತ್ರಮಾಲಿಕೆ ಮತ್ತು ಇತರ ಆಭರಣಗಳು–ಮುಂತಾದವು ದೇವಾಲಯಕ್ಕೆ ಇವರೂ ರಾಜಮನೆತನದವರೂ ಮಾಡಿಸಿರುವ ಸೇವೆಗಳು.

ಬೆಟ್ಟದ ಮೇಲಿರುವ ಚಾಮುಂಡೇಶ್ವರಿ ದೇವಾಲಯ

ಆಶ್ವೀಜ ಶುದ್ಧ ಹುಣ್ಣಿಮೆಯಂದು ನಡೆಯುವ ಚಾಮುಂಡೇಶ್ವರಿ ರಥೋತ್ಸವವೂ, ಅದಾದ ಎರಡು ದಿವಸಗಳಿಗೆ ದೇವಾಲಯಕ್ಕೆ ಹತ್ತಿರದಲ್ಲಿರುವ ದೇವಿ ಕೊಳದಲ್ಲಿ ರಾತ್ರಿ ನಡೆಯುವ ತೆಪ್ಪೋತ್ಸವವೂ ಪ್ರಖ್ಯಾತವಾಗಿವೆ. ಈ ಸಮಯದಲ್ಲಿ ಸಹಸ್ರಾರು ಭಕ್ತರೂ ಪ್ರವಾಸಿಗಳೂ ಇಲ್ಲಿಗೆ ಬರುತ್ತಾರೆ.

ಬೆಟ್ಟದ ಪೂರ್ವ ತುದಿಯಲ್ಲಿ, ಅದಕ್ಕೆ ಸೇರಿದಂತೆಯೇ, ಲಲಿತಾದ್ರಿ ಎಂಬ ತಗ್ಗಾದ ಮೊರಡಿಯಿದೆ. ಪ್ರಶಾಂತ ವಾತಾವರಣದಿಂದ ಕೂಡಿರುವ ಈ ಎಡೆಯಲ್ಲಿ ಸುತ್ತಲೂ ಗಿಡಮರಗಳಿಂದಾವೃತವಾದ ಒಂದು ವಿಶ್ರಾಂತಿಗೃಹವಿದೆ. ಲಲಿತಾದ್ರಿಯ ಮೂಲಕವೇ ಬೆಟ್ಟದ ಮೇಲಕ್ಕೆ ವಾಹನಸಂಚಾರ ಮಾರ್ಗಗಳು ಹಾದುಹೋಗುತ್ತವೆ. ಹಿಂದಿನ ರಾಜರು ಕುದುರೆಯ ಮೇಲೆ ಬೆಟ್ಟವೇರುತ್ತಿದ್ದ ಸವಾರಿ ದಾರಿಯೊಂದು ಮೆಟ್ಟಿಲುಗಳ ಸಮೀಪದಲ್ಲಿದೆ.

ಬೆಟ್ಟದ ತುತ್ತತುದಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಕಟ್ಟಿಸಿದ ಒಂದು ಅರಮನೆಯುಂಟು. ಪ್ರವಾಸಿಗಳಿಗೆ ಮತ್ತೊಂದು ಆಕರ್ಷಣೆಯೆಂದರೆ ದೇವಾಲಯಕ್ಕೆ ಹೋಗುವ ದಾರಿಯಲ್ಲಿರುವ 4ಮೀ. ಎತ್ತರದ ಮಹಿಷಾಸುರ ವಿಗ್ರಹ. ದೇವಸ್ಥಾನದ ಹತ್ತಿರದಲ್ಲಿ ಸಣ್ಣ ಊರೊಂದು ಬೆಳೆದಿದೆ. (ಎಂ.ಎಚ್. ಕೆ.ಆರ್.ಆರ್.)

**ಚಾರ್ ಮೀನು :** ಸಾಲ್ಮೊನಿಫಾರ್ಮಿಸ್ ಗಣದ ಸ್ಯಾಲ್ಮಾನಿಡೆ ಕುಟುಂಬಕ್ಕೆ ಸೇರಿದ ಒಂದು ಸಾಗರವಾಸಿ ಮೀನು. ಯುರೋಪಿನ ಮೂಲ ಸ್ಯಾಮನ್ ಮತ್ತು ಟ್ರೌಟ್ ಮೀನುಗಳ ಸಂಬಂಧಿಯಾದ ಇದು ಅವನ್ನು ಬಹುಮಟ್ಟಿಗೆ ಹೋಲುತ್ತದೆ. ಆದರೆ ಚಾರ್ ಮೀನಿನಲ್ಲಿ ಸೀರಿಕಾಸ್ಥಿಯ ಮೇಲೂ (ವೋಮರ್) ಹಲ್ಲುಗಳಿವೆ. ಉಳಿದೆರಡರಲ್ಲಿ ಈ ರೀತಿ ಇಲ್ಲ. ಚಾರ್ ಮೀನು ಸ್ಕ್ಯಾಂಡಿನೇವಿಯ, ಸ್ಕಾಟ್‌ಲೆಂಡ್, ಐರ್ಲೆಂಡ್ ಮತ್ತು ಯುರೋಪಿನ ಇತರ ದೇಶಗಳ ಸಾಗರಗಳಲ್ಲಿ ಕಾಣದೊರೆಯುತ್ತದೆ. ಇದು ಪ್ರಮುಖವಾಗಿ ಸಾಗರವಾಸಿಯಾದರೂ ಮೊಟ್ಟೆಗಳನ್ನಿಡಲು ಮಾತ್ರ ಸಿಹಿನೀರಿನ ನದಿ, ಸರೋವರಗಳಿಗೆ ವಲಸೆ ಬರುತ್ತದೆ. ಬಲುವರ್ಣಮಯವಾದ ಮೀನಿದು. ದೇಹದ ಮೇಲ್ಭಾಗ ನೀಲಿ ಬಣ್ಣದ್ದು. ಪಾರ್ಶ್ವಗಳಲ್ಲಿ ಕಿತ್ತಳೆ ಬಣ್ಣದ ಮಚ್ಚೆಗಳಿವೆ. ಹೊಟ್ಟೆಯ ಭಾಗ ಗುಲಾಬಿ ಬಣ್ಣದ್ದು. ದೇಹದ ಮೇಲೆಲ್ಲ ಸೈಕ್ಲಾಯಿಡ್ ಇಲ್ಲವೆ ಟೀನಾಯಿಡ್ ಮಾದರಿಯ ಶಲ್ಕಗಳಿವೆ.

ತಲೆಯ ಮೇಲೆ ಮಾತ್ರ ಶಲ್ಕಗಳಿಲ್ಲದಿರುವುದು ಈ ಮೀನಿನ ವಿಚಿತ್ರ ಲಕ್ಷಣ. ಬೆನ್ನಿನ ಈಜುರೆಕ್ಕೆಯ ಹಿಂಭಾಗದಲ್ಲಿ ಮೇದಸ್ಸಿನಿಂದ ಕೂಡಿದ ಈಜುರೆಕ್ಕೆಯೊಂದಿದೆ. ಗಂಟಲಿನ ಬಳಿ ಹೊರತೆರೆಯುವ ಸರಳರೀತಿಯ ವಾಯುಚೀಲವನ್ನು ಕಾಣಬಹುದು. ಇದು ಉಸಿರಾಟಕ್ಕೆ ಸಹಕಾರಿ. ಚಾರ್ ಮೀನಿನಲ್ಲಿ ಸ್ಪೈರಕಲ್, ಕೋನಸ್ ಆರ್ಟೀರಿಯೋಸಸ್, ಆಪ್ಟಿಕ್ ಕಯಾಸ್‌ಮೆ ಮತ್ತು ಕರುಳಿನ ಸ್ಪೈರಲ್ ಗೋಡೆಗಳು ರೂಪುಗೊಂಡಿಲ್ಲ. ಗಂಡಿನಲ್ಲಿ ಅಂಡಾಶಯಗಳು ಮೂತ್ರಪಿಂಡಗಳಿಂದ ಬೇರೆಯಾಗಿವೆ. ಮೊಟ್ಟೆಯಿಂದ ಹೊರಬರುವ ಮರಿಗಳು ಅರ್ಧ ಬೆಳೆದ ಸ್ಥಿತಿಯಲ್ಲಿದ್ದು ತಮ್ಮ ಬೆಳವಣಿಗೆಯನ್ನು ನೀರಿನಲ್ಲಿ ಮುಂದುವರಿಸಿ ಪ್ರೌಢಾವಸ್ಥೆಗೆ ಬರುತ್ತವೆ. ಚಾರ್ ಮೀನು ಒಂದು ಒಳ್ಳೆಯ ಆಹಾರಮೀನೆಂದು ಹೆಸರಾಗಿದೆ. (ಎಸ್.ಎಂ.)

**ಚಾರಣ ವಿದ್ಯೆ :** ಮಧ್ಯಯುಗದಲ್ಲಿ ಬ್ರಿಟನ್ ಮತ್ತು ಯುರೋಪಿನ ಇತರ ದೇಶಗಳಲ್ಲಿ ಚಾರಣರು (ಮಿನ್‌ಸ್ಟ್ರಲ್) ಪ್ರದರ್ಶಿಸುತ್ತಿದ್ದ ಗಾಯನ, ವಾದ್ಯವಾದನ ಮತ್ತು ಇನ್ನೂ ಹಲವು ಬಗೆಯ ಕೌಶಲಗಳು (ಮಿನ್‌ಸ್ಟ್ರಲ್ಸಿ). ಊರಿಂದೂರಿಗೆ ಪಾದಚಾರಿಗಳಾಗಿ ಸಂಚರಿಸುತ್ತಿದ್ದ ಈ ಚಾರಣರು ತಮ್ಮ ಆಕರ್ಷಕ ವಿದ್ಯೆಗಳನ್ನು ಪ್ರದರ್ಶಿಸಿ ತನ್ಮೂಲಕ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವುದಲ್ಲದೆ ಮಾನಮರ್ಯಾದೆಗಳನ್ನೂ ಪಡೆಯುತ್ತಿದ್ದರು. ಮಧ್ಯಯುಗದ ಇಂಗ್ಲಿಷ್ ಸಾಹಿತ್ಯವಲ್ಲದೆ ಫ್ರೆಂಚ್, ಜರ್ಮನ್ ಮುಂತಾದ ಇತರ ಯೂರೋಪಿನ ಸಾಹಿತ್ಯಗಳಲ್ಲೂ ಚಾರಣರ ಉಲ್ಲೇಖಗಳು ಹೇರಳವಾಗಿವೆ. ಮೊದಲಿಗೆ ಇವರು ರಾಜಸಭೆಗಳಿಗೂ ವರಿಷ್ಠವರ್ಗದವರ ಕುಟುಂಬಗಳಿಗೂ ಸೇರಿದ್ದರು. ಆಗ ಇವರು ಗಾಯನ, ವಾಚನ, ವಾದ್ಯವಾದನ ಮುಂತಾದ ಕಲೆಗಳಲ್ಲೇ ವಿಶೇಷ ಕೌಶಲ ಪಡೆದಿದ್ದರು. ಆದ್ದರಿಂದ ಇವರಿಗೆ ರಾಜಸಭೆಗಳಲ್ಲೂ ಉನ್ನತವರ್ಗದವರ ಮನೆತನಗಳಲ್ಲೂ ಬಹಳ ಗೌರವ ದೊರೆಯುತ್ತಿತ್ತು. ಕಾಲಕ್ರಮದಲ್ಲಿ ಇವರ ವಿದ್ಯೆಗಳಲ್ಲಿ ಅವನತಿಯುಂಟಾಗಿ ಸಂತೆ, ಜಾತ್ರೆಗಳಲ್ಲಿ ಇವರು ದೊಂಬರಾಟ, ಕೈಚಳಕದ ಪ್ರದರ್ಶನಗಳು, ಯಕ್ಷಿಣಿ ಇಂದ್ರಜಾಲಗಳ ಪ್ರದರ್ಶನಗಳು, ವಿವಿಧ ಬಗೆಯ ಕುಣಿತಗಳು ಮುಂತಾದುವನ್ನು ನಡೆಸಿ ತಮ್ಮ ಜೀವನೋಪಾಯ ಗಳಿಸಿಕೊಳ್ಳಬೇಕಾಯಿತು.

1469ರಲ್ಲಿ ಇಂಗ್ಲೆಂಡಿನ ನಾಲ್ಕನೆಯ ಎಡ್ವರ್ಡ್ ದೊರೆ ಚಾರಣರ ಸಂಘವೊಂದನ್ನು ರಚಿಸುವ ಆಜ್ಞೆ ಮಾಡಿದ. ಇದರ ಒಂದು ಉದ್ದೇಶ ರಾಜಸಭೆಗಳಿಗೋ, ವರಿಷ್ಠರ ಸೌಧಗಳಿಗೋ ಇವರು ಯದ್ವಾತದ್ವಾ ನುಗ್ಗಿ ಹೆಚ್ಚು ಪ್ರಮಾಣದಲ್ಲಿ ಸಂಭಾವನೆಯನ್ನು ಒತ್ತಾಯವಾಗಿ ಕೇಳುತ್ತಿದ್ದುದನ್ನು ತಪ್ಪಿಸುವುದು. ಅಲ್ಲದೆ ಈ ಸಂಘ ಸ್ಥಾಪಿಸಿದುದರಿಂದ ಇವರು ಪ್ರದರ್ಶಿಸುತ್ತಿದ್ದ ಕಲೆಗಳ ಮಟ್ಟವನ್ನು ನಿರ್ಣಯಿಸಲು ಸಾಧ್ಯವಾಯಿತು.

ಮೊದಲನೆಯ ಎಲಿಜಬೆತ್ ರಾಣಿಯ ಆಳ್ವಿಕೆಯ ಹೊತ್ತಿಗೆ ಈ ವೃತ್ತಿ ಬಹು ಕೀಳುಮಟ್ಟಕ್ಕಿಳಿಯಿತು. ಹೀಗಾಗಿ ಪುಂಡುಪೋಕರಿಗಳು, ಗೂಂಡಾಗಳು, ಅಲೆಮಾರಿಗಳು ಮುಂತಾದವರೊಡನೆ ಚಾರಣರನ್ನೂ ಹಲವೊಮ್ಮೆ ಶಿಕ್ಷಿಸುವ ಅಗತ್ಯ ಒದಗಿತು.

1656ರಲ್ಲಿ ಆಲಿವರ್ ಕ್ರಾಮ್‌ವೆಲ್ಲನ ಆಡಳಿತದಲ್ಲಿ ಒಂದು ಶಾಸನದ ಮೂಲಕ ಚಾರಣರ ಚಟುವಟಿಕೆಗಳಿಗೆ ಹೆಚ್ಚು ತಡೆಗಳನ್ನು ಹಾಕಲಾಯಿತು. ಇದರಿಂದ ಚಾರಣವೃತ್ತಿಗೇ ಬಹುಶಃ ಕೊಡಲಿ ಪೆಟ್ಟು ಬಿದ್ದಂತಾಯಿತು. ಫ್ರಾನ್ಸಿನಲ್ಲಿ ಮಿನ್‌ಸ್ಟ್ರಲ್‌ಗಳನ್ನು ಜಾಗ್ಲರ್‌ಗಳೆಂದು ಕರೆಯುತ್ತಿದ್ದರು.

ವೇದಗಳು, ಉಪನಿಷತ್ತುಗಳು ಮತ್ತು ಇತಿಹಾಸ ಪುರಾಣಗಳ ಕಾಲದಲ್ಲಿ ಪುರಾಣಿಕರೆಂಬ ಗಣ್ಯವ್ಯಕ್ತಿಗಳು ಭಾರತದೇಶದ ವಿವಿಧ ಭಾಗಗಳಲ್ಲಿ ಪಾದಚಾರಿಗಳಾಗಿ ಸಂಚರಿಸುತ್ತ ಗಾಯನ, ವಾಚನ, ಪ್ರವಚನಗಳಿಂದ ರಾಜಸಭೆಗಳಲ್ಲಿ ಮಾತ್ರವಲ್ಲದೆ, ಪುಣ್ಯಕ್ಷೇತ್ರಗಳು ಮೊದಲಾದ ಸ್ಥಳಗಳಲ್ಲಿ ಮನೋರಂಜನೆಯನ್ನು ಮಾತ್ರವಲ್ಲದೆ ಧರ್ಮ, ನೀತಿ ಮುಂತಾದ ಉಪದೇಶಗಳನ್ನು ಮಾಡುತ್ತಿದ್ದರು. ಇವರಿಗೆ ಆಗಾಗ ರಾಜ ಮರ್ಯಾದೆಯೂ ದೊರೆಯುತ್ತಿತ್ತು ಎನ್ನಲಾಗಿದೆ. ಅಂದಂದಿನ ಬಹುಮಟ್ಟಿನ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಉಳಿಸಿಕೊಂಡು ಬರುವಲ್ಲಿ, ಅವನ್ನು ಜನತೆಯಲ್ಲಿ ಪ್ರಸಾರ ಮಾಡುವಲ್ಲಿ ಚಾರಣರು ಮಾಡಿರುವ ಕೆಲಸ ಮರೆಯಲಾಗದಂಥದು. (ಕೆ.ವಿ.ಎಸ್.ಟಿ.)

**ಚಾರಿತ್ರಿಕ ಭಾಷಾವಿಜ್ಞಾನ :** ಭಾಷಾವಿಜ್ಞಾನದ ಎರಡು ಪ್ರಮುಖ ಭಾಗಗಳಲ್ಲೊಂದು (ಹಿಸ್ಟಾರಿಕಲ್ ಲಿಂಗ್ವಿಸ್ಟಿಕ್ಸ್); ಇನ್ನೊಂದು ವರ್ಣನಾತ್ಮಕ ಭಾಷಾವಿಜ್ಞಾನ(ಡಿಸ್ಕ್ರಿಪ್ಟಿವ್ ಲಿಂಗ್ವಿಸ್ಟಿಕ್ಸ್). ಒಂದು ಭಾಷೆಯ ಸಮಗ್ರ ಚರಿತ್ರೆಯನ್ನು ಅದರ ಪರಿವಾರದ ಸ್ವರೂಪವನ್ನು ಕಾಲಕ್ರಮದಂತೆ ವಿವರಿಸುವುದು ಚಾರಿತ್ರಿಕ ಭಾಷಾವಿಜ್ಞಾನದ ಉದ್ದೇಶ. ಇದನ್ನು ಐತಿಹಾಸಿಕ ಭಾಷಾವಿಜ್ಞಾನ ವೆಂದೂ ಕರೆಯುವುದಿದೆ. ಈ ಕಾರ್ಯವನ್ನು ತೌಲನಿಕ ಪದ್ಧತಿಯ ಮುಖಾಂತರ ಸಾಧಿಸಲಾಗುವುದು. ನಿರಂತರ ಬದಲಾವಣೆ ಯಾವುದೇ ಜೀವಂತ ಭಾಷೆಯ ವಿಶಿಷ್ಟ

ಲಕ್ಷಣಗಳಲ್ಲಿ ಒಂದು. ಈ ಬದಲಾವಣೆಗೆ ಕಾರಣ ಎನಿಸುವ ಅಂಶ ಹಾಗೂ ಕಾರಣಗಳನ್ನು ವಿವೇಚಿಸುವುದು ಮೊದಲ ಕೆಲಸ. ಒಮ್ಮೆ ಒಂದಾಗಿದ್ದ ಭಾಷೆ ಕಾರಣಾಂತರಗಳಿಂದ ಒಡೆದು ಅನೇಕ ಭಾಷೆಗಳಾಗುವುದುಂಟು. ಈ ಭಾಷೆಗಳ ಪರಸ್ಪರ ತೌಲನಿಕ ಅಧ್ಯಯನದ ಮೂಲಕ ಮೂಲಭಾಷೆಯನ್ನು ಗುರುತಿಸುವುದು, ಕೆಲವೇಳೆ ರಚಿಸುವುದು ಇನ್ನೊಂದು ಕೆಲಸ. ಇಂಥ ಸಾಧನೆಗೆ ಆವಶ್ಯಕವಾದ ಎಲ್ಲ ಪ್ರಕ್ರಿಯೆ ಮತ್ತು ಸಿದ್ಧಾಂತಗಳನ್ನೂ ಚಾರಿತ್ರಿಕ ಭಾಷಾವಿಜ್ಞಾನ ಒಳಗೊಂಡಿದೆ.

ಮೊದಮೊದಲು ಚಾರಿತ್ರಿಕ ಭಾಷಾವಿಜ್ಞಾನ ಭಾಷಾಭ್ಯಾಸದ ತಳಹದಿಯಾಗಿತ್ತು. ಕಾಲಾಂತರದಿಂದ ಅದರ ಸ್ಥಾನವನ್ನು ವರ್ಣನಾತ್ಮಕ ಭಾಷಾವಿಜ್ಞಾನ ಸೈದ್ಧಾಂತಿಕವಾಗಿ ಆವರಿಸಿತು. ಇತ್ತೀಚೆಗೆ ಅದೇ ಭಾಷಾವಿಜ್ಞಾನದ ಸಾಮ್ರಾಜ್ಞಿ ಎನಿಸಿದೆ.

ಒಂದು ಪ್ರದೇಶದ ಒಂದು ಕಾಲದ ಒಂದು ಭಾಷೆಯ ಅಭ್ಯಾಸವನ್ನು ಮಾಡುವುದು ವರ್ಣನಾತ್ಮಕ ಭಾಷಾವಿಜ್ಞಾನದ ಉದ್ದೇಶ. ಭಾಷಾಭ್ಯಾಸದ ಕಾಲ ಮತ್ತು ಪ್ರದೇಶಗಳ ಮಿತಿ ಹೆಚ್ಚಾದರೆ, ತುಲನೆ ತಲೆದೋರುತ್ತದೆ. ತುಲನೆ ಬಂದೊಡನೆ ಚಾರಿತ್ರಿಕ ರೀತಿ ಕಾಣಿಸಿಕೊಳ್ಳುತ್ತದೆ. ಹೀಗೆ ಒಂದು ಭಾಷೆಯ ಕೇವಲ ಭಿನ್ನ ಕಾಲ ಅಥವಾ ಪ್ರದೇಶಗಳ ಅನೇಕ ಹಂತಗಳ ತುಲನಾತ್ಮಕ ಅಧ್ಯಯನವೇ ಚಾರಿತ್ರಿಕ ಭಾಷಾವಿಜ್ಞಾನದ ಒಂದು ಭಾಗವಾಗಬಹುದು. ಒಂದೇ ಭಾಷೆಯ ತೌಲನಿಕ ಅಧ್ಯಯನಕ್ಕೆ ಐತಿಹಾಸಿಕ ಭಾಷಾವಿಜ್ಞಾನವೆಂದೂ, ಅನೇಕ ಭಾಷೆಗಳ ತೌಲನಿಕ ಅಧ್ಯಯನಕ್ಕೆ ತೌಲನಿಕ ಭಾಷಾವಿಜ್ಞಾನವೆಂದೂ ಕರೆಯುವರು.

ಚಾರಿತ್ರಿಕ ಭಾಷಾವಿಜ್ಞಾನ ವಿಚಾರ ಮಾಡುವ ಕೆಲವು ಮುಖ್ಯ ಸಂಗತಿಗಳಿವು. ಭಾಷೆಯ ಬದಲಾವಣೆ, ಬದಲಾವಣೆಯ ವೈವಿಧ್ಯ, ತಂತ್ರಗಳು, ಸ್ವೀಕರಣ, ಅದರ ಆವಶ್ಯಕತೆ, ಸಾದೃಶ್ಯ ಸೃಷ್ಟಿ, ಧ್ವನಿ ಬದಲಾವಣೆ ಮತ್ತು ಅದರ ಪರಿಣಾಮ, ಭಾಷಿಕ ಭೂಗೋಳ, ಭಾಷಾಭಿನ್ನತೆ, ಕೃತಕ ಭಾಷೆಗಳು, ಭೌಗೋಳಿಕ ಪ್ರಸಾರ, ತೌಲನಿಕ ಪದ್ಧತಿಗಳು, ಭಾಷೆಗಳ ವರ್ಗೀಕರಣ, ಅವುಗಳ ಆನುವಂಶಿಕ ಸಂಬಂಧ, ಹಾಗೂ ಆಂತರಿಕ ಪುನಾರಚನೆ, ಭಾಷಾ ಕಾಲಕ್ರಮವಿಜ್ಞಾನ, ಜಗತ್ತಿನ ಭಾಷೆಗಳು ಮತ್ತು ಪ್ರಮಾಣಭಾಷೆ ಮೊದಲಾದವು. ಈ ಎಲ್ಲ ವಿಷಯಗಳ ಸಮಗ್ರ ನಿರೂಪಣೆಯಿಂದ ಈ ವಿಜ್ಞಾನದ ಮಹತ್ತ್ವ ಮತ್ತು ವ್ಯಾಪ್ತಿ ಎಷ್ಟಿದೆಯೆಂಬುದನ್ನು ಊಹಿಸಬಹುದು.

ಭಾಷೆ ಬದಲಾಗುತ್ತದೆ ಎಂಬ ಮಾತಿಗೆ ಆಧಾರ ಇಲ್ಲವೆ ಕಾರಣಗಳ ಆವಶ್ಯಕತೆಯಿಲ್ಲ. ಬದಲಾವಣೆ ಭಾಷೆಯ ಜೀವಾಳ. ಜಗತ್ತಿನ ಇಂದಿನ ಸಾಹಿತ್ಯ ಭಾಷೆಗಳನ್ನು ನೋಡಿದರೆ ಅವು ಹಂತಹಂತವಾಗಿ ಬೆಳೆದುಬಂದದ್ದು ಕಂಡುಬರುತ್ತದೆ. ಹೀಗೆ ಬೆಳೆದು ಬರುವಾಗ ಬದಲಾವಣೆಗಳಾಗುವುದು ಸ್ವಾಭಾವಿಕ ಹಾಗೂ ಅನಿವಾರ್ಯ. ಭಾಷೆಯ ಬದಲಾವಣೆ ಹರಿಯುವ ನೀರಿನಂತೆ ನಿರಂತರ. ಭಾಷೆಯ ಆರಂಭದ ಸ್ಥಿತಿಗೂ ಬದಲಾವಣೆಯಾದ ಸ್ಥಿತಿಗೂ ಸಹಜವಾಗಿ ವ್ಯತ್ಯಾಸ ಕಂಡುಬರುತ್ತದೆ. ಈ ಮೂಲಕ ಪ್ರತಿಯೊಂದು ಭಾಷೆಯ ವಿವಿಧ ಘಟ್ಟಗಳನ್ನು ಕಲ್ಪಿಸಲು ಸಾಧ್ಯ. ಉದಾಹರಣೆ: ಕನ್ನಡವನ್ನು ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡವೆಂದು ಮೂರು ಘಟ್ಟಗಳಲ್ಲಿ ವಿಭಾಗಿಸಬಹುದು. ಇದಕ್ಕೆ ಶಾಸನಗಳು, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಗ್ರಂಥಗಳು ನಿದರ್ಶನ. ಈ ದೃಷ್ಟಿಯಿಂದ ಕನ್ನಡ ಭಾಷೆಯನ್ನು ಅವಲೋಕಿಸಿದರೆ ಈ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

ಹಿಂದಿದ್ದ ಅನೇಕ ರೂಪಗಳು ಬದಲಾಗಿವೆ. ಕನ್ನಡದ ವಿಭಕ್ತಿ ಪ್ರತ್ಯಯಗಳಲ್ಲಿ ಬದಲಾವಣೆಗಳು ಆಗಿವೆ. ಸ್ವರವ್ಯತ್ಯಾಸವೂ ಕಂಡುಬರುತ್ತದೆ. ಅಲ್ಲದೆ ಪ ಕಾರ ಹ ಕಾರವಾಗಿಯೂ ವ ಕಾರ ಬ ಕಾರವಾಗಿಯೂ ಬದಲಾವಣೆಯಾದದ್ದು ಕಂಡುಬರುತ್ತದೆ. ವಡ್ಡಾರಾಧನೆಯಲ್ಲಿ ಬರುವ ಕೆಲವು ರೂಪಗಳು ಇಂದು ಬಳಕೆಯಲ್ಲಿಲ್ಲ. ಅವುಗಳ ಬದಲಾಗಿ ಹೊಸ ರೂಪಗಳು ಬಳಕೆಗೊಂಡಿವೆ. ಅಂದು ಬಳಕೆಯಲ್ಲಿದ್ದ ಱ ಮತ್ತು ೞ ವರ್ಣಗಳು ಇಂದು ಬಳಕೆಯಲ್ಲಿಲ್ಲ. ಸ್ವೀಕರಣದ ಪರಿಣಾಮ ಅನೇಕ ಹೊಸ ಹೊಸ ಪದಗಳು ಸ್ವೀಕರಣಗೊಂಡಿವೆ. ಉದಾಹರಣೆ–ಜವಾಬು, ಲಡಾಯಿ, ಪಿಂಚಣಿ, ಕುಂಪಣಿ, ಲಡ್ಡು ಇತ್ಯಾದಿ. ಕಾಲದ ಅಂತರ ಹೆಚ್ಚಿದರೆ ಹಿಂದಿನ ಭಾಷೆಯನ್ನು ತಿಳಿಯುವುದು ಕಷ್ಟ. ಅಂತರ ಕಡಿಮೆಯಿದ್ದಷ್ಟೂ ಅರಿವಿನ ಮಟ್ಟ ಹೆಚ್ಚಾಗಿರುತ್ತದೆ. ಇದಕ್ಕೆ ಕಾರಣ, ನಿತ್ಯ ಬದಲಾಗುತ್ತಿರುವ ಭಾಷೆ ಕಡಿಮೆ ಕಾಲಾವಧಿಯಲ್ಲಿ ಕಡಿಮೆ ಬದಲಾವಣೆಯಾಗಿರುತ್ತದೆ. ಕಾಲದ ಅಂತರ ಹೆಚ್ಚಿದಂತೆ ಈ ಭಿನ್ನಾಂಶಗಳು ಹೆಚ್ಚಾಗುತ್ತಾ ಹೋಗುತ್ತವೆ. ಇಂಥ ಬದಲಾವಣೆ ಎಲ್ಲ ಭಾಷೆಗಳಿಗೂ ಅನ್ವಯಿಸುತ್ತದೆಯಾದರೂ ಅವುಗಳಲ್ಲೆಲ್ಲ ಇದು ಒಂದೇ ತೆರನಾಗಿ ಕಂಡುಬರುವುದಿಲ್ಲ. ಭಾಷೆ ಭಾಷೆಗಳ ನಡುವೆ ಬದಲಾವಣೆಗಳ ಭಿನ್ನತೆ ಕಂಡುಬರಲು ಆಯಾ ಭಾಷೆಗಳ ಲಿಪಿ ಕಾರಣವಾಗುತ್ತದೆ. ಇಂಗ್ಲಿಷ್ ಭಾಷೆಯ ಹಂತಹಂತಗಳಲ್ಲಿನ ಕಾಗುಣಿತದ (ಸ್ಪೆಲಿಂಗ್) ವ್ಯತ್ಯಾಸಗಳು ಕನ್ನಡದಲ್ಲಿ ಕಂಡುಬರುವುದಿಲ್ಲ. ಒಮ್ಮೊಮ್ಮೆ ಬರವಣಿಗೆಯ ಹಾಗೂ ಉಚ್ಚಾರಣೆಯ ವ್ಯತ್ಯಾಸವನ್ನು ಸೂಚಿಸುತ್ತದೆಯೇ ಇಲ್ಲವೇ ಎಂಬುದನ್ನು ಹೇಳುವುದು ಅಸಾಧ್ಯವಾಗುತ್ತದೆ. ಆದರೆ ಕನ್ನಡದಲ್ಲಿ ಈ ವ್ಯತ್ಯಾಸ ಸ್ಪಷ್ಟವಾಗಿ ತೋರುತ್ತದೆ. ಬರೆದಂತೆ ಉಚ್ಚಾರ ಮಾಡುವುದು ಕನ್ನಡದ ವೈಶಿಷ್ಟ್ಯ. (ಬ್ರಹ್ಮ, ಆಹ್ಲಾದ–ಇಂಥ ಕೆಲವು ಪದಗಳನ್ನು ಹೊರತುಪಡಿಸಿ)

ಯಾವುದೇ ಒಂದು ಭಾಷೆಯಲ್ಲಿ ನಡೆಯುವ ಬದಲಾವಣೆಗಳನ್ನು ತಡೆಯುವುದು ಯಾರಿಗೂ ಸಾಧ್ಯವಿಲ್ಲ. ಅದು ಒಂದು ನಿರಂತರ ನಿಶ್ಚಿತ ಲಕ್ಷಣ. ವೈಯಾಕರಣರು ಇಂಥ ಬದಲಾವಣೆಗಳನ್ನು ತಡೆಯಲು ವ್ಯರ್ಥ ಪ್ರಯತ್ನ ಮಾಡಿದ್ದುಂಟು. ಸಂಸ್ಕೃತದ ವ್ಯಂಜನಾಂತ ಶಬ್ದಗಳು ಪ್ರಾಕೃತಕ್ಕೆ ಬರುವಾಗ ಸ್ವರಾಂತಗಳಾದುವು. ಒಮ್ಮೊಮ್ಮೆ ಅಂತ್ಯ ವ್ಯಂಜನಗಳು ಬಿದ್ದುಹೋದವು. ಕನ್ನಡದಲ್ಲಿಯೂ ಇಂಥದೇ ಪ್ರಕ್ರಿಯಾ ಲಕ್ಷಣ ಕಂಡುಬರುತ್ತದೆ. ಹಳೆಗನ್ನಡದ ವ್ಯಂಜನಾಂತ ಪದಗಳು ಸ್ವರಾಂತಗಳಾದುವು. ಉದಾ : ಒರಲ್>ಒರಳು, ಕೊರಲ್>ಕೊರಳು, ಬೆರಲ್>ಬೆರಳು ಇತ್ಯಾದಿ. ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿಯೂ ಇಂಥ ಬದಲಾವಣೆಗಳನ್ನು ತಡೆಯುವ ವಿಫಲ ಪ್ರಯತ್ನ ನಡೆದಿದೆ. ಕೆಲವೇ ಸಂದರ್ಭಗಳಲ್ಲಿ ಇಂಥ ಪ್ರಯತ್ನ ಸಫಲವಾಗುವುದು. ಧಾರ್ಮಿಕ ಕಾರಣದಿಂದ ಪೂರ್ವಕಾಲದಲ್ಲಿ ಬಳಕೆಯಲ್ಲಿದ್ದ ಪದಗಳು ಮುಂದುವರಿಯಬಹುದು. ಸಂಸ್ಕೃತ, ಲ್ಯಾಟಿನ್, ಹೀಬ್ರು ಭಾಷೆಗಳು ಈ ಸಂಗತಿಗೆ ತಕ್ಕ ಉದಾಹರಣೆಗಳು.

ಒಟ್ಟಿನಲ್ಲಿ ಹೇಳುವುದಾದರೆ, ಭಾಷೆ ಬದಲಾಗುವುದು ಒಂದು ಸ್ವಾಭಾವಿಕ ಘಟನೆ, ಭಾಷೆಯಲ್ಲಿ ತೋರುವ ಭಿನ್ನತೆಯೂ ಅಷ್ಟೇ ಸ್ವಾಭಾವಿಕ. ಭಿನ್ನತೆಗಳು ಎಷ್ಟೇ ಹೆಚ್ಚಾಗಿದ್ದರೂ ಒಂದೇ ಮೂಲದಿಂದ ಹೊರಟ ಭಾಷೆಗಳಲ್ಲಿ ಪರಸ್ಪರ ಸಂಬಂಧ ಕಂಡುಬರುತ್ತದೆ. ಈ ಮೂಲವನ್ನು ತಾಯಿಭಾಷೆ ಎಂದು ಕರೆಯುವುದುಂಟು.

ಒಂದು ವಿಶಿಷ್ಟ ಕಾಲದ ಹಿಂದೆ ಇದ್ದ ಉಪಭಾಷೆಗಳು ಸಂಬಂಧಿತ ಭಾಷೆಗಳೆನಿಸಿಕೊಳ್ಳುವುವು. ಅವು ಬಳಕೆಯಲ್ಲಿರುವವರೆಗೆ ಈ ಸಂಬಂಧ ಮುಂದುವರಿಯುತ್ತದೆ. ಕಾಲ ಉರುಳಿದಂತೆ ಸಾಮ್ಯಾಂಶ ಕಡಿಮೆಯಾಗುತ್ತಾ ಹೋಗಬಹುದು. ಹೊಸ ಅಂಶಗಳು ಸೇರಿಕೊಳ್ಳುವುದರಿಂದಲಂತೂ ಎರಡೂ ಭಾಷೆಗಳಲ್ಲಿ ಪರಸ್ಪರ ಸಂಬಂಧವಿದೆಯೇ ಎಂಬ ಸಂಶಯ ತಲೆದೋರುವುದುಂಟು. ಆದರೆ ಅವುಗಳ ಸಂಬಂಧವನ್ನು ಗುರುತಿಸುವ ಅಂಶಗಳು ಇದ್ದೇ ಇರುತ್ತವೆ. ಆದ್ದರಿಂದ ಈ ಸಂಬಂಧ ಮುಂದುವರಿಯುತ್ತದೆ. ದೂರದಲ್ಲಿರುವ ಬ್ರಾಹೂಈ ಭಾಷೆಯಲ್ಲಿ ದ್ರಾವಿಡ ಭಾಷೆಯ ಅಂಶಗಳು ಕಂಡುಬರುವುದರಿಂದ ಅದು ದ್ರಾವಿಡ ಭಾಷೆಯೆಂದು ಹೇಳಿದರೂ ಅದಕ್ಕೆ ವಿಶಿಷ್ಟವಾದ ಕೆಲವು ಅಂಶಗಳು ಅದರಲ್ಲಿ ಬೆಳೆದು ಬಂದಿರುವುದು ಕಂಡುಬರುತ್ತದೆ.

ಭಾಷೆಯಲ್ಲಿಯ ಬದಲಾವಣೆಯೆಂದರೆ ಭಾಷಾರಚನೆಯ ಒಂದೊಂದು ಉಪವಿಭಾಗದ ಮೇಲೆ ಆಗುವ ಪರಿಣಾಮ. ಒಂದೊಂದು ವಿಭಾಗದ ಮೇಲೆ ಆಗುವ ಪರಿಣಾಮಕ್ಕೆ ಆ ವಿಭಾಗದ ಹೆಸರನ್ನೇ ಕೊಡುವ ರೂಢಿಯುಂಟು. ಹೀಗೆ ಭಾಷಾರಚನೆಯ ವಿಭಾಗಗಳು ತಮ್ಮ ಬದಲಾವಣೆಯ ಮುಖಾಂತರ ಬದಲಾವಣೆಯ ವೈವಿಧ್ಯಗಳನ್ನು ತೋರಿಸುತ್ತವೆ. ಭಾಷಿಕ ಬದಲಾವಣೆಯ ವೈವಿಧ್ಯವನ್ನು ತಿಳಿದುಕೊಳ್ಳುವ ಮೊದಲು ಭಾಷಾರಚನೆಯ ಉಪವಿಭಾಗಗಳು ಯಾವುವು ಎಂಬುದನ್ನು ಅವಶ್ಯ ತಿಳಿದುಕೊಳ್ಳಬೇಕು.

ಧ್ವನಿ, ಧ್ವನಿಮಾ, ಆಕೃತಿಮಾ, ವಾಕ್ಯರಚನೆ ಮತ್ತು ಅರ್ಥ–ಇವು ಭಾಷಾರಚನೆಯ ಪ್ರಮುಖ ಉಪವಿಭಾಗಗಳು. ಈ ವಿಭಾಗಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಅವೇ ಕೇಂದ್ರ ವಿಭಾಗ ಮತ್ತು ಬಾಹ್ಯ ವಿಭಾಗ. ಕೇಂದ್ರ ವಿಭಾಗದಲ್ಲಿ, ಧ್ವನಿಮಾ, ಆಕೃತಿಮಾ ಮತ್ತು ವಾಕ್ಯರಚನಾ ವಿಭಾಗಗಳನ್ನೂ ಬಾಹ್ಯ ವಿಭಾಗದಲ್ಲಿ ಉಳಿದ ಧ್ವನಿ ಹಾಗೂ ಅರ್ಥ ವಿಭಾಗಗಳನ್ನೂ ಸೇರಿಸುವುದುಂಟು. ಕೇಂದ್ರ ವಿಭಾಗಕ್ಕೆ ಒಳಪಟ್ಟವು ನೇರವಾಗಿ ಭಾಷಾರಚನೆಗೆ ಸಂಬಂಧಪಟ್ಟಿವೆ. ಆದರೆ ಧ್ವನಿ ಮತ್ತು ಅರ್ಥ ವಿಭಾಗಗಳು ಬೇರೆ ವಿಜ್ಞಾನಗಳಿಗೂ ಸಂಬಂಧಪಟ್ಟಿವೆ. ಈ ವರ್ಗೀಕರಣವನ್ನು ತಳಹದಿಯಾಗಿಟ್ಟುಕೊಂಡು ಭಾಷಿಕ ಬದಲಾವಣೆಯ ವೈವಿಧ್ಯಗಳ ಸಾಮಾನ್ಯ ಲಕ್ಷಣಗಳನ್ನು ಹೀಗೆ ನಿರೂಪಿಸಬಹುದು.

**ಧ್ವನಿಮಾ ಬದಲಾವಣೆ :** ಒಂದು ಭಾಷೆಯ ಒಟ್ಟು ಧ್ವನಿಮಾ ವ್ಯವಸ್ಥೆಯ ಸಂಖ್ಯೆಯಲ್ಲಿ ಹೆಚ್ಚು ಅಥವಾ ಕಡಿಮೆಯಾದರೆ ಇಲ್ಲವೆ ಧ್ವನಿಮಾ ಸಂಯೋಜನೆಯಲ್ಲಿ ವ್ಯತ್ಯಾಸವುಂಟಾದರೆ, ಅದಕ್ಕೆ ಧ್ವನಿಮಾ ಬದಲಾವಣೆ ಎನ್ನುವರು. ಹಳಗನ್ನಡದಲ್ಲಿದ್ದ ಳ್ ಮತ್ತು ೞ್ ಧ್ವನಿಮಾಗಳು ಕೂಡಿಕೊಂಡು ಹೊಸಗನ್ನಡದಲ್ಲಿ ಒಂದೇ (ಳ್) ಧ್ವನಿಮಾ ಆಗಿದೆ. ಅದೇ ರೀತಿ ರ್ ಮತ್ತು ಱ್ ಕೂಡಿ ರ್ ಆಗಿದೆ. ಹಳಗನ್ನಡದಲ್ಲಿದ್ದ ಪ್ ಉಳಿದುಕೊಂಡು ಅದರೊಡನೆ ಹ್ ಬೆಳೆದುಕೊಂಡು ಬಂದಿದೆ. ಪಲ್ಲಿ>ಹಲ್ಲಿ, ಪಗ್ಗ>ಹಗ್ಗ–ಹೀಗೆ ಧ್ವನಿಮಾ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಾದದ್ದು ತೋರಿಬರುತ್ತದೆ.

**ವ್ಯಾಕರಣ ವ್ಯವಸ್ಥೆಯ ಬದಲಾವಣೆ :** ಇದರಲ್ಲಿ ವ್ಯಾಕರಣ ಮತ್ತು ಪದಕೋಶಗಳ ಬದಲಾವಣೆಗಳು ಸೇರುತ್ತವೆ. ವ್ಯಾಕರಣದ ತಿರುಳಿನಲ್ಲಿ ಆಗುವ ಬದಲಾವಣೆ ಇಲ್ಲಿ ಮುಖ್ಯ. ಈ ತಿರುಳಿನಲ್ಲಿ ವ್ಯಾಕರಣ ವರ್ಗ, ವಾಕ್ಯಖಂಡ ಮತ್ತು ರಚನೆಗಳು ಅಡಕವಾಗಿವೆ. ಹಳಗನ್ನಡದಲ್ಲಿ –ಇಸು ಪ್ರತ್ಯಯ ಸಾಮಾನ್ಯವಾಗಿ ಧಾತುರೂಪಗಳಿಗೆ ಹತ್ತುತ್ತಿತ್ತು. ಆದರೆ

ಹೊಸಗನ್ನಡದಲ್ಲಿ ಅದನ್ನು ನಾಮರೂಪಗಳಿಗೂ ಹಚ್ಚುವ ರೂಢಿ ಬಂದಿದೆ. ಉದಾ: ರಚಿಸು, ರಮಿಸು, ವಚನಿಸು, ಸಮರ್ಪಿಸು, ಕವನಿಸು–ಹೀಗೆ ವ್ಯಾಕರಣ ಬದಲಾವಣೆ ಯಾದದ್ದು ಕಂಡುಬರುತ್ತದೆ. ಅಲ್ಲದೆ ಕನ್ನಡದಲ್ಲಿ ಕರ್ಮಣಿ ಪ್ರಯೋಗವನ್ನು ಬಳಕೆ ಮಾಡುವುದುಂಟು. ಇದು ಸಂಸ್ಕೃತದ ಪ್ರಭಾವದಿಂದ ಬಂದದ್ದು. ಇದೂ ವ್ಯಾಕರಣದ ಬದಲಾವಣೆಯೇ.

**ಪದಕೋಶ ಬದಲಾವಣೆ:** ಭಾಷೆಯಲ್ಲಿನ ಪದಗಳ ಸಂಖ್ಯೆಯಲ್ಲಿ ಆಗುವ ಬದಲಾವಣೆಗೆ ಪದಕೋಶ ಬದಲಾವಣೆ ಎನ್ನುವರು. ಪದಕೋಶಗಳ ಮೂಲಕ ಇದನ್ನು ತಿಳಿದುಕೊಳ್ಳಬಹುದು. ಸ್ವೀಕರಣದ ಪರಿಣಾಮದಿಂದ ಬೇರೊಂದು ಭಾಷೆಯಿಂದ ಅನೇಕ ಪದಗಳು ಒಂದು ಭಾಷೆಗೆ ಸೇರಿಕೊಳ್ಳುತ್ತವೆ. ಕನ್ನಡದ ಪದಸಂಗ್ರಹದಲ್ಲಿ ಸಂಸ್ಕೃತ, ಪ್ರಾಕೃತ, ತಮಿಳು, ಪೋರ್ಚುಗೀಸ್, ಪಾರಸಿ, ಹಿಂದೀ, ಇಂಗ್ಲಿಷ್ ಮುಂತಾದ ಭಾಷೆಗಳಿಂದ ಅನೇಕ ಪದಗಳು ಸೇರ್ಪಡೆಯಾಗಿವೆ. ನಮ್ಮಲ್ಲಿಲ್ಲದ ವಸ್ತುವನ್ನು ನಿರ್ದೇಶಿಸುವಾಗ ಹಳೆಯ ಎರಡು ಪದಗಳನ್ನು ಸೇರಿಸಿ ಹೊಸ ಸಮಾಸಪದವನ್ನು ಸೃಷ್ಟಿ ಮಾಡಿರುವುದುಂಟು. ಉದಾ : ಸೀಮೆಯೆಣ್ಣೆ. ಕೆಲವೇಳೆ ಅನ್ಯಭಾಷಾ ಪದದ ಅನುವಾದ ಮಾಡಿರುವುದೂ ಉಂಟು. ಉದಾ : ಹ್ಯಾಂಡ್‌ಬ್ಯಾಗ್=ಕೈಚೀಲ.

ಒಮ್ಮೊಮ್ಮೆ ಭಾಷೆಯಲ್ಲಿಯೇ ನಡೆಯುವ ಸಾದೃಶ್ಯ ಸೃಷ್ಟಿಯ ಮೂಲಕ ಹೊಸ ಹೊಸ ಪದಗಳು ರಚನೆಗೊಂಡು. ಆ ಭಾಷೆಯ ಪದಸಂಪತ್ತನ್ನು ಹೆಚ್ಚಿಸುವುದುಂಟು. ಉದಾ : ಕೆಲವು ನಾಮಪದಗಳಿಗೆ –ಇಸು ಪ್ರತ್ಯಯವನ್ನು ಹಚ್ಚುತ್ತಿರಲಿಲ್ಲ, ಆದರೆ ಈಗ ಇಂಗ್ಲಿಷ್ ಭಾಷೆಯಲ್ಲಿ ಮಾಡಿದಂತೆ ಅಂಥ ಪದಗಳು ಬಳಕೆಯಲ್ಲಿವೆ. ಉದಾ: ಕತ್ತಲು–ಕತ್ತಲಿಸು, ಗಾಳಿ–ಗಾಳಿಸು. ಇತ್ಯಾದಿ.

ಆಕೃತಿ ಧ್ವನಿಮಾ ವ್ಯವಸ್ಥೆಯಲ್ಲಿಯ ಬದಲಾವಣೆಯಲ್ಲಿ ರೂಪಬದಲಾವಣೆ ಮತ್ತು ವಿಕಲ್ಪ ಬದಲಾವಣೆ ಎಂಬ ಎರಡು ವಿಧಗಳುಂಟು. ಮೊದಲಿದ್ದ ಆಕೃತಿಮಾ ರೂಪಗಳು ಬದಲಾದರೆ ಅದು ರೂಪ ಬದಲಾವಣೆಯಾಗುತ್ತದೆ. ಹಳಗನ್ನಡದ ವ್ಯಂಜನಾಂತ ಪದಗಳು ಹೊಸಗನ್ನಡದಲ್ಲಿ ಸ್ವರಾಂತಗಳಾದುವು. ಉದಾ : ನಾನ್>ನಾನು, ಅವನ್>ಅವನು, ಅವಳ್>ಅವಳು. ವಿಕಲ್ಪ ಬದಲಾವಣೆಯಲ್ಲಿ ಬದಲಾದ ರೂಢಿಮೂಲಕ ಭಾಷೆಯಲ್ಲಿ ಮೊದಲು ಬಳಕೆಯಲ್ಲಿದ್ದ ರೂಪದ ಜೊತೆಗೆ ಇನ್ನೊಂದು ಹೊಸ ರೂಪ ಸೇರಿಕೊಂಡು ಎರಡೂ ರೂಪಗಳು ಉಪಯೋಗಿಸಲ್ಪಡುತ್ತವೆ. ಉದಾ : ಸಿಗು, ಸಿಕ್ಕನು, ಸಿಕ್ಕಿದನು.

**ಅರ್ಥ ಬದಲಾವಣೆ :** ಭಾಷೆಯ ಒಂದು ಹಂತದಲ್ಲಿ ವಿಶಿಷ್ಟ ಅರ್ಥದಲ್ಲಿ ಬಳಕೆಯಲ್ಲಿದ್ದ ಕೆಲವು ಪದಗಳು ಮತ್ತೊಂದು ಹಂತಕ್ಕೆ ಬರುವಷ್ಟರಲ್ಲಿ ಅವು ತಮ್ಮ ಮೂಲ ಅರ್ಥವನ್ನು ಕಳೆದುಕೊಂಡು ಹೊಸ ಅರ್ಥವನ್ನು ಪಡೆಯುತ್ತವೆ. ಈ ಕ್ರಿಯೆಗೆ ಅರ್ಥ ಬದಲಾವಣೆ ಎನ್ನುವರು. ಕನ್ನಡದ ಪದಗಳಾದ ತಣಿ, ಗೆಳೆಯ, ಯಜಮಾನ ಮೊದಲಾದವು ತಮ್ಮ ಪೂರ್ವದ ಅರ್ಥದ ಜೊತೆಗೆ ಹೊಸ ಅರ್ಥವನ್ನು ಪಡೆದಿವೆ. ತಣಿ=ತೃಪ್ತಿಗೊಳ್ಳು; ದಣಿ, ಗೆಳೆಯ=ಸ್ನೇಹಿತ; ಗೆಣೆಯ = ವಿಟ. ಯಜಮಾನ=ಯಜ್ಞದೊಡೆಯ ; ಒಡೆಯ.

ಹೀಗೆ ಅರ್ಥವ್ಯತ್ಯಾಸದ ಮೂಲಕ ಪದಕೋಶದಲ್ಲಿ ವ್ಯತ್ಯಾಸಗಳುಂಟಾಗುವುದು. ಬಾಹ್ಯ ವಿಭಾಗಕ್ಕೆ ಸೇರುವ ಬದಲಾವಣೆಯಲ್ಲಿ ಧ್ವನಿಬದಲಾವಣೆಯೂ ಒಂದು. ಉಚ್ಚಾರ ಮತ್ತು ಶ್ರವಣ ರೂಢಿಗಳಲ್ಲಿಯ ವ್ಯತ್ಯಾಸಗಳ ಮೂಲಕ ಭಾಷೆಯಲ್ಲಿ ಈ ಬದಲಾವಣೆ ಜರುಗುತ್ತದೆ. ಪಾಡು>ಹಾಡು. ಅಲ್ಪಪ್ರಾಣ ಮಹಾಪ್ರಾಣವಾಗುವಿಕೆಯೂ ಧ್ವನಿಬದಲಾವಣೆಗೆ ಒಂದು ಉದಾಹರಣೆ. ಕೆಲವು ತಂತ್ರಗಳ ಮೂಲಕ ಭಾಷೆಯಲ್ಲಿ ಬದಲಾವಣೆಗಳಾಗುತ್ತವೆ. ಭಾಷೆಯಲ್ಲಿ ಸರ್ವವ್ಯಾಪಿ ಬದಲಾವಣೆಗೆ ಕಾರಣವಾಗುವ ತಂತ್ರಗಳಿಗೆ 'ಪ್ರಮುಖತಂತ್ರ'ಗಳೆಂದೂ ಅಲ್ಲೊಂದು ಇಲ್ಲೊಂದು ಬದಲಾವಣೆಗೆ ಕಾರಣವಾಗುವ ತಂತ್ರಗಳಿಗೆ 'ಗೌಣತಂತ್ರ'ಗಳೆಂದೂ ಕರೆಯುವುದುಂಟು. ಪ್ರಧಾನ ತಂತ್ರಗಳಲ್ಲಿ ಧ್ವನಿ ಬದಲಾವಣೆ, ಸ್ವೀಕರಣ ಮತ್ತು ಸಾದೃಶ್ಯಗಳು ಸೇರ್ಪಡೆಯಾದರೆ, ಗೌಣ ತಂತ್ರಗಳಲ್ಲಿ ದೂಷಣೆ. ಅಧಿವಿಶ್ಲೇಷಣೆ, ಸದೃಶಾಕ್ಷರಲೋಪ, ವರ್ಣಪಲ್ಲಟ, ಸಮರೂಪಧಾರಣೆ ಮೊದಲಾದುವು ಸೇರ್ಪಡೆಯಾಗುತ್ತವೆ. ಧ್ವನಿ ಬದಲಾವಣೆ ತಂತ್ರವು ಭಾಷೆಯಲ್ಲಿ ಮೂಲಭೂತ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಉದಾ : ಹಳಗನ್ನಡದ ಪ್, ವ್ ಗಳು ಅನುಕ್ರಮವಾಗಿ ಹ್ ಮತ್ತು ಬ್ ಗಳಾದುವು.

ಎರಡು ಭಾಷೆಗಳು ಒಂದಕ್ಕೊಂದು ಸಮೀಪಿಸಿದಾಗ ಅವುಗಳಲ್ಲಿ ಸಂಪರ್ಕ ಕಂಡುಬರುವುದು ಸ್ವಾಭಾವಿಕ. ಅವೆರಡರ ನಡುವೆ ಕೊಡುಕೊಳ್ಳುವ ವ್ಯವಹಾರ ನಡೆಯುವುದು ಸಹಜ. ಹೀಗಾಗಿ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಧ್ವನಿ/ಪದಗಳ ಸ್ವೀಕರಣೆ ನಡೆಯುವುದು; ಸಂಸ್ಕೃತ, ಇಂಗ್ಲಿಷ್, ಮರಾಠಿ, ಹಿಂದಿ ಭಾಷೆಗಳಿಂದ ಕನ್ನಡಕ್ಕೆ ಅನೇಕ ಪದಗಳು ಸ್ವೀಕರಣಗೊಂಡಿವೆ. ಭಾಷೆಗೆ ಈ ಸ್ವೀಕರಣ ಉಪಭಾಷೆಗಳಲ್ಲಿಯೂ ನಡೆಯುತ್ತದೆ. ಬಳಕೆಯಲ್ಲಿದ್ದ ಆಧಾರದ ಮೇಲೆ ಅವಕ್ಕೆ ಸಾದೃಶ್ಯವಾದ ಹೊಸ ರೂಪಗಳನ್ನು ಸೃಷ್ಟಿಸುವ ವಿಧಾನಕ್ಕೆ ಸಾದೃಶ್ಯವೆನ್ನುತ್ತಾರೆ. ಸಿಗು–ಸಿಕ್ಕನು, ಹೋಗು–ಹೊಕ್ಕನು, ನಗು–ನಕ್ಕನು, ಒಂದು ಪದದ ಸತತ ಸಾಹಚರ್ಯದ ಮೂಲಕ ಮತ್ತೊಂದು ಪದದ ರೂಪ ಬದಲಾಗುವುದಕ್ಕೆ ದೂಷಣೆಯೆಂದೂ ಹಳೆಯ ರೂಪವನ್ನು ಬಿಟ್ಟು ಹೊಸ ರೂಪವನ್ನು ಬಳಸುವುದಕ್ಕೆ ಅಧಿವಿಶ್ಲೇಷಣೆಯೆಂದೂ ಕರೆಯುವುದುಂಟು. ಉದಾ: ನಾನ್–ನಾನುಂ, ನೀನ್–ನೀನುಂ ಇತ್ಯಾದಿ. ಕನ್ನಡದಲ್ಲಿ ಪುರುಷಸರಸ್ವತಿ ಪದ ಬಳಕೆಯಾಗುತ್ತಿದೆ. ಸರಸ್ವತಿ ಸ್ತ್ರೀಲಿಂಗ ಪದವಾಗಿದ್ದರೂ ಒಬ್ಬನ ಅಗಾಧ ಪಾಂಡಿತ್ಯವನ್ನು ಬಿಂಬಿಸಲು ಈ ಪದವನ್ನು ಬಳಸುತ್ತಾರೆ. ಆದರೂ ಆ ವ್ಯಕ್ತಿಗೆ ಅದು ಸರಿಯೆನಿಸಿದ್ದರಿಂದ, ಅದು ಬಳಕೆಯಾಗುತ್ತದೆ. ಎರಡು ಸದೃಶ ವರ್ಣಗಳಲ್ಲಿ ಒಂದು ಬಿದ್ದು ಹೋಗುವುದಕ್ಕೆ ಸದೃಶಾಕ್ಷರಲೋಪವೆಂದೂ ಒಂದು ಆಕೃತಿಮಾದಲ್ಲಿಯ ಧ್ವನಿಮಾಗಳು ತಮ್ಮ ಸ್ಥಾನಗಳನ್ನು ಬದಲಿಸಿಕೊಳ್ಳುವುದಕ್ಕೆ ವರ್ಣಪಲ್ಲಟವೆಂದೂ ಹೇಳುವುದುಂಟು. ಉದಾ: ಪ್ರಾಕೃತದಲ್ಲಿ ಹೃದಯ>ಹಿಯಯ>ಹಿಯ; ವಾರಾಣಶೀ>ವಾಣಾರಸೀ. ಉಚ್ಚಾರಣೆಯ ಒಂದು ಅಂಶದಂತೆ ಮತ್ತೊಂದು ಅಂಶವಾಗುವುದು ಸಮರೂಪ ಧಾರಣೆ. ಕನ್ನಡ ಗರ್ದೆ>ಗದ್ದೆ. ಕಳ್ದನು>ಕದ್ದನು, ಪಕ್ಷಿ>ಪಕ್ಕಿ>ಹಕ್ಕಿ.

ಭಾಷಾಬದಲಾವಣೆ ಸ್ವೀಕರಣದ ಮೂಲಕ ನಡೆಯುತ್ತದೆಂದು ಈ ಮೊದಲೇ ಹೇಳಿದೆ. ಎರಡು ಭಾಷೆಗಳು ಇಲ್ಲವೆ ಉಪಭಾಷೆಗಳು ಪರಸ್ಪರ ಸಂಪರ್ಕದಲ್ಲಿ ಬಂದಕೂಡಲೇ ಪರಸ್ಪರ ಕೊಡುಕೊಳ್ಳುವ ಕ್ರಿಯೆ ನಡೆಯುವುದು. ಹೀಗೆ ನಡೆಯುವ ಸ್ವೀಕರಣಕ್ಕೆ ಭಾಷಾಸ್ವೀಕರಣ ಅಥವಾ ಸಾಂಸ್ಕೃತಿಕ ಸ್ವೀಕರಣವೆಂದು ಹೆಸರು. ನಮ್ಮ ಭಾಷೆಯಲ್ಲಿ ಇಲ್ಲದ ವಿಚಾರ, ವ್ಯವಹಾರ ಮತ್ತು ವಸ್ತುಗಳನ್ನು ಅನ್ಯಭಾಷೆಯಿಂದ ಸ್ವೀಕರಿಸುತ್ತೇವೆ. ಅದರಂತೆ ಅನ್ಯಭಾಷಿಕರು ನಮ್ಮ ಭಾಷೆಯೊಳಗಿಂದ ತಮಗೆ ಹೊಸವೆನಿಸುವ ಅಂಶಗಳನ್ನು ಸ್ವೀಕರಿಸುತ್ತಾರೆ. ಈ ಬಗೆಯ ಕೊಡುಕೊಳ್ಳುವಿಕೆ ಸಾಮಾನ್ಯವಾಗಿ ಮೂರು ರೀತಿಯಲ್ಲಿ ನಡೆಯುತ್ತದೆ : 1 ಪದ ಸ್ವೀಕರಣ, 2 ಸ್ಥಾನಾಂತರ ಸ್ವೀಕರಣ, 3 ಮಿಶ್ರ ಸ್ವೀಕರಣ.

ಧ್ವನಿಸ್ವೀಕರಣೆ ಪದಕೋಶ, ರೂಪ, ವ್ಯಾಕರಣ, ವಿಕಲ್ಪ ಮತ್ತು ಧ್ವನಿಮಾಗಳ ಬದಲಾವಣೆಗೆ ಕಾರಣವಾದರೆ, ಸ್ಥಾನಾಂತರ ಸ್ವೀಕರಣೆ ಭಾಷಾಂತರ ಮತ್ತು ರೂಪಾಂತರ ಸ್ವೀಕರಣೆಗಳಿಗೆ ಕಾರಣವಾಗುತ್ತದೆ. ಸಂಸ್ಕೃತದಿಂದ ಕನ್ನಡಕ್ಕೆ ಬಂದ ತದ್ಭವಗಳನ್ನು ರೂಪಾಂತರ ಸ್ವೀಕರಣವೆಂದು ಹೇಳಬಹುದು. ಸಾಮಾನ್ಯವಾಗಿ ಸಾಮಾಜಿಕ ಪದಗಳಲ್ಲಿ ಒಂದು ನಮ್ಮ ಪದವಾಗಿದ್ದರೆ ಮತ್ತೊಂದು ಪರಭಾಷೆಯದಿರುತ್ತದೆ. ಇಂಥ ಸ್ವೀಕರಣಕ್ಕೆ ಮಿಶ್ರವೆನ್ನುವರು. ಉದಾ: ಅಣುಬಾಂಬು, ರೈಲುಗಾಡಿ ಇತ್ಯಾದಿ. ಸ್ವೀಕರಣದ ಪ್ರಮಾಣ ಅತಿಯಾದಲ್ಲಿ, ಕೃತಕ ಭಾಷೆಗಳು ನಿರ್ಮಾಣಗೊಳ್ಳುತ್ತವೆ. ಕೃತಕ ಭಾಷೆಗಳನ್ನು ವ್ಯವಹಾರದ ಉದ್ದೇಶಕ್ಕಾಗಿ ಅಥವಾ ಅಭ್ಯಾಸ ಪ್ರವೃತ್ತಿಯ ಸಮಾಧಾನಕ್ಕಾಗಿ ನಿರ್ಮಿಸಬಹುದು. ಹೀಗೆ ನಿರ್ಮಿತವಾಗುವ ಭಾಷೆಗಳು ಮೂರು ತೆರನಾಗಿವೆ: 1 ವ್ಯವಹಾರ ಭಾಷೆಗಳು, 2 ಕ್ರಿಯೋಲಗಳು, 3 ಕೃತಕ ಭಾಷೆಗಳು. ಸಂತೆಯಲ್ಲಿ ಆಡುವ ಭಾಷೆಗೆ ವ್ಯವಹಾರ ಭಾಷೆಯೆಂದೂ ಈ ವ್ಯವಹಾರಭಾಷೆಯೇ ಕಾಲಾಂತರದಿಂದ ಓದು–ಬರೆಹದ ಭಾಷೆಯಾದಾಗ ಕ್ರಿಯೋಲವೆಂದೂ ವಿದ್ವಾಂಸನಿಂದ ಸೃಷ್ಟಿಸಲಾದ ಭಾಷೆಗೆ ಕೃತಕ ಭಾಷೆಯೆಂದೂ ಹೇಳುವುದುಂಟು. **(ನೋಡಿ–ಕೃತಕ ಭಾಷೆಗಳು)**

ಒಂದು ಭಾಷೆಯನ್ನಾಡುವ ಇಬ್ಬರು ವ್ಯಕ್ತಿಗಳು ಒಂದೇ ರೀತಿಯಲ್ಲಿ ಮಾತಾಡುವುದಿಲ್ಲ. ಭಾಷೆ ಒಬ್ಬನಿಂದ ಮತ್ತೊಬ್ಬನಿಗೆ ಭಿನ್ನವಾಗಿರುತ್ತದೆ. ಒಂದು ಭಾಷಾಗುಂಪಿನಿಂದ ಮತ್ತೊಂದು ಭಾಷಾಗುಂಪಿಗೆ ವ್ಯತ್ಯಾಸಗಳಿರುತ್ತವೆ. ಸಮಾಜ ಒಂದೇ ಆಗಿದ್ದರೂ ಸಾಮಾಜಿಕವಾಗಿ ಅದರ ವರ್ಗ, ವೃತ್ತಿ, ಸಾಂಸ್ಕೃತಿಕ ರೀತಿನೀತಿಗಳು ಭಿನ್ನಭಿನ್ನವಾಗಿರುತ್ತವೆ. ಒಂದು ಭಾಷೆಯ ಪ್ರದೇಶ ವಿಸ್ತಾರವಾದಷ್ಟೂ ಭಿನ್ನಾಂಶಗಳು ಹೆಚ್ಚುತ್ತವೆ. ಇಂಥ ಭಿನ್ನಾಂಶಗಳನ್ನು ಭಾಷಾ ಭೂಗೋಳದಲ್ಲಿ ಚೆನ್ನಾಗಿ ತಿಳಿದುಕೊಳ್ಳಬಹುದು. ಭಾಷಾಭೂಗೋಳದಲ್ಲಿ ವ್ಯಕ್ತಿ ಭಾಷೆ, ಪ್ರಭೇದ ಸಮಾವೇಶಗೊಳ್ಳುತ್ತದೆ. ಇದಲ್ಲದೆ ಭಾಷಾಭಿನ್ನತೆ ಮತ್ತು ಭಾಷಾಬದಲಾವಣೆಗಳ ಭೌಗೋಳಿಕ ಪ್ರಸಾರ ಹೇಗೆ ನಡೆಯುವುದೆಂಬುದನ್ನು ಭಾಷಾಭೂಗೋಳದಿಂದ ತಿಳಿದುಕೊಳ್ಳಬಹುದು.

ವ್ಯಕ್ತಿ ಭಾಷೆ, ಪ್ರಭೇದ ಮತ್ತು ಉಪಭಾಷೆ–ಇವು ಭಾಷೆಯಲ್ಲಿನ ವೈವಿಧ್ಯವನ್ನು ತೋರಿಸುತ್ತವೆ. ಈ ವೈವಿಧ್ಯ ಭಾಷಾಭಿನ್ನತೆಯನ್ನು ಸೂಚಿಸುತ್ತದೆ. ಭಾಷಾಭಿನ್ನತೆಗೆ ಪ್ರಮುಖವಾಗಿ ಕಾಲ ಮತ್ತು ಪ್ರದೇಶಗಳು ಕಾರಣವಾಗುತ್ತವೆ. ಕಾಲಾನುಗತವಾದ ಭಿನ್ನತೆ ಕಾಣದೆ ಹೋಗಬಹುದು. ಆದರೆ ಪ್ರದೇಶಾನುಗತವಾದ ಭಿನ್ನತೆ ಕಾಣದೆ ಹೋಗುವುದಿಲ್ಲ. ಇದಲ್ಲದೆ ಬೇರೆ ಬಾಹ್ಯಕಾರಣಗಳೂ ಉಂಟು. ರಾಜಕೀಯ ಹಾಗೂ ಆಡಳಿತಗಳ ಬದಲಾವಣೆಯ ಮೂಲಕ ಮೂಲಭಾಷೆಯಲ್ಲಿ ಭಿನ್ನತೆ ಉಂಟಾಗಬಹುದು. ಅಲ್ಲದೆ ಎರಡು ಉಪಭಾಷೆಗಳ ನಿಕಟ ಸಂಪರ್ಕದ ಮೂಲಕ ಭಾಷಾ ವ್ಯವಸ್ಥೆಯಲ್ಲಿ ಬದಲಾವಣೆ ಯಾಗುವುದುಂಟು.

ಭಾಷಾಭಿನ್ನತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭೌಗೋಳಿಕವಾಗಿ ಹಬ್ಬುವುದುಂಟು. ಇದಕ್ಕೆ ಜನರ ಸಂಪರ್ಕವೇ ಕಾರಣ. ಇಂಥ ಭಾಷಾಭಿನ್ನತೆಯ ಅಂಶಗಳ ಪ್ರಸಾರವನ್ನು ಸೀಮಾರೇಖೆಗಳ ಸಹಾಯದಿಂದ ಭಾಷಾಭೂಪಟಗಳ ಮೇಲೆ

ಕಾಣಿಸಬಹುದು. ಸಂಬಂಧಿತ ಇಲ್ಲವೆ ಸಂಬಂಧರಹಿತ ಭಾಷೆಗಳ ಪರಸ್ಪರ ಪರಿಣಾಮದ ಮೇಲೆ ಕ್ಷೇತ್ರೀಯ ಪದ್ಧತಿ ಆಧಾರಿತವಾಗಿದೆ. ಈ ಪದ್ಧತಿಯಲ್ಲಿ ಭಾಷೆಗಳ ಸ್ವೀಕರಣವೇ ಸಾಮಗ್ರಿಯಾಗಿರುವುದು.

ಐತಿಹಾಸಿಕವಾಗಿ ಬೆಳೆದುಕೊಂಡು ಬಂದ ಭಾಷೆಗಳ ನಡುವಿನ ಆನುವಂಶಿಕ ಸಂಬಂಧವನ್ನು ಕಲ್ಪಿಸಲು ಪುನಾರಚನೆ ಪದ್ಧತಿ ಸಹಾಯವಾಗುತ್ತದೆ. ಆಂತರಿಕ ಮತ್ತು ಬಾಹ್ಯ ಪುನಾರಚನೆಗಳೆಂದು ಅದರಲ್ಲಿ ಎರಡು ವಿಧ. ಉಪಭಾಷೆಗಳ ನಡುವಿನ ಆನುವಂಶಿಕ ಸಂಬಂಧವನ್ನು ತೋರಿಸಲು ಆಂತರಿಕ ಪುನಾರಚನೆಯನ್ನು ಉಪಯೋಗಿಸಿದರೆ, ಭಾಷೆ ಭಾಷೆಗಳ ನಡುವಿನ ಆನುವಂಶಿಕ ಸಂಬಂಧವನ್ನು ಕಂಡುಹಿಡಿಯಲು ಬಾಹ್ಯ ಪುನಾರಚನೆಯನ್ನು ಉಪಯೋಗಿಸುತ್ತಾರೆ. ಹೀಗೆ ಐತಿಹಾಸಿಕ ತುಲನೆಯ ದೃಷ್ಟಿಯಿಂದ ಭಾಷೆಗಳನ್ನು ಆಯ್ದುಕೊಂಡು, ಅವನ್ನು ಚಿತ್ರಿಸಿ ತೋರಿಸಬಹುದು. ಒಂದು ಭಾಷೆಯ ಇಲ್ಲವೆ ಉಪಭಾಷೆಯ ಭೂಪಟವನ್ನು ತಯಾರಿಸುವುದೆಂದರೆ ಐತಿಹಾಸಿಕವಾಗಿ ಆ ಭಾಷೆಯ, ಅದರ ಉಪಭಾಷೆಗಳ ಪ್ರಸಾರ, ಅದರಲ್ಲಿ ಬೆಳೆದ ಭಿನ್ನತೆ ಮತ್ತು ಬದಲಾವಣೆಗಳ ಅಂಶಗಳನ್ನು ಅಭ್ಯಸಿಸಿದಂತೆಯೇ ಆಗುತ್ತದೆ. ಈ ಕಾರ್ಯವನ್ನು ಮಾಡುವ ಮೊದಲು, ಭಾಷೆಗೆ ಸಂಬಂಧಿಸಿದ ಎಲ್ಲ ಸಾಮಗ್ರಿಯನ್ನೂ ನಿವೇದಕನ ಮುಖಾಂತರ ಸಂಗ್ರಹಿಸಬೇಕಾಗುವುದು. ಇಂಥ ಕಾರ್ಯ ಪಾಶ್ಚಾತ್ಯ ದೇಶಗಳಲ್ಲಿ ಬಹುಕಾಲದಿಂದ ನಡೆದು ಬಂದಿದೆ. ಅವುಗಳಲ್ಲಿ ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಹಾಲೆಂಡ್, ಇಟಲಿ ಅಗ್ರಗಣ್ಯವಾಗಿವೆ.

ಭಾಷಿಕ ಬದಲಾವಣೆಯನ್ನು ತೌಲನಿಕ ಪದ್ಧತಿಗಳ ಸಹಾಯದಿಂದ ತೋರಿಸಬಹುದು. ಈ ತೆರನಾದ ಪದ್ಧತಿಗಳು ಮೂರು ಇವೆ: ಆನುವಂಶಿಕ ಪದ್ಧತಿ, ಪ್ರರೂಪ ಪದ್ಧತಿ, ಕ್ಷೇತ್ರೀಯ ಪದ್ಧತಿ. ಆನುವಂಶಿಕ ಪದ್ಧತಿ ಭಾಷಿಕ ಅಂಶಗಳ ಧ್ವನಿ ಮತ್ತು ಅರ್ಥಗಳ ನಡುವಿನ ಸಾಮ್ಯಗಳ ಮೇಲೆ ಆಧಾರಿತವಾಗಿರುತ್ತದೆ. ಪ್ರರೂಪ ಪದ್ಧತಿಯಲ್ಲಿ ಆನುವಂಶಿಕ ಸಂಬಂಧ ಹೊಂದಿದ ಭಾಷೆಗಳ ಪ್ರರೂಪವನ್ನು ಅಭ್ಯಸಿಸಲು ಸಾಧ್ಯವಿದೆ.

ಐತಿಹಾಸಿಕ ತೌಲನಿಕ ಪದ್ಧತಿಯ ಮೇರೆಗೆ ಭಾಷೆಗಳ ಆನುವಂಶಿಕತೆಯನ್ನು ಗುರುತಿಸಿದ ಮೇಲೆ ಅವುಗಳ ಉಪವಿಭಾಗೀಕರಣ ಮಹತ್ತ್ವದ ವಿಷಯವಾಗುತ್ತದೆ. ಭಾರತದ ಭಾಷೆಗಳು ವಿವಿಧ ಭಾಷಾಕುಟುಂಬಗಳಿಗೆ ಸೇರುತ್ತವೆ. ಇಂಥ ಭಾಷಾಕುಟುಂಬಗಳು ಮುಖ್ಯವಾಗಿ 1 ಇಂಡೋ–ಆರ್ಯನ್ ಕುಟುಂಬ (ಹಿಂದಿ, ಪಂಜಾಬಿ, ಗುಜರಾತಿ, ರಾಜಸ್ಥಾನಿ, ಮರಾಠಿ, ಬಂಗಾಳಿ, ಬಿಹಾರಿ, ಒರಿಯ ಇತ್ಯಾದಿ)2 ದ್ರಾವಿಡ ಭಾಷಾ ಕುಟುಂಬ (ಕನ್ನಡ, ತಮಿಳು, ತೆಲುಗು, ಮಲೆಯಾಳಂ, ತುಳು, ತೊದ, ಕೊಡವ ಇತ್ಯಾದಿ). 3 ಮುಂಡಭಾಷಾಕುಟುಂಬ (ಸಂತಾಲಿ, ಸೋರ). 4 ಟಿಬೆಟೋ–ಬರ್ಮೀ ಭಾಷಾಕುಟುಂಬ (ನಾಗಾ, ಗಾರೋ, ಬೋರೋ ಇತ್ಯಾದಿ). ಈ ಪ್ರಮುಖ ಭಾಷಾಕುಟುಂಬಗಳಿಗೆ ಸೇರಿದ ಭಾಷೆಗಳ ಉಪವಿಭಾಗೀಕರಣ ಮಾಡುವುದೂ ಐತಿಹಾಸಿಕ ಭಾಷಾವಿಜ್ಞಾನಕ್ಕೆ ಸೇರಿದ ವಿಷಯ. ಒಂದು ಭಾಷಾವಿಭಾಗಕ್ಕೆ ಸೇರಿದ ಭಾಷೆಗಳು ಮೂಲದಿಂದ ಬೇರ್ಪಟ್ಟು, ಮುಂದೆ ಮತ್ತೆ ಪ್ರತ್ಯೇಕ ಭಾಷೆಗಳಾಗಿ ಒಡೆಯುವುದಕ್ಕೆ ಮುಂಚೆ ಯಾವ ಯಾವ ಅಂಶಗಳನ್ನು ಬಳಸಿಕೊಂಡಿದೆ ಎಂಬುದನ್ನು ಗುರುತಿಸಲು ಸಾಧ್ಯವಿದೆ. ಇದರಿಂದ ಭಾಷೆಯ ಮೂಲರೂಪವನ್ನು ಪುನಾರಚಿಸಲು ಸಹಾಯವಾಗುತ್ತದೆ. ಒಂದು ಅಂಶ ಒಂದು ಕುಟುಂಬದ ಎರಡು ವಿಭಾಗಗಳಲ್ಲಿಯೂ ಕಂಡುಬಂದರೆ ಆ ಅಂಶವನ್ನು ಭಾಷಾಕುಟುಂಬದ ಮೂಲ ಅಂಶವೆಂದು ಹೇಳಬಹುದು. ದ್ರಾವಿಡ ಭಾಷೆಗಳನ್ನು ಪರಿಶೀಲಿಸಿದರೆ, ಆ ಕುಟುಂಬದಲ್ಲಿ ದಕ್ಷಿಣ ದ್ರಾವಿಡ, ಮಧ್ಯದ್ರಾವಿಡ ಮತ್ತು ಉತ್ತರ ದ್ರಾವಿಡಗಳೆಂದು ಮೂರು ಉಪವಿಭಾಗಗಳನ್ನು ಕಾಣುತ್ತೇವೆ.

ಐತಿಹಾಸಿಕ ಭಾಷಾವಿಜ್ಞಾನದಲ್ಲಿ ತುಲನಾತ್ಮಕ ಪದ್ಧತಿಗೆ ಮಹತ್ತ್ವವುಂಟು. ಇದರಿಂದ ಹೆಚ್ಚು ಸೋದರವಾಗಿರುವ ಎರಡು ಭಾಷೆಗಳನ್ನು ಆಯ್ದುಕೊಂಡು ಅವುಗಳ ಆಕೃತಿಯನ್ನು ಹೊಂದಿಸಿ, ಮೂಲಭಾಷೆಯನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಸೋದರ ಭಾಷೆಗಳ ಮೂಲಸ್ವರೂಪವನ್ನು ತಿಳಿದುಕೊಳ್ಳಲು ಅವುಗಳ ಆಕೃತಿಮಾಗಳ ತುಲನೆ ಮಾಡಬೇಕಾಗುತ್ತದೆ. ಈ ರೀತಿ ತುಲನೆ ಮಾಡುವುದೇ ತುಲನಾತ್ಮಕ ಪದ್ಧತಿ. ಇದಕ್ಕೆ ವಂಶವೃಕ್ಷ ಸಿದ್ಧಾಂತವೆಂದೂ ಕರೆಯುವುದುಂಟು. ಮೂಲಭಾಷೆಯಿಂದ ಹೊರಟ ಭಾಷೆಗಳನ್ನು ಈ ವಂಶವೃಕ್ಷ ಸಿದ್ಧಾಂತದ ಮೂಲಕ ವಿವರಿಸಿ ತೋರಿಸಲು ಅನುಕೂಲವಾಗುತ್ತದೆ. ಭಿನ್ನಭಾಷಿಕ ಅಂಶಗಳು ಭಿನ್ನಪ್ರದೇಶಗಳಲ್ಲಿ ತರಂಗಗಳಂತೆ ಹಬ್ಬುತ್ತವೆ. ಈ ಸಂಗತಿಯನ್ನು ಯೋಹಾನ್ಸ್ ಷ್ಮಿಟ್ ತನ್ನ ತರಂಗಸಿದ್ಧಾಂತದ ಮೂಲಕ ತೋರಿಸಿಕೊಟ್ಟಿರುವರು.

ಭಾಷೆಗಳ ಮೂಲಸ್ವರೂಪವನ್ನು ಎರಡು ಪದ್ಧತಿಗಳಿಂದ ಕಂಡುಹಿಡಿಯಬಹುದು: 1. ಆಂತರಿಕ ಪುನಾರಚನೆಯ ಪದ್ಧತಿ, 2. ಬಾಹ್ಯ ಪುನಾರಚನೆಯ ಪದ್ಧತಿ. ತುಲನಾತ್ಮಕ ಪದ್ಧತಿಯನ್ನು ಎರಡು ಭಿನ್ನ ಭಾಷೆಗಳಿಗೆ ಅನ್ವಯಿಸಿದರೆ ಅದುವೇ ಬಾಹ್ಯ ಪುನಾರಚನೆ. ಒಂದು ಭಾಷೆ ಒದಗಿಸುವ ಆಧಾರಗಳನ್ನು ಉಪಯೋಗಿಸಿ ಅದರ ಮೂಲಸ್ವರೂಪವನ್ನು ರಚಿಸುವುದೇ ಆಂತರಿಕ ಪುನಾರಚನೆ.

ಭಾಷಾ ಕಾಲಕ್ರಮ ವಿಜ್ಞಾನದ ಸಹಾಯದಿಂದ ಭಾಷೆಯ ಹಳಮೆಯನ್ನು ಕಂಡುಹಿಡಿಯಬಹುದು. ಈ ವಿಧಾನದ ಮೇರೆಗೆ ಭಾಷೆಗಳ ವಿವಿಧ ಘಟ್ಟಗಳೇ ಕಾಲನಿರ್ಣಯ ಮಾಡಬಹುದು. ಈ ರೀತಿ ಒಂದು ಭಾಷೆಯ ಕಾಲನಿರ್ಣಯವನ್ನು ಖಚಿತಗೊಳಿಸುವಾಗ ಕಲೆಹಾಕಿದ ಸಾಮಗ್ರಿಯನ್ನು ಶಾಬ್ದಿಕ ಸಂಬಂಧದ ಸಹಾಯದಿಂದ ತಿಳಿದುಕೊಳ್ಳಬೇಕೇ ಹೊರತು ಐತಿಹಾಸಿಕ ದಿನಾಂಕಗಳ ಮೂಲಕ ಅಲ್ಲ.

ಐತಿಹಾಸಿಕ ಭಾಷಾವಿಜ್ಞಾನದ ಅಧ್ಯಯನದಿಂದ ಜಗತ್ತಿನಲ್ಲಿ ಎಷ್ಟು ಭಾಷೆಗಳು ಬಳಕೆಯಲ್ಲಿವೆಯೆಂಬುದನ್ನು ಸ್ಥೂಲವಾಗಿ ತಿಳಿದುಕೊಳ್ಳಲು ಸಾಧ್ಯವಿದೆ. ಜಗತ್ತಿನ ಭಾಷಾಕುಟುಂಬಗಳಲ್ಲಿ ಇಂಡೋ–ಯೂರೋಪಿಯನ್ ಭಾಷಾಕುಟುಂಬ ಅತಿ ವಿಶಾಲವೂ ಮಹತ್ತ್ವದ್ದೂ ಆಗಿದೆ. ಈ ಕುಟುಂಬದಲ್ಲಿ ಜರ್ಮ್ಯಾನಿಕ್, ಕೆಲ್ಟಿಕ್, ರೋಮಾನ್ಸ್, ಬಾಲ್ಟಿಕ್ ಶಾಖೆಗಳಿವೆ. ಫಿನ್ನೊ–ಅಗ್ರಿಕ್, ಆಲ್ಟಿಕ್, ಕಕೇಷನ್, ಬಾಸ್ಕ, ಆಫ್ರೋ–ಏಷ್ಯಾಟಿಕ್, ದ್ರಾವಿಡ–ಭಾಷಾ ಕುಟುಂಬ–ಮುಂತಾದವನ್ನು ಪಟ್ಟಿ ಮಾಡಬಹುದು. ಇವಲ್ಲದೆ ಏಷ್ಯ ಮತ್ತು ಅಮೆರಿಕ ಖಂಡಗಳಲ್ಲಿ ಹಲವಾರು ಭಾಷಾಕುಟುಂಬಗಳನ್ನೂ ಇತ್ತೀಚೆಗೆ ಗುರುತಿಸಲಾಗಿದೆ.

ಒಂದು ಭಾಷೆ ಬಳಕೆಯಾಗುವ ಪ್ರದೇಶದ ಅಂತರ ಹಿಗ್ಗಿದಷ್ಟೂ ಅದರ ಭಿನ್ನತೆಯೂ ಹೆಚ್ಚುತ್ತದೆ. ಇಂಥ ಪರಿಸ್ಥಿತಿಗೆ ಪ್ರಾದೇಶಿಕ ಮತ್ತು ಸಾಮಾಜಿಕ ವೈವಿಧ್ಯಗಳು ಕಾರಣವಾಗುತ್ತವೆ. ಈ ಭಿನ್ನತೆಯ ಕಾರಣ ಒಂದು ಪ್ರದೇಶದ ಮಾತು ಮತ್ತೊಂದು ಪ್ರದೇಶದವರಿಗೆ ಅರ್ಥವಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಒಂದು ಸಾಮಾನ್ಯ ಸಂಪರ್ಕ ಮಾಧ್ಯಮದ ಆವಶ್ಯಕತೆ ಅತ್ಯಗತ್ಯ. ಈ ಸಾಮಾನ್ಯ ಸಂಪರ್ಕ ಮಾಧ್ಯಮವೇ ಪ್ರಮಾಣ ಭಾಷೆಯೆನಿಸಿ ಕೊಳ್ಳುವುದು.

ಹೀಗೆ ಚಾರಿತ್ರಿಕ ಭಾಷಾವಿಜ್ಞಾನ ವ್ಯಾಪಕ ಸ್ವರೂಪವನ್ನು ಹೊಂದಿ, ಭಾಷಾವಿಜ್ಞಾನದ ಅಧ್ಯಯನದಲ್ಲಿ ಮಹತ್ತ್ವದ ಸ್ಥಾನ ಪಡೆದಿದೆ. (ಪಿ.ಬಿ.ಬಿ.)

**ಚಾರಿತ್ರಿಕ ಭೌಗೋಳಿಕ ವಿಧಾನ :** ಮುಖ್ಯವಾಗಿ, ಜನಪದ ಕಥೆಗಳಿಗೆ ಪ್ರೇರಕವಾಗಿರುವ ಮೂಲಮಾತೃಕೆಯನ್ನು ಚಾರಿತ್ರಿಕ ಬೆಳವಣಿಗೆ ಮತ್ತು ಭೌಗೋಳಿಕ ಹಂಚಿಕೆಗಳ ಆಧಾರದಿಂದ ಕಂಡುಹಿಡಿಯುವುದಕ್ಕೆ ಉದ್ದೇಶಿತವಾದ ಸಿದ್ಧಾಂತವಿದು (ಹಿಸ್ಟಾರಿಕ್ ಜಿಯೋಗ್ರಾಫಿಕಲ್ ಸ್ಕೂಲ್). ಆದರೆ ಜಾನಪದದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಇದರ ಕ್ಷೇತ್ರ ವಿಸ್ತರಿಸಲೂಬಹುದು. ಕಳೆದ ಶತಮಾನದ ಕಡೆಯ ಅರ್ಧಭಾಗದಲ್ಲಿ ಜೂಲಿಯಸ್ ಕ್ರೋಹ್ನ ಮತ್ತು ಕಾರ್ಲೆ ಕ್ರೋಹ್ನ (ತಂದೆಮಕ್ಕಳು) ಅವರಿಂದ ಈ ವಿಧಾನ ಬಳಕೆಗೆ ಬಂತು. ಆದರೆ ಇದರ ಪ್ರಧಾನ ಪ್ರಯೋಗಗಳು ನಡೆದುದು ತೀರ ಇತ್ತೀಚೆಗೆ ಎನ್ನಬೇಕು. ಜನಪದ ಗೀತೆಗಳನ್ನು ಕುರಿತ ತನ್ನ ಅಧ್ಯಯನದಲ್ಲಿ ಜೂಲಿಯಸ್ ಕ್ರೋಹ್ನ ಅವನ್ನು ಅಂಶ ಘಟಕಗಳಾಗಿ ವಿಶ್ಲೇಷಿಸಿದ ಮತ್ತು ಈ ಅಂಶಗಳ ವಿತರಣೆಯನ್ನು ಕುರಿತು ವಿಚಾರ ಮಾಡಿದ. ವ್ಯವಸ್ಥಿತವಾಗಿ ಹಾಗೂ ಪ್ರಥಮತಃ ಈ ವಿಧಾನವನ್ನು ಕಾರ್ಲೆ ಕ್ರೋಹ್ನ ಜನಪದ ಕಥೆಯ ಸಂಶೋಧನೆಯಲ್ಲಿ ಬಳಸಿದ. 1880ರಲ್ಲಿ ನಡೆದ ಇವನ ಮಾರ್ಗದರ್ಶಕ ಅಧ್ಯಯನ ಮತ್ತು ತತ್ತ್ವಗಳ ಸೂತ್ರೀಕರಣದ ದಿವಸದಿಂದ ಈ ಬಗೆಯ ವಿಶ್ಲೇಷಣಾತ್ಮಕ ಅಧ್ಯಯನವನ್ನು ವಿದ್ವಾಂಸರು ಫಿನ್ಲೆಂಡಿನ ವಿಧಾನವೆಂದೂ ಕರೆಯಲು ಪ್ರಾರಂಭಿಸಿದರು. ಇದನ್ನು ಮತ್ತಷ್ಟು ಮುಂದುವರಿಸಿದವ ಆಂಟಿ ಆರ್ನೆ. ಅತ್ಯಂತ ಆಧುನಿಕವಾಗಿ ರೂಪಿಸಿದವ ಸ್ಟಿತ್ ಥಾಂಪ್ಸನ್. ಆಗಲೂ ಈ ವಿಧಾನವನ್ನು ಐತಿಹ್ಯ, ಆಟ, ಒಗಟು, ಲಾವಣಿ ಮುಂತಾದ ಪ್ರಕಾರಗಳಿಗೆ ಬಳಸಿದ್ದರೂ ಬಹುಮಟ್ಟಿಗೆ ಜನಪದ ಕಥೆಗಳಿಗೇ ಹೆಚ್ಚು ಅನ್ವಯಿಸಲಾಗಿತ್ತು.

ಪ್ರತಿಯೊಂದು ಕಥೆಯೂ ತನ್ನದೇ ಇತಿಹಾಸವನ್ನು ಹೊಂದಿರುತ್ತದಾಗಿ ಅದನ್ನು ಪ್ರತ್ಯೇಕವಾಗಿ ಅನ್ವೇಷಿಸಬಹುದಾಗಿದೆ. 19ನೆಯ ಶತಮಾನದ ವಿವಿಧ ವಿದ್ವಾಂಸರು ಸೈದ್ಧಾಂತಿಕ ನೆಲಗಟ್ಟಿನ ಮೇಲೆ, ಯಾವುದೇ ಸಮಗ್ರ ಅಧ್ಯಯನವಿಲ್ಲದೆ, ಜನಪದ ಕಥೆಗಳ ಉಗಮ ಮತ್ತು ಅರ್ಥಗಳ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರು. ಚಾರಿತ್ರಿಕ ಭೌಗೋಳಿಕ ವಿಧಾನ ಎರಡನೆಯದಕ್ಕೆ ಯಾವುದೇ ರೀತಿಯಲ್ಲಿ ಸಂಬಂಧಿಸುವುದಿಲ್ಲ, ಆದರೆ ಮೊದಲನೆಯದಕ್ಕೆ ಮಾತ್ರ ಸಂಭವನೀಯ ಗುರಿಯಾಗಿ ಕಾಣಿಸಿಕೊಳ್ಳುತ್ತದೆ.

ಕಥೆಯ ಉಗಮದ ಚಾರಿತ್ರಿಕ ಸತ್ಯಕ್ಕೆ ತಲುಪಲು ಹತ್ತಿರದ ಹಾದಿ ಇಲ್ಲವಾದುದರಿಂದ, ಪ್ರತಿ ಕಥೆಯನ್ನೂ ಅದರ ಎಲ್ಲ ಪಾಠಾಂತರಗಳೊಡನೆ ಅಧ್ಯಯನ ಮಾಡಿದಾಗ ಮಾತ್ರ ನಿಜವಾದ ವಿಚಾರ ಹೊರಬೀಳಬಹುದೆಂಬುದನ್ನು ಈ ವಿಧಾನ ತಿಳಿಸಿತು. ಹಲವು ಪಾಠಾಂತರಗಳು ಕಥೆಯ ಪೂರ್ಣಚರಿತ್ರೆಯ ಪುನಾರಚನೆಗೆ ಅಗತ್ಯವಾಗಿ ಬೇಕಾಗುತ್ತವೆ. ಆದ್ದರಿಂದ ಈ ಪಾಠಾಂತರಗಳ ತೌಲನಿಕ ಅಧ್ಯಯನ ಮತ್ತು ಚಾರಿತ್ರಿಕ ಸಂಶೋಧನೆಗಳು ಜನಪದಕಥೆಯ ಅಧ್ಯಯನದಲ್ಲಿ ವಿಶಿಷ್ಟ ಶಕ್ತಿಯಾಗಿ ಪರಿಣಮಿಸುತ್ತವೆ. ನಿರ್ದಿಷ್ಟ ಕಥೆಯ ಜೀವನಚರಿತ್ರೆಯೇ ಇದರ ಗುರಿ. ಅದರ ಹುಟ್ಟಿನ ನಿಜವಾದ ಮಾಹಿತಿಯೇ ಇದರ ಉದ್ದೇಶ. ಹಾಗೆ ಮಾಡುವಾಗ ಪಾಠಾಂತರಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕು. ಇದಕ್ಕೆ ಅಗತ್ಯವಾದ ಚಾರಿತ್ರಿಕ ಹಾಗೂ ಭೌಗೋಳಿಕ ವಿಷಯ ಸನ್ನಿವೇಶಗಳನ್ನು ಗಮನಕ್ಕೆ

ತಂದುಕೊಳ್ಳಬೇಕು. ಆಮೇಲೆ ಬಾಯಿ ಮಾತಿನ ಮೂಲಕ ಆದ ವ್ಯತ್ಯಾಸಗಳನ್ನು ವ್ಯವಸ್ಥಿತಗೊಳಿಸುವುದರಿಂದ ಅದರ ಮೂಲರೂಪವನ್ನು ಕಂಡುಹಿಡಿಯಬಹುದು. ಆ ಮೂಲರೂಪದಿಂದ ಇಷ್ಟೊಂದು ಪಾಠಾಂತರಗಳಾಗುವುದಕ್ಕೆ ಹಾಗೂ ಹಾಗೆ ಆಗುವಾಗ ನಡೆದ ವ್ಯತ್ಯಾಸಕ್ಕೆ ಕಾರಣಗಳನ್ನು ಕಾಣಿಸಬೇಕು. ಇದಲ್ಲದೆ ಈ ಅಧ್ಯಯನದಿಂದ ಕಥೆಯ ಉಗಮದ ಸ್ಥಳ, ಪ್ರಸಾರ ಮತ್ತು ಕಾಲ ಕೂಡ ಗೊತ್ತಾಗುತ್ತವೆ.

ಚಾರಿತ್ರಿಕ–ಭೌಗೋಳಿಕ ವಿಧಾನದಲ್ಲಿ ಮೊದಲು ಮಾಡಬೇಕಾದ ಕೆಲಸವೆಂದರೆ ಭಿನ್ನಪಾಠಗಳ ಸಂಗ್ರಹ. ಅದರ ಮುಂದಿನ ಹಂತ ದೊರೆತ ಪಾಠಾಂತರಗಳ ಕಾಲಾನು ಕ್ರಮವಾದ ಹಂಚಿಕೆ ಮತ್ತು ಕ್ರಮಬದ್ಧವಾದ ವ್ಯವಸ್ಥೆ. ಈ ಮೂಲಭೂತ ವಿಷಯಗಳನ್ನು ಗಮನಿಸಿದ ಮೇಲೆ ಅವುಗಳ ವಿಶೇಷ ವೈಲಕ್ಷಣ್ಯಗಳಿಗನುಗುಣವಾಗಿ ಪ್ರತಿ ಕಥೆಯನ್ನೂ ವಿಶ್ಲೇಷಣೆಗೆ ಒಡ್ಡಬೇಕು. ಹಾಗೆ ಮಾಡುವಾಗ, ಕಥೆಯ ಬಗೆಗಿನ ಎಲ್ಲ ವಿಷಯಗಳನ್ನೂ ಬೆಳವಣಿಗೆಯ ಎಲ್ಲ ಹಂತಗಳನ್ನೂ ಗುರುತಿಸಬೇಕಾಗುತ್ತದೆ. ಕಥೆಯ ಮೂಲಪ್ರತಿಯ ಅನ್ವೇಷಣೆಯಲ್ಲಿ ಅದರ ವೈಲಕ್ಷಣ್ಯ ಪರಿಶೀಲನೆ ಮುಖ್ಯವಷ್ಟೆ. ಈ ಪ್ರತಿಯೊಂದು ವಿಶೇಷ ಲಕ್ಷಣವನ್ನೂ ಹೇಗೆ ಪರೀಕ್ಷಿಸಬೇಕೆಂಬುದಕ್ಕೆ ಆಂಟಿ ಆರ್ನೆ ಕೆಲವು ವಿಧಾನಗಳನ್ನು ಸೂಚಿಸುತ್ತಾನೆ: 1 ಇದರ ಬರುವಿಕೆಯ ಸಾಪೇಕ್ಷ ಆವೃತ್ತಿ; 2 ಇದರ ವಿತರಣೆಯ ಹರವು; 3 ಪ್ರಸಾರದ ದಿಶೆಯಲ್ಲಿ ಪೂರ್ಣವರ್ಗದೊಡನೆ ಮಾಡಿಕೊಂಡ ಇದರ ಒಪ್ಪಂದ; 4 ಸುರಕ್ಷಿತ ಪಾಠಗಳಲ್ಲಿ ಇದರ ಹಾಜರಿ; 5 ಲಕ್ಷಣವನ್ನು ಸುಲಭವಾಗಿ ನೆನಪಿಡುವಂತೆ ಮಾಡುವ ಇದರ ಗಮನಾರ್ಹ ಗುಣಗಳ ; 6 ಇದರಲ್ಲಿನ ಸ್ವಾಭಾವಿಕತೆಗೂ ಉಳಿದವುಗಳಲ್ಲಿನ ಅಸ್ವಾಭಾವಿಕತೆಗೂ ಇರುವ ವೈದೃಶ್ಯ. 7 ಕಥನಕ್ರಿಯೆಯಲ್ಲಿ ಇದರ ವಿಶೇಷ ಸ್ಥಾನ. 8 ಏಕಮಾತ್ರ ಕಥೆಯಲ್ಲಿ ಇದರ ಬರುವಿಕೆ. 9 ಇದರಿಂದ ಸುಲಭವಾಗಿ ಬೆಳವಣಿಗೆ ಹೊಂದಬಹುದಾದ ರೂಪಗಳ ಸಾಧ್ಯತೆ. ಈ ಪರೀಕ್ಷೆಯಿಂದ ಯಾವ ರೂಪಗಳು ಮೂಲಪ್ರತಿಗೆ ಸಂಬಂಧಿಸಿದವು, ಯಾವುವು ಅನಂತರ ಬೆಳವಣಿಗೆ ಹೊಂದಿದವು ಎಂಬುದನ್ನು ತಿಳಿಯಬಹುದು.

ಜನಪದ ಕಥೆಗಳನ್ನು ಹೀಗೆ ಅಧ್ಯಯನ ಮಾಡುವಾಗ, ವಾಚಿಕ ಪಾಠಗಳನ್ನು ಭೌಗೋಳಿಕವಾಗಿಯೂ ಸಾಹಿತ್ಯಿಕ ಪಾಠಗಳನ್ನು ಚಾರಿತ್ರಿಕವಾಗಿಯೂ ಸಂಯೋಜಿಸ ಬೇಕಾಗುತ್ತದೆ. ಭೌಗೋಳಿಕವಾಗಿ ವರ್ಗೀಕರಿಸಿಕೊಳ್ಳುವುದು ಕಥೆಯ ಮೂಲದ ದೃಷ್ಟಿಯಿಂದ ಹೆಚ್ಚು ಅನುಕೂಲವನ್ನು ತರುತ್ತದೆ. ಜನಪದ ಕಥೆಗಳು ಸಾಹಿತ್ಯಿಕ ಕಥೆಗಳಿಗೆ ಮೂಲ ವಾಗಿರಬಹುದು. ಹಾಗೆಯೇ ಸಾಹಿತ್ಯಿಕ ಕಥೆಗಳಿಂದ ಜನಪದ ಕಥೆಗಳು ಬಂದಿರಬಹುದು. ಆದ್ದರಿಂದ, ಅವುಗಳ ಪ್ರಸಾರದ ಕಾಲ ಮತ್ತು ಸ್ಥಳಗಳನ್ನು ಹೆಚ್ಚು ಪ್ರಚಲಿತವಾಗಿರುವ ಪ್ರದೇಶಗಳಿಂದ ಪತ್ತೆಹಚ್ಚುವುದರ ಮೂಲಕ ಭೌಗೋಳಿಕ ವಿತರಣೆಯನ್ನು ಗುರುತಿಸಬೇಕಾಗುತ್ತದೆ. ಅನಂತರ ಅವುಗಳೊಡನೆ ಚಾರಿತ್ರಿಕ ವ್ಯತ್ಯಾಸವನ್ನು ಹೋಲಿಸಿ ಮೂಲಪ್ರತಿಯನ್ನು ನಿರ್ಧರಿಸಬೇಕಾಗುತ್ತದೆ. ಪ್ರಾಚೀನ ಅಥವಾ ಅರ್ವಾಚೀನ ಸಾಹಿತ್ಯಿಕ ದಾಖಲೆಗಳು ಸಿಕ್ಕಿದರೆ, ಅವುಗಳ ಕಾಲ ಗೊತ್ತಿರುವುದರಿಂದ, ಸಂಬಂಧಪಟ್ಟ ಜನಪದ ಕಥೆಯ ಮೂಲ ಸ್ವರೂಪವನ್ನು ಕಂಡುಹಿಡಿಯುವುದು ಕಷ್ಟವಾಗಲಾರದೆಂದು ತೋರುತ್ತದೆ.

ಹೀಗೆ ಎಲ್ಲ ವಿವರಗಳನ್ನೂ ಪರಿಶೀಲಿಸಿದಾಗ, ಕೆಲವು ನಿರೂಪಣೆಗಳು ಪ್ರಧಾನವಾಗಿರುವುದು ಕಂಡುಬಂದು, ಮೂಲಪ್ರತಿಗೆ ಇವು ಸಂಬಂಧಿಸಿರಬಹುದೆಂದು ಗೊತ್ತಾಗುತ್ತದೆ. ಇಷ್ಟಾದರೂ ಇದು ನಿಸ್ಸಂದೇಹವಾದುದೆಂದು ಹೇಳಲಾಗುವುದಿಲ್ಲ. ಆದ್ದರಿಂದ ಈ ಪ್ರಧಾನವಾದವುಗಳಿಗಿಂತ ಭಿನ್ನವಿರುವ ವಿಷಯಗಳನ್ನು ಅಧ್ಯಯನಮಾಡಿ ಸ್ಥಳೀಯ ಮೂಲಗಳನ್ನು ಕಂಡುಹಿಡಿಯಬೇಕು, ಆ ಮೂಲಕ ಪ್ರಾದೇಶಿಕ ಉಪಮಾತೃಕೆಗಳನ್ನು ಸ್ಥಾಪಿಸಬೇಕು. ಈ ಉಪಮಾತೃಕೆಗಳಿಂದ ಸಾರ್ವತ್ರಿಕ ಮೂಲಮಾತೃಕೆಯನ್ನು ಸ್ಥಾಪಿಸಲು ಹೊರಡಬೇಕಾಗುತ್ತದೆ. ಈ ಉಪಮಾತೃಕೆಗಳು ಮತ್ತು ಮೂಲಮಾತೃಕೆ ಊಹನಾತ್ಮಕ ರಚನೆಗಳಾಗಿದ್ದು, ಜನಪದ ಕಥೆಯೊಂದು ಪ್ರಸಾರವಿರುವ ಪ್ರದೇಶದ ತುಂಬ ಮತ್ತು ಕೆಲವು ಪ್ರದೇಶಗಳಿಗೆ ಮಾತ್ರ ಪರಿಮಿತವಾದಂತೆ ಲಭ್ಯವಿರುವ ಅದರ ಪಾಠಗಳನ್ನು ವಿವರಿಸಲು ಅನುಕೂಲವಾಗುತ್ತವೆ.

ಚಾರಿತ್ರಿಕ–ಭೌಗೋಳಿಕ ವಿಧಾನ ಪ್ರಧಾನವಾಗಿ ಜಾನಪದ ಆಶಯಗಳಿಗೆ ಸಂಬಂಧಪಟ್ಟದ್ದು. ಆಶಯಗಳ ನಿರ್ದಿಷ್ಟ ಭೌಗೋಳಿಕ ಆವರಣದ ಸೃಷ್ಟಿಯನ್ನು ಅವುಗಳ ರೂಪಾಂತರ ಪಾಠಾಂತರಗಳ ಚರಿತ್ರಾಂಶಗಳನ್ನು ಈ ವಿಧಾನ ವಿವರಿಸುತ್ತದೆ. ಆರ್ನೆ ಹೇಳುತ್ತಾನೆ–ಮೂಲತಃ ಪ್ರತಿಯೊಂದು ಆಶಯವೂ ನಿರ್ದಿಷ್ಟ ಕಥೆಯೊಂದರ ಭಾಗವಾಗಿದ್ದು, ಇತರ ವರ್ಗಗಳಲ್ಲಿ ಇದು ಆಗಾಗ್ಗೆ ಕಾಣಿಸಿಕೊಂಡರೂ ಸಂಬಂಧಿಸಿದ ಮೂಲ ಕಥೆಯಿಂದಲೇ ಇದು ಬಂದುದಾಗಿರುತ್ತದೆ. ಹಲವಾರು ಆಶಯಗಳು ಸ್ವತಂತ್ರ ಕಥನಗಳೂ ಆಗಿರುವ ಸಾಧ್ಯತೆ ಇರುವುದರಿಂದ ಈ ಮಾತನ್ನು ಅತಿರೇಕವೆನ್ನದೆ ವಿಧಿಯಿಲ್ಲ. ಆಶಯಗಳು ಸಾರ್ವತ್ರಿಕವಾಗಿರುವಂತೆಯೇ ನಿರ್ದಿಷ್ಟ ಪ್ರಾದೇಶಿಕವೂ ಆಗಿರುತ್ತವೆ ಎಂಬುದನ್ನು ಇಲ್ಲಿ ನೆನಸಿಕೊಳ್ಳಬಹುದು. ಹೀಗಾಗಿ ಒಂದು ಕಡೆ ಭೌಗೋಳಿಕ ಆವರಣವನ್ನೂ, ಮತ್ತೊಂದು ಕಡೆ ಚಾರಿತ್ರಿಕ ಬೆಳವಣಿಗೆಯನ್ನೂ ಕಾಣುತ್ತೇವೆ. ಇಲ್ಲಿಯೇ ಈ ವಿಧಾನ ಮಹತ್ತ್ವದ ಪಾತ್ರವನ್ನು ವಹಿಸುವುದು. ಆದ್ದರಿಂದ ಚಾರಿತ್ರಿಕ–ಭೌಗೋಳಿಕ ಅಧ್ಯಯನ ಪ್ರಧಾನವಾಗಿ ಕಥನವಿಷಯಕ್ಕೆ ಸಂಬಂಧಿಸಿದುದಾಗಿದೆ. ಈ ವಿಧಾನ ವಾಕ್‌ಸಂಪ್ರದಾಯದ ಕಥೆಗಳ ಅಧ್ಯಯನಕ್ಕೆ ಉಪಯೋಗಿಸುವ ವಿಶೇಷ ತಂತ್ರವಾಗಿದೆ. ಪಾಠಾಂತರಗಳು ಹೆಚ್ಚು ದೊರಕಿದಂತೆಲ್ಲ ಈ ತಂತ್ರ ಯಶಸ್ವಿಯಾಗುತ್ತದೆ.

ಈ ವಿಧಾನ ಕೊಡುವ ಫಲಿತಾಂಶಗಳಿಂದ ಸಂಪೂರ್ಣ ತೃಪ್ತಿ ದೊರಕುವ ಹಾಗಿಲ್ಲ. ಮೇಲೆ ಉಲ್ಲೇಖಿಸಿದ ವ್ಯಾಖ್ಯಾನದಲ್ಲಿ ಕೊರತೆಗಳಿರುವುದು ಸಾಧ್ಯ. ಇದು ಸಾಹಿತ್ಯಿಕ ನಿರೂಪಣೆಗಳನ್ನು ಸರಿಯಾಗಿ ಬೆಲೆ ಕಟ್ಟಲಿಲ್ಲ; ಸಂಪ್ರದಾಯದ ಕ್ರಿಯಾಶೀಲವಾಹಕದ ಪಾತ್ರವನ್ನು ತಾತ್ಸಾರ ಮಾಡಿತು; ಕಥೆಗಳ ಇತಿಹಾಸದಲ್ಲಿ ಭಾಷಿಕ ಮೂಲಕದ ಸಂಬಂಧದ ಕಡೆಗೆ ಸಾಕಷ್ಟು ಗಮನಹರಿಸಲಿಲ್ಲ. ಈ ಕೆಲವು ಕಾರಣಗಳನ್ನು ಇಟ್ಟುಕೊಂಡೇ ಕೆಲವರು ಈ ಸಿದ್ಧಾಂತವನ್ನು ವಿರೋಧಿಸಿದುದು.

ಹೀಗೆಯೇ ಈ ಸಿದ್ಧಾಂತ ಜಾನಪದದ ಹಲವಾರು ಪ್ರಮುಖ ಪ್ರಶ್ನೆಗಳತ್ತ ನೋಡಲಿಲ್ಲ. ಶೈಲಿಯ ಅಧ್ಯಯನಗಳಿಗಾಗಲಿ ಅಥವಾ ಗೊತ್ತಾದ ಪಾಠಕ್ಕೂ ಅದರ ಸಾಮಾಜಿಕ ಹಿನ್ನೆಲೆಗೂ ಇರುವ ಸಂಬಂಧವನ್ನು ಕುರಿತಾಗಲಿ ಪ್ರಯತ್ನಿಸುವುದಿಲ್ಲ. ಹಾಗಿದ್ದರೂ ತನ್ನದೇ ಸೀಮಿತ ಕ್ಷೇತ್ರದಲ್ಲಿ ಇದು ನಿಷ್ಪಕ್ಷ ವಿಶ್ಲೇಷಣಾತ್ಮಕ ವಿಧಾನವಾಗಿ ಬೆಳವಣಿಗೆ ಹೊಂದಿದೆ. ಇದರಲ್ಲಿ ಏನೇ ದೌರ್ಬಲ್ಯವಿರಲಿ, ನಿಸ್ಸಂದೇಹವಾಗಿಯೂ ಇದು ಜಾನಪದದ ಸಂಕೀರ್ಣ ಅಂಶಗಳ ಪ್ರಸಾರವನ್ನು ಕುರಿತಾದ ಗಂಭೀರ ಅಧ್ಯಯನಗಳಿಗೆಲ್ಲ ಆಧಾರವನ್ನು ರೂಪಿಸುತ್ತದೆ; ಜನಪದ ಕಥೆಗಳ ಉಗಮ, ವಿಕಾಸ, ಪ್ರಸಾರಗಳ ಅಧ್ಯಯನದ ರಾಜಬೀದಿಯಲ್ಲಿ ಈ ವಿಧಾನ ಒಂದು ದೊಡ್ಡ ದೀಪಸ್ತಂಭವಾಗಿದೆ. (ಆರ್. ಜಿ.)

**ಚಾರಿತ್ರಿಕ ಭೌತವಾದ :** ಈ ವಾದ (ಹಿಸ್ಟಾರಿಕಲ್ ಮಟೀರಿಯಲಿಸಮ್) ಅದಕ್ಕಿಂತ ವಿಶಾಲವಾದ ಕಾರ್ಲ್ ಮಾರ್ಕ್ಸ್‌ನ ವಿಚಾರಾತ್ಮಕ ಭೌತವಾದದ (ಡಯಲೆಕ್ಟಿಕಲ್ ಮೆಟೀರಿಯಲಿಸಂ) ಒಂದು ವಿಶೇಷ ಅನ್ವಯ. ಇದೇ ಅದಕ್ಕೆ ಆಧಾರವೂ ಹೌದು. ವಿಚಾರಾತ್ಮಕ ಭೌತವಾದದ ಈ ಸಾಮಾನ್ಯ ತತ್ತ್ವ ಎಲ್ಲ ವಿಧವಾದ ಇರವಿನ ಸ್ವಭಾವ ಮತ್ತು ಬೆಳವಣಿಗೆಯ ಸಾಮಾನ್ಯ ಲಕ್ಷಣವನ್ನು ತಿಳಿಸುತ್ತದೆ. ಈ ತತ್ತ್ವದ ಪ್ರಕಾರ ಇರವು ಪ್ರಧಾನವಾಗಿ ಭೌತವಾದದ್ದು. ನಾವು ಯಾವುದನ್ನು ಚೇತನವೆಂದು ಕರೆಯುತ್ತೇವೆಯೋ ಅದು ಕೂಡ ಭೌತವಾದುದರಿಂದಲೇ ಅದಕ್ಕೆ ಅಧೀನವಾಗಿ ಅದರ ನಿಯಮಕ್ಕೆ ಒಳಪಟ್ಟು ಉದ್ಭವಿಸಿದ್ದು. ನಮ್ಮ ಅರಿವೇ, ನಮ್ಮ ಚೇತನವೇ ಭೌತವಸ್ತುವಿನ ಪ್ರಾಧಾನ್ಯವನ್ನು ಸಾರುತ್ತದೆ. ನಮ್ಮಲ್ಲಿ ತಿಳಿವು ನಿಜವಾಗಬೇಕಾದರೆ ಅದು ಆಯಾ ವಸ್ತುವಿನ ಸ್ವಭಾವವನ್ನು ಅನುಸರಿಸಬೇಕು. ಕಬ್ಬು ಸಿಹಿ, ಬೇವು ಕಹಿ ಎಂಬ ತಿಳಿವು ಸತ್ಯವಾಗುವುದಕ್ಕೆ ಕಾರಣ ಅದು. ಅದರದರ ಅಂದರೆ ಕಬ್ಬಿನ, ಬೇವಿನ ಸ್ವಭಾವಕ್ಕನುಗುಣವಾಗಿರುವುದು. ನಾವು ತಿಳಿಯುವುದು ಕೇವಲ ಹೊರಗಿನ ವಸ್ತುಗಳನ್ನು ಮಾತ್ರವೇ ಅಲ್ಲ, ನಮ್ಮ ದೇಹವೂ ನಮ್ಮ ಅರಿವಿನ ವಸ್ತು. ಅದಿಲ್ಲದೆ ಯಾವ ವಿಧವಾದ ಅರಿವೂ ಇಲ್ಲ.

ಎಲ್ಲವೂ ಭೌತವೇ ಎಂಬ ತತ್ತ್ವ ಹಳೆಯದಾದರೂ ಮಾರ್ಕ್ಸನ ಭೌತತತ್ತ್ವದಲ್ಲಿ ಕೆಲವು ವೈಶಿಷ್ಟ್ಯಗಳಿವೆ. ಹಿಂದಿನ ಭೌತವಾದದ ಪ್ರಕಾರ ಭೌತವಸ್ತು ಕೇವಲ ಜಡವೆಂದೂ ಅದರಲ್ಲಿ ಕಾಣುವ ವ್ಯತ್ಯಾಸಗಳು ಪರಿಮಾಣಭೇದಗಳೇ ಹೊರತು, ಗುಣಗಳ ಮಾರ್ಪಾಡಲ್ಲವೆಂದೂ ತಿಳಿಯಲಾಗಿತ್ತು. ಮಾರ್ಕ್ಸ್‌ನ ಪ್ರಕಾರ ಜಡವಸ್ತು ಕ್ರಿಯಾತ್ಮಕವಾದದ್ದು, ರಚನಾತ್ಮಕವಾದದ್ದು, ನಿರಂತರವಾಗಿ ವೈವಿಧ್ಯವುಳ್ಳ ಬೆಳವಣಿಗೆಯುಳ್ಳದ್ದು. ಯಾವುದೂ ಎಲ್ಲ ಕಾಲಕ್ಕೂ ಚಿರವಾಗಿ ಬೆಳೆಮಣಿಗೆ ಇಲ್ಲದೆ, ವೈವಿಧ್ಯವಿಲ್ಲದೆ ತಟಸ್ಥವಾಗಿ ತಾನೇತಾನಾಗಿ ಇರಲಾರದು. ಪ್ರತಿಯೊಂದು ಕ್ಷಣದಲ್ಲೂ ವಿಧವಿಧವಾದ ಭಿನ್ನಭಿನ್ನವಾದ ಅಂಶಗಳಲ್ಲಿ ವಿರೋಧಗಳೂ ಘರ್ಷಣೆಗಳೂ ಕಾಣಿಸಿಕೊಂಡು ಒಂದರೊಡನೆ ಒಂದು ಸೆಣಸಾಡಿ ಹೊಸ ಹುಟ್ಟಿಗೆ ಕಾರಣಗಳಾಗುತ್ತವೆ. ನಿರಂತರವಾಗಿ ಹಳೆಯದು ಹೋಗಿ ಹೊಸದು ಹುಟ್ಟುತ್ತದೆ. ಒಂದಕ್ಕೂ ಇನ್ನೊಂದಕ್ಕೂ ಘರ್ಷಣೆ ನಡೆದು ಹೊಸದು ಬೆಳೆಯುವುದೇ ವಿಶ್ವದ ಚರಿತ್ರೆಯ ವೈಶಿಷ್ಟ್ಯ. ಈ ರೀತಿಯಾದ ಘರ್ಷಣೆಯಿಂದ ಹೊಸದು ಬೆಳೆಯುವುದನ್ನು ತೋರಿಸುವ ತತ್ತ್ವವಿಧಾನಕ್ಕೆ ಡಯಲೆಕ್ಟಿಕ್ ಎಂದು ಹೆಸರು. ಹೆಗಲ್ ಎಂಬ ತಾತ್ತ್ವಿಕ ಈ ಕ್ರಮವನ್ನು, ಚೇತನವೇ ಪ್ರಧಾನವೆಂದು ಎಣಿಸಿ, ಅದಕ್ಕೆ ಅನ್ವಯಿಸಿದ. ಮಾರ್ಕ್ಸ್ ಆದರೋ ತದ್ವಿರುದ್ಧವಾಗಿ ಭೌತಶಕ್ತಿಯೇ ಮೂಲಾಧಾರವೆಂದು ಎಣಿಸಿ ಅದಕ್ಕೆ ಡಯಲೆಕ್ಟಿಕ್ ಕ್ರಮವನ್ನು ಅನ್ವಯಿಸಿದ.

ಹಳೆಯದರಲ್ಲಿ ಪರಸ್ಪರ ಘರ್ಷಣೆ ತಲೆದೋರಿ ಹೊಸದು ಹುಟ್ಟುವ ವಿಧಾನ ಪ್ರಕೃತಿಯಲ್ಲಿ ಮಾತ್ರವಲ್ಲದೆ ಮಾನವ ಸಂಘ ಜೀವನದಲ್ಲೂ ಮುಂದುವರಿಯುತ್ತದೆ ಎಂದು ತೋರಿಸುವ ತತ್ತ್ವ ವಿಭಾಗಕ್ಕೆ ಚಾರಿತ್ರಿಕ ಭೌತವಾದ ಎಂದು ಹೆಸರು. ಜೀವನಕ್ಕೆ ಆಧಾರವಾದ ಪ್ರಕೃತಿಯ ಸ್ವಭಾವವನ್ನು ವೈಜ್ಞಾನಿಕ ವಿಧಾನದಿಂದ ಅರಿತು ಅದರ ಮೂಲಕ ಮಾನವ ಸಮಾಜದ ಕಲ್ಯಾಣವನ್ನು ಸಾಧಿಸಿದ, ಸಾಧಿಸುತ್ತಿದ್ದಾನೆಯಲ್ಲದೆ ಮುಂದೆ ಸಾಧಿಸಬೇಕಾದದ್ದೂ ಚಾರಿತ್ರಿಕ ಭೌತವಾದದ ವಸ್ತು.

ಈ ಚಾರಿತ್ರಿಕ ಭೌತವಾದ ಪಾಸಿಟಿವಿಸಂ ಎಂಬ ಹಿಂದಿನ ಭೌತವಾದವಲ್ಲ. ಆ ಹಿಂದಿನ ಭೌತವಾದದ ಪ್ರಕಾರ ಭೌತವಸ್ತು ಕೇವಲ ಯಾಂತ್ರಿಕಕ್ರಿಯೆ, ಅದು ಕೇವಲ ಯಂತ್ರದಂತೆ ಪುನಶ್ಚರಣ. ಕೇವಲ ಪುನಶ್ಚರಣವೆಂದು ತಿಳಿಸುವ ವಿಜ್ಞಾನವೇ ಸರ್ವಸ್ವ ಎಂದು ಆ ಪಂಥದವರು ತಿಳಿದಿದ್ದರು. ಚಾರಿತ್ರಿಕ ಭೌತವಾದಿಗಳಾದರೋ ತತ್ತ್ವದ ಆಶ್ರಯವಿಲ್ಲದ ವಿಜ್ಞಾನವೇ ಸರ್ವಸ್ವ ಎಂದು ಎಣಿಸುವುದಿಲ್ಲ. ತತ್ತ್ವದ ಆಶ್ರಯವಿಲ್ಲದ ವಿಜ್ಞಾನ ಜೀವನಕ್ಕೆ ಉಪಯೋಗಕಾರಿಯಲ್ಲ. ಅದು ಸಾರ್ಥಕವಾಗಬೇಕಾದರೆ ಜೀವನದ ಬೆಲೆಗಳನ್ನು, ಪುರುಷಾರ್ಥಗಳನ್ನು ಬೆಳೆಸಲು ಸಾಧಕವಾಗಬೇಕು.

ಪ್ರಕೃತಿ ಜಡವಲ್ಲ, ಅದು ಬದಲಾವಣೆ ಇಲ್ಲದ ವಸ್ತುವಲ್ಲ. ಅಂತೆಯೇ ಸಮಾಜವೂ ಜಡವಲ್ಲ; ಬದಲಾವಣೆ ಇಲ್ಲದ ನಿಸ್ತೇಜಕ ವಸ್ತುವಲ್ಲ. ಹೊಸ ಹೊಸ ಬೆಲೆಗಳನ್ನು ಬೆಳೆಸಲು ಅದರ ಮೈಕಟ್ಟನ್ನು ಹೊಸಹೊಸದಾಗಿ ರಚಿಸಿಕೊಳ್ಳುವುದೇ ಅದರ ಜೀವಾಳ. ಜೀವನಕ್ಕೆ ಪ್ರಪ್ರಥಮವಾಗಿ ಆಧಾರವಾದದ್ದು ಅರ್ಥ. ಅದಿಲ್ಲದೆ ಜೀವನವಿಲ್ಲ. ಅದನ್ನು ನ್ಯಾಯರೀತಿಯಲ್ಲಿ, ಅಂದರೆ ಒಬ್ಬ ಇನ್ನೊಬ್ಬನನ್ನು ತನ್ನ ಗುಲಾಮನಾಗಿ ಮಾಡಿಕೊಳ್ಳದೆ ಸಹಕಾರದಿಂದ, ಪ್ರಾಮಾಣಿಕವಾದ ದುಡಿಮೆಯಿಂದ, ಅರ್ಥವನ್ನು ಸೃಷ್ಟಿಸುವುದು ಮಾನವನ ಪ್ರಥಮ ಧರ್ಮ. ಆ ಆರ್ಥಿಕ ಧರ್ಮ ಜೀವನದ ಮೂಲಾಧಾರ. ಅದು ಸಿದ್ಧಿಸದಿದ್ದರೆ ಬೇರೆ ಯಾವ ಧರ್ಮವೂ, ಯಾವ ಪುರುಷಾರ್ಥವೂ ಸಿದ್ಧಿಸಲಾರದು. ಈ ಮೊದಲನೆಯ ಧರ್ಮವನ್ನು ಪಾಲಿಸಿಕೊಳ್ಳದ ಸಮಾಜ ಪೊಳ್ಳು ಸಮಾಜ. ಆ ಧರ್ಮದ ಆಧಾರದ ಮೇಲೆ ಸಮಾಜವನ್ನು ಕಟ್ಟುವುದು ಮಾನವನ ಮೊದಲ ಕರ್ತವ್ಯ. ಪ್ರಾಮಾಣಿಕವಾದ, ಸೃಷ್ಟ್ಯಾತ್ಮಕವಾದ ಆರ್ಥಿಕ ಜೀವನ ಮಾನವನ ಸತ್ತ್ವವನ್ನು ಒರೆ ಹೆಚ್ಚಿ ನೋಡುವಂತೆ ಬೇರೆ ಯಾವುದೂ ನೋಡಲಾರದು. ಸಹನೆ, ಸೌಜನ್ಯ, ಸತ್ಯ, ಧೈರ್ಯ, ವೀರ್ಯ, ಪರಸ್ಪರಾನುಕಂಪ, ಅನುರಾಗ, ಶಾಂತಿ – ಈ ಕಲ್ಯಾಣಗುಣಗಳು ಮೊಳಗುವುದು ಈ ಆರ್ಥಿಕ ಜೀವನದಲ್ಲಿ. ಇದು ಪ್ರಥಮ ತತ್ತ್ವ; ಪ್ರಥಮ ಧರ್ಮ; ಸೌಂದರ್ಯ; ಸತ್ಯ. ಮತ್ತು ಇತರ ಪುರುಷಾರ್ಥಗಳು ಅನಂತರದವು. ಇದನ್ನು ಅನುಸರಿಸಿ ಬೆಳೆಯುವಂಥವು.

ಮಾನವನ ಚರಿತ್ರೆಯುದ್ದಕ್ಕೂ ಈ ಪ್ರಥಮ ಸತ್ಯವನ್ನು ಅವಲಂಬಿಸಿದವರಿಗೂ ಇದನ್ನು ನಿರಾಕರಿಸಿದವರಿಗೂ ಘರ್ಷಣೆ ನಡೆದಿದೆ. ಡಿಮಾಕ್ರಿಟಸ್ ಹೆರಾಕ್ಲೈಟಸ್ ಎಂಬ ತಾತ್ತ್ವಿಕರು ಈ ಹೋರಾಟವನ್ನು ಮೊಟ್ಟಮೊದಲಿಗೆ ನಡೆಸಿದವರು. ಬೇಕನ್, ದಿದೆರೊ, ಹೆಲ್ವೆಟಿಯಸ್, ಸ್ಪಿನೋಜಾ–ಇವರು ಅನಂತರ ಈ ತತ್ತ್ವವನ್ನು ಹಿಡಿದೆತ್ತಿದರೆಂದೂ ಗ್ರೀಕರಲ್ಲಿ ಪ್ಲೇಟೋ ಆಧುನಿಕರಲ್ಲಿ ಹೆಗಲ್ ಇದಕ್ಕೆ ಪ್ರತಿಯಾದ ವಾದವನ್ನು ಹಿಡಿದೆತ್ತಿದರೆಂದೂ ಚಾರಿತ್ರಿಕ ಭೌತವಾದಿಗಳು ಭಾವಿಸುತ್ತಾರೆ. ಈ ಎಲ್ಲ ತತ್ತ್ವಗಳನ್ನೂ ವಿಮರ್ಶಿಸಿ ಇವುಗಳ ಲೋಪದೋಷಗಳನ್ನು ತೋರಿಸಿ ಮಾರ್ಕ್ಸ್ (1818–83) ಮತ್ತು ಎಂಗೆಲ್ಸ್ (1820–95) ಹೊಸ ಭೌತವಾದವನ್ನು ನಿರ್ಮಿಸಿದರು.

ಸಮಾಜದಲ್ಲಿ ದುಡಿದು ಜೀವಿಸುವವರ ಹಕ್ಕುಗಳನ್ನು ಕಡೆಗಣಿಸಿ, ದುಡಿಯದೆ ಜೀವಿಸುವ ಜನ ಅವರನ್ನು ದಾಸ್ಯಕ್ಕೆ ಈಡು ಮಾಡುತ್ತಿದ್ದರು. ಪ್ರಾಚೀನ ಕಾಲದಿಂದಲೂ ಮಾನವನ ಚರಿತ್ರೆ ಈ ಎರಡು ವರ್ಗಗಳ ಹೋರಾಟದ ಚರಿತ್ರೆಯೇ ಆಗಿದೆ. ರೋಮನ್ ಸಾಮ್ರಾಜ್ಯ ಕಾಲದಲ್ಲಿ ಸಾಮಂತರಿಗೂ ಸಾಮಾನ್ಯರಿಗೂ ಘರ್ಷಣೆ, ಮಧ್ಯಯುಗದಲ್ಲಿ ಫ್ಯೂಡಲ್ ಭೂಮಾಲೀಕರಿಗೂ ಅವರ ಜೀತಗಾರರಿಗೂ ಘರ್ಷಣೆ, ಫ್ಯೂಡಲ್ ಸಮಾಜ ಶಿಥಿಲವಾದ ಅನಂತರ ಬಂಡವಾಳಶಾಹಿ ಸಮಾಜ ರೂಪುಗೊಂಡು ಕೂಲಿಗಾರರಿಗೂ ಬಂಡವಾಳಶಾಹಿಗಳಿಗೂ ಘರ್ಷಣೆ ನಡೆದುವು. ಈ ಘರ್ಷಣೆ 19ನೆಯ ಶತಮಾನದಲ್ಲಿ ಪ್ರಬಲಗೊಂಡು ಬಂಡವಾಳ ಪದ್ಧತಿಯಾಗಿ, ಸಾಮಾನ್ಯ ಜನರ ಕಣ್ಣುಕುಕ್ಕುವಂತೆ ಅವರ ಮುಂದೆ ಬಂದು ನಿಂತಿತು. ಅವರು ಬಂಡವಾಳಗಾರರ ಮೇಲೆ ತಿರುಗಿ ಬಿದ್ದು ಕ್ರಾಂತಿ ಎಬ್ಬಿಸಿದರು. ಈ ಜನರ ಕ್ರಾಂತಿಯ ಕೂಗಿಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ಬೆಂಬಲವಿತ್ತು, ಅವರ ಅಂತರಂಗದ ಭಾವನೆಗಳನ್ನು ತಾತ್ತ್ವಿಕವಾಗಿ ಹೊರಗೆಡಹಿದರು. ಚಾರಿತ್ರಿಕ ಭೌತವಾದ ಕೂಲಿಗಾರವರ್ಗದ ಕ್ರಾಂತಿಯನ್ನು ಸಮರ್ಥಿಸುವ ವಾದ. ಆದ್ದರಿಂದ ಅದು ಕ್ರಾಂತಿವಾದ. ಕ್ರಾಂತಿಯೇ ಕೆಲಸಗಾರರ ವಿಮೋಚನೆಗೆ ನ್ಯಾಯವಾದ ದಾರಿ ಎಂದು ಅವರು ಸಮರ್ಥಿಸಿದರು. ಕೂಲಿಕಾರ್ಮಿಕರು ಸಂಘಟಿತವಾಗಿ ಹೋರಾಡುವುದೇ ಚರಿತ್ರೆಯ ಆದೇಶ. ಹೀಗೆ ಸಂಘನಿರ್ಮಾಣ ಮಾಡುವುದಕ್ಕೆ ನೆರವಾಗುವ ತತ್ತ್ವಕ್ಕೆ ಕಮ್ಯೂನಿಸ್ಟ್ ತತ್ತ್ವವೆಂದು ಹೆಸರು.

ಮಾರ್ಕ್ಸ್ ಮತ್ತು ಎಂಗೆಲ್ಸ್ ಕಮ್ಯೂನಿಸ್ಟ್ ಕ್ರಾಂತಿಗೆ ಕಾರಣರಾದರೆ, ಬಂಡವಾಳ ಸಮಾಜವನ್ನು ಧ್ವಂಸ ಮಾಡಲು ಅನುವಾದರೆ, ಧ್ವಂಸಕ್ಕೊಳಗಾದ ಜನರನ್ನು ರಚನಾತ್ಮಕ ಕಮ್ಯೂನಿಸ್ಟ್ ಸಂಘದ ಮೂಲಕ ಕಟ್ಟಲು ಲೆನಿನ್ ಸಹಾಯ ಮಾಡಿದ; ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿ ಇಂದಿನ ರಷ್ಯವನ್ನು ನಿರ್ಮಾಣ ಮಾಡಿದ. ಈಗ ರಷ್ಯದಲ್ಲಿ ಆ ಪಕ್ಷವನ್ನು ಬಿಟ್ಟು ಬೇರೆ ಪಕ್ಷವಿಲ್ಲ; ಅಂದರೆ ಅಲ್ಲಿಯ ಸಮಾಜವೂ ಪಕ್ಷವೂ ಒಂದೇ ಆಗಿದೆ. ಅಂತಿಮದಲ್ಲಿ ಸಮಾಜದಲ್ಲಿನ ಎರಡು ವಿರುದ್ಧ ಪಂಗಡಗಳು ಹೋಗಿ ಸಮಾಜವೆಲ್ಲ ಒಂದೇ ಪಂಗಡವಾಗಿ ಮಾರ್ಪಡುವುದು ಕಮ್ಯೂನಿಸಮ್ಮಿನ ಗುರಿ ಎಂದು ನುಡಿದ ಕ್ರೊಪೊಟ್‍ಕಿನ್ ಎಂಬ ಸಮಾಜವಾದಿಯ ಭವಿಷ್ಯ ಇಂದು ಕೈಗೊಡುತ್ತಿದೆ. ಆದರೂ ಸದಾ ಬೆಳೆಯುತ್ತಿರುವುದು ಸಮಾಜದ ಸ್ವಭಾವವಾದುದರಿಂದ ಅಲ್ಪಸ್ವಲ್ಪ ವ್ಯತ್ಯಾಸಗಳು, ಮತಭೇದಗಳು ಇದ್ದೇ ಇರುತ್ತವೆ. ಹಾಗಿಲ್ಲದೆ ಸಮಾಜದ ಹೊಸ ಬೆಲೆಗಳು ಹುಟ್ಟಲು ಅವಕಾಶವಿರುವುದಿಲ್ಲ. ಈಗ ಸೋವಿಯೆತ್ ರಷ್ಯದ ಜನ ಭಿನ್ನ ಮತಗಳು ವಿರುದ್ಧವಾದುವೆಂದು ಅಷ್ಟಾಗಿ ಭಾವಿಸದೆ, ಅವು ಹೆಚ್ಚಿನ ಪ್ರಗತಿಗೆ ಅಗತ್ಯವೆಂದು ತಿಳಿದು ಸಹಬಾಳ್ವೆಯ ತತ್ತ್ವವನ್ನು ಆಚರಿಸುತ್ತಿದ್ದಾರೆ.

ಹೀಗೆ ಚಾರಿತ್ರಿಕ ಭೌತವಾದ ಗೊಡ್ಡು ಬೀಳದೆ ಫಲಪ್ರದವಾಗಿ ವಿರಾಜಿಸುತ್ತಿದೆ. ಒಟ್ಟನಲ್ಲಿ ಧ್ಯೇಯವಾದಕ್ಕೂ ಭೌತವಾದಕ್ಕೂ ಇರುವ ಅಂತರ ಕಡಿಮೆಯಾಗುತ್ತಿದೆ. ಧ್ಯೇಯವಾದವನ್ನು ಅನುಸರಿಸುವ ದೇಶಗಳಲ್ಲೂ ಭೌತವಾದ ಬಹುಮಟ್ಟಿಗೆ ಆಚರಣೆಗೆ ಬರುತ್ತಿದೆ. ವೈವಿಧ್ಯವೂ ಬೆಳವಣಿಗೆಯೂ ಜೀವನದ ಜೀವಾಳವೆಂಬ ತತ್ತ್ವ ಹಿಂದೆ ಎಂದೂ ಇಲ್ಲದಷ್ಟು ಪ್ರಮುಖವಾಗಿ ಈಗ ಎದ್ದು ಕಾಣುತ್ತಿದೆ. ಇದಕ್ಕೆ ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನ್ ಬಹುಮಟ್ಟಿಗೆ ಕಾರಣರು. ಇದು ಅವರ ತತ್ತ್ವದ ಒಂದು ಒಳ್ಳೆಯ ಗುಣವೆಂಬುದನ್ನು ನಿರಾಕರಿಸಲಾಗುವುದಿಲ್ಲ. (ಜಿ.ಎಚ್.ಆರ್.; ಎಸ್.ಎಸ್.ಆರ್.)

**ಚಾರಿತ್ರ್ಯ ಶಿಕ್ಷಣ :** ವ್ಯಕ್ತಿಯ ಚಾರಿತ್ರ್ಯವನ್ನು ಸರಿಯಾದ ಮಾರ್ಗದಲ್ಲಿ ಬೆಳೆಸಲು ಕೊಡುವ ಶಿಕ್ಷಣವನ್ನು ಈ ಹೆಸರಿನಿಂದ ಕರೆಯಲಾಗಿದೆ (ಕ್ಯಾರೆಕ್ಟರ್ ಎಜುಕೇಷನ್). ಚಾರಿತ್ರ್ಯವೆಂದರೆ ವ್ಯಕ್ತಿಯ ಗುಣ, ಶೀಲ, ನೀತಿ, ನಡೆವಳಿ, ಸ್ವಭಾವ, ಮನೋಧರ್ಮ ಇವೇ ಮುಂತಾದ ಅಂಶಗಳನ್ನು ಒಳಗೊಂಡ ಅವನ ಇಡೀ ವ್ಯಕ್ತಿತ್ವ. ವ್ಯಕ್ತಿಯಲ್ಲಿ ಸಚ್ಚಾರಿತ್ರ್ಯವನ್ನು ರೂಪಿಸಿ ಬೆಳೆಸುವುದು ಶಿಕ್ಷಣದ ಮುಖ್ಯ ಉದ್ದೇಶಗಳಲ್ಲಿ ಒಂದು ಎಂದು ಎಲ್ಲ ಶಿಕ್ಷಣತಜ್ಞರ ಖಚಿತ ಅಭಿಪ್ರಾಯ. ಇಂಥ ಶಿಕ್ಷಣ ಮಕ್ಕಳಿಗೆ ಬಾಲ್ಯದಿಂದಲೇ ದೊರಕುವುದು ಅಗತ್ಯ.

ಮಕ್ಕಳನ್ನು ಶೀಲವಂತರನ್ನಾಗಿ ಬೆಳೆಸುವುದು ಶಿಕ್ಷಣದ ಮುಖ್ಯ ಗುರಿಗಳಲ್ಲಿ ಒಂದೆಂಬುದನ್ನು ಪ್ರಾಚೀನ ಶಿಕ್ಷಣಪದ್ಧತಿಗಳಲ್ಲೂ ಕಾಣುತ್ತೇವೆ. ಭರತಖಂಡದಂತೆ ಇತರ ಪ್ರಾಚೀನ ನಾಗರಿಕ ರಾಷ್ಟ್ರಗಳ ಶಿಕ್ಷಣಪದ್ಧತಿಗಳಲ್ಲೂ ಗುಣಶೀಲಗಳನ್ನು ರೂಪಿಸುವ ಧ್ಯೇಯಕ್ಕೆ ಪ್ರಾಧಾನ್ಯವಿತ್ತು. ಪ್ರಾಚೀನ ಗ್ರೀಸ್ ದೇಶದ ನಗರ ರಾಜ್ಯಗಳಾದ ಅಥೆನ್ಸ್ ಮತ್ತು ಸ್ಪಾರ್ಟ, ರೋಮ್ ಚಕ್ರಾಧಿಪತ್ಯ, ಪ್ರಾಚೀನ ಚೀನ ಮತ್ತು ಇಂಗ್ಲೆಂಡ್ ದೇಶದ ಪಬ್ಲಿಕ್ ಸ್ಕೂಲ್ ಪದ್ಧತಿ–ಇವು ಶೀಲ ನಿರೂಪಣೆಗೆ ಮಹತ್ತ್ವ ನೀಡಿದ್ದುವು. ಅಥೆನ್ಸ್ ಮತ್ತು ಸ್ಪಾರ್ಟಗಳು ಕೇವಲ ನಗರ ರಾಜ್ಯಗಳಾಗಿಯೇ ಇದ್ದ ಕಾಲದಲ್ಲಿ ದೈಹಿಕ ಮತ್ತು ಸೈನಿಕ ಶಿಕ್ಷಣಕ್ಕೇ ಪ್ರಾಮುಖ್ಯ ಕೊಡಲಾಗಿತ್ತು. ಆದರೆ ಅಲ್ಲಿ ಸಾಮ್ರಾಜ್ಯ ಏರ್ಪಟ್ಟಂತೆ ಅವುಗಳ ಶಿಕ್ಷಣಪದ್ಧತಿಗಳಲ್ಲಿ ಶೀಲ ಚಾರಿತ್ರ್ಯಗಳಿಗೆ ಆದ್ಯಸ್ಥಾನ ದೊರೆಯಿತು. ರಾಷ್ಟ್ರ ವಿಶಾಲವಾದಂತೆ ಅದರ ಆಡಳಿತ ನಿರ್ವಹಣ ಕಾರ್ಯ ಸಂಕೀರ್ಣವೂ ಕ್ಲಿಷ್ಟವೂ ಆಯಿತು. ಅದನ್ನು ಸಮರ್ಥವಾಗಿ ನಿರ್ವಹಿಸಲು ಶೀಲವಂತರೂ ಸಚ್ಚಾರಿತ್ರ್ಯ ಪಡೆದವರೂ ಬೇಕಾಯಿತು. ಇದರಿಂದ ಶಿಕ್ಷಣಪದ್ಧತಿಯಲ್ಲಿ ಇದಕ್ಕೆ ಪ್ರಾಮುಖ್ಯ ಬಂತು. ಪ್ಲೇಟೋವಿನ ರಿಪಬ್ಲಿಕ್‍ನಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು. ರೋಮನ್ ಚಕ್ರಾಧಿಪತ್ಯ ವಿಶಾಲಗೊಂಡಂತೆ ಅದರ ಶಿಕ್ಷಣಪದ್ಧತಿಯೂ ಇದೇ ಧಾಟಿಯನ್ನು ಅನುಸರಿಸಿತು. ಚೀನದ ತತ್ತ್ವಜ್ಞಾನಿ ಕನ್‍ಫ್ಯೂಷಸ್ ತನ್ನ ತತ್ತ್ವಶಾಸ್ತ್ರದಲ್ಲಿ ಸಚ್ಚಾರಿತ್ರ್ಯಕ್ಕೇ ಬಹು ಮುಖ್ಯ ಸ್ಥಾನ ಕೊಟ್ಟಿದ್ದಾನೆ. ಜ್ಞಾನಿಯಾದವ ಸಚ್ಚಾರಿತ್ರ್ಯವುಳ್ಳವನೂ ಆಗಿರುತ್ತಾನೆ–ಎಂದು ಅವನು ಭಾವಿಸಿ, ಅಂಥವರು ಮಾತ್ರ ರಾಜ್ಯಸೂತ್ರಗಳನ್ನು ನಡೆಸಲು ದಕ್ಷರು ಎಂದಿದ್ದಾನೆ. ಇಂಗ್ಲೆಂಡಿನಲ್ಲಿ ಪಬ್ಲಿಕ್ ಸ್ಕೂಲ್ ಪದ್ಧತಿ ಪ್ರಸಿದ್ಧಿಗೆ ಬಂದುದು ಅದು ಮಕ್ಕಳಿಗೆ ಕಲಿಸಿಕೊಡುತ್ತಿದ್ದ ಗ್ರೀಕ್ ಲ್ಯಾಟಿನ್ ಭಾಷೆಗಳಿಗಿಂತ ಹೆಚ್ಚಾಗಿ, ಅದು ಕಲಿಸುತ್ತಿದ್ದ ಶಿಸ್ತು, ಸಂಯಮ, ಮುಖಂಡತ್ವ ಮುಂತಾದ ಚಾರಿತ್ರ್ಯ ರೂಪಣೆಯ ವಿಧಾನಗಳಿಂದ.

ಭಾರತದಲ್ಲಿ ಪ್ರಚಾರದಲ್ಲಿದ್ದ ಪ್ರಾಚೀನ ಗುರುಕುಲ ಪದ್ಧತಿ ಶಿಕ್ಷಣದಲ್ಲಿ ಗುಣಶೀಲ ರೂಪಣೆಗೆ ಕೊಡುತ್ತಿದ್ದ ಮಹತ್ತ್ವದಿಂದ ಪ್ರಸಿದ್ಧಿಗೆ ಬಂತು. ಶಿಷ್ಯನು ಗುರುವಿನ ಜೊತೆಯಲ್ಲಿ ದೈನಂದಿನ ಜೀವನದಲ್ಲಿ ಭಾಗವಹಿಸಬೇಕು. ಗುರುವಿನಿಂದ ನೇರವಾಗಿ ಸದ್ಗುಣಗಳನ್ನು ಕಲಿಯಬೇಕು. ನೀತಿವಂತನಾಗಬೇಕು, ಧೈರ್ಯ, ಸ್ಥೈರ್ಯ, ತ್ಯಾಗ, ಔದಾರ್ಯ ಮುಂತಾದ ಉದಾತ್ತ ಗುಣಗಳನ್ನು ಅಭ್ಯಸಿಸಬೇಕು, ಗುರುಸೇವೆ ಮಾಡಿ ದೈಹಿಕ ತಪದಿಂದ ತನ್ನ ಮನಸ್ಸನ್ನು ಸ್ವಚ್ಛಗೊಳಿಸಬೇಕು, ದೇವತಾರಾಧನೆ ಮುಂತಾದ ಪವಿತ್ರ ವ್ರತಗಳಿಂದ ಆತ್ಮವನ್ನು ಶುದ್ಧ ಮಾಡಿಕೊಳ್ಳಬೇಕು. ಇದೇ ಬ್ರಹ್ಮಚರ್ಯ ವ್ರತ. ಇದು ಗುರುಕುಲ ಪದ್ಧತಿಯ ಮುಖ್ಯಲಕ್ಷಣ. ಮಹರ್ಷಿಗಳೂ ರಾಜಮಹಾರಾಜರೂ ತಮ್ಮ ಮಕ್ಕಳನ್ನು ಗುರುಕುಲಗಳಿಗೆ ಕಳುಹಿಸಿ ವಿದ್ಯೆ ಕೊಡಿಸುತ್ತಿದ್ದರು. ಶ್ರೀಕೃಷ್ಣ ಭಗವಾನ್ ತನ್ನ ಬಾಲ್ಯವನ್ನು ಸಾಂದೀಪನಿ ಋಷಿಗಳ ಗುರುಕುಲದಲ್ಲಿ ಕಳೆದನಲ್ಲವೆ. ವಿದ್ಯಾಕಾಂಕ್ಷಿಗಳಾದ ಬಡಮಕ್ಕಳಿಗೂ ವಿದ್ಯೆ ಕಲಿಯುವ ಅರ್ಹತೆಯಿದ್ದರೆ ಸಾಕು, ಗುರುಕುಲಕ್ಕೆ ಪ್ರವೇಶ ದೊರೆಯುತ್ತಿತ್ತು. ಇದಕ್ಕೆ

ಕುಚೇಲನೇ ಸಾಕ್ಷಿ. ಗುರುಕುಲದಿಂದ ವಿದ್ಯೆ ಮುಗಿಸಿ ಹೊರಬಂದ ವ್ಯಕ್ತಿ ಪೂರ್ಣ ಮನುಷ್ಯನಾಗಿ, ಗೃಹಸ್ಥನಾಗಿ, ಸಮಾಜಸೇವೆ ಮಾಡಲು ಪೂರ್ಣ ಅರ್ಹತೆ ಪಡೆದವನೆಂದು ಪರಿಗಣಿಸಲಾಗುತ್ತಿತ್ತು. ಗುರುಕುಲ ಪದ್ಧತಿ ಈಗ ಕಣ್ಮರೆಯಾದಂತೆ ಕಂಡರೂ ಅದು ಹೊಸ ಯುಗದಲ್ಲಿ, ಹೊಸ ರೂಪವನ್ನು ತಾಳಿ ಇಂದಿನ ಕಾಲದೇಶಗಳಿಗೆ ಹೊಂದಿಕೊಂಡು ಮಹಾತ್ಮ ಗಾಂಧಿಯವರು ರೂಪಿಸಿದ ಜೀವನಶಿಕ್ಷಣ ಅಥವಾ ಮೂಲಶಿಕ್ಷಣ ಮತ್ತು ಗ್ರಾಮೀಣ ವಿಶ್ವವಿದ್ಯಾಲಯ ಶಿಕ್ಷಣ ಇತ್ಯಾದಿ ರೂಪದಲ್ಲಿ ಪುನರುಜ್ಜೀವ ಪಡೆದು ಉಳಿದುಕೊಂಡು ಬಂದಿದೆ. **(ನೋಡಿ–ಗ್ರಾಮೀಣ ಶಿಕ್ಷಣ)**.

ವ್ಯಕ್ತಿಯ ಚಾರಿತ್ರ್ಯದಲ್ಲಿ ಮುಖ್ಯವಾಗಿ 1 ಜೈವಿಕ ಮತ್ತು ಅನುವಂಶೀಯ ಲಕ್ಷಣಗಳು, 2 ಸನ್ನಿವೇಶ ಪ್ರಭಾವದಿಂದ ಮೂಡಿದ ಲಕ್ಷಣಗಳು, 3 ಸಾಮಾಜಿಕ, ನೈತಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳು ಪಾತ್ರವಹಿಸುತ್ತವೆ.

ಜೈವಿಕ ಮತ್ತು ಅನುವಂಶೀಯ ಲಕ್ಷಣಗಳಲ್ಲಿ ವ್ಯಕ್ತಿಯ ದೇಹದಾರ್ಢ್ಯ, ದೇಹಾರೋಗ್ಯ, ವಂಶಪಾರಂಪರ್ಯವಾಗಿ ಬಂದ ಗುಣಗಳು ಸೇರಿವೆ. ವ್ಯಕ್ತಿ ಚಿಕ್ಕಂದಿನಿಂದ ಬೆಳೆದು ಬಂದ ಪ್ರಾಕೃತಿಕ ಮತ್ತು ಮಾನವೀಯ ಸನ್ನಿವೇಶಗಳ ಪ್ರಭಾವದಿಂದ ಬೆಳೆದುಬಂದ ಗುಣಲಕ್ಷಣಗಳು ಎರಡನೆಯ ಗುಂಪಿನವು. ತನ್ನ ಸುತ್ತಮುತ್ತಲಿರುವ ವ್ಯಕ್ತಿಗಳೊಡನೆ ವ್ಯವಹರಿಸುವ ರೀತಿನೀತಿಗಳು, ಇತರರ ಮೇಲೆ ತನ್ನ ಪ್ರಭಾವವನ್ನು ಬೀರಬಲ್ಲ ಶಕ್ತಿಸಾಮರ್ಥ್ಯಗಳು, ಇತರರಿಂದ ತಾನು ಕಲಿತು ಪ್ರಭಾವಿತನಾಗುವಂತೆ ಮಾಡುವ ಗುಣ ವಿಶೇಷಗಳು, ಸಾಮಾಜಿಕ ಪ್ರಜ್ಞೆ, ಇತರರಿಗೆ ಮಾರ್ಗದರ್ಶನ ಮಾಡಬಲ್ಲ ನಾಯಕತ್ವದ ಲಕ್ಷಣಗಳು, ನಾಯಕನಿಗೆ ನಿಷ್ಠೆಯಿಂದ ನಡೆದುಕೊಳ್ಳುವ ಗುಣಗಳು, ವ್ಯಕ್ತಿಯಲ್ಲಿ ಕಂಡುಬರುವ ನೀತಿ, ಶೀಲ, ನ್ಯಾಯ, ಧರ್ಮಬುದ್ಧಿ, ನಿಸ್ವಾರ್ಥಭಾವನೆ ಸಮಾಜದಿಂದ ಪಡೆದುಕೊಂಡ ಮತಾಚರಣೆ, ಪೂಜಾವಿಧಿ, ಸಾಹಿತ್ಯ, ಕಲೆ, ಸಂಗೀತ ಮುಂತಾದವುಗಳ ಅರಿವು–ಇವೆಲ್ಲ ಮೂರನೆಯ ಗುಂಪಿನ ಲಕ್ಷಣಗಳು.

ಈ ವಿಭಜನೆಯಿಂದ ಚಾರಿತ್ರ್ಯವೆಂಬುದು ವ್ಯಕ್ತಿಯಲ್ಲಿ ಕಂಡುಬರುವ ಒಂದು ಸರಳವಾದ ಗುಣಲಕ್ಷಣವಲ್ಲ, ಅದು ಸಂಕೀರ್ಣವೂ ಸಮಗ್ರವೂ ಆದ ಪೂರ್ಣ ವ್ಯಕ್ತಿತ್ವ ಎಂದಾಯಿತು. ತಂದೆ, ತಾತ, ಮುತ್ತಾತಂದಿರಿಂದ ಬಂದ ಅನುವಂಶೀಯ ಶಕ್ತಿ ಮತ್ತು ಗುಣಸ್ವಭಾವಗಳೂ ವ್ಯಕ್ತಿ ಬೆಳೆದು ಬಂದ ಸನ್ನಿವೇಶ ಅಥವಾ ವಾತಾವರಣದಿಂದ ದೊರೆತ ಗುಣಲಕ್ಷಣಗಳೂ ಸುತ್ತಮುತ್ತಲ ಸಮಾಜ ಮತ್ತು ಸಂಸ್ಕೃತಿಯ ಪ್ರಭಾವದಿಂದ ಬಂದ ಸಂಪ್ರದಾಯ, ಅಭ್ಯಾಸ, ನಂಬಿಕೆ, ಮನೋಧರ್ಮಗಳೂ ಒಂದರೊಡನೊಂದು ಸಮ್ಮಿಳಿತವಾಗಿ ಫಲಿತವಾದದ್ದು.

ಒಬ್ಬ ವ್ಯಕ್ತಿಯ ಚಾರಿತ್ರ್ಯ ಆತನ ಶಕ್ತಿ, ಸಾಮರ್ಥ್ಯ, ಆರೋಗ್ಯ ಮುಂತಾದ ದೈಹಿಕ ಸ್ವರೂಪವನ್ನು ಅವಲಂಬಿಸಿರುವುದಾದರೂ ಮುಖ್ಯವಾಗಿ ಅದು ಅವನ ಮಾನಸಿಕ ವ್ಯಾಪಾರಗಳಿಗೂ ಅಧ್ಯಾತ್ಮ ಪರಿಪಾಕಕ್ಕೂ ಸಂಬಂಧಿಸಿದೆ. ಅವನ ಮಾತು, ಚಿಂತನೆ, ನಡತೆ, ಆಸೆ ಆಕಾಂಕ್ಷೆ, ಆದರ್ಶ, ಸಾಧನೆ, ಸಿದ್ಧಿಗಳಿಂದ ಅವನ ಚಾರಿತ್ರ್ಯವನ್ನು ನಿರ್ಧರಿಸಿ ತಿಳಿಯಬೇಕಾಗುತ್ತದೆ. ಇತರರು ಆತನ ವಿಷಯದಲ್ಲಿ ಪಡೆದಿರುವ ಭಾವನೆ, ಇಟ್ಟಿರುವ ನಂಬಿಕೆಗಳು ಅವನ ಚಾರಿತ್ರ್ಯವನ್ನು ಸೂಚಿಸುತ್ತವೆ. ಒಬ್ಬ ವ್ಯಕ್ತಿಯ ಚಾರಿತ್ರ್ಯವನ್ನು ಆ ವ್ಯಕ್ತಿಯಲ್ಲಿ ಒಂದು ಕಾಲದಲ್ಲಿ, ಒಂದು ಸನ್ನಿವೇಶದಲ್ಲಿ ಕಂಡುಬಂದ ಪ್ರತಿಕ್ರಿಯೆಯಿಂದ ನಿರ್ಧರಿಸುವುದು ನ್ಯಾಯವಲ್ಲ. ಆತನಲ್ಲಿ ಬಾಲ್ಯದಿಂದಲೂ ಕಂಡುಬಂದು ವಿಕಾಸಗೊಂಡು ರೂಪುಗೊಳ್ಳುತ್ತಿರುವ ವ್ಯಕ್ತಿತ್ವದ ಧಾಟಿಯಿಂದ ಆತನ ಚಾರಿತ್ರ್ಯವನ್ನು ನಿರ್ಧರಿಸಬೇಕಾಗುತ್ತದೆ. ವ್ಯಕ್ತಿಗಳನ್ನು ಅವರವರ ಚಾರಿತ್ರ್ಯದ ದೃಷ್ಟಿಯಿಂದ ಸಜ್ಜನರು ದುರ್ಜನರು ಎಂದು ವಿಂಗಡಿಸುವ ಪರಿಪಾಟ ಸಾಮಾನ್ಯರಲ್ಲಿ ಕಂಡುಬರುತ್ತದೆ. ಅಲ್ಲದೆ ಧೀರೋದಾತ್ತ–ಖಳ, ಶಾಂತ–ಕೋಪಿ, ಕಲಹಪ್ರಿಯ–ಸೌಹಾರ್ದಯುತ, ಕರುಣಿ–ಕ್ರೂರಿ ಆತುರಗಾರ–ನಿಧಾನಿ, ವಿನಯಸಂಪನ್ನ–ಒರಟ, ಉದಾರಿ–ಜಿಪುಣ ಮುಂತಾದ ಮಾತುಗಳಿಂದ ವ್ಯಕ್ತಿಯ ಚಾರಿತ್ರ್ಯವನ್ನು ವರ್ಣಿಸಲು, ವ್ಯಕ್ತಿಗಳನ್ನು ವಿಂಗಡಿಸಲು ನಾವು ಪ್ರಯತ್ನಿಸುತ್ತೇವೆ. ಆಧುನಿಕ ಮನಶ್ಶಾಸ್ತ್ರದ ದೃಷ್ಟಿಯಿಂದ ಈ ಬಗೆಯ ವರ್ಣನೆ ವಿಂಗಡಣೆಗಳು ಸಾಧುವಲ್ಲ. ಏಕೆಂದರೆ ಒಂದು ಸಂದರ್ಭದಲ್ಲಿ, ಒಂದು ಸನ್ನಿವೇಶದಲ್ಲಿ, ಅಥವಾ ಒಬ್ಬನ ದೃಷ್ಟಿಯಲ್ಲಿ ಖಳನಾಗಿ ಕಂಡುಬಂದ ವ್ಯಕ್ತಿ ಇನ್ನೊಂದು ಸನ್ನಿವೇಶದಲ್ಲಿ ಇನ್ನೊಬ್ಬನ ದೃಷ್ಟಿಯಲ್ಲಿ ಧೀರೋದಾತ್ತನಾಗಿ ಕಾಣಬಹುದು. ಆದುದರಿಂದ ಶಿಕ್ಷಣಕ್ಷೇತ್ರದಲ್ಲಿ ವಿದ್ಯಾರ್ಥಿಗಳನ್ನು ಎಂಥ ವ್ಯಕ್ತಿಗಳನ್ನಾಗಿ ತಯಾರುಮಾಡಬೇಕೆಂದು ಯೋಚಿಸುವ ಬದಲು ವ್ಯಕ್ತಿಗಳಲ್ಲಿ ಯಾವ ಯಾವ ಸದ್ಗುಣ ಮತ್ತು ಮನೋಧರ್ಮಗಳನ್ನು ಮೂಡಿಸಿ ರೂಪಿಸಬೇಕೆಂದು ವಿವೇಚಿಸುವುದು ಸೂಕ್ತ.

ಸಚ್ಚಾರಿತ್ರ್ಯವೆಂಬುದು ಮಾನವರೆಲ್ಲರಿಗೂ ಒಂದೇ; ಅದು ಜಾತಿ, ಕುಲ, ವಂಶ, ಪಂಗಡ, ದೇಶಕಾಲಗಳಿಂದ ವ್ಯತ್ಯಾಸವಾಗುವಂಥದಲ್ಲ, ನಿಜ. ಆದರೆ ಶಿಕ್ಷಣದಲ್ಲಿ ಸಚ್ಚಾರಿತ್ರ್ಯವನ್ನು ಮೂಡಿಸಿ ರೂಪಿಸುವಲ್ಲಿ ಎಲ್ಲ ರಾಷ್ಟ್ರಗಳೂ ಎಲ್ಲ ಮಾನವಪಂಗಡಗಳೂ ಒಂದೇ ಬಗೆಯ ಕಾರ್ಯಕ್ರಮವನ್ನಾಗಲಿ, ಗುರಿಯನ್ನಾಗಲಿ ಇಟ್ಟುಕೊಳ್ಳುವುದು ಸಾಧ್ಯವಲ್ಲ. ಒಂದು ರಾಷ್ಟ್ರ ಒಂದು ಕಾಲದಲ್ಲಿ ಯುದ್ಧಪ್ರವೃತ್ತಿಯ ಚಾರಿತ್ರ್ಯವನ್ನು ಪ್ರಜೆಗಳಲ್ಲಿ ಮೂಡಿಸುವುದು ರಾಷ್ಟ್ರದ ಹಿತದೃಷ್ಟಿಯಿಂದ ಅನಿವಾರ್ಯವೆಂದು ತೋರಿದರೆ ಇನ್ನೊಂದು ರಾಷ್ಟ್ರಕ್ಕೆ ಇಲ್ಲವೆ ಇನ್ನೊಂದು ಕಾಲದಲ್ಲಿ ಶಾಂತಪ್ರಿಯತೆಯನ್ನು ಮೂಡಿಸುವುದು ಆವಶ್ಯಕವೆಂದು ತೋರ ಬಹುದು. ಆದ್ದರಿಂದ ಭಾರತದಲ್ಲಿ ಪ್ರಕೃತ ಪರಿಸ್ಥಿತಿಯಲ್ಲಿ ಯಾವ ಯಾವ ಆದರ್ಶಗಳನ್ನು ಗಮನದಲ್ಲಿಟ್ಟುಕೊಂಡು ಚಾರಿತ್ರ್ಯಶಿಕ್ಷಣವನ್ನು ರೂಪಿಸ–ಬೇಕಾಗುತ್ತದೆ ಯೆಂಬುದನ್ನು ಇಲ್ಲಿ ವಿವೇಚಿಸಬೇಕಾಗಿದೆ.

ಭಾರತ ದೇಶ ಆದಿಯಿಂದಲೂ ಕೆಲವು ಆದರ್ಶಗಳನ್ನು, ಜೀವನಮೌಲ್ಯಗಳನ್ನು, ದೃಷ್ಟಿಯಲ್ಲಿಟ್ಟುಕೊಂಡು ಎಷ್ಟೇ ಸಂಕಷ್ಟಗಳು ಒದಗಿದರೂ ಅವನ್ನು ಕೈಬಿಡದೆ ಪಾಲಿಸಿಕೊಂಡು ಬಂದಿದೆ. ಆ ಆದರ್ಶಗಳ ಶಕ್ತಿಯಿಂದಲೇ ಅದು ಹೊರಗಡೆಯಿಂದ ಬಂದ ಸೈನಿಕ, ರಾಜಕೀಯ, ಮತೀಯ ದಾಳಿ ಮತ್ತು ವಿಪತ್ತುಗಳನ್ನು ಎದುರಿಸಿ ಬಲಗೊಂಡು ಇನ್ನೂ ಭಾರತೀಯವಾಗಿಯೇ ಉಳಿದು ಬಂದಿದೆ. ಆ ಆದರ್ಶ, ಜೀವನಮೌಲ್ಯ, ತತ್ತ್ವ ಹೀಗಿವೆ:

1 ಸತ್ಯ : ಸತ್ಯಮೇವ ಜಯತೇ, ನಾನೃತಮ್. ಇದು ಭಾರತೀಯರ ಮೂಲ ಮಂತ್ರ. ಸತ್ಯವೆಂದರೆ, ಸುಳ್ಳು ಹೇಳದಿರುವುದು ಮಾತ್ರವಲ್ಲ, ತನಗೂ ತಾನಿರುವ ಸಮಾಜಕ್ಕೂ ಶ್ರೇಯಸ್ಸಾಗುವಂತೆ ನಡೆದುಕೊಳ್ಳುವುದು, ನುಡಿಯುವುದು ಸತ್ಯ ಮಾರ್ಗ; ಸತ್ಯವೇ ಧರ್ಮ, ಧರ್ಮ ಬಹುಜನ ಹಿತಾಕಾಂಕ್ಷಿ. ಸತ್ಯಮಾರ್ಗದಲ್ಲಿ ನಡೆಯಬೇಕೆಂಬ ಛಲ, ಹಂಬಲ, ನಿಷ್ಠೆ ವಿದ್ಯಾರ್ಥಿಗಳಲ್ಲಿ ಮೊಳೆಯಬೇಕು.

2 ಅಹಿಂಸೆ : ದೈಹಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ಇತರರಿಗೆ ನೋವನ್ನುಂಟುಮಾಡದಿರುವುದು ಅಹಿಂಸೆ. ಅಹಿಂಸಾ ಪರಮೋ ಧರ್ಮಃ ಎಂಬುದು ಭಾರತೀಯರ ಜಪ. ಅಹಿಂಸೆ ಎಂದರೆ ಬಲಪ್ರಯೋಗವನ್ನು ಎಂಥ ಸಂದರ್ಭದಲ್ಲಿಯೂ ಆಚರಿಸಕೂಡದೆಂಬುದಲ್ಲ. ಬಲಪ್ರಯೋಗದಿಂದ ಹಿಂಸೆಯಾಗಬಾರದು, ಇಲ್ಲ ಅನಿವಾರ್ಯ ಸಂದರ್ಭದಲ್ಲಿ ಹಿಂಸೆ ಆದಷ್ಟು ಕಡಿಮೆಯಾಗಬೇಕು, ಎಂಬುದು ಅಹಿಂಸೆಯ ಉದ್ದೇಶವಾಗಿರಬೇಕು. ಸತ್ಯವನ್ನು ಸಾಧಿಸುವಲ್ಲಿ ಅಹಿಂಸಾ ಮಾರ್ಗಗಳನ್ನು ಅವಲಂಬಿಸುವ ಪ್ರವೃತ್ತಿ ಮಕ್ಕಳಲ್ಲಿ ಬೆಳೆದುಬರಬೇಕು.

3 ಸಹಕಾರ : ಇತರರೊಡನೆ ಸ್ನೇಹಸೌಹಾರ್ದಗಳಿಂದ ಜೊತೆಗೂಡಿ ಕೆಲಸ ಮಾಡಿ ಸಹಬಾಳುವೆ ನಡೆಸುವ ತಂತ್ರಗಳನ್ನು ಮಕ್ಕಳು ಕಲಿಯಬೇಕು, ಅಭ್ಯಸಿಸಬೇಕು. ಇತರರ ಮೇಲೆ ಸ್ಪರ್ಧೆ ಹೂಡಿ ಅವರನ್ನು ಸೋಲಿಸಿ ತುಳಿದು ತಾನು ಗೆದ್ದು ಉನ್ನತಿ ಪಡೆಯಬೇಕೆಂಬುದು ಆದಿಮಾನವನ ಆದರ್ಶ. ಇಂದಿನ ನಾಗರಿಕ ಯುಗದಲ್ಲಿ ಸಹಕಾರದಿಂದ ಬಾಳುವುದು ಅತ್ಯಾವಶ್ಯಕ. ಇಲ್ಲದಿದ್ದರೆ ಮಾನವ ಕುಲವೇ ವಿನಾಶ ಹೊಂದಬಹುದು. ಈ ಸಹಕಾರ ತತ್ತ್ವ ಈಗ ಅಂತಾರಾಷ್ಟ್ರೀಯವಾಗಿ ವಿಕಾಸಗೊಳ್ಳುತ್ತಿದೆ.

4 ರಾಷ್ಟ್ರೀಯ ಭಾವೈಕ್ಯ : ಒಂದು ರಾಷ್ಟ್ರ ಉಳಿಯಬೇಕಾದರೆ, ಪ್ರಗತಿ ಹೊಂದಬೇಕಾದರೆ ಪ್ರಜೆಗಳಲ್ಲಿ ತಾವೆಲ್ಲರೂ ಒಂದು, ಒಂದು ತಾಯ ಮಕ್ಕಳು ಎಂಬ ಭಾವನೆ ಬೆಳೆದು ಬರಬೇಕು. ಭಾಷೆ, ಆಹಾರ, ವಿಹಾರ, ಉಡುಪು, ಮತಧರ್ಮ – ಇವುಗಳಲ್ಲಿ ಎಷ್ಟೇ ವೈವಿಧ್ಯವಿದ್ದರೂ ತಾವೆಲ್ಲರೂ ಒಂದು ರಾಷ್ಟ್ರದವರು ಎಂಬ ಭಾವನೆ ಬೆಳೆಯಬೇಕಾದುದು ಅನಿವಾರ್ಯ. ಈ ಭಾವನೆ ಬೆಳೆಯದಿದ್ದುದರಿಂದಲೇ ಹಿಂದಿನ ಶತಮಾನಗಳಲ್ಲಿ ಭಾರತೀಯರು ಪರದಾಳಿಗಳಿಗೆ ಸಿಕ್ಕಿ ಪರದಾಸ್ಯಕ್ಕೆ ಒಳಗಾಗಿ ಬಹು ಕಷ್ಟಪಡಬೇಕಾಯಿತು. ಆ ನ್ಯೂನತೆಯನ್ನು ಈಗ ಸರಿಪಡಿಸಿಕೊಂಡು, ಒಗ್ಗಟ್ಟಿನಿಂದ ಪ್ರಗತಿಪಥದಲ್ಲಿ ಮುಂದುವರಿಯಬೇಕಾಗಿದೆ.

5 ಅಂತಾರಾಷ್ಟ್ರೀಯ ಮನೋದೃಷ್ಟಿ : ರಾಷ್ಟ್ರೀಯ ಭಾವೈಕ್ಯತೆ ರಾಷ್ಟ್ರದ ಉನ್ನತಿಗೆ ಹೇಗೆ ಮುಖ್ಯವೋ ಹಾಗೆಯೇ ಮಾನವಕುಲದ ಉಳಿವಿಗೆ ಅಂತಾರಾಷ್ಟ್ರೀಯ ಭಾವನೆ ಬಹು ಮುಖ್ಯ. ಇದನ್ನು ಅರಿತಂತೆ ಈಗೀಗ ಅಂತಾರಾಷ್ಟ್ರೀಯ ಸಂಘಸಂಸ್ಥೆಗಳೂ ವ್ಯಾಪಾರ ವ್ಯವಹಾರಗಳೂ ಸಹಕಾರ ಸೌಹಾರ್ದಗಳೂ ಪ್ರಪಂಚದಲ್ಲಿ ಬಲಗೊಳ್ಳುತ್ತಿವೆ. ಈ ವಿಶಾಲದೃಷ್ಟಿ ವಿದ್ಯಾರ್ಥಿಗಳಲ್ಲಿ ಮೂಡಿ ಅವರು ಪ್ರಬುದ್ಧರಾದ ಮೇಲೆ ಇಡೀ ಮಾನವಕುಲಕ್ಕೇ ಹಿತವಾಗುವ ಕಾರ್ಯಗಳಲ್ಲಿ ಪಾಲ್ಗೊಳ್ಳುವಂತೆ ನಮ್ಮ ಶಿಕ್ಷಣ ಅವರಿಗೆ ಶಕ್ತಿ ನೀಡಬೇಕಾಗಿದೆ.

6 ದೇವರಲ್ಲಿ ನಂಬಿಕೆ : ಪರಾತ್ಪರ ವಸ್ತುವಿನಲ್ಲಿ, ಪರಮಾತ್ಮನಲ್ಲಿ ನಂಬಿಕೆ ಇಟ್ಟು ಭಕ್ತಿಪ್ರೇರಿತರಾಗಿ ಪೂಜಾವಿಧಿಗಳಲ್ಲಿ ತೊಡಗುವುದು ಭಾರತೀಯರಲ್ಲಿ ಬೆಳೆದು ಬಂದ ಒಂದು ಸಂಪ್ರದಾಯ. ಇದು ಶುದ್ಧಚಾರಿತ್ರ್ಯಕ್ಕೆ ಸತ್ತ್ವವನ್ನು ಕೊಡುವುದು. ಆದರೆ ಇದು ಸಂಕುಚಿತವಾದ ಮತೀಯ ಕರ್ಮಗಳಲ್ಲಿ ಅಂಧಶ್ರದ್ಧೆಯಾಗಿ ಪರಿಣಮಿಸದೆ ವಿಚಾರ ಪೂರಿತವಾದ ಅಂತರಾತ್ಮ ಪ್ರಜ್ಞೆಯಾಗಿ ಬೆಳೆಯುವುದು ವ್ಯಕ್ತಿಯ ಚಾರಿತ್ರ್ಯಕ್ಕೆ ತೀರ ಆವಶ್ಯಕ. ಶಿಕ್ಷಣ ವಿದ್ಯಾರ್ಥಿಗಳಲ್ಲಿ ಇಂಥ ಅಂತರಾತ್ಮ ಪ್ರಜ್ಞೆಯನ್ನು ಪ್ರಚೋದಿಸು ವಂತಾಗಬೇಕು. ಇಂದಿನ ನಮ್ಮ ಶಿಕ್ಷಣಪದ್ಧತಿಯಲ್ಲಿ ಶೀಲನಿರೂಪಣೆಗೆ ಗಮನ ಕೊಡುತ್ತಿದೆಯಾದರೂ ಅದೇ ಶಿಕ್ಷಣದ ಏಕೈಕ ಗುರಿಯಾಗಲು ಸಾಧ್ಯವಿಲ್ಲ. ಶಿಕ್ಷಣದ ಉದ್ದೇಶ ಯಾವುದೇ ಆಗಿರಲಿ, ಅದರ ತಳಹದಿಯಾಗಿ ಚಾರಿತ್ರ್ಯಶಿಕ್ಷಣ ಇರಲು ಸಾಧ್ಯ. ಈ ಕಾರಣದಿಂದ ಶಿಕ್ಷಣದ ಜವಾಬ್ದಾರಿ ಏಕಮುಖವಾಗಬಾರದು, ಬಹುಮುಖವಾಗಬೇಕು.

ಶೈಶವದ (ಆರು ವರ್ಷ ವಯಸ್ಸಿನ ಪೂರ್ವದ) ಶಿಕ್ಷಣದಲ್ಲಿ ಮಕ್ಕಳ ಅನಿರ್ಬಂಧಿತ ಚಟುವಟಿಕೆಗಳಿಗೆ ಪ್ರಾಧಾನ್ಯವಿದೆ. ಸಹನೆ, ತ್ಯಾಗ, ಸೇವೆ, ವಿನಯಪರತೆ, ಸಹಬಾಳುವೆ ಮುಂತಾದ ಸುಗುಣ,ಸೌಶೀಲ್ಯಗಳು ಶೈಶವದಿಂದಲೇ ಮೂಡಿ ಬೆಳೆಯಲು ಅನುಕೂಲಿಸುವಂತೆ ಶಿಶುವಿಹಾರ ತನ್ನ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶ ವಾತಾವರಣಗಳನ್ನು ಕಲ್ಪಿಸಿಕೊಡುತ್ತದೆ. ಈ ಸನ್ನಿವೇಶದಲ್ಲಿ, ಸಮವಯಸ್ಕರ ಮಧ್ಯದಲ್ಲಿ, ಅಲ್ಲಿ ನಡೆಯುವ ಚಟುವಟಿಕೆಗಳ ಸಂತೋಷ ಸಂಭ್ರಮಗಳಲ್ಲಿ ಮಕ್ಕಳು ವಿನಯಪರವಾದ ಮತ್ತು ಸಹನೆ ಸೇವಾಭಾವನೆಗಳಿಂದ ಕೂಡಿದ ಪ್ರತಿಕ್ರಿಯೆಯನ್ನು ತೋರುವರು. ಆಟಿಕೆಗಳನ್ನು ಉಪಯೋಗಿಸುವಲ್ಲಿ ತಮಗಿರುವಷ್ಟೇ ಅಧಿಕಾರ, ಹಕ್ಕುಗಳು ಇತರ ಮಕ್ಕಳಿಗೂ ಇವೆ ಯೆಂಬುದನ್ನು ಸ್ವಾಭಾವಿಕವಾಗಿ ಅರಿತುಕೊಂಡು ತಾವೂ ಅವನ್ನು ಉಪಯೋಗಿಸಿ ಇತರರೂ ಉಪಯೋಗಿಸಲು ಅವಕಾಶ ಕೊಡುವ ಅಭ್ಯಾಸ ಮಾಡಿಸಬೇಕು. ಇದರಿಂದ ಸಹಬಾಳುವೆಯ ಸರಳ ಪಾಠವೂ ಸೂಕ್ಷ್ಮವಾದ ಸಮಾಜಪ್ರಜ್ಞೆಯೂ ದೊರೆತಂತಾಗುವುದು.

ಇನ್ನು ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲಿ ಎಂದರೆ ವಯಸ್ಸು 6–12ರ ಮಟ್ಟದಲ್ಲಿ ಮಕ್ಕಳು ಓದುಬರಹ ಕಲಿಯುವರು. ಸರಳವಾದ ಸಮಾಜ ಪರಿಚಯ, ವಿಜ್ಞಾನದ ವಿಷಯಗಳು, ಸರಳ ಲೆಕ್ಕಾಚಾರಗಳು–ಇವನ್ನು ಅಭ್ಯಾಸ ಮಾಡುವರು. ಇವು ತರಗತಿಯಲ್ಲಿ ಏರ್ಪಡಿಸಲಾಗುವ ಕಾರ್ಯಕ್ರಮಗಳು. ಅವಕಾಶ ದೊರೆತ ಸಂದರ್ಭಗಳಲ್ಲಿ ಮಕ್ಕಳ ಪೂರ್ಣ ವ್ಯಕ್ತಿತ್ವದ ವಿಕಾಸಕ್ಕೆ ನೀತಿಯುತವಾದ ನಿಯಮ ನಡೆವಳಿಕೆಗಳಿಗೆ ಗಮನ ಕೊಡಲಾಗುತ್ತದೆ. ಸಮಾಜ ಪರಿಚಯ ಪಾಠದಲ್ಲಿ ಉದಾತ್ತ ವ್ಯಕ್ತಿಗಳ, ಮಹಾಪುರುಷರ ಜೀವನಕ್ಕೆ ಸಂಬಂಧಪಟ್ಟ ಕಥೆಗಳನ್ನು, ಅದರಲ್ಲಿಯೂ ಅವರು ಬಾಲಕರಾಗಿದ್ದಾಗಿನ ಕಥೆಗಳನ್ನು ಸೇರಿಸಲಾಗಿದೆ. ವಿಜ್ಞಾನಪಾಠದಲ್ಲಿ ಪ್ರಸಿದ್ಧ ವಿಜ್ಞಾನಿಗಳ ಕತೆ, ಅವರ ಸಾಹಸ, ಅವರು ಪಟ್ಟ ಶ್ರಮ, ಅದರಿಂದ ಮಾನವ ಸಮಾಜಕ್ಕಾದ ಲಾಭ ಮುಂತಾದ ವಿಷಯಗಳು ಮಕ್ಕಳಿಗೆ ಸ್ಫೂರ್ತಿದಾಯಕವೆನಿಸುವುವು. ಓದುಬರೆಹದ ಪಾಠದಲ್ಲಿಯೂ ಇಂಥ ಸ್ಫೂರ್ತಿದಾಯಕ ಪಠ್ಯ ವಸ್ತುಗಳೂ ಸೇರಿರುತ್ತವೆ. ಇದರಿಂದ ಮಕ್ಕಳಿಗೆ ಆದರ್ಶಗುಣಗಳ ಮೂರ್ತ ಸ್ವರೂಪದ ಪರಿಚಯವಾದಂತಾಗಿ ಅವುಗಳಿಂದ ಪ್ರೇರಿತರಾಗಿ ಮಹಾಪುರಷರ ಸುಗುಣಗಳನ್ನು ತಾವೂ ದೈನಂದಿನ ನಡೆವಳಿಗಳಲ್ಲಿ ಅನುಕರಿಸುವರು. ಈ ವಯೋಮಟ್ಟದಲ್ಲಿ ಮಕ್ಕಳು ನಾಯಕಪೂಜೆಯ ಮನೋಭಾವವನ್ನು ಪಡೆದಿರುವರು. ಈ ಕಾರಣದಿಂದ ಉದಾತ್ತ ಪುರಷರ ಸ್ಫೂರ್ತಿದಾಯಕ ಪರಿಚಯ ಅವರ ವ್ಯಕ್ತಿತ್ವದಲ್ಲಿ ಸೌಶೀಲ್ಯಾದಿ ಸದ್ಗುಣಗಳನ್ನು ವಿಕಾಸಗೊಳಿಸುವುದು.

ಶಿಕ್ಷಣದ ಮೂರನೆಯ ಹಂತದಲ್ಲಿ, ಎಂದರೆ ಪ್ರೌಢಶಾಲಾ ಮಟ್ಟದಲ್ಲಿ, ವಿದ್ಯಾರ್ಥಿಗಳು ತಾವು ಹಿಂದಿನ ವರ್ಷಗಳಲ್ಲಿ ಪಡೆದ ಭಾವಾನುರಾಗಪ್ರೇರಿತ ಜ್ಞಾನ ಕೌಶಲ್ಯಗಳನ್ನು ಬುದ್ಧಿಪೂರ್ವಕವಾಗಿ, ನಿಷ್ಪಕ್ಷವಾಗಿ, ನಿಖರವಾಗಿ, ಹೆಚ್ಚು ವೈಶಾಲ್ಯದಿಂದ ಒಂದು ಸ್ಪಷ್ಟ ಚೌಕಟ್ಟಿನಲ್ಲಿ ಕಲಿಯುವರು. ಇದರಿಂದ ಅವರ ಜ್ಞಾನಕೌಶಲಗಳಿಗೆ ಒಂದು ನಿರ್ದಿಷ್ಟ ಗುರಿ ಮತ್ತು ಅರ್ಥ ಆವಶ್ಯಕತೆಗಳನ್ನು ಅವರು ಮನಗಾಣುವರು. ಅವರು ಸ್ವಾಭಾವಿಕವಾಗಿ ಅಭ್ಯಾಸ ಮಾಡಿದ ಗುಣಶೀಲಗಳಿಗೆ ಒಂದು ಅರ್ಥ ಹೊಳೆದು, ಅವುಗಳಿಂದ ತನಗೂ ತನ್ನ ಸುತ್ತುಮುತ್ತಲಿನವರಿಗೂ ಹಿತವಾಗುವುದೆಂಬುದು ಮನವರಿಕೆಯಾಗುವುದು. ಆದ್ದರಿಂದ ಅವರು ಕಲಿಯುವ ಪಾಠಗಳ ನೀತಿಬೋಧೆಯನ್ನು ಅಮೂರ್ತವಾಗಿ ಪ್ರಸ್ತಾಪಿಸಿ ಅವುಗಳ ಕಡೆಗೆ ವಿದ್ಯಾರ್ಥಿಗಳ ಗಮನವನ್ನು ಸೆಳೆಯುವ ಪ್ರಯತ್ನ ಮಾಡಲಾಗುವುದು. ಇದರಿಂದ ಅವರು ಸದ್ಗುಣಗಳನ್ನು ಮನಃಪೂರ್ವಕವಾಗಿಯೇ ಮುಂದುವರಿಸಿಕೊಂಡು ಸತ್ತ್ವಪೂರ್ಣವಾಗಿ ಬೆಳೆಸಿಕೊಂಡು ಬರಲು ಪ್ರೇರಣೆ ದೊರೆಯುವುದು. ಈ ಹಂತದಲ್ಲಿ ವ್ಯಕ್ತಿ ತನ್ನ ನೆರೆಹೊರೆ, ಊರುಕೇರಿಗಳ ವಿಷಯವನ್ನಷ್ಟೇ ಅಲ್ಲದೆ ತನ್ನ ದೇಶ, ನೆರೆಹೊರೆ ದೇಶಗಳ ಅರಿವನ್ನೂ ಪಡೆಯುತ್ತಾನೆ.

ಶಿಕ್ಷಣದ ನಾಲ್ಕನೆಯ ಹಂತದಲ್ಲಿ, ಎಂದರೆ ಉನ್ನತ ಶಿಕ್ಷಣದ ಹಂತದಲ್ಲಿ, ಜ್ಞಾನ ಕೌಶಲಗಳು ತಾತ್ತ್ವಿಕ ಮತ್ತು ತಾರ್ಕಿಕ ರೂಪವನ್ನು ತಾಳುವುವು. ಈಗ ವಿದ್ಯಾರ್ಥಿಯ ಅರಿವು ವಿಶಾಲವ್ಯಾಪ್ತಿಯನ್ನು ಪಡೆಯುವುದು. ತಾನು ಪಡೆದ ಜ್ಞಾನಕೌಶಲಾದಿ ಗುಣಶೀಲಗಳು ಸಂಕುಚಿತವಾದುವಲ್ಲ, ಮಾನವಕುಲಕ್ಕೇ ಸಾಮಾನ್ಯವಾದ ವಿಷಯಗಳು ಎಂಬುದು ಅರಿವಾಗುವುದು, ಅಲ್ಲದೆ ಈ ಭೂಮಿಯು ಮಾತ್ರವೇ ಮಾನವನ ಕಾರ್ಯಕ್ಷೇತ್ರವಲ್ಲ, ಈ ಭೂಮಿಯನ್ನು ಮೀರಿ ಅನಂತ ಆಕಾಶದಲ್ಲಿ ಸಂಚರಿಸುತ್ತಿರುವ ಗ್ರಹ ತಾರಾ ಜ್ಯೋತಿಪುಂಜಗಳೂ ತನ್ನ ಜ್ಞಾನಸಾಧನೆ ಸಿದ್ಧಿಗಳ ಗುರಿಯಾಗಬೇಕು ಎಂಬುವ ಅರಿವಾಗುವುದು. ಪಂಚೇಂದ್ರಿಯಗಳಿಗೂ ಮೀರಿದ, ಮನಸ್ಸು ನೇರವಾಗಿ ಅರಿತು ಅನುಭವಿಸಬಹುದಾದ ಅನುಭವಗಳು, ಎಂದರೆ ಅಧ್ಯಾತ್ಮದ ಜ್ಞಾನಸಾಧನೆಗಳೂ ತನ್ನ ಪೂರ್ಣ ಜೀವನದ ಅಂಶಗಳೆಂಬುದು ವಿದ್ಯಾರ್ಥಿಯ ಮನೋದಿಗಂತದಲ್ಲಿ ಹೊಳೆಯುವುದು. ಈ ಚಿಂತನೆ, ಭಾವನೆ, ಪ್ರೇರಣೆಗಳಿಂದ ಅವನ ವ್ಯಕ್ತಿತ್ವ ಪೂರ್ಣ ವಿಕಾಸಗೊಳ್ಳುತ್ತ ಬರುವುದು. ಸೌಶೀಲ್ಯ, ಸಚ್ಚಾರಿತ್ರ್ಯಗಳು ಅವನ ವ್ಯಕ್ತಿತ್ವದ ಅವಿಭಾಜ್ಯ ಮೂಲಭೂತ ಅಂಶಗಳಾಗುವುವು. ಉನ್ನತಶಿಕ್ಷಣ ವಿದ್ಯಾರ್ಥಿಗಳಲ್ಲಿ ಈ ಮನೋದೃಷ್ಟಿಯನ್ನು ರೂಪಿಸಲು ಪ್ರಯತ್ನಿಸಬೇಕು.

ಚಾರಿತ್ರ್ಯ ಶಿಕ್ಷಣ ಶಿಕ್ಷಣಪದ್ಧತಿಯಲ್ಲಿ ಹಾಸುಹೊಕ್ಕಾಗಿ ನಡೆಯಬೇಕು. ಇದರಲ್ಲಿ ಶಿಕ್ಷಕರ ಪಾತ್ರ ಹಿರಿದಾದುದೆಂದು ಬೇರೆ ಹೇಳಬೇಕಾಗಿಲ್ಲ. ಗುಣಶೀಲಗಳನ್ನು ವಿದ್ಯಾರ್ಥಿಗಳು ಪಠ್ಯವಸ್ತು ಮತ್ತು ಶಾಲಾ ಕಾರ್ಯಕ್ರಮಗಳಿಂದ ಗ್ರಹಿಸಿ ಕಲಿಯುವುದಕ್ಕಿಂತ ಹೆಚ್ಚಾಗಿ ಆ ಪಠ್ಯವಸ್ತುಗಳನ್ನು ಬೋಧಿಸುವ ಶಿಕ್ಷಕರ ವ್ಯಕ್ತಿತ್ವ ವರ್ಚಸ್ಸುಗಳ ಆದರ್ಶದಿಂದ ಕಲಿಯುವರು. ಆದ್ದರಿಂದ ಚಾರಿತ್ರ್ಯಶಿಕ್ಷಣದಲ್ಲಿ ಗುರುವಿನ ಪಾತ್ರ ಅತಿಮುಖ್ಯವಾದುದು. ಗುರುವಿನಂತೆ ಶಿಷ್ಯ. ಅಷ್ಟೇ ಅಲ್ಲ. ಸುತ್ತಣ ಸಮಾಜ ಮತ್ತು ಸ್ವಂತ ಮನೆಯ ವಾತಾವರಣಗಳು, ದೇಶದ ರಾಜಕೀಯ ಮುಖಂಡರ ಧೋರಣೆಗಳು–ಇವೂ ಮಕ್ಕಳ ಮನಸ್ಸಿನ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತವಾಗಿ, ಒಟ್ಟು ಪರಿಸರ ನಿರ್ಮಲವಾಗಿ, ಆದರ್ಶರೂಪದ್ದಾಗಿ ಇರಬೇಕಾಗುತ್ತದೆ. ಲೋಕವೆಲ್ಲ ಕೆಟ್ಟಿರುವಾಗ ತರುಣ ಜನಾಂಗ ಶೀಲವಂತರಾಗಿರಲು ಸಾಧ್ಯವಾಗದು. ಮಕ್ಕಳ ಆದರ್ಶ ಇಡೀ ಸಮಾಜದಲ್ಲಿ ಕಾಣುವಂತಿರಬೇಕಾದದ್ದು ತೀರ ಅಗತ್ಯ. (ಎಂ.ಆರ್.ಆರ್.ಎ.)

**ಚಾರುಹಾಸನ್ :** ತಮಿಳಿನ ಹೆಸರಾಂತ ನಟ. ಕನ್ನಡಕ್ಕೆ ರಾಷ್ಟ್ರಮಟ್ಟದಲ್ಲಿ ಎರಡನೆಯ ಅತ್ಯುತ್ತಮ ನಟ ಪ್ರಶಸ್ತಿ ತಂದುಕೊಟ್ಟ ಕೀರ್ತಿಗೆ ಪಾತ್ರರಾಗಿದ್ದರು. ಚಾರುಹಾಸನ್ ಹುಟ್ಟು ಕಲಾವಿದರು. ಇವರ ಇಡೀ ಕುಟುಂಬವೇ ಕಲಾಸೇವೆಯಲ್ಲಿ ತೊಡಗಿಕೊಂಡಿದೆ. ಕಿರಿಯ ಸಹೋದರ ಕಮಲಹಾಸನ್ ಭಾರತೀಯ ಚಿತ್ರರಂಗದ ಮೇರುನಟ. ಪುತ್ರಿ ಸುಹಾಸಿನಿ ಹೆಸರಾಂತ ಕಲಾವಿದೆ. ಅಳಿಯ ಮಣಿರತ್ನಂ ಭಾರತೀಯ ಚಿತ್ರರಂಗಕ್ಕೆ ಹೊಸ ತಿರುವು ತಂದುಕೊಟ್ಟ ನಿರ್ದೇಶಕ. ತಮಿಳು ಮಾತೃಭಾಷೆಯಾದರೂ ಕನ್ನಡ, ತೆಲುಗು, ಮಲೆಯಾಳಂ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅಭಿನಯಿಸಿದ್ದಾರೆ. ತಮಿಳಿನ 'ಉದರಿ ಪೂಕ್ಕಳ್' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಚಾರುಹಾಸನ್ ಸಹಜಾಭಿನಯದಿಂದ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. 1986ರಲ್ಲಿ ಕನ್ನಡಕ್ಕೆ 'ಸ್ವರ್ಣಕಮಲ' ಪ್ರಶಸ್ತಿ ತಂದುಕೊಟ್ಟ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ತಬರನ ಕಥೆ' (ಪೂರ್ಣಚಂದ್ರ ತೇಜಸ್ವಿ) ಚಿತ್ರದಲ್ಲಿ ತಬರನ ಪಾತ್ರ ಮಾಡಿದ ಚಾರುಹಾಸನ್ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಗಳಿಸುವ ಮೂಲಕ ಸ್ವರ್ಣಕಮಲ ಪಡೆದುಕೊಂಡರು. ಕರ್ನಾಟಕ ಸರ್ಕಾರ ಅವರಿಗೆ 1986–87ನೆಯ ಸಾಲಿನಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ನೀಡಿ ಗೌರವಿಸಿದೆ. ಇಂಗ್ಲೆಂಡ್, ರಷ್ಯ ಮುಂತಾದ ರಾಷ್ಟ್ರಗಳಲ್ಲಿ ನಡೆದ ಚಿತ್ರೋತ್ಸವಗಳಲ್ಲಿ ಇವರು ಪಾಲ್ಗೊಂಡಿದ್ದಾರೆ. (ಎ.ಎನ್.ಪಿ.)

**ಚಾರ್ಟೆರಿಸ್, ಲೆಸ್ಲೀ:** 1907–1993. ಅಮೆರಿಕದ ಹೆಸರಾಂತ ಪತ್ತೇದಾರಿ ಕಾದಂಬರಿಕಾರ. ಜನಪ್ರಿಯ ಕೌತುಕ ಅದ್ಭುತರಮ್ಯ ಪತ್ತೇದಾರಿ ಕಾದಂಬರಿಗಳನ್ನು ರಚಿಸುವುದರಲ್ಲಿ ಎತ್ತಿದ ಕೈ ಎಂದು ಪ್ರಸಿದ್ಧಿ ಪಡೆದವ. ಈತನ ಕತೆಗಳು ತಮ್ಮ ಜಾಣ್ಮೆಯ ಕಥಾನಕಕ್ಕೂ ನಾಯಕನ ಆಕರ್ಷಕ ವ್ಯಕ್ತಿತ್ವಕ್ಕೂ ಹೆಸರಾಗಿವೆ. ಈತ ಹುಟ್ಟಿದ್ದು ಸಿಂಗಪುರದಲ್ಲಿ, ತಾಯಿ ಒಬ್ಬ ಆಂಗ್ಲ ಮಹಿಳೆ–ಬೋಯರ್ ಮನೆತನದವಳು. ತಂದೆ ಚೀನೀ ರಾಜವಂಶಕ್ಕೆ ಸೇರಿದ ಒಬ್ಬ ವೈದ್ಯ, ಶಸ್ತ್ರವೈದ್ಯ. ಈತನ ಹುಟ್ಟು ಹೆಸರು ಲೆಸ್ಲೀ ಚಾರ್ಲ್ಸ್ ಬೋಯರ್ ಯಿನ್. 10 ವರ್ಷದವನಿದ್ದಾಗಲೇ ಬರೆವಣಿಗೆಯನ್ನು ರೂಢಿಸಿಕೊಂಡು ತನ್ನದೇ ಪತ್ರಿಕೆಯನ್ನು ನಡೆಸುತ್ತಿದ್ದ. 12ನೆಯ ವಯಸ್ಸಿನಲ್ಲಿಯೇ ತಂದೆತಾಯಿಯರೊಂದಿಗೆ ಮೂರು ಬಾರಿ ಪ್ರಪಂಚವನ್ನೆಲ್ಲ ಸುತ್ತಿ ಬಂದ. 17ನೆಯ ವಯಸ್ಸಿನಲ್ಲೇ ಕತೆ ಬರೆದು ಹಣ ಗಳಿಸಲು ಪ್ರಾರಂಭಿಸಿದ. 1925ರಲ್ಲಿ ಇಂಗ್ಲೆಂಡಿಗೆ ಬಂದು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾದ. 1928ರಲ್ಲಿ ತನ್ನ ಹೆಸರನ್ನು ಲೆಸ್ಲೀ ಚಾರ್ಟೆರಿಸ್ ಎಂದು ಬದಲಾಯಿಸಿಕೊಂಡ. ಹಲವು ಕಾಲ ಮಲಯ ಹಾಗೂ ಸಿಂಗಪುರ ಪ್ರದೇಶಗಳಲ್ಲಿ ರಬ್ಬರ್ ತೋಟಗಾರ, ತವರದ ಗಣಿ ಕೆಲಸಗಾರ ಮತ್ತು ಚಿಪ್ಪುಗಳನ್ನು ಆಯುವ ಮುಳುಗುಕೆಲಸಗಾರ, ಚಿನ್ನದ ಅನ್ವೇಷಕ, ನಾವಿಕ, ಹೋಟೆಲ್ ಕಾರ್ಮಿಕ ಮತ್ತು ಪ್ರದರ್ಶನ ನಿರ್ವಾಹಕ ಮುಂತಾದ ಹಲವಾರು ಕಾರ್ಯಗಳಲ್ಲಿ ನಿರತನಾಗಿದ್ದು ಜೀವನ ನಿರ್ವಹಣೆ ಮಾಡಿದ. 1930ರಲ್ಲಿ ಈತನ ಅದೃಷ್ಟದ ಬಾಗಿಲು ತೆರೆಯಿತು; ಅದ್ಭುತ ಕೌತುಕ ಪತ್ತೇದಾರಿ ನಾಯಕನಾದ ಸೇಂಟ್ ಎಂಬ ಅಡ್ಡ ಹೆಸರನ್ನುಳ್ಳ ಸೈಮನ್ ಟೆಂಪ್ಲರ್ ಎಂಬ ಪಾತ್ರವನ್ನು ಸೃಷ್ಟಿಸಿದ. ಸೇಂಟ್ ಪಾತ್ರ ಕಾಣಿಸಿಕೊಂಡ ಮೊದಲ ಕಾದಂಬರಿ–ಎಂಟರ್ ದಿ ಸೇಂಟ್ (1930). ಇದು ಲೆಸ್ಲಿಗೆ ಹೆಸರು ಮತ್ತು ಹಣವನ್ನು ಹೇರಳವಾಗಿ ತಂದಿತು. ಸೈಮನ್ ಟೆಂಪ್ಲರ್ ಸಭ್ಯಗೃಹಸ್ಥನಾದರೂ ಸಮಾಜಘಾತುಕರನ್ನು ಸದೆಬಡಿಯಲು ತನ್ನದೇ ಆದ ದರೋಡೆಗಳನ್ನು, ಕೊಲೆಗಳನ್ನು ನಡೆಸಿದ ಬಹು ಜನಪ್ರಿಯ ವ್ಯಕ್ತಿ. ಈ ಸಭ್ಯ–ಕಳ್ಳ ಅಮೆರಿಕದಲ್ಲಿ ಪೆರಿ ಮೇಸನನ ಅನಂತರ ಅತ್ಯಂತ ಜನಪ್ರಿಯ ಪತ್ತೇದಾರನಾಗಿದ್ದಾನೆ. ಆತ ಸಿನಿಮಾ ನಟಿ ಆಡ್ರಿ ಲಾಂಗ್‌ಳೂ ಸೇರಿದಂತೆ ನಾಲ್ವರನ್ನು ವಿವಾಹವಾದ.

1932ರಲ್ಲಿ ಲೆಸ್ಲೀ ಚಾರ್ಟೆರಿಸ್ ಅಮೆರಿಕಕ್ಕೆ ಹೋಗಿ ಅಲ್ಲಿಯೇ ನೆಲಸಿ 1941ರಲ್ಲಿ ಅಮೆರಿಕನ್ ಪೌರತ್ವ ಪಡೆದ. ಈತನ ಮುಖ್ಯ ಕೃತಿಗಳು ಅಲಿಯಾಸ್ ದಿ ಸೇಂಟ್ (1931), ದಿ ಸೇಂಟ್ ಇನ್ ಮಿಯಾಮಿ (1941), ದಿ ಸೇಂಟ್ ಅರೌಂಡ್ ದಿ ವರ್ಲ್ಡ್.

ಸು. 40 ಇಂಥ ಕಾದಂಬರಿಗಳನ್ನು ಈತ ರಚಿಸಿದ. ಈತನ ಸೇಂಟ್ ಪಾತ್ರ ಪ್ರಪಂಚದ 20 ಭಾಷೆಗಳ ಜನರಿಗೆ ಪರಿಚಿತವಾಗಿದೆ. ಇವನ ಅನೇಕ ಕಾದಂಬರಿಗಳನ್ನು ಆಧರಿಸಿ ಒಳ್ಳೆಯ ಚಲನಚಿತ್ರಗಳನ್ನು ತಯಾರಿಸಲಾಗಿದೆ. ಆತ ಪೆಲೋನಿಯೊ ಎಂಬ ಚಿತ್ರದ ಸಂಕೇತ ಭಾಷೆಯನ್ನು ರೂಪಿಸಿದ. ಈತ ಬರ್ಕ್‌ಷೈರ್‌ನಲ್ಲಿ 15 ಏಪ್ರಿಲ್ 1993 ರಂದು ನಿಧನನಾದ. (ಎಸ್.ಎ.ಎನ್.)

**ಚಾರ್ನಕೈಟ್ :** ಹೈಪರ್‌ಸ್ತೀನ್ ಎಂಬ ಖನಿಜದಿಂದ ಕೂಡಿರುವ ಶಿಲೆ. ಭಾರತ ಭೂವಿಜ್ಞಾನ ಶಾಖೆಯ ಅಧಿಕಾರಿಯಾಗಿದ್ದ ಥಾಮಸ್ ಹಾಲೆಂಡ್ ಮದರಾಸಿನ ಪಲ್ಲವರಮ್ ಸಮೀಪದ ಈ ಶಿಲೆಯನ್ನು ವಿವರಿಸಿದ; ಕಲ್ಕತ್ತ ನಗರದ ಸ್ಥಾಪಕ ಜಾಬ್ ಚಾರ್ನಾಕನ ಸಮಾಧಿಗೆ ಇದೇ ಶಿಲೆಯನ್ನು ಉಪಯೋಗಿಸಿದ್ದ ಕಾರಣ ಆತನ ನೆನಪಿಗಾಗಿ ಈ ಶಿಲೆಯನ್ನು ಚಾರ್ನಕೈಟ್ ಎಂದು ಹೆಸರಿಸಿದ (1893). ಇದಕ್ಕೂ ಮುನ್ನ, ಭಾರತ ಭೂವಿಜ್ಞಾನ ಶಾಖೆಯ ಅಧಿಕಾರಿಗಳಾದ ಔಕ್‌ಟರ್ಲೋನಿ (1849), ಎಚ್. ಎಫ್. ಬ್ಲಾನ್‌ಫರ್ಡ್ (1858), ಸಿ.ಎ. ಓಲ್ಡ್ ಹ್ಯಾಮ್ (1864), ಕಿಂಗ್ (1875) ಮತ್ತು ರಾಬರ್ಟ್ ಬ್ರೂಸ್‌ಫುಟ್ (1873) ಮೊದಲಾದವರು ಈ ಶಿಲೆಯನ್ನು ಕುರಿತ ವಿವರಗಳನ್ನು ಹಲವಾರು ಪ್ರದೇಶಗಳಲ್ಲಿ ಸಂಗ್ರಹಿಸಿ ವಿವರಿಸಿದ್ದರು. ಆದರೆ ಈ ಶಿಲೆಗೆ ಚಾರ್ನಕೈಟ್ ಎಂಬ ಅಧಿಕೃತ ನಾಮಕರಣವಾದದ್ದು ಹಾಲೆಂಡ್‌ನಿಂದಲೇ. ಅಲ್ಲದೆ ಈ ವಿಶೇಷ ಶಿಲೆಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಚಾರ್ನಕೈಟ್ ಶ್ರೇಣಿ ಎಂಬ ಪ್ರತ್ಯೇಕ ಶಿಲಾಶ್ರೇಣಿಯನ್ನೇ ಈತ ಶಿಲಾವಿಜ್ಞಾನಕ್ಕೆ ಕೊಡುಗೆ ನೀಡಿದ್ದಾನೆ. ಇದನ್ನು ಕುರಿತ ವಿಶೇಷ ವರದಿಯೊಂದು 1900ರಲ್ಲಿ ಪ್ರಕಟವೂ ಆಯಿತು. ಅಲ್ಲಿನ ವಿವರಣೆಯ ಪ್ರಕಾರ ಈ ಶ್ರೇಣಿಯಲ್ಲಿ ಹೈಪರ್‌ಸ್ತೀನಿನಿಂದ ಕೂಡಿದ ಅಧಿಕ ಸಿಲಿಕಾಂಶ (ಆ್ಯಸಿಡ್), ಮಧ್ಯವರ್ತಿ (ಇಂಟರ್‌ಮೀಡಿಯೆಟ್) ಮತ್ತು ಅಲ್ಪಸಿಲಿಕಾಂಶ (ಬೇಸಿಕ್) ಎಂಬ ಮೂರು ವಿಧದ ಶಿಲೆಗಳನ್ನು ಗುರುತಿಸಲಾಗಿದೆ. ಆದರೆ ಇವೆಲ್ಲವುಗಳಲ್ಲೂ ಪರಸ್ಪರ ಜನ್ಯಸಂಬಂಧ ಉಂಟು. ಇದಕ್ಕೆ ಸಾಕ್ಷೀಭೂತವಾದುದೇ ಹೈಪರ್‌ಸ್ತೀನ್. ಅಂದರೆ ಇವೆಲ್ಲವೂ ಒಂದೇ ಮೂಲದಿಂದ ಜನಿಸಿದವೆಂದು ತಿಳಿಯಬೇಕು. ಮಾತೃಶಿಲಾದ್ರವವೊಂದರ ಆರುವಿಕೆಯ ವಿವಿಧ ಹಂತಗಳಲ್ಲಿ ವ್ಯತ್ಯಾಸಾತ್ಮಕ ಕ್ರಿಯೆಯ ಕಾರಣ ಇವು ಉಂಟಾದುವೆಂದು ವಿವರಿಸಲಾಯಿತು. ಈ ಶಿಲಾಬುಡಕಟ್ಟಿನ ಅಧಿಕಸಿಲಿಕಾಂಶ ಶಿಲೆಯನ್ನು ಮಾತ್ರ ಚಾರ್ನಕೈಟ್ ಎಂದು ಕರೆಯಬೇಕೆಂದೂ ಹಾಲೆಂಡ್ ಸ್ಪಷ್ಟಪಡಿಸಿದ. ಆತನೇ ವಿವರಿಸಿರುವಂತೆ ಕ್ವಾರ್ಟ್ಸ್, ಮೈಕ್ರೋಕ್ಲೀನ್ ಫೆಲ್ಡ್‌ಸ್ಪಾರ್, ಹೈಪರ್‌ಸ್ತೀನ್ ಮತ್ತು ಕಬ್ಬಿಣದ ಅದಿರು–ಈ ಖನಿಜಗಳಿಂದಾದ ಶಿಲೆಯೇ ಚಾರ್ನಕೈಟ್, ಅಲ್ಲದೆ ಸಾಧ್ಯವಾದಮಟ್ಟಿಗೆ ಚಾರ್ನಕೈಟ್ ಶ್ರೇಣಿಯ ಹೆಸರನ್ನು ದಕ್ಷಿಣಭಾರತಕ್ಕೆ ಮಾತ್ರ ಸೀಮಿತಗೊಳಿಸಬೇಕೆಂಬ ಆಶಯವನ್ನೂ ವ್ಯಕ್ತಪಡಿಸಿದ್ದಾನೆ. ಆದರೆ ಈ ಆಶಯವನ್ನು ಪ್ರಪಂಚದ ಇತರ ಭೂವಿಜ್ಞಾನಿಗಳು ಪಾಲಿಸಲಿಲ್ಲ. ಹೀಗಾಗಿ ಹೈಪರ್‌ಸ್ತೀನಿನಿಂದ ಕೂಡಿದ ಈ ಶಿಲೆಯನ್ನು ಪ್ರಪಂಚದ ಹಲವಾರು ಕಡೆ ಬೇರೆ ಬೇರೆ ಭೂವಿಜ್ಞಾನಿಗಳು ಗುರುತಿಸಿ ಚಾರ್ನಕೈಟ್ ಎಂಬ ಹೆಸರಿನಿಂದಲೇ ವಿವರಿಸಿದ್ದಾರೆ. ಆದ್ದರಿಂದ ಈ ಶಿಲೆಯ ಹೆಸರು ಕೇವಲ ದಕ್ಷಿಣ ಭಾರತಕ್ಕೆ ಸೀಮಿತವಾಗಿರದೆ ಪ್ರಪಂಚವ್ಯಾಪ್ತಿಯಾಗಿದೆ. ಕೊಂಚಮಟ್ಟಿಗೆ ಭೂವಿಜ್ಞಾನ ಸಾಹಿತ್ಯದಲ್ಲಿ ಇದು ಗೊಂದಲಕ್ಕೆ ಕಾರಣವಾಯಿತೆನ್ನಬಹುದು. ಅಲ್ಲದೆ ಕ್ರಮೇಣ ಅಧಿಕಸಿಲಿಕಾಂಶ ಚಾರ್ನಕೈಟ್, ಮಧ್ಯವರ್ತಿ ಚಾರ್ನಕೈಟ್ ಮತ್ತು ಅಲ್ಪಸಿಲಿಕಾಂಶ ಚಾರ್ನಕೈಟ್ ಎಂಬ ಶಿಲಾ ಹೆಸರುಗಳೂ ಬಳಕೆಗೆ ಬಂದು ಅವುಗಳ ಜನಕ ಹಾಲೆಂಡನ ಆಶಯ ಅಷ್ಟಾಗಿ ಉಳಿಯಲಿಲ್ಲ.

ಈ ಶ್ರೇಣಿಯ ಶಿಲೆಗಳಿಗೆ ಕೆಲವು ವಿಶಿಷ್ಟ ಲಕ್ಷಣಗಳಿವೆ. ಹೀಗಾಗಿ ಇವುಗಳಿಂದಾದ ಬಂಡೆಗಳನ್ನೂ ಗುಡ್ಡಬೆಟ್ಟಗಳನ್ನೂ ಇತರ ಶಿಲಾಮಾರ್ಗಗಳಿಂದ ಬೇರಾಗಿಸಿ ಗುರುತಿಸಬಹುದು. ಶಿಲೆ ಕಣರಚನೆಯಿಂದ ಕೂಡಿದ್ದು ನೀಲಿಮಿಶ್ರಿತ ಬೂದು ಅಥವಾ ಹಸಿರುಛಾಯೆಯನ್ನು ತಳೆದು ನೋಡಲು ಹೊಚ್ಚ ಹೊಸದಾಗಿರುತ್ತದೆ. ಸಾಮಾನ್ಯವಾಗಿ ಇತರ ಶಿಲೆಗಳನ್ನು ವಾಯುವಿಗೆ ಒಡ್ಡಿದಾಗ ಅವು ತಮ್ಮ ಹೊಳಪನ್ನು ಕಳೆದುಕೊಂಡು ಮಂಕಾಗುವುದುಂಟು. ಆದರೆ ಚಾರ್ನಕೈಟ್ ಹಾಗಲ್ಲ. ಈ ಶಿಲೆಯಲ್ಲಿರುವ ಕ್ವಾರ್ಟ್ಸ್ (ಬೆಣಚು) ಸಾಮಾನ್ಯವಾಗಿ ಬಿಳುಪಾಗಿರುವ ಬದಲು ಒಂದು ಬಗೆಯ ನೀಲಿಬಣ್ಣದ್ದಾಗಿರುತ್ತದೆ. ಫೆಲ್ಡ್‌ಸ್ಪಾರುಗಳೂ ಇದೇ ತೆರನಾದ ನೀಲಿ ಅಥವಾ ನೀಲಿಮಿಶ್ರಿತ ಬೂದು ಬಣ್ಣದಿಂದ ಕೂಡಿರುತ್ತವೆ. ಒಮ್ಮೊಮ್ಮೆ ಇವು ಕಂದುಛಾಯೆಯನ್ನು ತಳೆದಿರುವುದೂ ಉಂಟು. ಹೀಗಾಗಿ ತಿಳಿಯಾದ ಬಣ್ಣದಿಂದಿರ ಬೇಕಾದ ಚಾರ್ನಕೈಟ್ ನೀಲಿಮಿಶ್ರಿತ ಬೂದು ಬಣ್ಣದಿಂದ ಕೂಡಿರುತ್ತದೆ. ಬಣ್ಣದಲ್ಲಿ ನಿರ್ವರ್ಣ ಖನಿಜಗಳು ಸಹ ವರ್ಣಖನಿಜಗಳನ್ನೇ ಹೋಲುವುದು ಈ ಶಿಲೆಯ ವಿಶಿಷ್ಟಗುಣ. ಹೀಗೆಯೇ ಶಿಲೆಯ ವಿನ್ಯಾಸದಲ್ಲೂ ಒಂದು ಬಗೆಯ ವೈಶಿಷ್ಟ್ಯ ಉಂಟು. ಸಮಕಣರಚನೆಯೇ ಈ ಶಿಲೆಗಳ ಹೆಚ್ಚಳ. ಒಮ್ಮೊಮ್ಮೆ ಗೀರುರಚನೆಯನ್ನು ಕಾಣಬಹುದು. ಅದರಲ್ಲೂ ರೂಪಾಂತರ ಕ್ರಿಯೆಗೊಳಗಾದ ಶಿಲೆಗಳಲ್ಲಿ ಈ ವಿನ್ಯಾಸವನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯ.

ಶಿಲಾಶ್ರೇಣಿಯ ಮುಖ್ಯ ವರ್ಗಗಳು ಹೀಗಿವೆ :

ಅಧಿಕ ಸಿಲಿಕಾಂಶ ಚಾರ್ನಕೈಟ್ : ಇದನ್ನೇ ಹಾಲೆಂಡ್ ಚಾರ್ನಕೈಟ್ ಎಂದು ಹೆಸರಿಸಿದ್ದು. ಇದೊಂದು ಸಮಕಣ ವಿನ್ಯಾಸವನ್ನು ತಳೆದಿರುವ ಹೈಪರ್‌ಸ್ತೀನ್ ಗ್ರ್ಯಾನೈಟ್. ಶಿಲೆಯ ಸಂಯೋಜನೆಯಲ್ಲಿ ನೀಲಿ ಛಾಯೆಯ ಕ್ವಾರ್ಟ್ಸ್ ಮತ್ತು ಫೆಲ್ಡ್‌ಸ್ಪಾರುಗಳು ಅಧಿಕ ಹಾಗೂ ಪ್ರಮುಖ. ವರ್ಣಖನಿಜಗಳಲ್ಲಿ ಹೈಪರ್‌ಸ್ತೀನ್ ಬಹು ಪ್ರಧಾನವಾದುದು. ಒಮ್ಮೊಮ್ಮೆ ಬಯೊಟೈಟ್, ಹಾರ್ನ್‌ಬ್ಲೆಂಡ್ ಮುಂತಾದವೂ ಇರಬಹುದು. ಗಾರ್ನೆಟ್, ಜಿರ್ಕಾನ್, ಅಪಟೈಟ್, ರೂಟೈಲ್, ಕಬ್ಬಿಣದ ಅದಿರು–ಇವು ಅಲ್ಪ ಪರಿಮಾಣ ಗಳಲ್ಲಿರುವುದುಂಟು. ಇವು ಸಾಮಾನ್ಯವಾಗಿ ಬೃಹದಾಕಾರದ ಬೆಟ್ಟಗಳೋಪಾದಿ ಯಲ್ಲಿರುತ್ತವೆ. ಉದಾಹರಣೆಗೆ ನೀಲಗಿರಿ ಬೆಟ್ಟ,ಬಿಳಿಗಿರಿರಂಗನ ಬೆಟ್ಟ ಇತ್ಯಾದಿ.

ಮಧ್ಯವರ್ತಿ ಚಾರ್ನಕೈಟ್ : ಇವು ಸಹ ಸಮಕಣರಚನೆಯನ್ನು ತಳೆದಿರುತ್ತವೆ. ಇವುಗಳ ಸಂಯೋಜನೆಯಲ್ಲಿ ಬೂದುಬಣ್ಣದ ಕ್ವಾರ್ಟ್ಸ್, ಫೆಲ್ಡ್‌ಸ್ಪಾರುಗಳು, ಅಗೇಟ್, ಹಾರ್ನ್‌ಬ್ಲೆಂಡ್, ಹೈಪರ್‌ಸ್ತೀನ್–ಇವೇ ಪ್ರಮುಖಘಟಕಗಳು. ವರ್ಣ ಹಾಗೂ ನಿರ್ವರ್ಣ ಖನಿಜಗಳು ಸಮಪರಿಮಾಣಗಳಲ್ಲಿವೆ. ಇವು ಸಹ ಸಣ್ಣಪುಟ್ಟ ಗುಡ್ಡಬೆಟ್ಟಗಳು ಹಾಗೂ ಡೈಕುಗಳಂತಿವೆ. ಉದಾ: ಸೇಲಮ್ ಬಳಿಯ ಷೆವರಾಯ್ ಬೆಟ್ಟ.

ಅಲ್ಪ ಸಿಲಿಕಾಂಶ ಚಾರ್ನಕೈಟ್ : ಇವುಗಳಲ್ಲೂ ಕಣವಿನ್ಯಾಸವನ್ನೇ ಕಾಣಬಹುದು. ಸಂಯೋಜನೆಯಲ್ಲಿ ಫೆಲ್ಡ್‌ಸ್ಪಾರ್, ಅಗೇಟ್, ಹಾರ್ನ್‌ಬ್ಲೆಂಡ್ ಮತ್ತು ಹೈಪರ್‌ಸ್ತೀನುಗಳು ಪ್ರಮುಖ ಖನಿಜಗಳಾಗಿದ್ದು ವರ್ಣಖನಿಜಗಳ ಪರಿಮಾಣವೇ ಅಧಿಕ. ಗಾರ್ನೆಟ್ ಸಹ ಕಂಡುಬರುವುದುಂಟು. ಇವು ಸಾಮಾನ್ಯವಾಗಿ ಡೈಕುಗಳಂತಿವೆ. ಮೈಸೂರಿನ ಬಳಿಯ ಕಡಕೊಳ ಮತ್ತು ಕುಶಾಲನಗರದ ಸುತ್ತಮುತ್ತ ಇವನ್ನು ಕಾಣಬಹುದು.

ಅತ್ಯಲ್ಪ ಸಿಲಿಕಾಂಶ ಚಾರ್ನಕೈಟ್ : ಇಲ್ಲೂ ಕಣವಿನ್ಯಾಸವೇ ಪ್ರಧಾನ. ಶಿಲೆ ಬಹುಮಟ್ಟಿಗೆ ಹೈಪರ್‌ಸ್ತೀನಿನಿಂದ ಕೂಡಿದ್ದು ಅದರೊಟ್ಟಿಗೆ ಹಾರ್ನ್‌ಬ್ಲೆಂಡ್ ಮತ್ತು ಅಗೇಟ್ ಇರುವುದುಂಟು. ಆಲಿವೀನ್, ಸ್ಪಿನೆಲ್ ಅಪಟೈಟ್ ಮುಂತಾದ ಖನಿಜಗಳು ಇದ್ದರೂ ಗೌಣ. ಇವು ಸಹ ಸಣ್ಣಪುಟ್ಟ ಡೈಕುಗಳೋಪಾದಿಯಲ್ಲಿ ಹಲವಾರು ಕಡೆ ಕಂಡುಬಂದಿವೆ.

ಚಾರ್ನಕೈಟ್ ಶಿಲೆಯ ತೆಳುಪದರುಗಳನ್ನು ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಿದಾಗ ಶಿಲೆಯ ವಿನ್ಯಾಸ ಹಾಗೂ ಖನಿಜಗಳ ಲಕ್ಷಣಗಳು ಬಹು ಉತ್ತಮರೀತಿಯಲ್ಲಿ ವ್ಯಕ್ತವಾಗುತ್ತವೆ. ಕ್ವಾರ್ಟ್ಸ್ ಕಣಗಳಲ್ಲಿ ಕೂದಲಿನಂತೆ ಬಹು ಸೂಕ್ಷ್ಮವಾಗಿರುವ ರೂಟೈಲಿನ ಎಳೆಗಳು ನಿರ್ದಿಷ್ಟ ದಿಕ್ಕುಗಳಲ್ಲಿ ಅಡಕವಾಗಿರುವುದನ್ನು ಕಾಣಬಹುದು. ಖನಿಜ ಹಾಗೂ ಶಿಲೆಯ ವಿಶಿಷ್ಟ ನೀಲಿ ಛಾಯೆಗೆ ಈ ರಚನೆಯೇ ಮೂಲವೆಂದೂ ಕೆಲವರ ಅಭಿಪ್ರಾಯ. ಫೆಲ್ಡ್‌ಸ್ಪಾರ್ ಖನಿಜದ ಮೈಕ್ರೋಕ್ಲೀನ್, ಆರ್ಥೋಕ್ಲೇಸ್ ಮತ್ತು ಪ್ಲೇಜಿಯೊಕ್ಲೇಸ್ ಎಂಬ ಮೂರು ಪ್ರಭೇದಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಕೆಲವು ಖನಿಜ ಕಣಗಳು ಪರ್ಥಿಟಿಕ್ ಮತ್ತು ಪ್ರತಿಪರ್ಥಿಟಿಕ್ ಎಂಬ ಸೂಕ್ಷ್ಮ ಹೆಣಿಗೆ ವಿನ್ಯಾಸಗಳನ್ನು ತಳೆದಿರುವುದೂ ಉಂಟು. ವರ್ಣಖನಿಜಗಳಲ್ಲಿ ಪ್ರಧಾನವಾದುದೇ ಹೈಪರ್‌ಸ್ತೀನ್. ಇದು ವಿಶಿಷ್ಟ ಪಾಟಲ ಅಥವಾ ಕಂದುಬಣ್ಣವನ್ನು ತಳೆದಿದ್ದು, ಅಸಂಖ್ಯಾತ ಸೂಕ್ಷ್ಮ ಕಣಗಳಿಂದ ಕೂಡಿರುತ್ತದೆ. ಧ್ರುವೀಕೃತ ಬೆಳಕಿನಲ್ಲಿ ನಯನಮನೋಹರವಾದ ವರ್ಣಪರಿವರ್ತನೆಯನ್ನೂ ವೀಕ್ಷಿಸಬಹುದು. ಮತ್ತೊಂದು ವರ್ಣಖನಿಜವಾದ ಡಯಾಪ್ಸೈಡ್ ಬಹುಚೆಲುವಾದ ತಿಳಿಹಸಿರು ಬಣ್ಣವನ್ನೂ ಹಾರ್ನ್‌ಬ್ಲೆಂಡ್ ಕಡುಹಸಿರುಮಿಶ್ರಿತ ಕಂದುಬಣ್ಣವನ್ನೂ ಸೂಸುತ್ತವೆ. ಹಾರ್ನ್‌ಬ್ಲೆಂಡಿನ ವರ್ಣವರ್ತನೆಯೂ ವಿಶಿಷ್ಟ ಅಲ್ಲದೆ ಹಲವು ಪ್ರಭೇದಗಳಲ್ಲಿರುವ ಪಾಟಲವರ್ಣದ ಗಾರ್ನೆಟ್, ಆಲಿವೀನ್, ಅಪಟೈಟ್, ಜಿರ್ಕಾನ್ ಮುಂತಾದ ಗೌಣ ಖನಿಜಗಳು ಬಹುಸ್ಪಷ್ಟವಾಗಿ ಗೋಚರವಾಗುತ್ತವೆ.

ಮೊತ್ತಮೊದಲಿಗೆ ಈ ಶಿಲೆ ದೊರೆತ ತಮಿಳುನಾಡಿನ ಇಡೀ ನೀಲಗಿರಿಬೆಟ್ಟ ಶ್ರೇಣಿ ಸು. 1813 ಚ.ಕಿಮೀ ವಿಸ್ತೀರ್ಣವಾಗಿದ್ದು ಬಹುತೇಕ ಈ ಶಿಲೆಗಳಿಂದಾದುದು. ಅಲ್ಲದೆ ಮದರಾಸಿನ ಪಲ್ಲವರಮ್, ಸೇಂಟ್ ಥಾಮಸ್ ಮೌಂಟ್ ಮತ್ತು ಮಹಾಬಲಿಪುರಮ್, ಸೇಲಮ್ ಬಳಿಯ ಷೆವರಾಯ್, ಪಳನಿ, ತಿನ್ನವೆಲ್ಲಿ ಈ ಪ್ರದೇಶಗಳೆಲ್ಲವೂ ಚಾರ್ನಕೈಟ್‌ಮಯ. ಕರ್ನಾಟಕದ ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಶಿವಸಮುದ್ರದ ಸುತ್ತಲಿನ ಬೆಟ್ಟಗಳು, ಕನಕಪುರ ಸಾತನೂರು–ಹಲಗೂರು ಪ್ರಾಂತದ ಕಬ್ಬಾಳದುರ್ಗ ಮುಂತಾದ ಬೆಟ್ಟಗಳು, ಕೊಡಗಿನ ಕುಶಾಲನಗರದ ಸುತ್ತಮುತ್ತ ಚಾರ್ನಕೈಟ್ ಶಿಲಾಶ್ರೇಣಿಗೆ ಸೇರಿದ ವಿವಿಧ ಬಗೆಯ ಶಿಲೆಗಳು ಹರಡಿವೆ. ಆಂಧ್ರಪ್ರದೇಶದ ವಿಜಯವಾಡ–ಗುಂಟೂರು, ಮಧ್ಯಪ್ರದೇಶದ ಬಸ್ತರ್ ಹಾಗೂ ಬಿಹಾರದ ಹಲವೆಡೆಗಳಲ್ಲಿ ಚಾರ್ನಕೈಟುಗಳನ್ನು ಗುರುತಿಸಿದ್ದಾರೆ. ಒಟ್ಟಿನಲ್ಲಿ ಇವು ಬಹುಮಟ್ಟಿಗೆ ಭಾರತದ ದಕ್ಷಿಣಪ್ರದೇಶಗಳಿಗೆ ಸೀಮಿತವಾದ ಶಿಲಾವರ್ಗ. ಇದಲ್ಲದೆ ಶ್ರೀಲಂಕ, ಆಫ್ರಿಕದ ಅಂಗೋಲ, ಕಾಂಗೋ, ಕೀನ್ಯ, ನೈಜೀರಿಯ ಮತ್ತು ಉಗಾಂಡ, ಆಸ್ಟ್ರೇಲಿಯ, ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ಮೇರುಪ್ರದೇಶಗಳು, ಕೆನಡ, ಚೀನ, ಗ್ರೀನ್‌ಲೆಂಡ್, ದಕ್ಷಿಣ ಅಮೆರಿಕ, ಅಮೆರಿಕದ ಸಂಯುಕ್ತಸಂಸ್ಥಾನಗಳು,

ಯುರೋಪಿನ ಫಿನ್ಲೆಂಡ್, ನಾರ್ವೇ ಮತ್ತು ಸ್ಕಾಟ್ಲೆಂಡ್, ರಷ್ಯದ ಸೈಬೀರಿಯ, ಯುಕ್ರೇನ್ ಮತ್ತು ಕೋಲಾ ಪರ್ಯಾಯ ದ್ವೀಪ–ಹೀಗೆ ಪ್ರಪಂಚದ ನಾನಾ ಭಾಗಗಳಲ್ಲಿ ಚಾರ್ನಕೈಟು ಗಳನ್ನು ಗುರುತಿಸಿ ವಿವರಿಸಲಾಗಿದೆ.

ಮೊತ್ತಮೊದಲಿಗೆ ತಮಿಳುನಾಡಿನ ಚಾರ್ನಕೈಟುಗಳನ್ನು ಅಧ್ಯಯನ ಮಾಡಿದ ಹಾಲೆಂಡ್ ಇದನ್ನು ಕುರಿತ ಹಲವು ವಿವರಗಳನ್ನು ಒದಗಿಸಿದ್ದಾನೆ. ಶಿಲೆಯ ಬೆಟ್ಟಗಳು ನಕ್ಷೆಯಲ್ಲಿ ನಿರ್ದಿಷ್ಟ ನೀಳಾಕಾರವನ್ನು ತೋರುತ್ತವೆ. ಬಂಡೆಗಳನ್ನು ಪರೀಕ್ಷಿಸಿದಾಗ ನಡುವೆ ಅಲ್ಲಲ್ಲೆ ನಾನಾ ಗಾತ್ರದ ಹಾಗೂ ಆಕಾರದ ಕಪ್ಪುಮಚ್ಚೆಗಳನ್ನು ಗುರುತಿಸಬಹುದು. ಇವು ಸಹ ಅನೇಕ ಸಂದರ್ಭಗಳಲ್ಲಿ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ವ್ಯಾಪಿಸಿರುವುದನ್ನು ಕಾಣಬಹುದು. ಈ ಮಚ್ಚೆಗಳಲ್ಲಿ ಶಿಲೆಯ ವರ್ಣಖನಿಜಗಳು ಸಂಗ್ರಹವಾಗಿರುತ್ತವೆ. ಚಾರ್ನಕೈಟುಗಳು ಗೀರುವಿನ್ಯಾಸವನ್ನೂ ತೋರಿಸುವುದುಂಟು. ನೀಳಾಕೃತಿಯ ಖನಿಜಗಳು ಯಾವುದಾದರೊಂದು ನಿರ್ದಿಷ್ಟ ದಿಕ್ಕಿನಲ್ಲಿ ಹರಡಿರುತ್ತವೆ. ಬಿಸಿಲು, ಮಳೆ,ಗಾಳಿಗಳ ಹಾವಳಿಗೊಳಗಾಗಿ ಮಾಸಲಾಗಿರುವ ಶಿಲೆಯಲ್ಲಿ ಈ ರಚನೆ ಸುಸ್ಪಷ್ಟ. ತಮಿಳುನಾಡಿನ ಹಲವಾರು ಕಡೆ ಇವು ತಮಗಿಂತ ಹಳೆಯದಾದ ನೈಸ್(ಗೀರು)ಶಿಲೆಗಳನ್ನು ಭೇದಿಸಿ ಒಳಹೊಕ್ಕಿರುವ ವಿಚಾರವನ್ನು ಹಾಲೆಂಡ್ ಪ್ರಸ್ತಾಪಿಸಿದ್ದಾನೆ. ಕೆಲವು ಕಡೆ ಒಂದು ರೀತಿಯ ತುಯ್ತಕ್ಕೊಳಗಾಗಿ ನುಚ್ಚುನುರಿಯಾದ ವಿನ್ಯಾಸವೂ ಕಂಡುಬರುವುದುಂಟು. ಈ ಲಕ್ಷಣಗಳನ್ನು ಆಧರಿಸಿ ಚಾರ್ನಕೈಟು ಅಗ್ನಿಶಿಲೆ–ಅಂದರೆ ಮಾತೃಶಿಲಾ ದ್ರವದ ಆರುವಿಕೆಯಿಂದ ಉಂಟಾದ ಮೂಲಶಿಲೆ–ಎಂಬ ಅಭಿಪ್ರಾಯವನ್ನು ಹಾಲೆಂಡ್ ಸೂಚಿಸಿದ. ಆತನ ಅನೇಕ ಸಹೋದ್ಯೋಗಿಗಳೂ ತಮ್ಮ ಅಧ್ಯಯನಗಳಿಂದ ಹೆಚ್ಚಿನ ಮಾಹಿತಿಗಳನ್ನು ಒದಗಿಸಿ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಆದರೆ ವ್ರಿಡೆನ್‌ಬರ್ಗ್ ಮಾತ್ರ ಇದನ್ನು ವಿರೋಧಿಸಿ ಚಾರ್ನಕೈಟ್ ಅಗ್ನಿಶಿಲೆಯಾಗಿರದೆ ರೂಪಾಂತಶಿಲೆಯಾಗಿರಲು ಸಾಧ್ಯವೆಂಬ ಅಭಿಪ್ರಾಯವನ್ನು ಸೂಚಿಸಿದ್ದಾನೆ.

ಮೈಸೂರು ಭೂಶೋಧನ ಇಲಾಖೆಯ ಬಿ. ಜಯರಾಮ್ ಮೊತ್ತಮೊದಲಿಗೆ 1901ರಲ್ಲಿ ಈ ವರ್ಗದ ಶಿಲೆಗಳನ್ನು ಬೆಂಗಳೂರು ಜಿಲ್ಲೆಯ ಸಾತನೂರು ಬಳಿ ಪತ್ತೆ ಹಚ್ಚಿದರು. ಆದಾಗ್ಯೂ ಚಾರ್ನಕೈಟ್ ಎಂಬ ಹೆಸರನ್ನು ಮೊದಲು ಬಳಸಿದಾತ ಇಲಾಖೆಯ ನಿರ್ದೇಶಕ ಡಬ್ಲ್ಯು.ಎಫ್.ಸ್ಮಿತ್, 1904ರಲ್ಲಿ. ಈತ ಬಿಳಿಗಿರಿರಂಗನ ಬೆಟ್ಟದ ಶಿಲೆಗಳ ವೀಕ್ಷಣ ಕಾರ್ಯ ನಡೆಸಿ ಅವುಗಳಿಗೂ ನೀಲಗಿರಿ ಬೆಟ್ಟದ ಶಿಲೆಗಳಿಗೂ ಇರುವ ಹೋಲಿಕೆಯನ್ನು ಪ್ರಸ್ತಾಪಿಸಿದ್ದಾನೆ. 1906–1907ರಲ್ಲಿ ಎಚ್.ಕೆ. ಸ್ಲೇಟರ್ ಮಳವಳ್ಳಿ–ಕನಕಪುರ ಸುತ್ತಮುತ್ತ ಸು.300 ಕಿಮೀಗೆ ಪರಿವರ್ತಿಸಿ. ಪ್ರಾಂತದಲ್ಲಿ ಚಾರ್ನಕೈಟುಗಳನ್ನು ಗುರುತಿಸಿ ವಿವರಿಸಿದ. ಇಲ್ಲೆಲ್ಲ ಅಧಿಕಸಿಲಿಕಾಂಶ ಚಾರ್ನಕೈಟೇ ಪ್ರಧಾನವಾಗಿ ಕಂಡುಬರುತ್ತದೆ. ಈತನ ಟಿಪ್ಪಣಿಗಳಲ್ಲಿ ಗ್ರಾನೈಟ್ ಶಿಲೆ ಚಾರ್ನಕೈಟ್ ಶಿಲೆಗಳನ್ನು ಭೇದಿಸಿ ತೂರಿಬಂದ ವಿವರಗಳೂ ಇವೆ. ಬಿ.ಜಯರಾಮ್ ಅವರು ರಾಜ್ಯದ ದಕ್ಷಿಣ ಪ್ರದೇಶಗಳಲ್ಲಿ ಭೂಶೋಧನಕಾರ್ಯವನ್ನು ಮುಂದುವರಿಸಿ ಚಾರ್ನಕೈಟ್ ಶ್ರೇಣಿಯ ವಿವಿಧ ಬಗೆಗಳನ್ನೆಲ್ಲ ಪತ್ತೆಹಚ್ಚಿ ಇವೆಲ್ಲವೂ ಮ್ಯಾಗ್ನೀಯ ಶಿಲೆಗಳೆಂದೂ ಜನ್ಯಸಂಬಂಧವನ್ನು ತೋರಿ ಒಂದೇ ಮೂಲವನ್ನು ಸೂಚಿಸುತ್ತವೆಂದೂ ಅಭಿಪ್ರಾಯಪಟ್ಟರು. ಅಲ್ಲದೆ ಮಿಥ್ಯಾಚಾರ್ನಕೈಟ್ ಎಂಬ ವಿಶೇಷ ಶಿಲೆಯನ್ನು ಗುರುತಿಸಿ, ಅದು ತನ್ನ ಎಲ್ಲ ಲಕ್ಷಣಗಳಲ್ಲೂ ಚಾರ್ನಕೈಟನ್ನೇ ಹೋಲಿದರೂ ಅದರಲ್ಲಿ ಹೈಪರ್‌ಸ್ತೀನ್ ಕಾಣಬರದ ಅಂಶವನ್ನು ಪ್ರಸ್ತಾಪಿಸಿದ್ದಾರೆ. ಪಿ.ಸಂಪತ್ ಅಯ್ಯಂಗಾರ್‌ಅವರು ಹಾಸನ–ಕೊಡಗು ಸರಹದ್ದಿನ ಸಕಲೇಶಪುರ, ಮಂಜರಾಬಾದ್, ಅರಕಲಗೂಡು ಪ್ರದೇಶದಲ್ಲಿ ಚಾರ್ನಕೈಟ್ ಡೈಕುಗಳನ್ನು ಗುರುತಿಸಿದರು. ಇವು ಬಹುಮಟ್ಟಿಗೆ ಅಲ್ಪ ಸಿಲಿಕಾಂಶ ಚಾರ್ನಕೈಟುಗಳು. ಇವರೂ ಚಾರ್ನಕೈಟುಗಳು ಮಾತೃಶಿಲಾದ್ರವವೊಂದರ ಮ್ಯಾಗ್ಮ ಆರುವಿಕೆಯಿಂದುಂಟಾದ ಅಗ್ನಿಶಿಲೆಗಳೆಂಬ ಹಾಲೆಂಡ್‌ನ ವಾದವನ್ನೇ ಸಮರ್ಥಿಸಿದರು. ಮುಂದೆ ಬಿ.ರಾಮರಾಯರು ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ–ಬಿಳಿಗಿರಿರಂಗನಬೆಟ್ಟ, ಶಿವನಸಮುದ್ರ, ನಂಜನಗೂಡು–ಭೂಶೋಧನೆ ನಡೆಸಿ ಈ ಶಿಲೆಯ ಬಗ್ಗೆ ಹೆಚ್ಚು ಮಾಹಿತಿಗಳನ್ನು ಸಂಗ್ರಹಿಸಿದುದೇ ಅಲ್ಲದೆ ಅನೇಕ ಹೊಸ ವಿಷಯಗಳನ್ನೂ ಬೆಳಕಿಗೆ ತಂದರು. ಅನೇಕ ಕಡೆ ಅಧಿಕಸಿಲಿಕಾಂಶ ಚಾರ್ನಕೈಟುಗಳಿಗೂ ನೈಸುಗಳಿಗೂ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಿಲ್ಲ. ಒಂದು ಮತ್ತೊಂದರಲ್ಲಿ ಕ್ರಮೇಣ ಮಿಲನ ಹೊಂದುವ ಅಂಶವೂ ಹೊರಪಟ್ಟಿತು. ಹಲವೆಡೆ ಎರಡು ಭಿನ್ನ ಶಿಲೆಗಳ ಮಿಶ್ರಣದಿಂದ ಚಾರ್ನಕೈಟ್ ತಲೆದೋರಿರುವ ಅಂಶವೂ ವ್ಯಕ್ತವಾಯಿತು. ಹಾಗೂ ಇವಕ್ಕಿಂತ ಕಿರಿಯವೆನಿಸಿದ ರಾಮನಗರದ ಗ್ರ್ಯಾನೈಟುಗಳು ಈ ಶಿಲೆಗಳ ಜನನದಲ್ಲಿ ಬಹು ಪ್ರಮುಖ ಪಾತ್ರವನ್ನು ವಹಿಸಿವೆ ಎಂದೂ ಅಭಿಪ್ರಾಯಪಟ್ಟರು. ಒಟ್ಟಿನಲ್ಲಿ ಚಾರ್ನಕೈಟುಗಳ ಜನನ ಏಕರೀತಿಯಾಗಿರದೆ ವಿವಿಧ ಪ್ರದೇಶದ ವಿವಿಧ ಚಾರ್ನಕೈಟುಗಳು ವಿವಿಧ ರೀತಿಯಲ್ಲಿ ರೂಪುತಳೆದಿರುವ ಹೊಸ ಅಂಶವನ್ನು ಪ್ರಚುರ ಪಡಿಸಿದರು. ಅದುವರೆಗೂ ಪ್ರಚಲಿತವಾಗಿದ್ದ ಹಾಲೆಂಡ್‌ನ ವಾದವನ್ನು ಸಂಪೂರ್ಣವಾಗಿ ಅನುಮೋದಿಸಲಿಲ್ಲ. ಇವು ಖಂಡಿತವಾಗಿಯೂ ಒಂದೇ ಶಿಲಾಬುಡಕಟ್ಟಿಗೆ ಸೇರಿದ ಪ್ರಭೇದಗಳಲ್ಲವೆಂದೂ ಇವುಗಳಲ್ಲಿ ಪರಸ್ಪರ ಜನ್ಯಸಂಬಂಧವನ್ನು ಸೂಚಿಸುವ ಯಾವ ಲಕ್ಷಣವನ್ನ ಗುರುತಿಸಲಾಗದೆಂದೂ ಹೇಳಿದರು. ಚಾರ್ನಕೈಟ್ ಶಿಲಾಸಮುದಾಯದಲ್ಲಿ ಹಲವಾರು ಬಗೆಗಳು ನಾಡಶಿಲೆಗಳ ರೂಪಾಂತರದಿಂದ ಉಂಟಾಗಿರುವ ಸಾಧ್ಯತೆಯನ್ನು ಸೂಚಿಸಿದ ಕೀರ್ತಿ ಬೆಳ್ಳೂರು ರಾಮರಾಯರ ಪಾಲಿನದು. ಇದೇ ವೇಳೆಗೆ ಪ್ರಪಂಚದ ನಾನಾ ಪ್ರದೇಶಗಳಲ್ಲಿ ಚಾರ್ನಕೈಟುಗಳ ಸಂಶೋಧನೆಗಳು ನಡೆದಿದ್ದು, ಇದೇ ಬಗೆಯ ಅಭಿಪ್ರಾಯಗಳನ್ನು ಹಲವಾರು ತಜ್ಞರೂ ವ್ಯಕ್ತಪಡಿಸಿದರೆಂಬ ಅಂಶ ಬಹುಮುಖ್ಯ. ಸಿ.ಎಸ್.ಪಿಚ್ಚಮುತ್ತು ಅವರು ತಮ್ಮ ಅಧ್ಯಯನಗಳಿಂದ ಈ ಶಿಲೆ ರೂಪುಗೊಳ್ಳುವ ಕಾರ್ಯದಲ್ಲಿ ರಾಮನಗರದ ಗ್ರಾನೈಟಿನ ಪಾತ್ರವೇನೂ ಇಲ್ಲವೆಂಬ ಹೊಸ ಅಂಶವನ್ನು ನಿರೂಪಿಸಿದುದೇ ಅಲ್ಲದೆ ನೈಸ್‌ಶಿಲೆಗಳು ಚಾರ್ನಕೈಟೀಕರಣವೆಂಬ ವಿಶೇಷ ರೀತಿಯ ಕ್ರಿಯೆಗೊಳಗಾಗುವುದರ ಮೂಲಕ ಇವು ಉಂಟಾದುವೆಂಬ ಹೊಸ ವಾದವನ್ನು ಮುಂದಿಟ್ಟರು. ಇತ್ತೀಚಿನ ವರ್ಷಗಳಲ್ಲಿ ಎಂ.ಎಸ್. ಸದಾಶಿವಯ್ಯನವರು ಮಳವಳ್ಳಿ, ಸಾತನೂರು, ಹಲಸೂರು, ಶಿವನಸಮುದ್ರ ಈ ಪ್ರದೇಶದ ಚಾರ್ನಕೈಟುಗಳನ್ನು ವಿವರವಾಗಿ ಸಂಶೋಧಿಸಿ ಇವು ನೈಸ್ ಶಿಲೆಗಳಿಗಿಂತ ವಯಸ್ಸಿನಲ್ಲಿ ಹಿರಿಯವೆಂದೂ ಈ ಕಾರಣ ಚಾರ್ನಕೈಟೀಕರಣಕ್ರಿಯೆ ಅಸಮಂಜಸವೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಇಂದಿಗೂ ಈ ಶಿಲೆಗಳನ್ನು ಕುರಿತ ಸಂಶೋಧನೆಗಳು ಪ್ರಪಂಚದ ಹಲವಾರು ಕಡೆ ನಡೆಯುತ್ತಿದ್ದು ಮುಂದೆ ಹೊಸ ಅಂಶಗಳು ವ್ಯಕ್ತವಾಗುವುದರಲ್ಲಿ ಸಂದೇಹವಿಲ್ಲ. ಹೀಗಾಗಿ ಚಾರ್ನಕೈಟನ್ನು ಕುರಿತ ಕೊನೆಯ ಮಾತು ಸಲ್ಲ. ಮೊತ್ತಮೊದಲು ಮದರಾಸಿನ ಸಣ್ಣ ಗುಡ್ಡವೊಂದರಲ್ಲಿ ಕಾಣಿಸಿಕೊಂಡ ಈ ಶಿಲೆ ಪ್ರಪಂಚವ್ಯಾಪಿಯಾಗಿ ಇಂದಿಗೂ ಪ್ರಸಿದ್ಧ ಭೂವಿಜ್ಞಾನಿಗಳ ಗಮನವನ್ನು ಸೆಳೆದಿರುವುದು ಅತ್ಯಂತ ವಿಸ್ಮಯಕರ. ಶಿಲಾವಿಜ್ಞಾನದ ಅಧ್ಯಯನದಲ್ಲಿ ಇದೊಂದು ರೋಮಾಂಚಕಾರಿ ಅಧ್ಯಾಯ. (ಬಿ.ವಿ.ಜ.)

**ಚಾರ್ಲಿಯರ್ ತಾಳೆ :** ಆವರ್ತಾಂಕ ವಿತರಣೆಯ ಪ್ರಘಾತಗಳನ್ನು (ಮೊಮೆಂಟ್ಸ್) ಗಣಿಸುವಾಗ ಲೆಕ್ಕಾಚಾರಗಳ ತಾಳೆ ನೋಡಲು ಬಳಸಬಹುದಾದ ಒಂದು ಪರೀಕ್ಷೆ. ಸೂಚಿಸಿದಾತ ಸ್ವೀಡನನ ಸಂಖ್ಯಾಕಲನವಿಜ್ಞಾನ ಸಿ.ವಿ.ಎಲ್. ಚಾರ್ಲಿಯರ್. ಈಗ ಉದಾಹರಣೆಗೆ, ಕೆಳಗಿನ ನಿದರ್ಶನದಲ್ಲಿರುವ ವಿತರಣೆಯ ಮೊದಲು ನಾಲ್ಕು ಪ್ರಘಾತಗಳನ್ನು ಪಡೆಯಬೇಕಾಗಿದೆಯೆಂದು ಭಾವಿಸೋಣ.

| ದತ್ತಾಂಶಗಳು | | ಲೆಕ್ಕಾಚಾರಗಳು | | | | | | |
|---|---|---|---|---|---|---|---|---|
| ಚರದ ಮೌಲ್ಯ $x$ | ಆವೃತ್ತಿ $f$ | $u=\frac{x-54.5}{10}$ | $fu$ | $fu^2$ | $fu^3$ | $fu^4$ | $(u+1)^4$ | $f(u+1)^4$ |
| 34.5 | 5 | –2 | –10 | 20 | –40 | 80 | 1 | 5 |
| 44.5 | 11 | –1 | –11 | 11 | –11 | 11 | 0 | 0 |
| 54.5 | 18 | 0 | 0 | 0 | 0 | 0 | 1 | 18 |
| 64.5 | 12 | 1 | 12 | 12 | 12 | 12 | 16 | 192 |
| 74.5 | 9 | 2 | 18 | 36 | 72 | 144 | 81 | 729 |
| ಮೊತ್ತಗಳು | 55 | – | 9 | 79 | 33 | 247 | – | 944 |

ಚಾರ್ಲಿಯರ್ ತಾಳೆ ಒಂದು ನಿತ್ಯಸಮೀಕರಣದ ಮೇಲೆ ಅವಲಂಬಿಸಿದೆ: $\Sigma f(u+1)^4 \equiv \Sigma fu^4+4\Sigma fu^3+6\Sigma fu^2+4\Sigma fu+\Sigma f$. ಕೋಷ್ಟಕದಲ್ಲಿರುವ ದತ್ತಾಂಶಗಳಿಗೆ $\Sigma f(u+1)^4=944$; ನಿತ್ಯಸಮೀಕರಣದ ಬಲಬದಿಯ ಪದಗಳ ಮೊತ್ತ $247+4(33)+6(79)+4(9)+55$. ಸಂಕ್ಷೇಪಿಸಿದಾಗ ಇದು ಕೂಡ 944. ಆದ್ದರಿಂದ ಮೇಲಿನ ಲೆಕ್ಕಾಚಾರಗಳು ಚಾರ್ಲಿಯರ್ ತಾಳೆಯನ್ನು ತೃಪ್ತಿಪಡಿಸುತ್ತವೆ. ಮೊದಲ ಒಂದು, ಎರಡು ಅಥವಾ ಮೂರು ಪ್ರಘಾತಗಳನ್ನು ಗಣಿಸುವಾಗ ಇದೇ ರೀತಿ ಉಪಯೋಗಿಸಿಕೊಳ್ಳಬಹುದಾದ ನಿತ್ಯಸಮೀಕರಣಗಳು ಅನುಕ್ರಮವಾಗಿ ಇಂತಿವೆ:

$$\Sigma f(u+1)\equiv \Sigma fu+\Sigma f$$

$$\Sigma f(u+1)^2\equiv \Sigma fu^2+2\Sigma fu+\Sigma f$$

$$\Sigma f(u+1)^3\equiv \Sigma fu^3+3\Sigma fu^2+\Sigma fu+\Sigma f$$

ಇನ್ನೂ ಮೇಲಿನ ದರ್ಜೆಯ ಪ್ರಘಾತಗಳನ್ನು ಪಡೆಯುವಾಗ ಅನುರೂಪವಾದ ವಿಸ್ತರಣೆಗಳನ್ನು ಬಳಸಿದ ನಿತ್ಯಸಮೀಕರಣಗಳನ್ನು ರಚಿಸಿ ಉಪಯೋಗಿಸಿಕೊಳ್ಳಬಹುದು. ಬಳಸುವ ನಿತ್ಯಸಮೀಕರಣದಿಂದ ಎಡ ಮತ್ತು ಬಲಬದಿಗಳ ಮೌಲ್ಯಗಳನ್ನು ಅಥವಾ ಅಲ್ಲಿರುವ ಪದಗಳ ಮೌಲ್ಯಗಳನ್ನು ಗಣಿಸುವ ಹಾದಿಯಲ್ಲಿ ಪರಸ್ಪರ ಪರಿಹರಿಸಿಕೊಳ್ಳುವಂಥ

ದೋಷಗಳು ನುಸುಳಿಕೊಂಡರೆ ಅವುಗಳ ಇರುವಿಕೆಯನ್ನು ಚಾರ್ಲಿಯರ್ ತಾಳೆ ಸೂಚಿಸಲಾರದು. ಆದ್ದರಿಂದ ಈ ತಾಳೆ ನಿಖರತೆಯನ್ನು ಖಾತರಿಪಡಿಸುವುದಿಲ್ಲ. ಆದರೆ ದೋಷಗಳು ಪರಸ್ಪರ ಪರಿಹರಿಸಿಕೊಳ್ಳುವಂತಿರುವುದು ಅಪರೂಪವೆಂದು ತಿಳಿಯಬಹುದಾದ್ದರಿಂದ ತಾಳೆ ಸರಿಹೊಂದಿದಾಗ ಲೆಕ್ಕಾಚಾರಗಳು ಸರಿಯಾಗಿವೆಯೆಂದು ನಂಬಿ ಮುಂದುವರಿಯುವ ಭರವಸೆ ಮೂಡುತ್ತದೆ. ತಾಳೆ ಸರಿಹೊಂದದಿರುವಾಗ ಹಿನ್ನೆಲೆಯ ಲೆಕ್ಕಾಚಾರಗಳಲ್ಲಿ ಎಲ್ಲೋ ದೋಷ ನುಸುಳಿಕೊಂಡಿದೆ ಎಂಬುದು ಮಾತ್ರ ಖಚಿತ. ಆವರ್ತಾಂಕ ವಿತರಣೆಯ ಗಾತ್ರ ದೊಡ್ಡದಿದ್ದು ಗಣಕಯಂತ್ರಗಳ ನೆರವಿಲ್ಲದೆ ಪ್ರಘಾತಗಳನ್ನು ಪಡೆಯುವ ಸಂದರ್ಭಗಳಲ್ಲಿ ಈ ತಾಳೆಯ ಬಳಕೆ ಹಿತ. (ಎಂ.ವಿ.ಜೆ.; ಎಸ್.ಟಿ.)

**ಗ್ರಾಮ್ –ಚಾರ್ಲಿಯರ್ ಶ್ರೇಣಿಗಳು.** 1 A ತರಹದ ಶ್ರೇಣಿ; ಯಾವುದೇ ಯಾದೃಚ್ಛಿಕ ಚರ $x$ ನ ವಿತರಣೆಯ ಆವರ್ತಾಂಕ ಉತ್ಪನ್ನ $f(x)$ನ್ನು, ಮೊದಲ ಪದ ಪ್ರಸಾಮಾನ್ಯ ಆವರ್ತಾಂಕ ಉತ್ಪನ್ನ $\phi(x) = \left(1/\sqrt{2\pi}\right) \times \exp(-x^2/2)$ ಆಗಿರುವಂತೆ, ಉಳಿದವು $\phi(x)$ನ ಅನುಕ್ರಮ ಅವಕಲನಾಂಕಗಳಿಗೆ ಅನುಪಾತೀಯವಾಗಿದ್ದು, ಇಳಿಯುತ್ತಿರುವ ಪ್ರಾಮುಖ್ಯವುಳ್ಳವಾಗಿರುವಂತೆ ನಿರೂಪಿಸುವ ಒಂದು ಯತ್ನ ;

$$f(x) = C_0\phi(x) + C_0\phi'(x) + \dots\dots\dots + C_n\phi(n)(x) + \dots\dots\dots$$

$x$ ಶಿಷ್ಟೀಕೃತರೂಪದಲ್ಲಿದ್ದಾಗ ಅದರ ಮಧ್ಯಕ 0, ಚಲನೀಯ 1. ಮೂರನೆಯ ಮತ್ತು ನಾಲ್ಕನೆಯ ಪ್ರಘಾತಗಳು ಅನುಕ್ರಮವಾಗಿ $\alpha_3, \alpha_4$ ಮತ್ತು $\gamma_1=\alpha_3$, $\gamma_2=\alpha_4-3$ ಎಂದಿರಲಿ. ಆಗ $C_0 = 1.\ C_1=C_2=0, C_3=-\gamma_1/6, C_4 = \gamma_2/24$ ಇತ್ಯಾದಿ. ಸ್ವೀಡನಿನ ಸಂಖ್ಯಾಕಲನ ವಿಜ್ಞಾನಿಗಳಾದ ಜೆ.ಪಿ. ಗ್ರಾಮ್ (1883) ಮತ್ತು ಸಿ. ವಿ. ಎಲ್ ಚಾರ್ಲಿಯರ್ (1905) ಅವರ ಕೊಡುಗೆಗಳಿಂದಾಗಿ ಮೇಲಿನ ಶ್ರೇಣಿಗೆ ಆ ಅಂಕಿತ. ವ್ಯವಹಾರದಲ್ಲಿ ಇಂಥ ಅನಂತ ಶ್ರೇಣಿಯ ಮೊಕಲ ಕೆಲವು ಪದಗಳನ್ನು ಮಾತ್ರ ರಚಿಸಿ ಬಳಸಲು ಸಾಧ್ಯ. ಆದರೆ ಇಲ್ಲಿನ ಅನುಕ್ರಮ ಪದಗಳು ಏಕಪ್ರಕಾರವಾಗಿ ಇಳಿಮುಖ–ವಾಗಿರಲೇಬೇಕೆಂದಿಲ್ಲವಾದ್ದರಿಂದ, ಮೊದಲ ಕೆಲವು ಮಾತ್ರ $f(x)$ಗೆ ತೃಪ್ತಿಕರ ಅಂದಾಜನ್ನು ಕೊಡದಿರಬಹುದು. ಈ ದೃಷ್ಟಿಯಿಂದ ಎಜ್‍ವರ್ತ್ ಸೂಚಿಸಿರುವ ಪರ್ಯಾಯರೂಪದ A ತರಹದ ಶ್ರೇಣಿ

$$f(x) = \phi(x) - \frac{\gamma_1}{3!}\phi^{(3)}(x) + \left[\frac{\gamma_2}{4!}\phi^{(4)}(x) + \frac{10\gamma_1^{\,2}}{6!}\phi^{(6)}(x)\right]$$

ಇದರ ಬಳಕೆ ಹೆಚ್ಚು ತೃಪ್ತಿಕರ : ವ್ಯವಹಾರದಲ್ಲಿ ಕಡೆಗಣಿಸಿದ ಇದರ ಮೊದಲ ಪದ ಮತ್ತು ಶೇಷಪದಗಳು ಸಮದರ್ಜೆಯವಾಗಿರುತ್ತವೆ.

2 B ತರಹದ ಶ್ರೇಣಿ : ಪ್ರಾಚಲ λಆಗಿರುವ ಪ್ವಾಸಾಂವ್ ಚರದ ಆವರ್ತಾಂಕ ಉತ್ಪನ್ನ $f(x) = \exp(-\lambda).\lambda^{x}/x!$ನ $\lambda$ ವನ್ನು ಕುರಿತ ಅವಕಲನಾಂಕಗಳ ಮೇಲೆ ಆಧಾರಿತ ಈ ಶ್ರೇಣಿಯನ್ನು ವಿರತ ಉತ್ಪನ್ನಗಳನ್ನು ಪ್ರತಿನಿಧೀಕರಿಸಲು ಚಾರ್ಲಿಯರ್ 1905ರಲ್ಲಿ ಮಂಡಿಸಿದ. ಇದಕ್ಕೆ ಕೆಲವು ಗಣಿತೀಯ ಆಕರ್ಷಣೆಗಳಿದ್ದರೂ ಇದರ ಬಳಕೆಗೆ ಹಲವು ಅಡಚಣೆಗಳಿರುವುದರಿಂದ ಇಂದಿನ ದಿವಸಗಳಲ್ಲಿ ಇದರ ಉಪಯೋಗ ಅಪರೂಪ.

3 *C* ತರಹದ ಶ್ರೇಣಿ : *A* ತರಹದ ಶ್ರೇಣಿಯನ್ನು ಬಳಸಿದಾಗ ಋಣ ಆವರ್ತಾಂಕಗಳು ದೊರೆಯುವ ಸಾಧ್ಯತೆ ಇದೆ. ಇದನ್ನು ತಪ್ಪಿಸಲು ಚಾರ್ಲಿಯರ್ 1928ರಲ್ಲಿ ಈ ಶ್ರೇಣಿಯನ್ನು ಮುಂದಿರಿಸಿದ. $f(x)$ನ್ನು ಇದು, $f(x) = exp\left[\sum_r \gamma_r H_r(x)\right]$, [Hr($x$) ಬಹುಪದಿಗಳು, $\gamma_r$ಪ್ರಘಾತಗಳು] ಈ ರೂಪದಲ್ಲಿ ವಿಸ್ತರಿಸುತ್ತದೆ. ವ್ಯಾವಹಾರಿಕ ಅನುಭವ ಈ ಶ್ರೇಣಿಯ ಬಳಕೆಗೆ ಪ್ರತಿಕೂಲವಾದ್ದರಿಂದ ಇದರ ಉಪಯೋಗವನ್ನು ಕೈಬಿಡಲಾಗಿದೆ. (ಎಸ್.ಟಿ.)

**ಚಾರ್ಲ್ಸ್ (ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ದೊರೆಗಳು) :** ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡನ್ನಾಳಿದ ದೊರೆಗಳು.

**ಚಾರ್ಲ್ಸ್ 1 :** 1600–1649. ಸ್ಟೂವರ್ಟ್ ಮನೆತನದ ಎರಡನೆಯ ದೊರೆ. ಈತ 1ನೆಯ ಜೇಮ್ಸನ (ಸ್ಕಾಟ್ಲೆಂಡಿನ 6ನೆಯ ಜೇಮ್ಸ್) ಮಗನಾಗಿ 1600ರಲ್ಲಿ ಹುಟ್ಟಿದ. 1616ರಲ್ಲಿ ವೇಲ್ಸ್ ರಾಜಕುಮಾರನಾಗಿ ಅಭಿಷಿಕ್ತನಾದ. ಚಾರ್ಲ್ಸ್ ಪಟ್ಟವೇರುವ ಮೊದಲು ರಾಜಕಾರಣದಲ್ಲಿ ವಿಶೇಷ ಆಸ್ಥೆ ವಹಿಸಿದವನಲ್ಲ. ಸ್ಪೇನಿನ ರಾಜಕುಮಾರಿಯನ್ನು ವರಿಸುವ ಉದ್ದೇಶದಿಂದ ಸ್ಪೇನಿಗೆ ಭೇಟಿ ನೀಡಿದ್ದೊಂದೇ ಈತನ ಆ ಕಾಲದ ಉಲ್ಲೇಖನೀಯ ಕಾರ್ಯ. ಈ ಯಾತ್ರೆ ಯಶಸ್ವಿಯಾಗಲಿಲ್ಲ. ಇದರಿಂದಾಗಿ ಸ್ಪೇನಿನ ಮೇಲೆ ಯುದ್ಧ ಮಾಡಬೇಕೆಂದು ತಂದೆಗೆ ಒತ್ತಾಯ ಹಾಕಿದ. ಮುಂದೆ 1624ರಲ್ಲಿ ಇವನು ಫ್ರಾನ್ಸಿನ ರಾಜಕುಮಾರಿ ಹೆನ್ರಿಯೆಟ್ಟ ಮರೀಯಳನ್ನು ವರಿಸಲು ಒಪ್ಪಂದವಾಯಿತು. 1625ರಲ್ಲಿ ಪಟ್ಟಕ್ಕೆ ಬಂದ ಮೇಲೆ ಆಕೆಯನ್ನು ಮದುವೆಯಾದ. 1625ರಲ್ಲಿ ಕರೆಯಲಾದ ಪಾರ್ಲಿಮೆಂಟ್‍ನ ಕಾಮನ್ಸ್ ಸಭೆಯಲ್ಲಿ ಪ್ಯೂರಿಟನರೇ ಹೆಚ್ಚು ಸಂಖ್ಯೆಯಲ್ಲಿದ್ದರು. ದೊರೆ ಕ್ಯಾತೊಲಿಕ್ ಕನ್ಯೆಯನ್ನು ವರಿಸಿದ ಬಗ್ಗೆಯೂ ಸ್ಪೇನ್ ಮುಂದುವರಿಸುತ್ತಿದ್ದ ಯುದ್ಧದ ಕುರಿತು ತಮಗೆ ವಿವರಣೆಗಳನ್ನು ನೀಡದ ಬಗ್ಗೆಯೂ ಅವರು ಕ್ರುದ್ಧರಾಗಿದ್ದರು. ರಾಜನಿಗೆ ಟನ್ನೇಜ್ ಮತ್ತು ಪೌಂಡೇಜ್ ಅಧಿಕಾರವನ್ನು (ಸುಂಕ ಸಂಗ್ರಹಿಸುವ ಅಧಿಕಾರ) ನೀಡಲು ಅವರು ನಿರಾಕರಿಸಿದರು. 1626ರಲ್ಲಿ ಅವನು ಕರೆದ ಎರಡನೆಯ ಪಾರ್ಲಿಮೆಂಟ್ ಇನ್ನಷ್ಟು ಕ್ರುದ್ಧವಾಗಿತ್ತು. ಸ್ಪೇನಿನೊಡನೆ ನಡೆದ ಯುದ್ಧದಲ್ಲಿ ಕ್ಯಾಡಿಸ್‍ನ ವಿರುದ್ಧ ನಡೆಸಲಾದ ನೌಕಾಕಾರ್ಯಾಚರಣೆಯಲ್ಲಿ ಬ್ರಿಟನ್ನಿಗೆ ಸೋಲಾಗಿತ್ತು. ಇದಕ್ಕೆ ಬಕಿಂಗ್‍ಹ್ಯಾಮ್ ಕಾರಣವೆನ್ನಲಾಗಿದ್ದರಿಂದ ಅವನನ್ನು ರಾಜದ್ರೋಹದ ಆಪಾದನೆಗಾಗಿ ವಿಚಾರಣೆಗೆ ಗುರಿಪಡಿಸಬೇಕೆಂದು ಕಾಮನ್ಸ್ ಸಭೆ ಪ್ರಯತ್ನಿಸಿತು. ಇದನ್ನು ತಪ್ಪಿಸಲು ದೊರೆ ಪಾರ್ಲಿಮೆಂಟನ್ನು ವಿಸರ್ಜಿಸಿದ. ಆ ಸಮಯದಲ್ಲಿ ಯುರೋಪಿನಲ್ಲಿ 30 ವರ್ಷಗಳ ಯುದ್ಧ (1618–48) ನಡೆಯುತ್ತಿತ್ತು. ಧರ್ಮನಿಮಿತ್ತವಾಗಿ ಪ್ರಾಟೆಸ್ಟಂಟ್ ಮತ್ತು ಕೆಥೊಲಿಕ್ ಶಕ್ತಿಗಳ ನಡುವೆ ನಡೆಯುತ್ತಿದ್ದ ಯುದ್ಧವದು. ಫ್ರಾನ್ಸ್ ಮತ್ತು ಸ್ಪೇನ್‍ಗಳೊಡನೆ ಯುದ್ಧದಲ್ಲಿ ಅವನು ಆ ವೇಳೆಗೆ ಸಿಲುಕಿಕೊಂಡಿದ್ದ. ಹಣದ ತೊಂದರೆ ಹೆಚ್ಚಿತು. ಬಲವಂತದ ಸಾಲ ವಿಧಿಸಿದ. ಇದು ನ್ಯಾಯಬಾಹಿರವೆಂದು ನ್ಯಾಯಮೂರ್ತಿಗಳು ತೀರ್ಪಿತ್ತರು. ದೊರೆ ಶ್ರೇಷ್ಠ ನ್ಯಾಯಾಧೀಶನನ್ನೇ ವಜಾ ಮಾಡಿದ. ತನ್ನ ಕ್ರಮಕ್ಕೆ ಒಪ್ಪದ 70 ಜನರನ್ನು ಬಂಧಿಸಿದ. ಇವರಲ್ಲಿ ಕೆಲವು ನೈಟ್‍ಗಳೂ ಇದ್ದರು. ಸ್ಪೇನ್ ವಿರುದ್ಧ ನಡೆಸಿದ ಆಕ್ರಮಣ ಕಾರ್ಯದಲ್ಲಿ ಬಕಿಂಗ್‍ಹ್ಯಾಂ ಹಿಮ್ಮೆಟ್ಟಬೇಕಾಯಿತು. ರಾಜನಾಗಿ ಆಯ್ಕೆಯಾದ ತನ್ನ ಭಾವ ಫ್ರೆಡರಿಕ್‍ಗೆ ನೆರವು ನೀಡಲು ಚಾರ್ಲ್ಸ್ ಉತ್ಸುಕನಾಗಿದ್ದ. ಈ ಕಾರಣಗಳಿಂದಾಗಿ ಆತ 1628ರಲ್ಲಿ ಮೂರನೆಯ ಪಾರ್ಲಿಮೆಂಟನ್ನು ಆಮಂತ್ರಿಸಿದ. ದೊರೆ ಸ್ವೇಚ್ಛಾನುಸಾರವಾಗಿ ತೆರಿಗೆ ವಿಧಿಸುತ್ತಿದ್ದುದನ್ನೂ ಜನರನ್ನು ಬಂಧಿಸುತ್ತಿದ್ದುದನ್ನೂ ವಿರೋಧಿಸಿ ಕಾಮನ್ಸ್ ಸಭೆ ಕೂಡಲೇ ನಿರ್ಣಯಗಳನ್ನು ಮಾಡಿತು. ಹಕ್ಕುಗಳ ಮನವಿಯಲ್ಲಿ (ಪೆಟಿಷನ್ ಆಫ್ ರೈಟ್ಸ್) ತನ್ನ ದೂರುಗಳನ್ನೆಲ್ಲ ಉಲ್ಲೇಖಿಸಿತು. ಈ ಮನವಿಗೆ ಒಪ್ಪಿಗೆ ನೀಡಲು ದೊರೆ ಇಷ್ಟಪಡಲಿಲ್ಲವಾದರೂ ಖಾಸಗಿ ವಿಧೇಯಕದಂತೆ ಅದಕ್ಕೆ ಸಮ್ಮತಿ ನೀಡಲೇಬೇಕಾಯಿತು. ಇದು ಮ್ಯಾಗ್ನಕಾರ್ಟದಲ್ಲಿರುವ ವಿಚಾರಗಳ ಪುನರ್ಘೋಷಣೆಯೆಂದು ಭಾವಿಸಲ್ಪಟ್ಟಿದೆ. ಇದಾದೊಡನೆ ಬಕಿಂಗ್‍ಹ್ಯಾಮನನ್ನು ಅಧಿಕಾರದಿಂದ ವಜಾ ಮಾಡಬೇಕೆಂದು ಪಾರ್ಲಿಮೆಂಟ್ ಒತ್ತಾಯಿಸಿದಾಗ ದೊರೆ ಪಾರ್ಲಿಮೆಂಟನ್ನು ಮುಂದೂಡಿದ. ಅನಂತರ ಬಕಿಂಗ್‍ಹ್ಯಾಂ ಕೊಲೆಗೆ ಈಡಾದ.



1629ರಲ್ಲಿ ಚಾರ್ಲ್ಸ್ ನಾಲ್ಕನೆಯ ಪಾರ್ಲಿಮೆಂಟನ್ನು ಕರೆದ. ಟನ್ನೇಜ್ ಮತ್ತು ಪೌಂಡೇಜನ್ನು ದೊರೆ ಸಂಗ್ರಹಿಸುವುದನ್ನು ಪಾರ್ಲಿಮೆಂಟ್ ವಿರೋಧಿಸಿತು. ಅವನು ಕ್ಯಾತೊಲಿಕ್ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಲು ಯತ್ನಿಸುತ್ತಿರುವನೆಂಬ ಆಪಾದನೆಗೆ ಗುರಿಯಾದ. ಅವನ ಕೆಲವು ಧಾರ್ಮಿಕ ಸುಧಾರಣೆಗಳನ್ನು ಪಾರ್ಲಿಮೆಂಟ್ ಕಟುವಾಗಿ ಟೀಕಿಸಿತು. ದೊರೆ ಆ ಪಾರ್ಲಿಮೆಂಟನ್ನೂ ವಿಸರ್ಜಿಸಿ ಆಜ್ಞೆ ನೀಡಿದ. ಅದು ಸಭಾಪತಿಯನ್ನು ಬಲಾತ್ಕಾರದಿಂದ ಅವನ ಪೀಠದಲ್ಲಿ ಕುಳ್ಳಿರಿಸಿ ಮೂರು ನಿರ್ಣಯಗಳನ್ನು ಮಾಡಿತು. ಈ ಪೈಕಿ ಒಂದು ಹಕ್ಕುಗಳ ಮನವಿಯ ಸಿಂಧುತ್ವವನ್ನು ಪುನರುಚ್ಚರಿಸಿತು. ದೇಶದ ಧರ್ಮವ್ಯವಸ್ಥೆಯನ್ನು ಬದಲಾಯಿಸಲು ಯತ್ನಿಸುವವನು ದೇಶದ ಶತ್ರು ಎಂಬುದು ಇನ್ನೊಂದು ನಿರ್ಣಯ.

ಮುಂದೆ ಹನ್ನೊಂದು ವರ್ಷಗಳ ಕಾಲ (1629–40) ಚಾರ್ಲ್ಸ್ ಪಾರ್ಲಿಮೆಂಟಿನ ನೆರವಿಲ್ಲದೆ, ಅದನ್ನು ಕರೆಯದೆ ಆಳಿದ. ಹನ್ನೊಂದು ವರ್ಷಗಳ ಪೀಡಕ ಪ್ರಭುತ್ವ ಎಂದು ಅದನ್ನು ಕರೆಯಲಾಗಿದ್ದರೂ ವಾಸ್ತವವಾಗಿ ಆಗ ಅಂಥ ದುರಾಡಳಿತವೇನೂ ನಡೆದಿರಲಿಲ್ಲ. ದೇಶ ಆ ಕಾಲದಲ್ಲಿ ಸಮೃದ್ಧಿಯ ಪಥದಲ್ಲಿತ್ತು. ಫ್ರಾನ್ಸ್ ಮತ್ತು ಸ್ಪೇನ್‌ಗಳೊಂದಿಗೆ 1630ರಲ್ಲಿ ಶಾಂತಿ ಕೌಲುಗಳಾದುವು. ಪ್ಯೂರಿಟನ್ನರೂ ಕೆಥೊಲಿಕರೂ ಅನುಕ್ರಮವಾಗಿ ಅಮೆರಿಕದ ಮ್ಯಾಸಚೂಸೆಟ್ಸ್ ಮತ್ತು ಮೇರಿಲ್ಯಾಂಡ್‌ಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದರು. ವಿದೇಶಿ ವಾಣಿಜ್ಯ ಹೆಚ್ಚುತ್ತಿತ್ತು. ಆದರೆ 1638ರಲ್ಲಿ ಸ್ಕಾಟ್‌ಲೆಂಡ್‌ನಲ್ಲಿ ಬಂಡಾಯ ಸಂಭವಿಸಿತು. ದೊರೆಯ ಧಾರ್ಮಿಕ ನೀತಿಯ ವಿರುದ್ಧ ಸ್ಕಾಚ್ ಜನ ಮಾಡಿದ ಬಿಷಪ್‌ಗಳ ಯುದ್ಧಗಳಲ್ಲಿ (1639, 1640) ದೊರೆಗೆ ಸೋಲಾಗಿ ಆತ ಕದನವಿರಾಮಕ್ಕೆ ಒಪ್ಪಿಕೊಂಡು, ಧನಸಹಾಯ ಕೇಳಲು 1640ರ ಏಪ್ರಿಲ್‌ನಲ್ಲಿ ಪಾರ್ಲಿಮೆಂಟನ್ನು ಕರೆದ. ಅಲ್ಪಾವಧಿಯ ಪಾರ್ಲಿಮೆಂಟ್ ಎಂದು ಪರಿಚಿತವಾದ ಈ ಅಧಿವೇಶನದಲ್ಲಿ ರಾಜ 12 ಬಗೆಯ ಕರಗಳ ಸಂಗ್ರಹಕ್ಕೆ ಅನುಮತಿ ಕೇಳಿದ. ಜನರ ಕುಂದುಕೊರತೆಗಳ ಚರ್ಚೆ ನಡೆಯಬೇಕೆಂದು ಜಾನ್ ಪಿಮ್ ಎಂಬ ನಾಯಕ ಒತ್ತಾಯಿಸಿದನಲ್ಲದೆ ಸ್ಕಾಟ್ಲೆಂಡ್ ಜೊತೆ ಯುದ್ಧವನ್ನು ಮತ್ತೆ ಆರಂಭಿಸುವುದನ್ನು ವಿರೋಧಿಸಿದ. ದೊರೆ ಪಾರ್ಲಿಮೆಂಟನ್ನು ವಿಸರ್ಜಿಸಿ ಷಿಪ್ ಮನಿ ಎಂಬ, ಯುದ್ಧಕಾಲದಲ್ಲಿ ಕರಾವಳಿಯ ನಿವಾಸಿಗಳಿಂದ ಸಂಗ್ರಹಿಸುತ್ತಿದ್ದ, ಕರದ ಸ್ವೀಕರಣೆಯನ್ನು ಮುಂದುವರಿಸಿದ. ಸ್ಕಾಟ್ಲೆಂಡ್ ಜೊತೆ ಯುದ್ಧ ಮುಂದುವರಿಸಿ ಸೋಲನ್ನುಂಡ. ತಿರುಗಿ ನವೆಂಬರ್ 1640ರಲ್ಲಿ ಪಾರ್ಲಿಮೆಂಟನ್ನು ಕರೆದ ದೀರ್ಘ ಪಾರ್ಲಿಮೆಂಟ್ ಎಂದು ಇದು ಪ್ರಸಿದ್ಧವಾಗಿದೆ. ಷಿಪ್ ಮನಿಯ ವಸೂಲಿಯನ್ನು ಅದು ಖಂಡಿಸಿತು. ದೊರೆಯ ಧರ್ಮನೀತಿಯನ್ನು ಪ್ರತಿಭಟಿಸಿತು. ಐರ್ಲೆಂಡಿನಲ್ಲಿ ದೊರೆ ನೇಮಿಸಿದ್ದ ಪ್ರತಿನಿಧಿ ಸ್ಟ್ರಾಫರ್ಡನ ವಿಚಾರಣೆಯಾಗಬೇಕೆಂದು ಹೇಳಿಕೆ ಮುಂದಿಟ್ಟಿತು. ಸ್ಟ್ರಾಫರ್ಡ್ ವಿಚಾರಣೆಗೆ ಒಳಗಾದ. ಅವನ ವಿಚಾರಣೆಯಲ್ಲಿ ಗೆಲುವು ದೊರಕದೆನಿಸಿದಾಗ ಪಾರ್ಲಿಮೆಂಟು ಸರ್ವನಾಶದ ಮಸೂದೆಗೆ (ಬಿಲ್ ಆಫ್ ಅಟೆಯಂಡರ್) ಮಂಜೂರಾತಿ ನೀಡಿತು. ಇದರ ಜೊತೆಗೆ, ಸದ್ಯದ ಪಾರ್ಲಿಮೆಂಟು ತನ್ನ ಸ್ವಂತ ನಿರ್ಣಯದ ವಿನಾ ವಿಸರ್ಜಿತವಾಗಲಾರದು ಎಂಬ ಒಂದು ನಿರ್ಣಯವನ್ನೂ ಮಂಜೂರು ಮಾಡಿ ದೊರೆಯ ಸಹಿಗಾಗಿ ಒತ್ತಾಯಪಡಿಸಿತು. ದೊರೆ ವಿಧಿಯಿಲ್ಲದೆ ಸಹಿ ಹಾಕಿದ. ಸ್ಟ್ರಾಫರ್ಡ್ ಮರಣದಂಡನೆಗೆ ಗುರಿಯಾದ.

1641ರ ನವೆಂಬರಿನಲ್ಲಿ ಕಾಮನ್ಸ್ ಸಭೆ ಮತ್ತೆ ಸೇರಿ, ಚಾರ್ಲ್ಸ್ ಪಟ್ಟವೇರಿ ಬಂದಾಗಿನಿಂದ ಅದುವರೆಗಿನ ಅವನ ಎಲ್ಲ ಕೃತಿಗಳಿಗಾಗಿ ಅವನ್ನು ಖಂಡಿಸುವ ಗ್ರ್ಯಾಂಡ್ ರೆಮಾನ್‌ಸ್ಟ್ರನ್ಸ್ ಎಂಬ ನಿರ್ಣಯವನ್ನು 159 ಪರ, 148 ವಿರುದ್ಧ ಮತಗಳಿಂದ ಸ್ವೀಕರಿಸಿತು. ಇದೇ ಕಾಲಕ್ಕೆ ಐರ್ಲೆಂಡಿನಲ್ಲಿ ಬಂಡಾಯವಾಯಿತು. ದೊರೆ ತನ್ನ ಸೇನಾಧಿಕಾರವನ್ನು ಬಿಟ್ಟುಕೊಡಬೇಕೆಂಬುದು ಪಾರ್ಲಿಮೆಂಟಿನ ಕೇಳಿಕೆಯಾಗಿತ್ತು. ರಾಣಿಯನ್ನೂ ವಿಚಾರಣೆಗೊಳಪಡಿಸುವುದು ಅದರ ಯೋಜನೆ. ಇದನ್ನರಿತ ದೊರೆ, ಕಾಮನ್ಸ್ ಸಭೆಯ ಸದಸ್ಯರನ್ನೇ ಬಂಧಿಸಬೇಕೆಂದು ಸೇನೆಯೊಡನೆ ಪಾರ್ಲಿಮೆಂಟಿಗೆ ಬಂದ. ಆದರೆ ಆ ಸದಸ್ಯರು ತಲೆತಪ್ಪಿಸಿಕೊಂಡಿದ್ದರು. ಇದರಿಂದ ಅಂತರ್ಯುದ್ಧಕ್ಕೆ ಹಾದಿಯಾಯಿತು. ಪಾರ್ಲಿಮೆಂಟರಿ ಸೇನೆಗಳು ದೊರೆಯ ಪಡೆಗಳನ್ನು ಹಲವು ಕದನಗಳಲ್ಲಿ ಸೋಲಿಸಿದುವು. 1649ರಲ್ಲಿ ದೊರೆ ಸೆರೆಸಿಕ್ಕಿದ. ವಿಶೇಷ ಉಚ್ಚ ನ್ಯಾಯಾಲಯವೊಂದು ಅವನನ್ನು ವಿಚಾರಣೆಗೆ ಗುರಿಪಡಿಸಿ, 1649 ಜನವರಿ 27ರಂದು ಅವನಿಗೆ ಮರಣದಂಡನೆ ವಿಧಿಸಿತು. ದೊರೆಯನ್ನು ಈ ಲೋಕದಲ್ಲಿ ಯಾವ ನ್ಯಾಯಾಲಯವೂ ವಿಚಾರಣೆಗೆ ಗುರಿಪಡಿಸಲಾರದೆಂದು ವಾದಿಸಿದ ಚಾರ್ಲ್ಸ್ ತಾನೊಬ್ಬ ಹುತಾತ್ಮನೆಂದೇ ಭಾವಿಸಿ ಮರಣವನ್ನಪ್ಪಿದ. ಕುಳ್ಳನಾಗಿದ್ದ, ಕೊಂಚ ಉಗ್ಗುತ್ತಿದ್ದ ಚಾರ್ಲ್ಸ್ ಚಿತ್ರಕಲೆಯ ಆರಾಧಕನಾಗಿದ್ದ. ವ್ಯಾನ್ ಡೈಕ್, ರೂಬೆನ್ಸ್ ಮೊದಲಾದ ಕಲಾವಿದರಿಗೆ ಆತ ಆಶ್ರಯ ನೀಡಿದ್ದ. ಕುದುರೆ ಸವಾರಿಯಲ್ಲೂ ಬೇಟೆಗಳಲ್ಲೂ ಅವನಿಗೆ ಆಸಕ್ತಿಯಿತ್ತು.

**ಚಾರ್ಲ್ಸ್ II**: 1630–85. ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ದೊರೆ (1660–85). 1ನೆಯ ಚಾರ್ಲ್ಸನ ಮಗ. ಈತ ಬ್ರಿಟನಿನ ಅಂತರ್ಯುದ್ಧದ ಅನಂತರ ದೇಶಭ್ರಷ್ಟನಾಗಿದ್ದು, ರಕ್ಷಕ ಶಾಸನ (ಪ್ರೊಟೆಕ್ಟೊರೇಟ್) ಕೊನೆಗೊಂಡು ರಾಜತ್ವ ಮತ್ತೆ ಸ್ಥಾಪನೆಯಾದಾಗ 1660ರಲ್ಲಿ ಪಟ್ಟಕ್ಕೆ ಬಂದ. ತಂದೆ 1ನೆಯ ಚಾರ್ಲ್ಸನ ಆಳ್ವಿಕೆಯ ಕಾಲದಲ್ಲಿ ಈತ ದೇಶತ್ಯಾಗ ಮಾಡಬೇಕಾಯಿತು. ಅಲ್ಲಲ್ಲಿ ಅಲೆದಾಡಿ 1646ರಲ್ಲಿ ಪ್ಯಾರಿಸಿಗೆ ಬಂದ. ಅಲ್ಲಿ ತನ್ನ ತಾಯಿಯ ಮೇಲ್ವಿಚಾರಣೆಯಲ್ಲಿ ಶಿಕ್ಷಣ ಪಡೆದ. ತಂದೆಯ ಜೀವವನ್ನು ಉಳಿಸಲು ಇವನು ಮಾಡಿದ ಪ್ರಯತ್ನಗಳೂ ಮನವಿಗಳೂ ಫಲಿಸಲಿಲ್ಲ. ಒಂದನೆಯ ಚಾರ್ಲ್ಸ್ ಮರಣದಂಡನೆಗೆ ಗುರಿಯಾದ ಮೇಲೆ ಇವನನ್ನು ರಾಜಪಕ್ಷದವರು ದೊರೆಯೆಂದು ಘೋಷಿಸಿದರಾದರೂ ಇವನು ಅಸಹಾಯಕ ಸ್ಥಿತಿಯಲ್ಲೇ ಇದ್ದ. ಸ್ಕಾಟ್ಲೆಂಡಿಗೆ ತೆರಳಿ ಅಲ್ಲಿಯ ದೊರೆಯೆಂದು ಕಿರೀಟಧಾರಣೆ ಮಾಡಿಸಿಕೊಂಡ. ಅಲ್ಲಿಂದ ಇಂಗ್ಲೆಂಡಿನ ಮೇಲೆ ನಡೆಸಿದ ದಂಡಯಾತ್ರೆ ವಿಫಲವಾಯಿತು. ಆಲಿವರ್ ಕ್ರಾಮ್ವೆಲ್ ಇವನನ್ನು ಸೋಲಿಸಿದ. ಇವನು ಫ್ರಾನ್ಸಿಗೆ ಪಲಾಯನ ಮಾಡಿದ. ತಾಯಿಯೊಂದಿಗೂ ಜಗಳವಾಡಿದ. ಕ್ರಾಮ್ವೆಲನ ರಾಜ ತಂತ್ರಕುಶಲತೆಯಿಂದಾಗಿ ಇವನಿಗೆ ಫ್ರಾನ್ಸ್ ಮತ್ತು ನೆದರ್ಲೆಂಡ್‌ಗಳ ಬೆಂಬಲ ದೊರಕಲಿಲ್ಲ. ಸ್ಪೇನಿನ ಸಹಾಯ ಪಡೆದು ಸ್ಪ್ಯಾನಿಷ್ ನೆದರ್ಲೆಂಡ್ಸಿನಲ್ಲಿ ನೆಲೆನಿಂತ. ಕ್ರಾಮ್ವೆಲನ ಮರಣಾನಂತರ ಇಂಗ್ಲೆಂಡಿನಲ್ಲಿ ಆದ ಬದಲಾವಣೆಗಳ ಪರಿಣಾಮವಾಗಿ ಪಾರ್ಲಿಮೆಂಟ್ ಇವನನ್ನು ಮತ್ತೆ ಇಂಗ್ಲೆಂಡಿಗೆ ಬಂದು ಆಳಬೇಕೆಂದು ಆಮಂತ್ರಿಸಿತು. ಮೇ 1660ರಲ್ಲಿ ಇವನನ್ನು ಇಂಗ್ಲೆಂಡಿನ ದೊರೆಯೆಂದು ಘೋಷಿಸಲಾಯಿತು. ಏಪ್ರಿಲ್ 1661ರಲ್ಲಿ ಇವನಿಗೆ ಕಿರೀಟಧಾರಣೆಯಾಯಿತು. ಪೋರ್ಚುಗಲ್ ರಾಜಕುಮಾರಿ ಕ್ಯಾಥರಿನ್ ಬ್ರಗಾಂಜಳನ್ನು



ಈತ ವರಿಸಿದ. 3 ಲಕ್ಷ ಪೌಂಡುಗಳ ವರ ದಕ್ಷಿಣೆಯ ಜೊತೆಗೆ ಮುಂಬೈ, ಟಾಂಜಿಯರ್‌ಗಳು ಉಡುಗೊರೆಯಾಗಿ ಬಂದವು. ಎಡ್ವರ್ಡ್ ಹೈಡನನ್ನು ಚಾರ್ಲ್ಸ್ ತನ್ನ ಚಾನ್ಸಲರ್ ಆಗಿ ಆಯ್ಕೆ ಮಾಡಿ ಅವನನ್ನು ಕ್ಲ್ಯಾರೆಂಡನ ಅರ್ಲ್ ಆಗಿ ನೇಮಿಸಿದ. ಆದರೆ ರಾಜನಿಗೂ ಪಾರ್ಲಿಮೆಂಟಿಗೂ ನಡುವೆ ರಾಜಕೀಯ ವಿಚಾರಗಳಲ್ಲೂ ಧಾರ್ಮಿಕ ವಿಚಾರಗಳಲ್ಲೂ ತೀವ್ರ ಭಿನ್ನಾಭಿಪ್ರಾಯಗಳಿದ್ದುವು. ಪಾರ್ಲಿಮೆಂಟ್ ಉಗ್ರವಾಗಿ ಆಂಗ್ಲಿಕನ್ ಸಂಪ್ರದಾಯವನ್ನು ಎತ್ತಿ ಹಿಡಿದು ಇನ್ನೆಲ್ಲ ಪಂಥಗಳನ್ನೂ ಹತ್ತಿಕ್ಕುವ ವಿಚಾರ ಹೊಂದಿತ್ತು. ಚಾರ್ಲ್ಸ್ ಕ್ಯಾತೊಲಿಕ್ ಸಂಪ್ರದಾಯದ ಬಗ್ಗೆ ಸಹಾನುಭೂತಿಯುಳ್ಳವನಾಗಿದ್ದು, ಧಾರ್ಮಿಕ ಸಹಿಷ್ಣುತೆಯನ್ನು ಜಾರಿಗೆ ತರಬೇಕೆಂದಿದ್ದ. ಆದರೆ ಪಾರ್ಲಿಮೆಂಟು 1662ರಲ್ಲಿ ಮತ್ತು 1673ರಲ್ಲಿ ಎರಡು ಅಧಿನಿಯಮಗಳನ್ನು ಸ್ವೀಕರಿಸಿ, ಆಂಗ್ಲಿಕನರಲ್ಲದವರ ಧಾರ್ಮಿಕ ಸ್ವಾತಂತ್ರ್ಯಗಳನ್ನು ಕಸಿದುಕೊಂಡಿತು. ಇದೇ ಕಾಲಕ್ಕೆ 1665ರಲ್ಲಿ ಹಾಲೆಂಡಿನ ವಿರುದ್ಧ ಇಂಗ್ಲೆಂಡು ಯುದ್ಧ ಘೋಷಿಸಿ ಸೋಲನ್ನುಂಡಿತು. ಡಚ್ ನೌಕಾದಳ ಥೇಮ್ಸ್ ನದಿಯನ್ನು ಪ್ರವೇಶಿಸಿ ಲಂಡನ್ನಿನ ಚಟುವಟಿಕೆಯನ್ನು ಸ್ಥಗಿತಗೊಳಿಸಿತು. ಈ ಸೋಲಿಗಾಗಿ ರಾಜನನ್ನು ಆತನ ಸೋದರನೂ ಬ್ರಿಟನಿನ ನೌಕಾ ಸೇನಾನಿಯೂ ಆಗಿದ್ದ ಜೇಮ್ಸ್‌ನನ್ನೂ ಟೀಕಿಸಲಾಯಿತು. ಯುದ್ಧ ಮುಂದುವರಿಯುತ್ತಿದ್ದಂತೆ ಬ್ರಿಟನಿನಲ್ಲಿ ವ್ಯಾಪಕವಾಗಿ ಪ್ಲೇಗ್ ಪಿಡುಗು ಕಾಣಿಸಿಕೊಂಡು ಸಾವಿರಾರು ಜನರು ಸತ್ತರು. ಮರುವರ್ಷ ಲಂಡನ್ನಿನಲ್ಲಿ ಸಂಭವಿಸಿದ ಭಾರಿ ಬೆಂಕಿ ಆಕಸ್ಮಿಕದಿಂದಾಗಿ ಸೇಂಟ್ ಪಾಲ್ಸ್ ಕಥೀಡ್ರಲೂ ಸೇರಿ ಲಂಡನ್ನಿನ ಬಹುಭಾಗ ನಾಶವಾಯಿತು. ಜನ ತೀರ ಅಸಮಾಧಾನಗೊಂಡರು. ಡಚ್ ಯುದ್ಧ ಮುಗಿದಾಗ ಕ್ಲ್ಯಾರೆಂಡನನನ್ನು ಚಾರ್ಲ್ಸ್ ಕಿತ್ತೊಗೆಯಬೇಕಾಯಿತು. ಪಾರ್ಲಿಮೆಂಟಿನ ಹಿಡಿತದಿಂದ ಬೇಸತ್ತು ರಾಜ 1670ರ ಮೇ ತಿಂಗಳಲ್ಲಿ ಇಂಗ್ಲೆಂಡಿನ ವೈರಿಯಾದ, ಫ್ರಾನ್ಸಿನ ದೊರೆ 14ನೆಯ ಲೂಯಿಯ ಜೊತೆ ಡೋವರ್ ಗುಪ್ತ ಕೌಲು ಮಾಡಿಕೊಂಡ. ಈ ಕೌಲಿನಂತೆ ಕೆಥೊಲಿಕರಿಗೆ ಇಂಗ್ಲೆಂಡಿನಲ್ಲಿ ಸ್ವಾತಂತ್ರ್ಯ ನೀಡಲು ರಾಜ ಒಪ್ಪಿಕೊಂಡ; ಫ್ರಾನ್ಸಿಗೆ ಅನುಕೂಲವಾದ ವಿದೇಶ ನೀತಿಯನ್ನು ಅನುಸರಿಸಲು ಸಮ್ಮತಿಸಿದ. ಲೂಯಿ ಚಾರ್ಲ್ಸನಿಗೆ ಆರ್ಥಿಕ ನೆರವು ನೀಡಲು ಮುಂದಾದ. ಇದರಿಂದ ಹಣಕ್ಕಾಗಿ ಚಾರ್ಲ್ಸ್ ಪಾರ್ಲಿಮೆಂಟನ್ನು ಅವಲಂಬಿಸಬೇಕಾಗಿರಲಿಲ್ಲ. ಈ ದೇಶಘಾತಕ ಒಪ್ಪಂದವೇ 2ನೆಯ ಜೇಮ್ಸನ ಕಾಲದ ಅಪಾಯಕರ ಬೆಳವಣಿಗೆಗಳಿಗೆ ಕಾರಣವಾಯಿತೆಂದು ಒಬ್ಬ ಇತಿಹಾಸಕಾರ ಹೇಳಿದ್ದಾನೆ. 1772ರಲ್ಲಿ ಲೂಯಿಯ ಇಚ್ಛೆಯಂತೆ ಚಾರ್ಲ್ಸ್ ಹಾಲೆಂಡಿನ ವಿರುದ್ಧ ಯುದ್ಧ ಘೋಷಿಸಿದ. ಇದನ್ನು ಬ್ರಿಟನ್ನಿನ ಜನ ಮೆಚ್ಚಲಿಲ್ಲ. ಡೋವರ್ ಕೌಲಿನ ಗೌಪ್ಯ ಶೀಘ್ರವೇ ಬಯಲಾಯಿತು. ಇದರಿಂದ ಪಾರ್ಲಿಮೆಂಟ್ ಮತ್ತು ಆಂಗ್ಲಿಕನ್ ಪಕ್ಷದವರು ರಾಜನ ವಿರುದ್ಧ ಸಿಡಿದೆದ್ದರು. ಕೆಥೊಲಿಕರಿಗೆ ಸ್ವಾತಂತ್ರ್ಯ ನೀಡುವ ರಾಜನ ಯತ್ನವನ್ನು ಅವರು ವಿಫಲಗೊಳಿಸಿದರು. ಕೆಥೊಲಿಕರ ವಿರುದ್ಧ ಅಪಪ್ರಚಾರ ಆರಂಭವಾಯಿತು. ಲಂಡನ್ನಿನ ಅಗ್ನಿಕಾಂಡಕ್ಕೆ ಕೆಥೊಲಿಕರೇ ಕಾರಣವೆಂದು ಹೇಳಲಾರಂಭವಾಯಿತು.

ಟೇಟಸ್ ಓಟ್ಸ್ ಎಂಬ ಒಬ್ಬ ಆಂಗ್ಲಿಕನ್ ಪಾದ್ರಿ ಪೋಪನ ಪಿತೂರಿ ಎಂಬ ವದಂತಿಯೊಂದನ್ನು ಹುಟ್ಟಿಸಿದ. ರಾಜನನ್ನೂ ಪ್ರಾಟೆಸ್ಟಂಟ್ ರಾಜಕಾರಣಿಗಳನ್ನೂ ಕೊಲೆ ಮಾಡಿ ಇಂಗ್ಲೆಂಡನ್ನು ಜೆಸುಯಿಟರಿಗೆ ಒಪ್ಪಿಸಲು ಕೆಥೊಲಿಕರು (ಪೋಪನ ಅನುಯಾಯಿಗಳು)ಪಿತೂರಿ ನಡೆಸಿದ್ದಾರೆಂದು ಆಪಾದಿಸಲಾಯಿತು. ಇದೇ ಕಾಲಕ್ಕೆ ರಾಜನ ಸೋದರನೂ ಸಿಂಹಾಸನದ ಉತ್ತರಾಧಿಕಾರಿಯೂ ಕೆಥೊಲಿಕನೂ ಆದ ಜೇಮ್ಸನನ್ನು ಸಿಂಹಾಸನಾರೋಹಣ ಮಾಡದಂತೆ ತಡೆಯಬೇಕೆಂಬ ಉದ್ದೇಶದಿಂದ ಎಕ್ಸ್‌ಕ್ಲೂಷನ್ ಮಸೂದೆಯನ್ನು ಮಂಡಿಸಲು ಪಾರ್ಲಿಮೆಂಟಿನಲ್ಲಿ ಯತ್ನ ನಡೆಯಿತು. 1679ರಲ್ಲಿ ಮಂಡಿಸಿದ ಈ ಮಸೂದೆ ಕಾಮನ್ಸ್ ಸಭೆಯಲ್ಲಿ ಮಂಜೂರಾದರೂ ಲಾರ್ಡ್ಸ್ ಸಭೆಯಲ್ಲಿ ತಿರಸ್ಕೃತವಾಯಿತು. ಮಸೂದೆಯ ಸಮರ್ಥಕರನ್ನು ವಿಗ್‌ಗಳೆಂದೂ ವಿರೋಧಿಗಳನ್ನು ಟೋರಿಗಳೆಂದೂ ಹೀಗಳೆಯಲಾಯಿತು. ಇದೇ ಮುಂದಿನ ಪಕ್ಷಪದ್ಧತಿಗೆ ತಳಹದಿ. ಈ ಚಟುವಟಿಕೆಯಿಂದ ಬೇಸತ್ತ ಚಾರ್ಲ್ಸ್ ಪಾರ್ಲಿಮೆಂಟನ್ನು ವಿಸರ್ಜಿಸಿದ (1681). ತನ್ನ ಜೀವನದ ಉಳಿದ ವರ್ಷಗಳಲ್ಲಿ ಚಾರ್ಲ್ಸ್ ಪಾರ್ಲಿಮೆಂಟಿನ ನೆರವಿಲ್ಲದೆ ಆಳಿದ. ಫ್ರಾನ್ಸಿನ ಲೂಯಿಯ ಜೊತೆಗೆ ಮತ್ತೆ ಒಪ್ಪಂದ ಮಾಡಿಕೊಂಡು ಅವನಿಂದ ಧನಸಹಾಯ ಪಡೆದ. ಈ ನಡುವೆ ಪೋಪನ ಪಿತೂರಿ ಕಟ್ಟುಕತೆಯೆಂಬುದು ಮನವರಿಕೆಯಾಗಿ ವಿಗ್ ಪಕ್ಷದವರು ಗೌರವ ಕಳೆದುಕೊಂಡರು. ರಾಜನ ಪರವಾಗಿ ಸಾರ್ವಜನಿಕಾಭಿಪ್ರಾಯ ರೂಪಿತವಾಯಿತು. 1685ರಲ್ಲಿ ಆತ ತೀರಿಕೊಂಡಾಗ ಅವನ ಸೋದರ ಜೇಮ್ಸ್ ಪಟ್ಟಕ್ಕೆ ಬರಲು ಕಷ್ಟವಾಗಲಿಲ್ಲ.

ಚಾರ್ಲ್ಸನಿಗೆ ಸ್ವಪತ್ನಿಯಲ್ಲಿ ಮಕ್ಕಳಿರಲಿಲ್ಲವಾದರೂ ಅವನ ಉಪಪತ್ನಿಯರ ಮೂಲಕ ಅವನಿಗೆ 14 ಜನ ಮಕ್ಕಳಿದ್ದರು. ಎತ್ತರದ ಆಕಾರದ, ಸುಂದರನಾದ ಮತ್ತು ವಿನೋದಪರನಾದ ಚಾರ್ಲ್ಸ್ ವಿಲಕ್ಷಣ ವ್ಯಕ್ತಿ. ಸ್ಟುವರ್ಟ್ ದೊರೆಗಳಲ್ಲೇ ಈತ ಸಮರ್ಥನಾದವನು. ಟ್ಯೂಡರ್ ದೊರೆಗಳ ಕಾಲದಲ್ಲಿ ಆರಂಭವಾದ ಪುನರುಜ್ಜೀವನ ಇವನ ಕಾಲದಲ್ಲಿ ಮುಂದುವರಿಯಿತು. ರಾಯಲ್ ಸೊಸೈಟಿ ಆರಂಭವಾದ್ದು ಇವನ ಕಾಲದಲ್ಲೇ (1662). ಇವನ ಆಳ್ವಿಕೆಯ ಸಮಯದಲ್ಲಿ ದೇಶದಲ್ಲಿ ವೈಜ್ಞಾನಿಕ ಚಟುವಟಿಕೆ ಹೆಚ್ಚಿತು. ವಾಣಿಜ್ಯ ಬೆಳೆವಣಿಗೆ, ವಸಾಹತು ಸ್ಥಾಪನೆಗಳು ಭರದಿಂದ ಮುಂದುವರಿದುವು. (ಎಸ್.ಎನ್.ಕೆ.ಎ.)

**ಚಾರ್ಲ್ಸ್ (ನೇಪಲ್ಸ್, ಸಿಸಿಲಿ ದೊರೆಗಳು): ಚಾರ್ಲ್ಸ್ I** : 1265–85ರಲ್ಲಿ ನೇಪಲ್ಸ್ ಮತ್ತು ಸಿಸಿಲಿಗಳ ದೊರೆಯಾಗಿದ್ದ. ಫ್ರಾನ್ಸಿನ 8ನೆಯ ಲೂಯಿಯ ಮಗ; 9ನೆಯ ಲೂಯಿಯ ತಮ್ಮ. ಜನನ 1226. ಅಂಜುವಿನ ಕೌಂಟ್ ಆಗಿದ್ದ ಈತ 1248ರಲ್ಲಿ ತನ್ನ ಸೋದರನ ಜೊತೆ ಧರ್ಮಸಂಬಂಧಿ ಯುದ್ಧದಲ್ಲಿ ಭಾಗವಹಿಸಿ ಈಜಿಪ್ಟಿಗೆ ಹೋಗಿದ್ದ. ಅಲ್ಲಿ ಅಣ್ಣನೊಂದಿಗೆ ಇವನೂ ಬಂಧನಕ್ಕೊಳಗಾದ. ಬಿಡುಗಡೆ ಹೊಂದಿದ ಮೇಲೆ 1257ರಲ್ಲಿ ಮರ್ಸಾಯನ್ನು ಗೆದ್ದಾಗ ಇವನಿಗೆ ಖ್ಯಾತಿ ಬಂತು. ಪೋಪ್ 4ನೆಯ ಕ್ಲೆಮೆಂಟನ ಆಮಂತ್ರಣದಂತೆ ಈತ ನೇಪಲ್ಸಿನ ಮೇಲೆ ದಂಡೆತ್ತಿ ಹೋಗಿ, ಹಾಹೆನ್‌ಸ್ಟಾಫೆನ್ ಮನೆತನದ ರಾಜರನ್ನು ಸೋಲಿಸಿ 1265ರಲ್ಲಿ ನೇಪಲ್ಸಿನ ದೊರೆಯಾದ. ಪೋಪನ ವಿಶ್ವಾಸ ಗಳಿಸಿದ್ದ ಯುರೋಪಿನ ಆಗಿನ ಪ್ರಭಾವಿ ಅರಸರಲ್ಲಿ ಈತನೂ ಒಬ್ಬ. ಆದರೆ ಈತ ಕ್ರೂರಿ. 1282ರಲ್ಲಿ ಸಿಸಿಲಿಯಲ್ಲಿ ಬಂಡಾಯವಾಯಿತು; ಅದನ್ನು ಹತ್ತಿಕ್ಕುವ ಮೊದಲೇ ಈತ ತೀರಿಕೊಂಡ. ನೇಪಲ್ಸಿನಿಂದ ಸಿಸಿಲಿ ದೀರ್ಘಕಾಲ ಪ್ರತ್ಯೇಕವಾಗಿತ್ತು.

**ಚಾರ್ಲ್ಸ್ II :** ನೇಪಲ್ಸಿನ–ಮತ್ತು ನಾಮಮಾತ್ರಕ್ಕೆ ಸಿಸಿಲಿಯ–ದೊರೆ (1289–1309). ಜನನ 1250. 1ನೆಯ ಚಾರ್ಲ್ಸನ ಮಗ. 1284ರಲ್ಲಿ ಸಿಸಿಲಿಯ ಬಂಡಾಯದಲ್ಲಿ ಬಂಧಿತನಾದ. 1288ರಲ್ಲಿ ಇವನ ಬಿಡುಗಡೆಯಾಯಿತು. ಪೋಪ್ 5ನೆಯ ಮಾರ್ಟಿನ್ 1289ರಲ್ಲಿ ಈತನಿಗೆ ನೇಪಲ್ಸ್ ಮತ್ತು ಸಿಸಿಲಿಗಳ ಪಟ್ಟ ಕಟ್ಟಿದ. ಪೋಪನ ಪ್ರೇರಣೆಯಂತೆ ಸಿಸಿಲಿಯನ್ನು ಗೆಲ್ಲಲು ಈತ ಮಾಡಿದ ಯತ್ನಗಳೆಲ್ಲ ವ್ಯರ್ಥವಾದುವು. 1302ರಲ್ಲಿ ಸಿಸಿಲಿಯ ಮೇಲೆ ಆರಗಾನ್ ಮನೆತನದವರ ಹಕ್ಕನ್ನು ಈತ 1302ರಲ್ಲಿ ಮಾನ್ಯ ಮಾಡಿದ. ಇವನ ಅನಂತರ ಇವನ ಮಗ ರಾಬರ್ಟನಿಗೆ ನೇಪಲ್ಸಿನ ದೊರೆಯ ಪಟ್ಟವಾಯಿತು.

(ಎಸ್.ಎನ್.ಕೆ.ಎ.)

**ಚಾರ್ಲ್ಸ್ (ಫ್ರಾನ್ಸಿನ ದೊರೆಗಳು) : ಚಾರ್ಲ್ಸ್ I** : ಪವಿತ್ರ ರೋಮನ್ ಸಾಮ್ರಾಜ್ಯದ ಚಾರ್ಲ್ಸ್ II. (ನೋಡಿ– ಚಾರ್ಲ್ಸ್–(ಪವಿತ್ರ–ರೋಮನ್–ಚಕ್ರವರ್ತಿಗಳು).

**ಚಾರ್ಲ್ಸ್ II:** ಪವಿತ್ರ ರೋಮನ್ ಸಾಮ್ರಾಜ್ಯದ ಚಾರ್ಲ್ಸ್ III. (ನೋಡಿ– ಚಾರ್ಲ್ಸ್–(ಪವಿತ್ರ–ರೋಮನ್–ಚಕ್ರವರ್ತಿಗಳು).

**ಚಾರ್ಲ್ಸ್ III :** ಚಾರ್ಲ್ಸ್ ದಿ ಸಿಂಪಲ್ ಎಂದು ಇವನ ಹೆಸರು. 893–923ರಲ್ಲಿ ಫ್ರಾನ್ಸಿನ ದೊರೆಯಾಗಿದ್ದ. ಎರಡನೆಯ ಲೂಯಿಯ ಮರಣೋತ್ತರ ಪುತ್ರ. ಜನನ 879. ಚಕ್ರವರ್ತಿ ಮೂರನೆಯ ಚಾರ್ಲ್ಸ್ (ದಿ ಫ್ಯಾಟ್) ಪದಚ್ಯುತಿಗೊಂಡಾಗ (887) ಈತ ತೀರ ಎಳೆಯವನೆಂಬ ಕಾರಣದಿಂದ ಇವನಿಗೆ ಸಿಂಹಾಸನ ದೊರಕಲಿಲ್ಲ. ಆಡೊನ ಆಡಳಿತ ನಡೆದಾಗ ಕೆಲವು ಪ್ರತಿಷ್ಠಿತರು ರೇಮ್ಸ್‌ನಲ್ಲಿ ಈತನಿಗೆ ಪಟ್ಟ ಕಟ್ಟಿದರು. ಸಮ್ರಾಟ ಆರ್ನಲ್ಫನ ಬೆಂಬಲವೂ ಈತನಿಗೆ ದೊರೆಯಿತು. ಆಡೊ ಇವನಿಗೆ ರಾಜ್ಯದ ಕೆಲವು ಭಾಗಗಳನ್ನು ಬಿಟ್ಟುಕೊಟ್ಟ. 898ರಲ್ಲಿ ಆಡೊ ಸತ್ತಾಗ ಇಡೀ ರಾಜ್ಯಕ್ಕೆ ಈತ ದೊರೆಯಾದ. ನಾರ್ಮನರ ಜೊತೆ ಒಪ್ಪಂದ ಮಾಡಿಕೊಂಡು ಅವರಲ್ಲಿ ಅನೇಕರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಿದ್ದು ಇವನ ಹಿರಿಯ ಸಾಧನೆ. (911). 922ರಲ್ಲಿ ಪ್ರಮುಖರು ರಾಬರ್ಟನನ್ನು ದೊರೆಯಾಗಿ ಆರಿಸಿದರು. ಚಾರ್ಲ್ಸ್ ಅವನ ಮೇಲೆ ಯುದ್ಧ ಮಾಡಿ ಅವನನ್ನು ಕೊಂದನಾದರೂ ಅನಂತರ ಸೆರೆ ಸಿಕ್ಕ. ಬಂಧನದಲ್ಲೇ ಆತ ತೀರಿಕೊಂಡ.

**ಚಾರ್ಲ್ಸ್ IV :** 1322–28ರಲ್ಲಿ ಫ್ರಾನ್ಸಿನ ದೊರೆಯಾಗಿದ್ದ ಈತನಿಗೆ ಚಾರ್ಲ್ಸ್ ದಿ ಫೇರ್ ಎಂದು ಹೆಸರು. ದೊರೆ 4ನೆಯ ಫಿಲಿಪನ ಮೂರನೆಯ ಮಗ. 1322ರಲ್ಲಿ ತನ್ನ ಅಣ್ಣ 5ನೆಯ ಫಿಲಿಪ್ ತೀರಿಕೊಂಡಾಗ ಅವನ ಹೆಣ್ಣುಮಕ್ಕಳ ಹಕ್ಕನ್ನು ಬದಿಗೊತ್ತಿ ಈತ ಪಟ್ಟಕ್ಕೆ ಬಂದ. 1324 ರಿಂದ 27ರವರೆಗೆ ಇಂಗ್ಲೆಂಡ್ ಜೊತೆ ಯುದ್ಧ ನಡೆಸಿದ. ಫ್ರಾನ್ಸಿನಲ್ಲಿದ್ದ ಇಂಗ್ಲಿಷ್ ದೊರೆಯ ಜಹಗೀರಿನ ಕೆಲವು ಭಾಗಗಳನ್ನು ಕಸಿದುಕೊಂಡ. 1328ರಲ್ಲಿ ಈತ ತೀರಿಕೊಂಡಾಗ ಕಪೇಷಿಯನ್ ವಂಶದ ನೇರ ಉತ್ತರಾಧಿಕಾರದ ಕೊನೆಯಾಯಿತು.

**ಚಾರ್ಲ್ಸ್ V :** 1364–80ರಲ್ಲಿ ಫ್ರಾನ್ಸಿನ ದೊರೆ, ಇಂಗ್ಲೆಂಡಿನೊಂದಿಗೆ ನಡೆದ ನೂರು ವರ್ಷಗಳ ಯುದ್ಧದ ಸಂದಿಗ್ಧ ಸಮಯದಲ್ಲಿ ಫ್ರಾನ್ಸನ್ನು ರಕ್ಷಿಸಿದ ಸಮರ್ಥ. ದೊರೆ 2ನೆಯ ಜಾನನ ಮಗ. 1337ರಲ್ಲಿ ಜನಿಸಿದ. ಇಂಗ್ಲೆಂಡಿನೊಂದಿಗೆ ನಡೆದ ಯುದ್ಧದಲ್ಲಿ 1356ರಲ್ಲಿ ಆಂಗ್ಲರು ಜಾನನನ್ನು ಬಂಧಿಸಿ ಒಯ್ದಾಗ ರಾಜ್ಯಾಡಳಿತವನ್ನು ಸಮರ್ಥವಾಗಿ ನಿರ್ವಹಿಸಿದ ಈತ ಆ ಕಾಲದಲ್ಲಿ ಅನೇಕ ನೊಬೆಲ್‌ಗಳಿಂದಲೂ ಪ್ಯಾರಿಸಿನ ನಾಯಕರಿಂದಲೂ ವಿರೋಧವನ್ನು ಎದುರಿಸಬೇಕಾಯಿತು. ಇವನ ತಂದೆಯ ಶತ್ರುವಾಗಿದ್ದು, ಅವನಿಂದ ಬಂಧಿತನಾಗಿದ್ದ ನವಾರ್‌ನ ಚಾರ್ಲ್ಸ್ ಬಿಡುಗಡೆ ಹೊಂದಿ ಅನ್ಯ ನಾಯಕರ ಜೊತೆ ಸೇರಿ ಅವನ ಅಧಿಕಾರವನ್ನು ವಿರೋಧಿಸಿ, ಬ್ರಿಟಿಷರೊಂದಿಗೆ ಸ್ನೇಹ ಮಾಡಿದ್ದ. ಎಸ್ಟೇಟ್ಸ್–ಜನರಲ್ 1358ರಲ್ಲಿ ಚಾರ್ಲ್ಸನಿಗೆ ಕರ ಸಂಗ್ರಹಿಸುವ ಅಧಿಕಾರ ನೀಡಿ, ಯುದ್ಧ ಮುಂದುವರಿಸಲು ಇದ್ದ ಹಣದ ಅಡಚಣೆಯನ್ನು ನಿವಾರಿಸಿತು. ಜಾನ್ 1359ರಲ್ಲಿ ಸೆರೆಯಿಂದ ಬಿಡುಗಡೆ ಹೊಂದಲು ಪ್ರಯತ್ನಿಸಿ ಲಂಡನಿನಲ್ಲಿ ಬ್ರಿಟನ್ನಿನ ಜೊತೆಗೆ ಮಾಡಿಕೊಂಡ ಒಪ್ಪಂದವನ್ನು ತಿರಸ್ಕರಿಸಲು ಚಾರ್ಲ್ಸನಿಗೆ ಎಸ್ಟೇಟ್ಸ್–ಜನರಲ್ ಅನುಮತಿ ನೀಡಿತಲ್ಲದೆ ಯುದ್ಧವನ್ನು ಮುಂದುವರಿಸಲು ಅಧಿಕಾರ ನೀಡಿ ಹಣ ಮಂಜೂರು ಮಾಡಿತು. 1359 ಅಕ್ಟೋಬರಿನಲ್ಲಿ ಇಂಗ್ಲೆಂಡಿನ 3ನೆಯ ಎಡ್ವರ್ಡ್ ಫ್ರಾನ್ಸಿನ ಮೇಲೆ ದಂಡೆತ್ತಿ ಬಂದ. ಮುಂದೆ 1360ರಲ್ಲಿ ಬ್ರಿಟನ್ನಿನೊಂದಿಗೆ ಒಪ್ಪಂದವಾಯಿತು. ಎಡ್ವರ್ಡ್ ಸ್ವದೇಶಕ್ಕೆ ಮರಳಿದ. ಈ ಒಪ್ಪಂದದಂತೆ ಫ್ರಾನ್ಸ್ ನೀಡಬೇಕಾಗಿದ್ದ ಒತ್ತೆ ಹಣವನ್ನು ನೀಡಲಾಗಲಿಲ್ಲ. 1360ರಲ್ಲಿ ಮುಕ್ತನಾದ ಜಾನ್ ಇಂಗ್ಲೆಂಡಿಗೆ ಮರಳಿ 1364ರಲ್ಲಿ ಅಲ್ಲಿ ತೀರಿಕೊಂಡ. ಅದೇ ವರ್ಷ ಚಾರ್ಲ್ಸನಿಗೆ ಕಿರೀಟಧಾರಣೆಯಾಯಿತು. 1371ರಲ್ಲಿ ಯುದ್ಧ ಮತ್ತೆ ಆರಂಭವಾಯಿತು. ಫ್ರಾನ್ಸಿನದು ಮೇಲುಗೈಯಾಯಿತು. ಗಾರೊನ್ ನದಿಯ ಉತ್ತರಕ್ಕೆ ಬ್ರಿಟಿಷರ ವಶದಲ್ಲಿದ್ದ ಎಲ್ಲ ಫ್ರೆಂಚ್ ಪ್ರದೇಶಗಳನ್ನೂ ಅವರು ಬಿಟ್ಟುಕೊಡಬೇಕಾಯಿತು. 1380ರ ಹೊತ್ತಿಗೆ ಕೇವಲ ಐದು ಫ್ರೆಂಚ್ ಪಟ್ಟಣಗಳಷ್ಟೇ ಅವರ ವಶದಲ್ಲಿ ಉಳಿದುವು.

ಚಾರಿತ್ರ್ಯವಂತನೂ ಸಮಾಧಾನಚಿತ್ತದವನೂ ದೂರದೃಷ್ಟಿಯವನೂ ಆದ ಚಾರ್ಲ್ಸ್ ಒಳ್ಳೆಯ ಸಲಹೆಗಾರರನ್ನು ಹೊಂದಿದ್ದ. ಆಡಳಿತ, ಅರ್ಥವ್ಯವಸ್ಥೆಗಳನ್ನು ಚೆನ್ನಾಗಿ ರೂಪಿಸಿದ. ಶ್ರೀಮಂತರ ಶಕ್ತಿಯನ್ನು ಮಿತಗೊಳಿಸಿದ. ಆತನಿಗೆ ತತ್ತ್ವಜ್ಞಾನ, ವೈದ್ಯ, ಜ್ಯೋತಿಷ್ಯಗಳಲ್ಲಿ ಆಸ್ಥೆಯಿತ್ತು. ಆತ ಒಂದು ಒಳ್ಳೆಯ ಗ್ರಂಥಾಲಯವನ್ನು ಸ್ಥಾಪಿಸಿದ್ದ.

**ಚಾರ್ಲ್ಸ್ VI :** 1380–1422ರಲ್ಲಿ ಫ್ರಾನ್ಸಿನ ದೊರೆಯಾಗಿದ್ದವ. ಐದನೆಯ ಚಾರ್ಲ್ಸನ ಮಗ. 1368ರಲ್ಲಿ ಜನಿಸಿದ. ಈತ ಪಟ್ಟಕ್ಕೆ ಬಂದಾಗ ಇನ್ನೂ ಎಳೆಯನಾಗಿದ್ದ. ರಾಜನ ಸಂಬಂಧಿಗಳೂ ಕೆಲವು ಗಣ್ಯ ಶ್ರೀಮಂತರೂ ಆರಂಭದಲ್ಲಿ ಆಡಳಿತ ನಿರ್ವಹಿಸಿದರು. ಆದರೆ ಈತ ಪಟ್ಟಕ್ಕೆ ಬಂದಾಗಲೇ ಫ್ರಾನ್ಸಿನ ಅನೇಕ ನಗರಗಳು ಭಾರಿ ಕರಭಾರದ ವಿರುದ್ಧವಾಗಿ ಬಂಡೆದ್ದುವು. ಫ್ಲಾಂಡರ್ಸಿನ ನಗರಗಳಿಗೆ ಇಂಗ್ಲೆಂಡು ನೆರವು ಕಳುಹಿಸಿತು. 1392ರಲ್ಲಿ ಚಾರ್ಲ್ಸನಿಗೆ ಹುಚ್ಚು ಹಿಡಿಯಿತು. ಬರ್ಗಂಡಿ ಮತ್ತು ಆರ್ಲಿಯನ್ಸಿನ ಡ್ಯೂಕರ ನಡುವಣ ಈರ್ಷ್ಯೆಯು ಅಂತಃಕಲಹಕ್ಕೆ ಅವಕಾಶವಾಯಿತು. ಬರ್ಗಂಡಿಯ ಡ್ಯೂಕನಾದ ಜಾನ್ ಈ ಕಲಹದಲ್ಲಿ ಬ್ರಿಟನ್ನಿನ ನೆರವು ಕೇಳಿದ. 1407ರಲ್ಲಿ ಆರ್ಲಿಯನ್ಸ್ ಡ್ಯೂಕನ ಕೊಲೆಯಾಯಿತು. ಅವನ ಉತ್ತರಾಧಿಕಾರಿ ಅರ್ಮಾನ್ಯಾಕ್ ಎಂಬ ಪಕ್ಷ ಕಟ್ಟಿದ. ಇಂಗ್ಲೆಂಡಿನ 5ನೆಯ ಹೆನ್ರಿ ಫ್ರಾನ್ಸಿನ ಮೇಲೆ ದಂಡೆತ್ತಿ ಬಂದ. ಎಜಿನ್‌ಕೋರ್ಟ್ ಯುದ್ಧದಲ್ಲಿ ಚಾರ್ಲ್ಸನ ಇಬ್ಬರು ಹಿರಿಯ ಮಕ್ಕಳು ತೀರಿಕೊಂಡರು (1415). ಬರ್ಗಂಡಿಯವರು ರಾಜನ ಮಿತ್ರರಾದ ಅರ್ಮಾನ್ಯಾಕ್ ಪಕ್ಷದವರ ಮೇಲೆ ಸೇಡು ತೀರಿಸಿಕೊಳ್ಳಲು ರಾಣಿ ಇಸಬೆಲ್ಲಳನ್ನು ಬಂಧಿಸಿ 1418ರಲ್ಲಿ ಪ್ಯಾರಿಸನ್ನು ಗೆದ್ದುಕೊಂಡರು. 5ನೆಯ ಹೆನ್ರಿ ನಾರ್ಮಂಡಿಯನ್ನು ಗೆದ್ದ. 1420ರಲ್ಲಿ ರಾಣಿ ಬ್ರಿಟಿಷರೊಂದಿಗೆ ಟ್ರೂವ ಒಪ್ಪಂದ ಮಾಡಿಕೊಂಡು ಇಂಗ್ಲೆಂಡಿನ ಹೆನ್ರಿಯನ್ನು ಫ್ರಾನ್ಸಿನ ರಾಜ್ಯರಕ್ಷಕನೆಂದು ಮಾನ್ಯ ಮಾಡಿದಳು. ಚಾರ್ಲ್ಸನ ಹುಚ್ಚು ಹೋಗಲೇ ಇಲ್ಲ. ಹುಚ್ಚ ಚಾರ್ಲ್ಸ್ ಎಂದೇ ಇವನಿಗೆ ಹೆಸರಾಯಿತು. 1422ರಲ್ಲಿ ಈತ ತೀರಿಕೊಂಡ.

**ಚಾರ್ಲ್ಸ್ VII** : 1422–61ರಲ್ಲಿ ದೊರೆಯಾಗಿದ್ದ. ಚಾರ್ಲ್ಸ್ ದಿ ವಿಕ್ಟೋರಿಯಸ್ ಎಂದು ಹೆಸರು. ಆರನೆಯ ಚಾರ್ಲ್ಸನ ಐದನೆಯ ಮಗ. 1403ರಲ್ಲಿ ಜನನ. 1416ರಲ್ಲಿ ರಾಜ್ಯದ ಉತ್ತರಾಧಿಕಾರಿಯಾಗಿಯೂ 1418ರಲ್ಲಿ ರಾಜ್ಯರಕ್ಷಕನಾಗಿಯೂ ಆಯ್ಕೆಯಾದ. 1420ರ ಟ್ರೂವ ಒಪ್ಪಂದದಿಂದ ಅವನು ಪಟ್ಟದ ಹಕ್ಕನ್ನು ಕಳೆದುಕೊಂಡ. ತಂದೆಯ ಮರಣಾನಂತರ ಲ್ವಾರ್ ನದಿಯ ದಕ್ಷಿಣಕ್ಕಿರುವ ಪ್ರಾಂತ್ಯಗಳನ್ನಾಳುತ್ತಿದ್ದ ಈತ ಬೂರ್ಜ್ ನಗರದ ದೊರೆಯೆಂದೇ ಹೆಸರು ಹೊಂದಿದ್ದ. ತನ್ನ ಅನುಯಾಯಿಗಳ ನಡುವಣ ಕಲಹಗಳಿಂದಾಗಿ ಈತ ಬ್ರಿಟಿಷರ ವಿರುದ್ಧ ಹೋರಾಡಲಾಗಲಿಲ್ಲ. ಪ್ಯಾರಿಸಿನಲ್ಲಿ ಆಡಳಿತ ನಡೆಸುತ್ತಿದ್ದ ಬ್ರಿಟಿಷ್ ಪ್ರತಿನಿಧಿ ಬೆಡ್‌ಫರ್ಡ್ ಡ್ಯೂಕ್ ಉತ್ತರ ಫ್ರಾನ್ಸಿನಲ್ಲಿ ಆಡಳಿತವನ್ನು ಭದ್ರಗೊಳಿಸಿ ಆರ್ಲಿಯಯನ್ಸನ್ನು ಗೆಲ್ಲಲು ಮುಂದೆ ಸಾಗಿದಾಗ ಜೋನ್ (ಆಫ್ ಆರ್ಕ್) ಎಂಬ ದೇಶಭಕ್ತೆ ನಗರವನ್ನು ರಕ್ಷಿಸಿದಳು (1428). ಮುಂದೆ ಅದೇ ವರ್ಷ ರೀಮ್ಸ್ ಪಟ್ಟಣದಲ್ಲಿ ಚಾರ್ಲ್ಸ್‌ಗೆ ಕಿರೀಟಧಾರಣೆಯಾಯಿತು. 1435ರಲ್ಲಿ ಬೆಡ್‌ಫರ್ಡ್ ಡ್ಯೂಕ್ ತೀರಿಕೊಂಡ. ಅದೇ ವರ್ಷ ಚಾರ್ಲ್ಸನೊಂದಿಗೆ ಬರ್ಗಂಡಿಯ ಡ್ಯೂಕ್ ಒಪ್ಪಂದ ಮಾಡಿಕೊಂಡ. 1436ರಲ್ಲಿ ಪ್ಯಾರಿಸ್ ಚಾರ್ಲ್ಸನ ವಶವಾಯಿತು. ಅರ್ಥವ್ಯವಸ್ಥೆಯ ಮೇಲೆ ಹಿಡಿತ ತರಲು ಯತ್ನಗಳಾದುವು. ಆದರೆ ಮತ್ತೆ ರಾಜ್ಯದಲ್ಲಿ ಬಂಡಾಯ ಕಾಣಿಸಿಕೊಂಡಿತು. ರಾಜವಂಶದವರೂ ರಾಜಪುತ್ರ ಲೂಯಿಯೂ ಬಂಡಾಯದ ನಾಯಕರಾಗಿದ್ದರು (1440). ಆದರೆ ಚಾರ್ಲ್ಸ್ ಬಂಡಾಯವನ್ನು ಹತ್ತಿಕ್ಕಿ ಕೆಲವು ನಾಯಕರನ್ನು ದಾನನೀತಿಯಿಂದ ಗೆದ್ದುಕೊಂಡ. 1444ರಲ್ಲಿ ಇಂಗ್ಲೆಂಡಿನೊಂದಿಗೆ ಒಪ್ಪಂದವಾಯಿತು. ಮುಂದೆ ಇಂಗ್ಲಿಷರನ್ನು ಫ್ರಾನ್ಸಿನಿಂದ ಅಟ್ಟಿದ. ಕ್ಯಾಲೆ ಪಟ್ಟಣವೊಂದೇ ಅದರ ವಶದಲ್ಲಿ ಉಳಿದಿತ್ತು. 1446ರಲ್ಲಿ ರಾಜಕುಮಾರ ಲೂಯಿ ಮತ್ತೆ ಬಂಡೆದ್ದು ಡಾಫಿನಾದಲ್ಲಿ ಸ್ವತಂತ್ರ ರಾಜನಂತೆ ಇರತೊಡಗಿದ. ತನ್ನ ತಂದೆಯ ಸಾವಿನ ತನಕ ನಾನಾ ರೀತಿಯಲ್ಲಿ ಚಾರ್ಲ್ಸನಿಗೆ ಲೂಯಿ ತೊಂದರೆ ಕೊಡುತ್ತಲೇ ಇದ್ದ. ನೂರು ವರ್ಷಗಳ ಯುದ್ಧವನ್ನು ಕೊನೆಗೊಳಿಸಿ ಬ್ರಿಟಿಷರನ್ನು ಫ್ರಾನ್ಸಿನಿಂದ ಅಟ್ಟಿದ್ದು ಚಾರ್ಲ್ಸನ ಹಿರಿಯ ಸಾಧನೆ.

**ಚಾರ್ಲ್ಸ್ VIII** : 1483–98ರಲ್ಲಿ ದೊರೆಯಾಗಿದ್ದ. ಹನ್ನೊಂದನೆಯ ಲೂಯಿಯ ಮಗ. 1470ರಲ್ಲಿ ಜನನ. ಇವನು ಪಟ್ಟಕ್ಕೆ ಬಂದಾಗ ಕೇವಲ ಬಾಲಕ ಈತ ವಯಸ್ಸಿಗೆ ಬರುವವರೆಗೆ ಇವನ ಸೋದರಿ ಆನ್ ಇವನ ಅಧಿಕಾರ ರಕ್ಷಣೆ ಮಾಡಿದಳು. ಬ್ರಿಟನ್ನಿನ ಆ್ಯನಳೊಂದಿಗೆ ಚಾರ್ಲ್ಸನ ಮದುವೆ ಏರ್ಪಡಿಸಿ, ಆ ಪ್ರಾಂತ್ಯ ಫ್ರಾನ್ಸಿಗೆ ಸೇರುವಂತೆ ಮಾಡಿದಳು. ಕಾನ್ಸ್‌ಟ್ಯಾಂಟಿನೋಪಲಿನ ಸಾಮ್ರಾಟನಾಗಬೇಕೆಂದು ಕನಸು ಕಂಡ ಚಾರ್ಲ್ಸ್ ಬ್ರಿಟನ್ ಮತ್ತು ಆರಗಾನ್‌ಗಳ ಜೊತೆಗೆ ಫ್ರಾನ್ಸಿಗೆ ಘಾತಕವೆನಿಸುವ ಒಪ್ಪಂದಗಳನ್ನು ಮಾಡಿಕೊಂಡು (1494) ಇಟಲಿಯ ನೇಪಲ್ಸ್‌ನ ಅಧಿಕಾರಕ್ಕೆ ಹಾತೊರೆದು ಅಲ್ಲಿಗೆ ಹೋದ (1495). ನೇಪಲ್ಸಿನಿಂದ ಮುಂದೆ ಪೂರ್ವಕ್ಕೆ ದಂಡೆಯಾತ್ರೆಯನ್ನು ವಿಫಲಗೊಳಿಸಿತು. ಈತ ಫ್ರಾನ್ಸಿಗೆ ಮರಳಿ ಮತ್ತೆ ದಂಡಯಾತ್ರೆ ನಡೆಸುವ ಯತ್ನದಲ್ಲಿದ್ದಾಗ ಅಪಘಾತದಲ್ಲಿ ಸತ್ತ.

**ಚಾರ್ಲ್ಸ್ IX** : 1560–74ರಲ್ಲಿ ದೊರೆಯಾಗಿದ್ದ. ಎರಡನೆಯ ಹೆನ್ರಿಯ ಮಗ. ಜನನ 1550. ತನ್ನ ಅಣ್ಣ 2ನೆಯ ಫ್ರಾನ್ಸಿಸ್ 1560ರಲ್ಲಿ ತೀರಿಕೊಂಡಾಗ ಪಟ್ಟಕ್ಕೆ ಉತ್ತರಾಧಿಕಾರಿಯಾದ ಈತನನ್ನು ಬಾಲ್ಯದಲ್ಲೇ ಕ್ಷಯ ಮತ್ತು ಮಾನಸಿಕ ತೊಂದರೆಗಳು ಪೀಡಿಸಿದುವು. ಇವನ ತಾಯಿ ಕ್ಯಾದರಿನ್ ಮೆಡಿಚಿ ರಾಜ್ಯವ್ಯವಹಾರಗಳನ್ನು ನೋಡಿಕೊಂಡಳು. ಪವಿತ್ರ ರೋಮನ್ ಸಮ್ರಾಟ ಮ್ಯಾಕ್ಸಿಮಿಲಿಯನನ ಮಗಳು ಎಲಿಜ಼ಬೆತಳನ್ನು ಇವನು ವರಿಸಿದ (1570). ಬಾರ್ತೊಲೋಮ್ಯೂ ದಿನದ ಹತ್ಯಾಕಾಂಡ ಎಂದು ಪ್ರಸಿದ್ಧವಾಗಿರುವ ಉಗುನಾಟ್‌ಗಳ ಭಾರಿ ಕೊಲೆಗೆ (1572) ಇವನ ತಾಯಿ ಕಾರಣಳಾದಳು. ಚಾರ್ಲ್ಸನಿಗೆ ರಾಜ್ಯಾಡಳಿತದಲ್ಲಿ ಅಷ್ಟೇನೂ ಆಸ್ಥೆಯಿರಲಿಲ್ಲ. ಬೇಟೆಯಲ್ಲೂ ಸಾಹಿತ್ಯದಲ್ಲೂ ಅಭಿರುಚಿಯಿತ್ತು. ವಿವಾಹಿತ ಪತ್ನಿಯಲ್ಲಿ ಇವನಿಗೆ ಮಕ್ಕಳಾಗಲಿಲ್ಲ.

**ಚಾರ್ಲ್ಸ್ X** : ಇವನು 1824–30ರಲ್ಲಿ ಫ್ರಾನ್ಸಿನ ದೊರೆಯಾಗಿದ್ದ. 15ನೆಯ ಲೂಯಿಯ ಮೊಮ್ಮಗ. ಜನನ 1757ರಲ್ಲಿ. ಈತ ಆರ್ಟ್ವಾದ ಕೌಂಟ್ ಆಗಿದ್ದ. ತಾರುಣ್ಯದಲ್ಲಿ ಫ್ರೆಂಚ್ ಸೇನೆಯಲ್ಲಿ ಸೇವೆ ಸಲ್ಲಿಸಿ, ಕ್ರಾಂತಿಯಾದಾಗ ದೇಶಭ್ರಷ್ಟರಾದ ಶ್ರೀಮಂತರೊಂದಿಗೆ ವಿದೇಶಕ್ಕೆ ತೆರಳಿ ರಾಜಪಕ್ಷಕ್ಕೆ ಬೆಂಬಲಗಳಿಸಲು ಯುರೋಪಿನಲ್ಲೆಲ್ಲ ಸಂಚರಿಸಿದ. ನೆಪೋಲಿಯನ್ನನ ಪತನಾನಂತರ ಫ್ರಾನ್ಸಿಗೆ ಮರಳಿ, ತನ್ನ ಸೋದರ 18ನೆಯ ಲೂಯಿಯ ಆಡಳಿತ ಕಾಲದಲ್ಲಿ ತೀವ್ರವಾದ ರಾಜಪಕ್ಷದ ನಾಯಕನಾಗಿದ್ದ; ಲೂಯಿಯ ನಿಧನಾನಂತರ ಸಿಂಹಾಸನ ವನ್ನೇರಿದನಾದರೂ ಶೀಘ್ರವೇ ಇವನ ಜನಪ್ರಿಯತೆ ಕಡಿಮೆಯಾಯಿತು. 1789ರ ಕ್ರಾಂತಿ ನಡೆಯಲೇ ಇಲ್ಲವೇನೋ ಎನ್ನುವಂತೆ ಜನಾಭಿಪ್ರಾಯವನ್ನು ಕಡೆಗಣಿಸಿ ಆಳಲು ಯತ್ನಿಸಿ, 1830 ಜುಲೈ ಕ್ರಾಂತಿಯಿಂದ ಪದಚ್ಯುತನಾದ. ಇಂಗ್ಲೆಂಡಿಗೆ ಪಲಾಯನ ಮಾಡಿ 1836ರಲ್ಲಿ ತೀರಿಕೊಂಡ. ಈತ ಬೂರ್ಬೊ ವಂಶದ ಕೊನೆಯ ದೊರೆ. (ಎಸ್.ಎನ್.ಕೆ.ಎ.)

**ಚಾರ್ಲ್ಸ್ (ಪವಿತ್ರ ರೋಮನ್ ಚಕ್ರವರ್ತಿಗಳು) : ಚಾರ್ಲ್ಸ್ I** : ಪವಿತ್ರ ರೋಮನ್ ಸಾಮ್ರಾಜ್ಯದ ಮೊದಲನೆಯ ಚಕ್ರವರ್ತಿ. ನೋಡಿ– ಷಾರ್ಲಮೆನ್.

**ಚಾರ್ಲ್ಸ್ II** : ಷಾರ್ಲಮೇನ್ ಸ್ಥಾಪಿಸಿದ ಪವಿತ್ರ ರೋಮನ್ ಸಾಮ್ರಾಜ್ಯ ಒಡೆದಾಗ ಪಶ್ಚಿಮ ಫ್ರಾಂಕಿಷ್ ರಾಜ್ಯದ ರಾಜನಾಗಿ (843–77), ತನ್ನ ಆಡಳಿತದ ಕೊನೆಯ ಕಾಲದಲ್ಲಿ ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದವ (875–77). ಚಾರ್ಲ್ಸ್ ದ ಬಾಲ್ಡ್ (ಬೋಳ ಚಾರ್ಲ್ಸ್) ಎಂದು ಪರಿಚಿತ. ಷಾರ್ಲಮೇನನ ಮಗ 1ನೆಯ ಲೂಯಿಗೆ ಅವರ ಎರಡನೆಯ ಹೆಂಡತಿ ಜುಡಿತಳಲ್ಲಿ ಹುಟ್ಟಿದ (823). ಈತನಿಗೆ ತಂದೆಯ ರಾಜ್ಯದಲ್ಲಿ ಪಾಲು ನೀಡುವ ವಿಚಾರದಲ್ಲಿ ಸೋದರರಲ್ಲಿ ಅಂತಃಕಲಹವಾಗಿ ಕೊನೆಗೆ ಪೆರ್ಡನ್ ಒಪ್ಪಂದದಂತೆ (843) ಈತ ಪಶ್ಚಿಮ ಫ್ರಾಂಕಿಷ್ ರಾಜ್ಯದ ದೊರೆಯಾದ. 864ರ ವರೆಗೆ ನಾನಾ ಬಗೆಯ ವಿರೋಧಗಳನ್ನು ಎದುರಿಸಿದ. ಬ್ರಿಟಿಷ್ ಪಂಗಡದವರ ಬಂಡಾಯ, ನಾರ್ಮನ್ ವೈಕಿಂಗ್‌ಗಳ ಸತತ ದಾಳಿ–ಇವು ಪ್ರಮುಖ ಸಂಕಟಗಳು. ಅಕ್ವಿಟೇನ್ ರಾಜ್ಯವನ್ನು ವೈಕಿಂಗ್‌ಗಳ ದಾಳಿಯಿಂದ ರಕ್ಷಿಸಿ ಆ ರಾಜ್ಯಕ್ಕೆ ತನ್ನ ಮಗ ಚಾರ್ಲ್ಸನನ್ನು ರಾಜನಾಗಿ ಮಾಡಿದ (855). 856ರ ಅನಂತರ ಅವನ ಕೈಕೆಳಗಿನ ಶ್ರೀಮಂತರೇ ಬಂಡಾಯವೆದ್ದರು. ಅವರನ್ನು ಈತ ಯಶಸ್ವಿಯಾಗಿ ಎದುರಿಸಿದ. ಚರ್ಚ್ ಪೂರ್ತಿಯಾಗಿ ಈತನಿಗೆ ಬೆಂಬಲ ನೀಡಿತು. ಇವನ ಕಾಲದಲ್ಲಿ ಚರ್ಚು ಹಳೆಯ ಹಸ್ತಪ್ರತಿಗಳ ಪುನಃಪ್ರತಿ, ಶಾಲೆಗಳ ವಿಸ್ತರಣೆ, ಧರ್ಮಗ್ರಂಥಗಳ ಗಾಢ ಅಭ್ಯಾಸ ಮುಂತಾದ ವಿಶೇಷ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿತ್ತು. 875ರಲ್ಲಿ ಸಾಮ್ರಾಟ 2ನೆಯ ಲೂಯಿ ತೀರಿಕೊಂಡಾಗ ಪೋಪ್ 8ನೆಯ ಜಾನ್ ಈತನಿಗೆ ಸಾಮ್ರಾಟ ಪದವಿ ನೀಡಿ ಕಿರೀಟಧಾರಣೆ ಮಾಡಿಸಿದ. ಇವನ ಅನಂತರ ಇವನ ಮಗ 2ನೆಯ ಲೂಯಿಗೆ ಫ್ರಾಂಕಿಷ್ ರಾಜ್ಯದ ಪಟ್ಟವಾಯಿತು(879).

**ಚಾರ್ಲ್ಸ್ III** : ಚಾರ್ಲ್ಸ್ ಫ್ಯಾಟ್ (ಬೊಜ್ಜ ಚಾರ್ಲ್ಸ್) ಎಂದು ಪರಿಚಿತನಾದ ಈತ 881–88ರಲ್ಲಿ ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದ. ಷಾರ್ಲಮೇನನ ಮೊಮ್ಮಗ ಲೂಯಿ ಜರ್ಮನನ ಮಗ (839). 876ರಿಂದ ಸ್ವಾಬಿಯದ ರಾಜನಾಗಿದ್ದು, 879ರಲ್ಲಿ ಇಟಲಿಯ ರಾಜನಾದ. 881ರಲ್ಲಿ ರೋಮಿನ ಸಾಮ್ರಾಟನೂ, 882ರಲ್ಲಿ ಪೂರ್ವ ಫ್ರ್ಯಾಂಕಿಷ್ ರಾಜ್ಯದ ಅರಸನೂ ಆಗಿ ಆಯ್ಕೆಗೊಂಡ ಈತನಿಗೆ ಪಶ್ಚಿಮ ಫ್ರಾಂಕಿಷ್ ರಾಜ್ಯದ ದೊರೆ ಕಾರ್ಲೊಮನ್ ತೀರಿಕೊಂಡಾಗ (884) ಷಾರ್ಲಮೇನನ ಇಡೀ ರಾಜ್ಯದ (ಬರ್ಗಂಡಿ ವಿನಾ) ಒಡೆತನ ಬಂತು. ವೈಕಿಂಗ್‌ಗಳ ದಾಳಿಯನ್ನು ಇವನು ಎದುರಿಸಲಾಗಲಿಲ್ಲ. ಹಣ ತೆತ್ತು ಅವರನ್ನು ಹಿಂದಕ್ಕೆ ಕಳಿಸಬೇಕಾಯಿತು. ಈತನಿಗೆ ಅಪಸ್ಮಾರ ರೋಗ ಇದ್ದುದರಿಂದ ರಾಜ್ಯವನ್ನು ರಕ್ಷಿಸುವ ಸಾಮರ್ಥ್ಯ ಇರಲಿಲ್ಲ. ಈ ಕಾರಣದಿಂದಾಗಿ ಸಾಮ್ರಾಜ್ಯದಲ್ಲಿ ಬಂಡಾಯಗಳು ಹೆಚ್ಚಿದುವು. ಅದು ಒಡೆದುಹೋಯಿತು.

**ಚಾರ್ಲ್ಸ್ IV** : 1316–78. ಪವಿತ್ರ ರೋಮನ್ ಸಾಮ್ರಾಟ ಹಾಗೂ ಬೊಹೀಮಿಯದ ದೊರೆ. ಬೋಹೀಮಿಯದ ದೊರೆ ಜಾನ್ ಆಫ್ ಲಕ್ಸಂಬರ್ಗನ ಮಗ, ಮೊದಲು ಇವನಿಗೆ ವೆನ್ಸೆಸ್ಲಸ್ ಎಂಬ ಹೆಸರಿತ್ತು. 1323ರಲ್ಲಿ ಈತ ತನ್ನ ಸಂಬಂಧಿಯೂ ಫ್ರಾನ್ಸಿನ ದೊರೆಯೂ ಆಗಿದ್ದ 4ನೆಯ ಚಾರ್ಲ್ಸನ ಆಸ್ಥಾನಕ್ಕೆ ಹೋಗಿದ್ದಾಗ ಅಲ್ಲಿ ಇವನಿಗೆ ಚಾರ್ಲ್ಸ್ ಎಂದು ನಾಮಕರಣವಾಯಿತು. ಫ್ರಾನ್ಸಿನ 6ನೆಯ ಫಿಲಿಪನ ಸೋದರಿಯನ್ನು ಈತ 1324ರಲ್ಲಿ ವರಿಸಿದ. 1333ರಲ್ಲಿ ಮೊರೇವಿಯದ ಮಾರ್ಗ್ರೇವ್‌ಗೂ 1346ರಲ್ಲಿ ಬೊಹೀಮಿಯಕ್ಕೂ ರಾಜನಾದ. ಅದೇ ವರ್ಷ ರೆನ್ಸ್‌ನಲ್ಲಿ ಇವನನ್ನು ಜರ್ಮನಿಯ ರಾಜನೆಂದು ಘೋಷಿಸಲಾಯಿತು. ಸಾಮ್ರಾಟನೆಂದು ವಿಧ್ಯುಕ್ತವಾಗಿ ಇವನ ಕಿರೀಟಧಾರಣೆ ಯಾದ್ದು 1355ರಲ್ಲಿ. ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿಯ ಆಯ್ಕೆಯನ್ನು ನಿಬಂಧಿಸುವ ಏಳು ಜನ ಆಯ್ಕೆದಾರರನ್ನು ಗೊತ್ತುಪಡಿಸುವ ಗೋಲ್ಡನ್ ಬುಲ್ ಎಂಬ ಸ್ವರ್ಣಮುದ್ರಾಂಕಿತ ಆಜ್ಞೆಯನ್ನು ಹೊರಡಿಸಿದ್ದು ಇವನ ಐತಿಹಾಸಿಕವಾದ ಕೆಲಸ (1356). ತನ್ನ ಬೊಹೀಮಿಯ ರಾಜ್ಯಕ್ಕಾಗಿ ಅಪ್ಪರ್ ಪ್ಯಾಲಟಿನೇಟಿನ ಕೆಲವು ಭಾಗಗಳನ್ನು 1355ರಲ್ಲಿ ಈತ ಖರೀದಿ ಮಾಡಿದ. ವಿಟ್ಟೆಲ್ಸ್ ಬಾಕ್ ಮತ್ತು ಹ್ಯಾಪ್ಸ್‌ಬರ್ಗ್ ಮನೆತನಗಳ ಜೊತೆಗೆ ಮಾಡಿಕೊಂಡ ಉತ್ತರಾಧಿಕಾರ ಒಪ್ಪಂದದಿಂದ ಈತನ ಮಗ ವೆನ್ಸೆಸ್ಲಸ್ ಬ್ರಾಂಡೆನ್‌ಬರ್ಗಿಗೆ ಪಟ್ಟಾಧಿಕಾರಿಯಾಗುವ ಅವಕಾಶ ದೊರಕಿತು (1373). ಚಾರ್ಲ್ಸನ ಮೂರನೆಯ ಮದುವೆಯಿಂದಾಗಿ ಸೈಲೀಷಿಯ ಪ್ರದೇಶ ಬೊಹೀಮಿಯಕ್ಕೆ ಸೇರಿತು. ಈತ 1377ರಲ್ಲಿ ತನ್ನ ಆನುವಂಶಿಕ ರಾಜ್ಯವನ್ನು ವಿಭಜಿಸಿ ಹಿರಿಯ ಮಗ ವೆನ್ಸೆಸ್ಲಸ್‌ಗೆ ಬೊಹೀಮಿಯ, ಸೈಲೀಷಿಯ, ಲಕ್ಸೆಂಬರ್ಗ್‌ಗಳನ್ನು ಕೊಟ್ಟ. ಕಿರಿಯ ಮಗ ಹೆನ್ರಿಗೆ ಗಾರ್ಲಿಜ್‌ನ ಡಚಿ ದೊರೆಯಿತು. ಮೊರೇವಿಯವನ್ನು ತನ್ನ ಸೋದರನ ಮಕ್ಕಳಿಗೆ ಒಪ್ಪಿಸಿದ. ಇವನ ಸಾಮ್ರಾಜ್ಯಕ್ಕೆ ಪ್ರಾಗ್ ರಾಜಧಾನಿಯಾಗಿತ್ತು. ಅಲ್ಲಿ ಈತ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಿದನಲ್ಲದೆ ಅನೇಕ ಮತೀಯ ಕಟ್ಟಡಗಳನ್ನೂ ಕಟ್ಟಿಸಿದ. ಈತ ಸಾಹಿತಿಗಳಿಗೆ ಆಶ್ರಯದಾತನಾಗಿದ್ದ.

**ಚಾರ್ಲ್ಸ್ V** : ಪವಿತ್ರ ರೋಮನ್ ಸಾಮ್ರಾಜ್ಯದ ಸಾಮ್ರಾಟ (1519–56) ಹಾಗೂ ಸ್ಪೇನಿನ 1ನೆಯ ಚಾರ್ಲ್ಸ್ ದೊರೆ (1516–56). ಇಂಗ್ಲೆಂಡಿನ 8ನೆಯ ಹೆನ್ರಿ, ಫ್ರಾನ್ಸಿನ 1ನೆಯ ಫ್ರಾನ್ಸಿಸ್, ಪೋಪ್ 10ನೆಯ ಲಿಯೊ ಹಾಗೂ ತುರ್ಕಿಯ ಸುಲೇಮಾನ್

ಮುಂತಾದ ಘನವಂತರ ಸಮಕಾಲೀನನಾಗಿದ್ದು ತನ್ನ ಘನತೆ ಮೆರೆದ. ಆಸ್ಟ್ರಿಯ ಹಾಗೂ ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿಯೂ ಹ್ಯಾಪ್ಸ್‌ಬರ್ಗ್ ಮನೆತನದ 1ನೆಯ ಮ್ಯಾಕ್ಸಿಮಿಲಿಯನನ ಮಗನೂ ಆಗಿದ್ದ. ಆಗ್ಸ್‌ಬರ್ಗಿನ ದೊರೆ ಫಿಲಿಪ್ ಈತನ ತಂದೆ. ಆರಗಾನಿನ ದೊರೆ ಫರ್ಡಿನೆಂಡನ ಮತ್ತು ಕ್ಯಾಲಸ್ಟಿಲಿನ ರಾಣಿ ಇಸಬೆಲ್ಲಳ ಹಿರಿಯ ಮಗಳಾದ ಜೋನ್ ಇವನ ತಾಯಿ. 1500ರಲ್ಲಿ ಹುಟ್ಟಿದ ಈತ ಫಿಲಿಪ್ಪನ ರಾಜ್ಯಗಳಾದ ಬರ್ಗಂಡಿ ಮತ್ತು ನೆದರ್ಲೆಂಡ್ಸ್, ಜೋನಳ ರಾಜ್ಯವಾದ ಆರಗಾನ್‌ಗೂ ಕ್ಯಾಸ್ಟಿಲ್‌ಗೂ ಅವುಗಳ ಆಶ್ರಿತ ಪ್ರದೇಶಗಳಿಗೂ ಸಹಜವಾಗಿ ಉತ್ತರಾಧಿಕಾರಿಯಾಗುವವನಿದ್ದ. 1506ರಿಂದಲೇ ಬಾಲಕ ಚಾರ್ಲ್ಸನಿಗೆ ರಾಜಮುಕುಟಗಳ ಸರಮಾಲೆಯೇ ಬಂತು. 1506ರಲ್ಲಿ ಚಾರ್ಲ್ಸನ ತಂದೆ ತೀರಿಕೊಂಡಾಗ ಈತ ಬರ್ಗಂಡಿ ಹಾಗೂ ಕ್ಯಾಸ್ಟಿಲ್‌ಗಳ ದೊರೆಯಾದ. 1516ರಲ್ಲಿ ಈತನ ಅಜ್ಜ (ತಾಯಿಯ ತಂದೆ) ಫರ್ಡಿನೆಂಡ್ ತೀರಿಕೊಂಡಾಗ ಇವನು ಆರಗಾನ್ ಸಹಿತ ಇಡೀ ಸ್ಪೇನಿನ ಸ್ವಾಮಿಯಾದ. ರೋಮನ್ ಸಾಮ್ರಾಟ ಮ್ಯಾಕ್ಸಿಮಿಲಿಯನ್ 1519ರಲ್ಲಿ ತೀರಿಕೊಂಡಾಗ ಹ್ಯಾಪ್ಸ್‌ಬರ್ಗ್ ಮನೆತನದ ಆನುವಂಶಿಕ ಪ್ರದೇಶಗಳು ಈತನಿಗೆ ಬಂದುವು. ಇದರ ಜೊತೆಗೆ ರೋಮ್‌ನ ಸಾಮ್ರಾಜ್ಯದ ಪಟ್ಟವನ್ನು ಇವನು ಬಯಸಿದ. ಇಂಗ್ಲೆಂಡಿನ 8ನೆಯ ಹೆನ್ರಿಯೂ ಫ್ರಾನ್ಸಿನ 1ನೆಯ ಫ್ರಾನ್ಸಿಸನೂ ಆ ಪಟ್ಟಕ್ಕಾಗಿ ಇವನೊಂದಿಗೆ ಸ್ಪರ್ಧಿಸಿದರೂ ಅನೇಕ ಶತಮಾನಗಳಿಂದ ಹ್ಯಾಪ್ಸ್‌ಬರ್ಗರೇ ಇದಕ್ಕೆ ಆಯ್ಕೆಯಾಗುತ್ತಿದ್ದುದರಿಂದಲೂ ಜರ್ಮನಿಯ ಫಗ್ಗರ್ ಎಂಬ ಶ್ರೀಮಂತ ವ್ಯಾಪಾರಿ ಮನೆತನ ಆಯ್ಕೆದಾರರಿಗೆ ಲಂಚಕೊಟ್ಟು ಅವರನ್ನು ಒಲಿಸಿಕೊಂಡದ್ದರಿಂದಲೂ ಚಾರ್ಲ್ಸನೇ ರೋಮನ್ ಸಾಮ್ರಾಟನಾಗಿ 1520ರಲ್ಲಿ ಆಯ್ಕೆಗೊಂಡ. ಯುರೋಪಿನಲ್ಲೇ ತೀರ ವಿಸ್ತಾರವಾದ ಸಾಮ್ರಾಜ್ಯದ ಅಧಿಪತಿಯಾಗಿ ಮೆರೆದ. ಸಾಮ್ರಾಜ್ಯದ ವಿಸ್ತಾರಕ್ಕೆ ಅನುಗುಣವಾಗಿ ಇವನ ತೊಂದರೆಗಳೂ ಅಗಾಧವಾಗಿದ್ದುವು. ಆಂತರಿಕ ಹಾಗೂ ಬಾಹ್ಯ ತೊಂದರೆಗಳಿಂದ ಅವನು ಆಡಳಿತದಲ್ಲಿ ನೆಮ್ಮದಿ ಕಳೆದುಕೊಂಡಿದ್ದ. ಇವನ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶಗಳ ಆಡಳಿತ ಪದ್ಧತಿಗಳು ಒಂದೇ ಸಮನಾಗಿರಲಿಲ್ಲ. ಅವುಗಳ ಮೇಲೆ ಸಮಾನವಾದ ಅಧಿಕಾರವೂ ಇವನಿಗಿರಲಿಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧದಲ್ಲಿ, ಆಯಾ ಸ್ಥಳಗಳ ನಿಯಮ, ಪರಂಪರೆಗಳಂತೆ, ಚಾರ್ಲ್ಸ್ ಆಳಬೇಕಾಗಿತ್ತು. ನೆದರ್ಲೆಂಡಿನ 17 ಪ್ರಾಂತ್ಯಗಳಲ್ಲಿ ಒಂದೊಂದಕ್ಕೂ ಒಂದೊಂದು ಬಗೆಯ ಆಡಳಿತವಿತ್ತು. ಅವುಗಳಲ್ಲಿ ಕೇಂದ್ರಾಡಳಿತ ನಾಮಮಾತ್ರವಾಗಿತ್ತು. ಬರ್ಗಂಡಿಗೆ ಸೇರಿದ ಫ್ರಾನ್ಷ್‌ಕಾಂಟೇ ಕೂಡ ಸ್ವತಂತ್ರ ಆಡಳಿತ ವ್ಯವಸ್ಥೆ ಹೊಂದಿತ್ತು. ಕ್ಯಾಸ್ಟಿಲ್‌ಗೆ ಸೇರಿದ್ದ, ಹೊಸದಾಗಿ ಗೆದ್ದಂಥ, ಮುಸ್ಲಿಂ ಜನವಸತಿ ಅಧಿಕವಾಗಿದ್ದ, ಗ್ರನಾಡಾ ಪ್ರಾಂತ್ಯಕ್ಕೆ ಅದರವೇ ಸಮಸ್ಯೆಗಳಿದ್ದುವು. ಇದಲ್ಲದೆ ಕ್ಯಾಸ್ಟಿಲ್‌ಗೆ ಆಫ್ರಿಕದಲ್ಲಿ ಅನೇಕ ಚದುರಿದ ನೆಲಗಳೂ ಅಮೆರಿಕದಲ್ಲಿ ವಸಾಹತುಗಳೂ ಇದ್ದುವು. ಆರಗಾನ್‌ನಲ್ಲೂ ನಾಲ್ಕು ಪ್ರತ್ಯೇಕ ಜಿಲ್ಲೆಗಳಿದ್ದುವು. ಪ್ರತಿಯೊಂದಕ್ಕೂ ಪ್ರತ್ಯೇಕ ಜಿಲ್ಲಾ ಸಮಿತಿಗಳಿದ್ದುವು. ನೇಪಲ್ಸ್, ಸಿಸಿಲಿ, ಸಾರ್ಡೀನಿಯಗಳಲ್ಲೂ ಬೇರೆಬೇರೆ ಆಡಳಿತ ವಿಧಾನಗಳಿದ್ದುವು. ಹ್ಯಾಪ್ಸ್‌ಬರ್ಗ್ ಪ್ರದೇಶಗಳಲ್ಲಿ ಆಸ್ಟ್ರಿಯ, ಸ್ಟಿರಿಯ, ಟಿರೋಲ್ ಮುಂತಾದ ಪ್ರತ್ಯೇಕ ಪ್ರದೇಶಗಳಿದ್ದುವು. 1521ರಲ್ಲಿ ತನ್ನ ಸೋದರ ಫರ್ಡಿನೆಂಡ್‌ಗೆ ಚಾರ್ಲ್ಸ್ ಬಿಟ್ಟುಕೊಟ್ಟದ್ದು ಈ ಭಾಗವನ್ನೇ. ಒಟ್ಟಿನಲ್ಲಿ ಪವಿತ್ರ ರೋಮನ್ ಸಾಮ್ರಾಜ್ಯ ಅನೇಕ ಸಮಸ್ಯೆಗಳ ಆಗರವಾಗಿತ್ತು. ಅಲ್ಲಿನ ನೋಬೆಲ್‌ಗಳ, ನಗರಗಳ, ಪ್ರತಿನಿಧಿಸಭೆಗಳ ನಡುವೆ ಹಕ್ಕುಗಳಿಗಾಗಿ ಸದಾ ಹೋರಾಟ ನಡೆಯುತ್ತಿತ್ತು. ಇದಲ್ಲದೆ ಜರ್ಮನಿಯಲ್ಲಿ ಲೂಥರ್ ಪ್ರಣೀತವಾದ ಪ್ರಾಟೆಸ್ಟಂಟ್ ಬಂಡಾಯವನ್ನು ಕೂಡ ಈತ ಎದುರಿಸಬೇಕಾಯಿತು. ಸ್ಪೇನಿನಲ್ಲೂ ಇವನ ವಿರುದ್ಧ ಬಂಡಾಯಗಳು ನಡೆದುವು. ಈತ ಮೂಲತಃ ಬರ್ಗಂಡಿಯಲ್ಲಿ ಬೆಳೆದವನು, ಸ್ಪ್ಯಾನಿಷ್ ಅಲ್ಲ–ಎಂದು ಜನರಲ್ಲಿ ಅಸಮಾಧಾನವಾಗಿತ್ತು. ಸ್ಪೇನಿನಲ್ಲಿ ಇವನು ಫ್ಲೆಮಿಷ್ ಅಧಿಕಾರಿಗಳನ್ನು ಉಚ್ಚ ಹುದ್ದೆಗಳಿಗೆ ನೇಮಿಸಿದ್ದೂ ಬಂಡಾಯಕ್ಕೆ ಕಾರಣವಾಯಿತು. ಹೀಗಿದ್ದರೂ ತನ್ನ ವಿಶಾಲ ಸಾಮ್ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆಗಳನ್ನು ಸ್ಥಾಪಿಸಲು, ಸಮಾನವಾದ ಆಡಳಿತ ವ್ಯವಸ್ಥೆ ರೂಪಿಸಲು, ವಿವಿಧ ರಾಜ್ಯಗಳ ಜನರ ಸಮಗ್ರ ಪುರೋಗಮನ ಸಾಧಿಸಲು ಚಾರ್ಲ್ಸ್ ಶಕ್ತಿಮೀರಿ ಶ್ರಮಿಸಿದ. ಹಲವು ಹಿರಿಯ ಯುದ್ಧಗಳನ್ನೂ ಈತ ಮಾಡಬೇಕಾಗಿ ಬಂತು. ಇಟಲಿಯ ಕೆಲವು ಪ್ರದೇಶಗಳ ಸ್ವಾಮ್ಯದ ವಿಚಾರದಲ್ಲಿ ಫ್ರಾನ್ಸ್ ಮತ್ತು ಸ್ಪೇನ್‌ಗಳಲ್ಲಿ ಪರಸ್ಪರ ಸ್ಪರ್ಧೆಯಿತ್ತು. ಚಾರ್ಲ್ಸನೂ ಫ್ರಾನ್ಸಿನ 1ನೆಯ ಫ್ರಾನ್ಸಿಸನೂ ಸಾಮ್ರಾಟ ಪಟ್ಟಕ್ಕಾಗಿ ಸ್ಪರ್ಧಿಸಿದ್ದರಿಂದ ಫ್ರಾನ್ಸ್–ಸ್ಪೇನ್‌ಗಳ ಸ್ಪರ್ಧೆಗೆ ಹೆಚ್ಚಿನ ಮಹತ್ವ ಬಂತು. ನೇಪಲ್ಸ್ ಮೇಲಿನ ತನ್ನ ಹಕ್ಕನ್ನು ಫ್ರಾನ್ಸಿಸ್ ಪುನರುಚ್ಚರಿಸಿ, ಮಿಲಾನ್‌ಗೆ ದಾಳಿಯಿಟ್ಟ. ನೆದರ್ಲೆಂಡನ್ನು ಆಕ್ರಮಿಸಬೇಕೆಂಬುದೂ ಫ್ರಾನ್ಸ್–ಸ್ಪೇನ್ ಗಡಿಯಲ್ಲಿದ್ದ ನವಾರ್ ಪ್ರದೇಶದ ಮೇಲಣ ಹಕ್ಕು ಸ್ಥಾಪಿಸಬೇಕೆಂಬುದೂ ಇವನ ಇಚ್ಛೆಯಾಗಿತ್ತು. 1522ರಲ್ಲಿ ಆರಂಭವಾದ ಯುದ್ಧ 1529ರಲ್ಲಿ ಕಂಬ್ರಾಯ್ ಒಪ್ಪಂದದಿಂದ ಕೊನೆಗೊಂಡಿತು. ಇಂಗ್ಲೆಂಡಿನ ನೆರವಿದ್ದರೂ ಫ್ರಾನ್ಸಿಸ್ ಸೋತು ಇಟಲಿ ಹಾಗೂ ನೆದರ್ಲೆಂಡ್ಸ್ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಟ್ಟ. ಆದರೆ ಒಪ್ಪಂದ ತಾತ್ಪೂರ್ತಿಕವಾದ್ದಾಯಿತು. ಸ್ಕಾಟ್ಲೆಂಡ್, ಡೆನ್ಮಾರ್ಕ್, ಸ್ವೀಡನ್, ಜರ್ಮನಿಯ ಪ್ರಾಟೆಸ್ಟಂಟ್ ತುಂಡು ದೊರೆಗಳು ಮತ್ತು ಆಟೋಮನ್ ತುರ್ಕರ ನೆರವಿನಿಂದ ಫ್ರಾನ್ಸಿಸ್ ಯುದ್ಧವನ್ನು ಮುಂದುವರಿಸಿದ. 1533–35ರಲ್ಲಿ ಮತ್ತು 1542–46ರಲ್ಲಿ ಯುದ್ಧ ತೀವ್ರವಾಗಿ ಸಾಗಿತು. ಚಾರ್ಲ್ಸನೂ ಫ್ರಾನ್ಸಿಸನೂ ತೀರಿಕೊಂಡ ಅನಂತರವೂ ಈ ಕಲಹ ಮುಂದುವರಿದು 1559ರಲ್ಲಿ ಕೊನೆಗೊಂಡಿತು. 1521ರಲ್ಲಿ ತುರ್ಕರ ದೊರೆ ಸುಲೇಮಾನನ ಸೇನೆ ಹಂಗರಿಯನ್ನು ಮುತ್ತಿ ಬೆಲ್ಗ್ರೇಡನ್ನು ಗೆದ್ದು, 1529ರಲ್ಲಿ ಆಸ್ಟ್ರಿಯದ ರಾಜಧಾನಿ ವಿಯೆನ್ನವನ್ನೂ ಅಪಾಯಕ್ಕೀಡುಮಾಡಿದ್ದರಿಂದ ಚಾರ್ಲ್ಸನೂ ಫರ್ಡಿನಾಂಡನೂ ತುರ್ಕರನ್ನು ಎದುರಿಸಲಾರದೆ ಅವರ ಜೊತೆ ಒಪ್ಪಂದ ಮಾಡಿಕೊಂಡರು. ಹಂಗರಿಯ ಮೇಲೆ ತುರ್ಕರ ಸ್ವಾಮ್ಯವನ್ನು ಒಪ್ಪಿಕೊಂಡು ವಾರ್ಷಿಕ ಕಪ್ಪವನ್ನು ಕೊಡಲು ಕೂಡ ಚಾರ್ಲ್ಸ್ ಒಪ್ಪಿದ. ಜರ್ಮನಿಯಲ್ಲಿ ಅಂತರ್ಯುದ್ಧ ನಡೆಯುತ್ತಿದ್ದದ್ದರಿಂದ ಚಾರ್ಲ್ಸ್ ತುರ್ಕರನ್ನು ಸಮರ್ಥವಾಗಿ ಎದುರಿಸದಾದ.

ಫ್ರಾನ್ಸಿನ ವಿರುದ್ಧ ನಡೆದ ಯುದ್ಧದ ಸಮಯದಲ್ಲಿ ಚಾರ್ಲ್ಸನ ಸೇನೆ ತನಗೆ ಬಹುದಿನಗಳಿಂದ ಸಂಬಳ ಸಂದಿಲ್ಲದ ಕಾರಣ 1527ರಲ್ಲಿ ರೋಮ್ ನಗರದಲ್ಲಿ ಸುಲಿಗೆ ಮಾಡಿ, 4,000 ಜನರನ್ನು ಕೊಂದು ಒಂಬತ್ತು ತಿಂಗಳ ಕಾಲ ಅಲ್ಲಿ ಅರಾಜಕತೆ ನೆಲೆಸುವಂತೆ ಮಾಡಿತ್ತು. ಇಂಗ್ಲೆಂಡಿನ 8ನೆಯ ಹೆನ್ರಿ ನಿಷ್ಠ ಕೆಥೊಲಿಕನಾಗಿದ್ದುದರಿಂದ ಚಾರ್ಲ್ಸ್ ಆ ದೇಶದ ದ್ವೇಷ ಕಟ್ಟಿಕೊಳ್ಳಬೇಕಾಯಿತು. ಹೆನ್ರಿಯ ಪತ್ನಿ ಕ್ಯಾದರಿನಳು ಚಾರ್ಲ್ಸನ ಚಿಕ್ಕಮ್ಮನಾಗಿದ್ದಳು. ಅವಳೊಂದಿಗೆ ವಿವಾಹ ವಿಚ್ಛೇದನೆ ಮಾಡಿಕೊಳ್ಳಲು ಅವನು ಪೋಪನ ಅನುಮತಿ ಕೇಳಿದ. ಸಾಮ್ರಾಟ ಚಾರ್ಲ್ಸನ ಭಯದಿಂದ ಪೋಪ್ ಅನುಮತಿ ನೀಡಲು ನಿರಾಕರಿಸಿದ. ಇದರಿಂದ ಹೆನ್ರಿ ಮತ್ತು ಚಾರ್ಲ್ಸರ ದ್ವೇಷಕ್ಕೆ ಹೊಸ ರಂಗು ಬಂತು. ಇಂಗ್ಲೆಂಡು ಚಾರ್ಲ್ಸನ ವಿರುದ್ಧ ಫ್ರಾನ್ಸಿನ ಪಕ್ಷ ವಹಿಸಿತು. ಕ್ಯಾದರಿನಳನ್ನು ಹೆನ್ರಿ ತ್ಯಜಿಸಿದ; ಕೆಥೊಲಿಕ್ ಸಂಪ್ರದಾಯವನ್ನು ಬಿಟ್ಟ. ಸಾಮ್ರಾಟನ ಅಧಿಕಾರದ ಬಗ್ಗೆ ಮತ್ಸರ ತಳೆದಿದ್ದ ಜರ್ಮನಿಯ ದೊರೆಗಳಿಗೆ ಪ್ರಾಟೆಸ್ಟಂಟ್ ಸಂಪ್ರದಾಯದ ಉದಯದಿಂದ ಅನುಕೂಲವಾಯಿತು; ಸಾಮ್ರಾಜ್ಯದ ವಿರುದ್ಧ ಬಂಡೇಳಲು ಸುಸಂಧಿ ಒದಗಿಬಂತು. ಸ್ಯಾಕ್ಸನಿ ಮುಂತಾದ ರಾಜ್ಯಗಳು ಫ್ರಾನ್ಸಿನ ನೆರವಿನಿಂದ ಚಾರ್ಲ್ಸನ ವಿರುದ್ಧ ದೀರ್ಘಕಾಲದ ಯುದ್ಧ ನಡೆಸಿದುವು. ಮೆಟ್ಸ್‌ನಲ್ಲಿ ಚಾರ್ಲ್ಸನ ಸೇನೆ 1552ರಲ್ಲಿ ಭಾರಿ ಸೋಲನ್ನು ಅನುಭವಿಸಿತು. ಕೊನೆಗೆ 1555ರಲ್ಲಿ ಆದ ಆಗ್ಸ್‌ಬರ್ಗ್ ಒಪ್ಪಂದದಂತೆ ಚಾರ್ಲ್ಸ್ ಜರ್ಮನ್ ರಾಜ್ಯಗಳಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಬೇಕಾಯಿತು.

1556ರಲ್ಲಿ ಚಾರ್ಲ್ಸನು ಸ್ಪೇನ್ ರಾಜ್ಯವನ್ನು ತನ್ನ ಮಗ ಎರಡನೆಯ ಫಿಲಿಪ್ಪನಿಗೂ ರೋಮನ್ ಸಾಮ್ರಾಜ್ಯವನ್ನು ಸೋದರ ಫರ್ಡಿನೆಂಡನಿಗೂ ಒಪ್ಪಿಸಿ ನಿವೃತ್ತನಾದ; 1558ರಲ್ಲಿ ತೀರಿಕೊಂಡ. ಪೋಪನ ಕೈಯಲ್ಲಿ ಕಿರೀಟಧಾರಣೆ ಮಾಡಿಸಿಕೊಂಡ ಕೊನೆಯ ಸಾಮ್ರಾಟನಾದ ಇವನ ಅನಂತರ ಸಾಮ್ರಾಜ್ಯದ ವೈಭವ ಬಹುಮಟ್ಟಿಗೆ ಕುಂದಿತು.

ಚಾರ್ಲ್ಸನ ಆಡಳಿತ ಭವ್ಯವಾದ ಪರಾಜಯವೆಂದು ವರ್ಣಿತವಾಗಿದೆ. ಇವನ ಆಳ್ವಿಕೆಯ ಕಾಲದಲ್ಲಿ ಜಾಗತಿಕ ಮಟ್ಟದಲ್ಲಿ ಐರೋಪ್ಯ ಸಂಸ್ಕೃತಿ ತೀವ್ರವಾಗಿ ವಿಸ್ತರಣೆ ಹೊಂದಿತು. ಯುರೋಪಿನ ಇತಿಹಾಸದಲ್ಲಿ 16ನೆಯ ಶತಮಾನ ಸ್ಪೇನಿನ ಪ್ರಭಾವದ ಕಾಲವೆಂದು ಪ್ರಸಿದ್ಧವಾಗಿದೆ. ಚಾರ್ಲ್ಸನೂ ಅವನ ಮಗ ಫಿಲಿಪ್ಪನೂ ಇದಕ್ಕೆ ಕಾರಣ. ಯುರೋಪಿನಲ್ಲಿ ಹ್ಯಾಪ್ಸ್‌ಬರ್ಗ್ ಮನೆತನದ ಔನ್ನತ್ಯವನ್ನು ಸ್ಥಾಪಿಸಿದವನು ಇವನೇ. ಆ ಕಾಲದ ಅತ್ಯಂತ ಸಮರ್ಥ ರಾಜಕಾರಣಿಯಾದ ಈತ ಎದುರಿಸಬೇಕಾಗಿ ಬಂದ ಅಸಾಧಾರಣ ಸಮಸ್ಯೆಗಳಿಂದಾಗಿ, ಪರಿಸ್ಥಿತಿಯ ಭಾರಿ ಒತ್ತಡದಿಂದಾಗಿ, ತನ್ನ ಹಿರಿಮೆಯ ನೈಜಚಿತ್ರವನ್ನು ಪ್ರಕಟಪಡಿಸಲಾಗದೆ ಹೋದ ದುರ್ದೈವಿ. ಇವನು ವಿದ್ಯೆ, ಸಂಸ್ಕೃತಿಗಳ ಪಕ್ಷಪಾತಿಯಾಗಿದ್ದ. ಶ್ರದ್ಧಾವಂತ ಕೆಥೊಲಿಕ್ ಆಗಿದ್ದನೆಂದು ಹೇಳಲೇಬೇಕಾಗಿಲ್ಲ. ಖ್ಯಾತ ವೈದ್ಯವಿಜ್ಞಾನಿ ವಿಸೇಲಿಯಸ್ ಇವನ ಖಾಸಗಿ ಚಿಕಿತ್ಸಕ. ಚಾರ್ಲ್ಸನ ಆಡಳಿತದ ಕಾಲದಲ್ಲಿ ಸ್ಪೇನಿನ ಸಾಂಸ್ಕೃತಿಕ ಚಟುವಟಿಕೆಗಳು ಅಸಾಧಾರಣವಾಗಿದ್ದುವು. ಸಾಹಿತ್ಯ, ನಾಟಕ, ವಿಜ್ಞಾನ, ಲಲಿತಕಲೆಗಳಲ್ಲಿ ಬಹಳ ಪ್ರಗತಿಯಾಯಿತು.

**ಚಾರ್ಲ್ಸ್ VI :** ಪವಿತ್ರ ರೋಮನ್ ಚಕ್ರವರ್ತಿ (1711–40), ಆಸ್ಟ್ರಿಯದ ಸಾಮ್ರಾಟ. ಆಸ್ಟ್ರಿಯದ ಸಾಮ್ರಾಟನಾಗಿದ್ದ 2ನೆಯ ಲಿಯೊಪೋಲ್ಡನ ಎರಡನೆಯ ಮಗ. 1685ರಲ್ಲಿ ಜನಿಸಿದ. ಸ್ಪೇನಿನ ದೊರೆ 2ನೆಯ ಚಾರ್ಲ್ಸ್ ತೀರಿಕೊಂಡಾಗ ಈತನ ಪಟ್ಟಾಧಿಕಾರವನ್ನು ಲಿಯೋಪೋಲ್ಡ್ ಮುಂದೊಡ್ಡಿದ. ಇದರಿಂದ ಸ್ಪ್ಯಾನಿಷ್ ಉತ್ತರಾಧಿಕಾರ ಯುದ್ಧ (1701–14) ನಡೆಯಿತು. ಫ್ರಾನ್ಸಿನ 14ನೆಯ ಲೂಯಿ ಈ ಹಕ್ಕನ್ನು ವಿರೋಧಿಸಿ, ತನ್ನ ಮೊಮ್ಮಗ ಫಿಲಿಪ್ಪನ ಹಕ್ಕನ್ನು ಮುಂದಿಟ್ಟ. ಇಂಗ್ಲೆಂಡ್, ಪೋರ್ಚುಗಲ್ ಮುಂತಾದವು ಚಾರ್ಲ್ಸನ ಹಕ್ಕನ್ನು ಬೆಂಬಲಿಸಿದುವು. ಚಾರ್ಲ್ಸ್ 1704ರಲ್ಲಿ ಲಿಸ್ಬನ್‌ಗೆ ಹೋದ. ಆದರೆ ಆಸ್ಟ್ರಿಯದ ಸಿಂಹಾಸನಕ್ಕೆ ಹಕ್ಕುದಾರನಾಗಿದ್ದ ಅಣ್ಣ ಜೋಸೆಫ್ 1711ರಲ್ಲಿ ತೀರಿಕೊಂಡಿದ್ದರಿಂದ ಇವನು ಆಸ್ಟ್ರಿಯಕ್ಕೆ ಮರಳಿ ಅದರ ಸಾಮ್ರಾಟನಾದನಷ್ಟೇ ಅಲ್ಲ, ರೋಮನ್ ಸಾಮ್ರಾಟನೂ ಆದ. ಆದರೆ ಸ್ಪ್ಯಾನಿಷ್ ಉತ್ತರಾಧಿಕಾರ ಯುದ್ಧ ಮುಂದುವರಿಯಿತು. 1714ರಲ್ಲಿ ಅದು ಕೊನೆಗೊಂಡಾಗ ಫ್ರಾನ್ಸಿನ ಫಿಲಿಪನನ್ನು ಸ್ಪೇನಿನ ದೊರೆಯೆಂದು ಇವನು ಮಾನ್ಯ ಮಾಡಿ

ಸ್ಪೇನಿಗೆ ಸೇರಿದ ನೆದರ್‌ಲೆಂಡ್, ಮಿಲಾನ್, ಸಾರ್ಡೀನಿಯ ಮತ್ತು ನೇಪಲ್ಸನ್ನೂ, ಟಸ್ಕನಿಯ ಭಾಗಗಳನ್ನೂ ಪಡೆದ. ಪೂರ್ವದ ದೇಶಗಳೊಂದಿಗೆ ವ್ಯಾಪಾರಕ್ಕಾಗಿ 1722ರಲ್ಲಿ ಇವನು ಒಂದು ಕಂಪನಿಯನ್ನು ಸ್ಥಾಪಿಸಿದ. ಆದರೆ ಇಂಗ್ಲೆಂಡ್, ಹಾಲೆಂಡ್‌ಗಳ ಪ್ರತಿಭಟನೆಯ ಕಾರಣದಿಂದ 1731ರಲ್ಲಿ ಅದನ್ನು ಮುಚ್ಚಬೇಕಾಯಿತು. 1733–35ರ ಪೋಲೆಂಡ್‌ನ ಉತ್ತರಾಧಿಕಾರ ಯುದ್ಧದಲ್ಲಿ ಇವನು ಭಾಗವಹಿಸಿ, ನೇಪಲ್ಸ್ ಸಿಸಿಲಿಗಳನ್ನು ಕಳೆದುಕೊಂಡ. ಚಾರ್ಲ್ಸನಿಗೆ ಮೂರು ಹೆಣ್ಣು ಮಕ್ಕಳಿದ್ದರು. ಇವನ ಅನಂತರ ಹಿರಿಯ ಮಗಳು ಮರಿಯ ತೆರೀಸ ಆಸ್ಟ್ರಿಯದ ಸಿಂಹಾಸನವನ್ನೇರಿದಳು.

**ಚಾರ್ಲ್ಸ್ VII :** ಚಾರ್ಲ್ಸ್ ಆಲ್ಬರ್ಟ್ ಎಂದೂ ಈತನ ಹೆಸರು. ಬವೇರಿಯದ ಆಯ್ಕೆದಾರ (ಇಲೆಕ್ಟರ್) ಆಗಿದ್ದ (1726–45). 1742–45ರಲ್ಲಿ ಪವಿತ್ರ ರೋಮನ್ ಸಾಮ್ರಾಟನಾಗಿದ್ದ. 1697ರಲ್ಲಿ ಹುಟ್ಟಿದ ಈತ ತಾರುಣ್ಯದಲ್ಲಿ ತುರ್ಕರ ವಿರುದ್ಧ ಐರೋಪ್ಯರು ನಡೆಸಿದ ಯುದ್ಧದಲ್ಲಿ (1717) ಭಾಗವಹಿಸಿದ್ದ. ಆಸ್ಟ್ರಿಯದ ಮರಿಯ ತೆರೀಸಳ ಪತಿಯಾದ ಲಸ್ಕನಿಯ ಫ್ರಾನ್ಸಿಸನ ವಿರುದ್ಧ ಸ್ಪರ್ಧಿಸಿ ಸಮ್ರಾಟ್ ಪದವಿ ಗೆದ್ದ. ಆಸ್ಟ್ರಿಯನ್ ಉತ್ತರಾಧಿಕಾರ ಯುದ್ಧದಲ್ಲಿ (1740–48) ಆಸ್ಟ್ರಿಯನ್ ವಿರೋಧಿಗಳ ಕೈಗೊಂಬೆಯಂತಿದ್ದ. ಈ ಕಾಲದಲ್ಲಿ ಬವೇರಿಯ ಇವನ ಕೈತಪ್ಪಿ ಆಸ್ಟ್ರಿಯದ ವಶವಾದರೂ 1744ರಲ್ಲಿ ಮತ್ತೆ ಇವನಿಗೆ ದೊರೆಯಿತು. ಮರುವರ್ಷ ಈತ ತೀರಿಕೊಂಡ. (ಎಸ್.ಎನ್.ಕೆ.ಎ.)

**ಚಾರ್ಲ್ಸ್ (ಸ್ಪೇನಿನ ದೊರೆಗಳು) : ಚಾರ್ಲ್ಸ್ I :** 1500–1558. 1516ರಲ್ಲಿ ಸ್ಪೇನಿನ ದೊರೆಯಾದ ಈತ 1519ರಿಂದ 1556ರವರೆಗೆ ಪವಿತ್ರ ರೋಮನ್ ಚಕ್ರವರ್ತಿಯೂ ಆಗಿ 5ನೆಯ ಚಾರ್ಲ್ಸ್ ಆದ. ಇವನನ್ನು ಕುರಿತ ವಿವರಗಳಿಗೆ – (ನೋಡಿ– ಚಾರ್ಲ್ಸ್– (ಪವಿತ್ರ–ರೋಮನ್–ಚಕ್ರವರ್ತಿಗಳು).

**ಚಾರ್ಲ್ಸ್ II :** 1661–1700. ಸ್ಪ್ಯಾನಿಷ್ ಹ್ಯಾಪ್ಸ್‌ಬರ್ಗ್ ವಂಶದ ಕೊನೆಯ ದೊರೆ. ಸ್ಪೇನಿನ 4ನೆಯ ಫಿಲಿಪ್ ಮತ್ತು ಮೆರ್ಯಾ ಇವರ ಪುತ್ರ. ಮೆರ್ಯಾ ಆಸ್ಟ್ರಿಯದ ಸಾಮ್ರಾಟ ಮೂರನೆಯ ಫರ್ಡಿನೆಂಡನ ಮಗಳು. ಚಾರ್ಲ್ಸ್ ಬಾಲ್ಯದಿಂದಲೂ ದುರ್ಬಲ. ಇವನ ಅನಂತರ ಉತ್ತರಾಧಿಕಾರಿ ಯಾರಾಗಬೇಕೆಂಬ ಬಗ್ಗೆ ವಾದವಿವಾದ ನಡೆದು, ಹ್ಯಾಪ್ಸ್‌ಬರ್ಗರ ಹಕ್ಕಿನ ವಿರುದ್ಧ ಫ್ರಾನ್ಸಿನ 14ನೆಯ ಲೂಯಿಯ ಒತ್ತಡಕ್ಕೆ ಒಳಗಾಗಿ ಲೂಯಿಯ ಮೊಮ್ಮಗ ಫಿಲಿಪನಿಗೆ ಪಟ್ಟವಾಗಬೇಕೆಂದು ಚಾರ್ಲ್ಸ್ ಒಪ್ಪಿದ. ಇವನ ಮರಣಾನಂತರ ಸ್ಪೇನ್‌ನ ಸಿಂಹಾಸನದ ಉತ್ತರಾಧಿಕಾರಕ್ಕಾಗಿ ಯುದ್ಧ ಮೊದಲಿಟ್ಟಿತು.

**ಚಾರ್ಲ್ಸ್ III :** 1716–1788. ಸ್ಪೇನಿನ 5ನೆಯ ಫಿಲಿಪನ ಮಗ. 1716ರಲ್ಲಿ ಹುಟ್ಟಿದ. ಈತ 1732ರಲ್ಲಿ ಇಟಲಿಯ ಪಾರ್ಮಾದ ಡ್ಯೂಕನಾಗಿಯೂ 1734ರಲ್ಲಿ ನೇಪಲ್ಸ್–ಸಿಸಿಲಿಗಳ ರಾಜನಾಗಿಯೂ ಆಳುತ್ತಿದ್ದ. 1759ರಲ್ಲಿ ತನ್ನ ಬಲಸೋದರ, ಸ್ಪೇನಿನ ದೊರೆ, 4ನೆಯ ಫರ್ಡಿನೆಂಡ್ ತೀರಿಕೊಂಡಾಗ ನೇಪಲ್ಸ್ ಪಟ್ಟವನ್ನು ತನ್ನ ಮಗ ಫರ್ಡಿನೆಂಡನಿಗೆ ಕೊಟ್ಟು ಸ್ಪೇನಿನ ಸಿಂಹಾಸನವನ್ನೇರಿದ. ಬೂರ್ಬೊ ಕುಟುಂಬದ ಬಗ್ಗೆ ಇವನಿಗೆ ಅಭಿಮಾನವಿತ್ತು. ಇದಕ್ಕಾಗಿ ಇವನು ಫ್ರಾನ್ಸಿನ ಪರವಾಗಿ ಇಂಗ್ಲೆಂಡಿನ ವಿರುದ್ಧ ಸ್ಪೇನನ್ನು ಸಪ್ತವಾರ್ಷಿಕ ಯುದ್ಧದಲ್ಲಿ ತೊಡಗಿಸಿ ದೇಶವನ್ನು ಕಷ್ಟನಷ್ಟಗಳಲ್ಲಿ ಸಿಲುಕಿಸಿದ. ಅಮೆರಿಕನ್ ಸ್ವಾತಂತ್ರ್ಯ ಯುದ್ಧದ ಕಾಲಕ್ಕೂ ಇವನು ಇಂಗ್ಲೆಂಡ್ ವಿರೋಧಿ ನೀತಿ ಅನುಸರಿಸಿದ. ಆದರೆ ಒಳ್ಳೆಯ ಒಳಾಡಳಿತದಿಂದಾಗಿ ಅರಿವಿನ ದೊರೆಗಳಲ್ಲಿ ಒಬ್ಬನೆಂದು ಕೀರ್ತಿ ಪಡೆದ. ಕೆಥೊಲಿಕನಾದರೂ ಜೆಸುಯಿಟರನ್ನು ದೇಶದಿಂದ ಹೊರದೂಡಿ ಧಾರ್ಮಿಕ ವಿಚಾರಣೆಯನ್ನು ಸ್ಥಗಿತಗೊಳಿಸಿದ.

**ಚಾರ್ಲ್ಸ್ IV :** 1748–1814. 3ನೆಯ ಚಾರ್ಲ್ಸನ ಎರಡನೆಯ ಮಗ. 1748ರಲ್ಲಿ ಜನಿಸಿದ. ಅಣ್ಣ ದುರ್ಬಲನೂ ರೋಗಿಷ್ಠನೂ ಆಗಿದ್ದುದರಿಂದ ಇವನಿಗೆ ಪಟ್ಟವಾಯಿತು (1788). ರಾಣಿ ಮರಿಯಾ ಲುವಿಸಾ ತನ್ನ ಪ್ರಿಯಕರ ಗೊಡಾಯನ ನೆರವಿಂದ ರಾಜ್ಯಭಾರ ನಿರ್ವಹಿಸಿದಳು. ಫ್ರಾನ್ಸಿನ ಕ್ರಾಂತಿ ಯುದ್ಧಗಳಲ್ಲಿ ದೊರೆ ರಾಜಪಕ್ಷ ವಹಿಸಿದ. ಇದರಿಂದ ನೆಪೋಲಿಯನ್ ಸ್ಪೇನನ್ನು ವಶಪಡಿಸಿಕೊಂಡ. ಚಾರ್ಲ್ಸ್ 1808ರಲ್ಲಿ ಅಧಿಕಾರವನ್ನು ತ್ಯಜಿಸಿದ. ನೆಪೋಲಿಯನ್ ಈತನನ್ನು ಇವನ ಮಗನ ಜೊತೆಗೆ ಬಂಧಿಸಿ ಫ್ರಾನ್ಸಿಗೆ ಒಯ್ದ. ಈತ 1814ರಲ್ಲಿ ಬಿಡುಗಡೆಯಾಗಿ ರೋಮಿನಲ್ಲಿ ತೀರಿಕೊಂಡ. 1812ರಲ್ಲಿ ಇವನ ಮಗ 7ನೆಯ ಫರ್ಡಿನೆಂಡನಿಗೆ ಪಟ್ಟವಾಯಿತು. (ಎಸ್.ಎನ್.ಕೆ.)

**ಚಾರ್ಲ್ಸ್ (ಸ್ವೀಡನಿನ ದೊರೆಗಳು) : ಚಾರ್ಲ್ಸ್ IX :** 1550–1611. ಸ್ವೀಡನ್ ದೊರೆ ಗಸ್ಟೇವಸ್ ವಾಸನ ಮಗ. ಒಂಬತ್ತನೆಯ ಚಾರ್ಲ್ಸನೂ ಇವನ ಅನಂತರ ದೊರೆಗಳಾದ ಎರಡನೆಯ ಗಸ್ಟೇವಸ್, 10ನೆಯ ಚಾರ್ಲ್ಸ್ ಇವರೂ ಸ್ವೀಡನನ್ನು ಘನತೆಯ ರಾಷ್ಟ್ರವನ್ನಾಗಿ ಪರಿವರ್ತಿಸಿದರು. ತಂದೆಯ ಇಚ್ಛೆಯಂತೆ ಈತ ಸಾಡರ್ಮನ್‌ಲೆಂಡಿನ ಡ್ಯೂಕ್ ಆಗಿದ್ದ. ತನ್ನ ಮಲ ಅಣ್ಣ 14ನೆಯ ಎರಿಕನ ವಿರುದ್ಧ ಬಂಡಾಯವೆದ್ದ ಅವನನ್ನು ಇಳಿಸಿ ಅಣ್ಣ 3ನೆಯ ಜಾನನನ್ನು ಸಿಂಹಾಸನದ ಮೇಲೆ ಕೂರಿಸಿದ. ಆದರೆ ಜಾನನಿಗೂ ಚಾರ್ಲ್ಸನಿಗೂ ಕ್ರಮೇಣ ವಿರಸ ಬೆಳೆಯಿತು. ಅವನ ಮಗ ಸಿಗಿಸ್‌ಮಾಂಡ್ ರಾಜನಾದಾಗಲೂ ಈ ವಿರಸ ಮುಂದುವರಿಯಿತು. ಅವರ ವಿರುದ್ಧ ಬಂಡಾಯವೆದ್ದ. 1595ರಲ್ಲಿ ಈತ ರಾಜ್ಯ ರಕ್ಷಕನೆಂದು ನೇಮಿಸಲ್ಪಟ್ಟು, ಮುಂದೆ 1604ರಲ್ಲಿ ರಾಜನೆಂದು ಮಾನ್ಯತೆ ಪಡೆದ. ಪೋಲೆಂಡಿನ ವಿರುದ್ಧ ಸ್ವೀಡನ್ ನಡೆಸಿದ ದೀರ್ಘ ಯುದ್ಧ (1600–60) ಆರಂಭವಾದ್ದು ಇವನ ಕಾಲದಲ್ಲೇ. ಫಿನ್ಲೆಂಡ್, ಪೋಲೆಂಡ್, ಡೆನ್ಮಾರ್ಕ್, ರಷ್ಯಗಳ ವಿರುದ್ಧ ಇವನು ನಡೆಸಿದ ಯುದ್ಧಗಳೆಲ್ಲ ಅಪಯಶಸ್ಸಿಗೆ ಕಾರಣವಾದುವು. ಆದರೆ ತನ್ನ ತಂದೆ ಆರಂಭಿಸಿದ ಒಂದು ಬಲಶಾಲಿ ಹಾಗು ಪ್ರಾಟೆಸ್ಟಂಟ್ ರಾಜ್ಯವನ್ನು ಕಟ್ಟುವ ಕಾರ್ಯವನ್ನು ಈತ ಯಶಸ್ವಿಯಾಗಿ ಮುಂದುವರಿಸಿದ.

**ಚಾರ್ಲ್ಸ್ X :** 1622–1660ರಲ್ಲಿ ಸ್ವೀಡನ್ನಿನ ದೊರೆಯಾಗಿದ್ದ. ಇವನು ಗಸ್ಟೇವಸ್ ಅಡಾಲ್ಫಸನ ಸೋದರಿಯ ಮಗ. ಸ್ವೀಡನ್ನಿನ ರಾಣಿ ಕ್ರಿಸ್ಟಿಯಾನ ಈತನನ್ನು ತನ್ನ ಉತ್ತರಾಧಿಕಾರಿಯೆಂದು 1649ರಲ್ಲಿ ಘೋಷಿಸಿದಳು. 1654ರಲ್ಲಿ ಕ್ರಿಸ್ಟಿಯಾನ ಕಿರೀಟತ್ಯಾಗ ಮಾಡಿದಾಗ ಈತ ರಾಜನಾದ. ತನ್ನ ಅಲ್ಪಕಾಲದ ಆಡಳಿತದಲ್ಲಿ ಪೋಲೆಂಡಿನ ಮೇಲೆ ಯುದ್ಧ ನಡೆಸಿ ಅದರ ರಾಜಧಾನಿಯನ್ನು ಗೆದ್ದು, ಮುಂದೆ ಡೆನ್ಮಾರ್ಕನ್ನು ಸೋಲಿಸಿ ಯುರೋಪಿನಲ್ಲೆಲ್ಲ ಗಾಬರಿ ಹುಟ್ಟಿಸಿದ. ಯುದ್ಧ ಮುಂದುವರಿಸಬೇಕೆಂಬ ಹುಮ್ಮಸ್ಸಿನಲ್ಲಿನಲ್ಲಿದ್ದಾಗಲೇ ತೀರಿಕೊಂಡ.

**ಚಾರ್ಲ್ಸ್ XI :** 1660ರಿಂದ 1697ರ ವರೆಗೆ ಸ್ವೀಡನ್ನನ್ನಾಳಿದ ಈತ 10ನೆಯ ಚಾರ್ಲ್ಸನ ಒಬ್ಬನೇ ಮಗ. ಜನನ 1655. ತಂದೆ ತೀರಿಕೊಂಡಾಗ ಈತ ನಾಲ್ಕು ವರ್ಷಗಳ ಬಾಲಕ. 10ನೆಯ ಚಾರ್ಲ್ಸ್ ಸಾಯುವ ಮುನ್ನ ರಾಣಿಯ ಅಧ್ಯಕ್ಷತೆಯಲ್ಲಿ ಐದು ಮಂತ್ರಿಗಳ ರಾಜ್ಯರಕ್ಷಣಾ ಮಂಡಳಿಯನ್ನು ನೇಮಿಸಿದ್ದ. ಆದರೆ ಬಾಲ ರಾಜನಿಗೆ ಯೋಗ್ಯ ಶಿಕ್ಷಣ ದೊರಕಲಿಲ್ಲ. ಆಗ ಸ್ವೀಡನ್ ಫ್ರಾನ್ಸಿನ ಉಸುವಾರಿಗೆ ಒಳಪಟ್ಟಿತ್ತು. 1675ರಲ್ಲಿ ಡೆನ್ಮಾರ್ಕ್ ಸ್ವೀಡನ್ನಿನ ಮೇಲೆ ದಂಡೆತ್ತಿ ಬಂದಾಗ ಈ ಎಳೆಯನೇ ನಾಯಕತ್ವ ವಹಿಸಿ ಡೆನ್ಮಾರ್ಕಿನ ಸೇನೆಯನ್ನು ಪೂರ್ತಿ ಸೋಲಿಸಿ ಓಡಿಸಿದ (1678). ಮುಂದೆ ಡೆನ್ಮಾರ್ಕಿನೊಂದಿಗೆ ಸ್ನೇಹ ಬೆಳೆಸಿ, ಅಲ್ಲಿಯ ದೊರೆಯ ಸೋದರಿ ಆಲ್ರಿಕಾ ಲಿಯೊನಾರಾಳನ್ನು ಮದುವೆಯಾದ. ಬ್ರಾಂಡೆನ್‌ಬರ್ಗ್, ಫ್ರಾನ್ಸ್‌ಗಳ ಜೊತೆಗೂ ಒಪ್ಪಂದ ಮಾಡಿಕೊಂಡ. ಒಳಾಡಳಿತದ ಎಲ್ಲ ಶಾಖೆಗಳನ್ನೂ ತೀವ್ರವಾಗಿ ಸುಧಾರಿಸಿ ಸ್ವೀಡನ್ನಿಗೆ ಹೊಸ ರೂಪ ಕೊಟ್ಟ. ವೀರನೂ ವಿದ್ಯಾಪಕ್ಷಪಾತಿಯೂ ಅಸಾಧಾರಣ ಆಡಳಿತಗಾರನೂ ಆದ ಚಾರ್ಲ್ಸ್ ಸ್ವೀಡನ್ನಿನ ಗಣ್ಯ ದೊರೆ. 42ನೆಯ ವಯಸ್ಸಿನಲ್ಲಿ ಈತ ತೀರಿಕೊಂಡಾಗ ಇವನ ಮಗ 12ನೆಯ ಚಾರ್ಲ್ಸನಿಗೆ ಪಟ್ಟವಾಯಿತು.

**ಚಾರ್ಲ್ಸ್ XII :** 11ನೆಯ ಚಾರ್ಲ್ಸನ ಒಬ್ಬನೇ ಮಗ. 1697–1718ರಲ್ಲಿ ಸ್ವೀಡನ್ನನ್ನಾಳಿದ. ಜನನ 1682. ಈತ ಪಟ್ಟಕ್ಕೆ ಬಂದಾಗ ಇವನಿಗೆ ಕೇವಲ 15 ವರ್ಷ. ಈತನ ರಾಜ್ಯದ ಮೇಲೆ ದಾಳಿ ನಡೆಸಲು ಡೆನ್ಮಾರ್ಕ್, ಪೋಲೆಂಡ್, ರಷ್ಯ ಮತ್ತು ಪ್ರಷ್ಯಗಳು ಸಂಚು ನಡೆಸಿ ಒಪ್ಪಂದ ಮಾಡಿಕೊಂಡುವು. ಎಳೆಯ ರಾಜ ಈ ದೇಶಗಳ ಸಂಚನ್ನು ಮೊದಲೇ ತಿಳಿದುಕೊಂಡು, ಅವರೆಲ್ಲ ಅಚ್ಚರಿಪಡುವಂತೆ 1799ರಲ್ಲಿ ಡೆನ್ಮಾರ್ಕಿಗೆ ನುಗ್ಗಿ ಅಲ್ಲಿಯ ರಾಜನನ್ನು ಸೋಲಿಸಿ ಯುದ್ಧ ಪರಿಹಾರ ಪಡೆದ. ಮುಂದೆ ನಾರ್ವದಲ್ಲಿ ರಷ್ಯನ್ನರನ್ನು ಸೋಲಿಸಿ, ಲಿವೋನಿಯವನ್ನು ಮುತ್ತಿದ ಪೋಲರನ್ನೂ ಲಿತುವೇನಿಯದಿಂದ ರಷ್ಯನ್ನರನ್ನೂ ಹೊರದೊಡಿದ. 1702ರಲ್ಲಿ ಪೋಲೆಂಡಿನ ಮೇಲೆ ದಂಡೆತ್ತಿ ಹೋಗಿ ವಾರ್ಸಾವನ್ನು ಗೆದ್ದು ಅಲ್ಲಿಯ ದೊರೆಯನ್ನು ಪದಚ್ಯುತಗೊಳಿಸಿ ಸ್ಟ್ಯಾನಿಸ್ಲಸ್ ಲಿಸ್ಜಿನ್‌ಸ್ಕಿ ಎಂಬ ಕೈಗೊಂಬೆ ರಾಜನನ್ನು ಅಲ್ಲಿ ಸ್ಥಾಪಿಸಿದ (1704). ಮುಂದೆ ರಷ್ಯದ ರಾಜಧಾನಿ ಮಾಸ್ಕೋವನ್ನು ಗೆಲ್ಲಬೇಕೆಂದು ದಂಡಯಾತ್ರೆ ನಡೆಸಿ, ರಷ್ಯದ ಭೀಕರ ಚಳಿಯಲ್ಲಿ ತನ್ನ ಸೇನೆಯ ಬಹುಭಾಗವನ್ನು ಕಳೆದುಕೊಂಡ. ಪೋಲ್ಟಾವದಲ್ಲಿ ರಷ್ಯನ್ನರ ಕೈಯಲ್ಲಿ ಸೋತು (1709), ತನ್ನ ಸೇನೆಯನ್ನು ಕಳೆದುಕೊಂಡು ತುರ್ಕಿಯನ್ನು ಪ್ರವೇಶಿಸಿದ. ಮುಂದೆ ಐದು ವರ್ಷಗಳ ಅನಂತರ ಸ್ವೀಡನ್ನಿಗೆ ಮರಳಿದ. ಈ ಕಾಲದಲ್ಲಿ ತನ್ನ ವಿರುದ್ಧ ಏರ್ಪಟ್ಟಿದ್ದ ರಷ್ಯ, ಡೆನ್ಮಾರ್ಕ್, ಬ್ರಿಟನ್, ಹ್ಯಾನೋವರ್, ಪೋಲೆಂಡ್‌ಗಳ ಒಕ್ಕೂಟವನ್ನು ಮುರಿಯಲು ನಾರ್ವೆಯ ಮೇಲೆ ದಂಡೆತ್ತಿ ನಡೆದು, ಯುದ್ಧದಲ್ಲಿ ಗುಂಡು ತಗುಲಿ ಮರಣ ಹೊಂದಿದ.

**ಚಾರ್ಲ್ಸ್ XIII :** 1810–1818ರಲ್ಲಿ ಸ್ವೀಡನ್ನಿನ ದೊರೆಯಾಗಿದ್ದ, ಅಡಾಲ್ಫಸ್ ಫ್ರೆಡರಿಕನ ಎರಡನೆಯ ಮಗ, ವಾಸ ವಂಶದ ಕೊನೆಯ ದೊರೆ. ತನ್ನ ಅಣ್ಣನಾದ ದೊರೆ 3ನೆಯ ಗಸ್ಟೇವಸ್ ತೀರಿಕೊಂಡಾಗ (1789) ರಾಜರಕ್ಷಕನಾಗಿ ಏಳು ವರ್ಷ ಕಾರ್ಯ ನಿರ್ವಹಿಸಿದ. ಮುಂದೆ 1810ರಲ್ಲಿ 4ನೆಯ ಗಸ್ಟೇವಸನ ಅನಂತರ ರಾಜನಾಗಿ ಆಯ್ಕೆಯಾದ. ಇದೇ ಕಾಲಕ್ಕೆ ಸ್ವೀಡನ್ನಿಗೆ ಬಂದ ನೆಪೋಲಿಯನ್ನನ ಸೇನಾನಿ ಬರ್ನಾಡಾಟನನ್ನು ತನ್ನ ಉತ್ತರಾಧಿಕಾರಿಯಾಗಿ ಸ್ವೀಕರಿಸಿದ. 1814ರಲ್ಲಿ ನಾರ್ವೆ–ಸ್ವೀಡನ್‌ಗಳ ಸಂಯುಕ್ತ ರಾಜನಾದ. ಇವನ ಕಾಲದಲ್ಲಿ ಬರ್ನಾಡಾಟನೇ ಆಡಳಿತ ನೋಡಿಕೊಳ್ಳುತ್ತಿದ್ದು ಈತ ಹೆಸರಿಗೆ ಮಾತ್ರ ರಾಜನಾಗಿದ್ದ.

**ಚಾರ್ಲ್ಸ್ XIV :** 1818–1844ರಲ್ಲಿ ಸ್ವೀಡನ್ನಿನ ದೊರೆಯಾಗಿದ್ದ. ಫ್ರೆಂಚ್ ಮೂಲದ ನೇಕಾರರ ಕುಟುಂಬದಲ್ಲಿ ಜನನ(1763). 1780ರಲ್ಲಿ ಫ್ರೆಂಚ್ ಸೇನೆಯಲ್ಲಿ ಸೇರಿ ಮುಂದೆ ಸೇನಾಧಿಕಾರಿಯಾದ. ಕ್ರಾಂತಿಕಾರಿ ಸೇನೆಯಲ್ಲೂ ಅಧಿಕಾರಿಯಾಗಿದ್ದ. ನೆಪೋಲಿಯನ್ನನ

ಕೈಕೆಳಗೆ ಮಹತ್ತ್ವದ ಜವಾಬ್ದಾರಿಗಳನ್ನು ನಿರ್ವಹಿಸಿದ. 1810ರಲ್ಲಿ ಸ್ವೀಡನ್ನಿನ ಆಡಳಿತ ಗಾರನಾಗಲು ಕರೆ ಬಂದಾಗ ಅಲ್ಲಿಗೆ ತೆರಳಿದ. ಅಲ್ಲಿಯ ದೊರೆ 13ನೆಯ ಚಾರ್ಲ್ಸ್ ಈತನನ್ನು ತನ್ನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿದ. ಬರ್ನಾಡಾಟ್ ಎಂಬ ಹೆಸರು ಹೊಂದಿದ್ದ ಈತ ಚಾರ್ಲ್ಸ್ ಜಾನ್ ಎಂಬ ಹೆಸರು ತಳೆದ. ಶೀಘ್ರವೇ ಈತನಿಗೂ ನೆಪೋಲಿಯನ್ನನ ಶತ್ರುಗಳಿಗೂ ಸ್ನೇಹ ಬೆಳೆದು, ಈ ಸ್ನೇಹ ನೆಪೋಲಿಯನ್ನನ ಸೋಲಿಗೂ ಕಾರಣವಾಯಿತು. 1814ರಲ್ಲಿ ನಾರ್ವೆ ಸ್ವೀಡನ್ನಿಗೆ ಸೇರಿತು. 1818ರಲ್ಲಿ 13ನೆಯ ಚಾರ್ಲ್ಸ್ ತೀರಿಕೊಂಡಾಗ ಇವನು ಕಿರೀಟಧಾರಣೆ ಮಾಡಿಕೊಂಡ. ಇವನ ಕಾಲದಲ್ಲಿ ನಾರ್ವೆ ಸ್ವೀಡನ್‌ಗಳ ಆಡಳಿತ ಸುಧಾರಿಸಿತು, ಅರ್ಥವ್ಯವಸ್ಥೆ ಭದ್ರವಾಯಿತು, ಶಿಕ್ಷಣವ್ಯವಸ್ಥೆ ವಿಸ್ತರಿಸಿತು. ಈತ ತೀರಿಕೊಂಡಾಗ ನಾರ್ವೆ ಮತ್ತು ಸ್ವೀಡನ್‌ಗಳು ಬಲಿಷ್ಠವಾದ, ಸಮೃದ್ಧವಾದ ಮತ್ತು ಜನಭರಿತವಾದ ರಾಜ್ಯಗಳಾಗಿದ್ದುವು. ಈತನ ವಂಶಜರು ಅಲ್ಲಿ ಭದ್ರವಾಗಿ ಆಳ್ವಿಕೆ ಮುಂದುವರಿಸಿದರು.

**ಚಾರ್ಲ್ಸ್ XV :** ಸ್ವೀಡನ್ ಹಾಗೂ ನಾರ್ವೆಯ ದೊರೆ (1859–72). ನಾರ್ವೆಯ ದೊರೆ 1ನೆಯ ಆಸ್ಕರನ ಮಗ. ಬಹುಮುಖವಾದ ಹಾಗೂ ದೀರ್ಘಗಾಮಿಯಾದ ಸುಧಾರಣೆಗಳಿಂದಾಗಿ ಇವನ ಆಡಳಿತ ಖ್ಯಾತವಾಗಿದೆ. ಸ್ವೀಡನ್ನಿನ ಕಾನೂನುಗಳನ್ನು ಈತ ಪ್ರಗತಿಪರವಾಗಿ ಬದಲಾಯಿಸಿದ. ಶಾಸನಸಭೆ ಸುಧಾರಣೆಗೊಂಡಿತು. ಎರಡೂ ರಾಜ್ಯಗಳಲ್ಲಿ ಜನಪ್ರಿಯನಾಗಿದ್ದ ಈತ ಚಿತ್ರಕಾರನೂ ಕವಿಯೂ ಆಗಿದ್ದ. (ಎಸ್.ಎನ್.ಕೆ.ಎ.)

**ಚಾರ್ಲ್ಸ್ (ಹಂಗರಿಯ ದೊರೆ) : ಚಾರ್ಲ್ಸ್ I:** 1288–1342. ಹಂಗರಿಯ ದೊರೆ (1301; 1309–42). ನೇಪಲ್ಸಿನ ಚಾರ್ಲ್ಸ್ ಮಾರ್ಟೆಲ್ ಇವನ ತಂದೆ. ಈತನ ತಾಯಿ ಕ್ಲೆಮೆನ್ಷಿಯ. ಈಕೆ 1ನೆಯ ರುಡಾಲ್ಫ್ ಚಕ್ರವರ್ತಿಯ ಮಗಳು. 1301ರಲ್ಲಿ 3ನೆಯ ಆಂಡ್ರ್ಯೂ ತೀರಿಕೊಂಡಾಗ ಚಾರ್ಲ್ಸ್ ಹಂಗರಿಯ ದೊರೆಯಾದ. ಐದನೆಯ ಸ್ಟೀಫನನ ಮರಿಮಗನೆಂಬ ಕಾರಣದಿಂದ ಇವನಿಗೆ ಸಿಂಹಾಸನ ದಕ್ಕಿತು. ಚರ್ಚೂ ಇದನ್ನು ಅನುಮೋದಿಸಿತು. ಆದರೆ ಬೊಹೀಮಿಯದ 2ನೆಯ ವೆನ್ಸೆಸ್ಲಾಸ್ ತಕರಾರು ಹೂಡಿದ್ದರಿಂದ ಚಾರ್ಲ್ಸ್ ಅವನಿಗೆ ಸಿಂಹಾಸನವನ್ನು ಬಿಟ್ಟುಕೊಡಬೇಕಾಯಿತು. 1305ರಲ್ಲಿ ವೆನ್ಸೆಸ್ಲಾಸ್ ತನ್ನ ಅಧಿಕಾರವನ್ನು ಕೆಳ ಬವೇರಿಯದ ಆಟೊಗೆ ಬಿಟ್ಟುಕೊಟ್ಟ. ಹಂಗರಿಯನರು ಅವನನ್ನು ಸೆರೆಹಿಡಿದು 1309ರಲ್ಲಿ ಚಾರ್ಲ್ಸನಿಗೆ ಪಟ್ಟ ಕಟ್ಟಿದರು. ಈತ ಒಳ ಜಗಳಗಳನ್ನು ಹತ್ತಿಕ್ಕಿ ಪೋಲೆಂಡ್ ಜೊತೆಗೆ ರಕ್ಷಣಾ ಒಪ್ಪಂದ ಮಾಡಿಕೊಂಡು (1335) ಹಂಗರಿಯನ್ನು ಮತ್ತೊಮ್ಮೆ ಯುರೋಪಿನ ಹಿರಿಯ ರಾಷ್ಟ್ರಗಳ ಸಾಲಿಗೆ ತಂದ. ಶ್ರೇಷ್ಠ ರಾಜಕಾರಣಿಯಾದ ಈತ ಹಂಗರಿಯನ್ನು ನಾಗರಿಕ ರಾಷ್ಟ್ರವಾಗಿ ಪರಿವರ್ತಿಸಿದ. (ಎಸ್.ಎನ್.ಕೆ.ಎ.)

**ಚಾರ್ಲ್ಸ್, ಜಾಕ್ವಿಸ್ ಅಲೆಕ್ಸಾಂಡರ್ ಸೀಜರ್:** 1746–1823. ಫ್ರೆಂಚ್ ಭೌತ ಮತ್ತು ಗಣಿತ ವಿಜ್ಞಾನಿ. 12 ನವೆಂಬರ್ 1746ರಂದು ಜನಿಸಿದ. ಹಣಕಾಸಿನ ಸಚಿವಖಾತೆಯಲ್ಲಿ



ಹೈಡ್ರೊಜನ್ ತುಂಬಿದ ಹಾರುಬಲೂನಿನ ಪ್ರಯೋಗ

ಗುಮಾಸ್ತನಾಗಿ ಕೆಲಸಕ್ಕೆ ಸೇರಿದ. ಕಾರಣಾಂತರಗಳಿಂದ ಈ ಪ್ರತಿಭಾವಂತ ಕೆಲಸದಿಂದ ವಜಾ ಮಾಡಲ್ಪಟ್ಟ. ಬೇರೇನೂ ಕೆಲಸವಿಲ್ಲದ ಕಾರಣದಿಂದಲೋ ಏನೋ ಈತ ಫ್ರಾಂಕ್ಲಿನನ ವಿದ್ಯುತ್‌ಪ್ರಯೋಗಗಳನ್ನು ಜನರ ಮುಂದೆ ಪ್ರದರ್ಶಿಸಲಾರಂಭಿಸಿದ. ಮುಂದೆ ಈ ರೀತಿಯ ವಿಜ್ಞಾನ ಪ್ರದರ್ಶನಗಳು ಫ್ರಾನ್ಸಿನಲ್ಲಿ ಒಂದು ನಾಜೂಕೇ ಆಯಿತೆನ್ನಬಹುದು. ಪ್ರಯೋಗಗಳ ಪ್ರದರ್ಶನಗಳು ಹೆಚ್ಚಿದಂತೆ ಚಾರ್ಲ್ಸನ ಆಸಕ್ತಿ ಗಣಿತ ಹಾಗೂ ಭೌತವಿಜ್ಞಾನಗಳಲ್ಲಿ ಬೆಳೆಯತೊಡಗಿ ಸ್ವತಂತ್ರ ಸಂಶೋಧನೆಗೆ ದಾರಿಯಾಯಿತು. ಹಾರುವ ಬಲೂನುಗಳಲ್ಲಿ ಉಪಯೋಗಿಸುತ್ತಿದ್ದ ಬಿಸಿಗಾಳಿಯ ಬದಲಿಗೆ ಹಗುರಾದ ಹೈಡ್ರೊಜನನ್ನು ಉಪಯೋಗಿಸ ಬಹುದೆಂದು ತೋರಿಸಿದ (1783). ಮುಂದೆ 1787ರಲ್ಲಿ, ಇಂದು ನಾವು ಚಾರ್ಲ್ಸನ ನಿಯಮವೆಂದು ಕರೆಯುವ, ಸ್ಥಿರ ಒತ್ತಡದಲ್ಲಿ ಅನಿಲಗಳ ಉಷ್ಣತೆ ಮತ್ತು ಘನಗಾತ್ರಗಳಿಗಿರುವ ಸಂಬಂಧವನ್ನು ಕಂಡುಹಿಡಿದ. ಬಳಿಕ ಗ್ರೇವ್ ಸ್ಯಾಂಡ್ ಹೀಲಿಯೋಸ್ಟಾಟ್, ಫ್ಯಾರನ್‌ಹೈಟ್ ಏರೋಮೀಟರ್ ಮುಂತಾದ ಉಪಕರಣಗಳನ್ನು ಪರಿಷ್ಕರಿಸಿದ್ದೇ ಅಲ್ಲದೆ ಥರ್ಮಾಮಿಟ್ರಿಕ್ ಹೈಡ್ರೋಮೀಟರ್, ಪ್ರತಿಫಲನತತ್ತ್ವದ ಮೇಲೆ ರಚಿಸಿದ ಗೋನಿಯೋಮೀಟರ್ ಮುಂತಾದ ಹೊಸ ಭೌತ ಉಪಕರಣಗಳನ್ನೂ ರಚಿಸಿದ. ಫ್ರಾನ್ಸಿನ ಅಕಾಡೆಮಿ ಡೆ ಸೈನ್ಸಸಿನ ಸದಸ್ಯನಾಗಿ 1785ರಲ್ಲಿ ಆಯ್ಕೆಯಾದ. ಭೌತವಿಜ್ಞಾನದ ಪ್ರಾಧ್ಯಾಪಕನಾಗಿಯೂ ಸ್ವಲ್ಪ ಕಾಲ ಕೆಲಸ ಮಾಡಿದ. ಇವನು 7 ಏಪ್ರಿಲ್ 1823 ರಂದು ನಿಧನನಾದ. (ಎ.ವಿ.ಜ.)

**ಚಾರ್ವಾಕ ಸಿದ್ಧಾಂತ :** ನಾಸ್ತಿಕ ಸಿದ್ಧಾಂತಗಳಲ್ಲಿ ಮುಖ್ಯವಾದುದು. ಇದು ದರ್ಶನಗಳಲ್ಲೆಲ್ಲ ಮೊದಲನೆಯದು ಮತ್ತು ಸರ್ವ ದರ್ಶನಗಳಿಗೆ ಪ್ರತಿಕಕ್ಷಿಯಾದುದು. ಈ ಸಿದ್ಧಾಂತವನ್ನು ಪ್ರತಿಪಾದಿಸುವ ಗ್ರಂಥಗಳು ಲುಪ್ತವಾಗಿಹೋಗಿವೆಯಾದ ಕಾರಣ ಇದರ ವಿರೋಧಿಗಳು ಇದನ್ನು ಖಂಡಿಸುವಾಗ ಉದಾಹರಿಸುವ ಮಾತುಗಳಲ್ಲಿ ತೋರಿಸುವ ಉದ್ವೇಗ ಮತ್ತು ಕಾಳಜಿಗಳಿಂದಲೇ ಈ ದರ್ಶನದ ಮಹತ್ತ್ವ ಮತ್ತು ಜನಪ್ರಿಯತೆಯನ್ನು ತಿಳಿಯಬೇಕಾಗಿದೆ. ಇದಕ್ಕೆ ಸಂಬಂಧಿಸಿದ ಅಲ್ಪಸ್ವಲ್ಪ ವಿಷಯಗಳು ಜಾಬಾಲಿ, ಪರಾಶರ ಮೊದಲಾದ ಉಪನಿಷದ್ ಋಷಿಗಳ ಮಾತುಗಳಲ್ಲಿಯೂ ರಾಮಾಯಣ, ವಿಷ್ಣುಪುರಾಣ, ಮಹಾಭಾರತಾದಿಗಳಲ್ಲಿಯೂ ಮಾಧ್ವಾಚಾರ್ಯರ ಸರ್ವದರ್ಶನಸಂಗ್ರಹ ಮೊದಲಾದ ಇತ್ತೀಚಿನ ದರ್ಶನಗ್ರಂಥಗಳಲ್ಲಿಯೂ ಕಂಡುಬರುತ್ತವೆ. ಬೃಹಸ್ಪತ್ಯಾಚಾರ್ಯರೇ ಸೂತ್ರಕಾರ ರಾಗಿದ್ದ ಈ ತತ್ತ್ವದರ್ಶನ ಚಾರ್ವಾಕರೆಂಬುವರ ಭಾಷ್ಯದಿಂದ ಬುದ್ಧಪೂರ್ವಕಾಲದಲ್ಲಿಯೇ ಪ್ರಚಾರದಲ್ಲಿದ್ದಂತೆ ತಿಳಿದುಬರುತ್ತದೆ. ತತ್ತ್ವಸಂಗ್ರಹವೆಂಬ ಬೌದ್ಧಗ್ರಂಥದ ಮೂಲಕ ಕಂಬಲಾಶ್ವತರ ಎಂಬ ಚಾರ್ವಾಕ ಮತಾಚಾರ್ಯರನ್ನು ಖಂಡಿಸಿದುದು ಕಾಣುವುದಲ್ಲದೆ ಬೌದ್ಧಗ್ರಂಥಗಳಲ್ಲಿಯೇ ಇನ್ನೂ ಅನೇಕ ಚಾರ್ವಾಕ ಮತಪ್ರವರ್ತಕರ ಹೆಸರುಗಳು ಸಿಕ್ಕುತ್ತವೆ. ಶಬರ, ಪ್ರಭಾಕರ, ಪತಂಜಲಿ, ಭಾಸ್ಕರಾಚಾರ್ಯ ಮುಂತಾದವರ ಗ್ರಂಥಗಳಲ್ಲಿನ ಅಭಿಪ್ರಾಯ ಗಳನ್ನು ನೋಡಿದರೆ ಚಾರ್ವಾಕದರ್ಶನ ಪೂರ್ವಕಾಲದಲ್ಲಿ ಬಹಳ ಪ್ರಚಾರದಲ್ಲಿದ್ದಂತೆ ತೋರುತ್ತದೆ. ಸರ್ವದರ್ಶನಸಂಗ್ರಹದ ಮೊದಲನೆಯ ಅಧ್ಯಾಯವೇ ಪ್ರಬಲವಾದ ಚಾರ್ವಾಕಮತದ ಖಂಡನೆಯಿಂದ ಪ್ರಾರಂಭವಾಗುತ್ತದೆ. ಚಾರ್ವಾಕ ಮತದ ಕೆಲವು ಪ್ರಕ್ರಿಯೆಗಳ ಪ್ರಭಾವವಾದರೂ ಇತರ ದಾರ್ಶನಿಕರ ಮೇಲೆ ಆದುದು ಸ್ಪಷ್ಟವಿದೆ. ಏಕೆಂದರೆ ಪ್ರಾಚೀನವಾದ 'ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ, ನ ಚ ಬಹುಧಾ ಶ್ರುತೇನ', ಅರ್ವಾಚೀನವಾದ 'ಸ್ವರ್ಗನರಕ ಬೇರಿಲ್ಲ ಕಾಣಿರೊ' ಇತ್ಯಾದಿ ಅನೇಕ ಆಸ್ತಿಕರ ಮಾತುಗಳು ಯಜ್ಞಯಾಗಾದಿ ಆಚಾರಗಳ, ಸ್ವರ್ಗ ನರಕಾದಿ ಲೋಕಗಳ ಸಾಫಲ್ಯ ವೈಫಲ್ಯಗಳ ವಿಚಾರದಲ್ಲಿ ಅಂಶತಃ ಚಾರ್ವಾಕರ ವಾದಗಳನ್ನು ಸಮರ್ಥಿಸುತ್ತವೆ.

ಚಾರು + ವಾಕ್ = ಚಾರ್ವಾಕ ಎಂದರೆ ಮನಸ್ಸಿಗೆ ಹಿಡಿಸುವ ಮಾತು ಎಂದರ್ಥ. ಲೋಕಾಯತ, ಲೋಕಾಯತಿಕ, ಲೌಕಾಯ ಇತ್ಯಾದಿ ಹೆಸರುಗಳಿಂದ ಈ ಮತವನ್ನು ಕರೆಯಲಾಗಿದೆ. ದೇವರ ಅಸ್ತಿತ್ವವನ್ನು ಒಪ್ಪುವುದಿಲ್ಲವಾದ ಕಾರಣ ಇದು ನಾಸ್ತಿಕ ಮತ. ಉಳಿದೆಲ್ಲ ದರ್ಶನಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಆತ್ಮನೆಂಬ ವಸ್ತುವನ್ನು ಒಪ್ಪುವರಾದ ಕಾರಣ ಅವರೆಲ್ಲ ಆಸ್ತಿಕರು. ಚಾರ್ವಾಕರು ದೇಹಕ್ಕಿಂತಲೂ ಬೇರೆಯಾದ ಆತ್ಮನನ್ನೂ ಪಾಪಪುಣ್ಯಗಳನ್ನೂ ಪರಲೋಕಗಳನ್ನೂ ಒಪ್ಪುವುದಿಲ್ಲ. ಇವರದು ಶುದ್ಧ ಭೌತಿಕವಾದ. ಈ ಸಿದ್ಧಾಂತದಲ್ಲಿ ಪ್ರತ್ಯಕ್ಷದಿಂದ ತಿಳಿಯುವ ವಸ್ತುಗಳೇ ವಸ್ತುಗಳು. ಅವು ನಾಲ್ಕು; ಪೃಥಿವಿ, ನೀರು, ಅಗ್ನಿ, ಗಾಳಿ. ಇಂದ್ರಿಯಗಳಿಗೆ ಗೋಚರವಲ್ಲದ ವಸ್ತುಗಳನ್ನು ನಂಬಬೇಕಾಗಿಲ್ಲ. ಸುಖದುಃಖಗಳಿಗೆ ವಸ್ತುಸ್ವಭಾವವೇ ಕಾರಣ. ನಾಲ್ಕು ಭೂತಗಳ ಸಂಯೋಗವೇ ದೇಹರೂಪ ವಾಗಿ ಬರುತ್ತದೆ. ಈ ಸಂಯೋಗವಿಶೇಷದಲ್ಲಿಯೇ ಬುದ್ಧಿ, ಜ್ಞಾನ ಎಂಬ ಚೈತನ್ಯಶಕ್ತಿ ಹೊರಬೀಳುತ್ತದೆ. ಈ ಚೈತನ್ಯಶಕ್ತಿ ಭೌತಶಕ್ತಿಯೇ ಹೊರತು ಬೇರೆಯಲ್ಲ. ಆದಕಾರಣ ಶರೀರವಿರುವವರೆಗೆ ಆತ್ಮಶಕ್ತಿಯಿದ್ದು ಶರೀರದೊಂದಿಗೆ ಅದು ನಷ್ಟವಾಗುತ್ತದೆ.

ಮುಖ್ಯವಾಗಿ ಚಾರ್ವಾಕರಿಗೆ ಪ್ರತ್ಯಕ್ಷವೇ ಪ್ರಮಾಣ. ಅನುಮಾನಗಳಿಂದ ಸಿದ್ಧವಾಗುವ ಅನುಭವಗಳು ಕೇವಲ ಸಂದೇಹ ಮತ್ತು ಸಂಭಾವ್ಯತೆಯ ಮಟ್ಟಿಗೆ ತಲುಪಿಸುವ ಕಾರಣ ಖಚಿತಜ್ಞಾನಕ್ಕೆ ಅನುಮಾನ ಪ್ರಮಾಣವಾಗಲಾರದೆಂದು ಇವರ ಅಭಿಮತ. ವಸ್ತುಸ್ವಭಾವವೇ ಕಾರಣಶಕ್ತಿ. ಆದ್ದರಿಂದಲೇ ಪರಿಣಾಮ ಪ್ರತ್ಯಕ್ಷವಾಗುವುದಾದ ಕಾರಣ ಇವರು ಸ್ವಭಾವ ವಾದಿಗಳು. ಇದಕ್ಕೆ ಯಾದೃಚ್ಛಿಕವಾದವೆಂದೂ ಹೇಳುತ್ತಾರೆ. ಏಕೆಂದರೆ ಒಬ್ಬನ ಇಚ್ಛಾಶಕ್ತಿಯ ನಿಮಿತ್ತ ಕಾರಣದಿಂದ ಪರಿಣಾಮ ಪರಂಪರೆ ಉಂಟಾಗುವಂತೆ ಕಂಡುಬರುವುದಿಲ್ಲ. ನಮ್ಮ

ಬಯಕೆಯಿಲ್ಲದೆ ನಮಗೆ ತಿಳಿಯದೆಯೇ ಸುಖದುಃಖಗಳ ಅನುಭವ ಬರುವ ಕಾರಣ ಇದಕ್ಕೆ ಪ್ರಾಸಂಗಿಕವಾದವೆಂದೂ ಹೇಳುತ್ತಾರೆ. ಚಾರ್ವಾಕರಲ್ಲಿ ಕೆಲವು ಪಂಗಡದವರು ನೇತಿವಾದಿಗಳು ಅಂದರೆ ನಿಹಿಲಿಸ್ಟರು ಅಥವಾ ನೆಗೆಟಿವಿಸ್ಟರು. ಪ್ರಪಂಚ ನಿತ್ಯವಲ್ಲ, ಸತ್ಯವಲ್ಲ ಎಂಬುದು ಇವರ ಮತ. ಭಾರತೀಯ ತತ್ತ್ವಜ್ಞಾನಗಳಲ್ಲಿ ಆಸ್ತಿಕರು, ನಾಸ್ತಿಕರು, ಅದ್ವಯವಾದಿಗಳು–ಹೀಗೆ ಮೂರು ವಿಧ ವಿಭಾಗಿಸಿರುವುದನ್ನು ನೋಡಿದರೆ ನಾಸ್ತಿಕರಿಗೆ ಇರುವ ಪ್ರಾಧಾನ್ಯ ತಿಳಿಯುತ್ತದೆ. ಈ ಅಸ್ತಿ, ನಾಸ್ತಿ ಮತಗಳಲ್ಲಿ ಯಾವುದು ಮೊದಲೆಂದು ಹೇಳುವುದು ಸುಲಭವಲ್ಲ. ಆಸ್ತಿಕ ಮತದಲ್ಲಿ ನಾಸ್ತಿಕ ಮತದ ಖಂಡನೆಯೂ, ನಾಸ್ತಿಕ ಮತದಲ್ಲಿ ಆಸ್ತಿಕ ಮತದ ಖಂಡನೆಯೂ ಕಾಣುವುದರಿಂದ ಅನಾದಿಕಾಲದಿಂದ ಎರಡೂ ಬಗೆಯ ಅಭಿಪ್ರಾಯಗಳು ಇದ್ದುವೆಂದು ಕಾಣುತ್ತದೆ. ಪ್ರತ್ಯಕ್ಷವೊಂದೇ (ಇಂದ್ರಿಯ ಪ್ರತ್ಯಕ್ಷ) ಪ್ರಮಾಣ; ಅನುಮಾನವೆಂದರೆ ಸಂದೇಹ; ಆಗಮವೆಂಬುದು ಕೇಳಿದುದು, ನೋಡಿದುದಲ್ಲ ಎಂಬ ಚಾರ್ವಾಕವಾದವನ್ನು ಶಂಕರಾಚಾರ್ಯರೇ ಆದಿಯಾಗಿ ಎಲ್ಲ ಮತಾಚಾರ್ಯರೂ ಖಂಡಿಸುತ್ತಾರೆ. ಪ್ರತ್ಯಕ್ಷವೇ ಕೆಲವು ವೇಳೆ ಆಭಾಸವಾಗುವುದು, ಅನುಮಾನವಿಲ್ಲದೆ ವ್ಯವಹಾರವೇ ಸಾಗಲಾರದು–ಎಂದು ವೇದಾಂತಿಗಳ ವಾದ. ಸುಶಿಕ್ಷಿತ ಚಾರ್ವಾಕರೆಂಬ ಕೆಲವರು ಅನುಮಾನ ಆಗಮಗಳನ್ನು ಆಂಶಿಕವಾಗಿ ಒಪ್ಪುತ್ತಾರೆ. ಪ್ರತ್ಯಕ್ಷಕ್ಕೆ ಗೋಚರವಾಗತಕ್ಕ ವಿಷಯಗಳಲ್ಲಿ ಅನುಮಾನ (ಯುಕ್ತಿ) ಆಗಮಗಳಿಗೆ ಅವಕಾಶವುಂಟೆನ್ನುತ್ತಾರೆ. ತಾರ್ಕಿಕರು ಯುಕ್ತಿಯಿಂದಲೇ ಅತ್ಯಂತ ಪರೋಕ್ಷವನ್ನು ನಂಬಿದರೆ ವೈದಿಕರು ಶಾಸ್ತ್ರದಿಂದ ಅಂಥ ವಿಷಯಗಳನ್ನು ನಂಬುತ್ತಾರೆ. ಚಾರ್ವಾಕೇತರ ದರ್ಶನಗಳಲ್ಲಿಯೇ ಪರಸ್ಪರ ವೈಚಿತ್ರ್ಯ ಗಳಿರುವುದರಿಂದ ಚಾರ್ವಾಕರಲ್ಲಿ ಈ ವಿಚಾರಗಳಿರುವುದರಲ್ಲಿ ಆಶ್ಚರ್ಯವಿಲ್ಲ. ಚಾರ್ವಾಕಮತಕ್ಕೆ ತಾರ್ಕಿಕರು ಹೇಳಿರುವ ಕೊನೆಯ ಸಮಾಧಾನ ಕುತೂಹಲಕರವಾಗಿದೆ: ಜೀವಾತ್ಮ, ಪರಮಾತ್ಮರನ್ನೂ ಪುಣ್ಯಪಾಪಗಳನ್ನೂ ನಂಬಿರುವ ನಮಗೆ ಅವೆಲ್ಲ ಇಲ್ಲದಿದ್ದರೂ ಏನೂ ನಷ್ಟವಿಲ್ಲ. ಆದರೆ ಅವು ಒಂದು ವೇಳೆ ಇದ್ದುದಾದರೆ ಇಲ್ಲವೆಂದು ಸಾಧಿಸುವ ನಿಮ್ಮ ಗತಿ ಏನು? ಆದುದರಿಂದ ಸಂದೇಹ ಮಾರ್ಗವಾದರೂ ಆಸ್ತಿಕಮಾರ್ಗವೇ ಯುಕ್ತ.

ಚಾರ್ವಾಕಮತದ ಗುಣಾಂಶವನ್ನು ಹೇಳುವುದಾದರೆ ಮೂಲತಃ ವಸ್ತುಸ್ವಭಾವದಿಂದ ಸುಖದುಃಖಾದಿಗಳುಂಟಾಗುವ ಕಾರಣ, ಮತ್ತೊಬ್ಬ ಪುರುಷನ ಪ್ರಯತ್ನದಿಂದ ಬರುವುದಿಲ್ಲವಾದ ಕಾರಣ ಪರರಲ್ಲಿ ದ್ವೇಷವೆಂಬುದಕ್ಕೆ ಅವಕಾಶವಿಲ್ಲ. ಪರರಲ್ಲಿನ ರಾಗದ್ವೇಷಗಳನ್ನು ಅಡಗಿಸುವುದಕ್ಕಿಂತ ಹೆಚ್ಚಿನ ದರ್ಶನೋದ್ದೇಶ ಯಾವುದು? ಬದುಕಿರುವವರೆಗೆ ಚೆನ್ನಾಗಿ ಬದುಕು, ಚೆನ್ನಾಗಿ ಬದುಕುವಂತೆ ಪರಿಸರ ನಿರ್ಮಿಸಿಕೊಂಡು ಬದುಕು ಎನ್ನುವ ತತ್ತ್ವಜ್ಞಾನ ಯಾರಿಗೆ ಬೇಕಿಲ್ಲ? ಇದರಲ್ಲಿ ನಿಷಿದ್ಧವಾದುದೇನಿದೆ? ಇವು ಚಾರ್ವಾಕ ಮತ ನಮ್ಮೆದುರಿಗಿಟ್ಟ ಪ್ರಶ್ನೆಗಳು. ಧರ್ಮ ಅಥವಾ ಸಮಾಜವ್ಯವಸ್ಥೆಗೆ ವಿರೋಧವಾಗದ ಕಾಮನೆಗಳು ಗ್ರಾಹ್ಯವೆಂಬ ಮಾತು ಭಗವದ್ಗೀತೆಯಲ್ಲಿಯೂ ಕಾಣುತ್ತದೆ. ಮಹಾಭಾರತ ಯುದ್ಧವಾದ ಮೇಲೆ ಧರ್ಮರಾಜ ಪಟ್ಟಾಭಿಷಿಕ್ತನಾದ ಅನಂತರ ಒಂದು ದಿನ ಚಾರ್ವಾಕನೆಂಬಾತ (ಈತನೊಬ್ಬ ರಾಕ್ಷಸನೆನ್ನಲಾಗಿದೆ) ತುಂಬಿದ ರಾಜಸಭೆಗೆ ಬಂದು ರಾಜನನ್ನು ದೂಷಿಸುವ ಒಂದು ಕಥೆ ಇದೆ. ಕೇವಲ ರಾಗಾಂಧನಾಗಿ, ರಾಜ್ಯಭೋಗದ ಲಾಲಸೆಯಿಂದ, ಸ್ತ್ರೀ ಬಾಲಶೇಷವಾಗಿ ಲಕ್ಷಾನುಗಟ್ಟಲೆ ಜನರ ನಾಶಮಾಡಿ, ಸತ್ತವರಿಗೆ ಸ್ವರ್ಗ ಬರುವುದೆಂದು ಸಾಯುವುದಕ್ಕೆ ಪ್ರೋತ್ಸಾಹಿಸಿದ ಮಹಾಪಾಪಿಷ್ಠನೆಂದು ಧರ್ಮರಾಜ ನನ್ನು ಆ ಚಾರ್ವಾಕ ದೂಷಿಸುತ್ತಾನೆ. ಅನಂತರ ಅಲ್ಲಿದ್ದ ಬ್ರಾಹ್ಮಣರು ಈ ರಾಕ್ಷಸನನ್ನು ಶಾಪದಿಂದ ಕೊಂದುಬಿಡುತ್ತಾರೆ. ಇದು ಭಾರತದಲ್ಲಿ ಬರುವ ಕಥೆ. ಇದರಿಂದ ಎರಡು ಅಂಶಗಳ ಮೇಲೆ ಬೆಳಕು ಬೀಳುತ್ತದೆ. ಪ್ರಪಂಚವನ್ನು ಸುಖವಾಗಿಟ್ಟುಕೊಂಡು ತಾವೂ ಸುಖವಾಗಿರಬೇಕು. ಕೇವಲ ತಮ್ಮ ಸುಖಕ್ಕೋಸ್ಕರವೇ ಪ್ರಪಂಚವನ್ನು ಹಿಂಸಿಸಬಾರದು ಎಂಬ ಪ್ರಪಂಚಾನುಗ್ರಹ ದೃಷ್ಟಿಯೇ ಚಾರ್ವಾಕಮತದ ಮುಖ್ಯ ಧ್ಯೇಯವಾಗಿತ್ತೆಂಬುದೊಂದು. ಇನ್ನೊಂದು, ಮತೀಯ ಸಹಿಷ್ಣುತೆಗೆ, ವೈಚಾರಿಕ ಸ್ವಾತಂತ್ರ್ಯಕ್ಕೆ ಹೆಸರಾಗಿದ್ದ ಭಾರತೀಯ ಪರಂಪರೆಯಲ್ಲಿಯೂ ವಿರೋಧಾಭಿಪ್ರಾಯಕ್ಕೆ ಅಸಹನೆ, ಅವುಗಳ ದಮನ, ನಾಶಗಳಂಥ ಅವೈಚಾರಿಕ ಕ್ರಮಕ್ಕೆ ಕ್ವಚಿತ್ತಾಗಿಯಾದರೂ ಅವಕಾಶವಿತ್ತೆಂಬುದಕ್ಕೆ ನಷ್ಟ ಚಾರ್ವಾಕ ದರ್ಶನದಂಥ ಕೆಲವು ನಿದರ್ಶನಗಳಿದ್ದುವೆಂಬುದು.

ಚಾರ್ವಾಕ ಸಿದ್ಧಾಂತದ ಸಾರ ಸಂಗ್ರಹವಿದು : ಯಾವಜ್ಜೀವೇತ್ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್ ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ(ಎಷ್ಟು ದಿವಸ ಬದುಕುತ್ತೇವೂ ಅಷ್ಟು ದಿವಸ ಸುಖವಾಗಿ ಬದುಕಬೇಕು, ಸಾಲ ಮಾಡಿ ತುಪ್ಪ ತಿನ್ನಬೇಕು. ಸುಟ್ಟು ಬೂದಿಯಾದ ಶರೀರ ಮತ್ತೆ ಹುಟ್ಟುವುದು ಎಲ್ಲಿಂದ?) (ಜೀ.ಆರ್.ಪಿ.)

**ಚಾಲಕ ತಿಮಿ :** ಸಿಟೇಷಿಯ ಗಣ, ಒಡಾಂಟೊಸೀಟೈ ಉಪಗಣಗಳ ಡೆಲ್ಫಿನಿಡೀ ಕುಟುಂಬಕ್ಕೆ ಸೇರಿದ ಒಂದು ತಿಮಿಂಗಿಲ (ಪೈಲಟ್ ಹ್ವೇಲ್). ಡಾಲ್ಫಿನುಗಳಿಗೆ ಹತ್ತಿರ ಸಂಬಂಧಿ. ಕಪ್ಪು ಮೀನು (ಬ್ಲ್ಯಾಕ್ ಫಿಷ್), ಕಾಯಿಂಗ್ ತಿಮಿ ಮುಂತಾದುವು ಇದರ ಪರ್ಯಾಯನಾಮಗಳು. ಶಾಸ್ತ್ರೀಯ ಹೆಸರು ಗ್ಲೋಬಿಸೆಫಲ. ಮೆಲೀನ, ಮ್ಯಾಕ್ರೊರಿಂಕ ಮತ್ತು ಸ್ಕ್ಯಾಮೋನೈ ಎಂಬ ಮೂರು ಪ್ರಭೇದಗಳಿವೆ. ಚಾಲಕ ತಿಮಿ ಸಂಘಜೀವಿ; ನೂರಾರು ಪ್ರಾಣಿಗಳನ್ನೊಳಗೊಂಡ ದೊಡ್ಡ ಗುಂಪುಗಳಲ್ಲಿ ಜೀವಿಸುತ್ತದೆ. ಗುಂಪಿನ ನಾಯಕನನ್ನು ಎಂಥ ಪರಿಸ್ಥಿತಿಯಲ್ಲೂ ಕುರುಡಾಗಿ ಹಿಂಬಾಲಿಸುವ ಸ್ವಾಭಾವಿಕ ಪ್ರವೃತ್ತಿಯನ್ನು ಇದು ಪ್ರದರ್ಶಿಸುತ್ತದೆ. ಬಹುಶಃ ಈ ಗುಣಚಂದಾಗಿಯೇ ಇದಕ್ಕೆ ಚಾಲಕ ತಿಮಿ ಎಂಬ ಹೆಸರು ಬಂದಿರಬೇಕು. ಇದು ಸುಮಾರು 6 ರಿಂದ 9 ಮೀ. ಉದ್ದಕ್ಕೆ ಬೆಳೆಯುವ ಸಾಗರವಾಸಿ ಸ್ತನಿ. ತೂಕ ಸುಮಾರು 700ಕಿಗ್ರಾಂ. ಇದರ ತಲೆ ದೊಡ್ಡದಾಗಿ ಉಬ್ಬಿ



ಕೊಂಡಿರುವುದರಿಂದ ಹಣೆ ಮೇಲ್ದವಡೆಯ ಮೇಲ್ಭಾಗದಲ್ಲಿ ಮುಂದಕ್ಕೆ ಚಾಚಿದೆ. ಇದರಿಂದಾಗಿ ತಲೆ ಗೋಳಾಕಾರದ್ದಾಗಿದೆ. ಇದರಿಂದಲೇ ಇದಕ್ಕೆ ಗ್ಲೋಬಿಸೆಫಲ ಎಂಬ ಶಾಸ್ತ್ರೀಯ ಹೆಸರನ್ನು ಕೊಡಲಾಗಿದೆ. ಇದರ ದೇಹದ ಬಣ್ಣ ಅಚ್ಚಕಪ್ಪು. ಗದ್ದದ ಬಳಿ ಮಾತ್ರ ಬಿಳಿಬಣ್ಣದ ಮಚ್ಚೆಯೊಂದಿದೆ. ಬೆನ್ನ ಮೇಲೆ 0.3 ಮೀ ಎತ್ತರದ ಈಜುರೆಕ್ಕೆಯೂ ತಲೆ ಮತ್ತು ದೇಹ ಸೇರುವೆಡೆಯಲ್ಲಿ ಅಕ್ಕಪಕ್ಕಗಳಲ್ಲಿ ಒಂದೊಂದು ಈಜು ಅಂಗವೂ ಇವೆ. ಪ್ರತಿಯೊಂದು ದವಡೆಯಲ್ಲೂ 14–22 ಹಲ್ಲುಗಳಿವೆ. ಈಜುವಾಗ ಒಂದು ಗುಂಪಿನ ಎಲ್ಲ ತಿಮಿಗಳೂ ಏಕಕಾಲದಲ್ಲಿ ನೀರಿನಲ್ಲಿ ಮುಳುಗುತ್ತ ಏಳುತ್ತ ಬಹಳ ವೇಗವಾಗಿ ಚಲಿಸುತ್ತವೆ. ಚಾಲಕತಿಮಿಯಲ್ಲಿ ವಲಸೆ ಹೋಗುವ ಪ್ರವೃತ್ತಿಯೂ ಉಂಟು. ಋತುಗಳಿಗೆ ಅನುಗುಣವಾಗಿ ಶೀತ ಸಮುದ್ರ ಹಾಗೂ ಉಷ್ಣವಲಯದ ಸಾಗರಗಳ ನಡುವೆ ಚಲಿಸುತ್ತದೆ. ಹಲವಾರು ಬಗೆಯ ಮೀನುಗಳು, ಸ್ಕ್ವಿಡ್ಡುಗಳು ಮತ್ತು ಕಟಲ್ ಮೀನುಗಳು ಚಾಲಕ ತಿಮಿಯ ಪ್ರಧಾನ ಆಹಾರ. ಇವುಗಳ ಸಂತಾನೋತ್ಪತ್ತಿಯ ಕಾಲ ಚಳಿಗಾಲ. ಒಂದು ಸಲಕ್ಕೆ ಒಂದೇ ಒಂದು ಮರಿ ಹುಟ್ಟುತ್ತದೆ. ಗರ್ಭಧಾರಣಾ ಅವಧಿ ಸುಮಾರು ಒಂದು ವರ್ಷ. ಆಗತಾನೇ ಹುಟ್ಟಿದ ಮರಿಗಳು 2–3 ಮೀ. ಉದ್ದವಿರುವುದುಂಟು. ಸುಮಾರು ಒಂದೂವರೆ ವರ್ಷ ಕಾಲ ತಾಯೊಡನೇ ಇದ್ದು ಅನಂತರ ಸ್ವತಂತ್ರ ಜೀವನ ಆರಂಭಿಸುತ್ತವೆ. ಲೈಂಗಿಕ ಪ್ರಬುದ್ಧಾವಸ್ಥೆ ಹೆಣ್ಣಿಗೆ 6 ವರ್ಷ ವಯಸ್ಸಾದಾಗಲೂ ಗಂಡಿಗೆ 13 ವರ್ಷ ವಯಸ್ಸಾದಾಗಲೂ ಬರುತ್ತದೆ. ಚಾಲಕ ತಿಮಿಗಳ ಆಯಸ್ಸು ಸುಮಾರು 50 ವರ್ಷಗಳು. ನ್ಯೂಫೌಂಡ್ಲೆಂಡ್, ಸ್ಕಾಟ್ಲೆಂಡ್ ಮುಂತಾದೆಡೆ ಎಣ್ಣೆಗೋಸ್ಕರ ಚಾಲಕ ತಿಮಿಗಳನ್ನು ಬೇಟೆಯಾಡುವುದಿದೆ. ನ್ಯೂಫೌಂಡ್ಲೆಂಡಿನಲ್ಲಿ ವರ್ಷಕ್ಕೆ 3000–4000 ತಿಮಿಗಳನ್ನು ಕೊಲ್ಲುವುದುಂಟು. ಒಂದು ತಿಮಿಯಿಂದ ಸುಮಾರು 200 ಕಿ.ಗ್ರಾಂ. ಎಣ್ಣೆ ದೊರೆಯುತ್ತದೆ.

(ಎ.ಎಸ್.ಎಚ್.)

**ಚಾಲಕ ಮೀನು:** ಪರ್ಸೊಮಾರ್ಫೀ ಅಥವಾ ಪರ್ಸಿಫಾರ್ಮೀಸ್ ಗಣ, ಪರ್ಕಾಯ್‌ಡಿಯ ಉಪಗಣ, ಕೆರಾಂಜಿಡೆ ಕುಟುಂಬಕ್ಕೆ ಸೇರಿದ ಒಂದು ಸಾಗರವಾಸಿ ಮೀನು (ಪೈಲಟ್ ಫಿಷ್). ಇದರ ವೈಜ್ಞಾನಿಕ ಹೆಸರು ನಾಕ್ರೇಟಸ್ ಡಕ್ಟರ್. ಜಾಕ್ ಮತ್ತು ಕುದುರೆ ಮ್ಯಾಕರೆಲುಗಳ ಹತ್ತಿರ ಸಂಬಂಧಿ. ಚಾಲಕ ಮೀನುಗಳು ಅನೇಕ ವೇಳೆ ಹಡಗುಗಳನ್ನು ದೊಡ್ಡ ದೊಡ್ಡ ಷಾರ್ಕ್ ಮೀನುಗಳನ್ನೂ ಹಿಂಬಾಲಿಸಿಕೊಂಡು ಹೋಗುತ್ತವೆ. ಸಮುದ್ರದಲ್ಲಿ ದಾರಿ



ತಪ್ಪಿದ ನಾವಿಕರಿಗೆ ಈ ಮೀನುಗಳು ಮಾರ್ಗದರ್ಶನ ಮಾಡಿ ಅವರು ಬಂದರನ್ನು ಸೇರಲು ಸಹಾಯ ಮಾಡುವುವೆಂದು ಪ್ರಾಚೀನ ಗ್ರೀಕರು ನಂಬಿದ್ದರು. ತಿಮಿಂಗಿಲಗಳಿಗೂ ಮಾರ್ಗದರ್ಶಿಗಳಾಗಿದ್ದವೆಂಬ ನಂಬಿಕೆ ಕೂಡ ಇತ್ತು. ಈ ಕಾರಣಗಳಿಂದಾಗಿ ಇವಕ್ಕೆ ಚಾಲಕ ಮೀನುಗಳೆಂದು ಹೆಸರು ಬಂದಿರಬಹುದು. ಆದರೆ ನಿಜಕ್ಕೂ ಷಾರ್ಕ್ ಮತ್ತು ಡಾಲ್ಫಿನುಗಳು ತಮ್ಮ ಆಹಾರವನ್ನು ತಿನ್ನುವಾಗ ತುಂಡರಿಸಿದ ಅಳಿದುಳಿದ ಆಹಾರ ಪದಾರ್ಥಗಳಿಗಾಗಿ ಚಾಲಕ ಮೀನುಗಳು ಅವನ್ನು ಹಿಂಬಾಲಿಸುತ್ತವೆ. ಹಡಗಿನಿಂದ ನೀರಿನೊಳಕ್ಕೆ ಎಸೆಯಲ್ಪಡುವ ಬೇಡದ ಆಹಾರ ಪದಾರ್ಥಗಳ ನಿರೀಕ್ಷೆಯಿಂದ ಇವು ಹಡಗುಗಳನ್ನು ಹಿಂಬಾಲಿಸುತ್ತವೆ. ಆವಶ್ಯಕತೆ ಬಿದ್ದಾಗ ಇವು ತಮ್ಮ ಆಹಾರವಾದ ಸಣ್ಣಸಣ್ಣ ಮೀನುಗಳನ್ನು ಬೇಟೆಯಾಡುತ್ತವೆ.

ಚಾಲಕ ಮೀನು ಸುಮಾರು 70 ಸೆಂ.ಮೀ ಉದ್ದ ಬೆಳೆಯುತ್ತದೆ. ದೇಹದ ಬಣ್ಣ ನೀಲಿ. ದೇಹದ ಅಕ್ಕಪಕ್ಕಗಳಲ್ಲಿ ಬೆನ್ನಿನಿಂದ ಉದರದವರೆಗೆ ವಿಸ್ತರಿಸಿದಂತೆ ಗಾಢ ನೀಲಿಬಣ್ಣದ, ಅಗಲವಾದ 5 ಅಥವಾ 7 ಉದ್ದ ಪಟ್ಟೆಗಳಿವೆ. ಬಾಲದ ಅಕ್ಕಪಕ್ಕದಲ್ಲಿ ಅಡಿಗಟ್ಟಿನಂಥ

(ಕೀಲ್) ಒಂದು ಚೂಪಾದ ರಚನೆಯಿದೆ. ಬೆನ್ನಿನ ಈಜುರೆಕ್ಕೆಯ ಮುಂಭಾಗದಲ್ಲಿ ನಾಲ್ಕು ಸಣ್ಣ ಮುಳ್ಳುಗಳು ಉಂಟು. ಹಲ್ಲುಗಳು ಚಿಕ್ಕವು; ಅನೇಕ ಸಾಲುಗಳಲ್ಲಿ ಸ್ಥಿತವಾಗಿವೆ. ಚಾಲಕ ಮೀನುಗಳು ಸಮುದ್ರದಲ್ಲಿ ಮೊಟ್ಟೆಗಳನ್ನಿಡುತ್ತವೆ. ಮರಿ ಮೀನುಗಳಿಗೂ ಪ್ರೌಢ ಮೀನುಗಳಿಗೂ ಆಕಾರ ಮತ್ತು ಬಣ್ಣದಲ್ಲಿ ಸ್ವಲ್ಪವೂ ಹೋಲಿಕೆಯಿರುವುದಿಲ್ಲ. ಮರಿ ಮೀನುಗಳ ದೇಹ ಬಲು ಗಿಡ್ಡ. ಕಣ್ಣುಗಳು ಬಹಳ ದೊಡ್ಡ ಗಾತ್ರದವು; ಅಲ್ಲದೆ ಅವುಗಳ ಸುತ್ತ ಮುಳ್ಳುಗಳಿರುತ್ತವೆ. ಮರಿಮೀನುಗಳು ಸಾಮಾನ್ಯವಾಗಿ ತೇಲಾಡುತ್ತಿರುವ ಸಮುದ್ರದ ಕಳೆ, ಜೆಲಿ ಮೀನಿನ ದೇಹದ ತಳಭಾಗ ಅಥವಾ ಫೈಸೇಲಿಯದ ಸ್ಪರ್ಶಾಂಗಗಳ ನಡುವೆ ಮರೆಯಾಗಿರುತ್ತವೆ. ಈ ವಿಷಪೂರಿತ ಸ್ಪರ್ಶಾಂಗಗಳಿಂದ ಇವಕ್ಕೆ ಯಾವ ಹಾನಿಯೂ ಆಗುವುದಿಲ್ಲ. ಚಾಲಕ ಮೀನುಗಳು ಆಳವಾದ ನೀರಿನಲ್ಲಿ ವಾಸಿಸುತ್ತವೆ. ಇವು ಪ್ರಪಂಚದ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಸಮುದ್ರಗಳಲ್ಲಿ, ಮೆಡಿಟರೇನಿಯನಿನಲ್ಲಿ ಮತ್ತು ಅಮೆರಿಕದ ಕರಾವಳಿಯಲ್ಲಿ ಕಂಡುಬರುತ್ತವೆ.

ನೀರಿನ ಮೇಲ್ಭಾಗದಲ್ಲಿರುವುದರಿಂದ ಇವುಗಳನ್ನು ಕೈಬಲೆಗಳ ಸಹಾಯದಿಂದ ಹಿಡಿಯುತ್ತಾರೆ. ಇವುಗಳನ್ನು ತಾಜಾ ಮತ್ತು ಒಣಗಿಸಿದ ರೂಪದಲ್ಲಿ ಮಾರಾಟ ಮಾಡಲಾಗುತ್ತದೆ. (ಎ.ಎಸ್.ಎಚ್.)

**ಚಾಕ್ಯಾಲ್ಕೊಪೈರೈಟಿಸ್ :** ತಾಮ್ರದ ಪ್ರಮುಖ ಅದಿರು; ರಾಸಾಯನಿಕ ಸಂಯೋಜನೆ $CuFeS_2$. ತಾಮ್ರದ ಪೈರೈಟಿಸ್ ಅಥವಾ ತಾಮ್ರದ ಹಳದಿ ಅದಿರು ಎಂದೂ ಕರೆಯುವುದುಂಟು. ಬಣ್ಣದಲ್ಲಿ ಹಿತ್ತಾಳೆಯನ್ನು ಹೋಲುವ ಕಾರಣ ಹೆನ್‌ಕೆಲ್ ಎಂಬ ಖನಿಜಶಾಸ್ತ್ರಜ್ಞ ಇದನ್ನು ಚಾಲ್ಕೊಪೈರೈಟಿಸ್ ಎಂದು ಕರೆದ (1725). ಗ್ರೀಕ್‌ಭಾಷೆಯಲ್ಲಿ ಚಾಲ್ಕೊ ಎಂದರೆ ಹಿತ್ತಾಳೆ. ಬಹುಮಟ್ಟಿಗೆ ಈ ಖನಿಜ ಮಾತೃಶಿಲಾದ್ರವದಿಂದ ಹೊರಹೊಮ್ಮಿದ ಮೂಲ ಖನಿಜಗಳ ಗುಂಪಿಗೆ ಸೇರಿದೆ. ಮಾನ್‌ಜೋನೈಟ್, ಕ್ವಾರ್ಟ್ಸ್ ಮಾನ್‌ಜೊನೈಟ್ ಮೊದಲಾದ ಅಗ್ನಿಶಿಲೆಗಳಲ್ಲಿ ಇದು ಸಾಮಾನ್ಯವಾಗಿ ದೊರೆಯುತ್ತದೆ. ಪೆಗ್ಮಟೈಟ್ ಸಿರಗಳಲ್ಲಿಯೂ ಇದನ್ನು ಕಾಣಬಹುದು. ಡಾಲರೈಟ್ ಮುಂತಾದ ಒಡ್ಡುಶಿಲೆಗಳಲ್ಲಿಯೂ ಕಂಡುಬಂದಿದೆ. ಕೆಲವು ಸಲ ರೂಪಾಂತರಿತಶಿಲೆಗಳಲ್ಲಿಯೂ ದೊರೆಯುತ್ತದೆ. ಕಡಪ ಕಲ್ಲಿನಲ್ಲಿ ಇದರ ಗಂತಿಗಳನ್ನು ಕಾಣಬಹುದು. ಇದೇ ಅಲ್ಲದೆ ನೈಸ್ ಮತ್ತು ಷಿಸ್ಟ್ (ಪತ್ರಶಿಲೆ) ಮೊದಲಾದ ತೀವ್ರಬಗೆಯ ರೂಪಾಂತರಕ್ಕೊಳಗಾದ ಶಿಲೆಗಳಲ್ಲಿ ಕೂಡ ಇದು ಹುದುಗಿರುವುದುಂಟು. ಕೆಲವು ಬಾರಿ ಪ್ರತ್ಯಾಮ್ಲೀಯವರ್ಗದ ಸರ್ಪೆಂಟೈನ್ ಪದರುಶಿಲೆಗಳಲ್ಲಿ ಚಾಲ್ಕೊಪೈರೈಟಿಸ್ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಪೈರೈಟಿಸ್, ಬೋರ್ನೈಟ್, ಚಾಲ್ಕೊಸೈಟ್, ಟೆಟ್ರಹೀಡ್ರೈಟ್, ಮ್ಯಾಲಕೈಟ್, ಅಸ್ಯುರೈಟ್, ಕ್ಯುಪ್ರೈಟ್, ಸ್ಫ್ಯಾಲರೈಟ್, ಗೃಲಿನ ಕ್ಯಾಸ್ಸಿಟರೈಟ್ ಮೊದಲಾದ ಖನಿಜಗಳೊಡನೆ ಬೆರೆತಿರುತ್ತದೆ. ಈ ಖನಿಜವಿರುವ ಮೂಲಶಿಲೆಗಳು ಕಾಲಕ್ರಮೇಣ ಶಿಥಿಲವಾಗಿಯೋ ಇತರ ಬಗೆಯ ಬದಲಾವಣೆಗಳಿಗೆ ಒಳಗಾಗಿಯೋ ಅವುಗಳಲ್ಲಿನ ಚಾಲ್ಕೊಪೈರೈಟಿಸ್ ಬೇರಾಗಿ ಆನುಷಂಗಿಕ ಖನಿಜವಾಗಿ ಮಾರ್ಪಡುವುದೂ ಉಂಟು. ಪ್ರಕೃತಿಯಲ್ಲಿ ಈ ಖನಿಜ ಚತುಷ್ಫಲಕೀಯ (ಟೆಟ್ರಾಗೊನಲ್) ವರ್ಗದ ಸ್ಫಟಿಕಗಳಾಗಿ ದೊರೆಯುತ್ತದೆ. ಕೆಲವು ಬಾರಿ ಈ ಸ್ಫಟಿಕವರ್ಗಕ್ಕೆ ಸೇರಿದ ಅವಳಿ ಹರಳುಗಳೂ ಕಂಡುಬರುವುದುಂಟು; ಮತ್ತೆ ಕೆಲವು ಸಂದರ್ಭಗಳಲ್ಲಿ ನಿರ್ದಿಷ್ಟ ಒಳರಚನೆ ಇಲ್ಲದೆ ಮುದ್ದೆಯಾಗಿಯೋ ದ್ರಾಕ್ಷಿಗೊಂಚಲಿನಂತೆಯೋ ತಿಂಗಳವರೆ ಬೀಜಾಕಾರವಾಗಿಯೋ ತೋರಿಬರುವುದೂ ಇದೆ. ಇದರಲ್ಲಿ ಉತ್ತಮ ಸೀಳುಗಳಿವೆ. ಸೀಳಿನ ಜಾಡುಗಳನ್ನು ಕಷ್ಟವಿಲ್ಲದೆ ಗುರುತಿಸುವುದು ಸಾಧ್ಯ. ಅಸಮ ಮತ್ತು ಅಸ್ಪಷ್ಟ ಬಿರಿತವನ್ನೂ ನೋಡಬಹುದು. ಸುಲಭವಾಗಿ ಒಡೆದು ಪುಡಿಪುಡಿಯಾಗುತ್ತದೆ. ಖನಿಜದ ಕಾಠಿಣ್ಯಾಂಕ 3.5ರಿಂದ 4. ಅಂದರೆ ಪ್ರಯಾಸಪೂರ್ವಕವಾಗಿ ಚಾಕಿನಿಂದ ಗೀರು ಮಾಡಬಹುದು. ಸಾಪೇಕ್ಷ ಸಾಂದ್ರತೆ 4.1 ರಿಂದ 4.3ರ ವರೆಗೆ ಉಂಟು. ಲೋಹದ ಹೊಳಪನ್ನು, ಅದರಲ್ಲೂ ಆಗತಾನೆ ಬಿರಿತಕ್ಕೊಳಗಾದ ಖನಿಜ ಭಾಗದಲ್ಲಿ ಸ್ಪಷ್ಟವಾಗಿ ಕಾಣಬಹುದು. ಸಾಮಾನ್ಯವಾಗಿ ಈ ಹೊಳಪು ಕ್ರಮೇಣ ಮಾಯವಾಗಿ ಖನಿಜದ ಹೊರಮೈ ಮಂಕಾಗಿರುತ್ತದೆ. ಒಮ್ಮೊಮ್ಮೆ ವಾಯುಮಂಡಲದಲ್ಲಿರುವ ಅನಿಲಗಳ ರಾಸಾಯನಿಕ ಕ್ರಿಯೆಗೆ ಒಳಗಾಗಿ ಕಣ್ಣು ಕೋರೈಸುವ ವಿವಿಧ ಬಣ್ಣಗಳನ್ನು ಖನಿಜದ ಮೇಲೆ ಕಾಣಬಹುದು.

ರಾಸಾಯನಿಕ ಸಂಯೋಜನೆಯಲ್ಲಿ ಇದು ತಾಮ್ರ ಮತ್ತು ಕಬ್ಬಿಣದ ಸಲ್ಫೈಡ್. ಇದರಲ್ಲಿ ಶೇ. 35 ಗಂಧಕ. ಶೇ. 34.5 'ತಾಮ್ರ' ಮತ್ತು ಶೇ. 30.5 'ಕಬ್ಬಿಣ' ಇವೆ. ಹಲವು ವೇಳೆ ಪೈರೈಟೀಸ್ ಅಥವಾ ಸ್ವರ್ಣಮಕ್ಷಿಕಾ ಇದರೊಡನೆ ಬೆರೆತಿರುವುದುಂಟು. ಆಗ ಈ ಮೇಲಿನ ಪ್ರಮಾಣದಲ್ಲಿ ಏರುಪೇರುಗಳನ್ನು ಕಾಣಬಹುದು. ಈ ಮುಖ್ಯ ಧಾತುಗಳೇ ಅಲ್ಲದೆ ಅಲ್ಪ ಪರಿಮಾಣದಲ್ಲಿ ಚಿನ್ನ, ಬೆಳ್ಳಿ, ಸೆಲೆನಿಯಮ್ ಮತ್ತು ಥ್ಯಾಲಿಯಮ್ ಲೋಹ ಧಾತುಗಳು ಕೂಡ ಬೆರೆತಿರುತ್ತವೆ. ಅನೇಕ ಸಂದರ್ಭಗಳಲ್ಲಿ ಈ ಖನಿಜದ ಅದುರನ್ನು ಒಪ್ಪಮಾಡಿದಾಗ ಉಪವಸ್ತುಗಳಾಗಿ ಚಿನ್ನ ಮತ್ತು ಬೆಳ್ಳಿ ಲಾಭದಾಯಕ ಪರಿಮಾಣದಲ್ಲಿ ದೊರೆಯುವುದುಂಟು.

ಚಾಲ್ಕೊಪೈರೈಟಿಸ್ ಪ್ರಪಂಚದ ಅನೇಕ ಭಾಗಗಳಲ್ಲಿ ದೊರೆಯುತ್ತದೆ. ಇವುಗಳಲ್ಲಿ ಮುಖ್ಯವಾದವು ಚೆಕೊಸ್ಲೊವಾಕಿಯದ ಷ್ಲಾಗೆನ್‌ವಾಲ್ಡ್, ಬೊಹೀಮಿಯ ಮತ್ತು ಷೆಂನಿಟ್ಸ್. ಜರ್ಮನಿಯ ಸ್ಯಾಕ್ಸನಿ ಮತ್ತು ಫ್ರೀಬರ್ಗ್ ಗಣಿಗಳಲ್ಲಿ ಉತ್ತಮ ಬಗೆಯ ಹರಳುಗಳಾಗಿಯೂ ಹಾರ್ಸ್ ಪರ್ವತಶ್ರೇಣಿಗಳಲ್ಲಿ ಪೈರೈಟಿನೊಡನೆ ಬೆರೆತುಕೊಂಡೂ ಇದು ದೊರೆಯುತ್ತದೆ. ಇವಲ್ಲದೆ ಫ್ರಾನ್ಸ್, ಸ್ವೀಡನ್, ಇಂಗ್ಲೆಂಡ್, ಸ್ಪೇನ್, ಜಪಾನ್ ಮತ್ತು ಅಮೆರಿಕದ ಪೆನ್ಸಿಲ್ವೇನಿಯ, ಮಿಸೂರಿ, ಕಾಲರಾಡೋ, ಅರಿಜೋನ, ಮಾಂಟ್ಯಾನ, ಯೂಟಾ, ನೆವಾಡ, ಕ್ಯಾಲಿಫೋರ್ನಿಯ ಮತ್ತು ಅಲಾಸ್ಕ ಪ್ರಾಂತ್ಯಗಳಲ್ಲೂ ಕೆನಡದ ಬ್ರಿಟಿಷ್ ಕೊಲಂಬಿಯ, ಆಂಟೇರಿಯೋ ಮತ್ತು ಕ್ವಿಬೆಕ್ ಪ್ರಾಂತ್ಯಗಳಲ್ಲಿ ಉತ್ತಮ ದರ್ಜೆಯ ಚಾಲ್ಕೊಪೈರೈಟಿಸ್ ನಿಕ್ಷೇಪಗಳಿವೆ. ಇಲ್ಲೆಲ್ಲ ಗಣಿಗಾರಿಕೆ ಲಾಭದಾಯಕವಾದ ರೀತಿಯಲ್ಲಿ ಮುಂದುವರಿಯುತ್ತದೆ. ಭಾರತದಲ್ಲಿ ತಾಮ್ರದ ಅದಿರಿನ ನಿಕ್ಷೇಪಗಳಿರುವ ರಾಜಸ್ತಾನದ ಖೇತ್ರಿ ಮತ್ತು ದರಿಬಾ, ಬಿಹಾರಿನ ರಾಖಾ ಮತ್ತು ಮೊಸಬಾನಿ, ಆಂಧ್ರಪ್ರದೇಶದ ಅಗ್ನಿಗುಂಡಲ, ತಮಿಳುನಾಡಿನ ಮಾಮಂದೂರು ಮತ್ತು ಕರ್ನಾಟಕದ ಅರಸೀಕೆರೆ ಬಳಿ ಇರುವ ಕಲ್ಯಾಡಿ ಮತ್ತು ಚಿತ್ರದುರ್ಗ ಜಿಲ್ಲೆಯ ಇಂಗಳದಹಾಳಿನಲ್ಲಿ ಚಾಲ್ಕೊಪೈರೈಟಿಸ್ ಸಾಕಷ್ಟು ಮೊತ್ತದಲ್ಲಿ ದೊರೆಯುತ್ತದೆ. ಇದರಿಂದ ತಾಮ್ರವನ್ನು ತಯಾರಿಸುವ ಉದ್ದೇಶದಿಂದ ಚಿತ್ರದುರ್ಗ ಕಾಪರ್ ಕಂಪೆನಿ ಸ್ಥಾಪನೆಗೊಂಡು ಕೆಲವು ಕಾಲ ಗಣಿ ಕಾರ್ಯಾಚರಣೆ ನಡೆಯಿತು. (ಬಿ.ವಿ.ಜೆ.)

**ಚಾಲ್ತಿ ಆಸ್ತಿಗಳು :** ಚಾಲ್ತಿ ಆಸ್ತಿಯೆಂದರೆ ಶೀಘ್ರವಾಗಿ ನಗದಾಗಿಸಬಹುದಾದ ಆಸ್ತಿ. ಉದಾಹರಣೆಗೆ ಸರಕುಗಳು, ಸಂಕೀರ್ಣ ಸಾಲಗಾರರು, ಪಾವತಿಬರುವ ಬಿಲ್ಸ್‌ಗಳು, ಹೂಡಿಕೆಗಳು, ಪೂರ್ವಪಾವತಿಯಾದ ವೆಚ್ಚಗಳು ಮೊದಲಾದವುಗಳು. ಸಾಮಾನ್ಯವಾಗಿ ಚಾಲ್ತಿ ಆಸ್ತಿಗಳು ನಗದಾಗಿಸಲು ವರ್ಷಕ್ಕಿಂತ ಹೆಚ್ಚು ಕಾಲಾವಧಿ ತೆಗೆದುಕೊಳ್ಳುವುದಿಲ್ಲ. ಒಟ್ಟಿನಲ್ಲಿ ಕ್ಷಿಪ್ರ ಕಾಲದಲ್ಲಿ ನಗದಾಗಿ ಪರಿವರ್ತಿಸಬಹುದಾದ ಆಸ್ತಿಗಳು ಚಾಲ್ತಿ ಆಸ್ತಿ ರೂಪದಲ್ಲಿರುತ್ತವೆ.

ಒಂದು ವ್ಯವಹಾರ ಸಂಸ್ಥೆ ಪಡೆದಿರುವ ಅನಿರ್ಬಂಧಿತ ನಗದು ಸಮಾನವಾದ ಆಸ್ತಿ. ದೀರ್ಘಕಾಲದಲ್ಲಿ ನಗದಿಗೆ ಅಥವಾ ಅದಕ್ಕೆ ಸಮಾನವಾದ ಇತರ ಆಸ್ತಿಗಳಿಗೆ ಪರಿವರ್ತಿಸುವ ಸಲುವಾಗಿ ಹೊಂದಿರುವ ಆಸ್ತಿಗಳು, ಉಪಯುಕ್ತ ಸರಕುಗಳು ಮತ್ತು ಸೇವೆಗಳು (ಕರೆಂಟ್ ಅಸೆಟ್ಸ್). ಇವನ್ನು ಚರ ಆಸ್ತಿಗಳು (ಫ್ಲೋಟಿಂಗ್ ಅಸೆಟ್ಸ್) ಎಂದೂ ಕರೆಯಲಾಗಿದೆ.

ನಗದಾಗಿ ಅಥವಾ ನಗದಿಗೆ ಸಮಾನವಾದ ಇತರ ಆಸ್ತಿಗಳಾಗಿ ಪರಿವರ್ತನೆಗೊಳ್ಳುವ ಅವಧಿ ಸಾಮಾನ್ಯವಾಗಿ ಒಂದು ವರ್ಷ ಅಥವಾ ಅದಕ್ಕಿಂತ ಕಡಿಮೆ. ಕೆಲವು ಆಸ್ತಿಗಳ ಪರಿವರ್ತನೆಯ ಅವಧಿ ಇನ್ನೂ ದೀರ್ಘವಾಗಿರುವುದುಂಟು. ನಗದು, ತಾತ್ಕಾಲಿಕ ವಿನಿಯೋಜನೆಗಳು (ಇನ್ವೆಸ್ಟ್‌ಮೆಂಟ್ಸ್), ಪ್ರಾಪ್ಯ ಬಾಕಿಗಳು, ಕಚ್ಚಾ ಸಾಮಗ್ರಿ, ಅರ್ಧ ಮತ್ತು ಪೂರ್ಣಸಿದ್ಧ ಸರಕುಗಳು–ಇವು ಸಾಮಾನ್ಯವಾಗಿ ಚರ ಆಸ್ತಿಗಳೆನಿಸಿಕೊಳ್ಳುತ್ತವೆ. ಸರಕು ಸೇವೆಗಳ ಉತ್ಪಾದನೆಯ ಕಾರ್ಯದಲ್ಲಿ ದೀರ್ಘಕಾಲದಲ್ಲಿ ಉಪಯುಕ್ತವಾಗುವ ಮೂರ್ತ ವಸ್ತುಗಳು ಸ್ಥಿರ ಆಸ್ತಿಗಳು ಅಥವಾ ಬಂಡವಾಳ ಆಸ್ತಿಗಳು (ಉದಾ : ಕಟ್ಟಡ, ನಿವೇಶನ, ಯಂತ್ರೋಪಕರಣಗಳು ಇತ್ಯಾದಿ).

ಒಂದು ವ್ಯಾಪಾರಸಂಸ್ಥೆಯ ಆಸ್ತಿಗಳಲ್ಲಿ ಸ್ಥಿರ ಆಸ್ತಿಗಳು ಯಾವುವು, ಚರ ಆಸ್ತಿಗಳು ಯಾವುವು ಎಂಬುದು ಆ ಸಂಸ್ಥೆಯ ವ್ಯವಹಾರದ ಸ್ವರೂಪದ ಮೇಲೆ ನಿರ್ಧರಿಸಲ್ಪಡುತ್ತದೆ. ಒಂದು ಸಂಸ್ಥೆಯ ಚರ ಆಸ್ತಿಗಳು ಬೇರೊಂದು ಸಂಸ್ಥೆಯಲ್ಲಿ ಸ್ಥಿರ ಆಸ್ತಿಗಳೆನಿಸಬಹುದು. ಉದಾಹರಣೆಗೆ ಜವಳಿ ಗಿರಣಿಗೆ ಅದರ ಯಂತ್ರೋಪಕರಣಗಳು ಸ್ಥಿರ ಆಸ್ತಿಗಳಾದರೆ, ಯಂತ್ರೋಪಕರಣಗಳನ್ನು ವಿಕ್ರಯಿಸುವ ಸಂಸ್ಥೆಗೆ ಅವು ಚರ ಆಸ್ತಿಗಳು. ಹೈನು ಸಂಸ್ಥೆಗೆ ವಾಹನಗಳು ಸ್ಥಿರ ಆಸ್ತಿಗಳಾದರೆ ವಾಹನಗಳನ್ನು ವಿಕ್ರಯಿಸುವ ಸಂಸ್ಥೆಗೆ ಅವು ಚರ ಆಸ್ತಿಗಳು.

ಆಸ್ತಿ–ಜವಾಬ್ದಾರಿ ತಃಖ್ತೆ (ಬ್ಯಾಲೆನ್ಸ್ ಷೀಟ್) ತಯಾರಿಸುವಾಗ ಚರ ಆಸ್ತಿಗಳ ಮೌಲ್ಯನಿರ್ಧಾರ ವಿಧಾನ ಸ್ಥಿರ ಆಸ್ತಿಗಳ ಮೌಲ್ಯ ನಿರ್ಧಾರ ವಿಧಾನಕ್ಕಿಂತ ಭಿನ್ನವಾದ್ದು. ಸ್ಥಿರ ಆಸ್ತಿಯ ಮೌಲ್ಯವನ್ನು ನಿರ್ಧರಿಸುವಾಗ ಅದರ ಅಸಲಿನಲ್ಲಿ ಸವಕಳಿಯ ಮೊಬಲಗನ್ನು ಕಳೆದು ಉಳಿದ ಮೊಬಲಗನ್ನು ಅದರ ಪ್ರಚಲಿತ ಮೌಲ್ಯವೆಂದು ತೋರಿಸಲಾಗುವುದು. ಆದರೆ ಚಾಲ್ತಿ ಆಸ್ತಿಗಳ (ನಗದು ಹೊರತುಪಡಿಸಿ) ಮೌಲ್ಯ ನಿರ್ಧರಿಸಲು ಆಯಾ ಆಸ್ತಿಗಳ ಸ್ವರೂಪಗಳಿಗೆ ಅನುಗುಣವಾದ ವಿಧಾನ ಅನುಸರಿಸಲಾಗುವುದು. ಸಾಮಗ್ರಿ, ಸರಕುಗಳು ಮತ್ತು ಹೂಡಿಕೆಗಳು ಮಾರುಕಟ್ಟೆ ಬೆಲೆಯನ್ನು, ಇಲ್ಲವೇ ಅಸಲು ಮತ್ತು ಖರ್ಚುಗಳ ಮೊತ್ತವನ್ನು–ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು–ಅವುಗಳ ಪ್ರಚಲಿತ ಮೌಲ್ಯವೆಂದು ತೋರಿಸಲಾಗುವುದು. ಪ್ರಾಪ್ಯ ಬಾಕಿಗಳ ಮೌಲ್ಯ ನಿಷ್ಕರ್ಷೆ ಮಡುವಾಗ ಅವು ಎಷ್ಟು ಕಾಲದಿಂದ ಬಾಕಿಗಳಾಗಿ ಉಳಿದಿವೆಯೆಂಬುದನ್ನೂ ಅವುಗಳಲ್ಲಿ ಅನುಮಾನವಾದ ಮೊಬಲಗು ಎಷ್ಟೆಂಬುದನ್ನೂ ಪರಿಗಣಿಸಬೇಕು. ಚಾಲ್ತಿ ಆಸ್ತಿಗಳನ್ನು ನಗದಿಗೆ ಪರಿವರ್ತಿಸಿದಾಗ ಎಷ್ಟು ಮೊಬಲಗು ಬರಬಹುದೆಂಬುದು ಇವುಗಳ ಮೌಲ್ಯಗಳನ್ನು ನಿರ್ಧರಿಸುವಾಗ ಮುಖ್ಯವಾಗಿ ಪರಿಗಣಿಸಬೇಕಾದ ಅಂಶ. ಆಸ್ತಿ–ಹೊಣೆ ತಃಖ್ತೆಯನ್ನು ವಿಶ್ಲೇಷಿಸುವ

ತಜ್ಞರು ಚಾಲ್ತಿ ಆಸ್ತಿ ಹಾಗೂ ಚಾಲ್ತಿ ಜವಾಬ್ದಾರಿಗಳ ಅನುಪಾತವನ್ನು ಗುರುತಿಸಿ, ಅದರ ಆಧಾರದಿಂದ ಸಂಸ್ಥೆಯ ಚಾಲ್ತಿ ಸ್ಥಿತಿಗತಿ ಅರಿಯುತ್ತಾರೆ. ಇದು ಸಾಲ–ಮುಂಗಡಗಳನ್ನು ಕೊಡುವಾಗ ಬಹಳ ಉಪಯೋಗಕ್ಕೆ ಬರುವುದಲ್ಲದೆ ಅದಕ್ಕೆ ಆಧಾರವೂ ಆಗುತ್ತದೆ. (ಎಂ.ಆರ್.ಕೆಆರ್.; ಸಿ.ಎಂ.ಎಂ)

**ಚಾಲ್ತಿ ಕ್ರಯ :** ಚಾಲ್ತಿ ಕ್ರಯ (ಕರೆಂಟ್ ಕಾಸ್ಟ್) ಎಂದರೆ ಒಂದು ಆಸ್ತಿಯನ್ನು ಪಡೆಯಲು ನೀಡಲಾದ ಬೆಲೆ ಮತ್ತು ಮಾಡಲಾದ ಒಟ್ಟು ವೆಚ್ಚದ ಇಂದಿನ ಬೆಲೆಗಳ ಮಟ್ಟಕ್ಕೆ ಪರಿವರ್ತಿಸಲು ಸೂಚ್ಯಂಕಗಳು ಆಧಾರವಾಗಬಹುದು.

ಕಂಪನಿಯ ಆಸ್ತಿಗಳ ಬೆಲೆಯ ಮೇಲೆ ಪರಿಣಾಮ ಬೀರುವ ಬದಲಾವಣೆಗಳನ್ನು ಸರಿಹೊಂದಿಸುವ ಲೆಕ್ಕಾಚಾರಕ್ಕೆ ಅನುಗುಣವಾಗಿ ಒಂದು ಪದ್ಧತಿಯನ್ನು ವಿನ್ಯಾಸಮಾಡುವುದೇ ಚಾಲ್ತಿ ಲೆಕ್ಕಾಚಾರ ಪದ್ಧತಿಯಾಗಿದೆ. ಈ ಚಾಲ್ತಿ ಲೆಕ್ಕಾಚಾರ ಪದ್ಧತಿಯು– ಅದೇ ರೀತಿಯ ಆಸ್ತಿಯನ್ನು ಹೊಸದಾಗಿ ಬದಲಾಯಿಸಬೇಕಾದರೆ ಆ ಹೊಸದರ ಬದಲಾಯಿಸುವ ಬೆಲೆಯನ್ನರಿತು ದಾಖಲಿಸಿ ಪ್ರಸ್ತುತವಿರುವ ಒಂದು ಆಸ್ತಿಯ (ಅಥವಾ ಜವಾಬ್ದಾರಿಯ) ಬೆಲೆಯ ಮೇಲಿನ ಹಣದುಬ್ಬರದ ಪ್ರಭಾವವನ್ನು ಅರಿಯುವ ಪ್ರಯತ್ನವಾಗಿದೆ. ಈಗಾಗಲೇ ಇರುವ ಕಟ್ಟಡ ಅಥವಾ ಯಂತ್ರಸಾಮಗ್ರಿಯ ಉಪಯೋಗ ಮತ್ತು ಗುಣಮಟ್ಟಕ್ಕೆ ಸಮವಾಗಿ ಒಂದು ಕಟ್ಟಡ ಅಥವಾ ಯಂತ್ರಸಾಮಗ್ರಿಯನ್ನು ಹೊಂದುವ ಅಥವಾ ಉತ್ಪಾದಿಸುವಾಗಿನ ಚಾಲ್ತಿ ಕ್ರಯವನ್ನು ಲೆಕ್ಕಾಚಾರಮಾಡುವುದೇ ಚಾಲ್ತಿ ಲೆಕ್ಕಾಚಾರವಾಗಿದೆ.

ಒಂದು ಅಢಾವು ಪಟ್ಟಿಯಲ್ಲಿರುವ ಎಲ್ಲ ಅಂಶಗಳಿಗೆ ಅಥವಾ ಅವುಗಳಲ್ಲಿ ಕೆಲವಕ್ಕೆ ಇಂದಿನ ಬೆಲೆಗಳ ಮಟ್ಟದಲ್ಲಿ ನಿರ್ಧರಿಸಲಾದ ಕ್ರಯ (ಕರೆಂಟ್ ಕಾಸ್ಟ್). ಒಂದು ಆಸ್ತಿಯನ್ನು ಪಡೆಯಲು ನೀಡಲಾದ ಬೆಲೆ ಮತ್ತು ಮಾಡಲಾದ ಒಟ್ಟು ವೆಚ್ಚದ ಇಂದಿನ ಬೆಲೆಗಳ ಮಟ್ಟಕ್ಕೆ ಪರಿವರ್ತಿಸಲು ಸೂಚ್ಯಂಕಗಳು ಆಧಾರವಾಗಬಹುದು; ಅಂಥದೇ ಸರಕು ಅಥವಾ ಸೇವೆಯ ಚಾಲ್ತಿ ಬೆಲೆಯನ್ನು ಹಳೆಯ ಬೆಲೆಯ (ಐತಿಹಾಸಿಕ ಕ್ರಯ) ಸ್ಥಾನದಲ್ಲಿ ಅಳವಡಿಸಿಕೊಳ್ಳಬಹುದು. (ಸಿ.ಎಂ.ಎಂ.)

**ಚಾಲ್ತಿ ಠೇವಣಿ :** ಠೇವಣಿದಾರ ಕೇಳಿದ ಕೂಡಲೆ ಅವನಿಗೆ ವಾಪಸು ಕೊಡತಕ್ಕದ್ದೆಂಬ ಷರತ್ತಿಗೆ ಒಳಪಟ್ಟು ಅವನಿಂದ ಬ್ಯಾಂಕು ಸ್ವೀಕರಿಸಿದ ಹಣದ ಠೇವಣಿ (ಕರೆಂಟ್ ಡಿಪಾಸಿಟ್). ಬ್ಯಾಂಕಿನಲ್ಲಿ ಈ ಬಗೆಯ ಠೇವಣಿ ಇಡುವವನೇ ಕಾನೂನು ರೀತ್ಯಾ ಬ್ಯಾಂಕಿನ ಗ್ರಾಹಕ. ಒಂದು ಸಂಸ್ಥೆಯನ್ನು ವಾಣಿಜ್ಯ ಬ್ಯಾಂಕು ಎಂದು ಕರೆಯಬೇಕಾದರೆ ಈ ಬಗೆಯ ಠೇವಣಿಯನ್ನು ಸ್ವೀಕರಿಸುವುದು ಆ ಸಂಸ್ಥೆಯ ನಿತ್ಯ ವ್ಯವಹಾರದ ಒಂದು ಭಾಗವಾಗಿರಬೇಕು. ಗ್ರಾಹಕ ಇಟ್ಟ ಠೇವಣಿ ಹಣದಲ್ಲಿ ಎಷ್ಟನ್ನಾದರೂ ಎಂದಾದರೂ ಆತ ಹಿಂಪಡೆಯಲು ಸಾಮಾನ್ಯವಾಗಿ ನಿರ್ಬಂಧ ಇರುವುದಿಲ್ಲ. ಇದಕ್ಕಾಗಿ ಅವನು ಪೂರ್ವಭಾವಿ ತಿಳಿವಳಿಕೆಯನ್ನು ಬ್ಯಾಂಕಿಗೆ ನೀಡುವ ಅಗತ್ಯವಿಲ್ಲ. ಗ್ರಾಹಕನ ಲೆಕ್ಕದಲ್ಲಿ ಇರುವ ಶಿಲ್ಕಿನ ಮೊಬಲಗಿಗೆ ಒಳಪಟ್ಟು ಗ್ರಾಹಕ ನೀಡುವ ಚೆಕ್ಕುಗಳನ್ನು ಬ್ಯಾಂಕು ಸಾಮಾನ್ಯವಾಗಿ ಆದರಿಸಲೇಬೇಕು. ಚಾಲ್ತಿ ಠೇವಣಿ ಲೆಕ್ಕ ಒಂದು ಬಗೆಯ ಧಾರಾವಾಹಿ ಲೆಕ್ಕ. ಅದಕ್ಕೆ ಗ್ರಾಹಕ ಸಾಮಾನ್ಯವಾಗಿ ಹಣ ತುಂಬುತ್ತಿರುತ್ತಾನೆ; ಅದರಿಂದ ಹಣ ಸೆಳೆದುಕೊಳ್ಳುತ್ತಿರುತ್ತಾನೆ. ಚಾಲ್ತಿ ಠೇವಣಿಯ ಮೇಲೆ ಬಡ್ಡಿ ಕೊಡುವುದಿಲ್ಲ; ಚಾಲ್ತಿ ಠೇವಣಿದಾರ ತನ್ನ ಲೆಕ್ಕದಲ್ಲಿ ನಿಗದಿಯಾದ ಕನಿಷ್ಠ ಶಿಲ್ಕು ಇಟ್ಟಿರಲೇಬೇಕೆಂಬ ನಿಯಮವೂ ಇರುವುದುಂಟು. ಈ ಕನಿಷ್ಠ ಶಿಲ್ಕಿನ ನಿಯಮ ಎಲ್ಲಾ ಬ್ಯಾಂಕುಗಳಲ್ಲಿ ಒಂದೇ ಸಮನಾಗಿರುವುದಿಲ್ಲ. ವಿವಿಧ ಬ್ಯಾಂಕುಗಳಲ್ಲಿ ಬೇರೆ ಬೇರೆ ಕನಿಷ್ಠ ಶಿಲ್ಕಿನ ನಿಯಮವಿರುತ್ತದೆ. ಚಾಲ್ತಿ ಠೇವಣಿ ಲೆಕ್ಕ ಸಾಮಾನ್ಯವಾಗಿ ಇರುವುದೇ ಉದ್ಯಮಿಗಳ ಅನುಕೂಲಕ್ಕೆ. ಈ ಚಾಲ್ತಿ ಖಾತೆಯನ್ನು ಏಕವ್ಯಕ್ತಿ, ಜಂಟಿ ವ್ಯಕ್ತಿಗಳು, ಏಕ ಸ್ವಾಮಿತ್ವ ಸಂಸ್ಥೆ, ಪಾಲುದಾರಿಕೆ ಸಂಸ್ಥೆ, ಕೂಡುಬಂಡವಾಳ ಸಂಸ್ಥೆ (ಕಂಪನಿ), ಸಹಕಾರಿ ಸಂಘಗಳು, ವಿಶ್ವಸ್ಥ (ಟ್ರಸ್ಟ್) ಮಂಡಳಿಗಳು, ವ್ಯಾಪಾರೇತರ ಸಂಘಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಪ್ರಾರಂಭಿಸಬಹುದು. ಅಧಿಕ ಸಂಖ್ಯೆಯಲ್ಲಿ ವಹಿವಾಟು ಇರುವವರಿಗೆ ಇದು ಬಲು ಸೂಕ್ತವಾದ ಖಾತೆ. ಹಣ ಪಾವತಿ ಹಾಗು ಹಣ ಸಂದಾಯ ವಹಿವಾಟಿಗೆ ಯಾವ ಮಿತಿಯೂ ಇಲ್ಲ. ಆದರೆ ವರ್ಷಕ್ಕೊಮ್ಮೆ ಬ್ಯಾಂಕು ಈ ಖಾತೆದಾರರಿಗೆ ಸೇವಾಶುಲ್ಕ ವನ್ನು ವಿಧಿಸುವುದುಂಟು. ವರ್ಷವಿಡೀ ಅಧಿಕ ಮೊತ್ತದ ಶಿಲ್ಕನ್ನು ಇಟ್ಟಿರುವ ಖಾತೆಗಳಿಗೆ ಸೇವಾಶುಲ್ಕದ ವಿನಾಯಿತಿಯೊಂದಿಗೆ ಇತರ ಕೆಲವು ಸೌಲಭ್ಯಗಳನ್ನು ನೀಡಿ ಈ ರೀತಿಯ ಉಳಿಕೆಯನ್ನು ಪ್ರೋತ್ಸಾಹಿಸುತ್ತದೆ.

ಚಾಲ್ತಿ ಖಾತೆಯನ್ನು ಬ್ಯಾಂಕಿನಲ್ಲಿ ತೆರೆಯಲಿಚ್ಛಿಸುವವನು ಬ್ಯಾಂಕಿನ ಗ್ರಾಹಕರಲ್ಲೊಬ್ಬನಿಂದ ಅಥವಾ ಬ್ಯಾಂಕಿಗೆ ಪರಿಚಯಸ್ಥನಾದವನೊಬ್ಬನಿಂದ ಪರಿಚಯಪತ್ರ ತರಬೇಕು. ಪರಿಚಯಪತ್ರ ನೀಡುವವನು ಉಳಿತಾಯ ಖಾತೆಯ ಗ್ರಾಹಕನಾಗಿರಬಾರದು. ಅವನು ಚಾಲ್ತಿಖಾತೆಯನ್ನು ಹೊಂದಿರುವವನಾಗಿರಲೇ ಬೇಕು ಅಥವಾ ಬ್ಯಾಂಕಿಗೆ ಸಮ್ಮತಿಯಾಗುವಂಥ ವ್ಯಕ್ತಿಯಾಗಿರಬಹುದು. ಕೆಲವು ವಿಶೇಷ ಸಂದರ್ಭಗಳಲ್ಲಿ ಬ್ಯಾಂಕಿನ ಪ್ರಬಂಧಕರೇ ಪರಿಚಯ ಮಾಡುತ್ತಾರೆ. ಅರ್ಜಿದಾರ ತನ್ನ ಹೆಸರು, ವಿಳಾಸ, ವೃತ್ತಿ ಮುಂತಾದವನ್ನು ನೀಡಿ ಅರ್ಜಿ ಕೊಡಬೇಕು. ತನ್ನ ಮಾದರಿ ಸಹಿಯನ್ನೂ ನೀಡಬೇಕು. ಅವನ ಹೆಸರಿನಲ್ಲಿ ಖಾತೆ ತೆರೆಯಲು ಬ್ಯಾಂಕಿಗೆ ಅಭ್ಯಂತರವಿಲ್ಲದಿದ್ದರೆ ಬ್ಯಾಂಕು ಅವನಿಂದ ಪ್ರಾರಂಭಿಕ ಠೇವಣಿ(ಇನಿಷಿಯಲ್ ಡಿಪಾಸಿಟ್) ಸ್ವೀಕರಿಸಿ ಚಾಲ್ತಿ ಠೇವಣಿ ಖಾತೆ ತೆರೆಯುತ್ತದೆ. ಖಾತೆದಾರನಿಗೆ ಚೆಕ್ ಪುಸ್ತಕ, ಜಮಾ ಮಾಡಲು ಚಲನ್ ಪುಸ್ತಕ ಮತ್ತು ಪಾಸ್ ಪುಸ್ತಕ ಇವನ್ನೂ ಕೊಡಲಾಗುತ್ತದೆ. ಪಾಲುದಾರಿಕೆ ಸಂಸ್ಥೆ ಅಥವಾ ಕಂಪನಿಯ ಹೆಸರಿನಲ್ಲಿ ಖಾತೆ ತೆರೆಯಬೇಕಾದರೆ ಅದರ ಪರವಾಗಿ ವಹಿವಾಟು ನಡೆಸುವ ಪಾಲುದಾರ ಅಥವಾ ಅಧಿಕಾರಿಯ ಮಾದರಿ ಸಹಿ ಪಡೆಯುವುದು ಅವಶ್ಯ. ಪಾಲುದಾರಿಕೆಯ ಹೆಸರಿನಲ್ಲಿ ಲೆಕ್ಕ ತೆರೆಯಬೇಕಾದರೆ ಪಾಲುದಾರಿಕೆ ಒಪ್ಪಂದದ ವಿಧಿಗಳನ್ನು ನೋಡಬೇಕಾಗಬಹುದು. ಕಂಪನಿಯ ಲೆಕ್ಕ ತೆರೆಯಬೇಕಾದಾಗ ಕಂಪನಿಯ ಷರತ್ತುಗಳು ಮತ್ತು ಸಂಘದ ವಿಧಿಗಳು, ಕಂಪನಿಯ ಹಣಕಾಸಿನ ಸ್ಥಿತಿ ಮುಂತಾದ ವಿವರಗಳನ್ನು ಪಡೆಯಲಾಗುತ್ತದೆ. ಈ ಖಾತೆ ತೆರೆಯುವ ಬಗ್ಗೆ ಮತ್ತು ಇದರ ವಹಿವಾಟು ಯಾರು ನಡೆಸುವರೆಂಬ ಬಗ್ಗೆ ಕಂಪನಿಯ ನಿರ್ದೇಶಕರ ಮಂಡಲಿಯಲ್ಲಿ ಸ್ವೀಕೃತವಾದ ಠರಾವು ನಿರ್ಣಯದ ಪ್ರತಿಯನ್ನೂ ಬ್ಯಾಂಕು ಪಡೆಯುತ್ತದೆ. ಇದಕ್ಕೆ ಎಲ್ಲ ಪಾಲುದಾರರು ಅಥವಾ ಅಧಿಕೃತ ಎಲ್ಲ ನಿರ್ದೇಶಕರೂ ಸಹಿ ಮಾಡಿರಬೇಕಾಗುತ್ತದೆ. ಇತ್ತೀಚಿಗೆ ಕಂಪ್ಯೂಟರ್ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಮೇಲೆ ಬ್ಯಾಂಕುಗಳು ಈ ಖಾತೆಯ ಉತ್ತಮ ಗ್ರಾಹಕರನ್ನು ಹಲವಾರು ವಿಶಿಷ್ಟ ಸೇವಾ ಪ್ರಕ್ರಿಯೆಗಳನ್ನು ಯೋಜಿಸಿ ಆಕರ್ಷಿಸುತ್ತಿವೆ. (ಕೆ.ಜಿ.ಆರ್.)

**ಚಾಲ್ತಿ ಲೆಕ್ಕ :** ಪರಸ್ಪರ ಸಂಬಂಧ ಇರುವ ಇಬ್ಬರು ವ್ಯಕ್ತಿಗಳ, ಎರಡು ಸಂಸ್ಥೆಗಳ, ಅಥವಾ ಸಂಸ್ಥೆ ಮತ್ತು ವ್ಯಕ್ತಿಗಳ ನಡುವೆ ನಗದು, ಸರಕು ಮುಂತಾದವುಗಳ ರೂಪದಲ್ಲಿ ಜರುಗುವ ವಹಿವಾಟುಗಳ ಯಾದಿಯಾಗಿ ಚಾಲೂ ಆಗಿರುವ ಖಾತೆ; ಒಂದು ಪಾಲುದಾರಿಕೆ ಸಂಸ್ಥೆಯ ಪಾಲುದಾರ ಆ ಸಂಸ್ಥೆಯಿಂದ ತನ್ನ ಸ್ವಂತ ಉಪಯೋಗಕ್ಕಾಗಿ ಮಾಡುವ ಹಣದ ಸೆಳೆತವೇ ಮುಂತಾದ ವಹಿವಾಟುಗಳ ದಾಖಲೆಗಳನ್ನೊಳಗೊಂಡ ಖಾತೆಯನ್ನೂ ಚಾಲ್ತಿ ಖಾತೆ ಎಂದು ಕರೆಯಲಾಗುತ್ತದೆ (ಕರೆಂಟ್ ಅಕೌಂಟ್). ಪರಸ್ಪರ ಸಂಬಂಧ ಇರುವ ವ್ಯಕ್ತಿ, ಸಂಸ್ಥೆಗಳ ನಡುವಣ ಚಾಲ್ತಿ ಲೆಕ್ಕದ ಸಿಲ್ಕನ್ನು ಸಾಮಾನ್ಯವಾಗಿ ನಿಯತಕಾಲಿಕವಾಗಿ ಚುಕ್ತಾ ಮಾಡಬೇಕೆಂಬ ನಿಯಮ ಇರುವುದಿಲ್ಲ. ಸಂಸ್ಥೆಯಲ್ಲಿ ಪಾಲುದಾರರು ಹೊಂದಿರುವ ಬಂಡವಾಳವನ್ನು ಸಾಮಾನ್ಯವಾಗಿ ಪ್ರತ್ಯೇಕವಾಗಿ ಅವರ ಬಂಡವಾಳ ಖಾತೆಗಳ ಅಡಿಯಲ್ಲಿ ತೋರಿಸಲಾಗುತ್ತದೆ. ಪಾಲುದಾರಿಕೆ ಸಂಸ್ಥೆಯಿಂದ ಪಾಲುದಾರನಿಗೆ ಸಂದಾಯವಾಗಬೇಕಾಗಿರಬಹುದಾದ ಸಂಬಳ, ಬಂಡವಾಳದ ಮೇಲಣ ಬಡ್ಡಿ, ಲಾಭದಲ್ಲಿ ಅವನ ಪಾಲು, ಸ್ವಂತ ಉಪಯೋಗಕ್ಕಾಗಿ ಅವನು ಸಂಸ್ಥೆಯಿಂದ ತೆಗೆದುಕೊಂಡ ನಗದು ಸರಕು ಮುಂತಾದವು, ಇವುಗಳ

ಮೊಬಲಗಿನ ಮೇಲೆ ಕೊಡಬೇಕಾಗಿರುವ ಬಡ್ಡಿ ಮುಂತಾದವನ್ನೆಲ್ಲ ಪ್ರತ್ಯೇಕವಾಗಿ ಅವನ ಚಾಲ್ತಿಖಾತೆಯಲ್ಲಿ ದಾಖಲಿಸಲಾಗುತ್ತದೆ. ಲೆಕ್ಕದ ವರ್ಷದ ಅಥವಾ ಅವಧಿಯ ಕೊನೆಯಲ್ಲಿ ಈ ಖಾತೆಯ ಶಿಲ್ಕನ್ನು ಅವನ ಬಂಡವಾಳ ಖಾತೆಗೆ ವರ್ಗಮಾಡಬಹುದು; ಪಾಲುದಾರರ ಬಂಡವಾಳಗಳು ಸ್ಥಿರವಾಗಿದ್ದ ಪಕ್ಷದಲ್ಲಿ ಪಾಲುದಾರರ ಚಾಲ್ತಿ ಖಾತೆಗಳ ಶಿಲ್ಕುಗಳನ್ನು ಅವರ ಬಂಡವಾಳ ಖಾತೆಗಳಿಗೆ ವರ್ಗ ಮಾಡುವ ಬದಲು ಮುಂದಿನ ಅವಧಿಯ ಆರಂಭ ಸಿಲ್ಕುಗಳಾಗಿ ಅವರ ಚಾಲ್ತಿ ಖಾತೆಗಳಲ್ಲಿ ತೋರಿಸಲಾಗುವುದು. ಬ್ಯಾಂಕಿನ ಚಾಲ್ತಿ ಠೇವಣಿ ಖಾತೆಗಳನ್ನೂ ಚಾಲ್ತಿ ಲೆಕ್ಕಗಳೆಂದು ಹೇಳುವುದುಂಟು **(ನೋಡಿ– ಚಾಲ್ತಿ–ಠೇವಣಿ)** (ಕೆ.ಜಿ.ಆರ್.)

**ಚಾಲ್ತಿ ಹೊಣೆ :** ಅಲ್ಪಾವಧಿಯ ಋಣ; ಸಾಮಾನ್ಯವಾಗಿ ಒಂದು ವರ್ಷದೊಳಗೆ, ಇದಕ್ಕೂ ಮೀರಿದರೆ ಸಂಸ್ಥೆಯ ವ್ಯವಹಾರ ಆವರ್ತ ವರ್ಷದೊಳಗೆ, ಚಾಲ್ತಿ ಆಸ್ತಿಗಳಿಂದಲೋ ವರಮಾನಕ್ಕೆ ವರ್ಗಾಯಿಸಿಯೋ, ಸಮನ್ವಯ ಮಾಡಿಯೋ (ರಿಕನ್ಸೈಲ್) ಇತ್ಯರ್ಥಪಡಿಸಬೇಕಾದ ಹೊಣೆ (ಕರೆಂಟ್ ಲಯಬಿಲಿಟಿ). ಚರ ಹೊಣೆ ಅಥವಾ ಸಾಲ (ಫ್ಲೋಟಿಂಗ್ ಲಯಬಿಲಿಟಿ ಅಥವಾ ಡೆಟ್) ಎಂದೂ ಇದನ್ನು ಕರೆಯಲಾಗುತ್ತದೆ. ಚಾಲ್ತಿ ಹೊಣೆಗಳ ಉದಾಹರಣೆಗಳು ಇವು : 1 ಪದಾರ್ಥ, ಸೇವೆಗಳ ಸರಬರಾಜುದಾರರೊಂದಿಗಿನ ವಹಿವಾಟುಗಳಿಂದಾಗಿ ಉದ್ಭವವಾದ ವಾಣಿಜ್ಯ ಸಾಲದಾತರ ಲೆಕ್ಕಗಳು ಮತ್ತು ಪಾವತಿಸಬೇಕಾದ (ದೇಣಿ) ಹುಂಡಿಗಳು; 2 ಒಂದು ವರ್ಷದೊಳಗೆ ತೀರಿಸಬೇಕಾದ ಬ್ಯಾಂಕು ಸಾಲಗಳು ; 3 ಒಂದು ವರ್ಷದೊಳಗೆ ಪಾವತಿಗೆ ಬರುವ ದೀರ್ಘಾವಧಿ ಸಾಲದ ಕಂತುಗಳು ; 4 ಗ್ರಾಹಕರಿಂದ ಬಂದ ಅಲ್ಪಾವಧಿ ಠೇವಣಿಗಳು ಮತ್ತು ಮುಂಗಡಗಳು; 5 ಘೋಷಿಸಲಾದ–ಆದರೆ ಪಾವತಿಯಾಗದಿರುವ–ಲಾಭಾಂಶಗಳು ; 6 ಪಾವತಿ ಮಾಡಬೇಕಾದ ಬಡ್ಡಿ, ತೆರಿಗೆ, ಸಂಬಳ, ಕಮಿಷನ್, ಸ್ವಾಮ್ಯ ಶುಲ್ಕಭಾಗ (ರಾಯಲ್ಟಿ), ಬೋನಸ್ಸು, ಹಂಚಿಕೆಯಾದ ಲಾಭ ಮುಂತಾದವು.

ಚಾಲ್ತಿ ಹೊಣೆಗಳು ಸಂಸ್ಥೆಯ ಆಸ್ತಿ–ಹೊಣೆ ತಃಖ್ತೆ (ಬ್ಯಾಲೆನ್ಸ್ ಷೀಟ್)ಯ ಹೊಣೆಬದಿಯಲ್ಲಿ ಎರಡನೆಯ ಸ್ಥಾನದಲ್ಲಿ ನಮೂದಾಗುತ್ತವೆ. ರೂಢಿಯಂತೆ ಮೊದಲನೆಯ ಸ್ಥಾನ ಸ್ಥಿರಹೊಣೆಗಳದು. (ಸಿ.ಎಂ.ಎಂ.)

**ಚಾವಣಿ :** ಕಟ್ಟಡ, ಮನೆ ಮೊದಲಾದವುಗಳನ್ನು ಮುಚ್ಚಿರುವ ಮೇಲುಭಾಗ; ಮಾಡು (ರೂಫ್). ಗುಹೆಗಳಿಗೆ ಕಲ್ಲು ಚಪ್ಪಡಿಯೋ ಗಟ್ಟಿಮಣ್ಣಿನ ಕೊರೆದ ಭಾಗವೋ ಚಾವಣಿಯಾಗಿದ್ದರೆ ಅನಂತರದ ನಿರ್ಮಾಣಗಳಾದ ಗುಡಿಸಲು ಗುಡಾರಗಳಿಗೆ ಮರ, ಬಿದಿರು, ಹಂಬು, ಎಲೆ, ಹುಲ್ಲು, ಸೋಗೆ, ಚರ್ಮ ಮುಂತಾದವುಗಳ ಯುಕ್ತ ಬಳಕೆಯಿಂದ ರಚಿಸಿದ ಹಗುರವಾದ ಹೊದಿಕೆ ಚಾವಣಿಯಾಯಿತು. ಇಲ್ಲೆಲ್ಲ ಉದ್ದೇಶ ಒಂದೇ–ನಿಸರ್ಗದ ಪ್ರತಿಕೂಲ ಏರುಪೇರುಗಳಿಂದ ಬಿಡಾರದೊಳಗಿನ ಮನುಷ್ಯರಿಗೂ ಅವರ ವಸ್ತುಗಳಿಗೂ ರಕ್ಷಣೆ ಒದಗಿಸುವುದು. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಮಾದರಿಯ ಚಾವಣಿಗಳು ಬಳಕೆಗೆ ಬಂದಿರುವುದಕ್ಕೆ ಅಲ್ಲಿನ ಹವಾಗುಣ, ಅಲ್ಲಿ ದೊರೆಯುವ ಕಟ್ಟಡದ ವಸ್ತುಗಳು, ಸಾಂಸ್ಕೃತಿಕ ವಿಕಾಸ ಮುಂತಾದವು ಕಾರಣಗಳು. (ಎಂ.ಆರ್.ಎಸ್.ಐ.)



**ಮನೆಯೊಂದರ ಪ್ರರೂಪಿ ಇಪ್ಪಾರು ಚಾವಣಿಯ ರಚನೆ : 1. ಚಾವಣಿಯ ಮುಂಭಾಗದ ಉನ್ನತಿನಕ್ಷೆ, 2. ಅಡ್ಡ ನೋಟ, 3. ನಕಾಸೆ (ಪ್ಲಾನ್), 4. ಆಸರೆಕಟ್ಟುಗಳಿರುವ ಪಕಾಸುಗಳು, 5. ಚಿಮ್ನಿಯ ಸುತ್ತ ಚಾವಣಿಯ ಅಳವಡಿಕೆ, 6. ಚಾವಣಿಯ ಸಮಪರಿಮಾಣ ನೋಟ**

**ಲಕ್ಷಣಗಳು :** ಚಾವಣಿಗಳು ಮಟ್ಟವಾಗಿರಬಹುದು ಇಲ್ಲವೆ ಇಳುಕಲಾಗಿರಬಹುದು, ಮಾಡನ್ನು ಮುಚ್ಚುವ ಸಾಮಗ್ರಿ ಮಳೆ ಮತ್ತು ಹಿಮ, ಸೆಕೆ ಮತ್ತು ಚಳಿಗಳನ್ನು ತಡೆಯುವಂತೆ ಇರಬೇಕಲ್ಲದೆ ನೋಡುವುದಕ್ಕೂ ಲಕ್ಷಣವಾಗಿರಬೇಕು. ಕಾಂಕ್ರೀಟಿನಿಂದ ಕಟ್ಟುವ ಆಧುನಿಕ ಕಟ್ಟಡಗಳ ಮಟ್ಟವಾದ ಚಾವಣಿಗಳನ್ನು ಕಾಂಕ್ರೀಟಿನ ಚಪ್ಪಡಿಗಳಿಂದ ಮುಚ್ಚಿ ಮೇಲೆ ಆಸ್ಫಾಲ್ಟನ್ನು ಬಳಿದು ನೀರು ಒಳಗೆ ಇಳಿಯದಂತೆ ಮಾಡುತ್ತಾರೆ. ಇಂಥ ಮಾಡುಗಳ ಮೇಲುಭಾಗ ಮಳೆಯ ನೀರು ಧಾರಾಳವಾಗಿ ಹರಿಯುವ ಹಾಗೆ ಕೊಂಚ ಇಳಿಜಾರಾಗಿರಬೇಕು. ಉಕ್ಕಿನ ಚೌಕಟ್ಟಿನಿಂದ ಕಟ್ಟಿದ ಮನೆಗಳಿಗೆ ಚಪ್ಪಟೆಯಾದ ಕಾಂಕ್ರೀಟಿನ ಮಾಡನ್ನು ಕಟ್ಟಬಹುದು. ಆದರೆ ಮಹಡಿಯ ಮೇಲೆ ಹೆಚ್ಚು ಸ್ಥಳ ಬೇಕಾದಾಗ ಉಕ್ಕಿನಿಂದ ತಯಾರಿಸಿದ ಮ್ಯಾನ್‌ಸರ್ಡ್ ಮಾಡನ್ನು ಕಟ್ಟಬೇಕು. ಸೀಸ, ತಾಮ್ರ, ಸತು, ಫಲಕಗಳು, ಹೆಂಚುಗಳು

ಮತ್ತು ಕಲ್ನಾರು–ಸಿಮೆಂಟು ತಗಡುಗಳಿಂದ ತಯಾರಿಸಿದ ಮಾಡಿಗೆ ಆಧಾರವಾಗಿ ಮರದ ಚೌಕಟ್ಟುಗಳನ್ನು ಉಪಯೋಗಿಸುವುದು ಹಿಂದೆ ವಾಡಿಕೆಯಾಗಿತ್ತು. ಬೇಗ ಕಟ್ಟಬಹುದಾದ ಉಕ್ಕಿನ ಸರಕಟ್ಟುಗಳು ಈಚೆಗೆ ಮರದ ತೊಲೆಗಳ ಸ್ಥಾನಗಳನ್ನು ಆಕ್ರಮಿಸಿವೆ. ವಾಸದ ಮನೆಗಳು, ಸಣ್ಣ ಕಟ್ಟಡಗಳು, ಬಣ್ಣದ ಕಾರ್ಖಾನೆಗಳು, ಬಟ್ಟೆಯ ಚಲುವೆಯ ಮನೆಗಳು–ಇವುಗಳಲ್ಲಿ ಮಾತ್ರ ಈಗಲೂ ಮರವನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ.

ಚಾವಣಿಯ ಮಾದರಿಗಳು : 1 ವಾರ್ಚಾಟು ಅಥವಾ ಒಂದೇ ಇಳಿಜಾರಿನ ಮಾಡು ಅತ್ಯಂತ ಸರಳವಾದ ಮಾದರಿ. ಇದರಲ್ಲಿ ಮಾಡಿದ ಇಳಿಕಲು ದೊಡ್ಡ ಮಳೆ ಬಂದಾಗಲೂ ನೀರು ಸರಾಗವಾಗಿ ಕೆಳಗೆ ಇಳಿಯುವಂತಿರಬೇಕು. ಈ ಮಾಡಿನ ಮೇಲೆ ಹೆಂಚುಗಳು, ಫಲಕಗಳು, ಸತುವಿನ ಇಲ್ಲವೆ ಕಲ್ನಾರಿನ ಹಾಳೆಗಳನ್ನು ಹೊದೆಸಬಹುದು.

2 ಎರಡು ಇಳಿಜಾರುಗಳಿರುವ ಮಾಡುಗಳನ್ನು ಮಳೆ ಹೆಚ್ಚಾಗಿ ಬೀಳುವ ಪ್ರದೇಶಗಳಲ್ಲಿ ಉಪಯೋಗಿಸುವುದು ವಾಡಿಕೆ. ಇದರಲ್ಲಿ ಮಾಡಿನ ತೀರುಗಳು ಮೇಲುಭಾಗದಲ್ಲಿ ಗೋಡೆಯಿಂದ ಗೋಡೆಗೆ ಹೋಗುವ ಒಂದು ತೊಲೆಯ ಮೇಲೆ ನಿಂತಿರುತ್ತವೆ. ತೀರುಗಳ ಕೆಳಭಾಗಗಳನ್ನು ಗೋಡೆಯ ಮೇಲೆ ಕೂರಿಸಿರುವ ಒಂದು ಮಟ್ಟವಾದ ತೊಲೆಯ ಮೇಲೆ ಹಾದು ಕೊಂಚ ಮುಂದಕ್ಕೆ ನೂಕಿ ಮಳೆಯ ನೀರು ಗೋಡೆಯ ಮೇಲೆ ಬೀಳದ ಹಾಗೆ ಕಾಪಾಡುತ್ತಾರೆ. ಈ ಕ್ರಮದಲ್ಲಿ ಮಾಡಿನ ತೂಕ ಗೋಡೆಯ ಮೇಲೆ ಒಂದೇ ಸಮವಾಗಿ ಹರಡಿರುತ್ತದೆ. ಈ ನಮೂನೆಯ ಮಾಡನ್ನು 3.5ರಿಂದ 5.0 ಮೀ. ಅಗಲದ ಹಜಾರದಲ್ಲಿ ಉಪಯೋಗಿಸಬಹುದು.

3 ಗೋಡೆಯಿಂದ ಗೋಡೆಗೆ ಎಳೆಯುವ ಮಟ್ಟವಾದ ಮರದ ತೊಲೆಗಳು ವಾಸದ ಮನೆಗಳಲ್ಲಿ ವಿಶೇಷ ಬಳಕೆಯಲ್ಲಿರುವ ನಮೂನೆ. ಚಾವಣಿಯ ಮೇಲುಭಾಗ ಮಳೆಯ ನೀರು ಕೆಳಕ್ಕೆ ಸರಾಗವಾಗಿ ಇಳಿಯುವಂತೆ ಕೊಂಚ ಇಳಿಕಲಿನಲ್ಲಿರಬೇಕು.

4 ಹಜಾರದ ಅಗಲ 6ಮೀ ಇದ್ದರೆ ಸುಮಾರು 3ಮೀ ಅಂತರದಲ್ಲಿ ತೊಲೆಗಳ ಮಧ್ಯಭಾಗಗಳನ್ನು ಮಟ್ಟವಾದ ಒಂದು ಮರದ ತುಂಡಿನಿಂದ ಬಿಗಿದು ಈ ತುಂಡಿನ ಮಧ್ಯದಿಂದ ಲಂಬವಾದ ಇನ್ನೊಂದು ತುಂಡನ್ನು ಚಾವಣಿಯ ಬೆನ್ನು ತೊಲೆಯನ್ನು ಸಂಧಿಸುವ ಹಾಗೆ ಕೊಡಬೇಕಾಗುತ್ತದೆ.



ಕಿಂಗ್–ಪೋಸ್ಟ್ ಚಾವಣಿ ಆಸರೆಕಟ್ಟು

5 ಹಜಾರದ ಅಗಲ 6–10ಮೀವರೆಗೂ ಇದ್ದಾಗ ಕಿಂಗ್–ಪೋಸ್ಟ್ ಆಸರೆಕಟ್ಟನ್ನು ಉಪಯೋಗಿಸಬೇಕು. ಇದರಲ್ಲಿ ನಡುವಿನ ಕಂಬ ತಳದಲ್ಲಿ ತೊಲೆಗೆ ಆಧಾರವನ್ನು ಕೊಟ್ಟು ಅದರ ತಳದಿಂದ ಎರಡು ದಿಕ್ಕುಗಳಲ್ಲಿಯೂ ಎರಡು ಓರೆಯಾದ ತುಂಡುಗಳು ಮಾಡಿನ ಕೆಳಗಿನ ತೊಲೆಗೆ ಎರಡು ದಿಕ್ಕುಗಳಲ್ಲಿಯೂ ಆಧಾರಗಳನ್ನು ಕೊಡುತ್ತವೆ. ಈ ಮರದ ತುಂಡುಗಳನ್ನೆಲ್ಲ ಅಚ್ಚ ಕಬ್ಬಿಣದ ಪಟ್ಟಿಗಳಿಂದಲೂ ಬೋಲ್ಟುಗಳಿಂದಲೂ ಬಿಗಿದಿರುತ್ತಾರೆ.

6 ಹಜಾರದ ಅಗಲ 10ರಿಂದ 15ಮೀ ವರೆಗೂ ಇದ್ದಾಗ ಕ್ವೀನ್–ಪೋಸ್ಟ್ ಸರಕಟ್ಟನ್ನು ಬಳಸುತ್ತಾರೆ. ಇದರಲ್ಲಿ ತಳದ ತೊಲೆಯಿಂದ ಲಂಬವಾದ ಎರಡು ಕಂಬಗಳು ಮಾಡಿನ ಕೆಳಗಿನ ತೊಲೆಗೆ ಆಧಾರವನ್ನು ಕೊಡುತ್ತವೆ. ಇವೆರಡು ಕಂಬಗಳನ್ನೂ ಮೇಲುಗಡೆ ಒಂದು ಮಟ್ಟವಾದ ತೊಲೆಯಿಂದ ಸೇರಿಸುತ್ತಾರೆ. ಇದಲ್ಲದೆ ಒಂದೊಂದು ಕ್ವೀನ್–ಪೋಸ್ಟಿನ ತಳದಿಂದಲೂ ಓರೆಯಾಗಿ ಒಂದೊಂದು ತುಂಡು ಹೊರಟು ಮಾಡಿನ ಕೆಳಗಿನ ತೊಲೆಗೆ ಇನ್ನೊಂದು ಆಧಾರವನ್ನು ಕೊಡುತ್ತವೆ. ಇದರಲ್ಲಿಯೂ ಮರದ ತುಂಡುಗಳನ್ನೆಲ್ಲ ಅಚ್ಚಕಬ್ಬಿಣದ ಪಟ್ಟಿಗಳಿಂದಲೂ ಬೋಲ್ಟುಗಳಿಂದಲೂ ಬಿಗಿದಿರುತ್ತಾರೆ.

7 ಹ್ಯಾಮರ್ ಬೀಮ್ ಮರದ ಚೌಕಟ್ಟನ್ನು 10 ರಿಂದ 16ಮೀ ಅಗಲದ ಮಾಡುಗಳಲ್ಲಿ ಉಪಯೋಗಿಸಬಹುದು. ಇದರಲ್ಲಿ ತೀರುಗಳ ಕೆಳಗಡೆ ಹಿಂದಿನ ಚೌಕಟ್ಟುಗಳಲ್ಲಿರುವ ಹಾಗೆ ತೊಲೆಯಿರುವುದಿಲ್ಲ. ಅದರ ಬದಲು ಮಾಡಿನ ಎರಡು ತೊಲೆಗಳನ್ನೂ ಅವುಗಳ ಮಧ್ಯಭಾಗದಲ್ಲಿ ಒಂದು ಮಟ್ಟವಾದ ಕಾಲರನ್ನೂ ಸೇರಿಸುತ್ತಾರೆ. ತೊಲೆಗಳ ಕೆಳಭಾಗದಲ್ಲಿ ಗುಜ್ಜುಗಳು ಮತ್ತು ಬಿಗಿಪಟ್ಟಿಗಳು ಒಂದಕ್ಕೊಂದು ಸೇರಿಕೊಂಡು ಗೋಡೆಗಳ ಮೇಲಿನ ಒದೆತವನ್ನು ಕಡಿಮೆ ಮಾಡುತ್ತವೆ. ಈ ಚೌಕಟ್ಟಿನಲ್ಲಿ ಕಮಾನಿನ ನಮೂನೆ ಮತ್ತು ಚಾಚುಪೀಠದ ನಮೂನೆ ಎಂದು ಎರಡು ವಿಭಾಗಗಳಿವೆ. ಚಾಚುಪೀಠ ಗೋಡೆಯ ತಲೆಮಟ್ಟದಿಂದ ಮುಂದಕ್ಕೆ ಚಾಚಿ, ಕೊಂಚ ಕೆಳಗಡೆ ಗೋಡೆಯಿಂದ ಹೊರಟ ಬೋದಿಗೆಯ ಮೇಲೆ ನಿಂತಿರುತ್ತದೆ. ಯೂರೋಪಿನ ಮಧ್ಯಯುಗದ ಚರ್ಚುಗಳಿಗೆ ಈ ಗಾಂಭೀರ್ಯ ಒಪ್ಪುವ ಹಾಗಿತ್ತು.



ಕ್ವೀನ್–ಪೋಸ್ಟ್ ಚಾವಣಿ ಆಸರೆಕಟ್ಟು

ಮ್ಯಾನ್‌ಸರ್ಡ್ ಮಾಡಿನಲ್ಲಿ ಒಂದೊಂದು ಭಾಗದಲ್ಲೂ ಎರಡು ಇಳಿಜಾರುಗಳಿವೆ. ಇವುಗಳಲ್ಲಿ ಕೆಳಗಿನದು 70°ಗಳಷ್ಟು ಕಡಿದಾಗಿಯೂ ಮೇಲಿನದು 30°ಗಳಷ್ಟು ಓರೆಯಾಗಿಯೂ ಇವೆ. ಈ ಉಪಾಯದಿಂದ ಒಳಗಡೆ ಹೆಚ್ಚು ಜಾಗ ಸಿಕ್ಕುತ್ತದೆ. ಸಾಮಾನ್ಯವಾಗಿ ಕೆಳಗಡೆ ಕ್ವೀನ್–ಪೋಸ್ಟ್ ಚೌಕಟ್ಟಿನ ಮೇಲೆ ಮೇಲುಗಡೆ ಕಿಂಗ್–ಪೋಸ್ಟ್ ಚೌಕಟ್ಟನ್ನು ಇಡುವುದು ರೂಢಿ. ಈ ಮಾಡುಗಳನ್ನು ಫ್ರೆಂಚ್ ಇಂಜಿನಿಯರ್ ಮ್ಯಾನ್‌ಸರ್ಡ್ (1598–1666) ಮೊದಲ ಬಾರಿ ವರ್ಸೇಲ್ಸಿನಲ್ಲಿ ಕಟ್ಟಿದ. ಏಕೆಂದರೆ ಆಗ ಕಟ್ಟಡದ ಮುಂದುಗಡೆಯ ಗೋಡೆಗಳು ಒಂದು ಎತ್ತರಕ್ಕೆ ಮೀರಿರಬಾರದೆಂಬ ಕಾನೂನಿತ್ತು. 24ಮೀ ಉದ್ದ 12ಮೀ ಅಗಲದ ಹಜಾರದ ಮೇಲೆ ಮಾಡನ್ನು ನಿರ್ಮಿಸುತ್ತಿದ್ದುದೂ ಉಂಟು.



ಮ್ಯಾನ್‌ಸರ್ಡ್ ಚಾವಣಿ ಆಸರೆಕಟ್ಟು

ಸಂಯುಕ್ತ ಮಾಡುಗಳು : ಕಬ್ಬಿಣವನ್ನೂ ಮರವನ್ನೂ ಒಂದೇ ಚೌಕಟ್ಟಿನಲ್ಲಿ ಎಲ್ಲ ನಮೂನೆಯ ಕಟ್ಟಡಗಳಲ್ಲಿಯೂ ಸಮರ್ಪಕವಾದ ರೀತಿಯಲ್ಲಿ ಬಳಸಿದ್ದಾರೆ. ಇವುಗಳಲ್ಲಿ ಒತ್ತಡದಲ್ಲಿ ಸಿಕ್ಕಿರುವ ಗುಜ್ಜುಗಳನ್ನು ಮರದಿಂದಲೂ ಎಳೆತಕ್ಕೆ ಸಿಕ್ಕಿರುವ ದೂಲಗಳನ್ನು ಕಬ್ಬಿಣದಿಂದಲೂ ತಯಾರಿಸುತ್ತಾರೆ.

ಈಗ ಉಕ್ಕಿನಿಂದ ಸರಕಟ್ಟುಗಳನ್ನು (**ನೋಡಿ– ಆಸರೆಕಟ್ಟು**) ತಯಾರಿಸುವುದೇ ವಾಡಿಕೆ. ಇವನ್ನು ಜೋಡಿಸುವುದು ಸುಲಭ. ವಾಣಿಜ್ಯ ಕಟ್ಟಡಗಳಿಗಂತೂ ಈ ಮಾದರಿ ಬಹಳ ಚೆನ್ನಾಗಿ ಹೊಂದುತ್ತದೆ. ಲಕ್ಷಣವಾದ ನಾಟಕಶಾಲೆ, ನಗರ ಸಭಾಮಂದಿರ ಮೊದಲಾದ ಕಟ್ಟಡಗಳಲ್ಲೂ ಸರಕಟ್ಟುಗಳನ್ನು ವಾಡಿಕೆಯಾಗಿ ಬಳಸುತ್ತಾರೆ. ಮೊದಮೊದಲು ಒತ್ತಡದಲ್ಲಿ ಗುಜ್ಜುಗಳಿಗೆ T ಆಕಾರದ ತೊಲೆಯನ್ನೂ ಎಳೆತದಲ್ಲಿರುವ ದೂಲಗಳಿಗೆ ಗುಂಡಾದ ಇಲ್ಲವೆ ಚಪ್ಪಟೆಯಾದ ಕಬ್ಬಿಣದ ಕಂಬಿಗಳನ್ನೂ ಬಳಸುತ್ತಿದ್ದರು. ಈಗ ಎಲ್ಲ ಆಕಾರಗಳನ್ನೂ ಉಕ್ಕಿನ ಕೋನಗಳಿಂದ ರಚಿಸುವುದು ಎಲ್ಲೆಲ್ಲಿಯೂ ರೂಢಿಗೆ ಬಂದಿದೆ. ತೊಲೆ ಮತ್ತು ದೂಲಗಳನ್ನು ತಯಾರಿಸುವಾಗ ಎರಡು ಉಕ್ಕಿನ ಕೋನಗಳನ್ನು ಸೇರಿಸಿ ಅವುಗಳ ನಡುವೆ ಒಂಟಿ ಮೂಲೆ ಕಟ್ಟಿನ ಪಟ್ಟಿಗಳನ್ನು ರಿವೆಟ್ ಮಾಡುತ್ತಾರೆ.

**ಕಾರ್ಖಾನೆ ಚಾವಣಿಯ ಒಳನೋಟ. ಆಸರೆಕಟ್ಟುಗಳನ್ನೂ ಕಾಣಬಹುದು**

ಸರಕಟ್ಟುಗಳ ತಯಾರಿಕೆಯಲ್ಲಿ ಆಕಾರ ಮತ್ತು ತಪಶೀಲುಗಳು ಸರಳವಾಗಿರಬೇಕು. ಒಟ್ಟಿನಲ್ಲಿ ಅವು ತಮ್ಮ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸಬೇಕು. ಮಾಡಿನ ಅಗಲ ಹೆಚ್ಚಾಗಿದ್ದಾಗ ಜೋಡಿ ಕಾಲುವೆಗಳನ್ನು ಒತ್ತಡದಲ್ಲಿರುವ ಭಾಗಗಳಿಗೆ ಉಪಯೋಗಿಸಬಹುದು. ಆಸರೆಕಟ್ಟುಗಳ ಕೆಲವು ನಮೂನೆಗಳನ್ನು ಪುಟ 307ರಲ್ಲಿ ಕೊಟ್ಟಿದೆ.

ಕ್ವೀನ್‌ರಾಡ್ ಸರಕಟ್ಟಿನಲ್ಲಿ ದೂಲಗಳು ಲಂಬವಾಗಿವೆ. ಗುಜ್ಜುಗಳು ಓರೆಯಾಗಿವೆ. ಸರಕಟ್ಟಿನ ತೊಲೆಯಲ್ಲಿ ಗುಜ್ಜುಗಳು ತೊಲೆಗೆ ಸಮಕೋನವಾಗಿರುತ್ತವೆ. ಉಕ್ಕಿನ ಚೌಕಟ್ಟಿನಲ್ಲಿ, ಮಾರುಕಟ್ಟೆಯಲ್ಲಿ ಹೇರಳವಾಗಿ ದೊರಕುವ ಉಕ್ಕಿನ ಆಕಾರಗಳಿಂದ ಬೇಕಾದದ್ದನ್ನು ಆರಿಸಿಕೊಂಡು ಸರಕಟ್ಟನ್ನು ತಯಾರಿಸಬಹುದು.

ಮೋಟಾರ್ ಗ್ಯಾರೇಜುಗಳಲ್ಲಿಯೂ ನೇಯ್ಗೆಯ ಷೆಡ್ಡುಗಳಲ್ಲಿಯೂ ಒಳಗಡೆ ಯಾವ ಅಡಚಣೆಯೂ ಇಲ್ಲದ ವಿಶಾಲವಾದ ಜಾಗ ನೆಲದ ಮೇಲೆ ಬೇಕಾಗುತ್ತದೆ. ಅಂಥ ಕಡೆಗಳಲ್ಲಿ 45ಮೀ. ವರೆಗಿನ ಅಗಲದ ಅಂಕಣಗಳಲ್ಲಿ ಚಾಚುತೊಲೆಯ ಸರಕಟ್ಟುಗಳನ್ನು ಕಟ್ಟಿ, ಮಾಡಿನ ಪ್ರಧಾನವಾದ ಗರ್ಡರುಗಳನ್ನು ಚಾವಣಿಯ ಏಣಿನಲ್ಲಿ ಇರಿಸಿ ಅವುಗಳ ಎರಡು ಕಡೆಗಳಲ್ಲಿಯೂ ಚಾಚುತೊಲೆಗಳನ್ನು ಜೋಡಿಸುತ್ತಾರೆ. ಸರಕಟ್ಟುಗಳ ನಡುವೆ ನೀರಿನ ದೋಣಿಗಳಿರುತ್ತವೆ. ಗರ್ಡರುಗಳನ್ನು 10ಮೀ. ಅಂತರದಲ್ಲಿ ಇಟ್ಟರೆ 45ಮೀ ಉದ್ದ 10ಮೀ ಅಗಲದ ವಿಶಾಲವಾದ ಹಜಾರಗಳು ದೊರಕುತ್ತವೆ.

ಚಾವಣಿಯನ್ನು ಮುಚ್ಚುವ ಸಾಮಗ್ರಿಗಳು : 1. ಕೈ(ನಾಡ) ಹೆಂಚು, 2. ಮಂಗಳೂರು ಹೆಂಚು, 3. ಜಿಂಕ್ ಷೀಟುಗಳು, 4. ಕಲ್ನಾರು–ಸಿಮೆಂಟು ತಗಡುಗಳು, 5 ಸ್ಲೇಟುಗಳು, 6 ಚಪ್ಪಟೆಯಾದ ತಾರಸಿಗಳು.

1 ಹಳ್ಳಿಗಳಲ್ಲಿಯೂ ಸಣ್ಣ ಪಟ್ಟಣಗಳಲ್ಲಿಯೂ ಸಮಾಜದಲ್ಲಿ ಮಧ್ಯಮ ವರ್ಗದ ಜನರ ವಾಸದ ಮನೆಗಳಿಗೆ ಮಣ್ಣಿನಿಂದ ಊರಿನ ಕುಂಬಾರ ಮಾಡಿದ ಬೆಂಕಿಯಲ್ಲಿ ಹದವಾಗಿ ಸುಟ್ಟ ಕೈಹೆಂಚುಗಳನ್ನು (ಅಂದರೆ ದಂಬೆ ಹೆಂಚುಗಳನ್ನು) ಉಪಯೋಗಿಸುವುದು ಹಿಂದೆ ಬಳಕೆಯಲ್ಲಿತ್ತು. ಮಾಡಿನ ಮರದ ತೀರುಗಳನ್ನು ಬೆನ್ನುತೊಲೆಯಿಂದ ಕೆಳಗಿನವರೆಗೂ ಬೀಸಿ, ಅವುಗಳ ಮೇಲೆ ತೆಳುವಾದ ಗುಂಡು ಬಿದಿರುಗಳನ್ನು ಹತ್ತಿರ ಹತ್ತಿರವಾಗಿ ಜೋಡಿಸಿ ಮೇಲೆ ನಾಡಹೆಂಚುಗಳನ್ನು ಹೊದೆಸುತ್ತಿದ್ದರು. ಅನುಕೂಲವಿದ್ದವರು ಗುಂಡುಬಿದಿರುಗಳ ಬದಲು ಮರದ ಪಟ್ಟಿಗಳನ್ನು ಜೋಡಿಸುತ್ತಿದ್ದರು. ಈ ನಮೂನೆಗೆ ಇದ್ದ ತೊಂದರೆಯೆಂದರೆ ಮಂಗಗಳ ಹಾವಳಿ. ಅಂಥ ಕಡೆಗಳಲ್ಲಿ ಪ್ರತಿವರ್ಷವೂ ಮಳೆಗಾಲಕ್ಕೆ ಮುಂಚೆ ಮಾಡಿನ ಮೇಲೆ ಕೈಯಾಡಿಸಿ ಒಡೆದ ಹೆಂಚುಗಳನ್ನು ತೆಗೆದು ಹೊಸ ಹೆಂಚುಗಳನ್ನು ಜೋಡಿಸಬೇಕಾಗಿತ್ತು. ದಂಬೆ ಹೆಂಚುಗಳಿಗೂ ಕಾಸಿಲ್ಲದ ಬಡ ರೈತರ ಗುಡಿಸಲುಗಳಿಗೆ ಗದ್ದೆಯಲ್ಲಿ ಬೆಳೆದ ಬತ್ತದ ಹುಲ್ಲನ್ನು ಇಲ್ಲವೆ ಮುಳಿ ಹುಲ್ಲನ್ನು ಹೊದೆಸುತ್ತಿದ್ದರು. ಬಯಲುಸೀಮೆಯಲ್ಲಿ ರಾಗಿಯ ಹುಲ್ಲನ್ನು ಮುಚ್ಚುವುದುಂಟು. ಮಲೆನಾಡಿನಲ್ಲೂ ಕರಾವಳಿಯ ಪ್ರದೇಶಗಳಲ್ಲೂ ಅಡಿಕೆ ಮರದ ಸೋಗೆಗಳನ್ನು ಹೊದೆಸುವ ಕ್ರಮ ಬಳಕೆಯಲ್ಲಿದೆ.

2 ಮಂಗಳೂರಿನಲ್ಲಿ ಬಾಸೆಲ್ ಮಿಷನ್ನಿನವರು 1835ರಲ್ಲಿ ಹೆಂಚಿನ ಕಾರ್ಖಾನೆಯನ್ನು ಸ್ಥಾಪಿಸಿದ ಬಳಿಕ ಮನೆಗಳ ಮಾಡುಗಳಿಗೆ ಮಂಗಳೂರು ಹೆಂಚುಗಳನ್ನು ಹೊದೆಸುವುದು ಶ್ರೀಮಂತಿಕೆಯ ಲಕ್ಷಣವಾಯಿತು. ಮಳೆ ಹೆಚ್ಚಾದ ಕಡೆಗಳಲ್ಲಿ ಈಗಲೂ ಈ ಮಾದರಿ ಬಳಕೆಯಲ್ಲಿದೆ.

3 ಉಬ್ಬುತಗ್ಗಿನ (ಕಾರುಗೇಟಡ್) ಕಬ್ಬಿಣದ ತಗಡುಗಳನ್ನು ಕಾರ್ಖಾನೆಗಳು, ಮೋಟಾರು ಷೆಡ್ಡುಗಳು, ಕಾರ್ಮಿಕರ ವಾಸದ ಮನೆಗಳು, ಚಿತ್ರಮಂದಿರಗಳು–ಇವನ್ನು ಮುಚ್ಚಲು ವಿಶೇಷವಾಗಿ ಬಳಸುತ್ತಾರೆ. ಇವುಗಳಲ್ಲಿ ಕೆಲವು ಕಪ್ಪುಬಣ್ಣದ್ದಾಗಿರುತ್ತವೆ. ಆದರೆ ಕರಗಿ ನೀರಾದ ಸತುವಿನಲ್ಲಿ ಅದ್ದಿ ಬಿಳಿಯ ತಗಡುಗಳನ್ನು ಮಾಡುವುದೇ ರೂಢಿ. ಇವು ಬಹಳ ಹಗುರವಾಗಿರುವುದರಿಂದ ಇದರ ಮಾಡಿಗೆ ಹೆಚ್ಚಿನ ಮರದ ಆಧಾರ ಬೇಕಿಲ್ಲ. ಈಚೆಗೆ ಎಲ್ಲೆಲ್ಲಿಯೂ ಕೈಗಾರಿಕೆಗಳು ಬೆಳೆಯುತ್ತಿರುವಾಗ ಈ ಜಿಂಕ್‌ಷೀಟುಗಳ ಉಪಯೋಗ ದೊಡ್ಡ ಷೆಡ್ಡುಗಳ ರಚನೆಯಲ್ಲಿ ವಿಶೇಷವಾಗಿದೆ. ಇವುಗಳ ಉದ್ದ 1.6 ರಿಂದ 3.0ಮೀ ವರೆಗೂ ಅಗಲ 10.5–1ಮೀ–ವರೆಗೂ ವ್ಯತ್ಯಾಸವಾಗುತ್ತವೆ. ವ್ಯಾಪಾರಗಾರರು ಈ ತಗಡುಗಳಿಗೆ ಮಂದಕ್ಕೆ ಅನುಗುಣವಾಗಿ ಸಂಖ್ಯೆಗಳನ್ನು ಕೊಟ್ಟಿರುತ್ತಾರೆ. 16ನೆಯ ಸಂಖ್ಯೆಯ ತಗಡು ಬಹಳ ದಪ್ಪವಾದದ್ದು. ಬಲಿಷ್ಠವಾದ ಮಾಡು ಆವಶ್ಯಕವಾದಾಗ ಅದನ್ನು ಉಪಯೋಗಿಸುತ್ತಾರೆ. 18 ಮತ್ತು 20ನೆಯ ಸಂಖ್ಯೆಗಳ ತಗಡುಗಳನ್ನು ಸಾಧಾರಣವಾದ ಮಾಡುಗಳಲ್ಲಿಯೂ, 22ನೆಯ ಸಂಖ್ಯೆಯ ತಗಡನ್ನು ತಾತ್ಕಾಲಿಕವಾದ ಷೆಡ್ಡುಗಳಿಗೂ ಬಳಸುತ್ತಾರೆ. ಒಂದರ ಪಕ್ಕದಲ್ಲಿ ಇನ್ನೊಂದು ತಗಡನ್ನು ಮಾಡಿನಲ್ಲಿ ಕೂರಿಸುವಾಗ ಅವು ಅಗಲದಲ್ಲಿ ಒಂದು ಮಡಿಕೆಯಷ್ಟು ಸೇರಿರಬೇಕು. ಉದ್ದದಲ್ಲಿ ಕೊನೆಗಳಲ್ಲಿ 15 ಸೆಂಮೀ ಸೇರಿರಬೇಕು. ಒಂದು ತಗಡನ್ನು ಇನ್ನೊಂದಕ್ಕೆ ಜೋಡಿಸುವಾಗ ಗ್ಯಾಲ್ವನೀಕರಿಸಿದ ಬೋಲ್ಟುಗಳನ್ನು ತಾತ್ಕಾಲಿಕವಾದ ಕೆಲಸದಲ್ಲಿ ಉಪಯೋಗಿಸುತ್ತಾರೆ. ಆದರೆ ಪಕ್ಕಾ ಕೆಲಸದಲ್ಲಿ ತಗಡುಗಳನ್ನು ಗುಬ್ಬಿ ಮೊಳೆಗಳಿಂದ ಜೋಡಿಸಬೇಕು. ರಿವೆಟ್ಟುಗಳು ತಗಡಿನ ಉಬ್ಬಿನಲ್ಲಿರಬೇಕು. ತಗ್ಗಿನಲ್ಲಿದ್ದರೆ ನೀರು ಒಳಕ್ಕೆ ಸೋರುತ್ತದೆ. ತಗಡುಗಳನ್ನು ಮರದ ಚೌಕಟ್ಟಿನಲ್ಲಿ ಜೋಡಿಸುವಾಗಲೂ ಗುಮ್ಮಟದ ಆಕಾರದ ಬಿಗಿ ಬಿಲ್ಲೆಗಳುಳ್ಳ ಮೊಳೆಗಳನ್ನು ಉಪಯೋಗಿಸಬೇಕು. ಅಥವಾ ಗ್ಯಾಲ್ವನೀಕರಸಿದ ತಿರುಪಿನ ಮೊಳೆಗಳನ್ನು ಬಳಸಬೇಕು. ಉಕ್ಕಿನ ಚೌಕಟ್ಟುಗಳ ಮೇಲೆ ತಗಡುಗಳನ್ನು ಮುಚ್ಚುವಾಗ ಕೊಂಡಿಯ ಆಕಾರದ ಬೋಲ್ಟುಗಳನ್ನು ಉಪಯೋಗಿಸಬೇಕು. ಸೀಸದ ತಗಡುಗಳು ಗ್ಯಾಲ್ವನೀಕರಿಸಿದ ಕಬ್ಬಿಣದ ತಗಡುಗಳಿಗಿಂತ ತೂಕ ಜಾಸ್ತಿ. ಆದರೆ ಅವು ಹೆಚ್ಚಾಗಿ ಬಾಳಿಕೆ ಬರುತ್ತವೆ. ತಾಮ್ರದ ತಗಡುಗಳು ಹಗುರವಾಗಿರುತ್ತವಾದರೂ ಕಬ್ಬಿಣದ ತಗಡುಗಳಷ್ಟು ಬಲಿಷ್ಠವಾಗಿರದೆ ಇದ್ದರೂ ಅವುಗಳಿಗಿಂತ ಹೆಚ್ಚು ಬಾಳಿಕೆ ಬರುತ್ತವೆ.

ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಅಚ್ಚ ಕಬ್ಬಿಣದ ತಗಡುಗಳಿಗೆ ಕಾದ ತವರದ ಹೊದಿಕೆಯನ್ನು ಕೊಟ್ಟು ತಳದಲ್ಲಿ ಫೆಲ್ಟನ್ನಿಟ್ಟು ಜೋಡಿಸುತ್ತಾರೆ.

4 ಕಲ್ನಾರು ಸಿಮೆಂಟಿನ ತಗಡುಗಳು : ಈ ಶತಮಾನದಲ್ಲಿ ಕಲ್ನಾರು ಸಿಮೆಂಟಿನ ಹಾಳೆಗಳನ್ನು ಇಳಿಜಾರಿನ ಮಾಡುಗಳಿಗೆ ವಿಶೇಷವಾಗಿ ಬಳಸುತ್ತಾರೆ. ಇವನ್ನು ಕಾರ್ಖಾನೆಗಳಲ್ಲಿಯೇ ಅಲ್ಲದೆ ವಾಸದ ಮನೆಗಳಲ್ಲಿಯೂ ಉಪಯೋಗಿಸುವರು.

**ಕಾರ್ಖಾನೆಯೊಂದರ ಚಾವಣಿಯ ಹೊರನೋಟ**

ಸ್ಲೇಟುಗಳು: ದಕ್ಷಿಣ ಭಾರತದ ಕಡಪದ ಕಲ್ಲಿನ ಚಪ್ಪಡಿಗಳು ಈ ವರ್ಗಕ್ಕೆ ಸೇರಿದವು. ಇವು ಗಟ್ಟಿಯಾಗಿವೆ, ಚಪ್ಪಡಿಯ ಮೂಲಕ ನೀರು ಒಳಕ್ಕೆ ಇಳಿಯುವುದಿಲ್ಲ. ಇವುಗಳ ಬೆಲೆ ಕಡಿಮೆಯಾಗಿರುವುದರಿಂದ ಮನೆಗಳಲ್ಲಿ ನೆಲದ ಮೇಲೆ ಈ ಚಪ್ಪಡಿಗಳನ್ನು ಹಿಂದೆ ಹರಡುತ್ತಿದ್ದರು. (ಈಗ ಸಿಮೆಂಟ್ ಕಾಂಕ್ರೀಟನ್ನು ಹರಡುವುದು ಸಾಮಾನ್ಯವಾಗಿದೆ). ಸಾಕಷ್ಟು ಹತ್ತಿರವಾಗಿ ಮರದ ತೀರುಗಳನ್ನು ಎಳೆದು ಅವುಗಳ ಮೇಲೆ ಮಾಡಿಗೆ ಈ ಚಪ್ಪಡಿಗಳನ್ನು ನೀರು ಕೆಳಕ್ಕೆ ಇಳಿಯುವಷ್ಟು ಇಳಿಕಲಿನಲ್ಲಿ ಉಪಯೋಗಿಸಬಹುದು. ಇಳಿಜಾರಾದ ಮಾಡುಗಳಿಗೆ ಇವನ್ನು ಬಳಸಲಾಗುವುದಿಲ್ಲ.

ಮರದ ಚಾವಣಿಗಳು : ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿಯೂ ಕೆನಡದಲ್ಲಿಯೂ ಮರದ ಹಲಗೆಗಳನ್ನು ಹೆಂಚಿನ ಹಾಗೆ ಚಾವಣಿಗೆ ಹೊದೆಸುವುದು ರೂಢಿ. ಇವನ್ನು ಸೀಡರ್ ಇಲ್ಲವೆ ಸೈಪ್ರಸ್ ಮರದಿಂದ 0.3 ರಿಂದ 0.6ಮೀ ಉದ್ದವಾಗಿಯೂ 0.30ಮೀ ಅಗಲವಾಗಿಯೂ ತಯಾರಿಸುತ್ತಾರೆ. ಈ ಮಾದರಿಗೆ ಬೆಂಕಿಯ ಅಪಾಯ ತಪ್ಪಿದ್ದಲ್ಲವಾದ್ದರಿಂದ ಇವುಗಳ ಉಪಯೋಗ ಈಚೆಗೆ ಕಡಿಮೆಯಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಇವುಗಳ ಬಳಕೆಯನ್ನು ನಿಷೇಧಿಸಿದ್ದಾರೆ.

ವಾಯುವಿನ ಒತ್ತಡ : ಮಾಡುಗಳು 20°ಗಳಿಗಿಂತ ಹೆಚ್ಚಿನ ಇಳಿಕಲಿನಲ್ಲಿದ್ದರೆ ಒಂದು ಚದರಡಿಯ ಮೇಲೆ 28 ಪೌಂಡುಗಳ ವಾಯುವಿನ ಒತ್ತಡವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಚಪ್ಪಟೆಯಾದ ಮಾಡುಗಳು ಮಾಡಿನ ತೂಕವನ್ನಲ್ಲದೆ ಚದರ ಅಡಿಗೆ 56 ಪೌಂಡುಗಳ ವಾಯು ಒತ್ತಡವನ್ನು ತಡೆಯುವಂತೆ ಕೂಡ ಇರಬೇಕು. ಈ ಆಧಾರದ ಮೇಲೆ ಮಾಡಿನ ಸಾಮಗ್ರಿಯ ತೂಕವನ್ನೂ ಅದರ ಮೇಲಿನ ವಾಯು ಒತ್ತಡವನ್ನೂ ಪ್ರತ್ಯೇಕವಾಗಿ ಲೆಕ್ಕ ಹಾಕಬೇಕು.

ದೊಡ್ಡ ನಗರಗಳಲ್ಲಿ ಅಭದ್ರವಾದ ಮಾಡುಗಳು ಬಿದ್ದು ಜನಕ್ಕೆ ತೊಂದರೆಯಾಗದ ಹಾಗೆ ಕಟ್ಟಡಗಳ ನಿಯಮಗಳನ್ನು ರಚಿಸಿರುತ್ತಾರೆ. ಅವುಗಳ ಪ್ರಕಾರ ಪ್ರತಿಯೊಂದು ಮನೆಗೂ ಹೆಂಚು, ತಾರಸಿ, ಫಲಕ, ಲೋಹ ಮೊದಲಾದ ಅಗ್ನಿನಿರೋಧಕ ಸಾಮಗ್ರಿಗಳನ್ನೇ ಉಪಯೋಗಿಸಬೇಕು. ಕಾರ್ನಿಸುಗಳನ್ನೂ ಮಾಡಿನ ಕೊನೆಯ ಅಲಂಕಾರದ ಹಲಗೆಯನ್ನೂ ಮರದಿಂದ ತಯಾರಿಸಬಹುದು. ಮನೆಯಲ್ಲಾಗಲಿ ಕಾರ್ಖಾನೆಯಲ್ಲಾಗಲಿ ಮಾಡು 9ಮೀ ಗಳಿಗಿಂತ ಎತ್ತರವಾಗಿದ್ದರೆ ಮೇಲಕ್ಕೆ ಸಮಯ ಬಂದಾಗ ಹೋಗುವ ಅವಕಾಶವಿರಬೇಕು. ಗಡಂಗುಗಳ ಮಾಡಿನ ಇಳಿಕಲು ಒಂದು ಮೀ. ಮಟ್ಟಕ್ಕೆ ಒಂದು ಮೀಟರು ಲಂಬಕ್ಕಿಂತ ಹೆಚ್ಚು ಇರಬಾರದು. ಗೋಪುರಗಳು ಮಾತ್ರ ಇನ್ನೂ ಹೆಚ್ಚಾದ ಇಳಿಜಾರಿನಲ್ಲಿರಬಹುದು. ಮನೆಗಳ ಮಾಡುಗಳು 18ಮೀ ಗಳಿಗಿಂತ ಎತ್ತರವಾಗಿದ್ದರೆ ಬೆಂಕಿ ಬಿದ್ದರೆ ಹೊತ್ತದೆ ಇರುವ ಸಾಮಗ್ರಿಗಳಿಂದಲೇ ಮಾಡನ್ನು ಕಟ್ಟಬೇಕು. ಅಕಸ್ಮಾತ್ ಬೆಂಕಿಯೇನಾದರೂ ಬಿದ್ದರೆ ಒಳಗಿರುವ ಜನರು ಬೇಗ ಕೆಳಕ್ಕೆ ಇಳಿದು ಹೊರಕ್ಕೆ ಹೋಗುವ ಅವಕಾಶವಿರಬೇಕು.

ಆರ್.ಸಿ.ಸಿ. ಚಾವಣಿ

ನ್ಯೂಯಾರ್ಕ್ ನಗರದಲ್ಲಿ ಮನೆಗೆ ಮೂರು ಮಹಡಿಗಳಿದ್ದು, ಒಟ್ಟು ಎತ್ತರ 12ಮೀ ಮೀರಿದ್ದು ಮಾಡು 60°ಗಿಂತ ಹೆಚ್ಚಿನ ಇಳಿಜಾರಿನಲ್ಲಿದ್ದರೆ ಅದನ್ನು ಕಬ್ಬಿಣದ ತೀರುಗಳಿಂದಲೇ ಕಟ್ಟಬೇಕು. ಒಳಗಡೆ ಕಬ್ಬಿಣ ಇಲ್ಲವೆ ಉಕ್ಕಿನ ಅಂಚಿದ್ದು ಬೆಂಕಿಯಲ್ಲಿ ಸುಡದ ಸಾಮಗ್ರಿಯನ್ನು 75ಮಿಮೀ ಮುಂದಕ್ಕೆ ತುಂಬಬೇಕು. ಅದರ ಮೇಲೆ ಮಾಡಿನ ಹೆಂಚನ್ನೋ ಫಲಕವನ್ನೋ ಹೊದೆಸಬಹುದು.

ಹೊಸ ಕಟ್ಟಡದ ಮಾಡು : ಒಂದು ಹೊಸ ಕಟ್ಟಡಕ್ಕೆ ಮಾಡನ್ನು ನಿರ್ಣಯಿಸುವಾಗ ಅದರ ಅಗಲ, ತೂಕ, ಕೆಳಭಾಗದ ಸೌಂದರ್ಯ, ತಗಲುವ ಖರ್ಚು, ವರ್ಷ ವರ್ಷವೂ ದುರಸ್ತು ಮಾಡುವ ಸೌಲಭ್ಯ ಇವನ್ನು ಗಮನದಲ್ಲಿಡಬೇಕು.

ಮರ, ಹೆಂಚು, ಫಲಕ, ಕಲ್ನಾರು-ಸಿಮೆಂಟು ಇವುಗಳಿಂದ ನಿರ್ಮಿಸಿದ ಮಾಡಿನ ಇಳಿಕಲು 2। ಮಟ್ಟಕ್ಕೆ 1। ಲಂಬಕ್ಕಿಂತ ಕಡಿಮೆಯಿರಬಾರದು. ಇಳಿಜಾರಾದ ಮಾಡುಗಳಿಗೆ ಮರ ಇಲ್ಲವೆ ಕಬ್ಬಿಣದ ಚೌಕಟ್ಟುಗಳನ್ನು ಉಪಯೋಗಿಸಬಹುದು. ಮಾಡಿನ ಅಟ್ಟಕ್ಕೆ ಉದ್ದ ಸರಗಳಿಂದ ಇಲ್ಲವೆ ತೀರುಗಳಿಂದ ಆಧಾರವನ್ನು ಕೊಡಬೇಕು. ತೀರುಗಳ ಕೆಳಗಿನ ಕೊನೆಗಳು ಗೋಡೆಯ ಮೇಲೆ ಇಟ್ಟಿರುವ ಮರದ ಜಂತಿಯ ಮೇಲೆ ಕೂರುತ್ತವೆ. ಉದ್ದ ಸರದ ಕೊನೆಗಳು ಮಾಡಿನ ಸರಕಟ್ಟಿನ ಮೇಲೆ ನಿಂತಿರುತ್ತವೆ. ಚಪ್ಪಟೆಯಾದ ಮಾಡು ಗೋಡೆಯಿಂದ ಗೋಡೆಗೆ ಹಾಕಿದ ಉಕ್ಕು ಇಲ್ಲವೆ ಮರದ ದೂಲಗಳ ಮೇಲೆ ನಿಲ್ಲಿಸಿದ ಅಟ್ಟದ ಹಾಗಿರುತ್ತದೆ.

ತೆಳುವಾದ ಕವಚದ ಮಾಡು ಒಂದು ಬಿಗಿಯಾದ ಮತ್ತು ಬಾಗಿದ ಪೊರೆ. ಅದು ಹೊರಗಿನಿಂದ ಬರುವ ರಭಸವನ್ನು ಎಳೆತದ ಮತ್ತು ಕುಗ್ಗುವ ಒತ್ತಡಗಳ ಮೂಲಕ ಎದುರಿಸುತ್ತದೆ.

ಕಟ್ಟಡಗಳಲ್ಲಿ ಉಪಯೋಗಿಸುವ ಕವಚಗಳು ಮೂರು ಬಗೆಯಾಗಿವೆ: 1 ಗೋಳಾಕಾರ-ಗುಮ್ಮಟ, 2 ಪೀಪಾಯಿಯ ಆಕಾರ, 3 ಪರವಲಯಕಲ್ಪ (ಪ್ಯರಬೊಲಾಯಿಡ್).

ತೆಳುವಾದ ಕವಚದ ರಚನೆಗೆ ಅತಿಪರವಲಯಕ ಪರವಲಯಕಲ್ಪದ (ಹೈಪರ್ಬಾಲಿಕ್ ಪ್ಯರಬೊಲಾಯಿಡ್) ಆಕೃತಿ ಚೆನ್ನಾಗಿ ಹೊಂದುತ್ತದೆ. ಆದರೆ ಅದರ ಹೊರ ಮೈಯನ್ನು ಸರಳ ರೇಖೆಗಳಿಂದ ಮಾಡಿರಬೇಕು. ಒಂದನ್ನೊಂದು ಕತ್ತರಿಸುವ ಈ ಆಕೃತಿಗಳನ್ನೂ ಈ ಆಕೃತಿಗಳ ಖಂಡಗಳನ್ನೂ ಜೋಡಿಸಿ ಒಂದೇ ಆಧಾರದಿಂದ ಚಾಚುತೊಲೆಗಳ ಹಾಗೆ ನೂಕಿದರೆ ಈ ರಮ್ಯವಾದ ಸಂವಿಧಾನದ ಎರಡು ಮಾದರಿಗಳು ದೊರೆಯುತ್ತವೆ.

ಉಬ್ಬು ತಗ್ಗುಗಳಿರುವ ಅಥವಾ ಪಕ್ಕಗಳೂ ಕೊನೆಗಳೂ ಬಾಗಿರುವ ಚಾವಣಿ ಮತ್ತು ಮಡಚಿದ ಅಥವಾ ತಗಡಿನ ಚಾವಣಿ-ಇವು ವಕ್ರಾಕಾರವಾಗಿಲ್ಲದೆ ಇರುವುದರಿಂದ ಕವಚಗಳಲ್ಲ. ಆದರೂ ಈ ಕಟ್ಟಡದ ಮಾದರಿಗಳಿಂದ ವಿಶಾಲವಾದ ಭಾಗಗಳಿಗೆ ತೆಳುವಾದ ಉಕ್ಕಿನ ರಚನೆಗಳಿಂದ ಮಾಡನ್ನು ಕಟ್ಟಬಹುದು.

ಮಾಡಿನ ಮೇಲೆ ಬರುವ ತ್ರಾಸ: ಮಾಡಿನ ಪ್ರತಿಯೊಂದು ಭಾಗವನ್ನೂ ಅದರ ಮೇಲೆ ಬರುವ ಗರಿಷ್ಠ ತ್ರಾಸವನ್ನು ತಡೆದುಕೊಳ್ಳುವಂತೆ ಸಂವಿಧಾನ ಮಾಡಬೇಕು. ಇದಕ್ಕಾಗಿ ಮೇಲೆ ಬರುವ ತೂಕದ ಗಾತ್ರ ಮತ್ತು ಸ್ಥಾನವನ್ನು ತಿಳಿದಿರಬೇಕು. ವಾಯುವಿನ ತೂಕ ಮಾಡಿನ ಇಳುಕಲಿಗೆ ಅನುಗುಣವಾಗಿರುತ್ತದೆ.

ಗುಮ್ಮಟದ ಆಕಾರದ ಮಾಡುಗಳು : ಮರದ ತೊಲೆಗಳಿಂದ ಚೌಕಟ್ಟನ್ನು ಮಾಡಿ ಸಣ್ಣ ಗುಮ್ಮಟಗಳನ್ನು ಕಟ್ಟಬಹುದು. ಆದರೆ ದೊಡ್ಡ ಗುಮ್ಮಟಗಳನ್ನು ಉಕ್ಕಿನ ಚೌಕಟ್ಟಿನಿಂದ ಇಲ್ಲವೆ ಪ್ರಬಲಿತ ಕಾಂಕ್ರೀಟಿನಿಂದ ಕಟ್ಟಬೇಕಾಗುತ್ತದೆ. ಲಂಡನ್ನಿನ ಸೇಂಟ್ ಪಾಲ್ ಕೆಥೀಡ್ರಲ್ಲಿನ ಹೊರಗಿನ ಗುಮ್ಮಟವನ್ನು ಒಳಗಿನ ಇಟ್ಟಿಗೆಯ ಗುಮ್ಮಟದ ಮೇಲೆ ಎತ್ತಿದ ಶಂಕುವಿನ ಆಕಾರದ ಇಟ್ಟಿಗೆಯ ಕಟ್ಟಡದ ಆಧಾರದ ಮೇಲೆ ಸೀಸದಿಂದ ಮೇಲುಗಡೆ ಮುಚ್ಚಿದ ಮರದಿಂದ ಕಟ್ಟಿದ್ದಾರೆ.

ಈಗ ಪ್ರಬಲಿತ ಕಾಂಕ್ರೀಟು, ಗುಮ್ಮಟಗಳ ರಚನೆಗೆ ಹೇಳಿಸಿದ ಸಾಮಗ್ರಿಯಾಗಿದೆ. ಈಚೆಗೆ ವೆಸ್ಟ್ ಮಿನ್‌ಸ್ಟರಿನಲ್ಲಿ ಒಂದು ಇಗರ್ಜಿಗೆ ಪ್ರಬಲಿತ ಕಾಂಕ್ರೀಟಿನ ಕಮಾನು ಚಾವಣಿಯನ್ನು ಉಪಯೋಗಿಸಿದ್ದಾರೆ. ಅದರ ವ್ಯಾಸ 18ಮೀ. ಚಿಮ್ಮುವ ಕಡೆ ಕಮಾನಿನ ಮಂದ 0.90ಮೀ. ಇದ್ದು ನೆತ್ತಿಯಲ್ಲಿ $32\frac{1}{2}$ ಸೆಂಮಿಗೆ ಇಳಿಯುತ್ತದೆ. ಗುಮ್ಮಟವನ್ನು ಮೇಲುಗಡೆ 7.5 ಸೆಂಮೀ ಮಂದದ ಕೃತಕವಾದ ಕಲ್ಲಿನ ಚಪ್ಪಡಿಗಳಿಂದ ಮುಚ್ಚಿದೆ. ಚಪ್ಪಡಿಗಳು ಕಮಾನಿನ ಮೇಲೆ 12.5ಸೆಂ.ಮೀ ಆಳದ ಅರೀಯ ಬೆನ್ನುಪಟ್ಟಿಗಳ ಮೇಲೆ ನಿಂತಿರುವುದರಿಂದ ಬೆನ್ನುಪಟ್ಟಿಗಳಿಗೂ ಚಪ್ಪಡಿಗಳಿಗೂ ಮಧ್ಯೆ 5 ಸೆಂ.ಮೀ ವಾಯು ಆಡುವ ಜಾಗವಿದೆ. ಈ ಉಪಾಯದಿಂದ ಒಳಗಡೆಯ ಉಷ್ಣತೆ ಒಂದೇ ಸಮವಾಗಿರುತ್ತದೆ. ಈ ಗುಮ್ಮಟದ ಕೆಳಗಿನ ಆರಾಧನಾ ಮಂದಿರದ ಮೇಲುಗಡೆ ಮತ್ತೊಂದು ಸಣ್ಣ ಗುಮ್ಮಟವಿದೆ.

(ಎಚ್.ಸಿ.ಕೆ.)

**ಚಾವುಂಡರಾಯ**[1] : ಸು. 978. ಶ್ರವಣಬೆಳ್ಗೊಳದ ಪ್ರಸಿದ್ಧ ಗೊಮ್ಮಟ ವಿಗ್ರಹವನ್ನು ಪ್ರತಿಷ್ಠಾಪಿಸಿ ಕೀರ್ತಿಪಡೆದವ; ಚಾವುಂಡರಾಯಪುರಾಣವೆಂದು ಹೆಸರಾಗಿರುವ ತ್ರಿಷಷ್ಟಿಲಕ್ಷಣಮಹಾಪುರಾಣವೆಂಬ ಮಹಾಪುರಾಣವನ್ನು ಗದ್ಯದಲ್ಲಿ ರಚಿಸಿದವ. ಈತ ಪಶ್ಚಿಮ ಗಂಗವಂಶದ ರಾಜರಾದ ಮಾರಸಿಂಹ II (961-74) ಮತ್ತು ರಾಚಮಲ್ಲ IV (974-77) ಇವರಲ್ಲಿ ಯೋಧಾಗ್ರಣಿಯೂ ಮಂತ್ರಿಯೂ ಆಗಿದ್ದವ. ಈತನನ್ನು ಚಾಮುಂಡರಾಯ (ನಮಿ ತೀರ್ಥಂಕರನ ಯಕ್ಷಿಯಾದ ಚಾಮುಂಡಿ ಎಂಬುದರಿಂದ ಬಂದಿರಬೇಕು) ಎಂದೂ ಕರೆಯಲಾಗಿದೆ. ಗೊಮ್ಮಟ ಈತನ ಇನ್ನೊಂದು ಹೆಸರು. ಇದರಿಂದಾಗಿಯೇ ಈತ ಕಡೆಸಿದ ಬಾಹುಬಲಿ ಮೂರ್ತಿಯನ್ನು ಗೊಮ್ಮಟೇಶ್ವರ ಎಂದು ಕರೆಯಲಾಗಿದೆ.

ಈತ ಜೈನ, ಬ್ರಹ್ಮ ಕ್ಷತ್ರಕುಲೋತ್ಪನ್ನನೆಂದು ತಾನೇ ಹೇಳಿಕೊಂಡಿದ್ದಾನೆ. ತಂದೆತಾಯಿಗಳ ವಿಚಾರ ತಿಳಿಯದು. ಈತನಿಗೆ ಜಿನದೇವಣ ಎಂಬ ಮಗನಿದ್ದನೆಂಬ ಅಂಶಕ್ಕೆ ಶಾಸನಾಧಾರವಿದೆ. ಅಜಿತಸೇನಾಚಾರ್ಯ ಮತ್ತು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಈತನ ಗುರುಗಳು. ಈತ ಇಮ್ಮಡಿ ಮಾರಸಿಂಹನ ಸಹಪಾಠಿಯಾಗಿ ಮುಂದೆ ಆತನ ನೆಚ್ಚಿನ ಸೇನಾನಿಯಾಗಿ ಅವನ ಪರವಾಗಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ ವಿಷಯ ಚಾವುಂಡರಾಯಪುರಾಣದಲ್ಲಿ ಬರುವ ಉಲ್ಲೇಖಗಳಿಂದಲೂ ಶ್ರವಣಬೆಳ್ಗೊಳದ ಒಂದು ಶಾಸನದಿಂದಲೂ ಅನಂತರ ಪಟ್ಟಕ್ಕೆ ಬಂದ ನಾಲ್ವಡಿ ರಾಚಮಲ್ಲನಲ್ಲಿ ಮಂತ್ರಿಯಾಗಿದ್ದನೆಂದು 'ಸ್ಥಿರ ಜಿನಶಾಸನೋದ್ಧರಣರಾದಿಯೊಳಾರನೆ ರಾಚಮಲ್ಲ ಭೂವರ ವರಮಂತ್ರಿ ರಾಯನೆ...' ಎಂಬ ಶಾಸನವಾಕ್ಯದಿಂದಲೂ ತಿಳಿದುಬರುತ್ತದೆ. ಈತನಿಗೆ ಗುಣರತ್ನಭೂಷಣಂ,

ಕವಿಜನಶೇಖರಂ ಎಂಬ ಬಿರುದುಗಳಲ್ಲದೆ ಸಮರಧುರಂಧರ, ವೀರಮಾರ್ತಾಂಡ, ರಣರಂಗಸಿಂಗ, ವೈರಿಕುಲಕಾಲ ದಂಡ, ಭುಜವಿಕ್ರಮ, ಚಲದಂಕರಂಗ, ಸಮರ ಪರಶುರಾಮ, ಪ್ರತಿಪಕ್ಷರಾಕ್ಷಸ, ಭಟಮಾರಿ, ಸುಭಟಚೂಡಾಮಣಿ–ಎಂಬ ಶೌರ್ಯಮೂಲವಾದ ಬಿರುದುಗಳಿದ್ದಂತೆ ತಿಳಿದುಬರುತ್ತದೆ. ಇವು ಈತನ ಕಲಿತನಕ್ಕೆ ಸಾಕ್ಷಿಯಾಗಿವೆ.

ತ್ರಿಷಷ್ಟಿಲಕ್ಷಣ ಮಹಾಪುರಾಣ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟಸ್ಥಾನ ಪಡೆದಿದೆ. ಪ್ರಾಚೀನ ಗದ್ಯಗ್ರಂಥಗಳಲ್ಲಿ ಒಂದು ಎಂಬುದರ ಮೇಲೂ ಇದರ ಹಿರಿಮೆ ನಿಂತಿದೆ. ವಡ್ಡಾರಾಧನೆ ದೊರೆತು ಪ್ರಕಟವಾಗುವ ಮೊದಲು ಕನ್ನಡ ಸಾಹಿತ್ಯದ ಪ್ರಥಮ ಗದ್ಯಕೃತಿ ಎಂದು ಇದು ಮನ್ನಣೆ ಪಡೆದಿತ್ತು. ಇದರ ಕರ್ತೃತ್ವದ ಬಗ್ಗೆ ಸಂದೇಹವೂ ಇದೆ. ಇದರಲ್ಲಿ ರನ್ನನ ಕೈವಾಡವಿದೆಯೆಂದು ಕೆಲವಿದ್ವಾಂಸರ ಅಭಿಪ್ರಾಯ. ಜೈನಧರ್ಮಕ್ಕೆ ಸಂಬಂಧಿಸಿದ ಈ ಮಹಾಪುರಾಣ ರಚನೆಯಲ್ಲಿ ಜಿನಸೇನಾಚಾರ್ಯ, ಗುಣಭದ್ರಾಚಾರ್ಯರ ಮಹಾಪುರಾಣವನ್ನು ಅವಲಂಬಿಸಿ ಅನುಸರಿಸಲಾಗಿದೆ. ಶಲಾಕಾಪುರುಷರಾದ ತೀರ್ಥಂಕರರು 24, ಚಕ್ರವರ್ತಿಗಳು 12, ಬಲದೇವರು 9, ವಾಸುದೇವರು 9, ಪ್ರತಿವಾಸುದೇವರು 9– ಹೀಗೆ 63 ಜನರ ಚರಿತ್ರೆಯೇ ಮಹಾಪುರಾಣದ ವಸ್ತು. ಈತ ಮೂಲವನ್ನು ಬಳಸಿಕೊಳ್ಳುವಾಗ ಅತ್ಯಾವಶ್ಯಕವಾದ ತೀರ್ಥಂಕರಾದಿ ಮಹಾಪುರುಷಸಂಬಂಧವಾದ ಕಥಾಸಾರವನ್ನು ಉಳಿಸಿಕೊಂಡು ಅನುಪಯುಕ್ತವಾದ ಕಥಾವಿವರಣೆಗಳನ್ನೂ ವರ್ಣನೆಗಳನ್ನೂ ವ್ಯಕ್ತಿ–ಗುಣ–ವಸ್ತು ವಿಶೇಷಣಾದಿಗಳನ್ನೂ ಅಲಂಕಾರ ವೈಚಿತ್ರ್ಯಗಳನ್ನೂ ನೀತಿಪರವಾಕ್ಯಗಳನ್ನೂ ಧಾರ್ಮಿಕ ಪ್ರಕ್ರಿಯಾವಿವರಗಳನ್ನೂ ಪಾರಿಭಾಷಿಕ ಪದಸಮುಚ್ಚಯಗಳನ್ನೂ ಬಹುಮಟ್ಟಿಗೆ ಬಿಟ್ಟಿದ್ದಾನೆ. ಈತನ ಸಂಗ್ರಾಹಕತೆ ಎಷ್ಟೆಂದರೆ ಆದಿಪುರಾಣದ ಚಕ್ರವರ್ತಿಚರಿತದಲ್ಲಿ ಪ್ರಸಿದ್ಧರಾಗಿರುವ ಭರತ ಬಾಹುಬಲಿಗಳ ವ್ಯಾಯೋಗ ಪ್ರಸಂಗವನ್ನು ಜಿನಸೇನರು ಪೂರ್ಣಪುರಾಣದಲ್ಲಿ ಎರಡೂವರೆ ಪರ್ವಗಳಷ್ಟು ವಿಸ್ತಾರದಲ್ಲೂ ಪಂಪಕವಿ 133 ಪದ್ಯಗಳಲ್ಲೂ ಹೇಳಿದ್ದರೆ ಚಾವುಂಡರಾಯ ಕೇವಲ 27 ಸಾಲುಗಳಲ್ಲಿ ಸಂಕ್ಷಿಪ್ತವಾಗಿ ಅಡಕಗೊಳಿಸಿದ್ದಾನೆ. ಇಂಥ ನಿದರ್ಶನಗಳಿಂದ ಚಾವುಂಡರಾಯ ಕುಶಲಸಂಗ್ರಾಹಕನೆಂದು ಒಪ್ಪಿಕೊಳ್ಳದಿದ್ದರೂ ನಿಷ್ಠುರ ಸಂಗ್ರಾಹಕನೆನ್ನದೆ ವಿಧಿಯಿಲ್ಲ. ಈ ಸಂಗ್ರಾಹಕತೆಯಿಂದಾಗಿ ತೀರ್ಥಂಕರ ಚರಿತ್ರೆಗಳಲ್ಲಿ ಮನಸೆಳೆಯುವ ಕಥಾಂಶ, ವಿವರಗಳು ಇಲ್ಲ. ತೀರ್ಥಂಕರ ಚರಿತ್ರೆಯ ಮುಖ್ಯಾಂಶಗಳನ್ನು ಮೂಲಕ್ಕೆ ಚ್ಯುತಿಬಾರದಂತೆ ಸಂಕ್ಷೇಪಿಸಿ ಜೈನಧರ್ಮದ ಬಗ್ಗೆ ಜೈನರಲ್ಲಿ ಶ್ರದ್ಧಾಸಕ್ತಿ ಬೆಳೆಯುವಂತೆ ಮಾಡಿರುವುದು ಇಲ್ಲಿನ ಒಂದು ಸಾಧನೆ.

ತ್ಯಾಗದ ಬ್ರಹ್ಮದೇವರ ಕಂಬದ ಮೇಲಿರುವ ಚಾವುಂಡರಾಯನ ಮೂರ್ತಿ

ಭಾರತದಲ್ಲಿ ಮಹಾಪುರಾಣ ತುಂಬ ಪುರಾತನವಾದುದಾದರೂ ಕನ್ನಡಕ್ಕೆ ಮೊದಲ ಬಾರಿಗೆ ಅದನ್ನು ತಂದವ ಚಾವುಂಡರಾಯನೇ. ಕನ್ನಡದಲ್ಲಿ ತ್ರಿಷಷ್ಟಿ ಶಲಾಕಾಪುರುಷರ ಚರಿತ್ರೆಯನ್ನು ಕುರಿತು ಮಹಾಪುರಾಣ ಇದೇ ಎನ್ನುವುದರಿಂದಲೂ ಕನ್ನಡದಲ್ಲಿ ಜೈನಪರಂಪರೆಯ ರಾಮಾಯಣ, ಭಾರತ, ಭಾಗವತ ಕಥೆಗಳಿಗೆ ಪ್ರಥಮ ಆಕರಗ್ರಂಥವಾಗಿರುವುದರಿಂದಲೂ ಈ ಗ್ರಂಥಕ್ಕೆ ಪ್ರಾಶಸ್ತ್ಯ ಬಂದಿದೆ. ಸಾಮಾನ್ಯವಾಗಿ ಬೇರೆ ಗ್ರಂಥಗಳಲ್ಲಿ ದೊರಕದ, ಸಂಸ್ಕೃತ ಮಹಾಪುರಾಣಗಳ ಕವಿಪರಂಪರೆಯನ್ನು ಚಾವುಂಡರಾಯ ಸ್ಪಷ್ಟವಾಗಿ ಹೇಳಿದ್ದಾನೆ, ಈ ದೃಷ್ಟಿಯಿಂದಲೂ ಜೈನಸಾಹಿತ್ಯದಲ್ಲಿ ಚಾವುಂಡರಾಯಪುರಾಣ ಅಧಿಕೃತ ದಾಖಲೆಯಾಗಿ ನಿಲ್ಲುತ್ತದೆ. ತ್ರಿಷಷ್ಟಿಲಕ್ಷಣ ಮಹಾಪುರಾಣವನ್ನು 978ರಲ್ಲಿ ರಚಿಸಿದುದಾಗಿ ಕವಿಯೇ ಹೇಳಿಕೊಂಡಿದ್ದಾನೆ. ಗದ್ಯದಲ್ಲಿಯೇ ರಚಿತವಾದ ಈ ಗ್ರಂಥದ ಆದಿ, ಅಂತ್ಯ ಹಾಗೂ ಕಥೆಗಳ ಮಧ್ಯದಲ್ಲಿ ಅಲ್ಲಲ್ಲಿ ಪದ್ಯಗಳೂ ಉಂಟು. ಜಿನಸೇನಾಚಾರ್ಯ, ಗುಣಭದ್ರಾಚಾರ್ಯರ ಮಹಾಪುರಾಣವನ್ನೇ ಅನುಸರಿಸಿ ಈತ ತನ್ನ ಗ್ರಂಥವನ್ನು ರಚಿಸಿದ್ದರೂ ಈತ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಹಿಂದೆ ರಚಿತವಾದ ಇತರ ಮಹಾಪುರಾಣಗಳಿಂದಲೂ ಪ್ರಭಾವಿತನಾಗಿರುವುದಕ್ಕೆ ಇಲ್ಲಿ ಕಂಡುಬರುವ ಅನೇಕ ಬದಲಾವಣೆಗಳು ಸಾಕ್ಷಿಯಾಗಿವೆ. ಇದಲ್ಲದೆ ಈತ ತನ್ನ ಗುರು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಬರೆದ ಗೊಮ್ಮಟಸಾರಕ್ಕೆ ವೀರಮತ್ತಂಡೀ (ವೀರಮಾರ್ತಂಡೀ) ಎಂಬ ದೇಸೀವೃತ್ತಿಯನ್ನೂ (ಬಹುಶಃ ಕನ್ನಡ) ಬರೆದಂತೆ ಹೇಳಲಾಗಿದೆ. ಆದರೆ ಆ ಗ್ರಂಥ ಉಪಲಬ್ಧವಿಲ್ಲ.

ಚಾವುಂಡರಾಯನ ಹೆಸರು ಶಾಶ್ವತವಾಗಿ ನಿಂತಿರುವುದು ಆತ ಶ್ರವಣಬೆಳಗೊಳದ ಇಂದ್ರಗಿರಿಯ ಮೇಲೆ ಕೆತ್ತಿಸಿದ ಬಾಹುಬಲಿ ವಿಗ್ರಹದಿಂದ. ಬಾಹುಬಲಿಮೂರ್ತಿಯ ಬಲಭಾಗದ ಪಾದಗಳ ಬಳಿಯ 'ಶ್ರೀ ಚಾಮುಣ್ಡರಾಜಂ ಮಾಡಿಸಿದಂ' ಎನ್ನುವ ಶಾಸನದಿಂದಲೂ ತಮಿಳು ಮತ್ತು ಮರಾಠಿ ಭಾಷೆಯ ಅದೇ ಅರ್ಥದ ವಾಕ್ಯಗಳು ಬರುವುದರಿಂದಲೂ ವಿಗ್ರಹವನ್ನು ಕಡೆಸಿದ್ದು ಈತನೇ ಎನ್ನುವುದು ಖಚಿತವಾಗುತ್ತದೆ. ಈ ಮೂರ್ತಿಯ ಸ್ಥಾಪನೆ ಬಹುಶಃ 983ರಲ್ಲಿ ಆಯಿತೆಂದು ಹೇಳಲಾಗಿದೆ. ಬೊಪ್ಪಣಪಂಡಿತನ ಗೊಮ್ಮಟ ಜಿನೇಂದ್ರ ಗುಣಸ್ತವ ಶಾಸನದಲ್ಲಿ ಚಾವುಂಡರಾಯ ಈ ಮೂರ್ತಿಯನ್ನು ಸ್ಥಾಪಿಸಿದ ವಿವರ ಬಂದಿದೆ. ಭರತ ಪೌದನಪುರದಲ್ಲಿ ಬಾಹುಬಲಿಯ 525 ಬಿಲ್ಲುಗಳಷ್ಟು ಎತ್ತರದ ಮೂರ್ತಿಯನ್ನು ಮಾಡಿ ನಿಲ್ಲಿಸಿದನಷ್ಟೆ. ಆ ಮೂರ್ತಿಯ ಮಹಾತಿಶಯವನ್ನು ಕೇಳಿದ ಚಾವುಂಡರಾಯ ಅದರ ದರ್ಶನ ಪಡೆಯಲು ಹಂಬಲಿಸಿದನಂತೆ. ಆ ಮೂರ್ತಿಯಿದ್ದ ಸ್ಥಳ ದೂರವೂ ದುರ್ಗಮವೂ ಆಗಿದೆಯೆಂದು ಬಲ್ಲವರು ಹೇಳಿದಾಗ ಅಂಥದೇ ಇನ್ನೊಂದು ಮೂರ್ತಿಯನ್ನು ತಾನು ಕಡೆಸುವುದಾಗಿ ನಿಶ್ಚಯಿಸಿ ಶ್ರವಣಬೆಳಗೊಳದಲ್ಲಿ ಬಾಹುಬಲಿ ವಿಗ್ರಹವನ್ನು ಪ್ರತಿಷ್ಠಾಪಿಸಿದನಂತೆ. ಚಾವುಂಡರಾಯನ ಈ ಅಸಾಧಾರಣ ಕಾರ್ಯ ಜನರೂಢಿಯಲ್ಲಿ ಪೌರಾಣಿಕ ಕಲ್ಪನೆಯ ಹಂತವನ್ನು ಮುಟ್ಟುವಷ್ಟು ಪ್ರಭಾವಶಾಲಿಯಾಯಿತು. ಇದರ ಬಗ್ಗೆ ಅನೇಕ ರೀತಿಯ ಕಥೆಗಳು ಬೆಳೆದುಬಂದಿವೆ. ಈ ಪವಾಡಸದೃಶಕಾರ್ಯ ಮಾಡಿದ ಚಾವುಂಡರಾಯನಿಗೆ ರಾಯ ಎಂಬ ಬಿರುದು ಕೊಟ್ಟು ರಾಚಮಲ್ಲ ಗೌರವಿಸಿದ. ಚಾವುಂಡರಾಯನ ಈ ಧಾರ್ಮಿಕ ವ್ಯಕ್ತಿತ್ವದಿಂದಾಗಿಯೇ ಬಹುಶಃ ಇತರರು ಆತನನ್ನು ಅಣ್ಣ ಎಂದು ಸಂಬೋಧಿಸಿರಬೇಕು.

ಅಜಿತಸೇನಾಚಾರ್ಯರಲ್ಲಿ ಶಿಷ್ಯವೃತ್ತಿಯಲ್ಲಿದ್ದಾಗ ಕವಿ ರನ್ನ ಈತನ ಸಹಪಾಠಿಯಾಗಿದ್ದಿರಬೇಕು. ಅನಂತರವೂ ಈತ ರನ್ನನಿಗೆ ಸಾಕಷ್ಟು ಸಹಾಯ ಮಾಡಿರಬೇಕು. ಬಹುಶಃ ಆ ಕೃತಜ್ಞತೆಯಿಂದಲೇ ರನ್ನ ತನ್ನ ಮಗನಿಗೆ ರಾಯನೆಂದು ಹೆಸರಿಟ್ಟಂತೆ ತೋರುತ್ತದೆ. ಒಂದನೆಯ ನಾಗವರ್ಮನೂ ಚಾವುಂಡರಾಯನ ಆಶ್ರಯ ಪಡೆದಂತೆ ತನ್ನ ಛಂದೋಂಬುಧಿಯಲ್ಲಿ ಹೇಳಿಕೊಂಡಿದ್ದಾನೆ. (ಬಿ.ಎಸ್.ಕೆಯು.)

**ಚಾವುಂಡರಾಯ**[2] : ಸು. 1025. ಲೋಕೋಪಕಾರ ಎಂಬಶಾಸ್ತ್ರ ಗ್ರಂಥದ ಕರ್ತೃ. ಕಾಶ್ಯಪಗೋತ್ರದ ಬ್ರಾಹ್ಮಣ. ತಂದೆ ಭಟ್ಟಪಾರ್ಯ, ತಾಯಿ ಮಲ್ಲಿಕಬ್ಬೆ. ಚಾವುಂಡರಾಯ ಚಾಳುಕ್ಯ ಚಕ್ರವರ್ತಿಯಾದ ಜಯಸಿಂಹನಲ್ಲಿ ಸರ್ವಾಧಿಕಾರಿಯಾಗಿದ್ದನೆಂದೂ ಆತನಿಂದ 'ಮಹಾಬಳಿಯ ಗ್ರಾಹಕತನ' ಪಡೆದನೆಂದೂ ಗ್ರಂಥದಿಂದ ತಿಳಿದುಬರುತ್ತದೆ. ಅಚಳಿತವಚನ, ಶಿಷ್ಟಕಲ್ಪದ್ರುಮ, ಜಯಬಂಧುನಂದನ, ದಾನವಿನೋದ, ಕಾವ್ಯವಿಳಾಸ–ಮೊದಲಾದುವು ಈತನಿಗಿದ್ದ ಬಿರುದುಗಳು.

ಲೋಕೋಪಕಾರ 12 ಆಶ್ವಾಸಗಳ ಗ್ರಂಥ. ಪಂಚಾಂಗಫಲ, ನವಪಟಲ, ವಾಸ್ತುವಿಚಾರ, ಉತ್ಪಾತಶಾಂತಿ, ಉದಕಾರ್ಗಳ, ವೃಕ್ಷಾಯುರ್ವೇದ, ಸುಗಂಧವಾದ, ಸೂಪಶಾಸ್ತ್ರ, ವೈದ್ಯ, ವಿಷತತ್ತ್ವ, ಲಕ್ಷಣ, ಶಕುನ–ಇವು ಪ್ರತಿಪಾದಿತ ವಿಷಯಗಳು. ಇಲ್ಲಿ ಬಂದಿರುವುದೆಲ್ಲ ಜನಸಾಮಾನ್ಯರಿಗೆ ಆವಶ್ಯಕವಾದ ಸಂಗತಿಗಳು ಮಾತ್ರ. ಕವಿ ಎಲ್ಲವನ್ನೂ ಸಂಕ್ಷಿಪ್ತವಾಗಿ ಸಾಧ್ಯವಾದ ಮಟ್ಟಿಗೆ ತಿಳಿಗನ್ನಡ ಭಾಷೆಯಲ್ಲಿ ನಿರೂಪಿಸಿದ್ದಾನೆ. ಒಂದು ರೀತಿಯಿಂದ ಇದನ್ನು ಆ ಕಾಲದ ಸಾಮಾನ್ಯ ಗೃಹವಿಶ್ವಕೋಶವೆಂದು ಹೇಳಬಹುದು. ಅನಂತರ ಬಂದ ಶ್ರೀಧರಾಚಾರ್ಯ, ಕೀರ್ತಿವರ್ಮ ಮುಂತಾದ ಶಾಸ್ತ್ರಗ್ರಂಥಕಾರರಿಗೆ ಈತನ ಪುಸ್ತಕವೇ ಪ್ರೇರಕವಾಗಿರುವಂತೆ ತೋರುತ್ತದೆ. ಈ ಕೃತಿ ಬ್ರಾಹ್ಮಣ ಕವಿಯೊಬ್ಬನಿಂದ ಕನ್ನಡದಲ್ಲಿ ರಚಿತವಾದ ಪ್ರಥಮ ಶಾಸ್ತ್ರಕೃತಿ. (ಬಿ.ಎಸ್.ಕೆಯು.)

**ಚಾಸರ್, ಜೆಫ್ರಿ** : 1340–1400. ಇಂಗ್ಲಿಷ್ ಕಾವ್ಯದ ಜನಕನೆಂದೂ ಕಥನಕವನ ರಚನೆಯಲ್ಲಿ ಅದ್ವಿತೀಯನೆಂದೂ ಹೆಸರು ಪಡೆದ ಕವಿ. ಜನನ ಲಂಡನ್ನಿನಲ್ಲಿ. ತಂದೆ ಮದ್ಯ ವ್ಯಾಪಾರದಲ್ಲಿ ಏಳಿಗೆ ಹೊಂದಿ ಧನಿಕನಾಗಿದ್ದ. ಚಾಸರನ ವಿದ್ಯಾಭ್ಯಾಸದ ಬಗ್ಗೆ ಖಚಿತವಾದ ಮಾಹಿತಿ ದೊರೆತಿಲ್ಲದಿದ್ದರೂ ಇವನಿಗೆ ಫ್ರೆಂಚ್, ಇಟ್ಯಾಲಿಯನ್, ಲ್ಯಾಟಿನ್ ಭಾಷೆಗಳಲ್ಲಿ ಓದಿ ಬರೆಯುವಷ್ಟು ಪರಿಶ್ರಮವಿತ್ತೆಂದೂ ಸಾಹಿತ್ಯ, ತತ್ತ್ವಶಾಸ್ತ್ರ, ನ್ಯಾಯಶಾಸ್ತ್ರ, ಖಗೋಳಶಾಸ್ತ್ರ, ಕ್ರೈಸ್ತಧರ್ಮ ಶಾಸ್ತ್ರಗಳಲ್ಲಿ ಸಾಕಷ್ಟು ಶಿಕ್ಷಣವಿತ್ತೆಂದೂ ಇವನ ಕೃತಿಗಳಿಂದ ತಿಳಿಯಬರುತ್ತದೆ. ಯುವಕನಾಗಿದ್ದಾಗಲೇ ಅಲ್‌ಸ್ಟರ್ ಕೌಂಟೆಸ್ ಆಗಿದ್ದ ಎಲಿಜಬೆತ್‌ಳ ಪರಿಚರನಾಗಿದ್ದು ಆಸ್ಥಾನದ ಅಂದಿನ ಶಿಷ್ಟಾಚಾರದಲ್ಲೂ ಶಿಕ್ಷಣ ಹೊಂದಿದ್ದ. ಜೀವನದುದ್ದಕ್ಕೂ ಆಸ್ಥಾನಿಕ ರಾಯಭಾರಿ ಹಾಗೂ ಸರ್ಕಾರದ ಅಧಿಕಾರಿಯಾಗಿ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿ ವಿಸ್ತಾರವಾದ ಲೋಕಾನುಭವವನ್ನು ಪಡೆದ. 1359ರಲ್ಲಿ ಫ್ರಾನ್ಸ್‌ನಲ್ಲಿ ಸೈನಿಕ

ಕಾರ್ಯಾಚರಣೆಯಲ್ಲಿ ಭಾಗವಹಿಸಿ ರೀಮ್ಸ್ ಬಳಿ ಸೆರೆ ಸಿಕ್ಕಿಬಿದ್ದ. ರಾಜನೇ ಹಣ ಕೊಟ್ಟು ಬಿಡುಗಡೆ ಮಾಡಿಸಿದ. 1366ರಲ್ಲಿ ರಾಣಿಯ ಪರಿಚಾರಿಕೆಯರಲ್ಲಿ ಒಬ್ಬಳಾದ ಫಿಲಿಪ್ಪಳನ್ನು ಮದುವೆಯಾದ. 1367ರಲ್ಲಿ ದೊರೆಯ ಕುಟುಂಬದಲ್ಲಿ ಯೋಮನ್ ಆಫ್ ದಿ ಚೇಂಬರ್ ಆಗಿಯೂ, ಮರುವರ್ಷವೇ ಎಸ್ಕ್ವೈರ್ ಆಗಿಯೂ ನೇಮಕಗೊಂಡ. ಆ ಕಾರ್ಯದ ನಿಮಿತ್ತ ಈತ ನಿರ್ವಹಿಸಬೇಕಾಗಿದ್ದ ನಾನಾ ಬಗೆಯ ರಾಜಕೀಯ ಮತ್ತು ಸಾಮಾಜಿಕ ಕರ್ತವ್ಯಗಳಲ್ಲಿ ಕಥೆಗಳಿಂದ, ಹಾಡುಗಳಿಂದ ರಾಜಾಸ್ಥಾನವನ್ನು ರಂಜಿಸುವುದೂ ಒಂದಾಗಿತ್ತು, 1368, 69, 70ರಲ್ಲಿ ರಾಜಕಾರ್ಯದ ಮೇಲೆ ವಿದೇಶಪ್ರವಾಸ ಕೈಗೊಂಡು ಫ್ರಾನ್ಸ್ ಮತ್ತು ಇಟಲಿ ದೇಶಗಳಿಗೆ ಹೋಗಿಬಂದ. 1372ರಲ್ಲಿ ಜಿನೋವ ಜೊತೆಗೆ ವಾಣಿಜ್ಯ ಒಪ್ಪಂದದ ಮಾತುಕತೆ ನಡೆಸಲು ನಿಯೋಜಿತರಾದ ಮೂವರು ಕಮಿಷನರುಗಳ ಪೈಕಿ ಒಬ್ಬನಾಗಿ

ಕ್ಯಾಂಟರ್‌ಬರಿ ಟೇಲ್ಸಿನ ಹಸ್ತಪ್ರತಿಯೊಂದರಲ್ಲಿರುವ (15ನೇಯ ಶತಮಾನ) ಚಾಸರನ ಚಿತ್ರ

ಇನ್ನೂ ಹೆಚ್ಚು ಕಾಲದ ಪ್ರವಾಸ ಮಾಡಿದ. ಹಾಗೆಯೇ ಫ್ಲಾರೆನ್ಸಿಗೂ ಭೇಟಿಯಿತ್ತ. ಈ ಪ್ರವಾಸದಲ್ಲಿ ಡ್ಯಾಂಟೆ ಮತ್ತು ಬೊಕ್ಯಾಚಿಯೊಗಳ ಇಟ್ಯಾಲಿಯನ್ ಕೃತಿಗಳ ಪರಿಚಯ ಮಾಡಿಕೊಂಡ. 1373ರಲ್ಲಿ ಇಂಗ್ಲೆಂಡಿಗೆ ಹಿಂತಿರುಗಿದ ಮೇಲೆ ಸುಂಕದ ಖಾತೆಯ ಅಧಿಕಾರಿ ಮತ್ತು ಉಣ್ಣೆಯ ಅಧಿಕಾರಿಯ ಹೊಸ ಹುದ್ದೆ ದೊರಕಿತು. ಮುಂದಿನ ಹನ್ನೆರಡು ವರ್ಷ ಈ ಹುದ್ದೆಯಲ್ಲಿಯೇ ಮುಂದುವರಿದಿದ್ದಲ್ಲದೆ ವಿದೇಶ ರಾಯಭಾರಕ್ಕಾಗಿಯೂ ದೊರೆಯ ಮದುವೆಯ ಸಂಧಾನದ ನಿಮಿತ್ತವಾಗಿಯೂ ಅನೇಕ ಬಾರಿ ಫ್ರಾನ್ಸಿಗೂ ಒಮ್ಮೆ ಇಟಲಿಗೂ ಭೇಟಿಯಿತ್ತ. ಈ ಅವಧಿಯಲ್ಲಿಯೇ ದಿ ಹೌಸ್ ಆಫ್ ಫೇಮ್, ದಿ ಪಾರ್ಲಿಮೆಂಟ್ ಆಫ್ ಫೌಲ್ಸ್, ಟ್ರಾಯಿಲಸ್ ಅಂಡ್ ಕ್ರೆಸೀಡ ಎಂಬ ಸ್ವಂತ ಕೃತಿಗಳನ್ನೂ ಬಾಯ್‌ಥಿಯಸ್‌ನ ದಿ ಕಾನ್ಸೊಲೇಷನ್ಸ್ ಆಫ್ ಫಿಲಾಸಫಿಯ ಅನುವಾದವನ್ನೂ ರಚಿಸಿದ. 1386ರಲ್ಲಿ ಕೆಂಟಿನ ಜಸ್ಟಿಸ್ ಆಫ್ ದಿ ಪೀಸ್ ಆಗಿಯೂ ಪಾರ್ಲಿಮೆಂಟ್ ಸಭೆಗೆ ಸದಸ್ಯನಾಗಿ ಹಾಜರಾಗಲು ನೈಟ್ ಆಫ್ ದಿ ಷಯರ್ ಆಗಿಯೂ ನೇಮಕಗೊಂಡ. 1389ರಲ್ಲಿ ಎರಡನೆಯ ರಿಚರ್ಡ್ ದೊರೆ ಪುನಃ ಅಧಿಕಾರಕ್ಕೆ ಬಂದ ಪರಿಣಾಮವಾಗಿ ಚಾಸರಿಗೆ ವೆಸ್ಟ್‌ಮಿನ್‌ಸ್ಟರ್ ಅರಮನೆ, ಟವರ್ ಆಫ್ ಲಂಡನ್ ಮುಂತಾದ ಕಟ್ಟಡಗಳನ್ನು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವ ಕೆಲಸವೂ ನಾರ್ತ್ ಪೇಥರ್‌ಟನ್‌ಗೆ ಸೇರಿದ ಅರಣ್ಯವನ್ನು ನೋಡಿಕೊಳ್ಳುವ ಕೆಲಸವೂ ದೊರೆತವು. 1400ರಲ್ಲಿ ಚಾಸರ್ ಮರಣ ಹೊಂದಿದಾಗ ಅವನನ್ನು ವೆಸ್ಟ್‌ಮಿನ್‌ಸ್ಟರ್ ಅಬೆಯಲ್ಲಿ ಸಮಾಧಿ ಮಾಡಲಾಯಿತು. ಇದು ಇವನಿಗೆ ಸಿಕ್ಕ ಅಪೂರ್ವ ಗೌರವ. ಇವನ ಸಮಾಧಿಯ ಪ್ರದೇಶ ಅನಂತರ ಪೊಯೆಟ್ಸ್ ಕಾರ್ನರ್ ಎಂದು, ಹೆಸರಾಂತ ಕವಿಗಳ ಸಮಾಧಿ ಪ್ರದೇಶವಾಯಿತು.

ಬಹುಮುಖ ಚಟುವಟಿಕೆ ಮತ್ತು ವಿದೇಶ ಪ್ರವಾಸಗಳಿಂದ ನಾನಾ ಬಗೆಯ ಜನರ ಸಂಪರ್ಕ ಕವಿಗೆ ಲಭ್ಯವಾಯಿತು. ಕವಿಯ ಸ್ವಂತ ಜೀವನದ ಬಗ್ಗೆ ಕೆಲವು ಕವನಗಳಲ್ಲಿ ಹಲವು ಸೂಚನೆಗಳು ದೊರಕುವುವು. ದಿ ಹೌಸ್ ಆಫ್ ಫೇಮ್‌ನಲ್ಲಿ ವಸಂತಕಾಲ ಬಿಟ್ಟು ಉಳಿದ ಕಾಲದಲ್ಲಿ ತಾನು ಪುಸ್ತಕಪ್ರೇಮಿಯೆಂದೂ ಲೆಜೆಂಡ್ ಆಫ್ ಗುಡ್ ವಿಮೆನ್, ಕ್ಯಾಂಟರ್‌ಬರಿ ಟೇಲ್ಸ್, ಪ್ರೋಲೋಗ್ ಆಫ್ ಸರ್ ಥೋಪಾಸಿನ ಪೀಠಿಕಾ ಕವನದಲ್ಲಿ ತಾನು ಮೌನ ಸ್ವಭಾವದ, ಸಂಕೋಚದ, ಸೊಂಪಾಗಿ ಬೆಳೆದ ವಿಚಿತ್ರವ್ಯಕ್ತಿಯೆಂದೂ ತನ್ನನ್ನು ಬಣ್ಣಿಸಿಕೊಂಡಿದ್ದಾನೆ.

ಚಾಸರ್ ಬರೆದದ್ದು ಮುಖ್ಯವಾಗಿ ತನ್ನ ನಾಡಿನ ಗಣ್ಯರೂ ಸುಸಂಸ್ಕೃತರೂ ಆದ ಕೆಲವೇ ಮಂದಿಯನ್ನು ದೃಷ್ಟಿಯಲ್ಲಿಟ್ಟುಕೊಂಡು. ಇವನ ಕವನಗಳು ಮೊದಲು ಆಸ್ಥಾನದ ಶ್ರೋತೃಗಳಿಗೆ ವಾಚಿಸಲ್ಪಟ್ಟು ಅನಂತರ ಹಸ್ತಪ್ರತಿ ರೂಪದಲ್ಲಿ ನಗರದ ಹಾಗೂ ಹಳ್ಳಿಯ ಓದುಗರಲ್ಲಿ ಪ್ರಚಾರಗೊಂಡವು. ಇವನು ಯೌವನದಲ್ಲಿ ಅನೇಕ ದಿನಗಳನ್ನು ಫ್ರಾನ್ಸಿನಲ್ಲಿ ಕಳೆದಿದ್ದರಿಂದ ಮಧ್ಯಯುಗದ ಫ್ರೆಂಚ್ ಸಾಹಿತ್ಯದ ಪ್ರಭಾವ ಇವನ ಕೃತಿಗಳಲ್ಲಿ ಕಂಡುಬರುತ್ತದೆ. ಫ್ರೆಂಚ್ ಭಾಷೆಯಿಂದ ಮಾಡಿದ ಅನುವಾದಗಳಲ್ಲಿ ಅಥವಾ ಫ್ರೆಂಚ್ ಮಾದರಿಯನ್ನು ಅನುಸರಿಸಿ ಬರೆದ ಕವನಗಳಲ್ಲಿ ಮುಖ್ಯವಾದುವು ದಿ ರೋಮಾನ್ಸ್ ಆಫ್ ರೋಸ್, ದಿ ಕಂಪ್ಲೇಂಟ್ಸ್ , ದಿ ಬುಕ್ ಆಫ್ ದಿ ಡಚೆಸ್, ದಿ ಮೈನರ್ ಬ್ಯಾಲಡ್ಸ್–ಮುಂತಾದುವು. ಮುಂದೆ ಚಾಸರ್ ಇಟ್ಯಾಲಿಯನ್ ಸಾಹಿತ್ಯದಿಂದ, ವಿಶೇಷವಾಗಿ ಡ್ಯಾಂಟೆ ಮತ್ತು ಬೊಕ್ಯಾಚಿಯೊ ಕಥೆಗಳಿಂದ, ಪ್ರಭಾವಗೊಂಡು ಬರೆದ ಕೃತಿಗಳಲ್ಲಿ ಪ್ರಮುಖವಾದುವು– ಟ್ರಾಯಿಲಸ್ ಅಂಡ್ ಕ್ರೆಸೀಡ ಮತ್ತು ದಿ ನೈಟ್ಸ್ ಟೇಲ್. ಚಾಸರನ ಕವಿತಾಶಕ್ತಿ ಪೂರ್ಣವಾಗಿ ವಿಕಾಸಗೊಂಡ ಅವಧಿಯಲ್ಲಿ ಬರೆದ ಕ್ಯಾಂಟರ್‌ಬರಿ ಟೇಲ್ಸ್ ವಿಶಿಷ್ಟ ಸೊಬಗಿನಿಂದ ಕೂಡಿದೆ. ಇವುಗಳಲ್ಲಿ ನಾವು ಕಾಣುವುದು ಶುದ್ಧಾಂಗವಾಗಿ ಇಂಗ್ಲಿಷ್ ನೆಲದ ಸೊಗಡನ್ನು.

ದಿ ಬುಕ್ ಆಫ್ ದಿ ಡಚೆಸ್ : 1369ರ ಕೊನೆಯಲ್ಲಿ ಬರೆದ ಕನಸು ರೂಪಕಕವನ (ಡ್ರೀಮ್ ಅಲಿಗೊರಿ). ಚಾಸರನ ಪೋಷಕನಾಗಿದ್ದ ಜಾನ್ ಆಫ್ ಗಾಂಟ್‌ನ ಹೆಂಡತಿ ಬ್ಲಾಂಚಿ ಮೃತಿ ಹೊಂದಿದಾಗ ಬರೆದ ಶೋಕಗೀತೆ. ಈ ಕವನದಲ್ಲಿ ಬ್ಲಾಂಚಿಯ ಸದ್ಗುಣಗಳ ಬಗ್ಗೆ ಪ್ರಶಂಸೆಯೂ ಅವಳ ಸಾವಿನ ಬಗ್ಗೆ ಸಂತಾಪವೂ ಕಲಾತ್ಮಕವಾಗಿ ಸಂಗಮಿಸಿವೆ. ಕವಿ ತನ್ನ ಕನಸಿನಲ್ಲಿ, ಅರಣ್ಯದಲ್ಲಿ ಹೋಗುತ್ತಿರುವಾಗ ಕಪ್ಪುಬಟ್ಟೆಯ ವ್ಯಕ್ತಿಯೊಬ್ಬನನ್ನು ಸಂಧಿಸುತ್ತಾನೆ. ಅವನಿಂದ ತಾನು ಪ್ರೀತಿಸಿದ್ದ ಹೆಣ್ಣನ್ನು ಒಲಿಸಿಕೊಂಡ ಕಥೆಯನ್ನು, ಅವಳ ಗುಣಗಾನವನ್ನು ಕೇಳುತ್ತಾನೆ. ಕಡೆಗೆ ಅವಳು ಮೃತಿಹೊಂದಿದಳೆಂದು ಹೇಳಿ ಆ ವ್ಯಕ್ತಿ ತನ್ನ ದುಃಖವನ್ನು ತೋಡಿಕೊಳ್ಳುತ್ತಾನೆ. ಕವಿ ಒಬ್ಬ ಮಂದಬುದ್ಧಿಯ ಶ್ರೋತೃವಾಗಿ ನಟಿಸಿ ಬ್ಲಾಂಚಿಯ ಗುಣಗಾನವನ್ನು ಅವಳ ಗಂಡನ ಬಾಯಿಂದಲೇ ಹೇಳಿಸುವುದು ಇದರ ಸ್ವಾರಸ್ಯ. ಕಥೆಯ ಓಟ ಚುರುಕಾಗಿದೆ. ಕನಸಿನ ಪ್ರಪಂಚದಲ್ಲಿ ಕೊಂಡೊಯ್ಯುವ ಕಥೆಯಾದರೂ ಭಾವನೆಗಳನ್ನು ಬಣ್ಣಿಸುವುದರಲ್ಲಿ ಮನೋವಿಶ್ಲೇಷಣಾತ್ಮಕ ಒಳನೋಟವಿದೆ. ಮುಖ್ಯವಾಗಿ ಪ್ರಯೋಗಕ್ಕಾಗಿ ಬರೆದದ್ದಾದರೂ ಪ್ರಾಸ, ಛಂದಸ್ಸು ಮತ್ತು ಕಾವ್ಯ ಭಾಷೆಯ ದೃಷ್ಟಿಯಿಂದ ಕೃತಿ ಗಮನಾರ್ಹವಾಗಿದೆ.

ದಿ ಹೌಸ್ ಆಫ್ ಫೇಮ್ : 1374–80 ರ ಅವಧಿಯಲ್ಲಿ ರಚಿತವಾದ ಸಾಲುಗಳ ಅಪೂರ್ವ ಕವನ. ಈ ಕೃತಿಯಲ್ಲಿ ಡಾಂಟೆಯ ಮತ್ತು ಓವಿಡ್ಡರ ಪ್ರಭಾವ ಸ್ಪಷ್ಟವಾಗಿ ಮೂಡಿದೆ. ಕಥೆ ಕನಸಿನ ಚೌಕಟ್ಟಿನಲ್ಲಿದ್ದರೂ ನಮ್ಮನ್ನು ಕನಸಿನ ಲೋಕದಿಂದ ಹೊರಗೆ ತರುತ್ತದೆ. ಕವನ ಮೂರು ಭಾಗಗಳಲ್ಲಿದೆ. ಮೊದಲ ಭಾಗ ಕನಸುಗಳ ಬಗೆಗಿನ ಚರ್ಚೆಯಿಂದ ಆರಂಭವಾಗುವುದು. ಅಲ್ಲಿಂದಲೇ ನೇರವಾಗಿ ಒಂದು ಕನಸಿನ ವರ್ಣನೆ. ಅದರಲ್ಲಿ ಕವಿ ಗಾಜಿನ ದೇವಾಲಯಕ್ಕೆ ಹೋಗಿ ಅದರ ಗೋಡೆಗಳ ಮೇಲೆ ಕೆತ್ತಿರುವ ಈನಿಯಡ್ ಕಥೆಯ ಚಿತ್ರಗಳನ್ನು ನೋಡುತ್ತಾನೆ. ಅವುಗಳಲ್ಲಿ ಡೀಡೋ ಪ್ರಕರಣಕ್ಕೆ ಪ್ರಾಮುಖ್ಯ ಬಂದಿದೆ. ಚಾಸರ್ ಈ ಪ್ರಕರಣವನ್ನು 140 ಸಾಲುಗಳಲ್ಲಿ ವಿವರಿಸುತ್ತಾನೆ. ಈ ಸಂದರ್ಭದಲ್ಲಿ ಪ್ರೇಮದಲ್ಲಿ ದ್ರೋಹ ಬಗೆದವರ ಪಟ್ಟಿ ಬರುತ್ತದೆ. ಈ ಪ್ರೇಮವಂಚಕರಿಗೆ ಸಂಬಂಧಪಟ್ಟ ಘಟನೆಗಳು ಚಿತ್ರಗಳಾಗಿ ನಮ್ಮ ಕಣ್ಣುಮುಂದೆ ನಿಲ್ಲುತ್ತವೆ. ದೇವಸ್ಥಾನದ ಬಾಗಿಲಿನ ಹೊರಗೆ ಬಂದಾಗ ಕವಿಗೆ ಕಾಣಿಸುವುದು ಆಕಾಶದಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತಿರುವ ಒಂದು ಬಂಗಾರದ ಹದ್ದು. ಹದ್ದು ಹಾರಿ ಬಂದು ತನ್ನ ಮೊನೆಯುಗುರುಗಳಲ್ಲಿ ಕವಿಯನ್ನು ಹಿಡಿದುಕೊಂಡು ಮೇಲಕ್ಕೆ ಹಾರುತ್ತದೆ. ಈ ಘಟ್ಟದಿಂದ ಕಥನದಲ್ಲಿ ಒಂದು ಹೊಸ ಲವಲವಿಕೆಯಿಂದ ಕೂಡಿದ ಹಾಸ್ಯ ಹಾಗೂ ಆಡುಮಾತಿನ ಸೊಗಸು ಮೂಡುತ್ತವೆ. ಹದ್ದು ತನ್ನನ್ನು ಕೊಂಡೊಯ್ಯುವಾಗ ಕವಿ ದಿಗಿಲುಪಡುವುದೂ ಆಗ ಅವನನ್ನು ಆ ರಣಹದ್ದು ಸಂತೈಸುವುದೂ ಸಂಭಾಷಣೆಯ ರೂಪದಲ್ಲಿ ಬಂದಿವೆ. ಸಂಭಾಷಣೆಯನ್ನು ಹೊಸ ತಂತ್ರವಾಗಿ, ಚತುರವಾಗಿ ಇಲ್ಲಿ ಕವಿ ಬಳಸುತ್ತಾನೆ. ಅಲ್ಲಿನ ಜನರ ವಿಷಯವನ್ನು ಅಜ್ಞನಾದ ಕವಿಗೆ ಹದ್ದು ತಿಳಿಸುತ್ತದೆ. ಹೌಸ್ ಆಫ್ ಫೇಮ್‌ನಲ್ಲಿ ಕವಿ ಪ್ರೇಮದ ವಾರ್ತೆಯನ್ನು ಕೇಳುವನೆಂದೂ ಮಾನವರ ಅಸೂಯೆ, ಭಯ, ಠಕ್ಕುತನದ ಬಗ್ಗೆ ತಿಳುವಳಿಕೆ ಪಡೆಯುವನೆಂದೂ ಹದ್ದು ತಿಳಿಸುತ್ತದೆ. ಕವಿಯನ್ನು ಜಫ್ರಿ ಎಂದು ಸಲಿಗೆಯಿಂದ ಸಂಬೋಧಿಸುತ್ತ ಹದ್ದು ಒಂದು ಉಪನ್ಯಾಸವನ್ನೇ ಕೊಡಲು ಪ್ರಾರಂಭಿಸುತ್ತದೆ. ಎಂಥ ಜಟಿಲ ವಿಷಯಗಳನ್ನೂ ಮೂಢವ್ಯಕ್ತಿಗಳಿಗೂ ತಿಳಿಯುವಂತೆ ಸರಳವಾಗಿ ವಿವರಿಸಬಲ್ಲೆನೆಂದು

ಹದ್ದು ಹೆಮ್ಮೆಯಿಂದ ಜಂಬ ಕೊಚ್ಚಿಕೊಳ್ಳುತ್ತದೆ. ಕವಿಯ ಬವಣೆ ಹೇಳತೀರದು. ಅವನ ಬಾಯಿ ಕಟ್ಟಿದಂತಾಗಿ, ಹದ್ದಿನ ಪ್ರಶ್ನೆಗಳಿಗೆ ಒಂದೊಂದೇ ಮಾತಿನಲ್ಲಿ ಉತ್ತರ ಕೊಟ್ಟು ಸುಮ್ಮನಾಗುತ್ತಾನೆ. ಇವನನ್ನು ಹೌಸ್ ಆಫ್ ಫೇಮಿನ ಕಡಿದಾದ ಬಂಡೆಯ ಮೇಲೆ ಇಳಿಸುವವರೆಗೂ ಹದ್ದು ತನ್ನ ನೀತಿಬೋಧಕ ಮಾತಿನ ಹೊಳೆಯನ್ನೇ ಹರಿಸುತ್ತದೆ. ಹೌಸ್ ಆಫ್ ಫೇಮ್ ನಿಂತಿರುವುದು ದಟ್ಟ ಮಂಜುಗೆಡ್ಡೆಯಿಂದ ಕವಿದ ಬಂಡೆಯ ತುದಿಯಲ್ಲಿ. ಅದನ್ನು ಕವಿ ಪ್ರಯಾಸದಿಂದ ಹತ್ತಬೇಕು. ಬಂಡೆಯ ಮೇಲೆ ಒಂದು ಕಡೆ ಅನೇಕ ಕೀರ್ತಿವಂತರ ಹೆಸರುಗಳು ಕೆತ್ತಿವೆ. ಪ್ರತಿಯೊಂದು ಹೆಸರಿನಲ್ಲೂ ಕೆಲವು ಅಕ್ಷರಗಳು ಕರಗಿಹೋಗಿವೆ. ಆದರೆ ಬಂಡೆಯ ಇನ್ನೊಂದು ಭಾಗದಲ್ಲಿರುವ ಪ್ರಾಚೀನ ಕಾಲದ ಕೀರ್ತಿವಂತರ ಹೆಸರುಗಳು ಅಚ್ಚಳಿಯದೆ ನಿಂತಿವೆ. ಮುಂದೆ ಪಚ್ಚೆ ರತ್ನಗಳಲ್ಲಿ ಕಟ್ಟಿದ ಭವ್ಯ ಕೋಟೆಮನೆಯಲ್ಲಿ ಹೋಮರ್, ವರ್ಜಿಲ್, ಓವಿಡ್, ಲೂಕಾನ್, ಸ್ಟಾಟಿಯಸ್, ಕ್ಲೌಡಿಯಸ್ ಮುಂತಾದವರ ಶಿಲಾವಿಗ್ರಹಗಳನ್ನು ನೋಡುತ್ತಾನೆ. ಅಲ್ಲಿಯೇ ಅಧಿಕ ಸಂಖ್ಯೆಯಲ್ಲಿ ನೆರೆದಿರುವ ಜನರ ಗುಂಪುಗಳು ಬೇರೆ ಬೇರೆ ರೀತಿಯ ಯಶಸ್ಸಿಗಾಗಿ ಕೀರ್ತಿದೇವತೆಯ ಅನುಗ್ರಹವನ್ನು ಕೋರುತ್ತಿರುತ್ತಾರೆ. ಕೊನೆಯಲ್ಲಿ ಒಬ್ಬ ವ್ಯಕ್ತಿ ಕವಿಯ ಕಡೆ ತಿರುಗಿ, ಅವನ ಹೆಸರೇನೆಂದು ವಿಚಾರಿಸುತ್ತ ಅವನೂ ಯಶಸ್ಸನ್ನು ಬಯಸಿ ಅಲ್ಲಿಗೆ ಬಂದಿರುವನೇ ಎಂದು ಕೇಳುತ್ತಾನೆ. ಆ ಬಗೆಯ ಯಾವ ಆಶೆಯೂ ತನಗೆ ಇಲ್ಲವೆಂದೂ ಅವನು ಬಂದಿರುವುದು ಹೊಸವಾರ್ತೆಯನ್ನು ಕೇಳುವುದಕ್ಕಾಗೆಂದೂ ಕವಿ ಉತ್ತರಿಸುತ್ತಾನೆ. ಆಗ ಆ ವ್ಯಕ್ತಿ ಕವಿಯನ್ನು ಹೌಸ್ ಆಫ್ ಫೇಮಿನಿಂದ ಹೌಸ್ ಆಫ್ ರೂಮರ್‌ಗೆ ಕರೆದುಕೊಂಡು ಹೋಗುತ್ತಾನೆ. ಹೌಸ್ ಆಫ್ ರೂಮರ್ ಕೊಂಬೆಗಳಿಂದ ಕಟ್ಟಿರುವ ಕಟ್ಟಡ. ಈ ಪಂಜರದಂಥ ಕಟ್ಟಡ ಎಲ್ಲ ಬಗೆಯ ವದಂತಿಗಳ ಸದ್ದಿನಿಂದ ತುಂಬಿರುತ್ತದೆ. ಆ ಶಬ್ದ ಹೊರಗೆ ಹೋಗಲು ಕಟ್ಟಡದಲ್ಲಿ ಬೇಕಾದಷ್ಟು ತೂತುಗಳೂ ಇರುತ್ತವೆ. ಒಳಗೆ ಜನ ಹರಟೆ ಹೊಡೆಯುತ್ತ ಒಬ್ಬರಿಂದೊಬ್ಬರಿಗೆ ವದಂತಿ ಹರಡುತ್ತಿರುವ ದೃಶ್ಯವನ್ನು ಕಿಟಕಿಯ ಮೂಲಕ ಕವಿ ನೋಡುತ್ತಾನೆ. ಆ ಹೊತ್ತಿಗೆ ಮಹತ್ತ್ವಪೂರಿತ ವಾರ್ತೆಯನ್ನು ಘೋಷಿಸುವಂತೆ ಕಾಣುವ ಒಬ್ಬ ವ್ಯಕ್ತಿಯನ್ನು ದೂರದಲ್ಲಿ ಕವಿ ನೋಡುತ್ತಿರುವಂತೆಯೇ ಕವಿತೆ ಹಠಾತ್ತನೆ ಕೊನೆಗೊಳ್ಳುತ್ತದೆ. ಇಡೀ ಕೃತಿ ವಿಧವಿಧವಾದ ಅಂಶಗಳು ಮಿಶ್ರಣಗೊಂಡ ವಿಚಿತ್ರ ಕವನವಾಗಿದೆ. ಕನಸು, ಅಂತರಾರ್ಥಗಳನ್ನೊಳಗೊಂಡ ಮಧ್ಯಯುಗದ ಸಾಹಿತ್ಯ ಸಂಪ್ರದಾಯಗಳು ಹಳಸಲಾಗಿದ್ದರೂ ಅದುವರೆವಿಗೂ ಇಂಗ್ಲಿಷಿನಲ್ಲಿಲ್ಲದ ಕೆಲವು ಅಂಶಗಳನ್ನು ಚಾಸರ್ ಮೊದಲ ಬಾರಿಗೆ ಇದರಲ್ಲಿ ಸೇರಿಸಿದ್ದಾನೆ. ಇದರಲ್ಲಿ ಒಂದು ವಿಚಿತ್ರ ತೆರನಾದ ಹಾಸ್ಯ ಇಂಗ್ಲಿಷ್ ಕಾವ್ಯದಲ್ಲಿ ಮೊಟ್ಟಮೊದಲಿಗೆ ಎನ್ನುವಂತೆ ಪ್ರಯೋಗಗೊಂಡಿತು. ಮಧ್ಯಯುಗದ ಕಾವ್ಯತೋಟದಲ್ಲಿ ಒಂದು ಹೊಸ ಗಾಳಿ ಬೀಸಿತು–ಎಂಬ ವಿಮರ್ಶಕನ ಅಭಿಪ್ರಾಯವನ್ನು ಇಲ್ಲಿ ನೆನೆಯಬಹುದು. ಅಲ್ಲಲ್ಲಿ ಗಂಭೀರವಾದ ಮಾನಸಿಕ ಸಮಸ್ಯೆಗಳನ್ನು ಕುರಿತು ಚಿಂತನೆಯಿದ್ದರೂ ಮುಖ್ಯವಾಗಿ ಕಥನದ ಧ್ವನಿ ಹಾಸ್ಯದಿಂದ ಕೂಡಿದ ಸಂಭಾಷಣೆಯನ್ನು ಹೆಣೆದಿರುವ ಚತುರತೆ ಈ ಕವನದ ಒಂದು ವೈಶಿಷ್ಟ್ಯ.

ದಿ ಪಾರ್ಲಿಮೆಂಟ್ ಆಫ್ ದಿ ಫೌಲ್ಸ್ : 1382 ರಲ್ಲಿ ಬರೆದ 699 ಸಾಲುಗಳ ಈ ಕವನವೂ ಕನಸಿನ ರೂಪದಲ್ಲಿದೆ. ಶ್ರೀಮಂತವರ್ಗದ ಸುಸಭ್ಯ ಪ್ರೇಮಸಂಪ್ರದಾಯಗಳನ್ನೂ ಅವನ್ನು ತಿಳಿಯಲಾರದ ಜನಸಾಮಾನ್ಯರ ಅಸಮರ್ಥತೆಯನ್ನೂ ಕುರಿತಂತೆ ಈ ಕವಿತೆ ಒಂದು ವಿಡಂಬನೆ ಎಂದು ಕೆಲವರ ಅಭಿಪ್ರಾಯ. ಕವನ ಸಾಮಗ್ರಿ, ಸಾಂಪ್ರದಾಯಿಕವಾದದ್ದೇ. ಆದರೆ ಇಟಲಿಯ ಡ್ಯಾಂಟೆ ಮತ್ತು ಬೊಕ್ಯಾಚಿಯೊ ಕವಿಗಳ ಪ್ರಭಾವ ಬಹುಮಟ್ಟಿಗೆ ಇಲ್ಲಿದೆ. ಡ್ಯಾಂಟೆಯ ಗಂಭೀರ ವಾಕ್‌ಶಕ್ತಿ ಮತ್ತು ಬೊಕ್ಯಾಚಿಯೋನ ಚಿತ್ರಮಯ ವರ್ಣನೆಯನ್ನು ಓದಿ ಜೀರ್ಣಿಸಿಕೊಂಡಿದ್ದ ಚಾಸರ್‌ನ ಕವಿಚೇತನ ಕವಿತೆಯ ಶೈಲಿ ಮತ್ತು ವಸ್ತುಗಳೆರಡನ್ನೂ ಶ್ರೀಮಂತಗೊಳಿಸಿದೆ. ಕವಿ ಬಳಸಿರುವುದು 7 ಸಾಲುಗಳ ಪದ್ಯ (ರೈಮ್ ರಾಯಲ್). ಕಥೆಯನ್ನು ಸುಲಲಿತವಾಗಿ ಹೇಳುವ ಜಾಣ್ಮೆ ಈ ಕವನದಲ್ಲಿ ಸಿದ್ಧಿಸಿದೆ. ಈ ಶಕ್ತಿ ಇಂಗ್ಲಿಷ್ ಭಾಷೆಯಲ್ಲಿ ಅಭಿವ್ಯಕ್ತಗೊಂಡಿದ್ದೇ ಚಾಸರ್ ಮೂಲಕ.

ಸೋಮ್ನಿಯಂ ಸಿಪಿಯೋನಿಸ್ ಎಂಬ ಪ್ರೇಮಜಿಜ್ಞಾಸೆಯ ಗ್ರಂಥವನ್ನು ಕವಿ ಓದಿಮುಗಿಸಿ ಸಂಜೆಗತ್ತಲು ಕವಿಯುತ್ತಿದ್ದಂತೆ ಹಾಗೆಯೇ ನಿದ್ದೆ ಹೋಗುತ್ತಾನೆ. ಆಗ ಅವನು, ತನ್ನ ಕನಸಿನಲ್ಲಿ ಒಂದು ನದಿಯ ಪಕ್ಕದ ತೋಟಕ್ಕೆ ಬರುತ್ತಾನೆ. ಹಕ್ಕಿಗಳೆಲ್ಲ ಅಲ್ಲಿ ಹಾಡುತ್ತಿವೆ. ಕಾಮ, ಸಂತೋಷ, ವಿನಯ, ಆಹ್ಲಾದ, ಸಭ್ಯತೆ, ಸೌಂದರ್ಯ, ಯೌವನ, ಹೊಗಳಿಕೆ ಮೊದಲಾದ ಸಾಂಕೇತಿಕ ಪಾತ್ರಗಳು ಅವನ ಕಣ್ಮುಂದೆ ಹಾದುಹೋಗುತ್ತವೆ. ಕವಿ ವೀನಸ್ಸಿನ ದೇವಾಲಯವನ್ನು ನೋಡುತ್ತಾನೆ. ಹಾಗೆಯೇ ವಿಹರಿಸುತ್ತ ಕಡೆಗೆ ಒಂದು ಹಚ್ಚ–ಹಸಿರು ಜಾಗಕ್ಕೆ ಬರುತ್ತಾನೆ. ಅಲ್ಲಿ ನಿಸರ್ಗದೇವತೆ ಹೂವಿನ ಬೆಟ್ಟದ ಮೇಲೆ ಕುಳಿತುಕೊಂಡು ಹಕ್ಕಿಗಳ ಮಹಾಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದಾಳೆ. ಅಂದು ಸಂತ ವ್ಯಾಲಂಟೈನನ ದಿನಾಚರಣೆಯ ಪ್ರಯುಕ್ತ ಹಕ್ಕಿಗಳೆಲ್ಲ ಪ್ರಕೃತಿನಿಯಮಕ್ಕೊಳಗಾಗಿ ತಮ್ಮ ತಮ್ಮ ಕೂಟಸಂಗಾತಿಯರನ್ನು ಆರಿಸಿಕೊಳ್ಳಲು ಸಮಾವೇಶಗೊಂಡಿವೆ. ದೇವತೆಯ ಮಣಿಕಟ್ಟಿನ ಮೇಲೆ ಕುಳಿತಿದ್ದ ಹೆಣ್ಣುಹದ್ದನ್ನು ಮೋಹಿಸಿ ಅದನ್ನು ಮದುವೆಯಾಗಲು ಬಯಸಿ ಮೂರು ಹದ್ದುಗಳು ತಮ್ಮ ಅರ್ಹತೆಯ ಬಗ್ಗೆ ವಾದಮಾಡುತ್ತವೆ. ಅವುಗಳೂ ಸಭ್ಯ ಪ್ರಣಯಭಾಷೆಯನ್ನೇ ಅನುಸರಿಸುತ್ತವೆ. ಸಭೆಯಲ್ಲಿದ್ದ ಹಕ್ಕಿಗಳೆಲ್ಲ ಚರ್ಚೆಯಲ್ಲಿ ಭಾಗವಹಿಸುತ್ತವೆ. ಆಸ್ಥಾನೋಚಿತ ಪ್ರೇಮದ ಅತಿ ಶಿಷ್ಟಾಚಾರಗಳ ಬಗ್ಗೆ ಆ ಹಕ್ಕಿಗಳಿಗೆ ಸ್ವಲ್ಪವೂ ಸಹನೆಯಿಲ್ಲ. ಪ್ರೇಯಸಿ ಪ್ರೀತಿಸದಿದ್ದರೆ ಪ್ರೇಮದಲ್ಲಿ ನಿಷ್ಠೆಯ ಮಾತು ತರುವುದು ಹಾಸ್ಯಾಸ್ಪದವೆಂದು ಹೆಬ್ಬಾವಿನ ವಾದಸರಣಿ. ಇದರ ಬಗ್ಗೆ ನಡೆಯುವ ವಾದವಿವಾದ ಕೋಲಾಹಲವನ್ನುಂಟುಮಾಡಿದಾಗ ಪ್ರಕೃತಿದೇವಿ ಅವರ ಸದ್ದನ್ನಡಗಿಸಿ ತನ್ನ ತೀರ್ಪನ್ನು ಕೊಡುತ್ತಾಳೆ. ಆ ಹೆಣ್ಣುಹದ್ದು ಒಂದು ವರ್ಷ ಕಾಯ್ದು ತನ್ನ ಆಯ್ಕೆಯನ್ನು ಮಾಡಬಹುದೆಂಬುದೇ ದೇವಿಯ ತೀರ್ಮಾನ. ತೀರ್ಮಾನವಾದ ಮೇಲೆ ಪಕ್ಷಿಗಳು ಹಾರಿ ಹೋಗುವ ಮುನ್ನ ಸೇಂಟ್ ವ್ಯಾಲಂಟೈನನ ಸ್ತೋತ್ರವನ್ನು ಹಾಡುತ್ತವೆ. ಆಗ ಕವಿ ಕನಸಿನಿಂದ ಎಚ್ಚರಗೊಳ್ಳುತ್ತಾನೆ. ಪ್ರೇಮಭಾಷೆಯಲ್ಲಿ ನುರಿತ ಹದ್ದುಗಳು, ನೀತಿ ಬೋಧಿಸುವ ಹೆಬ್ಬಾವು, ವ್ಯವಹಾರಜ್ಞಾನವುಳ್ಳ ಬಾತುಕೋಳಿ, ರೊಮ್ಯಾಂಟಿಕ್ ಪಾರಿವಾಳ ಹಾಗೂ ಅಪಹಾಸ್ಯ ಮಾಡುವ ಕೋಗಿಲೆ ಚಾಸರನ ಶಕ್ತಿಗೆ ದ್ಯೋತಕವಾಗಿವೆ.

ಟ್ರಾಯಿಲಸ್ ಅಂಡ್ ಕ್ರೆಸೀಡ : 1380ರಲ್ಲಿ ರಚಿತವಾಯಿತು. ಚಾಸರನ ಪ್ರತಿಭೆಯನ್ನು ಪೂರ್ಣವಾಗಿ ಪ್ರತಿಬಿಂಬಿಸುವ ಕೃತಿ. ಛಂದಸ್ಸಿನ ತಂತ್ರದಲ್ಲಿ, ಕಥಾನಿರೂಪಣೆಯ ಚಾಣ್ಮೆಯಲ್ಲಿ ಮಾನವ ಸ್ವಭಾವದ ಪರಿಜ್ಞಾನದಲ್ಲಿ ಈ ಕೃತಿ ಶ್ರೇಷ್ಠಮಟ್ಟ ಮುಟ್ಟಿದೆ. ಒಂದು ದೃಷ್ಟಿಯಲ್ಲಿ ಇಂಗ್ಲಿಷಿನಲ್ಲಿ ಮೊದಲ, ನಿಜವಾದ, ಕಾದಂಬರಿಯೆಂದೂ ಪರಿಗಣಿತವಾಗಿದೆ. ಬೊಕಾಚಿಯೋವಿನ ಇಲ್‌ಫಿಲೊಸ್ಟ್ರೇಟೊ ಎಂಬ ಕಥೆಯೇ ಇದರ ಮೂಲ. ಅಲ್ಲಿ ಬರುವ ಪ್ರೇಮ ಮತ್ತು ದ್ರೋಹದ ಸರಳ ಕಥೆ ಮತ್ತು ಘಟನೆಗಳಿಗೆ ಒಂದು ಹೊಸ ಆಯಾಮವನ್ನೇ ಚಾಸರ್ ಕೊಡುತ್ತಾನೆ. ಪಾತ್ರವಿಶ್ಲೇಷಣವೂ ಹೆಚ್ಚು ಸೂಕ್ಷ್ಮವಾಗಿದೆ. ಟ್ರಾಯ್ ಯುದ್ಧದ ಹಿನ್ನೆಲೆಯಲ್ಲಿ ನಡೆಯುವ ಈ ದುರಂತ ಪ್ರೇಮದ ಕಥೆ ಇಲ್ಲಿ ಅನೇಕ ಮಾರ್ಪಾಡುಗಳನ್ನು ಹೊಂದಿದೆ. ಬೊಕಾಚಿಯೋವಿನ ಕಥೆಯನ್ನು ಆಧಾರವಾಗಿಟ್ಟುಕೊಂಡು ಚಾಸರ್ ತನ್ನ ಲೋಕಾನುಭವ, ಪುಸ್ತಕದಿಂದ ಬಂದ ತಿಳಿವಳಿಕೆ ಹಾಗೂ ಮಾನವ ಸ್ವಭಾವ ಪರಿಜ್ಞಾನವೆಲ್ಲವನ್ನೂ ಇಲ್ಲಿ ತುಂಬುತ್ತಾನೆ. ಮಧ್ಯಯುಗದ ಪ್ರಸಿದ್ಧ ಕವಿಗಳಾದ ಡಾಂಟೆ, ಪೆಟ್ರಾರ್ಕ್, ಓವಿಡ್, ಬಯ್‌ಥಿಯಸ್ ಮುಂತಾದವರನ್ನು ಓದಿ ಅವನು ಪಡೆದ ಜ್ಞಾನವೆಲ್ಲವೂ ಇಲ್ಲಿ ಛಟ್ಟ ಇಳಿದಿದೆ. ಇದರ ಜೊತೆಗೆ ಅವನ ವಿಶಿಷ್ಟ ಹಾಸ್ಯವೂ ವ್ಯಂಗ್ಯವೂ ಸೇರಿಕೊಂಡು ಈ ಕೃತಿ ಅತ್ಯಂತ ಪರಿಣಾಮಕಾರಿಯಾಗಿದೆ. ನಾವು ಮೊದಲು ನೋಡುವುದು ಪ್ರೇಮದ ವಿಚಾರದ ಬಗ್ಗೆ ಉಪೇಕ್ಷೆಯಿಂದಿದ್ದ ಉಲ್ಲಾಸ ಸ್ವಭಾವದ ತರುಣ ವಿಧವೆ ಕ್ರೆಸೀಡಳನ್ನು. ಒಂದು ಹಬ್ಬದ ದಿನ ದೇವಸ್ಥಾನದಲ್ಲಿ ಕಪ್ಪುವಸ್ತ್ರ ಧರಿಸಿದ್ದ ಕ್ರೆಸೀಡಳನ್ನು ನೋಡಿದೊಡನೆಯೇ ಟ್ರಾಯಿಲಸ್ ಮೋಹಗೊಳ್ಳುತ್ತಾನೆ. ಆ ಪ್ರೇಮಾಕರ್ಷಣೆಯ ಸೆಳೆತದಿಂದ, ಪ್ರೇಮಿಯ ಸರ್ವ ದುಃಖಗಳನ್ನೂ ಯಾತನೆಗಳನ್ನೂ ಅನುಭವಿಸುತ್ತಾನೆ. ಕ್ರೆಸೀಡಳು ಎಲ್ಲ ರೀತಿಯಲ್ಲಿಯೂ ತನಗಿಂತ ಉತ್ತಮಳೆಂದೂ ತನ್ನ ಕೈಗೆ ಎಟುಕದವಳೆಂದೂ ಭಾವಿಸುತ್ತಾನೆ. ಹೀಗೆ ಚಿಂತೆಯಲ್ಲಿ ಮುಳುಗಿ ಹಾಸಿಗೆ ಹಿಡಿದು ಪ್ರಲಾಪಿಸುತ್ತಿದ್ದ ಟ್ರಾಯಿಲಸ್‌ನನ್ನು ಕ್ರೆಸೀಡಳ ಚಿಕ್ಕಪ್ಪನಾದ ಪಾಂಡರೆ ನೋಡಿ ಅವನ ದುಃಖದ ರಹಸ್ಯವನ್ನು ತಿಳಿದು ಕ್ರೆಸೀಡಳನ್ನು ಒಲಿಸಿಕೊಳ್ಳುವ ಬಗ್ಗೆ ಅವನಿಗೆ ಭರವಸೆ ಮೂಡುವಂತೆ ಮಾಡುತ್ತಾನೆ.

ಕ್ರೆಸೀಡಳ ಸ್ಥಿತಿ ಬಿಗಡಾಯಿಸುತ್ತದೆ. ಅವಳ ತಂದೆ ಗ್ರೀಕರ ಕಡೆ ಸೇರಿಕೊಂಡಿರುವ ದೇಶದ್ರೋಹಿ. ಆದ್ದರಿಂದ ಕ್ರೆಸೀಡ ತುಂಬ ಎಚ್ಚರವಹಿಸಬೇಕು. ಪಾಂಡರೆ ಇವರಿಬ್ಬರನ್ನೂ ಕೂಡಿಸುವ ಸನ್ನಾಹದಲ್ಲಿ ತೊಡಗುತ್ತಾನೆ. ಈ ಮಧ್ಯೆ ಟ್ರಾಯಿಲಸ್ ಗ್ರೀಕರ ವಿರುದ್ಧ ತನ್ನ ಸಾಹಸ ಹೋರಾಟದಿಂದ ಶೌರ್ಯವನ್ನು ಪ್ರದರ್ಶಿಸುತ್ತಾನೆ. ಕ್ರೆಸೀಡಳ ಹೃದಯ ಟ್ರಾಯಿಲಸ್‌ನ ಪ್ರೇಮಭಿಕ್ಷೆಯನ್ನು ಒಪ್ಪುವಂತೆ ಮಾಡಲು ಪಾಂಡರೆ ಸಕಲ ಪ್ರಯತ್ನಗಳನ್ನೂ ಮಾಡುತ್ತಾನೆ. ಅವಳನ್ನು ಭೇಟಿಮಾಡಿ ಮಾತುಕತೆ ನಡೆಸಿ, ಅವಳ ಕುತೂಹಲವನ್ನು ಕೆರಳಿಸಿ ಟ್ರಾಯಿಲಸ್ ಅವಳಲ್ಲಿ ಅನುರಕ್ತನಾಗಿರುವುದನ್ನು ತಿಳಿಸುತ್ತಾನೆ. ಕ್ರೆಸೀಡ ಮರುಕವಿಟ್ಟು ಮಾತನಾಡಿಸಿದರೆ ಸಾಕು, ಟ್ರಾಯಿಲಸ್ ಆನಂದಭರಿತನಾಗುತ್ತಾನೆ. ಅವನ ಪ್ರೇಮದ ಕಾತರ ಎಷ್ಟೆಂದರೆ ಕ್ರೆಸೀಡ ಅವನನ್ನು ನಿರಾಕರಿಸಿದರೆ ಅವನು ಸಾಯುವುದಂತೂ ಖಂಡಿತ. ಟ್ರಾಯಿಲಸ್ ಒಂದು ವೇಳೆ ಸತ್ತರೆ ತಾನೂ ಸಾಯುವುದು ಖಚಿತ ಎಂದು ಪಾಂಡರೆ ಬಣ್ಣಿಸುತ್ತಾನೆ. ಮೊದಮೊದಲು ಕ್ರೆಸೀಡ ಪ್ರತಿಕೂಲವಾಗಿ ಉತ್ತರಿಸುತ್ತಾಳೆ. ಅವಳಿಗೆ ಒಂದು ಕಡೆ ಲೋಕನಿಂದೆಯ ಹೆದರಿಕೆ. ವಿಧವೆಯಾಗಿ ತಾನೊಬ್ಬಳೇ ಹೇಗೆ ಬೇಕೋ ಹಾಗೆ ಇರುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಭಯ ಮತ್ತೊಂದು ಕಡೆ. ಈ ಪ್ರಣಯಯಾಚನೆಗೆ ಅನುಮತಿ ಇತ್ತರೆ ಅದು ಅವಳನ್ನು ಎಲ್ಲೆಲ್ಲಿ ಕರೆದುಕೊಂಡು ಹೋಗುತ್ತದೋ ಎಂಬ ಆತಂಕ. ಆದರೂ ಅವನ ಬಗ್ಗೆ ಆಸಕ್ತಿ ಹುಟ್ಟುತ್ತದೆ. ಆ ಹೊತ್ತಿಗೆ ಸರಿಯಾಗಿ ಗ್ರೀಕರೊಡನೆ ಕಾದಾಡಿ ಜಯಪ್ರದವಾಗಿ ಹಿಂದಿರುಗುತ್ತಿದ್ದ ಟ್ರಾಯಿಲಸ್ ಕುದುರೆ ಸವಾರಿ ಮಾಡಿಕೊಂಡು ಕ್ರೆಸೀಡಳ ಕೊಠಡಿಯ ಕಿಟಕಿಯ ಪಕ್ಕದಲ್ಲಿ ಹೋಗುತ್ತಾನೆ.

ಸುಂದರ ಮುಖವನ್ನು, ಧೀರ ನಿಲುವನ್ನು ನೋಡಿ ಕ್ರೆಸೀಡ ತನ್ನ ಹೃದಯದಲ್ಲಿಯೇ ಮೆಚ್ಚಿಕೊಳ್ಳುತ್ತಾಳೆ. ಆದರೂ ಟ್ರಾಯಿಲಸ್‍ನನ್ನು ಭೇಟಿಮಾಡಲು ಏನೋ ಅಳುಕು, ಹಿಂಜರಿತ. ಕಟ್ಟಕಡೆಗೆ ಟ್ರಾಯಿಲಸ್ ಬರೆದ ಪ್ರೇಮಪತ್ರ ಸ್ವೀಕರಿಸಲೂ ಅದಕ್ಕೆ ಉತ್ತರ ಕಳುಹಿಸಲೂ ಒಪ್ಪುತ್ತಾಳೆ. ಪಾಂಡರೆಯ ಹಂಚಿಕೆಯಿಂದಾಗಿ ಟ್ರಾಯಿಲಸ್ ಕ್ರೆಸೀಡಳನ್ನು ಸಂಧಿಸುತ್ತಾನೆ.

ಕ್ಯಾಂಟರ್‍ಬರಿ ಟೇಲ್ಸಿನ ಚಿತ್ರಾಲಂಕೃತ ಹಸ್ತಪ್ರತಿಯ ಒಂದು ಪುಟ.
ಈ ಹಸ್ತಪ್ರತಿ ಲಂಡನಿನ ಬ್ರಿಟಿಷ್ ಮ್ಯೂಸಿಯಂನಲ್ಲಿದೆ

ಟ್ರಾಯಿಲಸ್ ತನ್ನನ್ನು ಕ್ರೆಸೀಡಳಿಗೆ ಒಪ್ಪಿಸುತ್ತಾನೆ. ಅವಳೂ ಅವನ ಪ್ರೇಮವನ್ನು ಸ್ವೀಕರಿಸಲು ಸಿದ್ಧ–ತನ್ನ ಗೌರವಕ್ಕೆ ಚ್ಯುತಿ ಬರದಂತೆ ಟ್ರಾಯಿಲಸ್ ಎಚ್ಚರ ವಹಿಸಿದರೆ ಮಾತ್ರ. ಮಳೆ ಬರುವ ಸೂಚನೆಯಿರುವ ಒಂದು ರಾತ್ರಿ ಪಾಂಡರೆ ಕ್ರೇಸಿಡಳನ್ನು ತನ್ನ ಮನೆಗೆ ಊಟಕ್ಕೆ ಆಹ್ವಾನಿಸುತ್ತಾನೆ. ಭಾರಿ ಮಳೆ ಬಂದು ಆ ರಾತ್ರಿ ಅಲ್ಲಿಯೇ ಅವಳು ತಂಗಬೇಕಾಗುತ್ತದೆ. ಟ್ರಾಯಿಲಸ್ ಕೂಡ ಅಲ್ಲಿಗೇ ಬಂದಿದ್ದಾನೆ–ಅಲ್ಲಿಗೆ ಪೂರ್ವ ಸೂಚನೆಯಿಲ್ಲದೆ ಬಂದಂತೆ ತೋರಿಸಿಕೊಳ್ಳುತ್ತಾನೆ. ಕ್ರೆಸೀಡ ಬೇರೆ ಯಾರನ್ನೋ ಪ್ರೀತಿಸಿದ್ದಾಳೆಂದು ತನ್ನ ಕಳವಳ ವ್ಯಕ್ತಪಡಿಸುತ್ತಾನೆ. ಆಗ ಅಲ್ಲಿಯೇ ಇದ್ದ ಕ್ರೆಸೀಡ ಅವನನ್ನು ಕಟುವಾಗಿ ಮೂದಲಿಸುತ್ತಾಳೆ. ಟ್ರಾಯಿಲಸ್ ತಕ್ಷಣವೇ ಮೂರ್ಛೆಹೋಗುತ್ತಾನೆ. ಅವನನ್ನು ಉಪಚರಿಸುವಂತೆ ಕ್ರೆಸೀಡಳಿಗೆ ಹೇಳಿ ಪಾಂಡರೆ ಹೊರಗೆ ಬರುತ್ತಾನೆ. ಅಂದು ರಾತ್ರಿ ಸುಖವಾಗಿ ಕಳೆದು ಮರುದಿನ ಮನಸ್ಸಿಲ್ಲದ ಮನಸ್ಸಿನಿಂದ ಪ್ರಿಯರು ಪರಸ್ಪರ ಅಗಲುತ್ತಾರೆ. ಅವರಿಬ್ಬರ ಗುಪ್ತ ಪ್ರಣಯ ಸ್ವಲ್ಪಕಾಲ ಮುಂದುವರಿಯುತ್ತದೆ. ಆದರೆ ವಿಧಿವಿಲಾಸದಿಂದ ಪ್ರಣಯಿಗಳು ಅಗಲ ಬೇಕಾಗುತ್ತದೆ. ಯುದ್ಧಬಂದಿಗಳ ವಿನಿಮಯವಾಗುವ ಸಂದರ್ಭದಲ್ಲಿ ಕ್ರೆಸೀಡಳನ್ನು ಗ್ರೀಕ್ ಪಕ್ಷಕ್ಕೆ ಹೋಗಿರುವ ಅವಳ ತಂದೆಯ ಬಳಿಗೆ ಕಳುಹಿಸಿಕೊಡುವ ತೀರ್ಮಾನವಾಗುತ್ತದೆ. ಪ್ರಣಯಿಗಳು ಅಗಲಬೇಕಾಗಿ ಬಂದದ್ದಕ್ಕಾಗಿ ಪರಿತಪಿಸುತ್ತ, ಕ್ರೂರವಿಧಿಯನ್ನು ದೂಷಿಸುತ್ತ ತಾವು ಸಾಯುವವರೆಗೂ ಒಬ್ಬರನ್ನೊಬ್ಬರು ಪ್ರೀತಿಸುವುದಾಗಿ ಪ್ರಮಾಣ ಮಾಡುತ್ತ ಟ್ರಾಯಿಲಸ್ ಮತ್ತು ಕ್ರೆಸೀಡ ಕಡೆಯ ರಾತ್ರಿಯನ್ನು ಕಳೆಯುತ್ತಾರೆ. ತಾವಿಬ್ಬರೂ ಯಾರಿಗೂ ಕಾಣದಂತೆ ತಪ್ಪಿಸಿಕೊಂಡು ಹೋಗಬಹುದೆಂಬ ಟ್ರಾಯಿಲಸ್ಸನ ಸೂಚನೆಯನ್ನು ಕ್ರೆಸೀಡ ಅವ್ಯಾವಹಾರಿಕವೆಂದು ತಳ್ಳಿ ಹಾಕುತ್ತಾಳೆ. ಅವಳಿಗೆ ಅಪವಾದದ ಭಯ. ಎಲ್ಲಿದ್ದರೂ ತಾನು ಹೊರಟ ಹತ್ತನೆಯ ದಿವಸ ಟ್ರಾಯ್ ನಗರಕ್ಕೆ ಹಿಂದಿರುಗುವುದಾಗಿ ಆಕೆ ಮಾತು ಕೊಟ್ಟಾಗಿದೆ. ಈ ಮಧ್ಯೆ ಅವಳನ್ನು ಗ್ರೀಕ್ ಶಿಬಿರಕ್ಕೆ ಕರೆದೊಯ್ದ ಡಯವಿಡಿ ಎಂಬಾತ ಅವಳನ್ನು ದಾರಿಯಲ್ಲಿಯೇ ಒಲಿಸಿಕೊಳ್ಳುತ್ತಾನೆ. ಅವನು ಪ್ರೇಮಚತುರ, ರೂಪವಂತ, ಯಾವುದಕ್ಕೂ ಹೇಸದವ. ಹೆಂಗಸರ ಸ್ವಭಾವವನ್ನು ಚೆನ್ನಾಗಿ ಅರಿತವ. ಕ್ರೆಸೀಡಳ ನಿಸ್ಸಹಾಯಕ ಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಅವಳನ್ನು ಬುಟ್ಟಿಗೆ ಹಾಕಿಕೊಳ್ಳುತ್ತಾನೆ. ಅಪರಿಚಿತರ ಮಧ್ಯೆ ಇದ್ದ ಕ್ರೆಸೀಡ ಡಯಮಿಡಿಯ ರಕ್ಷಣೆಯನ್ನು ಬಯಸಿ ಅವನನ್ನು ಪ್ರೇಮಿಯಾಗಿ ಸ್ವೀಕರಿಸುತ್ತಾಳೆ. ಪರಿಸ್ಥಿತಿಯ ಒತ್ತಡ ಒಂದು ಕಾರಣವಾದರೆ, ಅವಳ ದೌರ್ಬಲ್ಯ ಇನ್ನೊಂದು ಕಾರಣ. ಇಷ್ಟು ಬೇಗ ಅವಳು ಟ್ರಾಯಿಲಸ್ಸಿಗೆ ಕೊಟ್ಟ ಮಾತನ್ನು ಹೇಗೆ ಮರೆತಳು? ಅವಳಲ್ಲಿ ಎಷ್ಟೇ ಸದ್ಗುಣಗಳಿದ್ದರೂ ಗಟ್ಟಿ ಮನಸ್ಸಿರಲಿಲ್ಲ.

ಇತ್ತಕಡೆ ವಿರಹತಾಪದಿಂದ ಬಳಲುತ್ತಿರುವ ಟ್ರಾಯಿಲಸ್‍ನು ಕ್ರೆಸೀಡ ಬರುವಳೆಂದು ಕಾದುಕಾದು ನಿರಾಶನಾಗುತ್ತಾನೆ. ಕಡೆಗೆ ಪತ್ರ ಬರೆದುನೋಡುತ್ತಾನೆ. ಅದಕ್ಕೆ ಬಂದ ಕ್ರೇಸೀಡಳ ಉತ್ತರ ಪ್ರೇಮಭಾವದಿಂದ ಕೂಡಿದ್ದರೂ ಉಪಾಯದಿಂದ ಜಾರಿಕೊಳ್ಳುವಂಥದ್ದು. ಟ್ರಾಯಿಲಸ್ ಯುದ್ಧ ಮಾಡುವಾಗ ಡಯಮಿಡಿ ಧರಿಸಿದ್ದ ವಸ್ತ್ರದಲ್ಲಿ ತಾನು ಕ್ರೆಸೀಡಗೆ ಕೊಟ್ಟಿದ್ದ ಆಭರಣವನ್ನು (ಪದಕಸೂಚಿ) ನೋಡಿ ಹತಾಶನಾಗುತ್ತಾನೆ. ಕ್ರೆಸೀಡ ತನ್ನನ್ನು ವಂಚಿಸಿದಳೆಂಬ ನಿರಾಶೆಯಿಂದ ಯುದ್ಧದಲ್ಲಿ ಎಲ್ಲ ಆಸೆ ಬಿಟ್ಟು ಅಕಿಲಸನೊಡನೆ ಕಾದಾಡಿ ಮಡಿಯುತ್ತಾನೆ. ಟ್ರಾಯಿಲಸ್‍ನ ಆತ್ಮ ಮೇಲಿನ ಲೋಕದಿಂದ ಈ ಚಿಕ್ಕ ಪ್ರಪಂಚದ ವ್ಯರ್ಥ ವ್ಯವಹಾರಗಳನ್ನು ನೋಡಿ ನಗುತ್ತದೆ.

ದೇವರ ಕಡೆಗೆ ಮನಸ್ಸು ಕೊಡುವ ಕರೆಯೊಡನೆ ಕವಿತೆ ಮುಕ್ತಾಯಗೊಳ್ಳುತ್ತದೆ. ಪ್ರಪಂಚದ ಸುಖದುಃಖಗಳನ್ನು ಕುರಿತು ತಾತ್ತ್ವಿಕ ಚಿಂತನೆಗಳನ್ನೊಳಗೊಂಡ ಇದರ ವ್ಯಾಪ್ತಿ ಮೂಲಕ್ಕಿಂತ ಆಳವಾಗಿದೆ.

ದಿ ಲೆಜೆಂಡ್ ಆಫ್ ಗುಡ್ ವಿಮೆನ್ : 1386–95 ಅವಧಿಯಲ್ಲಿ ರಚಿತವಾದ ಕಥೆ. ಚಾಸರ್ ತನ್ನ ಕೆಲವು ಬರೆಹಗಳಲ್ಲಿ ಹೆಂಗಸರನ್ನು ಅವಹೇಳನ ಮಾಡಿದ್ದಾನೆಂದು ಕವಿಯನ್ನು ಅವನ ಕನಸಿನಲ್ಲಿ ಪ್ರೇಮದೇವತೆ ಆಕ್ಷೇಪಿಸುತ್ತಾಳೆ. ಆದ್ದರಿಂದ ಪ್ರೇಮದಲ್ಲಿ ನಿಷ್ಠೆಯಿಂದ ನಡೆದುಕೊಂಡ ಹೆಂಗಸರ ಕಥೆಗಳನ್ನು ಬರೆಯುವುದಾಗಿ ಹೇಳುತ್ತಾನೆ. ಇಪ್ಪತ್ತೈದು ಕಥೆಗಳನ್ನು ಬರೆಯಬೇಕೆಂದು ಉದ್ದೇಶಿಸಿದ್ದರೂ ಈಗ ಉಪಲಬ್ಧವಿರುವುವು ಒಂಬತ್ತೇ. ಪ್ರಾಯಶಃ ಕವಿಯೇ ಬೇಸತ್ತು ಅರ್ಧದಲ್ಲಿಯೇ ಕೈಬಿಟ್ಟಿರಬೇಕು. ಪೀಠಿಕೆಯಲ್ಲಿ ಚಾಸರ್ ತನ್ನ ಬಗ್ಗೆ ಕೊಡುವ ವಿವರಗಳೇ ಅದರ ಸ್ವಾರಸ್ಯಭಾಗ.

ಟೇಲ್ ಆಫ್ ಕ್ಯಾಂಟರ್‍ಬರಿ : ಚಾಸರನ ಪ್ರತಿಭೆಯನ್ನು ಪೂರ್ಣವಾಗಿ ಪ್ರಕಟಿಸುವ ಮೇರುಕೃತಿ. ದೇವರು ನೀಡಿರುವ ಸಮೃದ್ಧಿ ಇಲ್ಲಿದೆ ಎಂದು ಡ್ರೈಡನ್ ಹೇಳಿದ ಮಾತುಗಳು ಇದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಚಾಸರ್ ಈ ಕಥೆಗಳಲ್ಲಿ 14ನೆಯ ಶತಮಾನದ ಇಂಗ್ಲೆಂಡಿನ ಸಮಾಜಕ್ಕೆ ಕನ್ನಡಿ ಹಿಡಿದಿದ್ದಾನೆ. ಈ ಕೃತಿ ಅಪೂರ್ಣವಾಗಿಯೇ ಉಳಿದಿದೆ. ಲಂಡನ್ನಿನ ಸೌತ್‍ವಾರ್ಕಿನ ಟ್ಯಾಬಾರ್ಡ್ ಪ್ರವಾಸಿಗೃಹದಲ್ಲಿ ಯಾತ್ರಿಕರ ಗುಂಪೊಂದು ಸೇರುತ್ತದೆ. ಕ್ಯಾಂಟರ್‍ಬರಿಯಲ್ಲಿರುವ ಸಂತ ತಾಮಸ್ ಬೆಕೆಟ್ಟಿನ ಸಮಾಧಿಗೆ ತೀರ್ಥಯಾತ್ರೆ ಹೋಗಿ ಬರುವುದೇ ಅವರ ಉದ್ದೇಶ. ಕವಿಯೂ ಪ್ರವಾಸಿಗೃಹದ ಯಜಮಾನನೂ ಸೇರಿ ಮೂವತ್ತು ಜನ ಹೊರಡುತ್ತಾರೆ. ಪ್ರವಾಸದ ಆಯಾಸವನ್ನು ಪರಿಹರಿಸಲು ಪ್ರತಿಯೊಬ್ಬರೂ ಕ್ಯಾಂಟರ್‍ಬರಿಗೆ ಹೋಗುತ್ತ ಎರಡು ಕಥೆಗಳನ್ನೂ ಅಲ್ಲಿಂದ ಹಿಂದಿರುಗುತ್ತ ಎರಡು ಕಥೆಗಳನ್ನೂ ಹೇಳುವಂತೆ ಯಜಮಾನ ಸೂಚಿಸುತ್ತಾನೆ. ಉತ್ತಮ ಕಥೆ ಹೇಳಿದವರಿಗೆ ಹಿಂದಿರುಗಿದ ಮೇಲೆ ಭರ್ಜರಿ ಔತಣವನ್ನು ಇತರರು ಕೊಡಬೇಕೆಂದು ಒಪ್ಪಂದವಾಗುತ್ತದೆ. ಆದರೆ ಇಲ್ಲಿರುವುದು ಇಪ್ಪತ್ತನಾಲ್ಕು ಕಥೆಗಳು ಮಾತ್ರ. ಇಂಗ್ಲಿಷ್ ಸಮಾಜದ ಎಲ್ಲ ಅಂತಸ್ತಿನ ಹಾಗೂ ವೃತ್ತಿಯ ಪ್ರತಿನಿಧಿಯಾದರೂ ಪ್ರತಿಯೊಬ್ಬನಿಗೂ ಒಂದು ವಿಶಿಷ್ಟ ವ್ಯಕ್ತಿತ್ವವಿದೆ. ಪ್ರಥಮ ಪ್ರಸ್ತಾವನಾ ಭಾಗದಲ್ಲಿ ಯಾತ್ರಿಕರೆಲ್ಲರ ವಿವರಣೆಯಿದೆ. ಕಥೆಗಳ ನಡುವೆ ಯಜಮಾನ ಮಾತನಾಡುತ್ತಾನೆ. ಅವರ ಹರಟೆ ಅವರ ವ್ಯಕ್ತಿತ್ವವನ್ನು ಹೊರಗೆಡಹುತ್ತದೆ. ಷೇಕ್ಸ್‍ಪಿಯರ್‍ನಂತೆಯೇ ಚಾಸರ್ ಕೆಲವೇ ಮಾತುಗಳಲ್ಲಿ ಸೊಗಸಾದ ನುಡಿಚಿತ್ರವನ್ನು ಸೃಷ್ಟಿಸಬಲ್ಲ. ಮೊದಲು ಬರುವ ವ್ಯಕ್ತಿ ನೈಟ್. ಮಧ್ಯಯುಗದ ವೀರಸಾಹಸವೇ ಮೂರ್ತಿವೆತ್ತಂತಿದ್ದ ಸಿಪಾಯಿ. ಆಗತಾನೆ ಹೀದನ್ನರೊಡನೆ ಯುದ್ಧಮಾಡಿ ಬಂದಿದ್ದಾನೆ. ಆದರೂ ವಿನಯ ಸೌಜನ್ಯಗಳಿಂದ ಕೂಡಿದ ಸಂಭಾವಿತ. ಅವನ ಮಗ 'ಸ್ಕ್ವಯರ್' ಉಲ್ಲಾಸ ಸ್ವಭಾವದ ಸಾಹಸಿ ತರುಣ. ಇವನ ಕಥೆಯನ್ನೇ ಮಿಲ್ಟನ್ ಇಲ್ ಪೆನ್ಸೊರೋಸೋ ಕವನದಲ್ಲಿ ನೆನೆಸಿಕೊಂಡು ಅದು ಪೂರ್ಣಗೊಂಡಿದ್ದರೆ ಎಷ್ಟು ಚೆನ್ನವೆಂದು ಹೇಳಿರುವುದು.

ಈ ಗುಂಪಿನಲ್ಲಿ ವ್ಯಾಪಾರಿ, ವಕೀಲ, ನಾವಿಕ, ಲಂಡನ್ನಿನ ಕುಶಲಕರ್ಮಿಗಳು, ಹಳ್ಳಿಗಾಡಿನ ಉದ್ಯೋಗಸ್ಥರೂ ಸೇರಿದ್ದಾರೆ. ತರ್ಕದಲ್ಲಿ ಮುಳುಗಿದ ಶ್ರೀಮಂತ ಪಾದ್ರಿಯೂ ಇದ್ದಾನೆ. ಅವನಿಗೆ ಧ್ಯಾನಕ್ಕಿಂತ ಬೇಟೆಯೇ ಹೆಚ್ಚು ಪ್ರಿಯ, ಮತ್ತೊಬ್ಬ ಕ್ರೈಸ್ತ ಸಂನ್ಯಾಸಿ ಫ್ರಯರ್ ಶ್ರೀಮಂತರಿಗೆ ಮಾತ್ರ ಧರ್ಮೋಪದೇಶ ಮಾಡಲು ಇಷ್ಟಪಡುತ್ತಾನೆ – ಅದರಿಂದ ಬರುವ ಪ್ರಯೋಜನ ದೃಷ್ಟಿಯಿಂದ. ಅವನಿಗೆ ಬಡವರ ಗೊಡವೆಯೇ ಬೇಡ. ಚರ್ಚಿನ ನ್ಯಾಯಮಂಡಳಿಗೆ ಪಾಪಕೃತ್ಯ ಮಾಡಿರುವವರನ್ನು ಕರೆದುಕೊಂಡು ಬರುವ ಸಮನರ್ ಮತ್ತು ಕ್ಷಮೆಯನ್ನು ಮಾರಾಟ ಮಾಡುವ ಪಾರ್ಡನರ್ ಇಬ್ಬರೂ ಹಾಡು ಹೇಳುತ್ತ ಜೊತೆಯಲ್ಲೇ ಸವಾರಿ ಮಾಡುವರು. ಇಬ್ಬರೂ ಮೋಸಗಾರರು. ಅವರು ಹೇಳುವ ಕಥೆಗಳು ಅವರ ಸ್ವಭಾವಕ್ಕೆ ತಕ್ಕಂತೆಯೇ ಇವೆ. ಅವರಿಗೆ ವಿದೃಶವಾಗಿ ಧರ್ಮಾತ್ಮನೂ ಬಡವನೂ ಆದ ಪಾರ್ಸನ್ ಇದ್ದಾನೆ. ಅತ್ಯಂತ ಪ್ರೀತಿ ಮತ್ತು ಭಕ್ತಿಯಿಂದ ಅವನು ಜನಸೇವೆಯನ್ನು ಮಾಡುತ್ತಾನೆ. ಸುಸಂಸ್ಕೃತಳೂ ಕೋಮಲಹೃದಯಳೂ ಆದ ಪ್ರಯರೆಸ್ ಮತ್ತು ಇನ್ನೊಬ್ಬ ಕ್ರೈಸ್ತ ಸಂನ್ಯಾಸಿನಿ ಇಬ್ಬರೂ ಹುತಾತ್ಮರ ಕಥೆಗಳನ್ನು ಹೇಳುತ್ತಾರೆ. ಒಬ್ಬ ಅಡಿಗೆಯವನೂ ಪ್ರಾಮಾಣಿಕ ಬೇಸಾಯಗಾರನೂ ಈ ಗುಂಪಿನಲ್ಲಿ ಸೇರಿದ್ದಾರೆ. ದಿ ವೈಫ್ ಆಫ್ ಬಾತ್ ಎಂಬ ಹರಟೆಮಲ್ಲಿಯ ಚಿತ್ರ ಅತ್ಯಂತ ಹಾಸ್ಯಮಯವಾಗಿದೆ. ಅವಳು ತನ್ನ ಐದು ಗಂಡಂದಿರ ಕಥೆಯನ್ನು ಹೇಳುತ್ತ ಕನ್ಯಾತ್ವದ ಪವಿತ್ರ ಆದರ್ಶವನ್ನೂ ಅಲ್ಲಗಳೆದು ತನ್ನ ಭೋಗಸಿದ್ಧಾಂತವನ್ನು ಪ್ರತಿಪಾದಿಸುವುದು ಅಚ್ಚರಿಗೊಳಿಸುವಂತಿದೆ. ದಾಂಪತ್ಯದ ಸುಖವಿರುವುದು ಹೆಂಡತಿಯ ಯಜಮಾನಿಕೆಗೆ ಗಂಡ ತಲೆ ಬಾಗಿದಾಗ–ಎಂಬ ಅವಳ ವಾದವೂ ಸ್ವಾರಸ್ಯವಾಗಿದೆ. ಹೀಗೆಯೇ ಕೋರ್ಟಿನ ಒಬ್ಬ ಅಮೀನ, ಶ್ರೀಮಂತ ಮನೆಯ ಪಾರುಪತ್ಯಗಾರ ಮುಂತಾದವರು ಒಟ್ಟಾಗಿ ಅಂದಿನ ಇಂಗ್ಲೆಂಡಿನ ಇಡೀ ಸಮಾಜವನ್ನೇ ಪ್ರತಿಬಿಂಬಿಸುತ್ತಾರೆ. ಈ ಕಥೆಗಳಲ್ಲಿ ಚಾಸರ್ ತನ್ನ ಸಮಾಜದ ಬಗ್ಗೆ ವಿಡಂಬನ ಮಾಡುವುದೂ ತನ್ನ ಹಾಸ್ಯದ ಚಟಾಕಿಯಿಂದ ಮಾನವನ ದೌರ್ಬಲ್ಯಗಳನ್ನು ತೋರಿಸುವುದೂ ಅಸದೃಶವಾಗಿವೆ. ಸೊಗಸಾದ ನುಡಿಚಿತ್ರಗಳಿಂದ ಶೋಭಿಸುವ ಈ ಚಿತ್ರಶಾಲೆಯನ್ನು ನಿರ್ಮಿಸುವುದರಲ್ಲಿ ಚಾಸರ್ ತನ್ನ ಪರಿಪಕ್ವ ಲೋಕಾನುಭವವನ್ನೂ ಕಾವ್ಯಪ್ರತಿಭೆಯನ್ನೂ ಮೆರೆದಿದ್ದಾನೆ. ಚಾಸರ್ ಈ ಕಥೆಗಳಲ್ಲಿ ಬೇರೆ ಬೇರೆ ಸಾಹಿತ್ಯರೂಪಗಳಾದ ನೈಟ್ ಹೇಳುವ ಮಧ್ಯಯುಗದ ಸಾಹಸದ ಕಥೆ, ಸರ್ ಥೋಪಾಸಿನ ಅಣಕುರೂಪದ ಪ್ರಾಣಿಕಥೆ, ಮಿಲ್ಲರ್, ರೀವ್ ಮತ್ತು ನಾವಿಕರು ಹೇಳುವ ವರ್ಜಿನ್ ಮೇರಿಯ ಪವಾಡ ಕಥೆ, ಕ್ಲಾರ್ಕ್ ಹೇಳುವ ಜನಪದ ಕಥೆ, ಪಾರ್ಸನ್ನನ ಉಪದೇಶ ಕಥೆ, ಪಾರ್ಡನರ್ ಹೇಳುವ ದೃಷ್ಟಾಂತ ಕಥೆ–ಈ ಮುಂತಾದುವನ್ನು ಬಳಸಿರುವುದು ಮತ್ತೊಂದು ವೈಶಿಷ್ಟ್ಯ.

ಚಾಸರ್ ತನ್ನ ರಸಮಯ ಕವಿತೆಗಳಿಂದ ಇಂಗ್ಲಿಷ್ ಭಾಷೆಗೆ ಒಂದು ಹೊಸ ಸೊಗಸನ್ನೂ ಭಾಷೆ ಛಂದಸ್ಸು ಪ್ರಾಸಗಳಲ್ಲಿ ಪ್ರಯೋಗಗಳನ್ನು ಮಾಡಿ ತನ್ನ ತಾಯ್ನುಡಿಗೆ ಒಂದು ಹೊಸ ಸ್ವರೂಪವನ್ನೂ ಕೊಟ್ಟು ಇಂಗ್ಲಿಷಿನ ಕಾವ್ಯಪ್ರವರ್ತಕನೆಂಬ ಶಾಶ್ವತ ಕೀರ್ತಿಗೆ ಪಾತ್ರನಾಗಿದ್ದಾನೆ. (ಎಚ್.ಜಿ.ಎಸ್.ಆರ್.)

**ಚಾಳಮೀನು :** ಕ್ಲೂಪಿಫಾರ್ಮಿಸ್ ಗಣದ ಕ್ಲೂಪೀಯಿಡೆ ಕುಟುಂಬಕ್ಕೆ ಸೇರಿದ ಸಾರ್ಡೀನ್ ಜಾತಿಯ ಒಂದು ಮೀನು. ಸಾರ್ಡಿನೆಲ ಫಿಂಬ್ರಿಯೇಟ ಅಥವಾ ಕ್ಲೂಪಿಯ ಫಿಂಬ್ರಿಯೇಟ ಇದರ ಶಾಸ್ತ್ರೀಯ ಹೆಸರು. ಪೇಡಿ, ಎರೆಬೈ ಪರ್ಯಾಯ ನಾಮಗಳು. ಇದು ಪ್ರಪಂಚದ ಉಷ್ಣವಲಯದ ಸಮುದ್ರಗಳಲ್ಲಿ ವಾಸಿಸುತ್ತದೆ. ಮೀನುಗಾರಿಕೆಯಲ್ಲಿ ಅತ್ಯಂತ ಮುಖ್ಯವಾದ ಮೀನುಗಳಲ್ಲೊಂದು. ಭಾರತದಲ್ಲಿ ಪೂರ್ವ ಕರಾವಳಿಯ ಉತ್ತರ ಭಾಗದಲ್ಲೂ ಪಶ್ಚಿಮ ಕರಾವಳಿಯ ದಕ್ಷಿಣ ಭಾಗದಲ್ಲೂ ಹೇರಳವಾಗಿ ಸಿಕ್ಕುತ್ತದೆ. ಸಪ್ಟೆಂಬರ್‌ನಿಂದ ಜನವರಿವರೆಗಿನ ಅವಧಿಯಲ್ಲಿ ಇದರ ಹಿಡಿವಳಿ ಅತ್ಯಂತ ಹೆಚ್ಚು. ಈ ಮೀನುಗಳನ್ನು ಕರ್ನಾಟಕದ ಕರಾವಳಿಯಲ್ಲಿಯೂ ಗಣನೀಯ ಪ್ರಮಾಣದಲ್ಲಿ ಹಿಡಿಯಲಾಗುತ್ತದೆ. ಈ ಮೀನನ್ನು ಆಹಾರವಾಗಿ ಬಳಸುವುದಲ್ಲದೆ, ಇದರಿಂದ ಎಣ್ಣೆಯನ್ನೂ ತೆಗೆಯುವುದುಂಟು. ಇದನ್ನು ಗೊಬ್ಬರವಾಗಿ ಬಳಸುವುದೂ ಇದೆ. (ಎನ್.ಎಂ.)

**ಚಾಳುಕ್ಯ ವಂಶ:** ಕರ್ನಾಟಕದಲ್ಲಿ ಆಳಿದ ಒಂದು ಪ್ರಖ್ಯಾತ ರಾಜಮನೆತನ. ಈ ಮನೆತನದ ಅರಸರು ಸತ್ತ್ವಯುತ ಸಾಮ್ರಾಜ್ಯವನ್ನು ಕಟ್ಟಿ, ನಾಲ್ಕು ಶತಮಾನಗಳಿಗೂ ಹೆಚ್ಚು ಕಾಲ ಕನ್ನಡ ನಾಡಿನ ಇತಿಹಾಸ ರೂಪಿಸಿ ಅಜೇಯವಾದ ಕೀರ್ತಿ ಪಡೆದರು. ಕರ್ನಾಟಕದ ಸಾಹಿತ್ಯ ಕಲೆಗಳಿಗೆ ಅಮಿತವಾದ ಪ್ರೋತ್ಸಾಹ ನೀಡಿದರು. ಇವರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ವಿಶಿಷ್ಟವಾದ ವಾಸ್ತು ಹಾಗೂ ಶಿಲ್ಪಕಲೆ ರೂಪುಗೊಂಡಿತು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ ಈ ಅರಸು ಮನೆತನ ಭಾರತದ ಪ್ರಬಲ ಅರಸು ಮನೆತನಗಳಲ್ಲೊಂದೆಂದು ಪರಿಗಣಿತವಾಗಿದೆ. ಕನ್ನಡಿಗರಾದ ಇವರು ತಮ್ಮ ಪ್ರಭಾವವನ್ನು ಕರ್ನಾಟಕದ ಹೊರಗೂ ವಿಸ್ತರಿಸಿದರು. ಭಾರತದಾದ್ಯಂತವಲ್ಲದೆ ಆಗ್ನೇಯ ಏಷ್ಯವೇ ಮುಂತಾದ ಇತರ ಕಡೆಗಳಿಗೂ ಕನ್ನಡ ನಾಡಿನ ಸಂಸ್ಕೃತಿ ಹರಡುವಂತೆ ಮಾಡಿದರು. ಈ ಮನೆತನದ ನಾನಾ ಶಾಖೆಗಳಲ್ಲಿ ಬಾದಾಮಿ, ಕಲ್ಯಾಣ, ವೆಂಗಿ, ವೇಮುಲವಾಡ ಪ್ರಸಿದ್ಧವಾದವು. ಈ ಶಾಖೆಗಳ ಅರಸರಲ್ಲದೆ ಇನ್ನೂ ನಾನಾ ಶಾಖೆಗಳವರು ಕರ್ನಾಟಕದ ಹೊರಗೂ ಆಳಿದರು.

ಈ ವಂಶದ ಹೆಸರು ಬಾದಾಮಿಯ ಶಾಖೆಗೆ ಸಂಬಂಧಿಸಿದಂತೆ ಚಳುಕ್ಯ ಎಂದೂ ಕಲ್ಯಾಣದ ಶಾಖೆಗೆ ಸಂಬಂಧಿಸಿದಂತೆ ಚಾಳುಕ್ಯ ಎಂದೂ ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡುಬರುತ್ತದೆ. ಅಲ್ಲದೆ ಚಳ್ಕಿ, ಚಳುಕಿ, ಚಳುಕ್ಯ, ಚಾಳುಕ್ಯ ಎಂಬ ರೂಪಗಳೂ ಪ್ರಚಾರದಲ್ಲಿವೆ. ಇವೆಲ್ಲದರ ಮೂಲಪದದ ಅರ್ಥವೇನು ಎಂಬುದು ಸ್ಪಷ್ಟವಾಗಿಲ್ಲ. ಇದೊಂದು ವ್ಯಕ್ತಿನಾಮ ವಾಗಿರಬಹುದು ಅಥವಾ ದ್ರಾವಿಡರ ಒಂದು ಪಂಗಡದ ಜನಾಂಗದ ಹೆಸರಾಗಿರಬಹುದು. 3ನೆಯ ಶತಮಾನಕ್ಕೆ ಸೇರಿದ ನಾಗಾರ್ಜುನಕೊಂಡದಲ್ಲಿ ದೊರೆತ ಶಾಸನವೊಂದರಲ್ಲಿ ಖಂದಚಲಿಕಿ ರೆಮ್ಮಣಕನೆಂಬ ಹೆಸರು ಕಂಡುಬಂದಿದೆ. ಇವನಿಗೂ ಚಳುಕ್ಯರಿಗೂ ಯಾವ ಸಂಬಂಧವನ್ನೂ ಕಲ್ಪಿಸಲಾಗದಾದರೂ ಚಳುಕ್ಯ ಎಂಬ ಹೆಸರಿನ ಪ್ರಾಚೀನ ರೂಪವಿದು ಎಂಬ ಒಂದು ಊಹೆ ಇದೆ. 11ನೆಯ ಶತಮಾನದಲ್ಲಿ ಮತ್ತು ಅನಂತರ ಹುಟ್ಟಿದ ಶಾಸನಗಳು ಈ ಹೆಸರಿನ ವ್ಯುತ್ಪತ್ತಿಯನ್ನು ಕುರಿತು ಹಲವಾರು ಕಥೆಗಳನ್ನು ಹೆಣೆದಿವೆ. ಚುಲುಕ ಎಂಬ ಸಂಸ್ಕೃತ ಪದದಿಂದ ಚಲುಕ್ಯ ಬಂತೆಂಬುದು ಒಂದು ಹೇಳಿಕೆ. ಚುಲುಕ ಎಂದರೆ ಎರಡು ಅಂಗೈಗಳನ್ನು ಕೂಡಿಸಿದರೆ ಉಂಟಾಗುವ ಬೊಗಸೆ. ಬಿಲ್ಹಣ ತನ್ನ ವಿಕ್ರಮಾಂಕ ದೇವಚರಿತದಲ್ಲಿ ಈ ಕುರಿತು ಒಂದು ಕಥೆ ಹೇಳಿದ್ದಾನೆ. ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಸಂರಕ್ಷಿಸಲು ನಾಡಿಗೆ ಒಬ್ಬ ಮಹಾಪುರುಷನ ಆವಶ್ಯಕತೆ ಇದೆ ಎಂಬ ಕಾರಣದಿಂದ, ಅಂಥ ಒಬ್ಬ ಪುರುಷನನ್ನು ಸೃಷ್ಟಿಸಬೇಕೆಂದು ಬ್ರಹ್ಮನನ್ನು ಇಂದ್ರ ಪ್ರಾರ್ಥಿಸಿದ. ಇದಕ್ಕೆ ಒಪ್ಪಿದ ಬ್ರಹ್ಮ ಸಂಧ್ಯಾಕಾಲದಲ್ಲಿ ಅರ್ಘ್ಯ ಬಿಡುವಾಗ ತನ್ನ ಚುಲುಕದಲ್ಲಿದ್ದ ನೀರನ್ನು ದೃಷ್ಟಿಸಿದ. ಆಗ ಬೊಗಸೆಯಿಂದ ವೀರನೊಬ್ಬ ಉದಯಿಸಿದ, ಚುಲುಕದಿಂದ ಬಂದವನಾದ್ದರಿಂದ ಇವನೇ ಚಲುಕ್ಯ, ಚಾಲುಕ್ಯ, ಚಾಳುಕ್ಯ ಎನಿಸಿಕೊಂಡ.

ಈ ಕಾಲದ ಶಾಸನಗಳಲ್ಲಿ ಇವರನ್ನು ಕುರಿತ ಇನ್ನೊಂದು ಹೇಳಿಕೆ ಇದೆ. ಇವರು ಅಯೋಧ್ಯೆಯಿಂದ ದಕ್ಷಿಣಕ್ಕೆ ಬಂದವರು. ಈ ವಂಶದ ಹದಿನಾರು ಅರಸರು ದಕ್ಷಿಣಾ ಪಥದಲ್ಲಿ ಆಳಿದ ಮೇಲೆ ಸ್ವಲ್ಪ ಕಾಲ ಇವರು ಸತ್ತ್ವಹೀನರಾಗಿದ್ದರು. ಈ ವಂಶದ ಜಯಸಿಂಹ ಪುನಃ ಬಲಸಂವರ್ಧನೆ ಮಾಡಿಕೊಂಡು ರಾಷ್ಟ್ರಕೂಟ ಮನೆತನದ ಕೃಷ್ಣನ ಮಗನಾದ ಇಂದ್ರನನ್ನು ಸೋಲಿಸಿ ಚಾಳುಕ್ಯ ರಾಜ್ಯ ಸ್ಥಾಪನೆಗೆ ಕಾರಣನಾದ ಎಂದು ಹೇಳಲಾಗಿದೆ. ಆದರೆ ಈ ರಾಷ್ಟ್ರಕೂಟರು ಯಾರೆಂಬುದು ತಿಳಿಯದು. ಅಂಥವರಾರೂ ಕರ್ನಾಟಕದಲ್ಲಿ ಆ ಕಾಲದಲ್ಲಿ ಇದ್ದಂತಿಲ್ಲ. ಜಯಸಿಂಹನಿಗೆ ಹಿಂದೆ, ಚಾಳುಕ್ಯರು ಸತ್ತ್ವಹೀನರಾಗಿದ್ದ ಕಾಲಕ್ಕೂ ಮೊದಲು 16 ಜನ ದಕ್ಷಿಣಾಪಥದಲ್ಲಿ ಆಳಿದರೆಂಬ ಮಾತನ್ನು ನಂಬುವುದಾದರೆ ದಕ್ಷಿಣಾಪಥದಲ್ಲಿ ಇವರ ಆಳಿಕೆ ಸು. 130ರ ವೇಳೆಗೆ ಆರಂಭವಾಯಿತೆನ್ನ ಬೇಕು. ಆದ್ದರಿಂದ ಈ ಹೇಳಿಕೆಯನ್ನು ನಂಬಲಾಗುವುದಿಲ್ಲ.

ಚಾಳುಕ್ಯರ ಮೂಲನಾಮ ಚಲುಕಿ, ಚಲ್ಕಿ, ಸಲುಕಿ ಅಥವಾ ಸಲ್ಕಿ ಎಂಬ ಕನ್ನಡ ಪದ ಎಂದು ಊಹಿಸುವುದು ಹೆಚ್ಚು ಸಮಂಜಸ. ಇದು ಹಾರೆಯಂಥ ಕೃಷಿ ಉಪಕರಣದ ಹೆಸರು. ಈ ಮನೆತನದ ಮೂಲಪುರುಷ ಇದನ್ನು ತನ್ನ ಅಂಕಿತನಾಮವಾಗಿ ಸ್ವೀಕರಿಸಿರ ಬೇಕು. ಕೃಷಿ ಉಪಕರಣದ ಹೆಸರಿನ ಜೊತೆಗೆ ಅಪ್ಪ ಎಂಬ ಗೌರವ ಪದ ಜೋಡಿಸಿ ಹೆಸರಿಟ್ಟುಕೊಳ್ಳುವ ರೂಢಿ ಕರ್ನಾಟಕದಲ್ಲಿ ಈಗಲೂ ಇದೆ (ಉದಾ: ಸಲ್ಕೆಪ್ಪ, ಗುದ್ಲೆಪ್ಪ), ಚಾಳುಕ್ಯರು ಮೂಲತಃ ಬಾದಾಮಿಯ ಕೆಲಬಲದಲ್ಲಿ ವಾಸಿಸುವ ಒಕ್ಕಲಿಗರ ಬಣಕ್ಕೆ ಸೇರಿದವರಿರಬೇಕು. ಬರಬರುತ್ತ ಪ್ರಬಲವಾಗಿ ವಿಶಾಲ ಪ್ರದೇಶಗಳನ್ನು ಆಳಲು ಪ್ರಾರಂಭಿಸಿ ದಾಗ ಇವರ ಮನೆತನಕ್ಕೆ ಪೌರಾಣಿಕತೆಯನ್ನೂ ಪಾವಿತ್ರ್ಯವನ್ನೂ ಕೊಡುವುದಕ್ಕಾಗಿ ದಂತಕತೆ ಹುಟ್ಟಿಕೊಂಡಿರಬೇಕು.

ಬಾದಾಮಿಯ ಚಳುಕ್ಯರ ಸಮಕಾಲೀನ ಶಾಸನಗಳಲ್ಲಿ ಮೇಲೆ ಹೇಳಿದ ಕಥೆಗಳಾವುವೂ ಕಾಣಬರುವುದಿಲ್ಲ. ಆದರೆ ಇವರು ಮೂಲತಃ ಕನ್ನಡಿಗರೇ ಎಂಬ ವಿಷಯ ಅವುಗಳಿಂದ ತಿಳಿದುಬರುತ್ತದೆ. ಕದಂಬರಂತೆ ಇವರೂ ಹಾರೀತಿ ಪುತ್ರರು, ಮಾನವ್ಯಸ ಗೋತ್ರರು. ವರಾಹ ಇವರ ಲಾಂಛನ. ಈ ಅರಸರ ಪುಲಕೇಶಿ, ಬಿಟ್ಟರಸ ಮುಂತಾದ ಹೆಸರುಗಳನ್ನೂ ನೋಡುತ್ತ ಗೆಲ್ವೋಂ, ಪ್ರಿಯಗಳ್ಳ ಇತ್ಯಾದಿ ಬಿರುದುಗಳನ್ನೂ ಇವರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಿಗೆ ಕೊಟ್ಟ ಪ್ರೋತ್ಸಾಹವನ್ನೂ ಆ ಭಾಷೆ ಹಾಗೂ ಲಿಪಿಗಳಲ್ಲಿ ಇವರು ಕೆತ್ತಿಸಿದ ಶಾಸನಗಳನ್ನೂ ಗಮನಿಸಿದರೆ ಇವರಿಗೆ ಆ ಭಾಷೆಯ ಮೇಲೆ ಲಿಪಿಯ ಮೇಲೆ ಇದ್ದ ಒಲವು ಅರ್ಥವಾಗುತ್ತದೆ. ಈ ಕಾಲದಿಂದ ಕನ್ನಡ ಶಾಸನಸಾಹಿತ್ಯ ಹೆಚ್ಚು ಪ್ರೌಢವಾಗು ತ್ತದೆ. ಕನ್ನಡದಲ್ಲಿ ಶಾಸನಗಳನ್ನು ಬರೆಸುವ ರೂಢಿ ಪ್ರಬಲವಾಗುತ್ತದೆ. ಇವರ ಅನಂತರ ಆಳಿದ ರಾಷ್ಟ್ರಕೂಟರು ಇವರ ಸೇನೆಯನ್ನು ಕರ್ನಾಟಕಬಲ ಎಂದು ಕರೆದಿರುವುದನ್ನು ಇಲ್ಲಿ ಗಮನಿಸಬಹುದು. 8ನೆಯ ಶತಮಾನದಲ್ಲಿ ಪಾಂಡ್ಯರು ಕರ್ನಾಟಕದ ಈ ಅರಸರೊಂದಿಗೆ ಸಂಬಂಧ ಬೆಳೆಸಿದ್ದರು. ಪಾಂಡ್ಯ ವಂಶದ ನೆಡುಂಜಡೈಯನ ಅಜ್ಜನಾದ ಶಡೈಯನನ್ನು ಮಧುರ ಕರುಣಾಟಕನ್ ಎಂದು ವರ್ಣಿಸಿರುವುದು ಪಾಂಡ್ಯರು ಕರ್ನಾಟಕದವ ರೊಡನೆ, ಚಳುಕ್ಯರೊಡನೆ ಹೊಂದಿದ್ದ ಮಧುರವಾದ ಸಂಬಂಧದ ದ್ಯೋತಕವಾಗಿದೆ. ವಿಷ್ಣುವರ್ಧನ ರಾಜ ಎಂಬ ಹೆಸರಿನ ಕನ್ನಡ ರೂಪವಾದ ಬಿಟ್ಟರಸ ಎಂಬುದನ್ನು ಒಂದು ತಾಮ್ರ ಶಾಸನದ

ಮೊಹರಿನ ಮೇಲೆ ಕತ್ತಲಾಗಿದೆ. ಈ ವಂಶದ ಬುದ್ಧರಸನ ಬಿರುದು ಮದನಂಗಾಶ್ರಯ ಎಂದಿತ್ತು ಎಂಬ ವಿಷಯ ಇನ್ನೊಂದು ಶಾಸನದಿಂದ ತಿಳಿದಿದೆ. ಇದು ಸುಸ್ಪಷ್ಟವಾಗಿ ಕನ್ನಡದ ಬಿರುದು. ಈ ಎಲ್ಲ ಮಾಹಿತಿಗಳಿಂದ ಚಾಳುಕ್ಯರು ಮೂಲತಃ ಕನ್ನಡಿಗರೇ ಎಂಬುದೂ ಇವರು ಉತ್ತರದ ಅಯೋಧ್ಯೆಯಿಂದ ಬಂದವರೆಂಬುದು ಅನಂತರ ಹೆಣೆಯಲಾದ ಕಥೆಯೆಂಬುದೂ ಸ್ಪಷ್ಟ. (ಬಿ.ಆರ್.ಜಿ.)

**ಬಾದಾಮಿಯ ಚಳುಕ್ಯರು:** ರಾಜಕೀಯ ಇತಿಹಾಸ: 6ನೆಯ ಶತಮಾನದಲ್ಲಿ ವಾತಾಪಿ ಅಥವಾ ಬಾದಾಮಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಇವರು ಸು.2 ಶತಮಾನಗಳ ಕಾಲ ರಾಜ್ಯವಾಳಿದರು. ಭಾರತದ ನಾನಾ ಪ್ರಾಂತಗಳಲ್ಲಿ ಆಳಿದ ಚಳುಕ್ಯ ವಂಶಗಳಲ್ಲಿ ಬಾದಾಮಿ ಶಾಖೆಯೇ ಪ್ರಾಚೀನತಮವಾದುದು. ಬಾದಾಮಿಯ ಚಳುಕ್ಯರನ್ನು ಹಾರೀತಿಪುತ್ರರು, ಮಾನವ್ಯಸ ಗೋತ್ರಕ್ಕೆ ಸೇರಿದವರು, ಸಪ್ತಮಾತೃಕೆಯರಿಂದ ಪೋಷಿತರು ಹಾಗೂ ಕಾರ್ತಿಕೇಯನ ಆರಾಧಕರು, ನಾರಾಯಣ ಅನುಗ್ರಹಿಸಿದ ವರಾಹಲಾಂಛನರು ಎಂದು ಇವರ ಶಾಸನಗಳು ವರ್ಣಿಸುತ್ತವೆ.



ಒಂದನೆಯ ಪುಲಕೇಶಿಯ ಶಾಸನ, ಬಾದಾಮಿ

ಸಾಹಿತ್ಯ ಹಾಗೂ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಮೊದಲ ಚಳುಕ್ಯ ದೊರೆ ಜಯಸಿಂಹ, ಈತ ಕದಂಬರ ಅಧೀನದಲ್ಲಿ ಒಬ್ಬ ಅಧಿಕಾರಿಯೋ ಮಾಂಡಲಿಕನೋ ಆಗಿದ್ದನೆಂದು ತೋರುತ್ತದೆ. ಮಾನ್ಯಪುರ ಶಾಖೆಯ ರಾಷ್ಟ್ರಕೂಟ ಅರಸ ಅಭಿಮನ್ಯುವಿನ ಮಾಂಡಲಿಕ ಜಯಸಿಂಹನೆಂಬುವನ ಹೆಸರು ಶಾಸನೋಕ್ತವಾಗಿದೆ. ಇವನೇ ಚಳುಕ್ಯ ಜಯಸಿಂಹನಾಗಿದ್ದಿರಬಹುದೆಂದು ಊಹಿಸಲು ಅವಕಾಶವಿದೆ. ಆದರೆ ಖಚಿತವಾದ ಆಧಾರಗಳಿಲ್ಲ. ಜಯಸಿಂಹ 500–520ರವರೆಗೆ ರಾಜ್ಯವಾಳಿರಬಹುದು. ಇವನ ಮಗ ರಣರಾಗ (ಸು. 520–40). ಇವನ ಬಗ್ಗೆ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ.

ರಣರಾಗನ ಮಗ ಒಂದನೆಯ ಪುಲಕೇಶಿ (540–66). ಈತ ಇತಿಹಾಸದ ದೃಷ್ಟಿಯಿಂದ ಸಾಮ್ರಾಜ್ಯದ ಸ್ಥಾಪಕ, ಕದಂಬರನ್ನು ಅಧಿಕಾರದಿಂದ ಪದಚ್ಯುತಗೊಳಿಸಿ ಸ್ವತಂತ್ರ ರಾಜ್ಯವೊಂದರ ನಿರ್ಮಾಣಕ್ಕೆ ಅಡಿಪಾಯ ಹಾಕಿದ. ಬಾದಾಮಿಯನ್ನು ಚಳುಕ್ಯ ರಾಜ್ಯದ ರಾಜಧಾನಿಯಾಗಿ ಸ್ಥಾಪಿಸಿದ. ಅನಂತರ ಒಂದನೆಯ ಕೀರ್ತಿವರ್ಮ (566–96) ಚಳುಕ್ಯ ರಾಜ್ಯವನ್ನು ಸುಭದ್ರ ಗೊಳಿಸಿದ. ನಳ, ಮೌರ್ಯ ಹಾಗೂ ಕದಂಬರಿಗೆ ಕಾಳರಾತ್ರಿ ಸ್ವರೂಪನಾಗಿದ್ದು, ಸೇಂದ್ರಕರನ್ನೂ ತನ್ನ ಅಧೀನರನ್ನಾಗಿ ಮಾಡಿಕೊಂಡು ರಾಜ್ಯವನ್ನು ವಿಸ್ತರಿಸಿದ.

ಕೀರ್ತಿವರ್ಮನ ಮರಣಾನಂತರ ಅವನ ಮಗನಾದ ಇಮ್ಮಡಿ ಪುಲಕೇಶಿ ರಾಜ್ಯವಾಳಲು ಪ್ರಾಪ್ತವಯಸ್ಕನಾಗಿರಲಿಲ್ಲವಾಗಿ ಕೀರ್ತಿವರ್ಮನ ತಮ್ಮ ಮಂಗಲೀಶ (596–619) ರಾಜ್ಯಸೂತ್ರಗಳನ್ನು ವಹಿಸಿಕೊಂಡ. ಸು.602ರಲ್ಲಿ ಕಳಚುರಿ ಬುದ್ಧರಾಜ, ಕೊಂಕಣದ ರೇವತೀ ದ್ವೀಪದ ಸ್ವಾಮಿರಾಜ ಇವರನ್ನು ಸೋಲಿಸಿ ಚಳುಕ್ಯ ರಾಜ್ಯವನ್ನು ಮತ್ತಷ್ಟು ವಿಸ್ತರಿಸಿದ. ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದಿಂದ ಈತನ ಸೈನ್ಯ ಪೂರ್ವ–ಪಶ್ಚಿಮ ಸಮುದ್ರಪರ್ಯಂತ ಕಾರ್ಯನಿರತವಾಗಿತ್ತೆಂಬ ಸೂಚನೆ ಇರುವುದರಿಂದ ಬಹುಶಃ ಒಂದು ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿದ್ದ ರಾಜ್ಯವನ್ನು ವಿಸ್ತಾರವಾದ ಸಾಮ್ರಾಜ್ಯವಾಗಿ ಬೆಳೆಸಿದ ಕೀರ್ತಿ ಈತನದಾಗಿರಬೇಕು. ಆದರೆ ಸಿಂಹಾಸನದ ಹಕ್ಕುದಾರನಾದ ಕೀರ್ತಿವರ್ಮನ ಮಗ ಇಮ್ಮಡಿ ಪುಲಕೇಶಿ ವಯಸ್ಕನಾದಾಗಲೂ ಅವನಿಗೆ ರಾಜ್ಯವನ್ನು ಕೊಡಲು ಇಷ್ಟಪಡದೆ ರಾಜ್ಯ ತನ್ನ ವಶದಲ್ಲೇ ಮುಂದುವರಿಯಬೇಕೆಂಬ ಆಸಕ್ತಿಯನ್ನು ಹೊಂದಿದ್ದನಾಗಿ ಇವರಿಬ್ಬರಲ್ಲಿ ವಿರಸ ಮೂಡಿ ಕೊನೆಗೆ ನಡೆದ ಘರ್ಷಣೆಯಲ್ಲಿ ಮಂಗಲೀಶ ಸತ್ತ (ಸು.610).

ಇಮ್ಮಡಿ ಪುಲಕೇಶಿ (610–42): ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ ಪ್ರಾಚೀನ ಭಾರತೀಯ ಇತಿಹಾಸದಲ್ಲೇ ಕಂಡುಬರುವ ಅಪ್ರತಿಮ ಸಾರ್ವಭೌಮರಲ್ಲೊಬ್ಬ. ಸಾಮ್ರಾಜ್ಯ ನಿರ್ಮಾತೃವಿನಲ್ಲಿರಬೇಕಾದ ರಾಜಕೀಯ ನೈಪುಣ್ಯ, ಮಹತ್ವಾಕಾಂಕ್ಷೆ, ದಕ್ಷತೆ ಹಾಗೂ ದೂರದೃಷ್ಟಿ ಇವನಲ್ಲಿದ್ದವು. ಅಧಿಕಾರಕ್ಕೆ ಬಂದ ಹೊಸದರಲ್ಲಿ ಉಂಟಾಗಿದ್ದ ರಾಜಕೀಯ ಅಸ್ತವ್ಯಸ್ತತೆಯ ಲಾಭವನ್ನು ಹೊಂದಲಪೇಕ್ಷಿಸಿದ ರಾಷ್ಟ್ರಕೂಟರ ಅಪ್ಪಾಯಿಕ ಮತ್ತು ಗೋವಿಂದ ಎಂಬುವರನ್ನೂ ನಿಗ್ರಹಿಸುವುದು ಮೊದಲಾದ ಕಾರ್ಯಗಳಿಂದ ಮೊದಲು ತನ್ನ ರಾಜ್ಯವನ್ನು ಸುಭದ್ರವಾಗಿಸಿ, ಅನಂತರ ದಿಗ್ವಿಜಯವನ್ನು ಕೈಕೊಂಡ. ಐಹೊಳೆಯಲ್ಲಿ ರುವ ಇವನ ಶಾಸನದಲ್ಲಿನ ವಿವರಗಳ ಪ್ರಕಾರ ಮೊದಲು ಕದಂಬ ರಾಜಧಾನಿ ಬನವಾಸಿಯನ್ನು ಆಕ್ರಮಿಸಿದ. ಇವನ ಸಾಮರ್ಥ್ಯವನ್ನು ಮನಗಂಡ ದಕ್ಷಿಣ ಕನ್ನಡ ಜಿಲ್ಲೆಯ ಆಳುಪರು ಹಾಗೂ ತಲಕಾಡಿನ ಗಂಗರು ಇವನಿಗೆ ಬೆಂಬಲ ನೀಡಿ ಸಾರ್ವಭೌಮತ್ವವನ್ನು ಒಪ್ಪಿಕೊಂಡರು.

ಅನಂತರ ಕೊಂಕಣದತ್ತ ಮುಂದುವರಿದು ಮೌರ್ಯರನ್ನು ನೌಕಾಯುದ್ಧದಲ್ಲಿ ಸದೆಬಡಿದ. ಮುಂದೆ ಉತ್ತರಾಭಿಮುಖವಾಗಿ ಹೊರಟು ಲಾಟ, ಮಾಳವ ಮತ್ತು ಗೂರ್ಜರರನ್ನು ಸೋಲಿಸಿ ಮಾಹೀ ನದಿಯವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಪುಲಕೇಶಿಯ ಈ ದಿಗ್ವಿಜಯ ಹರ್ಷನನ್ನು ಎಚ್ಚರಿಸಿರಬೇಕು. ಇದರಿಂದ ಉತ್ತರ ಮತ್ತು ದಕ್ಷಿಣ ಭಾರತಗಳ ಶ್ರೇಷ್ಠ ಸಾರ್ವಭೌಮರಿಬ್ಬರಿಗೂ ನರ್ಮದಾ ತೀರದಲ್ಲಿ ಯುದ್ಧವಾಯಿತು. ಪುಲಕೇಶಿ ಜಯಿಸಲಸಾಧ್ಯವಾದ ಶತ್ರು ಎಂಬುದನ್ನು ಹರ್ಷ ಮನಗಾಣಬೇಕಾಯಿತು. ಅವನ ಗಜಸೈನ್ಯಕ್ಕೆ ಅಪಾರ ನಷ್ಟವುಂಟಾಯಿತು. ಈ ವಿಜಯದ ನೆನಪಾಗಿ ಪುಲಕೇಶಿ ಪರಮೇಶ್ವರನೆಂಬ ಬಿರುದನ್ನು ಧರಿಸಿದ (ಸು.612). ಈ ವಿಷಯಗಳಿಂದ ಪುಲಕೇಶಿ ತೊಂಬತ್ತೊಂಬತ್ತು ಸಹಸ್ರ ಗ್ರಾಮಗಳಿಂದ ಕೂಡಿದ ಮಹಾರಾಷ್ಟ್ರ ತ್ರಯಗಳ ಪ್ರಭುವಾದ. ಅನಂತರ ಪುಲಕೇಶಿ ದಕ್ಷಿಣಾಪಥದ ಪೂರ್ವದೇಶಗಳನ್ನು ಜಯಿಸಲು ಹೊರಟ. ಕೋಸಲ ಮತ್ತು ಕಳಿಂಗದ ಅರಸರು ಪುಲಕೇಶಿಯ ಸೈನ್ಯಾಗಮನದಿಂದಲೇ ಭೀತರಾಗಿ ಇವನಿಗೆ ಶರಣಾಗತರಾದರು. ಮುಂದೆ ಸಾಗಿದ ಪುಲಕೇಶಿ ಪಿಷ್ಟಪುರವನ್ನು (ಗುಂಟೂರು ಜಿಲ್ಲೆಯ ಪಿಠಾಪುರಂ) ವಶಮಾಡಿ ಕೊಂಡ. ಅನಂತರ ಕುನಾಲ (ಎಲ್ಲೂರಿನ ಬಳಿಯ ಕೊಲ್ಲೇರು) ಪ್ರದೇಶವನ್ನು ಜಯಿಸಿದ. ಮತ್ತೆ ದಕ್ಷಿಣದತ್ತ ಮುಂದುವರಿದು ಪಲ್ಲವ ಒಂದನೆಯ ಮಹೇಂದ್ರವರ್ಮನ ರಾಜ್ಯವನ್ನು ಆಕ್ರಮಿಸಿದ. ಪಲ್ಲವ ರಾಜಧಾನಿ ಕಂಚಿಗೆ ಸಮೀಪದಲ್ಲಿರುವ ಪುಲ್ಲಲೂರಿನಲ್ಲಿ ನಡೆದ ಈ ಯುದ್ಧದಲ್ಲಿ ಪಲ್ಲವ ಅರಸ ಸೋತ. ಪಲ್ಲವ ರಾಜ್ಯದ ಉತ್ತರ ಭಾಗಗಳು ಪುಲಕೇಶಿಯ ವಶವಾದವು. ಹಲವು ಶತಮಾನಗಳವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖವಾಗಿ ಕಂಡುಬರುವ ಕನ್ನಡ ನಾಡಿನ ಹಾಗೂ ತಮಿಳು ನಾಡಿನ ಅರಸರ ವೈಷಮ್ಯಕ್ಕೆ ಈ ಘಟನೆಯೇ ನಾಂದಿಯಾಯಿತೆಂದರೆ ತಪ್ಪಾಗಲಾರದು. ಪಲ್ಲವರನ್ನು ಸೋಲಿಸಲು ಕಾತುರರಾಗಿದ್ದ ಚೋಳ, ಪಾಂಡ್ಯ ಹಾಗೂ ಕೇರಳದ ಅರಸರು ಚಳುಕ್ಯರ ಸ್ನೇಹವನ್ನು ಸಂಪಾದಿಸಿಕೊಂಡರು.

ಹೀಗೆ ಎಲ್ಲೆಡೆಗಳಲ್ಲಿಯೂ ವಿಜಯಗಳನ್ನ ಸಂಪಾದಿಸಿದ ಪುಲಕೇಶಿ ವಾತಾಪಿಗೆ ಹಿಂದಿರುಗಿದ. ಲೋಹನೇರ ಶಾಸನ ಇವನನ್ನು ಪೂರ್ವಾಪರಸಮುದ್ರಾಧಿಪತಿ ಎಂದು ವರ್ಣಿಸಿರುವುದರಿಂದ ಇವನ ಸಾಮ್ರಾಜ್ಯ ಪೂರ್ವಸಮುದ್ರದಿಂದ ಪಶ್ಚಿಮ ಸಮುದ್ರದವರೆಗೆ ಹಬ್ಬಿತ್ತೆಂದು ಹೇಳಬಹುದು. ಪುಲಕೇಶಿ ತಾನು ಗೆದ್ದ ಪ್ರದೇಶಗಳಲ್ಲಿ ರಾಜ್ಯಭಾರ ನಡೆಸಲು ಅನುಕೂಲವಾಗುವಂತೆ ಏರ್ಪಾಡುಗಳನ್ನು ಮಾಡಿದ. ನಾಸಿಕ ಪ್ರದೇಶದಲ್ಲಿ ಧರಾಶ್ರಯ ಜಯಸಿಂಹನೆಂಬ ಸೋದರನನ್ನು ಮತ್ತು ವೆಂಗಿ ದೇಶದಲ್ಲಿ ಇನ್ನೊಬ್ಬ ಸೋದರನಾದ ಕುಬ್ಜ ವಿಷ್ಣುವರ್ಧನನನ್ನು ರಾಜ್ಯಪಾಲರಾಗಿ ನೇಮಿಸಿದ.

ಪುಲಕೇಶಿ ಒಬ್ಬ ಉತ್ತಮ ಯೋಧ, ಶ್ರೇಷ್ಠ ದಿಗ್ವಿಜಯಿ, ದಕ್ಷ ಆಡಳಿತಗಾರ. ಆದರೆ ಇವನಿಗೆ ಒದಗಿಬಂದ ಅಂತ್ಯ ಮಾತ್ರ ದುರದೃಷ್ಟಕರವಾದುದು. ಪಲ್ಲವ ಮಹೇಂದ್ರವರ್ಮನ ಮಗ ಒಂದನೆಯ ನರಸಿಂಹ ಪುಲಕೇಶಿಯಿಂದ ತನ್ನ ತಂದೆಗೆ ಒದಗಿದ್ದ ಸೋಲಿನ ಅವಮಾನದ ಸೇಡನ್ನು ತೀರಿಸಿಕೊಳ್ಳಲು ನಿರ್ಧರಿಸಿ, ಅಪಾರ ಸೈನ್ಯ ಸಹಿತವಾಗಿ ವಾತಾಪಿಯತ್ತ ಮುನ್ನುಗ್ಗಿ ವಾತಾಪಿಯನ್ನು ಸುಟ್ಟು ತನ್ನ ವಶ ಮಾಡಿಕೊಂಡ; ವಾತಾಪಿಕೊಂಡ ಎಂಬ ಬಿರುದನ್ನು ಧರಿಸಿದ. ಈ ಘಟನೆ ಸು.642ರಲ್ಲಿ ನಡೆಯಿತೆಂದು ತೋರುತ್ತದೆ. ಪುಲಕೇಶಿ ಪ್ರಾಯಶಃ ಈ ಯುದ್ಧದಲ್ಲಿ ಮಡಿದಿರಬೇಕು.

ಪುಲಕೇಶಿಯ ಮರಣಾನಂತರ ಸು.13 ವರ್ಷಗಳ ವರೆಗಿನ ಕಾಲ ಚಳುಕ್ಯ ಇತಿಹಾಸದಲ್ಲಿ ಕತ್ತಲೆಯ ಕಾಲ. ಸು.655ರಲ್ಲಿ ಪಲ್ಲವರ ವಶವಾಗಿದ್ದ ಚಳುಕ್ಯ ಸಾಮ್ರಾಜ್ಯವನ್ನು ಸ್ವಸಾಮರ್ಥ್ಯದಿಂದ ಸ್ವತಂತ್ರಗೊಳಿಸಿ ಒಂದನೆಯ ವಿಕ್ರಮಾದಿತ್ಯ ಪಟ್ಟಕ್ಕೆ ಬಂದ. ಚಳುಕ್ಯ ಸಾಮ್ರಾಜ್ಯ ದುರ್ದಶೆಯಲ್ಲಿದ್ದಾಗ ಹಲವಾರು ಸಾಮಂತರು ಸ್ವತಂತ್ರರಾಗತೊಡಗಿದರು.

ಅವರನ್ನೆಲ್ಲ ನಿಗ್ರಹಿಸಿ ಪುನಃ ಸಾರ್ವಭೌಮತ್ವವನ್ನು ಸ್ಥಾಪಿಸಿದ ವಿಕ್ರಮಾದಿತ್ಯನು ಪರಮೇಶ್ವರ ಎಂಬ ಬಿರುದನ್ನು ಪಡೆದನೆಂದು ಹೇಳಲಾಗಿದೆ. ಆದರೆ ಇವನ ವಿಜಯಗಳ ವಿವರಗಳು ಮಾತ್ರ ಲಭ್ಯವಾಗಿಲ್ಲ. ದತ್ತಮಂಡಲ ಹಾಗೂ ನೆಲ್ಲೂರು ಪ್ರದೇಶ ಮುಂತಾದ ಇತರ ಪ್ರಾಂತ್ಯಗಳನ್ನು ವಿಕ್ರಮಾದಿತ್ಯ ಜಯಿಸಿದ. ಪುಲಕೇಶಿಯ ಕಾಲದಲ್ಲಿ ಪೂರ್ವಚಳುಕ್ಯ ಶಾಖೆ ಆರಂಭವಾದಂತೆ, ಇವನ ಕಾಲದಲ್ಲಿ ಗುಜರಾತಿನ ಶಾಖೆ ಆರಂಭವಾಯಿತು. ಇವನು ಪಲ್ಲವರನ್ನು ಜಯಿಸಿದ ಸಂಗತಿಯನ್ನು ಧರಾಶ್ರಯನ ನವಸಾರಿ ಶಾಸನವೇ ತಿಳಿಸುತ್ತದೆ. 670–71ರಲ್ಲಿ ವಿಕ್ರಮಾದಿತ್ಯ ಕಂಚಿಯ ಸಮೀಪದ ಮಲ್ಲಿಯೂರಿನಲ್ಲಿ ಸೈನ್ಯದೊಂದಿಗೆ ಬೀಡುಬಿಟ್ಟಿದ್ದ. 674ರಲ್ಲಿ ಕಾವೇರಿ ನದಿಯ ದಕ್ಷಿಣ ತೀರದ ಚೋಳಿಕ ವಿಷಯದ ಉರಗಪುರದಲ್ಲಿ ಇದ್ದ. 674ರ ಹೊತ್ತಿಗೆ ಪೆರುವಳನಲ್ಲೂರು ಎಂಬಲ್ಲಿ ಚಳುಕ್ಯರು ಮತ್ತು ಪಲ್ಲವರಿಗೆ ಯುದ್ಧ ನಡೆದಂತೆ ತೋರುತ್ತದೆ. ಈ ಬಗ್ಗೆ ವಿವರಗಳು ತಿಳಿದುಬಂದಿಲ್ಲ. ಒಟ್ಟಿನಲ್ಲಿ ವಿಕ್ರಮಾದಿತ್ಯ ತನ್ನ ಆಳಿಕೆಯ ಅಂತ್ಯದ ಹೊತ್ತಿಗೆ ತನ್ನ ರಾಜ್ಯವನ್ನು ಭದ್ರಪಡಿಸಿ ಕೊಂಡಿದ್ದನಲ್ಲದೆ ರಾಜ್ಯದ ಶತ್ರುಗಳನ್ನು ನಿಗ್ರಹದಲ್ಲಿ ಒಂದೇ ಸಮನೆ ಶ್ರಮಿಸಿ ಸಫಲನಾಗಿದ್ದ. ವಿಕ್ರಮಾದಿತ್ಯನ ವಿಜಯಗಳಲ್ಲಿ ಅವನ ಮಗ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯ ಗಮನೀಯವಾದ ಪಾತ್ರ ವಹಿಸಿದ್ದರು.



ಲಾಡಖಾನ್ ದೇವಾಲಯದ ಸೀಳುನೋಟ

681ರಲ್ಲಿ ಒಂದನೆಯ ವಿಕ್ರಮಾದಿತ್ಯನ ಆಳಿಕೆ ಕೊನೆಗೊಂಡು, ಅನಂತರ ಯುವರಾಜ ನಾಗಿದ್ದ ವಿನಯಾದಿತ್ಯ ರಾಜ್ಯವನ್ನು ವಹಿಸಿಕೊಂಡ. ಇವನ ಕಾಲದಲ್ಲಿ ಸುಖಶಾಂತಿಗಳು ನೆಲೆಸಿದ್ದವು. ಕ್ರಮೇಣ ಪಾರಸಿಕ ಮತ್ತು ಸಿಂಹಳದ ಅರಸರನ್ನು ಈತ ಜಯಿಸಿದನೆಂದು ಶಾಸನಗಳು ತಿಳಿಸುತ್ತವೆ. ಆಳುಪರು ಹಾಗೂ ಸೇಂದ್ರಕರು ಇವನಿಗೆ ವಿಧೇಯರಾಗಿ ಸಾಮಂತರಾಗಿದ್ದರು. ಉತ್ತರ ಭಾರತದ ರಾಜನೊಬ್ಬನನ್ನು, ಬಹುಶಃ ಕನೌಜಿನ ಯಶೋವರ್ಮ ಅಥವಾ ವಜ್ರಟನನ್ನು ಸೋಲಿಸಿ ಗಂಗಾ, ಯಮುನಾ ಹಾಗೂ ಪಾಳಿಧ್ವಜದ ಚಿಹ್ನೆಯನ್ನು ಇವನು ವಶಮಾಡಿಕೊಂಡನೆಂದು ಕೆಲವು ಶಾಸನಗಳಲ್ಲಿ ಹೇಳಿದೆ.



ಲಾಡಖಾನ್ ದೇವಾಲಯದ ತಳವಿನ್ಯಾಸ

ಮುಂದೆ ವಿನಯಾದಿತ್ಯನ ಮಗ ವಿಜಯಾದಿತ್ಯ (696–733) ರಾಜನಾದ. ಇವನ ಆಳಿಕೆ ದೀರ್ಘವೂ ಶಾಂತಿಯುತವೂ ಆಗಿತ್ತು. ಇವನ ಕಾಲದಲ್ಲಿಯೂ ಪಲ್ಲವರ ಮೇಲೆ ಯುದ್ಧ ನಡೆಯಿತು. ಉಳ್ಳಾಲ ಶಾಸನದ ಪ್ರಕಾರ ಯುವರಾಜ ಎರಡನೆಯ ವಿಕ್ರಮಾದಿತ್ಯನ ನಾಯಕತ್ವದಲ್ಲಿ ಚಳುಕ್ಯ ಸೈನ್ಯ ಕಾಂಚೀಪುರಕ್ಕೆ ಧಾಳಿ ಇಟ್ಟು ಎರಡನೆಯ ಪರಮೇಶ್ವರ ವರ್ಮನನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ಪಡೆಯಿತು.

ಅನಂತರ ಪಟ್ಟಕ್ಕೆ ಬಂದವನು ಇವನ ಮಗನಾದ ಎರಡನೆಯ ವಿಕ್ರಮಾದಿತ್ಯ (733–45). ರಾಜ್ಯ ವಹಿಸಿಕೊಂಡ ಅನತಿ ಕಾಲದಲ್ಲೇ ಇವನು ಅರಬ್ಬರ ಆಕ್ರಮಣವನ್ನು ಎದುರಿಸಬೇಕಾಯಿತು. ತಾಜಿಕರು ಅಥವಾ ಅರಬ್ಬರು ಸೈಂಧವ, ಕಚ್ಚೆಲ, ಸೌರಾಷ್ಟ್ರ, ಮೌರ್ಯ ಮೊದಲಾದವರನ್ನು ನಿರ್ನಾಮಗೊಳಿಸಿ ದಕ್ಷಿಣಾಪಥವನ್ನು ಪ್ರವೇಶಿಸಲಪೇಕ್ಷಿಸಿ ನವಸಾರಿಕಾ ಪ್ರಾಂತ್ಯವನ್ನು ವಶಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ಪ್ರಯತ್ನ ಸಫಲವಾಗಲಿಲ್ಲ. ಆ ಪ್ರಾಂತ್ಯದ ಅಧಿಕಾರಿಯಾಗಿದ್ದ ಚಾಳುಕ್ಯ ಶಾಖೆಯ ಅವನಿಜನಾಶ್ರಯ ಪುಲಕೇಶಿ ಅರಬ್ಬರನ್ನು ಹಿಮ್ಮೆಟ್ಟಿಸಿದ. ಇದರಿಂದ ಸಂತೋಷಗೊಂಡ ವಿಕ್ರಮಾದಿತ್ಯ ಅವನಿಗೆ ಅನೇಕ ಬಿರುದುಗಳನ್ನು ನೀಡಿದನೆಂದು ತಿಳಿದುಬರುತ್ತದೆ. ವಿಕ್ರಮಾದಿತ್ಯ ತನ್ನ ಕುಲವೈರಿಗಳಾದ ಪಲ್ಲವರೊಡನೆ ನಡೆಸಿದ ಯುದ್ಧ ಈ ಕಾಲದ ಇನ್ನೊಂದು ಪ್ರಮುಖ ಘಟನೆ. ಇವನು ಮೂರು ಬಾರಿ ಕಂಚಿಯನ್ನು ಜಯಿಸಿದನೆಂದು ಇವನ ಪತ್ನಿ ಲೋಕಮಹಾದೇವಿಯ ಪಟ್ಟದಕಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಇವನು ಒಂದು ಯುದ್ಧದಲ್ಲಿ ಕಟುಮುಖವಾದಿತ್ರ, ಸಮುದ್ರಘೋಷ ಹಾಗೂ ಖಟ್ವಾಂಗಧ್ವಜಗಳನ್ನು ಪಲ್ಲವರರಸನಿಂದ ಕಿತ್ತುಕೊಂಡ. ಪಲ್ಲವರಸನ ಗಜಸೈನ್ಯವೂ ಅಪಾರ ಧನಸಂಪತ್ತು ಇವನ ವಶವಾಯಿತು. ಈ ಕಾಲದಲ್ಲಿ ಪಲ್ಲವ ಸಿಂಹಾಸನದಲ್ಲಿದ್ದವನು ಎರಡನೆಯ ದೇವಾಲಯಗಳಿಗೆ ಅಪಾರ ಸಂಪತ್ತನ್ನು ದಾನವಾಗಿ ನೀಡಿ ತನ್ನ ಔದಾರ್ಯವನ್ನೂ ದೈವಭಕ್ತಿಯನ್ನೂ ಪ್ರದರ್ಶಿಸಿದ. ಪಲ್ಲವ ನರಸಿಂಹವರ್ಮ ಬಾದಾಮಿಯಲ್ಲಿ ಕೆತ್ತಿಸಿದ ತಮಿಳು ಶಾಸನಕ್ಕೆ ಪ್ರತಿಯಾಗಿ ಕಂಚಿಯ ರಾಜಸಿಂಹೇಶ್ವರ ದೇವಾಲಯದ ಸ್ತಂಭವೊಂದರ ಮೇಲೆ ಕನ್ನಡ ಶಾಸನವನ್ನು ಕೆತ್ತಿಸಿದ. ಕಂಚಿಯುಂಗೊಂಡ ಎಂಬ ಬಿರುದನ್ನೂ ಧರಿಸಿದ.

ವಿಕ್ರಮಾದಿತ್ಯನ ಅನಂತರ ಅವನ ಮಗ ಇಮ್ಮಡಿ ಕೀರ್ತಿವರ್ಮ (745–57) ಅಳಿದ. ಇವನು ತನ್ನ ತಂದೆಯ ಜೀವಿತ ಕಾಲದಲ್ಲಿಯೇ ಯುವರಾಜನಾಗಿದ್ದು ಕಂಚಿಯನ್ನು ಆಕ್ರಮಿಸಿದ ವೀರ. ಇವನ ಆಳಿಕೆಯೂ ಶಾಂತಿಯುತವಾಗಿತ್ತು. ಆದರೆ ಚಳುಕ್ಯ ಬಲ ಕುಗ್ಗುತ್ತಿತ್ತು. ರಾಷ್ಟ್ರಕೂಟ ದಂತಿದುರ್ಗ 754ರ ಹೊತ್ತಿಗೆ ತನ್ನನ್ನು ಮಹಾರಾಜಾಧಿರಾಜ ನೆಂದೂ ಪಲ್ಲವರನ್ನು ನಿರ್ನಾಮಗೊಳಿಸಿದ ವೀರನೆಂದೂ ಕರೆದುಕೊಳ್ಳುವ ಮಟ್ಟಕ್ಕೆ ಬಂದಿದ್ದ. ಕೀರ್ತಿವರ್ಮನಿಗೆ ದಂತಿದುರ್ಗನ ಪ್ರಾಬಲ್ಯವನ್ನು ತಡೆಗಟ್ಟುವುದು ಸಾಧ್ಯವಾಗಲಿಲ್ಲ. 757 ರವರೆಗೂ ಕೀರ್ತಿವರ್ಮ ಅರಸನಾಗಿ ಮುಂದುವರೆದರೂ ಕೊನೆಗೆ ಆ ವರ್ಷ ರಾಷ್ಟ್ರಕೂಟ ಕೃಷ್ಣನಿಂದ ಸೋಲಿಸಲ್ಪಟ್ಟ. ಕೀರ್ತಿವರ್ಮನ ಅಂತ್ಯದೊಂದಿಗೆ ಬಾದಾಮಿಯ ಚಳುಕ್ಯರ ಆಳಿಕೆ ಮುಕ್ತಾಯ ಹೊಂದಿತು. ಇವರ ಸ್ಥಾನವನ್ನು ರಾಷ್ಟ್ರಕೂಟರು ಆಕ್ರಮಿಸಿದರು.

(ಎ.ವಿ.ಎನ್.)

ಶಾಸನಗಳ ಆಧಾರದಿಂದ **ಬಾದಾಮಿ ಚಳುಕ್ಯರ ವಂಶಾವಳಿಯನ್ನು** ಈ ರೀತಿ ನಿರೂಪಿಸಬಹುದು:

ಜಯಸಿಂಹ (ಸು.500–20)
|
ರಣರಾಗ (ಸು.520–40)
|
ಪುಲಕೇಶಿ (ಸು.540–66)

- ಪೂಗವರ್ಮ
- ಕೀರ್ತಿವರ್ಮ I (566–96)
  - ಪುಲಕೇಶಿ II (610–42)
    - ಆದಿತ್ಯವರ್ಮ
      - ಅಭಿನವಾದಿತ್ಯ
    - ಚಂದ್ರಾದಿತ್ಯ
    - ರಣರಾಗ
    - ವಿಕ್ರಮಾದಿತ್ಯ I (655–81)
      - ವಿನಯಾದಿತ್ಯ (681–96)
        - ವಿಜಯಾದಿತ್ಯ (696–733)
          - ವಿಕ್ರಮಾದಿತ್ಯ (733–45)
            - ಕೀರ್ತಿವರ್ಮ II (745–57)
    - ಜಯಸಿಂಹ
  - ಕುಬ್ಜವಿಷ್ಣುವರ್ಧನ
  - ಧರಾಶ್ರಯ ಜಯಸಿಂಹ
  - ಬುದ್ಧವರಸ
- ಮಂಗಲೀಶ (596–610)

**ಆಡಳಿತವ್ಯವಸ್ಥೆ:** ರಾಜಪ್ರಭುತ್ವ ಈ ಕಾಲದಲ್ಲಿ ಆಚರಣೆಯಲ್ಲಿದ್ದ ರಾಜ್ಯ ಪದ್ಧತಿ. ರಾಜ್ಯದ ಆಡಳಿತದಲ್ಲಿ ರಾಜ ಸ್ವತಃ ಪಾಲುಗೊಂಡು ಪ್ರಮುಖ ಪಾತ್ರ ವಹಿಸುತ್ತಿದ್ದ. ರಾಜ್ಯ ಆನುವಂಶಿಕವಾಗಿ ತಂದೆಯಿಂದ ಹಿರಿಯ ಮಗನಿಗೆ ಬರುತ್ತಿತ್ತು. ಉತ್ತರಾಧಿಕಾರಿ ಅಪ್ರಾಪ್ತ ವಯಸ್ಕನಾಗಿದ್ದಾಗ ರಾಜ್ಯದ ಹೊಣೆ ಅರಸನ ತಮ್ಮನ ಮೇಲೆ ಬೀಳುತ್ತಿತ್ತು. ಮಂಗಲೀಶ ಇಮ್ಮಡಿ ಪುಲಕೇಶಿ ಪರವಾಗಿ ಆಳಿದುದನ್ನು ಇಲ್ಲಿ ಗಮನಿಸಬೇಕು. ಅಂತೆಯೇ ಉತ್ತರಾಧಿಕಾರಿ ಅಶಕ್ತನಾಗಿದ್ದಾಗ ರಾಜ್ಯ ಮಕ್ಕಳಲ್ಲಿ ಸಮರ್ಥನಾದವನ ವಶವಾಗುತ್ತಿತ್ತು. ಇಮ್ಮಡಿ ಪುಲಕೇಶಿಯ ಅನಂತರ ಕುಸಿದಿದ್ದ ರಾಜ್ಯವನ್ನು ಮೇಲೆತ್ತಿ ಪುನಃ ಶಕ್ತಿಯುತವ ನ್ನಾಗಿ ಮಾಡಲು ಸಮರ್ಥನಾದ ವಿಕ್ರಮಾದಿತ್ಯ ಪುಲಕೇಶಿಯ ಉತ್ತರಾಧಿಕಾರಿಯಾದುದು ಸಹಜವೆಂದೆನಿಸಿತು. ಸತ್ಯಾಶ್ರಯ, ಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಪರಮಭಟ್ಟಾರಕ – ಇವು ಈ ಅರಸರು ಸಾಮಾನ್ಯವಾಗಿ ಧರಿಸಿದ್ದ ಬಿರುದುಗಳು. ಧಾರ್ಮಿಕ ಪ್ರವೃತ್ತಿಯನ್ನನುಸರಿಸಿ ಪರಮಮಾಹೇಶ್ವರ, ಪರಮಭಾಗವತ ಎಂಬ ಬಿರುದುಗಳನ್ನೂ ಇವರು ಧರಿಸಿದ್ದರು.

ರಾಜ್ಯವನ್ನು ಹಲವಾರು ವಿಷಯಗಳಾಗಿ ವಿಂಗಡಿಸಲಾಗಿತ್ತೆಂದು ತೋರುತ್ತದೆ. ವಿಷಯ ಎಂಬುದು ಈಗಿನ ಜಿಲ್ಲೆ ಅಥವಾ ಅದಕ್ಕೂ ಹಿರಿದಾದ ಆಡಳಿತ ಪ್ರದೇಶ. ಬಾಣರಾಜ ವಿಷಯ, ಚೋಳಿಕ ವಿಷಯ, ಬೆಳ್ವಲ ವಿಷಯ, ಪಳಯಟ್ಟಾಣ ವಿಷಯ, ಪೆಡೆಕಲ್ಲು ವಿಷಯ ಇತ್ಯಾದಿಗಳ ಉಲ್ಲೇಖ ಶಾಸನಗಳಲ್ಲಿ ಬಂದಿವೆ. ಬಾಣರಾಜ ವಿಷಯ, ಚೋಲಿಕ ವಿಷಯ, ನಳವಾಡಿ ವಿಷಯಗಳು ಬಾಣ, ಚೋಳ, ನಳ ಮೊದಲಾದ ಸಾಮಂತರ ಸ್ವಾಧೀನದಲ್ಲಿದ್ದ ವಿಷಯಗಳಾಗಿದ್ದು, ಅನಂತರ ಸಾಮ್ರಾಜ್ಯಕ್ಕೆ ಸೇರಿಹೋದ ಪ್ರದೇಶಗಳಿದ್ದಂತೆ ತೋರುತ್ತದೆ. ಈ ಎಲ್ಲ ವಿಷಯಗಳಿಗೂ ಅಧಿಪತಿಗಳಿದ್ದು ಅವರನ್ನು ವಿಷಯಾಧಿಪತಿ, ವಿಷಯಾಧಿಕರಣ, ಮಂಡಲಾಧಿಪತಿ ಎಂದು ಕರೆಯಲಾಗಿತ್ತು. ಈ ದೃಷ್ಟಿಯಲ್ಲಿ ವಿಷಯ ಮತ್ತು ಮಂಡಲ ಸಮಾನಾರ್ಥಕ ಪದಗಳು.

ಕೇಂದ್ರಾಧಿಕಾರಿಗಳು ಮತ್ತು ಅವರ ಕಾರ್ಯಕ್ಷೇತ್ರಗಳ ವಿವರಗಳು ಹೆಚ್ಚಾಗಿ ತಿಳಿದುಬಂದಿಲ್ಲ. ತಾಮ್ರ ಶಾಸನಗಳಲ್ಲಿ ಅರಸ ತಾನು ಮಾಡಿದ ದಾನಕ್ಕೆ ಸಂಬಂಧಿಸಿದ ಆಜ್ಞೆಯನ್ನು ವಿಷಯಪತಿ, ಸಾಮಂತ, ಗ್ರಾಮಭೋಗಿಕ, ಮಹತ್ತರ ಮುಂತಾದ ಅಧಿಕಾರಿಗಳು ತಿಳಿಯತಕ್ಕದ್ದು ಎಂದು ಹೇಳುವುದರಿಂದ ಇವು ಅಧಿಕಾರಿಗಳ ಹೆಸರುಗಳೆಂಬುದು ತಿಳಿಯುತ್ತದೆ. ಮಹಾಸಂಧಿವಿಗ್ರಹಿ, ಮಹಾಕ್ಷಪಟಲಾಧಿಕೃತ ಮೊದಲಾದವರು ಇತರ ಅಧಿಕಾರಿಗಳು. ಇವರು ಅರಸರ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ರಾಜನ ಆಜ್ಞೆಗಳನ್ನೂ ನೀಡಿದ ದಾನಗಳನ್ನೂ ಬರೆಹರೂಪಕ್ಕೆ ಇಳಿಸಿ, ಕಾರ್ಯಗತ ಮಾಡುವ ಹೊಣೆಗಾರಿಕೆ ಇವರದಾಗಿತ್ತು. ಪುಣ್ಯವಲ್ಲಭರೆಂಬ ಕುಲಕ್ಕೆ ಸೇರಿದ ಇಂಥ ನಾಲ್ವರು ಅಧಿಕಾರಿಗಳ ಹೆಸರುಗಳು ಶ್ರೀರಾಮ, ಅನಿರವದ್ಯ, ಅನಿವಾರಿತ, ಧನಂಜಯ ಶಾಸನಗಳಿಂದ ತಿಳಿದುಬಂದಿದೆ. ಶಾಸನಗಳನ್ನು ಬರೆಯಲು ಸಹ ಅಧಿಕಾರಿಗಳಿದ್ದರು. ಮಹೇಂದ್ರ ಪಲ್ಲವಾಚಾರಿ, ಸಿಂಗುಟ್ಟಿ, ಈಶಾನ ಮೊದಲಾದವರು ಇಂಥ ಲೇಖಕರು. ಕೇಂದ್ರ ಆಡಳಿತ ಕಾರ್ಯಗಾರವೊಂದಿದ್ದು ಅಲ್ಲಿ ವ್ಯವಸ್ಥಿತ ರೀತಿಯಲ್ಲಿ ದಾಖಲೆಗಳನ್ನು ಇಡಲಾಗಿದ್ದಿತೆಂದು ಊಹಿಸಬಹುದಾಗಿದೆ. ಹಿಂದೆ ಮಾಡಲಾದ ಶಾಸನಗಳನ್ನು ಉಲ್ಲೇಖಿಸಿ ಅದಕ್ಕೆ ಮತ್ತಷ್ಟನ್ನು ಸೇರಿಸಿಯೋ ಅಥವಾ ಲುಪ್ತವಾಗಿದ್ದಲ್ಲಿ ಅವುಗಳನ್ನು ಪುನರುಜ್ಜೀವನಗೊಳಿಸಿಯೋ ನೀಡಲಾದ ದಾನಶಾಸನಗಳಿವೆ.

ಆಡಳಿತದ ಘಟಕಗಳಲ್ಲಿ ಅತಿ ಸಣ್ಣದು ಗ್ರಾಮ. ಇದರ ಮುಖ್ಯಸ್ಥ ಗಾಮುಂಡ. ಕರಣ (ಗ್ರಾಮಭೋಗಿಕ) ಎಂಬುವನು ಇನ್ನೊಬ್ಬ ಗ್ರಾಮಾಧಿಕಾರಿ. ಈತ ಲೆಕ್ಕಪತ್ರಗಳ ವಹಿವಾಟನ್ನು ನಡೆಸುತ್ತಿದ್ದ. ಅರಸನಿಗೂ ಇತರ ಹಿರಿಯ ಆಡಳಿತಾಧಿಕಾರಿಗಳಿಗೂ ಇವರು ಆಡಳಿತದಲ್ಲಿ ಪ್ರಮುಖವಾದ ಕೊಂಡಿಗಳೂ ಆಗಿದ್ದರು. ಅಗ್ರಹಾರ ಗ್ರಾಮಗಳಲ್ಲಿ ಗ್ರಾಮದ ಹಿರಿಯರೆಲ್ಲ ಕೂಡಿದ ಮಹಾಜನ ಎಂಬ ಒಂದು ಸಮುದಾಯ ಇರುತ್ತಿತ್ತು. ಸಾಂಘಿಕ ಜೀವನಕ್ಕೆ ಸಂಬಂಧಿಸಿದಂತೆ ಕಟ್ಟುಪಾಡುಗಳನ್ನು ರೂಪಿಸುವ, ಗ್ರಾಮಸ್ಥರ ಯೋಗಕ್ಷೇಮವನ್ನು ವಹಿಸುವ, ಸಾಮಾಜಿಕ ವ್ಯವಸ್ಥೆ ಕಾಪಾಡುವ ಕರ್ತವ್ಯ ಮಹಾಜನರದು. ಅನೇಕ ಸಂದರ್ಭಗಳಲ್ಲಿ ಇವರ ಅಪ್ಪಣೆಯನ್ನು ಪಡೆದೆ ಅರಸರೂ ದಾನಧರ್ಮಾದಿ ಕಾರ್ಯಗಳನ್ನು ಮಾಡಬೇಕಿತ್ತು.

**ಆರ್ಥಿಕ–ಸಾಮಾಜಿಕ ಸ್ಥಿತಿ:** ವ್ಯವಸಾಯ ಜನರ ಮುಖ್ಯ ಕಸುಬಾಗಿತ್ತು. ಭೂಮಿಯನ್ನೂ ಅದರ ಉತ್ಪತ್ತಿಗೆ ಅನುಗುಣವಾಗಿ ಅವು ಪಡೆದಿದ್ದ ನೀರಿನ ಆಸರೆಗನುಗುಣವಾಗಿ ವಿಂಗಡಿಸಲಾಗಿತ್ತು. ಬತ್ತ, ಕಬ್ಬು, ನವಣೆ, ಸಾಮೆ, ಗೋದಿ ಅಂದಿನ ಮುಖ್ಯ ಬೆಳೆಗಳು. ದೇಶದಲ್ಲಿ ಬೇಸಾಯಗಾರರು ಹೇರಳವಾಗಿದ್ದು ದೇಶ ದವಸಧಾನ್ಯಗಳಿಂದ ಸಮೃದ್ಧವಾಗಿತ್ತು. ಅರಸರು ತಟಾಕುಗಳನ್ನು ರಾಜ್ಯದಲ್ಲಿ ಕಟ್ಟಿಸಿ ಬೇಸಾಯಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ನೇಕಾರಿಕೆ ಕಸುಬುಗಳಲ್ಲಿ ಮುಖ್ಯವಾದುದಾಗಿತ್ತು. ಈ ಪ್ರದೇಶ ಹತ್ತಿ ಬೆಳೆಗೆ ಅನುಕೂಲವಾದ ವಾತಾವರಣ ವನ್ನು ಪಡೆದಿದ್ದುದರಿಂದ ಹತ್ತಿ ಇಲ್ಲಿ ವಿಶೇಷವಾಗಿ ಬೆಳೆಯುತ್ತಿದ್ದು ಹತ್ತಿಯ ಬಟ್ಟೆಗಳನ್ನು ಇಲ್ಲಿ ನೇಯುತ್ತಿದ್ದಿರಬೇಕು. ಅಲ್ಲದೆ ರೇಷ್ಮೆ ಬಟ್ಟೆಗಳನ್ನು ತಯಾರಿಸಲಾಗುತ್ತಿತ್ತು. ಪಟ್ಟಗಾಜಿರ ಉಲ್ಲೇಖ ಶಾಸನಗಳಲ್ಲಿ ಬಂದಿದೆ. ವ್ಯಾಪಾರ ಈ ಕಾಲದಲ್ಲಿ ಚೆನ್ನಾಗಿ ವ್ಯವಸ್ಥಿತವಾಗಿತ್ತು. ಆಂತರಿಕ ವ್ಯಾಪಾರವಲ್ಲದೆ ಪರದೇಶಗಳೊಡನೆ, ಪ್ರಮುಖವಾಗಿ ಪರ್ಷಿಯ ದೇಶದೊಡನೆ ಕರ್ನಾಟಕ ವಾಣಿಜ್ಯ ಸಂಬಂಧಗಳನ್ನು ಹೊಂದಿತ್ತೆನಿಸುತ್ತದೆ. ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಘಗಳಿದ್ದವು. ಅಯ್ಯಾವೊಳೆ ಐನೂರ್ವ್ವರದು ಒಂದು ಪ್ರಮುಖ ವಣಿಕ ಸಂಘ. ಇದಕ್ಕೆ ಸ್ವತಂತ್ರವಾದ ಸ್ಥಾನಮಾನವಿದ್ದಂತೆ ತೋರುತ್ತದೆ. ನಗರ ಎಂಬ ವರ್ತಕರ ಶ್ರೇಣಿ ಸಹ ಇತ್ತು. ಅಲ್ಲದೆ ಕಂಚುಗಾರರು, ತೆಲ್ಲಿಗರು ಇತ್ಯಾದಿ ಇತರ ವೃತ್ತಿಗಳಿಗೆ ಸಂಬಂಧಿಸಿ ದವರು ತಮ್ಮದೇ ಆದ ಶ್ರೇಣಿಗಳನ್ನು ರೂಪಿಸಿಕೊಳ್ಳುತ್ತಿದ್ದರು.

ಸಮಾಜದಲ್ಲಿ ವರ್ಣಾಶ್ರಮ ಪದ್ಧತಿ ಇತ್ತು. ಬ್ರಾಹ್ಮಣರು ವಿದ್ಯಾವಿನಯಸಂಪನ್ನರಾಗಿದ್ದು ಅಧ್ಯಯನ ಅಧ್ಯಾಪನಗಳಲ್ಲಿ ನಿರತರಾಗಿದ್ದರು. ಅರಸರಿಂದ ಗೌರವಿಸಲ್ಪಟ್ಟು ಅವರಿಗೆ ರಾಜನೀತಿಯಲ್ಲೂ ಸಲಹೆಗಳನ್ನು ನೀಡುತ್ತಿದ್ದರು. ಇಮ್ಮಡಿ ಪುಲಕೇಶಿಗೆ ನಾಗವರ್ಧನಾಚಾರ್ಯನೆಂಬಾತ, ಇಮ್ಮಡಿ ವಿಕ್ರಮಾದಿತ್ಯನಿಗೆ ಸುದರ್ಶನಾಚಾರ್ಯನೆಂಬಾತ ಗುರುವಾಗಿದ್ದರು. ಇಮ್ಮಡಿ ಕೀರ್ತಿವರ್ಮನ ಆಡಳಿತದಲ್ಲಿ ವ್ಯಾಘ್ರಸ್ವಾಮಿ ಎಂಬ ವೇದವೇದಾಂಗ ಪಾರಂಗತನೂ ನೀತಿಶಾಸ್ತ್ರ ವಿಶಾರದನೂ ಆದ ಬ್ರಾಹ್ಮಣನೋರ್ವ ಮಹೋಪಕಾರಕನಾಗಿದ್ದ.

ಅರಸನಿಗೆ ಬಾಲ್ಯದಿಂದಲೂ ಶಸ್ತ್ರಾಸ್ತ್ರಗಳಲ್ಲಿ, ರಾಜನೀತಿಯಲ್ಲಿ ಉಚಿತವಾದ ಉತ್ತಮವಾದ ತರಬೇತಿಯನ್ನು ನೀಡಲಾಗುತ್ತಿತ್ತು. ಮಂಗಲೀಶ ಕೋಟೆ ಕೊತ್ತಳಗಳ ರಚನೆಯಲ್ಲಿ ಪರಿಣತನೆಂದು ಮಹಾಕೂಟದ ಶಾಸನ ಅವನನ್ನು ಹೊಗಳಿದೆ. ತನ್ನ ಮಗನಾದ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯರಿಗೆ ವಿಕ್ರಮಾದಿತ್ಯ ಸೂಕ್ತ ತರಬೇತಿ ನೀಡಿದ್ದನೆಂಬುದು ತಿಳಿದಿದೆ. ವಾತಾಪಿ ಚತುರ್ದಶವಿದ್ಯೋಪಲಸಿತರಾದ ಅನೇಕ ಸಹಸ್ರ ದ್ವಿಜರಿಂದ ಶೋಭಿಸುತ್ತಿತ್ತೆಂಬ ಶಾಸನದ ಹೇಳಿಕೆಯನ್ನು ಗಮನಿಸಿದರೆ ಅಂದು ಅಂಥ ವಿದ್ಯೆಗಳನ್ನು ಕಲಿಸುವ ವಿದ್ಯಾಸಂಸ್ಥೆಗಳಿದ್ದುವೆಂಬುದು ಸ್ಪಷ್ಟವಾಗುತ್ತದೆ.

ಸಮಾಜದಲ್ಲಿ ಸ್ತ್ರೀಯರಿಗೆ ಗಣ್ಯವಾದ ಸ್ಥಾನವಿತ್ತು. ಅವರು ಆಡಳಿತದಲ್ಲಿಯೂ ಪಾಲುಗೊಳ್ಳುತ್ತಿದ್ದರು. ಚಂದ್ರಾದಿತ್ಯನ ರಾಣಿ ವಿಜಯ ಭಟ್ಟಾರಿಕಾ ತನ್ನ ಹೆಸರಿನಲ್ಲಿ ಎರಡು ದತ್ತಿಗಳನ್ನು ನೀಡಿದಳು. ವಿನಯಾದಿತ್ಯನ ಪತ್ನಿ ವಿನಯವತಿ ರಾಜಧಾನಿಯಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಮೂರ್ತಿಗಳನ್ನು ಸ್ಥಾಪಿಸಿದಳು. ಲೋಕತಿನಿಮ್ಮಡಿ ಎಂಬಾಕೆ ಕುರ್ತಕೋಟಿ ಗ್ರಾಮವನ್ನು ಆಳುತ್ತಿದ್ದಳು. ವಿನಯಾದಿತ್ಯನ ಮಗಳಾದ ಕುಂಕುಮ ಮಹಾದೇವಿ ತನ್ನ ಸೋದರ ವಿಜಯಾದಿತ್ಯನೊಡನೆ ಕುಹುಂಡಿನಗರವೆಂಬ ಸ್ಕಂಧಾವಾರದಲ್ಲಿದ್ದಳು. ಸ್ತ್ರೀಯರಿಗೆ ವಿದ್ಯಾಭ್ಯಾಸದ ಸೌಲಭ್ಯಗಳು, ಅವಕಾಶಗಳು ಇದ್ದವು. ಸ್ತ್ರೀಯರು ಉತ್ತಮ ಗೃಹಿಣಿಯರು ಮಾತ್ರವಲ್ಲದೆ ಅಧಿಕಾರಿಗಳೂ ಕಲಾಜೀವಿಗಳೂ ಆಗಿದ್ದರು. ವಿಜಯಾದಿತ್ಯನ ಪ್ರಾಣವಲ್ಲಭೆ ಎನಿಸಿಕೊಂಡ ವಿನಾಪೋಟಿ ಎಂಬ ಸೂಳೆ ಮಕುಟೇಶ್ವರ ದೇವರಿಗೆ ರತ್ನ ಹಾಗೂ ಬೆಳ್ಳಿಯ ಪೀಠಗಳನ್ನು ದಾನಮಾಡಿದಳೆಂದು ತಿಳಿದಿದೆ. ಈಕೆ ಕೂಚಿಪೋಟಿಯ ಮಗಳು. ಬಾಲಬ್ಬೆ ಮೊದಲಾದ ಇತರ ವಾರಾಂಗನೆಯರ ಹೆಸರುಗಳೂ ಈ ಕಾಲದ ಶಾಸನಗಳಲ್ಲಿ ಲಭಿಸಿವೆ. ಈ ಕಾಲದಲ್ಲಿ ದೇವದಾಸಿ ಪದ್ಧತಿ ಅಸ್ತಿತ್ವದಲ್ಲಿತ್ತು.

**ಮಾಲೆಗಿತ್ತಿ ಶಿವಾಲಯ, ಬಾದಾಮಿ**

**ಲಲಿತಕಲೆ ಸಾಹಿತ್ಯ:** ಈ ಕಾಲದಲ್ಲಿ ಶಿಲ್ಪಕಲೆ, ಗಾಂಧರ್ವಕಲೆ ಮುಂತಾದ ಕಲೆಗಳನ್ನು ಬೋಧಿಸುವ ಸಂಸ್ಥೆಗಳು ಇದ್ದಿರಬಹುದಾಗಿದೆ. ಐಹೊಳೆ, ಬಾದಾಮಿ, ಪಟ್ಟದಕಲ್ಲು ಹಾಗೂ ಮಹಾಕೂಟಗಳಲ್ಲಿ ಚಳುಕ್ಯ ವಾಸ್ತು ಶಿಲ್ಪ ಶೈಲಿಯು ಆರಂಭವಾಯಿತು. ಐಹೊಳೆ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಒಂದು ತರಬೇತಿ ಕೇಂದ್ರದಂತಿತ್ತು. ಅನಿವಾರಿತಾಚಾರಿ ಗುಣ್ಡನೆಂಬ ಶಿಲ್ಪಿಗೆ ಪೃಥ್ವಿಯ ಬಿನ್ನಾಣಿಗಳು ತ್ರಿಭುವನಾಚಾರಿ ಎಂಬ ಬಿರುದನ್ನಿತ್ತಿದ್ದರು. ಸರ್ವಸಿದ್ಧಿ ಆಚಾರ್ಯ ಎಂಬವ ಪಟ್ಟದಲ್ಲಿನ ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯಗಳನ್ನು ಕಟ್ಟಿದ ಸೂತ್ರಧಾರಿ. ಅನೇಕ ರೂಪವಾಸ್ತು ಪಿತಾಮಹನೆಂದೂ ವಾಸ್ತು ಪ್ರಾಸಾದಯಾನಾಸನಶಯನ ಮಣಿಮಕುಟರತ್ನ ಚೂಡಾಮಣಿಯೆಂದೂ ಶಾಸನ ಇವನನ್ನು ವರ್ಣಿಸಿರುವುದನ್ನು ಗಮನಿಸಿದರೆ ಈತ ಹಲವಾರು ನಗರಗಳನ್ನು ಯೋಜಿಸಿದನೆಂದೂ

ಅರಮನೆಗಳು ಸಿಂಹಾಸನಾದಿ ಪೀಠೋಪಕರಣಗಳನ್ನು ರೂಪಿಸಿದನೆಂದೂ ಊಹಿಸ ಬಹುದು. ಈತನ ಚಟ್ಟ ರೇವಡಿವಜ್ಜರ್. ಈತನನ್ನು ತೆಂಕಣ ದಿಶೆಯ ಸೂತ್ರಧಾರಿ ಎಂದು ವರ್ಣಿಸಲಾಗಿದೆ. ಶಿವವದ್ದನ ಮಾನ, ಆತನ ಮಗ ಶಿವ, ಮೊಮ್ಮಗ ಶುಭದೇವ ಮೂವರು ಈ ಕಾಲದ ಖ್ಯಾತ ಶಿಲ್ಪಿಗಳು. ಬಲದೇವ, ಆರ್ಯ, ಪುಲ್ಲಪ್ಪನ್ ನಿರ್ಮಾಣದೇವನ್, ಆರ್ಯಮಿಞ್ಚೆ ಉಪಾಧ್ಯಾಯ, ಏರಂಡರ ಗಣಚ, ದೋಣಸಾಮಿ, ಅಯ್ಯಸಾಮಿ, ಕುಲ್ಲುಚ್ಚೆ, ಕೊಟ್ಟಮಞ್ಚೆ ಎಂಬ ಹಲವಾರು ಶಿಲ್ಪಿಗಳ ಹೆಸರು ಸಮಕಾಲೀನ ಶಾಸನಗಳಿಂದ ತಿಳಿದಿದೆ.

**ಹುಚ್ಚಿಮಲ್ಲಿ ಗುಡಿ, ಐಹೊಳೆ**

ಇನ್ನೊಬ್ಬ ಶಿಲ್ಪಿ ನರಸೊಬ್ಬನಿಗೆ ಜಂಬೂದ್ವೀಪದಲ್ಲಿಯೇ ಸರಿಸಮಾನರು ಯಾರೂ ಇರಲಿಲ್ಲವೆಂಬುದು ಒಂದು ಶಾಸನದ ಉದ್ಗಾರ. ಗಂಧರ್ವದ ಪ್ರಸ್ತಾಪ ಇನ್ನೊಂದು ಶಾಸನದಲ್ಲಿದೆ. ಅಚಲನೆಂಬ ನಟನ ಗರ್ಜನೆಯನ್ನು ಕೇಳಿದೊಡನೆ ಉಳಿದೆಲ್ಲ ನಟರು ತಮ್ಮ ಅಹಂಕಾರವನ್ನು ಅಡಗಿಸಿಕೊಳ್ಳುತ್ತಿದ್ದರು ಎಂದು ಪಟ್ಟದಕಲ್ಲಿನ ಶಾಸನದಲ್ಲಿ ಹೇಳಿದೆ.

ಈ ಕಾಲದಲ್ಲಿ ಅರಸರ ಪೋಷಣೆಗೆ ಒಳಪಟ್ಟು ಸಂಸ್ಕೃತ ಸಾಹಿತ್ಯ ಕೃತಿಗಳು ರಚಿತವಾದವು. ಸಂಸ್ಕೃತ ಭಾಷೆಯಲ್ಲಿನ ಶಾಸನಗಳು ಸಹ ಅಂದಿನ ಸಾಹಿತ್ಯಕ್ಕೆ ಕೈಗನ್ನಡಿಗಳಾಗಿವೆ. ಮಂಗಲೀಶನ ಮಹಾಕೂಟಸ್ತಂಭ ಶಾಸನದಲ್ಲಿ ಕಾಳಿದಾಸನ ರಘುವಂಶ ಹಾಗೂ ರಾಮಾಯಣ ಮತ್ತು ಅರ್ಥಶಾಸ್ತ್ರಗಳಿಂದ ಅನೇಕ ಪದಗಳನ್ನೂ ಪದಪುಂಜಗಳನ್ನೂ ಎತ್ತಿಕೊಂಡಿರುವುದು ಕಂಡುಬರುತ್ತದೆ. ಶಾಸನದಲ್ಲಿನ ಗದ್ಯ ಬಾಣನ ಶೈಲಿಯನ್ನು ನೆನಪಿಗೆ ತರುತ್ತದೆ. ಇಮ್ಮಡಿ

**ಪಾಪನಾಥ ದೇವಾಲಯ, ಪಟ್ಟದಕಲ್ಲು**

ಪುಲಕೇಶಿಯ ಐಹೊಳೆ ಶಾಸನದ ಕರ್ತೃ ರವಿಕೀರ್ತಿ. ತಾನು ಕಾಳಿದಾಸ ಭಾರವಿಗಳಷ್ಟೇ ಖ್ಯಾತನೆಂದು ಹೇಳಿಕೊಂಡಿರುವುದು ಉತ್ಪ್ರೇಕ್ಷೆಯೆನಿಸಿದರೂ ಅವರ ಶೈಲಿಯ ಪ್ರಭಾವ ಶಾಸನದಲ್ಲಿ ಕಾಣುತ್ತದೆ. ಚಂದ್ರಾದಿತ್ಯನ ಪತ್ನಿ ವಿಜಯ ಭಟ್ಟಾರಿಕೆಯು ವಿಜ್ಜಿಕಾ ಎಂಬ ಕವಯಿತ್ರಿಯಾಗಿದ್ದಳೆಂದು ಊಹಿಸಲಾಗಿದೆ. ಆದರೆ ಈ ಕಾಲದ ಕನ್ನಡ ಸಾಹಿತ್ಯ ಕೃತಿಗಳು ಯಾವುವೂ ದೊರೆತಿಲ್ಲ. ವಿಮಲ, ಉದಯ (ವಿಮಲೋದಯ), ನಾಗಾರ್ಜುನ, ಜಯಬಂಧು, ದುರ್ವಿನೀತರೆಂಬ ಗದ್ಯಕವಿಗಳು, ಶ್ರೀವಿಜಯ, ಕವೀಶ್ವರ ಪರಮ ಶ್ರೀವಿಜಯ ಅಥವಾ ಶ್ರೀವಿಜಯ ಕವೀಶ್ವರ ಪಂಡಿತ, ಚಂದ್ರ ಮತ್ತು ಲೋಕಪಾಲ ಎಂಬ ಪದ್ಯಕವಿಗಳನ್ನು ಕವಿರಾಜಮಾರ್ಗಕಾರ ತನಗೂ ಹಿಂದಿನವರೆಂದು ಹೆಸರಿಸಿದ್ದಾನೆ. ಇವರ ಯಾವ ಕೃತಿಗಳೂ ಲಭಿಸಿಲ್ಲ. ಆದರೆ ಸಮಕಾಲೀನ ಶಾಸನ ಸಾಹಿತ್ಯವನ್ನು ಗಮನಿಸಿದಾಗ ಈ ವೇಳೆಗೆ ಕನ್ನಡ ಭಾಷೆಯಲ್ಲಿ ವಿಸ್ತಾರವಾದ ಸಾಹಿತ್ಯ ಗ್ರಂಥಗಳೂ ಇದ್ದಿರಬಹುದೆನಿಸುತ್ತದೆ. ಇಂಥ ಹಲವಾರು ಶಾಸನಗಳು ಬಾದಾಮಿ, ಐಹೊಳೆ ಮುಂತಾದೆಡೆಗಳಲ್ಲಿ ದೊರೆತಿವೆ. ಕಪ್ಪೆ ಅರಭಟ್ಟನ ಶಾಸನದಲ್ಲಿ ಕನ್ನಡ ಛಂದಸ್ಸಿನಲ್ಲಿ ಪ್ರಾಚೀನವಾದ ತ್ರಿಪದಿಯ ವೃತ್ತಗಳ ಉಪಯೋಗ ಕಂಡುಬಂದಿದೆ. ಚತ್ತಾಣ, ಬೆದಂಡೆ, ಗದ್ಯ ಕಥೆಗಳಂಥ ಕಾವ್ಯ ಪ್ರಕಾರಗಳು, ಪದ, ಮೆಲ್ವಾಡು, ಪಾಡು ಮುಂತಾದ ಸಾಹಿತ್ಯ ರೂಪಕಗಳು, ಪಗರಣವೆಂಬ ದೃಶ್ಯವಿಧಾನಗಳು ಈ ಕಾಲದ ಸಾಹಿತ್ಯದ ಪ್ರಮುಖ ವೈಶಿಷ್ಟ್ಯಗಳಾಗಿ ಬೆಳೆದಿದ್ದಿರಬಹುದು. (ಬಿ.ಆರ್.ಜಿ.)

**ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು**

**ಚಿತ್ರಕಲೆ:** ಈ ಕಾಲದ ಚಿತ್ರಕಲೆಯ ಅವಶೇಷಗಳು ಬಾದಾಮಿಯ 3ನೆಯ ಗುಹೆಯಲ್ಲಿ ಕಂಡುಬಂದಿವೆ. 578ರಲ್ಲಿ ನಿರ್ಮಿತವಾದ ಈ ಗುಹೆ ಪ್ರಾಯಶಃ ಪೂರ್ಣವಾಗಿ ಚಿತ್ರಾಲಂಕೃತವಾಗಿದ್ದಿರಬೇಕೆಂದು ಅನೇಕ ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಬಹುದು. ಈಗ ಉಳಿದಿರುವುವು ಕಪೋತದ ಒಳಭಾಗದಲ್ಲಿರುವ ಕೆಲವು ತುಣುಕುಗಳು ಮಾತ್ರ. ಈ ಭಿತ್ತಿಚಿತ್ರಗಳು ಅಜಂತದ ಚಿತ್ರ ಸಂಪ್ರದಾಯವನ್ನು ಹೋಲುತ್ತವೆ. ಆದರೂ ಅಜಂತದ ಚಿತ್ರಗಳ ಗುಣಮಟ್ಟ ಇವುಗಳಲ್ಲಿಲ್ಲ ಎಂಬುದು ಕಲಾಭಿಜ್ಞರ ಅಭಿಪ್ರಾಯ. ಇವುಗಳ ಬಣ್ಣಗಳು ಬಹಳವಾಗಿ ಮಾಸಿ ಹೋಗಿರುವುದರಿಂದ ಇವು ಸ್ಪಷ್ಟವಾಗಿಲ್ಲ. ರಾಜರಾಣಿಯರು ಆಸ್ಥಾನದಲ್ಲಿ ತಮ್ಮ ಪರಿವಾರ ಮತ್ತು ಭೃತ್ಯವರ್ಗದೊಡನೆ ನೃತ್ಯವೀಕ್ಷಣೆ ಮಾಡುತ್ತಿರುವುದು, ಇಂದ್ರನ ಆಸ್ಥಾನ, ಆಕಾಶದಲ್ಲಿ ಸಂಚರಿಸುತ್ತಿರುವ ವಿದ್ಯಾಧರ ದಂಪತಿಗಳು ಮುಂತಾದ ಚಿತ್ರಗಳಿದ್ದಂತಿವೆ. ರಚನೆಯಲ್ಲಿ ಅಥವಾ ಅವು ಉಳಿದಿರುವ ಸ್ಥಿತಿಯಲ್ಲಿ ಈ ಚಿತ್ರಗಳು ಬಹು ಉತ್ತಮವಾಗಿ ಕಾಣದಿದ್ದರೂ ಭಾರತದಲ್ಲಿ ಕಂಡುಬಂದಿರುವ ಹಿಂದು ದೇವಾಲಯದ ಭಿತ್ತಿ ಚಿತ್ರ ಸರಣಿಯಲ್ಲಿ ಇವೇ ಪ್ರಾಚೀನವಾದವೆಂಬ ಕಾರಣದಿಂದ ಇವಕ್ಕೆ ಪ್ರಾಮುಖ್ಯವಿದೆ. (ಎಸ್.ಎನ್.)

**ಶಾಸನಗಳು:** ಬಾದಾಮಿಯ ಚಳುಕ್ಯರ ಶಾಸನಗಳಲ್ಲಿ ಹೆಚ್ಚಿನವು ತಾಮ್ರ ಶಾಸನಗಳು. ಇವುಗಳ ಭಾಷೆ ಸಂಸ್ಕೃತ, ಲಿಪಿ ಕನ್ನಡ. ಆಲಂಪುರದಲ್ಲಿ ದೊರೆತ ಸಿದ್ಧಮಾತೃಕಾ ಲಿಪಿಯ ಶಾಸನ ಮತ್ತು ವಿನಯಾದಿತ್ಯನ ನಾಗರೀ ಲಿಪಿಯ ಶಾಸನ ಇಂಥ ಒಂದೆರಡನ್ನು ಹೊರತುಪಡಿಸಿ ಶಿಲಾ ಶಾಸನಗಳೆಲ್ಲವೂ ಕನ್ನಡ ಲಿಪಿಯಲ್ಲಿದ್ದು ಹೆಚ್ಚಿನವು ಕನ್ನಡ ಭಾಷೆಯಲ್ಲಿವೆ.

ಸಾಮಾನ್ಯವಾಗಿ ತಾಮ್ರ ಶಾಸನಗಳಲ್ಲಿ ಮಂಗಳವಾಕ್ಯ, ರಾಜಪ್ರಶಸ್ತಿ, ದಾನಕ್ಕೆ ಸಂಬಂಧಿಸಿದ ವಿವರಗಳು ಹಾಗೂ ಕೊನೆಯಲ್ಲಿ ಶಾಪರೂಪದ ಶ್ಲೋಕಗಳು ಇರುತ್ತವೆ. ವರಾಹಾವತಾರದ ವಿಷ್ಣುವನ್ನು ಸ್ತುತಿಸುವ ಜಯತ್ಯಾವಿಷ್ಕೃತಂ ವಿಷ್ಣೋಃ ವಾರಾಹಂ ಕ್ಷೋಭಿತಾರ್ಣವಂ ಎಂದು ಆರಂಭವಾಗುವ ಶ್ಲೋಕ ಮೊದಲಲ್ಲಿದ್ದು ಅನಂತರ ಚಳುಕ್ಯರು ಮಾನವ್ಯಸ ಗೋತ್ರದವರು ಹಾರೀತಿಪುತ್ರರು ಸಪ್ತಮಾತೃಗಳಿಂದಲೂ ಕಾರ್ತಿಕೇಯನಿಂದಲೂ ರಕ್ಷಿಸಲ್ಪಟ್ಟು ಕಲ್ಯಾಣವಂತರಾಗಿ ಭಗವನ್ನಾರಾಯಣನ ಪ್ರಸಾದದಿಂದ ವರಾಹಲಾಂಛನವನ್ನು ಪಡೆದು ಅನೇಕ ರಾಜರನ್ನು ಗೆದ್ದವರು ಎಂದು ಹೇಳಲಾಗಿರುತ್ತದೆ. ಶಿಲಾ ಶಾಸನಗಳಲ್ಲಿ ಇಂಥ ಪ್ರಶಸ್ತಿಗಳು ಕಾಣಿಸುವುದಿಲ್ಲ. ವಿಷಯವನ್ನು ಚುಟುಕಾಗಿ ಹೇಳುವ ಸಣ್ಣ ಶಾಸನ ಗಳಿವು. ಇವುಗಳಲ್ಲಿ ನೇರವಾಗಿ ರಾಜನ ಆಳಿಕೆಯ ಪ್ರಸ್ತಾಪವಿದ್ದು ಅರಸನ ಹೆಸರನ್ನು ಉಲ್ಲೇಖಿಸಿದ ಅನಂತರ ಸತ್ಯಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಎಂಬ ಬಿರುದುಗಳಿರುತ್ತವೆ.

ಇವರ ಶಾಸನಗಳಲ್ಲಿ ಕಾಲನಿರ್ದೇಶನವಿರುವುದು ಒಂದು ವೈಶಿಷ್ಟ್ಯ. ಒಂದನೆಯ ಪುಲಕೇಶಿ ಮತ್ತು ಕೀರ್ತಿವರ್ಮರ ಬಾದಾಮಿಯ ಶಾಸನಗಳು, ಮಂಗಲೀಶನ ಮಹಾಕೂಟದ ಶಾಸನ, ಇಮ್ಮಡಿ ಪುಲಕೇಶಿಯ ಐಹೊಳೆಯ ಶಾಸನ ಮುಂತಾದ ಶಿಲಾಶಾಸನಗಳಲ್ಲಿ ಕಾಲಕ್ಕೆ ಸಂಬಂಧಿಸಿದ ಶಕವರ್ಷ ಹಾಗೂ ಇತರ ವಿವರಗಳಿವೆ. ಆದರೆ ಶಿಲಾಶಾಸನಗಳಿಗಿಂತ ಹೆಚ್ಚಾಗಿ ತಾಮ್ರ ಶಾಸನಗಳಲ್ಲಿ ಈ ವಿವರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಅದರಲ್ಲಿಯೂ ವಿನಯಾದಿತ್ಯನ ಹಾಗೂ ಅನಂತರ ಆಳಿದ ಅರಸರ ತಾಮ್ರ ಶಾಸನಗಳಲ್ಲಿ ಇವು ಸಾಮಾನ್ಯವಾಗಿವೆ. ಮೊದಲ ಅರಸರ ತಾಮ್ರ ಶಾಸನಗಳಲ್ಲಿ, ಶಕವರ್ಷದ ಪ್ರಸ್ತಾಪ ಕೆಲವು ಶಾಸನಗಳಲ್ಲಿ ಮಾತ್ರ ಇವೆ. ರಾಜನ ಆಳಿಕೆಯ ವರ್ಷಗಳನ್ನು ಈ ಶಾಸನಗಳು ಸಾಮಾನ್ಯವಾಗಿ ಸೂಚಿಸಿವೆ. ಸಂವತ್ಸರದ ಹೆಸರುಗಳು

ಅಪರೂಪವಾಗಿ ಉಲ್ಲೇಖಿಸಲ್ಪಟ್ಟಿವೆ. ತಿಂಗಳು, ಪಕ್ಷ, ತಿಥಿಗಳ ವಿವರಗಳಿದ್ದರೂ ವಾರ ದಿನದ ಪ್ರಸ್ತಾಪ ಮಾತ್ರ ಇರುವುದಿಲ್ಲ. ಕನ್ನಡ ಭಾಷೆಯ ದಾನ ಶಾಸನಗಳಲ್ಲಿ ಇದ್ದತ್ತಿಯಾನಮಿದೋನ್ವಾರಣಾಸಿಯೊಳ್ ಸಾಸಿರ್ಪಾರ್ವ್ವರುಮಾನ್ ಸಾಸಿರ ಕವಿಲೆಯುಮಾನ್ಕೊನ್ದಲೋಕಕ್ಕೆ ಸನ್ದೋನಕ್ಕು ಮುಂತಾದ ಅದೇ ಭಾಷೆಯ ಶಾಪ ವಾಕ್ಯಗಳು ಕಾಣಸಿಗುತ್ತವೆ. ದಾನಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಈ ಶಾಸನಗಳಲ್ಲಿ ಕಾಣಲಾಗದು. ಶಾಸನ ಬರೆದ ಆಚಾರಿಯ ಹೆಸರುಗಳನ್ನು ಕೆಲವು ಸಂದರ್ಭಗಳಲ್ಲಿ ಕೊಟ್ಟಿವೆ. (ಬಿ.ಆರ್.ಜಿ)

ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ದೇವಾಲಯ (ವೇಸರ ಮಾದರಿಯದು)

**ನಾಣ್ಯಗಳು:** ಬಾದಾಮಿ ಚಳುಕ್ಯರ ಲಾಂಛನ ವರಾಹವಾಗಿದ್ದಿತ್ತು. ಆದುದರಿಂದ ವರಾಹದ ಚಿತ್ರವನ್ನುಳ್ಳ ಮತ್ತು ಬರೆಹವಿಲ್ಲದಿರುವ ಚಿನ್ನದ ನಾಣ್ಯಗಳು ಬಾದಾಮಿ ಚಳುಕ್ಯರ ನಾಣ್ಯಗಳೆಂದು ವಿದ್ವಾಂಸರು ಭಾವಿಸಿದ್ದಾರೆ. ಸು.50–60 ಗ್ರೇನ್ ತೂಕದ ಚಿನ್ನದ ನಾಣ್ಯಗಳ ಮೇಲೆ ಬಾದಾಮಿ ಚಳುಕ್ಯರ ವರಾಹ ಚಿತ್ರವನ್ನು ಮುದ್ರಿಸಲಾಗಿದೆ. ಕಾಲಕ್ರಮದಲ್ಲಿ ವರಾಹ ಚಿಹ್ನೆ ಇಲ್ಲದಿದ್ದರೂ ಈ ತೂಕದ ನಾಣ್ಯಗಳ ಮೇಲೆ ಬಾದಾಮಿ ಚಳುಕ್ಯರ ವರಾಹ ಚಿತ್ರವನ್ನು ಮುದ್ರಿಸಲಾಗಿದೆ. ಕಾಲಕ್ರಮದಲ್ಲಿ ವರಾಹ ಚಿಹ್ನೆ ಇಲ್ಲದಿದ್ದರೂ ಈ ತೂಕದ ನಾಣ್ಯಗಳಿಗೆ ವರಹ ಎಂದು ಹೆಸರಾಯಿತು. ನಾಣ್ಯಗಳಿಗೆ ವರಹ ಎಂಬ ಹೆಸರು ಬರಲು ಬಾದಾಮಿ ಚಳುಕ್ಯರ ವರಾಹ ಚಿಹ್ನೆಯೇ ಕಾರಣವೆಂದು ಎಲ್ಲ ವಿದ್ವಾಂಸರೂ ಒಪ್ಪಿದ್ದಾರೆ.

ಜೈನ ದೇವಾಲಯ, ಪಟ್ಟದಕಲ್ಲು

ಬಾದಾಮಿ ಚಳುಕ್ಯರ ನಾಣ್ಯಗಳು ಅಚ್ಚಿನಿಂದ ಮಾಡಿದವುಗಳು. ಇವರ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಈವರೆಗೆ ಬೆಳಕಿಗೆ ಬಂದಿವೆ. ಒಂದನೆಯ ವಿಕ್ರಮಾದಿತ್ಯನ ಚಿನ್ನದ ನಾಣ್ಯಗಳು 117 ಗ್ರೇನ್ ತೂಕ ಉಳ್ಳದ್ದಾಗಿವೆ. ವೃತ್ತಾಕಾರದ ಈ ನಾಣ್ಯಗಳ ವ್ಯಾಸ 0.76. ಇವುಗಳ ಮುಮ್ಮುಖದಲ್ಲಿ ಬಲಭಾಗಕ್ಕಿರುವ ವರಾಹವಿದೆ. ಇದರ ಮೇಲೆ ಸೂರ್ಯ ಮತ್ತು ಚಂದ್ರ, ಮುಂಭಾಗದಲ್ಲಿ ದೀಪಸ್ತಂಭ ಇವೆ. ವರಾಹದ ಕೆಳಭಾಗದಲ್ಲಿ ಶ್ರೀವಿಕ್ರಮ ಎಂಬ ಕನ್ನಡ ಲಿಪಿಯ ಬರೆಹವಿದೆ. ಈ ನಾಣ್ಯದ ಹಿಮ್ಮುಖದಲ್ಲಿ ನಿಂತಿರುವ ಮನುಷ್ಯನ ಚಿತ್ರವೂ ಸಣ್ಣ ವರಾಹವೂ ಎಡಭಾಗದಲ್ಲಿ ವಿಕ್ರಮ ಎಂಬ ಬರೆಹವೂ ಇವೆ. ಇದೇ ರಾಜನ ಚಿನ್ನ (ಶೇ.30) ಮತ್ತು ಬೆಳ್ಳಿ (ಶೇ.70) ಮಿಶ್ರಲೋಹದ ನಾಣ್ಯವೂ ದೊರಕಿದೆ. ಇದರ ತೂಕ 153 ಗ್ರೇನ್, ಇದು ಚಿನ್ನದ ನಾಣ್ಯದ ಮಾದರಿಯಲ್ಲೇ ಇದ್ದರೂ ಕೆಲ ಬದಲಾವಣೆಗಳನ್ನು ತೋರಿಸುತ್ತದೆ. ಮುಮ್ಮುಖದಲ್ಲಿ ಶ್ರೀ ವಿಕ್ರಮರಾಜ ಎಂಬ ಬರೆವಣಿಗೆಯಿದೆ. ಹಿಮ್ಮುಖದಲ್ಲಿ ಶ್ರೀವಿಕ್ರಮ ಮಹಾರಾಜ ಎಂಬ ಕನ್ನಡ ಲಿಪಿಯ ಬರೆಹವೂ ನವಿಲುಗರಿಯನ್ನು ಧರಿಸಿರುವ ಮನುಷ್ಯನ ಚಿತ್ರವೂ ಇವೆ. ಈ ಎರಡು ನಾಣ್ಯಗಳು ಖಚಿತವಾಗಿ ಬಾದಾಮಿ ಚಳುಕ್ಯರಿಗೆ ಸೇರಿದವು. 50–60 ಗ್ರೇನ್ ತೂಕಕ್ಕಿಂಥ ಭಿನ್ನವಾಗಿರುವ ಈ ನಾಣ್ಯಗಳ ತೂಕ ಗಮನಾರ್ಹವಾದುದು. ಈ ತೂಕ ಗುಪ್ತರ ಚಿನ್ನದ ನಾಣ್ಯಗಳಿಗೆ ಸಮೀಪವಾಗಿದೆ.

ಎಂ.ಎಚ್.ಕೃಷ್ಣ ಅವರು ಚಿನ್ನದ ನಾಣ್ಯವೊಂದನ್ನು ಒಂದನೆಯ ಪುಲಕೇಶಿಯದೆಂದು ಭಾವಿಸುತ್ತಾರೆ. ಇದರ ತೂಕ 57.2 ಗ್ರೇನ್ ಮತ್ತು ವ್ಯಾಸ 0.55". ಇದರ ಮುಮ್ಮುಖದಲ್ಲಿ ಅಲಂಕೃತ ವರಾಹವಿದೆ. ಅದರ ಮೇಲೆ ಸೂರ್ಯ ಮತ್ತು ಚಂದ್ರ, ಹಿಮ್ಮುಖದಲ್ಲಿ ಅಷ್ಟದಳ ಪದ್ಮವಿದೆ. ಈ ಪದ್ಮ ಕದಂಬರ ಚಿಹ್ನೆಯೆಂದು ಭಾವಿಸಿ ಕದಂಬರನ್ನು ಸೋಲಿಸಿದುದರ ನೆನಪಾಗಿ ಈ ನಾಣ್ಯಗಳನ್ನು ಪುಲಕೇಶಿ ಅಚ್ಚುಮಾಡಿಸಿರಬೇಕೆಂದು ಕೃಷ್ಣ ಅವರು ಭಾವಿಸುತ್ತಾರೆ. ಆದರೆ ಇದರಲ್ಲಿ ಖಚಿತತೆಯಿಲ್ಲ. ಎಲಿಯಟ್ ಅವರು 66 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಬಾದಾಮಿ ಚಳುಕ್ಯರ ನಾಣ್ಯಗಳೆಂದು ಭಾವಿಸುತ್ತಾರೆ. ಒಂದು ನಾಣ್ಯದ ಮುಮ್ಮುಖದಲ್ಲಿ ಅಲಂಕೃತವಾದ ವರಾಹವಿದೆ. ಹಿಮ್ಮುಖದಲ್ಲಿ ಎಂಟು ದಳದ ಪದ್ಮದ ಚಿತ್ರವಿದೆ. ಮತ್ತೊಂದು ನಾಣ್ಯದಲ್ಲಿ ಅಲಂಕಾರವಿಲ್ಲದಿರುವ ವರಾಹ, ಹಿಮ್ಮುಖದಲ್ಲಿ ಪುಷ್ಪದ ನಮೂನೆಗಳಿವೆ. ಇವುಗಳಲ್ಲಿ ಬರೆವಣಿಗೆ ಇಲ್ಲದೆ ಇರುವುದರಿಂದ ಇವು ಯಾವ ರಾಜರ ನಾಣ್ಯಗಳು ಎಂಬುದು ತಿಳಿದಿಲ್ಲ. ಆದರೆ ವರಾಹ ಚಿತ್ರವಿರುವುದರಿಂದ ಇವು ಬಾದಾಮಿ ಚಳುಕ್ಯರ ನಾಣ್ಯಗಳೆಂದು ಊಹಿಸಬಹುದು. ಶ್ರೀರಣವಿಕ್ರಮ ಹಾಗೂ ಶ್ರೀಪೃಥಿವೀ ಎಂಬ ಬರೆಹವಿರುವ ನಾಣ್ಯಗಳನ್ನು ಒಂದನೆಯ ಪುಲಕೇಶಿಗೆ ಅನ್ವಯಿಸಲಾಗಿದೆ. ಹಾಗೆಯೇ ಶ್ರೀಕೃತರಾಜ ಎಂಬ ಬರೆಹವಿರುವ ನಾಣ್ಯವನ್ನು ಒಂದನೆಯ ಕೀರ್ತಿವರ್ಮನದೆಂದು ಭಾವಿಸಲಾಗಿದೆ. ಇಮ್ಮಡಿ ಪುಲಕೇಶಿಯ ತಾಮ್ರದ ನಾಣ್ಯಗಳು ಈಚೆಗೆ ಎಲಿಫೆಂಟ ದ್ವೀಪದಲ್ಲಿ ದೊರೆತಿದ್ದು, ಅವುಗಳ ಮುಮ್ಮುಖದಲ್ಲಿ ಶ್ರೀ ಸತ್ಯಾಶ್ರಯ ಎಂಬ ಬರೆಹ ಹಾಗೂ ಹಿಮ್ಮುಖದಲ್ಲಿ ವೃಷಭ ಚಿತ್ರಗಳಿವೆ. ಶ್ರೀ ವಿಕ್ರಮ ಎಂಬ ಬರೆಹವಿರುವ ಚಿನ್ನದ ನಾಣ್ಯ ಮೊದಲನೆಯ ವಿಕ್ರಮಾದಿತ್ಯನದೆಂದು ಪರಿಗಣಿಸಲಾಗಿದೆ. (ಎ.ವಿ.ಎನ್.)

ಜಂಬುಲಿಂಗ ದೇವಾಲಯ, ಪಟ್ಟದಕಲ್ಲು

**ವಾಸ್ತು ಮತ್ತು ಮೂರ್ತಿಶಿಲ್ಪ:** 543 ರಿಂದ 757ರ ವರೆಗೆ ಆಳಿದ ಚಳುಕ್ಯರು ತಮ್ಮ ರಾಜಧಾನಿ ಬಾದಾಮಿಯಲ್ಲಿ ಮತ್ತು ಅದರ ಸಮೀಪದ ಮಹಾಕೂಟ, ಪಟ್ಟದಕಲ್ಲು, ಐಹೊಳೆ, ನಾಗರಾಳ ಹಾಗೂ ಕೆಲೂರು ಅಲ್ಲದೆ ಆಂಧ್ರಪ್ರದೇಶದ ಮೆಹಬೂಬ ನಗರ ಜಿಲ್ಲೆಯ ಆಲಂಪುರ, ಕೂಡವೇಲಿ, ಕರ್ನೂಲು ಜಿಲ್ಲೆಯ ಸತ್ಯವೋಲು ಮತ್ತು ಮಹಾನಂದಿ ಮುಂತಾದೆಡೆ ಮುಖ್ಯ ವಾಸ್ತು ಕೃತಿಗಳನ್ನು ನಿರ್ಮಿಸಿದರು. ಇವರ ಕಾಲದ ರಚನೆಗಳನ್ನು ಕ್ಷಾತ್ರವಾಸ್ತು ಮತ್ತು ಧಾರ್ಮಿಕವಾಸ್ತು ಎಂದು ವಿಂಗಡಿಸಬಹುದು.

ಕ್ಷಾತ್ರವಾಸ್ತು: ಕ್ಷಾತ್ರವಾಸ್ತುವಿನ ಅವಶೇಷಗಳು ಬಾದಾಮಿ ಮತ್ತು ಐಹೊಳೆಯಲ್ಲಿವೆ. ಬಾದಾಮಿಯ ಉತ್ತರ ಕೋಟೆಯ ಮೂಲ ಭಾಗಗಳನ್ನು ರಚಿಸಿದವರು ಚಳುಕ್ಯರೇ. ಕಾಲಾನುಕ್ರಮದಲ್ಲಿ ವಿಜಯನಗರೋತ್ತರ ಕಾಲದವರೆಗೂ ಅದು ಸಾಕಷ್ಟು ಜೀರ್ಣೋದ್ಧಾರ ಕಂಡಿದೆ. ಮೂಲ ಕೋಟೆ ಗಿರಿದುರ್ಗದಂತಿದ್ದು ಎತ್ತರವಾಗಿ ಎದ್ದು ನಿಂತಿರುವ ಬೃಹತ್ ಬಂಡೆಗಳ ನಡುವಣ ಅಂತರಗಳನ್ನು ಮತ್ತು ಬಿರುಕುಗಳನ್ನು ಘನಾಕೃತಿಯ ಕಲ್ಲುಗಳಿಂದ ಗೋಡೆ ಕಟ್ಟಿ ತುಂಬಲಾಗಿದೆ. ಗೋಡೆಯ ರಚನೆಯಲ್ಲಿ ಬಂಧಕ ಸಾಮಗ್ರಿಯ ಬಳಕೆಯಾಗಿಲ್ಲ. ಮೇಲಿನಿಂದಲೂ ಕೆಳಗಿನಿಂದಲೂ ಬಾದಾಮಿಯ ದುರ್ಗ ಅಭೇದ್ಯವಾಗಿತ್ತೆಂದು ಅಲ್ಲಿಯ ಶಾಸನದಲ್ಲಿ ಹೇಳಿರುವುದರಿಂದ ಈ ಕೋಟೆಗೆ ಕೆಳಭಾಗ ಮತ್ತು ಮೇಲ್ಭಾಗಗಳೆರಡರಲ್ಲೂ ಸುತ್ತುಗಳಿದ್ದಿರಬೇಕು. ಐಹೊಳೆಯಲ್ಲಿಯೂ ಕೋಟೆಯ ಕೆಲಭಾಗಗಳು ಮೂಲತಃ ಚಳುಕ್ಯರ

ಕಾಲದ್ದಿರಬಹುದಾದರೂ ಈಗಿರುವ ಸ್ವರೂಪದಲ್ಲಿ ಅದು 9–10ನೆಯ ಶತಮಾನದ್ದು. ಇದನ್ನೂ ಯಾವುದೇ ಬಂಧಕ ಸಾಮಗ್ರಿಯನ್ನು ಬಳಸದೇ ಆಯತಾಕಾರ / ಚೌಕೋನ ದೊಡ್ಡ ದೊಡ್ಡ ಗಟ್ಟಿ ಕಲ್ಲುಗಳಿಂದ ರಚಿಸಲಾಗಿದೆ. ನಿರ್ದಿಷ್ಟ ಅಂತರಗಳಲ್ಲಿ ಚೌಕಾಕಾರದ ಬುರುಜುಗಳಿವೆ. ಸುತ್ತಲೂ ಕಂದಕವಿದ್ದಿರಬೇಕು.



ಬಾದಾಮಿ ದೇವಾಲಯಗಳ ವಿಹಂಗಮ ನೋಟ

ದೇಗುಲ ವಾಸ್ತು: ಚಳುಕ್ಯರ ಕಾಲದಿಂದ ಉಳಿದುಬಂದಿರುವ ಧಾರ್ಮಿಕವಾಸ್ತು ಉದಾಹರಣೆಗಳು ಅಪಾರ. ಸಂಖ್ಯೆ ಮತ್ತು ವೈಶಿಷ್ಟ್ಯಗಳಿಂದಾಗಿ ಇವು ವಿಶ್ವಾದ್ಯಂತ ಕಲಾಪ್ರೇಮಿ ಗಳ ಮನಸೆಳೆದಿವೆ. ಹೀಗಾಗಿ ಸಾಕಷ್ಟು ಪ್ರಮಾಣದಲ್ಲಿ ಅವುಗಳ ಬಗ್ಗೆ ಸಂಶೋಧನೆಗಳಾಗಿವೆ ಮತ್ತು ಸಾಹಿತ್ಯ ಪ್ರಕಟವಾಗಿದೆ. ಇವುಗಳನ್ನು ಗುಹೆಗಳು (ಲಯಣಗಳು, ಕಲ್ಮನೆಗಳು) ಮತ್ತು ಕಟ್ಟಡಗಳು ಎಂದು ವರ್ಗೀಕರಿಸಬಹುದು.

ಗುಹಾಲಯಗಳು: ಬಾದಾಮಿಯಲ್ಲಿ ಮೇಣಬಸ್ತಿಗಳೆಂದು ಕರೆಯಲಾಗುವ ನಾಲ್ಕು ಗುಹಾದೇಗುಲಗಳು ಹಾಗೂ ಐಹೊಳೆಯಲ್ಲಿ ರಾವಳಫಡಿ ಶೈವಗುಹೆ ಮತ್ತು ಇನ್ನೆರಡು ಜೈನಗುಹೆಗಳು ಇವೆ. ಇವಲ್ಲದೆ ಬೌದ್ಧಧರ್ಮಕ್ಕೆ ಸಂಬಂಧಿಸಿದ ಒಂದು ನೈಸರ್ಗಿಕ ಗುಹೆ ಬಾದಾಮಿಯ ಎರಡನೆಯ ಮತ್ತು ಮೂರನೆಯ ಗುಹೆಗಳ ಮಧ್ಯಂತರದಲ್ಲಿ ಇದೆ. ಐಹೊಳೆಯ ಮೇಗುಟಿ ಬೆಟ್ಟದ ಉತ್ತರ ಮುಖದಲ್ಲಿ ಭಾಗಶಃ ಬಂಡೆಯಲ್ಲಿ ಕೊರೆದಿರುವ ಭಾಗಶಃ ಕಟ್ಟಡರೀತಿಯಲ್ಲಿ ರಚಿಸಿದ ಬೌದ್ಧ ಚೈತ್ಯಾಲಯವಿದೆ. ಇವೆಲ್ಲವೂ ನಸುಗೆಂಪು ಮರಳುಗಲ್ಲು ಗುಡ್ಡಗಳ ಕಡಿದಾದ ಮುಖದೊಳಕ್ಕೆ ಕೊರೆಯಲ್ಪಟ್ಟಿವೆ. ಬಾದಾಮಿಯ ನಾಲ್ಕು ಗುಹಾಲಯಗಳಲ್ಲಿ ಮೊದಲನೆಯದು ಶೈವ, ಎರಡು ಮತ್ತು ಮೂರನೆಯವು ವೈಷ್ಣವ ಹಾಗೂ ನಾಲ್ಕನೆಯದು ಜೈನ ಸಂಪ್ರದಾಯಕ್ಕೆ ಸೇರಿವೆ. ಎಲ್ಲವೂ ಹೆಚ್ಚುಕಡಿಮೆ ಉತ್ತರಾಭಿಮುಖವಾಗಿವೆ. ಇವು ವಿನ್ಯಾಸದಲ್ಲಿ ಸುಮಾರು ಒಂದೇ ಪ್ರಕಾರದ್ದಾಗಿವೆ. ಮುಖಮಂಟಪ, ಸಭಾಮಂಟಪ ಮತ್ತು ತುಸು ಎತ್ತರಮಟ್ಟದಲ್ಲಿ ಹಿಂಗೋಡೆಯಲ್ಲಿ ಕೊರೆದಿರುವ ಚಿಕ್ಕ ಗರ್ಭಗೃಹ ಇವು ಮುಖ್ಯ ಭಾಗಗಳು. ಬಾದಾಮಿಯ ಮೊದಲ ಮೂರು ಗುಹೆಗಳು ಗಾತ್ರದಲ್ಲಿ ವ್ಯತ್ಯಾಸಪೂರಿತವಾಗಿದ್ದರೂ ಒಂದೇ ವಿನ್ಯಾಸಕ್ಕೆ ಬದ್ಧವಾಗಿವೆ. ನಾಲ್ಕನೆಯ ಗುಹೆಯಲ್ಲಿ ಮಾತ್ರ ಸಭಾಮಂಟಪವಿಲ್ಲ; ಆ ಸ್ಥಾನದಲ್ಲಿ ಮುಖಮಂಟಪದಷ್ಟೇ ಅಗಲವುಳ್ಳ ಚಿಕ್ಕ ಅಂತರಾಳ ಇದೆ. ಮೊದಲನೆಯ ಗುಹೆಯ ಪಶ್ಚಿಮಪಾರ್ಶ್ವದಲ್ಲಿ ದುರ್ಗಾ–ಗಣೇಶ–ಕಾರ್ತಿಕೇಯರಿಗಾಗಿ ಒಂದು ಚಿಕ್ಕಕೋಣೆಯನ್ನು ಕೊರೆದಿದೆ. ಈ ಎಲ್ಲ ಗುಹಾಲಯಗಳ ಮುಖಮಂಟಪದ ಮತ್ತು ಅದರಿಂದ ತುಸು ಮುಂಚಾಚಿರುವ ಪಾರ್ಶ್ವಗಳ ಗೋಡೆಗಳು ದೊಡ್ಡಗಾತ್ರದ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿವೆ. ಹಾಗೆಯೇ ಕಂಬಗಳ ಮುಖಗಳು, ಬೋದಿಗೆಗಳು, ಚಾವಣಿಗಳು ಸುಂದರ ಶಿಲ್ಪಗಳಿಂದ ಆವೃತವಾಗಿವೆ. ಅತಿ ದೊಡ್ಡದಾಗಿರುವ ಮೂರನೆಯ ಗುಹಾಲಯದಲ್ಲಿ ದೇವದಂಪತಿಗಳ, ಮಿಥುನಗಳ ಬೋದಿಗೆ ಶಿಲ್ಪಗಳಿರುವುದು ಉಲ್ಲೇಖನೀಯ. ಮೊದಲ ಮೂರು ಗುಹಾಲಯಗಳ ಜಂತಿಯಲ್ಲಿ ಸಮುದ್ರಮಥನ, ಕೃಷ್ಣಚರಿತ, ಪಾರ್ವತೀ ಕಲ್ಯಾಣ ಮುಂತಾದ ಪೌರಾಣಿಕ ಕಥಾನಿರೂಪಕ ಶಿಲ್ಪಗಳಿವೆ. ಶಿಲ್ಪಗಳೇ ಈ ಗುಹಾಲಯಗಳ ಅತ್ಯಾಕರ್ಷಕ ಅಂಶಗಳು.

ಲಾಡಖಾನ್ ದೇವಾಲಯದ ಒಂದು ಮಿಥುನ ಶಿಲ್ಪ, ಐಹೊಳೆ

ಒಳಚಾವಣಿಯ ಮೇಲೆ ಬಿಡಿಸಲಾಗಿರುವ ಕಾರ್ತಿಕೇಯ. ಹುಚ್ಚುಮಲ್ಲಿ ಗುಡಿ, ಐಹೊಳೆ

ಬಾದಾಮಿಯ ನಾಲ್ಕು ಗುಹಾಲಯಗಳಲ್ಲಿ ಕಾಲನಿರ್ಣೀತವಾಗಿರುವದೆಂದರೆ ಮೂರನೆಯ ವೈಷ್ಣವ ಗುಹೆ ಮಾತ್ರ. ಇದು ಮುಂದುಗಡೆ ವಿಶಾಲ ಅಂಗಳವನ್ನು ರೂಪಿಸಿರುವ ವಿಶಿಷ್ಟ ಪ್ರಾಕಾರ, ದ್ವಾರವಿರುವ ಏಕಮೇವ ಗುಹಾಲಯವಾಗಿದೆ. ಇದರಲ್ಲಿರುವ ಒಂದನೆಯ ಕೀರ್ತಿವರ್ಮನ ಆಳ್ವಿಕೆಯ 12ನೆಯ ವರ್ಷದಲ್ಲಿ ಮಂಗಲೀಶನು ಕೊರೆಸಿರುವ ಶಾಸನವನ್ನು 578ರಲ್ಲಿ ಪ್ರಕಟಿಸಲಾಯಿತು. ಇದರಲ್ಲಿ ಈ ಗುಹಾಲಯವನ್ನು ಮಹಾವಿಷ್ಣುಗೃಹ ಎಂದು ಕರೆದಿದೆಯಲ್ಲದೆ ಮಂಗಲೀಶ ಇದನ್ನು ನಿರ್ಮಿಸಿದನೆಂದು ಹೇಳುತ್ತದೆ. ಶಾಸನದಲ್ಲಿರುವ ವರ್ಣನೆಯನ್ನನುಲಕ್ಷಿಸಿದರೆ ಇದನ್ನು ಪೂರ್ತಿಗೊಳಿಸುವಾಗ ಆಗಲೇ ಪರಿಸರದಲ್ಲಿ ಇತರ ಗುಹಾಲಯಗಳಿದ್ದವೆಂಬ ಸೂಚನೆ ಕಾಣುತ್ತದೆ. ಈ ಆಧಾರದ ಮೇಲೆ ಮತ್ತು ಅವುಗಳಿರುವ ಮಟ್ಟ ಹಾಗೂ ಶಿಲ್ಪಶೈಲಿ ವೈವಿಧ್ಯದ ಆಧಾರದ ಮೇಲೆ ಬಾದಾಮಿಯ ಗುಹಾಲಯಗಳು 1, 2, 3 ಮತ್ತು 4 ಕ್ರಮದಲ್ಲಿ ಕೊರೆಯಲ್ಪಟ್ಟಿರುವ ಸಾಧ್ಯತೆ ಹೆಚ್ಚು. ಕೆಲವು ವಿದ್ವಾಂಸರು 3ನೆಯ ಗುಹಾಲಯವೇ ಮೊದಲು ನಿರ್ಮಾಣವಾಯಿತೆಂದೂ ಇನ್ನು ಕೆಲವರು 4, 3, 2, 1 ಕ್ರಮದಲ್ಲಿ ಇವು ನಿರ್ಮಾಣವಾಗಿವೆಯೆಂದೂ ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಭಾರತದ ಗುಹಾವಾಸ್ತು ಪರಂಪರೆಯಲ್ಲಿ ಬಹುಶಃ ಚಳುಕ್ಯ ಗುಹಾಲಯಗಳೇ ಪ್ರಾಚೀನತಮವಾದವುಗಳು ಎಂಬ ಅಭಿಪ್ರಾಯವಿದೆ.

ಐಹೊಳೆಯ ರಾವಳಫಡಿ ಶೈವಗುಹೆಯ ವಿನ್ಯಾಸ ಬೇರೆ ರೀತಿಯದು. ಮೆಟ್ಟಿಲು ಏರಿದರೆ ನೇರವಾಗಿ ಚೌಕ ಮಂಟಪದೊಳಗೆ ಪ್ರವೇಶವಾಗುತ್ತದೆ. ಇದರ ಎಡ ಬಲಗಳಲ್ಲಿ ಮಂಟಪಗಳಿವೆ. ಅಂತರಾಳ ಗರ್ಭಗೃಹಗಳು ದ್ವಾರದ ಎದುರುಗಿದೆ. ಪಾರ್ಶ್ವಗೋಡೆಗಳಲ್ಲಿ ದುರ್ಗಾಭಗವತಿ ಮತ್ತು ಭೂವರಾಹ ಉಬ್ಬು ಶಿಲ್ಪಗಳಿವೆ. ಅದರಂತೆ ಮಧ್ಯಮಂಟಪದ ಗೋಡೆಗಳಲ್ಲಿ ಅರ್ಧನಾರೀಶ್ವರ, ಗಂಗಾಧರ, ಹರಿಹರ, ಶಿವದ್ವಾರಪಾಲ ಮುಂತಾದ ದೊಡ್ಡ ಶಿಲ್ಪಗಳಿವೆ. ಪಾರ್ಶ್ವಮಂಟಪದಲ್ಲಿರುವ ಪಾರ್ವತೀಸಹಿತನಾಗಿ ಸಪ್ತಮಾತೃಕೆಯರೊಂದಿಗೆ ನರ್ತಿಸುತ್ತಿರುವ ದಶಭುಜ ನಟರಾಜನ ಶಿಲ್ಪ ಅಪೂರ್ವವಾದುದು. ಚಾವಣಿಯ ಅಲಂಕಾರವು ಹಂದರದ ಚಾವಣಿಬಟ್ಟೆಯ ಚಿತ್ರವಿನ್ಯಾಸವನ್ನು ನೆನಪಿಸುತ್ತದೆ. ಈ ಗುಹಾಲಯದ ಶಿಲ್ಪಗಳೆಲ್ಲ ನಿರ್ದಿಷ್ಟ ಶೈಲಿಗೆ ಬದ್ಧವಾಗಿವೆ. ಗುಹಾಲಯದ ಮುಂದುಗಡೆ ಅನತಿ ದೂರದಲ್ಲಿ ನಂದಿಯಿದ್ದು ಅದಾದನಂತರ ಮಹಾಕೂಟದಲ್ಲಿ ಮಂಗಲೀಶನು 597ರಲ್ಲಿ ನಿಲ್ಲಿಸಿದ (ಈಗ ಬಿಜಾಪುರದ ಗೋಳಗುಮ್ಮಟದ ಮುಂದಿರುವ ಪುರಾತತ್ತ್ವವಸ್ತುಸಂಗ್ರಹಾಲಯದಲ್ಲಿರುವ) ಧರ್ಮಜಯಸ್ತಂಭವನ್ನು ಹೋಲುವ ಸ್ತಂಭವನ್ನು ನಿಲ್ಲಿಸಲಾಗಿದೆ.

ಐಹೊಳೆಯ ಜೈನಗುಹೆ ಮೂಲತಃ ಮುಂಭಾಗ ತೆರೆದುಕೊಂಡಿರುವ ಮುಖಮಂಟಪ, ಚೌಕ ಮಧ್ಯಮಂಟಪ, ಅದರ ಎಡ ಬಲಗಳಲ್ಲಿ ಅಧಿಷ್ಠಾನದ ಮೇಲಿರುವ ಮಂಟಪಗಳು, ಹಿಂಭಾಗದಲ್ಲಿ ಅಧಿಷ್ಠಾನದ ಮೇಲಿರುವ ಗರ್ಭಗೃಹ ಭಾಗಗಳನ್ನೊಳಗೊಂಡಿದೆ. ಅನಂತರದ ಕಾಲದಲ್ಲಿ ಮುಖಮಂಟಪದ ತೆರೆದ ಮುಂಭಾಗವನ್ನು ಕಟೆದ ಘನಾಕೃತಿಯ ದೊಡ್ಡ

ಕಲ್ಲುಗಳನ್ನು ಪೇರಿಸಿ ಮುಚ್ಚಲಾಗಿದೆ. ಮುಖಮಂಟಪದ ಗೋಡೆಗಳಲ್ಲಿ ಬಾಹುಬಲಿ ಮತ್ತು ಕಮಠೋಪಸರ್ಗ ಪಾರ್ಶ್ವನಾಥ ಶಿಲ್ಪಗಳಿವೆ. ಮಧ್ಯಮಂಟಪದ ಒಂದು ಪಾರ್ಶ್ವದಲ್ಲಿರುವ ಚಿಕ್ಕ ಮಂಟಪದಲ್ಲಿ ಪಾರ್ಶ್ವನಾಥನ ಕೇವಲಜ್ಞಾನ ಕಲ್ಯಾಣದ ಸಂಕ್ಷಿಪ್ತ ನಿರೂಪಣೆಯಿದೆ. ಗರ್ಭಗೃಹದಲ್ಲಿ (ಗಂಧಕುಟಿಯಲ್ಲಿ) ಧ್ಯಾನಮುದ್ರೆಯಲ್ಲಿ ಜಿನಶಾಸನವನ್ನರುಹುವ ಜಿನನ ಶಿಲ್ಪವಿದೆ. ಈ ಗುಹೆಯ ಚಾವಣಿಯ ಶಿಲ್ಪಾಲಂಕಾರವೂ ಹಂದರದ ಚಾವಣಿಬಟ್ಟೆಯ ವಿನ್ಯಾಸವನ್ನು ನೆನಪಿಸುತ್ತದೆ. ಮುಖಮಂಟಪವನ್ನು ಹೊರತುಪಡಿಸಿದರೆ ಈ ಜಿನಾಲಯದ ವಿನ್ಯಾಸ ರಾವಳಫಡಿ ಶೈವಗುಹೆಯನ್ನೇ ಹೋಲುತ್ತದೆ. ಮಹಾದಿವ್ಯ ಉತುಣ ಎಂಬವನು ಈ ಗುಹಾಲಯದ ಸ್ಥಪತಿ–ಶಿಲ್ಪಿಗಳಲ್ಲಿ ಒಬ್ಬನೆಂದು ಈ ಪರಿಸರದ ಶಾಸನದಿಂದ ತಿಳಿಯುತ್ತದೆ.

**ಬ್ರಹ್ಮವಿಗ್ರಹ, ಕೊಂತಿಗುಡಿ, ಐಹೊಳೆ**

ಐಹೊಳೆಯ ಮೇಗುಟಿ ಬೆಟ್ಟದ ಉತ್ತರಮುಖದಲ್ಲಿರುವ ಬೌದ್ಧಚೈತ್ಯಾಲಯ ಅರೆಗುಹಾಮಾದರಿಯ ರಚನೆ. ಹಿಂಭಾಗವನ್ನು ಬಂಡೆಕೊರೆದು ನಿರ್ಮಿಸಲಾಗಿದ್ದರೂ ಮುಂಭಾಗವನ್ನು ಮಾತ್ರ ಎರಡು ಮಹಡಿಯಲ್ಲಿ ಕಟ್ಟಿ ನಿರ್ಮಿಸಲಾಗಿದೆ. ಇದರಲ್ಲಿ ಪ್ರತಿಷ್ಠಾಪಿಸಲಾಗಿದ್ದ ಬೌದ್ಧವಿಗ್ರಹಗಳಲ್ಲಿ ಒಂದು. ಈ ಕಟ್ಟಡದ ಸಮೀಪ, ಮತ್ತೊಂದು ಐಹೊಳೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿವೆ. ಮೇಲ್ಮಹಡಿಯ ಚಾವಣಿಯಲ್ಲಿ ಸಿದ್ಧಾಸನ ಸ್ಥಿತ, ಮುಕ್ಕೊಡೆಯಡಿಯಲ್ಲಿ ಅರ್ಧಪರ್ಯಂಕಾಸನದಲ್ಲಿರುವ ವ್ಯಾಖ್ಯಾನಬುದ್ಧನ ಅಪರೂಪದ ಉಬ್ಬುಶಿಲ್ಪವಿದೆ. ಈ ಚೈತ್ಯಾಲಯದ ದ್ವಾರಬಂಧದ ತೋಳುಗಳಲ್ಲಿ ಬುದ್ಧನ ಜೀವನದ ಘಟನೆಗಳು, ಜಾತಕ ಕಥೆಗಳು ಮುಂತಾದವುಗಳ ಚಿಕಣಿಶಿಲ್ಪಗಳಿವೆ.

ಐಹೊಳೆಯ ಗುಹಾಲಯಗಳ ಕಾಲನಿರ್ಣಯ ಸಮಸ್ಯಾದಾಯಕವಾಗಿದೆ. ರಾವಳಫಡಿ ಗುಹೆಯ ರಚನೆ ಮತ್ತು ಶಿಲ್ಪಗಳಲ್ಲಿ ಪ್ರಾಚೀನತೆಯ ಲಕ್ಷಣಗಳಿದ್ದು, ಬಹುಶಃ ಇದು ಬಾದಾಮಿಯ ಶೈವಗುಹೆಯಷ್ಟೇ ಹಳೆಯದಿರಬಹುದು; ಕೆಲವು ವಿದ್ವಾಂಸರು ಚಳುಕ್ಯ ಗುಹೆಗಳಲ್ಲಿ ಇದೇ ಪ್ರಾಚೀನತಮವೆಂದು ಅಭಿಪ್ರಾಯಿಸಿದ್ದಾರೆ. 6ನೆಯ ಶತಮಾನವೆಂದರೆ ತಪ್ಪಾಗದು. ಜೈನಗುಹೆ ಮಾತ್ರ ಸು.7–8ನೆಯ ಶತಮಾನದ್ದಿರಬೇಕು. ಬೌದ್ಧಚೈತ್ಯಾಲಯ 7ನೆಯ ಶತಮಾನದ ಮಧ್ಯಾವಧಿಯದಿರಬೇಕು.

**ನರ್ತನ ಭಂಗಿಯಲ್ಲಿ ಶಿವ, ರಾವಣಫಡಿ ಗುಹೆ**

ಗುಹಾಲಯಗಳಂತೆ ಕಟ್ಟಡ ದೇಗುಲಗಳಿಗೂ ಚಳುಕ್ಯ ಸ್ಥಪತಿಗಳು ಆ ಪ್ರದೇಶದಲ್ಲಿ ದೊರೆಯುವ ನಸುಗೆಂಪು ಮರಳುಗಲ್ಲನ್ನೇ ಬಳಸಿದ್ದಾರೆ. ಸಾಕಷ್ಟು ದೊಡ್ಡ ಗಾತ್ರದ ಕುಶಲಕರ್ಮ ನೀಡಿರುವ ಚಪ್ಪಡಿಯಂತಹ ಕಲ್ಲುಗಳನ್ನು ಬಂಧಕ ಸಾಮಗ್ರಿಯನ್ನು ಉಪಯೋಗಿಸದೆ ಒಂದರಮೇಲೊಂದರಂತೆ ಪೇರಿಸಿ ಗೋಡೆಗಳನ್ನು ನಿರ್ಮಿಸಿದ್ದಾರೆ. ಅದರಂತೆ ದಪ್ಪನೆಯ ಒಂದೊಂದೇ ಕಲ್ಲುಗಳನ್ನು ಒಂದೊಂದು ಚೌಕಾಕಾರದ (ರುಚಕ) ಕಂಬಗಳಿಗೆ ಮತ್ತು ತೊಲೆಗಳಿಗೆ ಬಳಸಿದ್ದಾರೆ. ಚಾವಣಿಗಾಗಿ ದೊಡ್ಡ ಚಪ್ಪಡಿಗಳನ್ನು ತಯಾರಿಸಿ ಕವುಚಿದ್ದಾರೆ. ಇವು ಈ ಕಾಲದ ವಾಸ್ತುನಿರ್ಮಾಣ ತಂತ್ರದ ಸಾಮಾನ್ಯ ಲಕ್ಷಣಗಳಾಗಿ ಗೋಚರಿಸುತ್ತವೆ. ಮುಂಚೆ ಗುಹಾವಾಸ್ತುವಿನಲ್ಲಿ ಬಿಟ್ಟರೆ ಕಲ್ಲನ್ನು ದೊಡ್ಡ ಪ್ರಮಾಣದಲ್ಲಿ ದೇಗುಲ ಕಟ್ಟಡಗಳಿಗೆ ಬಳಸುವ ಕ್ರಮವಿರಲಿಲ್ಲವಾದ್ದರಿಂದ ಮತ್ತು ಕಟ್ಟಡಗಳಿಗೆ ಮರ, ಇಟ್ಟಿಗೆ, ಗಾರೆಯ ಬಳಕೆ ಸಾಮಾನ್ಯವಾಗಿದ್ದುದರಿಂದ ಈ ರೀತಿ ಅಗತ್ಯ ಕ್ಕಿಂತ ದಪ್ಪವಿರುವ ಕಲ್ಲುಗಳನ್ನು ಭದ್ರತೆಗೋಸ್ಕರ ಉಪಯೋಗಿಸಿದ್ದಾರೆಂದು ಕೆಲವರು ವ್ಯಾಖ್ಯಾನಿಸಿದ್ದಾರೆ. ಈ ದೃಷ್ಟಿಯಿಂದ ಇದು ಶಿಲಾ ಕಟ್ಟಡ ಕಲೆಯ ಶೈಶವಾವಸ್ಥೆಯ ಕುರುಹೆಂದು ಇವರ ಭಾವನೆ. ಅದೇನಿದ್ದರೂ ದೇಗುಲ ನಿರ್ಮಾಣಕ್ಕೆ ದೊಡ್ಡ ಪ್ರಮಾಣದಲ್ಲಿ ಕಲ್ಲಿನ ಬಳಕೆ, ವಿವಿಧ ಶೈಲಿಗಳ ದೇಗುಲ ನಿರ್ಮಾಣ, ಅವುಗಳ ಶೈಲಿ ಮಿಶ್ರಣ ಪ್ರಯೋಗ ಗಳು ಚಳುಕ್ಯರ ದೇಶ–ಕಾಲದಲ್ಲಿ ನಡೆಯಿ ತೆಂಬುದರ ಬಗ್ಗೆ ಎರಡು ಮಾತಿಲ್ಲ. ಅಲ್ಲದೇ ಪ್ರಾದೇಶಿಕ ವೈಶಿಷ್ಟ್ಯವುಳ್ಳ ದೇಗುಲ ಶೈಲಿಲಕ್ಷಣ ಗಳನ್ನು ರೂಪಿಸಿದ್ದು ಅವರ ಮಹತ್ವದ ಕೊಡುಗೆಯಾಗಿದೆ.

**ವಿಷ್ಣು–ದುರ್ಗ ದೇವಾಲಯ, ಐಹೊಳೆ**

ಚಳುಕ್ಯರ ಕಟ್ಟಡ ಮಾದರಿಯ ದೇಗುಲಗಳನ್ನು ಮುಖ್ಯವಾಗಿ ಐದು ಗುಂಪುಗಳಾಗಿ ವರ್ಗೀಕರಿಸಬಹುದು: 1. ದಕ್ಷಿಣ ಭಾರತ ಮಾದರಿಯ ಅಥವಾ ದ್ರಾವಿಡ ಮಾದರಿ ದೇವಾಲಯಗಳು, 2. ಉತ್ತರ ಭಾರತ ಮಾದರಿಯ ಅಥವಾ ನಾಗರ ರೇಖಾ (ಲತಿನ) ಮಾದರಿ ದೇವಾಲಯಗಳು, 3. ಫಾಂಸನ ಮಾದರಿಯ (ಮುಂಚೆ ಕದಂಬ ನಾಗರ ಶೈಲಿ ಎಂದು ಕರೆಯಲಾಗುತ್ತಿದ್ದ) ದೇವಾಲಯಗಳು, 4. ಮಂಟಪ ರೀತಿಯ ದೇವಾಲಯಗಳು, 5. ಚಾಪಾಕಾರ ವಿನ್ಯಾಸದ ಅಥವಾ ಗಜಪೃಷ್ಠ ಪ್ರಕಾರದ ದೇವಾಲಯಗಳು.

**1. ದ್ರಾವಿಡ ಮಾದರಿಯ ದೇವಾಲಯಗಳು:** ವಾಸ್ತುಗ್ರಂಥಗಳಲ್ಲಿ ದ್ರಾವಿಡ ಮಾದರಿಯ ದೇವಾಲಯಗಳು ಕೆಲವು ಲಕ್ಷಣಗಳಿಂದ ಗುರುತಿಸಲ್ಪಡುತ್ತವೆ. ಇವುಗಳ ಮುಖ್ಯ ಭಾಗ ವಿಮಾನ. ಇದು ಗರ್ಭಗೃಹದ ಹೊರ ನೋಟ. ಊರ್ಧ್ವ ರಚನೆಯಲ್ಲಿ (ಕೆಳಗಿನಿಂದ ಮೇಲಕ್ಕೆ)

**ಸ್ವರ್ಗ ಬ್ರಹ್ಮ ದೇವಾಲಯ, ಆಲಂಪುರ**

ಸಾಮಾನ್ಯವಾಗಿ ಇದಕ್ಕೆ ಆರು ಭಾಗಗಳಿರುತ್ತವೆ: ಅಧಿಷ್ಠಾನ (ಪಾಯ), ಪಾದ (ಗೋಡೆ), ಪ್ರಸ್ತರ (ಛತ್ತಿನ ಮಟ್ಟದ ರಚನೆ), ಗ್ರೀವ (ಕುತ್ತಿಗೆ), ಶಿಖರ (ಗಂಟೆಯಂತಿರುವ ರಚನೆ) ಮತ್ತು ಸ್ತೂಪಿ (ಕಲಶವನ್ನೊಳಗೊಂಡ ತುದಿ). ಅಧಿಷ್ಠಾನದ ತೀರ ಕೆಳಗಿನ ಸ್ತರ ಉಪಾನ. ಉಪಾನದಿಂದ ಸ್ತೂಪಿಯವರೆಗಿನ ರಚನೆಯೇ ವಿಮಾನ. ಈ ಆರು ಭಾಗಗಳಿರುವುದರಿಂದಲೇ ದ್ರಾವಿಡ ದೇಗುಲಕ್ಕೆ ಷಡ್ವರ್ಗ ದೇವಾಲಯ ಎಂದು ಕರೆಯುವರು. ಅನೇಕ ಮಡಿಕೆಗಳುಳ್ಳ ಅಧಿಷ್ಠಾನ (ಅಥವಾ ಪೀಠ), ಗೋಡೆಯಲ್ಲಿರುವ ಕುಡ್ಯಸ್ತಂಭಗಳು, ಕಪೋತ, ಪ್ರಸ್ತರದ ಮೇಲಿನ ಹಾರ, ಇವು ಇನ್ನಿತರ ಲಕ್ಷಣಗಳು. ಕೋನಗಳಲ್ಲಿರುವ ಮುಂಚಾಚು ಕರ್ಣಭದ್ರ. ಕರ್ಣಭದ್ರಗಳ ನಡುವಣ ಭಾಗದಲ್ಲಿರುವ ಮುಂಚಾಚುಗಳು ಭದ್ರಗಳು. ಇವುಗಳ ನಡುವಣ ಹಿಂಚಾಚು ಸಲಿಲಾಂತರ. ಭದ್ರಗಳ ಕೋನಗಳಲ್ಲಿ ಕುಡ್ಯಸ್ತಂಭಗಳಿರುತ್ತವೆ. ಈ ಪ್ರಕಾರದ ಮುಂಚಾಚು ಹಿಂಚಾಚುಗಳು ಅಧಿಷ್ಠಾನದ ವಿನ್ಯಾಸದಲ್ಲೂ ಪ್ರಸ್ತರದ ವಿನ್ಯಾಸದಲ್ಲೂ ಕಾಣುತ್ತವೆ. ಕರ್ಣಭದ್ರಕ್ಕೆ ಸ್ಪಂದಿಯಾಗಿ ಹಾರದಲ್ಲಿ ನಾಲ್ಕೂ ಕಡೆ ಇಳಿಜಾರಾದ ಛಾವಣಿಯಿ ರುವ (ಶಿಖರ) ಚೌಕ ಗುಡಿಸಲಿನಂತೆ ಕಾಣುವ ಕೂಟವಿರುತ್ತದೆ. ಅಧಿಷ್ಠಾನ, ಪಾದ, ಪ್ರಸ್ತರ, ಗ್ರೀವ, ಕೂಟಶಿಖರದಿಂದೊಡಗೂಡಿ ಇದು ಸರಳ ಏಕತಲ (ತಳದ) ಕೂಟಾಕಾರದ ಗುಡಿಯ ಪ್ರತಿನಿಧಿಯಾಗುತ್ತದೆ. ಅದೇರೀತಿ ಕೂಟಗಳ ನಡುವಣ ಅಂತರದಲ್ಲಿ ಭದ್ರಗಳಿಗೆ ಸ್ಪಂದಿಯಾಗಿ ಕಮಾನಿನಾಕಾರ ಛಾವಣಿಯಿರುವ ಆಯತಾಕಾರದ ಗುಡಿಸಲಿನಂತೆ ಕಾಣುವ ಶಾಲವಿರುತ್ತದೆ. ಅಧಿಷ್ಠಾನ, ಪಾದ, ಪ್ರಸ್ತರ, ಗ್ರೀವ, ಶಾಲಶಿಖರದಿಂದೊಡಗೂಡಿ ಇದು ಸರಳ ಏಕತಲ ಶಾಲಾಕಾರ ಗುಡಿಯ ಪ್ರತಿನಿಧಿಯಾಗುತ್ತದೆ. ತುಸು ವಿಕಸಿತ ವಿಮಾನಗಳಲ್ಲಿ ಶಾಲ ಕೂಟಗಳ ನಡುವೆ ಗಜಪೃಷ್ಠಾಕಾರದ (ಚಾಪಾಕಾರ ವಿನ್ಯಾಸವುಳ್ಳ) ಗುಡಿಯ ಪ್ರತಿನಿಧಿಯಿದ್ದು, ಅದನ್ನು ಪಂಜರವೆಂದು ಕರೆಯುತ್ತಾರೆ. ಶಾಲ–ಕೂಟ–ಪಂಜರಗಳಿಂದ ಕೂಡಿರುವ ಹಾರವು ಆಯಾಯ ಮಹಡಿಯ ಅಂತ್ಯದ ಸೂಚಕವಾಗಿದೆ. ಮತ್ತೆ ಎರಡನೆಯ ಮಹಡಿಗೆ ಪಾದ, ಪ್ರಸ್ತರ, ಹಾರ ಭಾಗಗಳಿರುತ್ತವೆ. ಈ ವ್ಯವಸ್ಥೆ ಪ್ರತಿಯೊಂದು ಮಹಡಿಗೂ ಮುಂದುವರಿಯುತ್ತದೆ. ವಿಕಸಿತ ವಿಮಾನಗಳಲ್ಲಿ ಕೊನೆಯ ಮಹಡಿಗೆ ಹಾರದ ರಚನೆ ಇರಬೇಕಾಗಿಲ್ಲ. ಮಹಡಿಯ (ತಲಗಳ) ರಚನೆ ಮುಗಿದ ಮೇಲೆ ಕುತ್ತಿಗೆಯಂತೆ ಕಾಣುವ ಗ್ರೀವವಿರುತ್ತದೆ. ಇದರ ಮೇಲೆ ಘಂಟಾಕಾರದ ಶಿಖರವಿರುತ್ತದೆ. ಶಿಖರದ ತುದಿಯಲ್ಲಿ ಕಲಶ ಮತ್ತು ಸೂಚಿ ಇರುವದು.

ಶಿಖರದ ವಿನ್ಯಾಸ ಚೌಕ, ಅಷ್ಟಕೋನ ಇಲ್ಲವೆ ವೃತ್ತಾಕಾರವಾಗಿ ಇರಬಹುದು. ಚೌಕಾಕಾರವಿದ್ದರೆ ಆ ಗುಡಿಯನ್ನು ನಾಗರ ವಿಮಾನವೆಂದು, ಅಷ್ಟಕೋಣಾಕಾರವಿದ್ದರೆ ದ್ರಾವಿಡ ವಿಮಾನವೆಂದು, ವೃತ್ತಾಕಾರವಾಗಿದ್ದರೆ ವೇಸರ ವಿಮಾನವೆಂದು ಶಿಲ್ಪಶಾಸ್ತ್ರಗಳು ಹೆಸರಿಸುತ್ತವೆ. ಈ ಮೂರೂ ಪ್ರಕಾರದ ಶಿಖರವುಳ್ಳ ದ್ರಾವಿಡ ದೇವಾಲಯಗಳು ಚಲುಕ್ಯರ ಕಾಲದಲ್ಲಿ ಉದಾಹೃತವಾಗಿವೆ ಎಂಬುದು ಉಲ್ಲೇಖನೀಯ. ಇದಲ್ಲದೇ ತಳದಿಂದ ತುದಿಯವರೆಗೆ ಆಯತ, ವೃತ್ತ, ಅರ್ಧವೃತ್ತ (ಚಾಪಾಕಾರ) ವಿನ್ಯಾಸವುಳ್ಳ ರಚನೆಯೂ ಸಾಧ್ಯ. ಆಯತವಾಗಿರುವದನ್ನು ಶಾಲ ವಿಮಾನ, ವೃತ್ತ ಅಥವಾ ಚಾಪಾಕಾರ (ಗಜಪೃಷ್ಠ) ವಿರುವುದನ್ನು ವೇಸರ ವಿಮಾನ ಎಂಬುದಾಗಿಯೂ ಹೆಸರಿಸಿರುವುದಿದೆ.

ವಿಮಾನದಲ್ಲಿ ಒಳಗಡೆ ಗರ್ಭಗೃಹಕ್ಕೆ ಪ್ರದಕ್ಷಿಣೆ ಬರಲು ವ್ಯವಸ್ಥೆ ಇದ್ದರೆ ಅದು ಸಾಂಧಾರ ವಿಮಾನವೆನಿಸುತ್ತದೆ. ಅದಿಲ್ಲದಿದ್ದರೆ, ಅದು ನಿರಂಧಾರ ವಿಮಾನವಾಗುವದು. ಚಳುಕ್ಯರು ನೇರವಾಗಿ ಪೋಷಿಸಿ ನಿರ್ಮಿಸಿದ ಗುಡಿಗಳು ಸಾಂಧಾರ ಪ್ರಕಾರದ್ದಾಗಿವೆ. ಅವರ ಕಾಲದಲ್ಲಿ ಇತರರು ನಿರ್ಮಿಸಿದವುಗಳು ನಿರಂಧಾರವಾಗಿವೆ. ಬಾದಾಮಿಯಲ್ಲಿರುವ ದೇವಾಲಯಗಳು ದಕ್ಷಿಣ ಭಾರತ ಮಾದರಿಯ ವಿಮಾನಗಳಿಗೆ ಉತ್ತಮ ಪ್ರಾರಂಭಿಕ ಉದಾಹರಣೆಗಳನ್ನು ಒದಗಿಸುತ್ತವೆ. ಉತ್ತರ ಕೋಟೆಯ ಬೆಟ್ಟದ ನೆತ್ತಿಯಲ್ಲಿರುವ ಮೇಲಣ ಶಿವಾಲಯ ಮೂಲತಃ ವಿಷ್ಣು ದೇವಾಲಯ. ಮೊದಲನೆಯ ಪುಲಕೇಶಿಯು ನಿರ್ಮಿಸಿದ ಕೋಟೆಯ ಒಳಗಿರುವುದರಿಂದ ಚಳುಕ್ಯ ಅರಸರಿಗೋಸ್ಕರ ಕಟ್ಟಲ್ಪಟ್ಟಿದೆ ಎಂಬುದು ವಾಸ್ತವ. ಅದರ ಸಾಂಧಾರ ವಿನ್ಯಾಸವೂ ಇದನ್ನೇ ಸೂಚಿಸುತ್ತದೆ. ಚಳುಕ್ಯರು ಪ್ರಾರಂಭದಲ್ಲಿ ಪರಮಭಾಗವತರಾಗಿದ್ದರಿಂದ ಸಹಜವಾಗಿಯೇ ಈ ವಿಷ್ಣುದೇವಾಲಯ ಕೋಟೆಯೊಳಗಡೆ ನಿರ್ಮಾಣವಾಗಿದೆ. ವಾಸ್ತು ಲಕ್ಷಣ ದೃಷ್ಟಿಯಿಂದ ಇದನ್ನು ಸಾಂಧಾರ ತ್ರಿತಲ ನಾಗರ ವಿಮಾನ ಎಂದು ವರ್ಣಿಸಬಹುದು. ಮೇಲ್ಕಟ್ಟಡದ ರಚನೆಯಲ್ಲಿ ಕೆಲವು ವಿಕಸಿತವಲ್ಲದ ಲಕ್ಷಣಗಳನ್ನು ಈ ಗುಡಿ ಪ್ರಕಟಿಸುತ್ತದೆ. ಮೊದಲ (ಆದಿ) ತಲಕ್ಕೆ ಹಾರ ಸ್ಪಷ್ಟವಿದೆ. ಇದು ವಿಮಾನ ಭಾಗದ ಮೇಲೆ ಅಷ್ಟೇ ಅಲ್ಲದೆ ಗೂಢ ಮಂಟಪದ ಮೇಲೂ ಮುಂದುವರಿದಿತ್ತು. ಈಗ ಭಾಗಶಃ ಹಾಳಾಗಿದೆ. ಎರಡನೆಯ ತಲವು ಸಾಕಷ್ಟು ಎತ್ತರವಾಗಿದೆ. ಮೂರನೆಯ ತಲ ಅದರ ಅರ್ಧದಷ್ಟು ಕುಳ್ಳದಾಗಿವೆ. ಎರಡನೆಯ ಮತ್ತು ಮೂರನೆಯ ತಲಗಳ ಕಪೋತದ ಮೇಲ್ಗಡೆ ವ್ಯಾಳಮಾಲಾ ಮತ್ತು ವೇದಿ ಭಾಗಗಳು ಮಾತ್ರವಿದ್ದು ಶಾಲ–ಕೂಟಗಳ ಹಾರ ರಚನೆಯಿಲ್ಲ. ಶಿಖರ ಚೌಕ (ನಾಗರ) ಪ್ರಕಾರದ್ದಿದ್ದು, ಪ್ರತಿಯೊಂದು ಮುಖದಲ್ಲಿ ನಾಸಿ ಅಲಂಕಾರವಿದೆ. ಸ್ತೂಪಿ ಬಿದ್ದುಹೋಗಿದೆ.

ಅಧಿಷ್ಠಾನದ ರಚನೆಯಲ್ಲಿ ಉಪಾನ, ಜಗತಿ, ಗಲ (ಕಂಠ), ಕಪೋತಗಳಿವೆ. ಗಲಭಾಗದಲ್ಲಿ ರಾಮಾಯಣ ಮತ್ತು ಕೃಷ್ಣಚರಿತೆಯ ಕಥಾನಿರೂಪಣೆ ಇದೆ. ಪಾದದಲ್ಲಿ ಕುಡ್ಯಸ್ತಂಭಗಳು, ದೇವಕೋಷ್ಠಗಳು ಇವೆ. ಇವುಗಳಲ್ಲಿ ಗೋವರ್ಧನಧಾರಿ ಕೃಷ್ಣ, ಕಾಲಿಯದಮನ ಕೃಷ್ಣ, ಹಿರಣ್ಯಕಶ್ಯಪನೊಂದಿಗೆ ದ್ವಂದ್ವಯುದ್ಧದಲ್ಲಿ ತೊಡಗಿರುವ ನರಸಿಂಹ ಮುಂತಾದವು ಆಕರ್ಷಕವಾಗಿವೆ.



**ಕಥಾನಕ ಶಿಲ್ಪ, ಪಟ್ಟದಕಲ್ಲು**

ಗರ್ಭಗೃಹದ ದ್ವಾರಬಂಧದ ಶಾಖೆಗಳ ಅಲಂಕಾರ ಅಪೂರ್ಣವಾಗಿದೆ. ಮುಂದೆ, ಉಳಿದ ದೇಗುಲಗಳಲ್ಲಿ ಸಾಮಾನ್ಯವಾಗಿ ಗೋಚರಿಸುವ ಗರುಡ–ನಾಗಶಾಖಾ ಅಲಂಕಾರ ಇಲ್ಲಿಲ್ಲ. ಕಂಬಗಳು ಈಗ ಉಳಿದಿಲ್ಲವಾದರೂ ಅವು ರುಚಕ (ಚೌಕ, ಬ್ರಹ್ಮಕಾಂತ) ಮಾದರಿಯವಾಗಿದ್ದವೆಂಬುದರ ಸೂಚನೆ ಇದೆ. ಈ ಎಲ್ಲ ಅಂಶಗಳನ್ನು ಗಮನಿಸಿದರೆ, ಮೇಲಣ ಶಿವಾಲಯ 6ನೆಯ ಶತಮಾನದ, ಪ್ರಾಯಶಃ ಒಂದನೆಯ ಪುಲಕೇಶಿ ಇಲ್ಲವೇ ಒಂದನೆಯ ಕೀರ್ತಿವರ್ಮನ ಕಾಲದ ನಿರ್ಮಾಣವಿರಬಹುದು.

ಅದೇ ಕೋಟೆಯಲ್ಲಿ, ಮೇಲಣ ಶಿವಾಲಯಕ್ಕಿಂತ ತುಸು ಕೆಳಮಟ್ಟದಲ್ಲಿ ರಚಿತವಾಗಿರುವ ಕೆಳಗಣ ಶಿವಾಲಯದ ವಿಮಾನ ಭಾಗ ಮಾತ್ರ ಉಳಿದುಬಂದಿದೆ. ಇದಕ್ಕೆ ಅಷ್ಟಕೋನಾಕಾರದ ಅಂದರೆ, ದ್ರಾವಿಡ ಶಿಖರವಿದೆ. ಇದು ಸಾಂಧಾರ ದ್ವಿತಲ ದ್ರಾವಿಡ ವಿಮಾನ. ಹೊರಗೋಡೆ ನಶಿಸಿಹೋಗಿರುವದರಿಂದ ಆದಿ ತಲದ ವಿವರಗಳು ಲಭ್ಯವಿಲ್ಲ. ಎರಡನೆಯ ತಲದ ಪಾದದ ಕರ್ಣ–ಭದ್ರಗಳು ಮತ್ತು ಹಾರದ ವಿವರಗಳು ಸ್ಪಷ್ಟವಾಗಿವೆ.

ಎರಡನೆಯ ತಲವು ಮುಗಿದ ಮೇಲೆ ಗ್ರೀವ ಮತ್ತು ಶಿಖರವನ್ನು ಅಷ್ಟಕೋನ ರೀತಿಯಲ್ಲಿ ರಚಿಸಲಾಗಿದೆ. ಗ್ರೀವ ಶಿಖರಗಳ ಮುಖ್ಯ ದಿಕ್ಕುಗಳಲ್ಲಿ ನಾಸಿ ಅಲಂಕಾರವಿದೆ. ಉಪದಿಕ್ಕುಗಳಲ್ಲಿ ಕೂಟಗಳನ್ನು ಶಿಖರದ ಅರ್ಧದಷ್ಟು ಎತ್ತರದವರೆಗೆ ರಚಿಸಿರುವದು ವಿಶೇಷ. ಈ ಲಕ್ಷಣವು ಮಹಾಕೂಟದ ಮಹಾಕೂಟೇಶ್ವರ ದೇವಾಲಯದಲ್ಲಿಯೂ ಮರುಕಳಿಸಿದೆ. ಶಿಖರದ ಮೇಲಿರುವ ಸ್ತೂಪಿ ವಿಜಯನಗರ ಕಾಲದ್ದು. ಶಿಖರದ ನಾಲ್ಕು ಮೂಲೆಗಳಲ್ಲಿರುವ ಕೂಟಗಳಲ್ಲಿರುವ ಗಾರೆಯ ಶಿಲ್ಪಗಳೂ ವಿಜಯನಗರ ಕಾಲದವು. ಅಧಿಷ್ಠಾನದ ವಿವರಗಳು ಕಾಣುತ್ತಿಲ್ಲವಾದರೂ ಮೇಲಣ ಶಿವಾಲಯದಲ್ಲಿರುವಂತೆಯೇ ಇದ್ದಿರಬಹುದಾದ ಸೂಚನೆಗಳಿವೆ. ಅಧಿಷ್ಠಾನದ ಗಲ ಭಾಗದಲ್ಲಿ ಕೃಷ್ಣಚರಿತೆಯ ನಿರೂಪಣೆಗಳಿದ್ದವು. ಇವು ಈಗ ಬಾದಾಮಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿವೆ. ಈ ದೇವಾಲಯದ ದ್ವಾರಬಂಧದ ಶಾಖೆಗಳು ವಿವಿಧ ರೀತಿಯಲ್ಲಿ ಅಲಂಕೃತವಾಗಿವೆ. ಗರುಡ–ನಾಗಶಾಖಾ ವಿನ್ಯಾಸದ ಬಳಕೆ ಇಲ್ಲ. ಗರ್ಭಗೃಹದಲ್ಲಿ ದೀರ್ಘವೃತ್ತಾಕಾರದ ಪದ್ಮಪೀಠವಿದೆ. ಮೂಲದೇವತೆ ಯಾವುದೆಂದು ಸ್ಪಷ್ಟವಿಲ್ಲವಾದರೂ ವೈಷ್ಣವ ದೇಗುಲವಾಗಿರುವ ಸಾಧ್ಯತೆ ಇದೆ. ಪ್ರಾಚೀನ ಲಕ್ಷಣಗಳ ಹಿನ್ನೆಲೆಯಲ್ಲಿ ಇದನ್ನು ಮೇಲಣ ಶಿವಾಲಯಕ್ಕಿಂತ ತುಸು ಅನಂತರದ, ಬಹುಶಃ ಮಂಗಲೀಶನ ಆಳ್ವಿಕೆಯ ಕಾಲದ ನಿರ್ಮಾಣವೆಂದು ಪರಿಗಣಿಸಬಹುದು.

ತ್ರೈಲೋಕ್ಯಮಲ್ಲ ವಿಜಯಾದಿತ್ಯನ ಬನ್ನಿಗೋಳ ಶಾಸನ

ಮಾಲಗಿತ್ತಿ ಶಿವಾಲಯ ಬಾದಾಮಿಯಲ್ಲಿರುವ ಮೂರನೆಯ ಪ್ರಾಚೀನ ಕಟ್ಟಡ ಮಾದರಿಯ ದೇವಾಲಯ. ಉತ್ತಮ ಸ್ಥಿತಿಯಲ್ಲಿ ಉಳಿದಿರುವ ಇದು ಆರ್ಯಮಞ್ಚಿ ಉಪಾಧ್ಯಾಯನೆಂಬ ವಾಸ್ತುಶಿಲ್ಪಿ ನಿರ್ಮಿಸಿದ ನಿರಂಧಾರ ಸೂರ್ಯ ದೇಗುಲ. ಗರ್ಭಗೃಹ, ಚಿಕ್ಕ ಅಂತರಾಳ, ಗೂಢಮಂಟಪ ಮತ್ತು ಮುಖಮಂಟಪ ಇದರ ತಲವಿನ್ಯಾಸದ ಅಂಗಗಳು. ಅಧಿಷ್ಠಾನದ ಕಂಠದಲ್ಲಿ ಗಣಗಳ ಆಕರ್ಷಕ ಉಬ್ಬುಶಿಲ್ಪಗಳಿವೆ. ಪಾದದಲ್ಲಿ ಕರ್ಣ–ಭದ್ರಗಳಿದ್ದು ಕುಡ್ಯಸ್ತಂಭಗಳು ಗಮನೀಯವಾಗಿವೆ. ಕಪೋತದ ವಲಭೀಯಲ್ಲಿ ಗಣ–ಹಂಸಗಳ ಮಾಲೆ ಇದೆ. ಆದಿ ತಲದ ಹಾರವು ಗೂಢಮಂಟಪದ ಮೇಲೂ ಸಾಗಿದೆ. ತಲಗಳ ರೂಪು ಹೆಚ್ಚು ಸ್ಪಷ್ಟವಾಗಿದೆ. ಗ್ರೀವ–ಶಿಖರದ ಉಪದಿಕ್ಕುಗಳಲ್ಲಿ ಚಿಕ್ಕ ಕೂಟಗಳು ರಚಿತವಾಗಿವೆ. ಶಿಖರವು ಅಷ್ಟಕೋನಾಕಾರದಲ್ಲಿದೆ ಇದು ನಿರಂಧಾರ ದ್ವಿತಲ ದ್ರಾವಿಡ ವಿಮಾನ.

ಗರ್ಭಗೃಹದ ದ್ವಾರಬಂಧದ ಅಲಂಕೃತ ಶಾಖೆಗಳಲ್ಲಿ ಗರುಡ–ನಾಗಶಾಖಾ ವಿನ್ಯಾಸವಿರುವದು ಹೊಸ ಲಕ್ಷಣ. ಅಂತರಾಳದಂತೆ ಕಾಣುವ ಭಾಗದಲ್ಲಿ ಎಡಗಡೆ ಸೂರ್ಯನು ಛಾಯಾದೇವಿಯನ್ನು ದಂಡಿಸುತ್ತಿರುವ ಉಬ್ಬುಶಿಲ್ಪವಿದೆ. ಗೂಢಮಂಟಪದ ವಿತಾನದಲ್ಲಿ ಗರುಡಾರೂಢ ವಿಷ್ಣುವಿನ ಶಿಲ್ಪವಿದೆ. ಅದರಂತೆ ಗೂಢಮಂಟಪದ ಗೋಡೆಗಳಲ್ಲಿ ಸ್ಥಾನಕ ಶಿವ (ದಕ್ಷಿಣ ದಿಕ್ಕು) ಮತ್ತು ಸ್ಥಾನಕ ವಿಷ್ಣು (ಉತ್ತರ ದಿಕ್ಕು) ಶಿಲ್ಪಗಳು ವಿಶಿಷ್ಟ ಪ್ರಕಾರದವು. ಗುಪ್ತರ ಅಂತ್ಯಕಾಲದ ಶಿಲ್ಪಶೈಲಿಯ ಲಕ್ಷಣಗಳು ಇಲ್ಲಿವೆ. ಗರುಡ–ನಾಗಶಾಖಾ ವಿನ್ಯಾಸ ಮತ್ತು ಗುಪ್ತರ ಅಂತ್ಯಕಾಲದ ಶಿಲ್ಪಶೈಲಿಯ ಪ್ರಭಾವ ಇವೆರಡೂ ವೈಶಿಷ್ಟ್ಯಗಳು ದ್ರಾವಿಡ ದೇಶದ ವಾಸ್ತು ಮಾದರಿಯಲ್ಲಿ ಔತ್ತರೇಯ ಲಕ್ಷಣಗಳು ನುಸುಳುತ್ತಿರುವದನ್ನು ಸೂಚಿಸುತ್ತವೆ. ಈ ದೇವಾಲಯ ಅದೇ ಬೆಟ್ಟದಲ್ಲಿದ್ದರೂ ಮೂಲ ಕೋಟೆಯ ಹೊರ ವಲಯದಲ್ಲಿದೆ. ಬಹುಶಃ ಇದು ಇಮ್ಮಡಿ ಪುಲಕೇಶಿಯ ಆಳ್ವಿಕೆಯ ಕಾಲದಲ್ಲಿ ಇದು ನಿರ್ಮಾಣವಾಗಿರುವ ಸಾಧ್ಯತೆ ಹೆಚ್ಚು.

ಬಾದಾಮಿಯ ಅಗಸ್ತ್ಯತೀರ್ಥ ಹೊಂಡದ ಪೂರ್ವ ತಟದಲ್ಲಿ ಭೂತನಾಥ ದೇವಾಲಯವಿದೆ. ಭೂತೇಶ್ವರನಿಗೆ ಮುಡುಪಾಗಿರುವ ಇದು ಇಲ್ಲಿ ಚಳುಕ್ಯರ ಕಾಲದಲ್ಲಿ ರಚಿತವಾದ ದಕ್ಷಿಣ ಭಾರತ ಶೈಲಿಯ ದೇವಾಲಯಗಳಲ್ಲಿ ಬಹುಶಃ ಕೊನೆಯದು. ನಿರಂಧಾರ ಪ್ರಕಾರದ ಈ ದೇಗುಲಕ್ಕೆ ಗರ್ಭಗೃಹ, ಅಂತರಾಳ, ಗೂಢಮಂಟಪ ಮತ್ತು ಮುಖಮಂಟಪ ಇವೆ. ಮುಖಮಂಟಪವನ್ನು 11–12ನೆಯ ಶತಮಾನದಲ್ಲಿ ಹೆಚ್ಚು ವಿಶಾಲವಾದ ತೆರೆದ ಮಂಟಪ ವನ್ನಾಗಿ ವಿಸ್ತರಿಸಲಾಗಿದೆ. ಇದು ತ್ರಿತಲ ನಾಗರ ವಿಮಾನ; ಇದನ್ನು 700–30ರ ಅವಧಿಗೆ ಅನ್ವಯಿಸಬಹುದು.

ಮಹಾಕೂಟದಲ್ಲಿ ನಿರ್ಮಾಣಗೊಂಡ ದೇಗುಲಗಳಲ್ಲಿ ಬಾಣಂತಿ ಗುಡಿ, ಮಹಾಕೂಟೇಶ್ವರ ಗುಡಿ ಮತ್ತು ಮಲ್ಲಿಕಾರ್ಜುನ ಗುಡಿ ಉಲ್ಲೇಖನೀಯವಾಗಿವೆ. ಬಾಣಂತಿ ಗುಡಿ ಗರ್ಭಗೃಹ ಮತ್ತು ಮುಖಮಂಟಪ ಮಾತ್ರ ಇರುವ ಏಕತಲ ರಚನೆ. ಇದನ್ನು ನಿರಂಧಾರ ಪ್ರಕಾರದ ನಾಗರ ಅಲ್ಪ ವಿಮಾನ ಎಂದು ವರ್ಣಿಸಬಹುದು. ತಕ್ಕ ಮಟ್ಟಿಗೆ ಬಾದಾಮಿಯ ಮೇಲಣ ಶಿವಾಲಯವನ್ನು ನೆನಪಿಸುತ್ತದೆ. ಇದರ ಕಾಲ 6ನೆಯ ಶತಮಾನದ ಉತ್ತರಾರ್ಧವಿರಬಹುದು.

ಶಿವದೇವಾಲಯ, ಮಹಾಕೂಟ

ಮಹಾಕೂಟೇಶ್ವರ ಮತ್ತು ಮಲ್ಲಿಕಾರ್ಜುನ ದೇಗುಲಗಳು ಕೆಲವು ಸಾಮಾನ್ಯ ಲಕ್ಷಣಗಳಿಂದ ಕೂಡಿವೆ. ಇವೆರಡೂ ಮಧ್ಯಮ ಗಾತ್ರದ ದ್ವಿತಲ ಸಾಂಧಾರ ದ್ರಾವಿಡ ವಿಮಾನಗಳು. ಮಹಾಕೂಟೇಶ್ವರ ದೇವಾಲಯದ ಅಧಿಷ್ಠಾನದ ಕಂಠವು ಎತ್ತರವಿದ್ದು ಅದರಲ್ಲಿ ಕಥಾನಿರೂಪಕ ಶಿಲ್ಪಗಳಿವೆ. ಮಧ್ಯಭಾಗದಲ್ಲಿ ಗೋಡೆ ರಥರೀತಿಯಲ್ಲಿ ಭದ್ರ–ಉಪಭದ್ರಗಳಾಗಿ ಮುಂಚಾಚಿದೆ. ಸುಭದ್ರದಲ್ಲಿ ಶಿವನ ವಿಗ್ರಹವಿದೆ. ಎರಡನೆಯ ತಲದ ನಿರೂಪಣೆ ಹೆಚ್ಚು ವ್ಯವಸ್ಥಿತವಾಗಿದೆ. ಮಂಗಲೇಶನ ಶಾಸನದಲ್ಲಿ ಉಲ್ಲೇಖಿತ ಮಕುಟೇಶ್ವರನಾಥ ದೇವಾಲಯ ಇದೇ ಆಗಿದ್ದರೆ, ಇದರ ಕಾಲ 597ಕ್ಕಿಂತ ಮುಂಚೆ ಹೋಗುತ್ತದೆ.

ಐಹೊಳೆಯಲ್ಲಿ ಉಳಿದುಬಂದಿರುವ ದಕ್ಷಿಣ ಭಾರತದ ಮಾದರಿಯ ದೇಗುಲಗಳಲ್ಲಿ ಮೇಗುಟಿ ಜಿನೇಂದ್ರಭವನ ಉಲ್ಲೇಖನೀಯವಾಗಿದೆ. ದುರದೃಷ್ಟವಶಾತ್ ಇದರ ಮೇಲಣ ತಲಗಳ ವಿವರಗಳು ಲಭ್ಯವಿಲ್ಲ. ಇದು ವಿಶಾಲ ಪ್ರದಕ್ಷಿಣಾಪಥವುಳ್ಳ ಸಾಂಧಾರ ವಿಮಾನ. ಮೂಲ ವಿನ್ಯಾಸದಲ್ಲಿ ಇದಕ್ಕೆ ಸಾಂಧಾರ ಗರ್ಭಗೃಹ, ವಿಮಾನಕ್ಕಿಂತ ತುಸು ಕಿರಿದಾದ ಮಂಟಪ ಮಾತ್ರ ಇದ್ದವು. ಅನಂತರ, ಚಳುಕ್ಯರ ಕಾಲದಲ್ಲಿಯೇ ಮುಖಚತುಷ್ಕಿಯನ್ನು ಸೇರಿಸಲಾಯಿತು. ತದನಂತರದಲ್ಲಿ ಮುಖಚತುಷ್ಕಿಯನ್ನು ಒಳಗೊಂಡು ವಿಶಾಲ ತೆರೆದ ಮಂಟಪವನ್ನು ರಚಿಸಲಾಗಿದೆ. ಮೂಲ ವಿಮಾನದ ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮುದ, ಕಂಠ ಮತ್ತು ಕಪೋತ ಇವೆ. ಎರಡನೆಯ ತಲದಲ್ಲಿ ಇನ್ನೊಂದು ಗರ್ಭಗೃಹ ವಿದೆ. ಈ ಲಕ್ಷಣ ಹಳ್ಳೂರು, ಪಟ್ಟದಕಲ್ಲು, ಲಕ್ಕುಂಡಿ ಮುಂತಾದೆಡೆ ಇರುವ ಕೆಲವು ಜಿನಾಲಯಗಳಲ್ಲಿ ಕಂಡುಬರುತ್ತದೆ. ಮೇಲ್ಕಟ್ಟಡದ ಇತರ ಭಾಗ ಉಳಿದುಬಂದಿಲ್ಲ. ರವಿಕೀರ್ತಿ ಯಿಂದ ರಚಿತ ಇಮ್ಮಡಿ ಪುಲಕೇಶಿಯ ಪ್ರಶಸ್ತಿ ಶಾಸನ ಈಗ ಜಿನಾಲಯದ ಗೋಡೆಯಲ್ಲಿ ಸೇರಿಸಲ್ಪಟ್ಟಿದೆ. ರವಿಕೀರ್ತಿ ಇದರ ನಿರ್ಮಾತೃ. ಜಿನಾಲಯದ ಮೂಲ ಭಾಗಗಳು ಶಾಸನದ ಕಾಲಕ್ಕೆ ಅಂದರೆ 634ಕ್ಕೆ ಸೇರುತ್ತದೆ. ಮುಖಚತುಷ್ಕಿ ಮತ್ತು ಅದನ್ನೊಳಗೊಂಡ ತೆರೆದ ಮಂಟಪ ಅನಂತರದ ಕಾಲದವು.

ಚಳುಕ್ಯರ ಉತ್ತರಾರ್ಧ ಕಾಲದ ದಕ್ಷಿಣ ಭಾರತದ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಗಮನಾರ್ಹ ದೇಗುಲಗಳು ಪಟ್ಟದಕಲ್ಲಿನಲ್ಲಿವೆ. ಇವುಗಳಲ್ಲಿ ಪ್ರಾಚೀನತಮವಾದುದು ಸಂಗಮೇಶ್ವರ ದೇವಾಲಯ. ವಿಜಯಾದಿತ್ಯ (696–733) ಪ್ರಾರಂಭಿಸಿದ ಈ ದೇಗುಲ ಕೆಲವು ಅಂಶಗಳಲ್ಲಿ

ಅಪೂರ್ಣವಾಗಿದೆ. ವಿಜಯಾದಿತ್ಯನ ಹೆಸರಿನಲ್ಲಿ ಪ್ರತಿಷ್ಠಾಪಿತ ವಿಜಯೇಶ್ವರನಿಗೆ ಮುಡಿಪಾದ ಈ ದೇಗುಲ ಸಾಂಧಾರ ದ್ವಿತಲ ನಾಗರ ವಿಮಾನ. ಗರ್ಭಗೃಹ, ಪ್ರದಕ್ಷಿಣಾಪಥ, ತೆರೆದ ಅಗ್ರಮಂಟಪಗಳನ್ನೊಳಗೊಂಡಿರುವ ಈ ಗುಡಿಯ ಮಂಟಪಕ್ಕೆ ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಂದ ಪ್ರವೇಶವಿದೆ. ಗರ್ಭಗೃಹದ ಮುಂಭಾಗದಲ್ಲಿ ಮಂಟಪದಲ್ಲಿ ಎರಡು ಚಿಕ್ಕ ಗುಡಿಗಳಿರುವುದು ವೈಶಿಷ್ಟ್ಯ. ಇವು ಗಣೇಶ (ದಕ್ಷಿಣ) ಮತ್ತು ದುರ್ಗಾಭಗವತಿ (ಉತ್ತರ) ದೇವತೆಗಳಿಗೆ ಮುಡಿಪಾಗಿವೆ. ಈ ಲಕ್ಷಣ ಪ್ರಾಯಶಃ ಶೈವಧರ್ಮದ ಸ್ವರೂಪದಲ್ಲಾದ ಹೊಸ ಬದಲಾವಣೆಯ ಕುರುಹಾಗಿದೆ.

**ಶೈವಲಯಣ–ಪಾರ್ವತಿ, ಶಿವ, ಭೃಂಗಿ, ಬಾದಾಮಿ**

ಚಳುಕ್ಯ ವಾಸ್ತುಶಿಲ್ಪಿಗಳ ಬಹು ಮಹತ್ವಾಕಾಂಕ್ಷಿ ನಿರ್ಮಾಣಗಳಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ಗುಡಿಗಳು ಸೇರಿವೆ. ಇವೆರಡೂ ಬಹುಶಃ ಏಕಕಾಲಕ್ಕೆ ಪ್ರಾರಂಭಗೊಂಡು ಪೂರ್ತಿಯಾದವು. ಇಮ್ಮಡಿ ವಿಕ್ರಮಾದಿತ್ಯನ ಇಬ್ಬರು ಹೈಹಯವಂಶೀಯ ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯಮಹಾದೇವಿ ಇವುಗಳ ನಿರ್ಮಾತೃಗಳು. ವಿರೂಪಾಕ್ಷ ದೇವಾಲಯದ ಮೂಲ ಹೆಸರು ಲೋಕೇಶ್ವರ. ಇದು ಸಾಂಧಾರ ಚತುಸ್ತಲ ನಾಗರ ವಿಮಾನ. ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಪೂರ್ವ,

**ಕಾಶಿ ವಿಶ್ವೇಶ್ವರ ದೇವಾಲಯ, ಲಕ್ಕುಂಡಿ**

ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಂದ ಮುಖಮಂಟಪಗಳ ಮೂಲಕ ಪ್ರವೇಶವಿರುವ ವಿಶಾಲ ಗೂಢಮಂಟಪ ಇದರ ಭಾಗಗಳು. ಗೂಢ ಮಂಟಪದಲ್ಲಿ ಸಂಗಮೇಶ್ವರ ಗುಡಿಯಲ್ಲಿರುವಂತೆ ಗಣೇಶ ಮತ್ತು ದುರ್ಗಾಭಗವತಿಗಾಗಿ ಎರಡು ಗುಡಿಗಳಿವೆ. ಅಂತರಾಳಕ್ಕೆ ಸ್ಪಂದಿಯಾಗಿ ಮೇಲ್ಗಡೆ ಪೂರ್ವದಿಕ್ಕಿಗೆ ಚಾಚಿರುವ ಶುಕನಾಸವಿದೆ. ಇದು ನಾಲ್ಕನೆಯ ತಲದ ವೇದಿಯ ಮಟ್ಟದವರೆಗೆ ಎದ್ದು ನಿಂತಿದೆ. ಶುಕನಾಸ ದಾಕ್ಷಿಣಾತ್ಯ ಲಕ್ಷಣವಲ್ಲ; ಔತ್ತರೇಯ ಲಕ್ಷಣ. ಅದರಂತೆ ಮುಖಮಂಟಪಗಳಲ್ಲಿ ಕಕ್ಷಾಸನ ಇರುವದನ್ನೂ ಗಮನಿಸ ಬೇಕು; ಇದೂ ಔತ್ತರೇಯ ಲಕ್ಷಣವೇ. ವಿರೂಪಾಕ್ಷದೇವಾಲಯದಲ್ಲಿ ಬಹು ಆಕರ್ಷಕವಾಗಿ ಉತ್ತರ ಭಾರತದ ದೇಗುಲ ಮಾದರಿಯ ಲಕ್ಷಣಗಳನ್ನು ದಕ್ಷಿಣ ಭಾರತದ ಮಾದರಿಯ ದೇಗುಲದಲ್ಲಿ ಬೆಸೆದಿದ್ದಾರೆ. ಇದು ಮುಂದೆ ಕರ್ನಾಟಕ ದ್ರಾವಿಡ ಮಾದರಿಯ ದೇವಾಲಯ ಗಳ ವೈಶಿಷ್ಟ್ಯವಾಗಿ ಮುಂದುವರಿಯಿತು. ದೇವಾಲಯದ ಮುಂದುಗಡೆ ನಂದಿಮಂಟಪವಿದೆ. ಸುತ್ತಲೂ ಪ್ರಾಕಾರವಿದ್ದು ಅದರ ಒಳ ಮುಖದಪೂರ್ತಿ ಪರಿವಾರ ದೇಗುಲಗಳಿವೆ. ಪೂರ್ವದಿಶೆಯಲ್ಲಿ ಪ್ರಾಕಾರಕ್ಕೆ ಚಿಕ್ಕ ಶಾಲಾ ಗೋಪುರವುಳ್ಳ ಪ್ರವೇಶವಿದೆ. ಪ್ರಾಕಾರ, ಗೋಪುರ, ನಂದಿಮಂಟಪ ಇತ್ಯಾದಿ ಲಕ್ಷಣಗಳು ಪಲ್ಲವ ರಾಜಸಿಂಹನಿಂದ ನಿರ್ಮಾಣ ಗೊಂಡ ಕಾಂಚಿಯ ರಾಜಸಿಂಹೇಶ್ವರ (ಕೈಲಾಸನಾಥ) ದೇವಾಲಯವನ್ನು ನೆನಪಿಸುತ್ತವೆ. ವಿಕ್ರಮಾದಿತ್ಯನು ಕಾಂಚಿಯನ್ನು ಮೂರು ಬಾರಿ ಗೆದ್ದು, ಅಲ್ಲಿಯ ರಾಜಸಿಂಹೇಶ್ವರ ದೇವಾಲಯದ ಧನವನ್ನು ಪರಿಶೀಲಿಸಿ ಮರಳಿ ಆ ದೇವರಿಗೇ ಕೊಟ್ಟನೆಂಬ ವಿಚಾರ ಅವನ ಶಾಸನಗಳಿಂದ ತಿಳಿದಿದೆ. ಆದರೆ ಗರ್ಭಗೃಹ, ಅಂತರಾಳ, ಗೂಢಮಂಟಪಗಳ ರಚನೆಯಲ್ಲಿ ಕೈಲಾಸನಾಥ ದೇವಾಲಯಕ್ಕೆ ಯಾವುದೇ ನೇರ ಹೋಲಿಕೆಯಿಲ್ಲ. ದೇವಾಲಯದ ಹೊರಮೈಯಲ್ಲಿ ಶಿವನ ಲಿಂಗೋದ್ಭವ, ಚಂದ್ರಶೇಖರ, ಭೈರವ, ನಟೇಶ, ರಾವಣಾನುಗ್ರಹ ಮುಂತಾದ ಮೂರ್ತಿಗಳು, ರಾಮಾಯಣದ ಆಯ್ದ ಕಥಾನಿರೂಪಕ ದೃಶ್ಯಗಳು, ಗಜೇಂದ್ರಮೋಕ್ಷ, ವರಾಹ, ತ್ರಿವಿಕ್ರಮ ಮುಂತಾದ ವಿಷ್ಣುವಿಗ್ರಹ ಗಳು ಇವೆ. ಒಳಗಡೆ ರಾಮಾಯಣ, ಮಹಾಭಾರತ, ಭಾಗವತ, ಪಂಚತಂತ್ರ ಮುಂತಾದ ಕೃತಿಗಳಿಂದ ಸ್ಫೂರ್ತಿಪಡೆದ ಆಕರ್ಷಕ ಕಥಾನಕ ಶಿಲ್ಪಗಳಿವೆ. ಅಲ್ಲದೆ ಗೋಡೆಯ ಗುಂಟದ ಅರ್ಧಗಂಬಗಳ ಮುಖದಲ್ಲಿ ಸುಂದರ ದಂಪತಿಗಳ ವಿಗ್ರಹಗಳಿವೆ. ಗುಂಡ ಅನಿವಾರಿತಾ ಚಾರಿ ಮತ್ತು ಸರ್ವಸಿದ್ಧಿ ಆಚಾರಿ ಈ ದೇವಾಲಯದ ಮುಖ್ಯ ಸೂತ್ರಧಾರಿಗಳು. ಅವರ ಅದ್ಭುತ ಸಾಧನೆಗೆ ಮೆಚ್ಚಿ ಮೂರು ಬಾರಿ ಅವರಿಗೆ 'ಪೆರ್ಜೆರಪು' ಸನ್ಮಾನ ಮಾಡಲಾಯಿತಲ್ಲದೆ, ತ್ರಿಭುವನಾಚಾರಿ ಎಂಬ ಬಿರುದು ನೀಡಲಾಯಿತು. ಸರ್ವಸಿದ್ಧಿ ಆಚಾರಿ ಲೋಕೇಶ್ವರ ಗುಡಿಯ ದಕ್ಷಿಣ ಭಾಗದ ಸೂತ್ರಧಾರಿ. ಗುಂಡ ಅನಿವಾರಿತಾಚಾರಿ ಬಹುಶಃ ಆ ಗುಡಿಯ ಉತ್ತರ ಭಾಗದ ಸೂತ್ರಧಾರಿ ಇದ್ದಿರಬೇಕು. ವಿರೂಪಾಕ್ಷ ದೇವಾಲಯ ಕರ್ನಾಟಕ ದ್ರಾವಿಡ ವಾಸ್ತುಶೈಲಿಯ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲು.

**ಕಾಶಿ ವಿಶ್ವೇಶ್ವರ ದೇವಾಲಯದ ದಕ್ಷಿಣ ದ್ವಾರ**

ಹೆಚ್ಚು ಕಡಿಮೆ ಇದೇ ವಿನ್ಯಾಸವನ್ನನುಸರಿಸಿ ತುಸು ಕಡಿಮೆ ಗಾತ್ರದ ಮಲ್ಲಿಕಾರ್ಜುನ ದೇಗುಲವನ್ನು ನಿರ್ಮಿಸಲಾಗಿದೆ. ಇದರ ಮೂಲ ಹೆಸರು ತ್ರೈಲೋಕ್ಯೇಶ್ವರ. ನಿರ್ಮಿಸಿದಾಕೆ ತ್ರೈಲೋಕ್ಯ ಮಹಾದೇವಿ. ತಲವಿನ್ಯಾಸವು ವಿರೂಪಾಕ್ಷದಂತೆಯೇ ಇದೆ. ಶಿಲ್ಪಾಲಂಕಾರವೂ ಅದನ್ನೇ ಅನುಸರಿಸಿದೆ. ಆದರೆ ಇದರ ಶಿಖರ ವೃತ್ತಾಕಾರವಾಗಿದೆ. ಇದು ದಾಕ್ಷಿಣಾತ್ಯ ಸಾಂಧಾರ ತ್ರಿತಲ ವೇಸರ ವಿಮಾನದ ಪ್ರತಿನಿಧಿಯಾಗಿದೆ. ಈ ರೀತಿಯ ರಚನೆಗೆ ಚಳುಕ್ಯರ ಸಂದರ್ಭದಲ್ಲಿ ಇದೊಂದೇ ಉದಾಹರಣೆ. ಇಲ್ಲಿಯೂ ಔತ್ತರೇಯ ಲಕ್ಷಣವೆನಿಸಿದ ಸುಕನಾಸದ ರಚನೆಯಿರುವದು ಗಮನೀಯ. ಸ್ಪಷ್ಟ ಪುರಾವೆ ಇಲ್ಲದಿದ್ದರೂ ಗುಂಡ ಅನಿವಾರಿತಾಚಾರಿ ಮತ್ತು ಸರ್ವಸಿದ್ಧಿ ಆಚಾರಿ ಈ ದೇಗುಲದ ಸೂತ್ರಧಾರಿಗಳಾಗಿರುವ ಸಾಧ್ಯತೆಯಿದೆ. ಇದರ ಕಾಲವೂ ಸು.733–44.

2. ನಾಗರ ರೇಖಾ ಪ್ರಾಸಾದಗಳು (ಲತಿನ ಪ್ರಾಸಾದಗಳು): ಎರಡನೆಯ ಗುಂಪಿನ ದೇವಾಲಯಗಳು ಉತ್ತರ ಭಾರತದ ಮಾದರಿಯ ಪ್ರತಿನಿಧಿಗಳಾದ ನಾಗರ ರೇಖಾ ಅಥವಾ ಲತಿನ ಪ್ರಾಸಾದಗಳು. ಒಳ ರಚನೆಯಲ್ಲಿ ಈ ಕಾಲದ ದ್ರಾವಿಡ ಶೈಲಿಯ ದೇಗುಲಗಳಿಗಿಂತ ಭಿನ್ನವಾಗಿರದಿದ್ದರೂ ಬಾಹ್ಯ ವಿವರಗಳಲ್ಲಿ ವ್ಯತ್ಯಾಸಗಳಿವೆ. ಊರ್ಧ್ವ ರಚನೆಯಲ್ಲಿ ಅಧಿಷ್ಠಾನ (ಪೀಠ), ಜಂಘಾ (ಗೋಡೆ), ಶಿಖರ, ಗಲ (ಕುತ್ತಿಗೆ), ಆಮಲಸಾರಕ (ಆಮಲಶಿಲಾ, ನೆಲ್ಲಿಕಾಯಿಯನ್ನು ಹೋಲುವ ಅಂಗ) ಮತ್ತು ಕಲಶ ಇವು ಇದರ ಮುಖ್ಯ ಭಾಗಗಳು. ಐಹೊಳೆಯಲ್ಲಿ ಕಾಣುವಂತೆ ಇವುಗಳ ಪೀಠ ಸಾಮಾನ್ಯವಾಗಿ ಸರಳವಾಗಿದೆ. ಪದ್ಮ, ಕಂಠ ಮತ್ತು ಕಪೋತ ಅದರ ಪ್ರಮುಖ ಭಾಗಗಳು. ಆದರೆ ಪಟ್ಟದಕಲ್ಲಿನ ಗುಡಿಗಳ ಪೀಠದಲ್ಲಿ ಅನೇಕ ಮಡಿಕೆಗಳಿವೆ. ಪದ್ಮ, ಕುಂಭ, ಕಂಠ ಮತ್ತು ಕಪೋತಗಳು ಸಾಮಾನ್ಯ; ಕೆಲವು ದೇಗುಲಗಳಲ್ಲಿ ಕುಂಭದ ಸ್ಥಾನ ಕುಮುದದಿಂದ ಆಕ್ರಮಿತವಾಗಿದೆ. ಮೂಲ ಪ್ರಾಸಾದದ ಪೀಠ ಪ್ರತಿಯೊಂದು ಪಾರ್ಶ್ವದ ಮಧ್ಯದಲ್ಲಿ ಮುಂಚಾಚಿನಿಂದ ಕೂಡಿರುತ್ತದೆ. ಇದಕ್ಕೆ

ಸ್ಪಂದಿಯಾಗಿ ಸರಳ ಗೋಡೆಯ (ಜಂಘಾ) ಮಧ್ಯದಲ್ಲಿ ಒಂದು ಮುಂಚಾಚು (ರಥ) ಇರುತ್ತದೆ. ಹೀಗೆ ಚಳುಕ್ಯರ ಎಲ್ಲ ನಾಗರ ರೇಖಾ ಪ್ರಾಸಾದಗಳು ತ್ರಿರಥ ವಿನ್ಯಾಸ ವುಳ್ಳವಾಗಿವೆ. ಕೆಲವು ಸಲ ಇದನ್ನು ಕೇವಲ ದೇವಕೋಷ್ಠದ ರಚನೆಗೆ ಸೇರಿಸಿರುವ ಜೋಡು ಕಂಬಗಳಿಂದ ಸೂಚಿಸಲಾಗಿದೆ. ಶಿಖರ ಚೌಕ ವಿನ್ಯಾಸವುಳ್ಳದ್ದಾಗಿದ್ದು ನಾಲ್ಕೂ ಪಾರ್ಶ್ವಗಳಲ್ಲಿ ಮೇಲೇರಿದಂತೆ

ದೊಡ್ಡ ಬಸಪ್ಪ ದೇವಾಲಯ, ಡಂಬಳ

ಕ್ರಮೇಣ ಒಳಕ್ಕೆ ಬಾಗುತ್ತ ಸಾಗಿರುತ್ತದೆ. ಆದುದರಿಂದಲೇ ರೇಖಾ ನಾಗರ ಎಂಬ ಹೆಸರು ಇದಕ್ಕೆ ಅನ್ವಯವಾಗುತ್ತದೆ. ಶಿಖರದ ನಾಲ್ಕೂ ಪಾರ್ಶ್ವಗಳ ಮಧ್ಯದಲ್ಲಿ, ರಥ ಮುಂಚಾಚಿಗೆ ಸ್ಪಂದಿಯಾಗಿ ಗವಾಕ್ಷ, ಅರ್ಧಗವಾಕ್ಷಗಳಿಂದಾದ ಲತಾ ಅಲಂಕಾರವಿರುತ್ತದೆ. ಇದರ ಶಿಖರದ ಕೋನಗಳಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಭೂಮಿಯನ್ನು (ಮಹಡಿಯನ್ನು) ಸೂಚಿಸುವ ಕರ್ಣ ಆಮಲಕಗಳಿರುತ್ತವೆ. ದೇವಾಲಯಕ್ಕೆ ಅಂತರಾಲ (ಕಪಿಲಿ) ಇದ್ದರೆ, ದೇವಾಲಯ ಮುಖಮಾಡಿರುವ ದಿಶೆಯಲ್ಲಿ ಶಿಖರಕ್ಕೆ ಮುಂಚಾಚು ಇರುತ್ತದೆ. ಇದು ಸುಕನಾಸಿ. ಸುಕನಾಸಿಯ ಮುಖಪಟ್ಟಿಯಲ್ಲಿ ದೊಡ್ಡ ಗವಾಕ್ಷವಿದ್ದು ಅದರ ನಡುವೆ ಗರ್ಭಗೃಹದಲ್ಲಿ ಪ್ರತಿಷ್ಠಾಪಿತ ದೇವತೆಯ ಮೂರ್ತಿ ಇರುತ್ತದೆ. ಉದಾಹರಣೆಗೆ, ಶಿವ ದೇವಾಲಯವಿದ್ದರೆ,

ಮಹಾದೇವ ದೇವಾಲಯ, ಇಟ್ಟಗಿ

ಸುಕನಾಸದ ಮುಖಪಟ್ಟಿಯಲ್ಲಿ ನಟರಾಜ ವಿಗ್ರಹವಿರುವದು ಸಾಮಾನ್ಯ. ಅಂತರಾಲವಿರದಿರುವ ದೇಗುಲಗಳ ಶಿಖರದಲ್ಲಿ ಶುಕನಾಸವಿರಬೇಕಾದ ಭಾಗದಲ್ಲಿ ಕೇವಲ ಮುಖಪಟ್ಟಿಯನ್ನು ಇರಿಸಲಾಗಿರುತ್ತದೆ (ಉದಾ: ಐಹೊಳೆಯ ಹುಚ್ಚಿಮಲ್ಲಿ ಗುಡಿ). ಶಿಖರದ ಮೇಲ್ಭಾಗ ಸಮತಟ್ಟಾಗಿದ್ದು ಅದರ ಮಧ್ಯದಲ್ಲಿ ಗಲವನ್ನು ಪ್ರತಿನಿಧಿಸುವ ದುಂಡುಗಲ್ಲು ಇರುತ್ತದೆ. ಇದರ ಮೇಲ್ಗಡೆ ಕ್ರಮವಾಗಿ ಆಮಲಶಿಲಾ ಮತ್ತು ಕಲಶ ಇರುತ್ತವೆ. ಮುಖಮಂಟಪದ ಪಾರ್ಶ್ವ ಅಂಚಿನುದ್ದಕ್ಕೂ ಕಕ್ಷಾಸನ ಇರುವುದು ಸಾಮಾನ್ಯ. ದ್ರಾವಿಡ ಮಾದರಿಯ ದೇಗುಲಗಳಲ್ಲಿ ಕಾಣುವಂತೆ ಲತಿನ ಪ್ರಾಸಾದಗಳಲ್ಲಿಯೂ ಸಾಂಧಾರ ಮತ್ತು ನಿರಂಧಾರ ರಚನೆಗಳು ಕಾಣುತ್ತವೆ. ಸಾಂಧಾರ ದೇಗುಲಗಳು ರಾಜ ಪ್ರೋತ್ಸಾಹದಿಂದ ರಚಿತವಾಗಿವೆ.

ಈ ಮಾದರಿಯ ಪ್ರಾರಂಭಿಕ ಶಿಲಾದೇಗುಲಗಳು ಐಹೊಳೆಯಲ್ಲಿವೆ. ಹುಚ್ಚಿಮಲ್ಲಿ ಗುಡಿ ಸಾಂಧಾರ ರೀತಿಯ, ಗರ್ಭಗೃಹ, ಗೂಢಮಂಟಪ ಹಾಗೂ ಮುಖಮಂಟಪವ ನ್ನೊಳಗೊಂಡು ಪಶ್ಚಿಮಕ್ಕೆ ಮುಖಮಾಡಿರುವ ರೇಖಾ ಪ್ರಾಸಾದ. ಇದರ ಪೀಠ ಸಾಕಷ್ಟು ಎತ್ತರವಿದ್ದರೂ ಪದ್ಮ, ಕಂಠ ಮತ್ತು ಕಪೋತ ಅಂಗಗಳಿಂದಾಗಿದೆ. ಜಂಘಾ ಭಾಗವು ಸರಳವೂ ನಿರಲಂಕೃತವೂ ಆಗಿದ್ದು ಗರ್ಭಗೃಹವಿರುವ ಸ್ಥಾನದಲ್ಲಿ ಪ್ರದಕ್ಷಿಣಾಪಥಕ್ಕೆ ಬೆಳಕು ಒದಗಿಸಲು ಜಾಲವಾತಾಯನಗಳಿವೆ. ಶಿಖರದ ರೇಖಾ ರಚನೆ ಅಷ್ಟು ಬಲವಾಗಿಲ್ಲ. ಕರ್ಣಾಮಲಕಗಳು ದುಂಡಾಗಿವೆ. ಅಂತರಾಲವಿಲ್ಲದಿರುವುದರಿಂದ ಶಿಖರದ ಪಶ್ಚಿಮ ಮುಖದಲ್ಲಿ ನಟರಾಜನ ಉಬ್ಬುಶಿಲ್ಪವಿರುವ ಮುಖಪಟ್ಟಿಯನ್ನಿರಿಸಲಾಗಿದೆ. ಮುಂಚೆ ಬಿದ್ದು ಹೋಗಿದ್ದ ಆಮಲಶಿಲೆಯನ್ನು ಮತ್ತು ಕಲಶವನ್ನು ಈಗ ಪುನಸ್ಸ್ಥಾಪಿಸಲಾಗಿದೆ. ಮುಖಮಂಟಪದ ಪಾರ್ಶ್ವಗಳಲ್ಲಿ ಕಕ್ಷಾಸನಗಳಿವೆ. ಗೂಢಮಂಟಪದ ಕಂಬಗಳು ಚೌಕವಿದ್ದು ಮೇಲ್ಭಾಗದಲ್ಲಿ ಅರ್ಧವೃತ್ತಗಳನ್ನು ಎದುರುಬದಿರಾಗಿರುವಂತೆ ಹಾಗೂ ಮೂಲೆಗಳಲ್ಲಿ ಪಲ್ಲವಗಳು ಚಾಚಿರುವಂತೆ ಅಲಂಕರಿಸಿದೆ. ಬೋದಿಗೆ ಪ್ರಕಾರದಲ್ಲಿವೆ. ಛತ್ತು (ವಿತಾನ) ಮಧ್ಯದಲ್ಲಿ ಸಮತಲವಿದ್ದು ಬ್ರಹ್ಮ, ವಿಷ್ಣು, ಶಿವ ಮತ್ತು ಇಂದ್ರರು ತಮ್ಮ ತಮ್ಮ ವಾಹನಗಳ ಮೇಲೆ ಸಾಗುತ್ತಿರುವ ಶಿಲ್ಪವಿದೆ. ಈ ಎತ್ತರಿಸಿದ ವಿತಾನದ ಪಾರ್ಶ್ವಗಳಲ್ಲಿ ಸಣ್ಣ ಕಿಂಡಿಗಳಿದ್ದು ವಿತಾನದ ಶಿಲ್ಪಗಳಮೇಲೆ ಬೆಳಕು ಬೀರುತ್ತವೆ. ಗೂಢಮಂಟಪದ ಪಾರ್ಶ್ವದ ಛತ್ತುಗಳು ಇಳಿಜಾರಾಗಿವೆ. ಗೂಢಮಂಟಪದ ಹೊರಗೋಡೆಯಲ್ಲಿರುವ ವಿಜಯಾದಿತ್ಯನ ಶಾಸನ ರಾಜಪ್ರೋತ್ಸಾಹವನ್ನು ಪ್ರಕಟಿಸುತ್ತದೆ. ಮುಖಮಂಟಪದ ವಿತಾನದಲ್ಲಿರುವ ತಾರಕಾಸುರ ನನ್ನು ವಧಿಸುತ್ತಿರುವ ಕಾರ್ತಿಕೇಯನ ಶಿಲ್ಪ ಒಂದು ಉತ್ತಮ ಕೃತಿ. ವಿಶಿಷ್ಟ ಸರಳ ಲಕ್ಷಣಗಳ ಹಿನ್ನೆಲೆಯಲ್ಲಿ ಹುಚ್ಚಿಮಲ್ಲಿಗುಡಿಯನ್ನು 7ನೆಯ ಶತಮಾನಕ್ಕೆ ಅನ್ವಯಿಸಬಹುದು.

ಐಹೊಳೆಯ ಚಕ್ರಗುಡಿ ನಿರಂಧಾರ ರೇಖಾ ಪ್ರಾಸಾದದ ಇನ್ನೊಂದು ಪ್ರಾಚೀನ ಉದಾಹರಣೆ. ಮೂಲ ಪ್ರಾಸಾದ ತ್ರಿರಥ ಮಾದರಿಯಲ್ಲಿದೆ. ಗರ್ಭಗೃಹ ಒಳಗಡೆ ಆಯತ ವಿನ್ಯಾಸದಲ್ಲಿರುವದರಿಂದ ಇದು ದುರ್ಗಾಭಗವತಿಯ ಗುಡಿ ಇರಬೇಕು. ಅನಂತರದ ಕಾಲದಲ್ಲಿ ಈ ಗುಡಿಗೆ ಸಾಕಷ್ಟು ಸೇರ್ಪಡೆಗಳಾಗಿವೆ. ಇದರ ಪರಿಸರದಲ್ಲಿ ಯುವರಾಜ ಮೊದಲನೆಯ ವಿಕ್ರಮಾದಿತ್ಯನ ಶಾಸನ ದೊರೆತಿದೆ. ಆದುದರಿಂದ ಈ ಗುಡಿ 7ನೆಯ ಶತಮಾನದ ಮಧ್ಯಾವಧಿಯಲ್ಲಿ ನಿರ್ಮಾಣವಾಗಿರಬಹುದು.

ಮದನಿಕೆಯ ವಿಗ್ರಹ, ಮಲ್ಲಿಕಾರ್ಜುನ ದೇವಾಲಯ, ಕುರುವತ್ತಿ

ಐಹೊಳೆಯಲ್ಲಿರುವ ಹುಚ್ಚಪ್ಪಯ್ಯಗುಡಿ ನಿರಂಧಾರ ರೇಖಾ ಪ್ರಾಸಾದದ ಇನ್ನೊಂದು ಉದಾಹರಣೆ. ಇದು ಶಿವಾಲಯ. ವಿನ್ಯಾಸದಲ್ಲಿ ಗರ್ಭಗೃಹ, ಗೂಢಮಂಟಪ ಮತ್ತು ಕಕ್ಷಾಸನಸಹಿತ ಮುಖಮಂಟಪಗಳನ್ನೊಳಗೊಂಡಿದೆ. ಕಂಬಗಳು ಸರಳ ರುಚಕ ಮಾದರಿಯಲ್ಲಿದ್ದು ಅವುಗಳ ಬೋದಿಗೆಗಳೂ ಸರಳವಾಗಿವೆ. ಗೂಢಮಂಟಪ ಮತ್ತು ಗರ್ಭಗೃಹಗಳ ದ್ವಾರಬಂಧಗಳು ಮೇಲ್ತುದಿಯಲ್ಲಿ ಹೊರಚಾಚಿದ್ದು, ಅವುಗಳ ಅಲಂಕಾರಕ್ಕೆ ಔತ್ತರೇಯ ವಿನ್ಯಾಸಗಳನ್ನೇ ಬಳಸಲಾಗಿದ್ದರೂ ಉತ್ತರಾಂಗದಲ್ಲಿ ಒಂದೆಡೆ ಆಕಸ್ಮಿಕ ಎನ್ನುವಂತೆ ದಾಕ್ಷಿಣಾತ್ಯ ಶಾಲಾ ಶಿಖರ ಮಾದರಿಯ ಬಳಕೆಯಾಗಿರುವದು ಗಮನಾರ್ಹ. ಗರ್ಭಗೃಹದ

ದ್ವಾರದ ಪಾರ್ಶ್ವಗಳಲ್ಲಿರುವ ಕಂಬಗಳ ಪೂರ್ವಮುಖದಲ್ಲಿ ಶೈವ ದ್ವಾರಪಾಲರಿದ್ದಾರೆ. ಅಲ್ಲದೆ ದಕ್ಷಿಣ ಪಾರ್ಶ್ವದ ಕಂಬದ ಉತ್ತರ ಮುಖದಲ್ಲಿ ದುರ್ಗಾಭಗವತಿ ಮತ್ತು ಉತ್ತರ ಪಾರ್ಶ್ವದ ಕಂಬದ ದಕ್ಷಿಣಮುಖದಲ್ಲಿ ಗಣೇಶ ಶಿಲ್ಪಗಳಿವೆ. ಗೂಢಮಂಟಪದ ಉತ್ತರಾಂಗಗಳಲ್ಲಿ ವರಾಹ, ತ್ರಿವಿಕ್ರಮ ಮುಂತಾದ ಚಿಕಣಿ ಶಿಲ್ಪಗಳಿವೆ. ಗೂಢಮಂಟಪದ ದ್ವಾರದ ಒಳ ಮುಖದಲ್ಲಿ, ಗರ್ಭಗೃಹಕ್ಕೆ ಮುಖಮಾಡಿ ಗಜಲಕ್ಷ್ಮಿಯ ಸುಂದರ ಬೃಹತ್ ಶಿಲ್ಪವಿದೆ. ಮುಖಮಂಟಪದ ಕಂಬಗಳ ಹೊರ ಮುಖಗಳಲ್ಲಿ ವಿವಿಧ ಭಂಗಿಗಳಲ್ಲಿ ಮಿಥುನಗಳ ಶಿಲ್ಪಗಳಿವೆ. ಈ ದೇವಾಲಯದ ಅಧಿಷ್ಠಾನ, ಜಂಘಾ ಸರಳವಾಗಿವೆ. ಕಂಬಗಳ ಜೋಡಿಯನ್ನು ದೇವಕೋಷ್ಠ ರಚನೆಗೆ ಬಳಸುವ ಮೂಲಕ ಮೂಲಪ್ರಾಸಾದದ ತ್ರಿರಥ ವಿನ್ಯಾಸವನ್ನು ರೂಪಿಸಲಾಗಿದೆ. ಹಿಂಗೋಡೆಯ ದೇವಕೋಷ್ಠದಲ್ಲಿ ಉಗ್ರನರಸಿಂಹನ ಶಿಲ್ಪವಿದೆ. ಶಿಖರದ ಪೂರ್ವಮುಖದಲ್ಲಿ ನಟರಾಜನ ಉಬ್ಬುಶಿಲ್ಪವಿರುವ ಮುಖಪಟ್ಟಿಯಿದೆ. ಈ ದೇಗುಲವನ್ನು ನಿರ್ಮಿಸಿದ ಸೂತ್ರಧಾರಿ ನರಸೊಬ್ಬ. ಮುಖಮಂಟಪದಲ್ಲಿರುವ ಕಂಬದಲ್ಲಿ ಇವನು ಬರೆದಿರುವ ಶಾಸನದಲ್ಲಿ ಜಂಬೂದ್ವೀಪದಲ್ಲಿ ವಾಸ್ತುಪ್ರಾಸಾದ ನಿರ್ಮಾಣಕಲೆಯಲ್ಲಿ ನರಸೊಬ್ಬನನ್ನು ಮೀರಿಸುವಾತ ಹಿಂದೆ ಆಗಿಲ್ಲ, ಮುಂದೆ ಆಗುವದಿಲ್ಲ ಎಂಬುದಾಗಿ ಹೊಗಳಿದೆ. ಹುಚ್ಚಪ್ಪಯ್ಯ ಗುಡಿಯ ಇನ್ನೊಬ್ಬ ಶಿಲ್ಪಿ ಗನಸೊಬ್ಬ. ಇವರು ಕನ್ನಡ ನೆಲದವರೆಂದು ಅವರ ಹೆಸರುಗಳಿಂದ ಗುರುತಿಸಬಹುದು. ಔತ್ತರೇಯ ಶೈಲಿಯ ರೇಖಾ ಪ್ರಾಸಾದವನ್ನು ರಚಿಸುವ ಇವರ ಪ್ರಯತ್ನ ಶ್ಲಾಘನೀಯ; ಕೆಲವು ದಾಕ್ಷಿಣಾತ್ಯ ಅಂಶಗಳು ತಿಳಿದೋ ತಿಳಿಯದೆಯೋ ಈ ರಚನೆಯಲ್ಲಿ ನುಸುಳಿರುವದು ಅಚ್ಚರಿಯಲ್ಲ. ಪ್ರತಿಮಾಲಕ್ಷಣ, ಲಿಪಿ ಲಕ್ಷಣ, ವಾಸ್ತುವಿವರಗಳ ಹಿನ್ನೆಲೆಯಲ್ಲಿ ಈ ದೇಗುಲ 8ನೆಯ ಶತಮಾನದ ಪೂರ್ವಾರ್ಧದ್ದು.

ಐಹೊಳೆಯ ತಾರಬಸಪ್ಪ ಗುಡಿಯು ರೇಖಾ ಪ್ರಾಸಾದದ ಇನ್ನೊಂದು ಉದಾಹರಣೆ. ಹುಚಪ್ಪಯ್ಯ ಗುಡಿಯಂತೆ ಇದು ಕೂಡ ನಿರಂಧಾರ ಶಿವಾಲಯ. ಗರ್ಭಗೃಹ, ಗೂಢಮಂಟಪ, ಮುಖಚತುಷ್ಕಿ ಇದರ ತಲವಿನ್ಯಾಸದ ಅಂಗಗಳು. ಮೂಲಪ್ರಾಸಾದದ ಅಧಿಷ್ಠಾನದ ಮಡಿಕೆಗಳಲ್ಲಿ ದಾಕ್ಷಿಣಾತ್ಯ ಲಕ್ಷಣಗಳ ಬಳಕೆ, ಜಂಘಾ ಭಾಗದಲ್ಲಿ ಕುಡ್ಯಸ್ತಂಭಗಳಿರುವದು, ಮುಖಚತುಷ್ಕಿಯಲ್ಲಿ ಕಕ್ಷಾಸನ ಇಲ್ಲದಿರುವದು, ಈ ದೇಗುಲದ ಉಲ್ಲೇಖನೀಯ ವಿಶಿಷ್ಟ್ಯಗಳಾಗಿವೆ. ಕನ್ನಡ ನೆಲದ ಸೂತ್ರಧಾರಿಯ ಕೈಚಳಕ ಇಲ್ಲಿ ಸ್ಪಷ್ಟವಾಗಿಯೇ ಇದೆ. ದುರದೃಷ್ಟವಶಾತ್ ಸೂತ್ರಧಾರಿಯಾರೆಂದು ತಿಳಿದಿಲ್ಲ. ಇದು ಕೂಡ 8ನೆಯ ಶತಮಾನದ ಪೂರ್ವಾರ್ಧದ ದೇಗುಲ.

ಗೌಡರಗುಡಿ ಐಹೊಳೆಯಲ್ಲಿರುವ ದೇಗುಲಗಳಲ್ಲಿ ವೈಶಿಷ್ಟ್ಯಪೂರ್ಣವಾದುದು. ತುಸು ಆಯತ ವಿನ್ಯಾಸದ ಗರ್ಭಗುಡಿಯಲ್ಲಿ ಮೂಲತಃ ದುರ್ಗಾಭಗವತಿಯ ವಿಗ್ರಹವಿತ್ತು. ದ್ವಾರಬಂಧ ಔತ್ತರೇಯ ಲಕ್ಷಣಗಳಿಂದ ಕೂಡಿದೆ. ಗರ್ಭಗೃಹದ ಸುತ್ತಲೂ ವಿಶಾಲವಾಗಿರುವ ತೆರೆದ ಪ್ರದಕ್ಷಿಣಾಪಥವಿದ್ದು, ಅಂಚಿನಗುಂಟ ಕಕ್ಷಾಸನವಿದೆ. ಸುತ್ತಲಿನ ಚಾವಣಿ ಇಳಿಜಾರಾಗಿದೆ. ಗರ್ಭಗೃಹದ ಮೇಲೆ ಮೂಲತಃ ರೇಖಾ ಶಿಖರವಿದ್ದಿರಬೇಕು. ದುರ್ಗಾಭಗವತಿಗೆ ನೀಡಲಾದ ದಾನವನ್ನು ಉಲ್ಲೇಖಿಸುವ ಇಲ್ಲಿಯ ಜಂತಿಯಲ್ಲಿರುವ ಕನ್ನಡ ಶಾಸನ 8ನೆಯ ಶತಮಾನದ್ದು. ದೇಗುಲವಾದರೂ ಅದೇ ಕಾಲದ್ದು.

ನಾಗರ ರೇಖಾ ಪ್ರಾಸಾದದ ಬಹು ಉತ್ತಮ ಉದಾಹರಣೆಗಳು ಪಟ್ಟದಕಲ್ಲಿನಲ್ಲಿವೆ. ಇಲ್ಲಿ ಈ ಮಾದರಿಯ ಅನೇಕ ಚಿಕ್ಕ ನಿರಂಧಾರ ದೇಗುಲಗಳಿವೆಯಲ್ಲದೆ ಗಳಗನಾಥ ಮತ್ತು ಪಾಪನಾಥ ಎಂದು ಕರೆಯಲಾಗುವ ಎರಡು ಪ್ರಮುಖ ಬೃಹತ್ ಗಾತ್ರದ ಸಾಂಧಾರ ರೇಖಾ ಪ್ರಾಸಾದಗಳಿವೆ. ಇವುಗಳಲ್ಲಿ ಗಳಗನಾಥ ದೇಗುಲ ಶುದ್ಧ ನಾಗರ ರೇಖಾ ಮಾದರಿಯ ಅದ್ಭುತ ನಿರ್ಮಾಣ. ಇದರ ಮಂಟಪ ಭಾಗ ಮತ್ತು ಪ್ರದಕ್ಷಿಣಾಪಥದ ಹೊರಗೋಡೆಯ ಕೆಲವು ಭಾಗಗಳು ಬಿದ್ದು ಹೋಗಿವೆಯಾದರೂ ಉಳಿದ ಭಾಗ ಉತ್ತಮ ಸ್ಥಿತಿಯಲ್ಲಿದೆ. ಗರ್ಭಗೃಹದ ಅಧಿಷ್ಠಾನದಲ್ಲಿರುವ 'ಕುಂಭ' ಮಡಿಕೆ, ರಥ ಭಾಗದ ಅಧಿಷ್ಠಾನದಲ್ಲಿ ಕಾಣುವ ತುಲಾಪೀಠ ವಿನ್ಯಾಸ, ಸರಳ ಅಲಂಕಾರರಹಿತ ಜಂಘಾ, ಶಿಖರದ ಮನಮೋಹಕ ಬಾಗುರೇಖೆ, ಚೌಕ ದಿಂಬಿನಂತೆ ಚಪ್ಪಟೆಯಾಗಿ ಕಾಣುವ ಕರ್ಣಾಮಲಕಗಳು, ಲತಾ ಭಾಗದ ಗವಾಕ್ಷ ಅಲಂಕಾರದ ಕ್ರಮ, ಸ್ಫುಟವಾಗಿ ಸುಂದರವಾಗಿ ಕಾಣುವ ಆಮಲಶಿಲಾ ಮತ್ತು ಕಲಶ, ಘನದ್ವಾರದ ಮಂಟಪದಲ್ಲಿರುವ ಘಟಪಲ್ಲವ ಅಲಂಕೃತ ಚೌಕ ಕಂಬಗಳು, ಸಂಹಾರಮೂರ್ತಿ ಶಿವನ ವಿಗ್ರಹಗಳು, ಗರ್ಭಗೃಹದ ಟಿ–ಆಕಾರದ ದ್ವಾರಬಂಧ ಇವೆಲ್ಲವೂ ನೋಡುಗನ ಮೇಲೆ ಗಂಭೀರ ಪ್ರಭಾವವನ್ನು ಬೀರುವುದಲ್ಲದೇ ಸೂತ್ರಧಾರನು ರೇಖಾ ಪ್ರಾಸಾದದ ಒಳಹೊರ ವಿವರಗಳ ಸ್ಪಷ್ಟ ಪರಿಕಲ್ಪನೆ ಹೊಂದಿರುವುದನ್ನು ಸೂಚಿಸುತ್ತಿವೆ. ಸುಕನಾಸಿ ಈಗ ಬಿದ್ದು ಹೋಗಿದೆ. ಒಟ್ಟಾರೆ ನೋಡಿದಾಗ ಈ ದೇಗುಲ ಆಂಧ್ರಪ್ರದೇಶದ ಮೆಹಬೂಬನಗರ ಜಿಲ್ಲೆಯಲ್ಲಿ ಚಳುಕ್ಯರ ಕಾಲದಲ್ಲಿ ನಿರ್ಮಾಣ ಗೊಂಡ ಆಲಂಪುರದ ರೇಖಾ ಪ್ರಾಸಾದ ಮಾದರಿಯ ದೇವಾಲಯಗಳ ಲಕ್ಷಣಗಳಿಗೆ ತೀರ ಹತ್ತಿರವಾಗಿದೆ. ಆಲಂಪುರದಲ್ಲಿ ಕೆಲಸ ಮಾಡುತ್ತಿದ್ದ ಸ್ಥಪತಿ–ಶಿಲ್ಪಿಗಳೇ ಇದನ್ನು ನಿರ್ಮಿಸಿದ್ದರೆ ಆಶ್ಚರ್ಯವಿಲ್ಲ. ಇದನ್ನು ವಿಜಯಾದಿತ್ಯನ ಆಳ್ವಿಕೆಯ ಉತ್ತರಾರ್ಧಕ್ಕೆ, ಅಂದರೆ ಸು.720–33ರ ಕಾಲಾವಧಿಗೆ ಅನ್ವಯಿಸಬಹುದು.

ಪಟ್ಟದಕಲ್ಲಿನ ಪಾಪನಾಥ ದೇವಾಲಯ ಹಂತ ಹಂತಗಳಲ್ಲಿ ನಿರ್ಮಾಣವಾಗಿರುವ ಸಾಂಧಾರ ರೇಖಾ ಪ್ರಾಸಾದ. ಗರ್ಭಗೃಹ, ಗೂಢಮಂಟಪ, ಇನ್ನೊಂದು ನಂದಿಸಹಿತ ಗೂಢಮಂಟಪ ಮತ್ತು ಮುಖಮಂಟಪ ಇದರ ಮುಖ್ಯ ಭಾಗಗಳು. ಹೊರ ವಿವರಗಳಲ್ಲಿ ಅನೇಕ ಗಮನಾರ್ಹ ಅಂಶಗಳಿವೆ. ಅಧಿಷ್ಠಾನದಲ್ಲಿ ದ್ರಾವಿಡ ಮಾದರಿಯ ಅಧಿಷ್ಠಾನದ ಮಡಿಕೆಗಳಿವೆ. ಜಂಘಾದಲ್ಲಿ ಕುಡ್ಯಸ್ತಂಭಗಳಿವೆ. ಆದಿತಲದ ಮೇಲಂಚಿನುದ್ದಕ್ಕೂ ಕೂಟ–ಶಾಲಗಳ ಹಾರವಿದೆ. ಇವೆಲ್ಲ ದಾಕ್ಷಿಣಾತ್ಯ ವಾಸ್ತು ಲಕ್ಷಣಗಳು. ಆದರೆ ಜಂಘಾದ ಕೋಷ್ಠ ಪಂಜರಗಳ ಉದ್ಗಮಗಳು ಔತ್ತರೇಯ ರೀತಿಯಲ್ಲಿವೆ. ಮೂಲಪ್ರಾಸಾದದ ಮೂರು ಗೋಡೆಗಳಲ್ಲಿ ಘನದ್ವಾರಗಳಿವೆ. ಗರ್ಭಗೃಹದ ಮೇಲಿರುವ ಶಿಖರ ಮಾತ್ರ ರೇಖಾ ನಾಗರ ಪ್ರಕಾರದ್ದಾಗಿದೆ. ಇವೆಲ್ಲ ಔತ್ತರೇಯ ಲಕ್ಷಣಗಳು. ಹೀಗೆ ಈ ದೇವಾಲಯ ಪ್ರಾಥಮಿಕವಾಗಿ ಔತ್ತರೇಯ ಮಾದರಿಯಲ್ಲಿದ್ದರೂ ದಾಕ್ಷಿಣಾತ್ಯ ಅಂಶಗಳನ್ನು ಮೇಳೈಸಿಕೊಂಡಿದೆ. ಆದರೆ ಈ ಮಿಶ್ರಣ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ಗುಡಿಗಳಲ್ಲಿಯ ಮನಮೋಹಕ ಪ್ರಭಾವ ಬೀರುವದಿಲ್ಲ. ಆ ಕಾರಣದಿಂದಲೋ ಏನೋ, ಇಂತಹ (ಔತ್ತರೇಯಕ್ಕೆ ದಾಕ್ಷಿಣಾತ್ಯವನ್ನು ಜೋಡಿಸುವ) ಪ್ರಯತ್ನ ಮುಂದೆ ಕರ್ನಾಟಕದಲ್ಲಿ ಕಾಣುತ್ತಿಲ್ಲ. ರಾಮಾಯಣದ (ಶಾಸನ ಸಹಿತ) ಮತ್ತು ಕಿರಾತಾರ್ಜುನೀಯದ ಕಥಾ ನಿರೂಪಕ ದೃಶ್ಯಗಳು ಜಂಘಾ ಭಾಗವನ್ನು ಅಲಂಕರಿಸಿವೆ. ಇದರ ಸೂತ್ರಧಾರಿಗಳಲ್ಲಿ ಸರ್ವಸಿದ್ಧಿ ಆಚಾರಿಯ ಶಿಷ್ಯ ರೇವಡಿ ಓವಜನು ಪ್ರಮುಖ. ಬಲದೇವ ಮೊದಲಾದವರೂ ಇಲ್ಲಿ ಕೆಲಸ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಇದು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ಈಗಿನ ಸ್ವರೂಪವನ್ನು ಪಡೆಯಿತೆಂದು ಹೇಳಬಹುದು.

ಚಳುಕ್ಯರ ಕಾಲದ ಪಟ್ಟದಕಲ್ಲಿನ ಇತರ ಔತ್ತರೇಯ ರೇಖಾ ಮಾದರಿಯ ದೇವಾಲಯಗಳಲ್ಲಿಯೂ ಕೆಲವು ದಾಕ್ಷಿಣಾತ್ಯ ಅಂಶಗಳು (ಉದಾ: ಅಧಿಷ್ಠಾನದಲ್ಲಿ ತ್ರಿಪಟ್ಟಕುಮುದ, ಜಂಘಾ ಭಾಗದಲ್ಲಿ ಕುಡ್ಯಸ್ತಂಭಗಳು, ಕಪೋತದ ಮೇಲೆ ವ್ಯಾಲವರಿಯ ರಚನೆ ಇತ್ಯಾದಿ) ನುಸುಳಿರುವುದು ಕಾಣುತ್ತದೆ. ಇದನ್ನು ಪ್ರಯೋಗದ ಪರಿಣಾಮವೆಂದು ಕರೆಯಬೇಕೋ ಅಥವಾ ಅವುಗಳನ್ನು ನಿರ್ಮಿಸಿದ ಸ್ಥಪತಿಗಳಿಗಿದ್ದ ಔತ್ತರೇಯ ರೇಖಾ ಪ್ರಾಸಾದ ವಾಸ್ತು ಅಂಗಗಳ ಅಸ್ಪಷ್ಟ ಚಿತ್ರದ ಪರಿಣಾಮವೆಂದು ಹೇಳಬೇಕೋ ತಿಳಿಯದು.

3. ಫಾಂಸನ ಶೈಲಿಯ ದೇವಾಲಯಗಳು: ಮುಂಚೆ ಕದಂಬನಾಗರ ಎಂದು ಸಂಬೋಧಿಸಲಾಗುತ್ತಿದ್ದ ವಾಸ್ತು ಮಾದರಿಯನ್ನು ಈಗ ಫಾಂಸನ ಮಾದರಿ ಎಂಬುದಾಗಿ ಗುರುತಿಸಲಾಗುತ್ತಿದೆ. ಈ ಮಾದರಿಯ ದೇವಾಲಯಗಳು ಸಾಮಾನ್ಯವಾಗಿ ಐಹೊಳೆ ಮತ್ತು ಮಹಾಕೂಟದಲ್ಲಿ ಇವೆ. ವಿವರಗಳಲ್ಲಿ ಸರಳವಾಗಿರುವ ಈ ಮಾದರಿಯ ದೇಗುಲ ಬಹುಶಃ ರೇಖಾ ಪ್ರಾಸಾದ ಮಾದರಿಯಿಂದ ಮೂಡಿದಂತಿದೆ; ಅಥವಾ, ರೇಖಾ ನಾಗರ ಶೈಲಿಯ ಪೂರ್ವಭಾವಿ ರೂಪವಾಗಿದ್ದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಗೂಢಮಂಟಪ, ಮುಖಮಂಟಪ ಇದರ ಭಾಗಗಳು. ಎಲ್ಲವೂ ನಿರಂಧಾರ ದೇಗುಲಗಳು. ಊರ್ಧ್ವ ರಚನೆಯಲ್ಲಿ ಪದ್ಮ, ಕಂಠ, ಕಪೋತ ಮಡಿಕೆಗಳುಳ್ಳ ಸರಳ ಅಧಿಷ್ಠಾನವಿರುತ್ತದೆ. ಜಂಘಾ ಭಾಗಕ್ಕೆ ಅಲಂಕಾರವಿರುವದಿಲ್ಲ. ಶಿಖರ ಮೇಲಕ್ಕೆ ಹೋದಂತೆ ಕ್ರಮೇಣ ಕಿರಿದಾಗುತ್ತ ಸಾಗುವ, ಒಂದರ ಮೇಲೊಂದರಂತೆ ರಚಿತವಾಗಿರುವ ಕಪೋತ ಮತ್ತು ಕಿರಿದಾದ ಜಂಘಾಗಳ ಸಾಲಿನಿಂದಾದ ಭೂಮಿಗಳನ್ನು ಹೊಂದಿರುತ್ತದೆ. ಶಿಖರದ ಈ ಜಂಘಾಗಳಲ್ಲಿ ಸಾಲಾಗಿ ಜೋಡು ಕಂಬಗಳ ವಿನ್ಯಾಸ ಗೋಚರಿಸುತ್ತದೆ. ಶಿಖರಾಂತ್ಯ ಸಮತಟ್ಟಾಗಿದ್ದು ಅದರ ಮೇಲೆ ವೃತ್ತಾಕಾರದ ಗಲ, ಆಮಲಶಿಲಾ, ಕಲಶಗಳು ಒಂದರ ಮೇಲೊಂದರಂತೆ ಇರಿಸಲ್ಪಟ್ಟಿರುತ್ತವೆ. ದೇವಾಲಯ ಮುಖ ಮಾಡಿರುವ ದಿಕ್ಕಿಗೆ ಶಿಖರಕ್ಕೆ ಗವಾಕ್ಷ ಅಲಂಕಾರದಲ್ಲಿ ದೇವತೆಯ ಶಿಲ್ಪವುಳ್ಳ ಮುಖಪಟ್ಟಿ ಇರುತ್ತದೆ.

ಐಹೊಳೆಯ ಮಲ್ಲಿಕಾರ್ಜುನ ಗುಡಿ 7ನೆಯ ಶತಮಾನದ ಉತ್ತರಾರ್ಧಕ್ಕೆ ಅನ್ವಯಿಸಬಹುದಾದ ಗುಡಿ. ಇದು ಫಾಂಸನ ಮಾದರಿಯಲ್ಲಿದೆ. ಮೇಲೆ ಹೇಳಿದ ಲಕ್ಷಣಗಳೆಲ್ಲ ಈ ಗುಡಿಯಲ್ಲಿ ಕಾಣುತ್ತವೆ. ಇನ್ನೊಂದು ಫಾಂಸನಾ ಮಾದರಿಯ ಗಮನೀಯ ಗುಡಿಯೆಂದರೆ ಐಹೊಳೆಯ ಗಳಗನಾಥ ದೇವಾಲಯ. ಇದರ ಶಿಖರದ ಕೊನೆಯ ಭೂಮಿಯ ಕರ್ಣಗಳಲ್ಲಿ ಚಿಕ್ಕ ಆಮಲಕಗಳನ್ನಿರಿಸಲಾಗಿದೆ. ಈ ಲಕ್ಷಣ ಫಾಂಸನ ಶೈಲಿಯು ರೇಖಾ ಪ್ರಾಸಾದ ಶೈಲಿಗೆ ಹೊಂದಿರುವ ಸಂಬಂಧದ ಸೂಚಕವಾಗಿದೆ. ಈ ದೇವಾಲಯದ ವಿತಾನದಲ್ಲಿದ್ದ ಗರುಡಾರೂಢ ವಿಷ್ಣುವಿನ ಶಿಲ್ಪ ಔತ್ತರೇಯ ಪ್ರತಿಮಾ ಲಕ್ಷಣ ಮತ್ತು ಶಿಲ್ಪಶೈಲಿಯಲ್ಲಿರುವುದು ಉಲ್ಲೇಖನೀಯ.

ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯಲ್ಲಿ ಪರಿಕಲ್ಪಿಸಲಾದ ದ್ರಾವಿಡ ವಿಮಾನದಂತೆ ಫಾಂಸನ ಶೈಲಿಯೂ ತನ್ನ ಅಸ್ತಿತ್ವವನ್ನು ಕರ್ನಾಟಕದಲ್ಲಿ ಉಳಿಸಿಕೊಂಡಿತು. ಆದರೆ ಕೆಲವು ಪ್ರಾದೇಶಿಕ ಬದಲಾವಣೆಗಳು ಪರಿಚಯಿಸಲ್ಪಟ್ಟವು. ಉದಾಹರಣೆಗೆ ಭೂಮಿಗಳ ಅಂತ್ಯದಲ್ಲಿ ಆಮಲಶಿಲಾದ ಬದಲಿಗೆ ಘಂಟಾಕಾರದ ಚೌಕ ಭಾಗವನ್ನು ಅಳವಡಿಸಲಾಯಿತು. ಚಾಳುಕ್ಯ ಮತ್ತು ಹೊಯ್ಸಳರ ಕಾಲದ ಅನೇಕಾನೇಕ ದೇವಾಲಯಗಳು ಈ ಪರಿವರ್ತಿತ ಫಾಂಸನ ಶೈಲಿಯಲ್ಲಿ ರಚಿತವಾಗಿವೆ.

4. ಮಂಟಪ ಗುಡಿಗಳು: ಮಂಟಪ ಗುಡಿಗಳು ಐಹೊಳೆಯಲ್ಲಿ ಮಾತ್ರ ಕಾಣದೊರೆಯುತ್ತವೆ. ಕಂಬಗಳುಳ್ಳ ತುಸು ವಿಶಾಲ ರಚನೆಗಳಿವು. ಮಂಟಪ ಚೌಕ ಇಲ್ಲವೇ ಆಯತಾಕಾರದಲ್ಲಿರಬಹುದು. ಗರ್ಭಗೃಹ ಹಿಂಗೋಡೆಯ ಮಧ್ಯಭಾಗದಿಂದ ಮಂಟಪದೊಳಕ್ಕೆ ಚಾಚಿರುತ್ತದೆ. ಕೆಲವು ಉದಾಹರಣೆಗಳಲ್ಲಿ ಮುಖಮಂಟಪ ಇರುವುದುಂಟು. ಇವುಗಳಿಗೆ ಶಿಖರವಿರುವದಿಲ್ಲ. ಮಧ್ಯದ ಚಾವಣಿ ಸಮತಟ್ಟಾಗಿದ್ದು, ಸುತ್ತಲೂ ಇಳಿಜಾರಾಗಿರುತ್ತದೆ.

ಐಹೊಳೆಯ ಲಾಡಖಾನ ಗುಡಿ ಮಂಟಪ ಮಾದರಿಯ ಗುಡಿಗಳಲ್ಲಿ ಅತಿ ದೊಡ್ಡದು. ಇದು ಕಂಬಗಳುಳ್ಳ ವಿಶಾಲವಾದ ಚೌಕ ಮಂಟಪ ಸುತ್ತ ಗೋಡೆ ಮತ್ತು ಜಾಲವಾತಾಯನಗಳಿವೆ. ಪೂರ್ವ ಪ್ರವೇಶದಲ್ಲಿ ವಿಶಾಲ ಮುಖಮಂಟಪವೂ ಇದೆ. ಆಯತಾಕಾರದ ಗರ್ಭಗೃಹ ಚಿಕ್ಕದಾಗಿದ್ದು ಹಿಂಗೋಡೆಯ ಮಧ್ಯದಿಂದ ಮಂಟಪದೊಳಕ್ಕೆ ಚಾಚಿಕೊಂಡಿದೆ. ಈಗ ಲಿಂಗವಿದೆಯಾದರೂ ಮೂಲತಃ ಸೂರ್ಯ ಇಲ್ಲವೇ ಬೇರೆ ದೇವತೆಯ ವಿಗ್ರಹ ಇದ್ದಿರ ಬಹುದು. ಮಂಟಪದ ಚಾವಣಿ ಮಧ್ಯಭಾಗದಲ್ಲಿ ಸಮತಟ್ಟಾಗಿದ್ದು, ಸುತ್ತ ನಾಲ್ಕೂ ಪಾರ್ಶ್ವಗಳಲ್ಲಿ ಎರಡು ಹಂತಗಳಲ್ಲಿ ಇಳಿಜಾರಾಗಿದೆ. ಮಂಟಪದ ಮಧ್ಯದ ನಾಲ್ಕು ಕಂಬಗಳ ನಡುವೆ ದೊಡ್ಡ ನಂದಿಯನ್ನಿರಿಸಲಾಗಿದೆ. ಈ ಕಂಬಗಳಿರುವ ಸ್ಥಾನದಲ್ಲಿ ಮೇಲ್ಗಡೆ ಒಂದು ಚೌಕ ಗರ್ಭಗೃಹವಿದೆ. ಬಹುಶಃ ಇದರಲ್ಲಿ ಸೂರ್ಯವಿಗ್ರಹವಿತ್ತು. ಇದರ ಗೋಡೆಯಲ್ಲಿರುವ ಕೋಷ್ಠಗಳು ವಿಷ್ಣು, ಸೂರ್ಯ ಮತ್ತು ಅರ್ಧನಾರೀಶ್ವರ ಉಬ್ಬುಶಿಲ್ಪಗಳನ್ನೊಳಗೊಂಡಿವೆ. ಇದರ ಚಾವಣಿ ಸಮತಟ್ಟಾಗಿದೆ. ಮೇಲಿನ ಗರ್ಭಗೃಹವನ್ನು ತಲುಪಲು ಮುಖ ಮಂಟಪದಲ್ಲಿ ಕಲ್ಲಿನ ಏಣಿಯಿದೆ. ಮುಖಮಂಟಪದ ಅಂಚಿನಗುಂಟ ಕಕ್ಷಾಸನವಿದೆ. ಇದರ ಕಂಬಗಳ ಹೊರಮುಖಗಳು ಗಂಗಾ, ಯಮುನಾ, ಮಿಥುನ ಮುಂತಾದ ಸುಂದರ ಶಿಲ್ಪಗಳಿಂದ ಅಲಂಕೃತವಾಗಿವೆ. ಒಂದು ಕಂಬದ ಮುಖದಲ್ಲಿ ಚಲುಕ್ಯ ರಾಜರ ವರಾಹ ಲಾಂಛನವಿದೆ. ಚಾವಣಿಯನ್ನು ನಿರ್ಮಿಸಲು ಜೋಡಿಸಲಾಗಿರುವ ಕಲ್ಲಿನ ಹಲಗೆಗಳು ಸೇರುವಲ್ಲಿ ನೀರು ಕಟ್ಟಡದೊಳಕ್ಕೆ ಒಸರದಂತೆ ಕೊರಡಿನಂತೆ ಕಾಣುವ ಕಲ್ಲಿನ ದಿಂಡುಗಳನ್ನಿರಿಸಲಾಗಿದೆ. ಒಟ್ಟಾರೆ ನೋಡಿದಾಗ ಈ ಗುಡಿಯು ಪ್ರಾಚೀನ ಸಾಹಿತ್ಯದಲ್ಲಿ ಉಲ್ಲಿಖಿತ ಆದಿಮ ಸಂತಾಗಾರವನ್ನು (ಹಳ್ಳಿಯ ಚಾವಡಿ) ನೆನಪಿಸುತ್ತದೆ. ಈ ಕಾರಣದಿಂದ ಕಸೆನ್ಸ್, ಪರ್ಸಿ ಬ್ರೌನ್ ಮೊದಲಾದವರು ಇದೊಂದು ಬಹು ಪ್ರಾಚೀನ ಕಟ್ಟಡವೆಂದೂ 450ರ ಸುಮಾರಿನ ರಚನೆಯಿರಬೇಕೆಂದೂ ಮಂಡಿಸಿದ್ದರು. ಆದರೆ ಕಂಬ, ಶಿಲ್ಪಶೈಲಿ ಮುಂತಾದ ವಿವರಗಳನ್ನು ಪರಿಗಣಿಸಿದಾಗ ಇದು ಸು.7ನೆಯ ಶತಮಾನದ ಅಂತ್ಯ ಇಲ್ಲವೆ 8ನೆಯ ಶತಮಾನದ ಪ್ರಾರಂಭದ ಕಟ್ಟಡವೆಂಬುದು ಸ್ಪಷ್ಟವಿದೆ. ಈಚಿನ ವಿದ್ವಾಂಸರೆಲ್ಲ ಈ ಅಭಿಪ್ರಾಯವನ್ನೇ ಬೆಂಬಲಿಸಿದ್ದಾರೆ. ಅದರ ಪ್ರಾಚೀನ ಸ್ವರೂಪ ಬಹುಶಃ ಅದರ ನಿರ್ಮಾಣದ ಉದ್ದೇಶದಲ್ಲಿ ಅಡಗಿದೆ. ಮುಖ್ಯವಾಗಿ ಕಂಬ ಮತ್ತು ಬೋದಿಗೆಗಳು ಬಾದಾಮಿಯಲ್ಲಿ ವಿಜಯಾದಿತ್ಯ 699ರಲ್ಲಿ ನಿರ್ಮಿಸಿದ ಜಂಬುಲಿಂಗ ಗುಡಿಯಲ್ಲಿರುವಂತೆಯೇ ಇವೆ. ಲಾಡಖಾನ ಗುಡಿಯ ಗೋಡೆಯಲ್ಲಿರುವ 8ನೆಯ ಶತಮಾನದ ಶಾಸನವೊಂದರಲ್ಲಿ ಅನ್ನಪ್ರಾಶನ, ಉಪನಯನ, ಮದುವೆ ಮುಂತಾದ ಸಂಸ್ಕಾರಗಳಿಗೆ ನಿರ್ದಿಷ್ಟ ಹಣವನ್ನು ನಿಗದಿಪಡಿಸಲಾಗಿದ್ದು, ಅಂತಹ ಸಾಮಾಜಿಕ-ಧಾರ್ಮಿಕ ಕಾರ್ಯಗಳು ಇಲ್ಲಿ ನಡೆಯುತ್ತಿದ್ದವೆಂಬುದನ್ನು ಸೂಚಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಲು ಅನುಕೂಲವಾಗುವಂತೆ ಲಾಡಖಾನ ದೇವಾಲಯವನ್ನು ವಿಶಾಲ ಮುಖಮಂಟಪ ಸಹಿತವಾಗಿ ಮಂಟಪ ರೀತಿಯಲ್ಲಿ ಕಟ್ಟಿರುವದು ಸಾಧ್ಯ.

ಮಂಟಪ ಮಾದರಿಯ ಇನ್ನಿತರ ಕೆಲವು ಉದಾಹರಣೆಗಳು ಕೊಂತಿಗುಡಿ ಗುಂಪಿನಲ್ಲಿವೆ. ಇವುಗಳಲ್ಲಿ ವಾಯವ್ಯದಲ್ಲಿರುವ ಗುಡಿಯನ್ನು ಪ್ರಾಚೀನವಾದುದೆಂದು ಗುಪ್ತೆ ಮುಂತಾದ ಕೆಲವು ವಿದ್ವಾಂಸರು ಮಂಡಿಸಿದ್ದರು. ಆದರೆ ಇದು ಸ್ಪಷ್ಟವಾಗಿ ರಾಷ್ಟ್ರಕೂಟರ ಕಾಲದ್ದಾಗಿದೆ. ಈ ಗುಂಪಿನಲ್ಲಿ ನೈರುತ್ಯಕ್ಕಿರುವ ಗುಡಿ ಚಳುಕ್ಯರ ಅಂತ್ಯಕಾಲದ್ದು. ಪೂರ್ವಾಭಿಮುಖವಾಗಿರುವ ಈ ಗುಡಿಗೆ ದಕ್ಷಿಣೋತ್ತರವಾಗಿ ಚಾಚಿರುವ ಆಯತಾಕಾರದ ವಿಶಾಲ ಮಂಟಪವಿದೆ. ಎರಡು ಸಾಲು ಕಂಬಗಳು ಮಧ್ಯದ ಸಮತಟ್ಟಾದ ಛತ್ತಿಗೆ ಆಧಾರವೊದಗಿಸಿವೆ. ಹಿಂದಿನ ಗೋಡೆ ಮತ್ತು ಮುಂದಿನ ಕಂಬಗಳ ಸಾಲಿನ ಆಧಾರದ ಮೇಲೆ ಹಿಂದುಗಡೆ ಮುಂದುಗಡೆ ಛಾವಣಿಯನ್ನು ಇಳಿಜಾರಾಗಿ ರಚಿಸಲಾಗಿದೆ. ಮುಂಭಾಗ ತೆರೆದುಕೊಂಡಿದೆ. ಹಿಂಗೋಡೆಯ ಮಧ್ಯದಿಂದ ಚಿಕ್ಕ ಆಯತಾಕಾರದ ಗರ್ಭಗೃಹ ಮಂಟಪದೊಳಕ್ಕೆ ಚಾಚಿಕೊಂಡಿದೆ. ಸಮತಟ್ಟಾದ ಛತ್ತಿನಲ್ಲಿ ಬ್ರಹ್ಮ, ಶಿವ ಮತ್ತು ಅನಂತಶಯನ ವಿಷ್ಣುವಿನ ಸುಂದರ ಶಿಲ್ಪಗಳಿವೆ. ಮುಂದುಗಡೆಯ ಕಂಬಗಳ ಹೊರಮೈ ಶಿಲ್ಪಲಕ್ಷಣಗಳೂ ಒಳಗೊಂಡಂತೆ ಈ ದೇಗುಲದ ವಿವರಗಳು ಸು. 8ನೆಯ ಶತಮಾನದ್ದಾಗಿವೆ. ಇದಾದರೂ ವಿಶಿಷ್ಟ ಉದ್ದೇಶದಿಂದಾಗಿ (ಬಹುಶಃ ಶಾಲೆಯಂತೆ ವರ್ತಿಸಲು) ಅಪರೂಪದ ವಾಸ್ತು ಲಕ್ಷಣವನ್ನು ಪಡೆದಿದೆ.

5. ಚಾಪಾಕಾರ ವಿನ್ಯಾಸದ ಗಜಪೃಷ್ಠ ದೇವಾಲಯಗಳು: ತಲವಿನ್ಯಾಸದಲ್ಲಿ ಚಾಪಾಕಾರವಾಗಿರುವ (ಅಂದರೆ ಬಿಲ್ಲನ್ನು ಹೋಲುವ, ಇಂಗ್ಲಿಷ್ ಯು-ಆಕಾರದ) ಚಳುಕ್ಯರ ಕಾಲದ ಗುಡಿಗಳು ಐಹೊಳೆ ಮತ್ತು ಚಿಕ್ಕ ಮಹಾಕೂಟದಲ್ಲಿವೆ. ಆಯತಾಕಾರಕ್ಕೆ ಹಿಂಭಾಗದಲ್ಲಿ ಅರ್ಧವೃತ್ತವನ್ನು ಸೇರಿಸಿದಾಗ ಈ ವಿನ್ಯಾಸ ರೂಪುಗೊಳ್ಳುತ್ತದೆ. ಹೊರ ನೋಟದಲ್ಲಿ ಈ ವಿನ್ಯಾಸದ ದೇಗುಲಗಳು ಹಿಂಭಾಗವಾಗಿ ನಿಂತ ಆನೆಯನ್ನು ಹೋಲುತ್ತವೆ ಯಾದ್ದರಿಂದ ಗಜಪೃಷ್ಠ ಎಂಬ ಹೆಸರೂ ಅದಕ್ಕೆ ಅನ್ವಯವಾಗುತ್ತದೆ. ಹೆಚ್ಚು ಸುರಕ್ಷಿತವಾಗಿ ಉಳಿದುಬಂದಿರುವ ಚಾಪಾಕಾರ ವಿನ್ಯಾಸದ ದೇಗುಲವೆಂದರೆ ಐಹೊಳೆಯ ದುರ್ಗಾ ಗುಡಿ. ಇದರ ಪ್ರತೋಲಿ ಯಲ್ಲಿರುವ ಶಾಸನ ಇಮ್ಮಡಿ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ದೇವಾಲಯ ಆದಿತ್ಯಭಟನಿಗೆ (ಸೂರ್ಯ ದೇವತೆ) ಮುಡುಪಾಗಿತ್ತೆಂದೂ ಇದರ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದವನು ಕೊಮರಸಿಂಗನೆಂದೂ ತಿಳಿಸುತ್ತದೆ. ಆದುದರಿಂದ ಇದು ಮೂಲತಃ ಸೂರ್ಯನ ಗುಡಿ. ಇದರಲ್ಲಿ ಹಲವು ವೈಶಿಷ್ಟ್ಯಗಳಿವೆ. ಒಳಗಡೆ ಚಾಪಾಕಾರದ ಗೂಢಮಂಟಪ ದಲ್ಲಿರಿಸಿರುವ ಅರ್ಧವೃತ್ತಾಕೃತಿಯ ಸಾಂಧಾರ ಗರ್ಭಗೃಹ, ಗೂಢಮಂಟಪದ ಮುಂದುಗಡೆ ಕಕ್ಷಾಸನಸಹಿತ ಮುಖಮಂಟಪ. ಈ ಇಡಿ ಸಮೂಹ ಎತ್ತರ, ವಿಶಾಲವಾದ ಇದೇ ವಿನ್ಯಾಸದ ಮಂಟಪದೊಳಗೆ ಇರಿಸಲ್ಪಟ್ಟಂತಿದೆ. ಮುಖ ಮಂಟಪದ ಮಟ್ಟಕ್ಕೇರಲು ಎರಡೂ ಪಾರ್ಶ್ವಗ ಳಿಂದ ಮೆಟ್ಟಿಲುಗಳಿರುವ ದ್ವಿದರ ಸೋಪಾನ ವಿದೆ. ಗೂಢಮಂಟಪದ ಮಧ್ಯ ಚಾವಣಿ ಸಮತಟ್ಟಾಗಿದೆ. ಇದರ ಸುತ್ತಲೂ ಇಳಿಜಾರಾದ ಚಾವಣಿ ಇದೆ. ಗರ್ಭಗೃಹದ ಮೇಲ್ಗಡೆ ತುಸು ಜೀರ್ಣವಾಗಿರುವ ರೇಖಾ ಶಿಖರವಿದೆ. ವಾಸ್ತುಗ್ರಂಥಗಳ ಪ್ರಕಾರ ಚಾಪಾಕಾರದ ಗುಡಿಗಳಿಗೆ ಇದೇ ಆಕಾರದ ಇಲ್ಲವೆ ವೃತ್ತಾಕಾರದ ಶಿಖರವಿರಬೇಕು. ಇಲ್ಲಿ ರೇಖಾ ಶಿಖರವನ್ನು ಮಾಡಿರುವದು ಪ್ರಯೋಗ ವೆಂದು ಭಾವಿಸ ಬಹುದು. ವಾಸ್ತು ವೈಶಿಷ್ಟ್ಯದಿಂದೊಡಗೂಡಿರುವ ಈ ದೇವಾಲಯದಲ್ಲಿ ಹಲವಾರು ಮನಮೋಹಕ ಶಿಲ್ಪಗಳಿವೆ. ದೇವಕೋಷ್ಠಗಳಲ್ಲಿ ಕೆಲವು ದಾಕ್ಷಿಣಾತ್ಯ ಕಂಬ, ಉದ್ಗಮಗಳನ್ನು ನಿರೂಪಿಸಿವೆಯಾದರೆ ಇನ್ನು ಕೆಲವು ಔತ್ತರೇಯ ಸ್ವರೂಪದ್ದಾಗಿವೆ. ಶಿಲ್ಪಗಳಲ್ಲಿ ಕೆಲವು ಗುಪ್ತಾನಂತರದ ಮಾಲವ ಶೈಲಿಯನ್ನು ಇನ್ನು ಕೆಲವು ಉತ್ತರ ದಖ್ಖನಿನ ಶೈಲಿಯನ್ನು ಪ್ರತಿನಿಧಿಸಿವೆ. ಜಿನಾಲಯನೆಂಬ ಕನ್ನಡ ಶಿಲ್ಪಿ, ಸುರೇಂದ್ರಪಾದನೆಂಬ ಬಹುಶಃ ಉತ್ತರ ದಖನ್ನಿನ ಪ್ರದೇಶದ ಶಿಲ್ಪಿ ತಮ್ಮ ಹೆಸರುಗಳನ್ನು ಬರೆದಿದ್ದಾರೆ. ರೇಖಾ ಶಿಖರ ಅಷ್ಟಾಗಿ ಹೊಂದುತ್ತಿಲ್ಲವಾದರೂ ದುರ್ಗಾ ಗುಡಿ ಇದರ ಆಕಾರ, ಶಿಲ್ಪಸಂಪತ್ತಿನಿಂದಾಗಿ ಐಹೊಳೆಯ ಚಳುಕ್ಯ ದೇವಾಲಯಗಳಲ್ಲಿಯೇ ಅತ್ಯಾಕರ್ಷಕ ವಾಗಿದೆ. ಚಾಪಾಕಾರ ವಿನ್ಯಾಸದಿಂದಾಗಿ ಕೆಲವರು ಇದು ಮೂಲತಃ ಬೌದ್ಧ ಚೈತ್ಯಾಲಯ ವಾಗಿದ್ದಿರಬೇಕೆಂದು ಸೂಚಿಸಿದ್ದಾರೆ. ಆದರೆ ಚಾಪಾಕಾರ ವಿನ್ಯಾಸವು ಹಲವು ವಾಸ್ತು ವಿನ್ಯಾಸಗಳಲ್ಲಿ ಒಂದಾಗಿದ್ದು ಬೌದ್ಧ, ಜೈನ, ಹಿಂದು ದೇವಾಲಯಗಳಿಗೆಲ್ಲ ಪ್ರಾಚೀನ ಕಾಲದಿಂದಲೇ ಬಳಕೆಯಾಗಿದೆ. ಆದುದರಿಂದ ಇದು ಮೂಲದಲ್ಲಿ ಬೌದ್ಧ ಚೈತ್ಯಾಲಯವೆಂಬ ಅಭಿಪ್ರಾಯವನ್ನು ಒಪ್ಪಲಾಗದು.

ಐಹೊಳೆಯ ಚಿಕ್ಕಿಗುಡಿಯ ಪರಿಸರದಲ್ಲಿ ಜೀರ್ಣವಾಗಿರುವ ಚಾಪಾಕಾರದ ಶಿವ ದೇವಾಲಯದ ಅವಶೇಷಗಳಿವೆ. ದುರ್ಗಾ ಗುಡಿಯ ರಚನೆಯನ್ನು ಇದಾದರೂ ತಕ್ಕ ಮಟ್ಟಿಗೆ ಹೋಲುತ್ತಿತ್ತು. ಈಗ ತಲವಿನ್ಯಾಸ, ಗರ್ಭಗೃಹದಲ್ಲಿರುವ ವೃತ್ತಾಕಾರದ ಪೀಠಸಹಿತ ಲಿಂಗ ಮತ್ತು ಮುಂದುಗಡೆ ಒಂದು ಜೋಡು ಅರೆಗಂಬಗಳು ಮಾತ್ರ ಉಳಿದಿವೆ. ಇದರಲ್ಲೂ ಔತ್ತರೇಯ ಲಕ್ಷಣಗಳು ಹೆಚ್ಚಾಗಿದ್ದುದರ ಸೂಚನೆಗಳಿವೆ. ಇನ್ನೊಂದು ಗಜಪೃಷ್ಠ ದೇಗುಲವನ್ನು ಚಿಕ್ಕ ಮಹಾಕೂಟದಲ್ಲಿ ಕಾಣಬಹುದು.

ತಲವಿನ್ಯಾಸ ದೃಷ್ಟಿಯಿಂದ ಚಳುಕ್ಯರ ದೇಗುಲಗಳ ಬೆಳೆವಣಿಗೆಯಲ್ಲಿ ಕೆಲವು ಬಲದಾವಣೆಗಳನ್ನು ಗಮನಿಸಬಹುದು. ತೀರ ಸರಳ ದೇವಾಲಯಗಳಲ್ಲಿ-ಉದಾಹರಣೆಗೆ ಮಹಾಕೂಟದ ಬಾಣಂತಿಗುಡಿಯಲ್ಲಿ-ಗರ್ಭಗೃಹ ಮತ್ತು ಮುಖಮಂಟಪ ಮಾತ್ರ ಇವೆ. ತುಸು ದೊಡ್ಡ ದೇಗುಲದಲ್ಲಿ ಗರ್ಭಗೃಹ, ಗೂಢಮಂಟಪ ಮತ್ತು ಮುಖಮಂಟಪ ಇವೆ. ಸಾಂಧಾರ ದೇಗುಲಗಳಲ್ಲಿ ಮಂಟಪವನ್ನು ಆಯತಾಕಾರದಲ್ಲಿ ವಿಶಾಲವಾಗಿ ರಚಿಸಿ, ಗರ್ಭಗೃಹವನ್ನು ಅದರೊಳಗೆ ಹಿಂಭಾಗದಲ್ಲಿ ಇರಿಸಿದೆ. ಬಹುದೊಡ್ಡ ದೇಗುಲಗಳಲ್ಲಿ ಮಂಟಪಕ್ಕೆ ಪಾರ್ಶ್ವಗಳಿಂದ ಪ್ರವೇಶವಿರಿಸಲಾಗಿದೆ. ವಿಜಯಾದಿತ್ಯನಿಂದ 699ರಲ್ಲಿ ರಚಿತವಾದ ಬಾದಾಮಿಯ ಜಂಬುಲಿಂಗ ಗುಡಿ ಬ್ರಹ್ಮ, ಮಹೇಶ್ವರ ಮತ್ತು ವಿಷ್ಣು ದೇವತೆಗಳಿಗೆ ಮುಡುಪಾಗಿರುವುದು. ಇದಕ್ಕೆ ತ್ರಿಕೂಟ ಪ್ರಕಾರದ ತಲವಿನ್ಯಾಸವಿರುವದು ವೈಶಿಷ್ಟ್ಯ. ವಿಶಾಲ ಮುಖಮಂಟಪ, ವಿಶಾಲ ಗೂಢಮಂಟಪ ಮತ್ತು ಇದರ ಮೂರು ಪಾರ್ಶ್ವಗಳಲ್ಲಿ ಒಂದೊಂದರಂತೆ ಮೂರು ಗರ್ಭಗೃಹಗಳು ಇದರ ವಿನ್ಯಾಸದ ಭಾಗಗಳು. ದುರದೃಷ್ಟವಶಾತ್ ಮೂಲ ಶಿಖರಗಳು ನಶಿಸಿವೆ. ಒಂದು ಗರ್ಭಗೃಹದ ಮೇಲಿರುವ ಇಟ್ಟಿಗೆ ಮತ್ತು ಗಾರೆಯ ಶಿಖರ ವಿಜಯನಗರ ಕಾಲದ್ದು. ಗೂಢಮಂಟಪದ ಛತ್ತಿನಲ್ಲಿರುವ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಶಿಲ್ಪಗಳು ಸುಂದರವಾಗಿವೆ. ಕರ್ನಾಟಕದ ಮೊದಲ ತ್ರಿಕೂಟ ದೇವಾಲಯವೆಂಬ ಹೆಗ್ಗಳಿಕೆ ಇದಕ್ಕಿದೆ.

ಆಂಧ್ರ ಪ್ರದೇಶದಲ್ಲಿ ಬಾದಾಮಿ ಚಳುಕ್ಯರ ಕಾಲದ ಕಟ್ಟಡ ದೇಗುಲಗಳು: ಮೊದಲನೆಯ ಕೀರ್ತಿವರ್ಮನ ಕಾಲದಿಂದಲೇ (566-91) ತುಂಗಭದ್ರ-ಕೃಷ್ಣ ಹರಿದಿರುವ ಆಂಧ್ರ ಪ್ರದೇಶದ ಕರ್ನೂಲು-ಮಹಬೂಬ್‌ನಗರ ಜಿಲ್ಲಾ ಪ್ರದೇಶಗಳು ಚಳುಕ್ಯರ ನೇರ ಹಿಡಿತಕ್ಕೆ

ಒಂದಿದ್ದವು. ಇದನ್ನು ಚಾಳುಕ್ಯ ವಿಷಯ ಎಂದೇ ಕರೆಯಲಾಗುತ್ತಿತ್ತು. 7ನೆಯ ಶತಮಾನದಿಂದ ಇಲ್ಲಿ ಶಿಲಾದೇಗುಲಗಳು ನಿರ್ಮಾಣವಾಗತೊಡಗಿದವು. ಆಲಂಪುರ, ಕೂಡವೇಲಿ ಸಂಗಮೇಶ್ವರ, ಮಹಾನಂದಿ, ಸತ್ಯವೋಲು ಮುಂತಾದವು ಪಾಶುಪತ ಶೈವ ಧರ್ಮದ ಗಾಢ ಪ್ರಭಾವವಿದ್ದ ಸ್ಥಾನಗಳಾಗಿದ್ದವು. ಈ ಸ್ಥಳಗಳಲ್ಲಿ ಚಳುಕ್ಯರ ನೇರ ಪ್ರೋತ್ಸಾಹದೊಂದಿಗೆ ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ಶೈವ ದೇವಾಲಯಗಳ ನಿರ್ಮಾಣ ಆಯಿತು.

ದ್ರಾವಿಡ ಸಂಪ್ರದಾಯದ ದೇಗುಲಗಳು: ಈ ಪ್ರದೇಶ ನಾಗರ ಪರಂಪರೆಯಾಗಿದ್ದರೂ ದ್ರಾವಿಡ ವಾಸ್ತು ಲಕ್ಷಣವುಳ್ಳ ಕೆಲವು ಗಮನೀಯ ದೇವಾಲಯಗಳು ಇಲ್ಲಿವೆ. ಆಲಂಪುರದ ನವಬ್ರಹ್ಮೇಶ್ವರ ದೇಗುಲಗಳ ಗುಂಪಿನಲ್ಲಿ ತಾರಕಬ್ರಹ್ಮ ದೇಗುಲ ಈ ದೃಷ್ಟಿಯಿಂದ ಗಮನಾರ್ಹ. ಗರ್ಭಗೃಹದ ಮೇಲೆ ಶಿಥಿಲವಾದ ದ್ವಿತಲವಿಮಾನವಿದೆ. ಮರಳು ಶಿಲೆಯಿಂದ ಕಟ್ಟಲಾಗಿರುವ ಈ ಗುಡಿಗೆ ಚೌಕ ಗರ್ಭಗೃಹ, ಅಂತರಾಳ ಸಹಿತ ಮುಖಮಂಟಪ ಇವೆ. ಈ ದೇಗುಲವನ್ನು ಇದರ ಲಕ್ಷಣಗಳ ದೃಷ್ಟಿಯಿಂದ ಒಂದನೆಯ ವಿಕ್ರಮಾದಿತ್ಯನ ಆಡಳಿತಾವಧಿಗೆ ಅನ್ವಯಿಸಲಾಗಿದೆ.

**ನಾಗರ ಸಂಪ್ರದಾಯದ ಲತಿನ ದೇಗುಲಗಳು:** ಚಳುಕ್ಯ ಆಂಧ್ರದಲ್ಲಿ ನಾಗರ ಸಂಪ್ರದಾಯದ ದೇಗುಲಗಳ ಬೆಳವಣಿಗೆಗೆ ಅವಿಸ್ಮರಣೀಯ ಕೊಡುಗೆಯಿತ್ತಿದ್ದಾರೆ. ಆಲಂಪುರ, ಕೂಡವೇಲಿ, ಕಡಮಾರ ಕಾಳವ, ಪಾಣ್ಯಂ, ಮಹಾನಂದಿ, ಸತ್ಯವೋಲು (ಮೆಹಬೂಬ ನಗರ, ಕರ್ನೂಲು ಮತ್ತು ಪ್ರಕಾಶಮ್ ಜಿಲ್ಲೆಗಳಲ್ಲಿವೆ) ಮುಂತಾದೆಡೆ ಇರುವ ಈ ಕಾಲದ ನಾಗರ ದೇವಾಲಯಗಳು ಪ್ರಸಿದ್ಧವಾಗಿವೆ. ಅನೇಕ ದೇಗುಲಗಳು ಚಳುಕ್ಯ ಅರಸರ ಅಥವಾ ಅವರ ಪರಿವಾರದವರ ನೇರ ಪ್ರೋತ್ಸಾಹದಿಂದಾಗಿವೆ. ಶಾಸನಗಳು ಹಾಗೂ ಶೈಲಿಯ ಹಿನ್ನೆಲೆಯಲ್ಲಿ ಈ ದೇವಾಲಯಗಳನ್ನು ಎರಡು ಹಂತಗಳನ್ನಾಗಿ ವರ್ಗೀಕರಿಸಿದೆ. ಮೊದಲನೆಯ ಹಂತದ ದೇಗುಲಗಳನ್ನು ಮೊದಲನೆಯ ವಿಕ್ರಮಾದಿತ್ಯನ ಆಡಳಿತಾವಧಿಯವು. ಆಲಂಪುರದ ಕುಮಾರ ಬ್ರಹ್ಮ, ತಾರಕಬ್ರಹ್ಮ, ವೀರಬ್ರಹ್ಮ ಮತ್ತು ಬಾಲಬ್ರಹ್ಮ ದೇಗುಲಗಳು, ಕೂಡವೇಲಿಯ ಸಂಗಮೇಶ್ವರ ದೇಗುಲ ಹಾಗೂ ಕಡಮಾರ ಕಾಳವದ ಶಿವನಂದೀಶ್ವರ ದೇಗುಲ ಇವು ಮೊದಲ ಹಂತದವು. ಎರಡನೆಯ ಹಂತದ ದೇಗುಲಗಳು ವಿನಯಾದಿತ್ಯ, ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯ ಹಾಗು ಕೀರ್ತಿವರ್ಮ ಇವರ ಕಾಲದವು.

ಒಂದನೆಯ ವಿಕ್ರಮಾದಿತ್ಯನ ಪ್ರೋತ್ಸಾಹದಲ್ಲಿ ನಿರ್ಮಾಣವಾದ ಮೊದಲ ಹಂತದ ದೇಗಲುಗಳಲ್ಲಿ ಕುಮಾರಬ್ರಹ್ಮ ದೇಗುಲ ಮೊದಲನೆಯದು. ಸಾಂಧಾರ ಪ್ರಕಾರದ ಈ ದೇವಾಲಯಕ್ಕೆ ಮುಖಚತುಷ್ಕಿ, ಗೂಢಮಂಟಪ ಮತ್ತು ಗರ್ಭಗೃಹ ಇವೆ. ತಲವಿನ್ಯಾಸದಲ್ಲಿ ಐಹೊಳೆಯ ಹುಚ್ಚಿಮಲ್ಲಿಗುಡಿ ಮತ್ತು ಚಿಕ್ಕಿಗುಡಿಯನ್ನು ಇದು ಹೋಲುತ್ತದೆ. ಆದರೆ ಇವುಗಳಿಗಿಂತ ಹೆಚ್ಚು ಪ್ರಮಾಣಬದ್ಧವಾಗಿದೆ. ಈ ದೇಗುಲದ ನಾಗರ ರೇಖಾ ಶಿಖರದಲ್ಲಿ ಮೂರು ಭೂಮಿಗಳಿವೆ. ಶಿಖರದಲ್ಲಿ ವೇಣುಕೋಶ ಹಾಗೂ ಲತೆ ಇದ್ದು ಇವುಗಳ ನಡುವೆ ಬಾಲಪಂಜರ ಇದೆ. ಲತೆಯನ್ನು ಚಂದ್ರಶಾಲಾಗಳ ಜೋಡಣೆಯಿಂದ ರೂಪಿಸಿದೆ. ಐಹೊಳೆಯ ದೇಗುಲಗಳಲ್ಲಿ ಬಾಲಪಂಜರ ವಿಲ್ಲ. ಶಿಖರದ ಮೇಲೆ ಗ್ರೀವ ಮತ್ತು ಆಮಲಕ ಇವೆ. ಶುಕನಾಸವು ಇಲ್ಲದಿರುವುದು ಗಮನಾರ್ಹ. ದ್ವಾರಬಂಧದ ಮೇಲ್ಭಾಗದಲ್ಲಿ ಸಾಲಾಗಿ ಎಂಟು ಕಿರೀಟಧಾರಿ ಮುಖಗಳಿದ್ದು ಅಷ್ಟಗ್ರಹಗಳೆಂದು ಗುರುತಿಸಲ್ಪಟ್ಟಿವೆ. ಗೂಢ ಮಂಟಪ ಮತ್ತು ಮುಖಚತುಷ್ಕಿಯ ವಿತಾನದಲ್ಲಿ ಪದ್ಮಮಂಡಲ ಮತ್ತು ನಾಗರಾಜ ಶಿಲ್ಪಗಳಿವೆ. ಗರ್ಭಗೃಹದ ದ್ವಾರಬಂಧದ ಪೇದ್ಯಾಭಾಗ ದಲ್ಲಿ ಗಂಗಾ–ಯಮುನೆಯರ ಶಿಲ್ಪಗಳಿವೆ. ಈ ದೇವಾಲಯದ ಒಟ್ಟಾರೆ ಅಲಂಕಾರ ವಿನ್ಯಾಸವು ಗುಪ್ತ–ವಾಕಾಟಕ ಪರಂಪರೆಯನ್ನು ನೆನಪಿಸುತ್ತದೆ. ಅರ್ಕಬ್ರಹ್ಮ ದೇಗುಲ ಮೊದಲನೆಯ ವಿಕ್ರಮಾದಿತ್ಯನ ಕಾಲದ್ದು. ಆದರೆ ಇಲ್ಲಿ ಮಧ್ಯದೇಶದ ಗುಪ್ತ–ವಾಕಾಟಕ ಸಂಪ್ರದಾಯಗಳು ಇದರಲ್ಲಿ ಬಲವಾಗಿವೆ. ಎತ್ತರವಾದ ಜಗತಿಯ ಮೇಲೆ ನಿಂತಿರುವ ಈ ಸಾಂಧಾರ ದೇಗುಲಕ್ಕೆ ಗರ್ಭಗೃಹ ಮತ್ತು ಗೂಢಮಂಟಪ ಮಾತ್ರ ಇವೆ. ಗೋಡೆಯ ಮೇಲಿರುವ ಕಪೋತಾಲಿಯು ನಾಗರ ಸಂಪ್ರದಾಯದ್ದು. ಈ ದೇಗುಲದ ಶಿಖರ ನಷ್ಟವಾಗಿದೆ. ಗರ್ಭಗೃಹವನ್ನು ಈಚೆಗೆ ಪುನಾರಚಿಸಲಾಗಿದೆ.

ವೀರಬ್ರಹ್ಮ ದೇಗುಲ ಇದೇ ತಲವಿನ್ಯಾಸದಿಂದ ಕೂಡಿದೆ. ಈ ದೇವಾಲಯದ ನಾಗರ ರೇಖಾ ಶಿಖರಕ್ಕೆ ನಾಲ್ಕು ಭೂಮಿಗಳಿದ್ದು ಶುಕನಾಸವಿದೆ. ದೇವಕೋಷ್ಠಗಳ ಅರ್ಧಗಂಬಗಳು ಘಟಪಲ್ಲವ ಪ್ರಕಾರದವು. ಇವುಗಳ ಮೇಲಿರುವ ಉದ್ಗಮಗಳು ಸಂಕೀರ್ಣಸ್ವರೂಪದ್ದಾಗಿದವೆ. ಭದ್ರಾವಲೋಕನ ಹಾಗೂ ವಾತಾಯನಗಲ ಜಾಲಿಗಳ ಅಲಂಕಾರ ಸುಂದರವಾಗಿದೆ.

ಬಾಲಬ್ರಹ್ಮ ದೇವಾಲಯ ವಿನ್ಯಾಸದಲ್ಲಿ ವೀರಬ್ರಹ್ಮ ದೇವಾಲಯದಂತೆಯೇ ಇದೆ. ದೇಗುಲದ ಪೂರ್ವದಿಕ್ಕಿನ ಎರಡು ಮೂಲೆಗಳಲ್ಲಿರುವ ಪರಿವಾರದೇಗುಲಗಳು ಮೂಲ ವಿನ್ಯಾಸದ ಅಂಗವಾಗಿವೆ. ಉಳಿದ ಎರಡು ಗುಡಿಗಳು ತದನಂತರ ಸೇರಿಸಲ್ಪಟ್ಟವು.

ಕುಮಾರಬ್ರಹ್ಮ, ಅರ್ಕಬ್ರಹ್ಮ, ವೀರಬ್ರಹ್ಮ ಮತ್ತು ಬಾಲಬ್ರಹ್ಮ ದೇವಾಲಯಗಳು ಮೊದಲನೆಯ ವಿಕ್ರಮಾದಿತ್ಯನ ಕಾಲದಲ್ಲಿ ಆಲಂಪುರವು ನಾಗರ ಸಂಪ್ರದಾಯಕ್ಕೆ ಹೆಚ್ಚು ಒತ್ತು ನೀಡಿದ್ದ ಶಿಲಾವಸ್ತು ಕಲೆಯ ಪ್ರಮುಖ ಕೇಂದ್ರವಾಗಿತ್ತೆಂಬುದನ್ನು ಸೂಚಿಸುತ್ತವೆ.

ಕುಡವೇಲಿ ಸಂಗಮೇಶ್ವರ ದೇವಾಲಯ ಮೊದಲನೇ ವಿಕ್ರಮಾದಿತ್ಯನ ಕಾಲದ ಇನ್ನೊಂದು ಸುಂದರ ಸೃಷ್ಟಿ. ಈಗ ಇದನ್ನು ಆಲಂಪುರಕ್ಕೆ ಸ್ಥಳಾಂತರಿಸಲಾಗಿದೆ. ಸಾಂಧಾರ ರೀತಿಯ ಈ ದೊಡ್ಡ ದೇಗುಲದಲ್ಲಿ ಗೂಢಮಂಟಪ, ಅಂತರಾಳ ಮತ್ತು ಗರ್ಭಗೃಹ ಇವೆ. ಅಧಿಷ್ಠಾನವು ಮಂಚಬಂಧ ರೀತಿಯದು. ಬಾಲಬ್ರಹ್ಮದಲ್ಲಿರುವಂತೆಯೇ ಇದೆಯಾದರೂ ಶುಕನಾಸವಿಲ್ಲ.

ಮೂಲ ದೇವಾಲಯದ ಆಗ್ನೇಯ ದಿಕ್ಕಿಗೆ ಆಯತ ವಿನ್ಯಾಸದ ಶಾಲಾಕಾರ ವಿಮಾನ ಮಾದರಿಯ ಸಂಗಮೇಶ್ವರ ದೇವಾಲಯವಿದೆ. ಇದರ ಪ್ರಕಾರ ಒಂದು ಶ್ರೇಷ್ಠ ಕಲಾಕೃತಿ. 4.5 ಮೀ ಎತ್ತರದ ಪ್ರಾಕಾರದಲ್ಲಿ ಪೀಠ, ಭಿತ್ತಿ, ಹಾರಗಳಿವೆ. ಗೋಡೆಯಲ್ಲಿ ವಿದ್ಯಾಧರರು, ದಿಕ್ಪಾಲರು, ಗಂಧರ್ವರು, ಗಜಗಳು, ತಾಯಿ–ಮಗು, ಗಣಗಳು, ಮಿಥುನಗಳು, ಗಣೇಶ, ಶಿವನಟೇಶ, ವೀಣಾಧರ ಶಿವ ಇತ್ಯಾದಿ ಉಬ್ಬುಶಿಲ್ಪಗಳು ಇವೆ. ಮೇಲ್ಗಡೆ ಕೂಟ, ಶಾಲ, ಪಂಜರಗಳನ್ನೊಳಗೊಂಡ ಹಾರವಿದೆ. ಗೋಪುರ ನಷ್ಟವಾಗಿದೆ. ಈ ದೇವಾಲಯ ದಲ್ಲಿ ದ್ರಾವಿಡ ಸಂಪ್ರದಾಯದ ಪ್ರಭಾವ ಗಮನೀಯವಾಗಿದೆ, ಐಹೊಳೆಯ ದುರ್ಗಾಗುಡಿಯ ಕೆಲವು ಶಿಲ್ಪಗಳನ್ನು ಈ ದೇಗುಲದ ಶಿಲ್ಪಗಳಿಗೆ ಹೋಲಿಸಬಹುದು.

ಕಡಮಾರಕಾಳವದಲ್ಲಿರುವ ಶಿವನಂದೀಶ್ವರೇಶ್ವರ ದೇಗುಲ ಅರ್ಕಬ್ರಹ್ಮ ದೇವಾಲಯವನ್ನು ನೆನಪಿಸುತ್ತದೆ. ಆದರೆ ಕೆಲವು ಪ್ರಾದೇಶಿಕ ವೈಶಿಷ್ಟ್ಯಗಳು ಇದರಲ್ಲಿವೆ. ಈ ದೇಗುಲದ ಆಗ್ನೇಯ ದಿಕ್ಕಿಗೆ ಒಂದು ತ್ರಿಭೂಮಿ ಲತಿನ ಪ್ರಾಸಾದವೂ ಉತ್ತರಕ್ಕೆ ಐದು ಫಾಂಸನ ಗುಡಿಗಳೂ 20 ಕಿರು ದೇಗುಲ ಮಾದರಿಗಳೂ ಇವೆ. ಶೈಲಿಯ ಆಧಾರದ ಮೇಲೆ ಇವು ಒಂದನೆಯ ವಿಕ್ರಮಾದಿತ್ಯನ ಕಾಲದವು.

ಆಲಂಪುರದ ಸ್ಥಪತಿಗಳ ಹೊಸ ವಾಸ್ತು ರೂಪಣಗಳ ಉದಾಹರಣೆಯನ್ನು ಸ್ವರ್ಗಬ್ರಹ್ಮ ದೇವಾಲಯದಲ್ಲಿ ಕಾಣಬಹುದು. ಇದು ವಿನಯಾದಿತ್ಯನ ಕಾಲದಲ್ಲಿ ಇವನ ರಾಣಿಗಾಗಿ ನಿರ್ಮಾಣವಾಯಿತೆಂದು ಶಾಸನದಿಂದ ತಿಳಿಯುತ್ತದೆ. ಈ ಸಾಂಧಾರ ದೇಗುಲಕ್ಕೆ ಮುಖಚತುಷ್ಕಿ, ಗೂಢಮಂಟಪ, ಅಂತರಾಳ ಮತ್ತು ಗರ್ಭಗೃಹಗಳಿವೆ. ಮುಖ್ಯ ದಿಕ್ಕುಗಳ ಗೋಡೆಯಲ್ಲಿ ಭದ್ರ ಗವಾಕ್ಷಗಳಿವೆ. ಈ ಲಕ್ಷಣವು ಪಟ್ಟದಕಲ್ಲಿನ ಗಳಗನಾಥ ಮತ್ತು ಪಾಪನಾಥ ಗುಡಿಗಳಲ್ಲಿಯೂ ಗೋಚರಿಸುತ್ತದೆ. ಮಧ್ಯದೇಶದ ಗುಪ್ತ–ವಾಕಾಟಕ ಪರಂಪರೆಯಲ್ಲಿ ಕಾಣುವಂತೆ ವೇದಿಬಂಧ ಪೀಠದಲ್ಲಿ ತುಲಾಪೀಠವನ್ನು ಅಳವಡಿಸಿದೆ.

ನಾಲ್ಕು ಭೂಮಿಗಳಿರುವ ರೇಖಾ ಶಿಖರ ಸಹ ವಿಶಿಷ್ಟವಾಗಿದೆ. ಮಧ್ಯಲತೆಯನ್ನು ಆಳವಾಗಿ ಕಟೆದಿದ್ದು ತಳದಲ್ಲಿ ಇದು ಬಾಲಪಂಜರವನ್ನು ಬಳಸಿಕೊಂಡಿದೆ. ಸುಕನಾಸ ಎರಡನೆಯ ಭೂಮಿಯವರೆಗೆ ಮೇಲೇರಿದೆ. ಶಿಖರದ ಮೇಲ್ಗಡೆ ಗ್ರೀವ, ಆಮಲಕ, ದ್ವಿಕಲಶ ಹಾಗೂ ಆಕಾಶ ಲಿಂಗಗಳಿವೆ. ಶುಕನಾಸದ ಮುಖಪಟ್ಟಿಯಲ್ಲಿ ನಟೇಶ ಮೂರ್ತಿಯಿದೆ. ಮುಖಚತುಷ್ಕಿ ಮತ್ತು ಗೂಢಮಂಟಪಗಳಿಗೆ ಘಟಪಲ್ಲವ ಕಂಬಗಳನ್ನು ಬಳಸಲಾಗಿದೆ. ಈ ಕಂಬಗಳ ತಳ ಮತ್ತು ಮೇಲ್ಭಾಗಗಳಲ್ಲಿ ಪೂರ್ಣಘಟಗಳಿದ್ದು ಕಾಂಡದ ಮಧ್ಯವು ಅಷ್ಟಕೋನಾಕಾರದಲ್ಲಿದೆ. ಇವು ತಾಲಪತ್ರ ಬೋದಿಗೆಯನ್ನು ಹೊತ್ತಿವೆ. ಗರ್ಭಗೃಹದೊಳಗೆ ನಾಲ್ಕು ಕಂಬಗಳಿವೆ. ಹೀಗೆ ಸ್ವರ್ಗಬ್ರಹ್ಮ ದೇವಾಲಯ ಚಳುಕ್ಯ ಕಾಲೀನ ನಾಗರ ಸಂಪ್ರದಾಯದ ವಾಸ್ತು ವಿಕಾಸದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ. ಇದರ ಪ್ರಭಾವವನ್ನು ಪಾಣ್ಯಂನಲ್ಲಿರುವ ಪಾಣಿಕೇಶ್ವರ ದೇಗುಲದಲ್ಲಿ ಗುರುತಿಸಬಹುದು.

ಮಹಾನಂದಿಯಲ್ಲಿರುವ (ಕರ್ನೂಲು ಜಿಲ್ಲೆ) ಮಹಾನಂದೀಶ್ವರ ದೇವಾಲಯ ತಲವಿನ್ಯಾಸದಲ್ಲಿ ಮಂಟಪ, ಅಂತರಾಳ ಮತ್ತು ಗರ್ಭಗೃಹವಿರುವ ಸಾಂಧಾರ ರಚನೆ, ಇದರ ತಳ ಭಾಗದಲ್ಲಿ ಭದ್ರಗವಾಕ್ಷದ ಮುಂಚಾಚು ಇದೆಯಾದರೆ ಇದಕ್ಕೆ ಸ್ಪಂದಿಯಾಗಿ ಗೋಡೆಯಲ್ಲಿ ತೆರೆದ ಕಂಬಗಳಿವೆ. ಶಿಖರ ನಾಲ್ಕು ಭೂಮಿಗಳಿಂದಾಗಿದ್ದು ಆಲಂಪುರದ ಬಾಲಬ್ರಹ್ಮ ದೇಗುಲದ ಶಿಖರವನ್ನು ಹೋಲುತ್ತದೆ. ಐಹೊಳೆಯ ನಾಗರ ಮಾದರಿಯ ಕೆಲವು ದೇವಾಲಯಗಳ ರೂಪ ಇಲ್ಲಿ ಹೆಚ್ಚು ಕಾಣುತ್ತದೆ. ಬಹುಶಃ ಇದು ವಿನಯಾದಿತ್ಯನ ಕಾಲದ್ದು.

ವಿಜಯಾದಿತ್ಯನ ಕಾಲದಲ್ಲಿ ಆಲಂಪುರದ ಗರುಡಬ್ರಹ್ಮ ಮತ್ತು ವೀರಬ್ರಹ್ಮ ದೇವಾಲಯ ಗಳು ನಿರ್ಮಾಣಗೊಂಡವು. ಪ್ರಾಯಶಃ ಸತ್ಯವೊಲುವಿನಲ್ಲಿರುವ ರಾಮಲಿಂಗೇಶ್ವರ ಮತ್ತು ಭೀಮಲಿಂಗೇಶ್ವರ ದೇಗುಲಗಳೂ ಇವನ ಕಾಲದವೇ ಆಗಿವೆ. ಗರುಡಬ್ರಹ್ಮ ದೇಗುಲ ಸ್ವರ್ಗಬ್ರಹ್ಮ ದೇಗುಲದಂತೆಯೇ ಇದೆ. ಗರ್ಭಗೃಹದ ಗೋಡೆಗೆ ಆಳವಾದ ಮುಂಚಾಚು ಹಿಂಚಾಚುಗಳಿರುವುದು, ವಿಶಾಲವಾದ ಗೂಢಮಂಟಪ ಇವು ಗಮನಾರ್ಹವಾಗಿವೆ. ಅಧಿಷ್ಠಾನ ವೇದಿಬಂಧ ಮಾದರಿಯದು.

ಗೋಡೆಯಲ್ಲಿ ಅನೇಕ ಕೋಷ್ಠಗಳಿದ್ದು ಅವುಗಳಿಗೆ ಕಿರುಗಂಬಗಳನ್ನು ಅಳವಡಿಸಿರುವುದು ಚಳುಕ್ಯ ಶೈಲಿಯ ವಿಶಿಷ್ಟ ಲಕ್ಷಣವೆನಿಸಿದೆ. ಗೋಡೆಯಲ್ಲಿ ಶಿಲ್ಪಗಳಾಗಲಿ ಉದ್ಗಮಗ ಳಾಗಲಿ ಇಲ್ಲ. ಆದರೆ ಗೋಡೆಯ ಮೇಲಂಚಿನುದ್ದಕ್ಕೂ ಘಂಟಾಮಾಲೆ–ವಿದ್ಯಾಧರ ಶಿಲ್ಪಗಳು ಅದ್ಭುತವಾಗಿವೆ. ರೇಖಾ ನಾಗರ ಶಿಖರ ನಾಲ್ಕು ಭೂಮಿಗಳನ್ನೊಳಗೊಂಡಿದ್ದು ಸ್ವರ್ಗಬ್ರಹ್ಮ

ದೇವಾಲಯವನ್ನು ಹೋಲುತ್ತಿದೆ. ಇದರ ವಿಶಾಲ ಪ್ರಮಾಣಬದ್ಧ ಗೂಢಮಂಟಪದಲ್ಲಿ ನಾಲ್ಕು ಸಾಲು ಕಂಬಗಳಿವೆ. ಇವುಗಳಿಗೆ ಬೆನ್ನಿಗೆ ಬೆನ್ನು ಹಾಕಿ ಕುಳಿತಿರುವ ನಾಲ್ಕು ಸಿಂಹಗಳ ಪೀಠವಿರುವುದು ಚಳುಕ್ಯ ವಾಸ್ತುಶಿಲ್ಪದಲ್ಲಿಯೇ ಅಪೂರ್ವವೆನಿಸಿದೆ. ಚಳುಕ್ಯ ಪ್ರದೇಶದಲ್ಲಿ ಇಂತಹ ಇನ್ನೊಂದು ಉದಾಹರಣೆ ಇಲ್ಲ. ಅಜಂತದ 17ನೆಯ ಗುಹೆಯಲ್ಲಿರುವ ಕಂಬಗಳನ್ನು ಇದು ಬಹಳ ಹೋಲುತ್ತದೆ.

ಸತ್ಯವೋಲುವಿನಲ್ಲಿರುವ ರಾಮಲಿಂಗೇಶ್ವರ ಮತ್ತು ಭೀಮಲಿಂಗೇಶ್ವರ ಸಾಂಧಾರ ದೇಗುಲಗಳನ್ನು ವಿಜಯಾದಿತ್ಯನ ಕಾಲದ ಇತರ ದೇಗುಲಗಳಿಗೆ ಹೋಲಿಸಿದರೆ, ಪ್ರಾದೇಶಿಕ ಲಕ್ಷಣಗಳು ಹೆಚ್ಚು ಬಿಂಬಿತವಾಗಿರುವುದು ಕಾಣಿಸುತ್ತದೆ. ಅದರೊಂದಿಗೆ ಕೆಲವು ಹೊಸ ವಾಸ್ತು ಲಕ್ಷಣಗಳೂ ಇಲ್ಲಿ ಪ್ರಕಟವಾಗಿವೆ. ಒರಟು ರೀತಿಯ ನಿರ್ಮಾಣ, ವಿವರಗಳಲ್ಲಿ ಸೂಕ್ಷ್ಮ ಕುಶಲತೆಯ ಕೊರತೆ, ಮಡಿಕೆಗಳನ್ನು ದಿಟ್ಟವಾಗಿ ಕೊರೆದಿರುವ ರೀತಿ ಹಾಗೂ ದ್ರಾವಿಡ ಸಂಪ್ರದಾಯದೆಡೆಗೆ ಒಲವು ಇತ್ಯಾದಿಗಳು ಕರ್ನೂಲು ಪ್ರದೇಶದ ದೇಗುಲವಾಸ್ತುವಿನ ವೈಶಿಷ್ಟ್ಯಗಳಾಗಿ ಇಲ್ಲಿಯೂ ಗೋಚರಿಸುತ್ತಿವೆ.

ಭೀಮಲಿಂಗೇಶ್ವರ ದೇಗುಲ ಮಂಟಪ ಮತ್ತು ಗರ್ಭಗೃಹಗಳನ್ನೊಳಗೊಂಡಿರುವ ಮಧ್ಯಮ ಗಾತ್ರದ ರಚನೆಯಾಗಿದೆ. ಎರಡು ಭೂಮಗಿಗಳಿರುವ ರೇಖಾ ಶಿಖರಕ್ಕೆ ಶುಕನಾಸ ವಿದ್ದು, ಇದು ರಾಮಲಿಂಗೇಶ್ವರ ದೇಗುಲವನ್ನು ಹೋಲುತ್ತದೆ. ಆದರೆ ತಳಭಾಗದಲ್ಲಿ ವ್ಯಾಳವರಿಯನ್ನು ಪ್ರಯೋಗಿಸಿರುವದು ದ್ರಾವಿಡ ಸಂಪ್ರದಾಯದ ಪ್ರಭಾವವೆನಿಸಿದೆ.

ಆಲಂಪುರದ ಪದ್ಮಬ್ರಹ್ಮ ದೇವಾಲಯದ ಶಿಖರ ನಷ್ಟವಾಗಿದೆ. ಅಲ್ಲದೆ ಹಲವು ವಿವರಗಳು ಅಪೂರ್ಣವಾಗಿವೆ. ತಲವಿನ್ಯಾಸದಲ್ಲಿ ಇದು ವಿಶ್ವಬ್ರಹ್ಮ ದೇಗುಲದಂತೆ ಇದೆ. ಶೈಲಿಯ ಆಧಾರದ ಮೇಲೆ ಇದನ್ನು ಇಮ್ಮಡಿ ಕೀರ್ತಿವರ್ಮನ ಕಾಲಕ್ಕೆ ಅನ್ವಯಿಸಬಹುದು.

ಹೀಗೆ ಚಳುಕ್ಯ ನಾಗರ ಸಂಪ್ರದಾಯದ ದೇಗುಲಗಳು ಆಂಧ್ರ ಪ್ರದೇಶದಲ್ಲಿ ಸಾಂಧಾರ ವಿನ್ಯಾಸ, ಜಗತಿ, ಭದ್ರಾವಲೋಕನ, ಇಳಿಜಾರಿನ ಪಾರ್ಶ್ವಭಾವಣಿಗಳು, ರುಚಕ ಕಂಬಗಳು, ಅಲಂಕೃತ ದ್ವಾರಬಂಧಗಳು ಇತ್ಯಾದಿಗಳ ದೃಷ್ಟಿಯಿಂದ ಪ್ರಾರಂಭಿಕವಾಗಿ ಐಹೊಳೆಯ ಸಂಪ್ರದಾಯದಿ ಸ್ಫೂರ್ತಿ ಪಡೆದಿರಬಹುದು. ಆದರೆ ಕ್ರಮೇಣ ಆಲಂಪುರದ ವಾಸ್ತುಶಿಲ್ಪಿಗಳು ಕೆಲವು ಸೃಜನಶೀಲ ಪ್ರವೃತ್ತಿಗಳನ್ನು ಪ್ರಕಟಿಸಿದ್ದಾರೆ. ಗೋಡೆಯಲ್ಲಿ ಕೋಷ್ಠಗಳ ಅಳವಡಿಕೆ, ಉದ್ಗಮಗಳು, ಘಂಟಾಮಾಲೆ, ಘಟಪಲ್ಲವ ರೀತಿಯ ಕಂಬಗಳು, ತಾಲಪತ್ರ ಬೋದಿಗೆಗಳು, ತುಲಾಪೀಠಗಳು, ವೇದಿಬಂಧದ ಬಳಕೆ, ಇತ್ಯಾದಿಗಳು ನಾಗರ ಸಂಪ್ರದಾಯದ ಶುದ್ಧಲಕ್ಷಣ ಗಳಾಗಿದ್ದು ಅವುಗಳನ್ನು ಹೆಚ್ಚು ಹೆಚ್ಚು ಬಳಸಿರುವದು ಇಲ್ಲಿ ಕಾಣುತ್ತದೆ. ಕೆಲವು ಪ್ರಾದೇಶಿಕ ಲಕ್ಷಣಗಳೂ ಇಲ್ಲದಿಲ್ಲ. ಕ್ರಮೇಣ ಆಲಂಪುರದ ವಾಸ್ತುಶಿಲ್ಪಿಗಳು ಸ್ವರ್ಗಬ್ರಹ್ಮ ದೇವಾಲಯ ದಂತಹ ಅದ್ಭುತ ವಾಸ್ತುವಿನ್ಯಾಸಗಳನ್ನು ರೂಪಿಸುವಲ್ಲಿ ಸಫಲರಾದರು. ಶುದ್ಧ ನಾಗರ ಸಂಪ್ರದಾಯದ ಎಲ್ಲ ಲಕ್ಷಣಗಳನ್ನು ಅವರು ಪೂರ್ತಿಯಾಗಿ ಬಳಸಿಕೊಂಡು ತಮ್ಮ ಕೈಚಳಕವನ್ನೂ ತೋರಿಸಿದರು.

ಚಳುಕ್ಯರ ಕಾಲದ ಕಟ್ಟಡ ವಾಸ್ತು ಉದಾಹರಣೆಗಳು ಹಲವು ದೃಷ್ಟಿಕೋನಗಳಿಂದಾಗಿ ಮಹತ್ತ್ವದ್ದಾಗಿವೆ. ಇವು ದಕ್ಷಿಣ ಭಾರತದಲ್ಲಿ ಉಳಿದು ಬಂದಿರುವ ಪ್ರಾಚೀನ ಶಿಲಾದೇಗುಲ ಗಳು. ವಿವಿಧೆಡೆಗಳಿಂದ ಬಂದ ಶಿಲ್ಪಿಗಳ ತಂಡಗಳು ಇವುಗಳ ನಿರ್ಮಾಣದಲ್ಲಿ ಕೆಲಸ ಮಾಡಿವೆ. ಆ ಕಾರಣದಿಂದ ಭಾರತದ ವಿವಿಧ ದೇಗುಲ ವಾಸ್ತು ಶೈಲಿಗಳು ಪ್ರಯೋಗಗಳು ಇಲ್ಲಿ ಆಗಿವೆ. ದ್ರಾವಿಡ, ರೇಖಾನಾಗರ ಮತ್ತು ಫಾಂಸನ ಶೈಲಿಗಳು ಸ್ಪಷ್ಟ ಲಕ್ಷಣಗಳನ್ನು ಆಗಲೇ ಪಡೆದಿದ್ದವು. ಆದರೆ ಚಳುಕ್ಯ ಪ್ರದೇಶದಲ್ಲಿ ಇವುಗಳ ಕೆಲ ಅಂಶಗಳನ್ನು ಮಿಶ್ರಗೊಳಿಸುವ ಪ್ರಯತ್ನ–ಪ್ರಯೋಗಗಳು ಆದವು. ಕರ್ನಾಟಕ ದ್ರಾವಿಡ ಶೈಲಿ ಕೆಲವು ಔತ್ತರೇಯ ಲಕ್ಷಣಗಳನ್ನು ಮೈಗೂಡಿಸಿಕೊಂಡು ಸ್ವಂತಿಕೆಯನ್ನು ರೂಪಿಸಿಕೊಂಡಿತು. ಅದು ಕಲ್ಯಾಣದ ಚಾಳುಕ್ಯ-ದೋರಸಮುದ್ರದ ಹೊಯ್ಸಳರ ಕರ್ನಾಟಕ ದ್ರಾವಿಡ ಶೈಲಿಗೆ ಪಾಯ ಹಾಕಿಕೊಟ್ಟಿತು. ಫಾಂಸನ ಶೈಲಿ ಕೂಡ ಕರ್ನಾಟಕದಲ್ಲಿ ವೈಶಿಷ್ಟ್ಯಗಳನ್ನು ಮೇಳೈಸಿ ಕೊಂಡು ಬೆಳೆಯಲು ಸಾಧ್ಯವಾಯಿತು.

**2. ಶಿಲ್ಪಕಲೆ: ಗುಹಾಲಯಗಳ ಶಿಲ್ಪ:** ಚಳುಕ್ಯ ಗುಹಾಲಯಗಳ ಅತ್ಯಾಕರ್ಷಕ ಘಟಕಗಳೆಂದರೆ ಅವುಗಳಲ್ಲಿರುವ ದೊಡ್ಡ ಮತ್ತು ಚಿಕ್ಕ ಗಾತ್ರದ ವೈವಿಧ್ಯಮಯ ಶಿಲ್ಪಗಳು. ಪ್ರತಿಮಾಲಕ್ಷಣ, ಶಿಲ್ಪತಂತ್ರ, ಶೈಲಿ, ರೂಪಕರ್ಮ ಹೀಗೆ ಅನೇಕ ದೃಷ್ಟಿಕೋನಗಳಿಂದ ಇವು ವಿಶಿಷ್ಟವಾಗಿದ್ದು, ಅಧ್ಯಯನ ಯೋಗ್ಯವಾಗಿವೆ.

ಬಾದಾಮಿಯ ಶೈವ ಗುಹಾಲಯದ ಮುಂದುಗಡೆಯ ಅಂಗಳದಲ್ಲಿ ನಿಂತರೆ ಪಶ್ಚಿಮ ಪಾರ್ಶ್ವದಲ್ಲಿ ಹದಿನೆಂಟು ಕೈಗಳುಳ್ಳ ಶಿವನಟರಾಜನ ಅಪೂರ್ವ ಶಿಲ್ಪವಿದೆ. ಬಹುಶಃ ಭಾರತದಲ್ಲಿ ಇಷ್ಟು ಕೈಗಳುಳ್ಳ ಪ್ರಾಚೀನ ನಟರಾಜನ ವಿಗ್ರಹ ಇನ್ನೊಂದಿಲ್ಲ. ಕಲಾ ದೃಷ್ಟಿಯಿಂದಲೂ ಇದು ಅದ್ಭುತ ಕೃತಿಯೆಂದು ಮೆಚ್ಚುಗೆ ಗಳಿಸಿದೆ. ವೃತ್ತಾಕಾರದ ಪರಿಧಿಯನ್ನನುಸರಿಸಿ ಈ ಶಿಲ್ಪ ಸಂಯೋಜಿತವಾಗಿದೆ. ಬಲಗಾಲನ್ನು ಪದ್ಮಪೀಠದ ಮೇಲೆ ಭದ್ರವಾಗಿ ಊರಿ ಚತುರ ನಾಟ್ಯ ಭಂಗಿಯಲ್ಲಿರುವ ಜಟಾಧಾರಿ ನಟರಾಜ–ಶಿವನ ಕೈಗಳು ಏಕಕೇಂದ್ರೀಯ ವಾಗಿ ಗಡಿಯಾರದ ಮುಳ್ಳಿನಂತೆ ಬಲದಿಂದ ಎಡಕ್ಕೆ ವೃತ್ತಾಕಾರದಲ್ಲಿ ಚಲಿಸುತ್ತಿರುವಂತೆ ಭಾಸವಾಗುತ್ತದೆ. ಮೂರು ಬಲ ಕೈಗಳು ಅಕ್ಷಮಾಲೆ, ಪಾಶ (?) ಹಾಗೂ ಡಮರುಗಳನ್ನು, ಮೇಲೆತ್ತಿರುವ ಒಂದು ಬಲ ಎಡ ಕೈ ಬಿಡಿಸಿ ಹಿಡಿದಿರುವ ಸರ್ಪವನ್ನು, ಒಂದು ಎಡಕ್ಕೆ ತ್ರಿಶೂಲವನ್ನು ಹಾಗೂ ಇನ್ನೆರಡು ಎಡ ಕೈಗಳು ತಂತುವಾದ್ಯವನ್ನು ಹಿಡಿದಿವೆ; ಇನ್ನುಳಿದ ಕೈಗಳು ಅಭಯ ಹಸ್ತ, ತ್ರಿಪತಾಕ, ವಿಸ್ಮಯ (?) ಮುಂತಾದ ನಾಟ್ಯ ಮುದ್ರೆಗಳಲ್ಲಿ ಬೀಸು ಚಾಲನೆಯಲ್ಲಿವೆ. ನಟರಾಜನ ಭಂಗಿ ಹಾಗೂ ಕೈಗಳ ಆಯುಧ, ವಸ್ತು, ಮುದ್ರೆಗಳು ಇಲ್ಲಿ ಚಲನೆ ಮತ್ತು ಸಮತೋಲನ ಭಾವದ ಅಭಿವ್ಯಕ್ತಿಗೆ ಪೂರಕವಾಗಿವೆ. ನಟರಾಜನ ಹಿಂದಿರುವ ನಂದಿಯಮುಖ ದ್ವಿಭುಜ ಬಾಲಗಣೇಶ ಶಿವನ ನಾಟ್ಯವನ್ನು ಅನುಕರಣೆ ಮಾಡುತ್ತಿದ್ದಾನೆ. ಇವನ ಎಡಪಕ್ಕದಲ್ಲಿ ಒಬ್ಬನು ಮೃದಂಗ ಬಾರಿಸುವದರಲ್ಲಿ ಮಗ್ನನಾಗಿದ್ದಾನೆ. ಒಟ್ಟಾರೆ ಸೀಮಿತ ಆಭರಣ, ಶಿರದ ಹಿಂದಿರುವ ದೀರ್ಘವೃತ್ತಾಕಾರದ ಅಸ್ಪಷ್ಟ ಪ್ರಭಾಮಂಡಲ, ಆಕರ್ಷಕ ಭಂಗಿ ಮುಂತಾದವುಗಳೊಂದಿಗೆ ಇಲ್ಲಿ ಶಿಲ್ಪ ಸಂಯೋಜನೆ ಸಹಜವಾಗಿಯೇ ಚಿತ್ತಾಕರ್ಷಕವಾಗಿದೆ.

ಜಾಲಂಧ್ರ, ತ್ರಿಪುರಾಂತಕ ದೇವಾಲಯ, ಬೆಳಗಾಂವಿ

ಮುಖಮಂಟಪದಲ್ಲಿ ಪೂರ್ವ ಪಾರ್ಶ್ವದ ಗೋಡೆಯಲ್ಲಿರುವ ಲಕ್ಷ್ಮೀ–ಪಾರ್ವತೀ ಸಹಿತ ಹರಿಹರ ಶಿಲ್ಪ ಈ ಗುಹಾಲಯದ ಇನ್ನೊಂದು ಮಹತ್ತ್ವದ ಕಲಾಕೃತಿ. ಹರಿಹರನ ಬಲ ಅರ್ಧಭಾಗ ಶಿವನ ಮೂರ್ತಿ ಲಕ್ಷಣಗಳೊಂದಿಗೂ ವಾಮಾರ್ಧ ಭಾಗ ವಿಷ್ಣುವಿನ ಮೂರ್ತಿ ಲಕ್ಷಣಗಳೊಂದಿಗೂ ಮೂಡಿದೆ.

ಮುಖಮಂಟಪದಲ್ಲಿ ಪಶ್ಚಿಮ ಪಾರ್ಶ್ವದ ಗೋಡೆಯಲ್ಲಿರುವ ಅರ್ಧನಾರೀಶ್ವರ ಶಿಲ್ಪ ಈ ಗುಹಾಲಯದ ಮೇರು ಕೃತಿ. ಉಳಿದವುಗಳಂತೆ ಇದು ಕೂಡ ವೃತ್ತ ಪರಿಧಿಯನ್ನನು ಸರಿಸಿ ಸಂಯೋಜಿತವಾಗಿದೆ. ಇಲ್ಲಿ ಬಲ ಶಿವನದು ಹಾಗೂ ಎಡ ಭಾಗ ಪಾರ್ವತಿಯದು. ಬಲಗಡೆ, ಶಿವನ ಪಕ್ಕದಲ್ಲಿ ಮುಖ ಚಾಚಿರುವ ಬಸವ ಜೀವಕಳೆಯಿಂದ ಕೂಡಿದ್ದು, ನಿಂತಿದೆ. ಅದರ ಬಲಪಕ್ಕದಲ್ಲಿ ಅಸ್ತಿ ಪಂಜರದಂತೆ ಕೃಶದೇಹದ ಭೃಂಗಿ ಕೈ ಮುಗಿದು ನಿಂತಿದ್ದಾನೆ. ಅರ್ಧನಾರೀಶ್ವರನ ಎಡಪಾರ್ಶ್ವದಲ್ಲಿ ಧಮ್ಮಿಲ್ಲ ರೀತಿಯ ವಿಶಿಷ್ಟ ಕೇಶಾಲಂ ಕಾರದಿಂದೊಡಗೂಡಿದ, ಎಡಗೈಯಲ್ಲಿ ಪ್ರಸಾಧನ ಪಟ್ಟಿಗೆಯನ್ನು ಹೊತ್ತಿರುವ ಪ್ರಸಾದಿತೆ (ಪಾರ್ವತಿಯ ಸೇವಕಿ) ನಿಂತಿದ್ದಾಳೆ. ಮೇಲ್ಮೂಲೆಗಳಲ್ಲಿ ಹಾರಗಳನ್ನು ಹಿಡಿದು ಹಗುರವಾಗಿ ಆಕಾಶದಲ್ಲಿ ಹಾರುತ್ತ ಸಾಗಿವೆ. ನೋಡುಗನ ದೃಷ್ಟಿ ನೇರವಾಗಿ ಕೇಂದ್ರ ಪಾತ್ರದ ಅರ್ಧನಾರೀಶ್ವರ

ಮೂರ್ತಿಯೆಡೆಗೆ ಸೆಳೆಯುವುದರಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ; ಉಳಿದ ಪಾತ್ರಗಳು ಸಂಯೋಜನೆಗೆ ಪೂರಕವಾಗಿ ಮಾತ್ರ ಮಹತ್ತ್ವ ಪಡೆದಿವೆ. ಮುಮ್ಮುಖದ ಪಶ್ಚಿಮ ಪಾರ್ಶ್ವದಲ್ಲಿ ಪೂರ್ವಾಭಿಮುಖವಾಗಿರುವ ದುರ್ಗಾಭಗವತಿಯ ಮಂಟಪದಲ್ಲಿಯ ಮುಖ್ಯ ಶಿಲ್ಪ ದುರ್ಗಾಭಗವತಿಯದು. ದೇವಿಯನ್ನು ಹಸನ್ಮುಖಳಾಗಿಯೂ ದುಂಡುದುಂಡಾದ ಅಂಗಾಂಗ ಹಾಗೂ ತುಂಬು ಕುಚದ್ವಯಗಳಿಂದೊಡಗೂಡಿಯೂ ತೋರಿಸಲಾಗಿದೆ.

ಮುಖಮಂಟಪದ ಭಿತ್ತಿನಲ್ಲಿ ಐದು ಹೆಡೆಯ ನಾಗರಾಜ ಮತ್ತು ವಿದ್ಯಾಧರ ದಂಪತಿಗಳ ಆಕರ್ಷಕ ಶಿಲ್ಪಗಳಿವೆ. ಕೆಲವು ಕಥಾ ನಿರೂಪಕ ಶಿಲ್ಪಪಟ್ಟಿಕೆ ಮುಖಮಂಟಪದ ಜಂತಿಯ ಒಳಪಾರ್ಶ್ವದಲ್ಲಿವೆ. ಇವುಗಳಲ್ಲಿ ಪಾರ್ವತೀ ಕಲ್ಯಾಣ, ಕಾಮಕೇಳಿಯಲ್ಲಿರುವ ಸ್ತ್ರೀ ಪುರುಷರು, ನರ್ತಿಸುತ್ತಿರುವ ಗಣಗಳು ಸೇರಿವೆ.

ಮೊದಲನೆಯ ಗುಹಾಲಯದ ಶಿಲ್ಪ ತಂತ್ರದಲ್ಲಿ ಕೆಲವು ಸಾಮಾನ್ಯ ಲಕ್ಷಣಗಳನ್ನು ಕಾಣಬಹುದು. ಉದಾ: ಹಿರಿಗಾತ್ರದ ಉಬ್ಬು ಶಿಲ್ಪಗಳ ಕೆಳಗೆ ವಿವಿಧ ಭಾವಭಂಗಿಗಳಲ್ಲಿರುವ ಗಣರ ಶಿಲ್ಪಪಟ್ಟಿಕೆ ಇರುವುದು; ಹೆಚ್ಚಿನ ಶಿಲ್ಪಗಳು ಆಯತಾಕಾರದ ಚೌಕಟ್ಟಿನಲ್ಲಿ ರೂಪಿತವಾಗಿದ್ದರೂ ವೃತ್ತ ಪರಿಧಿಯನ್ನು ಅನುಸರಿಸಿ ಪಾತ್ರಗಳ ಸಂಯೋಜನೆ ರೂಪಿಸಿರುವುದು; ಉಡುಗೆ-ತೊಡುಗೆಗಳಲ್ಲಿ ಸಾಮ್ಯವಿರುವುದು; ರೂಪಕರ್ಮ ರೀತಿ ಹೆಚ್ಚುಕಡಿಮೆ ಒಂದೇ ರೀತಿಯಾಗಿರುವುದು ಇತ್ಯಾದಿ. ಇದಲ್ಲದೆ ಎಲ್ಲ ದೊಡ್ಡ ಶಿಲ್ಪಗಳಲ್ಲಿಯೂ ಹುಬ್ಬುಗಳು, ತೆರೆದ ಕಣ್ಣುಗಳು, ಎರಡು ಸ್ಪಷ್ಟಗೆರೆಗಳಿಂದ ಮೀನಿನಾಕಾರದಲ್ಲಿ ಸೂಚಿತವಾಗಿರುವ ಕಣ್ಣೆವೆಗಳು ಕಂಡುಬರುತ್ತವೆ.

ಆದರೆ ಮುಖಮಂಟಪ ಭಿತ್ತಿನಲ್ಲಿರುವ ವಿದ್ಯಾಧರ ದಂಪತಿಗಳ ಶಿಲ್ಪಗಳು ಭಿನ್ನ ಶೈಲಿಯವು. ಇಲ್ಲಿ ಮುಖ, ಅಸ್ಪಷ್ಟ ಹುಬ್ಬು ಹಾಗೂ ಮುಚ್ಚು ಕಣ್ಣುಗಳಿರುವುದು ಎರಡನೇ ಗುಹಾಲಯದ ಶಿಲ್ಪಗಳನ್ನು ನೆನಪಿಸುತ್ತವೆ. ಅಂತಾಗಿ ಇವು ಉತ್ತರ ದಖನ್ನಿನ ಶಿಲ್ಪಶೈಲಿಗೆ ಸಾಮ್ಯ ಹೊಂದಿವೆ. ಇದೇ ರೀತಿಯ ಸಾಮ್ಯವನ್ನು ವೃತ್ತಾಕಾರದ ಮೆತ್ತೆಯಂತಹ ಕಲಶ ಭಾಗವುಳ್ಳ ಕಂಬಗಳು, ಸರಳ ಅನಲಂಕೃತ ದೀರ್ಘ ವೃತ್ತಾಕೃತಿಯ ಪ್ರಭಾಮಂಡಲ, ಕಥಾವಸ್ತು ಮುಂತಾದವುಗಳಲ್ಲಿ ಗಮನಿಸಬಹುದು.

ಈ ಗುಹಾಲಯದಲ್ಲಿ ಕೆಲಸಮಾಡಿದರೆನ್ನಬಹುದಾದ ಅಯ್ಯಸ್ವಾಮಿ, ಕಲ್ಕುಟ್ಟಿ, ದೋಣಸಾಮಿ, ನಾಕೆಯ್ದು, ಮಾರುತಿಸಾಮಿ, ಶ್ರೀಸೋಪಕಾರಿ, ಉಮಾಭಟ, ಅಜ್ಕ, ಗಣಸಾಮಿ, ಮಲ್ಲಿಸಾಮಿ, ಕೊಳಿಮಞ್ಚೆ ಮೊದಲಾದ ಶಿಲ್ಪಿಗಳ ಹೆಸರುಗಳು ನಮಗೆ ತಿಳಿದಿವೆ. ಈ ಹೆಸರುಗಳು 6ನೆಯ ಶತಮಾನದ ಕನ್ನಡ ಅಕ್ಷರಗಳಲ್ಲಿವೆ. ಈ ಗುಹೆಯ ಪಕ್ಕದ ಬಿಲದ ಭಿತ್ತಿನಲ್ಲಿ ಕೆಲವು ಇದೇ ಕಾಲದ ಸಿದ್ಧಮಾತೃಕಾ ಲಿಪಿಯಲ್ಲಿ ಬರೆದಿರುವ ಹೆಸರುಗಳಿವೆ. ಇದರಿಂದ ಶಿಲ್ಪಶೈಲಿ ಹಾಗೂ ಶಿಲ್ಪಿಗಳ ಹೆಸರುಗಳು ಇಲ್ಲಿ ಕೆಲಸ ಮಾಡಿದ ಶಿಲ್ಪಿಗಳ ಸಮೂಹ ಸಂಕೀರ್ಣ ಸ್ವರೂಪದ್ದಾಗಿತ್ತೆಂಬುದನ್ನು ಸೂಚಿಸುತ್ತವೆ. ಹೆಚ್ಚು ಆಂಧ್ರ-ಕರ್ನಾಟಕ ಶಿಲ್ಪಿಗಳೂ ಕೆಲವೇ ಮಹಾರಾಷ್ಟ್ರ ಪ್ರದೇಶದ ಶಿಲ್ಪಿಗಳೂ ಈ ಗುಹಾಲಯ ನಿರ್ಮಾಣದಲ್ಲಿ ಪಾತ್ರವಹಿಸಿದ್ದಾರೆಂದು ಭಾವಿಸಿದರೆ ತಪ್ಪಾಗದು.

ಬಾದಾಮಿಯ ಎರಡನೆಯ ಗುಹಾಲಯದ ಮುಖ್ಯ ಶಿಲ್ಪಗಳೆಲ್ಲವೂ ಭೂತಗಣಗಳ ಸಾಲುಳ್ಳ ಪಟ್ಟಿಕೆಯ ಮೇಲ್ಗಡೆ ರಚಿತವಾಗಿವೆ. ದ್ವಾರಪಾಲರು, ವರಾಹ, ವಾಮನ-ತ್ರಿವಿಕ್ರಮ-ಇವು ಹಿರಿಯ ಶಿಲ್ಪಗಳು. ದ್ವಾರಪಾಲರು ದ್ವಿಭುಜರಾಗಿದ್ದು, ಅವರ ಪಕ್ಕದಲ್ಲಿ ಸ್ತ್ರೀ ಸೇವಕಿಯನ್ನು ತೋರಿಸಿದೆ. ಅಭಂಗದಲ್ಲಿ ಕರ್ತ್ತರಿ ಹಸ್ತರಾಗಿ ದ್ವಾರಪಾಲರು ನಿಂತಿದ್ದಾರೆ.

ಮುಖಮಂಟಪದಲ್ಲಿ ಪೂರ್ವ ಪಾರ್ಶ್ವ ಗೋಡೆಯಲ್ಲಿ ಭೂವರಾಹದ ದೊಡ್ಡ ಶಿಲ್ಪವಿದೆ. ವರಾಹನು ಚತುರ್ಭುಜನಾಗಿದ್ದು, ಎಡಗೈಯಿಂದ ಪದ್ಮದ ಮೇಲೆ ನಿಂತಿರುವ ಭೂದೇವಿಗೆ ಆಧಾರವೊದಗಿಸಿದ್ದಾನೆ. ಅವಳ ಬಲಗೈ ವರಾಹನ ಮುಖದ ಮೇಲೆ ಇರಿಸಲ್ಪಟ್ಟಿದ್ದು ಎಡಗೈ ಇಳಿಬಿಟ್ಟಿದೆ. ವರಹಾನ ಬಲಗೈ ಕಟಿಬಂಧದ ಮೇಲಿದೆ. ಮೇಲಿನ ಮೂಲೆಗಳಲ್ಲಿ ವಿದ್ಯಾಧರ ದಂಪತಿಗಳಿದ್ದಾರೆ. ವರಾಹನ ಶಿರದ ಮೇಲ್ಗಡೆ ಪೂಜಕ ಮುನಿಗಳಿದ್ದಾರೆ.

ಮುಖಮಂಟಪದ ಪಶ್ಚಿಮ ಗೋಡೆಯಲ್ಲಿ ವಾಮನಾವತಾರದ ಕಥಾರೂಪಕ ಶಿಲ್ಪವಿದೆ. ವಿರಾಟರೂಪದ ತ್ರಿವಿಕ್ರಮನ ಎಡಬದಿಗೆ ಕೆಳಗಡೆ ಅಸುರ ಬಲಿಚಕ್ರವರ್ತಿಯ ಪುರೋಹಿತ ಶುಕ್ರಾಚಾರ್ಯನು ವಟುರೂಪದಲ್ಲಿರುವ ವಾಮನರೂಪಿ ವಿಷ್ಣುವಿಗೆ ಅರ್ಘ್ಯ ನೀಡುತ್ತಿದ್ದಾನೆ. ಚೌಕಾಕಾರದ ಈ ದೃಶ್ಯ ಸಂಯೋಜನೆಯಲ್ಲಿ ಬಳಸದೆ ಉಳಿದ ಸ್ಥಳಾವಕಾಶ ತೀರ ಕಡಿಮೆಯಾದ್ದರಿಂದ ಹೆಚ್ಚು ವ್ಯಕ್ತಿ ಪಾತ್ರಗಳನ್ನು ತುಂಬಿರುವಂತೆ ಅನುಭವವಾಗುತ್ತದೆ. ನಾಟಕೀಯ ಭಾವ ಉತ್ಕೃಷ್ಟವಾಗಿದೆ.

ಈ ಗುಹಾಲಯದ ಜಂತಿಗಳ ಒಳ ಪಾರ್ಶ್ವದಲ್ಲಿರುವ ಕಥಾನಿರೂಪಕ ಶಿಲ್ಪಪಟ್ಟಿಕೆಗಳ ಬಗ್ಗೆ ಒಂದೆರಡು ವಿಷಯಗಳನ್ನು ಇಲ್ಲಿ ಹೇಳಬಹುದು. ಅನಂತಶಾಯಿ ವಿಷ್ಣುವಿನ ಪಕ್ಕದಲ್ಲಿ ಅವನ ಆಯುಧಗಳಾದ ಖಡ್ಗ (ನಂದಕ), ಗದೆ (ಕೌಮೋದಕಿ), ಶಂಖ (ಪಾಂಚಜನ್ಯ), ಚಕ್ರ (ಸುದರ್ಶನ) ಇವುಗಳನ್ನು ಮನುಷ್ಯಾಕಾರದಲ್ಲಿ ಅಂದರೆ ಆಯುಧಪುರುಷರ ರೂಪದಲ್ಲಿ ಮಧುಕೈಟಭ ರಾಕ್ಷಸರನ್ನೆದುರಿಸುತ್ತಿರುವಂತೆ ತೋರಿಸಿರುವುದು ಗಮನೀಯ. ಉಳಿದ ಪಟ್ಟಿಕೆಗಳಲ್ಲಿ ಸಮುದ್ರ ಮಥನ, ಭಾಗವತ ಇತ್ಯಾದಿ ಕಥಾನಕಗಳಿವೆ.

ಈ ವೈಷ್ಣವ ಗುಹಾಲಯದ ಶಿಲ್ಪಗಳು ಮೊದಲ ಗುಹಾಲಯಕ್ಕಿಂತ ಭಿನ್ನ ಶೈಲಿಯಲ್ಲಿರುವೆ. ಭಂಗಿಗಳ ಆಯ್ಕೆ ಮಕುಟ, ಆಭರಣ, ಪ್ರಭಾಮಂಡಲ, ವೇಷಭೂಷಣಗಳ ರಚನೆ, ಮುಖಭಾವ, ರೂಪಕರ್ಮ ಮುಂತಾದವುಗಳಲ್ಲಿ ಈ ವೈಶಿಷ್ಟ್ಯವನ್ನು ಗುರುತಿಸಬಹುದು. ಹಿರಿಯ ಶಿಲ್ಪಗಳಷ್ಟೇ ಅಲ್ಲದೆ ಅಧಿಕತರ ಕಿರುಶಿಲ್ಪಗಳು ಕೂಡ ಒಂದೇ ಶೈಲಿಗನುಗುಣವಾಗಿ ರಚಿತವಾಗಿರುವುದರಿಂದ, ಇಲ್ಲಿಯ ಹೆಚ್ಚಿನ ಹಿರಿಕಿರಿಯ ಶಿಲ್ಪಗಳೆಲ್ಲ ಒಂದೇ ಶಿಲೆಗೆ ಬದ್ಧವಾಗಿವೆ. ದ್ವಾರಪಾಲ ಶಿಲ್ಪಗಳಂತೂ ಉತ್ತರ ದಖನ್ನಿನ ಎಲ್ಲೋರ, ಎಲಿಫಂಟದ ಗುಹಾಲಯಗಳ ಶಿಲ್ಪಗಳನ್ನು ಶೈಲಿ, ಭಾವ, ಅಭಿವ್ಯಕ್ತಿಗಳಲ್ಲಿ ನೆನಪಿಸುತ್ತವೆ. ಇವನ್ನು ಮಾಡಿದವರು ಆ ಪ್ರದೇಶದಿಂದ ಬಂದ ಶಿಲ್ಪಿಗಳಾಗಿರಬೇಕು. ಇದಲ್ಲದೆ ಈ ಗುಹಾಲಯದ ಪರಿಸರದಲ್ಲಿ ಶಾಂತಿಮೂರ್ತಿ, ದುಟ್ಟೋಜ, ದೋಣ, ಗೊಟ್ಟಿಮೊರ್ಕ, ನಿದ್ದೆಗ, ಬುರು, ವಚ್ಚ, ಅಳಗೆರೆಯ, ಕೇಸವ, ದ್ವಿತ, ಭೀಮ, ದುರ್ವಿಟ ಇತ್ಯಾದಿ ಶಿಲ್ಪಿಗಳ ಹೆಸರುಗಳಿವೆ. ಇವೆಲ್ಲ ಕನ್ನಡ-ತೆಲುಗು ಲಿಪಿಯಲ್ಲಿವೆ. ವಚ್ಚನ ಹೆಸರನ್ನು ಒಮ್ಮೆ ಸಿದ್ಧಮಾತೃಕಾಲಿಪಿಯಲ್ಲಿಯೂ ಬರೆದಿದೆ. ಇದಲ್ಲದೆ ಭಾರತಚಂದ್ರ, ಶರಣಚಂದ್ರ, ಭಮಚಂದ್ರ, ಸಿವಪುತ್ರ, ಯಶದೇವ, ದೇವದಾಸ, ಗಂಗೋಸ್ವಾಮಿ, ಮಹಾರಾಟಿ ಮೊದಲಾದವರ ಹೆಸರುಗಳು ಸಿದ್ಧಮಾತೃಕಾ ಲಿಪಿಯಲ್ಲಿ ಗುಹಾಲಯದ ಪಕ್ಕದ ಬಿಲದ ಭಿತ್ತಿನಲ್ಲಿವೆ. ಹೀಗೆ ಶಿಲ್ಪಶೈಲಿ ಮತ್ತು ಸಿದ್ಧಮಾತೃಕಾ ಲಿಪಿಯ ಬಳಕೆ ಉತ್ತರ ದಖನ್ ಪ್ರದೇಶದ ಶಿಲ್ಪಿಗಳು ಇಲ್ಲಿ ಭಾಗವಹಿಸಿದ್ದನ್ನು ಪುಷ್ಟೀಕರಿಸುತ್ತವೆ.

ಮೂರನೆಯ ಗುಹಾಲಯದ ಅಧಿಷ್ಠಾನದ ಪೂರ್ವಪಾರ್ಶ್ವದ ಗೋಡೆಯಲ್ಲಿ ಅಷ್ಟಭುಜ ವಿಷ್ಣುವಿನ ಬೃಹತ್ ಶಿಲ್ಪವಿದೆ. ಸಮಪಾದದಲ್ಲಿರುವ ವಿಷ್ಣು ತನ್ನ ಬಲ ಕೈಗಳಲ್ಲಿ ಖಡ್ಗ, ಗದೆ, ಬಾಣ, ಚಕ್ರವನ್ನೂ, ಎಡಕೈಯಲ್ಲಿ ಶಂಖ, ಡಾಲು, ಬಿಲ್ಲನ್ನೂ ಧರಿಸಿ ಕಟ್ಯವಲಂಬಿತ ಹಸ್ತನಾಗಿದ್ದಾನೆ. ಕಿರೀಟಮಕುಟದ ಮೇಲೆ ನರಸಿಂಹನು ಚಕ್ರ, ಶಂಖಗಳನ್ನು ಧರಿಸಿ ಮುಂದಣ ಎರಡು ಕೈಗಳನ್ನು ಇರಿಸಿರುವಂತೆ ತೋರಿಸಲಾಗಿರುವುದು ವೈಶಿಷ್ಟ್ಯ. ಶಿರಶ್ಚಕ್ರವು ಬಿಚ್ಚಿದ ಬೀಸಣಿಗೆಯಂತಿದೆ. ಹುಬ್ಬುಗಳನ್ನು ಮತ್ತು ಗದ್ದವನ್ನು ಸ್ಫುಟವಾಗಿ ತೋರಿಸಿದೆ.

ಇದಕ್ಕೆ ಎದುರಾಗಿ, ಪಶ್ಚಿಮ ಪಾರ್ಶ್ವದ ಗೋಡೆಯಲ್ಲಿ ವಾಮನಾವತಾರ ಕಥಾನಿರೂಪಕ ಅದ್ಭುತ ಶಿಲ್ಪವಿದೆ. ತ್ರಿವಿಕ್ರಮನ ಎಡಪಕ್ಕದಲ್ಲೆ ವಟುರೂಪದ ವಾಮನ, ವಿಷ್ಣು, ಮಡದಿ ಸಮೇತನಾದ ಬಲಿಚಕ್ರವರ್ತಿಯಿಂದ ಪುರೋಹಿತ ಶುಕ್ರಾಚಾರ್ಯನ ಮೂಲಕ ದಾನ ಸ್ವೀಕರಿಸುತ್ತಿರುವ ದೃಶ್ಯವಿದೆ. ಶುಕ್ರಾಚಾರ್ಯನನ್ನು ಬುದ್ಧನಂತೆ ತೋರಿಸಿರುವುದು ಗಮನಾರ್ಹ. ಸಂಯೋಜನೆಯ ಕೇಂದ್ರವಸ್ತು ತ್ರಿವಿಕ್ರಮ ರೂಪ ತಾಳಿರುವ ಅಷ್ಟಭುಜ ವಿಷ್ಣು: ಖಡ್ಗ, ಗದೆ, ಬಾಣ, ಚಕ್ರ, ಶಂಖ, ಬಿಲ್ಲು, ಢಾಲು ಧರಿಸಿ, ಎಡಗೈಯನ್ನು ಮೇಲೆತ್ತಿರುವ ಎಡಗಾಲಿಗೆ ಸಮಾನಾಂತರವಾಗಿ ಹಿಡಿದು ಬೆರಳನ್ನು ಮುಖವಾಡದಂತಹ ರಾಹುವಿನ ಮುಖದೆಡೆಗೆ ತೋರಿಸುತ್ತಿದ್ದಾನೆ. ಸಿಲಿಂಡರಿನಾಕಾರದ ಕಿರೀಟವನ್ನು ಆಕರ್ಷಕವಾಗಿ ಅಲಂಕರಿಸಿದೆಯಲ್ಲದೆ ಶಿರಶ್ಚಕ್ರವನ್ನು ಬಿಚ್ಚಿದ ಬೀಸಣಿಗೆಯಂತೆ ತೋರಿಸಿದೆ. ಹುಬ್ಬು, ಕಣ್ಣೆವೆಗಳು, ಗದ್ದ, ಆಭರಣಾದಿಗಳು ಸ್ಫುಟವಾಗಿವೆ. ಬಲಿಯ ಮಗ ನಮುಚಿ ಬಲಪಕ್ಕದಲ್ಲಿ ತ್ರಿವಿಕ್ರಮನ ಕಾಲನ್ನು ಹಿಡಿದು ಅವನನ್ನು ತಡೆಯುವ ವ್ಯರ್ಥ ಪ್ರಯತ್ನದಲ್ಲಿದ್ದಾನೆ. ಮೇಲ್ಗಡೆ ಜಾಂಬವನ್, ಗರುಡ ಹಾಗೂ ಚಂದ್ರರನ್ನು ಪತಾಕಹಸ್ತದಲ್ಲಿ ಕೈಯೆತ್ತಿ ಹಾರುತ್ತಿರುವಂತೆ ತೋರಿಸಿದೆ. ಈ ಶಿಲ್ಪ ಸಂಯೋಜನೆ ನಾಟಕೀಯ ಸನ್ನಿವೇಶವನ್ನು ಅದ್ಭುತಾಶ್ಚರ್ಯ ರೀತಿಯಲ್ಲಿ ಮೂರ್ತಗೊಳಿಸು ವಲ್ಲಿ ಯಶಸ್ವಿಯಾಗಿದೆ.

ಮುಖಮಂಟಪದ ಪೂರ್ವ ಗೋಡೆಯಲ್ಲಿರುವ ಅನಂತಾಸೀನ ವಿಷ್ಣು ಶಿಲ್ಪ ಸಂಗೀತ, ನೃತ್ಯಗಳಲ್ಲಿ ತಲ್ಲೀನನಾಗಿರುವ ಗಣಗಳ ಪಟ್ಟಿಕೆಯ ಮೇಲಿದೆ. ಸುಖಾಸೀನನಾಗಿ ಐದು ಹೆಡೆಗಳ ಸರ್ಪದ ಮೇಲೆ ಕುಳಿತಿರುವ ಚತುರ್ಭುಜ ವಿಷ್ಣು, ಬಲಗೈಯಲ್ಲಿ ಫಲವನ್ನು ಹಿಡಿದು, ಎಡಗೈಯನ್ನು ತೊಡೆಯಮೇಲಿರಿಸಿದ್ದಾನೆ. ಮೇಲಣ ಕೈಗಳು ಚಕ್ರ ಮತ್ತು ಶಂಖ ಧರಿಸಿವೆ. ತಲೆಯ ಹಿಂದೆ ಸರಳವಾದ, ದೀರ್ಘವೃತ್ತಾಕೃತಿಯ ಪ್ರಭಾಮಂಡಲ ವಿದೆ. ಕಣ್ಣುಹುಬ್ಬುಗಳನ್ನು ತೋರಿಸಿದೆ. ಇವನ ಅಕ್ಕಪಕ್ಕದಲ್ಲಿ ನಾಗಕನ್ನಿಕೆಯರು ನಿಂತಿದ್ದಾರೆ. ಸರ್ಪಾಸನದ ಬಲಪಾರ್ಶ್ವದಲ್ಲಿ ಗರುಡನು ಕೈಕಟ್ಟಿಕೊಂಡು ತನ್ನ ಸ್ವಾಮಿಯ ಆದೇಶಕ್ಕಾಗಿ ಕಾಯ್ದು ಕುಳಿತಿದ್ದಾನೆ. ಎಡಪಾರ್ಶ್ವದಲ್ಲಿ ಸ್ತ್ರೀಯೊಬ್ಬಳು ಆತುಕೊಂಡು ಕುಳಿತಿದ್ದಾಳೆ. ವೇಷಭೂಷಣಗಳ ಕೂಲಂಕಷ ವಿವರಗಳುಳ್ಳ ಈ ಶಿಲ್ಪ ಪ್ರಮಾಣಬದ್ಧತೆ, ದೈವೀ ವ್ಯಕ್ತಿತ್ವ, ನಿರೂಪಣೆ, ಗಾಂಭೀರ್ಯಾಭಿವ್ಯಕ್ತಿ ಸಂಯೋಜನಾಚಾತುರ್ಯ, ರೂಪಕರ್ಮ ಮುಂತಾದವುಗಳಿಂದ ಮನಸೆಳೆಯುವ ಅದ್ಭುತ ಕೃತಿ. ಉಬ್ಬು ಶಿಲ್ಪವಾಗಿದ್ದರೂ ದುಂಡುಶಿಲ್ಪದ ಅಭಾಸ ನೀಡಬಲ್ಲ ಸಾಮರ್ಥ್ಯ ಈ ಶಿಲ್ಪಕ್ಕಿದೆ.

ಇದರ ಪಕ್ಕದಲ್ಲಿ ಗಣಗಳ ಪಟ್ಟಿಕೆಯ ಮೇಲ್ಗಡೆ, ಬೃಹದಾಕಾರದ ಭೂವರಾಹ ಉಬ್ಬುಶಿಲ್ಪವಿದೆ. ಸಾಗರದಾಳವನ್ನು ಸೂಚಿಸುವ ಸರ್ಪದ ದೇಹದ ಸುರುಳಿಯ ಮೇಲೆ ಎಡ ಕಾಲಿರಿಸಿ ನಿಂತಿರುವ ಭೂವರಾಹನು ಚತುರ್ಭುಜನಾಗಿದ್ದಾನೆ. ಬಲಗೈ ಕಟ್ಯವಲಂಬಿತ ವಾಗಿದೆ. ಎಡಗೈ ಪದ್ಮದ ಮೇಲೆ ನಿಂತಿರುವ ಭೂದೇವಿಗೆ ಆಧಾರವೊದಗಿಸಿದೆ. ಪೃಥ್ವಿವಲ್ಲಭರಾದ ಚಲುಕ್ಯರ ರಾಜಲಾಂಛನವೆನಿಸಿರುವ ವರಾಹನಿಗೆ ರಾಜಪ್ರತಿಷ್ಠೆಯ ನಿರ್ಮಿತಿಯೆನಿಸುವ

ಈ ಗುಹಾಲಯದಲ್ಲಿ ಮಹದಾಕಾರದ ಸ್ಥಾನ ಔಚಿತ್ಯಪೂರ್ಣವಾಗಿದೆ. ಮುಖಮಂಟಪದ ಪಶ್ಚಿಮ ಗೋಡೆಯಲ್ಲಿ ಅಪರೂಪದ ಭಂಗಿಯಲ್ಲಿರುವ ಚತುರ್ಭುಜ ಸ್ಥಾನಕ ನರಸಿಂಹ ವಿಗ್ರಹವಿದೆ. ನರಸಿಂಹನ ಮುಖ್ಯ ಬಲಗೈ ಕಟಕಮುದ್ರೆಯಲ್ಲಿದೆ; ಎಡಗೈ ಗದೆಯ ಮೇಲಿದೆ. ಮೇಲಣ ಕೈಗಳಲ್ಲಿ ಆಯುಧ ಪುರುಷರು ಸುದರ್ಶನ ಮತ್ತು ಪಾಂಚಜನ್ಯ ಶಂಖ ಇದ್ದಾರೆ. ಸಿಂಹಮುಖದ ಶಿರೋಭಾಗದಲ್ಲಿ ಅರಳಿದ ಪದ್ಮವಿದೆ. ನರಸಿಂಹನ ಬಲ ಪಾರ್ಶ್ವದಲ್ಲಿ ಕುಬ್ಜಾಕಾರದ ಪ್ರಹ್ಲಾದನಿದ್ದಾನೆ. ಅಸುರನೆಂದು ಸೂಚಿಸಲು ಇವನ ಕೂದಲುಗಳನ್ನು ಗುಂಗುರು ಗುಂಗುರಾಗಿ ತೋರಿಸಿದೆ. ಎಡಪಾರ್ಶ್ವದಲ್ಲಿ ಗದೆಯ ಪಕ್ಕದಲ್ಲಿ, ಕಟ್ಯವಲಂಬಿತನಾಗಿ ಗರುಡ ನಿಂತಿದ್ದಾನೆ. ಮೇಲ್ಗಡೆ ಮಾಲಾವಾಹಕರಾಗಿ ಎರಡು ಜೋಡಿ ವಿದ್ಯಾಧರ ದಂಪತಿಗಳು ತೇಲುತ್ತಿದ್ದಾರೆ.

ಇದರ ಪಕ್ಕದಲ್ಲಿ ಹರಿಹರ ಶಿಲ್ಪವಿದೆ. ಬಲಗೈಗಳಲ್ಲಿ ಫಲ, ಪರಶು ಹಾಗೂ ಎಡಗೈಗಳಲ್ಲಿ ಶಂಖ ಮತ್ತು ಕಟ್ಯವಲಂಬಿತ ಹಸ್ತವಿರುವ ಈ ದೇವತೆಯ ಮಕುಟ ಎತ್ತರವಾಗಿದೆ; ತಲೆಯ ಹಿಂದಿರುವ ಶಿರಶ್ಚಕ್ರ ಬಿಚ್ಚಿದ ಬೀಸಣಿಕೆಯಂತಿದೆ. ಕಣ್ಣ ಹುಬ್ಬನ್ನು ಸ್ಪಷ್ಟವಾಗಿ ಸೂಚಿಸಿದ್ದರೂ ಕಣ್ಣೆವೆಗಳನ್ನು ಏರಿಳಿತಗಳ ಮೂಲಕ ಮಾತ್ರ ತೋರಿಸಿದ್ದಾರೆ. ತುಟಿ, ಗದ್ದ ಸ್ಪಷ್ಟವಾಗಿವೆ. ಇತರ ಶಿಲ್ಪಗಳಲ್ಲಿರುವಂತೆ ವಿವಿಧ ಆಭರಣಗಳು ಅವನ ದೇಹವನ್ನು ಅಲಂಕರಿಸಿವೆ.

ಮೇಲೆ ವರ್ಣಿಸಿರುವ ಶಿಲ್ಪಗಳಲ್ಲಿ ಅನಂತಾಸೀನ ವಿಷ್ಣು ಮತ್ತು ವರಾಹ ವಿಗ್ರಹಗಳು ಮಾತ್ರ ಮೂಲ ವಿಗ್ರಹಗ ಳೆಂದೂ ಉಳಿದವುಗಳು ತದನಂತರ ಪಲ್ಲವ ನರಸಿಂಹವರ್ಮನು ಬಾದಾಮಿ ಯನ್ನಾಕ್ರಮಿಸಿದ್ದಾಗ ರೂಪಿತವಾಗಿವೆ ಯೆಂದೂ ಕೆಲವರು ಅಭಿಪ್ರಾಯಪಟ್ಟಿ ದ್ದಾರೆ. ಈ ಶಿಲ್ಪಗಳಿಗೆ ವಿಜಯನಗರ ಕಾಲದಲ್ಲಿ ತುಸು ಸಂಸ್ಕಾರ ನೀಡಲಾಗಿದೆ.

ಮೂರನೆಯ ಗುಹಾಲಯದಲ್ಲಿ ಮನಸೂರೆಗೊಳ್ಳುವ ಇತರ ಶಿಲ್ಪಗ ಳೆಂದರೆ ಕಂಬಗಳನ್ನ ಲಂಕರಿಸಿರುವ ಬೋದಿಗೆ ವಿಗ್ರಹಗಳು. ಎತ್ತರದಲ್ಲಿರುವು ದರಿಂದ ಇವು ಹಾಳಾಗದೆ ಉಳಿದು ಬಂದಿವೆ. ತುಸು ಎತ್ತರವಾದ ನೀಳ ಮೈಕಟ್ಟಿನ ವ್ಯಕ್ತಿಗಳು ಇಲ್ಲಿ ಕಂಡುಬರು ತ್ತಿವೆ. ಸಾಮಾನ್ಯ ವಾಗಿ ಕಂಬಗಳ ಪೂರ್ವ, ಪಶ್ಚಿಮ ಪಾರ್ಶ್ವಗಳಲ್ಲಿ ಮಿಥುನಗಳು, ದಕ್ಷಿಣ ಪಾರ್ಶ್ವದಲ್ಲಿ ಪ್ರಿಯಕರನಿಗಾಗಿ ಹಾತೊರೆಯುತ್ತ ನಿಂತಿರುವ ನಾಯಿಕೆಯರು ರೂಪಿತರಾಗಿದ್ದಾರೆ. ಇವುಗಳಲ್ಲಿ ನಾಗ–ನಾಗಿಣೀ ದಂಪತಿ, ಕಾಪಾಲೀ ಶಿವ ಮತ್ತು ಪಾರ್ವತಿ, ಅರ್ಧನಾರೀ, ಕಾಮ–ರತಿ, ಶಿವ–ಪಾರ್ವತಿ, ದರ್ಪಣಸುಂದರಿ, ಪ್ರಿಯಕರನಿಗೆ ಪತ್ರ ಬರೆಯಲು ಉದ್ಯುಕ್ತಳಾಗುತ್ತಿರುವ ಅಥವಾ ಬರೆದು ಮುಗಿಸಿರುವ ನಾಯಿಕೆ, ಕಾಮಸೂತ್ರದ ಸನ್ನಿವೇಶಗಳನ್ನು ಉದಾಹರಿಸುವ ಮಿಥುನಗಳು ಮನೋಹರವಾಗಿವೆ. ಇವೆಲ್ಲವುಗಳು ವಿವಿಧ ವೃಕ್ಷಗಳ ಹಿನ್ನೆಲೆಯಲ್ಲಿ ಪ್ರತೀಹಾರ–ಪ್ರತೀಹಾರಿಯರೊಂದಿಗೆ ಚಿತ್ರಿತವಾಗಿವೆ.

ಕಪೋತದಲ್ಲಿರುವ ಗರ್ಭಗೃಹಕ್ಕೆ ಮುಖ ಮಾಡಿ ಹಾರುತ್ತಿರುವ ಗರುಡನ ಬೃಹತ್ ಶಿಲ್ಪ ಇಲ್ಲಿಯ ಇನ್ನೊಂದು ಅದ್ಭುತ ಕೃತಿ. ಹುಬ್ಬುಗಳನ್ನೇರಿಸಿ ಕಣ್ಣುಗಳನ್ನು ತೆರೆದು ಕುಬ್ಜ ಮೈಕಟ್ಟಿನೊಂದಿಗೆ ಬಲಗೈಯಲ್ಲಿ ಹಾವನ್ನು ಹಿಡಿದು ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿರುವ ಗರುಡನ ಇಬ್ಬದಿಗಳಲ್ಲಿ ಖಡ್ಗ–ಢಾಲು ಹಿಡಿದು ಕಂಠಾಶ್ಲೇಷ ರೀತಿಯಲ್ಲಿ ಹಾರುತ್ತಿರುವ ವಿದ್ಯಾಧರ ದಂಪತಿಗಳಿದ್ದಾರೆ. ಇದು ನೆಲವರ್ಕೆ ಎಂಬ ಶಿಲ್ಪಿಯ ಕೃತಿ. ಕಪೋತದ ಒಳಮುಖದುದ್ದಕ್ಕೂ ವರ್ಣಚಿತ್ರಗಳಿದ್ದವು. ಈಗ ಹಾಳಾಗಿವೆ.

ಮುಖಮಂಟಪದ ತೊಲೆಗಳ ಒಳಪಾರ್ಶ್ವಗಳುದ್ದಕ್ಕೂ ಮಹಾಭಾರತ, ಹರಿವಂಶ, ವಿಷ್ಣುಪುರಾಣಗಳಿಂದ ಆಯ್ದ ಪೌರಾಣಿಕ ಕಥಾನಿರೂಪಕ ಶಿಲ್ಪಪಟ್ಟಿಕೆಗಳಿವೆ. ಸಮುದ್ರ ಮಥನದ, ಪಾರಿಜಾತಾಹರಣ, ಗಜಲಕ್ಷ್ಮಿ ಹಾಗೂ ಹಿರಣ್ಯಕಶಿಪು ವಧೆ, ಕೃಷ್ಣಚರಿತ ಇತ್ಯಾದಿ ದೃಶ್ಯಗಳಿವೆ.

ಒಂದು ಮತ್ತು ಎರಡನೆಯ ಗುಹಾಲಯಗಳಲ್ಲಿ ವಿಭಿನ್ನ ಶಿಲ್ಪಪರಂಪರೆಯಲ್ಲಿ ತರಬೇತಾಗಿದ್ದ ಶಿಲ್ಪಿಗಳೇ ಮೂರನೆಯ ಗುಹಾಲಯದಲ್ಲಿ ಸಮಪ್ರಾಣದಲ್ಲಿ ಕಾರ್ಯಪ್ರವೃತ್ತ ರಾಗಿದ್ದರೆಂದು ಅನಿಸುತ್ತದೆ. ಅನಂತಾಸೀನ ವಿಷ್ಣು ಮತ್ತು ವರಾಹ ಶಿಲ್ಪಗಳ ರೂಪಕರ್ಮ ವಿವರಗಳು ಎರಡನೆಯ ಗುಹಾಲಯದ ಶಿಲ್ಪಪರಂಪರೆಯ ಮುಂದುವರಿಕೆಯ ಸೂಚನೆ ಗಳನ್ನೊಳಗೊಂಡಿವೆ. ಅಷ್ಟಭುಜ ವಿಷ್ಣು, ಹರಿಹರ ಮತ್ತು ತ್ರಿವಿಕ್ರಮ ಶಿಲ್ಪಗಳು ಮೊದಲ ಗುಹಾಲಯದ ಶಿವ–ದ್ವಾರಪಾಲನ ಶಿಲ್ಪ ರೀತಿಯನ್ನು ನೆನಪಿಸುತ್ತವೆ. ಅನಂತಾಸೀನ ವಿಷ್ಣು, ವರಾಹ, ಅಷ್ಟಭುಜ ವಿಷ್ಣು, ತ್ರಿವಿಕ್ರಮ, ನರಸಿಂಹ ಶಿಲ್ಪಗಳಲ್ಲಿ ಮೂಲ ವಿಗ್ರಹಗಳ ಮುಖಗಳಿಗೆ ವಿಜಯನಗರ ಕಾಲದಲ್ಲಿ ಸಂಸ್ಕಾರನೀಡಿರುವುದು ಸ್ಪಷ್ಟವಿದೆ. ಈ ಗುಹಾಲಯದ ಶಿಲ್ಪಗಳ ಕೆತ್ತನೆ ಆಳವಾಗಿರುವುದರಿಂದ ಈ ಶಿಲ್ಪಗಳು ಉಬ್ಬುಶಿಲ್ಪಗಳಾಗಿದ್ದರೂ ದುಂಡು ಶಿಲ್ಪಗಳಂತೆ ಕಾಣುತ್ತವೆ.

ಈ ಗುಹಾಲಯಕ್ಕೆ ಸಂಬಂಧಿಸಿದಂತೆ ಕೆಲವು ಶಿಲ್ಪಿಗಳ ಹೆಸರುಗಳಿವೆ. ಕಪೋತ ದಲ್ಲಿಯ ಗರುಡನ ಉಬ್ಬುಶಿಲ್ಪ ನೆಲವರ್ಕೆಯ ಶ್ರೇಷ್ಠ ಕೃತಿ. ಕೊಣ್ಣಿಮಜ್ಜಿ, ವಸುದೇವ, ಶಕುಲ ಅಯ್ಯ, ಪಜ್ಜಿಣ, ಚೋಳ ದೇವರೆಯ ಕಲ್ಕುಟ್ಟಿಗ, ಗುಣಪಾಲ, ಅಜ, ಆಚಾರಸಿದ್ಧಿ, ರೂಪಶೇಖರ, ಅರ್ಯ್ಯಚಟ್ಟ, ಕೋಳಿಮಜ್ಜಿ, ಪಲಮಜ್ಜಿ, ವಿಮಲ, ದೋಣ, ಕೊಟ್ಟಲ, ಕಾನ್ತಿಮಜ್ಜಿ, ಸಾಮಿಚನ್ದ, ಬಿಜಯ ಓವಜ ಮೊದಲಾದವರಲ್ಲದೆ ನಾಲ್ಕನೆಯ ಗುಹಾಲಯ ದಲ್ಲಿಯೂ ಕೆಲಸ ಮಾಡಿರಬಹುದಾದ ಇನ್ನಿತರರು ಪ್ರಮುಖರಾಗಿದ್ದರೆ, ಅವಮೂರ್ಧ್ನ (ಶಂಕು) ಲಿಪಿಯಲ್ಲಿ ಬರೆದಿರುವ ಕೆಲವು ಹೆಸರುಗಳಿವೆಯಾದರೂ ಇವುಗಳನ್ನು ಓದುವುದಾಗಿಲ್ಲ. ವಿಪ್ರಮನೋಹರ ಎಂಬಾತನು ಈ ಗುಹೆಯ ಕೆಲವು ವರ್ಣಚಿತ್ರಗಳನ್ನು ರಚಿಸಿದಾತ; ಬಣ್ಣದಿಂದ ಬರೆದಿರುವ ಈತನ ಹೆಸರು ಕಪೋತದಲ್ಲಿ ಕಾಣಸಿಗುತ್ತದೆ.

ನಾಲ್ಕನೆಯ ಜೈನಗುಹೆಯಲ್ಲಿರುವ ಶಿಲ್ಪಗಳಲ್ಲಿ ಬಾದಾಮಿ ಚಳುಕ್ಯರ ಕಾಲಕ್ಕೆ ಅನ್ವಯಿಸಬಹುದಾದವುಗಳು ಮೂರು ಮಾತ್ರ: ಗರ್ಭಗೃಹದಲ್ಲಿರುವ ಜಿನ; ಮುಖಮಂಟಪ ದಲ್ಲಿರುವ ಪಾರ್ಶ್ವನಾಥ ಹಾಗೂ ಬಾಹುಬಲಿ: ಗರ್ಭಗೃಹದ ಹಿಂಗೋಡೆಯಲ್ಲಿ ಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜಿನನ ಕೈಗಳು ಧ್ಯಾನಮುದ್ರೆಯಲ್ಲಿವೆ. ತಲೆಯ ಹಿಂದೆ ಪ್ರಭಾಮಂಡಲವಿದೆ. ಮೇಲ್ಗಡೆ ಮುಕ್ಕೊಡೆ ಹಾಗೂ ಅಶೋಕವೃಕ್ಷದ ಹಿನ್ನೆಲೆಯಿದೆ. ಇದು ಮಹಾವೀರನು ಸಮವಸರಣ ಮಂಟಪದಲ್ಲಿ ದಿವ್ಯಧ್ವನಿಯಿಂದ ಪ್ರಥಮೋಪದೇಶ ನೀಡುವ ಸಂದರ್ಭವಾಗಿದೆ.

ಮುಖಮಂಟಪದ ಪೂರ್ವಗೋಡೆಯಲ್ಲಿ ಬಾಹುಬಲಿ (ಗೊಮ್ಮಟ) ಕಾಯೋತ್ಸರ್ಗ ಮುದ್ರೆಯಲ್ಲಿ ಕಾಯೋತ್ಸರ್ಗದಲ್ಲಿ ನಿಂತಿದ್ದಾನೆ. ಅವನ ಕೂದಲುಗಳು ಜಡೆಗಟ್ಟಿವೆ. ಕೈಕಾಲುಗಳಿಗೆ ಮಾಧವೀಲತೆಗಳು ಸುತ್ತಿಕೊಂಡಿವೆ. ಕಾಲ ಹತ್ತಿರ ಬೆಳೆದಿರುವ ಹುತ್ತಗಳಿಂದ ನಾಗರಹಾವುಗಳು ಹೊರಬಂದಿದೆ. ವಿದ್ಯಾಧರಿಯರು ಅವನ ಕೈಕಾಲುಗಳಿಗೆ ಸುತ್ತಿಕೊಂಡಿ ರುವ ಮಾಧವೀಲತೆಗಳನ್ನು ಬಿಡಿಸುತ್ತ ನಿಂತಿದ್ದಾರೆ.

ಪಶ್ಚಿಮ ಗೋಡೆಯಲ್ಲಿರುವ ಕಮಠೋಪಸರ್ಗ ದೃಶ್ಯದಲ್ಲಿ ಪಾರ್ಶ್ವನಾಥನು ಐದು ಹೆಡೆಯ ಹಾವಿನ (ಧರಣೇಂದ್ರ ಯಕ್ಷನ) ಕೆಳಗೆ ಕಾಯೋತ್ಸರ್ಗದಲ್ಲಿ ನಿಂತಿದ್ದಾನೆ. ಅವನ ಬಲ ಮತ್ತು ಎಡ ಪಾರ್ಶ್ವಗಳಲ್ಲಿ ಅಪೂರ್ಣ ಶಿಲ್ಪಗಳಿವೆ. ಬಲಪಕ್ಕದಲ್ಲಿರುವ ಪದ್ಮಾವತಿ ಯಕ್ಷಿ ಪಾರ್ಶ್ವನಾಥನ ಮೇಲಿನ ಹಾವಿನ ಹೆಡೆಗಳ ಮೇಲೆ ಬರುವಂತೆ ವಜ್ರಕೊಡೆ ಹಿಡಿದಿದ್ದಾಳೆ. ಮೇಲ್ಗಡೆ ಪಾರ್ಶ್ವನಾಥನ ಜನ್ಮಜನ್ಮಾಂತರಗಳ ವೈರಿಯಾಗಿದ್ದ ಉಗ್ರಮುಖದ ಕಮಠನು ಎರಡೂ ಕೈಗಳಿಂದ ಬಂಡೆಯನ್ನು ಎಸೆಯಲು ಪ್ರಯತ್ನಿಸುತ್ತಿರುವಂತಿದೆ. ಕೆಳಗಡೆ ಸೋತ ಕಮಠನು ಬಲಗೈಯನ್ನು ವಿಸ್ಮಯಮುದ್ರೆಯಲ್ಲಿ ಎತ್ತಿ ಕುಳಿತಿದ್ದಾನೆ.

ಇಲ್ಲಿರುವ ಕೆಲವೇ ಶಿಲ್ಪಗಳು ಮೂರನೆಯ ಗುಹಾಲಯದ ಶಿಲ್ಪ ಪರಂಪರೆಯನ್ನು ನೆನಪಿಸುತ್ತವೆ. ಗುಹಾಲಯದ ಪರಿಸರದಲ್ಲಿ ಅನೇಕ ಶಿಲ್ಪಿಗಳ ಹೆಸರುಗಳಿವೆ ಕಾನ್ತಿಮಜ್ಜಿ, ಕಣ್ಣು, ಪೆಲಮಜ್ಜಿ, ಸಿಗಮಜ್ಜಿ, ಹರಿಕೆ, ಭವಸ್ವಾಮಿ ಆರ್ಯ್ಯ, ಉದಗ್ರ, ಕೇಸವ, ಪಜ್ಜಿಣ, ವಿಜಾಮ್ಮ, ಪ್ರಸನ್ನ ಬುದ್ಧಿ, ಆರಿಕ್ಕೆ, ಭಾದುಕ್ಕೆ, ಸಿರಿಗೆರೆಯ, ಕೋಳಿಮಜ್ಜಿ, ಕದ್ರೆಸ್ವಾಮಿ, ಮಾರ್ಗಜ, ಶ್ರೀನಿಧಿದೇವ, ಅನತ್ತಮಜ್ಜಿ ಮುಂತಾದವು ಉಲ್ಲೇಖಾರ್ಹ.

ಸಭಾಮಂಟಪದಲ್ಲಿರುವ ಶಿಲ್ಪಗಳು ವಿಶಿಷ್ಟ ಪ್ರತಿಮಾಲಕ್ಷಣಗಳಿಂದೊಡಗೂಡಿ ಆಕರ್ಷಕವಾಗಿವೆ. ವಾಯವ್ಯ ಬದಿಯಲ್ಲಿರುವ ಅರ್ಧನಾರೀಶ್ವರ ಬಲಗೈಯಲ್ಲಿ ಎತ್ತರವಾದ ತ್ರಿಶೂಲ, ಎಡಗೈಯಲ್ಲಿ ಕುರುಳನ್ನು ಸ್ತ್ರೀ ಸಹಜ ಲಾವಣ್ಯದಿಂದ ಹಿಡಿದಿದ್ದಾನೆ. ವೇಷಭೂಷಣ ಹಾಗೂ ದೇಹ ವಿವರಗಳಲ್ಲಿ ಶಿವ ಮತ್ತು ಪಾರ್ವತಿ ಭಾಗಗಳ ಅಂತರವನ್ನು ಸೂಚಿಸಲಾಗಿದೆ. ತ್ರಿಶೂಲದ ಕೆಳಗಡೆ ಶಿವಗಣನನ್ನು ಹಾಗೂ ನಾರೀ ಭಾಗದ ಕೆಳಗಡೆ ಸಿಂಹವನ್ನು ಚಿತ್ರಿಸಿದೆ. ಮಕುಟವು ಎತ್ತರವಾಗಿದ್ದು, ಶಿರದ ಹಿಂಗಡೆ ಬಿಚ್ಚಿದ ಬೀಸಣಿಕೆಯಂತಹ ಶಿರಶ್ಚಕ್ರವಿದೆ. ಮೈಮಾಟ ಮುಖಭಾವ ಮತ್ತು ಭಂಗಿ ಆಕರ್ಷಕವಾಗಿವೆ.

ಆಗ್ನೇಯ ಬದಿಯ ದ್ವಾರಪಾಲನ ಪಕ್ಕದಲ್ಲಿ ಹರಿಹರನ ಶಿಲ್ಪವಿದೆ. ಸಮಪಾದನಾಗಿ ನಿಂತಿರುವ ಈತನ ಬಲಗೈಗಳಲ್ಲಿ ರುದ್ರಾಕ್ಷಿಮಾಲೆ ಹಾಗೂ ಸರ್ಪ ಇವೆ; ಎಡ ಕೈಗಳಲ್ಲಿ ಮೇಲಿನದು ಶಂಖವನ್ನು ಧರಿಸಿದ್ದು, ಕೆಳಗಿನದನ್ನು ಕಟ್ಯವಲಂಬಿತ ರೀತಿಯಲ್ಲಿದ್ದಾನೆ.

ಈ ಶಿಲ್ಪಕ್ಕೆ ಎದುರಾಗಿ ನೈರುತ್ಯ ಬದಿಯಲ್ಲಿ ಗಂಗಾಧರ ಶಿವನ ಅಪರೂಪದ ಶಿಲ್ಪವಿದೆ. ಚತುರ್ಭುಜವಾಗಿ ಸಮಪಾದದಲ್ಲಿ ನಿಂತಿರುವ ಶಿವನ ಮುಖ್ಯ ಬಲಗೈ ಕಟಕಹಸ್ತದಲ್ಲಿದೆ; ಎಡಗೈ ಕಟ್ಯವಲಂಬಿತವಾಗಿದೆ. ಉಳಿದೆರಡು ಮೇಲಣ ಕೈಗಳಿಂದ ಆತ ಗಂಗೆಯನ್ನು ಧರಿಸುವುದಕ್ಕಾಗಿ ಜಟೆಗಳನ್ನು ಬಿಡಿಸಿ ಹಿಡಿದಿದ್ದಾನೆ. ಮೇಲ್ಗಡೆ ಗಂಗೆ ಸ್ತ್ರೀರೂಪದಲ್ಲಿ, ತ್ರಿಪಥಗಾಮಿನಿಯಾಗಿ ಕೈಮುಗಿದು ಇಳಿದುಬರುತ್ತಿದ್ದಾಳೆ. ಶಿವನ ಬಲಪಾರ್ಶ್ವದಲ್ಲಿ ಕೈಗಳನ್ನು ಮೇಲಕ್ಕೆ ಎತ್ತಿ ಒಂಟಿಗಾಲ ಮೇಲೆ ತಪಸ್ಸು ಮಾಡುತ್ತಿರುವ ಭಗೀರಥನಿದ್ದಾನೆ. ಎಡಪಾರ್ಶ್ವದಲ್ಲಿ ಪಾರ್ವತಿ ಬಲಗೈಯನ್ನು ಗದ್ದದ ಮೇಲೆ ಇರಿಸಿ ಆಶ್ಚರ್ಯ ಸೂಚಿಸುತ್ತಿದ್ದಾಳೆ.

ಸಭಾಮಂಟಪದ ಉತ್ತರ ಪಾರ್ಶ್ವದಲ್ಲಿರುವ ನಟರಾಜ ಮಂಟಪದಲ್ಲಿ ದಶಭುಜ ನಟರಾಜ ಶಿವ ಸಮಚತುರ ಸ್ಥಿತಿಯಲ್ಲಿ ಸಪ್ತಮಾತೃಕೆಯರೊಂದಿಗೆ ನೃತ್ಯದಲ್ಲಿ ತೊಡಗಿದ್ದಾನೆ. ಮೇಲಣ ಎರಡು ಕೈಗಳು ಸರ್ಪವನ್ನು ಎತ್ತಿ ಬಿಡಿಸಿ ಹಿಡಿದಿವೆ. ಬಲಗೈಗಳಲ್ಲಿ ಒಂದು ಪರಶು ಹಾಗೂ ಇನ್ನೊಂದು ಡಮರುಗ ಧರಿಸಿವೆ. ಉಳಿದ ಕೈಗಳು ವಿವಿಧ ನಾಟ್ಯಮುದ್ರೆಗಳಲ್ಲಿವೆ. ಶಿವನ ಬಲಬದಿಗೆ ಕುಳ್ಳ ಬಾಲ ಗಣೇಶ ಮೂಲಕನ್ದ ಹಾಗೂ ಮೋದಕ ಪಾತ್ರೆ ಹಿಡಿದು ನಿಂತಿದ್ದಾನೆ; ಎಡಗಡೆ ಕುಮಾರನಿದ್ದಾನೆ. ಶಿವನ ಎಡಪಕ್ಕದಲ್ಲಿ ಪಾರ್ವತಿ ವಿಶಿಷ್ಟ ತ್ರಿಭಂಗಿಯಲ್ಲಿದ್ದು, ಬಲಗೈಯನ್ನು ಭುಜದ ಹತ್ತಿರ ಇರಿಸಿ ಎಡಗೈಯನ್ನು

ಲೋಲಹಸ್ತದಲ್ಲಿ ಇಳಿಬಿಟ್ಟಿದ್ದಾಳೆ. ನರ್ತಿಸುತ್ತಿರುವ ಸಪ್ತಮಾತೃಕೆಯರಲ್ಲಿ ಕೆಲವರು ಕಾಲಮಂಡಿಯವರೆಗೆ, ಇನ್ನು ಕೆಲವರು ಪಾದದವರೆಗೆ ವಸ್ತ್ರ ತೊಟ್ಟಿದ್ದು ಎತ್ತರವಾದ ಮಕುಟ ಮತ್ತು ಬೀಸಣಿಕೆಯಾಕಾರದ ಶಿರಶ್ಚಕ್ರ ಧರಿಸಿದ್ದಾರೆ.

ಅಂತರಾಳದ ಉತ್ತರ ಗೋಡೆಯಲ್ಲಿ ಭೂವರಾಹನ ಶಿಲ್ಪವಿದೆ. ವರಾಹನು ಎಡಗೈಯನ್ನು ಮಡಿಚಿ ಎತ್ತಿದ್ದು ಅದರ ಮೇಲ್ಗಡೆ ಭೂದೇವಿ ಎರಡು ಕಾಲುಗಳನ್ನು ಇಳಿಬಿಟ್ಟು ಕುಳಿತಿದ್ದಾಳೆ. ವರಾಹನ ಇನ್ನೊಂದು ಎಡಗೈ ಅವಳ ಕಾಲುಗಳಿಗೆ ಆಧಾರವೊದಗಿಸಿದೆ. ಸಂಯೋಜನೆ ಮತ್ತು ವಿವರಗಳಲ್ಲಿ ಈ ಶಿಲ್ಪ ಬಾದಾಮಿಯ ವರಾಹ ಶಿಲ್ಪಗಳಿಗಿಂತ ಭಿನ್ನವಾದುದು.

ಈ ಶಿಲ್ಪಕ್ಕೆ ಎದುರಾಗಿ ಅಂತರಾಳದ ದಕ್ಷಿಣ ಗೋಡೆಯಲ್ಲಿ ದುರ್ಗಾಭಗವತಿ ಶಿಲ್ಪವಿದೆ. ಅಷ್ಟಭುಜಳಾಗಿ ಶಿಲ್ಪಿತಳಾಗಿರುವ ದೇವಿ ಪೂರ್ಣ ಪ್ರಾಣಿರೂಪದ ಮಹಿಷದ ಮೋರೆಯನ್ನು ಎಡಗೈಯಿಂದ ಒತ್ತಿಹಿಡಿದು, ಮಡಚಿದ ತನ್ನ ಎಡಗಾಲ ಮುಂಡಿಯಿಂದ ಕುತ್ತಿಗೆಯನ್ನು ಅದುಮಿ, ಬಲಗೈಯಲ್ಲಿರುವ ತ್ರಿಶೂಲದಿಂದ ಬೆನ್ನಲ್ಲಿ ತಿವಿದಿದ್ದಾಳೆ. ಉಳಿದ ಬಲಗೈಗಳಲ್ಲಿ ಖಡ್ಗ, ಲೀಲಾ ಶುಕ (ಗಿಳಿ), ಚಕ್ರವನ್ನೂ ಎಡಗೈಗಳಲ್ಲಿ ಶಂಕ, ಖೇಟಕ ಮತ್ತು ಬಿಲ್ಲನ್ನೂ ಹಿಡಿದಿದ್ದಾಳೆ. ಅವಳ ಎಡಪಾರ್ಶ್ವದಲ್ಲಿ ಸಿಂಹವನ್ನು ಚಿತ್ರಿಸಿದೆ.

ಶಿಲ್ಪರೂಪಣ ಮತ್ತು ರೂಪಕರ್ಮ ವಿವರಗಳಲ್ಲಿ ಹಲವು ಸಾಮಾನ್ಯ ಲಕ್ಷಣಗಳನ್ನು ರಾವಳಫಡಿಯ ಶಿಲ್ಪಗಳಲ್ಲಿ ಗುರುತಿಸಬಹುದು. ಎತ್ತರವಾದ ನೀಳ ಜಾಡಿಯಾಕಾರದ ಮಕುಟ, ಬಿಚ್ಚು ಬೀಸಣಿಕೆಯಂತಹ ಶಿರಶ್ಚಕ್ರ, ತೆರೆದ ಕಣ್ಣುಗಳು, ಸ್ಪಷ್ಟ ಹುಬ್ಬು ಮತ್ತು ಕಣ್ಣೆವೆಗಳು, ಕಟಿವಸ್ತ್ರವನ್ನು ಹೆಚ್ಚಾಗಿ ಮಂಡಿಯವರೆಗೆ ಧೋತರದಂತೆ ಬಿಗಿದಿರುವುದು, ವಸ್ತ್ರದ ಮಡಿಕೆಗಳನ್ನು ಕೊರೆದ ಗೆರೆಗಳಿಂದ ಸೂಕ್ಷ್ಮವಾಗಿ ತೋರಿಸಿರುವುದು, ಚರ್ಮಾಂಬರದ ಅಂಚನ್ನು ತರಂಗ ರೂಪದಲ್ಲಿ ಚಿತ್ರಿಸಿರುವುದು, ಮುಕ್ತಾಯಜ್ಞೋಪವೀತ ಮತ್ತು ಅದರಿಂದಲೇ ಹೊರಟು ಸರಪಳಿಯಂತೆ ಪಾದದವರೆಗೆ ಇಳಿಬಿದ್ದಿರುವ ಶೃಂಖಲಾ ಯಜ್ಞೋಪವೀತ, ಮೈಕಟ್ಟು, ಮುಖ–ದೇಹಗಳ ಪ್ರಮಾಣ ಮುಂತಾದವೆಲ್ಲ ಈ ಶಿಲ್ಪಗಳು ನಿರ್ದಿಷ್ಟ ಹಿನ್ನೆಲೆಯಲ್ಲಿ ತರಬೇತಾದ ಶಿಲ್ಪಿಗಳ ಗುಂಪನ್ನು ಸೂಚಿಸುತ್ತವೆ. ಬಾದಾಮಿಯ ಒಂದನೆಯ ಗುಹಾಲಯದ ಶೈವ ದ್ವಾರಪಾಲ, ಮೂರನೆಯ ಗುಹಾಲಯದ ಹರಿಹರ, ತ್ರಿವಿಕ್ರಮ, ಅಷ್ಟಭುಜ ವಿಷ್ಣು ಶಿಲ್ಪಗಳಿಗೆ ಇವು ತಕ್ಕಮಟ್ಟಿಗೆ ಸಾಮ್ಯಹೊಂದಿವೆಯಾದರೂ ಹಲವು ವ್ಯತ್ಯಾಸಗಳೂ ಇಲ್ಲದಿಲ್ಲ. ವರಾಹ ಶಿಲ್ಪದಲ್ಲಿ ಶಂಖವನ್ನು ಹಿನ್ನೆಲೆಯಲ್ಲಿ ತೇಲುತ್ತಿರುವಂತೆ ತೋರಿಸಿರುವುದು ಸ್ಥಳೀಯ ವೈಶಿಷ್ಟ್ಯವಾಗಿದೆ. ದುರ್ಗಾಗುಡಿಯಲ್ಲಿರುವ ವರಾಹ ಶಿಲ್ಪದಲ್ಲಿ ಕೂಡ ಈ ಲಕ್ಷಣವನ್ನು ಗುರುತಿಸಬಹುದು. ಭೂದೇವಿಯನ್ನು ವರಾಹನ ಮೊಣಕೈ ಮೇಲೆ ಕುಳಿತಿರುವಂತೆ ತೋರಿಸಿರುವುದು ಭೂ–ವರಾಹ ಪ್ರತಿಮಾ ಲಕ್ಷಣದ ಪ್ರಗತಿಯ ದ್ಯೋತಕವೆಂದು ಭಾವಿಸಬಹುದು. ದೇವತೆಗಳ ಎತ್ತರೆತ್ತರವಾದ ಮಕುಟಗಳು ಅವರ ದೇಹದ ಪ್ರಮಾಣಕ್ಕೆ ತುಸು ಹೆಚ್ಚೆನಿಸಿದರೂ ವೈಶಿಷ್ಟ್ಯವೊದಗಿಸಿವೆ. ಕೆಲವು ವಿದ್ವಾಂಸರ ಪ್ರಕಾರ ಇದು ಪಲ್ಲವ ಶಿಲ್ಪಶೈಲಿಯ ಪ್ರಭಾವ. ಆದರೆ ಈ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಶಿಲ್ಪಿಗಳ ಹೆಸರನ್ನು ಸೂಚಿಸುವ ಶಾಸನಗಳು ರಾವಳಫಡಿ ಗುಹಾಲಯದ ಪರಿಸರದಲ್ಲಿಲ್ಲ. ನಟರಾಜ ಮಂಟಪದ ಅಧಿಷ್ಠಾನದಲ್ಲಿ ರಣವಿ(ಕ್ರಾನ್ತ) ಹೆಸರನ್ನು ಬರೆದಿದೆ. ಇದು ಒಂದನೆಯ ಅಥವಾ ಇಮ್ಮಡಿ ಪುಲಕೇಶಿಯ ಬಿರುದು ಆಗಿರುವ ಸಾಧ್ಯತೆಯಿದೆ.

ಐಹೊಳೆಯ ಜೈನ ಗುಹಾಲಯದ ಪೂರ್ವ ಪಾರ್ಶ್ವಗೋಡೆಯಲ್ಲಿ ಬಾಹುಬಲಿಯ (ಗೊಮ್ಮಟನ) ದೊಡ್ಡ ಶಿಲ್ಪವಿದೆ.

ಮುಖಮಂಟಪದ ಪಶ್ಚಿಮ ಪಾರ್ಶ್ವಗೋಡೆಯಲ್ಲಿ ಕಾಯೋತ್ಸರ್ಗ ಮುದ್ರೆಯಲ್ಲಿ ದಿಗಂಬರನಾಗಿ ನಿಂತಿರುವ ಪಾರ್ಶ್ವನಾಥನ ಶಿಲ್ಪವಿದೆ. ಇವನ ಶಿರದ ಮೇಲ್ಗಡೆ ಐದು ಹೆಡೆಯ ಹಾವಿನ ಆಸರೆಯಿದೆ. ಪಾರ್ಶ್ವನಾಥನ ಬಲಪಕ್ಕದಲ್ಲಿ ಶಿರದ ಮೇಲೆ ನಾಗ ಹೆಡೆಯಿರುವ ಇಬ್ಬರು ವ್ಯಕ್ತಿಗಳು ನಿಂತಿದ್ದಾರೆ. ಒಬ್ಬಳ ಬಲಗೈಯಲ್ಲಿ ಪದ್ಮವಿದೆ. ಇನ್ನೊಬ್ಬಳು ಪದ್ಮಾವತಿ. ತನ್ನೆರಡೂ ಕೈಗಳಿಂದ ವಜ್ರಕೊಡೆಯ ಕೋಲನ್ನು ಹಿಡಿದಿದ್ದಾಳೆ. ಮೇಲ್ಗಡೆ ಎಡಮೂಲೆಯಲ್ಲಿ ಎರಡೂ ಕೈಗಳನೆತ್ತಿ ಬಂಡೆಯನ್ನು ಎಸೆಯಲು ಪ್ರಯತ್ನಿಸುತ್ತಿರುವ ಕಮಠನಿದ್ದಾನೆ. ಪಾರ್ಶ್ವನಾಥನ ತಪೋಭಂಗಮಾಡಲು ಅಸಮರ್ಥನಾದ ಕಮಠನನ್ನು ಎಡಪಕ್ಕದಲ್ಲಿ ಅಂಜಲಿ ಮುದ್ರೆಯಲ್ಲಿ ತೋರಿಸಲಾಗಿದೆ.

ಗರ್ಭಗೃಹದಲ್ಲಿರುವ ತೀರ್ಥಂಕರನು ಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಹಿಂಗಡೆ ದಿಂಬಿನ ಪಾರ್ಶ್ವಗಳನ್ನು ಮಕರಗಳಿಂದ ಅಲಂಕರಿಸಿದೆ.

ರಾವಳಫಡಿ ಶೈವ ಗುಹಾಲಯವನ್ನು ತಲವಿನ್ಯಾಸ, ಭಿತ್ತಿನ ಶಿಲ್ಪ ವಿವರ ಇತ್ಯಾದಿಗಳಲ್ಲಿ ಈ ಜೈನ ಗುಹಾಲಯ ತಕ್ಕಮಟ್ಟಿಗೆ ಹೋಲುತ್ತಿದೆಯಾದರೂ ಶಿಲ್ಪನಿರೂಪಣೆ ಮತ್ತು ರೂಪಕರ್ಮ ವಿವರಗಳಲ್ಲಿ ವ್ಯತ್ಯಾಸಗಳಿವೆ. ಐಹೊಳೆಯ ಜೈನ ಗುಹಾಲಯದ ಶಿಲ್ಪಿಗಳು ತಮ್ಮ ಶೈಲಿ ವೈಶಿಷ್ಟ್ಯವನ್ನು ತೋರಿದ್ದಾರೆ. ಗುಹಾಲಯದ ಸಮೀಪದಲ್ಲಿ ಶ್ರೀ ಅ(ಜ)ವಿಕ್ಕರಕ, ಶ್ರೀ ಅಜಕಸಿ, ಶ್ರೀ ಪದ್ಮಸ್ವಾಮೀ ಮಹಾದಿವ್ಯ ಉತುಣನ್, ಪ್ರಿಯತ್ತಮ ಉತ್ತಣನ್ ಎಂಬ ಸು.7ನೆಯ ಶತಮಾನದ ಅಕ್ಷರಗಳಲ್ಲಿ ಬರೆದ ಹೆಸರುಗಳಿವೆ. ಇದರಂತೆ ಮೇಗುಟಿಯಿಂದ ಬೆಟ್ಟದ ಮೇಲಿನಿಂದ ಈ ಗುಹಾಲಯಕ್ಕೆ ತಲುಪುವ ಹಾದಿಯಲ್ಲಿ ಶ್ರೀಯನ್, ಮನವಶನ್, ಚಿತ್ರನ್, ಶ್ರೀಮಾರ್ಗನ್, ಸುರತನ್ ಇತ್ಯಾದಿ ಹೆಸರುಗಳಿವೆ. ಚಿತ್ರನ್, ಮಾರ್ಗನ್ ಎಂಬ ಹೆಸರುಗಳು ಬಾದಾಮಿಯಲ್ಲಿರುವ ಕೆಲವು ಹೆಸರುಗಳನ್ನು ನೆನಪಿಸುತ್ತವೆ. ಆದ್ದರಿಂದ ಇವುಗಳಲ್ಲಿ ಕೆಲವಾದರೂ ಈ ಗುಹಾಲಯದಲ್ಲಿ ಕೆಲಸ ಮಾಡಿದ ಶಿಲ್ಪಿಕಲ್ಕುಟ್ಟಿಗರ ಹೆಸರುಗಳೆಂದು ಭಾವಿಸಬಹುದು.

ಗುಹಾಲಯ ಶಿಲ್ಪಗಳ ಶೈಲಿಯ ಕುರಿತು ಚರ್ಚಿಸುವಾಗ ಕೆಲವು ಪ್ರಮುಖ ರೂಪಕರ್ಮ ವ್ಯತ್ಯಾಸಗಳನ್ನು ಸೂಚಿಸಲಾಯಿತು. ಶಿಲ್ಪಿಗಳ ಕೆಲವು ಹೆಸರುಗಳು ಸಿದ್ಧಮಾತೃಕಾ ಲಿಪಿಯಲ್ಲಿಯೂ ಹೆಚ್ಚಿನವು ಅಂದಿನ ಕನ್ನಡ ಲಿಪಿಯಲ್ಲಿಯೂ ಬರೆದಿರುವುದನ್ನು ಕೂಡ ಗಮನಿಸಲಾಯಿತು. ಸಿದ್ಧಮಾತೃಕಾ ಲಿಪಿ ಉತ್ತರ ದಖನ್ನಿನ ಮತ್ತು ಅದರಾಚೆಯ ಪ್ರದೇಶದಲ್ಲಿ ಹೆಚ್ಚು ಪ್ರಚಲಿತವಿದ್ದ ಲಿಪಿ. ಈ ಪ್ರದೇಶದಲ್ಲಿ ಗುಹಾವಾಸ್ತು ಪರಂಪರೆ ಪ್ರಶ. ಪೂರ್ವ ಕಾಲದಿಂದಲೂ ರೂಢಿಯಲ್ಲಿದ್ದುದು ಸರ್ವವಿದಿತ. ಶಿಲ್ಪ–ಶೈಲಿ ಮುಖ್ಯವಾಗಿ ಬಾದಾಮಿಯ 2ನೆಯ ಗುಹಾಲಯದಲ್ಲಿ ಎಲ್ಲೋರ–ಎಲಿಫಂಟ ಶೈಲಿಯನ್ನು ಹೋಲುತ್ತದೆ ಎಂಬುದನ್ನು ಕಂಡಿದ್ದೇವೆ. ಆದುದರಿಂದ ಗುಹಾ ವಾಸ್ತುರಚನಾ ಪರಂಪರೆ ಹಾಗೂ ಕೆಲಮಟ್ಟಿಗೆ ಶಿಲ್ಪಶೈಲಿ ಆ ಪ್ರದೇಶದಿಂದ ವಲಸೆ ಬಂದ ಅಥವಾ ಕರೆಸಲ್ಪಟ್ಟ ವಾಸ್ತು–ಶಿಲ್ಪಿಗಳ ಇರವನ್ನು ಸೂಚಿಸುತ್ತದೆ. ಹೆಚ್ಚಿನ ಶಿಲ್ಪಿಗಳ ಹೆಸರುಗಳು ಕನ್ನಡ ಲಿಪಿಯಲ್ಲಿ ಇವೆಯೆಂಬುದೂ ಗಮನಾರ್ಹ. ನೃಪತುಂಗನ ಕಾಲದಲ್ಲಿ ಕಾವೇರಿಯಿಂದ ಗೋದಾವರಿವರೆಗಿನ ಪ್ರದೇಶ ಕನ್ನಡದ ಪ್ರದೇಶವಾಗಿತ್ತು; ಅವನಿಗಿಂತ ಹಿಂದೆ ಉತ್ತರದಲ್ಲಿ ಇನ್ನೂ ಹೆಚ್ಚಿನ ಪ್ರದೇಶದಲ್ಲಿ ಕನ್ನಡ ಪ್ರಚಲಿತವಾಗಿದ್ದರೆ ಆಶ್ಚರ್ಯವೇನಲ್ಲ. ಈ ವಿಶಾಲ ಕನ್ನಡ ಪ್ರದೇಶದಿಂದ ರಾಜಾಶ್ರಯವನ್ನು ಅರಸಿ ಬಂದಿದ್ದ ಅನೇಕ ಶಿಲ್ಪಿಗಳು ಬಾದಾಮಿ ಮತ್ತು ಐಹೊಳೆಯಲ್ಲಿದ್ದರೆಂದು ತಿಳಿಯಬಹುದು.

ಮಙ್ಕೆ ಎಂದು ಅಂತ್ಯಗೊಳ್ಳುವ ಕೋಳಿಮಙ್ಕೆ, ಸಿಂಗಮಙ್ಕೆ ಮುಂತಾದ ಹೆಸರುಗಳು ಗಮನೀಯ. ಆಂಧ್ರದಲ್ಲಿ ಎಲ್ಲೇಶ್ವರಂ ಎಂಬಲ್ಲಿ ಇದೇ ಕಾಲದ 'ಮಙ್ಕೆ' ನಾಮಾಂತ್ಯವುಳ್ಳ ಹೆಸರುಗಳು ಕಂಡುಬಂದಿವೆ. ಅಲ್ಲದೆ ಇಂದಿಗೂ 'ಮಙ್ಕೆ' ಎಂದು ಅಂತ್ಯಗೊಳ್ಳುವ ವ್ಯಕ್ತಿನಾಮಗಳು ರೂಢಿಯಲ್ಲಿವೆ. ಈ ಕಾರಣದಿಂದ ಆಂಧ್ರಪ್ರದೇಶದಿಂದಲೂ ವಲಸೆ ಬಂದಿದ್ದ ರೂವಾರಿ ಸೂತ್ರಧಾರಿಗಳು ಬಾದಾಮಿಯ ಗುಹಾಲಯ ಶಿಲ್ಪರಚನೆಯಲ್ಲಿ ಪಾತ್ರವಹಿಸಿದ್ದಾರೆಂದು ತಿಳಿಯಬೇಕಾಗುತ್ತದೆ. ಅಮರಾವತಿ, ನಾಗಾರ್ಜುನ ಕೊಂಡದ ಶಿಲ್ಪ ಶೈಲಿಯ ಛಾಯೆ ಗುಹಾಲಯದ ಅನೇಕ ಅಲಂಕರಣ ವಿನ್ಯಾಸಗಳಲ್ಲಿ ಉದಾ: ಮೂರನೆಯ ಮತ್ತು ನಾಲ್ಕನೆಯ ಗುಹಾಲಯಗಳ ಮುಖಮಂಟಪದ ಎದುರುಗಂಬಗಳಲ್ಲಿರುವ ತಟ್ಟೆಯಾಕಾರದ ಪದ್ಮವಿನ್ಯಾಸ, ಅವುಗಳೊಳಗಿನ ಮಿಥುನಗಳು ಇತ್ಯಾದಿ ಕಂಡುಬರುವುದೆಂಬುದು ಈ ಹಿನ್ನೆಲೆಯಲ್ಲಿ ಚಿಂತನೀಯವಾಗಿದೆ.

ಕಟ್ಟಡ ದೇಗುಲಗಳ ಶಿಲ್ಪಕಲೆ: ಗುಹಾಶಿಲ್ಪಗಳ ಶೈಲಿ, ಪ್ರತಿಮಾಲಕ್ಷಣ ಇತ್ಯಾದಿ ವೈವಿಧ್ಯಗಳನ್ನು ದೇಗುಲ ಶಿಲ್ಪಗಳಲ್ಲೂ ಗಮನಿಸಬಹುದು. ಕೆಲವನ್ನು ಮಾತ್ರ ಪರಿಶೀಲಿಸಲಾಗಿದೆ.

ಬಾದಾಮಿಯಲ್ಲಿರುವ ಮೇಲಣ ಶಿವಾಲಯ (ವಿಷ್ಣುದೇವಾಲಯ) ಹಾಗೂ ಮಾಲಗಿತ್ತಿ ಶಿವಾಲಯ (ಸೂರ್ಯ ದೇವಾಲಯ) ಚಳುಕ್ಯರ ಪ್ರಾಚೀನ ರಾಚನಿಕ ಶಿಲಾದೇಗುಲಗಳು. ದಕ್ಷಿಣ ಗೋಡೆಯಲ್ಲಿರುವ ಗೋವರ್ಧನಧಾರಿ ಕೃಷ್ಣನ ಉಬ್ಬುಶಿಲ್ಪ ಬಹಳಷ್ಟು ಹಾಳಾಗಿದೆಯಾದರೂ ಬಹು ಸುಂದರ ಮತ್ತು ಅಪರೂಪದ ಕೃತಿ. ಇದೇ ದೇವಾಲಯದ ಉತ್ತರ ಗೋಡೆಯ ನರಸಿಂಹ ಶಿಲ್ಪದಲ್ಲಿ ಹಿರಣ್ಯಕಶ್ಯಪು ನರಸಿಂಹನ ಮೇಲೆ ಪ್ರಹಾರ ಮಾಡುವುದಕ್ಕಾಗಲೀ ಅವನಿಂದ ತಪ್ಪಿಸಿಕೊಳ್ಳಲಿಕ್ಕಾಗಲೀ ವ್ಯರ್ಥ ಪ್ರಯತ್ನ ಮಾಡುತ್ತಿರುವುದು ಆಕರ್ಷಕವಾಗಿದೆ. ತೊಡೆಯ ಮೇಲಿರಿಸಿ ಹಿರಣ್ಯ ಕಶ್ಯಪುವಿನ ಹೊಟ್ಟೆಯನ್ನು ನರಸಿಂಹನು ಬಗೆಯುತ್ತಿದ್ದಾನೆ. ಭಗವಂತನ ಲೀಲಾ ನಾಟಕ ಇಲ್ಲಿ ಬಹು ಸುಂದರವಾಗಿ ಮೂಡಿಬಂದಿದೆ.

ಮಾಲಗಿತ್ತಿ ಶಿವಾಲಯದ ಗೋಡೆಯಲ್ಲಿರುವ ಹಿರಿ ಶಿಲ್ಪಗಳ ಶೈಲಿ ಹಾಗೂ ಪ್ರತಿಮಾಲಕ್ಷಣ ದೃಷ್ಟಿಯಿಂದ ಗಮನೀಯವಾಗಿವೆ. ದಕ್ಷಿಣ ಗೋಡೆಯಲ್ಲಿರುವ ಚತುರ್ಭುಜ ಸಮಸ್ಥಾನಕ ಶಿವನ ಶಿಲ್ಪ ಬಹು ಸುಂದರ ಕಲಾಕೃತಿ. ಫಲ, ಸರ್ಪ, ತ್ರಿಶೂಲಗಳನ್ನು ಹಿಡಿದು ಕಟ್ಯವಲಂಬಿತ ಹಸ್ತನಾಗಿ ನಿಂತಿರುವ ಶಿವನ ಇಕ್ಕೆಲಗಳಲ್ಲಿ ಒಬ್ಬೊಬ್ಬನಂತೆ ಋಷಿಗಳು ಧ್ಯಾನದಲ್ಲಿ ನಿರತರಾಗಿದ್ದಾರೆ. ಸರಳ ಹಿತಮಿತ ಆಭರಣಾದಿಗಳಿರುವ ಈ ಶಿಲ್ಪದಲ್ಲಿ ರೂಪಕರ್ಮ ರೀತಿ ಅತ್ಯಾಕರ್ಷಕವಾಗಿದೆ. ಶಿವನ ಜಟಾಭಾರದ ಸ್ವರೂಪ ಹಾಗೂ ಅಂತರ್ಮುಖೀಭಾವ ಮಾಲವ ಪ್ರದೇಶದ ಗುಪ್ತರ ಅಂತ್ಯಕಾಲದ, ಕೊಂಕಣ ಮತ್ತು ಉತ್ತರ ದಖನ್ನಿನ (ಎಲಿಫಂಟ–ಎಲ್ಲೋರ) ಗುಹಾಲಯಗಳ ಶಿಲ್ಪಗಳನ್ನು ನೆನಪಿಸುತ್ತವೆ.

ಈ ದೇವಾಲಯದ ಉತ್ತರ ಗೋಡೆಯ ಸಮಸ್ಥಾನಕ ಚತುರ್ಭುಜ ವಿಷ್ಣು ಶಿಲ್ಪ ಕೂಡ ಇಂತಹುದೇ ಶೈಲಿ ಲಕ್ಷಣಗಳಿಂದೊಡಗೂಡಿದೆ. ಫಲ, ಚಕ್ರ, ಶಂಖ ಹಿಡಿದು ಕಟ್ಯವಲಂಬಿತನಾಗಿ, ಅಂತರ್ಮುಖಿ ಭಾವದೊಂದಿಗೆ ನಿಂತಿರುವ ವಿಷ್ಣುವಿನ ಬಲ ಮಗ್ಗುಲಲ್ಲಿ ಗದಾ ಕೌಮೋದಕೀ ತ್ರಿಭಂಗಿಯಲ್ಲಿದ್ದಾಳೆ. ಎಡಮಗ್ಗುಲಲ್ಲಿ ಕುಳ್ಳ ಗರುಡನಿದ್ದಾನೆ. ಗದಾದೇವಿ

ನಿಂತಿರುವ ರೀತಿ ದೇವಗಡದ (ಮಧ್ಯಪ್ರದೇಶ) ಗುಪ್ತರ ಅಂತ್ಯಕಾಲೀನ ದಶಾವತಾರ ದೇವಾಲಯದ ಅನಂತಶಯನ ಶಿಲ್ಪದ ಕೆಳಗಡೆ ಇರುವ ಗದಾದೇವಿಯನ್ನು ನೆನಪಿಸುತ್ತದೆ. ಈ ರೀತಿ ಆಯುಧ ಪುರುಷರನ್ನು ವಿಷ್ಣುವಿನ ಪಾರ್ಶ್ವದಲ್ಲಿ ತೋರಿಸುವ ಪರಂಪರೆ ಗುಪ್ತರ ಕಾಲದಿಂದ ಮುಂದುವರಿದು ಬಂದ ಬಳುವಳಿಯೆಂದು ಕಾಣುತ್ತದೆ. ಮಾಲವ ಪ್ರದೇಶದ ಉತ್ತರ ಗುಪ್ತಕಾಲೀನ ಶಿಲ್ಪಶೈಲಿಯ ಪ್ರಭಾವ, ಪ್ರತಿಬಿಂಬಗಳನ್ನು ಇದರಲ್ಲಿ ಕಂಡವರಿದ್ದಾರೆ.

ಅಂತರ್ಮುಖಿ ಭಾವ, ಸುಂದರ ಆಕರ್ಷಕ ಮೈಮಾಟ, ಸಂಯೋಜನೆಯಲ್ಲಿ ಫಲಕದ ನಾಲ್ಕು ಮೂಲೆಗಳಲ್ಲಿ ಒಬ್ಬೊಬ್ಬ ಗಣ ಇಲ್ಲವೆ ಪೂರಕ ವ್ಯಕ್ತಿಗಳನ್ನು ತೋರಿಸುವುದು, ಹಿತಮಿತ ಅಲಂಕರಣ, ನಗ್ನಾಭಾಸ ಮೂಡಿರುವ ರೂಪಕರ್ಮ ರೀತಿ ಇವೆಲ್ಲ ಮಾಲಗಿತ್ತಿ ಶಿವಾಲಯದ ಹಿರಿ ಶಿಲ್ಪಗಳ ಸಾಮಾನ್ಯ ಲಕ್ಷಣಗಳಾಗಿ ಒಡೆದು ಕಾಣುತ್ತಿವೆ. ದೇಗುಲ ದ್ರಾವಿಡ ಶೈಲಿಯದಾಗಿದ್ದು, ಇದರ ವಾಸ್ತುಶಿಲ್ಪಿ ಆರ್ಯಮಙ್ಚಿ ಉಪಾಧ್ಯಾಯ. ಈ ಹೆಸರು ಆಂಧ್ರದ ಶಿಲ್ಪಿಗಳನ್ನು ನೆನಪಿಸುತ್ತದೆ. ಹೀಗಿದ್ದೂ ಗೋಡೆಯ ಶಿಲ್ಪಗಳು ಮಾಲವ–ಕೊಂಕಣ–ಉತ್ತರ ಡೆಕ್ಕನ್ ಪ್ರದೇಶದ ಶಿಲ್ಪ ಲಕ್ಷಣಗಳನ್ನು ಸಾಕಷ್ಟು ಹೋಲುತ್ತವೆ ಎಂಬ ಸಂಗತಿ ಈ ಪ್ರದೇಶದ ಶಿಲ್ಪಿಗಳು ಇಲ್ಲಿ ಭಾಗವಹಿಸಿದ್ದಾರೆಂಬುದನ್ನು ಸೂಚಿಸುತ್ತದೆ.

ಮೇಲೆ ಗಮನಿಸಿದ ಶಿಲ್ಪಗಳು 650ಕ್ಕಿಂತ ಮುಂಚಿನವು. ಐಹೊಳೆಯ ಚಿಕ್ಕಿಗುಡಿಯ ಛತ್ತಿನಲ್ಲಿರುವ ಶಿಲ್ಪಗಳು ಇದೇ ಕಾಲಾವಧಿಯ ಪ್ರತಿಮಾಲಕ್ಷಣಕ್ಕನುಗುಣವಾಗಿವೆ. ಇಲ್ಲಿಯ ಅನಂತಶಯನ ಮತ್ತು ವಾಮನ–ತ್ರಿವಿಕ್ರಮ ಶಿಲ್ಪಗಳು ಬಾದಾಮಿಯ ಗುಹಾಶಿಲ್ಪಗಳು ಪ್ರತಿಮಾಲಕ್ಷಣ ಕ್ರಮವನ್ನನುಸರಿಸಿವೆ. ವೈಖಾನಸಾಗಮದಲ್ಲಿ ಹೇಳಿರುವ ಭೋಗಶಯನ ಮೂರ್ತಿಯ ವಿವರಕ್ಕೆ ಇದು ಹೊಂದುತ್ತದೆ.

ಚಳುಕ್ಯರ ಆಡಳಿತದ ಉತ್ತರಾರ್ಧಕ್ಕನ್ವಯಿಸುವ ದೇವಾಲಯಗಳು, ಐಹೊಳೆಯ ಮಹಾಕೂಟ, ಪಟ್ಟದಕಲ್ಲು ಮತ್ತು ಕೆಲ್ಲೂರಿನಲ್ಲಿವೆ. ಐಹೊಳೆಯ ಹುಚ್ಚಿಮಲ್ಲಿಗುಡಿಯ ಮುಖಮಂಟಪದ ಮೇಲ್ಗಂಡಿನಲ್ಲಿ ನವಿಲೇರಿರುವ ಕಾರ್ತಿಕೇಯನ ಉಬ್ಬುಶಿಲ್ಪವಿದೆ. ಕಾರ್ತಿಕೇಯನ ಭಂಗಿ ಮತ್ತು ಮುಖಭಾವ ಐಹೊಳೆಯ ದುರ್ಗಾಗುಡಿಯ ಮುಖಮಂಟಪದ ಛತ್ತಿನಲ್ಲಿರುವ ನಾಗರಾಜನನ್ನು ಹೋಲುತ್ತದೆ. ಹುಚ್ಚಿಮಲ್ಲಿ ಗುಡಿಯ ಕಾರ್ತಿಕೇಯ ಶಿಲ್ಪದ ನಿರ್ಮಾತೃ 'ಕೃಚುಜ್ಗ'.

ಐಹೊಳೆಯ ಲಾಡಖಾನ್, ಹುಚ್ಚಪ್ಪಯ್ಯನ ಮಠ ಹಾಗೂ ಹುಚ್ಚಪ್ಪಯ್ಯ ಗುಡಿಗಳ ಮುಖಮಂಟಪದ ಕಂಬಗಳ ಮುಖದಲ್ಲಿ ಗಂಗಾ, ಯಮುನಾ, ಮಿಥುನ, ಕಾಮರತಿ, ಅಶ್ವಮುಖಿ ಮುಂತಾದ ಶಿಲ್ಪಗಳನ್ನು ಬಹು ಸುಂದರವಾಗಿ ಕಟೆದಿದೆ.

ಈ ಶೈಲಿಯನ್ನು ಐಹೊಳೆಯ ದುರ್ಗಾಗುಡಿಯ ಕೆಲವು ಸ್ತಂಭ ಶಿಲ್ಪಗಳಲ್ಲಿ ಗುರುತಿಸಬಹುದು. ಆದರೆ ಈ ದೇಗುಲದ ವಿಪುಲ ಶಿಲ್ಪಗಳಲ್ಲಿ ಇತರ ವಿವಿಧ ಶೈಲಿಗಳನ್ನೂ ಗುರುತಿಸಲಾಗಿದೆ. ಸೂರ್ಯನು ಛಾಯಾದೇವಿಯನ್ನು ದಂಡಿಸುತ್ತಿರುವದು, ಅಶ್ವಮುಖಿ ಯಕ್ಷಿ ಮತ್ತು ಬ್ರಹ್ಮಚಾರಿ, ಬ್ರಹ್ಮಚಾರಿಯನ್ನು ಸೆಳೆದುಕೊಳ್ಳುತ್ತಿರುವ ಯಕ್ಷಿ, ದ್ವಾರಪಾಲಕ ಇತ್ಯಾದಿ ಶಿಲ್ಪಗಳು ಹೆಚ್ಚು ಕಡಿಮೆ ಲಾಡ್‌ಖಾನ್ ಮುಖ ಮಂಟಪದ ಶಿಲ್ಪ ಶೈಲಿಯಲ್ಲಿವೆ. ಆದರೆ ದುರ್ಗಾಗುಡಿಯ ಉತ್ತರ ಪಾರ್ಶ್ವದ ಕಂಬಗಳಲ್ಲಿ ಮಿಥುನಗಳ ಶೈಲಿ ಬೇರೆಯದು, ಇವುಗಳ ಅಲಂಕರಣ ರೀತಿ, ವೇಷಭೂಷಣ, ಕೇಶಾಲಂಕಾರ, ಕಿರೀಟ ಸ್ವರೂಪ, ಭಂಗಿ, ಅಂತರ್ಯದೊಳಕ್ಕೆ ನೋಡುವ ಮುಚ್ಚುಗಣ್ಣುಗಳು ಇವೆಲ್ಲ ಔರಂಗಾಬಾದ ಗುಹಾಲಯಗಳ ಕೆಲವು ಶಿಲ್ಪಗಳನ್ನು ಕಣ್ಮುಂದೆ ತರುತ್ತವೆ. ಅಂತಾಗಿ ಇದು ಉತ್ತರ ದಖನ್ನಿನ ಶೈಲಿಯ ಕುರುಹು ಎಂಬುದರಲ್ಲಿ ಸಂಶಯಕ್ಕೆಡೆಯಿಲ್ಲ. ದೇಗುಲದ ಈ ಪಾರ್ಶ್ವದ ಕಂಬವೊಂದರ ಮೇಲೆ ಸುರೇಂದ್ರ ಪಾದಃ ಎಂಬ ಸಿದ್ಧಮಾತೃಕಾ ಲಿಪಿಯಲ್ಲಿರುವ ಶಿಲ್ಪಿಯ ಹೆಸರು ಈ ದೃಷ್ಟಿಯಿಂದ ಗಮನಾರ್ಹ.

ದುರ್ಗಾಗುಡಿಯ ದೇವಕೋಷ್ಠ ಶಿಲ್ಪಗಳು ಶೈಲಿ ವೈವಿಧ್ಯದ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ. ವೃಷಭಾಂತಿಕ ಶಿವ, ಸ್ಥಾನಕ ಕೇವಲ ನರಸಿಂಹ, ಕರಿವರದ ವಿಷ್ಣು, ನೃವರಾಹ, ದುರ್ಗಾಮಹಿಷಮರ್ಧಿನಿ ಮತ್ತು ಹರಿಹರ–ಇವು ಆಕರ್ಷಕ ಶಿಲ್ಪಗಳು. ಈಗ ಪುರಾತತ್ತ್ವ ಸಂಗ್ರಹಾಲಯದಲ್ಲಿರುವ ಭಿಕ್ಷಾಟನ ಶಿವನಮೂರ್ತಿ ಕೂಡ ಮೂಲತಃ ಈ ದೇಗುಲದ ದೇವಕೋಷ್ಠಶಿಲ್ಪವೇ. ಇವುಗಳಲ್ಲಿ ವೃಷಭಾಂತಿಕ ಶಿವ, ಕರಿವರದ ವಿಷ್ಣು, ದುರ್ಗಾಮಹಿಷಮರ್ದಿನಿ ಶಿಲ್ಪಗಳು ಒಂದೇ ನಿರ್ದಿಷ್ಟ ಶೈಲಿಯಲ್ಲಿವೆ. ಇವುಗಳ ಸಂಯೋಜನೆ, ಅಲಂಕರಣ ಮತ್ತು ರೂಪಕರ್ಮ ರೀತಿಯಲ್ಲಿ ಸ್ಫುಟ ಸಾಮ್ಯವಿದೆ.

ಇದೇ ಶೈಲಿಯ ಬಹುಶಃ ಇದೇ ಶಿಲ್ಪಿ ರಚಿಸಿರಬಹುದಾದ ಇನ್ನೊಂದು ಶ್ರೇಷ್ಠ ಕೃತಿ ದುರ್ಗಾಭಗವತಿಯದು. ಅಷ್ಟಭುಜೆಯಾದ ದೇವಿ ತನ್ನ ಬಲಗಾಲನ್ನು ಧೃಢವಾಗಿ ಊರಿ ಖಡ್ಗ, ವಜ್ರ, ಪ್ರಯೋಗ ಚಕ್ರ, ತ್ರಿಶೂಲ, ಘಂಟಾ, ಶಂಖ ಇತ್ಯಾದಿಗಳನ್ನು ಧರಿಸಿ, ಎಡಗಾಲಿನಿಂದ ಕೋಣನ ರೂಪದಲ್ಲಿರುವ ರಾಕ್ಷಸನ ಬೆನ್ನ ಮೇಲೆ ರಭಸಪೂರ್ಣವಾಗಿ ತುಳಿದಿದ್ದಾಳೆ. ಕೋಣದ ಕುತ್ತಿಗೆಯೊಳಕ್ಕೆ ಹೊಕ್ಕಿರುವ ತ್ರಿಶೂಲದ ಮೊನೆ ಆಕ್ರಂದನದೊಂದಿಗೆ ಅದು ಮೋರೆ ಮೇಲೆತ್ತುವಂತೆ ಮಾಡಿದೆ. ಬಲಗಡೆ ಸಿಂಹ ಈ ದೃಶ್ಯವನ್ನು ನೋಡುತ್ತಲಿದೆ. ಹಲವು ಆಭರಣಗಳೊಂದಿಗೆ, ದುಂಡು ಕುಚದ್ವಯಗಳೊಂದಿಗೆ ಜಯಶೀಲದೇವಿ ಹಸನ್ಮುಖಿಯಾಗಿದ್ದಾಳೆ. ಪ್ರಭಾಮಂಡಲದಲ್ಲಿರುವ ಪುಷ್ಪ, ಶಿರಶ್ಚಕ್ರ ಕರಿವರದ ಶಿಲ್ಪದಲ್ಲಿರುವಂತೆಯೇ ಇದೆ. ಚಳುಕ್ಯ ಕಾಲದ ದುರ್ಗಾಭಗವತಿಯ ಶಿಲ್ಪಗಳಲ್ಲಿ ಇದೊಂದು ಉತ್ಕೃಷ್ಟ ಕೃತಿ.

ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ಪಟ್ಟದಕಲ್ಲಿನಲ್ಲಿ ನಿರ್ಮಾಣಗೊಂಡ ವಿರೂಪಾಕ್ಷ (ಲೋಕೇಶ್ವರ) ಮತ್ತು ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ದೇವಾಲಯಗಳ ಶಿಲ್ಪಗಳು ವಸ್ತು ವೈವಿಧ್ಯ ದೃಷ್ಟಿಯಿಂದ ಮಹತ್ತ್ವದ್ದಾಗಿವೆ. ಶಿಲ್ಪ ರೂಪಣದಲ್ಲಿ ಇವು ಚಳುಕ್ಯರ ಕೊನೆಯ ಹಂತದವು. ಶೈಲಿ ವೈವಿಧ್ಯ ಇಲ್ಲಿ ಅಷ್ಟಾಗಿಲ್ಲ. ಅಂದರೆ ಕರ್ನಾಟ ಕಲಾಶೈಲಿ ಹರಳುಗಟ್ಟುವೆಡೆ ಹೆಜ್ಜೆ ಇಡುತ್ತಿರುವುದನ್ನು ಇಲ್ಲಿ ಗುರುತಿಸಬಹುದು. ಕಾಂಚಿಯ ರಾಜಸಿಂಹೇಶ್ವರ (ಕೈಲಾಸನಾಥ) ದೇವಾಲಯದಿಂದ ಪ್ರಭಾವಿತವಾಗಿ ಪಟ್ಟದಕಲ್ಲಿನ ಈ ಜೋಡು ದೇಗುಲಗಳು ನಿರ್ಮಿತವಾದವೆಂಬ ಅಭಿಪ್ರಾಯ ಪ್ರಚಲಿತವಿದೆ. ಆದರೆ ನಿಜ ಸಂಗತಿ ಇದಕ್ಕೆ ವ್ಯತಿರಿಕ್ತವಾಗಿದೆ. ಪಟ್ಟದಕಲ್ಲಿನ ಪ್ರತಿಮೆಗಳ ಲಕ್ಷಣ–ಶೈಲಿಗಳೆರಡನ್ನೂ ಆಲಂಪುರದ (ಆಂಧ್ರಪ್ರದೇಶ) ದೇಗುಲಗಳ ಶಿಲ್ಪಗಳಲ್ಲಿ ಗುರುತಿಸಬಹುದು. ಆದ್ದರಿಂದ ಆಲಂಪುರ ಪರಿಸರದಲ್ಲಿ ರೂಢಿಗೊಂಡ ಶೈಲಿ ಕ್ರಮೇಣ ಪಟ್ಟದಕಲ್ಲಿಗೆ ಪ್ರೌಢವಾಗಿ ಸಾಗಿ ಬಂದಿದೆ ಎಂದು ತಿಳಿಯುವುದು ಸರಿ. ಶೈವ ಶಿಲ್ಪಗಳಿಗೆ ಇಲ್ಲಿ ಮಹತ್ತ್ವ ನೀಡಲಾಗಿದೆ ಯಾದರೂ ಉಳಿದ ದೇವತೆಗಳ ಬಿಂಬಗಳಿಗೆ ಇಲ್ಲಿ ಕೊರತೆಯಿಲ್ಲ. ಚೆಂಗಮ್ಮ, ಪುಲ್ಲಪ್ಪ, ಬಲದೇವ ಮುಂತಾದ ಶಿಲ್ಪಿಗಳು ಇಲ್ಲಿ ತಮ್ಮ ಕಲಾಕೌಶಲ್ಯವನ್ನು ತೋರಿದ್ದಾರೆ.

ಕುರುವತ್ತಿಯ ಬ್ರಹ್ಮವಿಗ್ರಹ. ಶಿಲ್ಪಿ ಚೌಣೋಜ. ಫಿಲಡೆಲ್ಫಿಯದ ವಸ್ತುಸಂಗ್ರಹಾಲಯದಲ್ಲಿದೆ.

ಅಪಸ್ಮಾರನ ಮೇಲೆ ವಿವಿಧನಾಟ್ಯ ಭಂಗಿಗಳಲ್ಲಿ ಕುಣಿಯುತ್ತಿರುವ ನಟರಾಜ ಶಿವನ ಬಿಂಬಗಳು ಇಲ್ಲಿ ಬಹಳ ಇದೆ. ಇಲ್ಲಿಯ ಎಲ್ಲ ನಟರಾಜ ಶಿಲ್ಪಗಳಲ್ಲಿ ಕಾಲಡಿ ಅಪಸ್ಮಾರ ಪುರುಷನಿರುವುದು ಗಮನೀಯ. ಗುಹಾಶಿಲ್ಪಗಳಲ್ಲಿ ಈ ಲಕ್ಷಣವಿಲ್ಲ.

ದಕ್ಷಿಣ ಮುಖಮಂಟಪದ ಕಂಬವೊಂದರಲ್ಲಿರುವ ರಾವಣ ಕೈಲಾಸವನ್ನೆತ್ತುವ ಶಿಲ್ಪ ಇಲ್ಲಿಯ ಆಕರ್ಷಕ ಶಿಲ್ಪಗಳಲ್ಲೊಂದು. ದಶಾನನ ರಾವಣ ಆಲೀಢ ಭಂಗಿಯಲ್ಲಿ ಕುಳಿತು ತನ್ನ ಇಪ್ಪತ್ತು ಬಾಹುಗಳಿಂದ ಕೈಲಾಸ ಪರ್ವತವನ್ನು ಎತ್ತುತ್ತಿರುವ ದೃಶ್ಯ ಬಹು ನಾಟಕೀಯವಾಗಿದೆ. ಅಲುಗಾಡುತ್ತಿರುವ ಕೈಲಾಸದ ಮೇಲೆ ಭಯವಿಗಳಿತಳಾಗಿ ಪಾರ್ವತಿ ಶಿವನ ಆಸರೆಯನ್ನು ಬಯಸಲುದ್ಯುಕ್ತಳಾಗಿರುವ ರೀತಿ ಶಿಲ್ಪಿಯ ಕಲ್ಪನಾ ಚಾತುರ್ಯವನ್ನು ಪ್ರತಿಬಿಂಬಿಸುತ್ತದೆ.

ವಿರೂಪಾಕ್ಷ ದೇಗುಲದ ಪೂರ್ವ ಗೋಡೆಯಲ್ಲಿ ಲಿಂಗೋದ್ಭವ ಮೂರ್ತಿಯ ಶಿಲ್ಪ ವಸ್ತು ದೃಷ್ಟಿಯಿಂದ ಅಪರೂಪದ್ದು. ಚಾಳುಕ್ಯ ಸಂದರ್ಭದಲ್ಲಿ ಆಲಂಪುರ ಮತ್ತು ಪಟ್ಟದಕಲ್ಲಿನ ಶೈವ ದೇವಾಲಯಗಳಲ್ಲಿ ಮಾತ್ರ ಈ ಶಿಲ್ಪ ಕಂಡುಬಂದಿದೆ.

ವೈಷ್ಣವ ಶಿಲ್ಪಗಳಲ್ಲಿ ಗಜೇಂದ್ರಮೋಕ್ಷ ಹಾಗೂ ತ್ರಿವಿಕ್ರಮ ಶಿಲ್ಪಗಳು ಉಲ್ಲೇಖನೀಯ. ಗರುಡನ ಮೇಲೆ ಕುಳಿತ ಭಕ್ತವತ್ಸಲ ವಿಷ್ಣು ಪ್ರಯೋಗ ಚಕ್ರದೊಂದಿಗೆ ಧಾವಿಸಿ ಗಜೇಂದ್ರನನ್ನು ಗ್ರಾಹದ ಹಿಡಿತದಿಂದ ಮುಕ್ತಗೊಳಿಸುತ್ತಿರುವ ದೃಶ್ಯ, ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇಗುಲಗಳ ಉತ್ತರ ಮುಖಮಂಟಪದ ಕಂಬಗಳ ಮೇಲಿವೆ. ಇಲ್ಲಿ ಗ್ರಾಹವನ್ನು ಆಮೆಯಾಗಿ ಚಿತ್ರಿಸಿರುವುದು ವೈಶಿಷ್ಟ್ಯ. ಈ ರೂಢಿ ದಖನ್ನಿನಲ್ಲಿ ಪ್ರಚಲಿತವಿತ್ತು.

ವಿರೂಪಾಕ್ಷ ದೇಗುಲದಲ್ಲಿರುವ ದುರ್ಗಾಭಗವತಿಯ ದುಂಡುಶಿಲ್ಪ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿದೆ. ಅಷ್ಟಭುಜೆಯಾದ ಸುಂದರ ಮೈಮಾಟದ ದೇವಿ ತನ್ನ ಎಡಗಾಲನ್ನು ಮನುಷ್ಯರೂಪದ ದೈತ್ಯದ ತಲೆಯ ಮೇಲೆ ಇರಿಸಿ ಕೊಲ್ಲುತ್ತಿದ್ದಾಳೆ. ಮಿತ ವೇಷಭೂಷಣ,

ಚಟುವಟಿಕೆಯಿಂದ ಕೂಡಿದ ಅಂಗಾಂಗಗಳು, ವಿಶಿಷ್ಟ ಭಂಗಿ, ಸಮತೋಲನ, ಕೌಶಲ್ಯಪೂರ್ಣ ರೂಪಕರ್ಮ–ಇವೆಲ್ಲ ಸೇರಿ ಚಾಲುಕ್ಯ ದುರ್ಗಾಭಗವತಿಯ ಶಿಲ್ಪಗಳಲ್ಲೆಲ್ಲ ಇದನ್ನು ಅತೀ ಶ್ರೇಷ್ಠ ಕೃತಿಯನ್ನಾಗಿಸಿವೆ.

ಪಟ್ಟದಕಲ್ಲಿನ ಈ ದೇಗುಲಗಳ ಉಲ್ಲೇಖಾರ್ಹ ಶಿಲ್ಪಗಳಲ್ಲಿ ದ್ವಾರಪಾಲಕ ಶಿಲ್ಪಗಳು ಮಹತ್ತ್ವದವು. ಮುಖಮಂಟಪಗಳಲ್ಲಿ ಆಳೆತ್ತರವಾಗಿ ಕಂಡುಬರುವ ಈ ವ್ಯಕ್ತಿಗಳು ಭಾರವಾದ ಗದೆಯ ಮೇಲೆ ವಿಶಿಷ್ಟ, ಸಹಜ, ಅನುಕೂಲಕರ ಭಂಗಿಗಳಲ್ಲಿ ನಿಂತಿದ್ದಾರೆ. ವಿಕಾರ ಕಣ್ಣುಗಳು, ಕೋರೆಗಳು ನೋಡುಗರ ಮನ ನಡುಗಿಸುವದರಲ್ಲಿ ಯಶಸ್ವಿಯಾಗುತ್ತದೆ. ಇವು ಶಿವನ ಆಯುಧ ಪುರುಷ ಶಿಲ್ಪಗಳೇ ಆಗಿವೆ. ದಾಕ್ಷಿಣಾತ್ಯ ಎನ್ನಬಹುದಾದ ಈ ಭೀಕರ ದ್ವಾರಪಾಲಕರ ಬಿಂಬಗಳು ಕೆಲವು ಸಲ ದುಂಡು ಶಿಲ್ಪವೆನ್ನುವಷ್ಟು ಮಟ್ಟಿಗೆ ರೂಪಕರ್ಮ ಪಡೆದಿವೆ. ಬಾದಾಮಿಯ ಮೊದಲ ಶೈವ ಗುಹಾಲಯದ ಸೌಮ್ಯ ದ್ವಾರಪಾಲಕರಿಗೆ ಹೋಲಿಸಿ ದಾಗ ಈ ರೌದ್ರರೂಪದ ದ್ವಾರಪಾಲಕರು ಬದಲಾದ ಧಾರ್ಮಿಕ ಭಾವಗಳ ಪ್ರತಿನಿಧಿಗಳಾಗಿ ಕಾಣುತ್ತಾರೆ.

ಒಟ್ಟಾರೆ ನೋಡಿದಾಗ, ಚಳುಕ್ಯ ರಾಚನಿಕ ದೇಗುಲಗಳ ಶಿಲ್ಪಗಳು ಕೊನೆಯ ಹಂತದ ವರೆಗೆ ಪ್ರತಿಮಾಲಕ್ಷಣ ವೈವಿಧ್ಯ ಮತ್ತು ಶೈಲಿ ವೈವಿಧ್ಯವನ್ನು ನಿರೂಪಿಸುತ್ತವೆ. ಈ ದೃಷ್ಟಿ ಯಿಂದ ಗುಹಾಶಿಲ್ಪ ಶೈಲಿಯಲ್ಲಿ ಕಂಡುಬರುವ ವೈವಿಧ್ಯತೆಯನ್ನು ಇಲ್ಲಿಯೂ ಗಮನಿಸ ಬಹುದು. ಮೊದಮೊದಲು ಔತ್ತರೇಯ, ಉತ್ತರ ದಖನ್ ಶಿಲ್ಪಪರಂಪರೆಯ ಪ್ರಾತಿನಿಧ್ಯವಿದೆ ಯಾದರೆ, ಕ್ರಮೇಣ ದಾಕ್ಷಿಣಾತ್ಯವೆನ್ನಬಹುದಾದ ಶೈಲಿ ರೂಢವಾಗಿಬಿಟ್ಟಿದೆ. ಹೀಗಿದ್ದರೂ ಪ್ರತಿಯೊಂದು ಹಂತದಲ್ಲಿ, ಪ್ರತಿಯೊಂದು ಪ್ರತಿಮೆಯಲ್ಲಿ ಶಿಲ್ಪಿಯ ಸ್ವತಂತ್ರ ಕಲ್ಪನಾ ಶಕ್ತಿ, ಸ್ವತಂತ್ರ ಅಭಿವ್ಯಕ್ತಿ ಚಾತುರ್ಯ ಅಡಿಗಡಿಗೂ ಕಾಣುತ್ತದೆ. ಇದರೊಟ್ಟಿಗೆ ಬದಲಾಗು ತ್ತಿರುವ ಧಾರ್ಮಿಕ ಭಾವನೆಗಳೂ ಪ್ರಕಟಗೊಂಡಿವೆ. ದೇವಾಲಯ ರೂಪಭೇದಗಳಲ್ಲಿ ಕಂಡುಬರುವ ಪ್ರಯೋಗಶೀಲ ಗುಣ ಶಿಲ್ಪಗಳಲ್ಲಿಯೂ ಪ್ರತಿಬಿಂಬಿತವಾಗಿದೆ. ಕೊನೆಯಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇಗುಲದಲ್ಲಿ ಹರಳುಗಟ್ಟಿದ್ದ ಕರ್ನಾಟಕ ಪ್ರಾಸಾದ ಲಕ್ಷಣ ವೈಶಿಷ್ಟ್ಯ ಅಲ್ಲಿಯ ಶಿಲ್ಪಗಳಲ್ಲಿ ಕೂಡ ನಿರ್ದಿಷ್ಟ ಶೈಲಿಯಾಗಿ ಹರಳುಗಟ್ಟಿದೆ. (ಎಸ್.ವಿ.ಪಿ.)

ನಾಟ್ಯ ಶಿವ ಶಿಲ್ಪಗಳು: ನೃತ್ಯ ಭಂಗಿಯಲ್ಲಿ ಅಭಿವ್ಯಕ್ತವಾಗಿರುವ ಸಮಗ್ರ ದೇವತಾ ಮೂರ್ತಿಗಳಲ್ಲಿ ಪರಶಿವನ ನಾಟ್ಯಭಂಗಿಗಳು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿವೆ. ನೃತ್ಯಶಿವನನ್ನು ರೂಪಿಸುವಾಗ ಧಾರ್ಮಿಕ, ಆಧ್ಯಾತ್ಮಿಕ, ಕಲಾತ್ಮಕ ಮತ್ತು ತಾತ್ತ್ವಿಕಾಂಶಗಳು ಹೃದ್ಯವಾಗಿರುತ್ತವೆ. ಅನೇಕ ಸಂಖ್ಯೆಯಲ್ಲಿ, ಭಂಗಿಯಲ್ಲಿ ಲಭ್ಯವಾಗಿರುವ ನೃತ್ಯಶಿವನನ್ನು ನೋಡುತ್ತಿದ್ದರೆ ಶಿವನು ನಾನಾ ಕಾರಣಕ್ಕಾಗಿ ನರ್ತನಗೈಯ್ಯುತ್ತಲೇ ಇದ್ದಾನೆಂದು ವೇದ್ಯವಾಗು ತ್ತದೆ. ಪೌರಾಣಿಕ ಕಥೆಗಳನ್ನಾಧರಿಸಿ ರೂಪಿತವಾಗುವ ಪರಶಿವನ ವಿವಿಧ ರೂಪಗಳ ಪರಿಕಲ್ಪನೆಗಳು ಸೃಜನಶೀಲ ಶಿಲ್ಪಿಗಳ ಕೈ ಚಳಕದಲ್ಲಿ ಕಲಾತ್ಮಕ ಪ್ರಪಂಚವನ್ನೇ ಸೃಷ್ಟಿಸಿವೆ. ಈ ರೀತಿ ಪ್ರಾರಂಭಿಕ ಹಂತದಲ್ಲಿ ಸೃಷ್ಟಿಸಲಾದ ನೃತ್ಯಶಿವನ ಪ್ರತಿರೂಪ ಮುಂದೆ ಭಾರತದಾದ್ಯಂತ ಪ್ರಚಲಿತವಾಗಿ ಆ ಭಂಗಿಗಳಿಂದಲೇ ಶಿಲ್ಪಕಲಾ ಶೈಲಿಯನ್ನು ಗುರುತಿಸುವ ಮಟ್ಟಕ್ಕೆ ಶಿವನ ನೃತ್ಯ ಭಂಗಿಗಳು ಮುಖ್ಯವಾಗುತ್ತವೆ. ಒಂದೊಂದು ಘಟ್ಟದಲ್ಲಿಯೂ ಒಂದೊಂದು ಪ್ರಮಾಣದಲ್ಲಿಯೂ ಒಂದೊಂದು ವಿನೂತನ ಭಂಗಿಯಲ್ಲಿಯೂ ರಚಿತವಾದ ಈ ಶಿವನ ನಾಟ್ಯಭಂಗಿಗಳು ಭಾರತೀಯ ಶಿಲ್ಪಕಲಾರಂಗದ ಮೇರುಕೃತಿಗಳ ಶ್ರೇಣಿಗೆ ಸೇರಿ ಭಾರತೀಯ ಸಂಸ್ಕೃತಿಯ ಸಂಕೇತಗಳಾಗಿ ಬೆಳೆದು ನಿಂತಿವೆ. ಶಿವನನ್ನು ದಿವ್ಯ ನರ್ತಕನಾಗಿ ಶಿಲ್ಪಿ ಕಲ್ಪಿಸಿಕೊಳ್ಳುವಾಗ ಸತ್ತ್ವಯುತ ಚಲನ ಮಾಧ್ಯಮದ ಮಾರ್ದನಿಗೆ ಒತ್ತು ನೀಡಿ ತನ್ನ ಮನ ಮತ್ತು ಕೈ ಚಳಕವನ್ನು ನಿರ್ದೇಶಿಸುತ್ತಾನೆ. ಶಿವನ ನೃತ್ಯ ವ್ಯೋಮಾತ್ಮಕ ಚಟುವಟಿಕೆಗಳಲ್ಲಿ ಪ್ರತಿಧ್ವನಿತವಾಗಿವೆ. ಈ ಚಿರಂತನ ನರ್ತನದಲ್ಲಿ ದುಷ್ಟಶಕ್ತಿಗಳ ಮೇಲೆ ಜಯದ ಸಾಧನೆ, ಮಾಯೆಯ ನಿರ್ಮೂಲನೆ, ಅನಂತದಲ್ಲಿ ಜೀವ ಲೀನವಾಗುವಿಕೆ ಮುಂತಾದ ಸಂದೇಶಗಳು ಮಾರ್ದನಿಗೊಳ್ಳುತ್ತವೆ. ಜೀವನದ ಸುಖದುಃಖಗಳನ್ನು ನಿಯಂತ್ರಿಸುತ್ತಾ ಸೃಷ್ಟಿ ಲಯಗಳ ಸಾಮರಸ್ಯವನ್ನು ಬೆಸೆಯುತ್ತಾ ಶಿವನು ತನ್ನ ಈ ಅಗೋಚರ ನರ್ತನ ಪ್ರಕ್ರಿಯೆಯಲ್ಲಿ ಇಡಿ ಸಂಸಾರವನ್ನೇ ಲೀನಗೊಳಿಸುತ್ತಾನೆ. ಪುರಾಣಗಳ ದಾರ್ಶನಿಕ ರೂಪಕಗಳು ಶಿವನ ಇಂತಹ ಪರಿಕಲ್ಪನೆಗಳ ಸುತ್ತ ಹೆಣೆದ ಲಯಬದ್ಧ ದಿವ್ಯರಚನೆಗಳು.

ಇಂತಹ ನೂರಾರು ಕಥಾನಕಗಳು ಕರ್ನಾಟಕದ ದೇವಾಲಯಗಳ ವಿವಿಧ ಭಾಗಗಳಲ್ಲಿ ಸಾಂದರ್ಭಿಕವಾಗಿ ಸಾದೃಶ್ಯಗೊಂಡಿವೆ. ಭಾರತದ ಇನ್ಯಾವ ಪ್ರಾಂತದಲ್ಲೂ ಕರ್ನಾಟಕದ ದೇವಾಲಯಗಳಲ್ಲಿ ಕಾಣುವಷ್ಟು ಶಿವನ ನೃತ್ಯಭಂಗಿಗಳ ಸಂಖ್ಯೆ ಮತ್ತು ವೈವಿಧ್ಯ ಕಂಡುಬರುವುದಿಲ್ಲ. ಕರ್ನಾಟಕದ ರೂವಾರಿಗಳ ಕಲಾತ್ಮಕ ದೃಷ್ಟಿ ಅವರ ರಚನಾ ಕೌಶಲ ಅವರಿಗೆ ದೊರೆತ ಧಾರ್ಮಿಕ ಪರಿಸರ ಮತ್ತು ಚಿತ್ರಿಸುವ ಸ್ವಾತಂತ್ರ್ಯ– ಈ ಅಂಶಗಳು ಶಿವನ ನೃತ್ಯ ಶಿಲ್ಪಗಳ ಸಂಯೋಜನೆಯಲ್ಲಿ ಆರ್ದ್ರವಾಗಿ ಹರಿದು ಬಂದಿದೆ.

ಕರ್ನಾಟಕದಲ್ಲಿ ಶಿವನ ಆರಾಧನೆಗಾಗಿ ನಿರ್ಮಿಸಿರುವ ನೂರಾರು ಮಹಾನ್ ದೇವಾಲಯಗಳಿವೆ. ಗರ್ಭಗುಡಿಯಲ್ಲಿ ಲಿಂಗರೂಪಿಯಾಗಿ ಆರಾಧನೆಗೊಳ್ಳುವ ಶಿವ ಅದೇ ದೇವಾಲಯದ ಭಿತ್ತಿಯಲ್ಲಿ ವಿವಿಧ ರೂಪಗಳಿಂದ ರಾರಾಜಿಸುತ್ತಾನೆ. ಹಲವು ಮೂರ್ತಿ ಶಿಲ್ಪಶಾಸ್ತ್ರ ಆಧಾರದಿಂದ ರಚಿತವಾಗಿದ್ದರೆ ಇನ್ನು ಹಲವು ನಾಟ್ಯಶಾಸ್ತ್ರ ಆಧಾರದಿಂದ ರಚಿತವಾಗಿರುತ್ತವೆ. ಹೀಗಾಗಿ ಶಿವನ ವಿವಿಧ ರೂಪಗಳ ಪರಿಚಯ ಅದಕ್ಕೆ ಸಂಬಂಧಪಟ್ಟ ಘಟನೆಗಳು ಪ್ರೇಕ್ಷಕರನ್ನು ಪೌರಾಣಿಕ ಸತ್ಯದೆಡೆಗೆ ಯೋಚಿಸಲು ಹಚ್ಚುತ್ತವೆ. ಶೈವಪುರಾಣಗಳು ರಚಿತವಾಗುತ್ತಿದ್ದ ಕಾಲದಿಂದ ಹಿಡಿದು ಶೈವ ಪಂಗಡಗಳ, ಕೃತಿಗಳ, ಆಗಮಗಳ ಬೆಳವಣಿಗೆಯ ಉದ್ದಕ್ಕೂ ಆಯಾ ನೆಲೆಯ ಹಿನ್ನೆಲೆಯಲ್ಲಿ ನಿರ್ಮಿಸಿದ ವಾಸ್ತುರಚನೆ ಶಿವನ ಶಿಲ್ಪಗಳ ಪ್ರತಿಪಾದನೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿವೆ. ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ನೊಳಂಬ ಹಾಗೂ ವಿಜಯನಗರ ಕಾಲದ ವಾಸ್ತುರಚನೆಗಳಲ್ಲಿ ನಾಟ್ಯ ಶಿವನ ಪ್ರತಿಪಾದನೆ ಬೇರೆಲ್ಲಾ ನಾಟ್ಯಶಿಲ್ಪಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮೂಡಿಬಂದಿದೆ. ಧಾರ್ಮಿಕ, ಆಧ್ಯಾತ್ಮಿಕ, ಕಲಾತ್ಮಕ ಮತ್ತು ತಾತ್ತ್ವಿಕ ಅಭಿವ್ಯಕ್ತತೆ ಈ ಶಿಲ್ಪಗಳನ್ನು ಕಂಡರಿಸುವಾಗ ಶಿಲ್ಪಿ ಗಮನದಲ್ಲಿರಿಸಿದ ಮೂಲ ಅಂಶವಾಗಿದೆ.

6ನೆಯ ಶತಮಾನದ ಚಳುಕ್ಯ ಶಿಲ್ಪಶೈಲಿಯ ಮೇರುಕೃತಿಗಳಲ್ಲಿ ಅಗ್ರಪಂಕ್ತಿಯಲ್ಲಿ ಬಾದಾಮಿಯ ನಟೇಶ ಶಿಲ್ಪ ಮೆರೆಯುತ್ತದೆ. ಬಾದಾಮಿಯ ನಾಲ್ಕು ಗುಹಾಂತರ ರಚನೆಗಳಲ್ಲಿ ಮೊತ್ತ ಮೊದಲ ಶಿಲ್ಪ ಇದಾಗಿದೆ. ಭಾರತೀಯ ಚಾರಿತ್ರಿಕ ಆಧಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನಾಟ್ಯಾಗಮವನ್ನು ಸಮಗ್ರವಾಗಿ ರೂಪಿಸಿರುವ ಪೂರ್ಣಪ್ರಮಾಣದ ನಟೇಶನ ಶಿಲ್ಪ ಪ್ರಪ್ರಥಮ ಉದಾಹರಣೆಯಾಗಿ ನಿಲ್ಲುತ್ತದೆ. ಚಾರಿತ್ರಿಕ ಅರಿವಿನ ಕೊರತೆ ಯಿಂದ ಅನೇಕ ಲೇಖಕರು ಚೋಳನಾಟ್ಯ ಶಿಲ್ಪವನ್ನೇ (ನಟರಾಜನೆಂದು ಪ್ರಖ್ಯಾತವಾಗಿರುವ) ಪ್ರಥಮವೆಂದು ತಿಳಿದು ಮತ್ತು ನಾಟ್ಯದ ಬೆಳವಣಿಗೆ ಅಗಿನಿಂದಲೇ ಆಗಿದೆಯೆಂದು ಭಾವಿಸುತ್ತಾರೆ. ಆದರೆ ಅವರು ಆಧರಿಸಿರುವ ಸಾಕ್ಷಿ ಹನ್ನೊಂದನೆಯ ಶತಮಾನದ್ದು.

ಕಲಾವಿಶ್ಲೇಷಣೆಯ ಎಲ್ಲ ಭೌತಿಕ ಅಂಶಗಳನ್ನು ಈ ಶಿಲ್ಪವು ಒಳಗೊಂಡಿದೆ. ರಚನಾ ತಂತ್ರದ ಅಂಶಗಳೂ ಪ್ರಮಾಣಬದ್ಧತೆಯ ನೈಪುಣ್ಯದೆಡೆಗೆ ಬೆರಳುಮಾಡಿ ತೋರಿಸುತ್ತದೆ. ಸಂಯೋಜನಾ ತಂತ್ರದ ವಾಸ್ತವಿಕಾಂಶಗಳಾದ ರೇಖಾವಿನ್ಯಾಸ, ಅಂಗಾಂಗಳ ಸಮತೋಲನ, ಲಂಬತೆ ಮತ್ತು ಅಡ್ಡ ಅವುಗಳ ಪ್ರಮಾಣದಲ್ಲಿ 18 ಕೈಗಳನ್ನು ಸಂಯೋಜಿಸಿರುವ ರೀತಿ, ಕೆಳಭಾಗದಲ್ಲಿ ಅಡ್ಡ ವಿನ್ಯಾಸದಲ್ಲಿ ಗಣೇಶ ಮತ್ತು ವಾದ್ಯಗಾರನ ಚಿತ್ರಣ ಮುಂತಾದ ಅಂಶಗಳು ಮುಖ್ಯವಾಗುತ್ತವೆ. ಅರ್ಧ ಉಬ್ಬು ತಂತ್ರವನ್ನು ಶಿಲ್ಪರಚನೆಗಾಗಿ ಬಳಸಿರುವುದ ರಿಂದ ಈ ಶಿಲ್ಪ ಗುಹಾಂತರ ವಾಸ್ತುವಿನ ತಂತ್ರತೆಯ ಚೌಕಟ್ಟಿನಲ್ಲಿ ಸಮರ್ಪಕವಾಗಿ ನಿಲ್ಲುತ್ತದೆ.

ಭರತನ ನಾಟ್ಯಶಾಸ್ತ್ರ ಸಂಪ್ರದಾಯವನ್ನು ಆಧರಿಸಿ ಚಳುಕ್ಯ ಶಿಲ್ಪಗಳು ಐಹೊಳೆಯ ಹುಚ್ಚಪ್ಪಯ್ಯ ಮಠ, ಪಟ್ಟದಕಲ್ಲಿನ ವಿರೂಪಾಕ್ಷ, ಸಂಗಮೇಶ್ವರ ಮತ್ತು ಪಾಪನಾಥ ದೇವಾಲಯಗಳಲ್ಲಿ ಊರ್ಧ್ವಜಾನು, ಚತುರ, ಅರ್ಧ ಮತ್ತಲ್ಲಿ, ರೇಚಿತ ನಿಕುಟ್ಟಿತ, ಅರ್ಧಸೂಚಿ, ಪೃಷ್ಠಸ್ವಸ್ತಿಕ ಮುಂತಾದ ಕರಣಗಳಲ್ಲಿ ನಾಟ್ಯಶಿವನ ಶಿಲ್ಪಗಳನ್ನು ಕಲಾತ್ಮಕವಾಗಿ ರಚಿಸಿದ್ದಾರೆ. ರಾಷ್ಟ್ರಕೂಟರ ಕಾಲದ ಶಿವನ ನಾಟ್ಯಶಿಲ್ಪಗಳನ್ನು ಎಲ್ಲೋರದ ದಶಾವತಾರ ಮತ್ತು ಕೈಲಾಸ ಗುಹಾಂತರ ದೇವಾಲಯಗಳಲ್ಲಿ ಕಾಣುತ್ತೇವೆ. ಪೌರುಷಯುತವಾಗಿ ತೋರುವ ಈ ಶಿಲ್ಪಗಳು ರಸಭರಿತ ಕಲಾಕೃತಿಗಳು. ಮಾನವಾಕೃತಿಗೆ ಮೀರಿ ಭಾವನಾತ್ಮಕ ಚಲನೆಯಲ್ಲಿ ಆಲೀಢಸ್ಥಾನ, ಊರ್ಧ್ವಜಾನು ಮತ್ತು ಭುಜಂಗ ತ್ರಾಸಿತ ಕರಣಗಳಲ್ಲಿ ಶಿವನು ಇಲ್ಲಿ ನರ್ತಿಸುತ್ತಾನೆ. ಕಲ್ಯಾಣ ಚಾಲುಕ್ಯರ ಕಾಲದ ನಾಟ್ಯಶಿವನ ಶಿಲ್ಪಗಳು ಪ್ರಮಾಣದಲ್ಲಿ ಚಿಕ್ಕವಾದರೂ ಒಂದು ಕರಣದಿಂದ ಇನ್ನೊಂದು ಕರಣಕ್ಕೆ ಸಾಗುವ ಚಲನೆಗಳನ್ನು ಸ್ಪಷ್ಟವಾಗಿ ಸೂಸುವ ರಚನೆಗಳು. ಲಕ್ಕುಂಡಿ, ಇಟಗಿಯ ದೇವಾಲಯಗಳಲ್ಲಿ ಹಲವು ಅಪರೂಪದ ನಾಟ್ಯ ಶಿವನ ಶಿಲ್ಪಗಳಿವೆ. ಹೊಯ್ಸಳರ ಕಾಲದ ನರ್ತನಶಿವನ ಶಿಲ್ಪಗಳಲ್ಲಿ ಮೊದಲಿನ ಸತ್ತ್ವ ಕಾಣದೆ ಆಭರಣಗಳ ಅಲಂಕಾರಗಳಿಂದ ಜಗ್ಗಿ ನರ್ತಿಸುವ ಭಾವ ತೋರುವುದು. ಹಳೇಬೀಡಿನ ಜೋಡಿ ದೇವಾಲಯಗಳ ಭಿತ್ತಿಗಳಲ್ಲಿ ಹಾಗೂ ಲಲಾಟ ಬಿಂಬಗಳಲ್ಲಿ ಊರ್ಧ್ವಜಾನು ಕರಣಗಳಲ್ಲಿ ನರ್ತಿಸುವ ಶಿವನ ರಚನೆಗಳನ್ನು ಕಾಣಲು ಸಾಧ್ಯ. ಈ ಹೊತ್ತಿಗೆ ಶಿವನ ನಾಟ್ಯಭಂಗಿಗಳಲ್ಲಿ ವೈವಿಧ್ಯ ಕಡಿಮೆಯಾಗಿರುವುದನ್ನು ಗಮನಿಸಬಹುದು. ವಿಜಯನಗರ ಕಾಲದಲ್ಲಿ ನಾಟ್ಯಶಿವನ ಶಿಲ್ಪಗಳು ವಿರಳವಾಗುತ್ತವೆ. ಲೋಹ ಶಿಲ್ಪಗಳು ನಟರಾಜನ ರೂಪದಲ್ಲಿ ಕಂಡುಬರುತ್ತವೆ. ಈ ವೇಳೆಗೆ ಚೋಳರ ಕಾಲದ ನಾದಾಂತ ಭಂಗಿಯಲ್ಲಿರುವ ನಟರಾಜ ಶಿವನ ಮೂರ್ತಿ ಹೆಚ್ಚು ಜನಪ್ರಿಯತೆ ಗಳಿಸಿದ್ದು ದೇವಾಲಯ ಭಿತ್ತಿಗಳಲ್ಲಿ ಶಿಲೆಯಲ್ಲಿ ಹಾಗೂ ಲೋಹ ಮಾಧ್ಯಮದಲ್ಲಿ ಶಿವನ ಆನಂದ ತಾಂಡವ ಮೂರ್ತಿ ಚಿರಸ್ಥಾಯಿಯಾಗಿ ಉಳಿಯುವಂತಾಯಿತು. ಭಾರತೀಯ ತಾತ್ತ್ವಿಕನೆಲೆಯನ್ನು ಪ್ರತಿಪಾದಿಸುವ ಒಂದು ಅದ್ವಿತೀಯ ಮೇರು ರಚನೆ ಈ ನಟರಾಜ ಶಿಲ್ಪವಾಗಿದೆ. (ಸಿ.ಎಂ.ಎನ್.)

**ಕುಬ್ಜಗಣ ಶಿಲ್ಪಗಳು:** ಬಾದಾಮಿ ಚಳುಕ್ಯರ ಕಾಲದ ಶಿಲ್ಪಗಳನ್ನು ಮೂರು ರೀತಿಯಾಗಿ ವಿಂಗಡಿಸಬಹುದು 1. ಅತಿಎತ್ತರವಾದ ಶಿಲ್ಪಗಳು. 2. ಸಾಮಾನ್ಯ ಎತ್ತರದ ಶಿಲ್ಪಗಳು. 3.ಅತಿಕುಳ್ಳಗಿನ ಶಿಲ್ಪಗಳು. ಶಿಲ್ಪಶಾಸ್ತ್ರಗಳಲ್ಲಿ ಮುಖ್ಯವಾಗಿ ಮೂರು ವಿಧವಾದ ರಚನೆಗಳಾಗ ಬೇಕೆಂಬ ನಿಯಮವಿದೆ. 1. ಉತ್ತಮ ದಶತಾಲ. 2. ಮಧ್ಯಮ ದಶತಾಲ. 3. ಅಧಮ ದಶತಾಲ. ಸಾಮಾನ್ಯವಾಗಿ ದಶತಾಲಪ್ರಮಾಣದ ಅನ್ವಯ ರೂಪುಗೊಳ್ಳುವ ಮೂರ್ತಿಗಳ

ವಿವರ ಹೀಗಿದೆ: ಉತ್ತಮ ದಶತಾಲದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಅರ್ಧನಾರೀಶ್ವರ, ದತ್ತಾತ್ರೇಯ, ಬುದ್ಧ, ಅರ್ಹಂತ, ವಾಸುದೇವ, ಭಕ್ತಮೂರ್ತಿಗಳ (ಸಾಯುಜ್ಯ) ರಚನೆಯಾಗುತ್ತವೆ. ಮಧ್ಯಮ ದಶತಾಲದಲ್ಲಿ ಸರಸ್ವತಿ, ಲಕ್ಷ್ಮಿ, ಉಮಾ, ದುರ್ಗೆ, ಭೂದೇವಿ, ನೀಳಾದೇವಿ, ಸಪ್ತಮಾತೃಕೆಯರು, ಭಕ್ತಮೂರ್ತಿಗಳು, ಶ್ರೀರಾಮ ಪರಿವಾರದ ಮೂರ್ತಿಗಳು (ಸಾರೂಪ್ಯ) ರಚನೆಯಾಗುತ್ತವೆ. ಅಧಮ ದಶತಾಲದಲ್ಲಿ ಇಂದ್ರ, ಅಗ್ನಿ, ವರುಣ, ಅಶ್ವಿನಿದೇವತೆಗಳು, ಸ್ಕಂದ, ವೀರಭದ್ರ, ಕ್ಷೇತ್ರಪಾಲಕ, ಈಶಾನ, ಸೂರ್ಯ, ಚಂದ್ರ, ಯಮ, ವಾಯು, ಚಂಡಿಕೇಶ್ವರ, ಆದಿತ್ಯರು, ಏಕಾದಶ ರುದ್ರರು, ಮಹರ್ಷಿಗಳು, ಭೃಗು, ಮಾರ್ಕಂಡೇಯ, ಆರ್ಯಮ, ಲಕ್ಷ್ಮಣ, ಭಕ್ತಮೂರ್ತಿ (ಸಾಮೀಪ್ಯ) ರಚನೆಯಾಗುತ್ತವೆ.

ಈ ಹಿನ್ನೆಲೆಯಲ್ಲಿ ಬಾದಾಮಿ ಚಲುಕ್ಯ ಶಿಲ್ಪಗಳನ್ನು ಗಮನಿಸಿದಾಗ ಉತ್ತಮ ದಶತಾಲದಲ್ಲಿ ವಿಷ್ಣುವಿನ ವಿವಿಧ ಅವತಾರಗಳಿಗೆ ಸಂಬಂಧಿಸಿದಂತಹ ಶಿಲ್ಪಗಳು, ಅರ್ಧನಾರೀಶ್ವರ, ಶಿವನ ನೃತ್ಯಶಿಲ್ಪಗಳು ರಚನೆಯಾಗಿವೆ. ಮಧ್ಯಮ ದಶತಾಲದಲ್ಲಿ ಲಕ್ಷ್ಮಿ, ಉಮಾ, ದುರ್ಗೆ, ಭೂದೇವಿ, ಸಪ್ತಮಾತೃಕೆಯರ ಶಿಲ್ಪಗಳು ನಿರ್ಮಿತವಾಗಿವೆ. ಅಧಮ ದಶತಾಲದಲ್ಲಿ ಏಕಾದಶರುದ್ರರು ಎಂದು ಹೇಳಲ್ಪಟ್ಟ ಶಿಲ್ಪಗಳು ಹೆಚ್ಚಾಗಿ ನಿರ್ಮಿತವಾಗಿವೆ. ಅಲ್ಲದೆ ವೀರಭದ್ರ, ಸ್ಕಂದ ಇತರ ದೇವತೆಗಳು ಗಂಧರ್ವರು. ಅಧಮ ದಶತಾಲದಲ್ಲಿ ನಿರ್ಮಿತರಾಗಿದ್ದಾರೆ.

ಋಗ್ವೇದದಲ್ಲಿ 33ದೇವತೆಗಳ ವಿವರಣೆ ಹೀಗಿದೆ: 33 ದೇವತೆಗಳಲ್ಲಿ ಭೂ ಸ್ಥಾನೀಯ ದೇವತೆಗಳು, ಅಂತರಿಕ್ಷಸ್ಥಾನೀಯ ದೇವತೆಗಳು ಹಾಗೂ ದ್ಯುಸ್ಥಾನೀಯ ಆಕಾಶ ದೇವತೆಗಳು ಎಂದು ಮೂರು ರೀತಿಯ ದೇವತೆಗಳಿದ್ದಾರೆ. ಅಂದರೆ ಭೂಮಿ, ಅಂತರಿಕ್ಷ ಹಾಗೂ ಆಕಾಶ ಎಂಬ ಮೂರು ಸ್ತರಗಳಲ್ಲಿ ದೇವತೆಗಳು ನೆಲೆಸಿರುತ್ತಾರೆ. ಭೂಮಿಯಲ್ಲಿ ಅಷ್ಟವಸುಗಳು (8 ಭೂದೇವತೆಗಳು) ಅಂತರಿಕ್ಷದಲ್ಲಿ ಏಕಾದಶರುದ್ರರು (11 ರುದ್ರರು) ಮತ್ತು ಆಕಾಶದಲ್ಲಿ ದ್ವಾದಶ ಆದಿತ್ಯರು (12 ಆದಿತ್ಯರು) ನೆಲೆಸಿರುತ್ತಾರೆ. ಇವರಲ್ಲದೆ ಅದಿತಿ ಮತ್ತುಪ್ರಜಾಪತಿ ಎಂಬ ಅನಿರ್ದಿಷ್ಟಸ್ಥಾನೀಯ ದೇವತೆಗಳೂ ಇದ್ದಾರೆ. ಈ 33 ದೇವತೆಗಳಿಗೆ ಇಂದ್ರನೇ ಅಧಿಪತಿ. ಇವರೆಲ್ಲರೂ ವಿವಿಧ ಹೆಸರುಗಳಿಂದ ಉಲ್ಲೇಖಿತರಾಗಿ ಪ್ರಖ್ಯಾತರಾಗಿದ್ದಾರೆ.

ಏಕಾದಶರುದ್ರರ ಅಧಿಪತಿ ರುದ್ರ. ಅಗ್ನಿಯ ಎರಡು ರೂಪಗಳಲ್ಲಿ ಅಂದರೆ ಶಿವ ಮತ್ತು ರುದ್ರರಲ್ಲಿ ರುದ್ರನು ಪ್ರಕೃತಿ ವಿಕೋಪಗಳ ದೇವತೆಯಾಗಿ ಪರಿಗಣಿತನಾಗಿದ್ದರಿಂದ ಅವನ ಅನುಚರರನ್ನು ಸ್ತುತಿಸುವ ಅವರನ್ನು ಪ್ರಸನ್ನರನ್ನಾಗಿಸಿ ಸೃಷ್ಟಿಯ ಸಮತೋಲನವನ್ನು ಕಾಪಾಡುವ ರೂಢಿ ಇದ್ದಿತು. ಹೀಗೆ ಇವರು ಇಂದ್ರನ ಆತ್ಮೀಯರಾಗಿ ಮಹಾದೇವನ ಅನುಚರರಾಗಿ, ವರುಣನ ನಿಕಟವರ್ತಿಗಳಾಗಿ ಭೂಮಿತಾಯಿಯ ಮಕ್ಕಳಾಗಿ, ಅಂತರಿಕ್ಷ ದೇವತೆಗಳಾಗಿ ವಿವಿಧ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ಆದ್ದರಿಂದ ಇವರನ್ನು ಮುಂದೆ ಪುರಾಣಯುಗದಲ್ಲಿ ಗಂಧರ್ವರು (ಕಿನ್ನರರು, ಕಿಂಪುರುಷರು), ಗಣಗಳು, ಯಕ್ಷರು ಭಾರವಾಹಕರು ಎಂದೂ ಅಷ್ಟೈಶ್ವರ್ಯ ಸಂಪತ್ತನ್ನು ನೀಡುವವರಾದ್ದರಿಂದ ಕುಬೇರನ ಮಕ್ಕಳೆಂದೂ ಪರಿಗಣಿತರಾಗಿ ಬಹು ವಿಧವಾಗಿ ಪೂಜಿಸಲ್ಪಟ್ಟಿದ್ದಾರೆ. ಕಾಲಾಂತರದಲ್ಲಿ ಭೂಮಿ ಮತ್ತು ಆಕಾಶ ಮಧ್ಯದಲ್ಲಿ ಬರುವ ಈ 11 ಅಂತರಿಕ್ಷ ದೇವತೆಗಳನ್ನು ಮನುಷ್ಯನು ಪೂಜಿಸಿದಾಗ ಬಹು ಬೇಗ ಪ್ರಸನ್ನರಾಗುವರೆಂದೂ ಸಂಪತ್ತು, ಐಶ್ವರ್ಯ, ಸುಖಭೋಗಗಳನ್ನು ನೀಡುವಂತಹ ದೇವತೆಗಳೆಂಬ ನಂಬಿಕೆ-ಪ್ರತೀತಿ ನೆಲೆಯೂರಿ ಇವರನ್ನು ವಿಶೇಷವಾಗಿ ಪೂಜಿಸುವ ಸ್ಮರಿಸುವ ಪ್ರವೃತ್ತಿ, ಸಂಸ್ಕೃತಿ ಪ್ರಾಚೀನ ಭಾರತದಲ್ಲಿತ್ತು. ಇತಿಹಾಸದ ಆರಂಭಕಾಲಕ್ಕೆ ಇವರು ಹೆಚ್ಚಾಗಿ ಯಕ್ಷರೂಪದಿಂದ ಪೂಜೆಗೊಂಡು ಜೈನ-ಬೌದ್ಧಪರಂಪರೆಯಲ್ಲಿ ವಿಶೇಷ ಪ್ರಾಶಸ್ತ್ಯವನ್ನು ಪಡೆದುಕೊಂಡಿದ್ದಾರೆ. ಯಕ್ಷಶಿಲ್ಪಗಳು ನಮಗೆ ಬಾರ್ಹುತ್ ಹಾಗೂ ಸಾಂಚಿಸ್ತೂಪಗಳಲ್ಲಿ ಕಾಣಸಿಗುತ್ತವೆ. ಶಿವನ ಅನುಚರರಾದ ಶಿವಗಣಗಳಾಗಿ ಇವರಿಗೆ ವಿಶೇಷ ಮಾನ್ಯತೆ ಇದ್ದುದು ಸ್ಪಷ್ಟ (ಉದಾ: 5ನೆಯ ಶತಮಾನದ ಭೂಮಾರ ದೇವಾಲಯ). ಈ ಎಲ್ಲ ಹಿನ್ನೆಲೆಗಳಿಂದ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ರೀತಿಯಾಗಿ ಮಾನ್ಯತೆಗೊಳಗಾದ ಏಕಾದಶರುದ್ರರು ಮತ್ತು ಅನುಚರರನ್ನು ಬಾದಾಮಿ ಚಳುಕ್ಯರ ಕಾಲದಲ್ಲಿ ಬಹಳ ವೈಶಿಷ್ಟ್ಯಪೂರ್ಣವಾಗಿ ಗಂಧರ್ವರಾಗಿ, ಗಣಗಳಾಗಿ, ಯಕ್ಷರಾಗಿ, ರಾಕ್ಷಸಗಣಗಳಾಗಿ, ನಿರೂಪಿಸಲ್ಪಟ್ಟಿರುವುದನ್ನು ಗಮನಿಸಬಹುದು.

ಕುಬ್ಜಶಿಲ್ಪಗಳು: ಈ ಶಿಲ್ಪಗಳನ್ನು ನಿರ್ಮಿಸುವಾಗ ಅಧಮ ದಶತಾಲದ ಪ್ರಮಾಣವನ್ನು ಇನ್ನೂ ಸಂಕುಚಿತಗೊಳಿಸಿ ಅಂದರೆ ಇರುವ ಪ್ರಮಾಣವನ್ನು ಮತ್ತಷ್ಟು ಇಳಿಸಿ ರೂಪಿಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಅಧಮ ದಶತಾಲದಲ್ಲಿ ಗೋಪಾಲಕೃಷ್ಣ, ಸ್ಕಂದ ಹಾಗೂ ಇತರ ದೇವತೆಗಳಿದ್ದರೂ ಯಕ್ಷ, ಕಿನ್ನರ, ಕಿಂಪುರುಷ, ಗಣ, ರಾಕ್ಷಸಗಣಗಳನ್ನು ನಿರ್ಮಿಸುವಾಗ ಇನ್ನೂ ಕುಂಚಿಸಿ, ಸಂಕೋಚಗೊಳಿಸಿ ನಿರ್ಮಿಸುವುದರಿಂದ ಇವುಗಳು ಕುಬ್ಜಶಿಲ್ಪಗಳು ಎಂದು ಕರೆಯಲ್ಪಟ್ಟಿವೆ. ವಾಸ್ತುಶಾಸ್ತ್ರದ ಹಿನ್ನೆಲೆಯಲ್ಲಿ ಇವರನ್ನು ಆಲಂಕಾರಿಕವಾಗಿ ಬಳಸಬಹುದು ಎಂಬ ವಿವರಣೆ ಮಾತ್ರ ದೊರಕುತ್ತದೆ. ಇವರಿಗೆ ನಿರ್ದಿಷ್ಟವಾದ ಸ್ಥಾನವಾಗಲಿ, ನಿರ್ದಿಷ್ಟ ಅಳತೆಯಾಗಲಿ ಇರಬೇಕೆಂಬ ನಿಯಮವಿಲ್ಲ. ಸಾಮಾನ್ಯ ಶಿಲ್ಪದಲ್ಲಿ ಒಂದು ಭಾಗವಾಗಿ ಮತ್ತು ದೇಹ ಕೈಕಾಲುಗಳನ್ನು ಸಂಕುಚಿಸಿ ಮಾಡಬೇಕೆಂಬ ನಿಯಮ ಮಾತ್ರವೇ ಇರುವುದರಿಂದ ಬಾದಾಮಿ ಚಳುಕ್ಯರ ಶಿಲ್ಪಿಗಳು ಈ ಶಿಲ್ಪಗಳನ್ನು ಆಲಂಕಾರಿಕವಾಗಿ ಮಾತ್ರವಲ್ಲದೆ ವೈದಿಕ ಹಿನ್ನಲೆಯಲ್ಲಿ ಶಿಲ್ಪಶಾಸ್ತ್ರ, ವಾಸ್ತುಶಾಸ್ತ್ರ, ಪುರಾಣಗಳ ಹಿನ್ನೆಲೆಯಲ್ಲಿ ಹಾಗೆಯೇ ಸಮಕಾಲೀನ ಸಂಸ್ಕೃತಿಯ ನಿರೂಪಣೆಗಾಗಿ ಅತ್ಯಂತ ಸೂಕ್ತರೀತಿಯಲ್ಲಿ ಬಳಸಿಕೊಂಡಿದ್ದಾರೆ.

ಚಳುಕ್ಯರ ಕಾಲದ ಪ್ರಾರಂಭಿಕ ಹಂತದ ರಾವಳಫಡಿ ಗುಹಾದೇವಾಲಯದಿಂದ 10ನೆಯ ಶತಮಾನದ ಗಳಗನಾಥ ಶಿಲ್ಪಗಳ ಸಂಕೀರ್ಣಗಳವರೆಗೆ ಎಲ್ಲ ವಾಸ್ತುರಚನೆಗಳಲ್ಲಿ ಅಂದರೆ ಗುಹಾ ದೇವಾಲಯಗಳ ಅಧಿಷ್ಠಾನ ಪಟ್ಟಿಕೆಗಳಲ್ಲಿ, ದೇವಮೂರ್ತಿಗಳ ಕೆಳಗಿನ ಪಟ್ಟಿಕೆಗಳಲ್ಲಿ, ದೇವಾಲಯಗಳ ಅಧಿಷ್ಠಾನಗಳಲ್ಲಿ, ಕಂಬಗಳಲ್ಲಿ, ಕಂಬಗಳ ಮಣಿಪಟ್ಟಿಕೆಗಳಲ್ಲಿ, ದ್ವಾರಬಂಧಗಳಲ್ಲಿ ಛತ್ತಿನ ಸಾಲುಗಳಲ್ಲಿ ಹೀಗೆ ಎಲ್ಲೆಲ್ಲಿ ಇವರನ್ನು ನಿರೂಪಿಸಲು ಸಾಧ್ಯವಿದೆಯೋ ಎಲ್ಲ ಕಡೆಗೂ ಇವರನ್ನು ನಿರೂಪಿಸಿ ಅವರ ಪ್ರಾಶಸ್ತ್ಯವನ್ನು ತೋರಿಸಿ ಕೊಟ್ಟಿದ್ದಾರೆ.

ಶಿಲ್ಪ ಲಕ್ಷಣಗಳು: ಅತಿ ಚಿಕ್ಕ ಶಿಲ್ಪಗಳಾಗಿ ನಿರ್ಮಿಸಲ್ಪಟ್ಟಿರುವ ಇವುಗಳಲ್ಲಿ ಕುಬ್ಜವೂ ಸ್ಥೂಲವೂ ಆದ ದೇಹ, ಮೋಟಾದ ಕೈಕಾಲುಗಳು ಅಗಲವಾದ ಮುಖ ಮುಂತಾದವು ಮುಖ್ಯ ಲಕ್ಷಣಗಳಾಗಿವೆ. ವೇಷಭೂಷಣದಲ್ಲಿ ಸಣ್ಣದಾದ ಲಂಗೋಟಿಯಂತಹ ವಸ್ತ್ರವನ್ನು ಸೊಂಟದಿಂದ ಕೆಳಗೆ ಕಚ್ಚೆಯಾಗಿ, ಕೆಲವೊಮ್ಮೆ ಹೊಟ್ಟೆಯ ಮೇಲೆ ಇಳಿಬಿದ್ದಿರುವಂತೆ, ಭಾರದ ಹೊಟ್ಟೆಯನ್ನು ಎತ್ತಿ ಹಿಡಿದು ಕಟ್ಟಿರುವಂತೆ, ಸೊಂಟದ ಪಟ್ಟಿಯನ್ನು ಬಿಗಿದು ಕಟ್ಟಿರುವಂತೆ, ಕೈಯಲ್ಲಿ ಕಡಗ, ಕಾಲಿನಲ್ಲಿ ಕಡಗ, ದುಂಡಾದ, ದಪ್ಪ ಕೊರಳಲ್ಲಿ ಅಡ್ಡಿಕೆಯಂತಹ ಆಭರಣ, ಅಗಲವೂ ನೀಳವೂ ಆದ ಬಳೆಯಂತಹ ಕಿವಿಯೋಲೆ ಇತ್ಯಾದಿಗಳು ಇವುಗಳ ಮುಖ್ಯ ಅಲಂಕರಣಗಳಾಗಿವೆ. ತಲೆಗೂದಲು ಹೆಚ್ಚು ಒತ್ತೊತ್ತಾಗಿ, ಗುಂಗುರು ಕೂದಲು ಕೆಲವೊಮ್ಮೆ ಇಳಿಬಿದ್ದಂತೆ, ಮಧ್ಯೆ ಬೈತಲೆ ತೆಗೆದು ಎರಡು ಭಾಗ ಮಾಡಿ ಇಳಿಬಿಟ್ಟಂತೆ, ಎಲ್ಲ ಕೂದಲನ್ನು ಸೇರಿಸಿ ನೆತ್ತಿಯ ಮೇಲೆ ಜಡೆಯನ್ನು ಕಟ್ಟಿದಂತೆ ಚಿತ್ರ ವಿಚಿತ್ರರೀತಿಯ ಕೇಶವಿನ್ಯಾಸಗಳಲ್ಲಿ ನಿರೂಪಿತವಾಗಿವೆ. ಅಗಲವಾದ ದುಂಡು ಮುಖ, ಅಗಲವಾದ ಕಣ್ಣು, ತುಂಬುಗೆನ್ನೆ ಅಗಲವೂ ಹಾಗೂ ಕೆಲವೊಮ್ಮೆ ನೀಳವೂ ಆದ ಕಿವಿ, ದಪ್ಪನೆಯ ಕೆಳದುಟಿ, ಮುಖದಲ್ಲಿ ಮುಗ್ಧಮಂದಹಾಸ; ಇವು ಕುಬ್ಜಗಣಗಳ ಮುಖಲಕ್ಷಣಗಳಾಗಿವೆ. ಒಟ್ಟಾರೆ ಈ ಕುಬ್ಜಶಿಲ್ಪಗಳನ್ನು ನೋಡಿದಾಕ್ಷಣ ಪುಟ್ಟ ಮುಗ್ಧ ಮಕ್ಕಳನ್ನು ನೋಡುತ್ತಿರುವಂತೆ ಭಾಸವಾಗುತ್ತದೆ. ಮುಖದಲ್ಲಿನ ಮುಗ್ಧಸ್ಮಿತ ನೋಡುಗರ ಮನಸ್ಸನ್ನು ಸೆಳೆಯುತ್ತದೆ.

ಕುಬ್ಜಗಣಗಳು ಹೆಚ್ಚಾಗಿ ನೃತ್ಯ-ಸಂಗೀತಗಳ ನಿರೂಪಣೆಯಲ್ಲಿ ಬಳಕೆಯಾಗಿವೆ. ಬಾದಾಮಿಯ ಗುಹಾ ದೇವಾಲಯಗಳಲ್ಲಿ, ಮಾಲಗಿತ್ತಿ ದೇವಾಲಯದಲ್ಲಿ ರೂಪಿತವಾಗಿರುವ ಶಿಲ್ಪಗಳಿಗೂ ಪಟ್ಟದಕಲ್ಲು, ಐಹೊಳೆಯ ದೇವಾಲಯಗಳಲ್ಲಿ ರೂಪಿತವಾಗಿರುವ ಶಿಲ್ಪಗಳಿಗೂ ಬಹಳ ವ್ಯತ್ಯಾಸವಿದೆ. ಶೈಲಿ, ಆಕಾರ, ಅಳತೆ, ರೂಪಿತವಾಗಿರುವ ಸ್ಥಳ, ಅವುಗಳನ್ನು ಬಳಸಿ ಕೊಂಡು ಹೇಳಲು ಹೊರಟಿರುವ ವಿಷಯ-ಹೀಗೆ ಎಲ್ಲದರಲ್ಲೂ ವ್ಯತ್ಯಾಸಗಳಿವೆ.

ಬಾದಾಮಿಯ ಗುಹಾ ದೇವಾಲಯಗಳಲ್ಲಿ ಹೊರಗಿನ ಅಧಿಷ್ಠಾನ ಪಟ್ಟಿಕೆಗಳಲ್ಲಿ ಕಂಡುಬರುವ ಕುಬ್ಜಗಣಗಳಿಗೂ ಒಳಗಿನ ಕುಬ್ಜಗಣಗಳಿಗೂ ವ್ಯತ್ಯಾಸಗಳಿವೆ. ಹೊರಗಿನ ಪಟ್ಟಿಕೆಗಳಲ್ಲಿ ಉತ್ಸವ ಹಾಗೂ ಸಂಭ್ರಮದ ವಾತಾವರಣವಿರುವ ನರ್ತನವು ಕಂಡುಬಂದರೆ ಒಳಗಿನ ದೇವತಾ ಮೂರ್ತಿಗಳ ಕೆಳಗಿನ ಪಟ್ಟಿಕೆಗಳಲ್ಲಿ ನಾಟ್ಯಶಾಸ್ತ್ರದನ್ವಯದಂತೆ ನರ್ತಿಸುತ್ತಿರುವಂತೆ ಮತ್ತು ಅದಕ್ಕೆ ಪೂರಕವಾದ, ವಾದ್ಯಗಳೊಂದಿಗೆ ನಿರೂಪಿತರಾಗಿದ್ದಾರೆ. ಇಲ್ಲಿ ದೇಶೀ ಕರಣವೆಂಬ ಅನೇಕ ನೃತ್ಯ ಬಂಧಗಳನ್ನು ಕಾಣಬಹುದು.

ಮೊದಲನೆಯ ವೈಷ್ಣವ ಗುಹೆಯ ಹೊರ ಅಧಿಷ್ಠಾನದ ಪಟ್ಟಿಕೆಯಲ್ಲಿ ಈ ಶಿಲ್ಪಗಳ ಸುಂದರ ನಿರೂಪಣೆ ಇದೆ. ಗರ್ಭಗೃಹದಿಂದ ಬಲಭಾಗದ ಅಧಿಷ್ಠಾನದಲ್ಲಿ ಅನೇಕ ಕರಣಗಳು ಸುಂದರವಾಗಿ ಕಂಡುಬರುತ್ತವೆ. ಇಕ್ಕೆಲದಲ್ಲಿ ವಾದ್ಯದವರು ಬಹಳ ಸಂಭ್ರಮದಿಂದ ವಾದ್ಯಗಳನ್ನು ನುಡಿಸುತ್ತಿದ್ದರೆ ಮಧ್ಯದ ನಾಲ್ವರು ನರ್ತಕರು ಒಬ್ಬರಿಗೊಬ್ಬರು ಕಡಿಮೆ ಇಲ್ಲವೆಂಬಂತೆ ಬಹಳ ಸಂಭ್ರಮದಿಂದ ನರ್ತಿಸುತ್ತಿದ್ದಾರೆ. ಅವರ ನಗು, ಭಾವ ಅತ್ಯಂತ ಮನೋಹರವಾಗಿ ಬಿಂಬಿತವಾಗಿದೆ.

ಮೂರನೆಯಗುಹೆ (ವೈಷ್ಣವಗುಹೆ) ಎಲ್ಲ ರೀತಿಯಲ್ಲಿಯೂ ಪ್ರಮುಖವಾದುದು. ಇಲ್ಲಿಯ ಕುಬ್ಜಶಿಲ್ಪಗಳು ಹಲವು ಬಗೆಗಳಲ್ಲಿ ನಿರೂಪಿಸಲ್ಪಟ್ಟಿವೆ. ಹೊರಗೋಡೆಯ ಅಧಿಷ್ಠಾನ ಪಟ್ಟಿಕೆಗಳ ಒಂದು ಚೌಕದಲ್ಲಿ ಇಬ್ಬರಂತೆ ಬಹಳ ಇಕ್ಕಟ್ಟಾಗಿ ಶಿಲ್ಪರಚನೆಗಳಿವೆ. ಇವುಗಳಲ್ಲಿ ಚಲನೆ ಇದ್ದರೂ ನರ್ತನದ ಓಘವಾಗಲಿ ಶೈಲಿಯಾಗಲಿ ಸ್ಪಷ್ಟವಾಗುವುದಿಲ್ಲ. ಮುಖವು ಹೆಚ್ಚಾಗಿ ರಾಕ್ಷಸಕಳೆಯಿಂದ ಕೂಡಿರುವಂತೆ ಕಂಡುಬರುತ್ತದೆ. ಇಲ್ಲಿ ಬಹುವಾಗಿ ರಾಕ್ಷಸಗಣಗಳೇ ನಿರೂಪಿತರಾಗಿದ್ದಾರೆ. ಒಳಗೆ ದೇವಮೂರ್ತಿಗಳ ಕೆಳಗಿನ ಪಟ್ಟಿಕೆಗಳಲ್ಲಿ ಅತಿ ಸಣ್ಣವರಾಗಿ ಭಾರವಾಹಕರಾಗಿಯೂ ನರ್ತಕರಾಗಿಯೂ ವಾದ್ಯಗಾರರಾಗಿಯೂ ಬಿಂಬಿಸಲ್ಪಟ್ಟಿದ್ದಾರೆ. ಇದೇ ಗುಹಾದೇವಾಲಯದ ಕಂಬಗಳ ಬೋದಿಗೆಯ ಮೇಲೆ ಸಾಲಭಂಜಿಕೆಯರ

ಇಕ್ಕೆಲಗಳಲ್ಲಿ (ಅವರ ಕಾಲ ಹತ್ತಿರ) ಯಕ್ಷರಾಗಿಯೂ ಇದ್ದಾರೆ. ಹಾಗೆಯೇ ಕಂಬಗಳ ಮಣಿಪಟ್ಟಿಕೆಗಳಲ್ಲಿ ಅಲಂಕರಣವಾಗಿ ನಿರೂಪಿಸಲ್ಪಟ್ಟಿದ್ದಾರೆ. ಈ ರೀತಿಯ ನಿರೂಪಣೆ ಇನ್ನೆಲ್ಲಿಯೂ ಕಂಡುಬರುವುದಿಲ್ಲ.

ಮಾಲಗಿತ್ತಿ ದೇವಾಲಯದ ನಿರ್ಮಾಣದ ಕಾಲಕ್ಕೆ ಹೊರಗೋಡೆಗಳಲ್ಲಿ ಬಹಳ ಸುಂದರವಾದ ದೇಶೀ ನರ್ತನ, ವಾದನಗಳಲ್ಲದೇ, ಮಲ್ಲಯುದ್ಧ, ದೊಂಬರಾಟ, ಹಾವಾಡಿಗರಾಗಿಯೂ (ಆ ಕಾಲದ) ದೇಶೀಯ ಶೈಲಿಯ ನಿರೂಪಣೆಯಲ್ಲಿದ್ದಾರೆ.

ಐಹೊಳೆಯ ದುರ್ಗಗುಡಿಯ ಅಧಿಷ್ಠಾನದಲ್ಲಿ ಗಣಗಳಾಗಿ ಕಂಡುಬಂದರೂ ಕಂಬಗಳ ಪಟ್ಟಿಕೆಗಳಲ್ಲಿ ಯುದ್ಧ ಸೈನಿಕ ತರಬೇತಿಯನ್ನು ಪಡೆಯುವವರಂತೆ ಕತ್ತಿ, ಗುರಾಣಿ ಹಿಡಿದು ಹೋರಾಡುತ್ತಿರುವಂತೆ ಚಿತ್ರಿತರಾಗಿದ್ದಾರೆ. ವಿರೂಪಾಕ್ಷ ದೇವಾಲಯದಲ್ಲಿ ಒಳಭಾಗದ ಒಟ್ಟು 38 ಕಂಬಗಳಲ್ಲಿ ಅಲಂಕರಣ ಮಣಿಪಟ್ಟಿಕೆಗಳ ಮಧ್ಯದಲ್ಲಿ ನೃತ್ಯ ನಿರತರಾಗಿ, ಸರ್ವಾಲಂಕೃತ ಕಲಾವಿದರಾಗಿ ಚಿತ್ರಣಗೊಂಡಿದ್ದಾರೆ. ಅದೇ ದೇವಾಲಯದ ಗರ್ಭದ್ವಾರದ ಬಲಭಾಗದ ದೊಡ್ಡ ಕಂಬದ ಗೋಡೆಯಲ್ಲಿ ನರ್ತನ ನಿರತರಾದ ಅತಿ ಸಣ್ಣ ಶಿಲ್ಪಗಳ (6–8ಸೆಂಮೀ) ಸಮುಚ್ಚಯವಿದೆ. ಇಲ್ಲಿ ನಿರೂಪಿಸಿರುವ ಶಿಲ್ಪಶೈಲಿ ತುಂಬ ಬೇರೆಯಾಗಿದೆ.

ಪಾಪನಾಥ ದೇವಾಲಯದಲ್ಲಿ ಇವರು ದೇವಾಲಯದ ಚಾವಣಿಯ ಸಾಲಿನಲ್ಲಿ ಅಲಂಕಾರವಾಗಿ ಭಾರವಾಹಕರಾಗಿ ಬಿಂಬಿತರಾಗಿದ್ದಾರೆ. ಮಹಾಕೂಟದ ದೇವಾಲಯದ ಹೊರಗೋಡೆಯ ಪಟ್ಟಿಕೆಯಲ್ಲಿ ಸ್ತ್ರೀ ಕುಬ್ಜಗಣಗಳ ಸಮುಚ್ಚಯವಿದೆ. ಇವರು ಸಹ ನೃತ್ಯವಾದನಗಳಲ್ಲಿ ನಿರತರಾಗಿದ್ದಾರೆ. ಬಾದಾಮಿ ಚಾಳುಕ್ಯರ ಕಾಲದ ಇಡಿಯ ಕುಬ್ಜಗಣ ಗಳಿಗೆ ಸಂಬಂಧಿಸಿದಂತೆ ಮಹಾಕೂಟದಲ್ಲಿ ಈ ಒಂದು ಜಾಗದಲ್ಲಿರುವ ಐದು ಶಿಲ್ಪಗಳು ಸ್ತ್ರೀ ರೂಪಗಳಾಗಿವೆ.

ಜಂಬುಲಿಂಗ ದೇವಾಲಯದ ಚಾವಣಿಯ ತೋರಣಗಳಲ್ಲಿ ಅಂತರಿಕ್ಷದೇವತೆಗಳಾಗಿ ನರ್ತಿಸುತ್ತಿರುವಂತೆ, ಗಳಗನಾಥ ದೇವಾಲಯದ ದ್ವಾರಬಂಧಗಳ ಪಟ್ಟಿಕೆಗಳಲ್ಲಿ ಆಲಂಕಾರಿಕ ವಾಗಿ ನೃತ್ಯನಿರತರಾಗಿದ್ದಂತೆ ರೂಪಿತರಾಗಿದ್ದಾರೆ.

ಸಾಮಾನ್ಯವಾಗಿ ಅಳತೆಯಲ್ಲಿ 30–60 ಮೀ ಎತ್ತರ ಹಾಗೂ 1.50–3.30ಮೀ ಉದ್ದ–ಚೌಕಟ್ಟಿನಲ್ಲಿ ಸು.3ರಿಂದ ಹಿಡಿದು 17–20 ಗಣಗಳ ಸಾಲಿನಲ್ಲಿ ಬಿಂಬಿತವಾದ ಶಿಲ್ಪಸಮುಚ್ಚಯವನ್ನು ಕಾಣಬಹುದು.

ಒಟ್ಟಾರೆಯಾಗಿ ಆ ಕಾಲದ ಸಂಪದ್ಭರಿತ ಸಾಂಸ್ಕೃತಿಕ ಇತಿಹಾಸದ ವೈಭವವನ್ನು ಸಾರಲು ತವಕಿಸುತ್ತಿರುವಂತೆ ರೂಪಿತರಾಗಿದ್ದಾರೆ. ಒಂದೊಂದು ಅಧಿಷ್ಠಾನ ಪಟ್ಟಿಕೆಗಳಲ್ಲಿಯೂ ದೇವಾಲಯದ ಹೊರಗೋಡೆಗಳಲ್ಲಿಯೂ ಕಂಬಗಳಲ್ಲಿಯೂ ಬಹಳ ಸೂಕ್ಷ್ಮವಾದ ವ್ಯತ್ಯಾಸಗಳಲ್ಲಿ ನಿರೂಪಿತರಾಗಿದ್ದಾರೆ. ಕೇವಲ ನೃತ್ಯ, ನರ್ತನ, ಸಂಗೀತ, ವಾದ್ಯಗಳಷ್ಟೇ ಅಲ್ಲದೆ ಯುದ್ಧದ ತರಬೇತಿ, ಕಥಾ ನಿರೂಪಣೆ, ಜನಪದ ಹಾಗೂ ಸಮಕಾಲೀನ ಜನಜೀವನ ಹೀಗೆ ಹಲವಾರು ರೀತಿಯಲ್ಲಿ ಪ್ರದರ್ಶಿತರಾಗಿದ್ದಾರೆ. (ಕೆ.ವಿ.)

ಚಳುಕ್ಯ ಕಾಲದ ಕಲ್ಲುಗಣಿ: ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಧಾರವಾಡ ವೃತ್ತ ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನ ಸುತ್ತಮುತ್ತ ಸರ್ವೇಕ್ಷಣೆ ನಡೆಸಿದಾಗ ಶೋಧಿಸಿದ ಆದಿ ಚಳುಕ್ಯ ಕಾಲದ ದೇವಾಲಯಗಳಲ್ಲಿ ಕಲ್ಲಿನ ಗಣಿಗಳು. ಪಟ್ಟದಕಲ್ಲಿನಿಂದ 5 ಕಿಮೀ ಉತ್ತರಕ್ಕಿರುವ ಶಂಕರಗುಂಡಿ ಮತ್ತು ಮೋಟಾರ್ ಮರಡಿ ಎಂಬ ಮರಳುಗಲ್ಲಿನ ಎರಡು ಗುಡ್ಡಗಳ ಸಾಲಿನಲ್ಲಿ ಈ ಗಣಿಗಳನ್ನು ಪತ್ತೆಹಚ್ಚಲಾಗಿದೆ. ಈ ಪ್ರದೇಶದಲ್ಲಿ ಉತ್ಕೃಷ್ಟ ಗುಣ ಮಟ್ಟದ ಕಲ್ಲಿನ ನಿಕ್ಷೇಪವಿದೆ. ಬೃಹತ್ ಪ್ರಮಾಣದಲ್ಲಿ ಕಲ್ಲನ್ನು ಹೊರ ತೆಗೆದ ಕಾರಣ ಈ ಜಾಗಗಳಲ್ಲಿ ಕೃತಕ ಸಮತಟ್ಟುಗಳು ರಚನೆಯಾಗಿವೆ. ನೈಸರ್ಗಿಕ ಮೇಲ್ಮೈಯುಳ್ಳ ಅಥವಾ ಸವೆದ ಮೇಲ್ಮೈಯ ತ್ಯಾಜ್ಯ ಕಲ್ಲು ತುಂಡುಗಳು, ದೊಡ್ಡ ಕಲ್ಲು ತುಂಡುಗಳ ಮೇಲೆ ಮೂಡಿಸಿರುವ ಬೆಣೆ ಗುಳಿಗಳು, ಕಲ್ಲೊಡ್ಡರ/ಮೇಸ್ತ್ರಿಯ ಗುರುತುಗಳು ಹಾಗೂ ಹಾಜರಾತಿ ಗುರುತುಗಳು, ಕಲ್ಲು ಬಂಡೆಗಳ ಮೇಲೆ ಮೂಡಿಸಿರುವ ಪ್ರಾಣಿ ಮತ್ತು ದೇವತೆಗಳ ರೇಖಾ ಚಿತ್ರಗಳು, ವಿವಿಧ ವಾಸ್ತುಭಾಗಗಳಿಗಾಗಿ ನಿರ್ದಿಷ್ಟ ಅಳತೆ–ಆಕಾರಕ್ಕೆ ಅಣಿಗೊಳಿಸಿದ ಕಲ್ಲುಗಳು, ಪುಟ್ಟಪುಟ್ಟ ಶಾಸನಗಳು ಮೊದಲಾದ ಅವಶೇಷಗಳನ್ನು ಮೇಲಿನ ಎರಡೂ ಜಾಗಗಳಲ್ಲಿ ಕಂಡುಹಿಡಿಯಲಾಗಿದೆ. ಇವೆಲ್ಲ 8ನೆಯ ಶತಮಾನಕ್ಕೆ ಸೇರುತ್ತವೆ. ಕಲ್ಲೊಡೆಯುವ ಸಂದರ್ಭದಲ್ಲಿ ಎಬ್ಬಿದ ಚಕ್ಕೆ ಚೂರು ಮತ್ತು ಅನುಪಯೋಗಿ ಸಣ್ಣಪುಟ್ಟ ಕಲ್ಲುಗಳನ್ನು ಗುಡ್ಡದ ಇಳಿಜಾರಿನಲ್ಲಿರುವ ಸ್ವಾಭಾವಿಕ ತಗ್ಗುಗಳಲ್ಲಿ ತುಂಬಲಾಗಿದೆ. ನಿರ್ದಿಷ್ಟ ಅಳತೆಗಳ ಕಲ್ಲುತುಂಡುಗಳು, ಉದಾಹರಣೆಗೆ 2.9x0.9x0.3 ಮೀ, 2.5x0.85x0.3 ಮೀ, 2x1.2x1.2 ಮೀ ಇಲ್ಲಿ ಅನೇಕ ಸಂಖ್ಯೆಯಲ್ಲಿವೆ. ಇವು ಪಟ್ಟದಕಲ್ಲಿನ ದೇವಾಲಯಗಳ ಕಂಬ, ಜಂತಿ, ಧ್ವಜಸ್ಥಂಭ, ತೊಲೆ, ಚಾವಣಿಗಳಲ್ಲಿ ಬಳಸಿರುವ ಕಲ್ಲುಗಳ ಅಳತೆಗೆ ಸಮನಾಗಿವೆ. ಸಿದ್ಧ ಕಲ್ಲುಗಳ ಪೂರೈಕೆಯಲ್ಲಿ ಕೊರತೆಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂತಹ ಕಲ್ಲುಗಳನ್ನು ಸಾಗಾಣಿಕೆಗೆ ಅನುಕೂಲ ವಾಗುವಂತೆ ಜೋಡಿಸಿಕೊಂಡಿರುವುದೂ ಕಾಣುತ್ತದೆ. ಬೇಕಾದ ಗಾತ್ರದಲ್ಲಿ ಕಲ್ಲನ್ನು ಒಡೆದು ತೆಗೆಯಲು ಮರದ ಗೂಟ/ದಿಮ್ಮಿಗಳನ್ನು ಬಳಸಲಾಗುತ್ತಿತ್ತು. ಈ ವಿಧಾನದಲ್ಲಿ ಆಯ್ದ ಬಂಡೆಯ ಮೇಲೆ ಮೊದಲು ಚಿಕ್ಕ ಗುಳಿಗಳನ್ನು ಮಾಡಿಕೊಳ್ಳಲಾಗುತ್ತದೆ. ಗುಳಿಗಳಲ್ಲಿ ಮರದ ಗೂಟಗಳನ್ನು ಹುಗಿದು ಇವನ್ನು ಬಹುಕಾಲ ನೀರಿನಿಂದ ನೆನೆಸಲಾಗುತ್ತದೆ. ನೆನೆದಾಗ ಗೂಟಗಳು ಉಬ್ಬಿಕೊಂಡು ಗುಳಿಗಳ ಸಾಲಿಗನುಗುಣವಾಗಿ ಆ ಭಾಗದಲ್ಲಿ ಕಲ್ಲು ಸೀಳುಬಿಡುತ್ತದೆ. ಅನಂತರ ಬೇರ್ಪಟ್ಟ ಕಲ್ಲಿನ ಭಾಗವನ್ನು ಹೊರತೆಗೆಯಲಾಗುತ್ತದೆ. ಕಲ್ಲುಗಳ ಮೇಲೆ ಕ್ರಮಬದ್ಧವಾಗಿ ಮೂಡಿರುವ ಬೆಣೆ ಗುಳಿಗಳ ಅಳತೆ (10×6 ಸೆಂಮೀ: 8–10 ಸೆಂಮೀ ಆಳ) ಇಲ್ಲಿ ದೊರೆತಿರುವ ಕಬ್ಬಿಣದ ಬೆಣೆಗಳ ಅಳತೆಗೆ ಸರಿಹೊಂದುತ್ತದೆ. ವಾಸ್ತುಶಿಲ್ಪಶಾಸ್ತ್ರಜ್ಞ, ಶಿಲ್ಪಿ ಶ್ರೇಣಿ ಮತ್ತು ಕರಕುಶಲಕಾರರ ಹೆಸರನ್ನು ತಿಳಿಸುವ ಐದು ಸಣ್ಣ ಶಾಸನಗಳು ಶಂಕರಗುಂಡಿಯಲ್ಲಿಯೂ ಮೂರು ಮೋಟಾರ್‌ಮರಡಿಯಲ್ಲಿಯೂ ಪತ್ತೆಯಾಗಿವೆ. 8ನೆಯ ಶತಮಾನಕ್ಕೆ ಸೇರುವ ಈ ಶಾಸನಗಳಲ್ಲಿ ಕೆಲವು ಹೀಗಿವೆ. 1. ಶ್ರೀ ಧರ್ಮ ಸಂಘಟನ ಕಣಿ, ಪಾಪಕೋ/ಅಂಜುವೋ ಪರಮಹೇಶ್ವರ (ಧರ್ಮ ಶ್ರೇಣಿಗೆ ಸೇರುವ ಕಲ್ಲಿನ ಗಣಿ, ಪಾಪಕೋ ಮತ್ತು ಅಂಜುವೋ ಇವರು ಶೈವ ಮತಾನುಯಾಯಿ ಗಳಾಗಿದ್ದು ಪ್ರಾಯಶಃ ಶ್ರೇಣಿಯ ಸದಸ್ಯರು). 2. ಸ್ವಸ್ತಿ ಶ್ರೀ ನಿಧಿ ಪುರು(ಶಮ್?) ಶ್ರೀ ಒವಜರ (ಸ)ನ್ (ಪ್ರಾಯಶಃ ಮುಖ್ಯ ಕರಕುಶಲಕಾರರ ಹೆಸರು). 3. ಶ್ರೀ–ಇದರೊಂದಿಗೆ ಎರಡು ಬಾಹುಗಳುಳ್ಳ ಗಣೇಶನನ್ನು ರೇಖೆಯಿಂದ ಮೂಡಿಸಲಾಗಿದೆ. 4. ಶ್ರೀ ಶ್ರೀ ಮರುಳನ್ (?) ಶ್ರೀ ಗುಣ ವಿಕ್ರ(ಮನ್). ಕಲ್ಲುನೆಲೆಯಲ್ಲಿರುವ ಮೇಸ್ತ್ರಿ ಅಥವ ಕಲ್ಲೊಡ್ಡರ ಗುರುತುಗಳು ಹಲವು ಬಗೆಯವು–ತ್ರಿಶೂಲವನ್ನು ಹೋಲುವ ಶೈಲೀಕೃತ ಭರ್ಜಿ, ವೃತ್ತದೊಳಗಿರುವ ಕೂಡುವ ಚಿನ್ಹೆ, ಉದ್ದ ಅಥವಾ ಅಡ್ಡ ಗೆರೆಗಳಿಂದ ಭೇದಿಸಲ್ಪಟ್ಟ ವೃತ್ತ ಇತ್ಯಾದಿ. ಈ ಗುರುತುಗಳು ಏನನ್ನು ಸಂಕೇತಿಸುತ್ತವೆ ಎಂಬುದನ್ನು ತಿಳಿಯಲಾಗಿಲ್ಲ. ಇವು ಕಂಬ, ತೊಲೆ, ಜಂತಿ ಮುಂತಾದ ವಿವಿಧ ವಾಸ್ತುಭಾಗಗಳಿಗಾಗಿ ಸಿಡಿಸಿದ ಕಲ್ಲುಗಳನ್ನು ಸುಲಭವಾಗಿ ಗುರುತಿಸಲು ಮಾಡಿದ ಗುರುತುಗಳಿದ್ದರೂ ಇರಬಹುದು. ಏಕೆಂದರೆ ಈ ಪ್ರದೇಶದಲ್ಲಿರುವ ಕೆಲವು ದೇವಾಲಯಗಳ ಕಲ್ಲುಗಳ ಮೇಲೂ ಇಂತಹ ಗುರುತುಗಳಿವೆ. ಉದಾಹರಣೆಗೆ ಇಲ್ಲಿಯ ವಿರೂಪಾಕ್ಷ ದೇವಾಲಯದ ಪ್ರಾಕಾರದಲ್ಲಿ ಬಳಸಿದ ಒಂದು ಕಲ್ಲಿನ ಮೇಲೆ ಕೂಡುವ ಚಿನ್ಹೆಯ ಗುರುತಿದೆ. ಕಲ್ಲು ಗಣಿಗಳಲ್ಲಿರುವ ಮತ್ತೊಂದು ಬಗೆಯ ಗುರುತುಗಳು ನೇರ ಅಥವಾ ಅಡ್ಡಲಾದ ಚಿಕ್ಕ ಸರಳಗೆರೆಗಳ (2.5–3.5 ಸೆಂಮೀ ಉದ್ದ) ಗುಂಪುಗಳು. ಪ್ರತಿ ಗುಂಪಿನಲ್ಲಿಯೂ ಏಳು ಗೆರೆಗಳಿವೆ. ಹಾಗಾಗಿ ಇವು ಹಾಜರಾತಿಯ ಲೆಕ್ಕವಿದ್ದಿರ ಬಹುದು. ಬಾದಾಮಿ ಮತ್ತು ಐಹೊಳೆಯಲ್ಲಿಯೂ ಇಂತಹ ಗೆರೆಗಳ ಗುಂಪು ಕಂಡುಬಂದಿವೆ. ಪ್ರಸ್ತುತ ಕಲ್ಲುಗಣಿಗಳಲ್ಲಿನ ಬಂಡೆಗಳ ಮೇಲೆ ಗಣೇಶ, ಮಹಿಷಮರ್ದಿನಿ, ಒಂಟೆ–ನವಿಲುಗಳಲ್ಲದೆ ವಾಸ್ತುಭಾಗಗಳ ಕೆತ್ತನೆಗಳೂ ಇವೆ. ಕೊನೆಯದಾಗಿ, ಕಲ್ಲುಗಣಿಯ ಕೆಲಸಗಾರರು ಉಪಯೋಗಿಸಿದ ಕಬ್ಬಿಣದ ಸುತ್ತಿಗೆ ಮತ್ತು ದೊಡ್ಡ ಸುತ್ತಿಗೆ ಸಹ ಇಲ್ಲಿ ಲಭಿಸಿವೆ. (ಎಂ.ವಿ.ವಿ.)

**ವೆಂಗಿ ಚಾಳುಕ್ಯರು:** ಬಾದಾಮಿ ಚಳುಕ್ಯವಂಶದ ಪ್ರಮುಖ ಶಾಖೆಗಳಲ್ಲಿ ಒಂದು. ವಿಷ್ಣುವರ್ಧನ ಈ ವಂಶದ ಮೂಲಪುರುಷ. ಇಮ್ಮಡಿ ಪುಲಕೇಶಿ, ಆಂಧ್ರಪ್ರದೇಶವನ್ನು ಗೆದ್ದಾಗ ಪಿಷ್ಟಪುರ (ಇಂದಿನ ಪೀಠಾಪುರಂ) ಪ್ರದೇಶ ಬಹುಶಃ ವಿಷ್ಣುಕುಂಡಿ ಅರಸರ ಕೈಯಲ್ಲಿತ್ತು. ಪುಲಕೇಶಿಯು ಆ ಪ್ರದೇಶವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಈ ದಿಗ್ವಿಜಯದಲ್ಲಿ ಇವನ ತಮ್ಮ ಪೃಥ್ವಿ ದುವರಾಜ (ಯುವರಾಜ) ವಿಷ್ಣುವರ್ಧನನು ಅವನಿಗೆ ಸಮರ್ಥ ರೀತಿಯಲ್ಲಿ ಸಹಕರಿಸಿದ್ದ. ಪುಲಕೇಶಿ ವಿಷ್ಣುವರ್ಧನನಿಗೆ ಯುವರಾಜ ಪಟ್ಟಗಟ್ಟಿ ಹೊಸದಾಗಿ ಗೆದ್ದ ಆಂಧ್ರ ಮತ್ತು ಅದಕ್ಕೆ ಹೊಂದಿಕೊಂಡಿದ್ದ ಮಹಾರಾಷ್ಟ್ರದ ಪ್ರದೇಶವನ್ನು ವಿಷ್ಣುವರ್ಧನನಿಗೆ ಬಿಟ್ಟುಕೊಟ್ಟ. ಇವನೇ ವೆಂಗಿ ಚಾಳುಕ್ಯ ಮನೆತನದ ಮೂಲಪುರುಷನೆನಿಸಿದ. ವೆಂಗಿ ಚಾಳುಕ್ಯರು ತಮ್ಮ ಅತ್ಯುಚ್ಛ್ರಾಯಕಾಲದಲ್ಲಿ ಉತ್ತರದಲ್ಲಿ ಕಳಿಂಗದ ಮಹೇಂದ್ರಗಿರಿಯಿಂದ ಹಿಡಿದು ದಕ್ಷಿಣದಲ್ಲಿ ನೆಲ್ಲೂರಿನ ಸಮೀಪ ಮನ್ನೇರು ನದಿಯವರೆಗೆ, ಪೂರ್ವದಲ್ಲಿ ಆಂಧ್ರದ ಕರಾವಳಿಗುಂಟದಿಂದ ಬಂಗಾಲಕೊಲ್ಲಿವರೆಗೆ, ಪಶ್ಚಿಮದಲ್ಲಿ ಪೂರ್ವಘಟ್ಟಗಳವರೆಗೆ ವಿಶಾಲ ಪ್ರದೇಶದ ಮೇಲೆ ಹಿಡಿತ ಹೊಂದಿದ್ದರು.

617ರ ಸುಮಾರಿಗೆ ವಿಷ್ಣುವರ್ಧನ ಯುವರಾಜ ಪದವಿ ಪಡೆದು ಚಾಳುಕ್ಯ ಸಾಮ್ರಾಜ್ಯದ ಉತ್ತರಭಾಗದ ಉಸ್ತುವಾರಿ ನೋಡತೊಡಗಿದ್ದ. ಆಂಧ್ರದ ಮೇಲೆ ಪುಲಕೇಶಿಯ ಯುದ್ಧ ಮತ್ತೆ ತೀವ್ರಗೊಂಡಾಗ ವಿಷ್ಣುವರ್ಧನನು ನೆಲದುರ್ಗವಾಗಿದ್ದ ಪಿಷ್ಟಪುರ ಕೋಟೆಯನ್ನು ಹಾಗೂ ಜಲದುರ್ಗವಾಗಿದ್ದ ಕುನಾಲ ಕೋಟೆಯನ್ನು ಗೆದ್ದುಕೊಟ್ಟ. ಈ ಸಾಧನೆಗಾಗಿ ಇವನಿಗೆ ವಿಷಮಸಿದ್ಧಿ ಎಂಬ ಬಿರುದು ಲಭ್ಯವಾಯಿತು. ಇವನ ವಿಧೇಯತೆ ಮತ್ತು ಸಾಮರ್ಥ್ಯ ಗಳಿಗೆ ಮೆಚ್ಚಿದ ಪುಲಿಕೇಶಿಯು ಇವನನ್ನು ಆಂಧ್ರದ ಪೃಥ್ವೀಯುವರಾಜನಾಗಿ ಪಟ್ಟಕಟ್ಟಿದ. ಕೆಲವು ಶಾಸನಗಳು ಈತನನ್ನು ಪರಮಭಾಗವತ (ವಿಷ್ಣುಭಕ್ತ), ಕಲ್ಪವೃಕ್ಷ ಇತ್ಯಾದಿಯಾಗಿ ಹೊಗಳಿವೆ. ಸು.631ರಲ್ಲಿ ಆತ ಮಹಾರಾಜ ಪದವಿಗೇರಿದ. ಇವನು 18 ವರ್ಷ ದಕ್ಷವಾಗಿ ರಾಜ್ಯಭಾರ ಮಾಡಿದ. ಕಳಿಂಗ, ಚಜ್ಜೇರ್ಲ, ಗುಂಟೂರು ಪ್ರದೇಶಗಳು

ಇವನ ಅಧೀನದಲ್ಲಿದ್ದವು. ಇವನ ರಾಣಿ ಅಯ್ಯಣಮಹಾದೇವಿ ವಿಜಯವಾಡದಲ್ಲಿ ಜೈನ ಬಸದಿಯನ್ನು ನಿರ್ಮಿಸಿದಳು. ತೆಲುಗು ಪ್ರದೇಶದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದಂತೆ ಇದೇ ಪ್ರಾಚೀನತಮ ಉಲ್ಲೇಖ.

ವಿಷ್ಣುವರ್ಧನನ ತರುವಾಯ ಅವನ ಮಕ್ಕಳಾದ ಮೊದಲನೆಯ ಜಯಸಿಂಹವಲ್ಲಭ ಮತ್ತು ಇಂದ್ರಭಟ್ಟಾರಕ ಎಂಬುವರು ಆಳಿದರು. ಜಯಸಿಂಹ 33 ವರ್ಷ (641–73) ಆಳಿದ. ಇವನು ಆಸನಪುರದಲ್ಲಿ ಘಟಿಕೆಯನ್ನು (ವಿಶ್ವವಿದ್ಯಾಲಯ) ಸ್ಥಾಪಿಸಿದ. ವಿಷ್ಣುಭಕ್ತನಾಗಿದ್ದ ಇವನಿಗೆ ಸರ್ವಸಿದ್ಧಿ ಎಂಬ ಬಿರುದು ಇತ್ತು. ಪ್ರಾಚೀನ ತೆಲುಗು ಶಾಸನಗಳಲ್ಲಿ ಇವನು ಹೊರಡಿಸಿದ ವಿಪ್ಪರ್ಲ ಶಾಸನವೂ ಸೇರಿದೆ. ಜಯಸಿಂಹನ ತಮ್ಮ ಇಂದ್ರಭಟ್ಟಾರಕ 7 ವರ್ಷ ಆಳಿದ. ತ್ಯಾಗಧೇನು ಎನಿಸಿದ್ದ ಇವನನ್ನು ಅಧಿರಾಜನೆಂಬುವನು ಸೋಲಿಸಿದ. ಇವನ ತರುವಾಯ ಇಮ್ಮಡಿ ವಿಷ್ಣುವರ್ಧನನು 9 ವರ್ಷ ಆಳಿದ. ವಿಷಮಸಿದ್ಧಿ ಮತ್ತು ಪ್ರಲಯಾದಿತ್ಯ ಎಂಬ ಬಿರುದುಗಳು ಇವನಿಗಿದ್ದವು. ಇವನ ಮಗ ಮಂಗಿ ಯುವರಾಜನು 682–706 ವರೆಗೆ ರಾಜ್ಯಭಾರ ಮಾಡಿದ. ವಿಜಯಾದಿತ್ಯ ಮತ್ತು ವಿಜಯಸಿದ್ಧಿ ಎಂಬ ಬಿರುದುಗಳಿದ್ದವು.

ವೆಂಗಿ ಯುವರಾಜನ ತರುವಾಯ ಅವನ ಮಗ ಸರ್ವಸಿದ್ಧಿ ಇಮ್ಮಡಿ ಜಯಸಿಂಹನು 706–718 ರವರೆಗೆ (13 ವರ್ಷ) ಆಳಿದ. ಇವನ ಅನಂತರ ಸಿಂಹಾಸನಕ್ಕಾಗಿ ಮಲತಮ್ಮಂದಿರ ನಡುವೆ ಒಳಜಗಳವಾಯಿತು. ಚಿಕ್ಕವನಾಗಿದ್ದ ಕೊಕ್ಕಿಲಿ 6 ತಿಂಗಳು ಸಿಂಹಾಸನವನ್ನು ಹಿಡಿದುಕೊಂಡು ಅನಂತರ ತನ್ನಣ್ಣ ಮುಮ್ಮಡಿ ವಿಷ್ಣುವರ್ಧನನಿಗೆ ಬಿಟ್ಟುಕೊಟ್ಟ. ಕೊಕ್ಕಿಲಿಯ ವಂಶಜರು ಕಳಿಂಗದ ಮಧ್ಯಭಾಗದಲ್ಲಿದ್ದ ಎಲಮಂಚಿ ಪ್ರದೇಶದ ಮೇಲೆ ಸು. 4 ತಲೆಮಾರುಗಳ ಕಾಲ ಆಳಿದರು.

ಮುಮ್ಮಡಿ ವಿಷ್ಣುವರ್ಧನ ತನ್ನ ತಮ್ಮ ಕೊಕ್ಕಿಲಿಯನ್ನು ಹೊಡೆದೋಡಿಸಿದ ಮೇಲೆ 719–755 ರವರೆಗೆ ಆಳಿದನು. ಇವನು ಅನೇಕ ಶಾಸನಗಳನ್ನು ಹೊರಡಿಸಿದ. ವಿಷಮಸಿದ್ಧಿ ಮತ್ತು ತ್ರಿಭುವನಾಂಕುಶ ಎಂಬ ಬಿರುದುಗಳು ಇವನಿಗಿದ್ದವು. ಇವನ ಅಧಿಕಾರಿಯಾಗಿದ್ದ ನಿಷಾದ ಬೋಯ ಪೃಥ್ವೀವ್ಯಾಘ್ರನು ಪಲ್ಲವ ಸೇನಾಪತಿ ಉದಯ ಚಂದ್ರನೊಂದಿಗೆ ಘರ್ಷಣೆ ಗಿಳಿದ. ಈ ಯುದ್ಧದಲ್ಲಿ ಪಲ್ಲವರಿಗೆ ಜಯವಾಗಿ, ವೆಂಗಿ ಚಾಳುಕ್ಯರ ನೆಲದ ಕೆಲಭಾಗ ಪಲ್ಲವರ ಪಾಲಾಯಿತು. ಮುಮ್ಮಡಿ ವಿಷ್ಣುವರ್ಧನ ವಿಜಯವಾಡದ ಜೈನ ಬಸದಿಗೆ ದಾನ ನೀಡಿದ. ಇವನ ರಾಣಿ ವಿಜಯ ಮಹಾದೇವಿ. ಇವನ ತಂಗಿ–ಮಂಗಿ ಯುವರಾಜನ ಮಗಳು–ಪೃಥ್ವೀ ಪೊರಿಯ ದಾನಿಯಾಗಿ ಶಾಸನವೊಂದರಲ್ಲಿ ಪ್ರಸ್ತಾಪಿತಳಾಗಿದ್ದಾಳೆ.

ಮುಮ್ಮಡಿ ವಿಷ್ಣುವರ್ಧನನ ಮಗ ವಿಜಯಸಿದ್ಧಿ ಮೊದಲನೆಯ ವಿಜಯಾದಿತ್ಯ 772ರವರೆಗೆ ಆಳಿದ. ಈ ಸಮಯದಲ್ಲಿ ಬಾದಾಮಿಯ ಚಳುಕ್ಯರು ರಾಷ್ಟ್ರಕೂಟರಿಂದ ಪರಾಜಿತರಾಗಿದ್ದರು. 769ರ ಹೊತ್ತಿಗೆ ರಾಷ್ಟ್ರಕೂಟ ಯುವರಾಜ ಇಮ್ಮಡಿ ಗೋವಿಂದ ವೆಂಗಿಮಂಡಲದ ಮೇಲೆ ಧಾಳಿಮಾಡಿ ತನ್ನ ಸಾರ್ವಭೌಮತ್ವವನ್ನು ಒಪ್ಪುವಂತೆ ಮಾಡಿದ. ವೆಂಗಿ ಚಾಳುಕ್ಯರ ಮೇಲೆ ಇದು ಹೇಳಿಕೊಳ್ಳುವಂತಹ ಪರಿಣಾಮ ಬೀರಲಿಲ್ಲ. ಒಂದನೆಯ ವಿಜಯಾದಿತ್ಯನ ಮಗ ನಾಲ್ಕನೆಯ ವಿಷ್ಣುವರ್ಧನ 36 ವರ್ಷ (772–808) ಆಳಿದ. ಇವನು ರಾಷ್ಟ್ರಕೂಟ ಇಮ್ಮಡಿ ಗೋವಿಂದ ಮತ್ತು ಅವನ ತಮ್ಮ ಧ್ರುವನ ನಡುವಿನ ಕಲಹದಲ್ಲಿ ಗೋವಿಂದನ ಪರ ವಹಿಸಿದ. ಆದರೆ ಈ ಕಲಹದಲ್ಲಿ ಧ್ರುವ ವಿಜಯಿಯಾದ. ಸೇಡು ತೀರಿಸಿಕೊಳ್ಳುವುದಕ್ಕಾಗಿ ಅವನು ವೆಂಗಿ ಚಾಳುಕ್ಯರ ಮೇಲೆ ಧಾಳಿಮಾಡಿದ. ವಿಷ್ಣುವರ್ಧನ ಸೋತು ಧ್ರುವನೊಂದಿಗೆ ಸಂಧಿ ಮಾಡಿಕೊಂಡು, ತನ್ನ ಮಗಳು ಶೀಲಮಹಾದೇವಿ ಯನ್ನು ಧ್ರುವನಿಗೆ ಧಾರೆ ಎರೆದು ಕೊಟ್ಟ. ಇವಳು ಅವನ ಪಟ್ಟಮಹಿಷಿಯಾದಳು. ವೆಂಗಿ ಮುಮ್ಮಡಿ ಗೋವಿಂದನ ಕಾಲದಲ್ಲಿಯೂ ರಾಷ್ಟ್ರಕೂಟರ ಅಧೀನ ರಾಜ್ಯವಾಗಿ ಮುಂದುವರಿ ಯಿತು. ವಿಷ್ಣುವರ್ಧನನಿಗೆ ಮೂರು ಮಕ್ಕಳಿದ್ದು ಅವರಲ್ಲಿ ಇಮ್ಮಡಿ ವಿಜಯಾದಿತ್ಯ ಮತ್ತು ಭೀಮಸಲುಕಿ ಸಿಂಹಾಸನ ಕ್ಕಾಗಿ ಕಲಹಕ್ಕಿಳಿದರು. ಮೂರನೆಯ ಮಗ ರುದ್ರನು ವಿಜಯಾದಿತ್ಯನ ಪರ ವಹಿಸಿದ.

ಇಮ್ಮಡಿ ವಿಜಯಾದಿತ್ಯ ಮಹಾಯೋಧನಾಗಿದ್ದು ರಾಷ್ಟ್ರಕೂಟರು ಮತ್ತು ಅವರ ಮಿತ್ರಬಲಗಳೊಂದಿಗೆ ಹಲವಾರು ವರ್ಷಗಳ ಕಾಲ ಯುದ್ಧಮಾಡಿದ. ಇವನು ನರೇಂದ್ರ ಮೃಗರಾಜ, ಚಾಳುಕ್ಯರಾಮ, ವಿಕ್ರಮಧವಲ ಎಂಬ ಬಿರುದುಗಳನ್ನು ಧರಿಸಿದ್ದ. ಇವನ ಆಳ್ವಿಕೆಯ 40 ವರ್ಷಗಳು (808–47) ಯುದ್ಧ, ಕಲಹಗಳಿಂದ ಕೂಡಿದ್ದವು. ರಾಷ್ಟ್ರಕೂಟರು ಇವನನ್ನು ದಂಗೆಕೋರನೆಂದು ಪರಿಗಣಿಸಿ ಇವನ ತಮ್ಮ ಭೀಮ ಸಲುಕಿಯನ್ನು ಎತ್ತಿಕಟ್ಟಿದರು. ಮುಮ್ಮಡಿ ಗೋವಿಂದ 814ರಲ್ಲಿ ಕಾಲವಾಗುವವರೆಗೂ ರಾಷ್ಟ್ರಕೂಟರ ಹಿಡಿತ ಬಲವಾಗಿತ್ತು. ಅನಂತರ ಒಂದನೆಯ ಅಮೋಘವರ್ಷ ಪಟ್ಟಕ್ಕೇರಿದ ಮೇಲೆ ವಿಜಯಾದಿತ್ಯನ ಕೈ ಮೇಲಾಯಿತು. ಅವನು ಗಂಗರನ್ನು ಸೋಲಿಸಿ, ಭೀಮನನ್ನು ಸಿಂಹಾಸನದಿಂದ ಕೆಳಗಿಳಿಸಿ, ವೆಂಗಿ ರಾಜ್ಯವನ್ನು ಮತ್ತೆ ತನ್ನ ವಶ ಮಾಡಿಕೊಂಡನಲ್ಲದೆ ರಾಷ್ಟ್ರಕೂಟರ ಮೇಲೂ ದಿಗ್ವಿಜಯಿಯಾದ.

ಇಮ್ಮಡಿ ವಿಜಯಾದಿತ್ಯನ ಮಗ ಐದನೆಯ ವಿಷ್ಣುವರ್ಧನ ರಾಷ್ಟ್ರಕೂಟ ರಾಜಕುಮಾರಿ ಶೀಲಮಹಾದೇವಿಯನ್ನು ವರಿಸಿದ. ಆದರೆ ಅವನ ಆಳಿಕೆ ಕೇವಲ ಒಂದೂವರೆ ವರ್ಷ ಮಾತ್ರ ಸಾಗಿತು. ಅವನ ಮಗ ಮುಮ್ಮಡಿ ವಿಜಯಾದಿತ್ಯ ವೆಂಗಿ ಚಾಳುಕ್ಯ ಅರಸರಲ್ಲಿಯೇ ಬಹು ಪ್ರಸಿದ್ಧ ರಾಜ. ಇವನು 44 ವರ್ಷಗಳ ಕಾಲ ದಕ್ಷ ಆಡಳಿತ ನಡೆಸಿ (840–892). ಇವನಿಗೆ ಗುಣಗ ವಿಜಯಾದಿತ್ಯ ಎಂಬ ಇನ್ನೊಂದು ಹೆಸರಿತ್ತು. ಗುಣಕೆ ನಲ್ಲಾತ, ಪರಚಕ್ರರಾಮ, ತ್ರಿಪುರಮರ್ತ್ಯಮಹೇಶ್ವರ, ವಲ್ಲಭ ಮುಂತಾದ ಬಿರುದುಗಳಿದ್ದವು. ಇವನ ಆಳಿಕೆಯ ಅವಧಿ ಯನ್ನು ಮೂರು ಹಂತಗಳಾಗಿ ಗುರುತಿಸಬಹುದು: ಒಂದನೆಯ ಹಂತದಲ್ಲಿ ಇವನು ತನ್ನ ಪ್ರಸಿದ್ಧ ಸೇನಾಪತಿ ಪಂಡರಂಗನ ಶಕ್ತಿಸಾಮರ್ಥ್ಯಗಳ ಸಹಾಯದಿಂದ ಆಂಧ್ರದ ನೆಲ್ಲೂರು ಪ್ರದೇಶದಲ್ಲಿ ಪ್ರಬಲರಾಗಿದ್ದ ಬೋಯ ಸಮುದಾಯದವರನ್ನು ಸದೆಬಡಿದು ಅವರ ಪ್ರದೇಶವನ್ನು ವೆಂಗಿ ರಾಜ್ಯಕ್ಕೆ ಸೇರಿಸಿಕೊಂಡ. ತದನಂತರ ರಾಹಣ ಎಂಬ ಅರಸನನ್ನು ಸೋಲಿಸಿದ.

ಎರಡನೆಯ ಹಂತದಲ್ಲಿ ವಿಜಯಾದಿತ್ಯ ರಾಷ್ಟ್ರಕೂಟರ ಒಂದನೆಯ ಅಮೋಘವರ್ಷ ನೊಂದಿಗೆ ಕದನಕ್ಕಿಳಿದ. ರಾಷ್ಟ್ರಕೂಟರ ಹಿಡಿತದಲ್ಲಿದ್ದ ಕರ್ನೂಲು ಜಿಲ್ಲೆಯ ಸ್ತಂಭಪುರ ವನ್ನು (ಇಂದಿನ ಕಂಬಂ) ವಿಜಯಾದಿತ್ಯ ಧಾಳಿಮಾಡಿ ಧ್ವಂಸಮಾಡಿದ. ಅಮೋಘವರ್ಷ ವಿಜಯಾದಿತ್ಯನ ಮೇಲೆ ಸೈನ್ಯವನ್ನು ಕಳಿಸಿದ. ವಿಂಗಾವಳ್ಳಿ ಎಂಬಲ್ಲಿ ನಡೆದ ಯುದ್ಧದಲ್ಲಿ ವಿಜಯಾದಿತ್ಯ ಸೋತು ಅಮೋಘವರ್ಷನ ಸಾರ್ವಭೌಮತ್ವವನ್ನು ಒಪ್ಪಿಕೊಂಡ. ಮುಂದೆ ರಾಷ್ಟ್ರಕೂಟರ ಪರವಾಗಿ ಯುದ್ಧಗಳಲ್ಲಿ ಪಾಲ್ಗೊಂಡು ನೊಳಂಬ ಮಂಗಿರಾಜನನ್ನೂ ಗಂಗ ನೀತಿಮಾರ್ಗ ಪೆರ್ಮಾನಡಿಯನ್ನೂ ಸೋಲಿಸಿದ.

ಅಮೋಘವರ್ಷ 880ರಲ್ಲಿ ತೀರಿಕೊಂಡಾಗ ವಿಜಯಾದಿತ್ಯನಿಗೆ ಸ್ವತಂತ್ರನಾಗಲು ಅವಕಾಶವಾಯಿತು. ಇಮ್ಮಡಿ ಕೃಷ್ಣ ದಕ್ಷ ಹಾಗೂ ಜನಪ್ರಿಯ ಅರಸನಾಗಿರಲಿಲ್ಲ. ವಿಜಯಾದಿತ್ಯ ಅವನೊಂದಿಗೆ ಕನಿಷ್ಠ ಎರಡು ಬಾರಿ ಯುದ್ಧಮಾಡಿದ. ಕೃಷ್ಣನು ಚೇದಿ ಸಂಕಿಲನ (ಶಂಕರಗಣ) ನೇತೃತ್ವದಲ್ಲಿ ವೆಂಗಿರಾಜ್ಯದ ಮೇಲೆ ದಂಡು ಕಳಿಸಿದ. ರಾಷ್ಟ್ರಕೂಟರ ಸೈನ್ಯ ಇದರಲ್ಲಿ ಸೋತಿದ್ದಲ್ಲದೆ ಡಾಹಲಕ್ಕೆ ಮರಳಬೇಕಾಯಿತು. ವಿಜಯಾದಿತ್ಯ ಈ ಸಂದರ್ಭವನ್ನು ದಿಗ್ವಿಜಯಕ್ಕೆ ಬಳಸಿಕೊಂಡ. ವೆಂಗಿಯಿಂದ ಪ್ರಾರಂಭವಾದ ಈ ದಿಗ್ವಿಜಯ ಸೇನಾನಿ ಪಂಡರಂಗನ ಸಾಮರ್ಥ್ಯದಿಂದ ಕಳಿಂಗದ ಮೂಲಕ ದಕ್ಷಿಣ ಕೋಸಲ ಹಾಗೂ ಮಧ್ಯ ದೇಶಗಳಲ್ಲಿ ಸಾಗಿತು. ರಾಷ್ಟ್ರಕೂಟ ಕೃಷ್ಣ ಸೋತು ಸಂಧಿಗೆ ಒಪ್ಪಿದ. ಅವನು ರಾಷ್ಟ್ರಕೂಟರಿಂದ ಪಾಲಿಧ್ವಜ, ಗಂಗಾ–ಯಮುನಾ ಮುಂತಾದ ರಾಜಸಂಕೇತಗಳನ್ನು ಪಡೆದುಕೊಂಡು, ವಲ್ಲಭ ಎಂಬ ಬಿರುದನ್ನು ಧರಿಸಿದ. ತ್ರಿಕಲಿಂಗ ದಕ್ಷಿಣಾಪಥದ ಸಾರ್ವಭೌಮನೆಂದು ಘೋಷಿಸಿದ. ಸ್ವತಃ ರಾಷ್ಟ್ರಕೂಟ ಕೃಷ್ಣನು ಅವನನ್ನು ಬೇಟಿ ಮಾಡಿ, ತನ್ನ ಅಧೀನತೆಯನ್ನು ಒಪ್ಪಿಕೊಂಡು ಅವನ ಆಯುಧಪೂಜೆ ಮಾಡಿದ. ವಿಜಯಾದಿತ್ಯ ಸಂತುಷ್ಟನಾಗಿ ಅವನ ರಾಜ್ಯವನ್ನು ಅವನಿಗೆ ಮರಳಿಸಿ ವೆಂಗಿಗೆ ಹಿಂದಿರುಗಿದ.

ವೆಂಗಿಯ ಸಿಂಹಾಸನವನ್ನಲಂಕರಿಸಿದ ಅರಸರಲ್ಲೆಲ್ಲ ಗುಣಗ ವಿಜಯಾದಿತ್ಯ ಸರ್ವಶ್ರೇಷ್ಠ ರಾಜನೆಂದು ಪ್ರಸಿದ್ಧನಾಗಿದ್ದಾನೆ. ಮಹೇಂದ್ರಗಿರಿಯಿಂದ ಪುಲಿಘಾಟಿನವರೆಗಿನ ವಿಶಾಲ ಪ್ರದೇಶದ ಮೇಲೆ ಇವನ ಹಿಡಿತವಿತ್ತು. ಸೇನಾಪತಿ ಪಂಡರಂಗನ ಧೀಶಕ್ತಿಸಾಮರ್ಥ್ಯ ಗಳು ವಿಜಯಾದಿತ್ಯನ ಏಳ್ಗೆಯಲ್ಲಿ ಅಪಾರ ಪಾತ್ರವಹಿಸಿದವು. ವೆಂಗಿ ಸಾಮ್ರಾಜ್ಯವನ್ನು ಉಚ್ಛಸ್ಥಾನ ಕ್ಕೇರಿಸಿದ ವಿಜಯಾದಿತ್ಯ 892ರಲ್ಲಿ ಕಾಲವಾದ. ಅವನಿಗೆ ಮಕ್ಕಳಿರಲಿಲ್ಲ ವಾದ್ದರಿಂದ ಅವನ ತಮ್ಮ ಭೀಮ ಪಟ್ಟಕ್ಕೇರಿದ. ಅವನ ದಾಯಾದಿ ಒಂದನೆಯ ಯುದ್ಧಮಲ್ಲ ರಾಷ್ಟ್ರಕೂಟ ಕೃಷ್ಣನ ಸಹಾಯ ಕೋರಿದ. ಯುದ್ಧ ನಡೆದು ವೆಂಗಿಯು ಯುದ್ಧಮಲ್ಲನ ವಶವಾಯಿತು. ಭೀಮನನ್ನು ಸೆರೆಹಿಡಿಯಲಾಯಿತಾದರೂ ಅವನು ಬಹುಬೇಗ ಸ್ವತಂತ್ರನಾದುದರಿಂದ ರಾಷ್ಟ್ರಕೂಟರ ಯಶಸ್ಸು ತಾತ್ಕಾಲಿಕವಾಗಿತ್ತು. ಕೃಷ್ಣನ ತರುವಾಯದ ವೆಂಗಿ ದಂಡಯಾತ್ರೆಯೂ ವಿಫಲವಾದುದರಿಂದ ಭೀಮನು ಪಟ್ಟಾಭಿಷಿಕ್ತನಾದ. ಚಾಳುಕ್ಯ ಭೀಮನು ಶಿವಾರಾಧಕನಾಗಿದ್ದ. ಅವನು ಚಾಳುಕ್ಯ ಭೀಮವರಂ ಮತ್ತು ದ್ರಾಕ್ಷಾರಾಮಗಳಲ್ಲಿ (ಪೂರ್ವ ಗೋದಾವರಿ ಜಿಲ್ಲೆ) ಶಿವದೇವಾಲಯಗಳನ್ನು ನಿರ್ಮಿಸಿದ.

921ರಲ್ಲಿ ಅವನ ಮಗ ನಾಲ್ಕನೆಯ ವಿಜಯಾದಿತ್ಯ ಪಟ್ಟಕೇರಿದ. ಇವನು ಕೇವಲ ಆರು ತಿಂಗಳು ಆಳಿದನಾದರೂ ಕಳಿಂಗದ ಮೇಲೆ ವಿಜಯ ಸಾಧಿಸಿದ. ಇವನು ಕಾಲವಾದ ಅನಂತರ ರಾಜ್ಯದಲ್ಲಿ ಅಂತಃಕಲಹಗಳು ಪ್ರಾರಂಭವಾದವು. ಕೇವಲ 12 ವರ್ಷಗಳ ಅವಧಿಯಲ್ಲಿ ಆರು ಜನ ಅರಸರು ಆಳ್ವಿಕೆ ನಡೆಸಿದರು. ಈ ವಿಷಮ ಪರಿಸ್ಥಿತಿಯು ವೆಂಗಿಯ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಅನುಕೂಲ ಒದಗಿಸಿತು. ಒಂದನೆಯ ಅಮ್ಮ ರಾಜಮಹೇಂದ್ರ (921–27) ರಾಜಮಹೇಂದ್ರಪುರ (ಇಂದಿನ ರಾಜಮಂಡ್ರಿ) ಎಂಬ ಪಟ್ಟಣವನ್ನು ಸ್ಥಾಪಿಸಿ ಅದನ್ನು ರಾಜಧಾನಿಯಾಗಿಸಿದ. ಇವನ ತರುವಾಯ ಅವನ ಅಪ್ರಾಪ್ತವಯಸ್ಸಿನ ಮಗ ಐದನೆಯ ವಿಜಯಾದಿತ್ಯ (ಬೇಟ ಅಥವಾ ಕಂಠಿಕಾ ವಿಜಯಾದಿತ್ಯ) ಸಿಂಹಾಸನವೇರಿದ. ಆದರೆ ಅವನು 15 ದಿನಗಳಲ್ಲಿಯೇ ಸಿಂಹಾಸನ

ಕಳೆದುಕೊಂಡು ಪೀಠಾಪುರದಲ್ಲಿ ಆಶ್ರಯ ಪಡೆದ. ಅಲ್ಲಿ ಅವನಿಂದ ಸ್ಥಳೀಯ ಚಾಳುಕ್ಯ ಶಾಖೆಯೊಂದು ಪ್ರಾರಂಭವಾಯಿತು. ಯುದ್ಧಮಲ್ಲನ ಮಗ ಮೊದಲನೆಯ ತಾಳನು ರಾಷ್ಟ್ರಕೂಟರ ಸಹಾಯದಿಂದ ವೆಂಗಿಯ ರಾಜನಾದ. ಆದರೆ ಕೆಲ ಸಮಯದಲ್ಲಿಯೇ ಇಮ್ಮಡಿ ವಿಕ್ರಮಾದಿತ್ಯ ಅವನ ಮೇಲೆ ಆಕ್ರಮಣ ಮಾಡಿ ಕೊಂದ. ಕೇವಲ 11 ತಿಂಗಳು ಮಾತ್ರ ಆಳಿದ ಇವನು ತ್ರಿಕಲಿಂಗವನ್ನು ಮರಳಿ ವೆಂಗಿಗೆ ಗೆದ್ದಕೊಟ್ಟ. ಮೊದಲನೆಯ ಅಮ್ಮನ ಮಗ ಭೀಮ ಅವನನ್ನು ಕೊಂದ. ಭೀಮನನ್ನು ತಾಳನ ಮಗ ಎರಡನೆಯ ಯುದ್ಧಮಲ್ಲ ರಾಷ್ಟ್ರಕೂಟ ಇಂದ್ರನ ಸಹಾಯದಿಂದ ಪಟ್ಟದಿಂದಿಳಿಸಿ ತಾನೇ ಅರಸನಾದ. ಆದರೆ ವಾಸ್ತವವಾಗಿ ವೆಂಗಿಯ ಆಡಳಿತ ರಾಷ್ಟ್ರಕೂಟರ ಕೈಯಲ್ಲಿತ್ತು. ಎರಡನೆಯ ಯುದ್ಧಮಲ್ಲ 7 ವರ್ಷ ಆಳಿದ. ವೆಂಗಿಯನ್ನು ಚಾಳುಕ್ಯ ಇಮ್ಮಡಿ ಭೀಮ ಮಾರ್ತಾಂಡ ಅರಾಜಕತೆಯಿಂದ ಮುಕ್ತಗೊಳಿಸಿದ. ಐದು ವರ್ಷಗಳ ಸತತ ಪ್ರಯತ್ನದಿಂದ ರಾಷ್ಟ್ರಕೂಟರನ್ನು ವೆಂಗಿಯಿಂದ ಹೊರದೂಡಿದ. ಇವನು ಹನ್ನೆರಡು ವರ್ಷಗಳ ಕಾಲ ಆಳಿದ. ಅವನು ಊರ್ಜಪಾ ಎಂಬ ಪೂರ್ವಗಂಗ ರಾಜಕುಮಾರಿಯನ್ನು ವರಿಸಿದ್ದ. ಇವಳಿಂದ ದಾನಾರ್ಣವ ಎಂಬ ಮಗನೂ ಲೋಕಾಂಬಾ ಎಂಬ ರಾಜಕುಮಾರಿಯಿಂದ ಅಮ್ಮ ಎಂಬ ಮಗನೂ ಜನಿಸಿದ. ಇಮ್ಮಡಿ ಅಮ್ಮನು ವೆಂಗಿ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ.

ಇಮ್ಮಡಿ ಅಮ್ಮ ಅಧಿಕಾರಕ್ಕೆ ಬಂದಾಗ ಅವನ ರಾಜ್ಯಕ್ಕೆ ಅನೇಕ ಅಡ್ಡಿ ಆತಂಕಗಳಿದ್ದವು (945). ಪಟ್ಟಾಭಿಷಿಕ್ತನಾದಾಗ ಇಮ್ಮಡಿ ಯುದ್ಧಮಲ್ಲನ ಮಕ್ಕಳಾದ ಬಾದಪ ಮತ್ತು ಇಮ್ಮಡಿ ತಾಳರು ರಾಷ್ಟ್ರಕೂಟರಲ್ಲಿ ಆಶ್ರಯ ಪಡೆದಿದ್ದರು. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಸಹಾಯ ದೊಂದಿಗೆ ಬಾದಪನು ವೆಂಗಿಗೆ ಧಾಳಿ ಮಾಡಿದಾಗ ಅಸಹಾಯಕನಾಗಿದ್ದ ಅಮ್ಮನು ರಾಜ್ಯ ಬಿಟ್ಟು ಹೋಗಬೇಕಾಯಿತು. ಬಾದಪನು ತಾನೇ ವೆಂಗಿಯ ಅರಸನೆಂದು ಘೋಷಿಸಿದ. ಅವನ ತರುವಾಯ ಅವನ ತಮ್ಮನಾದ ಇಮ್ಮಡಿ ತಾಳ ಸಿಂಹಾಸನಾರೂಢನಾದ.

ರಾಜ್ಯದಿಂದ ಪಲಾಯನಗೈದಿದ್ದ ಇಮ್ಮಡಿ ಅಮ್ಮನು ತನ್ನ ಮಾವನಾದ ಕೋಲ, ಅರಸ ನೃಪಕಾನ ಮತ್ತು ಶುಭಚಿಂತಕರ ಸಹಾಯ ಪಡೆದು ವೆಂಗಿಗೆ ದಾಳಿಯಿಟ್ಟು ತಾಳನನ್ನು ಕೊಂದು ಮರಳಿ ತನ್ನ ಅಧಿಕಾರ ಸ್ಥಾಪಿಸಿದ. ಕೆಲಕಾಲ ಶಾಂತಿಯಿಂದ ಆಳಿದ ಅಮ್ಮನು ಮತ್ತೆ 956ರಲ್ಲಿ ರಾಷ್ಟ್ರಕೂಟರೊಂದಿಗೆ ಘರ್ಷಣೆಗೆ ಇಳಿಯಬೇಕಾಯಿತು. ಮಹಾತ್ವಾಕಾಂಕ್ಷಿಯಾಗಿದ್ದ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಇಡೀ ದಕ್ಷಿಣ ಭಾರತದ ಮೇಲೆ ತನ್ನ ಸಾರ್ವಭೌಮತ್ವ ಸ್ಥಾಪಿಸಬೇಕೆಂದು ಯೋಜಿಸಿ ಕಾರ್ಯಕ್ಕಿಳಿದ. 949–50ರಲ್ಲಿ ಚೋಳ ಪರಾಂತಕನನ್ನು ತಕ್ಕೋಲಂ ಯುದ್ಧದಲ್ಲಿ ಸೋಲಿಸಿ ಕಾಂಚೀ ತಂಜಾವೂರು ಗಳನ್ನು ಆಕ್ರಮಿಸಿ ತನ್ನ ಸಾಮ್ರಾಜ್ಯಕ್ಕೆ ತೊಂಡೈಮಂಡಲವನ್ನು ಸೇರಿಸಿಕೊಂಡ. ಅನಂತರ ಅಮ್ಮನ ತಮ್ಮ ದಾನಾರ್ಣವನೊಂದಿಗೆ ಸಖ್ಯ ಬೆಳೆಸಿ ವೆಂಗಿಯ ಮೇಲೆ ಸೈನ್ಯವನ್ನು ಕಳಿಸಿದ. ಅಮ್ಮನು ಕಳಿಂಗಕ್ಕೆ ಪಲಾಯನ ಮಾಡಿದ. ದಾನಾರ್ಣವನನ್ನು ವೆಂಗಿಯ ಪಟ್ಟಕೇರಿಸ ಲಾಯಿತು. ಕೆಲ ಕಾಲದ ತರುವಾಯ ಅಮ್ಮನು ಮತ್ತೆ ವೆಂಗಿ ರಾಜ್ಯವನ್ನು ಗಳಿಸಿ 970ರ ವರೆಗೆ ಆಳಿದ. ಆದರೆ ದಾನಾರ್ಣವ ಮತ್ತೆ ದಂಗೆಯೆದ್ದು ರಾಜ್ಯ ಗಳಿಸಿದನಾದರೂ ಇವನ ಆಳ್ವಿಕೆ ಕೇವಲ ಮೂರು ವರ್ಷ ಸಾಗಿತು. ಈ ಕಾಲಾವಧಿ ಪೆಡಕಲ್ಲಿನ (ಕರ್ನೂಲು ಜಿಲ್ಲೆ) ತೆಲುಗು–ಚೋಡ ಅರಸ ಜಟಾ ಚೋಡ ಭೀಮನೊಂದಿಗೆ ಯುದ್ಧದಲ್ಲಿಯೆ ಕಳೆಯಲಾಯಿತು. ಜಟಾ ಚೋಡ ಭೀಮ ಬಹುಶಃ ತಾಯಿಯ ಕಡೆಯಿಂದ ಚಾಳುಕ್ಯ ಇಮ್ಮಡಿ ಭೀಮ ಅಥವಾ ರಾಜ ಭೀಮನ ಮೊಮ್ಮಗನೆಂದು ಹಾಗೂ ಇಮ್ಮಡಿ ಅಮ್ಮನ ಭಾವನೆಂದು ಕಾಣುತ್ತದೆ. ಈ ಕಾರಣದಿಂದಲೇ ಅವನು ಅಮ್ಮ ತೀರಿಕೊಂಡಾಗ ಸಿಟ್ಟಿನಿಂದ ದಾನಾರ್ಣವನ ಮೇಲೆ ಧಾಳಿ ಮಾಡಿ 973ರಲ್ಲಿ ಅವನನ್ನು ಕೊಂದ.

ತೆಲುಗು ಜಟಾ ಚೋಡ ಭೀಮನ ಪರಾಕ್ರಮದಿಂದ ವೆಂಗಿ ಚಾಳುಕ್ಯರು ಮೊದಲ ಬಾರಿ ತಮ್ಮ ಅಧಿಕಾರವನ್ನು ನಿಜವಾಗಿ ಕಳೆದುಕೊಂಡಂತಾಯಿತು. 27 ವರ್ಷಗಳ ಕಾಲ ಜಟಾ ಭೀಮನು ವೆಂಗಿಯನ್ನು ಆಳಿದ.

ದಾನಾರ್ಣವನಿಗೆ ಮೊದಲನೆಯ ಶಕ್ತಿವರ್ಮ ಮತ್ತು ವಿಮಲಾದಿತ್ಯ ಎಂಬ ಮಕ್ಕಳಿದ್ದರು. ಚಿಕ್ಕ ಮಗ ವಿಮಲಾದಿತ್ಯ ರಾಜರಾಜ ಚೋಳನ ಮಗಳಾದ ಕುಂದವ್ವೆಯನ್ನು ಮದುವೆಯಾಗಿದ್ದ. ಜಟಾ ಚೋಡ ಭೀಮ ವೆಂಗಿಯನ್ನಾಕ್ರಮಿಸಿದ್ದರಿಂದ ಸಹಜವಾಗಿ ರೊಚ್ಚಿಗೆದ್ದ ಚೋಳ ರಾಜರಾಜನು ಮೊದಲನೆಯ ಶಕ್ತಿವರ್ಮನ ಪರವಾಗಿ ವೆಂಗಿಯ ಮೇಲೆ ಧಾಳಿ ಮಾಡಿದ. ಯುದ್ಧದಲ್ಲಿ ಚೋಳ–ಚಾಳುಕ್ಯ ಮೈತ್ರಿಗೆ ವಿಜಯವಾಯಿತು. ಚೋಡ ಭೀಮನು ಕಳಿಂಗದ ಗುಡ್ಡಗಾಡುಗಳಲ್ಲಿ ತಲೆಮರೆಸಿಕೊಂಡ. ಶಕ್ತಿವರ್ಮನನ್ನು ರಾಜನೆಂದು ಘೋಷಿಸಿದ ಮೇಲೆ ಚೋಳ ಸೈನ್ಯ ತನ್ನ ನಾಡಿಗೆ ಮರಳಿತು. ಆಗ ಚೋಡ ಭೀಮ ಮತ್ತೆ ವೆಂಗಿಯನ್ನು ಆಕ್ರಮಿಸಿದನಲ್ಲದೆ ತೊಂಡೈಮಂಡಲದವರೆಗೂ ದಂಡ ಯಾತ್ರೆಗೈದ. ಒಂದನೆಯ ರಾಜರಾಜ ಚೋಳ ಅವನನ್ನು ಹೊರದಬ್ಬಿದ್ದಲ್ಲದೆ, ಆಂಧ್ರದ ಕರಾವಳಿಗುಂಟ ಹಾಗೂ ಕಳಿಂಗದವರೆಗೂ ಸೈನ್ಯಕಳುಹಿಸಿ 1002–03ರಲ್ಲಿ ಜಟಾ ಭೀಮನನ್ನು ಕೊಂದು, ವೆಂಗಿಯಲ್ಲಿ ಶಕ್ತಿವರ್ಮನನ್ನು ಪುನಃ ಅಧಿಕಾರಕ್ಕೆ ತಂದ.

ಶಕ್ತಿವರ್ಮ ಪಟ್ಟಕ್ಕೇರಿದ ಅನಂತರ ವೆಂಗಿಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಚೋಳರ ಸಹಾಯದಿಂದ ರಾಜ್ಯವನ್ನು ಮರಳಿ ಪಡೆದದ್ದರಿಂದ ವೆಂಗಿರಾಜ್ಯದ ಸ್ವಾತಂತ್ರ್ಯವನ್ನು ಬಲಿ ಕೊಟ್ಟು, ಚೋಳರ ಸಾರ್ವಭೌಮತ್ವವನ್ನು ಒಪ್ಪಬೇಕಾಯಿತು. ಇದರಿಂದ ದಖನ್ ರಾಜಕೀಯ ಸಮತೋಲನಕ್ಕೆ ಪೆಟ್ಟುಬಿದ್ದಿತು. ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಕಿತ್ತೆಸೆದು ಸ್ವತಂತ್ರರಾಗಿದ್ದ ಕಲ್ಯಾಣದ ಚಾಳುಕ್ಯರು ವೆಂಗಿಯ ಮೇಲೆ ಚೋಳರ ಹಿಡಿತವನ್ನು ಸಹಿಸಲು ಸಿದ್ಧರಿರಲಿಲ್ಲ. ಹೀಗಾಗಿ ವೆಂಗಿಯು ಮುಂದಿನ ಸು. 135 ವರ್ಷಗಳ ಕಾಲ ತಂಜಾವೂರಿನ ಚೋಳರ ಮತ್ತು ಕಲ್ಯಾಣದ ಚಾಳುಕ್ಯರ ನಡುವೆ ನಡೆದ ಯುದ್ಧಗಳಿಗೆ ರಂಗಮಂಚವಾಯಿತು. ವೆಂಗಿ ಚಾಳುಕ್ಯರು ಹೆಸರಿಗೆ ಮಾತ್ರ ಸಿಂಹಾಸನಾರೂಢರಾಗಿದ್ದರು. ಈ ಕಾಲಘಟ್ಟದ ಇತಿಹಾಸ ನಿಜವಾಗಿ ವೆಂಗಿಯ ಹಿಡಿತಕ್ಕಾಗಿ ಚಾಳುಕ್ಯ ಚೋಳರ ನಡುವೆ ನಡೆದ ಕಲಹಗಳ ಇತಿಹಾಸವಾಗಿದೆ.

ಶಕ್ತಿವರ್ಮ 12 ವರ್ಷಗಳ ಕಾಲ ಆಳಿದ. ಇವನ ಆಳ್ವಿಕೆಯ ಆರಂಭದಲ್ಲಿಯೇ 1006ರಲ್ಲಿ ಕಲ್ಯಾಣದ ಚಾಳುಕ್ಯ ಇಮ್ಮಡಿ ತೈಲಪನ ಮಗ ಸತ್ಯಾಶ್ರಯ ವೆಂಗಿಯ ಮೇಲೆ ದಾಳಿಯಿಟ್ಟ. ಅವನ ಸೇನಾನಿ ಬಯಲನಂಬಿ ವೆಂಗಿಯನ್ನಾಕ್ರಮಿಸಿ ಧರಣೀಕೋಟ ಮತ್ತು ಯನಮದಲ ಕೋಟೆಗಳನ್ನು ನಾಶಪಡಿಸಿದ. ಇದಕ್ಕೆ ಪ್ರತಿಯಾಗಿ ಒಂದನೆಯ ರಾಜರಾಜ ಚೋಳ ತನ್ನ ಸೈನ್ಯವನ್ನು ವೆಂಗಿಗೆ ಕಳುಹಿಸಿ ಸತ್ಯಾಶ್ರಯನ ಸೈನ್ಯ ಅಲ್ಲಿಂದ ಕಾಲುಕೀಳುವಂತೆ ಮಾಡಿದ. ಸ್ವಲ್ಪ ಕಾಲದಲ್ಲಿಯೇ ಶಕ್ತಿವರ್ಮ ಸಂತಾನ ವಿಲ್ಲದೆ ತೀರಿಕೊಂಡದ್ದರಿಂದ. ಅವನ ತಮ್ಮ ವಿಮಲಾದಿತ್ಯ 1011ರಲ್ಲಿ ವೆಂಗಿಯ ಪಟ್ಟಕ್ಕೇರಿದ. ಇವನು 1018ರ ವರೆಗೆ ಆಳಿದ. ಮೂಲತಃ ಶೈವನಾಗಿದ್ದ ಇವನು ಜೈನಧರ್ಮವನ್ನು ಸ್ವೀಕರಿಸದನೆಂದು ಶಾಸನಗಳಿಂದ ತಿಳಿಯುತ್ತದೆ. ವಿಮಲಾದಿತ್ಯ ಒಂದನೆಯ ಚೋಳ ರಾಜರಾಜನ ಮಗಳು ಕುಂದವ್ವೆಯನ್ನಲ್ಲದೆ ಜಟಾ ಚೋಡ ಭೀಮನ ಮಗಳಾದ ಮೇಲಮ ಎಂಬಾಕೆಯನ್ನು ವರಿಸಿದ್ದ. ಕುಂದವ್ವೆಯ ಮಗ ರಾಜರಾಜನನ್ನು ಯುವರಾಜನೆಂದು ಮಾನ್ಯಮಾಡಲಾಯಿತು.

ವಿಮಲಾದಿತ್ಯ 1018ರಲ್ಲಿ ಕಾಲವಾದಾಗ ಸಿಂಹಾಸನಕ್ಕಾಗಿ ಮತ್ತೆ ಅಂತರ್ ಕಲಹವುಂಟಾಯಿತು. ಮೇಲಮಳ ಮಗ ವಿಜಯಾದಿತ್ಯ ಚಾಳುಕ್ಯ ಇಮ್ಮಡಿ ಜಯಸಿಂಹ ಜಗದೇಕಮಲ್ಲನ ಸಹಾಯದಿಂದ ರಾಜರಾಜನನ್ನು ರಾಜ್ಯದಿಂದ ಹೊರಗಟ್ಟಿದ. ರಾಜರಾಜನು ರಾಜೇಂದ್ರ ಚೋಳನ ಸಹಾಯ ಯಾಚಿಸಿದ. ರಾಜೇಂದ್ರ ತನ್ನ ಸೈನ್ಯವನ್ನು ಶೋಳಿಯವರಶನ್ ಎಂಬ ಸೇನಾನಿಯ ನೇತೃತ್ವದಲ್ಲಿ ಅವನ ಸಹಾಯಕ್ಕೆ ಕಳಿಸಿದ್ದಲ್ಲದೆ ಚಾಳುಕ್ಯರ ಪ್ರದೇಶವಾಗಿದ್ದ ರಟ್ಟಪಾಡಿಯ ಮೇಲೆ ಧಾಳಿಯಿಟ್ಟ. ಸೇನಾನಿ ಶೋಳಿಯ ವರಶ ವೆಂಗಿಯನ್ನು ಆಕ್ರಮಿಸಿದ. ಉತ್ತರಕ್ಕೆ ದಂಡಯಾತ್ರೆ ಕೈಗೊಂಡು ಗಂಗಾ ಬಯಲಿನ ವರೆಗೂ ಸಾಗಿದ. ಅವನು ಮರಳುವಾಗ ಉತ್ಕಲದ ಅರಸರಿಂದ ತೊಂದರೆಯಾಗುವುದನ್ನು ಗಮನಿಸಿ ರಾಜೇಂದ್ರ ಸ್ವತಃ ತನ್ನ ಸೈನ್ಯದೊಂದಿಗೆ ಉತ್ಕಲರನ್ನು ದಂಡಿಸಿದ. ರಾಜರಾಜ ನನ್ನು ಮತ್ತೆ 1022ರಲ್ಲಿ ವೆಂಗಿಯ ಸಿಂಹಾಸನಕ್ಕೆ ತರಲಾಯಿತು.

ರಾಜರಾಜ ನರೇಂದ್ರ ತನ್ನ 42 ವರ್ಷಗಳ ಸುದೀರ್ಘ ಆಳ್ವಿಕೆಯಲ್ಲಿ ಸಮಸ್ಯೆಗಳ ಸರಮಾಲೆಯನ್ನೇ ಎದುರಿಸಬೇಕಾಯಿತು ಹಾಗೂ ಕೆಲವು ಸಲ ರಾಜ್ಯ ಬಿಟ್ಟು ಹೋಗ ಬೇಕಾಯಿತು. ಸಿಂಹಾಸನ ಕಳೆದುಕೊಂಡ ವಿಮಲಾದಿತ್ಯ ಕಲ್ಯಾಣದ ಚಾಳುಕ್ಯರ ಸಹಾಯ ದೊಂದಿಗೆ 1031ರಲ್ಲಿ ರಾಜಾದಿತ್ಯನನ್ನು ಓಡಿಸಿ ತಾನೆ ಪಟ್ಟಾಭಿಷಿಕ್ತನಾದ. 1035ರ ಸುಮಾರಿಗೆ ರಾಜರಾಜ ಮತ್ತೆ ವೆಂಗಿಯ ಅರಸನಾದ. ಕಲ್ಯಾಣದ ಚಾಳುಕ್ಯ ದೊರೆ ಒಂದನೆಯ ಸೋಮೇಶ್ವರ ಮತ್ತೊಮ್ಮೆ ವೆಂಗಿಯ ಮೇಲೆ ದಾಳಿಯಿಟ್ಟ. ಚೋಳರ ಸಹಾಯ ಬಯಸಿದ ರಾಜರಾಜನಿಗೆ ಬ್ರಹ್ಮಮಹಾರಾಜ ಎಂಬ ಚೋಳ ಸೇನಾನಿಯ ಲಭ್ಯವಾಯಿತು. ಕಾಲದಿಂಡಿ ಎಂಬ ಹಳ್ಳಿಯಲ್ಲಿ ನಡೆದ ಘೋರ ಯುದ್ಧದಲ್ಲಿ ಚಾಳುಕ್ಯ ಮತ್ತು ಚೋಳ ಸೈನ್ಯ ಸಾವನ್ನಪ್ಪಿತು. ಯುದ್ಧದ ಪರಿಣಾಮ ಸ್ಪಷ್ಟವಾಗಲಿಲ್ಲ.

ಚೋಳ ಒಂದನೆಯ ರಾಜಾಧಿರಾಜ ಪಟ್ಟಕ್ಕೇರಿದ ಅನಂತರ ವೆಂಗಿಯ ಮೇಲೆ ಹಿಡಿತ ಸಾಧಿಸಲೆಂದು ಧಾಳಿ ಮಾಡಿದ. ಚಾಳುಕ್ಯ ಆಹವಮಲ್ಲನ ಸೈನ್ಯದೊಂದಿಗೆ ಯುದ್ಧವಾಗಿ ತಾತ್ಕಾಲಿಕವಾಗಿ ರಾಜರಾಜನು ಮತ್ತೆ ವೆಂಗಿಯ ಸಿಂಹಾಸನವನ್ನೇರುವಂತಾಯಿತು. 1047ರಲ್ಲಿ ಚಾಳುಕ್ಯ ಆಹವಮಲ್ಲನು ವೆಂಗಿ ಕಳಿಂಗಗಳ ಮೇಲೆ ಜಯಶಾಲಿಯಾದ. ಚಾಳುಕ್ಯ ಇಮ್ಮಡಿ ಸೋಮೇಶ್ವರ ವೆಂಗಿಪುರವರೇಶ್ವರ ಎಂಬುದಾಗಿ 1049–54 ಶಾಸನ ಗಳಲ್ಲಿ ಉಲ್ಲೇಖಿಸಲಾಗಿದೆ. ಇಷ್ಟು ಹೊತ್ತಿಗೆ ಚೋಳ ರಾಜಾಧಿರಾಜನಿಗೆ ವೆಂಗಿಯ ಮೇಲಿನ ಆಸಕ್ತಿ ಕುಂದಿತ್ತು. ಹೀಗಾಗಿ ವೆಂಗಿಯ ರಾಜರಾಜನು ಚಾಳುಕ್ಯರ ಸಾರ್ವಭೌಮತ್ವನ್ನು ಒಪ್ಪಿದ. ಆಹವಮಲ್ಲನ ಪ್ರಧಾನಿ ನಾರಾಯಣಭಟ್ಟ. ವೆಂಗಿ ಚಾಳುಕ್ಯರ ರಾಜಧಾನಿಯ ನಿವಾಸಿಯಾಗಿದ್ದ. ರಾಜರಾಜನ ಆಸ್ಥಾನ ಕವಿಯೂ ಪುರೋಹಿತನೂ ಆಗಿದ್ದ ನನ್ನಯಭಟ್ಟನಿಗೆ ತೆಲುಗು ಮಹಾಭಾರತವನ್ನು ಬರೆಯಲು ಇವನು ಸಹಕರಿಸಿದ. ಇದರಿಂದ ಸಂಪ್ರೀತನಾದ ರಾಜರಾಜ 1051ರಲ್ಲಿ ನಂದಮಪೂಂಡಿ ಗ್ರಾಮವನ್ನು ಅಗ್ರಹಾರವಾಗಿ ಕೊಟ್ಟನೆಂದು ತಿಳಿಯುತ್ತದೆ. ರಾಜರಾಜನು ಚೋಳ ರಾಜೇಂದ್ರನ ಮಗಳು ಅಮ್ಮಂಗೈಯನ್ನು ಮದುವೆಯಾಗಿ ಅವಳಿಂದ ರಾಜೇಂದ್ರ ಎಂಬ ಮಗನನ್ನು ಪಡೆದ.

ರಾಜರಾಜ 1061ರಲ್ಲಿ ತೀರಿಕೊಂಡ. ಅದುವರೆಗೆ ಕಲ್ಯಾಣದ ಚಾಳುಕ್ಯರಲ್ಲಿ ಸೇವೆಸಲ್ಲಿಸುತ್ತಿದ್ದ ವಿಜಯಾದಿತ್ಯ ವೆಂಗಿಯ ಸಿಂಹಾಸನಕ್ಕೆ ವಾರಸುದಾರನಾದ. ವಿಜಯಾದಿತ್ಯನು ಚಾಳುಕ್ಯರ ಸೇವೆಯಲ್ಲಿ ನೊಳಂಬವಾಡಿಯ ಆಡಳಿತ ನೋಡುತ್ತಿದ್ದುದರಿಂದ ಮೊದಲು ತನ್ನ ಮಗ ಇಮ್ಮಡಿ ಶಕ್ತಿವರ್ಮನನ್ನು ವೆಂಗಿಯ ಅರಸನನ್ನಾಗಿ ಮಾಡಿದ. ಆದರೆ ಶಕ್ತಿವರ್ಮ ಒಂದೇ ವರ್ಷದಲ್ಲಿ ಬಹುಶಃ ಚೋಳ ವೀರರಾಜೇಂದ್ರನ ಆಕ್ರಮಣದಲ್ಲಿ ಮಡಿದ. ವಿಜಯಾದಿತ್ಯ ಅಥವಾ ವಿಷ್ಣುವರ್ಧನ, ಏಳನೆಯ ವಿಜಯಾದಿತ್ಯ ತನ್ನ ಮಗ ಶಕ್ತಿವರ್ಮ ಕಾಲವಾದಾಗ ವೆಂಗಿಯಲ್ಲಿರಲಿಲ್ಲ. ಚೋಳರಿಂದ ಚಾಳುಕ್ಯ ರಾಜ್ಯದ ಆಗ್ನೇಯಭಾಗವನ್ನು ರಕ್ಷಿಸಲೆಂದು ನೊಳಂಬವಾಡಿಯ ಅಧಿಕಾರಿಯಾಗಿ ಅವನನ್ನು ನೇಮಿಸಲಾಗಿತ್ತು. ಚೋಳರ ಮೇಲೂ ಅವನು ದಂಡಯಾತ್ರೆ ಕೈಗೊಂಡ. ಆದರೆ ಚೋಳ ವೀರರಾಜೇಂದ್ರ ವೆಂಗಿಯ ಮೇಲೆ ಚೋಳರ ಹಿಡಿತವನ್ನು ಪುನಃ ಸ್ಥಾಪಿಸುವುದರಲ್ಲಿ ಆಸಕ್ತನಾಗಿದ್ದ. ಇದರಿಂದಾಗಿ ಚಾಳುಕ್ಯ ಒಂದನೆಯ ಸೋಮೇಶ್ವರ ಧಾರಾದ ಜಗನ್ನಾಥನ ನೇತೃತ್ವದಲ್ಲಿ ಸೈನ್ಯ ಕಳಿಸಿ ವಿಜಯವಾಡದಲ್ಲಿ ಬೀಡು ಬಿಡಿಸಿದ. ಚೋಳರ ದಾಳಿ ತಡೆಯಲೆಂದು 1064ರಲ್ಲಿ ವಿಜಯಾದಿತ್ಯನನ್ನು ಚೋಳರ ವಿರುದ್ಧ ದಕ್ಷಿಣಕ್ಕೆ ಕಳುಹಿಸಿದ. ಆದರೆ ಸೋಮೇಶ್ವರ ಮರಣ ಹೊಂದಿದ್ದರಿಂದಾಗಿ ಆರನೆಯ ವಿಕ್ರಮಾದಿತ್ಯ ಹಸ್ತಕ್ಷೇಪಮಾಡಿದ ವಿಜಯಾದಿತ್ಯ ವೀರರಾಜೇಂದ್ರನೊಂದಿಗೆ ಸಂಧಿಮಾಡಿಕೊಂಡು ಚೋಳರ ಸಾರ್ವಭೌಮತ್ವವನ್ನು ಒಪ್ಪುವಂತೆ ಮಾಡಿದ.

1070ರಲ್ಲಿ ಚೋಳ ವೀರರಾಜೇಂದ್ರ ಮಡಿದ ಕೆಲಕಾಲದಲ್ಲಿಯೇ ಅವನ ಮಗ ಅಧಿರಾಜೇಂದ್ರ ಹತನಾದ. ವೆಂಗಿಯ ರಾಜೇಂದ್ರ ಚೋಳ ಒಂದನೆಯ ರಾಜೇಂದ್ರನಿಗೆ ತಾಯಿ ಕಡೆಯಿಂದ ಸಂಬಂಧಿಯಾದ್ದರಿಂದ ಚೋಳರ ಸಿಂಹಾಸನಕ್ಕೆ ವಾರಸುದಾರನಾದ. ಕಳಿಂಗದ ಪೂರ್ವಗಂಗ ದೊರೆ ರಾಜೇಂದ್ರ ವೆಂಗಿಯ ಮೇಲೆ ದಾಳಿಮಾಡಿ ವಿಜಯಾದಿತ್ಯನನ್ನು ಪಟ್ಟಕ್ಕೇರಿಸಿದ. ರಾಜೇಂದ್ರನೂ ಅದಕ್ಕೆ ಮನ್ನಣೆ ನೀಡಿದ. 1073ರಲ್ಲಿ ಡಾಹಲದ ಚೇದಿ ರಾಜ ಯಶಃಕರ್ಣದೇವನು ವೆಂಗಿಯ ಮೇಲೆ ಧಾಳಿಮಾಡಿದ. ಇದಲ್ಲದೆ ಪೂರ್ವ ಗಂಗ ಅರಸ ರಾಜೇಂದ್ರನ ಸೇನಾಪತಿ ಬನಪತಿಯು ವೆಂಗಿಯ ಅರಸನನ್ನು ಮತ್ತೆ ಮತ್ತೆ ಸೋಲಿಸಿದ್ದಾಗಿ 1075ರ ಶಾಸನವೊಂದರಲ್ಲಿ ಹೇಳಿದೆ. ಇದರಿಂದ ಏಳನೆಯ ವಿಜಯಾದಿತ್ಯ ವೆಂಗಿ ರಾಜ್ಯವನ್ನು ಕಳೆದುಕೊಳ್ಳುವಂತಾಯಿತು. 1074–75ರ ಒಂದು ಶಾಸನದಲ್ಲಿ ಉಲ್ಲೇಖಿಸುತ್ತದೆ–ಅವನು ಕಲ್ಯಾಣದ ಚಾಳುಕ್ಯ ದೊರೆ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಅಧೀನನಾಗಿದ್ದಂತೆ ಪಲ್ಲವಾನ್ವಯ, ಕಾಂಚೀಪುರವರೇಶ್ವರ, ಪಲ್ಲವ ಪೆರ್ಮಾನಡಿ ಮುಂತಾದ ಬಿರುದುಗಳು ಅವನಿಗಿದ್ದವು. ಆದ್ದರಿಂದ ಅವನು ನೊಳಂಬ ವಾಡಿಯ ಅಧಿಕಾರಿಯಾಗಿ ನೇಮಿತವಾಗಿದ್ದನೆಂದು ಸೂಚಿತವಾಗುತ್ತದೆ. ಸು. 1075ರಲ್ಲಿ ಅವನು ಮರಣಹೊಂದುವುದ ರೊಂದಿಗೆ ವೆಂಗಿಯ ಚಾಳುಕ್ಯರ ಆಳ್ವಿಕೆ ಕೊನೆಗೊಂಡಂತಾಯಿತು. ವೆಂಗಿ ಚೋಳ ಸಾಮ್ರಾಜ್ಯದ ಒಂದು ಭಾಗವಾಯಿತು.

**ವಾಸ್ತು ಮತ್ತು ಶಿಲ್ಪ:** ವೆಂಗಿಯ ಚಾಳುಕ್ಯರು ಗುಹಾವಾಸ್ತು ಮತ್ತು ರಾಚನಿಕ ವಾಸ್ತುನಿರ್ಮಾಣಗಳೆರಡಕ್ಕೂ ಪ್ರೋತ್ಸಾಹ ನೀಡಿದರು. ಅವರ ಕಾಲದ ಗುಹಾ ನಿರ್ಮಿತಿಗಳನ್ನು ವಿಜಯವಾಡದ ಸಮೀಪದಲ್ಲಿರುವ ಉಂಡವಳ್ಳಿಯ ಮೂರು ಮಹಡಿಯ ಗುಹಾಲಯ ಹಾಗೂ ವಿಜಯವಾಡ ನಗರದಲ್ಲಿರುವ ಅಕ್ಕಣ್ಣ–ಮಾದಣ್ಣ ಗುಹೆಗಳು, ಮೊಗಲ್ರಾಜಪುರಂ ಗುಹೆಗಳು, ಭೈರವಕೊಂಡದ ಗುಹಾಲಯಗಳು ಇತ್ಯಾದಿಗಳಲ್ಲಿ ಕಾಣಬಹುದು. ಪೊಂಡಗುಳ, ಬಿಕ್ಕವೊಲು ಮುಂತಾದೆಡೆ ರಾಚನಿಕ ದೇಗುಲಗಳಿವೆ.

ಗುಹಾಲಯಗಳು: ಶಿವರಾಮಮೂರ್ತಿ ಮುಂತಾದ ಕೆಲವು ವಿದ್ವಾಂಸರು ವಿಜಯವಾಡದ ಪರಿಸರದಲ್ಲಿರುವ ಗುಹಾಲಯಗಳನ್ನು ವಿಷ್ಣುಕುಂಡಿ ವಂಶೀಯರ ನಿರ್ಮಾಣಗಳೆಂದು ಭಾವಿಸುತ್ತಾರೆ. ಆದರೆ ಕೆ.ವಿ.ಸೌಂದರರಾಜನ್ ಹಾಗೂ ಮತ್ತಿತರರು ಇವು ವೆಂಗಿ ಚಾಳುಕ್ಯ ನಿರ್ಮಿತಿಗಳೆಂದು ಪರಿಗಣಿಸುತ್ತಿದ್ದು ಇದನ್ನೇ ಹೆಚ್ಚಿನ ವಿದ್ವಾಂಸರು ಬೆಂಬಲಿಸಿದ್ದಾರೆ.

ವಿಜಯವಾಡದಲ್ಲಿರುವ ಗುಹಾಲಯಗಳಲ್ಲಿ ಮೋಗಲ್ರಾಜಪುರಂನಲ್ಲಿರುವ 5 ಗುಹಾದೇಗುಲಗಳು ಪ್ರಾಚೀನತಮವಾದವುಗಳು. ಇವುಗಳಿಗೆ ಮುಖಮಂಟಪವುಳ್ಳ ಒಂದು ಇಲ್ಲವೆ ಮೂರು ಗರ್ಭಗೃಹಗಳಿವೆ. ಈ ಐದರಲ್ಲಿ ಎರಡನೆಯ ಗುಹೆ ಗಮನಾರ್ಹವಾದುದು. ಇದಕ್ಕೆ ತೆರೆದ ಮೊಗಸಾಲೆಯಿದ್ದು, ಅದರ ಹಿಂಭಾಗದಲ್ಲಿ ಮಂಟಪ ಮತ್ತು ಮಂಟಪದ ಹಿಂಗೋಡೆಯಲ್ಲಿ ಮೂರು ಗರ್ಭಗೃಹಗಳು ಇವೆ. ಮಧ್ಯದ ಗರ್ಭಗೃಹ ದೊಡ್ಡದಾಗಿದ್ದು ಪಾರ್ಶ್ವದ ಉಳಿದೆರಡು ಗರ್ಭಗೃಹಗಳು ತುಸು ಚಿಕ್ಕದಾಗಿವೆ. ತೆರೆದ ಮೊಗಸಾಲೆ ಪಾರ್ಶ್ವಗಳು ಇಳಿಜಾರಾಗಿದ್ದು, ಎಡ ಗೋಡೆಯಲ್ಲಿ ಕೊಠಡಿಯಿದೆ. ಇದು ಪಶ್ಚಿಮ ಭಾರತದ ಗುಹಾವಾಸ್ತು ಪರಂಪರೆಯನ್ನು ನೆನಪಿಸುತ್ತವೆ. ಗುಹಾಲಯದ ಮುಖ ಭಾಗದಲ್ಲಿ ಪಾದಬಂಧ ಅಧಿಷ್ಠಾನ, ಎರಡು ಕಂಭಗಳು, ಕಪೋತ ಮತ್ತು ವ್ಯಾಲವರಿ ಇವೆ. ಇದರ ಮೇಲ್ಭಾಗದಲ್ಲಿ ತುಸು ಹಿಂದೆ ಸರಿದಂತೆ ದೊಡ್ಡ ಗಾತ್ರದ ನಟರಾಜನ ಉಬ್ಬುಶಿಲ್ಪವಿದೆ. ಕಂಭಗಳು ಭಾರಿ ಗಾತ್ರದವು. ಇವುಗಳ ತಳ ಮತ್ತು ಮೇಲ್ಭಾಗಗಳು ಚೌಕವಿದ್ದು ನಡುವಿನ ಭಾಗ ಅಷ್ಟಕೋನಾಕಾರದಲ್ಲಿದೆ. ಕಂಭಗಳಲ್ಲಿ ಗಜೇಂದ್ರಮೋಕ್ಷ, ಕೃಷ್ಣಚರಿತ ಮುಂತಾದ ಶಿಲ್ಪಗಳಿವೆ. ಕಪೋತದಲ್ಲಿ ಮೂರು ದೊಡ್ಡ ನಾಸಿಕಗಳಿದ್ದು ಅವುಗಳಲ್ಲಿ ಕ್ರಮವಾಗಿ ಬ್ರಹ್ಮ, ಶಿವಪಾರ್ವತಿ ಮತ್ತು ವಿಷ್ಣು–ಲಕ್ಷ್ಮೀ ದೇವತೆಗಳ ಮುಖವನ್ನು ತೋರಿಸಿದೆ. ಒಳಗಡೆ ಈ ನಾಸಿಕಗಳಿಗೆ ಸ್ಪಂದಿಯಾಗಿರುವ ಗರ್ಭಗೃಹಗಳಲ್ಲಿ ಬ್ರಹ್ಮ, ಶಿವ ಮತ್ತು ವಿಷ್ಣು ಶಿಲ್ಪಗಳಿದ್ದವೆಂದು ಇದರಿಂದ ಸೂಚಿತವಾಗಿದೆ. ವೇದಿ ಭಾಗದಲ್ಲಿ ಸೊಂಡಿಲೆತ್ತಿದ ಆನೆ ಮತ್ತು ಗುಂಗುರು ಬಾಲವುಳ್ಳ ಸಿಂಹದ ಉಬ್ಬುಶಿಲ್ಪಗಳಿವೆ.

ವಿಜಯವಾಡದ ಇಂದ್ರಕೀಲಾದ್ರಿ ಬೆಟ್ಟದಲ್ಲಿರುವ ಅಕ್ಕಣ್ಣ–ಮಾದಣ್ಣ ಗುಹಾಲಯ ಮತ್ತು ಇತರ ಗುಹಾಲಯಗಳೂ ಉಲ್ಲೇಖನೀಯವಾಗಿವೆ. ಮೇಲಣ ಗುಹೆಯು ಶಿವ, ವಿಷ್ಣು ಮತ್ತು ಬ್ರಹ್ಮ ದೇವತೆಗಳಿಗೆ ಮುಡಿಪಾಗಿದೆ. ಇದು ಬಹುಶಃ ಮೂಲತಃ ಸು.2–3 ನೆಯ ಶತಮಾನದಲ್ಲಿ ಬೌದ್ಧ ವಿಹಾರವಾಗಿತ್ತು. ಅನಂತರ ವೆಂಗಿ ಚಾಳುಕ್ಯರ ಕಾಲದಲ್ಲಿ ತ್ರಿಮೂರ್ತಿಗಳ ದೇಗುಲವಾಗಿ ಪರಿವರ್ತಿಸಲ್ಪಟ್ಟಿದೆ. ಇದಕ್ಕೆ ಒಂದು ಮಂಟಪ ಹಾಗು ಹಿಂಗೋಡೆಯಲ್ಲಿ ಮೂರು ಗರ್ಭಗೃಹಗಳು ಇವೆ. ಮೂರು ಸಾಲು ಕಂಭಗಳಿದ್ದು ಮಂಟಪವನ್ನು ಅಂಕಣಗಳಾಗಿ ವಿಭಜಿಸಿವೆ. ಅಷ್ಟಕೋನಾಕೃತಿಯ ಕಂಬಗಳು, ಪಾದಬಂಧರೀತಿಯ ಅಧಿಷ್ಠಾನ ಮತ್ತು ಅಂಗಳದಲ್ಲಿ ನಂದಿಯನ್ನಿರಿಸುವುದು ಮುಂತಾದ ಲಕ್ಷಣಗಳು ಅಜಂತ–ಎಲ್ಲೋರದ ವಾಸ್ತು ಸಂಪ್ರದಾಯವನ್ನು ನೆನಪಿಸುತ್ತವೆ.ವಿಜಯವಾಡದಿಂದ ಸು.12 ಕಿಮೀ ದೂರದಲ್ಲಿರುವ ಉಂಡವಳ್ಳಿಯಲ್ಲಿ ಅದ್ಭುತ ಗುಹಾಲಯ ಸಂಕೀರ್ಣವಿದೆ. ಈ ಸಂಕೀರ್ಣದಲ್ಲಿ ಮೂರು ಗುಹಾಲಯಗಳಿವೆ. ಮೊದಲೇ ಗುಹಾಲಯವು ಮಂಟಪ ಮತ್ತು ಗರ್ಭಗೃಹವನ್ನೊಳ ಗೊಂಡಿದೆ. ಮಂಟಪದ ಮುಖ ಭಾಗದಲ್ಲಿ ಎರಡು ರುಚಕ ಕಂಭಗಳು ಹಾಗೂ ಇನ್ನೆರಡು ಅರ್ಧಗಂಭಗಳು ಇವೆ. ಗರ್ಭಗೃಹದ ದ್ವಾರದ ಪಾರ್ಶ್ವಗಳಲ್ಲಿ ದ್ವಿಭುಜ ಶೈವ ದ್ವಾರಪಾಲಕರಿದ್ದಾರೆ. ಗದೆಯ ಮೇಲೆ ಭಾರ ಊರಿ ನಿಂತಿರುವ ಶೈಲಿ ವೆಂಗಿ ಚಾಳುಕ್ಯರ ಎಲ್ಲ ಗುಹಾಲಯಗಳಲ್ಲಿ ಗೋಚರಿಸುವ ಲಕ್ಷಣವಾಗಿದೆ.

ಎರಡನೆಯದು ಅನಂತಶಯನ ಗುಡಿ ಎಂಬ ಮೂರು ಮಹಡಿಗಳಿರುವ (ನೆಲ ಮಹಡಿಯನ್ನು ಸೇರಿಸಿದರೆ 4 ಮಹಡಿಗಳಿರುವ) ವಿಶಿಷ್ಟ ಗುಹಾಲಯ. ನೆಲ ಮಟ್ಟದಲ್ಲಿರುವ ಮಂಟಪವು ಅಪೂರ್ಣವಾಗಿದೆ. ಇದರಲ್ಲಿ ದೊಡ್ಡ ಗಾತ್ರದ ಕಂಗಳಿವೆ. ಮೊದಲನೆಯ ಮಹಡಿಯಲ್ಲಿ ವಿಶಾಲ ಮಂಟಪವಿದ್ದು ಅದರ ಹಿಂಗೋಡೆಯಲ್ಲಿ ಮೂರು ಗರ್ಭಗೃಹಗಳಿವೆ. ಇಡೀ ಮಂಟಪವನ್ನು ಮೂರು ಬೇರೆ ಬೇರೆ ಗಾತ್ರದ ಘಟಕಗಳಾಗಿ ವಿಂಗಡಿಸಿದೆ. ಮಧ್ಯದ ಘಟಕದಲ್ಲಿ ನಾಲ್ಕು ಸಾಲು ಕಂಭಗಳು ಹಾಗು ಉಳಿದೆರಡು ಪಾರ್ಶ್ವ ಘಟಕಗಳಲ್ಲಿ ಎರಡೆರಡು ಸಾಲು ಕಂಭಗಳು ಇವೆ. ಇದು ತ್ರಿಮೂರ್ತಿಗಳಿಗೆ ರಚಿತವಾದುದೆಂಬುದು ಸ್ಪಷ್ಟವಿದೆ. ಎರಡನೆಯ ಮಹಡಿಯ ದಕ್ಷಿಣ ಗೋಡೆಯಲ್ಲಿ ಒಂದು ಗರ್ಭಗೃಹ ಹಾಗು ಉತ್ತರ ಕೊನೆಯಲ್ಲಿ ವಿಷ್ಣುವಿನ ಯೋಗಶಯನ ಮೂರ್ತಿ ಇದೆ. ಇದರ ಪ್ರತಿಮಾಲಕ್ಷಣಗಳು ಪಲ್ಲವರು ನಿರ್ಮಿಸಿದ ಮಹಾಬಲಿಪುರದ ಮಹಿಷಮರ್ದಿನಿ ಮಂಟಪದಲ್ಲಿರುವ ಯೋಗಶಯನಮೂರ್ತಿಯನ್ನು ನಿಕಟವಾಗಿ ಹೋಲುತ್ತವೆ. ಹಿಂಗೋಡೆಯಲ್ಲಿ ಮಂಟಪವಿರುವ ಮೂರು ಗರ್ಭಗೃಹಗಳಿವೆ. ಮೂರನೆಯ ಮಹಡಿಯ ಅಪೂರ್ಣವಿದ್ದು ಮಂಟಪದಲ್ಲಿ ಮೂರುಗರ್ಭಗೃಹಗಳಿವೆ. ಅನಂತಶಯನ ಗುಡಿಯ ಕಂಬಗಳು ಮೊಗಲ್ರಾಜಪುರದ ಎರಡನೆಯ ಗುಹೆಯ ಕಂಬಗಳನ್ನು ನೆನಪಿಸುತ್ತವೆ. ಪಾದಬಂಧ ಅಧಿಷ್ಠಾನ, ದೊಡ್ಡ ನಾಸಿಕಗಳುಳ್ಳ ಕಪೋತ, ಶಾಲಕೂಟಗಳಿಂದಾದ ಹಾರ, ಗರ್ಭಗೃಹಗಳ ದ್ವಾರಗಳ ಮೇಲ್ಗಡೆ ಮಕರತೋರಣ ವಿರುವುದು ಇತ್ಯಾದಿಗಳು ಗಮನಾರ್ಹ ಲಕ್ಷಣಗಳಾಗಿವೆ. ಕಂಬಗಳಲ್ಲಿ ಗಜೇಂದ್ರಮೋಕ್ಷ, ಲಿಂಗೋದ್ಭವಮೂರ್ತಿ, ಭೂವರಾಹ, ವಾಮನ – ತ್ರಿವಿಕ್ರಮ, ಕೃಷ್ಣ ಚರಿತ, ನರಸಿಂಹ, ಮುಂತಾದ ಉಬ್ಬುಶಿಲ್ಪಗಳಿದ್ದು ಪ್ರತಿಮಾ ಲಕ್ಷಣ ಮತ್ತು ಶೈಲಿಯ ದೃಷ್ಟಿಯಿಂದ ಬಾದಾಮಿಯ ಚಳುಕ್ಯರ ಉತ್ತರಾರ್ಧದವು ಗಳಾಗಿವೆ (650 ನಂತರ).ವಿಜಯವಾಡ ಮತ್ತು ಉಂಡವಳ್ಳಿಯ ಗುಹಾಲಯಗಳ ನಿಖರ ಕಾಲನಿರ್ಣಯವಾಗಿಲ್ಲ. ಆದರೆ ಇವುಗಳಿಗೆ ಸಂಬಂಧಿಸಿದಂತೆ ಶ್ರೀ ಉತ್ಪತ್ತಿಪಿಡುಗು ಎಂಬ ಸು. 7–8ನೆಯ ಶತಮಾನದ ಅಕ್ಷರಗಳಲ್ಲಿರುವ ಶಾಸನಗಳು ಕಂಡುಬಂದಿವೆ. ಇದು ಮಾಹೇಶ್ವರ–ಕಾಲಾಮುಖ ಮತದ ಮುನಿಯ ಬಿರುದೆಂದು ಈಚೆಗೆ ಸೂಚಿಸಲಾಗಿದೆ. ಏಕಾಂತವಾಸಿಗಳಾ ಗಿದ್ದ ಶ್ರಮಣ ಪರಂಪರೆಯ ಕಾಲಾ ಮುಖರು ಗುಹಾಲಯಗಳಲ್ಲಿ ವಾಸಿಸು ತ್ತಿದ್ದರೆಂದು ಕಾಣುತ್ತದೆ. ಇವರ ಪ್ರಭಾವ ಪ್ರಬಲವಾಗಿ ತುಸು ಅವಧಿಯಲ್ಲಿಯೇ ಆಂಧ್ರ ಕರ್ನಾಟಕ ಪ್ರದೇಶದಲ್ಲಿ ಕಾಳಾ ಮುಖ ಪಂಥವು ಜನಪ್ರಿಯವಾಗಿದ್ದನ್ನು ಕಾಣಬಹುದು

ಭೈರವಕೊಂಡದಲ್ಲಿರುವ ಗುಹಾಲಯಗಳು ಬಹುಶಃ ಇದೇ ಸಂಪ್ರದಾಯದವು. ಪಲ್ಲವರ ತೊಂಡೈ ಮಂಡಲ ಪ್ರದೇಶಕ್ಕೆ ಹತ್ತಿರವಿದ್ದ ಈ ನೆಲೆಯಲ್ಲಿರುವ ಗುಹಾಲಯಗಳಲ್ಲಿ ಪಲ್ಲವ ಶೈಲಿಯ ಕೆಲವು ಲಕ್ಷಣಗಳಿವೆ. ಇಲ್ಲಿರುವ ಹತ್ತು ಗುಹಾಲಯಗಳು ಕೆಲವು ಸಾಮಾನ್ಯ ಲಕ್ಷಣಗಳನ್ನು ಬಿತ್ತರಿ ಸುತ್ತವೆ. ಎಲ್ಲವೂ ಒಂದೇ ಗರ್ಭಗೃಹ ವುಳ್ಳವುಗಳು. ಗರ್ಭಗೃಹದಲ್ಲಿ ಲಿಂಗ ವಿದ್ದು ಹಿಂಗೋಡೆಯಲ್ಲಿ ಮಹೇಶ ಮೂರ್ತಿಯ ಉಬ್ಬುಶಿಲ್ಪವಿದೆ. ಗರ್ಭಗೃಹದ ದ್ವಾರದ ಇಕ್ಕೆಲಗಳಲ್ಲಿ ಬೃಹದ್ಗಾತ್ರದ ದ್ವಾರಪಾಲಕರು ಗದೆಯಮೇಲೆ ಭಾರ ಹಾಕಿ ವಿಶ್ರಾಮ ಸ್ಥಿತಿಯಲ್ಲಿ ನಿಂತಿದ್ದಾರೆ. ಇವರ ಪಾರ್ಶ್ವದಲ್ಲಿ ಬ್ರಹ್ಮ ಮತ್ತು ವಿಷ್ಣು ವಿಗ್ರಹಗಳಿವೆ. ಮಾಮಲ್ಲ ಶೈಲಿಯಲ್ಲಿರುವಂತೆ ಕಂಬಗಳು ಕುಳಿತ ಸಿಂಹಪೀಠದ ಮೇಲೆದ್ದಿವೆ. ಇಲ್ಲಿಯೂ ಶ್ರೀ ಉತ್ಪತ್ತಿ

ಪಿಡುಗು ಶಾಸನ ದೊರೆತಿದೆ. ಅಂತಾಗಿ ಭೈರವಕೊಂಡದ ಗುಹಾಲಯಗಳನ್ನು 8–9ನೆಯ ಶತಮಾನಕ್ಕೆ ಅನ್ವಯಿಸಬಹುದು. ಅಲ್ಲದೆ ಇವು ವೆಂಗಿ ಚಾಳುಕ್ಯರ ಸಾಮ್ರಾಜ್ಯದ ದಕ್ಷಿಣ ಭಾಗದ ಪ್ರಾದೇಶಿಕ ಶೈಲಿಯ ಪ್ರತೀಕಗಳೆಂದು ಪರಿಗಣಿಸಬಹುದು.

ರಾಚನಿಕ ದೇಗುಲಗಳು: ವೆಂಗಿಮಂಡಲದ ಪ್ರಾಚೀನ ದೇಗುಲಗಳ ಕೆಲವು ಉದಾಹರಣೆಗಳನ್ನು ಪರಿಶೀಲಿಸುವ ಮೊದಲು ಅವುಗಳ ವೈಶಿಷ್ಟ್ಯವನ್ನು ಗುರುತಿಸುವುದು ಒಳಿತು. ದಾಕ್ಷಿಣಾತ್ಯ ಸಂಪ್ರದಾಯದ ಶಿಲಾ ದೇಗುಲಗಳೇ ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗೋಚರಿಸುತ್ತವೆ. ಕೆಲವು ಲಕ್ಷಣಗಳು ಸಮಕಾಲೀನ ತೊಂಡೈಮಂಡಲದ (ತಮಿಳುನಾಡಿ ನಲ್ಲಿ ಪಲ್ಲವರ ಕೇಂದ್ರಪ್ರದೇಶ) ದೇಗುಲಗಳಿಗಿಂತ ಭಿನ್ನವಾಗಿವೆ. ವಾಸ್ತುವಿವರಗಳಿಗೆ ನೀಡಿರುವ ಒತ್ತಿನಲ್ಲಿ ಹಾಗೂ ಭಿತ್ತಿಯ ಆಲಂಕಾರಿಕ ವಿವರಗಳಲ್ಲಿ ಈ ವ್ಯತ್ಯಾಸ ಸ್ಫುಟವಾಗಿದೆ. ಚೌಕ ಶಿಖರ, ಭಾರವಾದ ಮತ್ತು ಅಗಲವಾದ ಮೇಲ್ಕಟ್ಟಡ, ಶುಕನಾಸ ಇಲ್ಲದಿರುವುದು, ಕೋಷ್ಠಪಂಜರಗಳ ಪರಿಣಾಮಕಾರಿ ಬಳಕೆ, ಪಾದಬಂಧ ಮತ್ತು ಪ್ರತಿಬಂಧ ಅಧಿಷ್ಠಾನ ಮಾದರಿಗಳ ಜಂಟಿ ಬಳಕೆ ಇವು ಇನ್ನು ಕೆಲವು ವಿಶೇಷಗಳು. ಕರ್ಣ, ಭದ್ರ, ಸಲಿಲಾಂತರಗಳ ಮುಂಚಾಚು ಮತ್ತು ಹಿಂಚಾಚುಗಳು ಪ್ರಧಾನ ಅಭಿವ್ಯಕ್ತಿಯನ್ನು ಪಡೆದಿದ್ದು ಸಮಕಾಲೀನ ಕರ್ನಾಟಕದ ದಾಕ್ಷಿಣಾತ್ಯ ದೇಗುಲಗಳಿಂದ ಇವನ್ನು ಬೇರೆಯಾಗಿ ಸಿವೆ. ಮೇಲ್ಕಟ್ಟಡ ಗಿಡ್ಡವಾಗಿರುವುದು ಹಾಗೂ ಚೌಕ (ದಾಕ್ಷಿಣಾತ್ಯ ನಾಗರ) ಶಿಖರಗಳ ಬಳಕೆಗೆ ಒತ್ತು ನೀಡಿರುವುದು ಕೂಡ ವಿಶೇಷವೇ. ಇವೆಲ್ಲವೂ ನಿರಂಧಾರ ದೇಗುಲಗಳು. ಕರ್ನಾಟಕದಲ್ಲಿರು ವಂತೆ ಮುಖಮಂಟಪದ ಮೇಲೆ ಹಾರದ ಮುಂದುವರಿಕೆ ಇಲ್ಲಿ ಕಾಣುವುದಿಲ್ಲ. ಪರಿವಾರ ದೇಗುಲಗಳಾಗಲಿ, ಪ್ರಾಕಾರಗಳಾಗಲಿ, ಗೋಪುರಗಳಾಗಲಿ ಕಂಡುಬಂದಿಲ್ಲ. ಬಲಿಪೀಠವನ್ನು ದೇಗುಲದ ಎದುರು ಇರಿಸುವ ಸಂಪ್ರದಾಯ ಬಹುತೇಕ ಬಳಕೆಯಲ್ಲಿತ್ತು. ಬಾದಾಮಿಯ ಚಳುಕ್ಯರು ಆಳಿದ ಕೃಷ್ಣೆ–ತುಂಗಭದ್ರೆಯ ನಡುವಣ ಪ್ರದೇಶದಲ್ಲಿ ಕಾಣುವ ಪ್ರತಿಮಾಲಕ್ಷಣಗಳು ಇಲ್ಲಿ ತಕ್ಕಮಟ್ಟಿಗೆ ಗೋಚರಿಸುತ್ತವೆ. ಉದಾಹರಣೆಗೆ ಬಿಕ್ಕವೋಲು ಗೋಲಿಂಗೇಶ್ವರ ದೇಗುಲದಲ್ಲಿ ಕಾಣುವ ಗಣೇಶ, ಕಾರ್ತಿಕೇಯ, ಮಹಿಷಮರ್ದಿನಿ, ದಿಕ್ಪಾಲಕರು, ಸೂರ್ಯ, ವಿಷ್ಣು, ಬ್ರಹ್ಮ, ಶಿವ ಮುಂತಾದ ಪ್ರತಿಮೆಗಳು.

ಕೃಷ್ಣಾ ತೀರದ ಪೊಂಡುಗುಳದಿಂದ (ಗುಂಟೂರು ಜಿಲ್ಲೆ) ಸು. 8 ಕಿಮೀ ದೂರದಲ್ಲಿರುವ ಜಲಪೇಶ್ವರದೇವಾಲಯ ಈ ಪ್ರದೇಶದಲ್ಲಿ ರಾಚನಿಕ ಶಿಲಾದೇಗುಲದ ಪ್ರಥಮ ಉದಾಹರಣೆಯಾಗಿದೆ. ಗರ್ಭಗೃಹ, ಅಂತರಾಳ, ಮುಖಮಂಟಪ ಇದರ ಭಾಗಗಳು. ಮುಖಮಂಟಪ ವಿಶಾಲವಾಗಿರುವುದು ವಿಶೇಷ. ಗರ್ಭಗೃಹದ ಭಿತ್ತಿಯಲ್ಲಿ ಒಂದೇ ಮಾನಸೂತ್ರಕ್ಕೆ ಬದ್ಧವಾಗಿರುವ ಭದ್ರ, ಕರ್ಣ, ಸಲಿಲಾಂತರ ಘಟಕಗಳಿವೆ. ಅಧಿಷ್ಠಾನ ಈ ಪ್ರದೇಶದ ಇತರ ದೇಗುಲಗಳಲ್ಲಿರುವಂತೆ ಪಾದಬಂಧ ಮಾದರಿಯದು. ಉಪಾನ, ಜಗತಿ, ತ್ರಿಪಟ್ಟ ಕುಮುದಗಳ ಪಾದಗಳನ್ನೊಳಗೊಂಡ ಕಂಠ, ಪಟ್ಟಿಕಾ ಮತ್ತು ಪ್ರತಿ ಇವು ಅಧಿಷ್ಠಾನದ ಮಡಿಕೆಗಳು. ಭಿತ್ತಿಯ ಕರ್ಣ ಮತ್ತು ಭದ್ರಗಳಲ್ಲಿ ದೇವಕೋಷ್ಠಗಳಿವೆ. ಸಲಿಲಾಂತರಗಳಲ್ಲಿ ಕೋಷ್ಠಪಂಜರಗಳಿವೆ. ದೇವಕೋಷ್ಠಗಳನ್ನು ಮಕರತೋರಣಗಳು ಅಲಂಕರಿಸಿವೆ. ವಿಮಾನದ ಮೇಲ್ಕಟ್ಟಡವು ಎರಡು ತಲಗಳಲ್ಲಿ ಮೇಲೇರಿದೆ. ಗ್ರೀವ ಮತ್ತು ಚೌಕ ಶಿಖರ ಇತರ ಲಕ್ಷಣಗಳು.

ಮುಖಮಂಟಪ ಮತ್ತು ಅಂತರಾಳದ ಬಾಹ್ಯ ವಿವರಗಳು ಸರಳವಾಗಿವೆ. ಮುಖಮಂಟಪಕ್ಕೆ ಲತಾಶಾಖೆ, ಪತ್ರಶಾಖೆ, ಮತ್ತು ಸ್ತಂಭಶಾಖೆಗಳುಳ್ಳ ತ್ರಿಶಾಖಾ ಮಾದರಿಯ ದ್ವಾರಬಂಧವಿದೆ. ಪೇದ್ಯಾಭಾಗದಲ್ಲಿ ದ್ವಾರಪಾಲಕರಿದ್ದಾರೆ. ಕಂಬಗಳ ಕಾಂಡವು ಕೆಳ ಮತ್ತು ಮೇಲ್ಭಾಗಗಳಲ್ಲಿ ಚೌಕವಿದ್ದು ಮಧ್ಯಂತರದಲ್ಲಿ ಅಷ್ಟಕೋಣವಾಗಿವೆ. ಕಾಂಡದ ಮೇಲ್ಭಾಗದಲ್ಲಿ ಲಶುನ, ಕುಂಭ, ವೀರಕಂಠ ಹಾಗೂ ತರಂಗ ಬೋದಿಗೆ ಇವೆ.

ಬಿಕ್ಕವೋಲು (ಪೂರ್ವ ಗೋದಾವರಿ ಜಿಲ್ಲೆ) ಎಂಬಲ್ಲಿ ಗುಣಗ ವಿಜಯಾದಿತ್ಯನ ಕಾಲದ ಗೋಲಿಂಗೇಶ್ವರ, ರಾಜರಾಜೇಶ್ವರ ಮತ್ತು ಚಂದ್ರಶೇಖರ ದೇಗುಲಗಳ ಗುಂಪು ಇದೆ. ಇವು ಪೊಂದುಗುಲದ ಜಲಪೇಶ್ವರ ದೇಗುಲದ ಕೆಲವು ಲಕ್ಷಣಗಳನ್ನು ಅನುಸುರಿಸಿದ್ದರೂ ಇವುಗಳಲ್ಲಿ ಕಳಿಂಗ ಶೈಲಿಯ ಪ್ರಭಾವ ಸ್ಪಷ್ಟ. ಒಂದೇ ಸಾಲಿನಲ್ಲಿ ನಿಂತಿರುವ ಈ ದೇವಾಲಯ ಗಳಲ್ಲಿ ಮಧ್ಯದಲ್ಲಿರುವ ರಾಜರಾಜೇಶ್ವರ ಗುಡಿಯು ದೊಡ್ಡದು; ಉಳಿದವು ಚಿಕ್ಕವು. ಗೋಲಿಂಗೇಶ್ವರ ದೇಗುಲಕ್ಕೆ ಮುಖಮಂಟಪ, ಅಂತರಾಳ ಮತ್ತು ಗರ್ಭಗೃಹ ಇವೆ. ಗರ್ಭಗೃಹದ ಕರ್ಣ, ಭದ್ರ, ಸಲಿಲಾಂತರಗಳ ಮುಂಚಾಚು ಮತ್ತು ಹಿಂಚಾಚುಗಳು ತೀರ ಸ್ಫುಟವಾಗಿವೆ. ಅಧಿಷ್ಠಾನದಲ್ಲಿ ಪಾದಬಂಧ ಮತ್ತು ಪ್ರತಿಬಂಧ ಮಾದರಿಗಳು ಪ್ರತಿನಿಧಿತವಾಗಿವೆ. ಉಪಾನ, ಪದ್ಮ–ಜಗತಿ, ವೃತ್ತ–ತ್ರಿಪಟ್ಟ ಕುಮುದ, ಕಂಠ, ಕಂಪ, ಪಟ್ಟಿಕಾ ಮತ್ತು ಪ್ರತಿಗಳು ಇದರ ಅಡ್ಡ ಮಡಿಕೆಗಳು. ಭಿತ್ತಿಯಲ್ಲಿರುವ ಎತ್ತರವಾದ ಕುಡ್ಯಸ್ತಂಭಗಳು ಹಾಗೂ ಕೋಷ್ಠಪಂಜರಗಳು ಲಯಬದ್ಧವಾದ ಲಂಬರೇಖೆಗಳ ಪರಿಣಾಮ ಬೀರಿವೆ. ಕೋಷ್ಠಗಳ ಮೇಲಿರುವ ಮಕರತೋರಣಗಳು ಸುಂದರವಾಗಿವೆ. ಕೋಷ್ಠಗಳಲ್ಲಿ ಸೂರ್ಯ, ವಿಷ್ಣು, ಅಗ್ನಿ, ಇಂದ್ರ, ಶಿವ–ಭಿಕ್ಷಾಟನ, ಬ್ರಹ್ಮ, ನಾಗಿಣಿ, ಕುಮಾರ, ಶಿವ–ಏಕಪಾದ, ಚಾಮುಂಡಿ, ಮಹಿಷಮರ್ದಿನಿ, ಅರ್ಧನಾರೀ ಶಿವ ಶಿಲ್ಪಗಳಿವೆ. ವಲಭಿಯಲ್ಲಿ ಹಂಸ ಮತ್ತು ಭೂತಗಣಗಳ ಮಿಶ್ರಣವಿರುವ ಮಾಲೆಯಿದೆ. ಕಪೋತದ ಮುಖದಲ್ಲಿ ಕೀರ್ತಿಮುಖವಿರುವ ನಾಸಿಕಗಳಿವೆ. ವಿಮಾನದ ಮೇಲ್ಕಟ್ಟಡದಲ್ಲಿ ಎರಡು ತಲಗಳಿವೆ. ತುಸು ಕುಳ್ಳವಾಗಿ ಅದು ಕಾಣುತ್ತದೆ. ಎತ್ತರವಾದ, ಸ್ಪಷ್ಟವಾಗಿ ಬೇರ್ಪಟ್ಟು ನಿಂತಿರುವ ಶಾಲ, ಕೂಟ ಮತ್ತು ಪಂಜರಗಳನ್ನೊಳಗೊಂಡ ಹಾರ ಪರಿಣಾಮಕಾರಿಯಾಗಿದೆ. ಗ್ರೀವ, ಚೌಕ ಶಿಖರ ಹಾಗೂ ಮಹಾನಾಸಿಕ ಇವು ಸ್ಫುಟ ಅಭಿವ್ಯಕ್ತಿ ಕಂಡಿವೆ.

ರಾಜರಾಜೇಶ್ವರ ದೇಗುಲಕ್ಕೆ ಗರ್ಭಗೃಹ ಮತ್ತು ಮುಖಮಂಟಪ ಇದ್ದು, ಭಿತ್ತಿ ವಿವರಗಳು ಗೋಲಿಂಗೇಶ್ವರದಲ್ಲಿರುವಂತೆ ಇವೆ. ಅಧಿಷ್ಠಾನದ ಅಷ್ಟಾಶ್ರ ಕುಮುದದ ಹಾಗು ವಲಭಿಯಲ್ಲಿರುವ ಹಂಸಮಾಲಾ ಗಮನಾರ್ಹವಾಗಿವೆ. ಚೌಕ ಶಿಖರವೇ ಮುಂತಾದವು ವೆಂಗಿದೇಶದ ಲಕ್ಷಣಕ್ಕನುಗುಣವಾಗಿವೆ. ಚಂದ್ರಶೇಖರ ದೇವಾಲಯವೂ ಹೆಚ್ಚು ಕಡಿಮೆ ಇದೇ ರೀತಿಯ ವಿವರಗಳನ್ನೊಳಗೊಂಡಿದೆ.

ವೆಂಗಿದೇಶದಲ್ಲಿ ದಾಕ್ಷಿಣಾತ್ಯ ವಿಮಾನಗಳಿಗೆ ಪ್ರಾಶಸ್ತ್ಯ ನೀಡಲಾಗಿದ್ದರೂ ಅಪರೂಪಕ್ಕೆ ಫಾಂಸನಾ ಮಾದರಿಯ ದೇಗುಲಗಳೂ ಕಾಣುತ್ತವೆ. ತೇರಾಲದಲ್ಲಿರುವ (ಗುಂಟೂರು ಜಿಲ್ಲೆ) ಶಿವದೇವಾಲಯ ಈ ಪ್ರಕಾರದ ಪ್ರಾಚೀನ ಉದಾಹರಣೆಯಾಗಿದೆ. ಗರ್ಭಗೃಹ, ಅಂತರಾಳ, ಮುಖಮಂಟಪ ಇರುವ ಈ ದೇಗುಲದ ಫಾಂಸನ ಶಿಖರದ ಭೂಮಿಗಳ ಕಪೋತಗಳಲ್ಲಿ ಹಂಸ ಮತ್ತು ಮಕರಗಳನ್ನೊಳಗೊಂಡ ನಾಸಿಕಗಳಿವೆ. ಶಿಖರದ ಮೇಲೆ ಆಮಲಕವಿದೆ. ಐಹೊಳೆಯ ಗಳಗನಾಥ, ಮಲ್ಲಿಕಾರ್ಜುನ ಮುಂತಾದ ದೇಗುಲಗಳಿಗೆ ಇದನ್ನು ಹೋಲಿಸಬಹುದು. (ಎಸ್.ವಿ.ಪಿ.)

**ಕಲ್ಯಾಣದ ಚಾಳುಕ್ಯರು:** ರಾಷ್ಟ್ರಕೂಟರ ಅನಂತರ ಉತ್ತರ ಕರ್ನಾಟಕದ ಭಾಗವನ್ನಲ್ಲದೆ ಸುತ್ತಲ ದಕ್ಷಿಣ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಪ್ರದೇಶಗಳ ಬಹುಭಾಗಗಳಲ್ಲಿ ಕಲ್ಯಾಣದ ಚಾಳುಕ್ಯರು ಆಳಿಕೆ ನಡೆಸಿದರು. ಈ ವಂಶದವರ ಆಳಿಕೆ ಪ್ರಾರಂಭವಾದದ್ದು 973ರಲ್ಲಿ. ಆ ವರ್ಷ ರಾಷ್ಟ್ರಕೂಟ ಖೊಟ್ಟಿಗನನ್ನು ಸೋಲಿಸಿ ಚಾಳುಕ್ಯವಂಶದ ಇಮ್ಮಡಿ ತೈಲಪ ಸಿಂಹಾಸನವನ್ನು ಆಕ್ರಮಿಸಿಕೊಂಡ. ಅಲ್ಲಿಂದ ಸು. 2 ಶತಮಾನಗಳವರೆಗೆ ಚಾಳುಕ್ಯರ ಆಳಿಕೆ ಅವ್ಯಾಹತವಾಗಿ ಸಾಗಿ ಅನಂತರ ಇಳಿಮುಖವಾಗಿ 12ನೆಯ ಶತಮಾನದ ಅಂತ್ಯದ ಹೊತ್ತಿಗೆ ಮರೆಯಾಯಿತು.

**ರಾಜಕೀಯ ಇತಿಹಾಸ:** ಬಾದಾಮಿಯ ಚಳುಕ್ಯರ ಆಳ್ವಿಕೆಯನ್ನು ಕೊನೆಗೊಳಿಸಿ ಪ್ರಭುತ್ವವನ್ನು ಸಾಧಿಸಿಕೊಂಡಿದ್ದ ರಾಷ್ಟ್ರಕೂಟವಂಶದವರು ಸು.2 ಶತಮಾನಗಳವರೆಗೆ ರಾಜ್ಯ ನಿರ್ವಹಿಸಿದರೂ ಚಾಳುಕ್ಯವಂಶದ ಅರಸರು ಅಲ್ಲಲ್ಲಿ ಚಿಕ್ಕಪುಟ್ಟ ಪ್ರದೇಶಗಳಲ್ಲಿ ಉಳಿದು ಕೊಂಡು ಬಂದು ತಮ್ಮ ಪುರಾತನ ವೈಭವದ ನೆನಪನ್ನು ಉಳಿಸಿಕೊಂಡಿದ್ದರೆಂದು ತೋರುತ್ತದೆ. ಈ ನಡುವೆ ಏಳು ತಲೆಮಾರುಗಳ ಜನ ತೆರೆಯ ಮರೆಯಲ್ಲಿ ಬಾಳಿದರೆಂದೂ ಖೊಟ್ಟಿಗನನ್ನು ಇಮ್ಮಡಿ ತೈಲಪ ಸೋಲಿಸಿ ಮಾನ್ಯಖೇಟವನ್ನು ಆಕ್ರಮಿಸಿದಂದಿನಿಂದ ಚಾಳುಕ್ಯರು ಪುನಃ ಪ್ರಕಾಶಕ್ಕೆ ಬಂದರೆಂದೂ ಕಲ್ಯಾಣದ ಚಾಳುಕ್ಯರ ಶಾಸನಗಳು ಹೇಳುತ್ತವೆ. ಗದಾಯುದ್ಧದ ಕರ್ತೃ ರನ್ನ ಸಹ ಇಜಿವಬೆಡಂಗ ಸತ್ಯಾಶ್ರಯನ ವಂಶಾಳಿಯನ್ನು ನಿರೂಪಿಸುವಾಗ ಬಾದಾಮಿಯ ಚಳುಕ್ಯರಿಗೂ ತೈಲಪನಿಗೂ ನಡುವಣ ಆ ವಂಶಜರ ಹೆಸರುಗಳನ್ನು ಉಲ್ಲೇಖಿಸಿದ್ದಾನೆ.

ಈ ನಡುಗಾಲದಲ್ಲಿ ತೆರೆಯ ಮರೆಯಲ್ಲಿದ್ದ **ಚಾಳುಕ್ಯ ಅರಸರ ವಂಶಾವಳಿ** ಹೀಗಿತ್ತೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ:



ಆದರೆ ರನ್ನನ ಗದಾಯುದ್ಧ ಕಾವ್ಯದಲ್ಲಿ ಕೊಟ್ಟಿರುವ ವಂಶಾವಳಿ ಇದಕ್ಕಿಂತ ಸ್ವಲ್ಪಮಟ್ಟಿಗೆ ಭಿನ್ನವಾದದ್ದು. ಶಾಸನಗಳಲ್ಲಿ 1ನೆಯ ತೈಲಪನ ಮಗ ಮುಮ್ಮಡಿ ವಿಕ್ರಮಾದಿತ್ಯನೆಂದು ಹೇಳಿದ್ದರೆ, ಕವಿ ಈ ವಿಕ್ರಮಾದಿತ್ಯನನ್ನೂ ಭೀಮನ ಮಗನೆಂದು ಹೇಳಿ ಭೀಮನನ್ನು 1ನೆಯ ತೈಲಪನ ಮಗನೆಂದಿದ್ದಾನೆ. ಪಟ್ಟದಕಲ್ಲಿನಲ್ಲಿ ದೊರೆತ ಶಾಸನವೊಂದರಲ್ಲಿ ಒಬ್ಬ ತೈಲಪನ ಪ್ರಸ್ತಾಪವಿದೆ. ಶ್ರೀ ಪೆರ್ಗ್ಗಡೆ ಮಹಾರಾಜ ತೈಲ ಮಹಾಧಿರಾಜ ಎಂದಿರುವ ಈ ಶಾಸನದಲ್ಲಿನ ತೈಲ ಒಬ್ಬ ಅಧಿಕಾರಿ (ಶ್ರೀ ಪೆರ್ಗ್ಗಡೆ) ಆಗಿದ್ದನೆಂದೂ ಮಹಾರಾಜ, ಮಹಾಧಿರಾಜ ಎಂಬವು ಆತನ ಬಿರುದುಗಳೆಂದೂ ಹೇಳಲಾಗಿದೆ. ಲಿಪಿಶಾಸ್ತ್ರ ದೃಷ್ಟಿಯಿಂದ, ಈ ತೈಲಪ ಚಾಳುಕ್ಯ ಮನೆತನದ ಮುಮ್ಮಡಿ ಕೀರ್ತಿವರ್ಮನ ಮಗನಾದ 1ನೆಯ ತೈಲಪನೆಂದು ಊಹಿಸಲಾಗಿದೆ. ಎರಡನೆಯ ಭೀಮನನ್ನು ಮುಕುಂದಿಯ ಕೊಂದ ಭೀಮ ಎಂದು ಕವಿ ಕರೆದಿದ್ದಾನೆ. ಆದರೆ ಈ ಮುಕುಂದಿ ಯಾರು ಎಂಬುದು ತಿಳಿಯದು. ಕೃಷ್ಣನ ಮಗಳನ್ನು ಇಮ್ಮಡಿ ತೈಲಪನ ಅಜ್ಜನಾದ ಅಯ್ಯಣ ಮದುವೆಯಾದನೆಂದು ಹೇಳಿದೆ. ಈ ಕೃಷ್ಣ ಯಾರೆಂಬುದನ್ನು ಗುರುತಿಸುವಲ್ಲಿ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯವಿಲ್ಲ.

ಅಯ್ಯಣನ ಮಗ ನಾಲ್ವಡಿ ವಿಕ್ರಮಾದಿತ್ಯ. ಕಳಚುರಿ ಮನೆತನದ ಲಕ್ಷ್ಮಣರಾಜನ ಮಗಳಾದ ಬೊಂಥಾದೇವಿಯನ್ನು ಈತ ಮದುವೆಯಾಗಿದ್ದ. ಚಾಳುಕ್ಯರು ಕ್ರಮೇಣ ಪ್ರಬಲರಾಗುತ್ತಿದ್ದ ರೆಂಬುದನ್ನು ಇದು ಸೂಚಿಸುತ್ತದೆ. ಈ ವೇಳೆಗೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ದಿಗ್ವಿಜಯಿಯಾಗಿ, ತನ್ನ ಸಂಬಂಧಿಗಳಾದ ಕಳಚುರಿಗಳನ್ನು ನಿರ್ಲಕ್ಷಿಸುವ ಮನೋಭಾವ ಬೆಳೆಸಿಕೊಂಡಿದ್ದ. ಬಹುಶಃ ಈ ಕಾರಣದಿಂದಲೇ ಚಾಳುಕ್ಯ ವಿಕ್ರಮಾದಿತ್ಯನೊಡನೆ ಕಳಚುರಿಗಳು ಬಾಂಧವ್ಯ ಏರ್ಪಡಿಸಿಕೊಂಡಿರಬಹುದು.

ರಾಷ್ಟ್ರಕೂಟರನ್ನೂ ಇಮ್ಮಡಿ ತೈಲಪ ಹೊರದೂಡುವ ಮುನ್ನ ಅವರ ಸಾಮಂತರಲ್ಲಿ ಒಬ್ಬನಾಗಿದ್ದ. 957ರ ಕಾರ್ಜೋಳ ಶಾಸನದಲ್ಲಿ ಕನ್ನರದೇವನ (ಮುಮ್ಮಡಿ ಕೃಷ್ಣ) ಪಾದಪದ್ಮೋಪಜೀವಿ ಎಂದು ತೈಲಪನನ್ನು ವರ್ಣಿಸಲಾಗಿದೆ. ಆದರೆ 8 ವರ್ಷಗಳ ಅನಂತರ 965ರ ಶಾಸನದಲ್ಲಿ ಸತ್ಯಾಶ್ರಯ ಕುಲತಿಲಕ, ಚಾಲುಕ್ಯರಾಮ, ಆಹವಮಲ್ಲ ಇತ್ಯಾದಿ ಬಿರುದಾಂಕಿತನಾದ ಮಹಾಸಾಮಂತರ ತೈಲಪರಸ ತರ್ದವಾಡಿಸಾಸಿರದ ಪ್ರಾಂತ್ಯವನ್ನು ಆಳುತ್ತಿದ್ದನೆಂದು ಹೇಳಿದೆ. ಇದರಲ್ಲಿ ಈತನನ್ನು ಮಹಾಸಾಮಂತನೆಂದು ಕರೆಯಲಾಗಿದೆ. ಇವನು ಪದವಿಯಲ್ಲಿ ಮೇಲೇರಿದ್ದುದನ್ನು ಇದು ಸೂಚಿಸುತ್ತದೆ. ಇದಾದ ಇನ್ನೆಂಟು ವರ್ಷಗಳೊಳಗಾಗಿ ಈತ ರಾಷ್ಟ್ರಕೂಟರನ್ನು ಮಳಖೇಡದಿಂದ ಹೊರದೂಡಿ ಚಾಳುಕ್ಯ ರಾಜ್ಯವನ್ನು ಪುನಃ ಪ್ರತಿಷ್ಠಾಪಿಸಿದ. ಮುಮ್ಮಡಿ ಕೃಷ್ಣನ ಅನಂತರ ಅಶಕ್ತ ಅರಸರು ಅಧಿಕಾರಕ್ಕೆ ಬಂದುದನ್ನೂ ಪರಮಾರ ಸೀಯಕ ಹರ್ಷ ಮಾನ್ಯಖೇಟವನ್ನು ಮುತ್ತಿ ರಾಜಧಾನಿಯನ್ನು ಹಾಳು ಕೆಡವಿದ ಸಂದರ್ಭವನ್ನೂ ತನ್ನ ರಾಜ್ಯ ಸ್ಥಾಪನೆಗೆ ಈತ ಉಪಯೋಗಿಸಿಕೊಂಡ. ಕೃಷ್ಣನ ವಿರೋಧಿಗಳಾಗಿದ್ದವರು ಆಗ ತೈಲಪನ ಸಹಾಯಕ್ಕೆ ಬಂದಂತೆ ತೋರುತ್ತದೆ. ಶ್ರೀಮುಖ ಸಂವತ್ಸರದಲ್ಲಿ (974) ರಾಷ್ಟ್ರಕೂಟ ಕಕ್ಕನನ್ನು ತೈಲಪ ಸೋಲಿಸಿ ಚಾಳುಕ್ಯ ರಾಜ್ಯ ಸ್ಥಾಪಿಸಿ ಅನಂತರ 24 ವರ್ಷಗಳ ಕಾಲ ಆಳಿದನೆಂದು ಗದಗದ 6ನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಹೇಳಿದೆ. ಕಲ್ಯಾಣದ ಚಾಳುಕ್ಯರು ಅಧಿಕಾರಕ್ಕೆ ಬರುವ ಮೊದಲು ವಾರಂಗಲ್ ಬಳಿಯ ಹನುಮಕೊಂಡದಲ್ಲಿ ಇದ್ದರು ಎಂಬುದಕ್ಕೆ ಇಮ್ಮಡಿ ಭೀಮನ ಕಾಜಿಪೇಟ್ ದರ್ಗಾ ಶಾಸನ ಆಧಾರವಾಗಿದೆ ಎಂಬ ಅಭಿಪ್ರಾಯವಿದೆ. ಇದರಿಂದ ರಾಷ್ಟ್ರಕೂಟರ ಅಧೀನದಲ್ಲಿ ಅವರು ಕೃಷ್ಣಾನದಿ ಬಯಲಿನ ವಿವಿಧೆಡೆ ಆಳಿದರೆಂದು ಹೇಳಬಹುದು. ಅವರಿಗೆ ಏತಗಿರಿ, ಪೊಟ್ಟಳಕೆರೆ, ಕೊಳ್ಳಿಪಾಕೆ, ಪೈತಣ ಕಲ್ಯಾಣ, ಜಯನ್ತಿಪುರ, ಸೆಲೆಹಳ್ಳಿ ಇತ್ಯಾದಿ ರಾಜಧಾನಿಗಳು ಮತ್ತು ನೆಲೆವೀಡುಗಳು ಇದ್ದವೆಂದು ತಿಳಿದುಬಂದಿದೆ.

ಕಕ್ಕನನ್ನು ಸೋಲಿಸಿದ ತೈಲಪ ಮಾನ್ಯಖೇಟವನ್ನು ಆಕ್ರಮಿಸಿದ. ಆದರೆ ರಾಷ್ಟ್ರಕೂಟರ ವಿಧೇಯ ಸಾಮಂತನಾಗಿದ್ದ ಗಂಗ ಮಾರಸಿಂಹ ಮತ್ತು ಅವನ ಮರಣಾನಂತರ ಅವನ ಉತ್ತರಾಧಿಕಾರಿಗಳಾಗಿ ಅಧಿಕಾರಕ್ಕೆ ಬಂದ ಗೋವಿಂದ, ಪಾಂಚಾಲದೇವ ಇವರು ತೈಲಪನನ್ನು ಎದುರಿಸಿದರೂ 977ರ ವೇಳೆಗೆ ಗಂಗ ಮನೆತನದ ಈ ಮಾಂಡಲಿಕರನ್ನು ಸೋಲಿಸಿದ ತೈಲಪ ತನ್ನ ಸಿಂಹಾಸನವನ್ನು ಭದ್ರಪಡಿಸಿಕೊಂಡ. ಈ ಹೊತ್ತಿಗೆ ರಾಷ್ಟ್ರಕೂಟರ ಅವನತಿಯೊಂದಿಗೆ ರಾಜ್ಯ ಸ್ಥಾಪನೆಮಾಡಿಕೊಂಡಿದ್ದ ಚೋಳವಂಶದವರು ರಾಜ್ಯ ವಿಸ್ತರಣಾಕಾಂಕ್ಷಿಗಳಾಗಿದ್ದರು. ಆ ವಂಶದ ರಾಜರಾಜ ಗಂಗವಾಡಿ ನೊಳಂಬವಾಡಿಗಳನ್ನು ವಶಪಡಿಸಿಕೊಳ್ಳಲು ಉದ್ಯುಕ್ತನಾದಾಗ ತೈಲಪ ದಕ್ಷಿಣದ ಕಡೆಗೆ ನುಗ್ಗಿ ಚೋಳ ಅರಸನನ್ನು ಸೋಲಿಸಿದ (1992). ಪರಮಾರ ವಂಶದ ಸೀಯಕ ಹರ್ಷನ ಉತ್ತರಾಧಿಕಾರಿ ಮುಂಜ ಚಾಳುಕ್ಯ ತೈಲಪನನ್ನು 16 ಬಾರಿ ಸೋಲಿಸಿದನೆಂದು ಮೇರುತುಂಗ ತನ್ನ ಪ್ರಬಂಧ ಚಿಂತಾಮಣಿಯಲ್ಲಿ ಹೇಳಿದ್ದಾನೆ. ಆದರೆ ಕೊನೆಯಲ್ಲಿ ಮುಂಜ ತೈಲಪನಿಗೆ ಸೋತು ಸೆರೆಸಿಕ್ಕು, ಬಹುಶಃ ಸೆರೆಮನೆಯಲ್ಲಿ ತೀರಿಕೊಂಡ. ಯುವರಾಜನಾದ ಸತ್ಯಾಶ್ರಯ ಈ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ. ಇವನ ಕಾಲದಲ್ಲಿ ಚಾಳುಕ್ಯ ರಾಜ್ಯ ಸುಮಾರು ವಿಂಧ್ಯ ಪರ್ವತದ ವರೆಗೂ ಹಬ್ಬಿತ್ತು.

ತೈಲಪನ ಮರಣಾನಂತರ ಪಟ್ಟಕ್ಕೆ ಬಂದ ಇವನ ಮಗ ಇಜಿವ ಬೆಡಂಗ ಸತ್ಯಾಶ್ರಯ (997–1008) ಚೋಳ ರಾಜರಾಜ, ಅನಂತರ ರಾಜೇಂದ್ರ ಇವರೊಡನೆ ಕದನಗಳನ್ನು ಮುಂದುವರಿಸಿದ. ಚೋಳ ಸಾಮರ್ಥ್ಯದ ಪರಿಣಾಮವಾಗಿ ಗಂಗವಾಡಿ ಮತ್ತು ನೊಳಂಬವಾಡಿ ಪ್ರದೇಶಗಳು ಅವರ ವಶವಾದವು. ಆದರೆ ಚಾಳುಕ್ಯರ ಬಲ ಕುಂದಲಿಲ್ಲ. ಇತ್ತ ಕೊಂಕಣದ ಮಾಂಡಲಿಕ ಶಿಲಾಹಾರ ಅಪರಾಜಿತನನ್ನು ಸತ್ಯಾಶ್ರಯ ಸೋಲಿಸಿದ. ಗುಜರಾತಿನ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸಿ ಅಲ್ಲಿದ್ದ ಚಾಳುಕ್ಯಶಾಖೆಯ ಆಳಿಕೆಯ ಮುಂದುವರಿಕೆಗೆ ಕಾರಣನಾದ.

ಸತ್ಯಾಶ್ರಯನೊಂದಿಗೆ ಅವನ ತಮ್ಮ ದಶವರ್ಮನೂ ಆಳುತ್ತಿದ್ದುದಕ್ಕೆ ಯಲಬುರ್ಗಿ ತಾಲ್ಲೂಕಿನ ಕಲ್ಲೂರಿನ ಶಾಸನದಲ್ಲಿ ಉಲ್ಲೇಖವಿದೆ ಎಂದು ಹೇಳಲಾಗಿದೆ. ಸತ್ಯಾಶ್ರಯನಿಗೆ ಗಂಡುಮಕ್ಕಳಿಲ್ಲದ್ದರಿಂದ ಅವನ ತಮ್ಮ ದಶವರ್ಮನ ಮಗನಾದ 5ನೆಯ ವಿಕ್ರಮಾದಿತ್ಯ (1008–15) ಪಟ್ಟಕ್ಕೆ ಬಂದ. ಇವನು ಅಷ್ಟೇನೂ ಪ್ರಭಾವಶಾಲಿಯಾಗಿರಲಿಲ್ಲವಾದ್ದರಿಂದ, ದಕ್ಷಿಣದ ಚೋಳರೂ ಉತ್ತರದ ಪರಮಾರ ಅರಸ ಭೋಜನೂ ಇವನ ರಾಜ್ಯವನ್ನು ಮುತ್ತಿದರು. ರಾಜ್ಯವನ್ನು ಶತ್ರುಗಳಿಂದ ಕಾಪಾಡಿಕೊಳ್ಳುವುದಕ್ಕಾಗಿ ಇವನು ಬಹಳ ಶ್ರಮಿಸಬೇಕಾಯಿತು.

ವಿಕ್ರಮಾದಿತ್ಯನ ಅನಂತರ 1015ರ ಸುಮಾರಿನಲ್ಲಿ ಇವನ ಸೋದರ ಅಯ್ಯಣ ಕೆಲವು ತಿಂಗಳುಗಳ ಕಾಲ ರಾಜ್ಯವಾಳಿ ಅನಂತರ ರಾಜ್ಯವನ್ನು ತೊರೆದಂತೆ ತೋರುತ್ತದೆ. ವಂಶಾವಳಿಗಳಲ್ಲಿ ಇವನ ಉಲ್ಲೇಖವಿಲ್ಲ.

ಅಯ್ಯಣನ ಬಳಿಕ ಇವನ ತಮ್ಮ ಒಂದನೆಯ ಜಗದೇಕಮಲ್ಲ (ಜಯಸಿಂಹ II, 1015–44) ಪಟ್ಟಕ್ಕೆ ಬಂದ. ಇವನು ರಾಜ್ಯವಾಳತೊಡಗಿದಂದಿನಿಂದ ರಾಜ್ಯಕ್ಕೆ ಸೂಕ್ತವಾದ ರಾಜಧಾನಿಯೊಂದನ್ನು ಆರಿಸುವ ಕೆಲಸ ಆರಂಭವಾಯಿತೆನ್ನಬೇಕು. ಈತ ಪಟ್ಟಕ್ಕೆ ಬಂದ ತರುಣದಲ್ಲೇ ಚಾಳುಕ್ಯ ಚೋಳರ ನಡುವಣ ಕದನಗಳಲ್ಲಿ ರಾಜಧಾನಿ ಮಾನ್ಯಖೇಟ ಶತ್ರುಗಳ ವಶಕ್ಕೆ ಸಿಕ್ಕಿ ಅವರು ಅದನ್ನು ನಾಶಗೊಳಿಸಿದ್ದರು. ಅನಂತರ ಏತಗಿರಿ ಈಗಿನ ಯಾದಗಿರಿ, ಹೊ(ಪೊ)ಟ್ಟಳಕೆರೆ (ಈಗಿನ ಆಂಧ್ರಪ್ರದೇಶದ ಪಟನ್‌ಚೆರು ಅಥವಾ ಪೊಟ್ಲಚೆರುವು) ಮತ್ತು ಕೊಳ್ಳಿಪಾಕೆ ಹೈದರಾಬಾದಿಗೆ 72 ಕಿಮೀ ಅಂತರದಲ್ಲಿರುವ ಈಗಿನ ಕೊಲನುಪಾಕ–ಇವು ಕ್ರಮವಾಗಿ ಜಯಸಿಂಹನ ನೆಲೆಗಳಾಗಿದ್ದುವು. ಕಲ್ಯಾಣವನ್ನು ರಾಜಧಾನಿಯಾಗಿ ಆರಿಸಿ ಅದನ್ನು ಅಭಿವೃದ್ಧಿಗೊಳಿಸಿದವನು ಜಯಸಿಂಹನ ಮಗನಾದ ಒಂದನೆಯ ಸೋಮೇಶ್ವರ.

ಜಯಸಿಂಹ ಅಧಿಕಾರಕ್ಕೆ ಬಂದಾಗ ರಾಜ್ಯದ ಎಲ್ಲ ಮೇರೆಗಳಲ್ಲೂ ಶತ್ರುಗಳು ಯುದ್ಧ ಸನ್ನದ್ಧರಾಗಿದ್ದರು. ಪರಮಾರ ಭೋಜ, ಕಳಚುರಿ ಗಾಂಗೇಯ ದೇವ ಹಾಗೂ ದಕ್ಷಿಣದ ರಾಜೇಂದ್ರ ಚೋಳ ಇವರು ಕಲೆತು ಕರ್ನಾಟಕದ ಮೇಲೆ ಎರಗಿದರು. ಭೋಜ ಕೊಂಕಣವನ್ನು ಆಕ್ರಮಿಸಿದ. ರಾಜೇಂದ್ರ ಚೋಳ ಚಾಳುಕ್ಯ ರಾಜಧಾನಿಯನ್ನು ಮುತ್ತಿ ಸುಟ್ಟ. ಆದರೆ ಕೂಡಲೇ ಚೇತರಿಕೊಂಡ ಜಯಸಿಂಹ ಭೋಜನನ್ನು ಸೋಲಿಸಿ ಹಿಂದಕ್ಕೆ ಅಟ್ಟಿದ. ಕೊಂಕಣವನ್ನು ಪುನಃ ಆಕ್ರಮಿಸಿ ಸಪ್ತಕೊಂಕಣಾಧೀಶ್ವರರ ಸಂಪತ್ತನ್ನು ಸೂರೆಗೊಂಡ. ಸೇವುಣರ 3ನೆಯ ಭಿಲ್ಲಮನನ್ನು ಸೋಲಿಸಿದ ಬಳಿಕ ಆತನಿಗೆ ತನ್ನ ಮಗಳಾದ ಅವ್ವಲ್ಲದೇವಿಯನ್ನು ವಿವಾಹ ಮಾಡಿ ಕೊಟ್ಟು ಅವನ ವಿಧೇಯತೆಯನ್ನು ಗಳಿಸಿದ. ರಾಜ್ಯಕ್ಕೊದಗಿದ್ದ ವಿಪತ್ತನ್ನು ಅಧಿಕಾರಕ್ಕೆ ಬಂದ ಕೂಡಲೇ ಹೀಗೆ ಪರಿಹರಿಸಿ ಕೊಂಡ ಜಯಸಿಂಹನಿಗೆ, ಉತ್ತರದ ಅರಸರಿಂದ ಅನಂತರ ಹೆಚ್ಚಿನ ತೊಂದರೆ ಉಂಟಾಗ ಲಿಲ್ಲ. ಆದರೆ ದಕ್ಷಿಣದಲ್ಲಿ ರಾಜೇಂದ್ರ ಚೋಳ ಮಾತ್ರ ತನ್ನ ಆಕ್ರಮಣ ಮನೋಭಾವವನ್ನು ಬಿಡಲಿಲ್ಲ. ವೆಂಗಿಯ ರಾಜಕೀಯ ಇದಕ್ಕೆ ಒಳ್ಳೆಯ ಕಾರಣವನ್ನು ಒದಗಿಸಿ ಚಾಳುಕ್ಯ ಚೋಳ ಯುದ್ಧಗಳು ಇವನ ಕಾಲದಲ್ಲಿ ನಡೆಯುತ್ತಲೇ ಇದ್ದುವು. ಈ ಕದನಗಳಲ್ಲಿ ಜಯಸಿಂಹನಿಗೆ ಆತನ ಅಧಿಕಾರಿಗಳೂ ಸೇನಾನಿಗಳೂ ಆದ ಕುಂದಮರಸ ಮತ್ತು ವಾವಣರಸ ಬಹಳ ಸಹಾಯ ನೀಡಿದರು. ತನ್ನ ಆಳಿಕೆಯ ಉದ್ದಕ್ಕೂ ಯುದ್ಧನಿರತನಾಗಿದ್ದ ಜಯಸಿಂಹ ಸು. 1044ರಲ್ಲಿ ಮೃತನಾದ.

ಜಯಸಿಂಹನ ಬಳಿಕ ಇವನ ಹಿರಿಯ ಮಗ ಒಂದನೆಯ ಸೋಮೇಶ್ವರ ಪಟ್ಟಕ್ಕೆ ಬಂದ. ಜಯಸಿಂಹನ ಕಾಲದಲ್ಲಿದ್ದ ರಾಜಕೀಯ ಪರಿಸ್ಥಿತಿ ಇವನ ಕಾಲದಲ್ಲೂ ಮುಂದುವರಿಯಿತು. ಈತ ಆಳಿದ 25 ವರ್ಷಗಳ ಕಾಲವೂ ದಕ್ಷಿಣ ಭಾರತ ಒಂದು ವಿಶಾಲವಾದ ರಣರಂಗವಾಗಿ ಪರಿವರ್ತಿತವಾಯಿತೆನ್ನಬಹುದು. ಕರ್ನಾಟಕದ ಹಾಗೂ ತಮಿಳುನಾಡಿನ ಎರಡು ಪ್ರಮುಖ ಅರಸುಮನೆತನಗಳ ನಡುವೆ ಈ ವರ್ಷಗಳಲ್ಲಿ ಹಿರಿಮೆಗಾಗಿ ತೀವ್ರವಾದ ಪೈಪೋಟಿಯುಂಟಾಯಿತು.

ಚೋಳ ರಾಜಾಧಿರಾಜ ಮತ್ತು ಸೋಮೇಶ್ವರ ಇವರ ನಡುವೆ ವಿಶೇಷವಾಗಿ ವೆಂಗಿ ಪ್ರದೇಶದ ಆಕ್ರಮಣಕ್ಕಾಗಿ ಐದು ಬಾರಿ ಘರ್ಷಣೆ ಉಂಟಾದವು. ಸು. 1044ರಲ್ಲಿ ದನ್ನಾಡದಲ್ಲಿ (ಆಂಧ್ರಪ್ರದೇಶದ ಧಾನ್ಯಕಟಕ ಅಥವಾ ಅಮರಾವತಿ) ಪುನಃ ಪುಣ್ಣಾರು ಎಂಬಲ್ಲಿ ಅನಂತರ

1054ರಲ್ಲಿ ಕೊಪ್ಪಂನಲ್ಲಿ (ರಾಯಚೂರು ಜಿಲ್ಲೆಯ ಕೊಪ್ಪಳ) ಯುದ್ಧಗಳಾದವು. ಹೆಚ್ಚಿನ ಯುದ್ಧಗಳು ಅನಿರ್ಣಾಯಕವಾಗಿದ್ದಂತೆ ತೋರುತ್ತದೆ. ಚಾಳುಕ್ಯ ಶಾಸನಗಳು ಮತ್ತು ಚೋಳ ಶಾಸನಗಳು ಅವರವರ ಬಲ ಮೇಲುಗೈಯಾಗಿತ್ತೆಂದು ವರ್ಣಿಸುವುದು ಸಾಮಾನ್ಯ. ಆದರೆ ಈ ಯುದ್ಧಗಳಲ್ಲಿ ಚಾಳುಕ್ಯ ಯುವರಾಜ ಜಯಸಿಂಹ ಮತ್ತು ಚೋಳ ರಾಜಾಧಿರಾಜ ಸತ್ತರೆಂಬ ಅಂಶಗಳು ಸ್ಪಷ್ಟ. ಚೋಳ ರಾಜಾಧಿರಾಜನ ಅನಂತರ ಬಂದ ಇಮ್ಮಡಿ ರಾಜೇಂದ್ರ ಹೋರಾಟಗಳನ್ನು ಮುಂದುವರಿಸಿ ಕೊಲ್ಲಾಪುರದ ವರೆಗೂ ಶತ್ರುಸೇನೆಯನ್ನು ಓಡಿಸಿದ. ಈತ ಅಲ್ಲಿ ಜಯಸ್ತಂಭವೊಂದನ್ನು ನೆಡಿಸಿದನೆಂದು ಹಲವು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಇದು ಸಂದೇಹಾಸ್ಪದ. ಮುನ್ನುಗ್ಗುತ್ತಿದ್ದ ರಾಜೇಂದ್ರನನ್ನು ಸೋಮೇಶ್ವರ ತಡೆದು ಅವನನ್ನು ಹಿಂದಕ್ಕೆ ಓಡಿಸಿದ್ದಾಗ ಅವನು ಕುಮ್ಮಟದ ಕೋಟೆಯನ್ನು ಮುತ್ತಿದನೆಂದೂ ಆದರೆ ಅಲ್ಲಿ ಅಧಿಕಾರದಲ್ಲಿದ್ದ ಹೊಯ್ಸಳ ವಿನಯಾದಿತ್ಯನ ನೆರವಿಗೆ ಸೋಮೇಶ್ವರ ಧಾವಿಸಿ ಕುಮ್ಮಟದ ಕೋಟೆಯಂ ನಿಷ್ಕಂಟಕಂ ಮಾಡಿದನೆಂದೂ ಈಚೆಗೆ ದೊರೆತ ಬನ್ನಿಗೊಳದ ಶಾಸನ ಹೇಳುತ್ತದೆ. ಇನ್ನೊಮ್ಮೆ 1059ರಲ್ಲಿ ರಾಜೇಂದ್ರನನ್ನು ಸೋಮೇಶ್ವರ ತುಂಗಭದ್ರಾ ನದಿಯ ತೀರದಲ್ಲಿ ಎದುರಿಸಿ ಸೋಲಿಸಿದ. ಹೀಗೆ ಎರಡೂ ಬಣಗಳ ನಡುವೆ ಹೋರಾಟಗಳು ನಡೆಯುತ್ತಲೇ ಇದ್ದರೂ ಯಾರಿಗೂ ಖಚಿತವಾದ, ಅಂತಿಮವಾದ ಯಶಸ್ಸು ದೊರಕಲಿಲ್ಲ. ಮುಂದೆ ಒಂದು ಸಂದರ್ಭದಲ್ಲಿ ಸೋಮೇಶ್ವರ ವೆಂಗಿಮಂಡಲದಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ಸನ್ನು ಸಂಪಾದಿಸಿದ (ಸು.1061). ಇದರ ಪರಿಣಾಮವಾಗಿ ಚೋಳ ವೀರರಾಜೇಂದ್ರ ಪುನಃ ಸೋಮೇಶ್ವರನನ್ನು ಕೂಡಲಸಂಗಮವೆಂಬ ಸ್ಥಳದಲ್ಲಿ ಎದುರಿಸಿದ. ವೆಂಗಿಯ ಆಂತರಿಕ ರಾಜಕೀಯದಲ್ಲಿ ನಡೆದ ಕೆಲವು ಹೊಂದಾಣಿಕೆಗಳು ಮುಂದೆ ಸ್ವಲ್ಪಮಟ್ಟಿಗೆ ಯುದ್ಧಗಳನ್ನು ತಡೆದವು. ಸೋಮೇಶ್ವರನ ಆಳಿಕೆಯ ಅಂತಿಮ ವರ್ಷಗಳಲ್ಲಿ ನಡೆದ ಈ ಘಟನೆಗಳ ವಿವರಗಳು ಸ್ಪಷ್ಟವಾಗಿಲ್ಲ. ಆದರೆ ಅದುವರೆಗೂ ವಿಜಯಾದಿತ್ಯನ ಹಕ್ಕನ್ನು ನಿರಾಕರಿಸಿದ್ದ ಚೋಳರೂ ಆ ಘಟ್ಟದಲ್ಲಿ ವಿಜಯಾದಿತ್ಯನ ಆಳಿಕೆಯನ್ನು ಮಾನ್ಯಮಾಡಿದರು. ಇದರ ಫಲವಾಗಿ ವಿಜಯಾದಿತ್ಯನ ಮತ್ತು ವೀರರಾಜೇಂದ್ರನ ನಡುವಣ ಬಾಂಧವ್ಯದಲ್ಲಿ ಸ್ಪಷ್ಟವಾದ ಬದಲಾವಣೆಯುಂಟಾಯಿತು.

ಸೋಮೇಶ್ವರ ತನ್ನ ಆಳಿಕೆಯ ಕಾಲದ ಬಹುಭಾಗವನ್ನು ಚೋಳರೊಡನೆ ಕದನಗಳಲ್ಲಿ ಕಳೆದರೂ 1051ರಲ್ಲಿ ಪರಮಾರ ವಂಶದ ಭೋಜನ ಮೇಲೆ ಎರಗಿ ಧಾರಾನಗರವನ್ನು ಸುಟ್ಟು ಮಾಂಡವದ ಕೋಟೆಯನ್ನು ವಶಪಡಿಸಿಕೊಂಡ. ಇನ್ನೊಂದು ಬಾರಿ ಭೋಜ ಇವನ ಮೇಲೇರಿ ಬಂದಾಗ ಸೋಮೇಶ್ವರ ಅವನನ್ನು ಚಾಳುಕ್ಯ ಮನೆತನದ ಭೀಮ ಮತ್ತು ಕಳಚುರಿ ಕರ್ಣರೊಡಗೂಡಿ ಕದನದಲ್ಲಿ ಎದುರಿಸಿದ. ಈ ಕದನದಲ್ಲಿ ಭೋಜ ಹತನಾದಂತೆ ತೋರುತ್ತದೆ.

ಒಂದು ಸಂದರ್ಭದಲ್ಲಿ ರಾಜ್ಯದೊಳಗೆ ದಂಗೆಯ ಸನ್ನಾಹ ನಡೆಸಿದ್ದ ಶಿಲಾಹಾರ ಮನೆತನದ ಕೊಂಕಣದ ಮುಮ್ಮಣಿ ಮತ್ತು ಕರಹಾಡದ ಮಾರಸಿಂಹರನ್ನೂ ಸೇವುಣರ 3ನೆಯ ಭಿಲ್ಲಮನನ್ನೂ ಸೋಲಿಸಿದ. 1068ರಲ್ಲಿ ಸೋಮೇಶ್ವರ ಮಡಿದ. ಆಗ ಸಿಂಹಾಸನ ವೇರಿದವನು ಆತನ ಹಿರಿಯ ಮಗ ಇಮ್ಮಡಿ ಸೋಮೇಶ್ವರ (1068–1076). ಇವನು ಪಟ್ಟಕ್ಕೆ ಬರುತ್ತಿದ್ದಂತೆಯೇ ಇವನ ಮೇಲೆ ಧಾಳಿಮಾಡಿದ ಚೋಳ ವೀರರಾಜೇಂದ್ರನನ್ನು ಸೋಲಿಸಿದ. ಆದರೆ ಅನಂತರ ಉತ್ತರದಲ್ಲಿ ಪರಮಾರ ಉದಯಾದಿತ್ಯನಿಂದ ಪರಾಜಿತನಾದ. ಇಮ್ಮಡಿ ಸೋಮೇಶ್ವರ ದಕ್ಷನಾದ ಅರಸನಾಗಿರಲಿಲ್ಲ. ತನ್ನ ಆಳಿಕೆಯ ಕೊನೆಯ ದಿನಗಳಲ್ಲಿ ಚಾಳುಕ್ಯ ವೈರಿಗಳಾಗಿದ್ದ ಚೋಳರೊಡನೆ ಸ್ನೇಹ ಬೆಳೆಸಿದ್ದು ಚಾಳುಕ್ಯರ ಆಸಕ್ತಿಯ ಕ್ಷೇತ್ರವಾಗಿದ್ದ ವೆಂಗಿದೇಶ ಚೋಳರ ವಶವಾಗಲು ಅವಕಾಶ ಮಾಡಿಕೊಟ್ಟದ್ದು ಮೊದಲಾದ ಘಟನೆಗಳು ನಡೆದವು. ಅಲ್ಲದೆ ಒಂದನೆಯ ಸೋಮೇಶ್ವರನ ಕಾಲದಿಂದಲೂ ಪ್ರಭಾವಿಯಾಗಿದ್ದ ಇವನ ತಮ್ಮ 6ನೆಯ ವಿಕ್ರಮಾದಿತ್ಯನನ್ನು ಸಂಶಯದೃಷ್ಟಿಯಿಂದ ನೋಡುತ್ತಿದ್ದುದರಿಂದ ಇವರಲ್ಲಿ ವಿರಸ ಮೂಡಿತ್ತು.

ಈ ಪರಿಸ್ಥಿತಿಯಲ್ಲಿ ವಿಕ್ರಮಾದಿತ್ಯ ಅಣ್ಣನನ್ನು ಸಿಂಹಾಸನದಿಂದ ಹೊರದೂಡಲು ನಿಶ್ಚಯಿಸಿದ. ಇವನ ತಮ್ಮ 3ನೆಯ ಜಯಸಿಂಹ ಗೋವೆಯ ಕದಂಬ ಜಯಕೇಶಿ, ಹಾನಗಲ್ಲಿನ ಕದಂಬ ಕೀರ್ತಿವರ್ಮ ಮುಂತಾದವರ ಬೆಂಬಲದಿಂದ ಸೋಮೇಶ್ವರನ ಮೇಲೆ ಜಯಗಳಿಸಿ ತಾನೇ ರಾಜನಾಗಿ ಐವತ್ತು ವರ್ಷಗಳಿಗೂ ಹೆಚ್ಚುಕಾಲ (1076–1127) ಆಳಿಕೆ ನಡೆಸಿದ. ಯುವರಾಜ ಪದವಿಯಲ್ಲಿದ್ದಾಗ ಮಿತಿಮೀರಿದ ಚಟುವಟಿಕೆಗಳಿಂದ ಕೂಡಿದ್ದು, ಸದಾ ಯುದ್ಧಸನ್ನದ್ಧ ನಾಗಿ, ಕದನಗಳಲ್ಲಿ ಪಾಲುಗೊಂಡಿದ್ದ ಈತ ಪಟ್ಟಕ್ಕೆ ಬಂದ ಬಳಿಕ ಹೆಚ್ಚು ಶಾಂತಿಯುತ ಜೀವನ ನಡೆಸಿದ. ಈ ಕಾಲದಲ್ಲಿ ಒಂದು ಕಡೆ ಕುಲೋತ್ತುಂಗನೂ ಮತ್ತೊಂದು ಕಡೆ ವಿಕ್ರಮಾದಿತ್ಯನೂ ಸಮಾನ ಶೂರರಾಗಿದ್ದರು. ತಮ್ಮ ತಮ್ಮ ಶಕ್ತಿಸಾಮರ್ಥ್ಯಗಳನ್ನೂ ಕುಂದು ಕೊರತೆಗಳನ್ನೂ ಪರಸ್ಪರ ಅರಿತಿದ್ದ ಈ ಅರಸರು ರಾಜಕೀಯ ಹೋರಾಟಗಳನ್ನು ಕೊನೆಗಾಣಿಸಿ, ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುವುದು ಹೆಚ್ಚು ಶ್ರೇಯಸ್ಕರವೆಂದು ಭಾವಿಸಿದಂತೆ ತೋರುತ್ತದೆ. ಆಗ ರಾಜ್ಯದಲ್ಲಿ ಶಾಂತಿ ಸುಭಿಕ್ಷೆ ನೆಲಸಿತ್ತು. ನಾಡು ಸರ್ವತೋಮುಖ ಅಭಿವೃದ್ಧಿಯನ್ನು ಕಂಡಿತು.

ಆದರೂ ವಿಕ್ರಮಾದಿತ್ಯನ ಆಡಳಿತ ಕಾಲದಲ್ಲೂ ಆಗಿಂದಾಗ್ಗೆ ಕೆಲವು ಘಟನೆಗಳು ಸಂಭವಿಸಿದುವು. ಇವನ ವಿರುದ್ಧ ಇವನ ಸೋದರನಾದ 3ನೆಯ ಜಯಸಿಂಹ ದಂಗೆ ಎದ್ದ. ಆದರೆ 1082ರ ಹೊತ್ತಿಗೆ ನಿಗ್ರಹಿಸಲ್ಪಟ್ಟ. ಕರಹಾಡದ ಶಿಲಾಹಾರ ಭೋಜ ಬಹುಶಃ ಸುಮಾರು ಒಂದು ದಶಕಕ್ಕೂ ಹೆಚ್ಚುಕಾಲ (1089–1100) ವಿಕ್ರಮಾದಿತ್ಯನ ವಿರುದ್ಧ ಬಂಡು ಹೂಡಿದ್ದು ಕೊನೆಗೆ ಸೋತ. ಅಂತೆಯೇ ಆಳುಪರ, ಹೈವೆಯ ನಾಗವರ್ಮನ ಹಾಗೂ ಗೊಗ್ಗಿಯ ಬಂಡಾಯವನ್ನೂ ಅರಸ ಮುರಿದ. ರಾಜ್ಯದ ಉತ್ತರದಲ್ಲಿ ಪರಮಾರರ ವಿರುದ್ಧ ದಂಡೆತ್ತಿ ಉದಯಾದಿತ್ಯನನ್ನು ಸೋಲಿಸಿ (1088) ಆ ವಂಶದ ಜಗದ್ದೇವನಿಗೆ ಆಶ್ರಯ ನೀಡಿದ. ಈ ದಂಡಯಾತ್ರೆಗಳ ಪರಿಣಾಮವಾಗಿ ಚಾಳುಕ್ಯ ರಾಜ್ಯ ನರ್ಮದಾ ನದಿಯವರೆಗೂ ವಿಸ್ತರಿಸಿತು. ಗೂರ್ಜರ ಸಿಂಧುರಾಜನನ್ನೂ ರತ್ನಪುರದ ಕಳಚುರಿ ಜಾಜವಲ್ಲದೇವನನ್ನೂ ತ್ರಿಪುರಿಯ ಯಶಃಕರ್ಣನನ್ನೂ ಒಮ್ಮೆ ಸೋಲಿಸಿದ. ಆಂಧ್ರದಲ್ಲಿ ವೆಂಗಿಮಂಡಲದ ಭಾಗಗಳೂ ಸು.1118ರ ಹೊತ್ತಿಗೆ ಪೂರ್ಣವಾಗಿ ವಿಕ್ರಮಾದಿತ್ಯನ ವಶವಾದವು.

ವಿಕ್ರಮಾದಿತ್ಯನ ಆಳಿಕೆಯ ಕೊನೆಯ ಭಾಗದಲ್ಲಿ ಹೊಯ್ಸಳರಿಂದ ಅನಿರೀಕ್ಷಿತವಾದ ವಿರೋಧ ಎದುರಾಯಿತು. ಹೊಯ್ಸಳ ಒಂದನೆಯ ಬಲ್ಲಾಳ ಮತ್ತು ಅವನ ತಮ್ಮ ವಿಷ್ಣುವರ್ಧನ ಇವರು ಚಾಳುಕ್ಯ ಸಾಮಂತರಾದ ಹಾನಗಲ್ಲಿನ ಕದಂಬರನ್ನೂ ಉಚ್ಚಂಗಿಯ ಪಾಂಡ್ಯರನ್ನೂ ಆಗಿಂದಾಗ್ಗೆ ಕೆಣಕಿ ಅವರ ಅಸ್ತಿತ್ವಕ್ಕೆ ಕುಂದುಂಟುಮಾಡಲಾರಂಭಿಸಿದರು. ಮೊದಮೊದಲು ವಿಕ್ರಮಾದಿತ್ಯ ಇದನ್ನು ತೃಣೀಕರಿಸಿದನಾದರೂ ಅವರ ಕಿರುಕುಳ ಹೆಚ್ಚಿದಾಗ ಧಾರಾನಗರದಿಂದ ತನ್ನೊಡನೆ ಬಂದಿದ್ದ ಪರಮಾರ ಜಗದೇವನ ನೇತೃತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳಿಸಿದ. ಆದರೆ ಆತ ಹೊಯ್ಸಳರಿಂದ ಸೋತ (ಸು.1090). ಪುನಃ 1117–18ರಲ್ಲಿ, ಕಣ್ಣೇಗಾಲದಲ್ಲಿ ನಡೆದ ಕದನದಲ್ಲಿ ಹೊಯ್ಸಳ ಸೇನಾನಿ ಗಂಗರಾಜ ಚಾಳುಕ್ಯ ಸೇನೆಯನ್ನು ಸೋಲಿಸಿದ. ಈ ಸೋಲಿನಿಂದ ವಿಕ್ರಮಾದಿತ್ಯ ಕ್ರುದ್ಧನಾಗಿ ಪ್ರಚಂಡ ಸೈನ್ಯದೊಂದಿಗೆ ನುಗ್ಗಿ ಹೊಯ್ಸಳರನ್ನು ಹಲಸೂರು ಮತ್ತು ಹೊಸವೀಡು ಕದನಗಳಲ್ಲಿ ಸೋಲಿಸಿದ. ವಿಷ್ಣುವರ್ಧನನ ಸೊಕ್ಕು ಇದರಿಂದ ಮುರಿದಂತಾಗಿ ಅವನು ಇನ್ನೂ ಸ್ವಲ್ಪ ಕಾಲ ಮಾಂಡಲಿಕನಾಗಿಯೇ ಮುಂದುವರಿಯುವುದರಲ್ಲಿ ತೃಪ್ತಿಪಟ್ಟುಕೊಳ್ಳಬೇಕಾಯಿತು. ದಿಕ್ಕು ದಿಕ್ಕುಗಳಲ್ಲೂ ಶತ್ರುಗಳನ್ನು ಸಂಹರಿಸಿ ಸಾಮಂತರನ್ನು ಆಜ್ಞಾಧಾರಕರನ್ನಾಗಿ ಮಾಡಿ ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ, ಪ್ರಜಾರಂಜಕನಾಗಿ, ಕಲಾಪೋಷಕನಾಗಿ, ಕವಿಗಳಿಗೂ ವಿದ್ವಾಂಸರಿಗೂ ಆಶ್ರಯದಾತನಾಗಿ, ಶಿಸ್ತಿನಿಂದ ಸೌಹಾರ್ದದಿಂದ ರಾಜ್ಯಭಾರ ಮಾಡಿದ ವಿಕ್ರಮಾದಿತ್ಯ 1127ರಲ್ಲಿ ನಿಧನಹೊಂದಿದ.

ಅನಂತರ ಪಟ್ಟಾಭಿಷಿಕ್ತನಾದವನು ಮುಮ್ಮಡಿ ಸೋಮೇಶ್ವರ (1127–39). ಚಾಳುಕ್ಯ ಇತಿಹಾಸದಲ್ಲಿ ಇವನ ಕಾಲ ಶಾಂತಿ ನೆಲಸಿದ್ದ ಕಾಲ. ಒಂದು ದೃಷ್ಟಿಯಿಂದ ಚಾಳುಕ್ಯಬಲ ಇಳಿಮುಖಗೊಳ್ಳಲು ಆರಂಭವಾದುದೂ ಇವನ ಕಾಲದಲ್ಲೇ ಎಂದು ಹೇಳಬಹುದು. ಇವನ ಆಳಿಕೆಯ ಪ್ರಾರಂಭದಲ್ಲಿಯೇ ವೆಂಗಿಯ ಬಹುಭಾಗ ಚಾಳುಕ್ಯರ ಕೈಬಿಟ್ಟಿತು. ದಕ್ಷಿಣದಲ್ಲಿ ಹೊಯ್ಸಳರು ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿದ್ದರು. ಆದರೂ ಈ ಹಿಂದೆ ಹೊಯ್ಸಳಾಧೀನವಾಗಿದ್ದ ಬನವಾಸಿ ಮತ್ತು ಉಚ್ಚಂಗಿ ಪ್ರಾಂತ್ಯಗಳನ್ನು ಸೋಮೇಶ್ವರ ಪುನಃ ಸಾಧಿಸಿಕೊಂಡಂತೆ ತೋರುತ್ತದೆ (ಸು.1136). ಇದೊಂದೇ ಸೋಮೇಶ್ವರನ ಗಮನಾರ್ಹ ರಾಜಕೀಯ ಸಾಧನೆ.

ಮುಂದಿನ ರಾಜ ಮುಮ್ಮಡಿ ಸೋಮೇಶ್ವರನ ಮಗ ಪೆರ್ಮ ಜಗದೇಕಮಲ್ಲ (1139–49). ಅಶಕ್ತ ದೊರೆಯಾದ ಇವನ ಕಾಲದಲ್ಲಿ ಚಾಳುಕ್ಯ ಸಾಮ್ರಾಜ್ಯ ಸಂಕುಚಿತಗೊಳ್ಳಲಾರಂಭಿಸಿತು. ಆಂಧ್ರಪ್ರದೇಶದ ಕರಾವಳಿ ಭಾಗ ಸ್ವಲ್ಪ ಸ್ವಲ್ಪವಾಗಿ ಇವನ ಹತೋಟಿಯಿಂದ ಜಾರಿತು. ಹೊಯ್ಸಳ ವಿಷ್ಣುವರ್ಧನ ಮತ್ತೆ ದಂಗೆ ಎದ್ದು ಕದಂಬರನ್ನು ಸೋಲಿಸಿದ. ಹಾನಗಲ್ಲು ಬಂಕಾಪುರಗಳು ಅವನ ವಶವಾದುದಲ್ಲದೆ ಬನವಾಸಿ ಪ್ರಾಂತ್ಯದ ಅಧಿಪತ್ಯ ಕೆಲಕಾಲ ಅವನದಾಯಿತು. ಆದರೆ 1143ರ ಸುಮಾರಿನಲ್ಲಿ ಈ ಭಾಗದಲ್ಲಿ ಚಾಳುಕ್ಯ ಬಲ ಸ್ವಲ್ಪ ಚೇತರಿಸಿಕೊಂಡು ಹೊಯ್ಸಳರನ್ನು ಆಕ್ರಮಿತ ಪ್ರದೇಶಗಳಿಂದ ಹೊರಗಟ್ಟಿದ್ದರೂ ಚಾಳುಕ್ಯ ಸಾಮ್ರಾಜ್ಯಕ್ಕೆ ಹೊಯ್ಸಳರು ಪೆಟ್ಟುಕೊಡುವ ಶಕ್ತಿ ಗಳಿಸದಿದ್ದರೆಂಬುದೇ ತತ್ಕಾಲದ ಸ್ಥಿತಿಯ ಸೂಚಕವಾಗಿದೆ. ಅತ್ತ ಕಳಚುರಿ ಮನೆತನದ ಬಿಜ್ಜಳ ಸಹ ಈ ವೇಳೆಗೆ ಪ್ರಬಲವಾಗಿ ಚಾಳುಕ್ಯ ರಾಜ್ಯವನ್ನು ಕಬಳಿಸಲು ಸನ್ನದ್ಧನಾಗುತ್ತಿದ್ದ.

ಇಂಥ ಪರಿಸ್ಥಿತಿಯಲ್ಲಿ ಜಗದೇಕಮಲ್ಲ ಮೃತನಾದಾಗ ಅವನ ಸೋದರ ಮುಮ್ಮಡಿ ತೈಲಪ (1149–62) ರಾಜ್ಯವಾಳತೊಡಗಿದ. ಅಶಕ್ತ ದೊರೆಯಾಗಿದ್ದ ಇವನ ಕಾಲದಲ್ಲಿ ಕಳಚುರಿ ಬಿಜ್ಜಳ ದಂಗೆ ಎದ್ದ, 1153ರ ವೇಳೆಗೆ ತಾನೇ ಚಕ್ರವರ್ತಿ ಎಂದು ಸಾರಿಕೊಂಡ. ರಾಜ್ಯದ ಅನೇಕ ಭಾಗಗಳ ಮೇಲೆ ಚಾಳುಕ್ಯರ ಅಂಕೆ ತಪ್ಪಿತು. ಶಿಲಾಹಾರರೂ ಕಾಕತೀಯರೂ ಹೊಯ್ಸಳರೂ ಈ ಪರಿಸ್ಥಿತಿಯ ಲಾಭ ಪಡೆದು ಸ್ವತಂತ್ರವಾಗಿ ಆಳತೊಡಗಿದರು. ತೈಲಪನ ವಿರುದ್ಧ ಕಾಕತೀಯ ರುದ್ರ ಕದನ ಹೂಡಿ ಜಯಗಳಿಸಿದ. ಈ ತೈಲಪನ ಕೊನೆಗಾಲದಲ್ಲಿ ಆಗ ರಾಜಧಾನಿಯನ್ನು ಅಣ್ಣಿಗೇರಿಗೆ ಮತ್ತೆ ಅಲ್ಲಿಂದ ಬನವಾಸಿಗೆ ವರ್ಗಾಯಿಸಿಕೊಂಡ. ಆಗ ಬನವಾಸಿ ಹಾಗೂ ಸುತ್ತಲಿನ ಪ್ರದೇಶಗಳು ಮಾತ್ರ ಇವನ ಅಧೀನದಲ್ಲಿ ಇದ್ದವು.

ಸಾಯುವ ಮುನ್ನ ತೈಲಪ ತನ್ನ ಮಗ ತ್ರಿಭುವನಮಲ್ಲ 4ನೆಯ ಸೋಮೇಶ್ವರನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ್ದನಾದರೂ ಇನ್ನಿಬ್ಬರು ರಾಜಕುಮಾರರಾದ 3ನೆಯ ಜಗದೇಕಮಲ್ಲ ಮತ್ತು 2ನೆಯ ಭೂಲೋಕಮಲ್ಲರು ಕಲ್ಯಾಣವನ್ನೇ ಬಿಟ್ಟು ಹೊರಗೆ ಹೋಗಬೇಕಾಯಿತು. ಅನಂತಪುರ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಅಧಿಕಾರದಲ್ಲಿದ್ದ ನಿಡುಗಲ್ಲಿನ ಚೋಳರು, ಉಚ್ಚಂಗಿಯ ಪಾಂಡ್ಯರು, ಸಾಂತರರು ಇವರಿಗೆ ಆಶ್ರಯವಿತ್ತರು. ಗೋವೆಯ ಕದಂಬರೂ ಇವರಿಗೆ ಬೆಂಬಲ ನೀಡಿದಂತೆ ತೋರುತ್ತದೆ. ಆದರೆ ಚಾಳುಕ್ಯ ರಾಜ್ಯ ಪೂರ್ಣವಾಗಿ ಕಳಚುರಿಗಳ ವಶವಾಯಿತು. 20 ವರ್ಷಗಳ ಅನಂತರ ಸು.1182ರಲ್ಲಿ ಸೋಮೇಶ್ವರ ತನ್ನ ನಂಬುಗೆಯ ದಂಡನಾಯಕರ ನೆರವಿನಿಂದ ರಾಜ್ಯವನ್ನು ಹಿಂದಕ್ಕೆ ಪಡೆದ. ಆದರೆ ಅವನ ಪ್ರಯತ್ನ ಪೂರ್ಣವಾಗಿ ಸಾರ್ಥಕವಾಗಲಿಲ್ಲ. ಒಂದು ಕಡೆ ಹೊಯ್ಸಳರೂ ಇನ್ನೊಂದು ಕಡೆ ಸೇವುಣರೂ ಮತ್ತೊಂದು ಕಡೆ ಕಾಕತೀಯರೂ ಪ್ರಬಲಿಸಿ ಅವರ ನಡುವಣ ಜಗಳದಲ್ಲಿ ಚಾಳುಕ್ಯ ರಾಜ್ಯ ಸು. 1189ರ ಹೊತ್ತಿಗೆ ಕರಗಿಹೋಯಿತು.

**ಆಡಳಿತ ವ್ಯವಸ್ಥೆ:** ಕಲ್ಯಾಣದ ಚಾಳುಕ್ಯರ ರಾಜ್ಯ ವಿಸ್ತಾರದಲ್ಲಿ ಹಿಂದಿನ ರಾಜ್ಯಗಳಿಗಿಂತ ಹೆಚ್ಚಾಗಿತ್ತು. ಅತ್ಯುತ್ತಮ ಸ್ಥಿತಿಯಲ್ಲಿ ರಾಜ್ಯ ದಕ್ಷಿಣದ ಕಾವೇರಿಯಿಂದ ನರ್ಮದೆಯವರೆಗೂ ಹಬ್ಬಿತ್ತು. ಮಹಾರಾಷ್ಟ್ರದ ದಕ್ಷಿಣದ ಜಿಲ್ಲೆಗಳು, ಆಂಧ್ರಪ್ರದೇಶದ ಪಶ್ಚಿಮದ ಅನಂತಪುರ, ಕಡಪ, ಕರ್ನೂಲು ಮುಂತಾದ ಜಿಲ್ಲೆಗಳು ಇವರ ರಾಜ್ಯದ ಭಾಗವಾಗಿ ಇದ್ದುವು. ಸಹಜವಾಗಿಯೇ ಆಡಳಿತದಲ್ಲಿ ಹೆಚ್ಚು ಸಮಸ್ಯೆಗಳು ಉದ್ಭವಿಸಿದವು. ಅಧಿಕಾರವರ್ಗ ಹೆಚ್ಚಾಯಿತು. ಅರಸನ ಜವಾಬ್ದಾರಿ ಗುರುತರವಾಯಿತು.

ಅರಸನ ಸಹಾಯಕ್ಕೆ ಮಂತ್ರಿಮಂಡಲವೊಂದಿತ್ತು. ಒಬ್ಬ ಮನೆವೆರ್ಗ್ಗಡೆ, ಇಬ್ಬರು ತಂತ್ರಪಾಲರು, ಒಬ್ಬ ತಂತ್ರದ ಸೇನಬೋವ, ಒಬ್ಬ ಪ್ರಧಾನ ಮತ್ತು ಒಬ್ಬ ಹಡಪದ ಇವರು ಒಂದನೆಯ ಸೋಮೇಶ್ವರನ ಮಂತ್ರಿಮಂಡಲದಲ್ಲಿದ್ದರೆಂದೂ ಪ್ರಧಾನರು ಮತ್ತು ಇತರ ಅಧಿಕಾರಿಗಳೊಡಗೂಡಿ ಖಿಲವಾಗಿದ್ದ ನೀತಿ ನಿಯಮಾವಳಿಗಳನ್ನು ರೂಪಿಸಿದರೆಂದು ಸೂಡಿಯ ಶಾಸನವೊಂದರಲ್ಲಿ ಹೇಳಿದೆ. ತಂತ್ರದ ಸೇನಬೋವ ಬಹುಶಃ ಆ ಮಂತ್ರಿಮಂಡಲದ ಕಾರ್ಯದರ್ಶಿಯಾಗಿದ್ದಿರಬಹುದು. ತಂತ್ರಪಾಳರಧಿಷ್ಠಾಯಕ ಎಂಬ ಅಧಿಕಾರಿ ಸಹ ಮಂತ್ರಿಮಂಡಲದ ಒಬ್ಬ ಸದಸ್ಯನಾಗಿದ್ದಂತೆ ತೋರುತ್ತದೆ. ಮಹಾಪ್ರಧಾನ ಎಂಬ ಹೆಸರು ಶಾಸನಗಳಲ್ಲಿ ದೊರಕಿದರೂ ಈತ ಮಂತ್ರಿಮಂಡಲದ ಮುಖ್ಯಸ್ಥನಾಗಿದ್ದಂತೆ ತೋರುವುದಿಲ್ಲ. ಒಂದೇ ಕಾಲದಲ್ಲಿ ಹಲವಾರು ಅಧಿಕಾರಿಗಳು ಈ ಬಿರುದನ್ನು ಹೊಂದಿದ್ದ ವಿಷಯ ತಿಳಿದಿದೆ. ಈ ಅಧಿಕಾರಿಗಳ ಕಾರ್ಯಕ್ಷೇತ್ರ ಯಾವುದಾಗಿತ್ತು, ಆಡಳಿತದ ಯಾವ ಶಾಖೆಗೆ ಅವರು ಮುಖ್ಯರಾಗಿದ್ದರು ಎಂದು ಹೇಳಲೂ ಸಾಧ್ಯವಿಲ್ಲ. ಅಂತಃಪುರ ವೆರ್ಗ್ಗಡೆ ಎಂಬಾತ ಬಹುಶಃ ರಾಜನ ಅರಮನೆಗೆ ಸಂಬಂಧಿಸಿದ ವ್ಯವಹಾರಗಳನ್ನು ಗಮನಿಸುತ್ತಿದ್ದ ಮನೆಯ ಹೆಗ್ಗಡೆ, ಕಡಿತವೆರ್ಗ್ಗಡೆ ಲೆಕ್ಕ ಪತ್ರಗಳ ಅಧಿಕಾರಿ. ಭಂಡಾರಿ, ಹೆಸರೆ ಸೂಚಿಸುವಂತೆ ಬೊಕ್ಕಸದ ಅಧಿಕಾರಿ. ವಡ್ಡರಾವುಳದ ಅಧಿಕಾರಿ ಆ ಹೆಸರಿನ ಸುಂಕವನ್ನು ವಸೂಲು ಮಾಡುವ ಜವಾಬ್ದಾರಿ ಹೊಂದಿದ್ದನೆನ್ನಬಹುದು. ಸೇನಾಧಿಪತಿ, ದಂಡನಾಯಕ, ಸಂಧಿವಿಗ್ರಹಿ, ಹೆರಿಲಾಳ ಕನ್ನಡ ಸಂಧಿವಿಗ್ರಹಿ, ಅಧ್ಯಕ್ಷ, ಸರ್ವಾಧ್ಯಕ್ಷ, ಅಂತಃಪುರಾಧ್ಯಕ್ಷ, ಬಾಹತ್ತರ ನಿಯೋಗಾಧಿ ಪತಿ, ಪಟ್ಟಸಾಹಣಿ, ಪಟ್ಟಸಾಹಣಧಿಷ್ಠಾಯಕ, ಪಸಾಯಿತ, ಶ್ರೀಕರಣ, ಬಾಣಸವೆರ್ಗ್ಗಡೆ, ಚೂಲಾಯ್ತ, ಪಡಿಹಾರ–ಇವು ಇನ್ನೂ ಕೆಲವು ಅಧಿಕಾರವರ್ಗಗಳು. ಹಲವಾರು ಸಂದರ್ಭಗಳಲ್ಲಿ ಒಬ್ಬನೇ ಹಲವಾರು ಅಧಿಕಾರಗಳನ್ನು ಪಡೆದಿರಬಹುದಾಗಿತ್ತು.

ಆಡಳಿತ ಸೌಕರ್ಯಕ್ಕಾಗಿ ರಾಜ್ಯವನ್ನು ಆ ಮೊದಲಿದ್ದಂತೆಯೇ ಬೇರೆ ಬೇರೆ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಆದರೆ ಈ ಪ್ರಾಂತ್ಯಗಳು ಈಗ ಇನ್ನೂ ಹೆಚ್ಚಿದುವಲ್ಲದೆ ಒಂದೊಂದು ಪ್ರಾಂತ್ಯದಲ್ಲೂ ಸಣ್ಣ ಘಟಕಗಳಿದ್ದುವು. ಬನವಾಸಿ 12000, ನೊಳಂಬವಾಡಿ 32000, ಗಂಗವಾಡಿ 96000, ಸಿಂದವಾಡಿ 1000, ಹಲಸಿಗೆ 12000, ಕೊಲ್ಲಿಪಾಕೆ 5000, ಕೊಂಕಣ 900, ಪಾನುಂಗಲ್ಲು 500, ಬೆಳ್ವೊಲ 300, ಪುರಿಗೆರೆ 400,ಸಬ್ಬಿ 30, ಹೈವೆ 50 ಇತ್ಯಾದಿ ಘಟಕಗಳು ಇದ್ದವು. ರಾಜನ ಕೈಕೆಳಗಿನ ಅಧಿಕಾರಿಗಳು ಕೇಂದ್ರಾಡಳಿತದ ಹೊಣೆಗಾರಿಕೆಯ ಜೊತೆಗೆ ಈ ಪ್ರಾಂತ್ಯಗಳ ಆಡಳಿತಕ್ಕೆ ನೇರವಾಗಿ ಜವಾಬ್ದಾರರಾಗಿರುತ್ತಿದ್ದರು. ಕೆಲವು ಪ್ರಾಂತ್ಯಗಳಲ್ಲಿ ಆನುವಂಶಿಕವಾಗಿ ಆಳುತ್ತಿದ್ದ ಸಾಮಂತರೇ ಅಧಿಕಾರದಲ್ಲಿ ಮುಂದುವರೆಯುತ್ತಿದ್ದರು. ಆದರೂ ಬಹುಶಃ ಅವರ ಮೇಲಿನ ಉಸ್ತುವಾರಿಗಾಗಿ ಅರಸ ಅಧಿಕಾರಿಗಳನ್ನು ತನ್ನ ಪ್ರತಿನಿಧಿಗಳಾಗಿ ಅಂಥ ಪ್ರಾಂತ್ಯಗಳಿಗೆ ನೇಮಿಸುತ್ತಿದ್ದ. ಅಧಿಕಾರಿಗಳನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ವರ್ಗಾಯಿಸುತ್ತಲೂ ಇದ್ದ. ಯುವರಾಜ ಹಾಗೂ ಅರಸನ ಇತರ ಸಂಬಂಧಿಕರು ಸಹ ಹೀಗೆ ಪ್ರಾಂತ್ಯಾಧಿಕಾರಿಗಳಾಗಿ ನೇಮಕಗೊಳ್ಳುತ್ತಿದ್ದರು.

ಗ್ರಾಮ ಆಡಳಿತದ ಅತಿ ಸಣ್ಣ ಘಟಕ. ಇದರ ಆಡಳಿತದ ಸಂಪೂರ್ಣ ಹೊಣೆಗಾರಿಕೆ ಅಲ್ಲಿನ ಮಹಾಜನರದು, ಪ್ರಜೆ ಗೌಡುಗಳದು ಆಗಿತ್ತು. ದೇವಾಲಯಗಳು, ಕೆರೆಗಳು, ಕಾಲುವೆಗಳು ಮುಂತಾದವುಗಳನ್ನು ಕಟ್ಟಿಸುವ, ಜೀರ್ಣೋದ್ಧಾರ ಮಾಡುವ ಮತ್ತು ರಕ್ಷಿಸುವ ಕೆಲಸಗಳು, ವಿದ್ಯಾಸಂಸ್ಥೆ, ಅನ್ನಸತ್ರ ಮುಂತಾದವುಗಳನ್ನು ನೋಡಿಕೊಳ್ಳುವ ಕೆಲಸಗಳೂ ಗ್ರಾಮೀಣ ಆಡಳಿತ ಕಕ್ಷೆಯೊಳಗೆ ಬರುತ್ತಿದ್ದವು. ಅಗ್ರಹಾರ, ಗ್ರಾಮಗಳ ನಿವಾಸಿಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸಂಸ್ಥೆ ಮಹಾಜನರದು. ಗ್ರಾಮದ ವಿಸ್ತೀರ್ಣ, ಜನಸಂಖ್ಯೆಗಳನ್ನು ಆಧರಿಸಿ ಮಹಾಜನರ ಸಂಖ್ಯೆ ಸಹ ನಿರ್ಧಾರವಾಗುತ್ತಿತ್ತು. ಮಹಾಜನರೆಲ್ಲ ಬ್ರಾಹ್ಮಣರೇ ಆಗಿದ್ದರೆಂಬ ವಾದವಿದೆಯಾದರೂ ಅನ್ಯವೃತ್ತಿಕಾರರಿಗೂ ಗ್ರಾಮದ ಆಡಳಿತದಲ್ಲಿ ಪ್ರಾತಿನಿಧ್ಯವಿದ್ದಿತು ಎಂಬುದು ತಿಳಿದಿದೆ. ತಂಬುಲಿಂಗ, ತೆಲ್ಲಿಗ, ಮುಮ್ಮರಿದಂಡ ಮೊದಲಾದವರ ವೃತ್ತಿಸಂಘಗಳು (ಶ್ರೇಣಿ) ಇದ್ದುವು. ವರ್ತಕರು ನಕರಗಳೆಂದೊ ಸೆಟ್ಟಿಗಳೆಂದೋ ಕರೆಯಲ್ಪಡುತ್ತಿದ್ದರು. ಗಾವುಂಡ ಗ್ರಾಮದ ಪ್ರಮುಖ ಅಧಿಕಾರಿ, ಈತ ಆನುವಂಶಿಕವಾಗಿ ಈ ಅಧಿಕಾರವನ್ನು ಪಡೆದಿದ್ದ. ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಗಾವುಂಡನೇ ಇದ್ದರೂ ಒಮ್ಮೊಮ್ಮೆ ಹೆಚ್ಚಿನ ಸಂಖ್ಯೆಯಲ್ಲೂ ಇದ್ದರೆನ್ನಲು ಆಧಾರಗಳಿವೆ. ಗಾವುಂಡನಿಗೆ ನೆರವಾಗಿ ಒಬ್ಬ ಲೆಕ್ಕಿಗ (ಕರಣ) ಅಥವಾ ಸೇನಬೋವ ಇರುತ್ತಿದ್ದ. ಹಲವು ಗ್ರಾಮಗಳು ಕೂಡಿದ ನಾಡಿಗೆ ನಾಳ್ಗಾವುಂಡನೆಂಬಾತ ಅಧಿಕಾರಿ.

ಈ ಅಧಿಕಾರಿಗಳಿಗೆಲ್ಲ ನಿಶ್ಚಿತ ತಲುಬನ್ನು ನೀಡುವ ವ್ಯವಸ್ಥೆ ಇರಲಿಲ್ಲ. ಅದಕ್ಕೆ ಬದಲು ಅವರಿಗೆ ಭೂಮಿಯ ವೃತ್ತಿಗಳನ್ನು ನೀಡಲಾಗುತ್ತಿತ್ತು. ಹಿರಿಯ ಅಧಿಕಾರಿಗಳಿಗೆ ಒಂದೊಂದು ಗ್ರಾಮವನ್ನೇ ಅದರ ಆದಾಯವನ್ನು ಅವರು ಸ್ವಂತಕ್ಕೆ ಬಳಸಲೆಂದು ಕೊಡಲಾಗುತ್ತಿತ್ತು. ರಾಣಿಯರು, ರಾಜಕುಮಾರರು, ಅರಸನ ಇತರ ಸಂಬಂಧಿಕರು ಸಹ ಇಂಥ ವೃತ್ತಿಗಳನ್ನು ಪಡೆದಿದ್ದರು. ಬೀಳವೃತ್ತಿ, ಪತ್ತುಲವೃತ್ತಿ, ಕುಮಾರವೃತ್ತಿ, ಅಣುಗಜೀವಿತ ಮುಂತಾಗಿ ಶಾಸನಗಳಲ್ಲಿ ಕಾಣಬರುವ ಪದಗಳು ಇಂಥ ವೃತ್ತಿಗಳನ್ನು ಸೂಚಿಸುತ್ತವೆ.

**ಆರ್ಥಿಕ–ಸಾಮಾಜಿಕಸ್ಥಿತಿ:** ರಾಜ್ಯ ಆರ್ಥಿಕವಾಗಿ ಬಹಳ ಅಭಿವೃದ್ಧಿಹೊಂದಿದ್ದಿತು. ಪ್ರಜೆಗಳು ತೆರಬೇಕಾಗಿದ್ದ ತೆರಿಗೆಗಳು ಬಹುವಿಧವಾಗಿದ್ದುವು. ಪನ್ನಾಯ, ದಸವಂದ, ಕುಳಿಯ ಸುಂಕ, ದವಸಾಯದ ಸುಂಕ, ಭತ್ತಾಯ, ಸದ್ದಾಯ, ಅರುವಣ, ನೀರುಣಿಸುಂಕ, ತಿಪ್ಪೆಸುಂಕ, ಮನ್ನೆವಣ, ತಳಾಐ ಗೂಲಿ ಇತ್ಯಾದಿಗಳು ತೆರಿಗೆಗಳು. ಇವುಗಳು ಬಹುಪಾಲು ವ್ಯವಸಾಯಕ್ಕೆ ಸಂಬಂಧಪಟ್ಟವುಗಳು. ಪ್ರತಿಯೊಂದು ತೆರಿಗೆಯ ಲಕ್ಷಣವಾಗಲೀ ಅರ್ಥವಾಗಲೀ ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗಿಲ್ಲ. ರಾಜ್ಯದ ಆದಾಯದ ಹೆಚ್ಚಿನ ಪಾಲು ಭೂಕಂದಾಯದಿಂದ ಬರುತ್ತಿತ್ತು. ವಾಣಿಜ್ಯ ಮತ್ತು ವೃತ್ತಿಗಳಿಗೆ ಸಂಬಂಧಿಸಿದಂಥ ಪೆರ್ಜುಂಕ, ಸಂತೆವಣ, ಮನೆವಣ, (ಮನೆದೆಱೆ), ಕಿಱುದೆಱೆ, ಹೊಸತಿಲುವಣ, ಸೂಲವಾಣಪಣ, ಕನ್ನಡಿವಣ, ವಡ್ಡರಾವುಳ, ದೊಂಬದೆಱೆ, ಘಾಣದೆಱೆ, ನಾವಿದವಾರಿ, ಬಿಲ್ಕೊಡೆ ಮುಂತಾದ ತೆರಿಗೆಗಳೂ ಇದ್ದುವು. ಸಾಮಾಜಿಕ ತೆರಿಗೆಗಳೆನ್ನಬಹುದಾದ ಮದುವೆಯ ಸುಂಕ, ದಂಡಾಯ ಎಂಬುವುಗಳು ಗಮನಾರ್ಹ. ಮನೆಗಳಲ್ಲಿ ನಡೆಯುವ ಹಬ್ಬ, ಮದುವೆ ಮುಂತಾದವುಗಳಿಗೂ ತೆರಿಗೆ ತೆರಬೇಕಾಗಿತ್ತು ಎಂಬುದು ಇದರಿಂದ ತಿಳಿಯುತ್ತದೆ. ದಂಡಾಯ ಶಿಕ್ಷೆಗೊಳಪಟ್ಟ ಸಮಾಜ ಘಾತುಕರಿಂದ ಗ್ರಾಮೀಣ ಸಂಸ್ಥೆಗಳೋ, ಕೇಂದ್ರಾಧಿಕಾರಿಗಳೋ ವಸೂಲು ಮಾಡುತ್ತಿದ್ದ ಮೊತ್ತ ಸರ್ಕಾರದ ಒಂದು ಆಯವಾಗಿತ್ತು. ಅತಿಕ್ರಮ ಪ್ರವೇಶಕ್ಕೆ 12 ಗದ್ಯಾಣ, ಆಡಿದ ಮಾತನ್ನು ಪೂರ್ಣವಾಗಿ ನಡೆಸದವರಿಗೆ 12 ಪಣ, ಮುರಿದಲ್ಲಿ 12 ಗದ್ಯಾಣ ದಂಡವೆಂದು ಒಂದು ಶಾಸನದಲ್ಲಿ ಹೇಳಿದೆ. ಆಜ್ಞೆಯನ್ನುಲ್ಲಂಘಿಸಿದರೆ 52 ದ್ರಮ್ಮ, ದುರಾಕ್ರಮಣಕ್ಕೆ 12 ದ್ರಮ್ಮ, ಕತ್ತಿಯನ್ನೆಳೆದರೆ 1000 ದ್ರಮ್ಮ, ಇರಿದರೆ 97 ದ್ರಮ್ಮ ದಂಡ ತೆರಬೇಕೆಂದು ಮತ್ತೊಂದು ಶಾಸನದಲ್ಲಿ ಹೇಳಿದೆ. ಇವುಗಳಿಂದ ಅಂದಿನ ಆಡಳಿತವರ್ಗ ಸಮಾಜದಲ್ಲಿ ಶಾಂತಿ ನೆಲಸಲು ಎಂಥ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿತ್ತೆಂದು ಗೊತ್ತಾಗುತ್ತದೆ.

ದ್ರಮ್ಮ, ಗದ್ಯಾಣ, ಪಣ, ಪೊನ್, ಸುವರ್ಣ, ಸಾಹಣಿಕಾಟಿ, ಸಲಿಕೆ, ಗುಲಿಕೆ, ಕಾಗಿಣಿ, ಮಾಡ, ವೀಸ, ಪ್ರತಾಪ, ಧರಣ ಮುಂತಾದ ನಾಣ್ಯಗಳು ಚಲಾವಣೆಯಲ್ಲಿದ್ದವು. ಗದ್ಯಾಣದಲ್ಲಿಯೇ ಬಹುಶಃ ಅದರ ತೂಕ ಇತ್ಯಾದಿಗಳಿಗನುಸಾರವಾಗಿ ದುಸರ ಗದ್ಯಾಣ, ಕಟಕ ಗದ್ಯಾಣ, ಪೆರ್ಗ್ಗಡೆ ಗದ್ಯಾಣ ಮುಂತಾದ ಬೇರೆ ಬೇರೆ ನಾಣ್ಯಗಳಿದ್ದುವು. ಈ ನಾಣ್ಯಗಳನ್ನು ಅಚ್ಚುಹಾಕಿಸಲು ಕಮ್ಮಟಗಳಿದ್ದುವು. ಲಕ್ಕುಂಡಿಯಲ್ಲಿ ಬೆಳ್ಳಿ ನಾಣ್ಯಗಳನ್ನು ಎರಕಹೊಯ್ಯುತ್ತಿದ್ದ ಬೆಳ್ಳಿಗಮ್ಮಟವಿತ್ತು. ಕುಡತಿನಿಯಲ್ಲಿ ಕಾರ್ತಿಕೇಯದೇವರ ನವಿಲಚ್ಚಿನ ಪೊನ್ನನ್ನು ಎರಕ ಹೊಯ್ಯುತ್ತಿದ್ದರು. ಆಣಿಕಾಱ ಎಂಬ ಅಧಿಕಾರಿ ಇಂಥ ಕಮ್ಮಟದ ಅಧಿಕಾರಿಯಾಗಿದ್ದ.

ಜನರು ಅನೇಕ ರೀತಿಯ ಕರಭಾರವನ್ನು ಹೊರಬೇಕಾದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಅತ್ಯುತ್ತಮವಾಗಿತ್ತೆನ್ನಬಹುದು. ಅರಸರೂ ಅಧಿಕಾರಿಗಳೂ ವ್ಯವಸಾಯೋತ್ಪನ್ನ ಹೆಚ್ಚಲು ಬೇಕಾದ ನೀರಾವರಿ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದರು. ಕಾಡುಗಳನ್ನು ಕಡಿದು ಹೆಚ್ಚಿನ ಭೂಮಿಯನ್ನು ವ್ಯವಸಾಯಕ್ಕೆ ಅಣಿಗೊಳಿಸಲಾಗುತ್ತಿತ್ತು. ಕೆರೆಗಳನ್ನು ಕಟ್ಟಿಸಿ, ಕಾಲುವೆಗಳನ್ನು ತೋಡಿಸುತ್ತಿದ್ದರು. ಇಂಥ ಕೆಲಸವನ್ನು ಅಧಿಕಾರಿಗಳು ಕರ್ತವ್ಯವೆಂದೋ ವೈಯಕ್ತಿಕವಾಗಿ ಪುಣ್ಯಪ್ರದ ಕಾರ್ಯವೆಂದೋ ಪರಿಗಣಿಸಿದ್ದರು. ಇದರಿಂದ ಭೂಮಿ ಹೆಚ್ಚು ಫಲವತ್ತಾಗಿ ಉತ್ಪನ್ನ ಹೆಚ್ಚಿತ್ತು.

ಭೂಮಿ ಸಾಮಾನ್ಯವಾಗಿ ವ್ಯಕ್ತಿಗಳ ಒಡೆತನಕ್ಕೆ ಸೇರಿರಲಿಲ್ಲ. ಈ ಕಾಲದ ಶಾಸನಗಳನ್ನು ವಿಶ್ಲೇಷಿದರೆ ಗ್ರಾಮಕ್ಕೆ ಸೇರಿದ ಭೂಮಿ ಗ್ರಾಮಸ್ಥರಿಗೆಲ್ಲ ಒಟ್ಟಾಗಿ ಸೇರಿದ್ದು ಅವಿಭಕ್ತಸ್ವಾಮ್ಯವಾಗಿತ್ತು. ಅಧಿಕಾರಿಗಳಿಗೆ ತಲುಬಿಗೆ ಬದಲಾಗಿ ಕೊಡಲಾದ ಭೂಮಿಯ ವೃತ್ತಿ, ಬ್ರಾಹ್ಮಣರಿಗೆ ದಾನವಾಗಿ ನೀಡಲಾದ ವೃತ್ತಿಗಳು, ನೆತ್ತರುಗೊಡಗೆ ಮುಂತಾದ ವೃತ್ತಿಗಳು ಮಾತ್ರ ವೈಯಕ್ತಿಕ ಸ್ವಾಮ್ಯಕ್ಕೆ ಸೇರಿದ ಆಸ್ತಿಗಳೆಂದು ಭಾವಿಸಬಹುದು. ಅವರಿಗೆ ಸಹ ಈ ಭೂಮಿಯನ್ನು ಪರಭಾರೆ ಮಾಡುವ ಹಕ್ಕು ಇದ್ದಂತೆ ತೋರುವುದಿಲ್ಲ. ಇವು ಹೊರತುಪಡಿಸಿ ಉಳಿದೆಲ್ಲ ಭೂಮಿಯ ಯಜಮಾನಿಕೆ ಗ್ರಾಮದ ಮಹಾಜನರಿಗೆ ಸೇರಿತ್ತು. ಮಹಾಜನ ಸಂಸ್ಥೆಗಳೇ ದಾನಗಳನ್ನು ನೀಡುತ್ತಿದ್ದುವು; ಕರಗಳನ್ನೂ ವಸೂಲು ಮಾಡುತ್ತಿದ್ದುವು. ಭೂಮಿಯ ವೈಯಕ್ತಿಕ ವ್ಯವಹಾರಗಳು ಅಪರೂಪ, ಆದರೆ ವೈಯಕ್ತಿಕ ವೃತ್ತಿಗಳನ್ನು ಪಡೆದ ಅಧಿಕಾರಿಗಳು ಹಾಗೂ ಅದರಿಂದ ಬಂದ ಉತ್ಪನ್ನವನ್ನು ರೂಢಿಸಿ ಕೊಂಡು ಶ್ರೀಮಂತರಾಗಿದ್ದರು. ಕೆರೆಗಳನ್ನೂ ದೇವಾಲಯಗಳನ್ನೂ ಕಟ್ಟಿಸುವ, ಕಾಲುವೆ ತೋಡಿಸುವ, ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವ ಆರ್ಥಿಕ ಶಕ್ತಿ ಅವರಲ್ಲಿತ್ತು. ಎಂತಲೆ ಈ ಕಾಲದಲ್ಲಿ ಅರಸರಿಗಿಂತ ಹೆಚ್ಚಾಗಿ ಶ್ರೀಮಂತ ವರ್ಗದವರು ಈ ಕಾಲಮಾನದಲ್ಲಿ ಇಂಥ ಕಾರ್ಯಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

ಹೀಗೆ ಸಮಾಜದಲ್ಲಿ ಶ್ರೀಮಂತವರ್ಗವೊಂದು ಬೆಳೆಯಿತು. ಆರ್ಥಿಕಾಭಿವೃದ್ಧಿಯಾದರೂ ಅದು ಸಾಮಾನ್ಯವಾಗಿ ಎಲ್ಲರಲ್ಲಿಯೂ ವಿತರಣೆಯಾಗಿರಲಿಲ್ಲವೆಂಬುದೂ ತಿಳಿದುಬರುತ್ತದೆ. ಆದರೆ ದಲಿತವರ್ಗದ ಪರಿಸ್ಥಿತಿ ಅನುಕೂಲಕರವಾಗಿಯೇ ಇದ್ದಿತಾದುದರಿಂದ ಸಮಾಜದಲ್ಲಿ 12ನೆಯ ಶತಮಾನದ ಮಧ್ಯದವರೆಗೂ ಶಾಂತಿ ನೆಲೆಸಿತ್ತು. ಅನಂತರ ತಲೆಎತ್ತಿದ ವೀರಶೈವ ಕ್ರಾಂತಿ ಒಂದು ವಿಧದಲ್ಲಿ ಆರ್ಥಿಕ ಅಸಮಾನತೆಯ ವಿರುದ್ಧ ಎದ್ದ ಕ್ರಾಂತಿಯೂ ಹೌದು. ಅಲ್ಲದೆ ಈ ಶ್ರೀಮಂತ ವರ್ಗದಲ್ಲಿ ಬಹುಭಾಗ ಬ್ರಾಹ್ಮಣ ಧರ್ಮಕ್ಕೆ ಸೇರಿದವರಾಗಿದ್ದರು. ಅರಸರ ಆಡಳಿತಾಧಿಕಾರಿಗಳಲ್ಲಿ ಬಹುಪಾಲು ಬ್ರಾಹ್ಮಣರಾ ಗಿದ್ದರು. ಇದರಿಂದ ಇತರ ಧರ್ಮಾನುಯಾಯಿಗಳಿಗಿಂತಲೂ ಬ್ರಾಹ್ಮಣರಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿತ್ತೆನ್ನಬಹುದು. ವರ್ಣ ಮತ್ತು ಜಾತಿ ವ್ಯವಸ್ಥೆಗಳು ಈಗ ಖಚಿತ ರೂಪವನ್ನು ತಾಳಿದ್ದುದಲ್ಲದೆ ಕಟ್ಟುನಿಟ್ಟಾದ ಜಾತಿನಿಯಮಗಳು ಆಚರಣೆಗೆ ಬಂದಿದ್ದವು. ಆದರೆ ಬ್ರಾಹ್ಮಣರನೇಕರು ಕ್ಷತ್ರಿಯರಂತೆ ಯುದ್ಧಕರ್ಮಿಗಳಾಗಿದ್ದು ದಂಡನಾಯಕ, ಸೇನಾಪತಿ ಮುಂತಾದ ಪದವಿಗಳನ್ನು ಪಡೆದಿದ್ದರು. ಇದು ಎಷ್ಟರಮಟ್ಟಿಗೆ ಮಾನ್ಯವಾಗಿತ್ತು ಎಂಬುದು ಸಂದೇಹಾಸ್ಪದ. ಈ ಪ್ರವೃತ್ತಿ ವ್ಯಾಪಕವಾಗಿದ್ದಂತೆ ತೋರದು. ಜನಸಾಮಾನ್ಯರು ಅರಸನಿಂದ ನಿರೀಕ್ಷಿಸುತ್ತಿದ್ದುದು ದುಷ್ಟಶಿಕ್ಷಣ ಮತ್ತು ಶಿಷ್ಟರಕ್ಷಣ. ಅವರಿಗೆ ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ ಇದ್ದಂತೆ ಕಂಡುಬಾರದು.

ದೇವಾಲಯ ಈಗ ಕಿರಿದಾದ ಸಾಮಾಜಿಕ ಸಂಸ್ಥೆಯೂ ಆಗಿತ್ತು. ಅಲ್ಲದೆ ಅದೊಂದು ವಿದ್ಯಾಕೇಂದ್ರವಾಗಿತ್ತು. ದೇವಸ್ಥಾನಕ್ಕೆ ಸೇರಿದಂತೆ ಒಂದು ಮಠ ಮತ್ತು ಅನ್ನಸತ್ರ ಇರುತ್ತಿತ್ತು. ಮಠದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೆ ಸತ್ರದಲ್ಲಿ ಊಟೋಪಚಾರದ ವ್ಯವಸ್ಥೆ ಇತ್ತು. ತಪೋವನ, ಘಟಿಕಾಸ್ಥಾನಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಧಾರವಾಡ ಜಿಲ್ಲೆಯ ಕಾಡಿಯೂರು, ಬಳ್ಳಾರಿಯ ಮೊಡಿಗೆರೆ, ಗುಲ್ಬರ್ಗದ ನಾಗಾಯಿ, ಬಿಜಾಪುರದ ಕಡಲೆವಾಡ– ಇವು ಇಂಥ ಘಟಿಕಾಸ್ಥಾನಗಳು. ಇಲ್ಲಿ ಘಟಿಕಾಪ್ರಹಾರಿಗಳು (ಕಾಪಿನ ಘಟಿಯಾರಿ), ಖ್ಯಾತ ವಿದ್ವಾಂಸರು ಇರುತ್ತಿದ್ದರು. ಎಲ್ಲ ಚಟುವಟಿಕೆಗಳು ವೇಳಾಪಟ್ಟಿಯಂತೆ ಕ್ರಮವಾಗಿ ನಡೆಯುವಂತೆ ನೋಡಿಕೊಳ್ಳುವ ಹೊಣೆ ಇವರದಾಗಿತ್ತು. ಪರೀಕ್ಷೆಯಲ್ಲಿ ತೇರ್ಗಡೆಯಾದವರು ಘಟಿಕಾಸಾಹಣಿಗಳೆನಿಸಿ ಕೊಳ್ಳುತ್ತಿದ್ದರು. ಅಗ್ರಹಾರಗಳು ವಿದ್ಯಾಸಂಪನ್ನ ಬ್ರಾಹ್ಮಣರ ವಾಸಸ್ಥಳಗಳು. ವೇದಾಧ್ಯಾಯಿಗಳೂ ಷಟ್ಕರ್ಮನಿರತರೂ ಆದ ಬ್ರಾಹ್ಮಣರನ್ನು ಬೇರೆ ಬೇರೆ ಕಡೆಗಳಿಂದ ಬರಮಾಡಿಕೊಂಡು ಇಂಥ ಅಗ್ರಹಾರಗಳಲ್ಲಿ ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿ ಅವರಿಂದ ವಿದ್ಯಾಪ್ರಸಾರ ಮಾಡಿಸುವುದು ಅಗ್ರಹಾರಗಳನ್ನು ಸ್ಥಾಪಿಸುವುದರ ಮುಖ್ಯ ಉದ್ದೇಶವಾಗಿತ್ತು. ಈ ಕಾಲದಲ್ಲಿ ಕರ್ನಾಟಕದಲ್ಲಿ ಅಗ್ರಹಾರಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು.

**ಲಲಿತಕಲೆ, ಸಾಹಿತ್ಯ:** ಕಲೆಗಳಿಗೆ ಹೆಚ್ಚಿನ ರಾಜಾಶ್ರಯ, ಜನಾಶ್ರಯ ದೊರಕಿತು. ದೇವಾಲಯಗಳು ನೃತ್ಯ ಸಂಗೀತ ಮುಂತಾದ ಕಲೆಗಳಿಗೆ ಆಶ್ರಯ ನೀಡಿದ್ದವು. ಶಾಸನಗಳಲ್ಲಿ ಇವುಗಳಿಗೆ ಸಂಬಂಧಿಸಿದ ಉಲ್ಲೇಖಗಳಿವೆ. ಅರಸನಾದ ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರನ ಅಭಿಲಷಿತಾರ್ಥಚಿಂತಾಮಣಿಯ ಕರ್ತೃ. ಚಾಳುಕ್ಯ ರಾಣಿಯರಲ್ಲಿ ಹಲವರು ನೃತ್ಯ, ಸಂಗೀತಗಳಲ್ಲಿ ಪರಿಣಿತರಾಗಿದ್ದರು. ನೃತ್ಯ ವಿದ್ಯಾಧರಿ, ಸಂಗೀತ ವಿದ್ಯಾಧರಿಗಳೆನಿಸಿ ಕೊಂಡಿದ್ದರು. ಚಿತ್ರಕಲೆಗೂ ಪ್ರೋತ್ಸಾಹ ನೀಡಲಾಗಿತ್ತೆನ್ನ ಬಹುದಾದರೂ ಅದಕ್ಕೆ ಗುರುತುಗಳು ಉಳಿದಿಲ್ಲ.

ಸಾಹಿತ್ಯಕ್ಕೆ ಉದಾರವಾದ ರಾಜಾಶ್ರಯ ದೊರೆತ ಕಾರಣ ಸಂಸ್ಕೃತ ಹಾಗೂ ಕನ್ನಡಗಳಲ್ಲಿ ಅನೇಕ ಸಾಹಿತ್ಯ ಕೃತಿಗಳು ಬೆಳಕು ಕಂಡವು. ಇಮ್ಮಡಿ ಜಯಸಿಂಹನ ಆಸ್ಥಾನದಲ್ಲಿದ್ದ ವಾದಿರಾಜ ಎಂಬ ಜೈನಕವಿ ಸಂಸ್ಕೃತದಲ್ಲಿ ಪಾರ್ಶ್ವನಾಥ ಚರಿತ, ಪ್ರಮಾಣ ನಿರ್ಣಯ, ಯಶೋಧರ ಚರಿತ ಇತ್ಯಾದಿ ಗ್ರಂಥಗಳನ್ನು ರಚಿಸಿದ. ದಯಪಾಲ ರೂಪಸಿದ್ಧಿ ಎಂಬ ವ್ಯಾಕರಣ ಗ್ರಂಥದ ಕರ್ತೃ. ಬಿಲ್ಹಣನ ವಿಕ್ರಮಾಂಕದೇವಚರಿತ ಪ್ರಸಿದ್ಧವಾದ ಐತಿಹಾಸಿಕ ಕಾವ್ಯ. ಈ ಕವಿ ಕಾಶ್ಮೀರವಾಸಿ. ದೇಶಪರ್ಯಟನೆ ಮಾಡುತ್ತ ಕರ್ನಾಟಕಕ್ಕೆ ಬಂದು ಇಲ್ಲಿ ರಾಜಾಶ್ರಯ ಪಡೆದು ವಿದ್ಯಾಪತಿ ಎನಿಸಿಕೊಂಡ. ಚಾರುಪಂಚಾಶಿಕ ವೆಂದು ಹೆಸರಾಂತ ಬಿಲ್ಹಣ ಕಾವ್ಯ ಈತನ ಇನ್ನೊಂದು ಕೃತಿ. ಯಾಜ್ಞವಲ್ಕ್ಯಸ್ಮೃತಿಗೆ ವ್ಯಾಖ್ಯಾನ ರೂಪದಲ್ಲಿ ರಚಿಸಿದ ಗ್ರಂಥ ಮಿತಾಕ್ಷರಾ. ಇದರ ಕರ್ತೃ ವಿಜ್ಞಾನೇಶ್ವರ. ಕಾನೂನು ನೀತಿ ಹಾಗೂ ಧರ್ಮಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥವಿದು. ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥಚಿಂತಾಮಣಿಯ ಕರ್ತೃ. ಜಗದಾಚಾರ್ಯ ಪುಸ್ತಕವೆನಿಸಿದ ಇದು ಒಂದು ವಿಶ್ವಕೋಶದಂತಿದೆ. ಈತನದೇ ಇನ್ನೊಂದು ಕೃತಿಯ ಹೆಸರು ವಿಕ್ರಮಾಂಕಾಭ್ಯುದಯ. ವಿಕ್ರಮಾಂಕದೇವಚರಿತವನ್ನೇ ಇದು ಹೋಲುತ್ತದೆಯಾದರೂ ಎರಡರಲ್ಲಿಯೂ ವಿವರಗಳಲ್ಲಿ ವ್ಯತ್ಯಾಸಗಳಿವೆ.

ಕರ್ನಾಟಕ ಕಾದಂಬರಿ ಹಾಗೂ ಛಂದೋಂಬುಧಿಗಳನ್ನು ರಚಿಸಿದ 1ನೆಯ ನಾಗವರ್ಮ ಈ ಕಾಲದವನು. ಅಜಿತತೀರ್ಥಂಕರಪುರಾಣತಿಲಕ ಮತ್ತು ಸಾಹಸಭೀಮ ವಿಜಯಗಳ ಕರ್ತೃವಾದ ಖ್ಯಾತಿವೆತ್ತ ರನ್ನ ಸಹ ಇದೇ ಕಾಲದವನು. ದುರ್ಗಸಿಂಹನಿಂದ ಹೊಗಳಲ್ಪಟ್ಟ ಮಾಳವೀಮಾಧವದ ಕನ್ನವಯ್ಯ, ಮನಸಿಜ, ಚಂದ್ರಭಟ್ಟ, ಗಜಾಂಕುಶ ಹಾಗೂ ಎರಡನೆಯ ನಾಗವರ್ಮ ಹೆಸರಿಸಿದ ವತ್ಸರಾಜ ಚರಿತೆಯನ್ನು ಬರೆದ ನಾಗವರ್ಮ, ಸುಲೋಚನಾಚರಿತದ ನಾಗದೇವ, ಶಂಖವರ್ಮ, ಹರಿಪಾಲ ಮತ್ತು ಕೇಶಿರಾಜ ಉಲ್ಲೇಖಿಸಿರುವ ಹಂಸರಾಜ ಬಹುಶಃ ಈ ಕಾಲದ ಕವಿಗಳು. ಲೋಕೋಪ ಕಾರದ ಕರ್ತೃ ಎರಡನೆಯ ಚಾವುಂಡರಾಯ, ಕರ್ಣಾಟಕ ಪಂಚತಂತ್ರದ ದುರ್ಗಸಿಂಹ, ಕಾವ್ಯಾವಲೋಕನ ಮುಂತಾದ ಶಾಸ್ತ್ರಗ್ರಂಥಗಳ ಮತ್ತು ವರ್ಧಮಾನಪುರಾಣದ ಕರ್ತೃ ಎರಡನೆಯ ನಾಗವರ್ಮ, ಜಾತಕತಿಲಕದ ಶ್ರೀಧರಾಚಾರ್ಯ, ದಿವಾಕರಣಂದಿ, ಸುಕುಮಾರಚರಿತದ ಶಾಂತಿನಾಥ, ಗೋವೈದ್ಯದ ಕೀರ್ತಿವರ್ಮ, ಚಂದ್ರಚೂಡಾಮಣಿ ಶತಕದ ನಾಗವರ್ಮಾಚಾರ್ಯ, ಮಲ್ಲಿನಾಥಪುರಾಣ ಮತ್ತು ರಾಮಚಂದ್ರ ಚರಿತ ಪುರಾಣಗಳನ್ನು ರಚಿಸಿದ ನಾಗಚಂದ್ರ, ಧರ್ಮಾಮೃತದ ನಯಸೇನ, ಮೇಘಚಂದ್ರ, ಉದಯಾದಿತ್ಯ ಹಾಗೂ ಕನ್ನಡ ಸಾಹಿತ್ಯದ ಮೊದಲ ಕವಯಿತ್ರಿಯಾದ ಕಂತಿ ಮೊದಲಾದ ಕವಿಗಳಿಂದ ಈ ಕಾಲದಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು.

**ಶಾಸನಗಳು:** ಕಲ್ಯಾಣ ಚಾಳುಕ್ಯರ ಶಾಸನಗಳು ಇದುವರೆಗೆ ಮೊದಲು ಆಳಿದ ಅರಸುಮನೆತನಗಳವರ ಶಾಸನಗಳಿಗಿಂತ ಸಂಖ್ಯೆಯ ದೃಷ್ಟಿಯಿಂದ ಹೆಚ್ಚು. ಇವುಗಳಲ್ಲಿ ಶಿಲಾಶಾಸನಗಳದೇ ಮೇಲುಗೈ. ತಾಮ್ರಶಾಸನಗಳು ಬಹಳ ಕಡಿಮೆ. ಬಹುತೇಕ ಎಲ್ಲ ಶಿಲಾಶಾಸನಗಳ ಲಿಪಿ ಕನ್ನಡ. ನಾಗರೀ ಲಿಪಿಯ ಶಾಸನಗಳು ವಿರಳ, ಆ ಲಿಪಿಯನ್ನು ತಾಮ್ರಶಾಸನಗಳಲ್ಲಿ ಮಾತ್ರ ಬಳಸಲಾಗಿದೆ. ಈ ಕಾಲದ ಅಕ್ಷರಗಳು ಹೆಚ್ಚು ವರ್ತುಲಾಕಾರವಾಗಿದ್ದು ಅವುಗಳನ್ನು ಸುಂದರವಾಗಿ ಕೊರೆಯಲಾಗಿದೆ. ಗಾತ್ರದಲ್ಲಿ ಅವು ಕಿರಿದು. ಶಿಲಾಶಾಸನ ಗಳನ್ನು ಕೊರೆಯುವ ಮೊದಲು ಕಲ್ಲನ್ನು ನಯಗೊಳಿಸಲಾಗುತ್ತಿತ್ತು. ಇವರ ಆಳಿಕೆಯ ಆರಂಭಕಾಲದ ಶಾಸನಗಳು ಸರಳವಾದ ಕಿರುಶಾಸನಗಳು. ಆದರೆ ಮೊದಲನೆಯ ಸೋಮೇಶ್ವರ ಮತ್ತು ಅವನ ಅನಂತರ ಆಳಿದ ಅರಸರ ಶಾಸನಗಳು ಹೆಚ್ಚು ವಿಸ್ತಾರವಾಗಿವೆ. ಅನೇಕ ಶಾಸನಗಳ ಭಾಷೆ ಕನ್ನಡವಾದರೂ ಅದು ಬಹುಮಟ್ಟಿಗೆ ಸಂಸ್ಕೃತದಿಂದ ಪ್ರಭಾವಿತವಾದುದು. ದಾನ ಶಾಸನಗಳೇ ಹೆಚ್ಚಿನವಾದರೂ ರಣರಂಗದಲ್ಲಿ ಮಡಿದ ವೀರರ, ಆತ್ಮ ಬಲಿಗೈದ ಯೋಧರ, ಸತಿಗಳ, ಸಲ್ಲೇಖನ ವಿಧಿಗಳಿಂದ ಬಾಳನ್ನು ತ್ಯಜಿಸಿದ ಜೈನ ಆಚಾರ್ಯರ ಸ್ಮಾರಕ ಶಾಸನಗಳೂ ಬಹು ಸಂಖ್ಯೆಯಲ್ಲಿವೆ. ಹಲವು ಶಾಸನಗಳು ಸಾಹಿತ್ಯ ಮೌಲ್ಯಗಳನ್ನೊಳಗೊಂಡಿದೆ.

ಪ್ರಾರ್ಥನಾ ಶ್ಲೋಕಗಳಿಂದ ಆರಂಭವಾಗುವ ಈ ಶಾಸನಗಳು ರಾಜಶಾಸನಗಳಾಗಿದ್ದಲ್ಲಿ ಅರಸನ ಪ್ರಶಸ್ತಿ, ಆತನ ಸಾಹಸಗಳ ವರ್ಣನೆ ಹಾಗೂ ಹಲವಾರು ಸಂದರ್ಭಗಳಲ್ಲಿ ಅವನ ವಂಶಾವಳಿಗಳನ್ನು ಒಳಗೊಂಡಿರುತ್ತವೆ. ಅನಂತರ ಆತನ ಸಾಮಂತರಿಗೆ ಅಥವಾ ಪ್ರಾಂತ್ಯಾಧಿ ಕಾರಿಗಳಿಗೆ ಸಂಬಂಧಿಸಿದ ವಿವರಗಳು, ಅವರ ವರ್ಣನೆಗಳು ಇದ್ದು ಆ ಬಳಿಕ ತೇದಿಯ ಉಲ್ಲೇಖ ಬಂದು ಕೊನೆಗೆ ದಾನದ ವಿವರಗಳು ಕೊಡಲ್ಪಟ್ಟಿರುತ್ತವೆ. ಅರಸನನ್ನು ಸಮಸ್ತ ಭುವನಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣ ಎಂಬ ಬಿರುದುಗಳಿಂದ ಸೂಚಿಸಿದ ಅನಂತರ ಅರಸನ ಹೆಸರನ್ನು ಹೇಳುತ್ತದೆ. ಈ ಅರಸರ ವೈಯಕ್ತಿವೆನ್ನಬಹುದಾದ ಆಹವಮಲ್ಲ, ಜಗದೇಕಮಲ್ಲ, ತ್ರೈಲೋಕ್ಯಮಲ್ಲ, ಭುವನೈಕಮಲ್ಲ, ತ್ರಿಭುವನಮಲ್ಲ, ಭೂಲೋಕಮಲ್ಲ ಮುಂತಾದ ಬಿರುದುಗಳು ಹೆಸರಿನ ಜೊತೆಗೆ ಸೇರಿಸಲ್ಪಟ್ಟಿರುತ್ತವೆ.

ತೇದಿಗಳಲ್ಲಿ ಹೆಚ್ಚಿನ ವಿವರಗಳು ಲಭಿಸುತ್ತವೆ. ಶಕವರ್ಷವನ್ನು ಸಾಮಾನ್ಯವಾಗಿ ಅಂಕಿಗಳಲ್ಲಿ ಸೂಚಿಸಿ ಅನಂತರ ಸಂವತ್ಸರದ ಹೆಸರು, ತಿಂಗಳು, ಪಕ್ಷ, ತಿಥಿ ಮತ್ತು ವಾರ, ದಿನಗಳನ್ನು ಕೊಡುತ್ತವೆ. ಆರನೆಯ ವಿಕ್ರಮಾದಿತ್ಯ ತನ್ನ ಹೆಸರಿನಲ್ಲಿ ಚಾಳುಕ್ಯವಿಕ್ರಮ ಶಕೆಯನ್ನು ಆರಂಭಿಸಿ

ದಾಗಿನಿಂದ ಈ ನೂತನ ಶಕೆಯ ಉಲ್ಲೇಖ ಸಹ ಶಾಸನಗಳಲ್ಲಿ ಕಾಣಿಸಿಕೊಳ್ಳತೊಡಗುತ್ತದೆ. ಮೊದಲಿನ ಶಾಲಿವಾಹನ ಶಕೆಯನ್ನು ಸಾಮಾನ್ಯವಾಗಿ ಕೊಡುವುದಿಲ್ಲ. ಅನಂತರದ ಮುಮ್ಮಡಿ ಸೋಮೇಶ್ವರ, ಪೆರ್ಮಾಡಿ, ಮುಮ್ಮಡಿ ತೈಲ ಮತ್ತು ನಾಲ್ವಡಿ ಸೋಮೇಶ್ವರರು ತಮ್ಮ ತಮ್ಮ ಆಳಿಕೆಯ ವರ್ಷಗಳನ್ನು ಶಾಸನಗಳಲ್ಲಿ ಪ್ರಸ್ತಾಪಿಸುವ ಪದ್ಧತಿಯನ್ನು ಪ್ರಾರಂಭಿಸಿದರು. ಭೂಲೋಕಮಲ್ಲ ವರ್ಷ, ಜಗದೇಕಮಲ್ಲ ವರ್ಷ, ತ್ರೈಲೋಕ್ಯಮಲ್ಲದೇವ ವರ್ಷ ಮತ್ತು ತ್ರಿಭುವನಮಲ್ಲಸೋಮೇಶ್ವರದೇವ ವರ್ಷ ಎಂಬ ಈ ವರ್ಷಗಳನ್ನು ನೀಡುವಾಗ ಇವು ಅವರ ಆಳಿಕೆಯ ವರ್ಷಗಳೆಂದು ಪರಿಗಣಿಸ ಬೇಕು. ಚಾಳುಕ್ಯ ವಿಕ್ರಮ ಶಕೆ ಬಳಕೆಯಲ್ಲಿದ್ದುದು ಕೇವಲ ಒಂದು ಶತಮಾನದಷ್ಟು ಕಾಲ. ಐವತ್ತನೆಯ ವರ್ಷದ ಬಳಿಕ ಇದರ ಉಪಯೋಗ ಕಡಿಮೆಯಾಗುತ್ತ ಹೋಗಿದೆ.

ಈ ಕಾಲದ ಶಾಸನಗಳಲ್ಲಿ ದಾನ ನೀಡಿದವರ ಹಾಗೂ ಪಡೆದವರ ವರ್ಣನೆಗಳೂ ಭೌಗೋಳಿಕ ಪ್ರದೇಶಗಳ, ಗ್ರಾಮಗಳ, ಮಹಾಜನರ ವರ್ಣನೆಗಳೂ ಹೆಚ್ಚು ವಿವರಗಳೊಂದಿಗೆ ಕಾಣಿಸಿಕೊಳ್ಳುತ್ತವೆ.

ಮೊದಲಿನ ಗದ್ಯಶಾಸನಗಳಿಗೆ ಬದಲು ಗದ್ಯ ಪದ್ಯಮಿಶ್ರಿತ ಚಂಪೂ ಶೈಲಿಯ ಹಾಗೂ ಕಾವ್ಯಗುಣಗಳನ್ನು ಪಡೆದ ಶಾಸನಗಳು ಸಂಖ್ಯೆಯಲ್ಲಿ ಹೆಚ್ಚು. ಶಾಸನಗಳು ವಿಷಯ ನಿರೂಪಣೆಯ ವಸ್ತುನಿಷ್ಠ ಮಾಧ್ಯಮಗಳಾಗಿ ಉಳಿಯದೆ ಹೆಚ್ಚು ಕಲಾತ್ಮಕವಾಗಿ ಕಾವ್ಯಗಳಾಗಿವೆ. ರಚನೆಯಲ್ಲಿ ಸುಮಾರು ಒಂದೇ ಕಟ್ಟುಪಾಡಿಗೆ ಒಳಪಟ್ಟ ಈ ಶಾಸನಗಳಲ್ಲಿ ಕೆಲವು ಪ್ರತಿಭಾವಂತ ಕವಿಗಳ ಕೃತಿಗಳಾಗಿವೆ. ಅನ್ಯತ್ರ ತಿಳಿದುಬಾರದ ಅನೇಕ ಶಾಸನಕವಿಗಳು ಈ ಶಾಸನಗಳ ಮೂಲಕ ಬೆಳಕಿಗೆ ಬಂದಿದ್ದಾರೆ. ಕಮಳಾದಿತ್ಯ, ಕಂದರ್ಪ, ಕಪ್ಪಣಭಟ್ಟ, ನಾಗಮಯ್ಯ, ನಾಗವಾರ, ಜಿನವರ್ಮ ಪಂಡಿತ, ಕವಿರಾಜವಲ್ಲಭ, ಗೋವಿಂದ, ಮಲ್ಲಿನಾಥ, ಬಸವಣಯ್ಯ, ರಾಜವಲ್ಲಭ ಕನ್ನಪಯ್ಯ, ರುದ್ರಭಟ್ಟ, ಹರಿಯಣ್ಣ, ವೈಜನಾಥ, ನಾಗದೇವ, ಕರ್ಪರಸ, ಸಂಧಿವಿಗ್ರಹಿ ದಾಮರಾಜ, ಮಾಳಪಯ್ಯ, ಮಾಧವಭಟ್ಟ, ನಾಗಾರ್ಜುನ ಪಂಡಿತ, ಮಲ್ಲ, ಚಂದ್ರಭಟ್ಟ, ಶ್ರೀಕಂಠಸೂರಿ, ಮಲ್ಲಿಕಾರ್ಜುನ ಭಟ್ಟ, ಆಚರಾಜ, ಮಲ್ಲಿದೇವ, ಲಕ್ಷ್ಮಣ, ನಾರಣದೇವ, ಚಟ್ಟಪಾರ್ಯ, ಶಾಂತಿನಾಥ, ಮರ್ದ್ದಿಮಯ್ಯ, ಭಾಸ್ಕರ, ಮಾಕಣ ಪಂಡಿತ, ಸಾಂತ ಮಹಂತ, ಬಲದೇವ, ಸೋಮೇಶ್ವರಭಟ್ಟ, ರೇಚಣಭಟ್ಟ, ಸರ್ವಜ್ಞ ಪಟ್ಟವರ್ಧನ, ಸೂರಿಲಿಯ ಮುಖ್ಯ ಪಂಡಿತ, ಕಲಿದೇವ ಪಂಡಿತ, ಉದಯ ಕಲ್ಪ ಮುಂತಾದ ಅನೇಕ ಶಾಸನ ಕವಿಗಳು ಈ ಕಾಲದವರು.

**ನಾಣ್ಯಗಳು:** ಕಲ್ಯಾಣ ಚಾಳುಕ್ಯರ ಕಾಲಕ್ಕೆ ಭಿನ್ನ ಮೌಲ್ಯಗಳನ್ನುಳ್ಳ ವೈವಿಧ್ಯಮಯ ನಾಣ್ಯಗಳು ಚಲಾವಣೆಯಲ್ಲಿದ್ದುವು. ದ್ರಮ್ಮ, ಗದ್ಯಾಣ, ಪೊನ್, ಪಣ, ಸುವರ್ಣ, ಸಾಹಣಿಕಾಟಿ, ಸಲಿಕೆ, ಗುಲಿಕೆ, ಕಾಹಿಣಿ, ಮಾಡ, ವೀಸ, ಅಡ್ಡ, ಪ್ರತಾಪ, ಧರಣ ಮುಂತಾದ ನಾಣ್ಯಗಳ ಹೆಸರುಗಳು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ದುಸರ ಗದ್ಯಾಣ, ಕಟಕಗದ್ಯಾಣ, ಪೆರ್ಗ್ಗಡೆ ಗದ್ಯಾಣ ಇವುಗಳ ಮೌಲ್ಯಗಳು ಹೆಚ್ಚಿನವಾಗಿದ್ದಿರಬಹುದು. ಲಕ್ಕುಂಡಿಯಲ್ಲೂ ಸೂಡಿಯಲ್ಲೂ ಬೆಳ್ಳಿಗಮ್ಮಟವಿತ್ತು (ಬೆಳ್ಳಿಯ ನಾಣ್ಯಗಳ ಕಮ್ಮಟ). (ಬಿ.ಆರ್.ಜಿ.)

ಗದ್ಯಾಣವೆಂಬುದು ಚಿನ್ನದ ನಾಣ್ಯ. ಗದ್ಯಾಣಗಳಲ್ಲಿ ವಿವಿಧ ರೀತಿಗಳಿದ್ದುವು. ಟಂಕಶಾಲೆಯ ಹೆಸರನ್ನು ಗದ್ಯಾಣದ ಜೊತೆ ಸೇರಿಸುವುದು ಈ ಕಾಲದಲ್ಲಿ ಪ್ರಾರಂಭವಾಯಿತು. ಲೊಕ್ಕಿ ಅಥವಾ ಲೊಕ್ಕಿಗುಂಡಿ ಗದ್ಯಾಣವೆಂಬುದು ಲೊಕ್ಕಿಗುಂಡಿಯಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಾದ ಗದ್ಯಾಣ. ಕಟಕ ಗದ್ಯಾಣ, ಕಟಕ ಪ್ರಿಯ ಗದ್ಯಾಣ, ವರ್ತಕ ಲೊಕ್ಕಿ ಗದ್ಯಾಣ ಮುಂತಾದವುಗಳು ಚಾಳುಕ್ಯರ ಶಾಸನಗಳಲ್ಲಿ ಕಾಣಬರುತ್ತವೆ. ಇದೇ ರೀತಿಯಲ್ಲಿ ನವಿಲಚ್ಚಿನ ಪೊನ್, ಲೊಕ್ಕಿ ಪೊನ್ ಮುಂತಾದ ನಾಣ್ಯಗಳೂ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಇವುಗಳ ಖಚಿತ ಸ್ವರೂಪವೇನೆಂಬುದು ತಿಳಿದಿಲ್ಲ. ಸೂಡಿ ಎಂಬಲ್ಲಿ ಒಂದು ಟಂಕಸಾಲೆ ಇತ್ತು. ಕಮ್ಮಟ, ಕಮ್ಮಟದ ಆಣಿ, ಅಚ್ಚು, ಅಚ್ಚಿನ ಮೊಳೆ, ಉಂಡಿಗೆ ಮುಂತಾದ ಪದಗಳು ಶಾಸನಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. ಇದರಿಂದ ನಾಣ್ಯಗಳನ್ನು ಅಚ್ಚು ಮಾಡುವ ಕಾರ್ಯ ವ್ಯವಸ್ಥಿತವಾಗಿ ಸಾಗುತ್ತಿತ್ತು ಎಂದು ತಿಳಿದುಬರುತ್ತದೆ. ಕಲ್ಯಾಣದ ಚಾಳುಕ್ಯರ ನಾಣ್ಯಗಳು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿವೆ. ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಕೋಡೂರು ಎಂಬಲ್ಲಿ ದೊರಕಿರುವ ಚಾಳುಕ್ಯರ ನಾಣ್ಯರಾಶಿಯೊಂದು ಬಹು ಶ್ರೀಮಂತವಾದುದು. ಇದರಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚು ನಾಣ್ಯಗಳು ಮಡಕೆಯಲ್ಲಿ ದೊರಕಿದವು. ಇದರ ಆಧಾರದ ಮೇಲೆ ಚಾಳುಕ್ಯರ ನಾಣ್ಯಗಳ ವಿಷಯಗಳಲ್ಲಿ ವಿಶೇಷ ಮಾಹಿತಿ ದೊರಕಿವೆ.

ಈ ಕಾಲದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಮಾತ್ರ ಬೆಳಕಿಗೆ ಬಂದಿವೆ. ಇವು ಮೊಳೆಯಿಂದ ಒತ್ತಿದ ಚಿಹ್ನೆಗಳುಳ್ಳ ಪಂಚ್ ನಾಣ್ಯಗಳು. ದುಂಡನೆಯ ಆಕಾರದ ಈ ನಾಣ್ಯಗಳಿಗೆ ಮುಮ್ಮುಖದಲ್ಲಿ ಮಾತ್ರ ಬರೆಹವುಂಟು. ಹಿಮ್ಮುಖ ಖಾಲಿಯಾಗಿ ಇರುತ್ತದೆ. ಸಾಮಾನ್ಯವಾಗಿ ಈ ನಾಣ್ಯಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರ, ರಾಜನ ಹೆಸರು, ಸೂರ್ಯ, ಚಂದ್ರ ಆನೆ, ಸಿಂಹ ಮುಂತಾದವು ಮುದ್ರಿತವಾಗಿರುತ್ತವೆ. ತೆಳುವಾದ ನಾಣ್ಯದ ಮೇಲೆ ಈ ರೀತಿ ಅನೇಕ ಪಂಚ್‌ಗಳು ಮಾಡಲ್ಪಟ್ಟಿರುವುದರಿಂದ ಇವುಗಳು ಬಟ್ಟಲಾಕಾರದಲ್ಲಿರುತ್ತವೆ.

ತ್ರೈಲೋಕ್ಯಮಲ್ಲ ಒಂದನೆಯ ಸೋಮೇಶ್ವರನ ಚಿನ್ನದ ನಾಣ್ಯಗಳು ಸುಮಾರು ಒಂದಂಗುಲ ವ್ಯಾಸದವು. ಇವುಗಳ ತೂಕ 58ಗ್ರೇನ್‌ಗಳು. ಇವುಗಳಲ್ಲಿ ಒಂಬತ್ತು ಪಂಚ್ ಮುದ್ರಿತ ಚಿಹ್ನೆಗಳಿವೆ. ಐದು ಸಿಂಹ, ಎರಡು ಶ್ರೀ ಎಂಬ ಕನ್ನಡ ಅಕ್ಷರ, ಮಿಕ್ಕೆರಡು ತ್ರೇಲೋ ಮತ್ತು ಮಲ್ಲಿ ಎಂಬ ಕನ್ನಡ ಬರೆಹ. ಇಮ್ಮಡಿ ಸೋಮೇಶ್ವರ ಭುವನೈಕಮಲ್ಲನ ನಾಣ್ಯಗಳಲ್ಲಿಯೂ ಒಂಬತ್ತು ಪಂಚ್‌ಗಳಿವೆ. ಅವುಗಳಲ್ಲಿ ಐದು ಸಿಂಹ, ಎರಡು ಶ್ರೀ ಎಂಬ ಅಕ್ಷರ, ಮಧ್ಯದಲ್ಲಿ ಕಮಲದ ಹೂವು, ಅದರ ಮೇಲೆ ಭುವನೈಕ ಎಂಬ ಬರೆಹ ಕಾಣುತ್ತದೆ. ಎರಡನೆಯ ಜಯಸಿಂಹನ ಚಿನ್ನದ ನಾಣ್ಯಗಳು ಸು. 58 ಗ್ರೇನ್ ತೂಗುತ್ತವೆ. ಇವುಗಳ ವ್ಯಾಸ 0.6 ರಿಂದ 0.8. ಒಂದು ನಮೂನೆಯ ನಾಣ್ಯದಲ್ಲಿ ಒಂಬತ್ತು ಪಂಚ್‌ಗಳಿವೆ. ಇದರಲ್ಲಿ ಐದು ಸಿಂಹ, ಎರಡು ಶ್ರೀ ಅಕ್ಷರ, ಜಯ ಮತ್ತು ದೇವ ಎಂಬ ಕನ್ನಡ ಬರೆಹಗಳಿವೆ. ಇದೇ ರೀತಿಯ ಕೆಲವು ನಾಣ್ಯಗಳಲ್ಲಿ ಸಿಂಹಗಳಿವೆ ಬದಲಾಗಿ ಹಂದಿ ಅಥವಾ ಆನೆ ಇರುವುದೂ ಉಂಟು. 2ನೆಯ ಜಗದೇಕಮಲ್ಲನ ಚಿನ್ನದ ನಾಣ್ಯಗಳು ಅನೇಕ ನಮೂನೆಗಳಲ್ಲಿ ದೊರಕಿವೆ. ಕೋಡೂರು ನಾಣ್ಯರಾಶಿಯಲ್ಲಿ 67–69 ಗ್ರೇನ್ ತೂಕದ ನಾಣ್ಯಗಳಿವೆ. ಇವುಗಳ ಮೇಲೆ ಜಗ, ಜಗದೇ ಅಥವಾ ಜಗದೇಕಮಲ್ಲ ಎಂಬ ಕನ್ನಡ ಲಿಪಿಯ ಬರೆಹಗಳು ಪಂಚ್ ಮಾಡಲ್ಪಟ್ಟಿವೆ. ನಾಣ್ಯದ ಮಧ್ಯಭಾಗದಲ್ಲಿ ದೇವಾಲಯದ ಗೋಪುರದ ಚಿತ್ರವಿದೆ. ಇದರ ಎರಡು ಕಡೆಗಳಲ್ಲಿಯೂ ಶ್ರೀ ಎಂಬ ಅಕ್ಷರವಿದೆ. ಕೆಲವು ನಾಣ್ಯಗಳಲ್ಲಿ ಸ್ವಸ್ತಿಕ, ಚೌರಿ, ಶಂಖಗಳೂ ಕಾಣಬರುತ್ತವೆ.

ಕೋಡೂರು ನಾಣ್ಯರಾಶಿಯಲ್ಲಿ ಕಾಣಬರುವ ನಾಣ್ಯವೊಂದು ಅಯ್ಯಣನಿಗೆ ಸೇರಿದ್ದಿರಬಹುದೆಂದೂ ಊಹೆ. ಇದರಲ್ಲಿ ಯಣ ಎಂಬ ಕನ್ನಡ ಬರೆಹವಿದೆ. ಮತ್ತೊಂದು ನಾಣ್ಯದಲ್ಲಿ ದಶವರ್ಮ ಎಂಬ ಬರೆಹವಿದೆ. ಈ ನಾಣ್ಯ ಚಾಳುಕ್ಯ ರಾಜಕುಮಾರ ದಶವರ್ಮನದ್ದಿರ ಬೇಕೆಂದು ಹೇಳಬಹುದು. ಆರನೆಯ ವಿಕ್ರಮಾದಿತ್ಯನ ರಾಣಿ ಲಕ್ಷ್ಮಾದೇವಿಯದೆಂದು ಹೇಳಲಾದ ಕೆಲವು ನಾಣ್ಯಗಳು ದೊರಕಿವೆ. ಇವು ಚಾಳುಕ್ಯ ನಾಣ್ಯಗಳಂತೆಯೇ ಇವೆ. ಮಧ್ಯದಲ್ಲಿ ಕಮಲದ ಹೂವು. ಎರಡು ಪಕ್ಕಗಳಲ್ಲಿ ಶ್ರೀ ಎಂಬ ಅಕ್ಷರ, ಕನ್ನಡ ಲಿಪಿಯಲ್ಲಿ ಶ್ರಿ ಲಷುಮಾ ಎಂಬ ಬರೆಹ ಮತ್ತು ಶಂಖ ಈ ನಾಣ್ಯಗಳಲ್ಲಿ ಕಾಣಬರುತ್ತವೆ. ಭುಜಬಲ ಎಂಬ ಬರೆಹವಿರುವ ಕೆಲವು ನಾಣ್ಯಗಳು ಕಲ್ಯಾಣದ ಚಾಳುಕ್ಯರದೆಂದು ಕೆಲವರ ಅಭಿಪ್ರಾಯ.

ರಾಜಗಜಕೇಸರಿ ಮತ್ತು ದಾಯಗಜಕೇಸರಿ ಎಂಬ ಕನ್ನಡ ಬರೆಹವುಳ್ಳ ನಾಣ್ಯಗಳು ವಿಶೇಷವಾಗಿ ಆಂಧ್ರಪ್ರದೇಶದಲ್ಲಿ ದೊರಕಿವೆ. ಇವು ಚಾಳುಕ್ಯ ಸಾಮಂತರ ನಾಣ್ಯಗಳು ಎಂದು ಭಾವಿಸಲಾಗಿದೆ. ರಾಮದುರ್ಗದಲ್ಲಿ ದೊರಕಿದ ಬರಮಭೂಪಾಲನ ನಾಣ್ಯಗಳಲ್ಲಿ ಶ್ರೀ ನಿಗಲಂಕಮಲ್ಲ ದಂಡಿನಗೋವ ಎಂಬ ಬರೆಹವಿದೆ. ಇವನು ಚಾಳುಕ್ಯ ಸಾಮಂತ. ಸಾತಾರಾ ಜಿಲ್ಲೆಯ ವಲ್ಯೆ ಎಂಬಲ್ಲಿ ದೊರಕಿರುವ ನಾಣ್ಯಗಳಲ್ಲಿ ಕನ್ನಡ ಬರೆಹವಿರುವುದ ರಿಂದ– ಇವು ಚಾಳುಕ್ಯ ಸಾಮಂತರವೆಂದು ಭಾವಿಸಲಾಗಿದೆ. (ಎ.ವಿ.ಎನ್.)

**ವಾಸ್ತುಶಿಲ್ಪ: ಹಿಂದಿನ ಅಧ್ಯಯನಗಳು:** ಕಲ್ಯಾಣ ಚಾಳುಕ್ಯರ ವಾಸ್ತುಶಿಲ್ಪಕಲೆಯ ಅಧ್ಯಯನದ ಪ್ರಾಚೀನತೆ ಸು. 140 ವರ್ಷಕ್ಕೂ ಹಿಂದಕ್ಕೆ ಹೋಗುತ್ತದೆ. ಇಷ್ಟೊಂದು ವರ್ಷಗಳ ಹಿಂದಿನಿಂದ ಈ ಕಾಲದ ವಾಸ್ತುಶಿಲ್ಪ ಮಾಹಿತಿಗಳು ಹೇರಳವಾಗಿ ವಿಭಿನ್ನ ಲೇಖನ, ವರದಿ, ಕೃತಿಗಳಲ್ಲಿ ಪ್ರಕಟವಾಗಿವೆ. ಸರ್ವೇಕ್ಷಣೆ, ಸಂಶೋಧನೆ, ಅಧ್ಯಯನದ ಪರಿಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಇಲ್ಲಿಯವರೆಗೆ ಈ ಕಾಲದ ವಾಸ್ತು–ಶಿಲ್ಪಕಲೆಯ ಬಗ್ಗೆ ಮಹತ್ವದ ಕೊಡುಗೆ ಯನ್ನು ಅನೇಕ ವಿದ್ವಾಂಸರು ನೀಡಿದ್ದು, ಅಂಥವರಲ್ಲಿ ಫಿಗಸ್, ನೈಲ್ ಮತ್ತು ಬಿಗ್ಸ್ ಮೊದಲಿಗರಾಗಿ ಕಾಣುವರು (1866). ತದನಂತರದಲ್ಲಿ ಟೇಲರ್ ಮತ್ತು ಜೇಮ್ಸ್ ಫರ್ಗ್ಯೂಸನ್ (1876). ಈ ಕಾಲದ ದೇವಾಲಯ ವಾಸ್ತುಶಿಲ್ಪಕ್ಕೆ ಚಾಳುಕ್ಯವೆಂಬ ಹೆಸರನ್ನು ಕೊಟ್ಟವರೇ ಮೊಟ್ಟ ಮೊದಲು ಫರ್ಗ್ಯೂಸನ್. ಉತ್ತರ ಭಾರತ ಮತ್ತು ದಕ್ಷಿಣ ಭಾರತ ವಾಸ್ತುಶಿಲ್ಪ ಕಲೆಯನ್ನು ಮೊದಲಿಗೆ ವಿಭಾಗಿಸಿದರು. ಮುಂದೆ ವಾಸ್ತುತಜ್ಞ ಅಲೆಗ್ಸಾಂಡರ್ ರಿ (1896), ಹೆನ್ರಿ ಕಸಿನ್ಸ್ (1900–26) ಇವರು ಈ ವಿಷಯದ ಬಗ್ಗೆ ಪ್ರಮುಖ ಕೊಡುಗೆಗಳನ್ನು ನೀಡಿದರು. ಪಿ.ಕೆ.ಆಚಾರ್ಯ (1918), 1931ರ ಅನಂತರ ಗುಲಾಮ್ ಯಾಜ್ದಾನಿ (1941), ಎಂ.ಎಚ್.ಕೃಷ್ಣ (1928–1947), ಸ್ಟೆಲ್ಲಾ ಕ್ರಾಮರಿಷ್ (1946) ಇವರುಗಳದ್ದು ಅಮೋಘ ಕೊಡುಗೆ. ಈ ಕಾಲದ ದೇವಾಲಯ ಮಾದರಿಯನ್ನು ಕ್ರಾಮರಿಷ್ ಅವರು ವೇಸರ ಎಂದು ಹೆಸರಿಸಿದರು. ಎಂ.ಎ.ಧಾಕಿ (1946, 1977), ಅ.ಸುಂದರ (1974–2007), ದೇಗಲೂರಕರ್ (1974), ಪಿ.ಕೆ.ಶರ್ಮ, ಸೌಂದರರಾಜನ್, ಸಿ.ಎಸ್.ಪಾಟೀಲ (1992), ಆಡಂ ಹಾರ್ಡಿ (1995), ಎಸ್.ರಾಜಶೇಖರ, ರು.ಮ.ಷಡಕ್ಷರಯ್ಯ (1985–2007), ಶ್ರೀನಿವಾಸ ಪಾಡಿಗಾರ (1986–2007), ಗೆರಾಲ್ಡ್ ಫಾಕಿಮಾ (2004) ಮುಂತಾದವರ ಕೊಡುಗೆ ಅಮೂಲ್ಯವೆನಿಸಿದೆ. ಎಂ.ಎ.ಧಾಕಿ ಇನ್ನಿತರರ ಸಂಪಾದನೆಯಲ್ಲಿ ಹಿಂದಿನ ಅನೇಕರ ಪ್ರಯತ್ನ ದಿಂದ ಸುಮಾರು ಎರಡು ನೂರು ದೇವಾಲಯಗಳ ಅಧ್ಯಯನ ಒಂದೆಡೆ ಬರಲು ಕಾರಣವಾಗಿದೆ. ದೇವಾಲಯಗಳ ತಳಪಾಯ, ಶಿಖರದ ಎತ್ತರ, ಅಗಲದ ರಚನೆಯ ವಿಸ್ತಾರದ ಬಗ್ಗೆ ಹೆಚ್ಚು ಮಾಹಿತಿ ನೀಡುವ ಇತ್ತೀಚಿನ ಕೃತಿ

ಗೆರಾಲ್ಡ್ ಫಾಕಿಮಾ ಅವರದು. ಅ.ಸುಂದರ, ಷಡಕ್ಷರಯ್ಯ, ಭಟಸೂರಿ, ಶ್ರೀನಿವಾಸ ಪಾಡಿಗಾರ, ರಮೇಶ, ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಬಿ.ಜಯಮ್ಮ, ಮಹಾದೇವ, ವಾಸುದೇವ, ಉಷಾ ಬೆಂಡೆ, ಸಿ.ಎಸ್.ಹಸಬಿ, ಕೋಟಿ ಮಲ್ಲಿಕಾರ್ಜುನ ಮುಂತಾದವರು ಕರ್ನಾಟಕದ ವಿಭಿನ್ನ ಪ್ರದೇಶಗಳ ಈ ಕಾಲದ ಅನೇಕ ದೇವಾಲಯಗಳ ಬಗ್ಗೆ ಅನೇಕ ಬಿಡಿ ಲೇಖನಗಳನ್ನು ಅಥವಾ ಮಹಾಪ್ರಬಂಧಗಳ ಮೂಲಕ ಹೊರತಂದಿರುವರು.

ಶಿಲೆ: ಈ ಕಾಲದ ದೇವಾಲಯಗಳ ನಿರ್ಮಾಣಕ್ಕೆ ಮೂರು ರೀತಿಯ ವಸ್ತುಗಳನ್ನು ಬಳಸಲಾಗಿದೆ: (1) ಇಟ್ಟಿಗೆ, (2) ಕೆಂಪು ಉಸುಕು ಶಿಲೆ (3) ಕಪ್ಪು ಮಿಶ್ರಿತ ನೀಲಿಛಾಯೆಯ ಡಾಲರೈಟ್ ಅಥವಾ ಕ್ಲೋರೇಟ್ ಶಿಷ್ಟ್ ಅಥವಾ ಬಿಳಿಯ ಸುಣ್ಣದ ಶಿಲೆ.

ತಳವಿನ್ಯಾಸ: ತಳವಿನ್ಯಾಸದಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಅರ್ಧಮಂಟಪ ಅಥವಾ ಅಂತರಾಳ ಅಥವಾ ಸುಕನಾಸಿ, ನವರಂಗ ಅಥವಾ ಸಭಾಮಂಟಪ, ಮಹಾಮಂಟಪ ಮತ್ತು ಮುಖಮಂಟಪಗಳು ಒಳಗೊಂಡಿವೆ. ಗರ್ಭಗೃಹಗಳ ಸಂಖ್ಯೆಗಳಿಗನುಗುಣವಾಗಿ ಕೂಟಗಳನ್ನು ಹೆಸರಿಸಲಾಗಿದೆ. ಒಂದು ಗರ್ಭಗೃಹವುಳ್ಳದ್ದನ್ನು ಏಕಕೂಟ ಮತ್ತು ಮೂರು ಗರ್ಭಗೃಹಗಳುಳ್ಳದ್ದನ್ನು ತ್ರಿಕೂಟ ಮಾದರಿಯ ದೇವಾಲಯಗಳೆಂದು ಹೆಸರಿಸಿದ್ದು ಇವು ಹೆಚ್ಚಿನ ಸಂಖ್ಯೆಯಲ್ಲಿವೆ. ಉಳಿದ ಮಾದರಿಯವು ವಿರಳವಾಗಿವೆ. ದ್ವಿಕೂಟ ಮಾದರಿಯಲ್ಲಿ ಎರಡು ಗರ್ಭಗೃಹಗಳನ್ನು ಏಕಸಾಲಿನಲ್ಲಿ (ಮುಧೋಳದ ಮಲ್ಲಿಕಾರ್ಜುನ) ಅಥವಾ ಎದುರು ಬದುರಾಗಿ ಕಟ್ಟಲಾಗಿದೆ (ಲಕ್ಕುಂಡಿ ಕಾಶಿವಿಶ್ವೇಶ್ವರ, ಸವಡಿಯ ನಾರಾಯಣ, ಮಕುಟ ದೇವಾಲಯ). ತ್ರಿಕೂಟ ಮಾದರಿಯಲ್ಲಿ ಮೂರು ಗರ್ಭಗೃಹಗಳನ್ನು ಏಕಸಾಲಿನಲ್ಲಿ ಅಥವಾ ಮೂರು ಗರ್ಭಗೃಹಗಳನ್ನು ಮೂರು ಕಡೆಗಳಲ್ಲಿ ಹೊಂದಿಸಿ ಕಟ್ಟಲಾಗಿರುತ್ತದೆ. ತಲಾ ಒಂದು ಗರ್ಭಗೃಹಕ್ಕೆ ಹೆಚ್ಚಾಗಿ ಅರ್ಧಮಂಟಪ ಅಥವಾ ಅಂತರಾಳ ಅಥವಾ ಶುಕನಾಸಿಗಳಿರುತ್ತವೆ. ನಡುವೆ ಏಕ ಸಭಾಮಂಟಪವಿರುತ್ತದೆ. ಎರಡು ಗರ್ಭಗೃಹಗಳ ನಡುವೆ ಅಂದರೆ ಸಭಾಮಂಟಪದಲ್ಲಿ ಒಂದು ಗರ್ಭಗೃಹ ಅಳವಡಿಸಲಾಗಿದೆ (ದೇಗಾವಿಯ ಕಮಲನಾರಾಯಣ). ತ್ರಿಕೂಟ ಮಾದರಿಯ ದೇವಾಲಯಗಳಲ್ಲಿ ಮೂರು ಗರ್ಭಗೃಹಗಳ ನಡುವೆ ತೆರೆದ ಸಭಾಮಂಟಪವಿರುವ ಮಾದರಿ ವಿರಳವಾಗಿ ಕಾಣುತ್ತದೆ.

ಒಂದೇ ಅಧಿಷ್ಠಾನದ ಮೇಲೆ (ಅಬ್ಬಲೂರಿನ ಬಸವೇಶ್ವರ) ಚತುಷ್ಕೂಟ ಮಾದರಿಯಲ್ಲಿ ಒಂದೊಂದೆ ದಿಕ್ಕಿಗೆ ನಾಲ್ಕುಗರ್ಭಗೃಹಗಳಿದ್ದು ತಲಾ ಒಂದಕ್ಕೆ ಒಂದು ಅಂತರಾಳ ಅಥವಾ ಅರ್ಧಮಂಟಪವಿದೆ. ಇವೆಲ್ಲಕ್ಕೂ ಕೇಂದ್ರದಲ್ಲಿ ಒಂದು ಸಭಾಮಂಟಪವಿದೆ (ನೀಲಗುಂದ ಭೀಮೇಶ್ವರ). ಪಂಚಕೂಟ ಮಾದರಿಯಲ್ಲಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗರ್ಭಗೃಹಗಳು, ತಲಾ ಒಂದಕ್ಕೆ ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳು ನಡುವಿನಲ್ಲಿ ಒಂದು ಚೌಕೋನದ ಗರ್ಭಗೃಹವಿದೆ (ಶಿರವಾಳದ ಸಿದ್ಧಲಿಂಗೇಶ್ವರ ಮತ್ತು ಕಲ್ಲೂರಿನ ಬಸವೇಶ್ವರ). ಮೂಲ ಗರ್ಭಗೃಹ–ಅಂತರಾಳದ ಮುಂದಿನ ಸಭಾಮಂಟಪದ ಇಕ್ಕೆಲಗಳಲ್ಲಿ ತಲಾ ಒಂದು ಕಡೆ ಎರಡೆರಡು ಗರ್ಭಗೃಹಗಳು ಒಳಗೊಂಡಿವೆ (ಉಜ್ಜಯಿನಿ ಮರುಳಸಿದ್ಧ). ಇನ್ನೊಂದು ಮಾದರಿಯಲ್ಲಿ ಒಂದೇ ಸಾಲಿನಲ್ಲಿ ಮೂರು ಮತ್ತು ಇವುಗಳ ಮುಂದಿನ ಮೂಲೆಗಳಲ್ಲಿ ಒಂದೊಂದು ಗರ್ಭಗೃಹಗಳಿವೆ (ಹುಂಚದ ಪಂಚಕೂಟ ಬಸದಿ). ಷಟ್‌ಕೂಟ ಮಾದರಿಯ ದೇವಾಲಯಗಳು ವಿರಳವಾದರೂ ಇಲ್ಲಿ ಆರು ಗರ್ಭಗೃಹ–ಅಂತರಾಳದ ಮುಂದಿನ ಸಭಾಮಂಟಪದ ಇಕ್ಕೆಲಗಳಲ್ಲಿ ಒಂದು ನಡುವೆ ಮೂಲ ಗರ್ಭಗೃಹವಿದೆ (ಇಂಗಳ್ಗಿ), ನವಕೂಟ ಮಾದರಿಯಲ್ಲಿ ಕುಕ್ಕನೂರಿನ ನವಲಿಂಗೇಶ್ವರ ದೇವಾಲಯವಿದೆ.

ಗರ್ಭಗೃಹದಲ್ಲಿ ಒಂದೇ ಮೂರ್ತಿಯಿರುವುದು ಸಾಮಾನ್ಯ. ಏಕ ಪೀಠದಲ್ಲಿ ತ್ರಿಮೂರ್ತಿಗಳ ಪ್ರತಿಷ್ಠಾಪನೆ ವಿರಳ (ನಾಗಾವಿ ತ್ರೈಪುರುಷ ಇತ್ಯಾದಿ). ಆಯತಾಕಾರದ ಗರ್ಭಗೃಹ ಮತ್ತು ಅಂತರಾಳ ಮತ್ತು ಮುಖಮಂಟಪದ ವಿನ್ಯಾಸವೂ ಅಪರೂಪ (ಬೇವೂರಿನ ತ್ರೈಪುರುಷ). ಗರ್ಭಗೃಹಗಳ ಒಳ ಇಕ್ಕೆಲಗಳಲ್ಲಿ ದೇವಕೋಷ್ಠಗಳಿರುವುದು ವಿರಳ (ನಾಗಾವಿ ತ್ರೈಪುರುಷ, ಕುರವತ್ತಿ ಮಲ್ಲಿಕಾರ್ಜುನ ಇತ್ಯಾದಿ). ಗರ್ಭಗೃಹಕ್ಕೆ ನಾಲ್ಕು ಅಂತರಾಳ ಮತ್ತು ನಾಲ್ಕು ಪ್ರವೇಶದ್ವಾರಗಳು, ನಡುವೆ ಪ್ರದಕ್ಷಿಣಾಪಥವಿರುವ ಅಪರೂಪದ ದೇವಾಲಯವನ್ನು ಸರ್ವತೋಭದ್ರವೆನ್ನುವರು (ಉಣಕಲ್ಲು ಚಂದ್ರಮೌಳೇಶ್ವರ, ಕಾಳಗಿ).

ಬೇವೂರಿನ ರಾಮೇಶ್ವರ ದೇವಾಲಯದಲ್ಲಿ ಆರು ಸಾಲುಗಳಲ್ಲಿ ಒಟ್ಟು 32 ಸ್ತಂಭಗಳುಳ್ಳ ಸಭಾಮಂಟಪದ ನಡುವೆ 1ಮೀ ಆಳದ ಚೌಕಾದ ಗುಂಡಿಯಿದ್ದು ಇದನ್ನು ಯಜ್ಞಕುಂಡ ಎಂದು ತಿಳಿಯಲಾಗಿದೆ. ನಾಗಾವಿಯ ತ್ರೈಪುರುಷ ದೇವಾಲಯದಲ್ಲಿ 64 ಕಂಬಗಳುಳ್ಳ ಸಭಾಮಂಟಪದಲ್ಲಿಯೂ ಇಂತಹ ಒಂದು ಗುಂಡಿಯಿದೆ. ಇದಕ್ಕೆ ನೆಲದಡಿಯಲ್ಲಿ ತೂಬನ್ನು ಅಳವಡಿಸಿರುವಂತೆ ಕಾಣುತ್ತದೆ. ಇಲ್ಲಿ ಎರಡು ಮಾದರಿಯ ಸ್ತಂಭಗಳಿವೆ. ಕೆಲವು ದೇವಾಲಯಗಳಲ್ಲಿ ಸಭಾಮಂಟಪ ಆಯತಾಕಾರದಲ್ಲಿದ್ದು ನಾಲ್ಕು ಸಾಲುಳ್ಳ ಸ್ತಂಭಗಳಿವೆ. ನಡುವಿನ ಎರಡು ಸಾಲುಗಳಲ್ಲಿ 12 ಸ್ತಂಭಗಳಿದ್ದರೆ ಹಿಂದಿನ ಸಾಲುಗಳಲ್ಲಿ ತಲಾ ಒಂದರಲ್ಲಿ ನಾಲ್ಕು ಕಂಬಗಳಿರುವುದು ವಿರಳ (ತಿಳವಳ್ಳಿಯ ಕಾಂತೇಶ್ವರ). ಕೆಲವು ದೇವಾಲಯಗಳ ಗರ್ಭಗೃಹದ ಹೊರ ತಳಪಾಯ ನಕ್ಷತ್ರಾಕಾರದಲ್ಲಿ (ಡಂಬಳದ ದೊಡ್ಡ ಬಸವಣ್ಣ), ಅರೆ ನಕ್ಷತ್ರಾಕಾರ (ನೀಲಗುಂದದ ನೀಲಕಂಠೇಶ್ವರ, ಮಹೇಶ್ವರ ಮಹಾದೇವ, ಚಟ್ಟರಕಿಯ ದತ್ತಾತ್ರೆಯ, ಬಸವನ ಬಾಗೇವಾಡಿಯ ಬಸವೇಶ್ವರ ಇತ್ಯಾದಿ) ದಲಿವೆ. ಬಿಲ್ರಾಪುರದ ಕೊಪ್ಪೇಶ್ವರದ ಎದುರಿನ ಮಂಟಪ ನಕ್ಷತ್ರಾಕಾರದಲ್ಲಿರುವುದು ಗಮನೀಯ. ಕೆಲವು ದೇವಾಲಯಗಳ ಮಹಾ ಮಂಟಪಗಳು ವಿಶಿಷ್ಟ ರೀತಿಯಲ್ಲಿವೆ. ನರೇಗಲ್ಲಿನ ಶಾಂತೇಶ್ವರ ದೇವಾಲಯದ ಮಹಾಮಂಟಪವು ಸಭಾಮಂಟಪದ ಮುಂದಿದೆ. ಈ ಮಹಾಮಂಟಪದ ಇಕ್ಕೆಲಗಳಲ್ಲಿ ಆಯತಾಕಾರದ ವಿಶಾಲ ಕೋಣೆಗಳಿದ್ದು ತಲಾ ಒಂದಕ್ಕೆ ಎರಡು ಪ್ರವೇಶ ದ್ವಾರಗಳಿವೆ. ಇದಲ್ಲದೆ ತಲಾ ಒಂದರಲ್ಲಿ ಸಾಲಾಗಿ 24 ತೀರ್ಥಂಕರರ ಶಿಲ್ಪಗಳ ಪೀಠಗಳಿವೆ.

ಪ್ರವೇಶ: ದೇವಾಲಯಗಳು ಅಥವಾ ಬಸದಿಗಳು ಸಾಮಾನ್ಯವಾಗಿ ಪೂರ್ವ ಉತ್ತರಕ್ಕೆ ಮುಖವಾಗಿವೆ. ದೇವಾಲಯಗಳಿಗೆ ಪ್ರವೇಶಗಳು ಹೆಚ್ಚಾಗಿ ಒಂದು ಅಥವಾ ಮೂರು ಇರುತ್ತವೆ. ಎರಡು ಪ್ರವೇಶದ್ವಾರಗಳು ಕಡಿಮೆ.

ದ್ವಾರ ಬಂಧ: ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ನವರಂಗದಲ್ಲಿ ಸಾಮಾನ್ಯವಾಗಿ ಮೂರು, ನಾಲ್ಕು, ಐದರಿಂದ ಹನ್ನೊಂದು ಊರ್ಧ್ವ ಶಾಖೆಗಳುಳ್ಳ ದ್ವಾರಗಳಿರುತ್ತವೆ. ದ್ವಾರಶಾಖೆಗಳ ಅಲಂಕರಣೆಯ ಲಕ್ಷಣಗಳನ್ನು ಎರಡು ಕಾಲಘಟ್ಟಗಳಿಗೆ ಸೇರಿವೆ: ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಪರಿವರ್ತನ ಹಂತ; ಕಲ್ಯಾಣ ಚಾಳುಕ್ಯ ಹಂತ. ಮೊದಲ ಹಂತದಲ್ಲಿ ಮುಖ್ಯವಾಗಿ ದ್ವಾರ ಶಾಖೆಗಳು ಸರಳವಾಗಿರುತ್ತವೆ ಹಾಗೂ ಲಲಾಟ ಪಟ್ಟಿಕೆಗಳಲ್ಲೂ ಹರಿದಿರುತ್ತವೆ. ಪಾದದಲ್ಲಿ ಕುಂಭಗಳು ಅಥವಾ ಗಂಗ–ಯಮುನೆಯರು ಇತ್ಯಾದಿ ಚಿತ್ರ ಪಟ್ಟಿಕೆಗಳು ಹಾಗೂ ಉತ್ತರಾಂಗ ಪಟ್ಟಿಕೆಯ ಮೇಲೆ ಹಂಸಗಳ ಸಾಲಿರುತ್ತದೆ. ಇನ್ನೊಂದರ ಹಂತದಲ್ಲಿ ಈ ಲಕ್ಷಣಗಿಂತ ಸ್ವಲ್ಪ ಭಿನ್ನವಾಗಿ ಮತ್ತು ಹೆಚ್ಚು ವಿಸ್ತಾರವಾಗಿ ಹೆಚ್ಚು ಶಾಖೆಗಳು, ತಲಾ ಒಂದರ ಪದದಲ್ಲಿ ದ್ವಾರಪಾಲಕರನ್ನು ಆಯತಾಕಾರದ ಗೂಡು ಗಳಲ್ಲಿ ಅಥವಾ ದ್ವಾರಪಾಲಕರ, ಕಾಮ, ರತಿ ಮತ್ತು ಪರಿಚಾರಕರ ಉಬ್ಬು ಶಿಲ್ಪಗಳ ಅಲಂಕರಣೆಯಿರುತ್ತವೆ. ದ್ವಾರ ಬಂಧದ ಅಕ್ಕ ಪಕ್ಕಗಳಲ್ಲಿ ಭವ್ಯವಾದ ಎತ್ತರದ ದ್ವಾರಪಾಲಕ ಒಂದೊಂದು ವಿಗ್ರಹವನ್ನು ನಿಲ್ಲಿಸಲಾಗಿರುತ್ತದೆ. ಹೊಸ್ತಿಲಗಳ ಬುಡದಲ್ಲಿ, ಉತ್ತರಾಂಗದಲ್ಲಿ ಶಿಲ್ಪ ಪಟ್ಟಿಕೆಗಳಿರುತ್ತವೆ. ದ್ವಾರ ಪಟ್ಟಿಕೆಗಳ ಶಾಖೆಗಳಿಗೆ ಹೊರ ಪಾರ್ಶ್ವಗಳಲ್ಲಿ ಒಮ್ಮೊಮ್ಮೆ ಜಾಲಂಧ್ರಗಳನ್ನು ಜೋಡಿಸಲಾಗಿರುತ್ತದೆ. ಲಲಾಟದಲ್ಲಿ ನಡುವೆ ಸಾಮಾನ್ಯವಾಗಿ ಗಜಲಕ್ಷ್ಮಿಯನ್ನು ಕಂಡರಿಸಲಾಗಿರುತ್ತದೆ. ಜೈನ ಬಸದಿಯಾಗಿದ್ದರೆ ಜಿನಬಿಂಬವಿರುತ್ತದೆ. ಕೆಲವೊಮ್ಮೆ ಅರ್ಧಮಂಟಪದಲ್ಲಿ ಸ್ತಂಭ ತೋರಣ ಶಿಲ್ಪಪಟ್ಟಿಕೆಯನ್ನು ನಿಲ್ಲಿಸಲಾಗಿರುತ್ತದೆ. ಈ ಪರಂಪರೆಯು ಈ ಪೂರ್ವದ ರಾಷ್ಟ್ರಕೂಟರ ದೇವಾಲಯಗಳಲ್ಲಿ ಆರಂಭವಾಗಿದ್ದಿತು.

ಲಲಾಟ: ಕೆಲವೊಮ್ಮೆ ಲಲಾಟ ಪಟ್ಟಿಕೆಯ ನಡುವೆ ತೀರ್ಥಂಕರ ಬದಿಗಳಲ್ಲಿ ಆನೆಗಳನ್ನು (ಬಸವ ಕಲ್ಯಾಣದ ಸದಾನಂದ ಮಠದ ಬಾವಿ ಶಿಲ್ಪ), ಸರಸ್ವತಿಯನ್ನು (ಜಲಸಂಗಿಯ ಮಹದೇವ), ನಟರಾಜನನ್ನು ಚತುರ್ಮುಖ ಶಿವನನ್ನು (ಗದುಗಿನ ಸೋಮೇಶ್ವರ), ಯತಿಗಳನ್ನು (ಉಜ್ಜಯಿನಿ ಮರುಳ ಸಿದ್ದೇಶ್ವರ), ಶಿವಲಿಂಗಗಳಿವೆ (ಕೋಗಳಿಯ ಮಾರುತಿ ಗುಡಿ). ಉಜ್ಜಯಿನಿಯ ಪದ್ಮಾಸನದಲ್ಲಿರುವ ಯೋಗಿಗಳ ಶಿಲ್ಪದಲ್ಲಿ ಒಂದಕ್ಕೆ ಮಾತ್ರ ನಾಲ್ಕು ಕೈಗಳಿವೆ. ಮೇಲಕ್ಕೆತ್ತಿದ ಹಿಂದಿನ ಕೈಗಳನ್ನು ಕೈ ಮುಗಿದ ಭಂಗಿಯಲ್ಲಿ ಕೆಳಗಿನ ಕೈಗಳನ್ನು ಮೋಹಮುದ್ರೆ ಯಲ್ಲಿ ಕೆತ್ತಲಾಗಿದೆ. ಉಳಿದ ಮೋಹಿಶಿಲ್ಪಗಳಲ್ಲಿ ಎರಡು ಕೈಗಳಿದ್ದು ಇವುಗಳು ಮೋಹ ಮುದ್ರೆ ಅಥವಾ ಕೈಮುಗಿದ ಭಂಗಿಯಲ್ಲಿವೆ. ದ್ವಾರಶಾಖೆಗಳಲ್ಲಿ ಪುಷ್ಪಲಂಕಾರ, ಲತಾಸುರುಳಿ, ದಂಪತಿಗಳು, ನೃತ್ಯಗಾರರು, ಸಿಂಹ, ವಾದ್ಯಗಾರರಿಂದ ಅಲಂಕೃತವಾದ ಮತ್ತು ಸ್ತಂಭ ಮಾದರಿಗಳು ಒಳಗೊಂಡಿವೆ (ಗದಗಿನ ಸೋಮೇಶ್ವರ ಇತ್ಯಾದಿ).

ಉತ್ತರಾಂಗ: ಲಲಾಟ ಪಟ್ಟಿಕೆಯ ಮೇಲಿನ ಕಪೋತದ ಮೇಲ್ಭಾಗದ ಪಟ್ಟಿಕೆಯೆ ಉತ್ತರಾಂಗ. ಈ ಪಟ್ಟಿಕೆಯಲ್ಲೂ ಸಾಮಾನ್ಯವಾಗಿ ಮುಖ್ಯ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದ ದೇವರ ವಿಗ್ರಹವನ್ನು ಕಂಡರಿಸಲಾಗಿರುತ್ತದೆ. ಆರಂಭಿಕ ಹಂತದಲ್ಲಿ ಹೆಚ್ಚಾಗಿ ತ್ರಿಮೂರ್ತಿ ಗಳಾದ ಬ್ರಹ್ಮ, ಮಹೇಶ್ವರ (ನಟರಾಜ) ಮತ್ತು ವಿಷ್ಣು ಮೂರ್ತಿಗಳನ್ನು ವೈವಿಧ್ಯಮಯವಾಗಿ ಚಿತ್ರಿಸಲಾಗಿರುತ್ತದೆ. ಇವುಗಳನ್ನು ಮಕರತೋರಣಗಳ ನಡುವೆ ಕೆತ್ತಲಾಗಿರುತ್ತದೆ. ಇವರ ಜೊತೆಯಲ್ಲಿ ವಾದ್ಯಮೇಳ, ನೃತ್ಯಮೇಳ ಮತ್ತು ವಾಹನಗಳನ್ನು ತೋರಿಸಲಾಗಿರುತ್ತದೆ. ಶಿವ–ಪಾರ್ವತಿಯರ ಬದಿಗಳಲ್ಲಿ ಗಣೇಶ ಮತ್ತು ಕಾರ್ತಿಕೆಯರನ್ನು ಚಿತ್ರಿಸಲಾಗಿರುತ್ತದೆ (ಉಜ್ಜಯಿನಿ ಮರುಳ ಸಿದ್ದೇಶ್ವರ, ನೀಲಗುಂದ ಭೀಮೇಶ್ವರ, ಕಾಳಗಿ ಸಿದ್ದೇಶ್ವರ ಇತ್ಯಾದಿ). ಕೆಲವೊಮ್ಮೆ ಅಪರೂಪವಾಗಿ ಏಕಾದಶ ರುದ್ರರನ್ನು (ಲಕ್ಕುಂಡಿ ಕಾಶಿವಿಶ್ವೇಶ್ವರ ಇತ್ಯಾದಿ), ವೀರಭದ್ರ ಮತ್ತು ಗಣೇಶ್ವರ ನಡುವೆ ಸಪ್ತ ಮಾತೃಕೆಯರನ್ನು (ಹಾವೇರಿ ಸಿದ್ದೇಶ್ವರ, ನಾರಾಯಣಪುರದ ಶಿವ ದೇವಾಲಯ) ವಿವಿಧ ರೀತಿಯ ಮೂರು ಶಿಖರಗಳನ್ನು ಕಂಡರಿಸಲಾಗಿದೆ. ಕೆಲವೊಮ್ಮೆ ಈ ಶಿಖರಗಳ ಬದಿಗಳಲ್ಲಿ ಸಿಂಹಗಳನ್ನು ತೋರಿಸಲಾಗಿರು ತ್ತದೆ. ಈ ಶಿಖರ ಮಾದರಿಗಳು ಹೆಚ್ಚಾಗಿ ದ್ರಾವಿಡ, ರೇಖನಾಗರ ಮತ್ತು ಫಾಂಸನದ್ದಾಗಿದೆ.

ವೈಷ್ಣವ ದೇವಾಲಯಗಳಾಗಿದ್ದರೆ ಉತ್ತರಾಂಗದಲ್ಲಿ ನರಸಿಂಹ ಮತ್ತು ಭೂವರಾಹ ಗಳನ್ನು ತೋರಿಸಲಾಗಿರುತ್ತದೆ. ಕೆಲವೊಮ್ಮೆ ಆನೆಗಳನ್ನು ಎದುರು ಬದುರಾಗಿ ನಿಂತಿರುವುದನ್ನು ಚಿತ್ರಿಸಲಾಗಿದೆ (ಲಕ್ಕುಂಡಿ ಕುಂಭೇಶ್ವರ). ಕೆಲವೊಮ್ಮೆ ತ್ರಿಮೂರ್ತಿಗಳ ಬದಿಗಳಲ್ಲಿ ಯತಿಗಳನ್ನು

ಮತ್ತು ಸೂರ್ಯನ ದೇವಾಲಯವಾಗಿದ್ದರೆ ಉತ್ತರಾಂಗದಲ್ಲಿ ಉಷಾ–ಪ್ರತ್ಯುಷಾ ಚಾಮರಧಾರಿಗಳು, ಸೂರ್ಯ, ಪ್ರತ್ಯುಕ್ಷಾರ ಶಿಲ್ಪಗಳನ್ನು ಕಂಡರಿಸಲಾಗಿದೆ (ಲಕ್ಕುಂಡಿ ಕಾಶಿ ವಿಶ್ವೇಶ್ವರ).

ಸ್ತಂಭತೋರಣಗಳು: ಸಾಮಾನ್ಯವಾಗಿ ದೇವಾಲಯಗಳ ಗರ್ಭಗೃಹದ ಮುಂದಿನ ಅರ್ಧಮಂಟಪದ ತೆರೆದ ಮುಂಬದಿಯಲ್ಲಿ ಎರಡು ಸ್ತಂಭಗಳ ಮೇಲೆ ಮಕರ ಶಿಲ್ಪ ಪಟ್ಟಿಕೆಯನ್ನು ನಿಲ್ಲಿಸಲಾಗಿರುತ್ತದೆ. ಈ ಮಕರ ಪಟ್ಟಿಕೆಯಲ್ಲಿ ನಡುವೆ ಸಾಮಾನ್ಯವಾಗಿ ತ್ರಿಮೂರ್ತಿಗಳ ಚಿತ್ರಗಳನ್ನು ಕೆತ್ತಲಾಗಿದೆ. ಈ ಪರಂಪರೆಯು ಈ ಕಾಲದ ಆರಂಭಿಕ ಹಂತದಲ್ಲಿ ಸಾಮಾನ್ಯ (ಹರೆ ಕಿತ್ತೂರಿನ ಸಂಗಮೇಶ್ವರ, ಕುರುವತ್ತಿ ಮಲ್ಲಿಕಾರ್ಜುನ, ಮುದನೂರಿನ ಲಕ್ಷ್ಮಣತೀರ್ಥದ ಹತ್ತಿರ ಇತ್ಯಾದಿ). ತ್ರಿಮೂರ್ತಿಗಳಲ್ಲಿ ಕೆಲವೊಮ್ಮೆ ಶಿವನ ಬದಲು ನಟರಾಜನನ್ನು ತೋರಿಸಲಾಗಿದೆ. ಸೂರ್ಯನ ದೇವಾಲಯವಾಗಿದ್ದರೆ ಮಕರ ತೋರಣದ ನಡುವೆ ಸೂರ್ಯನನ್ನು ಚಿತ್ರಿಸಲಾಗಿದೆ (ಲಕ್ಕುಂಡಿಯ ವಿರೂಪಾಕ್ಷ, ನಿಡಗುಂದಿಯ ಸೂರ್ಯ ನಾರಾಯಣ).

ಚಂದ್ರಶಿಲಾ: ಚಂದ್ರಶಿಲೆ ಸಾಮಾನ್ಯವಾಗಿ ಸುಕನಾಸಿಯ ಬಾಗಿಲ ಚೌಕಟ್ಟಿನ ಹೊಸ್ತಿಲ (ಉಡಂಬರ) ಮುಂದೆ ನೆಲಕ್ಕೆ ಹಾಸಿದ ಉಡುಂಬರ ಅಥವಾ ಭುರಂಗಮ ಅಥವಾ ಚಂದ್ರಶಿಲಾ ಎನ್ನುವರು. ಈ ಚಂದ್ರಶಿಲೆಯಲ್ಲಿ ಕಮಲಗಳ ಅಲಂಕಾರವಿರುತ್ತದೆ. ಅರ್ಧಚಂದ್ರಾಕಾರದ ಉಬ್ಬು ಇದ್ದು ಅಕ್ಕ ಪಕ್ಕಗಳಲ್ಲಿ ಬಳ್ಳಿ ಮತ್ತು ಸುರಳಿಗಳ ಚಿತ್ರಗಳಿವೆ. ಕೆಲವೊಮ್ಮೆ ಸುರಳಿಗಳಲ್ಲಿ ಆನೆ ಮತ್ತು ನವಿಲುಗಳಿವೆ. ಡಂಬಳದ ದೊಡ್ಡ ಬಸಪ್ಪ ಮತ್ತು ಮುಳಗುಂದದ ಬಸದಿಯ ಚಂದ್ರಶಿಲೆ ವೈವಿಧ್ಯಮಯವಾಗಿದೆ.

ಜಾಲಂಧ್ರಗಳು: ಗರ್ಭಗೃಹ ಅಥವಾ ಅಂತರಾಳ (ಸುಕನಾಸಿ) ದ್ವಾರ ಚೌಕಟ್ಟಿನ ಮತ್ತು ಅರೆ ಗಂಬಗಳ ನಡುವೆ ಜಾಲಂಧ್ರಗಳ ಪಟ್ಟಿಕೆಗಳನ್ನು ಕೂಡಿಸುವುದು ಸಾಮಾನ್ಯ. ಇವುಗಳ ಮೇಲೆ ಕುಸುರಿ ಕೆತ್ತನೆಯಲ್ಲಿ ಮೂರು ಜೊತೆ ನಾಗ–ನಾಗಿಣಿಯರದೇ – ಹೆಣೆದು ಗಂಟು ಹಾಕಿಕೊಂಡ ದೇಹ ಭಾಗ, ವಾದ್ಯಗಾರರ, ನರ್ತಕಿಯರು, ಸುರಳಿಗಳು, ಕೀರ್ತಿಮುಖ, ಪುಷ್ಪಲಂಕಾರ ಇತ್ಯಾದಿಗಳಿವೆ. ಕೆಲವೊಮ್ಮೆ ಕೀರ್ತಿಮುಖಗಳನ್ನು ತೋರಿಸಲಾಗಿದೆ. ಉದಾಹರಣೆಗೆ ಬಳ್ಳಿಗಾವೆಯ ತ್ರಿಪುರಾಂತಕ, ಉಜ್ಜಯಿನಿ ಮರುಳ ಸಿದ್ದೇಶ್ವರ ಇತ್ಯಾದಿ.

ನವರಂಗದ ಗೋಡೆಗಳು (ಒಳಭಾಗ): ದೇವಾಲಯದ ಗರ್ಭಗೃಹದ ಹೊರಬದಿಗಳಲ್ಲಿ ಅಪರೂಪವಾಗಿ ದೇವಕೋಷ್ಠಗಳನ್ನು ತೋರಿಸಿದ ಉದಾಹರಣೆಗಳಿವೆ (ನಾಗಿನಿಯ ತ್ರೈಪುರುಷ, ಕುರುವತ್ತಿಯ ಮಲ್ಲಿಕಾರ್ಜುನ ಇತ್ಯಾದಿ). ಕೆಲವೊಮ್ಮೆ ಅಂತರಾಳದ ಹೊರಬದಿಗಳಲ್ಲಿ ಮತ್ತು ಸಭಾಮಂಟಪದ ಗೋಡೆಗಳಲ್ಲಿ ದೇವಕೋಷ್ಠಗಳಿದ್ದು ವಿವಿಧ ದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ಈ ಸಭಾಮಂಟಪದ ಬಲಬದಿಯ ಹಿಂದಿನ ಮೂಲೆಯಲ್ಲಿಯ ದೇವಕೋಷ್ಠದಲ್ಲಿ ಬಹುತೇಕವಾಗಿ ಸಪ್ತ ಮಾತೃಕೆಯರ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಉಳಿದ ದೇವಕೋಷ್ಠಗಳಲ್ಲಿ ಗಣೇಶ, ಮಹಿಷಾಸುರಮರ್ಧಿನಿ, ಭೈರವ, ಕಾರ್ತಿಕೇಯ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಉದಾಹರಣೆಗಳಿವೆ. ದ್ವಾರದ ಬದಿಯಲ್ಲಿ ಕೆಲವೊಮ್ಮೆ ಕಥಾನಕ ದೃಶ್ಯಗಳನ್ನು ಅತಿ ಅಪರೂಪವಾಗಿ ಕಂಡರಿಸಲಾಗಿದೆ. ಉದಾಹರಣೆಗೆ ಅಬ್ಬಲೂರಿನ ಬ್ರಹ್ಮೇಶ್ವರದಲ್ಲಿ ಏಕಾಂತರಾಮಯ್ಯನ ಪವಾಡದ ಚಿತ್ರಗಳಿವೆ. ಇಂಥ ದೇವಕೋಷ್ಠಗಳಿಗೆ ಈ ಅಧಿಷ್ಠಾನ, ಭಿತ್ತಿ, ಪ್ರಸ್ತರ ಶಿಖರಗಳಿದ್ದು ಒಂದು ಚಿಕ್ಕ ದೇವಾಲಯ ದಂತಿರುತ್ತವೆ. ನವರಂಗದಲ್ಲಿ ಒಂಬತ್ತು ಅಂಕಣಗಳುಳ್ಳದ್ದು. ನಡುವಿನ ಅಂಕಣದಲ್ಲಿ ಸ್ವಲ್ಪ ಎತ್ತರದ ಚಚೌಕ ಅಥವಾ ವರ್ತುಲ ವೇದಿಕೆ ಇರುತ್ತದೆ. ಇದರ ನಾಲ್ಕು ಮೂಲೆಗಳಲ್ಲಿ ಒಂದೊಂದು ಕಂಬವಿರುತ್ತದೆ. ಈ ಕೇಂದ್ರ ಕಂಬಗಳು ಛತ್ತಿಯನ್ನು ಹೊತ್ತಿರುತ್ತವೆ. ಮೂಲೆ ಗೋಡೆಗಳಲ್ಲಿ ಹೊಂದಿ ಅರೆ ಗಂಬಗಳಿರುತ್ತವೆ. ಈ ವೇದಿಕೆಯ ಮೇಲೆ ಕೆಲವೊಮ್ಮೆ ಗರ್ಭಗೃಹದ ಶಿವಲಿಂಗಕ್ಕೆ ಮುಖಮಾಡಿ ನಂದಿಯ ಶಿಲ್ಪವನ್ನು ಇಡಲಾಗಿರುತ್ತದೆ. ಉದಾಹರಣೆಗೆ ತಂಬೂರಿನ ದೊಡ್ಡ ಬಸವೇಶ್ವರ ದೇವಾಲಯ ಇತ್ಯಾದಿ.

ಅನೇಕ ದೇವಾಲಯಗಳ ನವರಂಗದಲ್ಲಿ ಇಲ್ಲವೆ ಮುಖಮಂಟಪದಲ್ಲಿ ಸುತ್ತಲೂ ತೆರೆದ ಕಕ್ಷಾಸನವಿರುತ್ತದೆ. ಕಕ್ಷಾಸನದ ಒರಗು ಪಟ್ಟಿಕೆಯ ಹಿಂಭಾಗದಲ್ಲಿ ಶಿಲ್ಪ ಪಟ್ಟಿಕೆಗಳಿರುತ್ತವೆ. ಇಲ್ಲಿ ಒಂದು/ಎರಡು ಸಾಲುಗಳಲ್ಲಿ ಶಿಖರ ನಮೂನೆಗಳನ್ನು ಅಥವಾ ಗೂಡುಗಳಲ್ಲಿ ಮಿಥುನ, ನರ್ತಕಿ, ಇನ್ನಿತರ ಶಿಲ್ಪಗಳಿರುವುದು ಸಾಮಾನ್ಯ (ಉಮಾಪುರದ ಉಮಾಮಹೇಶ್ವರ ಇತ್ಯಾದಿ). ನವರಂಗದ ಮುಂದೆ ಇದಕ್ಕೆ ಹೊಂದಿಕೊಂಡಂತೆ ಮುಖ ಮಂಟಪಕ್ಕೆ ಬದಲಾಗಿ ಕೆಲವೊಮ್ಮೆ ಅನೇಕ ಸ್ತಂಭಗಳ ಮಹಾಮಂಟಪವಿರುತ್ತದೆ. ಲಕ್ಷ್ಮೇಶ್ವರದ ಕೆಲವು ದೇವಾಲಯ ಮತ್ತು ಬಸದಿಗಳಲ್ಲಿ ಮತ್ತು ಅಣ್ಣಿಗೇರಿಯ ಅಮೃತೇಶ್ವರ ಇತ್ಯಾದಿ ಕಡೆಗಳಲ್ಲಿ ಕಾಣಬಹುದು. ಆದರೆ ಈ ಮಹಾಮಂಟಪಗಳು ತದನಂತರ ಕಾಲದಲ್ಲಿ ನಿರ್ಮಾಣವಾಗಿವೆ. ಆದರೆ ಇಟಗಿಯ ಮಹದೇವ ದೇವಾಲಯದ ಮಹಾಮಂಟಪ (ಸಭಾಮಂಟಪ)ವು ತೆರೆದಿದೆ.

ವಿತಾನ (ಭುವನೇಶ್ವರಿ): ನವರಂಗದ ನಡುವಿನ ಅಂಕಣದ ಛತ್ತಿನ ಭುವನೇಶ್ವರಿಯಲ್ಲಿ ಕಮಲದ ಅಲಂಕರಣ ಸಾಮಾನ್ಯ. ಅಷ್ಟದಿಕ್ಪಾಲಕರನ್ನು ನಡುವಿನ ಇಲ್ಲವೆ ಆಯಾಯ ದಿಕ್ಕಿಗನುಗುಣವಾಗಿ ಮಧ್ಯದಲ್ಲಿ ನಟರಾಜನ ಇಲ್ಲವೆ ನರಸಿಂಹನ ಮೂರ್ತಿ ಸುತ್ತಲೂ ಅಷ್ಟದಿಕ್ಪಾಲಕರ ಮೂರ್ತಿಗಳನ್ನು ಕಂಡರಿಸಲಾಗಿರುತ್ತದೆ. ಈ ಲಕ್ಷಣ ಬಳ್ಳಿಗಾವೆಯ ಕೇದಾರೇಶ್ವರ ಇತ್ಯಾದಿ ಕಡೆಗಳಲ್ಲಿವೆ. ಇನ್ನೊಂದು ರೀತಿಯ ಈ ಛತ್ತು ಗುಮ್ಮಟಾಕಾರದ್ದಾಗಿವೆ. ಈ ಗುಮ್ಮಟಾಕಾರ ವಿಸ್ತಾರವಾಗಿ ಮತ್ತು ಆಳವಾಗಿರುತ್ತದೆ, ಅರಳಿದ ಕಮಲದಂತಿರುತ್ತದೆ. ಇದರ ಮಧ್ಯದಿಂದ ಇಳಿಬಿದ್ದ ಕೇಸರಿಯಿರುತ್ತದೆ (ಉಜ್ಜಯಿನಿಯ ಮರುಳಸಿದ್ದೇಶ್ವರ) ಅಥವಾ ಶಿಲೆಯ ಸರಪಳಿಯನ್ನು ಇಳಿಬಿಟ್ಟ ಉದಾಹರಣೆಗಳಿವೆ (ಹಾನಗಲ್ಲು ತಾರಕೇಶ್ವರ 32 ಸುತ್ತಳೆಯದ್ದು). ಈ ಗುಮ್ಮಟದ ಅಂಚಿನಲ್ಲಿ ಸಮಾನಾಂತರದಲ್ಲಿ ಅಡ್ಡಪಟ್ಟಿಕೆಗಳಿಗೆ ಹೊಂದಿ ವಾಹನ ಸಮೇತ ಅಷ್ಟದಿಕ್ಪಾಲಕರ ಶಿಲ್ಪಗಳಿರುತ್ತವೆ (ಉಜ್ಜಯಿನಿ ಮರುಳಸಿದ್ದೇಶ್ವರ, ಆನವಟ್ಟಿಯ ಕೈಟಬೇಶ್ವರ). ಆದರೆ, ಉಜ್ಜಯನಿಯ ಮರುಳಸಿದ್ದೇಶ್ವರದ ವೃತ್ತಾಕಾರದ ಗೊಮ್ಮಟ ಭುವನೇಶ್ವರಿಯ ಪಾದ ಹಂತದ ಮೇಲೆ ಕುಳಿತ 100ಕ್ಕೂಹೆಚ್ಚು ಚಿಕಣಿ ಯತಿಗಳನ್ನು ತೋರಿಸಿರುವುದು ಅಪರೂಪವೆನಿಸಿದೆ. ಇಟಗಿಯ ಮಹಾದೇವ ದೇವಾಲಯದಲ್ಲಿ ಭುವನೇಶ್ವರಿಯ ವೃತ್ತಪಟ್ಟಿಕೆ ಯಲ್ಲಿ ಈ ದೇವಾಲಯ ನಿರ್ಮಿಸಿದ ಮಹಾದೇವ ದಂಡನಾಯಕನ ವಂಶಸ್ಥರ ಶಿಲ್ಪ ಗಳನ್ನು ಅಳವಡಿಸಲಾಗಿದೆ. ಕೆಲವೊಮ್ಮೆ ಈ ಭುವನೇಶ್ವರಿಯು ಅಷ್ಟಕೋನಾಕೃತಿಯಲ್ಲಿದ್ದು ಇದರ ನಡುವೆ ನಟರಾಜ, ಬದಿಗಳಲ್ಲಿ ವಿಷ್ಣು ಮತ್ತು ಬ್ರಹ್ಮ ಇವರ ಕಿರುಚಿತ್ರಗಳನ್ನು ಚಿತ್ರಿಸಲಾಗಿದೆ. ಕೆಲವು ದೇವಾಲಯಗಳ ಮಧ್ಯದಲ್ಲಿ ಉಗ್ರನರಸಿಂಹ (ಲಕ್ಕುಂಡಿ ಚಂದ್ರಮೌಳೇಶ್ವರ) ಜೈನ ಬಸದಿಯಲ್ಲಿ ವಿತಾನದಲ್ಲಿ 24 ತೀರ್ಥಂಕರರ ಮತ್ತು ಬಸದಿ ನಿರ್ಮಿಸಿದವರ ಕಿರು ಶಿಲ್ಪಗಳಿವೆ (ಸೇಡಂ).

ಕಕ್ಷಾಸನ: ತೆರೆದ ನವರಂಗದ ಅಥವಾ ಸಭಾಮಂಟಪ ಅಥವಾ ಮಹಾಮಂಟಪದ ಸುತ್ತಲೂ ಅಥವಾ ಮುಖಮಂಟಪದಲ್ಲಿ ಕಕ್ಷಾಸನ ವ್ಯವಸ್ಥೆಯಿರುತ್ತದೆ. ಈ ಕಕ್ಷಾಸನದ ಕಟ್ಟೆಗಳ ಮೇಲೆ ಮತ್ತು ಛತ್ತಿಗೆ ಹೊಂದಿಸಿ ಅಲ್ಲಲ್ಲಿ ಕಿರುಸ್ತಂಭಗಳನ್ನು ನಿಲ್ಲಿಸಲಾಗಿದೆ. ಈ ಸ್ತಂಭಗಳನ್ನು ಭದ್ರಕ ಸ್ತಂಭಗಳೆಂದು ಕರೆಯಲಾಗಿದೆ. ಕಕ್ಷಾಸನದ ಒರಗು ಪಟ್ಟಿಕೆಯ ಹಿಂಬದಿಯಲ್ಲಿ ಮಿಥುನ ಇತ್ಯಾದಿ ಶಿಲ್ಪಗಳನ್ನು ಅಥವಾ ಶಿಖರ ಮಾದರಿಗಳ ಸಾಲನ್ನು ಕಂಡರಿಸಲಾಗಿದೆ (ಲಕ್ಕುಂಡಿ ಬ್ರಹ್ಮಜಿನಾಲಯ, ನಾರಾಯಣಪುರದ ಶಿವದೇವಾಲಯ, ಕಾಳಿಗ ಜೈನಬಸದಿ ಇತ್ಯಾದಿ). ಕೆಲವೊಮ್ಮೆ ಪೂರ್ಣಕುಂಭ ಮತ್ತು ದೊಡ್ಡ ಹೂಗಳಿವೆ. ಅಥವಾ ಸಿಂಹಯಾಳಿ, ರಾಮಾಯಣದ, ಸೇತುಬಂಧನ, ಸಮುದ್ರೋಲಂಘನ, ವಾಲಿ–ಸುಗ್ರೀವ ಇತ್ಯಾದಿ ಚಿತ್ರಗಳು ಇರುತ್ತವೆ.

ಕಂಬಗಳು: ಕಂಬಗಳನ್ನು ಸಾಮಾನ್ಯವಾಗಿ ದೇವಾಲಯದ ಅರ್ಧಮಂಟಪ, ನವರಂಗ (ಸಭಾಮಂಟಪ), ಮಹಾಮಂಟಪ ಮತ್ತು ಮುಖಮಂಟಪಗಳಲ್ಲಿ ನಿಲ್ಲಿಸಲಾಗಿರುತ್ತದೆ. ಇವುಗಳನ್ನು ಕೋಷ್ಠಸ್ತಂಭ, ಶ್ರೀಕಾರಸ್ತಂಭ ಬಹುಕೋನಾಕಾರ ಸ್ತಂಭ ಮತ್ತು ಸಂಯುಕ್ತ ಸ್ತಂಭಗಳೆಂದು ವಿಂಗಡಿಸಬಹುದು. ಈ ಕಂಬಗಳನ್ನು ಸಾಮಾನ್ಯವಾಗಿ ಪೀಠದ ಮೇಲೆ ನಿಲ್ಲಿಸಲಾಗಿದೆ. ಕಾಂಡಭಾಗದ ಪಾದಚೌಕಪಟ್ಟಿಕೆಗಳ ಮೇಲೆ ಉಬ್ಬುಶಿಲ್ಪಗಳ ರಚನೆಯಿವೆ (ಲಕ್ಕುಂಡಿ, ಕಾಶಿವಿಶ್ವೇಶ್ವರ). ಇಲ್ಲಿ ಆನೆ, ಹಂಸ, ಪದ್ಮ ಇತ್ಯಾದಿ ದೇವ–ದೇವತೆಗಳ ಉಬ್ಬು ಶಿಲ್ಪಗಳಿರುತ್ತವೆ. ಗದಗ, ಲಕ್ಕುಂಡಿ ಇತ್ಯಾದಿ ಕಡೆಗಳಲ್ಲಿ ಈ ಮಾದರಿ ಕಂಬಗಳನ್ನು ಮಿಶ್ರಕ ಸ್ತಂಭಗಳೆನ್ನುವರು. ಈ ಕಂಬಗಳನ್ನು ತಿರುಗುಣಿಯಿಂದ ನಿರ್ಮಿಸಿದ್ದು ಇವು ದುಂಡಾಗಿ, ನಯವಾಗಿ ಹೆಚ್ಚು ಮೆರುಗುಳ್ಳ ಘಂಟಾಕಾರದಲ್ಲಿವೆ. ಮೇಲ್ಭಾಗದಲ್ಲಿ ಸಣ್ಣ ವೃತ್ತ ಪಟ್ಟಿಕೆಗಳು, ಕುಂಡಾಕಾರದಲ್ಲಿ ಕುಂಭ ಮತ್ತು ಫಲಕಗಳಿವೆ (ಡಂಬಳದ ದೊಡ್ಡ ಬಸವೇಶ್ವರ, ಗದಗಿನ ಸರಸ್ವತಿ ಇತ್ಯಾದಿ).

ಮೂರನೆಯ ಮಾದರಿಯ ಕಂಬಗಳು ನಕ್ಷತ್ರಾಕಾರದಲ್ಲಿವೆ. ಇವು ಬಹುಕೋನಾಕೃತಿಯಲ್ಲಿವೆ (ಗದುಗಿನ ಸರಸ್ವತಿ, ನೀಲಗುಂದ ಭೀಮೇಶ್ವರ ಇತ್ಯಾದಿ). ಕೆಲವೆಡೆಗಳಲ್ಲಿ ಕಂಬಗಳ ಪಾದ ಭಾಗದ ಚೌಕ ಪಟ್ಟಿಕೆಗಳಲ್ಲಿ ಶಿಲ್ಪಗಳನ್ನು ಕೋಷ್ಠಗಳನ್ನು ನಿರ್ಮಿಸಿ ನಾಸಿಯುಕ್ತ ಪಂಜರಗಳನ್ನು ರಚಿಸಲಾಗಿದೆ. ಈ ಮಾದರಿಯ ಕಂಬಗಳನ್ನು ಕೋಷ್ಠಕಂಬ ಗಳೆನ್ನುವರು (ಗದುಗಿನ ಸರಸ್ವತಿ ಇತ್ಯಾದಿ). ಈ ಲಕ್ಷಣ ಹೊಯ್ಸಳರ ದೇವಾಲಯಗಳ ಕಂಬಗಳಲ್ಲಿ ಸಾಮಾನ್ಯ ಕಂಬಗಳ ಕಾಂಡದ ಕೆಳಗಿನ ಚೌಕಪಟ್ಟಿಕೆಗಳಲ್ಲಿ ಕೆಲವೊಮ್ಮೆ ಕಂಬಗಳು ಉದ್ದವಾಗಿ ಮತ್ತು ನೀಳವಾಗಿವೆ (ನಾರಾಯಣಪುರ ಶಿವದೇವಾಲಯ ಇತ್ಯಾದಿ). ಈ ಕಂಬಗಳ ಮೇಲಿನ ಭಾಗಗಳಲ್ಲಿ ಮುಂಚಾಚಿದ ಬೋದಿಗೆಯನ್ನಾಧರಿಸಿ ಮದನಿಕೆಯರ ಶಿಲ್ಪಗಳನ್ನು ಜೋಡಿಸಲಾಗಿದೆ (ಕುರುವತ್ತಿ ಮಲ್ಲಿಕಾರ್ಜುನ, ನಾರಾಯಣಪುರ ಶಿವ ದೇವಾಲಯ ಇತ್ಯಾದಿ). ಈ ಲಕ್ಷಣವೂ ಹೊಯ್ಸಳ ದೇವಾಲಯದಲ್ಲಿ ಸಾಮಾನ್ಯ.

ಕೆಲವೊಮ್ಮೆ ಕಾಂಡದ ಚೌಕ ಪಟ್ಟಿಕೆಗಳಲ್ಲೂ ಕಥಾನಕ ಶಿಲ್ಪಗಳಿವೆ. ಪೌರಾಣಿಕ, ರಾಮಾಯಣ, ಮಹಾಭಾರತ, ಪಂಚತಂತ್ರ ಇತ್ಯಾದಿ ವಿಷಯಗಳಿಗೆ ಸೇರಿದ ಕಥಾನಕ ಚಿತ್ರಗಳಿರುತ್ತವೆ. ಈ ಲಕ್ಷಣಗಳು ರಾಷ್ಟ್ರಕೂಟರ ಕಾಲದಲ್ಲಿ ಕಾಣುತ್ತವೆ. ಈ ಲಕ್ಷಣ ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ.11ನೆಯ ಶತಮಾನದ ಮಧ್ಯಭಾಗದವರೆಗೂ ವಿಸ್ತರಿಸಿದೆ. ಜೈನಬಸದಿಗಳಲ್ಲೂ ಶ್ರೀಕಾರ ಸ್ತಂಭಗಳಿವೆ. ವಿಶೇಷವೆಂದರೆ ಇಲ್ಲಿಯ ಕಂಬಗಳ ಪೀಠಭಾಗದಲ್ಲಿ ದರ್ಪಣ ಸುಂದರಿ, ನರ್ತಕಿ, ತಾಯಿ ಮತ್ತು ಮಗು (ಅಂಬಿಕ), ಕೊಳಲ ನುಡಿಸುವ

ಗೋಪಾಲಕೃಷ್ಣ ಇತ್ಯಾದಿ ಶಿಲ್ಪಗಳಿವೆ (ಲಕ್ಕುಂಡಿ ಬ್ರಹ್ಮಜಿನಾಲಯ). ದೇವಾಲಯದ ತಳದಿಂದ ಶಿಖರದ ತುದಿಯ ಕಲಶದವರೆಗೆ ಅಧಿಷ್ಠಾನ, ಭಿತ್ತಿ, ಕಪೋತ, ಪ್ರಸ್ತಾರ, ಹಾರ ಮತ್ತು ಸ್ತೂಪಿ ಎಂದು ಶಿಲ್ಪಗ್ರಂಥಗಳಲ್ಲಿ ವಿಂಗಡಿಸಲಾಗಿದೆ.

ಅಧಿಷ್ಠಾನ: ಈ ಕಾಲದ ಅಧಿಷ್ಠಾನಗಳೂ ಸಾಮಾನ್ಯವಾಗಿ ಎರಡು ನಮೂನೆಗಳಲ್ಲಿವೆ. 1. ಎತ್ತರದ ಅಧಿಷ್ಠಾನ (90ರಿಂದ 1.20 ಸೆಂಮೀ ಎತ್ತರ), 2. ಎತ್ತರದ ಜಗತಿ, ಇದರ ಮೇಲೆ ಅಧಿಷ್ಠಾನದಲ್ಲಿ ಹಿಂಚಾಚು ಮತ್ತು ಮುಂಚಾಚುಗಳು ಸಾಮಾನ್ಯ. ಕೆಲವು ತಳ ವಿನ್ಯಾಸಗಳಲ್ಲಿ ಎಲ್ಲ ಪಾರ್ಶ್ವಗಳಲ್ಲಿ ಏಕಪ್ರಕಾರವಾಗಿ ಮುಂಚಾಚುತ್ತ ಹೋಗುತ್ತದೆ. ಇವುಗಳ ಸಂಖ್ಯೆಗಳಿಗನುಗುಣವಾಗಿ ತಳವಿನ್ಯಾಸವನ್ನು ತ್ರಿರಥ, ಪಂಚರಥ, ಸಪ್ತರಥ ಎಂದು ವರ್ಗೀಕರಿಸಲಾಗಿದೆ. ಈ ಕಾಲದ ದೇವಾಲಯ ಭಿತ್ತಿಗಳು ಹೆಚ್ಚಾಗಿ ತ್ರಿರಥ ಮಾದರಿಯಲ್ಲಿವೆ. ಕೆಲವು ಪಂಚರಥ ಮಾದರಿಯಲ್ಲಿವೆ. ಈ ಹಿಂಚಾಚು-ಮುಂಚಾಚು ಅಧಿಷ್ಠಾನದಿಂದ ಆರಂಭವಾಗಿ ಮೇಲಿನ ಭಿತ್ತಿ ಹಾರ ಇಲ್ಲವೆ ಶಿಖರದ ತುದಿಯವರೆಗೂ ಏರಿಸಲಾಗಿರುತ್ತದೆ. ಇದನ್ನು ಗರ್ಭಗೃಹದ ಹೊರಮೈಯಿಗೆ ಸೀಮಿತವಾಗಿರುತ್ತದೆ. ಇದೇ ಲಕ್ಷಣವು ಅಂತರಾಳ ಮತ್ತು ಸಭಾಮಂಡಪದ ಅಧಿಷ್ಠಾನ-ಹಾರದಲ್ಲಿಯೂ ಕಾಣುತ್ತದೆ.

ಅಧಿಷ್ಠಾನದ ಅಡ್ಡಪಟ್ಟಿಕೆಗಳು ಮಡಿಕೆಗಳನ್ನು ಉಪಾನ, ಜಗತಿ, ಕಂಪ, ಕಂಠ, ಕಪೋತ ಜಟ್ಟಿ ಎಂದು ವಿಂಗಡಿಸಬಹುದು. ಇತ್ತೀಚೆಗೆ ಈ ಹೆಸರುಗಳ ಬದಲಿಗೆ ಖುರಕ, ಪದ್ಮ, ಅಂತರೀತ, ತ್ರಿಪಟ್ಟಕುಮುದ, ವಲ್ಲಿ, ಕುಂಭ, ಕಪೋತ ಮತ್ತು ವೇದಿಗಳಿಂದ ಇನ್ನೂ ನಿಖರವಾದ ಹೆಸರುಗಳಿಂದ ಕರೆಯುವುದು. ದೇವಾಲಯದ ಶಿಖರದ ನಮೂನೆಯನ್ನು ಈಗ ಇಲ್ಲದಿದ್ದರೂ ಅಧಿಷ್ಠಾನದ ಪಟ್ಟಿಕೆ ಲಕ್ಷಣಗಳಿಂದ ಗುರುತಿಸಲು ಸಾಧ್ಯವಾಗುವುದು.

ಈ ಕಾಲದ ಅಧಿಷ್ಠಾನಗಳನ್ನು ಎರಡು ಕಾಲಘಟ್ಟಗಳಲ್ಲಿ ವಿಭಾಗಿಸಬಹುದು. ಒಂದು ಆರಂಭಿಕಹಂತ (ರಾಷ್ಟ್ರಕೂಟ-ಕಲ್ಯಾಣಚಾಳುಕ್ಯರ ಪರಿವರ್ತನ ಹಂತ) ಮೊದಲ ಹಂತದ ಲಕ್ಷಣಗಳಲ್ಲಿ ಅಲಂಕಾರಕ್ಕೆ ಹೆಚ್ಚು ಒತ್ತನ್ನು ನೀಡಿಲ್ಲ. ಆದರೆ ಕಿರುಶಿಲ್ಪಗಳು ಮೊದಲು ಕಾಣುತ್ತವೆ. ನಂತರ ಪುಷ್ಪ ಅಲಂಕರಣವಿರುತ್ತವೆ. ಹಾಗೂ ಜಗತಿಯಿರುವುದು ವಿರಳ. ಎರಡನೆಯ ಹಂತದಲ್ಲಿ ಅಲಂಕರಣೆಗೆ ಹೆಚ್ಚು ಒತ್ತನ್ನು ನೀಡಲಾಗಿದೆ. ಖುರಕದಲ್ಲಿ ಕಲ್ಪಲತಾ ಸುರಳಿ (ಚೌಡದಾನಪುರದ ಮುಕ್ತೇಶ್ವರ), ಪದ್ಮ ಪಟ್ಟಿಕೆಯಲ್ಲಿ ಅಲ್ಲಲ್ಲಿ ಸ್ತಂಭ ಶಿಖರಗಳು ಅಥವಾ ನಾಸಿ, ಕಿರು ಶಿಲ್ಪಗಳಿರುತ್ತವೆ (ನಾರಾಯಣಪುರದ ಶಿವ, ಕಾಳಗಿಯ ರೇವಣಸಿದ್ದೇಶ್ವರ ಇತ್ಯಾದಿ), ಕಪೋತ ಬುಡದ ದಂತಪಂಕ್ತಿ ಅಥವಾ ಮಕರ ಪಂಕ್ತಿ ಸಾಮಾನ್ಯ ಎರಡನೆಯ ಹಂತದಲ್ಲಿ ವ್ಯಾಳ, ಕೀರ್ತ ಮುಖ, ದೇವ-ದೇವತೆಗಳು ಇತ್ಯಾದಿ ಶಿಲ್ಪಾಲಂಕಾರಗಳು ಒಳಗೊಂಡಿರುತ್ತವೆ (ಮಾಗಳದ ವೇಣುಗೋಪಾಲ, ಲಕ್ಷ್ಮೇಶ್ವರ ಶಂಖ ಬಸದಿ, ಇತ್ಯಾದಿ). ಖುರಕ, ಪದ್ಮ ಪತ್ರ, ಅಂತರೀತ, ಕುಮುದ ಮತ್ತು ಗಜತರ, ಅಶ್ವತರ ಮತ್ತು ಯಾಳಿಯಂಥ ಒಳಗೊಂಡಿರುತ್ತವೆ (ಗದಗಿನ ಸೋಮೇಶ್ವರ, ಡಂಬಳದ ದೊಡ್ಡ ಬಸಪ್ಪ ಇತ್ಯಾದಿ). ಈ ಪಟ್ಟಿಕೆಗಳು ಕೆಳಗಿನಿಂದ ಮೇಲಕ್ಕೆ ಹೋದಂತೆ ಹಿಂದಕ್ಕೆ ಸರಿಯುತ್ತ ಹೋದರೆ ಈ ರೀತಿಯ ದೇವಾಲಯವನ್ನು ಔತ್ತರೇಯ (ನಾಗರ) ಮಾದರಿ ಎನ್ನುವರು (ನಾರಾಯಣಪುರ ಶಿವ, ಕಾಳಗಿ ಸಿದ್ದೇಶ್ವರ, ಮಲ್ಲಿಕಾರ್ಜುನ, ಲಕ್ಕುಂಡಿ ಕಾಶಿ ವಿಶ್ವೇಶ್ವರ, ಇತ್ಯಾದಿ). ಈ ಮಾದರಿಯ ಹೆಚ್ಚಿನ ದೇವಾಲಯಗಳು ಬಿಜಾಪುರ, ಗುಲ್ಬರ್ಗ, ಬೆಳಗಾಂವಿ, ಬೀದರ ಜಿಲ್ಲೆಗಳಲ್ಲಿ ಮತ್ತು ದಕ್ಷಿಣದ ಮಹಾರಾಷ್ಟ್ರದಲ್ಲಿ ಕಾಣುತ್ತವೆ. ಗಜಪೀಠದ ಲಕ್ಷಣ ಕರ್ನಾಟಕದಲ್ಲಿ ವಿರಳ. ಇದರ ಉಗಮ ಗುಜರಾತ ಪ್ರದೇಶದಲ್ಲಿ ಕಾಣುತ್ತದೆ. ಕೆಲವು ದೇವಾಲಯಗಳ ಅಧಿಷ್ಠಾನದ ಬುಡದಲ್ಲಿ ಎತ್ತರದ ಜಗತಿಗಳಿವೆ (ಲಕ್ಕುಂಡಿಯ ಲಕ್ಷ್ಮೇಶ್ವರ ಜೈನ ಬಸದಿ). ಜಗತಿಯನ್ನು ನಕ್ಷತ್ರಾಕಾರದಲ್ಲಿ ರಚಿಸಿದ ಅಪರೂಪದ ನಿದರ್ಶನ ಕಾಳಗಿಯ ಮಲ್ಲಿಕಾರ್ಜುನರಲ್ಲಿ ಕಾಣಬಹುದು.

ಭಿತ್ತಿ: ದೇವಾಲಯದ ಗರ್ಭಗುಡಿ ಮತ್ತು ಸಭಾಮಂಟಪದ ಗೋಡೆಗಳ ಮಧ್ಯದ ಹೊರ ಮೈಯಲ್ಲಿ ದೇವಕೋಷ್ಠಗಳಿರಬಹುದು. ಆದ್ದರಿಂದ ಈ ಭಾಗವನ್ನು ಭದ್ರ ಎಂದು ಕರೆಯಲಾಗಿದೆ. ಇದರ ಎಡ-ಬಲ ಬದಿಯಲ್ಲಿ ಸ್ತಂಭ, ಸ್ತಂಭಪಂಜರ ಮತ್ತು ಕೋಷ್ಠ ಪಂಜರಗಳಿರುತ್ತವೆ. ಮುಂಚಾಚುತಳ ಕೋನಗಳಲ್ಲಿ ಕುಡ್ಯ ಸ್ತಂಭಗಳಿವೆ. ಸಲಿಲಾಂತರದಲ್ಲಿ ಅಂದರೆ ಹಿಂಚಾಚುವಿನಲ್ಲಿ ಸ್ತಂಭ ಪಂಜರಗಳಿವೆ. ಮೇಲೆ ಲವನ ಮಾದರಿಯ ಶಿಖರ ಪ್ರತಿಕೃತಿಗಳಿವೆ. ಕೆಲವೆಡೆ ದೇವಕೋಷ್ಠಗಳ ಬದಿಗಳಲ್ಲಿ ಕಥಾನಕ ಉಬ್ಬುಶಿಲ್ಪಗಳಿವೆ (ಲಕ್ಕುಂಡಿಯ ಕಾಶೀವಿಶ್ವೇರ). ಗರ್ಭಗೃಹದ ಹೊರ ಭಿತ್ತಿಯ ಮೂರು ಕಡೆಗಳಲ್ಲಿ ದೇವಕೋಷ್ಠಗಳು ಸಾಮಾನ್ಯ.

ಈ ಕಾಲದ ಈ ರೀತಿಯ ದೇವಾಲಯಗಳ ಗೋಡೆಗಳು ನಾಲ್ಕು ಮಾದರಿಯಲ್ಲಿವೆ: ಸರಳ ಮಾದರಿ, ಹಿಂಚಾಚು ಮುಂಚಾಚುಗಳ ಮಾದರಿ, ನಕ್ಷತ್ರಾಕಾರ ಮಾದರಿ ಮತ್ತು ಅರೆನಕ್ಷತ್ರಾಕಾರ ಮಾದರಿ. ಈ ಲಕ್ಷಣಗಳನ್ನು ಎರಡು ಕಾಲಮಾನಗಳ ಹಂತಗಳನ್ನಾಗಿ ವಿಂಗಡಿಸಬಹುದು: ರಾಷ್ಟ್ರಕೂಟ-ಕಲ್ಯಾಣ ಚಾಳುಕ್ಯರ ಕಾಲದ ಪರಿವರ್ತನೆಯ ಹಂತ, ಕಲ್ಯಾಣ ಚಾಳುಕ್ಯರ ಕಾಲದ ಹಂತ. ಹಾಗೆಯೇ ಭಿತ್ತಿಯಲ್ಲಿ ತ್ರಿರಥ, ಪಂಚರಥ ಮತ್ತು ಷಟ್ ರಥದಲ್ಲಿಯೂ ಇರುತ್ತವೆ. ಕೆಲವೊಮ್ಮೆ ಸಭಾಮಂಟಪ ಮತ್ತು ಗರ್ಭಗೃಹ ಭಿತ್ತಿ ತುದಿಯ ಕಪೋತದಲ್ಲಿ ಸುತ್ತಲೂ ಹಂಸ ಪಕ್ಷಿಗಳ ಸಾಲಿದೆ. ಕೆಲ ಭಿತ್ತಿಗಳು ಸರಳವಾಗಿವೆ ಯಾವ ಸ್ತಂಭಗಳಿರುವುದಿಲ್ಲ. ಕೇವಲ ಗರ್ಭಗೃಹದ ಹೊರ ಭಿತ್ತಿಯ ಮೂರು ಮುಖಗಳಲ್ಲಿ ಶಿಖರವುಳ್ಳ ದೇವಕೋಷ್ಠಗಳಿವೆ. ಕೆಲವೊಂದರಲ್ಲಿ ಸರಳ ಭಿತ್ತಿಯ ಮಧ್ಯದಲ್ಲಿ ಅಡ್ಡ ಕಿರುಪಟ್ಟಿಕೆಯಿರುತ್ತದೆ. ತಂಬೂರಿನ ಬಸವೇಶ್ವರ, ಕುಪಟೂರಿನ ರಾಮೇಶ್ವರ ಇತ್ಯಾದಿ. ಕೆಲವೊಮ್ಮೆ ಆಳವಾದ ದೇವಕೋಷ್ಠಗಳ ಬದಲು ಕೇವಲ ಪಂಜರದಂತಹ ಎತ್ತರದ ಕಂಬಗಳ ಮೇಲೆ ಭವ್ಯವಾದ ಶಿಖರವಿರುತ್ತದೆ. ಇಕ್ಕೆಲಗಳ ಹಿಂಚಾಚುಗಳಲ್ಲಿ ಸ್ತಂಭ ಶಿಖರಗಳಿವೆ. ಈ ಶಿಖರಗಳು ದ್ರಾವಿಡ, ನಾಗರ, ರೇಖನಾಗರ, ಶಾಲ ಮತ್ತು ಫಾಂಸನ ಮಾದರಿಯಲ್ಲಿರುತ್ತವೆ. ಇಂಥಹ ಕೆಲವು ನಮೂನೆಗಳಿರುವುದನ್ನು ಬೆಳಗಾಂವಿ ಜಿಲ್ಲೆಯ ಕೊಣ್ಣರಿನ ಬಸದಿ, ಕೋಟುಮಚಗಿಯ ಸೋಮೇಶ್ವರ, ಕುಕ್ಕನೂರಿನ ನವಲಿಂಗೇಶ್ವರ ಇತ್ಯಾದಿ ಕಡೆಗಳಲ್ಲಿ ಕಾಣಬಹುದು. ಕೆಲವೆಡೆ ಸ್ತಂಭ ಶಿಖರಗಳ ಮೇಲೆ ಉದ್ದವಾದ ಮಕರ ತೋರಣದ ಅಲಂಕರಣವಿದೆ. ಮೇಲ್ಗಡೆ ಕೀರ್ತಿ ಮುಖಗಳಿವೆ (ಲಕ್ಕುಂಡಿ ನಾಗನಾಥ). ಕೆಲವೆಡೆ ಕಥಾನಕ ಅಥವಾ ಪೌರಾಣಿಕ ಶಿಲ್ಪಗಳನ್ನು ಕಂಡರಿಸಲಾಗಿದೆ (ಲಕ್ಕುಂಡಿ, ಗದಗ, ಚೌಡದಾಮಪುರ).

ಮೂರನೆಯ ಮಾದರಿಯಲ್ಲಿ ಹಿಂಚಾಚು-ಮುಂಚಾಚುಗಳು ಸರಳವಾಗಿವೆ. ಮುಂಚಾಚುಗಳ ಅಂಚುಗಳಲ್ಲಿ ಕಿರು ಪಟ್ಟಿಕೆಗಳಿವೆ. ಮುಂಚಾಚು ಹೆಚ್ಚು ಅಗಲವಾಗಿವೆ. ಇವುಗಳ ಮೇಲೆ ಶಿಲ್ಪಗಳು ಅನಂತರ ಅಡ್ಡ ಪಟ್ಟಿಕೆಗಳು ಏಕಸಾಲಿನಲ್ಲಿ ಸುತ್ತುವರಿದಿವೆ. ಆದರೆ ಗರ್ಭಗೃಹದ ಹೊರ ಭಿತ್ತಿಯ ಮೂರು ಕಡೆಗಳಲ್ಲಿ ಮೂರು ದೇವಕೋಷ್ಠಗಳು ಕಿರು ದೇವಾಲಯದಷ್ಟು ಎತ್ತರವಿದೆ. ಈ ದೇವಕೋಷ್ಠಗಳ ಮುಂಚಾಚು (ಭದ್ರಭಾಗ)ದಲ್ಲಿ ಯಾವ ಶಿಲ್ಪಗಳಿರುವುದಿಲ್ಲ. ಇಕ್ಕೆಲ ಭಾಗದ ಮುಂಚಾಚು ಹಿಂಚಾಚುಗಳಲ್ಲಿ ದೇವಾನು ದೇವತೆಗಳು, ಆಲಸ ಕನ್ಯೆಯರು, ಅಪ್ಸರೆಯರು ಇತ್ಯಾದಿ ಪೀಠವುಳ್ಳ ಶಿಲ್ಪಗಳಿವೆ. ಈ ಮಾದರಿಯು ಹೆಚ್ಚಾಗಿ ಔತ್ತರೇಯ ಅಥವಾ ಶೇಖರಿ ಮಾದರಿಯ ಸೂಚನೆಗಳಿದ್ದು ಇವುಗಳು ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದಲ್ಲಿವೆ (ನಾರಾಯಣ ಶಿವದೇವಾಲಯ). ಆದರೆ ದಾಕ್ಷಿಣಾತ್ಯ ಮಾದರಿಯಲ್ಲಿ ಅರೆಗಂಬಗಳು ಅಗಲವಾಗಿದೆ. ಮುಂಚಾಚು ಹಿಂಚಾಚುಗಳಲ್ಲಿ ಹೆಚ್ಚಾಗಿ ಪಂಜರ, ಕೋಷ್ಠಪಂಜರ, ಸ್ತಂಭ ಶಿಖರಗಳಿವೆ (ಕುರುವತ್ತಿಮಲ್ಲಿಕಾರ್ಜುನ, ಕುಬಟೂರು ಇತ್ಯಾದಿ). ಕೆಲವೆಡೆ ಭಿತ್ತಿಯಲ್ಲಿ ಸರಳ ಹಿಂಚಾಚು-ಮುಂಚಾಚುಗಳಿದ್ದು ದೇವಕೋಷ್ಠದ ಬದಲು ಕೇವಲ ಕುಡ್ಯಸ್ತಂಭಗಳ ಮೇಲೆ ಶಿಖರಗಳಿವೆ. ಬದಿಗಳಲ್ಲಿ ಶಿಖರವುಳ್ಳ ಅರೆಗಂಬಗಳು ದಪ್ಪವಿದೆ (ಶಿರೂರಿನ ಸಿದ್ದೇಶ್ವರ). ಕೆಲವೊಮ್ಮೆ ಭಿತ್ತಿಯ ಪಂಜರದ ನಡುವೆ ಆನೆಗಳ ಶಿಲ್ಪಗಳಿವೆ (ಮುಳಗುಂದದ ಜೈನ ಬಸದಿ). ಕೆಲವೆಡೆ ಸರಳ ಭಿತ್ತಿಯ ಅರೆಗಂಬಗಳಲ್ಲಿ ಸಮಾಂತರ ಪಟ್ಟಿಕೆಗಳಿದ್ದು ನಡುವಿನ ಪಟ್ಟಿಕೆಯಲ್ಲಿ ಪದ್ಮಲತೆಯಿದೆ (ಮುತ್ತಿಗಿಯ ವಿಠಲ ಇತ್ಯಾದಿ).

ಶಿಲ್ಪಗಳ ವೈವಿಧ್ಯತೆಯಲ್ಲಿ ಕೆಲವೆಡೆ ಕಾಳಾಮುಖ ಪರಂಪರೆ, ಜೈನ ಪೌರಾಣಿಕ ಅಂಶಗಳು ಇದ್ದರೆ ಕೆಲವೊಮ್ಮೆ ಭಕ್ತರು ಇತ್ಯಾದಿ ಚಿತ್ರಗಳು ಒಳಗೊಂಡಿವೆ. ನೀಲಗುಂದದ ನೀಲಕಂಠೇಶ್ವರ ಭಿತ್ತಿಯಲ್ಲಿ ತೋರಿಸಿದ ಅನೇಕ ದೇವ-ದೇವತೆಗಳಲ್ಲದೆ ಕೈಯಲ್ಲಿ ಕೋಲು ಮತ್ತು ಗಿಣಿಯನ್ನು ಹಿಡಿದ, ಕೋಟನ್ನು ಧರಿಸಿದ ಗಡ್ಡಧಾರಿಯ ಶಿಲ್ಪವಿರುತ್ತದೆ. ಸಭಾಮಂಟಪದ ಭಿತ್ತಿಗಳಲ್ಲಿ ವಿವಿಧ ರೀತಿಯ ಜಾಲಂಧ್ರಗಳಿವೆ (ಕಾಳಗಿ ಬಸದಿ, ಮೊಗಳ ವೇಣುಗೋಪಾಲ). ಭಿತ್ತಿಯ ಮೇಲಂಚಿನಲ್ಲಿ ಕಪೋತವೆಂದು ಕರೆಯಲಾದ ಭಿತ್ತಿಯಿಂದ ಮುಂಚಾಚಿದ ಮಾಡು ಇರುತ್ತದೆ. ಒಳಬದಿಯಲ್ಲಿ ಕಪೋತ ಪಕ್ಷಿಗಳ ಸಾಲು ಇರುತ್ತದೆ. ಮಾಡಿನ ಮೇಲೆ ಅಂಚಿನುದ್ದಕ್ಕೂ ಶಾಲಾ-ಕೂಟ-ಸಲಿಲಾಂತರಗಳ ಕಟಾಂಜನವಿರುತ್ತದೆ. ಇದನ್ನು ಹಾರ ಎಂದು ಕರೆಯಲಾಗಿದೆ. ಕಪೋತ ಹಾರದ ನಡುವೆ ಅಡ್ಡ ಫಲಕವಿರುತ್ತದೆ.

ಶಿಖರ: ಗರ್ಭಗೃಹದ ಮೇಲೇರಿಸಿ ಕಟ್ಟಿದ ರಚನೆಗಳು ವಿವಿಧ ಮಾದರಿಯಲ್ಲಿ ಕಂಡು ಬಂದಿವೆ. ಇವುಗಳು ದ್ರಾವಿಡ, ನಾಗರ, ವೇಸರ, ಫಾಂಸನ, ಭೂಮಿಜ, ರೇಖಾನಾಗರ ಮಾದರಿಗಳಾಗಿವೆ. ದ್ರಾವಿಡ ಮಾದರಿಯಲ್ಲಿ ಗರ್ಭಗುಡಿಯ ಮೇಲೆ ಸುತ್ತಲೂ ಸ್ವಲ್ಪ ಸ್ಥಳವನ್ನು ಬಿಟ್ಟು ಒಂದರ ಮೇಲೊಂದರಂತೆ ಕಿರುದಾಗುತ್ತ ಹೋಗುವ ಗರ್ಭಗುಡಿ ಮಾದರಿಯ ಅಂತಸ್ತುಗಳಿರುತ್ತವೆ. ಸಾಮಾನ್ಯವಾಗಿ ಈ ರೀತಿಯ ಎರಡು ಮೂರು ತಳಗಳು (ಮಹಡಿಗಳು) ಇರುತ್ತವೆ. ತುದಿಯಲ್ಲಿ ಸ್ತೂಪಿ ಇಲ್ಲವೆ ಶಿಖರವೆಂದು ಕರೆಯಲಾದ ಘಂಟಾಕೃತಿಯ ಚೌಕೋನ ಇಲ್ಲವೆ ಅಷ್ಟಕೋನ ಇಲ್ಲವೆ ವೃತ್ತಾಕೃತಿಯಿರುತ್ತದೆ. ಸಲಿಲಾಂತರಗಳಲ್ಲಿ ಪ್ರಾಣಿಗಳ ಚಿತ್ರಗಳಿರುತ್ತವೆ (ಕಪಿಗಳು-ಹಂಸಗಳು). ಇನ್ನುಳಿದ ಮಹಡಿಗಳಲ್ಲಿ ಇದೇ ಲಕ್ಷಣಗಳು ಮುಂದುವರಿದಿರುತ್ತವೆ. ಅಂತಸ್ತುಗಳ ಮುಂಭಾಗದಲ್ಲಿ ಗಿಳಿಮೂಗಿನಂಥ ಸುಕನಾಸಿಯೆಂಬ ಗೂಡಿನ ಅಲಂಕರಣೆ ಇರುತ್ತದೆ. ಇದರಲ್ಲಿ ಗರ್ಭಗೃಹದಲ್ಲಿ ಸ್ಥಾಪಿಸಿದ ದೇವರಿಗೆ ಸಂಬಂಧಿಸಿದ ಶಿಲ್ಪವಿರುತ್ತದೆ. ಈ ಮಾದರಿ ಶಿಖರವು ದ್ರಾವಿಡ ಮಾದರಿಯಾಗಿದ್ದರೂ ಕೆಲವು ಭೂಮಿಜ ಶೈಲಿಯ ಲಕ್ಷಣಗಳು ಒಳಗೊಂಡಿರು ತ್ತವೆ

(ಲಕ್ಕುಂಡಿ ಕಾಶಿವಿಶ್ವೇಶ್ವರ ಸೂರ್ಯ ದೇವಾಲಯ ಇತ್ಯಾದಿ). ಇದರ ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗೃಹ ನಿರ್ಮಿಸಿರುವುದು ಕೇವಲ ಜೈನ ಬಸದಿಗಳಲ್ಲಿ ಕಾಣುತ್ತವೆ (ಲಕ್ಕುಂಡಿಯ ಬ್ರಹ್ಮ ಜಿನಾಲಯ). ಲಕ್ಷ್ಮೇಶ್ವರದ ಬಸದಿಯ ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗೃಹವಿದೆ. (ಆರ್.ಎಂ.ಎಸ್.)

**ಇತರ ಚಾಳುಕ್ಯ ಶಾಖೆಗಳು:** ಬಾದಾಮಿಯ ಚಳುಕ್ಯರ ಆಳಿಕೆ ಕೊನೆಗೊಂಡು, ಕರ್ನಾಟಕದಲ್ಲಿ ರಾಷ್ಟ್ರಕೂಟರ ಆಳಿಕೆ ಆರಂಭವಾದಾಗ ಚಾಳುಕ್ಯರು ಸ್ವಲ್ಪ ಕಾಲ ತೆರೆಯ ಮರೆಯಲ್ಲಿದ್ದರು. ಆಗ ಈ ಮನೆತನದ ಹಲವಾರು ಶಾಖೆಗಳು, ಬೇರೆ ಬೇರೆ ಕಡೆ ಸಣ್ಣ ಪುಟ್ಟ ಅಧಿಕಾರಗಳನ್ನು ಹೊಂದಿದ್ದು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವು. ವೆಂಗಿಯ ಚಾಳುಕ್ಯ, ವೇಮುಲವಾಡ ಚಾಳುಕ್ಯ, ಗುಜರಾತಿನ ಚಾಳುಕ್ಯ ವಂಶಗಳು ಸಹ ಈ ಮನೆತನಕ್ಕೆ ನೇರವಾಗಿ ಸಂಬಂಧಿಸಿದವು. ಕನಾಟಕದ ಹೊರಗೆ ಆಳಿದ ಚಾಳುಕ್ಯವಂಶದ ಶಾಖೆಗಳು ಅಲ್ಲದೆ ಕರ್ನಾಟಕದಲ್ಲಿದ್ದ ಕೆಲವು ಚಾಳುಕ್ಯ ಶಾಖೆಗಳು, ವ್ಯಕ್ತಿಗಳು ಶಾಸನಗಳ ಮೂಲಕ ಬೆಳಕಿಗೆ ಬಂದಿದ್ದಾರೆ.

ಚಾಳುಕ್ಯ ವಂಶಕ್ಕೆ ಸೇರಿದ ಪರಹಿತರಾಜನೆಂಬಾತ ಬೆಳಗಾಂವಿ ಜಿಲ್ಲೆಯ ಕೋಟೂರು ಗ್ರಾಮದ ಶಾಸನವೊಂದರಲ್ಲಿ ಕಾಣಿಸಿಕೊಂಡಿದ್ದಾನೆ. ಶಾಸನದ ಕಾಲ ಸು. 9ನೆಯ ಶತಮಾನ. ರಾಷ್ಟ್ರಕೂಟ ಪ್ರಭೂತವರ್ಷನ 812ರ ತಾಮ್ರ ಶಾಸನದಲ್ಲಿ ಚಾಳುಕ್ಯಾನ್ವಯಕ್ಕೆ ಸೇರಿದ ವಿಮಲಾದಿತ್ಯನೆಂಬಾತ ಹೆಸರಿಸಲ್ಪಟ್ಟಿದ್ದಾನೆ. ಈತನ ತಂದೆ ರಾಜನ್ ಎಂದು ಬಿರುದಾಂಕಿತನಾದ ಯಶೋವರ್ಮ; ತಾತ ಬಲವರ್ಮ ನರೇಂದ್ರ. ಗಂಗಮಂಡಲದ ಅಧಿರಾಜನೆನಿಸಿದ ಚಾಕಿರಾಜ ಈತನ ಸೋದರಮಾವ. ಈತ ಕುಣುಂಗಿಲ ದೇಶವನ್ನು ಆಳುತ್ತಿದ್ದ.

ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ 951ರ ಹಿರೇಕೋಗಿಲೂರಿನ ತಾಮ್ರಶಾಸನದಲ್ಲಿ ಅರಸನ ಮಾಂಡಲಿಕನಾಗಿ ಕದಂಬಳಿಗೆ 1000 ಪ್ರಾಂತ್ಯವನ್ನು ಆಳುತ್ತಿದ್ದ ಚಾಳುಕ್ಯ ರಾಜಾದಿತ್ಯನ ವಂಶಾವಳಿಯನ್ನು ಕೊಟ್ಟಿದೆ. ಅದು ಹೀಗಿದೆ: ಮೊದಲನೆಯ ರಾಜಾದಿತ್ಯನು ಕಾಕಲವರ್ಷನ ಮಗಳನ್ನು ಮದುವೆಯಾದನೆಂದಿದೆ. ಈತ ಮೇಡೂರಿನಲ್ಲಿ ದೊರೆತ ಮುಮ್ಮಡಿ ಗೋವಿಂದನ ಶಾಸನದಲ್ಲಿ ಉಕ್ತನಾದ ಪರಮೇಶ್ವರನಿಯೋಗಿ ನನ್ನಿಚಳುಕಿ ಎನಿಸಿಕೊಂಡ ರಾಜಾದಿತ್ಯನಾಗಿರಬಹುದು. ಹೀರೇಕೋಗಿ ಲೂರಿನ ಶಾಸನದಲ್ಲಿ ಇಮ್ಮಡಿ ರಾಜಾದಿತ್ಯನನ್ನು ನನ್ನಿಕೆ ಎಂದು ವರ್ಣಿಸಲಾಗಿದೆ. ಈ ಶಾಸನದಲ್ಲಿ ಚಾಳುಕ್ಯರ ಮೂಲವನ್ನು ಕುರಿತು ಒಂದು ಪೌರಾಣಿಕ ಕಥೆ ಹೇಳಿದೆ. ದ್ರೋಣನ ಮಗನಾದ ಅಶ್ವತ್ಥಾಮ ಸಂಧ್ಯಾಸಮಯದಲ್ಲಿ ಮಂತ್ರಪೂತವಾದ ಗಂಗಾಜಲವನ್ನು ಬೊಗಸೆಯಿಂದ ಚೆಲ್ಲಿದಾಗ ಚಳುಕಿ ಎಂಬ ವೀರಹುಟ್ಟಿದನೆಂದೂ ಅವನು ಶತ್ರುಗಳನ್ನು ಹೊಡೆದೋಡಿಸಬಲ್ಲವನಾದ ಕಾರಣ (ಚಾಳಯತಿ)ಅವನಿಗೆ ಆ ಹೆಸರು ಬಂತೆಂದೂ ಹೇಳಿದೆ. ಈ ತಾಮ್ರ ಶಾಸನದ ಮುದ್ರೆಯಲ್ಲಿ ವರಾಹದ ಚಿತ್ರವಿದೆ. ಮೈಸೂರು ಜಿಲ್ಲೆಯ ವರುಣ ಗ್ರಾಮದಲ್ಲಿ ದೊರೆತ ಶಾಸನವೊಂದರಲ್ಲಿ ಮಹಾಸಾಮಂತ ನರಸಿಂಹನನ್ನು ಚಾಳುಕ್ಯ ವಂಶಲಲಾಮನೆಂದು ಕರೆದಿದೆ. ಈತನ ಪತ್ನಿ ಗಾವಿಲಬ್ಬರಸಿ. ಇದೇ ಗ್ರಾಮದ ಇನ್ನೂ ಕೆಲವು ಶಾಸನಗಳಲ್ಲಿ ಚಾಳುಕ್ಯಾನ್ವಯಕ್ಕೆ ಸೇರಿದ ಗೊಗ್ಗಿ ಎಂಬಾತನ ಉಲ್ಲೇಖವಿದೆ.

ಚಿತ್ರದುರ್ಗ ಜಿಲ್ಲೆಯ ಬೇವಿನಹಳ್ಳಿಯ ಶಾಸನದಲ್ಲಿ ಚಾಳುಕ್ಯ ಸರ್ವಜ್ಞನೆಂದು ಕರೆಯಲಾದ ಪಂದಿಗನ ವಂಶಾವಳಿ ಈ ರೀತಿ ಇದೆ:

ವಿಕ್ರಮಾದಿತ್ಯ ನೃಪ
|
ಪಿಳ್ಳಿಮಯ್ಯ
|
ಕೀರ್ತಿಯುತ — ಕಲಿ ಕೊಂಕಣದೇವ
|
ರೇವಣ
|
ರಾಜಭೂಭುಜ
|
ಚಿಕ್ಕಿಯಣ್ಣ
|
ಗೊಗ್ಗಿ
|
ಶೂದ್ರಕಾಂಕ
|
ಪಂದಿಗ (ಪತ್ನಿ: ಜಕ್ಕಿ ಸುಂದರಿ)

ಇದೇ ಜಿಲ್ಲೆಯ ಇನ್ನೂ 3–4 ಶಾಸನಗಳಲ್ಲಿ ಪಂದಿಗನ ಹೆಸರು ಕಾಣಸಿಗುತ್ತದೆ. (ಬಿ.ಆರ್.ಜಿ.)

**ಚಿಂಚಿಲ :** ರಾಡೆನ್ಷಿಯ ಗಣದ ಚಿಂಚಿಲಿಡೀ ಕುಟುಂಬಕ್ಕೆ ಸೇರಿದ ಒಂದು ಸ್ತನಿ. ಚಿಂಚಿಲ ಲ್ಯಾನಿಗರ್ ಇದರ ವೈಜ್ಞಾನಿಕ ಹೆಸರು. ಪೆರು, ಚಿಲಿ, ಬೊಲೀವಿಯಗಳ ಆ್ಯಂಡೀಸ್ ಪರ್ವತಗಳ ಶಿಲಾಮಯ ಬಂಜರು ಪ್ರದೇಶಗಳಲ್ಲಿ ಕಾಣದೊರೆಯುತ್ತದೆ. ತನ್ನ ರೇಷ್ಮೆಯಂಥ ಹಾಗೂ ಬಲು ಬೆಲೆ ಬಾಳುವಂಥ ತುಪ್ಪಳಿನಿಂದಾಗಿ ಬಹಳ ಪ್ರಸಿದ್ಧವಾಗಿದೆ. ಗಾತ್ರದಲ್ಲೂ

ಸಾಮಾನ್ಯ ಆಕಾರದಲ್ಲೂ ಅಳಿಲನ್ನು ಹೋಲುವ ಪ್ರಾಣಿಯಿದು. ತಲೆಯೂ ಸೇರಿಕೊಂಡು ಇದರ ದೇಹದ ಉದ್ದ 22–38 ಸೆಂ.ಮೀ; ಇದಕ್ಕೆ ಸುಮಾರು 7–15 ಸೆಂ.ಮೀ ಉದ್ದದ ಬಾಲವೊಂದಿದೆ. ದೇಹದ ಮೇಲೆಲ್ಲ 2 ಸೆಂ.ಮೀ ದಪ್ಪದ ಅತ್ಯಂತ ಮೃದುವಾದ ತುಪ್ಪಳ ಇದೆ : ಅದರ ಬಣ್ಣ ಬೂದುಮಿಶ್ರಿತ ಮುತ್ತಿನಂತೆ. ಹೊಟ್ಟೆ ಮಾತ್ರ ಹಳದಿಮಿಶ್ರಿತ ಬಿಳಿ. ಬಾಲದ ಮೇಲೆ ಕೊಂಚ ಒರಟಾದ ಉದ್ದ ಕೂದಲುಗಳಿವೆ. ತನ್ನ ಅಗಲವಾದ ಮೂತಿ, ದೊಡ್ಡದೊಡ್ಡ ಕಪ್ಪುಬಣ್ಣದ ಹೊಳೆಯುವ ಕಣ್ಣುಗಳು, ದೊಡ್ಡ ಕಿವಿಗಳಿಂದಾಗಿ ಚಿಂಚಿಲ ಬಲು ಮುದ್ದಾಗಿ ಕಾಣುತ್ತದೆ. ಮೂತಿಯ ಮೇಲೆ ಉದ್ದವಾದ ಹಾಗೂ ಬಿರುಸಾದ ಕೂದಲುಗಳ ಮೀಸೆಯಿದೆ. ಕೆನ್ನೆಗಳಲ್ಲಿ ಅಪೂರ್ಣಾವಸ್ಥೆಯ ಸಂಚಿಗಳಿವೆ. ಮುಂಗಾಲಿನ ಪಾದಗಳಲ್ಲಿ ತಲಾ 4 ಮತ್ತು ಹಿಂಗಾಲಿನ ಪಾದಗಳಲ್ಲಿ ತಲಾ 3 ಬೆರಳುಗಳಿವೆ.

ಚಿಂಚಿಲ ಕಲ್ಲುಬಂಡೆಗಳ ಬಿರುಕುಗಳಲ್ಲಿ, ಡೊಗರುಗಳಲ್ಲಿ ವಾಸಿಸುತ್ತದೆ. ಇದು ಸಸ್ಯಾಹಾರಿ; ಬೀಜಗಳು, ಹಣ್ಣುಗಳು, ಕಾಳು, ಸಣ್ಣಪುಟ್ಟಗಿಡಗಳ ಚಿಗುರು, ಹಾವಸೆ ಮುಂತಾದವನ್ನು ತಿಂದು ಬದುಕುತ್ತದೆ. ಹೆಣ್ಣು ಚಿಂಚಿಲ ಒಂದು ಸಲಕ್ಕೆ 2–6 ಮರಿಗಳ ಲೆಕ್ಕದಲ್ಲಿ ವರ್ಷಕ್ಕೆ ಎರಡು ಬಾರಿ ಮರಿ ಹಾಕುತ್ತದೆ. ಗರ್ಭಾವಸ್ಥೆಯ ಅವಧಿ 110 ದಿವಸಗಳು. ಒಂದು ಗಂಡು ತನ್ನ ಜೀವಮಾನವಿಡೀ ಒಂದೇ ಒಂದು ಹೆಣ್ಣಿನೊಂದಿಗೆ ಮಾತ್ರ ಜೀವನ ಸಾಗಿಸುತ್ತದೆ. ಚಿಂಚಿಲದ ಇನ್ನೊಂದು ಸೋಜಿಗವೆಂದರೆ, ಹೆಣ್ಣು ಗಾತ್ರದಲ್ಲಿ ಗಂಡಿಗಿಂತ ದೊಡ್ಡದಿರುವುದು. ಅಂತೆಯೇ ಪ್ರಣಯಾಚರಣೆಯಲ್ಲಿ ಹೆಣ್ಣಿನದೇ ಮೇಲುಗೈ. ಮರಿಗಳು ಹುಟ್ಟಿದ ಕೆಲವೇ ಗಂಟೆಗಳಲ್ಲಿ ಓಡಾಡತೊಡಗುವುವಲ್ಲದೆ ಘನರೂಪದ ಆಹಾರವನ್ನು ಸೇವಿಸಲೂ ಸಮರ್ಥವಾಗುವುವು. 5–8 ತಿಂಗಳಿನಲ್ಲಿ ಇವಕ್ಕೆ ಲೈಂಗಿಕ ಪ್ರಬುದ್ಧತೆ ಬರುತ್ತದೆ. ಚಿಂಚಿಲದ ಆಯುಸ್ಸು ಸುಮಾರು 10 ವರ್ಷಗಳು.

ಚಿಂಚಿಲದಲ್ಲಿ ಮೂರು ಮುಖ್ಯ ಬಗೆಗಳನ್ನು ಗುರುತಿಸಬಹುದು:

1. ಪೆರುವಿನ ಅಥವಾ ರಾಜ ಚಿಂಚಿಲ–ಪೆರು ದೇಶದ ಪರ್ವತಸೀಮೆಗಳಲ್ಲಿ ವಾಸಿಸುತ್ತದೆ. ಇದರ ತುಪ್ಪಳು ಅತ್ಯಂತ ಉತ್ತಮವಾದುದೂ ಭಾರಿ ಬೆಲೆಯದೂ ಆಗಿದೆ.
2. ಬೊಲೀವಿಯದ ಚಿಂಚಿಲ–ಬೊಲೀವಿಯ ಮತ್ತು ಉತ್ತರ ಅರ್ಜಂಟೀನಗಳ ಆಂಡಿಸ್ ಪರ್ವತಗಳ ಪೂರ್ವದ ಇಳಿಜಾರುಗಳಲ್ಲಿ ಕಾಣಬರುತ್ತದೆ.
3. ಚಿಲಿಯ ಚಿಂಚಿಲ–ಚಿಲಿ ದೇಶದ ಪರ್ವತಗಳಲ್ಲಿ ಜೀವಿಸುತ್ತದೆ. ಇದನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ತುಪ್ಪಳಕ್ಕೋಸ್ಕರ ಸಾಕುತ್ತಾರೆ.

ಚಿಂಚಿಲಗಳ ಬೇಟೆ ಇಂಕಾಗಳ ಕಾಲದಿಂದಲೂ ರೂಢಿಯಲ್ಲಿದೆ ಎಂದು ಹೇಳಲಾಗಿದೆ. ಚಿಂಚಿಲಗಳು ಬಲು ಚುರುಕು ಪ್ರಾಣಿಗಳಾದ್ದರಿಂದ ಇವನ್ನು ಹಿಡಿಯುವುದು ಅತಿಪ್ರಯಾಸದ ಕೆಲಸ. ಆದರೂ ತುಪ್ಪಳಕ್ಕಾಗಿ ಇವನ್ನು ನೂರಾರು ವರ್ಷಗಳಿಂದ ಬೇಟೆಯಾಡುತ್ತ ಬಂದಿರುವುದರಿಂದ ಇವು ನಿರ್ವಂಶವಾಗುವ ಸ್ಥಿತಿ ಒದಗಿತ್ತು, ಆದರೆ 1920 ರಿಂದೀಚೆಗೆ ಚಿಲಿ ಮುಂತಾದ ದೇಶಗಳಲ್ಲಿ ಇವುಗಳ ಬೇಟೆಯನ್ನು ನಿಷೇಧಿಸಲಾಗಿದೆ. (ವಿ.ಕಿ.ವಿ.)

**ಚಿಂಚೋಳಿ:** ಕರ್ನಾಟಕ ರಾಜ್ಯದ ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು ; ಆ ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕು ಆ ಜಿಲ್ಲೆಯ ಈಶಾನ್ಯ ತುದಿಯಲ್ಲಿದೆ. ಉತ್ತರದಲ್ಲಿ ಬಿದರೆ ಜಿಲ್ಲೆಯ ಹುಮನಾಬಾದ್ ಮತ್ತು ಬಿದರೆ ತಾಲ್ಲೂಕುಗಳು ಮತ್ತು ಆಂಧ್ರ ಪ್ರದೇಶ. ಪೂರ್ವದಲ್ಲಿ ಆಂಧ್ರ ಪ್ರದೇಶ. ದಕ್ಷಿಣದಲ್ಲಿ ಸೇಡಂ ತಾಲ್ಲೂಕು, ಪಶ್ಚಿಮದಲ್ಲಿ

ಚಿತ್ತಾಪುರ ಮತ್ತು ಗುಲ್ಬರ್ಗ ತಾಲ್ಲೂಕುಗಳು–ಇವು ತಾಲ್ಲೂಕಿನ ಮೇರೆಗಳು. ವಿಸ್ತೀರ್ಣ 608.6 ಚ.ಮೈ. (1576.21ಚ.ಕಿಮೀ.); ಜನಸಂಖ್ಯೆ 2,23,477 (2001), ತಾಲ್ಲೂಕಿನಲ್ಲಿ ಚಿಂಚೋಳಿ ಪಟ್ಟಣವಲ್ಲದೆ 133 ಗ್ರಾಮಗಳಿವೆ. ಚಿಂಚೋಳಿ, ಐನಾಪುರ, ಕೋಡ್ಲಿ, ಸುಳೇಪೇಟೆ–ಇವು ತಾಲ್ಲೂಕಿನ ಕಂದಾಯ ವಲಯಗಳು.

ಚಿಂಚೋಳಿ ತಾಲ್ಲೂಕು ಸಮುದ್ರಮಟ್ಟದಿಂದ ಸಾಮಾನ್ಯವಾಗಿ 300–600 ಮೀ. ಎತ್ತರದಲ್ಲಿದೆ. ಸ್ಥೂಲವಾಗಿ ಉತ್ತರದಿಂದ ದಕ್ಷಿಣಕ್ಕೆ ನೆಲ ಇಳಿಜಾರಾಗಿದೆ. ತಾಲ್ಲೂಕಿನ ಮುಖ್ಯ ನದಿ ಮುಲ್ಲಾಮಾರಿ. ಇದು ವಾಯವ್ಯದಲ್ಲಿ ತಾಲ್ಲೂಕನ್ನು ಪ್ರವೇಶಿಸಿ, ಚಿಂಚೋಳಿ ಪಟ್ಟಣದವರೆಗೂ ಸ್ಥೂಲವಾಗಿ ಪೂರ್ವಾಭಿಮುಖವಾಗಿ ಹರಿದು ಅನಂತರ ದಕ್ಷಿಣಕ್ಕೆ ತಿರುಗಿ ಹರಿದು ಕಾಗಿಣಾ ನದಿಯನ್ನು ಸೇರುತ್ತದೆ.

ತಾಲ್ಲೂಕಿನ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಅರಣ್ಯಗಳಿವೆ. 70,087 ಎಕರೆಗಳಷ್ಟು ಅರಣ್ಯ ಪ್ರದೇಶ. ಇಡೀ ಗುಲ್ಬರ್ಗ ಜಿಲ್ಲೆಯ ಅರಣ್ಯದಲ್ಲಿ ಸುಮಾರು ಅರ್ಧಭಾಗ ಇಲ್ಲಿದೆ. ತೇಗ, ಬೀಟೆ, ಕರಿಮತ್ತಿ, ಹುರಗಲು ಮುಖ್ಯ ಮರಗಳು, ಇಲ್ಲಿಯದು ಮುಖ್ಯವಾಗಿ ಪರ್ಣಪಾತಿ ಅರಣ್ಯ. ಲಂಗೂರ್ ಕೋತಿ, ಜಿಂಕೆ, ನರಿಗಳಲ್ಲದೆ ಕೆಲವು ಚಿರತೆಗಳೂ ಕರಡಿಗಳೂ ಇವೆ. ಹಿಂದೆ ಹುಲಿಗಳಿದ್ದುವು. ಈಗ ಅವು ಇಲ್ಲವೇ ಇಲ್ಲವೆನ್ನಬಹುದು. ತೋಳ, ಕಿರುಬ, ಕಾಡುನಾಯಿಗಳೂ ಉಂಟು.

ಗುಲ್ಬರ್ಗ ಜಿಲ್ಲೆಯಲ್ಲಿಯೇ ಹಿಂದುಳಿದ ತಾಲ್ಲೂಕಾಗಿದ್ದ ಚಿಂಚೋಳಿ ಈಗ ಪ್ರಗತಿ ಹೊಂದುತ್ತಿದೆ. ಭೂಮಿ ಅಷ್ಟೇನೂ ಫಲವತ್ತಾದ್ದಲ್ಲ. ಇತ್ತೀಚೆಗೆ ಪ್ರಾರಂಭವಾಗಿ ಈಗ ಮುಗಿಯುವ ಹಂತದಲ್ಲಿರುವ ಚಂದ್ರಂಪಳ್ಳ ಜಲಾಶಯಕ್ಕೆ 140 ಲಕ್ಷ ರೂ.ಗಳಿಗಿಂತ ಹೆಚ್ಚು ವೆಚ್ಚ ತಗುಲಿದೆ. ಇದರಿಂದ 12,000 ಎಕರೆಗಳಿಗೂ ಹೆಚ್ಚು ಭೂಮಿಗೆ ಈ ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯ ಒದಗಲಿದೆ.

ತಾಲ್ಲೂಕಿನ ಮುಖ್ಯಸ್ಥಳ ಚಿಂಚೋಳಿ, ಇದು ಮುಲ್ಲಾಮಾರಿ ನದಿಯ ದಡದಲ್ಲಿದೆ. ಜನಸಂಖ್ಯೆ 17,158 (2001). ಗಿರಿಕಾನನ ಕಣಿವೆಗಳಿಂದ ಸುತ್ತುವರಿಯಲ್ಪಟ್ಟ ಚಿಂಚೋಳಿಯದು ರಮ್ಯವಾದ ಸನ್ನಿವೇಶ. ಹಿಂದೆ ಇಡೀ ಚಿಂಚೋಳಿ ತಾಲ್ಲೂಕು ನವಾಬ್ ಅಲಂ ಅಲಿ ಕೈರೋಜನ ಜಹಗೀರಾಗಿತ್ತು. ಚಿಂಚೋಳಿ ಪಟ್ಟಣದಲ್ಲಿ ಪ್ರಸಿದ್ಧವಾದ ದರಗಾ ಒಂದುಂಟು. ರಾಜನ ಅರಮನೆ ಇನ್ನೊಂದು ಪ್ರೇಕ್ಷಣೀಯ ಕಟ್ಟಡ. ರಾಯಿಮಾನ್‍ಘಡ ದೇವಸ್ಥಾನಕ್ಕೆ ಅನೇಕ ಭಕ್ತರು ಬರುತ್ತಾರೆ. ಚಿಂಚೋಳಿಯಲ್ಲಿ ಪ್ರೌಢಶಾಲೆ, ಆಸ್ಪತ್ರೆ ಮತ್ತು ತಾಲ್ಲೂಕು ಕಚೇರಿಗಳಿವೆ. 1953ರವರೆಗೂ ಚಿಂಚೋಳಿ ಪೌರ ಸಮಿತಿ ಅಲ್ಲಿಯ ತಹಸೀಲ್ದಾರರ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿತ್ತು. ಆ ವರ್ಷ ಅದಕ್ಕೆ ಪಟ್ಟಣ ಪೌರಸಭೆಯ ಸ್ಥಾನ ಲಭಿಸಿತು. ಪಟ್ಟಣಕ್ಕೆ ಸುರಕ್ಷಿತ ನೀರು ಸರಬರಾಯಿ ವ್ಯವಸ್ಥೆಯುಂಟು.

ಚಿಂಚೋಳಿಯ ಸುತ್ತಮುತ್ತಲೂ ನದೀನಾಲೆಗಳಿರುವುದರಿಂದ ಈಗಿರುವ ಊರಿಗೆ ಹೊಂದಿಕೊಂಡು ನಗರ ವಿಸ್ತರಣೆ ಮಾಡುವುದು ಸಾಧ್ಯವಿರಲಿಲ್ಲ. ಆದ್ದರಿಂದ ಪಕ್ಕದ ಚಂದಾಪುರವನ್ನು ಅಭಿವೃದ್ಧಿ ಪಡಿಸಬೇಕೆಂದು 310 ಎಕರೆ ಜಮೀನನ್ನು ವಶಪಡಿಸಿಕೊಂಡು ಅಲ್ಲಿ ಆಧುನಿಕ ಪಟ್ಟಣದ ಯೋಜನೆ ಹಾಕಲಾಗಿದೆ. ಸುಮಾರು 8,000 ಜನರಿಗೆ ವಸತಿ ಸೌಕರ್ಯ, ಪ್ರೌಢಶಾಲೆ, ಮಾರುಕಟ್ಟೆ, ಆರೋಗ್ಯ ಕೇಂದ್ರ, ಉದ್ಯಾನ, ಆಟದ ಮೈದಾನ, ಬಯಲು ನಾಟ್ಯಮಂದಿರ ಇತ್ಯಾದಿ ಸೌಕರ್ಯಗಳಿಗೆ ಅಲ್ಲಿ ಅವಕಾಶ ಒದಗಿಸಲಾಗಿದೆ. ಹತ್ತಿರದ ಮುಲ್ಲಾಮಾರಿ ನದಿಯಿಂದ ಅಲ್ಲಿಯ ನೀರಿನ ಪೂರೈಕೆಗೆ ಅನುಕೂಲವಿದೆ. ತುಂಗಭದ್ರಾ ಜಲವಿದ್ಯುತ್ತು ಈ ಪ್ರದೇಶಕ್ಕೆ ಸರಬರಾಜಾಗುತ್ತಿದೆ.

ರಾಜ್ಯದ ಇತರ ಭಾಗಗಳಿಂದ ಚಿಂಚೋಳಿ ತಲುಪಬೇಕಾದರೆ ತಾಂಡೂರು ನಿಲ್ದಾಣಕ್ಕೆ ರೈಲಿನಲ್ಲಿ ಹೋಗಿ ಅಲ್ಲಿಂದ ಬಸ್ ಮೂಲಕ ಹತ್ತೊಂಬತ್ತು 30ಕಿಮೀ. ಪ್ರಯಾಣ ಮಾಡ ಬೇಕಾಗುತ್ತಿತ್ತು. ಈಗ ಸೇಡಂ ತಾಲ್ಲೂಕಿನಿಂದ ನೇರವಾದ ರಸ್ತೆ ಸಿದ್ಧವಾಗಿದೆ. (ಜಿ.ಆರ್.ವಿ.)

**ಚಿಂತಾಮಣಿ :** ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಒಂದು ತಾಲ್ಲೂಕು; ಆ ತಾಲ್ಲೂಕಿನ ಕೇಂದ್ರ. ತಾಲ್ಲೂಕಿನ ಉತ್ತರದಲ್ಲಿ ಬಾಗೇಪಲ್ಲಿ ತಾಲ್ಲೂಕು ಮತ್ತು ಆಂಧ್ರ ಪ್ರದೇಶ, ಪಶ್ಚಿಮದಲ್ಲಿ ಶಿಡ್ಲಘಟ್ಟ ತಾಲ್ಲೂಕು, ಪೂರ್ವದಲ್ಲಿ ಶ್ರೀನಿವಾಸಪುರ ಮತ್ತು ದಕ್ಷಿಣದಲ್ಲಿ ಕೋಲಾರ ತಾಲ್ಲೂಕುಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 909.4 ಚ.ಕಿಮೀ. ಒಟ್ಟು 334 ಗ್ರಾಮಗಳೂ ಒಂದು ಪಟ್ಟಣವೂ ಇರುವ ಈ ತಾಲ್ಲೂಕಿನ ಹೋಬಳಿಗಳು ಚಿಂತಾಮಣಿ, ಅಂಬಾಜಿದುರ್ಗ, ಕಸಬಾ, ಕೈವಾರ, ಮುರಗಮಲ್ಲ, ಮುಂಗಾನಹಳ್ಳಿ ಮತ್ತು ಚಿಲಕಲನೇರ್ಪು. ಜನಸಂಖ್ಯೆ 2,71,246 (2001)

ತಾಲ್ಲೂಕಿನ ವಾಯುಗುಣ ಹಿತಕರವಾದ್ದು. ವಾರ್ಷಿಕ ಸರಾಸರಿ ಮಳೆ 690 ಮಿ.ಮೀ. ವರ್ಷದಲ್ಲಿ 45 ದಿನಗಳು ಮಳೆ ಬೀಳುತ್ತದೆ. ದಿನದ ಸರಾಸರಿ ಗರಿಷ್ಠ ಉಷ್ಣತೆ $29.6^{0}$ಸೆಂ. ಮತ್ತು ಕನಿಷ್ಠ ಉಷ್ಣತೆ $18.6^{0}$ ಸೆಂ. ಮೇ ಅತ್ಯಂತ ಹೆಚ್ಚು ಉಷ್ಣತೆಯ ತಿಂಗಳು; ಜನವರಿ ಅತ್ಯಂತ ಹೆಚ್ಚು ಚಳಿಯ ತಿಂಗಳು.

ಮರಳುಮಿಶ್ರಿತ ಮಣ್ಣುಳ್ಳ ಈ ತಾಲ್ಲೂಕಿನಲ್ಲಿ ವ್ಯವಸಾಯಯೋಗ್ಯ ಭೂಮಿ 2,14,232 ಎಕರೆಗಳು. 59,802 ಎಕರೆಗಳು ವ್ಯವಸಾಯಕ್ಕೊಳಪಟ್ಟಿವೆ. 5,450 ಎಕರೆಗಳು ಕಾಡಿನಿಂದಲೂ 90,647 ಎಕರೆಗಳು ಹುಲ್ಲುಗಾವಲಿನಿಂದಲೂ ಕೂಡಿದೆ (1965–66).

ತಾಲ್ಲೂಕಿನ ಉತ್ತರದಲ್ಲಿ ಕೆಲವೇ ಕಿಲೋಮೀಟರುಗಳಷ್ಟು ದೂರ ಪಾಪಘ್ನಿ ನದಿ ಹರಿದು ಆಂಧ್ರ ಪ್ರದೇಶವನ್ನು ಪ್ರವೇಶಿಸುತ್ತದೆ. ತಾಲ್ಲೂಕಿನಲ್ಲಿ 3,210 ಕೆರೆಗಳೂ, 2,000 ಬಾವಿಗಳೂ ಇವೆ (1965–66). ರಾಗಿ, ಬತ್ತ, ಕಬ್ಬು, ನೆಲಗಡಲೆ, ಮೆಣಸಿನಕಾಯಿ, ಈರುಳ್ಳಿ, ಆಲೂಗೆಡ್ಡೆ, ದ್ವಿದಳ ಧಾನ್ಯಗಳು ಇಲ್ಲಿಯ ಬೆಳೆಗಳು. ಮಾವಿನ ಹಣ್ಣು, ದ್ರಾಕ್ಷಿ ಮತ್ತು ದಾಳಿಂಬೆ ಮುಖ್ಯವಾದ ಹಣ್ಣುಗಳು.



ಚಿಂತಾಮಣಿಯ ಊರ ಮಧ್ಯದ ಬೆಟ್ಟ

ಇಲ್ಲಿ ಕುರಿ, ಹಂದಿ, ಕೋಳಿಗಳನ್ನು ಸಾಕುತ್ತಾರೆ, ಗ್ರಾಮಗಳಲ್ಲಿ ವ್ಯವಸಾಯದ ಜೊತೆಗೆ ಪಶುಪಾಲನೆಯೂ ಸಾಗುತ್ತದೆ. ಚಿಂತಾಮಣಿ, ಬಟ್ಲಹಳ್ಳಿ ಮತ್ತು ಬುರುಡಗುಂಟೆ ಗ್ರಾಮಗಳಲ್ಲಿ ಒಂದೊಂದು ಪಶುವೈದ್ಯಶಾಲೆಯುಂಟು. ಚಿಂತಾಮಣಿಯಲ್ಲಿ ಪಶುಗರ್ಭಧಾರಣ ಕೇಂದ್ರವೂ, ಹಂದಿ ಅಭಿವೃದ್ಧಿ ಕೇಂದ್ರವೂ ಇವೆ. ಚಿಂತಾಮಣಿಗೆ 12ಕಿಮೀ ದೂರದಲ್ಲಿ ನೈಋತ್ಯ ದಿಕ್ಕಿನಲ್ಲಿರುವುದು ಅಂಬಾಜಿದುರ್ಗ.ಸಮುದ್ರಮಟ್ಟದಿಂದ 1340 ಮೀ ಎತ್ತರದಲ್ಲಿರುವ ಈ ಬೆಟ್ಟದ ಮೇಲೆ ಟೀಪು ಸುಲ್ತಾನ್ ಕೋಟೆ ಕಟ್ಟಿಸಿದ. 1791ರಲ್ಲಿ ಬ್ರಿಟಿಷರು ಇದನ್ನು ವಶಪಡಿಸಿಕೊಂಡರು. ಈಗ ಅಂಬಾಜಿದುರ್ಗ ಚಿಂತಾಮಣಿ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ. ಚಿಂತಾಮಣಿಯಿಂದ 8 ಕಿಮೀ ದೂರದಲ್ಲಿರುವ ಮುರುಗಮಲೆ ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಪ್ರಾಗಿತಿಹಾಸಕಾಲದ ಅವಶೇಷಗಳುಂಟು. ಇಲ್ಲಿಯ ಮುಕ್ತೀಶ್ವರ ದೇವಾಲಯದ ಬಳಿ ನವಶಿಲಾಯುಗದ ಪಳೆಯುಳಿಕೆಗಳು ದೊರಕಿವೆ.

ಚಿಂತಾಮಣಿಯಲ್ಲಿ ದೊರಕುವ ಬಿಳಿಯ ಜೇಡಿಮಣ್ಣು ಪಿಂಗಾಣಿ ಉಪಕರಣಗಳ ತಯಾರಿಕೆಗೆ ಉಪಯುಕ್ತವಾದದ್ದು. ತಾಲ್ಲೂಕಿನಲ್ಲಿ ರೇಷ್ಮೆ, ಸುಗಂಧ ದ್ರವ್ಯ, ಅಗರಬತ್ತಿ ತಯಾರಾಗುತ್ತವೆ. ಇವು ಆಂಧ್ರ ಪ್ರದೇಶ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಿಗೆ ಸಾಗುತ್ತವೆ. ಮರ ಕುಯ್ಯುವ ಉದ್ಯಮವೂ ಉಂಟು. ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾಗಿ ಈ ತಾಲ್ಲೂಕಿನಲ್ಲಿ ಕೈಗಾರಿಕಾ ಸಹಕಾರ ಸಂಘಗಳು ಇವೆ. ಚಿಂತಾಮಣಿ ತಾಲ್ಲೂಕಿನ ಸಿಂಗ್ರಪಳ್ಳಿಯಲ್ಲಿ ಫಾಲ್ಗುಣ ಶುದ್ಧ ಏಕಾದಶಿಯಂದು ನಡೆಯುವ ಲಕ್ಷ್ಮೀನರಸಿಂಹಸ್ವಾಮಿ ಜಾತ್ರೆ, ಕೋನಕುಂಟ್ಲು ಗ್ರಾಮದಲ್ಲಿ ಆಷಾಢ ಶುದ್ಧ ಪೌರ್ಣಿಮಿಯಂದು ನಡೆಯುವ ವೆಂಕಟರಮಣಸ್ವಾಮಿ ಜಾತ್ರೆ, ಆಲಂಬಗಿರಿ ಗ್ರಾಮದಲ್ಲಿ ಚೈತ್ರ ಶುದ್ಧ ಪೌರ್ಣಿಮಿಯಂದು ನಡೆಯುವ ವೆಂಕಟರಮಣಸ್ವಾಮಿ ಜಾತ್ರೆ ಮತ್ತು ಬುರುಡಗುಂಟೆ ಗ್ರಾಮದಲ್ಲಿ ಚೈತ್ರ ಬಹುಳ ತ್ರಯೋದಶಿಯಂದು ನಡೆಯುವ ಗಂಗಮ್ಮ ದೇವರ ಜಾತ್ರೆ–ಇವು ಪ್ರಸಿದ್ಧವಾದವು. ಜಾತ್ರೆಗಳ ಕಾಲದಲ್ಲಿ ದನಗಳ ಪ್ರದರ್ಶನವೂ ಅವುಗಳ ವ್ಯಾಪಾರವೂ ನಡೆಯುತ್ತವೆ.

ಚಿಂತಾಮಣಿ ಪಟ್ಟಣ ಕೋಲಾರಕ್ಕೆ ವಾಯವ್ಯದಲ್ಲಿ 43 ಕಿಮೀ ದೂರದಲ್ಲಿದೆ. ಯಶವಂತಪುರ–ಬಂಗಾರಪೇಟೆ ನ್ಯಾರೋ ಗೇಜ್ ರೈಲುಮಾರ್ಗ ಇದರ ಮುಖಾಂತರ ಹಾದುಹೋಗುತ್ತವೆ. ಪಟ್ಟಣದ ಜನಸಂಖ್ಯೆ 65,456 (2001). ನಗರದ ವಿಸ್ತೀರ್ಣ 11.14 ಚ.ಕಿಮೀ ಚಿಂತಾಮಣಿ ರಾವ್ ಎಂಬ ಮರಾಠಿ ನಾಯಕ ಈ ಪಟ್ಟಣವನ್ನು ಸ್ಥಾಪಿಸಿದನೆಂದೂ ಆದ್ದರಿಂದ ಇದಕ್ಕೆ ಆತನ ಹೆಸರೇ ಬಂದಿದೆಯೆಂದೂ ಹೇಳಲಾಗಿದೆ.

ಚಿಂತಾಮಣಿ ಪೌರಸಭಾ ಪಟ್ಟಣ. ನಗರಕ್ಕೆ ಕನ್ನಂಪಲ್ಲಿ ಕೆರೆ ಮತ್ತು ಕೊಳವೆ ಬಾವಿಗಳಿಂದ ನೀರು ಸರಬರಾಜಾಗುತ್ತದೆ. ವಿದ್ಯುತ್ ಸೌಕರ್ಯವುಂಟು. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಾಲೆಗಳೂ, ವೃತ್ತಿಶಿಕ್ಷಣಶಾಲೆ ಮತ್ತು ಪ್ರಥಮ ದರ್ಜೆ ಕಾಲೇಜೂ

ಆಸ್ಪತ್ರೆಗಳೂ ಇವೆ. ಅಗರಬತ್ತಿ ತಯಾರಿಕೆ, ಚಿನ್ನ-ಬೆಳ್ಳಿ ಕೆಲಸಗಳಿಗೆ ಚಿಂತಾಮಣಿ ಪ್ರಸಿದ್ಧವಾಗಿದೆ. ಇದೊಂದು ವ್ಯಾಪಾರಕೇಂದ್ರ, ಕೋಲಾರ ಜಿಲ್ಲೆಯ ಪ್ರಥಮ ನಿಯಂತ್ರಿತ ಮಾರುಕಟ್ಟೆ ಆರಂಭವಾದ್ದು ಚಿಂತಾಮಣಿಯಲ್ಲೆ. ಇಲ್ಲಿಂದ ತಾಲ್ಲೂಕಿನ ಮತ್ತು ಹೊರಗಿನ ಮುಖ್ಯ ಸ್ಥಳಗಳಿಗೆ ರಸ್ತೆಗಳಿವೆ.

(ಎಂ.ಎಫ್.ಕೆ.)

**ಚಿಂತಾಮಣಿ, ಚಿರ್ರವೂರಿ ಯಜ್ಞೇಶ್ವರ :** 1880–1941. ಪ್ರತಿಭಾವಂತ ಪತ್ರಿಕೋದ್ಯಮಿ, ರಾಜಕಾರಣಿ, ಲೇಖಕ. ಆಂಧ್ರಪ್ರದೇಶದ ವಿಜಯನಗರಂನಲ್ಲಿ ಜನನ, ಅಲ್ಲೇ ವಿದ್ಯಾಭ್ಯಾಸ. ಕೇವಲ 18ನೆಯ ವಯಸ್ಸಿನಲ್ಲಿ ವೈಜಾಗ್ ಸ್ಪೆಕ್ಟೇಟರ್ ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಕೆಲಸಮಾಡಿ, ಅಲಹಾಬಾದಿಗೆ ಬಂದು ಅಲ್ಲಿಯ ಇಂಡಿಯನ್ ಪೀಪಲ್ ಎಂಬ ಪತ್ರಿಕೆ ಸೇರಿದರು. ಅಲ್ಲೇ 1909ರಲ್ಲಿ ಲಿಬರಲ್ ಪಕ್ಷದ ಅಂಗವಾಗಿ ಲೀಡರ್ ಎಂಬ ಇಂಗ್ಲಿಷ್ ದಿನಪತ್ರಿಕೆ ಸ್ಥಾಪನೆಯಾದಾಗ ಅದನ್ನು ಸೇರಿಕೊಂಡರು. 1910ರಲ್ಲಿ ಅದರ ಮುಖ್ಯ ಸಂಪಾದಕರಾಗಿ ನೇಮಕವಾಗಿ ತಮ್ಮ ಪ್ರತಿಭೆಯಿಂದ ಆ ಪತ್ರಿಕೆಯ ಯಶಸ್ಸಿಗೆ ಕಾರಣರಾದರು. ಅಂದಿನಿಂದ ತಮ್ಮ ಜೀವನದ ಕೊನೆಯವರೆಗೂ, ಮಧ್ಯೆ ಅವರು ಮಂತ್ರಿಗಳಾಗಿದ್ದ ಎರಡು ವರ್ಷ ಬಿಟ್ಟು, ಆ ಪತ್ರಿಕೆಯ ಸಂಪಾದಕರಾಗಿಯೇ ಇದ್ದರು.

ಕಾನೂನುಬದ್ಧ ರಾಜಕೀಯಾಚರಣೆಯಲ್ಲಿ ತೀವ್ರ ವಿಶ್ವಾಸವಿಟ್ಟಿದ್ದ ಅವರು ಗಾಂಧೀಜಿಯವರ ಅಸಹಕಾರ ಚಳವಳಿಯನ್ನು ಕಟುವಾಗಿ ವಿರೋಧಿಸುತ್ತಿದ್ದರು; ಆಳುತ್ತಿದ್ದ ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಯನ್ನೂ ತೀಕ್ಷ್ಣವಾಗಿ ಟೀಕಿಸುತ್ತಿದ್ದರು.

ಎಂಥ ಕಠಿಣ ಪರಿಸ್ಥಿತಿಯಲ್ಲೂ ಅವರು ತಮ್ಮ ಸಂಪಾದಕೀಯ ಸ್ವಾತಂತ್ರ್ಯವನ್ನು ಧೈರ್ಯದಿಂದ ಎತ್ತಿಹಿಡಿದರು. ಪತ್ರಿಕಾ ಸಂಸ್ಥೆಯ ನಿರ್ದೇಶಕರಾಗಿದ್ದ ಮದನ ಮೋಹನ ಮಾಲವೀಯ ಹಾಗೂ ಮೋತಿಲಾಲ್ ನೆಹ್ರು ಅವರು ಪತ್ರಿಕೆಯ ಧೋರಣೆಯನ್ನು ರಾಷ್ಟ್ರೀಯ ಕಾಂಗ್ರೆಸಿನ ಕಡೆಗೆ ವಾಲಿಸಬೇಕೆಂದು ಪ್ರಯತ್ನಪಟ್ಟಾಗ ಅವರೊಂದಿಗೂ ಸೆಣಸಿ, ತಮ್ಮ ಸಂಪಾದಕೀಯ ಸ್ವಾತಂತ್ರ್ಯವನ್ನುಳಿಸಿಕೊಂಡು ಪತ್ರಿಕೆಯ ಲಿಬರಲ್ ಪಕ್ಷದ ಧೋರಣೆಯನ್ನೇ ಮುಂದುವರಿಸಿಕೊಂಡು ಬಂದರು. ಒಮ್ಮೆ ಅವರು ನ್ಯಾಯಾಲಯ ನಿಂದನೆಯ ಆಪಾದನೆಗೆ ಗುರಿಯಾದಾಗ, ವಿಧಿಸಲಾದ ಜುಲ್ಮಾನೆಯನ್ನು ತೆತ್ತರೇ ವಿನಾ ಕ್ಷಮಾಪಣೆ ಕೇಳಿಕೊಳ್ಳಲಿಲ್ಲ.

ಲಿಬರಲ್ ಪಕ್ಷದ ನಾಯಕರಲ್ಲೊಬ್ಬರಾಗಿ ಚಿಂತಾಮಣಿಯವರು ರಾಜಕೀಯದಲ್ಲೂ ಖ್ಯಾತನಾಮರಾದರು. 1916–1923ರಲ್ಲಿ, ಮತ್ತು 1927–36ರಲ್ಲಿ, ಸಂಯುಕ್ತ ಪ್ರಾಂತ್ಯಗಳ(ಈಗಿನ ಉತ್ತರ ಪ್ರದೇಶ) ವಿಧಾನಸಭೆಯ ಸದಸ್ಯರಾಗಿದ್ದರು. 1921–1923ರಲ್ಲಿ ಪ್ರಾಂತ್ಯ ಸರ್ಕಾರದ ಶಿಕ್ಷಣ ಹಾಗೂ ಕೈಗಾರಿಕೆ ಮಂತ್ರಿಯಾಗಿ ಕೆಲಸ ಮಾಡಿದರು. 1918–1920ರಲ್ಲಿ ಅವರು ಭಾರತದ ರಾಷ್ಟ್ರೀಯ ಲಿಬರಲ್ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳಾಗಿದ್ದರಲ್ಲದೆ 1920ರಲ್ಲೂ 1931ರಲ್ಲೂ ಅದರ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. 1930–31ರಲ್ಲಿ ಲಂಡನಿನಲ್ಲಿ ಸೇರಿದ್ದ ದುಂಡು ಮೇಜಿನ ಪರಿಷತ್ತಿನಲ್ಲಿ ಚಿಂತಾಮಣಿಯವರು ಭಾರತದ ಬ್ರಿಟಿಷ್ ಪ್ರಾಂತ್ಯಗಳ ಪ್ರತಿನಿಧಿಗಳಲ್ಲೊಬ್ಬರಾಗಿ ಭಾಗವಹಿಸಿದ್ದರು.

ಅಸಾಧಾರಣ ಜ್ಞಾಪಕಶಕ್ತಿ, ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವ, ಕಾನೂನುಬದ್ಧ ರಾಜಕಾರಣದಲ್ಲಿ ಅಚಲ ವಿಶ್ವಾಸ, ತಾವು ನಂಬಿದ ತತ್ತ್ವಗಳಲ್ಲಿ ಅತೀವ ನಿಷ್ಠೆ, ಯಾವ ಪ್ರಲೋಭನಕ್ಕೂ ಒಲಿಯದ, ಯಾವ ಸೆಳೆತಕ್ಕೂ ಮಣಿಯದ ಕೆಚ್ಚೆದೆ, ಇವುಗಳಿಂದ ಚಿಂತಾಮಣಿಯವರು ಸಮಕಾಲೀನ ರಾಜಕೀಯ ರಂಗದಲ್ಲಿ ಒಂದು ಪ್ರತಿಷ್ಠಿತ ಸ್ಥಾನ ಪಡೆದಿದ್ದರು.

ಚಿಂತಾಮಣಿಯವರು ಇಂಗ್ಲಿಷಿನಲ್ಲಿ ಉಜ್ವಲ ಭಾಷಣಕಾರರೂ, ಪ್ರತಿಭಾನ್ವಿತ ಲೇಖಕರೂ ಆಗಿದ್ದರು. ಅವರ ಪುಸ್ತಕಗಳಲ್ಲಿ ಮುಖ್ಯವಾದವು ಇವು: ಇಂಡಿಯನ್ ಸೋಷಿಯಲ್ ರಿಫಾರ್ಮ್ (1901), ಇಂಡಿಯನ್ ಪಾಲಿಟಿಕ್ಸ್ ಸಿನ್ಸ್ ದಿ ಮ್ಯೂಟಿನಿ (1937). ಫಿರೋಜ್ ಷಾ ಮೆಹ್ತಾರವರ ಭಾಷಣ ಲೇಖನಗಳ ಸಂಗ್ರಹವನ್ನೂ ಇವರು ಪ್ರಕಟಿಸಿದ್ದಾರೆ (1905).

1939ರಲ್ಲಿ ಚಿಂತಾಮಣಿಯವರು ಬ್ರಿಟಿಷ್ ಚಕ್ರವರ್ತಿಯಿಂದ ನೈಟ್ ಪದವಿ ಪಡೆದಿದ್ದರು.

(ಟಿ.ಎಸ್.ಎಸ್.ಆರ್.ಎ.)

**ಚಿಂದೋಡಿ ಲೀಲಾ :** 1940–2010. ಸುಮಾರು ಎಂಟು ದಶಕಗಳ ಇತಿಹಾಸವುಳ್ಳ ಕನ್ನಡ ವೃತ್ತಿನಾಟಕ ಮಂಡಲಿಯ ಒಡತಿ. ಶತಮಾನೋತ್ಸವ, ಸಹಸ್ರಮಾನೋತ್ಸವ ಗಳನ್ನಾಚರಿಸಿದ ನಾಟಕಗಳ ಪ್ರಧಾನ ಅಭಿನೇತ್ರಿ, ಕನ್ನಡ ವೃತ್ತಿರಂಗಭೂಮಿಯಲ್ಲಿ ಇನ್ನೂ ಸರಿಗಟ್ಟಲಾಗದ ದಾಖಲೆಗಳನ್ನು ಸ್ಥಾಪಿಸಿದ ಸಾಹಸಿ. ಜನ್ಮ ದಾವಣಗೆರೆಯಲ್ಲಿ 1941ರಲ್ಲಿ. ತಂದೆ ಚಿಂದೋಡಿ ವೀರಪ್ಪ. ಪ್ರಖ್ಯಾತ ಗಾಯಕರು, ನಟರು. ತಾಯಿ ಶಾಂತಮ್ಮ ಗೃಹಿಣಿ. ಚಿಂದೋಡಿ ವೀರಪ್ಪ ದಾವಣಗೆರೆಯಲ್ಲಿ ಸ್ಥಾಪಿಸಿದ್ದ ಶ್ರೀಗುರು ಕರಿಬಸವ ರಾಜೇಂದ್ರ ನಾಟಕಮಂಡಲಿ (ಕೆ.ಬಿ.ಆರ್. ಡ್ರಾಮ ಕಂಪನಿ) ಅಭಿನಯಸುತ್ತಿದ್ದ ಗುಲೇಬಕಾವಲಿ, ಕಾಳಿದಾಸ, ಸಂಪೂರ್ಣ ರಾಮಾಯಣ, ಗುಣಸಾಗರಿ ಅತ್ಯಂತ ಜನಪ್ರಿಯ ನಾಟಕಗಳಾಗಿದ್ದವು. ಮೈಸೂರಿನ ಅರಸರಾದ ಕೃಷ್ಣರಾಜ ಒಡೆಯರು ವೀರಪ್ಪನವರ ಅಭಿನಯ ಗಾಯನವನ್ನು ಮೆಚ್ಚಿ 'ಗಾಯನ ಗಂಧರ್ವ' ಎಂಬ ಬಿರುದು, ಚಿನ್ನದ ತೋಡಾ ನೀಡಿ ಗೌರವಿಸಿದ್ದರು. 'ಚಿನ್ನದ ತೋಡಾ' ತೊಟ್ಟ ವೀರಪ್ಪ, ಚಿಂದೋಡಿ ವೀರಪ್ಪನಾಗಿ ಪ್ರಸಿದ್ಧರು. 'ಚಿಂದೋಡಿ' ಮನೆತನದ ಹೆಸರಾಗಿ ಬಳಕೆಗೆ ಬಂತು.

ಚಿಂದೋಡಿ ವೀರಪ್ಪನವರ ಐದು ಮಂದಿ ಗಂಡು, ನಾಲ್ಕು ಹೆಣ್ಣುಮಕ್ಕಳಲ್ಲಿ ಲೀಲಮ್ಮ ಕೊನೆಯವರು; ಗಂಡು ಮಕ್ಕಳೆಲ್ಲಾ ಕಂಪನಿಯ ನಟರು. ಸಂಪ್ರದಾಯಸ್ಥ ವೀರಶೈವ

ಕುಟುಂಬ. ಹೆಣ್ಣುಮಕ್ಕಳು ನಾಟಕ ರಂಗಪ್ರವೇಶ ಮಾಡುವುದು ನಿಷಿದ್ಧ ವಾಗಿತ್ತು. ಚಿಂದೋಡಿ ವೀರಪ್ಪನವರ ಕಂಪನಿಯಲ್ಲಿ ಸ್ತ್ರೀ ಪಾತ್ರಗಳನ್ನು ಅವರ ಮಕ್ಕಳೇ ಮಾಡುತ್ತಿದ್ದರು. ಈ ಸಂಪ್ರದಾಯಕ್ಕೆ ವಿರುದ್ಧವಾಗಿ ಚಿಂದೋಡಿ ಲೀಲಾ ತಮ್ಮ 5ನೇ ವಯಸ್ಸಿನಲ್ಲಿ ರಂಗಪ್ರವೇಶ ಮಾಡಿದರು. 'ಶಿವಯೋಗಿ ಸಿದ್ಧರಾಮ' ನಾಟಕದಲ್ಲಿ ಬಾಲಸಿದ್ಧರಾಮನ ಪಾತ್ರ ಬಾಲನಟಿಯ ಅಭಿನಯ ಜನಕ್ಕೆ ಮೆಚ್ಚುಗೆಯಾಯಿತು. ಪುರುಷರೇ ಸ್ತ್ರೀಪಾತ್ರ ನಿರ್ವಹಿಸುತ್ತಿದ್ದ ಕಾಲ; ಬದಲಾವಣೆ ಮಾಡಬಾರದೇಕೆ? ಎಂಬ ಕಲ್ಪನೆ ಬಂದದ್ದೇ ತಡ. ಲೀಲಮ್ಮ ತಮ್ಮ 14ನೇ ವಯಸ್ಸಿನಲ್ಲಿ 'ಹಳ್ಳಿಹುಡುಗಿ' ನಾಟಕದಲ್ಲಿ ಪ್ರಧಾನ ಸ್ತ್ರೀ ಪಾತ್ರ ನಿರ್ವಹಿಸಿದರು. ಚೂಟಿಯಾದ ಚೆಲುವಿನ ಕಿಶೋರಿಯ ಅಭಿನಯಕ್ಕೆ ಸರ್ವತ್ರ ಮೆಚ್ಚುಗೆ, ಚಿಂದೋಡಿ ಲೀಲಾ ಹಿಂತಿರುಗಿ ನೋಡಲಿಲ್ಲ.

1960 ರಿಂದ 1975ರವರೆಗಿನ ಅವಧಿಯಲ್ಲಿ ಕೆ.ಬಿ.ಆರ್. ಡ್ರಾಮ ಕಂಪನಿ ಗುಣಸಾಗರಿ, ಲಂಕಾದಹನ, ಚಿತ್ರಾಂಗದ, ಶಾಕುಂತಲ, ಹಳ್ಳಿಹುಡುಗಿ ಮೊದಲಾದ ನಾಟಕಗಳನ್ನು ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಸಹಸ್ರಾರು ಪ್ರದರ್ಶನಗಳನ್ನು ನೀಡಿತ್ತು. ಆದರೆ ಇವುಗಳಲ್ಲಿ ಅತ್ಯಂತ ಜನಪ್ರಿಯವಾದುದು, ಚಿಂದೋಡಿ ಲೀಲಾ ಪಾತ್ರ – 'ಹಳ್ಳಿ ಹುಡುಗಿ' ಪಾತ್ರ. ಕರ್ನಾಟಕದಲ್ಲಿ ಆ ಪಾತ್ರ ಮನೆ ಮಾತಾಯಿತು. ಲೀಲಾ ಅವರನ್ನು 'ಹಳ್ಳಿ ಹುಡುಗಿ' ಎಂದೇ ಅಭಿಮಾನಿ ಪ್ರೇಕ್ಷಕರು ಗುರುತಿಸುತ್ತಿದ್ದರು.

ಗಡಿನಾಡಿನಲ್ಲಿ ಕನ್ನಡದ ಜಯಭೇರಿ ಬಾರಿಸುವ ಬಯಕೆ, ಬೆಳಗಾವಿಯಲ್ಲಿ ಕ್ಯಾಂಪ್. ಅಭಿನಯಿಸಿದ ನಾಟಕಗಳೆಲ್ಲಾ ಶತದಿನೋತ್ಸವ ಆಚರಿಸಿದವು. ಗಡಿಭಾಗದಲ್ಲಿ 2000 ಕನ್ನಡ ನಾಟಕಗಳ ಪ್ರದರ್ಶನ ನೀಡಿದ್ದಕ್ಕಾಗಿ ಕರ್ನಾಟಕ ರಾಜ್ಯಪಾಲ ಎ.ಎನ್ ಬ್ಯಾನರ್ಜಿ ಅಧ್ಯಕ್ಷತೆಯಲ್ಲಿ ವಿಶೇಷ ಉತ್ಸವವೇ ನಡೆಯಿತು. ಗಡಿನಾಡಿನಲ್ಲಿ ನಡೆಸಿದ ಕಲಾಸೇವೆ ಮೆಚ್ಚಿ ಸರ್ಕಾರ ತಾತ್ಕಾಲಿಕ ರಂಗಮಂದಿರ ನಿರ್ಮಿಸಿದ್ದ ಜಮೀನನ್ನೇ 30 ವರ್ಷಗಳ ಗುತ್ತಿಗೆಗೆ ನೀಡಿತು. ಅಲ್ಲಿ ಈಗ 'ಚಿಂದೋಡಿ ಲೀಲಾ ರಂಗಮಂದಿರ' ನಿರ್ಮಾಣವಾಗಿದೆ. ಬೆಳಗಾವಿಯ ಉತ್ತರಭಾಗದ ಜನರಿಗೆ ಅನುಕೂಲವಾಗಲೆಂದು, ಸದಾಶಿವನಗರದಲ್ಲಿ ಕೆ.ಬಿ.ಆರ್. ಕನ್ನಡ ಸಂಸ್ಕೃತಿ ಕೇಂದ್ರ ರಂಗಮಂದಿರ ನಿರ್ಮಿಸಿದ್ದಾರೆ.

1950–60ರ ದಶಕದ ನಂತರ ಹಿರಣ್ಣಯ್ಯ ಮಿತ್ರಮಂಡಲಿಯಂತಹ ಸಂಸ್ಥೆಗಳನ್ನು ಬಿಟ್ಟರೆ, ವೃತ್ತಿಪರ ನಾಟಕ ಸಂಸ್ಥೆಗಳ ಚಟುವಟಿಕೆ ಬೆಂಗಳೂರಿನಲ್ಲಿ ಕಂಡುಬರುತ್ತಿರಲಿಲ್ಲ. ಚಿಂದೋಡಿ ಲೀಲಾ ಬೆಂಗಳೂರಿನಲ್ಲಿ ತಮ್ಮ ಅದೃಷ್ಟಪರೀಕ್ಷೆ ಮಾಡಲೆಂದು 1995ರ ಅಕ್ಟೋಬರ್‌ನಲ್ಲಿ ಬಂದರು. ಬೆಂಗಳೂರಿನ ಹೃದಯಭಾಗದಲ್ಲಿರುವ ಗುಬ್ಬಿ ವೀರಣ್ಣ ಚಿತ್ರಮಂದಿರದಲ್ಲಿ ಆರಂಭವಾದ 'ಪೊಲೀಸನ ಮಗಳು' ನಾಟಕ ಸತತ ಮೂರು ವರ್ಷಗಳು ನಡೆಯಿತು. ದಿನಕ್ಕೆರಡು ಪ್ರದರ್ಶನ. ಒಂದೇ ನಾಟಕ, ಒಂದೇ ತಂಡದಿಂದ. ದಿನಕ್ಕೆ ಎರಡು ಮೂರು ಪ್ರದರ್ಶನಗಳಂತೆ ನಿರಂತರವಾಗಿ 1135 ಪ್ರದರ್ಶನಗಳಾದವು. ಈ ಯಶಸ್ಸಿನ ಕೇಂದ್ರಬಿಂದು, ಪ್ರಧಾನ ಪಾತ್ರಧಾರಿ ಚಿಂದೋಡಿ ಲೀಲಾ.

ಬೆಂಗಳೂರಿನಲ್ಲಿ ಅಪೂರ್ವ ಯಶ ಸಾಧಿಸಿದ 'ಪೊಲೀಸನ ಮಗಳು' ಕರ್ನಾಟಕದ ಎಲ್ಲೆಡೆ ಪ್ರದರ್ಶಿತವಾಗಿದೆ. ಒಟ್ಟು 3340 ಪ್ರದರ್ಶನ ಕಂಡ ನಾಟಕ, ಗಿನ್ನೆಸ್ ದಾಖಲೆಗೆ ಸೇರಲಿರುವ ವೃತ್ತಿ ನಾಟಕ ಸಂಸ್ಥೆಯ ನಾಟಕ. ಚಿಂದೋಡಿ ಲೀಲಾ ಪ್ರಧಾನ ಭೂಮಿಕೆಯಲ್ಲಿರುವ ಇನ್ನೊಂದು ನಾಟಕ 'ಧರ್ಮದ ದೌರ್ಜನ್ಯ' ಅನೇಕ ಊರುಗಳಲ್ಲಿ

ಶತದಿನೋತ್ಸವ ಪ್ರದರ್ಶನಗೊಂಡ ನಾಟಕ. ಈ ನಾಟಕದಲ್ಲಿ ಚಿಂದೋಡಿ ಲೀಲಾ ಪೊಲೀಸ್ ಸೂಪರಿಂಟೆಂಡ್ 'ಜ್ಯೋತಿ' ಯಾಗಿ ಅಭಿನಯಿಸಿದ್ದಾರೆ. ಹಳ್ಳಿ ಹುಡುಗಿಯಂತೆಯೇ ಪ್ರಸಿದ್ಧವಾದ ಪಾತ್ರ. ಶಾಕುಂತಲ, ಚಿತ್ರಾಂಗದ, ಲಂಕಾದಹನ, ಮಹರಾವಣ, ಸಿಂಡಿಕೇಟ್–ಇಂಡಿಕೇಟ್, ಬ್ರಹ್ಮಚಾರಿಯ ಮಗ–ಇವು ಚಿಂದೋಡಿ ಲೀಲಾ ಅಭಿನಯದ ನಾಟಕಗಳು–ಜನಪ್ರಿಯ ನಾಟಕಗಳು.

ಚಿಂದೋಡಿ ವೀರಪ್ಪ 1928ರಲ್ಲಿ ಸ್ಥಾಪಿಸಿದ ಕೆ.ಬಿ.ಆರ್. ಡ್ರಾಮ ಕಂಪನಿ, ಇಂದಿಗೂ ಜೀವಂತ. ಕುಟುಂಬದ ಮೊದಲ 'ಬಂಗಾರ ತೋಡಾ'ಧಾರಿಯಾದ ವೀರಪ್ಪ ನಿಧನಾನಂತರ, ಅವರ ಹಿರಿಯ ಮಗ ಚಿಂದೋಡಿ ವೀರಪ್ಪ ನೇತೃತ್ವದಲ್ಲಿ ಕಂಪನಿ ಮುಂದುವರೆಯಿತು. ಎರಡನೇ ವೀರಪ್ಪನವರ ನಿಧನಾನಂತರ, 1978ರಲ್ಲಿ ಕಂಪನಿ ಕುಟುಂಬದಲ್ಲಿ ಮೂರು ಕವಲಾಗಿ ಹಂಚಿಹೋಯಿತು. ಕೆಲಕಾಲಾನಂತರ ಆ ಮೂರು ಸಂಸ್ಥೆಗಳು ಚಿಂದೋಡಿ ಲೀಲಾ ನೇತೃತ್ವದಲ್ಲಿ ಮುನ್ನಡೆದವು. ಈಗ ಅವು ಮೂರು ಮತ್ತೆ ಒಂದಾಗಿವೆ; ಲೀಲಾ ಸಾರಥ್ಯದಲ್ಲಿ ಮುಂದುವರೆದಿವೆ. ಸಂಸ್ಥೆಯ ಕೇಂದ್ರ ಸ್ಥಾನವಾದ ದಾವಣಗೆರೆಯಲ್ಲಿ 'ಚಿಂದೋಡಿ ಲೀಲಾ ಕಲಾಕ್ಷೇತ್ರ' ನಿರ್ಮಾಣ ಕಾರ್ಯ ಆರಂಭವಾಗಿದೆ. ಆಧುನಿಕ ಉಪಕರಣಗಳಿಂದ ಕೂಡಿದ ಅತ್ಯಾಧುನಿಕ ರಂಗಮಂದಿರ ಸಿದ್ಧವಾಗುತ್ತಿದೆ.

ಕನ್ನಡ ವೃತ್ತಿಪರ ನಾಟಕ ಸಂಸ್ಕೃತಿ ಪರಿಚಯ ಕಾರ್ಯಕ್ರಮದ ಅಂಗವಾಗಿ 'ಕಾಸರಗೋಡಿನಿಂದ ಕಾಶಿಯವರೆಗೆ' ರಂಗಯಾತ್ರೆ ನಡೆಸಿದ್ದಾರೆ. ಈ ರಂಗಯಾತ್ರೆ ಕಾಲದಲ್ಲಿ ಅನೇಕ ನಗರಗಳಲ್ಲಿ ವಿಚಾರಸಂಕಿರಣ ನಡೆಸಿ, ನಾಟಕಗಳನ್ನು ಪ್ರದರ್ಶಿಸಲಾಯಿತು. ಕರ್ನಾಟಕ ಸರಕಾರದ ನೆರವಿನಿಂದ ಬ್ರಿಟನ್ ಮತ್ತಿತರ ದೇಶಗಳಿಗೆ ಹೋಗಿ ಅಲ್ಲಿ 'ಕಿತ್ತೂರು ಚೆನ್ನಮ್ಮ', 'ಟಿಪ್ಪೂ ಸುಲ್ತಾನ್', 'ಜಗಜ್ಯೋತಿ ಬಸವೇಶ್ವರ' ನಾಟಕಗಳನ್ನು ಪ್ರದರ್ಶಿಸಿದ್ದಾರೆ.

ಚಿಂದೋಡಿ ಲೀಲಾ ಅವರಿಗೆ ಸರ್ಕಾರವಲ್ಲದೆ ಖಾಸಗಿ ಸಂಘ ಸಂಸ್ಥೆಗಳು, ಗುರುಮಠಗಳೂ ಸನ್ಮಾನಿಸಿವೆ; ಪ್ರಶಸ್ತಿಗಳನ್ನು ನೀಡಿವೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1985), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1994), ಗುಬ್ಬಿ ವೀರಣ್ಣ ಪ್ರಶಸ್ತಿ (2003)–ಮೊದಲಾದ ಪ್ರತಿಷ್ಠಿತ ಪ್ರಶಸ್ತಿಗಳಿಂದ ಸನ್ಮಾನಿತರಾಗಿರುವ ಈ ಕಲಾವಿದೆಗೆ ಕೇಂದ್ರ ಸರ್ಕಾರ 'ಪದ್ಮಶ್ರೀ' ಪ್ರಶಸ್ತಿ (1988) ನೀಡಿ ಗೌರವಿಸಿದೆ. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ (1987) ಅನಂತರ ಅಧ್ಯಕ್ಷೆಯಾಗಿ(1991) ಚಿಂದೋಡಿ ರಂಗಭೂಮಿಗೆ ಗಣನೀಯ ಸೇವೆ ಸಲ್ಲಿಸಿದ್ದಾರೆ.

ಕನ್ನಡದ ಕೆಲವು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನಿರೀಕ್ಷಿಸಿದ ಪ್ರೋತ್ಸಾಹ ದೊರೆಯದ ಕಾರಣ, ನಾಟಕರಂಗದಲ್ಲೇ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡರು. ಸೋದರಳಿಯ ಬಂಗಾರೇಶ್ (ಅಣ್ಣ ಚಿಂದೋಡಿ ವೀರಪ್ಪನ ಮಗ) ನಿರ್ದೇಶನದ ಚಿಂದೋಡಿ ಲೀಲಾ ನಿರ್ಮಿಸಿದ 'ಗಾನಯೋಗಿ ಪಂಚಾಕ್ಷರಿ ಗವಾಯಿ ಚಿತ್ರಕ್ಕೆ ರಾಷ್ಟ್ರಪತಿಗಳ ಸ್ವರ್ಣಕಮಲ ಪ್ರಶಸ್ತಿ ದೊರಕಿದೆ. ಕರ್ನಾಟಕ ಸರಕಾರ 'ಗಾನಯೋಗಿ' ಚಿತ್ರಕ್ಕೆ 1995–96ರ ಅತ್ಯುತ್ತಮ ಚಿತ್ರಪ್ರಶಸ್ತಿ (ನಿರ್ದೇಶಕ: ಚಿಂದೋಡಿ ಬಂಗಾರೇಶ್), ಅತ್ಯುತ್ತಮ ಪೋಷಕ ನಟ ಪ್ರಶಸ್ತಿ (ಗಿರೀಶ್ ಕಾರ್ನಾಡ್), ಅತ್ಯುತ್ತಮ ಸಂಗೀತ ನಿರ್ದೇಶಕ (ಹಂಸಲೇಖ) ನೀಡಿ ಗೌರವಿಸಿದೆ.

(ರಾಮಕೃಷ್ಣ ಮರಾಠೆ)

**ಚಿಂಪ್ಯಾಂಜಿ** : ಆಫ್ರಿಕದಲ್ಲಿ ಜೀವಿಸುವ ಒಂದು ವಾನರ. ಪ್ರೈಮೇಟ್ ಗಣದ ಪಾಂಜಿಡೀ ಕುಟುಂಬಕ್ಕೆ ಸೇರಿದೆ. ಒರಾಂಗೂಟಾನ್, ಗಿಬನ್, ಗೊರಿಲಗಳ ಹತ್ತಿರ ಸಂಬಂಧಿ. ಅವುಗಳಂತೆಯೇ ಇದಕ್ಕೂ ಬಾಲವಿಲ್ಲ. ಇದರ ಶಾಸ್ತ್ರೀಯ ಹೆಸರು ಪ್ಯಾನ್; ಇದರಲ್ಲಿ ಟ್ರಾಗ್ಲೊಡೈಟೀಸ್ ಮತ್ತು ಪ್ಯಾನಿಸ್ಕಸ್ ಎಂಬ ಎರಡು ಮುಖ್ಯ ಪ್ರಭೇದಗಳುಂಟು. ಪ್ಯಾನಿಸ್ಕಸ್ ಪ್ರಭೇದದ ಕಳುಬಗೆಯದು. ಇದು ಸ್ವತಂತ್ರವಾದ ಪ್ರಭೇದವೇ ಅಲ್ಲ, ಟ್ರಾಗ್ಲೊಡೈಟೀಸ್ ಪ್ರಭೇದದ ಒಂದು ಉಪಪ್ರಭೇದ ಮಾತ್ರ ಎಂಬ ಅಭಿಪ್ರಾಯವೂ ಇಲ್ಲದಿಲ್ಲ. ಈ ಅಭಿಮತಕ್ಕೆ ವಿರುದ್ಧವಾಗಿ ಪ್ಯಾನಿಸ್ಕಸ್ ಪ್ರಭೇದವನ್ನು ಪ್ಯಾನ್ ಜಾತಿಯಿಂದ ಬೇರೆಯಾದ ಮತ್ತು ಬಾನ್‌ಬೊ ಎಂಬ ಹೆಸರುಳ್ಳ ಸ್ವತಂತ್ರ ಜಾತಿಯೆಂದು ಪರಿಗಣಿಸುವ ಅಭಿಪ್ರಾಯವೂ ಉಂಟು. ಇನ್ನು ಕೆಲವರು ಪ್ಯಾನ್ ಸೇಟಿರಸ್ ವೀರಸ್, ಪ್ಯಾ. ಸೇಟಿರಸ್ ಸೇಟಿರಸ್ ಮತ್ತು ಪ್ಯಾ. ಸೇಟಿರಸ್ ಶ್ವೈನ್‌ಫುರ್ಥಿಯೈ ಎಂಬ ಇನ್ನೂ ಮೂರು ಪ್ರಭೇದಗಳನ್ನು ಗುರುತಿಸುತ್ತಾರೆ. ಗೊರಿಲದಂತೆಯೇ ಚಿಂಪ್ಯಾಂಜಿ ಕೂಡ ಆಫ್ರಿಕದ ಉಷ್ಣ ವಲಯದ ದಟ್ಟಕಾಡುಗಳ ವಾಸಿ, ಆದರೆ ಗೊರಿಲಕ್ಕೂ ಇದಕ್ಕೂ ಗಾತ್ರ, ಸ್ವಭಾವ ಮುಂತಾದ ಗುಣಲಕ್ಷಣಗಳಲ್ಲಿ ತುಂಬ ವ್ಯತ್ಯಾಸ ಉಂಟು.

ಚಿಂಪ್ಯಾಂಜಿಯ ಮುಖ, ಕಿವಿ, ಹಸ್ತ ಹಾಗೂ ಪಾದಗಳು ರೋಮರಹಿತ. ಮೈಯ ಮಿಕ್ಕ ಭಾಗದ ಮೇಲೆ ಒರಟಾದ, ಕಪ್ಪು ಬಣ್ಣದ ಕೂದಲುಗಳಿವೆ. ಮುಖದ ಬಣ್ಣ ಕಪ್ಪು ಇಲ್ಲವೆ ಕಂದು ಮಿಶ್ರಿತ ನಸುಗೆಂಪು. ಮೂಗು, ಕಿವಿ, ಕೈ ಹಾಗೂ ಪಾದಗಳು ಮಾತ್ರ ನಸುಗೆಂಪು ಮಾಂಸದ ಬಣ್ಣದವು. ಪೃಷ್ಠಭಾಗ ಮಾಸಲು ಬಿಳಿ ಬಣ್ಣಕ್ಕಿದೆ. ಚಿಂಪ್ಯಾಂಜಿಯ ಮುಖ, ಉಳಿದ ವಾನರಗಳ ಮುಖಕ್ಕಿಂತ ಹೆಚ್ಚಾಗಿ ಮನುಷ್ಯ ಮುಖವನ್ನು ಹೋಲುತ್ತದೆ. ಹಣೆ ದೊಡ್ಡದು. ಕಣ್ಣುಗಳು ಚಿಕ್ಕವು; ಎದ್ದು ಕಾಣುವಂತೆ ಮುಂಚಾಚಿದ ಹುಬ್ಬಿನಿಂದಾಗಿ ಆಳವಾಗಿ ಹುದುಗಿದಂತಿವೆ. ಅವುಗಳ ಬಣ್ಣ ಮಾಸಲು ಕಂದು. ಮೂಗು ಅಗಲ

ಮರಿ ಚಿಂಪ್ಯಾಂಜಿ

ಹಾಗೂ ಚಪ್ಪಟೆ. ಮೂತಿ ಗುಂಡಗಿದೆ. ತುಟಿಗಳು ತೆಳುವಾಗಿರುವವಲ್ಲದೆ ಮುಂಚಾಚಿಕೊಂಡಿವೆ. ಹಲ್ಲುಗಳ ಸಂಖ್ಯೆ ಮಾನವನಲ್ಲಿರುವಂತೆಯೇ 32. ಕಿವಿಗಳು ದೊಡ್ಡಗಾತ್ರದವು. ಕಾಲುಗಳಿಗಿಂತ ಕೈಗಳು ಬಲು ಉದ್ದ; ಚಿಂಪ್ಯಾಂಜಿ ನಿಂತಾಗ ಅದರ ಮಂಡಿಗೂ ಕೆಳಗೆ ಜೋಲು ಬೀಳುತ್ತವೆ. ಕೈಯ ಇತರ ಬೆರಳುಗಳಿಗಿಂತ ಹೆಬ್ಬೆರಳು ಬಲುಮೋಟು. ಪಾದದಲ್ಲೂ ಹಸ್ತದಲ್ಲೂ ಹೆಬ್ಬೆರಳು ಉಳಿದ ಬೆರಳುಗಳಿಗೆ ಅಭಿಮುಖವಾಗಿದೆ. ಇದರಿಂದ ರೆಂಬೆಗಳನ್ನು, ಇತರ ವಸ್ತುಗಳನ್ನು ಹಿಡಿಯಲು ಅನುಕೂಲ.

ವಯಸ್ಕ ಚಿಂಪ್ಯಾಂಜಿಯ ಎತ್ತರ 1 ರಿಂದ 1.7 ಮೀ. ತೂಕ 56–80 ಕಿಗ್ರಾಂ. ಹೆಣ್ಣುಗಳು ಗಂಡುಗಳಿಗಿಂತ ಚಿಕ್ಕವು.

ಚಿಂಪ್ಯಾಂಜಿ ಸಮಾಜಜೀವಿ; ಎರಡರಿಂದ ಇಪ್ಪತ್ತು ಪ್ರಾಣಿಗಳುಳ್ಳ ಗುಂಪು ಇಲ್ಲವೆ ಕುಟುಂಬಗಳಲ್ಲಿ ವಾಸಿಸುತ್ತದೆ. ಪ್ರತಿಗುಂಪಿಗೆ ಒಂದು ಬಲಿಷ್ಠ ಗಂಡು ನಾಯಕ. ಗುಂಪಿನ ಜವಾಬ್ದಾರಿಯೆಲ್ಲ ನಾಯಕ ಚಿಂಪ್ಯಾಂಜಿಯದೇ ಆದರೂ ಗುಂಪಿನ ಆಗುಹೋಗುಗಳಿಗೆ ಪ್ರತಿಯೊಂದು ಸದಸ್ಯಪ್ರಾಣಿಯ ವೈಯಕ್ತಿಕ ನಿಷ್ಠೆಯೂ ಮುಖ್ಯ. ಪ್ರತಿಯೊಂದು ಗುಂಪಿಗೂ ಅದರದೇ ಆದ ಅಧೀನ ಪ್ರಾಂತ್ಯವಿರುತ್ತದೆ. ಇಂಥ ಪ್ರಾಂತ್ಯದ ವಿಸ್ತೀರ್ಣ ಸುಮಾರು 26 ಚ.ಕಿ.ಮೀ. ಯಷ್ಟಿರಬಹುದು. ಚಿಂಪ್ಯಾಂಜಿ ಸಾಮಾನ್ಯವಾಗಿ ನೆಲದ ಮೇಲೇ ಕಾಲ ಕಳೆಯುವುದಾದರೂ ಹೆಚ್ಚು ದೂರ ಪ್ರಯಾಣ ಮಾಡಬೇಕಾದಾಗ ಖುಷಿಯಾಗಿ ಮರದಿಂದ ಮರಕ್ಕೆ ಕೈಕಾಲುಗಳ ಸಹಾಯದಿಂದ ಜಿಗಿಯುತ್ತ, ತೊನೆಯುತ್ತ ಸಾಗುತ್ತದೆ. ನೆಲದಮೇಲೆ ನಡೆಯುವಾಗ ಕೈಕಾಲುಗಳೆರಡನ್ನೂ ಬಳಸುತ್ತದೆ. ಕಾಲುಗಳನ್ನು ಕೊಂಚ ಬಗ್ಗಿಸಿ, ದೇಹವನ್ನು ಸ್ವಲ್ಪ ಮುಂದಕ್ಕೆ ಬಾಗಿಸಿ ಕೈಬೆರಳುಗಳನ್ನು ಹಿಂದಕ್ಕೆ ಮಡಿಚಿಕೊಂಡು ನಡೆಯುವುದೇ ಸಾಮಾನ್ಯ ಕ್ರಮ. ಕೆಲವೊಮ್ಮೆ ಮನುಷ್ಯನಂತೆ ಬರಿಯ ಕಾಲುಗಳ ಮೇಲೆಯೇ

ಲಂಡನ್ ಝೂನಲ್ಲಿ ಚಹಕೂಟ ! ಚಿಂಪ್ಯಾಂಜಿಗಳ ಸಾಮಾಜಿಕ ವರ್ತನೆಗೆ ಒಂದು ಒಳ್ಳೆಯ ನಿದರ್ಶನ

ನಡೆಯುವುದುಂಟು. ಹೀಗೆ ನಡೆಯುವಾಗ ಪಾದಗಳನ್ನು ಅಡ್ಡಡ್ಡವಾಗಿ ಇಡುತ್ತದೆ. ಹಗಲೆಲ್ಲ ಆಹಾರವನ್ನು ಅರಸಿಕೊಂಡು ಸಂಚರಿಸುತ್ತಿದ್ದು ರಾತ್ರಿಯ ವೇಳೆಗೆ ಮರದಲ್ಲಿ ಸೊಪ್ಪುಸದೆಯ ಗೂಡುಗಳನ್ನು ನಿರ್ಮಿಸಿಕೊಂಡು ಗುಂಪಿನ ಎಲ್ಲ ಚಿಂಪ್ಯಾಂಜಿಗಳೂ ಒಟ್ಟಿಗೆ ಮಲಗಿಬಿಡುತ್ತವೆ. ಹಗಲಿನಲ್ಲೂ ಇಂಥ ಗೂಡುಗಳನ್ನು ಮರದ ಮೇಲೆ ಇಲ್ಲವೆ ನೆಲದ ಮೇಲೆ ಕಟ್ಟಿಕೊಂಡು ಮಲಗಿ ವಿಶ್ರಮಿಸುವ ರೂಢಿ ಉಂಟು, ಕೆಲವು ಸಲ ಹೆಚ್ಚು ಬಿಸಿಲಿದ್ದರೆ ಗೂಡುಗಳ ಮೇಲೆ ಒಂದು ತೆರನ ಒರಟು ಚಾವಣಿಯನ್ನೂ ಕಟ್ಟುವುವು. ಸಾಮಾನ್ಯವಾಗಿ ರಾತ್ರಿಯೆಲ್ಲ ನಿದ್ದೆಯಲ್ಲೇ ಕಳೆಯುವುವಾದರೂ ಬೆಳದಿಂಗಳಿದ್ದರೆ ಎಚ್ಚರಗೊಂಡು ಏನಾದರೂ ಕಾರ್ಯನಿರತವಾಗಿರುವುದುಂಟು. ಬೆಳಗಿನ ಝಾವ ಎದ್ದು ಸೂರ್ಯ ಹುಟ್ಟಿದ ಎರಡು ಗಂಟೆಗಳವರೆಗೆ ಆಹಾರವನ್ನು ತಿನ್ನುತ್ತಿದ್ದು, ಅನಂತರ ತಿನ್ನುವುದನ್ನು ಕಡಿಮೆಮಾಡಿ,

ಮಧ್ಯಾಹ್ನದ ವೇಳೆಗೆ ಕೊಂಚ ವಿಶ್ರಮಿಸಿಕೊಂಡು ಸಂಜೆ ಮತ್ತೊಮ್ಮೆ ಗಣನೀಯ ಪರಿಮಾಣದಲ್ಲಿ ಆಹಾರವನ್ನು ಸೇವಿಸಿ ರಾತ್ರಿಯ ಹೊತ್ತಿಗೆ ಮರವನ್ನೇರಿ ಮಲಗುವುದು ಇವುಗಳ ದಿನನಿತ್ಯದ ಕಾರ್ಯಕ್ರಮ. ಹಣ್ಣುಹಂಪಲು, ಚಿಗುರು, ಗೆಡ್ಡೆಗೆಣಸು ಮುಂತಾದವೇ ಚಿಂಪ್ಯಾಂಜಿಗಳ ಪ್ರಧಾನ ಆಹಾರ, ಕೀಟಗಳನ್ನೂ ಹಕ್ಕಿಗಳ ಮೊಟ್ಟೆಗಳನ್ನೂ ತಿನ್ನುತ್ತವೆ. ಕೆಲವೊಮ್ಮೆ ಬುಷ್‌ಬಕ್ ಮುಂತಾದ ಜಿಂಕೆಗಳನ್ನು ಬೇಟೆಯಾಡಿ ತಿನ್ನುವುದುಂಟು.

ವಾನರಗಳಲ್ಲೆಲ್ಲ ಇದು ಅತ್ಯಂತ ಬುದ್ಧಿಶಾಲಿಯೆನಿಸಿಕೊಂಡಿದೆ. ಇದರ ಗ್ರಹಣಶಕ್ತಿ ಅಪಾರ. ಕಣ್ಣು, ಕಿವಿ ಬಲು ಚುರುಕು. ಭಾವಾಭಿವ್ಯಕ್ತಿ ವ್ಯವಸ್ಥೆಯನ್ನು ಚೆನ್ನಾಗಿ ರೂಢಿಸಿಕೊಂಡಿರುವ ಪ್ರಾಣಿ ಇದು. ಮುಖದ ಮಾಂಸಖಂಡಗಳು ನಿಖರವಾಗಿ ರೂಪುಗೊಂಡಿರುವುದರಿಂದ ಕೋಪ, ಆಶ್ಚರ್ಯ, ದುಃಖ, ಸಂತೋಷ ಮುಂತಾದ ವಿವಿಧ ಭಾವಗಳನ್ನು ಚೆನ್ನಾಗಿ ತೋರಿಸಬಲ್ಲದು. ಪ್ರೈಮೇಟುಗಳಲ್ಲಿ ಪೂರ್ವಾಪರ ವಿವೇಚನಶಕ್ತಿ ಮೊಟ್ಟಮೊದಲಿಗೆ ಕಂಡುಬರುವುದು ಚಿಂಪ್ಯಾಂಜಿಯಲ್ಲಿ. ಜೊತೆಗೆ ಕೋಲು ಮುಂತಾದವನ್ನು ಆಯುಧಗಳಾಗಿ ಉಪಕರಣಗಳಾಗಿ ಬಳಸುವ ಬುದ್ಧಿಶಕ್ತಿಯೂ ಇದಕ್ಕೆ ಇದೆ. ಚಿಂಪ್ಯಾಂಜಿ ಕೊನೆಯಪಕ್ಷ 32 ಬಗೆಯ ಶಬ್ದಗಳನ್ನು ಮಾಡಬಲ್ಲದು. ಬಹುಶಃ ಇದು ಒಂದು ನಿಮ್ನ ರೀತಿಯ ಭಾಷೆಯಿರಬಹುದು. ಅಲ್ಲದೆ ತುಟಿಗಳನ್ನು ಮುಂದಕ್ಕೆ ಚಾಚುವುದು, ಹಿಂದಕ್ಕೆ ಎಳೆಯುವುದು, ಹಲ್ಲು ಕಡಿಯುವುದು, ತುಟಿ ಚಪ್ಪರಿಸುವುದು ಮುಂತಾಗಿ ಹಲವಾರು ಬಗೆಯಲ್ಲಿ ಮುಖಭಾವಗಳನ್ನು ಪ್ರದರ್ಶಿಸುವುದರ ಮೂಲಕವೂ ತನ್ನ ಇಂಗಿತಗಳನ್ನು ತೋರಿಸಬಲ್ಲದು. ಜೊತೆಗೆ ಚಿಂಪ್ಯಾಂಜಿ ಬಲು ತುಂಟ ಪ್ರಾಣಿಯೂ ಹೌದು. ಒಂದು ಕ್ಷಣವೂ ಸುಮ್ಮನೆ ಕುಳಿತಿರದೆ ಏನಾದರೂ ಚೇಷ್ಟೆ ಮಾಡುತ್ತಲೇ ಇರುತ್ತದೆ. ಇದರಿಂದಾಗಿ ಇದಕ್ಕೆ ವಾನರ ಜಗತ್ತಿನ ಬಹಿರ್ಮುಖಿ ಎಂಬ ಹೆಸರು ಬಂದಿದೆ. ಇದು ತನ್ನ ಕೈಯಿಂದ ಇಲ್ಲವೆ ಕಾಲಿನಿಂದ ನೆಲವನ್ನೊ, ಮರಗಳ ಕಾಂಡವನ್ನೊ, ಟೊಳ್ಳಾದ ಮರದ ದಿಮ್ಮಿಗಳನ್ನೊ, ಬಡಿದು ಒಂದು ರೀತಿಯ 'ಸಂಗೀತ'ವನ್ನೂ ಮಾಡುವುದಂತೆ. ಇದು ಸಂಗೀತವಿರಲಿ ಇಲ್ಲದಿರಲಿ ಆಫ್ರಿಕದ ಕೆಲ ಆದಿವಾಸಿಗಳು ತಮ್ಮ ಮದ್ದಳೆ ತಾಡನದ ಮೂಲಕ ಸುದ್ದಿಯನ್ನು ಒಂದೆಡೆಯಿಂದ ಇನ್ನೊಂದೆಡೆ ಕಳಿಸುವಂತೆ, ಚಿಂಪ್ಯಾಂಜಿಗಳು ಕೂಡ ಸುದ್ದಿಸಾಗಣೆಗೆ ಬಳಸುವ ವ್ಯವಸ್ಥೆಯಿರಬಹುದು. ಚಿಂಪ್ಯಾಂಜಿ ಬಲು ಸ್ನೇಹಪರ ಜೀವಿ ಕೂಡ. ಕರುಣೆಯಿಂದ, ಪ್ರೀತಿಯಿಂದ ನಡೆಸಿಕೊಂಡರೆ ಇದನ್ನು ಬಹುಸುಲಭವಾಗಿ ಪಳಗಿಸಬಹುದಲ್ಲದೆ, ಇದಕ್ಕೆ ಹಲವಾರು ಬಗೆಯ ಚಳಕಗಳನ್ನೂ ಕಲಿಸಬಹುದು. ಇದರಿಂದಾಗಿ ಚಿಂಪ್ಯಾಂಜಿ ಬಹಳ ಜನಪ್ರಿಯ ಪ್ರಾಣಿಯಾಗಿದೆ. ಚಿಂಪ್ಯಾಂಜಿಗಳಲ್ಲಿ ರಜೋಚಕ್ರ ಸುಮಾರು ಮೂವತ್ತೈದು ದಿವಸಗಳಿಗೊಮ್ಮೆ. ಈ ಅವಧಿಯ ಯಾವುದೋ ಒಂದು ಕಾಲದಲ್ಲಿ ಹೆಣ್ಣಿನ ಜನನೇಂದ್ರಿಯ ಹಾಗೂ ಸುತ್ತಮುತ್ತಲ ಭಾಗ ಉಬ್ಬುತ್ತದೆ. ಹೆಣ್ಣು ಆಗ ಸಂಭೋಗ ಬಯಸುತ್ತದೆ. ಗಂಡು ಕೂಡ ಮದವೇರಿದಾಗ ಸಂಭೋಗ ಬಯಕೆಯ ತೀವ್ರತೆಯನ್ನು, ಕೈಗಳನ್ನು ಮರಕ್ಕೆ ಬಡಿಯುತ್ತಲೋ ಚಪ್ಪಾಳೆ ತಟ್ಟುತ್ತಲೋ ಅಥವಾ ನೆಲದ ಮೇಲೆ ಅವಿಶ್ರಾಂತವಾಗಿ ನೆಗೆದಾಡುತ್ತಲೋ ತೋರಿಸಿಕೊಳ್ಳುತ್ತದೆ. ಗರ್ಭಾವಸ್ಥೆಯ ಕಾಲವೂ ದೀರ್ಘವೇ–ಸುಮಾರು 8 ತಿಂಗಳು. ಸಾಮಾನ್ಯವಾಗಿ ಒಂದು ಬಾರಿಗೆ ಒಂದೇ ಮರಿ ಹುಟ್ಟುತ್ತದೆ. ಅವಳಿ ಮರಿಗಳೂ ಹುಟ್ಟುವುದುಂಟು. ಹುಟ್ಟಿದ ಮರಿ ಕೊನೆಯ ಪಕ್ಷ ಎರಡು ವರ್ಷಗಳಷ್ಟು ಕಾಲ ತಾಯಿಯನ್ನು ಆಶ್ರಯಿಸಿಕೊಂಡೇ ಬದುಕುತ್ತದೆ. ಈ ಮರಿ ಲೈಂಗಿಕ ಪ್ರಬುದ್ಧತೆಯನ್ನು ತಲುಪಲು ಸುಮಾರು ಹತ್ತು ಹನ್ನೆರಡು ವರ್ಷಗಳಾಗುತ್ತವೆ. ಚಿಂಪ್ಯಾಂಜಿಯ ಆಯುಸ್ಸು ಸುಮಾರು ನಲವತ್ತು ವರ್ಷಗಳು.

ವೈದ್ಯಕೀಯ ಹಾಗೂ ಶರೀರವಿಜ್ಞಾನಗಳಲ್ಲಿ ಚಿಂಪ್ಯಾಂಜಿಗೆ ಅತ್ಯಂತ ಶ್ರೇಷ್ಠ ಸ್ಥಾನವುಂಟು. ಕಾರಣ, ಇದು ಮನುಷ್ಯನಿಗೆ ಹತ್ತಿರ ಸಂಬಂಧಿಯಾಗಿರುವುದು. ಇದು ಮಂಗಗಳಿಗಿಂತ ಮನುಷ್ಯನಿಗೆ ಹತ್ತಿರ ಎನ್ನುವುದನ್ನು ತುಲನಾತ್ಮಕ ಅಂಗರಚನಾಶಾಸ್ತ್ರ, ಶರೀರವಿಜ್ಞಾನಶಾಸ್ತ್ರ ಮತ್ತು ಜೀವರಸಾಯನವಿಜ್ಞಾನಗಳ ಸಂಶೋಧನೆಗಳಿಂದ ಶ್ರುತಪಡಿಸಲಾಗಿದೆ. ಇದರ ಕಂಕಾಲ ಮನುಷ್ಯನ ಕಂಕಾಲವನ್ನು ಹೋಲುವುದೂ ಈ ಅಭಿಪ್ರಾಯದ ಒಂದು ಮುಖ್ಯ ಆಧಾರಾಂಶವಾಗಿದೆ. (ಕೆ.ಎಸ್.ಎ.)

**ಚಿಕನ್‌ಗುನ್ಯ :** ಒಂದು ಬಗೆಯ ವೈರಸ್ಸಿನಿಂದ ಬರುವ ರೋಗ. ಎರಡರಿಂದ ಐದು ದಿನಗಳವರೆಗೆ ಜ್ವರವಿದ್ದು, ದೀರ್ಘಕಾಲ ಕೀಲುನೋವೂ ಬರುತ್ತದೆ. ಕೆಲವರಿಗೆ ಈ ನೋವು ಕೆಲ ವರ್ಷಗಳ ಕಾಲ ಬಾಧಿಸುತ್ತದೆ.

ಈ ರೋಗ ಒಂದು ಬಗೆಯ ಸೊಳ್ಳೆಗಳಿಂದ (ಅಲ್ಬೊಪಿಕ್ಟಸ್ ಮತ್ತು ಏಜಿಪ್ಟಿ) ಹರಡುತ್ತದೆ. ಕೆರಿಬಿಯನ್ ದ್ವೀಪಗಳಿಂದ ಈ ರೋಗ ಅಮೆರಿಕಕ್ಕೆ ಹರಡಿತು. ಕೋತಿಗಳು ಮತ್ತು ದಂಶಕಗಳು ಈ ವೈರಸ್ಸುಗಳ ಭಂಡಾರವೆನ್ನಲಾಗಿದೆ.

ಸೊಳ್ಳೆಗಳ ನಿಯಂತ್ರಣ ಹಾಗೂ ವೈರಸ್ಸು ತಗುಲಿದ ಸೊಳ್ಳೆಗಳ ನಿವಾರಣೆಯಿಂದ ಈ ರೋಗವನ್ನು ತಡೆಗಟ್ಟಬಹುದು. ಇದಕ್ಕೆ ಯಾವುದೇ ನಿರ್ದಿಷ್ಟ ಚಿಕಿತ್ಸೆಯಿಲ್ಲದಿದ್ದರೂ ಜ್ವರಹಾರಿ ಮೊದಲಾದ ಔಷಧೋಪಚಾರದ ಜೊತೆಗೆ ವಿಶ್ರಾಂತಿ ಹಾಗೂ ದ್ರವ ಆಹಾರ ಒಳ್ಳೆಯದು. (ಬಿ.ವಿ.ಎಸ್‌ಆರ್‌ಐ.)

**ಚಿಕಲ್ :** ಸಪೋಟೇಸೀ ಕುಟುಂಬಕ್ಕೆ ಸೇರಿದ ಸಪೋಟ (ಚಿಕು) ಗಿಡದಿಂದ ಪಡೆಯಲಾಗುವ ಹಾಲ್ನೊರೆಯನ್ನು (ಲೇಟೆಕ್ಸ್) ಗರಣೆಗಟ್ಟಿಸಿ ತಯಾರಿಸಿದ ವಸ್ತು. ಪಲೇಕ್ವಿಯಮ್ ಗಟ ಎಂಬ ಸಸ್ಯದಿಂದ ದೊರೆಯುವ ಗಟಪರ್ಚದಂತೆಯೇ (ನೋಡಿ) ಚಿಕಲ್ ಕೂಡ ಇದೆಯಾಗಿ ಇದನ್ನೂ ಚೂಯಿಂಗ್ ಗಮ್ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಸಪೋಟ ಗಿಡದ ಕಾಂಡದ ಮೇಲೆ ವಂಕಿವಂಕಿಯಾದ ಸೀಳುಗಾಯಗಳನ್ನು ಮಾಡಿ ಹಾಲ್ನೊರೆಯನ್ನು ಜಿನುಗಿಸಿ ಗಿಡದ ಬುಡದಲ್ಲಿ ಕಟ್ಟಿರುವ ರಬ್ಬರ್‌ಲೇಪಿತ ಚೀಲಗಳಲ್ಲಿ ಸಂಗ್ರಹಿಸಲಾಗುತ್ತದೆ. ಅನಂತರ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಇದನ್ನು ಹಾಕಿ ಕುದಿಸಿ ಇದರ ನೀರಿನ ಅಂಶ ಶೇ. 33 ಕ್ಕೆ ಇಳಿಯುವಂತೆ ಮಾಡಲಾಗುತ್ತದೆ. ಆಗ ಹಾಲ್ನೊರೆ ಅರೆಘನ ಸ್ಥಿತಿಗೆ ಬರುತ್ತದೆ. ಆಮೇಲೆ ಇದನ್ನು ಮರದ ಧಾರಕಗಳಲ್ಲಿ ಹಾಕಿ ತಲಾ 10–11 ಕಿ.ಗ್ರಾಂ. ತೂಕದ ಕೊರಡುಗಳಾಗಿ ಎರಕ ಹುಯ್ಯಲಾಗುತ್ತದೆ. ಇಂಥ ಕೊರಡುಗಳಿಗೆ ಮಾರಿಸೆಪಾಗಳೆಂದು ಹೆಸರು. ಸಾಗಣೆಯ ಅನುಕೂಲಕ್ಕಾಗಿ ನಾಲ್ಕು ನಾಲ್ಕು ಕೊರಡುಗಳನ್ನು ಒಟ್ಟಿಗೆ ಕಟ್ಟುವುದುಂಟು. ಚೂಯಿಂಗ್ ಗಮ್ ತಯಾರಿಕೆಗೆ ಬಳಸುವಾಗ ಮಾರಿಸೆಪಾಗಳನ್ನು ಸಣ್ಣ ಸಣ್ಣ ತುಣುಕುಗಳಾಗಿ ಕತ್ತರಿಸಿ ಪ್ರಬಲ ಕ್ಷಾರದಿಂದಲೂ ಸೋಡಿಯಮ್ ಆ್ಯಸಿಡ್ ಫಾಸ್ಫೇಟಿನಿಂದಲೂ ಚೆನ್ನಾಗಿ ತೊಳೆದು ಒಣಗಿಸಿ ಪುಡಿ ಮಾಡಲಾಗುತ್ತದೆ. ಇದರಿಂದ ದೊರೆಯುವ ಅಂತಿಮ ಉತ್ಪನ್ನ ನೀರಿನಲ್ಲಿ ಕರಗದು; ಬಿಸಿಗೊಳಿಸಿದಾಗ ಬಲು ಅಂಟುಅಂಟಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಚಿಕಲ್‌ನ ಬಳಕೆ ಅತಿಹೆಚ್ಚು. (ಎಂ.)

**ಚಿಕಿತ್ಸಾ ಮನೋವಿಜ್ಞಾನ :** ಮನುಷ್ಯನ ಮಾನಸಿಕ ಸಮಸ್ಯೆಗಳನ್ನೂ, ವರ್ತನಾ ಸಮಸ್ಯೆಗಳನ್ನೂ ಮತ್ತು ಸಾಮಾಜಿಕ ಸಮಸ್ಯೆಗಳನ್ನೂ ಅಭ್ಯಸಿಸಿ ಅವುಗಳಿಗೆ ಯುಕ್ತ ಪರಿಹಾರಗಳನ್ನು ಹುಡುಕುವ ಮನೋವಿಜ್ಞಾನ ವಿಭಾಗ (ಕ್ಲಿನಿಕಲ್ ಸೈಕಾಲಜಿ). ಮಾನವ ಹಾಗೂ ಪ್ರಾಣಿವರ್ಗದ ವರ್ತನೆ ಮತ್ತು ಮನೋವ್ಯಾಪಾರಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸುವುದು ಮನೋವಿಜ್ಞಾನದ ಇನ್ನೊಂದು ಮುಖ್ಯ ಕೆಲಸ. ಕೇವಲ ಶಾಸ್ತ್ರಜ್ಞಾನದಿಂದ ಚಿಕಿತ್ಸಾ ಪ್ರಾವೀಣ್ಯ ಬರಲಾರದಾದುದರಿಂದ ಚಿಕಿತ್ಸಾ ಮನೋವಿಜ್ಞಾನದಲ್ಲಿ ಆಸಕ್ತರಿಗೆ ತರಬೇತಿ ಕೊಡಲು ಅನೇಕ ಸಂಸ್ಥೆಗಳಿವೆ. ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಹಾಗೂ ನರವಿಜ್ಞಾನ ಸಂಸ್ಥೆ ಇಂಥವುಗಳಲ್ಲೊಂದು. ಇಲ್ಲಿ ವೈದ್ಯರಿಗೆ ಹಾಗೂ ಇತರ ವೈದ್ಯರಿಗೆ ತರಬೇತಿ ಕೊಡುವುದರ ಜೊತೆಗೆ ರೋಗಿಗಳನ್ನು ಪರೀಕ್ಷಿಸಿ ಪರಿಹಾರ ಸೂಚಿಸುವ ವ್ಯವಸ್ಥೆಯೂ ಹಾಗೂ ಜೈವಿಕ, ಮಾನಸಿಕ, ಸಾಮಾಜಿಕ ಅಂಶಗಳ ಸಂಶೋಧನೆಗಳೂ ನಡೆದಿವೆ.

ಅನೇಕ ಮಕ್ಕಳು ತಮ್ಮ ವರ್ತನೆಯಲ್ಲಿ ಕೆಲವು ಲೋಪಗಳನ್ನು ವ್ಯಕ್ತಪಡಿಸುವರು. ಉದಾಹರಣೆಗೆ ಮೊದಲ ವರ್ಷದಲ್ಲಿಯೇ ಕೆಲವು ಮಕ್ಕಳು ಆಹಾರವನ್ನು ಕ್ರಮಬದ್ಧವಾಗಿ ಸ್ವೀಕರಿಸುವುದಿಲ್ಲ. ಕೆಲವರು ರಾತ್ರಿವೇಳೆ ನಿದ್ದೆ ಮಾಡದೆ ತಂದೆ ತಾಯಿಗಳಿಗೆ ವಿಪರೀತ ಕಷ್ಟವನ್ನು ಕೊಡುವರು. ಕೆಲವರು ಚಂಡಿಗಳಾಗಿ ಯಾವಾಗಲೂ ಅಳುವರು. ಮತ್ತೆ ಕೆಲವರು ತಾಯಿಯನ್ನು ಬಿಟ್ಟು ಒಂದು ಕ್ಷಣವೂ ಇರಲಾರರು. ಇನ್ನು ಕೆಲವರು ಬೆಳೆದ ಮೇಲೆ ಶಾಲೆಗೆ ಹೋಗುವುದಕ್ಕೆ ರಗಳೆ ಮಾಡುವರು.

ಬುದ್ಧಿಶಕ್ತಿ ಸರಿಯಾಗಿ ಬೆಳೆಯದೆ ಇರುವ ಕಾರಣದಿಂದ ಈ ಮಕ್ಕಳು ತಿಳಿವಳಿಕೆಯಲ್ಲಿಯೂ ಭಾವನಾ ಜೀವನದಲ್ಲಿಯೂ ಸಾಮಾಜಿಕ ಜೀವನದಲ್ಲಿಯೂ ಕುಂದು ಕೊರತೆಗಳನ್ನು ವ್ಯಕ್ತಪಡಿಸುವರು. ಇಂಥ ಮಕ್ಕಳಲ್ಲಿ ಕಲಿಕೆ ಬಹಳ ನಿಧಾನವಾಗಿ ಮುಂದುವರಿಯುವುದು. ಕೆಲ ಮಕ್ಕಳಲ್ಲಂತೂ ಕಲಿಕೆ ಎಂಬುದು ಇರುವುದೇ ಇಲ್ಲ. ಮತ್ತೆ ಕೆಲವರಲ್ಲಿ ವಯಸ್ಸಿಗೆ ತಕ್ಕ ಬೌದ್ಧಿಕ ಬೆಳವಣಿಗೆಯಾಗಲಿ ಕೈಚಳಕವಾಗಲಿ ಇರುವುದಿಲ್ಲ. ಇಂಥ ನ್ಯೂನತೆ ಎಲ್ಲ ದೇಶಗಳ ಎಳೆಯರಲ್ಲೂ ಉಂಟು. ಬುದ್ಧಿಶಕ್ತಿಯ ನ್ಯೂನತೆ (ಬುದ್ಧಿಮಾಂದ್ಯತೆ) ಪ್ರಪಂಚದಲ್ಲಿ ಶೇಕಡಾ 2 ಜನರಲ್ಲಿ ಇದೆಯೆಂದು ಅಂದಾಜು ಮಾಡಲಾಗಿದೆ.

ಬುದ್ಧಿ ಕುಂಠಿತವಾದ ಮಕ್ಕಳು ಮನೆಯಲ್ಲಿ ತಂದೆತಾಯಿಗಳಿಗೂ ಶಾಲೆಯಲ್ಲಿ ಉಪಾಧ್ಯಾಯರಿಗೂ ಹೊರಗಡೆ ಸಮಾಜಕ್ಕೂ ಅನೇಕ ಸಮಸ್ಯೆಗಳನ್ನುಂಟುಮಾಡುವರು. ಬುದ್ಧಿಶಕ್ತಿಯಲ್ಲಿಯೇ ನ್ಯೂನತೆ ಇರುವುದರಿಂದ ಇಂಥ ಮಕ್ಕಳು ಎಷ್ಟು ಶ್ರಮಪಟ್ಟರೂ ಪಠ್ಯಪುಸ್ತಕಗಳ ವಿಷಯಗಳನ್ನಾಗಲೀ ಕಸಬನ್ನಾಗಲೀ ಸಾಧಾರಣ ಮಟ್ಟದಲ್ಲಿಯೂ ಕಲಿಯಲಾರರು. ಇನ್ನು ಕೆಲಮಕ್ಕಳು ಶಾಲೆಗೆ ಚಕ್ಕರ್ ಹಾಕುವರು. ಕೆಲಮಕ್ಕಳು ತಮ್ಮ ಪಾಠವನ್ನು ಸರಿಯಾಗಿ ಅಭ್ಯಸಿಸದೆ ಪ್ರತಿ ವರ್ಷವೂ ಹಿಂದುಳಿಯುವರು. ಮತ್ತೆ ಕೆಲವರು ಶಾಲೆಯಲ್ಲಿ ಸಮವಯಸ್ಕರ ಜೊತೆಯಲ್ಲಿಯೂ ಉಪಾಧ್ಯಾಯರ ಜೊತೆಯಲ್ಲಿಯೂ ಜಗಳವಾಡುವುದನ್ನೇ ಅಭ್ಯಾಸ ಮಾಡುವರು. ಇಲ್ಲವೆ ಏನಾದರೊಂದು ಅಪರಾಧ ಮಾಡುತ್ತಲೇ ಇರುವರು. ಕದಿಯುವುದು ಮಾತ್ರವಲ್ಲದೆ ಅನೇಕ ದುರಭ್ಯಾಸಗಳಿಗೆ ಗುರಿಯಾಗುವವರೂ ಇಲ್ಲದಿಲ್ಲ. ಕೆಲವರು ಹೇಳದೆ ಕೇಳದೆ ಊರನ್ನು ಬಿಟ್ಟು ಓಡಿಹೋಗಬಹುದು; ಮತ್ತೆ ಕೆಲವರು ಬೀಡಿ, ಸಿಗರೇಟು. ಗಾಂಜಾ, ಸಾರಾಯಿ ಮುಂತಾದ ಮಾದಕಗಳ ಸೇವನೆಯಲ್ಲಿ

ತೊಡಗಬಹುದು. ತಮ್ಮ ಆಶೆ, ಕೋಪಗಳ ಮೇಲೆ ಹತೋಟಿ ಇಲ್ಲದ ಕೆಲವರು ಖೂನಿ ಮಾಡಬಹುದು, ಆತ್ಮಹತ್ಯೆ ಮಾಡಿಕೊಳ್ಳಬಹುದು. ಇಂಥವನ್ನು ನಡವಳಿಕೆ ಸಮಸ್ಯೆಗಳು ಎನ್ನುತ್ತಾರೆ. ಮಕ್ಕಳಲ್ಲಿ ವರ್ತನಾಸಮಸ್ಯೆಗಳು ಇರುವ ಹಾಗೆ, ತರುಣರಲ್ಲಿ ನಡವಳಿಕೆಗಳ ಸಮಸ್ಯೆಗಳು ಇರುವ ಹಾಗೆ, ವಯಸ್ಕರಲ್ಲಿ ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಇರುತ್ತವೆ.

ಶೇಕಡ 25 ರಿಂದ 30 ರಷ್ಟು ವಯಸ್ಕರಲ್ಲಿ ಹಿಂಜರಿಯುವಿಕೆ (ಕೀಳರಿಮೆ), ಸುಲಭದಲ್ಲಿ ಮಣಿಯುವುದು, ಹೆದರಿಕೆ, ಉದ್ವೇಗ, ಸಿಟ್ಟು, ದುಃಖ, ಔದಾಸೀನ್ಯ–ಮುಂತಾದ ಮನೋಭಾವಗಳು ಉದ್ಭವಿಸಿ, ವ್ಯಕ್ತಿ ತನ್ನ ಕೆಲಸದಲ್ಲಿಯೂ ವಿರಾಮ ಕಾರ್ಯ ಕಲಾಪಗಳಲ್ಲಿಯೂ ಅಪಕ್ವತೆ, ಅನನುಭವಿಯಂತೆ ವರ್ತಿಸುತ್ತ ವ್ಯಾಕುಲಚಿತ್ತನಾಗುತ್ತಾನೆ. ಕೆಲಸ ಕರ್ತವ್ಯಗಳಲ್ಲಿ ಅಸಮರ್ಥನಾಗುತ್ತಾನೆ.

ಇಂಥ ಸಮಸ್ಯೆಗಳ ಸ್ವಭಾವವನ್ನು ನಿರ್ಣಯಿಸುವುದಕ್ಕೆ ಚಿಕಿತ್ಸಾ ಮನೋವಿಜ್ಞಾನಿಗಳು ಮೊತ್ತಮೊದಲು ಆ ವ್ಯಕ್ತಿಯ ವರ್ತನೆಯನ್ನು ಪರಿಶೀಲಿಸುವರು. ತಂದೆ ತಾಯಿಗಳೋ ಉಪಾಧ್ಯಾಯರೋ ಸಮಾಜಸೇವಕರೋ ಆ ವ್ಯಕ್ತಿಯನ್ನು ಯಾವ ಕಾರಣದಿಂದ ಪರೀಕ್ಷಣಕ್ಕೆ ತಮ್ಮಲ್ಲಿಗೆ ಕಳುಹಿಸಿರುವರೆಂಬುದನ್ನು ವಿಶದವಾಗಿ ಗುರುತು ಮಾಡುವರು. ಅಲ್ಲದೆ ವರ್ತನೆಯ ಯಥಾರ್ಥ ಹಾಗೂ ಕಾರಣಗಳನ್ನು ತಿಳಿಯಲು ಯತ್ನಿಸುವರು. ಇದನ್ನು ನಿರ್ಣಯಿಸುವಲ್ಲಿ ಪರರ ಹೇಳಿಕೆಗಿಂತ ವ್ಯಕ್ತಿಯ ವರ್ತನೆಯೇ ಮುಖ್ಯವಾಗಬೇಕು. ವ್ಯಕ್ತಿಯ ಹಿಂದಿನ ಜೀವನಚರಿತ್ರೆ ಅಗತ್ಯವಾಗಬಹುದು. ಕಡೆಯದಾಗಿ ಬುದ್ಧಿಶಕ್ತಿಯ ಪರೀಕ್ಷೆಗಳು ವ್ಯಕ್ತಿತ್ವದ ಪರೀಕ್ಷೆಗಳು ಮೊದಲಾದುವನ್ನು ಬಳಸಿಕೊಂಡು ಅನೇಕ ವಿಷಯಗಳನ್ನು ಕಲೆಹಾಕಬೇಕಾಗಬಹುದು.

ಇದಾದ ಮೇಲೆ ವ್ಯಕ್ತಿ ಈ ಸಮಸ್ಯೆಗಳಿಂದ ಪಾರಾಗಲು ಯಾವ ಮಾರ್ಗವನ್ನು ಅನುಸರಿಸಬೇಕೆಂಬುದು ನಿರ್ಣಯಿಸಬೇಕು. ಬಾಲ್ಯ ಹಾಗೂ ತಾರುಣ್ಯದಲ್ಲಿ ಉಂಟಾಗುವ ವರ್ತನೆ ಹಾಗೂ ನಡವಳಿಕೆಯ ಸಮಸ್ಯೆಗಳು ಮುಖ್ಯವಾಗಿ ಪೋಷಕರ ಮತ್ತು ಮಗುವಿನ ಇಲ್ಲವೆ ಉಪಾಧ್ಯಾಯ ಮತ್ತು ಮಗುವಿನ ನಡುವಿನ ಸಂಬಂಧಗಳನ್ನು ಅವಲಂಬಿಸಿರುತ್ತವೆ. ಈ ಸಂಬಂಧಗಳನ್ನು ಸರಿಪಡಿಸುವುದೇ ಚಿಕಿತ್ಸಾ ಮನೋವಿಜ್ಞಾನದ ಮುಖ್ಯಗುರಿ. ಅಂದರೆ ತಾಯಿತಂದೆಗಳು ಉಪಾಧ್ಯಾಯರು ಮತ್ತಿತರರು ಮಗುವಿನ ವಿಚಾರದಲ್ಲಿ ತಮ್ಮ ನಡವಳಿಕೆಯನ್ನು ಬದಲಾಯಿಸಬೇಕಾಗುವುದು. ಇದರ ಪರಿಣಾಮವಾಗಿ ಮಗುವಿನ ವರ್ತನೆಯಲ್ಲಿಯೂ ಕ್ರಮೇಣ ಬದಲಾವಣೆಯುಂಟಾಗುವುದು.

ಬಾಲಕನ ಬುದ್ಧಿಶಕ್ತಿಯ ಬೆಳೆವಣಿಗೆಯಲ್ಲಿ ಲೋಪದೋಷಗಳಿದ್ದಾಗ ವರ್ತನಾ ಸಮಸ್ಯೆಗಳುಂಟಾಗುವುವು, ಇದಕ್ಕೆ ಪರಿಹಾರ ನೀಡಬೇಕಾದಲ್ಲಿ ತಕ್ಕ ಪರೀಕ್ಷಣದಿಂದ ಬಾಲಕನ ಬುದ್ಧಿಶಕ್ತಿಯ ಮಟ್ಟವನ್ನಳೆದು ತಾಯಿತಂದೆಯರಿಗೂ ಪೋಷಕರಿಗೂ ಉಪಾಧ್ಯಾಯರಿಗೂ ಅದನ್ನು ತಿಳಿಯಪಡಿಸಬೇಕು.

ನಡತೆಯ ಸಮಸ್ಯೆಗಳು ಮನೆಯ ಸ್ನೇಹಿತವರ್ಗಗಳ ಆವರಣವನ್ನು ಅವಲಂಬಿಸಿವೆ. ತಂದೆತಾಯಿಗಳಿಂದ ತನಗೆ ಬೇಕಾದ ಪ್ರೇಮ ಲಭಿಸದೆ ಹೋದರೆ ಮಗುವಿನ ನಡತೆ ವಿಕೃತವಾಗುವುದು. ಮನೆಯಲ್ಲಿ ಮೆಚ್ಚಿಗೆ ದೊರೆಯದೆ ಹೋದರೆ ಕಳ್ಳತನ ಮಾಡಿ ಸ್ನೇಹವರ್ಗದಲ್ಲಿ ಮೆಚ್ಚುಗೆಯನ್ನು ಪಡೆಯಲು ಮಗು ಪ್ರಯತ್ನಿಸುತ್ತದೆ.

ಈ ಮೇಲೆ ಹೇಳಿರುವ ಮತ್ತು ಇತರ ಕುಂದುಕೊರತೆಗಳು ವಯಸ್ಕರಲ್ಲಿ ಕಂಡುಬಂದಾಗ ಅವರಿಗೂ ಮಾನಸಿಕ ಚಿಕಿತ್ಸೆ ಅಗತ್ಯವಾಗಬಹುದು. ವ್ಯಕ್ತಿಯ ಆಲೋಚನೆಗಳನ್ನು ಸರಿಪಡಿಸುವುದು ಸಕಾರಾತ್ಮಕವಾಗಿ ಆಲೋಚಿಸುವಂತೆ ಮಾಡುವುದು, ವ್ಯಕ್ತಿಯ ವರ್ತನೆಗಳಲ್ಲಿ ಅಗತ್ಯ ಬದಲಾವಣೆಗಳನ್ನು ತರುವುದು, ಭಾವನಾತ್ಮಕ ಆಸರೆ ನೀಡುವುದು, ಜೀವನಕೌಶಲಗಳನ್ನು ಕಲಿಸುವುದು ಚಿಕಿತ್ಸೆಯ ಮುಖ್ಯಾಂಶಗಳು.

ಮಾನಸಿಕವಾಗಿ ಲೋಪದೋಷಗಳಿರುವ ವ್ಯಕ್ತಿ ಸರಿಯಾಗಲು ಅವನು ಹೇಗೆ ಪ್ರಯತ್ನಿಸಬೇಕು, ಅವನ ಸುತ್ತಲಿನ ಜನ ಹೇಗೆ ವರ್ತಿಸಿ ಅವನನ್ನು ಸರಿಪಡಿಸಬೇಕು ಎಂಬುದನ್ನು ಚಿಕಿತ್ಸಾ ಮನೋವಿಜ್ಞಾನ ವಿವರವಾಗಿ ಪರಿಶೀಲಿಸುತ್ತದೆ. (ಬಿ.ಕೆ.)

**ಚಿಕಿತ್ಸಾಲಯ :** ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಸ್ಥಳ (ಕ್ಲಿನಿಕ್). ರೋಗಿಗಳು ದಿನವೂ ಮನೆಯಿಂದ ಬಂದು ಚಿಕಿತ್ಸೆ ಮತ್ತು ಔಷಧಿ ಪಡೆದು ಹಿಂತಿರುಗಬಲ್ಲ ಚಿಕಿತ್ಸಾಕೇಂದ್ರಗಳಿಗೆ ಸಾಮಾನ್ಯವಾಗಿ ಇರುವ ಹೆಸರಿದು. ಹಾಗಲ್ಲದೆ, ರೋಗಿಗಳು ಅಲ್ಲೇ ಆಸರೆ ಪಡೆದು ಸಾಕಷ್ಟು ದಿವಸ ಔಷಧೋಪಚಾರ ಹಾಗೂ ವೈದ್ಯಕೀಯ ಸೇವೆ ಪಡೆಯಬಲ್ಲ ಕೇಂದ್ರಕ್ಕೆ ಆಸ್ಪತ್ರೆ ಎಂಬ ಹೆಸರುಂಟು. ಕ್ಲಿನಿಕ್ ಎಂಬುದು ರೋಗಿಯ ಹಾಸಿಗೆ ಅಥವಾ ರೋಗಿಯ ನೆಲೆ ಎಂಬ ಅರ್ಥಗಳನ್ನು ಕೊಡುವ ಮೂಲಗಳಿಂದ ಉತ್ಪತ್ತಿಯಾದ ಶಬ್ದ. ಆದ್ದರಿಂದ ಕ್ಲಿನಿಕ್ ಎಂದರೆ ಹಾಸಿಗೆ ಹತ್ತಿ ಮಲಗಿದ ರೋಗಿಯನ್ನು ಚಿಕಿತ್ಸಿಸುವ ಸ್ಥಳವೇ ಸರಿ. ಅಂದರೆ ಇದು ಸರ್ಕಾರದ ಅಥವಾ ಸಾರ್ವಜನಿಕ ಸಂಸ್ಥೆಯೂ ಅಲ್ಲ. ಇಲ್ಲಿ ಬಡಜನಗಳಿಗೆ ಧರ್ಮಾರ್ಥವಾಗಿ ಚಿಕಿತ್ಸೆ ಮಾಡುವ ಸಂಪ್ರದಾಯವೂ ಇಲ್ಲ. ವಿಧಿಸಿದ ಶುಲ್ಕವನ್ನು ಕೊಡಬಲ್ಲ ರೋಗಿಗಳನ್ನು ಸೇರಿಸಿಕೊಂಡು ಸೂಕ್ತಚಿಕಿತ್ಸೆಯನ್ನು ನೀಡುವ ಖಾಸಗಿ ಸಂಸ್ಥೆ ಮಾತ್ರ. ಚಿಕಿತ್ಸಾಲಯದಲ್ಲಿ ಅನೇಕ ವೈದ್ಯರು ತಕ್ಕ ಸಿಬ್ಬಂದಿ ಇದ್ದು ಇಲ್ಲಿ ರೋಗಿಗಳ ವಿಚಾರವಾದ ವಿಶೇಷ ವ್ಯಾಸಂಗಕ್ಕೂ ವಿಶೇಷ ಚಿಕಿತ್ಸಾಕ್ರಮಗಳಿಗೂ ಗಮನವೀಯಲಾಗುತ್ತದೆ. ಕೆಲವು ಚಿಕಿತ್ಸಾಲಯಗಳಲ್ಲಿ ಮಾತ್ರ ಓಡಾಡಿಕೊಂಡಿರುವ ರೋಗಿಗಳನ್ನೇ ಚಿಕಿತ್ಸಿಸಲಾಗುತ್ತದೆ. ಇಂಥ ಚಿಕಿತ್ಸಾಲಯಗಳನ್ನು ಆಂಬ್ಯುಲೆಂಟ್ ಕ್ಲಿನಿಕ್ ಎಂದು ಕರೆಯುತ್ತಾರೆ. ಆಧುನಿಕ ಕಾಲದಲ್ಲಿ ಕ್ಲಿನಿಕ್ ಎಂಬ ಶಬ್ದದ ಅರ್ಥವ್ಯಾಪ್ತಿ ಇನ್ನೂ ಅಧಿಕವಾಗಿದೆ. ವಿಶೇಷ ರೋಗಗಳಿಗೆ ಗಮನವೀಯುವ ಚಿಕಿತ್ಸಾಸ್ಥಳಗಳಿಗೂ ಕ್ಲಿನಿಕ್‌ಗಳೆಂದು (ಉದಾಹರಣೆಗೆ ಡೈಯಾಬಿಟಿಕ್ ಕ್ಲಿನಿಕ್, ಕಾರ್ಡಿಯ ಕ್ಲಿನಿಕ್) ಹೆಸರುಂಟು. (ಎಸ್.ಆರ್.ಆರ್.)

**ಚಿಕುಪಾಧ್ಯಾಯ :** 17ನೆಯ ಶತಮಾನದ ಕನ್ನಡ ಕವಿ. ಶ್ರೀವೈಷ್ಣವ. ಮೈಸೂರು ರಾಜ ಚಿಕ್ಕದೇವರಾಜ ಒಡೆಯರ (1672–1704) ಆಸ್ಥಾನದಲ್ಲಿ ಕರಣಿಕಾಗ್ರೇಸರನಾಗಿಯೂ ಮಂತ್ರಿಯಾಗಿಯೂ ಇದ್ದವ. ಲಕ್ಷ್ಮಿಪತಿ ಎಂಬುದು ಇವನ ಹುಟ್ಟು ಹೆಸರಾಗಿರಬಹುದು. ತ್ರಿಕದಂಬಪುರ ಅಥವಾ ತೆರಕಣಾಂಬಿ ಈತನ ಜನ್ಮಸ್ಥಳ. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪಂಡಿತನಾಗಿದ್ದ ಈತ ಯಾಚಕಜನಸಾರಥೇನು. ಸ್ವಜನ ಪರಜನ ಚಿಂತಾಮಣಿ, ಅಧೀತಸಕಲವೇದಶಾಸ್ತ್ರ ಪುರಾಣ ನಾನಾವಿಧ ವಿದ್ಯನಾಗಿ ಕವಿತಾವಾಕ್ಪತಿಯಾಗಿ ಹರಿಭಕ್ತಿ ರಸಾಸ್ವಾದನಪರನಾಗಿ ಇದ್ದವ. ಪಟ್ಟೂರಾಭಿದಾನ ಸತ್ಕುಲದೀಪ ಎಂಬುದಾಗಿ ತನ್ನನ್ನು ಕರೆದುಕೊಂಡಿದ್ದಾನೆ. ವ್ಯಾಸ, ವಾಲ್ಮೀಕಿ, ರುದ್ರಭಟ್ಟ, ಮಾಘ, ಬಾಣ ಮೊದಲಾದ ಪೂರ್ವ ಕವಿಗಳನ್ನು ಸ್ಮರಿಸಿದ್ದಾನೆ. ತನ್ನ ಪೋಷಕ ದೊರೆ ಚಿಕ್ಕದೇವರಾಯನ ವಂಶಾವಳಿ ಹಾಗೂ ವಿಜಯಗಳನ್ನು ತನ್ನ ಗ್ರಂಥಗಳ ಆದಿಭಾಗದಲ್ಲಿ ಹೇಳಿದ್ದಾನೆ.

ಚಿಕುಪಾಧ್ಯಾಯನ ಗ್ರಂಥರಾಶಿ ಅಪಾರ. ಚಂಪೂ, ಸಾಂಗತ್ಯ ಹಾಗೂ ಗದ್ಯಗಳಲ್ಲಿ ಸುಮಾರು ಇಪ್ಪತ್ತೆಂಟಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾನಲ್ಲದೆ ಟೀಕುಗಳನ್ನೂ ಕೆಲವು ಹಾಡುಗಳನ್ನೂ ಬರೆದಿದ್ದಾನೆ. ಇವನ ಕಾಲದವರೆಗೆ ಬೇರಾವ ಕವಿಯೂ ಈತನಷ್ಟು ಗ್ರಂಥಗಳನ್ನು ರಚಿಸಿರಲಾರನೆಂದು ಹೇಳಬಹುದು. ಇವನ ಗ್ರಂಥರಾಶಿಯನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

ಚಂಪೂಕಾವ್ಯಗಳು . 1 ವಿಷ್ಣುಪುರಾಣ, 2 ರುಕ್ಮಾಂಗದ ಚರಿತೆ, 3 ಯದುಗಿರಿ ಮಹಾತ್ಮ್ಯೆ, 4 ಕಮಲಾಚಲ ಮಹಾತ್ಮ್ಯೆ, 5 ಹಸ್ತಿಗಿರಿ ಮಹಾತ್ಮ್ಯೆ, 6 ದಿವ್ಯಸೂರಿ ಚರಿತೆ, 7 ಸಾತ್ವಿಕಬ್ರಹ್ಮ ವಿದ್ಯಾವಿಲಾಸ, 8 ಅರ್ಥಪಂಚಕ.

ಸಾಂಗತ್ಯ : 1 ಯಾದವಗಿರಿ ಮಹಾತ್ಮ್ಯೆ 2 ಪಶ್ಚಿಮರಂಗ ಮಹಾತ್ಮ್ಯೆ 3 ರಂಗಧಾಮಸ್ತುತಿ ಸಾಂಗತ್ಯ 4 ಶೃಂಗಾರಶತಕದ ಸಾಂಗತ್ಯ 5 ಪಶ್ಚಿಮ ರಂಗ ಸಾಂಗತ್ಯ 6 ಅಕ್ಷರಮಾಲಿಕಾ ಸಾಂಗತ್ಯ 7 ರಂಗಧಾಮನೀತಿಶತಕದ ಸಾಂಗತ್ಯ 8 ರಂಗಧಾಮಪುರಷವಿರಹದ ಸಾಂಗತ್ಯ 9 ಚಿತ್ರಶತಕ ಸಾಂಗತ್ಯ 10 ರಂಗನಾಯಕರಂಗನಾಯಕೀಸ್ತುತಿ ಸಾಂಗತ್ಯ.

ಗದ್ಯ : 1 ವಿಷ್ಣುಪುರಾಣ 2 ವೆಂಕಟಗಿರಿ ಮಹಾತ್ಮ್ಯೆ, 3 ಶ್ರೀರಂಗ ಮಹಾತ್ಮ್ಯೆ 4 ಶೇಷ ಧರ್ಮ 5 ಕಾಮಂದಕ ನೀತಿ 6 ಶುಕಸಪ್ತತಿ.

ಹಾಡು ಮತ್ತು ಟೀಕುಗಳು : 1 ರಂಗಸ್ವಾಮಿಯ ಶೃಂಗಾರಸೂತ್ರೋದಾಹರಣೆ, 2 ಶೃಂಗಾರದ ಹಾಡುಗಳು, 3 ವೈದ್ಯಾಮೃತ ಟೀಕೆ 4 ತಿರುವಾಯ್ಮೊಳಿ ಟೀಕೆ.

ಇವುಗಳಲ್ಲಿ ಯಾದವಗಿರಿ ಮಹಾತ್ಮ್ಯೆ, ಸಾತ್ವಿಕ ಬ್ರಹ್ಮವಿದ್ಯಾವಿಲಾಸ, ಅರ್ಥಪಂಚಕದ ಟೀಕೆ, ರಹಸ್ಯತ್ರಯ ಟೀಕೆ, ಭಾರದ್ವಾಜ ಸಂಹಿತೆ, ಅರ್ಥಪಂಚಕ ತತ್ತ್ವತ್ರಯ, ಮತ್ತು ದಿವ್ಯಸೂರಿ ಚರಿತೆ–ಇವು ವಿಶಿಷ್ಟಾದ್ವೈತ ಮತವಿವರಣ ರೂಪವಾದ ಗ್ರಂಥಗಳು. ಶ್ರೀರಂಗಮಹಾತ್ಮ್ಯೆ, ಯಾದವಗಿರಿ ಮಹಾತ್ಮ್ಯೆ (ಗದ್ಯ), ವೆಂಕಟಗಿರಿ ಮಹಾತ್ಮ್ಯೆ–ಇವು ಸ್ಥಳ ಮಹಾತ್ಮೆಯನ್ನು ತಿಳಿಸುವ ಗ್ರಂಥಗಳು, ಶೇಷ ಧರ್ಮ, ವಿಷ್ಣುಪುರಾಣ (ಗದ್ಯ), ವಿಷ್ಣುಪುರಾಣ (ಚಂಪು), ರುಕ್ಮಾಂಗದ ಚರಿತೆ (ಚಂಪು)–ಇವು ಪುರಾಣಗಳ ಅನುವಾದಗಳು. ಚಿತ್ರಶತಕ, ನೀತಿಶತಕ, ಶೃಂಗಾರಶತಕ, ಪುರುಷ ವಿರಹ, ರಂಗಸ್ವಾಮಿಯ ಶೃಂಗಾರ ಸೂತ್ರೋದಾಹರಣೆ (ಗದ್ಯ)–ಇವು ಕವಿತಾ ಚಮತ್ಕಾರ ಪ್ರದರ್ಶಕ ಗ್ರಂಥಗಳು. ಕಾಮಂದಕ ನೀತಿಸಾರ, ಶುಕಸಪ್ತತಿ–ಇವು ನೀತಿಬೋಧಕ ಗ್ರಂಥಗಳು.

ರಂಗಧಾಮ ಸ್ತುತಿಸಾಂಗತ್ಯ ಗ್ರಂಥ ರಂಗನಾಥನ ಪಾದಾದಿಕೇಶಾಂತ ವರ್ಣನೆಯನ್ನು ಒಳಗೊಂಡಿದೆ. ರಂಗಧಾಮ ಪುರಷವಿರಹ ಸಾಂಗತ್ಯದಲ್ಲಿ ರಂಗನಾಥ ದೇವರ ವಿರಹಸೂಚಕವಾದ ವ್ಯಂಗ್ಯೋಕ್ತಿ ಇದೆ. ನೀತಿಶತಕ ಸಾಂಗತ್ಯದಲ್ಲಿ ರಂಗನಾಥ ಸ್ತುತಿರೂಪವಾಗಿ ನೀತಿಯನ್ನು ಬೋಧಿಸಿದೆ. ಅಕ್ಷರಮಾಲಿಕಾಸಾಂಗತ್ಯ ರಂಗನಾಥ ದೇವರ ಮೇಲೆ ಕಕಾರದಿಂದ ಕ್ಷ ಕಾರ ಪರ್ಯಂತ ಅಕ್ಷರ ಮೊದಲಾಗಿಯೂ ಗುಣಿತದಿಂದಲೂ ಕಲ್ಪಿಸಿದ ಸ್ತುತಿಗಳನ್ನೊಳಗೊಂಡಿದೆ.

ಈತನ ಗ್ರಂಥಗಳಲ್ಲೆಲ್ಲ ದಿವ್ಯಸೂರಿ ಚರಿತೆ ಒಂದು ಉತ್ತಮ ಗ್ರಂಥ. ಇದರಲ್ಲಿ 14 ಆಶ್ವಾಸಗಳಿವೆ. ಚಿಕ್ಕದೇವರಾಜ ಪ್ರಭುಗಳು ಶ್ರೀರಂಗಾದಿ ದಿವ್ಯಕ್ಷೇತ್ರಗಳ ಮಹಾತ್ಮ್ಯೆಗಳನ್ನು ಕೇಳುತ್ತಿರುವಲ್ಲಿ ವೈಷ್ಣವ ಸಮುಚಿತ ದಿವ್ಯ ಪ್ರಬಂಧಗಳನ್ನು ರಚಿಸಿದ ದಿವ್ಯಸೂರಿಗಳ ಚರಿತ್ರವನ್ನು ಕೇಳುವ ಆಸೆ ಹುಟ್ಟಿ ಆಸ್ಥಾನಪಂಡಿತರನ್ನು ಕುರಿತು, ತಮಿಳು ಭಾಷೆಯಲ್ಲಿ ಕಂಗೊಳಿಸುವ ಆ ಮಹಾಮಹಿಮರ ಚರಿತ್ರೆಯನ್ನು ಕನ್ನಡ ಮಾತಿನಲ್ಲಿ ತಿಳಿಸಲು

ಕೇಳಿಕೊಂಡರೆಂದೂ, ಅದಕ್ಕೆ ತಾನು ಒಪ್ಪಿ ಹರಿಕೃಪೆಯಿಂದ ಅಂಥ ಕೃತಿಯೊಂದನ್ನು ಬರೆದೆನೆಂದೂ ಕವಿ ಹೇಳಿಕೊಂಡಿದ್ದಾನೆ. ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಪ್ರಚುರಗೊಳಿಸಿದ ಹನ್ನೆರಡು ಜನ ಆಳ್ವಾರುಗಳ ಜೊತೆಗೆ ಶ್ರೀ ರಾಮಾನುಜಾಚಾರ್ಯ ಚರಿತ್ರೆಯನ್ನೂ ಈ ಕೃತಿಯಲ್ಲಿ ನಿರೂಪಿಸಲಾಗಿದೆ. ಶ್ರೀ ವೈಷ್ಣವ ಗುರುಗಳ ಕಥೆಯನ್ನು ಕನ್ನಡಕ್ಕೆ ತಂದ ಕೀರ್ತಿ ಈತನದು. ಪಂಡಿತ ಎಂ.ಎ. ರಾಮಾನುಜ ಅಯ್ಯಂಗಾರ್ಯರು ಇದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ (1911).

ಚಿಕುಪಾಧ್ಯಾಯನ ಚಂಪೂ ಗ್ರಂಥಗಳು ಸಂಸ್ಕೃತಮಯವಾಗಿ ಪ್ರೌಢವಾಗಿದ್ದರೂ ಸಾಂಗತ್ಯ ಗ್ರಂಥಗಳು ಅಚ್ಚಕನ್ನಡ ಮತ್ತು ದೇಶೀಯ ಶಬ್ದಗಳ ಬಳಕೆಯಿಂದ ಸುಲಲಿತವಾಗಿವೆ. ಈತನ ಗ್ರಂಥರಾಶಿಯ ತುಂಬ ಶ್ರೀವೈಷ್ಣವ ಮತತತ್ತ್ವ, ಸಂಪ್ರದಾಯ, ಚರಿತ್ರೆ ಮುಂತಾದ ವಿಷಯಗಳೇ ಹೆಚ್ಚು. ಸಾತ್ತ್ವಿಕ ಬ್ರಹ್ಮವಿದ್ಯಾವಿಲಾಸವೆಂಬ ಕೃತಿಯಂತೂ ವಿಶಿಷ್ಟಾದ್ವೈತ ಮತವನ್ನು ಸಾಧಾರವಾಗಿ ನಿರೂಪಿಸುತ್ತದೆ. ಈತನ ಸಮಗ್ರ ಗ್ರಂಥರಾಶಿಯನ್ನು 'ರಾಮಾನುಜ ಮತಕೋಶ' ಎಂದು ಕರೆಯಲಾಗಿದೆ. ಈತನ ಪಾಂಡಿತ್ಯ ಮತ್ತು ಕವನರಚನಾಶಕ್ತಿ ನಿರ್ವಿವಾದದ್ದಾದರೂ, ಕವಿತ್ವದ ಮಟ್ಟ ಉನ್ನತವಾದುದುದಲ್ಲ ಎಂದು ವಿದ್ವಾಂಸರ ಮತ. (ಜಿ.ಎಸ್.ಪಿ.ಎಂ.)

**ಚಿಕೊರಿ :** ಆಸ್ಟರೇಸಿ ಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಮೂಲಿಕೆ ಸಸ್ಯ. ಸಕೋರಿ ಪರ್ಯಾಯ ನಾಮ. ಸಿಕೋರಿಯಮ್ ಇಂಟಿಬಸ್ ವೈಜ್ಞಾನಿಕ ಹೆಸರು. ಚಿಕೋರಿಯನ್ನು ವಿಶೇಷವಾಗಿ ಅದರ ಬೇರಿಗೋಸ್ಕರ ಬೆಳೆಸುತ್ತಾರೆ. ಚಿಕೊರಿಯ ಎಳೆಯ ಬೇರುಗಳನ್ನು ಕ್ಯಾರಟ್ ಗೆಡ್ಡೆಯಂತೆ ಬೇಯಿಸಿ ಮೊಸರು, ಮೆಣಸು ಮತ್ತು ಉಪ್ಪಿನೊಂದಿಗೆ ಸೇರಿಸಿ ತಿನ್ನುವುದುಂಟು. ಎಲೆಗಳನ್ನು ತರಕಾರಿಯಾಗಿ ಉಪಯೋಗಿಸಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಇದರ ಬೇರುಗಳನ್ನು ಒಣಗಿಸಿ, ಹುರಿದು, ಪುಡಿಮಾಡಿ ಕಾಫಿಪುಡಿಯ ಜೊತೆ ಮಿಶ್ರ ಮಾಡುವುದರಿಂದ ಇದಕ್ಕೆ ಆರ್ಥಿಕ ಪ್ರಾಮುಖ್ಯ ಉಂಟು. ಹೀಗೆ ಬೆರೆಸುವುದರಿಂದ ಕಾಫಿಯ ಬಣ್ಣ, ದಟ್ಟತೆ ಹಾಗೂ ರುಚಿಗಳು ಹೆಚ್ಚುತ್ತವೆ. ಚಿಕೊರಿಗೆ ಔಷಧೀಯ ಮಹತ್ತ್ವವೂ ಇದೆ. ಉದ್ಯಾನಗಳಲ್ಲಿ ಇದನ್ನು ಅಲಂಕಾರಸಸ್ಯವಾಗಿಯೂ ಬೆಳೆಸುತ್ತಾರೆ. ಇದರ ತವರು ಯೂರೋಪ್. 19ನೆಯ ಶತಮಾನದಿಂದೀಚೆಗೆ ಇದನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಬೆಳೆಸಲಾಗುತ್ತಿದೆ. ಭಾರತದಲ್ಲೂ ಇದರ ಅಲ್ಪಸ್ವಲ್ಪ ಬೇಸಾಯ ಉಂಟು.

ಚಿಕೊರಿ 1–2 ಮೀ. ಎತ್ತರ ಬೆಳೆಯುವ ಗಿಡ. ಇದರ ಬೇರು ಉದ್ದವಾಗಿಯೂ ರಸಭರಿತವಾಗಿಯೂ ಇದೆ. ಎಲೆಗಳು ಅಗಲ, ಆಯತಾಕಾರ ಅಥವಾ ಭರ್ಜಿಯಾಕಾರ, ಪ್ರತಿ ಎಲೆಯಲ್ಲಿ ಅನೇಕ ಹಾಲೆಗಳಿವೆ. ಅಂಚು ಗರಗಸದಂತೆ. ಹೂಗಳು ಹೊಳೆಯುವ ನೀಲಿಬಣ್ಣದವು. ಚಿಕೊರಿಯಲ್ಲಿ ವಿಟ್‌ಲೂಫ್, ಕ್ರಿಸ್‌ಮಾಸ್ ಮತ್ತು ಸಾಲಡ್ ಎಂಬ ಮೂರು ಬಗೆಗಳಿವೆ.

ಇದರ ಬೇಸಾಯ ಕ್ಯಾರಟ್ ಬೇಸಾಯದಂತೆಯೇ ಇದೆ. ಇದನ್ನು ಸಾಮಾನ್ಯವಾಗಿ ಎಲ್ಲ ತರದ ಮಣ್ಣಿನಲ್ಲಿ ಬೆಳೆಸಬಹುದಾದರೂ ಮರಳುಮಿಶ್ರಿತ ಗೋಡುಮಣ್ಣು ಬಹಳ ಉತ್ತಮ. ಚಿಕೊರಿಯನ್ನು ಅದರ ಸೊಪ್ಪಿಗಾಗಿ ಬೆಳೆಸುವಾಗ ಭೂಮಿಯನ್ನು ಚೆನ್ನಾಗಿ ಉತ್ತು, ಹೆಂಟೆಗಳನ್ನು ಒಡೆದು, ಕಸಕಡ್ಡಿಯನ್ನು ತೆಗೆದು ಮಟ್ಟಸ ಮಾಡಬೇಕು. ಬೀಜಗಳನ್ನು ಕೂರಿಗೆಯಿಂದ ಇಲ್ಲವೆ ಕೈಯಿಂದ ಬಿತ್ತಬಹುದು. ಎಕರೆಗೆ 3–5 ಕಿಲೋಗ್ರಾಂ ಬಿತ್ತನೆ ಬೇಕಾಗುತ್ತದೆ. ಒಂದು ವರ್ಷ ವಯಸ್ಸಿನ ಸಸಿಗಳಿಂದ ಎಲೆಗಳನ್ನೂ ತೆಗೆದು ಉಪಯೋಗಿಸಬಹುದು. ಬೆಳೆ 5–10 ವರ್ಷಗಳವರೆಗೂ ಇರುತ್ತದೆ. ಚಿಕೊರಿಯನ್ನು ಬೇರಿಗೋಸ್ಕರ ಬೆಳೆಸುವಾಗ ಬೀಜಗಳನ್ನು 22 ಅಂತರದ ಸಾಲುಗಳಲ್ಲಿ 9–12ಕ್ಕೆ ಒಂದರಂತೆ ನೆಡಬೇಕು. ಈ ರೀತಿ ನೆಡಲು ಒಂದು ಎಕರೆಗೆ $1\text{–}1\frac{1}{4}$ ಪೌಂಡ್ ಬಿತ್ತನೆ ಬೇಕಾಗುವುದು. ಬೇರುಗಳನ್ನು ಚೆನ್ನಾಗಿ ಬಲಿತಮೇಲೆ ಅಗೆದು ತೆಗೆದು ಒಣಗಿಸಬೇಕು. ಅಗೆಯುವುದು ತಡವಾದಲ್ಲಿ ಬೇರುಗಳು ನಾರಿನಂತಾಗಿ ತೂಕ ಕಡಿಮೆಯಾಗುವ ಸಂಭವ ಉಂಟು. ನ್ಯೂಜಿಲೆಂಡಿನಲ್ಲಿ ಒಂದು ಎಕರೆಯ ಸರಾಸರಿ ಇಳುವರಿ 10–11 ಟನ್ನುಗಳು. ಭಾರತದಲ್ಲಿ ಸ್ವಲ್ಪ ಕಡಿಮೆ. ಬೇರಿಗೋಸ್ಕರ ಬೆಳೆಸುವಾಗ ಬೀಜವಾಗಲು ಬಿಡುವುದಿಲ್ಲ. ಬೇರುಗಳನ್ನು ಬಿಸಿಲಿನಲ್ಲಾಗಲಿ ಬೆಂಕಿಯ ಶಾಖದಲ್ಲಾಗಲಿ ಒಣಗಿಸಬಹುದು. ಬಿಸಿಲಿನಲ್ಲಿ ಬೇರುಗಳು ನೋಡಲು ಚೆನ್ನಾಗಿರುತ್ತವೆ. (ಬಿ.ಎ.ಪಿ.)

**ಚಿಕ್ಕದೇವರಾಜ ಒಡೆಯರ್ :** 1645–1704. ಮೈಸೂರಿನ ಪ್ರಸಿದ್ಧ ದೊರೆಗಳಲ್ಲೊಬ್ಬರು. ಕರ್ಣಾಟಕ ಚಕ್ರವರ್ತಿ ಅಪ್ರತಿಮವೀರ, ತೆಂಕಣರಾಜ ಎಂಬ ಬಿರುದುಗಳನ್ನು ಪಡೆದಿದ್ದ ಇವರು ಪರಾಕ್ರಮಶಾಲಿ, ವ್ಯವಹಾರಚತುರ, ಒಳ್ಳೆಯ ಆಡಳಿತಗಾರ, ದೂರದರ್ಶಿಯಾದ ರಾಜಕಾರಣಿ, ಸಾಹಿತ್ಯಪ್ರೇಮಿ, ಸ್ವತಃ ಕವಿ. ಮೈಸೂರಿನಲ್ಲಿ ವಿಜಯನಗರ ಸಾಮ್ರಾಟರ ವಾರಸುದಾರರು ಮೈಸೂರು ಒಡೆಯರೆಂದು ಪ್ರತಿಪಾದಿಸಿದ ದೇವರಾಜ ಒಡೆಯರ ಸೋದರರ ಪುತ್ರರು. ಬಹುಮುಖ ಪ್ರತಿಭೆ ಹೊಂದಿದ್ದ ದೇವರಾಜ ಒಡೆಯರ ಸೋದರರ ಪುತ್ರರು. ಬಹುಮುಖ ಪ್ರತಿಭೆ ಹೊಂದಿದ್ದ ಇವರು 1645ರಲ್ಲಿ ಜನ್ಮವೆತ್ತಿದರು. 1673ರಲ್ಲಿ ತಮ್ಮ 28ನೆಯ ವಯಸ್ಸಿನಲ್ಲಿ ಮೈಸೂರಿನ ಸಿಂಹಾಸವನ್ನೇರಿದರು.

ಚಿಕ್ಕದೇವರಾಜರು ಮೊಗಲ್ ಚಕ್ರವರ್ತಿ ಔರಂಗ್‌ಜೇಬನ, ಮರಾಠರ ನಾಯಕ ಶಿವಾಜಿಯ ಸಮಕಾಲೀನರು. ಅವರ ಆಡಳಿತ ಕಾಲದಲ್ಲಿ ಭಾರತದ ಪರಿಸ್ಥಿತಿ, ಅದರಲ್ಲೂ ದಕ್ಷಿಣ ಭಾರತದ ರಾಜಕೀಯ ಸನ್ನಿವೇಶ, ಜಟಿಲಮಯವಾಗಿತ್ತು. ಮೈಸೂರು ಅರಸರ ಸ್ಥಾನವೇ ಭದ್ರವಾಗಿರಲಿಲ್ಲ. ಪಾಳೆಯಗಾರರ ಪಿತೂರಿ ಒಂದು ಕಡೆ ; ಕರ್ಣಾಟಕಕ್ಕೆ ಕಂಟಕಪ್ರಾಯರಾಗಿದ್ದ ದಕ್ಷಿಣದ ಮುಸ್ಲಿಂ ಅರಸರು ಇನ್ನೊಂದು ಕಡೆ ; ಇವರ ವೈರದ ಜೊತೆಗೆ ಮರಾಠರ ದಾಳಿಗಳು–ಇವೆಲ್ಲವನ್ನೂ ಎದುರಿಸಿ ಕನ್ನಡ ರಾಜ್ಯವನ್ನು ವ್ಯಾಪಕವಾಗಿ ಕಟ್ಟುವ ಧ್ಯೇಯ ಹೊಂದಿ, ಯಶಸ್ವಿಯಾದ ಕೀರ್ತಿ ಚಿಕ್ಕದೇವರಾಜರದು.

ಚಿಕ್ಕದೇವರಾಜರು ಪಟ್ಟಕ್ಕೆ ಬಂದ ತರುಣದಲ್ಲೇ ಮೈಸೂರು ರಾಜ್ಯವನ್ನು ಕಬಳಿಸುವ ಯತ್ನದಲ್ಲಿದ್ದ ಶತ್ರುಗಳನ್ನು ಎದುರಿಸಬೇಕಾಯಿತು. ಇವರು ಅನೇಕ ವಿಜಯಯಾತ್ರೆಗಳನ್ನು ಕೈಗೊಂಡರು. ತಮ್ಮ ರಾಜ್ಯದ ಮೇಲೆ ದಂಡೆತ್ತಿ ಬಂದ ಮಧುರೆಯ ನಾಯಕ ಚೊಕ್ಕನಾಥನ ದಾಳಿಯನ್ನು ಎದುರಿಸಿ ಜಯಗಳಿಸಿದರು. 1674ರಲ್ಲಿ ಕೆಳದಿಯ ಅರಸನ ಸೊಲ್ಲಡಗಿಸಿದರು.

1675 ರಲ್ಲಿ ಖಿಡಾಪುರದ ದಂಡನಾಯಕನಾದ ರಣದುಲ್ಲಾಖಾನನನ್ನು ಸೋಲಿಸಿ, ಕೇತಸಮುದ್ರ, ಕಂಡಿಕೆರೆ, ಹಂಡಾಲಕೆರೆ, ಗೂಳೂರು, ತುಮಕೂರು ಮತ್ತು ಹೊನ್ನವಳ್ಳಿ ಪ್ರಾಂತ್ಯಗಳನ್ನು ವಶಪಡಿಸಿಕೊಂಡು ರಾಜ್ಯ ವಿಸ್ತಾರಮಾಡಿದ್ದು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ತ್ವದ ಘಟನೆ. ಇದರಿಂದ ದಕ್ಷಿಣದಲ್ಲಿ ಮುಸ್ಲಿಮರ ಪ್ರಭಾವ ಸಡಿಲವಾಗತೊಡಗಿತು. 1677 ರಲ್ಲಿ ರಾಜ್ಯಕ್ಕೆ ಬಂದೊದಗಿದ್ದ ಮರಾಠರ ವಿಪತ್ತನ್ನು ಇವರು ನಿವಾರಿಸಿದರು. ಮತ್ತೆ 1682ರಲ್ಲಿ ದಾಳಿ ನಡೆಸಿದ ಸೇನಾನಾಯಕರ ದಾಳಿಯನ್ನು ಎದುರಿಸಿ ಯಶಸ್ವಿಯಾದರು. ಎರಡು ಬಾರಿ ಸೋತ ಮರಾಠರು ಮತ್ತೆ ಚಿಕ್ಕದೇವರಾಜರನ್ನು ಎದುರಿಸುವ ಸನ್ನಾಹ ಮಾಡಲಿಲ್ಲ. ಹೀಗೆ ರಾಜ್ಯಕ್ಕೆ ಬಂದೊದಗಿದ ವಿಷಮ ಸನ್ನಿವೇಶವನ್ನು ಧೈರ್ಯದಿಂದ ಎದುರಿಸಿ ಇವರು ಮೈಸೂರು ರಾಜ್ಯದ ಭವ್ಯ ಭವಿಷ್ಯಕ್ಕೆ ಬುನಾದಿ ಹಾಕಿದರು. ಮೈಸೂರಿನಲ್ಲಿ ಸಾರ್ವಭೌಮತ್ವವನ್ನು ಸ್ಥಿರವಾಗಿ ಸ್ಥಾಪಿಸಿ, ದಕ್ಷಿಣ ಭಾರತದಲ್ಲಿ ಅಪ್ರತಿಮ ವೀರರೆನಿಸಿಕೊಂಡರು. 1687 ರಲ್ಲಿ ಮೊಗಲರ ಸೇನಾನಿ ಖಾಸಿಮ್‌ಖಾನನಿಂದ ಕೊಂಡ ಬೆಂಗಳೂರು ಮೈಸೂರು ರಾಜ್ಯಕ್ಕೆ ತಿಲಕಪ್ರಾಯವಾಯಿತು.

ವ್ಯವಹಾರಚತುರರಾದ ಚಿಕ್ಕದೇವರಾಜರು ಭಾರತದ ರಾಜಕೀಯವನ್ನು ಕೂಲಂಕಷವಾಗಿ ಅಭ್ಯಸಿಸಿ, ಸುತ್ತಮುತ್ತಲಿನ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಂಡು, ರಾಜ್ಯದ ಅಭ್ಯುದಯಕ್ಕೆ ಕಾರಣಕರ್ತರಾದರು. ಪ್ರಾರಂಭದ ವಿರೋಧಗಳನ್ನು ಅಡಗಿಸಿದ ಮೇಲೆ ತಮ್ಮ ರಾಜ್ಯವನ್ನು ಸುಭದ್ರಗೊಳಿಸುವತ್ತ ಗಮನ ಹರಿಸಿದರು. ಅಂದು ಪ್ರಬಲವಾಗಿದ್ದ ಮರಾಠರ ಶಕ್ತಿಯನ್ನು ಕುಗ್ಗಿಸಬೇಕಾದರೆ, ದಕ್ಷಿಣದ ಮುಸಲ್ಮಾನರು ದಾಳಿ ಮಾಡದಂತೆ ತಪ್ಪಿಸಬೇಕಾದರೆ, ಮೊಗಲರ ಚಕ್ರವರ್ತಿ ಔರಂಗಜೇಬನ ಸ್ನೇಹಸಂಬಂಧ ಅನಿವಾರ್ಯವೆಂದು ತಿಳಿದ ಚಿಕ್ಕದೇವರಾಜರು, ಲಿಂಗಪ್ಪಯ್ಯನ ನೇತೃತ್ವದಲ್ಲಿ ರಾಯಭಾರವೊಂದನ್ನು ಅಹಮದ್‌ನಗರದಲ್ಲಿದ್ದ ಔರಂಗ್‌ಜೇಬನಲ್ಲಿಗೆ ಕಳುಹಿಸಿದರು. ಮುಖ್ಯವಾಗಿ ಮರಾಠರ ಮುತ್ತಿಗೆಗಳಿಂದ ಮತ್ತು ಪಾಳೆಯಗಾರರ ದಾಳಿಗಳಿಂದ ರಾಜ್ಯವನ್ನು ರಕ್ಷಿಸುವುದು, ಅಲ್ಲದೆ ಚಿಕ್ಕದೇವರಾಜರ ಸ್ನೇಹಿತನಾದ ಮೊಗಲ್ ದಳಪತಿ ಖಾಸಿಮ್‌ಖಾನನ ಮರಣದ ಅನಂತರ ಮೊಗಲರಿಂದ ಒದಗಬಹುದಾಗಿದ್ದ ವಿಪತ್ತಿನಿಂದ ಮೈಸೂರನ್ನು ರಕ್ಷಿಸುವುದು, ಮೈಸೂರು(ಈಗಿನ ಕರ್ನಾಟಕ)ರಾಜ್ಯದ ಪ್ರತಿಷ್ಠೆಯನ್ನು ಹೆಚ್ಚಿಸುವುದು-ಇವು ರಾಯಭಾರದ ಉದ್ದೇಶಗಳಾಗಿದ್ದುವು. ಚಿಕ್ಕದೇವರಾಜರ ಪ್ರಭುತ್ವಕ್ಕೆ ಔರಂಗಜೇಬ್ ಮನ್ನಣೆ ನೀಡಿದನಲ್ಲದೆ ಅವರಿಗೆ ಜಗದೇವರಾಯ ಎಂಬ ಬಿರುದನ್ನಿತ್ತ. ಔರಂಗಜೇಬನಿಗೂ ಈ ಮೈತ್ರಿಯಿಂದ ಪ್ರತಿಫಲ ದೊರಕಿತು. ಮುಖ್ಯವಾಗಿ ಮರಾಠರನ್ನು ದಕ್ಷಿಣದಲ್ಲಿ ಎದುರಿಸಿ, ಅವರ ಪ್ರಾಬಲ್ಯವನ್ನು ಕುಂಠಿತಗೊಳಿಸುವ ಅವನ ಯತ್ನದಲ್ಲಿ ಚಿಕ್ಕದೇವರಾಜರು ಸಹಾಯಕರಾದರು. ಅನಂತರ ಚಿಕ್ಕದೇವರಾಜರು ಕುಮಾರಯ್ಯನ ನೇತೃತ್ವದಲ್ಲಿ ದಕ್ಷಿಣಕ್ಕೆ ಕಳಿಸಿದ ಸೈನ್ಯ ದೀರ್ಘಕಾಲ ಮುತ್ತಿಗೆ ಹಾಕಿ ತಿರುಚಿನಾಪಳ್ಳಿಯನ್ನು ವಶಪಡಿಸಿಕೊಂಡಿತು.

ಹೀಗೆ ಕಾಲೋಚಿತವಾದ ಉದಾತ್ತ ರಾಜಕೀಯ ಧೋರಣೆಯನ್ನು ತಳೆದ ಚಿಕ್ಕದೇವರಾಜರು ಕರ್ನಾಟಕದ ಸ್ವತಂತ್ರ ರಾಜರಲ್ಲಿ ಅಗ್ರಗಣ್ಯರಾದರು. ಮೈಸೂರು(ಈಗಿನ ಕರ್ನಾಟಕ)ರಾಜ್ಯದ ರಾಜಕೀಯ ಪ್ರಗತಿಗೆ ರಾಜ ಒಡೆಯರ್ ಮತ್ತ ಕಂಠೀರವ ನರಸರಾಜರು ಸಾಕಷ್ಟು ಶ್ರಮಪಟ್ಟದ್ದು ನಿಜವಾದರೂ, ಅದನ್ನು ಇಮ್ಮಡಿಗೊಳಿಸಿದ ಕೀರ್ತಿ ಚಿಕ್ಕದೇವರಾಜರಿಗೆ ಸಲ್ಲತಕ್ಕದ್ದಾಗಿದೆ. ಇವರ ಆಡಳಿತಕಾಲದಲ್ಲಿ ಮೈಸೂರು(ಕರ್ನಾಟಕ) ರಾಜ್ಯ ಉತ್ತರದಲ್ಲಿ ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳಿಂದ ದಕ್ಷಿಣದಲ್ಲಿ ಅಣ್ಣಾಮಲೈ ಮತ್ತು ಪಳನಿ ಬೆಟ್ಟಗಳವರೆಗೂ ಪೂರ್ವದಲ್ಲಿ ಸೇಲಂನಿಂದ ಪಶ್ಚಿಮದಲ್ಲಿ ಬೇಲೂರು ಮತ್ತು ಕೊಡಗಿನವರೆಗೂ ವಿಸ್ತರಿಸಿತು. ಇವರು ಮಹಾರಾಜಾಧಿರಾಜ ಎಂಬ ಬಿರುದು ಧರಿಸಿದರು. ಅಪ್ರತಿಮವೀರರೆಂದು ಪ್ರಸಿದ್ಧಿ ಹೊಂದಿದರು.

ವೀರಯೋಧರಾಗಿದ್ದ ಚಿಕ್ಕದೇವರಾಜರು ಆಡಳಿತಪರಿಣಿತರೂ ಆಗಿದ್ದರು. ಆಡಳಿತವನ್ನು ಸುಗಮವಾಗಿ ನಡೆಸಲು ಸಚಿವ ಸಂಪುಟವನ್ನು ನೇಮಿಸಿ, ರಾಜ್ಯಭಾರವನ್ನು ವಿಚಕ್ಷಣೆಯಿಂದ ನಡೆಸಿದರು. ಭೂಮಿ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಕಂದಾಯ ಕಾನೂನುಗಳನ್ನು ಕ್ರೋಡೀಕರಿಸಿದರು. ದೇಶಕ್ಕೆಲ್ಲ ಅನ್ವಯವಾಗುವಂತೆ ಅಂಚೆ ವ್ಯವಸ್ಥೆ ರೂಢಿಗೆ ಬಂತು. ಸರ್ಕಾರದ ಕೆಲಸ ತ್ವರಿತವಾಗಿ ನಡೆಸುವ ಸಲುವಾಗಿ ಕೇಂದ್ರಾಡಳಿತವನ್ನು 18 ಇಲಾಖೆಗಳನ್ನಾಗಿ ವಿಂಗಡಿಸಲಾಯಿತು. ಆಡಳಿತದಲ್ಲಿ ಗ್ರಾಮಕಲ್ಯಾಣಕ್ಕೆ ಹೆಚ್ಚಿನ ಗಮನ ಕೊಡುವಂತೆ ಇವರು ಏರ್ಪಾಡು ಮಾಡಿದರು. ಅಧಿಕಾರಿಗಳು ತಮಗೆ ಬರುವ ಆದಾಯಕ್ಕಿಂತ ಹೆಚ್ಚಿನ ವೆಚ್ಚ ಮಾಡದಂತೆ ಕಟ್ಟಳೆ ಮಾಡಿದ್ದುದರಿಂದ ಲಂಚಕ್ಕೆ ಆಸ್ಪದ ನೀಡದೆ ಅಧಿಕಾರಿಗಳು ನ್ಯಾಯದಿಂದ ವರ್ತಿಸುವುದಕ್ಕೆ ದಾರಿಮಾಡಿಕೊಟ್ಟಿತು. ರಾಜ್ಯದ ನಾನಾ ಬಾಬುಗಳಿಂದ ಬರಬೇಕಾದ ಆದಾಯಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದರಿಂದ ವಾರ್ಷಿಕ ಆದಾಯ ಇಮ್ಮಡಿಯಾಯಿತು. ಅಲ್ಲದೆ ಅದರ ವಿತರಣೆಯಲ್ಲಿ ಒಂದು ಕ್ರಮವನ್ನು ಅನುಸರಿಸಿದ್ದರಿಂದ ರಾಜ್ಯದಲ್ಲಿ ಕ್ಷೇಮ, ಶಾಂತಿ ಮತ್ತು ಪ್ರಗತಿ ಸಾಧಿಸಿದುವು. ಮಿತವ್ಯಯ ನೀತಿಯಿಂದ, ಸಮರ್ಥ ಆರ್ಥಿಕ ನಿರ್ವಹಣೆಯಿಂದ ಚಿಕ್ಕದೇವರಾಜರು ಅಪಾರ ಧನಸಂಗ್ರಹ ಮಾಡಲು ಸಹಾಯವಾಯಿತು. ಅವರು ನವಕೋಟಿ ನಾರಾಯಣ ಎಂಬ ಹೆಸರು ಗಳಿಸಿದರು.

ಪ್ರಜೆಗಳಿಗೆ ನ್ಯಾಯವಾದ ಬೆಲೆಯಲ್ಲಿ, ನಿರ್ದಿಷ್ಟ ಅಳತೆಯಲ್ಲಿ ಪದಾರ್ಥಗಳು ಸಿಗುವಂತೆ ನಿಯಂತ್ರಿತ ಮಾರುಕಟ್ಟೆಗಳು ಸ್ಥಾಪಿತವಾದುವು. ತೂಕ ಮತ್ತು ಅಳತೆಗಳನ್ನು ನಿರ್ದಿಷ್ಟಗೊಳಿಸಲಾಯಿತು. ಇವರು ವರ್ತಕರ ವ್ಯಾಪಾರ ವಹಿವಾಟುಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿದ್ದರು. ರಾಜ್ಯದ ನೀರಾವರಿ ಯೋಜನೆಗಳಲ್ಲಿ ಆಸಕ್ತಿ ವಹಿಸಿ, ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿಸಿ, ಹೆಚ್ಚಿನ ಪ್ರದೇಶವನ್ನು ನೀರಾವರಿಗೆ ತರುವ ಪ್ರಯತ್ನ ಮಾಡಿದರು.

ಚಿಕ್ಕದೇವರಾಜರು ಶ್ರೀವೈಷ್ಣವ ಧರ್ಮೀಯರಾಗಿದ್ದರೂ ಪರಮತಸಹಿಷ್ಣುವಾಗಿದ್ದರು. ರಾಜ್ಯದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದುವು. ಶ್ರವಣಬೆಳಗೊಳದಲ್ಲಿ ಇವರು ತಟಾಕವನ್ನು ಕಟ್ಟಿಸಿದರು.

ಸಾಹಿತ್ಯಪೋಷಕರಾಗಿದ್ದ ಚಿಕ್ಕದೇವರಾಜರ ಕಾಲದಲ್ಲಿ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣ ಸಾಂಸ್ಕೃತಿಕ ಕೇಂದ್ರವಾಗಿ ಪ್ರಾಮುಖ್ಯ ಗಳಿಸಿತು. ಅವರ ಆಸ್ಥಾನದಲ್ಲಿ ವಿದ್ವಾಂಸರೂ ತಿರುಮಲಾರ್ಯ, ಮಲ್ಲರಸ ಮುಂತಾದ ಕವಿಗಳೂ, ಶೃಂಗಾರಮ್ಮ ಹೊನ್ನಮ್ಮ ಎಂಬ ಕವಯಿತ್ರಿಯರೂ ಇದ್ದರು. ಚಿಕ್ಕದೇವರಾಜರ ಆಡಳಿತಾವಧಿಯಾದ (1673-1704) 17ನೆಯ ಶತಮಾನದ ಉತ್ತರಾರ್ಧವನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿಕ್ಕದೇವರಾಜಯುಗವೆಂದೇ ಕರೆಯಲಾಗಿದೆ. ತಿರುಮಲಾರ್ಯ ಬರೆದ ಗ್ರಂಥಗಳಲ್ಲಿ ಚಿಕ್ಕದೇವರಾಜರೇ ಕಥಾನಾಯಕ. ಅವರ ವಂಶದ ಗೌರವಪ್ರತಿಷ್ಠೆಗಳ ಹಿನ್ನೆಲೆಯಲ್ಲಿ ತನ್ನ ಒಡನಾಡಿ ಒಡೆಯನ ಸೌಜನ್ಯವನ್ನು, ಶೌರ್ಯವನ್ನು, ದಿಗ್ವಿಜಯ ಸಂಗ್ರಾಮಗಳನ್ನು, ಧರ್ಮಬುದ್ಧಿಯನ್ನು, ಪ್ರಜಾಪರಿಪಾಲನ ನೀತಿಯನ್ನು ಮತ್ತು ಅವನ ವ್ಯಕ್ತಿತ್ವವನ್ನು ತಿರುಮಲಾರ್ಯ ವರ್ಣಿಸಿದ್ದಾನೆ.

ಚಿಕ್ಕದೇವರಾಜರು ಸ್ವತಃ ಕವಿಯಾಗಿದ್ದರು. ಅವರು ಚಿಕ್ಕದೇವರಾಜ ಬಿನ್ನಪ ಎಂಬ ಕೃತಿ ಶ್ರೀ ವೈಷ್ಣವ ಸಿದ್ಧಾಂತಕ್ಕೆ ಸರಳ ಮತ್ತು ಸುಂದರ ಕೈಪಿಡಿಯಾಗಿದೆ. ಹೆಚ್ಚಿನ ವಿವರಗಳಿಗೆ

**(ನೋಡಿ- ಒಡೆಯರ-ಕಾಲದ-ಕನ್ನಡ-ಸಾಹಿತ್ಯ)** **(ಎಚ್.ಡಿ.)**

ಚಿಕ್ಕದೇವರಾಜರು ಆಡಳಿತವನ್ನು ವಿಚಕ್ಷಣೆಯಿಂದ ನಡೆಸಿ, ಕನ್ನಡ ರಾಜ್ಯವನ್ನು ವ್ಯಾಪಕವಾಗಿ ಕಟ್ಟಿ, ಅದರ ಪ್ರತಿಷ್ಠೆಗೌರವಗಳನ್ನು ಹೆಚ್ಚಿಸಿ, 1704ರಲ್ಲಿ ತಮ್ಮ 76ನೆಯ ವಯಸ್ಸಿನಲ್ಲಿ ನಿಧನರಾದರು. **(ಕೆ.ಟಿ.ಆರ್.)**

**ಚಿಕ್ಕನಾಯಕನಹಳ್ಳಿ :** ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಪಶ್ಚಿಮದ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಕಸಬೆ. ಇದು ಬೆಂಗಳೂರಿನಿಂದ 132ಕಿ.ಮೀ ದೂರದಲ್ಲಿಯೂ, ತುಮಕೂರಿನಿಂದ 67ಕಿ.ಮೀ ದೂರದಲ್ಲಿಯೂ ಇದೆ. ಉತ್ತರಕ್ಕೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳು, ಪೂರ್ವಕ್ಕೆ ಶಿರಾ ಮತ್ತು ಗುಬ್ಬಿ ತಾಲ್ಲೂಕುಗಳು, ದಕ್ಷಿಣಕ್ಕೆ ತಿಪಟೂರು ತಾಲ್ಲೂಕು, ಪಶ್ಚಿಮಕ್ಕೆ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು - ಇವು ತಾಲ್ಲೂಕಿನ ಮೇರೆಗಳು. ಚಿಕ್ಕನಾಯಕನಹಳ್ಳಿ, ಶೆಟ್ಟಿಕೆರೆ, ಕಂಡಿಕೆರೆ, ಹಂದನಕೆರೆ, ಹುಳಿಯಾರ್ ಹೋಬಳಿಗಳಾಗಿ ವಿಭಾಗವಾಗಿರುವ ತಾಲ್ಲೂಕಿನ ಒಟ್ಟು ಗ್ರಾಮಗಳ ಸಂಖ್ಯೆ 208. ಚಿಕ್ಕನಾಯಕನಹಳ್ಳಿಯೊಂದೇ ಈ ತಾಲ್ಲೂಕಿನಲ್ಲಿರುವ ಪಟ್ಟಣ. ತಾಲ್ಲೂಕಿನ ವಿಸ್ತೀರ್ಣ 1,083.9 ಚ.ಕಿ.ಮೀ. ಜನಸಂಖ್ಯೆ 2,09,539 (2001). ಈ ತಾಲ್ಲೂಕು ತಿಪಟೂರು ಉಪವಿಭಾಗಕ್ಕೆ ಸೇರಿದೆ.

ತಾಲ್ಲೂಕಿನ ಪೂರ್ವದಲ್ಲಿ ದಕ್ಷಿಣೋತ್ತರವಾಗಿ ಸಮಾಂತರದಲ್ಲಿ ಸಾಗಿರುವ ತಗ್ಗಿನ ನಗ್ನ ಬೆಟ್ಟಗಳ ಮೂರು ಸಾಲುಗಳಿವೆ. ಇವುಗಳ ಮೇಲೆ ಬಿದ್ದ ಮಳೆನೀರು ಹರಿದು ಶಿರಾ ತಾಲ್ಲೂಕಿನಲ್ಲಿ ವೇದವತಿ ನದಿಯನ್ನು ಸೇರುತ್ತದೆ. ಬೆಟ್ಟಗಳ ಶ್ರೇಣಿಯಲ್ಲಿ ಮ್ಯಾಂಗನೀಸಿನ ಮತ್ತು ಕೆಂಪು ಹಾಗೂ ಬಿಳಿಯ ಕಾವಿ ಮಣ್ಣಿನ ನಿಕ್ಷೇಪಗಳುಂಟು. ಬೆಟ್ಟಗಳ ನಡುವಣ ಕಣಿವೆಯ ನೆಲ ಫಲವತ್ತಾದ್ದು. ಇಲ್ಲಿ ತೆಂಗು ಮತ್ತು ಅಡಕೆ ತೋಟಗಳಿವೆ. ಸೆಟ್ಟಿಕೆರೆಯ ದಕ್ಷಿಣದಿಂದ ಉತ್ತರಕ್ಕೆ ಹುಳಿಯಾರಿನ ಕಡೆಗೂ ಯೆಳನಾಡಿನಿಂದ ಬೂದಿಹಾಳಿನ ವಾಯವ್ಯದ ಕಡೆಯಲ್ಲಿ ಸಾಗಿ ವೇದವತಿಯನ್ನು ಸೇರಲು ಹೊಳಲ್ಕೆರೆ ತಾಲ್ಲೂಕಿನ ಕಡೆಗೂ ಎರಡು ತೊರೆಗಳು ಹರಿಯುತ್ತವೆ. ತಾಲ್ಲೂಕಿನ ಬೆಳೆಗಳು ರಾಗಿ, ಹುರುಳಿ, ಜೋಳ, ತೊಗರಿ, ತೆಂಗು, ಅಡಕೆ.

ಚಿಕ್ಕನಾಯಕನಹಳ್ಳಿ ಪಟ್ಟಣ ಈ ತಾಲ್ಲೂಕಿನ ಕಸಬೆ. ಉ.ಅ. $13^{0}$ 25' ಮತ್ತು ಪೂ.ರೇ. $76^{0}$ 4' ಮೇಲೆ, ತುರುವೇಕೆರೆ-ಹುಳಿಯಾರ್ ರಸ್ತೆಯಲ್ಲಿ, ಬೆಂಗಳೂರು-ಶಿವಮೊಗ್ಗ ರಸ್ತೆಗೆ 13 ಕಿ.ಮೀ ಉತ್ತರದಲ್ಲಿದೆ. ಬೆಂಗಳೂರು-ಪುಣೆ ರೈಲುಮಾರ್ಗದ ಬಾಣಾವರ ನಿಲ್ದಾಣದಿಂದ ಇಲ್ಲಿಗೆ ಸು. 18 ಕಿಮೀ. ದೂರ. ಜನಸಂಖ್ಯೆ 22,360 (2001). ಇಲ್ಲೊಂದು ಪುರಸಭೆ ಇದೆ. ಹಾಗಲವಾಡಿ ಮನೆತನದ ಪಾಳೆಯಗಾರನಾಗಿದ್ದ

ಚಿಕ್ಕನಾಯಕನಿಂದ ಊರಿಗೆ ಈ ಹೆಸರು ಬಂದಿದೆ. ಪರಶುರಾಮರಾಯನ ನೇತೃತ್ವದಲ್ಲಿ ಮರಾಠರ ಸೈನ್ಯ ಶ್ರೀರಂಗಪಟ್ಟಣದ ಬಳಿ ಬ್ರಿಟಿಷ್ ಸೈನ್ಯವನ್ನು ಸೇರಲು ಹೋಗುತ್ತಿದ್ದಾಗ ಹಾದಿಯಲ್ಲಿ ಈ ಪಟ್ಟಣವನ್ನು ಕೊಳ್ಳೆ ಹೊಡೆಯಿತೆಂದು ತಿಳಿದುಬರುತ್ತದೆ. ಚಿಕ್ಕನಾಯಕನಹಳ್ಳಿಯ ಸುತ್ತಮುತ್ತ ತೆಂಗು, ಅಡಕೆ ತೋಟಗಳಿವೆ. ಪಟ್ಟಣ ತಕ್ಕಮಟ್ಟಿಗೆ ಪ್ರವರ್ಧಮಾನವಾಗಿದೆ. ತೆಂಗು, ಅಡಕೆಗಳ ಬೇಸಾಯದ ಜೊತೆಗೆ ಕಂಬಳಿ ನೇಯುವುದೂ ಇಲ್ಲಿಯ ಒಂದು ಕಸಬು. ವಾರಕ್ಕೊಮ್ಮೆ ಇಲ್ಲಿ ಕೂಡುವ ಸಂತೆಯಲ್ಲಿ ಕಂಬಳಿಗಳು ವಿಶೇಷವಾಗಿ ಮಾರಾಟವಾಗುತ್ತವೆ. ವೆಂಕಟರಮಣಸ್ವಾಮಿಯ ದೇವಸ್ಥಾನ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾದ ದೊಡ್ಡ ಕಟ್ಟಡ. ಇಲ್ಲಿ ಹುಳಿಯಾರು ಆಂಜನೇಯ, ಬ್ರಹ್ಮಪುರಿ ಆಂಜನೇಯ ಎಂಬ ಎರಡು ಆಂಜನೇಯ ದೇವಸ್ಥಾನಗಳಿವೆ. ಮೊದಲನೆಯದು ದೊಡ್ಡದು. ದ್ರಾವಿಡ ಶೈಲಿಯಲ್ಲಿ ನಿರ್ಮಿತವಾದ ಇನ್ನೊಂದು ದೇವಸ್ಥಾನ ರಾಮೇಶ್ವರನದು. ಇದನ್ನು ಹಾಗಲವಾಡಿ ಪಾಳೆಯಗಾರ ಕಟ್ಟಿಸಿದನೆಂದು ಹೇಳಲಾಗಿದೆ. ಊರಿನ ದೇವತೆ ಹಿರಿಮಾ ವರದಾ ಎಲ್ಲಮ್ಮ ಅಥವಾ ರೇಣುಕಾದೇವಿ. ಈಕೆಯ ಪ್ರತಿಮೆ ಮರದ್ದು. ಇದಕ್ಕೆ ಕಲ್ಲಿನಿಂದ ಕಡೆಯಲಾದ ಮುಖವಿದೆ. ಉತ್ಸವಮೂರ್ತಿ ಪರಶುರಾಮನದು. ಇವನು ರೇಣುಕೆಯ ಮಗ. ರೇಣುಕೆಯ ಗಂಡನಾದ ಜಮದಗ್ನಿಯ ಪ್ರತಿಮೆ ಆಕೆಯ ಬಲಕ್ಕೆ ಇದೆ. ತಾತಯ್ಯನ ಗೋರಿ ಎಂಬುದು ಒಬ್ಬ ಮುಸ್ಲಿಂ ಸಂತನದು. ಇವನಿಗೆ ಅನೇಕ ಹಿಂದೂ ಭಕ್ತರೂ ಇದ್ದಾರೆ. ವರ್ಷಕ್ಕೊಮ್ಮೆ ಇಲ್ಲಿ ಉರುಸ್ ನಡೆಯುತ್ತದೆ.

ದಬ್ಬೆಘಟ್ಟದಲ್ಲಿ 13ನೆಯ ಶತಮಾನದ ಮಹಾಲಿಂಗೇಶ್ವರ ದೇವಾಲಯವಿದೆ. ಅಲ್ಲಿಯ ಮೂರು ಗರ್ಭಗುಡಿಗಳಲ್ಲಿ ಹೊಯ್ಸಳೇಶ್ವರ, ಬ್ರಹ್ಮೇಶ್ವರ ಮತ್ತು ಮಾದೇಶ್ವರ ಲಿಂಗಗಳುಂಟು. ದೊಡ್ಡ ಬಿದರೆಯಲ್ಲಿ ಈಶ್ವರ ದೇವಾಲಯವಿದೆ. ಅಲ್ಲಿಯ ಪಾತಾಳ ಲಿಂಗೇಶ್ವರ ಗುಡಿಯಲ್ಲಿ 100 ಲಿಂಗಗಳಿವೆ. ಯಳನಾಡು ದ್ರಾವಿಡ ಶೈಲಿಯ ಸಿದ್ಧರಾಮೇಶ್ವರ ದೇವಾಲಯದಿಂದಾಗಿ ಪ್ರಸಿದ್ಧ. ವೀರಶೈವಗುರು ಸಿದ್ಧರಾಮ ಇಲ್ಲಿ ತಪಸ್ಸು ಮಾಡಿದ. ದೇವಾಲಯದ ಪೂಜಾಮೂರ್ತಿ ಲಿಂಗಾಕೃತಿಯ ಹುತ್ತ. ಹೊನ್ನೆಬಾಗಿ ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಬೆಟ್ಟದ ಮೇಲೆ ರಂಗನಾಥಸ್ವಾಮಿ ಗುಡಿಯಿದೆ. ಹುಳಿಯಾರ್ ಇನ್ನೊಂದು ಐತಿಹಾಸಿಕ ಸ್ಥಳ. ಹೊಯ್ಸಳರ ಕಾಲದಲ್ಲಿ ಈ ಗ್ರಾಮದ ಹೆಸರು ಹುಲಿಯೇರು ಎಂದಿತ್ತು. ಇದು ಚಿಕ್ಕನಾಯಕನಹಳ್ಳಿಗೆ 23 ಕಿ.ಮೀ ದೂರದಲ್ಲಿದೆ. ಇಲ್ಲಿಯ ರಂಗನಾಥಸ್ವಾಮಿ ದೇವಾಲಯ ಹೊಯ್ಸಳರ ಕಾಲದ್ದು. ಕಂಡಿಕೆರೆ ಗ್ರಾಮದಲ್ಲಿ ಪುರಾತನ ಕೋಟೆಯಿದೆ. ಇದು ಈಗ ಪಾಳು ಬಿದ್ದಿದೆ. ಇಲ್ಲಿಯ ದೇವಾಲಯ ಗೋಪಾಲ ಕೃಷ್ಣನದು. ಮರುಳೆ ಗ್ರಾಮದಲ್ಲಿ ಕೆಲವು ಮಾಸ್ತಿ ಕಲ್ಲುಗಳೂ ಶೆಟ್ಟಿಕೆರೆಯಲ್ಲಿ ಯೋಗಮಾಧವ ಮತ್ತು ರಂಗನಾಥಸ್ವಾಮಿ ದೇವಾಲಯಗಳೂ ಇವೆ.

ಹುಳಿಯಾರ್ ಆಂಜನೇಯಸ್ವಾಮಿ, ಯಳನಾಡು ಸಿದ್ಧರಾಮೇಶ್ವರ, ಗೋಡೆ ಕೆರೆಯ ಸಿದ್ಧರಾಮೇಶ್ವರ, ಕೆರೆಹಳ್ಳಿಯ ರಂಗನಾಥಸ್ವಾಮಿ ಜಾತ್ರೆಗಳು ಮತ್ತು ಉತ್ಸವಗಳು ಪ್ರಸಿದ್ಧವಾಗಿವೆ.

(ವಿ.ಜಿ.ಕೆ.; ಆರ್.ಎಂ.ಆರ್.)

**ಚಿಕ್ಕಬಳ್ಳಾಪುರ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಇದೇ ಹೆಸರಿನ ತಾಲ್ಲೂಕು ಹಾಗೂ ಆಡಳಿತ ಕೇಂದ್ರ. ಕೋಲಾರಕ್ಕೆ 58 ಕಿಮೀ ದೂರದಲ್ಲಿ ವಾಯವ್ಯ ದಿಕ್ಕಿನಲ್ಲಿದೆ. ಈಗ ಇದರ ವಿಸ್ತೀರ್ಣ 11.65 ಚ.ಕಿಮೀ. ಜನಸಂಖ್ಯೆ 54,938. ನಗರ ಪೌರಸಭೆ ಆಡಳಿತಕೊಳಪಟ್ಟಿದೆ. ಈ ಪಟ್ಟಣ ರೇಷ್ಮೆ ಉದ್ಯಮ ಹಾಗೂ ಕಲ್ಲುಸಕ್ಕರೆ ತಯಾರಿಕೆಗೆ ಪ್ರಸಿದ್ಧ. ಸಣ್ಣ ಕೈಗಾರಿಕೆಗಳ ಬೆಳೆವಣಿಗೆಗಾಗಿ ಇಲ್ಲಿ ಕೈಗಾರಿಕ ಕ್ಷೇತ್ರವೊಂದು ಸ್ಥಾಪಿತವಾಗಿದೆ. ಇದೊಂದು ವ್ಯಾಪಾರ ಕೇಂದ್ರ. ಪಟ್ಟಣದ ಬಹುತೇಕ ದೇವಾಲಯಗಳು ಈಚಿನವು. ಚನ್ನಕೇಶವ ದೇವಾಲಯ ಅತ್ಯಂತ ಹಳೆಯದು. ಪಟ್ಟಣಕ್ಕೆ 4 ಕಿಮೀ ದೂರದಲ್ಲಿ ಚಿತ್ರಾವತಿ ಎಂಬ ಕೊಳವಿದೆ. ಇದೊಂದು ತೀರ್ಥ. ಇದರ ಸುತ್ತಲ ಹಂತಗಳನ್ನು ದಿವಾನ್ ಪೂರ್ಣಯ್ಯನವರು ಕಟ್ಟಿಸಿದರೆಂದು ಹೇಳಲಾಗಿದೆ. ಈ ಕೊಳಕ್ಕೆ ಹಲಸಮ್ಮನ ಬಾವಿ ಎಂದೂ ಹೆಸರುಂಟು. ಹಲಸಮ್ಮ ಪಾಳೆಯಗಾರನೊಬ್ಬನ ಮಗಳು. ಇದರ ಹತ್ತಿರ ಮಲ್ಲಿಕಾರ್ಜುನ ಚೆನ್ನಪ್ಪನ ಗದುಗೆಯಿದೆ. ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೂ ಜಿಲ್ಲೆಯ ಪ್ರಮುಖ ಸ್ಥಳಗಳಿಗೂ ರಸ್ತೆಗಳುಂಟು. ಬೆಂಗಳೂರು, ಚಿಂತಾಮಣಿ, ಕೋಲಾರಗಳಿಗೆ ರೈಲ್ವೆ ಸಂಪರ್ಕವಿದೆ.

ಮಂಡಿಕಲ್, ನಂದಿ ಮತ್ತು ಚಿಕ್ಕಬಳ್ಳಾಪುರ ಎಂಬ ಮೂರು ಹೋಬಳಿಗಳೂ 210 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 646.4 ಚ.ಕಿಮೀ. ಜನಸಂಖ್ಯೆ 1,84,226. ಪೂರ್ವದಲ್ಲಿ ಶಿಡ್ಲಘಟ್ಟ, ಪಶ್ಚಿಮದಲ್ಲಿ ಗೌರಿಬಿದನೂರು, ಉತ್ತರದಲ್ಲಿ ಗುಡಿಬಂಡೆ ತಾಲ್ಲೂಕುಗಳೂ ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯೂ ಇದರ ಮೇರೆಗಳು. ತಾಲ್ಲೂಕಿನ ವಾರ್ಷಿಕ ಸಾಮಾನ್ಯ ಮಳೆ ಸು. 87 ಸೆಂಮೀ. ಕೆಂಪು ಮತ್ತು ಎರೆಮಣ್ಣಿನಿಂದ ಕೂಡಿದ ಈ ಪ್ರದೇಶದಲ್ಲಿ ರಾಗಿ, ಬತ್ತ, ಕಬ್ಬು ಮತ್ತು ದ್ವಿದಳ ಧಾನ್ಯಗಳನ್ನೂ ಬಾವಿಗಳಿಂದ ಪಂಪುಗಳ ಮೂಲಕ ನೀರನ್ನೆತ್ತಿ ವ್ಯವಸಾಯ ಮಾಡುವುದು ಸಾಮಾನ್ಯ. ಆಲೂಗೆಡ್ಡೆ, ಈರುಳ್ಳಿ, ಉಪ್ಪುನೇರಿಳೆ, ಮೆಣಸಿನಕಾಯಿ, ತರಕಾರಿ ಮತ್ತು ಹಣ್ಣುಗಳನ್ನೂ ಬೆಳೆಯಲಾಗುತ್ತದೆ. ಮಾವು, ಹುಣಸೆ, ಹೊಂಗೆ ಮತ್ತು ಸರ್ವೆ ತೋಪುಗಳುಂಟು, ವ್ಯವಸಾಯದ ಜೊತೆಗೆ ಪಶುಪಾಲನೆ ಜನರ ಉದ್ಯೋಗವಾಗಿದೆ.

ಪ್ರಸಿದ್ಧ ವಿಶ್ರಾಂತಿಧಾಮ ನಂದಿದುರ್ಗ (1480 ಮೀ) ಈ ತಾಲ್ಲೂಕಿನಲ್ಲಿದೆ. ಚನ್ನರಾಯನಬೆಟ್ಟ (1450 ಮೀ) ಸ್ಕಂದಗಿರಿ 14480, ಬ್ರಹ್ಮಗಿರಿ (1420 ಮೀ) ಮತ್ತು ಹರಿಹರೇಶ್ವರ ಬೆಟ್ಟ (1256 ಮೀ) ಇವು ಈ ಶ್ರೇಣಿಗೆ ಸೇರಿದ ಬೆಟ್ಟಗಳು. ನಂದಿಯ ಈಶಾನ್ಯಕ್ಕಿರುವ ಗುಂಡಲಗುರ್ಕಿ ಬೆಟ್ಟದಲ್ಲಿ ಪಾಪಘ್ನಿ ನದಿ ಹುಟ್ಟಿ ಬಾಗೇಪಲ್ಲಿ ಮುಖಾಂತರ ಮದನಪಲ್ಲಿಯತ್ತ ಹರಿಯುತ್ತದೆ. ಈ ನದಿಗೆ ದೇವನಹಳ್ಳಿಯ ಹತ್ತಿರ ಅಡ್ಡಗಟ್ಟೆಕಟ್ಟಿ ವೆಂಕಟೇಶ ಸಾಗರವನ್ನು ನಿರ್ಮಿಸಲಾಗಿದೆ. ಪಾಪಘ್ನಿ ನದಿ ಕಮಲಾಪುರದ ಹತ್ತಿರ ಉತ್ತರ ಪಿನಾಕಿನಿಯನ್ನು ಸೇರುತ್ತದೆ. ಉತ್ತರ ಪಿನಾಕಿನಿ ನದಿಯ ನೀರನ್ನು ಈ ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 21 ಸಹಕಾರ ಕೈಗಾರಿಕಾ ಸಂಘಗಳುಂಟು. ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಕಾಲೇಜು, ಖಾಸಗಿ ವಾಣಿಜ್ಯ ವಿದ್ಯಾಶಾಲೆಗಳು ಇವೆ. ಆಸ್ಪತ್ರೆ, ಮಕ್ಕಳ ಕಲ್ಯಾಣ ಕೇಂದ್ರ, ಪಶುವೈದ್ಯ ಶಾಲೆಗಳು, ಮತ್ಸ್ಯೋದ್ಯಮ ಸಂಘ ಮುಂತಾದವು ಈ ತಾಲ್ಲೂಕಿನ ಅಭಿವೃದ್ಧಿಯನ್ನು ಪ್ರತಿಬಿಂಬಿಸುತ್ತಿವೆ. ನಂದಿ ಬೆಟ್ಟದ ಮೇಲಿರುವ ಕಬ್ಬನ್ ಹೌಸ್ ಪ್ರವಾಸಿಗರಿಗೆ ಒಂದು ಆಕರ್ಷಣೆ. ಈ ತಾಲ್ಲೂಕಿನಲ್ಲಿ ನಡೆಯುವ ಜಾತ್ರೆಗಳಲ್ಲಿ ನಂದಿಯ ಭೋಗನಂದೀಶ್ವರಸ್ವಾಮಿ ಜಾತ್ರೆ, ಚಿತ್ರಾವತಿಯ ಸುಬ್ರಹ್ಮಣ್ಯಸ್ವಾಮಿ ಜಾತ್ರೆ ಪ್ರಸಿದ್ಧವಾದವು. ಜಾತ್ರೆ ದಿನಗಳಲ್ಲಿ ದನಗಳ ವ್ಯಾಪಾರವೂ ನಡೆಯುತ್ತದೆ. (ಕೆ.ಎನ್.ಯು.)

ಆವತಿ ಪ್ರಭು ಮಲ್ಲಭೈರೇಗೌಡ ತನ್ನ ಮಗ ಮರಿಗೌಡನೊಡನೆ ಬೇಟೆಗೆ ಹೋಗಿದ್ದಾಗ ಕೋಡಿಮಂಚನಹಳ್ಳಿ ಸಮೀಪದ ಕಾಡಿನಲ್ಲಿ ಒಂದು ಮೊಲವು ಬೇಟೆ ನಾಯಿಗಳಿಗೆ ಹೆದರದೆ ಎದುರಾಗಿ ನಿಂತದ್ದನ್ನು ಕಂಡನಂತೆ. ಅಲ್ಲಿಯ ಗಂಡು ಭೂಮಿಯ ಪ್ರಭಾವವೇ ಇದಕ್ಕೆ ಕಾರಣವೆಂದು ಅವನು ಭಾವಿಸಿ ವಿಜಯನಗರದ ಅರಸನ ಅಪ್ಪಣೆ ಪಡೆದು ಅಲ್ಲೊಂದು ಕೋಟೆ ಕಟ್ಟಿ ಸ್ಥಾಪಿಸಿದನೆಂದು ಹೇಳಲಾಗಿದೆ. ಅದೇ ಬೆಳೆದು ಚಿಕ್ಕಬಳ್ಳಾಪುರ ವಾಯಿತು. ಅವನ ವಂಶದವರು ಬಹಳ ಕಾಲ ಈ ಸುತ್ತಣ ಪ್ರದೇಶವನ್ನಾಳಿದರು. ಬೈಚೇಗೌಡನ ಆಳ್ವಿಕೆಯ ಕಾಲದಲ್ಲಿ ಒಮ್ಮೆ ಮೈಸೂರು ಸೇನೆ ಇಲ್ಲಿಯ ಕೋಟೆ ಮುತ್ತಿತು. ಮರಾಠರ ಮಧ್ಯಪ್ರವೇಶದಿಂದ ಮುತ್ತಿಗೆಯನ್ನು ಕೈಬಿಡಲಾಯಿತು. ಚಿಕ್ಕಬಳ್ಳಾಪುರದ ಪ್ರಭುಗಳು ತಮ್ಮ ಪ್ರಾಂತ್ಯವನ್ನು ವಿಸ್ತರಿಸುತ್ತಿದ್ದರು. ಬೈಚೇಗೌಡನ ಅನಂತರ ಬಂದ ದೊಡ್ಡಬೈರೇಗೌಡ ಮೈಸೂರಿಗೆ ಬಿಟ್ಟುಕೊಟ್ಟಿದ್ದ ಪ್ರದೇಶಗಳನ್ನೆಲ್ಲ ಮತ್ತೆ ವಶಪಡಿಸಿಕೊಂಡ. 1762ರಲ್ಲಿ ಚಿಕ್ಕಪ್ಪನಾಯಕನ ಆಳ್ವಿಕೆಯ ಕಾಲದಲ್ಲಿ ಹೈದರ್ ಚಿಕ್ಕಬಳ್ಳಾಪುರಕ್ಕೆ ಮೂರು ತಿಂಗಳುಗಳ ಕಾಲ ಮುತ್ತಿಗೆ ಹಾಕಿದ. ಚಿಕ್ಕಪ್ಪನಾಯಕ ಹೈದರನಿಗೆ 5,00,000 ಪಗೋಡಗಳನ್ನು ಕೊಡಲು ಒಪ್ಪಿದುದರಿಂದ ಹೈದರ್ ತನ್ನ ಮುತ್ತಿಗೆಯನ್ನು ಹಿಂದಕ್ಕೆ ತೆಗೆದುಕೊಂಡ. ಹೈದರನ ಸೇನೆ ನಿರ್ಗಮಿಸಿದ ಮೇಲೆ ನಾಯಕ ಗುತ್ತಿಯ ಮುರಾರಿರಾಯನ ಸಹಾಯದಿಂದ ತನ್ನ ಹಿಂದಿನ ಬಲವನ್ನು ಪಡೆಯಲು ಪ್ರಯತ್ನಿಸಿದ. ಅವನ ಸೇನೆಯ ವಶಕ್ಕೆ ದುರ್ಗವನ್ನೊಪ್ಪಿಸಿ ನಾಯಕನೂ ಅವನ ಸಂಸಾರದವರೂ ನಂದಿದುರ್ಗದಲ್ಲಿ ಅಡಗಿಕೊಂಡರು. ಹೈದರ್ ಒಡನೆಯೇ ತನ್ನ ಸೇನೆಯೊಡನೆ ಹಿಂದಿರುಗಿ ಚಿಕ್ಕಬಳ್ಳಾಪುರವನ್ನೂ ಇತರ ಮುಖ್ಯ ಸ್ಥಳಗಳನ್ನೂ ವಶಪಡಿಸಿಕೊಂಡು ನಾಯಕನನ್ನೂ ಅವನ ಕುಟುಂಬದವರನ್ನೂ ಸೆರೆಯಲ್ಲಿಟ್ಟ. ನಾಯಕ ಬಂಧನದಲ್ಲೇ ತೀರಿಕೊಂಡ.

ಈ ಪಾಳೆಯಗಾರವಂಶದಲ್ಲೊಬ್ಬನಾಗಿದ್ದ ನಾರಾಯಣಗೌಡನಿಗೆ ಲಾರ್ಡ್ ಕಾರ್ನ್‌ವಾಲಿಸ್ ಚಿಕ್ಕಬಳ್ಳಾಪುರವನ್ನು ವಹಿಸಿಕೊಟ್ಟ. ಈ ಸಮಾಚಾರ ಟಿಪ್ಪುವಿಗೆ ತಿಳಿದಾಗ ಅವನು ಹಠಾತ್ತನೆ ಅದನ್ನು ವಶಪಡಿಸಿಕೊಂಡ. 1791ರಲ್ಲಿ ಬ್ರಿಟಿಷರು ನಂದಿದುರ್ಗವನ್ನು ವಶಪಡಿಸಿಕೊಂಡಾಗ ಸ್ವಲ್ಪಕಾಲ ನಾರಾಯಣಗೌಡನಿಗೆ ಈ ಪ್ರದೇಶದ ಆಡಳಿತವನ್ನು ವಹಿಸಿದ್ದರು. ಬ್ರಿಟಿಷರಿಗೂ ಟಿಪ್ಪುವಿಗೂ ಶಾಂತಿ ಕೌಲು ಆದಾಗ ಅವನು ಮತ್ತೆ ಅಧಿಕಾರ ಕಳೆದುಕೊಂಡ. ಬ್ರಿಟಿಷರು ಅಂತಿಮವಾಗಿ ಟಿಪ್ಪುವನ್ನು ಸೋಲಿಸಿ ಕೊಂದು ಮೈಸೂರು ರಾಜ್ಯವನ್ನು ಜಯಿಸಿದಾಗ ಚಿಕ್ಕಬಳ್ಳಾಪುರವೂ ನೆರೆಯ ಪ್ರದೇಶಗಳಂತೆ ಮೈಸೂರಿನ ಒಡೆಯರ ಆಡಳಿತಕ್ಕೆ ಸೇರಿತು. ಈಗ ಇದು ಕರ್ನಾಟಕದ ಭಾಗವಾಗಿದೆ. *

**ಚಿಕ್ಕಮಗಳೂರು :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ಆ ಜಿಲ್ಲೆಯ ಒಂದು ತಾಲ್ಲೂಕು; ಜಿಲ್ಲೆ ಮತ್ತು ತಾಲ್ಲೂಕುಗಳ ಆಡಳಿತ ಕೇಂದ್ರ.

ಜಿಲ್ಲೆ : ಉತ್ತರಕ್ಕೆ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳು, ಪೂರ್ವಕ್ಕೆ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳು, ದಕ್ಷಿಣಕ್ಕೆ ಹಾಸನ ಜಿಲ್ಲೆ, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು–ಇವು ಈ ಜಿಲ್ಲೆಯ ಮೇರೆಗಳು. ಕಡೂರು, ಚಿಕ್ಕಮಗಳೂರು,

ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ, ಶೃಂಗೇರಿ ಮತ್ತು ತರೀಕೆರೆ – ಇವು ಈ ಜಿಲ್ಲೆಯ ಏಳು ತಾಲ್ಲೂಕುಗಳು. ಜಿಲ್ಲೆಯಲ್ಲಿ ಒಟ್ಟು 32 ಹೋಬಳಿಗಳೂ 1113 ಗ್ರಾಮಗಳೂ 226 ಗ್ರಾಮ ಪಂಚಾಯಿತಿಗಳೂ 10 ಪಟ್ಟಣಗಳೂ ಇವೆ. ಪೂರ್ವ–ಪಶ್ಚಿಮವಾಗಿ ಈ ಜಿಲ್ಲೆಯ ಗರಿಷ್ಠ ಉದ್ದ 138ಕಿಮೀ. ಉತ್ತರ–ದಕ್ಷಿಣವಾಗಿ ಗರಿಷ್ಠ ಅಗಲ 88ಕಿಮೀ. ಜಿಲ್ಲೆಯ ವಿಸ್ತೀರ್ಣ 7,199ಚ.ಕಿಮೀ. ಜನಸಂಖ್ಯೆ 1,01,021 (2001).



**ಕೆಮ್ಮಣ್ಣುಗುಂಡಿ ಸಮೀಪದ ಹೆಬ್ಬೆ ಜಲಪಾತ**

ಮಲೆನಾಡು ಮತ್ತು ಮೈದಾನ ಪ್ರದೇಶದಿಂದ ಕೂಡಿರುವ ಈ ಜಿಲ್ಲೆ ಪರ್ವತಮಯ. ಇದರ ಪಶ್ಚಿಮದಂಚಿನಲ್ಲಿ ಪಶ್ಚಿಮಘಟ್ಟಗಳು ಹಬ್ಬಿವೆ. ಇವುಗಳ ಕೆಲವು ಶಿಖರಗಳು ಹಿಮಾಲಯಕ್ಕೂ ನೀಲಗಿರಿಗೂ ನಡುವಿನ ಪ್ರದೇಶದಲ್ಲೇ ಅತ್ಯುನ್ನತವಾದಂಥವು. ಈ ಪರ್ವತಶ್ರೇಣಿಯಿಂದ ಒಳಚಾಚಿ ಮೂಡಿಗೆರೆ, ಕೊಪ್ಪ, ನರಸಿಂಹರಾಜಪುರ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಹಬ್ಬಿರುವ ಬೆಟ್ಟಗಳ, ಶಿಖರಗಳ ಪೈಕಿ ಮುಳ್ಳಯ್ಯನಗಿರಿಯ ಎತ್ತರ ಸಮುದ್ರಮಟ್ಟದಿಂದ 1925ಮೀ. ಇದರ ಸಮೀಪದಲ್ಲೇ ಇರುವ ಬಾಬಾಬುಡನ್ ಗಿರಿ ಮತ್ತು ಕಲ್ಲತ್ತಗಿರಿಗಳು ಸಮುದ್ರಮಟ್ಟದಿಂದ ಅನುಕ್ರಮವಾಗಿ 1894ಮೀ. ಮತ್ತು 1876ಮೀ. ಎತ್ತರವಾಗಿವೆ. ಪಶ್ಚಿಮ ಘಟ್ಟದ ಕುದುರೆಮುಖ ಶಿಖರ 1894ಮೀ. ಎತ್ತರವಾಗಿದೆ. ಕುದುರೆಮುಖದಂತೆ ತೋರುವ ಈ ಶಿಖರ ಕಡಲ ನಾವಿಕರಿಗೆ ಭೂಮಿಯ ಹೆಗ್ಗುರುತಾಗಿತ್ತು. ಇದೇ ಶ್ರೇಣಿಯಲ್ಲಿ ಬಲ್ಲಾಳರಾಯನ ದುರ್ಗ (1505ಮೀ.), ಗಂಗಾಮೂಲ (1454ಮೀ.), ಒಡ್ಡಿನಗುಡ್ಡ (1526ಮೀ.), ಮೈತ್ರಿಗುಡ್ಡ (1661ಮೀ.), ಲಕ್ಕೆಪರ್ವತ (1421ಮೀ.), ಶಕುನಗಿರಿ (1418ಮೀ.) ಕಂಚಿಕಲ್ ದುರ್ಗ (1220ಮೀ.) ಮೊದಲಾದ ಶಿಖರಗಳಿವೆ. ಜಿಲ್ಲೆಯ ದಕ್ಷಿಣದಲ್ಲಿ ಎಪ್ಪತ್ತು ಮಂದಿ ಗುಡ್ಡ, ಸಿಸಲುಕುಡಿ ಇವು ಎತ್ತರವಾದ ಶಿಖರಗಳು.

ಕಡೂರು, ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳ ಕೆಲವು ಭಾಗಗಳನ್ನು ಬಿಟ್ಟರೆ ಜಿಲ್ಲೆಯ ಉಳಿದೆಲ್ಲ ಮಲೆನಾಡಿನ ಭಾಗ. ಈ ಪ್ರದೇಶ ಬೆಟ್ಟಗುಡ್ಡಗಳಿಂದಲೂ ದಟ್ಟವಾದ ಕಾಡುಗಳಿಂದಲೂ ಕೂಡಿದೆ. ಅಲ್ಲಲ್ಲಿ ಕಿರಿದಾದ ಬಯಲುಗಳಿವೆ. ಇನ್ನು ಕೆಲವು ಕಡೆ ಕುರುಚಲು ಕಾಡುಗಳಿವೆ. ಬೆಟ್ಟ ಗುಡ್ಡಗಳಲ್ಲಿ ಎತ್ತರಕ್ಕೆ ಹೋದಂತೆ, ಸು.1400ಮೀ. ಮೇಲೆ, ಕಾಡು ಕಡಿಮೆಯಾಗಿ ಕುರುಚಲು ಅಥವಾ ಹುಲ್ಲಿನಿಂದ ಕೂಡಿದ ಬೋಳು ಪ್ರದೇಶಗಳಿವೆ. ಜಿಲ್ಲೆಯ ಪೂರ್ವಭಾಗಕ್ಕೆ ಹೋದಂತೆಲ್ಲ ಬಯಲಿನ ಲಕ್ಷಣಗಳು ಕಂಡುಬರುತ್ತವೆ. ಬಾಬಾಬುಡನ್ ಗಿರಿಯ ತಪ್ಪಲಿನಿಂದ ಪೂರ್ವಕ್ಕೆ ಥಟ್ಟನೆ ಭೂಮಿಯ ಮಟ್ಟ ಇಳಿಯುತ್ತದೆ. ಮಲೆನಾಡಿನ ಸರಹದ್ದಿನಲ್ಲಿರುವ ಚಿಕ್ಕಮಗಳೂರಿನ ಎತ್ತರ 1061ಮೀ. ಆದರೆ ಬಯಲು ಸೀಮೆಯಲ್ಲಿರುವ ಕಡೂರು 788ಮೀ., ತರೀಕೆರೆ 681ಮೀ. ಎತ್ತರದಲ್ಲಿವೆ.

ಕರ್ನಾಟಕದಲ್ಲಿ ಹರಿಯುವ ಅನೇಕ ನದಿಗಳು ಹುಟ್ಟುವುದು ಈ ಜಿಲ್ಲೆಯಲ್ಲೇ. ಇಲ್ಲಿಯ ಜಲಸಂಪತ್ತನ್ನು ಇಲ್ಲಿಯ ಪರ್ವತಪ್ರದೇಶಗಳು ಇಬ್ಭಾಗವಾಗಿ ಒಡೆಯುತ್ತವೆ. ಆಗ್ನೇಯದಂಚಿನಲ್ಲಿ ಬಲ್ಲಾಳರಾಯನದುರ್ಗದಿಂದ ಹಿಡಿದು ಚಿಕ್ಕಮಗಳೂರು ಪಟ್ಟಣದ ಸಮೀಪವಿರುವ ಬಾಬಾಬುಡನ್ ಗಿರಿಯವರೆಗೂ ಹಬ್ಬಿರುವ ಪರ್ವತಶ್ರೇಣಿ ಕರ್ನಾಟಕದ ಉತ್ತರ ಮತ್ತು ದಕ್ಷಿಣದ ನದಿಗಳನ್ನು ಪ್ರತ್ಯೇಕಿಸುತ್ತದೆ. ವರಾಹ ಪರ್ವತದ ಗಂಗಾಮೂಲದಲ್ಲಿ ಹುಟ್ಟುವ ತುಂಗಾ ಮತ್ತು ಭದ್ರಾ ನದಿಗಳು ಉತ್ತರ ದಿಕ್ಕಿಗೆ ಹರಿದರೆ, ದಕ್ಷಿಣ ಭಾಗದಲ್ಲಿ ಮೆಲ್ಬಂಗಾಡಿಯ ಜಾವಳಿಯ ಬಳಿ ಹುಟ್ಟುವ ಹೇಮಾವತಿ ನದಿ ಮೂಡಿಗೆರೆ ತಾಲ್ಲೂಕಿನಲ್ಲಿ ದಕ್ಷಿಣ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತುಂಗಾ ಮತ್ತು ಭದ್ರಾ ನದಿಗಳು ಒಂದೇ ಪ್ರದೇಶದಲ್ಲಿ ಹುಟ್ಟಿದ್ದರೂ ಕೊಪ್ಪ ತಾಲ್ಲೂಕಿನಲ್ಲಿ ಇರುವ ಬೆಟ್ಟಗಳ ಸಾಲು ಅವನ್ನು ಪ್ರತ್ಯೇಕಿಸುತ್ತವೆ. ತುಂಗಾ ನದಿ ಶೃಂಗೇರಿಯವರೆಗೂ ಈಶಾನ್ಯ ದಿಕ್ಕಿಗೆ ಹರಿದು ಅನಂತರ ವಾಯವ್ಯ ದಿಕ್ಕಿಗೆ ತಿರುಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಭದ್ರಾ ನದಿ ಸ್ವಲ್ಪ ದೂರ ಪೂರ್ವದ ಕಡೆ ಹರಿದು ಕಳಸ, ಬಾಳೆಹೊನ್ನೂರು ಮತ್ತು ಖಾಂಡ್ಯಗಳನ್ನು ದಾಟಿ ಹೆಬ್ಬೆಯ ಬಳಿ ಜಾಗರ ಕಣಿವೆಯಿಂದ ಬರುವ ಸೋಮ ವಾಹಿನಿಯನ್ನು ಕೂಡಿಕೊಂಡು ಲಕ್ಕವಳ್ಳಿಯ ಮೂಲಕ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ.

ದಕ್ಷಿಣದ ಕಡೆಗೆ ಹರಿಯುವ ಹೇಮಾವತಿ ನದಿಗೆ ಸ್ವಲ್ಪ ದೂರದಲ್ಲೇ ಸೋಮಾವತಿ ಹೊಳೆ ಸೇರುತ್ತದೆ. ಮುಂದೆ ಇದೇ ನದಿಗೆ ದೊಡ್ಡಹಳ್ಳ, ಕಪಿಲ ಮೊದಲಾದ ತೊರೆಗಳು ಸೇರುತ್ತವೆ. ನದಿ ಆಗ್ನೇಯ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮುಳ್ಳಯ್ಯನಗಿರಿಯ ಬಳಿ ಹುಟ್ಟುವ ಯಗಚಿ ನದಿ ಚಿಕ್ಕಮಗಳೂರನ್ನು ದಾಟಿ ಹಾಸನ ಜಿಲ್ಲೆಯನ್ನು ಪ್ರವೇಶಿಸಿ ಗೊರೂರು ಬಳಿ ಹೇಮಾವತಿಯನ್ನು ಸೇರುತ್ತದೆ.

ಮುಳ್ಳಯ್ಯನಗಿರಿ ಶ್ರೇಣಿಯಲ್ಲಿ ಗೌರಿಹಳ್ಳ ಮತ್ತು ಆವತಿಹಳ್ಳ ಎಂಬ ಎರಡು ತೊರೆಗಳು ಹುಟ್ಟುತ್ತವೆ. ಸಕ್ಕರೆಪಟ್ಟಣಕ್ಕೆ ಪಶ್ಚಿಮದಲ್ಲಿ 6ಕಿಮೀ. ದೂರದಲ್ಲಿ ಗೌರಿಹಳ್ಳದಿಂದ ಆಗಿರುವ ಅಯ್ಯನಕೆರೆ ಇದೆ. ಅಲ್ಲಿಂದ ಹೊರಬೀಳುವ ನೀರೇ ಹೊಳೆಯಾಗಿ ವೇದಾನದಿ ಎಂದು ಹೆಸರಾಗಿದೆ. ಆವತಿ ಹಳ್ಳದಿಂದಾದದ್ದು ಮದಗಕೆರೆ. ಇದರಿಂದ ಹೊರಬಿದ್ದ ನೀರು ಕಡೂರಿನ ಬಳಿ ವೇದಾ ನದಿಯನ್ನು ಸೇರಿ ಅಲ್ಲಿಂದ ಮುಂದೆ ನದಿ ವೇದಾವತಿ ಎಂಬ ಹೆಸರಿನಿಂದ ಹರಿಯುತ್ತದೆ. **(ಡಿ.ಎಸ್.ಜೆ.; ಎಂ.ಆರ್.ಆರ್.)**

**ಭೂವಿಜ್ಞಾನ :** ಜಿಲ್ಲೆಯ ಸುಮಾರು ಅರ್ಧಭಾಗ ಧಾರವಾಡ ಭಿನ್ನಸ್ತರ ಶಿಲೆಗಳಿಂದ ಕೂಡಿದೆ. ಬಾಬಾಬುಡನ್ ಗಿರಿ, ಗಂಗಾಮೂಲ, ಮೈತ್ರಿಪರ್ವತ ಹಾಗೂ ಕುದುರೆಮುಖ ಪ್ರದೇಶಗಳಲ್ಲಿ ಈ ಬಗೆಯ ಶಿಲೆಗಳಿವೆ. ಬಾಬಾಬುಡನ್ ಗಿರಿ ಪ್ರದೇಶದ ಕಬ್ಬಿಣದ ಅದಿರುಗಳಿರುವುದು ಈ ಶಿಲೆಗಳಲ್ಲಿ. ಕಬ್ಬಿಣದ ಅದಿರು ಪದರಗಳು ಒತ್ತಾದ ಏಣುಗಳಾಗಿಯೇ ಪರಿಣಮಿಸಿ ಪರ್ವತಶಿಖರಗಳಾಗಿವೆ. ಈ ಪ್ರದೇಶದಲ್ಲಿರುವ ಕಲ್ಲತ್ತಗಿರಿ ಮತ್ತು ಕೆಮ್ಮಣ್ಣುಗುಂಡಿಯಲ್ಲಿ ಅದಿರನ್ನು ತೆಗೆಯುವ ಕೆಲಸ ನಡೆಯುತ್ತಿದೆ. ಇದನ್ನು ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಸಾಗಿಸಲಾಗುತ್ತಿದೆ. ಜಿಲ್ಲೆಯ ಪಶ್ಚಿಮಭಾಗದಲ್ಲಿ ಮೂಡಿಗೆರೆ ಮತ್ತು ಶೃಂಗೇರಿ ತಾಲ್ಲೂಕುಗಳಲ್ಲಿ ವಿಶೇಷವಾಗಿ ಕಪ್ಪು ಹಾರ್ನ್‌ಬ್ಲೆಂಡ್ ಭಿನ್ನಸ್ತರ ಶಿಲೆಗಳುಂಟು. ಮೂಡಿಗೆರೆ ತಾಲ್ಲೂಕಿನಲ್ಲಿರುವ ಕುದುರೆಮುಖದಲ್ಲಿ ಕಬ್ಬಿಣದ ಅದಿರು ತೆಗೆಯುವ ಬೃಹತ್ ಯೋಜನೆ ಅಸ್ತಿತ್ವದಲ್ಲಿದೆ.

ಭಿನ್ನಸ್ತರ ಶಿಲೆಗಳಿಲ್ಲದೆಡೆಗಳಲ್ಲಿ ವಿವಿಧ ಬಗೆಯ ಗ್ರಾನೈಟ್‌ಗಳೂ ನೈಸ್ ಶಿಲೆಗಳೂ ಉಂಟು. ಗ್ರಾನೈಟ್ ಶಿಲೆ ಕಡೂರು ಮತ್ತು ಬೀರೂರುಗಳ ಬಳಿ ಹೇರಳವಾಗಿ ದೊರೆಯುತ್ತದೆ. ಮೂಡಿಗೆರೆ ಬಳಿಯ ಕುದುರೆಗುಂಡಿ ಮತ್ತು ಬಾಳೆಗದ್ದೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಈ ಕಲ್ಲುಗಳನ್ನು ಕಟ್ಟಡ, ಸೇತುವೆ ಮೊದಲಾದವುಗಳಿಗಾಗಿ ತೆಗೆಯುತ್ತಾರೆ. ಬೆಳವಾಡಿಯಲ್ಲೂ ಗ್ರಾನೈಟ್ ಕಲ್ಲು ದೊರೆಯುತ್ತದೆ. ಶೃಂಗೇರಿಗೆ 6ಕಿಮೀ ದೂರದಲ್ಲಿ ಕಾಗೆಬಂಗಾರದ ನಿಕ್ಷೇಪಗಳುಂಟು. ತರೀಕೆರೆಯ ಕೆಲವು ಭಾಗಗಳಲ್ಲಿ ಕುರಂದ ಶಿಲೆಯಿದೆ. ಮ್ಯಾಂಗನೀಸನ್ನು ತೆಗೆಯುವ ಪ್ರಯತ್ನವೂ ನಡೆದಿದೆ.

ಬಾಬಾಬುಡನ್‌ಗಿರಿ ಮತ್ತು ಮುಳ್ಳಯ್ಯನಗಿರಿಯ ಉತ್ತರ ಮತ್ತು ಪೂರ್ವಕ್ಕಿರುವ ಬಯಲುಗಳದು ಕಪ್ಪುಮಣ್ಣು. ಚಿಕ್ಕಮಗಳೂರು ಮತ್ತು ತರೀಕೆರೆ ತಾಲ್ಲೂಕುಗಳ ಬಯಲು ಪ್ರದೇಶಗಳಿಂದ ಕಡೂರಿನವರೆಗೂ ಇದು ವ್ಯಾಪಿಸಿದೆ. ಇವು ಫಲವತ್ತಾದ ಪ್ರದೇಶಗಳು. ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ಬೆಟ್ಟ ಪ್ರದೇಶದಲ್ಲಿರುವುದೂ ಹೆಚ್ಚಾಗಿ ಕಪ್ಪುಮಣ್ಣು. ಇದು ಕಾಫಿ ಬೆಳೆಗೆ ಅನುಕೂಲಕರ. ತರೀಕೆರೆ ತಾಲ್ಲೂಕಿನ ಪಶ್ಚಿಮಭಾಗದ್ದು ಮರಳು ಮತ್ತು ಸುಣ್ಣಕಲ್ಲು ಮಿಶ್ರಿತ ನೆಲ. ಮೂಡಿಗೆರೆ ತಾಲ್ಲೂಕಿನ ಬಹುಭಾಗ ಕೆಂಪುಮಣ್ಣಿನಿಂದ ಕೂಡಿದ್ದು, ಹೇಮಾವತಿ ನದಿ ಉದ್ದಕ್ಕೂ ಹೊತ್ತು ತಂದ ಹುಯಿಗಲು ಅಥವಾ ಸಣ್ಣ ಮರಳುಮಣ್ಣು ಅಕ್ಕಪಕ್ಕದ ಬಯಲಿನಲ್ಲಿ ಹರಡಿದೆ. ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿ ಅಧಿಕ ಮಳೆಯಿಂದಾಗಿ ಗಟ್ಟಿಮಣ್ಣು ಮತ್ತು ಕೆಮ್ಮಣ್ಣು ಕಂಡುಬರುತ್ತವೆ. ಇಲ್ಲಿಯ ನದೀಬಯಲುಗಳು ಫಲವತ್ತಾದವು. ಅಡಕೆ ಬೆಳೆಗೆ ಅನುಕೂಲಕರವಾದ ಮಣ್ಣು ಈ ಪ್ರದೇಶದ್ದು.

ವಾಯುಗುಣ: ಚಿಕ್ಕಮಗಳೂರು ಜಿಲ್ಲೆಯ ವಾಯುಗುಣ ಹಿತಕರವಾದ್ದು. ಇದರ ಪಶ್ಚಿಮ ಭಾಗ ಹೆಚ್ಚು ತಂಪು. ಚಳಿಗಾಲದಲ್ಲಿ ಚಳಿ ಹೆಚ್ಚು, ಗರಿಷ್ಠ ಉಷ್ಣತೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ. ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಅಧಿಕ ಮಳೆ. ಜುಲೈ

ತಿಂಗಳೊಂದರಲ್ಲಿ ವರ್ಷದ ಒಟ್ಟು ಮಳೆಯ ಸುಮಾರು 1/3ರಷ್ಟು ಬೀಳುತ್ತದೆ. ಜಿಲ್ಲೆಯ ಪೂರ್ವ ಭಾಗದಲ್ಲಿ ಮಳೆ ಕಡಿಮೆ; ಕಡೂರು ತಾಲ್ಲೂಕಿನಲ್ಲಿ ಕನಿಷ್ಠ. ಕೊಪ್ಪ, ಮೂಡಿಗೆರೆ, ಶೃಂಗೇರಿಗಳಲ್ಲಿ 2500ಮಿಮೀ. ಗಿಂತ ಹೆಚ್ಚು ಮಳೆಯಾಗುತ್ತದೆ. ಜಿಲ್ಲೆಯಲ್ಲಿ ಅತಿ ಹೆಚ್ಚಿನ ಮಳೆಯಾಗುವ ಸ್ಥಳ ಮೂಡಿಗೆರೆ ತಾಲ್ಲೂಕಿನ ಬೈರಾಪುರ. ಅಲ್ಲಿ 8369ಮಿಮೀ. ಮಳೆಯಾದ ದಾಖಲೆ ಇದೆ. ಇತರೆಡೆಗಳಲ್ಲಿ 2000ದಲ್ಲಿನ ಸರಾಸರಿ ಮಳೆ ಈ ರೀತಿ ಇದೆ. ಶೃಂಗೇರಿ 3571ಮಿಮೀ., ಕೊಪ್ಪ 2835ಮಿಮೀ., ಮೂಡಿಗೆರೆ 2435ಮಿಮೀ., ನರಸಿಂಹರಾಜಪುರ 1500ಮಿಮೀ., ಚಿಕ್ಕಮಗಳೂರು 1029ಮಿಮೀ., ತರೀಕೆರೆ 874ಮಿಮೀ., ಕಡೂರು 623ಮಿಮೀ.

ಬಾಬಾಬುಡನ್ ಗಿರಿ

ಈ ಜಿಲ್ಲೆಯ ಅರಣ್ಯ ಸಂಪತ್ತು ಉತ್ಕೃಷ್ಟವಾದದ್ದು. ಅರಣ್ಯ ಪ್ರದೇಶದ ವಿಸ್ತೀರ್ಣ 2,00,485 ಹೆಕ್ಟೇರ್. ಪಶ್ಚಿಮಘಟ್ಟಗಳ ಉದ್ದಕ್ಕೂ ಹಬ್ಬಿರುವ ಈ ಕಾಡುಗಳಲ್ಲಿ ಉತ್ತಮ ಜಾತಿಯ ಮರಗಳುಂಟು. ಅವುಗಳಲ್ಲಿ ತೇಗ, ಶ್ರೀಗಂಧ, ಮತ್ತಿ, ನಂದಿ, ಹಲಸು, ದಬ್ಬೆ, ಹೆಬ್ಬಲಸು, ನೇರಳೆ, ಸಾಗವಾನಿ. ಮುಂತಾದ ಮರಮುಟ್ಟುಗಳಿಗೆ ಉಪಯುಕ್ತವಾದ ಮರಗಳಿವೆ. ಬಾಬಾಬುಡನ್ ಗಿರಿ ಗಿಡಮೂಲಿಕೆ ಸಸ್ಯಗಳಿಗೆ ಹೆಸರುವಾಸಿಯಾದ್ದು. ಹೊರಗಡೆಯಿಂದ ಇಲ್ಲಿಗೆ ನಾಟಿ ವೈದ್ಯರು ಬಂದು ಗಿಡಮೂಲಿಕೆಗಳನ್ನು ಸಂಗಹಿಸಿಕೊಂಡು ಹೋಗುತ್ತಾರೆ. ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ವಿಪುಲವಾದ ಬಿದಿರು ಕಾಡುಗಳುಂಟು. ಕಾಗದ ತಯಾರಿಸಲು ಬೊಂಬುಗಳನ್ನು ಇಲ್ಲಿಂದ ಸಾಗಿಸಲಾಗುತ್ತದೆ. ಜಿಲ್ಲೆಯ ಕಾಡುಗಳಲ್ಲಿ ಬೆಳೆಯುವ ಅಂಟುವಾಳ, ಸೀಗೆಕಾಯಿ, ಕಾಡುಮೆಣಸು ಮೊದಲಾದವು ವಾಣಿಜ್ಯ ಫಸಲುಗಳು. ಜಿಲ್ಲೆಯ ಪೂರ್ವಭಾಗದಲ್ಲಿ ಕಾಡು ಕಡಿಮೆ. ಈಚಲು ಮರಗಳು

ವಿಷ್ಣುವರ್ಧನನ ಸೇನಾನಿ ರಾಯಣ ದಂಡನಾಥ ಕಟ್ಟಿಸಿದ (1130) ಚೆನ್ನಕೇಶವ ದೇವಾಲಯ, ಮರ್ಲೆ

ಸಾಕಷ್ಟು ಬೆಳೆಯುತ್ತವೆ. ಜಿಲ್ಲೆಯಲ್ಲಿರುವ ಮುಖ್ಯ ಮೀಸಲು ಕಾಡುಗಳೆಂದರೆ ಮುತ್ತೋಡಿ, ಗಂಗಗಿರಿ, ಹೆಬ್ಬರಗಿರಿ, ಸಿಂದಗೆರೆ, ಉದುಗೆರೆ, ದಕ್ಷಿಣಭದ್ರ, ತಳಾವರ, ಬಾಳೂರು, ತುಂಗಭದ್ರ, ಲಕ್ಕವಳ್ಳಿ, ನರಸಿಂಹ ಪರ್ವತ, ತೇಗೂರ್ ಗುಡ್ಡ, ಹೊಸಹಳ್ಳಿ, ಕಿತ್ತಲೆಖಾನ್, ಆರಂಬಳ್ಳಿ ಮತ್ತು ಕುಸ್‌ಗಲ್. ಅರಣ್ಯಪ್ರದೇಶದ ಅನೇಕ ಕಡೆ ಅರಣ್ಯಭೂಮಿಯನ್ನು ಪ್ಲಾಂಟೇಷನ್ ಸಾಗುವಳಿಗಾಗಿ ಒತ್ತುವರಿ ಮಾಡಿರುವದು ಕಂಡುಬರುತ್ತದೆ. ಬಹುಕಾಲದಿಂದ ಸಾವಿರಾರು ಒಕ್ಕಲುಗಳು ಅರಣ್ಯದಲ್ಲಿ ನೆಲಸಿರುವ ಸಮಸ್ಯೆಯಿದೆ. ಇವೆಲ್ಲ ಅರಣ್ಯಪ್ರದೇಶದ ಕ್ಷೀಣಿಸುವಿಕೆಯನ್ನು ಹೆಚ್ಚಿಸಿವೆ. ಎಮ್ಮೆದೊಡ್ಡಿ ಕಾವಲು, ಚುರ್ಚೆ ಗುಡ್ಡ ಮೊದಲಾದ ಮೀಸಲು ಜಮೀನುಗಳಿವೆ.

ಜಿಲ್ಲೆಯ ಕಾಡುಗಳಲ್ಲಿ ಹಲಸು, ನೇರಳೆ, ಈಚಲು, ಚೊಟ್ಟೆ, ಸೀಬೆ, ಮೊದಲಾದ ಹಣ್ಣುಗಳ ಮರಗಳಿವೆ. ಮಲೆನಾಡಿನ ಕಾಡಿನಲ್ಲಿ ಬೆಳೆಯುವ ಬಗನಿ ಮರದಿಂದ ಸೇಂದಿಯನ್ನು ತೆಗೆಯುತ್ತಾರೆ. ಈ ಜಿಲ್ಲೆ ಪ್ರಾಣಿಸಂಪದ್ಭರಿತವಾದ್ದು. ಇಲ್ಲಿಯ ಕಾಡುಗಳಲ್ಲಿ ಆನೆ, ಹುಲಿ, ಕಾಡುಕೋಣ, ತೋಳ, ಚಿರತೆ, ಹಂದಿ, ಕಡವೆ, ಸಾರಂಗ, ಜಿಂಕೆ, ಮುಸಿಯ, ಕೆಂಜಳಿಲು, ಕರಡಿ, ಮುಳ್ಳುಹಂದಿ, ಕಾಡುಕುರಿ, ಉಡ, ಪುನುಗು, ಬೆಕ್ಕು, ಬರ್ಕ, ಮೊಲ, ನರಿ ಮೊದಲಾದ ಮೃಗಗಳೂ ಬಾವಲಿ, ರಣಹದ್ದು, ಕಾಡುಕೋಳಿ, ನವಿಲು, ಕೋಗಿಲೆ, ಗವುಜುಗ, ಗಿಡುಗ, ಕಾಜಾಣ, ಬೆಳ್ಳಕ್ಕಿ, ಕೆಂಭೂತ –ಪಕ್ಷಿಗಳೂ ಬಾತುಜಾತಿಗೆ ಸೇರಿದ ಚರ್ಲೆ, ಕುಂಡಿಮುಳುಗ ಮೊದಲಾದ ನೀರುಹಕ್ಕಿಗಳೂ ಹೆಬ್ಬಾವು, ಮಂಡಲ, ಕಟುಗ, ಕಾಳಿಂಗಸರ್ಪ, ನಾಗರ, ಕೇರೆ ಮುಂತಾದ ಹಾವುಗಳೂ ಕೆರೆಗಳಲ್ಲಿ ಕುರುಡಿ, ಮುರುಗೊಡವ, ಬಾಳೆ, ಅವಲು, ಕೊಚ್ಚಲು, ಕೊರೆ, ಮಳಲಿ, ಅರ್ಜು ಮುಂತಾದ ಮೀನುಗಳೂ ಮೊಸಳೆಗಳೂ ಇವೆ. ಇತ್ತೀಚೆಗೆ ಮರಕ್ಕಾಗಿ ಮತ್ತು ಸಾಗುವಳಿಗಾಗಿ ಕಾಡುಗಳು ನಾಶವಾಗುತ್ತಿರುವುದ ರಿಂದಲೂ ಶಿಕಾರಿಗಳಿಂದಲೂ ವನ್ಯಮೃಗಗಳು ನಶಿಸುತ್ತಿವೆ. ಜಿಲ್ಲೆಯ ಸಾಕುಪ್ರಾಣಿಗಳಲ್ಲಿ ಮುಖ್ಯವಾದವು ದನ, ಎಮ್ಮೆ, ಕುರಿ. ಮಲೆನಾಡಿನ ಹಸುಗಳು ಗಾತ್ರದಲ್ಲಿ ಚಿಕ್ಕವು. ಕಡಿಮೆ ಹಾಲು ಕರೆಯುತ್ತವೆ. ಬಿಳಿಯ ದೊಡ್ಡ ರಾಸುಗಳಿಗೆ ಮಲೆನಾಡಿನ ವಾಯುಗುಣ ಅಷ್ಟಾಗಿ ಒಗ್ಗುವುದಿಲ್ಲ. ಕೋಣಗಳನ್ನು ಬೇಸಾಯಕ್ಕೆ ಬಳಸುತ್ತಾರೆ.

ಜಮ್ಮಿಟಿಗೆಯ ನೀಲಕಂಠೇಶ್ವರ ದೇವಾಲಯ (1733)

ಜಿಲ್ಲೆಯ ಮುಖ್ಯ ಕಸಬು ಕೃಷಿ ಮತ್ತು ಪ್ಲಾಂಟೇಷನ್. ಕಾಫಿ ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಈ ಜಿಲ್ಲೆಯಲ್ಲಿ ಕಾಫಿ ಬೆಳೆಯಬಹುದಾದ ಪ್ರದೇಶದ ವಿಸ್ತೀರ್ಣ 2,590ಚ.ಕಿಮೀ. ಇದು ಕರ್ನಾಟಕದಲ್ಲಿ ಹೆಚ್ಚು ಕಾಫಿ ಉತ್ಪಾದಿಸುವ ಒಂದು ಜಿಲ್ಲೆ. ಕಾಫಿಯನ್ನು ದಕ್ಷಿಣ ಭಾರತಕ್ಕೆ ಮೊಟ್ಟಮೊದಲ ಬಾರಿಗೆ ಬಾಬಾಬುಡನ್ ಎಂಬವನು ಆಫ್ರಿಕದಿಂದ ತಂದು ಈ ಜಿಲ್ಲೆಯಲ್ಲಿರುವ ಬಾಬಾಬುಡನ್ ಗಿರಿಯಲ್ಲಿ ನೆಟ್ಟನೆಂದೂ ಅದರಿಂದ ಈ ಗಿರಿಗೆ ಅವನ ಹೆಸರೇ ಬಂತೆಂದೂ ಪ್ರತೀತಿ. 1820ರ ತರುವಾಯ ಕಾಫಿ ಬೆಳೆ ಯುರೋಪಿಯನ್ ಬೆಳೆಗಾರರಿಂದ ಹೆಚ್ಚು ಪ್ರಚಾರಕ್ಕೆ ಬಂತು. ಸ್ಥಳೀಯ ಬೆಳೆಗಾರರೂ ಇದರಲ್ಲಿ ಆಸಕ್ತಿ ವಹಿಸಿದುದರಿಂದ ಇದು ಹೆಚ್ಚು ವ್ಯಾಪಕವಾಯಿತು. ಕಾಫಿ ಬೆಳೆಯ ಸಂಶೋಧನೆಗಾಗಿ ಬಾಳೆಹೊನ್ನೂರಿನಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಅತ್ಯಧಿಕ ಮಳೆ ಬೀಳುವ ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ಕೆಲವು ಎತ್ತರದ ಪ್ರದೇಶಗಳಲ್ಲಿ ಅರ್‍ಯಾಬಿಕ ಕಾಫಿ ಉತ್ತಮವಾಗಿ ಬೆಳೆಯುತ್ತದೆ. ಉಳಿದಲ್ಲಿ ರೊಬಸ್ಟ ಕಾಫಿ ಚೆನ್ನಾಗಿ ಬೆಳೆಯುತ್ತದೆ. ಕಾವೇರಿ ಎಂಬ ತಳಿ 1990ರ ದಶಕದಲ್ಲಿ ಹೆಚ್ಚು ಪ್ರಚಾರ ಪಡೆದು ಸಾಗುವಳಿಗೆ ಬಂದಿತು. ಆದರೆ ಅದು ಅಷ್ಟು ಫಲಪ್ರದವಾಗಿಲ್ಲ. ಈಗ ಇನ್ನೂ ಅನೇಕ ಹೊಸ ತಳಿಗಳನ್ನು ಸೃಷ್ಟಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೆಳೆಯುವ ಒಟ್ಟು ಕಾಫಿ ಉತ್ಪನ್ನ 77,700 ಮೆಟ್ರಿಕ್ ಟನ್, ಕಾಫಿ ಬೆಳೆಯುವ ಪ್ರದೇಶ 80,818 ಹೆಕ್ಟೇರ್ (2000).

ಏಲಕ್ಕಿ ಇನ್ನೊಂದು ಮುಖ್ಯ ವಾಣಿಜ್ಯ ಬೆಳೆ. ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಮೂಡಿಗೆರೆಯ ಬಳಿ ಒಂದು ಪ್ರಾದೇಶಿಕ ಏಲಕ್ಕಿ ಸಂಶೋಧನಾಲಯವನ್ನು ಸ್ಥಾಪಿಸಲಾಗಿದೆ. ಕಳೆದ ದಶಕದಲ್ಲಿ ಮಳೆ ಕಡಿಮೆಯಾದುದರಿಂದ ಈ ಬೆಳೆಗೆ ಭಾರಿ ಪೆಟ್ಟು ಬಿದ್ದಿದೆ. ಈಗ ಏಲಕ್ಕಿ ಬೆಳೆಯುವ ಸ್ಥಳಗಳಲ್ಲಿ ಹೆಚ್ಚಾಗಿ ಕಾಫಿ ಬೆಳೆಯುವ ಪ್ರಯತ್ನ ನಡೆಯುತ್ತಿದೆ. ಎಲೆ ಮಡ್ಲು ಹಾಗೂ ಕಳಸಕ್ಕೆ ಸಮೀಪದಲ್ಲಿ ಕೆಲವು ಚಹ ತೋಟಗಳಿವೆ.



ಕಳಸೇಶ್ವರ ದೇವಾಲಯ, ಕಳಸ

ಈ ಜಿಲ್ಲೆಯಲ್ಲಿ ಅಡಕೆಯೂ ಹೆಚ್ಚಾಗಿ ಬೆಳೆಯುತ್ತದೆ. ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಮತ್ತು ಕಳಸದ ಸುತ್ತಮುತ್ತ ಬಯಲು ಸೀಮೆಯಲ್ಲಿ ಕೆಲವೆಡೆ ಅಡಕೆ ತೋಟಗಳಿವೆ. ಮೆಣಸು ಮತ್ತು ಶುಂಠಿಗಳನ್ನು ತೋಟಗಳಲ್ಲಿ ಗದ್ದೆಗಳಲ್ಲಿ ಉಪ ಬೆಳೆಗಳಾಗಿ ಬೆಳೆಯುವುದುಂಟು. ಕೆಲವೆಡೆ ರಬ್ಬರ್ ತೋಟಗಳಿವೆ. ಇತ್ತೀಚೆಗೆ ವೆನಿಲಾ ಬೆಳೆಯಲು ಒಲವು ಕಂಡುಬಂದಿದೆ.

ವೀರನಾರಾಯಣ ದೇವಾಲಯ, ಬೆಳವಾಡಿ

ಬತ್ತ ಇಲ್ಲಿನ ಮುಖ್ಯ ಆಹಾರ ಬೆಳೆ. ಒಟ್ಟು 53200 ಹೆಕ್ಟೇರುಗಳಲ್ಲಿ ಬತ್ತ ಬೆಳೆಯಲಾಗುತ್ತದೆ. ಚಿಕ್ಕಮಗಳೂರಿನ ಸುತ್ತಣ ಬಯಲಿಗೆ ಹೊಂಜೇವಣಿಗೆ ಸೀಮೆ ಅಥವಾ ಚಿನ್ನ ಹರಿಯುವ ಬಯಲು ಎಂದು ಹೆಸರು ಬಂದಿದೆ. ಇದಕ್ಕೆ ಇಲ್ಲಿಯ ಫಲವತ್ತಾದ ಬತ್ತದ ಬಯಲೇ ಕಾರಣ. ಕಪ್ಪುಮಣ್ಣಿನಿಂದ ಕೂಡಿದ ಪೂರ್ವ ಭಾಗದಲ್ಲಿ, ಅದರಲ್ಲೂ ಬಯಲು ನಾಡಿನ ಭಾಗದಲ್ಲಿ, ಬತ್ತದ ಇಳುವರಿ ಹೆಚ್ಚು. ಇದನ್ನು ಬೆಳೆಯುವ ಪ್ರದೇಶವೂ ಹೆಚ್ಚು. ಮಲೆನಾಡಿನ ಪ್ರದೇಶಗಳಲ್ಲಿ ಬತ್ತದ ಬಯಲುಗಳು ಕಡಿಮೆ. ಮೂಡಿಗೆರೆ ತಾಲ್ಲೂಕಿನ ಬಹುಭಾಗ ಬತ್ತದ ಬೆಳೆಗೆ ಅನುಕೂಲವಾಗಿಲ್ಲ. ಇದಕ್ಕೆ ಜಿಲ್ಲೆಯ ಅಧಿಕ ಮಳೆಯೂ ಅತಿಯಾದ ತೇವದಿಂದ ಕೂಡಿದ ಕೆಮ್ಮಣ್ಣು ಭೂಮಿಯೂ ಕಾರಣ. ಕಬ್ಬನ್ನು ಕೆಲವೆಡೆ ಬೆಳೆಯಲಾಗುತ್ತಿದೆ. ಕಡೂರು ತಾಲ್ಲೂಕಿನಲ್ಲಿರುವ ಅಯ್ಯನಕೆರೆ ಮತ್ತು ಮದಗಕೆರೆಗಳು ಸಾವಿರಾರು ಎಕರೆ ಪ್ರದೇಶಗಳಿಗೆ ನೀರನ್ನು ಒದಗಿಸುತ್ತವೆ. ಜಿಲ್ಲೆಯ ಒಟ್ಟು ನೀರಾವರಿ ಕ್ಷೇತ್ರ 30,365 ಹೆಕ್ಟೇರ್‌ಗಳು. ತರೀಕೆರೆ ತಾಲ್ಲೂಕಿನಲ್ಲಿ ಭದ್ರಾ ನದಿಗೆ ಅಡ್ಡಲಾಗಿ ಲಕ್ಕವಳ್ಳಿ ಅಣೆಕಟ್ಟನ್ನು ಕಟ್ಟಲಾಗಿದೆ. ಇದರ ಹೆಚ್ಚಿನ ಸೌಲಭ್ಯ ಶಿವಮೊಗ್ಗ ಜಿಲ್ಲೆಗೆ ದೊರೆಯುತ್ತದೆ. ಇದೇ ತಾಲ್ಲೂಕಿನಲ್ಲಿ ಜಂಬದಹಳ್ಳ ಯೋಜನೆಯನ್ನು 50 ಲಕ್ಷ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ರಾಗಿ ಇನ್ನೊಂದು ಪ್ರಮುಖ ಬೆಳೆಯಾಗಿದ್ದು ಇದನ್ನು 55,819 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತದೆ. ತೆಂಗು 30,161; ದ್ವಿದಳ ಧಾನ್ಯಗಳು 26,699; ಏಕದಳ ಧಾನ್ಯಗಳು 1,19,027 ಹೆಕ್ಟೇರ್‌ಗಳಲ್ಲಿ ಬೆಳೆಯುತ್ತವೆ, (1999–2000). ಕಡಲೆ, ತೊಗರಿ, ಕಬ್ಬು, ಹತ್ತಿ, ಬೆಳೆಗಳನ್ನು ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಾರೆ. ತರೀಕೆರೆ ವೀಳೆಯದೆಲೆಗೆ ಪ್ರಸಿದ್ಧ. ಜಿಲ್ಲೆಯ ಪಶ್ಚಿಮದಂಚಿನಲ್ಲಿರುವ ಕುದುರೆಮುಖದ ಬಳಿ ಅಧಿಕ ಪ್ರಮಾಣದಲ್ಲಿ ಕಬ್ಬಿಣದ ಅದುರನ್ನು ತೆಗೆಯುವ ಬೃಹತ್ ಯೋಜನೆ ಇದ್ದು, ಕೆಮ್ಮಣ್ಣುಗುಂಡಿಯಲ್ಲಿ ಕಬ್ಬಿಣದ ಅದುರು ತೆಗೆಯುವ ಉದ್ಯಮವಿದ್ದು ನೂರಾರು ಜನರಿಗೆ ಉದ್ಯೋಗ ಒದಗಿದೆ. ಚಿಕ್ಕಮಗಳೂರಿನಲ್ಲಿ ಕಾಫಿ ಹದಮಾಡುವ ಅನೇಕ ಕಾರ್ಖಾನೆಗಳಿವೆ. ಇಲ್ಲಿಂದ ಕಬ್ಬಿಣದ ಅದುರನ್ನು ಮಂಗಳೂರು ಬಂದರಿಗೆ ಸಾಗಿಸಿ ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ. ಗಣಿಗಾರಿಕೆಯಿಂದ ಉಂಟಾಗುವ ಪರಿಸರ ಹಾನಿಯ ಬಗ್ಗೆ ಸಾಮಾಜಿಕ ಚಳವಳಿ ನಡೆದಿದ್ದು ಗಣಿಗಾರಿಕೆ ಸದ್ಯ ಮುಂದುವರಿದಿದೆ. ಚಿಕ್ಕಮಗಳೂರು ಪಟ್ಟಣದಲ್ಲಿ ಮೊದಲ ಬಾರಿಗೆ 1917ರಲ್ಲಿ ಅಕ್ಕಿ ಗಿರಣಿಯನ್ನೂ 1920ರಲ್ಲಿ ಕಾಫಿ ಹದಮಾಡುವ ಕಾರ್ಖಾನೆಯನ್ನೂ



ಕಡೂರಿನ ಚೆನ್ನಕೇಶವ ದೇವಾಲಯದ ಮೂಲವಿಗ್ರಹ

ಸ್ಥಾಪಿಸಲಾಯಿತು. ಈಗ ಜಿಲ್ಲೆಯ ಹಲವಾರು ಕಡೆ ಅಕ್ಕಿ ಗಿರಣಿಗಳಿವೆ. ಕಾಫಿ ತೋಟಗಳಿಗೆ ಅಗತ್ಯವಿರುವ ಉಪಕರಣಗಳನ್ನು ತಯಾರಿಸುವ ಕಾರ್ಯಾಗಾರಗಳು ಚಿಕ್ಕಮಗಳೂರಿನಲ್ಲಿವೆ. 1911ರಲ್ಲಿ ಸ್ಥಾಪಿಸಿದ ಒಂದು ಹೆಂಚಿನ ಕಾರ್ಖಾನೆ ಶೃಂಗೇರಿಯಲ್ಲಿತ್ತು. ಚಿಕ್ಕಮಗಳೂರು, ತರೀಕೆರೆ, ಮೂಡಿಗೆರೆ ಮತ್ತಿತರೆಡೆಗಳಲ್ಲಿ ಮರ ಕೊಯ್ಯುವ ಕಾರ್ಖಾನೆಗಳೂ ಅಜ್ಜಂಪುರ, ಶಿವನಿ, ಬೀರೂರುಗಳಲ್ಲಿ ನೂಲಿನ ಮತ್ತು ಕಂಬಳಿ ತಯಾರಿಸುವ ಮಗ್ಗಗಳೂ ಉಂಟು. ಜಿಲ್ಲೆಯಲ್ಲಿ ಕೈಮಗ್ಗಗಳೂ, ಕಡೂರು ತಾಲ್ಲೂಕಿನ ಬಿದರೆಯಲ್ಲಿ ಕಚ್ಚಾ ಗಾಜಿನ ಬಳೆಗಳನ್ನು ತಯಾರಿಸುವ ಕಾರ್ಖಾನೆಯೂ, ಮೂಡಿಗೆರೆ ತಾಲ್ಲೂಕಿನ ಕೆಳಗೂರಿನಲ್ಲಿ ಚಹ ಪರಿಷ್ಕರಣ ಕಾರ್ಖಾನೆಯೂ ಇವೆ. ಇಲ್ಲಿಯ ಮಲೆನಾಡು ಭಾಗದಲ್ಲಿ ಜೇನು ಸಾಕುವ ಉದ್ಯಮ ಬೆಳೆದಿದೆ. ಮಡಕೆ ಮಾಡುವುದು, ಬಿದಿರಿನ ವಸ್ತುಗಳನ್ನು ತಯಾರಿಸುವುದು, ಗಾಡಿ ಕೂಡಿಸುವುದು ಮೊದಲಾದ ಕೈಗಾರಿಕೆಗಳೂ ಇವೆ. ಜಿಲ್ಲೆಯಲ್ಲಿ ಒಟ್ಟು 269 ಕಾರ್ಖಾನೆಗಳಿದ್ದು 1171 ಉದ್ಯೋಗಿಗಳಿದ್ದಾರೆ. ಇತರ ಕೈಗಾರಿಕೆಯಲ್ಲಿ ಜಿಲ್ಲೆಯ ಸ್ಥಾನ ಗೌಣ. ಜಿಲ್ಲೆಯಲ್ಲಿ ಎರಡು ವೃತ್ತಿ ತರಬೇತು ಶಾಲೆಗಳುಂಟು.

**ಸಾರಿಗೆ, ಸಂಪರ್ಕ:** ಬೆಂಗಳೂರು–ಪುಣೆ ರೈಲುಮಾರ್ಗ ಕಡೂರಿನ ಮೂಲಕ ಹಾದುಹೋಗುತ್ತದೆ. ಇದಕ್ಕೆ ಕವಲಾಗಿ ಬೀರೂರಿನಿಂದ ತರೀಕೆರೆಯ ಮೂಲಕ ಶಿವಮೊಗ್ಗಕ್ಕೆ ಒಂದು ರೈಲುಮಾರ್ಗವಿದೆ. ಜಿಲ್ಲೆಯಲ್ಲಿ ರೈಲುಮಾರ್ಗದ ಒಟ್ಟು ಉದ್ದ 97ಕಿಮೀ. ಕಡೂರು–

ಶ್ರೀ ವಿದ್ಯಾಶಂಕರ ದೇವಾಲಯ, ಶೃಂಗೇರಿ

ಚಿಕ್ಕಮಗಳೂರು ರೈಲು ಮಾರ್ಗ ಪ್ರಗತಿಯಲ್ಲಿದೆ. ಕಡೂರು–ಮಂಗಳೂರು ಹೆದ್ದಾರಿ ಚಿಕ್ಕಮಗಳೂರಿನ ಮೂಲಕ ಹಾದುಹೋಗುತ್ತದೆ. ಬೆಂಗಳೂರು – ಹೊನ್ನಾವರ ಹೆದ್ದಾರಿ ಕಡೂರಿನ ಮೂಲಕ ಸಾಗುತ್ತದೆ. ಚಿಕ್ಕಮಗಳೂರಿನಿಂದ ಬೆಂಗಳೂರು, ಮೈಸೂರು, ಹಾಸನ, ಶಿವಮೊಗ್ಗ, ಮಡಿಕೇರಿ, ಬೆಳಗಾವಿ, ಚಿತ್ರದುರ್ಗ, ಹರಿಹರ, ಉಡುಪಿ, ಮಂಗಳೂರು ಮೊದಲಾದ ಕಡೆಗಳಿಗೆ ಬಸ್ಸು ಮಾರ್ಗಗಳಿವೆ. ಚಿಕ್ಕಮಗಳೂರು – ಆಲ್ದೂರು – ಬಾಳೆಹೊನ್ನೂರು – ಉರುವಿನಖಾನ್ – ಕೊಟ್ಟಿಗೆಹಾರ ಹೆದ್ದಾರಿ, ಚಿಕ್ಕಮಗಳೂರು – ಜೈಪುರ – ಶೃಂಗೇರಿ ಮಾರ್ಗ, ಚಿಕ್ಕಮಗಳೂರು – ಮಲ್ಲಂದೂರು – ನರಸಿಂಹರಾಜಪುರ ಮಾರ್ಗ, ಚಿಕ್ಕಮಗಳೂರು – ಬಾಬಾಬುಡನ್‌ಗಿರಿ ರಸ್ತೆ, ಮಲ್ಲಂದೂರು – ಮತ್ತೋಡಿ – ಕೊಳಗಾವೆ – ಗಿರಿ ರಸ್ತೆ, ಮೂಡಿಗೆರೆ – ಸಕಲೇಶಪುರ ರಸ್ತೆ, ಕೊಟ್ಟಿಗೆಹಾರ – ಕಳಸ ರಸ್ತೆ, ಕೊಟ್ಟಿಗೆಹಾರ – ಬಾಳೆಹೊನ್ನೂರು ರಸ್ತೆ ಮೂಡಿಗೆರೆ – ದಾರದಹಳ್ಳಿ – ದೇವವೃಂದ ರಸ್ತೆ, ಮೂಡಿಗೆರೆ – ಗೆಂಡೆಹಳ್ಳಿ – ಬೇಲೂರು ರಸ್ತೆ, ಬಾಳೆಹೊನ್ನೂರು ಕೊಪ್ಪ –

ರಂಭಾಪುರೀ ಮಠ, ಬಾಳೆಹೊನ್ನೂರು

ಆಗುಂಬೆ ರಸ್ತೆ, ತರೀಕೆರೆ – ಲಕ್ಕವಳ್ಳಿ – ನರಸಿಂಹರಾಜಪುರ ರಸ್ತೆ ಇವು ಮಲೆನಾಡು ಭಾಗದ ಮುಖ್ಯ ರಸ್ತೆಗಳು. ಕಡೂರು – ಬೀರೂರು – ಅಜ್ಜಂಪುರ ರಸ್ತೆ, ಚಿಕ್ಕಮಗಳೂರು – ಮಾಗಡಿ – ಜಾವಗಲ್ಲು ರಸ್ತೆ, ತರೀಕೆರೆ – ಶಾಂತವೇರಿ – ಬೀರೂರು – ಕಡೂರು ರಸ್ತೆ; ತರೀಕೆರೆ – ಹೊಸದುರ್ಗ ರಸ್ತೆ – ಇವು ಬಯಲುಸೀಮೆಯ ಮುಖ್ಯ ರಸ್ತೆಗಳು. ಜಿಲ್ಲೆಯಲ್ಲಿ 34 ದೊಡ್ಡ ಸೇತುವೆಗಳಿವೆ. ಮಲೆನಾಡಿನಲ್ಲಿ ರಸ್ತೆ ನಿರ್ಮಾಣದ ವೆಚ್ಚ ಹೆಚ್ಚು. ಆದ್ದರಿಂದ ಇನ್ನೂ ಅನೇಕ ಊರುಗಳಿಗೆ ರಸ್ತೆ ಸಂಪರ್ಕ ಸರಿಯಾಗಿಲ್ಲ. ಹಲವು ರಸ್ತೆಗಳು ಮಳೆಗಾಲದಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಸರ್ಕಾರ ಈಗ ಈ ರಸ್ತೆಗಳ ವಿಸ್ತರಣೆ ಮತ್ತು ಅಭಿವೃದ್ಧಿಗೆ ಹೆಚ್ಚು ಗಮನ ನೀಡಿದೆ. ಒಟ್ಟು ರಸ್ತೆಗಳ ಉದ್ದ 7,547ಕಿಮೀ; ಪಕ್ಕಾ ರಸ್ತೆಗಳು 4,781ಕಿಮೀ (2000).

ಈ ಜಿಲ್ಲೆಯ ಸಾಕ್ಷರತೆ 64.27% (ಪುರುಷರಲ್ಲಿ 71.30%, ಸ್ತ್ರೀಯರಲ್ಲಿ 57.13%). 53 ಪ್ರೌಢಶಾಲೆಗಳೂ 46 ಪದವಿಪೂರ್ವ ಕಾಲೇಜುಗಳೂ 14 ಪ್ರಥಮ ದರ್ಜೆ ಕಾಲೇಜುಗಳೂ ಇವೆ. ಒಂದು ಎಂಜಿನಿಯರಿಂಗ್ ಕಾಲೇಜಿದೆ. ಮೂಡಿಗೆರೆಯಲ್ಲಿ ತೋಟಗಾರಿಕಾ ಕಾಲೇಜಿದೆ; 3 ಪಾಲಿಟೆಕ್ನಿಕ್‌ಗಳಿವೆ (2000–01). ಮೂಡಿಗೆರೆ ಮತ್ತು ಶೃಂಗೇರಿಗಳಲ್ಲಿ ನರ್ಸಿಂಗ್ ಶಾಲೆಗಳು ಆರಂಭವಾಗಿವೆ.

**ಜನ–ಜೀವನ** : ವ್ಯವಸಾಯ ಈ ಜಿಲ್ಲೆಯ ಜನರ ಪ್ರಧಾನ ಕಸಬಾದ್ದರಿಂದ ಗ್ರಾಮಜೀವನದ ಲಕ್ಷಣಗಳನ್ನು ಎಲ್ಲೆಲ್ಲೂ ಕಾಣಬಹುದು. ಬೆಳೆ ಕುಯ್ಲಿಗೆ ಬರುವಾಗ ಡಿಸೆಂಬರ್ ತಿಂಗಳಲ್ಲಿ ಹೊಸ ಅಕ್ಕಿ ಹಬ್ಬವನ್ನು ಮಾಡುತ್ತಾರೆ. ಆಗ ಹೊಸ ಬೆಳೆಯಿಂದ ಮಾಡಿದ ಅನ್ನವನ್ನು ದೇವರಿಗೆ ನೈವೇದ್ಯ ಮಾಡುತ್ತಾರೆ. ಗದ್ದೆ ಕುಯಿಲು, ಒಕ್ಕಣೆ ಮುಗಿದ ಮೇಲೆ ಕಣದ ಹಬ್ಬ ಆಚರಿಸುತ್ತಾರೆ. ಈ ಪದ್ಧತಿಯನ್ನೇ ಕಾಫಿ ಫಸಲಿಗೂ ಅನ್ವಯಿಸಲಾಗುತ್ತದೆ. ಸಾಮಾನ್ಯವಾಗಿ ಏಪ್ರಿಲ್, ಮೇ ತಿಂಗಳುಗಳಲ್ಲಿ ಸುಗ್ಗಿ ಹಬ್ಬವನ್ನು ಆಚರಿಸುತ್ತಾರೆ. ದೇವವೃಂದದಲ್ಲಿ ಉಗಾದಿಯಂದು ನಡೆಯುವ ರಾಮೇಶ್ವರ ಜಾತ್ರೆ ಈ ನಾಡಿನ ಹಬ್ಬ. ಫಲ್ಗುಣಿ ಸುಗ್ಗಿ ಹಬ್ಬ ಮುಕ್ಕುಂದ ನಾಡಿನ ಪ್ರಮುಖ ಉತ್ಸವ. ಒಂದೇ ಊರು ಪ್ರತ್ಯೇಕವಾಗಿ ಹಬ್ಬ ನಡೆಸುವುದೂ ಉಂಟು. ದಾರದಹಳ್ಳಿಯ ಸುಗ್ಗಿಹಬ್ಬ ಇಂಥದು. ಈ ಜಿಲ್ಲೆಯ ಕೊಪ್ಪ, ಶೃಂಗೇರಿ ಭಾಗಗಳಲ್ಲಿ ಅಂಟಿಗೆ ಪಂಟಿಗೆ ಸಂಪ್ರದಾಯವಿದೆ. ಕಾರ್ತಿಕದಲ್ಲಿ ಕೋಲಾಟ ನಡೆಯುವುದು. ವೀರಗಾಸೆ ಕುಣಿತ, ಕರಡೆಮಜಲು, ಕರಪಾಲಮೇಳ, ಕೀಲುಕುದುರೆ ನರ್ತನ ಮುಂತಾದವು ಇಲ್ಲಿಯ ಮುಖ್ಯ ಜನಪದ ಆಕರ್ಷಣೆಗಳು. ಬಯಲುಸೀಮೆಯಲ್ಲಿ ಅನೇಕ ಕಡೆ ದೇವರ ದರ್ಶನಗಳು ಬರುತ್ತವೆ. ಮೂಡಿಗೆರೆ ತಾಲ್ಲೂಕು ಕೆಸವೊಳಲಿನ ಮಹಾರುದ್ರ ದೇವರ ದರ್ಶನಕ್ಕೆ ನೂರಾರು ಭಕ್ತರು ಬರುತ್ತಾರೆ.

ಕಡೂರಿನ ಆಂಜನೇಯ ದೇವಾಲಯದ ಒಂದು ಕಂಬ

ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಮುಖ್ಯವಾದವು: ನಿರ್ವಾಣಸ್ವಾಮಿ ಜಾತ್ರೆ (ಮುಳ್ಳಯ್ಯನಗಿರಿ), ಸೀತಾಳ ಮಲ್ಲಿಕಾರ್ಜುನಸ್ವಾಮಿ ತೇರು (ಚಿಕ್ಕಮಗಳೂರು ತಾಲ್ಲೂಕು), ಲಕ್ಷ್ಮೀರಂಗನಾಥಸ್ವಾಮಿ ತೇರು (ಸಕ್ಕರೆ ಪಟ್ಟಣ), ಕಾಲಭೈರವ ತೇರು (ಬೀರುವದೇವರು), ಕಳಸೇಶ್ವರಸ್ವಾಮಿ ಜಾತ್ರೆ (ಕಳಸ), ಚಂದ್ರಮೌಳೇಶ್ವರ ಮತ್ತು ಶಾರದಾಂಬ ನವರಾತ್ರಿ ಮಹೋತ್ಸವ (ಶೃಂಗೇರಿ) ಮತ್ತು ಮಲ್ಲಿಕಾರ್ಜುನಸ್ವಾಮಿ ತೇರು (ಪುರ). ಶ್ರೀ ರಾಮೇಶ್ವರ ತೇರು (ದೇವವೃಂದ) ಬೆಳವಾಡಿ, ಬೀರೂರು, ಕಲ್ಮರಡಿ ಮಠ ಬುಕ್ಕಾಂಬುಧಿ, ಪಟ್ಟಣಗೆರೆ, ಆಸಂದಿ, ಹಿರೇಮಗಳೂರು, ದತ್ತಾತ್ರೇಯ ಪೀಠ, ಅಮೃತಾಪುರ, ಅಂಗಡಿ, ದೇವನೂರು ಮೊದಲಾದೆಡೆ ಜಾತ್ರೆ, ಉತ್ಸವಗಳು ನಡೆಯುತ್ತವೆ. ಸಿಂಹನಗದ್ದೆ ಜೈನರಿಗೆ ಪವಿತ್ರ ಸ್ಥಳ.

ಅನೇಕ ಸ್ಥಳಗಳು ಪುರಾಣೇತಿಹಾಸಪ್ರಸಿದ್ಧವಾದವು. ಮುಳ್ಳಯ್ಯನಗಿರಿ – ಬಾಬಾ ಬುಡನ್‌ಗಿರಿ ಶ್ರೇಣಿಯೇ ರಾಮಾಯಣ ಕಾಲದ ಚಂದದ್ರೋಣ ಪರ್ವತವೆಂದು ಹೇಳಲಾಗಿದೆ. ಮೂಡಿಗೆರೆ ತಾಲ್ಲೂಕಿನಲ್ಲಿರುವ ಹೇರಿಕೆಗೆ ಸಮೀಪದಲ್ಲಿರುವ ಪಾಂಡವರ ಗುಡ್ಡದಲ್ಲಿ ಹಿಂದೆ ಪಾಂಡವರು ವನವಾಸಕಾಲದಲ್ಲಿ ಇದ್ದರೆಂಬುದು ಸ್ಥಳಪುರಾಣ. ಅಲ್ಲಿರುವ ಕಲ್ಲಿನ ಉಪಕರಣಗಳನ್ನು ಅವರು ಬಳಸುತ್ತಿದ್ದರು ಎಂದು ನಂಬಲಾಗಿದೆ. ತುಂಗಾನದಿಯ ಅಂಬುತೀರ್ಥ ಎಂಬಲ್ಲಿರುವ ಭೀಮನಕಲ್ಲನ್ನು ಮಧ್ವಾಚಾರ್ಯರು ಒಂದೇ ಕೈಯಲ್ಲಿ ಎತ್ತಿ ಇಟ್ಟರೆಂದು ಮೂಡಿಗೆರೆಯ 89ನೆಯ ಶಾಸನ ತಿಳಿಸುತ್ತದೆ. ಮೂಡಿಗೆರೆ ತಾಲ್ಲೂಕಿನ ಬಲ್ಲಾಳರಾಯನ ದುರ್ಗದಲ್ಲಿ ಹೊಯ್ಸಳರ ಕಾಲದಲ್ಲಿ ಕಟ್ಟಿದ ಕೋಟೆ ಇದೆ. ಶೃಂಗೇರಿ ನಿಸರ್ಗದ ಮಡಿಲಲ್ಲಿರುವ ಸುಂದರ ಕ್ಷೇತ್ರ. ಬಾಳೆಹೊನ್ನೂರಿನಲ್ಲಿ ಶ್ರೀರಂಭಾಪುರಿ ಜಗದ್ಗುರುಗಳ ಮಠವಿದೆ. ಕಳಸ ಯಾತ್ರಾಸ್ಥಳ. ಇದು ಭೈರವರಸರ ರಾಜಧಾನಿಯೂ

ಆಗಿತ್ತು. ಇದರ ಸಮೀಪದಲ್ಲಿ ಇರುವ ಹೊರನಾಡು ದೇಗುಲ ಪ್ರಸಿದ್ಧವಾದದ್ದು. ಬಾಳೆಹೊನ್ನೂರಿಗೆ ಸಮೀಪದಲ್ಲಿ ಭದ್ರಾನದಿಯ ದಡದಲ್ಲಿರುವ ಖಾಂಡ್ಯ ಮಾರ್ಕಂಡೇಯನ ಜನ್ಮಸ್ಥಳವೆಂದು ಹೇಳಲಾಗಿದೆ. ಕಡೂರು – ಚಿಕ್ಕಮಗಳೂರು ರಸ್ತೆಯಲ್ಲಿರುವ ಸಕ್ಕರೆಪಟ್ಟಣ ಒಂದು ಪ್ರಮುಖ ಸ್ಥಳ. ಕಡೂರು ಪಟ್ಟಣದ ಬಳಿ ಇರುವ ಹೇಮಗಿರಿ ಮಲ್ಲಿಕಾರ್ಜುನಸ್ವಾಮಿ

ಶ್ರೀ ಅನ್ನಪೂರ್ಣೇಶ್ವರಿ ದೇವಾಲಯ, ಹೊರನಾಡು

ಬೆಟ್ಟದಲ್ಲಿ ವರ್ಷಕ್ಕೊಮ್ಮೆ ದನದ ಜಾತ್ರೆ ನಡೆಯುತ್ತದೆ. ಆ ತಾಲ್ಲೂಕಿನಲ್ಲಿರುವ ಆಸಂದಿ ಗ್ರಾಮ ಇತಿಹಾಸಪ್ರಸಿದ್ಧವಾದ್ದು. ಕೊಪ್ಪ ತಾಲ್ಲೂಕಿನ ಜಂಬಿಟ್ಟಿಗೆ ಗ್ರಾಮದಲ್ಲಿ 1733ರಲ್ಲಿ ಕಟ್ಟಿಸಿದ ಒಂದು ದೇವಾಲಯ ಶಿಲ್ಪಕಲೆಗೆ ಪ್ರಸಿದ್ಧವಾದ್ದು. ತರೀಕೆರೆಯ ಬಳಿ ಅಮೃತಾಪುರದ ಅಮೃತೇಶ್ವರ ದೇವಾಲಯ ಹೊಯ್ಸಳರ ಕಾಲದಲ್ಲಿ ರಚಿತವಾದ್ದು. ಚಿಕ್ಕಮಗಳೂರು ತಾಲ್ಲೂಕಿನ ವಸ್ತಾರೆಯಲ್ಲಿ ಪದ್ಮಾವತಿಯ ದೇವಾಲಯವಿದೆ. ಅಲ್ಲಿರುವ ಸಪ್ತ ಮಾತೃಕೆಯರ ಮತ್ತು ರಾಜಮಂತ್ರಿ ಸಮಾಲೋಚನೆಯ ಕೆತ್ತನೆಗಳು ಆಕರ್ಷಕವಾದವು. ಮೂಡಿಗೆರೆ ತಾಲ್ಲೂಕಿನ ಘಟ್ಟಶ್ರೇಣಿಯಲ್ಲಿರುವ ಮರಗುಂದದ ಬೆಟ್ಟದ ಭೈರವೇಶ್ವರ, ಭೈರಾಪುರದ ನಾಣ್ಯದ ಭೈರವೇಶ್ವರ, ದೇವರಮನೆಯ ಕಾಲಭೈರವೇಶ್ವರ ದೇವಾಲಯಗಳು ಅತ್ಯಂತ ಪ್ರಾಚೀನ ದ್ರಾವಿಡ ವಾಸ್ತು ರಚನೆಗೆ ಮಾದರಿಗಳಾಗಿವೆ.

ಈ ಜಿಲ್ಲೆಯ ಕೆಲವು ಪ್ರದೇಶ 4–6ನೆಯ ಶತಮಾನಗಳಲ್ಲಿ ಆದ್ಯ ಕದಂಬರ ಆಳಿಕೆಗೆ ಒಳಪಟ್ಟಿತ್ತು. 7,8,9ನೆಯ ಶತಮಾನಗಳಲ್ಲಿ ಜಿಲ್ಲೆಯ ಪಶ್ಚಿಮದ ಕೆಲವು ಭಾಗಗಳು ದಕ್ಷಿಣ ಕನ್ನಡ ಜಿಲ್ಲೆಯಿಂದ ಆಳಿದ ಆಳುಪರಿಗೆ ಸೇರಿದ್ದುವು. ಶಿವಮೊಗ್ಗ ಜಿಲ್ಲೆಗೆ ಸೇರಿದ ಹುಂಚದ ಸಾಂತರರ ರಾಜ್ಯ ಇಲ್ಲಿಯವರೆಗೂ ಹಬ್ಬಿತ್ತು. ಜಿಲ್ಲೆಯ ಹೆಚ್ಚಿನ ಭಾಗ ಗಂಗರ ಅಧೀನದಲ್ಲಿತ್ತು.



ಬ್ರಹ್ಮಸಮುದ್ರದ ಲಕ್ಷ್ಮೀನಾರಾಯಣ ದೇವಾಲಯದ ಅಲಂಕಾರ ಶಿಲ್ಪ

ಹೊಯ್ಸಳರ ಮೂಲಪುರುಷನಿಗೆ ಜನ್ಮ ನೀಡಿದ ಹೆಗ್ಗಳಿಕೆ ಈ ಜಿಲ್ಲೆಗೆ ಸೇರುತ್ತದೆ. ಆ ಸ್ಥಳ ಇದ್ದುದು ಮೂಡಿಗೆರೆಗೆ 13 ಕಿಮೀ ದೂರದಲ್ಲಿರುವ ಸೊಸವೂರು ಅಥವಾ ಈಗಿನ ಅಂಗಡಿ ಗ್ರಾಮದಲ್ಲಿ. 11–14ನೆಯ ಶತಮಾನಗಳಲ್ಲಿ ಜಿಲ್ಲೆ ಹೊಯ್ಸಳರ ಆಳಿಕೆಯಲ್ಲಿತ್ತು. ಶೃಂಗೇರಿಯ ವಿದ್ಯಾರಣ್ಯರು ವಿಜಯನಗರದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರೆಂದು ಹೇಳಲಾಗಿದೆ. ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಜಿಲ್ಲೆಯ ಪಶ್ಚಿಮ ಭಾಗ ಕಾರ್ಕಳದ ರಾಜರಿಗೂ ದಕ್ಷಿಣ ಭಾಗ ಮಂಜರಾಬಾದ್ ಪ್ರದೇಶದ ಪಾಳೆಯಗಾರರಿಗೂ ಸೇರಿದ್ದುವು. ಇವರೆಲ್ಲ ವಿಜಯನಗರದ ಸಾಮಂತರಾಗಿದ್ದರು. 17ನೆಯ ಶತಮಾನದ ಮಧ್ಯಭಾಗದಲ್ಲಿ ಈ ಜಿಲ್ಲೆಯ ಬಹುಭಾಗವನ್ನು ಶಿವಪ್ಪನಾಯಕ ವಶಪಡಿಸಿಕೊಂಡ. ವಿಜಯನಗರದ ಪ್ರತಿನಿಧಿಯಾಗಿದ್ದ ಶ್ರೀರಂಗರಾಯ ಸ್ವಲ್ಪಕಾಲ ಅವನ ಆಶ್ರಯದಲ್ಲಿದ್ದು ಸಕ್ಕರೆಪಟ್ಟಣ, ಬೇಲೂರು ಮತ್ತು ನೆರೆಯ ಪ್ರದೇಶಗಳನ್ನಾಳುತ್ತಿದ್ದ. 1690–94ರಲ್ಲಿ ಮೈಸೂರಿನ ರಾಜರು ಈ ಜಿಲ್ಲೆಯ ದಕ್ಷಿಣ ಭಾಗವನ್ನು ಆಕ್ರಮಿಸಿಕೊಂಡರು. ಅದೇ ವರ್ಷ ಮೈಸೂರು ಮತ್ತು ಇಕ್ಕೇರಿಗಳ ನಡುವೆ ಒಪ್ಪಂದವಾಗಿ, ಮೈಸೂರಿನ ಅರಸರು ಗೆದ್ದಿದ್ದ ಪ್ರದೇಶಗಳಲ್ಲಿ ಐಗೂರು ಮತ್ತು ವಸ್ತಾರೆ ಪಾಳೆಯಪಟ್ಟುಗಳನ್ನು ಬಿಟ್ಟುಕೊಟ್ಟರು. ಈ ಮಧ್ಯದಲ್ಲಿ ಕೆಲವು ಕಾಲ ತರೀಕೆರೆ ಪಾಳೆಯಗಾರರು ಆ ಪಟ್ಟಣದ ಸುತ್ತಲ ಪ್ರದೇಶಗಳನ್ನು ಆಳುತ್ತಿದ್ದರು. 1763ರಲ್ಲಿ ಹೈದರ್ ಇಕ್ಕೇರಿಯನ್ನು ಆಕ್ರಮಿಸಿಕೊಂಡು ಅದರ ಅಧೀನದಲ್ಲಿದ್ದ ವಿವಿಧ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡ. ಇಡೀ ಜಿಲ್ಲೆ ಮೈಸೂರಿನ ಆಳಿಕೆಗೆ ಒಳಪಟ್ಟಿತು. ಟಿಪ್ಪುವಿನ ಪತನಾನಂತರ ಮತ್ತೆ ಈ ಪ್ರದೇಶ ಮೈಸೂರಿನ ಅರಸರಿಗೆ ಒಳಪಟ್ಟಿತ್ತು. 1830ರಲ್ಲಿ ತರೀಕೆರೆಯ ರಂಗಪ್ಪನಾಯಕ ಬಂಡೆದ್ದು ಕಾಳದುರ್ಗ ಮತ್ತು ಕಾಮನದುರ್ಗಗಳನ್ನು ಹಿಡಿದುಕೊಂಡ. ಮೈಸೂರಿನ ಸೇನೆ ಮರುವರ್ಷ ಮತ್ತೆ ಇವನ್ನು ವಶಪಡಿಸಿಕೊಂಡಿತು. ಮೈಸೂರಿನ ಆಡಳಿತವು ಕಮಿಷನರಿಗೆ ವರ್ಗವಾದಾಗ (1831) ಈ ಭಾಗವನ್ನು ನಗರ ವಿಭಾಗಕ್ಕೆ ಸೇರಿಸಲಾಯಿತು. 1863ರಲ್ಲಿ ಇದನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು. ಕಡೂರು ಜಿಲ್ಲೆಯೆಂದು ಕರೆಯಲ್ಪಡುತ್ತಿದ್ದ ಇದಕ್ಕೆ ಆಗ ಕಡೂರೇ ಆಡಳಿತ ಕೇಂದ್ರ. 1865ರಲ್ಲಿ ಚಿಕ್ಕಮಗಳೂರು ಈ ಜಿಲ್ಲೆಯ ಆಡಳಿತ ಕೇಂದ್ರವಾಯಿತು. 1882ರಲ್ಲಿ ಅರಸೀಕೆರೆ, ಬೇಲೂರು, ಹಾಸನ ಮತ್ತು ಮಂಜರಾಬಾದ್ ತಾಲ್ಲೂಕುಗಳನ್ನೊಳಗೊಂಡ ಹಾಸನ ವಿಭಾಗ ಈ ಜಿಲ್ಲೆಗೆ ಸೇರಿತ್ತು. 1886ರಲ್ಲಿ ಪ್ರತ್ಯೇಕವಾದ ಹಾಸನ ಜಿಲ್ಲೆಯನ್ನು ರಚಿಸಲಾಯಿತು. ತರುವಾಯ ಇಲ್ಲಿಯ ಸ್ವಲ್ಪ ಭಾಗವನ್ನು ಚಿತ್ರದುರ್ಗ ಜಿಲ್ಲೆಗೆ ಸೇರಿಸಿ ಇಂದಿನ ರೂಪದಲ್ಲಿ ಜಿಲ್ಲೆಯನ್ನು ಉಳಿಸಿಕೊಳ್ಳಲಾಯಿತು.

(ಡಿ.ಎಸ್.ಜೆ.;ಎಚ್.ಪಿ.ಕೆ.)

ಚಿಕ್ಕಮಗಳೂರು ಜಿಲ್ಲೆ ಪ್ಲಾಂಟೇಷನ್ ಸಾಗುವಳಿಯಿಂದಾಗಿ ಹೊಸ ಆರ್ಥಿಕ ಸ್ವರೂಪವನ್ನು ಪಡೆದುಕೊಳ್ಳತೊಡಗಿತು. ಅನೇಕ ಐರೋಪ್ಯ ಕಾಫಿ ಬೆಳೆಗಾರರು ಜಿಲ್ಲೆಯಲ್ಲಿ ಬಂದು ನೆಲಸಿ ಕಾಫಿ ತೋಟಗಳನ್ನು ರೂಢಿಸಿದರು. ದೇಶೀಯರು ಸಹ ಕಾಫಿ ತೋಟಗಳನ್ನು ರೂಢಿಸತೊಡಗಿದರು. 1881ರಲ್ಲಿ ರಚಿತವಾದ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ಲಾಂಟೇಷನ್ ಮಾಲೀಕ ವರ್ಗಕ್ಕೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲಾಯಿತು. ಕೃಷಿ ಕಾರ್ಮಿಕ ವರ್ಗ ಬೆಳೆಯಿತು. ಹೊರರಾಜ್ಯಗಳಿಂದಲೂ ಕೃಷಿ ಕಾರ್ಮಿಕರು ಬಂದು ಇಲ್ಲಿ ನೆಲಸಿದರು. ಕಾಫಿ ಬೆಳೆಯ ಏಳುಬೀಳಿನೊಂದಿಗೆ ಅವರು ಇಲ್ಲಿಯೇ ಸ್ಥಿರವಾಗಿ ನೆಲಸಿದರು. 1914ರಿಂದ ಜಾರಿಗೆ ಬಂದ ಮಲೆನಾಡು ಅಭಿವೃದ್ಧಿ ಯೋಜನೆಗೆ ಆಗಿನ ದಿವಾನರಾಗಿದ್ದ ಎಂ.ವಿಶ್ವೇಶ್ವರಯ್ಯನವರ ಆಸಕ್ತಿಯೇ ಬಹುಮುಖ್ಯ ಕಾರಣವಾಯಿತು. ಅದರಿಂದ ಮಲೇರಿಯಾ ರೋಗ ಹರಡುವುದನ್ನು ತಡೆಗಟ್ಟಲು, ಬಾಣಂತಿಯರ ಶುಶ್ರೂಷೆಗೆ ಆದ್ಯತೆ ನೀಡಲು, ರಸ್ತೆ, ಬಾವಿಗಳನ್ನು ಮಾಡಿಸಲು ಅನುಕೂಲವಾಯಿತು.

ಈ ಜಿಲ್ಲೆಯ ಸಾಹಿತ್ಯ ಪರಂಪರೆ ದೊಡ್ಡದು. ಜನ್ನ, ರುದ್ರಭಟ್ಟ, ಲಕ್ಷ್ಮೀಶ ಇವರನ್ನು ಈ ಜಿಲ್ಲೆಯ ಮೂಲದವರೆಂದು ಗುರುತಿಸಲಾಗಿದೆ. ಶೃಂಗೇರಿ, ಕಳಸ, ಬಾಳೆಹೊನ್ನೂರು, ದೇವನೂರು ಇವು ಹಿಂದಿನಿಂದಲೂ ಸಾಹಿತ್ಯ ಸಂಬಂಧವಾದ ಚಟುವಟಿಕೆಗಳನ್ನು ಹೊಂದಿದ್ದವು. ಅನೇಕ ಶರಣ ಸಾಹಿತಿಗಳ ಕೃತಿಗಳಲ್ಲಿ ಈ ಜಿಲ್ಲೆಯ ವಿವರಗಳು ದಾಖಲಾಗಿವೆ. ಯಳ್ಳಂಬಳಸೆ ವೈ. ಸುಬ್ಬರಾವ್‌ರವರು ಶ್ರೇಷ್ಠ ಅದ್ವೈತ ವಿದ್ವಾಂಸರಾಗಿ 'ಬ್ರಹ್ಮಸೂತ್ರ' ಸಹಿತ ಹಲವಾರು ವಿದ್ವತ್ ಕೃತಿಗಳನ್ನು ರಚಿಸಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದವರು. ಇವರು ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳೆಂದು (1880–1975) ಉತ್ತರಾಶ್ರಮದಲ್ಲಿ ಪ್ರಸಿದ್ಧರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದರು. ಆಧುನಿಕ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಎ.ಆರ್.ಕೃಷ್ಣಶಾಸ್ತ್ರಿಯವರ ಹಿರಿಯರು ಚಿಕ್ಕಮಗಳೂರು ತಾಲ್ಲೂಕಿನ ಅಂಬಳೆಯವರು. ಮಹಾಕವಿ ಕುವೆಂಪು ಅವರು ಹುಟ್ಟಿದ್ದು ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆಯಲ್ಲಿ. ಈಗ ಅಲ್ಲಿ ಕುವೆಂಪು ಗೌರವಾರ್ಥ ಸಂದೇಶ ಮಂಟಪವನ್ನು ನಿರ್ಮಿಸಲಾಗಿದೆ. ಕುವೆಂಪು ಅವರ ಹಿರಿಯ ಪುತ್ರರೂ ಪಂಪಪ್ರಶಸ್ತಿ ವಿಜೇತರೂ ಆದ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ಮೂಡಿಗೆರೆ ಬಳಿ ನೆಲೆಸಿದ್ದರು. 'ಬುದ್ಧ ಚರಿತ ಮಹಾಮಧು' ಎಂಬ ಮಹಾಕಾವ್ಯ ರಚಿಸಿದ ಕಾಶಿ ವಿಶ್ವನಾಥಶೆಟ್ಟರು ಪ್ರಾಧ್ಯಾಪಕರಾಗಿ ನಿವೃತ್ತರಾಗಿ ಚಿಕ್ಕಮಗಳೂರಿನಲ್ಲಿ ನೆಲೆಸಿದ್ದರು. ಬಾಗಮನೆ ಕುಟುಂಬದಲ್ಲಿ ಹುಟ್ಟಿದ ಲಕ್ಷ್ಮೀದೇವಿ ಕಡಿದಾಳ್ ಮಂಜಪ್ಪನವರು ತಮ್ಮ ಕಾದಂಬರಿಗಳು ಹಾಗೂ ಇತರ ಕೃತಿಗಳ ಜೊತೆಗೆ 'ಶ್ರೀ ವಿವೇಕಾನಂದ ವಿಜಯ ಮಹಾಕಾವ್ಯ' ಎಂಬ ಬೃಹತ್ ಕೃತಿಯನ್ನು (ಒಂದು ಸಾವಿರ ಪುಟಗಳು) ರಚಿಸಿದ್ದಾರೆ. ಮಣೂರ, ಗೌ.ಮ.ಉಮಾಪತಿಶಾಸ್ತ್ರಿ, ದಾಶರಥಿ ದೀಕ್ಷಿತ್, ತ.ಪು.ವೆಂಕಟರಾಂ, ಯಳ್ಳಂಬಳಸೆ ಸುಬ್ರಹ್ಮಣ್ಯ ಶರ್ಮ, ತಿಮ್ಮರಸಯ್ಯ, ಮಾಕೋನಹಳ್ಳಿ ದೊಡ್ಡಪ್ಪಗೌಡ, ಕಾರೇಹಳ್ಳಿ ಮರುಳಸಿದ್ಧಪ್ಪ, ಸವ್ಯಸಾಚಿ, ವೇಣುಗೋಪಾಲರಾವ್, ಕೆ.ಎಸ್.ಮಲ್ಲೇಗೌಡ ಇವರೆಲ್ಲ ಸಾರಸ್ವತ ಲೋಕಕ್ಕೆ ಕಾಣಿಕೆ ಸಲ್ಲಿಸಿದ ಹಿರಿಯರು. ಜಿಲ್ಲೆಗೆ ಒಂದಲ್ಲ ಒಂದು ರೀತಿ ಸಂಬಂಧಿಸಿದ ಹಿರಿಯ ಕಿರಿಯ ಸಾಹಿತಿಗಳು, ಸಂಶೋಧಕರು ಸಾರಸ್ವತ ಲೋಕದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹವರಲ್ಲಿ ಸುಮತೀಂದ್ರನಾಡಿಗ, ಅಜ್ಜಂಪುರ ಜಿ.ಸೂರಿ, ಎಂ.ಪಿ.ಮಂಜಪ್ಪಶೆಟ್ಟಿ, ಡಿ.ಎಸ್.ಜಯಪ್ಪಗೌಡ, ಎ.ಎನ್.ಸ್ವಾಮಿ, ಚಂದ್ರಯ್ಯನಾಯ್ಡು, ಕೆ.ಓಂಕಾರಪ್ಪ, ಕನ್ನಡದಲ್ಲಿ ಅರ್ಚನೆಗೆ ಹೆಸರಾದ ಹಿರೇಮಗಳೂರು ಕಣ್ಣನ್, ಎಂ.ಆರ್. ನಾಗಭೂಷಣ, ಶೃಂಗೇರಿ ಸುಬ್ಬರಾಯಾಚಾರ್, ಸು.ಅಮೃತಾಪುರ, ಹಳೇಕೋಟೆ ರಮೇಶ್, ಬಿ.ಪುಟ್ಟಯ್ಯ ಶ್ರೀನಿವಾಸಮೂರ್ತಿ, ಸೌಕೂರು ಸುಬ್ರಹ್ಮಣ್ಯ ಅಡಿಗ, ಘನಿ ಅಕ್ಮಲ್, ಅಕ್ಮಲ್ ಆಲ್ದೂರಿ, ಗೌ.ರು.ಓಂಕಾರಯ್ಯ, ರಹಮತ್

ತರೀಕೆರೆ, ಬೆಳವಾಡಿ ಮಂಜುನಾಥ, ಕೆ.ಎಂ.ರೇವಣ್ಣ, ಯಲಗೊಡಿಗೆ ಮಂಜಯ್ಯ, ಬಾಣೂರು ಚನ್ನಪ್ಪ, ಹು.ಲಕ್ಷ್ಮೀನರಸಿಂಹಶಾಸ್ತ್ರಿ, ಕರಗುಂದ ರಾಮಣ್ಣ, ಟಿ.ಎಂ.ಬಾಲಗಣಪತಿ ಮೊದಲಾದವರು ಇದ್ದಾರೆ. ಮಹಿಳೆಯರಲ್ಲಿ ವಿಶೇಷವಾಗಿ ಬಿ.ಟಿ.ಲಲಿತಾನಾಯಕ್, ಲಲಿತಾಂಬ ವೃಷಭೇಂದ್ರ ಸ್ವಾಮಿ, ಕೆದಂಬಾಡಿ ಎಂ.ದೇವಕಿ, ಸೀತಮ್ಮ ನಂಜೇಗೌಡ, ಮಾಲತಿ ರಾಮದಾಸ್, ಟಿ.ಕೆ.ಶಕುಂತಳ, ಸುಕನ್ಯ ಕಳಸ ಇವರು ಗಮನಾರ್ಹರು.

ಹಿರೇಮಗಳೂರಿನ ಈಶ್ವರ ದೇವಾಲಯದ ಜಡೆಮುನಿ ವಿಗ್ರಹ

ಈ ಜಿಲ್ಲೆಯ ಜನಪದ ಕಲೆ, ಸಾಹಿತ್ಯ ಕ್ಷೇತ್ರದಲ್ಲಿನ ಪ್ರಮುಖ ಹೆಸರು ಗೊ.ರು. ಚನ್ನಬಸಪ್ಪನವರದು. ಇವರು 1967ರಲ್ಲಿ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನವನ್ನು ತರೀಕೆರೆಯಲ್ಲಿ ಸಂಘಟಿಸುವಲ್ಲಿ ಶ್ರಮಿಸಿದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಜನಪದ ಸಂಗೀತ ಕೋಗಿಲೆ ಕೆ.ಆರ್.ಲಿಂಗಪ್ಪನವರು ತರೀಕೆರೆಯವರು. 1921ರಲ್ಲಿ ಕೆ.ಸಿ.ಪುಟ್ಟಣ್ಣಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ 7ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತ್ತು. 1981ರಲ್ಲಿ 53ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪು.ತಿ.ನರಸಿಂಹಾಚಾರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲಾಮಟ್ಟದ ಹತ್ತಾರು ಸಾಹಿತ್ಯ ಸಮ್ಮೇಳನಗಳು ಜರುಗಿವೆ.

ಜಿಲ್ಲೆಯಲ್ಲಿ ಪತ್ರಿಕೋದ್ಯಮ 1932ರಿಂದ ಪ್ರಾರಂಭವಾಯಿತು. ಪಿ.ಚಿದಂಬರ್, ಪಂಡಿತ್, ಕೆ.ಎನ್.ಪ್ರಭುದೇವ್, ಎಂ.ಕೆ.ಗೋಪಾಲಸಿಂಗ್, ಎಂ.ವಿ.ಗುರುಬಸಪ್ಪ ಆದ್ಯರಲ್ಲಿ ಸೇರಿದ್ದಾರೆ. ಕೃನ.ಮೂರ್ತಿ, ಜನಮಿತ್ರ ಪತ್ರಿಕೆಯನ್ನು 1962ರಲ್ಲಿ ಪ್ರಾರಂಭಿಸಿ ಪತ್ರಿಕೋದ್ಯಮಕ್ಕೆ ಹೊಸ ಚಾಲನೆ ನೀಡಿದರು. ಇದರೊಂದಿಗೆ ಹೊಸ ದಿಗಂತ, ಮಲೆನಾಡು ಸಂಗತಿ, ಗಿರಿವಾರ್ತಾ, ಶಿರೋರತ್ನ, ಯುವಲೋಕ, ಜಿಲ್ಲಾ ಲೇಖನ ಇವು ಪ್ರಮುಖ ಪತ್ರಿಕೆಗಳು. ಎಂ.ಎನ್.ಕೃಷ್ಣಮೂರ್ತಿ, ಜಿ.ವಿ.ಚೂಡನಾಥ ಐಯ್ಯರ್, ಎಸ್.ಗಿರಿಜಾಶಂಕರ್, ಎಚ್.ಎಸ್.ಸೂರ್ಯನಾರಾಯಣ ಕಡೂರು, ಸಮುದ್ರವಳ್ಳಿ ಸುಬ್ಬರಾವ್, ಎಸ್.ಎನ್.ಶ್ರೀಕಂಠ, ಎಚ್.ಎನ್.ಪುಟ್ಟಸ್ವಾಮಿ, ಜಿ.ವಿ.ರಮೇಶ್, ಕಮಲಾಶ್ರೀಕಂಠ, ದಿನೇಶ್ ಪಟವರ್ಧನ, ಕಂ.ಕ.ಮೂರ್ತಿ, ಗಿರೀಶ್ ಮಾವಿನಕಾಡು, ಎ.ಎಚ್.ರಾಮಸ್ವಾಮಿ, ಎಂ.ಸಿ.ಶಿವಾನಂದಸ್ವಾಮಿ, ಸಿ.ಬಿ.ಸತೀಶ್, ಎಚ್.ಎಸ್.ಸುಂದರೇಶ್, ಜಿ.ಹಿರೇನಲ್ಲೂರು ಶಿವು ಮೊದಲಾದವರು ಜಿಲ್ಲಾ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಣನೀಯವಾಗಿ ದುಡಿದವರಾಗಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಹಲವಾರು ಮುಖಂಡರು, ಅಸಂಖ್ಯಾತ ಕಾರ್ಯಕರ್ತರು ಭಾಗವಹಿಸಿದ್ದರು. ಅವರಲ್ಲಿ ಹೊಸಕೊಪ್ಪ ಕೃಷ್ಣರಾವ್, ಎಂ.ಹುಚ್ಚೇಗೌಡ, ತರೀಕೆರೆ ಟಿ.ಸಿ.ಶಾಂತಪ್ಪ, ಎಸ್.ಅಣ್ಣಪ್ಪಶೆಟ್ಟಿ, ಯಳ್ಳಂಬಳಸೆ ಚಂದ್ರಶೇಖರ್, ಮಾಕೋನಹಳ್ಳಿ ದೊಡ್ಡಪ್ಪಗೌಡ, ಡಿ.ಎಸ್.ಕೃಷ್ಣಪ್ಪಗೌಡ, ಕೆ.ಆರ್.ನಾರಾಯಣಶೆಟ್ಟಿ, ಜಿ.ಟಿ.ಸತ್ಯನಾರಾಯಣಶೆಟ್ಟಿ ಮಾರ್ಗದ ಮಲ್ಲಪ್ಪ, ಬಿ.ಕೆ.ಲೋಕಪ್ಪಗೌಡ, ಸಿ.ವಿ.ಧ್ರುವರಾವ್, ವಾಸುದೇವರಾವ್, ಜಿ.ಪುಟ್ಟಸ್ವಾಮಿ, ಹಂಜಿ ಶಿವಣ್ಣ, ಬಿ.ಎಲ್.ಸುಬ್ಬಮ್ಮ, ಪಾರ್ವತಮ್ಮ ಹುಚ್ಚೇಗೌಡ, ಮುದಿಯಪ್ಪ, ಕೆ.ಎನ್.ವೀರಪ್ಪಗೌಡ, ಡಿ.ಎಚ್. ರುದ್ರಪ್ಪ, ಕೆ.ಎಂ.ತಮ್ಮಯ್ಯ, ಬಾಗಮನೆ ದೇವೇಗೌಡ, ಹಾಲೂರು ಗಿಡ್ಡಪ್ಪ ಮೊದಲಾದವರನ್ನು ಹೆಸರಿಸಬಹುದು.

ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕಡಿದಾಳು ಮಂಜಪ್ಪನವರು ಈ ಜಿಲ್ಲೆಯ ಶೃಂಗೇರಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಇನ್ನೂ ಹಲವಾರು ಜನ ಶಾಸಕರು ಮಂತ್ರಿಗಳಾಗಿ ಮತ್ತಿತರ ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿಯವರು 1978ರಲ್ಲಿ ಲೋಕಸಭೆಗೆ ಈ ಜಿಲ್ಲೆಯಿಂದ ಸ್ಪರ್ಧಿಸಿ ವಿಜೇತರಾಗಿದ್ದರು. ಇಂದಿರಾಗಾಂಧಿ ಅವರಿಗೆ ಲೋಕಸಭಾ ಸ್ಥಾನ ತೆರವು ಮಾಡಿದ್ದ ಡಿ.ಬಿ.ಚಂದ್ರೇಗೌಡರು 1983–85ರಲ್ಲಿ ವಿಧಾನಸಭಾ ಅಧ್ಯಕ್ಷರಾಗಿದ್ದರು. ಬಿ.ಎಲ್.ಶಂಕರ್ ಅವರು (2002–04) ವಿಧಾನ ಪರಿಷತ್ತಿನ ಸಭಾಪತಿಯಾಗಿದ್ದರು. ಡಿ.ಕೆ.ತಾರಾದೇವಿಯವರು ಕೇಂದ್ರದಲ್ಲಿ ಸಚಿವೆಯಾಗಿದರು.

**ತಾಲ್ಲೂಕು:** ಉತ್ತರದಲ್ಲಿ ಕಡೂರು, ತರೀಕೆರೆ ತಾಲ್ಲೂಕುಗಳು, ಪಶ್ಚಿಮದಲ್ಲಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ದಕ್ಷಿಣದಲ್ಲಿ ಮೂಡಿಗೆರೆ ತಾಲ್ಲೂಕು, ಪೂರ್ವಕ್ಕೆ ಹಾಸನ ಜಿಲ್ಲೆ – ಈ ತಾಲ್ಲೂಕಿನ ಮೇರೆಗಳು. ತಾಲ್ಲೂಕಿನಲ್ಲಿ ಅಂಬಳೆ, ಚಿಕ್ಕಮಗಳೂರು, ಲಕ್ಯ, ವಸ್ತಾರೆ, ಆವತಿ, ಜಾಗರ, ಆಲ್ದೂರು ಮತ್ತು ಖಾಂಡ್ಯ ಹೋಬಳಿಗಳೂ, 231 ಗ್ರಾಮಗಳೂ ಇವೆ. ತಾಲ್ಲೂಕಿನ ಜನಸಂಖ್ಯೆ 2,94,445. ಪಶ್ಚಿಮ ಘಟ್ಟಶ್ರೇಣಿಯಿಂದ ಒಳಚಾಚಿರುವ ಬೆಟ್ಟದ ಸಾಲು ಈ ತಾಲ್ಲೂಕಿನವರೆಗೂ ಹಬ್ಬಿದೆ. ಈ ಬೆಟ್ಟದ ಸಾಲಿನಲ್ಲಿಯೇ ಬರುವ ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್‌ಗಿರಿ ಇವು ಕರ್ನಾಟಕದ ಅತ್ಯಂತ ಎತ್ತರದ ಶಿಖರಗಳಲ್ಲಿ ಎರಡು. ತಾಲ್ಲೂಕಿನಲ್ಲಿ 93,973 ಎಕರೆ ಅರಣ್ಯ ಪ್ರದೇಶವಿದೆ. ಈ ಕಾಡುಗಳಲ್ಲಿ ಹೊನ್ನೆ, ಬೀಟೆ, ಮತ್ತಿ, ನಂದಿ, ಹಲಸು, ದಬ್ಬೆ, ಸಾಗುವಾನಿ ಮೊದಲಾದ ಮರಗಳಿವೆ. ತಾಲ್ಲೂಕಿನಲ್ಲಿರುವ ಮುತ್ತೋಡಿ ಮೀಸಲು ಕಾಡು ಸಾವಿರಾರು ಎಕರೆ ಪ್ರದೇಶವನ್ನು ಆವರಿಸಿದೆ. ಇದಲ್ಲದೆ ಬಸವನ ಕೋಟೆ, ಸಾರುಗೋಡ್, ಮತ್ತಾವರ, ಗಂಧದ ಕಾಡು, ಗಂಗಗಿರಿ, ಹೆಬ್ಬಗಿರಿ ಮೊದಲಾದ ಕಾಡುಗಳಿವೆ. ಚುರ್ಚೆಗುಡ್ಡ, ಕಾಮನಹಳ್ಳಿಗಳಲ್ಲಿ ಮೀಸಲು ಜಮೀನು ಇದೆ. ತಾಲ್ಲೂಕಿನಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ 803.08 ಮಿಮೀ. ಇದ್ದು ಇಲ್ಲಿಯ ಮಲೆನಾಡು ಪ್ರದೇಶಗಳ ಬೆಟ್ಟಗಳ ಇಳಿಜಾರು ಕಾಫಿ ಬೆಳೆಗೆ ಪ್ರಶಸ್ತವಾಗಿದೆ. ಚಿಕ್ಕಮಗಳೂರು ಪಟ್ಟಣದ ಸುತ್ತಮುತ್ತಲ ಮತ್ತು ಪೂರ್ವ ಭಾಗಕ್ಕಿರುವ ಬಯಲು ಪ್ರದೇಶಗಳು ಬತ್ತ ಮತ್ತು ಕಬ್ಬುಗಳನ್ನು ಬೆಳೆಯಲು ಫಲವತ್ತಾಗಿವೆ. ಈ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪವೂ ಹೇರಳವಾಗಿದೆ.

ಮುಳ್ಳಯ್ಯನಗಿರಿ ಬುಡದಲ್ಲಿ ಸೀತಾಳಪ್ಪನ ಕಣಿವೆಯಲ್ಲಿ ಯಗಚಿ ಹೊಳೆ ಹುಟ್ಟುತ್ತದೆ. ಇದು ಚಿಕ್ಕಮಗಳೂರಿನ ಮೂಲಕ ಬೇಲೂರು ಕಡೆ ಹರಿದು ಹಾಸನ ಜಿಲ್ಲೆ ಸೇರುತ್ತದೆ. ಇದೇ ತಾಲ್ಲೂಕಿನ ಆಣೂರು ಬಳಿ ಹುಟ್ಟುವ ಬೆರಂಜಿ ಹಳ್ಳ ಇದನ್ನು ಕೂಡಿಕೊಳ್ಳುತ್ತದೆ. ಗೌರಿಹಳ್ಳ ಮತ್ತು ಆವತಿ ಎಂಬ ಹೊಳೆಗಳು ಮುಳ್ಳಯ್ಯನಗಿರಿ ಶ್ರೇಣಿಯಲ್ಲಿ ಹುಟ್ಟುತ್ತವೆ. ಇವು ಕಡೂರಿನ ಬಳಿ ಒಂದುಗೂಡಿ ವೇದಾವತಿ ಎಂಬ ಹೆಸರಿನಿಂದ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಜಾಗರ ಕಣಿವೆಯಲ್ಲಿ ಹುಟ್ಟುವ ಸೋಮವಾಹಿನಿ ಎಂಬ ಹೊಳೆ ಪಶ್ಚಿಮಕ್ಕೆ ಹರಿದು ಭದ್ರಾನದಿಯನ್ನು ಸೇರುತ್ತದೆ.

ಮಲೆನಾಡು ಭಾಗದಲ್ಲಿ ಕಾಫಿ ಮತ್ತು ಕಿತ್ತಲೆ, ಮೆಣಸು ಮುಖ್ಯ ಬೆಳೆಗಳು. ಆಲ್ದೂರು ಮತ್ತು ಮಲ್ಲಂದೂರಿನ ಸುತ್ತಮುತ್ತಲ ಪ್ರದೇಶಗಳು ಕಿತ್ತಲೆಹಣ್ಣಿನ ಬೆಳೆಗೆ ಹೆಸರುವಾಸಿ ಯಾಗಿದ್ದವು. ಮಲೆನಾಡು ಭಾಗದಲ್ಲಿ ಬತ್ತ, ಅಡಕೆಗಳನ್ನೂ ಬೆಳೆಯುತ್ತಾರೆ. ಆದರೆ ಈ ಬೆಳೆಗಳು ಅಷ್ಟು ಅಧಿಕ ಇಳುವರಿ ನೀಡುವುದಿಲ್ಲ. ಬಯಲು ಪ್ರದೇಶದಲ್ಲಿ ಬತ್ತ, ಕಬ್ಬು, ರಾಗಿ, ಆಲೂಗೆಡ್ಡೆ, ಹುರುಳಿ, ಗೆಣಸು, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಸಾಸಿವೆ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

ತಾಲ್ಲೂಕಿನ ಕಾಫಿ ತೋಟಗಳ ಉದ್ಯಮ ಬೆಳೆದು ಹೊರಗಿನಿಂದ ಬಂದ ಸಾವಿರಾರು ಕಾರ್ಮಿಕರಿಗೆ ಉದ್ಯೋಗ ಲಭಿಸಿದೆ. ಇಲ್ಲಿ ಅನೇಕ ಕಾರ್ಮಿಕ ಸಂಘಗಳು ಇವೆ. ಮಲ್ಲಂದೂರು, ಹಿರೇಮಗಳೂರು, ಕೈಮರ, ಕಳಸಾಪುರ, ಕೃಷ್ಣರಾಜಪೇಟೆ, ವಸ್ತಾರೆ, ಆಲ್ದೂರು, ಇಂದಾವರ, ಜೋಳದಾಳು, ಶಿರವಾಸೆ ಮೊದಲಾದ ಸ್ಥಳಗಳು ಬೆಳವಣಿಗೆ ಹೊಂದಿವೆ. ಇವುಗಳಲ್ಲಿ ಬಹುತೇಕ ಸ್ಥಳಗಳಲ್ಲಿ ಮಾಧ್ಯಮಿಕ ಶಾಲೆಗಳೂ ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಇವೆ. ಹಲವು ಸ್ಥಳಗಳಲ್ಲಿ ಪಶುವೈದ್ಯಶಾಲೆಗಳು ಮತ್ತು ಪ್ರೌಢಶಾಲೆಗಳುಂಟು. ತಾಲ್ಲೂಕಿನ ಕೆಲವು ಸ್ಥಳಗಳಲ್ಲಿ ವಾರದ ಸಂತೆಗಳು ನಡೆಯುತ್ತವೆ.

ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್ ಗಿರಿ ಪ್ರೇಕ್ಷಣೀಯ ಸ್ಥಳಗಳು. ಮೂಡಿಗೆರೆ ರಸ್ತೆಯಲ್ಲಿರುವ ವಸ್ತಾರೆ 1875ರವರೆಗೂ ಇದೇ ಹೆಸರಿನ ತಾಲ್ಲೂಕಿಗೆ ಕೇಂದ್ರವಾಗಿತ್ತು. ಈ ಹೆಸರು ವಸುಧಾರಾ ಅಂದರೆ ದಾನವಾಗಿ ಕೊಟ್ಟ ಭೂಮಿ ಎಂಬ ಅರ್ಥದಲ್ಲಿ ಬಂದು

ರೂಪಾಂತರ ಹೊಂದಿ ವಸ್ತಾರೆ ಆಗಿದೆ ಎಂದು ತಿಳಿದುಬರುತ್ತದೆ. ಹುಂಚದ ರಾಜರಲ್ಲೊಬ್ಬ ಇದನ್ನು ಸ್ಥಾಪಿಸಿದ. ಇದು ಹಿಂದೆ ಸಿಸುಕಲಿ ಮತ್ತು ಕಾರ್ಕಳ ದೊರೆಗಳ ಅಧೀನದಲ್ಲಿತ್ತು. ಮಲೆನಾಡಿನಲ್ಲಿ ಮೊಟ್ಟಮೊದಲು ಕಾಫಿ ಬೆಳೆಯಲು ಪ್ರಯತ್ನಿಸಿದ ಸ್ಥಳಗಳಲ್ಲಿ ಇದೂ ಒಂದು ಎಂದು ಹೇಳಲಾಗಿದೆ.

ಮತ್ತಾವರದಲ್ಲಿರುವ ಪಾರ್ಶ್ವನಾಥ ಬಸದಿ ಬಹು ಪುರಾತನವಾದ್ದು. ಮರಳೆಯಲ್ಲಿ ಹೊಯ್ಸಳ ಶೈಲಿಯ ಎರಡು ದೇವಾಲಯಗಳುಂಟು. ಚಿಕ್ಕಮಗಳೂರು ಪಟ್ಟಣಕ್ಕೆ 2ಕಿಮೀ ದೂರವಿರುವ ಹಿರೇಮಗಳೂರು ಐತಿಹಾಸಿಕ ಸ್ಥಳ. ಕಳಸಾಪುರದಲ್ಲಿರುವ ಚೆಲುವನಾರಾಯಣ ದೇವಾಲಯ ಆಕರ್ಷಕ. ಬೆಳವಾಡಿಯ ವೀರನಾರಾಯಣ ದೇವಾಲಯ ಪ್ರಸಿದ್ಧ ಹೊಯ್ಸಳ ದೇವಾಲಯಗಳಲ್ಲೊಂದು. ಪಾದಪೀಠವೂ ಸೇರಿದಂತೆ ಅಲ್ಲಿಯ ವಿಗ್ರಹದ ಎತ್ತರ 2 ಮೀ. ಅಲ್ಲಿರುವ ಇನ್ನೊಂದು ದೇವಾಲಯ ಮಲ್ಲಿಕಾರ್ಜುನನದು. ಇದರ ತುದಿಯಲ್ಲಿ ಹೊಯ್ಸಳರ ಲಾಂಛನವಿದೆ. ಈ ಎರಡೂ ದೇವಾಲಯಗಳ ನವರಂಗಗಳಲ್ಲೂ ಅನೇಕ ದೇವದೇವತೆಗಳ ವಿಗ್ರಹಗಳನ್ನು ಕೆತ್ತಲಾಗಿದೆ. ಕೋಟೆ ಊರು ವಸ್ತಾರೆ ಹೋಬಳಿಯಲ್ಲಿದೆ. ಇಲ್ಲಿ ಹಲವು ಪ್ರಾಚೀನ ಶಾಸನಗಳುಂಟು.

ಪಟ್ಟಣ: ಚಿಕ್ಕಮಗಳೂರು ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಆಡಳಿತ ಕೇಂದ್ರ. ಇದು ಮುಳ್ಳಯ್ಯನಗಿರಿಯ ದಕ್ಷಿಣಕ್ಕಿದೆ. ಜನಸಂಖ್ಯೆ 1,01,022. 40 ಕಿಮೀ ದೂರದ ಕಡೂರೇ ಇಲ್ಲಿಗೆ ಅತ್ಯಂತ ಸಮೀಪದ ರೈಲ್ವೆ ನಿಲ್ದಾಣ.

ಇಲ್ಲಿ ಜಿಲ್ಲಾಮಟ್ಟದ ಕಚೇರಿಗಳೂ ಸೆಷನ್ಸ್ ಕೋರ್ಟೂ ಇವೆ. ಕಾಫಿ ಹದ ಮಾಡುವ ಕಾರ್ಖಾನೆಗಳಿವೆ. ಕೆಲವು ಎಂಜಿನಿಯರಿಂಗ್ ಕಾರ್ಯಾಗಾರಗಳು ಇದ್ದು ಇವು ಕಾಫಿ ತೋಟಗಳಿಗೆ ಬೇಕಾದ ಉಪಕರಣಗಳನ್ನು, ವಸ್ತುಗಳನ್ನು ತಯಾರಿಸುತ್ತವೆ. ಮರ ಕೊಯ್ಯುವುದು, ಬೆತ್ತ ಹೆಣೆಯುವುದು, ಕಬ್ಬಿಣದ ಉಪಕರಣಗಳ ರಿಪೇರಿ, ಗಾಡಿ ಕೂಡಿಸುವುದು, ಚರ್ಮದ ಕೆಲಸ-ಇವು ಕೆಲವು ಉಪಕಸಬುಗಳು. ಇಲ್ಲಿಯ ಪುರಸಭೆಯನ್ನು 1870ರಲ್ಲೇ ಸ್ಥಾಪಿಸಲಾಯಿತು.

ಪಟ್ಟಣಕ್ಕೆ ಸೇರಿಕೊಂಡಂತಿರುವ ರತ್ನಗಿರಿ ಒಂದು ಎತ್ತರದ ದಿಬ್ಬ; ಸಂಜೆಯ ವಿಹಾರ ಸ್ಥಳ. ಇಲ್ಲಿಯ ಗಂಧದ ಕೋಟೆ ಎಂಬ ಸ್ಥಳದಲ್ಲಿ ರಾಮೇಶ್ವರ ದೇವಾಲಯವೂ ಅನೇಕ ನಾಗರ ವಿಗ್ರಹಗಳೂ ಇವೆ. ಕನ್ನಿಕಾಪರಮೇಶ್ವರಿ ದೇವಾಲಯವನ್ನು ಆಧುನಿಕವಾಗಿ, ಭವ್ಯವಾಗಿ ಕಟ್ಟಲಾಗಿದೆ. ಇಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜು, ಒಂದು ಪಾಲಿಟೆಕ್ನಿಕ್, ಎರಡು ಪ್ರಥಮ ದರ್ಜೆ ಕಾಲೇಜುಗಳು ಇವೆ. ಆಧುನಿಕವಾಗಿ ನಿರ್ಮಿತವಾಗಿರುವ ಶ್ಮಶಾನ (ಮುಕ್ತಿಧಾಮ)ವಿದೆ.

ಚಿಕ್ಕಮಗಳೂರಿಗೆ ಈ ಹೆಸರು ಬರಲು ಒಂದು ಐತಿಹ್ಯವಿದೆ. ಮಹಾಭಾರತ ಕಥೆಯಲ್ಲಿ ಬರುವ ಹಾಗೂ ಸಕ್ಕರೆ ಪಟ್ಟಣದಲ್ಲಿದ್ದನೆನ್ನಲಾದ ರುಕ್ಮಾಂಗದ ಚಿಕ್ಕಮಗಳೂರನ್ನೂ ಇದರ ಸಮೀಪದಲ್ಲಿ ಇರುವ ಹಿರೇಮಗಳೂರನ್ನೂ ತನ್ನ ಕಿರಿಯ ಮತ್ತು ಹಿರಿಯ ಹೆಣ್ಣುಮಕ್ಕಳಿಗೆ ಬಳುವಳಿಯಾಗಿ ನೀಡಿದ. ಆ ಊರುಗಳಿಗೆ ಅನುಕ್ರಮವಾಗಿ ಚಿಕ್ಕ ಮಗಳ ಊರು ಮತ್ತು ಹಿರಿಯ ಮಗಳ ಊರು ಎಂದು ಹೆಸರುಗಳು ಬಂದುವು ಎಂದು ಪ್ರತೀತಿ. ಆದರೆ 9ನೆಯ ಶತಮಾನದಲ್ಲಿ ಗಂಗರು ನಿರ್ಮಿಸಿದರೆನ್ನಲಾದ ಕೋಟೆ ಇದ್ದ ಸ್ಥಳದಲ್ಲಿ ದೊರೆತಿರುವ ಶಾಸನದಲ್ಲಿ ಇದನ್ನು ಕಿರಿಯ ಮುಗುಳಿ ಎಂದು ಕರೆಯಲಾಗಿದೆ. ಮುಗುಳಿ ಎಂದರೆ ಒಂದು ಬಗೆಯ ಹೂ ಬಿಡುವ ಗಿಡ ಎಂಬ ಅರ್ಥವಿದೆ. ಒಂದು ಕಾಲಕ್ಕೆ ಇದು ಜೈನ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಚಿಕ್ಕಮಗಳೂರಿನ 1ನೆಯ ಶಾಸನದಲ್ಲಿ (1257) ಇದು ದೇವಳಿಗೆ ನಾಡಲ್ಲಿದ್ದಿತೆಂದೂ ಹೇಳಲಾಗಿದೆ. ಈ ಸ್ಥಳ ಹಿಂದೆಯೂ ಚಿಕ್ಕ ಪ್ರಾಂತ್ಯ ವಿಭಾಗದ ಮುಖ್ಯ ಕೇಂದ್ರವಾಗಿದ್ದಿರಬಹುದು. (ಡಿ.ಎಸ್.ಜೆ.)

**ಚಿಕ್ಕಯ್ಯ :** ಸು. 1160, ವಚನಕಾರ, ನಿಜಲಿಂಗ ಚಿಕ್ಕಯ್ಯನೆಂದೇ ಪ್ರಸಿದ್ಧನಾಗಿದ್ದಾನೆ. ಬಸವೇಶ್ವರನ ಸಮಕಾಲೀನನೆಂದು ಕಾಣುತ್ತದೆ. ಈತನ ವಚನಗಳಿಂದ ಕವಿಚರಿತೆಕಾರರು ಒಂದು ವಾರ್ಧಕ ಷಟ್ಪದಿಯನ್ನು ಉದ್ಧರಿಸಿದ್ದಾರೆ. ಈತ ರಾಘವಾಂಕನಿಗಿಂತ ಹಿಂದೆಯೇ ಇದ್ದನೆಂದು ಊಹಿಸಬಹುದು. ಸಿದ್ಧನಂಜೇಶನ ಹೇಳಿಕೆಯಂತೆ ರಾಘವಾಂಕನೇ ಷಟ್ಪದಿ ರಚನೆಯ ಮೊದಲಿಗನೆಂಬ ಮಾತು ಆಗ ಸುಳ್ಳಾಗುತ್ತದೆ. ಸದ್ಯಕ್ಕೆ ಷಟ್ಪದಿ ರಚನೆ ರಾಘವಾಂಕನಿಗಿಂತ ಹಿಂದೆ ಇದ್ದರೂ ಷಟ್ಪದಿಯಲ್ಲಿ ಗ್ರಂಥರಚನೆಯಾದುದು ರಾಘವಾಂಕನಿಂದ ಎಂಬ ಮಾತನ್ನು ಒಪ್ಪಬಹುದಾಗಿದೆ. ಈತ ಉಳಿಯುಮೇಶ್ವರ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ.

ಈತನ ಕಥೆ ಹೀಗಿದೆ : ಕಾಶ್ಮೀರ ದೇಶದ ಮಾಂಡವ್ಯಪುರದ ತನ್ನ ಅರಮನೆಯಿಂದ ಮೂರು ಸಾವಿರ ಚರಮೂರ್ತಿಗಳನ್ನು ಬಸವಣ್ಣ ಗುಪ್ತವಾಗಿ ಒಯ್ದನೆಂಬ ಕಾರಣದಿಂದ ಬಸವಣ್ಣನನ್ನು ರಹಸ್ಯವಾಗಿ ಕೊಂದುಬರುವಂತೆ ಇಬ್ಬರು ಭಟರನ್ನು ರಾಣಿ ಮಹಾದೇವಿ ಕಳುಹಿಸಿದಳು. ಕಪಟ ಜಂಗಮ ವೇಷದಿಂದಿದ್ದ ಆ ಭಟರು ಬಸವಣ್ಣನ ಕೃಪೆಗೆ ಪಾತ್ರರಾಗಿ ನಿಜಜಂಗಮರಾದರು. ಅವರಿಗೆ ಕ್ರಮವಾಗಿ ಚೋರಚಿಕ್ಕಯ್ಯ, ನಿಜಲಿಂಗ ಚಿಕ್ಕಯ್ಯ ಎಂದು ಹೆಸರಾಯಿತು. ನಿಜಲಿಂಗ ಚಿಕ್ಕಯ್ಯ ಓಲೆಗರಿಯನ್ನು ಮಾರುವ ಕಾಯಕ ನಡೆಸಿ ಗುರುಲಿಂಗಜಂಗಮ ಸೇವೆ ಮಾಡುತ್ತಿದ್ದ. ಒಮ್ಮೆ ಈತನನ್ನು ಗಂಗಯ್ಯನೆಂಬ ತಳವಾರ ಶಿವಪೂಜೆಗೆಂದು ಆಹ್ವಾನಿಸಿ, ರಾಜಕಾರ್ಯಕ್ಕಾಗಿ ಹೊರಗೆ ಹೋಗಿರಲು ಆತನ ಹೆಂಡತಿ ಚೆನ್ನಾಜಿ ಆ ಜಂಗಮನನ್ನು ಮೋಹಿಸಿ ರತಿಸುಖಕ್ಕೆ ಕರೆದಳು. ಆತನು ಒಪ್ಪದಿರಲು ಆತನ ಗಂಟಿನಲ್ಲಿ ತನ್ನ ಆಭರಣಗಳನ್ನಿಟ್ಟು ತನ್ನನ್ನು ಆತ ಕೆಡಸಬಂದನೆಂದೂ ಕಳ್ಳತನ ಮಾಡಿರುವನೆಂದೂ ಗಂಡನಿಗೆ ಚಾಡಿ ಹೇಳಿದಳು. ತನ್ನ ಮಾತನ್ನು ಗಂಡ ಒಪ್ಪದಿರಲು ದೂರನ್ನು ದೊರೆಯತನಕ ಒಯ್ದಳು. ಚಿಕ್ಕಯ್ಯನ ಗಂಟಿನಲ್ಲಿ ಆಕೆಯ ಆಭರಣಗಳಿದ್ದುದನ್ನು ಕಂಡ ದೊರೆ ಆತನ ತಲೆ ಕತ್ತರಿಸಲು ಆಜ್ಞಾಪಿಸಿದ. ಆದರೆ ಕತ್ತರಿಸಿದ ಚಿಕ್ಕಯ್ಯನ ತಲೆ ಆಕಾಶಕ್ಕೆ ನೆಗೆದು ಪಂಚಾಕ್ಷರಿಯನ್ನು ಜಪಿಸುತ್ತಿರಲು ಬಸವಣ್ಣ ಬಂದು ಆತನನ್ನು ಮತ್ತೆ ಬದುಕಿಸಿದ ಎಂಬುದಾಗಿ ಶಿವಶರಣರ ಪುರಾಣಗಳಿಂದ ತಿಳಿದುಬರುತ್ತದೆ.

ವಾರ್ಧಕ ಷಟ್ಪದಿಯಲ್ಲಿರುವ ಈತನ ಒಂದು ಪದ್ಯ:

ಭವಪಾಶಬಂಧದಿಂ ಬಿಗಿದು ಕವಿಲೆಯ ಹುಲಿಯ
ಗವಿಯೊಳಗೆ ಕಟ್ಟಿದಂತಾದೆ ಸಂಸಾರವೆಂ
ಬವಿಚಾರಸರ್ಪ ಸರ್ವಗ್ರಾಸಗೊಂಡುದಿದನೊಮ್ಮೆ ಪರಿಹರಿಸಿ ನಿಮ್ಮ
ಅವಿರಳ ಶ್ರೀಪಾದದೊಳು ಮಗ್ನನಾಗಿ ಮ
ತ್ತವಿಕಲ್ಪ ಸಮಸುಖಾನಂದದೊಳಗೆಂದಿಹೆನೊ
ಭವರಹಿತ ಪರಮೇಶ ಪಾಲಿಸೈ ಸದ್ಗುರುವೆ ಉಳಿಯುಮೇಶ್ವರಲಿಂಗವೇ

ಕವಿಚರಿತೆಕಾರರು ಈತನ ಮೂರು ವಚನಗಳು ಉಪಲಬ್ಧವೆಂದೂ ಫ.ಗು. ಹಳಕಟ್ಟಿಯವರು 15 ವಚನಗಳು ಉಪಲಬ್ಧವೆಂದೂ ಹೇಳುತ್ತಾರೆ. *

**ಚಿಕ್ಕೋಡಿ :** ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ವಾಯವ್ಯ ಭಾಗದ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಕಸಬೆ. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆ ಮತ್ತು ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಅಥಣಿ, ರಾಯಬಾಗ್, ಗೋಕಾಕ್ ಮತ್ತು ಹುಕ್ಕೇರಿ ತಾಲ್ಲೂಕುಗಳೂ ಈ ತಾಲ್ಲೂಕನ್ನು ಬಳಸಿವೆ. ವಿಸ್ತೀರ್ಣ ಸು. 840 ಚ.ಮೈ. ಇಲ್ಲಿ 141 ಹಳ್ಳಿಗಳಿವೆ. ಜನಸಂಖ್ಯೆ 5,61,671 (2001).

ಚಿಕ್ಕೋಡಿ ತಾಲ್ಲೂಕಿನ ಪಶ್ಚಿಮ ಭಾಗವನ್ನು ಮಲೆನಾಡಿನ ಸೆರಗೆಂದು ಕರೆಯುತ್ತಾರೆ. ಈ ತಾಲ್ಲೂಕಿನ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಗುಡ್ಡಗಳು ಬಹಳ. ಉಳಿದ ಭಾಗಗಳಲ್ಲಿ ಅಲ್ಲಲ್ಲಿ ಸಣ್ಣದೊಡ್ಡ ಗಿಡಗಳು ತುಂಬಿವೆ. ಮಧ್ಯಭಾಗ ಉಬ್ಬುಳ್ಳ ಪ್ರದೇಶ.

ತಾಲ್ಲೂಕಿನ ಬಹುಭಾಗವನ್ನು ಗುಡ್ಡಗಳು ಆವರಿಸಿದ್ದರೂ ಮುಖ್ಯವಾಗಿ ಪಶ್ಚಿಮದಿಂದ ಪೂರ್ವಕ್ಕೆ ಹಬ್ಬಿರುವ ಗುಡ್ಡಗಳ ಎರಡು ಸಾಲುಗಳನ್ನು ಕಾಣಬಹುದು. ಮೊದಲನೆಯ ಸಾಲು ಬೆಳಗಾವಿಯ ಪಶ್ಚಿಮದಲ್ಲಿ 24 ಕಿಮೀ ಗಳ ದೂರದಲ್ಲಿ ಆರಂಭವಾಗಿ ಘಟಪ್ರಭಾ-ಮಲಪ್ರಭಾ ನದಿಗಳ ಮಧ್ಯದಲ್ಲಿ ಪೂರ್ವ ಮೇರೆಯನ್ನು ದಾಟಿ ವಿಜಾಪುರ ಜಿಲ್ಲೆಯನ್ನು ಸೇರುತ್ತದೆ. ಎರಡನೆಯ ಸಾಲು ಸಾವಂತವಾಡಿಯ ಭಾಗದಲ್ಲಿ ಆರಂಭವಾಗಿ ಘಟಪ್ರಭಾ-ಕೃಷ್ಣಾ ಇವುಗಳ ಮಧ್ಯೆ ಪೂರ್ವಕ್ಕೆ ಸಾಗಿ ವಿಜಾಪುರ ಜಿಲ್ಲೆಯನ್ನು ಸೇರುತ್ತದೆ. ಈ ಗುಡ್ಡಗಳ ಮೇಲೆ ಕೆಲವು ಕಡೆ ಪುರಾತನ ಅವಶೇಷಗಳಿಂದ ಕೂಡಿದ ಹಾಳಾದ ಕೋಟೆಗಳನ್ನು ಕಂಡರೆ ಮತ್ತೆ ಕೆಲವು ಕಡೆ ಕಿರಿಅಡವಿಗಳು ಬೆಳೆದಿರುವುದನ್ನು ಕಾಣಬಹುದು. ಮತ್ತೆ ಕೆಲವು ಕಡೆ ಅಡಿಯಿಂದ ಮುಡಿಯವರೆಗೆ ನಾನಾ ಪ್ರಕಾರದ ಬೆಳೆಗಳು ಶೋಭಿಸುತ್ತವೆ.

ಚಿಕ್ಕೋಡಿಯ ನೆರೆಯಲ್ಲಿ ಅತ್ಯಂತ ಎತ್ತರದ ಗುಡ್ಡ ನಾಗರಾಳದ ಗುಡ್ಡ. ಇದಲ್ಲದೆ ಮಲ್ಲಪ್ಪನ ಗುಡ್ಡ, ಜೋಗಿಗುಡ್ಡ, ನಿರ್ವಾಣೆಪ್ಪನ ಗುಡ್ಡಗಳು ತಕ್ಕಮಟ್ಟಿಗೆ ಪ್ರಸಿದ್ಧಿ ಪಡೆದಿವೆ. ಇವುಗಳಲ್ಲೆಲ್ಲ ಹುಲ್ಲು, ಗೋದಿ, ಜೋಳಗಳು ಬೆಳೆಯುತ್ತವೆ.

ಕೃಷ್ಣಾನದಿ ಈ ತಾಲ್ಲೂಕಿನಲ್ಲಿ ದೂಧಗಂಗಾನದಿಯೊಡನೆ ಸಂಗಮಿಸಿ ಹರಿಯುತ್ತದೆ. ವೇದಗಂಗೆ ಸಹ್ಯಾದ್ರಿಯಲ್ಲಿ ಹುಟ್ಟಿ ಈ ತಾಲ್ಲೂಕಿನಲ್ಲಿ ಹರಿದು ಬೋಜದ ಹತ್ತಿರ ದೂಧಗಂಗೆಗೆ ಸೇರುತ್ತದೆ. ದೂಧಗಂಗೆಯೂ ಸಹ್ಯಾದ್ರಿಯಲ್ಲಿ ಹುಟ್ಟಿ ಈ ತಾಲ್ಲೂಕಿನಲ್ಲಿ ಹರಿದು ಕಲ್ಲೊಳ್ಳಿಯ ಹತ್ತಿರ ಕೃಷ್ಣೆಯನ್ನು ಸಂಗಮಿಸುತ್ತದೆ. ಈ ಹೊಳೆಗಳ ದಂಡೆಯ ಮೇಲಿನ ಭೂಮಿ ಹಾಗೂ ತಾಲ್ಲೂಕಿನ ಉತ್ತರ ಭಾಗದ ನೆಲ ಹೆಚ್ಚು ಫಲವತ್ತಾಗಿವೆ. ತಾಲ್ಲೂಕಿನ ಪಶ್ಚಿಮದಲ್ಲಿ ಕೆಂಪು ಮಣ್ಣಿದೆ. ಉಳಿದದ್ದೆಲ್ಲ ಕಪ್ಪು ಭೂಮಿ. ಉಸುಬು ಕೂಡಿದ ಕೆಂಪು ನೆಲ ಕಪ್ಪು ನೆಲದಷ್ಟು ಫಲವತ್ತಾಗಿಲ್ಲ.

ಚಿಕ್ಕೋಡಿ ತಾಲ್ಲೂಕಿನಲ್ಲಿ ನಿಯತವಾಗಿಯೂ ವಿಪುಲವಾಗಿಯೂ ಮಳೆ ಆಗುತ್ತದೆ. ಸರಾಸರಿ 508 ಮಿಮೀ. ಇಲ್ಲಿ ಮುಂಗಾರು ಮಳೆ ಸಾಮಾನ್ಯವಾಗಿ ಜೂನ್ 5ನೆಯ ದಿನಾಂಕ, ಆರಂಭವಾಗುತ್ತದೆ. ಅಧಿಕ ಮಳೆಯಿಂದಾಗಿ ಮಲೆನಾಡಿನ ಸೆರಗಿನಲ್ಲಿ ಆರ್ದ್ರತೆಯ ವಾಯುಗುಣ ಇರುತ್ತದೆ. ಈ ಆರ್ದ್ರ ಹವೆಯ ಪರಿಣಾಮವಾಗಿ ಅಲ್ಲಿ ಚಳಿಜ್ವರ, ಸನ್ನಿಪಾತ, ಅಜೀರ್ಣ, ವಿಷಮಜ್ವರ, ನೆಗಡಿ ಕೆಮ್ಮು ಮೊದಲಾದ ರೋಗಗಳ ಭಯವೂ ಬಹಳ.

ಹಳ್ಳಗಳಿಂದಲೂ ಕೆರೆಗಳಿಂದಲೂ ಬಾವಿಗಳಿಂದಲೂ ಕೆಲಮಟ್ಟಿಗೆ ಈ ತಾಲ್ಲೂಕಿನಲ್ಲಿ ನೀರನ್ನು ತೋಟಗಾರಿಕೆಗಾಗಿ ಉಪಯೋಗಿಸುತ್ತಾರೆ. ಇಂಥ ಹಳ್ಳಗಳಲ್ಲಿ ಕರೋಸಿ ಹಳ್ಳ ಮತ್ತು ನಿಪ್ಪಾಣಿ ಹಳ್ಳಗಳು ಪ್ರಮುಖವಾದವು. ಪ್ರತಿ 55 ಎಕರೆ ಸಾಗುವಳಿ ಭೂಮಿಗೆ ಒಂದರಂತೆ ಕೆರೆಗಳನ್ನು ಕಾಣಬಹುದು. ಬಾವಿಗಳೂ ಹೆಚ್ಚು ಸಂಖ್ಯೆಯಲ್ಲಿವೆ.

ಸಾಮಾನ್ಯವಾಗಿ ಇಲ್ಲಿ ಎರಡು ಫಸಲು ತೆಗೆಯುತ್ತಾರೆ. ಜೋಳ, ಸಜ್ಜೆ, ನವಣೆ, ಬತ್ತ, ಗೋದಿ, ಮೆಕ್ಕೆಜೋಳ, ಜವೆಗೋದಿ, ಹುರುಳಿ, ತಡೆಗುಣಿ, ಅಗಸೆ, ಉದ್ದು, ಎಳ್ಳು, ಹತ್ತಿ, ಪುಂಡಿ, ತಂಬಾಕು, ಮೆಣಸಿನಕಾಯಿ, ಕಬ್ಬು ಮುಖ್ಯ ಬೆಳೆಗಳು. ಬಯಲುಸೀಮೆಯಲ್ಲಿ ತೇಗ, ಚಂದನ, ಜಾಲಿ, ಈಚಲು, ಕಳ್ಳಿ, ಮುಳ್ಳುಗಳ್ಳಿ, ಬೇವು, ಬಸಿರೆ, ಹುಣಸೆ, ಅರಳೆ, ಮಾವು, ಮಸಿವಾಳ, ಹುಲಗಲಿ, ದಿಂಡಲ, ಅತ್ತಿ, ಬಣವರಿ ಮುಂತಾದ ಗಿಡಗಳನ್ನು ಕಾಣಬಹುದು. ಇವುಗಳಲ್ಲದೆ ಕಿರುಜಾತಿಯ ಗಿಡಗಳಾದ ಹೊನ್ನಾವರಿಕೆ, ಮದುಗುಣಕೆ, ಮೊದಲಾದವನ್ನು ನೋಡಬಹುದು. ನೀರಿನ ಸೌಕರ್ಯ ತಕ್ಕಮಟ್ಟಿಗೆ ಇರುವುದರಿಂದ ಎಲೆಬಳ್ಳಿ, ಬಾಳೆ, ತರಕಾರಿಗಳೂ ಇಲ್ಲಿ ವಿಶೇಷವಾಗಿ ಬೆಳೆಯುತ್ತವೆ.

ಇಲ್ಲಿ ಎತ್ತು, ಆಕಳು, ಎಮ್ಮೆ, ಕೋಣ, ಕುರಿ, ಕುದುರೆಗಳನ್ನು ಹೆಚ್ಚಾಗಿ ಸಾಕುತ್ತಾರೆ. ಅವುಗಳಿಂದ ಲಾಭವೂ ಉಂಟು. ಅಡವಿಗಳಲ್ಲಿ ಹಂದಿ, ಮೊಲ, ನರಿ, ಚಿರತೆ, ಕತ್ತೆಕಿರುಬ, ಅಡವಿಬೆಕ್ಕು ಮೊದಲಾದ ಪ್ರಾಣಿಗಳಿವೆ.

ಈ ಪ್ರದೇಶದಲ್ಲಿ ಹಬ್ಬಿರುವ ಗುಡ್ಡಗಳ ಒರೆಯಲ್ಲಿ ಚಿನ್ನದ ಮಣ್ಣು ದೊರೆಯುತ್ತದೆ. ಆದರೆ ಪರಿಶ್ರಮಕ್ಕೆ ತಕ್ಕಂತೆ ಅದರಿಂದ ಲಾಭ ಕಡಿಮೆ. ಈ ಭಾಗದಲ್ಲಿ ಹರಿಯುವ ಕೃಷ್ಣಾನದಿಯ ಪ್ರವಾಹದಲ್ಲಿ ಗೋಮೇದಿಕವೆಂಬ ಬೆಲೆಬಾಳುವ ಹರಳುಗಳು ದೊರೆಯುತ್ತವೆ. ಸರವು ಎಂಬಲ್ಲಿ ಕಾಗೆಬಂಗಾರದ ನಿಕ್ಷೇಪಗಳಿವೆ.

ತಾಲ್ಲೂಕಿನ ಮುಖ್ಯ ಉದ್ಯೋಗ ಒಕ್ಕಲುತನ. ಕಬ್ಬನ್ನು ಹೆಚ್ಚಾಗಿ ಬೆಳೆಯುವುದರಿಂದ ಬೆಲ್ಲ ಹಾಗೂ ಸಕ್ಕರೆಗಳನ್ನು ಮಾಡುವ ಉದ್ಯಮಗಳೂ ಸಾಕಷ್ಟು ಪ್ರಗತಿಸಾಧಿಸಿವೆ. ತಾಮ್ರ ಹಾಗೂ ಹಿತ್ತಾಳೆಯ ಸಾಮಾನುಗಳ ಕೈಗಾರಿಕೆಯೂ ಉಂಟು. ಸೀರೆ, ಕುಪ್ಪಸ, ರುಮಾಲು, ಹಚ್ಚಡ ಮೊದಲಾದವುಗಳನ್ನು ನೇಯುವ ಉದ್ಯಮವನ್ನು ಇನ್ನೂ ಬೆಳೆಸಲು ಅವಕಾಶಗಳಿವೆ. ಬಂಗಾರದ ಆಭರಣಗಳಲ್ಲಿ ರತ್ನಗಳನ್ನು ಕೂಡಿಸುವ ಉದ್ಯಮ ಜನಪ್ರಿಯವಾಗಿದೆ. ಈ ಕೆಲವು ಉದ್ಯಮಗಳನ್ನು ಬಿಟ್ಟರೆ ಸಾಮಾನ್ಯವಾಗಿ ಎಲ್ಲ ಕಡೆಯೂ ಇರುವಂತೆ ಇಲ್ಲೂ ಬಡಿಗತನ, ಕಮ್ಮಾರಿಕೆ, ಚಮ್ಮಾರಿಕೆ, ಉಪ್ಪಾರಿಕೆ, ಗಾಣಿಗತನ ಮೊದಲಾದ ಉದ್ಯೋಗಗಳು ಉಳಿದುಬಂದಿವೆ. ಒಕ್ಕಲುತನವನ್ನು ಬಿಟ್ಟರೆ ಎರಡನೆಯ ಪ್ರಮುಖ ಉದ್ಯೋಗವೆಂದರೆ ವ್ಯಾಪಾರ. ಹತ್ತಿ, ಬೆಲ್ಲ, ತಂಬಾಕು, ಮೆಣಸಿನ ಕಾಯಿ ನಿಪ್ಪಾಣಿಯಿಂದ ಕೊಂಕಣ, ಕಲಾದಗಿ, ಪುಣೆ ಮೊದಲಾದ ಕಡೆಗಳಿಗೆ ನಿರ್ಯಾತವಾಗುತ್ತವೆ. ಏಲಕ್ಕಿ ಮೆಣಸುಗಳು ಕೊಂಕಣದಿಂದ ಆಯಾತವಾಗುವ ವಸ್ತುಗಳಲ್ಲಿ ಪ್ರಮುಖವಾದವು.

ತಾಲ್ಲೂಕಿನಲ್ಲಿ 19 ಹಳ್ಳಿಗಳಿವೆ. ಇಲ್ಲಿ ಕನ್ನಡ ಭಾಷೆಯನ್ನು ಆಡುವವರ ಸಂಖ್ಯೆಯೇ ಹೆಚ್ಚು. ಮರಾಠಿ ಮತ್ತು ಉರ್ದು ಆಡುವವರು ಅತ್ಯಲ್ಪ ಸಂಖ್ಯಾತರು.

ಚಿಕ್ಕೋಡಿಯ ಪ್ರಮುಖ ಹಾಗೂ ಐತಿಹಾಸಿಕ ಸ್ಥಳಗಳು ಇವು:

1 ಅಕ್ಕೀವತ: ಇದು ಚಿಕ್ಕೋಡಿಯ ನೈರುತ್ಯಕ್ಕೆ, ಸಮುದ್ರಪಾತಳಿಯಿಂದ 695ಮೀ. ಎತ್ತರದಲ್ಲಿ, ಅಳಿದುಳಿದ ಕೋಟೆಕೊತ್ತಲಗಳಿಂದ ಗತವೈಭವವನ್ನು ಎತ್ತಿ ತೋರಿಸುವ ಊರು. 1777 ರಲ್ಲಿ ತಾಸಗಾವಿಯ ಪರಶುರಾಮ ಭಾವೂ ಇದನ್ನು ಗೆದ್ದ. 1827'ರಲ್ಲಿ ಕೊಲ್ಲಾಪುರದವರಿಂದ ಆಗಿನ ಸರ್ಕಾರ ಈ ಊರನ್ನು ಪಡೆಯಿತು.

2 ಭೋಜ : ಚಿಕ್ಕೋಡಿಯ ವಾಯವ್ಯಕ್ಕೆ ಸಮುದ್ರಪಾತಳಿಯಿಂದ 568 ಮೀ. ಎತ್ತರದಲ್ಲಿದೆ. ಇಲ್ಲಿ ಸವದತ್ತಿಯ ರಟ್ಟರ ಒಂದು ಶಾಸನವಿದೆ.

3 ಚಿಕ್ಕೋಡಿ : ತಾಲ್ಲೂಕಿನ ಮುಖ್ಯಸ್ಥಳ. ಉ.ಅ. $16^0$25', ಪೂ.ರೇ. $74^0$.38' ಮೇಲೆ ಜಿಲ್ಲಾ ಮುಖ್ಯಸ್ಥಳವಾದ ಬೆಳಗಾವಿಯಿಂದ 64 ಕಿಮೀ ಅಂತರದಲ್ಲಿ. ಸಮುದ್ರಪಾತಲಿಯಿಂದ 638 ಮೀ. ಎತ್ತರದಲ್ಲಿದೆ. ಜನಸಂಖ್ಯೆ 32,820 (2001). ಗುಡ್ಡಗಳ ಸಾಲುಗಳ ಮಧ್ಯದಲ್ಲಿರುವ ಈ ಪಟ್ಟಣದ ಸುತ್ತಲೂ ಮಣ್ಣಿನ ಕೋಟೆಯ ಗೋಡೆಗಳಿವೆ. ಊರಿನಿಂದ ದೂರದಲ್ಲಿ ಕೃಷ್ಣಾ ನದಿ ಹರಿಯುತ್ತದೆ. ಈ ಸ್ಥಳ ಮೊದಲು ಕೊಲ್ಲಾಪುರ ಸಂಸ್ಥಾನಕ್ಕೆ ಸೇರಿತ್ತು. ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳ ತಯಾರಿಕೆ, ಆಭರಣಗಳ ತಯಾರಿಕೆ, ನೇಯ್ಗೆ–ಇವು ಇಲ್ಲಿಯ ಕಸಬುಗಳು. 1680ರಲ್ಲಿ ಈ ಊರು ಸಾಕಷ್ಟು ಪ್ರಸಿದ್ಧಿ ಪಡೆದಿತ್ತೆಂದೂ ಅಕ್ಕಿ, ಬೇಳೆ, ಮೆಣಸಿನಕಾಯಿ, ತಂಬಾಕು, ಕಿರಾಣಿ ಸಾಮಾನುಗಳ ವ್ಯಾಪಾರ ವಿಶೇಷವಾಗಿ ನಡೆಯುತ್ತಿತ್ತೆಂದೂ ಬಟ್ಟೆಗಳೂ ಕಂಬಳಿಗಳೂ ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳೂ ಸಿದ್ಧವಾಗುತ್ತಿದ್ದುವೆಂದೂ ಒಬ್ಬ ಪ್ರವಾಸಿ ಬರೆದಿಟ್ಟ ದಾಖಲೆಗಳಿವೆ. 1720ರಲ್ಲಿ ಕ್ಯಾಪ್ಟನ್ ಮೂರ್ ಎಂಬುವನು ಈ ಊರನ್ನು ಬಹಳ ಅಭಿಮಾನದಿಂದ ಹೊಗಳಿದ್ದಾನೆ. ಆತ ಇಲ್ಲಿ ಗುರುವಾರ ಸಂತೆಯೆಂದೂ, ಇದು ಒಂದು ಮುಖ್ಯ ವ್ಯಾಪಾರ ಸ್ಥಳವೆಂದೂ ಇಲ್ಲಿಯ ನೇಯ್ಗೆಯ ಕೆಲಸ ಗಮನಾರ್ಹವೆಂದೂ ಜನರೂ ಗೌರವಾಭಿಮಾನಿಗಳೆಂದೂ ಬಣ್ಣಿಸಿ, ಈ ಊರಿನ ಸುತ್ತೆಲ್ಲ ಕಣ್ಣಿಗೆ ಅಂದವಾಗಿ ನಾಲಗೆಗೆ ರುಚಿಯಾಗಿರುವ ದ್ರಾಕ್ಷಿಯ ತೋಟಗಳು ಸಾಕಷ್ಟಿವೆಯೆಂದೂ ಅವು ಬಹಳ ಪ್ರಸಿದ್ಧವಾದವೆಂದೂ ಹೇಳಿದ್ದಾನೆ. ಇತ್ತೀಚೆಗೆ ಇಲ್ಲಿಯ ಜನರ ಅಭ್ಯುದಯಕ್ಕಾಗಿ ಕಾಲೇಜೊಂದನ್ನು ಆರಂಭಿಸಲಾಗಿದೆ. ಇಲ್ಲಿ ಪೌರಸಭೆಯಿದೆ.

4 ಕಬ್ಬೂರು : ಚಿಕ್ಕೋಡಿಯ ದಕ್ಷಿಣಕ್ಕೆ 12 ಕಿಮೀ ಅಂತರದಲ್ಲಿ ಸಮುದ್ರಪಾತಳಿಯಿಂದ 618 ಮೀ. ಎತ್ತರದಲ್ಲಿದೆ. ಇದೊಂದು ರೈಲ್ವೆ ನಿಲ್ದಾಣ. ಇಲ್ಲಿ ಸುಮಾರು 50ಕ್ಕೂ ಹೆಚ್ಚು ತೋಟಗಳಿವೆ. ಇಲ್ಲಿಯ ಈಶ್ವರ ದೇವಾಲಯದಲ್ಲಿ ಒಂದು ಶಾಸನವಿದೆ.

5 ಕರೋಸಿ : ಚಿಕ್ಕೋಡಿಯಿಂದ 6.5 ಕಿಮೀ ದೂರದಲ್ಲಿ ಸಮುದ್ರಪಾತಳಿಯಿಂದ 695 ಮೀ. ಎತ್ತರದಲ್ಲಿದೆ. ಪ್ರತಿವರ್ಷ ಈ ಊರಿನಲ್ಲಿ ಶ್ರಾವಣ ಮಾಸದ ಸಮಯಕ್ಕೆ ಗಂಟೆ ಬಸವನ ಜಾತ್ರೆ ನಡೆಯುತ್ತದೆ.

6 ಕೊಂಗನೊಳ್ಳಿ : ಚಿಕ್ಕೋಡಿಯ ವಾಯವ್ಯಕ್ಕೆ 35 ಕಿಮೀ ದೂರದಲ್ಲಿದೆ. ಇಲ್ಲಿ ಗುರುವಾರ ಸಂತೆ ನೆರೆದು, ಅಕ್ಕಿ, ಸಕ್ಕರೆ, ಉಪ್ಪು, ಬಟ್ಟೆ, ಕಂಬಳಿಗಳ ವ್ಯಾಪಾರ ಸಾಗುತ್ತದೆ. ಇಲ್ಲಿ 1877ಕ್ಕೂ ಮೊದಲು ಕಾಗದವನ್ನು ಮಾಡುವ ಕಾರ್ಖಾನೆಗಳಿದ್ದುವೆಂದು ತಿಳಿದುಬರುತ್ತದೆ. ಇಲ್ಲಿ ಒಂದು ಹಾಳು ಕಿಲ್ಲೆಯೂ ಇದೆ.

7 ನಿಪ್ಪಾಣಿ : ಚಿಕ್ಕೋಡಿಯ ಪಶ್ಚಿಮಕ್ಕೆ 24 ಕಿಮೀ ದೂರದಲ್ಲಿದೆ. ತಾಲ್ಲೂಕಿನ ಬಹು ದೊಡ್ಡ ವ್ಯಾಪಾರಕೇಂದ್ರ. ನಗರಪಾಲಿಕೆ, ಧರ್ಮಶಾಲೆ, ಗ್ರಂಥಭಂಡಾರ, ಕಾಲೇಜುಗಳಿಂದ ಕೂಡಿ ಪ್ರಗತಿಹೊಂದಿದೆ. ಜನಸಂಖ್ಯೆ 58,061 (2001). ಇಲ್ಲಿ ಅಕ್ಕಿ, ಅಡಕೆ, ಏಲಕ್ಕಿ, ಕಿರಾಣಿ, ಸಕ್ಕರೆ, ಕಾಳು, ವಸ್ತ್ರ, ಪಾತ್ರೆಗಳ ವ್ಯಾಪಾರ ಹೆಚ್ಚು. ತಂಬಾಕಿನ ವ್ಯಾಪಾರಕ್ಕೆ ಈ ಊರಿನ ಮಾರುಕಟ್ಟೆ ಹೆಸರುವಾಸಿ. ದನಗಳ ವ್ಯಾಪಾರಕ್ಕೂ ಇದು ಪ್ರಸಿದ್ಧವಾಗಿದೆ. ಊರು ಪ್ರಸಿದ್ಧಿಗೆ ಬರಲು ದೇಸಾಯಿ ಸಿದೋಜಿರಾವ್ ಅಪ್ಪಾಸಾಹೇಬ ನಿಂಬಾಳಕರ್ ಎಂಬವನು ಕಾರಣನೆಂದು ಹೇಳಲಾಗಿದೆ. 1812ರಲ್ಲಿ ಪ್ರೆಸಿಡೆಂಟನಾಗಿದ್ದ ಎಲ್ ಫಿನ್ ಸ್ಟನ್ ಸಾಹೇಬನ ಮಧ್ಯಸ್ಥಿಕೆಯಿಂದ ಕೊಲ್ಲಾಪುರುದ ಅರಸಮನಗೋಳಿ ಮತ್ತು ಚಿಕ್ಕೋಡಿ ಪರಗಣೆಗಳನ್ನು ಪುನ: ತೆಗೆದುಕೊಂಡು ಕೊಲ್ಲಾಪುರದ ಅರಸನಿಗೆ ಕೊಟ್ಟರು. 1839ರಲ್ಲಿ ಅಪ್ಪಾಸಾಹೇಬ ಮರಣ ಹೊಂದಿದಾಗ ಬ್ರಿಟಿಷ್ ಸರ್ಕಾರ ಅವನ ಮೊದಲಿನ 15000ದ ದೇಸಗತಿಯನ್ನು ಬಿಟ್ಟು ಉಳಿದ ಸೀಮೆಯನ್ನೆಲ್ಲ ತನ್ನ ವಶಕ್ಕೆ ತೆಗೆದುಕೊಂಡಿತು. ನಿಪ್ಪಾಣಿ ಸಮುದ್ರಪಾತಳಿಯಿಂದ 697 ಮೀ. ಎತ್ತರದಲ್ಲಿದೆ. ವ್ಯಾಪಾರದ ದೃಷ್ಟಿಯಿಂದ ಉಜ್ವಲ ಭವಿಷ್ಯವುಳ್ಳ ಊರಿದು.

8 ಯಮಕನ ಮರಡಿ : ಚಿಕ್ಕೋಡಿಯ ದಕ್ಷಿಣಕ್ಕೆ 32 ಕಿಮೀ ದೂರದ ಒಂದು ಹಳೆಯ ಕಾಲದ ಕೋಟೆಯಿಂದ ಕೂಡಿರುವ ಊರು. ಇಲ್ಲಿ ಕಾಳು, ವಸ್ತ್ರ, ತೆಂಗು, ಉತ್ತತ್ತಿ ಮೊದಲಾದ ಸರಕುಗಳ ವ್ಯಾಪಾರ ನಡೆಯುತ್ತದೆ. ಇಲ್ಲಿ ಮಂಗಳವಾರ ಸಂತೆ ಕೂಡುತ್ತದೆ.

9 ಎಡೂರು: ಕೃಷ್ಣಾ ನದಿಯ ದಂಡೆಯ ಮೇಲೆ ಚಿಕ್ಕೋಡಿಯ ಈಶಾನ್ಯಕ್ಕೆ 12 ಕಿಮೀ ಅಂತರದಲ್ಲಿದೆ. ಪ್ರತಿ ವರ್ಷ ಇಲ್ಲಿ ಶಿವರಾತ್ರಿಯ ಕಾಲಕ್ಕೆ ಒಂದು ತಿಂಗಳ ಕಾಲ ವೀರಭದ್ರದೇವರ ಜಾತ್ರೆ ಜರಗುತ್ತದೆ. ಇದೊಂದು ಪುಣ್ಯಕ್ಷೇತ್ರವೆಂದು ಪರಿಗಣಿತವಾಗಿದೆ.

ಅಂಕಲಿ, ಬಂಬಲವಾಡ, ಬೆಡಕಿಹಾಳ, ಬೆಳಕೂಡ, ಬೋರಗಾವ, ಚಿಂಚಣಿ, ಗಳತಿಗಿ, ಹತ್ತರವಾಟ, ಹಿರೇಕೋಡಿ, ಕಲ್ಲೋಳ, ಕೆರೂರ, ನಾಗರಮನೋಳಿ, ಸದಲಗಿ, ಎಕ್ಸಂಬ, ಮಾಂಜರಿ, ಶಮನೇವಾಡಿ, ಕರಗಾವ–ಇವು ಈ ತಾಲ್ಲೂಕಿನ ಇನ್ನು ಕೆಲವು ಮುಖ್ಯ ಊರುಗಳು. (ವಿ.ಕೆ.ಯುಎಸ್.)

**ಚಿಗಟ :** ಸೈಫೋನಾಪ್ಟರ ಶ್ರೇಣಿಗೆ ಸೇರಿದ ಕೀಟಗಳ ಗುಂಪಿಗೆ ಬಳಸುವ ಸಾಮಾನ್ಯ ಹೆಸರು (ಆಂಗ್ಲಭಾಷೆಯಲ್ಲಿ ಫ್ಲೀ). ಇವು ಮಾನವನ ಹಲವು ಸಾಂಕ್ರಾಮಿಕ ರೋಗಗಳ ಪ್ರಸಾರಕ್ಕೆ ವಾಹಕಗಳಾಗಿರುವುದರಿಂದಲೂ ಪ್ರಾಣಿಗಳ ಮತ್ತು ಮಾನವನ ದೇಹಕ್ಕೆ ಉಪಟಳವೆನಿಸುವ ಪಿಡುಗುಗಳಾಗಿರುವುದರಿಂದಲೂ ಇವಕ್ಕೆ ಆರ್ಥಿಕ ಪ್ರಾಮುಖ್ಯ ಉಂಟು. ಪ್ರೌಢಜೀವಿಗಳು ಪಕ್ಷಿಗಳ ಮತ್ತು ಸ್ತನಿಗಳ ರಕ್ತವನ್ನು ಹೀರಿ ಜೀವಿಸುತ್ತವೆ. ಇವುಗಳ ಡಿಂಭಗಳು ಹಕ್ಕಿಗಳ ಗೂಡುಗಳಲ್ಲೊ ಸ್ತನಿಗಳ ವಾಸಸ್ಥಳಗಳಲ್ಲೊ ಇರುವುವಾದರೂ ಅವುಗಳ ಮೇಲೆ ಅವಲಂಬಿಸಿಲ್ಲ. ಚಿಗಟ ಬಹು ಸಣ್ಣ ಕೀಟ; ಅತಿದೊಡ್ಡದೆಂದರೆ 1/4" ಉದ್ದವಿದೆ ಅಷ್ಟೆ. ಇದರ ದೇಹ ಬಲು ಹಗುರವಾಗಿದೆ. ಕೆನ್ನೆಯ ಎರಡು ಕಡೆಯಲ್ಲೂ ಒಂದು ಇಲ್ಲವೆ ಹೆಚ್ಚು ಮುಳ್ಳುಹಣಿಗೆಗಳಿವೆ. ಚಿಗಟದ ಕಾಲುಗಳು ಚೆನ್ನಾಗಿ, ದೃಢವಾಗಿ, ರೂಪುಗೊಂಡಿವೆ. ಇವು ಬಲಯುತವಾಗಿರುವುದರಿಂದ ಚಿಗಟ ಒಂದು ಸಲಕ್ಕೆ 13" ನಷ್ಟು ದೂರ ಜಿಗಿಯಬಲ್ಲದು. ರೆಕ್ಕೆಗಳಿಲ್ಲ. ಬಾಯಿಯ ಉಪಾಂಗಗಳು ಆಶ್ರಯಜೀವಿಯ ಚರ್ಮವನ್ನು ಚುಚ್ಚಿ ರಕ್ತಹೀರಲು ಅನುಕೂಲಿಸುವಂತೆ ಮಾರ್ಪಟ್ಟಿವೆ. ಮೇಲಿನ ಎರಡು ಜೋಡುದವಡೆಗಳು ಲೇಬ್ರಮ್ ಎಂಬ ನಿಡಿದಾದ ತುಟಿಯೊಡನೆ ಸೇರಿಕೊಂಡು ಚುಚ್ಚುವ

ಕೊಕ್ಕಿನಂತೆ ರೂಪುಗೊಂಡಿವೆ. ಜೋಡುದವಡೆಗಳು ಉದ್ದವಾಗಿದ್ದು ಹಲ್ಲುಗಳನ್ನೊಳಗೊಂಡು ಗರಗಸದ ಅಲಗುಗಳಂತಿವೆ; ತಲೆಯಲ್ಲಿ ಇನ್ನೂ ಹಲವು ಉಪಾಂಗಗಳಿವೆ. ಸರಳ ಕಣ್ಣುಗಳು, ದಪ್ಪವಾದ ಹಾಗೂ ಮೋಟಾದ ಸ್ಪರ್ಶಾಂಗಗಳು ಇವೆ. ಕೆಲವು ಜಾತಿಯ ಚಿಗಟಗಳಲ್ಲಿ ಕಣ್ಣು ಕ್ಷೀಣಿಸಿರಬಹುದು ಅಥವಾ ಇಲ್ಲದೆಯೂ ಇರಬಹುದು.



**ಎಡಗಡೆಯದು ಫ್ಯೂಲೆಕ್ಸ್ ಇರಿಟನ್ಸ್ ಚಿಗಟ; ಬಲಗಡೆಯದು ನೋಸೋಫಿಲಸ್ ಫ್ಯಾಸಿಯೇಟಸ್ ಚಿಗಟ (ಪ್ಲೇಗ್ ಚಿಗಟ)**

ಗರ್ಭಧರಿಸಿದ ಒಂದೊಂದು ಹೆಣ್ಣುಚಿಗಟ ಆಶ್ರಯದಾತ ಜೀವಿಯ ಗರಿಗಳ ಅಥವಾ ರೋಮಗಳ ನಡುವೆ ಕೆನೆಬಣ್ಣದ ನೂರಾರು ಮೊಟ್ಟೆಗಳನ್ನು ಇಡುತ್ತದೆ. ಅವು ಆಶ್ರಯದಾತ ಜೀವಿಯ ಗೂಡುಗಳಲ್ಲಿ ಅಥವಾ ವಾಸಿಸುವ ಸ್ಥಳಗಳಲ್ಲಿ ಉದುರಿ ಬೀಳುತ್ತವೆ. ಮೊಟ್ಟೆಯೊಡೆದಾಗ ಹೊರಬರುವ ಅಪಕ್ವಾವಸ್ಥೆಯ ಮರಿಗಳು ಆಶ್ರಯದಾತ ಜೀವಿಯ ದೇಹಕ್ಕೆ ಸುಲಭವಾಗಿ ಸೇರಿಕೊಳ್ಳಲು ಇದರಿಂದ ಅನುಕೂಲ. ಮೊಟ್ಟೆಗಳು ಒಡೆದು ಹಳದಿ ಬಣ್ಣದ ಕಂಬಳಿಹುಳುವಿನಂಥ ಮರಿಗಳು ಹೊರಬಂದು ಅಲ್ಲಿರುವ ಸಾವಯವ ಕಸದಲ್ಲಿ ಸೇರುತ್ತವೆ. ಕೆಲವು ದಿನಗಳ ಅನಂತರ ಮರಿಗಳು ತಮ್ಮ ಸುತ್ತ ರೇಷ್ಮೆಗೂಡನ್ನು ರಚಿಸಿಕೊಂಡು ಕೋಶಾವಸ್ಥೆಯನ್ನು ಸೇರಿ ಮುಂದೆ ರೂಪಪರಿವರ್ತನೆ ಹೊಂದಿ ಪ್ರೌಢಚಿಗಟಗಳಾಗುತ್ತವೆ. ಈ ಜೀವನಚಕ್ರ ಪೂರ್ಣಗೊಳ್ಳಲು ಬೇಕಾಗುವ ಅವಧಿ ಬೇರೆಬೇರೆ ಜಾತಿಯ ಚಿಗಟಗಳಲ್ಲಿ ಬೇರೆಬೇರೆಯಾಗಿರುತ್ತದೆ. ಹದಿನೇಳು ದಿನಗಳಿಂದ ಹಿಡಿದು ಒಂದು ವರ್ಷದವರೆಗೆ ಇದು ವ್ಯತ್ಯಾಸವಾಗಬಹುದು.

ಚಿಗಟಗಳ ಪ್ರಭೇದಗಳ ಸಂಖ್ಯೆ ಅಪಾರ. ಉತ್ತರ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಪ್ರದೇಶಗಳಲ್ಲೇ 209 ಪ್ರಭೇದಗಳೂ 63 ಉಪಪ್ರಭೇದಗಳೂ ಬೆಳಕಿಗೆ ಬಂದಿವೆ. ಪ್ರಪಂಚದ ಇನ್ನುಳಿದ ಭಾಗಗಳಲ್ಲಿರಬಹುದಾದ ಪ್ರಭೇದಗಳ ಸಂಖ್ಯೆಯನ್ನು ನಿಶ್ಚಯಿಸುವುದು ಕಷ್ಟ. ಸುಮಾರು 500 ಪ್ರಭೇದಗಳಿರಬಹುದೆಂದು ಕೆಲವರ ಅಂದಾಜು. ಇವುಗಳಲ್ಲಿ ಕೆಲವು ಮಾತ್ರ ಮಾನವನ ಪಿಡುಗಾಗಿ ಅವನ ದೇಹವನ್ನು ಆಶ್ರಯಿಸುತ್ತವೆ. ಮಿಕ್ಕವು ಪಕ್ಷಿಗಳನ್ನೂ ವನ್ಯಸ್ತನಿಗಳನ್ನೂ ಆಶ್ರಯಿಸುತ್ತವೆ. ಅದರಲ್ಲೂ ಕೆಲವು ಜಾತಿಯ ಪಕ್ಷಿ ಅಥವಾ ಪ್ರಾಣಿಗಳಲ್ಲಿರುವುದು ಅವಕ್ಕೆ ತುಂಬ ಇಷ್ಟ. ಆದರೆ ಕೆಲವು ಪ್ರಭೇದಗಳು ತಮ್ಮ ಮೆಚ್ಚಿನ ಆಶ್ರಯದಾತ ಜೀವಿ ದೊರೆಯದಾಗ ಮಾನವನನ್ನು ಆಶ್ರಯಿಸುವುವು. ಅಂಥ ಚಿಗಟಗಳು ಮಾನವರಲ್ಲಿ ಕೆಲವು ಉಗ್ರ ಸಾಂಕ್ರಾಮಿಕ ರೋಗಗಳನ್ನು ಹರಡುವುದುಂಟು.

ಇಲಿಗಳಲ್ಲಿ ಕಾಣಿಸಿಕೊಳ್ಳುವ ಗೆಡ್ಡೆ ಪ್ಲೇಗು ಮತ್ತು ಮ್ಯೂರೈನ್ ಟೈಫಸ್ ಮುಂತಾದ ಅಂಟುರೋಗಗಳನ್ನು ಚಿಗಟಗಳು ಮಾನವರಿಗೂ ಹರಡುತ್ತವೆ. ಸೀನೋಫಿಲ ಕಿಯೋಪಿನ್ ಎಂಬ ಪ್ರಭೇದದ ಚಿಗಟಗಳು ಪೌರಸ್ತ್ಯದೇಶಗಳ ಇಲಿಗಳಲ್ಲೂ ನೋಸೋಫಿಲಸ್ ಫ್ಯಾಸಿಯೇಟಸ್ ಎಂಬ ಪ್ರಭೇದದ ಚಿಗಟಗಳು ಯೂರೋಪಿನ ಇಲಿಗಳಲ್ಲೂ ಪರಾವಲಂಬಿಗಳಾಗಿ ಜೀವಿಸುತ್ತವೆ. ಮೊದಲ ಪ್ರಭೇದ ಪ್ರಪಂಚದ ಎಲ್ಲೆಡೆಗಳಲ್ಲೂ ಜೀವಿಸುವುದಾದರೂ ಉಷ್ಣಪ್ರದೇಶಗಳಲ್ಲಿ ಹೆಚ್ಚು. ಇದು ಮಾನವನನ್ನು ನಿರಾಯಾಸವಾಗಿ ನಿರರ್ಗಳವಾಗಿ ಕಡಿಯುತ್ತಿರುವುದರಿಂದ ರೋಗವನ್ನು ವ್ಯಾಪಕವಾಗಿ ಹರಡುತ್ತದೆ. ಇಲಿಗಳಂತೆ ಅಳಿಲು, ಮೊಲ ಮುಂತಾದ ದಂಶಕಗಳಿಗೂ ಪ್ಲೇಗು ಅಂಟುತ್ತದೆ. ಅವುಗಳಲ್ಲಿರುವ ರೋಗವನ್ನು ಒಂದು ಪ್ರಾಣಿಯಿಂದ ಇನ್ನೊಂದು ಪ್ರಾಣಿಗೆ ಹರಡುವುದರ ಮೂಲಕ ರೋಗಾಣುಗಳು ತಮ್ಮ ಸಂತತಿಯನ್ನು ಮುಂದುವರಿಸಲು ಚಿಗಟಗಳು ಸಹಾಯಮಾಡುತ್ತವೆ. ಆದ್ದರಿಂದ ಇವುಗಳ ಉಪಟಳವನ್ನು ತಡೆಯಲು ಮೇಲಿನ ಆಶ್ರಯದಾತ ಪ್ರಾಣಿಗಳನ್ನು ನಿಯಂತ್ರಿಸಬೇಕಾಗುತ್ತದೆ. ಅವಕ್ಕೆ ವಿಷಹಾಕುವುದು, ಅವು ವಾಸಿಸುವ ಬಿಲಗಳಿಗೆ ವಿಷಾನಿಲವನ್ನು ತುಂಬುವುದು, ಅವು ಬಿಲಮಾಡಿಕೊಂಡು ಜೀವಿಸಲು ವಾಸದ ಮನೆಗಳ ಬಳಿ ಅವಕಾಶವಿರದಂತೆ ಕಾಂಕ್ರೀಟ್ ನೆಲ ಏರ್ಪಡಿಸುವುದು ಮುಂತಾದ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ.

ಚಿಗಟಗಳು ಉಗ್ರರೀತಿಯ ಸಾಂಕ್ರಾಮಿಕ ರೋಗಗಳನ್ನು ಹರಡುವುದರ ಜೊತೆಗೆ ಮಾನವನ ದಿನನಿತ್ಯದ ಪಿಡುಗಾಗಿಯೂ ತೊಂದರೆ ಕೊಡುತ್ತವೆ. ಟೀನೊಸಿಫ್ಯಾಲಿಡೀಸ್ ಕ್ಯಾನಿಸ್ ಎಂಬ ಹೆಸರಿನ ನಾಯಿ ಚಿಗಟ, ಟೀನೊಸಿಫ್ಯಾಲಿಡೀಸ್ ಫೀಲಿಸ್ ಎಂಬ ಬೆಕ್ಕಿನ ಚಿಗಟ, ಪ್ಯೂಲೆಕ್ಸ್ ಇರಿಟನ್ಸ್ ಎಂಬ ಮಾನವನ ಚಿಗಟ–ಈ ಮೂರು ಪ್ರಭೇದಗಳು ಮಾನವನಿಗೆ ಕೆಲವೆಡೆ ತೀವ್ರರೀತಿಯ ಪಿಡುಗಾಗಿ ಪರಿಣಮಿಸುತ್ತವೆ. ಚಿಗಟ ಅಂಟಿದ ಪ್ರಾಣಿಗಳನ್ನು ಸಾಯಿಸುವುದರಿಂದಲೂ ಮೊಟ್ಟೆಯೊಡೆದು ಬರುವ ಮರಿ ಮತ್ತು ಕೋಶಾವಸ್ಥೆಗಳನ್ನು ನಾಶಮಾಡುವುದರಿಂದಲೂ ಚಿಗಟಗಳ ಹಾವಳಿಯನ್ನು ಕಡಿಮೆ ಮಾಡಬಹುದು. ಮನುಷ್ಯನ ವಾಸದ ಮನೆಯ ಬಳಿ ಜೀವಿಸುವ ಅಥವಾ ಓಡಾಡುವ ಪ್ರಾಣಿಗಳ ದೇಹದಲ್ಲಿ ಅವು ಕಂಡುಬಂದರೆ ಅಂಥ ಪ್ರಾಣಿಗಳ ಮೈಮೇಲೆ ವಾರಕ್ಕೊಮ್ಮೆ ಕೀಟನಾಶಕ ಪುಡಿಯನ್ನು ಹಾಕಿ ಉಜ್ಜುವುದರಿಂದ ಚಿಗಟಗಳು ನಾಶವಾಗುತ್ತವೆ. ಮನೆಯ ಬಳಿ ಕಸಕಡ್ಡಿಗಳ ದೂಳು ತುಂಬಿರುವ ಕೊಟ್ಟಿಗೆ ಮತ್ತು ಸಂದಿಗೊಂದಿಗಳಲ್ಲಿ ಚಿಗಟಗಳಿದ್ದರೆ ಕ್ರಿಯೊಸೋಟ್ ಎಣ್ಣೆ ಚಿಮುಕಿಸಬಹುದು. ಅದನ್ನು ಉಪಯೋಗಿಸುವುದು ಹಿತವೆನಿಸದಿದ್ದರೆ ನ್ಯಾಫ್ಥಲೀನ್ ಪುಡಿಯನ್ನು ನೆಲದ ಮೇಲೆ ಹರಡಬಹುದು.

ಎಕಿಡ್ನಾಫೆಗಾ ಗ್ಯಾಲಿನೇಸೀ ಪ್ರಭೇದದ ಚಿಗಟ ನಮ್ಮ ಕಾಲ್ನಡೆಗಳಿಗೆ ತೀರ ಮಾರಕವೆನಿಸುವುದು. ಇದು ಆಶ್ರಯದಾತ ಪ್ರಾಣಿಯ ಚರ್ಮಕ್ಕೆ ಬಲವಾಗಿ ಕಚ್ಚಿಕೊಂಡಿರುತ್ತದೆ. ಈ ಕಾರಣದಿಂದ ಇದನ್ನು "ಸ್ಟಿಕ್ ಟೈಟ್" ಚಿಗಟ ಎಂದೂ ಕರೆಯುವುದುಂಟು. ಇದು ಕೋಳಿಗಳ ದೇಹಕ್ಕೆ ಅಂಟಿ ಅವುಗಳ ಸಾಮೂಹಿಕ ಹನನಕ್ಕೆ ಕಾರಣವೆನಿಸುತ್ತದೆ. ನಾಯಿ, ಬೆಕ್ಕು ಮತ್ತು ಮಾನವನಲ್ಲೂ ಇದು ಕಾಣುವುದುಂಟು. ಡೆರಿಸ್ ಪುಡಿಯನ್ನೋ ಕಾರ್ಬೋಲೇಟೆಡ್ ವ್ಯಾಸಲೀನನ್ನೋ ಹಚ್ಚಿಕೊಳ್ಳುವುದರಿಂದ ಇವನ್ನು ನಿವಾರಿಸಬಹುದು. ಚಿಗಟಗಳ ಕಡಿತ ಮಾನವನಿಗೆ ಅಂಥ ತೀವ್ರವಾದ ನೋವನ್ನುಂಟುಮಾಡುವುದಿಲ್ಲ. ಆದರೆ ಉರಿಯಾಗುತ್ತದೆ. ಮೆಂಥಲೇಟೆಡ್ ಅಥವಾ ಕಾರ್ಬೋಲೇಟೆಡ್ ವ್ಯಾಸಲೀನನ್ನು ಹಚ್ಚುವುದರಿಂದ ಉರಿಯನ್ನು ನಿವಾರಿಸಬಹುದು. (ಎನ್.ಎಸ್.ವಿ.)

**ಚಿಗಟೇರಿ :** ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಸಬೆಯಿಂದ 13ಕಿಮೀ ಪೂರ್ವಕ್ಕಿರುವ ಒಂದು ಗ್ರಾಮ. ಈ ಗ್ರಾಮ ಹಿಂದೆ ಚಿನ್ನ ತೊಳೆಯುವ ಕೆಲಸಕ್ಕೆ ಪ್ರಸಿದ್ಧವಾಗಿತ್ತು. ಇಲ್ಲಿರುವ ಜಾಜಿಕಲ್ ಗುಡ್ಡ ಎಂಬ ಚಿಕ್ಕ ಬೆಟ್ಟದ ದಕ್ಷಿಣ ಮತ್ತು ಆಗ್ನೇಯದ ಪಾರ್ಶ್ವಗಳಲ್ಲಿ ಇರುವ ಚಿನ್ನದಿಂದ ಕೂಡಿದ ಬೆಣಚು ಕಲ್ಲುಗಳೇ ಇಲ್ಲಿ ದೊರೆಯುವ ಚಿನ್ನಕ್ಕೆ ಮೂಲವೆಂದು ತಿಳಿಯುತ್ತದೆ. ಅದರಂತೆ ಚಿನ್ನದಿಂದ ಕೂಡಿದ ಚೆಂಗುಳು ಎಂಬಲ್ಲಿನ ಚಿಗಟೇರಿ ಮೇಲಣ ನಾಲಾ, ಚಿಗಟೇರಿ ಹಳ್ಳಿಯ ಪಶ್ಚಿಮದಲ್ಲಿ ವಾಯವ್ಯಕ್ಕೆ ಇರುವ ಒಂದು ಚಿಕ್ಕತೊರೆ, ಬೋವಿಹಳ್ಳಿ ನಾಲಾ ಎಂದು ಕರೆಯುವ ಒಂದು ತೊರೆ ಮತ್ತು ಜಾಜಿಕಲ್ ಗುಡ್ಡದ ಈಶಾನ್ಯದ ಇಳಿಜಾರಿನಲ್ಲಿ ಹರಿಯುವ ಕೊಂಗನಹೊಸೂರು ನಾಲೆ ಇವುಗಳಲ್ಲಿ ಜರುಗು ಚಿನ್ನಕ್ಕಾಗಿ ಶೋಧಿಸುವುದುಂಟು. ಇವುಗಳಲ್ಲಿ ಕೊಂಗನ ಹೊಸೂರು ನಾಲೆ ಹೆಚ್ಚು ಫಲದಾಯಕ, ಉಳಿದವು ಉತ್ತಮವೆಂಬುದು ಬ್ರೂಸ್‌ಫುಟ್ ಎಂಬ ಭೂವಿಜ್ಞಾನಿಯ ಅಭಿಪ್ರಾಯ. (ಐ.)

**ಚಿಗರೆ :** ನೋಡಿ – ಜಿಂಕೆ

**ಚಿಚೇನ್ – ಇಟ್ಸಾ :** ಮೆಕ್ಸಿಕೋದ ಒಂದು ಹಳ್ಳಿ, ವ್ಯಾಲಡೊಲಿಡ್‌ನ ಪಶ್ಚಿಮಕ್ಕೆ ಯೂಕಟಾನ್ ರಾಜ್ಯದಲ್ಲಿ, ಪ.ರೇ $88^0$ 30' ಮತ್ತು ಉ.ಅ. $20^0$ 30' ಮೇಲಿದೆ. ಅಲ್ಲಿ ಇದೇ ಹೆಸರಿನ ಪುರಾತನ ಮಾಯ ನಗರದ ಅವಶೇಷಗಳಿವೆ. ಚಿಚೇನ್–ಇಟ್ಸಾದ ಸುತ್ತಣ ಪ್ರದೇಶ ಸುಣ್ಣಕಲ್ಲಿನ ನೆಲ. ನೆಲದ ಅಡಿಯಲ್ಲಿ ನೀರಿನ ವಸತಿಯಿದೆ. ಸುಣ್ಣಕಲ್ಲಿನ ಕವಚ ಕುಸಿದು ಬಿದ್ದಿರುವ ಕೆಲವು ಎಡೆಗಳಲ್ಲಿ ಮಾತ್ರ ನೀರು ಮೇಲಕ್ಕೆ ಹರಿಯುತ್ತದೆ.

**ಚಿಚೇನ್–ಇಟ್ಸಾದಲ್ಲಿಯ ಕ್ಯಾಸ್ಟಿಲೊ ದೇವಾಲಯದ ಸ್ಥಳದಲ್ಲಿರುವ ಕಲ್ಲಿನ ಸರ್ಪಗಳು**

ಇದನ್ನು ಆ ಪ್ರದೇಶದಲ್ಲಿದ್ದ ಮಾಯ ಜನ ಸೆನೋಟ್ ಎಂದು ಕರೆದಿದ್ದಾರೆ. ಎರಡು ದೊಡ್ಡ ಸೆನೋಟ್‌ಗಳಿದ್ದ ಸ್ಥಳದಲ್ಲಿ ನಗರ ಸ್ಥಾಪಿತವಾಗಿತ್ತು. ಅಲ್ಲಿ ಮೊದಲು ನೆಲಸಿದ್ದ ಮಾಯನ್ ಗುಂಪಿನ ಹೆಸರು ಇಟ್ಸಾ. ಮಾಯನ್ ಭಾಷೆಯಲ್ಲಿ ಚಿಚೇನ್ ಎಂದರೆ ಬಾವಿಗಳ (ಚೇನ್) ಬಾಯಿಗಳು (ಚಿ). 530ಕ್ಕಿಂತ ಮುಂಚೆ ಸ್ಥಾಪಿತವಾದ ಈ ನಗರ ಮೊದಲ ಒಂದು ಶತಮಾನ ಕಾಲ ಮಾಯ ನಾಗರಿಕತೆಯ ಪ್ರದೇಶದ ಅಂಚಾಗಿತ್ತು. ಹಳೆಯ ಮಾಯ ಸಾಮ್ರಾಜ್ಯ ಇದಕ್ಕೆ ದಕ್ಷಿಣದಲ್ಲಿ ಪ್ರವರ್ಧಮಾನ ಸ್ಥಿತಿಯಲ್ಲಿತ್ತು. ಒಂದು

ಶತಮಾನದ ಅನಂತರ ದಕ್ಷಿಣದ ಹಳೆಯ ಮಾಯ ನಗರಗಳನ್ನು ತ್ಯಜಿಸಿದಾಗ ಇಟ್ಸಾ ಗುಂಪಿನ ಜನರು ಚಿಚೇನ್–ಇಟ್ಸಾವನ್ನು ತಾತ್ಕಾಲಿಕವಾಗಿ ತ್ಯಜಿಸಿ (668), ಪಶ್ಚಿಮಕ್ಕೆ ಹೋಗಿ, ಈಗಿನ ಕ್ಯಾಂಪೀಚೆಯ ದಕ್ಷಿಣದಲ್ಲಿ ಚಾಕನ್‌ಪುಟನ್ ನಗರವನ್ನು ಸ್ಥಾಪಿಸಿದರು. ಇದು 944ರಲ್ಲಿ ಅಗ್ನಿಗೆ ಆಹುತಿಯಾಯಿತು. ಇಟ್ಸಾ ಗುಂಪಿನ ಪುರೋಹಿತರು ತಮ್ಮ ಜನರನ್ನು ಮತ್ತೆ ಚಿಚೇನ್–ಇಟ್ಸಾಗೆ ಕರೆದುಕೊಂಡು ಹೋದರು; ಅಲ್ಲಿ ಮತ್ತೆ ತಮ್ಮ ದೇಗುಲಗಳನ್ನು ಕಟ್ಟಿದರು. ಹೊಸ ಸಾಮ್ರಾಜ್ಯ ಸ್ಥಾಪನೆಯ ಕಾಲವದು. ಆಗ ಮಾಯ ಸಂಸ್ಕೃತಿಯ ಪುನರುಜ್ಜೀವನವಾಯಿತು. ಅನೇಕ ನಗರಗಳು ಬೆಳೆದವು. ಪ್ರ.ಶ. 11–13ನೆಯ ಶತಮಾನಗಳಲ್ಲಿ ಈ ಸಂಸ್ಕೃತಿ ಉಚ್ಛ್ರಾಯಸ್ಥಿತಿಯಲ್ಲಿತ್ತು. ಚಿಚೇನ್ – ಇಟ್ಸಾ ಆಗ ಒಂದು ದೊಡ್ಡ ನಗರವೂ ದೇವಾಲಯಗಳ ಬೀಡೂ ಮಾಯ ಸಂಸ್ಕೃತಿಯ ಕೇಂದ್ರವೂ ಆಗಿತ್ತು. ಅಲ್ಲಿರುವ ಅತ್ಯಂತ ಭವ್ಯ ಸ್ಮಾರಕಗಳಲ್ಲಿ ಎಲ್ ಕಾಸ್ಟಿಲೊ ಮತ್ತು ಹುಲಿ ದೇವಾಲಯಗಳು, ಕರಕೋಲ್ ಎಂಬ ಖಗೋಳವೀಕ್ಷಣಸ್ತಂಭ, ಸಾವಿರ ಕಂಬಗಳ ಸಭಾಂಗಣ (ಬಹುಶಃ ಹಿಂದಿನ ಸಂತೆಕಟ್ಟೆ) ಮತ್ತು ಬಾವಿ ಮುಖ್ಯವಾದವು. ಬಾವಿಗಳಿಗೆ ಮಾಯನ್ ಜನರು ಯುವತಿಯರನ್ನು ಬಲಿಕೊಡುತ್ತಿದ್ದರು. ಸ್ಪಾನಿಷರ ಆಕ್ರಮಣದಿಂದ ಮಾಯ ಸಂಸ್ಕೃತಿಯ ಈ ನಗರ ಹಾಳಾಯಿತು. (ಎ.ಎಸ್‌ಯು.)

**ಚಿಟ್ ಮೇಳ :** ಕನ್ನಡ ನಾಡಿನ ಜನಪದ ವಾದ್ಯಮೇಳಗಳಲ್ಲಿ ಒಂದು. ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ, ಮುಖ್ಯವಾಗಿ ಹಾಸನ ಜಿಲ್ಲೆಯಲ್ಲಿ ಬಳಕೆಯಲ್ಲಿದೆ. ಉತ್ತರ ಕರ್ನಾಟಕದ ಕರಡಿ ಮಜಲು ಮೇಳವನ್ನು ಇದು ಹೋಲುತ್ತದೆ. ಕಿರಿದು, ಚಿಕ್ಕದು ಎಂಬ ಅರ್ಥದಲ್ಲಿ ಚಿಟ್ ಶಬ್ದದ ಬಳಕೆ. ಕರಡಿ ಮಜಲಿಗಿಂತ ಇದು ಚಿಕ್ಕದು ಎಂದು ಸಾಧಿಸಲು ಆಧಾರ ಸಾಲದು. ಏಕೆಂದರೆ ಕರಡಿ ಮಜಲಿಗೆ ಸಂವಾದಿಯಾಗಿ

ಚಿಟ್ ಮೇಳ : ಹಾಸನ ಜಿಲ್ಲೆಯ ಹಾರ್ನಹಳ್ಳಿಯ ವಾದ್ಯದ ಚೆಲುವಯ್ಯ ಮತ್ತು ಸಂಗಡಿಗರು

ಅಷ್ಟೇ ಮಂದಿ ಭಾಗವಹಿಸುವ ಮೇಳವಿದು. ಇದರಲ್ಲಿ ಯಕ್ಷಗಾನ ಗೀತೆಗಳನ್ನು ವಿಶೇಷವಾಗಿ ನುಡಿಸಲಾಗುತ್ತದೆ. ಕರಡಿವಾದ್ಯವನ್ನು ಸೊಂಟಕ್ಕೆ ಕಟ್ಟಿಕೊಂಡು ಇಬ್ಬರು ಅದನ್ನು ಬಡಿಯುತ್ತ ಹಾಡಿನ ಗತಿಗೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ನರ್ತಿಸುತ್ತಾರೆ. ಅವರ ನಡುವೆ ಒಬ್ಬ ಸಮೇಳವನ್ನೂ ಮತ್ತೊಬ್ಬ ಜಲ್ಲರಿಯನ್ನೂ ಬಡಿಯುತ್ತ ನರ್ತಿಸುತ್ತಾರೆ. ಶ್ರುತಿ ಮತ್ತು ನಾಗಸ್ವರ ವಾದ್ಯಗಳನ್ನು ಊದುವವರು ಮಾತ್ರ ನರ್ತಿಸುವುದಿಲ್ಲ. ಬಯಲಾಟದ ಭಾಗವತರಂತೆ ಅವರಿಬ್ಬರೂ ಹಿಂಬದಿಯಲ್ಲಿ ನಿಂತು ನೃತ್ಯಕ್ಕೆ ಬೇಕಾದ ಗೀತೆಯನ್ನು ವಾದ್ಯಗಳಿಂದ ಒದಗಿಸುತ್ತಾರೆ. ಸಾಹಿತ್ಯ, ಸಂಗೀತ, ನೃತ್ಯ ಎಲ್ಲವೂ ಇರುವುದು ಯಕ್ಷಗಾನ ಬಯಲಾಟ ಎನಿಸಿಕೊಳ್ಳುತ್ತದೆ. ಇಂಥ ದೊಡ್ಡ ಮೇಳದ ಸಂಗೀತ ಭಾಗವನ್ನು ವಾದ್ಯ ಹಾಗೂ ನೃತ್ಯಗಳಲ್ಲಿ ಮಾತ್ರ ಅನುಕರಿಸುವುದು ಚಿಕ್ಕ ಮೇಳ ಅಥವಾ ಚಿಟ್ ಮೇಳ.

ನಿಲುವಂಗಿ, ವೀರಗಾಸೆ, ನಡುಪಟ್ಟಿ ಹಾಗೂ ಬಿಳಿಯ ರುಮಾಲು ಚಿಟ್ ಮೇಳದ ಕಲಾವಿದರ ಸಾಮಾನ್ಯ ಉಡುಪು. ಯಕ್ಷಗಾನದ ಎಲ್ಲ ಮಟ್ಟುಗಳನ್ನೂ ನಾಗಸ್ವರದಲ್ಲಿ ಮುಮ್ಮೇಳಗಾರ ತರುತ್ತಾನೆ. ತಾಳವನ್ನು ಅನುಸರಿಸಿ ಉಳಿದವರು ಹೆಜ್ಜೆ ಹಾಕುತ್ತಾರೆ. ಜನಪದ ಗೀತೆಗಳ ಮೂಲದ ಮಟ್ಟುಗಳನ್ನು ಹಿಡಿದು ವಾದ್ಯವನ್ನು ನುಡಿಸುವುದೂ ಉಂಟು. ನಾಗಸ್ವರ ಊದುವವನೇ ಇಲ್ಲಿ ಸೂತ್ರಧಾರ. ಉಳಿದವರು ಅವನ ನಾದದಂತೆ ನರ್ತಿಸುವುದು ಮಾತ್ರ. ಆದರೆ ಕರಡಿ, ಸಮೇಳಗಳನ್ನು ನಡುವಿಗೆ ಕಟ್ಟಿಕೊಂಡು ಅವನ್ನು ಕಿವಿಬಿರಿಯುವಂತೆ ಬಡಿಯುತ್ತ ಕುಣಿಯುವ ಚಳಕ ಆಶ್ಚರ್ಯಕರವಾದುದು. ಕರಡಿ ಮಜಲಿಗಿಂತಲೂ ವೇಷಕಟ್ಟಿ ಕುಣಿಯುವ ಬಯಲಾಟಕ್ಕಿಂತಲೂ ಚಿಟ್ ಮೇಳ ಅತ್ಯಂತ ಆಕರ್ಷಕ. ಜನಪದ ವಾದ್ಯಸಂಗೀತ ಹಿರಿಮೆಯನ್ನು ಸಾರುವ ವಿಶಿಷ್ಟ ಕಲೆ ಇದರಲ್ಲುಳಿದು ಬಂದಿದೆ. ಚಿಟ್ ಮೇಳ ಹಬ್ಬಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ನಡೆಯುತ್ತದೆ. ಗ್ರಾಮ ದೇವತೆಯ ಹಬ್ಬದಲ್ಲಿ ಸಮಗ್ರ ರಾತ್ರಿ ಜನರ ಆಸಕ್ತಿಯನ್ನು ಹಿಡಿದಿಡುವ ಆಕರ್ಷಣೆ ಈ ಮೇಳಕ್ಕಿದೆ. ಕುಣಿತದವರಲ್ಲಿ ಕುರುಬ ಜನಾಂಗದವರು ಹೆಚ್ಚಾಗಿ ಕಂಡುಬಂದಿದ್ದಾರೆ. ನಾಗಸ್ವರ, ಶ್ರುತಿಗಳಿಗೆ ಇತರರನ್ನೂ ಸೇರಿಸಿಕೊಳ್ಳಲಾಗುತ್ತದೆ. ಹಾಸನ ಜಿಲ್ಲೆಯ ಹಾರ್ನಳ್ಳಿಯ ಮೇಳ ತುಂಬ ಜನಪ್ರಿಯವಾದುದು. ತಿಪಟೂರು ತಾಲ್ಲೂಕು ಮತ್ತಿಹಳ್ಳಿಯಲ್ಲೂ ಮೇಳದ ಒಂದು ತಂಡವಿದೆ. ಈ ಮೇಳದ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆ ನಡೆಯಬೇಕಾಗಿದೆ. (ಜಿ.ಎಸ್.ಪಿ.)

**ಚಿಟ್ಟಾಣಿ ರಾಮಚಂದ್ರ ಹೆಗಡೆ :** (1935–) ಚಿಟ್ಟಾಣಿ ಎಂಬ ಮೂರಕ್ಷರದ ಶಬ್ದಕ್ಕೆ ಯಕ್ಷಗಾನ ವಲಯದಲ್ಲಿ ಚೆಂಡೆ ಮದ್ದಳೆಗಳ ನಿನಾದಕ್ಕಿಂತಲೂ ಹೆಚ್ಚು ಶಕ್ತಿಯಿದೆ. ಬಡಗುತಿಟ್ಟಿನ ಯಕ್ಷಗಾನ ಪ್ರಪಂಚದ ಮೇರು ನಟರಾದ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ನೃತ್ಯ ಮತ್ತು ಅಭಿನಯಕ್ಕೆ ಪರ್ಯಾಯ ಹೆಸರು. ಶಿಕ್ಷಣ, ವ್ಯವಸ್ಥಿತ ಕಲಿಕೆ, ಆನುವಂಶೀಯತೆಗಳಿಲ್ಲದೆ ಕೇವಲ ಸ್ವಂತ ಪರಿಶ್ರಮದಿಂದ ಮೂಡಿ ಬಂದವರು. ಕೆಲವು ಪಾತ್ರಗಳಿಗೆ ಅವರೇ ಅನಿವಾರ್ಯವೆಂದೆನಿಸುವಷ್ಟು ಜನಮಾನಸದಲ್ಲಿ ನೆಲೆ ನಿಂತ ಪ್ರತಿಭಾವಂತರು. ವಿಶೇಷವಾಗಿ ಶೃಂಗಾರರಸದ ಅಭಿವ್ಯಕ್ತಿಯಲ್ಲಂತೂ ಹೊಸ ಇತಿಹಾಸವನ್ನೇ ಬರೆದ ಅಪ್ರತಿಮ ಕಲಾವಿದ, ಕೀಚಕ, ಭಸ್ಮಾಸುರ, ಸಾಲ್ವ, ಕಾರ್ತವೀರ್ಯ, ಕೌರವ ಮುಂತಾದ ಪಾತ್ರಗಳ ರಂಗವೈಭವದಲ್ಲಿ ಮೆರೆದು ಅರ್ಧಶತಮಾನಕ್ಕೂ ಹೆಚ್ಚು ಕಾಲ ಯಕ್ಷಗಾನ ರಂಗಭೂಮಿಯನ್ನು ಆಳಿದ ನಟ ಸಾಮ್ರಾಟರು ಅವರು. ರಂಗಪ್ರವೇಶದಿಂದ ತೊಡಗಿ ಕೊನೆಯ ದೃಶ್ಯದವರೆಗೂ ಒಂದೇ ರೀತಿ ರಂಗವನ್ನು ಜೀವಂತವಾಗಿರಿಸಬಲ್ಲ ರಸ ಚೈತನ್ಯ ಅವರದು. ಮಿಂಚುನಡೆ, ಅದ್ಭುತ ಲಯಸಿದ್ಧಿ, ಆಕರ್ಷಕ ನೃತ್ಯಗಳಿಂದ ಪರಂಪರೆ ಮತ್ತು ಹೊಸತನಗಳನ್ನು ಏಕಕಾಲದಲ್ಲಿ ಮೊಗೆಮೊಗೆದು ಕೊಡಬಲ್ಲ ಪ್ರತಿಭೆ. ಎಪ್ಪತ್ತರ ಇಳಿಹರೆಯದಲ್ಲಿ ದಣಿವರಿಯದ ಕಲಾಸೃಷ್ಟಿಯ ಅದಮ್ಯ ಶಕ್ತಿ ಅವರದು.

ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಸಾಮಾನ್ಯ ಬಡಕುಟುಂಬವೊಂದರಲ್ಲಿ 18ನೆಯ ಸೆಪ್ಟೆಂಬರ್ 1935ರಂದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಹೊಸಕುಳಿ ಎಂಬಲ್ಲಿ ಜನಿಸಿದರು. ತಂದೆ ಸುಬ್ರಾಯ ಹೆಗಡೆ, ತಾಯಿ ಗಣಪಿ ಅಮ್ಮ. ಚಿಕ್ಕಂದಿನಲ್ಲೇ ಆ ಕಾಲದ ಮಹಾನ್ ಯಕ್ಷಗಾನ ಕಲಾವಿದರಾದ ಮೂಡ್ಕಣಿ ನಾರಾಯಣ ಹೆಗಡೆ, ಕೊಂಡದಕುಳಿ ರಾಮ ಹೆಗಡೆ, ಕೆರೆಮನೆ ಶಿವರಾಮ ಹೆಗಡೆ ಮೊದಲಾದವರ ವೇಷ ವೈಭವಕ್ಕೆ ಮನಸೋತು ತಾನೂ ವೇಷಧಾರಿಯಾಗಬೇಕೆಂಬ ಕನಸು ಕಂಡರು. ಪುರೋಹಿತ ವಂಶದ ಅವರ ಮನೆಯಲ್ಲಿ ಯಕ್ಷಗಾನವೆಂದರೆ ತುಸು ಮೈಲಿಗೆಯೇ. ಶಾಲೆಗೆ ಹೋಗುವುದನ್ನು ಬಿಟ್ಟು ಗೇರುಗುಡ್ಡದ ಮೇಲೆ ಯಕ್ಷಗಾನ ಕುಣಿತಕ್ಕೆ ಮೊದಲು ಮಾಡಿದ ಬಾಲಕ ಚಿಟ್ಟಾಣಿಯನ್ನು ಅವರ ಅಧ್ಯಾಪಕ ಕರ್ಕಿ ಭಟ್ಟ ಮಾಸ್ತರರು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಇದರ ಫಲವಾಗಿ ಬಾಲಕ ಚಿಟ್ಟಾಣಿಗೆ ಬಾಳೆಗದ್ದೆ ಮೇಳದಲ್ಲಿ ಅಗ್ನಿಯ ವೇಷ ಮಾಡುವ ಅವಕಾಶ ಒದಗಿ ಬಂತು. ಅನಂತರ ಮೂಡ್ಕಣಿ ಮೇಳದಲ್ಲಿ ಅಭಿಮನ್ಯುವಿನ ಪಾತ್ರ ಮಾಡಿ ಜನಮನ ಸೆಳೆದರು. ಗುಂಡಬಾಳಾ ಮುಖ್ಯಪ್ರಾಣನ ಸನ್ನಿಧಿಯಲ್ಲಿ ಗೆಜ್ಜೆ ಕಟ್ಟಿದ ಮೇಲಂತೂ ಹದಿಹರೆಯದ ಚಿಟ್ಟಾಣಿ ಬೇಡಿಕೆಯ ಕಲಾವಿದರಾಗಿ ಮೂಡಿಬಂದರು. ಮೂರೂರು ಮೇಳದಲ್ಲಿ ಅಭಿಮನ್ಯುವಿನ ಪಾತ್ರ ಮಾಡಿ ಜನಮನ ಸೆಳೆದರು. ಮೂರೂರು ಮೇಳದಲ್ಲಿ ಒಮ್ಮೆ 'ಭೋಜ ಕಾಳಿದಾಸ' ಪ್ರಸಂಗದ ಕಲಾಧರನ ಪಾತ್ರ ನಿರ್ವಹಿಸಿ ಅತ್ಯಂತ ಪ್ರಸಿದ್ಧಿಯನ್ನು ಪಡೆದರು. ಅನಂತರ ಎಷ್ಟೋ ಕಾಲದವರೆಗೆ ಅವರನ್ನು 'ಕಲಾಧರ ಹೆಗಡೆ' ಎಂದೇ ಜನ ಗುರುತಿಸುವಂತಾಯಿತು. ಹೀಗೆ ಆರಂಭವಾದ ಅವರ ವೃತ್ತಿಜೀವನ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಹತ್ತಾರು ಮೇಳಗಳಲ್ಲಿ ಮುಂದುವರಿಯಿತು. ಮೂರೂರು ಮೇಳ (1957), ಗುಂಡಬಾಳಾ ಮೇಳ (1962), ಇಡಗುಂಜಿ ಮೇಳ (1965), ಕೊಳಗಿಬೀಸ್ ಮೇಳ (1967), ಅಮೃತೇಶ್ವರ ಮೇಳ, ಪಂಚಲಿಂಗೇಶ್ವರ ಮೇಳ (1984), ಸಾಲಿಗ್ರಾಮ ಮೇಳ, ಬಚ್ಚಗಾರ ಮೇಳ (1989), ಮಾರಿಕಾಂಬಾ ಮೇಳ, ಪೆರ್ಡೂರ ಮೇಳ–ಹೀಗೆ ಚಿಟ್ಟಾಣಿಯವರ ವೃತ್ತಿಮೇಳದ ವ್ಯವಸಾಯ ಐದು ದಶಕಗಳ ಕಾಲಾವಧಿಯನ್ನು ದಾಟಿ ನಿಂತಿದೆ. ಈಗಲೂ ಅವರು ಸಕ್ರಿಯರಾಗಿ ತಮ್ಮ ಮಗನೇ ನಡೆಸುತ್ತಿರುವ 'ಬಂಗಾರಮಕ್ಕಿ' ಎಂಬ ಮೇಳದಲ್ಲಿ ಕಲಾವ್ಯವಸಾಯ ನಡೆಸುತ್ತಿದ್ದಾರೆ. ಅವರ ಇಬ್ಬರು ಗಂಡುಮಕ್ಕಳಾದ ನರಸಿಂಹ ಚಿಟ್ಟಾಣಿ ಮತ್ತು ಸುಬ್ರಹ್ಮಣ್ಯ ಚಿಟ್ಟಾಣಿ ಯಕ್ಷಗಾನದ ಉತ್ತಮ ವೇಷಧಾರಿಗಳಾಗಿ ಗೇರುಸೊಪ್ಪ ಹತ್ತಿರದ ಅಳ್ಳಂಕಿಯ ಗುಡ್ಡೆಕೆರೆಯಲ್ಲಿ ವಾಸವಾಗಿದ್ದಾರೆ.

ಚಿಟ್ಟಾಣಿಯವರ ಪಾತ್ರಸೃಷ್ಟಿ ಅನನ್ಯವಾದುದು. ಅವರು ನಿರ್ವಹಿಸುವ ಪಾತ್ರಗಳಲ್ಲಿ ಚಿಟ್ಟಾಣಿತನವೆಂಬುದು ಮೇಳೈಸಿರುತ್ತದೆ. ದಿ. ಕೆರೆಮನೆ ಶಿವರಾಮ ಹೆಗಡೆಯವರ ಬಳಿಕ ರಂಗಪ್ರವೇಶದಲ್ಲೇ ವಿದ್ಯುತ್ ಸಂಚಾರವನ್ನುಂಟು ಮಾಡಿ ಪ್ರೇಕ್ಷಕರ ಹೃದಯಕ್ಕೆ ಲಗ್ಗೆಯಿಡುವ ಸಾಮರ್ಥ್ಯವಿರುವುದು ಚಿಟ್ಟಾಣಿಯವರಲ್ಲಿ ಮಾತ್ರ. ಗದಾಯುದ್ಧದ ಕೌರವ, ಭೀಷ್ಮ,

ವಿಜಯದ ಸಾಲ್ವ, ಚಂದ್ರಾವಳೀವಿಲಾಸದ ಕೃಷ್ಣ, ಚಂದ್ರಹಾಸಚರಿತ್ರೆಯ ದುಷ್ಟಬುದ್ಧಿ ಅವರ ಸ್ವೋಪಜ್ಞ ಸೃಷ್ಟಿ. ಜರಾಸಂಧ, ಕೀಚಕ, ಭಸ್ಮಾಸುರ, ಕಾರ್ತವೀರ್ಯ ಮುಂತಾದ ಪಾತ್ರನಿರ್ಮಿತಿಗಳಲ್ಲಿ ಅವರ ಸಾಧನೆ ಗಮನಾರ್ಹವಾದುದು. ಬಡಾಬಡಗುತಿಟ್ಟು ಎಂದು ಹೇಳಲಾಗುವ ಉತ್ತರ ಕನ್ನಡ ಪರಂಪರೆಯಲ್ಲಿ ದಿ. ಮೂಡ್ಕಣಿ ನಾರಾಯಣ ಹೆಗಡೆ ಮತ್ತು ದಿ. ಕೆರೆಮನೆ ಶಿವರಾಮ ಹೆಗಡೆಯವರ ಹಸ್ತಾಭಿನಯ, ನೃತ್ಯ, ರಂಗಚಲನೆಗಳು, ಒಂದು 'ಘರಾನಾ' ಎಂಬ ಖ್ಯಾತಿಗೆ ಪಾತ್ರವಾಗಿದೆ. ಚಿಟ್ಟಾಣಿಯವರು ಈ ಇಬ್ಬರು ಕಲಾವಿದರ ಉತ್ತಮಾಂಶಗಳನ್ನು ತನ್ನದಾಗಿಸಿಕೊಂಡು ಸೃಜನಶೀಲತೆಯಿಂದ ಅದಕ್ಕೆ ಹೊಸಮೆರುಗನ್ನು ನೀಡಿರುವುದು ಐತಿಹಾಸಿಕ ಸತ್ಯ. ಅವರ ನೃತ್ಯಕ್ಕೆ ಅವರದೇ ಆದ ಭಾಷೆ ವ್ಯಾಕರಣಗಳಿವೆ. ಅಸಾಮಾನ್ಯವಾದ ಲಯಪ್ರಜ್ಞೆ ಅದರ ಜೀವಧಾತು. ಪ್ರತಿನಿತ್ಯವೂ ವಿನೂತನವಾದ ಚಿಂತನೆಯಿಂದ ಪಾತ್ರಾಭಿವ್ಯಕ್ತಿಯಲ್ಲಿ ವೈವಿಧ್ಯವನ್ನು ಸಾಧಿಸುವ ಅವರ ಕಲೆಗಾರಿಕೆ ಅಪೂರ್ವವಾದುದು. ಅವರದ್ದೇ ಎಂದು ಗುರುತಿಸಬಹುದಾದ ಹೆಜ್ಜೆಗಳು ಈಗ ಅವರನ್ನು ಅನುಕರಿಸಹೊರಟವರ ಸೊತ್ತಾಗಿರುವುದು ಒಂದು ಕಟು ವ್ಯಂಗ್ಯ. ಅವರ ಅಭಿನಯದಲ್ಲಿ ಹುಬ್ಬು, ತುಟಿ, ಕಣ್ಣು, ಗಲ್ಲ, ಹಸ್ತ, ಪ್ರತಿಯೊಂದೂ ಸಮರಸದಿಂದ ಪಾಲ್ಗೊಳ್ಳುತ್ತವೆ. ಶೃಂಗಾರದ ಅಭಿವ್ಯಕ್ತಿಯಲ್ಲಂತೂ ಚಿಟ್ಟಾಣಿಯವರ ಅಭಿನಯ ಅಕ್ಷರಗಳನ್ನು ಮೀರಿದ ಅನನ್ಯ ಸೃಷ್ಟಿ, ಅದು ಕೇವಲ ಅನುಭವೈಕ್ಯವೇದ್ಯ. ಸಾವಿರ ಮಾತುಗಳನ್ನು ಒಂದು ಕಣ್ಣ ನೋಟದಲ್ಲಿ ಹೇಳುವ ಅವರ ಆಂಗಿಕಾಭಿನಯಕ್ಕೆ ಚಿಟ್ಟಾಣಿಗೆ ಚಿಟ್ಟಾಣಿಯೇ ಸಾಟಿ. ಅದಕ್ಕೆಂದೇ ಯಕ್ಷಗಾನ ಕಲಾಭಿಮಾನಿಗಳು ಅವರನ್ನು 'ಶೃಂಗಾರರಾಜ' ಎಂದೇ ಪ್ರೀತಿಯಿಂದ ಕೊಂಡಾಡುತ್ತಾರೆ.

ವೀರರಸದ ಅಭಿನಯದಲ್ಲಿ ಅವರು ಹಿಂದೆ ಬಿದ್ದವರಲ್ಲ, ಹಿರಣ್ಯಕಶಿಪು, ರಾವಣ, ಕಂಸ, ಬಲಿ, ಪರಶುರಾಮ, ದುರ್ಜಯ ಮುಂತಾದ ಪಾತ್ರಗಳಲ್ಲಿಯೂ ಮಿಂಚಿದ್ದಾರೆ. ಚುರುಕಿನ ನಡೆ, ರಭಸದ ರಂಗಪ್ರವೇಶ, ಆಕರ್ಷಕ ಯುದ್ಧ ಕ್ರಮಗಳು, ವೈವಿಧ್ಯ ಪೂರ್ಣ ಹೆಜ್ಜೆಗಳು ಒಂದಕ್ಕೊಂದು ಮೇಲ್ಮೈಯನ್ನು ಸಾಧಿಸುತ್ತವೆ. ಕರುಣ, ಶೋಕರಸಗಳಲ್ಲಿ ಸ್ವಲ್ಪ ಸೋತಂತೆ ಕಂಡರೂ ಗದಾಯುದ್ಧದ ಕೌರವನ ಪಾತ್ರ ಅಧ್ಯಯನ ಯೋಗ್ಯವೆನಿಸಿದೆ. ಚಿಟ್ಟಾಣಿಯವರ ಆಳ್ತನವೂ ಅವರ ವೇಷದ ಆಕರ್ಷಣೆಗೆ ಕಾರಣ. ಹಿತಮಿತವಾದ ಎತ್ತರ, ಅಗಲವಾದ ಹಣೆ, ಜ್ವಾಜ್ವಲ್ಯಮಾನವಾದ ಕಣ್ಣು, ಬಳ್ಳಿಯಂತೆ ಬಳುಕುವ ಶರೀರ ಹಾಗೂ ಎಷ್ಟು ಕುಣಿದರೂ ಸೋಲದ ಕಾಲುಗಳು ಅವರಿಗೆ ದೈವದತ್ತವಾಗಿ ಬಂದ ಬಳುವಳಿ. ಅವರ ಸ್ವರ ದಪ್ಪವೆನಿಸಿ ತುಸು ಒಡಕು ಎಂದೆನಿಸಿದರೂ ಅದು ಎಲ್ಲ ಪಾತ್ರಗಳಿಗೂ ಒಪ್ಪುತ್ತದೆ. ಕಿವಿಗೆ ಇಂಪಲ್ಲವೆಂದು ಭಾಸವಾದರೂ ಅದರಲ್ಲಿ ಶ್ರುತಿಬದ್ಧತೆಯ ಆಪ್ಯಾಯಮಾನತೆಯಿದೆ. ಶಾಲಾಶಿಕ್ಷಣದ ಕೊರತೆಯಿದ್ದರೂ ದೇಸೀಶೈಲಿಯ ವಾಕ್ಚಾತುರ್ಯದಿಂದ ಅವರು ಜನಮನವನ್ನು ಗೆದ್ದಿದ್ದಾರೆ. ಸಹಕಲಾವಿದರೊಂದಿಗೆ ಸ್ನೇಹಭಾವದಿಂದ ವರ್ತಿಸುವ, ಕಹಿಘಟನೆಗಳನ್ನು ಶೀಘ್ರವಾಗಿ ಮರೆತುಬಿಡುವ, ಇಡೀ ರಂಗಕೃತಿಯನ್ನು ಒಟ್ಟಂದದಿಂದ ಪರಿಗ್ರಹಿಸಿ ಅದರ ಯಶಸ್ಸಿಗೆ ದುಡಿಯುವ ತಪಸ್ಸು ಚಿಟ್ಟಾಣಿಯವರದು. ಪಾತ್ರವೊಂದರ ಎಲ್ಲ ಪದ್ಯಗಳಿಗೂ ಉದಾಸೀನ ಮಾಡದೆ ನರ್ತಿಸಿ, ಪ್ರೇಕ್ಷಕರಿಗೆ ಮುದನೀಡುವ ಪ್ರಾಮಾಣಿಕತೆ ಅವರ ಗೆಲುವಿನ ಗುಟ್ಟು.

ಚಿಟ್ಟಾಣಿಯವರಿಗೆ ಅವರ ಅಸಂಖ್ಯ ಅಭಿಮಾನಿಗಳು ನೀಡಿದ ಪ್ರಶಂಸೆಯ ಮಹಾಪೂರದ ಎದುರು ಪ್ರಶಸ್ತಿಗಳು ಕುಬ್ಜವಾಗುತ್ತವೆ. ರಂಗಕ್ಕೆ ಪ್ರವೇಶವಾದೊಡನೆ ಕೇಳಿ ಬರುವ ಕಿವಿಗಡಚಿಕ್ಕುವ ಚಪ್ಪಾಳೆ ಅವರ ಮೇಲಿನ ತುಂಬು ಅಭಿಮಾನಕ್ಕೆ ನಿದರ್ಶನ. ಅವರ ಅಭಿಮಾನಿಗಳು ಚಿಟ್ಟಾಣಿಯವರಿಗೆ ಬೆಳ್ಳಿಯ ಕಿರೀಟ ತೊಡಿಸಿ ಆನಂದಪಟ್ಟಿದ್ದೂ ಉಂಟು. ಯಕ್ಷರತ್ನ, ರಸಿಕರ ರಾಜ, ನಟಸಾಮ್ರಾಟ ಮುಂತಾದ ಬಿರುದುಗಳನ್ನು ನೀಡಿ ಸನ್ಮಾನಿಸಿದ್ದೂ ಉಂಟು. ಹಲವಾರು ಊರುಗಳಲ್ಲಿ ನಡೆದ ಸಂಘ ಸಂಸ್ಥೆಗಳ ಸನ್ಮಾನಕ್ಕೆ ಲೆಕ್ಕವಿಲ್ಲ.

ಇತ್ತೀಚೆಗೆ ಅವರ ಆತ್ಮಕಥನ 'ನಿಮ್ಮ ಚಿಟ್ಟಾಣಿ' ಪ್ರಕಟವಾಗಿದೆ. ಅವರ ಆತ್ಮೀಯರು ಸೇರಿ 'ರಸರಾಜ' ಎಂಬ ಅಭಿನಂದನ ಗ್ರಂಥವನ್ನೂ ಅರ್ಪಿಸಿದ್ದಾರೆ. ಕರ್ನಾಟಕ ಸರಕಾರದ ರಾಜ್ಯಪ್ರಶಸ್ತಿಯ ಗೌರವ ಕೂಡ ಲಭಿಸಿದೆ. ಹಾಗೆಯೇ ಪ್ರತಿಷ್ಠಿತ ಜಾನಪದಶ್ರೀ ಪ್ರಶಸ್ತಿಯಿಂದಲೂ (2003) ರಾಜ್ಯಸರ್ಕಾರ ಅವರನ್ನು ಸನ್ಮಾನಿಸಿರುವುದು ಅವರ ಸುದೀರ್ಘ ಕಲಾವ್ಯವಸಾಯಕ್ಕೆ ಸಂದ ನಿಜವಾದ ಗೌರವವಾಗಿದೆ. (ವಿ.ಪಿ)

**ಚಿಟ್ಟೆಗಳು ಮತ್ತು ಪತಂಗಗಳು :** ಇವುಗಳು ಆರ್ತ್ರಾಪೊಡ ವಿಭಾಗದ, ಹೆಕ್ಸಾಪೊಡ ಅಥವಾ ಇನ್ಸೆಕ್ಟ ವರ್ಗದ, ಲೆಪಿಡಾಪ್ಟೆರಾ ಗಣಕ್ಕೆ ಸೇರಿದ ಕೀಟಗಳು. ಕೀಟ ವರ್ಗದಲ್ಲಿ ಹೆಚ್ಚು ಸುಂದರವಾದ ಹಾಗೂ ಜನಪ್ರಿಯವಾದಂತಹ ಕೀಟಗಳು, ಪ್ರಪಂಚದಲ್ಲಿ ಸುಮಾರು 140,000 ಜಾತಿಯ ಚಿಟ್ಟೆಗಳು ಮತ್ತು ಪತಂಗಗಳಿವೆ. ಸಂಖ್ಯೆಯ ದೃಷ್ಟಿಯಿಂದ ಇವಕ್ಕೆ ಕೀಟವರ್ಗದಲ್ಲಿ ಎರಡನೆಯ ಸ್ಥಾನವಿದೆ. ಮೊದಲ ಸ್ಥಾನ 350,000 ಪ್ರಭೇದಗಳ ನ್ನೊಳಗೊಂಡ ಹಾಗೂ ಕೋಲಿಯೋಪ್ಟೆರಾ ಗಣಕ್ಕೆ ಸೇರಿದ ಜೀರುಂಡೆಗಳದು (ಬೀಟಲ್ಸ್).

ಚಿಟ್ಟೆಗಳ ಹಾಗೂ ಪತಂಗಗಳ ಸಾಮಾನ್ಯ ಲಕ್ಷಣಗಳೆಂದರೆ –

1) ದೇಹವನ್ನು ತಲೆ, ಎದೆ ಹಾಗೂ ಹೊಟ್ಟೆಗಳಾಗಿ ವಿಂಗಡಿಸಬಹುದು.
2) ಎರಡು ಜೊತೆ ರೆಕ್ಕೆಗಳು
3) ರೆಕ್ಕೆಗಳ ಹಾಗೂ ಉಪಾಂಗಗಳ ಮೇಲೆ ಹುರುಪೆಗಳು (ಸ್ಕೇಲ್ಸ್)ಹೊದಿಕೆ ಇದೆ.
4) ತಲೆಯ ಮುಂಭಾಗದಲ್ಲಿ ಹೀರುಕೊಳವೆ (ಪ್ರೊಬೋಸಿಸ್) ಅಥವಾ ಸೊಂಡಿಲು.
5) ರೂಪಪರಿವರ್ತನೆ ಸಂಪೂರ್ಣ ರೀತಿಯದು.(ಕಂಪ್ಲೀಟ್ ಮೆಟಮಾರ್ಫಸಿಸ್)

ಕವಲುತೋಕೆ ಚಿಟ್ಟೆ (ಪ್ಯಾಪಿಲಿಯೊ ಟ್ರಾಯ್ಲ್‌ಸ್)

ಚಿಟ್ಟೆಗಳು ಹಾಗೂ ಪತಂಗಗಳು ಬೇರೆ ಬೇರೆ ಉಪವರ್ಗಕ್ಕೆ ಸೇರಿದಂತಹ ಕೀಟಗಳು. ಸಾಮಾನ್ಯವಾಗಿ ಪತಂಗಗಳು ರಾತ್ರಿ ವೇಳೆಯಲ್ಲಿ ಚಟುವಟಿಕೆಯಿಂದ ಕೂಡಿರುತ್ತವಾದರೂ, ಕೆಲವು ಪ್ರಭೇದಗಳು ದಿನದಲ್ಲಿಯೂ ಚುರುಕಾಗಿರುತ್ತವೆ. ವಿಕಾಸದ ಹಾದಿಯಲ್ಲಿ ಪತಂಗಗಳು ಚಿಟ್ಟೆಗಳಿಗಿಂತ ಮೊದಲು ಬರುತ್ತವೆ. ಚಿಟ್ಟೆಗಳ ವಿಕಾಸದ ಮೇಲೆ ಹಲವು ಸಿದ್ಧಾಂತಗಳಿವೆ. ಒಂದು ಸಿದ್ಧಾಂತವು–"ಕೆಲವು ಪತಂಗ ಪ್ರಭೇದಗಳು, ಬಾವಲಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು, ದಿನದಲ್ಲಿ ಹಾರಲು ಶುರುಮಾಡಿ ನಂತರ ಚಿಟ್ಟೆಗಳಾಗಿ ಮಾರ್ಪಾಡು ಹೊಂದಿದವು" ಎಂದು ಹೇಳುತ್ತದೆ. ಈ ರೀತಿಯ ಹಲವು ಸಿದ್ಧಾಂತ ಗಳಿದ್ದರೂ ಯಾವುದೇ ಸಿದ್ಧಾಂತವು ಚಿಟ್ಟೆಗಳ ವಿಕಸನದ ಬಗ್ಗೆ ನಿರ್ದಿಷ್ಟವಾಗಿ ಹೇಳುವುದಿಲ್ಲ. ಬಟರ್‌ಫ್ಲೈ–ಮಾತ್ ಎಂಬ ಗುಂಪಿಗೆ ಸೇರಿದ ಪ್ರಭೇದಗಳು ಪತಂಗ ಹಾಗೂ ಚಿಟ್ಟೆಗಳ ಗುಣಲಕ್ಷಣಗಳನ್ನು ಹೊಂದಿರುವ ಕಾರಣ ಅವುಗಳಿಗೆ ಆ ಹೆಸರು ಬಂದಿದೆ.

ಡ್ರೀಮಿ ಡಸ್ಕಿ ವಿಂಗ್ ಸ್ಕಿಪರ್ ಚಿಟ್ಟೆ (ಎರಿನಿಸ್ ಇಸೆಲಸ್)

ಚಿಟ್ಟೆಗಳಿಗೆ ಹಾಗೂ ಪತಂಗಗಳಿಗೆ ಇರುವ ಪ್ರಮುಖ ವ್ಯತ್ಯಾಸಗಳೆಂದರೆ–

1) ಚಿಟ್ಟೆಗಳ ಮೀಸೆ ಅಥವಾ ಗ್ರಹಿಸುವ ಅಂಗ (ಆ್ಯಂಟೆನಾ) ತುದಿಯಲ್ಲಿ ದಪ್ಪಗಿರುತ್ತದೆ ಮತ್ತು ಕೆಲವು ಚಿಟ್ಟೆಗಳಲ್ಲಿ ಅದು ತುದಿಯಲ್ಲಿ ಡೊಂಕಾಗಿರುತ್ತದೆ. ಪತಂಗಗಳ ಮೀಸೆ ಅಥವಾ ಗ್ರಹಿಸುವ ಅಂಗ ಕೂದಲಿನಿಂದ ಕೂಡಿದ್ದು, ತುದಿಯಲ್ಲಿ ದಪ್ಪಗಿರದೆ ಸಣ್ಣ ಎಳೆಗಳಂತೆ ಇರುತ್ತದೆ.

2) ಕುಳಿತುಕೊಳ್ಳುವಾಗ ಚಿಟ್ಟೆಗಳು ತಮ್ಮ ರೆಕ್ಕೆಗಳನ್ನು ಜೋಡಿಸಿಕೊಂಡು ಕೂರುತ್ತವೆ; ಪತಂಗಗಳು ಕುಳಿತುಕೊಳ್ಳುವಾಗ ರೆಕ್ಕೆಗಳನ್ನು ಹರಡಿಕೊಂಡು ಕೂರುತ್ತವೆ. ಕೆಲವು ಚಿಟ್ಟೆಗಳೂ ಸಹ ಕೂರುವಾಗ ರೆಕ್ಕೆ ಅಗಲಿಸಿ ಕೂರುವ ಕಾರಣ, ಈ ಒಂದು ಕಾರಣದಿಂದ ಚಿಟ್ಟೆಗಳನ್ನು ಪತಂಗಗಳಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ.

3) ಚಿಟ್ಟೆಗಳ ಹೊಟ್ಟೆ ಸಣ್ಣದಾಗಿದ್ದು, ಸೊಂಟವು ಎದ್ದು ಕಾಣುತ್ತದೆ, ಆದರೆ ಪತಂಗಗಳಲ್ಲಿ ಹೊಟ್ಟೆಯು ದಪ್ಪದಾಗಿದ್ದು, ಸೊಂಟವನ್ನು ಹೊಟ್ಟೆಯಿಂದ ಪ್ರತ್ಯೇಕಿಸುವುದು ಕಷ್ಟಸಾಧ್ಯ.

4) ಸುಮಾರು ಎಲ್ಲಾ ಚಿಟ್ಟೆಗಳು ದಿನದಲ್ಲಿ ಹೆಚ್ಚು ಚಟುವಟಿಕೆಯಿಂದ ಕೂಡಿದ್ದರೆ, ಪತಂಗಗಳ ಚಟುವಟಿಕೆ ರಾತ್ರಿ ಹೆಚ್ಚು.

ಹೆಸ್ಪರಿಡೆ ಕುಟುಂಬಕ್ಕೆ ಸೇರಿದ ಚಿಟ್ಟೆಗಳು ಪತಂಗಗಳಿಗೆ ಹೋಲುವ ಕಾರಣ, ಈ ಕುಟುಂಬಕ್ಕೆ ಸೇರಿದ ಹಲವು ಪ್ರಭೇದಗಳನ್ನು ಪತಂಗಗಳಿಂದ ಪ್ರತ್ಯೇಕಿಸುವುದು ಕಷ್ಟ.

**ನಾಕ್ಟುಯಿಡೀ ಕುಟುಂಬದ ಒಂದು ಪತಂಗ, ಹೂವಿನಿಂದ ಮಕರಂದವನ್ನು ಹೀರುತ್ತಿದೆ**

ನಾವು ಮೊಟ್ಟೆ, ಕಂಬಳಿಹುಳ ಹಾಗೂ ಕೋಶದಲ್ಲಿ ಕೂಡ ಅನೇಕ ವ್ಯತ್ಯಾಸವನ್ನು ಕಾಣಬಹುದು:

1. ಚಿಟ್ಟೆಯ ಮೊಟ್ಟೆಗಳು ದುಂಡಗೆ, ಬಾಟಲಿಯ ಆಕಾರದಲ್ಲಿ ಅಥವಾ ಗೋಪುರದ ಆಕಾರದಲ್ಲಿ ಇರುತ್ತವೆ. ಪತಂಗಗಳ ಮೊಟ್ಟೆಗಳು ದುಂಡಗೆ ಹಾಗೂ ಚಪ್ಪಟೆಯಾಗಿರುತ್ತವೆ.

2. ಚಿಟ್ಟೆಗಳ ಕಂಬಳಿಹುಳುಗಳು ಮೂರು ಜೋಡಿ ನಿಜವಾದ ಪಾದಗಳು (ಟ್ರೂ ಲೆಗ್ಸ್ – ಇವೆ, ಮುಂದೆ ಕಾಲುಗಳಾಗುವುದು) ಮತ್ತು ನಾಲ್ಕು ಜೋಡಿ ಪ್ರೋಪಾದಗಳನ್ನು (ಪ್ರೋಲೆಗ್ಸ್) ಹೊಂದಿರುತ್ತವೆ.

ಪತಂಗಗಳ ಕಂಬಳಿಹುಳುಗಳಲ್ಲಿ ಮೂರು ಜೋಡಿ ನಿಜವಾದ ಪಾದಗಳಿದ್ದು, ಪ್ರೋಪಾದಗಳು ಒಂದರಿಂದ ನಾಲ್ಕು ಜೋಡಿಗಳು ಇರುತ್ತವೆ.

3. ಸಾಮಾನ್ಯವಾಗಿ ಚಿಟ್ಟೆಗಳು ಕೋಶವನ್ನು (ಪ್ಯೂಪ) ಮಾಡಿ ಅದರಲ್ಲಿ ರೂಪಪರಿವರ್ತನೆಗೊಳ್ಳುತ್ತವೆ. ಆದರೆ ಪತಂಗಗಳು ಮೊಟ್ಟೆ ಆಕಾರದ ಕಕೂನ್‌ಗಳನ್ನು ಮಾಡಿ ಅದರಲ್ಲೇ ವಯಸ್ಕ ಪತಂಗಗಳಾಗಿ ಮಾರ್ಪಾಡಾಗುತ್ತವೆ.

**ಚಿಟ್ಟೆಯ ಜೀವನಚಕ್ರ :** ಚಿಟ್ಟೆಯ ಜೀವನಚಕ್ರವು 4 ಹಂತಗಳನ್ನು ಒಳಗೊಂಡಿದ್ದು, ಸಂಪೂರ್ಣ ರೀತಿಯದಾಗಿದೆ. ಆ ನಾಲ್ಕು ಹಂತಗಳೆಂದರೆ ಮೊಟ್ಟೆ, ಕಂಬಳಿಹುಳ, ಕೋಶಾವಸ್ಥೆ ಹಾಗೂ ವಯಸ್ಕ ಚಿಟ್ಟೆ ಅಥವಾ ಚಿಟ್ಟೆ.

**ಮೊಟ್ಟೆ :** ಎಲ್ಲಾ ಚಿಟ್ಟೆಗಳು ಮೊಟ್ಟೆಗಳ ಮೂಲಕ ಸಂತಾನವೃದ್ಧಿಮಾಡುತ್ತವೆ. ಕೆಲವು ಮಾತ್ರ ಮೊಟ್ಟೆಗಳನ್ನು ಹೊರಗಡೆ ಇಡದೆ ದೇಹದೊಳಗೆ ಇರಿಸಿಕೊಂಡು ಮರಿ ಮಾಡುವುದುಂಟು. ಚಿಟ್ಟೆಗಳು ಸಮಾನ್ಯವಾಗಿ ಎಲೆಗಳ ಕೆಳಗೆ, ಟೊಂಗೆಗಳ ಮೇಲೆ, ಹೂಗಳ ಮೇಲೆ ಹಾಗೂ ಹಣ್ಣುಗಳ ಮೇಲೆ ಕೂಡ ಮೊಟ್ಟೆಗಳನ್ನು ಇಡುತ್ತವೆ. ಕೆಲವು



**ಮೊಟ್ಟೆಗಳು**

ಚಿಟ್ಟೆಗಳು ಒಂದೇ ಗಿಡದಲ್ಲಿ ತನ್ನ ಎಲ್ಲಾ ಮೊಟ್ಟೆಗಳನ್ನು ಇಟ್ಟರೆ, ಮತ್ತೆ ಕೆಲವು 10ರಿಂದ 50 ಮೊಟ್ಟೆಗಳನ್ನು ಬೇರೆ ಬೇರೆ ಗಿಡಗಳಲ್ಲಿ ಇಡುತ್ತವೆ. ವಯಸ್ಕ ಹೆಣ್ಣು ಚಿಟ್ಟೆಗಳಲ್ಲಿ ಪೂರ್ಣ ರೂಪುಗೊಂಡ ಮೊಟ್ಟೆಗಳು ಅಂಡನಾಳದ ಮೂಲಕ ಸಾಗಿ ಯೋನಿಯೊಳಗೆ ಬರುತ್ತವೆ. ಹೆಣ್ಣು ಹಾಗೂ ಗಂಡು ಚಿಟ್ಟೆಗಳು ಕೂಡಿದಾಗ ಗಂಡಿನ ಶುಕ್ರಾಣುಗಳು ಆಸ್ಟಿಮಮ್ ಬರ್ಸೀ ಎಂಬ ದ್ವಾರದ ಮೂಲಕ ಹೆಣ್ಣಿನ ದೇಹದೊಳಗೆ ಬಂದು ಬರ್ಸ ಕೌಪ್ಯುಲೇಟ್ರಿಕ್ಸ್ ಎಂಬ ಶುಕ್ರಾಣು ಸಂಗ್ರಹ ಚೀಲದಲ್ಲಿ ಶೇಖರಣೆಯಾಗುತ್ತವೆ. ಈ ಚೀಲದಲ್ಲಿ ಶುಕ್ರಾಣುಗಳು ಅನೇಕ ವಾರ ಅಥವಾ ತಿಂಗಳು ಸಂಗ್ರಹವಾಗಿರಬಲ್ಲವು. ಈ ಶುಕ್ರಾಣುಚೀಲದಿಂದ ಯೋನಿಗೆ ಸೂಕ್ಷ್ಮನಾಳವೊಂದು ಹೋಗುತ್ತದೆ. ಮೊಟ್ಟೆಗಳು ಇಡುವ ಕಾಲ ಬಂದಾಗ ಅವು ಒಂದೊಂದಾಗಿ ಯೋನಿಯ ಮುಖಾಂತರ ಹೊರಬರುತ್ತವೆ. ಹೀಗೆ ಬರುವಾಗ ಶುಕ್ರಾಣುಸಂಗ್ರಹ ಚೀಲದಿಂದ ಶುಕ್ರಾಣುಗಳು ಸಾಗಿಬಂದು ಮೊಟ್ಟೆಗಳನ್ನು ನಿಷೇಚಿಸುತ್ತವೆ. ಮೊಟ್ಟೆಗಳ ಆಕಾರ ವಿವಿಧ ಕುಟುಂಬಗಳಲ್ಲಿ ವಿವಿಧ ರೀತಿಯಲ್ಲಿ ಇರುತ್ತವೆ. ಸಾಮಾನ್ಯವಾಗಿ ಮೊಟ್ಟೆಗಳು ಬಿಳಿ, ಹಳದಿ, ಕಂದು ಅಥವಾ ಹಸಿರು ಬಣ್ಣವನ್ನು ಹೊಂದಿರುತ್ತವೆ. ಕೆಲವು ಪತಂಗಗಳು ತಮ್ಮ ಮೊಟ್ಟೆಗಳ ಮೇಲೆ ಕೂದಲುಗಳಿಂದ ರಚಿತವಾದ ಒಂದು ರೀತಿಯ ಕವಚವನ್ನು ಹೊಂದಿಸುವುದುಂಟು. ಕೆಲವು ಪ್ರಭೇದಗಳಲ್ಲಿ ಇಂಥ ಕೂದಲುಗಳು ವಿಷಪೂರಿತವಾಗಿದ್ದು, ಅವನ್ನು ತಿನ್ನಬಂದ ಪ್ರಾಣಿಗಳಿಗೆ ತೀವ್ರ ತುರಿಕೆಯನ್ನುಂಟು ಮಾಡಿ ಮೊಟ್ಟೆಗಳಿಗೆ ರಕ್ಷಣೆ ನೀಡುತ್ತವೆ. ಮೊಟ್ಟೆಗಳು ಒಡೆಯಲು ಎರಡರಿಂದ ನಾಲ್ಕು ದಿನಗಳು ಬೇಕು.

**ಪತಂಗವೊಂದರ ಸೊಂಡಿಲು**

**ಕಂಬಳಿಹುಳ :** ಕಂಬಳಿಹುಳುಗಳಿಗೆ ಡಿಂಭಗಳು ಎಂದೂ ಕೂಡ ಕರೆಯುತ್ತಾರೆ. ಇವುಗಳ ದೇಹವು ತಲೆ, ಎದೆ ಹಾಗೂ ಉದರ ಎಂಬ 3 ಭಾಗಗಳಿಂದ ಕೂಡಿದೆ. ಎದೆ ಮತ್ತು ಉದರಗಳ ನಡುವಣ ವ್ಯತ್ಯಾಸ ಸ್ಪಷ್ಟವಾಗಿಲ್ಲ. ಎದೆ ಭಾಗದಲ್ಲಿ 3 ಖಂಡಗಳು ಹಾಗೂ ಉದರ ಭಾಗದಲ್ಲಿ 11 ಖಂಡಗಳಿವೆ. ತಲೆಯು 5 ಖಂಡಗಳಿಂದ ಕೂಡಿದ್ದರೂ, ಈ ಖಂಡಗಳು ಒಂದಕ್ಕೊಂದು ಕೂಡಿಕೊಂಡಿರುವ ಕಾರಣ ಒಂದೇ ರಚನೆಯಂತೆ ಕಾಣುತ್ತದೆ. ತಲೆಯ ಎರಡೂ ಕಡೆಗಳಲ್ಲಿ 6 ಸರಳ ಕಣ್ಣುಗಳಿವೆ. ಇವಕ್ಕೆ ಸ್ಟೆಮಾಟ ಅಥವಾ ಆಸಿಲ್ಲೈ ಎಂದು ಹೆಸರು. ಇದರ ಮೂತಿಯ ತುದಿಯಲ್ಲಿ ಒಂದು ಜೊತೆ ಬಲವಾದ ಮ್ಯಾಂಡಿಬೆಲ್ಲುಗಳು ಹಾಗೂ ಅವುಗಳ ಬುಡದಲ್ಲಿ ಒಂದು ಜೊತೆ ಗ್ರಹಿಸುವ ಅಂಗಗಳಿವೆ. ಮ್ಯಾಂಡಿಬೆಲ್ಲುಗಳ ಮುಂಭಾಗದಲ್ಲಿ ಮೇಲ್ತುಟಿಯಿದೆ. ಇದಕ್ಕೆ ಲೇಬ್ರಮ್ ಎಂದು ಕರೆಯುತ್ತಾರೆ. ಈ ಮ್ಯಾಂಡಿಬೆಲ್ಲುಗಳ ಹಿಂಭಾಗದಲ್ಲಿ ಮೊದಲ ಮ್ಯಾಕ್ಸಿಲೀ, ಲೇಬಿಯಮ್ ಹಾಗೂ ಹೈಪೋಫ್ಯಾರಿಂಕ್ಸಿನಿಂದ ಕೂಡಿ ರಚಿತವಾದ ಕೆಳದುಟಿಯಿದೆ.ಇದರ ಮಧ್ಯಭಾಗದಲ್ಲಿ ಸಿನರೆಟ್ ಎಂಬ ಅಂಗವಿದೆ. ಕೋಶರಚನೆಗೆ ಅತ್ಯಗತ್ಯವಾದ ರೇಷ್ಮೆಯು ಇದರಲ್ಲಿ ತಯಾರಾಗುತ್ತದೆ. ಎದೆಯ ಭಾಗದ ಪ್ರತಿಯೊಂದು ಖಂಡದಲ್ಲಿ ಒಂದೊಂದು ಜೊತೆ ಕಾಲುಗಳಿದ್ದು, ಇವಕ್ಕೆ ನಿಜವಾದ ಪಾದಗಳೆಂದು ಕರೆಯುತ್ತಾರೆ. ಉದರ ಭಾಗದ 3,4,5 ಮತ್ತು 6ನೆಯ ಖಂಡಗಳಲ್ಲಿ ಒಂದು ಜೊತೆ ಕಾಲುಗಳಿದ್ದು, ಇವಕ್ಕೆ ಪ್ರೊಲೆಗ್ಸ್‌ಗಳು ಎಂದು ಕರೆಯುತ್ತಾರೆ. ಉದರದ 11ನೆಯ ಖಂಡದಲ್ಲಿ ಕ್ಲಾಸ್ಪರ್ಸ್ ಎಂಬ ಅಂಗವಿದ್ದು, ಅದು ಕೋಶರಚನೆಯ ಸಮಯದಲ್ಲಿ ಕಂಬಳಿಹುಳುವು ಕೊಂಬೆಯಿಂದ ನೇತಾಡಲು ಸಹಾಯ ಮಾಡುತ್ತದೆ. ಕಂಬಳಿಹುಳಗಳ ವರ್ಗೀಕರಣದಲ್ಲಿ ಕಾಲುಗಳ ಸಂಖ್ಯೆ, ಜೋಡಣಾಕ್ರಮ ಮತ್ತು ಗಾತ್ರಗಳು ಅತ್ಯಂತ ಪ್ರಮುಖ ಲಕ್ಷಣಗಳಾಗಿವೆ. ಕಂಬಳಿಹುಳಗಳ ಮೇಲ್ಮೈ ನಿರ್ದಿಷ್ಟಕ್ರಮದಲ್ಲಿ ಜೋಡಣೆಗೊಂಡ ಬಿರುಗೂದಲುಗಳಿಂದ ಆವೃತವಾಗಿದೆ. ಬಿರುಗೂದಲುಗಳ ಜೋಡಣೆ ಬೇರೆ ಬೇರೆ ಪ್ರಭೇದಗಳಲ್ಲಿ ವಿಭಿನ್ನವಾಗಿದ್ದು, ಇವುಗಳ ಸಹಾಯದಿಂದ ಕೂಡ ಕಂಬಳಿಹುಳಗಳನ್ನು ಗುರುತಿಸಬಹುದಾಗಿದೆ. ಅನೇಕ ಕಂಬಳಿಹುಳಗಳು ತನ್ನ ಸುತ್ತ ಇರುವ ಪರಿಸರಕ್ಕೆ ಹೊಂದಿಕೊಳ್ಳುವ ಬಣ್ಣಗಳನ್ನು ಹೊಂದಿದ್ದು, ಅವುಗಳನ್ನು ಗಿಡಗಳಲ್ಲಿ ಹುಡುಕಿ ಗುರುತಿಸುವುದು ಕಷ್ಟ. ಅನೇಕ ಕಂಬಳಿಹುಳಗಳು

ಹಸಿರು ಹಾಗೂ ಕಂದು ಬಣ್ಣವನ್ನು ಹೊಂದಿದ್ದು ಅವುಗಳ ದೇಹ ರಚನೆ ಎಲೆ ಮತ್ತು ಟೊಂಗೆಗಳನ್ನು ಹೋಲುತ್ತವೆ. ಇಂತಹ ಕಂಬಳಿಹುಳಗಳು ವಿಶ್ರಾಂತಿ ತೆಗೆದುಕೊಳ್ಳುವಾಗ ಟೊಂಗೆಗಳ ಮೇಲೇರಿ ಸೆಟೆದು ನಿಂತು, ಮುರಿದ ಟೊಂಗೆಗಳ ಅನುಕರಣೆ ಮಾಡುತ್ತವೆ. ಮತ್ತೆ ಕೆಲವು ಕಂಬಳಿಹುಳಗಳು ಕಪ್ಪು, ಬಿಳುಪು ಬಣ್ಣಗಳನ್ನು ಹೊಂದಿದ್ದು ಹಕ್ಕಿಯ ಹಿಕ್ಕೆಯನ್ನು ಅನುಕರಣೆ ಮಾಡುತ್ತವೆ. ಕೆಲವು ಕಂಬಳಿಹುಳಗಳು ಪರಿಸರದ್ದೇ ಬಣ್ಣಗಳನ್ನು

ಕಂಬಳಿಹುಳುಗಳು

ಹೊಂದಿದ್ದರೆ, ಮತ್ತೆ ಕೆಲವು ವಿಷಪೂರಿತ ಕಂಬಳಿಹುಳಗಳು ವರ್ಣರಂಜಿತವಾಗಿರುತ್ತವೆ. ಕೆಲವು ಕಂಬಳಿಹುಳಗಳು ತಮ್ಮ ವರ್ತನೆಯಿಂದ ಹಾವುಗಳ ಚಲನೆಯನ್ನು ಅನುಕರಣೆ ಮಾಡುತ್ತವೆ. "ಲೈಸಿನಿಡೇ" ಕುಟುಂಬಕ್ಕೆ ಸೇರಿದ ಕಂಬಳಿಹುಳಗಳು ಮೈಮೇಲೆ ಒಂದು ರೀತಿಯ ಸಿಹಿದ್ರವ್ಯವನ್ನು ಸ್ರವಿಸುತ್ತವೆ. ಇದರಿಂದ ಆಕರ್ಷಕವಾದ ಕೆಲವು ಇರುವೆ ಪ್ರಭೇದಗಳು, ಇಂತಹ ಕಂಬಳಿಹುಳಗಳನ್ನು ತಮ್ಮ ಗೂಡಿನಲ್ಲಿ ಸಾಕಿಕೊಂಡು ಅವನ್ನು ಕಣಜ ಹಾಗೂ ಇತರ ಕೀಟಗಳಿಂದ ರಕ್ಷಿಸುತ್ತವೆ. ಕೆಲವು ಕಂಬಳಿಹುಳಗಳ ಮೇಲೆ ವಿಷಪೂರಿತ ರೋಮಗಳಿರುತ್ತವೆ. ಇಂತಹ ರೋಮವು ಚರ್ಮಕ್ಕೆ ತಾಕಿದರೆ ತುರಿಕೆ ಉಂಟಾಗಿ, ಆನಂತರ ಉರಿಯುವ ಗುಳ್ಳೆಗಳಾಗುತ್ತವೆ. ಕೆಲವು ಕಂಬಳಿಹುಳಗಳು, ಶತ್ರುಗಳಿಂದ ರಕ್ಷಿಸಿಕೊಳ್ಳಲು ಅಸಹ್ಯಕರ ಘಾಟು ವಾಸನೆ ಬೀರುತ್ತವೆ.

ಕಂಬಳಿಹುಳಗಳು ತಮ್ಮ ಅತ್ಯಧಿಕ ಸಮಯವನ್ನು ತಿನ್ನುತ್ತಲೇ ಕಳೆಯುತ್ತವೆ. ಕಂಬಳಿಹುಳವು ತನ್ನ 'ಆಹಾರ ಸಸ್ಯ'ವನ್ನು ಮಾತ್ರ ತಿಂದು ಬದುಕುತ್ತದೆ. ಕೆಲವು ಕಂಬಳಿಹುಳಗಳು ಒಂದು ಕುಟುಂಬಕ್ಕೆ ಸೇರಿದ ಹಲವು ಸಸ್ಯಗಳನ್ನು ತಿಂದರೆ, ಮತ್ತೆ ಕೆಲವು, ಬೇರೆಬೇರೆ ಕುಟುಂಬಕ್ಕೆ ಸೇರಿದ ಸಸ್ಯಗಳನ್ನು ತಿಂದು ಬದುಕುತ್ತವೆ. "ಮಿಲಿಟಿನೇ" ಉಪಕುಟುಂಬಕ್ಕೆ ಸೇರಿದ "ಏಪ್‌ಫ್ಲೈ" ಚಿಟ್ಟೆಯ ಕಂಬಳಿಹುಳುಗಳು ಚಿಕ್ಕಚಿಕ್ಕ ಕ್ರಿಮಿಗಳನ್ನು ತಿಂದು ಬದುಕುತ್ತವೆ. ಹಾವುಗಳಂತೆ ಕಂಬಳಿಹುಳುಗಳು ಪೊರೆ ಕಳಚುತ್ತವೆ. ಅವು ಕೋಶ ರಚಿಸುವ ಮುನ್ನ 5 ಬಾರಿ ಪೊರೆ ಕಳಚುತ್ತವೆ. ಒಂದು ಪೊರೆ ಕಳಚುವಿಕೆ ಮತ್ತು ಅದರ ಮುಂದಿನ ಪೊರೆ ಕಳಚುವಿಕೆಯ ನಡುವಿನ ಹಂತವನ್ನು "ಇನ್‌ಸ್ಟಾರ್" ಎಂದು ಕರೆಯುತ್ತಾರೆ. ಎಲ್ಲಾ ಬಗೆಯ ಕಂಬಳಿಹುಳಗಳೂ ರೇಷ್ಮೆಯನ್ನು ತಯಾರಿಸುತ್ತವೆ. ರೂಪಪರಿವರ್ತನೆಯ ಸಮಯದಲ್ಲಿ ಕೋಶವನ್ನು ರಚಿಸಲು ರೇಷ್ಮೆಯು ಅತ್ಯಗತ್ಯ. ಇದಲ್ಲದೆ ಕೆಲವೊಮ್ಮೆ ಕಂಬಳಿಹುಳಗಳು ತಾವು ಎಲೆಗಳ ಹಾಗೂ ಟೊಂಗೆಗಳ ಮೇಲೆ ಓಡಾಡುವಾಗ ದಾರಿಯನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಕೂಡ ಈ ರೇಷ್ಮೆಯನ್ನು ಬಳಸುವುದುಂಟು. ರೇಷ್ಮೆಯು ಕಪ್ಪು, ಹಸಿರು, ಹಳದಿ, ಕಂದು ಮುಂತಾದ ಅನೇಕ ಬಣ್ಣಗಳನ್ನು ಪಡೆದಿರಬಹುದು. ಈ ಬಣ್ಣಗಳಿಗೆ ಕಾರಣ ಅವುಗಳು ತಿನ್ನುವ ಆಹಾರದಲ್ಲಿನ ಫ್ಲೇವೋನ್, ಕ್ಯಾರೋಟಿನ್ ಮತ್ತು ಕ್ಯಾಂತೋಫಿಲ್‌ಗಳು. ಕಂಬಳಿಹುಳವು ಸುಮಾರು 15 ರಿಂದ 40 ದಿನಗಳಲ್ಲಿ ಕೋಶವನ್ನು ರಚಿಸುತ್ತವೆ.

**ಕೋಶಾವಸ್ಥೆ :** ಸಂಪೂರ್ಣವಾಗಿ ಬೆಳೆದ ಕಂಬಳಿಹುಳವು, ಆಹಾರಸೇವನೆ ನಿಲ್ಲಿಸಿ, ಸೂಕ್ತ ಸ್ಥಳ ಹುಡುಕಿ ಅಲ್ಲಿ ಕೋಶವನ್ನು ರಚಿಸುತ್ತದೆ. ಹಲವು ಪತಂಗಗಳು ಭೂಮಿಯಲ್ಲಿ ಕೋಶ(ಕಕೂನ್) ರಚಿಸಿದರೆ, ಚಿಟ್ಟೆಗಳ ಕಂಬಳಿಹುಳಗಳು ಸಾಮಾನ್ಯವಾಗಿ ಗಿಡಗಳ ಟೊಂಗೆಗಳಿಗೆ ಹೊಂದಿಕೊಂಡಂತೆ ಕೋಶವನ್ನು ರಚಿಸುತ್ತವೆ. "ಹೆಸ್ಪರಿಡೇ" ಅಥವಾ ಜಿಗಿತಗಾರ ಚಿಟ್ಟೆಗಳ ಕುಟುಂಬಕ್ಕೆ ಸೇರಿದ ಹಲವು ಕಂಬಳಿಹುಳಗಳು ಎಲೆಯನ್ನು ಮಡಚಿ ಅದನ್ನೇ ಕೋಶವನ್ನಾಗಿ ಬಳಸುತ್ತವೆ. ಪ್ರತಿಯೊಂದು ಪ್ರಭೇದದ ಕೋಶವೂ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ರೂಪುಗೊಂಡಿರುವ ಕಾರಣ, ಕೋಶದ ಮೂಲಕ ಕೂಡ ಚಿಟ್ಟೆಪ್ರಭೇದವನ್ನು ಗುರುತಿಸಬಹುದು. ಕಂಬಳಿಹುಳವು ಕೋಶದಲ್ಲಿ ರೂಪಪರಿವರ್ತನೆಗೊಳ್ಳುತ್ತಿರುವಾಗ ಹೊರಗಡೆಯಿಂದ ಚಿಟ್ಟೆಯ ಹಲವು ಭಾಗಗಳನ್ನು ಗುರುತಿಸಬಹುದು. ಮೀಸೆ, ಸೊಂಡಿಲು, ರೆಕ್ಕೆಗಳು ಹಾಗೂ ಕಾಲುಗಳು ಕೋಶದ ಕೆಳಭಾಗದಲ್ಲಿ ಹಿಮ್ಮುಖವಾಗಿ ಚಾಚಿಕೊಂಡಿರುತ್ತವೆ. ಕಣ್ಣುಗಳಿರುವ ಕಡೆ ಕೋಶವು ಉಬ್ಬಿಕೊಂಡಿರುತ್ತದೆ. ಚಿಟ್ಟೆಗಳ ಕೋಶಗಳು ವಿವಿಧ ಆಕಾರ ಹಾಗೂ ವಿವಿಧ ವರ್ಣಗಳನ್ನು ಹೊಂದಿದ್ದು, ಕೆಲವು ಕೋಶಗಳು, ಮುಳ್ಳುಗಳು ಹಾಗೂ ಸುಂದರವಾದ ಬಣ್ಣ ಬಣ್ಣದ ಚುಕ್ಕೆಗಳನ್ನು ಹೊಂದಿರುತ್ತವೆ. ಕೋಶದ ರಚನೆಯಾದೊಡನೆ ಕಂಬಳಿಹುಳವು ಚಿಟ್ಟೆಯಾಗಿ ಮಾರ್ಪಾಡು ಹೊಂದುವುದಿಲ್ಲ ಹಲವು ಪ್ರಭೇದಗಳಲ್ಲಿ ಕೋಶದೊಳಗೆ ಚಳಿಗಾಲ ಪೂರ್ತಿ, ಅದೇ ಅವಸ್ಥೆಯಲ್ಲಿ ಕಳೆದು, ನಂತರ ವಸಂತದಲ್ಲಿ ವಾತಾವರಣದ ಉಷ್ಣತೆಯು ಹೆಚ್ಚುತ್ತಿದ್ದಂತೆಯೇ ಚಿಟ್ಟೆಯಾಗಿ ಮಾರ್ಪಾಡಾಗುತ್ತದೆ. ಇಂತಹ ಪ್ರಭೇದಗಳಲ್ಲಿ ಅನುಕೂಲಕರ ವಾತಾವರಣ ಬರುವವರೆಗೆ ಕಂಬಳಿಹುಳವಿನ ಬೆಳವಣಿಗೆ ಸ್ಥಗಿತಗೊಂಡಿರುತ್ತದೆ. ಇದಕ್ಕೆ ತಾತ್ಕಾಲಿಕ ಸುಪ್ತತೆ (ಡಯಾಪೋಸ್) ಎಂದು ಕರೆಯುತ್ತಾರೆ. ತಾತ್ಕಾಲಿಕ ಸುಪ್ತತೆಯ ಕ್ರಿಯಾತಂತ್ರ ಬಲು ಸಂಕೀರ್ಣ ರೀತಿಯದು. ಚಿಟ್ಟೆಯ ತಲೆ ಮತ್ತು ಪ್ರೋತೊರಾಕ್ಸಿನಲ್ಲಿನ ಕೆಲವು ರಸಗ್ರಂಥಿ ವಾತಕಗಳು ಉತ್ಪಾದಿಸುವ ಹಾರ್ಮೋನುಗಳಿಂದ ಈ ಚಟುವಟಿಕೆ ನಿಯಂತ್ರಿತವಾಗಿದೆ. ಪರಿಸರದ ನಿರ್ದಿಷ್ಟ ಪ್ರಚೋದನೆಗಳಿಂದ ಮಿದುಳಿನ ಕೆಲವು ನರಸ್ರಾವಕ (ನ್ಯೂರೋಸೆಕ್ರೀಟರಿ) ಕೋಶಗಳು ಉತ್ತೇಜಿತವಾಗಿ, ವಿಶಿಷ್ಟ ರೀತಿಯ ಸ್ರಾವಗಳು ಬಿಡುಗಡೆ ಆಗುತ್ತವೆ. ಇವು ರಕ್ತದ ಮೂಲಕ ಸಾಗಿ ಬಂದು ಪ್ರೋತೊರಾಕ್ಸಿನ ರಸಗ್ರಂಥಿಗಳನ್ನು ತಲುಪಿ ನಂತರ ಪ್ರಚೋದಿಸುತ್ತವೆ. ಇದರಿಂದ ವಿಶಿಷ್ಟ ರೀತಿಯ ಹಾರ್ಮೋನುಗಳು ಉತ್ಪನ್ನವಾಗಿ ಇವುಗಳ ಪ್ರಭಾವದಿಂದ ತಾತ್ಕಾಲಿಕ ಸುಪ್ತತೆ ಕೊನೆಗೊಳ್ಳುತ್ತದೆ. ತಾತ್ಕಾಲಿಕ ಸುಪ್ತತೆಯ ಅವಧಿ ಹೊರಗಿನ ಉಷ್ಣಾಂಶ, ತೇವಾಂಶ ಹಾಗೂ ಇನ್ನಿತರ ಅಂಶಗಳ ಮೇಲೆ ನಿರ್ಧಾರಿತವಾಗಿರುತ್ತದೆ. ಕೋಶದಲ್ಲಿ ರೂಪಪರಿವರ್ತನೆಯು ಸಂಪೂರ್ಣ ಅಂತರ್ಮುಖಿ. ಅಂದರೆ ಈ ಹಂತದಲ್ಲಿ ಆಹಾರವನ್ನು ಸೇವಿಸುವುದಾಗಲಿ ಅಥವಾ ತ್ಯಾಜ್ಯವಸ್ತುಗಳನ್ನು ಹೊರ ಹಾಕುವುದಾಗಲಿ ಇರುವುದಿಲ್ಲ. ಎದೆಯ ಭಾಗದಲ್ಲಿರುವ ಶ್ವಾಸರಂಧ್ರಗಳ ಸಹಾಯದಿಂದ ಕೋಶವು ಅತ್ಯಂತ ಕನಿಷ್ಠ ಪ್ರಮಾಣದಲ್ಲಿ ಉಸಿರಾಟವನ್ನು ನಡೆಸುತ್ತದೆ. ಕೋಶಾವಸ್ಥೆಯಲ್ಲಿ ಯಾವುದೇ ರೀತಿಯ ವಿಸರ್ಜನಕ್ರಿಯೆ ನಡೆಯುವುದಿಲ್ಲ. ಸಾರಜನಕಯುಕ್ತ ನಿರುಪಯೋಗಿ ವಸ್ತುಗಳು ದ್ರವರೂಪದಲ್ಲಿ ಸಂಗ್ರಹವಾಗುತ್ತವೆ. ಈ

ದ್ರವಕ್ಕೆ ಮಿಕೋನಿಯಮ್ ಎಂದು ಹೆಸರು. ಪ್ರೌಢ ಚಿಟ್ಟೆ ಕೋಶದಿಂದ ಹೊರ ಬರುವ ಮುನ್ನ ಮಿಕೋನಿಯಮ್ ವಿಸರ್ಜಿತವಾಗುತ್ತದೆ. ಕೆಲವು ಚಿಟ್ಟೆಗಳು ತಮ್ಮ ಮೀಸೆಯ ಬಳಿ ಇರುವ ಲೇಬಿಯಲ್ ಪಲ್ಪ್ ಎಂಬ ಅಂಗದ ಸಹಾಯದಿಂದ ಕೋಶವನ್ನು ಒಡೆದು ಹೊರಬಂದರೆ, ಮತ್ತೆ ಕೆಲವು ಮಿಕೋನಿಯಮ್ ದ್ರವದ ಒತ್ತಡ ಹೆಚ್ಚಾಗಿ ಕೋಶ ಒಡೆದಾಗ ಹೊರ ಬರುತ್ತವೆ. ಅತ್ಯಂತ ಮೃದುವಾದ ದೇಹವುಳ್ಳ ಹಾಗೂ ಸುಲಭವಾಗಿ ಹಾಳಾಗುವಂತಹ ರೆಕ್ಕೆಗಳನ್ನು ಹೊಂದಿರುವ ಚಿಟ್ಟೆಯು ಕೋಶದಿಂದ ಹೊರಬರುವುದು ಕಷ್ಟದ ಕೆಲಸ. ಕೆಲವು ಪತಂಗಗಳ ಕೋಶದ ತುದಿಯಲ್ಲಿ ಮುಚ್ಚಳ ಇರುವುದುಂಟು. ಮತ್ತೆ ಕೆಲವು ಪತಂಗಗಳು 'ಕಾಸ್ಟಿಕ್ ಪೊಟಾಷ್" ದ್ರಾವಣವನ್ನು ಸ್ರವಿಸಿ ಕೋಶದ ತುದಿಯನ್ನು ಕರಗಿಸಿ ಹೊರಬರುತ್ತವೆ. ಕೋಶದಿಂದ ಮೊದಲು ತಲೆ ಮತ್ತು ಎದೆಯು ಹೊರಬರುತ್ತದೆ, ನಂತರ ತನ್ನ ಕಾಲುಗಳನ್ನು ಹೊರಚಾಚುತ್ತದೆ. ಅನಂತರ ಉದರವು ಹೊರಬರುತ್ತದೆ.

**ಪ್ಯೂಪ ಮತ್ತು ಆಗತಾನೇ ಹೊರಬಂದಿರುವ ಚಿಟ್ಟೆ**

ಮಿಕೋನಿಯಮ್ ದ್ರವದಿಂದ ಚಿಟ್ಟೆಯ ದೇಹವು ಪೂರ್ತಿ ಒದ್ದೆಯಾಗಿರುತ್ತದೆ. ಆದ್ದರಿಂದ ಅವು ಹೊರಬಂದ ತಕ್ಷಣ ಹಾರಲು ಸಾಧ್ಯವಾಗುವುದಿಲ್ಲ ಇಂತಹ ಸಮಯದಲ್ಲಿ ಅವುಗಳು ತಮ್ಮ ನೈಸರ್ಗಿಕ ಶತ್ರುಗಳಿಗೆ ಆಹಾರವಾಗುವ ಸಂಭವ ಅತ್ಯಂತ ಹೆಚ್ಚು. ಚಿಟ್ಟೆಯು ಕೋಶದಿಂದ ಹೊರಬಂದ ನಂತರ ರೆಕ್ಕೆಗಳು ಕೆಳಮುಖ ವಾಗಿರುವಂತಹ ಭಂಗಿಯಲ್ಲಿ ತೂಗಿಬಿದ್ದು, ಅವನ್ನು ಒಣಗಿಸುತ್ತದೆ. ಇದಲ್ಲದೆ ರೆಕ್ಕೆಗಳಿಗೆ ರಕ್ತವು ನುಗ್ಗುವಂತೆ ಮಾಡಲು, ಸಾಕಷ್ಟು ಗಾಳಿಯನ್ನು ದೇಹದಲ್ಲಿ ತೆಗೆದುಕೊಂಡು, ಸ್ನಾಯುಗಳು ಸಂಕುಚಿಸಿ, ದೇಹದ ಒತ್ತಡ ಹೆಚ್ಚಿ, ರಕ್ತವು ರೆಕ್ಕೆಗಳನ್ನು ತಲುಪಿ, ರೆಕ್ಕೆಗಳು ವಿಸ್ತಾರಗೊಳ್ಳುತ್ತವೆ. ಸ್ವಲ್ಪ ಸಮಯದ ನಂತರ ರೆಕ್ಕೆಗಳು ಗಟ್ಟಿಯಾಗಿ ಚಿಟ್ಟೆಯು ಹಾರಲು ಸಿದ್ಧವಾಗುತ್ತದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಸುಮಾರು 15 ರಿಂದ 60 ನಿಮಿಷ ಬೇಕಾಗುತ್ತದೆ. ಕಂಬಳಿಹುಳವು ಕೋಶದಲ್ಲಿ ಚಿಟ್ಟೆಯಾಗಿ ಮಾರ್ಪಾಡಾಗಲು 10 ರಿಂದ 20 ದಿನಗಳು ಬೇಕಾಗುತ್ತದೆ. ತಾತ್ಕಾಲಿಕ ಸುಪ್ತತೆ ಇದ್ದಲ್ಲಿ ರೂಪಪರಿವರ್ತನೆಗೆ ಹಲವು ತಿಂಗಳುಗಳೇ ಹಿಡಿಯುತ್ತದೆ.

ಪ್ರೌಢ ಚಿಟ್ಟೆ ಅಥವಾ ವಯಸ್ಕ ಚಿಟ್ಟೆ : ಚಿಟ್ಟೆಗಳು ಎಂದ ತಕ್ಷಣ ಬಹುಶಃ ಜ್ಞಾಪಕಕ್ಕೆ ಬರುವುದು ಹೂವುಗಳು. ಚಿಟ್ಟೆಗಳು ಹೂವಿನ ಮೇಲೆ ಕುಳಿತುಕೊಂಡು ಮಕರಂದ ಹೀರುವುದನ್ನು ಎಲ್ಲರೂ ನೋಡಿರುತ್ತಾರೆ. ಅದಲ್ಲದೆ ಮಕ್ಕಳು ಚಿಟ್ಟೆಗಳ ಹಿಂದೆ ಓಡಿ ಹೋಗಿ ಅವುಗಳನ್ನು ಹಿಡಿಯುವ ಪ್ರಯತ್ನ ಮಾಡುತ್ತಾರೆ.

**ದೇಹ ರಚನೆ :** ಚಿಟ್ಟೆಗಳಿಗೆ ಎರಡು ಜೋಡಿ ರೆಕ್ಕೆಗಳಿದ್ದು, ಇವುಗಳಿಗೆ ಮುಂದಿನ ರೆಕ್ಕೆಗಳು ಹಾಗೂ ಹಿಂದಿನ ರೆಕ್ಕೆಗಳು ಎಂದು ಕರೆಯುತ್ತಾರೆ. ಚಿಟ್ಟೆಗಳಿಗೆ ಆ್ಯಂಟೆನಾ ಇದ್ದು ಇದು ಗ್ರಹಿಸುವ ಅಂಗವಾಗಿ ಕಾರ್ಯನಿರ್ವಹಿಸುತ್ತವೆ. ಚಿಟ್ಟೆಗಳಿಗೆ 3 ಜೊತೆ ಕಾಲುಗಳಿದ್ದು, ಕಾಲುಗಳಲ್ಲಿ ಕೂಡ ಗ್ರಹಿಸುವ ಅಂಗವಿರುತ್ತದೆ. ಸಾಮಾನ್ಯವಾಗಿ ಮೊಟ್ಟೆ ಇಡುವ ಸಮಯದಲ್ಲಿ ತಮ್ಮ ಆಹಾರ ಸಸ್ಯವನ್ನು ಗುರುತಿಸಲು ಚಿಟ್ಟೆಗಳು ತಮ್ಮ ಕಾಲುಗಳನ್ನು ಬಳಸುತ್ತವೆ. ಚಿಟ್ಟೆಗಳ ರೆಕ್ಕೆಗಳ ಮೇಲೆ ಶಲ್ಕಗಳಿದ್ದು, ಇವು ರೆಕ್ಕೆಗಳಿಗೆ ಬಣ್ಣವನ್ನು ನೀಡುತ್ತದೆ. ಬಣ್ಣವು ಚಿಟ್ಟೆಗಳನ್ನು ನೈಸರ್ಗಿಕ ಶತ್ರುಗಳಿಂದ ರಕ್ಷಿಸುತ್ತದೆ ಮತ್ತು ಕೂಡುವ ಸಮಯದಲ್ಲಿ ತನ್ನ ಪ್ರಭೇದದ ಹೆಣ್ಣು ಅಥವಾ ಗಂಡನ್ನು ಹುಡುಕಲು ನೆರವಾಗುತ್ತದೆ.

**ಅಣಕಿಸುವಿಕೆ :** ಚಿಟ್ಟೆಯ ಅಣಕಿಸುವಿಕೆಯಲ್ಲಿ ಎರಡು ಬಗೆ. ಎಲ್ಲಾ ವಿಷವಿರುವ ಚಿಟ್ಟೆಗಳು ಒಂದನ್ನೊಂದು ಹೋಲುವ ರೀತಿಯಲ್ಲಿ ಬಣ್ಣವನ್ನು ಹೊಂದಿದ್ದರೆ, ಅದಕ್ಕೆ ಮುಲೇರಿಯನ್ ಅಣಕಿಸುವಿಕೆ ಎಂದು ಹೆಸರು. ಹಾಗೆಯೇ ಒಂದು ವಿಷವಿರದ ಚಿಟ್ಟೆಯು, ವಿಷವಿರುವ ಚಿಟ್ಟೆಯನ್ನು ಅಣಕಿಸಿದರೆ ಅದಕ್ಕೆ ಬೆಟೇಷಿಯನ್ ಅಣಕಿಸುವಿಕೆ ಎಂದು ಕರೆಯುತ್ತಾರೆ.

**ಆಹಾರ ಸೇವನೆ :** ಚಿಟ್ಟೆಗಳಿಗೆ ಬೇಕಾದಂತಹ ಪ್ರೋಟೀನ್ ಹಾಗೂ ವಿಟಮಿನ್‌ಗಳು ಅವುಗಳು ಕಂಬಳಿಹುಳದ ಅವಸ್ಥೆಯಲ್ಲಿ ಇರಬೇಕಾದರೆ, ಎಲೆಗಳ ಮೂಲಕ ದೊರಕಿರುತ್ತದೆ. ಆದರೆ ಹಾರಲು ಬೇಕಾದ ಶಕ್ತಿಯನ್ನು ಉತ್ಪನ್ನ ಮಾಡುವ ಕಾರ್ಬೋಹೈಡ್ರೇಟ್‌ಗಳು ದೊರಕಿರುವುದಿಲ್ಲ. ಈ ಕಾರ್ಬೋಹೈಡ್ರೇಟ್‌ಗಳನ್ನು ಪಡೆಯಲು ಚಿಟ್ಟೆಗಳು ಹೂಗಳ ಮಕರಂದವನ್ನು ತಮ್ಮ ಸೊಂಡಿಲಿನ ಮೂಲಕ ಹೀರುತ್ತವೆ. ಕೆಲವು ಚಿಟ್ಟೆ ಪ್ರಭೇದಗಳು ಹೂಗಳ ಬಳಿ ಹೋಗದೆ ಪ್ರಾಣಿಗಳ ಮೂತ್ರದ ಮೇಲೆ, ಮರಗಳಿಂದ ಸೋರುತ್ತಿರುವ ಅಂಟಿನ ಮೇಲೆ, ಪ್ರಾಣಿಗಳ ಕಳೇಬರಗಳ ಮೇಲೆ ಕುಳಿತುಕೊಂಡು ಅಲ್ಲಿರುವ ದ್ರವವನ್ನು ಸೇವಿಸುತ್ತವೆ.

ಇದಲ್ಲದೆ ಹಲವು ಪ್ರಭೇದದ ಗಂಡು ಚಿಟ್ಟೆಗಳು ಮಣ್ಣಿನ ಮೇಲೆ ಕುಳಿತು ಲವಣಾಂಶವನ್ನು ಹೀರುತ್ತವೆ. ಗಂಡು ಚಿಟ್ಟೆಯು ಹೆಣ್ಣು ಚಿಟ್ಟೆಯನ್ನು ಕೂಡಿದಾಗ ತಾನು ಶೇಖರಿಸಿದಂತಹ ಲವಣಾಂಶವನ್ನು ಮಾತ್ರೆಗಳ ರೂಪದಲ್ಲಿ ವರ್ಗಾಯಿಸುತ್ತವೆ. ನಂತರ ಹೆಣ್ಣು ಚಿಟ್ಟೆಗಳು ಈ ಲವಣಾಂಶವನ್ನು ಮೊಟ್ಟೆಗಳ ಮೇಲ್ಪದರ ರಚನೆಗೆ ಉಪಯೋಗಿಸಿಕೊಳ್ಳುತ್ತವೆ.

**ಬಿಸಿಲು ಕಾಯಿಸುವುದು :** ನಾವು ಹಲವು ಬಾರಿ ಟಾರ್ ರಸ್ತೆಗಳ ಮೇಲೆ, ಬಟ್ಟ ಬಯಲುಗಳಲ್ಲಿ ಹಾಗೂ ಎಲೆಗಳ ಮೇಲೆ ರೆಕ್ಕೆಗಳನ್ನು ಅಗಲಿಸಿಕೊಂಡ ಚಿಟ್ಟೆಗಳನ್ನು ನೋಡಿರುತ್ತೇವೆ. ಚಿಟ್ಟೆಯ ರೆಕ್ಕೆಗಳಲ್ಲಿ ರಕ್ತನಾಳಗಳಿರುತ್ತವೆ. ಚಿಟ್ಟೆಗಳು ನಿರಾಯಾಸವಾಗಿ ಹಾರಬೇಕಾದರೆ ರಕ್ತವು ಸರಾಗವಾಗಿ ಹರಿಯಬೇಕು. ರಕ್ತವು ಸರಾಗವಾಗಿ ಹರಿಯಬೇಕಾದರೆ ಅದರ ಉಷ್ಣತೆ ಹೆಚ್ಚಿರಬೇಕು. ಆದ್ದರಿಂದ ರಕ್ತದ ಉಷ್ಣಾಂಶವನ್ನು ಹೆಚ್ಚಿಸಲು ಚಿಟ್ಟೆಗಳು ಬಿಸಿಲು ಕಾಯಿಸುತ್ತವೆ. ಚಳಿಗಾಲದಲ್ಲಿ ಸೂರ್ಯನ ಬೆಳಕು ಕಡಿಮೆ ಇರುವುದರಿಂದ ಹಲವು ಚಿಟ್ಟೆಗಳು ಬಹುಕಾಲ ಎಲೆಗಳ ಕೆಳಗೆ ನೇತುಹಾಕಿಕೊಂಡು ಕಳೆಯುತ್ತವೆ. ಮತ್ತೆ ಕೆಲವು ಪ್ರಭೇದಗಳಲ್ಲಿ ಚಳಿಗಾಲ ಪೂರ್ತಿ ಕೋಶಾವಸ್ಥೆಯಲ್ಲಿದ್ದು, ಬೇಸಿಗೆ ಶುರುವಾದಾಗ ಮಾತ್ರ ಕೋಶದಿಂದ ಹೊರಬರುತ್ತವೆ.

**ಸಂಗಾತಿ ಆಯ್ಕೆ :** ಚಿಟ್ಟೆಗಳು ಎರಡು ರೀತಿಯಲ್ಲಿ ತಮ್ಮ ಸಂಗಾತಿಯನ್ನು ಆಯ್ಕೆ ಮಾಡುತ್ತವೆ. ಒಂದು ರೀತಿಯಲ್ಲಿ ಗಂಡು ಚಿಟ್ಟೆಗಳು ಕೊಂಬೆಗಳ ಮೇಲೆ ಕುಳಿತು ಹೆಣ್ಣಿಗೆ ಕಾಯುತ್ತವೆ. ಇದಕ್ಕೆ 'ಪರ್ಚಿಂಗ್' ಎಂದು ಕರೆಯುತ್ತಾರೆ. ಮತ್ತೊಂದು ರೀತಿಯಲ್ಲಿ ಗಂಡು ಚಿಟ್ಟೆಗಳು ಹೆಣ್ಣುಗಳನ್ನು ಅರಸುತ್ತಾ ಗಸ್ತು ತಿರುಗುತ್ತವೆ. ಇದಕ್ಕೆ ಪೆಟ್ರೋಲಿಂಗ್ ಎಂದು ಹೆಸರು. ಸಾಮಾನ್ಯವಾಗಿ ಹೆಣ್ಣು ಚಿಟ್ಟೆಗಳು ಬಲಿಷ್ಠವಾದ ಹಾಗೂ ಅತ್ಯಂತ ಸುಂದರವಾದ ಗಂಡುಗಳನ್ನು ತನ್ನ ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತವೆ. ಚಿಟ್ಟೆಗಳು ತಮ್ಮ ಸಂಗಾತಿಯನ್ನು ಗುರುತಿಸಲು ರಾಸಾಯನಿಕ ಸೂಚನೆಗಳನ್ನು ಹಾಗೂ ರೆಕ್ಕೆಗಳ ಬಣ್ಣಗಳನ್ನು ಬಳಸುತ್ತವೆ.

**ಲೈಂಗಿಕ ಕ್ರಿಯೆ :** ಗಂಡು ಚಿಟ್ಟೆಯು ಹೆಣ್ಣು ಚಿಟ್ಟೆಯನ್ನು ಆಕರ್ಷಿಸಿದ ನಂತರ ಅದನ್ನು ಗಿಡದ ಮೇಲೆ ತಳ್ಳಿ ಅದು ಹಾರದಂತೆ ಮಾಡಿ ನಂತರ ಕೂಡುತ್ತದೆ. ಕೂಡುವಾಗ ಗಂಡಿನ ಕೊಕ್ಕೆಯಂತಿರುವ ಅಂಗವು ಹೆಣ್ಣನ್ನು ಬಿಗಿಯಾಗಿ ಹಿಡಿದು ತನ್ನ ಜನನಾಂಗವು ಹೆಣ್ಣಿನ ಒಳಗೆ ಸರಾಗವಾಗಿ ಹೋಗುವಂತೆ ಮಾಡುತ್ತದೆ. ಇವುಗಳ ಕೂಡುವಿಕೆ ಹಲವು ನಿಮಿಷಗಳಿಂದ ಹಿಡಿದು ಹಲವು ಗಂಟೆಗಳ ಕಾಲ ಮುಂದುವರೆಯಬಹುದು. ಇವುಗಳು ಕೂಡಿರುವಾಗ ತೊಂದರೆ ಆದ ಪಕ್ಷದಲ್ಲಿ ಹೆಣ್ಣು ಗಂಡನ್ನು ಎತ್ತಿಕೊಂಡು ಹಾರುತ್ತದೆ. ಕೆಲವು ಪ್ರಭೇದಗಳಲ್ಲಿ ಗಂಡು ಹೆಣ್ಣನ್ನು ಎತ್ತಿಕೊಂಡು ಹಾರುತ್ತದೆ.

**ಬಣ್ಣ ವ್ಯತ್ಯಾಸ ಮತ್ತು ಬಣ್ಣ ಬದಲಾವಣೆ :** ಕೆಲವು ಪ್ರಭೇದದ ಚಿಟ್ಟೆಗಳು ತಮ್ಮ ದೇಹದ ಶಾಖವನ್ನು ನಿಯಂತ್ರಿಸಲು ಬಣ್ಣವನ್ನು ಬದಲಾಯಿಸುತ್ತವೆ, ಮತ್ತೆ ಕೆಲವು ಪ್ರಭೇದಗಳಲ್ಲಿ ಗಂಡು ಹಾಗೂ ಹೆಣ್ಣಿನಲ್ಲಿ ಬಣ್ಣ ವ್ಯತ್ಯಾಸ ಕಂಡುಬರುತ್ತದೆ.

ನಾವು ಚಿಟ್ಟೆಗಳ ಬಣ್ಣ ವ್ಯತ್ಯಾಸವನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಬಹುದು:

1. ಹೆಣ್ಣು ಮತ್ತು ಗಂಡಿನಲ್ಲಿನ ವ್ಯತ್ಯಾಸ : ಸಾಮಾನ್ಯವಾಗಿ ಗಂಡು ಚಿಟ್ಟೆಗಳು ಅತ್ಯಂತ ಹೊಳಪಿನಿಂದ ಕೂಡಿದ್ದು, ಅದೇ ಪ್ರಭೇದದ ಹೆಣ್ಣು ಚಿಟ್ಟೆಗಳು ಮಾಸಿದ ಬಣ್ಣವನ್ನು ಹೊಂದಿರುತ್ತವೆ. ಹೆಣ್ಣು ಚಿಟ್ಟೆಗಳು ಮೊಟ್ಟೆ ಇಡಬೇಕಾದ ಸಂದರ್ಭದಲ್ಲಿ ಅವುಗಳು ಒಂದೇ ಕಡೆ ಕೂರಬೇಕಾದ ಪರಿಸ್ಥಿತಿ ಬರುತ್ತದೆ. ಇಂತಹ ಸಮಯದಲ್ಲಿ ಅವುಗಳ ಬಣ್ಣ ಹೊಳಪಿನಿಂದ ಕೂಡಿದಲ್ಲಿ, ಅವುಗಳು ನೈಸರ್ಗಿಕ ಶತ್ರುಗಳಿಗೆ ಸುಲಭವಾದ ತುತ್ತಾಗುವ ಸಾಧ್ಯತೆಗಳು ಜಾಸ್ತಿ ಇರುತ್ತವೆ. ಆದ್ದರಿಂದ ಇದು ನೈಸರ್ಗಿಕ ಶತ್ರುಗಳ ಕಣ್ಣಿನಿಂದ ತಪ್ಪಿಸಿಕೊಳ್ಳಲು ಹೆಣ್ಣು ಚಿಟ್ಟೆಗಳು ಮಾಡಿಕೊಂಡಿರುವ ನೈಸರ್ಗಿಕ ಹೊಂದಾಣಿಕೆ.

**2. ಋತುಗಳಿಗೆ ತಕ್ಕಂತೆ ಆಗುವ ಬಣ್ಣ ಬದಲಾವಣೆ** : ಕೆಲವು ಪ್ರಭೇದಗಳು ಋತುಗಳಿಗೆ ತಕ್ಕಂತೆ ತಮ್ಮ ರೆಕ್ಕೆಗಳ ಬಣ್ಣವನ್ನು, ಬದಲಾಯಿಸುತ್ತವೆ. ಸೆರೆಲಿಮನ್‌ಗಳು, ಈವನಿಂಗ್ ಬ್ರೌನ್‌ಗಳು, ರಿಂಗ್‌ಗಳು ಮತ್ತು ಇನ್ನಿತರ ಚಿಟ್ಟೆ ಪ್ರಭೇದಗಳು ಸಾಮಾನ್ಯವಾಗಿ ಬೇಸಿಗೆಯಲ್ಲಿ "ಒಣಕಾಲ" ರೂಪವನ್ನು ಪಡೆಯುತ್ತವೆ. ಆಗ ಅವುಗಳ ರೆಕ್ಕೆಗಳ ಮೇಲೆ ಇರುವ ಉಂಗುರಗಳು ಮತ್ತು ಪಟ್ಟೆಗಳು ಮಾಸಿ ಅವು ಬೂದಿ ಬಣ್ಣವನ್ನು ಹೊಂದುತ್ತವೆ. ಇದು ಸೂರ್ಯನ ಬೆಳಕನ್ನು ಪ್ರತಿಬಿಂಬಿಸಿ ದೇಹದ ಶಾಖವನ್ನು ನಿಯಂತ್ರಿಸಲು ಸಹಾಯಕವಾಗುತ್ತದೆ. ಇದೇ ರೀತಿ ಚಳಿಗಾಲದಲ್ಲಿ ಇವುಗಳು "ತೇವಕಾಲ" ರೂಪವನ್ನು ಹೊಂದುತ್ತವೆ. ಆಗ ಅವುಗಳ ರೆಕ್ಕೆಗಳ ಮೇಲೆ ಕಪ್ಪು ಉಂಗುರಗಳು ಹಾಗೂ ಪಟ್ಟೆಗಳು ಕಾಣಿಸಿಕೊಂಡು ಇದು ಸೂರ್ಯನ ಶಾಖವನ್ನು ಹಿಡಿದಿಡಲು ಅನುಕೂಲ ಮಾಡುತ್ತದೆ.

3. ಒಂದೇ ಪ್ರಭೇದದ ಚಿಟ್ಟೆಗಳಲ್ಲಿ ಕಂಡುಬರುವ ಬಣ್ಣ ವ್ಯತ್ಯಾಸ ಕೆಲವು ಪ್ರಭೇದದ ಚಿಟ್ಟೆಗಳಲ್ಲಿ ಒಂದಕ್ಕಿಂತ ಹೆಚ್ಚು ರೂಪಗಳನ್ನು ಕಾಣಬಹುದು. ಈ ರೀತಿಯ ವ್ಯತ್ಯಾಸವನ್ನು ಮತ್ತೆ ಎರಡು ರೀತಿಯಲ್ಲಿ ವಿಂಗಡಿಸಬಹುದು.

ಅ) ಲಿಂಗಗಳಲ್ಲಿನ ಹಲವು ರೂಪಗಳು : ಇದರಲ್ಲಿ ಒಂದೇ ಪ್ರಭೇದದ ಗಂಡು ಮತ್ತು ಹೆಣ್ಣು ಚಿಟ್ಟೆಗಳು ಹಲವು ರೂಪಗಳಲ್ಲಿ ಕಂಡುಬರುತ್ತವೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ 'ಕೌಮನ್ ಮಾರ್ಮನ್'. ಈ ಪ್ರಭೇದದ ಹೆಣ್ಣು ಚಿಟ್ಟೆಗಳು ಮೂರು ರೂಪಗಳನ್ನು ಹೊಂದಿವೆ. ಅವೆಂದರೆ ಗಂಡನ್ನು ಹೋಲುವ ರೂಪ, "ಕ್ರಿಮ್‌ಸನ್ ರೋಸ್" ಎಂಬ ಪ್ರಭೇದವನ್ನು ಅಣಕಿಸುವ ಒಂದು ರೂಪ ಮತ್ತು ಕೌಮನ್‌ರೋಸ್ ಎಂಬ ಪ್ರಭೇದವನ್ನು ಅಣಕಿಸುವ ರೂಪ.

ಆ) ವಿವಿಧ ಪ್ರದೇಶಗಳಲ್ಲಿ ಕಂಡುಬರುವ ವಿವಿಧ ರೂಪಗಳು : ಇದರಲ್ಲಿ ಒಂದೇ ಪ್ರಭೇದದ ಚಿಟ್ಟೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೂಪವನ್ನು ಹೊಂದಿರುತ್ತವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಹಿಮಾಲಯದಲ್ಲಿ ಸಿಗುವ "ಇಂಡಿಯನ್ ವೈಟ್ ಅಡ್‌ಮಿರಲ್". ಇವು ಒಟ್ಟು 5 ರೂಪಗಳನ್ನು ಹೊಂದಿದ್ದು, ಒಂದೊಂದು ಪರ್ವತಶ್ರೇಣಿಯಲ್ಲಿ ಒಂದೊಂದು ರೂಪದಲ್ಲಿ ಕಾಣಬಹುದು.

4) **ವೈಯಕ್ತಿಕ ವ್ಯತ್ಯಾಸ** : ಕೆಲವು ಪ್ರಭೇದದ ಚಿಟ್ಟೆಗಳಲ್ಲಿ ರೂಪಗಳ ವ್ಯತ್ಯಾಸ ವಂಶಪಾರಂಪರ್ಯವಾಗಿರದೆ ಅದು ಕೇವಲ ವೈಯಕ್ತಿಕ ಚಿಟ್ಟೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅಂದರೆ ಕೆಲವು ಪ್ರಭೇದದ ಚಿಟ್ಟೆಗಳು ತಮ್ಮ ಸುತ್ತಮುತ್ತಲಿನ ಪರಿಸರಕ್ಕೆ ತಕ್ಕ ಹಾಗೆ ತಮ್ಮ ರೂಪವನ್ನು ಮಾರ್ಪಾಟು ಮಾಡಿಕೊಳ್ಳುತ್ತವೆ ಹಾಗೂ ಈ ಬದಲಾವಣೆ ಕೇವಲ ಆ ಚಿಟ್ಟೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ರೀತಿಯ ವೈಯಕ್ತಿಕ ವ್ಯತ್ಯಾಸ ತೋರುವ ಚಿಟ್ಟೆ ಪ್ರಭೇದಗಳೆಂದರೆ "ಬ್ಲೂ ಓಕಾಲೀಫ್" ಮತ್ತು "ಈವನಿಂಗ್ ಬ್ರೌನ್‌ಗಳು"

**ಹಾರುವ ಕೌಲಗಳು** : ಹಲವು ಪ್ರಭೇದದ ಚಿಟ್ಟೆಗಳನ್ನು ವರ್ಷದ ಕೆಲವು ತಿಂಗಳುಗಳಲ್ಲಿ ಮಾತ್ರ ಹಾರುವುದನ್ನು ಮಾತ್ರ ಕಾಣಬಹುದು. ಈ ಒಂದು ಸಮಯಕ್ಕೆ "ಹಾರುವ ಕೌಲ" ಎಂದು ಕರೆಯುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಮೊಟ್ಟೆಯು ವಯಸ್ಕ ಚಿಟ್ಟೆಯಾಗಿ ಮಾರ್ಪಾಟಾಗಲು ಬೇಕಾದಂತಹ ಸಮಯ. ಚಿಟ್ಟೆ ಮೊಟ್ಟೆಗಳು ವಯಸ್ಕ ಚಿಟ್ಟೆಗಳಾಗಿ ಬೆಳವಣಿಗೆ ಹೊಂದಲು ಸುಮಾರು ಮೂರರಿಂದ ನಾಲ್ಕು ತಿಂಗಳುಗಳು ಹಿಡಿಯುತ್ತದೆ. ಕೆಲವು ಪ್ರಭೇದಗಳಲ್ಲಿ ಅನುಕೂಲಕರ ವಾತಾವರಣ ಬರುವವರೆಗೆ ವಯಸ್ಕ ಚಿಟ್ಟೆಗಳಾಗಿ ಮಾರ್ಪಾಡಾಗುವುದಿಲ್ಲ. ಇಂತಹ ಪ್ರಭೇದದ ಚಿಟ್ಟೆಗಳ ರೋಗಗಳು ವಯಸ್ಕ ಚಿಟ್ಟೆಗಳಾಗಿ ಮಾರ್ಪಾಟಾಗಲು ಸುಮಾರು 8 ರಿಂದ 9 ತಿಂಗಳು ತೆಗೆದುಕೊಳ್ಳುತ್ತವೆ. ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಮೊಟ್ಟೆ ಇಡುವ ಪ್ರಭೇದಗಳಿಗೆ ಕ್ರಮವಾಗಿ ಯೂನಿವೋಲ್ಟೇನ್ ಮತ್ತು ಬೈವೋಲ್ಟೇನ್ ಎಂದು ಕರೆಯುತ್ತಾರೆ. ಕೆಲವು ಪ್ರಭೇದಗಳಲ್ಲಿ ಹೆಣ್ಣು ಚಿಟ್ಟೆಗಳು ವರ್ಷದಲ್ಲಿ ಹಲವು ಬಾರಿ ಮೊಟ್ಟೆ ಇಡುತ್ತವೆ. ಇಂತಹ ಪ್ರಭೇದಗಳನ್ನು ನಾವು ವರ್ಷ ಪೂರ್ತಿ ಪ್ರೌಢ ಚಿಟ್ಟೆಯ ಹಂತದಲ್ಲಿ ಕಾಣಬಹುದು. "ಹಾರುವ ಕಾಲ"ಗಳು ಹಾಗೂ ಮೊಟ್ಟೆ ಹಾಕುವ ಸಮಯ ಹಲವು ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಅವೆಂದರೆ "ಆಹಾರ ಸಸ್ಯ ಲಭ್ಯತೆ" ಶಾಖ ಮತ್ತು ತೇವಾಂಶ.

**ಚಿಟ್ಟೆಗಳ ವರ್ಣವೈವಿಧ್ಯ** : ಇವುಗಳ ಬಣ್ಣ ಎರಡು ತೆರನಾದುದು. ರಾಚನಿಕ ಮತ್ತು ವರ್ಣಕೀಯ. ಚಿಟ್ಟೆಯ ಮೈಯ ರಿಫ್ರೇಕ್ಷಣಾಂಶಕ್ಕೂ ಗಾಳಿಯ ರಿಫ್ರೇಕ್ಷಣಾಂಶಕ್ಕೂ ವ್ಯತ್ಯಾಸವಿರುವುದರಿಂದ ಬೆಳಕು ಚಿಟ್ಟೆಯ ಮೈಯಿಂದ ಗಾಳಿಯಲ್ಲಿ ಹಾಯುವಾಗ ತನ್ನ ಘಟಕ ಅಲೆಯುದ್ದಗಳಾಗಿ ಒಡೆಯುವುದರಿಂದ ಚಿಟ್ಟೆಯ ಮೈ ವರ್ಣರಂಜಿತವಾಗಿ ಕಾಣುತ್ತದೆ. ಇದೇ ರಾಚನಿಕ ಬಗೆಯ ಬಣ್ಣ, ಈ ಕ್ರಿಯೆಯಿಂದ ನೀಲಿ, ಬಿಳಿ, ಚಿನ್ನ ಮುಂತಾದ ಬಣ್ಣಗಳು ಉಂಟಾಗುತ್ತವೆ. ವರ್ಣಕೀಯ ವರ್ಣವೈವಿಧ್ಯಕ್ಕೆ ಚಿಟ್ಟೆಯ ಹುರುಪೆ ಹಾಗೂ ಕೂದಲುಗಳಲ್ಲಿ ಅಡಕವಾಗಿರುವ ವರ್ಣಕಗಳು ಕಾರಣ. ಅನೇಕ ಚಿಟ್ಟೆಗಳಲ್ಲಿ ಬಿಳಿ, ಹಳದಿ, ಹಸಿರು, ಕೆಂಪು ಬಣ್ಣಗಳು ದೇಹದಲ್ಲಿಯೇ ಉತ್ಪತ್ತಿಯಾಗುತ್ತವೆ. ನಮಗೆ ತಿಳಿದಿರುವ ಪಕ್ಷಿಗಳಂತೆ, ಚಿಟ್ಟೆಗಳು ಮತ್ತು ಪತಂಗಗಳು ವಲಸೆಹೋಗುತ್ತವೆ. ಚಿಟ್ಟೆಗಳಲ್ಲಿ ವಲಸೆಗೆ ಹೆಚ್ಚು ಪ್ರಸಿದ್ಧಿಹೊಂದಿರುವ ಪ್ರಭೇದವೆಂದರೆ "ಮೊನಾರ್ಕ್" ಚಿಟ್ಟೆಗಳು. ಇವುಗಳು ಉತ್ತರ ಹಾಗೂ ದಕ್ಷಿಣ ಅಮೇರಿಕ ನಡುವೆ ವಲಸೆ ಹೋಗುತ್ತವೆ. ವಲಸೆ ಸಮಯದಲ್ಲಿ ಇವು ಕ್ರಮಿಸುವ ದೂರ ಸುಮಾರು 5100ಕಿ.ಮೀ ಗಳು.

ಭಾರತದಲ್ಲಿ ಕೂಡ ಕೆಲವು ಚಿಟ್ಟೆ ಪ್ರಭೇದಗಳು ಪಶ್ಚಿಮ ಘಟ್ಟಗಳು ಹಾಗೂ ದಕ್ಷಿಣ ಭಾರತದ ಬಯಲುಗಳ ನಡುವೆ ವಲಸೆಹೋಗುತ್ತವೆ. ಭಾರತದಲ್ಲಿ ಸಾಮಾನ್ಯವಾಗಿ ವಲಸೆಹೋಗುವ ಪ್ರಭೇದಗಳೆಂದರೆ ಡಾರ್ಕ್ ಬ್ಲೂ ಟೈಗರ್ ಮತ್ತು ಡಬಲ್ ಬ್ರಾಂಡೆಡ್ ಕ್ರೋ ಗಳು. ಇದಲ್ಲದೆ ಎಮಿಗ್ರೆಂಟ್‌ಗಳು ಪೀ ಬ್ಲೂಗಳು ಮತ್ತು ಲೈಮ್ ಚಿಟ್ಟೆಗಳು ಕೂಡ ವಲಸೆ ಹೋಗುವುದುಂಟು. ಡಾರ್ಕ್ ಬ್ಲೂ ಟೈಗರ್ ಹಾಗೂ ಡಬಲ್ ಬ್ರಾಂಡೆಡ್ ಕ್ರೋ ಗಳ ವಲಸೆಯನ್ನು ಅಕ್ಟೋಬರ್, ನವೆಂಬರ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬೆಂಗಳೂರು, ಮಂಡ್ಯ, ಮೇಲುಕೋಟೆ, ಮೈಸೂರು, ಬಂಡೀಪುರ ಹಾಗೂ ಹಲವು ಪ್ರದೇಶಗಳಲ್ಲಿ ಕಾಣಬಹುದು. ಹಲವು ನೀಲಿ ಹಾಗೂ ಕಪ್ಪುಬಣ್ಣದ ಚಿಟ್ಟೆಗಳು ಒಂದರ ಹಿಂದೆ ಒಂದು, ಒಂದೇ ದಿಕ್ಕಿನಲ್ಲಿ ಸುಮಾರು ಹೊತ್ತು ಹಾರುವುದನ್ನು ಕಂಡರೆ ನಾವು ಅದನ್ನು ವಲಸೆ ಎಂದು ಪರಿಗಣಿಸಬಹುದು. ವಲಸೆ ಹೋಗಲು ಮುಖ್ಯವಾದ ಕಾರಣಗಳೆಂದರೆ "ಆಹಾರ ಸಸ್ಯದ ಲಭ್ಯತೆ" ಹಾಗೂ ಋತುಮಾನದಲ್ಲಿನ ಬದಲಾವಣೆ. ಸರಿಯಾದ ಅಧ್ಯಯನ ನಡೆಯದ ಕಾರಣ ಭಾರತದ ಚಿಟ್ಟೆಗಳ ವಲಸೆಯ ಬಗ್ಗೆ ಇನ್ನೂ ಸಂಪೂರ್ಣ ಮಾಹಿತಿ ಲಭ್ಯವಿಲ್ಲ. ಪ್ರೌಢ ಚಿಟ್ಟೆಗಳು ಹಲವು ದಿನಗಳಿಂದ ಹಲವು ತಿಂಗಳುಗಳ ಕಾಲ ಜೀವಿಸಬಲ್ಲವು. ವಯಸ್ಕ ಚಿಟ್ಟೆಗಳ ಮುಖ್ಯ ಉದ್ದೇಶವೆಂದರೆ ಶತ್ರುಗಳಿಂದ ತಮ್ಮನ್ನು ರಕ್ಷಿಸಿಕೊಂಡು, ಸಂಗಾತಿಯನ್ನು ಕೂಡಿ ತನ್ನ ವಂಶವಾಹಿನಿಯನ್ನು ಮುಂದುವರೆಸಿಕೊಂಡು ಹೋಗುವುದು.

**ಚಿಟ್ಟೆ ಪ್ರಭೇದಗಳು** : ಪ್ರಪಂಚದಲ್ಲಿ ಸುಮಾರು 17 ಸಾವಿರಕ್ಕಿಂತ ಹೆಚ್ಚು ಚಿಟ್ಟೆಗಳನ್ನು ಗುರುತಿಸಲಾಗಿದೆ. ಭಾರತದಲ್ಲಿ ಇದುವರೆಗೆ 1,501 ಚಿಟ್ಟೆಗಳನ್ನು ಗುರುತಿಸಿದ್ದಾರೆ. ಇದರಲ್ಲಿ ಹಲವು ಪ್ರಭೇದಗಳು ಕೇವಲ ಹಿಮಾಲಯ, ಸಿಕ್ಕಿಮ್, ಅಸ್ಸಾಮ್ ಮತ್ತು ಇತರ ಉತ್ತರ ಪೂರ್ವ ರಾಜ್ಯಗಳಲ್ಲಿ ಮಾತ್ರ ಕಂಡುಬರುತ್ತವೆ. ದಕ್ಷಿಣ ಭಾರತದಲ್ಲಿ ಹರೀಶ್ ಗಾಂವಕರ್ ಎಂಬ ಚಿಟ್ಟೆ ವಿಜ್ಞಾನಿಯೊಬ್ಬರು ಸುಮಾರು 331 ಪ್ರಭೇದಗಳನ್ನು ಗುರುತಿಸಿದ್ದಾರೆ.

ಚಿಟ್ಟೆಗಳಲ್ಲಿ ಮುಖ್ಯವಾಗಿ 5 ಕುಟುಂಬಗಳಿವೆ. ಅವೆಂದರೆ

1. ಉಬ್ಬಿರುವ ಬಾಲ ಹೊಂದಿರುವ ಚಿಟ್ಟೆಗಳು
(ಪ್ಯಾಪಿಲಿಯೋನಿಡೆ ಆರ್ ಸ್ವಾಲೋಟೇಲ್ಸ್)
2. ಬಿಳಿ ಮತ್ತು ಹಳದಿ ಚಿಟ್ಟೆಗಳು
ಪೈರಿಡೇ: ವೈಟ್ಸ್ ಅಂಡ್ ಯೆಲ್ಲೋಸ್
3. ಬ್ರಷ್‌ನಂತೆ ಪಾದವುಳ್ಳ ಚಿಟ್ಟೆಗಳು
(ವಂಫಾಲಿಡೇ ಆರ್ ಬ್ರಷ್ ಫೋಟೆಡ್)
4. ನೀಲಿಗಳು
(ಲೈಕಾನಿಡೇ ಆರ್ ಬ್ಲೂಸ್)
5. ಜಿಗಿತಗಾರ ಚಿಟ್ಟೆಗಳು,
(ಹೆಸ್ಪಿರಿಡೆ ಆರ್ ಸ್ಕಿಪ್ಪರ್ಸ್)

**ಉಬ್ಬಿರುವ ಬಾಲವುಳ್ಳ ಚಿಟ್ಟೆಗಳು** : ಈ ಕುಟುಂಬಕ್ಕೆ ಸೇರಿದ ಚಿಟ್ಟೆಗಳಲ್ಲಿ ಹಿಂದಿನ ರೆಕ್ಕೆಗಳ ತುದಿ ಉಬ್ಬಿದ ಬಾಲದ ರೀತಿಯಲ್ಲಿ ಇರುವ ಕಾರಣ ಈ ಹೆಸರು ಬಂದಿದೆ. ಭಾರತದಲ್ಲಿ ಈ ಕುಟುಂಬಕ್ಕೆ ಸೇರಿದ ಒಂದು ಉಪಕುಟುಂಬ ಮಾತ್ರ ಕಂಡುಬರುತ್ತದೆ. ಪ್ರಪಂಚದಲ್ಲಿ ಈ ಕುಟುಂಬಕ್ಕೆ ಸೇರಿದ 700 ಪ್ರಭೇದಗಳಿದ್ದು, ಭಾರತದಲ್ಲಿ 107 ಪ್ರಭೇದಗಳು ಕಂಡು ಬರುತ್ತದೆ. ದಕ್ಷಿಣ ಭಾರತದಲ್ಲಿ 19 ಪ್ರಭೇದಗಳಿವೆ. ಈ ಕುಟುಂಬಕ್ಕೆ ಸೇರಿದ ಎಲ್ಲಾ ಚಿಟ್ಟೆಗಳು ಗಾತ್ರದಲ್ಲಿ ದೊಡ್ಡದಾಗಿದ್ದು, ಅತ್ಯಂತ ಸುಂದರವಾಗಿವೆ. ಭಾರತದ ಅತ್ಯಂತ ದೊಡ್ಡ ಚಿಟ್ಟೆಯಾದ ಸದರ್ನ್ ಬರ್ಡ್‌ವಿಂಗ್ ಈ ಕುಟುಂಬಕ್ಕೆ ಸೇರುತ್ತದೆ. ಈ ಚಿಟ್ಟೆಯ ರೆಕ್ಕೆಯ ಅಗಲ 140 ರಿಂದ 190 ಮಿ.ಮೀ. ಇದ್ದು ಹಾರುವಾಗ ಚಿಕ್ಕ ಪಕ್ಷಿಯಂತೆ ಕಾಣುತ್ತದೆ. ಈ ಕುಟುಂಬಕ್ಕೆ ಸೇರಿದ "ಲೈಮ್" ಚಿಟ್ಟೆಯು ಹತ್ತಿರದ ಪ್ರದೇಶಗಳಿಗೆ ವಲಸೆ ಹೋಗುತ್ತದೆ.

**ಬಿಳಿ ಮತ್ತು ಹಳದಿ ಚಿಟ್ಟೆಗಳು** : ಭಾರತದಲ್ಲಿ ಈ ಕುಟುಂಬಕ್ಕೆ ಸೇರಿದ 2 ಉಪಕುಟುಂಬಗಳಿವೆ. ಈ ಕುಟುಂಬಕ್ಕೆ ಸೇರಿದ ಸುಮಾರು 109 ಪ್ರಭೇದಗಳು ಭಾರತದಲ್ಲಿ ಸಿಗುತ್ತವೆ ಹಾಗೂ ದಕ್ಷಿಣ ಭಾರತದಲ್ಲಿ 35 ಪ್ರಭೇದಗಳು ಕಾಣಸಿಗುತ್ತವೆ. ಹೆಸರೇ

ಹೇಳುವಂತೆ ಈ ಕುಟುಂಬಕ್ಕೆ ಸೇರಿದ ಎಲ್ಲಾ ಚಿಟ್ಟೆಗಳು ಬಿಳಿ ಅಥವಾ ಹಳದಿ ಬಣ್ಣಗಳಿಂದ ಕೂಡಿವೆ. ಈ ಕುಟುಂಬಕ್ಕೆ ಸೇರಿದ "ಎಮಿಗ್ರೆಂಟ್" ಚಿಟ್ಟೆಗಳು ಹತ್ತಿರದ ಪ್ರದೇಶಗಳಿಗೆ ವಲಸೆ ಹೋಗುತ್ತವೆ. ನಿತ್ಯಹರಿದ್ವರ್ಣ ಕಾಡುಗಳಲ್ಲಿ ಆಲ್‌ಬಟ್ರೋಸ್ ಎಂಬ ಚಿಟ್ಟೆಯೂ ಸಹ ವಲಸೆ ಹೋಗುತ್ತದೆ. ಈ ಕುಟುಂಬಕ್ಕೆ ಸೇರಿದ ಹಲವು ಚಿಟ್ಟೆಗಳು ಯಾವುದೇ ರೀತಿಯ ವಿಷವನ್ನು ಹೊಂದಿರದ ಕಾರಣ ಪಕ್ಷಿಗಳಿಗೆ, ಉರಗಗಳಿಗೆ ಹಾಗೂ ಜೇಡಗಳಿಗೆ ಅತ್ಯಂತ ಸುಲಭವಾಗಿ ತುತ್ತಾಗಿವೆ. ಆಂಗ್ಲಭಾಷೆಯಲ್ಲಿ ಬಟರ್‌ಫ್ಲೈ ಎಂಬ ಪದ ಬಂದಿರುವುದು ಈ ಕುಟುಂಬಕ್ಕೆ ಸೇರಿದ ಚಿಟ್ಟೆಗಳಿಂದಲೇ. ಆಂಗ್ಲ ಭಾಷೆಯಲ್ಲಿ 'ಬಟರ್" ಎಂದರೆ ಬೆಣ್ಣೆ ಎಂದು ಅರ್ಥ. ಬಟರ್‌ನಂತೆ ಬಣ್ಣ ಹೊಂದಿರುವ ಹಾಗೂ ಹಾರುವ ಕೀಟಗಳಿಗೆ "ಬಟರ್‌ಫ್ಲೈ" ಎಂದು ಕರೆದಿದ್ದಾರೆ. ಈ ಗುಂಪಿಗೆ ಸೇರಿದ ಹಲವು ಪ್ರಭೇದಗಳು ಗುಂಪಲ್ಲಿ ತೇವಾಂಶವಿರುವ ಮಣ್ಣಿನಲ್ಲಿ ಕುಳಿತು ಲವಣಾಂಶವನ್ನು ಹೀರುತ್ತವೆ. ವಿಜ್ಞಾನಿಗಳು ಈ ರೀತಿ ಮಣ್ಣು ಮುಕ್ಕುವ ಪ್ರಭೇದಗಳಲ್ಲಿ ಹೆಚ್ಚಾಗಿ ಗಂಡು ಚಿಟ್ಟೆಗಳು ಮಾತ್ರ ಈ ಚಟುವಟಿಕೆಯಲ್ಲಿ ಪಾಲುಗೊಳ್ಳುತ್ತವೆಂದು ಕಂಡುಹಿಡಿದಿದ್ದಾರೆ.

**ಬ್ರಷ್‌ನಂತೆ ಪಾದವಿರುವ ಚಿಟ್ಟೆಗಳು :** ಭಾರತದಲ್ಲಿ ಈ ಕುಟುಂಬಕ್ಕೆ ಸೇರಿದ 8 ಉಪಕುಟುಂಬಗಳು ಕಂಡುಬರುತ್ತವೆ, ಭಾರತದಲ್ಲಿ ಸುಮಾರು 520 ಪ್ರಭೇದಗಳಿದ್ದು, ದಕ್ಷಿಣ ಭಾರತದಲ್ಲಿ 109 ಪ್ರಭೇದಗಳು ಸಿಗುತ್ತವೆ. ಈ ಕುಟುಂಬಕ್ಕೆ ಸೇರಿದ ಚಿಟ್ಟೆಗಳಲ್ಲಿ ಮೊದಲ ಜೋಡಿ ಕಾಲುಗಳು ಸರಿಯಾಗಿ ವಿಕಾಸಗೊಳ್ಳದೆ ಬ್ರಷ್‌ನಂತೆ ಇರುವ ಕಾರಣ ಈ ಹೆಸರು ಬಂದಿದೆ. ಈ ಕುಟುಂಬಕ್ಕೆ ಸೇರಿದ ಸಾಮಾನ್ಯ ಚಿಟ್ಟೆ ಪ್ರಭೇದಗಳೆಂದರೆ ರಿಂಗುಗಳು, ನವಾಬುಗಳು, ರಾಜಗಳು, ಕ್ರೌಸ್ಟರ್‌ಗಳು, ಫ್ಯಾನ್ಸಿಗಳು, ಇತರೆ "ಡಾನೈನೆ" ಉಪಕುಟುಂಬಕ್ಕೆ ಸೇರಿದ "ಟೈಗರ್‌ಗಳು' ಹಾಗೂ 'ಕ್ರೋ'ಗಳು ವಲಸೆಗೆ ಪ್ರಸಿದ್ಧಿಯಾಗಿವೆ.

**ನೀಲಿಗಳು :** ಈ ಕುಟುಂಬಕ್ಕೆ ಸೇರಿದ ಸುಮಾರು ಎಲ್ಲಾ ಚಿಟ್ಟೆಗಳಲ್ಲಿ ಮೇಲಿನ ಭಾಗದಲ್ಲಿ ನೀಲಿ ಬಣ್ಣವಿದ್ದು ಇವಕ್ಕೆ ನೀಲಿಗಳು ಎಂಬ ಹೆಸರು ಬಂದಿದೆ. ಭಾರತದಲ್ಲಿ ಈ ಕುಟುಂಬಕ್ಕೆ ಸೇರಿದ 5 ಉಪಕುಟುಂಬಗಳಿದ್ದು, 450 ಪ್ರಭೇದಗಳಿವೆ. ದಕ್ಷಿಣ ಭಾರತದಲ್ಲಿ ಸುಮಾರು 100 ಪ್ರಭೇದಗಳಿವೆ. ಭಾರತದ ಅತ್ಯಂತ ಚಿಕ್ಕ ಗಾತ್ರದ ಚಿಟ್ಟೆಯಾದ "ಗ್ರಾಸ್ ಜ್ಯುಯೆಲ್" ಈ ಕುಟುಂಬಕ್ಕೆ ಸೇರಿದೆ. ಪೀ ಬ್ಲೂ ಎಂಬ ಚಿಟ್ಟೆಯು ಹತ್ತಿರ ಪ್ರದೇಶಗಳಿಗೆ ವಲಸೆ ಹೋಗುತ್ತವೆ. ಈ ಕುಟುಂಬಕ್ಕೆ ಸೇರಿದ ಸಾಮಾನ್ಯ ಚಿಟ್ಟೆ ಪ್ರಭೇದಗಳೆಂದರೆ ಪೈರೋಗಳು, ಸಿಲ್ವರ್‌ಲೈನ್‌ಗಳು, ಓಕ್‌ಬ್ಲೂಗಳು, ಗ್ರಾಸ್‌ಬ್ಲೂಗಳು, ರಾಯಲ್‌ಗಳು, ಲೈನ್ ಬ್ಲೂಗಳು ಇತರೆ.

**ಜಿಗಿತದ ಚಿಟ್ಟೆಗಳು :** ಈ ಕುಟುಂಬದ ಚಿಟ್ಟೆಗಳಲ್ಲಿ ಎದೆಯ ಭಾಗವು ಹೊಟ್ಟೆಯ ಭಾಗಕ್ಕಿಂತ ಪ್ರಮುಖವಾಗಿದ್ದು, ಇವುಗಳು ವೇಗವಾಗಿ ಹಾರಲು ಅನುಕೂಲವಾಗಿವೆ. ಈ ಕುಟುಂಬಕ್ಕೆ ಸೇರಿದ ಚಿಟ್ಟೆ ಪ್ರಭೇದಗಳು ಸಾಮಾನ್ಯವಾಗಿ ಒಂದೇ ಕಡೆ ಹೆಚ್ಚು ಹೊತ್ತು ಕೂರದೆ ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಅತ್ಯಂತ ವೇಗವಾಗಿ ಹಾರುವ ಕಾರಣ ಈ ಹೆಸರು ಬಂದಿದೆ.

ಭಾರತದಲ್ಲಿ ಈ ಕುಟುಂಬಕ್ಕೆ ಸೇರಿದ 3 ಉಪಕುಟುಂಬಗಳಿದ್ದು, 320 ಪ್ರಭೇದಗಳಿವೆ. ದಕ್ಷಿಣ ಭಾರತದಲ್ಲಿ ಸುಮಾರು 95 ಪ್ರಭೇದಗಳಿವೆ. ಈ ಕುಟುಂಬಕ್ಕೆ ಸೇರಿದ ಹಲವು ಚಿಟ್ಟೆಗಳ ಚಟುವಟಿಕೆ ರಾತ್ರಿ ಮಾತ್ರ.

**ಪರಿಸರದಲ್ಲಿ ಚಿಟ್ಟೆಗಳ ಮಹತ್ವ :** ಚಿಟ್ಟೆಗಳು ಪರಾಗಸ್ಪರ್ಶಕ್ರಿಯೆಗೆ ಅತ್ಯಂತ ಪ್ರಸಿದ್ಧಿಯಾಗಿದ್ದರೂ, ಇತರ ಕೀಟಗಳಿಗೆ ಹೋಲಿಸಿದರೆ ಇವುಗಳ ಪಾತ್ರ ಅತ್ಯಂತ ಕಡಿಮೆ. ಚಿಟ್ಟೆಗಳ ಪ್ರಮುಖ ಪಾತ್ರವೆಂದರೆ ಆಹಾರ ಸರಪಳಿಯಲ್ಲಿ ಹೆಚ್ಚಿನ ಮಟ್ಟದಲ್ಲಿ ಭಾಗವಹಿಸಿ ಪರಿಸರದ ಸಮತೋಲನವನ್ನು ಕಾಪಾಡುವುದು. ಉರಗಗಳು, ಪಕ್ಷಿಗಳು ಹಾಗೂ ಹಲವು ಕೀಟವರ್ಗಗಳು ಚಿಟ್ಟೆಗಳ ಮೆಲೆ ಆಹಾರಕ್ಕಾಗಿ ಅವಲಂಭಿಸಿವೆ. ಕೇವಲ ವಯಸ್ಕ ಚಿಟ್ಟೆಗಳಲ್ಲದೆ, ಎಲ್ಲಾ ಹಂತಗಳಲ್ಲಿಯೂ ಇವು ಆಹಾರವಾಗಿವೆ. ಹಲವು ಬಗೆಯ ನೊಣಗಳು, ಕಣಜಗಳು ಹಾಗೂ ಇತರ ಚಿಕ್ಕ ಕೀಟಗಳು ತಮ್ಮ ಮೊಟ್ಟೆಗಳನ್ನು ಚಿಟ್ಟೆಯ ಮೊಟ್ಟೆಗಳಲ್ಲಿ ಇಡುತ್ತವೆ. ಈ ಮೊಟ್ಟೆಗಳು ತಾವು ಇರುವ ಚಿಟ್ಟೆಯ ಮೊಟ್ಟೆಗಿಂತ ಮುಂಚೆ ಒಡೆದು ಹೊರಬಂದು ನಂತರ ಚಿಟ್ಟೆ ಮೊಟ್ಟೆಯನ್ನು ಆಹಾರವಾಗಿ ಬಳಸಿಕೊಳ್ಳುತ್ತವೆ.

ಹಲವು ಬಗೆಯ ಕಣಜಗಳು ತಮ್ಮ ಮೊಟ್ಟೆಗಳನ್ನು ಕಂಬಳಿಹುಳುವಿನಲ್ಲಿ ಇಡುತ್ತವೆ. ಈ ಮೊಟ್ಟೆಗಳು ಒಡೆದು, ಕಣಜದ ಮರಿಗಳು ಕಂಬಳಿಹುಳವನ್ನು ತಿನ್ನುತ್ತವೆ, ನಂತರ ಕೋಶವನ್ನು ರಚಿಸುತ್ತವೆ. ಈ ರೀತಿಯ ಪರಿಸ್ಥಿತಿಗಳಲ್ಲಿ ಕಂಬಳಿಹುಳವು ತಕ್ಷಣ ಸಾಯದೆ, ನಿಧಾನವಾಗಿ ಸಾವನ್ನಪ್ಪುತ್ತದೆ. ಮತ್ತೆ ಕೆಲವು ಬಗೆಯ ಕಣಜಗಳು ಕಂಬಳಿಹುಳುವನ್ನು ಎತ್ತಿಕೊಂಡು ಹಾರಿ ಹೋಗಿ, ಅದನ್ನು ಸಾಯಿಸದೆ ತನ್ನ ಗೂಡಿನಲ್ಲಿ ಬಿಟ್ಟು, ಅಲ್ಲಿ ತನ್ನ ಮೊಟ್ಟೆ ಇಟ್ಟು ಗೂಡನ್ನು ಮುಚ್ಚುತ್ತದೆ. ನಂತರ ಮೊಟ್ಟೆ ಒಡೆದು ಕಣಜದ ಮರಿಗಳು ಜೀವಂತ ಇರುವ ಕಂಬಳಿಹುಳುವನ್ನು ತಿನ್ನುತ್ತವೆ. ಬೀ–ಈಟರ್‌ಗಳು, ಬುಲ್‌ಬುಲ್‌ಗಳು ಹಾಗೂ ಹಲವು ಚಿಕ್ಕಚಿಕ್ಕ ಪಕ್ಷಿಗಳು ಕಂಬಳಿಹುಳಗಳನ್ನು ಹಾಗೂ ವಯಸ್ಕ ಚಿಟ್ಟೆಗಳನ್ನು ತಿಂದು ಬದುಕುತ್ತವೆ. ಇದಲ್ಲದೆ ಗೋಸುಂಬೆಗಳು, ಹಲ್ಲಿಗಳೂ ಕೂಡ ಪತಂಗ ಹಾಗೂ ಚಿಟ್ಟೆಗಳನ್ನು ಯಥೇಚ್ಛವಾಗಿ ತಿನ್ನುತ್ತವೆ. ಕೆಲವು ಚಿಟ್ಟೆ ಪ್ರಭೇದಗಳು ಸಣ್ಣ ಪ್ರಮಾಣದಲ್ಲಿ ವಿಷವನ್ನು ಹೊಂದಿದ್ದು, ಯಾವುದೇ ಪಕ್ಷಿಯು ಇಂತಹ ಪ್ರಭೇದಗಳ ತಂಟೆಗೆ ಹೋಗುವುದಿಲ್ಲ. ಕೆಲವೊಮ್ಮೆ ಹೆಚ್ಚು ತಿಳುವಳಿಕೆ ಇರದ ಕೆಲವು ಮರಿಹಕ್ಕಿಗಳು ಇಂತಹ ಚಿಟ್ಟೆಗಳನ್ನು ಹಿಡಿದು ತಿನ್ನಲು ಹೋಗಿ ಆನಂತರ ವಾಂತಿ ಮಾಡಿಕೊಳ್ಳುತ್ತವೆ. ಈ ರೀತಿಯ ವಿಷ ಚಿಟ್ಟೆ ಪ್ರಭೇದಗಳು ತಾವು ಕಂಬಳಿಹುಳುವಿನ ಹಂತದಲ್ಲಿರುವಾಗಲೇ ತಮ್ಮ ಆಹಾರ ಸಸ್ಯದಲ್ಲಿರುವ ಕೆಲವು ವಿಷಕಾರಿಯಾದ ರಾಸಾಯನಿಕಗಳನ್ನು ತಮ್ಮ ದೇಹದಲ್ಲಿ ಸಂಗ್ರಹಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಇಂತಹ ವಿಷಕಾರಿ ಚಿಟ್ಟೆಗಳು ಕೆಂಪು ಹಾಗೂ ಇತರ ಪ್ರಕಾಶಮಾನವಾದ ಬಣ್ಣಗಳನ್ನು ಹೊಂದಿದ್ದು, ತಮ್ಮ ಶತ್ರುಗಳಿಗೆ ತಾವು ವಿಷಕಾರಿಯಾದ ಬಣ್ಣದ ಮೂಲಕ ಸೂಚಿಸುತ್ತವೆ. ಅನೇಕ ಜೇಡ ಪ್ರಭೇದಗಳು ಇಂತಹ ವಿಷಕಾರಿ ಚಿಟ್ಟೆ ಪ್ರಭೇದಗಳನ್ನು ಹಿಡಿದು ತಿನ್ನುತ್ತವೆ. ಸಾಮಾನ್ಯವಾಗಿ ಕೆಲವು ತುಂಬ ದೊಡ್ಡ ಚಿಟ್ಟೆಗಳನ್ನು ಬಿಟ್ಟು ಉಳಿದ ಎಲ್ಲಾ ಚಿಟ್ಟೆ ಪ್ರಭೇದಗಳನ್ನು ಜೇಡಗಳು ತಿನ್ನುತ್ತವೆ. ಚಿಟ್ಟೆಗಳಿಗೆ ಇಷ್ಟೊಂದು ನೈಸರ್ಗಿಕ ಶತ್ರುಗಳಿರುವ ಕಾರಣ ಕೇವಲ ಶೇಕಡಾ ಐದರಷ್ಟು ಚಿಟ್ಟೆಗಳು ಪ್ರೌಢ ಹಂತ ತಲುಪುತ್ತವೆ. ಕೆಲವು ಸಸ್ಯಪ್ರಭೇದಗಳು ಪರಾಗಸ್ಪರ್ಶಕ್ಕಾಗಿ ಕೇವಲ ಚಿಟ್ಟೆಗಳನ್ನು ಅವಲಂಬಿಸಿವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಮಾರ್ಗಡೆ ಅಥವಾ ಕೆಗ್ಗಣಿಕೆ. ಚಿಟ್ಟೆಗಳು ಮಕರಂದಕ್ಕಾಗಿ ಒಂದು ಹೂವಿನ ಮೇಲೆ ಕುಳಿತಾಗ, ಅವುಗಳ ಕಾಲುಗಳಿಗೆ ಹಾಗೂ ಲೇಬಿಯಲ್ ಪಲ್ಪ್ ಎಂಬ ಅಂಗಕ್ಕೆ ಪರಾಗವು ಅಂಟಿಕೊಳ್ಳುತ್ತದೆ. ಈ ಚಿಟ್ಟೆಯು ಅದೇ ಪ್ರಭೇದದ ಮತ್ತೊಂದು ಗಿಡದ ಮೇಲೆ ಕುಳಿತಾಗ ಪರಾಗಸ್ಪರ್ಶವಾಗುತ್ತದೆ.

ವಿಜ್ಞಾನಿಗಳು ತಮ್ಮ ಹಲವು ಸಂಶೋಧನೆಗಳಲ್ಲಿ ಚಿಟ್ಟೆಗಳನ್ನು ಹಾಗೂ ಪತಂಗಗಳನ್ನು ಬಳಸಿಕೊಳ್ಳುತ್ತಾರೆ. ಜೀವವಿಕಸನ ಬಗೆಯ ಸಂಶೋಧನೆಗಳಲ್ಲಿ ಇವುಗಳ ಪಾತ್ರ ಪ್ರಮುಖವಾಗಿದೆ. ಚಿಟ್ಟೆಗಳು ತಮ್ಮ ಆಹಾರಸಸ್ಯದ ಮೇಲೆ ಅವಲಂಬಿತವಾಗಿರುವ ಕಾರಣ, ಒಂದು ಜಾಗದ ಸಸ್ಯರಾಶಿ ಹಾಗೂ ಅಲ್ಲಿಯ ಪರಿಸರದ ಸ್ಥಿತಿಗತಿಯನ್ನು ಅಲ್ಲಿಯ ಚಿಟ್ಟೆಗಳನ್ನು ನೋಡಿಯೇ ನಿರ್ಧರಿಸಬಹುದು. ಥೈಲಂಡ್ ಹಾಗೂ ಕೋಸ್ಟರೀಕ ದೇಶಗಳಲ್ಲಿ ಹಲವು ಮಂದಿ ಚಿಟ್ಟೆ ಉದ್ಯಾನಗಳನ್ನು ಇಟ್ಟುಕೊಂಡಿದ್ದಾರೆ. ಜನರು ದುಡ್ಡು ಕೊಟ್ಟು ಈ ಉದ್ಯಾನವನಗಳಲ್ಲಿ ಅಡ್ಡಾಡಬಹುದು. ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧವಾದ ಮೈಸೂರು ರೇಷ್ಮೆ ಸೀರೆಗಳನ್ನು ಮಾಡುವುದು, ಒಂದು ರೀತಿಯ ಪತಂಗಗಳ ಕೋಶದ ರೇಷ್ಮೆಗಳನ್ನು ಉಪಯೋಗಿಸಿಕೊಂಡು. ಹಲವು ದೇಶಗಳಲ್ಲಿ ಭಾರತದ ಚಿಟ್ಟೆಗಳನ್ನು ಕಾನೂನುಬಾಹಿರವಾಗಿ ಕದ್ದೊಯ್ದು, ಅತ್ಯಂತ ಹೆಚ್ಚಿನ ಬೆಲೆಗಳಿಗೆ ಮಾರುತ್ತಾರೆ. ಚಿಟ್ಟೆಗಳ ಹಾಗೂ ಅವುಗಳ ಆಹಾರಸಸ್ಯಗಳ ಸಂಬಂಧ ಅತ್ಯಂತ ಸೂಕ್ಷ್ಮವಾಗಿದೆ. ಅವುಗಳ ಆಹಾರ ಸಸ್ಯಗಳು ಮಾಯ ಆಗುತ್ತಿದ್ದಂತೆಯೇ, ಅದನ್ನು ಅವಲಂಭಿಸಿದ ಚಿಟ್ಟೆ ಪ್ರಭೇದಗಳು ಕ್ರಮೇಣವಾಗಿ ನಶಿಸಿಹೋಗುತ್ತವೆ. ಚಿಟ್ಟೆಗಳ ಜೀವನದ ಹಂತಗಳು ಹೊರಗಿನ ಉಷ್ಣತೆ, ಬಿಸಿಲು ಹಾಗೂ ತೇವಾಂಶಗಳನ್ನು ಹೆಚ್ಚಾಗಿ ಅವಲಂಬಿಸಿವೆ. ಆದ್ದರಿಂದ ಹೊರಗಿನ ವಾತಾವರಣದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಸಹ ಚಿಟ್ಟೆಗಳು ವಲಸೆಹೋಗುತ್ತವೆ ಅಥವಾ ತಾತ್ಕಾಲಿಕ ಸುಪ್ತತೆಯನ್ನು ತಲುಪುತ್ತವೆ.

ಹಲವು ಚಿಟ್ಟೆಗಳು ಪಶ್ಚಿಮ ಘಟ್ಟಗಳಲ್ಲಿ ಕಂಡುಬರುವ ಹುಲ್ಲುಗಾವಲಿನ ಕಣಿವೆ ಕಾಡುಗಳಲ್ಲಿ ಬದುಕುತ್ತವೆ. ಇಂತಹ ಪ್ರದೇಶಗಳನ್ನು ಶೋಲಾ ಎಂದು ಕರೆಯುತ್ತಾರೆ. ಈ ಶೋಲಾಗಳ ಮಹತ್ವ ಅರಿಯದ ಹಲವರು, ಇದಕ್ಕೆ ಬೆಂಕಿ ಹಚ್ಚುತ್ತಾರೆ ಹಾಗೂ ತಮ್ಮ ದನಕರುಗಳನ್ನು ಮೇಯಲು ಬಿಡುತ್ತಾರೆ. ಇಂತಹ ಶೋಲಾಗಳಲ್ಲಿ ಜನರು ಹೋಗಿ ಹಾಳುಮಾಡದಂತೆ ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಇತ್ತೀಚೆಗೆ ರಾಸಾಯನಿಕ ಕೀಟನಾಶಕಗಳ ಬಳಕೆ ಹೆಚ್ಚುತ್ತಿದೆ. ಈ ಕೀಟನಾಶಕಗಳಿಂದ ಕಂಬಳಿಹುಳಗಳು ತಕ್ಷಣ ಸತ್ತುಹೋಗುತ್ತವೆ. ಪಶ್ಚಿಮ ಘಟ್ಟಗಳಿಗೆ ಹೊಂದಿಕೊಂಡಂತೆ ಇರುವ ಹಲವು ಟೀ ಮತ್ತು ಕಾಫೀ ತೋಟಗಳಲ್ಲಿ ರಾಸಾಯನಿಕ ಕೀಟನಾಶಕಗಳ ಬಳಕೆ ಹೆಚ್ಚಾಗಿರುವುದರಿಂದ ಅನೇಕ ಚಿಟ್ಟೆ ಪ್ರಭೇದಗಳು ದಿನೇ ದಿನೇ ಕಡಿಮೆ ಆಗುತ್ತಿವೆ.

ಇದಲ್ಲದೆ ನಮ್ಮ ಕಾಡುಗಳಲ್ಲಿ ಪ್ಲಾಸ್ಟಿಕ್ ಕಸದ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕಾಡುಗಳಿಗೆ ಮೋಜಿಗಾಗಿ ಹೋಗುವ ಜನರು, ಎಲ್ಲಾ ಪ್ಲಾಸ್ಟಿಕ್ ಚೀಲಗಳನ್ನು ಹಾಗೂ ಸಾರಾಯಿ ಬಾಟಲಿಗಳನ್ನು ಅಲ್ಲೇ ಬಿಟ್ಟು ಬರುತ್ತಾರೆ. ಇಂತಹ ಪ್ಲಾಸ್ಟಿಕ್ ಚೀಲಗಳನ್ನು ತಿಂದ ಹಲವು ಪ್ರಾಣಿಗಳು ಸಾಯುತ್ತವೆ. ಅದಲ್ಲದೆ ಈ ಪ್ಲಾಸ್ಟಿಕ್ ಚೀಲಗಳು ಗಿಡಗಳ ಬೆಳವಣಿಗೆಯನ್ನು ಕುಂದಿಸುತ್ತವೆ. ಗಿಡಗಳ ಪ್ರಮಾಣ ಕುಂಠಿತವಾದರೆ ಇವುಗಳನ್ನು ಅವಲಂಬಿಸಿದ ಪ್ರಾಣಿ, ಪಕ್ಷಿ ಹಾಗೂ ಕೀಟಗಳು ಕ್ರಮೇಣ ನಶಿಸಿಹೋಗುತ್ತಿವೆ. ಆದ್ದರಿಂದ ನಮ್ಮನ್ನು ನಾವು ಉಳಿಸಿಕೊಳ್ಳಬೇಕೆಂದರೆ ಮಾಡಬೇಕಾಗಿರುವ ಕೆಲಸಗಳೆಂದರೆ ಕಾಡುಗಳನ್ನು ಬೆಳೆಸುವುದು, ನೀರನ್ನು ಮಿತವಾಗಿ ಬಳಸುವುದು, ಪ್ಲಾಸ್ಟಿಕ್ ಅನ್ನು ಕಡಿಮೆ ಬಳಸುವುದು ಹಾಗೂ ನಮ್ಮ ವ್ಯಾಮೋಹಗಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಂಡು ಪರಿಸರದ ಬಗ್ಗೆ ಸ್ವಲ್ಪ ಕಾಳಜಿ ವಹಿಸುವುದು.

**ಪರಿಷ್ಕರಣೆ: ಕೆ.ಆರ್.ಕಿಶನ್‌ದಾಸ್**

**ಚಿಟ್ಟೆ ಮೀನು :** ಆಳವಿಲ್ಲದ ನೀರಿನಲ್ಲಿ ಜೀವಿಸುವ ವರ್ಣರಂಜಿತ ದೇಹದ ಹಲವು ಜಾತಿಯ ಸಮುದ್ರವಾಸಿ ಮೀನುಗಳಿಗೆ ಬಳಸುವ ಒಂದು ಸಾಮಾನ್ಯ ಹೆಸರು (ಬಟರ್‌ಫ್ಲೈ ಫಿಷ್). ಆಸ್ಟಿಯೋಗ್ಲಾಸಿಡೀ ಕುಟುಂಬದ ಪ್ಯಾಂಟೊಡಾನ್ ಬುಕ್‌ಹೋಲ್‌ಟ್ಸೈ (ಆಫ್ರಿಕದ ಚಿಟ್ಟೆಮೀನು). ಕೀಟೋಡಾಂಟಿಡೆ ಕುಟುಂಬದ ಕೀಟೊಡಾನ್ ಆರ್ನೇಟಿಸಿಸಮ್ (ವಿದೂಷಕ ಚಿಟ್ಟೆಮೀನು), ಫಾರ್ಸಿಪೈಜರ್ ಲಾಂಜಿರಾಸ್ಟ್ರಿಸ್ (ಉದ್ದಮೂತಿಯ ಚಿಟ್ಟೆ ಮೀನು), ಹೆನಿಯೋಕಸ್ (ಇಂಡೊ–ಪೆಸಿಫಿಕ್ ಚಿಟ್ಟೆ ಮೀನು)ಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಆಫ್ರಿಕದ ಚಿಟ್ಟೆಮೀನು ತುಂಬ ಚಿಕ್ಕದು; ಇದರ ಉದ್ದ 5." ಸಾಮಾನ್ಯವಾಗಿ ನೀರಿನ ಮೇಲ್ಮೈಯ ಕೆಳಗೆ ಚಲಿಸದೆ ತೂಗುತ್ತಿರುವಂತೆ ನಿಂತಿರುತ್ತದೆ. ಆದರೆ ಆಗಾಗ ನೀರಿನಿಂದ 2 ಮೀ. ದೂರಕ್ಕೆ ನೆಗೆಯಬಲ್ಲದು. ಇದರಿಂದಾಗಿ ಗಾಜಿನ ತೊಟ್ಟಿಯಲ್ಲಿ ಸಾಕುವಾಗ ತೊಟ್ಟಿಯ ಮೇಲ್ಭಾಗವನ್ನು ಮುಚ್ಚ ಬೇಕಾಗುತ್ತದೆ. ನೀರಿನ ಮೇಲೆ ವಾಸಿಸುವ ಅಥವಾ ನೀರಿಗೆ ಬಂದು ಬೀಳುವ ಚಿಟ್ಟೆಗಳನ್ನು ಹಿಡಿದು ತಿಂದು ಜೀವಿಸುತ್ತದೆ. ಕೀಟೊಡಾಂಟಿಡೆ ಕುಟುಂಬಕ್ಕೆ ಸೇರಿದ ಚಿಟ್ಟೆ ಮೀನುಗಳು ಉಷ್ಣವಲಯದ ಸಮುದ್ರಗಳ ಹವಳದ ಗೂಡುಗಳಲ್ಲಿ ವಾಸಿಸುತ್ತವೆ. ಎಲ್ಲವೂ ಬಲು ವರ್ಣರಂಜಿತ. ಇವುಗಳ ಬೆನ್ನಿನ, ಬಾಲದ ಮತ್ತು ಗುದದ್ವಾರದ ಬಳಿಯ ರೆಕ್ಕೆಗಳ ಮುಂಭಾಗದಲ್ಲಿ ಅನೇಕ ಮುಳ್ಳುಗಳಿರುತ್ತವೆ. ಈ ಮುಳ್ಳುಗಳ ಮೃದುವಾದ ರೇಖೆಗಳು ಬಾಲದ ರೆಕ್ಕೆಯ ಬಳಿ ದೇಹದ ಸುತ್ತ ಸುತ್ತಿಕೊಳ್ಳುವಂತೆ ಚಾಚಿವೆ. ಎದ್ದು ಕಾಣುವ ಬಣ್ಣಗಳ ಜೊತೆಗೆ ಈ ಮೀನುಗಳ ಮೂತಿ ಉದ್ದವಾಗಿ ಚಾಚಿಕೊಂಡಿರುತ್ತದೆ.



ವಿದೂಷಕ ಚಿಟ್ಟೆ ಮೀನು

ವಿದೂಷಕ ಚಿಟ್ಟೆ ಮೀನು ಪೆಸಿಫಿಕ್ ಸಾಗರದ ಉಷ್ಣಪ್ರದೇಶಗಳಲ್ಲಿ ವಾಸಿಸುತ್ತದೆ. ಅದರ ಮೂತಿ ಮೇಲಕ್ಕೆ ಎದ್ದುಕೊಂಡಂತಿದೆ. ಫಾರ್ಸಿಪೈಜರ್ ಜಾತಿಯ ಮೀನುಗಳ ಮೂತಿ ವಿಪರೀತ ಉದ್ದ. ಇದರ ತುದಿಯಲ್ಲಿ ಮೊನೆಯಾದ ಮೂಗೂ ವಿವಿಧ ರೀತಿಯಲ್ಲಿ ಮಾರ್ಪಟ್ಟಿರುವ ಬಾಯೂ ಉಂಟು. ಕೆಲವು ಚಿಟ್ಟೆ ಮೀನುಗಳ ಹಲ್ಲುಗಳು ಉಳಿಯಂತಿವೆ. ಇವುಗಳ ಸಹಾಯದಿಂದ ಮೀನುಗಳು ಹವಳದ ಕುಡಿಗಳನ್ನು ಚಿವುಟಿಕೊಂಡು ಕಬಳಿಸುತ್ತವೆ. ಲಾಂಜಿರಾಸ್ಟ್ರಸ್ ಪ್ರಭೇದದ ಚಿಟ್ಟೆಮೀನು ತನ್ನ ನೀಳವಾದ ಮೂತಿಯ ಸಹಾಯದಿಂದ ಹವಳದ ಗೂಡಿನೊಳಕ್ಕೆ ಹೊಕ್ಕಿರುವ ಸಣ್ಣಪುಟ್ಟ ಕಠಿಣಚರ್ಮಿಗಳನ್ನು ಹುಡುಕಿ ತೆಗೆದು ತಿನ್ನುವುದುಂಟು. ಹಿಂದೂ ಮತ್ತು ಪೆಸಿಫಿಕ್ ಸಾಗರಗಳಲ್ಲಿ ವಾಸಿಸುವ ಹೆನಿಯೋಕಸ್ ಜಾತಿಯ ಚಿಟ್ಟೆ ಮೀನುಗಳಲ್ಲಿ ಬೆನ್ನಿನ ಮೇಲಿನ ಒಂದು ಮುಳ್ಳು ನೀಳವಾದ ದಾರದಂತೆ ಮಾರ್ಪಟ್ಟಿರುತ್ತದೆ.



ಉದ್ದ ಮೂತಿಯ ಚಿಟ್ಟೆ ಮೀನು

**ಚಿತ್ :** ತಾನೂ ಪ್ರಕಾಶಿಸಿ ಇತರ ವಸ್ತುಗಳನ್ನೂ ಪ್ರಕಾಶಿಸುವಂಥ ತೇಜೋಧಾತು ಎನ್ನುವ ಮುಖ್ಯ ಅರ್ಥದಲ್ಲಿ ಚಿತ್ ಶಬ್ದವನ್ನು ತತ್ತ್ವಶಾಸ್ತ್ರದಲ್ಲಿ ಬಳಸಲಾಗುತ್ತದೆ. ಈ ಅರ್ಥವನ್ನು ಸ್ವಲ್ಪ ಸಡಿಲಿಸಿಕೊಂಡೇ ಚಿತ್ ಎಂದರೆ ಮನಸ್ಸು, ಬುದ್ಧಿ, ಪ್ರಾಣ, ವಿವೇಕ ಎಂಬ ಅರ್ಥಗಳಲ್ಲೂ ಬಳಸುತ್ತಾರೆ. ಆದರೆ ಇದರ ಮುಖ್ಯ ಅರ್ಥವನ್ನು ಬಿಡದೆ ಉಪಯೋಗಿಸುವುದಾದರೆ ಇದು ಆತ್ಮ ಅಥವಾ ಬ್ರಹ್ಮತತ್ತ್ವ ಎಲ್ಲದಕ್ಕೂ ಮೂಲವೆಂಬಂತೆ ಅಸ್ತಿತ್ವವನ್ನು ಸೂಚಿಸುವ ಹಾಗೆ ತಾನೇ ಚಿದ್ವಸ್ತು ಎಂದೂ ಸೂಚಿಸಿಕೊಳ್ಳುತ್ತದೆ. ಈ ಅರ್ಥದಲ್ಲಿಯೇ ಉಪನಿಷತ್ತುಗಳು ಬ್ರಹ್ಮ ಅಥವಾ ಆತ್ಮತತ್ತ್ವವನ್ನು ಸತ್ ಚಿತ್ ಆನಂದವೆಂತಲೂ ಸತ್ಯಂ ಜ್ಞಾನಂ ಅನಂತಂ ಎಂತಲೂ ನಿರ್ದೇಶಿಸುತ್ತವೆ.

ಪರಮಾರ್ಥ ತತ್ತ್ವವಾದ ಬ್ರಹ್ಮತತ್ತ್ವ ಎಲ್ಲದರ ಇರುವಿಕೆಗೆ ಆಧಾರವಾಗಿದ್ದು ಎಲ್ಲದರ ಇರವನ್ನೂ ಆಗಗೊಳಿಸುವುದರಿಂದ ಸತ್‌ತತ್ತ್ವ ಎಂದು ಕರೆಯಿಸಿಕೊಳ್ಳುವುದು ಸಹಜ. ಇದು ನಿತ್ಯ, ನಿರಂತರ, ಅಕ್ಷರ ಆಗಿರುವಂಥ ಬ್ರಹ್ಮದ ಲಕ್ಷಣ. ಇಂಥ ಸದ್ವಸ್ತು ಏಕೆ ಜಡಾತ್ಮಕ ಅಥವಾ ಅಚೇತನಾತ್ಮಕವಾಗಿರಬಾರದು–ಎನ್ನುವುದಕ್ಕೆ ಉತ್ತರ ರೂಪದಲ್ಲಿ ಅದು ಚಿದ್ವಸ್ತು ಅಥವಾ ಚೇತನಾತ್ಮಕವಾದದ್ದು ಎಂದು ಉಪನಿಷತ್ತುಗಳು ಸಾರುತ್ತವೆ. ಹೀಗೆ ಬ್ರಹ್ಮತತ್ತ್ವವನ್ನು ಸ್ವಯಂಜ್ಯೋತಿ, ಸ್ವಪ್ರಕಾಶ ಎಂದು ನಿರ್ದೇಶಿಸಿವೆ. ಮೂಲಭೂತವಾಗಿ ಜಡ ಅಥವಾ ಅಚೇತನ ವಸ್ತುವಿನ ಲಕ್ಷಣ ಪರಪ್ರಕಾಶ್ಯವಾದದ್ದು, ಜ್ಞಾನಕ್ಕೆ ವಿಷಯವಾದದ್ದು. ಆದರೆ ಸ್ವಯಂಪ್ರಕಾಶವಾದ, ಸ್ವಯಂಜ್ಯೋತಿಯಾದ ಚಿದ್ವಸ್ತು ಜ್ಞಾತೃ ಸ್ಥಾನದಲ್ಲಿ ಇರುವಂಥದು ಎಂದು ತಿಳಿಸುತ್ತದೆ. ಆದ್ದರಿಂದಲೇ ಇದನ್ನು ಆತ್ಮ ಎನ್ನುವುದು. ಅದು ಬೆಳಕಿನ ಬೆಳಕು. ಎಲ್ಲ ಹೊರಗಿನ ಬೆಳಕುಗಳೂ ನಂದಿಹೋದಾಗ ನಮ್ಮನ್ನು ನಡೆಸುವುದು ಈ ಅಂತರಂಗದ ಬೆಳಕು ಎಂದು ಯಾಜ್ಞವಲ್ಕ್ಯ ಹೇಳುತ್ತಾನೆ. ಆ ಬೆಳಕಿನಿಂದಲೇ ಬಾಹ್ಯವಾಗಿ ಎಲ್ಲ ಬೆಳಕನ್ನೂ ನೀಡುವ ವಸ್ತುಗಳೂ ತಮ್ಮ ಬೆಳಕನ್ನು ಪಡೆಯುತ್ತವೆ ಎಂದು ಮುಂಡಕ ಉಪನಿಷತ್ತು ಹೇಳುತ್ತದೆ. ಇದೇ ಮೂಲಭೂತವಾದ ಪ್ರಜ್ಞಾನತತ್ತ್ವ. ಬ್ರಹ್ಮಕ್ಕೆ ಹೇಳಿರುವ ಈ ವಿವರಣೆ ಆತ್ಮತತ್ತ್ವಕ್ಕೂ ಅನ್ವಯವಾಗುತ್ತದೆ.

ಭಾರತದ ಇತಿಹಾಸದಲ್ಲಿ ಮುಂದೆ ಬಂದ ತತ್ತ್ವಭೂಮಿಕೆಯಲ್ಲಿ, ಎಂದರೆ ವೈದಿಕ ಮತ್ತು ಅವೈದಿಕ ದರ್ಶನಗಳು ಹುಟ್ಟಿದಾಗ, ಆತ್ಮ ಬ್ರಹ್ಮಗಳಿಗೆ ಸಂಬಂಧಿಸಿದಂತೆ ಚಿತ್ ವಿಷಯಕವಾದ ಜಿಜ್ಞಾಸೆ ಎರಡು ರೀತಿಯಲ್ಲಿ ನಡೆದಿರುವುದನ್ನು ಕಾಣಬಹುದು. ಮೊದಲನೆಯದು ಬ್ರಹ್ಮ (ಅಥವಾ ಆತ್ಮ) ಸ್ವಭಾವಕ್ಕೇ ಸಂಬಂಧಿಸಿದಂತೆ, ಎರಡನೆಯದು ಬ್ರಹ್ಮವನ್ನು ಅರಿಯುವುದಕ್ಕೆ ಸಂಬಂಧಿಸಿದಂತೆ. ಚಿತ್ ಮತ್ತು ಜ್ಞಾನ ಎಂಬುವನ್ನು ಪರ್ಯಾಯವಾಗಿ ತೆಗೆದುಕೊಂಡು, ಇವು ಆತ್ಮತತ್ತ್ವದ ಮೂಲಭೂತ, ಸ್ವಾಭಾವಿಕ ದ್ರವ್ಯರೂಪವೇ ಅಥವಾ ಆತ್ಮದ ವಿಶೇಷಣ ರೂಪವೆನ್ನಬಹುದಾದ ಗುಣವೇ ಅಥವಾ ಆತ್ಮದ ಕ್ರಿಯಾವ್ಯಾಪಾರವೆಂಬಂತೆ ಆಗಾಗ ಉಂಟಾಗುವ ಆಕಸ್ಮಿಕ ಅಥವಾ ಆಗಂತುಕ ಅಂಶವೇ, ಅಥವಾ ನಿತ್ಯತತ್ತ್ವವಾದ ಆತ್ಮತತ್ತ್ವದಂತೆಯೇ ಇದೂ ನಿತ್ಯ ವಿಶೇಷವೇ ಅಥವಾ ಬಂದು ಹೋಗುವ ಅನಿತ್ಯ ಅಂಶವೇ, ಆತ್ಮವನ್ನು ಅರಿಯುವ ವಿಷಯದಲ್ಲಿ ಜ್ಞಾತೃಸ್ಥಾನದಲ್ಲಿರುವುದನ್ನು ಜ್ಞೇಯವಾಗಿ ತಿಳಿದುಕೊಳ್ಳುವುದಾದರೂ ಹೇಗೆ–ಹೀಗೆ ನಾನಾ ಮುಖವಾಗಿ ಜಿಜ್ಞಾಸೆ ನಡೆಸಲಾಗಿದೆ.

ಚಾರ್ವಾಕರ ದೃಷ್ಟಿಯಲ್ಲಿ ಚಿತ್ ಅಥವಾ ಜ್ಞಾನವೆಂಬುದು ಭೌತಿಕ ದೇಹದಿಂದ ಉದ್ಭವವಾಗುವ ಒಂದು ಅಂಶ–ತಾಂಬೂಲಚರ್ವಣದಿಂದ ಕೆಂಪು ಹುಟ್ಟುವಂತೆ, ಕಬ್ಬಿನಲ್ಲಿ ಸಿಹಿ ಹುಟ್ಟುವಂತೆ. ದೇಹದ ಅಂತ್ಯವಾದರೆ ಅದೂ ಅಂತ್ಯವಾದಂತೆಯೇ.

ಬೌದ್ಧರ ಅನಾತ್ಮವಾದದ ಪ್ರಕಾರ ಚಿತ್ ಅಥವಾ ಜ್ಞಾನವೆನ್ನುವುದು ಕ್ಷಣ ಕ್ಷಣಕ್ಕೂ ಬದಲಾಗುವ ಒಂದು ಪ್ರಕ್ರಿಯೆ. ಪಂಚಸ್ಕಂಧಗಳ ಸಂಘಾತದಿಂದ ಉಂಟಾದ ಒಂದು ವಿಜ್ಞಾನ ವೃತ್ತಿ. ಪರಮಾರ್ಥವಾಗಿ ಅದೂ ಇಲ್ಲವಾಗುತ್ತದೆ.

ನೈಯಾಯಿಕರು ಹೇಳುವಂತೆ ಜ್ಞಾನವೆಂಬುದು ಆಗಂತುಕವಾಗಿ ಆತ್ಮದಲ್ಲಿ ಉಂಟಾಗುವ ಒಂದು ಬೋಧ. ಆತ್ಮ, ಮನಸ್ಸು, ಇಂದ್ರಿಯ ಮತ್ತು ಇಂದ್ರಿಯಾರ್ಥ ಇವುಗಳ ಸನ್ನಿಕರ್ಷದಿಂದ ಉಂಟಾಗುವಂಥದು. ಈ ದೃಷ್ಟಿಯ ಪ್ರಕಾರ ಜ್ಞಾನವೆಂಬುದು ಆತ್ಮನ ಸ್ವಭಾವಲಕ್ಷಣವಲ್ಲ, ಅಲ್ಲದೆ ನಿತ್ಯವಾದುದೂ ಅಲ್ಲ. ಆತ್ಮನ ಇರವಿಗೂ ಅರಿವಿಗೂ ಅಗತ್ಯ ಸಂಬಂಧವೇನಿಲ್ಲ.

ಮೀಮಾಂಸಕರ ದೃಷ್ಟಿಯಲ್ಲಿ, ನ್ಯಾಯದಲ್ಲಿದ್ದಂತೆಯೇ ಆತ್ಮ ಪ್ರಥಮತಃ ಜಡನ್ಯಾಯದ ದೃಷ್ಟಿಯಲ್ಲಿ ಆತ್ಮ ಅರಿಯತ್ತಾನೆ ಎನ್ನುವುದು ಅನುವ್ಯವಸಾಯವನ್ನು ಹೊಂದಿಕೊಂಡಿದ್ದರೆ, ಮೀಮಾಂಸಕರಲ್ಲಿ ಅಂಥ ಎರಡನೆಯ ಅರಿವಿನ ಅಗತ್ಯ ಬೇಕಿಲ್ಲ. ಆದರೆ ಜ್ಞಾನ ಸ್ವಭಾವತಃ ಆತ್ಮನ ಗುಣವಲ್ಲದಿದ್ದರೂ ಜ್ಞಾನಕ್ರಿಯೆ ನಡೆದಾಗ ಅದೇ ಸಮಯದಲ್ಲಿ ಅದೇ ಕ್ರಿಯೆಯಿಂದ ವಸ್ತುವನ್ನು ಅರಿಯುವಂತೆ ಆತ್ಮ ತನ್ನನ್ನೂ ಅರಿತುಕೊಳ್ಳುತ್ತಾನೆ. ಅರಿಯುವಿಕೆ ಅಥವಾ ಜ್ಞಾನ ಆತ್ಮನ ಅಸ್ತಿತ್ವಕ್ಕೆ ಸಂಬಂಧಿಸಿದ್ದಲ್ಲ. ಪೂರ್ಣ ನಿದ್ದೆಯಲ್ಲಿ ತನ್ನ ಅರಿವು ಇಲ್ಲದಿರುವ ಕಾರಣ ಆತ್ಮ ಸ್ವಾಭಾವಿಕವಾಗಿ ಜಡ ಎಂದು ಮೀಮಾಂಸಕರ ವಾದ. ಹಾಗಾದರೆ ಆತ್ಮಕ್ಕೂ ಜ್ಞಾನಕ್ಕೂ ಸಂಬಂಧ ಹೇಗೆ ಎಂದರೆ, ಅದೊಂದು ಆತ್ಮನಲ್ಲಿ ಉಂಟಾಗುವ ಕ್ರಿಯೆ ಎನ್ನುತ್ತಾರೆ. ಇದನ್ನು ಜ್ಞಾನಕರ್ಮ ಎಂದು ಕರೆಯುತ್ತಾರೆ. ಇದು ಉಂಟಾದಾಗ ಆತ್ಮನನ್ನು ಜ್ಞಾತೃವೆಂದೂ ಅರಿತ ವಸ್ತುವನ್ನು ಜ್ಞೇಯವೆಂದೂ ತಿಳಿಯತಕ್ಕದ್ದು. ಆತ್ಮ ಕೂಡ ಜ್ಞೇಯವಸ್ತುವಾಗಬಹುದು ಎಂಬುದು ಮೀಮಾಂಸಕರ ನಿಲವು. ತನ್ನನ್ನು ತಾನು ಅರಿತುಕೊಳ್ಳುವುದು ಎನ್ನುವ ಮಾತಿನಲ್ಲಿ ಈ ಸತ್ಯ ಹೊರಬೀಳುತ್ತದೆ ಎನ್ನುತ್ತಾರೆ, ಮೀಮಾಂಸಕರು.

ಭಾರತೀಯ ದಾರ್ಶನಿಕರಲ್ಲಿ ಆತ್ಮತತ್ತ್ವ ಚಿತ್ ಅಥವಾ ಜ್ಞಾನತತ್ತ್ವವೇ ಹೊರತು ಬೇರೆ ಬೇರೆಯಲ್ಲ ಎಂದು ಗಣಿಸಿದವರಲ್ಲಿ ಸಾಂಖ್ಯರು ಮೊದಲಿಗರು. ಇವರ ಪ್ರಕಾರ ಆತ್ಮ ಅಥವಾ ಪುರುಷ ಚಿದ್ವಸ್ತು ; ಪ್ರಕೃತಿ ಜಡಾತ್ಮಕ. ಪ್ರಕೃತಿಯ 'ವಿಕಾರ' ವಾದ 'ಬುದ್ಧಿ' ಎನ್ನುವುದು ಚಿತ್ಪುರುಷನನ್ನು ಪ್ರತಿಬಿಂಬಿಸುವ ಕರಣ ಮಾತ್ರ. ಪುರುಷನ ಪ್ರಕಾಶದಿಂದ ಹೊಳೆಯುವ ಬುದ್ಧಿ, ಅಹಂಕಾರ, ಮನಸ್ಸುಗಳು (ಅಂತಃಕರಣಗಳು) ಪ್ರಾಕೃತಿಕವೇ ಹೊರತು ಸ್ವತಃ ಪ್ರಕಾಶವನ್ನು ನೀಡುವಂಥ ಚಿದ್ವಸ್ತುಗಳಲ್ಲ ಎನ್ನುತ್ತಾರೆ, ಸಾಂಖ್ಯರು. ಚಿತ್ ಅಥವಾ ಜ್ಞಾನ ಲಕ್ಷಣನಾದ ಪುರುಷ ನಿತ್ಯ, ಅನೇಕ. ಆದ್ದರಿಂದ ಚಿತ್ತತ್ತ್ವ ಕೂಡ ನಿತ್ಯ ಮತ್ತು ಅನೇಕ.

ವೇದಾಂತ ದರ್ಶನಗಳಲ್ಲಿ ಚಿತ್ತಿಗೂ ಆತ್ಮತತ್ತ್ವಕ್ಕೂ ಇರುವ ಸಂಬಂಧವನ್ನು ಹೀಗೆ ವಿವರಿಸಲಾಗಿದೆ:

ದ್ವೈತ ದರ್ಶನದಲ್ಲಿ ಆತ್ಮನಿಗೆ ಚಿತ್ತೆನ್ನುವುದು ಅಗತ್ಯವಾದ ಒಂದು ಗುಣ ; ಅಹಂಕಾರದೊಡನೆ ಸದಾ ಇರುವಂಥದು. ಆದರೆ ನ್ಯಾಯದರ್ಶನದಲ್ಲಿ ಹೇಳಿರುವಂತೆ ಆಗಂತುಕವಾಗಿ ಆತ್ಮನೊಡನೆ ಸೇರುವ ಗುಣವಲ್ಲ. ಅದು ಗುಣವಾದರೂ ಆತ್ಮನಂತೆಯೇ ನಿತ್ಯವಾದುದು. ಆದರೆ ಇದಕ್ಕೆ ಭಿನ್ನವಾದ ಮತ್ತೊಂದು ಚಿದ್ವ್ಯಾಪಾರವನ್ನೂ ದ್ವೈತ ಒಪ್ಪುತ್ತದೆ. ಸಾಂಖ್ಯ ಮತ್ತು ಅದ್ವೈತಗಳು ಹೇಳುವಂತೆಯೇ ವೃತ್ತಿಜ್ಞಾನವೆನ್ನುವುದೂ ಇದೆ. ಇದು ಬಾಹ್ಯವಸ್ತು, ಮನಸ್ಸು ಮತ್ತು ಸಾಕ್ಷಿಗಳ ನಡುವೆ ಉಂಟಾಗುವ ಸಂಬಂಧದಿಂದ ಉದ್ಭವವಾದದ್ದು. ಆದ್ದರಿಂದ ಇದು ಅನಿತ್ಯ. ಆದ್ದರಿಂದ, ಆತ್ಮತತ್ತ್ವಕ್ಕೆ ಅಗತ್ಯವಾದದ್ದೇನಲ್ಲ. ಈ ವೃತ್ತಿಜ್ಞಾನ ಮಾನವನಿಗೆ ಸಂಬಂಧಿಸಿದ್ದಾದರೆ ಈಶ್ವರನಿಗೆ ಸಂಬಂಧಪಟ್ಟ ಜ್ಞಾನ ಬೇರೊಂದಿದೆ. ಅದು ಈಶ್ವರನಿಗೆ, ದೇಹದಂತೆ ಎಡೆಬಿಡದೆ ಇರುತ್ತದೆ. ಇದರ ಸಂಬಂಧವಾಗಿ ಈಶ್ವರನಿಗೆ ಸದಾಕಾಲದಲ್ಲೂ ಸರ್ವ ವಿಷಯಗಳೂ ಜ್ಞೇಯ ವಸ್ತುಗಳಾಗಿ ಇರುತ್ತವೆ. ಈ ಜ್ಞಾನತತ್ತ್ವದ ಕಾರಣದಿಂದಲೇ ಈಶ್ವರನೂ ತನಗೆ ತಾನೇ ಜ್ಞಾತೃವಾಗಿರುವಂತೆ ಜ್ಞೇಯನೂ ಆಗಿರಲು ಸಾಧ್ಯ.

ವಿಶಿಷ್ಟಾದ್ವೈತ ದರ್ಶನದಲ್ಲಿ ಚಿತ್ ಅಥವಾ ಜ್ಞಾನವೆನ್ನುವುದು ಆತ್ಮನ ವಿಶೇಷಣ; ಆತ್ಮನಂತೆಯೇ ನಿತ್ಯ. ನಿತ್ಯ–ವಿಶೇಷ ಸಂಬಂಧದಿಂದಲೇ ಆತ್ಮನನ್ನು ಚಿದ್ರೂಪ ಅಥವಾ ಚೈತನ್ಯಗುಣಕ ಎಂದು ಕರೆದಿರುವುದು. ಆತ್ಮ ಕೇವಲ ಜ್ಞಾನವೊಂದೇ ಅಲ್ಲ, ಜ್ಞಾನದಿಂದ ಪ್ರಕಟವಾಗುವ ಜ್ಞೇಯ ಕೂಡ. ಭೂಮಿಗೂ ಭೂಮಿಯಿಂದ ಹೊರಡುವ ಗಂಧಕ್ಕೂ ವ್ಯತ್ಯಾಸವಿರುವಂತೆ ಆತ್ಮಕ್ಕೂ ಜ್ಞಾನಕ್ಕೂ ಭಿನ್ನತೆ ಇದೆ. ಆದರೆ ಜ್ಞಾನ ವಿಶೇಷಣವಾದ್ದರಿಂದ ವಿಶೇಷ್ಯವಾದ ಆತ್ಮನನ್ನು ಆಧರಿಸಿಕೊಂಡೇ ಇರುತ್ತದೆ. ಈ ದರ್ಶನದ ಪ್ರಕಾರ ಕೇವಲವಾದ ಜ್ಞಾನವೆನ್ನುವುದಿಲ್ಲ. ಅದು ಸದಾ ಅರ್ಥವಿಷಯಕ; ಜ್ಞಾತೃ–ಜ್ಞೇಯ ಸಂಬಂಧವನ್ನು ಸದಾ ಸೂಚಿಸುತ್ತದೆ. ಆತ್ಮನೊಡನೆ ನಿತ್ಯ ವಿಶೇಷವಾಗಿ ಜ್ಞಾನ ಇರುವುದರಿಂದ ಆತ್ಮನನ್ನು ಜಡವೆಂದು ಕರೆಯಲಾಗದು ಎಂದು ವಿಶಿಷ್ಟಾದ್ವೈತದ ನಿಲವು.

ಅದ್ವೈತದಲ್ಲಿಯಾದರೋ ಬ್ರಹ್ಮ ಅಥವಾ ಆತ್ಮ (ಈ ದರ್ಶನದಲ್ಲಿ ಇವೆರಡೂ ಪರ್ಯಾಯ ತತ್ತ್ವಗಳು) ಚಿತ್ತಲ್ಲದೆ ಬೇರೆಯಲ್ಲ. ಚಿತ್ ಅಥವಾ ಜ್ಞಾನ ಆತ್ಮದ ಸ್ವರೂಪ. ಅದು ನಿತ್ಯ, ಏಕ, ಅಖಂಡ, ನಿರ್ವಿಶೇಷ ಮತ್ತು ನಿರ್ವಿಷಯಕ. ಚಿತ್ ಸ್ವರೂಪವಾದ ಆತ್ಮ ಸ್ವಯಂಜ್ಯೋತಿ ಮತ್ತು ಸ್ವಪ್ರಕಾಶ. ಉಪನಿಷತ್ತುಗಳು ಹೇಳುವಂತೆ ಇದು ಮೂಲಭೂತವಾದ ಸತ್ಯ, ಜ್ಞಾನ, ಜ್ಞಾತೃಜ್ಞೇಯಗಳೆಂಬ ತ್ರಿಪುಟೀ ಸಂಬಂಧ ವ್ಯಾವಹಾರಿಕವಾದದ್ದು ; ಜೀವಾತ್ಮ ಕ್ಷೇತ್ರದಲ್ಲಿ ಪ್ರಯೋಗವಾಗುವಂಥದು. ಈ ಕ್ಷೇತ್ರದಲ್ಲಿ ಉಂಟಾಗುವ ಜ್ಞಾನ ಸ್ವರೂಪಜ್ಞಾನವಿಲ್ಲ. ಅದು ಅಂತಃಕರಣವೃತ್ತಿ ಅಥವಾ ಬುದ್ಧಿವೃತ್ತಿ. ಪಾರಮಾರ್ಥಿಕ ಜ್ಞಾನ ಸ್ವರೂಪಸಿದ್ಧವಾದದ್ದು. ಆತ್ಮನಿಗೆ ಅಪರೋಕ್ಷವಾದದ್ದು ಮತ್ತು ನಿರಪೇಕ್ಷವಾದದ್ದು. ಆದ್ದರಿಂದ ಆತ್ಮ ಆತ್ಮಕ್ಕೆ ಜ್ಞೇಯ ವಸ್ತುವಾಗುವ ಆವಶ್ಯಕತೆ ಇಲ್ಲ. ಸತ್ ಒಂದೇ ಆದ್ದರಿಂದ ಸದ್ವಸ್ತುವಾದ ಆತ್ಮ ಅಖಂಡವಾದದ್ದು. ಆದ್ದರಿಂದ ಒಂದು ಇನ್ನೊಂದನ್ನು ಅರಿಯುವುದಿಲ್ಲ. ಏಕೆಂದರೆ ಎರಡನೆಯದೇ ಇರುವುದಿಲ್ಲ.

ಚಿತ್ತಿನ ವಿಚಾರವಾಗಿ ನಡೆದಿರುವ ಜಿಜ್ಞಾಸೆಯನ್ನು ಸಮಗ್ರ ದೃಷ್ಟಿಯಿಂದ ನೋಡಿದಲ್ಲಿ ಮುಖ್ಯವಾದ ಪ್ರಶ್ನೆ ಹೀಗಿರುತ್ತದೆ: ಜ್ಞಾನದ ಪರಿಮಿತಿಗೆ ಜ್ಞೇಯವಸ್ತು ಸಿಗುವ ಹಾಗೆ, ಅದೇ ಜ್ಞಾನವೂ ಸಿಗುತ್ತದೆಯೇ? ಎಂದರೆ ಜ್ಞಾನ ಜ್ಞೇಯವಾಗಬಲ್ಲುದೇ ? ಈ ಪ್ರಶ್ನೆಗೆ ಮೂರು ತೆರನಾದ ಸಮಾಧಾನ ಹೇಳಬಹುದು; ಹೇಳಿರುವುದು ಕಂಡುಬರುತ್ತದೆ. 1. ಒಂದು ವಸ್ತುವನ್ನು ನಾವು ಅರಿತೆವೆಂದಾಗ, ಈ ಅರಿವಿನ ಜ್ಞಾನ ನಮಗೆ ಇರುವುದಿಲ್ಲ. 2. ಈ ಅರಿವಿನ ಜ್ಞಾನ ಮತ್ತೊಂದು ಜ್ಞಾನದಿಂದ ನಮಗೆ ಸಿಗುತ್ತದೆ. 3. ಈ ಅರಿವಿನ ಜ್ಞಾನ ತತ್ ಕ್ಷಣ, ಪರೋಕ್ಷವಾಗಿ ಯಾವ ಮಾಧ್ಯಮದ ಉಪಯೋಗವೂ ಇಲ್ಲದೆ ಆಗುತ್ತದೆ.

ಮೊದಲ ಉತ್ತರ ಸರಿಯಾದಲ್ಲಿ, ಒಂದು ಅಸಂಗತ ಅಥವಾ ಅಯುಕ್ತವಾದ ಸನ್ನಿವೇಶದಲ್ಲಿ ನಾವು ಸಿಲುಕಿದಂತಾಗುತ್ತದೆ. ಅದೇನೆಂದರೆ ನಮ್ಮ ಅರಿವಿಗೆ ಸಿಗದ ಜ್ಞಾನ ಎಲ್ಲ ವಸ್ತುಗಳನ್ನೂ ಪ್ರಕಾಶಿಸುತ್ತದೆ, ಅರಿಯುತ್ತದೆ ಎಂದ ಹಾಗಾಯಿತು. ಎರಡನೆಯದು ನಿಜವಾದಲ್ಲಿ, ಎರಡನೆಯ ಜ್ಞಾನವನ್ನು ಅರಿಯಲು ಮತ್ತೊಂದು ಜ್ಞಾನ, ಅದನ್ನು ಅರಿಯಲು ಮಗದೊಂದು ಜ್ಞಾನ ಹೀಗೆ ಅನವಸ್ಥಾದೋಷಕ್ಕೆ ಸಿಗುತ್ತೇವೆ. ಈ ಎರಡು ದೋಷಗಳನ್ನು ಪರಿಹರಿಸಬೇಕಾದರೆ ಮೂರನೆಯ ನಿಲುವು ಅಗತ್ಯವಾಗುತ್ತದೆ.

ವಸ್ತುವನ್ನು ಪ್ರಕಾಶಿಸಿ ಪ್ರಕಟಗೊಳಿಸುವಂಥ ಜ್ಞಾನ, ತನ್ನ ಪ್ರಕಟಣೆಗೆ ಮತ್ತೊಂದು ಜ್ಞಾನವನ್ನು ಕಾಯಬೇಕು ಎನ್ನುವಂತಾದರೆ ಅದು ಮೂಲಭೂತವಾಗಿ ಜಡವೇ ಆಗಿರಬೇಕು. ಅಂದರೆ ಅದು ಪರಪ್ರಕಾಶ್ಯವಾಗಿರುತ್ತದೆ, ಸ್ವಪ್ರಕಾಶವಲ್ಲ. ಇದು ಸತ್ಯವಾದಲ್ಲಿ ಆತ್ಮತತ್ತ್ವವನ್ನು ಕತ್ತಲಿನ ಮೂಟೆ ಎಂದ ಹಾಗಾಯಿತು. ಈ ನಿಲುವಿನಿಂದ ಆತ್ಮತತ್ತ್ವದ ಪಾರಮ್ಯವನ್ನೇ ನಿರಾಕರಿಸಿದಂತಾಗುತ್ತದೆ. ಆತ್ಮವನ್ನು ತೋರಿಸುವ ಬೆಳಕಿಗಾಗಿ ಆತ್ಮದ ಎಲ್ಲೆಯಿಂದ ಆಚೆಯೇ ಹುಡುಕುವಂತಾಗುತ್ತದೆ. ಈ ಹುಡುಕುವಿಕೆಗೆ ಅಂತ್ಯವೇ ಇಲ್ಲವೆಂದಾಗುತ್ತದೆ. ಇದರಲ್ಲಿ ಮತ್ತೊಂದು ಸಂದಿಗ್ಧ ಕಂಡುಬರುತ್ತದೆ : ತನ್ನನ್ನು ಪ್ರಕಟಗೊಳಿಸಿಕೊಳ್ಳಲು ಅಸಮರ್ಥವಾದ ಆತ್ಮ ಜಗತ್ತನ್ನು ತೋರಿಸುವುದಾದರೂ ಹೇಗೆ? ಎಂದರೆ ಅದು ಜಡವೇ ಎಂದಾಗುತ್ತದೆ. ಆತ್ಮ ಜಡವಾದಲ್ಲಿ ಬೇರೆಯದನ್ನು ಅರಿಯುವುದಂತಿರಲಿ, ತನ್ನ ಅಸ್ತಿತ್ವವನ್ನೇ ಸಿದ್ಧಪಡಿಸಲಾರದಾಗುತ್ತದೆ. ಎಂದರೆ ತನ್ನ ಇರವನ್ನೇ ಅರಿಯದಂತಾಗುತ್ತದೆ. ಆದ್ದರಿಂದ ಒಂದು ದೀಪ ತನ್ನನ್ನು ತಾನು ತೋರಿಸಿಕೊಂಡು ಇತರ ವಸ್ತುಗಳನ್ನು ಬೆಳಗುವಂತೆ – ಯಾವ ಮಾಧ್ಯಮವನ್ನೂ ಅಪೇಕ್ಷಿಸದೆ–ಸ್ವಭಾವಸಿದ್ಧವಾಗಿ, ಸ್ವಪ್ರಕಾಶವಾಗಿ ಅಪರೋಕ್ಷವಾಗಿ ಆತ್ಮವು ಅಸ್ತಿ , ಭಾತಿ ಎನ್ನುವ ಎರಡು ಲಕ್ಷಣಗಳನ್ನೂ ಏಕಕಾಲದಲ್ಲಿ ಪ್ರಕಟಗೊಳಿಸುತ್ತದೆ. ಅದು ಬಾಹ್ಯ ಮತ್ತು ಜಡ ವಸ್ತುವಿನ ರೀತಿಯಲ್ಲಿ ಜ್ಞಾನಕ್ಕೆ ವಿಷಯವಾಗುವ ಅಂಶವೂ ಅಲ್ಲ. ಮತ್ತೊಂದು ಜ್ಞಾನಕ್ಕೆ ವಿಷಯವಾಗುವುದೂ ಅಲ್ಲ. ಅದು ಸ್ವವೇದ್ಯ, ಸ್ವಪ್ರಕಾಶ, ನಿರಂತರ, ನಿತ್ಯಸಿದ್ಧ, ಮತ್ತು ಅಖಂಡ.

ಈ ಉತ್ತರ ಉಪನಿಷತ್ತಿನ ರೀತಿಯಲ್ಲಿ ಆತ್ಮದ ಪರಮಾರ್ಥ ಸ್ವರೂಪವಾದ ಚಿತ್ತಿನ ಸ್ವಭಾವವನ್ನು ನೀಡುತ್ತದೆ. **(ನೋಡಿ–ಆತ್ಮ)** (ಕೆ.ಬಿ.ಆರ್.)

**ಚಿತಾಲ್ :** ನೋಟಾಪ್ಟರಿಡೀ ಕುಟುಂಬಕ್ಕೆ ಸೇರಿದ ಒಂದು ಸಿಹಿನೀರು ಮೀನು. ನೋಟಾಪ್ಟರಿಸ್ ಚಿತಾಲ ಇದರ ಶಾಸ್ತ್ರೀಯ ಹೆಸರು. ದೇಹದ ಉದ್ದ ಸುಮಾರು 0.3 ಮೀ. ಕೆಲವು 1 ಮೀ. ಅನ್ನೂ ಮೀರುವುದುಂಟು. ಇದು ಭಾರತದ ಅತಿ ಪ್ರಮುಖ ನದಿಗಳಾದ ಗಂಗಾ, ಬ್ರಹ್ಮಪುತ್ರ ಮತ್ತು ಮಹಾನದಿಗಳಲ್ಲಿ ಮಾತ್ರ ಕಂಡುಬರುತ್ತದೆ. ಚಿತಾಲ್ ಒಂದು ಚಪ್ಪಟೆ ಮೀನು. ಬೆನ್ನು ಗೋಪುರದಾಕಾರದಲ್ಲಿ ಬಾಗಿದೆ. ಬಹಳ ಸಣ್ಣ ತಲೆ; ಗುದದ ಉದ್ದನೆಯ ಈಜುರೆಕ್ಕೆ; ಈ ರೆಕ್ಕೆ ಬಾಲದ ಈಜುರೆಕ್ಕೆಯೊಂದಿಗೆ ಸೇರಿಕೊಂಡಿರುವುದು. ದೇಹದ ಹಿಂಭಾಗದಲ್ಲಿ ಆಚೀಚೆ ಪಟ್ಟಿಯಾಕಾರದ ಗುರುತುಗಳು ಇರುವುದು, ತಾಮ್ರಮಿಶ್ರಿತ ಕಂದುಬಣ್ಣ, ಬಾಲದ ಈಜುರೆಕ್ಕೆಯ ಬಳಿ ಕಪ್ಪು ಬಣ್ಣದ ಚುಕ್ಕೆಗಳಿರುವುದು–ಈ ಮೀನಿನ ಪ್ರಮುಖ ಲಕ್ಷಣಗಳು. ಪ್ರೌಢ ಚಿತಾಲ್ ಮೀನಿಗೆ ಇತರ ಬಗೆಯ ಸಣ್ಣ ಮೀನುಗಳೇ ಆಹಾರ. ಸಣ್ಣ ಮರಿಯ ಸ್ಥಿತಿಯಲ್ಲಿದ್ದಾಗ ಕಾರ್ಪ್ ಮರಿಗಳನ್ನು ಮತ್ತು ಕೀಟಗಳ ಡಿಂಬಗಳನ್ನು ತಿನ್ನುತ್ತದೆ. ಚಿತಾಲ್ ಮೀನು ನಿಂತ ನೀರಿನಲ್ಲಿ ಮೊಟ್ಟೆಯಿಡುತ್ತದೆ. ಸಾಮಾನ್ಯವಾಗಿ ಜಲಸಸ್ಯಗಳ ಮೇಲೆಯೇ ಮೊಟ್ಟೆಯಿಡುವುದಾದರೂ ಕೆಲವು ಸಲ ಗೂಡನ್ನು ರಚಿಸುವುದುಂಟು. ಚಿತಾಲ್ ಬಲು ರುಚಿಯಾದ ಮೀನೆಂದು ಹೆಸರಾಗಿದೆ. ಆದರೆ ಇದನ್ನು ಸದ್ಯಕ್ಕೆ ಎಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಸಾಕುತ್ತಿಲ್ಲ. (ಬಿ.ಎನ್.)

**ಚಿತ್ತಕ್ಷೀಣತೆ :** ಮಾನವ ವ್ಯಕ್ತಿಯಲ್ಲಿ ಆಲೋಚನಾಶಕ್ತಿ, ಜ್ಞಾಪಕಶಕ್ತಿ ಮತ್ತು ಭಾವನಾಶಕ್ತಿಗಳ ಕುಗ್ಗುವಿಕೆ (ಡಿಮೆನ್‌ಷಿಯ). ಮಿದುಳಿನ ಅಂಗಾಂಶದ ನಶಿಸುವಿಕೆ ಹಾಗೂ ಅದರಲ್ಲುಂಟಾಗುವ ರಾಸಾಯನಿಕ ಮತ್ತು ರಾಚನಿಕ (ಸ್ಟ್ರಕ್ಚರಲ್) ಏರುಪೇರುಗಳೇ ಇದಕ್ಕೆ ಕಾರಣ. ಮಿದುಳಿನ ಯಾವ ಭಾಗದಲ್ಲಿ ಈ ವ್ಯತ್ಯಾಸಗಳು ಉಂಟಾಗಿವೆ ಎಂಬುದರ ಮೇಲೆ ಹಾಗೂ ರೋಗಿಯ ವಯಸ್ಸು ಮತ್ತು ಪೂರ್ವವ್ಯಕ್ತಿತ್ವ ಇವುಗಳ ಮೇಲೆ ರೋಗಲಕ್ಷಣಗಳು ಅವಲಂಬಿಸಿವೆ.

1 ಅನಿರ್ದಿಷ್ಟ ಕಾರಣಗಳು. ಇವುಗಳಲ್ಲಿ ರೋಗಲಕ್ಷಣವಾಗಿ ಮೊದಲು ಕಂಡುಬರುವುದು ಚಿತ್ತಕ್ಷೀಣತೆಯೇ.

(ಅ) ವೃದ್ಧಾಪ್ಯದ ಚಿತ್ತಕ್ಷೀಣತೆ (ಸೆನೈಲ್ ಡಿಮೆನ್‌ಷಿಯ) : ವ್ಯಕ್ತಿಗೆ 60 ವರ್ಷ ವಯಸ್ಸಾದ ಮೇಲೆ ಬರುವ ರೋಗ. ಇದರಲ್ಲಿ ಮಿದುಳಿನ ಮುಂಭಾಗ (ಫ್ರಾಂಟಲ್ ಲೋಬ್) ಮತ್ತು ಪಾರ್ಶ್ವಭಾಗಗಳು (ಪರೈಟಲ್ ಲೋಬ್) ನಶಿಸಿರುತ್ತವೆ.

(ಆ) ವೃದ್ಧಾಪ್ಯಕ್ಕೆ ಮೊದಲೇ ಬರುವಂಥವು : (1) ಆಲ್‌ಜೈಮರನ ರೋಗ. ಇದರಲ್ಲಿ ಮಿದುಳಿನ ಗಾತ್ರ ಮತ್ತು ತೂಕ ಎರಡೂ ಕಡಿಮೆಯಾಗುತ್ತವೆ. (2) ಪಿಕ್ಸನ ರೋಗ : ಇದರಲ್ಲಿ ಮುಂಭಾಗದ ಮತ್ತು ಹಿಂಭಾಗದ ಕಾರ್ಟೆಕ್ಸುಗಳು ಹಾನಿಗೀಡಾಗಿ ರೋಗಕ್ಕೆ ಕಾರಣವಾಗುತ್ತದೆ. (3) ಜೇಕಬ್ ಕ್ರೆಂಟ್ಸ್ ಫೆಲ್ಡ್‌ನ ರೋಗ. ಇದರಲ್ಲಿ ಸೆರಿಬ್ರಲ್ ಕಾರ್ಟೆಕ್ಸ್, ಸಬ್‌ಕಾರ್ಟಿಕಲ್ ಗ್ರೇ ಮಾಸಸ್, ಸೆರಿಬೆಲಮ್ ಮತ್ತು ಬ್ರೆಯ್ನ್ ಸ್ಟೆಮ್ ನ್ಯೂರೋನ್‌ಗಳ ತೀವ್ರವಾದ ನಶಿಸುವಿಕೆ ಉಂಟಾಗುವುದರಿಂದ ರೋಗ ವ್ಯಕ್ತವಾಗುತ್ತದೆ. ಇವುಗಳಲ್ಲೆಲ್ಲ ಕಂಡುಬರುವ ಮಿದುಳಿನ ನಶಿಸುವಿಕೆಗೆ ಕಾರಣ ತಿಳಿಯದು.

2 ಕೇಂದ್ರ ನರಮಂಡಲದ ಸೋಂಕು : ಕ್ಷಯ, ಸಿಫಿಲಿಸ್, ಕ್ರಿಪ್ಟೋಕಾಕಲ್ ಮೆನಿನ್‌ಜೈಟಿಸ್ ಮತ್ತಿತರ ಮಿದುಳಿನ ಪೊರೆಗಳ ಉರಿಯೂತ, ಸಿಫಿಲಿಸ್ಸಿನಿಂದ ಸಮಸ್ತ ನರಗಳ ದೌರ್ಬಲ್ಯದಿಂದಲೂ (ಜನರಲ್ ಪೆರಾಲಿಸಿಸ್ ಆಫ್ ದಿ ಇನ್‌ಸೇನ್) ವರ್ನಿಕ್ಸನ ಎಂಕಿಫಲೊಪತಿಯಿಂದಲೂ ಚಿತ್ತಕ್ಷೀಣತೆ ಪರಿಣಮಿಸುತ್ತದೆ. ಎನ್‌ಸೆಫಲೈಟಿಸ್ ಮುಂತಾದ ಕಾಯಿಲೆಗಳಿಂದ ಸಂಭವಿಸುವ ನರ ಕಣಗಳ ನಷ್ಟದಿಂದಲೂ ಚಿತ್ತಕ್ಷೀಣತೆಯುಂಟಾಗುತ್ತದೆ.

3. ಪೋಷಕಾಂಶಗಳ ಕೊರತೆ : ಇವುಗಳಲ್ಲಿ ಬಿ6, ಬಿ12, ಥಯಾಮಿನ್, ನಿಕೋಟಿನಿಕ್ ಆಮ್ಲ ಮತ್ತು ಸಸಾರಜನಕಗಳ ಕೊರತೆ ಮುಖ್ಯವಾದವು.

4. ಮಾದಕವಸ್ತುಗಳ ಸೇವನೆ (ಬ್ರಾಂದಿ, ಹೆಂಡ), ಅಫೀಮು ಮತ್ತು ಭಂಗಿಯ ಚಟ, ಅಮಲಿನ ಔಷಧಗಳ ಚಟ (ಬ್ರೋಮೈಡ್ಸ್, ಬಾರ್ಬಿಟ್ಯುರೇಟ್, ಪೆಥಿಡಿನ್, ಮಾರ್ಫಿನ್, ಹೆರಾಯಿನ್, ಎಲ್ ಎಸ್ ಡಿ ಇತ್ಯಾದಿ).

5. ಪಿತ್ತಜನಕಾಂಗ ಮತ್ತು ಪುಪ್ಪುಸಗಳ ಕಾಯಿಲೆಯಿಂದ ಉಂಟಾಗುವ ಇಂಗಾಲಾಮ್ಲದ ಅಮಲೇರಿಕೆ, ಥೈರಾಯ್ಡ್ ಅಡ್ರಿನಲ್ ಪಿಟ್ಯುಯಿಟರಿ ಗ್ರಂಥಿಗಳ ಸ್ರಾವದಲ್ಲಿ ಕೊರತೆ.

ಮೇಲಿನವರೆಡರಲ್ಲೂ ದೀರ್ಘಕಾಲಿಕವಾಗಿ ವಿದ್ಯುದ್ವಿಶ್ಲೇಷಕಗಳ ಮತ್ತಿತರ ವಸ್ತುಗಳ ಚಯಾಪಚಯಕ್ರಿಯೆಗಳ ಏರುಪೇರುಂಟಾಗಿ ಇವುಗಳಿಂದ ದೀರ್ಘಕಾಲಿಕ ವಿಷಮತೆಯುಂಟಾಗಿ (ಕ್ರಾನಿಕ್ ಇನ್‍ಟಾಕ್ಸಿಕೇಷನ್) ಚಿತ್ತಕ್ಷೀಣತೆ ಉಂಟಾಗುತ್ತದೆ.

6. ತಲೆಬುರುಡೆಯೊಳಗೆ ರಕ್ತದ ಹೆಪ್ಪುಗಟ್ಟುವಿಕೆ, ರಕ್ತನಾಳಗಳ ಊತ ಮತ್ತಿತರ ರೋಗಗಳು, ತಲೆಬುರುಡೆಯೊಳಗೆ ಉಂಟಾಗುವ ರಕ್ತಸ್ರಾವ.

7. ತಲೆಬುರುಡೆಯೊಳಗೆ ಗೆಡ್ಡೆ (ಟ್ಯೂಮರ್).

8. ಹುಟ್ಟಿನಿಂದಾದ ವಿಕಾರಗಳು ಮತ್ತಿತರ ಕಿರಣಗಳಿಂದ ಮಿದುಳು ಮತ್ತು ಮಿದುಳುಬಳ್ಳಿಯ ದ್ರವಸಂಚಾರಕ್ಕೆ ತಡೆಯುಂಟಾಗುವಿಕೆ.

ಮೇಲಿನ ಮೂರು ಕಾರಣಗಳಿಂದ ತಲೆಬುರುಡೆಯೊಳಗಿನ ಒತ್ತಡ ಹೆಚ್ಚುವುದರಿಂದ, ಮತ್ತಿತರ ಕಾರಣಗಳಿಂದ ಮಿದುಳಿನ ರಕ್ತಪೂರೈಕೆ ಕಡಿಮೆಯಾಗಿ ಚಿತ್ತಕ್ಷೀಣತೆ ಉಂಟಾಗುತ್ತದೆ.

9. ಮಿದುಳಿಗೆ ತಗಲುವ ಪೆಟ್ಟುಗಳು ಮತ್ತು ಅಪಸ್ಮಾರದಿಂದ (ಮೂರ್ಛೆ ರೋಗ) ಆಗುವ ರಾಚನಿಕ ನಷ್ಟದಿಂದಲೂ ಚಿತ್ತಕ್ಷೀಣತೆ ಉಂಟಾಗುತ್ತದೆ.

10. ಚಿತ್ತಕ್ಷೀಣತೆ ಇನ್ನೂ ಅನೇಕ ರೋಗಗಳಲ್ಲೂ ಪ್ರಧಾನಲಕ್ಷಣವಾಗಿ ಕಾಣಿಸಬಹುದು. ಒಟ್ಟಿನಲ್ಲಿ ಚಿತ್ತಕ್ಷೀಣತೆಗೆ ಒಳಗಾದ ರೋಗಿಗಳಲ್ಲಿ ಎರಡು ಬಗೆಯನ್ನು ಕಾಣಬಹುದು : (ಅ) ನರಮಂಡಲಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾಥಮಿಕ ತೊಂದರೆ ಇಲ್ಲದೆಯೇ ಚಿತ್ತಕ್ಷೀಣತೆಗೆ ಒಳಗಾದವರು; (ಆ) ನರಮಂಡಲದ ವಿವಿಧ ಭಾಗಗಳಿಗೆ ತೊಂದರೆ ಉಂಟಾಗಿ ಚಿತ್ತಕ್ಷೀಣತೆಗೆ ಒಳಗಾದವರು.

ಚಿತ್ತಕ್ಷೀಣತೆಯ ಲಕ್ಷಣಗಳು : ಚಿತ್ತಕ್ಷೀಣತೆ ಉಂಟಾದ ರೋಗಿಗಳ ಕೆಲಸ ಕಾರ್ಯಗಳಲ್ಲಿ ಮೊದಲಿನ ಚಟುವಟಿಕೆ ಇರುವುದಿಲ್ಲ. ಸುತ್ತಮುತ್ತಲಿನವರು ಅವರ ನಡವಳಿಕೆಯಲ್ಲಿ ಬದಲಾವಣೆಗಳನ್ನು ಕಾಣಬಹುದು. ತಮಗೆ ಈಚೆಗೆ ಮರೆವು ಜಾಸ್ತಿ ಆಗಿದೆಯೆಂದು ಇಂಥ ರೋಗಿಗಳು ಹೇಳುತ್ತಾರೆ. ಸಾಮಾನ್ಯವಾಗಿ ಪಾರ್ಶ್ವವಾಯು, ವಾಕ್ ಶಕ್ತಿನಾಶ, ದೇಹಾರ್ಧಸಂವೇದನೆಯ ನಾಶ, ಅಪಸ್ಮಾರ ಮುಂತಾದವು ಚಿತ್ತಕ್ಷೀಣತೆಯ ಜೊತೆಯಲ್ಲಿ ಕಾಣಿಸಿಕೊಂಡು ರೋಗಲಕ್ಷಣಗಳಲ್ಲಿ ಸ್ಪಷ್ಟ ಬದಲಾವಣೆಗಳನ್ನು ಉಂಟುಮಾಡುತ್ತವೆ. ರೋಗಿಗಳ ಸಾಮಾನ್ಯ ಆರೋಗ್ಯ ಮನಃಸ್ಥಿತಿ ಮೊದಲಾದುವುಗಳಲ್ಲಿ ಏರಿಳಿತಗಳು ಕಂಡುಬರುತ್ತವೆ. ರೋಗಿ ಪೂರ್ಣವಾಗಿ ಜಾಗರೂಕನಾಗಿರಬಹುದಾದರೂ ಯಾವುದಾದರೂ ವಿಷಯ ಅಥವಾ ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ಆತನಿಗೆ ಸಾಧ್ಯವಾಗುವುದಿಲ್ಲ. ತನ್ನ ಸ್ಥಿತಿ ಮತ್ತು ತನ್ನ ಸುತ್ತಮುತ್ತಲ ಆವರಣದ ಅರಿವು ಸ್ಪಷ್ಟವಾಗಿರುವುದಿಲ್ಲ. ವಿವೇಚನಾಶಕ್ತಿ, ಜ್ಞಾಪಕಶಕ್ತಿಗಳು ಕಡಿಮೆಯಾಗಿರುವುದರಿಂದ ನಿತ್ಯವ್ಯವಹಾರದಲ್ಲಿ ಬದಲಾವಣೆ ಉಂಟಾಗಿ ಸಂಶಯ, ಕೋಪ, ಭಯ, ಭ್ರಾಂತಿ ಕ್ಲೇಶಗಳಿಂದ ಆತನ ನಡವಳಿಕೆ, ಮಾತುಕಥೆಗಳಲ್ಲಿ ವ್ಯತ್ಯಾಸ ಕಾಣುತ್ತದೆ. ಭಾವನಾಪರವಶತೆ ಕಡಿಮೆ ಆಗುವುದರಿಂದ ತನಗೆ ಪ್ರಿಯರಾದವರು ಸತ್ತರೂ ದುಃಖಪಡದೆ ಇರಬಹುದು. ನಿತ್ಯದ ವೇಷಭೂಷಣ ಶುಚಿತ್ವದ ಕಡೆಗೆ ಗಮನ ಕಡಿಮೆಯಾಗಿ ಮಲಮೂತ್ರಗಳ ಅರಿವೂ ಇಲ್ಲದಂತಾಗಬಹುದು. ರೋಗಿ ತನ್ನ ಸಂಸ್ಕೃತಿಗೆ ವಿರೋಧವಾದ ಕೆಲಸಗಳನ್ನೂ ಮಾಡಬಹುದು. ವ್ಯಕ್ತಿಯ ಮಿದುಳಿನ ಬಹುಭಾಗಕ್ಕೆ ಹಾನಿ ಉಂಟಾಗಿರಬಹುದಾದ್ದರಿಂದ ದೇಹದ ಚಲನಾತ್ಮಕ ಮತ್ತು ಪ್ರತಿವರ್ತನಾತ್ಮಕ (ರಿಫ್ಲೆಕ್ಸಿವ್) ಚಟುವಟಿಕೆಗಳಲ್ಲಿ ಏರಿಳಿತಗಳಾಗುತ್ತವೆ. ವೃದ್ಧಾಪ್ಯದ ಚಿತ್ತಕ್ಷೀಣತೆಯ ಪ್ರಾರಂಭ ನಿಧಾನವಾಗಿದ್ದು ಶಾರೀರಕ ಮತ್ತು ಮಾನಸಿಕ ಒತ್ತಡಗಳ ಪರಿಣಾಮದಿಂದ ಅದು ಹೆಚ್ಚುತ್ತ ಹೋಗುತ್ತದೆ. ಆರಂಭದ ದೆಸೆಯಲ್ಲಿ ಮರೆವು, ತಾತ್ಕಾಲಿಕ ಮಾನಸಿಕ ಗೊಂದಲ, ತಪ್ಪುನಿರ್ಣಯ ಮೊದಲಾದವು ತಲೆದೋರುತ್ತವೆ. ಈ ಚಿಹ್ನೆಗಳು ಕ್ರಮೇಣ ಉಲ್ಬಣವಾಗಿ ತೀರ ಹತ್ತಿರದ ಘಟನೆಗಳ ಮರೆವು ಜಾಸ್ತಿಯಾಗುತ್ತದೆ. ಈ ಬಗೆಯ ವ್ಯಕ್ತಿಗಳಲ್ಲಿ ಬಹಳ ಮಂದಿಗೆ ಅಸ್ಥಿರ ನಡಿಗೆ, ನಡುಕ, ಕ್ಷೀಣಧ್ವನಿ. ಮಂದಚಲನೆ ಮುಂತಾದ ಚಲನೆಗೆ ಸಂಬಂಧಪಟ್ಟ ಏರುಪೇರುಗಳು ಕಂಡುಬರುತ್ತವೆ. ಅಂತ್ಯದಲ್ಲಿ ರೋಗಿ ಹಾಸಿಗೆ ಹಿಡಿದು ಚಲಿಸಲಾಗದಿರುವುದರಿಂದ ದೇಹದಲ್ಲಿ ನಾನಾ ತೊಡಕುಗಳು ಉಂಟಾಗಿ ಅವನು ಮರಣವನ್ನಪ್ಪುತ್ತಾನೆ. ಆಲ್‍ಜೈಮರಿನ ರೋಗ ಸುಮಾರು 40ರಿಂದ 70 ವಯಸ್ಸಿನಲ್ಲಿರುವವರಲ್ಲಿ ಕಂಡುಬರುತ್ತದೆ. ಇದರಲ್ಲೂ ವೃದ್ಧಾಪ್ಯದ ಚಿತ್ತಕ್ಷೀಣತೆಯ ಲಕ್ಷಣಗಳೇ ಕಂಡುಬರುವುವಲ್ಲದೆ ಮೂರ್ಛೆ, ದಿಗ್ಭ್ರಮೆ, ತೊದಲು ಇತ್ಯಾದಿಗಳೂ ಕಂಡುಬರಬಹುದು. ಪಿಕ್ಸನ ರೋಗ 50– 60 ವರ್ಷ ವಯಸ್ಸಿನವರಲ್ಲಿ ಕಂಡುಬರುತ್ತದೆ. ಹೆಂಗಸರಲ್ಲಿ ಹೆಚ್ಚು. ಮೇಲಿನ ಮೂರು ರೀತಿಯ ಚಿತ್ತಕ್ಷೀಣತೆಗಳೂ ವಂಶಪಾರಂಪರ್ಯವಾಗಿರಬಹುದು. ಜೇಕಬ್ ಕ್ರೆಂಟ್ಸ್ ಫೆಲ್ಡನ ರೋಗ ಮಧ್ಯ ವಯಸ್ಕರಲ್ಲಿ ಕಂಡುಬರುತ್ತದೆ. ಇದು ವಂಶಪಾರಂಪರ್ಯವಲ್ಲದ ಮತ್ತು ವಿರಳವಾಗಿ ಕಂಡುಬರುವ ರೋಗ. ತೀವ್ರವಾದ ಚಿತ್ತಕ್ಷೀಣತೆ ಹಾಗೂ ಅಪಸ್ಮಾರದಿಂದ ರೋಗಿ ಒಂದೆರಡು ತಿಂಗಳಲ್ಲೇ ಸತ್ತುಹೋಗುತ್ತಾನೆ.

ಚಿತ್ತಕ್ಷೀಣತೆಯ ಪತ್ತೆ : ಚಿತ್ತಕ್ಷೀಣತೆಯನ್ನು ಪತ್ತೆಹಚ್ಚಲು ರೋಗಿಯ ಮುಂಚಿನ ಬೌದ್ಧಿಕ ಮಟ್ಟಕ್ಕೆ ಅನುಗುಣವಾದ ಕೆಲವು ಪರೀಕ್ಷೆಗಳನ್ನು–ಲೆಕ್ಕಮಾಡುವುದು, ಜ್ಞಾಪಕಶಕ್ತಿಯನ್ನು ಪರೀಕ್ಷಿಸುವುದು ಮುಂತಾದವು – ಮಾಡಬೇಕಾಗುತ್ತದೆ. ಇದರ ಜೊತೆಗೆ ಕೆಲವು ಪ್ರಾಯೋಗಿಕ ಪರೀಕ್ಷೆಗಳನ್ನೂ ಕೈಗೊಳ್ಳಬೇಕಾಗುತ್ತದೆ. (i) ರಕ್ತದಲ್ಲಿ ಬ್ರೋಮೈಡುಗಳು, ಬಾರ್ಬಿಟ್ಯುರೇಟುಗಳು ಮತ್ತು ಥೈರಾಯ್ಡ್ ರಸಗಳ ಮಟ್ಟವನ್ನು ಪರೀಕ್ಷಿಸುವುದು. (ii) ಎದೆ ಮತ್ತು ತಲೆಬುರುಡೆಗಳ ಎಕ್ಸ್ ಕಿರಣ ಪರೀಕ್ಷೆಯಿಂದ ಇರಬಹುದಾದ ಸೋಂಕು ಗಂಟು ಮತ್ತು ನ್ಯೂನತೆ ವಿಕಲತೆಗಳನ್ನು ಪತ್ತೆಹಚ್ಚುವುದು, (iii) ಮಿದುಳು ಮತ್ತು ಮಿದುಳುಬಳ್ಳಿಯ ದ್ರವದ ಒತ್ತಡ, ಬಣ್ಣ, ಸಸಾರಜನಕಾಂಶ ಮತ್ತು ಜೀವಕೋಶಗಳನ್ನು ಪರೀಕ್ಷಿಸುವುದರಿಂದ ಮಿದುಳಿಗೆ ತಗುಲಿರಬಹುದಾದ ಸೋಂಕು, ಪೆಟ್ಟು ಅಥವಾ ಗೆಡ್ಡೆಗಳನ್ನು ಗುರುತಿಸುವುದು. (iv) ಮಿದುಳಿನ ವಿದ್ಯುನ್ನಿರೂಪಣಯಂತ್ರದಿಂದ (ಎಲೆಕ್ಟ್ರೋ ಎನ್‍ಸೆಫಲೋಗ್ರಾಮ್) ಅಪಸ್ಮಾರ, ಮಿದುಳಿನ ಗೆಡ್ಡೆ ಔಷಧಗಳ ಅಮಲೇರಿಕೆಯ ಪ್ರಸಂಗಗಳನ್ನು ಅರಿಯುವುದು. ಇವಲ್ಲದೆ ಚಿತ್ತಕ್ಷೀಣತೆಯ ಸ್ವರೂಪಕ್ಕೆ ಅನುಗುಣವಾಗಿ ಇನ್ನೂ ಅನೇಕ ವಿಧವಾದ ರೋಗಪರೀಕ್ಷಾ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ.

ಚಿತ್ತಕ್ಷೀಣತೆಯ ಚಿಕಿತ್ಸೆ : ಚಿಕಿತ್ಸೆಯ ಸ್ವರೂಪ ಚಿತ್ತಕ್ಷೀಣತೆಯ ಕಾರಣವನ್ನು ಅವಲಂಬಿಸಿರುತ್ತದೆ. ನಿರ್ದಿಷ್ಟವಾದ ಯಾವ ಚಿಕಿತ್ಸೆಯೂ ಇಲ್ಲ. ಚಯಾಪಚಯ ವೈಷಮ್ಯ ನ್ಯೂನತೆಗಳು ಅಥವಾ ಪುನಶ್ಚೇತನಗೊಳಿಸಬಹುದಾದ ಮಿದುಳಿನ ಪೆಟ್ಟುಗಳು–ಇವನ್ನು ಸೂಕ್ತ ಚಿಕಿತ್ಸೆಯಿಂದ ಸರಿಪಡಿಸಬಹುದು. ಮಿದುಳಿನ ನಶಿಸುವಿಕೆಯಿಂದ ಉಂಟಾದ ಚಿತ್ತಕ್ಷೀಣತೆಗೆ ಇಂಥ ಚಿಕಿತ್ಸೆ ಸಾಧ್ಯವಿಲ್ಲ. ರೋಗಿಯನ್ನು ಪೂರ್ವಪರಿಚಿತ ವಾತಾವರಣದಲ್ಲಿಯೇ ಇಟ್ಟು, ನುರಿತ ದಾದಿಯರ ಸೇವೆಯನ್ನು ನಿರಂತರವಾಗಿ ಒದಗಿಸಿ ಚೆನ್ನಾಗಿ ಪೋಷಿಸಬೇಕು. ಸಣ್ಣಪುಟ್ಟ ಸೋಂಕು ತಲೆದೋರಿದಲ್ಲಿ ತಕ್ಕ ಸೋಂಕು ನಿರೋಧಕಗಳನ್ನು ನೋವು ನಿವಾರಕಗಳನ್ನು ಕೊಡಬೇಕು. (ಜಿ.ಇ.ಸಿಎಚ್;ಜಿ.ಸಿ.ಎಸ್)

**ಚಿತ್ತಗಾಂಗ್ :** ಬಾಂಗ್ಲಾದೇಶದ ಮುಖ್ಯ ರೇವುಪಟ್ಟಣ. ಅದೇ ಹೆಸರಿನ ಜಿಲ್ಲೆಯ ಹಾಗೂ ವಿಭಾಗದ ಆಡಳಿತ ಕೇಂದ್ರ. ಉ.ಅ.22 2' ಮತ್ತು ಪೂ.ರೇ. $91^{0}$, 50' ಮೇಲೆ, ಕರ್ನಫೂಲಿ ನದೀಮುಖದಿಂದ 19 ಕಿಮೀ. ಹಿಂದೆ, ಅದರ ಬಲದಂಡೆಯ ಮೇಲಿದೆ. ಜನಸಂಖ್ಯೆ 5.5 ಮಿಲಿಯನ್ (2008). ಹಸಿರು ತುಂಬಿದ ಗುಡ್ಡ ಬಯಲುಗಳ ನಡುವೆ ನಿರ್ಮಿತವಾದ ಈ ನಗರ ಸುಂದರವಾಗಿದೆ. ಇಲ್ಲಿಯದು ಆರೋಗ್ಯಕರ ವಾಯುಗುಣ. ಸಮುದ್ರದ ಮೇಲಿಂದ ಬೀಸುವ ಗಾಳಿಯಿಂದಾಗಿ ಹವ ತಂಪಾಗಿರುತ್ತದೆ. ಇಲ್ಲಿಂದ ಢಾಕಾ ನಗರಕ್ಕೆ ಕೋಮಿಲ್ಲದ ಮೂಲಕ ರೈಲ್ವೆ ಸಂಪರ್ಕವೂ ಢಾಕಾ, ಕಾಕ್ಸ್ ಬಜಾರ್, ರಂಗೂನ್, ಕೋಲ್ಕತ್ತಗಳಿಗೆ ವಿಮಾನ ಸಂಪರ್ಕವೂ ಉಂಟು. ಇಲ್ಲಿಯ ಬಂದರು ಉತ್ತಮವಾದ್ದು. ಇದೊಂದು ನೈಸರ್ಗಿಕ ಬಂದರು. ಚಹ, ಸೆಣಬು, ಸೆಣಬು ಉತ್ಪನ್ನಗಳು ಮತ್ತು ಚರ್ಮ, ಚರ್ಮದ ಉತ್ಪನ್ನಗಳು ಇಲ್ಲಿಂದ ರಫ್ತಾಗುತ್ತವೆ. ಇದು ವಾರ್ಷಿಕವಾಗಿ 20,000 ಟನ್‍ಗಳಷ್ಟು ಸರಕು ಸಾಗಣೆ ನಿರ್ವಹಿಸಬಲ್ಲುದು. ಏಕಕಾಲದಲ್ಲಿ ಇಪ್ಪತ್ತು ಹಡಗುಗಳು ನಿಲ್ಲಲು ಸೌಲಭ್ಯವುಂಟು.

ಪಟೆಂಗ ಬೀಚ್

ಬಂದರಿನ ಪಕ್ಕದಲ್ಲೇ ಚಿತ್ತಗಾಂಗ್ ನಗರ ಬೆಳೆದಿದೆ. ಹಿಂದೆ ಪೋರ್ಚುಗೀಸರ ಕೋಟೆ ಇದ್ದೆಡೆಯಲ್ಲಿ ನ್ಯಾಯಾಲಯದ ಕಟ್ಟಡವಿದೆ. ಜುಮಾ ಮಸೀದಿ ಇನ್ನೊಂದು ಮುಖ್ಯ ಕಟ್ಟಡ. ಬಂಗಾಲದಲ್ಲಿ ಮೊಗಲರ ಗವರ್ನರಾಗಿದ್ದ ಷಯಿಸ್ತಾಖಾನ್ ಇದನ್ನು ಕಟ್ಟಿಸಿದ. ಇದೊಂದು ವಿಶ್ವವಿದ್ಯಾಲಯ ಕೇಂದ್ರ. ಚಿತ್ತಗಾಂಗ್ ಕಾಲೇಜು, ಸರ್ಕಾರಿ ವಾಣಿಜ್ಯ ಕಾಲೇಜು, ಮಹಿಳೆಯರ ಕಾಲೇಜು, ನ್ಯಾಯಶಾಸ್ತ್ರ ಕಾಲೇಜು–ಇವು ಇಲ್ಲಿಯ ಕಾಲೇಜುಗಳಲ್ಲಿ ಕೆಲವು. ಚಿತ್ತಗಾಂಗಿಗೆ 8 ಕಿಮೀ ದೂರದಲ್ಲಿರುವ ಫೌಜ್‍ದರ್ಹತ್‍ನಲ್ಲಿ ಸೈನಿಕ ಕಾಲೇಜೊಂದಿದೆ. ಚಿತ್ತಗಾಂಗಿನ ಕೈಗಾರಿಕಾ ವಲಯ ನಗರದ ಉತ್ತರದಲ್ಲಿದೆ.

ಇಲ್ಲಿ ಹತ್ತಿ ಮತ್ತು ಸಣಬು ಗಿರಣಿಗಳೂ ಚಹ ಮತ್ತು ಬೆಂಕಿಕಡ್ಡಿ ಕಾರ್ಖಾನೆಗಳೂ ಎಂಜಿನಿಯರಿಂಗ್ ಕೈಗಾರಿಕೆಗಳೂ ಇವೆ. ಇದಕ್ಕೆ 16 ಕಿಮೀ ದೂರದಲ್ಲಿ ರೈಲ್ವೆ ಕಾರ್ಯಾಗಾರವಿದೆ. ಚಿತ್ತಗಾಂಗ್ ಬಾಂಗ್ಲಾದೇಶದ ವಿದೇಶಿ ವ್ಯಾಪಾರ ಕೇಂದ್ರ. ನಗರದಲ್ಲಿರುವ ಬತಾಲಿ ಗುಡ್ಡ ಒಂದು ವಿಹಾರ ಸ್ಥಳ. ಚಿತ್ತಗಾಂಗೆ 13 ಕಿಮೀ ದೂರದಲ್ಲಿರುವ ಬಾಯಾಜಿದ್ ಒಂದು ಯಾತ್ರಾಸ್ಥಳ.



ಫೋಯ್ಸ್ ಸರೋವರ

ಚಿತ್ತಗಾಂಗ್ ನಗರದ ಇತಿಹಾಸ 8ನೆಯ ಶತಮಾನದಷ್ಟು ಹಳೆಯದು. ಇದು ಮೂಲತಃ ಒಂದು ಹಿಂದೂರಾಜ್ಯಕ್ಕೆ ಸೇರಿತ್ತೆಂದು ತಿಳಿದುಬರುತ್ತದೆ. 9ನೆಯ ಶತಮಾನದಲ್ಲಿ ಇದನ್ನು ಅರಕಾನೀಸರು ವಶಪಡಿಸಿಕೊಂಡರು. 10ನೆಯ ಶತಮಾನದಿಂದ ಅರಬ್ ನಾವಿಕರು ಈ ರೇವಿನೊಂದಿಗೆ ಸಂಪರ್ಕ ಪಡೆದಿದ್ದರು. ಇದನ್ನು ಟ್ಸಿಟಗಾಂಗ್, ಚಾತಿಗ್ರಾಮ ಅಥವಾ ಚಾತ್ ಗಾಂವ್ ಎಂದು ಕರೆಯಲಾಗಿದೆ ಇದನ್ನು 14ನೆಯ ಶತಮಾನದಲ್ಲಿ (1338) ಮುಸ್ಲಿಮರು ವಶಪಡಿಸಿಕೊಂಡರು. ಆದರೆ ಅರಕಾನೀಸರು ಇದನ್ನು ಪುನಃ ಪಡೆದುಕೊಂಡರು.

1512ರಲ್ಲಿ ಬಂಗಾಲದ ಸುಲ್ತಾನನಾಗಿದ್ದ ಅಲಾ-ಅಲ್-ದೀನ್ ಹುಸೇನ್ ಷಾ ಈ ಪಟ್ಟಣವನ್ನು ಅರಕಾನೀಸರಿಂದ ವಶಪಡಿಸಿಕೊಂಡು ಅದಕ್ಕೆ ಫಥಾಬಾದ್ ಎಂಬ ಹೆಸರಿಟ್ಟ. ಆದರೆ ಅರಕಾನೀಸರು ಈ ಪಟ್ಟಣದ ಮೇಲೆ ತಮ್ಮ ಆಧಿಪತ್ಯವನ್ನು ಸಾಧಿಸುತ್ತಲೇ ಬಂದರು. 1638ರಲ್ಲಿ ಅರಕಾನೀಸರ ಮತಕ್ ರಾಜ ಎಂಬುವನು ಆರಕಾನೀಸ್ ದೊರೆಯ ವಿರುದ್ಧ ಬಂಡೆದ್ದು ಮೊಗಲರ ರಕ್ಷಣೆಯನ್ನು ಕೋರಿದ. ಮೊಗಲ್ ಗವರ್ನರ್ ಆಗಿದ್ದ ನವಾಬ್ ಷಯಿಸ್ತಾಖಾನ್ ಈ ಪಟ್ಟಣವನ್ನು ಅಂತಿಮವಾಗಿ 1666ರಲ್ಲಿ ವಶಪಡಿಸಿಕೊಂಡ. ಇದಕ್ಕೆ ಇಸ್ಲಾಮಾಬಾದ್ ಎಂದು ನಾಮಕರಣವಾಯಿತು. ಚಿತ್ತಗಾಂಗ್ ಜಿಲ್ಲೆಯೂ ಮೊಗಲರ ವಶವಾಯಿತು.

ಈ ರೇವು 16ನೆಯ ಶತಮಾನದಲ್ಲಿ ಪೋರ್ಚುಗೀಸರ ಕಡಲುಗಳ್ಳ ವ್ಯಾಪಾರದ ಕೇಂದ್ರವಾಗಿತ್ತು. ವೆನಿಷಿಯನ್ ನಾವಿಕ ಜೊವೊ ಡಿ ಬಾರೋಸ್ 1552ರಲ್ಲಿ ಇದನ್ನು ಬಂಗಾಲ ರಾಜ್ಯದ ಅತ್ಯಂತ ಪ್ರಸಿದ್ಧವಾದ ಮತ್ತು ಸಂಪದ್ಭರಿತವಾದ ನಗರ ಎಂದು ವರ್ಣಿಸಿದ. 1685ರಲ್ಲಿ ಈಸ್ಟ್ ಇಂಡಿಯ ಕಂಪನಿ ಅಡ್ಮಿರಲ್ ನಿಕೋಲ್ಸನ್ನನ ನೇತೃತ್ವದಲ್ಲಿ ಚಿತ್ತಗಾಂಗ್‌ನ್ನು ಆಕ್ರಮಿಸಲು ಪ್ರಯತ್ನಿಸಿ ವಿಫಲಗೊಂಡಿತು. 1760ರಲ್ಲಿ ಚಿತ್ತಗಾಂಗನ್ನು ನವಾಬ್ ಮೀರ್ ಕಾಸಿಂ ಅಲಿ ಈಸ್ಟ್ ಇಂಡಿಯ ಕಂಪನಿಗೆ ಒಪ್ಪಿಸಿದ.

1864ರಲ್ಲಿ ಇದು ಪೌರಸಭಾ ನಗರವಾಯಿತು. ಅಸ್ಸಾಂ-ಬಂಗಾಲಗಳ ನಡುವೆ ರೈಲುಮಾರ್ಗ ನಿರ್ಮಾಣವಾದ ಮೇಲೆ ಇದು ಬೆಳೆಯತೊಡಗಿತು. ಭಾರತದ ವಿಭಜನೆಯಾದಾಗ (1947) ಇದು ಪೂರ್ವ ಪಾಕಿಸ್ತಾನದಲ್ಲಿ ಸೇರಿತು. ಬಾಂಗ್ಲಾದೇಶದ ವಿಮೋಚನೆಯಾದ ಮೇಲೆ ಇದು ಆ ದೇಶದ ಮುಖ್ಯ ಬಂದರಾಗಿ ಮುಂದುವರಿಯುತ್ತಿದೆ.

**ಚಿತ್ತಗಾಂಗ್ ಜಿಲ್ಲೆ:** ಇದು ಬಂಗಾಳ ಕೊಲ್ಲಿಯ ಈಶಾನ್ಯದಲ್ಲಿ ಕಣಿವೆಗಳಿಂದಲೂ ತಗ್ಗಾದ ಸಮಾಂತರ ಬೆಟ್ಟಸಾಲುಗಳಿಂದಲೂ ಕೂಡಿದ ಕಿರಿ ಅಗಲದ ಕರಾವಳಿ ಪ್ರದೇಶವನ್ನೊಳಗೊಂಡಿದೆ. ಇದರ $\frac{1}{3}$ ಭಾಗ ಅರಣ್ಯದಿಂದ ಕೂಡಿದೆ. ಕಾಡಿನಲ್ಲಿ ಆನೆ, ಕಾಡೆಮ್ಮೆ, ಹುಲಿ, ಚಿರತೆ, ಜಿಂಕೆ, ಕಾಡುಬೆಕ್ಕು ಮುಂತಾದ ಪ್ರಾಣಿಗಳಿವೆ.

ಜಿಲ್ಲೆಯ ವಿಸ್ತೀರ್ಣ 5282 ಚ.ಕಿಮೀ. ಜನಸಂಖ್ಯೆ 7,509,000 (2011). ಇಲ್ಲಿಯ ವಾಯುಗುಣ ಹಿತಕರವಾದ್ದು. ಇಲ್ಲಿಯ ಭೂಮಿ ಹೆಚ್ಚಾಗಿ ಜೇಡಿ ಮರಳು, ಜೇಡಿಪದರ ಕಲ್ಲು ಹಾಗೂ ಬಿಳಿಕಲ್ಲಿನಿಂದ ಕೂಡಿದ್ದು, ಬೆಟ್ಟಸಾಲುಗಳ ನಡುವೆ ಇರುವ ಕಣಿವೆಗಳು ಫಲವತ್ತಾದ ಮಣ್ಣಿನಿಂದ ಕೂಡಿ ವ್ಯವಸಾಯಯೋಗ್ಯವಾಗಿವೆ. ಬೇಸಗೆಯಲ್ಲಿ ಮುಂಗಾರು ಮಾರುತಗಳಿಂದ ಅಧಿಕವಾಗಿ ಮಳೆಯಾಗುತ್ತದೆ. ವರ್ಷಕ್ಕೆ ಮಳೆ 100" ಗಿಂತಲೂ ಅಧಿಕ. ಆಗಾಗ್ಗೆ ಚಂಡಮಾರುತಗಳು ಬೀಸುವುದುಂಟು. ಸೆಣಬು, ಬತ್ತ, ಕಬ್ಬು, ಹೊಗೆಸೊಪ್ಪು,ಚಹ ಮುಖ್ಯ ಬೆಳೆಗಳು. ಚಹ ತೋಟಗಳು ತಗ್ಗು ಬೆಟ್ಟಗಳ ಇಳಿಜಾರಿನಲ್ಲಿ ಹೆಚ್ಚಾಗಿ ವ್ಯಾಪಿಸಿವೆ.

**ಚಿತ್ತಗಾಂಗ್ ಗುಡ್ಡಗಾಡು ಜಿಲ್ಲೆ:** ಚಿತ್ತಗಾಂಗ್ ಜಿಲ್ಲೆಗೂ ಅಸ್ಸಾಮಿನ ಲುಷೈ ಬೆಟ್ಟಗಳಿಗೂ ನಡುವೆ ಇರುವ ಪ್ರದೇಶ. ವಿಸ್ತೀರ್ಣ 1965 ಚಕಿಮೀ. ಜನಸಂಖ್ಯೆ 3,85,079 (1961). ಕಿಯೊ ಕರಾದಂಗ್ (1230 ಮೀ.) ಮತ್ತು ಪಿರಮಿಡ್ (919ಮೀ)ಅತ್ಯಂತ ಎತ್ತರದ ಬೆಟ್ಟಗಳು. ಬೆಟ್ಟಗುಡ್ಡಗಳಿಂದ ಕೂಡಿದ ಈ ಪ್ರದೇಶದ ಹೆಚ್ಚು ಭಾಗ ಸಾಗುವಳಿಗೆ ಯೋಗ್ಯವಾಗಿಲ್ಲ. ಇಲ್ಲಿ ಉಷ್ಣತೆ ಹೆಚ್ಚು; ವಾತಾವರಣದಲ್ಲಿ ತೇವಾಂಶ ಅಧಿಕ. ನದಿಗಳೇ ಇಲ್ಲಿಯ ಮುಖ್ಯ ಸಂಪರ್ಕ ಮಾಧ್ಯಮಗಳು. ಕರ್ಣಫೂಲಿ ಯೋಜನೆಯ ಅಡಿಯಲ್ಲಿ ಕಪ್ತಾಯ್ ಎಂಬಲ್ಲಿ ಕಟ್ಟೆಯೊಂದನ್ನು ಕಟ್ಟಲಾಗಿದೆ. ಹತ್ತಿ ಬಟ್ಟೆ ನೇಯುವುದು, ಬಿದಿರುಗೆಲಸ ಮುಖ್ಯ ಗುಡಿಸಲು ಕೈಗಾರಿಕೆಗಳು. ಬತ್ತ, ಹತ್ತಿ, ಚಹ, ಹೊಗೆಸೊಪ್ಪು, ಕಬ್ಬು ಮುಖ್ಯ ಬೆಳೆಗಳು.

**ಚಿತ್ತಗಾಂಗ್ ವಿಭಾಗ:** ಇದು ಬಾಂಗ್ಲಾ ದೇಶದ ನಾಲ್ಕು ಆಡಳಿತ ವಿಭಾಗಗಳಲ್ಲಿ ಒಂದು. ಚಿತ್ತಗಾಂಗ್, ನೌಖಾಲಿ, ಚಿತ್ತಗಾಂಗ್ ಗುಡ್ಡಗಾಡು, ಕೊಮಿಲ್ಲಾ ಮತ್ತು ಸಿಲ್ಹೆಟ್ ಜಿಲ್ಲೆಗಳು ಈ ವಿಭಾಗಕ್ಕೆ ಸೇರಿವೆ. ಇದರ ಆಡಳಿತ ಕೇಂದ್ರ ಚಿತ್ತಗಾಂಗ್ ನಗರ. ಈ ವಿಭಾಗದ ವಿಸ್ತೀರ್ಣ 6570 ಚ.ಕಿಮೀ. **(ಡಿ.ಎಸ್.ಜೆ.)**

**ಚಿತ್ತಪ್ರಕೃತಿ :** ಒಬ್ಬ ವ್ಯಕ್ತಿಯ ಸಂವೇಗಶೀಲತೆಯಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ವಿವರಿಸಲು ಈ ಪದವನ್ನು ಬಹಳ ಪ್ರಾಚೀನಕಾಲದಿಂದಲೂ ಬಳಸಿಕೊಂಡು ಬಂದಿದ್ದಾರೆ. ಸಂವೇಗಶೀಲತೆಯ ವೈಲಕ್ಷಣ್ಯವೇ ಚಿತ್ತಪ್ರಕೃತಿ (ಟೆಂಪರಮೆಂಟ್). ಇದರ ಬಗ್ಗೆ ಅಮೆರಿಕದ ಪ್ರಸಿದ್ಧ ಮನಶ್ಶಾಸ್ತ್ರಜ್ಞ ಜಿ. ಡಬ್ಲ್ಯು. ಆಲ್ಪೋರ್ಟ್ ಎಂಬುವನ ಅಭಿಪ್ರಾಯ ಹೀಗಿದೆ : ಒಬ್ಬ ವ್ಯಕ್ತಿಯ ಸಂವೇಗಾತ್ಮಕ ಸ್ವಭಾವದ ವಿಲಕ್ಷಣ ಘಟನೆಯೇ ಚಿತ್ತಪ್ರಕೃತಿ. ಅಂದರೆ, ಒಂದು ಸಂವೇಗಾತ್ಮಕ ಪ್ರಚೋದನೆಗೆ ವ್ಯಕ್ತಿ ಒಳಗಾಗುವ ಪ್ರವಣತೆ (ಸಸೆಪ್ಟಿಬಿಲಿಟಿ), ಆತ ತೋರಿಸುವ ಅನುಕ್ರಿಯೆಯ ಬಲ ಮತ್ತು ವೇಗಗಳ ಸಾಂಪ್ರದಾಯಿಕತೆ; ಅವನಲ್ಲಿರುವ ಚಿತ್ತವೃತ್ತಿಯ (ಮೂಡ್) ಗುಣ ಮತ್ತು ತೀವ್ರತೆಗಳ ಚಾಂಚಲ್ಯಗಳಲ್ಲಿ ಕಂಡುಬರುವ ವೈಲಕ್ಷಣ್ಯಗಳು-ಇವುಗಳೆಲ್ಲ ಚಿತ್ತಪ್ರಕೃತಿಯಲ್ಲಿ ಸಮಾವೇಶವಾಗಿರುತ್ತವೆ. ಆಲ್ಪೋರ್ಟನ ಈ ವ್ಯಾಖ್ಯೆಯ ಪ್ರಕಾರ ಚಿತ್ತಪ್ರಕೃತಿ ಜನ್ಮಜಾತ ಸ್ವರೂಪಾತ್ಮಕ ಲಕ್ಷಣಗಳಲ್ಲಿ ಒಂದೆನಿಸುವುದಾದರೂ ಹುಟ್ಟಿದಂದಿನಿಂದ ಸಾಯುವವರೆಗೂ ಬದಲಾಗದ ಗುಣವಾಗಲಾರದು. ದೇಹಸ್ವರೂಪ (ಮೈಕಟ್ಟು) ಮತ್ತು ಬುದ್ಧಿಶಕ್ತಿಗಳಂತೆಯೇ ಇದೂ ಒಂದು ರೀತಿಯಲ್ಲಿ ಬದಲಾವಣೆ ಹೊಂದುವುದು ನಿಜ. ವೈದ್ಯಕೀಯ, ಶಸ್ತ್ರಚಿಕಿತ್ಸಾತ್ಮಕ ಮತ್ತು ಪೋಷಕಾಂಶಗಳ ಕಾರಣದಿಂದಾಗಿ ವ್ಯಕ್ತಿತ್ವ ವಿಕಾಸವಾದಂತೆಲ್ಲ ಚಿತ್ತಪ್ರಕೃತಿ ಬದಲಾಗುತ್ತ ಹೋಗಬಹುದು. ಆದರೆ ಅಂಥ ಬದಲಾವಣೆಗೆ ಒಂದು ಪರಿಮಿತಿಯುಂಟು.

ಚಿತ್ತಪ್ರಕೃತಿ ಮತ್ತು ಚಿತ್ತವೃತ್ತಿ : ವ್ಯಕ್ತಿಯ ಭಾವನಾಸ್ಥಿತಿಯಲ್ಲಿ ಆಗಾಗ್ಗೆ ಉಂಟಾಗುವ ಚಾಂಚಲ್ಯಗಳೇ ಚಿತ್ತವೃತ್ತಿಗಳೆನಿಸುತ್ತವೆ. ಒಂದು ಸಮಯದಲ್ಲಿ ಆನಂದಭರಿತನಾಗಿದ್ದ ವ್ಯಕ್ತಿ ಮತ್ತೊಂದು ಸಮಯದಲ್ಲಿ ವಿಷಣ್ಣನಾಗಿ ಕುಳಿತಿರಬಹುದು. ಹೀಗೆ ಭಾವನಾ ಸ್ಥಿತಿಯಲ್ಲಿ ಆಗುವ ಚಾಂಚಲ್ಯಗಳು ದಿನವೂ ತೋರಬಹುದು, ಇಲ್ಲವೆ ಆಗಾಗ ಕಾಣಿಸಿಕೊಳ್ಳಬಹುದು. ಇಂಥ ಚಿತ್ತವೃತ್ತಿಗಳಲ್ಲಿ ಸಾಪೇಕ್ಷವಾಗಿ ಶಾಶ್ವತವೆನಿಸುವ ವಿನ್ಯಾಸಗಳೂ ಕಂಡುಬಂದಾಗ ಅವು ಚಿತ್ತಪ್ರಕೃತಿಗಳೆನಿಸುತ್ತವೆ. ಉದಾಹರಣೆಗೆ, ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಬರುವ ಆಗುಹೋಗುಗಳಿಗೆ ಅನುಗುಣವಾಗಿ ಸಂತೋಷ-ಸಂತಾಪಭಾವಗಳನ್ನು ಆಗಾಗ್ಗೆ ಪ್ರಕಟಿಸುತ್ತಿದ್ದರೂ ಅಂಥ ಭಾವಗಳು ತಾತ್ಕಾಲಿಕವಾಗಿರುತ್ತವೆ. ಅವು ಕೇವಲ ಅಲ್ಪಕಾಲಿಕವಾಗಿದ್ದು ಚಿತ್ತವೃತ್ತಿಗಳೆನಿಸಿದರೆ, ಅವುಗಳೇ ವೃತ್ತಿಯಲ್ಲಿ ನೆಲೆನಿಂತು ಸಾಪೇಕ್ಷವಾಗಿ ಶಾಶ್ವತವೆನಿಸಿದಾಗ ಮತ್ತು ಒಂದು ಸ್ಪಷ್ಟವಿನ್ಯಾಸವನ್ನು ಪಡೆದಾಗ ಚಿತ್ತಪ್ರಕೃತಿಗಳೆನಿಸುತ್ತವೆ. ಒಬ್ಬ ವ್ಯಕ್ತಿಯಲ್ಲಿ ಉಲ್ಲಾಸಶೀಲತೆ ಒಂದು ಸಾಮಾನ್ಯ ಲಕ್ಷಣವಾಗಿ ಕಂಡುಬಂದಾಗ, ಅಂಥ ವ್ಯಕ್ತಿಯನ್ನು ಉಲ್ಲಾಸಶೀಲ ಅಥವಾ ಉಲ್ಲಾಸಶೀಲ ಚಿತ್ತಪ್ರಕೃತಿಯ ವ್ಯಕ್ತಿ ಎಂದು ಕರೆಯಲಾಗುತ್ತದೆ. ವಿಷಣ್ಣ ಶೀಲತೆಯನ್ನೇ ಸಾಮಾನ್ಯಲಕ್ಷಣವಾಗಿ ಪಡೆದಿರುವ ವ್ಯಕ್ತಿಯೂ ಒಂದೊಂದು ಸಲ ಉಲ್ಲಾಸಭಾವವನ್ನು ಪ್ರಕಟಿಸಬಹುದು. ಆಗ ಅಂಥ ಭಾವಪ್ರಕಟಣೆಗೆ ಉಲ್ಲಾಸ ಚಿತ್ತವೃತ್ತಿ ಎನ್ನುತ್ತೇವೆಯೇ ಹೊರತು ಉಲ್ಲಾಸಶೀಲತೆ ಅಥವಾ ಉಲ್ಲಾಸ ಚಿತ್ತಪ್ರಕೃತಿ ಎನ್ನುವುದಿಲ್ಲ. ಯಾವುದೇ ಚಿತ್ತವೃತ್ತಿ ಅಥವಾ ಚಿತ್ತಪ್ರಕೃತಿ ಅದಕ್ಕೆ ಅನುಗುಣವಾದ ಸಂವೇಗಾನುಭವವನ್ನು ಪಡೆಯಲು ವ್ಯಕ್ತಿಯನ್ನು ಸಿದ್ಧಸ್ಥಿತಿಯಲ್ಲಿರಿಸುತ್ತದೆ. ಒಬ್ಬ ವ್ಯಕ್ತಿ ಸಂತೋಷದಿಂದಿದ್ದಾಗ, ಅಲ್ಪಪ್ರಮಾಣದ ಅಪಜಯಗಳನ್ನು ವಿನೋದಪ್ರದ

ಸವಾಲುಗಳು ಎಂದು ಪರಿಗಣಿಸಿ ಅವುಗಳಿಗೆ ಸುಲಭವಾಗಿ ಹೊಂದಿಕೊಳ್ಳಬಹುದು. ಅದಕ್ಕೆ ಬದಲಾಗಿ, ಅವನಲ್ಲಿ ಗೊಂದಲ ಚಿತ್ತವೃತ್ತಿಯಿದ್ದರೆ, ಅಂಥ ಅಪಜಯಗಳಿಂದ ಆತನಲ್ಲಿ ಕೋಪೋದ್ರೇಕ ಮತ್ತು ಹತಾಶೆಗಳು ಮೂಡಬಹುದು.

ಚಿತ್ತಪ್ರಕೃತಿಯ ದೈಹಿಕ ನೆಲೆಗಳು : ಚಿತ್ತಪ್ರಕೃತಿ ವ್ಯಕ್ತಿತ್ವದ ಒಂದು ಪ್ರಧಾನ ಅಂಗವೆಂದು ಹೇಳಿದ ಮೇಲೆ ಅದರ ನೆಲೆಗಳ ಬಗ್ಗೆ ಕೆಲವು ವಿವರಗಳನ್ನು ತಿಳಿಯುವ ಅಗತ್ಯವಿದೆ. ವ್ಯಕ್ತಿತ್ವ ಅನುವಂಶೀಯ ಹಾಗೂ ಪ್ರತ್ಯಾವರಣಾತ್ಮಕ ಕಾರಣಾಂಶಗಳ ನಿರಂತರ ಸಾಹಚರ್ಯದ ಪ್ರತೀಕವೆಂದು ಹೇಳುವುದುಂಟು. ಆದರೆ ಈ ಕಾರಕಾಂಶಗಳಲ್ಲಿ ಯಾವುದು ಎಷ್ಟು ಪ್ರಧಾನವೆಂಬ ಪ್ರಶ್ನೆ ಎದ್ದಾಗ, ಇತ್ತೀಚಿನ ಸಂಶೋಧನೆಗಳ ಆಧಾರದಿಂದ, ವ್ಯಕ್ತಿತ್ವರೂಪಣೆಯಲ್ಲಿ ಪ್ರತ್ಯಾವರಣದ ಪ್ರಭಾವ ಹೆಚ್ಚಿನದು ಎಂಬುದು ತಿಳಿದುಬಂದಿದೆ. ಆದರೆ ಚಿತ್ತಪ್ರಕೃತಿಯ ಅರ್ಥನಿರೂಪಣೆ ಮಾಡಿದಾಗ ಹಿಂದೆಯೇ ಪ್ರಸ್ತಾಪಿಸಿದಂತೆ, ಇದು ಮೂಲತಃ ಅನುವಂಶೀಯ ಹಾಗೂ ದೇಹಸ್ವರೂಪಾತ್ಮಕ ನೆಲೆಗಳನ್ನು ಹೊಂದಿರುವುದು ಕಂಡುಬರುತ್ತದೆ. ಈ ಸಮಸ್ಯೆಗೆ ಸಂಬಂಧಿಸಿದಂತೆ ಬಹಳ ಪ್ರಾಚೀನಕಾಲದಿಂದಲೂ ಸೈದ್ಧಾಂತಿಕ ಚರ್ಚೆ ನಡೆದಿರುವುದರ ಜೊತೆಗೆ, ಆಧುನಿಕ ಮನೋವಿಜ್ಞಾನದಲ್ಲಿ ಸಂಶೋಧನೆಗಳೂ ನಡೆದಿವೆ.

ಶರೀರಧಾತುಗಳು ಮತ್ತು ಚಿತ್ತಪ್ರಕೃತಿ : ಶರೀರದಲ್ಲಿವೆ ಎಂದು ಹೇಳಲಾದ ನಾಲ್ಕು ರೀತಿಯ ಧಾತುಗಳು ವ್ಯಕ್ತಿಯ ಚಿತ್ತಪ್ರಕೃತಿಯನ್ನು ನಿರ್ಧರಿಸುತ್ತವೆ ಎಂಬ ವಾದ ಬಹಳ ಪ್ರಾಚೀನವಾದುದು. ಪ್ರಾಚೀನ ಭಾರತೀಯರೂ ಗ್ರೀಕರೂ ಈ ವಾದವನ್ನು ಮುಂದಿಟ್ಟವರಲ್ಲಿ ಮೊದಲಿಗರು. ರಕ್ತ, ವಾತ, ಪಿತ್ತ ಮತ್ತು ಕಫಗಳೆಂಬ ಧಾತುಗಳ ಸಾಪೇಕ್ಷ ಪ್ರಾಬಲ್ಯಕ್ಕೆ ಅನುಗುಣವಾಗಿ ವ್ಯಕ್ತಿಯಲ್ಲಿ ನಾಲ್ಕು ರೀತಿಯ ಚಿತ್ತಪ್ರಕೃತಿಗಳು ಕಾಣಿಸಿಕೊಳ್ಳುತ್ತವೆ ಎಂಬುದು ಈ ವಾದದ ಸಾರ. ಅಲ್ಲದೆ ಭಾರತೀಯ ವಿಚಾರಧಾರೆಯಲ್ಲಿಯೂ ವಿವಿಧ ಆಹಾರಾಂಶಗಳು ಹಾಗೂ ಅವುಗಳಿಂದ ಸಿದ್ಧವಾದ ಶರೀರ ಧಾತುಗಳು ಇರುತ್ತವೆ ಎಂಬುದೂ ಶರೀರಧಾತು ಸಿದ್ಧಾಂತಕ್ಕೆ ಒಂದು ರೀತಿಯ ಪುಷ್ಟಿಯನ್ನು ಕೊಡಬಲ್ಲದು.

ಶರೀರಧಾತುಸಿದ್ಧಾಂತ ಪ್ರಶ ಪೂ. 5ನೆಯ ಶತಮಾನದಲ್ಲಿದ್ದ ಗ್ರೀಕ್ ವಿಚಾರವಂತನಾದ ಎಂಪೆಡೋಕ್ಲೀಸನ ವಿಚಾರಗಳಿಂದ ಉದ್ಭವಿಸಿದೆ ಎಂದು ಹೇಳಬಹುದು. ಪ್ರಕೃತಿ ಆತನ ಪ್ರಕಾರ ವಾಯು, ಭೂಮಿ, ಅಗ್ನಿ ಮತ್ತು ಜಲಗಳೆಂದು ನಾಲ್ಕು ಮೂಲಾಂಶಗಳಿಂದ ರೂಪಗೊಂಡಿದೆ. ಭಾರತೀಯ ವಿಚಾರಧಾರೆಯಲ್ಲಿರುವ ಪಂಚಭೂತ ಸಂಕಲ್ಪನೆಗೂ ಇದಕ್ಕೂ ನಿಕಟಸಾಮ್ಯವಿರುವುದು ಗಮನಾರ್ಹ ಅಂಶ. ಬೃಹತ್ ಪ್ರಕೃತಿ ಮೇಲೆ ಹೇಳಲಾದ ಮೂಲಾಂಶಗಳಿಂದ ರೂಪಗೊಂಡಿದ್ದರೆ, ಅದರ ಅಣುವೆನಿಸಿದ ಮಾನವನಲ್ಲಿಯೂ ಆ ಮೂಲಾಂಶಗಳು ಕ್ರಿಯಾಶೀಲವಾಗಿರಬೇಕಾದುದು ತರ್ಕಬದ್ಧವಾದ ಸಂಗತಿ. ಈ ರೀತಿಯಲ್ಲಿ ತರ್ಕಿಸಿದವನೆಂದರೆ, ವೈದ್ಯವಿಜ್ಞಾನದ ಪಿತನೆನಿಸಿದ ಹಿಪಾಕ್ರಟೀಸ್. ಆಶ್ಚರ್ಯವೆಂದರೆ, ಅಂತಃಸ್ರಾವ ವಿಜ್ಞಾನದ ಅಂಕುರವಾಗುವುದಕ್ಕೆ ಬಹಳ ಹಿಂದೆಯೇ ಮೇಲೆ ಹೇಳಲಾದ ಮೂಲಾಂಶಗಳು ಮನುಷ್ಯನ ಶರೀರದಲ್ಲಿ, ಧಾತುರೂಪದಲ್ಲಿ ಪ್ರತಿಫಲಿಸಿವೆ ಎಂಬ ಸತ್ತ್ವಪೂರ್ಣ ಪ್ರಾಕ್ಕಲ್ಪನೆಯ ಉದಯವಾಗಿತ್ತು.

ಹಿಪಾಕ್ರಟೀಸ್ ಹೇಳಿದ ಧಾತುಗಳೆಂದರೆ–ರಕ್ತ, ವಾತ, ಪಿತ್ತ ಮತ್ತು ಕಫ (ಶ್ಲೇಷ್ಮ). ಇವುಗಳಲ್ಲಿ ಯಾವುದೇ ಒಂದು ಧಾತು ಪ್ರಧಾನವಾಗಿದ್ದರೆ, ಅದಕ್ಕನುಗುಣವಾದ ಚಿತ್ತಪ್ರಕೃತಿಯೊಂದು ವ್ಯಕ್ತಿಯಲ್ಲಿ ಪ್ರಧಾನವಾಗಿರುತ್ತದೆ ಎಂಬುದು ಆತನ ಊಹೆಯಾಗಿತ್ತು. ಈ ಊಹೆಗೆ ಹೆಚ್ಚಿನ ರೂಪವನ್ನು ಕೊಟ್ಟವನೆಂದರೆ ಪ್ರ.ಶ.2ನೆಯ ಶತಮಾನದಲ್ಲಿದ್ದ ರೋಮಿನ ವೈದ್ಯ ಗೇಲನ್. ಆತನ ಪ್ರಕಾರ, ಹಿಪಾಕ್ರಟೀಸ್ ಹೇಳಿದ ಧಾತುಗಳು ಚಿತ್ತಪ್ರಕೃತಿಗಳಿಗೆ ಮಾತ್ರವಲ್ಲದೆ ರೋಗಿಗಳಿಗೂ ಸಂಬಂಧಿಸಿರುತ್ತವೆ. ಉದಾಹರಣೆಗೆ ಪಿತ್ತರಸ ಅಧಿಕವಾದಾಗ ವ್ಯಕ್ತಿ ಜ್ವರದಿಂದ ನರಳಿದರೆ, ವಾತ ಹೆಚ್ಚಿದಾಗ ಉಷ್ಣತೆ ಮತ್ತು ಕ್ಷಯಗಳಿಂದ ನರಳುತ್ತಾನೆ. ವಿಶ್ವ ಮೂಲಾಂಶಗಳು, ಶರೀರ ಧಾತುಗಳು ಮತ್ತು ಚಿತ್ತಪ್ರಕೃತಿಗಳ ನಡುವಣ ಸಂಬಂಧಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು :

| ವಿಶ್ವಮೂಲಾಂಶಗಳು | ಅವುಗಳ ಗುಣಗಳು | ಅನುಗುಣವಾದ ಶರೀರ ಧಾತುಗಳು | ಅನುಗುಣವಾದ ಚಿತ್ತಪ್ರಕೃತಿಗಳು |
|---|---|---|---|
| ಗಾಳಿ (ವಾಯು) | ಶಾಖ ಮತ್ತು ಶೈತ್ಯ | ರಕ್ತ | ಉಲ್ಲಾಸ |
| ಮಣ್ಣು (ಭೂಮಿ) | ತಂಪು ಮತ್ತು ಶುಷ್ಕ | ವಾತ | ವಿಷಣ್ಣತೆ |
| ಬೆಂಕಿ (ಅಗ್ನಿ) | ಶಾಖ ಮತ್ತು ಶುಷ್ಕ | ಪಿತ್ತ | ಸಿಡುಕುತನ |
| ನೀರು (ಜಲ) | ತಂಪು ಮತ್ತು ಶೈತ್ಯ | ಕಫ(ಶ್ಲೇಷ್ಮ) | ಅಲಸತೆ(ಜಡತೆ) |

ಕೋಷ್ಟಕದಲ್ಲಿ ಕೊಡಲಾಗಿರುವ ನಾಲ್ಕು ರೀತಿಯ ಚಿತ್ತಪ್ರಕೃತಿಗಳುಳ್ಳವರಲ್ಲಿ ಉಲ್ಲಾಸಿಗಳು – ಆಶಾವಾದ, ಪುನರ್ವರ್ತನಶೀಲತೆ, ಚಟುವಟಿಕೆ ಮತ್ತು ನಿರಾಳ ಭಾವನೆಗಳಿಂದಲೂ ವಿಷಣ್ಣರು–ಮಂಕು, ಚಿಂತೆ, ರೋಗಭಯ, ಶಂಕೆ ಮತ್ತು ಖಿನ್ನತೆಗಳಿಂದಲೂ ಸಿಡುಕರು–ಶೀಘ್ರವಾಗಿ ತೀವ್ರವಾಗಿ ಭಾವೋದ್ರೇಕಗಳಿಗೆ ಒಳಗಾಗುವರೂ, ಆಲಸಿಗಳು–ಜಡತೆ, ಶೀತಲಭಾವ ಮತ್ತು ಸೋಮಾರಿತನಗಳಿಂದಲೂ ಕೂಡಿರುತ್ತಾರೆ.

ಶರೀರಧಾತುಗಳು ಕೇವಲ ನಾಲ್ಕು ಮಾತ್ರವಲ್ಲ ಹಾಗೂ ಅಂತಃಸ್ರಾವಗಳು ಹಲವು–ಎಂಬುದನ್ನು ಆಧುನಿಕ ವೈಜ್ಞಾನಿಕ ಸಂಶೋಧನೆಗಳು ಬೆಳಕಿಗೆ ತಂದಿದ್ದರೂ ವ್ಯಕ್ತಿತ್ವದ ಸಂವೇಗಾತ್ಮಕ ತಳಹದಿ ಎನಿಸಿರುವ ಚಿತ್ತಪ್ರಕೃತಿ ದೇಹದ ರಾಸಾಯನಿಕ ವ್ಯಾಪಾರದಿಂದ ನಿರ್ಧಾರವಾಗುತ್ತದೆ ಎಂಬ ಊಹೆ ಮಹತ್ತ್ವಪೂರ್ಣವಾದುವಲ್ಲದೆ, ಪುರಾತನರು ವಿವರಿಸಿರುವ ನಾಲ್ಕು ಪ್ರರೂಪಗಳು ಹೆಚ್ಚು ನವ್ಯರೀತಿಯವಾಗಿದ್ದು, ಚಿತ್ತಪ್ರಕೃತಿಯನ್ನು ವರ್ಗೀಕರಿಸಲು ಉಪಯೋಗಿಸಲಾಗುವಂಥ ಯಾವುದೇ ಆಧುನಿಕ ಆಯಾಮಕ್ಕಾದರೂ ಸರಿಹೊಂದುತ್ತವೆ ಎಂಬುದು ಆಲ್ಪೋರ್ಟನ ಅಭಿಮತ. ಅಲ್ಲದೆ ಈ ನಾಲ್ಕು ಗುಣಗಳನ್ನೂ ಚಿತ್ತಪ್ರಾಕೃತಿಕ ಆಯಾಮಗಳಲ್ಲಿ ತಾರ್ಕಿಕ ಹಾಗೂ ಪಾರಿಮಾಣಿಕ ದೃಷ್ಟಿಕೋನಗಳಿಂದಲೂ ಪ್ರತಿಪಾದಿಸುವ ಸಾಧ್ಯತೆ ಇದೆ.

ಮೇಲೆ ಪ್ರಸ್ತಾಪಿಸಲಾದ ಚಿತ್ತಪ್ರಾಕೃತಿಕ ಪ್ರರೂಪಗಳು, ಸಂವೇಗಾತ್ಮಕತೆಯ (ವೇಗ ಮತ್ತು ತೀವ್ರತೆ) ವಿವಿಧ ಆಯಾಮಗಳಲ್ಲಿ ಹೇಗೆ ಒಪ್ಪಿಸಬೇಕೆಂಬುದನ್ನು ಆಲ್ಪೋರ್ಟ ಮುಂದಿನ ಮಾದರಿಗಳಿಂದ (**ಚಿತ್ರ 1**) ಸ್ಪಷ್ಟಪಡಿಸುತ್ತಾನೆ.

ಹಿಪಾಕ್ರಟೀಸನಿಂದ ಪ್ರಾರಂಭವಾದ ಶರೀರಧಾತುಸಿದ್ಧಾಂತ ಮೊದಲಿಗೆ ಗೇಲನ್ನನಿಂದ ಸುಧಾರಿತವಾಯಿತು. ಮುಂದೆ ರೋಸನಫ್, ಕ್ರೆಷ್ಮರ್,ಷೆಲ್‌ಡನ್ ಮುಂತಾದವರಿಂದ ನಾನಾ ಸುಧಾರಣೆಗಳನ್ನು ಪಡೆಯಿತು. ಉದಾ: ಹೆಮನ್ಸ್ ಮತ್ತು ವೆಯ್ಸ್‌ಮನ್‌ರ ವ್ಯಾಪಕ ಅಧ್ಯಯನದ ಆಧಾರದ ಮೇಲೆ ಎಂಟು ವಿಧವಾದ ಚಿತ್ತಪ್ರಕೃತಿಗಳನ್ನು ಹೇಳಿದ್ದಾರೆ. ಅವು: ಅಪರಿಪಕ್ವತೆ, ಜಡತೆ, ದುರ್ಬಲತೆ, ಭಾವಾತಿರೇಕ, ಉಲ್ಲಾಸ, ಉದಾಸೀನತೆ, ಸಿಡುಕು ಮುಂತಾದ ಅತಿರಾಗಭಾವಗಳು. ಹಿಪಾಕ್ರಟೀಸ್ ಮತ್ತು ಗೇಲನ್ ಪ್ರತಿಪಾದಿಸಿದ ನಾಲ್ಕು ರೀತಿಯ ಚಿತ್ತಪ್ರಕೃತಿಗಳೂ ಇವುಗಳಲ್ಲಿ ಸಮಾವೇಶವಾಗಿರುವುದನ್ನು ಕಾಣಬಹುದು.

ರೋಸನಫನ ಪ್ರಕಾರ ನಾಲ್ಕು ರೀತಿಯ ಮನೋರೋಗಲಕ್ಷಣಾತ್ಮಕ ಚಿತ್ತಪ್ರಕೃತಿಗಳಿವೆ: ಸಮಾಜಬಾಹಿರತನ, ಚಕ್ರವಿಕ್ಷಿಪ್ತಾತ್ಮಕತೆ (ಸೈಕ್ಲೊತೈಮಿಯ), ಸ್ವಲೀನತನ ಮತ್ತು ಅಪಸ್ಮಾರತನ. ಐದನೆಯ ಚಿತ್ತಪ್ರಕೃತಿ ಸಾಮಾನ್ಯರಲ್ಲಿ ಕಂಡುಬರುವ ವಿಶ್ರಾಂತಭಾವ.




**ಚಿತ್ರ 1. ಸಂವೇಗಾನುಕ್ರಿಯೆಯ ವಿವಿಧ ಆಯಾಮಗಳಿಗೆ ಅಳವಡಿಸಲಾದ ನಾಲ್ಕು ಚಿತ್ತ ಪ್ರಕೃತಿಗಳು. ಅ–ಸಂವೇಗಾತ್ಮಕ ವೇಗ ತೀವ್ರತೆಗಳ ; ಆ–ಅಗಲ ಮತ್ತು ಆಳಗಳ; ಇ–ಉತ್ತೇಜಕತೆ ಮತ್ತು ರಾಗಭಾವಗಳ ಮತ್ತು ಈ–ಕ್ರಿಯಾಮಟ್ಟ ಮತ್ತು ಕ್ರಿಯಾದಿಸೆಗಳ ಆಯಾಮಗಳಲ್ಲಿ. ನಾಲ್ಕು ರೀತಿಯ ಚಿತ್ತಪ್ರಕೃತಿಗಳ ಸ್ಥಾನಮಾನವೇನೆಂಬುದನ್ನು ಸೂಚಿಸುತ್ತವೆ.**

ಹೀಗೆ ಹಲವರು ಪ್ರತಿಪಾದಿಸಿದ ಚಿತ್ತಪ್ರಕೃತಿಪ್ರರೂಪಗಳಲ್ಲಿ ಹೆಚ್ಚಾಗಿ ಸಂಶೋಧಕರ ಮನಸ್ಸನ್ನು ಆಕರ್ಷಿಸಿದ ಪ್ರತಿಪಾದನೆಗಳನ್ನು ಕೊಟ್ಟವರು ಪ್ರಮುಖವಾಗಿ ಕ್ರೆಷ್ಮರ್ ಮತ್ತು ಷೆಲ್‌ಡನ್.

ಕ್ರೆಷ್ಮರ್ ಮತ್ತು ಅಂಗರಚನಾತ್ಮಕ ಪ್ರರೂಪಗಳು : ಜರ್ಮನಿಯ ಸುಪ್ರಸಿದ್ಧ ಮನೋವೈದ್ಯನೆನಿಸಿದ್ದ ಕ್ರೆಷ್ಮರ್ ಚಿತ್ತಪ್ರಕೃತಿಗಳಿಗೂ ದೇಹರಚನೆಗೂ ನಿಕಟ ಸಂಬಂಧವಿದೆ ಎಂದು ಪ್ರತಿಪಾದಿಸಿದ. ಒಂದೇ ರೀತಿಯ ಮುಖಲಕ್ಷಣಗಳ ಹಿನ್ನೆಲೆಯಲ್ಲಿ, ಒಂದೇ ರೀತಿಯ, ಸ್ವರೂಪಲಕ್ಷಣಗಳು ಇರುತ್ತವೆಯಲ್ಲದೆ ಒಂದು ರೀತಿಯ ಬಾಹ್ಯಲಕ್ಷಣಗಳ ಹಿನ್ನೆಲೆಯಲ್ಲಿ ಅದೇ ರೀತಿಯ ಮಾನಸಿಕ ಶಕ್ತಿಗಳು ಕ್ರಿಯಾಶೀಲವಾಗಿರುತ್ತವೆ – ಎಂಬುದು ಕ್ರೆಷ್ಮರನ ಅಭಿಮತ. ತನ್ನ ಪ್ರಾಕ್ಕಲ್ಪನೆಯನ್ನು ಪರಿಶೀಲಿಸಲು ಆತನ ಅನೇಕ ಮಂದಿ ರೋಗಿಗಳ ದೇಹರಚನೆಗಳನ್ನೂ ಮಾನಸಿಕ ಲಕ್ಷಣಗಳನ್ನೂ ಅವಲೋಕಿಸಿ ಅವುಗಳ ಆಧಾರದ ಮೇಲೆ ತನ್ನ ಸಿದ್ಧಾಂತವನ್ನು ರೂಪಿಸಿದ್ದಾನೆ. ಕ್ರೆಷ್ಮರನದು ನೈದಾನಿಕ ಅಧ್ಯಯನ. ಪ್ರಧಾನ ದೈಹಿಕ ಹಾಗೂ ಮಾನಸಿಕ ಲಕ್ಷಣಗಳ ಪರಸ್ಪರ ಸಹಸಂಬಂಧವನ್ನು ಗುರುತಿಸಿ ಪ್ರಮುಖವಾಗಿ ಎರಡು ಪ್ರರೂಪಗಳನ್ನು ಆತ ಪ್ರತಿಪಾದಿಸಿದ್ದಾನೆ. ಅವು ಚಕ್ರವಿಕ್ಷಿಪ್ತಶೀಲತೆ ಮತ್ತು ಮನೋವಿದಳನಶೀಲತೆ (ಸ್ಕಿಜೊತೈಮಿಯ) ಸಾಮಾನ್ಯವಾಗಿ ಗುಂಡುಕಾಯದ (ಪಿಕ್‍ನಿಕ್) ವ್ಯಕ್ತಿಗಳು ಚಕ್ರವಿಕ್ಷಿಪ್ತಶೀಲ ಚಿತ್ತಪ್ರಕೃತಿಯಿಂದ ಕೂಡಿದ್ದರೆ ನೀಳಕಾಯದ (ಆಸ್ತೆನಿಕ್) ವ್ಯಕ್ತಿಗಳು ಮನೋವಿದಳನ ಶೀಲಚಿತ್ತಪ್ರಕೃತಿಯಿಂದ ಕೂಡಿರುತ್ತಾರೆ. ಕ್ರೆಷ್ಮರ್ ತನ್ನ ರೋಗಿಗಳಲ್ಲಿ ಸಾಮಾನ್ಯವಾಗಿ ಗುಂಡುಕಾಯಗಳಿಂದ ಕೂಡಿದವರೂ ಮನೋವಿದಳಿತ ರೋಗಿಗಳು ನೀಳದೇಹಧಾರಿಗಳೂ ಆಗಿರುವುದನ್ನು ಗುರುತಿಸಿದ. ಹೀಗೆ ತನ್ನ ನೈದಾನಿಕ ಅಧ್ಯಯನದ ಕಾರ್ಯಪ್ರರೂಪಗಳು ಮತ್ತು ಚಿತ್ತಪ್ರಕೃತಿಗಳ ನಡುವಣ ಸಂಬಂಧವನ್ನು ಗುರುತಿಸಿದ ಮೇಲೆ ಅಂಥ ಸಂಬಂಧಗಳು ಕೇವಲ ನೈದಾನಿಕ ಕ್ಷೇತ್ರಕ್ಕೆ ಸೀಮಿತವಾಗಿರದೆ, ಸಾಮಾನ್ಯ ಜನರಲ್ಲಿಯೂ ಕಂಡುಬರುತ್ತವೆ ಎಂದು ಹೇಳಿದ. ಆತನ ಪ್ರಕಾರ ಮನೋವಿದಳನಶೀಲ ವ್ಯಕ್ತಿಗಳಲ್ಲಿ ಪ್ರಧಾನವಾಗಿ ಕಂಡುಬರುವ ಪ್ರಮುಖ ಮಾನಸಿಕ ಲಕ್ಷಣಗಳೆಂದರೆ ರೂಪಪ್ರತಿಕ್ರಿಯಾಶೀಲತೆ (ಫಾರಮ್ ರಿಆ್ಯಕ್ಟಿವಿಟಿ), ಅಮೂರ್ತತೆ ಮತ್ತು ವಿಶ್ಲೇಷಣಾತ್ಮಕ ಪ್ರತಿಕ್ರಿಯೆಗಳು. ಅಲ್ಲದೆ ಅಂಥ ವ್ಯಕ್ತಿಗಳು ಶೀಘ್ರತರದ ವೈಯಕ್ತಿಕಗತಿ ಮತ್ತು ಆಂತರಿಕ ಕಾರ್ಯಲಯಬದ್ಧತೆ (ವರ್ಕ್ ರಿದಮ್) ಗಳಿಂದಲೂ ಕೂಡಿರುತ್ತಾರೆ. ಅವರಲ್ಲಿ ಉತ್ಕೃಷ್ಟ ರೀತಿಯ ಸ್ನಾಯುಸಂಘಟನೆ ಇದ್ದರೂ ಅಧಿಕಮಟ್ಟದ ಸ್ನಾಯು ಆಕರ್ಷಣೆಯೂ ಇರುತ್ತದೆ. ಅವರು ಅತಿ ಕ್ರಮಬದ್ಧರೂ ಸತತ ಪ್ರಯತ್ನಶೀಲರೂ ಆಗಿರುತ್ತಾರೆ. ಅತಿಯಾದ ರಾಗಭಾವಗಳಿಂದ ಕೂಡಿರುವ ಈ ಜನರಲ್ಲಿ ಸ್ವಾಯತ್ತ ತಂತುಕ್ರಿಯೆ ಹೆಚ್ಚಾಗಿರುತ್ತದೆ. ತದ್ವಿರುದ್ಧವಾಗಿ, ಚಕ್ರವಿಕ್ಷಿಪ್ತಶೀಲರು ಪ್ರಮುಖವಾಗಿ ವರ್ಣಪ್ರತಿಕ್ರಿಯಾಶೀಲರೂ (ಕಲರ್ ರಿಆ್ಯಕ್ಟಿವಿಟಿ) ಸಮಗ್ರ ದೃಷ್ಟಿಯವರೂ ಸಂಶ್ಲೇಷಣ ವೃತ್ತಿಯವರೂ ಆಗಿರುತ್ತಾರೆ. ಅವರದು ನಿಧಾನ ಸ್ವಭಾವ, ಲಯಬದ್ಧ ರೀತಿನೀತಿ. ಇಂಥ ಜನ ಹೆಚ್ಚಾಗಿ ಸಂಗಶೀಲರಾಗಿರುತ್ತಾರೆ.

ಕ್ರೆಷ್ಮರ್‌ನ ಸಿದ್ಧಾಂತದ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಹಲವು ಸಂಶೋಧನೆಗಳು ನಡೆದದ್ದುಂಟು. ಅವುಗಳಲ್ಲಿ, ನೈದಾನಿಕ ಅಧ್ಯಯನಗಳಿಂದ ದೊರೆತ ತಥ್ಯಾಂಶಗಳು ಅವನ ಸಿದ್ಧಾಂತಕ್ಕೆ ಸ್ವಲ್ಪ ಪುಷ್ಟಿಯನ್ನು ಒದಗಿಸಿದರೂ ಸಾಮಾನ್ಯ ಜನತೆಯ ಮೇಲೆ ನಡೆಸಲಾದ ಅಧ್ಯಯನಗಳು ಅಷ್ಟಾಗಿ ಆಶಾದಾಯಕವಾಗಲಿಲ್ಲ. ಒಂದು ನೈದಾನಿಕ ಅಧ್ಯಯನದಲ್ಲಿ, ವೆಸ್ಟ್‌ಫಲ್ ಎಂಬಾತ 8,000 ಮನೋರೋಗಿಗಳ ಮೇಲೆ ಅಧ್ಯಯನ ನಡೆಸಿ ಸಾಮಾನ್ಯವಾಗಿ ಗುಂಡುಕಾಯದ ವ್ಯಕ್ತಿಗಳು ಉನ್ಮಾದ ವಿಷಣ್ಣತಾ (ಮೇನಿಕ್ ಡಿಪ್ರೆಸಿವ್) ಮನೋವಿಕ್ಷಿಪ್ತಿಯಿಂದಲೂ ನೀಳದೇಹಧಾರಿರೋಗಿಗಳು ಮನೋವಿದಳನ ರೋಗದಿಂದಲೂ ಆಯತದೇಹಧಾರಿಗಳಾದ (ಅತ್ಲೆಟಿಕ್) ರೋಗಿಗಳೂ ಅಪಸ್ಮಾರ ರೋಗದಿಂದಲೂ ನರಳುತ್ತಿರುತ್ತಾರೆಂಬುದನ್ನು ಗುರುತಿಸಿದ. ಮುಂದೆ ವಿವಿಧ ಸಂಶೋಧನೆಗಳು ನಡೆಯಲು, ಕ್ರೆಷ್ಮರನ ಸಿದ್ಧಾಂತ ಪ್ರೇರಕಶಕ್ತಿಯಾದುದರಲ್ಲಿ ಸಂಶಯವಿಲ್ಲ.




ಚಿತ್ರ 2. ಒಂದೇ ಮೂಲದಿಂದ ಬಂದಿರುವ ಅಂಗರಚನೆ ಮತ್ತು ಚಿತ್ತಪ್ರಕೃತಿಗಳು

ಷೆಲ್‌ಡನ್ನನ ಕಾಯಪ್ರರೂಪ ಸಿದ್ಧಾಂತ : ಸುಧಾರಿತ ಕ್ರೆಷ್ಮರ್‌ನ ಸಿದ್ಧಾಂತವೆಂದು ಹೇಳಬಹುದಾದ ಪ್ರಸಿದ್ಧ ಕಾಯಪ್ರರೂಪಗಳ (ಫಿಸಿಕರ್‌ಟೈಪ್ಸ್) ಸಿದ್ಧಾಂತವನ್ನು ಷೆಲ್‌ಡನ್ 1943ರಲ್ಲಿ ಮುಂದಿಟ್ಟು ಇದನ್ನು ಕಾಯಪ್ರರೂಪದ ಮುಮ್ಮುಖ(ಟ್ರೆಪಾರ್ಟೈಟ್) ಸಿದ್ಧಾಂತವೆಂದೂ ಹೇಳುವುದುಂಟು. ಷೆಲ್‌ಡನ್ನನ ಪ್ರಕಾರ ವ್ಯಕ್ತಿಯ ಅಂಗರಚನೆಗೂ ಆತನ ಚಿತ್ತಪ್ರಕೃತಿಗೂ ಸಂಬಂಧವುಂಟು. ಈ ವಿಚಾರಧೋರಣೆಯ ತಾರ್ಕಿಕ ಹಿನ್ನಲೆಯನ್ನು ಚಿತ್ರ 2ರಲ್ಲಿ ಕಾಣಬಹುದು

ಚಿತ್ತಪ್ರಕೃತಿಗಳಿಗೂ ಅಂಗರಚನೆಗಳಿಗೂ ಇರುವ ಸಂಬಂಧದ ಹಿನ್ನಲೆಯಲ್ಲಿರುವ ಸರಳ ತರ್ಕವನ್ನು ಮೇಲಿನ ಚಿತ್ರ ಸ್ಪಷ್ಟಪಡಿಸುತ್ತದೆ. ಗ್ರಂಥಿಗಳು ಮತ್ತು ಇತರ ಜೀವರಸಾಯನಿಕ ನಿಯೋಗಿಗಳು ವ್ಯಕ್ತಿಯ ಬೆಳವಣಿಗೆಯನ್ನು ನಿಯಮಬದ್ಧಗೊಳಿಸುವುದಾದರೆ, ಮತ್ತು ಆಂತರಿಕ ವಾತಾವರಣಕ್ಕನುಗುಣವಾಗಿ (ಇಂಟರ್ನಲ್ ಕ್ಲೈಮೇಟ್), ಕಾರ್ಯಾತ್ಮಕ ಹಾಗೂ ಸಂಕೇತಾತ್ಮಕ ಮಟ್ಟಗಳು ನಿರ್ಧಾರವಾಗುವುದಾದರೆ, ಕಾಯಪ್ರರೂಪದಿಂದ ಚಿತ್ತಪ್ರಕೃತಿಯನ್ನು ಮತ್ತು ಚಿತ್ತಪ್ರಕೃತಿಯಿಂದ ಕಾಯರೂಪವನ್ನು ಗುರುತಿಸಲು ಸಾಧ್ಯವಾಗಬೇಕಾಗುತ್ತದೆ. ಈ ತರ್ಕಕ್ಕನುಗುಣವಾಗಿ, ಮೂರು ರೀತಿಯ ಕಾಯಪ್ರರೂಪಗಳಿಗೆ ತಕ್ಕಂತೆ ಮೂರು ರೀತಿಯ ಚಿತ್ತಪ್ರಕೃತಿಗಳಿರುತ್ತವೆ ಎಂಬುದು ಷೆಲ್‌ಡನ್ನನ ಅಭಿಮತ. ಆತ ಹೇಳುವ ಮೂರು ಕಾಯಪ್ರರೂಪಗಳೆಂದರೆ ಗುಂಡಾಕಾರ (ಎಂಡೊಮಾರ್ಫಿಕ್) ಕಾಯ, ಆಯತಾಕಾರ (ಮೀಸೋಮಾರ್ಫಿಕ್) ಕಾಯ ಮತ್ತು ನೀಳಾಕಾರ (ಎಕ್ಟೊಮಾರ್ಫಿಕ್) ಕಾಯ. ಇವುಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಅಂತರವಯವ ಪ್ರಧಾನತೆ (ವಿಸರಟೋನೀಯ) ಕಾಯಪ್ರಧಾನತೆ (ಸೊಮ್ಯಾಟೊಟೋನಿಯ) ಮತ್ತು ಪ್ರಮಸ್ತಿಷ್ಕ ಪ್ರಧಾನತೆ (ಸೆರೆಬ್ರೊಟೋನೀಯ) ಎಂಬ ಚಿತ್ತಪ್ರಕೃತಿಗಳು ಕಂಡುಬರುತ್ತವೆ. ಗುಂಡಾಕಾರದ ವ್ಯಕ್ತಿ ಸ್ಥೂಲದೇಹಿಯಾಗಿರುತ್ತಾನೆ. ಅವನಲ್ಲಿ ಕರುಳು ಮತ್ತು ಇತರ ಅಂತರವಯವಗಳು ಪ್ರಧಾನವಾಗಿರುತ್ತವೆ. ಅವನಲ್ಲಿರುವ ಬೊಜ್ಜು ಅಂತರವಯವಗಳ ಪ್ರಧಾನತೆಯ ಜೊತೆಗೆ ಅಧಿಕ ಕೊಬ್ಬು ಇರುವುದನ್ನೂ ಸೂಚಿಸುತ್ತದೆ. ಆಯತಾಕಾರಿಯಾದ ವ್ಯಕ್ತಿಯ ದೇಹ ಮೂಳೆ ಮತ್ತು ಮಾಂಸಖಂಡಗಳಿಂದ ತುಂಬಿರುತ್ತದೆ. ಇದಕ್ಕೆ ಉದಾಹರಣೆ ಕ್ರೀಡಾಪಟು. ವಿಶಾಲವಾದ ಎದೆ ಮತ್ತು ಬಾಹುಗಳೂ, ಸಣ್ಣ ಪ್ರಮಾಣದ ಕಟಿ ಮತ್ತು ತರಂಗಿತ ಸ್ನಾಯುಗಳನ್ನು ಪಡೆದಿರುತ್ತಾನೆ. ನೀಳಕಾಯದ ವ್ಯಕ್ತಿಯಲ್ಲಿ ಮೃದುವಾದ ಚರ್ಮ, ಉತ್ತಮತರ ಕೂದಲು ಮತ್ತು ಸೂಕ್ಷ್ಮವೇದಿ ತಂತುಮಂಡಲಗಳಿರುತ್ತವೆ. ಆತ ಎತ್ತರವಾಗಿಯೂ ತೆಳುವಾಗಿಯೂ ಇರುವನಲ್ಲದೆ ಇಳಿಬಿದ್ದಿರುವ ಭುಜಗಳಿಂದ ಕೂಡಿರುತ್ತಾನೆ. ಅಂಥವನನ್ನು ಮೇಲೆ ಹೇಳಿದ ಇನ್ನಿಬ್ಬರೊಡನೆ ತಪ್ಪಾಗಿ ತಿಳಿಯುವ ಸಾಧ್ಯತೆ ಕಡಿಮೆ.

ಷೆಲ್‌ಡನ್ ಮೂರು ಸ್ಪಷ್ಟ ದೇಹಪ್ರರೂಪವನ್ನು ಹೇಳಿದರೂ ಶುದ್ಧಪ್ರರೂಪಗಳು ಅಪರೂಪವೆಂಬುದನ್ನು ಮನಗಂಡಿದ್ದ. ಸಾಮಾನ್ಯವಾಗಿ ಎಲ್ಲ ಜನರಲ್ಲಿಯೂ ಈ ಮೂರೂ ಅಂಗಾಂಶಗಳು ಹೆಚ್ಚು ಕಡಿಮೆ ಕಂಡುಬರುತ್ತವೆ ಎಂಬುದನ್ನು ಮರೆಯಲಾಗದು. ಹೀಗಿರುವುದರಿಂದ ಒಬ್ಬ ವ್ಯಕ್ತಿಯ ಕಾಯಪ್ರರೂಪವೇನೆಂಬುದನ್ನು ನಿರ್ಧರಿಸಬೇಕಾದರೆ, ಈ ಮೂರೂ ಅಂಗಾಂಶಗಳ ಪರಿಶೀಲನೆ ನಡೆಯಬೇಕಾಗುತ್ತದೆ.

ಷೆಲ್‌ಡನ್ ನಿರೂಪಿಸಿದ ಕಾರ್ಯಪ್ರರೂಪಗಳು ಮತ್ತು ಚಿತ್ತ ಪ್ರಕೃತಿ ಪ್ರರೂಪಗಳ ನಡುವಣ ಸಂಬಂಧವನ್ನು ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.

**ಷೆಲ್‌ಡನ್ನನ ಕಾಯಪ್ರರೂಪಗಳು ಮತ್ತು ಚಿತ್ತಪ್ರಕೃತಿಗಳು**

| ಕಾಯಪ್ರರೂಪ | ಚಿತ್ತಪ್ರಕೃತಿ | ಎದ್ದುಕಾಣುವ ಲಕ್ಷಣಗಳು |
|---|---|---|
| ಗುಂಡಾಕಾರ (ದುಂಡಗೆ ಮೃದುವಾಗಿರುವ) | ಅಂತರವಯವ ಪ್ರಧಾನತೆ | ಆಹಾರಪ್ರಿಯತೆ, ಅತಿಯಾಗಿ ತಿನ್ನುವ ಪ್ರವೃತ್ತಿ, ಶಂಕಾಭಾವ, ಅರಕ್ಷಿತಭಾವ, ಸೌಜನ್ಯಶೀಲತೆ, ಸುಖನಿದ್ರೆ , ಸಾಮಾಜಿಕ ಸಂಪ್ರದಾಯಗಳಿಗೆ ಹೊಂದಿಕೆ. |
| ಆಯತಾಕಾರ (ಸ್ನಾಯು ಮತ್ತು ಮೂಳೆಗಳ ಪ್ರಾಧಾನತೆ) | ಕಾಯ ಪ್ರಧಾನತೆ | ಸಾಹಸಪ್ರಿಯತೆ, ಆಯಾಸಕರ ವ್ಯಾಯಾಮ ಮತ್ತು ತಣ್ಣೀರಿನ ತುಂತುರುಸ್ನಾನದಲ್ಲಿ ಇಷ್ಟ, ಉಡುಪಿನತ್ತಅಷ್ಟಾಗಿ ಗಮನವಿಲ್ಲದಿರುವುದು, ಇಷ್ಟಪಟ್ಟು ನೋವನ್ನು ಸಹಿಸುವುದು. |
| ಲಂಬಾಕಾರ (ದೇಹ ರಚನೆಯಲ್ಲಿ ದುರ್ಬಲತೆ) ಮತ್ತು ದಂಡಾಕಾರ | ಪ್ರಮಸ್ತಿಷ್ಕ ಪ್ರಧಾನತೆ | ಅಸಂಗಶೀಲತೆ, ಅಸೌಜನ್ಯ ಶೀಲತೆ, ವ್ಯಾಯಾಮದ ಬಗ್ಗೆ ಅನಾಸಕ್ತಿ, ಸಾಹಸ ಪ್ರಿಯತೆಯ ಲೋಪ, ಸುಲಭವಾಗಿ ನೋವನ್ನು ಸಹಿಸಲಾಗದಿರುವುದು. |

ಷೆಲ್‌ಡನ್ನನ ಕಾಯಪ್ರರೂಪಗಳು, ಕ್ರೆಷ್ಮರ್ ಪ್ರತಿಪಾದಿಸಿದ ಪ್ರರೂಪಗಳಿಗಿಂತ ಹೆಚ್ಚು ನಮ್ಯವೆನಿಸುವುದಾದರೂ ಅವುಗಳ ಬಗ್ಗೆ ಮನೋವಿಜ್ಞಾನಿಗಳಲ್ಲಿ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಷೆಲ್‌ಡನ್ನನ ಅಧ್ಯಯನ ಸಾಪೇಕ್ಷವಾಗಿ ದೀರ್ಘಕಾಲಿಕವೂ ಪಾರಿಮಾಣಿಕವೂ

ಆಗಿದ್ದರೂ ಆತ ನಡೆಸಿದ ಅಂಕಿಅಂಶಾತ್ಮಕ ವಿಶ್ಲೇಷಣೆಯಲ್ಲಿ ವ್ಯಾಪಕರೀತಿಯ ದೋಷಗಳಿದ್ದುದು ಬೆಳಕಿಗೆ ಬಂದಿದೆ. ಅಲ್ಲದೆ ಆ ಸಿದ್ಧಾಂತಗಳನ್ನು ಪರಿಶೀಲಿಸಲೆಂದು ನಡೆಸಲಾದ ಅಧ್ಯಯನಗಳಿಂದ ದೊರೆತ ತಥ್ಯಾಂಶಗಳಲ್ಲಿ ಮೇಳವಿಲ್ಲ. ಉದಾಹರಣೆಗೆ, ಗ್ಲುಯೆಕ್ ಮತ್ತು ಗ್ಲುಯೆಗ್‌ವಿಲೋಪಿಗಳ ಮೇಲೆ ಮತ್ತು ವಾಕರ್ ಮಕ್ಕಳ ನಡೆಸಿದ ಅಧ್ಯಯನಗಳಿಂದ ಮೇಲಿನ ಸಿದ್ಧಾಂತಕ್ಕೆ ಪರಿಪೋಷಕವಾದ ಪುರಾವೆಗಳು ದೊರೆತರೂ ಮೂಲ ಅಧ್ಯಯನದಲ್ಲಿ ಪಡೆದ ಸಹಸಂಬಂಧ ಗುಣಾಂಕಗಳ ಮಟ್ಟದ ಗುಣಾಂಕಗಳು ಒದಗಲಿಲ್ಲ. ಕಾಲೇಜಿನ ಹೊಸಬರ ಮೇಲೆ ನಡೆಸಲಾದ ಅಧ್ಯಯನವೊಂದರಲ್ಲಿ, ದೇಹಪ್ರರೂಪಗಳು ಮತ್ತು ಚಿತ್ತಪ್ರಕೃತಿಗಳ ನಡುವಣ ಸಹಸಂಬಂಧ ಅತ್ಯಲ್ಪವಿದ್ದುದು ಬೆಳಕಿಗೆ ಬಂತು. ಆದರೂ ದೈಹಿಕ ವ್ಯತ್ಯಾಸಗಳ ಅನುವಂಶೀಯತೆಗೆ ವಿಪುಲ ಸಾಕ್ಷ್ಯಾಧಾರಗಳಿರುವುದನ್ನು ನೋಡಿದಾಗ, ಚಿತ್ತಪ್ರಕೃತಿಯ ಮೇಲೆ ದೇಹಪ್ರರೂಪಗಳು ಪ್ರಭಾವ ಬೀರುವುದನ್ನು ಅಲ್ಲಗೆಳೆಯಲು ಬಹುಶಃ ಯಾರಿಗೂ ಸಾಧ್ಯವಾಗದು.

ಚಿತ್ತಪ್ರಕೃತಿಗಳ ಅನುಭವಿಕ ಅಧ್ಯಯನಗಳು : ಚಿತ್ತಪ್ರಕೃತಿಗಳ ಬಗ್ಗೆ ಹೆಚ್ಚು ಹೆಚ್ಚು ನಿಖರವಾಗಿ ಜ್ಞಾನವನ್ನು ಪಡೆಯಲೆಂದು ನಡೆಸಿರುವ ಅಧ್ಯಯನಗಳಲ್ಲಿ ಪ್ರಮುಖವಾದವೆಂದರೆ ಯೋಗ್, ಗಿಲ್‌ಫೋರ್ಡ್ ಮತ್ತು ಐಸೆಂಕರ ಅಧ್ಯಯನಗಳು. ಚಿತ್ತಪ್ರಾಕೃತಿಕ ಪ್ರರೂಪಗಳ ನಿರೂಪಣೆಗೆ ಸಂಬಂಧಿಸಿದಂತೆ ಮನೋವಿಜ್ಞಾನವಲಯಗಳಲ್ಲಿ ಹೆಚ್ಚು ಗಮನ ಸೆಳೆದ ಸಿದ್ಧಾಂತವೆಂದರೆ ಕಾರ್ಲ್ ಜಿ. ಯೂಂಗನ ಅಂತರ್ಮುಖತೆ–ಬಹಿರ್ಮುಖತೆ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಅಂತರ್ಮುಖಿಗಳು ಆತ್ಮನಿಷ್ಠರೂ ಮೃದುಸ್ವಭಾವದರೂ ಆದರ್ಶವಾದಿಗಳೂ ಆಗಿರುತ್ತಾರೆ. ವಿಚಾರಗಳು, ಕಲ್ಪನೆಗಳು ಮತ್ತು ಅಂತರಂಗ ಜೀವನಗಳ ಬಗ್ಗೆ ಅವರು ಹೆಚ್ಚು ಆಸಕ್ತರಾಗಿರುತ್ತಾರೆ. ಅಲ್ಲದೆ, ಹೆಚ್ಚು ಸಮಯವನ್ನು ಏಕಾಂಯಾಗಿಯೂ ಓದುವುದರಲ್ಲಿಯೂ ಚದುರಂಗದಂಥ ಆಟಗಳನ್ನು ಆಡುವುದರಲ್ಲಿಯೂ ಕಳೆಯಲು ಇಚ್ಛಿಸುತ್ತಾರೆ. ತದ್ವಿರುದ್ಧವಾಗಿ, ಬಹಿರ್ಮುಖಿಗಳು ಹೊರಗಿನ ಆಗುಹೋಗುಗಳತ್ತ ತಮ್ಮ ಗಮನಹರಿಸುವ ಪ್ರವೃತ್ತಿಯಿಂದ ಕೂಡಿರುತ್ತಾರೆ. ಮೂಲತಃ ಅವರು ಸಾಮಾಜಿಕ ಚಟುವಟಿಕೆಗಳು ಮತ್ತು ವ್ಯಾವಹಾರಿಕ ವಿಷಯಗಳ ಬಗ್ಗೆ ಆಸಕ್ತರಾಗಿರುತ್ತಾರೆ. ಹೆಚ್ಚು ವಾಸ್ತವವಾದಿಗಳಾಗಿರುತ್ತಾರೆಯಲ್ಲದೆ ಏಕಾಂಗಿಗಳಾಗಿರಲು ಇಚ್ಛಿಸುವುದಿಲ್ಲ.

ಅಂತಮುರ್ಖತೆ ಮತ್ತು ಬಹಿರ್ಮುಖತೆಗಳ ಬಗ್ಗೆ ಕೊಡಲಾದ ಮೇಲಿನ ಸಂಕ್ಷಿಪ್ತ ವಿವರಣೆ ಸಾಮಾನ್ಯ ಜನರ ಅಭಿಪ್ರಾಯಗಳಿಗೆ ಅನುಗುಣವಾಗಿ ಇರುವುದಾದರೂ ವಾಸ್ತವವಾಗಿ ಅಪ್ಪಟ ಅಂತರ್ಮುಖಿ ಹಾಗೂ ಬಹಿರ್ಮುಖಿ ಜನ ಯಾವುದೇ ಜನತೆಯಲ್ಲಿ ಅಪರೂಪವೆಂಬುದನ್ನು ಮನಗಾಣಬೇಕು. ಉಭಯಮುಖತೆ (ಆ್ಯಂಬಿವರ್ಷನ್) ಎಂಬ ಒಂದು ಚಿತ್ತಪ್ರಕೃತಿಯೇ ಸಾಮಾನ್ಯವಾಗಿ ಬಹುಜನರಲ್ಲಿ ಕಂಡುಬರುವುದನ್ನು ಯೂಂಗ್ ಕಡೆಗಣಿಸಿಲ್ಲ.

ಚಿತ್ತಪ್ರಕೃತಿಯ ಪ್ರರೂಪಕ್ಕೆ ಸಂಬಂಧಿಸಿದಂತೆ ಮುಂದಿಡಲಾಗಿರುವ ಪ್ರಮುಖ ಕಲ್ಪಿತಭಾವಗಳನ್ನು ಐಸೆಂಕನ ರೇಖಾಚಿತ್ರಗಳು ಸೂಚಿಸುತ್ತವೆ.




ಚಿತ್ರ 3. ಪ್ರರೂಪ ಸಿದ್ಧಾಂತದ ಮೂರು ಸಂಕಲ್ಪನೆಗಳು

ಮೇಲಿನ ಚಿತ್ರದ (ಅ) ಎರಡು ಸ್ಪಷ್ಟ ಪ್ರರೂಪಗಳನ್ನು ಸೂಚಿಸುವುದರಿಂದ ಅದು ದ್ವಿ–ಪ್ರರೂಪ ಸಿದ್ಧಾಂತದ ಸೂಚಕವಾಗಿದೆ. ಆದರೆ ಇಂದು ಈ ಸಂಕಲ್ಪನೆಗೆ ಯಾವ ಸಾಕ್ಷ್ಯಾಧಾರವೂ ಇಲ್ಲ. ಚಿತ್ರದಲ್ಲಿ ಮೂರು ಸಾಪೇಕ್ಷವಾಗಿ ಸ್ಪಷ್ಟಪ್ರರೂಪಗಳನ್ನು ಸೂಚಿಸಿರುವುದರಿಂದ ಅದು ಮು–ಪ್ರರೂಪ ಸಿದ್ಧಾಂತ ಸೂಚಕವಾಗಿದೆ. ಅಂತರ್ಮುಖತೆ, ಉಭಯಮುಖತೆ (ಚಿತ್ರದ ಶೃಂಗ) ಮತ್ತು ಬಹಿರ್ಮುಖತೆಗಳೇ ಈ ಮು–ಪ್ರರೂಪಗಳು. ಈ ಸಂಕಲ್ಪನೆಯೂ ಹಲವರ ಮನಸ್ಸಿಗೆ ಬಂದಿಲ್ಲ. ಏಕೆಂದರೆ, ಯಾವುದೇ ಒಂದು ಜನತೆಯಲ್ಲಿ, ಸ್ಪಷ್ಟವಾಗಿ ಮೂರು ರೀತಿಯ ಚಿತ್ತಪ್ರಕೃತಿಗಳಿರುವುದು ಅಸಂಭವ. ಈ ಕಾರಣದಿಂದಾಗಿ ಅಂತರ್ಮುರ್ಖತೆ–ಬಹಿರ್ಮುಖತೆ ಆಯಾಮದಲ್ಲಿ, ಈ ಚಿತ್ತಪ್ರಕೃತಿ ಹೇಗೆ ವಿತರಣೆಗೊಂಡಿದೆ ಎಂಬುದನ್ನು ಸೂಚಿಸಲಾಗಿದೆ. ಶುದ್ಧ ಚಿತ್ತಪ್ರಕೃತಿಯ ಜನರ ಸಂಖ್ಯೆ ತೀರ ಕಡಿಮೆ ಎಂಬುದನ್ನೂ ಮಿಶ್ರಚಿತ್ತಪ್ರಕೃತಿಯನ್ನು ಹೆಚ್ಚು ಕಡಿಮೆ ಹೊಂದಿರುವವರೇ ಅಧಿಕ ಸಂಖ್ಯೆಯಲ್ಲಿ ಕಾಣಸಿಗುತ್ತಾರೆಂಬುದನ್ನೂ ಈ ರೇಖಾಚಿತ್ರ ಸ್ಪಷ್ಟಪಡಿಸುತ್ತದೆ. ಒಟ್ಟಿನಲ್ಲಿ ಅಂತರ್ಮುಖತೆ ಮತ್ತು ಬಹಿರ್ಮುಖತೆ ಚಿತ್ತಪ್ರಕೃತಿಗಳು, ಒಂದೇ ಸಾಂತತ್ಯಕದ (ಕಂಟಿನ್ಯೂಯಮ್) ಅಂತ್ಯಗಳೆನಿಸುತ್ತವೆ. ಅಂದರೆ, ಯಾವುದೇ ಒಂದು ಜನತೆಯಲ್ಲಿರುವ ವ್ಯಕ್ತಿಗಳು ಈ ಎರಡು ಸ್ಪಷ್ಟಪ್ರರೂಪಗಳಿಗೆ ಸೇರಿರದೆ, ಅಂತಮುರ್ಖತೆ–ಬಹಿರ್ಮುಖತೆ ಸಾಂತತ್ಯಕದಾದ್ಯಂತ ವಿತರಣೆ ಹೊಂದಿರುತ್ತಾರೆ. ಅಂಥ ವಿತರಣೆ ಪ್ರಸಾಮಾನ್ಯ ಸಂಭಾವ್ಯ ವಕ್ರರೇಖೆಯನ್ನು (ನಾರ್ಮಲ್ ಪ್ರಾಬಬಿಲಿಟಿ ಕರ್ವ್) ಹೋಲುತ್ತದೆ ಎಂಬುದು ಸ್ಪಷ್ಟ. ಗಿಲ್‌ಫೋರ್ಡ್, ಐಸೆಂಕ್ ಮುಂತಾದವರು ನಡೆಸಿದ ಕಾರಕ ವಿಶ್ಲೇಷಣೆಯ (ಫ್ಯಾಕ್ಟರ್ ಅನ್ಯಾಲಿಸಿಸ್) ಅಧ್ಯಯನಗಳಿಂದ ದೊರೆತ ತಥ್ಯಾಂಶಗಳೂ ಮೇಲಿನ ಸಂಕಲ್ಪನೆಗೆ ಪುಷ್ಟಿಕೊಡುತ್ತವೆ.

ಅಂತಮುರ್ಖತೆ ಮತ್ತು ಬಹಿರ್ಮುಖತೆ ಚಿತ್ತಪ್ರಕೃತಿಗಳೂ ಎರಡು ಆಯಾಮಗಳಲ್ಲಿ ವ್ಯಾಪಿಸುತ್ತವೆ ಎಂಬುದು ಐಸೆಂಕನ ಅಭಿಮತ. ಹಿನ್ನೆಲೆಯ ಅಂತಃಸ್ರಾವೀ ವ್ಯಾಪಾರವನ್ನು ಕಡೆಗಣಿಸಿ, ಮಾನಸಿಕ ಮಟ್ಟದಲ್ಲೇ ಇದ್ದುಕೊಂಡು, ಐಸೆಂಕ್ ಒಂದು ರೇಖಾಮಾದರಿಯ ಮೂಲಕ, ಪ್ರಾಚೀನ ಗ್ರೀಕ್ ಚಿತ್ತಪ್ರಕೃತಿಗಳು ಮತ್ತು ಆಧುನಿಕ ವಿಶೇಷಕ ಸಿದ್ಧಾಂತಗಳೊಂದಿಗೆ (ಟ್ರೇಟ್ ತಿಯರೀಸ್) ತನ್ನ ಸಿದ್ಧಾಂತಕ್ಕಿರುವ ಸಂಬಂಧವನ್ನು ಸ್ಪಷ್ಟಪಡಿಸುತ್ತಾನೆ. ಇದರಲ್ಲಿ ಆತ ಪ್ರಸ್ತಾಪಿಸಿರುವ ಎರಡು ಆಯಾಮಗಳೆಂದರೆ ಅಂತರ್ಮುಖತೆ–ಬಹಿರ್ಮುಖತೆ ಮತ್ತು ಸ್ಥಿರತೆ–ಅಸ್ಥಿರತೆ ಆಯಾಮಗಳು.




ಚಿತ್ರ 4. ಚಿತ್ತಪ್ರಕೃತಿಗಳು ಮತ್ತು ವಿಶೇಷಕಗಳಿಗೆ ಸಂಬಂಧಿಸುವ ಐಸೆಂಕನ ಆಯಾಮಗಳು. ಒಳಗಿನ ವೃತ್ತ ಗ್ರೀಕರು ಹೇಳಿದ ನಾಲ್ಕು ಚಿತ್ತಪ್ರಕೃತಿಗಳನ್ನು ತೋರಿಸುತ್ತದೆ. ಹೊರವೃತ್ತದಲ್ಲಿ ಐಸೆಂಕನ ಎರಡು ಪ್ರಧಾನ ಅಕ್ಷಗಳಿಗೆ ಸಂಬಂಧಿಸಿದಂತೆ ವಿಶ್ಲೇಷಣಾ ವಿಧಾನದ ಮೂಲಕ ಅಧ್ಯಯನ ಮಾಡಲಾದ ವಿವಿಧ ವಿಶೇಷಕಗಳ ಸ್ಥಾನಗಳನ್ನು ತೋರಿಸಿದೆ

ಮೇಲಿನ ಚಿತ್ರದಲ್ಲಿರುವ ಒಳಗಿನ ವೃತ್ತ ಗ್ರೀಕರು ಹೇಳಿದ ನಾಲ್ಕು ಚಿತ್ತಪ್ರಕೃತಿಗಳನ್ನು ತೋರಿಸುತ್ತದೆ. ಹೊರಗಿನ ವೃತ್ತ ಐಸೆಂಕನ ಎರಡು ಪ್ರಧಾನ ಅಕ್ಷಗಳಿಗೆ ಸಂಬಂಧಿಸಿದಂತೆ ಕಾರಕ ವಿಶ್ಲೇಷಣ ವಿಧಾನದ ಮೂಲಕ ಅಧ್ಯಯನ ಮಾಡಲಾದ ವಿವಿಧ ವಿಶೇಷಕಗಳ ಸ್ಥಾನಗಳನ್ನು ಪ್ರತಿನಿಧಿಸುತ್ತದೆ.

ಚಿತ್ತಪ್ರಾಕೃತಿಕ ಪ್ರರೂಪಗಳಿಗೂ ವಿಶೇಷಕಗಳಿಗೂ ಇರುವ ಸಂಬಂಧವನ್ನು ಐಸೆಂಕನ ಚಿತ್ರ ಸ್ವಲ್ಪಮಟ್ಟಿಗೆ ಸೂಚಿಸಬಲ್ಲದು.

ಅದರಲ್ಲಿ ತೋರಿಸಿರುವಂತೆ ಚಿತ್ತಪ್ರಕೃತಿ ಹಲವು ವಿಶೇಷಗಳ ಒಂದು ಸಮಾವೇಶ. ಒಂದೊಂದು ವಿಶೇಷಕವೂ ಹಲವು ಅಭ್ಯಸ್ತ ಅನುಕ್ರಿಯೆಗಳ ಸಂಗಮವೆನಿಸಿದರೆ ಒಂದೊಂದು ಅಭ್ಯಸ್ತ ಅನುಕ್ರಿಯೆಯೂ ಕೆಲವು ಪ್ರತ್ಯೇಕ ಅನುಕ್ರಿಯೆಗಳ ಸಂಘರ್ಷಣೆಯಿಂದ ಉಂಟಾದದ್ದು

ಹೀಗೆ ಒಂದು ಅನುಕ್ರಮ ಶ್ರೇಣಿಯ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳುವಂಥ ವರ್ತನಾವಿನ್ಯಾಸ (ಉದಾ: ಚಿತ್ತಪ್ರಕೃತಿ) ಸಾಪೇಕ್ಷವಾಗಿ ನಾಲ್ಕು ಪ್ರರೂಪಗಳೆನಿಸುವುದನ್ನು ಚಿತ್ರದಲ್ಲಿ ಕಾಣಬಹುದು. ಇದನ್ನನುಸರಿಸಿಯೇ ಐಸೆಂಕ್ ಸ್ಥಿರ ಬಹಿರ್ಮುಖಿ, ಸ್ಥಿರ ಅಂತರ್ಮುಖಿ, ಅಸ್ಥಿರ ಅಂತರ್ಮುಖಿ ಮತ್ತು ಅಸ್ಥಿರ ಬಹಿರ್ಮುಖಿ ಎಂಬ ನಾಲ್ಕು ಚಿತ್ತ ಪ್ರಾಕೃತಿಕ ಪ್ರರೂಪಗಳನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು.

ಚಿತ್ತಪ್ರಕೃತಿಯನ್ನು ಅಳೆಯಲು ಐಸೆಂಕನ ವ್ಯಕ್ತಿತ್ವ ಅಂಶಮಾಲೆ ಮಾತ್ರವಲ್ಲದೆ, ಇನ್ನೂ ಅನೇಕ ವ್ಯಕ್ತಿತ್ವ ಅಂಶಮಾಲೆಗಳನ್ನು ಉಪಯೋಗಿಸಲಾಗಿದೆ. ಉದಾಹರಣೆಗೆ, ಗಿಲ್‌ಫೋರ್ಡ್–ಜಿಮ್ಮರ್‌ಮನ್ ಚಿತ್ತಪ್ರಾಕೃತಿಕ ಸಮೀಕ್ಷಣೆ, ಕೃಷ್ಣನ್ ಚಕ್ರವಿಕ್ಷಿಪ್ತತೆ–ಮನೋವಿದಳನಶೀಲತೆ ಪ್ರಶ್ನಾವಳಿ–ಇವು ಚಿತ್ತಪ್ರಕೃತಿಯ ಮಾಪನಕ್ಕಾಗಿಯೇ ಮೀಸಲಾಗಿದ್ದರೆ, ಎಂ.ಎಂ.ಪಿ.ಐ (ಮಿನೆಸೋಟ ಮಲ್ಟಿಫೇಸಿಕ್ ಪರ್ಸನ್ಯಾಲಿಟಿ ಇನ್ವೆಂಟರಿ), ಎಂ.ಪಿ.ಐ.(ಮೈಸೂರ್ ಪರ್ಸನ್ಯಾಲಿಟಿ ಇನ್ವೆಂಟರಿ) ಮುಂತಾದ ಬಹು ಆಯಾಮೀ ಅಂಶಮಾಲೆಗಳಲ್ಲಿ ಚಿತ್ತಪ್ರಾಕೃತಿಕ ಆಯಾಮವನ್ನು ಅಳೆಯಲು ಅವಕಾಶವಿರುವುದನ್ನು ಕಾಣಬಹುದು.




ಚಿತ್ರ 5. ವ್ಯಕ್ತಿತ್ವದ ಅನುಕ್ರಮ ಶ್ರೇಣಿ

ಕೃಷ್ಣನ್ ಚಕ್ರವಿಕ್ಷಿಪ್ತತೆ–ಮನೋವಿದಳನಶೀಲತೆ ಪ್ರಶ್ನಾವಳಿಯನ್ನು ಉಪಯೋಗಿಸಿಕೊಂಡು, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಇತರ ಕಡೆಗಳಲ್ಲಿ ಅನೇಕ ಅಧ್ಯಯನಗಳು ನಡೆದಿವೆ. ಚಿತ್ತಪ್ರಕೃತಿ ಮತ್ತು ದೃಢತೆ, ಚಿತ್ತಪ್ರಕೃತಿ ಮತ್ತು ಮನೋದೌರ್ಬಲ್ಯಶೀಲತೆ, ಚಿತ್ತಪ್ರಕೃತಿ ಮತ್ತು ರೋಷಾಕ್ ಅನುಕ್ರಿಯೆಗಳು ಮುಂತಾದ ನಾನಾವಿಧವಾದ ಸಮಸ್ಯೆಗಳ ಮೇಲೆ ಅಧ್ಯಯನಗಳು ನಡೆದಿವೆ. ಇವುಗಳಲ್ಲದೆ ಗಿಲ್‌ಫೋರ್ಡ್ ಮತ್ತು ಜಿಮ್ಮರ್‌ಮನ್ ಚಿತ್ತಪ್ರಾಕೃತಿಕ ಸಮೀಕ್ಷೆಯನ್ನು ಜಯಸ್ವಾಲ್ ಮತ್ತು ಖಾನ್ ಅನೇಕ ಅಧ್ಯಯನಗಳಿಗೆ ಬಳಸಿಕೊಂಡಿದ್ದಾರೆ. ಎಂ.ಎಂ.ಪಿ.ಐ ಅಂಶಮಾಲೆಯನ್ನೂ ಬಳಸಿಕೊಂಡು ಹಲವರು ವ್ಯಕ್ತಿತ್ವದ ಇತರ ಅಂಗಾಂಶಗಳ ಜೊತೆಗೆ ಚಿತ್ತಪ್ರಕೃತಿಯನ್ನೂ ಅಳತೆ ಮಾಡಿರುವುದು ಕಂಡುಬರುತ್ತದೆ.

ಇಂದಿನ ದೃಷ್ಟಿ : ಚಿತ್ತಪ್ರಕೃತಿ ಮತ್ತು ಅದರ ಸ್ವಭಾವದ ಬಗ್ಗೆ ಇಂದು ಮನೋವಿಜ್ಞಾನಿಗಳಲ್ಲಿ ಕಂಡುಬರುವ ದೃಷ್ಟಿಯೆಂದರೆ, ಅದು ಮನಸ್ಸಿನ ಒಂದು ಸ್ವರೂಪ ಅಥವಾ ಪರಿಪಾಟ ಎಂಬುದು. ಅದು ಮೂಲತಃ ದೇಹಪ್ರಕೃತಿಯನ್ನು ಅವಲಂಬಿಸಿದ್ದರೂ ಇಲ್ಲವೆ ಅದಕ್ಕೆ ಸಂಬಂಧಿಸಿದ್ದರೂ ಪ್ರತ್ಯಾವರಣದ ಪ್ರಭಾವಗಳೂ ಸಾಕಷ್ಟಿರುತ್ತವೆ. ಈ ವಿಷಯದ ಬಗ್ಗೆ ನಡೆದಿರುವ ಮತ್ತು ನಡೆಯುವ ಸಂಶೋಧನೆಗಳು ಒಂದು ಪ್ರತ್ಯೇಕ ಮನೋವಿಜ್ಞಾನ ಶಾಖೆಯೇ ಆಗಿ ದೇಹಪ್ರಕೃತಿ ಮನೋವಿಜ್ಞಾನ (ಕಾನ್‌ಸ್ಟಿಟ್ಯೂಷನಲ್ ಸೈಕಾಲಜಿ) ಎಂಬ ಹೆಸರನ್ನು ತಾಳಿದೆ.

ಆಲ್ಪೋರ್ಟ್ ಹೇಳುವಂತೆ, ವ್ಯಕ್ತಿತ್ವ ರೂಪಣೆಯಲ್ಲಿ ದೇಹ ಮತ್ತು ಬುದ್ಧಿಶಕ್ತಿಗಳಂತೆಯೇ ಚಿತ್ತಪ್ರಕೃತಿಯೂ ಒಂದು ಮೂಲವಸ್ತುವೆನಿಸುತ್ತದೆ. ಅದು ಮೂಲತಃ ದೇಹದ ರಾಸಾಯನಿಕ ವಾತಾವರಣ ಇಲ್ಲವೆ ಆಂತರಿಕ ವಾಯುವಿನ್ಯಾಸವೆನಿಸುತ್ತದೆ. ವ್ಯಕ್ತಿತ್ವದ ವಿಕಾಸ, ವಿನ್ಯಾಸಗಳಲ್ಲಿ ಈ ಮೂಲಾಂಶದ ಪಾತ್ರವೂ ಅನುಪಮವಾದುದು. ದೇಹದ ರಾಸಾಯನಿಕ ವಾತಾವರಣ ಪ್ರಮುಖವಾಗಿ ಅಂತಃಸ್ರಾವ ವ್ಯಾಪಾರಗಳಿಗೆ ಅನ್ವಯಿಸುತ್ತದೆ. ಆಧುನಿಕ ಮನೋವಿಜ್ಞಾನಿಗಳಲ್ಲಿ ಹಲವರ ಪ್ರಕಾರ, ಅಂತಃಸ್ರಾವಗಳೇ ಚಿತ್ತಪ್ರಕೃತಿಯ ಹಿನ್ನೆಲೆಯಲ್ಲಿ ಕ್ರಿಯಾಶೀಲವಾಗಿರುವ ದೈಹಿಕನೆಲೆಗಳು.

ಅಂತಃಸ್ರಾವಗಳು ವ್ಯಕ್ತಿಯ ಬೆಳೆವಣಿಗೆಯ ವಿವಿಧ ಹಂತಗಳಲ್ಲಿ ವಿಶಿಷ್ಟವಾದ ಪ್ರಭಾವ ಬೀರುವುದು ಕಂಡುಬರುತ್ತದೆಯಲ್ಲದೆ, ಅವನ ಚಿತ್ತಪ್ರಕೃತಿಯನ್ನು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಬಹುಮಟ್ಟಿಗೆ ನಿರ್ಧರಿಸುತ್ತವೆ. ಥೈಮಸ್ ಗ್ರಂಥಿಯ ವ್ಯಾಪಾರಗಳ ಬಗ್ಗೆ ಅಷ್ಟಾಗಿ ಸ್ಪಷ್ಟಜ್ಞಾನ ದೊರೆಯದಿದ್ದರೂ ಥೈಮಿಕ್ ಕೊರತೆಯುಂಟಾದಾಗ ಸ್ನಾಯುದೌರ್ಬಲ್ಯ, ಅಸ್ಥಿಗಳು ಗಡುಸಾಗುವುದರಲ್ಲಿನ ಕೊರತೆ ಮತ್ತು ಸಾಮಾನ್ಯ ಚಯಾಪಚಯ ಕ್ರಿಯೆಗಳಲ್ಲಿ ಅಸ್ತವ್ಯಸ್ತತೆ–ಇವು ಉಂಟಾಗುತ್ತವೆ. ಇದರಂತೆಯೇ ಪೀನಿಯಲ್ ಗ್ರಂಥಿಯ ಬಗೆಗಿನ ಜ್ಞಾನವೂ ಅಲ್ಪವೆನಿಸಿದರೂ ಅವನ್ನು ನಾಶಮಾಡುವುದರಿಂದ ಲೈಂಗಿಕ ಬೆಳವಣಿಗೆ ವಿಪರೀತ ಮುಂಚಿತವಾಗಿ ಆಗುವುದು ಕಂಡುಬಂದಿದೆ. ಅಂತಃಸ್ರಾವೀ ಗ್ರಂಥಿಗಳ 'ಸಂಗೀತ ನಿರ್ದೇಶಕ' ಎನಿಸಿರುವ ಪಿಟ್ಯೂಟರಿ ಗ್ರಂಥಿ ಹಲವು ಅಂತಃಸ್ರಾವಗಳ ಜನಕನೆನಿಸಿದ್ದು, ಇತರ ಗ್ರಂಥಿಗಳ ಮತ್ತು ದೇಹದ ಸಾಮಾನ್ಯ ವ್ಯಾಪಾರಗಳ ಮೇಲೆ ಪ್ರಭಾವ ಬೀರುತ್ತದೆ. ಉದಾಹರಣೆಗೆ ಮುಂಬದಿಯ ಪಿಟ್ಯೂಟರಿ ಗ್ರಂಥಿ ಜೀವನಕ್ಕೆ ಅತ್ಯವಶ್ಯವಾಗಿ ಬೇಕಾಗಿರುವ ಗ್ರಂಥಿಯೆನಿಸಿದೆ. ಇದರ ಕ್ರಿಯೆಯಲ್ಲಿ ಕೊರತೆಯುಂಟಾದಾಗ ಶೈಶವದ ಲಕ್ಷಣಗಳು ತೋರಿದರೆ, ಇದರ ಕ್ರಿಯೆ ಅತಿಯಾದಾಗ ಎಲುಬುಗಳ ಹಾಗೂ ಲೈಂಗಿಕ ಅಂಗಗಳ ಬೆಳೆವಣಿಗೆಗಳು ತ್ವರಿತಗತಿಯಲ್ಲಿ ಸಾಗುತ್ತವೆ.

ಥೈರಾಯಿಡ್ ಗ್ರಂಥಿ ವ್ಯಕ್ತಿಯ ಜೀವಮಾನಪರ್ಯಂತ ಚಯಾಪಚಯ ಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆಯಲ್ಲದೆ, ಅದರ ಕ್ರಿಯೆಯಲ್ಲಿ ಕೊರತೆಯುಂಟಾದಾಗ ಜಡಕುಬ್ಜತೆ (ಕ್ರೇಟನಿಸಮ್) ಮತ್ತು ಮಿಕ್ಸಿಡೀಮ ಎಂಬ ರೋಗಗಳಿಗೆ ಕಾರಣವಾಗುತ್ತದೆ. ಪ್ಯಾರಥೈರಾಯಿಡ್ ಗ್ರಂಥಿ ಕರುಳಿನ ಜೀವಾಣುವಿಷಗಳನ್ನು ನಿಯಂತ್ರಿಸುವುದಲ್ಲದೆ, ಸುಣ್ಣ ಚಯಾಪಚಯ ಕ್ರಿಯೆಯಲ್ಲಿಯೂ ತನ್ನ ಪಾತ್ರವನ್ನು ನಿರ್ವಹಿಸುತ್ತದೆ. ಮೂತ್ರಪಿಂಡಸ್ಥ ಗ್ರಂಥಿಗಳು (ಅಡ್ರಿನಲ್ ಗ್ಲ್ಯಾಂಡ್ಸ್) ಉತ್ಪತ್ತಿ ಮಾಡುವ ಅಂತಃಸ್ರಾವಗಳಲ್ಲಿ ಒಂದೆನಿಸಿದ ಅಡ್ರಿನಲಿನ್ ಸಂವೇಗಾನುಭವದಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆಯಲ್ಲದೆ, ತಂತುಕ್ರಿಯೆಗಳನ್ನು ಪ್ರಚೋದಿಸಿ, ಶಕ್ತಿನೀಡಿ ಮುಂದುವರಿಸುತ್ತದೆ. ಈ ಗ್ರಂಥಿಗಳು ಸಾಕಷ್ಟು ಬೆಳೆಯದಿದ್ದರೆ, ವ್ಯಕ್ತಿಯಲ್ಲಿ ದುರ್ಬಲತೆ, ಶರಣಾಗತಿಶೀಲತೆ ಚಂಚಲ ವೃತ್ತಿಗಳು ಕಂಡುಬರುತ್ತವೆ. ಇದೇ ರೀತಿಯಲ್ಲಿ ಲಿಂಗಗ್ರಂಥಿಗಳ ಪ್ರಭಾವವೂ ಮಹತ್ವಪೂರ್ಣವಾಗಿರುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ಉದಾಹರಣೆಗೆ ಬಹಳ ಚಿಕ್ಕಂದಿನಲ್ಲಿಯೇ ವೀರ್ಯಾಶಯಗಳನ್ನು ತೆಗೆದುಹಾಕಿದರೆ ಜನನೇಂದ್ರಿಯಗಳು ಬೆಳೆಯುವುದಿಲ್ಲ ಮತ್ತು ಆನುಷಂಗಿಕ ಲಿಂಗಲಕ್ಷಣಗಳೂ ಕಾಣಿಸಿಕೊಳ್ಳುವುದಿಲ್ಲ. ಇಷ್ಟಲ್ಲದೆ ಅಕಾಲದಲ್ಲಿ, ಲೈಂಗಿಕ ಪರಿಪಕ್ವತೆ ಉಂಟಾದರೆ ಚಿತ್ತಪ್ರಕೃತಿಯ ಮೇಲೆ ಬಹಳ ಪ್ರಭಾವ ಬೀಳುವುದು ಸತ್ಯದ ಸಂಗತಿ. ಒಟ್ಟಿನಲ್ಲಿ ಹೇಳುವುದಾದರೆ, ಚಿತ್ತಪ್ರಕೃತಿಗೂ ಅಂತಃಸ್ರಾವಕಗಳ ವ್ಯಾಪಾರಗಳಿಗೂ ನೇರ ಸಂಬಂಧವಿರುವುದು ಕಂಡುಬರುತ್ತದೆ. ಮುಂದಿನ ಕೋಷ್ಟಕದಲ್ಲಿ ಕೊಡಲಾಗಿರುವ ಕೆಲವು ಅಂತಃಸ್ರಾವಕ ವ್ಯಾಪಾರಗಳನ್ನು ನೋಡಿದಾಗ ಚಿತ್ತಪ್ರಕೃತಿಯನ್ನು ನಿರ್ಧರಿಸುವಲ್ಲಿ ಅವುಗಳ ಪಾತ್ರವೇನೆಂಬುದನ್ನು ಸೂಚ್ಯವಾಗಿಯಾದರೂ ತಿಳಿಯಲು ಸಾಧ್ಯವಾಗುತ್ತವೆ.

ಚಿತ್ತಪ್ರಕೃತಿಯ ಬಗ್ಗೆ ಅಗತ್ಯ ಅರಿವನ್ನು ಪಡೆಯಲು ನಾವು ಹೆಚ್ಚು ಹೆಚ್ಚಾಗಿ, ಮಾನವ ಪ್ರಜನನ ವಿಜ್ಞಾನ, ಜೀವರಾಸಾಯನಿಕ ಶಾಸ್ತ್ರ, ತಂತುಮಂಡಲ ವಿಜ್ಞಾನ, ಅಂತಃಸ್ರಾವೀಗ್ರಂಥಿವಿಜ್ಞಾನ ಮತ್ತು ಭೌತಿಕ ಮಾನವಶಾಸ್ತ್ರ ಸಂಶೋಧನೆಗಳಲ್ಲಿ ನಡೆಸುವ ಅಗತ್ಯವಿದೆ. ವ್ಯಕ್ತಿತ್ವದಲ್ಲಿ ಚಿತ್ತಪ್ರಕೃತಿಯ ಪ್ರಭಾವ ಬಹಳ ಮಹತ್ತ್ವಪೂರ್ಣವೆನಿಸಿದ್ದರೂ ಚಿತ್ತಪ್ರಕೃತಿಯ ನೆಲೆ ಏನೆಂಬುದರ ಬಗ್ಗೆಯೇ ನಮ್ಮ ತಿಳಿವು ಇನ್ನೂ ಹೆಚ್ಚು ನಿಷ್ಕೃಷ್ಟವಾಗುವ ಅಗತ್ಯವಿದೆ. ಮನೋವೈಜ್ಞಾನಿಕ ಪರೀಕ್ಷೆಗಳು ಈ ದಿಸೆಯಲ್ಲಿ ಬಹಳ ನೆರವು ನೀಡುತ್ತವೆ. ಚಿತ್ತಪ್ರಕೃತಿಗಳ ಪ್ರಧಾನ ರೂಪಗಳನ್ನು ವರ್ಗೀಕರಿಸಲು ಬೇಕಾದ ಹೆಚ್ಚಿನ ಆಯಾಮಗಳನ್ನು ತಿಳಿದುಕೊಳ್ಳುವುದರಲ್ಲಿಯೂ ಈ ಪರೀಕ್ಷೆಗಳು ನೆರವಾಗಬಲ್ಲವು.

ಚೋದನೆಗಳು ಮತ್ತು ಅವುಗಳ ಸತ್ತ್ವ–ಇವುಗಳೂ ಚಿತ್ತಪ್ರಕೃತಿಯ ನೆಲೆಗಳಾಗಿರುವ ಸಾಧ್ಯತೆ ಇಲ್ಲದಿಲ್ಲ. ಅಡಕಾಕ್ ಹೇಳುವಂತೆ ಇವನ್ನು ಅಧಿಕ ಪ್ರಮಾಣದಲ್ಲಿ ಪಡೆದಿರುವ ದೇಹಪ್ರಕೃತಿಗಳು ಅಧಿಕಮಟ್ಟದ ಚಯಾಪಚಯ ಕ್ರಿಯೆಯನ್ನು ಪ್ರಬಲ ಥೈರಾಯಿಡ್ ವ್ಯಾಪಾರವನ್ನೂ ಹೊಂದಿರಬಹುದು.

**ಅಂತಃಸ್ರಾವೀ ಗ್ರಂಥಿಗಳ ಕೆಲವು ವಿಶಿಷ್ಟ ರೀತಿಯ ವ್ಯಾಪಾರಗಳು**

| ಗ್ರಂಥಿ | ನಿಯಮಬದ್ಧಗೊಳಿಸುವ ಕಾರ್ಯಗಳು |
|---|---|
| ಪಿಟ್ಯುಇಟರಿ ಗ್ರಂಥಿ: ಮುಂಬದಿ– ಹಿಂಬದಿ– | ವೃದ್ಧಿ (ಕುಬ್ಜತೆ, ರಾಕ್ಷಸಾಕಾರ) ಪ್ರಭು ಗ್ರಂಥಿಯೆನಿಸಿ, ಥೈರಾಯಿಡ್, ಮೇದೋಜೀರಕ, ಮೂತ್ರ ಪಿಂಡಸ್ಥ ಮತ್ತು ಜನನಗ್ರಂಥಿಗಳ ಮೇಲೆ ಪ್ರಭಾವ ಬೀರುತ್ತದೆ. ಜಲ ಚಯಾಪಚಯ ಕ್ರಿಯೆಗಳಲ್ಲಿ ಭಾಗವಹಿಸುತ್ತದೆ. |
| ಥೈರಾಯಿಡ್ ಗ್ರಂಥಿ | ಚಯಾಪಚಯ ಕ್ರಿಯೆಯ ವೇಗವನ್ನು ನಿಯಂತ್ರಿಸುವುದರ ಮೂಲಕ ಚಟುವಟಿಕೆ ಮತ್ತು ದಣಿವಿನ ಮೇಲೆ ಪ್ರಭಾವ ಬೀರುತ್ತದೆಯಲ್ಲದೆ ದೇಹದ ಭಾಗವನ್ನು ನಿರ್ಧರಿಸುತ್ತದೆ. |
| ಪ್ಯಾರ ಥೈರಾಯಿಡ್ ಗ್ರಂಥಿ ಥೈಮಸ್ ಗ್ರಂಥಿ | ಸುಣ್ಣ ಚಯಾಪಚಯ ಮತ್ತು ತಂತುಮಂಡಲದ ಸಾಮಾನ್ಯ ಉತ್ತೇಜಕತೆಯನ್ನು ನಿಯಂತ್ರಿಸುತ್ತದೆ. ಲಿಂಫಾಯಿಡ್ ವ್ಯವಸ್ಥೆಯನ್ನು ನಿಯಂತ್ರಿಸುವುದರಲ್ಲಿಯೂ ದೇಹದ ಪ್ರತಿಬಂಧಕ ಪ್ರತಿಕ್ರಿಯೆಗಳ ಬೆಳೆವಣಿಗೆಯಲ್ಲಿಯೂ ಪ್ರಮುಖವಾದುದು. |
| ಮೂತ್ರಪಿಂಡಸ್ಥ (ಅಡ್ರಿನಲ್) ಗ್ರಂಥಿ) ವಲ್ಕುಟ (ಕಾರ್ಟೆಕ್ಸ್) | ಜೀವನಿರ್ವಹಣೆಯ ನಿಯಂತ್ರಕಗಳನ್ನು ಸ್ರವಿಸುತ್ತದೆ. ಮನೋರೋಗದಲ್ಲಿಯೂ ಪ್ರಧಾನವಾಗಿರಬಹುದಲ್ಲದೆ, ಸಂವೇಗ ಕ್ರಿಯೆಯಲ್ಲಿ ಸಕ್ರಿಯವಾಗಿರುತ್ತದೆ. |
| ಮೆಡ್ಯುಲ | ಎಪಿನೆಫ್ರೈನ್ ಮತ್ತು ನಾರೆಪಿನೆಫ್ರೈನ್‌ಗಳ ಪ್ರಭಾವಗಳ ಮೂಲಕ ಸಂವೇಗದಲ್ಲಿ ಚಟುವಟಿಕೆಯಿಂದಿರುತ್ತದೆ. |
| ಜನನ ಗ್ರಂಥಿಗಳು | ಶಾರೀರಿಕ ಪರಿಪಕ್ವತೆಯ ಸಮಯದಲ್ಲಿ ಗಂಡುಹೆಣ್ಣುಗಳಲ್ಲಿ ವ್ಯತ್ಯಾಸ ತೋರಿಸುವಂಥ ಆನುಷಂಗಿಕ ಲಿಂಗ ಲಕ್ಷಣಗಳ ಬೆಳವಣಿಗೆ ಮತ್ತು ಜನನೇಂದ್ರಿಯಗಳ ಕ್ರಿಯಾತ್ಮಕ ಸ್ಥಿತಿಯನ್ನು ಉಳಿಸಿಕೊಂಡುಬರುವುದು ಇತ್ಯಾದಿ ಕಾರ್ಯಗಳು. |

ಚಿತ್ತಪ್ರಕೃತಿಗಳ ಬಗ್ಗೆ ನಮಗೆ ಇಂದಿನವರೆಗೆ ದೊರೆತಿರುವ ಜ್ಞಾನದ ಆಧಾರದ ಮೇಲೆ ಹೇಳುವುದಾದರೆ, ಅವುಗಳಿಗೆ ದೈಹಿಕ ನೆಲೆಗಳಿರುವುದು ನಿರ್ವಿವಾದ ವಿಚಾರ. ಪ್ರಧಾನವಾಗಿ ಅಂತಃಸ್ರಾವ ವ್ಯಾಪಾರಗಳೂ ಚಿತ್ತಪ್ರಕೃತಿಗಳನ್ನು ನಿರ್ಧರಿಸುತ್ತವೆ ಎಂದು ಹೇಳುವುದಕ್ಕೆ ಪ್ರಾಚೀನ ಊಹೆಗಳು ಮಾತ್ರವಲ್ಲದೆ ಆಧುನಿಕ ಸಂಶೋಧನೆಗಳಿಂದ ದೊರೆತ ತಥ್ಯಾಂಶಗಳೂ ನಿದರ್ಶನಗಳಾಗಿವೆ. ಆದರೂ ಪ್ರತ್ಯಾವರಣದ ಪ್ರಭಾವದಿಂದ ಚಿತ್ತಪ್ರಕೃತಿಗಳು ಮುಕ್ತವಾಗಿಲ್ಲ. ಒಂದು ಸೀಮಿತ ರೀತಿಯಲ್ಲಿ ಪ್ರತ್ಯಾವರಣದ ಕಾರಕಗಳು ಅವುಗಳ ಸ್ವಭಾವ ಮತ್ತು ಬೆಳವಣಿಗೆಯ ಮೇಲೆ ಪ್ರಭಾವ ಬೀರಬಲ್ಲವು. (ಡಿ.)

**ಚಿತ್ತರಂಜನ್ :** ಪಶ್ಚಿಮ ಬಂಗಾಳದ ಬರ್ದ್ವಾನ್ ಜಿಲ್ಲೆಯ ಆಸನ್ಸೋಲ್ ಉಪವಿಭಾಗದ ವಾಯವ್ಯ ಮೂಲೆಯಲ್ಲಿರುವ ಕೈಗಾರಿಕಾ ಪಟ್ಟಣ. ಉ.ಅ.23$^0$ 33' ಮತ್ತು ಪೂ.ರೇ.87$^0$54' ಮೇಲಿದೆ. ಇದರ ಉತ್ತರಕ್ಕೆ ಸಿಂಜುರಿ. ಪೂರ್ವಕ್ಕೆ ಅಜಯ, ದಕ್ಷಿಣಕ್ಕೆ ನಾಮಕೇಶಿಯಾ ಮತ್ತು ಉಪರಕೇಶಿಯಾ ನದಿಗಳು, ಪಶ್ಚಿಮಕ್ಕೆ ಹಿಂದೂಸ್ತಾನ್ ಕೇಬಲ್ ಕಾರ್ಖಾನೆಯ ನಿವೇಶನ ಇವೆ. ವಿಸ್ತೀರ್ಣ 19.4 ಚ.ಕಿಮೀ. ಜನಸಂಖ್ಯೆ 45925 (2001).

ಈ ಪಟ್ಟಣ ಪ್ರತ್ಯೇಕ ಆಡಳಿತ ವ್ಯವಸ್ಥೆಗೆ ಒಳಪಟ್ಟಿದೆ. ತಗ್ಗು–ದಿಣ್ಣೆಗಳಿಂದ ತುಂಬಿದ ಪಟ್ಟಣದ ಭೂಭಾಗ ಸ್ಥೂಲವಾಗಿ ಪೂರ್ವದಿಕ್ಕಿಗೆ ಇಳಿಜಾರಾಗಿದೆ. ಅಜಯ, ಬಾರಾತಾರ್, ದಾಮೋದರ ಮತ್ತು ಭಾಗೀರಥಿ ನದಿಗಳ ಪ್ರವಾಹಗಳು ಇದಕ್ಕೆ ನಿದರ್ಶನ. ಪಶ್ಚಿಮದ ಕಡೆಗೆ ಮಾತ್ರ ಹಸಿರು ಗಿಡಮರಗಳು ಒಡೆದು ಕಾಣುತ್ತವೆ. ಪಟ್ಟಣದ ಪೂರ್ವಸೀಮೆಯುದ್ದಕ್ಕೆ ಹರಿಯುವ ಅಜಯ ನದಿಯ ಉದ್ದ 288 ಕಿ.ಮೀ ಬಂಗಾಳದಲ್ಲಿ 5–6 ಮೀ ಆಳವೂ ಆಗಿದ್ದು ಪಟ್ಟಣದ ತಗ್ಗು–ದಿಣ್ಣೆಗಳಿಂದ ಬರುವ ನೀರನ್ನು ಕೊಂಡೊಯ್ಯುತ್ತದೆ. ಮಳೆಗಾಲದಲ್ಲಿ ದೋಣಿಗಳ ಮೂಲಕ ಹತ್ತಿರದ ಹಳ್ಳಿಗಳ ಜನರು ಈ ಪಟ್ಟಣಕ್ಕೆ ಬರುತ್ತಾರೆ.

ತಜ್ಞರ ಸಮಿತಿಯೊಂದರ ಶಿಫಾರಸಿನ ಮೇರೆಗೆ 1947ರ ಸೆಪ್ಟೆಂಬರಿನಲ್ಲಿ ಆಯ್ಕೆಯಾದ ಇಲ್ಲಿಯ ನಿವೇಶನದಲ್ಲಿ ನಿರ್ಮಿಸಲಾದ ರೈಲ್ವೆ ಎಂಜಿನ್ ಕಾರ್ಖಾನೆ 1950ರ ನವೆಂಬರ್ 1ರಂದು ಪ್ರಾರಂಭವಾಯಿತು. ಮೊದಮೊದಲು ಇಂಗ್ಲೆಂಡಿನಿಂದ ಆಮದು ಮಾಡಿಕೊಂಡ ಬಿಡಿಭಾಗಗಳನ್ನು ಕೂಡಿಸಿ ರೈಲ್ವೆ ಎಂಜಿನ್ ತಯಾರಿಸಲಾಗುತ್ತಿತ್ತು. 1954ರ ಹೊತ್ತಿಗೆ ಅದಕ್ಕೆ ಅಗತ್ಯವಾದ ಬಿಡಿಭಾಗಗಳಲ್ಲಿ ಶೇ.90 ರಷ್ಟನ್ನು ಕಾರ್ಖಾನೆಯೇ ಉತ್ಪಾದಿಸಲಾರಂಭಿಸಿತು. 1954ರ ಜನವರಿ 6ರಂದು ತನ್ನ ನೂರನೆಯ ಎಂಜಿನನ್ನು ಭಾರತದ ರೈಲ್ವೆಗೆ ಒಪ್ಪಿಸಿತು. 1961ರಲ್ಲಿ ಇದು ವಿದ್ಯುತ್ ಚಾಲಿತ ರೈಲ್ವೆ ಎಂಜಿನುಗಳ ಉತ್ಪಾದನೆಯನ್ನಾರಂಭಿಸಿತು. 1972ರಿಂದ ಉಗಿಯ ಎಂಜಿನಗಳ ಉತ್ಪಾದನೆಯನ್ನು ನಿಲ್ಲಿಸಲಾಯಿತು. 1950ರಿಂದ 1972ರ ವರೆಗೆ ಒಟ್ಟು 2,351 ಉಗಿ ರೈಲ್ವೆ ಎಂಜಿನ್‌ಗಳನ್ನು ಉತ್ಪಾದಿಸಿದ ಈ ಕಾರ್ಖಾನೆ ತದನಂತರ ದೇಶದ ವಿದ್ಯುತ್ ಉತ್ಪಾದನೆಯ ಪ್ರಗತಿ ಮತ್ತು ತ್ವರಿತಗತಿಯ ಸಾಗಾಣಿಕೆಯ ಆವಶ್ಯಕತೆಗಳಿಗೆ ಅನುಗುಣವಾಗಿ ವಿದ್ಯುತ್ ಚಾಲಿತ ಎಂಜಿನ್‌ಗಳ ಉತ್ಪಾದನೆಗೆ ವಿಶೇಷ ಗಮನ ನೀಡಲಾರಂಭಿಸಿತು. ಈಗ ಈ ಕಾರ್ಖಾನೆಯಲ್ಲಿ 13,000 ಜನ ಕಾರ್ಮಿಕರಿದ್ದಾರೆ: ಮತ್ತು ಇದು ಬಹುಶಃ ಭಾರತೀಯ ರೈಲ್ವೆಯ ಅತಿ ದೊಡ್ಡ ಘಟಕ. ದೇಶದ ಯೋಜಿತ ಅಭಿವೃದ್ಧಿಯಲ್ಲಿ ಅತ್ಯಂತ ಮಹತ್ತ್ವದ ಪಾತ್ರ ವಹಿಸುತ್ತಿರುವ ಪಟ್ಟಣಗಳಲ್ಲಿ ಚಿತ್ತರಂಜನ್ ಒಂದು. (ಬಿ.ಎ.ಎಸ್)

**ಚಿತ್ತಾಪುರ :** ಕರ್ನಾಟಕದ ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು. ಆ ತಾಲ್ಲೂಕಿನ ಕೇಂದ್ರ. ಚಿತ್ತಾಪುರ ತಾಲ್ಲೂಕನ್ನು ಗುಲ್ಬರ್ಗ, ಚಿಂಚೋಳಿ, ಸೇಡಂ, ಯಾದಗಿರಿ ಮತ್ತು ಜೀವರಗಿ ತಾಲ್ಲೂಕುಗಳು ಸುತ್ತುವರಿದಿವೆ. ಸಮುದ್ರ ಪಾತಳಿಯಿಂದ 448 ಮೀ. ಎತ್ತರವಿರುವ ಈ ತಾಲ್ಲೂಕಿನ ವಿಸ್ತೀರ್ಣ 1790 ಚ.ಕಿ.ಮೀ ಜನಸಂಖ್ಯೆ 3,66,524 (2001).

ತಾಲ್ಲೂಕಿನ ಬಹುಭಾಗ ಕಪ್ಪುನೆಲ. ಆದರೆ ನಾಲವಾರದ ಸುತ್ತಮುತ್ತ ಕೆಂಪುಮಿಶ್ರಿತ ಉಸುಬಿನ ನೆಲವಿದೆ. ತಾಲ್ಲೂಕಿನಲ್ಲಿ ಹರಿಯುವ ನದಿಗಳು ಭೀಮಾ, ಕಾಗಿಣಾ ಮತ್ತು ಬೆಣ್ಣೆತೊರೆ. ಈ ನದಿಗಳಿಂದಲೂ ಕುಂಬಾರವಾಡಿಕೆರೆ, ಆಲಹಳ್ಳಿ ಕೆರೆ, ಮುಗಳ ನಾಗಾವಿಯ ಬಸವೇಶ್ವರ ಕೆರೆಗಳಿಂದಲೂ ಚಿಕ್ಕ ನೀರಾವರಿ ಯೋಜನೆಯ ಅಡಿಯಲ್ಲಿ ತೋಡಿಸಿದ ಬಾವಿಗಳಿಂದಲೂ ವ್ಯವಸಾಯಕ್ಕೆ ನೀರು ಒದಗುತ್ತದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 33.22" ಜೂನ್‌ನಿಂದ ಅಕ್ಟೋಬರ್‌ವರೆಗೆ ಮಳೆಗಾಲ. ಜೋಳ, ಬತ್ತ, ನೆಲಗಡಲೆ, ತೊಗರಿ, ಕಡಲೆ, ಗೋದಿ, ಮೆಣಸಿನಕಾಯಿ, ಕಾಯಿಪಲ್ಲೆ ಇಲ್ಲಿಯ ಬೆಳೆಗಳು.

ತಾಲ್ಲೂಕಿನ ಶೇ.90ರಷ್ಟು ಜನಕ್ಕೆ ಒಕ್ಕಲುತನವೇ ಕಸುಬು. ಕೆಲವರ ಕಸುಬು ನೇಯ್ಗೆ. ಶಹಾಬಾದಿ ಕಲ್ಲಿನ ಗಣಿಗಳಲ್ಲೂ ಕೆಲವರು ಕೆಲಸ ಮಾಡುತ್ತಾರೆ. ಈ ಕಲ್ಲುಗಳನ್ನು ಮನೆಗಳ ನೆಲಕ್ಕೆ ಹಾಸುವುದಕ್ಕೂ ಚಾವಣಿಗೆ ಹೊದಿಸುವುದಕ್ಕೂ ಉಪಯೋಗಿಸುತ್ತಾರೆ. ಈ ಕಲ್ಲುಗಳನ್ನು ಚೌಕವಾಗಿ ಒಡೆಯುವುದರಲ್ಲೂ ಇವನ್ನು ಉಜ್ಜಿ ಮಿಂಚುವಂತೆ ಮಾಡಿ ಒಪ್ಪ ಹಾಕುವುದರಲ್ಲೂ ಇಲ್ಲಿ ಅನೇಕ ಜನರು ನಿಷ್ಣಾತರು. ಈ ಉದ್ದಿಮೆಗಳನ್ನು ವಿಶೇಷವಾಗಿ ಒಡ್ಡರೂ ಲಂಬಾಣಿ ಜನರೂ ನೆಚ್ಚಿಕೊಂಡಿದ್ದಾರೆ. ಆದ್ದರಿಂದಲೇ ಚಿತ್ತಾಪುರ ತಾಲ್ಲೂಕಿನ ಎಲ್ಲ ಭಾಗಗಳಲ್ಲೂ ಈ ಜನ ಕಾಣಸಿಗುತ್ತಾರೆ. ತಾಲ್ಲೂಕಿನ ಔದ್ಯೋಗಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿವೆ. ಶಹಾಬಾದಿನಲ್ಲಿ ಎಂಜಿನಿಯರಿಂಗ್ ಕಾರ್ಖಾನೆಯೊಂದಿದೆ.

ಚಿತ್ತಾಪುರದ ಕೋಟೆ

ಶಹಾಬಾದಿ ಕಲ್ಲುಗಳಿಂದ ನೀರು ತುಂಬುವ ಕೇಲುಗಳನ್ನು ಸಿದ್ಧಪಡಿಸುವ, ಸಿಮೆಂಟಿನಿಂದ ಒಲೆಗಳನ್ನೂ ಕಿಟಕಿಗಳನ್ನೂ ವೃಂದಾವನಗಳನ್ನೂ ಮಾಡುವ ಸಣ್ಣ ಕೈಗಾರಿಕೆಗಳು ತಾಲ್ಲೂಕಿನಲ್ಲಿ ಬೆಳೆದಿವೆ. ಜೋಳ, ಕುಸುಬಿ, ನೆಲಗಡಲೆ ಮೊದಲಾದ ಸರಕುಗಳ ವ್ಯಾಪಾರದಲ್ಲಿ ಕೆಲವರು ನಿರತರಾಗಿದ್ದಾರೆ. ಶಿರೂರಿನಲ್ಲಿ ದನದ ಜಾತ್ರೆ ನಡೆಯುತ್ತದೆ.

ದೀಪಸ್ತಂಭ

ಧೋತ್ರ, ಅಂಗಿ, ರುಮಾಲು ಸಾಮಾನ್ಯವಾಗಿ ಗಂಡಸರ ಉಡುಗೆ ತೊಡುಗೆ; ಸೀರೆ, ಕುಪ್ಪುಸ, ಮಣಿ ಸರಗಳು, ಕಾಲುಂಗುರ, ನತ್ತು, ಪಿಲ್ಲೆ– ಇವು ಹೆಂಗಸರ ಸಾಮಾನ್ಯ ಉಡುಗೆ ತೊಡುಗೆ. ಸಾಮಾನ್ಯವಾಗಿ ಇಲ್ಲಿಯ ಜನ ಸರಳರು; ಸೌಜನ್ಯಶೀಲರು. ಅಕ್ಷರಸ್ಥರ ಸಂಖ್ಯೆ ಕ್ರಮೇಣ ಬೆಳೆಯು ತ್ತಿದೆ. ತಾಲ್ಲೂಕಿನಲ್ಲಿ 145 ಪ್ರಾಥಮಿಕ ಶಾಲೆಗಳೂ 15 ಪ್ರೌಢ ಶಾಲೆಗಳೂ ಹೈದರಾಬಾದು ಕರ್ನಾಟಕ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಕಾಲೇಜೂ ಇವೆ.

ಚಿತ್ತಾಪುರ ತಾಲ್ಲೂಕಿಗೆ ದೀರ್ಘ ಇತಿಹಾಸವಿದೆ; ಉತ್ತಮ ಸಂಸ್ಕೃತಿ ಮತ್ತು ನಾಗರಿಕತೆಗಳ ಹಿನ್ನೆಲೆ ಯುಂಟು. ಅನೇಕ ಶಿಲಾಶಾಸನಗಳೂ ದೇವಾಲಯಗಳೂ ಇತರ ಅವಶೇಷ ಗಳೂ ಈ ಮಾತಿಗೆ ಪ್ರಮಾಣಗಳಾಗಿ ಉಳಿದಿವೆ. ಈ ಸಾಕ್ಷಿಗಳು ತಾಲ್ಲೂಕಿನ ಹಳ್ಳಿಹಳ್ಳಿಗಳಲ್ಲೂ ದೊರೆಯುತ್ತವೆ. ತಾಲ್ಲೂಕಿನ ಮುಖ್ಯವಾದ ಕೆಲವು ಸ್ಥಳಗಳು ಇವು:

1. ಚಿತ್ತಾಪುರ ಪಟ್ಟಣ ಈ ತಾಲ್ಲೂಕಿನ ಮುಖ್ಯಸ್ಥಳ. ವಾಡಿ–ಹೈದರಾಬಾದ್ ರೈಲುರಸ್ತೆಯ ಮೇಲೆ ಇದೆ. ಜನಸಂಖ್ಯೆ 31185(2001). ಇಲ್ಲಿ ಶಹಾಬಾದಿ ಕಲ್ಲಿನ ಗಣಿಗಳಿವೆ. ಮುಸಲ್ಮಾನರ ಪವಿತ್ರ ಸ್ಥಳವಾದ ಚಿತಾವಲಿ ದರ್ಗಾ ಇಲ್ಲಿಂದ ಸುಮಾರು ಒಂದು ಫರ್ಲಾಂಗ್ ದೂರದಲ್ಲಿದೆ.

2. ಶಹಾಬಾದ್ ಮುಂಬಯಿ–ಮದ್ರಾಸ್ ರೈಲು ಮಾರ್ಗದ ಮೇಲೆ ವಾಡಿ ಜಂಕ್ಷನ್‌ನಿಂದ 13 ಕಿ.ಮೀ ದೂರದಲ್ಲಿ ಇರುವ ಒಂದು ಕೈಗಾರಿಕಾ ಪಟ್ಟಣ. ಜನಸಂಖ್ಯೆ 66,040 (2001). ಸಿಮೆಂಟು ಉತ್ಪಾದನೆಗೆ ಬೇಕಾಗುವ ದೊಡ್ಡ ಸಲಕರಣೆಗಳಿವೆ. ಈ ಊರಿನ ಬಳಿ ಕುರುಬರಿಗೆ ಅಧಿದೇವತೆಯಾದ ಬೀರಪ್ಪನ ಮಂದಿರ ಒಂದು ದಿಣ್ಣೆಯ ಮೇಲೆ ಇದೆ. ಅದನ್ನು ಬೀರಪ್ಪನ ಬೆಟ್ಟವೆಂದು ಕರೆಯುತ್ತಾರೆ. ಹಳೆಯ ಶಹಾಬಾದಿನಲ್ಲಿ ಒಂದು ಪುರಾತನ ಕೋಟೆಯಿದೆ.

3. ನಾಗಾಯಿ : ಚಿತ್ತಾಪುರದಿಂದ 3 ಕಿಮೀ ಅಂತರದಲ್ಲಿರುವ ಹಾಳುಬಿದ್ದ ಊರು. ಪ್ರಾಕ್ತನ ದೃಷ್ಟಿಯಿಂದ ಬಹು ಮಹತ್ತ್ವವುಳ್ಳದ್ದು. ಇಲ್ಲಿ ಹಿಂದೆ, ಕಲ್ಯಾಣದ ಚಾಳುಕ್ಯ ವಿಕ್ರಮಾದಿತ್ಯನ ಸಭಾಸ್ಥಾನವನ್ನು ಅಲಂಕರಿಸಿದ್ದ ಕಾಳಿದಾಸ ದಂಡನಾಥನೆಂಬ ಮಂತ್ರಿ ವಿಶ್ವವಿದ್ಯಾಲಯ ಮಾದರಿಯ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿಸಿದ್ದನೆಂದೂ ಬೇರೆ ಬೇರೆ ದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರೆಂದೂ ತಿಳಿದುಬರುತ್ತದೆ. 200 ವಿದ್ಯಾರ್ಥಿಗಳಿಗೆ ವೇದಾಭ್ಯಾಸಕ್ಕೂ 50 ವಿದ್ಯಾರ್ಥಿಗಳಿಗೆ ಶಾಸ್ತ್ರಾಭ್ಯಾಸಕ್ಕೂ ಇಲ್ಲಿ ಅವಕಾಶ ಕಲ್ಪಿಸಲಾಗಿತ್ತೆಂದೂ ಇವನ್ನೂ ನ್ಯಾಯ ಮೀಮಾಂಸಾದಿಗಳನ್ನೂ ಬೋಧಿಸಲು ಅನೇಕ ಅಧ್ಯಾಪಕರಿದ್ದರೆಂದೂ ತಿಳಿದುಬರುತ್ತದೆ. ಘಟಿಕದಲ್ಲಿದ್ದ ಒಟ್ಟು ವಿದ್ಯಾರ್ಥಿ ಸಂಖ್ಯೆ 257. ಅವರಿಗೆಲ್ಲ ಯೋಗ್ಯವಾದ ವಸತಿಗೃಹಗಳನ್ನು ಕಟ್ಟಿಸಿದ್ದುದಲ್ಲದೆ ಶ್ರೇಷ್ಠವಾದ ಪುಸ್ತಕಭಂಡಾರವನ್ನೂ ಅವನು ನಿರ್ಮಿಸಿಕೊಟ್ಟಿದ್ದ. ಹೀಗೆ ಪುಸ್ತಕಭಂಡಾರವಿರುವ ಜ್ಞಾನಪೀಠವನ್ನು ಕಟ್ಟಿದವರಲ್ಲಿ ಮಂತ್ರಿಯೇ ಮೊತ್ತಮೊದಲಿಗ. ಈ ಮಾತಿಗೆ ಅಲ್ಲಿಯ ಒಂದು ಶಾಸನ ಪ್ರಮಾಣ ನುಡಿಯುತ್ತಿದೆ. ಅವನು ಸಾಹಿತ್ಯದಲ್ಲಿ ಅಭಿರುಚಿಯುಳ್ಳವನೂ ಸೈನ್ಯ ನಡೆಸುವುದರಲ್ಲಿ ನಿಷ್ಣಾತನೂ ರಾಜಕಾರಣದಲ್ಲಿ ಬೃಹಸ್ಪತಿಯೂ ಧೈರ್ಯದಲ್ಲಿ ಗರುಡನೂ ಆಗಿದ್ದು ನಾಗಾಯಿ ಅಗ್ರಹಾರವನ್ನು ಸ್ಥಾಪಿಸಿದನೆಂದೂ 2ನೆಯ ಜಯಸಿಂಹನಿಂದ. ಈ ಅಗ್ರಹಾರದ ಶಾಸನವನ್ನು ಮಾಡಿಸಿದನೆಂದೂ ತಿಳಿದುಬರುತ್ತದೆ. ಒಂದನೆಯ ಕಾಳಿದಾಸ ನಾಗಾಯಿಯ ಅಗ್ರಹಾರವನ್ನು ಸ್ಥಾಪಿಸಿದವನಿರಬೇಕೆಂದು ಶಾಸನಗಳಿಂದ ಗೊತ್ತಾಗುತ್ತದೆ. ಇವನು ಮಧುಸೂದನನ ಮಗ. ಎರಡನೆಯ ಕಾಳಿದಾಸ ಅನುಕ್ರಮವಾಗಿ 2ನೆಯ ಜಯಸಿಂಹ, 1ನೆಯ ಸೋಮೇಶ್ವರ, 4ನೆಯ ವಿಕ್ರಮಾದಿತ್ಯ ಇವರ ಪ್ರಧಾನಿಯಾಗಿದ್ದನೆಂದು ತಿಳಿದುಬರುತ್ತದೆ. ಇದು ಹಿಂದೆ ಕುಂತಳದೇಶದ ಏಯಲು 300 ಪ್ರಾಂತ್ಯದ ರಾಜಧಾನಿಯಾಗಿತ್ತೆಂದು ಹೇಳಲಾಗಿದೆ. ಇಷ್ಟೇ ಅಲ್ಲ, ಇಲ್ಲಿ ನಾಗಾಯಿಯ ಎಲ್ಲಮ್ಮ ಅಥವಾ ನಾಗಲಾಂಬಿಕಾ ದೇವಿಯ ಶಕ್ತಿಪೀಠವುಂಟು. ಆದ್ದರಿಂದ ಇಲ್ಲಿಗೆ ಸಾವಿರಾರು ಜನ ಭಕ್ತರು ಯಾತ್ರೆಗಾಗಿ ಬರುತ್ತಿರುತ್ತಾರೆ. ಈ ದೇವಾಲಯದ ಸುತ್ತಣ ಪ್ರದೇಶ ನೀರಿನ ಚಿಲುಮೆಗಳಿಂದ ಕೂಡಿ, ಹಸಿರು ಬನದಂತಿದೆ. ಮುಕ್ಕಾಗಿ ಬಿದ್ದಿರುವ ಜಿನಮೂರ್ತಿಗಳು, ಶಿಲಾಶಾಸನಗಳು, ನಂದಿಯ ವಿಗ್ರಹಗಳು, ದೇವಾಲಯದ ಮುರಿದ ಕಲ್ಲುಗಳು ಚೆಲ್ಲಾಡಿವೆ. ಎಲ್ಲಮ್ಮನ ಮಂದಿರದ ಸಮೀಪದಲ್ಲೇ ಇರುವ ನಂದಿ ಬಾವಿ ಹಾಗೂ ಸಿಡಿಲುಬಾವಿಗಳ ನೀರು ಸಿಹಿಯಾಗಿದೆ. ಅವುಗಳಲ್ಲಿ ಎಲ್ಲ ಋತುಗಳಲ್ಲೂ ನೀರು ಒಂದೇ ಮಟ್ಟದಲ್ಲಿರುತ್ತದೆ. ನಾಗಾಯಿಯಲ್ಲಿ 61 ಕಂಬಗಳ ದೇವಾಲಯವೊಂದಿದೆ. ಇದು ಜೈನ ಶೈಲಿಯದು. ದೇವಸ್ಥಾನದ ಮುಂದೆ ಇರುವ 7 ಎತ್ತರದ ದೀರ್ಘ ಚತುರಸ್ರಾಕಾರದ ಸ್ತಂಭದ ಮೇಲಿರುವ ಶಾಸನ ಚಾಳುಕ್ಯರ ಆಡಳಿತವನ್ನು ಕುರಿತದ್ದು.

4. ಕಾಳಗಿ : ಚಿತ್ತಾಪುರ ರೈಲ್ವೆ ನಿಲ್ದಾಣದಿಂದ ದೂರದಲ್ಲಿದೆ. ಇಲ್ಲಿ ಕಾಳೇಶ್ವರ ಮತ್ತು ನರಸಿಂಹ ದೇವಾಲಯಗಳಿವೆ. ಇಲ್ಲಿಗೆ ದಿನವೂ ಯಾತ್ರಿಕರು ಬರುತ್ತಾರೆ. ಪ್ರತಿ ವರ್ಷ ಮೇ ತಿಂಗಳಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಈ ಸ್ಥಳ ಬಾಣ ಮನೆತನದವರ ರಾಜಧಾನಿಯಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಊರಿಗೆ ಮಾನ್ಯದಡಿ ಸಾಸಿರವೆಂಬ ಹೆಸರೂ ಇದ್ದಂತೆ ತೋರುತ್ತದೆ. ಗುಲ್ಬರ್ಗದಿಂದ ಇಲ್ಲಿಗೆ ಪ್ರತಿದಿನವೂ ಬಸ್ಸುಗಳು ಓಡಾಡುತ್ತವೆ.

5. ಯರಗೋಳ : ಚಿತ್ತಾಪುರದ ಹತ್ತಿರದಲ್ಲಿರುವ ಊರು. ಟೀಕಾಚಾರ್ಯರೆಂದು ಪ್ರಸಿದ್ಧರಾದ ಜಯತೀರ್ಥರು ತಪಸ್ಸುಮಾಡಿದ ಗುಹೆ ಇಲ್ಲಿದೆ. ಅವರು ನ್ಯಾಯಸುಧಾವನ್ನು ಇಲ್ಲಿಯೇ ರಚಿಸಿದರೆಂದು ಪ್ರತೀತಿ.

6. ಇಂಗಳಗಿ : ಇದು ನಾಲ್ಕನೆಯ ಚಾಳುಕ್ಯ ವಿಕ್ರಮನ ಹೆಂಡತಿಯಾದ ಚಾಕಲಾದೇವಿಯ ರಾಜಧಾನಿಯಾಗಿತ್ತು. ಇಲ್ಲಿ ಹಿಂದೆ ಆನೆಗಳ ವ್ಯಾಪಾರ ನಡೆಯುತ್ತಿತ್ತೆನ್ನಲಾಗಿದೆ.

7. ಭಂಕೂರು : ಶಹಾಬಾದ್ ಪಟ್ಟಣದಿಂದ ಅರ್ಧ ಕಿ.ಮೀ ಅಂತರದಲ್ಲಿದೆ. ಇಲ್ಲಿ ಅನೇಕ ಜಿನಾಲಯಗಳೂ ಶಾಸನಗಳೂ ಇವೆ. ಶಾಸನಗಳಲ್ಲಿ ಈ ಊರನ್ನು ಭೂಮುಕುರ ಎಂದು ಕರೆಯಲಾಗಿದೆ. ಈ ಊರಿನ ಹೊರಗೆ ಬಿದ್ದಿರುವ ವರ್ಧಮಾನನ ಮೂರ್ತಿಯನ್ನು ಬತ್ತಲೆಯ ಗೌರಮ್ಮನೆಂದೂ, ಸಿಂಹಪೀಠವನ್ನು ಅಣಕಿಸುವ ಕಲ್ಲು ಎಂದೂ ಅರಿಯದ ಜನ ಕರೆಯುತ್ತಾರೆ. ಈ ಊರಿಗೆ ಅನತಿ ದೂರದಲ್ಲಿ ಬೃಹದಾಕಾರದ ಗಣಪತಿಯ ವಿಗ್ರಹವೊಂದುಂಟು. ಇದು ಸ್ವಯಂಭೂ ಗಣಪತಿಯೆಂಬುದಾಗಿ ಅಲ್ಲಿಯ ಜನರ ನಂಬಿಕೆ. ಇದರಂತೆ ಸ್ವಲ್ಪ ಕಿರಿದಾಗಿರುವ ಗಣಪತಿಯ ವಿಗ್ರಹ ಶಹಾಬಾದಿನಿಂದ ಗುಲ್ಬರ್ಗಕ್ಕೆ ಹೋಗುವ ಮಾರ್ಗದಲ್ಲಿದೆ. ಅದು ಈ ಗ್ರಾಮದ ಅಡವಿಗೆ ಹೊಂದಿಕೊಂಡೇ ಇದೆ.

8. ಸನ್ನತಿ (ಸಂತಿ) : ಮುಂಬಯಿ–ಮದ್ರಾಸ್ ರೈಲುಮಾರ್ಗದ ನಾಲ್ವಾರ ನಿಲ್ದಾಣದಿಂದ 19 ಕಿಮೀ ದೂರದಲ್ಲಿದೆ. ಇಲ್ಲಿ ಭೀಮಾನದಿಯ ದಂಡೆಯ ಮೇಲೆ ಇರುವ ಪುರಾತನವಾದ ಚಂದ್ರಲಾಪರಮೇಶ್ವರಿಯ ದೇವಸ್ಥಾನ ಅನೇಕ ಭಕ್ತರ ಯಾತ್ರಾಸ್ಥಳ. ಪೂರ್ವಾಭಿಮುಖವಾದ ಈ ಗುಡಿಯ ಮಹಾದ್ವಾರದ ಎರಡೂ ಪಕ್ಕಗಳಲ್ಲಿ ಎರಡು ದೊಡ್ಡ ಮಂಟಪಗಳಿವೆ. ದೇವಾಲಯದ ಆವರಣದಲ್ಲಿ ದ್ವಾದಶಲಿಂಗಗಳೂ, ಮಹಾಕಾಳಿ, ಮಹಾಲಕ್ಷ್ಮೀ, ಸರಸ್ವತಿಯರ ವಿಗ್ರಹಗಳೂ ಇವೆ. ಚಂದ್ರಲಾಂಬೆ ಪಶ್ಚಿಮ ಚಾಳುಕ್ಯರ ಕುಲದೇವತೆಯಾಗಿದ್ದಳೆಂದೂ ಚಾಮುಂಡೇಶ್ವರಿಯೆಂಬುದು ಈಕೆಯ ಪರ್ಯಾಯನಾಮವೆಂದೂ ತಿಳಿದುಬರುತ್ತದೆ.

ಭೀಮಾನದಿಯ ದಂಡೆಯ ಮೇಲೆ ಇರುವ ಪುರಾತನವಾದ ಚಂದ್ರಲಾಪರಮೇಶ್ವರಿಯ ದೇವಸ್ಥಾನ

ಈ ದೇವತೆ ಲಕ್ಷ್ಮಿಯ ಅವತಾರವಾದ ಸೀತಾದೇವಿಯೆಂದೂ ಜನ ನಂಬಿದ್ದಾರೆ. ಈಕೆಯನ್ನು ಕುರಿತು ಶ್ರೀ ಜಗದ್ಗುರು ಶಂಕರಾಚಾರ್ಯರು ಅಷ್ಟೋತ್ತರವನ್ನು ರಚನೆ ಮಾಡಿದ್ದಾರೆ. ಜಗನ್ನಾಥ ಪಂಡಿತ, ಲಿಂಗಸುಗೂರಿನ ಮುದ್ದುರಂಗ ಪ್ರಾಣೇಶ ವಿಠಲ ಇವರು ಈಕೆಯ ಭಕ್ತರಲ್ಲಿ ಮುಖ್ಯರು. ಬಲೂಚಿಸ್ಥಾನದ ಹಿಂಗಳಾದೇವಿಯ ಪೀಠದಿಂದ ಈ ಭಾಗದ ಭಕ್ತರನ್ನು ಉದ್ಧರಿಸಲು ಈಕೆ ಬಂದಳೆಂದು ಈ ದೇವಿಯ ಒಂದು ಪ್ರಾರ್ಥನಾಪದ್ಯ ಹೇಳುತ್ತದೆ. ಈ ಗುಡಿಯ ಸಮೀಪದಲ್ಲಿ ಮಾರ್ಕಂಡೇಯ ದೇವಾಲಯ, ಭೈರವತೀರ್ಥ ಹಾಗೂ ವಿಶ್ವಂಭರ ದೀಕ್ಷಿತರ ಸಮಾಧಿ ಇವೆ. ಈಚೆಗೆ ಇಲ್ಲಿ ಪ್ರಾಚೀನ ಬೌದ್ಧ ಅವಶೇಷಗಳೂ ಪ್ರಾಕೃತ ಮತ್ತು ಕನ್ನಡ ಶಾಸನಗಳೂ ದೊರೆತಿವೆ. ಈ ಸ್ಥಳ 3,4ನೆಯ ಶತಮಾನಗಳಲ್ಲಿ ಬೌದ್ಧಧರ್ಮದ ಪವಿತ್ರಸ್ಥಾನವೆನಿಸಿ ಚಾಳುಕ್ಯರ ಕಾಲದಲ್ಲಿ ಶಕ್ತಿಪೀಠವೆಂದು ಖ್ಯಾತಿ ಪಡೆದಿತ್ತು. ಈಗ ಇಲ್ಲಿ ಪ್ರತಿವರ್ಷ ಮಾರ್ಚ್–ಏಪ್ರಿಲ್ ತಿಂಗಳುಗಳಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

9. ವಾಡಿ : ಗುಲ್ಬರ್ಗದಿಂದ 32 ಕಿಮೀ ದೂರದಲ್ಲಿದೆ. ಇದೊಂದು ಮುಖ್ಯ ರೈಲ್ವೆ ಜಂಕ್ಷನ್. ಮುಂಬಯಿ–ಮದ್ರಾಸ್ ರೈಲುಮಾರ್ಗವೂ ಹೈದರಾಬಾದ್ ರೈಲುಮಾರ್ಗವೂ ಇಲ್ಲಿ ಸಂಧಿಸುತ್ತವೆ. ಇಲ್ಲೊಂದು ವಿಶಾಲ ರೈಲ್ವೆ ಅಂಗಳವೂ ಲೋಕೊ ಷೆಡ್ಡೂ ಇವೆ. ನಿಲ್ದಾಣದ ಬಳಿಯಲ್ಲಿರುವ ವಸತಿಯಲ್ಲಿ ರೈಲ್ವೆ ನೌಕರರೇ ಹೆಚ್ಚು. ವಾಡಿಯಲ್ಲೊಂದು ಸಿಮೆಂಟ್ ಕಾರ್ಖಾನೆ ಸ್ಥಾಪಿತವಾಗಿದೆ.

ಬಲವಡಿಗಿಯಲ್ಲಿ ಎಲ್ಲಮ್ಮ, ಕೊಂಚೂರಿನಲ್ಲಿ ಪ್ರಾಣದೇವರು. ದಂಡಗುಂಡದಲ್ಲಿ ಬಸವೇಶ್ವರ, ರೇವಾಯಿಯಲ್ಲಿ ರೇವಣಸಿದ್ಧೇಶ್ವರ, ಹೆಬ್ಬಾಳದಲ್ಲಿ ಅಣುವೀರಭದ್ರೇಶ್ವರ, ಹುನಗುಂಟೆಯಲ್ಲಿ ಕಾಗಿನಾಭೀಮಾ ಸಂಗಮದಲ್ಲಿ ಚಂದ್ರಲಾ ಪರಮೇಶ್ವರಿ, ಹಲಕರಟಿಯಲ್ಲಿ ವೀರಭದ್ರೇಶ್ವರ, ಕೋರವಾರದಲ್ಲಿ ವೀರಭದ್ರ ದೇವರು, ಸೂಗೂರಿನಲ್ಲಿ ವೆಂಕಟೇಶ್ವರ ದೇವರ ಜಾತ್ರೆಗಳು ಪ್ರತಿವರ್ಷವೂ ನಡೆಯುತ್ತವೆ. ಈ ಎಲ್ಲ ಸ್ಥಳಗಳೂ ಇತಿಹಾಸ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಮಹತ್ತ್ವವುಳ್ಳವು. ತಾಲ್ಲೂಕಿನ ಹಲವೆಡೆಗಳಲ್ಲಿ ಶಿಲಾಶಾಸನಗಳೂ ಪ್ರಾಕ್ತನ ಅವಶೇಷಗಳೂ ಕಾಣಸಿಗುತ್ತವೆ. (ವಿ.ಕೆ.ಯುಎಸ್)

**ಚಿತ್ತೂರು :** ಆಂಧ್ರ ಪ್ರದೇಶದ ಒಂದು ಜಿಲ್ಲೆ; ಆ ಜಿಲ್ಲೆಯ ಮುಖ್ಯ ಪಟ್ಟಣ. ಚಿತ್ತೂರು ಜಿಲ್ಲೆಯನ್ನು ಉತ್ತರ ಪೂರ್ವಗಳಲ್ಲಿ ಅನಂತಪುರ, ಕಡಪ ಮತ್ತು ನೆಲ್ಲೂರು ಜಿಲ್ಲೆಗಳೂ ದಕ್ಷಿಣ ನೈರುತ್ಯಗಳಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಸೇಲಂ ಜಿಲ್ಲೆಗಳೂ ಪಶ್ಚಿಮದಲ್ಲಿ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯೂ ಬಳಸಿವೆ. ಜಿಲ್ಲೆಯ ವಿಸ್ತೀರ್ಣ 15,359 ಚ.ಕಿ.ಮೀ. ಜನಸಂಖ್ಯೆ 22,67,769(1991). ಜಿಲ್ಲೆಯ ಬಹುಭಾಗ ಬೆಟ್ಟಮಯ. ಪೂರ್ವಘಟ್ಟದ ಕವಲುಗಳಿಂದ, ಕಿರಿದಾದ ಕಣಿವೆಗಳಿಂದ ಅಲ್ಲಲ್ಲಿ ಅರಣ್ಯಗಳಿಂದ ಕೂಡಿದೆ. ಕಣಿವೆಗಳು ಫಲವತ್ತಾಗಿವೆ. ಘಟ್ಟಪ್ರದೇಶದಲ್ಲಿ ಕಬ್ಬಿಣ ಮತ್ತು ತಾಮ್ರ ನಿಕ್ಷೇಪಗಳಿವೆ. ಜಿಲ್ಲೆಯ ಮುಖ್ಯ ಬೆಳೆಗಳು ಬತ್ತ. ರಾಗಿ ಮತ್ತು ಎಣ್ಣೆಕಾಳುಗಳು. ಈ ಜಿಲ್ಲೆಯ ಚಂದ್ರಗಿರಿ ತಾಲ್ಲೂಕಿನ ತಿರುಮಲೈ ಬೆಟ್ಟದ ಮೇಲೆ ಶ್ರೀ ವೆಂಕಟೇಶ್ವರ ದೇವಾಲಯಕ್ಕೆ ದೇಶದ ಎಲ್ಲೆಡೆಗಳಿಂದ ಲಕ್ಷಾಂತರ ಯಾತ್ರಿಕರು ಬರುತ್ತಾರೆ. ಕಾಳಹಸ್ತಿಯಲ್ಲಿರುವ ಶಿವದೇವಾಲಯ ಪ್ರಸಿದ್ಧವಾದ್ದು.

ಜಿಲ್ಲೆಯ ಮುಖ್ಯಕೇಂದ್ರ ಚಿತ್ತೂರು. ಪ್ರಮುಖ ವಾಣಿಜ್ಯಕೇಂದ್ರ. ಮದ್ರಾಸಿಗೆ 128 ಕಿಮೀ ಪಶ್ಚಿಮದಲ್ಲಿದೆ. ಜನಸಂಖ್ಯೆ 3,20,567(2011). ಇಲ್ಲಿ ಪೌರಸಭೆಯಿದೆ; ತಿರುಪತಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜು. ಶಿಕ್ಷಕರ ಕಾಲೇಜು ಮತ್ತು ಶಾಲೆಗಳಿವೆ. ಕಾಕಂಬಿ, ಮಾವಿನಹಣ್ಣು, ನೆಲಗಡಲೆಗಳಿಗೆ ಚಿತ್ತೂರು ಪ್ರಮುಖ ಮಾರುಕಟ್ಟೆ. ಬಿಸ್ಕತ್, ಮುರಬ್ಬ, ಮಿಠಾಯಿ, ಉಪ್ಪಿನಕಾಯಿಗಳ ತಯಾರಿಕೆಗೆ ಪ್ರಸಿದ್ಧಿ ಪಡೆದಿದೆ. ಭಾರತದ ಪ್ರಮುಖ ದೈನಿಕಗಳಲ್ಲೊಂದಾದ ಇಂಡಿಯನ್ ಎಕ್ಸ್‌ಪ್ರೆಸ್ ಚಿತ್ತೂರಿನಿಂದಲೂ ಪ್ರಕಟವಾಗುತ್ತದೆ.

ಚಿತ್ತೂರಿನ ಬಳಿ ಬಿಳಿ ಮತ್ತು ಕೆಂಪು ಚಂದನದ ಮರಗಳುಂಟು. ಅವುಗಳಿಂದ ಸುಂದರವಾದ ಗೊಂಬೆಗಳು ಮುಂತಾದ ಸರಕುಗಳನ್ನು ತಯಾರಿಸಲಾಗುತ್ತದೆ. ಇಲ್ಲಿ ಷರಾಬು ತಯಾರಿಸುವ ಹಾಗೂ ಚರ್ಮ ಹದ ಮಾಡುವ ಕಾರ್ಖಾನೆಗಳುಂಟು. ಗ್ರಾನೈಟ್ ಶಿಲೆಯ ವ್ಯಾಪಾರವೂ ನಡೆಯುತ್ತದೆ.

ಚಿತ್ತೂರಿಗೆ ಮದ್ರಾಸು ಹಾಗೂ ಬೆಂಗಳೂರಿನಿಂದ ನೇರ ಬಸ್ ಹಾಗೂ ರೈಲ್ವೆ ಸಂಪರ್ಕವುಂಟು. 1782ರಲ್ಲಿ ಹೈದರ್ ಅಲಿ ಮೃತನಾದ್ದು ಚಿತ್ತೂರಿನಲ್ಲಿ.

ಕೇರಳದ ತ್ರಿಚೂರಿನಿಂದ 60 ಕಿ.ಮೀ. ಪೂರ್ವ–ಈಶಾನ್ಯಕ್ಕೆ, ಪಾಲಕ್ಕಾಡ್ ಜಿಲ್ಲೆಯಲ್ಲಿ, ಚಿತ್ತೂರು ಎಂಬ ಹೆಸರಿನ ಇನ್ನೊಂದು ಪಟ್ಟಣವಿದೆ. ಜನಸಂಖ್ಯೆ 31,884(2000)

(ಎಚ್.ಜಿ.ಎ.)

**ಚಿತ್ತೋರ್ (ಚಿತ್ತೋಡ್‌ಗಢ) :** ರಾಜಾಸ್ಥಾನ ರಾಜ್ಯದ ಈಶಾನ್ಯಭಾಗದಲ್ಲಿ ಉದಯಪುರ ವಿಭಾಗದಲ್ಲಿರುವ ಒಂದು ಜಿಲ್ಲೆ; ಆ ಜಿಲ್ಲೆಯ ಮುಖ್ಯಪಟ್ಟಣ. ಜಿಲ್ಲೆಯ ವಿಸ್ತೀರ್ಣ 10445 ಚ.ಕಿ.ಮೀ, ಜನಸಂಖ್ಯೆ 18,02,524 (2001).

ಚಿತ್ತೂರು ಅಥವಾ ಚಿತ್ತೋಡ್ ಗಢ ಪಟ್ಟಣ ಉದಯಪುರಕ್ಕೆ ಈಶಾನ್ಯದಲ್ಲಿ, 105 ಕಿಮೀ ದೂರದಲ್ಲಿ, ಗುಡ್ಡವೊಂದರ ಇಳಿಜಾರಿನ ಮೇಲಿದೆ. ಅರ್ಧ ಕಿ.ಮೀ ದೂರದಲ್ಲಿ ಗಂಭೀರ್ ನದಿ ಹರಿಯುತ್ತದೆ. ಚಿತ್ತೂರು ರೈಲ್ವೆ ಜಂಕ್ಷನ್ ಇರುವುದು 1 ಕಿಮೀ ದೂರದಲ್ಲಿ. ಪಟ್ಟಣದ ಜನಸಂಖ್ಯೆ 116530 (2011). ಇಲ್ಲಿಯ ಕೋಟೆ ಯಾವಾಗ ನಿರ್ಮಾಣವಾಯಿತೆಂದು ನಿಖರವಾಗಿ ತಿಳಿಸುವ ಆಧಾರಗಳು ದೊರೆತಿಲ್ಲ. ಪಾಂಡವರಲ್ಲೊಬ್ಬನಾದ ಭೀಮ ಇದನ್ನು ಕಟ್ಟಿಸಿದನೆಂದು ಪ್ರತೀತಿ. 734ರಲ್ಲಿ ಬಾಪಾ ರಾವಲ ಕಟ್ಟಿಸಿದನೆಂದೂ ಹೇಳಲಾಗಿದೆ. ಚಿತ್ರಕೋಟೆ ಎಂಬುದು ಚಿತ್ತೂರಿನ ಪ್ರಾಚೀನ ಹೆಸರು. ಮೋರಿ ರಜಪೂತ ಸಂತತಿಯ ಚಿತ್ರಾಂಗ ಎಂಬುವನಿಂದ ಈ ಹೆಸರು ಬಂದುದಾಗಿ ತಿಳಿದುಬರುತ್ತದೆ. ಈ ಸಂತತಿಯವರು ಹಿಂದೆ ಇಲ್ಲಿ ಆಳ್ವಿಕೆ ನಡೆಸಿದರು. ಅವರ ಕಾಲದಲ್ಲಿ ಕಟ್ಟಲಾಯಿತೆನ್ನಲಾದ ತಟಾಕ ಮತ್ತು ಅರಮನೆಯ ಅವಶೇಷಗಳು ಕೋಟೆಯ ದಕ್ಷಿಣಭಾಗದಲ್ಲಿವೆ. ಕೋಟೆಯನ್ನು ಮೈದಾನದಿಂದ 152ಮೀ, ಎತ್ತರದಲ್ಲಿ ಕಟ್ಟಲಾಗಿದೆ. ಅದರ ಉದ್ದ ಸುಮಾರು 5.5 ಕಿ.ಮೀ.

ಚಿತ್ತೂರು ಕೋಟೆಯೊಳಗೆ ಇನ್ನೂ ಅನೇಕ ಐತಿಹಾಸಿಕ ಕಟ್ಟಡಗಳಿವೆ. ಅವುಗಳಲ್ಲಿ ಮುಖ್ಯವಾದವು ಕೀರ್ತಿಸ್ತಂಭ ಮತ್ತು ಜಯಸ್ತಂಭ. ಕೀರ್ತಿಸ್ತಂಭವನ್ನು 12 ಅಥವಾ 13ನೆಯ ಶತಮಾನದಲ್ಲಿ ಬಘೇರ್‌ವಾಲ್ ಮಹಾಜನ ಎಂಬವನು ಜೈನ ತೀರ್ಥಂಕರರಲ್ಲೊಬ್ಬನಾದ ಆದಿನಾಥನ ಸ್ಮರಣಾರ್ಥ ಕಟ್ಟಿಸಿದ. ಮಾಳವ ಮತ್ತು ಗುಜರಾತ್ ಸುಲ್ತಾನರ ಭಾರಿ ಸೈನ್ಯದ ಮೇಲೆ ಚಿತ್ತೂರಿನ ಮಹಾರಾಣಾ ಕುಂಭ ಯುದ್ಧ ಮಾಡಿ ಗಳಿಸಿದ ವಿಜಯದ ಸ್ಮಾರಕವಾಗಿ ಜಯಸ್ತಂಭವನ್ನು 1442–1449ರಲ್ಲಿ ಕಟ್ಟಿಸಿದ. ಈ ಸ್ತಂಭ 36.5 ಮೀ.ಉದ್ದವಾಗಿದೆ. ಭೂಮಟ್ಟದಲ್ಲಿ ಇದರ ವ್ಯಾಸ 9 ಮೀ. ಇದಕ್ಕೆ 9 ಹಂತಗಳಿವೆ. ತುದಿಯವರೆಗೂ ಹತ್ತಲು ಗೋಳದ ಕೇಂದ್ರ ಗೋಡೆಯಲ್ಲಿ ವರ್ತುಲಾಕಾರದಲ್ಲಿ ಮೆಟ್ಟಲುಗಳನ್ನು ನಿರ್ಮಿಸಲಾಗಿದೆ. ಜಯಸ್ತಂಭದ ತಳಭಾಗದಿಂದ ತುದಿಯವರೆಗೂ ಅನೇಕ ಹಿಂದೂ ದೇವ ದೇವತೆಗಳ ಚಿತ್ರಗಳನ್ನು ಕೊರೆಯಲಾಗಿದೆ. ಇವು ಅತ್ಯಂತ ಸೂಕ್ಷ್ಮವಾಗಿಯೂ ಸುಂದರವಾಗಿಯೂ ಇವೆ. ದೆಹಲಿಯಲ್ಲಿರುವ ಕುತುಬ್ ಮಿನಾರ್ ಇದಕ್ಕಿಂತ ದೊಡ್ಡದಾದರೂ ವಿನ್ಯಾಸದಲ್ಲಿ ಅದು ಜಯಸ್ತಂಭಕ್ಕೆ ಸರಿಯೆನಿಸಲಾರದೆಂಬುದು ಕರ್ನಲ್ ಟಾಡ್ ಅಭಿಪ್ರಾಯ. 1448ರಲ್ಲಿ ಕಟ್ಟಲಾದ ಶೃಂಗಾರ್ ಚೌರಿ ಆಲಯ ಅತ್ಯಂತ ಸುಂದರವಾದ್ದು. ಕೋಟೆಯಲ್ಲಿರುವ ಅತ್ಯಂತ ಪ್ರಾಚೀನ ದೇವಾಲಯವೆಂದರೆ ಕಾಳಿಕಾದೇವಿಯದು. ಪ್ರಾರಂಭದಲ್ಲಿ ಅದನ್ನು ಸೂರ್ಯದೇವನಿಗಾಗಿ ಕಟ್ಟಲಾಗಿತ್ತು. ಚಿತ್ತೂರಿನಲ್ಲಿ ಅನೇಕ ಬೌದ್ಧಸ್ತೂಪಗಳ ಅವಶೇಷಗಳಿವೆ. ಸಮಿದ್ಧೇಶ್ವರನ ಮಂದಿರ, ಅನ್ನಪೂರ್ಣಾ ಮಂದಿರ, ಮೀರಾ ಮಂದಿರ–ಇವು ಇತರ ಕೆಲವು ಕಟ್ಟಡಗಳು. ಚಿತ್ತೂರಿನ ಸುತ್ತ ರಾಜಸ್ಥಾನದಲ್ಲೇ ಅತ್ಯಂತ ಪ್ರಾಚೀನವಾದ ಸಂಸ್ಕೃತಿಯ ಅವಶೇಷಗಳು ದೊರೆತಿವೆ.

ಚಿತ್ತೂರಿನ ಪ್ರಾಚೀನ ಇತಿಹಾಸದ ಬಗ್ಗೆ ಮಾಹಿತಿಗಳು ದೊರೆಯುವುದಿಲ್ಲ. ಮೋರಿ ಸಂತತಿಯ ಕೊನೆಯ ರಾಜನ ಆಳ್ವಿಕೆ 734ರಲ್ಲಿ ಕೊನೆಗೊಂಡು ಅದು ಬಾಪಾ ರಾವಲನ ವಶವಾಯಿತು. ಅನಂತರ ಮಾಳವದ ಪರಮಾರ ಸಂತತಿಯ 2ನೆಯ ಮುಂಜರಾಜ ಹಲವು ಕಾಲ ಚಿತ್ತೂರನ್ನು ಆಕ್ರಮಿಸಿದ್ದ. 1567ರ ವರೆಗೂ ಚಿತ್ತೂರು ಮೇವಾಡ ರಾಜ್ಯದ ರಾಜಧಾನಿಯಾಗಿತ್ತು. ಅನಂತರ ಉದಯಪುರ ರಾಜಧಾನಿಯಾಯಿತು. ಮಧ್ಯಯುಗದಲ್ಲಿ ಚಿತ್ತೂರು ನಾಲ್ಕು ಸಾರಿ ಮುಸ್ಲಿಮರ ಆಕ್ರಮಣಕ್ಕೊಳಗಾಗಿತ್ತು. 1303ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ಚಿತ್ತೂರನ್ನು ಆಕ್ರಮಿಸಿದ, ಚಿತ್ತೂರಿನ ರತನ್ ಸಿಂಗ್ ರಾವಲನ ಪತ್ನಿ ರಾಣಿ ಪದ್ಮಿನಿಯ ರೂಪಕ್ಕೆ ಅವನು ಮರುಳಾಗಿದ್ದನೆಂದೂ ರಜಪೂತವೀರರು ಅಸದಳ ಪರಾಕ್ರಮ ತೋರಿ ಅವನ ವಿರುದ್ಧ ಕಾದಿದರೆಂದೂ ರಜಪೂತ ಸ್ತ್ರೀಯರು ಜೋಹ್ ಪದ್ಧತಿ ಅನುಸರಿಸಿದರೆಂದೂ ಹೇಳಲಾಗಿದೆ. ಅಲ್ಲಾವುದ್ದೀನ ಚಿತ್ತೂರನ್ನು ವಶಪಡಿಸಿಕೊಂಡು, ತನ್ನ ಮಗನಾದ ಖಿಜರ್‌ಖಾನನನ್ನು ಅಲ್ಲಿಯ ರಾಜನನ್ನಾಗಿ ನೇಮಿಸಿ ಚಿತ್ತೂರಿಗೆ ಖಿಜರಾಬಾದ್ ಎಂದು ಹೆಸರಿಟ್ಟ. ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ಚಿತ್ತೂರು ಮಹಮ್ಮದ್ ಬಿನ್ ತುಘಲಕನ ಆಕ್ರಮಣಕ್ಕೀಡಾಯಿತು. 1534ರಲ್ಲಿ ಗುಜರಾತಿನ ಬಹದ್ದೂರ್ ಶಹ ಚಿತ್ತೂರಿನ ಮೇಲೆ ಆಕ್ರಮಣ ನಡೆಸಿದ. ಕೋಟೆ ರಜಪೂತರ ಕೈಯಲ್ಲೇ ಉಳಿಯಿತು. ರಾಣಾ ಪ್ರತಾಪಸಿಂಹನ ಮರಣಾನಂತರ ಅವನ ಮಗನಾದ ಉದಯಸಿಂಹನನ್ನು 1567ರಲ್ಲಿ ಅಕ್ಬರ್ ಸೋಲಿಸಿ ಚಿತ್ತೂರನ್ನು ವಶಪಡಿಸಿಕೊಂಡ. ಜಿಲ್ಲೆಯ ಮುಖ್ಯ ಹೆಬ್ಬಾಗಿಲು, ದೊಡ್ಡ ನಗಾರಿ, ಕಾಳೀಮಾತೆಯ ದೇವಸ್ಥಾನದಲ್ಲಿದ್ದ ಬೆಲೆಯುಳ್ಳ ಮೋಂಬತ್ತಿ ಕರಡಿಗೆಗಳನ್ನು ಅವನು ಆಗ್ರಕ್ಕೆ ಒಯ್ದನೆಂದು ಹೇಳಲಾಗಿದೆ. ಔರಂಗ್‌ಜೇಬನ ಕಾಲದಲ್ಲಿ ಚಿತ್ತೂರಿನ ರಾಣಾ ಸ್ವತಂತ್ರನಾದರೂ ಔರಂಗ್‌ಜೇಬನ ವಿರುದ್ಧ ಹಲವು ಬಾರಿ ಕದನ ನಡೆಸಬೇಕಾಯಿತು. ಕೊನೆಗೆ ಔರಂಗ್‌ಜೇಬ್ ಚಿತ್ತೂರನ್ನು ಆಕ್ರಮಿಸಿಕೊಂಡ. ಅವನು ಮರಣ ಹೊಂದಿದ ಕೂಡಲೇ ಅಜಿತ್‌ಸಿಂಹ ಮೇವಾಡ ರಾಜ್ಯವನ್ನು ಮೊಗಲರ ಆಳ್ವಿಕೆಯಿಂದ ವಿಮೋಚನೆಗೊಳಿಸಿದ.



ಜಯಸ್ತಂಭ

(ಟಿ.ಆರ್.ಆರ್.; ಟಿ.ಆರ್.ಪಿ.; ಎಚ್.ಜಿ.ಎ.)

**ಚಿತ್ರಕಲೆ :** ಲಲಿತಕಲೆಗಳಲ್ಲಿ ಮುಖ್ಯವಾದ ಒಂದು ವಿಭಾಗ. ಬಣ್ಣವನ್ನು ಉಪಯೋಗಿಸಿ ಎರಡು ಆಯಾಮಗಳ ಮೇಲ್ಮೈಯಲ್ಲಿ ಚಿತ್ರರಚನೆ ಮಾಡುವ ಕಲೆಗೆ ಈ ಹೆಸರಿದೆ. ಬಣ್ಣದ ಬಗ್ಗೆ ತಿಳಿಯಲು ಬಣ್ಣಗಳು ಎಂಬ ಲೇಖನ ನೋಡಿ. ಚಿತ್ರಕಲೆ ವಾಸ್ತು ಮತ್ತು ಶಿಲ್ಪಗಳಷ್ಟೇ ಹಳೆಯದು. ಅದರ ಪ್ರಾಚೀನ ವಿವರಗಳಿಗೆ ಆದಿಮ ಜನರ ಕಲೆ ಮತ್ತು ಆದಿಮಾನವ ಕಲೆ ಎಂಬ ಲೇಖನಗಳನ್ನು ನೋಡಿ. ಗ್ರೀಕ್ ಕಲೆ, ರೋಮನರ ಕಲೆ, ಬಿಜ಼ಾಂಟಿನ್ ಕಲೆ, ಭಾರತೀಯ ಕಲೆ ಮೊದಲಾದ ಲೇಖನಗಳು ಚಿತ್ರಕಲೆಯ ಇತಿಹಾಸವನ್ನು ಮುಂದುವರಿಸುತ್ತವೆ.

ಈ ಲೇಖನದಲ್ಲಿ ರೆನೇಸಾನ್ಸ್ ಯುಗದಿಂದ ಆಧುನಿಕ ಯುಗದವರೆಗೆ ಚಿತ್ರಕಲೆ ಯೂರೋಪಿನಲ್ಲಿ ಬೆಳೆದುಬಂದ ಬಗೆಯನ್ನು ವರ್ಣಿಸಿದೆ.

ಲೇಖನವಿನ್ಯಾಸ ಹೀಗಿದೆ :

I ರೆನೇಸಾನ್ಸ್ (ಹೊಸಹುಟ್ಟು, ಪುನರುಜ್ಜೀವನ) ಯುಗ

II ಬರೋಕ್ ಯುಗ

III ಆಧುನಿಕ ಯುಗ

ಪೋಸ್ಟ್ ಇಂಪ್ರೆಷನಿಸಮ್

ಇಂಟಮಿಸಮ್

ಫ್ಲಾವಿಸಮ್
ಕ್ಯೂಬಿಸಮ್
ಫ್ಯೂಚರಿಸಮ್
ಆರ್ಫಿಸಮ್
ಎಕ್ಸ್‌ಪ್ರೆಷನಿಸಮ್
ಡಾಡಾಯಿಸಮ್
ಸರಿಯಲಿಸಮ್

**1. ರೆನೇಸಾನ್ಸ್ (ಹೊಸಹುಟ್ಟು ; ಪುನರುಜ್ಜೀವನ) ಯುಗ :** ರೆನೇಸಾನ್ಸ್ ಚಿತ್ರಕಲೆ ಎಂಬ ಮಾತನ್ನು ಮೊಟ್ಟ ಮೊದಲು ವಿಶೇಷವಾದ ಅರ್ಥದಲ್ಲಿ ಬಳಸಿದವ 16ನೆಯ ಶತಮಾನದವನಾದ ಇಟಲಿಯ ಖ್ಯಾತ ಕಲಾವಿದ, ಇತಿಹಾಸಕಾರ ಜಾರ್ಜ್ ವಸ್ಥಾರಿ. ಈತ ಇಟಲಿಯ ಶ್ರೇಷ್ಠ ಕಲಾವಿದರನ್ನು ಕುರಿತು ಬರೆದ ದಿ ಲೈವ್ಸ್ ಆಫ್ ಫೇಮಸ್ ಪೇಂಟರ್ಸ್ ಎಂಬ ಗ್ರಂಥದಲ್ಲಿ 14ನೆಯ ಶತಮಾನದಲ್ಲಿ ಇಟಲಿಯಲ್ಲಿ ಪ್ರಾರಂಭವಾಗಿ 16ನೆಯ ಶತಮಾನದಲ್ಲಿ ಉತ್ಕರ್ಷಗೊಂಡ ಕ್ಲಾಸಿಕಲ್ ಚಿತ್ರಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗಳ ಪುನರುಜ್ಜೀವನದ ಸಂದರ್ಭವನ್ನು ಕೂಲಂಕಷವಾಗಿ ವಿವರಿಸಿದ್ದಾನೆ. ಇಟಲಿಯ ಕಲಾವಿದ ಜಾಟೋನಿಂದ ಹಿಡಿದು ಮೈಕಲ್ ಏಂಜಲೋವರೆಗಿನ ಕಲೆಯ ಇತಿಹಾಸವನ್ನು ವಸ್ಥಾರಿ ಸಮಗ್ರವಾಗಿ ವಿವೇಚಿಸುತ್ತ ಇಟಲಿಯ ಕಲಾಪರಂಪರೆ ರೆನೇಸಾನ್ಸ್ ಅವಧಿಯಲ್ಲಿ ಸುವ್ಯವಸ್ಥಿತವಾಗಿ ಬೆಳೆದು ಸ್ಪಷ್ಟವಾಗಿ ರೂಪಗೊಂಡಿತು–ಎನ್ನುತ್ತಾನೆ. ಅವನ ಅಭಿಪ್ರಾಯವನ್ನೇ ಅನಂತರ ಬಂದ ಮಿಚಲೆ, ರಸ್ಕಿನ್, ಬರ್ಕ್‌ಹಾರ್ಡ್ಟ್, ಆರ್ಥರ್ ಸೈಮಂಡ್ಸ್, ವಾಲ್ಟರ್ ಪೇಟರ್ ಮುಂತಾದ ಕಲಾವಿಮರ್ಶಕರು ಸಮರ್ಥಿಸಿದ್ದಾರೆ.

ರೆನೇಸಾನ್ಸ್ ಎಂಬ ಪದದ ಅರ್ಥವ್ಯಾಪ್ತಿ ಏನೇ ಇರಲಿ, ಆ ಕಾಲದ ಚಿತ್ರಕಾರರು ಮುಖ್ಯವಾಗಿ ಕ್ಲಾಸಿಕಲ್ ಮಾದರಿಗಳನ್ನು ಅನುಸರಿಸುವುದರ ಜೊತೆಗೆ ಮೌಲ್ಯವಿವೇಚನೆಯಲ್ಲಿ ಕ್ಲಾಸಿಕಲ್ ಯುಗದ ಮಾನವತಾ ಸಿದ್ಧಾಂತದ ಆದರ್ಶಗಳನ್ನೇ ಎಡೆಬಿಡದೆ ಪಾಲಿಸಿದರು ಎಂಬುದನ್ನು ಇತಿಹಾಸಕಾರರು ಗಮನಿಸಿದ್ದಾರೆ. ರೆನೇಸಾನ್ಸ್ ಚಿತ್ರಕಲೆಯನ್ನು ಶ್ರೇಷ್ಠ ಮಟ್ಟಕ್ಕೆ ಕೊಂಡೊಯ್ದವರಲ್ಲಿ ಮುಖ್ಯವಾಗಿ ಫ್ಲಾರೆನ್ಸಿನ ಕಲಾವಿದರನ್ನು ಹೆಸರಿಸುತ್ತಾರೆ. ಆದರೆ ನಿಜವಾಗಿ ನೋಡಿದರೆ, 15ನೆಯ ಶತಮಾನದ ಕೊನೆಯವರೆಗೂ ಈ ಚಿತ್ರಕಾರರಿಗೆ ರೋಮನ್ ಭಿತ್ತಿಚಿತ್ರಗಳು ಮುಂತಾದ ಕ್ಲಾಸಿಕಲ್ ಮಾದರಿಗಳು ಹೆಚ್ಚಾಗಿ ದೊರೆತಿರಲಿಲ್ಲ. ಪ್ರಾಚೀನ ಗ್ರೀಸಿನ ಶ್ರೇಷ್ಠ ಕಲಾವಿದರಾದ ಜ್ಯೂಕ್ಸಿಸ್, ಅಪೆಲಿಸ್ ಮುಂತಾದವರ ಕಲಾಕೃತಿಗಳು ಅಲ್ಲಿಯವರೆಗೆ ಕೇವಲ ಗ್ರಂಥಸ್ಥವಾಗಿಯೇ ಉಳಿದಿದ್ದು ಅವುಗಳ ವಿಷಯ ಅನೇಕರಿಗೆ ಗೊತ್ತಿರಲಿಲ್ಲ. ಆದರೆ ಇತಿಹಾಸಕಾರ ಪ್ಲಿನಿ ಮೇಲೆ ಹೇಳಿದ ಗ್ರೀಕ್ ಕಲಾಕೃತಿಗಳ ಬಗೆಗೆ ಕೊಟ್ಟ ಅಮೋಘ ವರ್ಣನೆಗಳು ರೆನೇಸಾನ್ಸ್ ಕಲಾವಿದರ ಹಾಗೂ ಕಲಾಪ್ರೇಮಿಗಳ ಆಸಕ್ತಿಯನ್ನು ಕೆರಳಿಸಿದ್ದವು. ಗ್ರೀಕ್ ಕ್ಲಾಸಿಕಲ್ ಕಲಾವಿದರು ಪ್ರಕೃತಿಯ ಸಹಜವಾಸ್ತವ ಅಂಶಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಿದ್ದರು ಮತ್ತು ತಮ್ಮ ಅಭಿವ್ಯಕ್ತಿಯಲ್ಲಿ ಸಮುಚಿತ ಪ್ರಮಾಣದ ರೂಪವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದರು ಎಂಬ ಅಂಶಗಳು ರೆನೇಸಾನ್ಸ್ ಯುಗದವರನ್ನು ಬಹಳವಾಗಿ ಸೆಳೆದವು. ಆದರೆ ಈ ಕೆಲವು ಅಂಶಗಳು ಹಿಂದಿನ ಕಲಾಸಂಪ್ರದಾಯದಲ್ಲೂ ಅಡಕವಾಗಿದ್ದುದರಿಂದ ರೆನೇಸಾನ್ಸ್ ಸಂಪ್ರದಾಯ 15ನೆಯ ಶತಮಾನಕ್ಕೂ ಹಿಂದೆಯೇ ಪ್ರಾರಂಭವಾಯಿತೆನ್ನುವುದುಂಟು. ಇಟಲಿಯ ಚಿತ್ರಕಾರರು ಬಿಜ಼ಾಂಟಿನ್ ಚಿತ್ರಕಲೆಯ ಧಾರ್ಮಿಕ ಸಾಂಕೇತಿಕತೆಯನ್ನು ತ್ಯಜಿಸಿದಾಗ ಹೊಸ ಯುಗ ಪ್ರಾರಂಭವಾಯಿತೆನ್ನಬಹುದು. ಈ ತೆರನ ಹೊಸ ಪ್ರವೃತ್ತಿಗಳನ್ನು ಪ್ರಾರಂಭಿಸಿದವ ಜಾಟೋ. ನಶಿಸಿಹೋಗಿದ್ದ ಚಿತ್ರಕಲೆಯ ಸಂಪ್ರದಾಯವನ್ನು ಜೀವಂತವಾಗಿಸಿದವ ಅವನೇ ಎಂಬುದು ವಿಮರ್ಶಕರ ಅಭಿಮತ. ಇತಿಹಾಸಕಾರರು ಇವನ ಪೂರ್ವಜರ ಪೈಕಿ ದಾಂತೆಯ ಮೂಲಕ ಖ್ಯಾತಿಗಳಿಸಿದ 13ನೆಯ ಶತಮಾನದ ಚಿಮಾಬೂನ ಹೆಸರನ್ನು ಮಾತ್ರ ಹೇಳುವುದುಂಟು. ಅದೇನೇ ಇರಲಿ ಫ್ಲಾರೆನ್ಸಿನಲ್ಲಿ ರೆನೇಸಾನ್ಸ್ ಚಿತ್ರಕಲೆಯನ್ನು ವಾಸ್ತವಿಕತೆಯ ತತ್ತ್ವಗಳಿಗೆ ಅನುಸಾರವಾಗಿ ರೂಪಿಸಿದವ ಜಾಟೋ. ವಾಸ್ತವಿಕತೆಯ ಕಲ್ಪನೆಯನ್ನುಂಟು ಮಾಡಲು ಮೂರು ಆಯಾಮಗಳ (ತ್ರಿ–ಡಿ) ಶೈಲಿಯ ಉಬ್ಬುಚಿತ್ರಗಳ ರಚನೆ ಪ್ರಾರಂಭವಾದದು ಅವನ ಕಾಲದಲ್ಲಿಯೇ. ಅವನಿಂದ ಪ್ರಾರಂಭವಾದ ರೆನೇಸಾನ್ಸ್ ಚಿತ್ರಕಲೆಯ ಪರಂಪರೆ, ವಸ್ಥಾರಿ ಹೇಳುವಂತೆ, ಏಕಪ್ರಕಾರವಾಗಿ ವಿಕಾಸಗೊಂಡು ಮೈಕಲೇಂಜಲೋವಿನ ಅನ್ಯಾದೃಶ ಸೃಷ್ಟಿಗಳಲ್ಲಿ ಕೊನೆಗೊಳ್ಳುತ್ತದೆ. ಮೊದಲನೆಯದಾಗಿ 14ನೆಯ ಶತಮಾನದಲ್ಲಿ ಜಾಟೋವಿನ ಅನುಪಮ ಕೃತಿಗಳು, ಫ್ಲಾರೆನ್ಸ್ ಮತ್ತು ಸಿಯೆನ್ನಾಗಳಲ್ಲಿ ಅವನ ಮುಂದಿನ ಪೀಳಿಗೆಯವರಾದ ಸಿಮೋನಿ ಮಾರ್ಟಿನಿ, ಆಂಬ್ರೋಜಿಯೋ ಲೊರೆಂಜೆಟ್ಟಿ ಮುಂತಾದವರ ಮೇಲೆ ವ್ಯಾಪಕ ಪ್ರಭಾವ ಬೀರಿದವು. ಗಾತಿಕ್ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಹೊಸಪದ್ಧತಿಗಳು ರೂಪಗೊಂಡುದೂ ಆ ಕಾಲದಲ್ಲೇ. ಇಟಲಿಯ ಗಾತಿಕ್ ಶೈಲಿ ಸಮಗ್ರ ಯುರೋಪಿನ ಕಲಾಪರಂಪರೆಯ ಮೇಲೆ ಪ್ರಭಾವ ಬೀರುವಂತಾಗಲು ಸಿಮೋನಿ ಮಾರ್ಟಿನಿಯೇ ಕಾರಣಕರ್ತ.

ಆದರೆ ನಿಜವಾಗಿ ಇಟಲಿಯ ಕಲಾಸಂಪ್ರದಾಯಕ್ಕೆ ಹೊಸ ತಿರುವು ದೊರೆತದ್ದು ರೆನೇಸಾನ್ಸ್ ಯುಗದ ಎರಡನೆಯ ಘಟ್ಟದಲ್ಲಿ – 15ನೆಯ ಶತಮಾನದ ಮಾಸಾಚೋವಿನ (ಜನನ–1425) ಕೃತಿಗಳ ಮೂಲಕ. ಬ್ರೂನಲೆಸ್ಕಿಯ ವಾಸ್ತುಶಿಲ್ಪಾಕೃತಿಗಳು, ಡೊನಾಟೆಲ್ಲೋವಿನ ಶಿಲ್ಪಾಕೃತಿಗಳು ರೂಪಗೊಂಡದ್ದು ಈ ಕಾಲದಲ್ಲೇ ಎಂಬುದು ಸ್ವಾರಸ್ಯವಾದ ಸಂಗತಿ. (ನೋಡಿ– ಇಟಾಲಿಯನ್–ಕಲೆ) ಬ್ರೂನಲೆಸ್ಕಿಯ ಅನನ್ಯ ಗಣಿತ ಪಾಂಡಿತ್ಯವನ್ನು ಬಳಸಿಕೊಂಡು, ಶಾಸ್ತ್ರರೀತಿಯಲ್ಲಿ ಕಣ್ಣೆಲೆ ತಂತ್ರವನ್ನು (ಪರ್‌ಸ್ಪೆಕ್ಟಿವ್) ರೂಪಿಸಿದವ ಮಾಸಾಚೋ. ಇವನು ಕಂಡುಹಿಡಿದ ನೂತನ ವಿಧಾನ ರೆನೇಸಾನ್ಸ್ ಚಿತ್ರಕಲೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನುಂಟುಮಾಡುವಂತಾಯಿತು. ಆವರೆಗೆ ಕಲಾಕಾರರು ಕೇವಲ ಉದ್ದ ಅಗಲಗಳೆಂಬ 2ಆಯಾಮಗಳನ್ನು ಮಾತ್ರ ಸೂಚಿಸುವಂತೆ ಚಿತ್ರಗಳನ್ನು ಬರೆಯುತ್ತಿದ್ದರು. ಆದರೆ ವಾಸಾಚೋ ಘನಾಕೃತಿಯ ದೃಶ್ಯಗಳನ್ನು ರೂಪಿಸಿ ಚಿತ್ರಗಳಿಗೆ ಹೊಸ ಆಯಾಮವೊಂದನ್ನು ಸೇರಿಸಿದ. ಈ ಕಾರಣದಿಂದ, ನೋಡುವ ಕಣ್ಣಿಗೆ ಚಿತ್ರದ ಚೌಕಟ್ಟೇ ಹೊಸ ಲೋಕವನ್ನು ತೋರಿಸುವ ಕಿಟಕಿಯಾಯಿತು. ಆ ಕಿಟಕಿಯ ಮೂಲಕ, ವ್ಯಾಪಕವಾಗಿ ಹರಡಿದ, ಅಸೀಮ ಬೃಹತ್ ಲೋಕವೇ ಎದ್ದು ಹಂತ ಹಂತವಾಗಿ ಕಾಣಿಸುವಂತೆ ಭಾಸವಾಯಿತು. ಇದರಿಂದ ಚಿತ್ರಕಲೆಗೆ ಹೊಸದಾದ ತಂತ್ರವೊಂದು ಸಿಕ್ಕಂತಾಯಿತು. ಚಿತ್ರಕಾರರು ಪರ್‌ಸ್ಪೆಕ್ಟಿವ್ ತಂತ್ರವನ್ನು ಪರಿಣಾಮಕಾರವಾಗಿ ಸಾಧಿಸಲು ರೇಖಾಗಣಿತದ ಶಾಸ್ತ್ರೀಯ ಸಂಗತಿಗಳನ್ನು ಆಳವಾಗಿ ಅಧ್ಯಯನಮಾಡಿದರು. ಮನುಷ್ಯನ ಆಕಾರವನ್ನು ಸ್ಪಷ್ಟವಾಗಿ ಮೂಡಿಸಲು ಅವರು ಮಾನವ ಅಂಗರಚನಾಶಾಸ್ತ್ರವನ್ನು ಅಭ್ಯಾಸಮಾಡಬೇಕಾಯಿತು. ಮಾಸಾಚೋವಿನ ಚಿತ್ರಗಳಲ್ಲಿ ಕಂಡುಬರುವ ರೂಪರಚನೆಗೆ ಸಂಬಂಧಿಸಿದ ಅಂಶಗಳು ಫ್ಲಾರೆನ್ಸ್ ಮತ್ತಿತರ ಕಡೆಗಳಲ್ಲಿನ ಶಿಲ್ಪಕಲಾವಿದರ ಮೇಲೆ ಬಹಳಷ್ಟು ಪ್ರಭಾವ ಬೀರಿದವು. (ವಿ.ಎಸ್.; ಎಚ್.ಕೆ.ಆರ್.)

**ಮೈಕಲೇಂಜಲೋನ ದಿ ಲಾಸ್ಟ್ ಜಜ್‌ಮೆಂಟ್ ಎಂಬ ಬೃಹತ್ ಚಿತ್ರ. 1541 ವ್ಯಾಟಿಕನ್‌ನ ಸಿಸ್ಟೈನ್ ಚಾಪೆಲ್‌ನಲ್ಲಿದೆ. ಹೈ–ರೆನೇಸಾನ್ಸ್ ಯುಗದ ಮೂರನೆಯ ಘಟ್ಟದ ಕಲೆಯನ್ನಿದು ಪ್ರತಿನಿಧಿಸುತ್ತದೆ**

ಈ ಕಾಲದ ಸುಮಾರಿನಲ್ಲಿ ರಚಿತವಾದ ಚಿತ್ರಗಳು ಬಹುಮಟ್ಟಿಗೆ ಕ್ಲಾಸಿಕಲ್ ಶಿಲ್ಪಾಕೃತಿಗಳನ್ನೂ ಉಬ್ಬುಚಿತ್ರಗಳನ್ನೂ ಹೋಲುತ್ತವೆ. ಮಾಂಟೆನಾನ ಭಿತ್ತಿಚಿತ್ರಗಳು ರೋಮನ್ ಶಿಲ್ಪಾಕೃತಿಗಳನ್ನೊಳಗೊಂಡಿವೆ. ದಿ ಸ್ಟೋರಿ ಆಫ್ ಸೇಂಟ್ ಜೇಮ್ಸ್ ಎಂಬ ಚಿತ್ರವನ್ನು ಬಿಡಿಸುವಾಗ ಆತ ಅದರಲ್ಲಿನ ಮಾನವಾಕೃತಿಗಳಿಗೆ ಕ್ಲಾಸಿಕಲ್ ವೇಷಭೂಷಣಗಳನ್ನು ತೊಡಿಸಿ ರೋಮನ್ ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ಅವುಗಳನ್ನಿರಿಸುತ್ತಾನೆ. ಟ್ರಯಂಫ್ ಆಫ್ ಸೀಸರ್ ಎಂಬ ಇನ್ನೊಂದು ಚಿತ್ರದಲ್ಲೂ ರೋಮನ್ (ಕ್ಲಾಸಿಕಲ್) ಇತಿಹಾಸದ ವಾಸ್ತವಾಂಶಗಳನ್ನೂ ಅಚ್ಚುಕಟ್ಟಾಗಿ ಬಳಸಿಕೊಳ್ಳುತ್ತಾನೆ. ಇಂಥ ಚಿತ್ರಗಳು, ಕಳೆದುಹೋದ ಕ್ಲಾಸಿಕಲ್ ಯುಗದ ಜೀವನವನ್ನು ರೆನೇಸಾನ್ಸ್ ಮಾನವತಾವಾದಿಗಳ ಕಣ್ಣುಮುಂದೆ ಮತ್ತೆ ಪ್ರಕಾಶಗೊಳಿಸಿ ಪುರಾತನ ಕ್ಲಾಸಿಕಲ್ ಪ್ರಪಂಚದ ಮೌಲ್ಯಗಳತ್ತ ಅವರ ಗಮನ

ಸೆಳೆಯುತ್ತವೆ. ಹೀಗೆ ರೇನೇಸಾನ್ಸ್ ಯುಗದ ಎರಡನೆಯ ಘಟ್ಟದಲ್ಲಿ ಕಲಾವಿದರು ಹೆಚ್ಚು ಹೆಚ್ಚಾಗಿ ಕ್ಲಾಸಿಕಲ್ ವಾಸ್ತು–ಶೈಲಿಗಳನ್ನೇ ಅನುಸರಿಸಿದರೆಂಬುದು ಇದರಿಂದ ಖಚಿತವಾಗುತ್ತದೆ. ಉದಾಹರಣೆಗೆ, ಚಿತ್ರಕಾರ ಕ್ಯಾಸೊನಿ ಓವಿಡ್ ಕವಿಯ ಮೆಟಮಾರ್ಫಸಿಸ್ ಕಾವ್ಯದಿಂದ ವಸ್ತುವನ್ನೆತ್ತಿಕೊಂಡರೆ, ಬಾಟಿಚೆಲಿ ಗ್ರೀಕ್ ಪುರಾಣಕಥೆಗಳ ಆಧಾರದ ಮೇಲೆ ವೀನಸ್ ದೇವತೆಯ ಜನನ, ದಿ ಪ್ರೈಮವೇರ (ದಿ ಸ್ಪ್ರಿಂಗ್) ಮುಂತಾದ ಅನ್ಯಾದೃಶ ಮಹಾಕೃತಿಗಳನ್ನು ಬರೆದ.

ರೇನೇಸಾನ್ಸ್ ಚಿತ್ರಕಾರರ ಮತ್ತೊಂದು ಸಾಧನೆಯೆಂದರೆ ಅವರು ಪ್ರಕೃತಿಯ ಕಾವ್ಯತೆಯನ್ನು ಬಳಸಿಕೊಂಡ ರೀತಿ. ಇದರಲ್ಲಿ ವೆನಿಸ್ ಪಟ್ಟಣದ ಕಲಾವಿದರದ್ದೇ ಮೇಲುಗೈ. ಜೋವನಿ ಬೆಲ್ಲಿನಿಯ ಚಿತ್ರಗಳಲ್ಲಿ ಭೂದೃಶ್ಯದ ಹಿನ್ನೆಲೆಗಳು ಆಯಾ ಸನ್ನಿವೇಶದ ಭಾವಸ್ಥಿತಿಗಳನ್ನು (ಮೂಡ್) ಸೊಗಸಾಗಿ ಸೂಚಿಸುತ್ತವೆ. ಅವನು ಆಂಟೊನೆಲ್ಲಾ ಡ ಮೆಸ್ಸಿನ ಎಂಬ ಪ್ರಸಿದ್ಧ ಕಲಾವಿದನಿಂದ ಪ್ರಭಾವಿತನಾಗಿ ತೈಲವರ್ಣವನ್ನೂ ಟೆಂಪರಾ ಬಣ್ಣವನ್ನೂ ಬೆರೆಸಿ ತನ್ನ ಚಿತ್ರಗಳಲ್ಲಿ ನೆರಳು ಬೆಳಕಿನ ಅದ್ಭುತವಿನ್ಯಾಸವನ್ನು ಸಾಧಿಸಿದ. ಅವನ ಚಿತ್ರಗಳು ವೆನಿಸ್ ನಗರ ಕಲಾಪ್ರಪಂಚದ ಕಣ್ಣು ಎನಿಸುವಂತೆ ಮಾಡಿದವು.

ವಸ್ಸಾರಿ ಹೇಳುವ ಹೈ (ಉಜ್ವಲ) ರೇನೇಸಾನ್ಸ್ ಯುಗದ ಮೂರನೆಯ ಘಟ್ಟದಲ್ಲಿ ನಾವು ಲಿಯೋನಾರ್ಡೋ ಡ ವಿಂಚಿ, ಮೈಕಲ್ ಏಂಜಲೋ, ರಾಫೆಲ್, ಟಿಷನ್ ಮುಂತಾದ ಲೋಕವಿಖ್ಯಾತ ಚಿತ್ರಕಾರರನ್ನು ಕಾಣುತ್ತೇವೆ. ಇವರ ಕೃತಿಗಳಲ್ಲಿ ರೇನೇಸಾನ್ಸ್ ಕಲೆಯ ನಿಖರತೆ, ಅಚ್ಚುಕಟ್ಟು, ಸಾವಯವ ಸಮಗ್ರೀಕರಣ ಮೊದಲಾದ ಶ್ರೇಷ್ಠ ಗುಣ ಲಕ್ಷಣಗಳನ್ನು ನಾವು ಗ್ರಹಿಸಬಹುದು. ಜಾಟೋವಿನಿಂದ ಹಿಡಿದು ಆವರೆಗಿನ ಎಲ್ಲ ಕಲಾವಿದರೂ ಕಲೆಯ ಯಾವ ಅಂಶಗಳನ್ನು ಪರಿಪೂರ್ಣವಾಗಿ ಸಾಧಿಸಬೇಕೆಂದು ಕನಸು ಕಾಣುತ್ತಿದ್ದರೋ ಆ ಎಲ್ಲವನ್ನೂ ಒಂದು ಹದವಾದ, ಪರಿಪಕ್ವವಾದ, ರೂಪದಲ್ಲಿ ನಾವು ಈ ಮಹಾಕಲಾವಿದರ ಕೃತಿಗಳಲ್ಲಿ ಕಾಣಬಹುದು. ಆ ಹಿಂದಿನ ಕಲಾವಿದರುಗಳ ಕೃತಿಗಳಲ್ಲಿ ಒಂದು ತೆರನಾದ ಒರಟಾದ, ಶಿಲ್ಪಸದೃಶವಾದ, ರಚನೆಯಿತ್ತು. ಆದರೆ ಹೈ ರೇನೇಸಾನ್ಸ್ ಕೃತಿಗಳಲ್ಲಿ ಅಸಾಧಾರಣ ಸಾಮರಸ್ಯ ತುಂಬಿಕೊಂಡಿದೆ. ಅದರಲ್ಲೂ ಮುಖ್ಯವಾಗಿ ಲಿಯೋನಾರ್ಡೋವಿನ ಚಿತ್ರಗಳಲ್ಲಿ ಅನುಪಮ ಸ್ನಿಗ್ಧ ಮಾದರಿ ರಚನೆ ಇದೆ. ರಾಫೆಲ್‌ನ ಕೃತಿಗಳಲ್ಲಿ ಬೆರಗುಗೊಳಿಸುವಂಥ ಸಮಪ್ರಮಾಣವೂ ವೈವಿಧ್ಯಮಯವೂ ಆದ ಉನ್ನತಾಕೃತಿಗಳ ಅದ್ಭುತ ವಿನ್ಯಾಸ ಇದೆ. ಚಿತ್ರಕಾರ ಯಾವುದೇ ಉತ್ಕೃಷ್ಟ ಕೃತಿಯ ಅಂಧಾನುಕರಣೆಯಲ್ಲಿ ತೊಡಗದೆ ಆತ ತಾನೇ ತಾನಾಗಿ ಕಲ್ಪನೆಯನ್ನು ಹರಿಯಬಿಡುತ್ತಾನೆ. ಮೈಕಲ್ ಏಂಜಲೋ ಸಿಸ್ಟೈನ್ ಮಂದಿರದ ಮೇಲುಚಾವಣಿಯೊಳಗೆ ಬಿಡಿಸಿರುವ ಮಹೋನ್ನತಾಕೃತಿಯ ಚಿತ್ರಗಳು ಇಂಥ ಮೇರುಕಲ್ಪನೆಯಿಂದ ಸ್ಫೂರ್ತಿ ಪಡೆದಂಥವು. ಜೌರ್ಜೋನಿಯ ದಿವ್ಯ ಗ್ರಾಮೀಣ ಚಿತ್ರಣಗಳೂ ಈ ಸಾಲಿನಲ್ಲಿ ನಿಲ್ಲಬಲ್ಲ ಕೃತಿಗಳೇ ಆಗಿವೆ.

ಮ್ಯಾನರಿಸಮ್ : ರೇನೇಸಾನ್ಸ್ ವಿಮರ್ಶಕರು, ಆ ಯುಗದ ಚಿತ್ರಕಲಾವಿದರು ಲೇಖನ ಹಾಗೂ ವರ್ಣವಿನ್ಯಾಸದಲ್ಲಿ ಸಾಧಿಸಿದ ಉನ್ನತಮಟ್ಟವನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ.

**ಮ್ಯಾನರಿಸಮ್ ಶೈಲಿಯ ಮೂಲವನ್ನು 16ನೆಯ ಶತಮಾನದ ಆದಿಭಾಗದ ಇಟಲಿಯಲ್ಲಿ ಕಾಣಬಹುದು. ರೋಮಿನ ವ್ಯಾಟಿಕನ್‌ನಲ್ಲಿರುವ ಈ ಚಿತ್ರ ಕಲಾವಿದ ವಸಾರಿಯದು. ಮಸೀನ ಬಂದರಿನಿಂದ ಸಾಗುತ್ತಿರುವ ಒಂದು ಕ್ರೈಸ್ತ ನೌಕೆಯ ಈ ಚಿತ್ರಣದಲ್ಲಿ ರೂಪಕ ವಿಧಾನದಿಂದ ಪಾತ್ರಗಳನ್ನು ರಚಿಸಲಾಗಿದೆ**

ಟಸ್ಕನಿ ಪಂಥದವರ ರಚನಾಸಾಮರ್ಥ್ಯದ ಹಾಗೂ ರೇಖನ ಶೈಲಿಯ ಪರಾಕಾಷ್ಠೆಯನ್ನು ಮೈಕಲ್ ಏಂಜಲೋ ಮತ್ತು ಅವನ ಪರಂಪರೆಯ ಬ್ರಾಂಸಿನೋ, ವಸ್ಸಾರಿ ಮೊದಲಾದವರಲ್ಲಿ ಕಾಣಬಹುದು. ಇವರಲ್ಲಿ ಮುಖ್ಯನಾದ ವಸ್ಸಾರಿ ಪ್ರಪ್ರಥಮವಾಗಿ ಒಂದು ಚಿತ್ರಕಲೆಯ ಅಕಾಡಮಿಯನ್ನೇ ಸ್ಥಾಪಿಸಿದ. ಈ ಅಕಾಡಮಿಗೆ ಸೇರಿದ ಕಲಾವಿದರು ತಮ್ಮದೇ ಆದ ಹೊಸಪಂಥವನ್ನು ಸ್ಥಾಪಿಸಿಕೊಂಡರು. ಅವರು ನಗ್ನ ಆಕೃತಿಗಳನ್ನು ರೂಪಿಸುವಲ್ಲಿ ಅತಿಯಾದ ಸಂಕೀರ್ಣತೆಯನ್ನೂ ಸಮತೋಲನವನ್ನು ಸೂಚಿಸುತ್ತಿದ್ದುದರಿಂದ ಅದರ ಪರಿಪೂರ್ಣತೆಯೇ ಒಂದು ಸ್ಥಾಯೀ ಅವಸ್ಥೆಯನ್ನು ಮುಟ್ಟುವಂತಾಯಿತು. ಇದರಿಂದ ಮ್ಯಾನರಿಸಮ್ ಎಂಬ ಇನ್ನೊಂದು ಹೊಸ ಕಲಾಶೈಲಿಯ ಉಗಮವಾಯಿತು. ಈ ಸಂಪ್ರದಾಯದ ಚಿತ್ರಗಳಲ್ಲಿ ರೇನೇಸಾನ್ಸ್ ಯುಗದ ಮಾರ್ದವತೆ ಸಾಮರಸ್ಯ ಮಸುಕಾದವು. ವರ್ಣವಿನ್ಯಾಸದಲ್ಲಿ ಟಿಷನ್ನರಂಥ ವೆನಿಸ್ಸಿನ ಕಲಾವಿದರು ಪರಿಪೂರ್ಣತೆಯ ಶಿಖರವನ್ನೇರಿದರು. ಅವನ ಸಮಕಾಲೀನರಾದ, ಉತ್ತರ ಇಟಲಿಯ ಕರೆಜೋ ಮುಂತಾದವರು ಉಜ್ವಲವಾದ ವರ್ಣವಿನ್ಯಾಸದಲ್ಲಿ ನೆಳಲು ಬೆಳಕಿನ ಹೊಂದಾಣಿಕೆಯಲ್ಲಿ ಶ್ರೇಷ್ಠರೆನಿಸಿಕೊಂಡರು. ವರೋನಾ, ಟಸ್ಕನಿ ಮುಂತಾದ ಉತ್ತರ ಇಟಲಿ ಪ್ರದೇಶಗಳಿಂದ ಬಂದ ತರುಣ ಪೀಳಿಗೆಯ ಪಾರ್ಮಜಾನ್ ಟೆಂಟರೆಟೌ ಮುಂತಾದವರನ್ನು ರೇನೇಸಾನ್ಸ್ ಪಂಥಕ್ಕೆ ಸೇರಿದವರು ಎನ್ನುವುದಕ್ಕಿಂತ ಹೆಚ್ಚಾಗಿ ಮ್ಯಾನರಿಸಮ್ ಪಂಥದ ಚಿತ್ರಕಾರರು ಎನ್ನುವುದು ವಾಡಿಕೆಯಾಗಿದೆ.

ಇಟಲಿಯಿಂದಾಚೆಯ ಪ್ರದೇಶಗಳಲ್ಲಿ ರೇನೇಸಾನ್ಸ್ ಯುಗದ ಪ್ರಭಾವವನ್ನು ಅಷ್ಟಾಗಿ ಗುರುತಿಸುವುದು ಸಾಧ್ಯವಿಲ್ಲ. ಜರ್ಮನಿಯಲ್ಲಿ ಚಿತ್ರಕಲೆ ತನ್ನದೇ ಆದ ಸ್ವತಂತ್ರ ರೀತಿಯಲ್ಲಿ ಬೆಳೆಯಿತು. ಆದರೂ ಡ್ಯೂರರ್‌ನಂಥ ಕೆಲವರು ರೇನೇಸಾನ್ಸ್ ಇಟಲಿಯಿಂದಲೇ ಸ್ಫೂರ್ತಿ ಪಡೆಯಲು ಬಯಸಿದರು. ಇಟಲಿಯ ಚಿತ್ರಕಾರರ ಪರ್‌ಸ್ಪೆಕ್ಟಿವ್ ತಂತ್ರ ರೇಖಾವಿಧಾನ ಪರಿಮಾಣಸಾಧನೆ ಮೊದಲಾದ ಅಂಶಗಳ ಅಧ್ಯಯನಮಾಡಿ ಕರಗತಮಾಡಿಕೊಳ್ಳಲೆಂದೇ ಡ್ಯೂರರ್ ಎರಡು ಬಾರಿ ಇಟಲಿಗೆ ಭೇಟಿಯಿತ್ತ. ಇಟಲಿಯ ಕ್ಲಾಸಿಕಲ್ (ಅಭಿಜಾತ) ಸೌಂದರ್ಯದ ರಹಸ್ಯವನ್ನು ಅರ್ಥಮಾಡಿಕೊಳ್ಳುವ ಸಲುವಾಗಿಯೇ ಆತ ಹಲವು ವಿಮರ್ಶಾತ್ಮಕ ಲೇಖನಗಳನ್ನೂ ಚಿತ್ರಗಳನ್ನೂ ಬರೆದ. ಇಷ್ಟಾದರೂ ಅವನು ರೇನೇಸಾನ್ಸ್ ಶೈಲಿಯನ್ನು ಅನುಕರಿಸಿ ಬರೆದ ಚಿತ್ರಗಳು ತೀರ ವಿರಳ. ಅವುಗಳಲ್ಲಿ ಮ್ಯೂನಿಕ್ ಸಂಗ್ರಹಾಲಯದಲ್ಲಿರುವ ಫೋರ್ ಅಪಾಸಲ್ಸ್, ಆತ್ಮಚಿತ್ರಣ (ಸೆಲ್ಫ್ ಪೋರ್ಟ್‌ರೇಟ್), ವಿಯನ್ನಾದಲ್ಲಿರುವ ದಿ ಅಡೋರೇಷನ್ ಆಫ್ ದಿ ಟ್ರಿನಿಟಿ–ಇವು ಜಗತ್ಪ್ರಸಿದ್ಧ ಕೃತಿಗಳು. ಇವುಗಳಲ್ಲಿ ಬೆಲ್ಲಿನಿಯ ಪ್ರಭಾವ ನಿಚ್ಚಳವಾಗಿ ಪಡಿಮೂಡಿದೆ. ಸ್ಯಾಕ್ಸನಿ ಪ್ರದೇಶದ ಕ್ರಾನಾಖ್ ಎಂಬಾತ ರಚಿಸಿದ ಪೌರಾಣಿಕ ನಗ್ನಚಿತ್ರಗಳಲ್ಲಿಯೂ ಅಲ್ಪಸ್ವಲ್ಪ ರೇನೇಸಾನ್ಸ್ ಪ್ರಭಾವವನ್ನು ಗುರುತಿಸಬಹುದು. ಆದರೆ 15ನೆಯ ಶತಮಾನದ ಜರ್ಮನಿಯಲ್ಲಿ ಮುದ್ರಣೋದ್ಯಮಕ್ಕೆ ಹೆಸರಾಗಿದ್ದ ಬಾಸೆಲ್ ನಗರದಲ್ಲಿ ಜನಿಸಿದ (ಕಿರಿಯ) ಹಾಲ್‌ಬೈನ್ ಸಂಪೂರ್ಣವಾಗಿ ರೇನೇಸಾನ್ಸ್ ಪಂಥಕ್ಕೇ ಮಾರುಹೋದ. ಅವನು ಪ್ರಸಿದ್ಧ ಡಚ್ ರೇನೇಸಾನ್ಸ್ ಪಂಡಿತ ಇರಾಸ್ಮಸ್ ಮತ್ತು ಇಂಗ್ಲೆಂಡಿನ ತಾಮಸ್ ಮೋರ್ ಮುಂತಾದವರ ಗೆಳೆಯನಾಗಿದ್ದು ತನ್ನ ಜೀವಿತಕಾಲವನ್ನೆಲ್ಲ ಇಂಗ್ಲೆಂಡಿನಲ್ಲೇ ಕಳೆದ. ರೇನೇಸಾನ್ಸ್ ಕಲೆಯ ಅಭಿರುಚಿಯನ್ನು ಇಂಗ್ಲೆಂಡಿನಲ್ಲಿ ಪ್ರಸಾರಮಾಡಿದವ ಅವನೇ. ಆತ ರಚಿಸಿದ ಚಿತ್ರಗಳಲ್ಲಿ ಮತ್ತು ದೃಶ್ಯಾವಳಿಗಳಿಗೆಂದು, ಉಡುಗೆ ತೊಡುಗೆ ಮತ್ತು ಆಭರಣಗಳ ತಯಾರಿಕೆಗೆಂದು ರೂಪಿಸಿದ ರೇಖಾಚಿತ್ರಗಳಲ್ಲಿ ಮಾದರಿಗಳಲ್ಲಿ, ರೇನೇಸಾನ್ಸ್ ಕಲೆಯ ಛಾಯೆಯನ್ನು ಕಾಣಬಹುದು.

ಇಷ್ಟಲ್ಲದೆ ನೆದರ್ಲೆಂಡ್ಸ್ ಪ್ರದೇಶಕ್ಕೆ ಸೇರಿದ ಲೂಕಾಸ್‌ವಾನ್ ಲೈಡನ್ ಮುಂತಾದವರ ಕೃತಿಗಳಲ್ಲಿ ಲಿಯೋನಾರ್ಡೋವಿನ ಪ್ರಭಾವ ಅಚ್ಚಳಿಯದ ಮುದ್ರೆ ಒತ್ತಿದೆ. ಹೆಚ್ಚಾಗಿ ಮ್ಯಾನರಿಸಮ್ ಪಂಥವನ್ನೇ ಅನುಸರಿಸಿದ ಫ್ರೆಂಚ್ ಮತ್ತು ನೆದರ್ಲೆಂಡ್ಸ್ ಚಿತ್ರಕಾರರು ಅಷ್ಟಾಗಿ ರೇನೇಸಾನ್ಸ್ ಪ್ರಭಾವಕ್ಕೆ ಸಿಕ್ಕಲಿಲ್ಲ.

**2 ಬರೋಕ್ :** ಬರೋಕ್ ಎಂಬ ಶಬ್ದವನ್ನು ಕಲೆ ಹಾಗೂ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಮೊಟ್ಟಮೊದಲು ಉಪಯೋಗಿಸಿದವರು 19ನೆಯ ಶತಮಾನದ ಜರ್ಮನಿಯ ಬರ್ಕ್‌ಹಾರ್ಡ್ಟ್ ಮತ್ತು ವುಲ್ಫ್‌ಲಿನ್ ಎಂಬ ಕಲಾವಿಮರ್ಶಕರು. ಇಂಗ್ಲಿಷಿನಲ್ಲಿ ಈ ಶಬ್ದವನ್ನು ಮೂರು ತೆರನಾದ ಬೇರೆ ಬೇರೆ ಅರ್ಥಗಳಲ್ಲಿ ಬಳಸಲಾಗಿದೆ. ಮೊದಲನೆಯದಾಗಿ 16ನೆಯ ಶತಮಾನದ ಉತ್ತರ ಭಾಗದಿಂದ ಹಿಡಿದು 18ನೆಯ ಶತಮಾನದ ಪೂರ್ವ ಭಾಗದವರೆಗಿನ ಅವಧಿಯಲ್ಲಿ ಅಂದರೆ ಮ್ಯಾನರಿಸಮ್ ಪಂಥ ಮತ್ತು ರೊಕೊಕೊ ಯುಗದ ನಡುವೆ ಬರುವ ಕಾಲದಲ್ಲಿ ಪ್ರಚಲಿತವಾಗಿದ್ದ ಕಲಾಸಂಪ್ರದಾಯವನ್ನು ಬರೋಕ್ ಶೈಲಿ ಎನ್ನುತ್ತಾರೆ. ಎರಡನೆಯದಾಗಿ 17ನೆಯ ಶತಮಾನದಲ್ಲಿ ಬಳಸುತ್ತಿದ್ದ ವಿಶಿಷ್ಟ ಶೈಲಿಯಿಂದಾಗಿ ಆ ಶತಮಾನವನ್ನೇ ಬರೋಕ್ ಯುಗವೆನ್ನುವುದುಂಟು. ಮೂರನೆಯದಾಗಿ ಬರೋಕ್ ಎಂಬ ವಿಶೇಷಣವನ್ನು ಅಸಮರೂಪವುಳ್ಳ, ವಕ್ರ, ವಿಕೃತ, ವಿಚಿತ್ರ ಕಲ್ಪನೆಯ, ಅತ್ಯಲಂಕಾರದ, ಎಂಬ ಮಾತುಗಳಿಗೆ ಸಂವಾದಿಯಾಗಿಯೂ ಬಳಸಿದ್ದುಂಟು. ಈ ಕೊನೆಯ ಅರ್ಥವಿವರಣೆ ಈಗ ಸಮಂಜಸವಾಗಿಲ್ಲವೆಂದು ವಿಮರ್ಶಕರು ಒಪ್ಪಿಕೊಂಡಿದ್ದಾರೆ.

ಕಲೆಯ ಸಂದರ್ಭದಲ್ಲಿ ಬರೋಕ್ ಎನ್ನುವ ಮಾತನ್ನು ವೈವಿಧ್ಯಮಯವಾದದ್ದು, ವಿವಿಧ ಅಂಶಗಳನ್ನು ಒಳಗೊಂಡು ಮೇಳೈಸಿ ಸಮರಸವನ್ನು ಪ್ರಚೋದಿಸುವಂಥದ್ದು ಎಂಬ ಅರ್ಥದಲ್ಲಿ ಬಳಸಬೇಕೆಂದು ಕಲಾವಿಮರ್ಶಕರು ಹೇಳುತ್ತಾರೆ. ಬರೋಕ್ ಕಲೆಯಲ್ಲಿ ಒತ್ತು ಬೀಳುವುದು ಅದರ ಸಮರಸದ ಅಂಶದ ಮೇಲೆ. ವಿವಿಧ ಅಂಗಗಳು ಸಮ್ಮಿಳನಗೊಂಡು

ಸಮಗ್ರ ಪರಿಣಾಮಕ್ಕೆ ಪೋಷಕವಾಗುವುದು ಬರೋಕ್ ಕಲೆಯ ಮುಖ್ಯ ಲಕ್ಷಣ. ಹೈ ರೆನೇಸಾನ್ಸ್ ಕಲೆಯಲ್ಲೂ ಒಂದು ರಚನೆಯ ವಿವಿಧ ಅಂಗಾಂಗಗಳು ಪರಿಪೂರ್ಣವಾಗಿದ್ದು ಅವು ಸಮತೋಲನಗೊಂಡು ಒಟ್ಟು ಪರಿಣಾಮ ಸಾಧಿಸುವಂತಿರುತ್ತವೆ ಯಾದ್ದರಿಂದ ಅದು ಬರೋಕ್ ಶೈಲಿಗಿಂತ ತೀರಾ ಭಿನ್ನವಾದುದೇನಲ್ಲ. ಬರೋಕ್ ಕಲೆ ಸಾಧಿಸುವ ಪರಿಣಾಮ ನೋಡುವವನ ಭಾವನೆಗಳನ್ನೂ ಹೊಂದಿಕೊಂಡಿರುತ್ತದೆ. ನೋಡುವವನಿಗೆ ಕಲೆಯ ವಸ್ತು ವಾಸ್ತವತೆಯ ಭ್ರಮೆಯನ್ನು ಕಲ್ಪಿಸುವಂತಿರಬೇಕು. ನಿಜದ ತೋರ್ಕೆಯೇ ಅದರ ಜೀವಾಳ, ಕಲೆಯಲ್ಲಿ ಪ್ರತಿರೂಪಿತವಾಗಿರುವ ವಸ್ತು. ನಿಜವಾದ ವಸ್ತುವನ್ನು ಹೋಲುವಂಥ ಆಕಾರ, ಬಣ್ಣ, ರಚನೆ ವಿನ್ಯಾಸಗಳನ್ನೊಳ ಗೊಂಡಿರಬೇಕು. ಅದು ಒಂದು ಕಾಲದ ಒಂದು ಸನ್ನಿವೇಶದ ವಿಸ್ತಾರದ ಭವ್ಯಕಲ್ಪನೆಯನ್ನು ಮೂಡಿಸಿ, ಅದರಲ್ಲಿನ ಪಾತ್ರಗಳ ಹಾಗೂ ನೋಡುವವರ ನಡುವೆ ಭಾವುಕ ಸಂಬಂಧ ವನ್ನುಂಟುಮಾಡುವಂತಿರುತ್ತದೆ. ಸನ್ನಿವೇಶದಲ್ಲಿ ಸೂಚಿತವಾಗಿರುವ ತುರ್ತುಗತಿಯನ್ನು ವಸ್ತುವಿನ ಸ್ನಿಗ್ಧತೆಯನ್ನು ಬರೋಕ್ ಚಿತ್ರಕಾರ ನೆಳಲು ಬೆಳಕಿನ ವಿನ್ಯಾಸದಿಂದಲೇ ಸಾಧಿಸುತ್ತಾನೆ. ದೃಢವಾದ ಕರ್ಣರೇಖೆ ವಕ್ರರೇಖೆಗಳಿಂದ ತನಗೆ ಬೇಕಾದ ವೈದೃಶ್ಯದ ಪರಿಣಾಮವನ್ನು ಸೂಚಿಸುತ್ತಾನೆ.

**1732–33ರಲ್ಲಿ ನಿರ್ಮಿತವಾದ ಒಂದು ಚರ್ಚಿನ ಒಳನೋಟ. ಜರ್ಮನ್ ಬರೋಕ್ ಶೈಲಿಗೆ ಇದು ಒಳ್ಳೆಯ ನಿದರ್ಶನ**

ಬರೋಕ್ ಶೈಲಿ 16ನೆಯ ಶತಮಾನದ ರೋಮಿನಲ್ಲಿ ಹುಟ್ಟಿತೆನ್ನುವುದು ವಿಮರ್ಶಕರಲ್ಲಿ ವಾಡಿಕೆ. 1580 ರ ಸುಮಾರಿಗೆ ಮ್ಯಾನರಿಸಮ್ ವಿಧಾನ ಜಡವಾದಾಗ ಚಿತ್ರಕಾರರಲ್ಲಿ ಹೊಸತನದ ಬಯಕೆ ಮೂಡಿತು. ಉತ್ತರ ಯೂರೋಪಿನಲ್ಲಿ ಮ್ಯಾನರಿಸಮ್ ಹಾಗೂ ಬರೋಕ್ ವಿಧಾನಗಳು ಒಂದು ಅವಿಚ್ಛಿನ್ನ ಪರಂಪರೆಯ ಪ್ರವಾಹದಲ್ಲಿ ಸೇರಿಕೊಂಡವು. ಇದರಿಂದ 17ನೆಯ ಶತಮಾನದ ಪ್ರಾರಂಭದಲ್ಲಿ ರೂಪುಗೊಂಡ ನ್ಯಾಚುರಲಿಸ್ಟ್ ಪಂಥವೆನ್ನುವ ಸಂಪ್ರದಾಯದಲ್ಲೇ ಮೊದಲನೆಯದಾಗಿ ಎರಡು ವಿಭಿನ್ನ ಪ್ರವೃತ್ತಿಗಳು ಕಾಣಿಸಿಕೊಂಡವು.

(ಎ) ಅದರಲ್ಲಿ ಕರೆವಾಜೋ (ಸು. 1591–2) ಒಂದು ಪ್ರವೃತ್ತಿಯನ್ನು ಪ್ರತಿನಿಧಿಸುತ್ತಾನೆ. ಅವನು ಹೇಳುವ ಪ್ರಕಾರ ಪ್ರಕೃತಿಯಲ್ಲಿ ನಾವು ಕಾಣುವ ವಾಸ್ತವ ಸಂಗತಿಗಳು ಕಲೆಗೆ ಆಧಾರವಾಗಬೇಕೇ ಹೊರತು ನಾವು ಕಲ್ಪಿಸಿಕೊಳ್ಳುವ ಆದರ್ಶದ ಭಾವನೆಗಳಲ್ಲ. ವಾಸ್ತವ ಜೀವನದ ನಾನಾ ಅಂಶಗಳನ್ನು ನೇರವಾಗಿ ಯಥಾರ್ಥವಾಗಿ, ನಾಟಕೀಯವಾಗಿ, ಪಡಿ ಮೂಡಿಸಲು ಕರೆವಾಜೋ ಬೆಳಕು ನೆರಳುಗಳ ವಿನ್ಯಾಸವನ್ನು ಬಳಸುತ್ತಾನೆ.

(ಬಿ) ಎರಡನೆಯದಾಗಿ ಕೆಲವು ಚಿತ್ರಕಾರರು ಹೈ–ರೆನೇಸಾನ್ಸ್ ಯುಗದತ್ತ ಕಣ್ಣು ಹೊರಳಿಸಿ ಕ್ಲಾಸಿಕ್ ವಸ್ತುಗಳನ್ನು ಆರಿಸಿಕೊಂಡರು. ರಾಫೆಲ್, ಮೈಕಲ್ ಏಂಜಲೋ, ಮುಂತಾದವರ ಕೃತಿಗಳಲ್ಲಿ, ಹಾಗೂ ರೋಮ್‌ನ ಪುರಾಣೇತಿಹಾಸ ಕಾವ್ಯಗಳಿಂದ ಸ್ಫೂರ್ತಿ ಪಡೆಯಲು ಉದ್ದೇಶಿಸಿದರು. ಹೀಗೆ ಕ್ಲಾಸಿಕಲ್ ರೋಮಿನ ಅಭಿಜಾತ ಪರಂಪರೆಯಿಂದ ಸ್ಫೂರ್ತಿಯನ್ನು ಪಡೆದವರಲ್ಲಿ ಅನಿಬಾಲೆ ಕರಾಚಿ ಮತ್ತು ಅವನ ಶಿಷ್ಯ ಡೊಮೆನಿಚಿನೋ ಪ್ರಮುಖರು.

**ಫ್ಲಾರೆನ್ಸಿನ ಮೆಡಿಚಿ–ರಿಕಾರ್ಡಿ ಭವ್ಯಭವನದಲ್ಲಿನ ಬರೋಕ್ ಚಿತ್ರಗಳ ಒಂದು ಪಡಸಾಲೆ. ಚಾವಣಿಯಲ್ಲಿನ ಚಿತ್ರಣ ಇಲ್ಲಿ ಗಮನಾರ್ಹ**

ಒಂದು ಸ್ವಾರಸ್ಯದ ಸಂಗತಿಯೆಂದರೆ ಬರೋಕ್ ಕಲೆ ಮೇಲೆ ಹೇಳಿದ ಎರಡು ಪ್ರವೃತ್ತಿಗಳಿಂದ ಭಿನ್ನವಾದ ಇನ್ನೊಂದು ಜಾಡನ್ನು ಹಿಡಿದು ಪ್ರಮುಖವಾದ ಬೇರೆ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡಿತು. ಈ ಸಂಪ್ರದಾಯದ ರೀತಿಯನ್ನು ವೆನಿಸ್ ಪಂಥದ ಟಿಷನ್ನನ ಚಿತ್ರಗಳಲ್ಲಿ ಕಾಣಬಹುದು.

ಒಟ್ಟಿನಲ್ಲಿ ಬರೋಕ್ ಕಲೆ ವೆನಿಸ್ ಪಂಥದಿಂದ, ಕರೆವಾಜೋವಿನ ಕಲೆಯಿಂದ ವರ್ಣ ಹಾಗೂ ಬೆಳಕಿನ ವಿನ್ಯಾಸವನ್ನೂ ಕಣ್ಣುಕೋರೈಸುವಂಥ ಉಜ್ವಲ ಆಡಂಬರಯುತ ಶೈಲಿಯನ್ನೂ ರೂಪಿಸಿಕೊಂಡಿತು. ಹೀಗೆ ರೂಪುಗೊಂಡ ಬರೋಕ್ ಶೈಲಿಯ ಸಮಗ್ರ ಲಕ್ಷಣಗಳನ್ನು ನಾವು (1608ರಲ್ಲಿ ರೋಮಿನಿಂದ ಆಂಟ್‌ವರ್ಪ್‌ಗೆ ಹಿಂದಿರುಗಿದ) ರೂಬನ್ಸ್‌ನ ಚಿತ್ರಗಳಲ್ಲಿ, 1620ರ ಸುಮಾರಿನಲ್ಲಿ ರೋಮ್‌ನಲ್ಲಿದ್ದ ಇಟಲಿಯ ಚಿತ್ರಕಾರರ ಕೃತಿಗಳಲ್ಲಿ, ಸ್ಪಷ್ಟವಾಗಿ ಗುರುತಿಸಬಹುದು.

ಇಟಲಿಯ ಬರೋಕ್ ಕಲೆಯ ಇತಿಹಾಸವನ್ನು ಸ್ಥೂಲವಾಗಿ ಮೂರು ಘಟ್ಟಗಳಾಗಿ ವಿಂಗಡಿಸಬಹುದು. 1565–1625ರ ನಡುವಣ ಪ್ರಾರಂಭಯುಗ ಅಥವಾ ಸಂಕ್ರಮಣಯುಗ, 1625–1675ರ ಸುಮಾರಿನ ಹೈ (ಉಜ್ವಲ)ಬರೋಕ್‌ಯುಗ, 1675–1715 ಅವಧಿಯ ಅಂತಿಮ ಬರೋಕ್‌ಯುಗ.

ಸಂಕ್ರಮಣ ಯುಗದ ಬರೋಕ್ ಲಕ್ಷಣಗಳನ್ನು ನಾವು ಲಡೊವಿಕೊ ಕರಾಷಿಯನ ದಿ ಕನ್‌ವರ್ಷನ್ ಆಫ್ ಸೇಂಟ್ ಪಾಲ್ ಚಿತ್ರದಲ್ಲಿ, ಫಾರ್ನಿಸ್ ಅರಮನೆಯಲ್ಲಿ, ಅನಿಬಾಲೆ ಕರಾಷಿ ಮಾಡಿದ ವರ್ಣಾಲಂಕಾರಗಳಲ್ಲಿ, ರೂಬನ್ಸನ ಗ್ರಿಗರಿ ಅಂಡ್ ಡಾಮಿಟೆಲ್ಲಾ ಎಂಬ

ಚಿತ್ರದಲ್ಲಿ ಡೊಮಿನಿಚಿನೋವಿನ ಲಾಸ್ಟ್ ಕಮ್ಯೂನಿಯನ್ ಆಫ್ ಸೇಂಟ್ ಜೆರೋಮ್ ಚಿತ್ರದಲ್ಲಿ ಕಾಣಬಹುದು. ಇಲ್ಲಿ ಕಾಣಿಸುವ ವರ್ಣವೈಭವ, ಮಾನವದುರಂತದ ಮಾರ್ದವ ಕಲ್ಪನೆ, ಬೆಳಕಿನ ವಿನ್ಯಾಸ ಇವು ಚೇತೋಹಾರಿಯಾಗಿವೆ.

ಉಜ್ಜ್ವಲ ಬರೋಕ್ ಶೈಲಿ ಸೃಷ್ಟಿಯಾದದ್ದು ರೋಮಿನಲ್ಲಿ. ಅದನ್ನು ನಾವು ಕ್ಯಾಸಿನೋ ಲೂಡೋವಿಚಿ ಮಂದಿರದ ಮೇಲುಚಾವಣಿಯಲ್ಲಿ ಚಿತ್ರಕಾರ ಗರ್‌ಸಿನೋ ಮಾಡಿರುವ ಚಿತ್ರಾಲಂಕಾರದಲ್ಲಿ, ಸೇಂಟ್ ಆ್ಯಂಡ್ರಿಯ ಮಂದಿರದ ಗುಮ್ಮಟದೊಳಗೆ ಲಾನ್ ಫ್ರಾಂಕೊ ಎಂಬಾತ ರಚಿಸಿರುವ ಚಿತ್ರಾವಳಿಗಳಲ್ಲಿ ಕಾಣಬಹುದು. ಈ ಸಂಪ್ರದಾಯದ ಅತ್ಯುತ್ಕೃಷ್ಟ ಪ್ರತಿಭಾವಂತನೆಂದರೆ ಕೌರ್ಟೊನಾ. ಅವನ ದಿ ರೇಪ್ ಆಫ್ ದಿ ಸ್ಯಾಬೈನ್ಸ್ ಎನ್ನುವ ಚಿತ್ರದಲ್ಲಿ (1629ರಲ್ಲಿ ರಚಿತವಾದ ಈ ಕೃತಿ ಕ್ಯಾಪಿಟೋಲಿನ್ ಮ್ಯೂಸಿಯಮ್‌ನಲ್ಲಿದೆ) ಸಂಯಮಪೂರ್ಣ ರೋಮನ್ ಕ್ಲಾಸಿಕಲ್ ಹಾಗೂ ಮನೋಹರವಾದ ವೆನೀಷಿಯನ್ ಸಂಪ್ರದಾಯಗಳ ನಡುವಣ ಸಂಘರ್ಷವನ್ನು ಕಾಣಬಹುದು. ಇವನು ವೆನಿಸ್ ಫ್ಲಾರೆನ್ಸ್ ನಗರಗಳಲ್ಲಿನ ಚರ್ಚುಗಳಲ್ಲಿ ಮಾಡಿರುವ ಚಾವಣಿ ಚಿತ್ರಾಲಂಕಾರಗಳ ಮಾದರಿಗಳು ಇಟಲಿಯ ಹಲವು ಚರ್ಚುಗಳಲ್ಲಿ ಕಾಣಸಿಗುತ್ತವೆ.

ರೋಮಿನಿಂದಾಚೆ ಹಲವು ದೇಶಗಳಲ್ಲಿ ಬರೋಕ್ ಪರಂಪರೆಯ ಚಿತ್ರಕಲೆ ಬೆಳೆಯುತ್ತ ಹೋದರೂ ಅದರ ಉಜ್ಜ್ವಲ ಅಭಿವ್ಯಕ್ತಿಯನ್ನು ನಾವು ಕಾಣುವುದು ಖ್ಯಾತ ಚಿತ್ರಕಾರ ಬೆಲ್ಜಿಯಮಿನ ರೂಬನ್ಸ್‌ನ ಚಿತ್ರಗಳಲ್ಲಿ. ವ್ಯಾನ್ ಡೈಕ್ ಮತ್ತು ಯೌರ್ಡೌನ್ಸ್ ಮುಂತಾದ ಖ್ಯಾತ ಕಲಾವಿದರುಗಳ ಮೇಲೆ ರೂಬನ್ಸ್ ವ್ಯಾಪಕ ಪ್ರಭಾವ ಬೀರಿದ. ರೋಮಿನಿಂದಾಚೆ ಬರೋಕ್ ಶೈಲಿಯಲ್ಲಿ ಕೃತಿರಚನೆ ಮಾಡಿದವರಲ್ಲಿ ಸ್ಪೇನಿನ ವೆಲಾಸ್‌ಕ್ವಸ್ ಮುಖ್ಯನಾದವ. ಇವನ ದಿ ಮೇಡ್ ಆಫ್ ಆನರ್, ಸರೆಂಡರ್ ಆಫ್ ಬ್ರೆಡಾ ಮುಂತಾದ ಚಿತ್ರಗಳು ಬರೋಕ್ ಶೈಲಿಯ ಉನ್ನತ ಕೃತಿಗಳು.

ಹಾಲೆಂಡಿನ ವಿಖ್ಯಾತ ಚಿತ್ರಕಾರ ರೆಮ್‌ಬ್ರ್ಯಾಂಟ್ ಬರೋಕ್ ಶೈಲಿಯಿಂದ ಮುಕ್ತನಾದರೂ ಅವನ ದಿ ನೈಟ್ ವಾಚ್, ಕ್ರೈಸ್ಟ್ ಎಟ್ ದಿ ಕಾಲಮ್ ಮುಂತಾದ ಶ್ರೇಷ್ಠ ಕೃತಿಗಳಲ್ಲಿ ಮಾನವಜೀವನವನ್ನು ಕುರಿತ ಗಂಭೀರವಾದ ಚಿಂತನೆಯೂ ನಿತ್ಯಜೀವನದ ಸಾಮಾನ್ಯ ಸನ್ನಿವೇಶಗಳಲ್ಲಿನ ಭಾವುಕತೆಯೂ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಬರೋಕ್ ಸಂಪ್ರದಾಯ ಅತ್ಯಾಡಂಬರದಿಂದಾಗಿ ಅವನತಿಗೆ ಗುರಿಯಾದಾಗ ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡು ಅದು ರೊಕೊಕೊ ಸಂಪ್ರದಾಯದೊಂದಿಗೆ ಬೆರೆತುಹೋಯಿತು.

ಲೆನಿನ್‌ಗ್ರಾಡಿನ ಹರ್ಮಿಟೇಜ್ ಕಲಾಭವನದಲ್ಲಿರುವ ಈ ತೈಲವರ್ಣ ಚಿತ್ರ ಪಾಲ್ ಗಾಗಿಯದು. ದಿ ಸ್ಪ್ರಿಂಗ್ ಆಫ್ ಡಿಲೈಟ್ ಎಂದು ಇದರ ಹೆಸರು. ಇಂಪ್ರೆಷನಿಸಂನ ಉತ್ತರಾರ್ಧ ಕಾಲದ ಮುನ್ನಡೆಯನ್ನಿಲ್ಲಿ ಕಾಣಬಹುದು

3. ಆಧುನಿಕ : ಪೋಸ್ಟ್-ಇಂಪ್ರೆಷನಿಸಮ್ : ಚಿತ್ರಕಲೆ ಆಧುನಿಕ ಯುಗದಲ್ಲಿ ನೂರೆಂಟು ಪಂಥಗಳಾಗಿ ಒಡೆದು, ಹಲವಾರು ಶೈಲಿಗಳಲ್ಲಿ ರೂಪುಗೊಳ್ಳುತ್ತಿದೆ. ಅಕ್ಯಾಡೆಮಿಕ್ ಹಾಗೂ ಸಾಂಪ್ರದಾಯಿಕ ಚಿತ್ರಕಾರರ ಜಾಡನ್ನು ಬಿಟ್ಟು ತೀರ ವಿರೋಧವಾದ ರೀತಿಯಲ್ಲಿ ಹಲವಾರು ಹೊಸ ಚಳವಳಿಗಳು ಇಂದು ಮೈದೋರುತ್ತಿವೆ. ಇವತ್ತಿನ ಹಲವಾರು ಚಳವಳಿಗಳಿಗೆ ಪ್ಯಾರಿಸ್ ಹಾಗೂ ಮಧ್ಯ ಯುರೋಪುಗಳು ಕೇಂದ್ರಗಳಾಗುತ್ತಿವೆ. ಪ್ಯಾರಿಸ್ ನಗರವಂತೂ ಕಲಾಪ್ರಪಂಚದ ರಾಜಧಾನಿಯಾಗುತ್ತಿದೆ.

1900ರ ಹೊತ್ತಿಗೆ ಪರಿಣಾಮವಾದ ಅಥವಾ ಇಂಪ್ರೆಷನಿಸಮ್ ಎಂಬ ಚಳವಳಿ ತಣ್ಣಗಾಗಿದ್ದು ಅದರ ಮೂಲಸೂತ್ರಗಳನ್ನೆಲ್ಲವನ್ನೂ ವಿರೋಧಿಸುವ ಹೊಸಚಳವಳಿಯೊಂದು ಹುಟ್ಟಿಕೊಂಡಿತ್ತು. ಈ ಹೊಸ ಚಳವಳಿಗೆ ಸೇರಿದ ಪಾಲ್ ಸಿಜಾನ್, ಗಾಗಿ, ಮ್ಯಾಟೀಸ್ ಮುಂತಾದ ಫ್ರೆಂಚ್ ಚಿತ್ರಕಾರರ ಗುಂಪನ್ನು ಪೋಸ್ಟ್ ಇಂಪ್ರೆಷನಿಸ್ಟರು ಎಂದು ಕರೆಯಲಾಯಿತು. ಇವರ ಮುಖ್ಯ ಸಾಧನೆಯೆಂದರೆ ಇವರು ಪರಿಣಾಮವಿಧಾನದ ಚಿತ್ರಕಾರರಿಗಿಂತ ಮುಂದೆ ಹೋಗಿ ಹೊಸ ಕೃತಿಗಳಲ್ಲಿ ಗಟ್ಟಿಭದ್ರವಾದ ರೂಪ ಹಾಗೂ ರೇಖೆಗಳು ಮೂಡುವಂತೆ ಮಾಡಿದರು. ಉದಾಹರಣೆಗೆ ಜಾರ್ಜ್ಸ್ ಸ್ಯೆರ ಪಾಯಿಂಟಿಲಿಸಂ

ಕಲಾವಿದ ವಿನ್ಸೆಂಟ್ ವಾನ್ ಗೋನ ಒಂದು ಚಿತ್ರ. ಉಜ್ಜ್ವಲ ವರ್ಣಗಳ ಬಳಕೆಯನ್ನು ಇಲ್ಲಿ ಕಾಣಬಹುದು. ಹೆಲ್‌ಸಿಂಕಿಯ ಅತನೀಯಂ ಚಿತ್ರಕಲಾ ಸಂಗ್ರಹಣದಲ್ಲಿ ಇದನ್ನು ಕಾಣಬಹುದು

ಎಂಬ ಹೊಸ ಚಿತ್ರವಿಧಾನವನ್ನೇ ಪ್ರಾರಂಭಿಸಿ ವರ್ಣವಿನ್ಯಾಸದಲ್ಲಿ ಚುಕ್ಕಿಗಳನ್ನೂ ಪುಟ್ಟ ಗೀಟುಗಳನ್ನೂ ಬಳಸಿದ. ಚುಕ್ಕೆ ಹಾಗೂ ಗೀಟುಗಳಿಂದಲೇ ತುಂಬಿಸಿ ಬರೆದ ಅವನ ದಿ ಸರ್ಕಸ್ ಎಂಬ ಕೃತಿ ಅತ್ಯಂತ ಸೂಕ್ಷ್ಮವೂ ಪರಿಷ್ಕಾರವೂ ಅದ ರಚನೆಯಿಂದ ಕೂಡಿದೆ.



ಘನಾಕೃತಿ ವಿಧಾನಕ್ಕೆ ಸ್ಫೂರ್ತಿಯನ್ನಿತ್ತ ಪಾಲ್ ಸಿಜಾನನ (1839-1906) ಒಂದು ಚಿತ್ರ. ಕ್ಯಾನ್‌ವಾಸಿನ ಮೇಲೆ ತೈಲವರ್ಣಗಳಿಂದ ಸಿದ್ಧವಾದ್ದು. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿನ ಖಾಸಗಿ ಸಂಗ್ರಹದಲ್ಲಿದೆ.

ನೆದರ್‌ಲೆಂಡಿನ ವಾನ್ ಗೋ ಅತ್ಯಂತ ವ್ಯಗ್ರವಾದ ಭಾವನಾತ್ಮಕ ವಾದವಿಚಾರಗಳನ್ನು ಅಭಿವ್ಯಕ್ತಿಗೊಳಿಸಲು ಉಜ್ಜ್ವಲವರ್ಣಗಳನ್ನು ಬಳಸಿದ. ತಿರಿಚಿಹೋದ ಸೊಟ್ಟ ಚಿತ್ರಗಳನ್ನು ಬರೆದ. ಮೇಲುನೋಟಕ್ಕೆ ಇವನ ಕುಂಚ ಲಂಗುಲಗಾಮಿಲ್ಲದಂತೆ ಕಂಡರೂ ಇವನು ಅದ್ಭುತವಾದ ಸಂಯಮವನ್ನೂ ಹಿಡಿತವನ್ನೂ ತೋರಿಸಬಲ್ಲನೆಂಬುದಕ್ಕೆ ಇವನ ಸನ್‌ಫ್ಲವರ್ ಎಂಬ ವರ್ಣಚಿತ್ರವೇ ಸಾಕ್ಷಿ. ಚಿತ್ರಕಾರರಿಗಾಗಿ ಅಸಾಂಪ್ರದಾಯಿಕ ರೀತಿಯಲ್ಲಿ ಬಣ್ಣಗಳನ್ನು

ಬಳಸಿ ಸೂಚ್ಯವೂ ಸಾಂಕೇತಿಕವೂ ಆದ ಕಾಣ್ಕೆಗಳನ್ನು ಮೂಡಿಸಿದ. ಅವನ ಚಿತ್ರಗಳಲ್ಲಿ ದಿ ಸ್ಪಿರಿಟ್ ಆಫ್ ದಿ ನೈಟ್ ವಾಚಸ್ ಎಂಬುದು ಪ್ರಖ್ಯಾತ ಕೃತಿ. ಇದರಲ್ಲಿ ಅತ್ಯಾಧುನಿಕ ವೆನ್ನಬಹುದಾದ ಐರೋಪ್ಯ ಸಂವೇದನೆಯನ್ನು ತಾಹಿತಿ ದ್ವೀಪದ ಜೀವನದಿಂದ ಎತ್ತಿಕೊಂಡ ವಸ್ತುವಿಗೆ ಹೊಂದಿಸಲು ಯತ್ನಿಸಿದ್ದಾನೆ. ಈ ಪಂಥದ ಚಿತ್ರಕಾರರಲ್ಲಿ ಎಲ್ಲರಿಗಿಂತ ಪ್ರಮುಖನೆಂದರೆ ಪಾಲ್ ಸಿಜ಼ಾನ್. ಇವನದು ಭವ್ಯವೂ ಉನ್ನತವೂ ಆದ ಕಲ್ಪನೆ. ಉಜ್ವಲ ರಚನೆ ಹಾಗೂ ವರ್ಣವಿನ್ಯಾಸದ ಮೂಲಕ ಗಂಭೀರವೂ ಚಿಂತನಶೀಲವೂ ಆದ ದೃಶ್ಯಗಳನ್ನು ಬಿಡಿಸಬಲ್ಲವನಾಗಿದ್ದ. ಇವನ ಚಿತ್ರಗಳೇ ಬಹುತೇಕ ಕ್ಯೂಬಿಸಂ (ಅಮೂರ್ತವಾದ) ಪಂಥಕ್ಕೆ ಸ್ಫೂರ್ತಿಯಾದವೆಂದು ಹೇಳುವುದುಂಟು. ಇವನು ಪ್ರಸಿದ್ಧ ಚಿತ್ರಸಂಗ್ರಹಾಲಯಗಳಲ್ಲಿ ಕುಳಿತು ಗಂಟೆಗಟ್ಟಲೆ, ಜಗತ್ತಿನ ವಿಖ್ಯಾತ ಕೃತಿಗಳನ್ನು ಅಧ್ಯಯನ ಮಾಡುತ್ತಿದ್ದನಂತೆ. ಒಂದು ವಸ್ತುವನ್ನು ಪದರಪದರವಾಗಿ ವಿಶ್ಲೇಷಿಸಿ ಅದರಲ್ಲಿನ ಅಮೂರ್ತವಾದ ರೇಖಾವಿನ್ಯಾಸವನ್ನು ಚಿತ್ರದಲ್ಲಿ ಪಡಿಮೂಡಿಸಬೇಕೆನ್ನುವುದು ಅವನ ತತ್ತ್ವ. ನೇರವಾದ, ಸರಾಗವಾದ ಚಿತ್ರಣವನ್ನೂ ಅಂಥ ಅನುಕರಣೆಯನ್ನೂ ವಿರೋಧಿಸಿದ ಅವನು ತನ್ನ ಪಟ್ಟ ಶಿಷ್ಯನಾದ ಎಮಿಲಿ ಬರ್ನಾರ್ಡ್‌ಗೆ ಕೊಟ್ಟ ಉಪದೇಶ ಗಮನಾರ್ಹವಾಗಿದೆ: ಸಿಲಿಂಡರು, ಗೋಳ, ಶಂಕು–ಇವುಗಳ ನೆರವಿನಿಂದ ನಿಸರ್ಗವನ್ನು ವ್ಯಾಖ್ಯಾನ ಮಾಡುವ ವಸ್ತುಗಳು, ಅವುಗಳ ಮೇಲ್ಮೈಗಳ ಒಂದೊಂದು ಪಕ್ಕವೂ ಒಂದು ಕೇಂದ್ರ ಬಿಂದುವಿನೆಡೆಗೆ ಸರಿಯುವಂತೆ ಎಲ್ಲವನ್ನೂ ಕಣ್ಣೆಲೆಯಲ್ಲಿ ನಿರೂಪಿಸು. ಕ್ಯೂಬಿಸ್ಟ್ ಪಂಥದವರು ಈ ಮಾತುಗಳನ್ನೇ ತಮ್ಮ ಆದರ್ಶಸೂತ್ರವನ್ನಾಗಿ ಎತ್ತಿಕೊಂಡರೂ ಸಿಜ಼ಾನ್ ಕ್ಯೂಬಿಸಂ ತಂತ್ರವನ್ನು ಒಪ್ಪುತ್ತಿದ್ದನೆಂದು ಹೇಳುವುದು ಕಷ್ಟ. ಲಂಬರೇಖೆಗಳನ್ನು ಬಳಸಿ ದೃಶ್ಯದ ಅರ್ಥಸಂಕೇತಗಳನ್ನೂ ಆಳ ಅಗಾಧತೆಗಳನ್ನೂ ಸೂಚಿಸುವ ಇವನ ತಂತ್ರದಿಂದಾಗಿ ನೂತನ ರೀತಿಯಲ್ಲಿ ಭೂದೃಶ್ಯಗಳನ್ನು, ಸ್ತಬ್ಧಚಿತ್ರಗಳನ್ನು ಬರೆಯುವುದು ಸಾಧ್ಯವಾಯಿತು. ಆಧುನಿಕ ಚಿತ್ರಶೈಲಿಗೆ ಸಿಜ಼ಾನನೇ ಮೂಲ ಪುರುಷನೆನ್ನುವ ಮಾತಿನಲ್ಲಿ ಉತ್ಪ್ರೇಕ್ಷೆಯಿಲ್ಲ. ಪರಿಣಾಮ ವಿಧಾನದ ವಿರುದ್ಧವಾಗಿ ಸಿಜ಼ಾನ್ ಪ್ರಾರಂಭಿಸಿದ ಚಳವಳಿಯೇ ಆಧುನಿಕ ಚಿತ್ರಕಲೆಗೆ ಹೊಸ ನೆಲೆ ಬೆಲೆಗಳ ಅರಿವನ್ನು ಮೂಡಿಸಿತು.

**ಇಂಟಿಮಿಸಮ್ :** ಈ ಹೊಸ ಶೈಲಿಯ ಪ್ರವರ್ತಕರೂ ಫ್ರೆಂಚ್ ಕಲಾವಿದರೂ ಆದ ಬೌನಾ ಹಾಗೂ ವೀಯಾರ್ ಪರಿಣಾಮ ವಿಧಾನದಿಂದಲೇ ಸ್ಫೂರ್ತಿ ಪಡೆದರೆಂಬುದು ಸ್ವಾರಸ್ಯದ ಸಂಗತಿ. ಉಜ್ಜ್ವಲ ವರ್ಣವಿನ್ಯಾಸದಿಂದ ಉರಿಯುವ ಅವರ ಭೂದೃಶ್ಯಗಳೂ ರಸಬಿರಿಯುವ ಹಣ್ಣುಹೂವುಗಳ ಚಿತ್ರಣಗಳೂ ಈ ಹೊಸ ವಿಧಾನದ ಅಭಿವ್ಯಕ್ತಿಗಳಾಗಿವೆ. ಪರಿಣಾಮವಿಧಾನದಲ್ಲಿ ಭೂದೃಶ್ಯಗಳಿಗಾಗಿ ಬಳಸುತ್ತಿದ್ದ ಎಲ್ಲ ರಚನಾತಂತ್ರಗಳನ್ನೂ ಬಳಸಿಕೊಂಡು ಇವರು ಮಧುರವಾದ, ಸ್ನಿಗ್ಧ ಸೌಂದರ್ಯದಿಂದ, ಕಾಂತಿಯಿಂದ, ಬೆಳಗುವ ಒಳಮನೆಯ (ಇನ್‌ಡೋರ್) ದೃಶ್ಯಗಳನ್ನು ರಚಿಸಿದರು. ತೋಟ, ದಿವಾನಖಾನೆ ಮುಂತಾದ ಚಿರಪರಿಚಿತ ಪರಿಸರಗಳನ್ನು ರಾಗರಂಜಿತವಾಗಿ ಚಿತ್ರಿಸಿ ಪ್ರಸಿದ್ಧರಾದರು. ಈ ಗುಂಪಿನವರು ತಮ್ಮನ್ನು ನಾಬಿಸ್ ಅಥವಾ ಪ್ರವಾದಿಗಳು ಎಂಬ ಇನ್ನೊಂದು ಹೆಸರಿನಿಂದಲೂ ಕರೆದುಕೊಂಡರು.

**ಫಾವಿಸಮ್ :** 1905ರಲ್ಲಿ ನವ್ಯಚಿತ್ರಕಾರರ ಮುಖಂಡತ್ವ ನಾಬಿಸ್ ಗುಂಪಿನವರಿಂದ ಫಾವಿಸ್ ಅಥವಾ ಕಾಡುಮೃಗಗಳು ಎಂದು ಕರೆಯಲಾದ ಮತ್ತೊಂದು ಗುಂಪಿನವರ ಕೈಗೆ ಹೋಯಿತು. ಪರಿಹಾಸ್ಯಕ್ಕೆಂದು ಅವರನ್ನು ಹೀಗೆ ಕರೆದರೂ ಈ ಗುಂಪಿನಲ್ಲಿ ಹೆನ್ರಿ ಮ್ಯಾಟೀಸ್‌ರಂಥ ಮಹಾಪ್ರತಿಭಾಶಾಲಿಗಳಿದ್ದರು. (ಇವರು ಸಿಜ಼ಾನ್ ವಾನ್ ಗೋ, ಗಾಗಿ– ಇವರಿಂದಲೇ ಸ್ಫೂರ್ತಿ ಪಡೆದರು) ಈ ಪಂಥದವರ ಪ್ರಕಾರ ಒಂದು ಚಿತ್ರ ವರ್ಣರೇಖೆಗಳ ಸಾಮರಸ್ಯದಿಂದ ಆವಿರ್ಭವಿಸಬೇಕು. ಅದು ಸ್ವಯಂಪೂರ್ಣವಾಗಿದ್ದು ಪ್ರಕೃತಿಯ ಯಥಾರ್ಥತೆಯಿಂದ ಆದಷ್ಟು ದೂರವಿರಬೇಕು. ಉಜ್ಜ್ವಲ ವರ್ಣವಿನ್ಯಾಸಗಳ ಮೂಲಕ ಫಾವಿಸ್ ಪಂಥದವರು ಅತ್ಯಂತ ಸರಳವಾದ ನಮೂನೆ (ಪ್ಯಾಟರ್ನ್)ಗಳನ್ನು ರಚಿಸಿದರು. ಒಂದು ಚಿತ್ರ ಸ್ವಯಂಪೂರ್ಣವಾಗಿರಬೇಕೆಂಬ ತತ್ತ್ವವನ್ನು ಅವರು ಎಷ್ಟು ದೂರ ಕೊಂಡೊಯ್ದರೆಂದರೆ ಚಿತ್ರದ ಮಾದರಿ ರಚಿಸುವಿಕೆಯನ್ನೂ ಕಣ್ಣೆಲೆಯನ್ನೂ ಸಂಪೂರ್ಣವಾಗಿ ಬಿಟ್ಟುಕೊಟ್ಟರು. ಚಿತ್ರದ ಮೂರನೆಯ ಆಯಾಮ ಕೃತಕವಾದುದು. ಏಕೆಂದರೆ ಯಾವುದೇ ಚಿತ್ರಕ್ಕೆ ನಿಜವಾಗಿ ಇರುವುದು ಎರಡೇ ಆಯಾಮಗಳು. ಮೂರನೆಯ ಆಯಾಮ ಸುಳ್ಳು ಕಲ್ಪನೆ. ಆದ್ದರಿಂದಲೇ ಫಾವಿಸ್ ಚಿತ್ರಗಳನ್ನು ಅಡ್ಡಲಾಗಿ ಅಥವಾ ಮೇಲಿಂದ, ನೋಡುವ ಕಣ್ಣೆಲೆಗಳಲ್ಲಿ ವೀಕ್ಷಿಸಲು ಸಾಧ್ಯವಿಲ್ಲ. ಈ ಸೂತ್ರಗಳ ಕಾರಣದಿಂದ ಫಾವಿಸ್ ಚಿತ್ರಕಾರರು ಮಟ್ಟಸವಾದ ಆದರೆ ಸೂಕ್ಷ್ಮ, ವಿರಳ, ರೇಖಾವಿನ್ಯಾಸದಿಂದ ಕೂಡಿದ, ನೋಟಕ್ಕೆ ಅಸಂಗತವೆನಿಸುವ ಚಿತ್ರಗಳನ್ನು ಸೃಷ್ಟಿಸಿದರು. ಆಕೃತಿಗಳನ್ನು ಸಾಕಷ್ಟು ಸೊಟ್ಟಾಗಿ ತಿರಿಚಿ, ವಕ್ರರೂಪಣಗಳಿಂದಲೇ ಪರಿಣಾಮ ಸಾಧಿಸಿದರು. ಆದರೆ ಈ ಸೊಟ್ಟಾದ ಆಕೃತಿಗಳು ಇನ್ನೂ ಗುರುತಿಸಬಹುದಾದಷ್ಟು ಸ್ಪಷ್ಟವಾಗಿವೆ. ಡರಾನ್ ಮತ್ತು ವ್ಲಾಮಂಕ್ ಎಂಬುವರ ವರ್ಣವಿನ್ಯಾಸ ಹೆಚ್ಚು ಗಾಢವಾಗಿದ್ದು ಚಿತ್ರಗಳು ಅತಿ ವಕ್ರವಾಗಿವೆ. ಒಂದು ವಿಚಿತ್ರ ವಿಷಯವೆಂದರೆ ಈ ನವ್ಯ ಪಂಥದವರು ಮೊದಲಿನ ಮಹಾಯುದ್ಧದ ಅನಂತರ ತಮ್ಮ ಉಗ್ರ ಸೂತ್ರಗಳನ್ನು ಬಿಟ್ಟು ಸಾಂಪ್ರದಾಯಿಕವಾದ ನ್ಯಾಚುರಲಿಸ್ಟ್ ಪಂಥದ (ಸಹಜ ವಿಧಾನ)ರೀತಿಯಲ್ಲಿ ಹೊಸ ಕೃತಿಗಳನ್ನು ರಚಿಸಿದರು. 1910ರಿಂದ 1916ರ ವರೆಗಿನ



ವೆಸ್ಟ್‌ಮಿನ್ಸ್ಟರ್ ಬ್ರಿಜ್, 1907. ಆಂದ್ರೆ ಡರಾನನ ಒಂದು ತೈಲವರ್ಣ ಚಿತ್ರ. ಫಾವಿಸಮ್ ಶೈಲಿಯ ಮುಂದುವರಿಕೆಯನ್ನು ಇಲ್ಲಿ ಕಾಣಬಹುದು

ಅವಧಿಯಲ್ಲಿ ಕ್ಯೂಬಿಸ್ಟ್ ಪಂಥದವರ ಪ್ರಭಾವ ಅತಿರೇಕಕ್ಕೆ ಹೋದುದರಿಂದ ಡರಾನ್ ಮೊದಲಾದವರು ಅದಕ್ಕೆ ವಿರೋಧವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲೆಂದೋ ಎಂಬಂತೆ ಮತ್ತೆ ಹಳೆಯ ಜಾಡನ್ನೇ ಹಿಡಿದರು.

**ಕ್ಯೂಬಿಸಮ್ :** ಸಿಜ಼ಾನನ ಚಿತ್ರಗಳಿಂದ ಹಾಗೂ ಆಫ್ರಿಕದ ನೀಗ್ರೋ ಶಿಲ್ಪಕಲೆಯಿಂದ ಪ್ರಭಾವಿತರಾಗಿ ಫ್ರೆಂಚ್ ಚಿತ್ರಕಾರರಾದ ಪಿಕಾಸೊ ಮತ್ತು ಬ್ರಾಕ್ ಕ್ಯೂಬಿಸಮ್ (ಜ್ಯಾಮಿತಿ ಆಕಾರಗಳ ವಿಧಾನ) ಎಂಬ ಹೊಸ ಪಂಥವನ್ನು ಪ್ರಾರಂಭಿಸಿದರು. ಅವರ ಮೊಟ್ಟಮೊದಲಿನ ಪ್ರಾಯೋಗಿಕ ಕೃತಿಗಳಲ್ಲಿ ಆಕೃತಿಗಳ ಮುಖಚಹರೆ ಹಾಗೂ ಅವಯವಗಳು ಅತಿ ಸರಳಗೊಂಡಿರುವುದು ಕಂಡುಬರುತ್ತದೆ. (ಅವರು ಸಿಜ಼ಾನನ ಶೈಲಿಯನ್ನೇ ಅನುಸರಿಸಿ ಸಂಕೀರ್ಣ ಘನಾಕೃತಿಗಳ ರಚನೆಯೊಳಗಿನ ವಿವಿಧ ಘಟಕಗಳನ್ನು ವಿಶ್ಲೇಷಿಸಿ ತೋರಿಸುತ್ತಾರೆ. ವಿಭಜನಾತ್ಮಕ ಕ್ಯೂಬಿಸಮ್ ಎನ್ನುವ ಈ ವಿಧಾನದಲ್ಲಿ ಆಕೃತಿಗಳು, ವಸ್ತುಗಳು, ಅವುಗಳ ಹಿನ್ನೆಲೆ ಮುಂತಾದವು ಜ್ಯಾಮಿತೀಯ ರೂಪಗಳನ್ನು ತಳೆದು ಅರೆಯುಬ್ಬು ಚಿತ್ರಗಳಂತೆ ಎದ್ದು ಕಾಣಿಸುತ್ತವೆ. ಕ್ಯೂಬಿಸ್ಟರು ಫಾವಿಸ್ ಪಂಥದವರಂತೆ ಉಜ್ಜ್ವಲ ರಂಗುಗಳನ್ನು ಬಳಸುವುದಕ್ಕೆ ಹೋಗದೆ ಬೂದು, ಕಂದು, ಮತ್ತು ವಿರಳವಾಗಿ ಕಣ್ಣು ಸೆಳೆಯುವ ಬಣ್ಣ ಆಕಾರಗಳಿಲ್ಲದ, ಕೇವಲ ಬುದ್ಧಿಪ್ರಧಾನವಾದ ಹೊಸ ವಿಧಾನವೊಂದು ಸೃಷ್ಟಿಯಾದಂತಾಯಿತು. ಕಠಿಣವಾದ, ಅತಿಸೂಕ್ಷ್ಮವಾದ ವಿಶ್ಲೇಷಣೆಗೆ ಒಳಪಟ್ಟ, ಚಿತ್ರದೊಳಗಿನ ಆಕೃತಿಗಳು ಗುರುತಿಸಲಾಗದಷ್ಟು ಅಮೂರ್ತವಾದವು. ಆದರೆ ಒಂದು ಅರ್ಥದಲ್ಲಿ ಅವನ್ನು ಅಮೂರ್ತವೆನ್ನುವುದು ತಪ್ಪು. ಏಕೆಂದರೆ ಅವು ಒಂದು ವಿಶಿಷ್ಟ ವಸ್ತುವಿನಿಂದಲೇ ರೂಪುಗೊಂಡು ಆ ವಸ್ತುವನ್ನು ಸ್ವಲ್ಪವಾದರೂ ಹೋಲುವಂತಿದ್ದುವು. 1913ರ ಸುಮಾರಿಗೆ ಕ್ಯೂಬಿಸ್ಟ್ ವಿಧಾನ ಮತ್ತಷ್ಟು ಸಂಕೀರ್ಣಗೊಂಡು ಪಿಕಾಸೊ ಮತ್ತು ಬ್ರಾಕ್ ತಮ್ಮ ಚಿತ್ರಗಳ ಮೇಲ್ಮೈಗೆ ಅಂಟಿಕೆಗಳನ್ನು (ಕೊಲೇಜಸ್) ಅಂದರೆ ವೃತ್ತಪತ್ರಿಕೆಯ ತುಂಡುಗಳು, ಭಿತ್ತಿಪತ್ರದ ಚೂರುಗಳು, ಸಿಗರೇಟು ಪೆಟ್ಟಿಗೆ ಸೀಳುಗಳನ್ನು ಮೆತ್ತೆ ಹಾಕಲು ಪ್ರಾರಂಭಿಸಿದರು. 1909–14ರ ನಡುವೆ ಕ್ಯೂಬಿಸ್ಟ್ ಗುಂಪು ವ್ಯಾಪಕವಾಗಿ ಬೆಳೆದು ಹಲವಾರು ಪ್ರತಿಭಾವಂತರನ್ನು ತನ್ನೆಡೆಗೆ ಸೆಳೆಯಿತು. ಒಂದನೆಯ ಮಹಾಯುದ್ಧದಲ್ಲಿ ಈ ಗುಂಪಿನ ಫ್ರೆಂಚ್ ಸದಸ್ಯರು ಕಡ್ಡಾಯವಾಗಿ ಸೈನಿಕವೃತ್ತಿ ಕೈಗೊಳ್ಳಬೇಕಾಗಿ ಬಂದಾಗ ಪಿಕಾಸೋನ ನೇತೃತ್ವದಲ್ಲಿ ಹಲವು ವಿದೇಶಿ ಕಲಾವಿದರು ಇನ್ನಷ್ಟು ಉಗ್ರವಾಗಿ ಈ ಪರಂಪರೆಯನ್ನು ಮುಂದುವರಿಸಿದರು. 1914–19ರ ಅವಧಿಯಲ್ಲಿ ಪಿಕಾಸೊ ಅಮೂರ್ತ ರಚನೆಯ ಅತಿರೇಕಕ್ಕೆ ಹೋಗಿ ಮೂರನೆಯ ಆಯಾಮವಿಲ್ಲದ ತೀರ ಅಸಹಜವಾದ ಮಟ್ಟಸ ಮಾದರಿಗಳನ್ನು ಸೃಷ್ಟಿಸಿದ. ಈ ಶೈಲಿಯನ್ನು ಫ್ರಾನ್ಸಿನ ಕೆಲವರು ಅನುಸರಿಸಿದರೂ ಕ್ಯೂಬಿಸ್ಟ್ ವಿಧಾನ ಹೆಚ್ಚು ಜನಪ್ರಿಯವಾದದ್ದು ಫ್ರಾನ್ಸಿನ ಹೊರಗಡೆಯೇ. ಹಾಲೆಂಡಿನ ಮಾವಂಡ್ರೀಆನ್ ಮತ್ತು ಅವನ ನಿಯೋಪ್ಲಾಸ್ಟಿಸಿಸ್ಟ್ ಪಂಥದವರು ಆಯಾಕಾರದ ಬಣ್ಣದ ಪಟ್ಟಿಗಳನ್ನೊಳಗೊಂಡ, ಪರಸ್ಪರ ಸಮಕೋನದಲ್ಲಿರುವ ಸರಳರೇಖೆಗಳಿಂದಲೇ ಚಿತ್ರರಚನೆಗಳನ್ನು ಸೃಷ್ಟಿಸಿದರು.

ರಷ್ಯನ್ ಚಿತ್ರಕಾರ ಮಾಲೆವಿಚ್ ಅಮೂರ್ತ ವಿಧಾನವನ್ನು ಅಪಹಾಸ್ಯಕರವಾದ ಅತಿರೇಕಕ್ಕೆ ಒಯ್ದು ಬಿಳಿಯ ಕ್ಯಾನ್‌ವಾಸಿನ ಮೇಲೆ ಒಂದೇ ಒಂದು ಬಿಳಿ ಬಣ್ಣದ ಚೌಕವನ್ನು ಬಳಿದು ಅದನ್ನು ಚಿತ್ರವೆಂದು ಕರೆದ.

**ಕ್ಯೂಬಿಸಂ ಶೈಲಿಗೆ ಒಂದು ನಿದರ್ಶನ. ಪಾಬ್ಲೊ ಪಿಕಾಸೋನ ಒಂದು ಚಿತ್ರ. ತೈಲವರ್ಣ ರಂಜಿತ. ಬೀಸಣಿಗೆ ಹಿಡಿದಿರುವ ಸ್ತ್ರೀ. ಮಾಸ್ಕೋದ ಪುಷ್ಕಿನ್ ಮ್ಯೂಸಿಯಮಿನಲ್ಲಿದೆ**

ಕ್ಯೂಬಿಸ್ಟ್ ಪಂಥದವರ ಚಿತ್ರಗಳಲ್ಲಿ ಒಂದು ವಸ್ತುವಿನ ಅಥವಾ ಮುಖದ ನಾನಾ ಭಾಗಗಳನ್ನು ವಿಭಜಿಸಿ ಒಂದು ಕಲ್ಪನೆಗೆ ಅನುಸಾರವಾಗಿ ಫಕ್ಕನೆ, ಒಮ್ಮೆಲೇ ತೋರಿಸುವ ಪ್ರಯತ್ನವಿರುತ್ತದೆ. ಇದನ್ನು ಅವರು ಏಕಕಾಲಿಕತೆಯ ವಿಧಾನ ಎಂದು ಕರೆದರು. ಇದಕ್ಕೆ ಉದಾಹರಣೆಯಾಗಿ ನಾವು ಪಿಕಾಸೋನ ಮೊಟ್ಟಮೊದಲ ಕ್ಯೂಬಿಸ್ಟ್ ಚಿತ್ರ ದಿ ಲೇಡೀಸ್ ಆಫ್ ಅವಿಗ್ನಾನ್ ಮತ್ತು ಮಾರ್ಸೆಲ್ ಡೂಷಾಂಪ್‌ನ ಮಹಡಿ ಮೆಟ್ಟಲು ಹತ್ತುತ್ತಿರುವ ಬೆತ್ತಲೆ ಆಕೃತಿ ಎಂಬ ಚಿತ್ರಗಳನ್ನು ನೋಡಬಹುದು. ಕ್ಯೂಬಿಸ್ಟರು ಮುಖ್ಯವಾಗಿ ಒಂದು ವಸ್ತುವಿನ ತ್ವರಿತಗತಿಯ ಚಲನೆಯನ್ನು ಸೂಚಿಸುವುದರಲ್ಲಿ ಯಶಸ್ವಿಯಾದರು. ಚಲನಚಿತ್ರ ತಂತ್ರ ಸಚೇತನ ವ್ಯಂಗ್ಯಚಿತ್ರಗಳನ್ನು ಜನಪ್ರಿಯಗೊಳಿಸುವ ಮುಂಚೆಯೇ ಕ್ಯೂಬಿಸ್ಟ್ ಹಾಗೂ ಫ್ಯೂಚರಿಸ್ಟ್ ಚಿತ್ರಕಾರರು ಆ ತಂತ್ರವನ್ನು ಮೈಗೂಡಿಸಿಕೊಂಡಿದ್ದರೆಂಬುದು ಸ್ವಾರಸ್ಯವಾದ ವಿಷಯ.

**ಫ್ಯೂಚರಿಸಮ್ :** 20ನೆಯ ಶತಮಾದ ಆರಂಭದಲ್ಲಿ ಫ್ರಾನ್ಸಿನಲ್ಲಿ ಕ್ಯೂಬಿಸ್ಟ್ ತತ್ತ್ವ ವ್ಯಾಪಕವಾಗಿ ಕಾರ್ಯಪ್ರವೃತ್ತವಾಗಿದ್ದಾಗ ಅದೇ ಸುಮಾರಿನಲ್ಲಿ ಜರ್ಮನಿ ಮತ್ತು ಇಟಲಿಗಳಲ್ಲಿ ಇನ್ನೊಂದು ಹೊಸ ಪಂಥ ಹುಟ್ಟಿಕೊಂಡಿತು. ಸಾಮಾನ್ಯವಾಗಿ ಎಲ್ಲ ಹೊಸ ಪ್ರಭಾವಗಳೂ ಫ್ರಾನ್ಸಿನಿಂದಲೇ ಹೊಮ್ಮುತ್ತಿದ್ದಾಗ, ಈ ಪಂಥ ಇಟಲಿಯ ನೆಲದಲ್ಲೇ ಹುಟ್ಟಿ ಸ್ವತಂತ್ರವಾಗಿ ಪ್ರವರ್ಧಮಾನಕ್ಕೆ ಬಂದು, ಸಮಗ್ರ ಯುರೋಪಿನಲ್ಲಿ ಹರಡಿತು. ಈ ಪಂಥದ ಆದ್ಯ ಪ್ರವರ್ತಕರಲ್ಲಿ ಇಟಲಿಯ ವೈದ್ಯ, ಚಿತ್ರಕಾರ ಮ್ಯಾರಿನೆಟ್ಟಿ (1876–1914) ಮತ್ತು ರುಸೋಲೊ (1865–1947), ಬಲ್ಲ, ಸೆವೆರೆನಿ–ಇವರು ಪ್ರಮುಖರು. ಇವರು ಅಶಾಂತಿ, ವಿಪ್ಲವ, ಯುದ್ಧ ಇವು ಅತ್ಯಂತ ಪ್ರಯೋಜನಕಾರಿ ಶಕ್ತಿಗಳು ಎಂಬ ರಾಜಕೀಯ ತತ್ತ್ವದ ಮೇಲೆ ತಮ್ಮ ವೈಚಾರಿಕ ಸೂತ್ರಗಳನ್ನು ರೂಪಿಸಿಕೊಂಡರು. ಪುರಾತನ ಪರಂಪರೆಯ ಪ್ರತೀಕಗಳಾದ ಪುಸ್ತಕ ಭಂಡಾರಗಳು, ಅಕಾಡೆಮಿಗಳು, ಕಲಾಸಂಗ್ರಹಾಲಯಗಳು ಮುಂತಾದುವನ್ನು



**ಮಹಡಿಯ ಹಜಾರದಲ್ಲಿ ಓಡುತ್ತಿರುವ ಹುಡುಗಿ. ತೈಲವರ್ಣರಂಜಿತ ಚಿತ್ರ. ಕಲಾವಿದ ಜಾಕಾಮ ಬಲ್ಲನದು. ಮಿಲಾನಿನ ಆಧುನಿಕ ಕಲಾಸಂಗ್ರಹಾಯಲದಲ್ಲಿದೆ**

ಧ್ವಂಸ ಮಾಡುವುದರ ಮೂಲಕ ಭೂತಕಾಲವನ್ನು ನಾಶಗೊಳಿಸಬೇಕು. ಮುಂದಿನ ಜೀವನವನ್ನು ಕಟ್ಟಲು ನೆರವಾಗಬಲ್ಲ ಯಂತ್ರಸಲಕರಣೆ ಮೊದಲಾದವುಗಳ ಬಗ್ಗೆ ವೈಜ್ಞಾನಿಕವೂ ಕಲಾತ್ಮಕವೂ ಆದ ಕಾಳಜಿ ಇರಬೇಕು. ಕಲೆ ಹೊಸಕಾಲದ ಬದುಕಿನ ತ್ವರಿತಗತಿಯನ್ನು ತೋರಿಸುವುದರ ಜೊತೆಗೆ ಮಾನವನ ವ್ಯಗ್ರವಾದ ಮಾನಸಿಕ ತುಮುಲವನ್ನೂ ಸೂಚಿಸು



**ಬಲ್ಲನ ಇನ್ನೊಂದು ಕೃತಿ. ಓಡುತ್ತಿರುವ ನಾಯಿಯದು 1912**

ವಂತಿರಬೇಕು ಎನ್ನವುದು ಫ್ಯೂಚರಿಸ್ಟರ ವಾದ. ಆ ಪಂಥದ ಉತ್ತಮ ಕೃತಿಗಳು ವಸ್ತುಗಳ ಧಡೂತಿ ಶಕ್ತಿಯನ್ನೂ ಸಾಮರ್ಥ್ಯವನ್ನೂ ಕೆಲವೊಮ್ಮೆ ತುರ್ತಾದ ವೇಗ ಚಲನೆಗಳನ್ನೂ ಚಿತ್ರಿಸುತ್ತವೆ. ಉದಾಹರಣೆಗೆ, ಬಲ್ಲಾ ಎಂಬಾತನ ಪ್ರಸಿದ್ಧ ಚಿತ್ರದಲ್ಲಿ ಒಂದು ನಾಯಿ ವೇಗವಾಗಿ ನಡೆಯುತ್ತಿರುವುದನ್ನು ಸೂಚಿಸಲಾಗಿದೆ. ನಾಯಿಯ ಕಾಲುಗಳು ಮತ್ತು ಬಾಲವನ್ನು ಅದು ಚಲಿಸುವಾಗ ಉಂಟಾಗುವ ಪರಿಣಾಮವನ್ನು ಸೂಚಿಸಲು ಇಪ್ಪತ್ತು ಬೇರೆ ಬೇರೆ ಭಂಗಿಗಳಲ್ಲಿ (ಚಲನಚಿತ್ರಗಳಿರುವ ಫಿಲ್ಮ್ ಪಟ್ಟಿಕೆಯಂತೆ) ತೋರಿಸಿದ್ದಾನೆ. ಫ್ಯೂಚರಿಸಮ್‌ವಾದಿಗಳು ತಮ್ಮ ರಾಜಕೀಯ ಆದರ್ಶಗಳಿಂದಾಗಿ ಇಟಲಿಯ ಫ್ಯಾಸಿಸ್ಟ್

ಪ್ರಭುಗಳ ಕೃಪೆಗೂ ಆಶ್ರಯಕ್ಕೂ ಪಾತ್ರರಾದರು. ಸಾರ್ವಲೌಕಿಕವಾದ ಕ್ರಿಯಾತ್ಮಕತೆಯಿಂದ ತ್ವರಿತಗತಿಯ ಸಂವೇದನೆಯನ್ನು ಬೆಳೆಸಿಕೊಳ್ಳಬೇಕು-ವಸ್ತುಗಳ ಸತ್ತ್ವವನ್ನು ನಾಶಪಡಿಸುವಂತೆ ಬೆಳಕಿನ ಚಲನೆಯನ್ನು ಅಳವಡಿಸಿಕೊಳ್ಳಬೇಕು-ಎಂಬುದು ಫ್ಯೂಚರಿಸ್ಟರ ಘೋಷಣೆಯಾಗಿತ್ತು.

ಇಷ್ಟಾದರೂ ಈ ಚಳವಳಿ 1918ರ ಹೊತ್ತಿಗೆ ಅವನತಿಯಾಗಿ ಹೇಳಹೆಸರಿಲ್ಲದಂತಾಯಿತು. ಏಕೆಂದರೆ ಆ ಸುಮಾರಿಗೆ ಡಾಡಾಯಿಸಮ್, ವಾರ್ಟಿಸಿಸಮ್ ಎಂದು ಮುಂತಾದ ನವ್ಯತರ ವಾದಗಳು ಕೋಲಾಹಲವೆಬ್ಬಿಸಿದ್ದವು.

**ಆರ್ಫಿಸಮ್** : 1912ರಲ್ಲಿ ಫ್ರೆಂಚ್ ಚಿತ್ರಕಾರ ಡೆಲಾನೆ ಪ್ರಾರಂಭಿಸಿದ ಹೊಸ ಚಳವಳಿಯನ್ನು ವಿಮರ್ಶಕರು ಆರ್ಫಿಸಮ್ ಎಂದು ಕರೆದರು. ಆರ್ಫಿಯಸನ ಸಂಗೀತದಂತೆ ಮಂತ್ರಮುಗ್ಧಗೊಳಿಸುವ ಶೈಲಿ ಎಂಬುದು ಈ ಮಾತಿನ ಅರ್ಥ. ಇದಕ್ಕೆ ಸೈಮಲ್ಟೇನಿಯಸ್‌ನೆಸ್ ಅಥವಾ ಏಕಕಾಲಿಕತ್ವ ಎಂಬುದು ಇನ್ನೊಂದು ಹೆಸರು. ಇದಕ್ಕೆ ಉದಾಹರಣೆಯಾಗಿ



**ಆರ್ಫಿಸಮ್ ಶೈಲಿಯ ಒಂದು ಚಿತ್ರ, ರಾಬರ್ಟ್ ಡೆಲಾನೆಯದು ತೈಲವರ್ಣರಂಜಿತ-ವರ್ತುಳೀಯ ಆಕೃತಿಗಳು. ಪ್ಯಾರಿಸ್ಸಿನಲ್ಲಿ ಸೋನಿಯ ಡೆಲಾನೆ ಸಂಗ್ರಹದಲ್ಲಿದೆ**

ಡಲಾನೆಯ ಚಿತ್ರಗಳನ್ನು ನೋಡಬಹುದು. ಅವನು ಕ್ಯಾನ್‌ವಾಸಿನ ಮೇಲೆ ದಟ್ಟವಾದ ಪರಸ್ಪರ ವೈದೃಶ್ಯ ಬೀರುವ ಬಣ್ಣಗಳಿಂದ ಪಟ್ಟೆಪಟ್ಟೆಯ ಸುಳಿಗಳನ್ನು ಸುತ್ತಿ ಬಣ್ಣದ ಬಟ್ಟುಗಳನ್ನೂ ಪ್ಯಾಚುಗಳನ್ನೂ ಬಳಿದು ವಿಚಿತ್ರ ಪರಿಣಾಮ ಸಾಧಿಸಿದ್ದಾನೆ. ವಸ್ತ್ವೇತರ ವಿಧಾನ ಅಥವಾ ನಾನ್-ಆಬ್ಜೆಕ್ಟಿವ್ ಪೇಂಟಿಂಗ್ ಎಂಬ ಕೇವಲ ವರ್ಣಪ್ರಧಾನವಾದ ಶೈಲಿಯನ್ನು ಪ್ರಾರಂಭಿಸಿದವ ಡಲಾನೆಯೇ. ಈ ತೆರನಾದ ಚಿತ್ರಗಳಲ್ಲಿ ಚಿತ್ರವಿಚಿತ್ರವಾದ ಬಣ್ಣದ ಬೆರಕೆ, ನಿರೂಪಣಾ ಸಾಮರ್ಥ್ಯವನ್ನು ಬಿಟ್ಟರೆ ಬೇರೆ ಯಾವ ವಸ್ತುವಿನ ಆಕೃತಿಯ ಪ್ರತಿರೂಪವೂ ಇರುವುದಿಲ್ಲ. ಈ ವಿಚಿತ್ರ ವರ್ಣವಿನ್ಯಾಸವನ್ನೇ ವಿಮರ್ಶಕರು ಭಾವಗೀತಾತ್ಮಕ, ಕಾವ್ಯಾತ್ಮಕ ಎಂದೆಲ್ಲ ಬಣ್ಣಿಸುವುದುಂಟು. 1914ರಲ್ಲಿ ಪ್ರಸಿದ್ಧ ಇಂಗ್ಲಿಷ್ ವಿಮರ್ಶಕ ವಿಂಡ್‌ಹ್ಯಾಮ್ ಲೂಯಿಸ್, ವಾರ್ಟಿಸಿಸಮ್ ಎಂಬ (ಜರ್ಮನ್ ಅಭಿವ್ಯಕ್ತವಾದದಿಂದ ಪ್ರಭಾವಗೊಂಡ), ಹೊಸ ವಿಧಾನವನ್ನು ಪ್ರಾರಂಭಿಸಿ ಅದರಲ್ಲಿ ಕ್ಯೂಬಿಸ್ಟ್ ಹಾಗೂ ಫ್ಯೂಚರಿಸ್ಟರ ಮಾರ್ಗವನ್ನೂ ಬೆರೆಸಿ, ಕಲಬೆರಕೆಯ ಶೈಲಿ ಸೃಷ್ಟಿಸಿದ. ಇದರಿಂದ ಹಲವು ಚಿತ್ರಕಾರರು ಪ್ರಭಾವಗೊಂಡರೂ ನಿಷೇಧಾತ್ಮಕ ಉದ್ದೇಶಗಳಿಂದ ಕೂಡಿದ್ದ ಈ ಪಂಥ ಬಹು ಬೇಗ ನಶಿಸಿತು.

**ಅಭಿವ್ಯಕ್ತಿವಾದ (ಎಕ್ಸ್‌ಪ್ರೆಷನಿಸಮ್):** 20ನೆಯ ಶತಮಾನದ ಎರಡನೆಯ ದಶಕದ ಇಟಲಿಯಲ್ಲಿ ಫ್ಯೂಚರಿಸ್ಟ್ ಪಂಥ ಬೆಳೆದಂತೆ, ಫ್ರಾನ್ಸಿನಲ್ಲಿ ಕ್ಯೂಬಿಸ್ಟ್ ತತ್ತ್ವಕ್ಕೆ ಉತ್ತೇಜನ ಸಿಕ್ಕಿದಂತೆ, ಜರ್ಮನಿಯಲ್ಲಿ ಅಭಿವ್ಯಕ್ತಿವಾದವೆಂಬ ವ್ಯಾಪಕವಾದ ಚಳವಳಿ ಪ್ರಾರಂಭವಾಯಿತು.

**ಅಭಿವ್ಯಕ್ತಿವಾದದ ಪ್ರಮುಖರಲ್ಲೊಬ್ಬನಾದ ಎಡ್ವರ್ಡ್ ಮಂಕ್‌ನ ಒಂದು ತೈಲವರ್ಣಚಿತ್ರ-ಬೈ ದಿ ಬೆಡ್, 1906. ಆಸ್ಲೋದ ಸ್ಟೆನರ್‌ಸನ್ ಸಂಗ್ರಹದಲ್ಲಿದೆ**

ಮೊಟ್ಟಮೊದಲು ಈ ತತ್ತ್ವವನ್ನು ಚಿತ್ರಕಲೆ ಹಾಗೂ ಪ್ಲಾಸ್ಟಿಕ್ ಕಲೆಗಳ ಸಂದರ್ಭದಲ್ಲಿ ಬಳಸಿದರೂ ಕ್ರಮೇಣ ಸಾಹಿತ್ಯಕ್ಷೇತ್ರಕ್ಕೂ ಅನ್ವಯಿಸಲಾಯಿತು. ಜರ್ಮನಿಯಿಂದಾಚೆಯೂ ಈ ಚಳವಳಿ ತನ್ನ ಗಾಢ ಪ್ರಭಾವವನ್ನು ಬೀರಿತು. ಈ ಶತಮಾನದ ಮೊದಲ ದಶಕದಲ್ಲಿ ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿಯಿಂದ ಉಂಟಾದ ಜೀವನದ ಸಮೃದ್ಧಿ, ಪುಷ್ಕಳತೆಗಳು ಬುದ್ಧಿಜೀವನವನ್ನು ಸ್ಥಗಿತಗೊಳಿಸಲು ವಿಶೇಷ ಅವನತಿಗೆ ಕಾರಣವಾದವು. ಯಂತ್ರಯುಗದ ಶಕ್ತಿಗಳು ಮನುಷ್ಯನ ಅಂತರಂಗದ ಭಾವುಕ ಜೀವನಕ್ಕೆ ಮಾರಕವಾದವು. ಇದಕ್ಕೆ ಪ್ರತಿಕ್ರಿಯೆಗಾಗಿ, ಕಲೆ ಯಥಾರ್ಥ ಜೀವನವನ್ನು ಸುಮ್ಮನೆ ಪಡಿಮೂಡಿಸಬಾರದುಜಮನುಷ್ಯನ ಅಂತರಂಗದ ಸೂಕ್ಷ್ಮಾತಿಸೂಕ್ಷ್ಮ ಪದರಗಳ ಮೇಲೆ ಬೆಳಕು ಹಾಯಿಸಿ, ಅದು ಅಂತರಂಗದ ಅರ್ಥಪೂರ್ಣ ಅಭಿವ್ಯಕ್ತಿಯಾಗಬೇಕು ಎನ್ನುವ ಹೊಸ ತತ್ತ್ವ ಪ್ರಚಾರಕ್ಕೆ ಬಂತು. ಫ್ರಾಯ್ಡ್ ಮತ್ತು ಬರ್ಗ್‌ಸನ್ನರ ತತ್ತ್ವಗಳು ಈ ವಿಚಾರಧಾರೆಗೆ ಸಮರ್ಥನೆ ಕೊಟ್ಟವು. ಇವರಲ್ಲಿ ವಾಸಿಲಿ ಕಾಂಡಿನ್‌ಸ್ಕಿ, ಫ್ರಾನ್ಸ್ ಮಾರ್ಕ್, ಎಡ್ವರ್ಡ್ ಮಂಕ್ ಇವರು ಪ್ರಮುಖರು. ಅಂತರಂಗದ ಒಂದು ಸ್ಥಿತಿಯನ್ನು ಅಭಿವ್ಯಕ್ತಗೊಳಿಸಲು ಇವರು ಮುಖ್ಯವಾಗಿ ವಕ್ರೀಕರಣ ತಂತ್ರವನ್ನು ಬಳಸಿದರು. ವರ್ಣರೇಖೆಗಳ ವಿನ್ಯಾಸಕ್ಕಿಂತ ಹೆಚ್ಚಾಗಿ ಮನಸ್ಸಿನ ಅಲೌಕಿಕ ಸೆಳವುಗಳ, ಸ್ಥಿತಿಗತಿಗಳ ಅಭಿವ್ಯಕ್ತಿಯೇ ಈ ಪಂಥದ ಕಲಾವಿದರ ಮುಖ್ಯ ಉದ್ದೇಶ. ಕ್ಯೂಬಿಸ್ಟ್ ವಿಧಾನದವರು ಅನುಸರಿಸುವ ಜ್ಯಾಮಿತೀಯ ಪರಿಪೂರ್ಣತೆಯನ್ನು ಇವರು ಸಾಧಿಸದಿದ್ದರೂ ಮನಸ್ಸಿನ ತುಡಿತ ಬಡಿತಗಳನ್ನು ಪಡಿಮೂಡಿಸುವುದರಲ್ಲಿ ಎಕ್ಸ್‌ಪ್ರೆಷನಿಸ್ಟರು ತುಂಬ ಯಶಸ್ವಿಯಾದರು. ಇಂಪ್ರೆಷನಿಸ್ಟ್ ಚಿತ್ರಕಾರ ಬಾಗು ಮತ್ತು ವಕ್ರಗಳನ್ನು ಬಳಸಿಕೊಂಡು ವಸ್ತುವನ್ನು ವಸ್ತುನಿಷ್ಠೆಯಿಂದ ಪ್ರತಿಪಾದಿಸಿದರೆ, ಎಕ್ಸ್‌ಪ್ರೆಷನಿಸ್ಟ್ ಕಲೆಗಾರ ಸಂಪೂರ್ಣ ವ್ಯಕ್ತಿನಿಷ್ಠೆಯಿಂದ ವಸ್ತುವಿನಲ್ಲೇ ತಲ್ಲೀನನಾಗಿ ಚಿತ್ರಿಸುತ್ತಾನೆ-ವಸ್ತುವನ್ನು ವೀಕ್ಷಿಸಿ, ಅನಂತರ ಅದು ತನ್ನ ಮೇಲೆ ಎಂಥ ಪರಿಣಾಮ ಬೀರಿದೆ ಎಂದು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಾನೆ-ಎನ್ನುವ ಮಾತಿನಲ್ಲಿ ಇವರ ವಿಧಾನಗಳ ವಿವರಣೆ ಇದೆ.

1930ರ ಹೊತ್ತಿಗೆ ಅಭಿವ್ಯಕ್ತವಾದದ ಸೆಲೆ ಬತ್ತಿಹೋಗಿ, ಆ ಪಂಥದ ಅವನತಿ ಪ್ರಾರಂಭವಾಗಿತ್ತು. ಹಿಟ್ಲರನ ಫ್ಯಾಸಿಸ್ಟ್ ನೀತಿಯ ದೆಸೆಯಿಂದ ಹಲವು ಕಲಾವಿದರು ಜರ್ಮನಿಯನ್ನು ಬಿಟ್ಟು ಓಡಿಹೋದರು. ಜರ್ಮನಿಯಲ್ಲಿ ಉಳಿದಂಥವರು ಏನೊಂದು ಸ್ವಾತಂತ್ರ್ಯವಿಲ್ಲದೆ ಕ್ರಿಯಾತ್ಮಕ ಶಕ್ತಿಯನ್ನು ಕಳೆದುಕೊಳ್ಳಬೇಕಾಯಿತು. ವಸ್ತುಶೂನ್ಯ (ನಾನ್-ಆಬ್ಜೆಕ್ಟಿವ್) ವಿಧಾನಗಳು: ಕ್ಯೂಬಿಸ್ಟ್ ಪಂಥ ಆವಿರ್ಭಾವವಾದ ಸುಮಾರಿನಲ್ಲಿ ನೂರೆಂಟು

ಸಣ್ಣಪುಟ್ಟ ಅಮೂರ್ತ ಚಿತ್ರಣ ರೀತಿಗಳು ಪ್ರತಿಪಾದಿತವಾದವು. ಪ್ರತಿಯೊಬ್ಬ ಕಲಾವಿದನೂ ಹಲವು ಪ್ರಭಾವಗಳಿಗೆ ಒಳಗಾಗುತ್ತಿದ್ದುದರಿಂದ ಅದರ ರೀತಿಗಳನ್ನು ಸ್ಪಷ್ಟವಾಗಿ ವಿವರಿಸುವುದು ಕಷ್ಟಸಾಧ್ಯ. ಉದಾಹರಣೆಗೆ ಜರ್ಮನಿಯ ಬೌಹೌಸ್ ಪಂಥದವರ ಗಂಭೀರ ಕೃತಿಗಳು ಸಹ ಡಾಡಾಯಿಸಮ್, ಕ್ಯೂಬಿಸಮ್ ಮತ್ತು ಎಕ್ಸ್‌ಪ್ರೆಷನಿಸಮ್ ತತ್ತ್ವಗಳಿಂದ ಪ್ರೇರಣೆ ಪಡೆದುವು. 1910ರಿಂದ 1912ರವರೆಗಿನ ಎರಡು ವರ್ಷದ ಅವಧಿಯಲ್ಲಿ ರೆಯಾನಿಸಮ್, ಸೂಪ್ರಿಮ್ಯಾಟಿಸಮ್, ಕನ್‌ಸ್ಟ್ರಕ್ಟಿವಿಸಮ್ ಎಂದು ಮುಂತಾದ ಹಲವಾರು ಕ್ಷಣಿಕವಾದ ವಸ್ತುಶೂನ್ಯವಿಧಾನಗಳು ಬಂದು ಹೋದವು. ವಸ್ತುವಿಲ್ಲದೆ ಚಿತ್ರ ಬರೆಯಬಹುದೆನ್ನುವ ಈ ವಿಧಾನಗಳನ್ನು ತತ್ತ್ವಶಃ ಪಾಲಿಸಿದವ ರಷ್ಯನ್ ಚಿತ್ರಕಾರ ವಾಸಿಲಿ ಕಾಂಡಿನ್‌ಸ್ಕಿ. ಅವನು ಅಮೂರ್ತ ಚಿತ್ರಗಳನ್ನು ಸೃಷ್ಟಿಸುವುದರ ಜತೆಗೆ ತನ್ನದೇ ಆದ ಸೌಂದರ್ಯ ಮೀಮಾಂಸೆಯನ್ನೂ ರೂಪಿಸಿದ. ರೆಯಾನಿಸಮ್ ತತ್ತ್ವವನ್ನು ಪ್ರತಿಪಾದಿಸಿದ ಲ್ಯಾರಿಯೊನಾವ್ ಆಕೃತಿಗಳನ್ನು ವಿರಳಗೊಳಿಸಿ ಬೆಳಕಿನ ವಿನ್ಯಾಸದಿಂದಲೇ ಭಾವಾಭಿವ್ಯಕ್ತಿ ನೀಡಲು ಪ್ರಯತ್ನಿಸಿದ. ಸೂಪ್ರಿಮ್ಯಾಟಿಸಮ್ ವಿಧಾನವನ್ನು ಪ್ರಾರಂಭಿಸಿದ ರಷ್ಯದ ಪೋಲಿಷ್ ಚಿತ್ರಕಾರ ಮಾಲೆವಿಚ್ ಕೇವಲ ಜ್ಯಾಮಿತಿಯ ರಚನೆ, ಆಕಾರಗಳಿಂದಲೇ ಚಿತ್ರರಚನೆ ಮಾಡಿದ. ಅವನ ವೈಟ್ ಆನ್ ವೈಟ್ ಎಂಬ ಪ್ರಸಿದ್ಧ ಚಿತ್ರದಲ್ಲಿ ಬಿಳಿಯ ಚೌಕದೊಳಗಿನ ತ್ರಿಕೋನದ ಮೇಲೆ ಇಟ್ಟ ಇನ್ನೊಂದು ಬಿಳಿಯ ಚೌಕವಿದೆ. ಇವನು ಸೃಷ್ಟಿಸಿದ ವಿನ್ಯಾಸಗಳು ಅಚ್ಚುಮೊಳೆ ತಯಾರಿಸುವವರಿಗೆ ವಿಧವಿಧವಾದ ಡಿಸೈನುಗಳನ್ನು ಸೂಚಿಸಿದನೆಂದು ಹೇಳುತ್ತಾರೆ. ಕನ್‌ಸ್ಟ್ರಕ್ಟಿವಿಸ್ಟ್ ವಿಧಾನದಲ್ಲಿ ಮೂರು ಆಯಾಮಗಳ ರೀತಿಯನ್ನು ಅತಿರೇಕಕ್ಕೆ ಒಯ್ದು ಚಿತ್ರ ತಯಾರಿಕೆಗೆ ಮರ, ತಂತಿ, ಲೋಹದ ರೇಕು, ಗಾಜು, ಸಿಮೆಂಟ್ ಕಾಂಕ್ರೀಟ್ ಮುಂತಾದ ಪದಾರ್ಥಗಳನ್ನು ಬಳಸಲಾಯಿತು. ಈ ಶೈಲಿಯನ್ನು ಅನುಸರಿಸಿದವರ ಕೆಲವು ಕೃತಿಗಳನ್ನು ಶಿಲ್ಪಾಕೃತಿಗಳೆನ್ನಬೇಕೇ ಹೊರತು ಅವು ಚಿತ್ರಕಲೆಯ ಕ್ಷೇತ್ರಕ್ಕೆ ಸೇರುವುದಿಲ್ಲ.

**ಡಾಡಾಯಿಸಮ್** : ಎಕ್ಸ್‌ಪ್ರೆಷನಿಸಮ್ ವಿಧಾನದ ಅಧ್ವರ್ಯುಗಳೆನಿಸಿಕೊಂಡ ಮ್ಯೂನಿಕ್ ಚಿತ್ರಕಾರರ ಗುಂಪು ಮೊದಲನೆಯ ಮಹಾಯುದ್ಧದ ಅನಂತರ ಕರಗುತ್ತ ಬಂತು. ಕಾಂಡಿನ್‌ಸ್ಕಿ ರಷ್ಯಕ್ಕೆ ತೆರಳಿದ. ಮಾರ್ಕ್ಸ್ 1916ರಲ್ಲಿ ಮೃತನಾದ. ಅವರಲ್ಲಿ ಒಬ್ಬನಾದ ಆರ್ಪ್, ಜ್ಯೂರಿಕ್‌ಗೆ ತೆರಳಿ ಅಲ್ಲಿ ಪ್ರಾರಂಭವಾದ ಡಾಡಾಯಿಸಮ್ ಚಳವಳಿಯ ನೇತಾರನಾದ. ಡಾಡಾ ಎನ್ನುವ ಶಬ್ದಕ್ಕೆ ಫ್ರೆಂಚ್ ಭಾಷೆಯಲ್ಲಿ ಪ್ರಿಯವಾದ ಗೀಳು, ಹವ್ಯಾಸ ಎಂಬರ್ಥವಿದೆ. ಡಾಡಾಯಿಸಮ್ ವಿಧಾನದಲ್ಲಿ ಪ್ರತಿಯೊಬ್ಬ ಕಲೆಗಾರನೂ ತನಗೆ ಖುಷಿ ಬಂದ ರೀತಿಯಲ್ಲಿ ಪ್ರಿಯವಾದ ಗೀಳಿನ ಜಾಡು ಹಿಡಿದು ನಡೆಯಬಹುದೆಂಬ ಸ್ವಾತಂತ್ರ್ಯವನ್ನು ಅನುಸರಿಸಲಾಯಿತು. ಇಂದೊಂದು ಸ್ವೇಚ್ಛಾ ಪ್ರವೃತ್ತಿಯ ಅರಾಜಕತೆಯಾಗಿ ಪರಿಣಮಿಸಿದ್ದು ಆಶ್ಚರ್ಯವೇನಲ್ಲ. ಇದಕ್ಕೆ ಮೂಲ ಪ್ರಚೋದನೆಯೆಂದರೆ ಮಹಾಯುದ್ಧದ ಅನಂತರ ಉಂಟಾದ ಮನೋವೇದನೆ, ಸಾಮಾಜಿಕ ವಿಪ್ಲವ. ಡಾಡಾ ಪಂಥೀಯರು ಪರಂಪರಾನುಗತವಾದ ಎಲ್ಲ ಮೌಲ್ಯಗಳನ್ನೂ ನಿರಾಕರಿಸಿ, ಕಲೆಯ ಸಂಪ್ರದಾಯವನ್ನೇ ಬುಡಮೇಲು ಮಾಡಲು ಹೊರಟರು. ವಿವೇಚನೆಗೆ, ಚಿಂತನೆಗಳಿಗೆ ಯಾವ ಅರ್ಥವೂ ಇಲ್ಲ. ಇಂದಿನ ಸಾಂಸ್ಕೃತಿಕ ಪರಂಪರೆಯನ್ನು ಕಿತ್ತೊಗೆದು, ಪ್ರತಿಯೊಬ್ಬನೂ ತನ್ನ ಚಿತ್ತಲಹರಿ ನಡೆಸಿದ ಹಾಗೆ ನಡೆಯಬೇಕು. ಇದು ಡಾಡಾ ಪಂಥದವರ ಮೂಲ ಮಂತ್ರ. ಅವರ ಒಂದು ಘೋಷಣೆಯಲ್ಲಿನ ಈ ಮಾತುಗಳು ಹೀಗಿವೆ: ನಮಗೆ ಏನೂ ಬೇಡ, ಏನೂ ಬೇಕಿಲ್ಲ ಬೇಕಿಲ್ಲ'. ಈ ಪಂಥದ ಪ್ರಮುಖರಲ್ಲೊಬ್ಬನಾದ ಡಾಷಾಂಪ್ ಬರೆದ ಒಂದು ಪ್ರಸಿದ್ಧ ಚಿತ್ರದಲ್ಲಿ ಲೋಕವಿಖ್ಯಾತ ಮೋನಾ ಲೀಸಾ ಆಕೃತಿಗೆ ಮೀಸೆಗಳನ್ನು ಹಚ್ಚಿ ಅಲಂಕರಿಸಿ ಕೆಳಗಡೆ ಅಶ್ಲೀಲವಾದ ಆಲೇಖ್ಯ ಬರೆಯಲಾಗಿದೆ. ಅವರಲ್ಲೊಬ್ಬ ನುಡಿದಂತೆ, ಕಲಾವಿದ ಉಗುಳಿದ್ದೇ ಕಲೆ ಎನ್ನುವ ಕೆಟ್ಟ ಕಾಲಬಂತು.

ಡಾಡಾಯಿಸಮ್ ಪಂಥ, ಎಕ್ಸ್‌ಪ್ರೆಷನಿಸಮ್ ಚಳವಳಿ ಖಿಲವಾಗುತ್ತಿದ್ದಾಗ ಹುಟ್ಟಿ ಅನಂತರ ಬಂದ ಸರ್ರಿಯಲಿಸಮ್ ಅಥವಾ ಅತಿವಾಸ್ತವಿಕತಾ ವಾದಕ್ಕೆ ನಾಂದಿಯಾಯಿತು. ಎಕ್ಸ್‌ಪ್ರೆಷನಿಸ್ಟರು ಕಲೆಯಲ್ಲಿ ವಿವೇಚನೆಗಿಂತ ಕಲ್ಪನೆಗೆ ಹೆಚ್ಚು ಪ್ರಾಮುಖ್ಯ ಕೊಟ್ಟರು. ಆದರೆ ಡಾಡಾ ಪಂಥದವರು ಇನ್ನೊಂದು ಹೆಜ್ಜೆ ಮುಂದೆ ಹೋಗಿ ವಿವೇಚನೆಗೆ ಏನೂ ಬೆಲೆಯೇ ಇಲ್ಲವೆಂದು ಸ್ಪಷ್ಟವಾಗಿ ಘೋಷಿಸಿದರು. ಆದರೆ ವಿವೇಚನೆಯನ್ನು ಬಿಟ್ಟರೆ ಏನು ಗತಿ ಎಂಬುದರ ಬಗ್ಗೆ ಅವರು ಚಿಂತಿಸುವ ಗೋಜಿಗೆ ಹೋಗಲಿಲ್ಲ. ಸರ್ರಿಯಲಿಸ್ಟ್ ಪಂಥದವರು ಇದನ್ನೇ ತಮ್ಮ ತಾರಕ ಮಂತ್ರವನ್ನಾಗಿ ಸ್ವೀಕರಿಸಿದರೂ ಅದಕ್ಕೆ ಕ್ರಿಯಾತ್ಮಕವಾದ ಕೆಲವು ಅಂಶಗಳನ್ನು ಸೇರಿಸಿದರು.

ಅತಿ ವಾಸ್ತವಿಕತಾವಾದ (ಸರಿಯಲಿಸಮ್) : 1922ರ ಹೊತ್ತಿಗೆ, ಡಾಡಾಯಿಸಮ್, ಎಕ್ಸ್‌ಪ್ರೆಷನಿಸಮ್ ಮತ್ತು ಪಿಕಾಸೋವಿನ ಅತಿಕ್ಯೂಬಿಸ್ಟ್ ತತ್ತ್ವ, ಚಿರಿಕೋವಿನ ಫ್ಯಾಂಟಸಿ ಚಿತ್ರಣ ಮೊದಲಾದ ಹಲವು ವಿಧಾನಗಳನ್ನೊಳಗೊಂಡ ಸರಿಯಲಿಸಮ್ ಎಂಬ ಕಲಬೆರಕೆ ವಿಧಾನ ಬಳಕೆಗೆ ಬಂತು. ಸರಿಯಲಿಸಮ್ ಎಂಬ ಮಾತು ಕೇವಲ ಸೌಂದರ್ಯಕ್ಕೆ ಸೀಮಿತವಾದುದಲ್ಲ-ಅದು ಬದುಕಿನ ತತ್ತ್ವಕ್ಕೆ ಸಂಬಂಧಿಸಿದ್ದು ಎಂದು ಅತಿ ವಾಸ್ತವಿಕ ವಾದಿಗಳು ಘೋಷಿಸಿದರು. ಮನಸ್ಸಿನ ಅಜಾಗೃತ ಸ್ಥಿತಿ ಚೈತನ್ಯಪೂರ್ಣವಾದ ಕ್ರಿಯಾತ್ಮಕವಾದ ಶಕ್ತಿಯಾಗಿ ಕೆಲಸ ಮಾಡಬಲ್ಲುದು ಎಂಬ ಫ್ರಾಯ್ಡ್‌ನ ತತ್ತ್ವವನ್ನು ಅವರು ಸಂಪೂರ್ಣವಾಗಿ ಒಪ್ಪಿಕೊಂಡರು. ಸರಿಯಲಿಸಮ್ ಪ್ರಾರಂಭವಾದದ್ದು 1922ರ ಪ್ಯಾರಿಸ್ಸಿನಲ್ಲಿ. ಆದರೆ ಈ ವಿಧಾನದ ವಕ್ತಾರನಾದ ಆಂದ್ರೆ ಬ್ರೆಟನ್ ಪಂಥದ ಘೋಷಣೆಯನ್ನು ಹೊರಡಿಸಿದ್ದು ಎರಡು ವರ್ಷಗಳ ಅನಂತರ. ಸರಿಯಲಿಸಮ್ ಎಂದರೇನು ಎಂಬ ಪ್ರಶ್ನೆಗೆ ಯಾರೂ ಸಮಂಜಸವಾದ ಉತ್ತರ ಕೊಟ್ಟಿಲ್ಲವಾದರೂ ಬ್ರೆಟನ್ ಕೊಟ್ಟ ವಿವರಣೆ ಹೀಗಿದೆ : ವಿಚಾರದ ನಿಯಂತ್ರಣ ಲವಲೇಶವೂ ಇಲ್ಲದಂತೆ, ಸೌಂದರ್ಯ ಮತ್ತು ನೀತಿಗಳಿಗೆ ಸಂಬಂಧಿಸಿದ ಪರಿಗಣನೆಗೆ ಮೀರಿದಂತೆ ನಡೆಯುವ ಚಿತ್ತವ್ಯಾಪಾರವನ್ನು ಅದರ ಆದೇಶವನ್ನು ಮಾತಿನಲ್ಲಾಗಲಿ, ಬರೆಹದಲ್ಲಾಗಲಿ ಇನ್ನಾವುದೇ ಮಾಧ್ಯಮದಲ್ಲಾಗಲೀ ಅಭಿವ್ಯಕ್ತಿಸುವ ಉದ್ದೇಶವುಳ್ಳ ಶುದ್ಧ ಮಾನಸಿಕ ಸ್ವಯಂಚಾಲಕತೆಯೇ ಅತಿ ವಾಸ್ತವಿಕತಾವಾದ.

ಈ ಪಂಥದವರು ಸುಪ್ತ ಚೇತನದಿಂದ ಹೊಮ್ಮುವ ಪ್ರತಿಮೆಗಳನ್ನು ತಮ್ಮ ಚಿತ್ರಗಳಲ್ಲಿ ಪ್ರಕ್ಷೇಪಿಸಲು ಪ್ರಯತ್ನಿಸುತ್ತಾರೆ. ಹೀಗೆ ಮಾಡುವಾಗ ಆ ಪ್ರತಿಮೆಗಳನ್ನು ಬೌದ್ಧಿಕ ಅಥವಾ ಸೌಂದರ್ಯ ತತ್ತ್ವಗಳಿಗನುಸಾರವಾಗಿ ಮಾರ್ಪಡಿಸುವ ಗೋಜಿಗೆ ಹೋಗುವುದಿಲ್ಲ. ಏಕೆಂದರೆ ಅವರಿಗೆ ಬೇಕಾಗಿರುವುದು ಕಲ್ಪನೆಯ, ಕನಸಿನ ಚಿತ್ರಣಗಳೇ ಹೊರತು ಯಥಾರ್ಥತೆಯ, ವೈಚಾರಿಕತೆಯ ಚಿತ್ರಣವಲ್ಲ. ವಿಚಾರಕ್ಕಿಂತ ವಿಭಾನೆಯ ಶಕ್ತಿಯೇ ಪ್ರಬಲವಾದದ್ದೆಂದು ಹೇಳಿ ಅವರು, ಬಾಸ್ಕ್, ಗೋಯ, ಬ್ಲೇಕ್ ಮುಂತಾದ ಹಿಂದಿನ ಚಿತ್ರಕಾರರೆಲ್ಲರೂ ತಮ್ಮ ಪರಂಪರೆಯ ಮೂಲ ಪುರುಷರೆಂದು ಹೇಳಿಕೊಂಡಿದ್ದಾರೆ. ಫ್ರಾಯ್ಡನ ಸಾರ್ವತ್ರಿಕ ಸುಪ್ತ ಚೇತನ ತತ್ತ್ವವನ್ನು ಅರ್ಥಮಾಡಿಕೊಂಡರೆ ಬೇರೆ ಬೇರೆ ಕಲಾವಿದರು ರೂಪಿಸುವ ವೈಯಕ್ತಿಕ ಪ್ರತಿಮೆ, ಸಂಕೇತಗಳನ್ನು ಅರ್ಥಮಾಡಿಕೊಳ್ಳುವುದೇನೂ ಕಷ್ಟವಿಲ್ಲ ಎಂದು ಅವರು ವಾದಿಸಿದರು. ಈ ಪಂಥದ ಮೂಲತತ್ತ್ವಗಳನ್ನು ಗ್ರಹಿಸಲು ನಾವು ಈ ವಿಧಾನದ ಮುಖ್ಯ ಪ್ರವರ್ತಕರಾದ ಸಾಲ್ವಡಾರೊ ಡಾಲಿ, ಜೊನ್ ಮಿರೋ ಮುಂತಾದವರ ಕೆಲವು ಕೃತಿಗಳನ್ನು ನೋಡಬಹುದು. ಅವರು ನಿತ್ಯಜೀವನದ ಚಿರಪರಿಚಿತ ವಸ್ತುಗಳನ್ನು ಅಲೌಕಿಕ ಪರಿಸರದಲ್ಲಿಟ್ಟು, ವಿಚಿತ್ರ ಭಂಗಿಗಳಲ್ಲಿ ರೂಪಿಸಿ ನಮಗೆ ಷಾಕ್ ಕೊಟ್ಟು ಅಸಾಧಾರಣ ಪರಿಣಾಮ ಸಾಧಿಸುತ್ತಾರೆ. ಉದಾಹರಣೆಗೆ ಡಾಲಿಯ ದಿ ಪರ್‌ಸಿಸ್ಟೆನ್ಸ್ ಮೆಮೊರಿ ಎಂಬ ಚಿತ್ರದಲ್ಲಿ ನೀರಿನಲ್ಲಿ ತೊಯ್ದು ಮೆತ್ತಗಾಗಿ ಜೋಲಾಡುವ ಗಡಿಯಾರಗಳ ಆಕಾರವನ್ನು ಸಾಂಪ್ರದಾಯಿಕ ರೀತಿಯಲ್ಲಿ ಚಿತ್ರಿಸಲಾಗಿದೆ. ಚಿತ್ರದಲ್ಲಿ ಸೂಚಿಸುವ ವಿಸ್ಮೃತತೆ ಹಾಗೂ ಕರಗಿ ಹೋಗುತ್ತಿರುವ ಗಡಿಯಾರದ ದ್ರವರೂಪ-ಇವು ಕನಸಿನ ಷಾಕ್ ಅನುಭವವನ್ನು ಅದ್ಭುತವಾಗಿ ಅರ್ಥೈಸುತ್ತವೆ. 1939ರ ಹೊತ್ತಿಗೆ ಈ ವಿಧಾನ ಹಳತಾಗಿ ಹೋದರೂ ಪಿಕಾಸೊನಂಥ ಅನನ್ಯ ಕಲಾವಿದರೂ ಅದರ ಪ್ರಭಾವದಿಂದ ಮುಕ್ತರಾಗಲಿಲ್ಲ.

ಕಲೆ ಮತ್ತು ಆಧುನಿಕ ರಾಷ್ಟ್ರ ಸರ್ಕಾರಗಳು : ಒಂದನೆಯ ಮಹಾಯುದ್ಧದ ತರುವಾಯ ಯುರೋಪಿನ ಹಲವು ರಾಷ್ಟ್ರಗಳಲ್ಲಿ ಅಧಿಕಾರಶಾಹಿ ಸರ್ಕಾರ ಪಟ್ಟಭದ್ರ ಹಿತಾಸಕ್ತಿಗಳನ್ನು ಸ್ಥಾಪಿಸಿಕೊಂಡು ಚಿತ್ರಕಲೆಯನ್ನು ಹಾಗೂ ಕಲಾವಿದರನ್ನು ಸ್ವಪ್ರಯೋಜನಗಳಿಗಾಗಿ ಮಾತ್ರ ಬಳಸಿಕೊಳ್ಳಲು ಆರಂಭಿಸಿತು. ಇದರಿಂದ ಕಲೆ ರಾಷ್ಟ್ರನಿಯಂತ್ರಣಕ್ಕೆ ಒಳಗಾಗಬೇಕಾಯಿತು. ಇಟಲಿಯ ಫ್ಯಾಸಿಸ್ಟ್ ಸರ್ಕಾರ ಫ್ಯೂಚರಿಸಮ್ ವಿಧಾನ ಬೆರೆಸಿದ ವಾಸ್ತವ (ನ್ಯಾಚುರಲಿಸ್ಟ್) ಶೈಲಿಯನ್ನು ತಮ್ಮ ಜನಾಂಗ ಧೋರಣೆಯ ಬೆಳವಣಿಗೆಗಾಗಿ ಹಾಗೂ ಸರ್ಕಾರದ ಸಾಧನೆಗಳ ಪ್ರಚಾರಕ್ಕಾಗಿ ದುರುಪಯೋಗಪಡಿಸಿಕೊಂಡರು. ಜರ್ಮನಿಯಲ್ಲಿ ನಾಟ್ಜಿ ಪ್ರಭುಗಳು ನವ್ಯ ಕಲೆಯನ್ನು ಅವನತಿಯ ಚಿಹ್ನೆ ಎಂದು ಖಂಡಿಸಿದರು. ನ್ಯಾಚುರಲಿಸ್ಟ್ ವಿಧಾನದ ಮೂಲಕ ನಾಟ್ಜಿ ತತ್ತ್ವಗಳ ಹಾಗೂ ಕಾರ್ಯಕ್ರಮಗಳ ಪ್ರಚಾರವನ್ನೂ ಆತ್ಮಪ್ರಶಂಸೆಯನ್ನೂ ಸಾಧಿಸಿಕೊಳ್ಳಲು ರಷ್ಯದಲ್ಲಿ ಹೊಸ ವಿಧಾನಗಳಿಗೆ ಸಾಕಷ್ಟು ಉತ್ತೇಜನ ದೊರೆತರೂ ಕಾಲಕ್ರಮೇಣ ನವ್ಯ ಕಲೆಯು ಜನಸಾಮಾನ್ಯರಿಗೆ ಎಟುಕದೆ ನಿತ್ಯಜೀವನಕ್ಕೆ ಹೆಚ್ಚು ಪ್ರಯೋಜನವಾಗುತ್ತಿಲ್ಲವೆಂಬ ದೂರಿಗೆ ಒಳಗಾಯಿತು. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ನವ್ಯಶೈಲಿ ತನ್ನ ಜಟಿಲತೆ ಅಸ್ಪಷ್ಟತೆಗಳಿಂದಾಗಿ ಹೆಚ್ಚು ಜನಾದರಣೆ ಗಳಿಸುವಂತಾಗಲಿಲ್ಲ.

20ನೆಯ ಶತಮಾನದಲ್ಲಿ ಚಿತ್ರಕಲೆ ಸಾಮಾಜಿಕವಾಗಿ ಹೆಚ್ಚು ಅರ್ಥಪೂರ್ಣವಾಗಿಲ್ಲ ಎಂಬುದು ನಿಜ. ಆಧುನಿಕ ಕಲೆಗೆ ರಾಜಾಶ್ರಯ ತಪ್ಪಿ ಹೋಗಿ, ಪ್ರಭುಶಕ್ತಿಯ ಬೆಂಬಲವಿಲ್ಲದಂತಾಗಿದೆ. ತನ್ನ ಅಮೂರ್ತ ವಿಧಾನ ಹಾಗೂ ಸಂಕೀರ್ಣ ವೈಚಾರಿಕ ಸ್ವರೂಪದಿಂದಾಗಿ ಶ್ರೀಸಾಮಾನ್ಯನ ಬೆಂಬಲವನ್ನು ಗಳಿಸುವುದು ಕಷ್ಟವಾಗಿದೆ. ಇದರಿಂದಾಗಿ ಕಲಾವಿದರು ಹೆಚ್ಚು ಹೆಚ್ಚು ವೈಯಕ್ತಿಕವೂ ವ್ಯಕ್ತಿನಿಷ್ಠವೂ ಆದ ಶೈಲಿಯ ಬೆನ್ನು ಹತ್ತಿದ್ದಾರೆ. ಜನಸಂಪರ್ಕವಿಲ್ಲದ ಕಲಾವಿದರೂ ತಮ್ಮ ದಂತಗೋಪುರದಲ್ಲಿ ಗಾಳಿ ಬೆಳಕುಗಳಿಲ್ಲದ ಪರಿಸರದಲ್ಲಿ ವಾಸಿಸುತ್ತಿದ್ದಾರೆ. ದೀರ್ಘಕಾಲದ ಈ ಪರಿಸ್ಥಿತಿಯನ್ನು ಬದಲಾಯಿಸುವ ಪ್ರಯತ್ನಗಳೇನೂ ಆದಂತೆ ಕಾಣುವುದಿಲ್ಲ. ಸಮಾಜದ ಕಲಾವಿದರ ನಡುವಣ ಸಂಬಂಧ ಸುವ್ಯವಸ್ಥಿತಗೊಳ್ಳುವವರೆಗೆ ಈ ಪರಿಸ್ಥಿತಿ ಹೀಗೆಯೇ ಮುಂದುವರಿಯಬೇಕಾಗಿದೆ. ಆಧುನಿಕ ಸಮಾಜದಲ್ಲಿ ಅತಿ ಸೂಕ್ಷ್ಮವಾಗಿ, ಪರಿಪೂರ್ಣವಾಗಿ ಮಾಡಲು ಮೂಲಭೂತ ಆದರ್ಶಗಳನ್ನು ಅಭಿವ್ಯಕ್ತಿಸಲು ಕಲಾವಿದರು ಹೆಚ್ಚು ಅರ್ಥಪೂರ್ಣ ಪಾತ್ರವಹಿಸಬೇಕಾಗಿದೆ. (ಎಚ್.ಕೆ.ಆರ್.)

**ಚಿತ್ರಕಲೆಯ ಬೋಧನೆ :** ಎಳೆಯ ಮಕ್ಕಳಿಗೆ ಶಾಲಾ ಪಠ್ಯಗಳಲ್ಲಿ ಚಿತ್ರಕಲೆಯ ಪಾಠಗಳನ್ನು ಕಡ್ಡಾಯ ಮಾಡಿರುವುದರ ಉದ್ದೇಶ ಅವರಿಗೆ ಅದರ ಮೂಲಭೂತ ಅಂಶಗಳ ಅರಿವು ಅಗತ್ಯ ಎಂಬುದಷ್ಟೇ ಅಲ್ಲ; ಅವರಿಗೆ ಸಂಗೀತ, ನೃತ್ಯ, ಅಭಿನಯ, ವಾಚನಗಳಲ್ಲಿ ಹೇಗೋ ಹಾಗೆ ಚಿತ್ರರಚನೆಯಲ್ಲೂ ಸಹಜವಾದ ಅಭಿರುಚಿ ಇರುವುದರಿಂದ ಅಭ್ಯಾಸಮಾಡಿದರೂ ಸುಲಭವಾದ ಚಿತ್ರಗಳನ್ನೂ ಕೂಡ ಸ್ಥೂಲವಾಗಿ ಬರೆಯುವ ಕಲೆ ಸಿದ್ಧಿಸಿರುವುದಿಲ್ಲ. ಚಿತ್ರ ಹಾಗಿರಲಿ, ಅಕ್ಷರಗಳನ್ನು ಕೂಡ ಅವರು ನೆಟ್ಟಗೆ ಬರೆಯಲಾರರು. ಆದರೆ ಇತರರು ಬಹು ಬೇಗ ಚಿತ್ರಕಲೆಯ ಬಗ್ಗೆ ತಮಗಿರುವ ಸಹಜ ಪ್ರವೃತ್ತಿಯನ್ನು, ಪ್ರತಿಭೆಯನ್ನು ತೋರಗೊಡುತ್ತಾರೆ. ಅಂಥವರನ್ನು ಗುರುತಿಸಿ ಅವರಿಗೆ ಈ ಕಲೆಯನ್ನು



ಚಿತ್ರಕಲೆಯ ಅಭ್ಯಾಸದಲ್ಲಿ ಬಳಸುವ ಸಲಕರಣೆಗಳು : 1. ಈಸಲ್, 2. ಕ್ಯಾನ್‌ವಾಸ್ ಬೋರ್ಡು, 3. ಪ್ಯಾಲೆಟ್, 4. ಕುಂಚ ಮತ್ತಿತರ ಸಾಧನಗಳು

ಆ ಬೋಧನೆಯಿಂದ ಅವರ ಸರ್ವಾಂಗೀಣ ವಿಕಾಸಕ್ಕೆ ಸಹಾಯವಾಗುತ್ತದೆ ಎಂಬುದೂ ಆಗಿದೆ. ಅಲ್ಲದೆ ಇತರ ಪಾಠಗಳಲ್ಲಿ ಬರುವ ಪಶು ಗಿಡಮರ ಹಕ್ಕಿ ಮೊದಲಾದವುಗಳ ಸ್ಥೂಲರೂಪವನ್ನು ಬಿಡಿಸುವುದು, ಜ್ಯಾಮಿತೀಯ ಆಕೃತಿಗಳನ್ನು ರಚಿಸುವುದು ಅವರಿಗೆ ತಿಳಿದಿರಬೇಕು. ಇದನ್ನವರು ಸಮರ್ಪಕವಾಗಿ ನಿರ್ವಹಿಸಬೇಕಾದರೆ ಮೂಲವಸ್ತುವನ್ನು ಅವರು ವಿವರವಾಗಿ ನೋಡಿ ತಿಳಿದಿರಬೇಕಲ್ಲದೆ ಅದರ ಆಕಾರವನ್ನು ಬರವಣಿಗೆಯಲ್ಲಿ ಇಳಿಸುವುದನ್ನು ಅಭ್ಯಾಸಮಾಡಿರಬೇಕಾಗುತ್ತದೆ. ಮುಂದೆ ಚಿತ್ರಕಲಾವಿದರೇ ಆಗಬೇಕೆಂಬುವ ವರಿಗಂತೂ ಇಂಥ ಪ್ರಾಥಮಿಕ ಪಾಠಗಳಿಂದ ಸಾಕಷ್ಟು ಸಹಾಯ, ಪ್ರಚೋದನೆ, ಪ್ರೋತ್ಸಾಹ ದೊರೆತಂತಾಗುತ್ತದೆ.


ಮುಖರೂಪಣೆಯ ನಾಲ್ಕು ಹಂತಗಳು

ಕಪ್ಪುಹಲಗೆ ಮತ್ತು ಸೀಮೆಸುಣ್ಣ, ಸ್ಲೇಟುಬಳಪ, ಕಾಗದ, ಸೀಸದಕಡ್ಡಿ, ರಬ್ಬರು ಇವನ್ನು ಸಕ್ರಮವಾಗಿ ಕೊಟ್ಟು ಚಿತ್ರ ಬರೆಯಲು ಹೇಳಬೇಕು. ಅವು ತಮ್ಮ ಮನಸ್ಸು, ಕೈ ಓಡಿದಂತೆ ಚಿತ್ರರಚನೆ ಮಾಡುತ್ತ, ಸರಿ ಎನಿಸಿದಾಗ ಅಳಿಸುತ್ತ ಮತ್ತೆ ಬರೆಯುತ್ತ ಕಲೆಯನ್ನು ಅಭ್ಯಾಸ ಮಾಡುತ್ತವೆ. ಜಲವರ್ಣ, ತೈಲವರ್ಣ, ಕ್ರೇಯಾನ್ ಮೊದಲಾದುವನ್ನೂ ಅವರ ಕೈಗೆ ಕೊಡಬಹುದು. ಮೊದಮೊದಲು ಮಕ್ಕಳು ಕೈ ಮೈ ಮಸಿ ಮಾಡಿಕೊಂಡರೂ ಕ್ರಮೇಣ ಅವನ್ನು ಸರಿಯಾಗಿ ಉಪಯೋಗಿಸುವುದನ್ನು ಕಲಿಯುತ್ತವೆ.

ಒಂದು ದೃಷ್ಟಿಯಿಂದ ಚಿತ್ರಕಲೆ ಕೇವಲ ಕಲಾವಿಜ್ಞಾನದ ವಿಷಯವಾಗದೆ ಬುದ್ಧಿಯ ಬೆಳವಣಿಗೆಗೂ ಶಿಕ್ಷಣಕ್ಷೇತ್ರದಲ್ಲಿಯ ವಿವಿಧ ವಿಷಯಗಳ ಪರಿಜ್ಞಾನಕ್ಕೂ ಸಾಧಕವಾಗಿದೆ.

ಚಿತ್ರ ಬಿಡಿಸುವುದು ಮಕ್ಕಳಿಗೆ ಬಹು ಪ್ರಿಯವಾದ ಒಂದು ಹವ್ಯಾಸ. ಅದರಿಂದ ಅವುಗಳ ಬೇಸರ ಕಳೆಯುತ್ತದೆ. ಅದು ಒಂದು ಉಪಯುಕ್ತ ಕೆಲಸವಾಗಿರುವುದರಿಂದ ಅದನ್ನು ಮಾಡಿ ಮುಗಿಸಿದಾಗ ಮಕ್ಕಳಿಗೆ ಒಂದು ಬಗೆಯ ತೃಪ್ತಿ ಸಿಗುತ್ತದೆ. ಚಿತ್ರ ಬರೆಯುವ ಎಲ್ಲ ಮಕ್ಕಳೂ ಚಿತ್ರಕಾರರಾಗಲು ಸಾಧ್ಯವಿಲ್ಲ. ಅನೇಕ ಮಕ್ಕಳಿಗೆ ವರ್ಷಗಟ್ಟಲೆ ಸಾಕಷ್ಟು ಪರಿಶ್ರಮ ಪಡುವಂತೆ ಮಾಡುವುದು ಉಪಾಧ್ಯಾಯರ ಹಾಗೂ ಪೋಷಕರ ಜವಾಬ್ದಾರಿ.

ಮಕ್ಕಳು ಚಿತ್ರಕಲೆಯನ್ನು ಅಭ್ಯಾಸಮಾಡಿ ದೊಡ್ಡ ಚಿತ್ರಕಲಾವಿದರಾಗುವ ಮಾತು ಹಾಗಿರಲಿ, ಮಕ್ಕಳದ್ದೇ ಒಂದು ಚಿತ್ರಕಲಾ ಸಂಪ್ರದಾಯವಿದೆ ಎಂಬುದು ಈಚಿನ ತಜ್ಞರ ಅಭಿಪ್ರಾಯ. ಆ ಕಲೆಯನ್ನು ಗುರುತಿಸಿ ಅದನ್ನು ಪ್ರೋತ್ಸಾಹಿಸಲು ಅನೇಕ ಸಂಸ್ಥೆಗಳು ಕೆಲಸಮಾಡುತ್ತಿವೆ. ಲಯನ್ಸ್ ಕ್ಲಬ್, ರೋಟರಿ ಕ್ಲಬ್, ಜೂನಿಯರ್ ಚೇಂಬರ್ ಅಸೋಸಿಯೇಷನ್ ಮುಂತಾದ ಸಾರ್ವಜನಿಕ ಸಂಘಸಂಸ್ಥೆಗಳು ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆಗಳನ್ನು ಆಗಾಗ್ಗೆ ಏರ್ಪಡಿಸುತ್ತವೆ. ಸ್ಪರ್ಧೆಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ ಬಹುಮಾನಗಳನ್ನು ಕೊಡುವುದೂ ಉಂಟು. ಈ ಬಗ್ಗೆ ದೆಹಲಿಯ ಶಂಕರ್ಸ್ ವೀಕ್ಲಿ ವಾರ ಪತ್ರಿಕೆಯವರು ಪ್ರತಿ ವರ್ಷವೂ ನಡೆಸುತ್ತಿರುವ ಜಾಗತಿಕ ಮಕ್ಕಳ ಚಿತ್ರಕಲಾ ಸ್ಪರ್ಧೆ ವಿಶೇಷ ಖ್ಯಾತಿಯದಾಗಿದೆ. ಆ ಸಂಸ್ಥೆ, ಪ್ರತಿವರ್ಷವೂ ಬಹುಮಾನ ಪಡೆದ ಚಿತ್ರಗಳ ವಿಶೇಷ ಸಂಚಿಕೆಯನ್ನೂ ಪ್ರಕಟಿಸುತ್ತದೆ.

ಮಕ್ಕಳ ಚಿತ್ರಗಳಲ್ಲಿ ಸೌಂದರ್ಯವನ್ನು ಗಮನಿಸದೆ ಅವುಗಳಲ್ಲಿ ಅಡಗಿರುವ ಭಾವ, ವಿಚಾರ, ಚೇತನ ಇತ್ಯಾದಿಗಳಿಗೆ ಮೊದಲು ಗಮನ ನೀಡಿ ಪ್ರೋತ್ಸಾಹಿಸ ಬೇಕು. ಶಿಶುಚಿತ್ರಗಳಂತೆ, ಜೈಮನಿರಾಯ್, ಪಾವುಲ್ ಕ್ಲೀ, ಮ್ಯಾಟಿಸ್ಸೆ, ಪಿಕಾಸೊ ಮೊದಲಾದ ಖ್ಯಾತ ಕಲಾವಿದರು ಮಕ್ಕಳಂತೆ ಚಿತ್ರರಚನೆ ಮಾಡಲು ಆಶಿಸಿದರು ಎಂಬುದನ್ನು ಇಲ್ಲಿ ನೆನೆಯಬಹುದು.

ಶಿಶುವಿಹಾರಗಳಲ್ಲಿನ ಮಕ್ಕಳಿಗೆ ಬೋಧನೆ ಆಕರ್ಷಕವಾಗುವುದು ಚಿತ್ರಗಳ ಮೂಲಕ. ಆದ್ದರಿಂದ ಶಿಶುವಿಹಾರ ಮತ್ತು ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಚಿತ್ರಕಲೆಯ ಬೋಧನೆ ಅತಿ ಮಹತ್ತ್ವದ್ದೆನಿಸಿದೆ. ಅಲ್ಲಲ್ಲ ವಿದ್ಯಾಭ್ಯಾಸದ ಅಂಗವಾಗಿ ಚಿತ್ರಕಲೆಗೆ ಯೋಗ್ಯಸ್ಥಾನ ಕಲ್ಪಿಸಿಕೊಡುವ ಸರ್ಕಾರದ ಉದ್ದೇಶ ಸ್ತುತ್ಯವಾದುದು. ಕೇಂದ್ರಸರ್ಕಾರದ ಆದೇಶದಂತೆ ಚಿತ್ರಕಲಾಭಿವೃದ್ಧಿಯ ಬಗೆಗೆ ಸಲಹೆ ನೀಡಲು ನೇಮಕವಾದ ಸಮಿತಿ 1967ರಲ್ಲಿ ತನ್ನ ಅಭಿಮತವನ್ನು ಮಂಡಿಸಿತು. ಆ ಸಲಹೆಗಳನ್ನು ಅನೇಕ ಕಡೆ ಕಾರ್ಯರೂಪಕ್ಕೆ ತರಲಾಗಿದೆ.

ಚಿತ್ರಕಲಾಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಪ್ರಗತಿಯನ್ನು ಸಾಧಿಸುವುದಕ್ಕಾಗಿ ಇಂದು ಮಹಾರಾಷ್ಟ್ರ ಸರ್ಕಾರದವರು ಚಿತ್ರಕಲಾ ಶಿಕ್ಷಣಕ್ಕಾಗಿ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದ್ದಾರೆ. ಕರ್ನಾಟಕ ಸರ್ಕಾರ ತಕ್ಕ ಮಟ್ಟಿಗೆ ಚಿತ್ರಕಲೆಗೆ ಪ್ರೋತ್ಸಾಹ ನೀಡುತ್ತಲಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ

ಪಾಠ್ಯಗಳಲ್ಲಿ ಚಿತ್ರಕಲೆಯನ್ನು ಸೇರಿಸಲಾಗಿದೆ. ವಿಶೇಷ ತರಬೇತಿಯ ಉಚ್ಚಕಲಾ ಪರೀಕ್ಷೆಗಳನ್ನೂ ನಡೆಸಲಾಗುತ್ತಿದೆ. ಸರ್ಕಾರಿ ವಲಯದಲ್ಲಿ ಕಲೆ ಮತ್ತು ಕುಶಲ ಕೈಗಾರಿಕಾ ತರಬೇತಿ ಕೇಂದ್ರಗಳು ಮೈಸೂರು ಮತ್ತು ದಾವಣಗೆರೆಗಳಲ್ಲಿರುವುವಲ್ಲದೆ, ಖಾಸಗಿ

ಪ್ರತಿರೂಪ ಚಿತ್ರಣದಲ್ಲಿ ಬಳಸುವ ಡಾಂಕಿ ಪೀಠೋಪಕರಣ

ವಲಯದಲ್ಲೂ 13 ಉಚ್ಚಕಲಾಶಾಲೆಗಳಿವೆ. ಕರ್ನಾಟಕ ವಿಶ್ವವಿದ್ಯಾಲಯ ಕಲಾ ಶಿಕ್ಷಣಕ್ಕೆ ವಿಶೇಷ ಮಹತ್ತ್ವ ನೀಡಿ ಪದವಿ ಪರೀಕ್ಷೆಗೆ ಅದನ್ನು ಒಂದು ವಿಷಯವಾಗಿ ಆಯ್ದಿದೆ.

(ಆರ್.ಜಿ.ಆರ್.ಎ.)

**ಚಿತ್ರಕಾವ್ಯ :** ಸಂಸ್ಕೃತ ಸಾಹಿತ್ಯದಲ್ಲಿ ಶಬ್ದಚಮತ್ಕಾರ ಪ್ರದರ್ಶನಕ್ಕೆ, ಬುದ್ಧಿಶಕ್ತಿಯ ಕಸರತ್ತುಗಳಿಗೆ ಮೀಸಲಾದ ಕಾವ್ಯಪದ್ಧತಿ. ಕ್ರಿಸ್ತ ಶಕಾದಿಯಿಂದಲೂ ಶಬ್ದಚಮತ್ಕಾರಾಂಶದ ವಿಶೇಷ ಕೃಷಿ ನಡೆಯುತ್ತಿದ್ದುದನ್ನು ಅಶ್ವಘೋಷ, ಭರತ, ಪಿಂಗಲ, ಸಂಸ್ಕೃತ–ಪ್ರಾಕೃತ ಶಿಲಾಶಾಸನಕಾರರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಮುಂದೆ ಮಹಾಕವಿಗಳ ಪದವಿಗೆ ಆಸೆ ಪಡುವವರೆಲ್ಲರೂ ಚಿತ್ರಕಾವ್ಯದಲ್ಲಿ ತಮ್ಮ ಶಕ್ತಿಯನ್ನು ತೋರಿಸಿದಲ್ಲದೆ ಕೃತಕೃತ್ಯತೆಯನ್ನು ಕಾಣುತ್ತಿರಲಿಲ್ಲ. ಅಶ್ವಘೋಷ ಕಾಳಿದಾಸರಲ್ಲಿ ಕ್ವಚಿತ್ತಾಗಿಯೂ ಭಾರವಿ ಮಾಘಾದಿಗಳಲ್ಲಿ ನಿಯತಸರ್ಗಗಳಲ್ಲಿಯೂ ಚಿತ್ರಕವಿತ್ವದ ನಿದರ್ಶನಗಳಿವೆ. ಕ್ರಮೇಣ ಈ ಸಂಪ್ರದಾಯ ಬೆಳೆದು ಪಂಡಿತ ಜನರಿಗೆ ಪ್ರಿಯತರವಾಗುತ್ತ ಹೋದುದರ ಪರಿಣಾಮವಾಗಿ,




ಪದ್ಮಬಂಧ

ಬಾಣಮಯೂರಾದಿಗಳ ಸ್ತೋತ್ರಶತಕಗಳಲ್ಲಿ, ಘಟಕರ್ಪರಾದಿ ಖಂಡಕಾವ್ಯಗಳಲ್ಲಿ, ಸುಬಂಧು ಮುಂತಾದವರ ಗದ್ಯಕೃತಿಗಳಲ್ಲಿ, ಕಡೆಗೆ ನಲಚಂಪೂ ಮುಂತಾದ ಚಂಪೂ ಸಾಹಿತ್ಯದಲ್ಲಲ್ಲದೆ ಮುರಾರಿ ಪ್ರಭೃತಿಗಳ ನಾಟಕಗಳಲ್ಲಿ ಕೂಡ ಚಿತ್ರಕಾವ್ಯವ್ಯಾಮೋಹ ವ್ಯಾಪಿಸಿತು. 9ನೆಯ ಶತಮಾನದ ವಿಮರ್ಶಕ ಆನಂದವರ್ಧನ ಈ ವ್ಯಾಮೋಹವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರೂ ಪೂರ್ವದ ಆಲಂಕಾರಿಕರಾದ ದಂಡಿವಾಮನಾದಿಗಳು ಇದಕ್ಕೆ ತಮ್ಮ ಸಮ್ಮತಿಯನ್ನು ಇತ್ತುದೇ ಪಂಡಿತಕವಿಗಳಿಗೆ ಪ್ರಿಯವಾಯಿತೆನ್ನಬೇಕು. ಹೀಗಾಗಿ ಸಂಸ್ಕೃತ ಸಾಹಿತ್ಯದ ಮುಂದಿನ ಇತಿಹಾಸವೆಲ್ಲ ಚಿತ್ರಕಾವ್ಯದ ಪ್ರಭಾವದ ಸೆಳೆತದಲ್ಲಿ ಸಿಕ್ಕಿ ಇಂದಿನವರೆಗೂ ಕೃತ್ರಿಮ ಶಬ್ದಪರಿಷ್ಕಾರದ ಒಂದು ಅನ್ಯಾದೃಶ ಆವರಣವನ್ನು ತಳೆದಿದೆ. 12ನೆಯ ಶತಮಾನದಿಂದ 19ನೆಯ ಶತಮಾನದವರೆಗೂ ಸಂಸ್ಕೃತ ಪಂಡಿತಮಂಡಲಿಗಳಲ್ಲಿ ಅಗ್ರಪೀಠದ ಮರ್ಯಾದೆ ದೊರೆಯುತ್ತಿದ್ದುದು ಚಿತ್ರ ಕವಿಚತುರನಿಗೇ ಹೊರತು ಸರಸಕವಿಗಲ್ಲ. ಇದರಲ್ಲಿ ಶಬ್ದಚಿತ್ರ ಮತ್ತು ಅರ್ಥಚಿತ್ರ ಎಂದು ಪ್ರಧಾನ ವ್ಯತ್ಯಾಸ; ಅನುಪ್ರಾಸ ಯಮಕಾದಿ ಶಬ್ದಾಲಂಕಾರಗಳಿಂದ ಕೂಡಿದ್ದು ಶಬ್ದಚಿತ್ರ. ಉಪಮೆ ಉತ್ಪ್ರೇಕ್ಷಾದಿ ಊಹಾತ್ಮಕ ಅಲಂಕಾರಗಳಿಂದ ಕೂಡಿದ್ದು ಅರ್ಥಚಿತ್ರ. ಚಿತ್ರಕವಿತೆಯ ಕೆಲ ಬಗೆಗಳನ್ನು ಇಲ್ಲಿ ವಿವರಿಸಲಾಗಿದೆ:

1. ಕತ್ತಿ, ತೆಕ್ಕೆಹಾವು, ಮದ್ದಲಿ, ಪದ್ಮ ಮುಂತಾದ ಚಿತ್ರಾಕೃತಿಗಳಲ್ಲಿ ಲೆಕ್ಕಾಚಾರದ ಮನೆಗಳನ್ನು ಮಾಡಿ, ಅವುಗಳಲ್ಲಿ ಒಂದು ನಿರ್ದಿಷ್ಟಕ್ರಮದಿಂದ ಪದ್ಯಾಕ್ಷರಗಳನ್ನು ತುಂಬುವಂತೆ ಬರೆಯುವ ಮಾದರಿ ಒಂದು ಬಗೆ. ಇವಕ್ಕೆ ಖಡ್ಗಬಂಧ, ನಾಗಬಂಧ, ಮುರಜಬಂಧ, ಪದ್ಮಬಂಧ ಮುಂತಾದ ಹೆಸರುಗಳಿವೆ. ಇವನ್ನು ಇಂದಿನ ಚಕ್ರಬಂಧ ಸ್ಪರ್ಧೆಯ ಚಿತ್ರಾಕೃತಿಗಳೊಡನೆ ಹೋಲಿಸಬಹುದು.

ಭಾಸತೇ ಪ್ರತಿಭಾಸಾರ ರಸಾಭಾತಾಹತಾ ವಿಭಾ ।
ಭಾವಿತಾತ್ಮಾ ಶುಭಾವಾದೇ ದೇವಾಭಾ ಬತ ತೇ ಸಭಾ ॥

ಇಲ್ಲೆಲ್ಲ ಪದ್ಯದ ಅರ್ಥಸ್ವಾರಸ್ಯಕ್ಕಿಂತ ಕವಿಯ ಬುದ್ಧಿಬಲಕ್ಕೇ ಬೆಲೆ. ಉದಾ : ಪದ್ಮಬಂಧ ಪೂರ್ವದಿಂದ ಆರಂಭಿಸಿ ಅನುಕ್ರಮವಾಗಿ ಕೇಂದ್ರದ ಅಕ್ಷರದೊಂದಿಗೆ ಚಿತ್ರದಲ್ಲಿ ತೋರಿಸಿರುವಂತೆ ಸುತ್ತಲೂ ಹಿಂದಕ್ಕೂ ಮುಂದಕ್ಕೂ (1, 2, 3 ಇತ್ಯಾದಿ 12ರ ವರೆಗೆ) ಓದಿದರೆ ಶ್ಲೋಕವಾಗುತ್ತದೆ.

2. ಸ್ಥಾನನಿಯಮಕ್ಕೆ ಅನುಸರಿಸಿ ಭಿನ್ನಾರ್ಥಕವಾದ ಸರೂಪ ಶ್ಲಿಷ್ಟಪದಗಳ ಆವೃತ್ತಿ ಯಮಕಾಲಂಕಾರವೆನಿಸುವುದು. ಇದು ಶಬ್ದಚಿತ್ರದ ಮತ್ತೊಂದು ಬಗೆ. ಪ್ರಾಚೀನ ಲಾಕ್ಷಣಿಕರು ಇದರ ಅನೇಕ ಪ್ರಭೇದಗಳನ್ನು ನಿರೂಪಿಸಿದ್ದಾರೆ. ಒಂದು ಸಾಮಾನ್ಯ ಉದಾಹರಣೆ :

ಯದಾನತೋಽಯದಾನತೋ ನ ಯಾ ತ್ಯಯಂ ನ ಯಾತ್ಯಯಮ್
ಶಿವೇ ಹಿತಾಂ ಶಿವೇಹಿತಾಂ ಸ್ಮರಾಮಿತಾಂ ಸ್ಮರಾಮಿ ತಾಮ್ ॥

ಯಾವಾಕೆಯ ಅಭಯದಾನದಿಂದ (ಅಯದಾನತಃ) ಆನತನಾದ ಈ ಭಕ್ತ (ಅಯಂ, ಯದ್+ಆನತೋ) ಯಾವಾಗಲೂ ಧರ್ಮದೆಲ್ಲೆಯನ್ನು (ನಯಾತ್ಯಯಂ) ಮೀರುವುದಿಲ್ಲವೋ ಆ ಶಿವನ ಮನೋವಲ್ಲಭೆಯಾದ (ಶಿವೇಹಿತಾಂ), ಲೋಕಕಲ್ಯಾಣನಿರತನಾದ (ಶಿವೇ ಹಿತಾಂ), ಮನ್ಮಥನಿಂದಲೂ ಅಳೆಯಲಾರದ ಸೌಂದರ್ಯವನ್ನುಳ್ಳ (ಸ್ಮರ+ಅಮಿತಾಂ), ದೇವಿಯನ್ನು ನೆನೆಯುತ್ತೇನೆ.

3. ಎಡದಿಂದ ಬಲಕ್ಕೆ ಓದಲಿ ; ಬಲದಿಂದ ಎಡಕ್ಕೆ ಓದಲಿ, ಒಂದೇ ಸಮವಾದ ಪದ್ಯವಾಗುವುದು ಗತ–ಪ್ರತ್ಯಾಗತ ಅಥವಾ ಅನುಲೋಮ–ಪ್ರತಿಲೋಮ–ಸಮ ಎನಿಸುವ ಚಿತ್ರಕಾವ್ಯ. ಭಾರವಿಯ ಕೆಳಗಿನ ಪದ್ಮಚರಣಗಳು ಉದಾಹರಣೆ:

ನನು ಹೋ ಮಂಥನಾ ರಾಘೋ ಘೋರಾ ನಾಥಮಹೋನು ನ
ತಯ ದಾತವದಾ ಭೀಮಾ ಮಾಭೀದಾ ಬತ ದಾಯತ ॥

4. ಒಂದೇ ಅಕ್ಷರ ಇಡಿಯ ಪದ್ಯಚರಣದಲ್ಲೆಲ್ಲ ಇದ್ದರೆ ಏಕಾಕ್ಷರ :

ಸ ಸಾಸಿಃ ಸಾಸುಸೂಃ ಸಾಸೋ ಯೇಯಾಯೇಯಾಯಯಾಯಯಃ

ಎರಡು ಅಕ್ಷರಗಳು ಮಾತ್ರ ಇದ್ದರೆ ದ್ವ್ಯಕ್ಷರಃ

ಚಾರಚಂಚುಶ್ಚಿರಾರೇಚೀ ಚಂಚಚ್ಚೀರರುಚಾ ರುಚಃ ।
ಚಚಾರ ರುಚಿರಶ್ಚಾರು ಚಾರೈರಾಚಾರ ಚಂಚುರಃ ॥

5. ನಾಲ್ಕನೆಯ ಪಾದದ ಅಕ್ಷರಗಳೆಲ್ಲ ಮೊದಲ ಮೂರು ಪಾದಗಳಲ್ಲಿ ಅಡಗಿರುವುದು ಗೂಢ ಚತುರ್ಥ. ಉದಾ:

ದ್ಯುವಿಯದ್ಗಾಮಿನೀ ತಾರಸಂರಾವವಿಹತಶ್ರುತಿಃ ।
ಹೈಮೀಷುಮಾಲಾ ಶುಶುಭೇ ವಿದ್ಯುತಾಮಿವ ಸಂಹತಿಃ ॥

6. ಓಷ್ಠ್ಯವರ್ಣಗಳು (ಪವರ್ಗ) ಒಂದೂ ಇಲ್ಲದ ರಚನೆ ನಿರೋಷ್ಠ್ಯ. ದಂಡಿಯ ದಶಕುಮಾರಚರಿತೆಯಲ್ಲಿ ಒಂದು ಅಧ್ಯಾಯ (ವಿಶ್ರುತ ಚರಿತೆ) ಇದಕ್ಕೆ ಉದಾಹರಣೆ.

ಕೇವಲ ಶ್ಲೇಷಯಮಕಾದಿಗಳಿಗೆ ಮೀಸಲಾದ ರಚನೆಗಳಲ್ಲಿ ಇಂಥ ಶಬ್ದವೈಚಿತ್ರ್ಯ ಮಾರ್ಗಗಳು ಇನ್ನೂ ಹಲವಾರುಂಟು.

ನಿಚಿತಂ ಖಮುಪೇತ್ಯ ನೀರದೈಃ
ಪ್ರಿಯಹೀನಾ ಹೃದಯಾವನೀರದೈಃ

ಎಂದಾರಂಭವಾಗುವ ಘಟಕರ್ಪರಕಾವ್ಯವನ್ನೂ

ಹೃದಯ ಸದಾ ಯಾದವತಃ
ಪಾಪಾಟವ್ಯಾ ದುರೌಸದಾಯಾ ದವತಃ

ಎಂದಾರಂಭವಾಗುವ, ನಲೋದಯ ಕಾವ್ಯವನ್ನೂ ಮುಖ್ಯವಾಗಿ ಹೆಸರಿಸಬೇಕು. ಮುಂದೆ ರತ್ನಾಕರನ ಹರವಿಜಯ ವಾಸುದೇವನ ಯುಧಿಷ್ಠಿರ ವಿಜಯ ಮೊದಲಾದ ಮಹಾಕಾವ್ಯಗಳಲ್ಲೂ ಈ ಪ್ರವೃತ್ತಿಯಿದೆ.

ವಿನೋದಕ್ಕಾಗಿ ವಿದ್ವಾಂಸರ ಗೋಷ್ಠಿಗಳಲ್ಲೂ ರಾಜಸಭೆಗಳಲ್ಲೂ ಪ್ರಾಯಿಕವಾಗಿ ನಡೆಯುತ್ತಿದ್ದ ಸಮಸ್ಯೆಗಳು, ಒಗಟೆಗಳು ಮುಂತಾದ ಚತುರೋಕ್ತಿಗಳಲ್ಲೂ ಅರ್ಥಚಮತ್ಕಾರ ಇರುತ್ತದೆ. ಜಿನಸೇನನ ಆದಿಪುರಾಣದಲ್ಲಿ (ಸು. 900) ಇವನ್ನೊಳಗೊಂಡ ಒಂದು ಅಧ್ಯಾಯವೇ ಇದೆ.

ಕ್ವ ಕೀದೃಕ್ ಶಸ್ಯತೇ ರೇಖಾ ? (ರೇಖೆ ಎಲ್ಲಿ ಹೇಗಿದ್ದರೆ ಶುಭ ?). ಕರಿಣೀಂ ಚ ವದಾನ್ಯೇನ ಪರ್ಯಾಯೇಣ (ಹೆಣ್ಣಾನೆ ಮರಿಯ ಹೆಸರೂ ಅದೇ ಆಗಬೇಕು). ಒಂದು ಉತ್ತರವುಳ್ಳ ಇಂಥ ಎರಡು ಪ್ರಶ್ನೆಗಳ ಒಗಟಿಗೆ ಏಕಾಲಾಪಕವೆಂದು ಹೆಸರು. ಕರೇ(s)ಣುಕಾ ಎಂಬುದು ಉತ್ತರ.

ನಿರ್ದಿಷ್ಟ ರೀತಿಯ ಉತ್ತರವನ್ನು ಊಹಿಸುವ ಶಕ್ತಿಯನ್ನಳೆಯುವ ಪ್ರಶ್ನೆಗಳನ್ನು ಪ್ರಶ್ನೋತ್ತರ ಎನ್ನುತ್ತಾರೆ.

ವರಾಶನೇಷು ಕೋ ರುಚ್ಯಃ ? (ಮೃಷ್ಟಾನ್ನದಲ್ಲಿ ರುಚಿಕರ ಯಾವುದು ?) ಕೋ ಗಂಭೀರೋ ಜಲಾಶಯಃ? (ಆಳವಾದ ಜಲಾಶಯ ಯಾವದು ?) ಕಃ ಕಾಂತಸ್ತವ ತನ್ವಂಗಿ ? (ಚೆಲುವೆಯೆ, ನಿನ್ನ ಕಾಂತ ಯಾರು ?) ಪದಾದಿ ವ್ಯಂಜನೈಃ ಪೃಥಕ್ (ಆದಿಯ ವ್ಯಂಜನ ಮಾತ್ರ ಬೇರೆಯಾಗುವಂತೆ ಉತ್ತರಿಸು). ಈ ಸಮಸ್ಯೆಗೆ ಉತ್ತರ– ಸೂಪಃ (ತೊವ್ವೆ), ಕೂಪಃ (ಬಾವಿ), ಭೂಪಃ

ಆಪಾತತಃ ಅರ್ಥ ಹೊಂದುವ ಒಗಟಿಯೇ ಪ್ರಹೇಲಿಕಾ. ಇಲ್ಲಿ ಸಂಧಿಯನ್ನು ಸರಿಯಾಗಿ ಬಿಡಿಸಿಕೊಂಡರೆ ಅರ್ಥವಾಗುತ್ತದೆ.

ವಟವೃಕ್ಷಃ ಪುರೋಽಯಂ ತೇ ಘನಚ್ಛಾಯಃ ಸ್ಥಿತೋ ಮಹಾನ್ ।
ಇತ್ಯುಕ್ತೋಽಪಿ ನ ತಂ ಘರ್ಮೇ ಶ್ರಿತಃ ಕೋಽಪಿವದಾದ್ಭುತಮ್ ॥

ನೋಡು ನಿನ್ನ ಮುಂದೆಯೇ ದೊಡ್ಡ ಆಲದಮರದ ನೆರಳು ಬೇಕಾದಷ್ಟಿದೆ ಎಂದು ತೋರಿಸಿಕೊಟ್ಟರೂ ಬಿಸಿಲಿನಲ್ಲಿ ಬಳಲುತ್ತಿದ್ದ ಯಾವನೂ ನೆರಳಿಗೆ ಹೋಗಲಿಲ್ಲ. ಈ ಸೋಜಿಗವನ್ನು ವಿವರಿಸು–ಇದು ಒಗಟೆ, ವಟವೃಕ್ಷಃ = ವಟೋ (ವಟುವೇ) + ಋಕ್ಷಃ (ಕರಡಿ) ಎಂದು ಬಿಡಿಸಿದರೆ ಒಗಟೆ ಒಡೆಯುತ್ತದೆ. ವಟು ಕಪ್ಪು ಕರಡಿಯ ಬಳಿಗೆ ಹೋಗದಿದ್ದುದರಲ್ಲಿ ಆಶ್ಚರ್ಯವಿಲ್ಲ.

ಹೀಗೆಯೇ ಬಿಂದುಚ್ಯುತಕ, ಮಾತ್ರಾಚ್ಯುತಕ, ಬಿಂದುಮತೀ ಮುಂತಾದ ಒಗಟೆಗಳು, ಬಿಂದು (ಅನುಸ್ವಾರ)ವೇ ಮೊದಲಾದುವನ್ನು ಹಾಕುವ, ಇಲ್ಲವೆ ತೆಗೆಯುವುದರಿಂದ ಬಿಡಿಸುವಂತಿರುತ್ತದೆ. ಆಶುಕವಿತೆ, ಸಮಸ್ಯಾಪೂರಣ ಇವನ್ನೂ ಇಲ್ಲಿ ನೆನೆಯಬಹುದು.

ಈಚಿನವರೆಗೂ ಚಿತ್ರಕವಿತ್ವ ಪಂಡಿತರಲ್ಲಿ ತುಂಬ ಪ್ರಿಯವಾಗಿತ್ತು. ಚಾಮರಾಜನಗರದ ರಾಮಶಾಸ್ತ್ರಿಗಳು ಸೀತಾರಾವಣಸಂವಾದ–ಝರೀ ಎಂಬ ಶತಕಾರ್ಥವನ್ನು ಬರೆದಿದ್ದಾರೆ. ಇದರಲ್ಲಿ ರಾಮನು ಸೀತೆಗೆ ಹೇಳುವ ಮಾತು, ಅದಕ್ಕೆ ಸೀತೆಯ ಉತ್ತರ, ಎರಡೂ (ಸ್ವಲ್ಪ ವರ್ಣವ್ಯತ್ಯಾಸದಿಂದ) ಒಂದೇ ಪದ್ಯದಿಂದ ಮೂಡುವಂತೆ ರಚನೆಯಿದೆ:

ಜುಷ್ಟೋ ಮಂತ್ರಿಜನೇನ ಸಂಗತಧಿಯಾ ಮದ್ವನ್ನ ಕಶ್ಚಿತ್ ಪ್ರಭುಃ
ಪ್ರಾಪ್ತಾತ್ಯುಜ್ಜ್ವಲ ಕೀರ್ತಿಸಂಹತಿರಹಂ ತೈಸ್ತೈಶ್ಚರಿತ್ರೈರ್ನಿಜೈಃ ।
ರಾಮೋ ನಾರ್ಹತಿ ತುಲ್ಯತಾಂ ಜನಕಜೇ ಸಂಗ್ರಾಮಸಿಂಹಸ್ಯ ಮೇ
ಸರ್ವಂ ಸತ್ಯಮರೇ ಪರಂ ತ್ವನುಚಿತಸ್ಸನ್ನ್ಯಾಸ ಏಕಸ್ತವ ॥

ನನ್ನ ಮಂತ್ರಿಗಳು ಬುದ್ಧಿವಂತರು, ನನ್ನಂಥ ಪ್ರಭುಗಳೇ ಇಲ್ಲ, ನನ್ನ ಸಾಹಸಕೃತಿಗಳಿಂದ ಕೀರ್ತಿ ಬಂದಿದೆ, ಯುದ್ಧದಲ್ಲಿ ವೀರನಾದ ನನಗೆ ರಾಮನೆಂತು ಸರಿಯಾದಾನು ?–ಇದು ರಾವಣನ ಮಾತಾದರೆ ಅದಕ್ಕೆ ಸೀತೆಯ ಉತ್ತರ–ಎಲೋ ರಾವಣ, ನಿನ್ನ ಮಾತೆಲ್ಲ ಸರಿ; ನಿನ್ನ ಸಂನ್ಯಾಸಿ ವೇಷ ಮಾತ್ರ ತಪ್ಪಾಯಿತು; ನಿನ್ನ ಸಂ ಎಂಬ ಉಪವರ್ಗ ಸೇರಿಸಿದ್ದೂ ತಪ್ಪಾಗಿದೆ. ಈ ಶ್ಲೋಕದಲ್ಲಿ ಎಲ್ಲ ಕಡೆಗೂ ಎಂಬುದನ್ನು ಬಿಟ್ಟರೆ ಇರುವ ಅರ್ಥವಿದು.

ಬುದ್ಧಿಯಿಲ್ಲದ ಮಂತ್ರಿಗಳಿಂದ ಕೂಡಿದ ನನ್ನಂಥ ಪ್ರಭು ಯಾರೂ ಇಲ್ಲ. ನನ್ನ ಕೃತಿಗಳಿಂದ ಕೀರ್ತಿಗೆ ಹಾನಿ ಬಂದಿದೆ, ನಾನು ಗ್ರಾಮಸಿಂಹ ಎಂದರೆ ನಾಯಿ.

ಹೀಗೆ ಚಿತ್ರಕಾವ್ಯ ಸಂಸ್ಕೃತ ಭಾಷೆಯ ವೈಶಿಷ್ಟ್ಯವನ್ನು ಎತ್ತಿ ತೋರಿಸುವ ಒಂದು ಪಂಡಿತಪ್ರಿಯ ವಿನೋದವಾಗಿದೆ.

**ಕನ್ನಡದಲ್ಲಿ ಚಿತ್ರಕಾವ್ಯ :** ರುದ್ರಟನು ಸಂಸ್ಕೃತದಲ್ಲಿ ಹೇಳಿದ್ದನ್ನು ಅನುಸರಿಸಿ ನಾಗವರ್ಮ ತನ್ನ ಕಾವ್ಯಾವಲೋಕನದಲ್ಲಿ ಚಿತ್ರಕಾವ್ಯದ ಲಕ್ಷಣ ಹೇಳಿದ್ದಾನಷ್ಟೇ ಅಲ್ಲ; ಉದಾಹರಣೆಗಳನ್ನೂ ಒದಗಿಸಿದ್ದಾನೆ. ಆನಂದವರ್ಧನನೇ ಮುಂತಾದ ಧ್ವನಿವಾದಿಗಳಂತೆ ಆತ ಚಮತ್ಕಾರಪ್ರಧಾನವಾದ ಎಲ್ಲ ಶಬ್ದಾರ್ಥಾಲಂಕಾರಗಳನ್ನೂ ಚಿತ್ರಕಾವ್ಯವೆನ್ನುವುದಿಲ್ಲ. ಯಾವುದಾದರೊಂದು ರೇಖಾಚಿತ್ರದ ಮನೆಗಳಲ್ಲಿ ಅಳವಡುವಂತೆ ಅಕ್ಷರಗಳನ್ನು ಕೂಡಿಸಿ ರಚಿಸಿದ ಶ್ಲೋಕವೇ ಚಿತ್ರ ; ಅದು ಶರ, ಶೂಲ, ಚಾಪ, ಚಕ್ರ, ಅಸಿ, ಆನೆ, ಕುದುರೆ, ರಥ, ಮುರಜ, ಗೋಮೂತ್ರಿಕೆ, ಪದ್ಮ ಮುಂತಾದ ರೇಖಾಚಿತ್ರವಿರಬಹುದು (ಕಾವ್ಯಾವಲೋಕನ) ಎಂದಿದ್ದಾನೆ. ಆದರೆ ಉದಾಹರಣೆ ಕೊಡುವಾಗ ವಿಶೇಷ ಪ್ರಾಚುರ್ಯವಿರುವ ಕಂದವೃತ್ತಾದಿಗಳಿಗಿಂತ ಹೆಚ್ಚಾಗಿ ಅಷ್ಟು ಪ್ರಚಾರವಿಲ್ಲದ ಸಂಸ್ಕೃತ ಅನುಷ್ಟುಪ್ ಛಂದಸ್ಸಿನ ಕನ್ನಡ ಶ್ಲೋಕಗಳನ್ನೇ ಸ್ವಂತವಾಗಿ ರಚಿಸಿ ಉದಾಹರಿಸಿರುವಂತೆ ಭಾಸವಾಗುತ್ತದೆ. ಉದಾಹರಣೆಗೆ, ಶರಚಿತ್ರದ ಉದಾಹರಣೆ :

ಸುಂದರಾಕಾರಸಂಪನ್ನ
ನೆಂದುಮೀ ನೃಪನಂದನಂ ।
ನಂದನಂ ಬುಧಕೀರಾಳಿ
ವೃಂದಕ್ಕೆ ಸಕಲರ್ತುಕಂ ॥

ಆದರೆ ಕನ್ನಡದಲ್ಲಿ ಈ ರೇಖಾಚಿತ್ರಗಳಿಗೆ ಎಷ್ಟು ಮನೆಗಳು, ಹೇಗೆ ರಚನೆ, ಎಂಬ ಸಾಂಪ್ರದಾಯಿಕ ವಿವರಣೆಗಳು ಇಂದು ಸಿಕ್ಕುತ್ತಿಲ್ಲ. ಕನ್ನಡ ಮಹಾಕವಿಗಳಾದರೂ ಈ ಚಿತ್ರಬಂಧಗಳನ್ನು ಹೆಚ್ಚಾಗಿ ಬಳಸಿದಂತೆ ಕಾಣುವುದಿಲ್ಲ. ಮುಂದಿನ ಲಾಕ್ಷಣಿಕರೂ ಚಿತ್ರಕಾವ್ಯವನ್ನು ವಿವರಿಸುವುದಿಲ್ಲ.

ಆದರೆ ಚಿತ್ರಾಯತನ ಅಥವಾ ಚತ್ತಾಣವೆಂಬ ಹಾಡುಗಬ್ಬದ ಉಲ್ಲೇಖ ಕವಿರಾಜಮಾರ್ಗದಲ್ಲಿ ಬರುತ್ತದೆ. ಛಂದೋಂಬುಧಿಯಲ್ಲಿಯೂ ಜಯಕೀರ್ತಿಯ ಛಂದೋನುಶಾಸನದಲ್ಲಿಯೂ ಚಿತ್ರ ಎಂಬ ತ್ರಿಪದಿ ಛಂದಸ್ಸಿನ ಲಕ್ಷಣ ಬರುತ್ತದೆ. ಸಂಸ್ಕೃತ ಮಾನಸೋಲ್ಲಾಸದಲ್ಲಿ, ಕನ್ನಡ ಚಿತ್ರ ಕಥಕರು ಷಟ್ಪದೀಕಥನ ಕಾವ್ಯಗಳನ್ನು ಹೇಳುತ್ತಿದ್ದ ಉಲ್ಲೇಖವಿದೆ. ಚಿಕುಪಾಧ್ಯಾಯನ ಚಿತ್ರಶತಕ ಸಾಂಗತ್ಯದಲ್ಲಿ ಒಗಟೆಯಂಥ ಪದ್ಯಗಳನ್ನೇ ಹೋಲಿಸಬಹುದು. ಉದಾಹರಣೆ ; ಮುತ್ತಿರೆ ನರೆಯೆಂಬ... ಕತ್ತಿಯ ಕಂಡು ಗೇಣಿಂಬ, ಪತ್ತಿಯ ನೂಲೆಂಬ ಕನ್ನಡದೊಳು ರಂಗಮುತ್ತಿನ ಮಾತು ಪಾಸಟಿಯೇ II (ಕರ್ನಾಟಕ ಕವಿಚರಿತೆ). (ಕೆ.ಕೆ.)

**ಚಿತ್ರಕೂಟ :** ಪುರಾಣಪ್ರಸಿದ್ಧವಾದ ಒಂದು ಪರ್ವತ ; ಒಂದು ಪ್ರಾಚೀನ ಪುಣ್ಯಕ್ಷೇತ್ರ. ಉತ್ತರ ಪ್ರದೇಶದ ಬಾಂದಾ ಜಿಲ್ಲೆಯಲ್ಲಿದೆ. ಝಾನ್ಸಿ–ಮಾಣಿಪುರ ರೈಲುಮಾರ್ಗದಲ್ಲಿ ಚಿತ್ರಕೂಟ ಎಂಬ ರೈಲುನಿಲ್ದಾಣ ಈ ಪರ್ವತದಿಂದ ನಾಲ್ಕು ಮೈಲು ದೂರದಲ್ಲಿದೆ. ಇದರ ಸಮೀಪದಲ್ಲಿ ಪಯೋಷ್ಣೀ ನದಿ ಹರಿಯುತ್ತದೆ. ರಾಮ, ಲಕ್ಷ್ಮಣ, ಸೀತೆ ವನವಾಸಕ್ಕೆ ಹೊರಟಾಗ ಅವರ ಮೊದಲ ನಿಲ್ದಾಣವಾದದ್ದು ಈ ಚಿತ್ರಕೂಟ ಪರ್ವತ. ಇಲ್ಲಿಯವರು ಆಶ್ರಮವನ್ನು ಕಟ್ಟಿ ವಾಸಿಸುತ್ತಿರುವಾಗ ಭರತ ಬಂದು ದಶರಥನ ಮರಣವಾರ್ತೆಯನ್ನು ತಿಳಿಸಿ, ರಾಮನನ್ನು ಅಯೋಧ್ಯೆಗೆ ಹಿಂದಿರುಗಿಸಲು ಪ್ರಯತ್ನಿಸಿ ಸೋತು ಕೊನೆಗೆ ಅಣ್ಣನ ಪಾದುಕೆಗಳನ್ನು ತೆಗೆದುಕೊಂಡು ಹೋಗಿ ರಾಮನ ಪ್ರತಿನಿಧಿಯಾಗಿ ತಾನು ರಾಜ್ಯವಾಳಿದ. ಕಾಕಾಸುರನ ಪ್ರಕರಣ ನಡೆದದ್ದೂ ಇಲ್ಲಿಯೇ. ಇದರಿಂದಾಗಿಯೇ ಚಿತ್ರಕೂಟ ಪರ್ವತ ಶ್ರೀರಾಮಕ್ಷೇತ್ರವಾಗಿ ಪ್ರಸಿದ್ಧವಾಯಿತು.

ರಾಮಾಯಣವಲ್ಲದೆ ಮಹಾಭಾರತ, ಬೃಹತ್‌ಸಂಹಿತೆ ಮುಂತಾದ ಗ್ರಂಥಗಳಲ್ಲೂ ಚಿತ್ರಕೂಟದ ಉಲ್ಲೇಖ ಬಂದಿದೆ. ಈ ಪುಣ್ಯಕ್ಷೇತ್ರದಲ್ಲಿ ಧರ್ಮರಾಜ ತಪಸ್ಸು ಮಾಡಿದ. ನಳ ಇಲ್ಲಿಯೇ ತಪಸ್ಸುಮಾಡಿ ಕಳೆದುಹೋದ ತನ್ನ ರಾಜ್ಯವನ್ನು ಮತ್ತೆ ಪಡೆದ.

ಪ್ರಮೋದವನ, ಸ್ಫಟಿಕಶಿಲಾ, ಕಾಮತಾನಾಥ, ಗುಪ್ತಗೋದಾವರಿ, ಜಾನಕೀಕುಂಡ, ಭರತಕೂಪ, ಹನುಮಾನ್‌ಧಾರಾ, ರಾಮಶಯ್ಯಾ–ಇವು ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳು. ಹನುಮಾನ್‌ಧಾರೆಯ ನೀರಿನಲ್ಲಿ ಸ್ನಾನಮಾಡುವುದರಿಂದ ಕುಷ್ಠರೋಗ ಪರಿಹಾರ ವಾಗುತ್ತದೆಂದು ನಂಬಲಾಗಿದೆ. ರಾಮನವಮಿ, ದೀಪಾವಳಿ ಮತ್ತು ಕಾರ್ತಿಕ ಅಮಾವಾಸ್ಯೆ ಯಂದು ಇಲ್ಲಿ ದೊಡ್ಡ ಜಾತ್ರೆ ಸೇರುತ್ತದೆ. (ಜಿ.ಎಚ್.)

**ಚಿತ್ರಗುಪ್ತ[1] :** ಸೂರ್ಯವಂಶದ ಒಬ್ಬ ರಾಜ. ಈತನ ಮೊದಲ ಹೆಸರು ಚಿತ್ರ. ಶುದ್ಧಮನಸ್ಸಿನಿಂದ ಸೂರ್ಯದೇವನನ್ನು ಬಹುಕಾಲ ಆರಾಧಿಸಿ ಆತನ ಅನುಗ್ರಹದಿಂದ ಸರ್ವಜ್ಞತ್ವವನ್ನು ಸಂಪಾದಿಸಿದ್ದ. ಇದನ್ನು ತಿಳಿದ ಯಮ ಈತನನ್ನು ತನ್ನ ಲೇಖಕನನ್ನಾಗಿ ಮಾಡಿಕೊಂಡರೆ ತಾನು ನೆಮ್ಮದಿಯಾಗಿರಬಹುದೆಂದು ಭಾವಿಸಿ, ತನ್ನ ಕಿಂಕರರ ಮೂಲಕ ಸಶರೀರವಾಗಿ ತನ್ನ ಲೋಕಕ್ಕೆ ಕರೆಸಿಕೊಂಡು ಚಿತ್ರಗುಪ್ತನೆಂದು ಹೆಸರಿಟ್ಟು ತನ್ನ ಲೇಖಕನನ್ನಾಗಿ ನೇಮಿಸಿಕೊಂಡ–ಎಂಬುದಾಗಿ ಸ್ಕಾಂದಪುರಾಣದಲ್ಲಿ ಹೇಳಿದೆ. ಅಂದಿನಿಂದ ವಿಶ್ವದ ಸಕಲ ಪ್ರಾಣಿಗಳ ಶುಭಾಶುಭ ಕರ್ಮಗಳನ್ನು ಬರೆದಿಡುವುದು ಈತನ ಕೆಲಸವಾಯಿತು. ಮರಣಾನಂತರ ಜೀವಿಗಳು ಯಮಲೋಕಕ್ಕೆ ಹೋದಾಗ ಅವಕ್ಕೆ ಈತನ ವರದಿಯ ಆಧಾರದ ಮೇಲೆ ಸ್ವರ್ಗ ಅಥವಾ ನರಕಗಳು ಪ್ರಾಪ್ತವಾಗುತ್ತವೆಯಂತೆ.

ಯಮನನ್ನೂ ಒಮ್ಮೊಮ್ಮೆ ಚಿತ್ರಗುಪ್ತ ಎಂದು ಕರೆಯುವುದಿದೆ.

ಯೆಹೂದ್ಯರು ಕ್ರೈಸ್ತರು ಮತ್ತು ಮಹಮ್ಮದೀಯರು ಕೂಡ ಇಂಥ ಒಂದು ದೇವತೆಯಲ್ಲಿ (ರಿಕಾರ್ಡಿಂಗ್ ಏಂಜಲ್) ನಂಬಿಕೆ ಇಟ್ಟುಕೊಂಡಿದ್ದಾರೆ.

(ಆರ್.ಎಸ್.ಎಸ್.)

**ಚಿತ್ರಗುಪ್ತ [2] :** ಕನ್ನಡದ ಒಂದು ದಿನಪತ್ರಿಕೆ ಹಾಗೂ ವಾರಪತ್ರಿಕೆ. 1928ರ ಡಿಸೆಂಬರ್ ಅಂತ್ಯದಲ್ಲಿ ಬೆಂಗಳೂರಿನಿಂದ ಪ್ರಕಟವಾಗತೊಡಗಿತು. ಪತ್ರಿಕೆಯ ಸಂಪಾದಕರು ಮತ್ತು ಮುದ್ರಕರು ಎಚ್. ಕೆ. ವೀರಣ್ಣಗೌಡ. ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯಲ್ಲಿದ್ದ ಅವರ ಗ್ರಾಮಸೇವಾ ಪ್ರೆಸ್‌ನಲ್ಲಿ ಮುದ್ರಿತವಾಗಿ ಅಲ್ಲಿಂದಲೇ ಪ್ರಕಟವಾಗುತ್ತಿತ್ತು. ಈ ಪತ್ರಿಕೆ ಕೇವಲ 3 ವರ್ಷಗಳ ಕಾಲ ನಡೆದರೂ ನಿರ್ಭಯ, ನಿರ್ದಾಕ್ಷಿಣ್ಯ, ನಿಷ್ಪಕ್ಷಪಾತ ಧ್ಯೇಯಗಳಿಂದ ಕೂಡಿ, ಅವಕ್ಕೆ ಅನುಸಾರವಾಗಿ ದೇಶಸೇವೆ ಸಲ್ಲಿಸಿ ಕೀರ್ತಿಗಳಿಸಿತ್ತು. ಆಗಿನ ಮೈಸೂರು ಸಂಸ್ಥಾನದ ದಿವಾನ್ ಮಿರ್ಜಾ ಇಸ್ಮೈಲರ ಆಡಳಿತದ ಲೋಪದೋಷಗಳನ್ನು ಕಟುವಾಗಿ ಟೀಕಿಸುತ್ತಿದ್ದುದರಿಂದ ಪತ್ರಿಕೆಯನ್ನು ಸರ್ಕಾರದವರು ಕ್ರೂರದೃಷ್ಟಿಯಿಂದ ನೋಡುತ್ತಿದ್ದರು. ಮೊದಮೊದಲು ಸಂಪಾದಕರನ್ನು ವಶಪಡಿಸಿಕೊಳ್ಳಲು ಮಿರ್ಜಾ ಅವರು ಪ್ರಯತ್ನಿಸಿದರು. ಅವರು ತಮ್ಮನ್ನು ಕಾಣಬೇಕೆಂದು ಸ್ನೇಹಿತರೊಬ್ಬರ ಮುಖಾಂತರ ಹೇಳಿಕಳುಹಿಸಿದರು. ಒಮ್ಮೆ ಸತ್ಕಾರಕೂಟವೊಂದರಲ್ಲಿ ಸಂಪಾದಕರಿದ್ದ ಸ್ಥಳಕ್ಕೆ ಅವರಾಗಿ ಬಂದು, ಕ್ಷೇಮಸಮಾಚಾರ ವಿಚಾರಿಸಿ, ತಮ್ಮನ್ನು ಕಾಣಲು ಬರಬೇಕೆಂದು ಸ್ವತಃ ಆಹ್ವಾನಿಸಿದರು. ದಿವಾನರನ್ನು ಕಂಡರೆ ತಾವೆಲ್ಲಿ ಅವರ ಬಲೆಗೆ ಬೀಳಬೇಕಾಗುವುದೋ ಎಂಬ ಶಂಕೆಯಿಂದ ಸಂಪಾದಕರು ಎಂದೂ ಅವರನ್ನು ಭೇಟಿ ಮಾಡಲಿಲ್ಲ. ಕ್ರಮೇಣ ಸರ್ಕಾರದ ಆಗ್ರಹ ತೀವ್ರವಾಯಿತು. ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಸರ್ಕಾರಿ ಪ್ರಕಟಣೆಗಳು ನಿಂತವು. ಮುದ್ರಣಾಲಯಕ್ಕಾಗಿ ಬ್ಯಾಂಕಿನಿಂದ ಪಡೆದಿದ್ದ ಸಾಲವನ್ನು ನಿಂತ ಹೆಜ್ಜೆಯಲ್ಲೇ ಕೊಡಬೇಕೆಂದು ಬ್ಯಾಂಕಿನಿಂದ ತಗಾದೆ ಬಂತು. ಪತ್ರಿಕೆಯ ಧೋರಣೆಯಿಂದ ದಿವಾನರು ಕುಪಿತರಾಗಿದ್ದಾರೆಂದೂ, ಪತ್ರಿಕೆಯನ್ನು ನಿಲ್ಲಿಸಬೇಕೆಂದೂ, ಮುದ್ರಣಾಲಯ ಅಭಿವೃದ್ಧಿಗೊಳಿಸಲು ಇನ್ನೂ ಹೆಚ್ಚಿನ ಸಾಲ ಕೊಡುವುದಾಗಿಯೂ ಬ್ಯಾಂಕಿನ ಅಧಿಕಾರಿಗಳಿಂದ ಸಲಹೆ ಬಂತು. ಪತ್ರಿಕೆ ನಿಲ್ಲಿಸಿದರೆ ಮುದ್ರಣಾಲಯದ ಅಗತ್ಯವೇ ಇಲ್ಲವೆಂಬುದು ಸಂಪಾದಕರ ಉತ್ತರ. ಪತ್ರಿಕೆಯ ಧ್ಯೇಯಧೋರಣೆಗಳು ಬದಲಾಗಲಿಲ್ಲ.

ಬೆಂಗಳೂರಿನಲ್ಲಿ 1929ರಲ್ಲಿ ನಡೆದ ಗಣಪತಿ ಗಲಭೆಯ ಸಂಬಂಧ ವಿಚಾರಣೆ ನಡೆಸಲು ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸರ್ಕಾರ ರಚಿಸಿದ್ದ ವಿಚಾರಣಾ ಸಮಿತಿಯ ವರದಿಯನ್ನು ಬಹಿರಂಗಪಡಿಸಬೇಕೆಂದು ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಗಳಲ್ಲಿ ಪ್ರತಿನಿಧಿಗಳು ಎಷ್ಟೇ ಒತ್ತಾಯಪಡಿಸಿದರೂ ಸರ್ಕಾರ ಅದನ್ನು ಪ್ರಕಟಿಸಲಿಲ್ಲ. ಸರ್ಕಾರದ ಬೀಗಮುದ್ರೆಯಲ್ಲಿದ್ದ ಆ ವರದಿಯ ಪ್ರತಿಯೊಂದನ್ನು ಚಿತ್ರಗುಪ್ತದ ಸಂಪಾದಕರು ಹೇಗೋ ಪಡೆದುಕೊಂಡು ಚಿತ್ರಗುಪ್ತ ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟಿಸುತ್ತ ಬಂದರು. ಅನಂತರ ಸರ್ಕಾರ ವರದಿಯನ್ನು ಪುಸ್ತಕರೂಪದಲ್ಲಿ ಪ್ರಕಟಿಸಿತು. ಅದೇ ರೀತಿ 1928–29ರಲ್ಲಿ ಬೆಂಗಳೂರು ಜಿಲ್ಲಾ ಬೋರ್ಡು ಕಬ್ಬನ್ ಪಾರ್ಕಿನಲ್ಲಿ ನಡೆಸಿದ ವಸ್ತುಪ್ರದರ್ಶನದಲ್ಲಿ ಆಡಳಿತಗಾರರು ಲಕ್ಷಾಂತರ ರೂಪಾಯಿ ದುಂದುವೆಚ್ಚ ಮಾಡಿದ್ದರ ಬಗ್ಗೆ ಸರ್ಕಾರದ ತನಿಖೆ ಶಾಖೆ ಸರ್ಕಾರಕ್ಕೆ ಕೊಟ್ಟಿದ್ದ ವರದಿಯನ್ನೂ ಸರ್ಕಾರ ಪ್ರಕಟಿಸಲಿಲ್ಲ. ಆ ವರದಿಯೂ ಚಿತ್ರಗುಪ್ತ ಪತ್ರಿಕೆಯಲ್ಲಿ ಪ್ರಕಟವಾಯಿತು. ಅನಂತರ ಆ ವಸ್ತುಪ್ರದರ್ಶನ ನಡೆಯಲಿಲ್ಲ. ದಾವಣಗೆರೆಯಲ್ಲಿ ನಡೆದ ಹಿಂದೂ–ಮುಸ್ಲಿಂ ಗಲಭೆಯ ನಿಜಾಂಶಗಳನ್ನು ವಿವರವಾಗಿ ಪ್ರಕಟಿಸಬಾರದೆಂದು ಸರ್ಕಾರದ ಪ್ರಯತ್ನವಾಗಿತ್ತು. ಆದರೆ ಚಿತ್ರಗುಪ್ತ ಪತ್ರಿಕೆಯಲ್ಲಿ ಅದರ ನಿಜಾಂಶಗಳು ಪ್ರಕಟವಾದುವು. ಪತ್ರಿಕೆಯ ಈ ಬಗೆಯ ಧೋರಣೆಯಿಂದ ಸರ್ಕಾರದ ಕಿರುಕುಳ ಅಧಿಕವಾಯಿತು. ಪತ್ರಿಕೆಯನ್ನು ಪ್ರೋತ್ಸಾಹಿಸಬಾರದೆಂಬ ಸರ್ಕಾರದ ಇಚ್ಛೆಯನ್ನು ಕಾರ್ಯಗತಗೊಳಿಸಲು ಕೆಲವು ಅಧಿಕಾರಿಗಳು ಪ್ರಯತ್ನ ನಡೆಸಿದರು; ಪ್ರಭಾವ ಬೀರಿದರು. ನ್ಯಾಯಲಯಗಳಲ್ಲಿ ನಡೆಯುತ್ತಿದ್ದ ಮೊಕದ್ದಮೆಗಳ ಬಗ್ಗೆ ವಕೀಲರುಗಳು ನೀಡುತ್ತಿದ್ದ ಪ್ರಕಟಣೆಗಳನ್ನು ಚಿತ್ರಗುಪ್ತ ಪತ್ರಿಕೆಯಲ್ಲಿ ಪ್ರಕಟಿಸದೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಕೆಲವು ನ್ಯಾಯವಾದಿಗಳಿಗೆ ಸರ್ಕಾರ ಒತ್ತಾಯ ಮಾಡಿತು. ಸಂಸ್ಥಾನದ ಹಲವೆಡೆಗಳಲ್ಲಿದ್ದ ಪತ್ರಿಕಾ ಪ್ರತಿನಿಧಿಗಳು ಕೊಡಬೇಕಾದ ಹಣವನ್ನು ಕೊಡದೆ ತೊಂದರೆ ನೀಡಿದರು. ಪತ್ರಿಕೆ ಮತ್ತು ಮುದ್ರಣಾಲಯಗಳ ಮೇಲಿದ್ದ ಸಾಲಕ್ಕಾಗಿ ಸಾಲಿಗರು ನ್ಯಾಯಾಲಯದಲ್ಲಿ ದಾವೆ ಹೂಡಿ ಡಿಕ್ರಿ ಪಡೆದುಕೊಂಡರು. ಉಜ್ವಲ ರಾಷ್ಟ್ರೀಯ ಕನ್ನಡ ದಿನಪತ್ರಿಕೆಯೆಂದು ಖ್ಯಾತಿ ಪಡೆದಿದ್ದ ಚಿತ್ರಗುಪ್ತ ದಿನ ಪತ್ರಿಕೆಯೂ, ಅದೇ ಹೆಸರಿನ ವಾರಪತ್ರಿಕೆಯೂ ಹೀಗೆ ನಾನಾ ಕೋಟಲೆಗಳಿಂದಲೂ ಆರ್ಥಿಕ ಮುಗ್ಗಟ್ಟಿನಿಂದಲೂ 1931ರ ಅಂತ್ಯದಲ್ಲಿ ಅನಿವಾರ್ಯವಾಗಿ ನಿಂತುಹೋಯಿತು. ಸಂಪಾದಕರು ಭಾರಿ ಸಾಲದ ಹೊರೆ ಹೊರಬೇಕಾಯಿತು.

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿತವಾದ ಮೇಲೆ ಕೆಲವು ಜನ ಸೇರಿ ಖಾಸಗಿ ಸಂಸ್ಥೆಯೊಂದನ್ನು ಸ್ಥಾಪಿಸಿ ಪುನಃ ಚಿತ್ರಗುಪ್ತ ಪತ್ರಿಕೆಯನ್ನೂ ವೀರಣ್ಣಗೌಡರ ನೇತೃತ್ವದಲ್ಲಿ ಹೊರಡಿಸಿದರು. ಅದೂ ಕೇವಲ ಒಂದು ವರ್ಷ ಕಾಲ ನಡೆದು ಹಣದ ಮುಗ್ಗಟ್ಟಿನಿಂದ ನಿಂತಿತು. ಪತ್ರಿಕೆಯ ಉಪಸಂಪಾದಕರಾಗಿದ್ದ ಎಂ. ಎಸ್. ಭಾರದ್ವಾಜರ ಸಂಪಾದಕತ್ವದಲ್ಲಿ ವಾರಪತ್ರಿಕೆ ಕೆಲವು ತಿಂಗಳುಗಳ ಕಾಲ ನಡೆಯಿತು. ಆಮೇಲೆ ಅದೂ ನಿಂತುಹೋಯಿತು. (ಎಚ್.ಕೆ.ವಿ.)

**ಚಿತ್ರದುರ್ಗ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ ಹಾಗೂ ತಾಲ್ಲೂಕು ; ಅವುಗಳ ಆಡಳಿತ ಕೇಂದ್ರ. ಜಿಲ್ಲೆ ಉ.ಅ. 13$^{0}$ 34’–15$^{0}$02’ ಮತ್ತು ಪೂ.ರೇ 75$^{0}$ 37’–77$^{0}$ 01’ ನಡುವೆ ಇದೆ. ಉತ್ತರದಲ್ಲಿ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಉದ್ದಕ್ಕೆ ಉ.ಅ. 15$^{0}$ 02’ ವರೆಗೆ ಚಾಚಿಕೊಂಡಿದೆ. ಜಿಲ್ಲೆಯ ಉಳಿದ ಭಾಗ ಉ.ಅ. 14$^{0}$ 40’ ವರೆಗೆ ಮಾತ್ರ ಹಬ್ಬಿದೆ. ಉತ್ತರ–ದಕ್ಷಿಣವಾಗಿ ಜಿಲ್ಲೆಯ ಗರಿಷ್ಠ 137 ಕಿಮೀ. ಪೂರ್ವ–ಪಶ್ಚಿಮವಾಗಿ 160 ಕಿಮೀ ಉತ್ತರದ ಚಾಚು ಸು. 51 ಕಿಮೀ ಉದ್ದ ಮತ್ತು 10–20 ಕಿಮೀ ಅಗಲವಾಗಿದೆ. ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ, ಆಗ್ನೇಯದಲ್ಲಿ ತುಮಕೂರು ಜಿಲ್ಲೆ, ನೈರುತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ, ವಾಯವ್ಯದಲ್ಲಿ ಧಾರವಾಡ ಜಿಲ್ಲೆ–ಇವು ಮೇರೆಗಳು. ಇದರ ವಿಸ್ತೀರ್ಣ 10,802,6 ಚ.ಕಿಮೀ. ಜನಸಂಖ್ಯೆ 15,17, 896 (2001).

ಇಡೀ ಜಿಲ್ಲೆ ವೇದಾವತಿ ಅಥವಾ ಹಗರಿ ನದೀಕಣಿವೆ ಪ್ರದೇಶ. ವಾಯವ್ಯ ಗಡಿಯಲ್ಲಿ ಸ್ವಲ್ಪದೂರ ತುಂಗಭದ್ರಾ ನದಿ ಹರಿಯುತ್ತದೆ. ದಕ್ಷಿಣ–ಆಗ್ನೇಯದಿಂದ ಉತ್ತರ–ವಾಯವ್ಯದ ಕಡೆಗೆ ಸಮಾಂತರದಲ್ಲಿ ಸಾಗುವ ತಗ್ಗಿನ ಬೆಟ್ಟಗಳ ಸಾಲುಗಳು ಬಹಳಮಟ್ಟಿಗೆ ನಗ್ನಶಿಲಾಮಯ. ಇವುಗಳ ನಡುನಡುವೆ ಕಣಿವೆಗಳುಂಟು. ಪೂರ್ವಸಾಲು ಹಿರಿಯೂರಿನ ಪಶ್ಚಿಮದಿಂದ ಚಿತ್ರದುರ್ಗದವರೆಗೆ (984) ಹಬ್ಬಿ, ಸ್ವಲ್ಪದೂರ ಬಿಟ್ಟು ಕಣಕುಪ್ಪ ಬೆಟ್ಟದಲ್ಲಿ ಮುಂದುವರಿದು ಜಿಲ್ಲೆಯ ಎಲ್ಲೆಯವರೆಗೂ ಸಾಗುತ್ತದೆ. ಈ ಸಾಲಿನ ಉನ್ನತ ಶಿಖರಗಳಲ್ಲಿ ಜೋಗಿಮರಡಿ ಒಂದು ; ಚಿತ್ರದುರ್ಗ ಪಟ್ಟಣಕ್ಕೆ ದಕ್ಷಿಣದಲ್ಲಿದೆ. ಪಶ್ಚಿಮ ಶ್ರೇಣಿ ಹೊಸದುರ್ಗದಲ್ಲಿ (983) ಆರಂಭವಾಗಿ ಮಾಯಕೊಂಡದ ಮೂಲಕ ಅಣಜಿಗೆ ಹಬ್ಬಿದೆ. ಮೊಳಕಾಲ್ಮೂರಿನ ಬಳಿ ಕೆಲವು ಶಿಲಾಬೆಟ್ಟಗಳುಂಟು. ಇವುಗಳಲ್ಲಿ ಮುಖ್ಯವಾದವು ನುಂಕೆಭೈರವ ಬೆಟ್ಟ (921), ಜಟಿಂಗರಾಮೇಶ್ವರ ಬೆಟ್ಟ (1,05 ಮೀ) ಮತ್ತು ಶಾಂತಿಗುಡ್ಡ (791 ಮೀ) ಈ ಪ್ರದೇಶ ವಿಶಿಷ್ಟ ಸೌಂದರ್ಯದಿಂದ ಕೂಡಿದ್ದೆಂದು ಬ್ರೂಸ್‌ಫೂಟ್ ಬರೆದಿದ್ದಾನೆ. ಬೆಟ್ಟಗಳ ಶ್ರೇಣಿಗಳನ್ನು ಬಿಟ್ಟರೆ ಜಿಲ್ಲೆಯ ಉಳಿದ ಭಾಗ ಮಟ್ಟಸವಾದ ಮೈದಾನ. ಅಂಥ ವೈವಿಧ್ಯವೇನೂ ಇಲ್ಲ. ಇಡೀ ಜಿಲ್ಲೆ ಸಮುದ್ರಮಟ್ಟದಿಂದ ಸಾಮಾನ್ಯವಾಗಿ 2,000’ ಎತ್ತರದಲ್ಲಿದೆ. ಚಿತ್ರದುರ್ಗದಲ್ಲಿ ನೆಲದ ಔನ್ನತ್ಯ 726 ಮೀ, ಹಿರಿಯೂರಿನಲ್ಲಿ 1965 ಮೀ, ಹರಿಹರದಲ್ಲಿ 558 ಮೀ, ಕಣಕುಪ್ಪೆ ಬೆಟ್ಟ 829 ಮೀ ಇದೆ. ಹೊಸದುರ್ಗ ತಾಲ್ಲೂಕಿನ ಹಲರಾಮೇಶ್ವರ ಗುಡ್ಡ (1181 ಮೀ) ಈ ಜಿಲ್ಲೆಯ ಅತ್ಯುನ್ನತ ಶಿಖರ. ಚಿತ್ರದುರ್ಗ ನಗರದ ದಕ್ಷಿಣದಲ್ಲಿರುವ ಜೋಗಿಮರಡಿ ಪ್ರದೇಶದ ಬೀರನದುರ್ಗದ (ಬೀರನಗುಟ್ಟ) ಎತ್ತರ 1177 ಮೀ ಎಚ್ಚಲುಗುಡ್ಡ (1159 ಮೀ), ಜೋಗಿಮಟ್ಟಿ (1160 ಮೀ) – ಇವು ಇನ್ನೆರಡು ಮುಖ್ಯ ಶಿಖರಗಳು.



ವಾಣಿವಿಲಾಸ ಸಾಗರ, ಹಿರಿಯೂರು

ಚಿತ್ರದುರ್ಗದ ವಾಯವ್ಯದಲ್ಲಿ ತುಂಗಭದ್ರಾ ನದಿ 47 ಕಿಮೀ ದೂರ, ಈ ಜಿಲ್ಲೆಗೂ ಧಾರವಾಡ ಜಿಲ್ಲೆಗೂ ನಡುವೆ ಹರಿಯುತ್ತದೆ. ನದಿಯ ಕಡಿದಾದ ಬಲದಂಡೆ ಈ ಜಿಲ್ಲೆಯ ಅಂಚು. ಏತದ ಮೂಲಕ ನೀರಾವರಿ ಸಾಧ್ಯ. ಲಕ್ಕವಳ್ಳಿಯ ಭದ್ರಾ ಜಲಾಶಯದಿಂದ ತೋಡಿರುವ ಎರಡು ನಾಲೆಗಳು ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳಲ್ಲಿ ಸಾಗುತ್ತವೆ. ವೇದಾವತಿ ನದಿ ಈ ಜಿಲ್ಲೆಯಲ್ಲಿ 333 ಕಿಮೀ ದೂರ ಹರಿಯುತ್ತದೆ. ಬ್ರಹ್ಮಗಿರಿ ದುರ್ಗದ ದಕ್ಷಿಣಕ್ಕಿರುವ ಮಾರಿಕಣಿವೆಯಲ್ಲಿ ಈ ನದಿಗೆ ಅಡ್ಡಲಾಗಿ ಕಟ್ಟೆ ಕಟ್ಟಿ ವಾಣಿವಿಲಾಸಸಾಗರ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಜಲಾಶಯ ಹಿರಿಯೂರು ತಾಲ್ಲೂಕಿನ ಜಮೀನುಗಳಿಗೆ ನೀರು ಪೂರೈಸುತ್ತದೆ. ನದಿ ಮುಂದಕ್ಕೆ ಹಿರಿಯೂರಿನ ಬಳಿ ಹರಿದು

ಚಳ್ಳಕೆರೆ ತಾಲ್ಲೂಕಿನ ಘಟಪರ್ತಿಯ ಬಳಿ ಜಿಲ್ಲೆಯ ಗಡಿಯನ್ನು ಬಿಟ್ಟು ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಜನಗನಹಳ್ಳ (ಚಿಕ್ಕಹಗರಿ) ಎಂಬುದು ಚಿತ್ರದುರ್ಗ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ಹರಿದು ವೇದಾವತಿಯನ್ನು ಸೇರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಈ ತೊರೆಯ ಉದ್ದ 129 ಕಿಮೀ ಭಟ್ಟರ ಹಳ್ಳಿ, ದೇವಸಮುದ್ರ ಮತ್ತು ಮಲ್ಲಳ್ಳಿ ಕೆರೆಗಳಿಗೆ ನೀರು ಒದಗುವುದು ಇದರಿಂದ, ಸ್ವರ್ಣಮುಖಿ ನದಿ ತುಮಕೂರು ಜಿಲ್ಲೆಯಲ್ಲಿ ಹುಟ್ಟಿ ಹಿರಿಯೂರು ತಾಲ್ಲೂಕಿನ ಇಕ್ಕನೂರು ಬಳಿ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಿ 7 ಕಿಮೀ ದೂರ ಹರಿದು ವೇದಾವತಿಯನ್ನು ಸೇರುತ್ತದೆ ; ಕರಿಯಾಲದ ಬಳಿ ಅಣೆಕಟ್ಟು ಅದರ ನೀರನ್ನು ವ್ಯವಸಾಯಕ್ಕೆ ಬಳಸಲಾಗಿದೆ. ಹೊಳಲ್ಕೆರೆಯ ಪಶ್ಚಿಮ ಭಾಗದ ಬೆಟ್ಟಗಳಲ್ಲಿ ಹುಟ್ಟಿ, ಚಿತ್ರದುರ್ಗ ಜಿಲ್ಲೆಯಲ್ಲಿ 72 ಕಿಮೀ ದೂರ ಹರಿದು, ಹರಿಹರದ ಬಳಿ ತುಂಗಭದ್ರಾ ನದಿಯನ್ನು ಸೇರುವ ತೊರೆ ಸ್ಯಾಗಲಹಳ್ಳ. ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳ ವ್ಯವಸಾಯಕ್ಕೆ ಈ ತೊರೆ ಉಪಯುಕ್ತ. ಈ ಜಿಲ್ಲೆಯಲ್ಲಿ ಹರಿಯುವ ಗರಣಿ ಮತ್ತು ನಾಯಕನಹಟ್ಟಿ ತೊರೆಗಳು ಹಿರಿಯೂರಿಗೆ 11 ಕಿಮೀ ದೂರದಲ್ಲಿ ವೇದಾವತಿಯನ್ನು ಸೇರುತ್ತದೆ. ಜಿಲ್ಲೆಯಲ್ಲಿ ಮಳೆ ಕಡಿಮೆ. ಬೇಸಿಗೆಯ ತಾಪ ಹೆಚ್ಚು ; ಚಳಿಗಾಲ ಹಿತಕರ. ಚಳಿಗಾಲದ ಸರಾಸರಿ ಉಷ್ಣತೆ 27.9$^0$ ಸೆಂ.(82.3ಲಿ ಫ್ಯಾ.) ಬೇಸಿಗೆಯಲ್ಲಿ 36.2$^0$ ಸೆಂ.(97.2$^0$ ಫ್ಯಾ.)–41ಸೆಂ.(106$^0$ಫ್ಯಾ). ಸರಾಸರಿ ವಾರ್ಷಿಕ ಮಳೆ 379.3 ಮಿಮೀ (22.81").

ಚಿತ್ರದುರ್ಗ ಜಿಲ್ಲೆಯಲ್ಲಿ ಕುರುಚಲು ಕಾಡುಗಳೇ ಹೆಚ್ಚು. ಮಳೆ ಹೆಚ್ಚಾಗಿಲ್ಲದ ಭಾಗಗಳಲ್ಲಿ ಹುಣಸೆ, ಮಾವು, ಹಿಪ್ಪೆ ಮರಗಳು, ಜಾಲಿ ಜಾತಿಯ ಗಿಡಗಳು ಮತ್ತು ಸೀತಾಫಲ ಬೆಳೆಯುತ್ತವೆ. ತಂಪು ತಿಂಗಳುಗಳಲ್ಲಿ ಚಳ್ಳಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳ ಅಮೃತ ಮಹಲ್ ಹುಲ್ಲುಗಾವಲುಗಳು ಅಚ್ಚ ಹಸಿರಾಗಿರುತ್ತವೆ. ಹೊಸದುರ್ಗ ಬಳಿಯ ವೇದಾವತಿ ಕಣಿವೆ ಸಸ್ಯಸಂಪದ್ಭರಿತವಾದ್ದು. ಜೋಗಿಮಟ್ಟಿ ಬೆಟ್ಟಗಳ ಬಳಿ ಬಿದಿರುಮೆಳೆಗಳು ಉಂಟು. ಜಿಲ್ಲೆಯ ಅರಣ್ಯ ಭಾಗ 2,13,813 ಎಕರೆಯಲ್ಲಿ ಚೌಬೀನೆಗೆ ಯೋಗ್ಯವಾದ ಕಮ್ಮರ, ಸೋಮೆ (ಸ್ವಾಮಿ ಮರ) ಮತ್ತು ಕೆಂಪು ಖೈರ ಮರಗಳು ಅಲ್ಲಿ ಬೆಳೆಯುತ್ತವೆ. ಇತರ ಬಗೆಯ ಮರಗಳು ದಿಂಡಿಗ, ಬೇವು, ಕಕ್ಕೆ, ಚುಜ್ಜಲು. ತಂಗಡಿ ಮತ್ತು ಬಂದರಿಕೆ ಗಿಡಗಳು ವ್ಯಾಪಕವಾಗಿ ಬೆಳೆದುಕೊಂಡಿವೆ.

ಬೆಟ್ಟಗುಡ್ಡಗಳಲ್ಲಿ ಚಿರತೆ, ಕತ್ತೆಕಿರುಬ, ಕರಡಿ, ಕಾಡುಹಂದಿಗಳಿವೆ. ಹುಲಿಗಳೂ ಉಂಟು. ಜಿಂಕೆಗಳು ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಹೆಚ್ಚು. ಅಳಿಲು ಮತ್ತು ಮಂಗಗಳು ಇಲ್ಲಿರುವ  ಇತರ ಪ್ರಾಣಿಗಳು. ಉರಗ ಜಾತಿಯಲ್ಲಿ ನಾಗರಹಾವು, ಮಂಡಲದ ಹಾವು ಹೆಚ್ಚು. ಮಂಡರಗಪ್ಪೆ ಮತ್ತು ಇತರ ಬಗೆಯ ಚೇಳುಗಳುಂಟು. ತುಂಗಭದ್ರಾ ನದಿಯಲ್ಲಿ ಮೊಸಳೆಗಳಿವೆ. ಕಾಡು ಕಾಗೆ, ಮೈನ, ಮರಕುಟಿಗ, ಕಾಡು ಪಾರಿವಾಳ, ಹಸುರು ಪಾರಿವಾಳ, ಕಾಡುಕೋಳಿ, ಕವುಜಗ, ನೀರು ಕೋಳಿ, ಕೋಗಿಲೆ, ಬಾನಾಡಿ ಇವು ಜಿಲ್ಲೆಯಲ್ಲಿರುವ ಪಕ್ಷಿಗಳಲ್ಲಿ ಮುಖ್ಯವಾದುವು. ಗಾಯಿತ್ರಿ ಜಲಾಶಯ, ವಾಣಿವಿಲಾಸ ಸಾಗರ ಮತ್ತು ಕೆರೆಗಳಲ್ಲಿ ಗೆಂಡೆ, ಕೊಳಸ, ಕೆಮ್ಮೀನು, ಮಚಲು, ಬಾಳೆಮೀನು, ಮೀಸೆಗಿರಲು, ಹೂಮೀನು, ಕುಚ್ಚು, ಕೊರಚ, ಹಾವುಮೀನು, ಸೀಗಡಿ ಮುಂತಾದ ಮೀನುಗಳಿವೆ.

ಜಿಲ್ಲೆಯಲ್ಲಿ ವಿವಿಧ ಖನಿಜಗಳ ಪದರ ಶಿಲೆಗಳುಂಟು. ಚಿತ್ರದುರ್ಗಕ್ಕೆ ದಕ್ಷಿಣದಲ್ಲಿ ಈ ಶಿಲಾಸ್ತರಗಳ ಗರಿಷ್ಠ ಅಗಲ 40 ಕಿಮೀ ಜಿಲ್ಲೆಯ ಮುಖ್ಯ ಖನಿಜಗಳು ಕಲ್ನಾರು, ಆ್ಯಂಟಿಮೊನಿ, ಬಾಕ್ಸೈಟ್, ತಾಮ್ರ, ಕಬ್ಬಿಣದ ಅದಿರು, ಸುಣ್ಣಗಲ್ಲು, ಮ್ಯಾಂಗನೀಸ್, ಸೀಸ, ಬೆಣಚುಕಲ್ಲು, ಸ್ಫಟಿಕಶಿಲೆ, ಹಾಸುಗಲ್ಲು (ಕಡಪಕಲ್ಲು).

ಕಮಿಷನರ ಆಡಳಿತವನ್ನು ಕೊನೆಗೊಳಿಸಿ ಬ್ರಿಟಿಷರು ಒಡೆಯರ ಆಡಳಿತಕ್ಕೆ ಮೈಸೂರು ಸಂಸ್ಥಾನವನ್ನು ವಹಿಸಿಕೊಟ್ಟ ಮೇಲೆ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳನ್ನು ಒಳಗೊಂಡಿತ್ತು. 1863ರಲ್ಲಿ ಆ ವಿಭಾಗವನ್ನು ರದ್ದುಮಾಡಿ ಚಿತ್ರದುರ್ಗ ಜಿಲ್ಲೆಯನ್ನು ನಗರ ವಿಭಾಗಕ್ಕೆ ಸೇರಿಸಿ, ತುಮಕೂರು ಜಿಲ್ಲೆಯನ್ನು ನಂದಿದುರ್ಗ ವಿಭಾಗಕ್ಕೆ ಸೇರಿಸಲಾಯಿತು. 1879ರಲ್ಲಿ ಈ ವ್ಯವಸ್ಥೆ ರದ್ದಾಯಿತು. 1882ರಲ್ಲಿ ಚಿತ್ರದುರ್ಗವನ್ನು ತುಮಕೂರು ಜಿಲ್ಲೆಗೆ ಸೇರಿಸಿ ಅದನ್ನೊಂದು ಉಪವಿಭಾಗವನ್ನಾಗಿ ಮಾಡಲಾಯಿತು. 1886ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಮತ್ತೆ ಸ್ಥಾಪಿಸಿ ಪಾವಗಡ ತಾಲ್ಲೂಕನ್ನು ತುಮಕೂರು ಜಿಲ್ಲೆಗೆ ಸೇರಿಸಲಾಯಿತು. 1956ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಚಿತ್ರದುರ್ಗ ಜಿಲ್ಲೆ ಬೆಂಗಳೂರು ವಿಭಾಗದ ಅಂಗವಾಯಿತು. ಈ ಜಿಲ್ಲೆಯಲ್ಲಿ ಎರಡು ಉಪವಿಭಾಗಗಳೂ 9 ತಾಲ್ಲೂಕುಗಳೂ ಇವೆ. ಚಿತ್ರದುರ್ಗ ಉಪವಿಭಾಗಕ್ಕೆ ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ತಾಲ್ಲೂಕುಗಳೂ ದಾವಣಗೆರೆ ಉಪವಿಭಾಗಕ್ಕೆ ದಾವಣಗೆರೆ, ಜಗಳೂರು, ಹೊಸದುರ್ಗ, ಹೊಳಲ್ಕೆರೆ, ಹರಿಹರ ತಾಲ್ಲೂಕುಗಳೂ ಸೇರಿವೆ.

ಜಿಲ್ಲೆಯ ಕರಿಯ ಮಣ್ಣು ಫಲವತ್ತಾಗಿದೆ. ಮುಖ್ಯ ಬೆಳೆಗಳು ಹತ್ತಿ, ನೆಲಗಡಲೆ, ಜೋಳ, ತೊಗರಿ, ಬತ್ತ, ನವಣೆ, ಗೋದಿ, ಸಾಸುವೆ, ತಂಬಾಕು, ಬಾಳೆ, ಅಡಕೆ, ತೆಂಗು. ಕೆರೆಗಳು ವ್ಯವಸಾಯಕ್ಕೆ ಮುಖ್ಯ ಆಶ್ರಯ. ಹಿರಿಯೂರು ತಾಲ್ಲೂಕಿನ ವಾಣಿವಿಲಾಸಸಾಗರದ 28,000 ಎಕರೆ ಭೂಮಿಗೆ, ಸುವರ್ಣಮುಖಿ ನದಿಗೆ ಅಡ್ಡಲಾಗಿ ಕಟ್ಟಿರುವ ಗಾಯಿತ್ರಿ ಜಲಾಶಯ 3,000 ಎಕರೆ ಭೂಮಿಗೆ ನೀರು ಒದಗಿಸುತ್ತದೆ.



ವಾಣಿವಿಲಾಸ ಸಹಕಾರ ಸಕ್ಕರೆ ಕಾರ್ಖಾನೆ, ಹಿರಿಯೂರು

ಹೊಸದುರ್ಗ, ಚಿತ್ರದುರ್ಗ, ಜಗಳೂರು ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಗಣಿಗಳುಂಟು. 1965ರಲ್ಲಿ 39,245 ಟನ್ ಮ್ಯಾಂಗನೀಸ್ ಉತ್ಪಾದನೆಯಾಯಿತು. ಕಬ್ಬಿಣದ ಗಣಿಗಳಲ್ಲಿ ಉತ್ಪನ್ನವಾಗುವ ಅದುರು 2,09,398 ಟನ್. ಹರಿಹರ ತಾಲ್ಲೂಕು ಯಂತ್ರಪುರದ ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಯಂತ್ರೋಪಕರಣಗಳು ತಯಾರಾಗುತ್ತವೆ. ದಾವಣಗೆರೆಯಲ್ಲಿ ಹತ್ತಿ ಗಿರಣಿಗಳುಂಟು. ಎಣ್ಣೆ ಗಿರಣಿಗಳು ದಾವಣಗೆರೆ, ಚಳ್ಳಕೆರೆ, ಚಿತ್ರದುರ್ಗ ಮತ್ತು ಹರಿಹರಗಳಲ್ಲಿವೆ. ಜಗಳೂರು ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಕಂಬಳಿ ನೇಯುತ್ತಾರೆ. ಹಿರಿಯೂರಿನಲ್ಲಿ ಸಕ್ಕರೆ ಕಾರ್ಖಾನೆ ಇದೆ.

ಚಿತ್ರದುರ್ಗ ಜಿಲ್ಲೆಯಲ್ಲಿ 2090ಕಿ.ಮೀ ರಸ್ತೆಗಳುಂಟು. ಅವುಗಳಲ್ಲಿ ರಾಷ್ಟ್ರೀಯ ಹೆದ್ದಾರಿ 180 ಕಿಮೀ ರಾಜ್ಯ ಹೆದ್ದಾರಿ 328 ಕಿಮೀ ಬೆಂಗಳೂರು–ಪುಣೆ ಮೀಟರ್ ಗೇಜ್ ರೈಲುಮಾರ್ಗ ಚಿತ್ರದುರ್ಗ ಜಿಲ್ಲೆಯ ಮೂಲಕ ಹಾದುಹೋಗುತ್ತದೆ. ಜಿಲ್ಲೆಯಲ್ಲಿ ಇದರ ಉದ್ದ 98 ಕಿಮೀ; 11 ನಿಲ್ದಾಣಗಳಿವೆ. ಅವು ಶಿವನಿ, ಹೊಸದುರ್ಗ ರೋಡ್, ರಾಮಗಿರಿ, ಹೊಳಲ್ಕೆರೆ, ಚಿಕ್ಕಜಾಜೂರು, ಸಾಸಲು, ಮಾಯಕೊಂಡ, ಕಡಗನೂರು, ತೊಳಹುಣಸಿ, ದಾವಣಗೆರೆ ಮತ್ತು ಹರಿಹರ, ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ 34 ಕಿಮೀ ದೂರದ ಮೀಟರ್ ಗೇಜ್ ರೈಲುಮಾರ್ಗವುಂಟು.



ಚಿತ್ರದುರ್ಗದ ಕೋಟೆ–ಒಂದು ನೋಟ

**ತಾಲ್ಲೂಕು** : ಚಿತ್ರದುರ್ಗ ತಾಲ್ಲೂಕಿನ ವಿಸ್ತೀರ್ಣ 527.7 ಚ. ಮೈ. (1,366.7 ಚ.ಕಿಮೀ) ಚಿತ್ರದುರ್ಗ, ಹಿರೇಗುಂಟನೂರು, ಭರ್ಮಸಾಗರ, ತುರುವನೂರು– ಇವು ಇದರ ಹೋಬಳಿಗಳು. ತಾಲ್ಲೂಕಿನಲ್ಲಿ 161 ಗ್ರಾಮಗಳಿವೆ.

**ಚಿತ್ರದುರ್ಗ ಪಟ್ಟಣ :** ಜಿಲ್ಲೆಯ ಆಡಳಿತಕೇಂದ್ರ. ಇದು ಚಿಕ್ಕಜಾಜೂರು ರೈಲ್ವೆ ನಿಲ್ದಾಣದಿಂದ 34 ಕಿಮೀ ದೂರದಲ್ಲಿ, ಬೆಂಗಳೂರಿನ ವಾಯವ್ಯಕ್ಕೆ 203 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 122594 (2001). ಹಿಂದೆ ಇದಕ್ಕೆ ಇದ್ದ ಹೆಸರುಗಳು ಹಿಡಿಂಬಾ ಪಟ್ಟಣ, ಚಿನ್ನಮುಲಾದ್ರಿ, ಬೆಮ್ಮತ್ತನಕಲ್ಲು, ಸೂಳಗಲ್, ಪೆರುಮಾಳೆಪುರ, ಚಿತ್ರಕಲ್‌ದುರ್ಗ, ಮಲ್ಲರಾಯನದುರ್ಗ. ಇದಕ್ಕೆ ಟೀಪು ಸಲ್ತಾನ ಕೊಟ್ಟ ಹೆಸರು ಫರೂಕಾಬಾದ್. ನಗರದ ಇತಿಹಾಸ ಕರ್ನಾಟಕವನ್ನಾಳಿದ ಅರಸು ಮನೆತನಗಳ ಹಾಗೂ ಈ ಭಾಗದ ಪಾಳೆಯಗಾರರ ಇತಿಹಾಸದೊಂದಿಗೆ ಸೇರಿದೆ.



ಭೀಮನ ಬಂಡೆಯ ಮೇಲಿನ ಹಿಡಿಂಬೇಶ್ವರ ದೇವಾಲಯ

ಹಳೆಯ ಪಟ್ಟಣ ಒತ್ತಾದ ಬಂಡೆಗಳ ಮಧ್ಯೆ, ಕೋಟೆಯಿಂದ ಕೂಡಿ ಈಶಾನ್ಯ ಭಾಗದಲ್ಲಿದೆ. ಕೋಟೆಯ ಏಳು ಸುತ್ತುಗಳಲ್ಲಿ ಮೂರು ಸುತ್ತು ಚಿತ್ರದುರ್ಗ ಬೆಟ್ಟದ ತಳಭಾಗದಲ್ಲಿ ನಾಲ್ಕು ಸುತ್ತು ಬೆಟ್ಟದ ಮೇಲೆ ಇವೆ. ಹೊರಗಿನ ಕೋಟೆಗೆ ನಾಲ್ಕು ಬಾಗಿಲುಗಳು, ಅವುಗಳಲ್ಲಿ ರಂಗಯ್ಯನ ಬಾಗಿಲು (ಸಿರಾದರ್ವಾಜಾ) ಪೂರ್ವಕ್ಕೂ ಸಂತೆ ಬಾಗಿಲು (ಸಿದ್ಧಯ್ಯನ ಬಾಗಿಲು) ಪಶ್ಚಿಮಕ್ಕೂ ಇವೆ. ನೈರುತ್ಯಕ್ಕಿರುವುದು ಛತ್ರಿ ಬಂಡೆ. ನಗರದ ದಕ್ಷಿಣಕ್ಕಿರುವ ಬೆಟ್ಟದ ತುದಿಯಲ್ಲಿ ಬೇಡರ ದೇವತೆ ಓಬಳಾದೇವಿಯ ಗುಡಿಯಿದೆ.

ಚಿತ್ರದುರ್ಗ ಕೋಟೆಯಲ್ಲಿ ಒಟ್ಟು 19 ದ್ವಾರಗಳು, 38ದಿಡ್ಡಿ ಬಾಗಿಲುಗಳು, 35 ಗುಪ್ತದ್ವಾರಗಳು, 4 ಸುರಂಗಮಾರ್ಗಗಳು ಇದ್ದುವೆಂದು ಹೇಳಲಾಗಿದೆ. ಪಾಳೆಯಗಾರರ ಪಾಳುಬಿದ್ದ ಅರಮನೆಗಳ ಅವಶೇಷಗಳನ್ನು ಈಗಲೂ ಕಾಣಬಹುದು. ಕಲ್ಲಿಕೋಟೆಯನ್ನು ಹೈದರ್ ಮತ್ತು ಟೀಪು ಕಟ್ಟಿಸಿದರು.

ಚಿತ್ರದುರ್ಗ ಬೆಟ್ಟದ ಮೇಲೆ 14 ದೇವಾಲಯಗಳುಂಟು. ಅವುಗಳಲ್ಲಿ ಪ್ರಮುಖವಾದವು ಸಂಪಿಗೆ ಸಿದ್ಧೇಶ್ವರ, ಹಿಡಿಂಬೇಶ್ವರ, ಏಕನಾಥಮ್ಮ, ಫಲ್ಗುಣೇಶ್ವರ, ಗೋಪಾಲಕೃಷ್ಣ, ಆಂಜನೇಯ, ಸುಬ್ಬರಾಯ, ಬಸವೇಶ್ವರ ದೇವಾಲಯಗಳು. ಹಿಡಿಂಬೇಶ್ವರನ ಗುಡಿಯಲ್ಲಿ

ಸಂಪಿಗೆ ಸಿದ್ಧೇಶ್ವರ ಗುಡಿ

ಹಿಡಿಂಬಾಸುರನ ಹಲ್ಲು ಮತ್ತು 2 ಮೀ.ಗಳ ಭೀಮನ ಭೇರಿ ಇವೆ. ಹೈದರ್ ಮತ್ತು ಟೀಪು ಫಿರಂಗಿ ಮದ್ದನ್ನು ತಯಾರಿಸುತ್ತಿದ್ದ ದೊಡ್ಡ ಬೀಸುವ ಕಲ್ಲುಗಳುಂಟು. ಹೈದರನ ಸೈನಿಕರನ್ನು ಓಬವ್ವ ಸದೆಬಡಿದ ಒನಕೆ ಕಿಂಡಿಯನ್ನೂ ಕಾಣಬಹುದು.

ಬೆಟ್ಟದ ತಪ್ಪಲಲ್ಲಿ ಉಚ್ಚಂಗಿಯಮ್ಮ (ಉತ್ಸವಾಂಬ) ದೇವಾಲಯವಿದೆ. ಅಲ್ಲಿ ಭಾರಿ ದೀಪದ ಸ್ತಂಭ ಮತ್ತು ಉಯ್ಯಾಲೆ ಮಂಟಪ ಇವೆ. ಕೋಟೆಯೊಳಗೆ ಪೂರ್ವದಿಂದ ಪಶ್ಚಿಮಕ್ಕೆ ಹರಿದಿರುವುದು ರಥದ ಬೀದಿ. ಅದಕ್ಕೆ ದೊಡ್ಡಪೇಟೆ ಎಂದು ಹೆಸರಿತ್ತು. ಪಟ್ಟಣದ ಹೊಸ ಬಡಾವಣೆ ಕೋಟೆಗೆ ಈಶಾನ್ಯ ಭಾಗದಲ್ಲಿ ಬೆಳೆದುಕೊಂಡಿದೆ. ಸರ್ಕಾರಿ ಕಛೇರಿಗಳು ಇರುವುದು ಹಳೆಯ ಪಟ್ಟಣಕ್ಕೂ ಹೊಸ ಬಡಾವಣೆಗಳಿಗೂ ನಡುವೆ. ಕಛೇರಿಗಳ ದಕ್ಷಿಣ ಭಾಗದಲ್ಲಿ ಜಿಲ್ಲಾ ಆಸ್ಪತ್ರೆ ಮತ್ತು ಪ್ರಥಮ ದರ್ಜೆ ಕಾಲೇಜ್ ಇವೆ.

ನಗರದ ವಾಯವ್ಯದಲ್ಲಿ 5ಕಿ.ಮೀ ದೂರದಲ್ಲಿ ಮುರುಘರಾಜೇಂದ್ರ ಮಠ, ಪಶ್ಚಿಮದ ಗುಡ್ಡಗಳ ನಡುವೆ ಅಂಕ್ಲಿ ಮಠ ಇವೆ. ಅಂಕ್ಲಿ ಮಠ ನೆಲಮಾಳಿಗೆಗಳಿಂದ ಕೂಡಿದ್ದು. ಚಿತ್ರದುರ್ಗದಿಂದ ವಿವಿಧ ಭಾಗಗಳಿಗೆ ಬಸ್ ಸೌಕರ್ಯವುಂಟು. ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ ರೈಲುಮಾರ್ಗವಿದೆ. (ಎ.ಜಿ.ಕೆ.)

**ಇತಿಹಾಸ :** ಇಲ್ಲಿ ಇತಿಹಾಸಪೂರ್ವದ ಶಿಲಾಯುಗದಿಂದಲೂ ಜನವಸತಿ ಇತ್ತೆಂಬುದು ಜಿಲ್ಲೆಯ ಹಲವು ಭಾಗಗಳಲ್ಲಿ ದೊರೆತಿರುವ ಬೃಹತ್ ಶಿಲಾಸಮಾಧಿಗಳು ಮತ್ತು ಇತರ ಪ್ರಾಚೀನ ಅವಶೇಷಗಳಿಂದಲೂ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಗಳಲ್ಲಿ ನಡೆಸಿರುವ ಉತ್ಖನನಗಳಿಂದಲೂ ಸ್ಪಷ್ಟಪಟ್ಟಿದೆ. ಇಲ್ಲಿಯ ಇತಿಹಾಸವನ್ನು ಪ್ರಶ.ಪೂ. 3ನೆಯ ಶತಮಾನದಿಂದಲೂ ಗುರುತಿಸಬಹುದು. ಈ ಜಿಲ್ಲೆ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತೆಂಬುದು ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಂಗರಾಮೇಶ್ವರಗಳಲ್ಲಿ ದೊರೆತಿರುವ ಅಶೋಕನ ಶಾಸನಗಳಿಂದ ವ್ಯಕ್ತವಾಗುತ್ತದೆ. ಮೌರ್ಯರ ಅನಂತರ ಶಾತವಾಹನರು ಇಲ್ಲಿ ಆಳಿದರು. ಅವರ ಶಾಸನಗಳು ದೊರೆಯದಿದ್ದರೂ ಚಂದ್ರವಳ್ಳಿಯಲ್ಲಿ ಅವರ ಅನೇಕ ಸೀಸದ ನಾಣ್ಯಗಳು ದೊರೆತಿವೆ. ಅವುಗಳಲ್ಲಿ ಸಡಕಣಲಾಯ, ಗೌತಮೀಪುತ್ರ ವಿಳಿವಾಯಕುರ, ಮುಂಡಾನಂದ, ಯಜ್ಞಶ್ರೀ ಶಾತಕರ್ಣಿ ಮುಂತಾದ ಹೆಸರುಗಳಿವೆ. ಶಾತವಾಹನರ ಮಾಂಡಲಿಕರಾಗಿದ್ದ ಚುಟುಕುಲದ ಅರಸರು ಚಂದ್ರವಳ್ಳಿಯಲ್ಲಿ ಆಳುತ್ತಿದ್ದರು. 1–2ನೆಯ ಶತಮಾನಗಳಲ್ಲಿ ಇವರು ರೋಂ ಚಕ್ರಾಧಿಪತ್ಯದೊಡನೆ ವ್ಯಾಪಾರ ಸಂಬಂಧ ಹೊಂದಿದ್ದರು. ಇಲ್ಲಿ ಅಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳ ನಾಣ್ಯಗಳೂ ರೂಲೆಟ್ ಮಣ್ಣಿನ ತಟ್ಟೆಗಳೂ (ಗಟ್ಟಿ ಜೇಡಿಮಣ್ಣಿನಿಂದ, ಒಳಭಾಗದ ಮಧ್ಯದಲ್ಲಿ ಉರುಳುಹಲ್ಲುಚಕ್ರದಿಂದ ಕಿರುಗೆರೆ ಅಥವಾ ಬಿಂದುಗಳ ವೃತ್ತಗಳನ್ನು ಮೂಡಿಸಿ ಅಂಚುಗಳು ಒಳಕ್ಕೆ ಬಾಗಿರುವಂತೆ ತಯಾರಿಸಿದ ತಟ್ಟೆ–ರೂಲೆಟೆಡ್ ವೇರ್) ದೊರೆತಿವೆ. ಮುಂದೆ ಈ ಜಿಲ್ಲೆ ಬನವಾಸಿ ಕದಂಬರಿಗೆ ಸೇರಿತು. ಕದಂಬ ಮಯೂರವರ್ಮ ಗೆದ್ದ ರಾಜ್ಯಗಳನ್ನು ಅವನ ಚಂದ್ರವಳ್ಳಿ ಶಾಸನ ತಿಳಿಸುತ್ತದೆ. ಅಲ್ಲಿ ಅವನು ಒಂದು ಕೆರೆಯನ್ನು ಕಟ್ಟಿಸಿದನೆಂದೂ ಶಾಸನದಿಂದ ಗೊತ್ತಾಗುತ್ತದೆ. ಕದಂಬ ಕೃಷ್ಣವರ್ಮನಿಗೂ ಸಣಕ್ಕಸ ಪಲ್ಲವನಿಗೂ ನಡೆದ ಯುದ್ಧದಲ್ಲಿ ಕೃಷ್ಣವರ್ಮ ಸೋತ. ಇದರ ಫಲವಾಗಿ ಶಿವಾನಂದವರ್ಮ ಅಣಜಿಯಲ್ಲಿ ಪ್ರಾಣತ್ಯಾಗ ಮಾಡಿದ. ಕದಂಬರು ಉಚ್ಚಂಗಿಯಿಂದಲೂ ಆಳುತ್ತಿದ್ದರು. ಮುಂದೆ ಚಾಳುಕ್ಯರಿಗೆ ಅಧೀನರಾದರು. ಚಿತ್ರದುರ್ಗ ಜಿಲ್ಲೆಯ ಪಶ್ಚಿಮ ಮತ್ತು ಉತ್ತರದ ಬಹುಭಾಗ ಕದಂಬಳಿಗೆ ಸಾವಿರದಲ್ಲಿ ಸೇರಿಹೋಗಿತ್ತು; 8ನೆಯ ಶತಮಾನದಲ್ಲಿ ಚಾಳುಕ್ಯರಿಂದ ರಾಜ್ಯವನ್ನು ಕಿತ್ತುಕೊಂಡ ರಾಷ್ಟ್ರಕೂಟರಿಗೆ ಅಧೀನವಾಯಿತು. ಇದೇ ಕಾಲದಲ್ಲಿ ಈ ಜಿಲ್ಲೆಯ ಬಹುಭಾಗವನ್ನು ಆಳಲಾರಂಭಿಸಿದ ಮುಖ್ಯವಾದ ರಾಜಮನೆತನ ನೊಳಂಬ ಪಲ್ಲವರದು. ಇವರ ರಾಜಧಾನಿ ಹೆಂಜೇರು. ಮೊದಲು ನೊಳಂಬಳಿಗೆ ಸಾವಿರವಾಗಿದ್ದ ಇವರ ರಾಜ್ಯ ಮುಂದೆ ನೊಳಂಬವಾಡಿ 32000 ರಾಜ್ಯವಾಯಿತು. ಸ್ವಲ್ಪ ಕಾಲ ಸ್ವತಂತ್ರವಾಗಿಯೂ ಮತ್ತೆ ಸ್ವಲ್ಪ ಕಾಲ ಗಂಗರ ಅಥವಾ ರಾಷ್ಟ್ರಕೂಟರ ಅಧೀನವಾಗಿಯೂ ನೊಳಂಬರು ಆಳಿದರು. ಈ ಜಿಲ್ಲೆಯ ತೀರ ದಕ್ಷಿಣ ಭಾಗದಲ್ಲಿ ನಿರ್ಗುಂದ 300 ಪ್ರಾಂತ್ಯವಿತ್ತು. ಇದೂ ನೊಳಂಬರ ಅಧೀನದಲ್ಲಿತ್ತು. ಚಳ್ಳಕೆರೆ ತಾಲ್ಲೂಕಿನ ಹಿರೆಮಧುರೆಗಳು ಇವರ ಕಾಲದ ಮುಖ್ಯ ಊರುಗಳಾಗಿದ್ದುವು.

ಚಿತ್ರದುರ್ಗ ಬೆಟ್ಟದ ಮೇಲೆ ಗೋಪಾಲಸ್ವಾಮಿ ಹೊಂಡ

10ನೆಯ ಶತಮಾನದಲ್ಲಿ ಪುನಃ ಪ್ರಬಲರಾದ ಚಾಳುಕ್ಯರಿಗೆ ಈ ಭಾಗ ಸೇರಿತು. ನೊಳಂಬವಾಡಿ 32000ವನ್ನು ಸ್ವಲ್ಪ ಕಾಲ ಚಾಳುಕ್ಯ ಯುವರಾಜ ಜಯಸಿಂಹ ನೊಳಂಬ ಪಲ್ಲವ ಆಳಿದ. ನಿರ್ಗುಂದ 300ನ್ನು ಗೋವಿಂದ, ಚಟ್ಟ, ವಿಷ್ಣು ಮೊದಲಾದ ಸಾಮಂತರಾಜರು ಮೊದಲು ಚಾಳುಕ್ಯರಿಗೂ ಅನಂತರ ಹೊಯ್ಸಳರಿಗೂ ಅಧೀನರಾಗಿ ಹುಳಿಯಾರಿನಿಂದ ಆಳಿದರು. ಹನ್ನೊಂದನೆಯ ಶತಮಾನದಿಂದ ನೊಳಂಬವಾಡಿಯನ್ನು ಉಚ್ಚಂಗಿ ಪಾಂಡ್ಯರು ಚಾಳುಕ್ಯರ ಅಧೀನರಾಗಿ ಆಳಲಾರಂಭಿಸಿದರು. ಇವರಲ್ಲಿ ತ್ರಿಭುವನಮಲ್ಲ ಪಾಂಡ್ಯದೇವ, ವಿಜಯ ಪಾಂಡ್ಯದೇವ, ವೀರ ಪಾಂಡ್ಯದೇವ ಇವರು ಮುಖ್ಯರು. ಪಾಂಡ್ಯರು ಆಳುತ್ತಿದ್ದ

ಜಿಲ್ಲೆಯ ಈ ಭಾಗಕ್ಕೆ ಪಾಂಡ್ಯರಾಜ್ಯ ಅಥವಾ ಪಾಂಡ್ಯಮಂಡಲವೆಂಬ ಹೆಸರಿತ್ತು. ಸುಮಾರು 1220ರ ವರೆಗೂ ಆಳಿದ ಪಾಂಡ್ಯರನ್ನು ಹೊಯ್ಸಳ ಇಮ್ಮಡಿ ವೀರಬಲ್ಲಾಳ ಸೋಲಿಸಿ ಪಾಂಡ್ಯನಾಡನ್ನು ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡ. ನೊಳಂಬವಾಡಿ, ನಿರ್ಗುಂದ 300 ಇವು ಹೊಯ್ಸಳ ರಾಜ್ಯದ ಪ್ರಾಂತ್ಯಗಳಾದುವು.

ಈ ಜಿಲ್ಲೆಯ ಪೂರ್ವಭಾಗವನ್ನು ಚೋಳಮನೆತನವೊಂದು ಚಾಳುಕ್ಯರ ಮಹಾ ಮಂಡಲೇಶ್ವರರಾಗಿ 12ನೆಯ ಶತಮಾನದಲ್ಲಿ ನಿಡಗಲ್ಲಿನಿಂದ ಆಳಿದರು. ಇವರಲ್ಲಿ ಇರುಂಗೋಳ ಚೋಳ ಮಹಾರಾಜ, ಮಲ್ಲಿದೇವ ಚೋಳ ಮಹಾರಾಜ, ಗೋವಿಂದರಾಯ, ಇರುಂಗೋಳದೇವ ಇವರನ್ನು ಹೆಸರಿಸಬಹುದು.

ದೇವಗಿರಿಯ ಯಾದವರೂ ಈ ಜಿಲ್ಲೆಯ ವಾಯವ್ಯ ಭಾಗವನ್ನು ಸ್ವಲ್ಪ ಕಾಲ ತಮ್ಮ ಅಧೀನಕ್ಕೆ ಒಳಪಡಿಸಿಕೊಂಡಿದ್ದರು. ಅವರ ಒಬ್ಬ ಪ್ರಾಂತ್ಯಾಧಿಕಾರಿ ಸು. 1270ರ ಹೊತ್ತಿಗೆ ದಾವಣಗೆರೆಯ ಬಳಿಯ ಬೇತೂರಿನಿಂದ ಆಳುತ್ತಿದ್ದ. ಆದರೆ 1287ರಲ್ಲಿ ಹೊಯ್ಸಳರು ಈ ಭಾಗವನ್ನೆಲ್ಲ ಆಕ್ರಮಿಸಿಕೊಂಡರು. ಇವರ ಕಾಲದಲ್ಲಿ ಬೆಮ್ಮತ್ತನಕಲ್ಲು (ಈಗಿನ ಚಿತ್ರದುರ್ಗ ಪಟ್ಟಣ) ಈ ಪ್ರಾಂತ್ಯದ ಮುಖ್ಯ ಪಟ್ಟಣವಾಯಿತು. ಹೊಯ್ಸಳರ ಕಾಲಾನಂತರ ಈ ಜಿಲ್ಲೆ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದಾಗಲೂ ಬೆಮ್ಮತ್ತನಕಲ್ಲು ಇಲ್ಲಿಯ ಮುಖ್ಯ ಪಟ್ಟಣವಾಗಿ ಮುಂದುವರಿಯಿತು. ಮುಂದೆ 15, 16ನೆಯ ಶತಮಾನಗಳಲ್ಲಿ ಹಲವು ಪಾಳೆಯಗಾರರು ಈ ಜಿಲ್ಲೆಯಲ್ಲಿ ಅಲ್ಲಲ್ಲಿ ಆಳಲಾರಂಭಿಸಿದರು. ಅವರಲ್ಲಿ ಮುಖ್ಯರಾದವರು ಚಿತ್ರದುರ್ಗ ಮತ್ತು ನಿಡುಗಲ್ ದುರ್ಗದ ಪಾಳೆಯಗಾರರು, ಕಾಮಗೇತಿ ವಂಶಕ್ಕೆ ಸೇರಿದ ಚಿತ್ರದುರ್ಗದ ಪಾಳೆಯಗಾರರು ಆರಂಭದಲ್ಲಿ ವಿಜಯನಗರಕ್ಕೆ ಅಧೀನರಾಗಿದ್ದು, 1564ರಲ್ಲಿ ವಿಜಯನಗರದ ಪತನಾನಂತರ ಸ್ವತಂತ್ರರಾಗಿ ಆಧಿಪತ್ಯ ನಡೆಸಿದರು. ಇವರಲ್ಲಿ ಮದಕರಿನಾಯಕ, ಕಸ್ತೂರಿ ರಂಗಪ್ಪನಾಯಕ, ಕುಮಾರ ಬರಮಪ್ಪ ನಾಯಕ ಮೊದಲಾದವರು ಪ್ರಬಲರು. ಆದರೆ ಒಂದು ಕಡೆ ಹೈದರನೊಂದಿಗೂ ಇವರು ಹೋರಾಡಬೇಕಾಯಿತು. ಕಟ್ಟಕಡೆಗೆ 1779ರಲ್ಲಿ ಹೈದರನಿಗೆ ಸೋತು ಈ ವಂಶ ಕೊನೆಗೊಂಡಿತು. ಕೋಟೆಯನ್ನು ಹೈದರ್ ಮತ್ತು ಟೀಪು ಬಲಪಡಿಸಿ, ಅಲ್ಲಿ ಬಲವಾದ ಸೈನ್ಯವನ್ನಿಟ್ಟಿದ್ದರು. ಬ್ರಿಟಿಷರು ಟೀಪುವನ್ನು ಸೋಲಿಸಿದ ಮೇಲೆ ಈ ಜಿಲ್ಲೆ ಮೈಸೂರರಸರಿಗೆ ಸೇರಿ ಚಿತ್ರಕಲ್ ಫೌಜ್‍ದಾರಿಯಾಗಿ ಮುಂದುವರಿಯಿತು. ಮೈಸೂರು ಸಂಸ್ಥಾನ ಬ್ರಿಟಿಷ್ ಕಮೀಷನರ ಆಡಳಿತಕ್ಕೆ ಒಳಪಟ್ಟಿದ್ದಾಗ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಸೇರಿ ಚಿತ್ರದುರ್ಗ ವಿಭಾಗವಾಗಿ, ತುಮಕೂರು ಇದರ ಮುಖ್ಯ ಕೇಂದ್ರವಾಯಿತು. 1865ರಲ್ಲಿ ಇದರಲ್ಲಿ ಮತ್ತೆ ಎರಡು ಭಾಗಗಳಾದುವು. ನಗರವಿಭಾಗಕ್ಕೆ ಚಿತ್ರದುರ್ಗ ಸೇರಿತು. 1879ರಲ್ಲಿ ಈ ವಿಭಾಗಗಳು ರದ್ದಾದುವು. ಚಿತ್ರದುರ್ಗ 1882ರಲ್ಲಿ ತುಮಕೂರು ಜಿಲ್ಲೆಯ ಒಂದು ಭಾಗವಾಯಿತು. ಈಗಿನ ಚಿತ್ರದುರ್ಗ ಜಿಲ್ಲೆ ಅಸ್ತಿತ್ವಕ್ಕೆ ಬಂದದ್ದು 1886ರಲ್ಲಿ.

ತೇರು ಮಲ್ಲೇಶ್ವರ ದೇವಸ್ಥಾನ, ಹಿರಿಯೂರು

**ಪುರಾತತ್ತ್ವ** : ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಗಳಲ್ಲಿ ವಿಸ್ತಾರವಾದ ಭೂಶೋಧನೆ ನಡೆದು ಈ ಜಿಲ್ಲೆಯ ಪ್ರಾಕ್ತನ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವಂತಾಗಿದೆ. ಬ್ರಹ್ಮಗಿರಿಯಲ್ಲಿ ನಡೆದ ಉತ್ಖನನದಲ್ಲಿ ಮೂರು ಬಗೆಯ ಸಂಸ್ಕೃತಿಗಳು ಕಂಡುಬಂದವು. ಇವುಗಳಲ್ಲಿ ಅತ್ಯಂತ ಪ್ರಾಚೀನವಾದ್ದು ನವಶಿಲಾಯುಗದ ಸಂಸ್ಕೃತಿ. ಈ ಸಂಸ್ಕೃತಿಯ ಮುಖ್ಯವಾದ ಕುರುಹು ಕರಿಯ ಕಲ್ಲಿನ ಕೊಡಲಿಯಂಥ, ಉಜ್ಜಿ ನಯ ಮಾಡಿದ ಆಯುಧಗಳು. ಚಂದ್ರವಳ್ಳಿಯಲ್ಲೂ ಇಂಥ ಕೆಲವು ಆಯುಧಗಳು ದೊರೆತಿವೆ. ಇದರ ಅನಂತರ ಬಂದದ್ದು ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ. ದಪ್ಪ ಗುಂಡುಗಳನ್ನು ದುಂಡಗೆ ಜೋಡಿಸಿ ಕಲ್ಲಿನ ಶವಪೆಟ್ಟಿಗೆಯಲ್ಲೋ ಆಳವಾದ ಕುಳಿಯಲ್ಲೋ ಹಲವಾರು ಬಗೆಯ ಹೊಳಪಿನ ಮಡಿಕೆಗಳನ್ನೂ ಕಬ್ಬಿಣದ ಆಯುಧಗಳನ್ನೂ ಇಟ್ಟು ವಿಶಿಷ್ಟವಾಗಿ ನಡೆಸುತ್ತಿದ್ದ ಶವಸಂಸ್ಕಾರ ಈ ಸಂಸ್ಕೃತಿಯ ಹೆಗ್ಗುರುತು. ಬ್ರಹ್ಮಗಿರಿಯಲ್ಲಿ ಇಂಥ ಹಲವು ಬಗೆಯ ಸಮಾಧಿಗಳನ್ನು ಶೋಧಿಸಿ ಈ ಸಂಸ್ಕೃತಿಯ ರೂಪುರೇಖೆಗಳನ್ನು ವಿಂಗಡಿಸಲಾಗಿದೆ. ಇಂಥ ಬೃಹತ್ ಶಿಲಾಸಮಾಧಿಗಳು ಬ್ರಹ್ಮಗಿರಿಯಲ್ಲಲ್ಲದೆ ಹಾಯಕಲ್ಲು, ಚಿಕ್ಕಮಧುರೆ,

ರಂಗನಾಥಸ್ವಾಮಿ ದೇವಾಲಯ, ನೀರ್ತಡಿ

ತುರುವನೂರು ಮೊದಲಾದ ಕಡೆಗಳಲ್ಲೂ ಕಂಡುಬಂದಿದೆ. ಇದಾದ ಅನಂತರ ಇತಿಹಾಸದ ಆರಂಭಕಾಲದ ನಾಗರಿಕತೆಯನ್ನು ಗುರುತಿಸಲಾಗಿದೆ. ಪ್ರಶ. ಪೂ. ಸು. 3ನೆಯ ಶತಮಾನದಲ್ಲಿ ಆರಂಭವಾದ ಈ ಸಂಸ್ಕೃತಿಯಲ್ಲಿ ಇಟ್ಟಿಗೆ ಕಟ್ಟಡಗಳನ್ನು ಕಟ್ಟಿದ್ದುದನ್ನು ಕಾಣಬಹುದು. ಬ್ರಹ್ಮಗಿರಿಯ ಗುಡ್ಡದ ಇಳಿಜಾರಿನಲ್ಲಿ ಕಟ್ಟಿದ್ದ ಚೈತ್ರಾಕಾರದ ಕಟ್ಟಡ ಇವುಗಳಲ್ಲಿ ಮುಖ್ಯವಾದ್ದು. ಇದು ಬ್ರಹ್ಮಗಿರಿಯ ಅಶೋಕನ ಶಾಸನದ ಬಳಿಯೇ ದೊರೆತಿದೆ. ಬ್ರಹ್ಮಗಿರಿ, ಸಿದ್ದಾಪುರ ಮತ್ತು ಸಂಗಮೇಶ್ವರಗಳಲ್ಲಿ ಬಂಡೆಗಳ ಮೇಲೆ ಆಳವಾಗಿಯೂ ದಪ್ಪನಾಗಿಯೂ ಕೊರೆದಿರುವ ಅಶೋಕನ ಮೂರು ಶಾಸನಗಳು ಬ್ರಾಹ್ಮೀಲಿಪಿಯಲ್ಲಿವೆ. ಇವು ಈ ಜಿಲ್ಲೆಯ ಅತ್ಯಂತ ಪ್ರಾಚೀನವೂ ಪ್ರಮುಖವೂ ಆದ ಶಾಸನಗಳು. ಈ ಭಾಗದಲ್ಲಿ ಇಸಿಲಾ ಎಂಬ ಪಟ್ಟಣವಿದ್ದದ್ದು ಈ ಶಾಸನಗಳಿಂದ ವ್ಯಕ್ತವಾಗುತ್ತದೆ. ಶಾತವಾಹನರ ಕಾಲದ ನಾಗರಿಕತೆಯ ಹಲವು ರೀತಿಯ ಅವಶೇಷಗಳನ್ನು ಚಂದ್ರವಳ್ಳಿಯಲ್ಲಿ ಕಾಣಬಹುದು. ಶಾತವಾಹನರ ಸೀಸದ ಮತ್ತು ಮಿಶ್ರಲೋಹದ ನಾಣ್ಯಗಳು, ರೋಮಿನ ಬೆಳ್ಳಿಯ ನಾಣ್ಯಗಳು, ಕಪ್ಪು ಕೆಂಪು ಬಣ್ಣದ ಹೊಳಪಿನ ಬಗೆಬಗೆಯ ಮಡಕೆಗಳು, ಅವುಗಳ ಮೇಲಿನ ರೇಖಾಚಿತ್ರಗಳು, ರೂಲೆಟ್ ತಟ್ಟೆಗಳು, ಜಾಡಿ ಮತ್ತು ಹೂಜಿಗಳು, ಹಲವು ಬಗೆಯ ಮಣಿಗಳು ಮತ್ತು ಆಭರಣಗಳು ಇಲ್ಲಿ ದೊರೆತಿವೆ. ಬಹುಶಃ ಇದೇ ಕಾಲದಲ್ಲೇ ಬಂಡೆಗಳ ಮೇಲೆ ರೇಖೆಯಲ್ಲಿ ಬಿಡಿಸಲಾದ ಹುಲಿ, ಜಿಂಕೆ, ಕಾಡುಕೋಣಗಳ ಆಕೃತಿಗಳನ್ನು ಚಂದ್ರವಳ್ಳಿಯ ಬಳಿಯಲ್ಲೂ ಚಿತ್ರದುರ್ಗದ ಬೆಟ್ಟದ ಮೇಲೂ ನೋಡಬಹುದು.

ಅಂಕಲೆಮಠದ ಪರದೇಶಪ್ಪನ ಗವಿ, ಧವಳಪ್ಪನ ಗುಡ್ಡದ ಮೇಲಿನ ಗುಹಾ ದೇವಾಲಯ, ಚಿತ್ರದುರ್ಗದ ಬೆಟ್ಟದ ಮೇಲಿರುವ ಹಿಡಿಂಬೇಶ್ವರ, ಸಿದ್ಧೇಶ್ವರ, ಫಲ್ಗುಣೇಶ್ವರ, ಮತ್ತು ಏಕನಾಥೇಶ್ವರ ದೇವಾಲಯಗಳ ಗರ್ಭಗೃಹಗಳು ಗವಿಯಲ್ಲಿವೆ. ಇವುಗಳಲ್ಲಿ ಕೆಲವಾದರೂ 8-9ನೆಯ ಶತಮಾನಕ್ಕೆ ಸೇರಿದವು. ಇವು ಈ ಜಿಲ್ಲೆಯ ಪ್ರಾಚೀನ ದೇವಾಲಯಗಳು.

ಮದರಿಕಲ್ಲು ಎಂಬ ಹೆಸರಿನಿಂದ ನೊಳಂಬ ಪಲ್ಲವರ ಪ್ರಾಂತ್ಯವೊಂದರ ರಾಜಧಾನಿಯಾಗಿದ್ದ ಚಿಕ್ಕಮಧುರೆಯಲ್ಲಿ ನೊಳಂಬ ಪಲ್ಲವಾಧಿರಾಜನ ರಾಣಿ ಮತ್ತು ಪಲ್ಲವ ಮಲ್ಲನ ತಾಯಿ ಗವಗಣಬ್ಬೆ 790 ರಲ್ಲಿ ಗವಗಣೇಶ್ವರ ಎಂಬ ಶಿವಾಲಯವನ್ನು ಕಟ್ಟಿಸಿದಳು. ಈಗ ಶಿಥಿಲಾವಸ್ಥೆಯಲ್ಲಿರುವ, ಸರಳವಾದ ಈ ದೇವಾಲಯದಲ್ಲಿ ಚೌಕನಾದ ಕಂಬಗಳೂ ತೆಳುವಾಗಿ ಉಬ್ಬಿಸಿ ಬಿಡಿಸಿದ ಸಪ್ತಮಾತೃಕೆ, ಸೂರ್ಯ ಮೊದಲಾದ ಚಿಕ್ಕಚಿಕ್ಕ ಮೂರ್ತಿಗಳೂ ಇವೆ. ನೊಳಂಬರ ಮೊದಮೊದಲ ಶಿಲ್ಪಶೈಲಿಯನ್ನು ಇಲ್ಲಿ ಗಮನಿಸಬಹುದು. ಚಿಕ್ಕಮಧುರೆ ಮತ್ತು ಹಿರೆಮಧುರೆಗಳಲ್ಲಿ ನೊಳಂಬರ ಕಾಲದ ಹಲವು ವೀರಗಲ್ಲುಗಳಿವೆ. ಕತ್ತಿ ಗುರಾಣಿಗಳನ್ನು ಹಿಡಿದು ನಿಂತ ಭವ್ಯಾಕೃತಿಗಳನ್ನು ಅವುಗಳಲ್ಲಿ ಕಂಡರಿಸಿದೆ. ಪ್ರಭಾಕರದಾಸ ಮುಂತಾದ ಕೆಲವು ವೀರರ ಹೆಸರುಗಳು ಮಾತ್ರ ಈ ವೀರಗಲ್ಲುಗಳಲ್ಲಿ ಇರುವುದುಂಟು. ತಮಟ ಕಲ್ಲಿನಲ್ಲಿ ಎರಡು ಕಲ್ಲುಗಳ ಮೇಲೆ ದಪ್ಪ ಅಕ್ಷರಗಳಲ್ಲಿ ಸುಂದರವಾಗಿ ಕಡೆದಿರುವ 8ನೆಯ ಶತಮಾನದ ಶಾಸನವೊಂದಿದೆ. ಇದು ಮಾಸಿಕ್ಕಾಪುರಾಧಿನಾಥನಾಗಿದ್ದ ಗುಣಮಧುರನೆಂಬ ವೀರನನ್ನು ಮನೋಜ್ಞವಾಗಿ ವರ್ಣಿಸುತ್ತದೆ. ಚಿತ್ರದುರ್ಗದ ಬಳಿ ಗೋವನೂರು ಎಂಬಲ್ಲಿ ದೊರೆತ, ಈಗ ಚಿತ್ರದುರ್ಗದ ವಸ್ತುಸಂಗ್ರಹಾಲಯದಲ್ಲಿರುವ, ಸಪ್ತಮಾತೃಕೆಯರ ಮೂರ್ತಿಗಳು ಗವಗಣೇಶ್ವರ ದೇವಾಲಯದ ಶಿಲ್ಪದ ಮಾದರಿಯಲ್ಲಿದೆ. ಇವು ನೊಳಂಬರ ಶಿಲ್ಪಕ್ಕೆ ಮಾದರಿಗಳಾಗಿವೆ.



ಈಶ್ವರ ದೇವಾಲಯದ ಸುಕನಾಸೀ ದ್ವಾರ, ನಂದೀಗುಡಿ

ರಾಷ್ಟ್ರಕೂಟರ ಕಾಲದಲ್ಲಿ, ಸು. 10ನೆಯ ಶತಮಾನದಲ್ಲಿ ಕಟ್ಟಿದ್ದಿರಬಹುದಾದ ನಂದ ಗುಡಿಯ ಈಶ್ವರ ದೇವಾಲಯ ಈ ಜಿಲ್ಲೆಯಲ್ಲಿರುವ ಕೆಲವೇ ಪ್ರಾಚೀನ ದೇವಾಲಯಗಳಲ್ಲಿ ಪ್ರಮುಖವಾದದ್ದು. ಹೊರಭಾಗ ಹೆಚ್ಚು ಬದಲಾವಣೆ ಹೊಂದಿ ತೀರ ಸಾಮಾನ್ಯವಾದುದಾಗಿ ಕಂಡರೂ ಅಲ್ಲಿರುವ ಬೃಹದಾಕಾರದ ನಂದಿ, ವಿಶಾಲವಾದ ಮಧ್ಯದ ಅಂಕಣವನ್ನು ಹೊಂದಿರುವ ನವರಂಗದ ಕಂಬಗಳು, ವೈವಿಧ್ಯಮಯವಾಗಿ ಕಂಡರಿಸಿರುವ ಸುಕನಾಸಿಯ ಬಾಗಿಲುವಾಡ, ಅದರ ಇಕ್ಕೆಲಗಳಲ್ಲಿ ಉನ್ನತವಾಗಿ ನಿಂತಿರುವ ದ್ವಾರಪಾಲಕರು-ಇವೆಲ್ಲವೂ ಆಕರ್ಷಣೀಯವಾಗಿವೆ. ರಾಷ್ಟ್ರಕೂಟ ಸುವರ್ಣವರ್ಷನ ಆಳ್ವಿಕೆಯಲ್ಲಿ ಅಲ್ಲಿಗನೆಂಬ ವೀರ ತನ್ನ ಒಡೆಯನ ಸಾವಿನಿಂದಾಗಿ ಕೀಮಿಣಿಯಾಗಿದ್ದದನ್ನು ಈ ದೇವಾಲಯದ ಬಳಿ ಇರುವ ವೀರಗಲ್ಲೊಂದು ತಿಳಿಸುತ್ತದೆ. ಜಂಟಿಗರಾಮೇಶ್ವರ ಬೆಟ್ಟದ ಮೇಲಿರುವ 10ನೆಯ ಶತಮಾನದ ಶಾಸನವೊಂದಿದೆ. ಅದು ಜಟಾಯುವನ್ನು ರಾವಣ ವಧಿಸಿದ ತಾಣವೆಂದೂ ಶ್ರೀರಾಮ ಜಟಾಯುವಿಗೆ ಸಂಸ್ಕಾರ ಮಾಡಿ ಇಟ್ಟಿಗೆಯಲ್ಲಿ ಜಟಿಂಗ ರಾಮೇಶ್ವರ ದೇವಾಲಯವನ್ನು ಕಟ್ಟಿಸಿದನೆಂದೂ ಈ ದೇವಾಲಯವನ್ನು ಕಲ್ಲಿನಿಂದ ಪುನರ್ನಿರ್ಮಾಣ ಮಾಡಿದುದಾಗಿಯೂ ಈ ಶಾಸನ ತಿಳಿಸುತ್ತದೆ. ಅಶೋಕನ ಶಾಸನದ ಬಳಿಯೇ ಇರುವ ಈ ದೇವಾಲಯ ಬಹುಶಃ ಇಟ್ಟಿಗೆಯಿಂದ ಕಟ್ಟಿದ ಚೈತ್ಯಾಲಯವಾಗಿತ್ತು. 10ನೆಯ ಶತಮಾನದ ಹೊತ್ತಿಗಾಗಲೇ ಮೇಲಿನ ಪ್ರತೀತಿ ಹರಡಿದ್ದಿರಬೇಕು.

ಹರಿಹರದ ಹರಿಹರೇಶ್ವರ ದೇವಾಲಯ ಅಥವಾ ಶಂಕರನಾರಾಯಣ ದೇವಾಲಯ 11 ನೆಯ ಶತಮಾನದ ಹೊತ್ತಿಗೆ ಆಗಲೇ ಪ್ರಸಿದ್ಧವಾಗಿತ್ತು. ಆದರೆ ಮೂಲಮೂರ್ತಿಯೊಂದನ್ನು ಬಿಟ್ಟು ಆಗಿನ ದೇವಾಲಯ ಉಳಿದುಬಂದಿಲ್ಲ. ಈಗ ಇರುವ ದೇವಾಲಯವನ್ನು ಹೊಯ್ಸಳ ಮಂತ್ರಿ ಪೋಲಾಳ್ವ ದಂಡನಾಥ 1224 ರಲ್ಲಿ ಕಟ್ಟಿಸಿದ. ಇದಕ್ಕೆ ಮಹಾದ್ವಾರವನ್ನು 1268ರಲ್ಲಿ ಹೊಯ್ಸಳ ದಂಡನಾಯಕ ಸೋಮನಾಥ ಕಟ್ಟಿಸಿದ. ಈ ದೇವರಿಗೆ ಉಚ್ಚಂಗಿ ಪಾಂಡ್ಯರು, ಕಲಚೂರ್ಯ ಬಿಜ್ಜಳ, ಯಾದವರು, ಹೊಯ್ಸಳರು ಮತ್ತು ವಿಜಯನಗರದ ಅರಸರು ದತ್ತಿ ಬಿಟ್ಟಿದ್ದಾರೆ. ಶಾಸನಗಳಲ್ಲಿ ವರ್ಣಿತವಾಗಿರುವ ಈ ಹೊಯ್ಸಳ ದೇವಾಲಯ ಪೂರ್ಣವಾಗಿ ಉಳಿದುಬಂದಿಲ್ಲವಾದರೂ ಇದು ಜಿಲ್ಲೆಯಲ್ಲೇ ಅತ್ಯಂತ ಸುಂದರವಾದ ದೇವಾಲಯ. ಇದರ ಸುತ್ತಲೂ ಅನೇಕ ಶಾಸನಗಳಿವೆ. ಅವುಗಳಲ್ಲಿ ಒಂದು 5 ಮೀ.ಗಳಿಗೂ ಎತ್ತರವಾಗಿದೆ.

ಒಂಟಿಕಾಲು ಬಸವಣ್ಣನ ದೀಪದ ಗೂಡು, ಚಿತ್ರದುರ್ಗ ಕೋಟೆ

ಚಾಳುಕ್ಯರ ಕಾಲದಲ್ಲೂ ಹೊಯ್ಸಳರ ಕಾಲದಲ್ಲೂ ಈ ಜಿಲ್ಲೆಯಲ್ಲಿ ಹಲವಾರು ದೇವಾಲಯಗಳು ನಿರ್ಮಿತವಾದವು. ಹಾನೆಯದ ಅಕ್ಕತಂಗಿಯರ ಗುಡಿ, ಕೊಡಗನೂರಿನ ವಿಷ್ಣು ದೇವಾಲಯ(1113), ಸೋಮೇಶ್ವರ ದೇವಾಲಯ(1101), ಕಬ್ಬೂರಿನ ಅವಿಮುಕ್ತೇಶ್ವರ ದೇವಾಲಯ (1114), ಮಳಲಕೆರೆಯ ಲಿಂಗ, ಜನಾರ್ದನ ಮತ್ತು ಸೂರ್ಯ ನಾರಾಯಣರನ್ನೊಳಗೊಂಡ ತ್ರಿಕೂಟಾಚಲ (1071), ಕಂದಗಲ್ಲಿನ ಕಲ್ಲೇಶ್ವರ, ಲೋಕೀಕೆರೆಯ ಕೇತೇಶ್ವರ, ಮತ್ತು ಕೋಡಿ ಕಲ್ಲೇಶ್ವರ ಮತ್ತು ಆನೆಕೊಂಡದ ಈಶ್ವರ ದೇವಾಲಯಗಳನ್ನು ಹೆಸರಿಸಬಹುದು. ಆದರೆ ಈ ದೇವಾಲಯಗಳಲ್ಲಿ ಬಹುಭಾಗ ಹಾಳಾಗಿದೆ ಅಥವಾ ಅದನ್ನು ರಕ್ಷಿಸುವುದಕ್ಕಾಗಿ ಮಣ್ಣಿನ ದಿಬ್ಬದಿಂದ ಮುಚ್ಚಿಹಾಕಿದೆ. ಹೊರನೋಟಕ್ಕೆ ಬರಿಯ ಮಣ್ಣಿನ ಗುಡ್ಡೆಗಳಾಗಿ ಕಂಡರೂ ಬಾಗಿಲುಗಳ ಮೂಲಕ ಅವುಗಳ ಒಳಹೊಕ್ಕಾಗ ಚಾಳುಕ್ಯರ ಶಿಲ್ಪದ ಸುಂದರ ಪರಿಚಯ ಆಗುತ್ತದೆ. ಅವುಗಳಲ್ಲೆಲ್ಲಾ ಆನೆಕೊಂಡದ ಈಶ್ವರ ದೇವಾಲಯದ ನವರಂಗದ ಕಲ್ಲುಗಳು ವೈವಿಧ್ಯಮಯವಾಗಿಯೂ ಸುಂದರವಾಗಿಯೂ ಇವೆ. ಕಂಡರಣೆಗಳಲ್ಲಿ ಇವು ಬೇಲೂರಿನ ಕಂಬಗಳನ್ನು ನೆನಪಿಗೆ ತರುತ್ತವೆ. ಈ ದೇವಾಲಯದ ಮತ್ತು ಲೋಕೀಕೆರೆಯ ಕೇತೇಶ್ವರ ದೇವಾಲಯದ ಹೊರಗೆ ಮುಚ್ಚಿದ್ದ ಮಣ್ಣಿನ ರಾಶಿಗಳನ್ನು ಈಚೆಗೆ ತೆಗೆದು, ಈ ದೇವಾಲಯಗಳ ಹೊರನೋಟ ಕಾಣುವಂತೆ ಮಾಡಿದ್ದಾರೆ. ಲೋಕೀಕೆರೆಯ ಕೇತೇಶ್ವರ ದೇವಾಲಯವನ್ನು ಕಟ್ಟಿಸಿದವರು ಉಚ್ಚಂಗಿ ಪಾಂಡ್ಯರೆಂಬುದು ಮಣ್ಣಿನ ರಾಶಿಯಲ್ಲಿ ಹೂತುಹೋಗಿದ್ದ ಶಾಸನವೊಂದರಿಂದ ತಿಳಿದುಬಂದಿದೆ. ಹರಿಹರಕ್ಕೆ 13ಕಿಮೀ. ದೂರದಲ್ಲಿರುವ ನಂದಿತಾವರೆಯಲ್ಲಿ ಹೊಯ್ಸಳ ಅಧಿಕಾರಿ ಮಾಣಿಕಣ್ಣ 1220ರಲ್ಲಿ ಕಟ್ಟಿಸಿದ ಒಂದು ಸುಂದರವಾದ ಹೊಯ್ಸಳ ದೇವಾಲಯವಿದೆ. ಇದು ಅಮೃತಲಿಂಗ ಮಾಣಿಕೇಶ್ವರ ದೇವಾಲಯ. ಇದರ ಹೊರಗೂ ಒಳಗೂ ನಿಬಿಡವಾಗಿ ಬಿಡಿಸಿರುವ ಅಲಂಕರಣಗಳು ಮೂರ್ತಿಶಿಲ್ಪಗಳಿಂದ ಕೂಡಿವೆ. ಹೊರ ಗೋಡೆಯ ಮೇಲೆ 6ಮೀ. ಎತ್ತರದ ಮೂರ್ತಿಗಳ ಸಾಲಿದೆ. ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳಲ್ಲಿರುವಂತೆ ಅವುಗಳ ಮೇಲೆ ಬಳ್ಳಿವಿತಾನಗಳಿಲ್ಲ. ನವರಂಗದ ಚಾವಣಿಗಳು ಚಪ್ಪಟೆಯಾಗಿವೆ. ನಡುವಿನ ಅಂಕಣದಲ್ಲಿ ತಾಂಡವೇಶ್ವರ ಮತ್ತು ಅಷ್ಟದಿಕ್ಪಾಲಕರ ಮೂರ್ತಿಗಳಿವೆ. ಒಂದೊಂದು ಮೂರ್ತಿಯ ಸುತ್ತಲೂ ಗಾಯಕರು, ನರ್ತಕರು, ವಾದ್ಯಗಾರರು ಮತ್ತು ಸೈನಿಕರು ತುಂಬಿರುವ ಈ ಶಿಲ್ಪ ಬಹಳ ಅಪರೂಪವಾದ್ದು.

ಚಿತ್ರದುರ್ಗದ ಪಾಳೆಯಗಾರರು ಕಟ್ಟಿಸಿದ ಹಲವು ದೇವಾಲಯಗಳೂ ಇತರ ಕಟ್ಟಡಗಳೂ ಚಿತ್ರದುರ್ಗದ ಬೆಟ್ಟದ ಮೇಲೂ ಇತರ ಕಡೆಗಳಲ್ಲೂ ಉಳಿದುಬಂದಿವೆ. ನೀರ್ತಡಿಯಲಿ, ಇವರು ಪುನರ್‌ನಿರ್ಮಾಣ ಮಾಡಿದ ರಂಗನಾಥ ದೇವಾಲಯದ ಹೊರಗೋಡೆಯ ಮೇಲಿನ ಮೂರ್ತಿಶಿಲ್ಪಗಳು ವಿಜಯನಗರ ಶಿಲ್ಪದ ಅನುಕರಣೆ.

ಇದರ ಉನ್ನತವಾದ ಗರ್ಭಗುಡಿಯ ಶಿಲಾಗೋಪುರ ವಿಶಿಷ್ಟವಾದ್ದು. ನಾಯಕನಹಟ್ಟಿಯ ದಕ್ಷಿಣಕ್ಕೆ ತಗ್ಗಾದ ಕಲ್ಲುಮೊರಡಿಯೊಂದರ ಇಳಿಜಾರಿನಲ್ಲಿ ಬಂಡೆಯನ್ನು ಕತ್ತರಿಸಿ ಕೊರೆದು, ನಾಲ್ಕು ಕಂಬಗಳ ಆಧಾರದ ಮೇಲೆ ನಿಂತ ಹಜಾರದಂಥ ಗವಿಯೊಂದನ್ನು ನಿರ್ಮಿಸಿ,



ತುಪ್ಪದ ಕೊಳದ ಬೆಟ್ಟ, ಚಿತ್ರದುರ್ಗ ಕೋಟೆ

ಕಂಬಗಳ, ಚಾವಣಿಯ ಮತ್ತು ಅಡ್ಡತೊಲೆಗಳ ಮೇಲೆಲ್ಲಾ ನವುರಾದ ಶಿಲ್ಪವನ್ನು ಬಿಡಿಸಲಾಗಿದೆ. ಇದು ನಾಯಕರ ವಾಸ್ತುಶಿಲ್ಪದ ಒಂದು ಅಪೂರ್ವ ಮಾದರಿ. ಹಾಗೆಯೇ ಅವರು ಚಿತ್ರದುರ್ಗದ ಬೆಟ್ಟದ ಮೇಲೆ ಕಟ್ಟಿಸಿದ ಹಲವು ಸುತ್ತುಗಳ ಅಭೇದ್ಯ ಕೋಟೆಯನ್ನು ಹೈದರನೂ ಟೀಪುವೂ ಮತ್ತಷ್ಟು ಭದ್ರಪಡಿಸಿದರು. ಅದು ಈಗಲೂ ಅಚ್ಚಳಿಯದೆ ಉಳಿದುಬಂದಿದೆ.



ವೀರ ಮದಕರಿನಾಯಕ

ಚಿತ್ರದುರ್ಗ ಪಟ್ಟಣ ಈಗ ಬಂಡೆಗಲ್ಲುಗಳಿಂದಾವೃತವಾದ ಬೆಟ್ಟದ ಬುಡದಲ್ಲಿ ಇದೆಯಾದರೂ ಹಿಂದೆ ಬೆಟ್ಟದ ಮೇಲೆಯೇ ಇತ್ತು; ಹಲವು ಸಾಲು ರಕ್ಷಣಾಕೋಟೆಗಳಿಂದ ಸುತ್ತುವರಿಯಲ್ಪಟ್ಟಿತ್ತು. ಚಾಲುಕ್ಯರ ಕಾಲದಲ್ಲಿ ಸೂಳ್ಗಲ್ಲು ಎಂದೂ, ಹೊಯ್ಸಳರ ಕಾಲದಲ್ಲಿ ಬೆಮ್ಮಾತ್ತನಕಲ್ಲು, ಬ್ರಹ್ಮಪುರಿಗಿರಿ, ಪೆರುಮಾಳೆಪುರ ಎಂಬ ಹೆಸರುಗಳೂ ಇದ್ದವು. ಹಿಡಿಂಬಪಟ್ಟಣ, ಚಿನ್ಮೂಲಾದ್ರಿ ಎಂಬ ಪೌರಾಣಿಕ ಹೆಸರುಗಳೂ ಶಾಸನದಲ್ಲಿ ಕಾಣಿಸಿಕೊಳ್ಳುತ್ತವೆ. ವಿಜಯನಗರದ ಮತ್ತು ಪಾಳೆಯಗಾರರ ಆಳ್ವಿಕೆಯಲ್ಲಿ ಚಿತ್ರಕಲ್ದುರ್ಗ, ಚಿತ್ತನಕಲ್‍ದುರ್ಗ, ಚಿತ್ರದುರ್ಗ ಎಂದೂ ಹೆಸರುಗಳಿದ್ದವು. ಹೈದರ್ ಇದಕ್ಕೆ ಫರೂಕ್ ಯಾಬ್ ಹಿಸ್ಸಾರ್ ಎಂಬ ಹೆಸರಿಟ್ಟಿದ್ದ. ಈ ಬೇರೆ ಬೇರೆ ಕಾಲಗಳಲ್ಲಿ ಇಲ್ಲಿ ನಿರ್ಮಿಸಿರುವ ದೇವಾಲಯಗಳು, ಕೋಟೆಗಳು ಮತ್ತು ಇತರ ಕಟ್ಟಡಗಳು ಈಗಲೂ ಉಳಿದುಬಂದಿದೆ.

ಚಾಚುಬಂಡೆಗಳ ಬುಡದಲ್ಲಿ ಉಂಟಾಗಿರುವ ಗವಿಗಳಲ್ಲಿರುವ ಹಿಡಿಂಬೇಶ್ವರ, ಸಿದ್ಧೇಶ್ವರ, ಫಲ್ಗುಣೇಶ್ವರ ಏಕನಾಥೇಶ್ವರಿ ಗುಹಾ ದೇವಾಲಯಗಳು ಪುರಾತನವಾದವು. ಇವುಗಳ ಮೇಲಿನ ಬಂಡೆಯ ಮೇಲೆ ಚಾಳುಕ್ಯರೀತಿಯ ಶಿಖರಗಳಿವೆ. ಹೊಯ್ಸಳರ ಕಾಲದಲ್ಲಿ ನವರಂಗ, ಮುಖಮಂಟಪಗಳು ನಿರ್ಮಿತವಾದವು. ಹೊಯ್ಸಳರ ಕಾಲವಾದರೂ ಇವು ಕಗ್ಗಲ್ಲಿನ ಕಟ್ಟಡಗಳೇ. ಸಿದ್ದೇಶ್ವರ, ಹಿಡಿಂಬೇಶ್ವರ ದೇವಾಲಯಗಳ ಮುಂದೆ, ಹಿಡಿಂಬ ರಥ, ಭೀಮರಥಗಳೆಂದು ಜನ ಕರೆಯುವ ಮೂರಂತಸ್ತಿನ ವಿಶಿಷ್ಟರೀತಿಯ ಮಹಾದ್ವಾರ ಗೋಪುರಗಳು ವಿಜಯನಗರದ ಒಂದನೆಯ ದೇವರಾಯನ ಮಗ ಮಲ್ಲಣ್ಣ ಒಡೆಯ ಕಟ್ಟಿಸಿದುದಾಗಿ ತಿಳಿದುಬರುತ್ತದೆ.

ಪಾಳೆಯಗಾರರು ಇಲ್ಲಿ ಕಟ್ಟಿಸಿರುವ ಅನೇಕ ಕಟ್ಟಡಗಳಲ್ಲಿ ಮುಖ್ಯವಾದವು ಇಡೀ ಬೆಟ್ಟವನ್ನೇ ಬಳಸಿ ನಿಂತಿರುವ ಐದು ಭದ್ರವಾದ ಕೋಟೆಗಳು. ಬೃಹದ್ಗಾತ್ರದ ಕಲ್ಲುಗಳಿಂದ ಕಟ್ಟಿರುವ ಗೋಡೆಗಳು, ದುರ್ಗಮವಾದ ದ್ವಾರಗಳು, ಈ ಕೋಟೆಗಳಿಗೆ ಹೊಂದಿಕೊಂಡಂತೆ ಇರುವ ಎಣ್ಣೆಕೊಳ, ತುಪ್ಪದ ಕೊಳ ಎಂದು ಕರೆಯುವ – ಕಲ್ಲಿನಲ್ಲಿಯೇ ಕೊರೆದು ಮಾಡಿರುವ–ದೊಡ್ಡದೊಡ್ಡ ತೊಟ್ಟಿಗಳು, ಮದ್ದನ್ನರೆಯಲು ಉಪಯೋಗಿಸುತ್ತಿದ್ದ ಭಾರಿಯಾದ ಬೀಸುವ ಕಲ್ಲುಗಳು ನಾಯಕರ ಕಾಲದ ಶಕ್ತಿಯ ಸಂಕೇತಗಳಾಗಿ ನಿಂತಿವೆ. ಬೆಟ್ಟದ ಮೇಲೆ ಏಕನಾಥೇಶ್ವರಿ ದೇವಾಲಯದ ಮುಂದೆ 12ಮೀ.ಗೂ ಹೆಚ್ಚು ಎತ್ತರವಾಗಿ ನಿಂತಿರುವ ಕಂಬ, ಉಯ್ಯಾಲೆಕಂಬಗಳು, ಬೆಟ್ಟದತುದಿಯಲ್ಲಿರುವ ಅರಮನೆಯ ಅವಶೇಷಗಳು, ಬುಡದಲ್ಲಿರುವ ಉಚ್ಚಂಗಮ್ಮನ ದೇವಾಲಯ, ಊರಿನಲ್ಲಿರುವ ಕೆಳಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನ ಮೊದಲಾದವು ನಾಯಕರ ಕಾಲದ ಸಾಧನೆಗಳು. ಹೈದರ್ ಮತ್ತು ಟೀಪು ಇಲ್ಲಿಯ ಕೋಟೆಗಳನ್ನು ಮತ್ತಷ್ಟೂ ಭದ್ರಪಡಿಸಿ ಅರಮನೆ ಮತ್ತು ಮಸೀದಿಗಳನ್ನು ಕಟ್ಟಿಸಿದರು. ತನ್ನ ಪ್ರಾಚೀನ ವೈಭವವನ್ನು ಕಳೆದುಕೊಂಡ ಊರು ಈಗ ಪ್ರೇಕ್ಷಣೀಯ ಸ್ಥಳವಾಗಿ ಉಳಿದಿದೆ. (ಎಂ.ಎಚ್.)

**ಚಿತ್ರಭಾನು : ನೋಡಿ–ಸಂವತ್ಸರಗಳು**

**ಚಿತ್ರಮೂಲ :** ಪ್ಲಂಬ್ಯಾಜಿನೇಸೀ ಕುಟುಂಬಕ್ಕೆ ಸೇರಿದ ಒಂದು ಬಹು ವಾರ್ಷಿಕ ಪೊದೆಸಸ್ಯ. ಪ್ಲಂಬ್ಯಾಗೊ ಜ಼ೀಲ್ಯಾನಿಕ ಇದರ ಶಾಸ್ತ್ರೀಯ ಹೆಸರು. ಇದಕ್ಕೆ ಬಿಳಿಚಿತ್ರಮೂಲ ಎಂಬ ಹೆಸರು ಇದೆ. ಅಲ್ಲದೆ ಇದನ್ನೇ ಹೋಲುವ ಕೆಂಪು ಚಿತ್ರಮೂಲ (ಪ್ಲಂಬ್ಯಾಗೋ

ಇಂಡಿಕ) ಮತ್ತು ತೋಟಗಳಲ್ಲಿ ಅಲಂಕಾರಕ್ಕೆಂದು ಬೆಳೆಸಲಾಗುವ ನೀಲಿ ಚಿತ್ರಮೂಲ (ಪ್ಲ. ಆರಿಕ್ಯುಲೇಟ) ಎಂಬುವೂ ಇವೆ. ಇವೆಲ್ಲವೂ ಉಷ್ಣದೇಶಗಳಲ್ಲಿ ಬೆಳೆಯುವುವು. ಭಾರತದಲ್ಲೂ ಇವು ಕಾಣಬರುತ್ತವೆ. ಚಿತ್ರಮೂಲ ಸುಮಾರು 1 ಮೀ. ಎತ್ತರಕ್ಕೆ ಬೆಳೆಯುವ ಗಿಡ. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಅವುಗಳ ಆಕಾರ ಅಂಡದಂತೆ. ಮೃದುವಾಗಿಯೂ ರೋಮರಹಿತವಾಗಿಯೂ ಇವೆ. ಹೂಗಳು ಚಿಕ್ಕವು. ಕದಿರು–ಗೊಂಚಲುಗಳಲ್ಲಿ ಸಮಾವೇಶ–ಗೊಂಡಿವೆ. ಪುಷ್ಪಪಾತ್ರೆಯ ಮೇಲೆಲ್ಲ ಅಂಟು ದ್ರವವೊಂದನ್ನು ಸ್ರವಿಸುವ ಗ್ರಂಥಿ ರೋಮಗಳಿವೆ. ಚಿತ್ರಮೂಲ ಆಯುರ್ವೇದ ಔಷಧ

ಪದ್ಧತಿಯಲ್ಲಿ ಉಪಯುಕ್ತವೆನಿಸಿದೆ. ಇದರಲ್ಲಿರುವ ಪ್ಲಂಬ್ಯಾಜಿನ್ ಎಂಬ ಅಂಶವೇ ಇದಕ್ಕೆ ಕಾರಣ. ಇದರ ಬೇರು ವಿಷಯುಕ್ತ. ಆದ್ದರಿಂದ ಬಳಸುವಾಗ ಜಾಗ್ರತೆ ವಹಿಸಬೇಕು. ಎಲೆ ಮತ್ತು ಬೇರುಗಳನ್ನು ಅರೆದು ಅನ್ನದೊಂದಿಗೆ ಬೆರೆಸಿ ಚರ್ಮ–ವ್ಯಾಧಿಗಳಿಗೆ ಕಟ್ಟುವರು. ಇದರ ಬೇರುಗಳಿಂದ ತೆಗೆದ ಕಷಾಯವನ್ನು ತುರಿಕೆರೋಗ ನಿವಾರಿಸಲು ಫಿಲಿಪೀನ್ಸ್ ದ್ವೀಪಗಳಲ್ಲಿ ಉಪಯೋಗಿಸುವರು. ಭಾರತ ಮತ್ತು ಜಪಾನುಗಳಲ್ಲಿ ಇದನ್ನು ಗರ್ಭನಿರೋಧಕ ವಾಗಿ ಉಪಯೋಗಿಸುವುದುಂಟು. ಆಫ್ರಿಕ ಮತ್ತಿತರ ದೇಶಗಳಲ್ಲಿ ಇದರ ರಸವನ್ನು ಬಿಕ್ಷುಕರು ಮೈಗೆ ಹಚ್ಚಿಕೊಂಡು ಬೊಬ್ಬೆಗಳನ್ನು ಹುಟ್ಟಿಸಿಕೊಳ್ಳುವುದುಂಟು. ನೈಜೀರಿಯದಲ್ಲಿ ಇದರ ಬೇರಿನ ರಸವನ್ನು ಬೆಂಡೇ ರಸದೊಂದಿಗೆ ಬೆರಸಿ ಕುಷ್ಠರೋಗ ಚಿಕಿತ್ಸೆಯಲ್ಲಿ ಬಳಸುವುದಿದೆ. ವಿಪರೀತ ಜ್ವರ ಬಂದಾಗ ಮೈ ಬೆವರುವಂತೆ ಮಾಡಲು ಇದನ್ನು ಉಪಯೋಗಿಸುವುದುಂಟು. ಚಿತ್ರಮೂಲವನ್ನು ಬೇರಿನ ಕಂದುಗಳಿಂದ ಮತ್ತು ಕಾಂಡತುಂಡುಗಳಿಂದ ಇಲ್ಲವೆ ಬೀಜಗಳಿಂದ ಬೆಳೆಸಬಹುದು. (ಎಂ.ಎಚ್.ಎಂ.; ವಿ.ಎಸ್.ವೈ.)

**ಚಿತ್ರಲಿಪಿ** : ಚಿತ್ರಗಳನ್ನೇ ಲಿಪಿಚಿಹ್ನೆಗಳಾಗಿ ಬಳಸಿದ ಲಿಪಿಗೆ ಈ ಹೆಸರಿದೆ (ಪಿಕ್ಟೋರಿಯಲ್ ಸ್ಕ್ರಿಪ್ಟ್). ಇದನ್ನು ಅನಕ್ಷರ ಲಿಪಿ ಎನ್ನಬಹುದು. ಬಹು ವಿಶಾಲವಾದ ಅರ್ಥದಲ್ಲಿ ಮಾನವನಿಂದ ಬರೆಯಲ್ಪಟ್ಟ, ಗೀಚಲ್ಪಟ್ಟ, ಕೊರೆಯಲ್ಪಟ್ಟ, ಚಿತ್ರಿತವಾದ ಮತ್ತು ಅಕ್ಷರಲಿಪಿಯ ವಿಕಾಸಕ್ಕೆ ದಾರಿ ಮಾಡಿಕೊಟ್ಟ ಎಲ್ಲ ಚಿತ್ರಗಳನ್ನೂ ಒಳಗೊಂಡಿರುತ್ತದೆ. ಆದರೆ ಇಲ್ಲಿ ಚಿತ್ರಗಳು ಕೇವಲ ಸೌಂದರ್ಯಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸುವ ಸಾಧನಗಳಲ್ಲ. ಅವು ವ್ಯಾವಹಾರಿಕ ಉಪಯೋಗಕ್ಕಾಗಿ, ಅಂದರೆ ಸಂದೇಶ ಪ್ರಸಾರಕ್ಕೋಸ್ಕರ ಅಣಿಗೊಳಿಸಿದವು ಎಂಬುದನ್ನು ಗಮನಿಸಬೇಕು. ಅಂದರೆ ಚಿತ್ರಲಿಪಿ ಒಂದು ಬಗೆಯ ಭಾಷಾ ಮಾಧ್ಯಮ. ಪರಿಮಿತ ಅರ್ಥದಲ್ಲಿ ಚಿತ್ರಲಿಪಿಯನ್ನು ಕಲ್ಲಿನ ಮೇಲೆ ಚಿತ್ರಿತವಾದ ಪ್ರಾಚೀನಕಾಲದ ಬರವಣಿಗೆ (ಪೆಟ್ರೋಗ್ರಾಮ್) ಅಥವಾ ಕೊರೆದ ಬರವಣಿಗೆ (ಪೆಟ್ರೋಗ್ರ್ಯಾಫ್) ಎಂದು ಗ್ರಹಿಸಬೇಕಾಗಿದೆ. ಬಹು ನಿರ್ದಿಷ್ಟವಾದ ಅರ್ಥದಲ್ಲಿ ಅಕ್ಷರಲಿಪಿಯ ಪೂರ್ವಸ್ಥಿತಿಯೇ ಚಿತ್ರಲಿಪಿ ಎಂದೂ ಹೇಳಬಹುದು. ಲಿಪಿ ತನ್ನ ವಿಶಾಲಾರ್ಥದಲ್ಲಿ ಭಾವಲಿಪಿ ಮತ್ತು ಪದಸೂಚಕಲಿಪಿಗಳೆರಡನ್ನೂ (ಲೋಗೋಗ್ರಫಿ) ಒಳಗೊಂಡಿರುತ್ತದೆ.

ಚಿತ್ರಲಿಪಿಯೇ ಬರವಣಿಗೆಯ ಅತ್ಯಂತ ಪ್ರಾಚೀನ ಹಂತ. ಅಕ್ಷರಸ್ಥ ನಾಗರಿಕರಿಗೆ ಬರವಣಿಗೆ ಯಾವ ರೀತಿ ಸಹಾಯವಾಗಿದೆಯೋ ಅದೇ ರೀತಿ ಪ್ರಾಚೀನ ಜನಾಂಗಗಳಿಗೆ ಚಿತ್ರಲಿಪಿ ಸಹಾಯಕವಾಗಿತ್ತು. ಕಾಲಕ್ರಮದಲ್ಲಿ ಚಿತ್ರಲೇಖನಕಲೆಯಲ್ಲಿ ಎರಡು ಮುಖ್ಯ ಭಾಗಗಳಾದವು. ಮೊದಲನೆಯದರಲ್ಲಿ ಚಿತ್ರಗಳಿಗೂ ಭಾಷೆಗೂ ಯಾವ ಸಂಬಂಧವೂ ಕಾಣದು. ಉದಾಹರಣೆಗೆ ಆನೆಯ ಚಿತ್ರ. ಕನ್ನಡಿಗ ಅದನ್ನು ನೋಡಿ ಆನೆ ಎಂದರೆ ಸಂಸ್ಕೃತದವ ಗಜ ಎನ್ನಬಹುದು. ಅಂದರೆ ಇದು ಮಾತಿನ ಧ್ವನಿಗೆ ಸಂಬಂಧಿಸದೆ ಭಾವನೆಗೆ ಸಂಬಂಧಿಸಿದ್ದು. ಎರಡನೆಯದರಲ್ಲಿ ಚಿತ್ರಕ್ಕೂ ಭಾಷೆಗೂ ಸಂಬಂಧ ಉಂಟು. ಇದನ್ನೇ ಭಾವಲಿಪಿ ಎನ್ನುತ್ತಾರೆ. ಚಿತ್ರಲಿಪಿಗೂ ಭಾವಲಿಪಿಗೂ ಇರುವ ಸಂಬಂಧ ಬಹಳ ನಿಕಟವಾದದ್ದು. ಒಂದು ವಿಧದಲ್ಲಿ ಅಕ್ಷರಲಿಪಿಗೂ ಚಿತ್ರಲಿಪಿಗೂ ಮಧ್ಯದ ಹಂತವೇ ಭಾವಲಿಪಿ. ಭಾವಲಿಪಿಯೂ ಚಿತ್ರಲಿಪಿಯೇ, ಏಕೆಂದರೆ ಇಲ್ಲಿಯೂ ಸಂದೇಶವನ್ನು ತಿಳಿಸಲು ಚಿತ್ರಗಳೇ ಬಳಸಲ್ಪಡುತ್ತದೆ. ಚಿತ್ರಲಿಪಿ ಚಿತ್ರಿತ ವಸ್ತುವಿನ ಬಾಹ್ಯ ರೂಪರೇಷೆಗಳನ್ನು ತಿಳಿಸಿದರೆ, ಭಾವಲಿಪಿ ಆ ವಸ್ತುವಿನ ಅಂತರಾರ್ಥವನ್ನು ಸೂಚಿಸುತ್ತದೆ. ಚಿತ್ರಲಿಪಿಯಲ್ಲಿ ಒಂದು ಸಣ್ಣ ವೃತ್ತ ಸೂರ್ಯ ಎಂಬುದನ್ನು ತಿಳಿಸುತ್ತದೆ. ಆದರೆ ಇದೇ ವೃತ್ತ ಭಾವಲಿಪಿಯಲ್ಲಿ ಸೂರ್ಯನ ಶಾಖ, ಬಿಸಿಲು, ಹಗಲು ಮುಂತಾದವನ್ನು ತಿಳಿಸುತ್ತದೆ. ಅದೇ ರೀತಿಯಲ್ಲಿ ಎರಡು ಕಾಲುಗಳು ಕೇವಲ ಅದೇ ಅಭಿಪ್ರಾಯವನ್ನು ತಿಳಿಸಿದರೆ, ಭಾವಲಿಪಿಯಲ್ಲಿ ಓಡಾಡುವುದು, ನಡೆಯುವುದು ಮುಂತಾದ ಅರ್ಥಗಳನ್ನು ಕೊಡುತ್ತದೆ. ಅಂದರೆ ಭಾವಲಿಪಿ ಚಿತ್ರಲಿಪಿಗಿಂತ ಮುಂದುವರಿದ ಲಿಪಿ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಭಾವಲಿಪಿ ಚಿತ್ರಲಿಪಿಯಷ್ಟು ಸರಳವಾದುದಲ್ಲ, ಏಕೆಂದರೆ ಸಮಾಜದಲ್ಲಿ ಬಳಕೆಯಿರುವ ಕೆಲವು ಅಭಿಪ್ರಾಯಗಳು ಭಾವಲಿಪಿಯಲ್ಲಿ ಸೇರಿರುತ್ತದೆ. ಕೈ ಮತ್ತು ಬೆರಳುಗಳ ವಿನ್ಯಾಸವನ್ನು ಬರೆದಾಗ ಪರಿಚಯವಿರುವವರಿಗೆ ಮಾತ್ರ ಅರ್ಥವಾಗುತ್ತದೆ. ಮಿಕ್ಕವರಿಗೆ ಅದರ ಅರ್ಥವೇ ತಿಳಿಯುವುದಿಲ್ಲ. ಈ ರೀತಿಯ ಸಂಕೇತಗಳನ್ನು ಅಮೆರಿಕನ್ ಇಂಡಿಯನ್ ಬರವಣಿಗೆಯಲ್ಲಿ ವಿಶೇಷವಾಗಿ ಕಾಣಬರುತ್ತವೆ. ಈ ಅರ್ಥದಲ್ಲಿ ನಮ್ಮ ನೃತ್ಯಶಾಸ್ತ್ರದ ಕರನ್ಯಾಸಗಳನ್ನೂ ಮುದ್ರೆಗಳನ್ನೂ ಉದಾಹರಿಸಬಹುದು.

ಚಿತ್ರ ಮತ್ತು ಭಾವಲಿಪಿಗಳೆರಡರಲ್ಲೂ ವರ್ಣಕ್ಕೆ (ಬಣ್ಣಕ್ಕೆ) ಪ್ರಾಧಾನ್ಯವಿದೆ. ಅಮೆರಿಕನ್ ಇಂಡಿಯನ್ ಬುಡಕಟ್ಟಿನ ಚಿರೋಕಿ ಎಂಬ ಜನರಲ್ಲಿ ಪ್ರತಿಯೊಂದು ಬಣ್ಣಕ್ಕೂ ಒಂದು ಅರ್ಥ ಉಂಟು. ಬಿಳಿಯ ಬಣ್ಣ ಸಂತೋಷವನ್ನೂ, ಕರಿಯ ಬಣ್ಣ ಸಾವನ್ನೂ, ಕೆಂಪು ಬಣ್ಣ ವಿಜಯವನ್ನೂ, ನೀಲಿ ಬಣ್ಣ ಸೋಲನ್ನೂ ಸಂಕೇತಿಸುತ್ತದೆ. ಅಂದರೆ ಒಂದು ಚಿತ್ರದಲ್ಲಿ ಇಬ್ಬರು ರಾಜರ ಚಿತ್ರಗಳಿದ್ದು, ಒಬ್ಬನ ಬಣ್ಣ ಕೆಂಪಗೂ ಮತ್ತೊಬ್ಬನ ಬಣ್ಣ ನೀಲಿಯೂ ಆಗಿದ್ದರೆ, ಕೆಂಪು ಬಣ್ಣದ ರಾಜನ ಚಿತ್ರ ಗೆದ್ದ ರಾಜನದ್ದೆಂದೂ ನೀಲಿ ಬಣ್ಣದ ರಾಜನ ಚಿತ್ರ ಸೋತ ರಾಜನದ್ದೆಂದೂ ತಿಳಿಯಬೇಕಾಗುತ್ತದೆ. ಚಿತ್ರಲಿಪಿ ಮತ್ತು ಭಾವಲಿಪಿಗಳಿಗಿರುವ ಇನ್ನೊಂದು ವ್ಯತ್ಯಾಸವನ್ನು ಇಲ್ಲಿ ಗಮನಿಸಬಹುದು. ಚಿತ್ರಲಿಪಿಯಲ್ಲಿ, ಒಂದು ಅಭಿಪ್ರಾಯವನ್ನು ತಿಳಿಸುವ ನಾಲ್ಕಾರು ಚಿತ್ರಗಳಲ್ಲಿ ಯಾವ ಚಿತ್ರ ಎಲ್ಲಿ ಬರಬೇಕೆಂಬ ನಿಯಮವಿರುವುದಿಲ್ಲ. ಅಂದರೆ ಚಿತ್ರಗಳ ಸ್ಥಾನಕ್ಕೆ ಮಹತ್ವವಿಲ್ಲ. ಆದರೆ ಭಾವಲಿಪಿಯಲ್ಲಿ ಆ ಸ್ಥಾನಗಳಿಗೂ ಪ್ರಾಧಾನ್ಯವುಂಟು. ಒಬ್ಬ ಮನುಷ್ಯನ ತಲೆಯ ಮೇಲ್ಭಾಗದಲ್ಲಿ ಸಿಂಹದ ಚಿತ್ರವನ್ನು ಬರೆದರೆ, ಆ ಮನುಷ್ಯನ ಹೆಸರು ಸಿಂಹ ಎಂದಾಗುತ್ತದೆ. ಅದೇ ಸಿಂಹವನ್ನು ಅವನ ಎದುರಿಗೆ ಬರೆದರೆ ಅವನು ಸಿಂಹದೊಡನೆ ಹೋರಾಡುತ್ತಾನೆ ಎಂದಾಗುತ್ತದೆ. ಅದೇ ಸಿಂಹವನ್ನು ಅವನಿಗೆ ಹಿಮ್ಮುಖವಾಗಿ ಬರೆದರೆ ಸಿಂಹ ಅವನಿಗೆ ಹೆದರಿ ಓಡಿಹೋಗುತ್ತಿದೆ ಎಂದಾಗುತ್ತದೆ. ಅಮೆರಿಕನ್ ಇಂಡಿಯನ್ ಬರವಣಿಗೆಯಲ್ಲಿ ಸಂದೇಶದ ಕೊನೆಯಲ್ಲಿ ಚಿರತೆಯ ಚಿತ್ರವನ್ನು ಬರೆದರೆ, ಶಕ್ತಿದೇವತೆಯನ್ನು ಸ್ತುತಿಸಿದ ಅರ್ಥ ಬರುತ್ತದೆ. ಅದೇ ಚಿರತೆ ಚಿತ್ರವನ್ನು ಮನುಷ್ಯನ ತಲೆಯ ಮೇಲೆ ಬರೆದರೆ ಅದು ಅವನ ಹೆಸರಾಗುತ್ತದೆ.

ಈ ಎರಡು ಹಂತಗಳನ್ನೂ ಮೀರಿದ ಮತ್ತೊಂದು ಹಂತವೇ ಪದಸೂಚಕಲಿಪಿ. ಅಂದರೆ ಇಲ್ಲಿ ಚಿತ್ರಗಳೂ ಒಂದು ಪದವನ್ನು ಸೂಚಿಸುವ ಸಾಧನಗಳಾಗಬಲ್ಲವು. ಇದನ್ನು ಈ ಉದಾಹರಣೆಯಿಂದ ವಿಶದಪಡಿಸಬಹುದು. ರಾಜ ಆನೆಯನ್ನು ಕೊಂದ ಎಂಬುದನ್ನು ಚಿತ್ರಲಿಪಿಯಲ್ಲಿ, ಕಿರೀಟ ಅಥವಾ ರಾಜಚಿಹ್ನೆ ಧರಿಸಿದ ಮನುಷ್ಯನ ಚಿತ್ರ, ಅವನು ಆಯುಧದಿಂದ ಆನೆಯನ್ನು ಇರಿಯುತ್ತಿರುವ ಚಿತ್ರ ಮತ್ತು ಸತ್ತು ಬಿದ್ದಿರುವ ಆನೆಯ ಚಿತ್ರ–ಈ ಮೂರು ಚಿತ್ರಗಳನ್ನು ಬರೆಯುವುದರಿಂದ ತೋರಿಸಬಹುದು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಇಲ್ಲಿನ ಚಿಹ್ನೆಗಳು ಮಾತನಾಡುವ ಕ್ರಮದಲ್ಲಿಯೇ ಇರಬೇಕು. ಅಂದರೆ ಮೊದಲನೆಯದು ರಾಜನ ಚಿಹ್ನೆ, ಎರಡನೆಯದು ಆನೆಯದು ಮತ್ತು ಕೊಲ್ಲು ಎನ್ನುವ ಪದದ್ದು. ಈ ಚಿಹ್ನೆಗಳ ಸ್ಥಾನಪಲ್ಲಟಕ್ಕೆ ಅವಕಾಶವಿಲ್ಲ. ಕೊಂದನು ರಾಜನು ಆನೆಯನ್ನು ಎಂದು ನಾವು ಮಾತನಾಡುವುದಿಲ್ಲ. ಅದೇ ರೀತಿಯಲ್ಲಿ ಬರೆಯುವಾಗಲೂ ಪದಸೂಚ್ಯಲಿಪಿಯಲ್ಲಿ ಈ ರೀತಿ ಬರೆಯುವ ಹಾಗಿಲ್ಲ. ಏಕೆಂದರೆ ಅದು ಅರ್ಥವಾಗುವುದಿಲ್ಲ.

ಪದಸೂಚ್ಯಲಿಪಿಯಲ್ಲಿ ಮತ್ತೊಂದು ವ್ಯತ್ಯಾಸ ಕಾಣಬರುತ್ತದೆ. ಭಾವಲಿಪಿಯಲ್ಲಿ ಒಂದು ಚಿತ್ರಕ್ಕೆ ಸಂಬಂಧಿಸಿದ ಎಷ್ಟು ಅರ್ಥಗಳು ಬೇಕಾದರೂ ಇರಬಹುದು. ಸೂರ್ಯನ ಚಿತ್ರ ಹಗಲು, ಹೊಳೆಯುವುದು, ಶುದ್ಧವಾದುದು, ಬೆಳ್ಳಗಿರುವುದು ಮುಂತಾದ ಹತ್ತಾರು ಅರ್ಥಗಳನ್ನು ಕೊಡಬಲ್ಲುದು. ಆದರೆ ಪದಸೂಚ್ಯಲಿಪಿಯಲ್ಲಿ ಆ ಪದಕ್ಕೆ ಸಂಬಂಧಿಸಿದ ಅರ್ಥಗಳು ಆ ಭಾಷೆಯಲ್ಲಿ ಎಷ್ಟಿವೆಯೋ ಅಷ್ಟನ್ನು ಮಾತ್ರ ಸೂಚಿಸುತ್ತವೆ. ಉದಾಹರಣೆಗೆ ಸುಮೇರಿಯನ್ ಭಾಷೆಯಲ್ಲಿ ಸೂರ್ಯನ ಚಿತ್ರಕ್ಕೆ ಏಳು ವಿವಿಧ ಅರ್ಥಗಳಿವೆ. ಆದರೆ ಚೀನೀಲಿಪಿಯಲ್ಲಿ ಅದಕ್ಕೆ ಎರಡೇ ಅರ್ಥ– ಸೂರ್ಯ ಮತ್ತು ಹಗಲು ಎಂದು. ಸುಮೇರಿಯನ್‌ನಲ್ಲಿ ಶುದ್ಧವಾದುದು ಎಂಬುದನ್ನು ಹೇಳಲು ಸೂರ್ಯನ ಚಿಹ್ನೆಯನ್ನೇ ಬಳಸಿದರೆ ಸಾಕು. ಆದರೆ ಚೀನೀ ಲಿಪಿಯಲ್ಲಿ ಸೂರ್ಯ ಚಿತ್ರದ ಜೊತೆಯಲ್ಲಿ ಬಣ್ಣದ ಚಿತ್ರವನ್ನೂ ಸೇರಿಸಿದರೆ ಮಾತ್ರ ಪರಿಶುದ್ಧವಾದುದು ಎಂಬ ಅರ್ಥ ಸ್ಫುರಿಸುತ್ತದೆ. ಅಂದರೆ ನಿರ್ದಿಷ್ಟ ಅರ್ಥ ಮತ್ತು ಧ್ವನಿಯನ್ನು ಗುರುತಿಸುವ ಹಂತದಲ್ಲಿ ಪದಸೂಚಕಲಿಪಿ ಚಿತ್ರಲಿಪಿಯ ಸುಧಾರಿತ ರೂಪವೆಂದು ತಿಳಿಯಬಹುದು.



**ಬೆಣೆಲಿಪಿಗೂ ಅಭಿಜಾತ ಚಿತ್ರಲಿಪಿಗೂ ಮೂಲವೆನಿಸಿದ ಚಿತ್ರಲಿಪಿ**

ಈ ವಿವಿಧ ಹಂತಗಳ ಚಿತ್ರಲಿಪಿ ಪ್ರಾಚೀನ ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರಚಲಿತವಾಗಿತ್ತು. ಮುಖ್ಯವಾಗಿ ಮೆಸಪೊಟೇಮಿಯ, ಈಜಿಪ್ಟ್, ಫಿನೀಷಿಯ, ಕ್ರೀಟ್, ಸ್ಪೇನ್, ದಕ್ಷಿಣ ಫ್ರಾನ್ಸ್, ಚೀನ, ಅಮೆರಿಕ, ಭಾರತ, ಸೈಬೀರಿಯ, ಆಸ್ಟ್ರೇಲಿಯ–ಮುಂತಾದ ಕಡೆಗಳಲ್ಲಿ ಬಳಕೆಯಲ್ಲಿತ್ತು. ಮೆಸಪೊಟೋಮಿಯದಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದ ಬೆಣೆಲಿಪಿ (**ನೋಡಿ- ಲಿಪಿ**) ಪ್ರಾರಂಭದಲ್ಲಿ ಬಹು ಸರಳ ಚಿತ್ರಲಿಪಿಯೇ ಆಗಿತ್ತು. ಸುಮಾರು ಒಂಬೈನೂರು ಚಿಹ್ನೆಗಳುಳ್ಳ ಈ ಚಿತ್ರಲಿಪಿ ಉರುಕ್ ಎಂಬಲ್ಲಿ IVB ಎಂಬ ಸಂಸ್ಕೃತಿಸ್ತರದಲ್ಲಿ ದೊರೆತಿದೆ. ಈ ಸ್ತರದಲ್ಲಿ ಭಾವಲಿಪಿ ಕಂಡುಬರುವುದೇ ಇಲ್ಲ. ಈ ಸುಮೇರಿಯನ್ ಚಿತ್ರಲಿಪಿ ಸುಮಾರು ಪ್ರಶ ಪೂ. ನಾಲ್ಕನೆಯ ಸಹಸ್ರಮಾನದ ಮಧ್ಯದಲ್ಲಿ ಬಳಕೆಯಲ್ಲಿತ್ತೆಂದು ಹೇಳಬಹುದು. ಇದರಲ್ಲಿ ವಿಶೇಷವಾಗಿ ಮನುಷ್ಯ, ಗಂಡಸು, ಹೆಂಗಸು, ಬೆಟ್ಟ, ಎತ್ತು,

ಸೂರ್ಯ, ಹಸು, ಮೀನು ಮುಂತಾದ ಚಿತ್ರಗಳು ಕಾಣಬರುತ್ತವೆ. ಕಾಲಕ್ರಮದಲ್ಲಿ ಭಾವಲಿಪಿಯಾಗಿ, ಈ ಚಿತ್ರಲಿಪಿ ಬೆಣೆಲಿಪಿಗೆ ಎಡೆಮಾಡಿ ಕೊಟ್ಟಿತು. ಪ್ರಾಯಶಃ ಇದೇ ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಬರವಣಿಗೆಯೆಂದು ಭಾವಿಸಬಹುದು.



ಪ್ರಾಚೀನ ಕ್ರೀಟ್ ಚಿತ್ರಲಿಪಿಯ ಸಂಕೇತಗಳು

ಪ್ರಾಚೀನ ಈಜಿಪ್ಟಿನ ದೇವಲಿಪಿಯಾದ ಹೈರೋಗ್ಲಿಫಿಕ್ ಬರೆವಣಿಗೆ ಪ್ರಶ. ಪೂ. ಸುಮಾರು 3 ನೆಯ ಸಹಸ್ರಮಾನದ ಆದಿಭಾಗಕ್ಕೆ ಸೇರಿದ್ದು, ಈ ಲಿಪಿಯೂ ಚಿತ್ರಲಿಪಿಯಿಂದಲೇ ಉಗಮವಾಯಿತೆನ್ನುವ ವಾದವನ್ನೇ ಅನೇಕ ವಿದ್ವಾಂಸರು ಒಪ್ಪುತ್ತಾರೆ. ನಾರ್ಮರ್ ಪಾಲೆಟ್ ಎಂದು ಖ್ಯಾತವಾಗಿರುವ ವಸ್ತುವಿನ ಮೇಲಿರುವ ಚಿತ್ರಲಿಪಿ ಈಜಿಪ್ಟಿನ ಚಿತ್ರಲಿಪಿಗೆ ಉತ್ತಮ ಉದಾಹರಣೆ. ಈಜಿಪ್ಟಿನ ಸೈನ್ಯವೊಂದು ಶತ್ರುಗಳ ಮೇಲೆ ಹೋಗುತ್ತಿರುವ ಚಿತ್ರ, ಆ ಶತ್ರುಸೈನ್ಯವನ್ನು ಸೋಲಿಸುತ್ತಿರುವುದು ಮತ್ತು ಈಜಿಪ್ಟಿನ ರಾಜನೊಬ್ಬ ಶತ್ರುರಾಜನನ್ನು ಹೊಡೆಯುತ್ತಿರುವುದು ಇದರಲ್ಲಿ ಬಲು ಸುಂದರವಾಗಿ ಚಿತ್ರಿತವಾಗಿದೆ. ಇದರಲ್ಲಿ ಚಿತ್ರಲಿಪಿಯನ್ನು ಮೀರಿದ ಮುಂದಿನ ಹಂತದ ಲಿಪಿಯಿದೆ.

ಪ್ರಾಚೀನ ಕ್ರೀಟ್‌ನಲ್ಲಿ ಚಿತ್ರಲಿಪಿ ಪ್ರಾಚೀನ ಮಿನೋವನ್ ಸಂಸ್ಕೃತಿಯ ಮೊದಲ ಸ್ತರದಲ್ಲಿ ಬಳಕೆಯಲ್ಲಿತ್ತು. ಪ್ರಶ.ಪೂ. ಸುಮಾರು2800ಕ್ಕೆ ಸೇರಬಹುದಾದ ಈ ಸಂಸ್ಕೃತಿಯಲ್ಲಿ ಶಂಕುವಿನಾಕಾರದ ಮುದ್ರೆಗಳಲ್ಲಿ ಬಹು ಸರಳವಾದ ಚಿತ್ರಲಿಪಿ ಕಾಣಬರುತ್ತದೆ. ಇವುಗಳಲ್ಲಿ ನಯವಿಲ್ಲದ ಅನೇಕ ಚಿತ್ರಗಳಿರುವುದು ಗಮನಾರ್ಹ. ಈ ಚಿಹ್ನೆಗಳು ಮಧ್ಯ ಮಿನೋವನ್ ಸಂಸ್ಕೃತಿಯ ಪ್ರಶ.ಪೂ. 2000–1850 ಕಾಲದವರೆಗೂ ಬಳಕೆಯಲ್ಲಿದ್ದವು. ಈ ಸಂಸ್ಕೃತಿಯ ಕೊನೆಯ ಭಾಗದಲ್ಲಿ ಲೀನಿಯರ್ A ಲಿಪಿ ಬಳಕೆಗೆ ಬಂತು. ಪ್ರಶ.ಪೂ 1500ಕ್ಕೆ ಸೇರಬಹುದಾದ ಹಿಟ್ಟೈಟ್ ಹೈರೋಗ್ಲಿಫಿಕ್ ಎಂದು ಕರೆಯಲ್ಪಡುವ ಮೂಲವಿನ್ನೂ ತಿಳಿದಿಲ್ಲ. ಆದರೆ ಹೊರನೋಟಕ್ಕೆ ಇದಕ್ಕೂ ಕ್ರೀಟನ್ ಚಿತ್ರಲಿಪಿಗೂ ಬಹಳ ಹೋಲಿಕೆಗಳಿರುವುದು ಕಾಣ ಬರುತ್ತದೆ. ಆದುದರಿಂದ ಇದನ್ನು ಹಿಟ್ಟೈಟ್ ಚಿತ್ರಲಿಪಿಯೆಂದು ಕರೆಯುವುದುಂಟು. ಪ್ರಶ.ಪೂ. 600 ರವರೆಗೂ ಬಳಕೆಯಲ್ಲಿದ್ದ ಈ ಲಿಪಿಯಲ್ಲಿ ಚಿತ್ರ ಮತ್ತು ಭಾವಲಿಪಿಗಳ ಮಿಲನವಿರುವುದೇ ವಿಶೇಷ.

ಪ್ರಶ.ಪೂ ಎರಡನೆಯ ಸಹಸ್ರಮಾನದ ಮಧ್ಯ ಭಾಗಕ್ಕೆ ಸೇರುವ ಚೀನೀ ಲಿಪಿ ಪೂರ್ಣ ಚಿತ್ರಲಿಪಿಯಲ್ಲ. ಆದರೆ ಅದರ ಬೆಳವಣಿಗೆಯನ್ನು ಗಮನಿಸಿದರೆ ಇದಕ್ಕಿಂತ ಪೂರ್ವದಲ್ಲಿ ಅಲ್ಲಿ ಚಿತ್ರಲಿಪಿ ಇದ್ದಿರ ಬೇಕೆಂದೂ ಅದು ನಮಗೆ ಇನ್ನೂ ದೊರಕಿಲ್ಲವೆಂದೂ ಊಹಿಸಬಹುದಾಗಿದೆ.

ಪ್ರಶ.ಪೂ. ಮೂರನೆಯ ಸಹಸ್ರಮಾನದಲ್ಲಿ ಬಳಕೆಯಲ್ಲಿದ್ದ ಸಿಂಧೂ ಲಿಪಿ ಗೋಪ್ಯ ಲಿಪಿಯಾಗಿಯೇ ಉಳಿದಿದೆಯೆನ್ನಬಹುದು. ಸುಮಾರು ಎರಡೂವರೆ ಸಹಸ್ರ ಮುದ್ರೆಗಳ ಮೇಲಿನ ಲಿಪಿಯಲ್ಲಿ ಸುಮಾರು ಇನ್ನೂರೈವತ್ತು ಚಿಹ್ನೆಗಳಿವೆ. ಚಿತ್ರಲಿಪಿ ಮತ್ತು ಭಾವಲಿಪಿ ಎಂದಿದನ್ನು ಹೆಸರಿಸಲು ಈಗ ದೊರೆತಿರುವ ಇನ್ನೂರೈವತ್ತು ನಿದರ್ಶನಗಳು ಸಾಲವು. ವರ್ಣಾತ್ಮಕ ಲಿಪಿಯೆನ್ನಲು ಈ ಚಿಹ್ನೆಗಳ ಸಂಖ್ಯೆ ಹೆಚ್ಚು. ಹೀಗಾಗಿ ಇವು ವರ್ಣಾತ್ಮಕ ಮತ್ತು ಭಾವಲಿಪಿ ಚಿತ್ರಲಿಪಿಗಳ ಮಿಶ್ರಣವೆಂದು ಅನೇಕ ವಿದ್ವಾಂಸರು ಭಾವಿಸಿದ್ದಾರೆ. ಮತ್ತೆ ಕೆಲವರು ಇದು ಕೇವಲ ಪದಸೂಚಕ ಲಿಪಿಯೆಂದು ವಾದಿಸಿದ್ದಾರೆ. ಸೋವಿಯತ್ ಲಿಪಿತಜ್ಞರು, ಕೋಲನ್ನು ಹಿಡಿದಿರುವ ಮನುಷ್ಯನ ಚಿತ್ರವನ್ನು ದಂಡಧರ ಅಥವಾ ಯಮ ಎಂದು ಭಾವಿಸಿದ್ದಾರೆ. ಆದರೆ ಇತ್ತೀಚೆಗೆ ಈ ಪ್ರಶ್ನೆಯನ್ನು ವಿಶದವಾಗಿ ಸಂಶೋಧಿಸಿರುವ ಶಿಕಾರಿಪುರದ ರಂಗನಾಥರಾಯರು ಸಿಂಧೂಲಿಪಿ, ಚಿತ್ರಲಿಪಿ ಅಥವಾ ಭಾವಲಿಪಿಯಲ್ಲವೆಂದು ವಾದಿಸಿದ್ದಾರೆ. ಇವರ ಪ್ರಕಾರ ಸಿಂಧೂ ಲಿಪಿಯಲ್ಲಿ 52 ಸಂಕೇತಗಳಿವೆ. ಇವುಗಳಲ್ಲಿ 12 ಮಾತ್ರ ಚಿತ್ರಗಳು, ಅವು ಕೀಟಗಳು, ಪಕ್ಷಿಗಳು, ಚೇಳು, ನಾಯಿ, ಮರ, ಮೀನು ಮತ್ತು ಮನುಷ್ಯ. ಮಿಕ್ಕವು ಧ್ವನ್ಯಾತ್ಮಕ ಚಿಹ್ನೆಗಳು. ಇವು ಸಿಂಧೂ ನಾಗರಿಕತೆಯ ಕೊನೆಯ ಹಂತದವುಗಳಾದುದರಿಂದ ಈ ಲಿಪಿಯ ಉಗಮ ಚಿತ್ರಲಿಪಿಯಿಂದಾದುದೆಂದು ಹೇಳಲು ಅಡ್ಡಿಯಿಲ್ಲ.

ಚಿತ್ರಲಿಪಿ ಪ್ರಾಚೀನಕಾಲಕ್ಕೆ ಮಾತ್ರ ಸೀಮಿತವಾಗಿತ್ತೆಂದು ಹೇಳಲಾಗುವುದಿಲ್ಲ. ಮಧ್ಯ ಆಫ್ರಿಕ, ಆಗ್ನೇಯ ಏಷ್ಯ, ಸೈಬೀರಿಯ ಮುಂತಾದ ಕಡೆಗಳಲ್ಲಿ ಅನಾಗರಿಕ ಬುಡಕಟ್ಟಿನ ಜನಾಂಗಗಳು ಇಂದಿಗೂ ಚಿತ್ರಲಿಪಿಯನ್ನು ಬಳಸುತ್ತಿದ್ದಾರೆ. ಆಧುನಿಕ ನಾಗರಿಕತೆಯಲ್ಲಿಯೂ ಅದು ಬಳಕೆಯಲ್ಲಿದೆ. ಸಂಚಾರ ಮಾರ್ಗಗಳಲ್ಲಿ, ಸೇತುವೆಗಳು, ತಿರುವುಗಳು, ಶಾಲೆಯ ಸಮೀಪದ ಸ್ಥಳಗಳು, ಮತ್ತು ಆಸ್ಪತ್ರೆಗಳಲ್ಲಿ ನಿಶ್ಶಬ್ದ ಬೇಕೆಂಬ ನಿಯಮದ ಚಿತ್ರ, ಚಿತ್ರಮಂದಿರಗಳಲ್ಲಿ ಧೂಮಪಾನ ನಿಷೇಧ ಚಿತ್ರ, ವಿದ್ಯುತ್ತಿನ ಅಪಾಯವನ್ನು ತೋರಿಸುವ ಕೆಂಪುಬಣ್ಣದ ತಲೆಬುರುಡೆ ಚಿತ್ರ – ಹೀಗೆ ಹಲವಾರು ಇಂದಿಗೂ ಬಳಕೆಯಲ್ಲಿವೆ. ಇವೆಲ್ಲಾ ಚಿತ್ರಲಿಪಿಯಿಂದಲೇ ಪ್ರಭಾವಿತಗೊಂಡವು ಎಂದರೆ ತಪ್ಪಲ್ಲ. (ಎ.ವಿ.ಎನ್.; ಕೆ.ಕೆ.ಜಿ.ಬಿ.)

**ಚಿತ್ರಲೀನ ಬಳ್ಳಿ** : ಅಪೋಸೈನೇಸೀ ಕುಟುಂಬಕ್ಕೆ ಸೇರಿದ ನಿತ್ಯಸಿರಾಗಿರುವ ಮತ್ತು ದಾರುಮಯ ಬಳ್ಳಿ. ಅಗ್ಯಾನೋಸ್ಮ ಸೈಮೋಸ ಇದರ ಶಾಸ್ತ್ರೀಯ ಹೆಸರು. ಭಾರತದ ಮೂಲದ್ದು ಇದು. ಮಲಯ, ದಕ್ಷಿಣ ಚೀನಗಳಲ್ಲೂ ಕಾಣಸಿಗುತ್ತದೆ. ಇದರ ಬೇರಿನಿಂದ ತಯಾರಿಸಲಾದ ಕಷಾಯವನ್ನು ಮೂತ್ರಪಿಂಡದ ಕೆಲವು ಬೇನೆಗಳ ಚಿಕಿತ್ಸೆಗೆ ಬಳಸುತ್ತಾರೆ. ಜ್ವರ ಬಂದಾಗ ಶಕ್ತಿವರ್ಧಕವಾಗಿ ಉಪಯೋಗಿಸುವುದುಂಟು. (ಎಸ್.ಐ.ಎಚ್.)

**ಚಿತ್ರಲೇಖಗಳು** : ದತ್ತಾಂಶಗಳನ್ನು ಪ್ರದರ್ಶಿಸಲು ಬಳಸುವ ಪ್ರತೀಕಗಳು (ಪಿಕ್ಟೋಗ್ರಾಫ್). ಇವು ದತ್ತಾಂಶಗಳ ಸ್ವರೂಪವನ್ನು ಸೂಚಿಸುವಂತಿರುತ್ತವೆ. ಉದಾಹರಣೆಗೆ ವಿದೇಶಿ ಪ್ರವಾಸಿಗಳ ವಾರ್ಷಿಕ ಸಂಖ್ಯೆಗಳನ್ನು ಹೋಲಿಸಲು ಕ್ಯಾಮರವನ್ನು ಬಗಲಲ್ಲಿ ತೂಗುಹಾಕಿಕೊಂಡಿರುವ ಮನುಷ್ಯಾಕೃತಿಗಳು. ದೇಶದ ನೌಕಾಬಲದ ಬೆಳವಣಿಗೆಯನ್ನು ತೋರಿಸಲು ಯುದ್ಧನೌಕೆಗಳ ಆಕೃತಿಗಳು. ರಾಷ್ಟ್ರಗಳ ಅಕ್ಕಿಯ ಉತ್ಪಾದನೆಯನ್ನು ಹೋಲಿಸಲು ಅಕ್ಕಿಮೂಟೆಗಳ ಆಕೃತಿಗಳು ಇತ್ಯಾದಿ. ಕೋಷ್ಟಕ 1 ಮತ್ತು ಕೋಷ್ಟಕ 2ರಲ್ಲಿರುವ ದತ್ತಾಂಶಗಳಿಗೆ ಅನುರೂಪವಾದ ಚಿತ್ರಲೇಖಗಳನ್ನು ಚಿತ್ರದಲ್ಲಿ ತೋರಿಸುತ್ತವೆ.




ಚಿತ್ರ 1

**ಕೋಷ್ಟಕ 1 : ಕರ್ನಾಟಕದಲ್ಲಿ ಕೃಷಿ ಉಪಕರಣಗಳ ಅಂದಾಜು ಸಂಖ್ಯೆಗಳು**

| ವರ್ಷ | ಎಣ್ಣೆ ಎಂಜಿನ್ನುಗಳು | ವಿದ್ಯುತ್‌ಪಂಪ್ ಸೆಟ್ಟುಗಳು | ಟ್ರ್ಯಾಕ್ಟರುಗಳು |
|---|---|---|---|
| 1956 | 5628 | 5481 | 807 |
| 1961 | 10,087 | 12,433 | 982 |

ಒಂದು ಮನುಷ್ಯಾಕೃತಿ 50 ದಶಲಕ್ಷ ಜನರನ್ನು ಸೂಚಿಸುತ್ತಿದ್ದರೆ, ಆಗ 250 ದಶಲಕ್ಷ ಜನರನ್ನು ಸೂಚಿಸಲು 5 ಮನುಷ್ಯಾಕೃತಿಗಳನ್ನು ಬಳಸಿಕೊಂಡರಾಯಿತು. 50 ದಶಲಕ್ಷಕ್ಕಿಂತ ಕಡಿಮೆ ಜನರನ್ನು ಸೂಚಿಸಬೇಕಾದಲ್ಲಿ ಪ್ರತೀಕದ ಒಂದು ಸೂಕ್ತ ಭಾಗವನ್ನು ತೋರಿಸಬಹುದು. ಹೀಗಾಗಿ, 275 ದಶಲಕ್ಷ ಜನರನ್ನು ತೋರಿಸಬೇಕಾದಲ್ಲಿ 5 ಪೂರ್ಣ ಮತ್ತು ಒಂದು ಅರ್ಧ ಪ್ರತೀಕಗಳನ್ನು ಬಳಸಿಕೊಂಡರೆ ಸಾಕು. ಕೆಲವೊಮ್ಮೆ ಒಂದೇ

**ಕೋಷ್ಟಕ 2 : ಭಾರತದ ಜನಸಂಖ್ಯೆ**

| ಜನಗಣತಿ ವರ್ಷ | ಜನಸಂಖ್ಯೆ |
|---|---|
| 1941 | 318.7 ದಶಲಕ್ಷ |
| 1951 | 361.1 ದಶಲಕ್ಷ |
| 1961 | 439.2 ದಶಲಕ್ಷ |
| 1971 | 547.4 ದಶಲಕ್ಷ |
| 2011 | 1.2 ಬಿಲಿಯನ್ |

ಪ್ರತೀಕ ಸಂದರ್ಭಾನುಸಾರವಾಗಿ ಬೇರೆಬೇರೆ ಅರ್ಥಗಳನ್ನು ಕೊಡಬಹುದು. ನಿದರ್ಶನಕ್ಕಾಗಿ, ಸೂರ್ಯನ ಗುರುತು ಹಗಲು ಅಥವಾ ಶುಭ್ರತೆಯನ್ನು ಸೂಚಿಸಬಹುದು. ಚಿತ್ರಲೇಖಗಳ ಮೂಲಕ ದತ್ತಾಂಶಗಳ ಸ್ಥೂಲವಿವರಗಳನ್ನು ಆಕರ್ಷಕ ಮತ್ತು ಸುಲಭಗ್ರಾಹ್ಯವಾಗುವಂತೆ ಪ್ರದರ್ಶಿಸಬಹುದು. ಇಲ್ಲಿ ಪರಿಮಾಣಗಳ ಏರಿಳಿತಗಳು ವೀಕ್ಷಕನ ಕಣ್ಣುಗಳಿಗೆ ಶೀಘ್ರವಾಗಿ ಗೋಚರಿಸುತ್ತವೆ. ಕೋಷ್ಟಕಗಳನ್ನು ಉಪಯೋಗಿಸುವುದು ಇಲ್ಲವೇ ಬೇರೆ ಯಾವುದೇ ರೂಪದಲ್ಲಿ ಮಾಹಿತಿಯನ್ನು ಕೊಡುವುದಕ್ಕಿಂತ ಬೇಗನೆ ಚಿತ್ರಗಳ ಮೂಲಕ ಮಾಹಿತಿಯನ್ನು ಪ್ರದರ್ಶಿಸುವ ವಿಧಾನ ನೋಡುವವನ ಲಕ್ಷ್ಯವನ್ನು ಸೆರೆಹಿಡಿದು, ಅವನ ಮನಸ್ಸಿನ ಮೇಲೆ ದೀರ್ಘಕಾಲದವರೆಗೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತದೆ. ಸರ್ಕಾರಿ ವಿಭಾಗಗಳು ಮತ್ತು ಖಾಸಗಿ ಸಂಸ್ಥೆಗಳು ಪ್ರದರ್ಶನ, ಪ್ರಚಾರ, ಜಾಹಿರಾತು ಮತ್ತು ಜನರಿಗೆ, ಮಾಹಿತಿಯನ್ನು ಒದಗಿಸುವ ಉದ್ದೇಶಕ್ಕೆ ಚಿತ್ರಲೇಖಗಳನ್ನು ಬಳಸುತ್ತವೆ.

ಚಿತ್ರಲೇಖಗಳು ಮೂಲತಃ ಭಾವ ಪ್ರಧಾನವಾದವು. ಇಲ್ಲಿ ಅರ್ಥ ನೇರವಾಗಿ ಚಿತ್ರದ ಮೂಲಕ ಕೊಡಲ್ಪಡುತ್ತದೆ. ಚಿತ್ರವನ್ನು ಅರಿಯಲು ಅದನ್ನು ಬರೆದವನ ಭಾಷೆಯ ಜ್ಞಾನ ಅವಶ್ಯವಲ್ಲ, ಆದರೆ ಸೂಕ್ಷ್ಮವಿವರಗಳನ್ನು ಇವುಗಳಲ್ಲಿ ನಿಖರವಾಗಿ ಪ್ರದರ್ಶಿಸುವುದು ಕಷ್ಟ. ಉದಾಹರಣೆಗೆ 250 ದಶಲಕ್ಷ ಮತ್ತು 250.23 ದಶಲಕ್ಷ ಜನಸಂಖ್ಯೆಗಳಿಗೆ ನಡುವಿನ ಭೇದವನ್ನು ಚಿತ್ರಲೇಖಗಳಲ್ಲಿ ತೋರಿಸುವುದು, ತೋರಿಸಿದರೂ ಅದನ್ನು ಸುಲಭದಲ್ಲಿ ಗ್ರಹಿಸುವುದು ಕಷ್ಟ. ಚಿತ್ರಲೇಖಗಳ ರಚನೆಗೆ ನಾಲ್ಕು ಸೂತ್ರವಿಧಿಗಳಿವೆ:




**ಚಿತ್ರ 2**

1. ಪರಿಮಾಣಗಳನ್ನು ಪ್ರತೀಕಗಳ ಸಂಖ್ಯೆಗಳ ಮೂಲಕ ಹೋಲಿಸಲಾಗುವುದು, ಪ್ರತೀಕಗಳ ಗಾತ್ರಗಳ ಮೂಲಕವಲ್ಲ. ಏಕೆಂದರೆ ಪ್ರತೀಕಗಳ ಗಾತ್ರಗಳು ಏರಿಳಿಯುತ್ತಿದ್ದರೆ, ಅದು ವೀಕ್ಷಕನ ಗಮನಕ್ಕೆ ಬಂದರೂ ಏರಿಳಿತದ ನಿಖರ ಪರಿಮಾಣವನ್ನು ತಿಳಿಯುವುದು ಕಷ್ಟ. ಪರಿಣಾಮವಾಗಿ ಬೇರೆಬೇರೆ ಪರಿಣಾಮಗಳನ್ನು ಅನುರೂಪ ಗಾತ್ರದ ಪ್ರತೀಕಗಳ ಸಹಾಯದಿಂದ ಹೋಲಿಸುವುದು ಅಪರೂಪ. ಒಂದೇ ಗಾತ್ರದ ಅವಶ್ಯವಿರುವಷ್ಟು ಪ್ರತೀಕಗಳನ್ನು (ಅಥವಾ ಪ್ರತೀಕದ ಭಾಗವನ್ನು) ರಚಿಸುವುದು ರೂಢಿ.

2. ಪ್ರತೀಕಗಳು ನಿಚ್ಚಳವಾಗಿದ್ದು ಸಂದಿಗ್ಧತೆ ಇಲ್ಲವಾಗಿರಬೇಕು. ಅಲ್ಲದೆ ಅವು ಸ್ವಯಂ ಸ್ಪಷ್ಟವಾಗಿರಬೇಕು.

3. ಏಕಾಂಗಿ ಮಾಹಿತಿಯನ್ನು ತೋರಿಸಲು ಚಿತ್ರಲೇಖಗಳು ಸೂಕ್ತವಲ್ಲ. ಉದಾಹರಣೆಗೆ 1970ರಲ್ಲಿ ವಿದೇಶಿ ಪ್ರವಾಸಿಗಳ ಒಟ್ಟು ಸಂಖ್ಯೆಯನ್ನು ಮಾತ್ರ ಏಕಾಂಗಿಯಾಗಿ ಚಿತ್ರಲೇಖದ ಮೂಲಕ ಪ್ರದರ್ಶಿಸುವುದು ಸೂಕ್ತವಲ್ಲ. ಏಕೆಂದರೆ ಇಲ್ಲಿ ಹೋಲಿಕೆಯ ಮೂಲಕ ತಿಳಿವಳಿಕೆ ಮೂಡಲಾರದು. ಬದಲು ಐದು ನಿರ್ದಿಷ್ಟ ವರ್ಷಗಳಲ್ಲಿ ಭಾರತಕ್ಕೆ ಬಂದ ವಿದೇಶಿ ಪ್ರವಾಸಿಗಳ ಸಂಖ್ಯೆಗಳ ತುಲನೆಯನ್ನು ಅನುರೂಪ ಚಿತ್ರಲೇಖಗಳ ಮೂಲಕ ಮಾಡಬಹುದು.

4. ತುಲನೆ ಮಾಡಬೇಕಾದ ಪರಿಮಾಣಗಳ ಸರಿಸುಮಾರು ಮೌಲ್ಯಗಳನ್ನು ಮಾತ್ರ ಚಿತ್ರಲೇಖಗಳು ಪ್ರತಿನಿಧಿಸುತ್ತವೆ; ಸೂಕ್ಷ್ಮವಿವರಗಳನ್ನು ಅವು ತೋರಿಸಲಾರವು.

ಬಹುಶಃ ಪೂರ್ವ ಶಿಲಾಯುಗದಿಂದಲೂ ಚಿತ್ರಲೇಖನ (ಪಿಕ್ಟೋಗ್ರಾಮ್) ಬಳಕೆಯಲ್ಲಿದೆ. ವಿಶಾಲ ಅರ್ಥದಲ್ಲಿ ಅದು, ಬರೆದಿರುವ, ಬಣ್ಣಹಚ್ಚಿರುವ, ಗೀರಿರುವ, ಕೆತ್ತಿರುವ ಅಥವಾ ಕೊರೆದಿರುವ ಚಿತ್ರಗಳ ಮೂಲಕ ಮಾನವನ ಭಾವ ಪ್ರದರ್ಶನ ವಿಚಾರ ವಿನಿಮಯಗಳ ಸಮಗ್ರತೆಯನ್ನು ಸೂಚಿಸುತ್ತದೆ. ಕೇವಲ ಕಲಾತ್ಮಕ ದೃಷ್ಟಿಯಿದ್ದ ಪೂರ್ವಕಾಲದ ಪ್ರಯತ್ನಗಳನ್ನೂ ವಿಚಾರ ವ್ಯಕ್ತಪಡಿಸುವ ಮತ್ತು ವಿನಿಮಯದ ಉದ್ದೇಶವಿದ್ದ ಚಿತ್ರಗಳನ್ನೂ ಅದು ಒಳಗೊಂಡಿದೆ. ಇಂಥ ಚಿತ್ರಗಳನ್ನು ಬರೆಹದ ಪೂರ್ವಗಾಮಿಗಳು ಎನ್ನಬಹುದು. ಒಂದು ಸಂಕುಚಿತ ಅರ್ಥದಲ್ಲಿ ಚಿತ್ರಲೇಖನವು ಶಿಲೆಗಳ ಮೇಲಿನ ಪೂರ್ವಕಾಲದ ಚಿತ್ರಗಳನ್ನು ಸೂಚಿಸುತ್ತದೆ. ಚಿತ್ರಗಳನ್ನು ಎಳೆಯಲಾಗಿದ್ದರೆ ಅಥವಾ ಬಣ್ಣದಲ್ಲಿ ರಚಿಸಲಾಗಿದ್ದರೆ ಅವಕ್ಕೆ ಪೆಟ್ರೋಗ್ರಾಮ್ಸ್ ಎಂದೂ ಕರೆಯಲಾಗಿದೆ. ಕೊರೆಯಲಾಗಿದ್ದರೆ ಇಲ್ಲವೆ ಕೆತ್ತಲಾಗಿದ್ದರೆ ಅವಕ್ಕೆ ಪೆಟ್ರೊಗ್ಲಿಪ್ಸ್ ಎಂದೂ, ಚಿತ್ರಲೇಖಗಳ ಅತ್ಯಂತ ಹಳೆಯ ರೂಪದಲ್ಲಿ, ಸರಳ ಕಥಾನಕಗಳನ್ನು ನೇರವಾಗಿ ತಿಳಿಸಲು ಪ್ರತೀಕಗಳ ಸರಣಿಗಳನ್ನು ಬರೆಯಲಾಗುತ್ತಿತ್ತು.

ಆಫ್ರಿಕ, ಏಷ್ಯ ಮತ್ತು ಉತ್ತರ ಅಮೆರಿಕದ ಕೆಲವು ಭಾಗಗಳ ಆಧುನಿಕ ಆದಿ ಜನಾಂಗದವರು ಈಗಲೂ ಈ ವಿಧಾನವನ್ನು ಬಳಸುತ್ತಿದ್ದಾರೆ. ಮೆಕ್ಸಿಕೋದ ಕೆಲವು ಕೋಮುಗಳ ಜನರು ಈ ವಿಧಾನವನ್ನು ಮೇಲ್ಮಟ್ಟದ ಕೌಶಲದಿಂದ ಬಳಸುತ್ತಿದ್ದರು. ಮೆಕ್ಸಿಕೊ ಸ್ಪೇನಿನ ವಸಾಹತು ಆಗುವ ಮೊದಲಿನ ಹಲವು ಚಿತ್ರಲೇಖಗಳು ಇಂದಿಗೂ ಉಳಿದಿವೆ. ಉತ್ತರ ಅಮೆರಿಕದ ಇಂಡಿಯನ್ ಪಂಗಡಗಳಲ್ಲಿ ಬಹಳ ಕ್ರಮಬದ್ಧ ಚಿತ್ರಲೇಖನ ಪ್ರಚಲಿತವಾಗಿತ್ತು. ಇತ್ತೀಚೆಗೆ ಡಕೋಟಾದ ಇಂಡಿಯನ್ ಪಂಗಡದವರು ತಮ್ಮ ಚರಿತ್ರೆಯನ್ನು ಚಿತ್ರಲೇಖಗಳಲ್ಲಿ ಸಿದ್ಧಗೊಳಿಸಿದ್ದಾರೆ. (ಎಸ್.ಟಿ.)

**ಚಿತ್ರಶಾಲೆಗಳು :** ಪಾಶ್ಚಾತ್ಯರಲ್ಲಿ ಚಿತ್ರಶಾಲೆ (ಆರ್ಟ್ ಗ್ಯಾಲರಿ) ಎಂಬ ಶಬ್ದವನ್ನು ವಸ್ತುಸಂಗ್ರಹಾಲಯ (ಮ್ಯೂಸಿಯಮ್) ಎಂಬುದಕ್ಕೆ ಸಂವಾದಿಯಾಗಿ ಬಳಸುವುದು ವಾಡಿಕೆ. ಚಿತ್ರಶಾಲೆ ಅಥವಾ ಮ್ಯೂಸಿಯಮ್ ಎಂದರೆ ಕಲಾಕೃತಿಗಳನ್ನೋ ಪುರಾತನ ವಸ್ತುಗಳನ್ನೋ ವ್ಯವಸ್ಥಿತವಾಗಿ ಸಂಗ್ರಹಿಸಿ ಪ್ರದರ್ಶಿಸುವ ಸಂಸ್ಥೆ ಅಥವಾ ಕಟ್ಟಡ ಆಗಬಹುದು.

ಪುರಾತನ ಗ್ರೀಸಿನಲ್ಲಿ ಮ್ಯೂಸಿಯಮ್ ಎಂದರೆ ಮ್ಯೂಸಸ್ ಅಥವಾ ಕಲಾದೇವಿಯರ ದೇವಾಲಯ, ಕಲೆ, ಸಾಹಿತ್ಯ ಮುಂತಾದ ವಿದ್ವತ್ ವಿಚಾರಗಳಿಗೆ ಮುಡಿಪಿಟ್ಟ ಸಂಸ್ಥೆ ಎನ್ನುವ ಅರ್ಥವಿತ್ತು. 2ನೆಯ ಟಾಲಮಿ ಪ್ರಶ.ಪೂ. 3ನೆಯ ಶತಮಾನದ ಅಲೆಕ್ಸಾಂಡ್ರಿಯಾದಲ್ಲಿ ಸ್ಥಾಪಿಸಿದ ಮ್ಯೂಸಿಯಮ್ ಎಲ್ಲಕ್ಕಿಂತ ಅತ್ಯಂತ ಪುರಾತನವಾದುದೆಂದು ಹೇಳಬಹುದು. ಚಿತ್ರಶಾಲೆಯು ಮ್ಯೂಸಿಯಮ್‌ಗಿಂತ ವಿಭಿನ್ನವಾದುದು ಎಂಬ ಕಲ್ಪನೆಯ ಉಗಮವನ್ನು ಪಾಲಿಗ್ನೋಟಸ್ ಎಂಬಾತನ ಚಿತ್ರಗಳನ್ನು ಅಥೆನ್ಸಿನ ಆಕ್ರಪೊಲಿಸ್ ಎಂಬ ಸ್ಥಳದಲ್ಲಿ ಪ್ರದರ್ಶಿಸಿದಾಗ ಬಳಸಿದ ಪಿನೋಕೊತಿಕಾ ಎಂಬ ಶಬ್ದದಲ್ಲಿ ಗುರುತಿಸಬಹುದು. ಈಗಲೂ ಪಿನೋಕೊತಿಕಾ ಎಂದರೆ ಚಿತ್ರಶಾಲೆ ಎನ್ನುವ ಅರ್ಥ ಬಳಕೆಯಲ್ಲಿದೆ. ಪುರಾತನ ರೋಮ್ ನಗರದ ಭವ್ಯ ಕಂಬಸಾಲುಗಳ ಮುಂದೆ ಚಿತ್ರಕಲಾಕೃತಿಯನ್ನು ಪ್ರದರ್ಶನಕ್ಕೆ ಇಡುವ ಸಂಪ್ರದಾಯವಿತ್ತು.

ರೆನೇಸಾನ್ಸ್ ಯುಗಕ್ಕೆ ಪೂರ್ವದಲ್ಲೇ, ಅಪೂರ್ವ ಕಲಾವಸ್ತುಗಳನ್ನೂ ಅವಶೇಷಗಳನ್ನೂ ಖಾಸಗಿಯಾಗಿ ಸಂಗ್ರಹಿಸುವ ಸಂಪ್ರದಾಯ ಬೆಳೆದುಬಂದಿತ್ತು. ರೇನೆಸಾನ್ಸ್ ಕಾಲದಲ್ಲಿ ಮ್ಯೂಸಿಯಮ್ ಎಂದರೆ ಹ್ಯೂಮನಿಸ್ಟ್ ವಿದ್ವಾಂಸರು ಅಥವಾ ಶ್ರೀಮಂತರು ಕೂಡಿಟ್ಟುಕೊಂಡ ಪುರಾತನ ನಾಣ್ಯಗಳು, ಹಸ್ತಪ್ರತಿಗಳು, ಚಿತ್ರಗಳು, ಶಾಸನಗಳು, ಅತ್ಯಮೂಲ್ಯ ಮಣಿರತ್ನಗಳು ಮುಂತಾದ ವಸ್ತುಗಳ ಪ್ರದರ್ಶನ ಶಾಲೆ ಎಂಬ ಅರ್ಥವೂ ಉದ್ಭವಿಸಿತು. ಚಿತ್ರಕಲಾಕೃತಿಗಳನ್ನು ಅವುಗಳ ಪ್ರಾಚೀನತೆ ಹಾಗೂ ಕಲಾತ್ಮಕತೆಗೋಸ್ಕರವೇ ಸಂಗ್ರಹಿಸುವ ಪರಂಪರೆ ಪ್ರಾರಂಭವಾದದ್ದು 16ನೆಯ ಶತಮಾನದಲ್ಲಿ, ಇಟಲಿಯಲ್ಲಿ. ಇಂಥ ಸಂಗ್ರಹಣೆಗಾಗಿ ವಸ್ತುಗಳನ್ನು ಆರಿಸುವಾಗ ರೆನೇಸಾನ್ಸ್ ವಿದ್ವಾಂಸರು ಹಾಕಿಕೊಂಡ ಸೂತ್ರಗಳೇ ಆಯ್ಕೆಯ ಮಾನದಂಡಗಳೆಂದು ಅನಂತರ ಒಪ್ಪಿಕೊಳ್ಳಲಾಯಿತು. ರೆನೇಸಾನ್ಸ್ ಕಾಲದ ಇಂಥ ಸಂಗ್ರಹಣಾಲಯಗಳೇ ಆಧುನಿಕ ಚಿತ್ರಶಾಲೆಗಳಿಗೆ ಪ್ರೇರಣೆಯಾಯಿತು. ಶ್ರೀಮಂತರ

ಖಾಸಗಿ ಚಿತ್ರಸಂಗ್ರಹಣೆಗಳು ರಾಷ್ಟ್ರೀಯ ಚಿತ್ರಸಂಗ್ರಹಾಲಯಗಳಾಗಿ ರೂಪುಗೊಂಡವು. ಅವುಗಳಲ್ಲಿ ಮುಖ್ಯವಾದ ಕೆಲವು ಲೋಕವಿಖ್ಯಾತ ಚಿತ್ರಶಾಲೆಗಳನ್ನು (ಆರ್ಟ್ ಗ್ಯಾಲರೀಸ್) ಕುರಿತ ವಿವರಗಳು ಇಲ್ಲಿವೆ.

**ಲೂವರ್ ಚಿತ್ರಶಾಲೆ :** ಪ್ಯಾರಿಸ್ ನಗರದಲ್ಲಿರುವ ಫ್ರಾನ್ಸಿನ ರಾಷ್ಟ್ರೀಯ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸೂಕ್ಷ್ಮರೂಪದಲ್ಲಿ ಪ್ರತಿನಿಧಿಸುವಂತಿರುವ ಈ ಚಿತ್ರಶಾಲೆ ಪ್ರಶ 1190ರಲ್ಲಿ ಫಿಲಿಪ್ ಅಗಸ್ಟಸ್ ಕಟ್ಟಿಸಿದ ಅರಮನೆಯ ಒಂದು ಭಾಗವಾಗಿತ್ತು. ಪ್ರಶ. 1400ರ ಸುಮಾರಿನಲ್ಲಿ 5ನೆಯ ಚಾರ್ಲ್ಸ್ ಈ ಕಟ್ಟಡವನ್ನು ಸುಂದರವಾಗಿ ಮಾರ್ಪಡಿಸಿದ. ಕ್ರಮೇಣ ಇದರಿಂದ ಬಿಬ್ಲಿಯೋತೀಕ್ ನ್ಯಾಷನಲ್ ಎಂಬ ಪುಸ್ತಕಾಲಯದ ಸ್ಥಾಪನೆಗೂ ನಾಂದಿಯಾಯಿತು. ಮೊದಲನೆಯ ಫ್ರಾನ್ಸಿನ ದೊರೆ ಹಳೆಯ ಕಟ್ಟಡವನ್ನು ಕೆಡವಿಸಿ ಅದರ ಸ್ಥಳದಲ್ಲಿ ಲೂವರ್ ಅರಮನೆಯನ್ನು ಕಟ್ಟಿಸಿದ. ಹಲವಾರು ಚಿತ್ರಕೃತಿಗಳನ್ನು ಸಂಗ್ರಹಿಸಿ ಇಟಲಿಯ ಶ್ರೀಮಂತ ಅರಸರಂತೆ ಅವನೂ ಕಲಾವಿದರಿಗೆ ಆಶ್ರಯವನ್ನು ನೀಡಿ, ರಾಜಮನೆತನದ ಸಾಂಸ್ಕೃತಿಕ ಹಿರಿಮೆಯನ್ನು ಉಜ್ವಲಗೊಳಿಸಿದ. ಲಿಯೊನಾರ್ಡೊ ಡ ವಿಂಚಿ, ಆಂದ್ರಿಯಾ ದೆಲ್ ಸಾರ್ಟೋ, ಪ್ರೈಮಾಟೀಚೋ ಮತ್ತು ಚೆಲ್ಲಿನಿ ಮುಂತಾದ ಮಹಾನ್ ಕಲಾವಿದರು ಅವನ ಆಶ್ರಯಕ್ಕೆ ಪಾತ್ರರಾಗಿದ್ದರು. ಅವನು ಸಂಗ್ರಹಿಸಿದ ಚಿತ್ರಗಳಲ್ಲಿ ಮುಖ್ಯವಾದುವುಗಳೆಂದರೆ, ಲಿಯನಾರ್ಡೊವಿನ ಲೋಕವಿಖ್ಯಾತ ಮೋನಾಲಿಸ, ರ್‍ಯಾಫಲ್‌ನ ಬೆಲ್ಲಾರ್ಡಿನೀರ್ ಮುಂತಾದ ಕೃತಿಗಳು. ಲೂವರ್ ಅರಮನೆಯ ರಾಷ್ಟ್ರೀಯ ಚಿತ್ರಸಂಗ್ರಹಾಲಯವಾದದ್ದು ಆ ಕಾಲದಲ್ಲೇ.

ಹದಿನಾರನೆಯ ಶತಮಾನದ ಮಧ್ಯದಲ್ಲಿ ಪ್ರಾರಂಭವಾದ ಈ ಅರಮನೆಯ ಜೀರ್ಣೋದ್ಧಾರ ಕಾರ್ಯ ಸುಮಾರು ಒಂದು ಶತಮಾನದವರೆಗೂ ನಡೆಯಿತು. 1641ರಲ್ಲಿ ಪೌಸಿನ್ ಎಂಬಾತ (ಮುಂದೆ ಲೂವರ್ ಚಿತ್ರಶಾಲೆಯ ಅಂಗವಾಗಿ ಮಾರ್ಪಟ್ಟ) ಗ್ರ್ಯಾಂಡ್ ಗ್ಯಾಲರಿಯನ್ನು ಅಲಂಕರಣಗೊಳಿಸಿದ. ಹದಿನಾಲ್ಕನೆಯ ಕಾಲ್ಬರ್ಟ್ ದೊರೆ ಅಲ್ಲಿಯವರೆಗೆ ಇನ್ನೂರು ಚಿತ್ರಕೃತಿಗಳನ್ನು ಮಾತ್ರ ಪಡೆದಿದ್ದ ಲೂವರ್ ಚಿತ್ರಶಾಲೆಗೆ ಎರಡು ಸಾವಿರ ಚಿತ್ರಗಳನ್ನು ಸೇರಿಸಿದ. ಅವನು 1661ರಲ್ಲಿ ಕಾರ್ಡಿನಲ್ ಮಸರಿನ್ನನ ಬಳಿ ಇದ್ದ ಅತ್ಯಮೂಲ್ಯ ಕೃತಿಗಳನ್ನು ಖರೀದಿ ಮಾಡಿ ಅದನ್ನು ಈ ಚಿತ್ರಶಾಲೆಗೆ ದಾನಮಾಡಿದ. ಅವನು ಜಬಾಕ್ ಎಂಬ ಹಣವಂತನ ಬಳಿಯಲ್ಲಿದ್ದ ಶ್ರೇಷ್ಠಚಿತ್ರಗಳನ್ನು ಮೈಕಲ್ ಡಿ ಮರೋಲ್ಸ್ ರಚಿಸಿದ ಚಿತ್ರಗಳ ನೂರಾರು ಪ್ರತಿರೂಪಗಳನ್ನು ಕೊಂಡು ತಂದು ಸೇರಿಸಿದ. 1661ರಲ್ಲಿ ಮೊತ್ತಮೊದಲಬಾರಿಗೆ ಈ ಚಿತ್ರಶಾಲೆಯನ್ನು ಸ್ವಲ್ಪಕಾಲ ಸಾರ್ವಜನಿಕರಿಗಾಗಿ ತೆರೆದಿಡಲಾಯಿತು. 1673ರಿಂದ ಫ್ರೆಂಚ್ ಅಕಾಡೆಮಿಯ ಚಿತ್ರಪ್ರದರ್ಶನಗಳನ್ನು ಅಲ್ಲಿ ಪ್ರಾರಂಭಿಸಲಾಯಿತು. 1664ರಲ್ಲಿ ಕಾಲ್ಬರ್ಟ್ ದೊರೆ ಬರ್ನಿನಿ ಎಂಬ ಕಲಾವಿದನನ್ನು ಆಹ್ವಾನಿಸಿ ಚಿತ್ರಶಾಲೆಯ ನವೀಕರಣದ ಕೆಲಸವನ್ನು ಅವನಿಗೆ ವಹಿಸಿದ. ಆದರೆ ಕಟ್ಟಡದ ಕೆಲಸ ಪೂರ್ಣಗೊಳ್ಳಲಿಲ್ಲ.

ಫ್ರೆಂಚ್ ಮಹಾಕ್ರಾಂತಿಯ ಅನಂತರ ಲೂವರ್ ಚಿತ್ರಶಾಲೆಯನ್ನು ರಾಷ್ಟ್ರೀಯ ಸಂಸ್ಥೆಯೆಂದು ಭಾವಿಸಿ ಸಾರ್ವಜನಿಕರಿಗಾಗಿ ತೆರೆದರು. ನೆಪೋಲಿಯನ್ ತನ್ನ ದಂಡಯಾತ್ರೆಯಲ್ಲಿ ಗೆದ್ದ ಪ್ರದೇಶಗಳಿಂದ ವಶಪಡಿಸಿಕೊಂಡು ತಂದ ಚಿತ್ರಕೃತಿಗಳನ್ನು ಇಲ್ಲಿ ಪ್ರದರ್ಶಿಸಲಾಯಿತು. ಇವುಗಳಲ್ಲಿ ಹಲವನ್ನು ನೆಪೋಲಿಯನ್ನನ ಪತನದ ತರುವಾಯ ಆಯಾ ದೇಶಗಳಿಗೆ ಹಿಂದಿರುಗಿಸಿದರೂ ಲೋಕಪ್ರಸಿದ್ಧ 'ವೀನಸ್ ಡಿಮಲೋ'ದಂಥ ಕೆಲವು ಅಮೃತಶಿಲೆಯ ಶಿಲ್ಪಕೃತಿಗಳನ್ನು ಅಲ್ಲೇ ಉಳಿಸಿಕೊಳ್ಳಲಾಯಿತು.

1806ರಲ್ಲಿ ಪರ್ಸಿಯರ್ ಮತ್ತು ಫಾಂಟೈನ್ ಎಂಬುವರು ಲೂವರ್ ಅರಮನೆಯ ಉತ್ತರಕ್ಕೆ ಒಂದು ಚಿತ್ರಶಾಲೆಯನ್ನು ಕಟ್ಟಿ ಅದನ್ನು ಮುಖ್ಯ ಕಟ್ಟಡಕ್ಕೆ ಸೇರಿಸಿದರು. ಲೂವರ್ ಚಿತ್ರಶಾಲೆಯಲ್ಲಿ ಸಮಗ್ರ ಯೂರೋಪಿಯನ್ ಕಲಾಪರಂಪರೆಯನ್ನು ಸೂಚಿಸುವಂಥ ಚಿತ್ರಪ್ರದರ್ಶನವನ್ನು ಪ್ರಾರಂಭಿಸಿದವ ಮೂರನೆಯ ನೆಪೋಲಿಯನ್. ಅವನು ಲುಕ್ಸಂಬರ್ಗ್ ಅರಮನೆಯಿಂದ ಮೆಡಿಚಿ ಕಾಲದ ಚಿತ್ರಗಳನ್ನು ಲೂವರ್‌ಗೆ ರವಾನಿಸಿದ. ಕಾಲಕ್ರಮೇಣ ಲುಕ್ಸಂಬರ್ಗ್ ಚಿತ್ರಶಾಲೆಯಲ್ಲಿ ಸಮಕಾಲೀನ ಫ್ರೆಂಚ್ ಕಲಾಸಂಪ್ರದಾಯದ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದು, ಅಲ್ಲಿ ಒಪ್ಪಿ ಸ್ವೀಕರಿಸಿದ ಮೇರುಕೃತಿಗಳನ್ನು ಮಾತ್ರ ಲೂವರ್ ಚಿತ್ರಶಾಲೆಗೆ ವರ್ಗಾಯಿಸುತ್ತಿದ್ದರು. 1929ರ ವರೆಗೆ ಫ್ರೆಂಚ್ ಇಂಪ್ರೆಷನಿಸ್ಟ್ ಚಿತ್ರಗಳನ್ನು ಅಲ್ಲಿ ಪ್ರದರ್ಶಿಸಲು ಅನುಮತಿ ದೊರೆಯಲಿಲ್ಲವೆನ್ನುವುದು ಅಂದಿನ ವೈಚಾರಿಕ ಗೊಂದಲವನ್ನು ಎತ್ತಿತೋರಿಸುತ್ತದೆ. ಎರಡನೆಯ ಮಹಾಯುದ್ಧದ ಅನಂತರ ಇಂಪ್ರೆಷನಿಸ್ಟ್ ಚಿತ್ರಗಳನ್ನು ಅಲ್ಲಿಂದ ಬೇರೆಡೆಗೆ ವರ್ಗಾಯಿಸಲಾಯಿತು.

**ಊಫಿಟ್ಜೀ ಚಿತ್ರಶಾಲೆ :** ಇಟಲಿಯ ಫ್ಲಾರೆನ್ಸಿನಲ್ಲಿರುವ ಊಫಿಟ್ಜೀ ಚಿತ್ರಶಾಲೆಯಲ್ಲಿ ಮುಖ್ಯವಾಗಿ ಇಟಲಿಯ ಕಲಾವಿದರ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಲೊರೆಂಜೊ ಡಿ ಮೆಡಿಚಿ ಮನೆತನದವರು ಊಫಿಟ್ಜೀ ಅರಮನೆಯ ಮಹಡಿ ಮೇಲಿನ ಗ್ಯಾಲರಿಯಲ್ಲಿ ಸಂಗ್ರಹಿಸಿದ್ದ ಚಿತ್ರಗಳು ಈ ಸಂಗ್ರಹಾಲಯಕ್ಕೆ ಮೂಲದ್ರವ್ಯವಾದವು. ಈ ಗ್ಯಾಲರಿಯನ್ನು ಪ್ರ.ಶ. 1560–74ರ ಅವಧಿಯಲ್ಲಿ ವಸ್ಸಾರಿ ಎಂಬಾತ ಮೊದಲನೆಯ ಕೋಸ್ಸೆಮೋ (ಟಸ್ಕನಿ ರಾಜ್ಯದ ಗ್ರ್ಯಾಂಡ್ ಡ್ಯೂಕ್) ಎಂಬುವನಿಗಾಗಿ ಕಟ್ಟಿದ. 1565ರಲ್ಲಿ ವಸ್ಸಾರಿ ಪಾಂಟವೆಚಿಯೋ ಎಂಬ ಅರಮನೆಯ ಮೇಲುಗಡೆ ಮೊಗಸಾಲೆಯನ್ನು ಕಟ್ಟಿ ಊಫಿಟ್ಜೀ ಮತ್ತು ಪಿಟ್ಟಿ ಅರಮನೆಗಳೆರಡನ್ನೂ ಸೇರಿಸಿದ. ಊಫಿಟ್ಜೀ ಚಿತ್ರಾಲಯದಲ್ಲಿ ಮೂರನೆಯ ಡ್ಯೂಕ್ ಕೋಸ್ಸೆಮೋ (1642–1723) ರಚಿಸಿದ ಸುಪ್ರಸಿದ್ಧ ಆತ್ಮಚಿತ್ರಣಗಳು(ಸೆಲ್ಫ್ ಪೋರ್ಟ್‌ರೇಟ್ಸ್) ಇಂದಿಗೂ ಚಿರಸ್ಥಾಯಿಯಾಗಿ ಉಳಿದಿದೆ. ಮೆಡಿಚಿ ಮನೆತನದ

**ಫ್ಲಾರೆನ್ಸಿನ ಊಫಿಟ್ಜೀ ಚಿತ್ರಶಾಲೆಯ ಟ್ರಿಬ್ಯೂನ್ ವಿಭಾಗ. ಮೆಡಿಚಿ ಕುಟುಂಬದವರ ಅಮೂಲ್ಯ ಸಂಗ್ರಹವೆಲ್ಲ ಈ ಚಿತ್ರಶಾಲೆಯಲ್ಲಿ ಕಂಡುಬರುತ್ತದೆ**

ಶ್ರೀಮಂತರು ಸಾಹಿತ್ಯ, ಕಲೆಗಳ ಆಶ್ರಯದಾತರಾಗಿದ್ದರು. ಶ್ರೇಷ್ಠ ಕಲಾಭಿಜ್ಞರೂ, ರಸಿಕರೂ ಆಗಿದ್ದ ಆ ಮನೆತನದ ಡ್ಯೂಕರು ಪ್ರಾಚೀನ ಕ್ಲಾಸಿಕಲ್ ಶಿಲ್ಪಕೃತಿಗಳನ್ನು ಸಮಕಾಲೀನ ಇಟಲಿಯ ಹಾಗೂ ಬೇರೆ ದೇಶಗಳ ಕಲಾವಿದರ ಉತ್ತಮ ಚಿತ್ರಕೃತಿಗಳನ್ನು ಸೇರಿಸಿ ಇಟ್ಟುಕೊಂಡಿದ್ದರು. ಅಲ್ಲಲ್ಲಿ ಹರಿದುಹೋಗಿ ನಷ್ಟಕ್ಕೀಡಾಗಿದ್ದ ಮೆಡಿಚಿ ಅರಮನೆಯ ಅನ್ಯಾದೃಶ ಕಲಾಸಂಪತ್ತನ್ನು ಮೊದಲನೆಯ ಕೋಸ್ಸೆಮೋ ಸಾಕಷ್ಟು ಶ್ರಮದಿಂದ ರಕ್ಷಿಸಿ ಸ್ವಾಧೀನಪಡಿಸಿಕೊಂಡ. ಅನಂತರ ಅವೆಲ್ಲವನ್ನೂ ಒಟ್ಟು ಮಾಡಿ ಮೆಡಿಚಿ ಗಾರ್ಡರೋಬಾ ಎಂಬ ಚಿತ್ರಸಮುದಾಯವನ್ನು ಊಫಿಟ್ಜೀ ಅರಮನೆಯಲ್ಲಿ ಶೇಖರಿಸಿದ. ಈ ವೈಭವಯುತ ಕಲಾಶ್ರೀಯನ್ನು ಫರ್ಡಿನೆಂಡ್ ದೊರೆಗಳು ಮೂರನೆಯ ಕೋಸ್ಸೆಮೋ ತನ್ನ ಚಿಕ್ಕಪ್ಪ ಕಾರ್ಡಿನಲ್ ಲಿಯೋಪಾಲ್ಡೋನ ಸಂಗ್ರಹಾಲಯದಿಂದ ಪಡೆದ ಆತ್ಮಚಿತ್ರಣಗಳನ್ನೂ, ಡಚ್ ವರ್ಣಚಿತ್ರಗಳನ್ನೂ ಇಟಲಿಯ ರೆನೇಸಾನ್ಸ್ ಯುಗದ ಉತ್ಕೃಷ್ಟ ತೈಲಚಿತ್ರಗಳನ್ನೂ ತಂದು ಸೇರಿಸಿದ. ಫ್ರೆಂಚ್ ಮಹಾಕ್ರಾಂತಿಯ ಕಾಲದಲ್ಲಿ ನಷ್ಟವಾಗಿದ್ದ ಈ ಚಿತ್ರಶಾಲೆಯನ್ನು 19ನೆಯ ಶತಮಾನದಲ್ಲಿ ಪುನರುಜ್ಜೀವನಗೊಳಿಸಿ, ಕಳೆದುಹೋಗಿದ್ದ ಕಲಾಕೃತಿಗಳನ್ನು ಹಿಂಪಡೆಯಲು ಅವಿರತ ಪ್ರಯತ್ನ ಮಾಡಲಾಯಿತು. ಅನಂತರ ಊಫಿಟ್ಜೀಯಲ್ಲಿನ ಪ್ರಾಚ್ಯವಸ್ತುಗಳನ್ನೂ ಮಧ್ಯಯುಗದ ಮತ್ತು ರೆನೇಸಾನ್ಸ್ ಶಿಲ್ಪಕಲಾಕೃತಿಗಳನ್ನೂ ಅತ್ಯುತ್ತಮ ಪ್ರಾಯೋಗಿಕ ಚಿತ್ರಕೃತಿಗಳನ್ನೂ ಅಲ್ಲಿಂದ ಬಾರ್ಗೆಲ್ಲೋ ಮುಂತಾದ ಬೇರೆಬೇರೆ ಸಂಗ್ರಹಾಲಯಗಳಿಗೆ ಸಾಗಿಸಲಾಯಿತು. ಇಟಲಿಯ ಚರ್ಚುಗಳನ್ನು ಹತ್ತಿಕ್ಕಿ, ಸಂನ್ಯಾಸಿಮಠಗಳನ್ನು ವಶಪಡಿಸಿಕೊಂಡಾಗ ಆ ಸಂಸ್ಥೆಗಳಲ್ಲಿ ಸಂರಕ್ಷಿಸಲಾಗಿದ್ದ ಸಾವಿರಾರು ಚಿತ್ರಗಳನ್ನು ತಂದು ಊಫಿಟ್ಜೀ ಚಿತ್ರಶಾಲೆಗೆ ಕೊಡಿಸಲಾಯಿತು. 1919ರಲ್ಲಿ ದಿ ಗ್ಯಾಲರಿ ಆಫ್ ಫೈನ್ ಆರ್ಟ್‌ನ್ನು ಊಫಿಟ್ಜೀಯ ಒಂದು ಭಾಗವನ್ನಾಗಿ ಅಳವಡಿಸಲಾಯಿತು. ಈ ಎಲ್ಲಾ ಕಾರಣಗಳಿಂದ, ಹದಿಮೂರನೆಯ ಶತಮಾನದಿಂದ ಹದಿನೆಂಟನೆಯ ಶತಮಾನದ ವರೆಗಿನ ಇಟಲಿಯ ಚಿತ್ರಕಲೆ ಹೇಗೆ ವಿಕಾಸವಾಯಿತೆಂಬುದನ್ನು ಅಲ್ಲಿನ ಚಿತ್ರಗಳ ಮೂಲಕ ನಾವು ಇಂದಿಗೂ ಊಫಿಟ್ಜೀ ಚಿತ್ರಶಾಲೆಯಲ್ಲಿ ಕಾಣಬಹುದು.

**ವ್ಯಾಟಿಕನ್ ಸಂಗ್ರಹಾಲಯಗಳು :** 15ನೆಯ ಶತಮಾನದ ಪ್ರಾರಂಭದಿಂದಲೂ ರೋಮಿನ ಹಲವು ಪೋಪ್ ಪ್ರಭುಗಳು ಸಂಗ್ರಹಿಸಿದ್ದ ಅಸಂಖ್ಯಾತ ಕಲಾವಸ್ತುಗಳು, ಚಿತ್ರಗಳು ವ್ಯಾಟಿಕನ್ ಮ್ಯೂಸಿಯಮ್‌ನಲ್ಲಿ ಕಾಣಸಿಗುತ್ತವೆ. ಧಾರ್ಮಿಕ ಮುಖಂಡರಾಗಿದ್ದ ತಮಗೆ ಕೊಡುಗೆಯಾಗಿ ದೊರೆಯುತ್ತಿದ್ದ ಹೇರಳ ವಸ್ತುಗಳನ್ನು (1870 ರಲ್ಲಿ ಇಟಲಿಯ ಏಕೀಕರಣವಾಗುವವರೆಗೆ ವ್ಯಾಟಿಕನ್ ಧರ್ಮಪ್ರಭುಗಳೇ ರೋಮಿನ ಪೇಗನ್ ಅವಶೇಷಗಳ ಪಾಲಕರಾಗಿದ್ದುದರಿಂದ ಆಗಾಗ ತಮಗೆ ದೊರೆಯುತ್ತಿದ್ದ) ಪುರಾತನ ಕಲಾಕೃತಿಗಳನ್ನು ಪೋಪ್ ಗುರುಗಳು ವ್ಯಾಟಿಕನ್ ಸಂಗ್ರಹಾಲಯದಲ್ಲಿ ಸೇರಿಸುತ್ತಾ ಬಂದರು. ದೇಶಭ್ರಷ್ಟಾಗಿದ್ದ

ಪೋಪ್ 1420ರಲ್ಲಿ ತನ್ನ ಸ್ಥಾನಕ್ಕೆ ಹಿಂದಿರುಗಿದ ಮೇಲೆ ತನ್ನ ಪದವಿಯ ಘನತೆ ಗೌರವಗಳನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಕೆಲವು ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರಾರಂಭಿಸಿದ. ಇವರಿಗೆ ಫ್ಲಾರೆನ್ಸಿನವರಂತೆ ತಾವೂ ತಮ್ಮ ಪ್ರದೇಶದ ನಗರಗಳನ್ನು ಸುಂದರಗೊಳಿಸಬೇಕೆನ್ನಿಸಿತು. ಸ್ವಲ್ಪಕಾಲದಲ್ಲಿ ಎರಡನೆಯ ಪಯಸ್, ಐದನೆಯ ಮಾರ್ಟಿನ್‌ರಂಥ ಪೋಪ್ ಪ್ರಭುಗಳು ಫ್ಲಾರೆನ್ಸಿನ ಶ್ರೀಮಂತ ಸಂಸ್ಥಾನಿಕರಷ್ಟೇ ಕಲಾಭಿಮಾನಿಗಳೆಂದು ಪ್ರಸಿದ್ಧರಾದರು. 1476ರಲ್ಲಿ ಪೋಪ್ ನಾಲ್ಕನೆಯ ಸಿಕ್ಸಟಿಸ್, ವ್ಯಾಟಿಕನ್ ಪುಸ್ತಕಾಲಯವನ್ನು ಕಟ್ಟಿಸಿ ಸಿಸ್ಟೈನ್ ಮಂದಿರದಲ್ಲಿ ಉಬ್ಬು ಚಿತ್ರಗಳನ್ನು ರಚಿಸುವ ವ್ಯವಸ್ಥೆಮಾಡಿದ. ರೆನೇಸಾನ್ಸ್ ಕಾಲದ ಪೋಪ್ ಗುರುಗಳಲ್ಲಿ ಅತ್ಯಂತ ಶ್ರೇಷ್ಠನೆನಿಸಿಕೊಂಡ ಎರಡನೆಯ ಜೂಲಿಯಸ್ (1505–1613) ಸಿಸ್ಟೈನ್ ಮಂದಿರದ ಒಳಮಾಳಿಗೆಯಲ್ಲಿ ಮೈಕಲ್ ಏಂಜಲೋವಿನ ವರ್ಣರಂಜಿತ ಚಿತ್ರಗಳನ್ನು ಬರೆಯಿಸಿದ ರಾಫೆಲ್‌ನಿಂದ ತನ್ನ ಪುಸ್ತಕ ಭಂಡಾರ ಹಾಗೂ ಸಂದರ್ಶನ ಕೋಣೆಗಳಲ್ಲಿ ಅದ್ಭುತವರ್ಣಚಿತ್ರಗಳನ್ನು ಬರೆಯಿಸುವ ವ್ಯವಸ್ಥೆ ಮಾಡಿದ. ತನ್ನ ವೈಭವಯುತ ಜೀವನಕ್ಕೆ ಸಂಬಂಧಿಸಿದ ಚಿತ್ರಗಳನ್ನೂ ಬರೆಯಿಸಿ ತನ್ನ ಹೆಸರು ಚಿರಸ್ಥಾಯಿಯಾಗುವಂತೆ ಮಾಡಿಕೊಂಡ. ಪ್ರಾಚ್ಯಸಂಶೋಧಕರು ಅಗೆದು ತೆಗೆದಿದ್ದ ಲಾವೋಕೂನ್, ಅಪಾಲೋ ಬೆಲ್ವಡಿಯರ್, ವೀನಸ್ ದೇವತೆಗಳ ಶಿಲ್ಪಾಕೃತಿಗಳನ್ನು ಪಡೆದುಕೊಂಡು ಸಂಗ್ರಹಾಲಯಕ್ಕೆ ಸೇರಿಸಿದ. ಐದನೆಯ ಚಾರ್ಲ್ಸ್ ರೋಮ್ ನಗರವನ್ನು ಮುತ್ತಿ ಕೊಳ್ಳೆಹೊಡೆದಾಗ ಪೋಪ್ ಗುರುಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರಬಲವಾದ ಪೆಟ್ಟುಬಿತ್ತು. ಆದರೂ ಪುರಾತನ ರೋಮ್ ಪ್ರದೇಶದಲ್ಲಿ ಉತ್ಖನನ ಕಾರ್ಯಗಳು ನಡೆಯುತ್ತಲೇ ಇದ್ದವು. ಮೈಕೆಲ್ ಏಂಜಲೋ ಸಿಸ್ಟೈನ್ ಮಂದಿರದಲ್ಲಿ ತನ್ನ ಲೋಕವಿಖ್ಯಾತ ದಿ ಲಾಸ್ಟ್ ಜಡ್ಜ್‌ಮೆಂಟ್

ಲಂಡನಿನ ಟ್ರಫಾಲ್ಗರ್ ಚೌಕದಲ್ಲಿನ ರಾಷ್ಟ್ರೀಯ ಚಿತ್ರಶಾಲೆಯ ನವಾಭಿಜಾತ ಮುಂಭಾಗ ಮುಖಮಂಟಪದ ಹಿಂದೆ ಪ್ರಪಂಚದ ಅತಿ ಶ್ರೀಮಂತ ಕಲಾಸಂಗ್ರಹಗಳಲ್ಲೊಂದನ್ನು ಕಾಣಬಹುದು

ಚಿತ್ರವನ್ನು ಬರೆದದ್ದು ಆ ಕಾಲದಲ್ಲೇ. ಕೌಂಟರ್ ರೆಫರ್ಮೇಷನ್ ಕಾಲದಲ್ಲಿ ಕಲೆಯ ಪುನರುಜ್ಜೀವನ ಕಾರ್ಯಗಳು ಕುಂಠಿತವಾದವು. ಬೆಲ್ವೇಡಿಯರ್ ಶಿಲ್ಪಾಕೃತಿಗಳನ್ನು ನೋಡುವವರಿಲ್ಲದೆ ಅವು ಸುಮಾರು 700 ವರ್ಷಗಳ ಕಾಲ ಮಂದಿರದೊಳಗೆ ಧೂಳುಹಿಡಿದು ಬಿದ್ದಿದ್ದವು. ಅನಂತರ ಈ ಹಲವು ಕೃತಿಗಳನ್ನು ಕ್ಯಾಪಿಟೋಲಿನ ಅರಮನೆಗೆ ಸಾಗಿಸಿ ಅಲ್ಲಿ ಅವುಗಳನ್ನು ಸಂರಕ್ಷಿಸಿ ಇಡುವ ವ್ಯವಸ್ಥೆ ಮಾಡಲಾಯಿತು.

18ನೆಯ ಶತಮಾನದ ಅನಂತರ ಬಂದ ಪೋಪ್ ಪ್ರಭುಗಳು ವ್ಯಾಟಿಕನ್ ಸಂಗ್ರಹಾಲಯಗಳ ನವೀಕರಣದಲ್ಲಿ ತೊಡಗಿ ಹೊಸ ಹೊಸ ಕಲಾಕೃತಿಗಳನ್ನು ಸಂಗ್ರಹಿಸಿದರು. ಅತ್ಯಮೂಲ್ಯ ಕೃತಿಗಳನ್ನು ಅಲ್ಲಿಂದ ಯಾರೂ ಕದ್ದು ಒಯ್ಯದಂತೆ ನೋಡಿಕೊಂಡರು. ಪೋಪ್ ಹನ್ನೊಂದನೆಯ ಕ್ಲೆಮೆಂಟ್ ತಾನು (ಕಾರ್ಡಿನಲ್ ಆಲ್ಬನಿಯಾಗಿದ್ದಾಗ) ಸ್ವಂತವಾಗಿ ಪರಿಚಯಿಸಿದ ಅಮೂಲ್ಯ ಚಿತ್ರಸಂಗ್ರಹಣೆಯನ್ನು ಇಡಲು ಹೊಸ ಚಿತ್ರಶಾಲೆಯನ್ನೇ ಕಟ್ಟಬೇಕಾಯಿತು. ಮ್ಯೂಸಿಯೋ ಕ್ಲೆಮೆಂಟಿನೋ ಎಂಬ ಹೆಸರಿನ ಕಲಾವಸ್ತು ಸಂಗ್ರಹಾಲಯವನ್ನು ಪ್ರಪ್ರಥಮವಾಗಿ 1773ರಲ್ಲಿ ಸಾರ್ವಜನಿಕರಿಗಾಗಿ ತೆರೆದಿಡಲಾಯಿತು. ಏಳನೆಯ ಪೋಪ್ ಪಯಸ್ಸನ ಕಾಲದಲ್ಲಿ ಬ್ರೊಮಾಂಟ್ ಗ್ಯಾಲರಿಯನ್ನು ಒಳಗೊಂಡಂತೆ ಬೆಲ್ವೆಡಿಯರ್ ಕಟ್ಟಡವನ್ನೂ ವ್ಯಾಟಿಕನ್ ಮಂದಿರವನ್ನೂ ಒಂದುಗೂಡಿಸ ಲಾಯಿತು. ಸಾವಿರಾರು ಪುರಾತನ ವಸ್ತುಗಳನ್ನು ಸಂಗ್ರಹಿಸಲಾಯಿತು. ಬೇರೆಬೇರೆ ಕಲಾವಸ್ತುಗಳ ಪ್ರದರ್ಶನಕ್ಕಾಗಿ ಪ್ರತ್ಯೇಕವಾದ ಗ್ಯಾಲರಿಯನ್ನು ಕಟ್ಟಿಸಲಾಯಿತು. ಉದಾಹರಣೆಗೆ ಮ್ಯೂಸಿಯೋ ಗ್ರಿಗೋರಿಯಾನ ಎಟ್ರುಸ್ಕೋ ಎಂಬ ಕಡೆ ಎಟ್ರುಸ್ಕನ್ ವಸ್ತುಗಳನ್ನೂ ಇಡಲಾಯಿತು. ಈ ಸಂಗ್ರಹಾಲಯ ಸಮುದಾಯಕ್ಕೆ ಒಂದು ಸೊಗಸಾದ ಚಿತ್ರಶಾಲೆಯನ್ನು ಸೇರಿಸಲಾಯಿತು. ಮೊಟ್ಟಮೊದಲು ತೀರ ಅವ್ಯವಸ್ಥಿತವಾಗಿದ್ದ ಈ ಚಿತ್ರಶಾಲೆಯಲ್ಲಿ ರಾಫೆಲ್‌ನ ಟ್ರಾನ್ಸ್‌ಫಿಗರೇಷನ್‌ನಂಥ ಶ್ರೇಷ್ಠ ಕಲಾಕೃತಿಗಳನ್ನು ಸೇರಿಸಿದ್ದು ಅಪೂರ್ವ ಸಂಗತಿ. 1909ರಲ್ಲಿ ಈ ಚಿತ್ರಶಾಲೆಯನ್ನು ಸಂಪೂರ್ಣವಾಗಿ ವ್ಯವಸ್ಥೆಗೊಳಿಸಿ (ನೆಪೋಲಿಯನ್ ಕಾಲದಲ್ಲಿ ಹಲವು ಪೋಪ್ ಗುರುಗಳ ನಿವಾಸದಲ್ಲಿ ಹಂಚಿ ಹರಡಿಹೋಗಿದ್ದ) ಶ್ರೇಷ್ಠ ಚಿತ್ರಕೃತಿಗಳನ್ನು ಮತ್ತೆ ಪಡೆದು ಈ ಚಿತ್ರಶಾಲೆಯಲ್ಲಿ ತಂದಿರಿಸಲಾಯಿತು. ರೆನೇಸಾನ್ಸ್ ಯುಗದ ಹಲವು ಶ್ರೇಷ್ಠ ಮೂಲಕೃತಿಗಳನ್ನು ಇಲ್ಲಿ ಕಾಣಬಹುದು.

ಪ್ಯಾರಿಸಿನಲ್ಲಿರುವ ಲೂವರ್ ಚಿತ್ರಶಾಲೆ ; ಪ್ರಪಂಚದ ರಾಷ್ಟ್ರೀಯ ಚಿತ್ರಶಾಲೆಗಳಲ್ಲಿ ಅತಿ ದೊಡ್ಡದು. ಇಲ್ಲಿನ ಅಮೂಲ್ಯ ಸಂಗ್ರಹಗಳಲ್ಲಿ ಲಿಯೊನಾರ್ಡೊ ಡ ವಿಂಚಿಯ ಮೋನಲಿಸವೂ ಒಂದು.

ಫ್ರೆಂಚ್ ಮಹಾಕ್ರಾಂತಿಯ ನಂತರ ಖಾಸಗಿ ಕಲಾಸಂಗ್ರಹಣೆಯ ಮಾದರಿಯನ್ನು ಅನುಸರಿಸಿ ಸರ್ಕಾರಗಳೇ ಈ ಕಾರ್ಯವನ್ನು ನಿರ್ವಹಿಸಲು ಮುಂದೆಬಂದವು. ರಾಷ್ಟ್ರಪ್ರೇಮದಿಂದ ತಮ್ಮ ದೇಶಗಳ ಪುರಾತನ ಪರಂಪರೆಯ ಬಗ್ಗೆ ಮೂಡಿದ ಹೆಮ್ಮೆ ಅಭಿಮಾನದಿಂದ ಅವು ಪ್ರೇರಣೆ ಪಡೆದವು. ನೆಪೋಲಿಯನ್ನನ ಆಕ್ರಮಣಕ್ಕೆ ತುತ್ತಾದ ದೇಶಗಳಲ್ಲಿ ಶ್ರೀಮಂತ ಮನೆತನದ ಕಲಾವಸ್ತುಗಳನ್ನು ಆಯಾ ದೇಶದ ಸರ್ಕಾರಗಳ ವಶಕ್ಕೆ ವಹಿಸಲಾಯಿತು. ಇದರಿಂದ ಅಲ್ಲಿಯವರೆಗೆ ಶ್ರೀಮಂತರ ಸ್ವತ್ತಾಗಿದ್ದ ಕಲಾವಸ್ತುಗಳು ಸಾರ್ವಜನಿಕರ ಆಸಕ್ತಿಯನ್ನೂ ಸೆಳೆಯುವ ಸಾಧನಗಳಾದವು. ಅಂಥ ಪ್ರೇರಣೆಯಿಂದ ಹೊಸದಾಗಿ ರೂಪಿತವಾದ ಕೆಲವು ಪ್ರಸಿದ್ಧ ಚಿತ್ರಶಾಲೆಗಳನ್ನು ಕುರಿತು ಕೆಲವು ವಿವರಗಳು ಹೀಗಿವೆ.

**ರಿಕ್ಸ್ ಮ್ಯೂಸಿಯಮ್:** ಇದು ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿರುವ ಹಾಲೆಂಡಿನ ರಾಷ್ಟ್ರೀಯ ಪ್ರಾಚ್ಯ ಸಂಗ್ರಹಾಲಯ. ಇದು ಉಗಮವಾದ್ದು ಹಾಲೆಂಡಿನ ದೊರೆ ಲೂಯಿ ನೆಪೋಲಿಯನ್ 1808ರಲ್ಲಿ ಸ್ಥಾಪಿಸಿದ ರಾಯಲ್ ಮ್ಯೂಸಿಯಮಿನಲ್ಲಿ, ಜೋವಾನ್ ಮೀರ್‌ಮನ್ ಎಂಬ ಅಧಿಕಾರಿಯ ನೇತೃತ್ವದಲ್ಲಿ ಹೇಗ್‌ನಲ್ಲಿದ್ದ ನ್ಯಾಷನಲ್ ಆರ್ಟ್ ಗ್ಯಾಲರಿಯಿಂದಲೂ ಕಲಾಕೃತಿಗಳನ್ನು ತಂದು ಇಲ್ಲಿ ಸಂಗ್ರಹಿಸಲಾಯಿತು. ಆ್ಯಮ್‌ಸ್ಟರ್‌ಡ್ಯಾಮ್ ನಗರದವರು ರೆಮಬ್ರ್ಯಾಂಟ್‌ನ ದಿ ನೈಟ್ ವಾಚ್, ದಿ ಗವರ್ನರ್ಸ್ ಆಫ್ ದಿ ಕ್ಲಾತ್ ಗಿಲ್ಡ್ ಮುಂತಾದ ಲೋಕೋತ್ತರ ವರ್ಣಚಿತ್ರಗಳನ್ನೂ ಸಹ ರಿಕ್ಸ್ ಚಿತ್ರಾಲಯಕ್ಕೆ ದಾನವಾಗಿ ಕೊಟ್ಟರು. ಹಾಲೆಂಡಿನ ಕಲಾವಿದರ ಕೃತಿಗಳ ಜತೆಯಲ್ಲಿ ಬೇರೆಬೇರೆ ದೇಶಗಳ ಸಮಕಾಲೀನ ಕಲಾವಿದರು ಬರೆದ ಚಿತ್ರಗಳನ್ನೂ ಅಲ್ಲಿ ಇಡಬೇಕೆಂಬ ಉದ್ದೇಶದಿಂದ ಟ್ರಿಪ್ಪನ್‌ಹ್ಯೂಸ್ ಎಂಬಲ್ಲಿ 1817ರಲ್ಲಿ ರಿಕ್ಸ್ ಮ್ಯೂಸಿಯಮ್ಮನ್ನು ಸ್ಥಾಪಿಸಲಾಯಿತು. ಸ್ಥಳಸಂಕೋಚದಿಂದಾಗಿ ಅವ್ಯವಸ್ಥೆಯಲ್ಲಿದ್ದ ಈ ಸಂಸ್ಥೆಯನ್ನು 1885ರಲ್ಲಿ ಹಾಲೆಂಡಿನ ಆರ್ಟ್ಸ್ ಕಮಿಷನ್ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಮೇಲೆ ಅದಕ್ಕೆ ಹೊಸಜೀವ ಬಂತು. ಒಂದು ಚಿತ್ರದ ಯೋಗ್ಯತೆಯಿರುವುದು ಅದರ ಕಲಾಸೌಂದರ್ಯದಲ್ಲೇ ವಿನಾ ಅದರ ಐತಿಹಾಸಿಕತೆ, ಪ್ರಾಚೀನಪರಂಪರೆ, ಮುಂತಾದ ಅಂಶಗಳಲ್ಲಲ್ಲ ಎಂಬ ಹೊಸ ದೃಷ್ಟಿಯಿಂದ ಪ್ರೇರಣೆಗೊಂಡ ಯುವಕರ ಪೀಳಿಗೆ ರಿಕ್ಸ್ ಸಂಗ್ರಹಾಲಯದ ಮೇಲೆ ತನ್ನ ವಿಚಾರದ ಪ್ರಭಾವ ಬೀರಿತು. ಪ್ರಾಚೀನ ಡಚ್ ಜಾನಪದ ಸಂಪ್ರದಾಯದ ಹಲವು ಅಪೂರ್ವ ಚಿತ್ರಗಳನ್ನು (ಡಚ್ ಪ್ರಿಮಿಟಿವ್) ಇಲ್ಲಿ ನೋಡಬಹುದು. 1972 ರ ನಂತರ ಈ ಚಿತ್ರಶಾಲೆಯನ್ನು ಆಧುನಿಕಗೊಳಿಸಿ ಬೇರೆ ದೇಶಗಳ ಶ್ರೇಷ್ಠ ಕೃತಿಗಳನ್ನು ತಂದಿಡಲಾಯಿತು. ಕಳೆದುಹೋಗಿದ್ದ ಅನೇಕ ಅಪೂರ್ವ ಕಲಾಕೃತಿಗಳನ್ನು ದಿ ಫೌಂಡೇಷನ್ ಫಾರ್ ನೆದರ್‌ಲ್ಯಾಂಡ್ಸ್ ಆರ್ಟ್ ಪೊಸೆಷನ್ ಎಂಬ ಸಂಸ್ಥೆಯ ನೆರವಿನಿಂದ ಹಿಂದಕ್ಕೆ ಪಡೆಯಲಾಯಿತು. ರಿಕ್ಸ್ ಗ್ಯಾಲರಿಯಲ್ಲಿ ವರ್ಮಿಯರ್, ರೆಂಬ್ರ್ಯಾಂಟ್ ಮುಂತಾದವರ ಅಪೂರ್ವ ಕಲಾಕೃತಿಗಳೂ ಡಚ್ ಪ್ರಿಮಿಟಿವ್ ಚಿತ್ರಗಳೂ ಸೇರಿವೆ. ಇದು ಜಗತ್ತಿನ ಶ್ರೇಷ್ಠ ಚಿತ್ರಶಾಲೆಗಳಲ್ಲೊಂದೆನ್ನುತ್ತಾರೆ.

**ಬ್ರೆರಾ ಚಿತ್ರಶಾಲೆ :** ಇಟಲಿಯ ಮಿಲಾನಿನಲ್ಲಿರುವ ಈ ಚಿತ್ರಶಾಲೆ 1809ರಲ್ಲಿ ಪ್ರಾರಂಭವಾದರೂ ಅದು ತೀರಾ ಇತ್ತೀಚಿನದು ಎನ್ನಬಹುದು. ಮೊಟ್ಟಮೊದಲು ಬ್ರೆರಾ ಅರಮನೆ ಜೆಸೂಯಿಟ್ ಧರ್ಮಗುರುಗಳಿಗೆ ಸೇರಿತ್ತು. ಚಕ್ರವರ್ತಿನಿ ಮರೆಯಾ ತೆರೆಸಾ

ಈ ಅರಮನೆಯಲ್ಲಿ ಕೆಲವು ಶಿಕ್ಷಣಸಂಸ್ಥೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದಳು. ಮಿಲಾನ್ ನಗರದ ಫ್ರೆಂಚರಿಗೆ ಸೇರಿದ ಪ್ರದೇಶದ ರಾಜಧಾನಿಯಾದ ಮೇಲೆ ಈ ಅರಮನೆಯನ್ನು ಚಿತ್ರಶಾಲೆಯನ್ನಾಗಿ ಪರಿವರ್ತಿಸಿ, ಉತ್ತರ ಇಟಲಿಯಲ್ಲಿ ನಿಷೇಧಗೊಳಿಸಲಾದ ಧರ್ಮ ಮಂದಿರಗಳಿಂದ ತಂದ ಅನೇಕ ಚಿತ್ರಗಳನ್ನು ಇಲ್ಲಿ ಇಡಲಾಯಿತು. ಇದರಿಂದಾಗಿ ರಾಫೆಲ್‌ನ ದಿ ಮ್ಯಾರೇಜ್ ಆಫ್ ದಿ ವರ್ಜಿನ್, ಪಿಯರೋ ಡೆಲ್ಲಾ ಫ್ರಾನ್ಸಿಸ್ಕೋನ ದಿ ಮೆಡೋನಾ ವಿತ್ ದಿ ಏಂಜಲ್ಸ್ ಅಂಡ್ ವಿತ್ ದಿ ಡ್ಯೂಕ್ ಮುಂತಾದ ಉದ್ದಾಮ ರೆನೇಸಾನ್ಸ್ ಕೃತಿಗಳನ್ನೂ ವೆನೀಷಿಯನ್ ಪಂಥದ ಚಿತ್ರಗಳನ್ನೂ ಬ್ರೆರಾ ಚಿತ್ರಶಾಲೆಯಲ್ಲಿ ನೋಡುವಂತಾಯಿತು.

ವೆನಿಸ್ ನಗರದ ಅಕಾಡೆಮಿಯಾ ಡಿ ಬೆಲ್ಲ ಆರ್ಟ ಎಂಬುದು ಅಲ್ಲಿನ ನಗರಾಡಳಿತ ಸಂಸ್ಥೆಯ ಆಶ್ರಯದಲ್ಲಿರುವ ಒಂದು ಶ್ರೇಷ್ಠ ಚಿತ್ರಶಾಲೆ. 1807 ರಲ್ಲಿ ನೆಪೋಲಿಯನ್‌ನಿಂದ ಸ್ಥಾಪಿಸಲ್ಪಟ್ಟ ಈ ಗ್ಯಾಲರಿಯಲ್ಲಿ ಹಳೆಯ ಅಕಾಡೆಮಿಯಿಂದ, ಗ್ಯಾಲರಿಯಾ ಡಗೆಸ್ಸಿಯಿಂದ ಸಂಚಯಿಸಿದ ಚಿತ್ರಗಳಿವೆ. ನೆಪೋಲಿಯನ್ನನ ಪತನದ ಅನಂತರ ಹಿಂದಕ್ಕೆ ಪಡೆಯಲಾದ ಮತ್ತು ಆಸ್ಟ್ರಿಯದವರು ಹಿಂದಕ್ಕೆ ಕೊಟ್ಟ ವೆನೀಷಿಯನ್ ಶೈಲಿಯ ಚಿತ್ರಗಳು ಈ ಚಿತ್ರಶಾಲೆಯಲ್ಲಿನ ಅತ್ಯಂತ ಆಕರ್ಷಕ ವಸ್ತುಗಳಾಗಿವೆ.

**ಮೈಸೂರು ನಗರದ ಹಳೆಯ ಚಿತ್ರಶಾಲೆಯಾದ ಜಯಚಾಮರಾಜೇಂದ್ರ ಚಿತ್ರಶಾಲೆಯ ಒಂದು ನೋಟ**

**ನ್ಯಾಷನಲ್ ಗ್ಯಾಲರಿ:** ಲಂಡನ್ನಿನ ಈ ವಿಖ್ಯಾತ ಚಿತ್ರಶಾಲೆ ಒಂದು ಇತಿಹಾಸಪ್ರಸಿದ್ಧ ಸಂಸ್ಥೆ. ಇಂಗ್ಲೆಂಡಿನಲ್ಲಿ ರಾಷ್ಟ್ರೀಯ ಚಿತ್ರಶಾಲೆಯೊಂದನ್ನು ಸ್ಥಾಪಿಸಿ ದೇಶದ ಕಲಾಕೃತಿಗಳನ್ನು ಬೇರೆ ದೇಶದವರು ಕೊಳ್ಳೆ ಹೊಡೆಯದಂತೆ ಮಾಡಬೇಕೆಂದು ಜಾನ್ ವಿಲ್ಕಿಸ್ ಒಂದು ಉಗ್ರ ಚಳುವಳಿಯನ್ನೇ ಹೂಡಿದ. ಸರ್ ರಾಬರ್ಟ್ ವಾಲ್ಪೋಲ್ ಸಂಗ್ರಹಿಸಿದ್ದ ಉತ್ಕೃಷ್ಟ ಚಿತ್ರಗಳನ್ನು ರಷ್ಯದ ರಾಣಿ ಕ್ಯಾತರಿನಳಿಗೆ ಮಾರಿದ ಸಂದರ್ಭದಲ್ಲಿ ರೊಚ್ಚಿಗೆದ್ದ ಜಾನ್ ವಿಲ್ಕಿಸ್ ರಾಷ್ಟ್ರೀಯ ಚಿತ್ರಶಾಲೆಯ ಕಲ್ಪನೆಯನ್ನು ಪಾರ್ಲಿಮೆಂಟಿನ ಮುಂದಿಟ್ಟ. ತಾವೇ ಖಾಸಗಿಯಾಗಿ ಚಿತ್ರಸಂಗ್ರಹಣೆಯನ್ನು ಇಟ್ಟುಕೊಂಡಿದ್ದ ಇಂಗ್ಲೆಂಡಿನ ಶ್ರೀಮಂತವರ್ಗ ಈ ಚಳುವಳಿಗೆ ಬೆಂಬಲ ನೀಡಲಿಲ್ಲ. ಆದರೆ ಸುಪ್ರಸಿದ್ಧ ಕಲಾವಿದರಾದ ಸರ್ ಜೋಷುವ ರೆನಲ್ಡ್ಸ್, ಬೆಂಜಮಿನ್ ವೆಸ್ಟ್, ಜೇಮ್ಸ್ ಬ್ಯಾರಿ, ಜಾನ್ ಓಪಿ ಮುಂತಾದವರು ವಿಲ್ಕಿಸನ ನಿಲುವನ್ನು ಸಮರ್ಥಿಸಿದರು. ಇದರ ಫಲವಾಗಿ ಇಂಗ್ಲೆಂಡಿನಲ್ಲಿ ದಿ ಬ್ರಿಟಿಷ್ ಇನ್‌ಸ್ಟಿಟ್ಯೂಟ್ ಫಾರ್ ಪ್ರಮೋಷನ್ ಆಫ್ ದಿ ಫೈನ್ ಆರ್ಟ್ಸ್ ಎಂಬ ಹೊಸ ಸಂಸ್ಥೆಯು ಹುಟ್ಟಿಕೊಂಡಿತು. ಸರ್ ಜಾರ್ಜ್ ಬೋಮೆಂಟ್ ಮತ್ತು ಜಾನ್ ಜೂಲಿಯಸ್ ಆಂಗರ್‌ಸ್ಟಿನ್ ಎಂಬ ಶ್ರೀಮಂತರ ಬಳಿಯಿದ್ದ ಶ್ರೇಷ್ಠ ಚಿತ್ರಸಂಗ್ರಹವನ್ನು ಕೊಂಡು ಇಂಗ್ಲೆಂಡಿನಲ್ಲಿ ಪ್ರಪ್ರಥಮವಾಗಿ ರಾಷ್ಟ್ರೀಯ ಚಿತ್ರಶಾಲೆಯೊಂದನ್ನು ಸ್ಥಾಪಿಸಲಾಯಿತು. ಇದರಲ್ಲಿ ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನದ ಹಲವು ಪ್ರಸಿದ್ಧ ಐರೋಪ್ಯ ಚಿತ್ರಕಾರರ ಕೃತಿಗಳಿವೆ. ಕಲೆಯ ಅಧ್ಯಯನವನ್ನು ಶಿಕ್ಷಣಪದ್ಧತಿಯ ಭಾಗವನ್ನಾಗಿ ಅಳವಡಿಸುವ ಉದ್ದೇಶದಿಂದ ಸಂಗ್ರಹಿಸಲಾದ ಹಲವು ಕಲಾತ್ಮಕ ವಸ್ತುಗಳನ್ನು ಇಲ್ಲಿ ಕಾಣಬಹುದು.

**ಟೇಟ್ ಗ್ಯಾಲರಿ :** ಲಂಡನ್ನಿನ ಈ ಚಿತ್ರಶಾಲೆಯಲ್ಲಿ ಇಂಗ್ಲೆಂಡಿನ ಬೇರೆ ಬೇರೆ ಪಂಥದ ಕಲಾವಿದರುಗಳು ರಚಿಸಿದ ಚಿತ್ರಗಳಿವೆ. ನ್ಯಾಷನಲ್ ಗ್ಯಾಲರಿಯಲ್ಲಿ ಇಂಗ್ಲಿಷ್ ಕಲಾವಿದರ ಚಿತ್ರಗಳಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂಬ ಕಾರಣದಿಂದ, ವಿಶಿಷ್ಟವಾದ ಇನ್ನೊಂದು ಚಿತ್ರಶಾಲೆಯನ್ನು ಪ್ರಾರಂಭಿಸಲಾಯಿತು. 1890ರಲ್ಲಿ ಹೆನ್ರಿ ಟೇಟ್ ತಾನು ಸಂಗ್ರಹಿಸಿದ್ದ ಆಧುನಿಕ ಬ್ರಿಟಿಷ್ ಚಿತ್ರಗಳನ್ನು ದಾನವಾಗಿಕೊಡಲು ಮುಂದೆ ಬಂದ. 1790ರ ಪೂರ್ವದ ತೊಂಬತ್ತಾರು ಬ್ರಿಟಿಷ್ ಚಿತ್ರಗಳು ಇಲ್ಲಿವೆ. ಇಂಗ್ಲೆಂಡಿನಲ್ಲಿ ಎರಡು ರಾಷ್ಟ್ರೀಯ ಚಿತ್ರಶಾಲೆಗಳಿರಬೇಕೆಂದೂ ಹೊಸ ಗ್ಯಾಲರಿಯಲ್ಲಿ ಬ್ರಿಟಿಷ್ ಚಿತ್ರಕಾರರ ಕೃತಿಗಳಿಗೆ ಮಾತ್ರ ಅವಕಾಶವಿರಬೇಕೆಂದೂ ಒಪ್ಪಿಕೊಂಡಿದ್ದರಿಂದ ಜಗತ್ಪ್ರಸಿದ್ಧ ಪುರಾತನ ಕೃತಿಗಳನ್ನು ನ್ಯಾಷನಲ್ ಗ್ಯಾಲರಿಯಲ್ಲಿಟ್ಟು ಆಧುನಿಕ ಇಂಗ್ಲಿಷ್ ಕೃತಿಗಳಿಗೆ ಟೇಟ್ ಗ್ಯಾಲರಿಯಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದೆ. 1937ರಿಂದೀಚೆಗೆ ಅಲ್ಲಿ ಆಧುನಿಕ ಬ್ರಿಟಿಷ್ ಹಾಗೂ ವಿದೇಶಿ ಕಲಾವಿದರ ಶಿಲ್ಪಕೃತಿಗಳನ್ನು ಇಡಲಾಗಿದೆ. 1949ರಿಂದೀಚೆಗೆ ನಡೆಯುತ್ತಿರುವ ಭಾರಿ ಪ್ರದರ್ಶನದಲ್ಲಿ ಮ್ಯಾಥ್ಯು ಸ್ಮಿತ್, ಸ್ಟಾನ್ಲೆ ಸ್ಪೆನ್ಸರ್, ವಿಂಡ್ ಹ್ಯಾಮ್ ಲೂಯಿಸ್ ಮುಂತಾದವರ ಕೃತಿಗಳನ್ನು ಪ್ರತ್ಯೇಕವಾಗಿ ಪ್ರದರ್ಶಿಸುವ ವಾಡಿಕೆ ಇಟ್ಟುಕೊಂಡಿದ್ದಾರೆ.

**ದಿ ವಿಕ್ಟೋರಿಯ ಆಲ್ಬರ್ಟ್ ಮ್ಯೂಸಿಯಮ್ :** ಇದರ ಭಾಗವಾಗಿರುವ ಚಿತ್ರಶಾಲೆ (ಲಂಡನ್) ಒಂದು ವಿಶಿಷ್ಟ ಶೈಕ್ಷಣಿಕ ಉದ್ದೇಶದಿಂದ ಪ್ರಾರಂಭವಾದ ಸಂಸ್ಥೆ. ಎಲ್ಲ ಕಾಲ ದೇಶಗಳ ಎಲ್ಲ ಪಂಥಗಳ ಕಲಾವಿದರು ರಚಿಸಿದ ಕೃತಿಗಳನ್ನು ಜನಪ್ರಿಯಗೊಳಿಸಿ ಜನತೆಯ ಅರಿವನ್ನು ಹೆಚ್ಚಿಸಬೇಕು, ಕಲೆಯಲ್ಲಿನ ಆನ್ವಯಿಕ ಸೂತ್ರಗಳನ್ನೂ, ವಿಚಾರಗಳನ್ನೂ ಔದ್ಯೋಗಿಕ ಉತ್ಪನ್ನಗಳ ತಯಾರಿಕೆಗಾಗಿ ಬಳಸಿಕೊಳ್ಳಬೇಕು-ಎಂದರೆ, ಬ್ರಿಟನ್ನಿನ ಔದ್ಯೋಗಿಕ ವ್ಯಾಪಾರಗಳು ಹೆಚ್ಚುವಂತೆ ಕಲೆಯ ವಿಚಾರಗಳನ್ನು ನಿತ್ಯ ಬಳಕೆಯ ಔದ್ಯೋಗಿಕ ಉತ್ಪನ್ನಗಳ ತಯಾರಿಕೆಗೆ ಅನ್ವಯಿಸುವಂತೆ ಬಳಸಿಕೊಳ್ಳಬೇಕು ಎಂಬ ಉದ್ದೇಶದಿಂದ ಪ್ರೇರಣೆ ಪಡೆದು, ದಿ ಗ್ರೇಟ್ ಎಕ್ಸಿಬಿಷನ್ ಉತ್ಸವಕ್ಕಾಗಿ ಸಂಗ್ರಹಿಸಲಾಗಿದ್ದ ಎಲ್ಲಾ ಕಲಾವಸ್ತುಗಳನ್ನೂ ಐದು ಸಾವಿರ ಪೌಂಡುಗಳಿಗೆ ಕೊಳ್ಳಲಾಯಿತು. ಈ ವಸ್ತುಗಳನ್ನು ಪಡೆದುಕೊಂಡು ಪ್ರಾರಂಭವಾದ ಸಂಸ್ಥೆಯೇ ದಿ ವಿಕ್ಟೋರಿಯ ಆಲ್ಬರ್ಟ್ ಮ್ಯೂಸಿಯಮ್ ಎಂಬ ಸಂಗ್ರಹಾಲಯವಾಗಿ ಬೆಳೆಯಿತು. ಸ್ವಲ್ಪ ಕಾಲದ ಅನಂತರ ದಕ್ಷಿಣ ಕೆನ್‌ಸಿಂಗ್‌ಟನ್‌ನಲ್ಲಿದ್ದ ಕಲಾಸಂಗ್ರಹಾಲಯವನ್ನೂ ಇದಕ್ಕೆ ಜೋಡಿಸಲಾಯಿತು. 1909ರಿಂದೀಚೆಗೆ ಅದು ಕೇವಲ ಕಲಾವಸ್ತು ಸಂಗ್ರಹಾಲಯವಾಗಿ ಮಾರ್ಪಟ್ಟು ಅದರಲ್ಲಿನ ವೈಜ್ಞಾನಿಕ, ಶೈಕ್ಷಣಿಕ ವಸ್ತುಗಳನ್ನು ಬೇರೊಂದು ವೈಜ್ಞಾನಿಕ ಮ್ಯೂಸಿಯಮಿಗೆ ಸಾಗಿಸಿದರು. ಈ ಸಂಗ್ರಹಾಲಯದಲ್ಲಿ ಹದಿನೇಳನೆಯ ಶತಮಾನದಿಂದೀಚಿನ ಚಿತ್ರಗಳು, ಶಿಲ್ಪಕೃತಿಗಳು, ಬ್ರಿಟನ್ನಿನಲ್ಲಿ ರಚಿತವಾದ ಕಿರು ಚಿತ್ರಗಳು, ಜಲವರ್ಣ ಚಿತ್ರಗಳು, ಬೆಳ್ಳಿಯ ಕೆತ್ತನೆಯ ಕೆಲಸದ ಕೃತಿಗಳು ಮುಂತಾದುವನ್ನು ಸಂಗ್ರಹಿಸಿ ಇಡಲಾಗಿದೆ. ಇಲ್ಲಿನ ಕುಂಭ ಕಲಾವಸ್ತು ಸಂಗ್ರಹಣೆಯಂತೂ ಜಗತ್ತಿನಲ್ಲೇ ಅತ್ಯುತ್ತಮವಾದುದು ಎನ್ನುವುದುಂಟು.

ಆಧುನಿಕ ಕಾಲದಲ್ಲಿ ಚಿತ್ರಶಾಲೆಗಳನ್ನು ಅತ್ಯಂತ ಸೂಕ್ಷ್ಮವೂ ವೈಜ್ಞಾನಿಕವೂ ಆದ ರೀತಿಯಲ್ಲಿ ಅಣಿಗೊಳಿಸಿರುವುದನ್ನು ಅಮೆರಿಕದಲ್ಲಿ ನೋಡಬಹುದು. ಮ್ಯೂಸಿಯಮ್ ವಿಜ್ಞಾನ ಪರಿಣತಿಯನ್ನು ಬಳಸಿಕೊಂಡು ಸ್ಥಾಪಿಸಿರುವ ಇಂಥ ಸಂಸ್ಥೆಗಳೆಂದರೆ ವಾಷಿಂಗ್‌ಟನ್ನಿನ ಮೆಲ್ಲೋನ್ ಗ್ಯಾಲರಿ, ನ್ಯೂಯಾರ್ಕ್‌ನಲ್ಲಿರುವ ದಿ ಫ್ರಿಕ್ ಸಂಗ್ರಹಾಲಯ, ಬ್ರಜಿಲ್‌ನ ಪ್ರಸಿದ್ಧ ಸಾವೊ ಪಾಲೋ ಮ್ಯೂಸಿಯಮ್ ಮೊದಲಾದವು. ಈ ಗ್ಯಾಲರಿಗಳೆಲ್ಲವೂ ಖಾಸಗಿ ವ್ಯಕ್ತಿಗಳು, ಕಲಾಸಂಸ್ಥೆಗಳು ನೀಡಿದ ಉದಾರ ಕೊಡುಗೆಯ ಫಲಗಳಾಗಿವೆ.

ಭಾರತದಲ್ಲಿ: ಮೊದಲು ಮೊಗಲ್ ಮತ್ತು ರಜಪೂತರ ಕಾಲದಲ್ಲಿ ಚಿತ್ರಗಳನ್ನು ಬೇರೆಬೇರೆ ವ್ಯಕ್ತಿಗಳು ತಮ್ಮ ಸ್ವಂತ ಸಂಗ್ರಹಣೆಯಲ್ಲಿ ಇಟ್ಟುಕೊಳ್ಳುವ ಪರಿಪಾಟವಿತ್ತು. ಚಿತ್ರಶಾಲೆ ಎಂಬ ಸಾರ್ವಜನಿಕ ಸಂಸ್ಥೆಗಳು ಹುಟ್ಟಿಕೊಂಡಿದ್ದು ಸು.19 ನೆಯ ಶತಮಾನದಲ್ಲಿ. ಇವುಗಳಲ್ಲಿ ಅನೇಕವು ಪ್ರತ್ಯೇಕ ವ್ಯಕ್ತಿಗಳ ಸಂಗ್ರಹಗಳೇ ಆಗಿದ್ದವು. ಈಗ ಭಾರತದಲ್ಲಿ ಅನೇಕ ಚಿತ್ರಶಾಲೆಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಲು ಸಾಧ್ಯ. ಹೈದರಾಬಾದಿನಲ್ಲಿರುವ ಸಾಲಾರ್‌ಜಂಗ್ ಮ್ಯೂಸಿಯಮ್ಮಿನಲ್ಲಿ ಐರೋಪ್ಯ ಹಾಗೂ ಭಾರತೀಯ ಚಿತ್ರಕಲಾಕೃತಿಗಳ ಉತ್ತಮ ಸಂಗ್ರಹವಿದೆ. ಮುಂಬಯಿನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮ್ಮಿನಲ್ಲಿ ಮಧ್ಯಕಾಲೀನ ಭಾರತದ ಹಾಗೂ ಆಧುನಿಕ ಕಾಲದ ಹಲವು ಚಿತ್ರಶೈಲಿಗಳ ಉತ್ತಮ ಉದಾಹರಣೆಗಳು ಪ್ರದರ್ಶನದಲ್ಲಿವೆ. ದೆಹಲಿಯ ನ್ಯಾಷನಲ್ ಮ್ಯೂಸಿಯಮ್‌ನಲ್ಲೂ ಕೆಲವು ಹಳೆಯ ಸಂಪ್ರದಾಯದ ಕಲಾಕೃತಿಗಳನ್ನು ಕಾಣಬಹುದು. ಇಲ್ಲಿಯ ಮ್ಯೂಸಿಯಮ್ ಆಫ್ ಮಾಡರ್ನ್ ಆರ್ಟ್‌ನಲ್ಲಿ ಆಧುನಿಕ ಸಂಪ್ರದಾಯಗಳ ವಿವಿಧ ಚಿತ್ರಗಳನ್ನು ಇಡಲಾಗಿದೆ. ಮದ್ರಾಸಿನ ಆರ್ಟ್ ಗ್ಯಾಲರಿ, ಕೊಲ್ಕೊತ್ತೆಯ ವಿಕ್ಟೋರಿಯ ಸ್ಮಾರಕ ಭವನ, ತಂಜಾವೂರಿನ ಸರಸ್ವತಿ ಮಹಲ್, ತಿರುವನಂತಪುರದ ಶ್ರೀ ಚಿತ್ರಾಲಯಂ, ಬರೋಡದ ಚಿತ್ರಶಾಲೆ, ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆ-ಇವು ಪ್ರಸಿದ್ಧ ಚಿತ್ರಶಾಲೆಗಳು.

ಭಾರತದ ಈ ಚಿತ್ರಶಾಲೆಗಳಲ್ಲದೆ, ಪಾಕಿಸ್ತಾನದಲ್ಲಿನ ಕೆಲವು ಪ್ರಸಿದ್ಧ ಚಿತ್ರ ಸಂಗ್ರಹಾಲಯಗಳನ್ನೂ ಹೆಸರಿಸಬಹುದು. ಲಾಹೋರಿನ ಸೆಂಟ್ರಲ್ ಮ್ಯೂಸಿಯಮ್ಮಿನಲ್ಲಿ ಭಾರತೀಯ ಶಿಲ್ಪಕಲೆ ಹಾಗೂ ಚಿತ್ರಕಲೆಗೆ ಸಂಬಂಧಿಸಿದ ಕೆಲವು ಅಸದೃಶ ಕೃತಿಗಳಿವೆ. ಪೆಷಾವರ್‌ನಲ್ಲಿರುವ ಮ್ಯೂಸಿಯಮ್ಮಿನಲ್ಲಿ ಗಾಂಧಾರ ಶಿಲ್ಪಕಲೆಯನ್ನು ಪ್ರತಿನಿಧಿಸುವ ವಿಶಿಷ್ಟ ಚೆಲುವಿನ ಕೃತಿಗಳಿವೆ. ಕರಾಚಿಯ ನ್ಯಾಷನಲ್ ಮ್ಯೂಸಿಯಮ್ ಆಫ್ ಪಾಕಿಸ್ತಾನ್ ಸಂಗ್ರಹಾಲಯದಲ್ಲಿ ಭಾರತೀಯ ಕಲೆ ಮತ್ತು ಪ್ರಾಚ್ಯಶಾಸ್ತ್ರಗಳಿಗೆ ಸಂಬಂಧಿಸಿದ ವಸ್ತುಗಳನ್ನೂ, ಕಲಾವಶೇಷಗಳನ್ನೂ ಸಂರಕ್ಷಿಸಿ ಇಡಲಾಗಿದೆ. *

**ಚಿತ್ರಸಂಗ್ರಹಣೆ :** ಚಿತ್ರಗಳು ಮುಂತಾದ ಶ್ರೇಷ್ಠ ಕಲಾಕೃತಿಗಳನ್ನೂ ಸಾರ್ವಜನಿಕ ಸಂಗ್ರಹಾಲಯಗಳಲ್ಲಿ ಪ್ರದರ್ಶಿಸುವ ಸಂಪ್ರದಾಯ ಬೆಳೆಯುವುದಕ್ಕೆ ಮುಂಚೆ ಯುರೋಪಿನಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಖಾಸಗಿ ವ್ಯಕ್ತಿಗಳು ಅಮೂಲ್ಯ ಕಲಾವಸ್ತುಗಳನ್ನು ಶೇಖರಿಸಿಟ್ಟುಕೊಳ್ಳುತ್ತಿದ್ದುದುಂಟು, ಇದಕ್ಕೆ ಹಲವು ಕಾರಣಗಳಿರುತ್ತಿದ್ದುವು. ಕೆಲವರು ಕಲಾಪ್ರೇಮದಿಂದ ವಿವೇಚಾತ್ಮಕವಾಗಿ ಚಿತ್ರಗಳನ್ನು, ಶಿಲ್ಪಕೃತಿಗಳನ್ನು ಸಂಗ್ರಹಿಸುತ್ತಿದ್ದರೆ ಇನ್ನು ಕೆಲವರು ತಮ್ಮ ಸಿರಿ ಸಂಪತ್ತನ್ನು ಮೆರೆಯಿಸಲು, ತಮ್ಮ ಶ್ರೀಮಂತಿಕೆಯ ದ್ಯೋತಕವಾಗಿ ಕಲಾವಸ್ತುಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದುದುಂಟು. ಏನೇ ಆಗಲಿ, ಇಂಥ ಸ್ವಂತ ಸಂಗ್ರಹಣೆಗಳಿಂದ ಕಾಲ ಕ್ರಮೇಣ ಸಾರ್ವಜನಿಕ ಚಿತ್ರಶಾಲೆಗಳೂ ಸಂಗ್ರಹಾಲಯಗಳೂ ಹುಟ್ಟಿ ಅದರಿಂದ ಕಲೆಯ ಮೇಲಿನ ಅಕ್ಕರೆ– ಆಸ್ಥೆಗಳು ಬೆಳೆಯಲು ನೆರವಾದವೆಂಬುದನ್ನು ಈಗಾಗಲೇ ವಿವೇಚಿಸಲಾಗಿದೆ. ಸಾವಿರಾರು ವರ್ಷಗಳಿಂದ ಬೆಳೆದುಬಂದ ಚಿತ್ರಸಂಗ್ರಹಣೆಯ ಇತಿಹಾಸವನ್ನು ಇಲ್ಲಿ ಸಂಕ್ಷೇಪವಾಗಿ ನೋಡಬಹುದು.

ಕಲಾ ಸಂಗ್ರಹಣೆಯ ಉಗಮವನ್ನು ನಾವು ಪ್ರಪ್ರಥಮವಾಗಿ ಪ್ರಾಚೀನ ಗ್ರೀಸಿನಲ್ಲಿ ಕಾಣಬಹುದು; ಹೆಲೆನಿಸ್ಟಿಕ್ ಯುಗದಷ್ಟು ಪೂರ್ವದಲ್ಲೇ, ಅಂದರೆ ಪ್ರಶ..ಪೂ 138ರ ಸುಮಾರಿನಲ್ಲಿ ಪರ್ಗಮಮ್ ದೊರೆ ಎರಡನೆಯ ಅಟಲಸನಲ್ಲಿ ಒಂದು ಅಪೂರ್ವ ಚಿತ್ರ ಸಂಗ್ರಹವಿತ್ತೆಂದು ಹೇಳುವುದುಂಟು. ರೋಮ್ ಮತ್ತು ಸೈರಾಕ್ಯೂಸ್ ಮುಂತಾದ ಕಡೆಗಳಲ್ಲಿ ಯುದ್ಧಗಳು ನಡೆದಾಗ ಅಮೂಲ್ಯ ಕಲಾವಸ್ತುಗಳನ್ನು ದೋಚಲೆಂದೇ ಹಲವು ಪ್ರಯತ್ನಗಳು ನಡೆದುದ್ದುಂಟು. ಹೀಗೆ ಕೊಳ್ಳೆ ಹೊಡೆದು ಹೇರಳವಾಗಿ ಕಲಾವಸ್ತುಗಳನ್ನು ಸಂಗ್ರಹಿಸಿದವರಲ್ಲಿ ಅಟಿಕಸ್, ಲುಕಲ್ಲಸ್, ಪಾಂಪೆ, ಜೂಲಿಯಸ್ ಸೀಸರ್, ವೆರ್ರಿಸ್ ಮುಂತಾದವರ ಹೆಸರುಗಳನ್ನು ಹೇಳಬಹುದು. ನೀರೋ ಚಕ್ರವರ್ತಿಯ ಬಳಿ ಜಗತ್ಪ್ರಸಿದ್ಧ ಕಲಾವಸ್ತುಗಳಿದ್ದವಂತೆ. ಲೋಕೋತ್ತರವಾದ ಕಲಾವಸ್ತುಗಳು ಖಾಸಗಿ ಸಂಗ್ರಹಣಾಲಯದಲ್ಲಿ ಅಡಗಿ ಯಾರ ಕಣ್ಣಿಗೂ ಕಾಣಿಸದೆ ನಶಿಸಿ ಹೋಗುತ್ತಿದೆ ಎಂದು ಪುರಾತನ ಇತಿಹಾಸಕಾರ ಪ್ಲಿನಿ ವ್ಯಥೆಪಟ್ಟಿದ್ದಾನೆ.

ಪುರಾತನ ಚೀನಾದ ರಾಜರು ಇಂಥ ಹೇರಳವಾದ ಸಂಗ್ರಹಣೆಯಲ್ಲಿ ತೊಡಗಿರುತ್ತಿದ್ದರು. ಜಪಾನಿನ ನಾರಾದಲ್ಲಿನ ರಾಜಭಂಡಾರದಲ್ಲಿ ಪ್ರಶ. ಎಂಟನೆಯ ಶತಮಾನದ ನೂರಾರು ಬುದ್ಧ ವಿಗ್ರಹಗಳು ಇದ್ದವು. ರಾಜಮನೆತನಗಳು ನಾಶವಾದಾಗ ಇಂಥ ಬೆಲೆಬಾಳುವ ಸಂಗ್ರಹಣೆಗಳೂ ನಷ್ಟಕ್ಕೀಡಾದವು.

ಆಫ್ರಿಕದಲ್ಲಿ, ಮಧ್ಯಯುಗದ ಯುರೋಪಿನಲ್ಲಿ ರಾಜರುಗಳ ಆಸ್ಥಾನ ಹಾಗೂ ಚರ್ಚುಗಳ ಸಲುವಾಗಿ ಹಲವು ಕಲಾಕೃತಿಗಳನ್ನು ತಯಾರಿಸಿ ಸಂಗ್ರಹಿಸುತ್ತಿದ್ದುದುಂಟು. ಹಲವು ಚರ್ಚುಗಳಲ್ಲಿ ಹಾಗೂ ಸಂನ್ಯಾಸಿ ಮಠಗಳಲ್ಲಿ ಚಿತ್ರಗಳು, ಶಿಲ್ಪಕೃತಿಗಳು, ಹಸ್ತಪ್ರತಿಗಳು, ಪವಿತ್ರ ಅವಶೇಷಗಳು, ಕಂಚಿನ ಹಾಗೂ ದಂತದ ಆಕೃತಿಗಳು ಮುಂತಾದ ವಸ್ತುಗಳನ್ನು ಕೂಡಿಸಿ ಇಡಲಾಗಿತ್ತು.

ಮಧ್ಯಯುಗದ ಸಂಗ್ರಹಣೆಗಳನ್ನು ನೋಡುವಾಗ ಸಂಗ್ರಹಣಕಾರರಿಗೆ ವಿವೇಚನಾತ್ಮಕವಾದ ಕಲಾಪ್ರೇಮವಿತ್ತೆಂದು ಹೇಳಲು ಬರುವುದಿಲ್ಲ. ರತ್ನ, ಮಣಿ, ವಜ್ರ, ವೈಢೂರ್ಯಗಳ ಜೊತೆಯಲ್ಲೇ ಚಿತ್ರಗಳನ್ನೂ, ಶಿಲ್ಪಕೃತಿಗಳನ್ನೂ ರಾಶಿ ಹಾಕಿದುದನ್ನು ನೋಡುವಾಗ ಲಲಿತ ಕಲಾವಸ್ತುಗಳ ಬಗ್ಗೆ ಅವರಲ್ಲಿ ವಿಶಿಷ್ಟ ಆಸ್ಥೆಯಿತ್ತೇ ಎಂದು ಹೇಳುವುದು ಕಷ್ಟ. ಆದರೆ ರೆನೇಸಾನ್ಸ್ ಯುಗದಲ್ಲಿ ಮಾನವತಾವಾದದ ದೆಸೆಯಿಂದ ಸಾಹಿತ್ಯ, ಕಲೆ ಮೊದಲಾದುವನ್ನು ಕುರಿತು ವಿಶೇಷವಾದ ಅಭಿರುಚಿ–ಆಸಕ್ತಿಗಳು ಹುಟ್ಟಿದವೆಂದು ಹೇಳಬಹುದು. ಫ್ರೆಡ್ರೆರಿಕ್ ಆಫ್ ಹೋಹೆನ್ ಸ್ಟಾಫನ್ (1220–50) ರಿಯೆಂಜ್ಹೋ, ಪೆಟ್ರಾರ್ಕ್, ಪ್ರಾಗ್‌ನ ಚಕ್ರವರ್ತಿ ಎರಡನೆಯ ರೂಡಾಲ್ಫ್ (1552–1612) ಮುಂತಾದವರ ಖಾಸಗಿ ಸಂಗ್ರಹಣಾ ಶಾಲೆಗಳು ಜಗತ್ಪ್ರಸಿದ್ಧವಾದುವು.

ಇಟಲಿಯ ಹ್ಯೂಮನಿಸ್ಟ್ ಪಂಥದ ರಾಜರುಗಳು ಮೆಡಿಚಿ, ಎಸ್ತ್, ಗೊಂಜಾಗೋ ಮುಂತಾದ ಮನೆತನದ ಶ್ರೀಮಂತ ಅರಸರುಗಳು ವಿಶೇಷವಾದ ಕಲಾರುಚಿಯುಳ್ಳವರಾಗಿದ್ದು ಬಹಳ ಶ್ರೇಷ್ಠವಾದ ಕಲಾವಸ್ತುಗಳನ್ನು ಸಂಪಾದಿಸಿದ್ದರು. ಇದರಿಂದ ರೆನೇಸಾನ್ಸ್ ಯುಗದಲ್ಲಿ ಕಲೆಯ ಹಿರಿಮೆ–ಗರಿಮೆಗಳು ಹೆಚ್ಚಿ ನೂರಾರು ಖಾಸಗಿ ಸಂಗ್ರಹಾಲಯಗಳು ಹುಟ್ಟಿಕೊಂಡವು. ಹಲವು ವರ್ಷ ಯಾರ ಕಣ್ಣಿಗೂ ಬೀಳದೆ ನಿರ್ಲಕ್ಷಿಸಲ್ಪಟ್ಟಿದ್ದ ಶ್ರೇಷ್ಠ ಚಿತ್ರಗಳು ಜನರ ಕಣ್ಣನ್ನು ಸೆಳೆಯುವಂತಾದವು. ಅದೇ ಕಾಲದ ಯುರೋಪಿನಲ್ಲಿ ಕಲಾವಸ್ತುಗಳನ್ನು, ಅದರಲ್ಲೂ ಪುರಾತನ ಚಿತ್ರಗಳನ್ನು, ಹೇರಳವಾಗಿ ಹಣಕೊಟ್ಟು ಕೊಳ್ಳುವ ರೂಢಿಯೂ ಬೆಳೆಯಿತು. ಮೊದಲನೆಯ ಚಾರ್ಲ್ಸ್ ದೊರೆ ಮ್ಯಾಂಟುವ ಡ್ಯೂಕರುಗಳ ಮನೆತನದ ಇಡೀ ಖಾಸಗಿ ಚಿತ್ರಸಂಗ್ರಹಾಲಯವನ್ನೇ ಕೊಂಡುಕೊಂಡ.

18ನೆಯ ಶತಮಾನದಲ್ಲಿ ಹಲವಾರು ಖಾಸಗಿ ವ್ಯಕ್ತಿಗಳು ತಮ್ಮ ಆಡಂಬರದ ಸಿರಿವಂತಿಕೆಯನ್ನು ಪ್ರದರ್ಶಿಸಲೆಂದೇ ಚಿತ್ರಗಳನ್ನು ಸಂಗ್ರಹಿಸಲು ಪ್ರಾರಂಭಿಸಿದರು. ಏನೊಂದು ಅಭಿರುಚಿಯಿಲ್ಲದ ಇಂಥ ಮೂಢರು ಕಲೆಯ ವಿಷಯವಾಗಿ ಗಳಹುತ್ತಾ ಅಪಹಾಸ್ಯಕ್ಕೀಡಾಗುತ್ತಿದ್ದ ಸಂಗತಿಯನ್ನು ಆ ಕಾಲದ ವಿಡಂಬನ ಸಾಹಿತ್ಯದಲ್ಲಿ ನಾವು ನೋಡಬಹುದು.

ಕೆಲವು ಸುಸಂಸ್ಕೃತ ವ್ಯಕ್ತಿಗಳು ಕಲೆಯನ್ನು ಜನಪ್ರಿಯಗೊಳಿಸಿ ಜನರನ್ನು ಸುಶಿಕ್ಷಿತರನ್ನಾಗಿ ಮಾಡಲು ಪ್ರಯತ್ನಿಸಿದ್ದುಂಟು. ಮೆಡಿಚಿ ಮನೆತನದ ಕಟ್ಟ ಕಡೆಯ ಪ್ರತಿನಿಧಿ ಆನ ಲುಡೋವಿಕ ಎಂಬ ರಾಜಕುಮಾರಿ 1747ರಲ್ಲಿ ಒಂದು ಆಜ್ಞೆ ಹೊರಡಿಸಿ ಸಾರ್ವಜನಿಕ ಕಲಾಪ್ರದರ್ಶನವನ್ನು ಏರ್ಪಡಿಸಿದಳು. ಚಕ್ರವರ್ತಿನಿ ಮರೆಯಾ ತೆರೆಸಾ ತನ್ನ ಲುಕ್ಸೆಂಬರ್ಗ್ ಅರಮನೆಯ ಚಿತ್ರಶಾಲೆಯನ್ನು ಸಾರ್ವಜನಿಕರ ಸಲುವಾಗಿ ಪ್ರದರ್ಶನಕ್ಕೆ ತೆರೆದಿಟ್ಟಳು.

ಫ್ರಾನ್ಸಿನ ಮಹಾಕ್ರಾಂತಿಯ ಅನಂತರ ಇಂಥ ಖಾಸಗಿ ಸಂಗ್ರಹಾಲಯಗಳು ಸರ್ಕಾರದ ವಶಕ್ಕೆ ಬಂದು ಸಾರ್ವಜನಿಕರಲ್ಲಿ ಕಲೆಯ ಬಗ್ಗೆ ಆಸ್ಥೆ ಮೂಡಿಸಲು ನೆರವಾದವು.

ಪ್ರಜಾರಾಜ್ಯಗಳ ಕಾಲದಲ್ಲೂ ಖಾಸಗಿ ಚಿತ್ರಸಂಗ್ರಹಾಲಯಗಳು ತಮ್ಮ ಉಪಯುಕ್ತತೆಯನ್ನು ಕಳೆದುಕೊಳ್ಳಲಿಲ್ಲ. ಕಲೆಯ ಗಂಧವೇ ಇಲ್ಲದ ಅಧಿಕಾರಿಗಳು ಹುಚ್ಚು ಕಾರುಬಾರು ನಡೆಸುತ್ತಿದ್ದಾಗ ಕಲೆಯು ಸಂಪೂರ್ಣವಾಗಿ ನಾಶವಾಗದಂತೆ ನೋಡಿಕೊಂಡವರು ಕಲಾಸಕ್ತಿಯುಳ್ಳ ಖಾಸಗಿ ವ್ಯಕ್ತಿಗಳು.

ಖಾಸಗಿ ಸಂಗ್ರಹಾಲಯಗಳು ಇನ್ನೊಂದು ವಿಶೇಷವಾದ ಸಾಧನೆಯನ್ನು ಕೈಗೂಡಿಸಿದವು. ಸಂಪ್ರದಾಯ ಶಿಲಾಯುಗದಲ್ಲಿ ಹೊಸ ಹೊಸ ಪ್ರವೃತ್ತಿಗಳೂ ಅಭಿರುಚಿಗಳೂ ಹುಟ್ಟಿ ನವ್ಯಕೃತಿಗಳ ರಚನೆ ಆದಾಗ ಅವುಗಳಿಗೆ ಅಧಿಕಾರಯುತವಾದ ಮನ್ನಣೆ ದೊರೆಯುವುದು ಕಷ್ಟ. ಆದ್ದರಿಂದ ಹೊಸ ಶೈಲಿಯ (ಆವಾಂತ್ ಗಾರ್ಡ್) ನವ್ಯ ಚಿತ್ರಗಳಿಗೆ ಸಾರ್ವಜನಿಕ ಚಿತ್ರಶಾಲೆಗಳಲ್ಲಿ ಪ್ರದರ್ಶನಾವಕಾಶ ಸಿಕ್ಕಬೇಕಾದರೆ ಬಹುಕಾಲ ಹಿಡಿಯುತ್ತದೆ. ಅಂಥ ಸಂದರ್ಭಗಳಲ್ಲಿ ಹೊಸ ಚಿತ್ರಗಳು ಮೊದಲು ಖಾಸಗಿ ಸಂಗ್ರಹಾಲಯದಲ್ಲಿದ್ದು ಕ್ರಮೇಣ ಹತ್ತು ಜನರ ಆಸಕ್ತಿಯನ್ನು ಕೆರಳಿಸಿ ಆಮೇಲೆ ಜನಪ್ರಿಯವಾದ ನಿದರ್ಶನಗಳಿವೆ. ಉದಾಹರಣೆಗೆ, ಯುರೋಪಿನ ಇಂಪ್ರೆಷನಿಸ್ಟ್ ಮತ್ತು ಪೋಸ್ಟ್ ಇಂಪ್ರೆಷನಿಸ್ಟ್ ಪಂಥದ ಚಿತ್ರಕಾರರು ಪ್ರಸಿದ್ಧಿಗೆ ಬಂದದ್ದು ಹೀಗೆಯೇ (**ನೋಡಿ– ಚಿತ್ರಕಲೆ**). ಜಪಾನಿನ ಬಣ್ಣದ ಪ್ರಿಂಟುಗಳು, ಆಫ್ರಿಕದ ಶಿಲ್ಪಕಲೆ, ಪುರಾತನ ಅಮೆರಿಕನ್ ಕಲೆ, ಓಷಿಯಾನಿಯಾದ ಲಲಿತಕಲೆಗಳು, ಇಂಡೋಚೀನ, ಭಾರತ ಮುಂತಾದ ರಾಷ್ಟ್ರಗಳ ದೇಶೀಯ ಕಲೆಗಳು ಬೆಳಕಿಗೆ ಬಂದು ಜನಪ್ರಿಯವಾದುದು ಹೀಗೆಯೇ. ಇಟಲಿಯ ಜಗದ್ವಿಖ್ಯಾತ ಚಿತ್ರಕೃತಿಗಳು ರಾಷ್ಟ್ರೀಯ ಚಿತ್ರಶಾಲೆಗಳಲ್ಲಿ ಪ್ರದರ್ಶಿತವಾಗುವುದಕ್ಕೆ ಮುಂಚೆಯೇ ಶತಮಾನಗಳ ಹಿಂದೆಯೇ ಅವು ಖಾಸಗಿ ವ್ಯಕ್ತಿಗಳ ಸಂಗ್ರಹಾಲಯವನ್ನು ಅಲಂಕರಿಸಿದ್ದವು. ಹತ್ತೊಂಬತ್ತನೆಯ ಶತಮಾನದ ಶ್ರೇಷ್ಠ ಫ್ರೆಂಚ್ ಕಲಾವಿದರ ಕೃತಿಗಳನ್ನು ಕೊಳ್ಳಲು ಸರ್ಕಾರಿ ಚಿತ್ರಶಾಲೆಗಳು ಹಿಂದು ಮುಂದು ನೋಡುತ್ತಿದ್ದಾಗ ಇಂಗ್ಲೆಂಡಿನ ಸರ್ ಹ್ಯೂಲೇನ್, ಮಿಸೆಸ್ ಡೇವಿಸ್ ಮುಂತಾದ ಸಂಗ್ರಹಣಕಾರರು ಆ ಕಾಲದ ಅಮೂಲ್ಯ ಚಿತ್ರಗಳನ್ನು ದುಬಾರಿ ಬೆಲೆ ತೆತ್ತು ಸಂಗ್ರಹಿಸಿದ್ದರು. ಇಂದಿಗೂ ಇಂಗ್ಲೆಂಡಿನಲ್ಲಿ ಅತ್ಯುತ್ತಮ ಇಟ್ಯಾಲಿಯನ್ ಚಿತ್ರಕೃತಿಗಳನ್ನು ನೋಡಬೇಕೆಂದರೆ, ಅವನ್ನು ಮತ್ತೆ ಹೊಸದಾಗಿ ಗುರುತಿಸಿ ಲೋಕದ ಕಣ್ಣನ್ನು ಅವುಗಳತ್ತ ಸೆಳೆದ ಉತ್ಸಾಹಿ ಸಂಗ್ರಹಣಕಾರರ ಖಾಸಗಿ ಚಿತ್ರಶಾಲೆಗಳಿಗೆ ಹೋಗಬೇಕು.

ಈ ಎಲ್ಲಾ ಸಂಗತಿಗಳಿಂದ ಒಂದು ವಿಷಯ ವ್ಯಕ್ತವಾಗುತ್ತದೆ. ಅದೇನೆಂದರೆ ಸಾರ್ವಜನಿಕ ಚಿತ್ರಶಾಲೆಗಳು ಜನರ ಅಭಿರುಚಿಯನ್ನು ಬೆಳೆಸಿ ಹೆಚ್ಚಿಸಲು ಸರ್ಕಾರವು ಹಣವನ್ನು ಖರ್ಚುಮಾಡುವುದು ನ್ಯಾಯಸಮ್ಮತವಾಗಿದೆ. ಆದರೆ ಕಲಾಭಿರುಚಿಯ ಪರಂಪರೆಯನ್ನು ಬೆಳೆಸುವುದರಲ್ಲಿ ಖಾಸಗಿ ಸಂಗ್ರಹಣಕಾರರು ಅನನ್ಯ ಪಾತ್ರ ವಹಿಸುತ್ತಾ ಬಂದಿದ್ದಾರೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು.

ಯುರೋಪಿನಲ್ಲಿ 1930ರ ಅನಂತರ ಸಾರ್ವಜನಿಕ ಚಿತ್ರಶಾಲೆಗಳು ಖಾಸಗಿ ಸಂಗ್ರಹಣೆಯಿಂದ ಆಯ್ದುಕೊಂಡ ಶ್ರೇಷ್ಠ ಕೃತಿಗಳನ್ನು ಪ್ರತ್ಯೇಕವಾಗಿ ಪ್ರದರ್ಶಿಸುವುದರ ಮೂಲಕ ಅವು ಖಾಸಗಿ ಸಂಗ್ರಹಣಾಲಯಗಳ ಸಾಧನೆಯ ಮೇಲೆ ಅಂಗೀಕಾರದ ಮುದ್ರೆಯೊತ್ತಿವೆ ಎಂಬುದು ಇದರಿಂದ ಖಚಿತವಾಗುತ್ತದೆ. (ಎಚ್.ಕೆ.ಆರ್.)

**ಚಿತ್ರಸೇನ :** ಈ ಹೆಸರಿನ ಹಲವು ವ್ಯಕ್ತಿಗಳು ಮಹಾಭಾರತದಲ್ಲೂ ಭಾಗವತದಲ್ಲೂ ಕಂಡುಬರುತ್ತಾರೆ. ಇದರಲ್ಲಿ ಮುಖ್ಯನಾದವ ಚಿತ್ರಸೇನನೆಂಬ ಗಂಧರ್ವ; ವಿಶ್ವಾವಸುವಿನ ಮಗ. ಈತ ಅರ್ಜುನನಿಗೆ ಗಂಧರ್ವವೇದವನ್ನು ಕಲಿಸಿದ. ಅರ್ಜುನ ಇಂದ್ರಕೀಲದಿಂದ ದೇವಲೋಕಕ್ಕೆ ಹೋಗಿ ಅಲ್ಲಿ ವಾಸಮಾಡುತಿದ್ದ ಕಾಲದಲ್ಲಿ ಇಂದ್ರನ ಅಪ್ಪಣೆಯಂತೆ ಚಿತ್ರಸೇನ ಅರ್ಜುನನನ್ನು ಮೋಹಗೊಳಿಸಲು ಊರ್ವಶಿಯನ್ನು ಅವನ ಬಳಿಗೆ ಕಳುಹಿಸಿದ.

ಪಾಂಡವರು ವನವಾಸದಲ್ಲಿದ್ದಾಗ ದುರ್ಯೋಧನ ಅಲ್ಲಿಗೆ ಬಂದು ತನ್ನ ವೈಭವವನ್ನು ಅವರ ಮುಂದೆ ಪ್ರದರ್ಶಿಸಿ ಅವರನ್ನು ಹೀಯಾಳಿಸಿ ವಿಜೃಂಭಿಸುತ್ತಾನಷ್ಟೆ. ಆಗ ಇಂದ್ರನ ಅಪ್ಪಣೆಯ ಮೇರೆಗೆ ಚಿತ್ರಸೇನ ಆ ವನಕ್ಕೆ ಬಂದು ದುರ್ಯೋಧನನನ್ನು ಸೆರೆಹಿಡಿದು ಕೈಕಾಲು ಕಟ್ಟಿ ಇಂದ್ರಲೋಕಕ್ಕೆ ಒಯ್ಯಲುಪಕ್ರಮಿಸುತ್ತಾನೆ. ಅದನ್ನು ಕಂಡ ಯುಧಿಷ್ಠಿರ ತನ್ನ ವಂಶದವನಾದ ದುರ್ಯೋಧನನಿಗೆ ಆದ ಅಪಮಾನ ಸಹಿಸದೆ, ಅವನನ್ನು ಚಿತ್ರಸೇನನ ಬಂಧನದಿಂದ ಬಿಡಿಸಬೇಕೆಂದು ಅರ್ಜುನನಿಗೆ ಆಜ್ಞಾಪಿಸುತ್ತಾನೆ. ಅಂತೆಯೇ ಅರ್ಜುನ ಚಿತ್ರಸೇನನ್ನು ಸೋಲಿಸಿ ದುರ್ಯೋಧನನನ್ನು ಬಂಧನದಿಂದ ಬಿಡಿಸುತ್ತಾನೆ.

ಮಹಾಭಾರತದಲ್ಲಿ ಬರುವ ಇತರ ಚಿತ್ರಸೇನರಲ್ಲಿ ಒಬ್ಬ ಅಭಿಸಾರ ದೇಶದ ದೊರೆ. ಈತ ರಾಜಸೂಯಯಾಗ ಸಮಯದಲ್ಲಿ ಅರ್ಜುನನಿಂದ ಪರಾಜಿತನಾದ. ಇನ್ನಿಬ್ಬರು ಪಾಂಡವರ ಪರವಾಗಿ ಮಹಾಭಾರತ ಯುದ್ಧದಲ್ಲಿ ಹೋರಾಡಿ ಮಡಿದವರು. ಇನ್ನೊಬ್ಬ ಚಿತ್ರಸೇನ ಕರ್ಣನ ಮಕ್ಕಳಲ್ಲಿ ಒಬ್ಬ. ಮತ್ತೊಬ್ಬ ದ್ರುಪದನ ಮಗ. ಧೃತರಾಷ್ಟ್ರನ ಮಕ್ಕಳಲ್ಲೂ ಚಿತ್ರಸೇನನೆಂಬುವನು ಒಬ್ಬ. ಇವರೆಲ್ಲ ಮಹಾಭಾರತ ಯುದ್ಧದಲ್ಲಿ ಹತರಾದರು.

ಭಾಗವತದ ಇಬ್ಬರು ಚಿತ್ರಸೇನರಲ್ಲಿ ಒಬ್ಬ 13ನೆಯ ಮನ್ವಂತರದಲ್ಲಿದ್ದ ದೇವಸಾವರ್ಣಿ ಮನುವಿನ ಹಿರಿಯ ಮಗ. ಇನ್ನೊಬ್ಬ ವೈವಸ್ವತ ಮನುವಿನ ಮಗನಾದ ನರಿಷ್ಯಂತ ರಾಜನ ಹಿರಿಯ ಮಗ. (ಜಿ.ಎಚ್.)

**ಚಿತ್ರಹಿಂಸೆ :** ಗುಟ್ಟನ್ನು ತಿಳಿಯಲೊ, ಸೇಡು ತೀರಿಸಿಕೊಳ್ಳಲೊ, ಪ್ರಾಯಶ್ಚಿತ್ತವಾಗಿಯೋ ವ್ಯಕ್ತಿಗೆ ಕೊಡುವ ಚಿತ್ರವಿಚಿತ್ರವಾದ ಹಿಂಸೆ (ಟಾರ್ಚರ್). ಸಮಾಜಶಾಸ್ತ್ರಜ್ಞರು ಈ ಅಭಿಪ್ರಾಯವನ್ನು ಹೆಚ್ಚಾಗಿ ದಂಡನೆ ಮತ್ತು ಕಾಯದೆಯ ಪರಿಮಿತಿಯಲ್ಲಿ ಪರಿಗಣಿಸಿದ್ದಾರೆ. ರೋಮನ್ ಕಾಯದೆ ತಜ್ಞರು ಚಿತ್ರಹಿಂಸೆಯನ್ನು ಸತ್ಯಾಸತ್ಯತೆಯನ್ನು ಹೊರಗೆಡಹುವ ಒಂದು ವಿಧಾನವೆಂದು ಪರಿಗಣಿಸಿದ್ದರು. ಅಪರಾಧಿಗಳಿಗೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಕೊಟ್ಟು ಸತ್ಯವನ್ನು ಅವರು ಕಂಡುಹಿಡಿಯುತ್ತಿದ್ದರು. ಇದಕ್ಕಾಗಿ ಪುರಾತನ ಕಾಲದಲ್ಲಿ ದಿವ್ಯವೆಂಬ(ಆರ್ಡಿಯಲ್) ಮತ್ತೊಂದು ಬಗೆಯ ಒರೆಗಲ್ಲನ್ನು ಉಪಯೋಗಿಸಲಾಗುತ್ತಿತ್ತು. ದಿವ್ಯಗಳೂ ಕಠೋರವಾದುವೇ. ಬೆಂಕಿಯ ಮೇಲೆ ನಡೆದೂ ಕಾಲು ಸುಡದಿದ್ದಲ್ಲಿ, ಕೈಯಲ್ಲಿ ಬೆಂಕಿಯನ್ನು ಹಿಡಿದೂ ಕೈ ಸುಡದಿದ್ದಲ್ಲಿ ಅಪರಾಧದ ಗುಮಾನಿ ಇದ್ದವನು ನಿರಪರಾಧಿಯಾಗುತ್ತಿದ್ದ. ಅಪರಾಧವನ್ನು ಕಂಡುಹಿಡಿಯುವುದಕ್ಕೆ ಮಾತ್ರವಲ್ಲದೆ ಶಿಕ್ಷೆಯಾಗೂ ಚಿತ್ರಹಿಂಸೆ ಕೊಡುವುದು ಮುಂದೆ ವಾಡಿಕೆಯಾಯಿತು.

ಕೆಲವೊಂದು ಸಲ ಕೆಲವು ನಿರಪರಾಧಿಗಳೂ ಅಪರಾಧಿಗಳೆಂದು ಸಂಶಯಕ್ಕೆ ಒಳಗಾದವರೂ ಚಿತ್ರಹಿಂಸೆಗೆ ಬಲಿಯಾಗಿರುವುದುಂಟು. ಚಿತ್ರಹಿಂಸೆ ಪೂರ್ವಕಾಲದಲ್ಲಿ ಗ್ರೀಸ್ ಮತ್ತು ರೋಮ್‌ಗಳಲ್ಲಿ ಹೆಚ್ಚಾಗಿ ಗುಲಾಮಗಿರಿಗೆ ಕೊಡಲ್ಪಡುತ್ತಿತ್ತು. ಚಿತ್ರಹಿಂಸೆ ಜಗತ್ತಿನಲ್ಲಿ ಸಾಮಾನ್ಯವಾದ ಶಿಕ್ಷೆಯ ವಿಧಿಯಾಗಿರಲಿಲ್ಲ. ಅಸೀರಿಯನರಲ್ಲಿ, ಈಜಿಪ್ಷಿಯನರಲ್ಲಿ ಕಂಡುಬಂದಾಗ್ಯೂ ಪೂರ್ವಕಾಲದ ಚೀನಿಯರ, ಹಿಂದುಗಳ ಮತ್ತು ಜ್ಯೂ ಜನರ ಕಾಯಿದೆಗಳಲ್ಲಿ ಚಿತ್ರಹಿಂಸೆ ಕಂಡುಬರುವುದಿಲ್ಲ. ಆದರೆ ಮುಸ್ಲಿಮರಲ್ಲಿ ಕಾಯ್ದ ಕೆಂಡವನ್ನು ತಲೆಯ ಮೇಲೆ ಇಡುವ ವಿಧಾನ ಬಹಳ ಹಿಂದೆಯೇ ಇತ್ತು. ಅಥೆನ್ಸಿನ ಗುಲಾಮರನ್ನು ಬಂಡಿಗಳ ಗಾಲಿಗಳ ಕೆಳಗೆ ತುಳಿಸಿ ಇಲ್ಲವೆ ಸುಡುವ ಮನೆಯಲ್ಲಿ ಕೂಡಿ ಹಾಕಿ ಅಪರಾಧಕ್ಕೆ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

ರೋಮ್ ಗಣರಾಜ್ಯದಲ್ಲಿ ಚಿತ್ರಹಿಂಸೆಯನ್ನು ಕೊಡುವ ಪೂರ್ವದಲ್ಲಿ ಅಪರಾಧ ಸಿದ್ಧವಾಗುವುದು ಅವಶ್ಯವಾಗಿದ್ದರೂ ಕೆಲವೊಂದು ಸಲ ಗುಮಾನಿ ಇದ್ದವರಿಗೆ ಚಿತ್ರಹಿಂಸೆಯನ್ನು ಕೊಟ್ಟೇಕೊಡುತ್ತಿದ್ದರು.

ಇನ್ನು ಕೆಲವು ಸಲ ಚಿತ್ರಹಿಂಸೆಗಳಿಗೆ ಹೆದರಿ ನಿರಪರಾಧಿಗಳು ಸಹಿತ ಅಪರಾಧಿಗಳೆಂದು ತಾವೇ ಒಪ್ಪಿಕೊಂಡ ಪ್ರಸಂಗಗಳು ಆಗ ಧಾರಾಳವಾಗಿ ದೊರೆಯುತ್ತಿದ್ದವು. ಆಗ ಚಿತ್ರಹಿಂಸೆಗೆ ಗುರಿಪಡಿಸುವುದನ್ನು ಮಕ್ಕಳಿಗೆ, ಗರ್ಭಿಣಿ ಸ್ತ್ರೀಯರಿಗೆ ಮತ್ತು ಪೂಜಾರಿಗಳಿಗೆ ಅನ್ವಯಿಸಿರಲಿಲ್ಲ. ಆದರೆ ಅಪರಾಧಗಳನ್ನು ಗುರುತಿಸುವಾಗ ಮಾತ್ರ ಚಿತ್ರಹಿಂಸೆಗೆ ಬಹಳ ಮಹತ್ವವನ್ನು ಕೊಡಲಾಗುತ್ತಿತ್ತು. ಪ್ರ.ಶ 1215 ರಲ್ಲಿ ರೋಮಿನ ಪ್ರಜಾಪ್ರತಿನಿಧಿ ಸಭೆ ಚಿತ್ರಹಿಂಸೆಯ ಈ ಅನಾಗರಿಕ ಪದ್ಧತಿಗಳಿಗೆ ಕೊನೆ ತಂದಿತು. 13ನೆಯ ಶತಮಾನದಲ್ಲಿ ಫ್ರಾನ್ಸ್ ಮತ್ತು ಇಟಲಿಗಳಲ್ಲಿ ಚಿತ್ರಹಿಂಸೆಯ ಪದ್ಧತಿ ಜಾರಿಯಲ್ಲಿ ಇದ್ದುದು ಕಂಡುಬರುತ್ತದೆ. ಫ್ರಾನ್ಸಿನಲ್ಲಂತೂ ಚಿತ್ರಹಿಂಸೆಯ ಅನೇಕ ವಿಧಗಳು ಇದ್ದುವಲ್ಲದೆ ಅವುಗಳಿಗೆ ಪ್ರತ್ಯೇಕ ಹೆಸರುಗಳು ಇದ್ದುವು.

ಇಂಗ್ಲೆಂಡಿನಲ್ಲಿ ಸ್ಟೀಫನ್ ಅರಸನ ಕಾಲದಲ್ಲಿ ಅರಾಜಕತೆಯುಂಟಾದಾಗ ಚಿತ್ರಹಿಂಸೆ ಎಂಬುದು ಒಂದು ಬೈಗುಳದ ಶಬ್ದವಾಗಿತ್ತು. ಜಾನ್ ಅರಸನ ಕಾಲದಲ್ಲಿ ಜ್ಯೂ ಜನರಿಂದ ಸಂಪತ್ತು ಸೆಳೆಯುವ ವಿಧಾನಗಳಿಗೂ ಈ ಶಬ್ದವನ್ನು ಉಪಯೋಗಿಸಿರುವುದುಂಟು. 13 ಮತ್ತು 14ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಚಿತ್ರಹಿಂಸೆಯನ್ನು ಪ್ರಯೋಗಿಸಿರುವುದು ಕಂಡುಬಂದಿದೆ. ಷೇಕ್ಸ್‌ಪಿಯರ್ ಮತ್ತು ಎಲಿಜಬೆತ್ ರಾಣಿಯ ಕಾಲದ ಇನ್ನುಳಿದ ನಾಟಕಕಾರರು ಚಿತ್ರಹಿಂಸೆಯ ಅನೇಕ ಉದಾಹರಣೆಗಳನ್ನು ತಮ್ಮ ನಾಟಕಗಳಲ್ಲಿ ಪ್ರದರ್ಶಿಸಿದ್ದಾರೆ. ಚಿತ್ರಹಿಂಸೆ ಮತ್ತು ಅಜ್ಞಾನಗಳು ಜೊತೆಜೊತೆಯಾಗಿ ಹೋಗುತ್ತವೆ. ಗುಪ್ತ ನ್ಯಾಯಾಲಯಗಳು ಗುಪ್ತ ನ್ಯಾಯ ದಂಡನೆಗಳಿಗೆ ಮಹತ್ವವಿತ್ತಿವೆ. ಗುಪ್ತ ನ್ಯಾಯ ದಂಡನೆಗಳಲ್ಲಿ ಚಿತ್ರಹಿಂಸೆಗೆ ಮಹತ್ವದ ಸ್ಥಾನ ದೊರೆತಿದೆ. ಸ್ಕಾಟ್‌ಲೆಂಡಿನಲ್ಲಿ ಕಾಯದೆ ಸ್ವರೂಪ ಇಂಗ್ಲೆಂಡಿನಲ್ಲಿಯದಕ್ಕಿಂತ ಭಿನ್ನವಾಗಿರಲಿಲ್ಲ. 1542ರಲ್ಲಿ ಈ ದೇಶದಲ್ಲಿ ಚಿತ್ರಹಿಂಸೆಯಿಂದ ಒಪ್ಪಿಕೊಂಡ ಅಪರಾಧ ನಿಜವಾದುದಲ್ಲವೆಂದು ಸ್ಥಾಪಿತವಾಯಿತು. ಮಾಟವಿದ್ಯೆ ಭೂತವಿದ್ಯೆಗಳನ್ನು ರೂಢಿಸಿಕೊಂಡ ಜನ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಚಿತ್ರಹಿಂಸೆಯನ್ನು ತಮ್ಮ ಸಾಧನವಾಗಿ ಬಳಸುತ್ತಿದ್ದರು. ಈ ಮಾಟಗಾರರು ಕೆಲವೊಂದು ಸಲ ಅಪರಾಧೀ ಕಾರ್ಯಗಳನ್ನು ಕೈಕೊಳ್ಳುತ್ತಿದ್ದರು. ಇಂಥ ಉದಾಹರಣೆಗಳು ಈಗಲೂ ಭಾರತದಲ್ಲಿ ಕಂಡುಬರುತ್ತವೆ. ಮಕ್ಕಳನ್ನು ಕದ್ದು ದೇವಿಗೆ ಬಲಿಕೊಡುವ ಅನೇಕ ಸಂಗತಿಗಳು ನಡೆಯುತ್ತಿವೆ. ಸ್ಕಾಟ್‌ಲೆಂಡನಲ್ಲಿಯ ಅನೇಕ ಚಿತ್ರಹಿಂಸೆಯ ಪ್ರಸಂಗಗಳು ಸೋವಿಯೆತ್ ದೇಶದಿಂದ ಬಂದಂಥವುಗಳಾಗಿದ್ದವು. ನೂರೆಂಬರ್ಗ್‌ದಲ್ಲಿನ ವಸ್ತುಸಂಗ್ರಹಾಲಯಗಳು ಮತ್ತು ಇನ್ನಿತರ ಐತಿಹಾಸಿಕ ಸ್ಮಾರಕಗಳು ಚಿತ್ರಹಿಂಸೆಯ ಅಸ್ತಿತ್ವವನ್ನು ತೋರಿಸುತ್ತವೆ.

ಗ್ರಿಲ್ಯಾಂಡಸ್ ಎಂಬ ಪಂಡಿತ ಚಿತ್ರಹಿಂಸೆಯಲ್ಲಿ ಐದು ವಿಧಗಳನ್ನು ಮಾಡಿದ್ದಾನೆ. ಮೊದಲನೆಯದು ಕೇವಲ ಬೆದರಿಕೆ, ಎರಡನೆಯದು ತೂಗುಹಾಕುವುದು, ಮೂರನೆಯದು ಎತ್ತರದಲ್ಲಿ ತೂಗುಹಾಕುವುದು, ನಾಲ್ಕನೆಯದು ಅನೇಕ ಗಂಟೆಗಳವರೆಗೆ ತೂಗುಹಾಕುವುದು, ಐದನೆಯದು ಕೈಕಾಲುಗಳಿಗೆ ಭಾರವನ್ನು ಕಟ್ಟಿ ತೂಗುಹಾಕುವುದು. ಇಂಥ ಅನೇಕ ಚಿತ್ರಹಿಂಸೆಗಳಿಗೆ ಜನ ಹೇಗೆ ತುತ್ತಾಗುತ್ತಿದ್ದರೆಂಬುದು ಸೋಜಿಗದ ಸಂಗತಿ. ಇಂಥವು ನ್ಯಾಯಾಧೀಶರು ಮತ್ತು ಅಧಿಕಾರಿಗಳ ಎದುರಿಗೇ ನಡೆಯುತ್ತಿದ್ದವೆಂಬುದು ಇನ್ನೂ ಗಮನಾರ್ಹ ವಿಷಯ. ಗ್ರಿಲ್ಯಾಂಡಸ್ ತನ್ನ ಪೀಸಾ ಮತ್ತು ರೋಮ್ ಪ್ರದೇಶಗಳ ಅನುಭವಗಳನ್ನು ವಿವರಿಸುವಾಗ ಚಿತ್ರಹಿಂಸೆಗೆ ಗುರಿಯಾದ ಒಬ್ಬ ಕಳ್ಳ ತನ್ನ ಹತ್ತಿರ ಒಂದು ತಾಯತವನ್ನು ಇಟ್ಟುಕೊಂಡು ಹಿಂಸೆಯನ್ನು ಸಹಿಸಿಕೊಳ್ಳುತ್ತಿದ್ದನೆಂದು ವಿವರಿಸುತ್ತಾನೆ. ಈ ಪ್ರಕಾರವಾಗಿ ಚಿತ್ರಹಿಂಸೆಯು ದಂಡನೆಗಳಿಗೆ ಒಳಗಾದ ಅಪರಾಧಿಗಳು ಮಂತ್ರಪಠಣ ಮಾಡುವುದು ಮತ್ತು ಚಿತ್ರಹಿಂಸೆಯನ್ನು ಸಹಿಸಿಕೊಳ್ಳುವ ಮಾಂತ್ರಿಕ ವಿಧಿಗಳನ್ನು ಕೈಕೊಳ್ಳುವುದು ರೂಢಿಯಲ್ಲಿತ್ತು.

ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ವೈರಿಗಳೊಡನೆ ನಡೆದುಕೊಳ್ಳುವ ನೀತಿಯನ್ನು ವಿವರಿಸುತ್ತ ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ಬಗೆಗಳನ್ನು ಸೂಚಿಸುತ್ತಾನೆ. ವೈರಿರಾಜ್ಯಗಳನ್ನು ಗೆಲ್ಲುವಾಗ ಅವರಿಗೆ ಯಾವ ತರಹದ ತೊಂದರೆಗಳನ್ನು ಕೊಡಬೇಕೆಂಬುದನ್ನು ಹೇಳುತ್ತಾ ವೈರಿ ರಾಜ್ಯಗಳಲ್ಲಿ ರೋಗಗಳನ್ನು ಹಬ್ಬಿಸಬೇಕು ಮತ್ತು ಕೆರೆ ಬಾವಿಗಳಲ್ಲಿ ವಿಷವನ್ನು ಹಾಕಿ ಪ್ರಜೆಗಳಿಗೆ ತೊಂದರೆ ಕೊಡುವುದರಲ್ಲಿ ಹಿಂದು ಮುಂದು ನೋಡಬಾರದು ಎಂದು ವಿಧಿಸಿದ್ದಾನೆ. ಔರಂಗಜೇಬ್ ಭಾರತದ ಸಾರ್ವಭೌಮನಿದ್ದಾಗ ಶಿವಾಜಿಯ ಮಗ ಸಂಬಾಜಿಯನ್ನು ಚಿತ್ರಹಿಂಸೆಗೆ ಗುರಿ ಮಾಡಿ ಕೊಂದನೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಭಾರತದ ಮೇಲೆ ಮುಸಲ್ಮಾನರ ದಾಳಿಗಳಾದ ಕಾಲಕ್ಕೆ ಅನೇಕ ಹಿಂದೂ ರಾಜರು ಮತ್ತು ಪ್ರಜೆಗಳು ಮತ್ತು ಸ್ತ್ರೀಯರು ಚಿತ್ರಹಿಂಸೆಗೆ ಗುರಿಯಾದರು. ಬಂಗಾಳದಲ್ಲಿ ಬಿಳಿಯರನ್ನು ಕತ್ತಲ ಕೋಣೆಯಲ್ಲಿ ಹಾಕಿ ಕೊಂದುದು (ಅದು ನಿಜವಾದಲ್ಲಿ) ಒಂದು ತರಹದ ಚಿತ್ರಹಿಂಸೆಯೇ. ಬಡತನ ಮತ್ತು ಬರಗಾಲಗಳಲ್ಲಿ ಕಾಮಿಗಳು ಪರಸ್ತ್ರೀಯರನ್ನು ಚಿತ್ರಹಿಂಸೆಗೆ ಗುರಿಮಾಡಿದ ಪ್ರಸಂಗಗಳನ್ನು ಭಾರತದ ನಾಟಕಕಾರರು ಮತ್ತು ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ವರ್ಣಿಸಿದ್ದಾರೆ. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಚಿತ್ರಹಿಂಸೆಗೆ ಒಂದು ಪ್ರಬಲ ನಿದರ್ಶನ. ಈಚೆಗೆ ಪೂರ್ವ ಬಂಗಾಲದಲ್ಲಿ ಪಾಕಿಸ್ತಾನೀಯರು ನಡೆಸಿದ ಹತ್ಯಾಕಾಂಡದಲ್ಲಿ ಅನೇಕ ಚಿತ್ರಹಿಂಸೆಯ ವಿಧಗಳು ಹೊರಬಿದ್ದಿವೆ. ಸ್ತ್ರೀಯರನ್ನು ವಿವಸ್ತ್ರರನ್ನಾಗಿ ಮಾಡುವುದು, ನಿರಪರಾಧಿಗಳ ಮೇಲೆ ಗುಂಡಿನ ಮಳೆಗರೆಯುವುದು–ಇವು ಚಿತ್ರಹಿಂಸೆಯ ಕೆಲವು ಉದಾಹರಣೆಗಳು.

ಹಿಂದೂ ಧರ್ಮದಲ್ಲಿ ಬರುವ ನರಕಯಾತನೆಯ ಕಲ್ಪನೆಯಲ್ಲಿ ಚಿತ್ರಹಿಂಸೆಗೆ ಸರಿಸಮಾನವಾದ ಕಲ್ಪನೆಗಳಿವೆ. ಪಾಪ ಮಾಡಿದವರು ನರಕವನ್ನು ಸೇರಿ ಅನೇಕ ತರಹದ ಹಿಂಸೆಗಳಿಗೆ ಗುರಿಯಾಗುತ್ತಾರೆ. ಬೆಂಕಿಯಿಂದ ಸುಡುವುದು, ಹಾವು ಚೇಳುಗಳಿಂದ ಕಡಿಸುವುದು, ಗರಗಸದಿಂದ ತಲೆ ಕೊರೆಯುವುದು, ಭರ್ಜಿಯಿಂದ ಬೆನ್ನು, ಹೊಟ್ಟೆಗಳನ್ನು ತಿವಿಯುವುದು–ಇವೇ ಮುಂತಾದವು ಅವುಗಳಲ್ಲಿ ಕೆಲವು. ಎಲ್ಲಾ ಧರ್ಮಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಸ್ವರ್ಗನರಕಗಳ ಕಲ್ಪನೆಗಳಿವೆ.

ಚರ್ಚುಗಳು ಧರ್ಮಬಾಹಿರರನ್ನು ದಂಡಿಸುವುದಕ್ಕಾಗಿ ಚಿತ್ರಹಿಂಸೆಯನ್ನು ಅವಲಂಬಿಸಿದ್ದು ಕ್ರೈಸ್ತಧರ್ಮದ ಇತಿಹಾಸದಲ್ಲಿನ ಒಂದು ಸಂಗತಿಯಾಗಿದೆ. ಇಸ್ಲಾಮ್ ಧರ್ಮದ ಪ್ರಸಾರ ಕೂಡ ಒಂದು ಕೈಯಲ್ಲಿ ಕತ್ತಿ ಮತ್ತೊಂದು ಕೈಯಲ್ಲಿ ಕುರಾನ್– ಹೀಗೆ ನಡೆಯಿತು.

ನವಯುಗದಲ್ಲಿ ಚಿತ್ರಹಿಂಸೆಯನ್ನು ಅನಾಗರಿಕವೆಂದು ಪರಿಗಣಿಸಲಾಗಿದೆ. ಅಗಸ್ಟಾಯಿನ್, ಉಲ್ಪಿಯನ್, ಕ್ವಿಂಟಿಲಿಯನ್ ಮತ್ತು ಮಾಂಟೇನ್ ಇವರು ಚಿತ್ರಹಿಂಸೆಯನ್ನು ವಿರೋಧಿಸಿದರು. ಆದರೆ ಡೆಮಾಸ್ಥನೀಸ್, ಅರಿಸ್ಟಾಟಲ್, ಬೋಡಿನ್ ಮತ್ತು ಪೋಲೆಯರ್–ಇವರು ಚಿತ್ರಹಿಂಸೆ

ನ್ಯಾಯದಂಡನೆಯಲ್ಲಿ ಇರಬೇಕೆಂದು ವಾದಿಸಿದರು. 17ನೆಯ ಶತಮಾನದಿಂದ ಈಚೆಗೆ ಇಂಗ್ಲೆಂಡಿನಲ್ಲಿ ಚಿತ್ರಹಿಂಸೆಗೆ ಸ್ಥಾನವಿಲ್ಲ. ಸ್ಕಾಟ್‌ಲೆಂಡಿನಲ್ಲಿ 18ನೆಯ ಶತಮಾನದಲ್ಲಿ ಅದನ್ನು ಕಾಯಿದೆಯಿಂದ ಮೊಟಕು ಮಾಡಲಾಯಿತು (1708). ಅದೇ ರೀತಿಯಲ್ಲಿ ಪ್ರಷ್ಯದಲ್ಲಿ 1740ರಲ್ಲಿ, ಪೋರ್ಚುಗಲ್‌ನಲ್ಲಿ 1776ರಲ್ಲಿ, ಸ್ವೀಡನ್ನಿನಲ್ಲಿ 1786ರಲ್ಲಿ, ಫ್ರಾನ್ಸಿನಲ್ಲಿ 1789ರಲ್ಲಿ ಮತ್ತು ರಷ್ಯದಲ್ಲಿ 1801ರಲ್ಲಿ ಚಿತ್ರಹಿಂಸೆಗೆ ಸ್ಥಾನವಿಲ್ಲವಾಯಿತು. ಆದರೆ 1906–07ರಲ್ಲಿ ರಾಜಕೀಯ ಕೈದಿಗಳು ಚಿತ್ರಹಿಂಸೆಯ ಕ್ರೂರಯಾತನೆಗಳಿಗೆ ಒಳಗಾದರೆಂದು ವಸ್ತು ಸಂಗ್ರಹಾಲಯದಲ್ಲಿನ ದಾಖಲೆಗಳಿಂದ ತಿಳಿದುಬರುತ್ತದೆ. ಅವುಗಳಲ್ಲಿ ಬೆಂಕಿಯಿಂದ ಪಾದವನ್ನು ಸುಡುವುದು ಮುಖ್ಯವಾಗಿತ್ತು. ಪೌರಸ್ತ್ಯ ರಾಷ್ಟ್ರಗಳಲ್ಲಿ ಸಹಿತ ಚಿತ್ರಹಿಂಸೆಗೆ ಈಗ ಯಾವ ಸ್ಥಾನವೂ ಇಲ್ಲ. ಆದರೆ ಅಧಿಕಾರಿಗಳು ಗುಪ್ತವಾಗಿ ತಮ್ಮ ಚಿತ್ರಹಿಂಸೆಯ ವಿಧಾನಗಳನ್ನು ಅನುಸರಿಸುತ್ತಿದ್ದಾರೆಂದು ತಿಳಿಯುತ್ತದೆ.

ಇಂದಿನ ಯುಗದಲ್ಲಿ ಚಿತ್ರಹಿಂಸೆಗೆ ಯಾವ ರಾಷ್ಟ್ರವೂ ಪುರಸ್ಕಾರಕೊಟ್ಟಿಲ್ಲ. ಚಿತ್ರಹಿಂಸೆ ಅಮಾನುಷವೆಂದೂ ಅನಾಗರಿಕವೆಂದೂ ಬಗೆಯಲಾಗಿದೆ. ಅಪರಾಧಗಳ ತನಿಖೆ ಮುಖ್ಯವಾಗಿ ವೈಜ್ಞಾನಿಕವಾಗಿ ನಡೆಯುತ್ತಿದೆಯೇ ವಿನಾ ಚಿತ್ರಹಿಂಸೆಯಿಂದಲ್ಲ. (ಎನ್.ಕೆ.ಕೆ.ಟಿ.)

**ಚಿತ್ರಾಂಗದ :** ಶಂತನು ಮತ್ತು ಸತ್ಯವತಿಯರ ಹಿರಿಯ ಮಗ. ಭೀಷ್ಮನ ಬಲತಮ್ಮ, ವಿಚಿತ್ರವೀರ್ಯನ ಅಣ್ಣ. ಈತ ಬಾಲ್ಯದಿಂದಲೂ ಪರಾಕ್ರಮಕ್ಕೆ ಪ್ರಸಿದ್ಧನಾಗಿದ್ದ. ತಂದೆಯ ಮರಣಾನಂತರ ಸತ್ಯವತಿಯ ವಿವಾಹದ ಮುಂಚಿನ ಕರಾರಿನಂತೆ ಭೀಷ್ಮ ಈತನಿಗೇ ಪಟ್ಟಾಭಿಷೇಕ ಮಾಡಿದ. ಈತ ಅತ್ಯಂತ ಪ್ರಬಲನಾಗಿ, ಪರಾಕ್ರಮದಿಂದ ರಾಜ್ಯವಾಳುತ್ತಿದ್ದ. ದೇವ, ಮಾನವ ಮತ್ತು ರಾಕ್ಷಸರಲ್ಲಿ ತನಗೆ ಸರಿಸಮನಾಗಿ ಯಾರೂ ಇಲ್ಲ ಎಂಬ ದರ್ಪ ಇವನಲ್ಲಿ ಮನೆಮಾಡಿತ್ತು. ಶತ್ರು ಭಯಂಕರನಾಗಿದ್ದ ಈತನ ವ್ಯಾಪ್ತಿಯನ್ನು ಸಹಿಸದ ಚಿತ್ರಾಂಗದನೆಂಬ ಗಂಧರ್ವ ಹಸ್ತಿನಾಪುರದ ಮೇಲೆ ದಾಳಿ ಮಾಡಿದ. ಮಿತಿಮೀರಿದ ಆತ್ಮವಿಶ್ವಾಸದಿಂದ ಚಿತ್ರಾಂಗದ ಆತನನ್ನು ಎದುರಿಸಿದ. ಕುರುಸೇನೆಗೂ, ಗಂಧರ್ವರಿಗೂ ಸುಮಾರು ಮೂರು ವರ್ಷಗಳ ಕಾಲ ಯುದ್ಧ ನಡೆಯಿತು. ಎರಡು ಪಕ್ಷದವರೂ ಸಮಬಲದಿಂದ ಹೋರಾಡಿದರು. ಚಿತ್ರಾಂಗದ ಪರಾಕ್ರಮಶಾಲಿಯಾಗಿದ್ದರೂ ಗಂಧರ್ವರ ಮಾಯಾ ಪ್ರಕ್ರಿಯೆಗಳನ್ನು ತಿಳಿದಿರಲಿಲ್ಲ. ಆದ್ದರಿಂದ ಪ್ರಾರಂಭದಲ್ಲಿ ಗೆದ್ದರೂ ಕೊನೆಯಲ್ಲಿ ಸೋತು ಗಂಧರ್ವನಿಂದ ಹತನಾದ. ಗೆದ್ದ ಗಂಧರ್ವನಾದರೋ ಭೀಷ್ಮನಿಗೆ ಹೆದರಿ ತನ್ನ ಲೋಕಕ್ಕೆ ಓಡಿದ. ಅನಂತರ ವಿಚಿತ್ರವೀರ್ಯನಿಗೆ ಪಟ್ಟಾಭಿಷೇಕವಾಯಿತು.

ಮಂಗರಸನ ನೇಮಿಜಿನೇಶಸಂಗತಿ ಮತ್ತು ಕರ್ಣಪಾರ್ಯನ ನೇಮಿನಾಥ ಪುರಾಣಗಳಲ್ಲಿ ಚಿತ್ರಾಂಗದ ಬೇರೆ ರಾಜರೊಂದಿಗೆ ಯುದ್ಧಮಾಡಿ ಮಡಿದ ಎಂದಿದೆ. ಹರಿಷೇಣನ ಬೃಹತ್‌ಕಥೆಯಲ್ಲಿ ಚಿತ್ರ, ವಿಚಿತ್ರ, ಚಿತ್ರಾಂಗದ ಈ ಮೂವರೂ ಶಂತನು ಸತ್ಯವತಿಯರ ಮಕ್ಕಳು ಎಂದಿದೆ. (ಡಿ.ವಿ.)

**ಚಿತ್ರಾಂಗದೆ :** ಮಹಾಭಾರತದಲ್ಲಿ ಕಂಡುಬರುವ ಒಂದು ಉದಾತ್ತ ಸ್ತ್ರೀಪಾತ್ರ. ಈಕೆ ಮಣಲೂರಿನ ರಾಜ ಚಿತ್ರವಾಹನನ ಏಕಮಾತ್ರ ಪುತ್ರಿ. ಪುತ್ರರಿಲ್ಲದ ಆ ರಾಜ ಇವಳನ್ನೇ ಮಗನೆಂದು ತಿಳಿದು ಸಕಲ ವಿದ್ಯೆಗಳನ್ನೂ ಕಲಿಸಿದ. ಈಕೆ ಪುರುಷೋಚಿತವಾದ ಬಿಲ್ಲುವಿದ್ಯೆ, ಕತ್ತಿವರಸೆ ಮೊದಲಾದ ರಣವಿದ್ಯೆಗಳನ್ನು ಕಲಿತು ಹೆಣ್ಣಿನ ಲಾಲಿತ್ಯಕ್ಕೆ ಬದಲಾಗಿ ಗಂಡಿನ ಸ್ವಭಾವಸಿದ್ಧವಾದ ಕಾಠಿಣ್ಯ ಮತ್ತು ಒರಟುತನಗಳನ್ನು ಮೈಗೂಡಿಸಿಕೊಂಡು ಬೆಳೆದು ತಾರುಣ್ಯಕ್ಕೆ ಅಡಿಯಿಟ್ಟಳು. ಮುಂದೆ ಅರ್ಜುನ ಇವಳನ್ನು ಮದುವೆಯಾದ. ಬಭ್ರುವಾಹನ ಇವರ ಮಗ. ಅಶ್ವಮೇಧಕ್ಕೆ ಮೊದಲು ದಿಗ್ವಿಜಯ ಹೊರಟ ಅರ್ಜುನನನ್ನು ಬಭ್ರುವಾಹನ ಕೊಲ್ಲಲಾಗಿ ಚಿತ್ರಾಂಗದೆ ಬಹಳ ದುಃಖಪಟ್ಟು ಉಲೂಪಿಯ ಮೂಲಕ ಸಂಜೀವನ ರತ್ನವನ್ನು ತರಿಸಿ ಪತಿಯನ್ನು ಬದುಕಿಸಿದಳು. ಅಶ್ವಮೇಧಯಾಗಕ್ಕೆ ಚಿತ್ರಾಂಗದೆ ಹಸ್ತಿನಾವತಿಗೆ ಬಂದಿದ್ದಳು. ಪಾಂಡವ ಮಹಾಪ್ರಸ್ಥಾನದ ಬಳಿಕ ಈಕೆ ಮತ್ತೆ ಮಣಲೂರಿಗೆ ಹಿಂತಿರುಗಿದಳು. ಇಷ್ಟು ಮಹಾಭಾರತದಲ್ಲಿ ಬರುವ ಈಕೆಯ ವೃತ್ತಾಂತ.

ಚಿತ್ರಾಂಗದೆಯ ಕಥೆ ವ್ಯಾಸಮಹಾಭಾರತದ ಮಹಾಸಾಗರದಲ್ಲಿ ಕೇವಲ ಬಿಂದುಮಾತ್ರವಾಗಿದೆಯಷ್ಟೆ ಕನ್ನಡ ಜೈಮಿನಿಭಾರತದಲ್ಲಿ ಅರ್ಜುನ ಬಭ್ರುವಾಹನರ ಕಾಳಗದ ಪ್ರಸಂಗದಲ್ಲಿ ಚಿತ್ರಾಂಗದೆ ಕ್ಷಣಮಾತ್ರ ಮಿಂಚಿ ಮಿನುಗುತ್ತಾಳೆ. ಇಲ್ಲಿ ಆಕೆಯ ಜೀವನದ ಉತ್ತರಾರ್ಧದ ಚಿತ್ರವಿದೆ. ರವೀಂದ್ರನಾಥ ಠಾಗೂರರ ಚಿತ್ರಾನಾಟಕದಲ್ಲಿ ಚಿತ್ರಾಂಗದೆಯ ಪೂರ್ವಜೀವನದ ಶೃಂಗಾರಪೂರ್ಣ ಬದುಕಿನ ಚಿತ್ರವಿದೆ. ಮಹಾಕವಿ ಕುವೆಂಪು ಅವರ ಚಿತ್ರಾಂಗದಾ ಎಂಬ ಖಂಡಕಾವ್ಯದಲ್ಲಿ ಚಿತ್ರಾಂಗದೆಯ ಪೂರ್ಣ ಬದುಕಿನ ಸುಂದರ ಹಾಗೂ ಸಮಗ್ರ ಚಿತ್ರಣವನ್ನು ಕಾಣಬಹುದು. (ಎಂ.ಪಿ.ವಿ.)

**ಚಿತ್ರಾಲ್ :** ಪಾಕಿಸ್ತಾನದ ವಾಯವ್ಯ ಗಡಿ ಪ್ರಾಂತ್ಯದಲ್ಲಿ ಮಾಲಕಂಡ್ ವಿಭಾಗದಲ್ಲಿರುವ ಒಂದು ಜಿಲ್ಲೆ ; ಆ ಜಿಲ್ಲೆಯ ಆಡಳಿತ ಕೇಂದ್ರ ; ಹಿಂದೂಕುಷ್ ಪರ್ವತದಲ್ಲಿ ಹುಟ್ಟಿ ಈ ಜಿಲ್ಲೆಯ ದಕ್ಷಿಣಾಭಿಮುಖವಾಗಿ ಹರಿದು 483 ಕಿಮೀ ಸಾಗಿ ಕಾಬೂಲ್ ನದಿಯನ್ನು ಸೇರುವ ಒಂದು ನದಿ. ಉತ್ತರ ಪಶ್ಚಿಮಗಳಲ್ಲಿ ಆಫ್ಘಾನಿಸ್ತಾನ, ಪೂರ್ವಕ್ಕೆ ಕಾಶ್ಮೀರದ ಗಿಲ್ಗಿಟ್, ದಕ್ಷಿಣ ಮತ್ತು ಆಗ್ನೇಯಗಳಲ್ಲಿ ಡಿರ್ ಮತ್ತು ಸ್ವಟ್ ಜಿಲ್ಲೆಗಳು ಇದರ ಮೇರೆಗಳು. ಉತ್ತರದಲ್ಲಿ ಆಫ್ಘಾನಿಸ್ಥಾನದ ವಾಕಾನ್ ಕಣಿವೆಯಿಂದಾಗಿ ಇದು ಸೋವಿಯತ್ ಒಕ್ಕೂಟದಿಂದ ಬೇರ್ಪಟ್ಟಿದೆ. ಆದ್ದರಿಂದ ಇದು ಆಯಕಟ್ಟಿನ ಪ್ರದೇಶ. ಹಿಂದೂಕುಷ್ ಪರ್ವತದ ತಪ್ಪಲಲ್ಲಿ, ಸಮುದ್ರಮಟ್ಟದಿಂದ 1524–4572 ಮೀ ಎತ್ತರದಲ್ಲಿರುವ ಈ ಜಿಲ್ಲೆಯ ವಿಸ್ತೀರ್ಣ 14833 ಚ. ಕಿಮೀ. ಜನಸಂಖ್ಯೆ 300,000 (2006). ಹಿಮಾಚ್ಛಾದಿತ ಪರ್ವತಶ್ರೇಣಿಗಳಿಂದ, ದೇವದಾರು ವೃಕ್ಷಗಳ ಕಾಡುಗಳಿಂದ, ರಮಣೀಯವಾದ ಕಣಿವೆಗಳಿಂದ ಕೂಡಿದ ಚಿತ್ರಾಲ್ ಸುಂದರವಾದ ಪ್ರದೇಶ. ಕಣಿವೆಗಳು ತುಂಬ ಫಲವತ್ತಾಗಿವೆ. ಗೋಧಿ, ಬಾರ್ಲಿ, ಮುಸುಕಿನ ಜೋಳ, ಬತ್ತ ಮುಖ್ಯ ಬೆಳೆಗಳು, ಹಣ್ಣುಗಳು, ದ್ರಾಕ್ಷಿ, ಉಪ್ಪುನೇರಿಳೆ– ಇವು ಇತರ ಉತ್ಪನ್ನಗಳು. ಇಲ್ಲಿ ಕಬ್ಬಿಣದ ಅದಿರು, ಸೀಸ, ತಾಮ್ರ, ಮ್ಯಾಂಗನೀಸ್ ಮತ್ತು ಆ್ಯಂಟಿಮನಿ ನಿಕ್ಷೇಪಗಳಿವೆ. ಕೃಷಿಯನ್ನು ಬಿಟ್ಟರೆ, ಕತ್ತಿ ಮತ್ತು ಜಮಾಖಾನೆ ತಯಾರಿಕೆ, ಮತ್ತು ಕಸೂತಿ ಕೆಲಸ ಮುಖ್ಯ ಕಸುಬುಗಳು. ಚಿತ್ರಾಲ್ ಜಿಲ್ಲೆಯ ಜನ ಬಹುತೇಕ ಖೋ ಬುಡಕಟ್ಟಿನವರು. ಇವರ ಭಾಷೆ ಖೋವಾರ್ ಅಥವಾ ಚಿತ್ರಾಲಿ. ಇವರು ಆಕ್ಸಸ್ ಪ್ರದೇಶದಿಂದ ಇಲ್ಲಿಗೆ ಬಂದವರೆಂದು ನಂಬಲಾಗಿದೆ. ಇಲ್ಲಿಯ ಮೂಲ ವಾಸಿಗಳು ಅಲ್ಪಸಂಖ್ಯಾತರು. ಅವರು ಅಲ್ಲಲ್ಲಿ ಚದರಿ ಹೋಗಿದ್ದಾರೆ.

ಜಿಲ್ಲೆಯ ಮುಖ್ಯಪಟ್ಟಣ ಚಿತ್ರಾಲ್. ಇದು ಪೆಷಾವರಿಗೆ ಉತ್ತರದಲ್ಲಿ 206 ಕಿಮೀ ದೂರದಲ್ಲಿ. ಚಿತ್ರಾಲ್ ನದಿಯ ದಡದ ಮೇಲೆ. 3. ಕಿಮೀ. ಗಳಿಗಿಂತ ಕಿರಿದಾದ ಕಣಿವೆಯಲ್ಲಿ ಇದೆ. ಇದರ ಜನಸಂಖ್ಯೆ 20,000 (2006) ನೌಷೇರದಿಂದ ಇಲ್ಲಿಗೆ ಮರ್ದಾನ್, ಮಾಲಕಂಡ್, ಡಿರ್ ಮತ್ತು ಲೋವರಾಯ್ ಕಣಿವೆ ದಾರಿಯ ಮೂಲಕ ರಸ್ತೆಯಿದೆ. ಈ ರಸ್ತೆ ಬೇಸಗೆಯಲ್ಲಿ ಮಾತ್ರ ಸಂಚಾರಯೋಗ್ಯ. ಚಿತ್ರಾಲ್‌ಗೂ ಗಿಲ್ಗಿಟ್‌ಗೂ ಷಂಡೂರ್ ಕಣಿವೆಯ ಮೂಲಕ ಸಂಪರ್ಕ ಸಾಧ್ಯ. ಚಿತ್ರಾಲ್‌ಗೂ ಪೆಷಾವರಿಗೂ ವಿಮಾನ ಸಂಪರ್ಕವಿದೆ.

ಪ್ರಶ.ಪೂ. 1ನೆಯ ಶತಮಾನದಲ್ಲಿ ಈ ಪ್ರದೇಶ ಚೀನೀಯರ ಅಧೀನಕ್ಕೆ ಬಂತೆಂದೂ ಅನಂತರ ಹಲವು ಶತಮಾನಗಳ ಕಾಲ ಅವರು ಇಲ್ಲಿ ಆಳುತ್ತಿದ್ದರೆಂದೂ ಹೇಳಲಾಗಿದೆ. ಆಫ್ಘಾನಿಸ್ಥಾನದಿಂದ ಮುಸ್ಲಿಮರೂ ಇಲ್ಲಿಗೆ 11ನೆಯ ಶತಮಾನದಲ್ಲಿ ಬಂದರು. ಭಾರತ ಸ್ವತಂತ್ರವಾಗುವುದಕ್ಕೆ ಮುಂಚೆ ಈ ಪ್ರದೇಶ ಒಂದು ದೇಶೀಯ ಸಂಸ್ಥಾನವಾಗಿತ್ತು. ಇದನ್ನಾಳುತ್ತಿದ್ದ ದೊರೆ ಮೊಗಲ್ ಚಕ್ರವರ್ತಿ ಬಾಬರನ ಮೊಮ್ಮಕ್ಕಳಲ್ಲೊಬ್ಬನಾದ ಬಾಬಾ ಅಯೂಬನ ವಂಶದವನೆಂದೂ ಬಾಬಾ ಅಯೂಬ್ ಇಲ್ಲಿಗೆ 17 ನೆಯ ಶತಮಾನದಲ್ಲಿ ಬಂದು ಇಲ್ಲಿಯ ದೊರೆಯ ಅಧಿಕಾರಿಯಾದನೆಂದೂ ಮುಂದೆ ಬಾಬಾ ಅಯೂಬನ ಮರಿಮಗ ಈ ಪ್ರದೇಶದಿಂದ ಅಧಿಪತಿಯಾದನೆಂದೂ ಹೇಳಲಾಗಿದೆ. ಬ್ರಿಟಿಷರು 1889 ರಲ್ಲಿ ಗಿಲ್ಗಿಟ್‌ನಲ್ಲಿ ತಮ್ಮ ಸೈನ್ಯವೊಂದನ್ನು ನೆಲೆಗೊಳಿಸಿ ಈ ಪ್ರದೇಶದ ದೊರೆಯನ್ನು ತಮ್ಮ ಆಶ್ರಿತನನ್ನಾಗಿ ಮಾಡಿಕೊಂಡರು. 1947 ರಲ್ಲಿ ಭಾರತ ವಿಭಜನೆಯಾಗಿ ಪಾಕಿಸ್ತಾನ ನಿರ್ಮಾಣವಾದ ಮೇಲೆ ಇಲ್ಲಿಯ ದೊರೆ ಸ್ವತಂತ್ರನಾದ. ಸಂಸ್ಥಾನ ಪಾಕಿಸ್ತಾನಕ್ಕೆ ಸೇರಿಕೊಂಡಿತು.

**ಚಿತ್ರಾಲಂಕೃತ ಹಸ್ತಪ್ರತಿಗಳು :** ವಿವಿಧ ರೀತಿಯ ಚಿತ್ರಗಳಿಂದ ಅಲಂಕೃತವಾದ ಹಸ್ತಪ್ರತಿಗಳಿಗೆ ಈ ಹೆಸರಿದೆ (ಇಲಸ್ಟ್ರೇಟೆಡ್ ಮ್ಯಾನ್ಯುಸ್ಕ್ರಿಪ್ಟ್). ಅಕ್ಷರಗಳನ್ನೇ ಸಾಲಂಕೃತವಾಗಿ ಮಾಡುವುದು, ಪುಟಪುಟಕ್ಕೂ ಸುಂದರ ಚೌಕಟ್ಟನ್ನು ಕಟ್ಟುವುದು, ಮುಖಪುಟವನ್ನು ಮೇಲು ಹೊದಿಕೆಯ ರಟ್ಟನ್ನು ವರ್ಣಚಿತ್ರಗಳಿಂದ ಅಲಂಕರಿಸುವುದು, ವಿಷಯಕ್ಕೆ ಸಂಬಂಧಿಸಿದಂತೆ ಗ್ರಂಥದ ಒಳಗಡೆ ರೇಖಾಚಿತ್ರಗಳನ್ನು ಒದಗಿಸುವುದು–ಹೀಗೆ ಹಸ್ತಪ್ರತಿ ಚಿತ್ರಾಲಂಕರಣ ಕಲೆ ಅನೇಕ ಬಗೆಯಲ್ಲಿ ಪ್ರಕಾಶಗೊಂಡು ಲಿಪಿಕಾರರ ಕಲಾಕೌಶಲಕ್ಕೆ ನಿದರ್ಶನವಾಗಿದೆ.

ಚಿತ್ರಾಲಂಕೃತ ಹಸ್ತಪ್ರತಿಗಳು ಯಾವುದೇ ದೇಶಕ್ಕೆ, ವಿಷಯಕ್ಕೆ ಸೀಮಿತವಾಗಿಲ್ಲ. ದೊರೆಯುವ ಚಿತ್ರಗಳು ಮಾತ್ರ ಆಯಾ ದೇಶದ, ಆಯಾ ಕಲೆಯ ವೈಶಿಷ್ಟ್ಯವನ್ನು ಪಡೆದಿರುತ್ತವೆ. ಇದುವರೆಗೆ ತಿಳಿದುಬಂದಿರುವಂತೆ ಯುರೋಪಿನಲ್ಲಿ ಬೈಜಾಂಟೀಯನ್ ಮತ್ತು ರೋಮನ್ ಕಲೆಗಳೇ ಪುರಾತನವಾದುವು. ದೊರೆಯುವ ಚಿತ್ರಾಲಂಕೃತ ಹಸ್ತಪ್ರತಿಗಳಲ್ಲಿ ಪುರಾತನವಾದುವೆಂದರೆ ಈಜಿಪ್ಟಿನ ಪಪೈರಸ್ ಸುರುಳಿಗಳು. ಇವುಗಳ ಕಾಲ ಪ್ರಶ.ಪೂ. 7,000 ವರ್ಷಗಳು. ದಿ ಬುಕ್ ಆಫ್ ದಿ ಡೆಡ್ ಎಂಬ ಗ್ರಂಥದ ಬೇರೆ ಬೇರೆ ಪ್ರತಿಗಳು ಹಲವು ಸಮಾಧಿಗಳಲ್ಲಿ ಕಂಡುಬಂದಿವೆ. ಇವುಗಳೆಲ್ಲವೂ ಪಪೈರಸ್ ಸುರುಳಿಗಳೇ. ಇವುಗಳಲ್ಲಿ ರೇಖಾಚಿತ್ರಗಳನ್ನೂ ಜಲವರ್ಣಚಿತ್ರಗಳನ್ನೂ ಕಾಣಬಹುದಾಗಿದೆ. ಇದೇ ಮಾದರಿಯ ಒಂದು ಹಸ್ತಪ್ರತಿ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ. ಗ್ರೀಸಿನಲ್ಲಿ ಪ್ರಶ. 4ನೆಯ ಶತಮಾನಕ್ಕೆ ಪೂರ್ವದ ಇಂಥ ಯಾವ ಪ್ರತಿಗಳೂ ದೊರೆಯದಿದ್ದರೂ ಪ್ರ.ಶ. 400ರ ರೋಮನ್ ಪ್ರತಿ ಹೋಮರನ ಇಲಿಯಡ್ ಕಾವ್ಯ ಅಮ್ಟ್ರೋಸಿಯಾನ ಗ್ರಂಥಾಲಯದಲ್ಲಿದೆ. ಇದರಲ್ಲಿ 58 ಉಜ್ವಲಾಲಂಕೃತ ಚಿತ್ರಗಳಿವೆ. ಇನ್ನೊಂದು ಇದೇ ಕಾಲದ ರೋಮನ್ ಪ್ರತಿಯೆಂದರೆ ವರ್ಜಿಲ್ ಆಫ್ ದಿ ವ್ಯಾಟಿಕನ್.

ಇದೇ ರೀತಿ ಭಾರತದಲ್ಲಿ ಓಲೆ ಮತ್ತು ಕಾಗದದ ಮೇಲೆ ಬರೆದ ಚಿತ್ರಾಲಂಕೃತ ಹಸ್ತಪ್ರತಿಗಳು ದೊರೆಯುತ್ತವೆ. ಈಗ ತಿಳಿದುಬಂದಿರುವಂತೆ ಓಲೆಯ ಅತ್ಯಂತ ಹಳೆಯ ಚಿತ್ರಾಲಂಕೃತ ಪ್ರತಿಯೆಂದರೆ, 1962ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಪ್ರದರ್ಶಿತವಾದ



ಬೈಬಲಿನ ಚಿತ್ರಾಲಂಕೃತ ಹಸ್ತಪ್ರತಿ. ಕಾಲ 15ನೆಯ ಶತಮಾನ

ಸಂಸ್ಕೃತ ಗ್ರಂಥ. ಇದು ಬೌದ್ಧರ ಪ್ರಾರ್ಥನಾಗೀತೆಗಳನ್ನೊಳಗೊಂಡಿದೆ. ಇದರಲ್ಲಿರುವ ಚಿತ್ರಗಳು ಅಜಂತ ಕಲೆಯನ್ನನುಸರಿಸಿವೆಯೆಂದು ಹೇಳುತ್ತಾರೆ. ಈಗ ದೊರೆಯುವ ಮತ್ತೊಂದು ಪ್ರತಿಯೆಂದರೆ ಧವಳ ಮಹಾಗ್ರಂಥ. ಇದರ ಕಾಲ ಸುಮಾರು 11ನೆಯ ಶತಮಾನ. ಇದು ಅರ್ಧಮಾಗಧಿ ಭಾಷೆಯಲ್ಲಿ ಕನ್ನಡ ಶಾಸನಲಿಪಿಯಲ್ಲಿ ಬರೆಯಲಾಗಿದೆ.



ಕುರಾನಿನ ಒಂದು ಚಿತ್ರಾಲಂಕೃತ ಹಸ್ತಪ್ರತಿ

ಜೈನತತ್ತ್ವ ನಿರೂಪಣೆಯನ್ನು ಹೊಂದಿರುವ ಈ ಹಸ್ತಪ್ರತಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ ಜೈನಮಂದಿರದಲ್ಲಿ ಸಿದ್ಧಾಂತದರ್ಶನಕ್ಕೆಂದು ಮೀಸಲಾಗಿದೆ. ಇದರಲ್ಲಿ ಅತ್ಯುತ್ತಮವಾದ ವರ್ಣರಂಜಿತ ಚಿತ್ರಗಳಿವೆ. ಇಲ್ಲಿಯೇ ಇರುವ ಮತ್ತೊಂದು ರೇಖಾಚಿತ್ರಗಳನ್ನೊಳಗೊಂಡ ಹಸ್ತಪ್ರತಿಯೆಂದರೆ ನೇಮಿಚಂದ್ರನ ನೇಮಿನಾಥಪುರಾಣ. ಇಂಥ ಹಲವಾರು ಓಲೆ ಗ್ರಂಥಗಳಲ್ಲಿ ಚಿತ್ರಗಳನ್ನು ಕಂಡರಸಿದ್ದಾರೆ. ಹಲವು ಹಸ್ತಪ್ರತಿಗಳು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ ಮತ್ತು ಪ್ರಾಚ್ಯ ವಿದ್ಯಾಸಂಶೋಧನಾಲಯಗಳಲ್ಲಿವೆ.

14ನೆಯ ಶತಮಾನದ ಕೊನೆಯಲ್ಲಿ ಕಾಗದ ಬಳಕೆಗೆ ಬಂದು ಓಲೆ ಮತ್ತು ಭೂರ್ಜಪತ್ರಗಳ ಸ್ಥಾನವನ್ನು ಆಕ್ರಮಿಸಿತು. ಕಾಗದ ಬಳಕೆಗೆ ಬಂದಮೇಲೆ ತಯಾರಾದ ಹಸ್ತಪ್ರತಿಗಳಲ್ಲಿ 1550 ರಲ್ಲಿ ಬರೆದ, ಜೈನ ನಿಯಮಾವಳಿಗಳನ್ನೊಳಗೊಂಡ ಚಿತ್ರಾಲಂಕೃತ ಹಸ್ತಪ್ರತಿಯೆಂದರೆ ಕಲ್ಪಸೂತ್ರ. ಇದರಲ್ಲಿನ ಚಿತ್ರಗಳು ಪಶ್ಚಿಮ ದೇಶದ ರೇಖಾವಿನ್ಯಾಸಗಳನ್ನೊಳಗೊಂಡ ಭಾರತ ಚಿತ್ರಗಳು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದ ದಶರಥನಂದನ ಚರಿತೆಯ ಹಸ್ತಪ್ರತಿಯ ಮೇಲಿನ ಚಿತ್ರಾಲಂಕರಣ

16ನೆಯ ಶತಮಾನದಲ್ಲಿ ಬಹುತೇಕ ಹಸ್ತಪ್ರತಿಗಳು ಚಿತ್ರಗಳಿಂದ ಅಲಂಕೃತವಾದುವಾಗಿವೆ. ಮೊಗಲ್ ಚಕ್ರವರ್ತಿ ಅಕ್ಬರ್ ಭಾರತದ ಎಲ್ಲ ಭಾಗಗಳಿಂದ ಚಿತ್ರಕಾರರನ್ನು ಕರೆಸಿದ. ಇವರಿಂದ ಹಲವಾರು ಹಸ್ತಪ್ರತಿಗಳು ಉತ್ತಮ ಚಿತ್ರಗಳಿಂದ ಅಲಂಕೃತವಾದುವು. ಈ ಎಲ್ಲ ಚಿತ್ರಗಳಲ್ಲಿ ಮೊಗಲರ ಕಲಾವಂತಿಕೆಯನ್ನು ನೋಡಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ 36 ಚಿತ್ರಗಳನ್ನೊಳಗೊಂಡ, 1595ರಲ್ಲಿ ಅಕ್ಬರನಿಗಾಗಿ ರಚಿತವಾದ ಅಬ್ದುಲ್ ರಹೀಮ್ ಗ್ರಂಥವನ್ನು ನೋಡಬಹುದು. ಇದು ಬಾಬರನ ಜೀವನ ಘಟನೆಗಳನ್ನೊಳಗೊಂಡ ಪಾರಸಿ ಹಸ್ತಪ್ರತಿ. 16ನೆಯ ಶತಮಾನದ ಮತ್ತೊಂದು ಚಿತ್ರಾಲಂಕೃತ ಹಸ್ತಪ್ರತಿಯೆಂದರೆ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸಸ್. ಇದರಲ್ಲಿ ಮರಗಿಡಗಳು, ಕಲ್ಲುಗಳು ಮತ್ತು ಪ್ರಾಣಿಗಳ ಚಿತ್ರಗಳು ಅತ್ಯಂತ ಸುಂದರವಾಗಿ ಚಿತ್ರಿತವಾಗಿವೆ. 1567ರಲ್ಲಿ ಪ್ರಸಿದ್ಧ ಕನ್ನಡ ಲಿಪಿಕಾರ ಪಾಯಣ್ಣನಿಂದ ಕಂಡರಿಸಲಾದ ಎರಡನೆಯ ನಾಗವರ್ಮನ ವರ್ಧಮಾನ ಪುರಾಣದ ಕಾಗದದ ಪ್ರತಿಯಲ್ಲಿ ಕೆಲವು ವರ್ಣರಂಜಿತ ಚಿತ್ರಗಳನ್ನು ಕಾಣಬಹುದು.

ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ, ಎಂದರೆ 1850ರಲ್ಲಿ, ಇಂಥ ಹಸ್ತಪ್ರತಿಗಳು ಮೈಸೂರು ನಗರದಲ್ಲಿ ರಚಿತವಾಗಿವೆ. ಇವುಗಳಲ್ಲಿ ಶ್ರೀತತ್ತ್ವನಿಧಿ ಬಹು ಪ್ರಸಿದ್ಧಿವಾದುದು. ಇದರಲ್ಲೂ ಸುಮಾರು 40,000 ವರ್ಣಚಿತ್ರಗಳೂ ಹಲವಾರು ರೇಖಾಚಿತ್ರಗಳೂ ಇವೆ. ಇಲ್ಲಿ ಕೊಟ್ಟಿರುವ ನವನಿಧಿಗಳ ನಿರೂಪಣೆಗೆ ಅನುಗುಣವಾಗಿ ಚಿತ್ರಗಳನ್ನು ಅಳವಡಿಸಲಾಗಿದೆ. ಹಾಗೆಯೇ ಚದುರಂಗಚಕ್ರವನ್ನೂ ನೋಡಬಹುದು. ಇದೂ ವರ್ಣಚಿತ್ರಗಳಿಂದ ಕೂಡಿದೆ. ಇದರಲ್ಲಿ ವಿವಿಧ ರೀತಿಯ ಆಟಗಳಿವೆ. ಹಾಗೆಯೇ ಅಶ್ವವೈದ್ಯಗ್ರಂಥವೂ ಚಿತ್ರಸಹಿತವಾಗಿದೆ.

**ಮಹಾಧವಳದ ವರ್ಣಚಿತ್ರಿತ ಹಸ್ತಪ್ರತಿ**

ವೀರಶೈವಾಮೃತ ಪುರಾಣ ಓಲೆಗ್ರಂಥದಲ್ಲಿ ಹಲವಾರು ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಭೀಮಕವಿಯ ಬಸವಪುರಾಣದ ಕಾಗದದ ಹಸ್ತಪ್ರತಿಯೊಂದರಲ್ಲಿ ಪ್ರತಿ ಪುಟವನ್ನೂ ವಿವಿಧ ರೀತಿಯ ಬಣ್ಣದ ಚೌಕಟ್ಟುಗಳಿಂದ ಅಲಂಕರಿಸಲಾಗಿದೆ. ಇದರಲ್ಲಿ ಕಂಡು ಬರುವ ವಿನ್ಯಾಸಗಳು ತುಂಬಾ ಆಕರ್ಷಕವಾಗಿವೆ. ಈ ಚೌಕಟ್ಟುಗಳೇ ಅಲ್ಲದೆ ಈ ಹಸ್ತಪ್ರತಿಯ ರಕ್ಷಣೆಗಾಗಿ ಉಪಯೋಗಿಸಿರುವ ಹೊರಗಣ ಎರಡು ಹಲಗೆಗಳ ಮೇಲೆ ಮೂಡಿಸಿರುವ ವರ್ಣರಂಜಿತ ಚಿತ್ರಗಳೂ ಬಹಳ ಸೊಗಸಾಗಿವೆ.

**ಅರ್ಧನೇಮಿ ಪುರಾಣದ ಒಂದು ಹಸ್ತಪ್ರತಿ**

ಹೀಗೆ ಚಿತ್ರಗಳನ್ನು ಬಿಡಿಸಿರುವುದಲ್ಲದೆ, ಅಕ್ಷರಗಳನ್ನು ಬರೆಯುವಾಗಲೂ ಹಲವಾರು ಚಿತ್ರವಿಚಿತ್ರ ರೀತಿಯಿಂದ ಬರೆದ ಲಿಪಿಕಾರರು ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಿರುವುದನ್ನು ಕಾಣಬಹುದು. ಇದಕ್ಕೆ ಧವಳ ಗ್ರಂಥದಲ್ಲಿ ಹಾಕಿರುವ 4ನೆಯ ಪತ್ರಸಂಖ್ಯೆಯನ್ನು ನೋಡಬಹುದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ರಾಜನೀತಿ ಪದ್ಯಗಳಿರುವ ಪತ್ರಗಳಲ್ಲಿ ಬರೆದಿರುವ ವಿವಿಧ ರೀತಿಯ ಸಾಲು ಜೋಡಿಗಳನ್ನು ನೋಡಬಹುದು. ವಿವಿಧ ದಿಕ್ಕುಗಳಿಂದ ಓದಬಹುದಾದ ಈ ಬರಹ ಚಮತ್ಕಾರಯುಕ್ತವಾಗಿದೆ.

ಹಾಗೆಯೇ ಸೂಕ್ಷ್ಮಲಿಪಿಗಳಿಗೆ ಪ್ರಸಿದ್ಧವಾಗಿರುವ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ದೇವೀ ಸ್ತೋತ್ರ ಮತ್ತು ಸುಂದರಕಾಂಡ ಓಲೆಗ್ರಂಥಗಳನ್ನು ನೋಡಬಹುದು. ದೇವೀಸ್ತೋತ್ರ ಹಸ್ತಪ್ರತಿಯ ಎರಡೂವರೆ ಅಂಗುಲ ಉದ್ದದಲ್ಲಿ 25 ಅಕ್ಷರಗಳನ್ನೂ $1\frac{1}{2}$ ಅಗಲದಲ್ಲಿ 23 ಪಂಕ್ತಿಗಳನ್ನೂ ಕಾಣಬಹುದಾಗಿದೆ. ಇದು ಸಂಸ್ಕೃತ ಗ್ರಂಥವಾಗಿದ್ದು ತೆಲುಗು ಲಿಪಿಯಲ್ಲಿದೆ. ಸುಂದರಕಾಂಡ ಗ್ರಂಥಾಕ್ಷರದಲ್ಲಿದೆ. $3\frac{3}{4} \times 1\frac{1}{2}$ ಬರವಣಿಗೆಯ ಅಳತೆಯ ಭಾಗದಲ್ಲಿ 47 ಅಕ್ಷರಗಳೂ 21–25 ಪಂಕ್ತಿಗಳೂ ಇವೆ. ಇವುಗಳ ಜೊತೆಗೆ ಇದೇ ಮಾದರಿಯಲ್ಲಿ ಬರೆದಿರುವ, ಹೆಸರು ತಿಳಿಯದ ಯಾವುದೋ ಗ್ರಂಥದ ಒಂದು ಪತ್ರಮಾತ್ರ ದೊರೆತಿದೆ. ಅದರ ಅಳತೆ $18'' \times 1\frac{1}{4}$. ಅದರ ಪ್ರತಿ ಪಕ್ಕದಲ್ಲಿ 22 ಪಂಕ್ತಿಗಳೂ, ಪ್ರತಿ ಪಂಕ್ತಿಯಲ್ಲಿಯೂ 420 ಅಕ್ಷರಗಳೂ ಇವೆ ಎಂದಾಗ ಆಶ್ಚರ್ಯವಾಗುತ್ತದೆ.

ಹೀಗೆ ವಿವಿಧ ರೀತಿಯ ರೇಖಾಚಿತ್ರ ವರ್ಣಚಿತ್ರಗಳಿಂದಲಂಕೃತವಾದ ವೈವಿಧ್ಯಮಯ ಲಿಪಿಗಳನ್ನು ಹೊತ್ತ ಹಲವಾರು ಹಸ್ತಪ್ರತಿಗಳು ದೇಶ ವಿದೇಶಗಳಲ್ಲಿ ದೊರೆಯುತ್ತವೆ.

6ನೆಯ ಶತಮಾನದ ಚಿತ್ರಾಲಂಕೃತ ಹಸ್ತಪ್ರತಿಯೆಂದರೆ ಡಯಾಸ್ಕೋರಿಡಿಸ್ ಎಂಬ ವೈದ್ಯಗ್ರಂಥವಾಗಿದೆ. ಇದು ವಿಯನ್ನದಲ್ಲಿದೆ. ಇದು ಪೂರ್ವ ಕ್ರಿಶ್ಚನ್ ಕಲೆಗೆ ಸೇರಿದುದಾಗಿದ್ದು ಮೂಲಪ್ರತಿಯೇ ಉಳಿದು ಬಂದಿದೆ. ಇಂಥ ಹಸ್ತಪ್ರತಿಗಳು ಇನ್ನೂ ಹಲವಿದ್ದರೂ ಇವುಗಳು ಮೂಲದ ಮರುಪ್ರತಿಗಳಾಗಿದ್ದು ಮಧ್ಯ ಕಾಲಕ್ಕೆ ಸೇರಿದುವಾಗಿವೆ. ಇವುಗಳಲ್ಲಿ ಕಂಡು ಬರುವ ಚಿತ್ರಗಳು ಹೆಲೆನಿಸ್ಟಿಕ್ ಕಲೆಯಿಂದ ಪ್ರೇರಿತವಾದವು.

ಬೈಜಾಂಟಿಯನ್ ಕಲಾಚಿತ್ರಗಳ ಬೆಳವಣಿಗೆ ಹೇಗೆ ಪ್ರಾರಂಭವಾಯಿತೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ಇದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಬೈಜಾಂಟಿಯನ್ ರೆನೇಸಾನ್ಸ್ ಕೃತಿಗಳೆಂದು ಪ್ರಸಿದ್ಧವಿರುವ ಹಸ್ತಪ್ರತಿಗಳು ಪೂರ್ವ ಕ್ರಿಶ್ಚಿಯನ್ ಗ್ರಂಥಗಳ ಮರುಪ್ರತಿಗಳಾಗಿದ್ದು. ಕೆಲವು ಅದನ್ನು ಅನುಸರಿಸಿ ರಚಿಸಿದ ಸ್ವತಂತ್ರ ಕೃತಿಗಳಾಗಿವೆ.

ಇದಲ್ಲದೆ ಕೆಲವು ಹಸ್ತಪ್ರತಿಗಳು ಪಶ್ಚಿಮ ದೇಶಗಳ ಮೂಲದಿಂದ ಬಂದವುಗಳಾಗಿವೆ. ಇವುಗಳಲ್ಲಿ ಅತ್ಯಂತ ಮುಖ್ಯವಾದುವೆಂದರೆ ಕೇಂಬ್ರಿಜ್‌ನ ಕಾರ್ಪಸ್ ಕ್ರಿಸ್ಟಿಯಲ್ಲಿರುವ ಸೇಂಟ್ ಅಗಸ್ಟಿನ್ಸ್ ಗಾಸ್ಪೆಲ್ಸ್ ಎಂಬುದಾಗಿದೆ. ಬಿಬ್ಲಿಯೋತಿಕ್ ನ್ಯಾಷನಲ್‌ನಲ್ಲಿರುವ ಆಷ್‌ಬರ್ನ್ ಹ್ಯಾಮ್ ಪೆಂಟಾಟೆಂಚ್ ಎಂಬುದು ಬೇರೆ ರೀತಿಯದಾಗಿದ್ದು ಅದರಲ್ಲಿನ 19 ಸೂಕ್ಷ್ಮ ಚಿತ್ರಗಳು ಪ್ರಾಚೀನ ಶೈಲಿಯಲ್ಲಿವೆ.

ಪಶ್ಚಿಮ ಯುರೋಪಿನ 7 ಮತ್ತು 8ನೆಯ ಶತಮಾನಗಳ ಕೆಲವು ಹಸ್ತಪ್ರತಿಗಳು ಚಿತ್ರಾಲಂಕರಣಕ್ಕೆ ಪ್ರಸಿದ್ಧವಿವೆ. ಇವುಗಳಲ್ಲಿ 675 ರ ಡರೋ ಎಂಬುದು 7 ನೆಯ ಶತಮಾನದ ಐರಿಷ್ ಮತ್ತು ಸ್ಯಾಕ್ಸನ್ ಲೋಹಕಲೆಯನ್ನು ಹೋಲುವುದಾಗಿದೆ. ಲಿಂಡಿಸ್ ಫಾರ್ನ್ ಗಾಸ್ಪೆಲ್ಸ್ ಎಂಬುದು 258 ಪತ್ರಗಳಿಂದ ಕೂಡಿದ್ದು 7 ನೆಯ ಶತಮಾನದ ಕೊನೆಯದಾಗಿದ್ದು ಇದುವರೆಗೂ ಉಳಿದುಬಂದಿದೆ. ಇದರಲ್ಲಿ ಕಂಡುಬರುವ ಸುಂದರ ಅಲಂಕೃತ ಚಿತ್ರಗಳು ಪ್ರಸಿದ್ಧ ಈಡ್ ಫ್ರಿತ್ ಎಂಬ ಕಲೆಗಾರನಾಗಿವೆ. ಈತ ಬ್ರಿಟಿಷ್ ದ್ವೀಪಗಳ ಕಲಾ ಇತಿಹಾಸದಲ್ಲಿ ಕಂಡುಬರುವ ಮೊದಲ ಕಲೆಗಾರನಾಗಿದ್ದಾನೆ. ಕೆಲ್ಸ್ ಎಂಬುದು ಮತ್ತೊಂದು ವೆಲ್ಲಮ್ ವಸ್ತುವಿನದಾಗಿದ್ದು ಉಳಿದವುಗಳಂತೆಯೇ ಕ್ರೈಸ್ತ ಧಾರ್ಮಿಕ ಗ್ರಂಥವಾಗಿದೆ. ಇದರಲ್ಲಿ ಕಂಡುಬರುವ ಕಲೆ ಮೇಲೆ ಹೇಳಿದ ಎರಡು ಗ್ರಂಥಗಳಿಂದಲೇ ಪ್ರೇರಿತವಾದುದಾದರೂ ಅಲ್ಲಿಗಿಂತ ಹೆಚ್ಚು ಸೂಕ್ಷ್ಮವಾಗಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಹಾಳೆಗಳು ಉಜ್ವಲಾಲಂಕಾರದಿಂದ ಕೂಡಿದ್ದು ವರ್ಣರಂಜಿತ ವಾಗಿವೆ.



**ಓಲೆಯ ಮೇಲೆ ರೂಪಿಸಿದ ಚಿತ್ರಗಳು**

ಹೀಗೆಯೇ ಕ್ಯಾರೋಲಿಂಜಿಯನ್ ಕಾಲದ ಕಲಾವಸ್ತುಗಳಲ್ಲಿ ಹಸ್ತಪ್ರತಿಗಳು ಪ್ರಸಿದ್ಧ ವಾದುವಾಗಿವೆ. 9 ನೆಯ ಶತಮಾನದ ಮಧ್ಯಭಾಗದ ವಿವಿಯನ್ ಬೈಬಲ್ ಎಂಬುದು ಟೂರ್ಸ್ ಕಲಾಶಾಲೆಗೆ ಸೇರಿದುದಾಗಿದ್ದು ಲಿಪಿ ಹಾಗೂ ವಿಷಯ ನಿರೂಪಣಾ ಚಿತ್ರಗಳಿಗೆ ಪ್ರಸಿದ್ಧವಾಗಿದೆ.

ಲೀಬನದ ಬೀಟಸ್ ಎಂಬ ಸ್ಪೇನಿನ ಸಂನ್ಯಾಸಿಯಿಂದ 770 ರಲ್ಲಿ ರಚಿತವಾದ ಕಾಮೆಂಟರಿ ಆಫ್ ದಿ ಅಪೋಕಲಿಪ್ಸ್ ಎಂಬುದರ ಮರು ಹಸ್ತಪ್ರತಿಗಳು ವರ್ಣರಂಜಿತ ಚಿತ್ರಗಳಿಗೆ ಹೆಸರುವಾಸಿಯಾಗಿವೆ. ಮೂಲ ಹಸ್ತಪ್ರತಿಯ ಅನಂತರ ಮೂರು ಶತಮಾನಗಳವರೆಗೆ ಈ ಹಸ್ತಪ್ರತಿಯ ನಕಲುಗಳು ತಯಾರಾಗಿವೆ. ಇವುಗಳ ಪ್ರಭಾವ ಯುರೋಪು ಖಂಡದ ಎಲ್ಲ ಕಲಾ ಸಂಪ್ರದಾಯಗಳ ಮೇಲೂ ಆಗಿರುವುದು ಕಂಡುಬರುತ್ತದೆ. ಇವುಗಳಲ್ಲಿ ಉಳಿದುಬಂದಿರುವ 24 ಹಸ್ತಪ್ರತಿಗಳ ಕಾಲ 926 ರಷ್ಟು ಹಿಂದಕ್ಕೆ ಹೋಗುತ್ತದೆ. 13ನೆಯ ಶತಮಾನದ ಧಾರ್ಮಿಕ ಗ್ರಂಥಗಳು ವೈಯಕ್ತಿಕ ಉಪಯೋಗಕ್ಕಾಗಿ ರಚಿತವಾಗಿದ್ದು ಸುಂದರವಾದ ಸೂಕ್ಷ್ಮ ಚಿತ್ರಗಳಿಂದ ಕೂಡಿದುವಾಗಿವೆ.

15ನೆಯ ಶತಮಾನದಲ್ಲಿ ಅಚ್ಚಿನ ಸಾಧನ ಬಂದು, ಅದರ ಮೂಲಕ ಚಿತ್ರಗಳನ್ನು ಹಾಕುವುದು ರೂಢಿಗೆ ಬಂದಮೇಲೆ ಹಸ್ತಪ್ರತಿಗಳ ಚಿತ್ರಗೆಲಸ ಕಡಿಮೆಯಾಗುತ್ತ ಬಂತು.
(ಎಸ್.ಬಿ.ಎಸ್.)

**ಚಿತ್ಸುಖ :** ತತ್ತ್ವಪ್ರದೀಪಿಕಾ ಎಂಬ ಖ್ಯಾತ ಗ್ರಂಥದ ಕರ್ತೃ. ಅದ್ವೈತದ ವಾದಭೂಮಿಕೆಯಲ್ಲಿ ಈತನ ಹೆಸರು ಪ್ರಮುಖವಾದುದು. ಈತ 13ನೆಯ ಶತಮಾನದ ಆದಿಭಾಗದಲ್ಲಿದ್ದನೆಂದು ತಿಳಿದುಬರುತ್ತದೆ. ಈತನ ಗುರು ಜ್ಞಾನೋತ್ತಮ. ಈತನ ಬಹು ಮುಖ್ಯ ಗ್ರಂಥ ತತ್ತ್ವಪ್ರದೀಪಿಕಾ. ಇದನ್ನು ಚಿತ್ಸುಖೀ ಎಂದೇ ಕರೆಯುವುದು ರೂಢಿಯಲ್ಲಿದೆ. ಇವನ ಇತರ ಗ್ರಂಥಗಳು ಹೀಗಿವೆ: ಆನಂದಬೋಧಾಚಾರ್ಯರ ನ್ಯಾಯ ಮಕರಂದ ಮತ್ತು ಶ್ರೀಹರ್ಷನ ಖಂಡನಖಂಡಖಾದ್ಯ ಎನ್ನುವುದರ ಮೇಲಿನ ಭಾಷ್ಯಗಳು. ಅಲ್ಲದೆ ಶಂಕರಾಚಾರ್ಯರು ಬ್ರಹ್ಮಸೂತ್ರಗಳ ಮೇಲೆ ಬರೆದ ಭಾಷ್ಯದ ಮೇಲೆ ಭಾಷ್ಯ ಭಾವಪ್ರಕಾಶಿಕಾ, ಮಂಡನಮಿಶ್ರರಚಿತವಾದ ಬ್ರಹ್ಮಸಿದ್ಧಿ ಎನ್ನುವುದರ ಮೇಲೆ ಅಭಿಪ್ರಾಯಪ್ರಕಾಶಿಕಾ ಎಂಬ ಎರಡು ಗ್ರಂಥಗಳು. ಈತನ ಸ್ವತಂತ್ರಗ್ರಂಥಗಳೆಂದರೆ–ವಿವರಣತಾತ್ಪರ್ಯದೀಪಿಕಾ ಮತ್ತು ಬ್ರಹ್ಮಸೂತ್ರಗಳ ಮೇಲಿನ ಅಧಿಕರಣಮಂಜರೀ ಎನ್ನುವವು.

ಶ್ರೀಹರ್ಷನ ಖಂಡನಖಂಡಖಾದ್ಯ ಚಿತ್ಸುಖನಿಗೆ ಬಲು ಇಷ್ಟ ಆತನ ವಾದಸರಣಿಯನ್ನೇ ಉಪಯೋಗಿಸಿಕೊಂಡು ಮತ್ತು ಮುಂದುವರಿಸಿಕೊಂಡು ಅದ್ವೈತ ದೃಷ್ಟಿಯನ್ನು ಬಲಪಡಿಸುವ ವಾದಗಳನ್ನು ಈತ ಮುಂದಿಡುತ್ತಾನೆ. ತತ್ತ್ವಪ್ರದೀಪಿಕೆಯಲ್ಲಿ ನ್ಯಾಯಸಿದ್ಧಾಂತದ ವಿಮರ್ಶೆಯ ರೂಪದಲ್ಲಿ ಅದ್ವೈತದ ಮುಖ್ಯ ಪ್ರಣಾಳಿಕೆಗಳನ್ನು ಸ್ಥಿರಗೊಳಿಸುತ್ತಾನೆ. ಆತ್ಮತತ್ತ್ವದ ಸ್ವಪ್ರಕಾಶದ ವಿಚಾರದಲ್ಲಿ ಈತನದು ಅಧಿಕಾರವಾಣಿಯಾಗಿ ಇಂದೂ ಮಾನ್ಯವಾಗಿದೆ. ತತ್ತ್ವಪ್ರದೀಪಿಕೆ ನಾಲ್ಕು ಅಧ್ಯಾಯಗಳ ಪ್ರಕರಣ ಗ್ರಂಥ ಎನ್ನಬಹುದು. ಮೊದಲ ಅಧ್ಯಾಯದಲ್ಲಿ ಆತ್ಮ ಅಥವಾ ಚೈತನ್ಯದ ಲಕ್ಷಣವನ್ನೂ ಅವಿದ್ಯೆಯ ಸ್ವಭಾವವನ್ನೂ ವಿವರಿಸಲಾಗಿದೆ. ಎರಡನೆಯದರಲ್ಲಿ ನ್ಯಾಯಸಿದ್ಧಾಂತವಿಮರ್ಶೆ ಮುಖ್ಯಸ್ಥಾನ ಪಡೆದಿದೆ. ಮೂರನೆಯದರಲ್ಲಿ ಬ್ರಹ್ಮಸಾಕ್ಷಾತ್ಕಾರದ ಬಗೆ ಮತ್ತು ಜ್ಞಾನದ ಮೂಲಕ ಅದರ ಸಾಧ್ಯತೆಗಳನ್ನೂ ತಿಳಿಸಿದೆ. ನಾಲ್ಕನೆಯದರಲ್ಲಿ ಅಂತಿಮ ಗುರಿಯಾದ ಮೋಕ್ಷದ ವಿಚಾರವಿದೆ. (ಕೆ.ಬಿ.ಆರ್.)

**ಚಿದಂಬರಂ :** ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಒಂದು ಪಟ್ಟಣ. ಚೆನ್ನೈನಿಂದ ದಕ್ಷಿಣ ನೈಋತ್ಯಕ್ಕೆ 196 ಕಿಮೀ ದೂರದಲ್ಲಿ ವೆಳ್ಳಾರ್ ಮತ್ತು ಕೊಲರೂನ್ ನದೀಮುಖಗಳ ನಡುವಣ ಬತ್ತದ ಬಯಲಿನಲ್ಲಿ ಬಂಗಾಲ ಕೊಲ್ಲಿಗೆ ಕೆಲವೇ ಕಿಮೀಗಳ ದೂರದಲ್ಲಿ ಇದೆ. ಜನಸಂಖ್ಯೆ 82,458 (2011). ಊರಿಗೆ ಅತ್ಯಂತ ಸಮೀಪದಲ್ಲೇ, ಪುರಾತನ ತೀರ್ಥಕ್ಷೇತ್ರವೆನಿಸಿದ ಸ್ಥಳದಲ್ಲಿ, 1929ರಲ್ಲಿ ಸ್ಥಾಪಿತವಾದ ಅಣ್ಣಾಮಲೈ ವಿಶ್ವವಿದ್ಯಾಲಯವಿದೆ. ಚಿದಂಬರಂನಲ್ಲಿ ನೇಕಾರಿಕೆ ಮುಖ್ಯ ಕಸುಬು. ತಮಿಳುನಾಡಿನ ಯಾತ್ರಾಸ್ಥಳಗಳಲ್ಲಿ ಶ್ರೀರಂಗಮ್ ಮತ್ತು ಮಧುರೈಗಳನ್ನು ಬಿಟ್ಟರೆ ಇದೇ ಅತ್ಯಂತ ಪ್ರಖ್ಯಾತ ಯಾತ್ರಾಸ್ಥಳ. ಇಲ್ಲಿ ನಟರಾಜನ ದೇವಾಲಯವಿದೆ. ಶೈವಸಾಹಿತ್ಯದಲ್ಲಿ ಇದು ಕೋಯಿಲ್ ಎಂದು ಪ್ರಸಿದ್ಧವಾಗಿದೆ. ಈ ದೇವಾಲಯಕ್ಕೆ ಯಾವ ವಿಧವಾದ ಆಸ್ತಿಯಾಗಲಿ, ಸರ್ಕಾರದಿಂದ ಬರುವ ಆದಾಯವಾಗಲಿ ಇಲ್ಲ. ದೀಕ್ಷಿತರೆಂಬ ಬ್ರಾಹ್ಮಣ ಕುಲದ ಗುಂಪಿಗೆ ಈ ದೇವಾಲಯದ ಒಡೆತನವೂ ಇದರ ಮೇಲಿನ ಎಲ್ಲ ಹಕ್ಕುಗಳೂ ಸೇರಿವೆ. ಬಹು ಹಿಂದಿನಿಂದಲೂ ಗರ್ಭಗೃಹದವರೆಗೂ ಎಲ್ಲರಿಗೂ ಮುಕ್ತವಾಗಿರುವ ದಕ್ಷಿಣ ಭಾರತದ ಕೆಲವೇ ದೇವಾಲಯಗಳಲ್ಲಿ ಇದೂ ಒಂದು

ಸಂಗಮ್ ಸಾಹಿತ್ಯದಲ್ಲಿ ಚಿದಂಬರದ ಉಲ್ಲೇಖವಿಲ್ಲದ್ದರೂ 7–10 ನೆಯ ಶತಮಾನಗಳ ಶೈವ ಸಂತರ ಸ್ತೋತ್ರಗಳನ್ನು ಪರಿಶೀಲಿಸಿದಾಗ ಆ ವೇಳೆಗಾಗಲೇ ಅದು ಪ್ರಸಿದ್ಧಿ ಪಡೆದಿತ್ತೆಂಬುದು ತಿಳಿಯುತ್ತದೆ. ಚಿಟ್ರಂಬಲಮ್ (ಸಣ್ಣ ಆಲಯ ಅಥವಾ ಸಭಾಮಂಟಪ), ತಿಲ್ಲೈ (ತಿಲ್ಲೈ ಮರಗಳ ತೋಪು), ಪೊನ್ನಂಬಲಮ್ (ಸ್ವರ್ಣಾಲಯ), ಪೆರುಂಬಟ್ರಪುಲಿಯೂರ್ (ದೊಡ್ಡ ಹಲ್ಲುಗಳುಳ್ಳ ಹುಲಿಯ ಊರು) ಎಂದೆಲ್ಲ ಈ ಸ್ತೋತ್ರಗಳಲ್ಲಿ ಶೈವಸಂತರು ಚಿದಂಬರವನ್ನು ಸ್ತುತಿಸಿದ್ದಾರೆ. ಇಲ್ಲಿ ವಿಷ್ಣುವಿನ ಆಲಯವೂ ಒಂದು ಉಂಟು. ಇದನ್ನು ತಿರುಮಂಗೈ ಆಳ್ವಾರರೂ ಕುಲಶೇಖರರೂ ತಮ್ಮ ಸ್ತೋತ್ರಗಳಲ್ಲಿ ತಿರುಚಿತ್ರಕೂಟಮ್ ಎಂದು ವರ್ಣಿಸಿದ್ದಾರೆ. ಈ ಎರಡೂ ಆಲಯಗಳು ಪರಸ್ಪರ ಅತಿ ಸಮೀಪದಲ್ಲಿವೆ. ಮಾಣಿಕ್ಯ ವಾಚಕರೂ ಹಾಗೆ ಹೇಳಿದ್ದಾರೆ. ವಿಷ್ಣುವಿನ ಆಲಯವನ್ನು ಮಾಣಿಕ್ಯವಾಚಕರು ಗೋವಿಂದರಾಜ ಸನ್ನಿಧಿ ಎಂದು ಕರೆಯುತ್ತಾರೆ.

ಇಲ್ಲಿಯ ಸ್ಥಳಪುರಾಣಗಳಲ್ಲಿ ಪತಂಜಲಿ ಮತ್ತು ವ್ಯಾಘ್ರಪಾದಮಹರ್ಷಿಗಳಿಗೂ ಈ ಸ್ಥಳಕ್ಕೂ ಸಂಬಂಧ ಕಲ್ಪಿಸಲಾಗಿದೆ. ಸಿಂಹವರ್ಮನೆಂಬ ಅರಸ ಕುಷ್ಠರೋಗಪೀಡಿತನಾಗಿದ್ದು ಚಿದಂಬರಂ ದೇವಾಲಯದ ಕೊಳದಲ್ಲಿ ಮಿಂದು ಸ್ವರ್ಣದೇಹವನ್ನು ಪಡೆದನೆಂಬುದೊಂದು ಸಾಂಪ್ರದಾಯಿಕ ಕತೆ. ಪಲ್ಲವರ ಅರಸನೊಬ್ಬ ಚಿದಂಬರದ ಶಿವನ ಭಕ್ತನೆಂದು ಶೈವಸಂತರಾದ ಸುಂದರರ್ ಹೇಳಿದ್ದಾರೆ. ಇಲ್ಲಿಯ ವಿಷ್ಣು ದೇವಾಲಯಕ್ಕೆ ಪಲ್ಲವ ಅರಸನೊಬ್ಬ ದಾನಗಳನ್ನು ಮಾಡಿದನೆಂದು ತಿರುಮಂಗೈ ಆಳ್ವಾರರು ಹೇಳಿದ್ದಾರೆ. ಚೋಳರ 1ನೆಯ ಆದಿತ್ಯ (871–907) ಮತ್ತು 1ನೆಯ ಪರಾಂತಕರು (907–955) ದೇವಾಲಯದ ಗರ್ಭಗೃಹಕ್ಕೆ ಚಿನ್ನ ಮುಲಾಮನ್ನು ಮಾಡಿಸಿದಂತೆ ಕಂಡುಬರುತ್ತದೆ. ರಾಜರಾಜ ಚೋಳನ (955–1016) ಕಾಲದಲ್ಲಿ ದೇವಾಲಯದಲ್ಲಿ ಮುಚ್ಚಿದ್ದ ಒಂದು ಕೋಣೆಯಲ್ಲಿ ಕಳೆದುಹೋಯಿತೆಂದು ಭಾವಿಸಲಾಗಿದ್ದ ತೇವಾರಮ್‌ನ ತಾಡವೋಲೆ ಪ್ರತಿ ನಂಬಿ ಅಂಡಾಲ್ ನಂಬಿಗೆ ದೊರೆಯಿತಂತೆ. ಚೋಳರ 1ನೆಯ ರಾಜೇಂದ್ರ ರಾಜಧಾನಿಯನ್ನು ಸಮೀಪದ ಗಂಗೈಕೊಂಡಚೋಳಪುರಕ್ಕೆ ಬದಲಾಯಿಸಿದಾಗ ಚೋಳ ಅರಸರು ಚಿದಂಬರದ ದೇವಾಲಯದೊಡನೆ ಹೆಚ್ಚಿನ ಸಂಬಂಧ ಪಡೆಯುವಂತಾಯಿತು. ಅವರಲ್ಲಿಯೂ 1ನೆಯ ಕುಲೋತ್ತುಂಗ ಅಧಿಕಾರಕ್ಕೆ ಬಂದಾಗಿನಿಂದ (1070) ಚಿದಂಬರದ ಇತಿಹಾಸ ಚೋಳರ ಇತಿಹಾಸವೆನಿಸಿಕೊಂಡಿತು.

ಮಾಣಿಕ್ಯ ವಾಚಕರ ತಿರುವಾಚಕಂ ತಿರುಚಿಟ್ರಂಬಲಮ್‌ಗಳು ಚಿದಂಬರದ ತಿಲ್ಲೈಯಲ್ಲಿ ರಚಿತವಾದವು. ಶೇಕ್ಕಿಳಾರ್‌ರವರ ತಿರುತ್ತೊಂಡರ್ ಪುರಾಣಂ (ಪೆರಿಯ–ಪುರಾಣಂ) ಚಿದಂಬರದ ಸಾವಿರ ಕಂಬಗಳ ಮಂಟಪದಲ್ಲಿ ಇಮ್ಮಡಿ ಕುಲೋತ್ತುಂಗನ(1133–1150) ಕಾಲದಲ್ಲಿ ರಚಿತವಾಯಿತೆಂದು ಪ್ರತೀತಿ.

ನಟರಾಜ ದೇವಾಲಯದ ಉತ್ತರದ ಗೋಪುರ

ದೇವಾಲಯ ಬಹಳಮಟ್ಟಿಗೆ 12–13ನೆಯ ಶತಮಾನಗಳಲ್ಲಿ ವಿಸ್ತೃತಗೊಂಡಿತು. ಮೊದಲಿನ ಚೋಳರ ಶಾಸನಗಳು ಕೆಲವು ಇಲ್ಲಿ ದೊರೆತಿವೆ. ಆದರೆ ಅವು ಮೊದಲಿದ್ದ ಸ್ಥಳದಲ್ಲೇ ಇರದೆ ಜೀರ್ಣೋದ್ಧಾರ ಸಮಯದಲ್ಲಿ ಸ್ಥಾನಪಲ್ಲಟವಾಗಿರುವ ಕಾರಣ, ಅವುಗಳಲ್ಲಿ ಉಲ್ಲೇಖವಾಗಿರಬಹುದಾದ ಕಟ್ಟಡಗಳು ಯಾವುವು ಎಂದು ಹೇಳಲಾಗದು. ವಿಜಯನಗರದ ಕಾಲದಲ್ಲಿಯಾಗಲಿ, ಮಧುರೆಯ ನಾಯಕರ ಕಾಲದಲ್ಲಿಯಾಗಲಿ ಯಾವ ಹೊಸ ಕಟ್ಟಡವು ಕಟ್ಟಲ್ಪಡಲಿಲ್ಲ. ಉತ್ತರದ ಗೋಪುರವನ್ನು ಮಾತ್ರ ಕೃಷ್ಣದೇವರಾಯ ಕಳಿಂಗದೇಶದ ತನ್ನ ವಿಜಯದ ಸ್ಮಾರಕವಾಗಿ ಕಟ್ಟಿಸಿದ. ಆದರೆ ವಾಸ್ತವಿಕವಾಗಿ ಇದಕ್ಕೂ ಮೊದಲೇ ಗೋಪುರದ ಸ್ವಲ್ಪಭಾಗ ಕಟ್ಟಲ್ಪಟ್ಟು ಅಸಂಪೂರ್ಣವಾಗಿ ಅದರ ಕಟ್ಟಡವನ್ನು ನಿಲ್ಲಿಸಲಾಗಿತ್ತು. ಆದರೆ ಈ ಶತಮಾನದ ಆರಂಭದಲ್ಲಿ ನಾಕುಕೋಟಿ ಚೆಟ್ಟಿಗಳು ಜೀರ್ಣೋದ್ಧಾರದ ಹೆಸರಿನಲ್ಲಿ ಅನೇಕ ಹೊಸ ಕಟ್ಟಡಗಳನ್ನು ಕಟ್ಟಿದ್ದಾರೆ. ಇವುಗಳ ಪರಿಣಾಮವಾಗಿ ಮೊದಲಿನ ವಿನ್ಯಾಸವೇ ಬದಲಾಗಿದೆ. ಸಾಧಾರಣವಾಗಿ ಗರ್ಭಗೃಹವು ದೇವಾಲಯದ ಹಿಂದಿನ ಭಾಗದಲ್ಲಿದ್ದು ಇತರ ಎಲ್ಲ ದ್ವಾರಗಳೂ ಅದರ ಮುಂದಿರಬೇಕು. ಈ ಗೋಪುರಗಳಲ್ಲಿ ಯಾವುದೂ ಇತರ ದೇವಾಲಯಗಳಲ್ಲಿದ್ದಂತೆ ಗರ್ಭಗೃಹಕ್ಕೆ ಸಮಾನಾಂತರ ರೇಖೆಯಲ್ಲಿ ಇಲ್ಲ. ದಕ್ಷಿಣದ ಗೋಪುರವನ್ನು ಗಮನಿಸಿದಾಗ ದೇವಾಲಯ ದಕ್ಷಿಣಾಭಿಮುಖವಾಗಿದ್ದಿರಬೇಕೆನಿಸುತ್ತದೆ. ಹಾಗಾದರೆ ಉಳಿದ ಎಲ್ಲ ಕಟ್ಟಡಗಳೂ ಗರ್ಭಗೃಹದ ಹಿಂದೆ ಹರಡಿದಂತಾಗುತ್ತದೆ.

ಇಲ್ಲಿ ಮುಖ್ಯವಾದ್ದು ಚಿತ್ಸಭೆ ಮತ್ತು ಕನಕಸಭೆ. ಚಿತ್ಸಭೆಯ ಮೂರು ಕಡೆ ಮರದಿಂದ ಮಾಡಿದ ಗೋಡೆಗಳಿವೆ. ನಟರಾಜವಿಗ್ರಹವೂ ಆಕಾಶಲಿಂಗವೂ ಇರುವುದು ಇದರೊಳಗಡೆಯ ಗರ್ಭಗೃಹದಲ್ಲಿ. ಆದರೆ ದೇವರಿಗೆ ಉತ್ಸವಗಳೂ ಕೈಂಕರ್ಯಗಳೂ ನಡೆಯುವುದು ಕನಕಸಭೆಯಲ್ಲಿ.

ದೇವಾಲಯದ ನಾಲ್ಕುಗೋಪುರಗಳಲ್ಲಿ ದಕ್ಷಿಣದ ಗೋಪುರದ ಕಟ್ಟಡವನ್ನು ಪಾಂಡ್ಯರ ದೊರೆ ಜಟಾವರ್ಮ ಸುಂದರಪಾಂಡ್ಯ 12–13ನೆಯ ಶತಮಾನಗಳಲ್ಲಿ ಮುಗಿಸಿದ. ಪೂರ್ವ ಮತ್ತು ಪಶ್ಚಿಮದ ಗೋಪುರಗಳನ್ನು ಜಟಾವರ್ಮ ಸುಂದರಪಾಂಡ್ಯನ ಕಾಲದಲ್ಲಿ ಮುಗಿಸಲಾಯಿತಾದರೂ ಅದು ಆರಂಭವಾದ್ದು 12ನೆಯ ಶತಮಾನದ ಮಧ್ಯಭಾಗದಲ್ಲಿ.

ದೇವಾಲಯದ 3ನೆಯ ಪ್ರಾಕಾರದಲ್ಲಿ ಶಿವಗಂಗಾ ಕೊಳ, ನೂರು ಕಂಬಗಳ ಹಾಗೂ ಸಾವಿರ ಕಂಬಗಳ ಮಂಟಪಗಳು ಹಾಗೂ ದೇವಿಯ ಗುಡಿಗಳು ಇವೆ. ಎರಡನೆಯ ಪ್ರಾಕಾರಕ್ಕೆ ಹೆಚ್ಚುಕಡಿಮೆ ಸಂಪೂರ್ಣವಾಗಿ ಚಾವಣಿಯನ್ನು ಹೊದಿಸಲಾಗಿದೆ. ದೇವಸಭೆ, ನೃತ್ಯಸಭೆ, ಮೂಲಸ್ಥಾನ ಹಾಗೂ ನಾಚ್ಚಿಯಾರ್ ಸನ್ನಿಧಿಗಳಿರುವುದು ಈ ಪ್ರಾಕಾರದಲ್ಲಿ.
(ಜಿ.ಬಿ.ಆರ್.; ಎಂ.ಎಲ್.ಎಸ್.)

**ಚಿದಂಬರಯ್ಯ ಹೊಸಕೆರೆ :** 1870–1938. ಧರ್ಮಪ್ರಚಾರಕರು, ಧಾರ್ಮಿಕ ಗ್ರಂಥಕರ್ತೃಗಳು. ಅಂದಿನ ಲೋಯರ್ ಸೆಕಂಡರಿ ಪರೀಕ್ಷೆ ಮುಗಿಸಿ, ದಾವಣಗೆರೆ ಮುಂತಾದ ಸ್ಥಳಗಳಲ್ಲಿ ಮಾಧ್ಯಮಿಕ ಶಾಲಾ ಅಧ್ಯಾಪಕರೂ ಮುಖ್ಯಾಧ್ಯಾಪಕರೂ ಆಗಿ ಕೆಲಸ ಮಾಡಿದರು. ತುಂಬ ದೈವಭಕ್ತರು. ಆಧ್ಯಾತ್ಮಿಗಳು, ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ಸಲ್ಲಿಸಿ ಸಾಧುಗಳಾದ ಗೋಂದಾವಲಿ ಮಹಾರಾಜರ ಮತ್ತು ಕುರ್ತುಕೋಟಿ ಮಹಾಭಾಗವತರಲ್ಲಿ ಸೇವಾನಿರತರಾದರು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳಲ್ಲಿ ಇವರಿಗೆ ಪರಿಶ್ರಮವಿತ್ತು.

ಭಾರತೀಯ ತರುಣರನ್ನು ಪರಧರ್ಮ, ಪರಭಾಷಾ ವ್ಯಾಮೋಹದಿಂದ ಮುಕ್ತರನ್ನಾಗಿಸಿ ಸ್ವಧರ್ಮ ಸ್ವಭಾಷಾ ಪ್ರೇಮಿಗಳನ್ನಾಗಿಸಲು ಧಾರವಾಡದಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಶಿಕ್ಷಣ ಸಮಿತಿಯಲ್ಲಿ ಶಿಕ್ಷಕರಾಗಿ ನೇಮಕಗೊಂಡು ಮಕ್ಕಳಿಗೆ ಧರ್ಮಬೋಧೆ ಮಾಡತೊಡಗಿದರು. ಆಗ್ಗೆ ಧಾರ್ಮಿಕ ಗ್ರಂಥಗಳು ಕನ್ನಡದಲ್ಲಿ ತುಂಬ ವಿರಳವಾಗಿದ್ದುವು. ಸಂಸ್ಕೃತದಲ್ಲಿದ್ದ ಧಾರ್ಮಿಕಪ್ರೌಢಗ್ರಂಥಗಳ ವ್ಯಾಸಂಗ ನಡೆಸಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವುದು ಕಠಿಣ ಕಾರ್ಯವೇ ಆಗಿದ್ದ ಅಂಥ ಸಮಯದಲ್ಲಿ ಧರ್ಮಕ್ಕೆ ಸಂಬಂಧಿಸಿದಂತೆ ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದರು. ಕೆಲವು ಭಾಷಾಂತರಗಳು, ಕೆಲವು ಟೀಕೆಗಳು, ಮತ್ತೆ ಕೆಲವು ಸ್ವತಂತ್ರ ಕೃತಿಗಳು. ಗೀತೆ, ವೇದ, ಉಪನಿಷತ್ತು ಮತ್ತು ಪುರಾಣಗಳ ಧರ್ಮಸೂತ್ರಗಳನ್ನು ಸರಳವಾಗಿ ಹಲವಾರು ಉಪಕತೆಯೊಂದಿಗೆ, ಕನ್ನಡ ಪ್ರಾಚೀನ ಕವಿಗಳ, ಕಾವ್ಯಗಳ ಉದಾಹರಣೆಗಳೊಂದಿಗೆ ಕನ್ನಡಕ್ಕೆ ತಂದರು. ಇವರ ವ್ಯಾಖ್ಯಾನ ಅಬಾಲವೃದ್ಧರಿಗೂ ತಿಳಿಯುವಂಥದು. ಶೈಲಿ ಸರಳ, ಗ್ರಂಥರಚನೆ, ಪ್ರಕಾಶನಗಳ ಜೊತೆಗೆ ಪರಮಾರ್ಥ ಮತ್ತು ಭಕ್ತಬಂಧು ಎಂಬ ಎರಡು ಮಾಸಪತ್ರಿಕೆಗಳನ್ನು ಇವರು ನಡೆಸುತ್ತಿದ್ದರು. ಬೆಂಗಳೂರಿನಲ್ಲಿ ಕೀರ್ತನಕಾರರ ಸಮ್ಮೇಳನ ನಡೆಸಿ, ಕೀರ್ತನ ಕಾರ್ಯವನ್ನು ಶಾಸ್ತ್ರೀಯಗೊಳಿಸಲು ಪ್ರಯತ್ನಿಸಿದರು. ಮಾದರಿಯಾಗಿ ಹಲವು ಕೀರ್ತನಗ್ರಂಥಗಳನ್ನು ರಚಿಸಿದರು.

ಇವರ ಧಾರ್ಮಿಕ ಶ್ರದ್ಧೆ ಮತ್ತು ಕರ್ತವ್ಯ ಇವರಿಗೆ ಕರ್ನಾಟಕ ಕವಿರತ್ನ ಎಂಬ ಬಿರುದನ್ನು ತಂದುಕೊಟ್ಟಿತು. ಶಾಲೆಗಳಲ್ಲಿ ಕಲಿತದ್ದು ಅಲ್ಪವಾದರೂ ಸ್ವಂತ ಪರಿಶ್ರಮದಿಂದ ಮಹಾಜ್ಞಾನಿಗಳೆನಿಸಿಕೊಂಡು ಜ್ಞಾನದಾನದಲ್ಲೇ ತಮ್ಮ ಬಹುಭಾಗ ಜೀವನವನ್ನು ಕಳೆದ ಇವರು ತಮ್ಮ 68ನೆಯ ವಯಸ್ಸಿನವರೆಗೂ ತಿರುಮಕೂಡಲು ನರಸೀಪುರದ ನದೀತೀರದಲ್ಲಿ ಇದ್ದುಕೊಂಡು ಗ್ರಂಥರಚನೆ ನಡೆಸುತ್ತ 1938ರಲ್ಲಿ ವೈಕುಂಠವಾಸಿಗಳಾದರು.

ಚಿದಂಬರಯ್ಯನವರು ರಚಿಸಿದ ಗ್ರಂಥಗಳ ಸಂಖ್ಯೆ ಅಪಾರ, ಅಂತೆಯೇ ವೈವಿಧ್ಯಮಯ. ಗದ್ಯ, ಪದ್ಯ, ನಾಟಕ, ಟೀಕೆ ಮುಂತಾದವುಗಳಲ್ಲೆಲ್ಲ ಇವರು ಕೈಯಾಡಿಸಿದ್ದಾರೆ. ಉಪಾಧ್ಯಾಯ ವೃತ್ತಿಯ ತಮ್ಮ ಅನುಭವಗಳನ್ನು, ಆ ಕ್ಷೇತ್ರದ ಕುಂದುಕೊರತೆಗಳನ್ನು ಆಧರಿಸಿಕೊಂಡು ಕೆಲವು ಗ್ರಂಥ ರಚಿಸಿದ್ದಾರೆ. ಮನಃ ಶಿಕ್ಷಣ, ಬೋಧನ ಸ್ವಭಾವ, ಬೋಧನಕ್ರಮ, ಉಪಾಧ್ಯಾಯರ ಯೋಗ್ಯತೆಗಳು, ಗಣಿತಾಬ್ಜ ಭಾಸ್ಕರ – ಇವು ಅವುಗಳಲ್ಲಿ ಕೆಲವು. ಕುರ್ತಕೋಟಿ ಮಹಾಭಾಗವತರ ಉಪನ್ಯಾಸಗಳನ್ನೆಲ್ಲ ಸಂಗ್ರಹಿಸಿ ಭಗವದ್ಗೀತಾಸಾರವೆಂಬ ಗ್ರಂಥವನ್ನೂ, ಮರಾಠಿಯ ಮನಾಚೇ ಶ್ಲೋಕವೆಂಬ ಗ್ರಂಥವನ್ನು ಆಧರಿಸಿ ಮನಸ್ಸಿಗುಪದೇಶವೆಂಬ ಕನ್ನಡ ಗ್ರಂಥವನ್ನೂ ಪ್ರಕಟಿಸಿದ್ದಾರೆ.

ನೀತಿಗಳ ನೆಲಗಟ್ಟು, ಗುಣನಿರೂಪಣೆ, ಭರತನ ಬಂಧುಪ್ರೇಮ–ಮುಂತಾದ ನೀತಿಗ್ರಂಥಗಳನ್ನೂ ಸುಧರ್ಮ ಪ್ರಭಾವ, ಕಲಿಸಂಕರಣ, ಕೃಷ್ಣಮಹೇಶ್ವರಿ, ನವೀನಕಲ್ಪ, ಚೂಡಾಲೆ–ಮುಂತಾದ ನಾಟಕಗಳನ್ನೂ ವಿದ್ಯಾರಣ್ಯ ಕಾವ್ಯ, ಪರಮಾತ್ಮ ಸ್ತುತಿ, ಗುರುಸ್ತುತಿ–ಮುಂತಾದ ಸ್ತೋತ್ರ ಗ್ರಂಥಗಳನ್ನೂ ಅನೇಕ ಕೀರ್ತನೆಗಳನ್ನೂ ಸಂಗೀತಕ್ಕೆ ಅಳವಡಿಸಿ ಭಕ್ತಿಗೀತಾವಳಿ ಗ್ರಂಥವನ್ನೂ ಹರಿಕಥೆ ನಡೆಸುವವರಿಗೆ ಮಾರ್ಗದರ್ಶನವಾಗುವಂತೆ ಕೀರ್ತನೆ ಕಂಠಾಭರಣ ಮುಂತಾದ ಕೀರ್ತನ ಗ್ರಂಥಗಳನ್ನೂ ಇವರು ರಚಿಸಿದ್ದಾರೆ. ಜ್ಞಾನಪ್ರಧಾನವಾದ ಗೀತಾರ್ಥಚಂದ್ರಿಕೆ, ಪಂಚದಶೀ ತತ್ತ್ವಾರ್ಥ, ವೇದಾಂತ ರೂಪರೇಖೆ, ಮಾಂಡೂಕ್ಯ ಸಂವಾದ, ವೇದಾಂತಜೀವನ ಇವೇ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅನುಭವಾಮೃತಕ್ಕೆ ಸಂದರ್ಶನೀ ಎಂಬ ಕನ್ನಡ ಟೀಕೆಯನ್ನೂ ಮಲ್ಲಾರಿ ಮಹಾತ್ಮ್ಯೆ ಟೀಕಾ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳೇ ಅಲ್ಲದೆ ಭರತಖಂಡದ ಜೀವಜ್ಯೋತಿಗಳು. ಮಕ್ಕಳ ಗೀತೆ, ಜೀವನ್ಮುಕ್ತಿ ವಿವೇಕ, ಆರ್ಯಧರ್ಮ ಪ್ರದೀಪ, ಆತ್ಮಶಕ್ತಿಯ ತೇಜಸ್ಸು–ಮುಂತಾದವೂ ಇವರ ಕೃತಿಗಳೇ.

ಆರ್ಯಧರ್ಮ ಪ್ರದೀಪ ಇವರ ಶ್ರೇಷ್ಠ ಗ್ರಂಥಗಳಲ್ಲೊಂದು. ಸುಮಾರು 550 ಪುಟಗಳ ಈ ಗ್ರಂಥ 1924ರಲ್ಲಿ ಮೊದಲು ಮುದ್ರಣಗೊಂಡು ಈಗಾಗಲೇ 3 ಬಾರಿ ಪುನರ್ಮುದ್ರಣಗೊಂಡಿದೆ. ದೇವರು, ಜಗತ್ತು, ಧರ್ಮ, ಅವತಾರ ಮತ್ತು ಜನ್ಮಾಂತರ, ವಿದ್ಯಾರ್ಥಿವೃತ್ತಿ, ಕರ್ಮಯೋಗ, ರಾಜಯೋಗ, ಭಕ್ತಿಯೋಗ, ಜ್ಞಾನಯೋಗ–ಇವನ್ನು ಸೋದಾಹರಣವಾಗಿ, ಹಲವು ಆಕರ್ಷಕ ಕಥೆಗಳೊಂದಿಗೆ ಇಲ್ಲಿ ವಿವರಿಸಿದ್ದಾರೆ. ಪರಿಶಿಷ್ಟವಾಗಿ ವೈದಿಕ ಧರ್ಮದ ಪರಮ ಗ್ರಂಥಗಳಾದ ವೇದಗಳು, ವೇದಾಂಗಗಳು, ಮೀಮಾಂಸೆ, ನ್ಯಾಯಶಾಸ್ತ್ರ, ಧರ್ಮಶಾಸ್ತ್ರ ಮತ್ತು ಪುರಾಣಗಳ ಹಾಗೂ ಕೆಲವು ಮುಖ್ಯ ಮತಭೇದಗಳಾದ ಬೌದ್ಧ, ಜೈನ, ಅದ್ವೈತ, ವಿಶಿಷ್ಟಾದ್ವೈತ , ವೀರಶೈವ, ದ್ವೈತ, ಸಿಖ್ ಮತಗಳ ಬಗ್ಗೆಯೂ ಆರ್ಯಸಮಾಜ, ಯೆಹೂದಿ, ಪಾರ್ಸಿ, ಇಸ್ಲಾಂ ಮತ್ತು ಕ್ರೈಸ್ತ ಮತಗಳ ಬಗ್ಗೆಯೂ ಸ್ಥೂಲ ವಿವರಣೆ ನೀಡಿದ್ದಾರೆ.

1929ರಲ್ಲಿ ಪ್ರಕಟವಾದ ಗೀತಾರ್ಥ ಚಂದ್ರಿಕೆ ಇವರ ಮತ್ತೊಂದು ಜನಪ್ರಿಯ ಗ್ರಂಥ. ಗೀತೆಯ ಬಗ್ಗೆ ಹಲವು ಕನ್ನಡ ವ್ಯಾಖ್ಯಾನ ಗ್ರಂಥಗಳಿದ್ದರೂ ನೂತನ ಮಾದರಿಯಲ್ಲಿ ರಚಿತವಾದ ಈ ಗ್ರಂಥ ತುಂಬ ಜನಪ್ರಿಯವಾಗಿದೆ. ಗೀತೆಯ ಒಂದೊಂದು ಶಬ್ದಕ್ಕೂ ಸೂಕ್ತ ಅರ್ಥ ನೀಡಿ, ವಿವರಣೆ, ಉದಾಹರಣೆಗಳಿಂದ ಗೀತೆಯನ್ನು ಸುಲಭಗ್ರಾಹ್ಯವಾಗಿ ಮಾಡಿದ್ದಾರೆ. ಅವರ ಕೀರ್ತನಗ್ರಂಥಗಳಲ್ಲಿ ಕೀರ್ತನ ಕಂಠಾಭರಣ–ರಾಮಾಯಣ ತುಂಬ ಪ್ರಸಿದ್ಧ ಗ್ರಂಥ. ಸುಮಾರು 225 ಪುಟಗಳ ಈ ಗ್ರಂಥ 1928ರಲ್ಲಿ ಪ್ರಕಟವಾಗಿದೆ. ಇಂದಿಗೂ ಅದು ಕೀರ್ತನಕಾರರಿಗೆ ಕೈದೀಪವಾಗಿದೆ. ಇವರ ಗ್ರಂಥಗಳಲ್ಲಿರುವ ವೈಶಿಷ್ಟ್ಯವೆಂದರೆ ಸಂಸ್ಕೃತ ಕಾವ್ಯಭಾಗಗಳ ಜೊತೆಗೆ ಕನ್ನಡ ಪ್ರಾಚೀನ ಸಾಹಿತ್ಯ ಹಾಗೂ ಕವಿಗಳ ಪದ್ಯಗಳನ್ನು ಧಾರಾಳವಾಗಿ ಉಪಯೋಗಿಸಿಕೊಂಡಿರುವುದು. ಹಲವು ಕನ್ನಡ ಕವಿಗಳ, ವಚನಕಾರರ ಪದ್ಯಗಳಿಗೆ ಸಂಗೀತ ಸ್ವರಸಂಯೋಜನೆ ಮಾಡಿದ್ದಾರೆ. ತಾವೇ ಸ್ವತಃ ಕೆಲವು ಗೀತೆಗಳನ್ನು ರಚಿಸಿದ್ದಾರೆ. ಮರಾಠಿಯಿಂದ ಸಾಕಿ, ದಿಂಡಿ ಛಂದಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಒಟ್ಟಿನಲ್ಲಿ 20ನೆಯ ಶತಮಾನದ ಪೂರ್ವಾರ್ಧದಲ್ಲಿ ಚಿದಂಬರಯ್ಯನವರು ಮಾಡಿರುವ ಸಾಹಿತ್ಯಕೃಷಿ ಅಪಾರವಾದುದು. ಓದು ಬಲ್ಲವರೆಲ್ಲರೂ ಇಂಗ್ಲಿಷಿನತ್ತ ವಾಲಿ, ಇಂಗ್ಲಿಷ್ ಶಿಕ್ಷಣ ಪಡೆದು ಸರ್ಕಾರಿ ಹುದ್ದೆಗಳತ್ತ ಹಂಬಲಿಸಿ ಹೋಗುತ್ತಿದ್ದ ಸಮಯದಲ್ಲಿ ತಮ್ಮ ಪಾಲಿಗೆ ದೊರೆತಿದ್ದ ಅಧ್ಯಾಪಕ ವೃತ್ತಿಗೂ ರಾಜೀನಾಮೆಯಿತ್ತು, ಆಧ್ಯಾತ್ಮಿಕ ಸಾಧನೆಯತ್ತ ಚಿದಂಬರಯ್ಯನವರು ಮನಸ್ಸನ್ನು ಹರಿಸಿದರು. (ಜೆ.ಎಸ್.ಪಿ.ಎಂ.)

**ಚಿದಾನಂದ :** ಕನ್ನಡದಲ್ಲಿ ಈ ಹೆಸರಿನ ಮೂವರು ಕವಿಗಳಿದ್ದಾರೆ. ಇವರಲ್ಲಿ ಒಬ್ಬ ಚಿದಾನಂದನ ಕಾಲ ಸು. 1680. ಈತ ಜೈನಕವಿ. ಮೈಸೂರು ದೊರೆ ಚಿಕ್ಕದೇವರಾಜನನ್ನು (1672–1704) ಸ್ತುತಿಸಿರುವುದರಿಂದ ಈತ ಚಿಕ್ಕದೇವರಾಜನ ಕಾಲದಲ್ಲಿದ್ದವನೆನ್ನಲಾಗಿದೆ. ಚಿಕ್ಕದೇವರಾಜನ ವಂಶಾವಳಿಯನ್ನೂ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನೂ ತನ್ನ ಕೃತಿ ಮುನಿವಂಶಾಭ್ಯುದಯದಲ್ಲಿ ಹೇಳಿದ್ದಾನೆ. 16 ಸಂಧಿ ಮತ್ತು 2530 ಪದ್ಯಗಳನ್ನು ಒಳಗೊಂಡಿರುವ ಈ ಗ್ರಂಥ ಸಾಂಗತ್ಯದಲ್ಲಿದೆ. ಜೈನ ಮುನಿಗಳ–ಮುಖ್ಯವಾಗಿ ಮೂಲ ಸಂಘದ ದೇಶೀಯ ಗಣದ ಕೊಂಡ ಕುಂದಾನ್ವಯದ ಮುನಿಗಳ ಪರಂಪರೆಯನ್ನು ಕವಿ ಇದರಲ್ಲಿ ಹೇಳಿದ್ದಾನಲ್ಲದೆ, ಶ್ರುತಕೇವಲಿಯಾದ ಭದ್ರಬಾಹು ಬೆಳ್ಗೊಳಕ್ಕೆ ಬಂದು ಚಿಕ್ಕ ಬೆಟ್ಟದಲ್ಲಿ ಇದ್ದಂತೆಯೂ ಚಂದ್ರಗುಪ್ತ ಇಲ್ಲಿಗೆ ಬಂದು ದೀಕ್ಷೆ ಪಡೆದಂತೆಯೂ ಹೇಳಿದ್ದಾನೆ. ರಾಜನೀತಿ, ಆತ್ಮಜಿಜ್ಞಾಸೆ ಮುಂತಾದ ವಿಷಯಗಳನ್ನು ಕುರಿತೂ ಬರೆದಿದ್ದಾನೆ. ಗ್ರಂಥದ ಪ್ರಾರಂಭದಲ್ಲಿ ಜಿನಸ್ತುತಿ ಇದೆ.

ಇನ್ನೊಬ್ಬ ಚಿದಾನಂದನ ಕಾಲ ಸುಮಾರು 1675. ಈತ ಬ್ರಾಹ್ಮಣ, ಜ್ಞಾನಸಿಂಧುವನ್ನು ಬರೆದ ಚಿದಾನಂದಾವಧೂತನ ಗುರು. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿರುವ ಬೈಲೂರು ಈತನ ಸ್ಥಳ. ಚಿದಖಂಡಾನುಭವಸಾರ, ಹರಿಭಕ್ತಸಾರ ಈತನ ಕೃತಿಗಳು. ಕೆಲವು ಹಾಡುಗಳನ್ನೂ ರಚಿಸಿದ್ದಾನೆ. ಇವಕ್ಕೆ ಚಿದಾನಂದರ ಕೋರಡೆ ಎಂಬ ಹೆಸರಿದೆ.

ಮತ್ತೊಬ್ಬ ಚಿದಾನಂದನ ಕಾಲ ಸು. 1234. ಈತನೂ ಬ್ರಾಹ್ಮಣ. ಈತ ಪರಮ ಪ್ರಕಾಶ ಯೋಗೀಶ್ವರನ ಮಗನೆಂದೂ ಬ್ರಹ್ಮವಿದ್ಯಾವೇತ್ತನೆಂದೂ ಸತ್ಯವೀಶ್ವರನೆಂದೂ ಈತನ ಕೆಲವು ಪದ್ಯಗಳಿಂದ ಗೋತ್ತಾಗುತ್ತದೆ. ಮಂಡ್ಯದ 121,122ನೆಯ ಶಾಸನಗಳನ್ನು ಈತ ರಚಿಸಿದನೆಂದು ತಿಳಿದುಬರುತ್ತದೆ. (ಎಂ.ಸಿ.ಪಿ.)

**ಚಿದಾನಂದಮೂರ್ತಿ, ಎಂ. :** 1931–. ಪ್ರಸಿದ್ಧ ಸಂಶೋಧಕ, ಲೇಖಕ. ಈಗ ದಾವಣಗೆರೆ ಜಿಲ್ಲೆಯಲ್ಲಿರುವ ಚನ್ನಗಿರಿ ತಾಲ್ಲೂಕಿನ ಹಿರೇಕೋಗಲೂರಿನಲ್ಲಿ 1931 ಮೇ 10ರಂದು ಜನಿಸಿದರು. ತಂದೆ ಕೊಟ್ಟೂರಯ್ಯ, ತಾಯಿ ಪಾರ್ವತಮ್ಮ. ಇವರ ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸಗಳು ಕೋಗಲೂರು, ಸಂತೆ ಬೆನ್ನೂರುಗಳಲ್ಲೂ ಇಂಟರ್ ಶಿಕ್ಷಣ ದಾವಣಗೆರೆಯಲ್ಲೂ ಬಿ.ಎ. (ಆನರ್ಸ್), ಕನ್ನಡ ಎಂ.ಎ.ಮತ್ತು ಪಿಎಚ್.ಡಿ. ಅಧ್ಯಯನಗಳು ಮೈಸೂರಿನಲ್ಲೂ ನಡೆದುವು. ಇಂಟರ್‌ನಲ್ಲಿ ಹತ್ತನೆಯ ರ‍್ಯಾಂಕನ್ನೂ ಬಿ.ಎ. (ಆನರ್ಸ್) ಮತ್ತು ಎಂ.ಎ. ಪದವಿಗಳಲ್ಲಿ ಮೊದಲನೆಯ ರ‍್ಯಾಂಕನ್ನೂ ಗಳಿಸಿದ ಇವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.

ಆರಂಭದ ಕೆಲವು ವರ್ಷ ಪದವಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು 1957ರಲ್ಲಿ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು. ಮಾನಸಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ 1960ರಲ್ಲಿ ಅಧ್ಯಾಪಕರಾಗಿ, 1968ರಲ್ಲಿ ರೀಡರ್ ಆದರು. ಬಳಿಕ ಬೆಂಗಳೂರು ವಿಶ್ವವಿದ್ಯಾಲಯದ ಸೇವೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ 1990ರ ಅಕ್ಟೋಬರ್ 10ರಂದು ಸ್ವಯಂ ನಿವೃತ್ತಿ ಪಡೆದರು. 1967–68ರಲ್ಲಿ ಶಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಂದರ್ಶಕ ಅಧ್ಯಾಪಕರಾಗಿಯೂ 1979ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡದ ಕಾರಣಕ್ಕೆ ಕರ್ನಾಟಕದ ವಿವಿಧ ಪ್ರಾಂತ್ಯಗಳನ್ನೂ ಅಧ್ಯಯನದ ಸಲುವಾಗಿ ದೇಶ ವಿದೇಶಗಳನ್ನೂ ಸುತ್ತಿದ್ದಾರೆ. ಬರ್ಕ್ಲಿಯಲ್ಲಿ ನಡೆದ ಅಮೆರಿಕನ್ ಓರಿಯಂಟಲ್ ಸೊಸೈಟಿಯ ವಾರ್ಷಿಕಾಧಿವೇಶನ, ಫಿಲಡೆಲ್ಫಿಯದಲ್ಲಿ ನಡೆದ ಏಷಿಯನ್ ಸೆಮಿನಾರ್, ಸ್ಟಾನ್‌ಫೋರ್ಡ್ ವಿಶ್ವ ವಿದ್ಯಾನಿಲಯದ ಐತಿಹಾಸಿಕ ಭಾಷಾವಿಜ್ಞಾನ – ಈ ಮೊದಲಾದ ಸಮ್ಮೇಳನಗಳಲ್ಲಿ ಇವರು ಪ್ರಬಂಧ ಮಂಡಿಸಿದ್ದಾರೆ.



ಚಿದಾನಂದಮೂರ್ತಿಯವರು ಮೂವತ್ತಕ್ಕೂ ಹೆಚ್ಚು ಪುಸ್ತಕಗಳನ್ನೂ ನಾನೂರಕ್ಕೂ ಹೆಚ್ಚು ಸಂಪ್ರಬಂಧಗಳನ್ನೂ ಪ್ರಕಟಿಸಿದ್ದಾರೆ. ಭಾಷೆ, ವ್ಯಾಕರಣ, ಸ್ಥಳನಾಮ, ಛಂದಸ್ಸು, ಗ್ರಂಥಸಂಪಾದನೆ, ಸಾಹಿತ್ಯಚರಿತ್ರೆ, ಜಾನಪದ, ಶಾಸನ, ಕರ್ನಾಟಕ, ಇತಿಹಾಸ, ಸಂಸ್ಕೃತಿ ಹೀಗೆ ಇವರದು ಹಲವು ಕ್ಷೇತ್ರಗಳ, ಬಹುಮುಖ ಸಂಶೋಧನೆ. ಇವರ ಸಂಶೋಧನೆಯಲ್ಲಿ ವ್ಯಾಪಕವಾದ ವ್ಯಾಸಂಗ, ಆಳವಾದ ಅಧ್ಯಯನ, ಅಪಾರವಾದ ಪರಿಶ್ರಮ, ಮಿಂಚಿನ ಪ್ರತಿಭೆ ಮಿಳಿತವಾಗಿವೆ. ಇವರ ಸಂಶೋಧನ ಲೇಖನಗಳು ಹೊಸಸಂಗತಿಗಳ ಹೊಳಪಿನಿಂದ ಕಂಗೊಳಿಸುತ್ತವೆ. ಸಂಸ್ಕೃತಿಶೋಧಕರಾಗಿ ಇವರು ಕನ್ನಡ ಸಂಶೋಧನ ಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸಿ ಅದಕ್ಕೆ ಹಲವು ಆಯಾಮಗಳನ್ನು ಜೋಡಿಸಿದ್ದಾರೆ.

ಭಾಷಾವಿಜ್ಞಾನದ ಮೂಲತತ್ತ್ವಗಳು (1965) ಎಂಬ ಕೃತಿ ಭಾಷಾವಿಜ್ಞಾನ ಹಾಗೂ ಕನ್ನಡ ಭಾಷೆ, ವ್ಯಾಕರಣ, ಸ್ಥಳನಾಮಗಳನ್ನು ಕುರಿತದ್ದು. 'ವಾಗರ್ಥ' (1981) ಕನ್ನಡದಲ್ಲಿ ಪ್ರತಿಧ್ವನಿಪದ, ಗೋದಾವರಿ ತೀರದ ಕನ್ನಡ, ಕರ್ನಾಟಕದ ಸ್ಥಳನಾಮ – ವ್ಯಕ್ತಿನಾಮ, ವ್ಯಾವಹಾರಿಕ ಶಿಷ್ಟಕನ್ನಡದ ವಿಭಕ್ತಿ ವ್ಯವಸ್ಥೆ ಮುಂತಾದ 25 ಬರೆಹಗಳಿಂದ ಕೂಡಿದ ಇನ್ನೊಂದು ಕೃತಿ. ಛಂದಸ್ಸಿಗೆ ಸಂಬಂಧಿಸಿದ ಕೃತಿ 'ಛಂದೋತರಂಗ' (1984). ಇದರಲ್ಲಿ ಬೆದಂಡೆ, ಒನಕೆವಾಡು, ಲಯಗ್ರಾಹಿ ಲಯೋತ್ತರ, ಅಂಶಷಟ್ಪದಿ ಮುಂತಾದ ವಿಚಾರಗಳನ್ನು ಕುರಿತಂತೆ 25 ಲೇಖನಗಳಿವೆ. ಹೊಸ ಪರಿಭಾಷೆಯ ಸೃಷ್ಟಿ ಒಳನೋಟಗಳನ್ನು ನಾವು ಇಲ್ಲಿ ಕಾಣುತ್ತೇವೆ.

'ಕನ್ನಡ ಭಾಷಾ ಸಾಹಿತ್ಯಗಳ ಸೃಷ್ಟಿಕ ವಿದ್ಯಾರ್ಥಿ' ಎಂಬುದು ಚಿದಾನಂದಮೂರ್ತಿಯವರನ್ನು ಕುರಿತ ತೀ.ನಂ.ಶ್ರೀಕಂಠಯ್ಯನವರ ಪ್ರಶಂಸೆ. ಅದರ ಸಮರ್ಥನೆ ಎಂಬಂತೆ ಇವರು ಕವಿರಾಜಮಾರ್ಗಕಾರನಿಂದ ಮುದ್ದಣನವರೆಗೆ ವಿಪುಲವಾಗಿ ಕೆಲಸ ಮಾಡಿದ್ದಾರೆ. ಸಂಶೋಧನತರಂಗ (1,2), ಹೊಸತು ಹೊಸತು (1993) ಎಂಬ ಕೃತಿಗಳು ಈ ದೃಷ್ಟಿಯಿಂದ ಮುಖ್ಯವಾದುವು. ವೀರಶೈವ ಸಾಹಿತ್ಯದ ಬಗ್ಗೆಯೂ ಇವರು ಅಪಾರವಾದ ಕೆಲಸ ಮಾಡಿದ್ದು ಶೂನ್ಯ ಸಂಪಾದನೆಯನ್ನು ಕುರಿತು, ವಚನ ಸಾಹಿತ್ಯ (1964), ಲಿಂಗಾಯತ ಅಧ್ಯಯನಗಳು (1986), ವಚನಶೋಧ (1994) ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ವಚನ ಸಾಹಿತ್ಯದ ಉಗಮ, ಅಜಗಣ್ಣನ ವಚನಗಳ ಅಭಿಜ್ಞೆ, ಅನಿಮಿಷನ ಗುಹೆ, ಹರಿಹರನ ವಾಸಸ್ಥಾನ, ಚಾಮರಸನ ಆಶ್ರಮ, ಪಾಲ್ಕುರಿಕೆ ಸೋಮನಾಥನ ಸಮಾಧಿಗಳನ್ನು ಇವರು ಗುರುತಿಸಿದ್ದಾರೆ. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ (1985) ಎಂಬ ಇವರ ಪುಸ್ತಕ ಮಧ್ಯಕಾಲೀನ ಕರ್ನಾಟಕದ ಸಾಂಸ್ಕೃತಿಕ ವಿವೇಚನೆ. ದಲಿತದನಿಯನ್ನು, ದಲಿತ ಜೀವನವನ್ನು ದಲಿತವರ್ಗದ ಹೋರಾಟವನ್ನು ಚಿತ್ರವತ್ತಾಗಿ ಆಧಾರಸಹಿತವಾಗಿ ಈ ಕೃತಿ ತಿಳಿಸುತ್ತದೆ. ಕರ್ನಾಟಕದ ದಲಿತ ಹೋರಾಟದ ಪುನಾರಚನೆಗೆ ಇದೊಂದು ಆಕರ ಗ್ರಂಥ. ಇವರು ಕುರ್ಕ್ಯಾಲ ಶಾಸನದ ಮೇಲೆ ತೋರಿಸಿರುವ ಆದಿಪುರಾಣದ ಪ್ರಭಾವ, ಸುಕುಮಾರ ಚರಿತೆಯ ರಚನಾಕಾಲ, ಹಂಪಿಯ ವ್ಯಾಟಿಕನ್ ನಗರ ಮಾದರಿಯದು ಎಂಬುವು ತುಂಬ ಅಮೂಲ್ಯವಾದ ಶೋಧಗಳು.

ಚಿದಾನಂದಮೂರ್ತಿಯವರಿಗೆ ತುಂಬ ಹೆಸರು ತಂದುಕೊಟ್ಟದ್ದು ಇವರ ಶಾಸನದ ಸಂಬಂಧವಾದ ಸಂಶೋಧನೆ. ಶಾಸನಗಳಲ್ಲಿ ಹುದುಗಿದ್ದ ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸಿದ್ದು ಇವರ ಸಂಶೋಧನೆಯ ವೈಶಿಷ್ಟ್ಯ. ಸು.450ರಿಂದ ಸು.1150ರವರೆಗಿನ ಶಾಸನಗಳನ್ನು ಅವಲಂಬಿಸಿ ಇವರು ರಚಿಸಿದ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಇವರ ಪಿಎಚ್.ಡಿ. ಪ್ರಬಂಧ. ಸಂಸ್ಕೃತಿ ಸಂಶೋಧನ ಕ್ಷೇತ್ರದ ದೀಪಸ್ತಂಭ. ಅಪಾರ ಪರಿಶ್ರಮ, ವಿಶಾಲ ಅಧ್ಯಯನ, ತರ್ಕಬದ್ಧ ವಿಶ್ಲೇಷಣೆಗಳಿಂದ ಕೂಡಿರುವ ಈ ಕೃತಿಯಲ್ಲಿ ಮೊದಲ ಬಾರಿಗೆ ನೂರಾರು ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ. ವೇಳೆವಾಟಿ, ಲೆಂಕವಾಟಿ, ಸಹಗಮನ, ಸಮಾಧಿಮರಣ, ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ, ತುರುಗೋಳ್, ಪೆಣ್‌ಪುಯ್ಯಲ್, ಊರಳಿವು, ಕಾಳಾಮುಖ, ಕಾಪಾಲಿಕಾ, ಕಾಳ, ಲಾಕುಳಶೈವ ಮುಂತಾದ ನೂರಾರು ವಿಷಯಗಳನ್ನು ಕುರಿತಂತೆ ಇದೊಂದು ಸಾಂಸ್ಕೃತಿಕ ವಿಶ್ವಕೋಶವಾಗಿದೆ. ಪೂರ್ಣಸೂರ್ಯಗ್ರಹಣ (1982) ಎಂಬ ಕೃತಿ ಸಮಾಜೋ – ಸಾಂಸ್ಕೃತಿಕ ಅಧ್ಯಯನದ ಹೊತ್ತಗೆ. ಗ್ರಾಮೀಣ (1977), ಪಗರಣ ಮತ್ತು ಇತರ ಸಂಪ್ರಬಂಧಗಳು ಎಂಬ ಸಂಕಲನಗಳ ಬರೆಹಗಳು ಜಾನಪದ ಅಧ್ಯಯನಕ್ಕೆ ಹೊಸ ಉಪಕ್ರಮ ನೀಡಿದ ಪುಸ್ತಕಗಳು. ಶೂಲದಹಬ್ಬ, ನಾಗಬೆತ್ತ, ಕುಪ್ಪಕುಜಿ, ಪಗರಣ, ಕರಪಲ್ಲವ, ದಂತಕತೆ, ಬೈಗುಳ, ಹಳ್ಳಿ, ಜೋಕುಮಾರ, ಮೈಲಾರ ಮಾಳಚಿಯರನ್ನು ಕುರಿತ ಇದೊಂದು ವಿಶಿಷ್ಟ ಜಾನಪದ ಲೋಕ.

ಕನ್ನಡ–ಕನ್ನಡಿಗ–ಕರ್ನಾಟಕಗಳ ಉಳಿವಿಗಾಗಿ ಚಿದಾನಂದಮೂರ್ತಿಯವರು ಮಾಡುತ್ತ ಬಂದ ಕನ್ನಡ ಹೋರಾಟ ಒಂದು ಚರಿತ್ರೆಯಾಗಿದೆ. ಗೋಕಾಕ್ ಚಳವಳಿ ಸಂದರ್ಭದಲ್ಲಿ ಸಾಹಿತಿಗಳ ಕಲಾವಿದರ ಬಳಗವನ್ನು ಅಸ್ತಿತ್ವಕ್ಕೆ ತಂದರು; ಮತ್ತೆ 'ಕನ್ನಡ ಶಕ್ತಿ ಕೇಂದ್ರ' ಸ್ಥಾಪಿಸಿ ಅದರ ಕಾರ್ಯಾಧ್ಯಕ್ಷರಾದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಗೆ ಪ್ರೇರಕರಾದವರಲ್ಲಿ ಇವರೂ ಒಬ್ಬರು. ಜನಸಾಮಾನ್ಯರಲ್ಲಿ ಕನ್ನಡಪ್ರಜ್ಞೆಯನ್ನು ಜಾಗೃತಗೊಳಿಸಲು ಇವರು ಪ್ರಕಟಿಸಿರುವ ಕನ್ನಡ ಸಂಸ್ಕೃತಿ, ನಮ್ಮ ಹೆಮ್ಮೆ(1987), ಕನ್ನಡ–ಕನ್ನಡಿಗ–ಕರ್ನಾಟಕ ಎಂಬ ಕೃತಿಗಳು ತುಂಬ ಉಪಯುಕ್ತವೂ ಪರಿಣಾಮಕಾರಿಯೂ ಆಗಿವೆ. ತಾವು ನಿರೀಕ್ಷಿಸಿದ ಪ್ರಮಾಣದಲ್ಲಿ ಕನ್ನಡ ಜಾಗೃತಿ ಆಗದಿದ್ದುದರಿಂದ ವ್ಯಥೆಗೊಂಡು ಇವರು ಜಲಪ್ರವೇಶ ಮಾಡಿಯೂ ಉಳಿದುಕೊಂಡರು.

ಇವರಿಗೆ ಅನೇಕ ಪ್ರಶಸ್ತಿ, ಬಹುಮಾನ, ಪುರಸ್ಕಾರಗಳು ಪ್ರಾಪ್ತವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ದೇವರಾಜ ಬಹಾದ್ದೂರ್ ಬಹುಮಾನ, ಮೈಸೂರು ವಿಶ್ವವಿದ್ಯಾನಿಲಯ ತೀ.ನಂ.ಶ್ರೀ. ಸ್ಮಾರಕ ಬಹುಮಾನ, ಹೊಸತು ಹೊಸತು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1997) ಲಭ್ಯವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಗೌರವ ಪ್ರಶಸ್ತಿ (1978), ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (1984), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985), ಭೂಸನೂರಮಠ ಸ್ಮಾರಕ ಗೌರವ ಪ್ರಶಸ್ತಿ (1992), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ (1993), ಬಸವಸೇವಾಸಮಿತಿಯ ಸಾಹಿತ್ಯಶ್ರೀ ಪ್ರಶಸ್ತಿ, ಅನಕೃ ಪ್ರತಿಷ್ಠಾನ ಪ್ರಶಸ್ತಿ (1999), ಸೇಡಿಯಾಪು ಕೃಷ್ಣಭಟ್ಟ ಪ್ರಶಸ್ತಿ (2000) ಪ್ರಾಪ್ತವಾಗಿವೆ. ಇವರಿಗೆ 2002ರಲ್ಲಿ ಪಂಪ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಇವರಿಗೆ ನಾಡೋಜ ಗೌರವ ನೀಡಿದೆ(2004). ಇವರ ಶಿಷ್ಯರು, ಮಿತ್ರರು, ಅಭಿಮಾನಿಗಳು ಇವರಿಗೆ ಸಂಶೋಧನ ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಿದ್ದಾರೆ. ಇವರ ಹೆಸರಿನಲ್ಲಿ ಚಿದಾನಂದ ಪ್ರಶಸ್ತಿ ಎಂಬುದನ್ನು ಸ್ಥಾಪಿಸಲಾಗಿದ್ದು ಕನ್ನಡ ಸಂಶೋಧನ ಕ್ಷೇತ್ರಕ್ಕೆ ಕೆಲಸ ಮಾಡಿದ ವಿದ್ವಾಂಸರಿಗೆ ಇದನ್ನು ನೀಡಲಾಗುತ್ತಿದೆ. (ಎನ್.ಎಸ್.ಟಿ.)

**ಚಿದಾನಂದಾವಧೂತ :** ಸು. 1750. ಅದ್ವೈತ ವೇದಾಂತವನ್ನು ನಿರೂಪಿಸುವ ಜ್ಞಾನಸಿಂಧು ಎಂಬ ಕೃತಿಯನ್ನು ಬರೆದು ಪ್ರಸಿದ್ಧನಾಗಿರುವ ಕನ್ನಡ ಕವಿ. ಇದು ಮಹಾಲಿಂಗರಂಗನ ಅನುಭವಾಮೃತವನ್ನು ಬಹುಮಟ್ಟಿಗೆ ವಸ್ತು ಹಾಗೂ ನಿರೂಪಣೆಗಳೆರಡರಲ್ಲೂ ಹೋಲುತ್ತದೆ.

ಚಿದಾನಂದಾವಧೂತ ಬ್ರಾಹ್ಮಣ ಕವಿ. ತುಂಗಭದ್ರಾ ತಟದ ಅಯೋಧ್ಯಾಪುರದ ಚಿದಾನಂದ ಈತನ ಗುರು. ಪಂಚೀಕರಣ, ತತ್ತ್ವಚಿಂತಾಮಣಿ, ನವಚಕ್ರಕುಲ ರೇಖಾಲಕ್ಷಣ, ದೇವೀಮಹಾತ್ಮ್ಯ, ಬಗಳಾಂಬಾಸ್ತೋತ್ರ, ಚಿದಾನಂದವಚನ ಮತ್ತು ಕಾಮವಿಡಂಬನ– ಇವು ಈತನ ಇತರ ಕೃತಿಗಳು .

ಜ್ಞಾನಸಿಂಧು ಗ್ರಂಥದಲ್ಲಿ 49 ಅಧ್ಯಾಯಗಳಿದ್ದು 3621 ಪದ್ಯಗಳಿವೆ. ಶಿವ ಷಣ್ಮುಖನಿಗೆ ವಿವರಿಸಿದ ಅಧ್ಯಾತ್ಮ ಬೋಧೆಯೇ ಇದರ ವಸ್ತು. ವ್ಯಾಕರಣಕ್ಕೆ ವಿಶೇಷ ಗಮನ ಕೊಡದೆ ಸಾಮಾನ್ಯ ಜನತೆಗಾಗಿ ಭಾಮಿನಿಷಟ್ಪದಿಯಲ್ಲಿ ಬರೆದ ಕೃತಿ ಇದು. ಸರ್ವಶಾಸ್ತ್ರಾರ್ಥವನ್ನನುಸರಿಸಿರುವುದು ಆತ್ಮಜ್ಞಾನವನ್ನು ತಿಳಿಯುವ ದಾರಿಯಿನ್ನರುಹುವುದು ಕವಿಯ ಉದ್ದೇಶ. ಪಂಚೀಕರಣ ಹದಿನೈದು ವಚನಗಳ ಗದ್ಯ ಕೃತಿ. ಚಿದಾನಂದ ಸದ್ಗುರುವೇ ಎಂಬ ಅಂಕಿತದಿಂದ ಪ್ರತಿವಚನವೂ ಮುಕ್ತಾಯವಾಗುತ್ತದೆ. ಕೇಳಯ್ಯ ದೇಹ ಬೀಟಲು ಪೃಥ್ವಿ ಪೃಥ್ವಿಯ ಕೂಡಿತು ; ಅಪ್ಪು ಅಪ್ಪ ಕೂಡಿತು ; ತೇಜ ತೇಜವ ಕೂಡಿತು ; ವಾಯು ವಾಯುವ ಕೂಡಿತು ; ಆಕಾಶ ಆಕಾಶವ ಕೂಡಿತು ; ಪಂಚಭೂತ ತತ್ತ್ವಗಳು ಆಯಾ

ಭೂತತತ್ತ್ವಂಗಳಲ್ಲಿ ಕೂಡಿದವು. ತತ್ತ್ವದ ಗುಣಂಗಳು ತತ್ತ್ವವ ಹೊಂದಿದವು. ನೀನು ಅಂಗರಹಿತನು, ನೀನು ನಿರ್ವಿಕಾರನು, ನಿರ್ವಯಲುಕಣಾ ಚಿದಾನಂದ ಸದ್ಗುರವೆ–ಎಂಬ ಇದರಲ್ಲಿನ ಒಂದು ವಚನದಿಂದ ಕವಿಯ ಮನೋಭಾವ ಸ್ಪಷ್ಟವಾಗುತ್ತದೆ. ಧ್ಯಾನಪರತತ್ತ್ವ ವಿಶ್ವವಿರಾಟ್ಪುರುಷವಿವರ, ಜೀವೇಶ್ವರೈಕ್ಯ ವಿಚಾರ, ಪ್ರಣವನಾದ ಬಿಂದುಸ್ವರೂಪ ಮತ್ತಿತರ ವಿವರಗಳು ತತ್ತ್ವಚಿಂತಾಮಣಿಯಲ್ಲಿವೆ. ವೇದಾಂತ ವಿಷಯವನ್ನು ತಿಳಿಸುವ ನವಚಕ್ರ ಕುಲರೇಖಾಲಕ್ಷಣದಲ್ಲಿ ಶಿವಪಾರ್ವತಿಯರ ಸಂವಾದ ಶ್ಲೋಕರೂಪದಲ್ಲಿದ್ದು ಅದರ ಟೀಕೆ ಗದ್ಯದಲ್ಲಿದೆ. ದೇವೀಮಹಾತ್ಮ್ಯ ಅದೇ ಹೆಸರಿನ ಸಂಸ್ಕೃತ ಕೃತಿಯ ಭಾಷಾಂತರ. 18 ಸಂಧಿ, 769 ಪದ್ಯಗಳನ್ನೊಳಗೊಂಡಿರುವ ಈ ಕೃತಿ ಭಾಮಿನೀ ಷಟ್ಪದಿಯಲ್ಲಿದೆ. ತನ್ನ ಗುರುವಿನ ಆಜ್ಞೆಯ ಮೇರೆಗೆ ಈ ಕೃತಿಯನ್ನು ರಚಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ. ಬಗಳಾಂಬಾ ಸ್ತೋತ್ರದಲ್ಲಿ 101 ಪದ್ಯಗಳಿವೆ. ಹತ್ತು ಮಹಾವಿದ್ಯಾಧಿದೇವತೆಗಳಲ್ಲಿ ಒಬ್ಬಳಾದ ಬಗಳಾಂಬ ದೇವತೆಯ ಸ್ತುತಿಯೇ ಇದರ ವಸ್ತು. ಇದು ಮಾತ್ರಾಗಣಕ್ಕೆ ತಿರುಗಿದ ಛಂದೋವಸಂತ ಎಂಬ ಛಂದಸ್ಸಿನಲ್ಲಿದೆ. ಪ್ರತಿ ಪದ್ಯದ ಕೊನೆಯಲ್ಲೂ ಚಿದಾನಂದ ಎಂಬ ಅಂಕಿತವಿದೆ. ಚಿದಾನಂದವಚನದಲ್ಲಿ ರಾಗತಾಳಗಳಿಂದ ಕೂಡಿದ ಹಲವು ಹಾಡುಗಳಿವೆ. ಕಾಮವಿಡಂಬನದಲ್ಲಿ 110 ಪದ್ಯಗಳಿವೆ. ಇವಕ್ಕೆ ಹೋಳಿಪದಗಳು ಎಂಬ ಹೆಸರೂ ಉಂಟು. ನೀತಿ, ತತ್ತ್ವ ಇವುಗಳೇ ಇಲ್ಲಿನ ವಸ್ತು. (ಎಸ್.ಎಸ್.ಜೆ.ಎ.)

**ಚಿದ್ದಣ ಚೋಳ ಮಹಾರಾಜ :** ತೆಲುಗು ಚೋಳ ವಂಶದ ಒಂದು ಶಾಖೆಗೆ ಸೇರಿದ ಅರಸ. ಕಲ್ಯಾಣ ಚಾಳುಕ್ಯ ಇಮ್ಮಡಿ ಸೋಮೇಶ್ವರನ ಸಾಮಂತ. 1073ರಲ್ಲಿ ಕನ್ನೆ 300, ಪೆಡೆಕಲ್–800, ನಳವಾಡಿ–500, ಅಯಜೆ–500 ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದಿದೆ. ತೆಲುಗು ಚೋಳ ವಂಶಸ್ಥರು ಸಾಧಾರಣವಾಗಿ ಉಪಯೋಗಿಸುತ್ತಿದ್ದ ಚರಣಸರೋರುಹವಿಹಿತ ವಿಲೋಚನ ತ್ರಿಲೋಚನಪ್ರಮುಖಾಖಿಳಪೃಥ್ವೀಶ್ವರ ಕಾರಿತಕಾವೇರೀ ತಿಲ್ ಕರಿಕಾಲಕುಲರತ್ನಪ್ರದೀಪ ಕುಮಾರಾಂಕುಸ ಕಾಂಚೀಪುರತ್ರಿಪುರ ಸಂಹರಣ ಮಹೇಶ್ವರ ಎಂಬ ಪ್ರಶಸ್ತಿಯನ್ನು ಈತನ ಶಾಸನಗಳಲ್ಲೂ ಬಳಸಲಾಗಿದೆ. ಇಂಥದೇ ಪ್ರಶಸ್ತಿಯನ್ನು ಪಡೆದಿದ್ದ ಇರುಗಣ ಚೋಳನೆಂಬೊಬ್ಬ ಈತನಿಗೂ ಮೊದಲು ಒಂದನೇಯ ಸೋಮೇಶ್ವರನ (1044–1068) ಸಾಮಂತನಾಗಿ ಆಳುತ್ತಿದ್ದುದು ಆಂಧ್ರ ಪ್ರದೇಶದ ಮಹಬೂಬ್‌ನಗರ ಜಿಲ್ಲೆಯ ಸುತ್ತಲ ಗ್ರಾಮಗಳ ಶಾಸನಗಳಿಂದ ತಿಳಿದಿದೆ. ಇವನು ಚಿದ್ದಣ ಚೋಳನಿಗೆ ಹಿರಿಯನಾಗಿರಬಹುದು.

ಚಿದ್ದಣ ತನ್ನ ಅರಸನಾದ ಸೋಮೇಶ್ವರನಿಗೆ ಅತ್ಯಂತ ವಿಧೇಯನಾಗಿದ್ದ. ಸೋಮೇಶ್ವರನಿಗೂ ವಿಕ್ರಮಾದಿತ್ಯನಿಗೂ ನಡುವೆ ದ್ವೇಷ ತಲೆದೋರಿದಾಗ ಈತ ಸೋಮೇಶ್ವರನ ಸಾಮಂತನಾಗಿಯೇ ಉಳಿದನಲ್ಲದೆ, ಪರಿಸ್ಥಿತಿಯ ದುರ್ಲಾಭ ಪಡೆಯಲು ದಂಗೆ ಎದ್ದಿದ್ದ ಸೇವುಣ ವಂಶದ ಸೇಗುಣವನ್ನು (ಇಮ್ಮಡಿ ಸೇಉಣ ಚಂದ್ರ ) ಸೋಲಿಸಿ ಸೆರೆಹಿಡಿದ. ಇದಕ್ಕಾಗಿ ಉತ್ತರ ದಿಗ್ವಿಜಯ ಕೈಗೊಂಡಿದ್ದ ಈತ ಹಿಂದಿರುಗುವಾಗ ಎಳರಾಮತೀರ್ಥದ ಲಕ್ಷ್ಮಣೇಶ್ವರ ದೇವರಿಗೆ ದತ್ತಿಗಳನ್ನು ಬಿಟ್ಟನೆಂದು ಬೀಪಲ್ಲಿ ಶಾಸನ ತಿಳಿಸುತ್ತದೆ. ವಿಕ್ರಮಾದಿತ್ಯ ಆಳತೊಡಗಿದ ಮೇಲೆ ಚಿದ್ದಣ ಬಹುಶಃ ತನ್ನ ಅಧಿಕಾರವನ್ನು ಕಳೆದುಕೊಂಡ. (ಜಿ.ಬಿ.ಆರ್.)

**ಚಿನಾಬ್ :** ಸಿಂಧೂ ನದಿಯ ಒಂದು ಉಪನದಿ, ಭಾರತ–ಪಾಕಿಸ್ತಾನಗಳ ಉಭಯ ಪಂಜಾಬ್ ಪ್ರದೇಶಕ್ಕೆ ಆ ಹೆಸರು ಬರಲು ಕಾರಣವಾದ ಪಂಚನದಿಗಳ ಪೈಕಿ ಒಂದು. ಭಾರತದ ಹಿಮಾಚಲ ಪ್ರದೇಶದಲ್ಲಿ ಹಿಮಾಲಯದ ಬಾರಾಲಾಚಾ ಕಣಿವೆ ಹಾದಿಯ (4,891ಮೀ.) ಆಗ್ನೇಯ ಮತ್ತು ವಾಯವ್ಯಗಳಲ್ಲಿ ಅನುಕ್ರಮವಾಗಿ ಉಗಮಿಸುವ ಚಂದ್ರ ಮತ್ತು ಭಾಗಾ ನದಿಗಳು ಟಂಟಿ ಎಂಬಲ್ಲಿ ಪರಸ್ಪರ ಕೂಡಿಕೊಂಡು ಚಂದ್ರಭಾಗಾ ಅಥವಾ ಚಿನಾಬ್ ನದಿಯಾಗಿ ಪರಿಣಮಿಸುತ್ತವೆ. ಈ ನದಿ ಹಿಮಾಲಯ ಮತ್ತು ಪೀರ್ ಪಂಜಾಲ್ ಶ್ರೇಣಿಗಳ ನಡುವಣ ಕಣಿವೆಯಲ್ಲಿ ಸುಮಾರು 161ಕಿ.ಮೀ ದೂರ ವಾಯವ್ಯಾಭಿಮುಖವಾಗಿ ಹರಿದು, ಕಾಶ್ಮೀರದ ಕಿಷ್‌ವಾರ್ ಬಳಿ ದಕ್ಷಿಣಕ್ಕೆ ತಿರುಗಿ ಪೀರ್ ಪಂಜಾಲ್ ಶ್ರೇಣಿಯ ಕೊರಕಲೊಂದರ ಮೂಲಕ ಅದನ್ನು ದಾಟಿ, ಅಖ್ನೂರ್ ಬಳಿ ಮೈದಾನಪ್ರವೇಶ ಮಾಡುತ್ತದೆ. ಬಾರಾ ಲಾಚಾದಿಂದ ಅಖ್ನೂರ್‌ವರೆಗಿನ 608ಕಿ.ಮೀ ದೂರದಲ್ಲಿ ನದಿ 4,724 ಮೀ. ಕೆಳಕ್ಕೆ ಇಳಿಯುತ್ತದೆ.ಇದರ ನದಿಯ ಉದ್ದ 960 ಕಿ.ಮೀ

ಜಮ್ಮು ನಗರದ ಬದಿಯ ಜವಿ ಜಂಕ್ಷನ್‌ನ ಕೆಳಭಾಗದಲ್ಲಿ ಇದು ಪಾಕಿಸ್ತಾನದ ಪಂಜಾಬನ್ನು ಪ್ರವೇಶಿಸುತ್ತದೆ. ಟಿಮ್ಮು ಎಂಬಲ್ಲಿ ಝೇಲಂ ನದಿಯೂ ಸಿಂಧುವಿನ ಬಳಿಯಲ್ಲಿ ರಾವೀ ನದಿಯೂ ಇದನ್ನು ಕೂಡಿಕೊಳ್ಳುತ್ತವೆ. ಅನಂತರ ಇವು ತ್ರಿಮಾಬ್ ಎಂದು ಕರೆಸಿಕೊಳ್ಳುತ್ತದೆ. ಬಿಯಾಸ್ ನದಿಯನ್ನು ಕೂಡಿಸಿಕೊಂಡ ಸಟ್ಲೆಜ್ ನದಿ ಮಾಡ್ವಾಲಾ ಎಂಬಲ್ಲಿ ಚಿನಾಬನ್ನು ಸೇರುತ್ತದೆ. ಅಲ್ಲಿಂದ ಮುಂದೆ ಇದು ಪಂಜನದ ಎನಿಸಿಕೊಂಡು ಸಿಂಧೂ ನದಿಯನ್ನು ಸಂಗಮಿಸುತ್ತದೆ. ಮಾರ್ಚ್ ತಿಂಗಳಿಂದ ನದಿಯಲ್ಲಿ ಪ್ರವಾಹ ಅಧಿಕವಾಗುತ್ತದೆ. ಗರಿಷ್ಠ ಪ್ರವಾಹ ಜುಲೈ–ಆಗಸ್ಟ್ ಅವಧಿಯಲ್ಲಿ. ನವೆಂಬರ್–ಫೆಬ್ರುವರಿಯಲ್ಲಿ ಪ್ರವಾಹದ ಮಟ್ಟ ಅತ್ಯಂತ ಕೆಳಗೆ ಇರುತ್ತದೆ. ಪ್ರವಾಹದಿಂದ ಅಕ್ಕಪಕ್ಕಗಳಲ್ಲಿ ಹೆಚ್ಚು ದೂರ ನೀರು ಆವರಿಸುವುದಿಲ್ಲ. ಆದರೆ ದಡಗಳು ಮರಳಿನಿಂದ ಕೂಡಿರುವುದರಿಂದ ಒಳನಾಡಿನಲ್ಲಿ ತುಂಬ ದೂರ ಅದರ ತೇವ ಹಬ್ಬುತ್ತದೆ. ಇದರಿಂದ ವ್ಯವಸಾಯಕ್ಕೆ ಅನುಕೂಲ. ಇದು ತಂದು ಎಸೆಯುವ ಮಣ್ಣಿನಲ್ಲಿ ಮರಳು ಹೆಚ್ಚು. ಪಂಜಾಬಿನ ಇತರ ನದಿಗಳ ಮಣ್ಣಿನಷ್ಟು ಇದು ಫಲವತ್ತಲ್ಲ. ಈ ನದಿಯಲ್ಲಿ ಸರಾಸರಿ 28,980.78 ಘನ ಮೀ. ನೀರು ಹರಿಯುವುದೆಂದು ಅಂದಾಜಿದೆ. ಪಂಜಾಬಿನ ಇತರ ನದಿಗಳಂತೆ ಈ ನದಿಯೂ ಆಗಿಂದಾಗ್ಗೆ ತನ್ನ ಪಾತ್ರ ಬದಲಿಸುತ್ತದೆ.

ಮೊಗಲರ ಕಾಲದಿಂದಲೂ ಈ ನದೀ ಪ್ರದೇಶದಲ್ಲಿ ಸುಯೋಜಿತ ನೀರಾವರಿ ವ್ಯವಸ್ಥೆ ಉಂಟು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇದು ಮತ್ತಷ್ಟು ಅಭಿವೃದ್ಧಿ ಹೊಂದಿತು. ಚಿನಾಬ್ ಕೆಳದಂಡೆ ಕಾಲುವೆ (1882) ಮತ್ತು ಚಿನಾಬ್ ಮೇಲು ದಂಡೆ ಕಾಲುವೆ (1912–15)–ಇವೂ ಇತರ ಕಾಲುವೆಗಳೂ ಇಲ್ಲಿಯ ಬೇಸಾಯದ ಅಭಿವೃದ್ಧಿಗೆ ಕಾರಣವಾಗಿವೆ. ಗಜ್ರನ್‌ವಾಲ, ಝುಂಗ್ ಮತ್ತು ಮಾಂಟ್ಗೋಮರಿ ಜಿಲ್ಲೆಗಳು ಸೇರಿ 1892ರಲ್ಲಿ ರಚನೆಗೊಂಡ ಚಿನಾಬ್ ನದೀ ವಸತಿ ಚಿನಾಬ್ ಮತ್ತು ರಾವಿ ನದಿಗಳ ನಡುವೆ ಇರುವ ರೇಚನಾ ದೋಆಬ್ ಪ್ರದೇಶದಲ್ಲಿದೆ. ಈ ವಸತಿಗೆ ಸಂಬಂಧಿಸಿದ 25 ಲಕ್ಷ ಎಕರೆ ಜಮೀನು ಚಿನಾಬ್ ನದೀ ನೀರಾವರಿಗೆ ಒಳಪಟ್ಟಿದೆ. ಈ ನದಿಯಿಂದಾಗಿ ಬಾರ್ ಮರಳುಗಾಡು ಸಸ್ಯಾಚ್ಛಾದಿತವಾಗಿದೆ. 1912ರಲ್ಲಿ ನಿರ್ಮಿಸಲಾದ ಚಿನಾಬ್ ಮೇಲ್ದಂಡೆ ಕಾಲುವೆಯಿಂದ 5 ಲಕ್ಷ ಎಕರೆ ನೆಲ ನೀರಾವರಿಗೆ ಒಳಪಟ್ಟಿದೆ. ಚಿನಾಬ್ ವಸತಿ ಪ್ರದೇಶದ ಮುಖ್ಯ ಪಟ್ಟಣ ಲಯಾಲ್‌ಪುರ. ಇದು ಈ ಪ್ರದೇಶದ ಮಹತ್ತ್ವದ ವ್ಯಾಪಾರ ಕೇಂದ್ರ.

ಈ ನದಿಗೆ ಅಡ್ಡಲಾಗಿ ಹಲವಾರು ರೈಲ್ವೆ ಬ್ರಿಡ್ಜು ಹಾಗೂ ರಸ್ತೆ ಸೇತುವಗಳನ್ನೂ ನಿರ್ಮಿಸಲಾಗಿದೆ. ಪ್ರಪಂಚದ ಅತ್ಯಂತ ಎತ್ತರದ ರೈಲ್ವೆ ಬ್ರಿಡ್ಜನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಚೀನಾಬ್‌ಗೆ ಅಡ್ಡಲಾಗಿ ರಚಿಸಲಾಗಿದೆ. ಇದರ ಹೆಸರು ಚೀನಾಬ್ ಬ್ರಿಡ್ಜ್. (ಬಿ.ಎ.ಎಸ್.)

**ಚಿನಿವಾರ ಉದ್ಯಮ : ನೋಡಿ ಅಕ್ಕಸಾಲಿಗರ ಉದ್ಯಮ**

**ಚಿನ್ನ :** ಆವರ್ತಕೋಷ್ಟಕದ ಆರನೆಯ ಆವರ್ತದ ಒಂದನೆಯ ಗುಂಪಿಗೆ ಸೇರಿದ ಒಂದು ಸಂಕ್ರಾಂತಿ (ಟ್ರಾನ್ಸಿಷನ್) ಲೋಹಧಾತು (ಗೋಲ್ಡ್). ರಾಸಾಯನಿಕ ಸಂಕೇತ Au. ಪರಮಾಣುಸಂಖ್ಯೆ 79, ಪರಮಾಣು ತೂಕ 196.967. ಎಲೆಕ್ಟ್ರಾನಿಕ್ ವಿನ್ಯಾಸ ಅಯಾನಿಕ್ $1s^2 2s^2 2p^6 3s^2 3p^6 3d^{10} 4s^2 4p^6 4d^{10} 4f^{14} 5s^2 5p^6 5d^{10} 6s^1$. ಅಯಾನಿಕ್ ತ್ರಿಜ್ಯ $Au+1.37A^0$. ನೈಸರ್ಗಿಕವಾಗಿ ದೊರೆಯುವ ಇದರ ಏಕಮಾತ್ರ ಐಸೊಟೋಪಿನ ಪರಮಾಣು ತೂಕ 197.

ಪ್ರಸಕ್ತ ಲೇಖನದಲ್ಲಿ ಚಿನ್ನದ ಐತಿಹಾಸಿಕ ಹಿನ್ನೆಲೆಯ ಸೂಕ್ಷ್ಮ ಪರಿಚಯವನ್ನೂ ಭೂವಿಜ್ಞಾನ ಹಾಗೂ ರಸಾಯನ ವೃತ್ತಾಂತಗಳನ್ನೂ ವಿವೇಚಿಸಲಾಗಿದೆ.

ಚಿನ್ನದ ಬಣ್ಣ ಮತ್ತು ಹೊಳಪಿನಿಂದಾಗಿ ಮಾನವ ಬಹಳ ಕಾಲದಿಂದಲೂ ಅದಕ್ಕೆ ಆಕರ್ಷಿತನಾಗಿದ್ದನೆಂಬುದಕ್ಕೆ ಪುರಾವೆಗಳುಂಟು. ಭಾರತದಲ್ಲಿ ಬಹುಶಃ ವೇದಗಳ ಕಾಲದಿಂದಲೂ ಚಿನ್ನ ಅಸ್ತಿತ್ವದಲಿದ್ದುದಕ್ಕೆ ದಾಖಲೆಗಳು ಇವೆ. ಯುರೋಪಿನ ರೋಮನ್ನರಿಗೂ ಗ್ರೀಕರಿಗೂ ಇದರ ಪರಿಚಯ ಸಾಕಷ್ಟು ಇದ್ದಿತೆಂಬುದನ್ನು ಅಲ್ಲಿನ ಸಂಸ್ಕೃತಿಗಳು ಸಾರುತ್ತವೆ. ಕೆಲವು ಕ್ಷಾರಲೋಹಗಳನ್ನು ರಸವಾದದ ರೀತ್ಯಾ ಪರುಷದಿಂದ (ಫಿಲಾಸಫರ್ಸ್ ಸ್ಟೋನ್) ಚಿನ್ನ ಅಥವಾ ಬೆಳ್ಳಿಯನ್ನಾಗಿ ಮಾಡುವುದು ಮತ್ತು ಜೀವಾಮೃತವನ್ನು ಕಂಡುಹಿಡಿಯುವುದು–ಮುಂತಾದವುಗಳ ವಿಚಾರವನ್ನು ಮಧ್ಯಯುಗದ ರಸಸಿದ್ಧರ (ಆಲ್‌ಕೆಮಿಸ್ಟ್) ಚರಿತ್ರೆಗಳಲ್ಲಿ ಕಾಣಬಹುದು. ನವೀನ ಶಿಲಾಯುಗದ ಗುಹೆಗಳಲ್ಲಿ ನಡೆಸಿದ ಹಲವಾರು ಪ್ರಾಚ್ಯ ಸಂಶೋಧನೆಗಳಿಂದಾಗಿ ಚಿನ್ನ ಹಿಂದೆ ಬಳಕೆಯಲ್ಲಿದ್ದ ಬಗ್ಗೆ ಆಧಾರಗಳು ದೊರೆತಿವೆ. ಅನೇಕ ಸಾಮ್ರಾಜ್ಯಗಳು ಚಿನ್ನವನ್ನು ಆಶ್ರಯಿಸಿ ವೈಭವದಿಂದ ಮೆರೆದದ್ದುಂಟು. ಪ್ರಾಚೀನ ಈಜಿಪ್ಷಿಯನ್, ಮಿನೋವನ್, ಅಸೀರಿಯನ್ ಮತ್ತು ಎಟ್ರುಸ್ಕನ್ ನಾಗರಿಕತೆಗಳನ್ನು ಕುರಿತ ಅಧ್ಯಯನದಿಂದ ಚಿನ್ನದ ಆಭರಣಗಳ ತಯಾರಿಕೆ, ಅವುಗಳ ತಯಾರಿಕೆಯಲ್ಲಿ ಆ ಜನರ ಕರಕೌಶಲ ಇವೇ ಮುಂತಾದ ವಿವರಗಳು ತಿಳಿದುಬರುತ್ತವೆ. ಇಂದಿಗೂ ಚಿನ್ನವನ್ನು ಒಂದು ರಾಷ್ಟ್ರದ ಸಂಪತ್ತಿನ ಅಳತೆಗೋಲಾಗಿ ಪರಿಗಣಿಸಲಾಗುತ್ತಿದೆ.

ಚಿನ್ನವನ್ನು ಹೊರತೆಗೆಯಲೋಸುಗ ನಡೆದ ಗಣಿಯ ಕೆಲಸದ ಮೊತ್ತ ಮೊದಲಿನ ಪ್ರಸ್ತಾಪ ಇತಿಹಾಸದಲ್ಲಿ ಕಾಣಬರುವುದು. ಪ್ರ.ಶ. ಸು. 77ರಲ್ಲಿ, ಅದರಲ್ಲೂ ಭಾರತದ ಇತಿಹಾಸದಲ್ಲಿ. ಈ ಕಾರ್ಯ ಬಹು ತೀವ್ರಗತಿಯಿಂದ 1300ರ ತನಕ ಅಂದರೆ ಮಹಮ್ಮದೀಯ ಶಕೆ ಆರಂಭವಾಗುವವರೆಗೆ ಸಾಗಿತ್ತು. ಮುಂದೆ 1600 ರವರೆಗೆ ಇದರ ಪ್ರಸ್ತಾಪವಿದ್ದಂತೆ ತೋರುವುದಿಲ್ಲ. 1800ರ ಸುಮಾರಿನಲ್ಲಿ ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಚಿನ್ನಕ್ಕಾಗಿ ಗಣಿಯ ಕೆಲಸ ಆರಂಭವಾದಂತೆ ತಿಳಿದುಬರುತ್ತದೆ. 1848ರಲ್ಲಿ ಕ್ಯಾಲಿಫೋರ್ನಿಯ ರಾಜ್ಯದಲ್ಲಿ ಚಿನ್ನದ ಗಣಿಗಳನ್ನು ಪತ್ತೆಹಚ್ಚುವವರೆಗೆ ಇದು ಯಾವ ಪ್ರಾಮುಖ್ಯವನ್ನೂ ಪಡೆದಿರಲಿಲ್ಲ.

ಸುಮಾರು 1905ರ ವರೆಗೆ ಈ ಚಿನ್ನದ ಗಣಿ ತನ್ನ ಉತ್ಪಾದನೆಯಲ್ಲಿ ಅಗ್ರಸ್ಥಾನವನ್ನು ಗಳಿಸಿತ್ತು. ಕಾಲಕ್ರಮೇಣ ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ್ ಪ್ರದೇಶದ ಗಣಿಗಳು ಅಸ್ತಿತ್ವಕ್ಕೆ ಬಂದು ಕ್ಯಾಲಿಫೋರ್ನಿಯ ಗಣಿಯ ಮಹತ್ತ್ವ ಕಡಿಮೆಯಾಯಿತು. ಹೀಗಾಗಿ ಚಿನ್ನಕ್ಕೆ ಸಂಬಂಧಿಸಿದಂತೆ ಅಗ್ರಮಾನ್ಯತೆಯನ್ನು ದಕ್ಷಿಣ ಆಫ್ರಿಕ ಉಳಿಸಿಕೊಂಡಿದೆ. ಪ್ರಪಂಚದ ಚಿನ್ನದ ಒಟ್ಟು ಉತ್ಪಾದನೆಯಲ್ಲಿ ಅರ್ಧಕ್ಕೂ ಹೆಚ್ಚಿನ ಭಾಗ ಟ್ರಾನ್ಸ್‌ವಾಲಿನ ಗಣಿಗಳಿಂದ ಆಗುತ್ತಿದೆ.

**ಭೂವಿಜ್ಞಾನ ವೃತ್ತಾಂತ :** ಭೂಚರಿತ್ರೆಯ ರೀತ್ಯಾ ನೋಡಿದಾಗ ಅತಿ ಪುರಾತನವಾದ ಪ್ರಿಕೇಂಬ್ರಿಯನ್ ಯುಗದ (600 ದಶಲಕ್ಷ ವರ್ಷಗಳ ಹಿಂದೆ) ಶಿಲೆಗಳಿಂದ ಹಿಡಿದು ಟರ್ಷಿಯರಿ ಯುಗದವರೆಗೂ ಹರಡಿರುವ ನಾನಾ ಶಿಲೆಗಳಲ್ಲಿ ಚಿನ್ನ ಹುದುಗಿರುವುದು ಕಾಣಬರುತ್ತದೆ. ಶಿಲೆಗಳಲ್ಲಿ ದೊರೆಯುವ ಚಿನ್ನದ ಪರಿಮಾಣ ಅತ್ಯಲ್ಪ–1,00,000,000 ಭಾಗಗಳಲ್ಲಿ ಕೇವಲ ಒಂದು ಭಾಗದಷ್ಟು. ಪ್ರತಿ ವರ್ಷವೂ ಪ್ರಪಂಚದ ನಾನಾ ಗಣಿಗಳಲ್ಲಿ ಸುಮಾರು 100 ಮಿಲಿಯನ್ ಟನ್ ಅದಿರನ್ನು ಒಪ್ಪ ಮಾಡಿ 1,100 ಟನ್ ಅಂದರೆ 30 ಮಿಲಿಯನ್ ಔನ್ಸುಗಳಷ್ಟು ಚಿನ್ನವನ್ನು ಪಡೆಯಲಾಗುತ್ತಿದೆ. ಅಲ್ಪಸ್ವಲ್ಪ ಪರಿಮಾಣದಲ್ಲಿ ಸಮುದ್ರದ ನೀರಿನಲ್ಲೂ ಚಿನ್ನ ದೊರೆಯುವುದು. ಒಂದು ಘನಮೈಲಿ ನೀರಿನಲ್ಲಿ ಸುಮಾರು 6,00,000 ಔನ್ಸುಗಳಷ್ಟು ಚಿನ್ನವಿರುತ್ತದೆಂದು ಅಂದಾಜು ಮಾಡಲಾಗಿದೆ. ಇದರಿಂದ ಚಿನ್ನ ಪಡೆಯುವುದು ಲಾಭದಾಯಕವಾಗಿಲ್ಲವಾದ್ದರಿಂದ ಪ್ರಯತ್ನ ನಡೆದಿಲ್ಲ. ಆದರೂ ಮುಂದುವರಿದ ವೈಜ್ಞಾನಿಕ ವಿಧಾನಗಳಿಂದ ಸಮುದ್ರದಲ್ಲಿ ಚಿನ್ನ ಪಡೆಯುವ ಕೆಲವಾರು ಪ್ರಯೋಗಗಳನ್ನು ವಿಜ್ಞಾನಿಗಳು ಯೋಜಿಸುತ್ತಿದ್ದಾರೆ.

ಚಿನ್ನ ಸಾಮಾನ್ಯವಾಗಿ ಎರಡು ಮೂಲಗಳಿಂದ ದೊರೆಯುತ್ತದೆ : (i) ಮೂಲ ನಿಕ್ಷೇಪಗಳು ಮತ್ತು (ii) ಮೆಕ್ಕಲು ನಿಕ್ಷೇಪಗಳು. ಶಿಲೆಗಳಲ್ಲಿ ಕಂಡುಬರುವ ಚಿನ್ನದ ಸಿರಗಳು ಮತ್ತು ಎಳೆಗಳನ್ನು ಮೊದಲನೆಯ ಗುಂಪಿಗೆ ಸೇರಿಸಬಹುದು. ಇವು ಬಹುಮಟ್ಟಿಗೆ ಗ್ರ್ಯಾನೈಟ್ ಮೊದಲಾದ ಅಗ್ನಿ ಶಿಲಾರೂಪಗಳ ಸಮೀಪದಲ್ಲಿ ಕಂಡುಬರುತ್ತವೆ. ಅದರಲ್ಲೂ ಶಿಲಾರೂಪ ನಾಡಶಿಲೆಯನ್ನು (ಕಂಟ್ರಿ ರಾಕ್) ಸೋಕುವ ಕಡೆ ಲೋಹದ ಉತ್ಪತ್ತಿಗೆ ಬಹಳ ಅನುಕೂಲವಾದ ಪರಿಸರವಿರುವುದು. ಸಾಮಾನ್ಯವಾಗಿ ಸಿರಗಳಲ್ಲಿನ ಬೆಣಚು, ಗಂಧಕಯುಕ್ತ ಖನಿಜಗಳು, ಕ್ಲೋರೈಟ್ ಮತ್ತು ಕ್ಯಾಲ್ಸೈಟ್ ಖನಿಜಗಳೊಡನೆ ಚಿನ್ನ ಬೆರೆತಿರುವುದು, ಇವುಗಳಲ್ಲಿ ಬೆಣಚಿನ ಸಿರಗಳು ಉತ್ತಮ ದರ್ಜೆಯ ಅದಿರು. ಎಳೆಗಳೋಪಾದಿಯಲ್ಲಿ, ನರಗಳಂತೆ, ಕಣಗಳಂತೆ ಅಥವಾ ಅತಿಸೂಕ್ಷ್ಮ ರೇಕುಗಳಂತೆ ಚಿನ್ನ ಬೆಣಚಿನಲ್ಲಿ ಹುದುಗಿರುತ್ತದೆ. ಇವು ಸಾಮಾನ್ಯವಾಗಿ ಹೆಚ್ಚಿನ ಆಳದಲ್ಲಿ ಉಷ್ಣತೆ ಹೆಚ್ಚಾಗಿರುವ ಕಡೆ ಕಂಡುಬರುತ್ತವೆ. ಕೋಲಾರದ ಚಿನ್ನದ ಗಣಿಗಳಲ್ಲಿ ದೊರೆಯುವ ಚಿನ್ನದ ಅದಿರು ಈ ಜಾತಿಯದು. ಕೆಲವು ಕಡೆ, ಅಷ್ಟು ಹೆಚ್ಚಿನ ಉಷ್ಣತೆ ಇಲ್ಲದ ಪ್ರದೇಶಗಳಲ್ಲೂ ಚಿನ್ನದ ಅದಿರು ದೊರೆಯುತ್ತದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಕಾಲೋರ್‍ಯಾಡೋ ಚಿನ್ನದ ಗಣಿಗಳು ಈ ಬಗೆಯವು.

ಮೆಕ್ಕಲು ನಿಕ್ಷೇಪಗಳಲ್ಲಿ ನಾನಾ ಗಾತ್ರದ ಚಿನ್ನದ ಕಣಗಳು ಮತ್ತು ಗಟ್ಟಿಗಳು ಇವೆ. ಈ ನಿಕ್ಷೇಪಗಳು ಸಾಮಾನ್ಯವಾಗಿ ಭೂಮಿಯ ಮೇಲ್ಭಾಗ ಅದೂ ನದಿಯ ತೀರ, ಸಮುದ್ರದ ಕರೆ ಮುಂತಾದ ಆಯಕಟ್ಟಿನ ಪ್ರದೇಶಗಳಲ್ಲಿ ಉಂಟು. ಕೆಲವೆಡೆ, ಉದಾಹರಣೆಗೆ ಕ್ಯಾಲಿಫೋರ್ನಿಯ ಮತ್ತು ಆಫ್ರಿಕದ ರ್‍ಯಾಂಡ್ ಪ್ರದೇಶಗಳಲ್ಲಿ ಈ ತೆರನಾದ ಮೆಕ್ಕಲು ನಿಕ್ಷೇಪಗಳು ಇತರ ಶಿಲಾವಸ್ತುಗಳಿಂದ ಮುಚ್ಚಿ ಹೋಗಿ ಸ್ವಲ್ಪ ಮಟ್ಟಿಗೆ ಭೂ ಆಳದಲ್ಲಿ ಹುದುಗಿರುವುದೂ ಇದೆ. ಅಲಾಸ್ಕ ಪ್ರಾಂತ್ಯದಲ್ಲಿ ಉತ್ತಮ ದರ್ಜೆಯ ಸಮುದ್ರ ಮೆಕ್ಕಲು ನಿಕ್ಷೇಪಗಳು ಇವೆ. ಧಾರವಾಡ ಶಿಲಾಸ್ತೋಮದ ಮೂಲಕ ಹರಿಯುವ ನದಿಗಳ ಜಾಡಿನಲ್ಲಿ ಈ ಬಗೆಯ ಚಿನ್ನ ದೊರೆತಿದೆ. ಪಾಲಾರ್ ಮತ್ತು ಪೊನ್ನಾರ್ ನದಿಗಳ ಕಣಿವೆಗಳಲ್ಲಿ ಉತ್ತಮ ದರ್ಜೆಯ ಮೆಕ್ಕಲು ನಿಕ್ಷೇಪಗಳು ಸಿಕ್ಕಿವೆ. ಕೆಲವೆಡೆಯಂತೂ ಒಂದು ಟನ್ ಮೆಕ್ಕಲಿಗೆ 12.5 ಗ್ರೇನುಗಳಷ್ಟು ತೂಕದ ಚಿನ್ನ ಒದಗುವುದೆಂದು ಅಂದಾಜಾಗಿದೆ. ಮರಳು ಮತ್ತು ಮೆಕ್ಕಲನ್ನು ಸೋಸಿ ಜಾಲಿಸುವುದರ ಮೂಲಕ ಈ ಬಗೆಯ ಚಿನ್ನವನ್ನು ಪಡೆಯಬಹುದು. ಇದನ್ನೇ ಮುಖ್ಯ ಕಸುಬಾಗುಳ್ಳವರು ಭಾರತದ ಹಲವೆಡೆಗಳಲ್ಲಿದ್ದಾರೆ.

ಪ್ರಪಂಚದಲ್ಲಿ ಸುಮಾರು 75 ದೇಶಗಳಲ್ಲಿ ಚಿನ್ನ ದೊರೆಯುತ್ತದೆ. ಹೀಗೆ ನಾನಾ ಕಡೆ ಹರಡಿರುವ ನಿಕ್ಷೇಪಗಳಲ್ಲಿ ಸುಮಾರು 1,000,000,000 ಔನ್ಸುಗಳಷ್ಟು ಚಿನ್ನ ಸಿಕ್ಕಬಹುದು ಎಂದು ಅಂದಾಜು. ಇಂಥವಲ್ಲಿ ರಷ್ಯದ ನಿಕ್ಷೇಪಗಳನ್ನು ಬಹು ಉತ್ತಮ ದರ್ಜೆಯವೆನ್ನಲಾಗಿದೆ. ದಕ್ಷಿಣ ಆಫ್ರಿಕದ ನಿಕ್ಷೇಪಗಳಲ್ಲಿ ಕಡೆಯ ಪಕ್ಷ 500,000,000 ಔನ್ಸ್ ಚಿನ್ನ ಲಭಿಸಬಹುದು. 1944ರ ಅಂದಾಜಿನಂತೆ ಅಮೆರಿಕದ ಸಂಯುಕ್ತಸಂಸ್ಥಾನ ಮತ್ತು ಅಲಾಸ್ಕಗಳಲ್ಲಿ ಸುಮಾರು 69,000,000 ಔನ್ಸ್ ಚಿನ್ನ ದೊರೆತೀತೆಂದು ಗಣಿಸಲಾಗಿದೆ. ಈ ದೃಷ್ಟಿಯಿಂದ ಭಾರತದ ನಿಕ್ಷೇಪಗಳು ಆಶಾದಾಯಕವಾಗಿಲ್ಲ.

ಭಾರತದಲ್ಲಿ ಚಿನ್ನದ ಗಣಿಗಳು ಕೋಲಾರ, ಹಟ್ಟಿ, ವೈನಾಡು, ಛೋಟಾನಾಗಪುರ, ಧಾರವಾಡ ಮತ್ತು ಅನಂತಪುರ ಈ ಸ್ಥಳಗಳಲ್ಲಿ ಇವೆ. ಇವುಗಳಲ್ಲೆಲ್ಲ ಕೋಲಾರದ ಗಣಿಗಳು ಉತ್ತಮ ದರ್ಜೆಯವು. ಈ ಗಣಿಗಳಲ್ಲಿ ಕೆಲಸ ನಡೆದ ಕುರುಹುಗಳು 1802ರಲ್ಲೇ ಪತ್ತೆಯಾದರೂ 1871ರ ವೇಳೆಗೆ ಗಣಿಯ ಕೆಲಸಕ್ಕೆ ಅನುಮತಿ ದೊರೆತು ಕಾರ್ಯ ಮುಂದುವರಿಯಿತು. 1961 ಮಾರ್ಚ್ ಅಂತ್ಯದವರೆಗೆ ಈ ಗಣಿಗಳಲ್ಲಿ 23 ಮಿಲಿಯನ್ ಔನ್ಸುಗಳಷ್ಟು ಚಿನ್ನ ದೊರೆತಿದೆ. ಕೋಲಾರದ ಗಣಿಗಳಿಂದ ಸುಮಾರು 800 ಟನ್ನು ಚಿನ್ನ ಈವರೆಗೆ ದೊರೆತಿದೆ. ಕೋಲಾರ ಮತ್ತು ಹಟ್ಟಿಗಣಿಗಳಲ್ಲಿ ಚಿನ್ನ ಧಾರವಾಡ ಶಿಲಾಸ್ತೋಮಕ್ಕೆ ಸೇರಿದ ಹಾರ್ನ್‌ಬ್ಲೆಂಡ್ ಪದರುಶಿಲೆಗಳಲ್ಲಿ ಹರಡಿರುವ ಬೆಣಚಿನ ಸಿರಗಳಲ್ಲಿ ದೊರೆಯುತ್ತದೆ. ಕೋಲಾರದ ಗಣಿಗಳಲ್ಲಿ ಸಿಕ್ಕುವ ಚಿನ್ನ ಒಂದು ಬಗೆಯ ಬೂದು ಅಥವಾ ತೆಳು ನೀಲಿ ಬಣ್ಣದ ಬೆಣಚಿನ ಸಿರಗಳಲ್ಲಿ ಹುದುಗಿರುತ್ತದೆ. ಚಿನ್ನ ಲಭಿಸುವ ಧಾರವಾಡ ಶಿಲಾಜಾಡು ಉತ್ತರ–ದಕ್ಷಿಣ ಗತಿಯಲ್ಲಿ ಸುಮಾರು 80 ಕಿಮೀಗಳಷ್ಟು ದೂರ ಹರಡಿದೆ. ಇಲ್ಲಿ ಪುರಾತನರು ಕೆಲಸ ಮಾಡಿ ಕೈಬಿಟ್ಟ ಅನೇಕ ಹಳೆಯ ಗಣಿಗಳು ಇವೆ. 1885ರಲ್ಲಿ ಮೆಸರ್ಸ್ ಜಾನ್ ಟೇಲರ್ ಅಂಡ್ ಸನ್ಸ್ ಎಂಬ ಸಂಸ್ಥೆ ಉತ್ತಮ ರೀತಿಯಲ್ಲಿ ಗಣಿಯ ಕೆಲಸ ಪ್ರಾರಂಭಿಸಿತು. ಚಿನ್ನ ಬಹುಮಟ್ಟಿಗೆ 6 ಕಿಮೀ ಉದ್ದ ಮತ್ತು 1 ಮೀ ಮಂದವಾಗಿರುವ ಛಾಂಪಿಯನ್ ಸಿರದಲ್ಲಿ ಕಂಡುಬಂದಿದೆ. ಇದು ಮೈಸೂರು, ಛಾಂಪಿಯನ್ ರೀಫ್, ಉರಿಗಾಮ್ ಮತ್ತು ನಂದಿದುರ್ಗ ಈ ಗಣಿಗಳ ಉದ್ದಕ್ಕೂ ಹರಡಿದೆ. ಮೇಲ್ಭಾಗದಲ್ಲಿ ಈ ಸಿರ ಭೂಮಟ್ಟದಿಂದ 450–600 ಇಳಿವೋರೆಯನ್ನು ತೋರಿಸುತ್ತ ಆಳಕ್ಕೆ ಹೋದಂತೆ ಕಡಿದಾಗುತ್ತ ನೆಟ್ಟಗಾಗುತ್ತದೆ. ಅತ್ಯಂತ ಉತ್ತಮ ದರ್ಜೆಯ ಅದುರಿನಿಂದ ಕೂಡಿದ ನಿಕ್ಷೇಪಗಳೇ ಇಲ್ಲಿಯ ಗಣಿಗಳ ವೈಶಿಷ್ಟ್ಯ. ಹಲವು ಕಡೆ ಇವು ಬಹು ವಿಸ್ತಾರವಾಗಿದ್ದು ಗಣಿಯ ಪ್ರಗತಿಗೆ ಮುಖ್ಯ ಕಾರಣಗಳಾಗಿವೆ. ಆಳಕ್ಕೆ ಹೋದಂತೆಲ್ಲ ಇವು ಹೆಚ್ಚಿನ ಪರಿಮಾಣದಲ್ಲಿ ತೂರಿ ಬರಬಹುದೆಂದು ಈಚಿನ ಭೂಶೋಧನೆಗಳಿಂದ ಊಹಿಸಲಾಗಿದೆ. ಈ ಗಣಿಗಳು 3230ಮೀ. ಆಳವಾಗಿದೆ. ಇವನ್ನು ಪ್ರಪಂಚದ ಎರಡನೇ ಅತ್ಯಂತ ಆಳವಾದ ಗಣಿಗಳೆಂದು ಪರಿಗಣಿಸಿದ್ದಾರೆ. 1956ರಲ್ಲಿ ಆಗಿನ ಮೈಸೂರು(ಈಗಿನ ಕರ್ನಾಟಕ) ಸರ್ಕಾರದವರು ಸುಮಾರು ಎರಡು ಕೋಟಿ ರೂಪಾಯಿ ಪರಿಹಾರ ದ್ರವ್ಯವನ್ನು ಕೊಟ್ಟು ಈ ಗಣಿಗಳ ಆಡಳಿತ ಮತ್ತು ನಿರ್ವಹಣೆಗಳನ್ನು ವಹಿಸಿಕೊಂಡರು. ಭಾರತ ಸರ್ಕಾರ ಈ ಗಣಿಗಳನ್ನು ಮುಂದುವರಿಸಿತು. **(ನೋಡಿ– ಕೋಲಾರ–ಚಿನ್ನದ–ಗಣಿ–(ಪ್ರದೇಶ)**.

ಚಿನ್ನದ ಅದಿರನ್ನು ಭೂಮಿಯ ಆಳದಿಂದ ತೆಗೆಯುವ ಕೆಲಸ ಬಹಳ ಶ್ರಮಸಾಧ್ಯದ್ದು. ಒಂದು ಟನ್ ಚಿನ್ನವನ್ನು ಪಡೆಯಲು 100,000 ಟನ್ನುಗಳಿಗೂ ಹೆಚ್ಚಿನ ಅದಿರನ್ನು ತೆಗೆದು ಪುಡಿಮಾಡಿ ಒಪ್ಪ ಮಾಡಬೇಕಾಗುತ್ತದೆ. ಹೊರತೆಗೆದ ಚಿನ್ನ ಬೆರೆತಿರುವ ಶಿಲಾಚೂರುಗಳನ್ನು ದೊಡ್ಡ ದೊಡ್ಡ ಕುಟ್ಟುವ ಯಂತ್ರಗಳ ಸಹಾಯದಿಂದ ನಯವಾಗಿ ಪುಡಿಮಾಡಲಾಗುವುದು. ಲೋಹದೊಡನೆ ಬೆರೆತಿರುವ ಇತರ ವಸ್ತುಗಳನ್ನು ಯಂತ್ರಗಳ ಸಹಾಯದಿಂದ ಬೇರ್ಪಡಿಸಲಾಗುವುದು. ಅನಂತರ ಪಾದರಸ, ಸಯನೈಡ್ ಮೊದಲಾದ ರಾಸಾಯನಿಕ ವಸ್ತುಗಳ ಸಹಾಯದಿಂದ ಚಿನ್ನವನ್ನು ಒಪ್ಪ ಮಾಡುತ್ತಾರೆ. ಇದನ್ನು ಮತ್ತೆ ಕುಲುಮೆಗಳಲ್ಲಿಟ್ಟು ಕರಗಿಸಿ ಶುದ್ಧ ಮಾಡಿ ಇಟ್ಟಿಗೆಯ ರೂಪದಲ್ಲೋ ಇಲ್ಲವೆ ಗಟ್ಟಿಗಳಾಗಿವೆಯೋ ಎರಕ ಹುಯ್ಯುತ್ತಾರೆ.

ಚಿನ್ನ ಅತ್ಯಂತ ಭಾರವಾದ ಲೋಹಗಳ ಗುಂಪಿಗೆ ಸೇರಿದೆ. ಸಾಪೇಕ್ಷ ಸಾಂದ್ರತೆ 15.6–19.3 (ಪರಿಶುದ್ಧ ಚಿನ್ನ). ಹೊಂಬಣ್ಣ ಮತ್ತು ಹೊಳಪುಳ್ಳ ಚಿನ್ನವನ್ನು ಒರೆ ಹಚ್ಚಿದಾಗಲೂ ಅದೇ ಹೊಂಬಣ್ಣ ಮತ್ತು ಹೊಳಪು ಬರುತ್ತದೆ. ಇದು ಮೆದುವಾದ ಲೋಹವಾದ್ದರಿಂದ ಬಹು ನವುರಾದ ತಗಡುಗಳನ್ನಾಗಿ ತಟ್ಟಬಹುದು; ಬಹುಸೂಕ್ಷ್ಮವಾದ ತಂತಿಗಳನ್ನಾಗಿ ಎಳೆಯಬಹುದು.

**ರಸಾಯನ ವೃತ್ತಾಂತ :** ಚಿನ್ನ ಮೂಲಧಾತುವಿನ ರೂಪದಲ್ಲಿ ದೊರೆಯುತ್ತದೆ. ನಾನಾ ಶಿಲೆಗಳಲ್ಲೂ ಮರಳು ಮಣ್ಣಿನೊಡನೆಯೂ (ಮೆಕ್ಕಲು ಮಣ್ಣು) ಇದು ಬೆರೆತಿರುವುದುಂಟು. ಇವನ್ನು ಅನುಕ್ರಮವಾಗಿ ಹೊಂಗಲ್ಲು (ಆರಿಫೆರಸ್ ಕ್ವಾರ್ಟ್ಸ್) ಮತ್ತು ನೆರೆಮಣ್ಣು ನಿಕ್ಷೇಪಗಳೆಂದು (ಅಲ್ಯೂವಿಯಲ್ ಡಿಪಾಸಿಟ್ಸ್) ಕರೆದಿದ್ದಾರೆ. ಕಬ್ಬಿಣದ ಪಿರೈಟಿಸ್ ಮುಂತಾದ ಗಂಧಕಯುಕ್ತ ಅದಿರುಗಳಲ್ಲೂ ಸಮುದ್ರದ ನೀರಿನಲ್ಲೂ ಸ್ವಲ್ಪ ಚಿನ್ನವಿರುವುದು ಕಂಡುಬಂದಿದೆ. ಸಂಯುಕ್ತ ಸ್ಥಿತಿಯಲ್ಲಿ ಚಿನ್ನವಿರುವ ಖನಿಜಗಳುಂಟು. ಇದಕ್ಕೆ ಸಿಲ್ವನೈಟ್ (AgAuTe2) ಒಂದು ಉದಾಹರಣೆ.ಅದಿರನ್ನು ಪೂರ್ವಭಾವಿಯಾಗಿ ಅಣಿಗೊಳಿಸಿದ ಹೊರತು ಅದರಿಂದ ಚಿನ್ನವನ್ನು ತೆಗೆಯುವಂತಿಲ್ಲ ಅದಕ್ಕಾಗಿ ಬಳಕೆಯಲ್ಲಿರುವ ಕೆಲವು ವಿಧಾನಗಳನ್ನು ಮುಂದೆ ಪ್ರಸ್ತಾವಿಸಲಾಗಿದೆ:

(1) **ಬಾಣಲೆ ವಿಧಾನ :** ಸುಮಾರು 0.3ಮೀ. ವ್ಯಾಸವುಳ್ಳ ವರ್ತುಲಾಕಾರದ ಕಬ್ಬಿಣದ ಬಾಣಲೆಗಳಲ್ಲಿ ನೆರೆಮಣ್ಣು ನಿಕ್ಷೇಪವನ್ನು ನೀರಿನೊಡನೆ ಕದಡಿ ಸುತ್ತು ಸುಳಿ ಎಬ್ಬಿಸಿದರೆ ಹಗುರವಾದ ಮರಳು ಮುಂತಾದವು ಉಕ್ಕಿ ಹರಿಯುವ ನೀರಿನೊಂದಿಗೆ ಕೊಚ್ಚಿಹೋಗುತ್ತವೆ. ಭಾರವಾದ ಚಿನ್ನ ಕಣಗಳು ಬಾಣಲೆಯಲ್ಲೇ ಉಳಿಯುವುವು. ಸಣ್ಣ ಉದ್ದಿಮೆದಾರರಿಗೆ ಈ ವಿಧಾನ ಹೆಚ್ಚು ಅನುಕೂಲ.

**(2) ಹೂಳೆತ್ತುವ ಕ್ರಮ :** ನದಿಯ ತಳದಲ್ಲಿರುವ ಮರುಳುಮಿಶ್ರಿತ ಚಿನ್ನವನ್ನು ಪಡೆಯುವ ಕ್ರಮವಿದು. ಬಕೆಟ್ಟುಗಳ ಅನಂತಸರಣಿಯನ್ನು ಹೊತ್ತ ಸಾಗುಪಟ್ಟಿ ವಾಹಕವನ್ನು ವಿಶಿಷ್ಟ ಮಾದರಿಯ ದೋಣಿಯೊಂದಕ್ಕೆ ಜೋಡಿಸಿರುತ್ತಾರೆ. ಬಕೆಟ್ಟುಗಳು ನೀರಿನಲ್ಲಿ ಮುಳುಗಿ ನದಿಯ ತಳದಲ್ಲಿರುವ ಮರಳನ್ನು ಮೇಲೆತ್ತುತ್ತವೆ. ಈ ಮರಳು ಜಾಲರಿಗಳ ಮೇಲೆ ಬಂದು ಬೀಳುತ್ತದೆ. ಆಗ ಸಣ್ಣ ಮರಳು ಬೇರ್ಪಟ್ಟು ಶೇಷವಸ್ತು ಮತ್ತೆ ನದಿಗೆ ವಿಸರ್ಜಿತವಾಗುತ್ತದೆ. ಸಣ್ಣ ಮರಳನ್ನು ವಿಲ್‌ಫ್ಲೇ ಮೇಜುಗಳಿಗೆ ರವಾನಿಸಿ ನೀರಿನಿಂದ




ಚಿತ್ರ 1. ವಿಲ್‌ಫ್ಲೆ ಮೇಜುಗಳ ಕಾರ್ಯ ನಿರ್ವಹಣಾ ತತ್ತ್ವ

ತೊಳೆಯಲಾಗುವುದು. ಈ ಮೇಜುಗಳ ಮೇಲೆ ತೆಳುವಾದ ಮರದ ಹಲಗೆಗಳನ್ನು ಜೋಡಿಸಿ ಅಡ್ಡಕಟ್ಟೆಗಳನ್ನು ಚಿತ್ರ–1 ಹಾಕಿರುತ್ತಾರೆ.: ಇವು ಸೋಪಾನದ ಕ್ರಮದಲ್ಲಿರುತ್ತವೆ (**ಚಿತ್ರ 1**). ನೀರು ಮತ್ತು ಮಣ್ಣುಗಳ ಮಿಶ್ರಣ ನಿಧಾನವಾಗಿ ಈ ಕಟ್ಟೆಗಳ ಮೇಲೆ ಹಾದು ಕೆಳಗಿಳಿಯುವುದು. ಅಡ್ಡಕಟ್ಟೆಗಳು ಭಾರವಾದ ಚಿನ್ನದ ಕಣಗಳನ್ನು ತಡೆದು ಉಳಿಸಿಕೊಳ್ಳುತ್ತವೆ. ಹಗುರವಾದ ಮರಳು ಮುಂತಾದವು ಕೊನೆಯ ಮೆಟ್ಟಿಲ ಬಳಿ (CD) ಶೇಖರಿಸುತ್ತವೆ. ಮೇಜು ಯಾಂತ್ರಿಕವಾಗಿ ಅಲುಗಾಡುತ್ತಿರುತ್ತದೆ. ಇದರಿಂದ ತಟ್ಟೆಗಳು ತಡೆಹಿಡಿದಿದ್ದ ಚಿನ್ನದ ಪುಡಿ ಪಕ್ಕಕ್ಕೆ ಸರಿಯುತ್ತ ಬಂದು ಎಡಭಾಗದಲ್ಲಿರುವ ತೊಟ್ಟಿಯೊಳಕ್ಕೆ ಬೀಳುವುದು. ತೀರ ದಪ್ಪವಾದ ಚಿನ್ನದ ಕಣಗಳನ್ನು ಮಾತ್ರ ಅಡ್ಡಕಟ್ಟೆಗಳು ತಡೆಯುತ್ತವೆ. ಚಿನ್ನದ ಸಣ್ಣ ಕಣಗಳು ನೀರಿನೊಡನೆ ಕೊಚ್ಚಿಹೋಗುವ ಸಂಭವವಿರುವುದರಿಂದ ಅವನ್ನು ಸಂಪಾದಿಸಲು ತೆಂಗಿನ ನಾರಿನ ಚಾಪೆಯನ್ನು ಹೊದಿಸಿರುವ ಇಂಥದೇ ಮತ್ತೊಂದು ಮೇಜಿನ ಮೇಲೆ ಹಾಯಿಸುವುದು ವಾಡಿಕೆ.

**(3) ದ್ರವಚಾಲಿತ (ಹೈಡ್ರಾಲಿಕ್) ವಿಧಾನ :** ಚಿನ್ನಮಿಶ್ರಿತವಾದ ಮರಳು ನದಿಯ ದಂಡೆಯಲ್ಲಿ ಅಥವಾ ಗುಡ್ಡದ ಇಳಿಜಾರಿನಲ್ಲಿ ಸಂಗ್ರಹವಾಗಿದ್ದಾಗ ಈ ವಿಧಾನದ ಬಳಕೆ ಉಂಟು. ಒತ್ತಡದಿಂದ ನೀರನ್ನು ಧಾರಾಕಾರವಾಗಿ ಸಂಗ್ರಹಕ್ಕೆ ಎರೆದರೆ ಚಿನ್ನಮಿಶ್ರಿತ ಮರಳು ಕೊಚ್ಚಿ ಹೋಗುವುದು. ಬಗ್ಗಡವನ್ನು ಮರದಿಂದ ಮಾಡಿದ ಕಾಲುವೆಗಳ ಮೂಲಕ ಹಾಯಿಸಲಾಗುತ್ತದೆ. ಇವುಗಳ ತಳದಲ್ಲಿ ಅಲ್ಲಲ್ಲೇ ಇರುವ ಅಡ್ಡಕಟ್ಟೆಗಳು ಭಾರವಾದ ಚಿನ್ನದ ಕಣಗಳನ್ನು ತಡೆಹಿಡಿಯುತ್ತವೆ. ಹಗುರವಾದ ಮರಳು ಮುಂತಾದ ಕಶ್ಮಲಗಳು ಕಟ್ಟೆಗಳ ಮೇಲೆ ಹಾದುಹೋಗುತ್ತವೆ. ಕಾಲುವೆ ನೀರಿಗೆ ಸ್ವಲ್ಪ ಪಾದರಸವನ್ನು ಸೇರಿಸುವುದುಂಟು. ಕಟ್ಟೆಗಳ ಬಳಿ ನಿಂತ ಪಾದರಸ ಚಿನ್ನವನ್ನು ಅಮಾಲ್ಗಮ್ ರೂಪದಲ್ಲಿ ಇನ್ನೂ ತೃಪ್ತಿಕರವಾಗಿ ಉಳಿಸಿಕೊಳ್ಳುವುದು. ಅಮಾಲ್ಗಮನ್ನು ಸೋಸಿ ಕಾಸಿದರೆ ಪಾದರಸ ಆವಿಯಾಗುತ್ತದೆ. ಇದನ್ನು ಶೇಖರಿಸಿ ಪುನಃ ಉಪಯೋಗಿಸಬಹುದು. ಕಾಲುವೆಗಳನ್ನು ವಾರಕ್ಕೆ ಒಂದು ಸಲವಾದರೂ ಶುಚಿಗೊಳಿಸಲಾಗುತ್ತದೆ.

**(4) ಕೊಟ್ಟಣ ವಿಧಾನ :** ಹೊಂಗಲ್ಲಿನಿಂದ ಚಿನ್ನವನ್ನು ಪಡೆಯಲು ಈ ವಿಧಾನ ಯೋಗ್ಯ. ಹೊಂಗಲ್ಲನ್ನು ಮೊದಲು ದವಡೆ ಗಿರಣಿಗಳಿಗೆ (ಜಾ ಕ್ರಷರ್ಸ್) ಕೊಟ್ಟು ಒಡೆಯಲಾಗುತ್ತದೆ. ಅನಂತರ ಅವನ್ನು ಕುಟ್ಟುವ ಯಂತ್ರಕ್ಕೆ ರವಾನಿಸುತ್ತಾರೆ. ಪ್ರತಿಯೊಂದು ಕೊಟ್ಟಣದಲ್ಲೂ ಉಕ್ಕಿನಿಂದ ಮಾಡಿದ ಐದು ಒರಳುಗಳೂ ಐದು ಹಾರೆಗಳೂ ಇವೆ (**ಚಿತ್ರ 2**) ವಿದ್ಯುಚ್ಚಾಲಿತ ಕೊಟ್ಟಣಗಳು ಕಲ್ಲನ್ನು ಚೆನ್ನಾಗಿ ಅರೆಯುವುವು. ಕಲ್ಲು ಪುಡಿಯಾದಂತೆಲ್ಲ ಒಂದು ಪಾರ್ಶ್ವದಿಂದ ಹಾಯುತ್ತಿರುವ ನೀರಿನ ಧಾರೆ ಅದನ್ನು ಕೊಚ್ಚಿಕೊಂಡು ಹೋಗುತ್ತದೆ. ಬಗ್ಗಡ ಹೊರಬೀಳುವ ದ್ವಾರಕ್ಕೆ ತಂತಿಯ ಬಲೆಯನ್ನು ಹೆಣೆದಿರುತ್ತಾರೆ. ದೊಡ್ಡ ತುಣುಕುಗಳನ್ನು ಒರಳಿಗೆ ಹಿಂತಿರುಗಿಸುವುದು ಇದರ ಉದ್ದೇಶ.

ಈ ವಿಧಾನಗಳಿಂದ ಅಣಿಗೊಳಿಸಿಕೊಂಡ ಸಾರೀಕರಿಸಿದ ಚಿನ್ನಮಿಶ್ರಿತ ಕಲ್ಲು ಅಥವಾ ಪುಡಿಯಿಂದ ಚಿನ್ನ ತೆಗೆಯಲು ಮೂರು ವಿಧಾನಗಳು ರೂಢಿಯಲ್ಲಿವೆ:

(a) ಅಮಾಲ್ಗಮೇಷನ್ ವಿಧಾನ : ಇಳಿಜಾರಾದ ಒಂದು ವೇದಿಕೆಯ ಮೇಲೆ ತಾಮ್ರದ ಅಮಾಲ್ಗಮಿನಿಂದ ಮಾಡಿದ ತಗಡುಗಳನ್ನು ಹಾಸಿರುತ್ತಾರೆ.

ಚಿನ್ನದ ಪುಡಿಯುಳ್ಳ ಬಗ್ಗಡ ಇದರ ಮೇಲೆ ಹರಿಯುವಾಗ ಚಿನ್ನ ಅಮಾಲ್ಗಮ್ ಆಗಿ ತಗಡಿನ ಮೇಲ್ಮೈಗೆ ಅಂಟಿಕೊಳ್ಳುತ್ತದೆ. ಅದನ್ನು ಆಗಿಂದಾಗ್ಗೆ ಜತನದಿಂದ ಕೆರೆದು ತೆಗೆದು ಚರ್ಮದ ಚೀಲಗಳಿಗೆ ಹಾಕಿ ಹಿಸುಕಿದರೆ ಹೆಚ್ಚುವರಿ ಪಾದರಸದ ಆವಿಯನ್ನು ತಣಿಸಿ ದ್ರವ್ಯರೂಪಕ್ಕೆ ತಂದು ಪುನಃ ಉಪಯೋಗಿಸುತ್ತಾರೆ. ಈ ಕ್ರಮದಿಂದ ಅದುರಿನಲ್ಲಿದ್ದ ಅರ್ಧದಷ್ಟು ಚಿನ್ನ ಮಾತ್ರ ಲಭ್ಯವಾಗುತ್ತದೆ. ಉಳಿದರ್ಧ ವೇದಿಕೆಯ ಬುಡದಲ್ಲಿ ಸಂಗ್ರಹವಾಗುವ ಉಚ್ಛಿಷ್ಟದಲ್ಲಿ (ಟೇಲಿಂಗ್ಸ್) ಸೇರಿರುತ್ತದೆ. ಅದನ್ನು ಸಯನೈಡ್ ವಿಧಾನದಿಂದ ತೆಗೆಯಲಾಗುವುದು.



ಚಿತ್ರ 2. ಕೊಟ್ಟಣದ ಎದುರು ನೋಟವನ್ನು ಎಡಚಿತ್ರದಲ್ಲೂ ಪಾರ್ಶ್ವನೋಟವನ್ನು ಬಲಚಿತ್ರದಲ್ಲೂ ಕಾಣಿಸಿದೆ

(b) ಸಯನೈಡ್ ವಿಧಾನ : ಇನ್ನೂರನೆಯ ನಂಬರ್ ಜರಡಿ ಗಾತ್ರಕ್ಕೆ ಪುಡಿ ಮಾಡಿದ ಹೊಂಗಲ್ಲು ಅಥವಾ ಅಮಾಲ್ಗಮ್ ವಿಧಾನದಿಂದ ದೊರೆತ ಉಚ್ಛಿಷ್ಟ ಅಥವಾ ಇವೆರಡರ ಮಿಶ್ರಣವನ್ನು ಇಲ್ಲಿ ಬಳಸಬಹುದು. ಇವನ್ನು ನೀರಿನೊಂದಿಗೆ ಬೆರೆಸಿ ಕುಸುರಿ (ಪಲ್ಪ್) ಮಾಡಿ ಸ್ವಲ್ಪ ಸುಣ್ಣ ಮತ್ತು 0.03–0.1% ಸೋಡಿಯಮ್ ಸಯನೈಡ್ ದ್ರಾವಣವನ್ನು ಸೇರಿಸಲಾಗುವುದು. ಮಿಶ್ರಣವಿರುವ ತೊಟ್ಟಿಯ ತಳದಿಂದ ಗಾಳಿ ಹಾಯಿಸಿ 4–5 ಗಂಟೆಗಳ ಕಾಲ ಕಲಕುತ್ತಿದ್ದರೆ ಚಿನ್ನ ಮಾತ್ರ ವಿಲೀನವಾಗಿ, ಸೋಡಿಯಮ್ ಆರೊಸಯನೈಡಿನ ದ್ರಾವಣವಾಗುವುದು. ಕ್ಷಾರೀಯ ಮಾಧ್ಯಮವಿರುವುದರಿಂದ ಎರಡು ಅನುಕೂಲಗಳಿವೆ.

$$8NaCN + 4Au + 2H_2O + O_2 \rightarrow 4Na[Au(CN)_2] + 4NaOH \downarrow$$

ಅದುರಿನಲ್ಲಿರುವ ತಾಮ್ರ, ಕಬ್ಬಿಣ, ಆಂಟಿಮೊನಿ ಮತ್ತು ಆರ್ಸೆನಿಕ್ ಧಾತುಗಳ ಸಲ್ಫೈಡುಗಳು ವಿಲೀನವಾಗುವುದಿಲ್ಲ. ಅದ್ರಾವ್ಯ ವಸ್ತುಗಳು ಬೇಗ ತಳವೂರುತ್ತವೆ. ಒತ್ತರವನ್ನು ಇನ್ನೊಮ್ಮೆ ಸೋಡಿಯಮ್ ಸಯನೈಡಿನ ಸಾರರಿಕ್ತ (ಡೈಲ್ಯೂಟ್) ದ್ರಾವಣದಿಂದ ತೊಳೆದರೆ ಅದು ಗ್ರಹಿಸಿರಬಹುದಾದ ಚಿನ್ನವೂ ವಿಲೀನವಾಗುವುದು. ಆರೊಸಯನೈಡಿನ ದ್ರಾವಣವನ್ನು ಸೋಸಿ ನಿರ್ವಾತ ಕೋಶಗಳಲ್ಲಿ ಕಾಸಿದರೆ ವಾಯುವರ್ಜಿತ ತಿಳಿಯಾದ ದ್ರಾವಣ ದೊರೆಯುತ್ತದೆ. ಇದನ್ನು ಸತುವಿನ ತುರಿ ತುಂಬಿರುವ ಮರದ ಪೆಟ್ಟಿಗೆಗಳ ಮೂಲಕ ಹಾಯಿಸುತ್ತಾರೆ. ಆಗ ಚಿನ್ನ ಕಪ್ಪು ಮಣ್ಣಿನಂತೆ ಒತ್ತರಿಸುವುದು. ಸ್ವಲ್ಪ ಸೀಸದ ನೈಟ್ರೇಟನ್ನು ಹಾಕುವುದರಿಂದ ಸತು–ಸೀಸದ ಜೋಡಿಯುಂಟಾಗಿ ಚಿನ್ನವನ್ನು ಕ್ಷಿಪ್ರವಾಗಿ ಒತ್ತರಿಸುತ್ತದೆ.

$$2Na[Au(CN_2)] + 4NaOH + Zn \rightarrow Na_2ZnO_2 + 4NaCN + 2H_2O + 2Au \downarrow$$

ಒತ್ತರಿಸಿದ ಚಿನ್ನವನ್ನು ತೊಳೆದು ಒಣಗಿಸಿ ಸೋಡಿಯಮ್ ಕಾರ್ಬೊನೇಟ್ ಮತ್ತು ಇದ್ದಲುಗಳೊಡನೆ ಕರಗಿಸಿದರೆ ಸತುವಿನ ಅಂಶವನ್ನು ಕಳೆಯಬಹುದು. ಅದಿರಿನಲ್ಲಿದ್ದ ಚಿನ್ನದ ಶೇಕಡ 90–95 ಭಾಗವನ್ನು ಹೀಗೆ ಸಂಪಾದಿಸಬಹುದಾದರೂ ಅದರಲ್ಲಿ ಕೊಂಚ ಸತು, ಸೀಸ, ಬೆಳ್ಳಿ ಮತ್ತು ತಾಮ್ರಗಳು ಇದ್ದೇ ಇರುವುವು.

**ಕ್ಲೋರಿನೇಷನ್ ವಿಧಾನ :** ಸುವರ್ಣಯುಕ್ತ ಪಿರೈಟಿಸಿನಿಂದ ಚಿನ್ನವನ್ನು ತೆಗೆಯಲು ಇದು ಅತ್ಯುತ್ತಮವಾದ ವಿಧಾನ. ಮೊದಲು ಅದಿರನ್ನು ಹುರಿಯಬೇಕು. ಇದರಿಂದ ಗಂಧಕ ಮತ್ತು ಆರ್ಸೆನಿಕ್‌ಗಳ ಆಕ್ಸೈಡುಗಳಾಗಿ ಹೋಗುವುವು. ಚಿನ್ನದ ಹೊರತು ಎಲ್ಲ ಲೋಹಗಳೂ ಆಕ್ಸೈಡುಗಳಾಗುತ್ತವೆ. ಅಲ್ಲದೆ ಅದಿರು ಸರಂಧ್ರವಾಗುವುದು. ಹುರಿದ ಅದುರನ್ನು ನೀರಿನಿಂದ ತೋಯಿಸಿ ಮುಚ್ಚಿದ ಮರದ ಬಾನೆಗಳಲ್ಲಿ ಕ್ಲೋರೀನಿನ ವರ್ತನೆಗೆ ಗುರಿಪಡಿಸುತ್ತಾರೆ. ಆಗ ಚಿನ್ನ ಆರಿಕ್ ಕ್ಲೋರೈಡಾಗುತ್ತದೆ. $2Au + 3Cl_2 \rightarrow 2AuCl_3$

24 ಗಂಟೆಗಳ ಅನಂತರ ರಾಶಿಯನ್ನು ನೀರಿನಲ್ಲಿ ಕದಡಿದರೆ ಆರಿಕ್ ಕ್ಲೋರೈಡ್ ಮಾತ್ರ ವಿಲೀನವಾಗುವುದು. ದ್ರಾವಣದಿಂದ ಚಿನ್ನವನ್ನು ಒತ್ತರಿಸಲು ಫೆರಸ್ ಸಲ್ಫೇಟ್‌ನಿಂದ ಅಪಕರ್ಷಿಸುವುದು ವಾಡಿಕೆ.

$$AuCl_3 + 3FeSO_4 \rightarrow FeCl_3 + F_2(SO_4)_3 + Au \downarrow$$

ಒತ್ತರಿಸಿದ ಚಿನ್ನವನ್ನು ಸೋಸಿ ತೊಳೆದು ಒಣಗಿಸಿ ಕರಗಿಸಿದಾಗ ಗಟ್ಟಿ ಚಿನ್ನ ಉಂಟಾಗುತ್ತದೆ. ಇತ್ತೀಚಿಗೆ ಕ್ಲೋರೀನಿನ ಬದಲು ಬ್ರೋಮೀನನ್ನು ಬಳಸುವುದು ವಾಡಿಕೆ. ಬ್ರೋಮೀನ್ ಚಿನ್ನದೊಡನೆ ಹೆಚ್ಚು ಸರಾಗವಾಗಿ ವರ್ತಿಸುವುದರಿಂದ ಅದಿರಿನಲ್ಲಿರುವ ಚಿನ್ನದ ಶೇಕಡ 95 ಭಾಗವನ್ನು ಸಂಪಾದಿಸಬಹುದೆಂಬುದು ಇತ್ತೀಚಿನ ವರದಿ. ಆದರೆ ಬ್ರೋಮೀನ್ ಬೆಳ್ಳಿಯೊಡನೆ ವರ್ತಿಸದೆ ಹಾಗೆಯೇ ಉಳಿದುಬಿಡುವುದು ಇಲ್ಲಿ ಒಂದು ಅನಾನುಕೂಲ ಸನ್ನಿವೇಶ.

ಮೇಲೆ ವಿವರಿಸಿರುವ ವಿಧಾನಗಳಿಂದ ಪಡೆದ ಚಿನ್ನ ಶುದ್ಧವಾಗಿರುವುದಿಲ್ಲ. ಕಶ್ಮಲಗಳ ಪೈಕಿ ಬೆಳ್ಳಿಯ ಅಂಶವೇ ಹೆಚ್ಚು. ತಾಮ್ರ, ಸತು ಮತ್ತು ಸೀಸಗಳೂ ಇರುತ್ತವೆ. ಇವುಗಳ ನಿವಾರಣೆಗೆ ಅನುಸರಿಸುವ ಸಂಸ್ಕರಣ ವಿಧಿಗಳನ್ನು ಕೆಳಗೆ ಪ್ರಸ್ತಾವಿಸಲಾಗಿದೆ :

(I) ಉತ್ಕರ್ಷಣ : ಅಶುದ್ಧ ಚಿನ್ನವನ್ನು ಒಂದು ಮೂಸೆಯಲ್ಲಿ ಕರಗಿಸಿ ಅದರ ಮೇಲೆ ಬಿಸಿ ಗಾಳಿಯನ್ನು ಹಾಯಿಸುವರು. ಆಗ ಕೀಳು ಲೋಹಗಳೆಲ್ಲ ಉತ್ಕರ್ಷಿತವಾಗಿ ಕಸದಂತೆ ತೇಲುವುವು. ಇದನ್ನು ಗೋರುಸೌಟುಗಳಿಂದ ಎತ್ತಿ ಹಾಕಬಹುದು.

(ii) ಸಲ್ಫ್ಯೂರಿಕ್ ಆಮ್ಲದಿಂದ ವಿಚ್ಛೇದನ : ಲೋಹಮಿಶ್ರಣದಲ್ಲಿರುವ ಚಿನ್ನದ ಅಂಶ 33% ಮೀರಿದಾಗ ಸಲ್ಫ್ಯೂರಿಕ್ ಆಮ್ಲದಿಂದ ಪ್ರಭಾವಿತವಾಗುವುದಿಲ್ಲ. ಆದ್ದರಿಂದ ಅಂಥ ಚಿನ್ನಕ್ಕೆ ಬೆಳ್ಳಿಯನ್ನು ಕೂಡಿಸಿ ಚಿನ್ನದ ಪ್ರಮಾಣವನ್ನು 25% ಕ್ಕೆ ಇಳಿಸುತ್ತಾರೆ. ಹೀಗಾಗಿ ಈ ಕ್ರಮಕ್ಕೆ ಕ್ವಾರ್ಟೇಷನ್ ವಿಧಾನ ಎಂದು ಹೆಸರಿದೆ. ಇಂಥ ಲೋಹಮಿಶ್ರಣವನ್ನು ಕರಗಿಸಿ ನೀರಿಗೆ ಹಾಕಿ ತರಿತರಿಯಾಗಿ ಮಾಡಿ ಸಾರಯುತ (ಕಾನ್ಸೆಂಟ್ರೇಟೆಡ್) ಸಲ್ಫ್ಯೂರಿಕ್ ಆಮ್ಲ ಅಥವಾ ನೈಟ್ರಿಕ್ ಆಮ್ಲದೊಡನೆ ಕುದಿಸಿದರೆ ತಾಮ್ರ, ಬೆಳ್ಳಿ ಮುಂತಾದ ಕೀಳುಲೋಹಗಳು ವಿಲೀನವಾಗಿ ಆಯಾ ಸಲ್ಫೇಟುಗಳಾಗಿಯೋ ಇಲ್ಲವೆ ನೈಟ್ರೇಟುಗಳಾಗಿಯೋ ಪರಿವರ್ತಿತವಾಗುತವೆ. ಮತ್ತು ಚಿನ್ನದ ಕಂದು ಬಣ್ಣದ ಪುಡಿ ಉಳಿಯುವುದು. ಇದರಲ್ಲಿರುವ ಬೆಳ್ಳಿಯ ಪ್ರಮಾಣ ಕೇವಲ 0.002%. ಕಂದು ಪುಡಿಯನ್ನು ನೈಟ್ರಿಕ್ ಆಮ್ಲ ಮತ್ತು ನೀರಿನಿಂದ ತೊಳೆದು ಬೋರ‍್ಯಾಕ್ಸಿನೊಂದಿಗೆ ಕರಗಿಸಿ ಸಂಸ್ಕರಿಸಲಾಗುವುದು. ಬೆಳ್ಳಿಯ ಸಲ್ಫೇಟ್ ದ್ರಾವಣವಾಗಿರುವುದರಿಂದ ಅದಕ್ಕೆ ನೀರು ಸೇರಿಸಿ ಸಾರರಿಕ್ತಗೊಳಿಸಿ ತಾಮ್ರವನ್ನು ಕೂಡಿಸಿದರೆ ವಿಲೀನವಾಗಿದ್ದ ಬೆಳ್ಳಿಯೂ ಒತ್ತರಿಸುತ್ತದೆ. ಈ ವಿಧಾನ ಸ್ವಲ್ಪ ದುಬಾರಿಯಾದುದರಿಂದ ಅಷ್ಟಾಗಿ ಬಳಕೆಯಲ್ಲಿಲ್ಲ.

(iii) ವಿದ್ಯುದ್ವಿಧಾನ : ಚಿನ್ನವನ್ನು ಹೀಗೂ ಸಂಸ್ಕರಿಸಬಹುದು. 4% ಆರಿಕ್ ಕ್ಲೋರೈಡ್ ಮತ್ತು 5% ಹೈಡ್ರೋಕ್ಲೋರಿಕ್ ಆಮ್ಲಗಳ ಮಿಶ್ರಣವೇ ವಿದ್ಯುದ್ವಿಶ್ಲೇಷ್ಯ. ಅಶುದ್ಧ ಚಿನ್ನದ ಗಟ್ಟಿಗಳೇ ಧನಧ್ರುವಗಳು. ಶುದ್ಧ ಚಿನ್ನದಿಂದ ಮಾಡಿದ ತೆಳುವಾದ ತಗಡುಗಳೇ ಋಣ ಧ್ರುವಗಳು. ಶುದ್ಧ ಚಿನ್ನ ಋಣಧ್ರುವಗಳ ಮೇಲೆ ಶೇಖರಿಸುವುದು. ಧನಧ್ರುವಗಳಿಂದ ಬಿಡುಗಡೆಯದ ಬೆಳ್ಳಿ ಅದರ ಕ್ಲೋರೈಡಾಗಿ ಆ್ಯನೋಡ್ ಮಣ್ಣಿನ ರೂಪದಲ್ಲಿ ಉಳಿಯುತ್ತದೆ. ಶೇಖರವಾಗುವ ಆ್ಯನೋಡ್ ಮಣ್ಣು ಧನಧ್ರುವದ 20% ರಷ್ಟಿರುತ್ತದೆ. ಆದ್ದರಿಂದ ಅದನ್ನು ಆಗಿಂದಾಗ್ಗೆ ಹೊರಹಾಕದಿದ್ದರೆ ವಿದ್ಯುದ್ವಿಭಜನೆಯ ಕ್ರಿಯೆ ಸ್ಥಗಿತಗೊಳ್ಳುವ ಸಂಭವ ಉಂಟು. ಈ ವಿಧಾನದಿಂದ ಪರಿಶುದ್ಧವಾದ ಚಿನ್ನ ದೊರೆಯುವುದಾದರೂ ಗಣನೀಯ ಪ್ರಮಾಣದಲ್ಲಿ ಲೋಹ ವಿದ್ಯುದ್ವಿಶ್ಲೇಷ್ಯದಲ್ಲೇ ಅಡಗಿ ಅಲಭ್ಯವಾಗುವುದರಿಂದ ಇದು ವ್ಯಾವಹಾರಿಕವಲ್ಲ.

(iv) ಕ್ಲೋರಿನೇಷನ್ : ಈ ವಿಧಾನ ದುಬಾರಿಯಲ್ಲ. ನಿಯಂತ್ರಿಸುವುದು ಸುಲಭ. ಈ ವಿಧಾನದಿಂದ ಪರಿಶುದ್ಧ ಚಿನ್ನ ಒದಗುತ್ತದೆ. ಅಶುದ್ಧ ಚಿನ್ನವನ್ನು ಮಣ್ಣಿನ ಮೂಸೆಗಳಲ್ಲಿ ಕರಗಿಸಿ ಅದರ ಮೇಲೆ ಬೋರ‍್ಯಾಕ್ಸ್ ಪುಡಿಯನ್ನು ಹರಡುತ್ತಾರೆ. ಮೂಸೆಯ ತಳವನ್ನು ಮುಟ್ಟುವಂತಿರುವ ಒಂದು ನಾಳದ ಮೂಲಕ ಕ್ಲೋರೀನನ್ನು ಹಾಯಿಸಲಾಗುವುದು. ಆಗ ಚಿನ್ನ ನಿರ್ಲಿಪ್ತ ಸ್ಥಿತಿಯಲ್ಲಿರುತದೆ. ಕೀಳುಲೋಹಗಳು ಆಯಾ ಕ್ಲೋರೈಡನ್ನು ಬಿಟ್ಟು ಇತರ ಕ್ಲೋರೈಡುಗಳು ಆವಿಯಾಗಿ ಹೋಗುತ್ತವೆ. ಬೆಳ್ಳಿಯ ಕ್ಲೋರೈಡ್ ಬೋರ‍್ಯಾಕ್ಸ್ ಸಹಿತ ಕಸವಾಗಿ ತೇಲುವುದು. ಇದರಿಂದ ಬೆಳ್ಳಿಯನ್ನು ಪಡೆಯಬಹುದು. ಉಳಿದ ಚಿನ್ನವನ್ನು ಕರಗಿಸಿ ಗಟ್ಟಿಗಳನ್ನಾಗಿ ಮಾಡುತ್ತಾರೆ. ಈ ಶುದ್ಧೀಕರಣದ ಅವಧಿ 2–3 ಗಂಟೆಗಳು.

ಕೋಲಾರದ ಗಣಿಗಳಲ್ಲಿ ಅಮಾಲ್ಗಮೇಷನ್ ವಿಧಾನದಿಂದ ಚಿನ್ನದ ಬಹು ಭಾಗವನ್ನೂ ಸಯನೈಡ್ ವಿಧಾನದಿಂದ ಶೇಷಾಂಶವನ್ನೂ ತೆಗೆಯುತ್ತಾರೆ.

ಚಿನ್ನ ಆಕರ್ಷಕ ಹೊಂಬಣ್ಣದ ಲೋಹ. ಅದರ ತೆಳುವಾದ ತಗಡುಗಳನ್ನು ಪ್ರಸಾರಿತ ಬೆಳಕಿನಲ್ಲಿ ಹಿಡಿದರೆ ಹಸಿರು ಅಥವಾ ನೀಲಿಯಾಗಿ ಕಾಣುತ್ತವೆ. ದ್ರವಿತ ಲೋಹವೂ ಅಷ್ಟೆ. ದ್ರವನ ಬಿಂದು 1064°C, ಕುದಿಬಿಂದು 2610°C. ಸಾಪೇಕ್ಷ ಸಾಂದ್ರತೆ 19.30. ಇದು ಉತ್ತಮ ವಿದ್ಯುದ್ವಾಹಕ ಮತ್ತು ಉಷ್ಣವಾಹಕ. ಕುಟ್ಯ(ಮ್ಯಾಲಿಯಬಿಲಿಟಿ) ಮತ್ತು ತನ್ಯತೆಗಳಲ್ಲಿ (ಡಕ್ಟಿಲಿಟಿ) ಇದನ್ನು ಸರಿಗಟ್ಟಬಲ್ಲ ಮತ್ತೊಂದು ಲೋಹವಿಲ್ಲ. 0.00002 ಸೆಂ. ಮೀ ನಷ್ಟು ತೆಳ್ಳನೆಯ ಚಿನ್ನದ ರೇಕನ್ನು ಪಡೆಯಲು ಸಾಧ್ಯ. ಪುಸ್ತಕಗಳ ಹೊದಿಕೆಗಳ ಮೇಲೆ ಅಕ್ಷರಗಳ ಆಲಂಕಾರಿಕ ವಿನ್ಯಾಸಕ್ಕೆ ಇದು ಉಪಯುಕ್ತ.

ಚಿನ್ನ ರಾಸಾಯನಿಕವಾಗಿ ಪಟುವಾದ ಲೋಹವಲ್ಲ. ವಾಯು ಅಥವಾ ಆಮ್ಲಜನಕ, ನೀರು ಅಥವಾ ಹಬೆ, ಕ್ಷಾರಗಳು ಮತ್ತು ಪರಿಚಿತ ಆಮ್ಲಗಳು ಚಿನ್ನದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಆದರೆ ಕುದಿಯುತ್ತಿರುವ ಫೆರಿಕ್ ಕ್ಲೋರೈಡ್ ದ್ರಾವಣ, ಬಿಸಿಯಾದ ಸೆಲೆನಿಕ್ ಆಮ್ಲ, ಸಲ್ಫ್ಯೂರಿಕ್ ಅಥವಾ ಫಾಸ್ಫಾರಿಕ್ ಆಮ್ಲ, ಮಿಶ್ರಿತ ಟೆಲ್ಯೂರಿಕ್ ಆಮ್ಲ, ಕ್ಷಾರೀಯ ಸಲ್ಫೈಡ್ ಮತ್ತು ಥಯೊಸಲ್ಫೇಟುಗಳು, ಪರ್‌ಕ್ಲೋರೇಟ್ ಪರ್‌ಬ್ರೋಮೈಡ್ ಮತ್ತು ಪರ್‌ಅಯೊಡೈಡುಗಳು, ರಾಜಾಮ್ಲ ಮತ್ತು ವಾಯುವಿನ ಸಂಪರ್ಕದಲ್ಲಿ ಕ್ಷಾರೀಯ ಸಯನೈಡ್ ದ್ರಾವಣಗಳುಃಇವು ಮಾತ್ರ ಚಿನ್ನದೊಡನೆ ವರ್ತಿಸಲು ಶಕ್ತವಾಗಿವೆ. ಚಿನ್ನ ರಾಜಾಮ್ಲದಲ್ಲಿ ವಿಲೀನವಾದಾಗ ಹೈಡ್ರೋಕ್ಲೋರಿಕ್ ಆಮ್ಲ ಉಂಟಾಗುವುದು. ರಾಜಾಮ್ಲವೆಂಬುದು ಸಾರಯುತ ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸಾರಯುತ ನೈಟ್ರಿಕ್ ಆಮ್ಲಗಳ 3.1 ಗಾತ್ರ ಪ್ರಮಾಣದ ಮಿಶ್ರಣ. ಚಿನ್ನ, ಪ್ಲ್ಯಾಟಿನಮ್ ಮೊದಲಾದ ಘನಲೋಹಗಳನ್ನು ವಿಲೀನ ಮಾಡಿಕೊಳ್ಳುವುದರಿಂದ ಮಿಶ್ರಣಕ್ಕೆ ಈ ಹೆಸರು.

$$2Au + 3HNO_3 + 11HCl \rightarrow 2HAuCl_4 + 6H_2O + 3NOCl$$

ಸುಮಾರು 200° C ಉಷ್ಣತೆಯಲ್ಲಿ ಕ್ಲೋರೀನೊಡನೆ ಸಂಯೋಜನೆಗೊಂಡು ಆರಿಕ್ ಕ್ಲೋರೈಡನ್ನು ಕೊಡುವುದು. ಪಾದರಸದಲ್ಲಿ ದ್ರಾವಣವಾಗಿರುವ ಚಿನ್ನದ ಘನೀಭವನ ಉಷ್ಣತೆಯನ್ನು ಗಮನಿಸಿದರೆ ಅದು ಏಕ ಪರಮಾಣು ಅಣುಗಳಾಗಿಯೇ ಇರಬೇಕು ಎಂದೂ ಸೂಚಿತವಾಗುತ್ತದೆ.

ಚೊಕ್ಕ ಚಿನ್ನ ಅತಿ ಮೆದುವಾದುದರಿಂದ ಆಭರಣಗಳಿಗೆ ಮತ್ತು ನಾಣ್ಯಗಳಿಗೆ ಅಷ್ಟು ಉಪಯುಕ್ತವಲ್ಲ. ಇದರ ಸಲುವಾಗಿ ತಾಮ್ರ ಮತ್ತು ಬೆಳ್ಳಿಗಳನ್ನು ಸೇರಿಸುವುದು ರೂಢಿ. ಚಿನ್ನದ ಪರಿಶುದ್ಧತೆಯನ್ನು ಇಂತಿಷ್ಟು ಕ್ಯಾರೆಟುಗಳು ಎಂದು ಸೂಚಿಸುವುದು ವಾಡಿಕೆ. 24 ಕ್ಯಾರೆಟ್ಟಿನದು ಪರಿಶುದ್ಧ, ಅಪ್ಪಟ ಬಂಗಾರ. 14 ಕ್ಯಾರೆಟ್ ಚಿನ್ನವೆಂದರೆ 14 ತೂಕಭಾಗ ಚಿನ್ನ ಮತ್ತು 10 ಭಾಗ ಇತರ ಲೋಹಗಳು ಕೂಡಿವೆ ಎಂದರ್ಥ. ಇದರ ಪ್ರಕಾರ 18 ಕ್ಯಾರೆಟ್ ಚಿನ್ನದ ಪರಿಶುದ್ಧತೆ 75%. ಚಿನ್ನದ ನಾಣ್ಯಗಳಲ್ಲಿ 90% ಚಿನ್ನ ಮತ್ತು 10% ತಾಮ್ರವೂ ಒಡವೆ ತಯಾರಿಸಲು ಬಳಸುವ ಲೋಹದಲ್ಲಿ 84% ಚಿನ್ನ ಮತ್ತು 16% ತಾಮ್ರವೂ ಇರುತ್ತವೆ.

ಚಲಾವಣೆಯಲ್ಲಿರುವ ಹಣದ ನೋಟುಗಳ ಮೌಲ್ಯದ ಇಂತಿಷ್ಟು ಭಾಗ ಬಂಗಾರವನ್ನು ಎಲ್ಲ ದೇಶಗಳ ರಿಸರ್ವ್ ಬ್ಯಾಂಕುಗಳೂ ಠೇವಣಿಯಾಗಿ ಹೊಂದಿರಲೇಬೇಕೆಂಬ ಅಂತಾರಾಷ್ಟ್ರೀಯ ನಿಯಮವಿದೆ. ಪ್ರಪಂಚದ ಉತ್ಪಾದನೆಯಲ್ಲಿ ಸುಮಾರು ಅರ್ಧ ಭಾಗದಷ್ಟು ಚಿನ್ನ ಹೀಗೆ ಗಟ್ಟಿಗಳ ರೂಪದಲ್ಲಿ ಅಡಗಿ ಕುಳಿತಿದೆ. ಬೆಳ್ಳಿಗೆ ಚಿನ್ನದ ವಿದ್ಯುಲ್ಲೇಪನ ಮಾಡಬಹುದು. ಆದರೆ ತಾಮ್ರಕ್ಕೆ ಬೆಳ್ಳಿಯ ಲೇಪವಿದ್ದ ಹೊರತು ಚಿನ್ನ ಅಂಟದು. ಕಲಿಲಸ್ಥಿತಿಯಲ್ಲಿರುವ ಚಿನ್ನವನ್ನು ಗಾಜು ಮತ್ತು ಪಿಂಗಾಣಿಗಳಿಗೆ ಬಣ್ಣ ಕೊಡಲು ಬಳಸುತ್ತಾರೆ. ವೈದ್ಯಕೀಯದಲ್ಲೂ ಇದರ ಉಪಯೋಗ ಉಂಟು. ಸಸ್ಯಜನ್ಯ ಎಣ್ಣೆಯಲ್ಲಿ ಸೂಕ್ಷ್ಮಕಣಗಳ ರೂಪದಲ್ಲಿ ವಿಲಂಬಿತವಾಗಿರುವ ಚಿನ್ನಕ್ಕೆ ದ್ರವಬಂಗಾರ ಎಂದು ಹೆಸರು. ಪಿಂಗಾಣಿ ಸಾಮಾನುಗಳ ಮೇಲೆ ಮೂಡಿಸುವ ಚಿತ್ರ ಕೆಲಸಕ್ಕೆ ಇದು ಅಗತ್ಯ. ಆಭರಣ ಮತ್ತು ಕಲಾತ್ಮಕ ವಸ್ತುಗಳನ್ನು ತಯಾರಿಸಲು ಚಿನ್ನವನ್ನು ಉಪಯೋಗಿಸುತ್ತಾರೆ. **(ನೋಡಿ–ಚಿನ್ನ,–ಬೆಳ್ಳಿ,–ಕೆತ್ತನೆ)** ವೈಜ್ಞಾನಿಕ ಸಂಶೋಧನೆಗಳು ಮತ್ತು ಕೆಲವು ವಿಶೇಷೋಪಕರಣಗಳ ತಯಾರಿಕೆಗೆ ಚಿನ್ನ ಬಹು ಉಪಯುಕ್ತ. ಕ್ಷಿಪಣಿ ಮತ್ತು ರಾಕೆಟುಗಳ ಮೇಲ್ಭಾಗದಲ್ಲಿ ಈ ಲೋಹದ ಅತಿ ತೆಳುವಾದ ಪೊರೆಯುಂಟು. ಇದರಿಂದ ಅತಿರಕ್ತ ಕಿರಣಗಳ ಪ್ರತಿಫಲನಕ್ಕೆ ಬಹು ಅನುಕೂಲ. ಚಿನ್ನದ ಪಾರಕ ಅತಿಸೂಕ್ಷ್ಮ ಪೊರೆ ಮೋಟಾರು ವಾಹನಗಳ ಕಿಟಕಿಗಳ ಗಾಜಿನ ಬಾಗಿಲುಗಳ ತಯಾರಿಕೆಯಲ್ಲಿ ಉಪಯೋಗಕ್ಕೆ ಬರುವುದು. ಇಂಥ ಗಾಜುಗಳನ್ನು ಮೋಟಾರು ವಾಹನಗಳಲ್ಲಿ ಬಳಸುವುದರಿಂದ ರಸ್ತೆಯಲ್ಲಿ ದಟ್ಟವಾದ ಮಂಜು ಕವಿದಿರುವಾಗಲೂ ವಾಹನ ನಡೆಸುವುದು ಸುಗಮವಾಗುತ್ತದೆ. ಟ್ರಾನ್ಸಿಸ್ಟರುಗಳ ತಯಾರಿಕೆಯಲ್ಲೂ ಚಿನ್ನದ ಉಪಯೋಗ ಉಂಟು.

ಚಿನ್ನದ ಸಂಯುಕ್ತಗಳು : ಇವುಗಳಲ್ಲಿ ಎರಡು ಬಗೆಗಳಿವೆ. ಆರಸ್ ಮತ್ತು ಆರಿಕ್. ಆರಸ್ ಸಂಯುಕ್ತಗಳಲ್ಲಿ ಚಿನ್ನದ ವೇಲೆನ್ಸ್ 1. ಆರಿಕ್ ಸಂಯುಕ್ತಗಳಲ್ಲಿ 3. ಸಾಮಾನ್ಯವಾಗಿ ಇವೆಲ್ಲ ಅಸ್ಥಿರ ಸಂಯುಕ್ತಗಳು, ಕಾಸಿದಾಗ ಇಲ್ಲವೇ ಅಪಕರ್ಷಣಕಾರಿಗಳ ಸಂಪರ್ಕವಾದಾಗ ಇವು ಚಿನ್ನವಾಗಿಬಿಡುತ್ತವೆ. ಆಕ್ಸೈಡ್‌ಗಳ ಪೈಕಿ ಆರಸ್ ಆಕ್ಸೈಡನ್ನು ($Au_2O$) ಪಡೆಯಬೇಕಾದರೆ ಒತ್ತರಿಸಿದ ಆರಸ್ ಹೈಡ್ರಾಕ್ಸೈಡನ್ನು 200°C ಉಷ್ಣತೆಗೆ ಕಾಸಿದರೆ ಸಾಕು.

$$2AuOH \rightarrow Au_2O + H_2O$$

ಇದು ನೇರಿಳೆ ಬೂದು ಬಣ್ಣದ ಪುಡಿ. ಕಾಸಿದರೆ ವಿಭಜಿಸಿ ಚಿನ್ನ ಮತ್ತು ಆಕ್ಸಿಜನ್ನುಗಳನ್ನು ಕೊಡುತ್ತದೆ. ಆರಿಕ್ ಹೈಡ್ರಾಕ್ಸೈಡನ್ನು ಕಾಸಿದರೆ ಆರಿಕ್ ಆಕ್ಸೈಡ್ ($Au_2O_3$) ಉಂಟಾಗುವುದು. ಇದನ್ನೇ ಚಿನ್ನದ ಆಕ್ಸೈಡ್ ಎನ್ನುವುದು. ಇದು ಕಂದು ಕಪ್ಪು ಪುಡಿ. ನೀರಿನಲ್ಲಿ ಅದ್ರಾವ್ಯ. ಸುಮಾರು $160^0C$ ಉಷ್ಣತೆಗೆ ಕಾಸಿದರೆ ಆರಸ್ ಆಕ್ಸೈಡ್ ಕೊಡುವುದು

$$Au_2O_3 \rightarrow Au_2O + O_2 \uparrow$$

ಆಂಫೊಟೆರಿಕ್ ಆಕ್ಸೈಡ್ ಎಂದರೆ ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಗುಣಗಳೆರಡನ್ನೂ ಮೈಗೂಡಿಸಿಕೊಂಡಿರುವ ಆಕ್ಸೈಡ್. ಈ ಕಾರಣದಿಂದ ಅದು ಸಾರಯುತ ಆಮ್ಲಗಳಲ್ಲಿ ವಿಲೀನವಾಗಿ ಆಯಾ ಲವಣಗಳನ್ನೂ ಕಾಸ್ಟಿಕ್ ಪೊಟ್ಯಾಷ್ ದ್ರಾವಣದಲ್ಲಿ ವಿಲೀನವಾಗಿ ¥ÉÆmÁåµÀAiÀiÁ DgÉÃ £ÀÆB($KAuO_2$) ಕೊಡುವುದು. ಕೃತಕ ಹಲ್ಲುಗಳನ್ನು ತಯಾರಿಸಲು ಆರಿಕ್ ಆಕ್ಸೈಡ್ ಉಪಯುಕ್ತ. ತಣ್ಣನೆಯ ಸಾರರಿಕ್ತ ಪೊಟ್ಯಾಸಿಯಮ್ ಹೈಡ್ರಾಕ್ಸೈಡ್ ದ್ರಾವಣದೊಡನೆ ಆರಸ್ ಕ್ಲೋರೈಡ್ ಅಥವಾ ಆರಸ್ ಬ್ರೋಮೈಡ್ ದ್ರಾವಣ ವರ್ತಿಸಿದಾಗ ಆರಸ್ ಹೈಡ್ರಾಕ್ಸೈಡ್ ಒತ್ತರಿಸುವುದು. ಇದರ ಬಣ್ಣ ದಟ್ಟ ನೇರಿಳೆ. ಅತಿ ಸಾರರಿಕ್ತ ಕ್ಷಾರ. ಆರಿಕ್ ಕ್ಲೋರೈಡ್ ದ್ರಾವಣಕ್ಕೆ ಕಾಸ್ಟಿಕ್ ಪೊಟ್ಯಾಷ್ ದ್ರಾವಣವನ್ನು ಕೂಡಿಸಿದಾಗ ಆರಿಕ್ ಹೈಡ್ರಾಕ್ಸೈಡ್ $[Au(OH)_3]$ ಒತ್ತರಿಸುವುದು. ಇದು ಹಳದಿ ಕಂದುಬಣ್ಣದ ಪುಡಿ. ಬಿಸಿಮಾಡಿದರೆ ವಿಭಜನೆ ಹೊಂದುತ್ತದೆ. ಆರಿಕ್ ಆಕ್ಸೈಡಿನಂತೆ ಇದಕ್ಕೂ ಆಂಫೊಟೆರಿಕ್ ಗುಣ ಉಂಟು. ಅಮೋನಿಯದೊಂದಿಗೆ ವರ್ತಿಸಿದಾಗ ಆಲಿವ್ ಹಸಿರು ಬಣ್ಣದ ಪುಡಿ ಉಂಟಾಗುವುದು. ಫಲ್ಮಿನೇಟಿಂಗ್ ಗೋಲ್ಡ್ (ಸಿಡಿಯುವ ಚಿನ್ನ) ಎಂಬ ಈ ವಸ್ತುವಿಗೆ ತೀವ್ರ ಸ್ಫೋಟಕ ಗುಣವಿದೆ. ಆರಿಕ್ ಹೈಡ್ರಾಕ್ಸೈಡನ್ನು ಚಿನ್ನದ ಲೇಪ ಕೊಡುವುದು, ಕೃತಕ ದಂತಗಳ ತಯಾರಿಕೆ ಮತ್ತು ಇತರ ವೈದ್ಯಕೀಯ ಉಪಯೋಗಗಳಿಗೆ ಬಳಸುತ್ತಾರೆ.

ಆರಿಕ್ ಕ್ಲೋರೈಡನ್ನು ಎಚ್ಚರಿಕೆಯಿಂದ $170_0C$ ಉಷ್ಣತೆಗೆ ಕಾಸಿ ಆರಸ್ ಕ್ಲೋರೈಡನ್ನು ಪಡೆಯಬಹುದು. ತಿಳಿಹಳದಿ ಬಣ್ಣದ ಈ ವಸ್ತು ಅಸ್ಥಿರ. ಕಾಸಿದರೆ ವಿಭಜಿಸುವುದು. ಕ್ಲೋರೀನ್ ಬಿಡುಗಡೆಯಾಗಿ ಚಿನ್ನ ಉಳಿಯುತ್ತದೆ.

$$Aucl_3 \rightarrow AuCl + Cl_2 \uparrow$$

ನೀರಿನ ಸಂಪರ್ಕದಲ್ಲಿಯೂ ವಿಭಜಿಸುತ್ತದೆ. ಆಗ ಬರುವುದು ಆರಿಕ್ ಕ್ಲೋರೈಡ್ ಮತ್ತು ಚಿನ್ನ.

$$3Aucl \rightarrow AuCl_3 + 2Au$$

ಆರಿಕ್ ಕ್ಲೋರೈಡ್ ಚಿನ್ನದ ಬಲು ಮುಖ್ಯ ಸಂಯುಕ್ತ. ಇದನ್ನು ಚಿನ್ನದ ಕ್ಲೋರೈಡ್ ಎಂದೂ ಕರೆಯುತ್ತಾರೆ. ಜಲಯುಕ್ತ ಲವಣದ ರಾಸಾಯನಿಕ ಸೂತ್ರ $AuCl_3.2H_2O$. ಚಿನ್ನವನ್ನು ರಾಜಾಮ್ಲದಲ್ಲಿ ವಿಲೀನ ಮಾಡಿ ದ್ರಾವಣವನ್ನು ಸಾಂದ್ರೀಕರಿಸಿದರೆ ಹೈಡ್ರೋಕ್ಲೋರಾರಿಕ್ ಆಮ್ಲದ ($HAuCl_4.4H_2O$) ಹಳದಿ ಬಣ್ಣದ ಹರಳುಗಳು ಬೇರ್ಪಡುತ್ತವೆ. ಇವನ್ನು $120_0C$ ಉಷ್ಣತೆಗೆ ಕಾಸಿದರೆ ಚಿನ್ನದ ಕ್ಲೋರೈಡಿನ ಕೆಂಪು ಹರಳುಗಳು ದೊರೆಯುವುವು.

$$HAuCl_4.4H_2O \rightarrow AuCl_3.2H_2O + HCl + 2H_2O$$

ನಿರ್ಜಲ ಚಿನ್ನದ ಕ್ಲೋರೈಡ್ ಕಂದು ಬಣ್ಣದ ಪುಡಿ. ನೀರು, ಆಲ್ಕೋಹಾಲ್ ಮತ್ತು ಈಥರುಗಳಲ್ಲಿ ದ್ರಾವ್ಯ. $170_0$–$180_0C$ ಉಷ್ಣತಾಮಿತಿಯಲ್ಲಿ ಕಾಸಿದರೆ ಆರಸ್ ಕ್ಲೋರೈಡೂ ಈ ಮಿತಿಮೀರಿದರೆ ಚಿನ್ನ ಮತ್ತು ಕ್ಲೋರೀನುಗಳೂ ಉಂಟಾಗುವುವು. ಆರಿಕ್ ಕ್ಲೋರೈಡಿನ ಅಣು ಸೂತ್ರ $Au_2Cl_6$ ಆಗಿರಬೇಕೆಂದು ಆವಿಸಾಂದ್ರತೆ ಪ್ರಯೋಗಗಳಿಂದ ನಿರ್ಣಯಿಸಲಾಗಿದೆ. ಆರಿಕ್ ಕ್ಲೋರೈಡಿನ ದ್ರಾವಣಕ್ಕೆ ಸ್ಟ್ಯಾನಸ್ ಕ್ಲೋರೈಡ್ ($SnCl_2$) ಮತ್ತು ಸ್ಟ್ಯಾನಿಕ್ ಕ್ಲೋರೈಡುಗಳ ($SnCl_4$) ಸಾರರಿಕ್ತ ದ್ರಾವಣಗಳನ್ನು ಕೂಡಿಸಿ ಬಿಸಿ ಮಾಡಿದರೆ ತತ್‌ಕ್ಷಣ ಕಲಿಲ ಸ್ಥಿತಿಯಲ್ಲಿರುವ ಊದಾಬಣ್ಣದ ಚಿನ್ನ ಲಭಿಸುತ್ತದೆ. ಇದಕ್ಕೆ ಕ್ಯಾಸಿಯಸನ ಪರ್ಪಲ್ ಎಂದು ಹೆಸರು. ಚಿನ್ನದ ಲವಣಗಳನ್ನು ಗುರುತಿಸಲು ಇದೊಂದು ಸೂಕ್ಷ್ಮವಾದ ಪರೀಕ್ಷಾ ಪ್ರಯೋಗ. ಛಾಯಾಚಿತ್ರಗಳನ್ನು ಟೋನ್ ಮಾಡಲು, ಹಾವು ಕಚ್ಚಿ ಬಾಧೆಗೊಳಗಾದವರ ಚಿಕಿತ್ಸೆಗಾಗಿ, ಕೆಂಪುಗಾಜು ಮತ್ತು ವಿಶೇಷ ಮಸಿಗಳನ್ನು ತಯಾರಿಸಲು ಚಿನ್ನದ ಕ್ಲೋರೈಡಿನ ಬಳಕೆ ಉಂಟು. (ಬಿ.ವಿ.ಜಿ; ಎಚ್.ಜಿ.ಎಸ್.)

ಮಧ್ಯಯುಗದ ಕಾಲದಲ್ಲಿ ಚಿನ್ನ ಆರೋಗ್ಯಕ್ಕೆ ಸಹಕಾರಿ ಎಂದು ನಂಬಲಾಗಿತ್ತು. ಆಧುನಿಕ ವಿಜ್ಞಾನಿಗಳು ಸಹ ಬಂಗಾರಕ್ಕೆ ಔಷಧೀಯ ಗುಣಗಳಿವೆ ಎಂದು ಹೇಳುತ್ತಾರೆ. ಚಿನ್ನದ ಲವಣಗಳು ಔಷಧೀಯ ಗುಣಗಳನ್ನು ಹೊಂದಿದ್ದು ಇವುಗಳನ್ನು ಸಂಧಿವಾತ, ಉರಿಯೂತ ಮುಂತಾದ ಸಮಸ್ಯಗಳಿಗೆ ಔಷಧವಾಗಿ ಬಳಸಲಾಗುತ್ತದೆ.

ಇತ್ತೀಚೆಗೆ ಬಂಗಾರವನ್ನು ಚುಚ್ಚುಮದ್ದು ರೂಪದಲ್ಲಿ ಬಳಸಿ ನೋವು ನಿವಾರಣೆ, ಉರಿಯೂತ, ಕ್ಷಯ ಹಾಗೂ ಸಂಧಿವಾತ ಖಾಯಿಲೆಗಳನ್ನು ಗುಣಪಡಿಸಲು ಉಪ ಯೋಗಿಸುತ್ತಾರೆ. ವಿವಿಧ ರೀತಿಯ ದಂತಚಿಕಿತ್ಸೆ, ಅದರಲ್ಲೂ ಕೃತಕ ಹಲ್ಲುಗಳ ತಯಾರಿಕೆ ಯಲ್ಲಿ ಚಿನ್ನವನ್ನು ಬಳಸಲಾಗುತ್ತದೆ.

ಚಿನ್ನ ಹಾಗೂ ಚಿನ್ನಮಿಶ್ರಿತ ಲೋಹಗಳನ್ನು ಬಗೆಬಗೆಯ ಜೀವಶಾಸ್ತ್ರ, ಔಷಧಶಾಸ್ತ್ರ ಹಾಗೂ ಬೇರೆ ಬೇರೆ ವಿಜ್ಞಾನಗಳ ಸಂಶೋಧನೆಗಾಗಿ ಬಳಸುತ್ತಾರೆ. ವಿವಿಧ ರೀತಿಯ ಸೂಕ್ಷ್ಮದರ್ಶಕ ಸಂಶೋಧನೆಯಲ್ಲಿ ಚಿನ್ನವನ್ನು ಬಳಸಿ ಸಂಶೋಧನೆ ಮಾಡುತ್ತಾರೆ. ಇದಲ್ಲದೆ ತೆಳುವಾದ ಚಿನ್ನದ ರೇಕುಗಳನ್ನು ವಿವಿಧ ರೀತಿಯ ಖಾದ್ಯಗಳು ಹಾಗೂ ಸಿಹಿ ತಿಂಡಿಗಳನ್ನು ತಯಾರಿಸಲು ಅಲಂಕಾರಕ್ಕಾಗಿ ಬಳಸುತ್ತಾರೆ. ಯೂರೋಪಿನಲ್ಲಿ ಮಧ್ಯಯುಗದಲ್ಲಿದ್ದ ಶ್ರೀಮಂತರು ತಮ್ಮ ಅಂತಸ್ತನ್ನು ತೋರಲು ಅಡುಗೆಗಳಲ್ಲಿ ಚಿನ್ನದ ರೇಕು ಹಾಗೂ ಚಿನ್ನದ ಪ್ರತಿಯನ್ನು ಬಳಸುತ್ತಿದ್ದರು. ಚಿನ್ನವು ಆರೋಗ್ಯಕ್ಕೆ ಒಳ್ಳೆಯದು ಎಂದು ಅವರು ಭಾವಿಸಿದ್ದರು. ಆದರೆ ಸಂಶೋಧನೆಗಳು ಚಿನ್ನವು ದೇಹಕ್ಕೆ ಯಾವುದೇ ರೀತಿಯ ತೊಂದರೆ ಅಥವಾ ಉಪಯೋಗ ಮಾಡುವು ದಿಲ್ಲವೆಂದು ಹೇಳುತ್ತವೆ.

**ಚಿನ್ನ, ಬೆಳ್ಳಿ ಕೆತ್ತನೆ :** ಚಿನ್ನ ಮತ್ತು ಬೆಳ್ಳಿ ಬಹಳ ಹಿಂದಿನಿಂದಲೂ ಮಾನವನಿಗೆ ಅಪೂರ್ವ ಲೋಹಗಳಾಗಿವೆ. ಅವನ್ನವನು ಆಭರಣಗಳಾಗಿ ಧರಿಸುತ್ತ ಬಂದಿದ್ದಾನೆ; ಹಣವಾಗಿ ಬಳಸಿದ್ದಾನೆ. ಇಂದಿಗೂ ಅವು ಅವನ ಶ್ರೀಮಂತಿಕೆಯ ಮಾಪನಗಳಾಗಿವೆ.

ಗಣೇಶ ವಿಗ್ರಹ, ಜೈಪುರ, ರಾಜಸ್ಥಾನ

ಚಿನ್ನ, ಬೆಳ್ಳಿಯ ಗೋಲಾಕಾರದ ಮತ್ತು ಸ್ತಂಭಾಕಾರದ ಚಿಕ್ಕ ಮಣಿಗಳು ಸಿಂಧೂ ಸಂಸ್ಕೃತಿಯ ಉತ್ಖನನದಲ್ಲಿ ದೊರಕಿವೆ. ಚಿನ್ನದ ಮಣಿಗಳ ಮೇಲಿನ ಚಿಕ್ಕ ಚಿಕ್ಕ ಮುಚ್ಚಳಗಳು ರಚನಾಕೌಶಲದಲ್ಲಿ ಆಶ್ಚರ್ಯಕಾರಕವಾಗಿವೆ. ವೇದಗಳಲ್ಲಿ ಮತ್ತು ಪ್ರಾಚೀನ ಕಾವ್ಯ ಪುರಾಣಗಳಲ್ಲಿ ಬಂಗಾರ ಮತ್ತು ಬೆಳ್ಳಿಯಿಂದ ತಯಾರಿಸಿದ ನಾನಾ ಆಭರಣಗಳ ಹೆಸರುಗಳು ದೊರಕುತ್ತವೆ. ಕರ್ಣಶೋಭನ, ಕುಂಭ, ಖಾಡಿ, ರುಕ್ಮ, ಸೃಜ ರಸನ, ನಿನಭಗಳೆಂಬ ಆಭರಣಗಳು ಕ್ರಮವಾಗಿ, ಕಿವಿ, ತಲೆ, ಪಾದ, ಕೈ, ಕೊರಳು, ಟೊಂಕ–ಇವುಗಳಿಗೆ ಧರಿಸುವಂತವು ಆಗಿದ್ದವು. ಮಹಾಕಾವ್ಯಗಳ ಕಾಲದಲ್ಲಿ ಆಭರಣಗಳಲ್ಲಿನ ಕೌಶಲ ಪರಾಕಾಷ್ಠೆಯನ್ನು ಹೊಂದಿತ್ತು. ತಕ್ಷಶಿಲೆ, ಸಿತ್ರಪ, ಭೀರಗಳಲ್ಲಿ ನಡೆದ ಉತ್ಖನನಗಳಿಂದ ದೊರಕಿದ ಆಭರಣಗಳಲ್ಲಿ ಗ್ರೀಕ್ ಕಲೆಯ ಪ್ರಭಾವ ಕಂಡುಬರುತ್ತದೆ. ಸಾಂಚಿಯಲ್ಲಿ ದೊರಕಿದ ಕೊರಳಸರ, ಗೆಜ್ಜೆ–ಟಿಕ್ಕಿಗಳು ಅನುಪಮ ನಕ್ಷೆಯಿಂದ ತುಂಬಿವೆ. ಅಜಂತ, ಬೇಲೂರುಗಳಲ್ಲಿನ ಶಿಲ್ಪದಲ್ಲಿ ಕಂಡುಬರುವ ಆಭರಣಗಳ ನಕ್ಷೆಗಳು ಆಧುನಿಕವೂ



ಬೆಳ್ಳಿಯ ಕಿರೀಟಗಳು

ಶಿರಸಿಯ ಶ್ರೀ ಮಾರಿಕಾಂಬಾ ದೇವಿಯ ರತ್ನಖಚಿತ ಚಿನ್ನದ ಕಿರೀಟ. ವಜ್ರ, ಕೆಂಪು, ಪಚ್ಚೆ ಇತ್ಯಾದಿಗಳಿಂದ ಕೂಡಿದ ಕಿರೀಟದ ಮಧ್ಯದಲ್ಲಿ ಶೇಷಶಾಯಿಯ ಹಾಗೂ ಕೆಳಗೆ ನವಗ್ರಹ ಮೂರ್ತಿಗಳಿವೆ. ಎತ್ತರ $22\frac{1}{2}$", ತಯಾರಕರು : ದಿ. ಗುರುರಾವ್ ರಾಮಚಂದ್ರ ರಾಯಕರ, ಶಿರಸಿ

ಮೈಸೂರು ಅರಮನೆಯಲ್ಲಿರುವ ಚಾಮುಂಡೇಶ್ವರಿಯ ಚಿನ್ನದ ಪಲ್ಲಕ್ಕಿ

ಬೆಳ್ಳಿಯ ಬಹುಮಾನ ಗೊಂಡೆ, ಮಂಗಳೂರಿನ ಶಿಲ್ಪ

ಬೆಳ್ಳಿಯ ಕಬರೇಶ್ವರಿ, ಉತ್ಸವಮೂರ್ತಿ ($1\frac{1}{2}$')
ತಯಾರಕ : ನರಸಿಂಹ ಶೇಟ, ಸಿದ್ದಾಪುರ

ವೈವಿಧ್ಯಪೂರ್ಣವೂ ಆಗಿವೆ. ಮೊಗಲರ ಕಾಲದಲ್ಲಿ ಆಭರಣಪ್ರಿಯತೆ ಬಹಳವಾಗಿತ್ತು. ಜಮ್ಮು ಎಂಬ ಕಿವಿಯ ಆಭರಣವಂತೂ ಲೋಕಪ್ರಿಯವಾಗಿತ್ತು. ಮುಕುಟ, ನೆತ್ತಿಮಣಿ, ನತ್ತು, ಚಿತ್ತಾಣ, ಬುಗುಡಿ, ಬುಲಾಕು, ಕಂಠಿ(ಸರ), ಕಂಕಣ, ವಂಕಿ ಜೂರಿಕ ಇತ್ಯಾದಿ ಆಭರಣಗಳು ಕಾಲಕ್ಕನುಸಾರವಾಗಿ ಬೇರೆ ಬೇರೆ ಹೆಸರುಗಳಿಂದ ಆಕಾರ, ಅಳತೆಗಳಿಂದ ರೂಢಿಯಲ್ಲಿವೆ.

ಕದ್ರಿಯ ಬೆಳ್ಳಿಯ ರಥ

ಚಿನ್ನ, ಬೆಳ್ಳಿಯ ಕೆಲಸ ಮಾಡುವವರು ಬಹುತೇಕ ಪರಂಪರೆಯನ್ನೇ ಅನುಸರಿಸುತ್ತಾರೆ. ಅವರ ಉದ್ಯೋಗ ಪರಂಪರಾಗತವಾಗಿರುತ್ತದೆ. ಅವರು ದೇವರಪೂಜೆ, ಧರ್ಮಕಾರ್ಯಗಳಿಗೆ ಬೇಕಾದ ಸಲಕರಣೆ, ಆಭರಣಗಳನ್ನು ಶಾಸ್ತ್ರಬದ್ಧವಾಗಿ ಮಾಡುತ್ತಾರೆ. ಆದರೆ ಸ್ತ್ರೀಪುರುಷರು ಧರಿಸುವ ಆಭರಣಗಳನ್ನು ಆಯಾ ಕಾಲದ ರುಚಿ, ಬೇಡಿಕೆಗಳನ್ನು ಅನುಸರಿಸಿ ತಯಾರಿಸುತ್ತಾರೆ. ಚಿನ್ನ ಬೆಳ್ಳಿಯ ಉದ್ಯೋಗವನ್ನು ವಿಶಿಷ್ಟ ಜಾತಿಯವರು ಮಾಡುತ್ತಿದ್ದು, ಅವರನ್ನು ವಿಶ್ವಕರ್ಮರು, ವಿಶ್ವ ಬ್ರಾಹ್ಮಣರು, ದೈವಬ್ರಾಹ್ಮಣರು, ಪಾಂಚಾಲಿಯರು, ಪತ್ತಾರರು, ಸೋನಾರರು, ಅಕ್ಕಸಾಲಿಗರು, ಚಿನಿವಾರರು, ಅರ್ಕಚಾರಿಗಳು, ಆಚಾರಿಗಳು, ಪಂಚಾನನರು, ಸುವರ್ಣಕಾರರು ಎಂದೂ ಕರೆಯುತ್ತಾರೆ. ಆಧುನಿಕ ನಾಗರಿಕತೆಯಲ್ಲಿ ಜನರು ಸೂಕ್ಷ್ಮತರ ಮತ್ತು ವೈವಿಧ್ಯಮಯವಾದ ಆಭರಣಗಳನ್ನು ಹೆಚ್ಚು ಹೆಚ್ಚಾಗಿ ಇಚ್ಛಿಸುತ್ತಾರಾಗಿ ಚಿನಿವಾರರು, ಪರಂಪರಾಗತವಾಗಿ ಬಂದ ಆಭರಣ ತಯಾರಿಕೆಯ ಜ್ಞಾನ ಸಾಕಾಗದ್ದರಿಂದ ವಿಶೇಷ ತರಬೇತಿಯನ್ನು ಪಡೆಯುತ್ತಿದ್ದಾರೆ. ಹೊರಗಿನ ನೌಕರರನ್ನು ನಿಯಮಿಸಿಕೊಳ್ಳುವ ರೂಢಿ ಈಚೀಚೆಗೆ ಬರುತ್ತಿದೆ. ಒಂದು ಚಿಕ್ಕ ಒಳದಲ್ಲಿ ಅಕ್ಕಸಾಲಿಗನ ಕೆಲಸ ನಡೆದಿರುತ್ತದೆ. ಅದು ಬಹುತೇಕ ಮನೆಯ ಹೊರಭಾಗ. ಅವನ ಸುತ್ತಮುತ್ತ ಆಭರಣಗಳನ್ನು ತಯಾರಿಸಲು ಬೇಕಾದ ಸಲಕರಣೆಗಳನ್ನು ಇಟ್ಟುಕೊಂಡಿರುತ್ತಾನೆ. ಐರಣಿ, ಸುತ್ತಿಗೆ, ಚಿಮ್ಮಟಿಗೆ, ಊದುಗೊಳವೆ, ಅಗ್ನಿಕುಂಡ, ಕುದ್ದಾಲಿ, ಕೆತ್ತನೆಯ ಚಾಣಗಳು, ಬೈರಿಗೆ, ಕರಗಸ, ತರತರದ ಅಚ್ಚುಗಳು, ಪಂಕ, ಅರಗಳು, ಕಂಪಾಸು, ತ್ರಾಸ, ತೂಕ–ಅಳತೆಗಳು, ಗುಂಜಿಗಳು– ಇವು ಅವನ ಕೆಲವು ಹತ್ಯಾರುಗಳು. ಚಿಮಣಿ, ಇಕ್ಕಳ, ತಂತಿ ಪಿಟ್ಟಾಡಾಯ್ ಯಂತ್ರಗಳು– ಇವು ನಯಗೊಳಿಸುವ ಸಾಧನಗಳು. ಅಲ್ಲದೆ, ಬಂಗಾರವನ್ನು ಶುದ್ಧಗೊಳಿಸಲು ನೈಟ್ರಿಕ್ ಮತ್ತು ಸಲ್‌ಫ್ಯೂರಿಕ್ ಆಮ್ಲಗಳು, ಆಭರಣದ ವಿವಿಧ ಮಾದರಿಯ ಚಿತ್ರಗಳುಳ್ಳ ಪುಸ್ತಕಗಳು ಅವನ ಬಳಿ ಇರುತ್ತವೆ.

ಮೈಸೂರು ಒಡೆಯರ ಕಾಲದ ನವರತ್ನ ಕಿರೀಟ

ಚಿನ್ನ–ಬೆಳ್ಳಿಯ ಕೈಗಾರಿಕೆ ಕೇವಲ ಕೈಕಸುಬಲ್ಲ. ಅದು ಕಲೆ, ಉಪಯುಕ್ತ ಕಲೆ. ಕಲೆ ಮತ್ತು ಕೈಕಸಬುಗಳ ಕೌಶಲದಲ್ಲಿ ಈ ವೃತ್ತಿ ಲಾಭದಾಯಕವೂ ಆಗಿದೆ. ಆರ್ಥಿಕವಾಗಿ ಈ ವೃತ್ತಿ ಮಧ್ಯಮ ವರ್ಗಕ್ಕೆ ಸೇರುತ್ತದೆ. ಗ್ರಾಹಕರ, ಅಕ್ಕಸಾಲಿಗರ ಮಧ್ಯದಲ್ಲಿ ದಲಾಲಿ ಮಾಡುವ ಸರಾಫರು ಮಾತ್ರ ಶ್ರೀಮಂತ ವರ್ಗಕ್ಕೆ ಸೇರುತ್ತಾರೆ. ಈ ದಂಧೆಗೆ ಪ್ರಾಮಾಣಿಕತೆ, ಕುಶಲತೆ ಅಷ್ಟೇ ಮಹತ್ತ್ವದ್ದಾಗಿವೆ.

1962ರಲ್ಲಿ ಭಾರತದ ಸುವರ್ಣ ನಿಯಂತ್ರಣ ಕಾನೂನು ಬಳಕೆಗೆ ಬಂತು. ಅದರ ಪ್ರಕಾರ ಬಂಗಾರವನ್ನು ಸಂಗ್ರಹಿಸಿಕೊಟ್ಟುಕೊಳ್ಳಬಾರದೆಂದಾಯಿತು. 14 ಕ್ಯಾರೆಟ್ಟುಗಳಿಗಿಂತ ಹೆಚ್ಚು ಶುದ್ಧ ಬಂಗಾರವನ್ನು ಉಪಯೋಗಿಸಿ ಆಭರಣಗಳನ್ನು ಮಾಡಬಾರದೆಂದು ನಿರ್ಬಂಧಿಸಲಾಯಿತು. ಇದರಿಂದ ಅಕ್ಕಸಾಲಿಗರಿಗೆ ತಮ್ಮ ಕಡೆಗೆ ಇರುವ ಸಲಕರಣೆಗಳಿಂದ ಆಭರಣ ತಯಾರಿಸಲು ಸಾಧ್ಯವಾಗದಷ್ಟು ಧಾತು ಗಟ್ಟಿಯಾಯಿತು. ಹೆಚ್ಚು ಬಂಡವಾಳವನ್ನು ತೊಡಗಿಸಿ ಆಭರಣ ತಯಾರಿಸಲು ಬೇಕಾಗುವ ಯಂತ್ರಗಳನ್ನು ಕೊಳ್ಳಬೇಕಾದ ಪ್ರಸಂಗ ಒದಗಿತು. 1967ರಲ್ಲಿ ಈ ಕಾಯದೆಯಲ್ಲಿ ಕೆಲಮಟ್ಟಿನ ಮಾರ್ಪಾಡು ನಡೆಯಿತಾದರೂ ಮೊದಲಿನಷ್ಟು ಈ ಉದ್ಯೋಗ ಲಾಭದಾಯಕವೂ ಸುಲಭವೂ ಆಗಿ ಉಳಿಯಲಿಲ್ಲ **ನೋಡಿ–ಅಕ್ಕಸಾಲಿಗರ–ಉದ್ಯಮ.** (ಆರ್.ಜಿ.ಆರ್.ಎ.)

**ಚಿನ್ಮಯ ವಿಶ್ವತತ್ತ್ವ :** ಪ್ರಪಂಚಕ್ಕೆ ಏಕಮಾತ್ರ ಕಾರಣವಾದ ಪರತತ್ತ್ವ ಸ್ವರೂಪವನ್ನು ಕುರಿತು ಇರುವ ಅನೇಕ ವಾದಗಳಲ್ಲಿ ಒಂದು. ವಿಶ್ವಕ್ಕೆ ಮೂಲಭೂತವಾದ ವಸ್ತು ತರ್ಕಬದ್ಧವಾದ ಮಹಾ ಚೈತನ್ಯ ಎಂದು ಈ ವಾದ (ಪ್ಯಾನ್‌ಲಾಜಿಸಂ) ಹೇಳುತ್ತದೆ. ವಿಚಾರಗಮ್ಯವಾದುದು ಮಾತ್ರ ವಾಸ್ತವಿಕ. ಚೈತನ್ಯ ತಾರ್ಕಿಕ ರೀತಿಯಲ್ಲಿ ಅಭಿವ್ಯಕ್ತಿ ಹೊಂದುತ್ತದೆ. ಯುಕ್ತವಾದದ್ದು ಸತ್ಯ, ಸತ್ಯವಾದದ್ದು ಯುಕ್ತ ಎಂದು ಹೇಳಿ ಹೆಗಲ್ ಈ ವಾದವನ್ನು ಸಮರ್ಥಿಸುತ್ತಾನೆ **(ನೋಡಿ–ಆಧುನಿಕ–ಪಾಶ್ಚಾತ್ಯತತ್ತ್ವದ–ಮುನ್ನಡೆ).** (ಎಸ್.ಎಸ್.ಆರ್.)

**ಚಿನ್ಸುರ :** ಕೋಲ್ಕತ್ತದ ಬಳಿ ಹೂಗ್ಲಿ ನದಿಯ ದಡದಲ್ಲಿ ಇರುವ ಒಂದು ಪಟ್ಟಣ. ಡಚ್ ಈಸ್ಟ್ ಇಂಡಿಯ ಕಂಪನಿಯ ಮುಖ್ಯ ವಸಾಹತುವಾಗಿತ್ತು (1653). ಡಚ್ಚರು ಇಲ್ಲಿಂದ ಕಚ್ಚಾ ರೇಷ್ಮೆ, ಬಟ್ಟೆ, ಪೆಟ್ಲುಪ್ಪುಗಳನ್ನು ರಫ್ತು ಮಾಡುತ್ತಿದ್ದರು. ಪ್ಲಾಸಿ ಕದನದ ಬಳಿಕ ಇಂಗ್ಲಿಷರು ಬಂಗಾಳದಲ್ಲಿ ಯಶಸ್ಸು ಗಳಿಸುತ್ತಿದ್ದದ್ದು ಚಿನ್ಸುರದಲ್ಲಿದ್ದ ಡಚ್ಚರ ಅಸೂಯೆಗೆ ಕಾರಣವಾಯಿತು. ಅವರು ಬಂಗಾಳದ ನವಾಬ ಮೀರ್ ಜಾಫರನೊಂದಿಗೆ ಬ್ರಿಟಿಷರ ವಿರುದ್ಧ ಗುಪ್ತ ಒಪ್ಪಂದ ಮಾಡಿಕೊಂಡರು. ಡಚ್ಚರು ಜಾವದಿಂದ ಸೈನಿಕರನ್ನು ಕರೆಸಬೇಕೆಂದಿದ್ದರು. ಆದರೆ ರಾಬರ್ಟ್ ಕ್ಲೈವನ ಮುತ್ಸದ್ದಿತನದಿಂದ ಡಚ್ಚರ ಯೋಜನೆ ವಿಫಲವಾಯಿತು. ಡಚ್ಚರ ಸೈನ್ಯ ಬರುವುದಕ್ಕೆ ಮುಂಚೆಯೇ ಕ್ಲೈವ್ ಬಿದೆರಾ ಕದನದಲ್ಲಿ ಡಚ್ಚರನ್ನು ಸೋಲಿಸಿದ (ನವೆಂಬರ್, 1769). ಡಚ್ಚರು ಶಾಂತಿ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಅವರು ಎಡ ಚಿನ್ಸುರವನ್ನು ಮಾತ್ರ ವ್ಯಾಪಾರಕ್ಕಾಗಿ ಬಳಸಬೇಕೆಂದು ಕ್ಲೈವ್ ನಿರ್ಬಂಧ ಹಾಕಿದ. ಚಿನ್ಸುರ ಪಟ್ಟಣ ಡಚ್ಚರ ಕೈಯಲ್ಲಿದ್ದದ್ದು 1825ರ ವರೆಗೆ ಮಾತ್ರ. ಸುಮಾತ್ರದಲ್ಲಿಯ ಕೆಲವು ಪ್ರದೇಶಗಳ ವಿನಿಮಯ ನಡೆದಾಗ ಚಿನ್ಸುರವನ್ನೂ ಡಚ್ಚರು ಬ್ರಿಟಿಷರಿಗೆ ಬಿಟ್ಟುಕೊಟ್ಟರು.

ಬಂಗಾಳದ ಪ್ರಥಮ ಮಿಷನರಿ ಶಾಲೆ ಸ್ಥಾಪಿತವಾದ್ದು ಇಲ್ಲೇ. (ಬಿ.ಎಂ.)

**ಚಿಪ್ಪುಗಳು ಮತ್ತು ಚಿಪ್ಪು ಸಂಗ್ರಹಣೆ :** ಸಾಧಾರಣವಾಗಿ ಕೆಲವು ಜೀವಿಗಳ ಮೈಯನ್ನು ಆವರಿಸಿರುವ ಕಠಿಣವಾದ ರಕ್ಷಾಕವಚವನ್ನು ಚಿಪ್ಪು ಎನ್ನುವರು. ಚಿಪ್ಪುಗಳು ಸಸ್ಯಗಳ ಕಾಯಿ ಮತ್ತು ಬೀಜಗಳನ್ನೂ ಪ್ರಾಣಿಗಳಲ್ಲಿ ಸರೀಸೃಪ ಮತ್ತು ಪಕ್ಷಿಗಳ ಮೊಟ್ಟೆಗಳನ್ನೂ ಆಮೆ, ಚಿಪ್ಪು ಹಂದಿ ಮುಂತಾದ ಕಶೇರುಕಗಳ ಹೊರಮೈಯನ್ನೂ ಆವರಿಸಿವೆ. ಫೊರಾಮಿನಿಫೆರ, ಕಠಿಣಚರ್ಮಿ, ಕಂಟಕಚರ್ಮಿ, ಬ್ರ್ಯಾಕಿಯೋಪೊಡ, ಮೃದ್ವಂಗಿ (ಮಾಲಸ್ಕ) ಮುಂತಾದ ಅಕಶೇರುಕಗಳಲ್ಲಿಯೂ ಚಿಪ್ಪುಗಳಿವೆ. ಪ್ರಸಕ್ತ ಲೇಖನದಲ್ಲಿ ಮೃದ್ವಂಗಿ ಚಿಪ್ಪುಗಳ ವಿಚಾರವನ್ನು ಮಾತ್ರ ತಿಳಿಸಿದೆ.

ಮೃದ್ವಂಗಿ ಚಿಪ್ಪುಗಳು ಮನಮೋಹಕವಾದುದರಿಂದ ಲೋಕಪ್ರಸಿದ್ಧವಾಗಿವೆ. ವೈವಿಧ್ಯಮಯ ವರ್ಣವಿನ್ಯಾಸ, ಆಕಾರ, ಪ್ರರೂಪ, ಮಿರುಗುವ ಮೈರಚನೆಗಳನ್ನು ಪಡೆದಿರುವುದರಿಂದಲೂ ಕಡಲಿನ ತೀರದಲ್ಲಿ ಹೇರಳವಾಗಿ ಸಿಗುವುದರಿಂದಲೂ ಇವು ಮಾನವನನ್ನು ಹಿಂದಿನಿಂದಲೂ ಆಕರ್ಷಿಸಿವೆ. ಆದ್ದರಿಂದಲೇ ಹಿಂದೆ ಜನ ಇವನ್ನು ಆಭರಣ, ಸಲಕರಣೆ ಮತ್ತು ನಾಣ್ಯಗಳನ್ನಾಗಿ ಉಪಯೋಗಿಸುತ್ತಿದ್ದರು. ಇವುಗಳ ವಿಚಾರವಾಗಿ ಅರಿಸ್ಟಾಟಲ್ ಮತ್ತು ಪ್ಲಿನಿ ದೀರ್ಘವಾಗಿ ಬರೆದಿದ್ದಾರೆ. ಪುರಾತನ ಪಾಂಪೆ ಕಟ್ಟಡದ ಅವಶೇಷಗಳಲ್ಲಿ ಮತ್ತು ಯೂಕಟಾನ್‌ನ ಮಯಾನ್ ಪಿರಮಿಡ್ಡಿನ ಒಂದು ಗೂಡಿನಲ್ಲಿ ಚಿಪ್ಪುಗಳು ಕಂಡುಬಂದಿವೆ. ಬಹುಶಃ ಪುರಾತನ ಕಾಲದಲ್ಲಿ ಮಾಡಿದ ಚಿಪ್ಪುಗಳ ಸಂಗ್ರಹಣೆಯ ಉಳಿಕೆಗಳು ಇವು ಎಂದು ತಿಳಿಯಲಾಗಿದೆ. ಮೃದ್ವಂಗಿ ವಂಶದಲ್ಲಿ ಐದು ವರ್ಗಗಳಿವೆ. ಕೆಲವು ಪ್ರಭೇದಗಳನ್ನುಳಿದು ಮಿಕ್ಕೆಲ್ಲ ಮೃದ್ವಂಗಿಗಳಲ್ಲಿ ಚಿಪ್ಪುಗಳು ದೇಹವನ್ನು ಆವರಿಸಿವೆ. ಆಂಫಿನ್ಯೂರ ವರ್ಗದ ಕೈಟಾನಿಡೀ ಕುಟುಂಬದ ಪ್ರಾಣಿಗಳ ಮೈಮೇಲೆ ಫಲಕಗಳಿವೆ. ಸ್ಕ್ಯಾಫೊಪೋಡ ವರ್ಗದಲ್ಲಿ ಆನೆಕೊಂಬಿನಂಥ ಕೊಳವೆ ರೀತಿಯ ಒಂದೇ ಒಂದು ಚಿಪ್ಪು ಇದೆ. ಕಪ್ಪೆಚಿಪ್ಪು ಪ್ರಾಣಿಗಳಲ್ಲಿ ಜೋಡಿ ಚಿಪ್ಪುಗಳೂ ಗ್ಯಾಸ್ಟ್ರೊಪೊಡ ವರ್ಗದಲ್ಲಿ ಶಂಖಾಕಾರದ ಒಂದು ಚಿಪ್ಪೂ ಹೊರಕವಚವಿರುವ ಶಿರೋಪಾದಿಗಳಲ್ಲಿ (ಸೆಫಲಾಪೊಡ) ಕೋಣೆಗಳಿರುವ ಚಿಪ್ಪುಗಳೂ ಇವೆ. ಚಿಪ್ಪುಗಳು ಮೃದ್ವಂಗಿಗಳ ಮೆತು ದೇಹವನ್ನು ಆವರಿಸಿ ರಕ್ಷಣೆಯನ್ನು ಕೊಡುತ್ತವೆ. ಮೃದ್ವಂಗಿಗಳ ದೇಹದ ಸುತ್ತ ಇರುವ ಮ್ಯಾಂಟಲಿನ ಹೊರಪದರದ ಜೀವಕೋಶಗಳು ಚಿಪ್ಪನ್ನು ನಿರ್ಮಿಸುವುವು. ಚಿಪ್ಪಿನ ಉತ್ಪಾದನೆ ಸಾಧಾರಣವಾಗಿ ಎಲ್ಲ ಮೃದ್ವಂಗಿಗಳಲ್ಲಿ ಒಂದೇ ರೀತಿಯದು. ಚಿಪ್ಪಿನಲ್ಲಿ ಹೊರಗಿನ ಪೆರಿಯಾಸ್ಟ್ರಕಮ್, ಮಧ್ಯದ ಪ್ರಿಸ್ಮ್ಯಾಟಿಕ್ ಮತ್ತು ಒಳಗಿನ ನೆಕ್ರಿಯಸ್ ಪದರಗಳಿವೆ. ವಿವಿಧ ಪ್ರಭೇದಗಳಲ್ಲಿ ಈ ಪದರಗಳ ದಪ್ಪ ಹಾಗೂ ಒಳರಚನೆ ಬೇರೆ ಬೇರೆ ರೀತಿ ಇರುವುದುಂಟು. ಚಿಪ್ಪುಗಳು ಪ್ರಾಣಿಯ ದೇಹವನ್ನು ರಕ್ಷಿಸುವುವಲ್ಲದೆ ವಿವಿಧ ಅಂಗಗಳಿಗೆ ಆಧಾರವಾಗಿವೆ. ಪ್ರಾಣಿಗೂ ಅದರ ಚಿಪ್ಪಿಗೂ ನಿಕಟ ಸಂಬಂಧ ಉಂಟು. ಚಿಪ್ಪಿಲ್ಲದೆ ಪ್ರಾಣಿ ಜೀವಿಸಲಾರದು. ಪ್ರಾಣಿ ಸತ್ತ ಮೇಲೆ ಅದರ ಖಾಲಿ ಚಿಪ್ಪನ್ನು ಕೆಲವು ಸಣ್ಣಪ್ರಾಣಿಗಳು ತಮ್ಮ ಗೂಡನ್ನಾಗಿ ಉಪಯೋಗಿಸುವುದುಂಟು. ಉದಾಹರಣೆಗೆ ಸಂನ್ಯಾಸಿ ಏಡಿಯು ಶಂಖವನ್ನು ತಾತ್ಕಾಲಿಕ ಗೂಡನ್ನಾಗಿ ಮಾಡಿಕೊಳ್ಳುತ್ತದೆ. ಮೃದ್ವಂಗಿಗಳು ಅನೇಕ ಪ್ರಾಣಿಗಳ ಜೊತೆ ಸಹಚರ ಜೀವನವನ್ನು ನಡೆಸುತ್ತವೆ. ಉದಾಹರಣೆಗೆ ಚಿಪ್ಪಿನ ಮೇಲೆ ವಾಸಿಸುವ ಕುಟುಕುಕಣವಂತ ಜೀವಿಗಳು ಮತ್ತು ಮೃದ್ವಂಗಿಗಳು ಒಂದಕ್ಕೊಂದು ಸಹಾಯಕವಾಗುವುವು.


ಮ್ಯೂರೆಕ್ಸ್

ಚಿಪ್ಪುಗಳ ಸಂಗ್ರಹಣೆಯು ನಾಣ್ಯ ಮತ್ತು ಅಂಚೆಚೀಟಿಗಳ ಸಂಗ್ರಹಣೆಯ ಹವ್ಯಾಸದಂತೆ ಬಹಳ ಇತ್ತೀಚಿನದು. ಇವುಗಳ ಶೇಖರಣೆಯ ಕಾರ್ಯ 18ನೆಯ ಶತಮಾನದ ಪೂರ್ವಾರ್ಧದ ಅಂತರದಲ್ಲಿ ಇಂಗ್ಲಂಡಿನಲ್ಲಿ ಬಹು ಹೆಚ್ಚಾಗಿತ್ತು. ಈ ಕಾಲದಲ್ಲಿ ಕಂಡುಹಿಡಿದ ಹೊಸ ದ್ವೀಪಗಳಿಂದ ಅಪೂರ್ವವಾದ ಹಾಗೂ ಆಕರ್ಷಣೀಯವಾದ ಹೊಸ ಚಿಪ್ಪುಗಳ ಸಂಗ್ರಹಣೆಯಾಯಿತು. ಅವನ್ನು ಸಿರಿವಂತ ವರ್ತಕರು ತಮ್ಮ ಸಂಗ್ರಹಣೆಯ ಮಾದರಿಗಳಿಗಾಗಿ ಕೊಂಡರು. 1850–60ರಲ್ಲಿ ಚಿಪ್ಪುಸಂಗ್ರಹಣೆಯ ಹವ್ಯಾಸ ವಿಪುಲವಾಗಿತ್ತಲ್ಲದೆ ಅವುಗಳ ಹರಾಜೂ ಸರ್ವೇಸಾಧಾರಣವಾಗಿತ್ತು. ಆಗ ಅಪರೂಪದ ಹಾಗೂ ಆಕರ್ಷಣೀಯ ಚಿಪ್ಪುಗಳಿಗೆ ಒಳ್ಳೆಯ ಬೆಲೆ ಸಿಗುತ್ತಿತ್ತು. ಆದರೆ ಚಿಪ್ಪುಸಂಗ್ರಹಕಾರರು ಹೆಚ್ಚಾದಂತೆ ಅಪರೂಪದ ಚಿಪ್ಪುಗಳು ಮಾರುಕಟ್ಟೆಗೆ ಹೆಚ್ಚು ಬರತೊಡಗಿ ಅವುಗಳ ಬೆಲೆ ಇಳಿಮುಖವಾಯಿತು. ಉದಾಹರಣೆಗೆ ಮೊದಮೊದಲು ಒಂದು ಚಿಪ್ಪಿಗೆ 50–60 ಪೌಂಡು ಮೌಲ್ಯವಿದ್ದ ಜನಪ್ರಿಯವಾದ ವೊಲುಟ ಜುನೋನಿಯ ಎಂಬ ಚಿಪ್ಪಿನ ಬೆಲೆ ಅದರ ಸಂಗ್ರಹಣೆ ಹೆಚ್ಚಾದ ಮೇಲೆ 5 ಪೌಂಡಿಗೆ ಇಳಿಯಿತು. ಇದರಂತೆಯೇ ಇನ್ನೂ ಅನೇಕ ಚಿಪ್ಪುಗಳ ಬೆಲೆಯೂ ತಗ್ಗಿತು. ಆದರೂ ಅವುಗಳ ವರ್ಣವಿನ್ಯಾಸ, ವೈವಿಧ್ಯಮಯ ಆಕಾರ, ಮೈರಚನೆ ಬಹು ಮೋಹಕವಾದುದರಿಂದಲೂ ಬಹುಮುಖ ಉಪಯೋಗಗಳಿಂದಲೂ ಚಿಪ್ಪುಗಳ ಸಂಗ್ರಹಣೆಯ ಕಾರ್ಯ ಜನಪ್ರಿಯವಾಗಿ ಮುಂದುವರಿಯಿತು.

ಮೃದ್ವಂಗಿಗಳು ಜಲ ಮತ್ತು ನೆಲವಾಸಿಗಳೆರಡೂ ಹೌದು. ಆದರೆ ಜಲವಾಸಿಗಳೇ ಹೆಚ್ಚು, ಅದರಲ್ಲೂ ಬಹುಪಾಲು ಮೃದ್ವಂಗಿಗಳು ಕಡಲಲ್ಲಿ ಜೀವಿಸುತ್ತವೆ. ಬಹು ಅಪರೂಪದ, ಅಂದದ, ಅಮೂಲ್ಯವಾದ ಚಿಪ್ಪುಪ್ರಾಣಿಗಳು ಕಡಲಲ್ಲಿ ಸಿಗುವುವು. ಚಿಪ್ಪುಗಳ ಜಗತ್ತಿನಲ್ಲಿ ಅತಿ ಹೆಚ್ಚಿನ ಸ್ಥಾನವನ್ನು ಪಡೆದಿರುವ ಪ್ರಭೇದಗಳ ಕುಟುಂಬಗಳೆಂದರೆ ಸೈಪ್ರಿಡೀ (ಕವಡೆಗಳು), ಕೋನಿಡೀ (ಶಂಖಗಳು), ವಲ್ಯೂಟಿಡೀ (ವಲ್ಯೂಟ್‌ಗಳು) ಮತ್ತು ಮ್ಯೂರಿಸಿಡೀ (ಬಂಡೆಚಿಪ್ಪುಗಳು); ಇವೆಲ್ಲವೂ ಗ್ಯಾಸ್ಟ್ರೊಪೊಡ ವರ್ಗಕ್ಕೆ ಸೇರಿದವು. ಅತಿ ಅಪೂರ್ವವಾದ ಹಾಗೂ ಪ್ರಿಯವಾದ ಒಂದು ಪ್ರಭೇದವೆಂದರೆ ಕಡಲ ಶೋಭೆ (ಗ್ಲೋರಿ ಆಫ್ ದಿ ಸೀ) ಎಂದು ಹೆಸರಾಗಿರುವ ಕೋನಸ್ ಗ್ಲೋರಿಯ ಮಾರಿಸ್ ಎಂಬ ಚಿಪ್ಪು. ಇಲ್ಲಿಯವರೆಗೆ ಬಹು ಮೋಹಕವಾದ ಈ ತೆರನ ಸುಮಾರು 30ಚಿಪ್ಪುಗಳು ಮಾತ್ರ ಸಿಕ್ಕಿವೆ. 1957ರಲ್ಲಿ ಒಂದು ಚಿಪ್ಪಿನ ಬೆಲೆ 1250 ಡಾಲರ್ ಇತ್ತು.

ಮೃದ್ವಂಗಿಗಳು ವಿವಿಧ ಪರಿಸರಗಳಲ್ಲಿ ವಾಸಿಸುತ್ತವೆ. ಕೆಲವು ಉಬ್ಬರವಿಳಿತ ಪ್ರದೇಶಗಳಲ್ಲಿ ವಾಸಿಸಿದರೆ ಮತ್ತೆ ಕೆಲವು ಆಳ ನೀರಿನಲ್ಲಿ ವಾಸಿಸುವುವು. ಇದರಿಂದಾಗಿ ಕೆಲವು ಚಿಪ್ಪುಗಳು ಅಪರೂಪ, ಕೆಲವು ಬಹಳ ಸಾಮಾನ್ಯ. ಮತ್ತೆ ಕೆಲವು ಬಲು ಹೇರಳ. ಮರಳಿರುವ ಅಥವಾ ಬಂಡೆಗಳಿರುವ ಉಬ್ಬರವಿಳಿತ ತೀರಪ್ರದೇಶಗಳಿಗೆ ಅನೇಕ ಪ್ರಭೇದಗಳು ಹೊಂದಿಕೊಂಡಿವೆ. ಇಂಥಲ್ಲಿ ಉಬ್ಬರ ಪೂರ್ತಿ ಇಳಿದ ಮೇಲೆ ಚಿಪ್ಪುಗಳನ್ನು ಆಯ್ದುಕೊಳ್ಳುವುದು ಸುಲಭ. ಉಬ್ಬರವಿಳಿತ ಪ್ರದೇಶದಲ್ಲಿ ಬಹು ಅಂದದ ಕೆಲವು ಚಿಪ್ಪುಗಳು ಸಿಗುವುದುಂಟು. ಉದಾಹರಣೆಗೆ ನಯವಾದ ಹೊಳಪು ರಂಗಿನ ಆಲಿವಿಡೀ (ಆಲಿವ್ ಚಿಪ್ಪುಗಳು), ನಾಟಿಸಿಡೀ (ಚಂದ್ರ ಚಿಪ್ಪುಗಳು), ಸ್ಟ್ರಾಂಬಿಡೀ (ಸ್ಟ್ರಾಂಬ್‌ಗಳು), ಟೆರೆಬ್ರಿಡೀ (ಶಕುನ ಚಿಪ್ಪುಗಳು) ಮತ್ತು ಅನೇಕ ಜೋಡಿಚಿಪ್ಪು ಪ್ರಾಣಿಗಳ ಚಿಪ್ಪುಗಳು. ಬಂಡೆಗಳ ಮೇಲೆ ಹಾಗೂ ಕೆಳಗೆ ಲಿಟೋರಿನಿಡೀ (ಪೆರಿವಿಂಕಲ್), ಟರ್ಬೊ (ರುಮಾಲು ಚಿಪ್ಪು) ಮತ್ತು ಲಿಂಪೆಟ್‌ಗಳು ಹಾಗೂ ಸುರುಳಿಸುತ್ತುವ ಕೈಟಾನಿಡೀ ಪ್ರಾಣಿಗಳು ಕಂಡುಬರುತ್ತವೆ. ಮಿಕ್ಕ ಮೃದ್ವಂಗಿಗಳು ಸಮುದ್ರದ ಉಬ್ಬರವಿಳಿತ ಕನಿಷ್ಠ ರೇಖೆಯಾಚೆಯ ನೆರಿಟಿಕ್ ವಲಯದ ನೀರಿನಲ್ಲಿ ವಾಸಿಸುತ್ತವೆ. ಇವುಗಳ ಚಿಪ್ಪುಗಳು ಬಿರುಗಾಳಿ ಎದ್ದಾಗ ತೀರಕ್ಕೆ ಒಗೆಯಲ್ಪಡುವುವು. ಈ ಪ್ರದೇಶದ ಚಿಪ್ಪುಗಳು ಉಬ್ಬರವಿಳಿತ ಪ್ರದೇಶದ ಚಿಪ್ಪುಗಳಿಗಿಂತ ಅಪೂರ್ವ ಮತ್ತು ಅಮೂಲ್ಯ. ಆಳಸಮುದ್ರದಲ್ಲಿ ಬಹು ಅಪೂರ್ವವಾದ ಬೆಲೆಯ ವಲ್ಯೂಟ್‌ಗಳು, ಶಂಖಗಳು, ಕವಡೆಗಳು ಮತ್ತು ಬಂಡೆಚಿಪ್ಪುಗಳು ಇವೆ. ಇವನ್ನು ಮೇಲಕ್ಕೆ ತರಲು ವಿಶೇಷ ಹಡಗುಗಳು ಮತ್ತು ಆಳಸಮುದ್ರದಲ್ಲಿ ಉಪಯೋಗಿಸುವ ಸಲಕರಣೆಗಳು ಅಗತ್ಯ. ಆದ್ದರಿಂದ ಈ ಚಿಪ್ಪುಗಳ ಸಂಗ್ರಹಣೆ ಕಷ್ಟಕರವಾದುದು ಮತ್ತು ದುಬಾರಿ ಖರ್ಚಿನದು ಕೂಡ. ಇದರಿಂದಾಗಿ ಸಾಮಾನ್ಯ ಸಂಗ್ರಹಕಾರನಿಗೆ ಇವು ಸಿಗುವುದು

ಅಸಾಧ್ಯವಾಗಬಹುದು. ಆದರೆ ಈ ಚಿಪ್ಪುಗಳು ಸೀಗಡಿ ಅಥವಾ ಮೀನುಬಲೆಗಳಲ್ಲಿ ಬರುವುದುಂಟು. ಉದಾಹರಣೆಗೆ ಮೂಲಂಗಿ ಆಕಾರದ ಚಿಪ್ಪಿರುವ ಬ್ಯೂಸಿಕಾನ್ ಕೊಯಾರ್ಕ್‌ಟೇಟಮ್. ಜಾತಿಯ ಪ್ರಾಣಿಗಳು ವೈಜ್ಞಾನಿಕ ಹಾಗೂ ವಾಣಿಜ್ಯ ದೃಷ್ಟಿಯಿಂದ ಮುಖ್ಯವಾದುವು. ಸಾಧಾರಣವಾಗಿ ಆಳಸಮುದ್ರದಲ್ಲಿ ಜೀವಿಸುವ ಈ ಪ್ರಾಣಿಯ ಚಿಪ್ಪು ಬಲು ಆಕರ್ಷಕವಾಗಿದೆ. ಅನೇಕ ಮೃದ್ವಂಗಿಗಳು ಭೂವಾಸಿಗಳೂ ಹೌದು. ಇಂಥವುಗಳಲ್ಲಿ ವರ್ಣರಂಜಿತ ಚಿಪ್ಪುಗಳಿವೆ.



ವಿವಿಧ ಬಗೆಯ ಚಿಪ್ಪುಗಳು : 1. ಏಕ್ಮೀಯ, 2. ಹ್ಯಾಲಿಯೋಟಸ್, 3. ಟ್ರೋಕಸ್, 4. ಕ್ರೆಪಿಡ್ಯುಲ, 5. ಲಿಟೊರೈನ, 6. ಸ್ಟ್ರಾಂಬಸ್, 7. ಕ್ರ್ಯಾಸಾಸ್ಟ್ರಿಯ, 8. ಕ್ಯಾರೋನಿಯ, 9. ಪ್ಲೂರೋಸೀರ, 10. ಬ್ಯೂಸಿಕಾನ್, 11. ಆಕಟೈನ, 12. ಸೆರೈಟೈಲಿಸ್ ನೋಡೋಸಸ್ (ಟ್ರಯಾಸಿಕ್ ಯುಗದ ಶಿರಪಾದಿಯ ಚಿಪ್ಪು), 13. ಟ್ರಯೋಡಾಪ್ಸಿಸ್, 14. ಆರ್ಕ, 15. ಮಾಕ್ಟ್ರ, 16. ಪೆಕ್ಟನ್, 17. ಕ್ಯಾಂಪಿಲೋಮ, 18. ಕೋನಸ್, 19. ಟರಿಲೈಟಿಸ್ ಕಾಸ್ಟೇಟಸ್, 20. ಟೆರಡೊ

ಆಳನೀರಿನ ಚಿಪ್ಪುಗಳನ್ನು ಮೃದ್ವಂಗಿ ಭಕ್ಷಕ ಮೀನುಗಳ ಹೊಟ್ಟೆಯನ್ನು ಸೀಳಿ ಶೇಖರಿಸಬಹುದು. ಸಮುದ್ರತಳದಲ್ಲಿ ವಾಸಿಸುವ ಮೀನುಗಳಾದ ಹ್ಯಾಡಕ್ ಮತ್ತು ಕಾಡ್ ಮೀನುಗಳ ಹೊಟ್ಟೆಗಳಲ್ಲಿ ಒಡೆಯದ ಹಾಗೂ ಶುಭ್ರವಾದ ಚಿಪ್ಪುಗಳು ಸಿಕ್ಕಿವೆ. ಘುಲ್ಪನ್ ಕವಡೆ (ಸೈಪ್ರಿಯ ಘುಲ್ಪೋನಿ) ಮುಂತಾದ ಅಪರೂಪದ ಮತ್ತು ಹೆಚ್ಚು ಬೆಲೆಯ ಚಿಪ್ಪುಗಳನ್ನು ಈ ವಿಧದಿಂದಲೇ ಸಂಗ್ರಹಿಸುವರು. ಹವಳದಲ್ಲಿ ಅಡಗಿರುವ ಅನೇಕ ಅಮೂಲ್ಯ ಚಿಪ್ಪುಗಳನ್ನು ನೀರಿನಲ್ಲಿ ಮುಳುಗಿ ತರುತ್ತಾರೆ. ಶಿರೋಪಾದಿಗಳಲ್ಲಿ ನಾಟಿಲಸ್ ಜೀವನಕ್ಕೆ ಆವಶ್ಯಕವಾದ ನೆರಳು, ತೇವ ಮತ್ತು ಆಹಾರ ದೊರೆಯುವ ಸ್ಥಳಗಳಲ್ಲೆಲ್ಲ ಇವು ಸಾಮಾನ್ಯವಾಗಿ ಕಂಡುಬರುತ್ತವೆ. ಬಹುತೇಕ ಭೂಮೃದ್ವಂಗಿಗಳು ಸಣ್ಣವು ಮತ್ತು ಸರಳ. ಇವು ಎಲ್ಲರಿಗೂ ಪ್ರಿಯವಾದುವಲ್ಲ. ಪ್ರಾದೇಶಿಕ ಅಭ್ಯಾಸ ನಡೆಸುವ ವಿಜ್ಞಾನಿಗೆ ಹಾಗೂ ಹವ್ಯಾಸಿ ಸಂಗ್ರಹಕಾರರಿಗೆ ಮಾತ್ರ ಇವುಗಳಲ್ಲಿ ಆಸಕ್ತಿ. ಕೆಲವು ಹೊಳೆಯುವ ಬಣ್ಣದ ಚಿಪ್ಪುಗಳೂ ದೊಡ್ಡಗಾತ್ರದ ಚಿಪ್ಪುಗಳೂ ಇರುವುದುಂಟು. ಇವುಗಳಲ್ಲಿ ದಕ್ಷಿಣ ಫ್ಲಾರಿಡ ಮತ್ತು ಕ್ಯೂಬದಲ್ಲಿರುವ ಲಿಗ್ವಸ್ ಎಂಬ ಮರಶಂಖ ಪಾಪುವದ ಪಾಪೈನ,

ಫಿಲಿಪೀನ್ಸಿನ ಹೆಲೆಕೊಸ್ಟೈಲ ಮತ್ತು ಆಫ್ರಿಕದ ಅಖಾಟಿನ ಜಾತಿಯ ಪ್ರಾಣಿಗಳು ಎಲ್ಲರಿಗೂ ಪರಿಚಿತವಾಗಿರುವ ಮೃದ್ವಂಗಿಗಳು. ಇವುಗಳ ಸಂಗ್ರಹ ಸುಲಭವಲ್ಲ. ಸಂಗ್ರಹಕಾರರು ಅನೇಕ ಅನನುಕೂಲತೆಗಳನ್ನೂ ಅಪಾಯ ಪರಿಸ್ಥಿತಿಗಳನ್ನೂ ಎದುರಿಸಬೇಕಾಗುವುದು. ಉದಾಹರಣೆಗೆ, ಫ್ಲಾರಿಡದ ಮರಶಂಖ ಪ್ರಾಣಿಗಳು ವಾಸಿಸುವ ಪ್ರದೇಶದಲ್ಲಿ ಅಪಾಯಕಾರಿಗಳಾದ ಕಾಟನ್ ಮೌತ್ ಹಾವು, ಬುಡುಬುಡಿಕೆ ಹಾವು ಮುಂತಾದ ವಿಷಸರ್ಪಗಳೂ ಸೊಳ್ಳೆಗಳೂ ಇರುವುದರಿಂದ ಈ ಚಿಪ್ಪಿನ ಸಂಗ್ರಹ ಬಲುಕಷ್ಟ. ಸಿಹಿನೀರಿನ ಮೃದ್ವಂಗಿಗಳಲ್ಲಿ ಅಂದವಾಗಿರುವ ಚಿಪ್ಪುಗಳಿರುವುದು ಕೆಲವು ಪ್ರಾಣಿಗಳಲ್ಲಿ ಮಾತ್ರ. ಆದ್ದರಿಂದ ಸಂಗ್ರಹಕಾರರ ದೃಷ್ಟಿಯಲ್ಲಿ ಸಿಹಿನೀರಿನ ಮೃದ್ವಂಗಿಗಳು ಅಷ್ಟು ಮುಖ್ಯವಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನದ ಮಧ್ಯ ಪಶ್ಚಿಮಭಾಗದಲ್ಲಿ ಹರಿಯುವ ಕೆಲವು ನದಿಗಳಲ್ಲಿ ಕೆಲವು ಜೋಡಿ ಚಿಪ್ಪುಪ್ರಾಣಿಗಳ ಪ್ರಭೇದಗಳಿವೆ. ಅವುಗಳ ಚಿಪ್ಪುಗಳ ಒಳಮೈ ಮುತ್ತಿನ ಬಣ್ಣಕ್ಕಿರುತ್ತದೆ. ಇವುಗಳಲ್ಲಿ ಸಣ್ಣಗಂತಿ ಮತ್ತು ಅಲೆಯಂತಿರುವ ಏಣುಗಳನ್ನುಳ್ಳ ಕೆಲವು ಚಿಪ್ಪುಗಳು ಹೆಚ್ಚು ಸುಂದರವಾಗಿರುವುದರಿಂದ ಗುಂಡಿಗಳನ್ನು ತಯಾರಿಸಲು ಇವನ್ನು ಬಳಸುವರು. ಸಿಹಿನೀರಿನ ಶಂಖ ಪ್ರಾಣಿಗಳು ಉಷ್ಣವಲಯದ ರೋಗತಜ್ಞರಿಗೆ ಬಹು ಮುಖ್ಯವಾದವು. ಏಕೆಂದರೆ ಇವುಗಳಲ್ಲಿ ಕೆಲವು ಮನುಷ್ಯನ ಹಾಗೂ ಪ್ರಾಣಿಗಳ ರೋಗಗಳನ್ನು ಹರಡುವ ಪರಾವಲಂಬಿಗಳಿಗೆ ಆಶ್ರಯದಾತವಾಗಿವೆ.

ಬಹುತೇಕ ಸಂಗ್ರಹಕಾರರ ಅಭಿರುಚಿ ಹೆಚ್ಚು ಮೌಲ್ಯದ ಚಿಪ್ಪುಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಕೆಲವರಿಗೆ ಪ್ರಾದೇಶಿಕ ಚಿಪ್ಪುಗಳ ಸಂಗ್ರಹಣೆಯಲ್ಲಿ ಮಾತ್ರ ಆಸಕ್ತಿ. ಇವರು ಆಯಾ ಪ್ರದೇಶದ ಮೃದ್ವಂಗಿಗಳು ವಾಸಿಸುವ ಪರಿಸರ, ಅವುಗಳ ಸ್ವಭಾವಗಳ ವಿಚಾರವಾಗಿ ಅಮೂಲ್ಯವಾದ ವೈಜ್ಞಾನಿಕ ಅಂಶಗಳನ್ನು ಒದಗಿಸುವರು. ಇನ್ನೂ ಕೆಲವು ಸಂಗ್ರಹಕಾರರು ಒಂದು ಗೊತ್ತಾದ ಜಾತಿಗೆ ಸೇರಿದ ಪ್ರಭೇದಗಳ ಚಿಪ್ಪುಗಳನ್ನು ಮಾತ್ರ ಶೇಖರಿಸುವರು. ವರ್ಗೀಕರಣ ಮತ್ತು ವಿಕಾಸದ ಅಧ್ಯಯನದಲ್ಲಿ ನಿರತರಾಗಿರುವ ವಿಜ್ಞಾನಿಗಳಿಗೆ ಈ ರೀತಿಯ ಸಂಗ್ರಹಣೆ ಬಹು ಉಪಯುಕ್ತವಾಗಿದೆಯಲ್ಲದೆ ಚಿಪ್ಪುಗಳ ಜಗತ್ತಿನ ಯಥಾರ್ಥದರ್ಶನವನ್ನೂ ನೀಡುವುದು. ಜಲಚರಮೃದ್ವಂಗಿತಜ್ಞರ ಹಾಗೆ ಭೂಚರಮೃದ್ವಂಗಿ ತಜ್ಞರೂ ಇದ್ದಾರೆ. ಭೂಮೃದ್ವಂಗಿಗಳು ಕಡಲ ಮೃದ್ವಂಗಿಗಳಿಗಿಂತ ಗಾತ್ರದಲ್ಲಿ ಸಣ್ಣವಾದ್ದರಿಂದ ಅವುಗಳ ಸಂಗ್ರಹ ಸುಲಭ. ಕಡಿಮೆ ಖರ್ಚಿನಲ್ಲಿ ಒಂದು ಕುಟುಂಬದ ಅಥವಾ ಜಾತಿಯ ಎಲ್ಲ ಚಿಪ್ಪುಗಳನ್ನೂ ಸಂಗ್ರಹಿಸಲು ಸಾಧ್ಯವಾಗುತ್ತದೆ. ಚಿಪ್ಪುಗಳ ಸಂಗ್ರಹ ಅನೇಕ ಅಭಿರುಚಿಯ ಅಧ್ಯಯನಗಳಿಗೆ ತಳಹದಿ ಆಗಬಹುದು. ಅಂಚೆ ಚೀಟಿ ಮತ್ತು ನಾಣ್ಯಗಳು ಯಂತ್ರದಿಂದ ತಯಾರಾಗುವುದರಿಂದ ಒಂದೇ ರೀತಿ ಇರುವುವು. ಆದರೆ ಯಾವ ಎರಡು ಚಿಪ್ಪುಗಳೂ ಒಂದೇ ತರಹ ಇರುವುದಿಲ್ಲ. ಒಂದು ಪ್ರಭೇದದ ಪ್ರಾಣಿಗಳಲ್ಲಿನ ವ್ಯತ್ಯಾಸಗಳಿಂದಾಗಿ ಅವು ಬೇರೆ ಬೇರೆ ಪ್ರಭೇದಗಳೆಂದು ಖಚಿತವಾಗಿ ಪರಿಗಣಿಸಿದ್ದ ಪ್ರಾಣಿಗಳು ನಿಜವಾಗಿಯೂ ವಿಪರೀತ ವ್ಯತ್ಯಾಸಗಳನ್ನು ತೋರಿಸುವ ಒಂದೇ ಪ್ರಾಣಿಪ್ರಭೇದದ ಬಹುರೂಪಗಳೆಂದು ಅವುಗಳ ವಿಚಾರವಾಗಿ ಹೆಚ್ಚು ಅಂಶಗಳನ್ನು ಸಂಗ್ರಹಿಸಿ ತೋರಿಸಬಹುದು. ಇಂಥ ಕಾರಣಗಳಿಂದಾಗಿ ಚಿಪ್ಪುಸಂಗ್ರಹಣೆ ಹವ್ಯಾಸ ಮಿಕ್ಕ ಹವ್ಯಾಸಗಳಿಗಿಂತ ಹೆಚ್ಚು ಸ್ವಾರಸ್ಯವೆನಿಸಿದೆ. ವಾಸ್ತವವಾಗಿ, ಮೊದಲು ಮೋಜಿಗಾಗಿ ಸಂಗ್ರಹವನ್ನು ಪ್ರಾರಂಭಿಸಿದ ಅನೇಕರು ಈಗ ಚಿಪ್ಪು ಅಧ್ಯಯನದ ಪ್ರಮುಖ ವಿಜ್ಞಾನಿಗಳಾಗಿದ್ದಾರೆ. ಚಿಪ್ಪು ಸಂಗ್ರಹಣೆಯಲ್ಲಿ ವಿಶೇಷ ವಿಷಯವೆಂದರೆ ಚಿಪ್ಪುಗಳನ್ನು ಶೇಖರಿಸಲು ಅಷ್ಟಾಗಿ ಮುನ್ನೆಚ್ಚರಿಕೆ ವಹಿಸಬೇಕಾಗಿಲ್ಲ. ಅಲ್ಲದೆ ತೊಂದರೆ ಕಡಿಮೆ. ಕೀಟಗಳಾದ ಚಿಟ್ಟೆ ಜೀರುಂಡೆ ಅಥವಾ ಸಸ್ಯಭಾಗಗಳನ್ನು ಶೇಖರಿಸಲು ಬೇಕಾದ ಜಾಗರೂಕತೆ ಚಿಪ್ಪುಗಳ ಬಗ್ಗೆ ಬೇಕಾಗಿಲ್ಲ. ಚಿಪ್ಪುಗಳು ಖನಿಜಗಳಷ್ಟು ಭಾರವಿಲ್ಲ. ಇವಕ್ಕೆ ಕೀಟಗಳ ಅಥವಾ ಶಿಲೀಂಧ್ರಗಳ ಕಾಟವಿಲ್ಲ. ಚಿಪ್ಪುಗಳನ್ನು ಒಮ್ಮೆ ಚೆನ್ನಾಗಿ ಶುಚಿಮಾಡಿ ಅವುಗಳ ಗುರುತಿನ ಚೀಟಿಯನ್ನು ಲಗತ್ತಿಸಿ ಮೇಜಿನಲ್ಲಾಗಲಿ ಅಥವಾ ಬೀರುವಿನಲ್ಲಾಗಲಿ ಇಟ್ಟರೆ ವರ್ಷಾನುಕಾಲ ಯಾವ ಬದಲಾವಣೆಯೂ ಇಲ್ಲದೆ ಕೆಡದೆ ಇರುವುವು. (ಎಸ್.ವಿ.ಎ.)

**ಚಿಪ್ಪುಹಂದಿ :** ಫಾಲಿಡೋಟ ಗಣದ ಮ್ಯಾನಿಡೀ ಕುಟುಂಬಕ್ಕೆ ಸೇರಿದ ಒಂದು ವಿಚಿತ್ರ ಬಗೆಯ ಸ್ತನಿ (ಸ್ಕೇಲಿ ಆ್ಯಂಟ್ ಈಟರ್, ಪ್ಯಾಂಗೋಲಿನ್). ಮೈಮೇಲೆಲ್ಲ ಚಿಪ್ಪಿನ ರೀತಿಯ ದೊಡ್ಡ ದೊಡ್ಡ ಶಲ್ಕ ಅಥವಾ ಹುರುಪೆಗಳಿರುವುದರಿಂದಲೂ ಇದು ಇರುವೆ, ಗೆದ್ದಲು ಮುಂತಾದ ಕೀಟಗಳನ್ನು ತಿನ್ನುವುದರಿಂದಲೂ ಇದಕ್ಕೆ ಸ್ಕೇಲಿ ಆ್ಯಂಟ್ ಈಟರ್ ಎಂಬ ಹೆಸರು ಬಂದಿದೆ. ಮ್ಯಾನಿಸ್ ಇದರ ಶಾಸ್ತ್ರೀಯ ಹೆಸರು. ಸುಮಾರು ಒಂದೂವರೆಯಿಂದ ಎರಡು ಅಂಗುಲ ಉದ್ದದ ಪ್ರಾಣಿ. ತಲೆ ಚಿಕ್ಕದು; ಅದರ ಆಕಾರ ಶಂಕುವಿನಂತೆ. ಕಣ್ಣು ಹಾಗೂ ಕಿವಿಗಳು ಸಣ್ಣವು. ಹೊಟ್ಟೆಯನ್ನು ಬಿಟ್ಟು ದೇಹದ ಉಳಿದ ಭಾಗದಲ್ಲೆಲ್ಲ ಮನೆಗೆ ಹೊದಿಸುವ ಹೆಂಚುಗಳಂತೆ ಜೋಡಣೆಗೊಂಡಿರುವ ಹುರುಪೆಗಳ ಹೊದಿಕೆಯಿದೆ. ಕೊಂಬಿನಂಥ ವಸ್ತುವಿನಿಂದ ಕೂಡಿದ ಈ ಹುರುಪೆಗಳು ಬಹುಶಃ ಕೂದಲುಗಳೆಲ್ಲ ಕೂಡಿಕೊಂಡು ಜಡ್ಡುಗಟ್ಟಿ ಉಂಟಾಗಿರಬಹುದೆಂದು ಭಾವಿಸಲಾಗಿದೆ. ಹುರುಪೆಗಳ ಮಧ್ಯೆ ಹಾಗೂ ದೇಹದ ಕೆಳಭಾಗದಲ್ಲಿ ನಿಬಿಡವಾದ ಕೂದಲುಗಳಿವೆ. ಚಿಪ್ಪುಹಂದಿಯ ಮುಂಗಾಲುಗಳು ಹಿಂಗಾಲುಗಳಿಗಿಂತ ಸ್ವಲ್ಪ ಉದ್ದ. ಪ್ರತಿಯೊಂದು ಪಾದದಲ್ಲೂ ಉದ್ದವಾದ ಹಾಗೂ ಬಾಗಿರುವ ಮತ್ತು ಮೊನಚಾದ ಉಗುರುಗಳುಳ್ಳ 5 ಬೆರಳುಗಳಿವೆ. ಮುಂಗಾಲಿನ ಉಗುರುಗಳು ಹೆಚ್ಚು ಉದ್ದ. ಹಲ್ಲುಗಳಿಲ್ಲದಿರುವುದು



ಚಿಪ್ಪುಹಂದಿಯ ಸೋಜಿಗದ ಲಕ್ಷಣಗಳಲ್ಲೊಂದು. ತನ್ನ ನಾಲಗೆಯನ್ನು ಬಲು ಉದ್ದವಾಗಿ ಚಾಚಬಲ್ಲದು. ಅಲ್ಲದೆ ನಾಲಗೆ ಬಹಳ ಅಂಟಂಟಾಗಿದೆ. ತನ್ನ ತೀಕ್ಷ್ಣವಾದ ಘ್ರಾಣಶಕ್ತಿಯಿಂದ ಹುತ್ತ ಮತ್ತು ಇರುವೆಗೂಡುಗಳನ್ನು ಮೂಸುತ್ತ ಕೀಟಗಳ ಇರವನ್ನು ಪತ್ತೆಹಚ್ಚಿ, ಮುಂಗಾಲುಗಳ ಉಗುರುಗಳಿಂದ ಗೂಡುಗಳನ್ನು ಕೆದಕಿ ತನ್ನ ಉದ್ದನಾಲಗೆಯನ್ನು ಒಳಚಾಚಿ ಅಲುಗಾಡಿಸಿ, ನಾಲಗೆಗೆ ಅಂಟಿಕೊಳ್ಳುವ ಇರುವೆಗಳನ್ನು ಬಾಯೊಳಕ್ಕೆ ಸಾಗಿಸುತ್ತದೆ. ಇದರ ವಾಸವೆಲ್ಲ ನೆಲದಲ್ಲಿ ಕೊರೆದು ರಚಿಸಿದ ಬಿಲಗಳಲ್ಲಿ. ಕೆಲವೊಮ್ಮೆ ಮರಗಳಲ್ಲಿನ ಪೊಟರೆಗಳಲ್ಲೂ ವಾಸಿಸುವುದುಂಟು. ಹಗಲೆಲ್ಲ ಬಿಲದಲ್ಲಿ ತನ್ನ ದೇಹವನ್ನು ಚಂಡಿನಂತೆ ಸುತ್ತಿಕೊಂಡು ನಿದ್ರಿಸುತ್ತಿದ್ದು, ರಾತ್ರಿಯವೇಳೆ ಇರುವೆಗಳ ಬೇಟೆಗೆ ಹೊರಡುತ್ತದೆ. ಶತ್ರುಗಳಿಂದ ಆವರಿಸಲ್ಪಟ್ಟಾಗಲೂ ಹೀಗೆ ದೇಹವನ್ನು ಚಂಡಿನಂತೆ ಸುತ್ತಿಕೊಂಡು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಚಿಪ್ಪುಹಂದಿಯು ಏಷ್ಯ ಮತ್ತು ಆಫ್ರಿಕಗಳಲ್ಲಿ ಮಾತ್ರ ಕಾಣಸಿಗುತ್ತದೆ. ಗಾತ್ರ ಹಾಗೂ ಹುರುಪೆಗಳ ಜೋಡಣೆಯ ರೀತಿಯನ್ನು ಆಧರಿಸಿ ಚಿಪ್ಪುಹಂದಿಯಲ್ಲಿ 7 ಪ್ರಭೇದಗಳನ್ನು ಗುರುತಿಸಲಾಗಿದೆ. ಏಷ್ಯದಲ್ಲಿ ಮೂರು ಮತ್ತು ಆಫ್ರಿಕದಲ್ಲಿ ನಾಲ್ಕು ಪ್ರಭೇದಗಳು ಇವೆ. ಏಷ್ಯದಲ್ಲಿ ಕಾಣಬರುವ ಬಲು ಸಾಮಾನ್ಯ ಪ್ರಭೇದ ಮ್ಯಾನಿಸ್ ಪೆಂಟಡ್ಯಾಕ್ಟಿಲ.

(ಎನ್.ವಿ.ಎ; ಜಿ.ಆರ್.ವಿ.)

**ಚಿಯಾಂಗ್ ಕೈ–ಷೆಕ್ :** 1887–1975. ಚೀನೀ ಯೋಧ, ರಾಜಕಾರಣಿ; 1928 ರಿಂದ 1949ರ ವರೆಗೆ ಚೀನೀ ಸರ್ಕಾರದ ಮತ್ತು 1949ರಿಂದ ಫಾರ್ಮೋಸ ದ್ವೀಪದಲ್ಲಿ ದೇಶಭ್ರಷ್ಟ ಸರ್ಕಾರದ ಅಧ್ಯಕ್ಷ.

ಚೆಜಿಯಾಂಗ್ ಪ್ರಾಂತ್ಯದ ಪೆಂಗ್ವಾ ಜಿಲ್ಲೆಯ ಚಿಕೋವ್ ಎಂಬ ಗ್ರಾಮದ ವರ್ತಕ ಕೃಷಿಕಾರ ಕುಟುಂಬವೊಂದರಲ್ಲಿ 1887ರ ಅಕ್ಟೋಬರ್ 31ರಂದು ಚಿಯಾಂಗ್ ಕೈ–ಷೆಕ್ ಜನಿಸಿದರು. 1906ರಲ್ಲಿ ಉತ್ತರ ಚೀನದ ಪೋಟಿಂಗ್ ಸೈನಿಕ ಅಕಾಡೆಮಿಯಲ್ಲೂ, 1907–1911ರವರೆಗೆ ಜಪಾನಿನ ಟೋಕಿಯೋ ಸೈನಿಕ ಕಾಲೇಜಿನಲ್ಲೂ ಶಿಕ್ಷಣ ಪಡೆದರು. 1909–1911ರವರೆಗೆ ಜಪಾನಿ ಸೈನ್ಯದಲ್ಲಿ ಕೆಲಸ ಮಾಡಿದರು. ಆಗ ಅವರ ಸಹಪಾಠಿಗಳಿಂದ ಪ್ರಭಾವಿತರಾದ ಚಿಯಾಂಗ್ ಕ್ರಾಂತಿಕಾರಿಯಾದರು. ಚೀನವನ್ನು ಮಂಚು ವಂಶದ ಆಡಳಿತದಿಂದ ವಿಮೋಚನೆಗೊಳಿಸುವ ಸಂಚಿನಲ್ಲಿ ಇವರೂ ಭಾಗವಹಿಸಿದರು. ಸುನ್ ಯಾಟ್–ಸೆನ್ನರ ವಿಚಾರಗಳಲ್ಲಿ ಇವರಿಗೆ ಆಸಕ್ತಿ ಮೂಡಿತು.

1911ರಲ್ಲಿ ಚೀನದಲ್ಲಿ ಕ್ರಾಂತಿಕಾರಿ ಘಟನೆಗಳು ಸಂಭವಿಸಿದಾಗ ಚಿಯಾಂಗ್ ಸ್ವದೇಶಕ್ಕೆ ಹಿಂದಿರುಗಿ ಹೋರಾಟದಲ್ಲಿ ನೆರವಾದರು. ಮಂಚುಗಳ ಪತನವಾಯಿತಾದರೂ ಯುವಾನ್ ಷಿ–ಕೈ ಅಧ್ಯಕ್ಷರಾಗಿ, ನಿರಂಕುಶಾಧಿಪತಿಯಾಗಿ ಆಳತೊಡಗಿ, ತನ್ನನ್ನು ಅಧಿಕಾರಕ್ಕೆ ತಂದ ಪಕ್ಷವನ್ನೇ ನಾಶಗೊಳಿಸಲು ಯತ್ನಿಸಿದ. ಕ್ರಾಂತಿಕಾರರು ಅವನ ವಿರುದ್ಧ ಚಳವಳಿ ನಡೆಸಿ ವಿಫಲರಾದರು. ಚಿಯಾಂಗ್ ಜಪಾನಿಗೆ ಓಡಿಹೋಗಿ 1915 ರವರೆಗೂ ಅಲ್ಲೇ ಇದ್ದರು. ಯುವಾನ್ ತಾನೇ ಚಕ್ರವರ್ತಿಯಾಗಲು ಪ್ರಯತ್ನಿಸಿ ಜನವಿರೋಧವನ್ನು ಬೆಳೆಸಿಕೊಂಡ. ಮತ್ತೊಂದು ಕ್ರಾಂತಿಗೆ ಪರಿಸ್ಥಿತಿ ಹದವಾಗಿತ್ತು. ಅದರಲ್ಲಿ ಭಾಗವಹಿಸಲು ಚಿಯಾಂಗ್ ಸ್ವದೇಶಕ್ಕೆ ಹಿಂದಿರುಗಿದರು. ಕ್ರಾಂತಿ ಸಂಭವಿಸಿತು. ಗಣರಾಜ್ಯ ಉಳಿದುಕೊಂಡಿತು. ಯುವಾನನ ಆಶೆ ಮಣ್ಣುಗೂಡಿತು.

ಚಿಯಾಂಗ್ ಕೈ-ಷೆಕ್ 1916-17ರಲ್ಲಿ ಷಾಂಗ್‌ಹೈನಲ್ಲಿ ಗ್ರೀನ್ ಗ್ಯಾಂಗ್ ಎಂಬ ಗುಪ್ತ ಸಂಘವೊಂದರಲ್ಲಿದ್ದರು. ಈ ಸಂಸ್ಥೆ ಹಣಕಾಸಿನ ಕೈವಾಡಗಳಲ್ಲಿ ನಿರತವಾಗಿತ್ತು. 1918ರಲ್ಲಿ ಚಿಯಾಂಗ್ ಮತ್ತೆ ಸಾರ್ವಜನಿಕ ರಂಗ ಪ್ರವೇಶಮಾಡಿದರು. ಕ್ವೊಮಿನ್ ಟಾಂಗ್‌ನ (ರಾಷ್ಟ್ರೀಯ ಪಕ್ಷ) ನಾಯಕ ಸುನ್ ಯಾಟ್-ಸೆನರ ಅನುಯಾಯಿಯಾದರು. ಯುವಾನನ ಅನಂತರ ಸೇನಾ ಸತ್ರಪರಲ್ಲಿ ಹರಿದು ಹಂಚಿಹೋಗಿದ್ದ ಚೀನವನ್ನು ಒಂದುಗೂಡಿಸಲು ಸುನ್ ಯಾಟ್-ಸೆನ್ ಪ್ರಯತ್ನಿಸುತ್ತಿದ್ದರು. ರಾಜ್ಯವನ್ನು ವಿಮೋಚನೆಗೊಳಿಸಿ, ಕ್ರಾಂತಿಯನ್ನು ಸಾರ್ಥಕಗೊಳಿಸುವುದು ಅವರ ಉದ್ದೇಶವಾಗಿತ್ತು. ಸುನ್ ಯಾಟ್-ಸೆನ್ ಸೈನ್ಯವನ್ನು ಕಟ್ಟಲು ಅವರಿಗೆ ಪರಕೀಯರ ಸಹಾಯ ಆವಶ್ಯವಾಗಿತ್ತು. ಅವರು ಸೋವಿಯೆತ್ ದೇಶದ ಸಹಾಯ ಕೋರಿದರು. ಸೋವಿಯೆತ್ ಸಂಘಸಂಸ್ಥೆಗಳನ್ನೂ ಅಲ್ಲಿಯ ಸೈನ್ಯಪದ್ಧತಿಯನ್ನೂ ಅಧ್ಯಯನ ಮಾಡಲು ಚಿಯಾಂಗ್ ರಷ್ಯಕ್ಕೆ ಭೇಟಿಯಿತ್ತರು. ಸೋವಿಯೆತ್ ಮಾದರಿಯಲ್ಲಿ, ಕ್ಯಾಂಟನ್ನಿನ ಹತ್ತಿರದ ವಾಂಪೋವದಲ್ಲಿ ಸೈನಿಕ ಅಕಾಡೆಮಿ ಸ್ಥಾಪಿತ ವಾಯಿತು. ಚಿಯಾಂಗರೇ ಅದಕ್ಕೆ ಅಧಿಪತಿ.

ಸೋವಿಯೆತ್ ಸಲಹೆಗಾರರು ಕ್ಯಾಂಟನ್‌ಗೆ ಬಂದರು. ಚೀನೀ ಕಮ್ಯೂನಿಸ್ಟರಿಗೂ ಕ್ವೊಮಿನ್‌ಟಾಂಗ್ ಪಕ್ಷಕ್ಕೂ ಬಾಂಧವ್ಯ ಏರ್ಪಟ್ಟಿತ್ತು. ಚಿಯಾಂಗರು ಮಾರ್ಕ್ಸ್ ಮತ್ತು ಲೆನಿನರ ಕೃತಿಗಳ ಅಧ್ಯಯನ ಮಾಡಿದರು. ಲೆನಿನ್ ಸಿದ್ಧಾಂತಗಳು ಅವರ ಮೇಲೆ ಪ್ರಭಾವ ಬೀರಿದುವು. ಸುನ್ ಯಾಟ್-ಸೆನ್ನರ ಮರಣಾನಂತರ (1925) ಅಧಿಕಾರಕ್ಕಾಗಿ ಚೀನೀ ಕಮ್ಯೂನಿಸ್ಟರಿಗೂ ಚಿಯಾಂಗರಿಗೂ ಸ್ಪರ್ಧೆ ಏರ್ಪಟ್ಟಿತು. ವಾಂಪೋವ ಸೈನ್ಯ ಪಡೆಯ ಸಹಾಯದಿಂದ ಚಿಯಾಂಗ್ ಅವರನ್ನು ಎದುರಿಸಿದರು. ಶಕ್ತಿ ಪ್ರದರ್ಶನ ಹಾಗೂ ಸೌಮ್ಯನೀತಿಗಳನ್ನು ಒಂದೊಂದಾಗಿ ಪ್ರದರ್ಶಿಸಿ, ಸೋವಿಯೆತರ ಸಹಾಯವನ್ನು ಕಳೆದುಕೊಳ್ಳದೆ ಕಮ್ಯೂನಿಸ್ಟರನ್ನು ವಿರೋಧಿಸಿದರು. 1927ರ ವರೆಗೂ ಸೋವಿಯೆತ್ ದೇಶದ ಸಹಾಯ ಅವರಿಗೆ ದೊರಕುತ್ತಿತ್ತು. 1927ರಲ್ಲಿ ಕ್ಷಿಪ್ರಾಕ್ರಮಣ ನಡೆಸಿ ಚಿಯಾಂಗ್ ಅಧಿಕಾರ ಪಡೆದುಕೊಂಡರು. ಕಮ್ಯೂನಿಸ್ಟರೊಂದಿಗಿನ ಸಂಬಂಧ ಕೊನೆಗೊಂಡಿತು. ಕ್ರಾಂತಿಸೇನೆಯ ದಂಡಾಧಿಕಾರಿಯಾಗಿ ಅವರು ಯುದ್ಧನಾಯಕರೊಂದಿಗೆ ನಡೆಸುತ್ತಿದ್ದ ಯುದ್ಧ 1928ರಲ್ಲಿ ಕೊನೆಗೊಂಡಿತು. ಆ ವರ್ಷ ಅವರು ಪೀಕಿಂಗನ್ನು ಪ್ರವೇಶಿಸಿದರು. ಚಿಯಾಂಗರ ನಾಯಕತ್ವದಲ್ಲಿ ಹೊಸ ಕೇಂದ್ರೀಯ ಸರ್ಕಾರ ನ್ಯಾನ್‌ಕಿಂಗ್‌ನಲ್ಲಿ ಸ್ಥಾಪಿತವಾಯಿತು. ಅದೇ ವರ್ಷ ಅವರು ಸೂಂಗ್ ಕುಟುಂಬದ ಕೊನೆಯ ಪುತ್ರಿ ಮೈ-ಲಿಂಗಳನ್ನು ವಿವಾಹವಾಗಿ, ಆ ಪ್ರಭಾವದಿಂದಾಗಿ ಕ್ರೈಸ್ತರಾದರು. ಆದರೂ ಕ್ರೈಸ್ತಮತಕ್ಕಿಂತ ಜಪಾನೀ ಹಾಗೂ ಲೆನಿನ್ ಪ್ರಭಾವವೇ ಅವರ ಮೇಲೆ ಹೆಚ್ಚಾಗಿತ್ತು.



1931ರಲ್ಲಿ ಜಪಾನು ಮಂಚೂರಿಯವನ್ನು ಆಕ್ರಮಿಸಿತು. ಆ ದೇಶದೊಡನೆ ಯುದ್ಧ ಅನಿವಾರ್ಯವಾಯಿತು. ಆದರೆ ಕಮ್ಯೂನಿಸ್ಟರನ್ನು ಪರಾಜಯಗೊಳಿಸಿ ಅನಂತರ ಜಪಾನನ್ನು ಎದುರಿಸಬೇಕೆಂಬುದು ಚಿಯಾಂಗರ ಹಂಚಿಕೆಯಾಗಿತ್ತು. ಇದರಿಂದ ಆಂತರಿಕ ವಿರೋಧ ಬೆಳೆಯಲು ಅವಕಾಶ ನೀಡಿದಂತಾಯಿತು. ಧಾರ್ಮಿಕ ಐಕ್ಯ ಸಾಧಿಸುವ ಉದ್ದೇಶದಿಂದ ಅವರು ಕಾನ್‌ಫ್ಯೂಷಿಯಸನ ತತ್ತ್ವಗಳನ್ನು ಪ್ರಚಾರ ಮಾಡಿದರು.

1936ರಲ್ಲಿ ಅಶಾಂತಿ ಹೆಚ್ಚಿತು. ಕಮ್ಯೂನಿಸ್ಟರೊಂದಿಗೆ ಒಪ್ಪಂದ ಮಾಡಿಕೊಂಡು ಜಪಾನೀ ಆಕ್ರಮಣದ ವಿಪತ್ತನ್ನು ಎದುರಿಸಲು ತೀರ್ಮಾನಿಸಲಾಯಿತು. ಚಿಯಾಂಗರ ನೇತೃತ್ವದಲ್ಲಿ ಎಲ್ಲ ಶಕ್ತಿಗಳೂ ಒಟ್ಟುಗೂಡಿದವು.

1937ರಲ್ಲಿ ಜಪಾನಿನೊಂದಿಗೆ ಯುದ್ಧ ಆರಂಭವಾದಾಗ ಇಡೀ ಚೀನೀ ಪಡೆಗೆ ಚಿಯಾಂಗ್ ಮುಖ್ಯ ಸೇನಾನಿಯಾದರು. ಅನಂತರ 1941ರ ಡಿಸೆಂಬರ್ 8 ರಂದು ಇಟಲಿ ಮತ್ತು ಜರ್ಮನಿಗಳ ಮೇಲೆ ಚೀನ ಯುದ್ಧ ಘೋಷಿಸಿತು. 1942ರ ಆರಂಭದಲ್ಲಿ ಚಿಯಾಂಗ್ ಭಾರತಕ್ಕೆ ಭೇಟಿ ನೀಡಿ ಇಲ್ಲಿಯ ರಾಜಕೀಯ ಪರಿಸ್ಥಿತಿಯನ್ನವಲೋಕಿಸಿ, ಬ್ರಿಟಿಷರು ಭಾರತದ ಕಾಂಗ್ರೆಸ್ ನಾಯಕರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದರು. ಭಾರತದ ಸಮಸ್ಯೆ ಪರಿಹರಿಸುವುದಕ್ಕೆ ಅಮೆರಿಕದ ಅಧ್ಯಕ್ಷರ ಮೂಲಕ ಬ್ರಿಟಿಷ್ ಪ್ರಧಾನಿಗೆ ಅನೇಕ ಸಲಹೆಗಳನ್ನು ನೀಡಿದರು. ಆದರೆ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಅದಕ್ಕೆ ಗಮನ ಕೊಡಲಿಲ್ಲ.

ಎರಡನೆಯ ಮಹಾಯುದ್ಧ ಕೊನೆಗೊಂಡ ಮೇಲೆ ಚೀನವೂ ವಿಶ್ವಸಂಸ್ಥೆಯಲ್ಲಿ ಐದು ಬೃಹದ್ರಾಷ್ಟ್ರಗಳಲ್ಲಿ ಒಂದೆಂಬ ಮನ್ನಣೆ ಪಡೆಯಿತು. 1948ರ ಮೇ 20ರಂದು ಚಿಯಾಂಗ್ ಚೀನದ ಪ್ರಥಮ ಸಂವಿಧಾನದ ಅಧ್ಯಕ್ಷರಾಗಿ ಪ್ರತಿಜ್ಞಾವಚನ ಸ್ವೀಕರಿಸಿದರು. ಆದರೂ ಆಂತರಿಕವಾಗಿ ಚಿಯಾಂಗರ ಸರ್ಕಾರ ಕ್ಷೀಣಿಸಲಾರಂಭವಾಗಿ ಕಮ್ಯೂನಿಸ್ಟರೊಡನೆ ಹೋರಾಟ ಮುಂದುವರಿಯಿತು. 1949ರಲ್ಲಿ ಚೀನದ ಮುಖ್ಯ ಪ್ರದೇಶವನ್ನು ಕಮ್ಯೂನಿಸ್ಟರು ಸಂಪೂರ್ಣವಾಗಿ ಪಡೆದುಕೊಂಡರು. ಚಿಯಾಂಗ್ ಫಾರ್ಮೋಸ (ಟೈವಾನ್) ದ್ವೀಪದಲ್ಲಿ ನೆಲೆಸಿ, ಹೋರಾಟ ಮುಂದುವರಿಸಿದರು. ಚಿಯಾಂಗರು 1958ರಲ್ಲಿ ಮತ್ತು 1966ರಿಂದ 1972ರವರೆಗೆ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದರು.

ಚಿಯಾಂಗರ ಪತನಕ್ಕೆ ಅವರ ಸರ್ಕಾರದಲ್ಲಿ ತಾಂಡವವಾಡುತ್ತಿದ್ದ ಲಂಚರುಷುವತ್ತುಗಳೂ, ಅವರು ಸಾರ್ವಜನಿಕ ಅಭಿಪ್ರಾಯವನ್ನು ಕಡೆಗಣಿಸಿದ್ದೂ, ಬದಲಾದ ಪರಿಸ್ಥಿತಿಗೆ ತಕ್ಕಂತೆ ತಮ್ಮ ನೀತಿ ಮಾರ್ಪಡಿಸಿಕೊಳ್ಳದೆ ಹೋದದ್ದು ಕಾರಣಗಳು. ಚಿಯಾಂಗ್ ದಕ್ಷತೆಗಿಂತ ನಿಷ್ಠೆಗೂ ಸಂಸ್ಥೆಗಿಂತ ವ್ಯಕ್ತಿಗೂ ಹೆಚ್ಚಿನ ಪ್ರಾಮುಖ್ಯ ನೀಡಿದರು. ಚಿಯಾಂಗ್ ಕೈ-ಷೆಕರನ್ನು ಚೀನೀ ಇತಿಹಾಸದ ಪರಿವರ್ತನೆಯ ಕಾಲದಲ್ಲಿ ಸಂಭವಿಸಿದ ಅನಿಶ್ಚಯತೆ ಅವ್ಯವಸ್ಥೆಗಳ ಪ್ರತೀಕವೆನ್ನಬಹುದು. ಇವರು ಏಪ್ರಿಲ್ 5, 1975 ರಂದು 87 ವರ್ಷವಾಗಿದ್ದಾಗ, ಹೃದಯಾಘಾತ ಹಾಗೂ ಮೂತ್ರಪಿಂಡ ವೈಫಲ್ಯಗಳಿಂದ ನಿಧನರಾದರು. (ವಿ.ಕೆ.)

**ಚಿಯಾ-ಸಿಯಾಂಗ್ ಸೀನ್ :** ಚೀನದ ಷಾಂಟಂಗ್ ಪ್ರಾಂತ್ಯದಲ್ಲಿ ವು ವಂಶೀಯರ ಸಮಾಧಿಗಳು (ಪ್ರ.ಶ.ಸು. 147-168) ಇರುವ ಸ್ಥಳ. ಹ್ಯಾನ್ ರಾಜವಂಶದ ಕಾಲಕ್ಕೆ ಸೇರಿದ ಇಂಥ ಕುಲಸಮಾಧಿಗಳು ಹೋಪೇ, ಷಾಂಟಂಗ್ ಮುಂತಾದೆಡೆಗಳಲ್ಲೂ ಇವೆ. ಈ ಸಮಾಧಿಗಳೆಲ್ಲ ನೆಲದ ಅಡಿಯಲ್ಲಿ ಕಟ್ಟಿದಂಥವು. ಆದರೂ ಇಟ್ಟಿಗೆಯ ಕಟ್ಟಡ, ಕಮಾನು, ಅರೆಪೀಪಾಯಿ ಚಾವಣಿ ಮುಂತಾದ ವಾಸ್ತುವೈಶಿಷ್ಟ್ಯಗಳು ಇವುಗಳಲ್ಲಿ ಕಂಡುಬರುತ್ತವೆ. ಈ ಸಮಾಧಿಗಳಲ್ಲಿ ಉತ್ತರ-ದಕ್ಷಿಣವಾಗಿ, ಒಂದಕ್ಕೊಂದು ಹೊಂದಿಕೊಂಡಂತೆ, ಹಬ್ಬಿರುವ ಅನೇಕ ದೊಡ್ಡ ಕೋಣೆಗಳೂ ಇವುಗಳಿಂದ ಪಕ್ಕಗಳಿಗೆ ತೆರೆಯುವ ಸಣ್ಣ ಕೋಣೆಗಳೂ ಇವೆ. ಇವುಗಳ ಒಳಗೋಡೆಗಳ ಮೇಲೆ ಪ್ರಾಣಿಗಳು, ಹಕ್ಕಿಗಳು, ಮುಂತಾದವೇ ಅಲ್ಲದೆ ಮೃತನಿಗೆ ಅಧೀನರಾಗಿದ್ದ ಕಿರಿ ಅಧಿಕಾರಿಗಳು, ಸೇವಕರು, ಆ ಕಾಲದ ಕಟ್ಟಡಗಳು, ದೋಣಿಗಳು ಮುಂತಾದವುಗಳ ವರ್ಣಚಿತ್ರಗಳು ಅಥವಾ ಅಲ್ಪ ಉಬ್ಬುಶಿಲ್ಪಗಳು ಇರುತ್ತವೆ. ಕಾನ್ಫ್ಯೂಷಿಯ, ಟಾವೊ ಮುಂತಾದ ಸಿದ್ಧಾಂತಗಳಿಗೆ ಸಂಬಂಧಿಸಿದ ಚಿತ್ರಗಳೂ ಉಂಟು. ಈ ಚಿತ್ರಗಳೂ ಶಿಲ್ಪಗಳೂ ಹ್ಯಾನ್ ರಾಜವಂಶಕಾಲದ ಚೀನೀ ಸಂಸ್ಕೃತಿಯನ್ನು ಅರಿಯಲು ಬಹಳಮಟ್ಟಿಗೆ ಸಹಾಯಕವಾಗಿವೆ. (ಎಸ್.ಎನ್.)

**ಚಿರತೆ :** ಕಾರ್ನಿವೊರ ಗಣ, ಅಲ್ಯುರಾಯ್ಡಿಯ ಉಪಗಣ, ಫೀಲಿಡೀ ಕುಟುಂಬ-ಇವುಗಳಿಗೆ ಸೇರಿದ ಮಾಂಸಾಹಾರಿ ಸ್ತನಿ (ಲೆಪರ್ಡ್). ಇದನ್ನು ಕಿರುಬ, ಹೊನಿಗ, ಮೊಟಗ ಎಂದೂ ಕರೆಯುವುದುಂಟು. ಇದು ಏಷ್ಯ ಮತ್ತು ಆಫ್ರಿಕ ಖಂಡಗಳ ಬಹು ಭಾಗಗಳಲ್ಲಿ ಕಾಣದೊರೆಯುತ್ತದೆ. ದಟ್ಟವಾದ ಭಾರಿ ಕಾಡುಗಳಿಗಿಂತ ಹೆಚ್ಚಾಗಿ ಕುರುಚಲುಗಿಡಗಳ ಸಾಧಾರಣ ಕಾಡುಗಳಲ್ಲೂ ಬಂಡೆ ಅಥವಾ ಬಯಲುಗಳಿರುವ ಪ್ರದೇಶಗಳಲ್ಲೂ ವಾಸಿಸುತ್ತದೆ. ಇದು ನಿರಾಯಾಸವಾಗಿ ಮರವನ್ನು ಹತ್ತಬಲ್ಲುದು. ಚಂಗನೆ ಹಾರಿ ಗುರಿತಪ್ಪದಂತೆ ತನ್ನ ಬೇಟೆಯನ್ನು ಹಿಡಿದುಕೊಂಡು ತಿನ್ನುವುದರಲ್ಲಿ ಅಸಾಮಾನ್ಯ ಕೌಶಲವನ್ನು ಪ್ರದರ್ಶಿಸುತ್ತದೆ. ಹಗಲು ವೇಳೆಗಳಲ್ಲಿ ಮೆಳೆಗಳ ಅಥವಾ ಬಂಡೆಗಳ ಸಂದುಗಳಲ್ಲೋ ಮರದ ಕೊಂಬೆಗಳ ಮೇಲೋ ಅಡಗಿದ್ದು ರಾತ್ರಿಯಾದ ಮೇಲೆ ಬೇಟೆಗೆ ಹೊರಡುತ್ತದೆ. ಇದರ ಹಳದಿ ಚರ್ಮದ ಮೇಲೆ ಕಪ್ಪು ಚುಕ್ಕೆಗಳಿರುವುದರಿಂದ ಮರ ಹತ್ತಿದಾಗ ಎಲೆಗಳ ನಡುವೆ ತೂರುವ ಬಿಸಿಲು-ನೆರಳುಗಳ ವಿನ್ಯಾಸಕ್ಕೆ ತನ್ನ ಮೈ ಬಣ್ಣವನ್ನು ಹೊಂದಿಸಿಕೊಳ್ಳುವುದರ ಮೂಲಕ ಸನ್ನಿವೇಶದಲ್ಲಿ ಬೆರೆತುಹೋಗಿ ಆತ್ಮರಕ್ಷಣೆ ಮಾಡಿಕೊಳ್ಳುತ್ತದೆ. ಮೈ ಚುಕ್ಕೆಗಳೇ ಇಲ್ಲದೆ ಪೂರ್ಣವಾಗಿ ಕಪ್ಪಾಗಿರುವ ಚಿರತೆಯೂ ಉಂಟು.

ಚಿರತೆಯು ಹುಲಿಗಿಂತಲೂ ಧೈರ್ಯಶಾಲಿ. ಕೆಲವು ವೇಳೆ ಸ್ವಲ್ಪವೂ ಹೆದರಿಕೆಯಿಲ್ಲದೆ ಜನ ವಾಸಿಸುವ ಕಡೆಗಳಲ್ಲೇ ವಾಸಿಸುತ್ತಿದ್ದು, ರಾತ್ರಿವೇಳೆ ಅವರ ದನ ಕರುಗಳ ಮೇಲೆ ಬಿದ್ದು ಕೊಂದು ತಿನ್ನುವುದು. ಇದು ಚಿಕ್ಕ ಪ್ರಾಣಿಯಾದರೂ ಬಲು ಚುರುಕು. ಇದರ ಇಂದ್ರಿಯಗಳು ಅತಿ ಪಟುವಾಗಿರುವುದರಿಂದ ಸಣ್ಣಪುಟ್ಟ ಪ್ರಾಣಿಗಳನ್ನು ಹಿಡಿದು ತಿನ್ನುವಾಗ ತೀಕ್ಷ್ಣಬುದ್ಧಿಯಿಂದ ವರ್ತಿಸುತ್ತದೆ. ಹಕ್ಕಿಗಳು, ಉರಗಗಳು, ಮೊಲ, ಜಿಂಕೆಮರಿ, ನಳ್ಳಿ ಮುಂತಾದವು ಇದರ ಮುಖ್ಯ ಆಹಾರದ ಪ್ರಾಣಿಗಳು. ಕೆಲವು ವೇಳೆ ದನ, ಕುರಿ, ಜಿಂಕೆ, ಕುದುರೆ, ಕತ್ತೆ ಮುಂತಾದ ದೊಡ್ಡ ಪ್ರಾಣಿಗಳನ್ನೂ ಕೊಂದು ತಿನ್ನುವುದುಂಟು.

ಚಿರತೆಯು ವರ್ಷದ ಎಲ್ಲ ಕಾಲಗಳಲ್ಲೂ ಮರಿಹಾಕಬಹುದು. ಗರ್ಭಾವಸ್ಥೆಯ ಅವಧಿ ಸುಮಾರು ಹದಿಮೂರು ವಾರಗಳು, ಮರಿಗಳಿಗೆ ಎರಡೂವರೆ ವರ್ಷಗಳ ಸುಮಾರಿಗೆ ಪ್ರಬುದ್ಧತೆ ಬರುತ್ತದೆ.

ಚಿರತೆಗಳಲ್ಲಿ ಹಲವು ಬಗೆಗಳುಂಟು. ಪ್ಯಾಂತರ್ ಎಂಬುದು ಸಾಮಾನ್ಯ ಚಿರತೆ, ಹಿಮಕಿರುಬ ಎಂಬುದು ಮೈಮೇಲೆ ಚಿಕ್ಕ ಚಿಕ್ಕ ಚುಕ್ಕೆಗಳನ್ನುಳ್ಳ ಚಿಕ್ಕ ಚಿರತೆ. ಇವೆರಡೂ ಪ್ಯಾಂತೆರ ಜಾತಿಗೆ ಸೇರಿದವು. ಕ್ಲೌಡೆಡ್ ಲೆಪರ್ಡ್ ಎಂಬುದರ ಮೈ ಮೇಲೆ ಚುಕ್ಕೆಗಳು ಅಷ್ಟು ಚೆನ್ನಾಗಿ ಎದ್ದುಕಾಣುವುದಿಲ್ಲ ; ಇದು ನಿಯೋಫಿಲಿಸ್ ಜಾತಿಗೆ ಸೇರಿದ್ದು. ಬೇಟೆ



ಚಿರತೆ (ಹಂಟಿಂಗ್ ಲೆಪರ್ಡ್) ಎಂಬುದು ಆ್ಯಸಿನೋನಿಕ್ಸ್ ಜಾತಿಗೆ ಸೇರಿದ್ದು. ಇದನ್ನು ಸಾಕಿ ಪಳಗಿಸುವುದುಂಟು. ಪ್ಯಾಂತೆರ ಪಾರ್ಡಸ್ ಎಂಬ ಭಾರತೀಯ ಚಿರತೆಯ ಪ್ರಭೇದದಲ್ಲಿ ಮೂರು ಬಗೆಗಳಿವೆ. ಪ್ಯಾಂತೆರ ಪಾರ್ಡಸ್ ಫುಸ್ಕ, ಪ್ಯಾಂತೆರ ಪಾರ್ಡಸ್ ಪೆರಿಗ್ರಿ, ಪ್ಯಾಂತೆರ ಪಾರ್ಡಸ್ ಮಿಲರ್ಡ್ ಇವೇ ಆ ಮೂರು ಬಗೆಗಳು. ಪ್ಯಾಂತೆರ ಪಾರ್ಡಸ್ ಫುಸ್ಕ ಭಾರತದ ಅನೇಕ ಕಡೆಗಳಲ್ಲಿ ಕಾಡುಗಳಲ್ಲಿ ವಾಸಿಸುತ್ತದೆ. ಇದರ ಹೊಳಪಾದ ಮೈಮೇಲೆ ಎದ್ದುಕಾಣುವ ಚಿಕ್ಕ ಚಿಕ್ಕ ಚುಕ್ಕೆಗಳಿವೆ. ಸಿಕ್ಕಿಂ, ನೇಪಾಳ, ಕುಮಾಂವ್, ಗರ್ವಾಲ್ ಮುಂತಾದೆಡೆಗಳಲ್ಲಿ ವಾಸಿಸುವ ಪ್ಯಾಂತೆರ ಪಾರ್ಡಸ್ ಪೆರಿಗ್ರಿ ಎಂಬ ಬಗೆಯ ಮೈಮೇಲೆ ಚಳಿಗಾಲದಲ್ಲಿ ದಟ್ಟವಾಗಿ ಕೂದಲು ಬೆಳೆದಿರುತ್ತದೆ. ಇದರ ಮೈಬಣ್ಣ ಅಷ್ಟು ಹೊಳಪಾಗಿಲ್ಲ; ಆದರೆ ಮಚ್ಚೆಗಳು ಅಗಲವಾಗಿವೆ. ಪ್ಯಾಂತೆರ ಪಾರ್ಡಸ್ ಮಿಲರ್ಡ್ ಎಂಬುದು ಕಾಶ್ಮೀರದಲ್ಲಿ ವಾಸಿಸುತ್ತದೆ; ಇದರ ಕೂದಲು ಅಷ್ಟು ಹೊಳಪಾಗಿಲ್ಲ; ಒತ್ತಾಗಿರುವ ಚಿಕ್ಕ ಚಿಕ್ಕ ಚುಕ್ಕೆಗಳಿರುತ್ತವೆ.

ಪ್ಯಾಂತೆರ ಊನ್ಸಿಯ ಎಂಬ ಪ್ರಭೇದ (ಹಿಮಗಿರುಬ) ಕಾಶ್ಮೀರದಿಂದ ಸಿಕ್ಕಿಂವರೆಗಿನ ಹಿಮಾಲಯ ಕಾಡುಗಳಲ್ಲಿ ವಾಸಿಸುತ್ತದೆ. ಇದು ಚಳಿಗಾಲದಲ್ಲಿ ಹಿಮಾಲಯದ ಕಡಿಮೆ ಎತ್ತರದ ಬೆಟ್ಟಗಳ ತಪ್ಪಲುಗಳಲ್ಲಿ ವಲಸೆ ಬರುತ್ತದೆ. ಮೈ ನಯವಾಗಿ ಚುಕ್ಕೆಗಳು ಉದ್ದುದ್ದವಾದ ಮಚ್ಚೆಗಳಂತಿವೆ. ಇದರ ಚರ್ಮ ಮತ್ತು ತುಪ್ಪಳಕ್ಕೆ ತುಂಬ ಬೆಲೆಯಿರುವುದರಿಂದ ಈ ಚಿರತೆಯನ್ನು ಬೇಟೆಯಾಡುವುದು ಹೆಚ್ಚು.

ನಿಯೋಫಿಲಿಸ್ ನೆಬ್ಯುಲೋಸ (ಕ್ಲೌಡೆಡ್ ಲೆಪರ್ಡ್) ಎಂಬ ಚಿರತೆ ನೇಪಾಳ, ಭೂತಾನ, ಸಿಕ್ಕಿಂ, ಅಸ್ಸಾಂ ಮುಂತಾದ ಪ್ರದೇಶಗಳ ದಟ್ಟ ಕಾಡುಗಳಲ್ಲಿ ವಾಸಿಸುತ್ತದೆ. ಇದಕ್ಕೆ ಬಹು ನಿಡಿದಾದ ಕೋರೆಹಲ್ಲುಗಳಿವೆ. ಇದರ ಮೈಬಣ್ಣ ನರೆ, ಕಂದು ಇಲ್ಲವೆ ಮಾಸಲು ಬಿಳಿ. ಉದರಭಾಗ ಮಾತ್ರ ಬಿಳಿಬಣ್ಣದ್ದು. ಕಣ್ಣಿನಿಂದ ಬಾಯಿಯವರೆಗೂ ಎರಡು ಕಡೆಯಲ್ಲೂ ಇರುವ ಉದ್ದವಾದ ಕಪ್ಪು ಮಚ್ಚೆಗಳು ಇದರ ವಿಶಿಷ್ಟ ಲಕ್ಷಣಗಳು. ದೇಹದ ಇನ್ನುಳಿದ ಭಾಗಗಳಲ್ಲಿ ಒತ್ತಾದ ಕಪ್ಪು ಚುಕ್ಕೆಗಳಿರುತ್ತವೆ. ಇದು ಬಯಲಿಗೆ ಬಂದಾಗ ಬೇಟೆಗಾರರು ಹೊಂಚುಹಾಕಿ ಕೊಂದು ಹಾಕುವರು. ಇದನ್ನು ಸಾಕಿ ಪಳಗಿಸುವುದೂ ಉಂಟು. ಈಚೆಗೆ ಇದು ನಿರ್ವಂಶವಾಗುವ ಸ್ಥಿತಿಯಲ್ಲಿದೆ.

ಬೇಟೆಚಿರತೆ (ಹಂಟಿಂಗ್ ಲೆಪರ್ಡ್) ಎಂಬುದರ ಕಾಲುಗಳ ಉಗುರಿನ ಮೇಲೆ ಇತರ ಚಿರತೆಗಳಿಗಿರುವಂತೆ ಮಾಂಸದ ಪೊರೆಯಿಲ್ಲ. ಇದರಲ್ಲಿ ಭಾರತದ ಮತ್ತು ಆಫ್ರಿಕದ ಬೇಟೆ ಚಿರತೆಗಳೆಂದು ಎರಡು ಬಗೆಗಳುಂಟು. ಭಾರತದ ಬೇಟೆ ಚಿರತೆಗೆ ಆಫ್ರಿಕದ ಚಿರತೆಗಿರುವುದಕ್ಕಿಂತ ತೆಳುವಾದ ತುಪ್ಪಳದ ಚರ್ಮವಿದೆ. ಕತ್ತಿನ ಬಳಿ ಗಂಡು ಚಿರತೆಗೆ ಕೇಸರವಿಲ್ಲ. ಇದರ ಮೈ ಬಣ್ಣ ಮಾಸಲು ಬಿಳಿ. ಉದರಭಾಗ ಬಿಳಿ, ಕಣ್ಣಿನಿಂದ ಬಾಯಿಯವರೆಗೆ ಕಂದು ಮಚ್ಚೆಯಿದೆ. ಇದನ್ನು ಪಳಗಿಸಿ ಬೇಟೆಯಾಡಲು ಬಳಸುವರು. (ಎ;ಜಿ.ಆರ್.ವಿ.)

**ಚಿರಲ್, ಇಗ್ನೇಷಿಯಸ್ ವ್ಯಾಲೆಂಟೈನ್ :** 1852–1929. ಬ್ರಿಟಿಷ್ ಪತ್ರಕರ್ತ. ಇವನ ವಿದ್ಯಾಭ್ಯಾಸ ಮುಖ್ಯವಾಗಿ ಫ್ರಾನ್ಸಿನಲ್ಲಿ ನಡೆಯಿತು. ಸಾರ್ಬಾನ್‌ನಲ್ಲಿ ಪದವಿ ಪಡೆದ ಮೇಲೆ ಸ್ವಲ್ಪಕಾಲ (1872–1876) ವಿದೇಶಾಂಗ ಕಚೇರಿಯಲ್ಲಿ ಕಾರಕೂನನಾಗಿದ್ದ. ಪಶ್ಚಿಮ ಏಷ್ಯ, ಭಾರತ, ಆಸ್ಟ್ರೇಲಿಯ ಮೊದಲಾದ ದೇಶಗಳಲ್ಲಿ ವ್ಯಾಪಕವಾಗಿ ಸಂಚಾರ ಮಾಡಿದ (1876–1892). ಅನಂತರ 1892ರಿಂದ 1896ರ ವರೆಗೆ ಬರ್ಲಿನ್‌ನಲ್ಲಿ ಲಂಡನ್ ಟೈಮ್ಸ್ ಪತ್ರಿಕೆಯ ಬಾತ್ಮೀದಾರನಾಗಿ, 1899–1912ರಲ್ಲಿ ಟೈಮ್ಸ್‌ನ ವಿದೇಶ ಇಲಾಖೆಯ ಅಧಿಕಾರಿಯಾಗಿ, 1908–1912ರಲ್ಲಿ ಟೈಮ್ಸ್ ಪ್ರಕಟಣ ಕಂಪನಿಯ ಮಂಡಲಿಯ ಸದಸ್ಯನಾಗಿ ಇದ್ದ. ಟ್ವಿಕ್ಸ್ಟ್ ಗ್ರೀಕ್ ಅಂಡ್ ಟರ್ಕ್ (1881), ದಿ ಫಾರ್ ಈಸ್ಟರ್ನ್ ಕ್ವೆಶ್ಚನ್ (1896), ದಿ ಮಿಡ್ಲ್ ಈಸ್ಟರ್ನ್ ಕ್ವೆಶ್ಚನ್ (1903), ಇಂಡಿಯನ್ ಅನ್‌ರೆಸ್ಟ್ (1910), ದಿ ಈಜಿಪ್ಷಿಯನ್ ಪ್ರಾಬ್ಲಮ್ (1920), ದಿ ಆ್ಯಕ್ಸಿಡೆಂಟ್ ಅಂಡ್ ದಿ ಓರಿಯೆಂಟ್ (1924)–ಇವು ಅವನು ಬರೆದ ಕೆಲವು ಕೃತಿಗಳು.

ಲಾರ್ಡ್ ಕರ್ಜನ್ ದೆಹಲಿ ದರ್ಬಾರಿನ ವಿವರಣೆಯನ್ನು ವರದಿಮಾಡಲು 1908ರಲ್ಲಿ ಚಿರಲನನ್ನು ಭಾರತಕ್ಕೆ ಬರಮಾಡಿಕೊಂಡ. ಭಾರತ ರಾಷ್ಟ್ರೀಯ ಚಳವಳಿ ಕೇವಲ ಆಕಸ್ಮಿಕವಾದದ್ದೇ ಅಥವಾ ಸಹಜವಾಗಿ ರಾಷ್ಟ್ರವ್ಯಾಪಿಯಾದದ್ದೇ ಎಂಬುದನ್ನು ಪರಿಶೀಲಿಸಲೂ ಅದನ್ನು ಉಪಶಮನಗೊಳಿಸಲು ಸುಧಾರಣಾಮಾರ್ಗ ಅನುಸರಿಸಬೇಕೇ ಅಥವಾ ಬಲಪ್ರಯೋಗ ಕೈಗೊಳ್ಳಬೇಕೆ ಎಂಬ ಬಗ್ಗೆ ಸಲಹೆ ನೀಡಲೂ ಅವನನ್ನು ನೇಮಿಸಲಾಗಿತ್ತು (1910). ಅವನು ಈ ದೃಷ್ಟಿಯಿಂದ ವಿಪುಲವಾಗಿ ಮಾಹಿತಿ ಸಂಗ್ರಹಿಸಿ ತನ್ನ ವರದಿಯನ್ನು ಸಿದ್ಧಪಡಿಸಿದ ; ಅನಂತರ ಅದರ ಆಧಾರದ ಮೇಲೆ ಇಂಡಿಯನ್ ಅನ್‌ರೆಸ್ಟ್ ಎಂಬ ಗ್ರಂಥವನ್ನು ಪ್ರಕಟಿಸಿದ. ಅವನು ಬ್ರಿಟಿಷ್ ಸಾಮ್ರಾಜ್ಯನೀತಿಯ ಪ್ರತಿಪಾದಕನಾಗಿದ್ದುದರಿಂದ ಭಾರತ ರಾಷ್ಟ್ರೀಯ ಆಂದೋಲನದ ನಿಜವಾದ ಸ್ವರೂಪವನ್ನು ಅರಿಯಲಾಗಲಿಲ್ಲ. ರಾಷ್ಟ್ರೀಯ ಚಳವಳಿ ನಗರವಾಸಿಗಳಾದ ಹಿಂದೂಗಳಿಗೂ ಮಹಾರಾಷ್ಟ್ರ, ಮಧ್ಯಭಾರತ, ಬಂಗಾಳ, ಪಂಜಾಬುಗಳಿಗೂ ಸೀಮಿತವಾದದ್ದೆಂದೂ, ಆದ್ದರಿಂದ ಭಾರತಕ್ಕೆ ಸ್ವರಾಜ್ಯದ ಹಕ್ಕು ನೀಡುವುದು ಅಪೇಕ್ಷಣೀಯವಲ್ಲವೆಂದೂ ಆಡಳಿತದಲ್ಲಿ ಹಲವು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾತ್ರ ಪರಿಶೀಲಿಸಬಹುದೆಂದೂ ಅವನು ವರದಿ ನೀಡಿದ. ಲೋಕಮಾನ್ಯ ಬಾಲ ಗಂಗಾಧರ ತಿಲಕರಿಗೆ ಸಂಬಂಧಿಸಿದಂತೆ ಮುಂಬಯಿಯ ಆಡಳಿತ ವರ್ಗದಿಂದ ಲಭ್ಯವಾದ ಮಾಹಿತಿಯ ಆಧಾರದ ಮೇಲೆ ಹಲವು ಅನ್ಯಾಯವಾದ ಹೇಳಿಕೆಗಳು ಅವನ ಕೃತಿಯಲ್ಲಿ ಸೇರಿದ್ದುವು. ತಿಲಕರು ಅವನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದರು. ಕೆಳ ನ್ಯಾಯಾಲಯದಲ್ಲಿ ಚಿರಲ್‌ಗೆ ವಿರುದ್ಧವಾದ ತೀರ್ಪು ಹೊರಬಂತು. ಮೇಲಿನ ನ್ಯಾಯಾಲಯಕ್ಕೆ ಚಿರಲ್ ಮೇಲ್ಮನವಿ ಸಲ್ಲಿಸಿದ. ಸಾಮ್ರಾಜ್ಯ ಹಿತಾಸಕ್ತಿಗಳ ಪ್ರವೇಶದಿಂದ ಅಲ್ಲಿ ಚಿರಲ್‌ಗೆ ಅನುಕೂಲವಾಗಿ ತೀರ್ಪಾಯಿತು. ಅವನು ಅನಂತರ ಇಂಡಿಯ ಓಲ್ಡ್ ಅಂಡ್ ನ್ಯೂ ಎಂಬ ಗ್ರಂಥ ರಚಿಸಿದ. ಭಾರತ ರಾಷ್ಟ್ರೀಯ ಚಳವಳಿಯ ಬಗ್ಗೆಯಾಗಲಿ ನಾಯಕರ ವಿಷಯವಾಗಿಯಾಗಲಿ ಅವನು ನ್ಯಾಯಬದ್ಧವಾದ ನಿಲುವು ತಳೆಯಲಿಲ್ಲ. ಚಿರಲ್‌ಗೆ ಬ್ರಿಟಿಷ್ ದೊರೆಯಿಂದ ಸರ್ ಪದವಿ ಪ್ರಾಪ್ತವಾಗಿತ್ತು. ಅವನು ಅಕ್ಟೋಬರ್ 22, 1929 ರಂದು ಲಂಡನ್‌ನಲ್ಲಿ ಮರಣಹೊಂದಿದ. (ಜಿ.ಆರ್.ಆರ್.)

**ಚಿರಾಯತ :** ಜೆನ್ಸಿಯನೇಸೀ ಕುಟುಂಬಕ್ಕೆ ಸೇರಿದ ಒಂದು ಮೂಲಿಕೆ ಸಸ್ಯ. ಸ್ವರ್ಷಿಯ ಚಿರೆಟ ಇದರ ಶಾಸ್ತ್ರೀಯ ಹೆಸರು. ಇದು ಸಾಮಾನ್ಯವಾಗಿ 1,220–3050 ಮೀ. ಎತ್ತರದ ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದಕ್ಕೆ ಆರ್ಥಿಕ ಪ್ರಾಮುಖ್ಯವಿರುವುದರಿಂದ ಇದನ್ನು ಬಹಳ ಬೆಳೆಸಲಾಗುತ್ತಿದೆ. ಹೂಗಳು ನೀಲಿ ಅಥವಾ ಬಿಳಿ ಬಣ್ಣದವು. ಅಂಡಾಶಯವನ್ನು ಬಿಟ್ಟು ಹೂವಿನ ವಿವಿಧ ಭಾಗಗಳ ಸಂಖ್ಯೆ 4 ಇಲ್ಲವೆ 5 ಅಂಡಾಶಯ ಉಚ್ಚಸ್ಥಾನದ್ದು. ಅದರಲ್ಲಿ ಒಂದೇ ಕೋಶವಿದೆ. ಹಣ್ಣಿನಲ್ಲಿ ಚಿಕ್ಕ ಗಾತ್ರದ ಅಸಂಖ್ಯ ಬೀಜಗಳಿರುತ್ತವೆ.

ಚಿರಾಯತಕ್ಕೆ ಔಷಧೀಯ ಮಹತ್ತ್ವವುಂಟು. ಕಾಂಡವನ್ನು ಬಿಟ್ಟು ಸಸ್ಯದ ಉಳಿದ ಎಲ್ಲ ಭಾಗಗಳು ಕಹಿಯಾಗಿರುತ್ತವೆ. ಇದನ್ನು ಸಂಸ್ಕರಿಸಿ ತಯಾರಿಸಿದ ಔಷಧವನ್ನು ಮಧುಮೇಹ ರೋಗಕ್ಕೆ ಬಳಸುತ್ತಾರೆ. 'ಡಯಾಬಿಕಾನ್' ಎಂಬ ಔಷಧಿ ಚಿರಾಯತದಿಂದ ತಯಾರಿಸಿದ ಪ್ರಸಿದ್ಧ ಔಷಧ. ಇದಕ್ಕೆ ಕಾರಣ ಇದರಲ್ಲಿರುವ ಒಫೆಲಿಕ ಮತ್ತು ಚಿರಾಟಿನ್ ಎಂಬ ಆಮ್ಲಗಳು. ಜ್ವರ, ಶೀತ, ಹೊಟ್ಟೆನೋವು ಮುಂತಾದ ರೋಗಗಳಿಗೆ ಈ ಗಿಡ ಒಳ್ಳೆಯ ಔಷಧಿ ಎನಿಸಿದೆ. (ಬಿ.ಪಿ.)

**ಚಿಲಿ:** ದಕ್ಷಿಣ ಅಮೆರಿಕದಲ್ಲಿ ಪೆಸಿಫಿಕ್ ಕರಾವಳಿಯಲ್ಲಿರುವ ಒಂದು ದೇಶ. ಉತ್ತರಕ್ಕೆ ಪೆರು, ಪೂರ್ವಕ್ಕೆ ಬೊಲಿವಿಯ ಮತ್ತು ಆರ್ಜೆಂಟೀನ, ಪಶ್ಚಿಮಕ್ಕೆ ಪೆಸಿಫಿಕ್ ಸಾಗರ ಇವೆ. ದ.ಅ. $17^{0}$ 30' ನಿಂದ ದ. ಅ. $55^{0}59'$ ವರೆಗೆ 4264 ಕಿ.ಮೀ. ಉದ್ದಕ್ಕೆ ಚಾಚಿರುವ ಈ ದೇಶದ ಸರಾಸರಿ ಅಗಲ ಕೇವಲ 177 ಕಿ.ಮೀ. ಅಕ್ಷಾಂಶೀಯವಾಗಿ ಇಷ್ಟು ದೂರ

ಹಬ್ಬಿರುವ, ಜನ ವಾಸವಿರುವ ದೇಶ ಪ್ರಪಂಚದಲ್ಲಿ ಬೇರೆ ಯಾವುದೂ ಇಲ್ಲ. ಚಿಲಿಯ ವಿಸ್ತೀರ್ಣ 756096.3 ಚ.ಕಿಮೀ ದಕ್ಷಿಣ ಪೆಸಿಫಿಕ್ ಸಾಗರದ ವಾನ್ ಫರ್ನಾಂಡಿಸ್, ಈಸ್ಟರ್ ಮತ್ತು ಇತರ ಹಲವು ದ್ವೀಪಗಳು ಚಿಲಿಗೆ ಸೇರಿವೆ. ಚಿಲಿಯ ಜನಸಂಖ್ಯೆ 15,116,435 (2002).




**ಭೂವಿಜ್ಞಾನ :** ಚಿಲಿ ದೇಶ ಬಹುಕಾಲದಿಂದಲೂ ಭೂಕಂಪ ಮತ್ತು ಜ್ವಾಲಾಮುಖಿಗಳ ಹಾವಳಿಗೆ ತುತ್ತಾದ ಪ್ರದೇಶ. ಪೂರ್ವದ ಉದ್ದಕ್ಕೂ ಗಗನಚುಂಬಿ ಆ್ಯಂಡೀಸ್ ಪರ್ವತಶ್ರೇಣಿ, ಪಶ್ಚಿಮತೀರದ ಉದ್ದಕ್ಕೂ ಅಷ್ಟೇ ಆಳವಾದ ಸಮುದ್ರ, ಹೀಗೆ ಅತಿ ಎತ್ತರ, ಅತಿ ಆಳ–ಇವೆರಡರ ಸೀಮಾಪ್ರದೇಶವೇ ಚಿಲಿ ದೇಶ. 16ನೆಯ ಶತಮಾನದಿಂದ ಈಚೆಗೆ ಇಲ್ಲಿ ಸಂಭವಿಸಿದ ಅನೇಕ ಭೂಕಂಪಗಳ ದಾಖಲೆ ಇದೆ. ಇವುಗಳ ಪೈಕಿ ಸುಮಾರು 100 ಬಲು ಭಯಂಕರ ಭೂಕಂಪಗಳು. ಇವುಗಳ ಹಾವಳಿ ಅಪಾರ. 20ನೇ ಶತಮಾನದಲ್ಲಿ ತಲೆದೋರಿದ 1906, 1928, 1939, 1960 ಹಾಗೂ 1973ರ, ಭೂಕಂಪಗಳ ಹಾವಳಿಯಂತೂ ಬಹು ಭಯಾನಕ. ದೇಶದ ಪಶ್ಚಿಮತೀರದ ಉದ್ದಕ್ಕೂ ಭೂ ಇತಿಹಾಸದ ಅತ್ಯಂತ ಪುರಾತನ ಯುಗಗಳ ಗ್ರ್ಯಾನೈಟ್, ಪದರುಶಿಲೆ ಹಾಗೂ ಕ್ರಿಟೇಷಸ್ ಮತ್ತು ಟರ್ಷಿಯರಿ ನಿಕ್ಷೇಪಗಳು ಇವೆ. ಒಳನಾಡಿನ ಪೂರ್ವದಿಕ್ಕಿನ ಉದ್ದಕ್ಕೂ ಆ್ಯಂಡೀಸ್ ಪರ್ವತಶ್ರೇಣಿಯ ಪಶ್ಚಿಮಪಂಕ್ತಿ. ಇವೆರಡರ ನಡುವೆ ಇಡೀ ದೇಶದ ಉದ್ದಕ್ಕೂ ವ್ಯಾಪಿಸಿರುವ ಮಹಾ ತಗ್ಗು ಅಥವಾ ಕಣಿವೆ. ಆ್ಯಂಡೀಸ್ ಪರ್ವತಪಂಕ್ತಿಯ ಜಾಡಿನಲ್ಲಿ ಅಂತಸ್ಸರಣಗಳು (ಇನ್‍ಟ್ರೂಸಿವ್ಸ್) ಜ್ವಾಲಾಮುಖಿ ಶಿಲಾನಿಕ್ಷೇಪಗಳು ಮತ್ತು ಮಡಿಕೆ ಬಿದ್ದಿರುವ ಮೀಸೋಜೋಯಿಕ್ ಶಿಲಾಸ್ತರಗಳಿವೆ. ಕಣಿವೆಯ ಭಾಗದಲ್ಲಿ ಪುರಾತನಶಿಲಾಕಣಗಳ ಸಂಗ್ರಹದಿಂದಾದ ನಿಕ್ಷೇಪಗಳಿದ್ದು ಹಲವೆಡೆ ಇವು 90 ಮೀ.ಗಳಿಗೂ ಮೀರಿ ಮಂದವಾಗಿವೆ. ಉತ್ತರ ಚಿಲಿಯ ಆ್ಯಂಟೊ ಫ್ಯಾಗಸ್ಟಾದ ದಕ್ಷಿಣಕ್ಕಿರುವ ಪುರಾತನ ಶಿಲೆಗಳು ಸಮುದ್ರಮಟ್ಟದಿಂದ ಬಹು ಎತ್ತರಕ್ಕೆ ಬೆಟ್ಟಗಳೋಪಾದಿ ವ್ಯಾಪಿಸಿವೆ. ಈ ಬೆಟ್ಟಗಳ ಜಾಡು ಹಾರ್ನ್ ಭೂಶಿರದವರೆಗೂ ಕಂಡುಬರುತ್ತದೆ. ದಕ್ಷಿಣ ಚಿಲಿಯ ಅನೇಕ ದ್ವೀಪಗಳ ಪೂರ್ತಿ ಇವೇ ವ್ಯಾಪಿಸಿವೆ. ಇವೆಲ್ಲ ಪೇಲಿಯೊಜೋಯಿಕ್ ಯುಗದ ಶಿಲಾಸ್ತರಗಳಿಂದ ಕೂಡಿದ್ದು, ಅನೇಕ ಕಡೆ ಮಡಿಕೆ ಬಿದ್ದಿವೆ. ಉತ್ತರ ಚಿಲಿಯ ತೀರಪ್ರದೇಶದಲ್ಲಿರುವ ಕ್ರಿಟೇಷಸ್ ಮತ್ತು ಟರ್ಷಿಯರಿ ಶಿಲಾಸ್ತರಗಳು ಅಷ್ಟು ವಿಸ್ತಾರವಾಗಿಲ್ಲ. ಆದರೆ ದಕ್ಷಿಣ ಚಿಲಿಯ ಮೀಸೋಜೋಯಿಕ್ ಶಿಲಾಸ್ತರಗಳು ಬಹು ವಿಶಾಲವಾದ ಜಾಡಿನಲ್ಲಿ ಪ್ರಸರಿಸಿವೆ. ತೀರಪ್ರದೇಶದ ಟರ್ಷಿಯರಿ ಶಿಲಾಸ್ತರಶ್ರೇಣಿಯಲ್ಲಿ ಸಮುದ್ರದ ಹಾಗೂ ನೆಲಪ್ರದೇಶಗಳಲ್ಲಿ ಉತ್ಪತ್ತಿಯಾದ ಶಿಲಾನಿಕ್ಷೇಪಗಳನ್ನು ಕಾಣಬಹುದು. ಇವುಗಳಲ್ಲಿ ಬಹುಭಾಗ ಮಯೋಸೀನ್ ಅಥವಾ ಪ್ಲಿಯೋಸೀನ್ ಯುಗಕ್ಕೆ ಸೇರಿವೆ. ಟಿರಡೆಲ್‍ಫ್ಯೂಗೋ ದ್ವೀಪದ ಇಡೀ ಉತ್ತರಾರ್ಧದ ಪ್ರಸ್ಥಭೂಮಿ ಮಟ್ಟಸವಾದ ಟರ್ಷಿಯರಿ ಶಿಲಾಸ್ತರಗಳಿಂದಾದುದು. ಚಿಲಿಯ ಆ್ಯಂಡೀಸ್ ಪರ್ವತಶ್ರೇಣಿಯ ಉತ್ತರಭಾಗದಲ್ಲಿ ಜುರಾಸಿಕ್ ಹಾಗೂ ಕ್ರಿಟೇಷಸ್ ಕಾಲದ ಜಲಜಶಿಲಾಸ್ತರಗಳು ಮತ್ತು ಟರ್ಷಿಯರಿ ಯುಗದ ಬಹಿಸ್ಸರಣ ಶಿಲೆಗಳನ್ನು ಗುರುತಿಸಬಹುದು. ಪರ್ವತಶ್ರೇಣಿಯ ದಿಕ್ಕಿನಲ್ಲೇ ಹರಡಿರುವ ಮೀಸೋಜೋಯಿಕ್ ಯುಗದ ಶಿಲಾಸ್ತರಗಳು ಬೃಹದಾಕಾರದ ಸಮಾಂತರ ಮಡಿಕೆಗಳ ಶ್ರೇಣಿಯನ್ನೇ ನಿರ್ಮಿಸಿವೆ. ಇವನ್ನು ಭೇದಿಸಿಕೊಂಡು ಟರ್ಷಿಯರಿ ಗ್ರ್ಯಾನೈಟ್ ಮತ್ತು ಇತರ ಅಗ್ನಿಶಿಲಾಸ್ವರೂಪಗಳಿವೆ. ಅಲ್ಲದೆ ಈಚಿನ ಭೂಯುಗಗಳ ಜ್ವಾಲಾಮುಖಿಕೂಪಗಳನ್ನೂ ನೋಡಬಹುದು. ಉತ್ತರ ಚಿಲಿಯ ಕೋಪಿಯಾಪೋ ಬಳಿ ಸಸ್ಯಾವಶೇಷಗಳಿಂದ ಕೂಡಿದ ಕಲ್ಲಿದ್ದಲ ಸ್ತರಗಳಿವೆ. ಇವು ಕಿರಿಯ ಟ್ರಯಾಸಿಕ್ ಯುಗದ ರ್ಹೇಟಿಕ್ ಕಾಲದವು. ದೇಶದ ಹಲವಾರು ಕಡೆ ಮೀಸೋಜೋಯಿಕ್ ಶಿಲಾಸ್ತರಗಳನ್ನೂ ಕಾಣಬಹುದು. ಇವು ಬಹುಮಟ್ಟಿಗೆ ಸಮುದ್ರದ ಮರಳುಶಿಲೆ ಹಾಗೂ ಸುಣ್ಣ ಶಿಲಾಸ್ತರಗಳು. ನಡುವೆ ಅಲ್ಲಲ್ಲೇ ಜ್ವಾಲಾಮುಖಿಜ ಟುಫ್ ಹಾಗೂ ಪಾರ್ಫಿರಿ ಮತ್ತು ಪಾರ್ಫಿರೈಟುಗಳಿಂದಾದ ಕದಂಬಶಿಲೆಯನ್ನು ಗುರುತಿಸಲಾಗಿದೆ. ಪಾರ್ಫಿರೈಟಿನಲ್ಲಿ ಸಮುದ್ರಜೀವಿಗಳ ಅವಶೇಷಗಳು ಬೆರೆತಿರುವ ಕಾರಣ ಅವುಗಳಿಗೆ ಮೂಲವಾದ ಜ್ವಾಲಾಮುಖಿಗಳು ಸಮುದ್ರತಳದಲ್ಲಿದ್ದುವೆಂದು ಊಹಿಸಲಾಗಿದೆ. ಈ ಶಿಲಾಸ್ತರಗಳು ದಕ್ಷಿಣ ಆ್ಯಂಡೀಸ್ ಪರ್ವತಶ್ರೇಣಿಯ ವಿಶಿಷ್ಟ ಲಕ್ಷಣವೆನಿಸಿವೆ. ಇವು ಯಾವ ಒಂದು ಭೂಯುಗದ ನಿರ್ದಿಷ್ಟ ಶಿಲಾಶ್ರೇಣಿಯ ಹಂತಕ್ಕೂ ಸೀಮಿತವಾಗಿರದೆ ಇಡೀ ಜುರಾಸಿಕ್ ಹಾಗೂ ಕ್ರಿಟೇಷಸ್ ಸ್ತರಗಳ ನಡುವೆ ಅಲ್ಲಲ್ಲೇ ಗೋಚರವಾಗಿವೆ. ಒಮ್ಮೊಮ್ಮೆ ಅದೇ ಕಾಲದ ನೈಜ ಸಮುದ್ರೀಯ ಸ್ತರಗಳೊಡನೆ ಕ್ರಮೇಣ ಸೇರಿಹೋಗುವ ಸಂದರ್ಭಗಳೂ ಉಂಟು. ಆ್ಯಂಡೀಸ್ ಪರ್ವತಶ್ರೇಣಿಯ ಉಳಿದ ಭಾಗ ಬಹುಮಟ್ಟಿಗೆ ಬೃಹದಾಕಾರದ ಅಗ್ನಿಪರ್ವತಗಳಿಂದ ಹೊರಬಿದ್ದ ಶಿಲಾವಸ್ತುಗಳಿಂದಾದುದು. ಪರ್ವತಗಳ ಭವ್ಯಶಿಖರಗಳೇ ಈ ಜ್ವಾಲಾಮುಖಿಗಳು. ಈ ವರ್ಗದ ಶಿಲೆಗಳಲ್ಲಿ ಲಿಪಾರೈಟ್, ಡೇಸೈಟ್ ಮತ್ತು ಆ್ಯಂಡಿಸೈಟುಗಳು ಬಹುಮುಖ್ಯವಾದವು. ದಕ್ಷಿಣ ಚಿಲಿ ಪ್ರದೇಶದ ಈಚಿನ ಜ್ವಾಲಮುಖಿಗಳಿಂದ ಹೊರಬಿದ್ದ ಲಾವಾಸ್ತರಗಳಲ್ಲಿ ಆಲಿವೀನ್–ಹೈಪರ್‌ಸ್ತೀನ್ ಆ್ಯಂಡಿಸೈಟ್, ಬೆಸಾಲ್ಟ್ ಮೊದಲಾದ ಅಗ್ನಿಶಿಲೆಗಳನ್ನು ಕಾಣಬಹುದು. (ಬಿ.ವಿ.ಜಿ.)

**ಭೌತಲಕ್ಷಣ :** ಭೌತಿಕವಾಗಿ ಚಿಲಿಯನ್ನು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು: 1 ಉತ್ತರ ಚಿಲಿ (ದ. ಅ. $18^0$–ದ.ಅ. $30^0$), 2 ಮಧ್ಯ ಚಿಲಿ (ದ. ಅ. $30^0$–ದ. ಅ. $42^0$). 3 ದಕ್ಷಿಣ ಚಿಲಿ (ದ. ಅ. $42^0$ –ದ. ಅ. $56^0$). ದಕ್ಷಿಣೋತ್ತರವಾಗಿ ಹಬ್ಬಿರುವ ಆ್ಯಂಡೀಸ್ ಪರ್ವತಶ್ರೇಣಿಗಳು ಚಿಲಿ ದೇಶದ ಕಡೆಗೆ ಹೆಚ್ಚು ಇಳುಕಲಾಗಿವೆ. ಇವುಗಳ ಎತ್ತರ ಸಮುದ್ರಮಟ್ಟದಿಂದ 2,333 ಮೀ.–7,333 ಮೀ. ಚಿಲಿಯಲ್ಲಿ ಆ್ಯಂಡೀಸಿನ ಉತ್ತರದ ಕೊನೆಯಾದ ಪುನ್ನದ ಅಟಕಾಮ ಪ್ರಸ್ಥಭೂಮಿಯ ಎತ್ತರ 4570 ಮೀ. ಮಧ್ಯ ಚಿಲಿಯಲ್ಲಿ ಈ ಶ್ರೇಣಿಗಳು ಗರಿಷ್ಠ ಎತ್ತರ ತಲುಪುತ್ತವೆ. ಆಕಂಕಾಗ್ವ ಶಿಖರದ ಎತ್ತರ 7,610 ಮೀ. ದಕ್ಷಿಣ ಚಿಲಿಯ ರೇವುಪಟ್ಟಣವಾದ ಬಾಲ್ಪಾರಾಯೀಸೊಗೂ ಅರ್ಜಂಟೀನದ ಮುಖ್ಯ ಪಟ್ಟಣವಾದ ಬ್ವೆನಸ್ ಏರಿಸ್‌ಗೂ ಸಂಬಂಧ ಕಲ್ಪಿಸುವ ಖಂಡಾಂತರ ರೈಲ್ವೆಯ ಸುರಂಗಮಾರ್ಗ ಇರುವುದು ಈ ಕಣಿವೆಮಾರ್ಗಕ್ಕೆ ದಕ್ಷಿಣದಲ್ಲಿ. ದಕ್ಷಿಣಕ್ಕೆ ಸಾಗಿದಂತೆ ಈ ಶ್ರೇಣಿಗಳ ಎತ್ತರ ಕಡಿಮೆ. ದಕ್ಷಿಣ ತುದಿಯಲ್ಲಿ ಇವು ಕವಲೊಡೆದು ಸಮುದ್ರದಲ್ಲಿಳಿದು ತೀರವನ್ನು ಅಂಕುಡೊಂಕುಗೊಳಿಸಿವೆಯಲ್ಲದೆ ಹಲವಾರು ದ್ವೀಪಗಳಿಗೆ ಕಾರಣವಾಗಿವೆ. ದಕ್ಷಿಣದ ಹಲವು ಶಿಖರಗಳು ಹಿಮಾಚ್ಛಾದಿತ ಹಲವು ಶಿಖರಗಳು ಜ್ವಾಲಾಮುಖಿಗಳು.

ಅವು ನೋಡಲು ಬಲು ಸುಂದರವಾಗಿವೆ. ಉತ್ತರ ಚಿಲಿ ಮರುಭೂಮಿ. ಇದು ಜಗತ್ತಿನ ಪ್ರಮುಖ ಒಣ ಪ್ರದೇಶಗಳಲ್ಲೊಂದು. ಮಧ್ಯ ಚಿಲಿ ಫಲವತ್ತಾದ ಮೈದಾನ. ಇಲ್ಲೇ ಚಿಲಿಯ ಶೇ. 90ರಷ್ಟು ಜನ ವಾಸಿಸುತ್ತಾರೆ.

ಬಿಗ್‌ಲ್ ಚ್ಯಾನಲ್‌ನಲ್ಲಿರುವ ಹಿಮನದಿ

ಆ್ಯಂಡೀಸಿನಲ್ಲಿ ಹುಟ್ಟಿ ಚಿಲಿಯಲ್ಲಿ ಹರಿದು ಪೆಸಿಫಿಕ್ ಸಾಗರ ಸೇರುವ ನದಿಗಳ ಸಂಖ್ಯೆ ಸುಮಾರು 30. ಅವುಗಳಲ್ಲಿ ಹಲವು ವೇಗವಾಗಿ ಹರಿಯುತ್ತವೆ. ಉತ್ತರದಲ್ಲಿ ಹೆಚ್ಚು ನದಿಗಳಿಲ್ಲ. ಇಲ್ಲಿ ಹರಿಯುವ ಲೋವಾ ಎಂಬುದು ಚಿಲಿಯ ಅತ್ಯಂತ ಉದ್ದವಾದ ನದಿ (379 ಕಿಮೀ). ಇದು ವರ್ಷವೆಲ್ಲ ಹರಿಯುತ್ತದೆ. ಎರಡನೆಯ ದೊಡ್ಡ ನದಿ ಕೋಪಿಯಾಪೋ (180 ಕಿಮೀ). ಈ ನದಿಯ ನೀರೆಲ್ಲ ವ್ಯವಸಾಯಕ್ಕೆ ಬಳಕೆಯಾಗುತ್ತದೆ. ದಕ್ಷಿಣದಲ್ಲಿ ಅನೇಕ ಸಣ್ಣಪುಟ್ಟ ನದಿಗಳಿವೆ. ಇವುಗಳಲ್ಲಿ ನೀರು ಯಥೇಚ್ಛ. ಇವು ವಿದ್ಯುತ್ ಉತ್ಪಾದನೆಗೆ ಅನುಕೂಲವಾಗಿವೆ. ಚಿಲಿಯ ಸರೋವರಗಳು ಜಗತ್ತಿನಲ್ಲೇ ಅತ್ಯಂತ ಸುಂದರವೆಂದು ಪ್ರಸಿದ್ಧವಾಗಿವೆ. ದಕ್ಷಿಣ ಚಿಲಿಯಲ್ಲಿ ಬೀಯೊ-ವೀಯೊ ನದಿಗೆ ದಕ್ಷಿಣದಲ್ಲಿ ಅನೇಕ ಹಿಮಾನಿ ಸರೋವರಗಳಿವೆ. ಅವುಗಳ ಪೈಕಿ ಯಾಂಗ್‌ಕೀವೆ (852 ಚ.ಕಿಮೀ) ಮತ್ತು ರಾಂಕೊ (407 ಚ.ಕಿಮೀ) ಅತ್ಯಂತ ದೊಡ್ಡವು. ಸರೋವರ ಪ್ರದೇಶ ಪ್ರವಾಸಿಗಳ ಸತತ ಆಕರ್ಷಣೆಯಾಗಿದೆ.

**ವಾಯುಗುಣ :** ಚಿಲಿಯ ವಾಯುಗುಣ ವೈಪರೀತ್ಯಗಳಿಂದ ಕೂಡಿದ್ದು. ಉತ್ತರ ಭಾಗ ಶುದ್ಧ ಮರಳುಗಾಡು. ಮಧ್ಯ ಚಿಲಿಯ ಕಡೆಗೆ ಸಾಗಿದಂತೆ ಮಳೆ ಅಧಿಕವಾಗುತ್ತದೆ. ದಕ್ಷಿಣ ಚಿಲಿಯಲ್ಲಿ ಬೀಳುವಷ್ಟು ಮಳೆ ಉಷ್ಣವಲಯದ ಹೊರಗಿರುವ ಬೇರಾವ ಪ್ರದೇಶದಲ್ಲೂ ಬೀಳುವುದಿಲ್ಲ. ದ. ಅ. 30ಲಿ ಯ ಸುಮಾರಿನಲ್ಲಿ ಪೆಸಿಫಿಕ್‌ನಲ್ಲಿ ಶಾಶ್ವತ ಉನ್ನತ ಒತ್ತಡ ಪ್ರದೇಶದಿಂದಾಗಿ ಉತ್ತರದ ಕಡೆಗೆ ಮಾರುತಗಳು ಬೀಸುತ್ತವೆ. ಆದ್ದರಿಂದ ಆ ಪ್ರದೇಶ



ಉತ್ತರ ಚಿಲಿಯಲ್ಲಿರುವ ಪರಿನಕೋಟ ಜ್ವಾಲಾಮುಖಿ

ಶುಷ್ಕ. ಆ ಉನ್ನತ ಒತ್ತಡ ಪ್ರದೇಶಕ್ಕೆ ದಕ್ಷಿಣ ಭಾಗದಲ್ಲಿ ಚಂಡಮಾರುತಗಳು ಅಧಿಕ. ದಕ್ಷಿಣ ಭಾಗದಲ್ಲಿಯ ಕಡಿಮೆ ಒತ್ತಡದ ಪ್ರದೇಶಗಳ ಪಟ್ಟಿಗಳು ಬಿರುಗಾಳಿಗಳಿಗೆ ಕಾರಣವಾಗಿವೆ. ಪಶ್ಚಿಮದಿಂದ ಬೀಸುವ ಮಾರುತಗಳು ಮಳೆ ತರುತ್ತವೆ. ಉತ್ತರದಲ್ಲಿ ಸರಾಸರಿ ಮಳೆ 1-5ಮಿಮೀ. ನಷ್ಟು (0.06") ಕಡಿಮೆ. ದಕ್ಷಿಣಕ್ಕೆ ಸಾಗಿದಂತೆ ಹೆಚ್ಚು. ಲಾ ಸೆರೇನಾದಲ್ಲಿ (ದ. ಅ. $30^{\circ}$) 141 ಮಿಮೀ. (5.6"), ಬಾಲ್ಪಾರಾಯೀಸೊದಲ್ಲಿ (ದ. ಅ. $33^{\circ}$) 500 ಮಿಮೀ. (19.7"). ಇನ್ನೂ ದಕ್ಷಿಣಕ್ಕೆ ಬಾಲ್ಡೀವಿಯದಲ್ಲಿ (ದ. ಅ. $39^0$ 50') 2,707 ಮಿಮೀ (107"). ದ. ಅ. $53^0$ ಯಲ್ಲಿರುವ ಬಾಯೀಯಾ ಫೆಲಿಕ್ಸ್‌ನಲ್ಲಿ 5,379 ಮಿಮೀ. (216") ಮಳೆಯಾಗುತ್ತದೆ. ಕಣಿವೆ ಪ್ರದೇಶಗಳಿಗಿಂತ ಆ್ಯಂಡೀಸಿನ ಪಶ್ಚಿಮ ಇಳಿಜಾರುಗಳಲ್ಲಿ ಮಳೆ ಅಧಿಕ.

ಪೆರು ಶೀತೋದಕ ಪ್ರವಾಹ ಚಿಲಿಯ ತೀರವನ್ನು ದ. ಅ. $40^0$ಯ ಬಳಿ ಮುಟ್ಟಿ ತೀರದಲ್ಲೇ ಉತ್ತರಾಭಿಮುಖವಾಗಿ ಹರಿಯುತ್ತದೆ. ಆದ್ದರಿಂದ ಚಿಲಿಯ ಉಷ್ಣತೆ ಸಾಮಾನ್ಯವಾಗಿ ಇರಬೇಕಾದ್ದಕ್ಕಿಂತ ಕಡಿಮೆ. ಉತ್ತರ ಭಾಗದಲ್ಲಿರುವ ಆರೀಕಾದಲ್ಲೂ ಬೇಸಿಗೆಯಲ್ಲಿ ಸರಾಸರಿ ಉಷ್ಣತೆ $24^0C$ ಗಿಂತ ಹೆಚ್ಚಿರುವುದಿಲ್ಲ. ಇಕೀಕೆಯಲ್ಲಿ ಮಧ್ಯಕ ಉಷ್ಣತೆ $19^0C$ ಬಾಲ್ಪಾರಾಯೀಸೋದಲ್ಲಿ $14^{\circ}C$ 519 ಮೀ. ಎತ್ತರದಲ್ಲಿರುವ ಸಾಂತಿಯಾಗೋದಲ್ಲಿ $35^0$ ಫ್ಯಾ-$25^0$ ಫ್ಯಾ. ಮಧ್ಯದ ಕಣಿವೆಯ ದಕ್ಷಿಣ ಭಾಗದಲ್ಲಿರುವ ಬಾಲ್ಡೀವಿಯದಲ್ಲಿ ಜನವರಿ ಅತ್ಯುಷ್ಣ ಮಾಸ ($16.5^0$ಫ್ಯಾ.) ಜುಲೈ ಅತಿ ಶೀತ ಮಾಸ ($45^{\circ}$ ಫ್ಯಾ). ಮಧ್ಯ ಚಿಲಿ ಪ್ರದೇಶದಲ್ಲಿ ಜನವಸತಿಗೆ ಅತ್ಯಂತ ಹಿತಕರವಾದ ವಾಯುಗುಣವಿದೆ.



ಪೈನೆ ಜಲಪಾತದ ಹಿನ್ನೆಲೆಯಲ್ಲಿ 30,940 ಮೀ ಎತ್ತರದ ಪೈನೆ ಶಿಖರ

**ಸ್ವಾಭಾವಿಕ ಸಸ್ಯಪ್ರಾಣಿವರ್ಗ :** ಚಿಲಿಯ ಶೇ. 70 ಕ್ಕಿಂತ ಹೆಚ್ಚು ಭಾಗ ಪರ್ವತಮಯ. ಸಮುದ್ರಮಟ್ಟದಿಂದ 6100 ಮೀ.ಗೂ ಹೆಚ್ಚಿನ ಎತ್ತರದವರೆಗೆ ನಾನಾ ಎತ್ತರಗಳ ಪ್ರದೇಶಗಳು ಇಲ್ಲುಂಟು. ಮಳೆಯೇ ಆಗದ ಪ್ರದೇಶಗಳಿಂದ ಹಿಡಿದು, 200"ಗಿಂತ ಹೆಚ್ಚು ಮಳೆ ಆಗುವ ಪ್ರದೇಶಗಳವರೆಗೆ ಇದು ಹಬ್ಬಿದೆಯಾದ್ದರಿಂದ ಇಲ್ಲಿಯ ಸಸ್ಯಗಳಲ್ಲಿ ವಿಶೇಷ ವೈವಿಧ್ಯವನ್ನು ಕಾಣಬಹುದು. ನೆಲದ ಎತ್ತರ ಹಾಗೂ ವಾಯುಗುಣಕ್ಕೆ ಅನುಗುಣವಾಗಿ ಇಲ್ಲಿ ಮೂರು ಮುಖ್ಯ ಸಸ್ಯವಲಯಗಳಿವೆ. ಪೆರುವಿನ ಎಲ್ಲೆಯಿಂದ ದ. ಅ. $20^0$ ವರೆಗಿನ ತೀರಪ್ರದೇಶ ಮರುಭೂಮಿ. ದ. ಅ. $20^0$ ಯಿಂದ ದಕ್ಷಿಣಕ್ಕೆ ತೀರದ ಬೆಟ್ಟಗಳ ಪ್ರದೇಶದಲ್ಲಿ ಚಳಿಗಾಲದಲ್ಲಿ ದಟ್ಟ ಮಂಜು ಬೀಳುತ್ತದೆ. ಆದ್ದರಿಂದ ಇಲ್ಲಿಯ ಸಸ್ಯಗಳು ಶ್ರಾಯೀಣ. ದ. ಅ. $24^0$ -ದ. ಅ. $26^0$ 50' ಪ್ರದೇಶದಲ್ಲಿ ನಾಲ್ಕು ಬಗೆಯ ಸಸ್ಯಗಳಿವೆ. ಮಂಜು ಪಟ್ಟಿಯ ನೆಲಕ್ಕಿಂತ ಎತ್ತರದಲ್ಲಿ ಮತ್ತು ಅದಕ್ಕಿಂತ ಕೆಳಗಡೆ ಶುಷ್ಕ ವಿರೋಧಿ ಪೊದೆಗಿಡಗಳೂ ಮಂಜುಪಟ್ಟಿಯ ಪ್ರದೇಶದಲ್ಲಿ ನಾನಾ ಬಗೆಯ ಕಳ್ಳಿಗಳೇ ಮುಂತಾದ ಸಸ್ಯಗಳೂ ಉಂಟು. ದ. ಅ. $20^0$ 50'-ದ. ಅ. $37^0$ ಪ್ರದೇಶದಲ್ಲಿ ಮೆಡಿಟರೇನಿಯನ್ ವಾಯುಗುಣವಿರುವುದರಿಂದ ಆ ವಾಯುಗುಣಕ್ಕೆ ವಿಶಿಷ್ಟವಾದ ಸಸ್ಯಗಳಿವೆ. ಎತ್ತರಕ್ಕೆ ತಕ್ಕಂತೆ ಅವು ಬದಲಾಗುತ್ತವೆ. ಸಮುದ್ರಮಟ್ಟದ ಬಳಿಯ ಪ್ರದೇಶದಲ್ಲಿ ಆಲೂಗಡ್ಡೆ ಸಂಬಂಧಿ ಸೋಲೇನಂ, ಮೆರಿಟಿಯಂ ಸಾಮಾನ್ಯ. 762ಮೀ. ಎತ್ತರದವರೆಗೆ ಕ್ರೈನೊಡೆಂಡ್ರಾನ್ ಪಟಗ್ವ ಎಂಬ ವೃಕ್ಷ, ಸದೃಶ ಲಿಲಿಗಳೂ, ಬೆಲೊಟ ಮೈಯಸೈಗಳೂ ಬೆಳೆಯುತ್ತವೆ. ಕಡಿಮೆ ಎತ್ತರದ ಈ ಪ್ರದೇಶಗಳಲ್ಲಿ ಗೊಬ್ಬಳಿ ಮುಂತಾದ, ಹೆಚ್ಚು ಎತ್ತರಕ್ಕೆ ಬೆಳೆಯದ ಮರಗಳು ಸಾಮಾನ್ಯ. ಪರ್ವತ ಇಳಿಜಾರಿರುವ ಕೆಲವು ಎಡೆಗಳಲ್ಲಿ ಅಂಟುವಾಳ, ಲಿತ್ರಿಯಗಳೂ ಇರುತ್ತವೆ. 1372ಮೀ. ವರೆಗಿನ ಎತ್ತರದಲ್ಲಿ ವ್ಯಾಲೆನ್ಸಿಲಿಯ ಮತ್ತು ಇತರ ಪೊದೆಗಳುಂಟು. ಹಿಮರೇಖೆಯ ಕೆಳಗೆ (ಮಧ್ಯ ಚಿಲಿಯಲ್ಲಿ 4267ಮೀ.)ಮೆತ್ತೆ ಗಿಡಗಳು ಬೆಳೆಯುತ್ತವೆ. ವಸಂತಕಾಲದಲ್ಲಿ ಹೂಬಿಡುವ ಅನೇಕ ಗಿಡಗಳು ಇವೆ. ದ. ಅ. $37_0$ -ದ. ಅ. $56_0$ ಪ್ರದೇಶದಲ್ಲಿ ಹೆಚ್ಚು. ಇಲ್ಲಿ ಮಧ್ಯ ರೇಖಾಂಶಗಳ ಒತ್ತಾದ ಮಳೆಕಾಡುಗಳು ವಿಶೇಷ. ಇಲ್ಲಿ ಶಂಕುಪರ್ಣಿಗಳ ಹಲವು ಬಗೆಗಳು ಬೆಳೆಯುತ್ತವೆ. ನಾನಾ ಬಗೆಯ ಬಳ್ಳಿಗಳು, ಪೊದೆಗಳು, ತೆರ್ಮೆಗಳು, ಹಾವಸೆಗಳು ಸಾಮಾನ್ಯ. ತೆರೆದ ಸ್ಥಳಗಳಲ್ಲಿ ಬಿದಿರುಮೆಳೆಗಳಿವೆ. ಚಿಲಿಯ ಹಲವು ಸಸ್ಯಗಳು ಆ್ಯಂಡಿಯನ್ ಮತ್ತು ಉಪ ಅಂಟಾರ್ಕ್ಟಿಕ್ ಮೂಲ ಅಥವಾ ಸಂಬಂಧ ಉಳ್ಳವು.

ಆ್ಯಂಡೀಸ್ ಶ್ರೇಣಿಗಳಿಂದಾಗಿ ದಕ್ಷಿಣ ಅಮೆರಿಕದ ಇತರ ಭಾಗಗಳ ಪ್ರಾಣಿಗಳಿಂದ ಚಿಲಿಯ ಪ್ರಾಣಿಗಳು ಪ್ರತ್ಯೇಕಿಸಲ್ಪಟ್ಟಿವೆ. ಪ್ಯೂಮ, ಗ್ವಾನಾಕೊ, ಆ್ಯಂಡಿಯನ್ ತೋಳ, ಹ್ಯೂಮಲ್, ಚಿಲ, ಎರಡು ಬಗೆಯ ಕಾಡುಬೆಕ್ಕುಗಳು-ಇವು ಚಿಲಿಯ ದೊಡ್ಡ ಗಾತ್ರದ

ಸ್ತನಿಗಳು. ಬಹುತೇಕ ನಷ್ಟಜೀವಿಯಾದ ಕಾಡು ಚಿಂಚಿಲವೇ ಮುಂತಾದ ಹಲವು ಬಗೆಯ ಪರ್ವತ ದಂಶಕಗಳಿವೆ. ದಕ್ಷಿಣದ ಕಾಡುಗಳಲ್ಲಿ ಉದರಸಂಚಿಗಳೂ ಡಾರ್ವಿನ್ ನರಿಗಳೂ, ಅತಿ ಚಿಕ್ಕ ಜಿಂಕೆಗಳೂ ಇವೆ. ಚಿಲಿಯಲ್ಲಿ ಸಣ್ಣ ಹಕ್ಕಿಗಳು ತುಂಬ ಉಂಟು. ಆದರೆ ದಕ್ಷಿಣ ಅಮೆರಿಕದ ಮುಖ್ಯ ಹಕ್ಕಿಗಳ ಬಗೆಗಳು ಹಲವು ಇಲ್ಲಿಲ್ಲ. ಗೂಳಿಗಪ್ಪೆಗಳೂ, ಕಪ್ಪೆಗಳೂ ಇವೆ. ಸ್ಥಳೀಯ ಶುದ್ಧಜಲಮೀನುಗಳು ಹೆಚ್ಚಾಗಿಲ್ಲ.

**ಸಾಂತಿಯಾಗೋ ನಗರದ ಒಂದು ನೋಟ**

**ಜನಜೀವನ :** ಚಿಲಿಯ ಜನಸಂಖ್ಯೆ 17,248,450 (2011). ಅವರಲ್ಲಿ ಶೇ 90ರಷ್ಟು ಜನ ಮಧ್ಯ ಚಿಲಿಯಲ್ಲಿ ಸಾಂದ್ರೀಕರಿಸಿದ್ದಾರೆ. ಶೇಕಡ 85 ಜನ ಪಟ್ಟಣವಾಸಿಗಳು. ರಾಜಧಾನಿ ಸಾಂತಿಯಾಗೋ ಚಿಲಿಯ ಅತ್ಯಂತ ದೊಡ್ಡ ನಗರ. ಜನಸಂಖ್ಯೆ ಸು. 5428,590. ಇತರ ನಗರಗಳು ಬಾಲ್ಪಾರಾಯೀಸೊ (2002ರಲ್ಲಿ 6,66,381), ಕಾನ್ಸೆಪ್ಸಿಯಾನ್ (803,683), ಆನ್ತೊಫಾಗಾಸ್ತಾ (285,255), ಟೆಮೂಕೊ, ಟಾಲ್ಕಾ, ಷೀಯಾನ್, ಒಸಾರ್ನೊ ಮತ್ತು ಬಾಲ್ದೀವಿಯ. 1990ರಿಂದ ಚಿಲಿಯ ಜನಸಂಖ್ಯೆ ಇಳಿಯುತ್ತಿದೆ. 2050ರ ಹೊರಗೆ ಜನಸಂಖ್ಯೆ 20.2 ಮಿಲಿಯನ್ ಆಗಬಹುದು.



**ಬಾಲ್ಪಾರಾಯೀಸೋ ಬಳಿಯ ಸಮುದ್ರತೀರ ನಗರ ಬೀನ್ಯಾದೆಲ್ ಮಾರ್, ಚಿಲಿಯ ಪ್ರಮುಖ ಬೇಸಗೆ ವಿಹಾರಧಾಮ**

ಚಿಲಿಯದು ಬಹುಜನಾಂಗೀಯ ಸಮಾಜ; ಬಹುಭಾಗ ಯುರೋಪಿಯನ್ ಮೂಲದ್ದು; ಜರ್ಮನ್, ಇಟ್ಯಾಲಿಯನ್, ಐರಿಷ್, ಫ್ರೆಂಚ್, ಬ್ರಿಟಿಷ್, ಸ್ವಿಸ್ ಮತ್ತು ಕ್ರೊಏಷಿಯನ್ ಮೂಲದವರೂ ಇದ್ದಾರೆ.

ಚಿಲಿಯ ರಾಷ್ಟ್ರಭಾಷೆ ಆ್ಯಸ್ಪಿಲಿಯಾನ್ . ಜರ್ಮನ್ ಭಾಷೆ ಆಡುವವರು ಸ್ವಲ್ಪ ಜನರುಂಟು. ಆರಾಕೇನಿಯನ್ ಇಂಡಿಯನರು ತಮ್ಮ ಭಾಷೆಯ ಜೊತೆಗೆ ಸ್ಪ್ಯಾನಿಷನ್ನೂ ಆಡುತ್ತಾರೆ. ಶೇ. 89.5 ಜನ ರೋಮನ್ ಕ್ಯಾಥೊಲಿಕರು. ಫುಟ್‍ಬಾಲ್ ಇಲ್ಲಿಯ ಜನಪ್ರಿಯ ಕ್ರೀಡೆ. ಸ್ಕೀಯಿಂಗ್, ಮೀನು ಹಿಡಿಯುವುದು–ಇವುಗಳಲ್ಲೂ ಜನರಿಗೆ ಆಸಕ್ತಿ.

**ವ್ಯವಸಾಯ, ಪಶುಪಾಲನೆ, ಅರಣ್ಯಗಾರಿಕೆ :** ಚಿಲಿಯ ಒಟ್ಟು ವಿಸ್ತೀರ್ಣದಲ್ಲಿ ಕೃಷಿಯೋಗ್ಯವಾದ ನೆಲದ ಭಾಗ ಬಲು ಕಡಿಮೆ. ಚಿಲಿಯ ಜನರು ಮುಖ್ಯವಾಗಿ ವ್ಯವಸಾಯವನ್ನೂ, ಗಣಿಗಾರಿಕೆಯನ್ನೂ ಅವಲಂಬಿಸಿದ್ದಾರೆ. ಕೃಷಿಗೆ ಒಳಪಟ್ಟ ನೆಲದ ಬಹುಭಾಗ ಇರುವುದು ಮಧ್ಯ ಚಿಲಿಯಲ್ಲಿ. ಎರಡನೆಯ ಮಹಾಯುದ್ಧದವರೆಗೂ ಆಹಾರ ವಿಚಾರದಲ್ಲಿ ಚಿಲಿ ಸ್ವಾವಲಂಬಿಯಾಗಿತ್ತು. ಅಲ್ಲಿಂದೀಚೆಗೆ ಕೊರತೆ ಉದ್ಭವಿಸಿದೆ. ಆಹಾರ ಆಮದಿನಿಂದಾಗಿ ವಿದೇಶಿ ವಿನಿಮಯ ಸಮಸ್ಯೆ ಉಲ್ಬಣಿಸಿದೆ. ಆಧುನಿಕ ಕೃಷಿವಿಧಾನಗಳನ್ನು ಅನುಸರಿಸದಿರುವುದು, ಅನೇಕ ಕೃಷಿಕರು ಇತರರ ನೆಲದಲ್ಲಿ ಬೇಸಾಯ ಮಾಡಬೇಕಾಗಿರುವುದು – ಇವು ಕಡಿಮೆ ಉತ್ಪನ್ನಕ್ಕೆ ಮುಖ್ಯ ಕಾರಣಗಳು. ಸರಿಯಾಗಿ ಬೇಸಾಯ ಮಾಡಿದರೆ ಚಿಲಿಯ ನೆಲ ಈಗಿನ ಜನಸಂಖ್ಯೆಯ ನಾಲ್ಕರಷ್ಟಕ್ಕೆ ಸಾಕಷ್ಟು ಆಹಾರ ಒದಗಿಸಬಲ್ಲುದು. ಈ ದೃಷ್ಟಿಯಿಂದ ಅಲ್ಲಿ ವ್ಯಾಪಕವಾದ ಭೂಸುಧಾರಣೆಗಳು ಜಾರಿಗೆ ಬಂದಿವೆ. ಚಿಲಿಯ ಮುಖ್ಯ ಬೆಳೆಗಳು ಗೋದಿ, ಬಾರ್ಲಿ, ಓಟ್ಸ್, ರೈ, ಮೆಕ್ಕೆಜೋಳ, ಆಲೂಗಡ್ಡೆ, ಹುರುಳಿ, ಲೆಂಟಿಲ್. ಅನೇಕ ಬಗೆಯ ಹಣ್ಣುಗಳೂ ಬೆಳೆಯುತ್ತವೆ. ಗೋದಿ, ಸಕ್ಕರೆ, ಕಾಫಿ, ಚಹ, ಬಾಳೆಹಣ್ಣು, ಹತ್ತಿ ಇವನ್ನು ಚಿಲಿ ಆಮದು ಮಾಡಿಕೊಳ್ಳುತ್ತದೆ. ದ್ರಾಕ್ಷಿ ಒಂದು ಮುಖ್ಯ ಬೆಳೆ. ವೈನ್ ತಯಾರಿಕೆ ಪ್ರವರ್ಧಮಾನವಾಗಿದೆ. ಊಟದ ವೇಳೆಯಲ್ಲಿ ವೈನನ್ನು ಸೇವಿಸುವುದು ಚಿಲಿಯನರ ಪದ್ಧತಿಯಾದ್ದರಿಂದ ದೇಶದಲ್ಲೇ ಇದಕ್ಕೆ ಸ್ಥಿರವಾದ ಬೇಡಿಕೆಯಿದೆ. ಇದು ರಫ್ತೂ ಆಗುತ್ತದೆ.

ಚಿಲಿಯಲ್ಲಿ ದನ, ಕುರಿಗಳನ್ನು ಹೆಚ್ಚಾಗಿ ಸಾಕುತ್ತಾರೆ. ಕುದುರೆ, ಆಡು ಇತರ ಸಾಕುಪ್ರಾಣಿಗಳು. ಚಿಲಿಯನರಿಗೆ ಸಾಕಾಗುವಷ್ಟು ಮಾಂಸ ಅಲ್ಲಿ ಉತ್ಪತ್ತಿಯಾಗುವುದಿಲ್ಲ. ಚಿಲಿಯ ಅಗತ್ಯದಲ್ಲಿ ಶೇ. 35 ಹೊರಗಡೆಯಿಂದ ಬರುತ್ತದೆ.

ಚಿಲಿಯ ಒಟ್ಟು ನೆಲದಲ್ಲಿ ಶೇ. 10ರಷ್ಟು ಭಾಗದಲ್ಲಿ ವಾಣಿಜ್ಯ ಚೌಬೀನೆ ಮರಗಳಿವೆಯೆಂಬುದಾಗಿ 1946ರಲ್ಲಿ ನಡೆಸಿದ ಒಂದು ಸರ್ವೇಕ್ಷಣೆಯಿಂದ ವೇದ್ಯವಾಗಿದೆ. ಆದರೆ ಇದರಲ್ಲಿ ಬಹುಭಾಗ ಇರುವುದು ಸಂಚಾರ ಕಷ್ಟಸಾಧ್ಯವಾದ ದಕ್ಷಿಣ ಚಿಲಿಯಲ್ಲಿ. ದೇಶಕ್ಕೆ ಅಗತ್ಯವಾದ ಗಟ್ಟಿ ಹಾಗೂ ಮೆದು ಮರಗಳೂ ಇವೆ. ರಚನೆಗೆ ಅಗತ್ಯವಾದ ಭಾರವಾದ ಮರಗಳು ಕಡಿಮೆ. ಒಂದನೆಯ ಮಹಾಯುದ್ಧಕ್ಕೆ ಮುಂಚೆ ಚೌಬೀನೆ ಕೈಗಾರಿಕೆ ಅದಕ್ಷವೂ ಅಪವ್ಯಯಕಾರಿಯೂ ಆಗಿತ್ತು. ಅನಂತರ ಈ ಕೈಗಾರಿಕೆ ಬೆಳೆಯಲಾರಂಭಿಸಿತು. ಇದಕ್ಕೆ ರಕ್ಷಣೆ ನೀಡಲಾಯಿತು. ಅರಣ್ಯರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಜಾರಿಗೆ ಬಂದವು. ಈಗ ಚೌಬೀನೆ ಆಮದು ಬಹುತೇಕ ನಿಂತಿದೆ. ಪ್ಲೈವುಡ್, ಮರದ ತಿರುಳು ಮುಂತಾದ ಅನೇಕ ಕೈಗಾರಿಕೆಗಳು ಬೆಳೆದಿವೆ. ದಕ್ಷಿಣ ಅರಣ್ಯ ಪ್ರದೇಶಗಳಲ್ಲಿ ಸಂಚಾರ ಸೌಲಭ್ಯಗಳನ್ನು ಹೆಚ್ಚಿಸಲು ಪ್ರಯತ್ನಗಳಾಗುತ್ತಿವೆ.

**ಓಹಿಗ್ಗಿನ್ ಪ್ರಾಂತ್ಯದ ಎಲ್‍ಟೆನಿಯೆಂಟೆ ತಾಮ್ರದ ಗಣಿ. ಜಗತ್ತಿನ ಅತ್ಯುತ್ತಮ ತಾಮ್ರದ ಅದುರು ಇಲ್ಲಿಯದು**

**ಗಣಿಗಾರಿಕೆ, ಮತ್ಸ್ಯೋದ್ಯಮ, ಕೈಗಾರಿಕೆ :** ನೈಟ್ರೇಟ್ ಮತ್ತು ತಾಮ್ರ ಪ್ರಮುಖ ಖನಿಜಗಳು. ಇವು ಉತ್ತರ ಚಿಲಿಯಲ್ಲಿ ಹೇರಳವಾಗಿ ಸಿಗುತ್ತವೆ. ನೈಸರ್ಗಿಕ ನೈಟ್ರೇಟಿನಲ್ಲಿ ಚಿಲಿಯದು ಏಕಸ್ವಾಮ್ಯ. ತಾಮ್ರ ಉತ್ಪಾದನೆಯಲ್ಲಿ ಇದು ಜಗತ್ತಿನಲ್ಲಿ ಮೂರನೆಯದು.

ಈ ದೇಶದಲ್ಲಿ ಉತ್ತಮ ದರ್ಜೆಯ ಗಂಧಕದ ಗಣಿಗಳಿವೆ. ಅಲ್ಲದೆ ಕಬ್ಬಿಣದ ಅದಿರು, ಕಲ್ಲಿದ್ದಲು, ಬೆಳ್ಳಿ, ಸತು, ತವರ, ಬಂಗಾರ, ಬೋರ್ಯಾಕ್ಸ್, ಮ್ಯಾಂಗನೀಸ್, ಸೀಸ, ತೈಲ ಮುಂತಾದವು ದೊರೆಯುತ್ತವೆ. ಅನೇಕ ಗಣಿ ಉದ್ಯಮಗಳು ಅಮೆರಿಕನರ ಒಡೆತನಕ್ಕೆ ಸೇರಿವೆ.

ಚಿಲಿಯ ಕಡಲ ತೀರದಲ್ಲಿ ಅನೇಕ ಬಗೆಯ ಮೀನುಗಳು ಸಮೃದ್ಧವಾಗಿವೆ. ಆದರೆ ಮತ್ಸ್ಯೋದ್ಯಮವನ್ನು ಬೆಳೆಸಲು ವ್ಯವಸ್ಥಿತ ಕಾರ್ಯಕ್ರಮ ಆರಂಭವಾದ್ದು 1930ರಲ್ಲಿ. ಟ್ಯೂನ, ಕಾಂಗ್ರಿಯೊ, ಕಾರ್ವಿನ, ಸಾರ್ಡಿನ್, ಹೇಕ್, ಸೀರ–ಇವು ಮಾರಾಟವಾಗುತ್ತಿವೆ. ಚಿಲಿಯ ಜನ ಮೀನು ತಿನ್ನುವ ಅಭ್ಯಾಸ ಬೆಳೆಸಿಕೊಂಡಿಲ್ಲ. ಅವರ ಆಹಾರಾಭ್ಯಾಸಗಳಲ್ಲಿ ಬದಲಾವಣೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ನೇಯ್ಗೆ, ಆಹಾರೋತ್ಪಾದನೆ, ಹಡಗು ನಿರ್ಮಾಣ, ಚರ್ಮ ಹದ ಮಾಡುವುದು, ಹಿಟ್ಟಿನ ಗಿರಣಿ, ಮದ್ಯ, ನೂಲಿನ ಗಿರಣಿ, ಚರ್ಮದ ವಸ್ತುಗಳ ತಯಾರಿಕೆ, ಎರಕ, ಲೋಹೋದ್ಯಮ, ಪ್ಲೈವುಡ್, ಕಾಗದ, ಹೆಂಚು, ಗಾಜು, ಕಬ್ಬಿಣ, ಉಕ್ಕು–ಮುಂತಾದ ಹಲವು ಕೈಗಾರಿಕೆಗಳಿವೆ. ಚಿಲಿಯ ಹಲವು ಕೈಗಾರಿಕೆಗಳು ಸಾಂತಿಯಾಗೋ ಮತ್ತು ಬಾಲ್ಪಾರಾಯೀಸೊ ಸುತ್ತ ಸ್ಥಾಪಿತವಾಗಿವೆ. ಕಾನ್ಸೆಪ್ಸಿಯಾನ್ ಇನ್ನೊಂದು ಕೈಗಾರಿಕಾವಲಯ. ಕೈಗಾರಿಕೆಗೆ ಬೇಕಾದ ತೈಲ, ಉತ್ತಮ ಕಲ್ಲಿದ್ದಲು ಹೆಚ್ಚಾಗಿಲ್ಲವಾದ್ದರಿಂದ ಜಲವಿದ್ಯುದುತ್ಪಾದನೆಗೆ ಗಮನ ಕೊಡಲಾಗಿದೆ.

**ವ್ಯಾಪಾರ, ಸಾರಿಗೆ, ಸಂಪರ್ಕ :** ಚಿಲಿಯ ವ್ಯಾಪಾರ ನಡೆಯುವುದು ಬಹುತೇಕ ಸಮುದ್ರಮಾರ್ಗದ ಮೂಲಕ. ಆಹಾರ ಧಾನ್ಯಗಳು ಮಧ್ಯ ಚಿಲಿಯಿಂದ ಉತ್ತರ ಚಿಲಿಗೆ ಹಡಗುಗಳಲ್ಲಿ ರವಾನೆಯಾಗುತ್ತವೆ. ದಕ್ಷಿಣ ಚಿಲಿಯಿಂದ ಎಣ್ಣೆ, ಕಲ್ಲಿದ್ದಲು,ಮಾಂಸ, ಉಣ್ಣೆ, ಮುಂತಾದುವು ಮಧ್ಯ ಚಿಲಿಗೆ ಸಾಗುತ್ತವೆ. ತಾಮ್ರ, ನೈಟ್ರೇಟ್, ಮದ್ಯ, ಹಣ್ಣು, ಕಬ್ಬಿಣದ ಅದಿರು, ಉಣ್ಣೆ, ಒಣಗಿದ ಮತ್ತು ಡಬ್ಬಿಗೆ ತುಂಬಿದ ಹಣ್ಣುಗಳು, ದ್ರಾಕ್ಷಿ, ಚರ್ಮ, ಮಾಂಸ ಇವು ಮುಖ್ಯ ನಿರ್ಯಾತ ಸರಕುಗಳು. ತೈಲ, ಯಂತ್ರ, ರೈಲ್ವೆ ಸಲಕರಣೆ, ಹಡಗು, ವಾಹನ, ಸಕ್ಕರೆ, ಹತ್ತಿ, ಕಾಫಿ, ಚಹ, ದನದ ಮಾಂಸ ಇವು ಪ್ರಮುಖ ಆಯಾತ ಸರಕುಗಳು.

**ಸ್ಯಾಂಟಿಯಾಗೊ ಮೆಟ್ರೊ – ದಕ್ಷಿಣ ಅಮೆರಿಕದ ಅತಿದೊಡ್ಡ ಮೆಟ್ರೊವ್ಯವಸ್ಥೆ**

ದೇಶದಲ್ಲಿ 43,642 ಕಿಮೀ ರಸ್ತೆ ಮತ್ತು 9,857 ಕಿಮೀ ರೈಲುಮಾರ್ಗಗಳಿವೆ. ಚಿಲಿ ಪರ್ವತಮಯವಾದ್ದರಿಂದ ಭೂಸಾರಿಗೆಗೆ ಹೆಚ್ಚು ಸೌಲಭ್ಯಗಳಿಲ್ಲ. ಒಳನಾಡಿನಿಂದ ಬಂದರುಗಳಿಗೆ ರೈಲುಮಾರ್ಗಗಳು ಮತ್ತು ರಸ್ತೆಗಳು ಸಂಪರ್ಕ ಕಲ್ಪಿಸಿವೆ. ಪಿಸಾಗ್ವಾ–ಪ್ವೆರ್ಟೊ ಮಾಂಟ್, ಆರೀಕಾ–ಲಾ ಪಾಸ್, ಲೊಸ್ ಆಂಡೆಸ್–ಮೆಂಡೋಸಾ (ಆರ್ಜೆಂಟೀನ), ಬಾಲ್ಪಾರಾಯೀಸೊ–ಸಾಂತಿಯಾಗೊ, ಆನ್ತೊಫಾಗಾಸ್ತಾ–ಸಾಲ್ತಾ (ಆರ್ಜೆಂಟೀನ)–ಇವು ಮುಖ್ಯ ರಾಷ್ಟ್ರೀಯ ರೈಲು ಮಾರ್ಗಗಳು. ವಿವಿಧ ಗೇಜುಗಳಿಂದಾಗಿ, ಹಲವು ರೈಲ್ವೆ ಸಲಕರಣೆಗಳು ಹಳೆಯವಾಗಿರುವುದರಿಂದ ಸಮಸ್ಯೆಗಳು ಉದ್ಭವಿಸಿವೆ. ಒಳ್ಳೆಯ ರಸ್ತೆಗಳು ಕಡಿಮೆ. ಉತ್ತರದ ಕೆಲವು ರಸ್ತೆಗಳನ್ನು ಗಣಿ ಕಂಪನಿಗಳು ನಿರ್ವಹಿಸುತ್ತಿವೆ. ಆರೀಕಾ, ಆನ್ತೊಫಾಗಾಸ್ತಾ, ಕೊಕಿಂಬೊ, ಬಾಲ್ಪಾರಾಯೀಸೊ, ಸಾನ್ ಆಂತೋನಿಯೊ, ಮತ್ತು ಪ್ವೆರ್ಟೊ ಮಾಂಟ್ ಆಧುನಿಕ ಬಂದರುಗಳು. ಸುಮಾರು 125 ನಗರಗಳಲ್ಲಿ ವಿಮಾನ ನಿಲ್ದಾಣಗಳುಂಟು. ಚಿಲಿಯ ನಾಣ್ಯ ಪೇಸೋ (Peso).

**ಶಿಕ್ಷಣ ಪದ್ಧತಿ :** ವಸಾಹತು ಕಾಲದ ಚಿಲಿಯಲ್ಲಿ ಶಿಕ್ಷಣ ಸೌಲಭ್ಯ ಅಷ್ಟಾಗಿ ವ್ಯವಸ್ಥೆಗೊಂಡಿರಲಿಲ್ಲ. ಚರ್ಚುಗಳು ದೇಶದ ಕೆಲವೆಡೆಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದವು. ಸಾರ್ವಜನಿಕ ಶಿಕ್ಷಣ 19ನೆಯ ಶತಮಾನದ ಮಧ್ಯಕಾಲದ ವೇಳೆಗೆ ಅಸ್ತಿತ್ವಕ್ಕೆ ಬರಲಾರಂಭಿಸಿತು. ಆ ಶತಮಾನದ ಕೊನೆಕೊನೆಗೆ ಶಾಲಾ ಕಟ್ಟಡಗಳ ನಿರ್ಮಾಣಕಾರ್ಯ ಆರಂಭವಾಗಿ 20ನೆಯ ಶತಮಾನದಲ್ಲಿ ಮುಂದುವರಿಯುತ್ತಿದೆ. 1920ರ ವೇಳೆಗೆ 7–15ರ ವಯೋಮಾನದ ಮಕ್ಕಳಿಗೆ ಶಿಕ್ಷಣ ಕಡ್ಡಾಯವಾಯಿತು. ಆಂದ್ರೆ ಬೆಲೊ ಎಂಬ ವೆನಿಜ್ವೇಲದ ಕಾರ್ಯದಲ್ಲಿ ಪ್ರೋತ್ಸಾಹ ನೀಡಿದ. ಎರಡನೆಯ ಮಹಾಯುದ್ಧ ಆರಂಭವಾಗುವ ವೇಳೆಗೆ ಪ್ರೌಢಶಿಕ್ಷಣವನ್ನೂ, ಯುದ್ಧಾನಂತರ ವೃತ್ತಿ ಮತ್ತು ತಾಂತ್ರಿಕ ಶಿಕ್ಷಣವನ್ನೂ ವಿಸ್ತರಿಸಲಾಯಿತು.

ಚಿಲಿ ದೇಶದ ಶಿಕ್ಷಣದ ವ್ಯವಸ್ಥೆ ಮತ್ತು ಆಡಳಿತ ಶಾಸನದತ್ತವಾಗಿ ಕೇಂದ್ರ ಸರ್ಕಾರದ ಹೊಣೆಗಾರಿಕೆಗೆ ಸೇರಿದೆ. ಆ ಕಾರ್ಯವನ್ನು ಅದು ತನ್ನ ಶಿಕ್ಷಣ ಸಚಿವಾಲಯದ ಮೂಲಕ ನಿರ್ವಹಿಸುತ್ತದೆ. 1925ರ ರಾಷ್ಟ್ರ ಘಟನೆಯ 10ನೆಯ ಅನುಚ್ಛೇದ ಬೋಧನಾಸ್ವಾತಂತ್ರ್ಯವನ್ನು ಎತ್ತಿ ಹಿಡಿದಿರುವುದರ ಜೊತೆಗೆ ಶಿಕ್ಷಣ ಸೇವಾವ್ಯವಸ್ಥೆ ರಾಜ್ಯದ ಪ್ರಮುಖ ಕರ್ತವ್ಯಗಳಲ್ಲೊಂದೆಂದು ಸೂಚಿಸಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದೆ. ರಾಷ್ಟ್ರದ ಶಿಕ್ಷಣನೀತಿಯನ್ನು ರೂಪಿಸುವ ಕಾರ್ಯವೂ ಕೇಂದ್ರ ಸರ್ಕಾರಕ್ಕೆ ಸೇರಿದೆ.

ಚಿಲಿಯ ಶಿಕ್ಷಣ ಸಚಿವಾಲಯ ಸಾಮಾನ್ಯ ಆಡಳಿತ ಶಾಖೆಯ ಜೊತೆಗೆ ಶಿಕ್ಷಣದ ಮೇಲ್ವಿಚಾರಣೆ, ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ತಾಂತ್ರಿಕ ಶಿಕ್ಷಣ, ಗ್ರಂಥಾಲಯ–ಈ ಕ್ಷೇತ್ರಗಳಿಗೆ ಸಂಬಂಧಿಸಿದ ನಾಲ್ಕು ಕಾರ್ಯಾಲಯಗಳನ್ನೂ ಅಧ್ಯಾಪಕರ ಪ್ರಶಿಕ್ಷಣ ಮತ್ತು ಶೈಕ್ಷಣಿಕ ಪ್ರಯೋಗಗಳ ಕೇಂದ್ರವನ್ನೂ ಒಳಗೊಂಡಿದೆ. ಚಿಲಿ ವಿಶ್ವವಿದ್ಯಾಲಯ, ಶಾಲಾ ಕಟ್ಟಡಗಳ ನಿರ್ಮಾಣದ ಕಾರ್ಪೊರೇಷನ್, ರಾಷ್ಟ್ರೀಯ ವಿದ್ಯಾರ್ಥಿ ಕಲ್ಯಾಣ ಮಂಡಲಿ, ಚಿಲಿ ಇನ್ಸ್ಟಿಟ್ಯೂಟ್, ಚಿಲಿ ವಿಶ್ವವಿದ್ಯಾಲಯಗಳ ಕುಲಪತಿಗಳ ಮಂಡಲಿ, ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನೆಗಳ ಆಯೋಗ–ಇವೇ ಮೊದಲಾದ ಸ್ವಯಂ ಆಡಳಿತ ಸಂಸ್ಥೆಗಳು ಅಲ್ಲಿನ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿವೆ.

ಚಿಲಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಎಲ್ಲ ಮಟ್ಟದಲ್ಲೂ ಅಸ್ತಿತ್ವದಲ್ಲಿವೆ. ರಾಷ್ಟ್ರದ ಶಿಕ್ಷಣವ್ಯವಸ್ಥೆಯ ಮೂರನೆಯ ಒಂದು ಭಾಗದಷ್ಟನ್ನು ಖಾಸಗಿ ಸಂಸ್ಥೆಗಳು ನಿರ್ವಹಿಸುತ್ತವೆ. ಅವೆಲ್ಲ ಸರ್ಕಾರ ಸೂಚಿಸುವ ಪಠ್ಯಕ್ರಮ, ಬೋಧನ ವಿಧಾನ, ಪರೀಕ್ಷಾ ಪದ್ಧತಿ ಮುಂತಾದವನ್ನು ಅನುಸರಿಸುತ್ತವೆ. ಸರ್ಕಾರದ ಅನುದಾನವನ್ನೂ ಪಡೆಯುತ್ತವೆ.

1865ರಲ್ಲಿ ಚಿಲಿಯ ಜನಸಂಖ್ಯೆಯ ಶೇ. 3ರಷ್ಟು ಮಕ್ಕಳು ಮಾತ್ರ ಶಾಲೆಗೆ ಸೇರಿದ್ದರು. ರಾಷ್ಟ್ರದಲ್ಲಿ ಸಾಕ್ಷರತೆ ಶೇ. 17ರಷ್ಟು ಮಾತ್ರವಿತ್ತು. ಆದರೆ ಅಲ್ಲಿನವರ ಸತತ ಪ್ರಯತ್ನದ ಫಲವಾಗಿ 1960ರ ವೇಳೆಗೆ ಜನಸಂಖ್ಯೆಯ ಶೇ. 19.7ರಷ್ಟು ಮಕ್ಕಳು ಶಾಲೆಗೆ ಸೇರುವಂತಾಯಿತಲ್ಲದೆ ಸಾಕ್ಷರತೆಯ ಪ್ರಮಾಣ ಶೇ. 83.6ಕ್ಕೆ ಹೆಚ್ಚಿತು. ಸಾಮಾನ್ಯವಾಗಿ ಈಗ ಶಾಲಾಕಾಲೇಜುಗಳಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಸಮಾನ ಸಂಖ್ಯೆಯಲ್ಲಿರುವರು. ಆದರೆ ತಾಂತ್ರಿಕ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳೆಯರು ಗಂಡಸರಿಗಿಂತ ಕಡಿಮೆ ಸಂಖ್ಯೆಯಲ್ಲಿರುವರು.

19ನೆಯ ಶತಮಾನದ ಮಧ್ಯಕಾಲದಿಂದ ವಿದ್ಯಾಪ್ರಚಾರವನ್ನು ಬಿರುಸಿನಿಂದ ಕೈಗೊಂಡಿದ್ದರೂ ಅದರ ಗುಣಮಟ್ಟವನ್ನು ಹೆಚ್ಚಿಸುವ ಸುಧಾರಣೆಗಳು ಎರಡನೆಯ ಯುದ್ಧಾನಂತರ ಆರಂಭವಾದುವು. ಯೋಜನೆಯ ಅಭಾವ, ವಿದ್ಯಾಸೌಲಭ್ಯದಲ್ಲಿ ಅಸಮಾನತೆ–ಇವುಗಳ ಜೊತೆಗೆ ಹಳೆಯ ಬೋಧನಕ್ರಮದ ನ್ಯೂನತೆಗಳನ್ನೂ ಪರಿಶೀಲಿಸಿ ಆಯೋಗವೊಂದು 1945ರಲ್ಲಿ ಪುನರ್ವ್ಯವಸ್ಥೆಗೆ ಯೋಜನೆ ಹಾಕಿಕೊಟ್ಟಿತು. ಪ್ರೌಢಶಾಲೆಯ ಮಟ್ಟದಲ್ಲಿ ಸಂಶೋಧನೆ ಪ್ರಯೋಗಾದಿಗಳು ನಡೆದು ಅನೇಕ ಮಾರ್ಪಾಟುಗಳು ಆಚರಣೆಗೆ ಬಂದುವು. 1962ರಲ್ಲಿ ಮತ್ತೊಂದು ಆಯೋಗ ಶಿಕ್ಷಣಾಭಿವೃದ್ಧಿಗೆ ರಾಷ್ಟ್ರವ್ಯಾಪಕ ಯೋಜನೆಯನ್ನು ಸಲ್ಲಿಸಿತು. ಅದರ ಫಲವಾಗಿ ಶಿಕ್ಷಣ ಶಾಖೆ, ರಾಷ್ಟ್ರೀಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಮಂಡಲಿ, ಕಟ್ಟಡಗಳ ರಾಷ್ಟ್ರೀಯ ಮಂಡಲಿ–ಇವು 1964ರಲ್ಲಿ ಅಸ್ತಿತ್ವಕ್ಕೆ ಬಂದುವು. ಅಂದಿನಿಂದ ಶಿಕ್ಷಣ ಗುಣಮಟ್ಟ ಪ್ರಮಾಣದಲ್ಲೂ ಅಭಿವೃದ್ಧಿಯಾಗುತ್ತ ಬರುತ್ತಿದೆ. ಪ್ರಾಥಮಿಕ ಪೂರ್ವದ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದ ವರೆಗಿನ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲೂ ವಿದ್ಯಾರ್ಥಿಸಂಖ್ಯೆ ವೇಗದಲ್ಲಿ ಹೆಚ್ಚುತ್ತಿದೆ.

ಪ್ರಾಥಮಿಕ ಪೂರ್ವ ಶಿಕ್ಷಣ : 1970ರಲ್ಲಿ ಶಾಸನವೊಂದರ ಮೂಲಕ 1 ರಿಂದ 6 ವರ್ಷದವರೆಗಿನ ಮಕ್ಕಳಿಗಾಗಿ ಶಿಶುಪಾಠಶಾಲೆಗಳನ್ನು ಆರಂಭಿಸಿ ನಡೆಸುವ ಹೊಣೆಯನ್ನು ಸರ್ಕಾರ ಹೊತ್ತುಕೊಂಡಿತು. ಆ ಕಾರ್ಯಕ್ಕಾಗಿ ಪ್ರತ್ಯೇಕ ರಾಷ್ಟ್ರೀಯ ಮಂಡಲಿಯೊಂದು ಅಸ್ತಿತ್ವಕ್ಕೆ ಬಂತು. ಈಗ ಆ ವಯೋಮಾನದ ಸುಮಾರು 16 ಲಕ್ಷ ಮಕ್ಕಳು ಶಾಲೆಗೆ ಸೇರಿರುವರು. ರಾಷ್ಟ್ರ ತನ್ನ ಹಣದಿಂದ ಅವರ ಆಹಾರ, ಶಿಕ್ಷಣ, ವೈದ್ಯಪರೀಕ್ಷೆ ಮುಂತಾದವನ್ನು ನೋಡಿಕೊಳ್ಳುತ್ತಿದೆ.

ಪ್ರಾಥಮಿಕ ಶಿಕ್ಷಣ : ಇದು 6ರಿಂದ 15 ವರ್ಷದ ವರೆಗೆ 8 ವರ್ಷಗಳ ಕಾಲದ್ದಾಗಿದ್ದು ನಾಲ್ಕು ವರ್ಷಗಳ ಎರಡು ಹಂತಗಳಲ್ಲಿ ವ್ಯವಸ್ಥೆಗೊಂಡಿದೆ. ಮೊದಲ ನಾಲ್ಕು ಹಂತದಲ್ಲಿ ಸಾಮಾನ್ಯ ಶಿಕ್ಷಣವನ್ನೂ ಎರಡನೆಯ ಹಂತದಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ವೃತ್ತಿಪರ

ಶಿಕ್ಷಣವನ್ನೂ ಏರ್ಪಡಿಸಿದೆ. ಸ್ಪ್ಯಾನಿಷ್ ಭಾಷೆ ಶಿಕ್ಷಣ ಮಾಧ್ಯಮವಾಗಿ ಬಳಕೆಯಲ್ಲಿದೆ. ಪ್ರಾಥಮಿಕ ಶಿಕ್ಷಣ ಮುಗಿಸಿದವರು ಕೆಲಸಕ್ಕಾದರೂ ಹೋಗಬಹುದು, ಪ್ರೌಢಶಾಲೆಗಾದರೂ ಸೇರಬಹುದು. ಒಟ್ಟು 7,000ಕ್ಕೂ ಹೆಚ್ಚು ಶಾಲೆಗಳಿದ್ದು ಅಲ್ಲಿ 10 ಲಕ್ಷಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳಿರುವರು.

ಪ್ರೌಢ ಶಿಕ್ಷಣ : ನಾಲ್ಕು ವರ್ಷಗಳ ಕಾಲಾವಧಿಯ ಇಲ್ಲಿನ ಪ್ರೌಢ ಶಿಕ್ಷಣ ವಿದ್ಯಾರ್ಥಿಗಳನ್ನು ಒಳ್ಳೆಯ ಪೌರರನ್ನಾಗಿ ಮಾಡುವ, ವ್ಯಕ್ತಿತ್ವವನ್ನು ರೂಪಿಸುವ, ಸಾಮಾಜಿಕ ಪ್ರಗತಿಗೆ ನಾಯಕರನ್ನು ಒದಗಿಸುವ ಮತ್ತು ಉದ್ಯೋಗಗಳಿಗೆ ಕೆಲಸಗಾರರನ್ನು ತರಬೇತು ಮಾಡುವ ಹೊಣೆಯನ್ನು ಹೊತ್ತಿರುತ್ತದೆ. ಈ ಹಂತದ ಪಠ್ಯಕ್ರಮ ಎರಡು ಮಾರ್ಗಗಳಲ್ಲಿ ವ್ಯವಸ್ಥೆಗೊಂಡಿದೆ–ಸಾಂಸ್ಕೃತಿಕ ಮತ್ತು ವೃತ್ತಿಪರ ಎಂದು. ಮೊದಲ ಪಠ್ಯಕ್ರಮವನ್ನು ಆರಿಸಿಕೊಂಡು ಶಿಕ್ಷಣ ಮುಗಿಸಿದವರು. ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುವರು. ಎರಡನೆಯ ಪಠ್ಯಕ್ರಮವನ್ನು ಆರಿಸಿಕೊಂಡವರು ಉದ್ಯೋಗಗಳಿಗೆ ಸೇರುವರು. ಪ್ರಾಥಮಿಕ ಶಾಲೆಯನ್ನು ಮುಗಿಸಿ ಮುಂದಕ್ಕೆ ಓದಲಾಗದವರಿಗೆ ಔದ್ಯೋಗಿಕ ಶಿಕ್ಷಣವೀಯಲು ಉಮೇದುವಾರಿ ವೃತ್ತಿಶಿಕ್ಷಣ ಸಂಸ್ಥೆಗಳಿವೆ. ಅಲ್ಲಿಯದು ಮೂರು ವರ್ಷ ಶಿಕ್ಷಣ. ಆ ಅವಧಿಯ ಶೇ. 70ರಷ್ಟನ್ನು ವೃತ್ತಿಯ ತರಬೇತಿಗೂ ಮಿಕ್ಕದ್ದನ್ನು ಸೈದ್ಧಾಂತಿಕ ಜ್ಞಾನಬೋಧನೆಗೂ ವಿನಿಯೋಗಿಸುವರು. ಯಂತ್ರವಿಜ್ಞಾನ, ವಿದ್ಯುಚ್ಛಕ್ತಿ, ಕೃಷಿ, ಉಡುಪು ತಯಾರಿಕೆ ಮುಂತಾದವು ಪ್ರಚಾರದಲ್ಲಿರುವ ಮುಖ್ಯ ವೃತ್ತಿವಿಷಯಗಳು. ಒಟ್ಟು 400ಕ್ಕೂ ಹೆಚ್ಚು ಪ್ರೌಢಶಾಲೆಗಳೂ 2 ಲಕ್ಷದಷ್ಟು ವಿದ್ಯಾರ್ಥಿಗಳೂ ಇರುವರು.

ವಯಸ್ಕರ ಶಿಕ್ಷಣ : ರಾಷ್ಟ್ರವು ವಯಸ್ಕರ ಶಿಕ್ಷಣಕ್ಕೆ ತುಂಬ ಗಮನಕೊಡುತ್ತಿದೆ. 1965ರಿಂದ ಅದನ್ನು ಮೂರು ಮಟ್ಟಗಳಲ್ಲಿ ವ್ಯವಸ್ಥೆಗೊಳಿಸಿದೆ. ಅನಕ್ಷರಸ್ಥ ವಯಸ್ಕರಿಗಾಗಿ ಸಾಕ್ಷರ ಪ್ರಚಾರ, ಸುಮಾರು ಶಿಕ್ಷಣ ಪಡೆದವರಿಗೆ ಮುನ್ನಡೆಯ ಶಿಕ್ಷಣ, ಕಾರ್ಖಾನೆ ಕಾರ್ಯಾಲಯಗಳಲ್ಲಿ ಕೆಲಸ ಮಾಡತಕ್ಕವರಿಗೆ ಅವರವರ ವೃತ್ತಿಯಲ್ಲಿ ಹೆಚ್ಚಿನ ಶಿಕ್ಷಣ ಈ ಕಾರ್ಯಕ್ರಮಗಳ ಮೂಲಕ 1960ರಲ್ಲಿದ್ದ ಶೇ. 16.4 ಅನಕ್ಷರಸ್ಥರ ಪ್ರಮಾಣ ಈಗ ಶೇ. 5 ಅಥವಾ 6 ಕ್ಕೆ ಇಳಿದಿದೆ.

ಉನ್ನತ ಶಿಕ್ಷಣ: 25 ಸರ್ಕಾರಿ ವಿಶ್ವವಿದ್ಯಾಲಯಗಳೂ 50 ಖಾಸಗಿ ವಿಶ್ವ ವಿದ್ಯಾಲಯಗಳೂ ಹಾಗೂ ಒಟ್ಟು 75 ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿವೆ. 20 ವಿಶ್ವವಿದ್ಯಾನಿಲಯಗಳಿಗೆ ಸರ್ಕಾರದ ಮನ್ನಣೆ ದೊರಕಿದೆ. ಸರ್ಕಾರಿ ವಿ.ವಿ ನಿಲಯಗಳಿಗೆ ಶೇ. 30ರಷ್ಟು ಭಾಗ ಅನುದಾನ ದೊರಕುತ್ತದೆ, ಉಳಿದ ಹಣವನ್ನು ವಿದ್ಯಾರ್ಥಿಗಳಿಂದ ಶುಲ್ಕವಾಗಿ ಪಡೆಯಲಾಗುವುದು. ವೃತ್ತಿಶಿಕ್ಷಣ, ಸಂಶೋಧನೆ ಮತ್ತು ಸಂಸ್ಕೃತಿ ಸಂವರ್ಧನ– ಅವುಗಳ ಪ್ರಮುಖ ಕರ್ತವ್ಯಗಳಾಗಿವೆ. ಸ್ಯಾಂಟಿಯಾಗೋದಲ್ಲಿರುವ ವಿಶ್ವವಿದ್ಯಾಲಯ (1842) ಈ ದೇಶದ ರಾಷ್ಟ್ರೀಯ ವಿಶ್ವವಿದ್ಯಾಲಯ. ಇದು 23,400 ಸ್ನಾತಕಪೂರ್ವ ವಿದ್ಯಾರ್ಥಿಗಳಿಗೆ ಮತ್ತು 4.108 ಸ್ನಾತಕೋತರ ವಿದ್ಯಾರ್ಥಿಗಳಿಗೆ ಶಿಕ್ಷಣವೀಯುತ್ತಿದೆ. ಇಲ್ಲಿ 16 ಅಧ್ಯಯನ ಶಾಖೆಗಳೂ 13 ಕ್ಯಾಂಪಸುಗಳೂ ಇವೆ.

ಅಧ್ಯಾಪಕರ ಪ್ರತಿಕ್ಷಣ : ಅಧ್ಯಾಪಕ ವೃತ್ತಿಗೆ ಸೇರಬಯಸತಕ್ಕವರು ವೃತ್ತಿಶಿಕ್ಷಣವನ್ನು ಮುಗಿಸಿರಬೇಕು. ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗತಕ್ಕವರು ನಾರ್ಮಲ್ ಸ್ಕೂಲಿನ ಮೂರು ವರ್ಷದ ಪ್ರಶಿಕ್ಷಣವನ್ನೂ, ಪ್ರೌಢಶಾಲೆಯ ಅಧ್ಯಾಪಕರಾಗತಕ್ಕವರು ವಿಶ್ವವಿದ್ಯಾಲಯದ ಐದು ವರ್ಷದ ಶಿಕ್ಷಣವನ್ನೂ ಮುಗಿಸಿರಬೇಕು. ತಾಂತ್ರಿಕ ಶಿಕ್ಷಣದ ಅಧ್ಯಾಪಕರಾಗತಕ್ಕವರು 3 ಅಥವಾ 5 ವರ್ಷಗಳ ವಿಶ್ವವಿದ್ಯಾಲಯದ ಶಿಕ್ಷಣ ಮತ್ತು ಪ್ರಶಿಕ್ಷಣವನ್ನು, ಮುಗಿಸಿರಬೇಕು.

ವೃತ್ತಿನಿರತ ಅಧ್ಯಾಪಕರ ಪ್ರಶಿಕ್ಷಣಕ್ಕೂ ಸಂಶೋಧನೆಗಳಿಗೂ ಹೆಸರಾದ ರಾಷ್ಟ್ರೀಯ ಸಂಸ್ಥೆ (ಸ್ಥಾಪನೆ : 1967) ಅಧ್ಯಾಪಕರಿಗೆ ವಿವಿಧ ರೀತಿಯ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಜೊತೆಗೆ ಅವರ ಬಡ್ತಿಗೂ ಸಿದ್ಧತೆ ನೀಡುತ್ತದೆ. ಇಂಥ ಪ್ರಶಿಕ್ಷಣ ಕಾರ್ಯಕ್ರಮದಲ್ಲೂ ಸಂಶೋಧನೆಯಲ್ಲೂ ಭಾಗವಹಿಸಿದ ವೃತ್ತಿನಿರತ ಅಧ್ಯಾಪಕರ ಸಂಭಾವನೆಯನ್ನು ಶೇ. 20ರಷ್ಟು ಹೆಚ್ಚಿಸಲಾಗುವುದು.

ಇತಿಹಾಸ : ಸ್ಪೇನಿನವರ ಆಕ್ರಮಣ ಆರಂಭವಾಗುವ ಮುನ್ನ–ಎಂದರೆ 16ನೆಯ ಶತಮಾನದ ನಡುಗಾಲದ ವರೆಗೆ–ಚಿಲಿಯಲ್ಲಿ ಸುಮಾರು 5 ಲಕ್ಷ ಇಂಡಿಯನರು ನೆಲಸಿದ್ದರು. ಭಾಷೆ–ಬುಡಕಟ್ಟುಗಳ ದೃಷ್ಟಿಯಿಂದ ಇವರಲ್ಲಿ ಪರಸ್ಪರ ನಿಕಟ ಸಂಬಂಧವಿತ್ತು. ಆದರೆ ಮೌಲೆ ನದಿಯ ಉತ್ತರದಲ್ಲಿದ್ದವರು ಸಾಂಸ್ಕೃತಿಕವಾಗಿ ಉಳಿದವರಿಗಿಂತ ಮುಂದುವರಿದಿದ್ದರು. ಇನ್‌ಕ್ಕ ಸಾಮ್ರಾಜ್ಯದ ಭಾಗವಾಗಿದ್ದ ಕ್ವೆಚುವಗಳ ಮತ್ತು ಪೆರುವಿನ ಚಿಂಚರ ಪ್ರಭಾವ ಅವರ ಮೇಲೆ ಬಿದ್ದಿತ್ತು.

1536–37ರಲ್ಲಿ ಸ್ಪ್ಯಾನಿಷರು ಚಿಲಿಯ ಆಕ್ರಮಣವನ್ನಾರಂಭಿಸಿದರು. ಡೀಗೊಡ ಆಲ್ಮಾಗ್ರೊ ಎಂಬುವನು ಮೌಲೆ ನದಿಯ ವರೆಗೂ ತನ್ನ ಸೇನೆಯೊಂದಿಗೆ ಮುನ್ನಡೆದ. ಪೆರುವಿನಂಥ ಇನ್ನೊಂದು ನಾಡನ್ನು ಕಂಡುಹಿಡಿಯುವುದು ಅವನ ಉದ್ದೇಶವಾಗಿತ್ತು. ಆದರೆ ಅವನ ನಿರೀಕ್ಷೆ ನಿಜವಾಗಲಿಲ್ಲ. ಆಲ್ಮಾಗ್ರೊನ ಜೊತೆಗಾರ ಫ್ರಾನ್ಸಿಸ್ಕೊ ಪಿಜಾರೊ. ಆಲ್ಮಾಗ್ರೊ ತೀರಿಕೊಂಡ ಮೇಲೆ ಪಿಜಾರೊ 1540–41ರಲ್ಲಿ ಪೆಡ್ರೊ ಡ ವಾಲ್ಡೀಯ ಎಂಬುವವನಿಗೆ ಈ ಪ್ರದೇಶವನ್ನು ಗೆದ್ದು ವಸಾಹತಾಗಿ ಮಾಡಲು ಅನುಮತಿ ನೀಡಿದ. ಇವನು ತನ್ನ ಅನುಚರರೊಂದಿಗೆ ಚಿಲಿಯನ್ನು 1540ರ ಅಂತ್ಯದಲ್ಲಿ ಪ್ರವೇಶಿಸಿ, 1541ರಲ್ಲಿ ಸಾಂಟಿಯಾಗೋವನ್ನು ಸ್ಥಾಪಿಸಿದ. ಆದರೆ ಅಲ್ಲಿಯ ಇಂಡಿಯನರು ಕೊಡುತ್ತಿದ್ದ ಕಿರುಕುಳದಿಂದ ಮುಂದಿನ ಎರಡು ದಶಕಗಳಲ್ಲಿ ನೆಲೆಸಿಗರ ಜೀವನ ಅಪಾಯಕರವಾಗಿತ್ತು. ನೆಲಸುನಾಡಿನಲ್ಲಿ ರಕ್ಷಣಾ ಭರವಸೆ ಮೂಡುವ ಮೊದಲೇ ಆಕ್ರಮಣಕಾರರು ಭೂಮಿಯನ್ನು ತಮ್ಮತಮ್ಮಲ್ಲಿ ಹಂಚಿಕೊಂಡು ಸ್ಥಿರಾಸ್ತಿ ಪದ್ಧತಿಯನ್ನು ಪ್ರಾರಂಭಿಸಿದರು.

ಬೀವೊ–ವೀವೊ ನದಿಯ ದಕ್ಷಿಣದ ಪ್ರದೇಶದ ಆಕ್ರಮಣವನ್ನು 1550ರಲ್ಲಿ ವಾಲ್ಡೀವಿಯ ಆರಂಭಿಸಿದ. ಕೋಟೆಗಳನ್ನು ಕಟ್ಟಿಸಿದ. ತಮ್ಮ ನೆಲವನ್ನು ಆಕ್ರಮಿಸಿಕೊಂಡು ತಮ್ಮ ಇರವಿಗೇ ಮುಳಿವಾಗಿದ್ದ ಸ್ಪ್ಯಾನಿಷರ ವಿರುದ್ಧ ಇಂಡಿಯನರು ಬಂಡಾಯ ಹೂಡಿದರು. ಕದನವೊಂದರಲ್ಲಿ ವಾಲ್ಡೀವಿಯ ಸೆರೆಸಿಕ್ಕಿ ಸತ್ತ. ಇಂಡಿಯನರ ಪ್ರತಿಭಟನೆ ಬಹಳ ಕಾಲ ಮುಂದುವರಿಯಿತು. 16ನೆಯ ಶತಮಾನದ ಕೊನೆಯ ವೇಳೆಗೆ ಇತರ ದೇಶಗಳವರೂ ಈ ಪ್ರದೇಶದಲ್ಲಿ ಆಸಕ್ತಿ ತೋರಿಸಿದರು. ಫ್ರಾನ್ಸಿಸ್ ಡ್ರೇಕ್, ಥಾಮಸ್ ಕ್ಯಾವೆಂಡಿಷ್ ಮುಂತಾದ ಇಂಗ್ಲಿಷ್ ಕಡಲ್ಗಳ್ಳರೂ ದರೋಡೆಕೋರರೂ ಡಚ್ ಸಾಹಸಿಗಳೂ ಇದರ ತೀರದ ಬಳಿ ಪದೇಪದೇ ದಾಳಿ ನಡೆಸುತ್ತಲೇ ಇದ್ದರು.

ಚಿಲಿಯಲ್ಲಿ ಅಮೂಲ್ಯ ಲೋಹಗಳು ಅಷ್ಟೇನೂ ದೊರಕಲಿಲ್ಲವಾದ್ದರಿಂದ ನೆಲೆಸಿಗರು ವ್ಯವಸಾಯವನ್ನು ಅವಲಂಬಿಸಬೇಕಾಯಿತು. ಅವರು ಬೆಳೆದ ದವಸಧಾನ್ಯಗಳು ಅವರಿಗೆ ಸಾಕಾಗುತ್ತಿದ್ದುವೇ ವಿನಾ ರಫ್ತಿಗೆ ಅವಕಾಶವಿರಲಿಲ್ಲ. ಸ್ಪೇನಿಗೆ ಈ ವಸಾಹತು ಲಾಭಪ್ರದವಾಗಿರಲಿಲ್ಲ.

ಇಲ್ಲಿಯ ಆಡಳಿತ ಮತ್ತು ರಕ್ಷಣಾ ವೆಚ್ಚಕ್ಕಾಗಿ ಪ್ರತಿ ವರ್ಷವೂ ಸ್ಪೇನ್ ಸರ್ಕಾರ ಸಹಾಯದ್ರವ್ಯ ನೀಡಬೇಕಾಗುತ್ತಿತ್ತು. ನೆಲಸುಗಾರರು ಸ್ವತಃ ಬೇಸಾಯನಿರತರಾಗಬೇಕಾಗಿತ್ತು. ಆ ಪ್ರದೇಶ ನೀಗ್ರೋಗಳನ್ನು ನೇಮಿಸಿಕೊಳ್ಳುವಷ್ಟು ಐಶ್ವರ್ಯಯುಕ್ತವಾಗಿರಲಿಲ್ಲ. ಇಂಡಿಯನರ ಸಹಕಾರವನ್ನು ನಿರೀಕ್ಷಿಸುವಂತಿರಲಿಲ್ಲ. 16ನೆಯ ಶತಮಾನದ ಕೊನೆಯ ವೇಳೆಗೆ ಇಲ್ಲಿ ಸುಮಾರು 5,000 ಸ್ಪ್ಯಾನಿಷರು ನೆಲೆಸಿದ್ದರು.

ಚಿಲಿಯ ಆಡಳಿತ ಮತ್ತು ಧಾರ್ಮಿಕ ವ್ಯವಸ್ಥೆ ಅವರ ನೆರೆರಾಜ್ಯಗಳಿಗೆ ಸರಿಸಮನಾಗಿತ್ತು. ಆಡಳಿತ ನಿರ್ವಹಣೆಗೆ ನೇಮಿಸಲಾಗಿದ್ದ ಅಧಿಕಾರಿಗಳು ಸಾಮಾನ್ಯ ದರ್ಜೆಯವರು. ಸ್ಪೇನಿನ ದೊರೆ ಮತ್ತು ರೋಮನ್ ಕ್ಯಾತೊಲಿಕ್ ಚರ್ಚ್ ಎರಡೂ ಇಲ್ಲಿಯ ನೆಲಸುಗಾರರ ಮೇಲೆ ಪ್ರಭುತ್ವ ಸ್ಥಾಪಿಸಿದುವು. ನೆಲಸಿಗರಿಗೆ ಆಡಳಿತ ಸ್ವಾತಂತ್ರ್ಯ ಇರಲಿಲ್ಲ.

1600ರ ಅನಂತರ ಚಿಲಿಯಲ್ಲಿ ಸಂಭವಿಸಿದ ಮಹತ್ವದ ಸಾಮಾಜಿಕ ಬೆಳವಣಿಗೆಯೆಂದರೆ ಇಂಡಿಯನ್–ಯುರೋಪಿಯನ್ ಮಿಶ್ರ ತಳಿಯ ಜನರ ಸಂಖ್ಯೆಯ ವೃದ್ಧಿ. ಇವರಿಗೆ ಮೆಸ್ಟಿಜೊ ಎಂದು ಹೆಸರು. ವಸಾಹತು ಕಾಲದ ಅಂತ್ಯದ ವೇಳೆಗೆ ಅಲ್ಲಿದ್ದ ಜನಸಂಖ್ಯೆಯಾದ 5,00,000ದಲ್ಲಿ 3,00,000 ಮೆಸ್ಟಿಜೊಗಳು 1,50,000 ಮಂದಿ ಕ್ರಿಯೋಲ್‌ಗಳು (ಚಿಲಿಯಲ್ಲಿ ಜನಿಸಿದ ಐರೋಪ್ಯ ವಂಶೀಯರು). ಸ್ಪೇನಿನಿಂದ ಹೊಸದಾಗಿ ಬಂದಿದ್ದವರು (ಪೆನಿನ್ಸುಲರ್ಸ್) 20,000 ಮಂದಿ. ಸುಮಾರು 10,000 ನಿಗ್ರೋಗಳಿದ್ದರು. ಚಿಲಿಯ ಜನರಲ್ಲಿ ಬಹುಸಂಖ್ಯಾತರು ನೆಲೆಸಿದ್ದು ಸಾಂಟಿಯಾಗೋದಿಂದ ಕಾನ್ಸೆಪ್ಸಿಯಾನ್ ವರೆಗಿನ ಪ್ರದೇಶದಲ್ಲಿ. ಇದು ಚಿಲಿಯನ್ ರಾಷ್ಟ್ರೀಯತೆಯ ತೊಟ್ಟಿಲೆನಿಸಿತು.

ಶಿಕ್ಷಣಕ್ಷೇತ್ರದಲ್ಲಿ ಕ್ಯಾತೊಲಿಕರ ಏಕಸ್ವಾಮ್ಯವಿತ್ತು. ಹೆಚ್ಚಿನ ಶಿಕ್ಷಣ ಸೌಲಭ್ಯಗಳಿರಲಿಲ್ಲ. 19ನೆಯ ಶತಮಾನದ ಆರಂಭದ ವರೆಗೂ ಚಿಲಿ ಬೌದ್ಧಿಕವಾಗಿ ಹಿಂದುಳಿದಿತ್ತು. 1818ರಲ್ಲಿ ಸ್ಪೇನಿನಿಂದ ಸ್ವಾತಂತ್ರ್ಯ ಗಳಿಸಿದ ಸಮಯದಲ್ಲೂ ಚಿಲಿಯಲ್ಲಿ ಒಂದು ಮುದ್ರಣಾಲಯ ಕೂಡ ಇರಲಿಲ್ಲ. ನಾಗರಿಕ ಪ್ರಪಂಚದೊಡನೆ ಹೆಚ್ಚು ಸಂಪರ್ಕವೇ ಬೆಳೆದಿರಲಿಲ್ಲ.

19ನೆಯ ಶತಮಾನದ ಆದಿಭಾಗದ ವೇಳೆಗೆ ಚಿಲಿಯಲ್ಲಿ ಜನಜಾಗೃತಿ ಉಂಟಾಗಿತ್ತು. ಉಳಿದ ಪ್ರಪಂಚದಿಂದ ಚಿಲಿ ಪ್ರತ್ಯೇಕವೆನಿಸಿದರೂ ಅಮೆರಿಕದ ಸ್ವಾತಂತ್ರ್ಯ, ಫ್ರಾನ್ಸಿನ ಕ್ರಾಂತಿ, ಅಮೆರಿಕದ ನೆಲದಿಂದ ಸ್ಪೇನಿನ ಹಿನ್ನಡೆ, ಚಿಲಿಯ ತೀರದಲ್ಲಿ ಬ್ರಿಟನ್ ಮತ್ತು ಅಮೆರಿಕ ನಡೆಸುತ್ತಿದ್ದ ನಿಷಿದ್ಧ ವ್ಯಾಪಾರ–ಇವು ಚಿಲಿಯನರ ಗಮನಕ್ಕೆ ಬಂದಿದ್ದವು. 1808ರಲ್ಲಿ ನೆಪೋಲಿಯನ್ ಸ್ಪೇನಿನ ವ್ಯವಹಾರಗಳಲ್ಲಿ ಕೈಹಾಕಿದಾಗ ಚಿಲಿಯ ಜನ ಸ್ವಾವಲಂಬಿಗಳಾಗುವುದು ಅನಿವಾರ್ಯವಾಯಿತು. ಅವರು ಆಗ ಸ್ವಯಮಾಡಳಿತದ ಹಾದಿಯಲ್ಲಿ ಮೊದಲ ಹೆಜ್ಜೆ ಇಟ್ಟರು. ಬಹಿರಂಗ ಪುರಜನ ಸಭೆಯೊಂದು 1810ರ ಸೆಪ್ಟೆಂಬರ್ 18ರಂದು ಸೇರಿ, ಚಿಲಿಯ ಅಧ್ಯಕ್ಷ–ರಾಜ್ಯಪಾಲನ ರಾಜೀನಾಮೆಯನ್ನು ಅಂಗೀಕರಿಸಿ ಅವನ ಸ್ಥಾನದಲ್ಲಿ ಆಡಳಿತ ಸಭೆಯೊಂದನ್ನು ಚುನಾಯಿಸಿತು.

ಮೊದಲ ಮೂರು ವರ್ಷ ಚಿಲಿಯನರ ಹೋರಾಟ ಶಾಂತಿಯುತವಾಗಿತ್ತು. ವ್ಯಾಪಾರ ನಿರ್ಬಂಧಗಳು ಸಡಿಲವಾದವು. ಗುಲಾಮಗಿರಿಯನ್ನು ತೊಡೆದುಹಾಕಲು ಪ್ರಯತ್ನಗಳು ನಡೆದುವು. ದೇಶಭಕ್ತರ ಆಶೋತ್ತರಗಳನ್ನು ಪ್ರಚುರಪಡಿಸಲು ವೃತ್ತಪತ್ರಿಕೆ ಆರಂಭವಾಯಿತು.

ವಿದ್ಯಾಭ್ಯಾಸದ ಉತ್ತೇಜನಕ್ಕಾಗಿ ಇನ್ಸ್ಟಿಟ್ಯೂಟೋ ನ್ಯಾಷನಲ್ ಎಂಬ ಸಂಸ್ಥೆ ಜನ್ಮತಾಳಿತು. ಆದರೆ ಆಂತರಿಕ ಭಿನ್ನತೆಗಳ ಪ್ರವೃತ್ತಿಗಳೂ ಬೆಳೆದವು. ಸ್ವಯಮಾಡಳಿತದ ಹಾದಿಯಲ್ಲಿ ಎಷ್ಟು ದೂರ ಹೋಗಬಹುದೆಂಬ ಬಗ್ಗೆ ಕ್ರಿಯೋಲರಲ್ಲಿ ಒಮ್ಮತವಿರಲಿಲ್ಲ. ಅದೇ ಸಮಯಕ್ಕೆ ಸ್ಪೇನ್ ಮತ್ತೆ ಚಿಲಿಯ ಮೇಲೆ ತನ್ನ ಅಧಿಕಾರ ಸ್ಥಾಪಿಸಿತು (1814). ಸೋತ ಹೋರಾಟಗಾರರು ಅರ್ಜೆಂಟೀನಕ್ಕೆ ಓಡಿಹೋದರು. ಅವರು 1817ರಲ್ಲಿ ಬಲವಾದ ಸೈನ್ಯದೊಡನೆ ಆ್ಯಂಡೀಸನ್ನು ದಾಟಿ ಬಂದು, ಚಾಕಲಾಂಕೊ ಬೆಟ್ಟದ ಮೇಲೆ ಸ್ಪೇನಿನ ಸೇನೆಯೊಂದಿಗೆ ಕದನ ನಡೆಸಿ (ಫೆಬ್ರವರಿ 12, 1817) ಅದನ್ನು ಸೋಲಿಸಿದರು. ಅವರು ಸಾಂತಿಯಾಗೋ ಕಡೆಗೆ ಮುನ್ನುಗ್ಗಿದರು. ಓ ಹಿಗಿನ್ಸ್ ಚಿಲಿಯ ಮಹಾನಿರ್ದೇಶಕನಾದ. 1818ರ ಫೆಬ್ರವರಿ 12ರಂದು ಚಿಲಿಯ ಸ್ವಾತಂತ್ರ್ಯದ ಘೋಷಣೆಯಾಯಿತು. 1818ರ ಏಪ್ರಿಲ್ 5ರ ವೇಳೆಗೆ ಸ್ಪೇನಿನ ರಾಜಭಕ್ತರ ಸೇನೆ ಸಂಪೂರ್ಣವಾಗಿ ಸೋತಿತು.

ಆದರೆ ಚಿಲಿಯಲ್ಲಿ ಅಂತಃಕಲಹಗಳು ಮುಂದುವರಿದುವು. ಓ ಹಿಗಿನ್ಸ್‌ಗೆ ಪ್ರತಿಸ್ಪರ್ಧಿಯಾಗಿದ್ದ ಜೋಸ್ ಮಿಗ್ವೆಲ್ ಕಾರೆರಾನ ಸೋದರರಿಬ್ಬರು ಕೊಲ್ಲಲ್ಪಟ್ಟರು (1818). ಕಾರೆರಾನಿಗೂ 1821ರಲ್ಲಿ ಅದೇ ಗತಿ ಸಂಭವಿಸಿತು. ಸ್ವಾತಂತ್ರ್ಯ ಹೋರಾಟ ಮುಂದುವರಿದಂತೆ ಚಿಲಿಯ ಆರ್ಥಿಕ ಸ್ಥಿತಿ ಹದಗೆಡುತ್ತ ಬಂತು. ಓ ಹಿಗಿನ್ಸನ ಸರ್ವಾಧಿಕಾರ ಮುಂದುವರಿಯಿತು. ಜನರ ಅಸಮಾಧಾನ ಅತಿಯಾದಾಗ ಅವನು ರಾಜೀನಾಮೆ ಕೊಟ್ಟು (1823) ಪೆರುವಿಗೆ ನಿರ್ಗಮಿಸಿದ.

ಆ ಸಮಯದಲ್ಲಿ ರಾಮೊನ್ ಫ್ರೇಯರ್ ಅಧಿಕಾರ ವಹಿಸಿಕೊಂಡ. ನೀಗ್ರೋ ಗುಲಾಮಗಿರಿಯನ್ನು ಅವನು ತೆಗೆದುಹಾಕಿದ. ಸಂಯುಕ್ತರಾಜ್ಯವನ್ನು ಜಾರಿಗೆ ತರುವ ಸಂವಿಧಾನ 1826ರಲ್ಲಿ ಆಚರಣೆಗೆ ಬಂತು. ಇದರಿಂದಾಗಿ 1827ರಲ್ಲಿ ಫ್ರೇಯರನ ಅಧಿಕಾರ ಹೋಯಿತು. ಆದರೆ ಚುನಾವಣೆಯಲ್ಲಿ ಫ್ರೇಯರನಿಗೆ ಪರವಾಗಿದ್ದ ಅಧ್ಯಕ್ಷನೂ ಕಾಂಗ್ರೆಸ್ಸೂ ಆಯ್ಕೆಯಾದ್ದರಿಂದ ಅವನ ಪ್ರಭಾವ ಮತ್ತೆ ಹೆಚ್ಚಿತು.

1828ರಲ್ಲಿ ಉದಾರ ದೃಷ್ಟಿಯ ಸಂವಿಧಾನವನ್ನು ಘೋಷಿಸಲಾಯಿತು. ಚಿಲಿಯಲ್ಲಿ ಪಿಲುಕೋನ್ಸ್ (ಸಂಪ್ರದಾಯವಾದಿಗಳು ಮತ್ತು ಕ್ಯಾತೊಲಿಕರು) ಮತ್ತು ಪಿಪಿಯೊಲೋಸ್ (ಉದಾರವಾದಿಗಳು ಮತ್ತು ಪಾದ್ರಿವಿರೋಧಿಗಳು) ಎಂದು ಎರಡು ಪಕ್ಷಗಳಾದುವು. ಈ ಪಕ್ಷಗಳ ನಡುವೆ ಕದನ ನಡೆದು ಕೊನೆಗೆ ಪಿಲುಕೋನ್ಸ್ ಗೆದ್ದರು (1830).

ಸಂಪ್ರದಾಯವಾದಿಗಳು 1831 ರಿಂದ 1861ರ ವರೆಗೆ ಪ್ರಬಲರಾಗಿದ್ದರು. ದೇಶದಲ್ಲಿ ಸ್ಥಿರತೆ ಏರ್ಪಟ್ಟಿತ್ತು. 1830ರ ದಶಕದಲ್ಲಿ ಅಧ್ಯಕ್ಷನಾಗಿದ್ದಾತ ಜೋಕ್ವಿನ್ ಪ್ರೀಟೊ. ಆದರೆ ಡೀಗೊ ಪೋರ್ಟೇಲ್ಸ್ ಪ್ರಬಲ ವ್ಯಕ್ತಿಯಾಗಿದ್ದ. ಅವನು ಮಂತ್ರಿಯಾಗಿರಲಿ, ಸರ್ಕಾರದ ಹೊರಗೇ ಇರಲಿ, ಅವನ ಮಾತೇ ನಡೆಯುತ್ತಿತ್ತು. 1837ರಲ್ಲಿ ಅವನು ಕೊಲೆಗೆ ಈಡಾದ. ಅವನಿಗೆ ಬಡಜನರಲ್ಲೂ ಪ್ರಜಾಪ್ರಭುತ್ವದಲ್ಲೂ ತುಚ್ಛಭಾವವಿತ್ತು. ಆಡಳಿತದಲ್ಲಿ ಕಳೆದುಹೋಗಿದ್ದ ಚರ್ಚ್‌ಪ್ರಭಾವವನ್ನು ಮತ್ತೆ ಅವನು ಪ್ರತಿಷ್ಠಾಪಿಸಿದ. ಸರ್ಕಾರದಲ್ಲಿ ಚರ್ಚಿನ ಪಾಲುಗಾರಿಕೆ ಏರ್ಪಟ್ಟಿತು. ಅವನು ವಿದೇಶಿ ಬಂಡವಾಳಕ್ಕೆ ಸ್ವಾಗತ ನೀಡಿದ. ವರಿಷ್ಠರ ಆಡಳಿತಕ್ಕೆ ಮನ್ನಣೆ ನೀಡುವ ಸಂವಿಧಾನ 1833ರಲ್ಲಿ ಜಾರಿಗೆ ಬಂತು. ಇದು ಕೆಲವು ತಿದ್ದುಪಡಿಗಳೊಡನೆ 1825ರ ವರೆಗೂ ಜಾರಿಯಲ್ಲಿತ್ತು. ಜನಸಾಮಾನ್ಯರ ಶಿಕ್ಷಣಕ್ಕೆ ಅವನು ಮಾನ್ಯತೆ ನೀಡಲಿಲ್ಲವಾದರೂ ವಿದ್ವಾಂಸರನ್ನೂ ಸಾಹಿತಿಗಳನ್ನೂ ಅವನು ಪ್ರೋತ್ಸಾಹಿಸಿದ. ಹೊರದೇಶಗಳಿಂದ ವಿದ್ವಾಂಸರನ್ನು ಬರಮಾಡಿಕೊಂಡ.

ಬೊಲಿವಿಯದ ಸರ್ವಾಧಿಕಾರಿ ತನ್ನ ರಾಜ್ಯವನ್ನೂ ಪೆರು ರಾಜ್ಯವನ್ನೂ ಕೂಡಿಸಿ ಸಂಯುಕ್ತ ರಾಜ್ಯವನ್ನಾಗಿ ಮಾಡಲು ಯತ್ನಿಸಿದಾಗ ಇದರಿಂದ ಚಿಲಿಗೆ ಅಪಾಯವಿದೆಯೆಂದು ಪೋರ್ಟೇಲ್ಸ್ ಬಗೆದು ಅದರೊಂದಿಗೆ ಯುದ್ಧ ಹೂಡಿದ (1836–39). ಯುದ್ಧವಿರೋಧಿಗಳನ್ನು ದಮನ ಮಾಡಿದ. ದಂಗೆಯೆದ್ದ ಸೈನಿಕರು 1837ರ ಜೂನಿನಲ್ಲಿ ಅವನನ್ನು ಕೊಲೆ ಮಾಡಿದರು. ಇದರಿಂದ ಚಿಲಿಯಲ್ಲಿ ಐಕಮತ್ಯ ಸಾಧಿಸಿತು. ಯುದ್ಧದಲ್ಲಿ ಅದಕ್ಕೆ ಜಯ ಲಭಿಸಿತು. ಇದರಿಂದ ಪಶ್ಚಿಮ ತೀರದಲ್ಲಿ ಚಿಲಿಯ ಪ್ರಭಾವ ಬೆಳೆಯಿತು.

ಪೋರ್ಟೇಲ್ಸನ ಅನಂತರ ಚಿಲಿ ಶಾಂತಿ–ಪ್ರಗತಿಗಳತ್ತ ಮುನ್ನಡೆಯಿಟ್ಟಿತು. ಅಶಾಂತಿ ಅರಾಜಕತೆಗಳಿಂದ ಕೂಡಿದ್ದ ರಾಜ್ಯಗಳ ನಡುವೆ ಆರ್ಥಿಕವಾಗಿ, ರಾಜಕೀಯವಾಗಿ ಸುಭದ್ರವಾಗಿದ್ದ ರಾಷ್ಟ್ರ ಇದೊಂದೇ. ನೂತನ ಅಧ್ಯಕ್ಷ ಮ್ಯಾನ್ಯುಯೆಲ್ ಬುಲ್ನಿಸ್ ಕಾಲದಲ್ಲಿ (1841–1851) ಆರ್ಥಿಕ ಹಾಗೂ ಬೌದ್ಧಿಕವಾಗಿ ಚಿಲಿ ಮತ್ತೊಂದು ಹೆಜ್ಜೆ ಇಟ್ಟಿತು. ಸಾರ್ವಜನಿಕ ಸಾಲವನ್ನು ತೀರಿಸಲಾಯಿತು. ಕಟ್ಟಳೆಗಳನ್ನು ನಿರ್ದೇಶಿಸಲಾಯಿತು. ಸಾರಿಗೆಗಾಗಿ ನೌಕೆಗಳು ನಿರ್ಮಾಣವಾದುವು. ಹಿಟ್ಟಿನ ಗಿರಣಿಗಳು ಸ್ಥಾಪನೆಯಾದುವು. ಕಲ್ಲಿದ್ದಲು ಗಣಿಗಳನ್ನು ತೆರೆಯಲಾಯಿತು. ಅಮೂಲ್ಯ ಹಾಗೂ ಇತರ ಲೋಹಗಳ ಉತ್ಪನ್ನ ಹೆಚ್ಚಿತು. 1843ರಲ್ಲಿ ವಿದ್ಯಾಶಾಲೆ ಹಾಗೂ ವಿಶ್ವವಿದ್ಯಾಲಯವೂ ಸಂಗೀತ, ವಾಸ್ತು ಮತ್ತು ಇತರ ಕಲೆಗಳ ಅಧ್ಯಯನಕ್ಕೆ ಶಾಲೆಗಳೂ ಸ್ಥಾಪಿತವಾದವು. ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕ ಪತ್ರಿಕೆಗಳು ಚಿಲಿಯ ಬುದ್ಧಿಜೀವಿಗಳಿಗೆ ವಾದಸಾಧನವಾದುವು.

ಮ್ಯಾನ್ಯುಯೆಲ್ ಬುಲ್‌ನಿಸ್ ಮಂತ್ರಿಮಂಡಲದಲ್ಲಿ ಶಿಕ್ಷಣ ಸಚಿವನಿಗಿದ್ದ ಮ್ಯಾನ್ಯುಯೆಲ್ ಮಾಂಟ್ ಅನಂತರ ಅಧ್ಯಕ್ಷನಾದ (1851–1861). ಅವನು ವ್ಯವಸಾಯಕ್ಕೆ ಹೆಚ್ಚಿನ ಆದ್ಯತೆ ನೀಡಿದನಲ್ಲದೆ, ರೈಲ್ವೆ, ತಂತಿ ಮುಂತಾದವುಗಳ ವ್ಯವಸ್ಥೆ ಮಾಡಿದ. ಚಿಲಿಯ ಕಾನೂನುಗಳು ಕ್ರೋಡೀಕರಿಸಲ್ಪಟ್ಟುವು. ಪರಿಣಿತ ಕುಶಲಕಲಾವಿದರಿಗೆ ಅವನು ಧನಸಹಾಯ ನೀಡಿದ. ಆದರೆ ಬುದ್ಧಿಜೀವಿಗಳ ಸ್ವಾತಂತ್ರ್ಯವನ್ನು ಕಸಿದುಕೊಂಡ. ಇವನೊಂದಿಗೆ ಚಿಲಿಯ 30 ವರ್ಷಗಳ ಸರ್ವಾಧಿಕಾರ ಕೊನೆಗೊಂಡಿತು.

ಉದಾರವಾದಿಗಳು ಮತ್ತು ಸಂಪ್ರದಾಯಸ್ಥರು ಒಂದಾಗಿ ಜೋಸ್ ಜೋಕ್ವಿನ್ ಪಿರಜ್‌ನ ಅಧ್ಯಕ್ಷತೆಗೆ (1861–1871) ಬೆಂಬಲ ನೀಡಿದುವು. ಈ ಕಾಲದ ಮುಖ್ಯ ಬೆಳವಣಿಗೆ ಎಂದರೆ ಮಧ್ಯಮವರ್ಗದ ವ್ಯಾಪಕತೆ. ಮಧ್ಯಮ ಹಾಗೂ ಕಾರ್ಮಿಕ ವರ್ಗಗಳು ಬೆಳೆದುವು. ತಂತ್ರಶಾಸ್ತ್ರ ಮತ್ತು ಪ್ರೌಢ ವಿದ್ಯಾಭ್ಯಾಸಕ್ಕೆ ಉತ್ತೇಜನ ದೊರಕಿತು.

ಫೆಡರಿಕೊ ಎರಾಝುರಿಝ್ ಜ಼ನಾರ್ಟು ಅಧ್ಯಕ್ಷತೆಯ (1871–76) ಅವಧಿಯಲ್ಲಿ ಸುಧಾರಣಾ ಕಾರ್ಯ ತೀವ್ರವಾಯಿತು. ಅಧ್ಯಕ್ಷನ ಅಧಿಕಾರವನ್ನು ಇನ್ನಷ್ಟು ಮಿತಿಗೊಳಿಸಲಾಯಿತು. ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಸಿಕ್ಕಿತು. ಚರ್ಚಿನ ಅಧಿಕಾರವನ್ನು ಸೀಮಿತಗೊಳಿಸಲಾಯಿತಲ್ಲದೆ ಅದರ ಅಧಿಕಾರಿಗಳು ಶಿಕ್ಷೆಗೆ ಒಳಪಡುವಂತಾಯಿತು. ಚಿಲಿ ವಿಶ್ವವಿದ್ಯಾಲಯ ವಿಸ್ತರಿಸಿತು. ಸಾಂತಿಯಾಗೋ ಆಧುನಿಕ ನಗರವಾಗಿ ಬೆಳೆಯಿತು.

ಅನಿಬಾಲ್ ಬಂಟೊ ಅಧ್ಯಕ್ಷತೆಯ ಕಾಲದಲ್ಲಿ ಸಂಭವಿಸಿದ ವಿಶ್ವ ಆರ್ಥಿಕ ಮುಗ್ಗಟ್ಟಿನ ಪರಿಣಾಮ ಚಿಲಿಯ ಮೇಲೂ ಉಂಟಾಯಿತು. ಇದರಿಂದ ಚೇತರಿಸಿಕೊಳ್ಳುವ ಮೊದಲೇ ಬೊಲಿವಿಯ ಮತ್ತು ಪೆರುವಿನೊಂದಿಗೆ ನೈಟ್ರೇಟ್ ಕ್ಷೇತ್ರಗಳ ವಿಚಾರದಲ್ಲಿ ವಾದವುಂಟಾಗಿ ಅದು ಯುದ್ಧದಲ್ಲಿ ಪರ್ಯವಸಾನವಾಯಿತು. ಈ ಯುದ್ಧದಲ್ಲಿ (1833) ಜಯ ಗಳಿಸಿದ ಚಿಲಿಗೆ ಪೆರುವಿನ ಕೆಲವು ಪ್ರಾಂತ್ಯಗಳ ತಾತ್ಕಾಲಿಕ ಹತೋಟಿ ಸಿಕ್ಕಿತಲ್ಲದೆ ಅದರ ಆದಾಯವೂ ಹೆಚ್ಚಾಯಿತು.

1881ರಲ್ಲಿ ಡೊಮಿಂಗೊ ಸಾಂತ ಮರಿಯ ಅಧ್ಯಕ್ಷನಾದ. ಅವನ ಕಾಲದಲ್ಲಿ ಕಾಂಗ್ರೆಸ್ ಅಧ್ಯಕ್ಷರ ವೀಟೊ ಅಧಿಕಾರವನ್ನು $\frac{2}{3}$ ಮತಗಳಿಂದ ಬದಿಗೊತ್ತುವ ಅಧಿಕಾರವನ್ನು ಕಾಂಗ್ರೆಸ್ ಪಡೆಯಿತು. ಸ್ಥಳೀಯ ಅಧಿಕಾರಿಗಳ ಅಧಿಕಾರವನ್ನು ಮಿತಗೊಳಿಸಲಾಯಿತು. ಮತ ಚಲಾವಣೆಗೆ ಅವಶ್ಯವಾಗಿದ್ದ ಆರ್ಥಿಕ ಅರ್ಹತೆಯನ್ನು ಸಡಿಲಗೊಳಿಸಲಾಯಿತು. ದಕ್ಷಿಣದ ಅರಾಕೇನಿಯನ್ ಇಂಡಿಯನರನ್ನು ಅವನು ದಮನಮಾಡಿದ. ಅನಂತರ ಬಂದ ಜೋಸ್ ಮ್ಯಾನ್ಯುಯೆಲ್ ಬಾಲ್ಮಸೀಡನ ಅಧ್ಯಕ್ಷತೆಯ ಕಾಲದಲ್ಲಿ ಚಿಲಿಯ ಜನರ ಕಷ್ಟಗಳು ಹೆಚ್ಚಿದುವು. ಅವನಿಗೆ ಕಾಂಗ್ರೆಸಿನ ಬೆಂಬಲ ತಪ್ಪಿತು. ಅವನು ಕಾಂಗ್ರೆಸನ್ನೇ ಕಡೆಗಣಿಸಿ ಸರ್ವಾಧಿಕಾರದ ದಾರಿ ಹಿಡಿದಾಗ ಕಾಂಗ್ರೆಸ್ಸು ನೌಕಾಸೇನೆಯ ಬೆಂಬಲ ಪಡೆದು, ಅಧ್ಯಕ್ಷನನ್ನು ವಜಾ ಮಾಡುವ ನಿರ್ಣಯ ಮಾಡಿತು. ಅಂತರ್ಯುದ್ಧ ಸಂಭವಿಸಿತು. ಕಾಂಗ್ರೆಸ್ ಪರವಾದ ನೌಕಾಪಡೆ ನೈಟ್ರೇಟ್ ಗಣಿಗಳನ್ನು ವಶಪಡಿಸಿಕೊಂಡಿತು. ಕೊನೆಗೆ ಕಾಂಗ್ರೆಸ್ ಜಯಗಳಿಸಿತು. ಬಾಲ್ಮಸೀಡ ಆತ್ಮಹತ್ಯೆ ಮಾಡಿಕೊಂಡ.

1891–1918ರ ಕಾಲವನ್ನು ಸಂಸತ್ತಿನ ಆಳ್ವಿಕೆಯ ಕಾಲವೆಂದು ಪರಿಗಣಿಸಬಹುದು. ಬಲಿಷ್ಠ ಅಧ್ಯಕ್ಷರಿಗೆ ಜಾಗವಿಲ್ಲವಾಯಿತು. ಅಧ್ಯಕ್ಷರ ಆಗಮನ ಮತ್ತು ನಿರ್ಗಮನ, ಮಂತ್ರಿಮಂಡಲದ ಬದಲಾವಣೆ ಇವು ಸಾಮಾನ್ಯವಾದುವು. ರಾಜಕೀಯ ಮೌಲ್ಯದಲ್ಲಿ ಇಳಿಮುಖ ಕಂಡುಬಂತು. ನೈತಿಕ ಶಿಸ್ತು, ಸಾರ್ವಜನಿಕ ಜವಾಬ್ದಾರಿ, ಪಕ್ಷಗಳ ರೀತಿ ಹೊಲಸಾದುವು. ಮಧ್ಯಮ ವರ್ಗದವರಿಗೆ ರಾಜಕೀಯವೇ ಕಸುಬಾಯಿತು.

ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ, ಗಣಿ ಉದ್ಯಮ ಹಾಗೂ ನೈಟ್ರೇಟ್ ಉತ್ಪತ್ತಿ, ಹೆಚ್ಚಿನ ವಿದೇಶಿ ವಿನಿಮಯ, ಕೈಗಾರಿಕೆ ಮತ್ತು ವಾಣಿಜ್ಯಕ್ಕೆ ಹೆಚ್ಚಿನ ಉತ್ತೇಜನ, ನಗರಗಳ ಸೌಂದರ್ಯವರ್ಧನ, ಪಟ್ಟಣಗಳಲ್ಲಿ ಹೆಚ್ಚಿನ ಜನಸಾಂದ್ರತೆ–ಇವು ಈ ಕಾಲದ ಕೆಲವು ಪ್ರವೃತ್ತಿಗಳು. ಆರ್ಥಿಕ ಪ್ರಗತಿ ಸಮಾಜದ ಮೇಲೆ ತನ್ನ ಪ್ರಭಾವ ಬೀರಿತು. ಆರ್ಥಿಕ ಕ್ಷೇತ್ರದಲ್ಲಿ ರಾಜ್ಯ ಹಸ್ತಕ್ಷೇಪ ಮಾಡಕೂಡದೆಂಬ ಒತ್ತಾಯವಿತ್ತು.

1912ರಲ್ಲಿ ಸಮಾಜವಾದಿ ಕಾರ್ಮಿಕ ಪಕ್ಷ ಸ್ಥಾಪನೆಯಾಯಿತು. ಆದರೆ ಅದು ಹೆಚ್ಚು ಪರಿಣಾಮಕಾರಿಯಾಗಿರಲಿಲ್ಲ. ವಿಶ್ವವಿದ್ಯಾಲಯ ಮತ್ತು ಸಾರ್ವಜನಿಕ ಶಾಲೆಗಳ ಸ್ಥಾಪನೆ, ಅರ್ಹ ಉಪಾಧ್ಯಾಯರ ನೇಮಕ, ಪತ್ರಿಕಾ ಸ್ವಾತಂತ್ರ್ಯ–ಇವು ಜನರ ಮನಸ್ಸನ್ನು ಒಲಿಸಿಕೊಳ್ಳಲು ಸಾಧ್ಯವಾಗಲಿಲ್ಲ. 1818ರ ಸಾರ್ವತ್ರಿಕ ಚುನಾವಣಾ ಸಮಯದಲ್ಲಿ ದೇಶದಲ್ಲಿ ಜಾಗೃತಿ ಮೂಡಿತ್ತು.

ಜನತೆಯ ಆಶೋತ್ತರಗಳ ಪ್ರತೀಕವಾಗಿ ಅಧ್ಯಕ್ಷನಾಗಿ ಆರಿಸಿ ಬಂದವನು ಆರ್ಟುರೊ ಅಲೆಸಾಂಡ್ರಿ ಪಾಲ್ಮ. ಆದರೆ ಅಧಿಕಾರಯುಕ್ತ ಹಳೆಯ ರಾಜಕಾರಣಿಗಳೇ ಮೇಲ್ಮನೆಯಿಂದ ಸೆನೆಟಿನಲ್ಲಿ ಮುಂದುವರಿದು ಅಲೆಸಾಂಡ್ರಿಗೆ ವಿರೋಧ ವ್ಯಕ್ತಪಡಿಸುತ್ತಿದ್ದುದರಿಂದ ಅವನು ಹೊಸ ಸಂವಿಧಾನವನ್ನು ಘೋಷಿಸಿದ. 1925ರಲ್ಲಿ ಇದಕ್ಕೆ ಜನರ ಒಪ್ಪಿಗೆ ಲಭಿಸಿತು.

ಇದರಿಂದ ಅಧ್ಯಕ್ಷನಿಗೆ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಅಧಿಕಾರ ಸಿಕ್ಕಿದುವು. ರಾಜ್ಯ ಮತ್ತು ಚರ್ಚ್ ಬೇರ್ಪಟ್ಟುವು. ಆರ್ಥಿಕ ವಿಚಾರಗಳಲ್ಲಿ ಸರ್ಕಾರ ಪ್ರವೇಶಿಸಬಾರದೆಂಬುದು ಆಗ ಸ್ವೀಕೃತವಾಗಿದ್ದ ನೀತಿ.

ಅಲೆಸಾಂಡ್ರಿಯ ಸರ್ಕಾರದಲ್ಲಿ ಯುದ್ಧಮಂತ್ರಿಯಾಗಿದ್ದ ಇಬಾನೆಝ್ ಅವನನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೆ ಬಂದ. ಅವನದು ಸ್ವೇಚ್ಛಾ ಪ್ರವೃತ್ತಿಯ ಆಳ್ವಿಕೆ. ಸಮಾಜದಲ್ಲಿ ಅಸಂತುಷ್ಟಿ ಹೆಚ್ಚಿತು. ವಿದೇಶಿ ವಿನಿಮಯದ ಮೂಲ ಇಂಗಿತು. ನಿರುದ್ಯೋಗ ಹೆಚ್ಚಾಯಿತು. ತೆರಿಗೆ ವಿಧಿಸುವ ಅವನ ಪ್ರಯತ್ನದಿಂದ ಕಳವಳ ಅಧಿಕವಾಯಿತು. ಕೊನೆಗೆ ಅವನು ರಾಜೀನಾಮೆಯಿತ್ತ. (1831).

1932ರಲ್ಲಿ ನಡೆದ ಕ್ಷಿಪ್ರಾಕ್ರಮಣದ ಅನಂತರದ ಚುನಾವಣೆಯಲ್ಲಿ ಪುನಃ ಅಲೆಸಾಂಡ್ರಿ ಅಧ್ಯಕ್ಷನಾದ. ಕೈಗಾರಿಕೆ ಹಾಗೂ ಖನಿಜ ಉತ್ಪತ್ತಿಯ ಹೆಚ್ಚಳದಿಂದ ಆರ್ಥಿಕ ಸ್ಥಿತಿ ಉತ್ತಮಗೊಂಡಿತು. ಆದರೆ ಅವನು ಸುಧಾರಣೆಯ ನೀತಿ ಅನುಸರಿಸಲಿಲ್ಲವಾದ್ದರಿಂದ, ಅವನಿಗೆ ಬೆಂಬಲ ನೀಡಿದ್ದ ತೀವ್ರವಾದಿ ಪಕ್ಷ ತನ್ನ ಬೆಂಬಲವನ್ನು ಹಿಂದೆಗೆದುಕೊಂಡಿತು. ಎರಡು ವರ್ಷಗಳ ಕಾಲ ಅನಿಶ್ಚಯ ಪರಿಸ್ಥಿತಿಯಿತ್ತು. 1936ರ ವೇಳೆಗೆ ಅದರ ಮತ್ತು ಮಧ್ಯ ಹಾಗೂ ವಾಮ ಗುಂಪುಗಳ ಸಹಯೋಗ ಏರ್ಪಟ್ಟು ಜನಪ್ರಿಯರಂಗ ಸ್ಥಾಪಿತವಾಯಿತು. ಅದರ ಮುಂದಾಳು ಪೇಡ್ರೊ ಅಗ್ವಿರೆ ಸೆರ್ದ ಅಧ್ಯಕ್ಷನಾದ (1938).

ಆರ್ಥಿಕ ಪ್ರಗತಿ ಮುಂದುವರಿಯಿತು. ಕೈಗಾರಿಕೆಗೆ ಸರ್ಕಾರ ಬೆಂಬಲ ನೀಡಿತು. 1941ರಲ್ಲಿ ಸೆರ್ದ ತೀರಿಕೊಂಡ. ವಾಮಪಂಥೀಯ ಉದಾರವಾದಿಗಳಿಗೂ ಕಮ್ಯುನಿಸ್ಟರಿಗೂ ನಡುವೆ ಕಲಹಗಳು ಆರಂಭವಾದುವು. ವಾನ್ ಆಂಟೋನಿಯೊ ರೀಯೋಸ್ ಚಿಲಿಯ ಅಧ್ಯಕ್ಷನಾದ (1942–46). ಅಮೆರಿಕದೊಂದಿಗೆ ಸಂಬಂಧ ಬೆಳೆಯಿತು. 1946ರಲ್ಲಿ ರೀಯೋಸ್ ತೀರಿಕೊಂಡ. ಅವನ ಕಾಲದಲ್ಲಿ ಕೈಗಾರಿಕೆಗಳಿಗೆ ಪ್ರಾಮುಖ್ಯ ಸಂದಿತ್ತಾದರೂ ಸಾಮಾಜಿಕ ಪ್ರಗತಿಗೆ ಪ್ರಾಶಸ್ತ್ಯ ಇರಲಿಲ್ಲ. ಅನಂತರ ಬಂದ ಗೇಬ್ರಿಯೆಲ್ ಗೊಞಾಲೆಝ್ ವಿಡೆಲ ಕೂಡ ಜನರ ನಿರೀಕ್ಷೆಯನ್ನು ಸಾರ್ಥಕಗೊಳಿಸಲಿಲ್ಲ. ಅವನಿಗೆ ಬೆಂಬಲ ನೀಡಿದ್ದ ಕಮ್ಯೂನಿಸ್ಟರು ಹಿಂದೆ ಸರಿದರು. ಸರ್ಕಾರ ಆ ಪಕ್ಷವನ್ನು ಬಹಿಷ್ಕರಿಸಿತು. 1958ರ ವರೆಗೂ ಇದೇ ಸ್ಥಿತಿ ಮುಂದುವರಿಯಿತು. 1952ರಲ್ಲಿ ವೆಡೆಲನ ಸ್ಥಾನದಲ್ಲಿ ಕಾರ್ಲೋಸ್ ಇಬಾನೆಝ್ ಅಧ್ಯಕ್ಷನಾದ. ಹಿಂದೆ ಸರ್ವಾಧಿಕಾರಿಯಾಗಿದ್ದ ಈತನ ಆಡಳಿತದ ಕಾಲದಲ್ಲಿ ಅತೃಪ್ತಿ ಅಧಿಕವಾಯಿತು. 1958ರಲ್ಲಿ ಜಾರ್ಜ್ ಅಲೆಸಾಂಡ್ರಿ ಅಧ್ಯಕ್ಷನಾದ. ಅಮೆರಿಕದೊಂದಿಗೆ ಸ್ನೇಹ ಬೆಳೆಯಿತು. ಜನರ ಒಲವು ವಾಮಪಕ್ಷಗಳ ಕಡೆಗೆ ಓಲುತ್ತಿತ್ತು. 1964ರಲ್ಲಿ ಎಡ್ವರ್ಡೊ ಫ್ರೈ ಅಧ್ಯಕ್ಷನಾದ.

1970ರಲ್ಲಿ ವಾಮಪಕ್ಷಗಳ ಬೆಂಬಲದಿಂದ ಸಾಲ್ವಡಾರ್ ಅಲೆಂಡೆ ಅಧ್ಯಕ್ಷರಾಗಿ ಚುನಾಯಿತರಾದರು. ಅವರು ಚಿಲಿಯ ಪ್ರಥಮ ಸಮಾಜವಾದಿ ಅಧ್ಯಕ್ಷ ಮತ್ತು ಕಮ್ಯುನಿಸಮ್ ಪ್ರತಿಪಾದಕ. ಅಮೆರಿಕದ ಹಿತಾಸಕ್ತಿಗಳ ಹಿಡಿತದಿಂದ ಚಿಲಿಯನ್ನು ವಿಮೋಚನೆಗೊಳಿಸಲು ಅನೇಕ ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತಂದರು. ಅವುಗಳಲ್ಲಿ ಮುಖ್ಯವಾದುವೆಂದರೆ ಕಾರ್ಮಿಕರ ಕನಿಷ್ಠ ವೇತನದ ಏರಿಕೆ, ಸಮಾನ ಕೆಲಸಕ್ಕೆ ಸಮಾನ ವೇತನ, ಕೆಲಸ–ವೇತನಗಳ ವಿಚಾರದಲ್ಲಿ ಸ್ತ್ರೀಪುರುಷರೆಂಬ ತಾರತಮ್ಯದ ಅಂತ್ಯ, ಆಹಾರ ಸ್ವಾವಲಂಬನೆಗಾಗಿ ಭೂಸುಧಾರಣೆ. ತಾಮ್ರದ ಗಣಿಗಳೂ ಸೇರಿದಂತೆ ಎಲ್ಲ ಮೂಲ ಕೈಗಾರಿಕೆಗಳನ್ನೂ ಅವರು ರಾಷ್ಟ್ರೀಕರಣ ಮಾಡಿದರು. ಈ ಕಾರ್ಯಕ್ರಮಗಳು ಅಮೆರಿಕನ್ ಸರ್ಕಾರಕ್ಕೆ ಸರಿದೋರಲಿಲ್ಲ. ಪಟ್ಟಭದ್ರರ ವಿರೋಧಿಯಾಗಿದ್ದ ಅವರಿಗೆ ಅಧಿಕಾರದ ಆರಂಭದಿಂದಲೂ ಕಿರುಕುಳವಿತ್ತು. 1973ರ ಸೆಪ್ಟಂಬರ್ 11 ರಂದು ಅಗಸ್ಟೊ ಪಿನೊಚೆಟ್ ನಾಯಕತ್ವದಲ್ಲಿ ನಡೆದ ಸೇನಾಬಂಡಾಯ ಅವರ ಸರ್ಕಾರವನ್ನು ಉರುಳಿಸಿತು. ಅಲೆಂಡೆ ಸಾವನಪ್ಪಿದರು. ಮಾನವ ಹಕ್ಕುಗಳನ್ನು ಉಲ್ಲಂಘಿಸಿದ ಪಿನೋಚೆಯನ್ನು 1989ರಲ್ಲಿ ಉಚ್ಚಾಟಿಸಲಾಯಿತು. ಅನಂತರ ಅವನನ್ನು ಅಕ್ಟೋಬರ್ 98ರಲ್ಲಿ ಲಂಡನ್ನಿನಲ್ಲಿ ದಸ್ತಗಿರಿ ಮಾಡಲಾಯಿತು. ಆದರೆ ಮಾರ್ಚ್ 2000ದಲ್ಲಿ ಆತ ಮತ್ತೆ ಹಿಂತಿರುಗಿದ. ಅವನನ್ನು ಗೃಹಬಂಧನದಲ್ಲಿರಿಸಿ ಜುಲೈ 2001 ರವರೆಗೆ ಚುನಾವಣೆಗೆ ನಿಲ್ಲದಂತೆ ಘೋಷಿಸಲಾಯಿತು.

(ಎಚ್.ವಿ.ಎಸ್.ಎಂ.)

**ಚಿಲಿಯನ್‌ವಾಲಾ ಕದನ :** ಎರಡನೆಯ ಸಿಖ್ ಯುದ್ಧದ ಕಾಲದಲ್ಲಿ ಸಿಖ್ ಹಾಗೂ ಬ್ರಿಟಿಷ್ ಸೈನ್ಯಗಳ ನಡುವೆ 1849ರ ಜನವರಿ 13ರಂದು ಚಿಲಿಯನ್ ವಾಲಾ ಬಳಿ ನಡೆದ ಕದನ. ಪಂಜಾಬಿನಲ್ಲಿ ದೊರೆ ರಣಜಿತ್‌ಸಿಂಗನ (1780–1839) ಮರಣಾನಂತರ ಅಧಿಕಾರಕ್ಕಾಗಿ ಕಿತ್ತಾಟ ನಡೆದು ಕೊನೆಗೆ ಸೈನ್ಯಾಡಳಿತ ಅಸ್ತಿತ್ವಕ್ಕೆ ಬಂತು. ರಣಜಿತ್‌ಸಿಂಗನ ಕಿರಿಯ ಮಗನಾದ ಆರು ವರ್ಷ ವಯಸ್ಸಿನ ದಲೀಪ್‌ಸಿಂಗ್ ಹೊಸ ರಾಜನೆಂದು ಘೋಷಿತನಾದರೂ ಆಡಳಿತ ಸೂತ್ರಗಳೆಲ್ಲ ಖಾಲ್ಸಾ ಸೈನ್ಯದ ಕೈಯಲ್ಲಿದ್ದುವು. 1845ರ ಹೊತ್ತಿಗೆ ಲಾಹೋರಿನಲ್ಲಿ ಸೈನ್ಯಬಲ ಇಮ್ಮಡಿಗೊಂಡಿತು. ರಾಜಾ ಲಾಲ್‌ಸಿಂಗ್ ವಜೀರನಾಗಿಯೂ ಸರ್ದಾರ್ ತೇಜ್‌ಸಿಂಗ್ ಸೇನಾನಿಯಾಗಿಯೂ ನೇಮಕಗೊಂಡರು. ಸಿಖ್ಖರ ಬಗ್ಗೆ ಬ್ರಿಟಿಷರ ಸಂಶಯ ಬೆಳೆಯಿತು. ಅವರು ಗಡಿ ಪ್ರದೇಶಗಳಲ್ಲಿ ತಮ್ಮ ಸೈನ್ಯಬಲವನ್ನು ಹೆಚ್ಚಿಸಿದರು. ಈ ಬೆಳವಣಿಗೆಯನ್ನು ಸಿಖ್ಖರು ಸಹಿಸಲಿಲ್ಲ. ಮೊದಮೊದಲು ಕೇವಲ ಸ್ವರಕ್ಷಣೆಗಾಗಿ ಯುದ್ಧವೆಂಬುದಾಗಿ ಬ್ರಿಟಿಷ್ ಹಾಗೂ ಸಿಖ್ ಸೈನಿಕರು ಭಾವಿಸಿದ್ದರು. 1845–46ರಲ್ಲಿ ನಡೆದ ಯುದ್ಧಗಳಲ್ಲಿ ಸಿಖ್ ಸೈನಿಕರಿಗೆ ಸೋಲುಂಟಾಯಿತು. ಲಾಹೋರ್ ಬ್ರಿಟಿಷರ ಅಧೀನಕ್ಕೊಳಪಟ್ಟಿತ್ತು. ಜಲಂದರ್ ದೋಆಬ್ ಪ್ರದೇಶ ಬ್ರಿಟಿಷರಿಗೆ ಸೇರಬೇಕೆಂದೂ 15 ಲಕ್ಷ ಸ್ಟರ್ಲಿಂಗುಗಳನ್ನು ಯುದ್ಧದ ಖರ್ಚಿಗಾಗಿ ಸಿಖ್ಖರು ಕೊಡಬೇಕೆಂದೂ ಒಪ್ಪಂದವಾಯಿತು. ಸಿಖ್ ದರ್ಬಾರು ಹಣ ಕೊಡುವ ಸ್ಥಿತಿಯಲ್ಲಿರಲಿಲ್ಲವಾದ್ದರಿಂದ ಕಾಶ್ಮೀರ ಪ್ರಾಂತ್ಯವನ್ನೂ ಕಳೆದುಕೊಳ್ಳಬೇಕಾಯಿತು. ದಲೀಪ್ ಸಿಂಗ್ ಬ್ರಿಟಿಷರ ರಕ್ಷಣೆಯಲ್ಲಿ ಇರಬೇಕಾಯಿತು. ಬ್ರಿಟಿಷ್ ರೆಸಿಡೆಂಟ್ ಹೆನ್ರಿ ಲಾರೆನ್ಸನ ಸಹಾಯಕ್ಕಾಗಿ ಲಾಹೋರಿನಲ್ಲಿ ಬ್ರಿಟಿಷ್ ಸೈನ್ಯವನ್ನಿಡಲಾಯಿತು. ಇದೇ ಸಮಯದಲ್ಲಿ ಮುಲ್ತಾನಿನಲ್ಲಿ ರಾಜ್ಯಪಾಲನಾಗಿದ್ದ ಮುಲ್‌ರಾಜನಿಗೂ ಸಿಖ್ ಸರ್ಕಾರಕ್ಕೂ ಮನಸ್ತಾಪ ಉಂಟಾಯಿತು. ಅವನ ಸ್ಥಾನದಲ್ಲಿ ಅಧಿಕಾರ ವಹಿಸಿಕೊಳ್ಳಲು ಸರ್ದಾರ್ ಖಾನ್ ಎಂಬುವನನ್ನು ಲಾಹೋರಿನ ದರ್ಬಾರು ನೇಮಕ ಮಾಡಿತು. ಅವನು ಮುಲ್ತಾನಿಗೆ ಹೋಗುತ್ತಿದ್ದಾಗ ಅವನ ಜೊತೆಯಲ್ಲಿದ್ದ ಇಬ್ಬರು ಬ್ರಿಟಿಷ್ ಅಧಿಕಾರಿಗಳು ಹತರಾದರು. ಬ್ರಿಟಿಷರ ವಿರುದ್ಧ ಮುಲ್ತಾನಿನಲ್ಲಿ ಆರಂಭವಾದ ಪ್ರತಿಭಟನೆ ವ್ಯಾಪಕ ಸಿಖ್ ಬಂಡಾಯವಾಗಿ ಪರಿಣಮಿಸಿತು. ದಲೀಪ್ ಸಿಂಗನ ತಾಯಿ ರಾಣಿ ಝಿಂದಾನಳ ಕಲಾಪಗಳೂ ಬ್ರಿಟಿಷರ ಕೋಪಕ್ಕೆ ಕಾರಣವಾದುವು. ಎರಡನೆಯ ಸಿಖ್–ಬ್ರಿಟಿಷ್ ಯುದ್ಧ ಆರಂಭವಾಯಿತು.

1849ರ ಜನವರಿ 13ರ ಮಧ್ಯಾಹ್ನಾನಂತರ ಲಾರ್ಡ್ ಗಾಫನ ನೇತೃತ್ವದಲ್ಲಿ ಚಿಲಿಯನ್‌ವಾಲಾ ಗ್ರಾಮದಿಂದ ಮುಂದುವರಿದು ಬರುತ್ತಿದ್ದ ಬ್ರಿಟಿಷ್ ಸೈನ್ಯವನ್ನು ಕಂಡ ಸಿಖ್ ಸೈನಿಕರು ಗುಂಡು ಹಾರಿಸುತ್ತ ಸುಮಾರು ಒಂದು ಗಂಟೆ ಕಾಲ ಅವರನ್ನು ಎದುರಿಸಿದರು. ಷೇರ್ ಸಿಂಗ್ ಸಿಖ್ ಸೈನ್ಯದ ನೇತೃತ್ವ ವಹಿಸಿದ್ದ. ಹೆಚ್ಚು ಸಂಖ್ಯೆಯಲ್ಲಿದ್ದ ಬ್ರಿಟಿಷ್ ಸೈನಿಕರನ್ನು ಎದುರಿಸುವುದಕ್ಕಾಗಿ ಸಿಖ್ಖರು ಅರಣ್ಯಪ್ರದೇಶದಲ್ಲಿ ಚದುರಿಕೊಂಡರು. ರಾತ್ರಿಯವರೆಗೂ ನಡೆದ ಕದನದಲ್ಲಿ ಸಿಖ್ ಸೈನಿಕರು ಬಹು ಶೌರ್ಯದಿಂದ ಹೋರಾಡಿದರು. 132 ಅಧಿಕಾರಿಗಳೂ ಸೇರಿದಂತೆ 2,446 ಬ್ರಿಟಿಷ್ ಸೈನಿಕರು ಗಾಯಗೊಂಡರು, ಇಲ್ಲವೆ ಮರಣ ಹೊಂದಿದರು. ನಾಲ್ಕು ಬಂದೂಕುಗಳು ಮತ್ತು ಮೂರು ಧ್ವಜಗಳು ಸಿಖ್ಖರ ಕೈವಶವಾದವು. ಸಿಖ್ಖರಿಗೂ ಈ ಕದನದಲ್ಲಿ ತುಂಬ ನಷ್ಟ ಉಂಟಾಗಿತ್ತು. ಮಾರನೆಯ ಬೆಳಿಗ್ಗೆ ಸಿಖ್ಖರು ತಮ್ಮ ವಿಜಯಕ್ಕಾಗಿ ಇಪ್ಪತ್ತೊಂದು ಕುಶಾಲುತೋಪುಗಳನ್ನು ಹಾರಿಸಿದರು. ಬ್ರಿಟಿಷರು ತಮಗೇ ವಿಜಯವಾಯಿತೆಂದು ಹೇಳಿಕೊಂಡರೂ ನಿಜಸಂಗತಿ ಬೇರೆಯಾಗಿತ್ತು. ಬ್ರಿಟನ್ನಿನಲ್ಲಿ ಲಾರ್ಡ್ ಗಾಫನ ವರ್ತನೆ ಹಾಗೂ ಬ್ರಿಟಿಷ್ ಸೈನ್ಯದ ತೀವ್ರ ನಷ್ಟಕ್ಕಾಗಿ ತುಂಬ ಅಸಮಾಧಾನವುಂಟಾಗಿತ್ತು. ಚಿಲಿಯನ್‌ವಾಲಾ ಕದನ ಬ್ರಿಟಿಷರಿಗೆ ಮರೆಯಲಾಗದ ಕಹಿ ಅನುಭವವಾಗಿತ್ತು.

(ಎಚ್.ಎಂ.ಎಸ್.ಆರ್.)

**ಚಿಲಿ ಸಾಹಿತ್ಯ :** ಚಿಲಿ ಸಾಹಿತ್ಯ 16ನೆಯ ಶತಮಾನದಿಂದ ಆರಂಭವಾಗುತ್ತದೆ. ಸ್ಪೇನಿನವನಾದ ಅಲೋನ್ಸ ದ ಎರ್ಸಿಲ್ (1553–1594) ಲಾ ಅ್ಯರಕಾನ ಎಂಬ ಕವನವನ್ನು ಬರೆದ. ಇದು ಆ ಕಾಲಕ್ಕೆ ಮಹತ್ತ್ವಪೂರ್ಣ ಪ್ರಭಾವವನ್ನು ಬೀರಿತು. ಇದರಿಂದಾಗಿ ಚಿಲಿ ದೇಶದಲ್ಲಿ ಅಮೆರಿಕದಲ್ಲೆಲ್ಲೂ ಕಾಣಬಾರದಷ್ಟು ದೊಡ್ಡ ಪರಿಮಾಣದಲ್ಲಿ ಉತ್ತಮ ಸಾಹಿತ್ಯಕೃತಿಗಳು ನಿರ್ಮಾಣವಾದುವು. ಎರ್ಸಿಲ್ಲನ ಪ್ರಸಿದ್ಧ ಅನುಯಾಯಿಗಳಲ್ಲಿ ಮುಖ್ಯರಾದವರೆಂದರೆ ಅ್ಯರಕೊ ದಮಾದೊ ಕೃತಿಯ ಕರ್ತೃ ಪೆದ್ರೊ ಲೆ ಓನಾ (1570–1643). ಪ್ಯುರೇನ್ ಇಂದೋಮಿತೊ ಕೃತಿಯ ಕರ್ತೃ ಆಲ್ವಾರೆಜ್ ದ ಟೊಲೆಡೋ ಮತ್ತು ಆಂತೋನಿಯೊ ದ ಕ್ವಿನೋನೆ, ಮೆಲ್ಚೋರ್ ಜೂಫ್ರೆದ ಅಗಿಲ್ಲ, ದಿಯೇಗೊ ಸಾಂಟಿಸ್ಟೆಬಾನ್ ಓಸಾರಿಯೋ–ಮೊದಲಾದವರು.

ಹೀಗೆ ಆರಂಭಗೊಂಡ ಸಾಹಿತ್ಯ 19ನೆಯ ಶತಮಾನದ ವರೆಗೂ, ಏಕೋ ಏನೋ, ಸಾಕಷ್ಟು ಅಭಿವೃದ್ಧಿ ಹೊಂದಲಿಲ್ಲ. 19ನೆಯ ಶತಮಾನದಲ್ಲಿ ಸಾಹಿತ್ಯ ಮರುಹುಟ್ಟು ಪಡೆಯಿತು. ವಿದ್ವಾಂಸ ಹಾಗೂ ಕವಿಯಾದ ಆಂದ್ರೆ ಬೆಲ್ಲೊ (1781–1864) ಮತ್ತು ದೇಶಭ್ರಷ್ಟರಾಗಿದ್ದ ಆರ್ಜಂಟೀನದವರಾದ ದೊಮಿಂಗೊ ಫಾಸ್ಟಿನೊ ಸಾರ್ಮಿಂಟೊ, ಜಾನ್ ಬತೀಸ್ತ ಅಲ್ಬೆರ್ಡಿ ಮತ್ತು ವಿಸೆಂಟೆ ಫೈಡಲ್ ಲೋಪೆಸ್ ಮೊದಲಾದವರು ತಮ್ಮ ಬೌದ್ಧಿಕ ಶಕ್ತಿಯನ್ನು ನಾಡಿನ ಸಾಹಿತ್ಯಕ್ಕೆ ತಂದುಕೊಟ್ಟರು. 1842ರಲ್ಲಿ ಸ್ಥಾಪಿತವಾದ ಈ ಚಳವಳಿಯ ಕೇಂದ್ರಸ್ಥಾನ ಸೊಸಿಯದಾದ್ ಲಿಟರೇರಿಯ ಎಂಬ ಸಂಸ್ಥೆಯಾಗಿತ್ತು. ಇದರಲ್ಲಿ ಕಾದಂಬರಿಕಾರರು, ಕವಿಗಳು ಮೊದಲಾದ ಎಲ್ಲ ಬಗೆಯ ಸಾಹಿತಿಗಳೂ ಇದ್ದರು. ಕಾದಂಬರಿಕಾರರ ಜೋಸೆ ವಿಕ್ಟೋರಿನೊ ಲಾಸ್ಟಾರಿಯ (1817–1888), ಕವಿ ಸಾಲ್ವಾದೊರ್ ಸಾನ್ ಫುಯಂಟೆ (1817–1860) ಹಾಗೂ ಸ್ಥಳೀಯ ವಿಷಯಗಳನ್ನು ಕುರಿತು ಬರೆಯುತ್ತಿದ್ದ ಲೇಖಕರಲ್ಲಿ ಅಗ್ರಪಂಕ್ತಿಗೆ ಸೇರಿದ್ದ ಜೋಸೆ ಜೋಕ್ವಿನ್ ವಲ್ಲೆಜೊ (1809–1858) (ಈತನನ್ನು ಜೊಟಬೆಚೆಯ ಎಂದೂ ಕರೆಯುತ್ತಾರೆ), ಇವರು ಈ

ಸಂಸ್ಥೆಯ ಪ್ರಮುಖ ಸದಸ್ಯರು. ಜೊಟಬೆಚೆಯ ಅನುಯಾಯಿಯೆಂದು ಡೇನಿಯಲ್ ಬರೋ ಗ್ರೇಜ್‌ನನ್ನು (1834–1904) ಪರಿಗಣಿಸಬಹುದು. ಈತ ತುಂಟರ ಸಾಹಸಕೃತ್ಯಗಳನ್ನು ಕುರಿತ ಕಾದಂಬರಿಗಳನ್ನು ಬರೆದಿದ್ದಾನೆ. ಪ್ರಕೃತಿ ತತ್ತ್ವವಾದಿ ಗುಂಪಿಗೆ ಸೇರಿದ್ದು, ಕಾಲಕ್ರಮೇಣ ಅಸಂಖ್ಯಾತ ಚಿಲಿ ಲೇಖಕರನ್ನು ಆಕರ್ಷಿಸಿದ್ದ ಅಲ್ಬರ್ಟೊ ಬ್ಲೆಸ್ಟ್ ಗಾನನೂ (1830–1920) ಮುಖ್ಯನಾದವ. 19ನೆಯ ಶತಮಾನದ ಕೊನೆಯ ವೇಳೆಯಲ್ಲಿ ಚಿಲಿ ಸಮಾಜದ ಸುಂದರ ಚಿತ್ರಣವನ್ನು ಈತ ನೀಡಿದ್ದಾನೆ. ಈತನ ಬರವಣಿಗೆ ಬಹಳ ಶಕ್ತಿಯುತವಾದ್ದು. ಚಿಲಿ ಸಾಹಿತ್ಯದ ಸ್ವರ್ಣಯುಗ, ವಿಶೇಷವಾಗಿ ಕಾವ್ಯಪ್ರಕಾರದಲ್ಲಿ, 20ನೆಯ ಶತಮಾನದಿಂದ ಆರಂಭವಾಯಿತೆಂದು ಹೇಳಬಹುದು. ರುಬೇನ್ ದರೀಯೋನ ಪ್ರಭಾವ ಈ ಶತಮಾನದ ಮೂವರು ಮಹಾಕವಿಗಳ ಮೇಲೆ ಇದೆಯೆನ್ನುವರು : ಸ್ವತಂತ್ರವಾಗಿ ಆಲೋಚಿಸುವ ಅಸಾಧಾರಣ ಪ್ರತಿಭೆಯುಳ್ಳ ವಿಸೆಂಟೆ ಹ್ಯುದೋಬ್ರೊ (1893–1948), ನೊಬೆಲ್ ಪ್ರಶಸ್ತಿವಿಜೇತ ಗಾಬ್ರಿಯೇಲ ಮಿಸ್ತ್ರಲ್ (1889–1957) ಹಾಗೂ ಪಾಬ್ಲೊ ನೆರುದ (1904–1973). ಇತರ ಸಮಕಾಲೀನ ಕವಿಗಳಲ್ಲಿ ಪ್ರಸಿದ್ಧರಾಗಿರುವವರು ಪಾಬ್ಲೊ ದೇರೋಖ (1894–1968), ಜುವೆನಿಕೊ ವಲ್ಲೆ (1900–1999) ಮತ್ತು ಆಂತೋನಿಯೊ ದ ಅಂದರ್ರಗ (1911– ).

ಈ ಶತಮಾನದಲ್ಲಿ ಕಾದಂಬರಿ ಪ್ರಕಾರವೂ ಸಿದ್ಧಿಯನ್ನು ಪಡೆಯಿತು. ಶತಮಾನದ ಆರಂಭಕಾಲದಲ್ಲಿದ್ದ ಆಗಸ್ಟೊ ದ ಹಾಮರ್ (1880–1950), ಟಾಲ್‌ಸ್ಟಾಯ್‌ನ ಮನೋಭಾವವನ್ನೇ ತನ್ನ ಕಾದಂಬರಿಗಳಲ್ಲೂ ವ್ಯಕ್ತಪಡಿಸಿದ್ದಾನೆ. ಈತ ಸುಮಾರು ಹತ್ತು ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ವಿದೇಶಿ ಹಿನ್ನೆಲೆಗಳನ್ನು ಕಾಣಬಹುದು. ಎಡ್ಯುಯಾರ್ಡೊ ಬ್ಯಾರಿಯೋಸ್ (1884–1963), ಜೆನಾರೊ ಪ್ರಿಯೆಟೊ (1889–1946), ಮರಿಯಾನೊ ಲತೋರೆ (1886–1946) ಮೊದಲಾದವರೂ ಕಾದಂಬರಿಗಳನ್ನು ರಚಿಸಿದ್ದಾರೆ. ಮರಿಯಾನೊ ಲತೋರೆಯ ಕೃತಿಗಳಲ್ಲಿ ಚಿಲಿಯ ಪರ್ವತಗಳು ಮತ್ತು ಹಳ್ಳಿಗಾಡುಗಳ ಚಿತ್ರಣ ಸೊಗಸಾಗಿ ಮೂಡಿಬಂದಿದೆ. ಮ್ಯಾನ್ಯುಯೆಲ್ ರೋಜಸ್ (1896–) ಬಹುಮಟ್ಟಿಗೆ ನಗರಜೀವನವನ್ನು ಚಿತ್ರಿಸುತ್ತಾರೆ. ಈತನ ಹಿಜೊ ದ ಲಾದ್ರೊನ್ (1951) ಕಾದಂಬರಿ ತುಂಟರ ಸಾಹಸಕೃತ್ಯಗಳನ್ನು ಅತ್ಯಂತ ರಮ್ಯವಾಗಿ ಚಿತ್ರಿಸುತ್ತದೆ. (ಎಚ್.ಎಸ್.ಎಚ್.)

**ಚಿಲುಮೆ :** ಸಾಂದ್ರವಾಗಿ ಶೇಖರಗೊಂಡ ಭೂಗತ ನೀರು ನೆಲಮಟ್ಟವನ್ನು ತಲುಪಿದಾಗ ಇಲ್ಲವೇ ಬೇರೆ ಕಡೆ ಮಣ್ಣಿನ ಪದರದಿಂದ ಮುಕ್ತವಾದಾಗ ಹೊರಹೊಮ್ಮುವ ನೀರಿನ ಊಟೆ (ಸ್ಪ್ರಿಂಗ್). ಇಂಥ ಒಂದು ಚಿಲುಮೆಯಿಂದ ನೀರು ಸಾಮಾನ್ಯವಾಗಿ ವರ್ಷದ ಉದ್ದಕ್ಕೂ ಜಿನುಗುತ್ತಲೋ ಚಿಮ್ಮುತ್ತಲೋ ಸತತವಾಗಿ ಬರುತ್ತಿರುತ್ತದೆ. ಕೆಲವು ಚಿಲುಮೆಗಳು ಬೇಸಿಗೆಯಲ್ಲಿ ಬತ್ತಿ ಹೋಗುವುದೂ ಉಂಟು. ನೆಲದ ಮೇಲೆ ಬಿದ್ದ ಮಳೆಯ ನೀರಿನಲ್ಲಿ ಕೊಂಚ ಭಾಗ ಇಳಿಜಾರಿನಲ್ಲಿ ಹರಿದು ಹತ್ತಿರದ ತೊರೆಯನ್ನೋ ನದಿಯನ್ನೋ ಕೆರೆಯನ್ನೋ ಸೇರುತ್ತದೆ. ಇನ್ನುಳಿದ ಭಾಗ ಭೂಮಿಯಲ್ಲಿ ಇಮರಿ ಹೋಗುತ್ತದೆ. ಈ ನೀರು ತನಗೆ ಅಡ್ಡಬಂದ ವಿವಿಧ ಶಿಲೆಗಳ ಮೂಲಕ ಹಾದು ಕೆಳಮಟ್ಟಕ್ಕೆ ಜಿನುಗುತ್ತಿರುತ್ತದೆ. ನೀರಿನ ಜಿನುಗುವಿಕೆಯನ್ನು ಅನುಸರಿಸಿ ಶಿಲೆಗಳನ್ನು ವ್ಯಾಪ್ಯಶಿಲೆ ಮತ್ತು ಅವ್ಯಾಪ್ಯ ಶಿಲೆಗಳೆಂದು ಎರಡು ಮುಖ್ಯ ಗುಂಪಾಗಿ ವಿಂಗಡಿಸಬಹುದು. ವ್ಯಾಪ್ಯಶಿಲೆಗಳಲ್ಲಿ ನೀರೇ ಮೊದಲಾದ ದ್ರವಗಳು ಅಲ್ಲಿರುವ ಸೂಕ್ಷ್ಮರಂಧ್ರ, ಬಿರುಕು ಮತ್ತು ಸೀಳುಗಳ ಮೂಲಕ ಪ್ರವಹಿಸುತ್ತವೆ. ಮರಳುಶಿಲೆ, ಕಣಶಿಲೆ ಮುಂತಾದವು ಉತ್ತಮ ಬಗೆಯ ವ್ಯಾಪ್ಯಶಿಲೆಗಳು. ಅವ್ಯಾಪ್ಯಶಿಲೆಗಳಲ್ಲಿ ಅಷ್ಟಾಗಿ ರಂಧ್ರಗಳಾಗಲೀ ಸೀಳುಗಳಾಗಲೀ ಇರದೆ ದ್ರವ ಸುಲಭವಾಗಿ ಪ್ರವಹಿಸಲು ಸಾಧ್ಯವಾಗಲಾರದು. ಜೇಡುಶಿಲೆ, ಸುಣ್ಣಶಿಲೆ ಮುಂತಾದುವು ಈ ವರ್ಗಕ್ಕೆ ಸೇರಿದವು. ಹೀಗೆಯೇ ಶಿಲೆಗಳನ್ನು ಸರಂಧ್ರ ಶಿಲೆಗಳು ಮತ್ತು ಆರಂಧ್ರಶಿಲೆಗಳೆಂದೂ ವಿಂಗಡಿಸಲಾಗಿದೆ. ಸರಂಧ್ರಶಿಲೆಗಳಲ್ಲಿ ರಂಧ್ರಗಳೇ ಇಲ್ಲ. ಇದ್ದರೂ ಬಹು ಸೂಕ್ಷ್ಮ ಮತ್ತು ವಿರಳ. ಈ ಕಾರಣ ನೀರಾಗಲೀ ಇತರ ದ್ರವವಾಗಲೀ ಸುಲಭವಾಗಿ ಪ್ರವಹಿಸಲಾರದು. ಜೇಡು ಶಿಲೆ ಈ ವರ್ಗಕ್ಕೆ ಉತ್ತಮ ಉದಾಹರಣೆ. ಶಿಲೆ ವ್ಯಾಪ್ಯ ಮತ್ತು ಸರಂಧ್ರವಾಗಿದ್ದಲ್ಲಿ ನೀರಿನ ಪ್ರಸರಣ ಅತ್ಯಂತ ಉತ್ತಮ ರೀತಿಯಲ್ಲಿ ಆಗುತ್ತದೆ. ಒಳಗೆ ಇರುವ ನೀರಿನ ಜಿನುಗುವಿಕೆಯಲ್ಲಿ ಈ ಬಗೆಯ ಶಿಲೆಗಳು ಬಹು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಭೂರಚನೆಯಲ್ಲಿ ಮೇಲೆ ವಿವರಿಸಿರುವ ಎರಡು ಬಗೆಯ ಶಿಲೆಗಳ ಪರಸ್ಪರ ಸಂಬಂಧವನ್ನು ಅನುಸರಿಸಿ ಹಲವಾರು ಬಗೆಯ ಚಿಲುಮೆಗಳು ಉಂಟಾಗುತ್ತವೆ.

ಎಲ್ಲ ಚಿಲುಮೆಗಳಲ್ಲೂ ನೀರು ಒಂದೇ ಮೊತ್ತದಲ್ಲಿ ಚಿಮ್ಮುವುದಿಲ್ಲ. ಹಲವು ಚಿಲುಮೆಗಳಲ್ಲಿ ನಿಧಾನಗಾಗಿ ತೊಟ್ಟಿಕ್ಕುತ್ತಿದ್ದರೆ ಕೆಲವು ಚಿಲುಮೆಗಳಲ್ಲಿ ಧಾರಾಕಾರವಾಗಿ ಚಿಮ್ಮುತ್ತಿರುವುದು. ಹಲವಲ್ಲಂತೂ ಪ್ರತಿ ಮಿನಿಟಿಗೆ 450 ಗ್ಯಾಲನುಗಳಷ್ಟು ನೀರು ಚಿಮ್ಮುತ್ತದೆ. ಈ ದೃಷ್ಟಿಯಿಂದ ಫ್ರಾನ್ಸ್‌ದೇಶದ ಫಾಂಟೇನ್ ಡಿ ವಾಕ್ಲೂಸ್ ಎಂಬ ಚಿಲುಮೆ ಉತ್ತಮವಾದುದು. ಇಲ್ಲಿ ಪ್ರತಿಯೊಂದು ಮಿನಿಟಿಗೆ 4,000 ಸೆಕೆಂಡ್–ಅಡಿಗಳಿಗೂ ಹೆಚ್ಚಿನ ನೀರು ಚಿಮ್ಮುತ್ತಿರುತ್ತದೆ. (1 ಸೆಕೆಂಡ್–ಅಡಿ=7.48 ಗ್ಯಾಲನ್/ಸೆಕೆಂಡ್). ಆದರೆ ಅನೇಕ ದೊಡ್ಡ ಚಿಲುಮೆಗಳಲ್ಲಿ ಇಷ್ಟು ಹೆಚ್ಚಿನ ಮೊತ್ತದಲ್ಲಿ ಕಂಡುಬರುವುದಿಲ್ಲ. ಅವುಗಳಿಂದ ಸುಮಾರು 500 ಸೆಕೆಂಡ್–ಅಡಿಗಳಿಗೂ ಹೆಚ್ಚಿನ ನೀರು ಚಿಮ್ಮುತ್ತಿರುವುದು. ಚಿಲುಮೆಗಳಿಂದ ಹೊರಬರುವ ನೀರಿನ ಮೊತ್ತವನ್ನು ಅನುಸರಿಸಿ ಮೆಯಿನ್‌ಜರ್ ಎಂಬಾತ ಎಂಟು ಬಗೆಯ ಚಿಲುಮೆಗಳನ್ನು ಗುರುತಿಸಿದ್ದಾನೆ.

| ವರ್ಗ | ಚಿಮ್ಮುವಿಕೆ |
|---|---|
| 1 | 100ಸೆಕೆಂಡಿಗೆ– ಅಡಿ ಅಥವಾ ಅಧಿಕ |
| 2 | 10–100ಸೆಕೆಂಡ್–ಅಡಿ ಅಥವಾ ಅಧಿಕ |
| 3 | 1–10 ಅಥವಾ ಅಧಿಕ ಸೆಕೆಂಡ್–ಅಡಿ |
| 4 | ಪ್ರತಿ ಒಂದು ಮಿನಿಟಿಗೆ 100ಗ್ಯಾಲನ್–1 ಸೆಕೆಂಡ್–ಅಡಿ |
| 5 | ಪ್ರತಿ ಒಂದು ಮಿನಿಟಿಗೆ 10–100 ಗ್ಯಾಲನ್ |
| 6 | ಪ್ರತಿ ಒಂದು ಮಿನಿಟಿಗೆ 1–10 ಗ್ಯಾಲನ್ |
| 7 | ಪ್ರತಿ ಒಂದು ಮಿನಿಟಿಗೆ 1 ಪೈಂಟಿನಿಂದ 1 ಗ್ಯಾಲನ್ ಅಥವಾ ಪ್ರತಿದಿವಸ 4ರಿಂದ 40 ಬ್ಯಾರಲುಗಳು |
| 8 | ಪ್ರತಿ ಒಂದು ಮಿನಿಟಿಗೆ ಒಂದು ಪೈಂಟಿಗಿಂತಲೂ ಕಡಿಮೆ. |

ಚಿಲುಮೆಗಳು ಉಂಟಾಗುವಲ್ಲಿ ಒಂದು ಪ್ರದೇಶದ ಮಳೆಯ ವಾರ್ಷಿಕ ಪರಿಮಾಣ, ಶಿಲೆಗಳ ವ್ಯಾಪ್ಯ ಸ್ಥಿತಿ, ಭೂಮಿಯ ಮೇಲ್ಮೈ ಲಕ್ಷಣ ಮತ್ತು ಶಿಲಾರಚನೆ ಅಥವಾ ವಿನ್ಯಾಸ ಈ ಅಂಶಗಳು ಬಹು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವುಗಳ ಆಧಾರದ ಮೇಲೆ ಟಾಲ್‌ಮನ್ ಎಂಬಾತ ಚಿಲುಮೆಗಳನ್ನು ಆರು ಗುಂಪುಗಳನ್ನಾಗಿ ವರ್ಗೀಕರಿಸಿದ್ದಾನೆ : 1. ತೆಳುವಾದ ಶಿಲಾ ಹೊರಹೊದಿಕೆಗಳಲ್ಲಿನ ಚಿಲುಮೆಗಳು, 2. ಮಂದವಾದ ಶಿಲಾ ಹೊರ ಹೊದಿಕೆಗಳಲ್ಲಿನ ಚಿಲುಮೆಗಳು, 3 ವ್ಯಾಪ್ಯ ಮತ್ತು ಅವ್ಯಾಪ್ಯ ಶಿಲಾಪ್ರಸ್ತರಗಳಲ್ಲಿನ ಚಿಲುಮೆಗಳು, 4. ಶಿಲಾರಂಧ್ರಗಳಿಂದ ಚಿಮ್ಮುವ ಚಿಲುಮೆಗಳು, 5. ಲಾವಾ ಪ್ರವಾಹಗಳ ಬಿರುಕುಗಳಲ್ಲಿನ ಚಿಲುಮೆಗಳು. 6, ಶಿಲಾ ಸೀಳುಗಳಲ್ಲಿನ ಚಿಲುಮೆಗಳು,

ಮೊದಲನೆಯ ಗುಂಪಿನ ಚಿಲುಮೆಗಳನ್ನು ಗುರುತ್ವ ಚಿಲುಮೆಗಳೆನ್ನಬಹುದು. ಏಕೆಂದರೆ ಇವು ಉಂಟಾಗಲು ಭೂಗುರುತ್ವ ಬಹುಮಟ್ಟಿಗೆ ಕಾರಣ. ಇವುಗಳ ಮುಖ್ಯ ಶಿಲಾವಿನ್ಯಾಸವೆಂದರೆ ಅವ್ಯಾಪ್ಯ ಶಿಲೆಯ ಮೇಲೆ ವ್ಯಾಪ್ಯಶಿಲೆಯಿರುವುದು. ಜಲವಾಹಕಶಿಲೆ ಮಟ್ಟಸವಾಗಿರಬಹುದು ಅಥವಾ ಕೊಂಚಮಟ್ಟಿಗೆ ಮಾಲಿಕೊಂಡಿರಬಹುದು. ಶಿಲಾ ಪ್ರಸ್ತರಗಳು ಅಷ್ಟು ಮಂದವಾಗಿರುವುದಿಲ್ಲ. ಇವಿರುವ ಸ್ಥಳವನ್ನು ಅನುಸರಿಸಿ ಎತ್ತರದ ಚಿಲುಮೆ, ತಪ್ಪಲು ಚಿಲುಮೆ, ಬಂಡೆ ಚಿಲುಮೆ, ದಂಡೆ ಚಿಲುಮೆ ಈ ಮುಂತಾಗಿ ಹೆಸರಿಸಬಹುದು. ಸಾಮಾನ್ಯವಾಗಿ ಈ ವರ್ಗದಲ್ಲಿನ ಚಿಲುಮೆಗಳು ಚಿಕ್ಕವು.

ಎರಡನೆಯ ವರ್ಗದ ಚಿಲುಮೆಗಳು ನೆಲಮಟ್ಟವನ್ನು ಜಲಮಟ್ಟ ಛೇದಿಸುವ ಜಾಡಿನಲ್ಲಿ ಕಂಡುಬರುತ್ತವೆ. ಹೀಗಾಗಿ ಇವಕ್ಕೆ ಜಲಮಟ್ಟದ ಚಿಲುಮೆಗಳೆಂದೇ ಹೆಸರುಂಟು. ಇವು ಕಾಣಿಸಿಕೊಳ್ಳುವ ಜಲವಾಹಕ ಶಿಲಾಪ್ರಸ್ತರ ಸಾಕಷ್ಟು ಮಂದವಾಗಿಯೂ ಇರುವುದು. ಇವು ಸಾಮಾನ್ಯವಾಗಿ ಮೆಕ್ಕಲುಭೂಮಿ, ನದಿ ಮರಳು ನಿಕ್ಷೇಪಗಳು, ಹಿಮನದಿಗಳಿಂದಾದ ನಿಕ್ಷೇಪಗಳು, ಮರಳು ಶಿಲಾಪ್ರಸ್ತರಗಳಲ್ಲಿ ಕಂಡುಬರುತ್ತವೆ. ಈ ಗುಂಪಿನಲ್ಲಿ ಮುಖ್ಯವಾದವೆಂದರೆ ನದಿ ದಂಡೆಗಳಲ್ಲಿನ ಚಿಲುಮೆಗಳು, ಕಣಿವೆಚಿಲುಮೆಗಳು, ಬೆಟ್ಟದ ಇಳಿಜಾರಿನ ಚಿಲುಮೆಗಳು, ಕೊರಕಲು ಚಿಲುಮೆಗಳು ಮತ್ತು ಮೆಕ್ಕಲು ಚಿಲುಮೆಗಳು. ಇವು ಕೂಡ ಗಾತ್ರದಲ್ಲಿ ಅಷ್ಟು ದೊಡ್ಡವಲ್ಲ. ಇವುಗಳ ಗಾತ್ರವನ್ನು ಜಲವಾಹಕ ಪ್ರಸ್ತರದ ಮಂದ ಮತ್ತು ಜಲಮಟ್ಟದ ಇಳಿವೋರೆ ನಿರ್ಧರಿಸುತ್ತವೆ. ಮೂರನೆಯ ವರ್ಗದ ಚಿಲುಮೆಗಳು ಕಾಣಿಸುಕೊಳ್ಳುವ ಜಲವಾಹಕಶಿಲೆ ಪ್ರಸ್ತರೀ ರಚನೆಯನ್ನು ತೋರಿಸುತ್ತದೆ. ಅಲ್ಲದೆ ಈ ಬಗೆಯ ಪ್ರಸ್ತರ ಮತ್ತು ಅವ್ಯಾಪ್ಯ ಶಿಲಾಪ್ರಸ್ತರಗಳು ಒಂದರ ಮೇಲೊಂದು ಹರಡಿರುತ್ತವೆ. ಇವು ಮಟ್ಟಸವಾಗಿರಬಹುದು ಅಥವಾ ಮಾಲಿಕೊಂಡಿರಬಹುದು. ಹಲವು ಬಾರಿ ಮಡಿಕೆ ಬಿದ್ದಿರುವುದೂ ಉಂಟು ಅಥವಾ ಅವುಗಳ ಹರಿವಿನಲ್ಲಿ ಭಂಗವಾಗಿರುವುದೂ ಉಂಟು. ಜಲವಾಹಕಗಳು ಹೊರದೋರುವ ಸ್ಥಳಗಳಲ್ಲಿ ಈ ಗುಂಪಿನ ಚಿಲುಮೆಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ ಇವನ್ನು ಕಣಿವೆಗಳು, ಬೆಟ್ಟದ ಇಳಿಜಾರು ಅಥವಾ ತಪ್ಪಲುಗಳಲ್ಲಿ ನೋಡಬಹುದು. ಸಾಮಾನ್ಯವಾಗಿ ಇವು ಜಲವಾಹಕದ ಅಡಿಯಿಂದ ಉದ್ಭವವಾಗುತ್ತವೆ. ಅಂದರೆ ಜಲವಾಹಕ ಅವ್ಯಾಪ್ಯ ಶಿಲಾಪ್ರಸ್ತರವನ್ನು ಸೋಕುವ ಜಾಡಿನಲ್ಲಿ ಉಂಟಾಗುತ್ತವೆ. ಆದ್ದರಿಂದ ಇವನ್ನು ಸ್ಪರ್ಶ ಚಿಲುಮೆಗಳೆನ್ನಬಹುದು. ಇವು ತೋರಿಬರುವ ಶಿಲಾಪ್ರಸ್ತರಗಳು ಮಟ್ಟಸವಾಗಿರದೆ

ಮಡಿಕೆ ಬಿದ್ದಿರಬಹುದು. ಹೀಗೆ ಉಂಟಾದ ರಚನೆಗೆ ಅನುಗುಣವಾಗಿ ಇವನ್ನು ಬಾಗು ಚಿಲುಮೆ, ಕೆಳಮಡಿಕೆಯ ಚಿಲುಮೆ, ಮೇಲ್ಮಡಿಕೆಯ ಚಿಲುಮೆ, ಸಂಚಯನ ವಿಳಂಬ ಚಿಲುಮೆ ಎಂದು ಹೆಸರಿಸಲಾಗಿದೆ.

**ಏಕಪ್ರವಣ ಚಿಲುಮೆ (ಬಾಗು ಚಿಲುಮೆ) :** ಜಲವಾಹಕ ಎರಡು ಅವ್ಯಾಪ್ಯ ಶಿಲಾಪ್ರಸ್ತರಗಳ ನಡುವೆ ಇದ್ದು ಇಡೀ ಶಿಲಾಸಮೂಹ ಒಂದೇ ದಿಕ್ಕಿನಲ್ಲಿ ಮಾಲಿರುತ್ತದೆ. ಜಲವಾಹಕದ ಅಡಿಯಿಂದ ಓರೆಯಾಗಿರುವ ಕಡೆ ನೀರಿನ ಚಿಲುಮೆ ಕಾಣಿಸಿಕೊಳ್ಳುತ್ತದೆ. ಕೆಳಮಡಿಕೆ ಚಿಲುಮೆ ವ್ಯಾಪ್ಯ ಮತ್ತು ಅವ್ಯಾಪ್ಯ ಶಿಲಾಪ್ರಸ್ತರಗಳು ಒಂದರ ಮೇಲೊಂದಿದ್ದು ಬಾಣಲೆಯೋಪಾದಿಯಲ್ಲಿ ಮಡಿಕೆ ಬಿದ್ದಿರುತ್ತವೆ. ಹೀಗಾಗಿ ವ್ಯಾಪ್ಯ ಶಿಲಾಪ್ರಸ್ತರದ ಮೇಲ್ಭಾಗ ಮತ್ತು ಕೆಳಭಾಗಗಳಲ್ಲಿ ಅವ್ಯಾಪ್ಯಶಿಲಾಪ್ರಸ್ತರಗಳು ಹರಡಿದ್ದು ಶೇಖರವಾದ ನೀರು ಹರಿದು ಹೋಗಲು ಸಾಧ್ಯವಿಲ್ಲ. ಅಲ್ಲದೆ ನೀರಿನ ಶೇಖರಣೆ ಹೆಚ್ಚಿದಂತೆಲ್ಲ ಒತ್ತಡವೂ ಅಧಿಕವಾಗುತ್ತದೆ. ಈ ತೆರನಾದ ಸನ್ನಿವೇಶದಲ್ಲಿ ಭೂಸವೆತದಿಂದ ಮೇಲಿರುವ ವ್ಯಾಪ್ಯಶಿಲಾಪ್ರಸ್ತರ ಸಂಪೂರ್ಣವಾಗಿ ಸವೆದು ಕಣಿವೆಯೊಂದು ಉಂಟಾಗಬಹುದು. ಅಲ್ಲದೆ ಒಳಗೆ ಹುದುಗಿದ್ದ ಜಲವಾಹಕ ಕಣಿವೆಯ ತಳ ಮತ್ತು ಪಾರ್ಶ್ವಗಳಲ್ಲಿ ಹೊರದೋರಿ ಹೆಚ್ಚಿನ ಒತ್ತಡಕ್ಕೆ ಒಳಗಾಗಿದ್ದ ನೀರು ಚಿಲುಮೆಯಂತೆ ಹೊರಚಿಮ್ಮುತ್ತದೆ. ಶೇಖರಣೆ ಹೆಚ್ಚಾಗಿದ್ದು ಒತ್ತಡವೂ ಹೆಚ್ಚಾಗಿದ್ದಲ್ಲಿ ಚಿಮ್ಮುವಿಕೆ ಬಹು ರಭಸವಾಗಿರಬಹುದು. ಈ ಬಗೆಯ ಶಿಲಾರಚನೆ ಹೊರದೋರದೆ ಭೂಮಿಯ ಒಳಗೇ ಹುದುಗಿರುವುದೂ ಉಂಟು. ಅಂಥ ಪ್ರದೇಶಗಳಲ್ಲಿ ತೋಡಿದ ಬಾವಿ ಜಲವಾಹಕವನ್ನು ಮುಟ್ಟಿದೊಡನೆ ನೀರು ಒಂದೇ ಸಮನೆ ಉಕ್ಕಿಬರುತ್ತದೆ. ಬತ್ತಿಹೋಗುವುದು ಬಹು ಅಪರೂಪ. ಇವನ್ನು ಮೊತ್ತಮೊದಲು ಫ್ರಾನ್ಸಿನ ಆರ್ಟಾಯ್ ಪ್ರಾಂತ್ಯದಲ್ಲಿ ಕಂಡದ್ದರಿಂದ, ಈ ಬಗೆಯ ಚಿಲುಮೆಗಳಿಗೆ ಆರ್ಟೀಸಿಯನ್ ಚಿಲುಮೆ ಅಥವಾ ಬಾವಿ ಎಂಬ ಹೆಸರು ಬಂತು. ಕರ್ನಾಟಕದ ಕೊರಟಗೆರೆ, ಪಾವಗಡ, ಮಧುಗಿರಿ ವಲಯದಲ್ಲೂ ಪಾಂಡಿಚೆರಿಯ ಸುತ್ತಮುತ್ತಲೂ ಇವನ್ನು ಕಾಣಬಹುದು.

**ಮೇಲ್ಮಡಿಕೆ ಚಿಲುಮೆ :** ಚಿಲುಮೆ ಮಡಿಕೆಯ ತುದಿಯಲ್ಲಿ ಕಾಣಿಸಿಕೊಳ್ಳುತ್ತದೆ. ಇಲ್ಲಿ ವ್ಯಾಪ್ಯ ಮತ್ತು ಅವ್ಯಾಪ್ಯ ಶಿಲಾಪ್ರಸ್ತರಗಳು ಪರಸ್ಪರ ತಾಗಿಕೊಂಡಿರುತ್ತವೆ. ಅವ್ಯಾಪ್ಯ ಶಿಲಾ ಹೊದಿಕೆ ನಶಿಸಿಹೋದಲ್ಲಿ ಚಿಲುಮೆ ಉಂಟಾಗಲು ಅತ್ಯಂತ ಉತ್ತಮ ಸನ್ನಿವೇಶವುಂಟಾಗುತ್ತದೆ.

**ಸಂಚಯನ ವಿಳಂಬ ಚಿಲುಮೆ :** ಎರಡು ಅನನುರೂಪಶೀಲ (ಅನ್‌ಕನ್‌ಫಾರ್ಮಬಲ್) ಶಿಲಾರಚನೆಗಳು ಸಂಧಿಸುವ ಜಾಡಿನಲ್ಲಿ ಚಿಲುಮೆಗಳು ಕಾಣಿಸಿಕೊಳ್ಳುತ್ತವೆ. ಅಡಿಯ ಶಿಲೆ ಅವ್ಯಾಪ್ಯವಾಗಿಯೂ ಮೇಲಿನ ಶಿಲಾಪ್ರಸ್ತರ ಜಲವಾಹಕವಾಗಿಯೂ ಇರುವುದು ಈ ಬಗೆಯ ಚಿಲುಮೆಗಳ ರಚನಾ ವೈಶಿಷ್ಟ್ಯ. ನಾಲ್ಕನೆಯ ವರ್ಗದ ರಂಧ್ರಚಿಲುಮೆಗಳನ್ನು ಸುಣ್ಣಶಿಲಾಪ್ರದೇಶಗಳಲ್ಲಿ ನೋಡಬಹುದು. ಸುಣ್ಣಶಿಲೆ ನೀರಿನಲ್ಲಿ ಸುಲಭವಾಗಿ ಕರಗಿ ಹೋಗಿರುವುದರಿಂದ ಹೆಚ್ಚಿಗೆ ಕರಗಿರುವ ಕಡೆ ಗುಳಿಬಿದ್ದು ಅವುಗಳ ಮೂಲಕ ಶೇಖರವಾದ ನೀರು ಹೊರಕ್ಕೆ ಚಿಮ್ಮುತ್ತದೆ. ಹಲವು ಸಂಧರ್ಭಗಳಲ್ಲಿ ಅದು ಅಲ್ಲೇ ಶೇಖರವಾಗಿ ಸಣ್ಣ ಸರೋವರಗಳಾಗಿ ಮಾರ್ಪಡುವುದೂ ಉಂಟು. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಈ ತೆರನಾದ ಚಿಲುಮೆಗಳನ್ನು ಫ್ಲಾರಿಡ, ಜಾರ್ಜಿಯ ಮತ್ತು ಅಲಬಾಮ ಪ್ರಾಂತ್ಯಗಳಲ್ಲಿ ಕಾಣಬಹುದು.

ಜಲವಾಹಕಗಳ ಮೇಲೆ ಲಾವಾಸ್ತರಗಳಿದ್ದು ಅವುಗಳಲ್ಲಿನ ಸೀಳು, ಬಿರುಕು ಮತ್ತು ರಂಧ್ರಗಳ ಮೂಲಕ ಆಳದಲ್ಲಿರುವ ನೀರು ಹೊರಚಿಮ್ಮುತ್ತದೆ. ಇಂಥ ಚಿಲುಮೆಗಳು ಐದನೆಯ ಗುಂಪಿಗೆ ಸೇರುತ್ತವೆ. ಅಮೆರಿಕದ ಇಡಾಹೋ, ಓರೆಗಾನ್, ವಾಷಿಂಗ್ಟನ್ ಮತ್ತು ಕ್ಯಾಲಿಫೋರ್ನಿಯ ಪ್ರಾಂತ್ಯಗಳಲ್ಲಿನ ಟರ್ಷಿಯರಿ ಮತ್ತು ಕ್ವಾಟರ್ನರಿ ಲಾವಾಗಳಲ್ಲಿ ಕಂಡುಬರುವ ಚಿಲುಮೆಗಳು ಈ ದರ್ಜೆಯವು.

ಆರನೆಯ ಗುಂಪಿನ ಚಿಲುಮೆಗಳು ಶಿಲಾಸೀಳುಗಳ ಮೂಲಕ ಹೊರಬರುವ ಚಿಲುಮೆಗಳು. ಈ ವರ್ಗದಲ್ಲೂ ಎರಡು ವಿಧವಾದ ಚಿಲುಮೆಗಳನ್ನು ಗುರುತಿಸಬಹುದು: 1. ವ್ಯಾಪ್ಯಶಿಲೆಗಳನ್ನು ಛೇದಿಸುವ ಬಿರುಕುಗಳಲ್ಲೂ ಸೀಳುಗಳಲ್ಲೂ ತೋರಿಬರುವ ಚಿಲುಮೆಗಳು ;2. ಅವ್ಯಾಪ್ಯ ಶಿಲಾ ಹೊಂದಿಕೆಗಳಲ್ಲಿನ ಬಿರುಕು ಮತ್ತು ಸೀಳುಗಳಲ್ಲಿರುವ ಚಿಲುಮೆಗಳು. ಇವುಗಳಲ್ಲಿ ನೀರು ಅಡಿಯಲ್ಲಿರುವ ಜಲವಾಹಕದಿಂದ ಬರುತ್ತದೆ.

ಚಿಲುಮೆಗಳ ನೀರಿನ ಉಷ್ಣತೆ ಮತ್ತು ರಾಸಾಯನಿಕ ಸಂಯೋಜನೆಗೆ ಅನುಗುಣವಾಗಿ ಅವನ್ನು ಬಿಸಿನೀರಿನ ಚಿಲುಮೆಗಳು, ಖನಿಜ ಚಿಲುಮೆಗಳು ಎಂದು ವಿಂಗಡಿಸಬಹುದು. ಹಲವು ಬಿಸಿನೀರಿನ ಚಿಲುಮೆಗಳನ್ನು ಗೈಸರು (ನೋಡಿ) ಎಂದೂ ಕರೆಯುವುದುಂಟು. ಇವುಗಳಲ್ಲಿ ನೀರಿನ ಚಿಮ್ಮುವಿಕೆ ಸದಾ ಕಾಲದಲ್ಲೂ ತೋರಿಬರದೆ ಕೇವಲ ನಿಯತಕಾಲಗಳಲ್ಲಿ ಮಾತ್ರ ಕಂಡುಬರುತ್ತದೆ. ಅಮೆರಿಕದ ಯೆಲ್ಲೊ ಸ್ಟೋನ್ ನ್ಯಾಷನಲ್ ಪಾರ್ಕ್, ನ್ಯೂಜಿಲೆಂಡ್ ಮತ್ತು ಐಸ್‌ಲೆಂಡ್ ದೇಶಗಳ ಬಿಸಿನೀರಿನ ಚಿಲುಮೆಗಳು ಬಹು ಪ್ರಸಿದ್ಧವಾದವು. ಚಿಲುಮೆಗಳ ನೀರಿನಲ್ಲಿ ವಿವಿಧ ಖನಿಜಗಳಿದ್ದಲ್ಲಿ ಅದು ಉತ್ತಮ ವೈದ್ಯಕೀಯ ಗುಣಗಳನ್ನು ಪಡೆದಿರುತ್ತದೆ. ಚರ್ಮರೋಗಗಳಿಗಂತೂ ರಾಮಬಾಣ. ಬಿಹಾರ್ ಮತ್ತು ಹಿಮಾಲಯ ತಪ್ಪಲು ಪ್ರಾಂತಗಳಲ್ಲಿ ಈ ಬಗೆಯ ಹಲವಾರು ಚಿಲುಮೆಗಳಿವೆ. ಇವು ಉತ್ತಮ ವಿಹಾರ ಸ್ಥಳಗಳು ಹಾಗೂ ಆರೋಗ್ಯಧಾಮಗಳು ಕೂಡ. ಕೆಲವು ಖನಿಜಗಳ ನೀರು ವಿಕಿರಣಪಟುತ್ವವನ್ನು ಸಹ ಹೊಂದಿರುವುದುಂಟು. ಬಿಸಿನೀರಿನ ಚಿಲುಮೆಗಳ ದ್ವಾರದ ಸುತ್ತ ಟ್ರಾವರ್‌ಟೈನ್, ಸಿಕತದ ಸಿಂಟರ್, ಗಂಧಕ ಮುಂತಾದ ವಸ್ತುಗಳು ಶೇಖರವಾಗುತ್ತವೆ. ಖನಿಜಪೂರಿತ ಚಿಲುಮೆ ನೀರಿನ ದ್ರಾವಣಶಕ್ತಿ ಕುಗ್ಗಿ ಅದರಲ್ಲಿ ಸೇರಿದ್ದ ಖನಿಜಾಂಶಗಳು ನಿಕ್ಷೇಪಗಳಾಗಿ ಮಾರ್ಪಡುತ್ತವೆ.

**ಭಾರತದಲ್ಲಿನ ಚಿಲುಮೆಗಳು :** ಭಾರತದ ಭೂವಿಜ್ಞಾನ ಸಂಸ್ಥೆಯ ಮೊದಲನೆಯ ಪರಿಶೀಲನೆಯ ಪ್ರಕಾರ (1882) ದೇಶದ ವಿವಿಧ ಭಾಗಗಳಲ್ಲಿರುವ 300 ಚಿಲುಮೆಗಳ ಪಟ್ಟಿ ಪ್ರಕಟವಾಗಿದೆ. ಪುನಃ ಪರಿಶೀಲನಾನಂತರ 1918ರಲ್ಲಿ 43 ಹೊಸ ಚಿಲುಮೆಗಳನ್ನು ಈ ಪಟ್ಟಿಗೆ ಸೇರಿಸಲಾಯಿತು. 1939–41ರಲ್ಲಿ ಬಿಹಾರ್, ಮಹಾರಾಷ್ಟ್ರ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಪಂಜಾಬ್ ಮತ್ತು ಪಶ್ಚಿಮ ಬಂಗಾಳಗಳಲ್ಲಿರುವ ಚಿಲುಮೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಲಾಯಿತು. ಭಾರತದ ಚಿಲುಮೆಗಳು ನಾಲ್ಕು ಜಾಡುಗಳಲ್ಲಿ ಹರಡಿವೆ: 1. ಬಿಹಾರಿನ ರಾಜಗೃಹ ಮತ್ತು ಮಾಂಘೀರ್ ಜಾಡು ; ಮತ್ತು ಕಲ್ಲಿದ್ದಲು ಗಣಿ ಪ್ರದೇಶಗಳ ಅಂಚಿಗೆ ಸಮಾಂತರವಾಗಿರುವ ಜಾಡು; 2. ಪಶ್ಚಿಮ ಕರಾವಳಿಯ ರತ್ನಗಿರಿ, ಥಾನಾ, ಕೊಲಾಬ ಮತ್ತು ಸೂರತ್ ಜಿಲ್ಲೆಗಳನ್ನೊಳಗೊಂಡ ಜಾಡು; 3 ಸಿಂಧ್, ಬಲೂಚಿಸ್ತಾನ ಪ್ರದೇಶ (ಈಗಿನ ಪಾಕಿಸ್ತಾನ); 4 ಹಿಮಾಲಯ ಪ್ರದೇಶ. ಈ ಮುಖ್ಯ ಜಾಡುಗಳಲ್ಲದೆ ಒರಿಸ್ಸದ ಮಹಾನದಿ ಕಣಿವೆ, ಪಶ್ಚಿಮ ಬಂಗಾಳದ ಬೀರ್‌ಭೂಮ್ ಮತ್ತು ಡಾರ್ಜಿಲಿಂಗ್ ಜಿಲ್ಲೆ, ಅಸ್ಸಾಮ್, ಸಿಕ್ಕಿಂ ಮತ್ತು ದಕ್ಷಿಣ ಭಾರತದ ಹಲವಾರು ಪ್ರದೇಶಗಳಲ್ಲೂ ಚಿಲುಮೆಗಳು ಅಲ್ಲಲ್ಲಿ ಚದರಿದಂತೆ ಹರಡಿವೆ. ಇವುಗಳಲ್ಲಿ ಹಲವು ಪ್ರಪಂಚದ ಹೆಸರಾಂತ ಖನಿಜ ಚಿಲುಮೆಗಳಿಗೆ ಸಾಟಿಯಾಗುವಂಥವು. ಬಿಹಾರಿನ ಹಜಾರಿಬಾಗ್ ಜಿಲ್ಲೆಯಲ್ಲಿರುವ ಪಟಾಲ್‌ಸೂರ್ ಮತ್ತು ಪರಾಶ್‌ನಾಥ್ ಚಿಲುಮೆಗಳು ಪ್ರಪಂಚದಲ್ಲಿ ಬಹು ಪ್ರಸಿದ್ಧವಾದ ಫ್ರಾನ್ಸಿನ ಇವಯಾನ್ ಚಿಲುಮೆಗಳಿಗೆ ಸಮವಾಗಿವೆ. (ಬಿ.ವಿ.ಜಿ.)

**ಕೃತಕ ಚಿಲುಮೆ :** ಒತ್ತಡದ ನೀರನ್ನು ಚಿಕ್ಕ ರಂಧ್ರಗಳ ಮೂಲಕ ಮೇಲ್ಮುಖವಾಗಿ ಹೊರಹೊಮ್ಮಿಸುವಾಗ ಕೃತಕ ಚಿಲುಮೆ ಉಂಟಾಗುತ್ತದೆ. ನಗರಗಳ ಉದ್ಯಾನವನಗಳಲ್ಲಿ ಕೃತಕ ಚಿಲುಮೆಗಳು ಸಾಧಾರಣ ದೃಶ್ಯಗಳು. ರಾತ್ರಿವೇಳೆ ವರ್ಣವಿದ್ಯುದ್ದೀಪಗಳಿಂದ ಇವನ್ನು ಅಲಂಕರಿಸಿ ಮನರಂಜನೆಯನ್ನು ಪಡೆಯುವುದು ಕೂಡ ವಾಡಿಕೆಯಲ್ಲಿದೆ.

(ಜಿ.ಟಿ.ಜಿ.)

ಚಿಲ್ಕರಿವೆ ಗಿಡದ ಬೀಜಗಳು ದೇಹದಲ್ಲಿನ ಕ್ಯಾಲ್ಸಿಯಂ ಉಳಿಕೆಯನ್ನು ತಡೆಗಟ್ಟಬಕ್ಕದು ಎಂದು ಸಂಶೋಧನೆಗಳು ಸಿದ್ಧಪಡಿಸಿವೆ. ಕೆಲವು ಅಧ್ಯಯನಗಳು ಇದರಲ್ಲಿ ಅಧಿತ ಪ್ರಮಾಣದ "ಆಂಟಿಆಕ್ಸಿಡೆಂಟ್ಸ್ 'ಗಳು ಇದೆ ಎಂದು ವರದಿ ಮಾಡಿದೆ. ಚಿಲ್ಕರಿವೆ ಸಸ್ಯವು ವಾತ,ಪಿತ್ತ, ಮಲ ಬದ್ಧತೆ, ರಕ್ತ ಹೀನತೆ, ಮಾತ್ರ ಸಂಬಂಧಿ ತೊಂದರೆ, ದೃಷ್ಟಿ ಕುಂದುವಿಕೆ, ಸಾಮಾನ್ಯ ನಿಶ್ಯಕ್ತಿ ಮುಂತಾದ ತೊಂರೆಗಳನ್ನು ಶನಬ ನಾಡುವ ಶಕ್ತಿ ಹೂಂದಿದೆ. ಚಿಲ್ಕರಿವೆ ಸಸ್ಯವನ್ನು ತಯಾರಾಗಿಯೂ ಉಪಯೋಗಿಸುತ್ತಾರೆ.

**ಚಿಲ್ಕರಿವೆ ಸೊಪ್ಪು :** ಅಮರ್‍ಯಾಂತೇಸೀ ಕುಟುಂಬಕ್ಕೆ ಸೇರಿದ ಒಂದು ಜನಪ್ರಿಯ ಸೊಪ್ಪು ತರಕಾರಿ. ದಂಟು ಪರ್ಯಾಯನಾಮ. ಅಮರ್‍ಯಾಂತಸ್ ಗ್ಯಾಂಜಟಿಕಸ್ ಶಾಸ್ತ್ರೀಯ ನಾಮ. ಉಷ್ಣಪ್ರದೇಶಗಳ ಮೂಲದ್ದು. ಇದರ ಕೃಷಿ ಭಾರತಾದ್ಯಂತ ಉಂಟು. ಇದರಲ್ಲಿ ಲ್ಯಾನ್ಸಿಯೋಲೇಟಸ್, ಲಿವಿಡಸ್, ಪಾಲಿಗ್ಯಾಮಸ್ ಮತ್ತು ಟ್ರಿಸ್ಟಸ್ ಎಂಬ ನಾಲ್ಕು ಬಗೆಗಳಿವೆ. ಇದು ಏಕವಾರ್ಷಿಕ ಪೊದೆಸಸ್ಯ. ಇದರ ಕಾಂಡದ ಬಣ್ಣ ಹಸಿರು ಅಥವಾ ಕಡುಗೆಂಪು. ಎಲೆಗಳು ದಟ್ಟ ಹಸಿರು ಬಣ್ಣದವು. ಕೆಲವು ಸಲ ಊದಾಬಣ್ಣದ ಛಾಯೆಯಿರುವುದುಂಟು. ಹೂಗಳು ರೆಂಬೆಗಳ ತುದಿಯಲ್ಲಿ ರೇಸೀಮ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಬೀಜಗಳು ರಾಗಿಕಾಳಿಗಿಂತ ಚಿಕ್ಕ ಗಾತ್ರದವು. ಅವುಗಳ ಬಣ್ಣ ಹೊಳೆಯುವ ಕಪ್ಪು.

ಚಿಲ್ಕರಿವೆ ಸೊಪ್ಪನ್ನು ನೀರು ನಿಲ್ಲದಂಥ ಎಲ್ಲ ತರದ ಮಣ್ಣಿನಲ್ಲಿ ಬೆಳೆಸಬಹುದು. ಭೂಮಿಯನ್ನು 3–4 ಸಾರಿ ಚೆನ್ನಾಗಿ ಉತ್ತು ಹೆಂಟೆ ಒಡೆದು ಪುಡಿ ಮಾಡಿ ಕಸಕಡ್ಡಿ ಆರಿಸಿ ಮಟ್ಟಮಾಡಬೇಕು. ಅಗತೆ ಮಾಡುವುದಾದರೆ 6" ಆಳಕ್ಕೆ ಅಗೆದು ಹದ ಮಾಡಬೇಕು. ಒಂದು ಎಕರೆಗೆ 20–25 ಗಾಡಿ ಕೊಳೆತು ಪುಡಿಯಾಗಿರುವ ಕೊಟ್ಟಿಗೆ ಗೊಬ್ಬರ ಹಾಕಿ ಅನುಕೂಲಕ್ಕೆ ತಕ್ಕಂತೆ ಪಾತಿಗಳನ್ನು ಮತ್ತು ನೀರು ಕಾಲುವೆಗಳನ್ನು ಮಾಡಬೇಕು.

ಒಂದು ಹೆಕ್ಟೇರಿಗೆ 1.5–2.4 ಕೆ.ಜಿ. ಬೀಜ ಬೇಕಾಗುವುದು. ಬೀಜ ಚಿಕ್ಕದಾದ್ದರಿಂದ ಆದಷ್ಟು ಭೂಮಿಯ ಮೇಲ್ಭಾಗದಲ್ಲಿರುವಂತೆ ಬಿತ್ತಬೇಕು. ಬೀಜದಷ್ಟೇ ಚಿಕ್ಕಗಾತ್ರದ ಮರಳನ್ನು ಸೇರಿಸಿ ಬಿತ್ತುವುದು ಒಳ್ಳೆಯದು. ಬಿತ್ತನೆ ಸಮಯದಲ್ಲಿ ಸಾಕಷ್ಟು ತೇವಾಂಶವಿರಬೇಕು. ಬಿತ್ತನೆ ಅನಂತರ ಲಘುವಾಗಿ ನೀರು ಹಾಕಬೇಕು. ಬೇಸಿಗೆಯಲ್ಲಿ 4 ದಿವಸಗಳಿಗೊಮ್ಮೆ

ನೀರು ಹಾಕುತ್ತಿದ್ದು, ಮಧ್ಯ ಮಧ್ಯ 3–4 ಬಾರಿ ಕಳೆ ಕೀಳಬೇಕು. ಬಿತ್ತನೆಮಾಡಿದ 4–5 ವಾರಗಳಲ್ಲಿ ಸೊಪ್ಪು ಕೊಯ್ಲಿಗೆ ಬರುತ್ತದೆ. ಸೊಪ್ಪನ್ನು ಯಾವಾಗಲೂ ಸಾಯಂಕಾಲ ಕೊಯ್ಯಬೇಕು. ಒಂದು ಹೆಕ್ಟೇರಿನಿಂದ 90–100 ಕ್ವಿಂಟಾಲ್ ಸೊಪ್ಪನ್ನೂ 1.8–2.8 ಕ್ವಿಂಟಾಲ್ ಬೀಜವನ್ನೂ ಪಡೆಯಬಹುದು.

ಚಿಲ್ಕರಿವೆ ಸೊಪ್ಪನ್ನು ಕೊಯ್ಲಿಗೆ ಅನುಗುಣವಾಗಿ ಬಿತ್ತನೆಮಾಡಿ, ಎಲ್ಲ ಕಾಲದಲ್ಲಿಯೂ ಬೆಳೆಸಿ ನಿತ್ಯ ವ್ಯಾಪಾರಕ್ಕೆ ಕೊಯ್ಲು ಮಾಡಬಹುದು. ಮನೆ ತೋಟಗಳಲ್ಲಿ ನಿತ್ಯ ಪಲ್ಯಕ್ಕೆ, ಸೊಪ್ಪು ಸಾರಿಗೆ ಸಿಗುವಂತೆ ಬೆಳೆಸಿಕೊಳ್ಳಬಹುದು. ಇದು ರಕ್ತ ಶುದ್ಧಿಗೆ ಮತ್ತು ವೃದ್ಧಿಗೆ ಒಳ್ಳೆಯದು. ಇದರಲ್ಲಿ ಎ, ಬಿ ಮತ್ತು ಸಿ ವಿಟಮಿನ್ನುಗಳೂ ಕಬ್ಬಿಣ, ರಂಜಕ, ಸುಣ್ಣ ಮತ್ತು ಪ್ರೋಟೀನುಗಳೂ ಹೆಚ್ಚು ಪ್ರಮಾಣದಲ್ಲಿವೆ. (ಎಂ.ಎಚ್.ಎಂ.)

**ಚಿಲ್ಕಾ ಸರೋವರ :** ಭಾರತದ ಒರಿಸ್ಸ ರಾಜ್ಯದಲ್ಲಿರುವ ಒಂದು ಸರೋವರ. ಭಾರತದಲ್ಲಿ ಅತ್ಯಂತ ದೊಡ್ಡದು. ಉ.ಅ. 19$_{0}$ 28'–19$_{0}$ 56' ಮತ್ತು ಪೂ.ರೇ. 85$_{0}$ 6'–85$^{0}$ 86' ನಡುವೆ ಇರುವ ಈ ಸರೋವರದ ಬಹುಭಾಗ ಇರುವುದು ಪುರಿ ಜಿಲ್ಲೆಯ ದಕ್ಷಿಣದಲ್ಲಿ. ಸ್ವಲ್ಪಭಾಗ ಗಂಜಾಂ ಜಿಲ್ಲೆಯಲ್ಲಿದೆ. ಹಿಂದೆ ಇದು ಬಂಗಾಲ ಕೊಲ್ಲಿಯ ಅಳಿವೆಯಾಗಿತ್ತು. ಈಗ ಮರಳು ದಿಬ್ಬಗಳಿಂದ ಬೇರ್ಪಟ್ಟಿದೆ. 64–72 ಕಿಮೀ ಉದ್ದವಾಗಿಯೂ ಸರಾಸರಿ 8 ಕಿಮೀ ಅಗಲವಾಗಿಯೂ ಸಾಮಾನ್ಯವಾಗಿ 1 ರಿಂದ 2 ಮೀ ಆಳವಾಗಿಯೂ ಇದೆ. ಈ ಸರೋವರಕ್ಕೆ ನೀರು ಸುತ್ತಮುತ್ತಲ ಬೆಟ್ಟದ ಸಾಲುಗಳಿಂದ, ಮಹಾನದಿ ಭಾರ್ಗವೀ, ದಯಾ ಅಥವಾ ದೇವಿ ನದಿಗಳಿಂದ ಬರುತ್ತದೆ. ಡಿಸೆಂಬರ್‌ನಿಂದ ಜೂನ್‌ವರೆಗೆ ನೆರೆಯ ಸಮುದ್ರದಿಂದಾಗಿ ಅದರ ನೀರು ಉಪ್ಪಾಗಿರುತ್ತದೆ. ಮಳೆಗಾಲದಲ್ಲಿ ಹರಿದು ಬಂದ ಹೊಸ ನೀರಿನಿಂದಾಗಿ ಅದರ ನೀರು ಸಿಹಿಯಾಗಿರುತ್ತದೆ. ತೀರದ ಉದ್ದಕ್ಕೂ ಉಪ್ಪಿನ ಪಾತಿಗಳುಂಟು. ಆಕಾರದಲ್ಲಿ ಪೇರ್ ಹಣ್ಣನ್ನು ಹೋಲುವ ಈ ಸರೋವರದಲ್ಲಿ ಹಲವಾರು ಸಣ್ಣ ದ್ವೀಪಗಳಿವೆ. ಪಶ್ಚಿಮ ಮತ್ತು ದಕ್ಷಿಣದಲ್ಲಿ ಬೆಟ್ಟದ ಸಾಲುಗಳಿಂದ ಕೂಡಿ ನಿಸರ್ಗ ರಮಣೀಯವಾದ ಸರೋವರವಿದು. ಚಿಲ್ಕಾ ಸರೋವರದಲ್ಲಿ ಮುಲ್ಲೆಟ್, ಪ್ರಾನ್ಫ್ರೆಟ್ ಮತ್ತು ಪ್ರಾನ್ ಮೀನುಗಳೂ ಮೊಸಳೆಗಳೂ ಇವೆ. ಬಾತುಕೋಳಿಯ ಬೇಟೆಗೆ ಮತ್ತು ಮೀನು ಹಿಡಿಯುವುದಕ್ಕೆ ಸೂಕ್ತವಾದ ಸನ್ನಿವೇಶ ಇಲ್ಲಿಯದು. ಸರೋವರ ಸಂದರ್ಶನಕ್ಕೆ ಅನುಕೂಲವಾದ ತಿಂಗಳುಗಳು ಅಕ್ಟೋಬರ್ ಮತ್ತು ಏಪ್ರಿಲ್. (ಎಸ್.ಎನ್.ಎಲ್.)

**ಚಿಲ್ಲರೆ ವ್ಯಾಪಾರಿ :** ಅಂತಿಮ ಅನುಭೋಗಿಗಳಿಗೆ, ಎಂದರೆ ಸ್ವಂತ ಉಪಯೋಗಕ್ಕಾಗಿ ಅಥವಾ ಮನೆಯಲ್ಲಿ ಬಳಸುವುದಕ್ಕಾಗಿ ಕೊಳ್ಳುವವರಿಗೆ, ಸರಕನ್ನು ನೇರವಾಗಿ ವಿಕ್ರಯಿಸುವ ವರ್ತಕ (ರೀಟೇಲರ್). ಈ ವ್ಯವಹಾರಕ್ಕೆ ಚಿಲ್ಲರೆ ವ್ಯಾಪಾರ (ರೀಟೆಲಿಂಗ್) ಎಂದು ಹೆಸರು. ಸರಕಿನ ವಿಕ್ರಯವೇ ಅಲ್ಲದೆ ಅದನ್ನು ಬಳಸುವಂತಾಗಲು ಅವಶ್ಯವಾದ ಬಗೆಯ ಸೇವೆಗಳ ವಿಕ್ರಯವೂ ಇದರಲ್ಲಿ ಸೇರಿದೆ. ಆದರೆ ಸೇವೆಗಳನ್ನೇ ವಿಕ್ರಯಿಸುವ ವ್ಯವಹಾರವನ್ನು ಚಿಲ್ಲರೆ ವ್ಯಾಪಾರ ಎನ್ನುವುದಿಲ್ಲ. ಚಿಲ್ಲರೆ ವ್ಯಾಪಾರಿ ವಾಣಿಜ್ಯ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗಿನ ಹಂತದಲ್ಲಿರುವ ವ್ಯಾಪಾರಿ. ಅನುಭೋಗಿಗಳೊಂದಿಗೆ ಈತ ನೇರ ಸಂಪರ್ಕ ಹೊಂದಿರುತ್ತಾನೆ. ಈತ ತನ್ನ ಸ್ವಂತ ಬಂಡವಾಳದಿಂದ ಸಗಟು ವ್ಯಾಪಾರಿಯಿಂದ ಸರಕನ್ನು ಕೊಂಡು ಅನುಭೋಗಿಗಳಿಗೆ ಬಿಕರಿ ಮಾಡುತ್ತಾನೆ. ಚಿಲ್ಲರೆ ವ್ಯಾಪಾರಿ ಒಂದು ಸ್ಥಳದಲ್ಲಿ, ಅಂಗಡಿಯಲ್ಲಿ ಸರಕನ್ನು ದಾಸ್ತಾನಿಟ್ಟು ಬಿಕರಿ ಮಾಡುವುದು ಸಾಮಾನ್ಯ. ಆದರೆ ಸರಕನ್ನು ತಲೆಯ ಮೇಲೆ ಹೊತ್ತೋ, ಗಾಡಿಯಲ್ಲಿಟ್ಟೋ ಬೀದಿಯಲ್ಲಿ ಸಾಗಿ, ಮನೆಯಿಂದ ಮನೆಗೆ ಹೋಗಿ ವ್ಯಾಪಾರ ಮಾಡುವವರೂ ಉಂಟು. ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲಿ ಪ್ರಮುಖ ಸ್ಥಳಗಳಲ್ಲಿ ಅನುಭೋಗಿಗಳಿಗೆ ಬೇಕಾದ ಸರಕನ್ನು ವಿಕ್ರಯಿಸುವ ಸ್ವಯಂಚಾಲಿತ ಯಂತ್ರಗಳನ್ನು ಸ್ಥಾಪಿಸಿರುವುದುಂಟು. ನಿಗದಿಯಾದ ನಾಣ್ಯವನ್ನು ಯಂತ್ರದ ಸೀಳುಗಂಡಿಯಲ್ಲಿ ಹಾಕಿ ಗುಂಡಿ ಒತ್ತಿದರೆ ಸರಕು ಹೊರಬರುತ್ತದೆ.

**ಪ್ರಾಮುಖ್ಯ :** ಒಂದು ದೇಶದ ಚಿಲ್ಲರೆ ವ್ಯಾಪಾರದ ವ್ಯಾಪಕತೆ ದೇಶದ ರಾಷ್ಟ್ರೀಯ ವರಮಾನವನ್ನು ಅವಲಂಬಿಸಿರುತ್ತದೆ. ಹೆಚ್ಚು ಮುಂದುವರೆದ ದೇಶಗಳಲ್ಲಿ ಚಿಲ್ಲರೆ ವ್ಯಾಪಾರಕ್ಕೆ ಹೆಚ್ಚು ಪ್ರಾಮುಖ್ಯವುಂಟು. ಅದು ಹೆಚ್ಚು ಜನರಿಗೆ ಉದ್ಯೋಗ ನೀಡುತ್ತದೆಯಲ್ಲದೆ ಕೈಗಾರಿಕೆಯ ಬೆಳವಣಿಗೆಗೆ ಉತ್ತೇಜಕವಾಗಿರುತ್ತದೆ. ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲಿ ಚಿಲ್ಲರೆ ವ್ಯಾಪಾರ ವಹಿಸುವ ಪಾತ್ರ ಪ್ರಧಾನವಾದ್ದು. ಜನರ ಅನೇಕ ಬೇಡಿಕೆಗಳನ್ನು ಪೂರೈಸುವ ನೇರ ಮಾಧ್ಯಮ ಅದು. ಚಿಲ್ಲರೆ ವ್ಯಾಪಾರ ವ್ಯವಸ್ಥೆ ಎಷ್ಟು ಸಮರ್ಪಕವಾಗಿರುತ್ತದೆಯೋ ಅಷ್ಟರ ಮಟ್ಟಿಗೆ ಅನುಭೋಗಿಗಳಿಗೆ ಒಳ್ಳೆಯ ಗುಣಮಟ್ಟಗಳ, ವೈವಿಧ್ಯಪೂರ್ಣವಾದ ಸರಕುಗಳು ನ್ಯಾಯವಾದ ಬೆಲೆಗಳಲ್ಲಿ ದೊರಕುತ್ತವೆ. ಮಧ್ಯಮವರ್ಗದ ಬೆಳವಣಿಗೆಗೆ ಅದು ಸಾಧಕವಾಗುತ್ತದೆ.

**ಇತಿಹಾಸ :** ಚಿಲ್ಲರೆ ವ್ಯಾಪಾರ ಅತ್ಯಂತ ವ್ಯಾಪಕವಾದ ಮತ್ತು ಬಹುಶಃ ಅತ್ಯಂತ ಪ್ರಾಚೀನವಾದ ವ್ಯಾಪಾರ. ಇತಿಹಾಸದ ದಾಖಲೆ ಇರುವ ಎಲ್ಲ ನಾಗರಿಕತೆಗಳಲ್ಲೂ ಇದು ಒಂದಿಲ್ಲೊಂದು ರೂಪದಲ್ಲಿ ಜಾರಿಯಲ್ಲಿತ್ತು. ಇತಿಹಾಸಪೂರ್ವ ಕಾಲದಲ್ಲೂ ಇದು ಪ್ರಮುಖವಾಗಿದ್ದಿರಬೇಕು. ಆ ಕಾಲದ ಉಪಕರಣಗಳು, ವಸ್ತ್ರಗಳು, ಆಭರಣಗಳು ಮುಂತಾದವುಗಳಿಗೆ ಬಳಸಲಾಗಿರುವ ಕಚ್ಚಾ ಸಾಮಗ್ರಿಗಳು ಕೆಲವು ಸೀಮಿತ ಪ್ರದೇಶಗಳಲ್ಲಿ ಮಾತ್ರ ದೊರಕುತ್ತಿದ್ದುವು. ಆದರೆ ಆ ಸಾಮಗ್ರಿಗಳಿಂದ ಮಾಡಿದ ಉಪಕರಣಗಳೂ ಅಸ್ತ್ರಗಳೂ ಆಭರಣಗಳೂ ಇಡೀ ಖಂಡಗಳಲ್ಲೆಲ್ಲ ಕಾಣಸಿಕ್ಕಿವೆ. ಎಂದರೆ ಒಂದು ಜನಾಂಗ ಇನ್ನೊಂದನ್ನು ಲೂಟಿಮಾಡಿಯೋ, ಯುದ್ಧದಲ್ಲಿ ಸೋಲಿಸಿಯೋ ಶಾಂತಿಯುತ ವಿನಿಮಯ ಅಥವಾ ವ್ಯಾಪಾರದಿಂದಲೋ ಅವನ್ನು ಪಡೆದಿರಬೇಕು. ವ್ಯಾಪಾರ ಅಥವಾ ವಿನಿಮಯವೇ ಇವುಗಳ ಹರಡುವಿಕೆಗೆ ಮುಖ್ಯ ಕಾರಣಗಳಿದ್ದಿರಬೇಕು.

ಪ್ರಶ.ಪೂ. 2000ದ ವೇಳೆಗೆ ಚಿಲ್ಲರೆ ವ್ಯಾಪಾರ ಖಚಿತವಾಗಿ ಬೆಳೆದಿತ್ತು. ನಗರಗಳಲ್ಲಿ ಅಂಗಡಿಗಳಿದ್ದುವು. ಸಂಚಾರಿ ವ್ಯಾಪಾರಿಗಳು ಸ್ಥಳದಿಂದ ಸ್ಥಳಕ್ಕೆ ಹೋಗಿ ವ್ಯಾಪಾರ ಮಾಡುತ್ತಿದ್ದರು. ಚಿಲ್ಲರೆ ವ್ಯಾಪಾರ ವ್ಯವಸ್ಥೆಯ ಹಿಂದೆ ಸಗಟು ವ್ಯಾಪಾರವೂ ಆಯಾತ–ನಿರ್ಯಾತ ವ್ಯಾಪಾರವೂ ಇದ್ದಿರಬೇಕು. ಆದರೂ ಕೃಷಿ, ರಾಜಕಾರಣ, ಯುದ್ಧವೃತ್ತಿಗಳಿಗಿಂತ ವ್ಯಾಪಾರವೃತ್ತಿ ಕೀಳೆಂಬ ಭಾವನೆಯಿತ್ತು. ಗ್ರೀಕರ ಯುದ್ಧದೇವತೆ ಹರ್ಮಿಸ್ ಕಳ್ಳರ, ದರೋಡೆಕೋರರ ದೇವತೆ ಕೂಡ. ಗ್ರೀಕ್ ನಗರ ರಾಜ್ಯಗಳ ಮತ್ತು ರೋಮನ್ ಚಕ್ರಾಧಿಪತ್ಯದ ಉಚ್ಛ್ರಾಯ ಕಾಲದಲ್ಲಿ ಚಿಲ್ಲರೆ ವ್ಯಾಪಾರ ಬೆಳೆಯಿತು. ಅಂಗಡಿಯಲ್ಲಿ ಸರಕುಗಳ ಪ್ರದರ್ಶನ, ಕಲೆ, ಅಂಗಡಿ ಅಲಂಕರಣ, ಅನುಭೋಗಿಯ ಆಸಕ್ತಿಗೆ ಪ್ರಾಧಾನ್ಯ–ಇವು ಗಮನಾರ್ಹ ಬೆಳವಣಿಗೆಗಳು. ರೋಮಿನ ಅಂಗಡಿಗಳು ಆ ಕಾಲದ ನಾಗರಿಕ ಜಗತ್ತಿನ ಫ್ಯಾಷನ್ನಿನ ಕೇಂದ್ರಗಳಾಗಿದ್ದುವು. ಅಂಚೆ ಆದೇಶ, ಸರಪಣಿ ಅಂಗಡಿ, ಇಲಾಖಾ ಮಳಿಗೆ, ವಿಶಿಷ್ಟ ಸರಕಿನ ಅಂಗಡಿ ಮುಂತಾದ ಆಧುನಿಕ ಚಿಲ್ಲರೆ ವ್ಯಾಪಾರದ ಬಗೆಗಳು ಆಗಿನ ರೋಮಿನಲ್ಲಿ ಉಗಮ ಹೊಂದಿದುವು. ಪ್ರಾಚೀನಭಾರತದಲ್ಲೂ ಚಿಲ್ಲರೆ ವ್ಯಾಪಾರ ಪ್ರವರ್ಧಮಾನವಾಗಿತ್ತು.

ರೋಮ್ ಚಕ್ರಾಧಿಪತ್ಯದ ಅವನತಿಯ ಅನಂತರ ಸ್ವಲ್ಪ ಕಾಲ ಯುರೋಪಿನಲ್ಲಿ ಚಿಲ್ಲರೆ ವ್ಯಾಪಾರ ಕ್ಷೀಣಿಸಿತು. 500–900ರ ಅವಧಿಯಲ್ಲಿ ಜಾತ್ರೆಗಳಲ್ಲೂ ಪರಿಷೆಗಳಲ್ಲೂ ವ್ಯಾಪಾರ ಹೆಚ್ಚಾಗಿ ನಡೆಯುತ್ತಿತ್ತು. ವ್ಯಾಪಾರಗಳಿಗೆ ರಕ್ಷಣೆ ಇರಲಿಲ್ಲ. ವ್ಯಾಪಾರಿಗಳನೇಕರು ಊರಿಂದೂರಿಗೆ ಅಲೆಯುತ್ತ ವ್ಯಾಪಾರ ನಡೆಸುತ್ತಿದ್ದರು. ಭಾರತದಲ್ಲೂ ವಿದೇಶೀ ಆಕ್ರಮಣವಾದಾಗಲೆಲ್ಲ, ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿದಾಗಲೆಲ್ಲ ಅಂಗಡಿಗಳ ವ್ಯಾಪಾರ ಕ್ಷೀಣಿಸುತ್ತಿತ್ತು. ಹದಿನೆಂಟನೆಯ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಸಣ್ಣ ಚಿಲ್ಲರೆ ಅಂಗಡಿಯ ಬೆಳವಣಿಗೆ ಪರಮಾವಧಿ ಮುಟ್ಟಿತು. ವಿಶಿಷ್ಟ ಸರಕುಗಳನ್ನು ವಿಕ್ರಯಿಸುವ ಅಂಗಡಿಗಳು ಹೆಚ್ಚಿದುವು. ಹಣ್ಣು, ತರಕಾರಿ, ಮಾಂಸ, ಮೀನು, ದರ್ಜಿ, ಒಡವೆ, ಊದುಬತ್ತಿ ಅಂಗಡಿಗಳು ಸಾಮಾನ್ಯವಾದವು. ಈ ವ್ಯಾಪಾರಿಗಳು ಸಾಮಾನ್ಯವಾಗಿ ಸಗಟು ವ್ಯಾಪಾರಿಗಳಿಂದ ತಾವು ವಿಕ್ರಯಿಸುವ ಸರಕು ಕೊಳ್ಳುತ್ತಿದ್ದರು. ಸ್ಯಾಂಪಲುಗಳನ್ನು ತೋರಿಸಿ ಅಂಗಡಿಗಾರರಿಂದ ಸರಕಿಗೆ ಆದೇಶ ಪಡೆಯುವ ಸಂಚಾರಿ ವಿಕ್ರಯಾಧಿಕಾರಿಗಳು ಹುಟ್ಟಿಕೊಂಡರು. ಉದ್ದರಿ ವ್ಯವಸ್ಥೆಯನ್ನು ಶಿಷ್ಟೀಕರಿಸಲಾಯಿತು.

ಹತ್ತೊಂಬತ್ತು, ಇಪ್ಪತ್ತನೆಯ ಶತಮಾನಗಳ ಮುಖ್ಯ ಬೆಳವಣಿಗೆಯೆಂದರೆ ಚಿಲ್ಲರೆ ವ್ಯಾಪಾರ ಸಂಸ್ಥೆಗಳ ಬೃಹದ್ಗಾತ್ರ. ಒಂದೇ ಬಗೆಯ ಸರಕುಗಳನ್ನು ಹಲವು ಸ್ಥಳಗಳಲ್ಲಿ ವಿಕ್ರಯಿಸುವ ಸರಪಣಿ ಅಂಗಡಿಗಳು, ಒಂದೇ ಮಾಳಿಗೆಯ ಅಡಿಯಲ್ಲಿ ಹಲವು ಬಗೆಯ ಸರಕುಗಳ ವಿವಿಧ ಇಲಾಖೆಗಳನ್ನುಳ್ಳ ಇಲಾಖಾ ಮಳಿಗೆಗಳು ಮುಂತಾದವು ಬೆಳೆದವು. ಇವುಗಳೊಂದಿಗೆ ಹಿಂದಿನ ಪ್ರಕಾರಗಳೂ ಉಳಿದುಕೊಂಡಿವೆ. ಚಿಲ್ಲರೆ ವ್ಯಾಪಾರ ಸದಾ ಪರಿವರ್ತನಶೀಲವಾದ್ದು. ಹೊಸ ಹೊಸ ಬಗೆಯ ಅಂಗಡಿಗಳು ಹುಟ್ಟಿಕೊಳ್ಳುತ್ತಲೇ ಇವೆ.

**ಕಾರ್ಯಭಾರಗಳು :** ಚಿಲ್ಲರೆವ್ಯಾಪಾರಿ ಗ್ರಾಹಕರ ಬೇಡಿಕೆಗಳನ್ನು ಪೂರೈಸುವುದಕ್ಕಾಗಿ ನೂರಾರು ಬಗೆಯ ಸರಕುಗಳನ್ನು ತನ್ನ ಅಂಗಡಿಯಲ್ಲಿ ವಿಕ್ರಯಕ್ಕಾಗಿ ಇಡಬೇಕಾಗುತ್ತದೆ. ಸಾಮಾನ್ಯವಾಗಿ ಸರಕನ್ನು ಸಗಟುವ್ಯಾಪಾರಿಯಿಂದಲೋ ಉತ್ಪಾದಕರಿಂದಲೋ ಕೊಳ್ಳಬೇಕಾಗುತ್ತದೆ. ಹೀಗೆ ಕೊಂಡ ಸರಕುಗಳು ಕಡಿಮೆ ಬೆಲೆಯವಾಗಿರಬೇಕು ಮತ್ತು ಗಿರಾಕಿಗಳಿಗೆ ತೃಪ್ತಿನೀಡುವುವಾಗಿರಬೇಕು. ಅನೇಕ ಸಲ ಉತ್ಪಾದಕರಿಂದ ಅಥವಾ ಸಗಟು ವ್ಯಾಪಾರಿಗಳಿಂದ ಕೊಂಡ ಸರಕನ್ನು ಸಣ್ಣ ಗಾತ್ರದಲ್ಲಿ ಮತ್ತೆ ಪ್ಯಾಕ್ ಮಾಡಬೇಕಾಗಬಹುದು. ಅನೇಕ ಉತ್ಪಾದಕರ ಸರಕನ್ನು ಸೇರಿಸಿ ಒಂದು ಹೊಸ ಸರಕನ್ನಾಗಿ ಮಾಡಲು ಜೋಡಣೆ ಕೆಲಸವನ್ನು ಸಹ ಮಾಡಬೇಕಾಗುತ್ತದೆ (ಉದಾಹರಣೆ : ಬೈಸಿಕಲ್‌ಗಳನ್ನು ಮಾರುವ ವ್ಯಾಪಾರಿ). ಸಾಮಾನ್ಯವಾಗಿ ಚಿಲ್ಲರೆ ವ್ಯಾಪಾರಿಯ ಅಂಗಡಿಯಲ್ಲಿ ಸ್ಥಳದ ಅಭಾವ ಇದ್ದೇ ಇರುತ್ತದೆ. ಆದ್ದರಿಂದ ಕೊಂಡ ಸರಕೆಲ್ಲವನ್ನೂ ಅವನು ಅಂಗಡಿಯಲ್ಲೇ ಇಡುವುದು ಸಾಧ್ಯವಾಗದು. ಆತ ಹೆಚ್ಚಿನ ಸರಕನ್ನು ದಾಸ್ತಾನು ಮಳಿಗೆಯಲ್ಲಿ ದಾಸ್ತಾನು ಮಾಡಬೇಕಾಗುತ್ತದೆ. ಕೊಂಚ ಸಾಮಾನನ್ನು ಅಂಗಡಿಯಲ್ಲಿ ಇಟ್ಟು ಪ್ರದರ್ಶಿಸುತ್ತಾನೆ. ಚಿಲ್ಲರೆ ವ್ಯಾಪಾರಿಯ ಮುಖ್ಯ ಧ್ಯೇಯವೆಂದರೆ ಸರಕನ್ನು ವಿಕ್ರಯಿಸಿ ಲಾಭ ಪಡೆಯುವುದು. ಸಾಮಾನ್ಯವಾಗಿ

ಗ್ರಾಹಕರಿಂದ ಹೆಚ್ಚು ಬೇಡಿಕೆ ಇರುವ ಸರಕುಗಳನ್ನು ಮಾತ್ರ ಇವನು ಕೊಂಡು ತನ್ನ ಅಂಗಡಿಯಲ್ಲಿ ಪ್ರದರ್ಶಿಸಿ ವಿಕ್ರಯಿಸಲು ಪ್ರಯತ್ನಿಸುತ್ತಾನೆ. ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವ ಶಕ್ತಿ ಈತನಲ್ಲಿ ಇರುವುದು ಆವಶ್ಯ. ಈತ ನಮ್ರನಾಗಿ, ಕೌಶಲದಿಂದ ವ್ಯಾಪಾರಮಾಡಿದರೆ ವ್ಯವಹಾರವನ್ನು ಚೆನ್ನಾಗಿ ಬೆಳೆಯಿಸಬಹುದು. ಇದರಿಂದ ಉತ್ಪಾದಕನಿಗೂ ಸಗಟು ವ್ಯಾಪಾರಿಗೂ ಗ್ರಾಹಕನಿಗೂ ಒಳ್ಳೆಯದು. ತನ್ನ ವ್ಯಾಪಾರವನ್ನು ಹೆಚ್ಚಿಸುವುದಕ್ಕಾಗಿ ಚಿಲ್ಲರೆ ವ್ಯಾಪಾರಿ ಗ್ರಾಹಕರಿಗೆ ಉದ್ದರಿಯ ಮೇಲೆ ಸರಕನ್ನು ಮಾರಿ, ಪ್ರತಿ ತಿಂಗಳ ಮೊದಲನೆಯ ತಾರೀಖಿನಂದು ಹಣವನ್ನು ವಸೂಲಿ ಮಾಡಬೇಕಾಗಬಹುದು. ಹೀಗೆ ಉದ್ದರಿ ವ್ಯಾಪಾರ ಮಾಡಬೇಕಾದರೆ ತಾನೂ ಸರಕನ್ನು ಉದ್ದರಿಯ ಮೇಲೆ ತಂದಿರಬೇಕಾಗುತ್ತದೆ. ಇದರಿಂದ ಖರ್ಚು ಹೆಚ್ಚುತ್ತದೆ. ಅಲ್ಲದೆ ಸಾಲದ ಮೇಲೆ ಬಡ್ಡಿ ವಿಮೆ ಮಾರಾಟ ತೆರಿಗೆ ಮುಂತಾದುವನ್ನು ಸಹ ಕೊಡಬೇಕಾಗುತ್ತದೆ. ಈ ಎಲ್ಲ ಖರ್ಚುಗಳನ್ನೂ ವಿವೇಕಯುತವಾಗಿ ನಿರ್ವಹಿಸಬೇಕಾಗುತ್ತದೆ. ಇದು ಆತನ ಜವಾಬ್ದಾರಿಯುತವಾದ ಕೆಲಸ. ಚಿಲ್ಲರೆ ವ್ಯಾಪಾರಿ ಅನೇಕ ಸಲ ನಷ್ಟ ಅನುಭವಿಸಬೇಕಾಗುತ್ತದೆ. ಇದಕ್ಕೆ ಕಾರಣ ಮಾರುಕಟ್ಟೆಯ ಸ್ಥಿತಿ. ಗ್ರಾಹಕರ ಬೇಡಿಕೆಯನ್ನು ಪೂರೈಸಲು ವಿವಿಧ ರೀತಿಯ ಸರಕುಗಳನ್ನು ಸಂಗ್ರಹಿಬೇಕಾಗುತ್ತದೆ. ಸರಕುಗಳನ್ನು ಇಲಿ, ಹೆಗ್ಗಣಗಳು ತಿಂದು ನಷ್ಟವಾಗಬಹುದು. ಕೆಲವು ಸಲ ಫ್ಯಾಷನ್ನಿನ ಬದಲಾವಣೆಯಿಂದ ಹಲವು ಸರಕುಗಳು ಮಾರಾಟವಾಗದೆ ಉಳಿದುಹೋಗುತ್ತವೆ. ಹೀಗೆ ನಾನಾ ಬಗೆಯ ನಷ್ಟಗಳನ್ನು ಅನುಭವಿಸಲು ಆತ ಸಿದ್ಧನಾಗಿರಬೇಕು. ಇದೂ ಅವನ ಜವಾಬ್ದಾರಿ.

**ಸೇವೆಗಳು** : ಈತ ಗ್ರಾಹಕರಿಗೆ ನೇರವಾಗಿ ಸರಕನ್ನು ಸಣ್ಣ ಪರಿಮಾಣಗಳಲ್ಲಿ ವಿಕ್ರಯಿಸುವುದರಿಂದ ಸಣ್ಣ ಉತ್ಪಾದಕರ ಮತ್ತು ಸಗಟು ವ್ಯಾಪಾರಿಗಳ ಕಷ್ಟವನ್ನು ತಪ್ಪಿಸುತ್ತಾನೆ. ಗ್ರಾಹಕರೊಂದಿಗೆ ನೇರ ಸಂಪರ್ಕ ಇರುವುದರಿಂದ ಅವರ ಅಭಿರುಚಿಗಳಲ್ಲಿ ಆಗುತ್ತಿರುವ ಮಾರ್ಪಾಡನ್ನು ಗಮನಿಸಿ ಉತ್ಪಾದಕರಿಗೂ ಸಗಟು ವ್ಯಾಪಾರಿಗಳಿಗೂ ತಿಳಿಸುತ್ತಾನೆ. ಇದರಿಂದಾಗಿ ಉತ್ಪಾದಕರು ಗ್ರಾಹಕರ ಬೇಡಿಕೆ ಹಾಗೂ ಅಭಿರುಚಿಗಳಿಗೆ ತಕ್ಕಂತೆ ಸರಕಿನ ಉತ್ಪಾದನೆಯನ್ನು ನಿಯಂತ್ರಿಸಿಕೊಳ್ಳಬಹುದು. ಸಗಟು ವ್ಯಾಪಾರಿಗಳು ದಾಸ್ತಾನನ್ನು ನಿಯಂತ್ರಿಸಿಕೊಳ್ಳಬಹುದು. ಹೊಸ ಸರಕುಗಳ ಬಗ್ಗೆ ಗ್ರಾಹಕರ ಅಭಿಪ್ರಾಯವೇನು ಎಂಬುದನ್ನು ಚಿಲ್ಲರೆ ವ್ಯಾಪಾರಿಯಿಂದ ಸುಲಭವಾಗಿ ಉತ್ಪಾದಕರು ಮತ್ತು ಸಗಟು ವ್ಯಾಪಾರಿಗಳು ತಿಳಿದುಕೊಳ್ಳಬಹುದು. ಅನೇಕ ಸಾರಿ ಚಿಲ್ಲರೆ ವ್ಯಾಪಾರಿ ಗ್ರಾಹಕರ ಮನವೊಲಿಸಿ ಹೊಸ ಸರಕುಗಳನ್ನು ವಿಕ್ರಯಿಸಬಹುದು. ಗ್ರಾಹಕರ ಬೇಕು ಬೇಡಗಳನ್ನು ಉತ್ಪಾದಕರು ಮತ್ತು ಸಗಟು ವ್ಯಾಪಾರಿಗಳು ಅರಿತುಕೊಳ್ಳಬೇಕಾದರೆ, ಅದು ಚಿಲ್ಲರೆ ವ್ಯಾಪಾರಿಗಳ ಮುಖಾಂತರವೇ ಸಾಧ್ಯ.

ಗ್ರಾಹಕರಿಗೆ ಬೇಕಾದ ಸರಕನ್ನು ಚಿಲ್ಲರೆ ವ್ಯಾಪಾರಿ ದಾಸ್ತಾನು ಮಾಡಿ, ಅವರು ಕೇಳಿದಾಗ ವಿಕ್ರಯಿಸುತ್ತಾನೆ. ಗ್ರಾಹಕರಿಗೆ ಅನುಕೂಲವಾದ ಸ್ಥಳದಲ್ಲಿ ಅಂಗಡಿಯನ್ನು ಸ್ಥಾಪಿಸಿ ಅವರಿಗೆ ತೊಂದರೆಯಾಗದಂತೆ ವ್ಯಾಪಾರ ಮಾಡುತ್ತಾನೆ. ಅನೇಕ ಸಾರಿ ಪುಕ್ಕಟೆಯಾಗಿ ಸರಕನ್ನು ಗ್ರಾಹಕರ ಮನೆಗೆ ಸಾಗಿಸಿಕೊಡಲು ಸಹ ಮುಂದಾಗುತ್ತಾನೆ. ಚಿಲ್ಲರೆ ವ್ಯಾಪಾರಿಯ ಜನಪ್ರಿಯತೆಗೆ ಇವೆಲ್ಲ ಕಾರಣಗಳು. ಅವನು ಉದ್ದರಿ ಸೌಲಭ್ಯ ನೀಡುತ್ತಾನೆ. ವಿಕ್ರಯಿಸಿದ ಸರಕು ಗ್ರಾಹಕನಿಗೆ ಬೇಡವಾಗಿದ್ದಲ್ಲಿ ಅದನ್ನು ಹಿಂದಕ್ಕೆ ಪಡೆದುಕೊಂಡು, ಬೇರೆ ಸರಕನ್ನು ನೀಡಲು ಅವನು ಸಿದ್ಧ. ಸರಕು ಚಿಲ್ಲರೆ ವ್ಯಾಪಾರದಲ್ಲಿ ಸದಾ ದೊರೆಯುತ್ತದೆಯಾದ್ದರಿಂದ ಗ್ರಾಹಕರು ಹೆಚ್ಚು ಸರಕನ್ನು ದಾಸ್ತಾನು ಮಾಡಬೇಕಾಗುವುದಿಲ್ಲ.

**ಬಗೆಗಳು** : ಚಿಲ್ಲರೆ ವ್ಯಾಪಾರಿಗಳು ಮುಖ್ಯವಾಗಿ ಎರಡು ಬಗೆ: 1 ಸಂಚಾರಿ ವ್ಯಾಪಾರಿಗಳು ಮತ್ತು 2 ಸ್ಥಿರ ವ್ಯಾಪಾರಿಗಳು. ಬೀದಿಯಲ್ಲಿ ವ್ಯಾಪಾರ ಮಾಡುವವರು, ಸರಕನ್ನು ತಲೆಯ ಮೇಲೆ ಹೊತ್ತುಕೊಂಡೋ ಕೈಗಾಡಿಗಳ ಮೇಲೆ ಇಟ್ಟುಕೊಂಡೋ ಬೀದಿಯಿಂದ ಬೀದಿಗೆ ಹೋಗಿಯೋ ಸಂತೆಗೆ ಹೋಗಿಯೋ ವ್ಯಾಪಾರ ಮಾಡುವವರು ಸಂಚಾರಿ ವ್ಯಾಪಾರಿಗಳು. ಇವರ ವ್ಯಾಪಾರಕ್ಕೆ ನಿಶ್ಚಿತ ಸ್ಥಳವಿಲ್ಲ. ಇವರ ಬಂಡವಾಳ ಸಾಮಾನ್ಯವಾಗಿ ಕಡಿಮೆ. ಹಾಲು, ಹಣ್ಣು, ತರಕಾರಿ, ಹೂವು, ಆಟದ ಸಾಮಾನುಗಳು–ಮುಂತಾದವುಗಳ ವ್ಯಾಪಾರ ಮಾಡುವವರು ಇಂಥವರು. ಅಗ್ಗದ ಅಂಗಡಿಕಾರ (ಚೀಪ್ ಜಾಕ್) ಬೀದಿಯಿಂದ ಬೀದಿಗೆ ತಿರುಗುವುದಿಲ್ಲ. ಅವನು ಯಾವುದಾದರೊಂದು ಸ್ಥಳದಲ್ಲಿ ಅಂಗಡಿ ಹೂಡುತ್ತಾನೆ. ಆದರೆ ಅಲ್ಲೇ ಸ್ಥಿರವಾಗಿರುವುದಿಲ್ಲ. ಅಲ್ಲಿ ವ್ಯಾಪಾರ ಲಾಭಕರವಲ್ಲವೆನಿಸಿದಾಗ ತಳ ಕಿತ್ತು ಬೇರೆಡೆಗೆ ಹೋಗುತ್ತಾನೆ. ದೊಡ್ಡ ನಗರಗಳ ಜನಸಂದಣಿಯ ಪ್ರದೇಶಗಳಲ್ಲಿ ಕಾಲುದಾರಿಯ ಮೇಲೆ ಸರಕಿಟ್ಟು ವ್ಯಾಪಾರ ಮಾಡುವವರು ಬೀದಿ ಬಿಕರಿದಾರರು. ಇವರು ಕೂಡ ಸಂಚಾರಿ ವ್ಯಾಪಾರಿಗಳ ಗುಂಪಿಗೆ ಸೇರುತ್ತಾರೆ.

ಸ್ಥಿರ ಅಂಗಡಿಗಳನ್ನು ಸಣ್ಣವು, ದೊಡ್ಡವು ಎಂದು ವಿಂಗಡಿಸಬಹುದು. ಪೆಟ್ಟಿಗೆ ಅಂಗಡಿ, ಹಳೆಸರಕುಗಳ ಅಂಗಡಿ, ವಿಶಿಷ್ಟ ಸರಕುಗಳ (ಸ್ಪೆಷಾಲಿಟಿ) ಅಂಗಡಿ, ಹಲವು ಸರಕುಗಳ ಅಂಗಡಿ–ಇವು ಸಣ್ಣವು. ಇಲಾಖಾ ಮಳಿಗೆ, ಬಹು ಶಾಖಾ ಅಂಗಡಿ, ಅಂಚೆ ಆದೇಶ ಗೃಹ, ಸಹಕಾರಿ ಭಂಡಾರ–ಇವು ದೊಡ್ಡವು.

**ಇಲಾಖಾ ಮಳಿಗೆ** : ಒಂದೇ ಸೂರಿನ ಅಡಿಯಲ್ಲಿ ಅನೇಕ ಇಲಾಖೆಗಳ ಮೂಲಕ ವಿವಿಧ ಬಗೆಯ ಸರಕುಗಳನ್ನು ವಿಕ್ರಯ ಮಾಡುವ ಅಂಗಡಿ ಇದು (ಡಿಪಾರ್ಟ್‌ಮೆಂಟಲ್ ಸ್ಟೋರ್ಸ್). ಒಂದೊಂದು ಇಲಾಖೆ ಅಥವಾ ವಿಭಾಗ ಒಂದೊಂದು ಬಗೆಯ ಸರಕುಗಳಿಗೆ ಮೀಸಲು. ಉದಾಹರಣೆ: ಬಟ್ಟೆ ವಿಭಾಗ, ದಿನಸಿ ವಿಭಾಗ, ಪಾತ್ರೆಗಳ ವಿಭಾಗ, ಪೀಠೋಪಕರಣಗಳ ವಿಭಾಗ ಇತ್ಯಾದಿ. ಸಾಮಾನ್ಯವಾಗಿ ಇಲಾಖಾ ಮಳಿಗೆಗಳಂಥ ಭಾರಿ ಉದ್ಯಮಗಳನ್ನು ಪಾಲುದಾರಿಕೆ ಸಂಸ್ಥೆಗಳೇ ಸ್ಥಾಪಿಸಿ ನಡೆಸುತ್ತವೆ. ಕಂಪನಿಯ ಒಡೆತನದಲ್ಲಿರುವ ಮಳಿಗೆಯ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ವ್ಯವಸ್ಥಾಪಕ ನಿರ್ದೇಶಕ ಅಥವಾ ಮಹಾ ವ್ಯವಸ್ಥಾಪಕ ಎಂಬ ಅಧಿಕಾರಿಗೆ ವಹಿಸಲಾಗುತ್ತದೆ.

ಸಾಮಾನ್ಯವಾಗಿ ಬಳಕೆದಾರರು ಕೇಳುವ ಸಕಲ ಸರಕುಗಳನ್ನೂ ಒಂದೇ ಸೂರಿನ ಅಡಿಯಲ್ಲಿ ನೀಡುವುದು ಇಲಾಖಾ ಮಳಿಗೆಯ ಉದ್ದೇಶ. ಇದರಿಂದ ಗ್ರಾಹಕರಿಗೆ ಕಾಲ ಮತ್ತು ಶ್ರಮದ ಉಳಿತಾಯವಾಗುತ್ತದೆ. ಅಲ್ಲದೆ ಇದು ಗ್ರಾಹಕರಿಗೆ ಉದ್ದರಿ ಸೌಲಭ್ಯ, ಸರಕನ್ನು ಸಂಸ್ಥೆಯ ಗಾಡಿಯಲ್ಲಿ ಗ್ರಾಹಕರ ಮನೆಗಳಿಗೆ ಕಳುಹಿಸುವುದು, ಗ್ರಾಹಕರು ಒಪ್ಪಿದ ಮೇಲೆ ಸರಕನ್ನು ಮಾರುವುದು ಮುಂತಾದ ಅನೇಕ ಸೌಲಭ್ಯಗಳನ್ನು ನೀಡಬಹುದು. ಅಮೆರಿಕ ಮುಂತಾದ ದೇಶಗಳಲ್ಲಿ ಗ್ರಾಹಕರು ವ್ಯಾಪಾರ ಮಾಡುತ್ತಿರುವಾಗ ಅವರ ಮಕ್ಕಳಿಗೆ ಆಟದ ವ್ಯವಸ್ಥೆಯನ್ನು ಸಹ ಮಾಡಲಾಗಿರುತ್ತದೆ.

ಇಂಥ ಸಂಸ್ಥೆ ವ್ಯಾಪಾರವನ್ನು ದೊಡ್ಡ ಪ್ರಮಾಣದಲ್ಲಿ ಮಾಡುತ್ತದೆ. ಅಂಗಡಿಯು ಊರಿನ ಪ್ರಮುಖ ಸ್ಥಳದಲ್ಲಿ ಅಥವಾ ಮಧ್ಯಭಾಗದಲ್ಲಿ ಸ್ಥಾಪಿತವಾಗಿರುತ್ತದೆ; ಸಾರಿಗೆ ವ್ಯವಸ್ಥೆಗೆ ನಿಲುಕುವಂಥ ಸ್ಥಳದಲ್ಲಿರುತ್ತದೆ. ಸರಕನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸುವುದರಿಂದ ಗ್ರಾಹಕರಲ್ಲಿ ಉತ್ತಮ ಅಭಿರುಚಿಯುಂಟಾಗಿ ಅವರು ಸರಕನ್ನು ಕೊಳ್ಳುವಂತೆ ಆಗುತ್ತದೆ.

ಸಾಮಾನ್ಯವಾಗಿ ಈ ರೀತಿಯ ಮಳಿಗೆ ಸಗಟು ವ್ಯಾಪಾರಿಯಂತೆ ಉತ್ಪಾದಕರಿಂದ ಸರಕನ್ನು ಕೊಂಡು, ಚಿಲ್ಲರೆಯಾಗಿ ಬಳಕೆದಾರರಿಗೆ ಮಾರುತ್ತದೆ. ದೊಡ್ಡಗಾತ್ರದಲ್ಲಿ ಸರಕನ್ನು ಕೊಂಡಾಗ ದೊರಕುವ ಲಾಭ ಇಲಾಖಾ ಮಳಿಗೆಗೂ, ತನ್ಮೂಲಕ ಬಳಕೆದಾರನಿಗೂ ದೊರೆಯುತ್ತದೆ. ಸೇವೆಯೂ ಇದರ ಧ್ಯೇಯ. ಆದ್ದರಿಂದ ಮಳಿಗೆಗೆ ಬರುವ ಬಳಕೆದಾರರಿಗೆ ಒಳ್ಳೆಯ ರೀತಿಯಲ್ಲಿ ಸೇವೆ ಸಲ್ಲಿಸಬೇಕೆಂಬ ಉತ್ಸಾಹ ಮಳಿಗೆಯ ಕೆಲಸಗಾರರಿಗೆ ಇರುತ್ತದೆ. ಇದರಿಂದ ಬಳಕೆದಾರರಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಅಲ್ಲದೆ ಬಳಕೆದಾರರ ಉಪಯೋಗಕ್ಕಾಗಿ ಅದೇ ಕಟ್ಟಡದಲ್ಲಿ ಉಪಾಹಾರ ಗೃಹ, ಕ್ರೀಡಾಗೃಹಗಳು, ವಾಚನಾಲಯಗಳು ಮುಂತಾದ ವ್ಯವಸ್ಥೆಗಳನ್ನು ಕೂಡ ಮಾಡಿರುತ್ತದೆ. ಸಂಸ್ಥೆಗೆ ಹೆಚ್ಚು ಬಂಡವಾಳ ಇರುವುದರಿಂದ ಬಳಕೆದಾರರನ್ನು ಹೆಚ್ಚು ಸಂತೃಪ್ತಿಗೊಳಿಸಲು ನುರಿತ ಕೆಲಸಗಾರರುಗಳನ್ನು ನೇಮಿಸಿಕೊಂಡು ವ್ಯಾಪಾರ ಮಾಡುವುದು ಸಾಧ್ಯ. ಸಂಸ್ಥೆ ಒಂದೇ ವಿಭಾಗವನ್ನು ಹೊಂದಿದ್ದರೆ ಆಗುತ್ತಿದ್ದ ನಷ್ಟದ ಹೊಣೆಯನ್ನು ಇಲ್ಲಿ ಆದಷ್ಟು ಕಡಿಮೆ ಮಾಡಬಹುದು. ಇಲ್ಲಿ ಅನೇಕ ವಿಭಾಗಗಳಿರುವುದರಿಂದ, ಒಂದರ ನಷ್ಟವನ್ನು ಮತ್ತೊಂದು ವಿಭಾಗ ತುಂಬಿಕೊಡುವ ಸಾಧ್ಯತೆಯುಂಟು. ಇದರಿಂದ ಒಟ್ಟಿನಲ್ಲಿ ಸುಸೂತ್ರವಾಗಿ ವ್ಯಾಪಾರ ನಡೆಯಿಸಿಕೊಂಡು ಹೋಗುವುದು ಸಾಧ್ಯ.

ಸಂಸ್ಥೆ ದೊಡ್ಡದಾದ್ದರಿಂದ ಇದಕ್ಕೆ ಸಿಬ್ಬಂದಿ ಹೆಚ್ಚು. ಇದರಿಂದ ಖರ್ಚು ಹೆಚ್ಚಾಗುತ್ತದೆ. ಈ ಖರ್ಚನ್ನು ಬಳಕೆದಾರರೇ ಭರಿಸಬೇಕಾಗುತ್ತದೆ. ಅಂದರೆ ಸರಕಿನ ಬೆಲೆ ಏರುವ ಸಂಭವವುಂಟು. ಸಂಸ್ಥೆಯ ಮಾಲೀಕನಿಗೂ ಬಳಕೆದಾರನಿಗೂ ನೇರ ಸಂಬಂಧ ಇರುವುದಿಲ್ಲ. ಇಂಥ ಅಂಗಡಿಗಳು ಸಾಮಾನ್ಯವಾಗಿ ಜನಭರಿತವಾದ ಸ್ಥಳಗಳಲ್ಲಿ ಅಥವಾ ಊರಿನ ಮಧ್ಯಭಾಗದಲ್ಲಿ ಮಾತ್ರ ಸ್ಥಾಪಿತವಾಗಿರುವುದರಿಂದ ದೂರದ ಅನೇಕ ಬಳಕೆದಾರರು ಇವುಗಳ ಉಪಯೋಗ ಪಡೆಯಲು ಸಾಧ್ಯವಾಗಿದೆ.

**ಬಹುಶಾಖಾ ಅಂಗಡಿಗಳು** : ಒಬ್ಬನೇ ಮಾಲಿಕ ಅಥವಾ ಸಂಸ್ಥೆಯ ಒಡೆತನದಲ್ಲಿ ಅನೇಕ ಸ್ಥಳಗಳಲ್ಲಿ ಸ್ಥಾಪಿತವಾದ ಒಂದೇ ಬಗೆಯ ಅಂಗಡಿಗಳು ಇವು (ಮಲ್ಟಿಪಲ್ ಷಾಪ್ಸ್). ಇಂಥ ಅಂಗಡಿಗಳನ್ನು ಒಂದೇ ಊರಿನ ಅನೇಕ ಭಾಗಗಳಲ್ಲಿ ತೆರೆದಿರಬಹುದು; ಅಥವಾ ಅನೇಕ ಊರುಗಳಲ್ಲಿ ತೆರೆದಿರಬಹುದು. ಇವನ್ನು ಸರಪಣಿ ಅಂಗಡಿಗಳು (ಚೇನ್ ಸ್ಟೋರ್ಸ್) ಎಂದು ಅಮೆರಿಕದಲ್ಲಿ ಕರೆಯುತ್ತಾರೆ.

ಈ ರೀತಿಯ ಅಂಗಡಿಗಳ ಮೂಲ ಉದ್ದೇಶವೆಂದರೆ ಸರಕು ಒಂದು ಸ್ಥಳದಲ್ಲಿ ಉತ್ಪಾದಿಸಿ ಅಥವಾ ಕೊಂಡು ಬೇರೆ ಬೇರೆ ಸ್ಥಳಗಳಲ್ಲಿ ಬಳಕೆದಾರರಿಗೆ ಚಿಲ್ಲರೆಯಾಗಿ ಮಾರುವುದು. ಇವು ಮಾರುವ ಸರಕು ಸಾಮಾನ್ಯವಾಗಿ ನಿತ್ಯ ಬಳಕೆಯದ್ದಾಗಿರುತ್ತದೆ. ಪ್ರತಿಯೊಂದು ಬಹುಶಾಖಾ ಅಂಗಡಿಯೂ ಒಂದೇ ರೀತಿಯ ಸರಕನ್ನು ವಿಕ್ರಯಿಸುತ್ತದೆ. ಎಲ್ಲ ಶಾಖೆಗಳೂ ಒಂದೇ ತೆರ. ಈ ಅಂಗಡಿಗಳಲ್ಲಿ ಉದ್ದರಿ ವ್ಯವಹಾರ ಇರುವುದಿಲ್ಲ.

ಇವು ದೊಡ್ಡ ಗಾತ್ರದಲ್ಲಿ ವ್ಯವಹಾರ ನಡೆಸುವ ಸಂಸ್ಥೆಗಳಾದ್ದರಿಂದ ಸರಕನ್ನು ಕೊಳ್ಳುವಾಗ ಅಥವಾ ಉತ್ಪಾದಿಸುವಾಗ, ಸಿಬ್ಬಂದಿ ವ್ಯವಸ್ಥೆಯಲ್ಲಿ, ಪ್ರಚಾರದಲ್ಲಿ ಉಳಿತಾಯ ಮಾಡಬಹುದು. ವಿವಿಧ ಸ್ಥಳಗಳಲ್ಲಿ ಶಾಖೆಗಳಿರುವುದರಿಂದ ಸರಕು ಬೇಗ ವಿಕ್ರಯವಾಗುತ್ತದೆ.

ಅಲ್ಲದೆ ಉದ್ದರಿ ವ್ಯವಹಾರ ಇಲ್ಲದಿರುವುದರಿಂದ ಋಣದ ಬಾಕಿ ಇರುವುದಿಲ್ಲ. ಇದರಿಂದ ಸಂಸ್ಥೆಗೆ ನಷ್ಟಸಂಭವ ಕಡಿಮೆ. ಶಾಖೆಯಿಂದ ಶಾಖೆಗೆ ಸರಕಿನ ವರ್ಗಾವಣೆ ಸಾಧ್ಯವಾದ್ದರಿಂದ ಸರಕು ಪೋಲಾಗುವುದು ತಪ್ಪುತ್ತದೆ. ಒಂದು ಶಾಖೆಯ ಪ್ರಚಾರದಿಂದ ಉಳಿದ ಶಾಖೆಗಳ ವ್ಯಾಪಾರಕ್ಕೆ ಸಹಾಯಕ.

ಇವುಗಳಲ್ಲಿ ಪ್ರತಿಕೂಲಗಳೂ ಉಂಟು. ಸಂಸ್ಥೆಯ ಮಾಲೀಕನ ಮುಖವನ್ನೇ ಬಳಕೆದಾರ ಕಾಣುವುದಿಲ್ಲ. ಇದರಿಂದ ಗ್ರಾಹಕರಿಗೆ ಸಂಸ್ಥೆಯ ಬಗ್ಗೆ ಸದ್ಭಾವನೆ ಬರದೆ ಇರಬಹುದು. ಅಂಗಡಿಗಳಲ್ಲಿ ಒಬ್ಬ ತಯಾರಕನ ಸರಕು ಮಾತ್ರವೇ ಇರುವುದರಿಂದ ಬಳಕೆದಾರ ತನಗೆ ಬೇಕಾದ ಸರಕನ್ನು ಕೊಳ್ಳಲು ಸಾಧ್ಯವಿಲ್ಲ. ಬೇರೆ ಉತ್ಪಾದಕರ ಸರಕನ್ನು ಕೊಳ್ಳಲು ಅವನು ಬೇರೆ ಅಂಗಡಿಗೆ ಹೋಗಬೇಕಾಗುತ್ತದೆ. ಪ್ರತಿಯೊಂದು ಶಾಖೆಯೂ ಕೇಂದ್ರ ಕಚೇರಿಯ ಆದೇಶಗಳನ್ನು ಅಕ್ಷರಶಃ ಪಾಲಿಸಬೇಕಾಗುತ್ತದೆ ; ಮತ್ತು ಅದಕ್ಕೆ ಅನುಗುಣವಾಗಿ ವ್ಯಾಪಾರ ಮಾಡಬೇಕಾಗುತ್ತದೆ. ಆದ್ದರಿಂದ ಸಿಬ್ಬಂದಿಗೆ ಹೆಚ್ಚಿನ ಸ್ವಾತಂತ್ರ್ಯ ಇರುವುದಿಲ್ಲ. ಬಳಕೆದಾರನ ಹಿತಗಳಿಗೆ ಲಕ್ಷ್ಯ ದೊರಕದೆ ಹೋಗಬಹುದು.

ಅಂಚೆ ಆದೇಶ ಗೃಹ : ಗ್ರಾಹಕರಿಂದ ಅಂಚೆಯ ಮೂಲಕ ಆದೇಶ ಪಡೆದು, ಅಂಚೆಯ ಮೂಲಕವೇ ಸರಕು ವಿಕ್ರಯಿಸುವುದು ಇದರ ವಿಧಾನ. ಗ್ರಾಹಕರಿಗೂ ಬಿಕರಿದಾರರಿಗೂ ನೇರ ಸಂಪರ್ಕ ಇರುವುದಿಲ್ಲ.

ಅಂಚೆಯ ಮೂಲಕ ವ್ಯವಹಾರ ನಡೆಸಬೇಕಾದರೆ ಸರಕುಗಳಿಗೆ ಕೆಲವು ಲಕ್ಷಣಗಳಿರಬೇಕು.

1. ಅವು ಹಾಳಾಗುವ ಸರಕುಗಳಾಗಿರಬಾರದು. 2. ಸರಕುಗಳನ್ನು ಸುಲಭವಾಗಿ ಶ್ರೇಣೀಕರಿಸಲು ಮತ್ತು ಶಿಷ್ಟೀಕರಿಸಲು ಸಾಧ್ಯವಿರಬೇಕು. 3. ಸರಕುಗಳು ಹೆಚ್ಚು ಭಾರವಾಗಿಯಾಗಲಿ ಗಾತ್ರವಾಗಿಯಾಗಲಿ ಇರಬಾರದು ; ಅಂಚೆಯ ಮೂಲಕ ಸುಲಭವಾಗಿ ಸಾಗಿಸಲು ಸಾಧ್ಯವಾಗುವಂತೆ ಇರಬೇಕು. 4. ಅಂಚೆ ವೆಚ್ಚ ಕಡಿಮೆಯಿರಬೇಕು.

ಸರಕನ್ನು ಸಾಮಾನ್ಯವಾಗಿ ದೇಯಮೌಲ್ಯ ಅಂಚೆಯ (ವಿ.ಪಿ.ಪಿ.) ಮೂಲಕ ಕಳುಹಿಸಲಾಗುವುದು. ಸರಕನ್ನು ಪಡೆದುಕೊಳ್ಳುವಾಗ ಪೂರ್ತಿ ಹಣವನ್ನು ಪಾವತಿ ಮಾಡಬೇಕಾಗುತ್ತದೆ.

ಬಳಕೆದಾರ ತನ್ನ ಮನೆಯಲ್ಲೇ ಇದ್ದು ತನಗೆ ಬೇಕಾದ ಸರಕನ್ನು ಕಾಲವಿಳಂಬವಿಲ್ಲದೆ ಮತ್ತು ಹೆಚ್ಚು ಹಣವ್ಯಯವಿಲ್ಲದೆ ಪಡೆಯುವುದು ಇದರಿಂದ ಸಾಧ್ಯ. ಸ್ಥಳೀಯ ಮಾರುಕಟ್ಟೆಯಲ್ಲಿ ಸಿಗದ ಸರಕನ್ನು ಸುಲಭವಾಗಿ ದೂರದ ಮಾರುಕಟ್ಟೆಗಳಿಂದ ಪಡೆಯಬಹುದು. ಅಂಚೆ ಸೌಕರ್ಯವಿರುವ ಎಲ್ಲ ಊರುಗಳಲ್ಲಿರುವ ಬಳಕೆದಾರರಿಗೂ ಇದು ಅನುಕೂಲಕರ. ಅವರು ಇದ್ದಲ್ಲೇ ವ್ಯಾಪಾರ ಮಾಡುವುದು ಇದರಿಂದ ಸಾಧ್ಯ. ಸಣ್ಣ ಬಂಡವಾಳ ಸಾಕು. ಸರಕನ್ನು ಒಂದು ಜಾಗದಲ್ಲಿ ಕಲೆ ಹಾಕಬೇಕಾಗಿಲ್ಲ. ಆದೇಶ ಬಂದ ನಂತರ ಸರಕನ್ನು ಸಂಗ್ರಹಿಸಿ ಅದನ್ನು ಬಳಕೆದಾರರಿಗೆ ಕಳುಹಿಸಬಹುದು.

ಆದರೆ ಇದರಲ್ಲಿ ಕೆಲವು ಪ್ರತಿಕೂಲಗಳೂ ಉಂಟು. ಬಳಕೆದಾರ ಸರಕನ್ನು ಪರೀಕ್ಷಿಸಿ ಅನಂತರ ಕೊಳ್ಳುವ ವ್ಯವಸ್ಥೆ ಇಲ್ಲವಾದ್ದರಿಂದ ಅವನು ಮೋಸ ಹೋಗಬಹುದಾದ ಸಂಭವವಿರುತ್ತದೆ. ಉದ್ದರಿಯೇ ಮುಂತಾದ ಸೌಲಭ್ಯಗಳು ಈ ವ್ಯವಸ್ಥೆಯಲ್ಲಿ ಇರುವುದಿಲ್ಲ. ಈ ಬಗೆಯ ವ್ಯವಹಾರ ಮಾಡಲು ಗ್ರಾಹಕನಿಗೆ ಓದು ಬರಹ ಗೊತ್ತಿರಬೇಕು. ಇಲ್ಲವಾದರೆ ಓದುಬರಹ ಬಲ್ಲವರನ್ನು ಆಶ್ರಯಿಸಬೇಕು.

ಬಳಕೆದಾರರ ಸಹಕಾರಿ ಮಳಿಗೆ : ಬಳಕೆದಾರರು ತಾವೇ ಮಾಲೀಕರಾಗಿ ತಮ್ಮ ಹಿತ ರಕ್ಷಣೆಗಾಗಿ ಸ್ಥಾಪಿಸಿಕೊಂಡ ಸಂಸ್ಥೆಯಿದು. ಇದರಿಂದ ಮಧ್ಯವರ್ತಿ ವ್ಯಾಪಾರಿಯನ್ನು ಸರಕು ವಿಕ್ರಯದ ಸರಪಣಿಯಿಂದ ಹೊರದೂಡಿದಂತಾಗುತ್ತದೆ. ಸಂಸ್ಥೆಯ ಬಂಡವಾಳವನ್ನು ಅನೇಕ ಜನಗಳಿಂದ ಸಣ್ಣ ಪರಿಮಾಣಗಳಲ್ಲಿ ಷೇರು ರೂಪದಲ್ಲಿ ಕೂಡಿಸಲಾಗುತ್ತದೆ. ಪ್ರತಿಯೊಂದು ಸಹಕಾರ ಸಂಘವೂ ತನ್ನದೇ ಆದ ಆಡಳಿತ ಹೊಂದಿರುವುದಲ್ಲದೆ, ಷೇರುದಾರರಿಗೆ ಒಳ್ಳೆಯದಾಗುವಂತೆ, ಅನಾವಶ್ಯಕವಾದ ಯಾವ ನಿರ್ಬಂಧವೂ ಇಲ್ಲದೆ, ವ್ಯವಹಾರವನ್ನು ನಡೆಸಬಹುದು. ಸಹಕಾರ ಸಂಘವೂ ಸರಕನ್ನು ಸಗಟು ವ್ಯಾಪಾರದ ದರದಲ್ಲಿ ಕೊಂಡು ಚಿಲ್ಲರೆಯಾಗಿ ಮಾರುತ್ತದೆ. ಲಾಭ ಮುಖ್ಯವಲ್ಲ, ನ್ಯಾಯವಾದ ಬೆಲೆಯಲ್ಲಿ ಒಳ್ಳೆಯ ಸರಕನ್ನು ಸದಸ್ಯರಿಗೆ ಒದಗಿಸುವುದು ಧ್ಯೇಯ. ಬರುವ ಲಾಭ ಸದಸ್ಯರಲ್ಲೇ ವಿನಿಯೋಗವಾಗುತ್ತದೆ. ಲಾಭದ ಒಂದು ಭಾಗವನ್ನು ವಿದ್ಯಾಭ್ಯಾಸಕ್ಕೆ ಮತ್ತು ಇತರ ಬಗೆಯ ಸಾಮಾಜಿಕ ಒಳಿತಿಗಾಗಿ ವಿನಿಯೋಗಿಸಬಹುದು.

ಇದು ಸಾಮಾನ್ಯವಾಗಿ ಒಳ್ಳೆಯ ಮತ್ತು ಪರಿಶುದ್ಧವಾದ ಸರಕನ್ನು ವಿಕ್ರಯಿಸುವುದರಿಂದ ಬಳಕೆದಾರರಿಗೆ ಸರಕಿನ ನಷ್ಟವಾಗುವುದಿಲ್ಲ. ಅತಿಯಾದ ಲಾಭವನ್ನು ಸಂಪಾದಿಸುವ ಮತ್ತು ಏಕಸ್ವಾಮ್ಯವನ್ನು ಹೊಂದಿರುವ ಸಂಸ್ಥೆಗಳಿಗೆ ಇದೊಂದು ಸವಾಲು. ಸಂಘದ ಸದಸ್ಯರಲ್ಲಿ ಉಳಿತಾಯದ ಮನೋಭಾವ ಬೆಳೆಯುತ್ತದೆ. ಇದು ಪ್ರಜಾಪ್ರಭುತ್ವ ವಿಧಾನದಲ್ಲಿ ನಡೆಯುವ ಸಂಸ್ಥೆ.

ಆದರೆ ಅನುಭವ ಇಲ್ಲದಿರುವವರು ಅನೇಕ ವೇಳೆ ಇದರ ಆಡಳಿತ ನಡೆಸುವುದರಿಂದ ಇದು ಸರಿಯಾಗಿ ನಡೆಯದೆ ಹೋಗಬಹುದು. ಸದಸ್ಯರು ಸಂಘದ ಏಳಿಗೆಗಾಗಿ ಕಾಲವನ್ನು ವಿನಿಯೋಗಿಸಲು ಸಾಧ್ಯವಿಲ್ಲದೆ ಇರಬಹುದು. ಸದಸ್ಯರ ಗುಂಪುಗುಳಿತನದಿಂದಾಗಿ ಅದಕ್ಕೆ ತೊಂದರೆಯಾಗಬಹುದು.

**ಸೂಪರ್ ಮಾರುಕಟ್ಟೆ :** ಇದರ ಜನನ 1930ರಲ್ಲಿ ಅಮೆರಿಕದಲ್ಲಾಯಿತು. 1930ರಲ್ಲಿ ಅಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟಿನ ಫಲವಾಗಿ ಹಣದ ಉಳಿತಾಯಕ್ಕಾಗಿ ಪ್ರಾರಂಭವಾದ ದೊಡ್ಡ ಪರಿಮಾಣದ ಚಿಲ್ಲರೆ ವ್ಯಾಪಾರ ಸಂಸ್ಥೆಯಿದು.

ಇದರಲ್ಲಿ ಬಿಕರಿದಾರರಿರುವುದಿಲ್ಲ. ಗ್ರಾಹಕರೇ ಒಳಗಡೆ ಸುತ್ತಾಡಿ ತಮಗೆ ಬೇಕಾದ ಸರಕನ್ನು ಆರಿಸಿಕೊಂಡು ಹೊರಕ್ಕೆ ಹೋಗುವಾಗ ಅಲ್ಲಿರುವ ಗುಮಾಸ್ತನಿಗೆ ಸರಕಿನ ಬೆಲೆಯನ್ನು ಕೊಟ್ಟು ಹೋಗುತ್ತಾರೆ. ಎಲ್ಲ ಸರಕುಗಳೂ ಪ್ಯಾಕ್ ಆಗಿರುತ್ತವೆ. ಈ ವ್ಯವಸ್ಥೆಯಿಂದ ಖರ್ಚು ಕಡಿಮೆಯಾಗಿ ಸರಕನ್ನು ಕಡಿಮೆ ಬೆಲೆಗೆ ವಿಕ್ರಯಿಸಬಹುದು. ಸ್ವಯಂಸೇವೆಯೇ ಸೂಪರ್ ಮಾರುಕಟ್ಟೆಯ ಧ್ಯೇಯ. ಇಲ್ಲಿ ಉದ್ದರಿ ವ್ಯಾಪಾರವಿರುವುದಿಲ್ಲ. ನಿತ್ಯೋಪಯೋಗಿ ವಸ್ತುಗಳಾದ ತರಕಾರಿಗಳು, ದಿನಸಿಗಳು ಮುಂತಾದ ಸಾಮಾನುಗಳನ್ನು ಸಹ ಮಾರಲಾಗುತ್ತದೆ. ಸಾಮಾನ್ಯವಾಗಿ ವಿಶಾಲವಾದ ಭವನದಲ್ಲಿ ಅಂಗಡಿ ಇರುವುದರಿಂದ ಜನ ಸರಕನ್ನು ಕೊಳ್ಳಲು ಕಾಯಬೇಕಾಗಿಲ್ಲ. ಆದರೆ ಸರಕಿನ ಉಪಯೋಗದ ಬಗ್ಗೆ ಗ್ರಾಹಕರಿಗೆ ವಿಷಯಗಳನ್ನು ತಿಳಿಸುವ ವಿಕ್ರಯಾಧಿಕಾರಿಗಳಿಲ್ಲದಿರುವುದರಿಂದ ಅವರಿಗೆ ತೊಂದರೆಯಾಗುತ್ತದೆ. ಕೆಲವು ಸಾರಿ ಈ ಬಗೆಯ ಅಂಗಡಿಗಳು ಹರಟೆಯ ಕೇಂದ್ರಗಳಾಗಬಹುದು. ಇದರಿಂದ ಅನೇಕ ಗ್ರಾಹಕರಿಗೆ ತೊಂದರೆಯಾಗಬಹುದು.

ಸಂಬಳ, ಕೂಲಿ, ಬಾಡಿಗೆ, ಜಾಹೀರಾತು, ನೀರು, ದೀಪ, ತೆರಿಗೆ, ವಿಮೆ, ಪ್ರಯಾಣಭತ್ಯ – ಇವು ಚಿಲ್ಲರೆ ವ್ಯಾಪಾರಿಗಳ ಕೆಲವು ಮುಖ್ಯ ಖರ್ಚುಗಳು. ಸಂಬಳ, ಕೂಲಿ, ಬಾಡಿಗೆ ಇವು ಅತ್ಯಂತ ಮುಖ್ಯವಾದವು. ದೊಡ್ಡ ಅಂಗಡಿಗಳನ್ನು ನಡೆಸುವ ವೆಚ್ಚಗಳು ಈಚಿನ ವರ್ಷಗಳಲ್ಲಿ ವಿಪರೀತವಾಗಿ ಏರುತ್ತಿವೆ. ಸಗಟಿನಲ್ಲಿ ಸರಕು ಕೊಳ್ಳುವುದರಿಂದ ಆಗುವ ಉಳಿತಾಯವನ್ನೂ ಮೀರಿ ಈ ವೆಚ್ಚಗಳು ಏರುತ್ತಿವೆ. ವಿಕ್ರಯ ಸಿಬ್ಬಂದಿಯ ಆವಶ್ಯಕತೆ ಇಲ್ಲದ–ಯಂತ್ರಗಳ ಮೂಲಕವೇ ವಿಕ್ರಯಮಾಡುವ–ಅನೇಕ ವ್ಯವಸ್ಥೆಗಳು ಮುಂದುವರಿದ ದೇಶಗಳಲ್ಲಿ ಬೆಳೆಯುತ್ತಿವೆ. ಇವು ಸಾಧ್ಯವಿಲ್ಲದ ಕ್ಷೇತ್ರಗಳಲ್ಲಿ ಸಣ್ಣ ವ್ಯಾಪಾರಿಗಳು ಎಂದಿನಂತೆ ಮುಂದುವರಿಯುತ್ತಾರೆ. (ಕೆ.ಜಿ.ಆರ್.; ಜಿ.ಕೆ.ಐ.)

**ಚಿವ್ :** ಲಿಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಲಶುನ ಸಸ್ಯ. ಅಲಿಯಮ್ ಷೀನೋಪ್ರೇಸಮ್ ಇದರ ವೈಜ್ಞಾನಿಕ ಹೆಸರು. ಇದರ ಎಲೆ ಮತ್ತು ಗೆಡ್ಡೆಯನ್ನು ತರಕಾರಿ ಹಾಗೂ ಸಂಬಾರ ಪದಾರ್ಥವಾಗಿ ಉಪಯೋಗಿಸುತ್ತಾರೆ. ಇದು ಸುಂದರವಾದ ಸಸ್ಯವೂ ಆದ್ದರಿಂದ ಇದನ್ನು ಅಲಂಕಾರ ಸಸ್ಯವಾಗಿ ಬೆಳೆಸುವುದುಂಟು. ಚಿವ್ ಔಷಧಿಯ ಪ್ರಾಮುಖ್ಯವನ್ನು ಸಹ ಪಡೆದಿದೆ. ಇದರ ತವರು ಯೂರೋಪ್. ಇದು ನೋಡಲು ಹುಲ್ಲಿನಂತಿದೆ. ಇದರ ಎತ್ತರ 6"–8". ಕಾಂಡ ಬಲ್ಬ್ ಮಾದರಿಯ ಗೆಡ್ಡೆಯಾಗಿ ಮಾರ್ಪಟ್ಟಿದೆ. ಎಲೆಗಳು ಉದ್ದನೆಯ ಹುಲ್ಲಿನ ಎಸಳುಗಳಂತಿವೆ. ಹೂಗಳು ತಿಳಿ ಕೆನ್ನೀಲಿ ಬಣ್ಣದವು ; ಚಿಕ್ಕ ಗಾತ್ರದವು ಗುಂಡನೆಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಚಿವ್ ಗಿಡವನ್ನು ಬೀಜಗಳಿಂದಲೂ ಕಿರುಲಶುನಗಳಿಂದಲೂ ವೃದ್ಧಿ ಮಾಡಬಹುದು. ಬೀಜ ಬಿತ್ತುವ ಕಾಲ ಏಪ್ರಿಲ್. ಕಿರುಲಶುನಗಳನ್ನು ನೆಟ್ಟು ಬೆಳೆಸುವಾಗ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಸಾಲಿನಿಂದ ಸಾಲಿಗೆ 12" ಮತ್ತು ಸಾಲಿನಲ್ಲಿ ಸಸಿಯಿಂದ ಸಸಿಗೆ 6" ಅಂತರ ಕೊಟ್ಟು ಬೆಳೆಸಲಾಗುತ್ತದೆ. ಆಯುರ್ವೇದದಲ್ಲಿ ಇದು ಬ್ಯಾಕ್ಟೀರಿಯಾ ವಿರೋಧಕ್ಕ ಶಕ್ತಿ ಹೊಂದಿದೆ ಎಂದು ಹೇಳಲಾಗಿದೆ, ಈ ಸಸ್ಯವನ್ನು ಕೆಮ್ಮು, ಗಂಟಲು ನೋವು ಮುಂತಾದ ಖಾಯಿಲೆಗಳಿಗೆ ಔಷಧವಾಗಿ ಉಪಯೋಗಿಸಲಾಗಿತ್ತದೆ. ಇದರ ಸುವಾಸನೆಯಿಂದಾಗಿ ಇದನ್ನು ಹೆಚ್ಚಾಗಿ ಸೇವಿಸಿದರೆ ಅಜೀರ್ಣದ ತೊಂದರೆಯಾಗುತ್ತದೆ, ಈ ಸಸ್ಯವು ವಿಟಮಿನ್ "ಎ' ವಿಟಮಿನ್ "ಸಿ' ಅಲ್ಪ ಪ್ರಮಾಣದಲ್ಲಿ ಗಂಧಕ ಹಾಗೂ ಅಧಿಕ ಸುಣ್ಣ ಮತ್ತು ಕಬ್ಬಿಣಾಂಶ ಹೊಂದಿರುತ್ತದೆ. ಈ ಸಸ್ಯವು ಕ್ರಿಮಿಕೀಟಗಳನ್ನು ದೂರವಿಡುವ ಗುಣ ಹೊಂದಿದೆಯಾದ್ದರಿಂದ ಇದನ್ನು ಕ್ರಿಮಿನಾಶಕವಾಗಿ ಬಳಸಲಾಗುತ್ತದೆ. (ಬಿ.ಎ.ಸಿ.)

**ಚಿಹ್ನೆ ಪರೀಕ್ಷೆ :** ಸಂಖ್ಯಾಕಲನೀಯ ಆಧಾರಭಾವನೆಗಳ ವಿತರಣಮುಕ್ತ ಪರೀಕ್ಷೆಗಳಲ್ಲಿ (ಡಿಸ್ಟಿಬ್ಯೂಷನ್–ಫ್ರೀ ಟೆಸ್ಟ್ಸ್) ಬಳಕೆಗೆ ಸರಳ ಮತ್ತು ಅರ್ಥವಿಸಿಕೊಳ್ಳಲು ಸುಲಭವಾದ ಒಂದು ಪರೀಕ್ಷೆ (ಸೈನ್ ಟೆಸ್ಟ್). ಬಳಸುವ ನಿದರ್ಶಜದ (ಸ್ಟ್ಯಾಟಿಸ್ಟಿಕ್) ಸಂಭಾವ್ಯತಾವಿತರಣೆ ಆಧಾರಭಾವನೆ ಸೂಚಿಸುವ ವಿತರಣೆ ಮತ್ತು ಅದರ ಪ್ರಾಚಲಗಳನ್ನು ಅವಲಂಬಿಸಿರದಿದ್ದರೆ ಆ ಪರೀಕ್ಷೆ ವಿತರಣಮುಕ್ತ.

ಚಿಹ್ನೆ ಪರೀಕ್ಷೆಯನ್ನು ಉಪಯೋಗಿಸಿಕೊಳ್ಳಬಹುದಾದ ಸಂದರ್ಭಗಳು : (1) $X$, $Y$ ಎರಡು ಯಾದೃಚ್ಛಿಕ ಚರಗಳು. ಅವುಗಳ ಮಾಧ್ಯಗಳಲ್ಲಿ (ಮೀಡಿಯನ್ಸ್) ಲಕ್ಷ್ಯಾರ್ಹ ವ್ಯತ್ಯಾಸವಿದೆಯೇ ಎಂದು ಪರೀಕ್ಷಿಸಬೇಕಾಗಿದೆ. ಉದಾಹರಣೆಗೆ

$X$: ಚಿಕಿತ್ಸೆಗೆ ಮೊದಲಿನ ರಕ್ತದೊತ್ತಡ.

$Y$: ಚಿಕಿತ್ಸೆಯ ಬಳಿಕದ ರಕ್ತದೊತ್ತಡ.

ಎಂದು ಭಾವಿಸೋಣ. $(X_1, Y_1), (X_2, Y_2), \ldots\ldots (X_n, Y_n)$ ಇವು $n$ ಜೊತೆ ಅವಲೋಕನಗಳು. ಮೂಲ ಆಧಾರಭಾವನೆ

$$H_0 : P(X\text{-}Y>0) = P(X\text{-}Y<0) = \frac{1}{2}$$

[$X, Y$ ನಿರಪೇಕ್ಷ ಅವಿಚ್ಛಿನ್ನ ಯಾದೃಚ್ಛಿಕ ಚರಗಳಾಗಿರುವಾಗ $P(X\text{-}Y=0)=0$]. ಪರ್ಯಾಯ ಆಧಾರಭಾವನೆ.

$$H_1 : P(X\text{-}Y=0) > P(X\text{-}Y<0]$$

ಯಾದೃಚ್ಛಿಕ ಚರ $Z_i$ ಯನ್ನು

$$Z_i = 1, \quad X_i - Y_i > 0 \text{ ಆಗಿರುವಾಗ ಮತ್ತು}$$
$$Z_i = 0, \quad X_i - Y_i < 0 \text{ ಆಗಿರುವಾಗ}$$

ಎಂದು ವ್ಯಾಖ್ಯಿಸಿದರೆ $n$ ವ್ಯತ್ಯಾಸಗಳಲ್ಲಿ ಧನವ್ಯತ್ಯಾಸಗಳು ಎಷ್ಟೆಂಬುದನ್ನು ಯಾದೃಚ್ಛಿಕ ಚರ $Z = \sum_{i=1}^{n} Z_i$ ತಿಳಿಸುತ್ತದೆ. $H_0$ ನಿಜವಾಗಿರುವಾಗ $Z$ ನ ನಿರೀಕ್ಷಿತ ಮೌಲ್ಯ $n/2$.

$Z - n/2 > Z_\alpha$ ಆದಾಗ ಚಿಹ್ನೆ ಪರೀಕ್ಷೆ $H_1$ ಕ್ಕೆ ಅನುಕೂಲವಾಗಿ $H_0$ ಯನ್ನು ತಿರಸ್ಕರಿಸುತ್ತದೆ. ಸಂಧಿಸ್ಥ ಮೌಲ್ಯ (ಕ್ರಿಟಿಕಲ್ ವ್ಯಾಲ್ಯು) $Z_\alpha$ ವನ್ನು

$$P\left(Z - n/2 > c \mid H_0 \text{ ನಿಜವಾಗಿರುವಾಗ}\right) = P(Z > C'/ H_0) \leq \alpha$$

$C' = n/2 + c$ ಎಂಬ ಅಸಮತೆಯನ್ನು ತೃಪ್ತಿಪಡಿಸುವ $c'$ ನ ಕನಿಷ್ಠ ಪೂರ್ಣಾಂಕಮೌಲ್ಯವಾಗಿ ಆಯ್ಕೆ ಮಾಡಬೇಕು. $H_0$ ನಿಜವಾಗಿರುವಾಗ ಅದನ್ನು ತಿರಸ್ಕರಿಸುವ ಗರಿಷ್ಠ ಸಂಭಾವ್ಯತೆಯಾದ $\alpha$ ಕ್ಕೆ ಲಕ್ಷ್ಯಾರ್ಹತೆಯ ಮಟ್ಟ (ಲೆವೆಲ್ ಆಫ್ ಸಿಗ್ನಿಫಿಕನ್ಸ್) ಎಂದು ಹೆಸರು. $H_0$ ನಿಜವಾಗಿರುವಾಗ $Z$ ದ್ವಿಪದ ವಿತರಣೆಯನ್ನು (**ನೋಡಿ–ಮೂಲಭೂತ ವಿತರಣೆಗಳು**) ಅನುಸರಿಸುವುದರಿಂದ

$$P\left(Z - \tfrac{n}{2} > c \mid H_0\right) = \left[\binom{n}{\frac{n}{2}+c+1} + \binom{n}{\frac{n}{2}+c+2} + \cdots + \binom{n}{n}\right]\left(\frac{1}{2}\right)^n$$

ಪರ್ಯಾಯ ಆಧಾರಭಾವನೆ

$$H_2 : \quad P(X - Y > 0) < P(X - Y < 0) \text{ ಅಥವಾ}$$
$$H_3 : \quad P(X - Y > 0) \neq P(X - Y < 0)$$

ಎಂದಿದ್ದರೆ ಆಗ ಪರೀಕ್ಷಾ ವಿಧಾನದಲ್ಲಿ ಸೂಕ್ತ ಮಾರ್ಪಾಟು ಮಾಡಿಕೊಳ್ಳಬೇಕು.

$P(X - Y = 0) \neq 0$ ಆದಾಗ $Z_1, Z_2, Z_3$, ಅನುಕ್ರಮವಾಗಿ ಧನ, ಋಣ ಮತ್ತು ಸೊನ್ನೆ ವ್ಯತ್ಯಾಸಗಳಿರುವ ಜೊತೆಗಳ ಸಂಖ್ಯೆಗಳಾಗಿರಲಿ.

$Z_1 - \frac{1}{2}(n - z_3) > C(z_3)$ ಆದಾಗ $H_1$ ಕ್ಕೆ ಅನುಕೂಲವಾಗಿ $H_0$ ಯನ್ನು ತಿರಸ್ಕರಿಸಬೇಕು. ಇಲ್ಲಿ Cಯ ಮೌಲ್ಯ ಪ್ರಯೋಗದಲ್ಲಿ ಕಂಡುಬಂದ $Z_3$ ರ ಮೌಲ್ಯ $Z_3$ ನ್ನು ಅವಲಂಬಿಸಿದೆ. ಅಂದರೆ ಸೊನ್ನೆ ವ್ಯತ್ಯಾಸವಿರುವ ಜೊತೆಗಳನ್ನು ಕಡೆಗಣಿಸಿ ಚಿಹ್ನೆ ಪರೀಕ್ಷೆಯನ್ನು ಬಳಸಬಹುದು. ಅವಲೋಕನಗಳು ಜೊತೆಯಲ್ಲಿದ್ದಾಗ ಮತ್ತು ಅವನ್ನು ಸ್ಥಿರಪರಿಸರದಲ್ಲಿ ಅವಲೋಕಿಸಿದಾಗ ಚಿಹ್ನೆಪರೀಕ್ಷೆ ಒಂದು ಪ್ರಬಲ ಆದರೂ ಸರಳ ಪರೀಕ್ಷೆ.

(2) $X$ ಒಂದು ಯಾದೃಚ್ಛಿಕ ಚರ. ಅದರ ಮಾಧ್ಯ $M$. $X_1, X_2, \cdots\cdots, X_n$ ಪರಸ್ಪರ ನಿರವಲಂಬಿ ಆವಲೋಕನಗಳು

$$H_0 : M = M_0, \quad M_0 \text{ ಒಂದು ದತ್ತ ಮೌಲ್ಯ.}$$

$$H_1 : M > M_0$$

$X_1 - M_0, \quad X_2 - M_0, \cdots\cdots X_n - M_0$ ಗಳಲ್ಲಿ ಧನವ್ಯತ್ಯಾಸಗಳ ಸಂಖ್ಯೆ $Z$ ಆದರೆ $H_0$ ನಿಜವಾಗಿರುವಾಗ $Z$ ನ ನಿರೀಕ್ಷಿತ ವಮೌಲ್ಯ $n/2$. $Z - n/2 > Z_\alpha$ ಆದಾಗ $H_1$ ಕ್ಕೆ ಅನುಕೂಲವಾಗಿ $H_0$ ಯನ್ನು ತಿರಸ್ಕರಿಸಬೇಕು.

$$P(Z - n/2 > C \mid H_0) = P(Z > C' \mid H_0) \leq \alpha,$$

$C' = n/2 + \text{C}$, $\alpha$ ಲಕ್ಷ್ಯಾರ್ಹತೆಯ ಮಟ್ಟ ಎಂಬ ಅಸಮತೆಯನ್ನು ತೃಪ್ತಿಪಡಿಸುವ $C'$ ನ ಕನಿಷ್ಠ ಪೂರ್ಣಾಂಕ ಮೌಲ್ಯ $Z_\alpha$. ನಿಜವಾಗಿರುವಾಗ $Z$ ದ್ವಿಪದವಿತರಣೆಯನ್ನು ಅನುಸರಿಸುತ್ತದೆ.

ಯಾದೃಚ್ಛಿಕ ಚರ $X$ ನ ಸಂಭಾವ್ಯತಾ ವಿತರಣೆ

$$f(x;\theta) = \frac{1}{2}\exp[-|x-\theta|] \quad -\infty < \text{X}, \theta < \infty$$

ಆಗಿದ್ದರೆ $H_0 : \theta \leq 0$ ಯನ್ನು $H_1 : \theta > 0$ ಯ ವಿರುದ್ಧ ಪರೀಕ್ಷಿಸಲು ಕೂಡ ಚಿಹ್ನೆ ಪರೀಕ್ಷೆಯನ್ನು ಉಪಯೋಗಿಸಬಹುದು. t–ಪರೀಕ್ಷೆ(ನೋಡಿ) ಮೇಲಿನ ಸಂದರ್ಭಗಳಲ್ಲಿ ಬಳಸಬಹುದಾದ ಪ್ರಾಚಲ ಪರೀಕ್ಷೆ. ಹಿನ್ನೆಲೆಯಲ್ಲಿರುವ ಎಲ್ಲ ಅಭಿಗೃಹೀತಗಳೂ ಸಿಂಧುವಾಗಿರುವಾಗ ತಪ್ಪು $H_0$ ಯನ್ನು t–ಪರೀಕ್ಷೆ ತಿರಸ್ಕರಿಸುವ ಸಂಭಾವ್ಯತೆ ಹೆಚ್ಚಿರುವುದರಿಂದ ಅದು ಚಿಹ್ನೆಪರೀಕ್ಷೆಗಿಂತ ಸಮರ್ಥವಾದುದು. ಅವಲೋಕನಗಳು ಪ್ರಸಾಮಾನ್ಯ ವಿತರಣೆಯನ್ನು ಅನುಸರಿಸಬೇಕು. ಮತ್ತು ಎರಡು ಪ್ರತಿಚಯಗಳ ಸಂದರ್ಭದಲ್ಲಿ ಹಿನ್ನೆಲೆಯ ಎರಡು ಪ್ರಸಾಮಾನ್ಯ ವಿತರಣೆಗಳ ಚಲನೀಯಗಳು ಸಮವಿರಬೇಕು ಎಂಬ ಅಭಿಗೃಹೀತಗಳನ್ನು t–ಪರೀಕ್ಷೆ ಬಳಸುವುದರಿಂದ ಚಿಹ್ನೆ ಪರೀಕ್ಷೆ ಹೆಚ್ಚು ಸಾರ್ವತ್ರಿಕವಾದುದು; ಅಲ್ಲದೆ ಅವಲೋಕನಗಳಿಗೆ ಸಾಂಖ್ಯಿಕ ಮೌಲ್ಯಗಳನ್ನು ಕೊಡಲಾಗದಾಗಲೂ ಯಾವುದೋ ದೃಷ್ಟಿಯಿಂದ ಅವುಗಳಲ್ಲಿ ಒಂದು ಇನ್ನೊಂದಕ್ಕಿಂತ ಹೆಚ್ಚು ಎಂದು ಹೇಳಬಹುದಾದರೆ ಆಗ ಚಿಹ್ನೆಪರೀಕ್ಷೆಯನ್ನು ಬಳಸಬಹುದು. ಆದರೆ t–ಪರೀಕ್ಷೆಯನ್ನು ಮಾತ್ರ ಸಾಧ್ಯವಿಲ್ಲ. $H_0$ ಯನ್ನು ಪರೀಕ್ಷಿಸಲು $A, B$ ಎರಡು ಪರೀಕ್ಷೆಗಳಿದ್ದು $n_A$ ಅವಲೋಕನಗಳಿದ್ದಾಗ $A$ ಯು $B$ ಗಿಂತ ಸಮರ್ಥವಾಗಿದ್ದರೆ ಮತ್ತು A ಯಷ್ಟೇ ಸಮರ್ಥವಾಗಲು B ಗೆ nB ಆವಲೋಕನಗಳು ಬೇಕಾಗುವುದಿದ್ದರೆ ಆಗ $(n_A/n_B)\times 100$ ನ್ನು A ಗೆ ಹೋಲಿಸಿದಂತೆ Bಯ ಸಾಮರ್ಥ್ಯ–ದಕ್ಷತೆ (ಪವರ್–ಎಫಿಷಿಯೆನ್ಸಿ) ಎಂದು ವ್ಯಾಖ್ಯಿಸಲಾಗಿದೆ. $n$=6 ಆಗಿರುವಾಗ $t$–ಪರೀಕ್ಷೆಗೆ ಹೋಲಿಸಿದಂತೆ ಚಿಹ್ನೆ ಪರೀಕ್ಷೆಯ ಸಾಮರ್ಥ್ಯ ದಕ್ಷತೆ 95%. $n$ ಚಿಕ್ಕದಿರುವಾಗ (25 ಕ್ಕಿಂತ ಕಡಿಮೆ) ದ್ವಿಪದ ವಿತರಣೆಯ ಕೋಷ್ಟಕವನ್ನು ಬಳಸಿ ಬೇರೆ ಬೇರೆ ಲಕ್ಷ್ಯಾರ್ಹತೆಮಟ್ಟಗಳಿಗೆ ಅನುರೂಪವಾಗಿ ಚಿಹ್ನೆಪರೀಕ್ಷೆಗೆ ಬೇಕಾಗುವ ಸಂಧಿಸ್ಥಮೌಲ್ಯಗಳನ್ನು ಕಂಡುಹಿಡಿಯಬಹುದು. $n$ ಚಿಕ್ಕದಲ್ಲದಿರುವಾಗ ಕೇಂದ್ರಾಭಿಮಿತಿ ಪ್ರಮೇಯವನ್ನು (**ನೋಡಿ**) ಅನ್ವಯಿಸಿ $W = [Z - n/2]/\sqrt{n/4}$ ಶಿಷ್ಟೀಕೃತ ಪ್ರಸಾಮಾನ್ಯ ವಿತರಣೆಯನ್ನು ಹೊಂದಿರುತ್ತದೆ ( $H_0$ ನಿಜವಾಗಿರುವಾಗ).

$Z_\alpha$

$H_1 : \quad P(X - Y > 0) > P(X - Y < 0)$ ಆದರೆ, ಚಿಹ್ನೆಪರೀಕ್ಷೆ $W > w\alpha$ ಆದಾಗ $H_0$ ಯನ್ನು ತಿರಸ್ಕರಿಸುತ್ತದೆ.

$$P(W > c \mid H_0) = \frac{1}{\sqrt{2\pi}}\int_c^\infty exp\left(-w^2/2\right) dw \leq \alpha$$

ಎಂಬ ಅಸಮತೆಯನ್ನು ತೃಪ್ತಿಪಡಿಸುವ c ಯ ಕನಿಷ್ಠ ಮೌಲ್ಯ = $w\alpha$ ($\alpha$ ಲಕ್ಷ್ಯಾರ್ಹತೆ ಮಟ್ಟ). ಶಿಷ್ಟೀಕೃತ ಪ್ರಸಾಮಾನ್ಯ ವಿತರಣೆಯ ಕೋಷ್ಟಕಗಳಿಂದ ಬೇರೆ ಬೇರೆ ಲಕ್ಷ್ಯಾರ್ಹತೆಯ ಮಟ್ಟಗಳಿಗೆ ಅನುರೂಪವಾದ ಮೌಲ್ಯಗಳನ್ನು ಪಡೆಯಬಹುದು. ಬೇರೆ ಬೇರೆ ಸಂದರ್ಭಗಳಿಗೆ ಹೊಂದಿಕೊಳ್ಳುವ ಹಲವು ವಿತರಣಮುಕ್ತ ಪರೀಕ್ಷೆಗಳಿವೆ. **(ಎಸ್.ಎಂ.ಎಂ.ಎ.)**

**ಚೀಕಲಪರವಿ :** ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ಒಂದು ಗ್ರಾಮ. ತುಂಗಭದ್ರಾನದಿಯ ದಡದಲ್ಲಿದೆ. ಇದು ಕರ್ನಾಟಕದ ದಾಸಸಾಹಿತ್ಯ ಪರಂಪರೆಯಲ್ಲಿ ಎರಡನೆಯ ಘಟ್ಟದ ಪ್ರಮುಖರಾದ ವಿಜಯದಾಸರ ಜನ್ಮಸ್ಥಳ. ಆ ಕಾರಣಕ್ಕಾಗಿಯೇ ಇದರ ಪ್ರಸಿದ್ಧಿ. ಪ್ರ.ಶ. 1687ರಲ್ಲಿ ಈ ಊರಿನ ಬಡ ಬ್ರಾಹ್ಮಣ ಮನೆತನದಲ್ಲಿ ವಿಜಯದಾಸರು ಜನ್ಮತಾಳಿದರು. ದಾಸಶ್ರೇಷ್ಠರಾದ ಪುರಂದರದಾಸರ ಅನಂತರ 25,000 ಕನ್ನಡ ಪದಗಳನ್ನು ರಚಿಸಿದ ಕೀರ್ತಿ ವಿಜಯದಾಸರದು. ಇದೇ ಜಿಲ್ಲೆಯ ನೆರೆಹೊರೆಯ ಊರುಗಳಲ್ಲಿ ಜನಿಸಿ ಪ್ರಸಿದ್ಧರಾದ ಗೋಪಾಲದಾಸ, ಜಗನ್ನಾಥದಾಸರಿಗೂ ವಿಜಯದಾಸರೇ ಮಾರ್ಗದರ್ಶಕರಾಗಿದ್ದರು. ಚೀಕಲಪರವಿ ಇವರ ಕಾಲದಲ್ಲಿ ಸಾಹಿತ್ಯಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳ ಕೇಂದ್ರವಾಗಿದ್ದಿರಬೇಕು. ವಿಜಯದಾಸರು ವಾಸಿಸುತ್ತಿದ್ದ ಅವರ ಮಗಳ ಮನೆಯೊಂದು ಈಗ ಚೀಕಲಪರವಿಯಲ್ಲಿದೆ. ಅವರು ಉಪಯೋಗಿಸುತ್ತಿದ್ದುದೆಂದು ಹೇಳಲಾಗುವ ಗಂಧ ತೇಯುವ ಸಾಣೆಕಲ್ಲೂ ಅಲ್ಲಿ ಇದೆ. ನದಿಯ ದಂಡೆಯ ಹತ್ತಿರ ಶ್ರೀಪಾದರಾಜರು ನೆಟ್ಟು ಬೆಳೆಸಿದ್ದೆಂದು ಹೇಳಲಾಗುವ ಒಂದು ಅಶ್ವತ್ಥವೃಕ್ಷವಿದೆ. ಪ್ರತಿವರ್ಷ ಚೀಕಲಪರವಿಯಲ್ಲಿ ವಿಜಯದಾಸರ ಆರಾಧನೆ ಜರುಗುತ್ತದೆ. **(ಜೆ.ಆರ್.ಪಿ.)**

**ಚೀನ :** ಪೂರ್ವ ಏಷ್ಯದ ಒಂದು ಸ್ವತಂತ್ರ ದೇಶ. ಪ್ರಪಂಚದ ದೊಡ್ಡ ರಾಷ್ಟ್ರಗಳಲ್ಲಿ ಒಂದು. ಉ.ಅ. 18೦–54೦ ಮತ್ತು ಪೂ.ರೇ. 73೦–135೦ ನಡುವೆ ಹಬ್ಬಿರುವ ಈ ದೇಶ ಪೂರ್ವ ಪಶ್ಚಿಮವಾಗಿ 4828 ಕಿಮೀ ಉತ್ತರದಕ್ಷಿಣವಾಗಿ 4023 ಕಿಮೀ ಇದ್ದು ಒಟ್ಟು 9640821 ಚ.ಕಿಮೀ ವಿಸ್ತೀರ್ಣ ಹೊಂದಿದೆ. 6468 ಕಿಮೀ ಸಮುದ್ರ ತೀರವಿರುವ ಈ ದೇಶದ ಜನಸಂಖ್ಯೆ 1,339,724,852 (2010). ಇದರಲ್ಲಿ ಶೇ.70 ಗ್ರಾಮವಾಸಿಗಳು ಶೇ. 30 ನಗರವಾಸಿಗಳಿದ್ದಾರೆ. ಈ ದೇಶದ ಪಶ್ಚಿಮದಲ್ಲಿ ಕಜûಕಿಸ್ತಾನ್, ತಜಕಿಸ್ತಾನ್, ಭಾರತ, ಉತ್ತರದಲ್ಲಿ ರಷ್ಯ, ಮಂಗೋಲಿಯ, ಈಶಾನ್ಯದಲ್ಲಿ ರಷ್ಯ, ದಕ್ಷಿಣದಲ್ಲಿ ವಿಯೆಟ್ನಾಮ್, ಲಾವೋಸ್ ಮತ್ತು ಮಯನ್ಮಾರ್, ಭಾರತ, ನೇಪಾಲ, ಭೂತಾನ ದೇಶಗಳು ಸುತ್ತುವರೆದಿವೆ. ಪೂರ್ವದಲ್ಲಿ ಉತ್ತರ ಮತ್ತು ದಕ್ಷಿಣ ಕೊರಿಯ, ತೈವಾನ್, ಚೀನಸಮುದ್ರವಿದ್ದು ದಕ್ಷಿಣದಲ್ಲಿ ಭಾರತದ ಕಾರಕೋರಮ್ ಮತ್ತು ಹಿಮಾಲಯ ಪರ್ವತಗಳು ಇದರ ಗಡಿಯಾಗಿವೆ.

(ವಿ.ಜಿ.ಕೆ.)

ಪ್ರಕೃತ ಲೇಖನದಲ್ಲಿ ಈ ವಿಭಾಗಗಳಿವೆ :

I ಪ್ರಾಕೃತಿಕ ಭೂಗೋಳ ವೃತ್ತಾಂತ
- i ಭೂವಿಜ್ಞಾನ
- ii ಭೌತಲಕ್ಷಣ
- iii ವಾಯುಗುಣ
- iv ಸಸ್ಯಗಳು
- v ಪ್ರಾಣಿಜೀವನ

II ಜನ, ಸಂವಿಧಾನ, ಆಡಳಿತ
- i ಜನಜೀವನ
- ii ಪ್ರಾಂತ್ಯಗಳು
- iii ಸಂವಿಧಾನ ಮತ್ತು ಆಡಳಿತ
- iv ರಕ್ಷಣೆ

III ಆರ್ಥಿಕತೆ
- i ವ್ಯವಸಾಯ
- ii ಅರಣ್ಯ
- iii ಗಣಿಗಳು
- iv ಕೈಗಾರಿಕೆ
- v ವಿದ್ಯುಚ್ಛಕ್ತಿ
- vi ವ್ಯಾಪಾರ, ಸಾರಿಗೆ
- vii ನಗರಗಳು

$Z_\alpha$

IV ಇತಿಹಾಸ
- i ಪ್ರಾಗಿತಿಹಾಸ
- ii ಇತಿಹಾಸ

V ಆರ್ಥಿಕ ಅಭಿವೃದ್ಧಿ

ಚೀನ–ಜಪಾನ್–ಯುದ್ಧಗಳು, ಚೀನದ–ಮಹಾಗೋಡೆ, ಚೀನ–ಸಮುದ್ರ, ಚೀನೀ–ಕಲೆ, ಚೀನೀ–ಕುಂಭಕಲೆ, ಚೀನೀ–ತತ್ತ್ವ, ಚೀನೀ–ನಾಟಕ, ಚೀನೀ–ನ್ಯಾಯ, ಚೀನೀ–ಪುರಾಣ, ಚೀನೀ–ಭಾಷೆ, ಚೀನೀ–ಯಾತ್ರಿಕರು–(ಭಾರತದಲ್ಲಿ), ಚೀನೀ–ವಾಸ್ತು, ಚೀನೀ–ಶಿಲ್ಪ, ಚೀನೀ–ಸಂಗೀತ, ಚೀನೀ–ಸಾಹಿತ್ಯ, ಮುಂತಾದ ವಿಷಯಗಳನ್ನು ಕುರಿತ ಪ್ರತ್ಯೇಕ ಲೇಖನಗಳನ್ನು ನೋಡಿ.

**i ಭೂವಿಜ್ಞಾನ :** ಬಹು ಪುರಾತನ ಕಾಲದಿಂದಲೂ ಭೂಚಟುವಟಿಕೆಗಳ ಪ್ರಭಾವಕ್ಕೆ ಚೀನ ಒಳಗಾಗಿರುವುದಕ್ಕೆ ದಾಖಲೆಗಳಿವೆ. ಇವು ನಾನಾ ಹಂತಗಳಲ್ಲಿ ತಲೆದೋರಿ ವಿವಿಧ ಭೂಭಾಗಗಳು ಹಾಗೂ ಶಿಲಾಪ್ರಸ್ತರಗಳಲ್ಲಿ ಕಾಣಬರುವ ಮಡಿಕೆಗಳು, ಸ್ತರಭಂಗಗಳು ಮುಂತಾದ ರಚನೆಗಳಿಗೆ ಕಾರಣವೆನಿಸಿವೆ. ಹೀಗಾಗಿ ಭೂ ಇತಿಹಾಸದ ವಿವಿಧ ಯುಗಗಳ ಶಿಲೆಗಳು ಇಡೀ ದೇಶದುದ್ದಕ್ಕೂ ಹರಿದು ಹಂಚಿಹೋಗಿವೆ. ಭೂಚಟುವಟಿಕೆಗಳು ಪೂರ್ವ ಕೇಂಬ್ರಿಯನ್ (ಪ್ರೀಕೇಂಬ್ರಿಯನ್), ಉತ್ತರ ಸೈಲೂರಿಯನ್ (ಪೋಸ್ಟ್ ಸೈಲೂರಿಯನ್), ಉತ್ತರ ಡಿವೋನಿಯನ್ (ಪೋಸ್ಟ್ ಡೀವೋನಿಯನ್), ಮೇಲಿನ ಕಾರ್ಬಾನಿಫೆರಸ್, ಮಧ್ಯ ಪರ್ಮಿಯನ್, ಉತ್ತರ ಟ್ರಯಾಸಿಕ್, ಉತ್ತರ ಜ್ಯುರಾಸಿಕ್, ಉತ್ತರ ಕ್ರಿಟೇಷಸ್, ಅಂತ್ಯ ಟರ್ಷಿಯರಿ ಮತ್ತು ನವೀನ ಹೀಗೆ ಹತ್ತು ಪ್ರಮುಖ ಹಂತಗಳಲ್ಲಿ ತಲೆದೋರಿದವು. ಅವುಗಳಲ್ಲೆಲ್ಲ ಪೂರ್ವ ಕೇಂಬ್ರಿಯನ್ ಜುರಾಸಿಕ್ ಹಾಗೂ ಉತ್ತರ ಕ್ರಿಟೇಷಸ್ ಕಾಲಗಳ ಭೂಚಟುವಟಿಕೆಗಳು ಬಹು ಪ್ರಭಾವಶಾಲಿಯಾದಂಥವು. ಇವುಗಳ ಪ್ರಭಾವವೇ ದೇಶದ ಅನೇಕ ಕಡೆಗಳಲ್ಲಿ ಕಾಣಸಿಗುತ್ತವೆ.

ಭೂಇತಿಹಾಸದಲ್ಲಿ ಅತ್ಯಂತ ಪುರಾತನವಾದ ಪೂರ್ವ ಕೇಂಬ್ರಿಯನ್ ಯುಗದ (600 ದಶಲಕ್ಷ ವರ್ಷಗಳ ಹಿಂದೆ) ನಿಕ್ಷೇಪಗಳನ್ನು ಟೈಷಾನ್ (ಆರ್ಕೆಯನ್), ವುಟಾಯ್ ಮತ್ತು ಸಿನಿಯನ್ ಎಂದು ಮೂರು ಹಂತಗಳಾಗಿ ವಿಂಗಡಿಸಿದ್ದಾರೆ. ಇವುಗಳಲ್ಲಿ ಅತ್ಯಂತ ಪುರಾತನವಾದ ಟೈಷಾನ್ ವರ್ಗದಲ್ಲಿ ನೈಸ್ (ಗೀರುಶಿಲೆ), ಗ್ರಾನೈಟ್ ಷಿಸ್ಟ್ (ಪದರುಶಿಲೆ), ಕಣಸುಣ್ಣಶಿಲೆ ಮತ್ತು ಅಮೃತಶಿಲೆಗಳು ಇವೆ. ಇವನ್ನು ಹಲವಾರು ಕಡೆ ಅಂತಸ್ಸರಣಗಳು ಭೇದಿಸಿರುವುದನ್ನು ಕಾಣಬಹುದು. ವುಟಾಯ್ ಹಂತದ ಶಿಲೆಗಳು ಉತ್ತರ ಚೀನದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ವಿವಿಧ ಜಲಜಶಿಲೆಗಳಿಂದಾದ ಈ ಸ್ತರಗಳು ಭೂಸವೆತ ಕ್ಕೊಳಗಾಗಿರುವ ಟೈಷಾನ್ ಶಿಲೆಗಳ ಮೇಲೆ ವ್ಯಾಪಿಸಿರುವುದನ್ನು ಕಾಣಬಹುದು. ಇವನ್ನು ಸಹ ಗ್ರಾನೈಟ್ ಹಾಗೂ ಬೇಸಿಕ್ ಶಿಲೆಯ ಅಂತಸ್ಸರಣಗಳು ಭೇದಿಸಿವೆ. ಈ ಸ್ತರಗಳು ವಿವಿಧ ದರ್ಜೆಯ ರೂಪಾಂತರಕ್ಕೊಳಗಾಗಿ ಪದರುಶಿಲೆ, ಗೀರುಶಿಲೆ, ಫಿಲೈಟ್, ಕ್ವಾರ್ಟ್ಸೈಟ್ ಮತ್ತು ಅಮೃತಶಿಲೆಗಳಾಗಿ ಮಾರ್ಪಟ್ಟಿವೆ. ಉತ್ತರ ಹೋಪೇ ಮತ್ತು ದಕ್ಷಿಣ ಮಂಚೂರಿಯಲ್ಲಿರುವ ಈ ಶಿಲಾಶ್ರೇಣಿಗಳಲ್ಲಿ ವಿಸ್ತಾರವಾದ ಕಬ್ಬಿಣ ಅದಿರಿನ ಸ್ತರಗಳನ್ನು ಕಾಣಬಹುದು. ಸಿನಿಯನ್ ಹಂತದ ಸ್ತರಗಳು ಉತರ ಚೀನದಲ್ಲಿ ಕಾಣಬರುತ್ತವೆ. ಇವು ಬಹುಮಟ್ಟಿಗೆ ಕ್ವಾರ್ಟ್ಸೈಟ್ ಸ್ಲೇಟ್ ಮತ್ತು ಸಿಲಿಕಾಂಶಯುಕ್ತ ಸುಣ್ಣಶಿಲೆಗಳಿಂದಾಗಿವೆ. ಸುಣ್ಣಶಿಲಾಸ್ತರಗಳಲ್ಲಿ ಆಲ್ಗಿಯನ್ನೇ ಹೋಲುವ ಹಲಕೆಲವು ರಚನೆಗಳನ್ನು ಭೂವಿಜ್ಞಾನಿಗಳು ಗುರುತಿಸಿದ್ದಾರೆ.

ಕೆಳಕೇಂಬ್ರಿಯನ್ ಯುಗದ ಜೇಡುಶಿಲೆ, ಸುಣ್ಣಶಿಲೆ, ಪೆಂಟೆಶಿಲೆ ಮತ್ತು ಮರಳು ಶಿಲಾಸ್ತರಗಳನ್ನು ಚೀನದ ವಾಯವ್ಯ, ಕೇಂದ್ರ ಮತ್ತು ಪಶ್ಚಿಮಭಾಗಗಳಲ್ಲಿ ಕಾಣಬಹುದು. ಇವುಗಳ ಬಣ್ಣ ಬಹುತೇಕ ಕೆಂಪು. ಇವುಗಳಲ್ಲಿ ಆ ಯುಗದ ಹಲವಾರು ಜೀವ್ಯವಶೇಷಗಳಿವೆ. ಮುಖ್ಯವಾಗಿ ರೆಡ್‍ಲಿಕಿಯ ಎಂಬ ತ್ರಿಖಂಡಿಯ (ಟ್ರೈಲೊಬೈಟ್) ಅವಶೇಷಗಳು ವಿಶೇಷವಾಗಿ ಕಂಡುಬಂದಿವೆ. ಮಧ್ಯ ಕೇಂಬ್ರಿಯನ್ ಯುಗದ ನಿಕ್ಷೇಪಗಳು ಉತ್ತರ ಪ್ರಾಂತ್ಯಗಳಲ್ಲಿ ಮಾತ್ರ ಸೀಮಿತವಾಗಿವೆ. ಇವು ಬಹುಮಟ್ಟಿಗೆ ಊಲಿಟಿಕ್ ಸುಣ್ಣಶಿಲೆ ಮತ್ತು ಜೇಡುಶಿಲಾಸ್ತರಗಳಿಂದ ಆದಂಥವು. ಈ ನಿಕ್ಷೇಪಗಳಲ್ಲಿ ಪ್ರಾಚೀನ ಜೀವ್ಯವಶೇಷಗಳು ಅಸಂಖ್ಯಾತ. ದಕ್ಷಿಣಕ್ಕೆ ಸರಿದಂತೆಲ್ಲ ಮೇಲಿನ ಕೇಂಬ್ರಿಯನ್ ಯುಗದ ಸ್ತರಗಳು ಕಾಣಬರುತ್ತವೆ. ಇವು ಮುಖ್ಯವಾಗಿ ಸುಣ್ಣಶಿಲಾಸ್ತರಗಳು. ಇವುಗಳ ನಡುವೆ ಅಲ್ಲಲ್ಲೇ ಪೆಂಟೆಶಿಲೆ ಮತ್ತು ಜೇಡುಶಿಲಾಸ್ತರಗಳನ್ನು ಗುರುತಿಸಬಹುದು. ಹಲವಾರು ಕಡೆ ಕೇಂಬ್ರಿಯನ್ ಶಿಲಾಸ್ತರಗಳ ಮೇಲೆ ಕೆಳ ಆರ್ಡೊವಿಷಿಯನ್ ಸ್ತರಗಳು ನಿಕ್ಷೇಪಗೊಂಡಿವೆ. ಇವುಗಳಲ್ಲಿ ಸುಣ್ಣ ಹಾಗೂ ಡಾಲೊಮಿಟಿಕ್ ಸುಣ್ಣಶಿಲಾಸ್ತರಗಳು ಹೆಚ್ಚಾಗಿ ವ್ಯಾಪಿಸಿವೆ. ನಡುವೆ ಅಲ್ಲಲ್ಲೇ ಜೇಡುಶಿಲಾಸ್ತರಗಳು ಉಂಟು. ಇವುಗಳಲ್ಲಿ ಗ್ರಾಪ್ಟೊಲೈಟ್ ಅವಶೇಷಗಳಿವೆ. ಅಷ್ಟು ಆಳವಿರದ ಜಲಭಾಗಗಳ ಜನ್ಯಲಕ್ಷಣಗಳನ್ನು ಈ ಜೇಡುಶಿಲಾಸ್ತರಗಳು ಮತ್ತು ಜೇಡುಸುಣ್ಣ ಶಿಲಾಸ್ತರಗಳು ಸೂಸುತ್ತವೆ. ಮಧ್ಯ ಆರ್ಡೊವಿಷಿಯನ್ ಯುಗದ ಶಿಲಾಶ್ರೇಣಿಗಳು ಆ ಕಾಲದ ಎರಡು ಪ್ರಮುಖ ಮಹಾಭಿನತಿಗಳಲ್ಲಿ (ಜಿಯೊಸಿನ್‍ಕ್ಲೈನ್ಸ್) ನಿಕ್ಷೇಪಗೊಂಡಿವೆ. ಇವೇ ಇಂದಿನ ಸಿನ್‍ಲಿಂಗ್ ಮತ್ತು ನ್ಯಾನ್‍ಕಿಂಗ್ ಬೆಟ್ಟ ಪ್ರದೇಶಗಳು. ಇವು ಬಹುಮಟ್ಟಿಗೆ ಸುಣ್ಣಶಿಲಾಸ್ತರಗಳು. ಉತ್ತರ ಮತ್ತು ದಕ್ಷಿಣ ಅಭಿನತೀಯ ಸ್ತರಗಳಲ್ಲಿ ಅನುಕ್ರಮವಾಗಿ ಆಕ್ಟಿನೊಸಿರಾಸ್ ಮತ್ತು ಆರ್ಥೋಸಿರಾಸ್ ಎಂಬ ಜೀವ್ಯವಶೇಷಗಳಿವೆ. ಅಲ್ಲಲ್ಲೇ ಗ್ರಾಪ್ಟೊಲೈಟ್ ಅವಶೇಷಗಳು ಹುದುಗಿರುವ ಜೇಡುಶಿಲಾಸ್ತರಗಳನ್ನು ಕಾಣಬಹುದು. ಮೇಲಿನ ಆರ್ಡೊವಿಷಿಯನ್ ಶಿಲಾಸ್ತರಗಳು ಪಶ್ಚಿಮ ಹೂಪೇ ಮತ್ತು ದಕ್ಷಿಣ ಆನ್‍ಹ್ವೆ ಪ್ರಾಂತ್ಯಗಳಲ್ಲಿ ಚದುರಿಹೋಗಿವೆ.

ಸಿನ್‍ಲಿಂಗ್ ಶ್ರೇಣಿ ಹಾಗೂ ಅದರ ದಕ್ಷಿಣದತ್ತ ಆರ್ಡೊವಿಷಿಯನ್ ಸ್ತರಗಳ ಮೇಲೆ ಕೆಳ ಸೈಲೂರಿಯನ್ ಯುಗದ (440 ದಶಲಕ್ಷ ವರ್ಷಗಳ ಹಿಂದೆ) ಶಿಲೆಗಳು ಹರಡಿವೆ. ಇವುಗಳಲ್ಲಿ ಗ್ರಾಪ್ಟೊಲೈಟ್ ಜೇಡುಶಿಲಾಸ್ತರಗಳೇ ಬಲು ಪ್ರಧಾನವಾದವು. ಶ್ರೇಣಿಯ ನಡುವೆ ಅಲ್ಲಲ್ಲಿ ಮರಳುಶಿಲೆ ಮತ್ತು ಪೆಂಟೆಶಿಲೆಯ ಸಣ್ಣಮಟ್ಟ ಸ್ತರಗಳನ್ನು ಕಾಣಬಹುದು. ಕೆಲವೆಡೆ ಕಾರಲ್ ಮತ್ತು ಬ್ರೇಕಿಯೊಪಾಡ್ ಜೀವ್ಯವಶೇಷಗಳಿಂದ ಕೂಡಿರುವ ಸುಣ್ಣ ಶಿಲಾಸ್ತರಗಳೂ ಇವೆ. ಮಧ್ಯ ಸೈಲೂರಿಯನ್ ಸ್ತರಗಳು ಎಲ್ಲೂ ಕಂಡುಬಂದಿಲ್ಲ. ಆದರೆ ಅತ್ಯಂತ ಕಿರಿಯ ಸೈಲೂರಿಯನ್ ಶಿಲಾಸ್ತರಗಳನ್ನು ಸಿನ್ಲಿಂಗ್ ಶ್ರೇಣಿಯ ನೈಋತ್ಯಭಾಗಗಳಲ್ಲಿ ಗುರುತಿಸಲಾಗಿದೆ. ಈ ಸ್ತರಗಳಲ್ಲಿ ಪ್ರಾಚೀನ ಮೀನಿನ ಅವಶೇಷಗಳಿರುವುದು ಕಂಡುಬಂದಿದೆ. ಸೈಲೂರಿಯನ್ ಯುಗದ ಅಂತ್ಯದಲ್ಲಿ ತಲೆದೋರಿದ ಭೂಚಟುವಟಿಕೆಗಳು ಚೀನದ ಇಡೀ ಭೂಭಾಗವನ್ನು ಮೇಲಕ್ಕೆತ್ತಿ ಖಂಡಪ್ರದೇಶವನ್ನಾಗಿಸಿದುವು. ಹೀಗಾಗಿ ಡಿವೋನಿಯನ್ ಯುಗದ (350–400 ದಶಲಕ್ಷ ವರ್ಷಗಳ ಹಿಂದೆ) ನಿಕ್ಷೇಪಗಳೂ ಬಲು ವಿರಳ. ಮಧ್ಯ ಡಿವೋನಿಯನ್ ಯುಗದ ಮರಳುಶಿಲೆ ಮತ್ತು ಸುಣ್ಣಶಿಲಾಸ್ತರಗಳು ಪಶ್ಚಿಮ ಸಿನ್‍ಲಿಂಗ್ ಪ್ರದೇಶದಲ್ಲೂ ಮೇಲಿನ ಡಿವೋನಿಯನ್ ಯುಗದ ಮರಳುಶಿಲೆ, ಜೇಡುಶಿಲೆ ಹಾಗೂ ಸುಣ್ಣಶಿಲಾಸ್ತರಗಳು ನೈರುತ್ಯ ಭಾಗಗಳಲ್ಲೂ ಹರಡಿವೆ.

ಕೆಳ ಕಾರ್ಬಾನಿಫೆರಸ್ ಯುಗದ (350 ದಶಲಕ್ಷ ವರ್ಷಗಳ ಹಿಂದೆ) ಶಿಲಾಸ್ತರಗಳು ಹೂನಾನ್, ಗ್ವೆಜೋ, ನ್ಯಾನ್‌ಕಿಂಗ್ ಬೆಟ್ಟಗಳು ಹಾಗೂ ಷಿನ್‌ಜಿಯಾಂಗ್ ಪ್ರದೇಶಗಳಲ್ಲಿವೆ. ಈ ನಿಕ್ಷೇಪಗಳಲ್ಲಿ ಮರಳುಶಿಲೆಯ ಮಂದವಾದ ಸ್ತರಗಳಿವೆ. ಇವುಗಳಲ್ಲಿ ಸಸ್ಯಾವಶೇಷಗಳನ್ನು ಕಾಣಲಾಗಿದೆ. ಸುಣ್ಣ ಶಿಲೆ ಮತ್ತು ಜೇಡುಶಿಲಾಸ್ತರಗಳನ್ನು ಅಲ್ಲಲ್ಲಿ ಕಾಣಬಹುದು. ಹೂನಾನ್ ಮತ್ತು ಗ್ವಾಂಗ್‌ಸೀ ಪ್ರಾಂತ್ಯದ ನಿಕ್ಷೇಪಗಳಲ್ಲಿ ಕಲ್ಲಿದ್ದಲೂ ದೊರೆಯುತ್ತದೆ. ಆರ್ಡೊವಿಷಿಯನ್ ಶಿಲಾಶ್ರೇಣಿಯ ಮೇಲೆ ಸಸ್ಯಾವಶೇಷಗಳಿಂದ ಕೂಡಿರುವ ಜೇಡುಶಿಲಾಸ್ತರಗಳೂ ಕಲ್ಲಿದ್ದಲಿಂದ ಕೂಡಿರುವ ಮರಳುಶಿಲಾಸ್ತರಗಳೂ ನಿಕ್ಷೇಪಗೊಂಡಿವೆ. ಇವುಗಳ ಜೊತೆಗೆ ಫ್ಯೂಸಿಲೈನ ಅವಶೇಷಗಳಿಂದಾದ ಸುಣ್ಣ ಶಿಲಾಸ್ತರಗಳನ್ನೂ ಕಾಣಬಹುದು. ಮೇಲಿನ ಕಾರ್ಬಾನಿಫೆರಸ್ ಯುಗದ (280 ದಶಲಕ್ಷ ವರ್ಷಗಳ ಹಿಂದೆ) ನಿಕ್ಷೇಪಗಳಲ್ಲಿ ಫ್ಯೂಸಲೈನ ಸುಣ್ಣ ಶಿಲಾಸ್ತರಗಳು, ಟೈಯುವಾನ್ ಶ್ರೇಣಿಯ ಮರಳುಶಿಲಾಸ್ತರಗಳು ಹಾಗೂ ಕಲ್ಲಿದ್ದಲಿರುವ ಜೇಡುಶಿಲಾಸ್ತರಗಳು ಇವೆ. ಇವುಗಳ ನಡುವೆ ಅಲ್ಲಲ್ಲೇ ಸಮುದ್ರೀಯ ಲಕ್ಷಣಗಳನ್ನು ತೋರುವ ಸುಣ್ಣಶಿಲೆಯ ಸಣ್ಣಪುಟ್ಟ ಸ್ತರಗಳನ್ನು ಕಾಣಲು ಸಾಧ್ಯ.

ದಕ್ಷಿಣ ಚೀನದಲ್ಲಿ ಕೆಳ ಪರ್ಮಿಯನ್ ಯುಗದ ಫ್ಯೂಸಲೈನ ಸುಣ್ಣಶಿಲಾಸ್ತರಗಳಿವೆ. ಉತ್ತರ ಪ್ರಾಂತ್ಯಗಳಲ್ಲಿ ಉತ್ತಮ ಕಲ್ಲಿದ್ದಲು ನಿಕ್ಷೇಪಗಳನ್ನು ಹೊಂದಿರುವ ಷಾನ್‌ಸಿ ಸ್ತರಗಳು, ಮರಳುಶಿಲೆ ಮತ್ತು ಜೇಡುಶಿಲಾಸ್ತರಗಳಿವೆ. ಇದೇ ಕಾಲದಲ್ಲಿ ಸಿನ್‌ಲಿಂಗ್ ಮಹಾಭಿನತಿಯಲ್ಲಿ ಪರ್ವತಜನ್ಯ ಚಟುವಟಿಕೆಗಳು ಉದ್ಭವಿಸಿದವು. ವಿಶಾಲಪ್ರದೇಶದಲ್ಲಿ ಹರಡಿದ್ದ ಶಿಲಾಸ್ತರಗಳು ಮಡಿಕೆ ಬಿದ್ದು ಅವುಗಳ ನಡುವೆ ಅಲ್ಲಲ್ಲೇ ಸ್ತರಭಂಗಗಳೂ ಏರ್ಪಟ್ಟುವು. ಕಾದ ಶಿಲಾರಸ ನೆಲದ ಮೇಲೆಲ್ಲ ಹರಿದು ಹೆಪ್ಪುಗಟ್ಟಿತು. ಮಧ್ಯ ಮತ್ತು

ಮೇಲಿನ ಪರ್ಮಿಯನ್ ಯುಗದ ನಿಕ್ಷೇಪಗಳನ್ನು ಉತ್ತರ ಹಾಗೂ ದಕ್ಷಿಣ ಚೀನಗಳಲ್ಲಿ ಕಾಣಬಹುದು. ಬಹುಮಟ್ಟಿಗೆ ಇವು ಉತ್ತಮ ಕಲ್ಲಿದ್ದಲು ನಿಕ್ಷೇಪಗಳನ್ನೊಳಗೊಂಡ ಮರಳುಶಿಲೆ ಹಾಗೂ ಜೇಡುಶಿಲಾಸ್ತರಗಳೇ ಆಗಿವೆ. ಇವುಗಳಲ್ಲಿ ಜೈಗ್ಯಾಂಟಾಪ್ಟರಿಸ್ ಎಂಬ ಸಸ್ಯಾವಶೇಷ ಉಂಟು. ಇದೇ ಭೂಯುಗಕ್ಕೆ ಸೇರಿದ ಜೆಷ್ವಾನ್ ಕೆಂಪು ತಗ್ಗು ಪ್ರದೇಶದಲ್ಲಿ ಡಾಲೊಮಿಟಿಕ್ ಸುಣ್ಣಶಿಲೆಯ ನಿಕ್ಷೇಪಗಳಿವೆ. ಈ ನಿಕ್ಷೇಪಗಳ ನಡುವೆ ಹಲವಾರು ಕಡೆ ಲವಣಸ್ತರಗಳು ಕಂಡುಬಂದಿವೆ. ದಕ್ಷಿಣಪ್ರಾಂತ್ಯದ ಗ್ವೇಜೋ ಪ್ರದೇಶದ ಸಮುದ್ರೀಯ ಸುಣ್ಣಶಿಲೆಯ ಮಂದಸ್ತರಗಳಲ್ಲಿ ಪೆಟ್ರೋಲಿಯಮ್ ದೊರೆಯುವ ಭೂಲಕ್ಷಣಗಳು ಕಾಣಿಸಿಕೊಂಡಿವೆ.

ಟ್ರಯಾಸಿಕ್ ಯುಗದ (190–225 ದಶಲಕ್ಷ ವರ್ಷಗಳ ಹಿಂದೆ) ನಿಕ್ಷೇಪಗಳಲ್ಲಿ ಬಹುಮಟ್ಟಿಗೆ ನೆಲಭಾಗದ ಲಕ್ಷಣಗಳು ಕಾಣಿಸಿವೆ. ಈ ನಿಕ್ಷೇಪಗಳು ಕೆಂಪು ಹಾಗೂ ಹಸಿರುಬಣ್ಣದ ಮರಳುಶಿಲೆ ಮತ್ತು ಜೇಡುಶಿಲಾಸ್ತರಗಳಿಂದಾಗಿವೆ. ಕೆಲವು ಸಸ್ಯಾವಶೇಷಗಳು ಮತ್ತು ಥಿರೊಮಾರ್ಫ್ ಎಂಬ ಸರೀಸೃಪದ ಅವಶೇಷಗಳು ಇವುಗಳಲ್ಲಿ ಕಂಡುಬಂದಿವೆ.

ಜೂರಾಸಿಕ್ ಯುಗದ (135–190 ದಶಲಕ್ಷ ವರ್ಷಗಳ ಹಿಂದೆ) ನಿಕ್ಷೇಪಗಳು ದೇಶದ ಅನೇಕ ಕಡೆ ವಿಸ್ತಾರವಾಗಿ ಹರಡಿವೆ. ಇವು ನೆಲಭಾಗ ಅಥವಾ ಸಿಹಿನೀರು ಪ್ರದೇಶದ ಲಕ್ಷಣಗಳನ್ನು ತಳೆದಿರುವ ಜೇಡುಶಿಲೆ, ಮರಳುಶಿಲೆ ಮತ್ತು ಪೆಂಟೆಶಿಲಾಸ್ತರಗಳಿಂದಾದವು. ಈ ಸ್ತರಗಳಲ್ಲಿ ಉತ್ತಮ ಕಲ್ಲಿದ್ದಲಿನ ನಿಕ್ಷೇಪಗಳೂ ಉಂಟು.

ಕಿಟೇಷಸ್ ಯುಗದ (55–135 ದಶಲಕ್ಷ ವರ್ಷಗಳ ಹಿಂದೆ) ಕೆಂಪು ಹಾಗೂ ಹಸಿರು ಮರಳುಶಿಲೆ ಮತ್ತು ಜೇಡುಶಿಲಾಸ್ತರಗಳನ್ನು ಮಂಗೋಲಿಯ, ಷೆನ್‌ಸೀ ಹಾಗೂ ಜೆಕ್ವಾನ್ ಪ್ರದೇಶಗಳಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ ಜಿಪ್ಸಮ್ ನಿಕ್ಷೇಪಗಳು ಮತ್ತು ಸರೀಸೃಪಗಳ ಅವಶೇಷಗಳಿವೆ. ಡೈನೊಸಾರ್ ಎಂಬ ಪೆಡಂಭೂತದ ಮೊಟ್ಟೆಗಳನ್ನು ಈ ನಿಕ್ಷೇಪಗಳಲ್ಲಿ ಪ್ರಾಚೀನ ಜೀವ್ಯವಶೇಷಗಳ ರೂಪದಲ್ಲಿ ಪತ್ತೆಹಚ್ಚಲಾಗಿದೆ. ಕ್ರಿಟೇಷಸ್ ಯುಗದ ಹಂತಗಳಲ್ಲಿ ಚೀನದ ಆಗ್ನೇಯ ಭಾಗಗಳು ಭೂಚಟುವಟಿಕೆಗಳಿಗೊಳಗಾಗಿ ಲಾವಾಸ್ತರಗಳು ಹಾಗೂ ಗ್ರ್ಯಾನೈಟ್ ಅಂತಸ್ತರಣಗಳು ತಲೆದೋರಿದುವು. ಇವುಗಳೊಡನೆ ಕಬ್ಬಿಣ ಅದಿರು ನಿಕ್ಷೇಪಗಳೂ ಕಾಣಿಸಿಕೊಂಡುವು.

ದೇಶದ ಹಲವಾರು ಕಡೆ, ಅದರಲ್ಲೂ ಆಗ್ನೇಯ ಭಾಗಗಳಲ್ಲಿ, ಇಯೊಸೀನ್ ಯುಗದ (60 ದಶಲಕ್ಷ ವರ್ಷ ಪ್ರಾಚೀನದಿಂದ 40 ದಶಲಕ್ಷ ವರ್ಷ ಪ್ರಾಚೀನದವರೆಗಿನ ಅವಧಿ) ಶಿಲಾಸ್ತರಗಳಿವೆ. ಬಹುವಾಗಿ ಇವು ಕೆಂಬಣ್ಣದ ಪೆಂಟೆಶಿಲೆ, ಮರಳುಶಿಲೆ ಮತ್ತು ಸುಣ್ಣ ಜೇಡುಶಿಲಾಸ್ತರಗಳು. ಇವುಗಳ ನಡುವೆ ಅಲ್ಲಲ್ಲೇ ಜಿಪ್ಸಮ್ ನಿಕ್ಷೇಪಗಳು ಮತ್ತು ಸಸ್ತನಿಗಳ ಅವಶೇಷಗಳಿವೆ. ಮಂಚೂರಿಯದ ಆಲಿಗೊಸೀನ್ ಶಿಲಾಶ್ರೇಣಿಗಳಲ್ಲಿ ಉತ್ತಮ ಬಿಟ್ಯುಮಿನಸ್ ಕಲ್ಲಿದ್ದಲ ನಿಕ್ಷೇಪಗಳಿವೆ. ಪ್ಲಿಯೊಸೀನ್ ಕಾಲದ (1–11 ದಶಲಕ್ಷ ವರ್ಷಗಳ ಹಿಂದೆ) ಕೆಂಪುಜೇಡು ಹಾಗೂ ಜೇಡುಮರಳಿನ ನಿಕ್ಷೇಪಗಳನ್ನು ದೇಶದ ಉತ್ತರ ಪ್ರದೇಶಗಳಲ್ಲೂ ಮಯೋಸೀನ್ ಕಾಲದ (11–25 ದಶಲಕ್ಷ ವರ್ಷಗಳ ಹಿಂದೆ) ನುರುಜುಶಿಲೆ ಮತ್ತು ಕೆಂಪುಜೇಡು ಶಿಲಾಸ್ತರಗಳನ್ನು ದಕ್ಷಿಣ ಭಾಗಗಳಲ್ಲೂ ಗುರುತಿಸಲಾಗಿದೆ. ಚೌಕಟೀನ್ ಎಂಬ ನಿಕ್ಷೇಪಗಳು ಬಹು ವಿಶಿಷ್ಟವಾದವು. ಇವು ಪ್ಲೀಸ್ಟೋಸೀನ್ ಕಾಲಕ್ಕೆ (1 ದಶಲಕ್ಷ ವರ್ಷಗಳ ಹಿಂದೆ) ಸೇರಿದ್ದು. ಇವುಗಳಲ್ಲಿ ಸೈನಾನ್‌ಥ್ರೋಪಸ್ ಪೆಕೆನೆನಿಸ್ ಎಂಬ ಆದಿಮಾನವನ ಅವಶೇಷಗಳನ್ನು ಪತ್ತೆಹಚ್ಚಲಾಯಿತು. ಉತ್ತರ ಚೀನದ ವಿಸ್ತಾರ ಪ್ರದೇಶಗಳಲ್ಲಿ ಹರಡಿರುವ ಮೆಕ್ಕಲು ಧೂಳು ನಿಕ್ಷೇಪಗಳು (ಲೋಯೆಸ್), ಯಾಂಗ್‌ಟ್ಸೀ ಮತ್ತು ಇತರ ನದೀ ಕಣಿವೆಗಳಲ್ಲಿರುವ ಹಳದಿ ಮೆಕ್ಕಲು ನಿಕ್ಷೇಪಗಳು ಪ್ಲೀಸ್ಟೋಸೀನ್ ಹಾಗೂ ಇತ್ತೀಚಿನ ಕಾಲದವು.

**II ಭೌತಲಕ್ಷಣ :** ಚೀನವನ್ನು ದಕ್ಷಿಣದ ಪರ್ವತಭಾಗ ಮತ್ತು ಉತ್ತರದ ಬಯಲು ಪ್ರದೇಶ ಎಂದು ವಿಭಜಿಸಬಹುದು. ಪಶ್ಚಿಮ ಪೂರ್ವಭಾಗಗಳಲ್ಲಿ ಪ್ರಾದೇಶಿಕ ಭಿನ್ನತೆಗಳು ಎದ್ದುಕಾಣುತ್ತವೆ. ಉತ್ತರಚೀನದ ಬಯಲುನಾಡು ಸಮುದ್ರತೀರದಿಂದ 645 ಕಿಮೀ ವರೆಗೆ ವ್ಯಾಪಿಸಿದೆ. ಅಲ್ಲಿಂದ ಮುಂದಕ್ಕೆ ಷಾನ್‌ಸೀ, ಷೆನ್‌ಸೀ ಮತ್ತು ಕ್ಯಾನ್ಸೂ ಪ್ರಾಂತ್ಯಗಳ ಮೇಲ್ನಾಡು. ವಾಯವ್ಯ ಪ್ರದೇಶದ ಬಹುಭಾಗ ಮೆಕ್ಕಲುಭೂಮಿ. ಬಿರುಗಾಳಿಗಳಿಂದ ತೂರಿಬಂದ ಮೆಕ್ಕಲು ಮಣ್ಣಿನ ಪದರ 15 ರಿಂದ 75 ಮೀ ವರೆಗೆ ದಪ್ಪವಾಗಿ ಹರಡಿ ನೆಲ ಫಲವತ್ತಾಗಿದೆ. ನೀರಿನ ಅನುಕೂಲ ಇರುವ ಕಡೆ ವ್ಯವಸಾಯ ಚೆನ್ನಾಗಿ ನಡೆಯುತ್ತದೆ. ಆದರೆ ಈ ಭಾಗಗಳಲ್ಲಿ ಮಳೆ ಕಡಿಮೆ; ನೀರಿನ ಆಸರೆ ಹೆಚ್ಚಾಗಿ ಇಲ್ಲ.

ಪೂರ್ವಭಾಗದಲ್ಲಿ, ಉತ್ತರ ಚೀನ ಬಯಲುನಾಡು ಫಲವತ್ತಾದ್ದು; ವ್ಯವಸಾಯಕ್ಕೆ ಪ್ರಶಸ್ತ. ಇಲ್ಲಿ ಜನಸಾಂದ್ರತೆ ಹೆಚ್ಚು. ಉತ್ತರ ಚೀನ ಮತ್ತು ದಕ್ಷಿಣ ಮಂಚೂರಿಯ ಬಯಲಿನ ನಡುವೆ ಸಂಪರ್ಕ ಕಲ್ಪಿಸುವ ಇಕ್ಕಟ್ಟಾದ ತೀರಮಾರ್ಗ ಸಮುದ್ರಕ್ಕೂ ಜೆಹೋಲ್ ಪರ್ವತಗಳಿಗೂ ನಡುವೆ ಇದೆ.

ಮಧ್ಯ ಮತ್ತು ದಕ್ಷಿಣ ಚೀನಗಳಲ್ಲಿ ಪೂರ್ವ–ಪಶ್ಚಿಮ ಪ್ರಾದೇಶಿಕ ವ್ಯತ್ಯಾಸಗಳು ಅಷ್ಟಿಲ್ಲ. ಪಶ್ಚಿಮ ಭಾಗದ ಪರ್ವತಗಳಲ್ಲಿ ಕಣಿವೆ ದಾರಿಗಳು ಕಡಿಮೆ. ಪೂರ್ವ ಭಾಗದಲ್ಲಿ ಯಾಂಗ್ಟ್ಸೀ ನದಿ ಸಮುದ್ರದಿಂದ ಪಶ್ಚಿಮಕ್ಕೆ 1125 ಕಿಮೀ ದೂರ ಡೂಂಗ್‌ಟಿಂಗ್ ಸರೋವರದ ವರೆಗೆ ಇಳುಕಲು ನೆಲವನ್ನು ಸೃಷ್ಟಿಸಿದೆ. ದಕ್ಷಿಣದಲ್ಲಿ ಷೀ ಕ್ಯಾಂಗ್ ನದಿ ಪ್ರದೇಶವೂ ಇದೆ ರೀತಿ ತಗ್ಗಾದ್ದು.

**ಸ್ವಾಭಾವಿಕ ವಿಭಾಗಗಳು :** ಚೀನವನ್ನು ಭೌಗೋಳಿಕವಾಗಿ 10 ಪ್ರದೇಶಗಳನ್ನಾಗಿ ವಿಂಗಡಿಸಬಹುದು. : 1. ಟಿಬೆಟ್ ಪ್ರಸ್ಥಭೂಮಿ: ಸಮುದ್ರಮಟ್ಟದಿಂದ ಇದರ ಎತ್ತರ 3660 ಮೀ. ರಾಜ್ಯದ ಸು. ಕಾಲುಭಾಗ ಇದರ ವಿಸ್ತೀರ್ಣ. 2. ಇಡೀ ಷಿನ್‌ಜಿಯಾಂಗ್ ವೀಗುರ್ ಸ್ವಯಮಾಡಳಿತ ಪ್ರದೇಶಗಳನ್ನೊಳಗೊಂಡ ಷಿನ್‌ಜಿಯಾಂಗ್ ತಗ್ಗು ಭೂಮಿ: ಟಿಯೆನ್‌ಷಾನ್ ಪರ್ವತಶ್ರೇಣಿಯಿಂದಾಗಿ ಈ ಪ್ರದೇಶ ಎರಡು ಭಾಗಗಳಾಗಿದೆ. ಅವುಗಳಲ್ಲಿ ಉತ್ತರಕ್ಕಿರುವುದು ಜುಂಗಾರಿಯ ; ದಕ್ಷಿಣದಲ್ಲಿ ಡಾರೀಮ್ ನದೀ ಬಯಲು. 3. ಮಂಗೋಲಿಯ ಪ್ರಸ್ಥಭೂಮಿ : ಈ ಪ್ರದೇಶ ಈಶಾನ್ಯದ ಷಿಂಗಾನ್ ಪರ್ವತಗಳಿಂದ ಷಿನ್‌ಜಿಯಾಂಗ್ ನದಿಯವರೆಗೆ ಹರಡಿದೆ. 4. ಮೆಕ್ಕಲು ಭೂಮಿ : ಇದು ಮಂಗೋಲಿಯ ಬಯಲುನಾಡಿನ ದಕ್ಷಿಣದಲ್ಲಿದೆ : ಷಾನ್‌ಸೀ ಮತ್ತು ಕ್ಯಾನ್ಸೂ ಪ್ರಾಂತ್ಯಗಳ ಸ್ವಲ್ಪಭಾಗ ಇದಕ್ಕೆ ಸೇರಿದೆ. ಭೂಸವೆತದಿಂದಾಗಿ ಈ ಪ್ರದೇಶದಲ್ಲಿ 183 ಮೀ.ಗಳಷ್ಟು ಆಳದ ಅನೇಕ ದರಿ ಮತ್ತು ಕಮರಿಗಳುಂಟು. 5. ಸಚ್ವಾನ್ ತಗ್ಗುಪ್ರದೇಶ : ಇದು ಬಹುಮಟ್ಟಿಗೆ ಸಚ್ವಾನ್ ಪ್ರಾಂತ್ಯಗಳನ್ನೊಳಗೊಂಡಿದೆ. ಇಲ್ಲಿಯ ಫಲವತ್ತಾದ ಕಣಿವೆಗಳು ನೆರೆಮಣ್ಣಿನಿಂದ ಕೂಡಿದವು. 6. ಯುನ್ನಾನ್ ಗ್ವೇಜೋ ಮಲೆನಾಡು : ಇಲ್ಲಿ ಕಮರಿ ಹಾಗೂ ದರಿಗಳು ಹೆಚ್ಚಾದ ಪ್ರಯುಕ್ತ ಭೂಮಿಯ ಬಹುಭಾಗ ವ್ಯವಸಾಯಕ್ಕೆ ಅನುಕೂಲವಾಗಿಲ್ಲ. 7. ಈಶಾನ್ಯ ಬಯಲುನಾಡು : ಸುಂಗಾರೀ ಮತ್ತು ಲಿಯೌ ನದಿಗಳ ನಡುವಣ ಜಲಾನಯನ ಭೂಮಿಯನ್ನೊಳಗೊಂಡಿದೆ. ಇದರ ವಿಸ್ತಾರ ಉತ್ತರದಿಂದ ದಕ್ಷಿಣಕ್ಕೆ 965 ಕಿಮೀ ; ಪೂರ್ವದಿಂದ ಪಶ್ಚಿಮಕ್ಕೆ 402 ಕಿಮೀ. 8 ಉತ್ತರ ಚೀನ ಬಯಲುನಾಡು : ಚೀನದ ದೊಡ್ಡ ಬಯಲುಗಳಲ್ಲಿ ಇದು ಎರಡನೆಯದು ; ಷಾನ್‌ಸೀ ಪ್ರಾಂತ್ಯವನ್ನು ಬಿಟ್ಟು ಉತ್ತರ ಚೀನ ಭಾಗವನ್ನು ಆವರಿಸಿದೆ. 9 ಯಾಂಗ್ಟ್ಸೀ ನದಿಯ ಹರಿವಿನ ನಡುವಿನ ಮತ್ತು ಅಂತ್ಯದ ಭಾಗ : ಈ ಪ್ರದೇಶದಲ್ಲಿ ನದಿಯ ಇಬ್ಬದಿಯಲ್ಲೂ ಸಮುದ್ರದವರೆಗೆ ಫಲವತ್ತಾದ ಭೂಮಿ ಇದೆ. 10 ಆಗ್ನೇಯ ಬೆಟ್ಟಗುಡ್ಡ ಪ್ರದೇಶ : ಇದು ಯಾಂಗ್ಟ್ಸೀ ನದಿಯ ಮಧ್ಯ ಹರಿವಿನ ದಕ್ಷಿಣ ಭಾಗದಲ್ಲಿದೆ.

**ಪರ್ವತಗಳು :** ಟಿಬೆಟ್ ಪ್ರಾಂತ್ಯದ ಪರ್ವತಗಳನ್ನು ಬಿಟ್ಟರೆ ಚೀನದಲ್ಲಿ ದಟ್ಟವಾಗಿ ಸಾಗುವ ಮತ್ತು ಎತ್ತರ ಶಿಖರಗಳಿಂದ ಕೂಡಿದ ಪರ್ವತಗಳು ಕಡಿಮೆ. ಪರ್ವತಗಳು ಅವಿಚ್ಛಿನ್ನವಾಗಿ ಸಾಗುವ ಕಡೆ ಹವಾಗುಣದ ನಿರ್ಧಾರದಲ್ಲಿ ಅವುಗಳ ಪಾತ್ರ ವಿಶಿಷ್ಟವಾದ್ದು. ಚೀನದ ಈಶಾನ್ಯಭಾಗದಲ್ಲಿ ಮಹಾ ಷಿಂಗಾನ್ ಪರ್ವತಶ್ರೇಣಿ ವ್ಯಾಪಿಸಿದೆ. ಅದರ ಪೂರ್ವಪ್ರದೇಶ ಸಮತಲವಾಗಿದ್ದು ಅಲ್ಲಲ್ಲಿ ಬೆಟ್ಟಗಳಿವೆ. ಈ ಭಾಗ ವ್ಯವಸಾಯಕ್ಕೆ ಅನುಕೂಲ; ಈ ಪರ್ವತದ ಕಡೆ ಕಿರುಬೆಟ್ಟಗಳ ಸಾಲು, ಇಳಕಲು ಭೂಮಿ, ಬಯಲುಗಳು ಇವೆ.

ಷಿಂಗಾನ್ ಪರ್ವತಸಾಲು ಬೇಸಗೆ ಮಳೆಯನ್ನು ತಡೆಯುವುದರಿಂದ ಅಲ್ಲಿ ಮಳೆ ಕಡಿಮೆ. ಈ ಭಾಗದಲ್ಲಿ ಬೇಸಾಯಕ್ಕಿಂತ ಪಶುಪಾಲನೆ ಮುಖ್ಯ ಕಸುಬು. ಇನ್‌ಷಾನ್ ಪರ್ವತ ಶ್ರೇಣಿ ಮಂಗೋಲಿಯವನ್ನು ಉತ್ತರ ಚೀನದಿಂದ ಪ್ರತ್ಯೇಕಿಸಿದೆ. ಟೈಹಾಂಗ್ ಪರ್ವತಗಳು ಉತ್ತರ ಚೀನ ಬಯಲು ನಾಡಿಗೂ ಲೂಯೆಸ್ ಪ್ರಸ್ಥಭೂಮಿಗೂ ನಡುವೆ ಇವೆ. ಉತ್ತರಚೀನ ಬಯಲು ಮಂಚೂರಿಯ ಬಯಲಿನಿಂದ ಪ್ರತ್ಯೇಕಗೊಂಡಿರುವುದು ಒಳಮಂಗೋಲಿಯದ ಮಲೆನಾಡಿನಿಂದಾಗಿ, ಚಿನ್‌ಲಿಂಗ್ ಪರ್ವತ ಚೀನವನ್ನು ಎರಡು ಪ್ರತ್ಯೇಕ ಹವಾಗುಣ ಪ್ರದೇಶಗಳನ್ನಾಗಿ ವಿಭಜಿಸಿದೆ. ಈ ಪರ್ವತದ ಉತ್ತರಭಾಗದಲ್ಲಿ ಚಳಿ ಹೆಚ್ಚು, ನೆಲ ಬಹುತೇಕ ಬಂಜರು. ಪರ್ವತದ ದಕ್ಷಿಣಭಾಗ ಸಮತಲವಾಗಿಲ್ಲ ; ಅಲ್ಲಿ ಬಿಸಿಲು ಮತ್ತು ಮಳೆ ಹೆಚ್ಚು. ಪಶ್ಚಿಮದಲ್ಲಿ ಕ್ಯಾನ್ಸೂ ಪ್ರಾಂತ್ಯದಲ್ಲಿ ಪ್ರಾರಂಭವಾಗುವ ಈ ಪರ್ವತಶ್ರೇಣಿ ಪೂರ್ವಕ್ಕೆ ಸಾಗಿ ಆನ್‌ಹ್ವೇ ಪ್ರಾಂತ್ಯದ ಮಧ್ಯಭಾಗದಲ್ಲಿ ಇಳಿಯುತ್ತ ಬಂದು ಅದೃಶ್ಯವಾಗುತ್ತದೆ. ಇಲ್ಲಿಯ ಬೆಳೆ ಚಹ ಮತ್ತು ಬತ್ತ. ಮಧ್ಯ ಚೀನದ ವೂಷಾನ್ ಪರ್ವತ ಪೂರ್ವ ಚೀನವನ್ನು ಪಶ್ಚಿಮ ಚೀನದಿಂದ ಪ್ರತ್ಯೇಕಿಸಿದೆ. ನಾನ್‌ಲಿಂಗ್ ಪರ್ವತಸಾಲೂ ವಾಯುಗುಣ ನಿರ್ಧಾರಕವಾದ್ದು ; ಮಧ್ಯ ಚೀನ ದಕ್ಷಿಣ ಚೀನದಿಂದ ಪ್ರತ್ಯೇಕಗೊಳ್ಳಲು ಅದು ಕಾರಣ, ಅದರ ಉತ್ತರದಲ್ಲಿ ವಿಶಾಲವಾದ ಹಾಗು ಫಲವತ್ತಾದ ಯಾಂಗ್‌ಟ್ಸೀ ನದಿ ಜಲಾನಯನ ಭೂಮಿಯೂ ದಕ್ಷಿಣದಲ್ಲಿ ದಕ್ಷಿಣ ಚೀನದ ಪ್ರಸಿದ್ಧ ಜಲಮಾರ್ಗಗಳೂ ಉಂಟು. ಈ ಪರ್ವತದಿಂದ ಪಶ್ಚಿಮಭಾಗದಲ್ಲಿ ಬೇಸಗೆಯ ಮಳೆಗಳಿಗೆ ಅಡಚಣೆ. ಕುನ್‌ಲುನ್ ಮತ್ತು ಸಚ್ವಾನ್ ಪರ್ವತ ಶ್ರೇಣಿಗಳು ಚಿಂಗ್‌ಹೈ–ಷೀ ಕ್ಯಾಂಗ್–ಟಿಬೆಟ್ ಪ್ರಸ್ಥಭೂಮಿಗೆ ಉತ್ತರ ಹಾಗೂ ಪೂರ್ವ ಅಂಚುಗಳು, ಅದು ಪಶ್ಚಿಮದಲ್ಲಿ ಪಾಮೀರ್ ಪ್ರಸ್ಥಭೂಮಿಯಲ್ಲಿ ಪ್ರಾರಂಭವಾಗಿ ಕುನ್‌ಲುನ್, ಅಲ್ಟಿನ್‌ತಾಗ್, ನಾನ್‌ಷಾನ್, ಮಿನ್ಷಾನ್ ಮೊದಲಾದ ಹೆಸರುಗಳನ್ನು ತಾಳಿ ಯುನ್ನಾನ್ ಪ್ರಾಂತ್ಯದ ಪಶ್ಚಿಮ ಅಂಚಿನ ಬಳಿ ಇಳಿದು ಸಾಗಿ ಅದೃಶ್ಯವಾಗುತ್ತದೆ. ಇಲ್ಲಿಯ ಜನರ ವೃತ್ತಿ ಪಶುಪಾಲನೆ. ಹುಲ್ಲು ಬಯಲುಗಳು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಚೀನದ ಪರ್ವತಶಿಖರಗಳಲ್ಲಿ ಟಯೆನ್ ಷಾನ್ ಪರ್ವತದ ಟೆಂಗ್ರಿಕಾನ್‌ನ ಎತ್ತರ 7200 ಮೀ. ಚಿನ್‌ಲಿಂಗ್ ಪರ್ವತದ ಅತ್ಯಂತ ಎತ್ತರದ ಶಿಖರದ ಎತ್ತರ 3658 ಮೀ. ಕುನ್‌ಲುನ್ ಪರ್ವತದ ಅತ್ಯಂತ ಎತ್ತರ ಶಿಖರ 7620 ಮೀ.



ಟೀಯೆನ್ ಷಾನ್ ಪರ್ವತದ ಒಂದು ದೃಶ್ಯ

ಚೀನದ ಪರ್ವತಗಳು ರಾಜ್ಯವನ್ನು ಪ್ರತ್ಯೇಕ ಭೌಗೋಳಿಕ ಪ್ರದೇಶಗಳನ್ನಾಗಿ ವಿಂಗಡಿಸುವಂತಿದ್ದರೂ ಅವುಗಳ ಕಣಿವೆಗಳಲ್ಲಿ ಹರಿಯುವ ನದಿಗಳು ಜಲಮಾರ್ಗಗಳಾಗಿ ಚೀನದ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸಿವೆ. ಚೀನದ 5 ಜಲಮಾರ್ಗಗಳೂ 2 ಭೂಮಾರ್ಗಗಳೂ ಪ್ರಸಿದ್ಧವಾಗಿವೆ. 1. ತುಂಗ್ ಕ್ವಾಂಗ್: ಹ್ವಾಂಗ್ ಹೋ ನದಿಯ ಉತ್ತರ ದಂಡೆಯ ಮೇಲೆ ಇರುವ ಇದು ಉತ್ತರ ಚೀನ ಬಯಲುನಾಡಿಗೆ ಪಶ್ಚಿಮ ದ್ವಾರ. 2. ಯಾಂಗ್‌ಟ್ಸೀ ಕಣಿವೆ ದಾರಿ: ವೂಷಾನ್ ಪರ್ವತಗಳಲ್ಲಿದೆ. ಸಚ್ವಾನ್ ಜಲಾನಯನ ಭೂಮಿಗೂ ಪೂರ್ವಭಾಗದ ಯಾಂಗ್‌ಟ್ಸೀ ಮೈದಾನ ಪ್ರದೇಶಕ್ಕೂ ಸಂಬಂಧ ಕಲ್ಪಿಸಿದೆ. 3. ನನ್‌ಲಿಂಗ್ ತೆರಪು : ಜಿಯಾಂಗ್‌ಸೀ ಮತ್ತು ಗ್ವಾಂಗ್‌ಡುಂಗ್ ಪ್ರಾಂತ್ಯಗಳಿಗೆ ಸಂಪರ್ಕ ಕಲ್ಪಿಸಿರುವ ಕಣಿವೆಯಿದು. ನಗರದಿಂದ ಕ್ಯಾಂಟನ್‌ಹ್ಯಾಂಕೌ ವರೆಗಿನ ರೈಲುಮಾರ್ಗ ಈ ಕಣಿವೆಯಲ್ಲಿ ಸಾಗಿದೆ. 4. ಚಿನ್‌ಲಿಂಗ್ ಕಣಿವೆ ಮಾರ್ಗಗಳು: ಚಿನ್‌ಲಿಂಗ್ ಪರ್ವತದ ಎಂಟು ಕಣಿವೆ ಮಾರ್ಗಗಳಿಂದ ಉತ್ತರ ಮತ್ತು ದಕ್ಷಿಣ ಚೀನಗಳ ನಡುವೆ ಸಂಪರ್ಕ ಏರ್ಪಟ್ಟಿದೆ. 5 ಮಂಗೋಲಿಯ ಪ್ರಸ್ಥಭೂಮಿಗೂ ಉತ್ತರ ಚೀನ ಬಯಲುನಾಡಿಗೂ ಸಂಚಾರವನ್ನು ಸಾಧ್ಯಗೊಳಿಸಿರುವ ಕಲ್ಗನ್ ಕಣಿವೆ ಮಾರ್ಗ. 6 ಕ್ಯಾನ್ಸೂ ಮುಖ್ಯಮಾರ್ಗ: ದಕ್ಷಿಣದ ಚಿಲನ್, ಉತ್ತರದ ಹೋಲಿ ಪರ್ವತಗಳ (ಟಿಬೆಟ್–ಮಂಗೋಲಿಯ) ನಡುವಣ 1610 ಕಿಮೀಗಳ ಹಿರಿಯ ಮಾರ್ಗ. 7 ಲಿಯೌಸಿ ಮಾರ್ಗ : ಕಡಲತೀರದಲ್ಲಿ ಬೋ–ಹೈ ಕೊಲ್ಲಿಯ ಅಂಚಿನಲ್ಲಿ ಉತ್ತರ ಚೀನ ಮತ್ತು ಮಂಗೋಲಿಯ ಬಯಲುನಾಡುಗಳಿಗೆ ಸಂಪರ್ಕ ಕಲ್ಪಿಸುವ ದಾರಿ.

**ನದಿಗಳು :** ಚೀನದ ನದಿಗಳಲ್ಲಿ ಹ್ವಾಂಗ್ ಹೋ, ಯಾಂಗ್‌ಟ್ಸೀ ಮತ್ತು ಷೀ ಕ್ಯಾಂಗ್ ಬಹು ಮುಖ್ಯ ನದಿಗಳು. ಈ ಮೂರು ನದಿಗಳು ಪಶ್ಚಿಮದ ಇಳುಕಲು ಬೆಟ್ಟಗಳಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು ಸಮುದ್ರವನ್ನು ಸೇರುತ್ತವೆ. ಉತ್ತರದ ಕಾಲುಭಾಗದಷ್ಟು ಪ್ರದೇಶದಲ್ಲಿ ಹ್ವಾಂಗ್ ಹೋ (ಹಳದಿ ನದಿ), ದೇಶದ ಮಧ್ಯಭಾಗದಲ್ಲಿ ಯಾಂಗ್‌ಟ್ಸೀ ನದಿ ಮತ್ತು ದಕ್ಷಿಣದ ಕಾಲುಭಾಗ ಪ್ರದೇಶದಲ್ಲಿ ಷೀ ಕ್ಯಾಂಗ್ ನದಿ ಹರಿಯುತ್ತವೆ.

ಯಾಂಗ್‌ಟ್ಸೀ ನದಿಯ ಒಂದು ಕಮರಿ

ಹ್ವಾಂಗ್ ಹೋ (ಉದ್ದ 4840ಕಿ.ಮೀ.) ಶುಷ್ಕ ವಾಯುಗುಣ ಪ್ರದೇಶದಲ್ಲಿ ಹರಿಯುವ ನದಿ. ಚೀನದ ವಾಯವ್ಯ ಭಾಗದ ಬೆಂಗಾಡಿನಲ್ಲಿ ಹರಿದು ಒಳ ಮಂಗೋಲಿಯದ ಆರ್ಡಸ್ ಮರಳುಗಾಡಿನಲ್ಲಿ ಬೃಹತ್ ಕುಣಿಕೆಯ ಆಕಾರ ತಾಳಿ ಕೊನೆಗೆ ಅರೆಬೆಂಗಾಡು ಪ್ರದೇಶವಾದ ಚೀನ ಬಯಲಿಗೆ ಅಡ್ಡಲಾಗಿ ಯಿನ್‌ಷಾನ್ ಮತ್ತು ಚಿನ್‌ಲಿಂಗ್ ಪರ್ವತಗಳ ನಡುವೆ ಸಾಗಿ ಸಮುದ್ರ ಸೇರುತ್ತದೆ. ನದಿ ತನ್ನ ಪ್ರವಾಹದೊಂದಿಗೆ ಮೆಕ್ಕಲು ಮಣ್ಣನ್ನು ಹೊತ್ತು ತಂದು ಆಗಾಗ್ಗೆ ಪಾತ್ರವನ್ನು ಬದಲಾಯಿಸುವುದರಿಂದ ಇದು ಭಾರಿ ಹಡಗುಗಳ ಸಂಚಾರಕ್ಕೆ ಅನುಕೂಲವಾಗಿಲ್ಲ. ಕಿರಿಯ ಹಡಗುಗಳು ಹೋನ್ಯಾನ್ ಪ್ರಾಂತ್ಯದ ಕೆಲವು ಭಾಗಗಳಲ್ಲಿ, ಪಾವ್‌ಟೌ ಹಾಗೂ ಪಶ್ಚಿಮದ ಲಾಂಚೋ–ಫು ನಗರಗಳ ನಡುವೆ ಸಂಚರಿಸುತ್ತವೆ. ಹ್ವಾಂಗ್ ಹೋಗೆ ಚೀನದ ದುಃಖದ ನದಿ ಎಂಬ ಹೆಸರಿದೆ. ಕಳೆದ 3,000 ವರ್ಷಗಳಲ್ಲಿ ನದಿಯ ಅಣೆಕಟ್ಟುಗಳು 15,000 ಬಾರಿ ಒಡೆದಿವೆ; 26 ಸಲ ಅದರ ಹರಿವು ಬದಲಾಗಿದೆ. ಚೀನ ಸರ್ಕಾರ ಕಾಲುವೆ, ಅಣೆ ಮತ್ತು ವ್ಯವಸಾಯ ಯೋಜನೆಗಳಿಂದ ನದಿಗಳನ್ನು ಹತೋಟಿಗೆ ತರಲು ಯತ್ನಿಸಿದೆ. ಹ್ವಾಂಗ್ ಹೋ ನದಿಯ ಪ್ರವಾಹನಿಯಂತ್ರಣ ಚೀನದ ಪಂಚವಾರ್ಷಿಕ ಯೋಜನೆಯ (1953–57) ಮುಖ್ಯ ಕಾರ್ಯಕ್ರಮವಾಗಿತ್ತು. ಯಾಂಗ್‌ಟ್ಸೀ ನದಿಯ ನೀರನ್ನು ಹ್ವಾಂಗ್ ಹೋ ನದಿಗೆ ತಿರುಗಿಸುವ ಯೋಜನೆಯೂ ಉಂಟು. ಹ್ವಾಂಗ್ ಹೋ ನದಿಯ ಜಲಾನಯನ ಭೂಮಿಯ ವಿಸ್ತೀರ್ಣ 12,45,131 ಚಕಿ.ಮೀ.

ಯಾಂಗ್‌ಟ್ಸೀ ನದಿ (5150ಕಿ.ಮೀ.) ಚಿನ್‌ಲಿಂಗ್ ಮತ್ತು ನ್ಯಾನ್‌ಲಿಂಗ್ ಪರ್ವತಗಳ ನಡುವೆ ಮಧ್ಯಚೀನದಲ್ಲಿ ಹರಿದು ಸಮುದ್ರ ಸೇರುತ್ತದೆ. ಇದರ ಜಲಾನಯನಭೂಮಿ 1314794.82 ಚ.ಕಿಮೀ. ಇದು ಪಶ್ಚಿಮ ಏಷ್ಯದ ಅತ್ಯಂತ ಹಿರಿಯ ನದಿ. ಅದಕ್ಕೆ ದಕ್ಷಿಣದಿಂದ ಬಂದು ಸೇರುವ ನದಿಗಳ ಪೈಕಿ ಷೀಯಾಂಗ್, ವೂ ಮುಖ್ಯವಾದವು. ಉತ್ತರದಿಂದ ಬಂದು ಕೂಡುವ ನದಿಗಳು ಹಾನ್, ಜಿಯಲಿಂಗ್ ಮತ್ತು ಮಿನ್. ಈ ಉಪನದಿಗಳ ಮೇಲೂ ಚೀನೀ ಸರಕುಗಳು ಸಾಗುತ್ತವೆ. ಯಾಂಗ್‌ಟ್ಸೀ ನದಿಯ ಮೇಲೆ ಸಮುದ್ರತೀರದಿಂದ 1008 ಕಿಮೀ ದೂರ ಹ್ಯಾನ್‌ಕೌ ವರೆಗೆ ಕಡಲನೌಕೆಗಳು ಸಂಚರಿಸ ಬಹುದು. ಅವರ ಉಳಿದ 32,200 ಕಿಮೀಗಳ ವಿವಿಧ ಜಲಮಾರ್ಗ ಹಾಗೂ ಕಾಲುವೆಗಳಲ್ಲಿ ಕಿರಿಯ ಜಹಜುಗಳು ಮತ್ತು ನಾವೆಗಳು ಸಂಚರಿಸುತ್ತವೆ.

ಷೀ ಕ್ಯಾಂಗ್ ಅಥವಾ ಪಶ್ಚಿಮದ ನದಿ (2127 ಕಿಮೀ) ಯಾಂಗ್‌ಸ್ಟೀ ಮತ್ತು ಹ್ವಾಂಗ್ ಹೋ ನದಿಗಳಿಗಿಂತ ಚಿಕ್ಕದು. ಇದರ ಜಲಾನಯನ ಭೂಮಿ (10,062,00 ಚ.ಕಿಮೀ). ಇದು ದಕ್ಷಿಣ ಚೀನದ ಬೆಟ್ಟಗುಡ್ಡಗಳಿಂದ ಸೀಮಿತವಾಗಿದೆ. ಅದರ ಮುಖಭಾಗದಲ್ಲಿರುವ ಕ್ಯಾಂಟನ್ ನಗರದಿಂದ ಒಳನಾಡಲ್ಲಿ 400 ಕಿಮೀ ದೂರ ಜಹಜುಗಳ ಸಂಚಾರವುಂಟು. ಆದರೆ ಯಾಂಗ್‌ಟ್ಸೀಯ ಉಪನದಿಗಳಂತೆ ಈ ನದಿಯ ಉಪನದಿಗಳ ಮೇಲೆ ನೌಕಾಸಂಚಾರ ಸಾಧ್ಯವಿಲ್ಲ.

ಉತ್ತರ ಮಂಚೂರಿಯ ಭಾಗದಲ್ಲಿ ಅಮೂರ್ ನದಿಯನ್ನು ಸೇರುವ ಸುಂಗಾರೀ ಮತ್ತು ಅದರ ಉಪನದಿಗಳು ಎತ್ತರ ಪ್ರದೇಶಗಳಲ್ಲಿ ಹರಿಯುತ್ತವೆ. ಇವುಗಳ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟುತ್ತದೆ. ವಸಂತಕಾಲದಲ್ಲಿ ಇವುಗಳಲ್ಲಿ ಪ್ರವಾಹ ಬರುತ್ತದೆ. ಲಿಯೌ (ಉದ್ದ 1430 ಕಿಮೀ) ಒಣ ನೆಲದಲ್ಲಿ ಹರಿಯುವ ನದಿ. ಶೀತ ಕಾಲದಲ್ಲಿ ಹಿಮಗಟ್ಟುತ್ತದೆ. ಹ್ವೈಹೋ (1000 ಕಿಮೀ) ಬೇಸಿಗೆಯಲ್ಲಿ ಪ್ರವಾಹದಿಂದ ತುಂಬಿ ಹರಿಯುವ ನದಿ.

ಚೀನದ ಬೆಟ್ಟಗುಡ್ಡಗಳು ವ್ಯವಸಾಯವನ್ನು ಸೀಮಿತಗೊಳಿಸಿದ್ದರೂ, ನದೀ ಕಣಿವೆಗಳು ಫಲವತ್ತಾಗಿವೆ. ನದಿಗಳು ನೀರಾವರಿಗೆ ಹಾಗೂ ಸರಕು ಸಾಗಣೆಗೆ ಅನುಕೂಲವಾದವು. ಚೀನದ ಪಟ್ಟಣಗಳು ನದೀದಂಡೆಗಳ ಮೇಲೆಯೇ ಹೆಚ್ಚು. ಅಲ್ಲಿ ಜನಸಾಂದ್ರತೆಯೂ ಅಧಿಕ.

**ಕಡಲತೀರ :** ಚೀನದ ಕಡಲತೀರ ಚೀನ-ಕೊರಿಯ ಗಡಿ ಬಳಿಯ ಯಾಲೂ ನದಿಯ ಮುಖಭಾಗದಿಂದ ಪ್ರಾರಂಭವಾಗಿ ಚೀನ-ವಿಯೆಟ್ನಾಮ್ ಗಡಿಯ ಪೈಲನ್ ನದಿಯ ಮುಖದವರೆಗೆ ಹಬ್ಬಿದೆ. ಹ್ವಾಂಗ್‌ಚೌ ಕೊಲ್ಲಿಗೆ ಉತ್ತರದಲ್ಲಿ ಕಡಲಂಚು ಹೆಚ್ಚು ಡೊಂಕಿಲ್ಲ ; ಇದು ಮರಳಿನಿಂದ ಕೂಡಿದೆ. ಈ ತೀರದಲ್ಲಿ ಚೀನದ ಪ್ರಸಿದ್ಧ ಉಪ್ಪು ತಯಾರಿಕೆ ಪ್ರದೇಶಗಳಿವೆ. ಇದು ಮೀನುಗಾರಿಕೆಗೂ ಪ್ರಸಿದ್ಧಿ. ಷ್ಯಾನ್‌ಟಂಗ್, ಲಿಯೌಡಂಗ್ ಪರ್ಯಾಯದ್ವೀಪಗಳಲ್ಲಿ ಹಲವು ಬಂದರುಗಳುಂಟು. ಹ್ಯಾಂಗ್‌ಚೌ ಕೊಲ್ಲಿಯ ದಕ್ಷಿಣಕ್ಕಿರುವ ಕಡಲ ತೀರ ಉದ್ದಕ್ಕೂ ಖಾರಿಗಳಿಂದ ಕೂಡಿದ್ದು, ಡೊಂಕಾದ್ದು. ಇಲ್ಲಿ ಬಂಡೆಗಳು ಹೆಚ್ಚು. ಈ ಭಾಗದಲ್ಲಿ ಹಲವು ದ್ವೀಪಗಳುಂಟು. ಇಲ್ಲಿ ಸ್ವಾಭಾವಿಕ ಬಂದರುಗಳೂ ಮೀನುಗಾರಿಕೆ ಕೇಂದ್ರಗಳೂ ಇವೆ. ಚೀನದ ಅತ್ಯಂತ ಮುಖ್ಯ ರೇವುಪಟ್ಟಣ ಷಾಂಗ್‌ಹೈ.

ಚೀನೀ ತೀರದ ಒಂದು ದೃಶ್ಯ

**iii ವಾಯುಗುಣ :** ಚೀನದ ವಾಯುಗುಣ ವೈವಿಧ್ಯಪೂರ್ಣ. ರಾಜ್ಯದ ಶೇ.90 ಭಾಗ ಸಮಶೀತೋಷ್ಣ ವಲಯದಲ್ಲಿದೆ. ದಕ್ಷಿಣಭಾಗದಲ್ಲಿ ಉಷ್ಣವಲಯದ ವಾಯುಗುಣ. ದೂರದ ಈಶಾನ್ಯ ಮೂಲೆಯಲ್ಲಿ ಸೈಬೀರಿಯ ವಾಯುಗುಣವಿದೆ. ಮಂಚೂರಿಯದ ಹೇಲುಂಗ್‌ಜಿಯಾಂಗ್ ಪ್ರಾಂತ್ಯದಲ್ಲಿ ಉಷ್ಣತೆ-$47_o$ ಫ್ಯಾ. ವರೆಗೆ ಇಳಿಯುತ್ತದೆ; ಆದರೆ ದಕ್ಷಿಣದಲ್ಲಿ ಶೀತಗಾಲವೇ ಇಲ್ಲ. ಯುನ್ನಾನ್-ಗ್ವೇಜೋ ಮೇಲ್ನಾಡಿನ ಮಧ್ಯಭಾಗದಲ್ಲಿ ಜನವರಿ ಉಷ್ಣತೆ $40_o$ಫ್ಯಾ. ಗಿಂತ ಕಡಿಮೆ ಇರುವುದಿಲ್ಲ. ಟಿಬೆಟ್‌ನಲ್ಲಿ ಸರಾಸರಿ ಉಷ್ಣತೆ $32^\circ$ ಫ್ಯಾ.

ಉತ್ತರದಿಂದ ದಕ್ಷಿಣಕ್ಕೆ, ತರುವಾಯ ದಕ್ಷಿಣದಿಂದ ಉತ್ತರಕ್ಕೆ ಬೀಸುವ ಗಾಳಿಯಿಂದ ಚೀನದ ವಾಯುಗುಣ ಋತುವಿಗನುಗುಣವಾಗಿ ನಿಯಂತ್ರಿತ. ವಾಯುವಿನ ಈ ಚಲನೆ ಉಷ್ಣತೆಯಲ್ಲಿ ವ್ಯತ್ಯಾಸಗಳನ್ನು ತಂದು ಕ್ಲುಪ್ತಕಾಲಿಕ ಮಳೆಗಳನ್ನುಂಟುಮಾಡುತ್ತದೆ. ವಾರ್ಷಿಕ ಮಳೆಯಲ್ಲಿ ಶೇ.50 ಬೇಸಗೆಯಲ್ಲಿ ಬೀಳುತ್ತದೆ. ಚೀನ ಸಮುದ್ರದಲ್ಲಿ ಜುಲೈಯಿಂದ ಅಕ್ಟೋಬರ್‌ವರೆಗೆ ತಲೆದೋರುವ ತೂಫಾನೂ ವಾಯುಗುಣ ವ್ಯತ್ಯಾಸಗಳಿಗೆ ಕಾರಣ.

ಕ್ಯಾಂಟನ್ ಮತ್ತು ಹೈನಾನ್‌ಗಳ ಸರಾಸರಿ ವಾರ್ಷಿಕ ಮಳೆ 203ಸೆಂ.ಮೀ. ಮಂಗೋಲಿಯದ ಮಧ್ಯ ಭಾಗ ಮತ್ತು ಸಿಂಜಿಯಾಂಗ್ ಪ್ರದೇಶದ ವಾರ್ಷಿಕ ಮಳೆ 26 ಸೆಂ.ಮೀ.

ಚೀನದಲ್ಲಿ 8 ಪ್ರಮುಖ ವಾಯುಗುಣ ಪ್ರದೇಶಗಳಿವೆ : 1. ಉತ್ತರ ಮಂಚೂರಿಯ: ಈ ಭಾಗ ಕಣಿವೆ ಮತ್ತು ಬೆಟ್ಟಗಳಿಂದ ಕೂಡಿದ ಅತಿ ಶೀತ ಪ್ರದೇಶ. ಬೇಸಗೆ ಕಡಿಮೆ. ವ್ಯವಸಾಯಕ್ಕೆ ಅನುಕೂಲವಾಗಿಲ್ಲ. ಹಿಮಗಾಲ ಹೆಚ್ಚು. ಬೇಸಗೆ ವಾಯುಗುಣ ಹಿತಕರ. ವಾರ್ಷಿಕ ಮಳೆ 50.6ಸೆಂ.ಮೀ. 2. ವಾಯುವ್ಯ ಚೀನ: ಹುಲ್ಲುಗಾವಲು, ಮರುಭೂಮಿ ಪ್ರದೇಶ. ಇದು ಕ್ಯಾನ್ಸೂ, ಉತ್ತರ ಷೆನ್‌ಸೀ ಮತ್ತು ಒಳಮಂಗೋಲಿಯ ಭಾಗಗಳನ್ನೊಳಗೊಂಡಿದೆ. ಶುಷ್ಕ ವಾಯುಗುಣ. ವಾರ್ಷಿಕ ಮಳೆ ಸು. 50.6ಸೆಂ.ಮೀ. ಕೆಲವು ಕಡೆ 25.3ಸೆಂ.ಮೀ. ಬೇಸಗೆಯಲ್ಲಿ ಮಳೆ. 3. ಉತ್ತರ ಚೀನ: ಈ ಪ್ರದೇಶಕ್ಕೆ ಮಂಚೂರಿಯ ಬಯಲುನಾಡಿನ ದಕ್ಷಿಣ ಭಾಗ, ಜೆಹೋಲ್ ಮತ್ತು ಟೈಹಾಂಗ್ ಪರ್ವತಗಳು, ಲೋಯೆಸ್ ಮೇಲ್ನಾಡಿನ ಬಹುಭಾಗ ಸೇರಿವೆ. ವ್ಯವಸಾಯಕ್ಕೆ ಅನುಕೂಲವಾದ ಕಾಲ 150-225 ದಿನಗಳು. ಮಧ್ಯ ಮಂಚೂರಿಯ ಮತ್ತು ಜೆಹೋಲ್ ಪರ್ವತ ಭಾಗಗಳಲ್ಲಿ ವಾರ್ಷಿಕ ಮಳೆ 75.9ಸೆಂ.ಮೀ. ದಕ್ಷಿಣ ಮತ್ತು ವಾಯವ್ಯದಲ್ಲಿ 36ಸೆಂ.ಮೀ. ಕೆಲವು ಕಡೆ ಅತಿವೃಷ್ಟಿ. ವಾಯುಗುಣ ಹಿತಕರವಾಗಿದ್ದರೆ ಬೆಳೆ ಉತ್ತಮ; ಇಲ್ಲವಾದರೆ ನಷ್ಟ. 4. ಯಾಂಗ್‌ಟ್ಸೀ



ಚೀನದ ಮಹಾಗೋಡೆಯ ಒಂದು ಭಾಗ

ಕಣಿವೆ: ಮಧ್ಯಚೀನದ ಈ ಭಾಗ ದಕ್ಷಿಣಕ್ಕೆ ಹ್ಯಾಂಗ್‌ಚೌ ಕೊಲ್ಲಿಯವರೆಗೆ ಹಬ್ಬಿದೆ. ವ್ಯವಸಾಯಕ್ಕೆ 225-240 ದಿನಗಳು ಅನುಕೂಲ. ಚಳಿಗಾಲದಲ್ಲಿ ಕೊರೆಯುವ ಚಳಿ, ಹಿಮ; ಬೇಸಗೆಯಲ್ಲಿ ಬಿಸಿಲ ತಾಪ. ಜೂನ್-ಜುಲೈಗಳಲ್ಲಿ ಮುಂಗಾರುಮಳೆ. ವಾರ್ಷಿಕಮಳೆ 114-203ಸೆಂ.ಮೀ. 5. ದಕ್ಷಿಣ ಚೀನ : ಈ ವಲಯದ ಆಗ್ನೇಯ ತೀರ ಮತ್ತು ದಕ್ಷಿಣದ ಬೆಟ್ಟ ಪ್ರದೇಶಗಳಲ್ಲಿ ಚಳಿಗಾಲ ಯಾಂಗ್‌ಟ್ಸೀ ಕಣಿವೆಯಲ್ಲಿರುವುದಕ್ಕಿಂತ ಹಿತಕರವಾಗಿರುತ್ತದೆ. ಪರ್ವತ ಪ್ರದೇಶ ಹಿಮದಿಂದ ಕೂಡಿರುತ್ತದೆ. ತಗ್ಗುನಾಡಿನಲ್ಲಿ ವ್ಯವಸಾಯಕ್ಕೆ ಇಡೀ ವರ್ಷ ಅನುಕೂಲ. ಬೇಸಗೆ ಕಾಲ ದೀರ್ಘ: ಬಿಸಿಲು ಹೆಚ್ಚು, ಮೇಲ್ನಾಡಿನಲ್ಲಿ ಮತ್ತು ತೀರಪ್ರದೇಶಗಳಲ್ಲಿ ಆಗ ತಂಪು ಹವೆ ಇರುತ್ತದೆ. ಮೇ, ಜೂನ್, ಜುಲೈಗಳಲ್ಲಿ 126-203ಸೆಂ.ಮೀ. ಮಳೆಯಾಗುತ್ತದೆ. ಕಡಲ ತೀರದಲ್ಲಿ ಬೇಸಗೆ ಮತ್ತು ವಸಂತ ಕಾಲಗಳಲ್ಲಿ ಬೀಸುವ ತುಫಾನು ವಿನಾಶಕಾರಿ. 6. ಸಜ್ವಾನ್ ಮತ್ತು ಉತ್ತರ ಗ್ವೇಜೋ ಪ್ರದೇಶ: ಇಲ್ಲಿ ವರ್ಷಪೂರ್ತಿ ಬೇಸಾಯ. ಎತ್ತರ ಪ್ರದೇಶಗಳಲ್ಲಿ ಹಿಮ ಬೀಳುತ್ತದೆ. ಚಿನ್‌ಲಿಂಗ್ ಪರ್ವತ ಉತ್ತರದ ಶೀತಮಾರುತಗಳನ್ನು ಹಾಗೂ ಟಿಬೆಟ್ ಪ್ರಸ್ಥಭೂಮಿಯಿಂದ ಬಂದ ಪಶ್ಚಿಮಾಭಿಮುಖವಾಗಿ ಬೀಸುವ ಗಾಳಿಯನ್ನು ತಡೆದು ರಕ್ಷಣೆ ನೀಡುತ್ತದೆ. ಚಳಿಗಾಲ ತೀವ್ರ, ಉಷ್ಣತೆ ಕಡಿಮೆ. ಸೂರ್ಯ ಕಾಣಿಸಿದಷ್ಟು ಮೋಡ. ಬೇಸಗೆ ಹಿತಕರವಾಗಿರುತ್ತದೆ. ವಾರ್ಷಿಕ ಮಳೆ ಉತ್ತರದಲ್ಲಿ 75ಸೆಂ.ಮೀ. ದಕ್ಷಿಣದಲ್ಲಿ 132ಸೆಂ.ಮೀ.

**7. ನೈಋತ್ಯ ಚೀನ :** ಗ್ವೇಜೋ ಪ್ರಾಂತ್ಯದ ಪಶ್ಚಿಮ ಮತ್ತು ದಕ್ಷಿಣಭಾಗ ಹಾಗೂ ಯುನ್ನಾನ್ ಪ್ರಸ್ಥಭೂಮಿಗಳಲ್ಲಿ ಚೀನದ ಇತರ ಭಾಗಗಳಲ್ಲಿ ಇಲ್ಲದ ಅತ್ಯಂತ ಹಿತಕರವಾದ ಹವಾಗುಣವಿದೆ. ಈ ಪ್ರದೇಶ ಸಮುದ್ರಮಟ್ಟಕ್ಕೆ ಹೆಚ್ಚು ಎತ್ತರದಲ್ಲಿರುವುದರಿಂದ ಉಷ್ಣತೆ ಕಡಿಮೆ. ಇಡೀ ವರ್ಷದಲ್ಲಿ ವ್ಯವಸಾಯ ಸಾಧ್ಯ. ಚಳಿಗಾಲ ಹಿತಕರ ; ಬೇಸಗೆ ತಂಪು. ಜುಲೈ ತಿಂಗಳಲ್ಲಿ ಮಳೆ ಹೆಚ್ಚು. ವಾರ್ಷಿಕ ಮಳೆ ಉತ್ತರದಲ್ಲಿ 100ಸೆಂ.ಮೀ.; ದಕ್ಷಿಣದಲ್ಲಿ 132ಸೆಂ.ಮೀ. ಮೇಘಸಾಲು ಮತ್ತು ನೀಲಾಕಾಶಕ್ಕೆ ಯುನ್ನಾನ್ ಪ್ರಾಂತ್ಯ ಪ್ರಸಿದ್ಧ. ಅದನ್ನು ದಕ್ಷಿಣದ ಮೇಘನಾಡು ಎಂದು ಕರೆಯುತ್ತಾರೆ. 8 ಉಷ್ಣೀಯ ದಕ್ಷಿಣ ತೀರ: ಹೈನಾನ್ ದ್ವೀಪ ಮತ್ತು ಚೀನದ ದಕ್ಷಿಣ ತೀರಪ್ರದೇಶ ಈ ವಲಯಕ್ಕೆ ಸೇರಿವೆ. ಇಲ್ಲಿಯದು ಉಷ್ಣವಲಯದ ವಾಯುಗುಣ. ಇಡೀ ವರ್ಷ ವ್ಯವಸಾಯ ನಡೆಯುತ್ತದೆ. ಇಡೀ ವರ್ಷ ಉಷ್ಣತೆ ಹೆಚ್ಚು. ಎಲ್ಲ ತಿಂಗಳೂ ಮಳೆಯಾಗುತ್ತದೆ. ಮೇ-ಆಗಸ್ಟ್ ನಡುವೆ ಹೆಚ್ಚು ಮಳೆ. ವಾರ್ಷಿಕ ಮಳೆ 114-215ಸೆಂ.ಮೀ. ಇಡೀ ವರ್ಷ ಬತ್ತ ಬೆಳೆಯಬಹುದು.

**ಸಸ್ಯಗಳು :** ಚೀನದಲ್ಲಿ ಉತ್ತರದ ಶಂಕುಪರ್ಣಿ ನಿತ್ಯಹಸಿರು ಗಿಡಗಳಿಂದ ಹಿಡಿದು ದಕ್ಷಿಣದ ಮಳೆಗಾಡುಗಳವರೆಗೆ, ಬಂಜರುನಾಡ ಕುರುಚಲು ಗಿಡಗಳಿಂದ ಹಿಡಿದು ಮರುಭೂಮಿಯ ಮತ್ತು ಉಷ್ಣವಲಯದ ಹವಳ ದ್ವೀಪೀಯ ಸಸ್ಯಗಳವರೆಗೆ ಅನೇಕ ಸ್ವಾಭಾವಿಕ ಗಿಡಮರಗಳಿವೆ. ಇಡೀ ಚೀನವನ್ನು ಎರಡು ಸಸ್ಯಗಾವಲುಗಳನ್ನಾಗಿ ವಿಂಗಡಿಸಬಹುದು. ವಾಯವ್ಯದಿಂದ ದೇಶದ ಅರ್ಧಭಾಗ ಹುಲ್ಲುಗಾವಲು ಹಾಗೂ ಮರಳ್ಗಾಡಿನ ಸಸ್ಯಗಳಿಂದ ಕೂಡಿದೆ. ದೇಶದ ಮಧ್ಯಭಾಗದಿಂದ ಆಗ್ನೇಯ ಅಂಚಿನವರೆಗೆ ಅರಣ್ಯಗಳಿವೆ. ಚೀನದ ಅರಣ್ಯಗಳಲ್ಲಿ ಆರು ಬಗೆ : 1. ಗಟ್ಟಿ ಮರಗಳ ಅರಣ್ಯಗಳು ಈಶಾನ್ಯ ಮತ್ತು ಉತ್ತರ ಪ್ರಾಂತ್ಯಗಳಲ್ಲಿವೆ. ಅಲ್ಲಿಯ ಮುಖ್ಯ ಮರಗಳು ಲಿನ್‌ಡನ್ ಮತ್ತು

ಬರ್ಚ್. ಅವುಗಳೊಂದಿಗೆ ಅಲ್ಲಲ್ಲಿ ಬಿಳಿ ಪೈನ್, ಓಕ್ ಮತ್ತು ಅಕ್ರೋಟ (ವಾಲ್‌ನಟ್) ಮರಗಳಿವೆ. 2. ಉತ್ತರ ಪ್ರಾಂತ್ಯಗಳ ಪರ್ಣಪಾತಿ ಸಸ್ಯಗಳ ಅರಣ್ಯಗಳು : ಇಲ್ಲಿಯ ಮರಗಳು ಆಷ್, ಹಾರ್ನ್‌ಬೀಮ್, ಎಲ್ಮ್, ಅಕ್ರೋಟ ಮತ್ತು ಹ್ಯಾಕ್‌ಬೆರಿ. ಪರ್ವತಶಿಖರಗಳಲ್ಲಿ ಪೈನ್ ಗಿಡಗಳು ಹೇರಳ. ಇಳಿಭೂಮಿಗಳಲ್ಲಿ ಹುಲ್ಲುಗಾವಲು, ಪೊದರುಗಳು, ಕಾಡುಗುಲಾಬಿ

ನೈಋತ್ಯ ಚೀನದ ಅತಿ ದೊಡ್ಡ ಜಲಪಾತ

ಮತ್ತು ಲಿಲಾಕ್ 3. ಯಾಂಗ್‌ಟ್ಸೀ ಕಣಿವೆಯ ಅರಣ್ಯಗಳಲ್ಲಿ ಅನೇಕ ಬಗೆಯ ನಿತ್ಯಹಸಿರು ಗಿಡಗಳಿವೆ. 4. ದಕ್ಷಿಣ ಮತ್ತು ನೈಋತ್ಯ ಪ್ರಾಂತ್ಯಗಳಲ್ಲಿ ಹಾಗೂ ಟೈವಾನ್ ಮತ್ತು ಹೈನಾನ್ ದ್ವೀಪಗಳಲ್ಲಿ ನಿತ್ಯ ಹಸಿರಿನ ಓಕ್ ಮರಗಳ ಅರಣ್ಯಗಳಿವೆ. ಯಾಂಗ್‌ಟ್ಸೀ ನದಿಯ ದಕ್ಷಿಣ ಪ್ರದೇಶಗಳಲ್ಲಿ ಬಿದಿರು ಮೆಳೆಗಳು ಹೆಚ್ಚು. 5. ಯುನ್ನಾನ್ ಭಾಗದಿಂದ ಹೈನಾನ್ ಮತ್ತು ಟೈವಾನ್ ದ್ವೀಪಗಳವರೆಗೆ ಮಳೆಗಾಡುಗಳಿವೆ. 6. ಷಿಂಗಾನ್ ಪರ್ವತಶ್ರೇಣಿಗಳಲ್ಲಿ ಶಂಕುಪರ್ಣಿ ಮರಗಳು ಹೆಚ್ಚು. ಕೊರಿಯ ಗಡಿಯ ಪ್ರದೇಶದಲ್ಲಿ ಸ್ಪ್ರೂಸ್ ಮತ್ತು ಫರ್ ಮರಗಳ ದಟ್ಟ ಅರಣ್ಯಗಳಿವೆ. ಈಶಾನ್ಯ ಪ್ರಾಂತ್ಯಗಳ ಪಶ್ಚಿಮದಿಂದ ಟಿಯೆನ್ ಷಾನ್ ಪರ್ವತಗಳವರೆಗೆ ವಿಶಾಲ ಹುಲ್ಲುಗಾವಲು ; ಅವುಗಳ ಮಧ್ಯೆ ಉಪ್ಪುನೀರಿನ ಸರೋವರಗಳು, ಕಲ್ಲು ಭೂಮಿ, ಮರಳುಗುಡ್ಡೆಗಳು, ಮರಳ್ಗಾಡ ಊಟೆಗಳಿರುವ ಕಡೆ ಎಲ್ಮ್ ಗಿಡಗಳು ಮತ್ತು ಹಣ್ಣಿನ ತೋಟಗಳು ಇವೆ.

**V ಪ್ರಾಣಿಜೀವನ :** ಪರ್ವತಶ್ರೇಣಿ ಮತ್ತು ದಟ್ಟ ಅರಣ್ಯಗಳ ವೈವಿಧ್ಯದಿಂದ ಇತರ ಕಡೆಗಳಲ್ಲಿ ಕಾಣದಂಥ ಅನೇಕ ಪ್ರಾಣಿಗಳು ಚೀನದಲ್ಲಿ ಉಳಿದುಬಂದಿವೆ. ಯಾಂಗ್‌ಟ್ಸೀ ನದಿಯ ಹಿರಿಯ ರೆಕ್ಕೆ ಮೀನು, ಮಧ್ಯಚೀನದ ಪೂರ್ವಭಾಗದ ಕಿರು ಜಾತಿಯ ಮೊಸಳೆ ಮತ್ತು ಪಶ್ಚಿಮ ಚೀನದ ಅಗ್ನಿ ಮಕರ ಕೆಲವು ಉದಾಹರಣೆಗಳು. ಟಿಬೆಟ್ ಅಂಚಿನ ಕಣಿವೆಗಳಲ್ಲಿ ದೊಡ್ಡ ಗಾತ್ರದ ಪಂಡ ಇದೆ. ದೇಶದ ಎಲ್ಲ ಪರ್ವತ ಪ್ರದೇಶಗಳಲ್ಲಿ ಮೇಕೆ–ಜಿಂಕೆ, ಬಣ್ಣ ಬಣ್ಣದ ಹಕ್ಕಿಗಳು ಇವೆ. ಕಾರ್ಪ್ ಮತ್ತು ಕ್ಯಾಟ್‌ಫಿಷ್ ಜಾತಿಯ ಮೀನುಗಳಿಗೆ ಚೀನ ತವರೆಂಬ ಅಭಿಪ್ರಾಯವಿದೆ.

ಚೀನದ ವಿವಿಧ ಪ್ರದೇಶಗಳಲ್ಲಿ ಒಂದೇ ಜಾತಿಯ ಪ್ರಾಣಿಗಳ ಲಕ್ಷಣಗಳಲ್ಲಿ ವ್ಯತ್ಯಾಸವುಂಟು. ಮಂಗೋಲಿಯ ಮರಳ್ಗಾಡಿನ ಮೂಲಕ ಮಧ್ಯ ಏಷ್ಯದಿಂದ ಬಂದ ಪ್ರಾಣಿಗಳು ಉತ್ತರಚೀನದ ಹುಲ್ಲುಗಾವಲುಗಳಲ್ಲಿವೆ. ಪರ್ವತಶ್ರೇಣಿಗಳಲ್ಲಿಯ ಪ್ರಾಣಿಗಳಲ್ಲಿ ಹಳೆಯ ಪ್ರಪಂಚದ (ಉತ್ತರಾರ್ಧಗೋಳದ ಉತ್ತರಭಾಗದ) ಪ್ರಾಚೀನ ಪ್ರಾಣಿಗಳ ಕುರುಹುಗಳುಂಟು.

ಚೀನದ ದಕ್ಷಿಣದಲ್ಲಿ ಉಷ್ಣವಲಯದ ಉರಗಗಳು, ಉಭಯಚರ ಜೀವಿ ಕಶೇರುಕಗಳು, ಬಗೆಬಗೆಯ ಡೇಗೆ ಮತ್ತು ಇತರ ಪಕ್ಷಿಗಳು ಮತ್ತು ಸಸ್ತನಿಗಳಿವೆ. ಒಳ ಮಂಗೋಲಿಯ, ಕ್ಯಾನ್ಸೂ, ಷಿನ್‌ಜಿಯಾಂಗ್, ಜಿಂಗ್‌ಹೈ ಪ್ರಾಂತ್ಯದಲ್ಲಿ ಚೌರಿಮೃಗ ಮತ್ತು ಒಂಟೆ ಹೆಚ್ಚು. ಚೀನದಲ್ಲಿ ಸು. ಹತ್ತು ಲಕ್ಷ ಒಂಟೆಗಳಿವೆ. ಒಂಟೆ ತುಪ್ಪಟ ಸರಬರಾಜು ಮಾಡುವ ರಾಷ್ಟ್ರಗಳಲ್ಲಿ ಚೀನ ಮುಖ್ಯ.

## II ಜನ, ಸಂವಿಧಾನ, ಆಡಳಿತ

ಜನಜೀವನ : ಪ್ರಪಂಚದ ಜನಸಂಖ್ಯೆಯಲ್ಲಿ ಕಾಲುಭಾಗದಷ್ಟು ಜನ ಚೀನದಲ್ಲಿ ವಾಸಿಸುತ್ತಾರೆ. ಜನಸಂಖ್ಯೆಯಲ್ಲಿ ಇದು ಪ್ರಪಂಚದ ರಾಷ್ಟ್ರಗಳಲ್ಲಿ ಪ್ರಥಮ. ಚೀನದಲ್ಲಿ ವಿವಿಧ ಮಾನವ ಬುಡಕಟ್ಟುಗಳಿವೆ. ಅವುಗಳಲ್ಲಿ ಪ್ರಧಾನವಾದ್ದು ಹನ್ (ಹೂಣ) ಮೂಲಚೀನಿ ಬುಡಕಟ್ಟು. ಇದಲ್ಲದೆ ಚೀನದಲ್ಲಿ 45 ಅಲ್ಪಸಂಖ್ಯಾತ ಬುಡಕಟ್ಟುಗಳುಂಟು. ಆದರೆ ಮೂಲಚೀನೀಯರೊಂದಿಗೆ ಹೋಲಿಸಿದರೆ ಈ ಅಲ್ಪಸಂಖ್ಯಾತ ಬುಡಕಟ್ಟುಗಳ ಜನರ ಸಂಖ್ಯೆ ತೀರ ಕಡಿಮೆ, ಚೀನದ ಒಟ್ಟು ಪ್ರದೇಶದ $\frac{2}{3}$ ಭಾಗದಲ್ಲಿ ಚೀನೀಯರು ಮತ್ತು ಉಳಿದ ಭಾಗದಲ್ಲಿ $\frac{1}{3}$ ಅಲ್ಪಸಂಖ್ಯಾತ ಬುಡಕಟ್ಟುಗಳ ಜನರು ಹರಡಿದ್ದಾರೆ. ರಷ್ಯದಂತೆ ಸಮತಾವಾದಿ ಚೀನವೂ ಅಲ್ಪಸಂಖ್ಯಾತ ಬುಡಕಟ್ಟುಗಳಿಗೆ ಸ್ವಯಮಾಡಳಿತ ಪ್ರದೇಶಗಳನ್ನು ಕಲ್ಪಿಸಿದೆ.

ವಿಶಿಷ್ಟ ಉಡುಗೆ–ತೊಡುಗೆ ಧರಿಸಿರುವ ಚೀನೀ ಅಲ್ಪಸಂಖ್ಯಾತ ಬುಡಕಟ್ಟು ಜನ

ಚೀನೀ ಜನರ ಮೂಲ ನೆಲೆ ಹ್ವಾಂಗ್ ಹೋ ಕಣಿವೆ ; ಅದರಲ್ಲೂ ಕ್ಯಾನ್ಸೂ, ಷೆನ್‌ಸೀ ಮತ್ತು ಚೀನೀ ಮಹಾಬಯಲು. ಯಾಂಗ್‌ಟ್ಸೀ, ಚೂ ಮತ್ತು ಮಿಂಗ್ ನದಿಗಳ ಕಣಿವೆಗಳಲ್ಲಿ ಮಿಯೌ ಜನರಿದ್ದರು. ಕೌಷಾನ್‌ಗಳು ಟೈಟಾನ್ ದ್ವೀಪದಲ್ಲೂ ಲೀಗಳು ಹೈನಾನ್ ದ್ವೀಪದಲ್ಲೂ ಇದ್ದರು. ವಾಯವ್ಯ ಮತ್ತು ಈಶಾನ್ಯ ಭಾಗದ ಅಲೆಮಾರಿ ಜನರ ದಾಳಿಗಳಿಗೆ ಚೀನ ಪದೇಪದೇ ತುತ್ತಾಗಿದೆ. 13 ಮತ್ತು 14ನೆಯ ಶತಮಾನಗಳಲ್ಲಿ ನಾಗರಿಕತೆಯ ಪರಾಕಾಷ್ಠೆ ಮುಟ್ಟಿದ್ದ ಚೀನ ರಾಜ್ಯವನ್ನು ಮಂಗೋಲರು ಗೆದ್ದರು. ತರುವಾಯ 1664 ರಲ್ಲಿ ಮಂಚು ಜನ ಆಕ್ರಮಿಸಿಕೊಂಡರು. ಅಷ್ಟು ನಾಗರಿಕರಲ್ಲದ ಆಕ್ರಮಣಕಾರರು ಚೀನೀಯರೊಂದಿಗೆ ಬೆರೆತರೂ ಮೂಲಚೀನೀಯರು ತಮ್ಮ ವಿಶಿಷ್ಟ ನಾಗರಿಕತೆಯನ್ನು ಕಳೆದುಕೊಳ್ಳಲಿಲ್ಲ. ತಮ್ಮ ಹಿಂದಿನ ನೆಲೆಗಳ ಅಂಚಿನಲ್ಲೇ ಚೀನೀಯರು ಅಪ್ಪಟ ಚೀನೀ ರಾಜ್ಯವನ್ನು ಸ್ಥಾಪಿಸಿಕೊಂಡರು. ರಾಷ್ಟ್ರದ ಅಲ್ಪಸಂಖ್ಯಾತ ಬುಡಕಟ್ಟುಗಳ ಜನ ದೇಶದ ಪರಿಧಿಗಳಲ್ಲಿ ನೆಲೆಸಿದರು. ಇವರಲ್ಲಿ ಕೆಲವು ಸಂಘಟಿತ ಸಮುದಾಯಗಳಿವೆ; ಇನ್ನು ಕೆಲವರು ಸಣ್ಣ ತಂಡಗಳಾಗಿ ಹರಡಿಕೊಂಡಿದ್ದಾರೆ.



ಯಾಂಗ್‌ಟ್ಸೀ ನದೀಮುಖಜಭೂಮಿಯ ಪುರಾತನ ಸೇತುವೆಗಳಲ್ಲೊಂದು. ಕಮಾನುಗಳ ಅಡಿಯಲ್ಲಿ ದೋಣಿಗಳು ಸಂಚರಿಸಬಹುದು.

ದೇಶದ ಪರಿಧಿಗಳಲ್ಲಿಯ ಅಲ್ಪಸಂಖ್ಯಾತ ಬುಡಕಟ್ಟುಗಳು ಹೊರಗಿನ ಸಂಸ್ಕೃತಿಯನ್ನು ಚೀನಕ್ಕೆ ತರಲು ನೆರವಾಗಿವೆ. ಉದಾಹರಣೆಗೆ : ಮೀಗರ್ ಜನ ಭಾರತದಿಂದ ಬಂದ ಬೌದ್ಧಮತವನ್ನು ಹರಡಲು ಪ್ರಮುಖ ಪಾತ್ರವಹಿಸಿದರು ; ಕಲ್ಲಂಗಡಿ, ಕರಬೂಜ, ದ್ರಾಕ್ಷಿ, ಸೌತೆ, ಗಜ್ಜರಿ, ಬೆಳ್ಳುಳ್ಳಿ ವ್ಯವಸಾಯವನ್ನು ರೂಢಿಸಿದರು. ಇವರ ನೆಲೆ ಚೀನದ ಪಶ್ಚಿಮ ಅಂಚು. ಪ್ರಶ.ಪೂ. 1ನೆಯ ಶತಮಾನದಲ್ಲಿ ರೇಷ್ಮೆ ರಸ್ತೆಯ ಮೂಲಕ ಸಂಸ್ಕೃತಿಗಳು ಬೆಸೆದವು. ಭಾಗಶಃ

ಅರಬ್ಬಿ ಬುಡಕಟ್ಟಿಗೆ ಸೇರಿದ ಹುಯೀ ಜನರು ಚೀನದ ವಿಜ್ಞಾನಿಗಳು ಮತ್ತು ತಂತ್ರಜ್ಞರು. ಇವರು ಪೀಕಿಂಗ್ ನಗರದಲ್ಲಿ ಖಗೋಳ ಸಮೀಕ್ಷಾ ಮಂದಿರವನ್ನು ಕಟ್ಟಿ ಖಗೋಳವಿಜ್ಞಾನಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ. ವೀಗುರ್ ಜನರ ಮೂಲಪುರುಷರಾದ ಷಿಯುಂಗ್‌ನು ಜನ ಪ್ರಶ.ಪೂ. 2ನೆಯ ಶತಮಾನದಲ್ಲಿ ವ್ಯವಸಾಯಕ್ಕೆ ಪ್ರಾಣಿಗಳನ್ನು ಬಳಕೆಗೆ ತಂದರು.

ಚೀನದಲ್ಲಿ ಚೀನೀ-ಟಿಬೆಟ್ ಮತ್ತು ಅಲ್ಟಾಯಿಕ್ ಎಂಬ ಎರಡು ಪ್ರಮುಖ ಭಾಷಾ ಕುಲಗಳಿವೆ. ಚೀನೀ-ಟಿಬೆಟ್ ಕುಲವೇ ದೊಡ್ಡದು.

ಮಂಚೂರಿಯದ ಫ್ಯೂಷನ್ನಿನಲ್ಲಿರುವ ಉಕ್ಕಿನ ಕಾರ್ಯಾಗಾರಗಳ ಒಂದು ನೋಟ. ಎರಡನೆಯ ಮಹಾಯುದ್ಧದ ಅನಂತರ ಮಂಚೂರಿಯ ಚೀನದ ಒಂದು ಪ್ರಮುಖ ಕೈಗಾರಿಕಾ ನೆಲೆಯಾಯಿತು

ಚೀನದ ಜನ ಪಶ್ಚಿಮ ಕರಾವಳಿ, ಪೂರ್ವ ಹಾಗೂ ಆಗ್ನೇಯ ನದಿ ಬಯಲು ಮತ್ತು ತಗ್ಗುನಾಡಿನಲ್ಲಿ ಒತ್ತಾಗಿ ಜೀವಿಸುತ್ತಾರೆ. ದೇಶದ ಸರಾಸರಿ ಜನಸಾಂದ್ರತೆ 2.5 ಚ.ಕಿಮೀಗೆ 180. ಪಶ್ಚಿಮ ಬೆಂಗಾಡಿನಲ್ಲಿ ಜನ ಕಡಿಮೆ. ಅಲ್ಲಿ ಜನಸಾಂದ್ರತೆ 2.5 ಚ.ಕಿಮೀಗೆ 91. ಜಿಂಗ್‌ಹೈ ಮತ್ತು ಷಿನ್‌ಜಿಯಾಂಗ್‌ಗಳಲ್ಲಿ 2.5 ಚ.ಕಿಮೀಗೆ 4.7-6.3 ರಷ್ಟು ಕಡಿಮೆ. ಯಾಂಗ್‌ಟ್ಸೀ ನದಿಯ ದಕ್ಷಿಣಭಾಗ ಅತ್ಯಂತ ಹೆಚ್ಚು ಜನಸಾಂದ್ರತೆಯಿಂದ ಕೂಡಿದ್ದು, ಅಲ್ಲಿ ಜಿಯಾಂಗ್‌ಸೀ ಪ್ರಾಂತ್ಯದಲ್ಲಿ 2.5 ಚ.ಕಿಮೀಗೆ 1,560 ಮಂದಿ ಇದ್ದಾರೆ. ಪೂರ್ವಿಕರ ನೆಲೆಯನ್ನು ಬಿಟ್ಟು ಹೋಗಬಾರದೆಂಬ ಹಳೆಯ ನಂಬಿಕೆ ಜನಸಾಂದ್ರತೆಗೆ ಒಂದು ಕಾರಣ. ಈಗ ಜನ ಇತರ ಪ್ರದೇಶಗಳಿಗೆ ಹರಡುತ್ತಿದ್ದಾರೆ. ಈಶಾನ್ಯ, ವಾಯವ್ಯ ಹಾಗೂ ಒಳಮಂಗೋಲಿಯ ನಗರಗಳಲ್ಲಿ ಜನ ಹೆಚ್ಚುತ್ತಿರುವುದು ಕಂಡುಬಂದಿದೆ.

ಚೀನೀಯರು ಮಲಯ, ಫಿಲಿಪೀನ್ಸ್, ಜಾವ, ಇಂಡೋನೇಷ್ಯ, ವಿಯೆಟ್ನಾಮ್, ಮಯನ್ಮಾರ್, ಯುರೋಪ್, ಅಮೆರಿಕ ಮೊದಲಾದ ಭಾಗಗಳಲ್ಲಿ ವಲಸೆಹೋಗಿದ್ದಾರೆ. 2010ರಲ್ಲಿ ಹೊರದೇಶಗಳಲ್ಲಿದ್ದ ಚೀನೀಯರ ಸಂಖ್ಯೆ : ಜಪಾನ್ 655,377, ಯು.ಕೆ. 500,000, ದ.ಆಫ್ರಿಕ 350,000, ಆರ್ಜೆಂಟೀನ 320,000, ಇಟಲಿ 209,000, ಭಾರತ 196000, ಬ್ರೆಜಿಲ್ 156,000, ಆಸ್ಟ್ರೇಲಿಯ 669,861.

ಚೀನದಲ್ಲಿ ಒಟ್ಟು 22 ಪ್ರಾಂತ್ಯಗಳು (Provinces), 4 ಪುರಸಭೆಗಳು, 5 ಸ್ವಯಮಾಡಳಿತ ಪ್ರದೇಶಗಳು (autonomous regions) ಮತ್ತು 2 ವಿಶೇಷಾಡಳಿತ ಪ್ರದೇಶಗಳು (special administrative regions) ಇವೆ.

| ಕ್ರ.ಸಂ | ಪ್ರಾಂತ್ಯಗಳು | ರಾಜಧಾನಿ | ಜನಸಂಖ್ಯೆ | ವಿಸ್ತೀರ್ಣ |
|---|---|---|---|---|
| 1 | ಸಿಂಜಿಯ್ಯಾಂಗ್ ಉಯುಗುರ್ | ಉರುಂಕಿ | 21,813,33411, | 660,400 |
| 1(a) | ಜಿಯಾಂಗ್ಸು | ನಂಜಿಂಗ್ | 78,659,903 | 102,600 |
| 2 | ಜಿಯಾಂಗ್ಸಿ | ನಂಚಂಗ್ | 44,567,475 | 167,000 |
| 3 | ಹೆಬೈ | ಷಿ ಆ್ಯಜೌಂಗ್ | 71,854,202 | 187,700 |
| 4 | ಹೆನನ್ | ಜೆಂಗ್‌ಷಾ | 94,023,567 | 167,000 |
| 5 | ಜಿಜಿಯಾಂಗ್ | ಹ್ಯಾಗ್‌ಷಾ | 54,426,891 | 102,000 |
| 6 | ಹೈನನ್ | ಹೈಕಾ | 8,671,518 | 34,000 |
| 7 | ಹ್ಯುಬೈ | ವುಹನ್ | 57,237,740 | 185,900 |
| 8 | ಹುನನ್ | ಚಂಗ್ಷಾ | 65,683,722 | 210,000 |
| 9 | ಮಕೌ | ಮಕೌ | 552,300 | 29 |
| 10 | ಗನ್ಸು | ಲನ್ಸೌ | 25,575,254 | 454,300 |
| 11 | ಫುಜಿಯನ್ | ಫುಜೌ | 36,894,216 | 121,300 |
| 12 | ಸ್ಸಿಯಾಂಗ್ | ಲ್ಹಾಸ | 3,002,166 | 1,228,400 |
| 13 | ಗುಯಿಷೌ | ಗುಇಯಾಂಗ್ | 34,746,468 | 176,000 |
| 14 | ವೈಲನಿಂಗ್ | ಷೆನ್ಯಾಂಗ್ | 43,746,323 | 145,900 |
| 15 | ಚಾಂಗ್‌ಕ್ವಿಂಗ್ | ಚೋಂಗ್‌ಕ್ವಿಂಗ್ | 28,846,170 | 82,300 |
| 16 | ಷಾಂಕ್ಸಿ | ಸ್ಸಿಅನ್ | 37,327,378 | 205,600 |
| 17 | ಕ್ವಿಂಗೈ | ಸ್ಸಿನಿಂಗ್ | 5,626,722 | 721,200 |
| 18 | ಸ್ಸಿಯಾಂಗಾಂಗ್ | ಹಾಂಗ್‌ಕಾಂಗ್ | 7,061,200 | 1,104 |
| 19 | ಷಾಂಗೈ | ಷಾಂಗೈ | 23,019,148 | 6,341 |
| 20 | ಯುನಾನ್ | ಕುನ್ಮಿಂಗ್ | 45,966,239 | 394,000 |
| 21 | ಇನ್ನರ್ ಮಂಗೋಲಿಯ | ಹಾಹಾಟ್ | 24,706,321 | 1,183,000 |
| 22 | ಪೀಜಿಂಗ್ | ಪೀಜಿಂಗ್ | 19,612,368 | 16,800 |
| 23 | ತೈವಾನ್ | ಟೈಬೇ | 23,140,000 | 35,581 |
| 24 | ಜಿಲಿನ್ | ಚಾಂಗ್‌ಚುನ್ | 27,462,297 | 187,400 |
| 25 | ಸಿಚುವನ್ | ಚೆಂಗ್ಡು | 80,418,200 | 485,000 |
| 26 | ತಿಯಾನ್‌ಜಿನ್ | ತಿಯಾನ್‌ಜನ್ | 12,938,224 | 11,305 |
| 27 | ನಿಂಗ್ಜಿಯಾ ಹುಯಿ | ಯಿಂಚುಅನ್ | 6,301,350 | 66,400 |
| 28 | ಆನ್‌ಹುಯಿ | ಹೆಫೇ | 59,500,510 | 139,700 |
| 29 | ಷಾಂದಾಂಗ್ | ಜಿನನ್ | 95,793,065 | 153,800 |
| 30 | ಷಾಂಸಿ | ತೈಯುವನ್ | 35,712,111 | 156,300 |
| 31 | ಗ್ವಾಂಗ್‌ದಾಂಗ್ | ಜುಆಂಗ್‌ಜೌ | 104,303,132 | 180,000 |
| 32 | ಗುವಾಂಗ್ಸಿ ಝುಆಂಗ್ | ನ್ಯಾನಿಂಗ್ | 46,026,629 | 236,000 |

ವಿಶೇಷ ಆಡಳಿತ ಪ್ರದೇಶಗಳು : ಸಂಖ್ಯೆ 9, 18

S.A.R ಸ್ವಯಮಾಡಳಿತ ಪ್ರದೇಶಗಳು : ಸಂಖ್ಯೆ 1, 12, 21, 27, 32

ಪುರಸಭೆಗಳು : 15, 19, 22, 26

ಸಂಪ್ರದಾಯಬದ್ಧ ಚೀನ 20ನೆಯ ಶತಮಾನದಲ್ಲಿ ತೀವ್ರ ಸಾಂಸ್ಕೃತಿಕ ಕ್ರಾಂತಿಗೆ ಒಳಗಾಯಿತು. ಅನ್ಯ ಸಂಸ್ಕೃತಿ ಮತ್ತು ವಿದೇಶಿ ಸರಕುಗಳ ಬಹಿಷ್ಕಾರ, ರಾಷ್ಟ್ರೀಯ ಸರ್ಕಾರ ಮತ್ತು ಸಮತಾವಾದಿ ಸರ್ಕಾರಗಳ ನಿಯಂತ್ರಣದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಇವುಗಳಿಂದ ಜನಜೀವನ ಮಾರ್ಪಟ್ಟಿದೆ. ಅನೂಚಾನವಾಗಿ ಬಂದ ಪದ್ಧತಿಗಳು ಮತ್ತು ನೈತಿಕ ನಿಯಮಗಳು ಬದಲಿಸಿವೆ. ಕನ್‌ಫ್ಯೂಷಿಸ್ ದರ್ಶನಕ್ಕೆ ಅನುಗುಣವಾದ ಕುಟುಂಬ ವ್ಯವಸ್ಥೆ, ಕುಟುಂಬದ ಹಿರಿಯರಲ್ಲಿ ವಿಧೇಯತೆ, ವಿವಾಹ ಮತ್ತು ಅಂತ್ಯಕ್ರಿಯೆಗಳ

ಬಗ್ಗೆ ಹಳೆಯ ಆಚರಣೆಗಳು, ಪಿತೃಪೂಜೆ, ನಿಯತಕಾಲಗಳಲ್ಲಿ ಕುಟುಂಬ ಸದಸ್ಯರ ಮಿಲನ–ಇವೆಲ್ಲ ಅದೃಶ್ಯವಾಗಿವೆ; ಕೈಗಾರಿಕೆಗಳ ಸ್ಥಾಪನೆ ಹಾಗೂ ಸಮುದಾಯ ವ್ಯವಸ್ಥೆಗಳು ಸಮಾಜವನ್ನು ರಾಜಕೀಯ ಮತ್ತು ಮಾನಸಿಕ ನಿಯಂತ್ರಣಕ್ಕೊಳಪಡಿಸಿವೆ. ಹಿಂದುಳಿದಿದ್ದ ಚೀನೀ ಸ್ತ್ರೀಯರು ಎಲ್ಲ ಕ್ಷೇತ್ರಗಳಲ್ಲೂ ಪುರುಷರೊಡನೆ ಸಮಾನ ಹಕ್ಕು ಹೊಂದಿದ್ದಾರೆ.

ಒಂದು ಚೀನೀ ಗಾರುಡಿ ಪ್ರದರ್ಶನ

ರಾಜಕೀಯ ಪರಿವರ್ತನೆಯಿಂದಾಗಿ ಜನತೆಯಲ್ಲಿ ಹೊಸ ವ್ಯಕ್ತಿತ್ವ ಮತ್ತು ಸಮಾಜಪ್ರಜ್ಞೆ ಮೂಡಿವೆ. ಸಾಮ್ಯವಾದದ ಪ್ರಸಾರ ಮತ್ತು ರಾಷ್ಟ್ರಸೇವೆ ಶಿಕ್ಷಣದ ಮುಖ್ಯ ಗುರಿ. ರಾಷ್ಟ್ರದ ಜನರನ್ನು ಸರ್ಕಾರ ಆರ್ಥಿಕಾಭಿವೃದ್ಧಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿದೆ. ವ್ಯವಸಾಯ ಪ್ರಮುಖ ಚೀನ ಈಗ ವಿಶ್ವದ ಮುಖ್ಯ ಕೈಗಾರಿಕೆ ರಾಷ್ಟ್ರವಾಗುವ ಗುರಿ ಹೊಂದಿದೆ. (ವಿ.ಜಿ.ಕೆ.)

iii ಸಂವಿಧಾನ ಮತ್ತು ಆಡಳಿತ : ಚೀನದಲ್ಲಿ 1949ರಲ್ಲಿ ಕಮ್ಯೂನಿಸ್ಟ್ ಪ್ರಭುತ್ವ ಸ್ಥಾಪಿತವಾಯಿತು. ಇದು ಜನತಾ ಪ್ರಜಾಸತ್ತಾತ್ಮಕ ಗಣರಾಜ್ಯ. ಸಮಾಜವಾದವನ್ನು ಆಧರಿಸಿದ ಸಂವಿಧಾನವನ್ನು ಚೀನದ ಸಂವಿಧಾನ ಸಭೆಯಾದ ರಾಷ್ಟ್ರೀಯ ಜನತಾ ಕಾಂಗ್ರೆಸ್ 1954ರ ಸೆಪ್ಟೆಂಬರ್ 20ರಂದು ಅಂಗೀಕರಿಸಿತು. ಈ ಲಿಖಿತ ಸಂವಿಧಾನದಲ್ಲಿ ಪೀಠಿಕೆಯಲ್ಲದೆ ನಾಲ್ಕು ಅಧ್ಯಾಯಗಳು ಹಾಗೂ 106 ವಿಧಿಗಳು ಇವೆ. 1 ರಿಂದ 20 ವಿಧಿಗಳಿರುವ

ಬೀಜಿಂಗ್ ಷಾಂಗ್‌ಹೈ ಮಾರ್ಗದ ಒಂದು ರೈಲು

ಮೊದಲನೆಯ ಅಧ್ಯಾಯದಲ್ಲಿ ಸಾಮಾನ್ಯ ಸೂತ್ರಗಳು ಎಂಬ ಶೀರ್ಷಿಕೆಯಲ್ಲಿ ಚೀನೀ ಗಣರಾಜ್ಯದ ಮೂಲ ಸ್ವರೂಪವನ್ನೂ ಆಧಾರತತ್ತ್ವಗಳನ್ನೂ ನೀತಿಗಳನ್ನೂ ಕೊಡಲಾಗಿದೆ. ರಾಜ್ಯದ ಅಂಗರಚನೆಯನ್ನು ಕುರಿತದ್ದು ಎರಡನೆಯ ಅಧ್ಯಾಯ. ಇದರಲ್ಲಿ 21 ರಿಂದ 84ರವರೆಗಿನ ವಿಧಿಗಳಿವೆ. ಇಲ್ಲಿ ರಾಜ್ಯದ ಮುಖ್ಯ ಆಡಳಿತ ಸಂಸ್ಥೆಗಳ ಅಂಗರಚನೆಯನ್ನು ವಿವರಿಸಿದೆ. ಪೌರರ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಕುರಿತದ್ದು ಮೂರನೆಯ ಅಧ್ಯಾಯ (ವಿಧಿಗಳು 85–103). ನಾಲ್ಕನೆಯ ಅಧ್ಯಾಯದಲ್ಲಿ ರಾಷ್ಟ್ರಧ್ವಜ, ರಾಷ್ಟ್ರಚಿಹ್ನೆ, ರಾಜಧಾನಿ ಇವನ್ನು ಕುರಿತ ವಿಧಿಗಳಿವೆ (104–106).

ಮೂಲಸೂತ್ರಗಳು : ಚೀನೀ ಸಂವಿಧಾನದ ಮೂಲ ಸೂತ್ರಗಳೆಂದರೆ 1 ಸಮಾಜವಾದ, 2 ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನು ತಿರಸ್ಕರಿಸಿದ ಜನತಾಪ್ರಜಾಪ್ರಭುತ್ವ, 3 ರಾಷ್ಟ್ರೀಯ ಜನಾಂಗಗಳ ಸಮಾನತೆ ಮತ್ತು 4 ಪ್ರಜಾಸತ್ತಾತ್ಮಕ ಕೇಂದ್ರೀಕರಣ. ಈ ಸೂತ್ರಗಳ ಆಧಾರದ ಮೇಲೆ ಚೀನದ ವಾಸ್ತವಿಕವಾದ ಏಕಪಕ್ಷೀಯ ನಿರಂಕುಶಪ್ರಭುತ್ವವನ್ನು ಪ್ರಜಾಪ್ರಭುತ್ವವಾದಿ ನಿರಂಕುಶ ಪ್ರಭುತ್ವವೆಂದೂ ಕಾರ್ಮಿಕ ಮತ್ತು ರೈತಜನರ ಒಕ್ಕೂಟವನ್ನಾಧರಿಸಿದ ಮತ್ತು ಕಾರ್ಮಿಕ ವರ್ಗದ ನಾಯಕತ್ವ ಹೊಂದಿದ ಜನತಾ ಪ್ರಜಾಪ್ರಭುತ್ವವೆಂದೂ ಕರೆಯಲಾಗುತ್ತದೆ. ಅದು ಏಕಾತ್ಮಕ ರಾಜ್ಯ. ಇಡೀ ಚೀನಕ್ಕೆ ಒಂದೇ ಸರ್ಕಾರವಿದೆ. ರಾಷ್ಟ್ರೀಯ ಸರ್ಕಾರದ ಹತೋಟಿಯಲ್ಲೇ ಎಲ್ಲ ಆಡಳಿತವೂ ಕೇಂದ್ರೀಕೃತವಾಗಿದೆ. ಕಾನೂನು ಮಾಡುವ ಹಕ್ಕು ರಾಷ್ಟ್ರೀಯ ಜನತಾ ಕಾಂಗ್ರೆಸಿಗೆ ಸೇರಿದ್ದು. ಅಧಿಕಾರಪ್ರತ್ಯೇಕತಾಸಿದ್ಧಾಂತವನ್ನು ಚೀನದ ಸಂವಿಧಾನ ತಿರಸ್ಕರಿಸಿದೆ. ಚೀನದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನಲ್ಲಿ ಶಾಸಕಾಂಗದ ಅಧಿಕಾರವಲ್ಲದೆ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಅಧಿಕಾರವೂ ಕೇಂದ್ರೀಕೃತವಾಗಿದ್ದು, ಈ ಸಂಸ್ಥೆಯಿಂದಲೇ ಕಾರ್ಯಾಂಗಕ್ಕೆ–ರಾಷ್ಟ್ರಾಧ್ಯಕ್ಷನಿಗೆ ಮತ್ತು ಮಂತ್ರಿಮಂಡಲಕ್ಕೆ–ಹಾಗೂ ನ್ಯಾಯಾಂಗವಾದ ಜನತಾ ನ್ಯಾಯಾಲಯಕ್ಕೆ ಅಧಿಕಾರ ಪ್ರಾಪ್ತವಾಗುತ್ತದೆ. ಅಲ್ಲದೆ ಚೀನದ ಶ್ರೇಷ್ಠ ಜನತಾ ನ್ಯಾಯಾಲಯಕ್ಕೆ ಸಂವಿಧಾನವನ್ನು ವ್ಯಾಖ್ಯಾನಿಸುವ ಅಥವಾ ಉದ್ಧರಿಸುವ ಹಕ್ಕು ಇಲ್ಲ. ಸಂವಿಧಾನವನ್ನು ಉದ್ಧರಿಸುವ ಹಕ್ಕನ್ನು ರಾಷ್ಟ್ರೀಯ ಜನತಾ ಕಾಂಗ್ರೆಸ್ ತನ್ನ ಸ್ಥಾಯೀ ಸಮಿತಿಗೆ ಕೊಟ್ಟಿದೆ; ಮತ್ತು ಸಂವಿಧಾನವನ್ನು ಅದು $\frac{2}{3}$ರಷ್ಟು ಸದಸ್ಯರ ಬಹುಮತದಿಂದ ತಿದ್ದುಪಡಿ ಮಾಡುವ ಹಕ್ಕು ಹೊಂದಿದೆ. ಈ ಕಾರಣ ರಾಷ್ಟ್ರೀಯ ಜನತಾ ಕಾಂಗ್ರೆಸ್ಸನ್ನು ಪೂರ್ಣವಾಗಿ ಹತೋಟಿಯಲ್ಲಿಟ್ಟು–ಕೊಂಡಿರುವ ಚೀನೀ ಕಮ್ಯೂನಿಸ್ಟ್ ಪಕ್ಷವೇ ಚೀನೀ ಸಂವಿಧಾನವನ್ನು ಉದ್ಧರಿಸುವ, ತಿದ್ದುಪಡಿ ಮಾಡುವ ಹಕ್ಕು ಪಡೆದಿದೆ.

ಆಡಳಿತದ ಅಂಗಗಳು : ಸಂವಿಧಾನದನ್ವಯ ಚೀನೀ ಆಡಳಿತ ಸಂಸ್ಥೆಗಳಲ್ಲಿ ಮುಖ್ಯವಾದವು ಇವು : 1. ರಾಷ್ಟ್ರೀಯ ಜನತಾ ಕಾಂಗ್ರೆಸ್, 2. ರಾಷ್ಟ್ರಾಧ್ಯಕ್ಷ, 3. ರಾಜ್ಯ ಸಮಿತಿ, 4. ಸ್ಥಳೀಯ ಜನತಾ ಕಾಂಗ್ರೆಸ್ ಮತ್ತು ಸ್ಥಳೀಯ ಜನತಾ ಸಮಿತಿಗಳು, 5. ಸ್ವಾಯತ್ತತಾ ರಾಷ್ಟ್ರೀಯ ಪ್ರದೇಶಗಳ ವಿಶೇಷ ಸಂಸ್ಥೆಗಳು ಮತ್ತು 6. ಜನತಾ ನ್ಯಾಯಾಲಯಗಳು ಮತ್ತು ಜನತಾ ಕಾನೂನು ಸಂಸ್ಥೆಗಳು.

ಉನ್ನತ ಸಭೆಯೊಂದರಲ್ಲಿ ಮಾವೋ

ರಾಷ್ಟ್ರೀಯ ಜನತಾ ಕಾಂಗ್ರೆಸ್ಸೇ ಚೀನದ ಏಕ–ಸದನ ಸಂಸತ್ತು. ಕೆಳಗಿನ ಪ್ರಾಂತೀಯ ಕಾಂಗ್ರೆಸ್‌ಗಳಿಂದಲೂ ಹಲವು ಪ್ರಮುಖ ನಗರ ಕಾಂಗ್ರೆಸ್‌ಗಳಿಂದಲೂ ಪರೋಕ್ಷವಾಗಿ ಆರಿಸಿ ಬರುವ ಈ ಸಂಸತ್ತು ಇಡೀ ರಾಷ್ಟ್ರದ ಪ್ರತಿನಿಧಿ ಸಭೆಯಲ್ಲದೆ ತಾತ್ತ್ವಿಕವಾಗಿ ರಾಜ್ಯದ ಅತ್ಯಂತ ಶಕ್ತ ಸಂಸ್ಥೆ. ಚೀನದ ಚುನಾವಣಾ ಪದ್ಧತಿಯಲ್ಲಿ 18 ಅಥವಾ ಹೆಚ್ಚಿನ ವಯಸ್ಕರಾದ ಮತದಾರರು ನೇರವಾಗಿ ತಮ್ಮ ಸ್ಥಳೀಯ ಮೊಹಲ್ಲದ ಅಥವಾ ಗ್ರಾಮದ ಕಾಂಗ್ರೆಸಿನ ಚುನಾವಣೆಯಲ್ಲಿ ಮಾತ್ರ ಭಾಗವಹಿಸುತ್ತಾರೆ. ಆಮೇಲೆ ಹಂತಹಂತವಾಗಿ ಕಾಂಗ್ರೆಸ್‌ಗಳನ್ನು ಚುನಾಯಿಸುತ್ತವೆ. ಯೋಜನೆ, ಆಯವ್ಯಯ, ಯುದ್ಧ, ಶಾಂತಿ ಮುಂತಾದ, ರಾಷ್ಟ್ರಜೀವನದ ಎಲ್ಲ ಪ್ರಮುಖ ವಿಷಯಗಳ ಮೇಲೆ ಅಧಿಕಾರವ್ಯಾಪ್ತಿಯುಳ್ಳ ರಾಷ್ಟ್ರೀಯ ಕಾಂಗ್ರೆಸ್ ತಾತ್ತ್ವಿಕವಾಗಿ ಸರ್ವಶಕ್ತ ಸಭೆ. ಸಾಮಾನ್ಯವಾಗಿ ಒಂದು ಸಾವಿರಕ್ಕಿಂತಲೂ ಹೆಚ್ಚಿನ ಸದಸ್ಯರುಳ್ಳ ಈ ಸಭೆ ವಿರಳವಾಗಿ–ವರ್ಷಕ್ಕೆ ಒಂದು ಬಾರಿ–ಸೇರುವುದರಿಂದ ಇದು ಅಧಿವೇಶನದಲ್ಲಿಲ್ಲದಾಗ ಇದರ ಸ್ಥಾಯೀ ಸಮಿತಿ ಕಾಂಗ್ರೆಸ್ಸಿನ ಎಲ್ಲ ಅಧಿಕಾರಗಳನ್ನೂ ಚಲಾಯಿಸುತ್ತದೆ.

ರಾಷ್ಟ್ರೀಯ ಜನತಾ ಕಾಂಗ್ರೆಸ್ಸಿನಿಂದ ಪರೋಕ್ಷವಾಗಿ ನಾಲ್ಕು ವರ್ಷಗಳ ಅವಧಿಗಾಗಿ ಆರಿಸಿ ಬರುವ ಚೀನೀ ರಾಷ್ಟ್ರಾಧ್ಯಕ್ಷ ತಾತ್ತ್ವಿಕವಾಗಿ ಭಾರತದ ರಾಷ್ಟ್ರಾಧ್ಯಕ್ಷನಂತೆ ನಾಮಮಾತ್ರ ಅಧಿಕಾರಿಯಂತೆ ಕಂಡುಬಂದರೂ ವಾಸ್ತವವಾಗಿ ಶ್ರೇಷ್ಠ ರಾಜ್ಯ ಸಮ್ಮೇಳನ ಮತ್ತು ರಾಷ್ಟ್ರೀಯ ರಕ್ಷಣಾ ಸಮಿತಿಗಳ ಮೇಲಿನ ತನ್ನ ಹತೋಟಿಗಳ ಮೂಲಕ ವಿಶಿಷ್ಟ ಅಧಿಕಾರ

ಪಡೆದಿರುತ್ತಾನೆ. ಚೀನದಲ್ಲಿ ಇಬ್ಬರು ಉಪರಾಷ್ಟ್ರಾಧ್ಯಕ್ಷರೂ ಇದ್ದಾರೆ. ಭಾರತದ ಮಂತ್ರಿ ಮಂಡಲಕ್ಕೆ ಸಮಾನವಾದ ಚೀನೀ ರಾಜ್ಯಸಮಿತಿ ರಾಷ್ಟ್ರಾಧ್ಯಕ್ಷನ ಸಲಹೆಯ ಮೇಲೆ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನಿಂದ ಆರಿಸಲ್ಪಡುತ್ತದೆ. ಇದರಲ್ಲಿ ಪ್ರಧಾನಿಯೂ ಉಪ ಪ್ರಧಾನಿಗಳೂ ಆಡಳಿತ ಆಯೋಗಗಳ ಅಧ್ಯಕ್ಷರೂ ಇರುತ್ತಾರೆ. ಈ ಸಮಿತಿಯೇ ಪ್ರಮುಖ ಆಡಳಿತ ಕಾರ್ಯಾಂಗವಾದರೂ ಇದನ್ನು ಭಾರತದ ಸಂಸದೀಯ ಕಾರ್ಯಾಂಗಕ್ಕೆ ತಾತ್ತ್ವಿಕವಾಗಿ ಮಾತ್ರ ಹೋಲಿಸಬಹುದು. ರಾಜ್ಯಸಮಿತಿ ತಾತ್ತ್ವಿಕವಾಗಿ ರಾಷ್ಟ್ರೀಯ ಜನತಾ ಕಾಂಗ್ರೆಸ್ಸಿಗೆ ಅಥವಾ ಸ್ಥಾಯೀ ಸಮಿತಿಗೆ ಉತ್ತರ ನೀಡಬೇಕಾಗುತ್ತದೆ. ರಾಜ್ಯಸಮಿತಿ ಅನೇಕ ಆಡಳಿತ ಆಯೋಗಗಳ ಮೂಲಕ ಕೇಂದ್ರ ಸರ್ಕಾರದ ಆಡಳಿತವನ್ನು ನಡೆಸುತ್ತದೆ.

ಹ್ವೈ ನದಿಯ ಕಟ್ಟೆಗಳಲ್ಲೊಂದು

ಸ್ಥಳೀಯ ಆಡಳಿತಕ್ಕಾಗಿ ಚೀನವನ್ನು 21 ಪ್ರಾಂತ್ಯಗಳಾಗಿ, 5 ಸ್ವಾಯತ್ತತಾ ಪ್ರದೇಶಗಳಾಗಿ, ಅಲ್ಲದೆ ಕೇಂದ್ರಾಡಳಿತ ನಗರ ಪ್ರದೇಶಗಳಾಗಿ ವಿಭಜಿಸಲಾಗಿದೆ. ಅಲ್ಲದೆ ಪ್ರತಿ ಪ್ರಾಂತ್ಯವನ್ನೂ ಅನೇಕ ನಗರಪ್ರದೇಶಗಳನ್ನಾಗಿಯೂ ಗ್ರಾಮಾಂತರ ಜಿಲ್ಲೆಗಳನ್ನಾಗಿಯೂ ವಿಭಜಿಸಲಾಗಿದೆ. ಹಾಗೆಯೇ ಪ್ರತಿ ನಗರಪ್ರದೇಶವನ್ನೂ ಮೊಹಲ್ಲಗಳಾಗಿಯೂ ಗ್ರಾಮಾಂತರ ಜಿಲ್ಲೆಗಳನ್ನು ಅನೇಕ ಆಡಳಿತ ಗ್ರಾಮ ಅಥವಾ ಹಳ್ಳಿಗಳಾಗಿಯೂ ವಿಭಜಿಸಲಾಗಿದೆ. ಈ ಎಲ್ಲ ಮಟ್ಟಗಳಲ್ಲೂ ಶಾಸನಸಭೆಯನ್ನು ಪ್ರತಿಬಿಂಬಿಸುವ ಕಾಂಗ್ರೆಸ್‌ಗಳನ್ನೂ ಕಾರ್ಯಾಂಗಗಳನ್ನು ಹೋಲುವ ಸಮಿತಿಗಳನ್ನೂ ರಚಿಸಲಾಗಿದೆ.

ಬಹುರಾಷ್ಟ್ರೀಯ ಜನಾಂಗಗಳ ರಾಜ್ಯವೆಂದು ಸಾರಲ್ಪಟ್ಟಿರುವ ಚೀನದಲ್ಲಿರುವ ಮಂಗೋಲಿಯನರು, ಟಿಬೆಟನರು, ಕಜ಼ಕರು ಮುಂತಾದ ಅಲ್ಪಸಂಖ್ಯಾತರ ಅನುಕೂಲಕ್ಕಾಗಿ, ಚೀನೀ ಸಂವಿಧಾನದ ಸೂತ್ರಗಳ ಪ್ರಕಾರ, ಆಯಾ ಜನಾಂಗದ ಪ್ರದೇಶದಲ್ಲಿ ಅವರವರ ಇಚ್ಛಾನುಸಾರ ಅಗತ್ಯವಾದ ಸ್ವಯಂ ಆಡಳಿತ ಸಂಸ್ಥೆಗಳನ್ನು ರಚಿಸಲು ಅವಕಾಶವಿದೆ. ಆದರೆ ಈ ಸ್ವಾಯತ್ತತೆಯ ಪ್ರದೇಶಗಳ ಆಡಳಿತ ಸಂಸ್ಥೆಗಳ ನಿರ್ಧಾರಗಳೆಲ್ಲವೂ ಚೀನ ಸರ್ಕಾರದ ನೀತಿಗೆ ಅನುಸಾರವಾಗಿ ಮತ್ತು ಅದರ ಒಪ್ಪಿಗೆಯಂತೆ ಇರಬೇಕು.

ಸಿ.ಆರ್.ಎಚ್. ಹಾರ್ಮೋನಿ ಬುಲೆಟ್ ರೈಲು

ಚೀನದ ನ್ಯಾಯಾಂಗ ಜನತಾ ನ್ಯಾಯಾಲಯಗಳಿಂದ ಕೂಡಿದೆ. ರಾಷ್ಟ್ರಮಟ್ಟದಲ್ಲಿ ಶ್ರೇಷ್ಠ ಜನತಾ ನ್ಯಾಯಾಲಯ ಇದೆ. ಪ್ರಾಂತೀಯ ಮತ್ತು ಸ್ಥಳೀಯ ಮಟ್ಟಗಳಲ್ಲಿ ಸೂಕ್ತ ಜನತಾ ನ್ಯಾಯಾಲಯಗಳಲ್ಲದೆ ಹಲವು ವಿಶೇಷ ಜನತಾ ನ್ಯಾಯಾಲಯಗಳೂ ಇವೆ. ಸಂಬಂಧಪಟ್ಟ ಕಾಂಗ್ರೆಸ್‌ಗಳಿಂದ ಆರಿಸಲ್ಪಡುವ ಮತ್ತು ನಿಯಂತ್ರಿಸಲ್ಪಡುವ ಈ ನ್ಯಾಯಾಲಯಗಳು ಕಮ್ಯುನಿಸ್ಟ್ ಪಕ್ಷದ ನೀತಿಗೆ ಬದ್ಧವಾಗಿ ಕೆಲಸ ಮಾಡುತ್ತವೆ. ಕಾನೂನುಗಳನ್ನು ಜನರೂ ಸರ್ಕಾರಿ ಸಂಸ್ಥೆಗಳೂ ಅನುಸರಿಸುವಂತೆ ಜನತಾ ಕಾನೂನು ಸಂಸ್ಥೆಗಳು (ಪೀಪಲ್ಸ್ ಪ್ರೊಕ್ಯುರೇಟೊರೇಟ್ಸ್) ನೋಡಿಕೊಳ್ಳುತ್ತವೆ. ಕಾನೂನು ವಿರೋಧಿಗಳನ್ನು ಶೋಧಿಸಿ ನ್ಯಾಯಾಲಯದ ಮುಂದೆ ತರುವುದು ಇವುಗಳ ಕೆಲಸ.

ಚೀನದಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಮುಖವಾದ್ದು. ನಾಮಮಾತ್ರಕ್ಕೆ ಹಲವು ಇತರ ಪಕ್ಷಗಳಿದ್ದರೂ ವಾಸ್ತವವಾಗಿ ಅವು ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮಕ್ಕೆ ಒಪ್ಪಿ ಅದರ ನಾಯಕತ್ವದಲ್ಲಿ ಕೆಲಸ ಮಾಡುತ್ತವೆ. ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಚೀನೀ ಕಮ್ಯುನಿಸ್ಟ್ ಪಕ್ಷ ರಾಷ್ಟ್ರದ ಏಕೈಕ ಪ್ರಬಲ ರಾಜಕೀಯ ಶಕ್ತಿ. ಸ್ಥಾನಗಳ, ಸಂಸ್ಥೆಗಳ, ನೀತಿಗಳ ನಿಯಂತ್ರಣದ ಮೂಲಕ ಇಡೀ ಚೀನದ ಆಡಳಿತವನ್ನು ಎಲ್ಲ ಮಟ್ಟಗಳಲ್ಲೂ ಈ ಪಕ್ಷ ನಿರ್ಧರಿಸುತ್ತದೆ. ಕಮ್ಯುನಿಸ್ಟ್ ಪಕ್ಷವೇ ಚೀನೀ ಆಡಳಿತದ ಬೆನ್ನೆಲುಬು. ಎಲ್ಲ ವಿಷಯಗಳಲ್ಲಿ ಅದರ ನಿರ್ಧಾರವೇ ಅಂತಿಮ ನಿರ್ಧಾರ. ಆದ್ದರಿಂದ ವಾಸ್ತವವಾಗಿ ಚೀನೀ ಪ್ರಭುತ್ವ ಸೋವಿಯತ್ ಪ್ರಭುತ್ವದಂತೆ ಏಕಪಕ್ಷೀಯ ಪ್ರಭುತ್ವವಾಗಿದೆ.

ಷಾಂಗ್‌ಹೈ ನಗರ

iv ರಕ್ಷಣೆ : ಚೀನವನ್ನು 13 ಸೈನಿಕ ಪ್ರದೇಶಗಳಾಗಿ ವಿಭಾಗಿಸಲಾಗಿದೆ. ಪ್ರತಿ ಪ್ರದೇಶಕ್ಕೂ 23 ಸೈನಿಕ ಜಿಲ್ಲೆಗಳಿವೆ. ಭೂನೌಕಾ ವಾಯುಸೇನೆಗಳ ಮುಖ್ಯಾಧಿಕಾರಿ ದಂಡನಾಯಕ. 1955ರಲ್ಲಿ ಕಡ್ಡಾಯ ಸೈನ್ಯ ಸೇವೆ ರೂಢಿಗೆ ಬಂತು. 18ನೆಯ ವಯಸಿನಲ್ಲಿ ಸೇವೆ ಪ್ರಾರಂಭವಾಗುತ್ತದೆ. ಸೇವೆಯ ಕಾಲ ಭೂಸೇನೆಯಲ್ಲಿ 4 ವರ್ಷ, ನೌಕಾಸೇನೆಯಲ್ಲಿ 6 ವರ್ಷ, ವಾಯುಸೇನೆಯಲ್ಲಿ 5ವರ್ಷ. ಸೈನ್ಯದಲ್ಲಿ ಯೋಧರ ವರ್ಗೀಕರಣ ಮತ್ತು ದರ್ಜೆಗಳು 1965ರಲ್ಲಿ ರದ್ದಾಗಿ, ಕಾರ್ಯಕ್ಕನುಗುಣವಾಗಿ ಅವರ ದರ್ಜೆಗಳು ಏರ್ಪಟ್ಟಿವೆ.

ಚೀನದ ಬಿಹುಅ ಕಾಲೇಜು

ಚೀನೀ ಸಶಸ್ತ್ರ ಪಡೆಯನ್ನು ಪೀಪಲ್ಸ್ ಲಿಬರೇಷನ್ ಆರ್ಮಿ ಎಂದು ಕರೆಯುತ್ತಾರೆ. 2009 ರಲ್ಲಿ ಸೇನೆಯ ಸಂಖ್ಯೆ 2.3 ಮಿಲಿಯನ್ ; ರಕ್ಷಣಾ ಖಾತೆಗೆ ಒದಗಿಸುವ ಮೊತ್ತ 532.1 ಬಿಲಿಯನ್ ಯುವಾನ್ (ಸು.70.8 ಬಿಲಿಯನ್ (ಅಮೆರಿಕನ್ ಡಾಲರುಗಳು) (2010).

### III ಆರ್ಥಿಕತೆ

**I ವ್ಯವಸಾಯ :** ಚೀನ ಹಿಂದಿನಿಂದ ವ್ಯವಸಾಯಾವಲಂಬಿ ದೇಶವಾಗಿದೆ ಆಹಾರಧಾನ್ಯ, ವಾಣಿಜ್ಯಫಸಲು ಮತ್ತು ಎಣ್ಣೆಬೀಜಗಳ ಬೆಳೆ ಪ್ರಧಾನ. ಹಂದಿಗಳನ್ನು ವಿಶೇಷವಾಗಿ ಸಾಕುತ್ತಾರೆ.

1950ರಲ್ಲಿ ಊಳಿಗಮಾನ್ಯ ಪದ್ಧತಿ ರದ್ದಾಗಿ ಭೂಮಿ ಸರ್ಕಾರದ ವಶವಾಯಿತು. ಕೃಷಿ ಸಮಾಜೀಕರಣ 1958ರಲ್ಲಿ ಪೂರ್ತಿಗೊಂಡಿತು. ಸುಮಾರು 50 ಕೋಟಿ ರೈತಪ್ರಜೆಗಳನ್ನೊಳಗೊಂಡ ಗ್ರಾಮಾಂತರ ಪ್ರದೇಶಗಳು 74,000 ಕಮ್ಯೂನ್‌ಗಳಾಗಿ ವಿಂಗಡಣೆಯಾದವು. ಪ್ರತಿ ಕಮ್ಯೂನ್‌ನಲ್ಲೂ ಅನೇಕ ಗ್ರಾಮಗಳು ಸೇರಿವೆ ; ಅದರಲ್ಲಿ 6,000ಕ್ಕೂ ಹೆಚ್ಚಿನ ಕುಟುಂಬಗಳಿರುತ್ತವೆ.

ಚೀನವನ್ನು ನಾಲ್ಕು ಕೃಷಿ ವಲಯಗಳನ್ನಾಗಿ ವಿಭಾಗಿಸಬಹುದು : 1. ಒಂದೇ ಬೆಳೆಯಾಗುವ ವಲಯ. ಇದು ತೀರ ಚಳಿ ಪ್ರದೇಶ. ಇದು ಚೀನದ ಮಹಾಗೋಡೆಯ ಉತ್ತರದಲ್ಲಿದೆ. ಇಲ್ಲಿ ವಸಂತ ಗೋದಿ ಮತ್ತು ಇತರ ಧಾನ್ಯಗಳನ್ನು ಬೆಳೆಯುತ್ತಾರೆ. 2. ಎರಡು ವರ್ಷಗಳಲ್ಲಿ ಮೂರು ಬೆಳೆಯಾಗುವ ವಲಯ. ಚೀನದ ಮಹಾಗೋಡೆಯ

ದಕ್ಷಿಣಭಾಗ ಮತ್ತು ಚಿನ್‌ಲಿಂಗ್ ಪರ್ವತಶ್ರೇಣಿಗಳ ದಕ್ಷಿಣದಲ್ಲಿದೆ. 3. ವರ್ಷದಲ್ಲಿ ಎರಡು ಬೆಳೆ ಆಗುವ ವಲಯ. ಹ್ವೈ ನದಿಯ ಜಲಾನಯನ ಭೂಮಿ, ಚಿನ್‌ಲಿಂಗ್ ಪರ್ವತಗಳ ದಕ್ಷಿಣ ಭಾಗ, ಟಯುಲಿಂಗ್, ಚಿಯುಲಿಂಗ್‌ಷನ್ ಮತ್ತು ಟಂಗ್‌ಅನ್‌ಲಿಂಗ್ ಪರ್ವತಗಳ

ವ್ಯವಸ್ಥಿತ ಬೇಸಾಯ ಭೂಮಿಯ ನೋಟ

ಉತ್ತರದ ಭಾಗಗಳನ್ನೊಳಗೊಂಡಿದೆ. 4. ವರ್ಷದಲ್ಲಿ ಮೂರು ಬೆಳೆ ಆಗುವ ವಲಯ. ಗ್ವಾಂಗ್‌ಡುಂಗ್ ಪ್ರಾಂತ್ಯದ ಚುಕ್ಯಾಂಗ್ ಮತ್ತು ಮಿನ್‌ಕ್ಯಾಂಗ್ ನದಿಗಳ ಜಲಾನಯನ ಭೂಮಿ, ಫೂಕೈನ್ ಕಡಲ ತೀರ ಭಾಗ ಮತ್ತು ಗ್ವಾಂಗ್‌ಸೀ–ಚ್ವಾಂಗ್ ಸ್ವಯಮಾಡಳಿತ ಪ್ರದೇಶಗಳನ್ನೊಳಗೊಂಡಿದೆ.

ಅಕ್ಕಿ ಮತ್ತು ಗೋಧಿ ಜನರ ಮುಖ್ಯ ಆಹಾರ. ಇವು ದೇಶದ ಅನೇಕ ಭಾಗಗಳಲ್ಲಿ ಬೆಳೆಯುತ್ತವೆ. ಬತ್ತದ ಗದ್ದೆಗಳ ವಿಸ್ತೀರ್ಣ 32,60,00000 ಹೆಕ್ಟೇರುಗಳು ಯಾಂಗ್‌ಟ್ಸೀ ನದಿಯ ಉತ್ತರ ಭಾಗ, ಉತ್ತರ ಚೀನ ಬಯಲು, ಈಶಾನ್ಯ ಭಾಗ (ಮಂಚೂರಿಯ) ಮತ್ತು ಸಚ್ವಾನ್ ಜಲಾನಯನ ಭೂಮಿಯಲ್ಲಿ ಗೋಧಿ ಬೆಳೆ ಹೆಚ್ಚು. ಚೀನದಲ್ಲಿ ಬೆಳೆಯುವ ಇತರ ಧಾನ್ಯಗಳು ಕವೊಲಿಂಗ್ ಎಂಬ ಒರಟು ಧಾನ್ಯ, ಬಾರ್ಲಿ, ಮೆಕ್ಕೆಜೋಳ, ಸೋಯಾಬೀನ್ಸ್, ಕವೊಲಿಂಗ್ ಧಾನ್ಯ ಈಶಾನ್ಯ ಚೀನದ ಮುಖ್ಯ ಬೆಳೆ, ಜನರ ಆಹಾರ, ಪ್ರಾಣಿಗಳ ಮೇವು. ಇದರ ಬೆಳೆಗೆ ಸ್ವಲ್ಪ ಮಳೆ ಸಾಕು. ಉತ್ತರ ಚೀನ ಬಯಲಲ್ಲಿ ಸಹ

ಚೀನದ ಒಂದು ಚಹ ತೋಟ

ಈ ಧಾನ್ಯ ಬೆಳೆಯುತ್ತದೆ. ಮೆಕ್ಕೆಜೋಳ ಬೆಳೆಯುವ ಪ್ರದೇಶ ಹೋಪೇ, ಹೋನ್ಯಾನ್, ಷಾನ್‌ಟುಂಗ್, ಷೆನ್ಸೀ, ಸಚ್ವಾನ್ ಮತ್ತು ಯುನ್ನಾನ್ ಪ್ರಾಂತ್ಯಗಳು. ಮೆಕ್ಕೆಜೋಳ ಬೆಳೆಯುವ ರಾಷ್ಟ್ರಗಳಲ್ಲಿ ಚೀನ ಎರಡನೆಯದು. ಮಿಲೆಟ್ ಧಾನ್ಯ ಹೆಚ್ಚಾಗಿ ಉತ್ತರ ಚೀನ ಬಯಲು, ಈಶಾನ್ಯ ಚೀನ ಮತ್ತು ಲೊಯೆಸ್ ಪ್ರಸ್ಥಭೂಮಿಯಲ್ಲಿ ಬೆಳೆಯುತ್ತದೆ. ದೇಶದ ಕೆಲವು ಕಡೆ ಬಾರ್ಲಿ ಬೆಳೆಯುತ್ತದೆ. ಇದನ್ನು ಪ್ರಾಣಿಗಳ ಮೇವಾಗೂ ಬಳಸಲಾಗುತ್ತಿದೆ. ದೇಶದಲ್ಲಿ ಬೆಳೆಯುವ ಸೋಯಾ ಬೀನ್ಸ್‌ನಲ್ಲಿ ಅರ್ಧಭಾಗ ಆಹಾರವಾಗಿ ಬಳಕೆಯಾಗುತ್ತದೆ. ಉಳಿದ ಅರ್ಧಭಾಗದಿಂದ ಎಣ್ಣೆ ತಯಾರಿಸುತ್ತಾರೆ. ಪ್ರಪಂಚದ ಸೋಯಾಬೀನ್ಸ್‌ನಲ್ಲಿ ಶೇ.80 ರಷ್ಟು ಚೀನದಲ್ಲಿ ಬೆಳೆಯುತ್ತದೆ. ನೆಲಗಡಲೆಯು, ಷ್ಯಾನ್‌ಟಂಗ್, ಹೋಪೇ, ಹೋನ್ಯಾನ್, ಜಿಯಾಂಗ್‌ಸೂ, ಸಚ್ವಾನ್, ಫೂಕೈನ್, ಗ್ವಾಂಗ್‌ಡುಂಗ್, ಜಿಯಾಂಗ್‌ಸೀ ಪ್ರಾಂತ್ಯಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ರೇಪ್ ಬೀಜ, ಸಾಸುವೆ, ಗಸಗಸೆ ಇವು ಮುಖ್ಯವಾಗಿ ಯಾಂಗ್‌ಟ್ಸೀ ನದಿ ಬಯಲಿನಲ್ಲಿ ಬೆಳೆಯುತ್ತವೆ. ಹತ್ತಿ, ಸಣಬು, ರ್‍ಯಾಮಿ ನಾರು, ಅಗಸೆ ಇವು ಇಲ್ಲಿಯ ವಾಣಿಜ್ಯ ಬೆಳೆಗಳು. ಚೀನದ ಇನ್ನೊಂದು ಮುಖ್ಯ ಬೆಳೆ ಚಹ. ಚೀನದ 15 ಪ್ರಾಂತ್ಯಗಳಲ್ಲಿ ಚಹ ತೋಟಗಳಿವೆ. ಜಜಿಯಾಂಗ್, ಫೂಕೈನ್, ಗ್ವಾಂಗ್‌ಡುಂಗ್ ಪ್ರಾಂತ್ಯಗಳಲ್ಲಿ ವಿಶೇಷ. ಹೊಗೆಸೊಪ್ಪು ಬೆಳೆ ಹೇಲುಂಗ್‌ಜಿಯಾಂಗ್ ಮತ್ತು ಯುನ್ನಾನ್ ಪ್ರಾಂತ್ಯಗಳಲ್ಲಿ ಹೆಚ್ಚು. ಪ್ರಪಂಚದ ಹೊಗೆಸೊಪ್ಪು ಬೆಳೆಯುವ ರಾಷ್ಟ್ರಗಳಲ್ಲಿ ಚೀನ ಎರಡನೆಯದು. 2,76,000 ಹೆಕ್ಟೇರ್‌ಗಳಲ್ಲಿ ಹೊಗೆಸೊಪ್ಪು ಬೆಳೆಯುತ್ತದೆ. ನಿಂಬೆಜಾತಿಯ ಹಣ್ಣುಗಳು, ಸೇಬು, ಮರಸೇಬು, ದ್ರಾಕ್ಷಿ, ಬಾಳೆ, ಅನಾನಾಸ್ ಚೀನದ ಮುಖ್ಯ ಫಲಗಳು. ಚೀನದ ದಕ್ಷಿಣದ

ದಕ್ಷಿಣ ಗ್ವಾಂಗ್‌ಡುಂಗ್ ಪ್ರಾಂತ್ಯದಲ್ಲಿ ಬತ್ತದ ಬೇಸಾಯ, ಅಕ್ಕಿ ಇಲ್ಲಿಯ ಜನರ ಪ್ರಮುಖ ಆಹಾರ

ಭಾಗದಲ್ಲಿ ರೇಷ್ಮೆ ವ್ಯವಸಾಯ ನಡೆಯುತ್ತದೆ. ಅಲ್ಲಿ ಉಪ್ಪುನೇರಳೆ ವಿಶೇಷವಾಗಿ ಬೆಳೆಯುತ್ತದೆ. ಚೀನಕ್ಕೆ ಉದ್ದವಾದ ಕಡಲ ಕರೆ ಇರುವುದರಿಂದ ಪ್ರಪಂಚದ ಮೀನು ಹಿಡಿಯುವ ಒಟ್ಟು ಪ್ರದೇಶದಲ್ಲಿ ಶೇ.24 ರಷ್ಟು ಭಾಗ ಚೀನದಲ್ಲಿದೆ. ನದಿ ಸರೋವರಗಳಲ್ಲೂ ಮೀನು ವಿಶೇಷವಾಗಿ ದೊರೆಯುತ್ತದೆ. ಚೀನದ ಮೀನಿನ ವಾರ್ಷಿಕ ಸರಾಸರಿ ಹಿಡಿತ 28 ಲಕ್ಷ ಮೆಟ್ರಿಕ್ ಟನ್. ಮೀನುಗಾರಿಕೆಯಲ್ಲಿ 70 ಲಕ್ಷ ಜನ ನಿರತರಾಗಿದ್ದಾರೆ.

ರೇಷ್ಮೆಗೂಡು ಸಾಕಣೆ

**ii ಅರಣ್ಯ :** ಚೀನದ ಮೂಲನಾಡು ಮತ್ತು ಮಂಚೂರಿಯದಲ್ಲಿ ಹಿಂದೆ ಅರಣ್ಯಗಳಿದ್ದವು. ನಗರಗಳ ನಿರ್ಮಾಣ ಹಾಗೂ ಚೌಬೀನೆಗಾಗಿ ಬಹುಭಾಗ ಅರಣ್ಯ ನಾಶವಾಯಿತು. ಈಗ ಅರಣ್ಯ ಬೆಳೆಸುವ ಯೋಜನೆ ಇದೆ. ಚೀನದ ಮುಖ್ಯ ಅರಣ್ಯಗಳಿರುವ ಭಾಗ ಹೇಲುಂಗ್, ಜಿಯಾಂಗ್ ಸಚ್ವಾನ್ ಮತ್ತು ಯುನ್ನಾನ್ ಪ್ರಾಂತ್ಯಗಳು. ಟಂಗ್ ಮರ ಅರಣ್ಯಗಳಲ್ಲಿ ಅಧಿಕ; ಅದರಿಂದ ಎಣ್ಣೆ ತೆಗೆಯುತ್ತಾರೆ. ತೇಗದ ಮರ ಹೇರಳ. ಯಾಂಗ್‌ಟ್ಸೀ ನದಿಯ ದಕ್ಷಿಣ ಭಾಗಗಳಲ್ಲಿ ಬಿದಿರು ಅರಣ್ಯಗಳಿವೆ.

**iii ಗಣಿಗಳು :** ಚೀನದ ಎಲ್ಲ ಪ್ರಾಂತ್ಯಗಳಲ್ಲೂ ಕಲ್ಲಿದ್ದಲು ನಿಕ್ಷೇಪಗಳಿವೆ. ಕೈಲುವಾನ್, ಫೂಷಿನ್, ಹೈನ್ಯಾನ್, ಟಾಟುಂಗ್ ಗಣಿಗಳಲ್ಲಿ ಹೆಚ್ಚು ಕಲ್ಲಿದ್ದಲು ಉತ್ಪಾದನೆಯಾಗುತ್ತದೆ. ಕಬ್ಬಿಣದ ಅದುರು ಷಾನ್‌ಸೀ, ಹೂಪೇ, ಷ್ಯಾನ್‌ಟಂಗ್ ಪ್ರಾಂತ್ಯಗಳಲ್ಲಿ ಹೇರಳ. ಮಂಚೂರಿಯಲ್ಲಿ ಕಬ್ಬಿಣದ ಕಾರ್ಖಾನೆಗಳಿವೆ. ಉಕ್ಕಿನ ಕಾರ್ಖಾನೆಗಳು ಮಂಚೂರಿಯದ ಆನ್‌ಷ್ಯನ್, ಹೋಪೇ ಪ್ರಾಂತ್ಯದ ವೂಹಾನ್, ಒಳಮಂಗೋಲಿಯದ ಪವೋಟಾ ನಗರಗಳಲ್ಲಿವೆ. ಎಣ್ಣೆ ಗಣಿಗಳು ಕ್ಯಾನ್ಸು ಮತ್ತು ಷೆನ್‌ಸೀ ಪ್ರಾಂತ್ಯಗಳಲ್ಲಿವೆ. ಯುನ್ನಾನ್ ಪ್ರಾಂತ್ಯದಲ್ಲಿ ತವರದ ಗಣಿಗಳಿವೆ. ಹ್ಯೂನಾನ್, ಗ್ವಾಂಗ್‌ಡುಂಗ್, ಯುನ್ನಾನ್ ಪ್ರಾಂತ್ಯಗಳಲ್ಲಿ ಟಂಗ್‌ಸ್ಟನ್ ದೊರಕುತ್ತದೆ.

**iv ಕೈಗಾರಿಕೆ :** ಚೀನದ ಗೃಹಕೈಗಾರಿಕೆ ಪುರಾತನವಾದ್ದು. ಆಧುನಿಕ ಕೈಗಾರಿಕೆಗಳಲ್ಲಿ ಮುಖ್ಯವಾದವು ಹತ್ತಿ ಜವಳಿ, ರೇಷ್ಮೆ ಫಿಲೇಚರ್, ಉಕ್ಕು ಮತ್ತು ಬೆಂಕಿಕಡ್ಡಿ ತಯಾರಿಕೆ. ಭಾರಿ ಕೈಗಾರಿಕೆಗಳಿಗೆ ಮೊದಲ ಪಂಚವಾರ್ಷಿಕ ಯೋಜನೆಯ ಕಾಲದಿಂದ ಉತ್ತೇಜನ ದೊರಕುತ್ತಿದೆ. ಉಕ್ಕು, ರಾಸಾಯನಿಕ ವಸ್ತುಗಳು, ಸಿಮೆಂಟ್, ವ್ಯವಸಾಯ ಉಪಕರಣ, ಪ್ಲಾಸ್ಟಿಕ್ ಸರಕು, ಲಾರಿ, ಟ್ರ್ಯಾಕ್ಟರು ಮೊದಲಾದವು ಅಧಿಕವಾಗಿ ಉತ್ಪಾದನೆಯಾಗುತ್ತಿವೆ. 2009–10ರಲ್ಲಿ ಉತ್ಪಾದನೆಯಾದ ಕೆಲವು ಮುಖ್ಯ ವಸ್ತುಗಳ ವಿವರ ಹೀಗಿದೆ :

| | |
|---|---|
| ಕಲ್ಲಿದ್ದಲು | 2.96 ಬಿಲಿಯನ್ ಟನ್ |
| ಕಬ್ಬಿಣದ ಅದಿರು | 234 ಮಿಲಿಯನ್ ಟನ್ |
| ಕಚ್ಚಾತೈಲ ದಿನಕ್ಕೆ | 3.79 ಮಿಲಿಯನ್ ಬ್ಯಾರಲ್ |
| ಸಿಮೆಂಟ್ | 1.63 ಬಿಲಿಯನ್ ಟನ್ |
| ರಾಸಾಯನಿಕ ಗೊಬ್ಬರ | 5747ಮಿಲಿಯನ್ ಟನ್ |
| ಉಪ್ಪು | 20, ಮಿಲಿಯನ್ ಟನ್ (2010) |
| ಸಕ್ಕರೆ | 12.7 „ „ಎಂ.ಎಂ.ಟಿ (2010) |
| ಕಾಗದ | 50 ಮಿಲಿಯನ್ ಟನ್ |
| ವಿದ್ಯುಚ್ಛಕ್ತಿ | 3.6430 ಟ್ರಿಲಿಯನ್ ಕಿವ್ಯಾ. (ವಿಶ್ವದಲ್ಲಿ 2ನೆಯದು) |

**v ವಿದ್ಯುಚ್ಛಕ್ತಿ :** ಜಲವಿದ್ಯುಚ್ಛಕ್ತಿಗಿಂತ ಉಷ್ಣ ವಿದ್ಯುತ್ ಉತ್ಪಾದನೆಯ ಕೇಂದ್ರಗಳು ಹೆಚ್ಚು. ಅವುಗಳಲ್ಲಿ ಮುಖ್ಯವಾದವು ಷಾಂಗ್‌ಹೈ, ಫೂಷಿನ್, ಫೂಷುನ್ ಮತ್ತು ಪೀಕಿಂಗ್ ನಗರಗಳಲ್ಲಿವೆ. 2000ರಲ್ಲಿ ಚೀನದ ವಿದ್ಯುದುತ್ಪಾದನೆ 315 ಗ.ಡ. ಇದರಲ್ಲಿ ಜಲವಿದ್ಯುತ್ 77 ಗ.ಢ, ಆದರೆ ಉಷ್ಣವಿದ್ಯುತ್ 235ಘ.ಢ

ಬೀಡು ಕಬ್ಬಿಣದ ತಯಾರಿಕೆ

ಚೀನದ ಪಂಚವಾರ್ಷಿಕ ಯೋಜನೆಗಳಲ್ಲಿ ನದಿಗಳಿಗೆ ಕಟ್ಟೆ ಕಟ್ಟಿ ವಿದ್ಯುಚ್ಛಕ್ತಿ ಉತ್ಪಾದಿಸುವ ಕಾರ್ಯಕ್ರಮಗಳಿವೆ. ಅವುಗಳಲ್ಲಿ ಯಾಂಗ್‌ಟ್ಸೀ, ಸುಂಗಾರಿ, ಹಾನ್, ಆರ್ಗುನ್ ನದಿಗಳ ಯೋಜನೆ ಪ್ರಧಾನವಾದವು. ಸಮುದ್ರದ ಅಲೆಗಳನ್ನು ಬಳಸಿ ವಿದ್ಯುಚ್ಛಕ್ತಿ ಉತ್ಪಾದಿಸುವ ಯೋಜನೆ ಸಹ ಇದೆ. ಈ ದಿಶೆಯಲ್ಲಿ 1958ರಲ್ಲಿ ಸ್ಥಾಪಿತವಾದ ಗ್ವಾಂಗ್‌ಡುಂಗ್ ಪ್ರಾಂತ್ಯದ ಟಾಲಿನ್ ವಿದ್ಯುತ್ ಉತ್ಪಾದನಾ ಕೇಂದ್ರ ಒಂದು.

2000ದಲ್ಲಿ ಚೀನದ ವಿದ್ಯುದುತ್ಪಾದನೆ 315 GW. ಇದರಲ್ಲಿ ಜಲವಿದ್ಯುತ್ 77 GW ಆದರೆ, ಉಷ್ಣವಿದ್ಯುತ್ 235 GW, ಬೈಜಿಕ ವಿದ್ಯುತ್ 2 GW.

**vi ವ್ಯಾಪಾರ, ಸಾರಿಗೆ :** ಚೀನದ ವಿದೇಶಿ ವ್ಯಾಪಾರ ಮುಖ್ಯವಾಗಿ ಜಪಾನ್, ಬ್ರಿಟನ್, ಹಾಂಗ್‌ಕಾಂಗ್, ಪಶ್ಚಿಮ ಜರ್ಮನಿಗಳೊಡನೆ ನಡೆಯುತ್ತದೆ. ರಫ್ತಾಗುವ ಸರಕು ಕಚ್ಚಾ ರೇಷ್ಮೆ, ರೇಷ್ಮೆ ಗೂಡು. ಹತ್ತಿ ಬಟ್ಟೆ, ಚಹ, ಲೋಹಗಳ ಅದುರು, ಮರದ ಎಣ್ಣೆ, ಹತ್ತಿ, ನೆಲಗಡಲೆ, ಎಣ್ಣೆ ಬೀಜ, ಇದ್ದಿಲು, ಸೋಯಾಬೀನ್. ಚೀನ ಆಮದು ಮಾಡಿಕೊಳ್ಳುವ ಸರಕು ಸೀಮೆ ಎಣ್ಣೆ, ರಾಸಾಯನಿಕ ವಸ್ತುಗಳು, ಯಂತ್ರಗಳು, ಉಣ್ಣೆ, ರಬ್ಬರ್.

ಚೀನದ ಪ್ರಥಮ ರೈಲುಮಾರ್ಗ ವೂಸುಂಗ್ (ಷ್ಯಾಂಗ್‌ಹೈ) ಮಾರ್ಗ (1876) 70ರ ದಶಕದಲ್ಲಿ 32,000 ಕಿಮೀನಷ್ಟು ಇದ್ದ ರೈಲುಮಾರ್ಗ 2010ರ ವೇಳೆಗೆ 91000 ಕಿಮೀ ಆಗಿದೆ. ಉತ್ತರ–ದಕ್ಷಿಣ ರೈಲ್ವೆ, ಪೂರ್ವ–ಪಶ್ಚಿಮ ರೈಲ್ವೆ ಮತ್ತು ಮಂಚೂರಿಯ ರೈಲ್ವೆ–ಇವು ಚೀನದ 3 ಬೃಹತ್ ರೈಲ್ವೆ ವಲಯಗಳು. ಮುಖ್ಯ ರೈಲ್ವೆಮಾರ್ಗಗಳಿವು ; 1. ಪೀಕಿಂಗ್–ಷೆನ್‌ಯಂಗ್ ಮಾರ್ಗ; 2. ಟಿನ್‌ಟ್ಸಿನ್–ಪೂಕೋ ಮಾರ್ಗ; 3. ಪೀಕಿಂಗ್–ವೂಹಾನ್ ಮಾರ್ಗ; 4. ಗ್ವಾಂಗ್‌ಜೋ–ವೂಹಾನ್ ಮಾರ್ಗ 1100ಕಿಮೀ. ; 5 ಹಾರ್ಬಿನ್ ಮಾರ್ಗ; ಇದು ಮಂಚೂರಿಯದ ಮುಖ್ಯ ಮಾರ್ಗ ; 6. ಲುಂಗ್ ಹೆ ಮಾರ್ಗ ಮೈ. ಮತ್ತು 7. ಷ್ಯಾಂಗ್‌ಹೈ–ಚೂಚೌ ಮಾರ್ಗ: ಲಾಂಚೋ. ಉರೂಮ್‌ಚಿ, ಟ್ಯಾನ್ ಕಿಯಾಂಗ್–ಹೌ, ವೂಹಾನ್, ಗ್ವೇಯಾಂಗ್ ರೈಲುಮಾರ್ಗಗಳು; ಮತ್ತು ಆನ್‌ಹ್ವೆ ಪ್ರಾಂತ್ಯದ ಮೂಲಕ ಸಾಗುವ ಹ್ವಾ–ಘೂ ರೈಲುಮಾರ್ಗ. 1968ರಲ್ಲಿ ಯಾಂಗ್‌ಟ್ಸೀ ನದಿಗೆ ಅಡ್ಡಲಾಗಿ ಭಾರಿ ರೈಲ್ವೆ ಸೇತುವೆ ಕಟ್ಟಲಾಯಿತು.

ಟಿನ್‌ಟ್ಸಿನ್ ನಗರದ ಬಳಿಯ ಬಂದರು

ಚೀನದಲ್ಲಿರುವ ನದಿ, ಸರೋವರ, ಕಾಲುವೆಗಳ ಒಟ್ಟು ಮಾರ್ಗ 101168 ಕಿಮೀ. ಅದರಲ್ಲಿ 37892 ಕಿಮೀ ಜಹಜುಗಳ ಯಾನಕ್ಕೆ ಅನುಕೂಲ. ಉಳಿದ ಮಾರ್ಗಗಳಲ್ಲಿ ಜಂಕ್ ಹಡಗುಗಳ ಮತ್ತು ಸಣ್ಣ ನೌಕೆಗಳ ಸಂಚಾರ ಸಾಧ್ಯ. ನೌಕಯಾನಕ್ಕೆ ಅನುಕೂಲವಾದ ನದಿಗಳು ಯಾಂಗ್‌ಟ್ಸೀ, ಷೀ ಕ್ಯಾಂಗ್, ಹ್ವಾಂಗ್ ಹೋ (ಹಳದಿ ನದಿ) ಮತ್ತು ಸುಂಗಾರಿ. ಯಾಂಗ್‌ಟ್ಸೀ (5760 ಕಿಮೀ) 2670 ಕಿಮೀ ನೌಕಾಯಾನಕ್ಕೆ ಯೋಗ್ಯವಾಗಿದೆ. ಚೀನದ ಸರಕುಗಳು ಹೆಚ್ಚಾಗಿ ಜಲಮಾರ್ಗಗಳ ಮೂಲಕ ಸಾಗುತ್ತವೆ. ಕಾಲುವೆಗಳ ಪೈಕಿ ಚೀನ ಮಹಾಕಾಲುವೆ ದೊಡ್ಡದು (1768 ಕಿಮೀ). ಅದು ಪೀಕಿಂಗ್ ನಗರದಿಂದ ಹಾಂಗ್‌ಕಾಂಗ್ ನಗರದವರೆಗೆ ಸಾಗುತ್ತದೆ. ಕ್ಯಾನ್ಸೂ ಮಹಾಕಾಲುವೆ ಇನ್ನೊಂದು ಮುಖ್ಯ ಮಾರ್ಗ. ಕರಾವಳಿ ಹಾಗೂ ವಿದೇಶಿ ಸಂಚಾರ ಹಡಗುಗಳ ನಿಯಂತ್ರಣಕ್ಕೆ ಟಿನ್‌ಟ್ಸಿನ್, ಷ್ಯಾಂಗ್‌ಹೈ, ಚಿಂಗ್‌ಡೌ, ಲೂಟ ಮತ್ತು ಕ್ಯಾಂಟನ್‌ಗಳಲ್ಲಿ ಸಮುದ್ರಯಾನ ಕಚೇರಿಗಳಿವೆ.

ಚೀನದಲ್ಲಿರುವ ರಸ್ತೆಗಳ ಉದ್ದ 1.871 ಮಿಲಿಯನ್ ಕಿಮೀ. (ಇದರಲ್ಲಿ ಎಕ್ಸ್ ಪ್ರೆಸ್ ಹೆದ್ದಾರಿಗಳು 65,000 ಕಿಮೀ) (2009) ಆಧುನಿಕ ಹೆದ್ದಾರಿಗಳು ಹಲವಿವೆ. 1964ರಿಂದ ಪೀಕಿಂಗ್, ಕ್ಯಾಂಟನ್ ಮತ್ತು ಷ್ಯಾಂಗ್‌ಹೈ ಮುಖ್ಯ ವಿಮಾನ ಕೇಂದ್ರಗಳು. ಪೀಕಿಂಗ್ ನಗರದಿಂದ ಒಳನಾಡಿಗೆ 20 ವಿಮಾನ ಮಾರ್ಗಗಳಿವೆ. ಕೆಲವು ಸಮತಾವಾದಿ ರಾಜ್ಯಗಳು, ಮಾಯನ್ಮಾರ್, ಫ್ರಾನ್ಸ್, ಕಾಂಬೋಡಿಯ, ಇಂಡೋನೇಷ್ಯ ಮತ್ತು ಪಾಕಿಸ್ತಾನ–ಇವುಗಳಿಗೆ ವಿಮಾನ ಸಂಚಾರವಿದೆ.

**vii ನಗರಗಳು :** ಚೀನದಲ್ಲಿ ಒಂದು ಮಿಲಿಯನ್‌ಗಿಂತ ಹೆಚ್ಚು ಜನಸಂಖ್ಯೆ ಇರುವ 160 ನಗರಗಳಿವೆ. 23 ಶತಮಾನಗಳ ಇತಿಹಾಸದಲ್ಲಿ ಚೀನಕ್ಕೆ ರಾಜಧಾನಿಗಳಾಗಿದ್ದ ನಗರಗಳು ಆರು, ಅವು ಹ್ವಾಂಗ್‌ಹೋ (ಹಳದಿ ನದಿ) ದಂಡೆಯ ಮೇಲಣ ಲೋಯಾಂಗ್,

ಷಾಂಗ್‌ಹೈ ನಗರದ ಕಡಲಂಚು

ಷೀಯಾನ್, ಕೈಫಂಗ್, ಪೀಕಿಂಗ್ ; ಯಾಂಗ್‌ಟ್ಸೀ ನದಿಯ ದಡದ ಮೇಲಣ ನ್ಯಾನ್‌ಕಿಂಗ್, ಹ್ಯಾಂಗ್‌ಚೌ, ಈಗಿನ ರಾಜಧಾನಿ ಪೀಕಿಂಗ್. ದಕ್ಷಿಣ ಮತ್ತು ಪೂರ್ವ ಭಾಗದ ನದೀತೀರಗಳಲ್ಲಿ ಹಾಗೂ ಕಡಲಂಚಿನಲ್ಲಿ ಜನಸಾಂದ್ರತೆ ಹೆಚ್ಚು, ಅಲ್ಲಿ ದೊಡ್ಡ ಪಟ್ಟಣಗಳು ಬೆಳೆದುವು. ಇಟಲಿಯ ಪ್ರವಾಸಿ ಮಾರ್ಕೋಪೋಲೋ, ಕುಬ್ಲೈಖಾನನ ಆಸ್ಥಾನಕ್ಕೆ ಬಂದಾಗ ಪೀಕಿಂಗ್ ನಗರಕ್ಕೆ ಚುಂಗ್–ಟು ಎಂಬ ಹೆಸರಿತ್ತು. ಮಿಂಗ್ ರಾಜಸಂತತಿಯ ಕಾಲದಲ್ಲಿ (1421) ಅದಕ್ಕೆ ಪೀಕಿಂಗ್ ಎಂಬ ಹೆಸರು ಬಂತು. 2010ರ ಜನಗಣತಿಯ ಪ್ರಕಾರ ಈ ನಗರಗಳ

ಜನಸಂಖ್ಯೆ ಹೀಗಿದೆ: ಬೀಜಿಂಗ್ 19,612,368, ಹಾಂಗ್‌ಕಾಂಗ್ (ಜಿಯಾಂಗ್‌ಗಾಂಗ್). 7,103,300, ಟಿಯಾನಿಜನ್ 12,938,224, ವೂಹನ್ 9,785,392, ಗ್ವಾಂಗ್ 12,700,800, ಷೆನ್ಸೆನ್ 10,357,938, ಷೆನ್ಯಾಂಗ್ 8,106,171, ಟೈಪೇ.. 6900,273, ಹಾರ್ಬಿನ್–10,635,971, ಸಿಆನ್ 8467,837, ಚಾಂಗುನ್..7,459,005, ಜಿನಾನ್ 6,814,000, ಡ್ಯಾಲಿಯನ್–6,170,000 ಜೆಯುಆನ್..6,201,591, ಸೆಂಗ್ ಸೌ–2,280,000, ಕ್ವಿಂಗ್‌ಡೇ–2,160,000, ಸಿಯಮೆನ್ 1,896,000.

### iv ಇತಿಹಾಸ

**ಪ್ರಾಗಿತಿಹಾಸ :** ಪ್ರಾಚೀನ ಶಿಲಾಯುಗ ಸಂಸ್ಕೃತಿ : 1929ರಲ್ಲಿ ಪೀಕಿಂಗಿನ ನೈಋತ್ಯಕ್ಕೆ ಸು. 45 ಕಿಮೀ ದೂರದಲ್ಲಿರುವ ಜೋಕೋಟೈನ್ ಗುಡ್ಡ ಪ್ರದೇಶದಲ್ಲಿ ಅಲ್ಲಿಯ ಸುಣ್ಣಕಲ್ಲಿನ ಗುಡ್ಡದ ಬಿರುಕುಗಳಲ್ಲಿದ್ದ ಕೆಂಪುಮಣ್ಣು ಮತ್ತು ಕಲ್ಲುಚೂರುಗಳ ಪದರುಗಳಲ್ಲಿ ಚೀನದ ಅತ್ಯಂತ ಪ್ರಾಚೀನ ಮಾನವ ತಲೆಬುರುಡೆಯ ಪಳಿಯುಳಿಕೆಗಳು ದೊರೆತವು. ಈ ಸ್ಥಳದಲ್ಲಿ ದೊರೆತ 45 ವ್ಯಕ್ತಿಗಳ ಅಸ್ಥಿ ಅವಶೇಷಗಳಲ್ಲಿ 15 ಮಕ್ಕಳುಗಳ ಅವಶೇಷಗಳಾಗಿದ್ದುವು. ಮಾನವನ ದೈಹಿಕ ಹಾಗೂ ಸಾಂಸ್ಕೃತಿಕ ಉತ್ಕ್ರಾಂತಿಯನ್ನು ತಿಳಿಯುವುದಕ್ಕೆ ಆಧಾರವಾಗಿರುವ ಕೆಲವೇ ಪುರಾತತ್ತ್ವ ಶೋಧನೆಗಳಲ್ಲಿ ಇವೂ ಒಂದಾಗಿದ್ದು ಅತಿ ಮುಖ್ಯವೂ ಆದುದರಿಂದ, ಈ ಆವಿಷ್ಕಾರ ಈಗ ಜಗತ್ ಪ್ರಸಿದ್ಧವಾಗಿದೆ. ಈ ಅವಶೇಷಗಳು



**ಚಿತ್ರ 1. ಪೇಲಿಯೊಲಿತಿಕ್ ಕಲ್ಲಿನ ಆಯುಧಗಳು**

ಮಧ್ಯ ಪ್ಲೀಸ್ಟೊಸಿನ್ ಯುಗಕ್ಕೆ ಸೇರಿದವೆಂದು, ಎಂದರೆ ಸುಮಾರು 5 ಲಕ್ಷ ವರ್ಷಗಳಷ್ಟು ಹಿಂದಿನವೆಂದು, ತರ್ಕಿಸಲಾಗಿದೆ. ಈ ಕಾಲದ ಮಾನವನನ್ನು ಪ್ರಾಕ್ತನ ಶಾಸ್ತ್ರಜ್ಞರು ಸಿನಾಂಥ್ರೋಪಸ್ (ಪಥಕಾಂತ್ರೋಪಸ್ ಪೇಕಿನೆಸಿಸ್) ಅಥವಾ ಪೀಕಿಂಗ್ ಮಾನವ ಎಂದು ಕರೆದಿದ್ದಾರೆ. ಇವನು ಸುಮಾರು 1,56 ಮೀ. ಎತ್ತರವಾಗಿದ್ದು ನೆಟ್ಟಗೆ ನಿಲ್ಲುವಂಥವನಾಗಿದ್ದ. ಇವನಿಗೆ ತಗ್ಗಿದ ಹಣೆ, ಉಬ್ಬಿದ ಹುಬ್ಬು, ಬಲವಾದ ದವಡೆ ಇದ್ದುವು. ಇವನು ಪ್ರಾಯಶಃ ತನಗೆ ಅನುಕೂಲವಾಗುವ ರೀತಿಯಲ್ಲಿ ಶಬ್ದಗಳನ್ನು



**ಚಿತ್ರ 2. ಮೆಸೋಲಿತಿಕ್ ಆಯುಧಗಳು**

ಉಚ್ಚರಿಸುವ ಸಾಮರ್ಥ್ಯ ಪಡೆದಿದ್ದ. ಈ ಪಳೆಯುಳಿಕೆಗಳೊಡನೆ ಪ್ರಾಣಿಗಳ ಅಸ್ಥಿ ಅವಶೇಷಗಳು, ಒರಟು ಕಲ್ಲಿನ ಉಪಕರಣಗಳು, ಸುಟ್ಟ ಎಲುಬುಗಳು, ಅಗ್ನಿಕುಂಡಗಳ ಕುರುಹುಗಳು ಕೂಡ ದೊರೆತಿವೆ. ಕಲ್ಲಿನ ಆಯುಧಗಳು ಹೆಚ್ಚಾಗಿ ಹಸುರು ಮರಳುಗಲ್ಲು, ಸುಣ್ಣಕಲ್ಲು, ಬೆಣಚುಕಲ್ಲುಗಳಲ್ಲಿ ಮಾಡಿದವು. ಅವು ಸಾಮಾನ್ಯವಾಗಿ ಮಚ್ಚುಗತ್ತಿಯ ರೀತಿಯಲ್ಲಿರುತ್ತಿದ್ದವು. ಅಥವಾ ಮೊನೆಯುಳ್ಳ ಆಯುಧಗಳಾಗಿದ್ದವು. ಮಚ್ಚುಗತ್ತಿಯಂಥ ಆಯುಧಗಳು ದುಂಡಾಗಿಯೋ, ಕೋಳಿಮೊಟ್ಟೆಯ ಆಕಾರದಲ್ಲೋ ಇರುತ್ತಿದ್ದವು. ಚಪ್ಪಟೆಯಾದ ಗಟ್ಟಿ ಕಲ್ಲಿನಿಂದ ಮಾಡಿದವಾಗಿದ್ದವು. ಮೊನೆಯುಳ್ಳ ಆಯುಧಗಳು ಚಕ್ಕೆಕಲ್ಲಿನವು; ಮತ್ತು ಹೆರೆಯಲನುಕೂಲವಾದಂಥವು.



**ಚಿತ್ರ 3. ನಿಯೋಲಿತಿಕ್ ಕೊಡಲಿ ಮತ್ತು ಚಾಕುಗಳು**

ಈ ಮಾನವ ಇದ್ದ ಪ್ರದೇಶದಲ್ಲಿ ಹುಲಿ, ನೀರೆಮ್ಮೆ, ಎಮ್ಮೆ, ಜಿಂಕೆ, ಕುರಿ, ಕಾಡುಹಂದಿ, ಘೇಂಡಾಮೃಗ, ಒಂಟೆ ಮುಂತಾದ ಪ್ರಾಣಿಗಳಿದ್ದವು. ಈತ ಬೇಟೆಗಾರನಾಗಿದ್ದ. ಜಿಂಕೆಯ ಮಾಂಸವೇ ಹೆಚ್ಚಾಗಿ ಇವನ ಆಹಾರ. ಅಸ್ಥಿಯೊಳಗಿನ ಮಜ್ಜೆಯನ್ನೂ ತಿನ್ನುತ್ತಿದ್ದ. ಪ್ರಾಯಶಃ ಇವನು ನರಭಕ್ಷಕನೂ ಆಗಿದ್ದಿರಬೇಕು.

ಈ ಪ್ರಾಚೀನ ನೆಲೆಯ ಒಂದು ಭಾಗವಾದ ಟಿಂಗ್–ಟ್ಸುನ್ ಪ್ರದೇಶದಲ್ಲಿ ದೊರೆತ ಕಲ್ಲಿನ ಆಯುಧಗಳು ಮತ್ತು ಮನುಷ್ಯನ ಅಸ್ಥಿ ಅವಶೇಷಗಳು ಅಲ್ಲಿಯ ಪ್ರಾಚೀನ ಶಿಲಾಯುಗ ಸಂಸ್ಕೃತಿಯ ಸುಧಾರಿಸಿದ ಮತ್ತು ಕೊನೆಯ ಹಂತಕ್ಕೆ ಸೇರಿದಂಥವು. ಇವು

ಸಿನಾಂತ್ರೋಪಸ್ ಮಾನವನಿಗೂ ಆ ಬುಡಕಟ್ಟಿನ ಈಗಿನ ಮಾನವನಿಗೂ ನಡುವಣ ಸ್ಥಿತಿಯಲ್ಲಿದ್ದ ಮಾನವನವು. ಪ್ರಾಚೀನ ಶಿಲಾಯುಗ ಸಂಸ್ಕೃತಿಯ ಹಂತದಿಂದ ಮುಂದಿನ, ನೂತನ ಶಿಲಾಯುಗದವರೆಗಿನ, ಚೀನೀ ಪ್ರದೇಶದಲ್ಲಿಯ ಮಾನವ ಸಂಸ್ಕೃತಿಯ ಬಗ್ಗೆ ಅಷ್ಟಾಗಿ ಏನೂ ತಿಳಿದುಬಂದಿಲ್ಲ. ಷುಯಿ-ತುಂಗ್-ಕಾವ್‍ನಲ್ಲಿ ಮೆಕ್ಕಲು ಮಣ್ಣಿನ ಪ್ರದೇಶದಲ್ಲಿಯ ಉತ್ಖನನಗಳಲ್ಲಿ 12ಮೀ. ಕೆಳಗೆ ಫ್ಲಿಂಟ್ ಕಲ್ಲಿನ ಉಪಕರಣಗಳೂ, ಪ್ರಾಣಿಗಳ ಅಸ್ಥಿ ಅವಶೇಷಗಳೂ ರಾತ್ರಿ ಬಿಡಾರದ ಅಗ್ಗಿಷ್ಟಿಕೆಯ ಕುರುಹುಗಳೂ ದೊರೆತಿವೆ. ಇವು ಕಾಡುಕತ್ತೆ, ಚಿಗರಿ, ಉಷ್ಟ್ರಪಕ್ಷಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ ಜನರವೆಂದು ಕಾಣುತ್ತದೆ. ಜಾರು-ಆಸೊ-ಗೋಲ್‍ನಲ್ಲಿಯ ಹುಲ್ಲುಗಾವಲಿನಲ್ಲಿ 50 ಮೀ. ಆಳದಲ್ಲಿ ಇಂಥ ಜನರ ವಸತಿ ನೆಲೆಗಳಿದ್ದ ಗುರುತುಗಳು ದೊರೆತಿವೆ. ಜೊತೆಗೆ, ಅಲ್ಲಿ ಕಲ್ಲಿನ ಮೊನೆಗಳು, ಹೆರೆಯುವ ಚಕ್ಕೆಗಳು, ಗಟ್ಟಿಗಳು ಮತ್ತು ಆನೆ, ಕುದುರೆ, ಮೇಕೆ, ಘೇಂಡಾಮೃಗ, ಉಷ್ಟ್ರಪಕ್ಷಿ ಮುಂತಾದ ಪ್ರಾಣಿಗಳ ಅಸ್ಥಿಗಳು ಇದ್ದುವು. ಗಟ್ಟಿಗಳ ಮೇಲೆ ನೀಳವಾದ ಚಕ್ಕೆಗಳನ್ನು ತೆಗೆದುದರಿಂದುಂಟಾದ ಪಟ್ಟೆಗಳಿವೆ. ಈ ಸಂಸ್ಕೃತಿ ಪಶ್ಚಿಮ ಯುರೋಪಿನ ಸೂಕ್ಷ್ಮಶಿಲಾಯುಗದ ಸಂಸ್ಕೃತಿಯ ಮ್ಯಾಗ್ಡಲೀನಿಯನ್ ಸಂಸ್ಕೃತಿಯನ್ನು ಸ್ವಲ್ಪಮಟ್ಟಿಗೆ ಹೋಲಬಹುದು.

ಚೌಕೊ-ಟೀಯೆನ್ ಗುಡ್ಡದ ಮೇಲ್ಭಾಗದಲ್ಲೇ ಒಂದು ಗುಹೆಯಲ್ಲಿ ಇದೇ ಬಗೆಯ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಇಲ್ಲಿ ನೀಳ ಚಕ್ಕೆಗಳಿಲ್ಲ. ಈಗಿನ ಬುಡಕಟ್ಟಿನ ಜನರನ್ನು ದೈಹಿಕವಾಗಿ ಹೋಲುವಂಥ ಸುಮಾರು 20 ವ್ಯಕ್ತಿಗಳ ಅಸ್ಥಿಪಂಜರಗಳು, ಎಲುಬು ಕೋಡುಗಳಿಂದ ಮಾಡಿದ ಉಪಕರಣಗಳು, ಕೆಮ್ಮಣ್ಣು ಸವರಲಾದ, ಉಜ್ಜಿದ ತೂತುಳ್ಳ ಮಣಿಗಳು, ಅಸ್ಥಿಪದಕಗಳು, ತೂತುಳ್ಳ ಹೊಳಪು ಮಾಡಿದ ಶಂಖಾಭರಣಗಳು ಮುಂತಾದವು ಇದ್ದುವು. ಇಲ್ಲಿಯ ಹಳೆಯ ಶಿಲಾಯುಗದ ಜನರಿಗಿಂತ ಬಹುವಿಧದಲ್ಲಿ ಇವರು ಸುಧಾರಿತರಿದ್ದರೆಂಬುದು ಖಚಿತವಾಯಿತು.

ಒಂದು ಅಸ್ಥಿಪಂಜರದ ಮೇಲೆ ಹಾಗೂ ಸುತ್ತಲೂ ಕೆಮ್ಮಣ್ಣಿನ ಬಣ್ಣ ಹಾಕಲಾಗಿತ್ತು. ಚೀನದಲ್ಲಿ ಇದೇ ಅತ್ಯಂತ ಪ್ರಾಚೀನ ಶವಸಂಸ್ಕಾರದ ಗುರುತು. ಮುಂದೆ ನೂತನ ಶಿಲಾಯುಗ ಸಂಸ್ಕೃತಿಯ ಜನರ ಶವಸಂಸ್ಕಾರದ ಪದ್ಧತಿಯಲ್ಲಿ ಕೆಮ್ಮಣ್ಣಿನ ಬಳಕೆ ಸಾಮಾನ್ಯವಾಗಿತ್ತು. ಆದರೆ ಕೆಮ್ಮಣ್ಣು ಆ ಸ್ಥಳದಲ್ಲಿ ಸಿಗುವುದಿಲ್ಲ. ಅದರ ಉತ್ತರಕ್ಕೆ ಸುಮಾರು 170 ಕಿಮೀ ದೂರದಲ್ಲಿ ಲಂಗ್ ಕುವಾನ್ ಎಂಬಲ್ಲಿ ದೊರೆಯುತ್ತದೆ. ಆಭರಣಗಳಿಗೆ ಉಪಯೋಗಿಸಲಾಗುತ್ತಿದ್ದ ಶಂಖದ ವಸ್ತು ಸು. 185 ಕಿಮೀ ದೂರದಲ್ಲಿಯ ಸಮುದ್ರತೀರದಿಂದ ಬಂದಿರಬೇಕು. ಆದ್ದರಿಂದ ದೂರಪ್ರದೇಶಗಳೊಡನೆ ಈ ಜನ ವ್ಯಾಪಾರಸಂಬಂಧ ಹೊಂದಿದ್ದಿರಬೇಕು. ಇವರು ಮಂಗೊಲಾಯ್ಡ್ ಹಾಗೂ ಈಗಿನ ಎಸ್ಕಿಮೊ ಮತ್ತು ಮಲನೇಷಿಯನ್ ಬುಡಕಟ್ಟಿನ ಜನರ ಲಕ್ಷಣಗಳುಳ್ಳವರಾಗಿದ್ದರು. ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ. ಸು. 30000-20000 ಎಂದು ಅಂದಾಜು ಮಾಡಲಾಗಿದೆ.

**ಸೂಕ್ಷ್ಮ ಶಿಲಾಯುಗ ಸಂಸ್ಕೃತಿ :** ಪ್ರಶ.ಪೂ. ಸು. 2ನೆಯ ಸಹಸ್ರಮಾನದ, ಭಿನ್ನ ರೀತಿಯ ಸಾಂಸ್ಕೃತಿಕ ಅವಶೇಷಗಳು ಮಧ್ಯ ಚೀನದಲ್ಲಿಯ ಮಂಗೋಲಿಯ, ಮಂಚೂರಿಯ ಮತ್ತು ಓರ್ಡೋಸ್‍ಗಳಲ್ಲಿ ದೊರೆತಿವೆ. ಆದರೆ ಈ ಸಂಸ್ಕೃತಿ ಹಳದಿ ನದಿ ಬಯಲಿನಲ್ಲಿ ತೋರಿಬಂದ ಪಶುಸಂಗೋಪನೆಯ ಮತ್ತು ಕೃಷಿ ಆಧಾರಿತವಾದ ಕಂಚಿನ ಯುಗದ ಸಂಸ್ಕೃತಿಯದಕ್ಕಿಂತ ಹಿಂದಿನದೇ ಎಂಬುದು ಖಚಿತವಾಗಿಲ್ಲ. ಪ್ರಾಯಶಃ ಇದು ಹಿಂದಿನ ಕಾಲದಿಂದಲೂ ಬಂದಿದ್ದು, ಕಂಚಿನ ಯುಗದ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿರಬಹುದು; ಅಥವಾ ಇವೆರಡು ಸಂಸ್ಕೃತಿಗಳೂ ಸಮಕಾಲೀನವಾಗಿದ್ದಿರಬಹುದು. ಈ ಸಂಸ್ಕೃತಿಯ ಕಾಲಾವಧಿ ನಿರ್ದಿಷ್ಟವಾಗಿ ತಿಳಿದಿಲ್ಲ. ಇದಕ್ಕೆ ಸಂಬಂಧಿಸಿದ ಸುಮಾರು 327 ನೆಲೆಗಳನ್ನು ಮಂಚೂರಿಯ ಮತ್ತು ಷಿನ್‍ಜಿಯಾಂಗ್ ನಡುವಿನ ಪ್ರದೇಶದಲ್ಲಿ ಚೀನೀ-ಸ್ವೀಡಿಷ್ ತಂಡದ ಅನ್ವೇಷಕರು ಶೋಧಿಸಿದರು. ಇವುಗಳಲ್ಲಿ ಫ್ಲಿಂಟ್ ಕಲ್ಲಿನ ಸೂಕ್ಷ್ಮ ಶಿಲಾಯುಧಗಳು, ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿಗಳು, ಮಣ್ಣಿನ ಪಾತ್ರೆಗಳ ಚೂರುಗಳು ಮುಂತಾದವು ಇವೆ. ಇವುಗಳಲ್ಲಿ ಸೂಕ್ಷ್ಮ ಶಿಲಾಯುಗದ ಮತ್ತು ನೂತನ ಶಿಲಾಯುಗದ ಸಂಸ್ಕೃತಿಗಳ ಲಕ್ಷಣಗಳುಂಟು. 1922-30ರಲ್ಲಿ ಅಮೆರಿಕನ್-ಮಧ್ಯ ಏಷ್ಯನ್ ತಂಡದ ಅನ್ವೇಷಕರು ಶೋಧಿಸಿದ 180 ನೆಲೆಗಳಲ್ಲಿ ಒಂದಾದ ಷಬರಖ್ ಉಸು ಎಂಬಲ್ಲಿ ಮಾತ್ರ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಸೂಕ್ಷ್ಮಶಿಲಾಯುಗ ಸಂಸ್ಕೃತಿಯದಕ್ಕಿಂತ ಮೇಲಿನ ಮಣ್ಣಿನ ಪದರಗಳಲ್ಲಿದ್ದುವು. ಈ ನೆಲೆಗಳ ಪೈಕಿ ಗೋಬಿ ಮರುಭೂಮಿಯವು ಉತ್ತಮ ನಿದರ್ಶನಗಳು.

ಇಲ್ಲಿಯ ಕಲ್ಲಿನ ಕೊಡಲಿಗಳು ಹೆಚ್ಚಾಗಿ ದುಂಡಾಗಿವೆ. ಅಪರೂಪವಾಗಿ ಚೌಕೋನ ವಾಗಿಯೂ ಉಂಟು. ಜೊತೆಗೆ ಉಜ್ಜಿದ, ಉದ್ದನೆಯ, ಚೌಕೋನ ಅಥವಾ ಅರ್ಧ ಚಂದ್ರಾಕೃತಿಯ ಕಲ್ಲಿನ ಚಾಕುಗಳು ದೊರೆತಿವೆ. ಗಡಿಗೆ ಮಡಕೆಗಳೆಲ್ಲವೂ ಕೈಯಿಂದ ಮಾಡಿದಂಥವು. ಈ ಅವಶೇಷಗಳಲ್ಲಿ ಮೂರು ಕಾಲುಗಳುಳ್ಳ ಬಟ್ಟಲುಗಳು, ಹಲ್ಲುಗಳುಳ್ಳ ಗಾಳ, ಹೆಣೆದ ಕಡ್ಡಿಗಳ ಬಲೆ, ಪ್ರಾಯಶಃ ಕೊಡಲಿಗಳಿಗೆ ಕಾವುಗಳಾಗಿ ಉಪಯೋಗಿಸಿದ್ದಿರ ಬಹುದಾದ ಎರಡು ಜಿಂಕೆ ಕೊಂಬುಗಳು ಗಮನಾರ್ಹ, ಪೂರ್ವ ಮಂಗೋಲಿಯ, ಮಂಚೂರಿಯ ಮತ್ತು ಗೋಬಿ ಪ್ರದೇಶಗಳಲ್ಲಿಯ ಸಂಸ್ಕೃತಿಗಳು ಸಾಮಾನ್ಯವಾಗಿ ಒಂದೇ ವಿಧವಾಗಿದ್ದರೂ ಆಯಾ ಪ್ರದೇಶಗಳಲ್ಲಿಯ ಕೆಲವೊಂದು ವೈಶಿಷ್ಟ್ಯಗಳಿಂದ ಭಿನ್ನವಾಗಿಯೂ ಇವೆ.

ಈ ಜನರು ಸತ್ತವರನ್ನು ತಮ್ಮ ವಸತಿನೆಲೆಗಳ ಸಮೀಪದಲ್ಲಿ ಹುಗಿಯುತ್ತಿದ್ದರು. ಶವಗಳ ಜೊತೆಗೆ ಗಡಿಗೆಗಳನ್ನು, ಅಸ್ಥಿ ಮತ್ತು ಕಲ್ಲಿನ ಉಪಕರಣಗಳನ್ನು ಮತ್ತು ಅಪರೂಪವಾಗಿ ನಾಯಿಯನ್ನು ಇಡುತ್ತಿದ್ದರು.

ಲಿನ್-ಹ್ಸಿಯಲ್ಲಿ ಈ ನೂತನ ಶಿಲಾಯುಗ ಸಂಸ್ಕೃತಿ ಇನ್ನೂ ಸುಧಾರಿಸಿತ್ತೆಂದು ತೋರುತ್ತದೆ. ಇಲ್ಲಿಯ ಗಡಿಗೆಗಳು ಚಕ್ರದ ತಿಗರಿಯ ಮೇಲೆ ಮಾಡಿದವಾಗಿವೆ. ಕಲ್ಲಿನ ಗುಳಗಳು, ಕೊಯ್ಲು ಮಾಡುವ ಕತ್ತಿಗಳ ಅವಶೇಷಗಳು ದೊರೆತಿವೆ.

**ನೂತನ ಶಿಲಾಯುಗ ಸಂಸ್ಕೃತಿ :** 1922ರಲ್ಲಿ ಪ್ರಥಮವಾಗಿ ಯಾಂಗ್‍ಶಾವೊ ಬಳಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಗುರುತಿಸಲಾಯಿತು. ಬೂದು ಹಾಗೂ ಕೆಂಪು ಬಣ್ಣದ ಮಣ್ಣಿನ ಪಾತ್ರೆಗಳು ದಪ್ಪನೆಯ, ದುಂಡನೆಯ ಅಥವಾ ಚೌಕೋನದ ಉಜ್ಜಿದ ಕಲ್ಲಿನ ಕೊಡಲಿಗಳು, ಕುಯ್ಲು ಮಾಡುವ, ತೆಳ್ಳನೆಯ ಚಕ್ಕೆಯಲ್ಲಿ ಮಾಡಿದ, ಉದ್ದನೆಯ ಕುಡುಗೋಲುಗಳು, ತಕಲಿಗಳು ಬಾಣದ ಮೊನೆಗಳು ಮುಂತಾದವು ಇಲ್ಲಿ ಸಿಕ್ಕಿವೆ. ಇಂಥ ಸಾಂಸ್ಕೃತಿಕ ಅವಶೇಷಗಳುಳ್ಳ ನೆಲಗಳು ಹಳದಿ ನದಿ ಬಯಲಿನ ಮಧ್ಯದಿಂದ ಉದ್ದಕ್ಕೂ , ಇದರ ಉಪನದಿಗಳಾದ ಕ್ಯಾನ್ಸೂ ಮತ್ತು ವೈ ನದಿಗಳ ಫಲವತ್ತಾದ ಬಯಲುಗಳಲ್ಲೂ ಇವೆ. ಈ ನೆಲೆಗಳಲ್ಲಿ ಪನ್-ಪೊ-ಟ್ಸುನ್ ಎಂಬಲ್ಲಿ ಮಾತ್ರ ವ್ಯಾಪಕವಾಗಿ ಮಾಡಲಾದ ಉತ್ಖನನದಿಂದ ಈ ಸಂಸ್ಕೃತಿಯ ಸ್ಥೂಲ ಸ್ವರೂಪ ತಿಳಿದಿದೆ.



ಚಿತ್ರ 4. ರೇಖಾಚಿತ್ರಗಳಿರುವ ಗಡಿಗೆ-ಮಡಕೆಗಳು

ಈ ಜನ ವಾಸಕ್ಕಾಗಿ ಚೌಕೋನದ ಅಥವಾ ದುಂಡಾದ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಇವುಗಳಿಗೆ ತಡಿಕೆಗೋಡೆಗಳಿರುತ್ತಿದ್ದುವು. ಒಳಗಡೆ ಧಾನ್ಯಗಳ ಸಂಗ್ರಹಕ್ಕೂ ಒಲೆಗಳಿಗೂ ನೆಲದಲ್ಲಿ ಗುಂಡಿಗಳನ್ನು ಅಗೆದು ಬದಿಗಳಿಗೆ ನುಣುಪು ಮಣ್ಣು ಬಳಿಯುತ್ತಿದ್ದರು. ಧಾನ್ಯಸಂಗ್ರಹದ ಗುಂಡಿಗಳು ಮನೆಯ ಹೊರಗಡೆಯೂ ಇರುತ್ತಿದ್ದವು. ಇವು ಸುಮಾರು 6 ಮೀ. ಆಳವಿರುತ್ತಿದ್ದುವು. ಹಳ್ಳಿಯ ಒಂದು ಬದಿಯಲ್ಲಿ ಗಡಿಗೆಗಳನ್ನು ಸುಡುವ ಬಟ್ಟಿಗಳಿರುತ್ತಿದ್ದವು. ಎತ್ತರವಾದ ಗುಡಾಣಗಳು, ಬುಡ ದುಂಡಾದ ಅಥವಾ ಚಪ್ಪಟೆಯಾದ ಬಟ್ಟಲುಗಳು (ಮರಿಗೆಗಳು), ಮೂರು ಕಾಲುಗಳುಳ್ಳ ಬಟ್ಟಲುಗಳು, ಚೂಪಾದ ಬುಡವೂ ಸಣ್ಣ ಬಾಯೂ ಉಳ್ಳ ಹೂಜಿಗಳು-ಇವು ಗಡಿಗೆ ಮಡಿಕೆಗಳಲ್ಲಿ ಮುಖ್ಯವಾದವು. ಇವುಗಳ ಬಣ್ಣ ಕೆಂಪು ಅಥವಾ ಬೂದು. ಕೆಂಪು ಗಡಿಗೆಗಳ ಮೇಲೆ ಕಪ್ಪು ಬಣ್ಣದ ರೇಖಾಚಿತ್ರಗಳಿರು ತ್ತಿದ್ದವು. ಮನುಷ್ಯಮುಖದ ಮತ್ತು ಮೀನಿನ ಚಿತ್ರಗಳು ಈ ನೆಲೆಯಲ್ಲಿಯ ಗಡಿಗೆಯ ಮೇಲೆ ಮಾತ್ರ ಕಂಡುಬಂದಿವೆ. ಒರಟು ಮಡಿಕೆಗಳ ಮೇಲೆ ಕೊರೆದ ಗೆರೆ ಚಿತ್ರಗಳ ಅಚ್ಚೊತ್ತಿದ, ಹೆಣೆದ ಹಗ್ಗಗಳ, ಚಿತ್ರಗಳಿವೆ. ವರ್ಣಚಿತ್ರಿತ ಅಸ್ಥಿಪಾತ್ರೆಗಳು ವಿಶೇಷ ರೀತಿಯವಾಗಿರುತ್ತಿದ್ದವು.

ಚಿತ್ರ 4 (ಎ). ಮನುಷ್ಯಮುಖವನ್ನು ಚಿತ್ರಿಸಿರುವ ಗಡಿಗೆಯೊಂದರ ಶಿರೋಭಾಗ

ಶವಸಂಸ್ಕಾರ ಪದ್ಧತಿಗಳಲ್ಲಿ ಕ್ಯಾನ್ಸೂ ಮತ್ತು ಯಾಂಗ್‌ಷಾವೊ ಪ್ರದೇಶಗಳಲ್ಲಿ ವ್ಯತ್ಯಾಸಗಳಿವೆ. ಮೊದಲನೆಯದರಲ್ಲಿ, ದೇಹವನ್ನು ಬಲ ಮಗ್ಗುಲಲ್ಲಿ ಮಲಗಿಸಿ, ಕಾಲುಗಳನ್ನು ಮೇಲಕ್ಕೆಳೆದು ಮಡಿಸಲಾಗುತ್ತಿತ್ತು. ಅದರ ಮುಂಭಾಗದಲ್ಲಿ ವಿವಿಧ ಮಡಿಕೆಗಳನ್ನು ಸಾಲಾಗಿ ಇಡುತ್ತಿದ್ದರು. ಶವವನ್ನು ಹೊರಗೆ ಇಟ್ಟಿದ್ದು ಕೆಲವು ಸಮಯದ ಅನಂತರ ಅದರ ಅಳಿದುಳಿದ ಅಸ್ಥಿಗಳನ್ನು ಒಟ್ಟುಮಾಡಿ ಹುಗಿಯುತ್ತಿದ್ದುದೂ ಉಂಟು. ಚೌಕೋನದ ಗುಂಡಿಯಲ್ಲಿ ಶವವನ್ನು ಅಂಗಾತ ಮಲಗಿಸುವುದು ಯಾಂಗ್‌ಷಾವೊ ಪ್ರದೇಶದ ಪದ್ಧತಿ. ಕೆಲವು ಗುಂಡಿಗಳಲ್ಲಿ ಅವುಗಳ ಬದಿಗಳಿಗೆ ಮರದ ಹಲಗೆಗಳನ್ನು ಜೋಡಿಸಲಾಗಿತ್ತು.

ಈ ನೂತನ ಶಿಲಾಯುಗದ ಕಾಲ ಯಾವುದೆಂಬುದು ಇನ್ನೂ ಖಚಿತವಾಗಿ ತಿಳಿದಿಲ್ಲ. ಯಾಂಗ್‌ಷಾವೊ ಸಂಸ್ಕೃತಿಯ ಕಾಲ ಬಹುಶಃ ಪ್ರಶ.ಪೂ. 2ನೆಯ ಸಹಸ್ರಮಾನದ ಆದಿಭಾಗವೆಂದೂ ಶಾನ್ಸು ಸಂಸ್ಕೃತಿ ಇದಕ್ಕಿಂತ ಪೂರ್ವದಲ್ಲಿ ಆರಂಭವಾಗಿದ್ದಿರಬೇಕೆಂದೂ ತರ್ಕಿಸಲಾಗಿದೆ.

ಈ ಪ್ರದೇಶಗಳ ಪೂರ್ವದಲ್ಲಿಯ, ಹೋನ್ಯಾನ್‌ಗೆ ಈಶಾನ್ಯದ ಭಾಗಗಳಲ್ಲಿ ಬೇರೆ ಬಗೆಯ, ಲಂಗ್‌ಷಾನ್ ಎಂದು ಕರೆಯಲಾದ, ನೂತನ ಶಿಲಾಯುಗದ ಸಂಸ್ಕೃತಿಯಿತ್ತು. ಇದು ಯಾಂಗ್‌ಷಾವೊ ಸಂಸ್ಕೃತಿಯ ಅನಂತರದ್ದು. ಇದರ ಮಣ್ಣು ಪಾತ್ರೆಗಳು ಕಪ್ಪು ಬಣ್ಣದವು. ಕೆಳಭಾಗದಲ್ಲಿ ಮೂರು ಭಾಗವಾಗಿದ್ದ ಉದ್ದನೆ ಹೂಜಿ ಒಂದು ವಿಶೇಷ. ಚೀನದ ಆಗ್ನೇಯ ಭಾಗದಲ್ಲಿ ಈ ಸಂಸ್ಕೃತಿಗಳಿಗಿಂತ ಕಾಡು ಸ್ಥಿತಿಯಲ್ಲಿದ್ದ ನೂತನ ಶಿಲಾಯುಗ ಸಂಸ್ಕೃತಿಯಿತ್ತು. ಮಣ್ಣಿನ ಪಾತ್ರೆಗಳು ಸಾಮಾನ್ಯವಾಗಿ ಕಂದು ಬಣ್ಣದವಾಗಿದ್ದು, ಬಿರುಸಾಗಿರುತ್ತಿದ್ದುವು. ಇವುಗಳ ಮೇಲೆ ಸಮಬಾಹು ಚತುರ್ಭುಜದ ಸುತ್ತುಗಳಂಥ, ಹೆಣೆದ ಹಗ್ಗದ, ಚಾಪೆಯ, ಅಚ್ಚೊತ್ತಿದ ಚಿತ್ರಗಳಿರುತ್ತಿದ್ದವು. ಅಪರೂಪವಾಗಿ ಕಪ್ಪು ಬಣ್ಣದ ರೇಖಾಚಿತ್ರಗಳಿರುತ್ತಿದ್ದುದುಂಟು. (ಒಂದು ಗಮನಾರ್ಹ ಅಂಶವೆಂದರೆ, ಮೇಲ್ತುದಿಯಲ್ಲಿ ರಂಧ್ರವಿದ್ದ ಅರ್ಧಚಂದ್ರಾಕೃತಿಯ ಅಥವಾ ಚೌಕೋನಾಕೃತಿಯ, ಉಜ್ಜಿದ ಕಲ್ಲಿನ ಕುಡುಗೋಲು ಎಲ್ಲ ಪ್ರಾದೇಶಿಕ ಸಂಸ್ಕೃತಿಗಳಲ್ಲೂ ಬಳಕೆಯಲ್ಲಿತ್ತು. ಇದು ಚೀನದ ಒಂದು ವೈಶಿಷ್ಟ್ಯ). ಈ ಸಂಸ್ಕೃತಿ ಪ್ರಶ.ಪೂ. 8ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿತ್ತೆಂದು ತಿಳಿದುಬಂದಿದೆ.

**ಕಂಚಿನ ಯುಗ ಸಂಸ್ಕೃತಿ :** ಅನ್ಯಾಂಗ್‌ನಲ್ಲಿ ಉತ್ಖನನದಲ್ಲಿ ಕೆಳಗಿನ ಪದರಗಳಲ್ಲಿ ಯಾಂಗ್‌ಷಾವೊ ಸಂಸ್ಕೃತಿಯ ಮಧ್ಯದ ಪದರುಗಳಲ್ಲಿ ಲುಂಗ್‌ಷಾನ್ ಸಂಸ್ಕೃತಿಯ ಮತ್ತು ಮೇಲಿನ ಪದರಗಳಲ್ಲಿ ಕಂಚಿನ ಯುಗದ ನಗರ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಆದರೆ ಇಲ್ಲಿಯ ಮತ್ತು ಇತರ ಕಡೆಗಳ ಉತ್ಖನನಗಳಿಂದ ನೂತನ ಶಿಲಾಯುಗ ಸಂಸ್ಕೃತಿ ಹೇಗೆ ಕ್ರಮೇಣ ಕಂಚಿನ ಯುಗದ ನಾಗರಿಕ ಸಂಸ್ಕೃತಿಯಾಗಿ ಬೆಳೆಯಿತೆಂದು ಸ್ಪಷ್ಟವಾಗಿಲ್ಲ.

ಕಂಚಿನ ಯುಗ ಸಂಸ್ಕೃತಿಯ ಪೂರ್ವ ಭಾಗ : ಷಾಂಗ್ ವಂಶ. 1929–37ರಲ್ಲಿ ಅನ್ಯಾಂಗ್ ಹತ್ತಿರದ ಹ್ಸಿಯ ತುನ್‌ನಲ್ಲಿ ಮಾಡಿದ ಉತ್ಖನನಗಳಿಂದ ಆ ನೆಲೆ ಷಾಂಗ್ ರಾಜವಂಶದ ರಾಜಧಾನಿಯಾಗಿತ್ತೆಂದು ತಿಳಿದುಬಂತು. ಕೊರೆದ ಅಕ್ಷರಗಳುಳ್ಳ ಅಸ್ಥಿ ತುಂಡುಗಳು ಇಲ್ಲಿ 1902ರಿಂದಲೂ ಸಿಗುತ್ತಿದ್ದವು. ಎಲುಬಿನ ಮೇಲೆ ಭವಿಷ್ಯವಾಣಿ ಬರೆಯುವುದು ಷಾಂಗ್ ವಂಶದ ಧಾರ್ಮಿಕ ಪದ್ಧತಿಯ ಒಂದು ವೈಶಿಷ್ಟ್ಯವಾಗಿತ್ತು ಎಂಬುದು ಈ ವಂಶಕ್ಕೆ ಸಂಬಂಧಿಸಿದ ಗ್ರಂಥಗಳ ಆಧಾರದಿಂದ ಹೇಳಬಹುದು. ಈ ಎಲುಬುಗಳ ಮೇಲಿನ ಬರೆವಣಿಗೆ ಆ ಭವಿಷ್ಯವಾಣಿಗಳೆಂದು ತಿಳಿದುಬಂತು. ಉತ್ಖನನಗಳಲ್ಲಿ ಈ ನಾಗರಿಕ ಷಾಂಗ್ ಮನೆತನದ ಅವಶೇಷಗಳ ಜೊತೆಗೆ ವಿಶಿಷ್ಟವಾದ ಬೂದುಬಣ್ಣದ ಮಣ್ಣಿನ ಪಾತ್ರೆಗಳು ಇದ್ದುವು. ಹೊನ್ಯಾನ್ ಪ್ರಾಂತ್ಯದ ಇತರೆಡೆಗಳಲ್ಲಿಯ ಉತ್ಖನನಗಳಲ್ಲಿ ಲಂಗ್‌ಷಾನ್ ಸಂಸ್ಕೃತಿಯ ಅವಶೇಷಗಳುಳ್ಳ ಹಾಳುಮಣ್ಣಿನ ಪದರಗಳ ಮೇಲೆಯೇ ಷಾಂಗ್ ನಾಗರಿಕ ಸಂಸ್ಕೃತಿಯ ಅವಶೇಷಗಳುಳ್ಳ ಮಣ್ಣಿನ ಪದರಗಳಿದ್ದವು. 1953ರಿಂದ ಜೆಂಗ್‌ಚೌ ನಗರದ ಸಮೀಪದ ಕೆಲವು ಷಾಂಗ್ ನೆಲೆಗಳಲ್ಲಿ ನಡೆದ ಉತ್ಖನನಗಳಿಂದ ಹ್ಸಿಯೊತುನ್ ಎಂಬಲ್ಲಿ ರಾಜಧಾನಿಯನ್ನು ಸ್ಥಾಪಿಸುವುದಕ್ಕೆ ಮುಂಚೆಯೇ ಅಸ್ತಿತ್ವದಲ್ಲಿದ್ದ ಈ ಸಂಸ್ಕೃತಿಯ ಸ್ವರೂಪ ಹೇಗಿತ್ತೆಂದು ತಿಳಿದಿದೆ. ಈ ಸಂಸ್ಕೃತಿಯ ಕಾಲ ಪ್ರಶ.ಪೂ. ಸು. 1500–1026 ಎಂಬುದೂ ಇದರ ಬೆಳೆವಣಿಗೆಯ ಐದು ಹಂತಗಳಿರುವುದೂ ಈ ಉತ್ಖನನಗಳಿಂದ ವೇದ್ಯವಾಗಿವೆ. ರಾಜಧಾನಿಯನ್ನು ಕಟ್ಟುವುದಕ್ಕೆ ಪೂರ್ವದ ಸಂಸ್ಕೃತಿಯ ಕಾಲ ಪ್ರ.ಶ.ಪೂ. 1300 ವರೆಗೆ ಎಂದು ತಿಳಿದಿದೆ.

ಷಾಂಗ್ ಸಂಸ್ಕೃತಿಯ ನಗರದ ಸುತ್ತಲೂ ಇದ್ದ 19–20 ಮೀ. ಅಗಲದ ಬೃಹತ್ ಪೌಳಿ ಗೋಡೆಗಳೂ ಮುದ್ದೆಮಣ್ಣಿನಿಂದ ಕಟ್ಟಿದ ಕಟ್ಟಡಗಳೂ ಅವನ್ನು ಕಟ್ಟುವಾಗ ಧಾರ್ಮಿಕ ವಿಧಿಗಳಿಗನುಸಾರವಾಗಿ ಬಲಿಕೊಟ್ಟ ಮಾನವರ ಮತ್ತು ಪ್ರಾಣಿಗಳ ಶವಕುಣಿಗಳೂ ಸಿಕ್ಕಿವೆ. ಕಮಾನುಗಳನ್ನಾಗಲಿ, ಕಮಾನುಚಾವಣಿಗಳನ್ನಾಗಲಿ ಕಟ್ಟದೆ, ಕೇವಲ ಜಂತಿಗಳನ್ನು ಮತ್ತು ದೂಲಗಳನ್ನು ಉಪಯೋಗಿಸಿ ಮರದ ಕಟ್ಟಡಗಳನ್ನು ಕಟ್ಟುವ ಪದ್ಧತಿ ಚೀನದಲ್ಲಿ ಆರಂಭವಾದ್ದು ಈ ಸಂಸ್ಕೃತಿಯ ಕಾಲದಲ್ಲೇ. ಅಲ್ಲದೆ ಸಾಧಾರಣ ರೀತಿಯ ಸಾಲುಮನೆಗಳನ್ನು, ನೆಲದಲ್ಲಿಯ ಸುಮಾರು 2 ಮೀ. ಆಳದ ಮತ್ತು 3–5 ಮೀ. ವ್ಯಾಸದ ಗುಂಡಿಗಳನ್ನು ತೋಡಿ ಮಾಡಲಾದ ಗುಂಡಿ ವಸತಿಗಳು, ಅಗಲವಾದ ಬೀದಿಗಳು ಧಾನ್ಯಗಳನ್ನು ಸಂಗ್ರಹಿಸಲು

ಚಿತ್ರ 5. ಷಾಂಗ್ ಕಾಲದ ವಿವಿಧ ಬಗೆಯ ಕಂಚಿನ ಪಾತ್ರೆಗಳು

ಮಾಡಿದ ಆಳದ ಹಗೇವುಗಳು, ರಾಜಮನೆತನದ ಹಾಗೂ ಸಾಮಾನ್ಯ ಜನರ ಗೋರಿಗಳು, ವಿವಿಧ ರೀತಿಯ ಚಿತ್ರಿತ ಕಂಚಿನ ಪಾತ್ರಗಳು ಬಾಣದ ಮತ್ತು ಈಟಿಯ ಮೊನೆಗಳು, ಚಾಕುಗಳು, ಕತ್ತಿಗಳು, ಕೊಡಲಿಗಳು, ಪ್ರಾಣಿಗಳ ಚಿತ್ರಗಳುಳ್ಳ ತಾಯಿತಗಳು ವರ್ಣಚಿತ್ರರಹಿತ ಮಣ್ಣುಪಾತ್ರೆಗಳ, ಎಲುಬಿನ ಕಡ್ಡಿಮೊನೆಗಳು, ಭವಿಷ್ಯವಾಣಿಯನ್ನು ಬರೆದ ಎಲುಬುಗಳು–



ಚಿತ್ರ 6. ಪ್ರಾಣಿಗಳ ಚಿತ್ರಗಳುಳ್ಳ ತಾಯಿತಗಳು

ಇವು ಮುಖ್ಯವಾಗಿ ಗಮನಾರ್ಹ. ಹ್ಸಿ–ಪಿ–ತಾಂಗ್‌ನಲ್ಲಿದ್ದ ರಾಜರುಗಳ ಗೋರಿಗಳಿಗೆ ಮರದ ಚಾವಣಿಗಳುಂಟು. ಇವುಗಳ ಸಮೀಪದಲ್ಲಿ ಶವಸಂಸ್ಕಾರ ಸಂಬಂಧವಾಗಿ ಬಲಿಕೊಟ್ಟ ನಾಯಿ, ಮಂಗ, ಜಿಂಕೆ, ಆನೆ ಮುಂತಾದ ಪ್ರಾಣಿಗಳ ಮತ್ತು ಮನುಷ್ಯರ, ಚಾಲಕಸಹಿತವಾದ ರಥಗಳ ಅವಶೇಷಗಳು, ಕಲ್ಲಿನ ಕೊಡಲಿಗಳು, ಕಂಚಿನ ಚಾಕುಗಳು, ಬೇರೆ ಬೇರೆ

ಗುಂಡಿಗಳಲ್ಲಿ ಕಂಡುಬಂದಿವೆ. ಯಾರ ಶವಸಂಸ್ಕಾರವೆಂಬುದನ್ನು ಕಂಚಿನ ಪಾತ್ರೆಗಳ ಮೇಲೆ ಬರೆಯಲಾಗಿದೆ. ಬೇರೆ ಬೇರೆ ಶೌರ್ಯಗಳಿಗೆ ನಿಯಮಿತವಾದ ನಾನಾ ವಿಧವಾದ ಕಂಚಿನ ಪಾತ್ರೆಗಳ ಮೇಲೆ ಸಶಸ್ತ್ರ ಮಾನವರ, ಬಿಲ್ಲುಗಳ, ಪ್ರಾಣಿಗಳ ಚಿತ್ರಗಳನ್ನು ಗೆರೆಗಳಲ್ಲಿ ಸಾಂಕೇತಿಕವಾಗಿ ಮೂಡಿಸಲಾಗಿದೆ. ಜೇಡ್ ಕಲ್ಲಿನಲ್ಲಿ ಮಾಡಿದ ವಿವಿಧ ಪ್ರಾಣಿಗಳು,

**ಚಿತ್ರ 7. ಹೋನ್ಯಾನ್ ಪ್ರಾಂತ್ಯದ ಅನ್ಯಾಂಗ್ ಬಳಿ ದೊರೆತ ಸಮಾಧಿಯಲ್ಲಿ ಕಂಡುಬಂದ ಅವಶೇಷಗಳು. ಕುದುರೆಗಳ ಮತ್ತು ಸಾರಥಿಯ ಅಸ್ಥಿಪಂಜರಗಳನ್ನು ಕಾಣಬಹುದು. ರಥದ ವಿವಿಧ ಭಾಗಗಳ ಗುರುತುಗಳೂ ಇವೆ.**

ಮಾಂತ್ರಿಕ ತಾಯತಗಳು, ಎತ್ತಿನ ಅಸ್ಥಿಗಳು ಗಮನಾರ್ಹ. ಈ ಅಸ್ಥಿಗಳ ಮೇಲಣ ಭವಿಷ್ಯವಾಣಿಯಲ್ಲಿ ಚೀನದ ಅತ್ಯಂತ ಪ್ರಾಚೀನ ಲಿಪಿಗಳಿವೆ. ಷಾಂಗ್ ವಂಶದ ರಾಜರಲ್ಲಿ 22ನೆಯವನಿಂದ 29ನೆಯವನ ವರೆಗಿನ ಆಳ್ವಿಕೆಯ ಕಾಲವನ್ನು ಐದು ಭಾಗಗಳನ್ನಾಗಿ ವಿಂಗಡಿಸುವುದು ಈ ಭವಿಷ್ಯವಾಣಿಗಳಿಂದ ಸಾಧ್ಯವಾಗಿದೆ. ಅವರ ಯುದ್ಧಸನ್ನಾಹಗಳು ಅವರಿಗೆ ಶತ್ರುಗಳಾಗಿದ್ದ ಕಾಡುಜನರು, ಗುಲಾಮಗಿರಿ, ದೇವರಾಜ ಪ್ರಭುತ್ವ, ಅಧಿಕಾರಿಗಳ ಸ್ಥಾನಗಳು ಮುಂತಾದವು ತಿಳಿದಿವೆ.

**ಕಂಚಿನ ಯುಗ ಸಂಸ್ಕೃತಿ–ಉತ್ತರ ಭಾಗ :** ಪ್ರಶ.ಪೂ. ಸು. 1027ರಲ್ಲಿ ಷಾಂಗ್ ರಾಜರ ಅಧೀನರಾಗಿದ್ದ ಚೌ ಮನೆತನದವರು ಷಾಂಗ್ ಮನೆತನವನ್ನು ಸೋಲಿಸಿ ತಮ್ಮ ಆಳ್ವಿಕೆ ಸ್ಥಾಪಿಸಿದರು. ಇವರ ಚರಿತ್ರೆಗೆ ಸಂಬಂಧಿಸಿದ ಹಾಗೆ ಕಂಚಿನಲ್ಲಿ ಎರಕ ಹೊಯ್ದ ಕೆಲವು ಮಹತ್ವದ ಶಾಸನಗಳು ಸಿಕ್ಕಿವೆ. ಷಾಂಗ್ ರಾಜ ಜನರ ಸುಖವನ್ನು ಕಡೆಗಣಿಸಿ ನಿರಂಕುಶನಾಗಿ ಆಳುತ್ತಿದ್ದುದರಿಂದ ಚೌ ಮನೆತನದವರು ಅವನನ್ನು ಬದಿಗೊತ್ತಿ ತಮ್ಮ ಆಳ್ವಿಕೆಯನ್ನು ಆರಂಭಿಸಿದರೆಂಬುದು ಕಂಚಿನ ಪಾತ್ರೆಗಳ ಮೇಲೆ ಕೊರೆದ ಶಾಸನಗಳಿಂದ ತಿಳಿದುಬರುತ್ತದೆ. ಷಾಂಗ್ ದೊರೆಗಳ ಭವಿಷ್ಯವಾಣಿಯ ಬರೆವಣಿಗೆಗಳಲ್ಲಿ ಚೌ ಮನೆತನದ ವಿಷಯ ಸ್ವಲ್ಪ ತಿಳಿದಿದೆ. ಈ ಮನೆತನದ ಮೂರನೆಯ ರಾಜನ ಕಾಲದ (ಪ್ರಶ.ಪೂ. 10ನೆಯ ಶತಮಾನದ ಆದಿಭಾಗ) ಶಾಸನ ಬಹು ಮುಖ್ಯವಾದ್ದು. ಅದರಲ್ಲಿ ಚೌ ಮನೆತನದವರ ನೈತಿಕ ಗೆಲುವು, ರಾಜ ನೀಡಿದ ದತ್ತಿ, ಅಧಿಕಾರಿಗಳ ನೇಮಕ, ಕೊಡಲಾದ ದೇಣಿಗೆಗಳು–ಈ ವಿಷಯಗಳಿವೆ. ಯೆನ್–ತುನ್–ಷಾನ್ ಎಂಬ ಎರಡನೆಯ ಚೌ ರಾಜನದು ಇನ್ನೊಂದು ಮುಖ್ಯ ಶಾಸನ. ಇವನು ತನ್ನ ತಂದೆಗಾಗಿ ಮಾಡಿದ ಬಲಿಕರ್ಮ, ಷಾಂಗ್ ಮನೆತನದವರ ಮೇಲೆ ಸಾಧಿಸಿದ ವಿಜಯ, ಪೂರ್ವ ಪ್ರದೇಶಗಳಲ್ಲಿ ಈ ರಾಜ ನೀಡಿದ ಸಂದರ್ಶನ–ಮುಂತಾದ ವಿಷಯಗಳು ಈ ಶಾಸನದಲ್ಲಿವೆ. ಇವಲ್ಲದೆ ಸಾಮಂತ ಅಧಿಕಾರಿಗಳ ಕೆಲವು ಶಾಸನಗಳೂ ಇವೆ. ಇವು ಪ್ರಶ.ಪೂ. 950ಕ್ಕಿಂತ ಮುಂಚಿನ, ಪ್ರಶ.ಪೂ. 671ರ ಅನಂತರದ ಶಾಸನಗಳು. ಪ್ರಶ.ಪೂ. 6–5ನೆಯ ಶತಮಾನಗಳ ಕಂಚಿನ ಪಾತ್ರೆಗಳ ಮೇಲೆ ಸಾಮಂತರ ಹೆಸರುಗಳನ್ನು ತಿಳಿಸುವ ಶಾಸನಗಳೂ ದೊರಕಿವೆ.

ಜಪಾನೀಯರು ನಡೆಸಿದ ಪ್ರಾಚ್ಯವಸ್ತು ಸಂಶೋಧನೆಯಲ್ಲಿ ಹ್ಸಿಯನ್‌ನಲ್ಲಿ ಸು. 7ಕಿಮೀ. ಸುತ್ತಳತೆಯ 7ಮೀ. ಎತ್ತರದ ತಳಹದಿಯ ಮೇಲೆ 10 ಮೀ. ವರೆಗೆ ಎತ್ತರವಾದ ಕೋಟೆಗೋಡೆ ಮತ್ತು ಅದರೊಳಗಿನ ಕಟ್ಟಡದ ಅವಶೇಷಗಳೂ ಹಾನ್–ತಾನ್‌ನಲ್ಲಿ ಚೌಕೋನದ ಪೌಳಿಗಳ ಅವಶೇಷಗಳೂ ದೊರಕಿವೆ.

**ಚಿತ್ರ 8. ಹೋನ್ಯಾನ್ ಪ್ರಾಂತ್ಯದಲ್ಲಿ ದೊರೆತ ಕಂಚಿನ ಬಟ್ಟಲು. ಇದರ ಮೇಲೆ ಚಿತ್ರಗಳನ್ನು ಕೊರೆಯಲಾಗಿದೆ**

ಹ್ಯೂ ಹ್ಸಿಯದ ಚೌ ಗೋರಿಯಲ್ಲಿ ಸಿಕ್ಕ ಕಂಚಿನ ಬಟ್ಟಲಿನ ಮೇಲೆ ಕೊರೆದ ಚಿತ್ರಗಳಿಂದ ಇವರ ಕಾಲದ ಕಟ್ಟಡಗಳ ಸ್ವರೂಪ ತಕ್ಕಮಟ್ಟಿಗೆ ಗೊತ್ತಾಗಿದೆ. ಮೊದ ಮೊದಲು ಚೌ ರಾಜವಂಶದ ಗೋರಿಗಳು ಹಿಂದಿನ ಷಾಂಗ್ ವಂಶದವರ ಗೋರಿಗಳ ಹಾಗೆ ಇರುತ್ತಿದ್ದವು. ಕ್ರಮೇಣ, ಪ್ರಶ.ಪೂ. ಸು. 6. 5ನೆಯ ಶತಮಾನಗಳಿಗಿಂತ ಸ್ವಲ್ಪ ಮುಂಚಿನ ವೇಳೆಗೆ, ಶವಕುಣಿಗಳ ಬದಿಗಳನ್ನು ಮೆಟ್ಟಲು ಮೆಟ್ಟಿಲಾಗಿ ರಚಿಸತೊಡಗಲಾಯಿತು. ಮರದ ಬದಲು ಕಲ್ಲಿನ ಹಲಗೆಗಳಿಂದ ಶವಪೆಟ್ಟಿಗೆಯನ್ನು ಮಾಡುವ ಪದ್ಧತಿ ಬೆಳೆಯಿತು. ಷಾಂಗ್ ಮನೆತನದವರಂತೆ ಶವಸಂಸ್ಕಾರ ಸಂದರ್ಭದಲ್ಲಿ ಪ್ರಾಣಿ ಮತ್ತು ಮನುಷ್ಯರ ಬಲಿ ಕೊಡುತ್ತಿರಲಿಲ್ಲ. ಚಾಂಗ್‌ಷಾದಲ್ಲಿ ಪ್ರಶ.ಪೂ. 4–3ನೆಯ ಶತಮಾನದ ಗೋರಿಯೊಂದು ಸಿಕ್ಕಿದೆ. ಇದನ್ನು ಮರದ ಹಲಗೆಗಳಿಂದ ಕಟ್ಟಲಾಗಿದೆ. ಎರಡು ಶವಪೆಟ್ಟಿಗೆಗಳು ಒಂದರೊಳಗೊಂದು ಇವೆ. ಈ ಗೋರಿ ಅಪೂರ್ವವಾದ್ದು. ಈ ಪೆಟ್ಟಿಗೆಗಳ ಗೋಡೆಗಳ ಮಧ್ಯದಲ್ಲಿ ಕಂಚಿನ ಪಾತ್ರೆಗಳನ್ನು, ಕತ್ತಿಗಳು ಮತ್ತು ಇತರ ಆಯುಧಗಳನ್ನು, ಗಡಿಗೆ ಮಡಕೆಗಳನ್ನು ಇಡಲಾಗಿತ್ತು. ಒಂದು ಗೋರಿಯಲ್ಲಿ ಒಂದು ಬಿಲ್ಲು ಕೂಡ ಇತ್ತು.

ಆ ಕಾಲದ ಜನರ ಒಂದು ಮಹತ್ತ್ವದ ಶೋಧನೆಯೆಂದರೆ ಒಳ್ಳೆಯ ಪರಿಣಾಮಕಾರಿಯಾದ ಯಾಂತ್ರಿಕ ಬಿಲ್ಲು. ಸುಧಾರಿಸಿದ ರಥಗಳು, ಹಿಡಿಯುಳ್ಳ ಕಂಚಿನ ಕತ್ತಿಗಳು, ಈಟಿ ಮೊನೆಗಳು ಮುಂತಾದ ಆಯುಧಗಳು ಗಮನಾರ್ಹ.

ಹ್ಯೂ ಹ್ಸಿಯನ್ ಗೋರಿಗಳಲ್ಲಿ ಕಬ್ಬಿಣದ ಉಪಕರಣಗಳೂ ಸಿಕ್ಕಿವೆ. ಸಲಿಕೆ, ಕೊಡಲಿ ಬಾಯಿ ಹಾಗೂ ಕುಳ, ಚೌಕೋನದ ಮತ್ತು ಚಂದ್ರಾಕಾರದ ಕುಡುಗೋಲುಗಳು ಮುಂತಾದ ವಿವಿಧ ಮಾದರಿಗಳ ವ್ಯವಸಾಯದ ಮುಟ್ಟುಗಳು ಹೇರಳವಾಗಿ ದೊರಕಿವೆ. ಪ್ರಶ.ಪೂ. ಸು. 5ನೆಯ ಶತಮಾನಕ್ಕೆ ಸ್ವಲ್ಪ ಮುಂಚೆ ಕಬ್ಬಿಣದ ಬಳಕೆ ಆರಂಭವಾಗಿರಬಹುದೆಂದು ಇದರಿಂದ ಊಹಿಸಬಹುದಾಗಿದೆ. ಆದರೂ ಕ್ರಿ.ಪೂ. 3ನೆಯ ಶತಮಾನದ ವರೆಗೆ ಕಂಚಿನ ಉಪಯೋಗವೇ ಹೆಚ್ಚಾಗಿತ್ತು.

ಕಂಚಿನ ಯುಗದ ಕಲೆ ನಿಜಕ್ಕೂ ಪ್ರಶಂಸಾರ್ಹ. ಹೆಚ್ಚಾಗಿ ಕಂಚಿನ ಪಾತ್ರೆಗಳ ವೈವಿಧ್ಯ ಮತ್ತು ಅವುಗಳ ಮೇಲಿನ ಚಿತ್ರಗಳು, ಜೇಡ್ ಕಲ್ಲಿನಲ್ಲಿ ಕೊರೆದ ಪಕ್ಷಿಗಳ ಮತ್ತು ಪ್ರಾಣಿಗಳ ಮತ್ತು ಕಾಲ್ಪನಿಕವಾದ ಭಯಂಕರ ಪ್ರಾಣಿಗಳ ಚಿತ್ರಗಳನ್ನು, ರೇಖಾಚಿತ್ರಗಳು, ಕಂಚಿನ ಮುಖವಾಡಗಳು, ಹೆಣೆದ ವಜ್ರಾಕೃತಿಯ ಚೌಕುಳಿ ಆಭರಣಗಳು, ಸೊಂಟಪಟ್ಟಿ, ಕೊಕ್ಕೆಗಳು, ಅರಗಿನ ಮೆರುಗುಳ್ಳ ಅಲಂಕಾರ ಪಟ್ಟಿಗಳು, ಗಡಿಗೆಗಳ ಮೇಲೆ ಬಿಡಿಸಿದ ಚಿತ್ರಗಳು ಮುಂತಾದವು ಉತ್ತಮ ನಿದರ್ಶನ. (ಎ.ಎಸ್.ಯು.)

ii ಇತಿಹಾಸ : ಚೀನದ ಪೂರ್ವಚರಿತ್ರೆ ನಾಲ್ಕೈದು ಸಾವಿರ ವರ್ಷಗಳಷ್ಟು ಹಿಂದಿನದಾದರೂ ಅದನ್ನು ನಿರ್ಧರಿಸಲು ಸೂಕ್ತ ಆಧಾರಗಳು ಸಿಗುವಂತಿಲ್ಲ. ಸಿಕ್ಕಿರುವ ಆಧಾರಗಳು ಸಮರ್ಪಕವಾಗಿಲ್ಲ. ಅಲ್ಲಲ್ಲಿ ಸಿಗುವ ಪುರಾವೆಗಳಿಂದ, ಚೀನದ ಪ್ರಸಿದ್ಧ ತತ್ತ್ವಜ್ಞಾನಿ ಕನ್‌ಫ್ಯೂಷಿಯಸನ ಬರವಣಿಗೆಗಳಿಂದ ಇದರ ಇತಿಹಾಸದ ಆರಂಭಕಾಲದ ಕೆಲವು ಅಂಶಗಳನ್ನು ಅರಿಯುವುದು ಸಾಧ್ಯವಿದೆ.



ಚಿತ್ರ 9. ಮರದ ಹಲಗೆಗಳಿಂದ ನಿರ್ಮಿತವಾದ ಶವಪೆಟ್ಟಿಗೆ



ಚಿತ್ರ 10. ಕಂಚಿನ ಬಿಲ್ಲು

ಪ್ರಶ.ಪೂ. ಸು. 5000ದ ವೇಳೆಗೆ ಚೀನದ ಪಶ್ಚಿಮಕ್ಕಿರುವ ಮಧ್ಯ ಏಷ್ಯ ಪ್ರದೇಶ ಫಲವತ್ತಾಗಿದ್ದು ಜನಸಾಂದ್ರತೆಯಿಂದ ಕೂಡಿತ್ತು. ಆದರೆ ಬರಬರುತ್ತ ಮಳೆಯ ಕೊರತೆಯಿಂದ ನೀರಿಗೆ ಅಭಾವ ಉಂಟಾಯಿತು. ವ್ಯವಸಾಯದಿಂದ ಜೀವಿಸುತ್ತಿದ್ದ ಅಲ್ಲಿಯ ಜನ ಬೇರೆ ಪ್ರದೇಶಗಳಿಗೆ ಹೋಗಬೇಕಾಯಿತು. ಇವರ ಪೈಕಿ ಕೆಲವರು ಪಶ್ಚಿಮದ ಪರ್ವತಗಳನ್ನು ದಾಟಿ ಹ್ವಾಂಗ್ ಹೋ ನದಿಯ ಬಯಲಲ್ಲಿ ನೆಲೆಸಿದರು. ಇವರೇ ಚೀನೀಯರ ಮೂಲಪುರುಷರೆಂದು ಪ್ರತೀತಿ. ಇವರು ತಮ್ಮ ಪೈಕಿ ಹಿರಿಯನೊಬ್ಬನನ್ನು ಆರಿಸಿಕೊಂಡು ಅವನ ಆಜ್ಞೆಯನ್ನು ಪಾಲಿಸುತ್ತಿದ್ದರು. ಆಗ ರಾಜರಿರಲಿಲ್ಲ. ಕ್ರಮೇಣ ರಾಜ್ಯಸ್ಥಾಪನೆಯಾಯಿತು. ಯಾವೋ ಎಂಬೊಬ್ಬ ಮುಂಖಡನನ್ನು ಅವರು ತಮ್ಮ ಅಧಿಪತಿಯನ್ನಾಗಿ ಗೊತ್ತುಪಡಿಸಿಕೊಂಡರು. ಮುಂದೆ ಇವನ ಉತ್ತರಾಧಿಕಾರಿಗಳಿಗೆ ವಂಶಾನುಗತವಾಗಿ ಆಳುವ ಅಧಿಕಾರ ಲಭಿಸಿತು. ಅರಸುತನ ಆರಂಭವಾದ್ದು ಪ್ರಶ.ಪೂ. 2356ರಲ್ಲಿ. ಆಮೇಲೆ ಅನೇಕ ವಂಶಗಳು ಚೀನವನ್ನಾಳಿದವು.



ಚಿತ್ರ 11. ಕಂಚಿನ ಪಾತ್ರೆಗಳ ಮೇಲೆ ಮೂಡಿಸಲಾದ ಡ್ರೇಗನ್ ಚಿತ್ರಗಳು

ಅರಸಾಳ್ವಿಕೆಯನ್ನಾರಂಭಿಸಿದ ಯಾವೋಗಳು ಎಲ್ಲ ವಿಧದಲ್ಲೂ ಯೋಗ್ಯರೆನಿಸಿದ್ದರು; ಉತ್ಸಾಹಿಗಳೂ ಶ್ರದ್ಧಾವಂತರೂ ಆಗಿದ್ದರು. ಇವರು ದೇಶವನ್ನು ವಿಸ್ತರಿಸಿ ನ್ಯಾಯವಾಗಿಯೂ ಚೆನ್ನಾಗಿಯೂ ಆಳಿ ಮುಂದಿನವರಿಗೆ ಮಾರ್ಗದರ್ಶಕರಾದರೆಂದು ಗೊತ್ತಾಗುತ್ತದೆ.

**ಷಾಂಗ್ ವಂಶ :** ಮುಂದೆ ಆಳಿದ ಮುಖ್ಯ ವಂಶಗಳಲ್ಲಿ ಮೊದಲನೆಯದು ಷಾಂಗ್ (ಪ್ರಶ.ಪೂ. ಸು. 1766–ಪ್ರಶ.ಪೂ. ಸು. 1123). ಆದರೆ ಆ ವಂಶದವರಾರೂ ಅರ್ಹರೆನಿಸಲಿಲ್ಲ. ಅವರ ಕಾಲದಲ್ಲಿ ದೇಶ ಪ್ರಗತಿ ಹೊಂದಲಿಲ್ಲ. ಆ ವಂಶ ಕೊನೆಗೊಂಡದ್ದು ದೊಡ್ಡದೊಂದು ಕ್ರಾಂತಿಯಿಂದ. ಕೊನೆಯ ಅರಸ ತುಂಬ ಕ್ರೂರಿಯಾಗಿದ್ದ. ಶತ್ರುವಿಗೆ ಸೋತು, ತನ್ನ ಅರಮನೆಯಲ್ಲೇ ಬೆಂಕಿಹೊತ್ತಿಸಿಕೊಂಡು ಸಾವನ್ನಪ್ಪಿದ. ಈ ದುರಂತದಿಂದ ಆ ವಂಶ ಅಳಿಸಿಹೋಯಿತು.

ಆ ವಂಶದ ಆಳ್ವಿಕೆಯಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ ಕಿತ್ಸೆ ಎಂಬುವನು ತನ್ನ ಅರಸನಿಲ್ಲದ ನಾಡಿನಲ್ಲಿರಲು ಇಷ್ಟಪಡದೆ ಸಾವಿರಾರು ಹಿಂಬಾಲಕರೊಡನೆ ಕೊರಿಯಕ್ಕೆ ಹೋದ. ಆ ಪ್ರದೇಶವನ್ನು ಚೋಸನ್ ಎಂದು ಕರೆದ. ಕ್ರಮೇಣ ಅಲ್ಲಿಗೆ ಚೀನೀಯರು ಹೆಚ್ಚು ಹೆಚ್ಚಾಗಿ ಹೋಗಿ ನೆಲೆಸಲಾರಂಭಿಸಿದರು. ಆ ಪ್ರದೇಶಕ್ಕೆ ಕಿತ್ಸೆ ಅರಸನಾದ. ಅವನ ವಂಶದವರು ಸುಮಾರು ಒಂಬತ್ತು ಶತಮಾನಗಳ ಕಾಲ ಅಲ್ಲಿ ಆಳಿದರು. ಚೀನದ ನಾಗರಿಕತೆ ಕೊರಿಯಾಕ್ಕೂ ಹರಡಿತು.

**ಜೋ :** ಪ್ರಶ.ಪೂ. ಸು. 1122 ಪ್ರಶ.ಪೂ. 256. ಈ ವಂಶದ ಅರಸರು ದೇಶವನ್ನು ಅಭಿವೃದ್ಧಿಗೆ ತಂದರು. ನಾಗರಿಕತೆ ಬೆಳೆಯಿತು. ವ್ಯವಸಾಯ ವ್ಯಾಪಕವಾಯಿತು. ವ್ಯಾಪಾರ, ಕೈಗಾರಿಕೆಗಳೂ ಬೆಳೆದವು. ಹತ್ತಿ, ರೇಷ್ಮೆ ಬಟ್ಟೆಗಳೂ ಚರ್ಮಗೆಲಸ, ದಂತದ ಕೆತ್ತನೆ, ಒಡವೆ ಮುಂತಾದ ಕುಶಲ ಕಲೆಗಳೂ ಬೆಳೆದವು. ಸಾಹಿತ್ಯ, ವಿಜ್ಞಾನ ಪ್ರಗತಿ ಹೊಂದಿದವು. ಆದರೆ ಈ ಪ್ರಗತಿ ಶಾಶ್ವತವಾಗಿ ಉಳಿಯಲಿಲ್ಲ. ಒಳಜಗಳಗಳು ಮೊದಲಾದವು. ದೇಶದ ಸುರಕ್ಷತೆಗೆ ಅಪಾಯ ಒದಗಿತು. ಪ್ರಶ.ಪೂ. 256ರಲ್ಲಿ ಜೋ ವಂಶ ಕೊನೆಗೊಂಡಿತು. ಚೀನದ ಸುಪ್ರಸಿದ್ಧ ತತ್ತ್ವಜ್ಞಾನಿಗಳಾದ ಕನ್‌ಫ್ಯೂಷಿಯಸ್ ಮತ್ತು ಲಾವೊ ಟ್ಸೆ ಈ ವಂಶದ ಆಳ್ವಿಕೆಯ ಕಾಲದಲ್ಲಿ ಜನ್ಮವೆತ್ತಿದರು. ಇದು ಚೀನದ ಇತಿಹಾಸದಲ್ಲಿ ಅಪೂರ್ವ ಘಟನೆ ಎಂದೇ ಹೇಳಬೇಕು. ಈ ಇಬ್ಬರು ವ್ಯಕ್ತಿಗಳೂ ಚೀನದ ಸಮಾಜದ ಮೇಲೆ ಅಚ್ಚಳಿಯದಂಥ ಪರಿಣಾಮ ಉಂಟು ಮಾಡಿದರು.

**ಚಿನ್ ವಂಶ :** ಪ್ರಶ.ಪೂ. 221–207. ಇದು ಅನಂತರ ಬಂದ ವಂಶ. ಈ ವಂಶದ ಹೆಸರಿನಿಂದಲೇ ಚೀನಕ್ಕೆ ಆ ಹೆಸರು ಬಂತೆಂದು ಹೇಳಲಾಗಿದೆ. ಪ್ರಶ.ಪೂ. 221ರಲ್ಲಿ ಪರಮಾಧಿಕಾರ ಗಳಿಸಿದ ದೊರೆ ತನ್ನನ್ನು ಪ್ರಥಮ ಚಕ್ರಾಧಿಪತಿಯೆಂದು (ಷಿರ್ ಹ್ವಾಂಗ್ ಟೀ) ಕರೆದುಕೊಂಡ. ಇವನು ಸ್ವಾರ್ಥಿ, ಮಹತ್ವಾಕಾಂಕ್ಷಿ. ತನ್ನ ಹೆಸರು ಶಾಶ್ವತವಾಗಿ ಉಳಿಯಬೇಕು, ತನ್ನ ಆಳ್ವಿಕೆಯೇ ಆದಿ ಎನಿಸಬೇಕು–ಎಂಬುದು ಇವನ ಬಯಕೆ. ಹೀಗಾಗ ಬೇಕಾದರೆ ಹಿಂದಿನವರ ನೆನಪೇ ಸಿಗಬಾರದು; ದಾಖಲೆಗಳಿರಬಾರದು; ಹಿಂದಿನ ಸಂಸ್ಕೃತಿ ಉಳಿದಿರಬಾರದು – ಎಂದು ಇವನು ಯೋಚಿಸಿದ. ಹಿಂದಿನ ದಾಖಲೆಗಳನ್ನೆಲ್ಲ ನಾಶ ಪಡಿಸಲು ಆಜ್ಞೆ ಮಾಡಿದ. ಹಿಂದಿನವರ ಹಿರಿಮೆಯನ್ನು ಸೂಚಿಸುವ ಯಾವುದೂ ಇರಬಾರದೆಂದು ನಿರೂಪ ಹೊರಡಿಸಿದ. ಅಂತೆಯೇ ಎಷ್ಟೋ ಪ್ರಾಚೀನ ಗ್ರಂಥಗಳು ನಾಶಗೊಂಡವು. ಇವನ್ನು ಒಪ್ಪಿಸಲು ಹಿಂಜರಿದವರು ಮರಣದಂಡನೆಗೆ ಗುರಿಯಾದರು. ನಾನೂರು ವಿದ್ವಾಂಸರು ಜೀವಸಹಿತ ಸಮಾಧಿಯಾದರು. ಇಷ್ಟಾದರೂ ಕನ್‌ಫ್ಯೂಷಿಯಸನ ಸಾಹಿತ್ಯ ಮಾತ್ರ ಹೇಗೋ ಉಳಿಯಿತು. ಆದರೂ ಈ ದೊರೆ ಪ್ರತಿಭಾವಂತ, ಸಮರ್ಥ, ಉತ್ತರದಿಂದ ಆಗಾಗ್ಗೆ ದಂಡೆತ್ತಿ ಬರುತ್ತಿದ್ದ ಹೂಣರನ್ನು ಹೊಡೆದಟ್ಟುತ್ತಿದ್ದ. ಹೊರಗಿನ ಶತ್ರುಗಳ ದಾಳಿಯನ್ನು ತಡೆಯುವ ಉದ್ದೇಶದಿಂದ ಸುಮಾರು 2410 ಕಿ.ಮೀ. ಉದ್ದದ ಮಹಾಗೋಡೆಯನ್ನು ಜೀತದ ಆಳುಗಳಿಂದ ನಿರ್ಮಿಸಿದವನು ಇವನೇ (ನೋಡಿ– ಚೀನದ–ಮಹಾಗೋಡೆ) ಚೀನದ ಮಹಾಗೋಡೆ ಎಂದು ಇದು (ಗ್ರೇಟ್ ವಾಲ್ ಆಫ್ ಚೈನ) ಪ್ರಸಿದ್ಧವಾಗಿದೆ. ಇವನು ವಿರೋಧಿಗಳನ್ನಡಗಿಸಿ ಎಲ್ಲ ಪ್ರಾಂತ್ಯಗಳನ್ನೂ ತನ್ನ ಅಧೀನಕ್ಕೊಳಪಡಿಸಿಕೊಂಡ. ಇವನ ದಕ್ಷತೆ ಮತ್ತು ಒಳ್ಳೆಯ ಆಡಳಿತವ್ಯವಸ್ಥೆಯಿಂದ ದೇಶದಲ್ಲಿ ಏಕತೆ ಬೆಳೆಯಿತು. ಇವನು ದೇಶವನ್ನು 36 ಆಡಳಿತವಿಭಾಗಗಳನ್ನಾಗಿ ವಿಂಗಡಿಸಿ, ಆಡಳಿತ ಸುಗಮವಾಗಿ ನಡೆಯುವಂತೆ ಮಾಡಿದ. ಏಕರೀತಿಯ ತೂಕ ಮತ್ತು ಅಳತೆಗಳು ಜಾರಿಗೆ ಬಂದವು. ಚೀನದಲ್ಲಿ ಹಲವು ಹೆದ್ದಾರಿಗಳು ನಿರ್ಮಾಣವಾದವು. ಈತ ಪ್ರಶ.ಪೂ. 210ರಲ್ಲಿ ಮರಣ ಹೊಂದಿದ. ಕೂಡಲೇ ದೇಶದಲ್ಲಿ ಅನಾಯಕತೆ ತಲೆದೋರಿತು.

ಚಕ್ರವರ್ತಿ ಯೂ : ಷಿಯಾ ರಾಜವಂಶದ ಪ್ರಥಮ ದೊರೆಯಾಗಿ ಚೀನದಲ್ಲಿ ರಾಜವಂಶ ಪದ್ಧತಿಯನ್ನು ಜಾರಿಗೆ ತಂದವ ಈತನೆಂದು ಪ್ರತೀತಿ (ಪ್ರಶ.ಪೂ. 23ನೆಯ ಶತಮಾನ)

**ಹಾನ್ :** ಪ್ರಶ.ಪೂ. 202 ಪ್ರಶ. 221 ಎಂಟು ವರ್ಷಗಳ ತರುವಾಯ ಹಾನ್ ಎಂಬ ವಂಶದ ಆಳ್ವಿಕೆ ಆರಂಭವಾಯಿತು. ಚಕ್ರವರ್ತಿ ಷಿಯಾವೋ ವೂ ಟೀ ಪ್ರಶ.ಪೂ. 141 ರಿಂದ ಪ್ರಶ.ಪೂ. 87ರ ವರೆಗೆ ಆಳಿದ ಇವನ ಅಧಿಕಾರ ಪಶ್ಚಿಮದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೂ ವ್ಯಾಪಿಸಿತ್ತು. ಈ ಕಾಲದಲ್ಲೇ ಪೂರ್ವ ಪಶ್ಚಿಮಗಳ ನಡುವೆ ವ್ಯಾಪಾರ ಆರಂಭವಾದ್ದು. ಉತ್ತರದಿಂದ ಬಂದು ಪದೇ ಪದೇ ಪೀಡಿಸುತ್ತಿದ್ದ ಟಾರ್ಟರರನ್ನು ಇವನು ಸೋಲಿಸಿ ಓಡಿಸಿದ. ಪ್ರಬಲರಾಗಿದ್ದ ಸಾಮಂತ ರಾಜರನ್ನೂ ಪ್ರಾಂತ್ಯಾಧಿಕಾರಿಗಳನ್ನೂ ದಂಡಿಸಿ ತನ್ನ ಅಧಿಕಾರಕ್ಕೊಳಪಡುವಂತೆ ಮಾಡಿದ. ದೇಶದ ಎಲ್ಲ ಭಾಗಗಳಲ್ಲೂ ಸುವ್ಯವಸ್ಥಿತ ಆಡಳಿತ ಏರ್ಪಡಿಸಿದ. ಲಂಚ, ಸ್ವಜನಪಕ್ಷಪಾತ, ಮುಂತಾದ ದುರ್ವ್ಯಾಪಾರಗಳನ್ನು ನಿಲ್ಲಿಸಿ, ಯೋಗ್ಯರನ್ನು ಪುರಸ್ಕರಿಸಿ, ಅವರಿಗೆ ಅಧಿಕಾರ ವಹಿಸಿದ್ದು ಇವನ ಕೆಲವು ಒಳ್ಳೆಯ ಕ್ರಮಗಳು. ವ್ಯವಸಾಯ, ಕೈಗಾರಿಕೆ, ವ್ಯಾಪಾರ ಇವು ಬೆಳೆದುವು. ಹಿಂದೆಂದೂ ಇಲ್ಲದಿದ್ದಂಥ ಒಗ್ಗಟ್ಟು ಇವನ ಕಾಲದಲ್ಲಿ ಉಂಟಾಯಿತು. ರೋಮ್‌ನೊಂದಿಗೆ ವ್ಯಾಪಾರ ಸಂಪರ್ಕ ಬೆಳೆದದ್ದು ಇವನ ಆಳ್ವಿಕೆಯಲ್ಲೇ. ಒಟ್ಟಿನಲ್ಲಿ ಇವನ ಆಳ್ವಿಕೆಯಲ್ಲಿ ಜನರು ನೆಮ್ಮದಿಯಿಂದಿದ್ದರು. ಹಾನ್ ವಂಶದಲ್ಲಿ ಚೀನೀ ಪ್ರಭಾವ ಪರ್ಷಿಯ ಮತ್ತು ಹಿಂದೂಸ್ತಾನದವರೆಗೆ ಹಬ್ಬಿತೆಂದು ತಿಳಿದುಬರುತ್ತದೆ. ಷಿಯಾವೋ ವೂ ಟೀ ತರವಾಯ ಪಟ್ಟಕ್ಕೇರಿದ ವಾಂಗ್ ಮಾಂಗ್ ಇತ್ಯಾದಿ ಅರಸರು ಅವನ ಆಡಳಿತದ ಮಾದರಿಯನ್ನೇ ಮುಂದುವರಿಸಿಕೊಂಡು ಬಂದರಲ್ಲದೆ, ಅದನ್ನು ಇನ್ನೂ ಉತ್ತಮಗೊಳಿಸಲು ಯತ್ನಿಸಿದರು, ದೇಶದ ಸಂಪತ್ತಿಗೆ ಎಲ್ಲರೂ ಸಮಭಾಗಿಗಳಾದ್ದರಿಂದ ಬಡತನವಿರುವುದು ಅನ್ಯಾಯ ಎಂಬ ನೀತಿಯ ಅನುಸಾರ ರಾಜ್ಯವ್ಯವಸ್ಥೆಯನ್ನು ರೂಪಿಸಿದರು. ಪ್ರಾಚೀನ ಕಾಲದಲ್ಲಿ ಹೀಗೆ ಸಮತಾವಾದ ತತ್ತ್ವವನ್ನು ಗ್ರಹಿಸಿ ಸುವ್ಯವಸ್ಥಿತ ರೀತಿಯಲ್ಲಿ ಆಚರಣೆಗೆ ತಂದು ಇಡೀ ಜಗತ್ತಿಗೆ ಮಾರ್ಗದರ್ಶಿಯಾದ ದೇಶ ಚೀನ. ಈ ಕಾಲದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿದ್ದ ರೋಮ್ ಚಕ್ರಾಧಿಪತ್ಯಕ್ಕಿಂತ ಚೀನದ ಸ್ಥಿತಿ ಉತ್ತಮವಾಗಿತ್ತೆಂದು ಗೊತ್ತಾಗುತ್ತದೆ. ರೋಮ್ ಮುಂತಾದ ದೇಶಗಳೊಂದಿಗೆ ನಡೆಯುತ್ತಿದ್ದ ರೇಷ್ಮೆ ವ್ಯಾಪಾರದಿಂದ ಹೊರಗಿನ ದೇಶಗಳೊಂದಿಗೆ ಸಂಪರ್ಕ ಅಧಿಕಗೊಂಡಿತು.

ಭಾರತದ ವಾಯವ್ಯದಲ್ಲಿ ರಾಜ್ಯವಾಳುತ್ತಿದ್ದ ಕುಶಾನ ಚಕ್ರಾಧಿಪತ್ಯದೊಂದಿಗೆ ಹಾನ್ ವಂಶ ಮೈತ್ರಿಯಿಂದಿತ್ತು. ಬೌದ್ಧಧರ್ಮ ಚೀನದಲ್ಲಿ ಹರಡಲು ಅವಕಾಶವಾದ್ದು ಈ ಮೈತ್ರಿಯಿಂದಾಗಿ. ಅನೇಕ ದೊರೆಗಳು ಬೌದ್ಧಧರ್ಮವನ್ನಪ್ಪಿದರು. ಚೀನೀ ಯಾತ್ರಿಕರು ಭಾರತಕ್ಕೆ ಹೋಗಿ ಬಂದರು. ಇವರಲ್ಲಿ ಪ್ರಸಿದ್ಧನಾದವನು ಫಾ ಷಿಯೆನ್. ಪ್ರಶ. ಒಂದನೆಯ ಶತಮಾನದಲ್ಲಿ ಕಾಗದದ ಉಪಜ್ಞೆಯಾಯಿತು. ಗ್ರಂಥ ಪ್ರಕಟನೆಗೆ ಇದರಿಂದ ಅನುಕೂಲವಾಯಿತು. ಪ್ರಶ. 100ರಲ್ಲಿ ಷೂ ಯೋ ವೆನ್ ಎಂಬ ನಿಘಂಟು ಪ್ರಕಟವಾಯಿತು. ಜಗತ್ತಿನಲ್ಲಿ ಇದೇ ಅತ್ಯಂತ ಪ್ರಾಚೀನ ನಿಘಂಟು. ಚೀನದ ಇತಿಹಾಸ ರಚನೆಯ ಪ್ರಥಮ ಪ್ರಯತ್ನ ನಡೆದದ್ದು ಈ ಕಾಲದಲ್ಲಿ, ಇದನ್ನು ರಚಿಸಿದವನು ನುಸ್ಸುಮ ಚಿನ್. ಇದರಲ್ಲಿ ಪುರಾತನ ಚೀನಕ್ಕೆ ಸಂಬಂಧಿಸಿದ ಅನೇಕ ವಿಚಾರಗಳಿವೆ. ವಿಜ್ಞಾನ ಕೂಡ ಬೆಳೆದದ್ದು ಈ ಕಾಲದಲ್ಲೇ. ಗ್ರಹಣಗಳನ್ನು ಕುರಿತಂತೆ ಜನರಲ್ಲಿ ನೆಲೆಸಿದ್ದ ತಪ್ಪು ಭಾವನೆಗಳನ್ನು ದೂರ ಮಾಡಿ, ಸರಿಯಾದ ಪರಿಕಲ್ಪನೆಯನ್ನುಂಟುಮಾಡಲಾಯಿತು. ಸರಾಸರಿ 180 ದಿನಗಳಿಗೊಮ್ಮೆ ಒಂದು ಚಂದ್ರಗ್ರಹಣವಾಗುತ್ತದೆ, 41–42 ತಿಂಗಳಿಗೊಮ್ಮೆ ಸೂರ್ಯಗ್ರಹಣವಾಗುತ್ತದೆ. ಇವು ಕ್ರಮವಾಗಿ ಜರುಗುವ ಘಟನೆಗಳು. ರಾಜಕೀಯ ಕರ್ಮಸಂಯೋಗದಿಂದ ಸಂಭವಿಸತಕ್ಕವಲ್ಲ–ಎಂದು ವಾಂಗ್ ಚುಂಗ್(27–100) ಹೇಳಿದ.

ದೊರೆ ಫುಷಿ (ಪ್ರಶ.ಪೂ. 3ನೆಯ ಸಹಸ್ರಮಾನದ ಒಬ್ಬ ಪುರಾಣ ಪುರುಷ)

ಹೀಗೆ ಸಕಲಕ್ಷೇತ್ರಗಳಲ್ಲೂ ಖ್ಯಾತಿ ಗಳಿಸಿದ್ದ ಹಾನ್ ವಂಶದ ಆಳ್ವಿಕೆಯೂ ಖಿಲವಾಯಿತು. ಈ ವಂಶದ ಕೊನೆಯ ಅರಸ 221ರಲ್ಲಿ ಮೂಲೆಗೊತ್ತಲ್ಪಟ್ಟ. ಇಲ್ಲಿಯ ಮುಂದೆ ಪರಿಸ್ಥಿತಿ ಪೂರ್ಣವಾಗಿ ಮಾರ್ಪಟ್ಟಿತು. ಒಳಯುದ್ಧಗಳು ನಡೆದುವು. ದೇಶ ಛಿದ್ರವಾಯಿತು. ಬೇರೆ ಬೇರೆ ರಾಜ್ಯಗಳು ಹುಟ್ಟಿಕೊಂಡು ಆಳಿ ಅಳಿದವು. ಹೂಣರೂ ತುರುಕರೂ ಪದೇಪದೇ ದಾಳಿ ನಡೆಸುತ್ತಿದ್ದರು. ಚೀನದ ಜನಸಂಖ್ಯೆಯೂ ಉತ್ಪಾದನೆಯೂ ಹೆಚ್ಚಿದುವು. ದೇಶ ಹೆಚ್ಚು ಸುಸಂಸ್ಕೃತವಾಯಿತು. ಚೀನೀ ಬೌದ್ಧಧರ್ಮ ವಿಶೇಷವಾಗಿ ಬಳಕೆಗೆ ಬಂತು. ಭಾರತದೊಡನೆ ಸಂಪರ್ಕ ಬೆಳೆಯುತ್ತಿತ್ತು. ಚೀನದ ಗಣಿತ, ಔಷಧಿ, ಸಂಗೀತ, ಶಿಲ್ಪ, ಕಲೆ ಮುಂತಾದವು ಬೆಳೆದುವು.

**ಟಾಂಗ್ ವಂಶ :** 618–906. ಅಂತಃಕಲಹಗಳು ದೀರ್ಘಕಾಲ ಮುಂದುವರಿಯಲಿಲ್ಲ. ಟಾಂಗ್ ವಂಶ ಪ್ರಬಲವಾಯಿತು. ಇದು ಚೀನದ ಮಧ್ಯಕಾಲದ ಸುವರ್ಣದಶೆಯ ಅವಧಿಯೆನ್ನಬಹುದು. ಇಂದಿಗೂ ಈ ಅವಧಿಯ ಬಗ್ಗೆ ಚೀನೀಯರಲ್ಲಿ ಅಭಿಮಾನವಿದೆ. ತಾವು ಟಾಂಗ್ ಜನಾಂಗದವರು ಎಂದು ಅನೇಕ ಚೀನೀಯರು ಇಂದಿಗೂ ಹೆಮ್ಮೆಯಿಂದ ಹೇಳಿಕೊಳ್ಳುವುದುಂಟು.

ಟಾಂಗ್ ವಂಶದ ಮೊದಲನೆಯ ಅರಸ ಟೈ ಟ್ಸುಂಗ್. ಇವನು ಚೀನದ ಒಬ್ಬ ಘನವಂತ ಅರಸ. ಶತ್ರುಗಳನ್ನು ಓಡಿಸಿ ಮಧ್ಯ ಏಷ್ಯದ ತರಿಮ್ ಪ್ರಸ್ಥಭೂಮಿಯಲ್ಲಿ ಚೀನದ ಸ್ಥಾನಮಾನಗಳನ್ನು ಬಲಪಡಿಸಿದ. ಅನೇಕ ಆಡಳಿತ ಸುಧಾರಣೆಗಳಾದುವು.

ದೊಡ್ಡದೊಡ್ಡ ಭೂಸ್ವಾಮ್ಯಗಳು ಏರ್ಪಡದಂತೆ ತಡೆಗಟ್ಟಲು ಇವನು ಶಾಸನ ಮಾಡಿದ. ರೈತರು ನಾಡಿನ ಪ್ರಗತಿಗಾಗಿ ಕಂದಾಯವನ್ನೂ ದೇಹಶ್ರಮವನ್ನೂ ಸಲ್ಲಿಸುವಂತೆ ಆಜ್ಞೆ ಹೊರಡಿಸಿದ. ಜನ ನೆಮ್ಮದಿಯಿಂದ ಬಾಳ್ವೆ ನಡೆಸುವಂತಾಯಿತು. ಸಾರಿಗೆ ಸಂಪರ್ಕಕ್ಕಾಗಿ ನಾಲೆಗಳನ್ನು ನಿರ್ಮಿಸಿದುದರಿಂದ ಹೊರದೇಶಗಳೊಂದಿಗೆ ವ್ಯಾಪಾರ ಸಂಬಂಧ ಹೆಚ್ಚಿತು. ಜಪಾನಿನೊಡನೆ ವ್ಯಾಪಾರ ಅಭಿವೃದ್ಧಿ ಹೊಂದಿತು. ಎಂಟನೆಯ ಶತಮಾನದ ಕೊನೆಯಲ್ಲಿ ಯೆಹೂದಿ, ಅರಬ್ಬಿ, ಕ್ರೈಸ್ತ ಮುಂತಾದ ಎಂಟು ಸಾವಿರ ಕುಟುಂಬಗಳು ರಾಜಧಾನಿಯೊಂದರಲ್ಲೇ ನೆಲೆಸಿದ್ದವು. ರಾಜಧಾನಿಯ ಜನಸಂಖ್ಯೆ ಅಂದು ಹತ್ತು ಲಕ್ಷದಷ್ಟಿತ್ತು.

ಚಕ್ರವರ್ತಿ ಟೈ ಡ್ಜುಂಗ್

8ನೆಯ ಶತಮಾನ ಚೀನದ ಇತಿಹಾಸದಲ್ಲಿ ಕಾವ್ಯ ಯುಗವಾಗಿತ್ತೆಂದು ಹೇಳಲಾಗಿದೆ. ಅರಸರ ಆಸ್ಥಾನದಲ್ಲಿ ಲೀ ಬಾ ಮತ್ತು ಡೂ ಫೂ ಎಂಬ ಇಬ್ಬರು ಅಸಾಧಾರಣ ಕವಿಗಳಿದ್ದರು. ಲೀ ಬಾ ಜನತಾ ಕವಿಯಾಗಿದ್ದ. ಆ ಕಾಲದಲ್ಲಿ ವಿದ್ವನ್ಮಣಿಗಳಿಗೂ ಕಲೆಗಳಿಗೂ ಪ್ರೋತ್ಸಾಹ ಅಪಾರವಾಗಿ ದೊರೆಯಿತು. ಹಿಂದಿನ ಕಾಲದ ಇತಿಹಾಸವನ್ನು ರಚಿಸಲಿಕ್ಕೆ ಅನೇಕ ಪಂಡಿತರು ನೇಮಕವಾಗಿದ್ದರು. ಮುದ್ರಣಕಲೆ ಕಂಡುಹಿಡಿಯಲ್ಪಟ್ಟಿದ್ದು ಆಗಲೇ. ಟಾಂಗ್ ವಂಶದ ಆಳ್ವಿಕೆಯಲ್ಲಿ ನೂತನ ಚೀನದ ಉದಯವಾಯಿತು. ಆದರೆ ಪರಕೀಯರ ದಾಳಿ, ದೇಶದೊಳಗಿನ ಭ್ರಷ್ಟಾಚಾರ, ಜನರ ಅತೃಪ್ತಿ, ಅಸಂತುಷ್ಟಿ, ಪ್ರಾಂತ್ಯಾಧಿಪತಿಗಳ ಪ್ರಾಬಲ್ಯ-ಇವುಗಳಿಂದ ಟಾಂಗ್ ವಂಶದ ವರ್ಚಸ್ಸು ಕುಂದಿತು. 906ರಲ್ಲಿ ಅದು ಕೊನೆಗೊಂಡಿತು.

**ಸುಂಗ್ ವಂಶ** : 960–1279. ಟಾಂಗ್ ವಂಶ ಕೊನೆಗೊಂಡಾಗ ದೇಶಕ್ಕೆ ಮತ್ತೆ ಅನಾಯಕಸ್ಥಿತಿ ಪ್ರಾಪ್ತವಾಯಿತು. 907ರಿಂದ 960ವರೆಗೆ ಅನೇಕ ರಾಜವಂಶಗಳು ಆಳಿದುವು. ಕ್ರಮೇಣ ಪ್ರಬಲವಾದದ್ದು ಸುಂಗ್ ವಂಶ. ವಿವಿಧ ನೀತಿಗಳುಳ್ಳ ರಾಜಕೀಯ ಪಕ್ಷಗಳನ್ನುಳ್ಳ ಆಧುನಿಕ ಸರ್ಕಾರ ಇದರದು. ಆದರೆ ಇದೂ ಹಲವಾರು ಎಡರು ತೊಡರುಗಳನ್ನು ಎದುರಿಸಬೇಕಾಯಿತು. ಉತ್ತರದ ಗಡಿಯಲ್ಲಿ ಆಗಾಗ್ಗೆ ದಾಳಿ ನಡೆಸುತ್ತಿದ್ದ ಟಾರ್ಟರುಗಳ ಉಪದ್ರವವನ್ನು ನಿವಾರಿಸಿಕೊಳ್ಳಲು ಈ ವಂಶದ ಅರಸರು ಅವರಿಗೆ ವರ್ಷೇವರ್ಷೇ ಕಪ್ಪ ಕೊಡಲು ಒಪ್ಪಿಕೊಂಡಿದ್ದು ಅಹಿತವಾಯಿತು. ಇಷ್ಟರಲ್ಲಿ ಮಂಚೂರಿಯದ ಈಶಾನ್ಯ ಗಡಿಯಿಂದ ಇನ್ನೊಂದು ಶತ್ರು ಗುಂಪು ತಲೆಯೆತ್ತಿತು. ಟಾರ್ಟರುಗಳನ್ನು ಅಡಗಿಸಲು ಈ ಗುಂಪು ಅರಸನಿಗೆ ಸಹಾಯ ಮಾಡಿ ಕಟ್ಟಕಡೆಗೆ 1126ರಲ್ಲಿ ಸುಂಗ್ ರಾಜಧಾನಿಯನ್ನೇ ಆಕ್ರಮಿಸಲು ಯತ್ನಿಸಿತು. ಸುಂಗರಿಗೆ ಯಾಂಗ್‍ಟ್ಸೀ ಕಣಿವೆಯ ಉತ್ತರ ಪ್ರದೇಶದ ಮೇಲೆ ಹತೋಟಿ ತಪ್ಪಿತು. ಇದೆಲ್ಲದರ ಪರಿಣಾಮವಾಗಿ ಮುಂದಿನ ಒಂದು ಶತಮಾನ ಕಾಲ ಚೀನದಲ್ಲಿ ಎರಡು ಚಕ್ರಾಧಿಪತ್ಯಗಳು ಏರ್ಪಟ್ಟವು. ರಾಜಕೀಯ ದೃಷ್ಟಿಯಿಂದ ಸುಂಗ್ ಕಾಲ ದುರಂತದ ಕಾಲ. ಆದರೆ ಇತರ ವಿಚಾರಗಳಲ್ಲಿ ಅದು ತನ್ನ ವೈಶಿಷ್ಟ್ಯ ಉಳಿಸಿಕೊಂಡಿತ್ತು. ಕಲೆ ಬೆಳೆಯಿತು. ಈ ಕಾಲದ ಪಿಂಗಾಣಿ ಕಲೆಯಂತೂ ಇಂದಿಗೂ ಶ್ರೇಷ್ಠವೆನಿಸಿದೆ.

ಸುಂಗ್ ವಂಶ ಕೊನೆಗೊಂಡ ಮೇಲೆ ಮಂಗೋಲರು ಪ್ರಬಲರಾದರು. 12ನೆಯ ಶತಮಾನದಲ್ಲಿ ಜೆಂಘಿಸ್‍ಖಾನ್ ಎಂಬುವನು ಮಂಗೋಲರನ್ನೆಲ್ಲ ಒಟ್ಟುಗೂಡಿಸಿ ಇಡೀ ಮಂಗೋಲಿಯದ ಮೇಲೆ ತನ್ನ ಪ್ರಭಾವವನ್ನು ಗಳಿಸಿಕೊಂಡ. ಕ್ರಮೇಣ ಇವನ ದೃಷ್ಟಿ ದಕ್ಷಿಣದತ್ತ ಹೊರಳಿತು. ಮೊದಲು ಉತ್ತರದಲ್ಲಿ ಜುರ್‍ಚೆನ್ನರು ಸ್ಥಾಪಿಸಿದ್ದ ರಾಜ್ಯದ ಮೇಲೆ ತನ್ನ ಸೈನಿಕರನ್ನು ನುಗ್ಗಿಸಿದ. 1215ರಲ್ಲಿ ರಾಜಧಾನಿ ಪೀಕಿಂಗಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡು ಅಲ್ಲಿಯ ಜನರನ್ನು ಕೊಲೆಮಾಡಿದ. 1234ರ ವೇಳೆಗೆ ಈ ರಾಜ್ಯದ ಹೆಸರೇ ಇಲ್ಲವಾಯಿತು. 1279ರಲ್ಲಿ ಸುಂಗ್ ರಾಜ್ಯದ ಕೊನೆಯ ಅಧಿಪತಿಯನ್ನು ನಾಮಾವಶೇಷಮಾಡಿದ. ಯುಆನ್ ಎಂಬ ಮಂಗೋಲ್ ವಂಶದ ಅರಸರು ಚೀನದಲ್ಲಿ ಸಂಪೂರ್ಣ ಅಧಿಪತಿಗಳಾದರು. ಮಂಗೋಲ್ ಆಳ್ವಿಕೆ ಆರಂಭವಾಯಿತು. ಚೀನ ಈ ತೆರನಾಗಿ ಪರಕೀಯರ ಆಳ್ವಿಕೆಗೆ ಒಳಪಟ್ಟಿದ್ದು ಇದೇ ಪ್ರಥಮ.

**ಯುಆನ್ ವಂಶ** : 1280–1368. ಯುಆನ್ ವಂಶದ ಆಳ್ವಿಕೆ ಚೀನದಲ್ಲಿ ಮಂಗೋಲ್ ದೊರೆ ಜೆಂಘಿಸ್‍ಖಾನ್‍ನಿಂದ ಆರಂಭವಾಯಿತು. ಈ ವಂಶದ ಅರಸರ ಪೈಕಿ ಕುಬ್ಲೈಖಾನ್ ಅತ್ಯಂತ ಪ್ರಸಿದ್ಧ. ಜೆಂಘಿಸ್‍ಖಾನ್ ಉತ್ತರ ಚೀನವನ್ನು ವಶಪಡಿಸಿಕೊಂಡು ಪೀಕಿಂಗಿನಿಂದ ಆಳತೊಡಗಿದ. ಅಂದು ದೇಶದ ಜನರಲ್ಲಿ ಮಂಗೋಲರು ಅಲ್ಪಸಂಖ್ಯಾತರಾಗಿದ್ದರು. ಆದ್ದರಿಂದ ಅವರ ಸ್ಥಾನಮಾನಗಳು ಪ್ರಮುಖವಾಗಿರುವಂತೆ ಇವನು ಕಾನೂನುಗಳನ್ನು ಜಾರಿಗೆ ತಂದ. ಆದರೂ ಚೀನೀಯರು ತಲೆ ಎತ್ತುವುದನ್ನು ತಡೆಗಟ್ಟಲು ಸಾಧ್ಯವಿಲ್ಲವಾಯಿತು. ಬುದ್ಧಿವಂತನಾದ ಖಾನ್ ದೂರದರ್ಶಿತ್ವ ತೋರಿ, ಚೀನೀಯರ ಶ್ರೇಷ್ಠ ಸಂಸ್ಕೃತಿಯನ್ನು ಅರ್ಥಮಾಡಿಕೊಂಡು ಸಹನೆ ವಿವೇಕಗಳಿಂದ ಆಳ್ವಿಕೆ ನಡೆಸುತ್ತಿದ್ದ. ಆದ್ದರಿಂದ ಅನುಕೂಲಸ್ಥಿತಿ ನೆಲೆಸಿತು. ದೇಶದಲ್ಲಿ ಅನೇಕ ಜನೋಪಯೋಗಿ ಕಾರ್ಯಗಳು ಆದುವು. ಹೆದ್ದಾರಿಗಳೂ ಕಾಲುವೆಗಳೂ ನಿರ್ಮಾಣವಾದುವು. ದೇಶ ಅಭಾವಕ್ಕೆ ತುತ್ತಾಗದಂತೆ ಹೆಚ್ಚಿನ ಆಹಾರಧಾನ್ಯಗಳನ್ನು ಶೇಖರಿಸಿ ಇಡಲು ಅಲ್ಲಲ್ಲಿ ಕಣಜಗಳನ್ನು ಕಟ್ಟಿಸಿದನಲ್ಲದೆ, ದೇಶದ ಪಂಚಾಂಗವನ್ನು ಬದಲಾಯಿಸಿದ ರಾಜಧಾನಿ ಪೀಕಿಂಗನ್ನು ಅಭಿವೃದ್ಧಿಗೊಳಿಸಿದ ಖಾನನ ಆಳ್ವಿಕೆಯ ಕಾಲದಲ್ಲೇ ಮಾರ್ಕೊಪೋಲೋ ಎಂಬ ಪ್ರವಾಸಿ ಚೀನಕ್ಕೆ ಭೇಟಿಕೊಟ್ಟು, ಅಲ್ಲಿ ತಾನು ಕಂಡ ಒಳ್ಳೆಯ ಮಟ್ಟದ ನಾಗರಿಕತೆಯನ್ನು ಜಗತ್ತಿಗೆ ಪರಿಚಯಮಾಡಿಕೊಟ್ಟ. ಅವನು 1275ರಲ್ಲಿ ಬಂದು ತಂದೆ ಮತ್ತು ಚಿಕ್ಕಪ್ಪನೊಡನೆ 17 ವರ್ಷಗಳವರೆಗೆ ಅಲ್ಲಿದ್ದ. ಕುಬ್ಲೈ ಖಾನನ ತರುವಾಯ ಏಳು ಯುಆನ್ ಅರಸರು ರಾಜ್ಯವಾಳಿದರೂ ಯಾರೂ ಅವನ ಮಟ್ಟಕ್ಕೇರಲಿಲ್ಲ. ಈ ಅರಸರು ಸ್ವಕಾರ್ಯಸಾಧಕರಾದರೇ ವಿನಾ ತಾವು ನುಡಿದಂತೆ ನಡೆದು ತೋರಿಸಲಿಲ್ಲ.

**ಕುಬ್ಲೈಖಾನನ ಅನಂತರ ಮಿಂಗ್ ವಂಶ 1368–1644** : ಚೀನೀಯರಲ್ಲಿ ಅಸಮಾಧಾನ ಉಂಟಾಯಿತು. ಜನಸಾಮಾನ್ಯರ ಕಷ್ಟ ಹೆಚ್ಚಿತು. ರೈತರ ಬಡತನ ಹೆಚ್ಚಿತು. ಕಡೆಗೆ ದೇಶದಲ್ಲಿ ದಂಗೆಯೆದ್ದು ಒಬ್ಬ ಮಾಜಿ ಬೌದ್ಧ ಸಂನ್ಯಾಸಿ ನಾಯಕನಾದ. ಇವನ ಹೆಸರು ಹಂಗ್‍ವು. ಇವನ ಸೇನೆ 1368ರಲ್ಲಿ ಪೀಕಿಂಗನ್ನು ಮುತ್ತಿ ವಶಪಡಿಸಿಕೊಂಡು ಮಂಗೋಲರ ಆಡಳಿತವನ್ನು ಅಂತ್ಯಗೊಳಿಸಿತು.

ಮಂಗೋಲರ ಆಳ್ವಿಕೆಯ ಗುರುತೇ ಇರಬಾರದೆಂದು ಈತ ಯೋಚಿಸಿ ಅದೆಲ್ಲವನ್ನೂ ಅಳಿಸಿ ಮತ್ತೆ ಚೀನೀ ಸಂಪ್ರದಾಯವನ್ನು ಅಸ್ತಿತ್ವಕ್ಕೆ ತಂದ. ಆದರೆ ಈ ಸಂಪ್ರದಾಯಗಳು ಕೇವಲ ಕಂದಾಚಾರದವಾಗಿದ್ದರಿಂದ ಕಡೆಗೆ ಇವನ್ನು ಕೈಬಿಡಲಾಯಿತು. ಶಿಕ್ಷಣಪದ್ಧತಿಯನ್ನೂ ನ್ಯಾಯಪದ್ಧತಿಯನ್ನೂ ಮಾರ್ಪಡಿಸಲಾಯಿತು. ಇವನ ಆಳ್ವಿಕೆಯಲ್ಲಿ ಸುಖ, ಸಮೃದ್ಧಿ ಉಂಟಾದುವು. ಇವನ ತರುವಾಯ ಬಂದವರು ಅಷ್ಟಾಗಿ ಸಮರ್ಥರಲ್ಲ. ಆದ್ದರಿಂದ ಪ್ರಗತಿಯಾಗಲಿಲ್ಲ. ಕಲೆಗಳನ್ನೂ ಸಾರ್ವಜನಿಕ ಪ್ರಯೋಜನಕಾರ್ಯಗಳನ್ನೂ ಇವರು ಪ್ರೋತ್ಸಾಹಿಸಿದರು.

ಮಿಂಗ್ ವಂಶದ ಆಳ್ವಿಕೆಯ ಕಾಲದಲ್ಲಿ ವಿದೇಶಗಳೊಡನೆ ಸಂಪರ್ಕ ಬೆಳೆಯಿತು. ಪೋರ್ಚುಗಲ್ ಚೀನದೊಡನೆ ವ್ಯಾಪಾರ ಸಂಬಂಧ ಆರಂಭಿಸಿತು. ಮುಂದೆ ಯೂರೋಪಿನ ರಾಷ್ಟ್ರಗಳು ಒಂದೊಂದಾಗಿ ಚೀನಕ್ಕೆ ಬಂದು ವ್ಯಾಪಾರ ಸಂಬಂಧ ಬೆಳೆಸಿದುವು. ಆದರೆ ಅವು ನಡೆದುಕೊಂಡ ಬಗೆ ಸಮರ್ಪಕವಾಗಿರಲಿಲ್ಲ. ಸ್ಥಳೀಯ ಆಚಾರ ವಿಚಾರಗಳನ್ನು ಅವು ಉಪೇಕ್ಷಿಸಿದುವು. ದುರಹಂಕಾರದಿಂದಲೂ ಕ್ರೂರತನದಿಂದಲೂ ವರ್ತಿಸಿದುವು. ಪೋರ್ಚುಗಲ್ ಅಂತೂ ತುಂಬ ಧೂರ್ತತನದಿಂದ ನಡೆದುಕೊಂಡಿತು. ಕ್ರೈಸ್ತರಲ್ಲದವರ ಬಗ್ಗೆ ದುಷ್ಟತನ ತೋರಿತು. ಅವರ ಆಸ್ತಿಪಾಸ್ತಿಗಳ ಕಡೆ ವಕ್ರ ವಕ್ರದೃಷ್ಟಿ ಬೀರಿತು. ಇದರಿಂದ ಚೀನೀಯರು ಕೋಪಗೊಂಡರು. ಪರಿಣಾಮವಾಗಿ ವಿದೇಶೀಯರು ಚೀನದಲ್ಲಿ ಕಾಲಿಡದಂತೆ ಮಾಡಿದರು. ವ್ಯಾಪಾರ ದೃಷ್ಟಿಯಿಂದ ಮಾತ್ರವೇ ಪೋರ್ಚುಗೀಸರಿಗೆ ಮಾಕಾವ್‍ನಲ್ಲಿ ಇರಲು 1557ರಲ್ಲಿ ಅನುಮತಿ ಕೊಡಲಾಯಿತು. ಆದರೆ ಅದಕ್ಕೂ ಹಲವು ನಿರ್ಬಂಧಗಳನ್ನು ವಿಧಿಸಲಾಗಿತ್ತು.

ಪೋರ್ಚುಗೀಸರ ತರುವಾಯ ಚೀನದಲ್ಲಿ ಕಾಲಿಟ್ಟವರು ಕ್ರೈಸ್ತ ಪಾದ್ರಿಗಳು. ಇವರಲ್ಲಿ ಪ್ರಮುಖನಾದವನು ಫ್ರಾನ್ಸಿಸ್ ಜೇವಿಯರ್. ಇವನು ತೀರಿಕೊಂಡ ಮೇಲೆ ಇವನ ಶಿಷ್ಯರು ರಾಜಮನೆತನದವರನ್ನೂ ಪ್ರಾಂತ್ಯಗಳಲ್ಲಿನ ಮುಖ್ಯಸ್ಥರನ್ನೂ ಮತಾಂತರಗೊಳಿಸಿದರು. ಚೀನದಲ್ಲಿ ಪ್ರಾಬಲ್ಯ ಗಳಿಸಲು ಅನಂತರ ಹೆಣಗಿದ ರಾಷ್ಟ್ರಗಳಲ್ಲಿ ಜಪಾನ್ ಕೂಡ ಮುಖ್ಯವಾಯಿತು. ಚೀನ, ಕೊರಿಯಗಳ ಆಕ್ರಮಣವೇ ಅದರ ಗುರಿ. ಮುಂದೆ ಇದಕ್ಕಾಗಿ ಜಪಾನ್ ಸನ್ನಾಹ ನಡೆಸಿತು. 16ನೆಯ ಶತಮಾನದ ಕೊನೆಯಲ್ಲಿ ಜಪಾನ್ ತನ್ನ ಸೇನೆಯನ್ನು

ಕೊರಿಯದಲ್ಲಿ ತಂದಿಳಿಸಿತು. ಈ ಸಂಬಂಧವಾಗಿ ನಡೆದ ಅನೇಕ ಕದನಗಳಲ್ಲಿ ಕೊರಿಯನರಿಗೂ ಚೀನಿಯರಿಗೂ ಪರಾಭವವಾಯಿತು. ಆದರೆ ಸಮುದ್ರದ ಓಣಿಗಳ ಮೇಲೆ ಅವರು ಹತೋಟಿಯನ್ನಿಟ್ಟುಕೊಳ್ಳದ್ದರಿಂದ ಕೊರಿಯದ ನಾವಿಕರು ಅವರ ನೌಕೆಗಳನ್ನೆಲ್ಲ ಧ್ವಂಸ ಮಾಡಿದರು. ಈ ನಿಮಿತ್ತ ಜಪಾನರು ಹಿಮ್ಮೆಟ್ಟಬೇಕಾಯಿತು.

ಆ ವೇಳೆಗೆ ಮತ್ತೊಂದು ದಾಳಿ ಸಿದ್ಧವಾಗಿತ್ತು. ಉತ್ತರದಲ್ಲಿ ಚೀನದ ಮಹಾಗೋಡೆಯನ್ನು ಭೇದಿಸಿಕೊಂಡು ಬಂದ ಮ್ಯಾಂಚುಗಳಿಗೆ ಚೀನ ಮಣಿಯಬೇಕಾಯಿತು. ಮಿಂಗರಿಗೆ ಆಪತ್ಕಾಲ ಸನ್ನಿಹಿತವಾಯಿತು. ಅದೇ ಸಮಯದಲ್ಲೇ ದೇಶದೊಳಗೆ ಕ್ರಾಂತಿ ಸಂಭವಿಸಿತು. 1644ರಲ್ಲಿ ಈ ಕ್ರಾಂತಿಯ ನಾಯಕ ಅರಸನ ಸೈನಿಕರನ್ನು ಪರಾಜಯಗೊಳಿಸಿ ಪೀಕಿಂಗನ್ನು ಸ್ವಾಧೀನಪಡಿಸಿಕೊಂಡ. ಆದರೆ ಬಲಾಢ್ಯರಾಗಿದ್ದ ಮ್ಯಾಂಚೂಗಳ ಕೈಗೆ ಸಿಕ್ಕಿ ಈ ನಾಯಕ ಹತನಾದ. ಆ ವರ್ಷವೇ ಮ್ಯಾಂಚೂ ವಂಶದ ಸ್ಥಾಪನೆಯಾಯಿತು.



**ಮಿಂಗ್ ಮತ್ತು ಚಿಂಗ್ ರಾಜವಂಶಗಳ ಅರಮನೆಗಳಲ್ಲೊಂದು : ಟೈ ಹೋ ಟೇನ್**

ಮಿಂಗ್ ವಂಶದ ಆಳ್ವಿಕೆ ಅನೇಕ ವಿಧಗಳಲ್ಲಿ ವೈಶಿಷ್ಟ್ಯಪೂರ್ಣವಾದದ್ದು. ಕಲಾಕೌಶಲ ಉಚ್ಛ್ರಾಯಸ್ಥಿತಿ ಮುಟ್ಟಿತು. ಪಿಂಗಾಣಿ ಸಾಮಾನುಗಳ ವೈಖರಿ, ಅದರ ವರ್ಣವಿನ್ಯಾಸ, ಸೊಬಗು, ಹೊಳಪು ಅನುಪಮವಾದ್ದು. ದುರ್ಭೇದ್ಯವಾಗುವಂತೆ ಪೀಕಿಂಗ್ ನಗರದ ನಿರ್ಮಾಣವಾದದ್ದು ಮಿಂಗ್ ವಂಶದ ಆಳ್ವಿಕೆಯ ಆದಿಭಾಗದಲ್ಲಿ.

ಮ್ಯಾಂಚೂ : 1644–1912 ಮ್ಯಾಂಚೂಗಳು ತಮ್ಮ ಆಳ್ವಿಕೆಯಲ್ಲಿ ಚೀನೀಯರ ಮೇಲೆ ಬಗೆಬಗೆಯ ಪ್ರಭಾವ ಉಂಟು ಮಾಡಿದರು. ಉಡಿಗೆ ತೊಡಿಗೆಯಲ್ಲಿ ಹೊಸ ಪದ್ಧತಿಯನ್ನು ಹಾಕಿಕೊಟ್ಟರು. ಈ ವಂಶದ ಅರಸರಲ್ಲಿ ಪ್ರಖ್ಯಾತನಾದವನೆಂದರೆ ಕಾಂಗ್‍ಷೀ(1661–1722). ಈತ ವಿದ್ಯಾಪರಿಣತನೂ ದಕ್ಷ ಸೇನಾನಿಯೂ ಆಗಿದ್ದ. ಇವನ ನೇತೃತ್ವದಲ್ಲಿ ಚೀನೀ ಭಾಷೆಯ ನಿಘಂಟು ಸಿದ್ಧವಾಯಿತು. ಟಿಬೆಟ್ ಚೀನಕ್ಕೆ ಸೇರುವಂತೆ ಆದದ್ದೂ ಇವನ ಕಾಲದಲ್ಲೇ. ದೇಶ ಸುಭಿಕ್ಷವಾಗಿತ್ತು. ಭಾರಿ ಭೂಕಂಪವೊಂದು ಪೀಕಿಂಗಿನಲ್ಲಿ ಸಂಭವಿಸಿ, ನಾಲ್ಕು ಲಕ್ಷ ಜನ ಸತ್ತರೆಂದು ಹೇಳಲಾಗಿದೆ.

**ವಿದೇಶೀ ಪ್ರಭಾವ** : ವಿದೇಶಗಳೊಡನೆ ಚೀನ ಸಂಪರ್ಕವನ್ನಿಟ್ಟುಕೊಂಡು ಬಂದದ್ದರಿಂದಾಗಿ ಅದು ಮುಂದೆ ಬಹಳ ಕಷ್ಟಕ್ಕೆ ಸಿಲುಕಿತೆಂದು ಇತಿಹಾಸ ಹೇಳುತ್ತದೆ. ಇಷ್ಟವಿಲ್ಲದಿದ್ದರೂ ದೇಶದ ಸ್ಥಿತಿಗತಿಗನುಸಾರವಾಗಿ ಅದು ಸಂಪರ್ಕ ಹೊಂದಬೇಕಾಯಿತು. 16ನೆಯ ಶತಮಾನದಲ್ಲಿ ರಷ್ಯದೊಡನೆ ಚೀನ ಒಂದು ಒಪ್ಪಂದಕ್ಕೆ ಬಂದಿತ್ತು. ಅದಕ್ಕೆ ವ್ಯಾಪಾರದ ರಿಯಾಯಿತಿಯನ್ನು ತೋರಿಸಿತ್ತು. ವ್ಯಾಪಾರ ದೃಷ್ಟಿಯಿಂದ ಹಲವಾರು ವಿದೇಶೀ ರಾಷ್ಟ್ರಗಳು ಚೀನವನ್ನು ಬಯಸಿದ್ದೂ ಆಗಲೇ. ಈ ರಾಷ್ಟ್ರಗಳ ಪೈಕಿ ಮುಖ್ಯವಾದ್ದು ಬ್ರಿಟನ್. ಈಸ್ಟ್ ಇಂಡಿಯ ಕಂಪನಿ ರಂಗಕ್ಕಿಳಿಯಿತು. ವ್ಯಾಪಾರ ಸಂಪರ್ಕ ಬೆಳೆಸಿಕೊಂಡಿತು. ಆದರೂ ಚೀನ ಅದರ ಮೇಲೆ ನಿರ್ಬಂಧಗಳನ್ನು ಹೇರಿತ್ತು. ವ್ಯಾಪಾರ ಹೆಚ್ಚುತ್ತ ಬಂದಂತೆಲ್ಲ ನಿರ್ಬಂಧಗಳನ್ನು ಸಡಿಲಿಸಬೇಕೆಂದು ಚೀನದ ಮೇಲೆ ಆ ಕಂಪನಿ ಒತ್ತಾಯ ತರುತ್ತಿತ್ತು. ಅದರ ಹಿಂದಿದ್ದ ರಾಜಕೀಯ ಚೀನಕ್ಕೆ ಅರ್ಥವಾಗದಿರಲಿಲ್ಲ. ಕಂಪನಿಯೂ ಸಾಮಾನ್ಯ ವರ್ತಕರಂತೆ ಎಂಬುದು ಅದರ ನಿಲುವು. ಈಸ್ಟ್ ಇಂಡಿಯ ಕಂಪನಿಯ ವ್ಯಾಪಾರದ ಏಕಸ್ವಾಮ್ಯವನ್ನು ಬ್ರಿಟಿಷ್ ಸರ್ಕಾರ ತಪ್ಪಿಸಿ ತನ್ನ ಪ್ರತಿನಿಧಿಯೊಬ್ಬನನ್ನು ಅದಕ್ಕಾಗಿ ನೇಮಕ ಮಾಡಿತು. ಈ ಪ್ರಸಂಗ ನಡೆದದ್ದು 1834ರಲ್ಲಿ. ಈ ಪ್ರಕರಣದಿಂದ ಪರಸ್ಪರ ವಿರಸವುಂಟಾಯಿತು. ಬ್ರಿಟಿಷ್ ಸರ್ಕಾರದ ಬೇಡಿಕೆಯನ್ನು ಚೀನೀ ಅರಸ ಪುರಸ್ಕರಿಸಲಿಲ್ಲ. ಅದರ ಪ್ರತಿನಿಧಿಯ ಒತ್ತಾಯಗಳಿಗೂ ಮಣಿಯಲಿಲ್ಲ. ಕಡೆಗೆ ವ್ಯಾಪಾರ ನಿಲ್ಲುವಂತಾಯಿತು.

ಪರಿಸ್ಥಿತಿ ಉತ್ಕಟವಾಯಿತು. ಇದಕ್ಕೆ ಮೂಲವಾದ್ದು ಅಫೀಮಿನ ಪ್ರಶ್ನೆ. ಪೋರ್ಚುಗೀಸರು ಅಲ್ಲಿ ಕಾಲಿಡುವುದಕ್ಕೆ ಮೊದಲೇ ಚೀನೀಯರಿಗೆ ಅಫೀಮಿನ ವಿಚಾರ ತಿಳಿದಿತ್ತು. 18–19ನೆಯ ಶತಮಾನಗಳಲ್ಲಿ ಅಫೀಮು ಸೇವನೆಯ ಚಟ ಚೀನಿಯರಲ್ಲಿ ಹೆಚ್ಚಾಗಿತ್ತು. ಇಂಗ್ಲಿಷರು ಅಫೀಮನ್ನು ಚೀನಕ್ಕೆ ಭಾರತದಿಂದ ಆಮದು ಮಾಡಿಕೊಳ್ಳುತ್ತಿದ್ದರು. ಇದಕ್ಕೆ ಅಲ್ಲಿದ್ದ ಬೇಡಿಕೆ ಬಹಳ. ಹದಿನೈದು ವರ್ಷಗಳಲ್ಲಿ ಇದರ ಆಮದು ನಾಲ್ಕು ಪಟ್ಟು ಹೆಚ್ಚಿತು. ಇದರ ಆಮದನ್ನೂ ಉಪಯೋಗವನ್ನೂ ನಿಷೇಧಿಸಿ ಅರಸ ಆಜ್ಞೆಮಾಡಿದರೂ ಪ್ರಯೋಜನವಾಗಲಿಲ್ಲ. 1800ರಲ್ಲಿ ಅಫೀಮಿನ ವ್ಯಾಪಾರವನ್ನು ಕಠಿಣವಾಗಿ ನಿಷೇಧಿಸಲಾಯಿತು. ಆದರೂ ವ್ಯಾಪಾರ ಚೆನ್ನಾಗಿಯೇ ಸಾಗುತ್ತಿತ್ತು. ಚೀನೀ ಅಧಿಕಾರಿಗಳೇ ಇದಕ್ಕೆ ಬೆಂಬಲವಾಗಿದ್ದರು. 1833ರಲ್ಲಿ ಅರಸ ತನ್ನ ಅಧಿಕಾರಿಯೊಬ್ಬನನ್ನು ಕ್ಯಾಂಟನ್ನಿಗೆ ಕಳುಹಿಸಿ ಅಫೀಮು ನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಆಜ್ಞೆಮಾಡಿದ. ಈ ಅಧಿಕಾರಿಯ ಪ್ರಯತ್ನ ವ್ಯರ್ಥವಾಯಿತು. ಸ್ಥಳದ ಜನರಿಂದಲೂ ವಿದೇಶೀಯರಿಂದಲೂ ಪ್ರತಿಭಟನೆಗಳು ಬಂದುವು. ವ್ಯವಹಾರವನ್ನು ತಡೆಗಟ್ಟಲು ನೇಮಕಗೊಂಡ ದೋಣಿಗಳೇ ಕಳ್ಳತನದಲ್ಲಿ ಅದನ್ನು ತಂದು ಹಂಚುವುದರಲ್ಲಿ ಉದ್ಯುಕ್ತವಾಗಿದ್ದುವು. 1839ರಲ್ಲಿ ಬೇರೊಬ್ಬ ಅಧಿಕಾರಿ ನೇಮಕನಾದ. ಈ ಅಧಿಕಾರಿ ಕಠಿಣಕ್ರಮವನ್ನೇ ಅನುಸರಿಸಿದ. ಬ್ರಿಟಿಷರ ವಶದಲ್ಲಿದ್ದ ಅಫೀಮನ್ನೆಲ್ಲ ಒಪ್ಪಿಸಬೇಕೆಂದು ಅಧಿಕಾರಿ ನಿರೂಪ ಹೊರಡಿಸಿ, ಬ್ರಿಟಿಷ್ ಪ್ರಜೆಗಳ ಮೇಲೆ ನಿರ್ಬಂಧ ಹಾಕಿದ. ಇದರಿಂದ ಅವರಿಗೆ ಕಷ್ಟವಾಯಿತು. ಬ್ರಿಟನ್ನಿನ ಪ್ರತಿನಿಧಿ ಬ್ರಿಟಿಷ್ ವರ್ತಕರ ಬಳಿ ಇದ್ದ ಅಫೀಮುನ್ನೆಲ್ಲ ಒಪ್ಪಿಸಿದ. ಇದು ಇಪ್ಪತ್ತು ಸಾವಿರ ಪೆಟ್ಟಿಗೆಗಳಷ್ಟಿತ್ತು. ಚೀನೀ ಅಧಿಕಾರಿಯ ಆಜ್ಞೆಯಂತೆ ಇದನ್ನೆಲ್ಲ ಸುಡಲಾಯಿತು. ಚೀನೀ ಅಧಿಕಾರಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಬ್ರಿಟಿಷ್ ವರ್ತಕರು ಮುಂದೆ ಅಫೀಮು ವ್ಯಾಪಾರ ನಡೆಸುವುದಿಲ್ಲವೆಂಬ ಭರವಸೆ ನೀಡಬೇಕೆಂದು ಕೇಳಿದ. ಇದನ್ನು ಉಲ್ಲಂಘಿಸಿದವರಿಗೆ ಮರಣದಂಡನೆ ವಿಧಿಸುವುದು ಅವನ ಉದ್ದೇಶ. ಎರಡೂ ಪಕ್ಷಗಳಲ್ಲಿ ಯಾವುದೂ ಮಣಿಯಲಿಲ್ಲ. ಸ್ಥಿತಿ ಕೆಡುತ್ತ ಬಂತು. ಯುದ್ಧ ಅನಿವಾರ್ಯವಾಯಿತು. ಬ್ರಿಟಿಷ್ ಹಾಗೂ ಚೀನೀ ಹಡಗುಗಳ ನಡುವೆ ನಡೆದ ಗುಂಡಿನ ಕಾಳಗದಲ್ಲಿ ಚೀನೀ ನೌಕೆಗಳು ಹಿಮ್ಮೆಟ್ಟಿದುವು. ಆದರೂ ಕದನ ನಿಲ್ಲಲಿಲ್ಲ. ಮೂರು ವರ್ಷಗಳ ಕಾಲ ಯುದ್ಧ ನಡೆಯಿತು. ಕೊನೆಗೆ ಜಯ ಲಭಿಸಿದ್ದು ಬ್ರಿಟಿಷರಿಗೆ. ಕೆಲವು ದ್ವೀಪಗಳೂ ಪಟ್ಟಣಗಳೂ ಷಾಂಗ್‍ಹೈ ರೇವುಪಟ್ಟಣವೂ ಬ್ರಿಟಿಷರ ವಶವಾದುವು. ಪೀಕಿಂಗ್, ನ್ಯಾನ್‍ಕಿಂಗ್ ನಗರಗಳಿಗೆ ಅಪಾಯ ಉಂಟಾಯಿತು. ಆಗ ಅರಸ ರಾಜಿಗೆ ಬಂದ.

1842ರಲ್ಲಿ ನ್ಯಾನ್ಕಿಂಗ್ ಕೌಲಿಗೆ ಸಹಿಯಾಯಿತು. ಬ್ರಿಟಿಷರ ಈ ವಿಜಯದಿಂದ ವಿದೇಶೀಯರಿಗೆ ಅನುಕೂಲವಾಯಿತು. ಪಾಶ್ಚಾತ್ಯ ರಾಷ್ಟ್ರವೊಂದರೊಡನೆ ಕೌಲಿನ ಹೆಸರಿನಲ್ಲಿ ಚೀನ ಬಂಧಿಸಲ್ಪಟ್ಟದ್ದು ಇದೇ ಪ್ರಥಮ. ಈ ಕೌಲಿನಂತೆ ಬ್ರಿಟನ್ನಿಗೆ ಚೀನ ಹಾಂಗ್‍ಕಾಂಗನ್ನು ಒಪ್ಪಿಸಬೇಕಾಯಿತು. ಅಲ್ಲದೆ ಇನ್ನು ಕೆಲವು ಪ್ರಮುಖ ರೇವುಗಳೂ ಯುರೋಪಿನ ವ್ಯಾಪಾರಕ್ಕಾಗಿ ತೆರೆದವು. ಜೊತೆಗೆ ಚೀನವು ಬ್ರಿಟನ್ನಿಗೆ ಎರಡು ಕೋಟಿ ಹತ್ತು ಲಕ್ಷ ಡಾಲರುಗಳಷ್ಟು ತಪ್ಪು ಕಾಣಿಕೆ ತೆರಬೇಕಾಯಿತು. ಎರಡು ವರ್ಷಗಳ ತರುವಾಯ ಅಮೆರಿಕ, ಫ್ರಾನ್ಸುಗಳೂ ಮೂರು ವರ್ಷಗಳ ಮೇಲೆ ನಾರ್ವೆ, ಸ್ವೀಡನ್‍ಗಳೂ ಬ್ರಿಟನ್ ಮಾಡಿಕೊಂಡಿದ್ದ ಮಾದರಿಯಲ್ಲಿ ವ್ಯಾಪಾರದ ಒಡಂಬಡಿಕೆ ಮಾಡಿಕೊಂಡುವು.

ಇಷ್ಟಾದರೂ ಸ್ಥಿತಿ ಸುಧಾರಿಸಲಿಲ್ಲ. 1856ರಲ್ಲಿ ಚೀನ ಮತ್ತೆ ಬ್ರಿಟನ್ನಿನೊಡನೆ ಕಾದಾಡುವ ಪ್ರಸಂಗ ಒದಗಿತು. ಈ ಬಾರಿ ಬ್ರಿಟನ್ನನ್ನು ಫ್ರಾನ್ಸ್ ಕೂಡಿಕೊಂಡಿತು. ಗ್ವಾಂಗ್‍ಸೀಯ ಚೀನೀ ಅಧಿಕಾರಿಗಳು ಫ್ರೆಂಚ್ ಕ್ಯಾತೊಲಿಕ್ ಪಾದ್ರಿಯನ್ನು ಗಲ್ಲಿಗೇರಿಸಿದ್ದು ಇದಕ್ಕೆ ಕಾರಣ. ಈ ಪಾದ್ರಿ ದೊಂಬಿ ಎಬ್ಬಿಸಲು ಸಂಚು ಹೂಡಲು ಯತ್ನಿಸಿದನೆಂಬುದು ಆಪಾದನೆ. ಇದರಿಂದ ಫ್ರೆಂಚ್ ಪ್ರಜೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬಂತೆಂದು ಫ್ರೆಂಚ್ ಪ್ರತಿನಿಧಿ ಪ್ರತಿಭಟನೆ ಸಲ್ಲಿಸಿದ. 1860ರ ತನಕ ಯುದ್ಧ ನಿಲ್ಲಲಿಲ್ಲ. ಕೊನೆಗೆ ಬ್ರಿಟನ್ ಫ್ರಾನ್ಸ್‍ಗಳು ಒಟ್ಟುಗೂಡಿ ಪೀಕಿಂಗ್ ನಗರವನ್ನು ಹಿಡಿದುವು. ಈ ಯುದ್ಧ ಸ್ವಾಭಾವಿಕವಾಗಿಯೇ ಚೀನದಲ್ಲಿ ಅಸಮಾಧಾನವನ್ನುಂಟುಮಾಡಿತು. ಅಲ್ಲಲ್ಲಿ ಗಲಭೆ ಎದ್ದಿತು. ಇದಕ್ಕೆ ನಾಯಕನಾಗಿದ್ದವನು ಹುಂಗ್ ಷಿಯೂ ಚ್ಯೂಆನ್. ಇವನ ನೇತೃತ್ವದಲ್ಲಿ ಬಂಡಾಯಗಾರರು ನ್ಯಾನ್ಕಿಂಗ್ ಪಟ್ಟಣವನ್ನು ಹಿಡಿದರು. ಇದನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಆದರೂ ವಿದೇಶೀಯರ ಸಹಾಯದಿಂದ ಈ ಬಂಡಾಯವನ್ನು ಹತ್ತಿಕ್ಕಲಾಯಿತು. ಇದು ಟೈಪಿಂಗ್ ಬಂಡಾಯವೆಂದು ಹೆಸರಾಗಿದೆ.

ಹತ್ತು ವರ್ಷಗಳ ಅನಂತರ ಚೀನ ಪುನರುಜ್ಜೀವನಗೊಂಡಿತು. ಆದರೆ 1894ರಲ್ಲಿ ಪುನಃ ಜಪಾನಿನೊಡನೆ ಅದು ಯುದ್ಧ ಮಾಡಬೇಕಾಯಿತು. ಕೊರಿಯದ ಮೇಲೆ ಚೀನ ಸಾರ್ವಭೌಮತ್ವ ಸ್ಥಾಪಿಸಿದ್ದು ಈ ಎರಡೂ ದೇಶಗಳ ಮಧ್ಯೆ ಮನಸ್ತಾಪಕ್ಕೆ ಕಾರಣ. ಈ ಯುದ್ಧದಲ್ಲಿ ಚೀನ ಸಂಪೂರ್ಣ ಪರಾಭವ ಹೊಂದಿತು. 1895ರಲ್ಲಿ ಆದ ಒಪ್ಪಂದದ ಪ್ರಕಾರ ಚೀನ ಜಪಾನಿಗೆ ಫಾರ್ಮೋಸ ದ್ವೀಪವನ್ನೂ ಲಿಯೌಡುಂಗ್ ಪರ್ಯಾಯ ದ್ವೀಪವನ್ನೂ ಪರಿಹಾರ ದ್ರವ್ಯವನ್ನು ಕೊಡಬೇಕಾಯಿತು. ಆದರೆ ಲಿಯೌಡುಂಗನ್ನು ಜಪಾನಿಗೆ ಒಪ್ಪಿಸಲು ಯೂರೋಪಿನ ರಾಷ್ಟ್ರಗಳು ಸಮ್ಮತಿಸಲಿಲ್ಲ. ರಷ್ಯಕ್ಕೆ ಅದರ ಮೇಲೆ ಕಣ್ಣಿತ್ತು. ಅದು ಫ್ರಾನ್ಸ್ ಮತ್ತು ಜರ್ಮನಿಯ ಸಹಾಯದಿಂದ ಜಪಾನಿನ ಮೇಲೆ ಭಾರಿ ಒತ್ತಡ ತಂದಿತು. ಪರಿಣಾಮವಾಗಿ ಜಪಾನು ಲಿಯೌಡುಂಗ್ ಬಿಟ್ಟುಕೊಟ್ಟು ಫರ್ಮೋಸವನ್ನು ಮಾತ್ರ ಉಳಿಸಿಕೊಂಡಿತು. ಲಿಯೌಡುಂಗನ್ನು ಮುಂದೆ ಚೀನದಿಂದ ರಷ್ಯ ಗುತ್ತಿಗೆಗೆ ಪಡೆಯಿತು. ಈ ಮಧ್ಯೆ ಹಲವಾರು ಘರ್ಷಣೆಗಳು ವಿದೇಶೀಯರ ದುರಾಶೆಯ ಫಲವಾಗಿ ಕುಟಿಲತನಗಳೂ ಇವನ್ನೆಲ್ಲ ಮೆಟ್ಟಿನಿಂತು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಚೀನದ

ಹೆಣಗಾಟವೂ ಮುಂದುವರಿದುವು. ಆದರೆ ಚೀನ ಯಶಸ್ಸುಗಳಿಸಲಿಲ್ಲ. ವಿದೇಶೀಯರಲ್ಲಿ ಉಂಟಾದ ಪರಸ್ಪರ ಅಸೂಯೆಯ ಪರಿಣಾಮದ ಕುಟಿಲೋಪಾಯಗಳಿಗೆ ಅದು ಮಣಿಯ ಬೇಕಾಯಿತು. ಇತರ ದೇಶಗಳೊಡನೆ ಸಂಧಿ ಮಾಡಿಕೊಂಡು ಹಲವು ರಿಯಾಯಿತಿಗಳಿಗೆ ಸಮ್ಮತಿ ನೀಡಿತು. ಒಂದೊಂದು ವಿದೇಶೀ ರಾಷ್ಟ್ರದ ಉದ್ದಿಶ್ಯವೂ ಒಂದೊಂದು ಬಗೆ. ರಷ್ಯಕ್ಕೆ ಮಂಚೂರಿಯವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕೆಂಬ ಆಸೆ. ಜರ್ಮನಿಗೆ ಕಯೋಚೌವನ್ನು ಪಡೆಯಬೇಕೆಂದು ಇಷ್ಟ. ಜೊತೆಗೆ ಷಾಂಟಂಗ್ ಪ್ರದೇಶದಲ್ಲಿದ್ದ ಖನಿಜ ನಿಕ್ಷೇಪಗಳ ಮೇಲೆ ಹತೋಟಿ ಪಡೆಯಬೇಕೆಂಬುದೂ ಅದರ ಉದ್ದೇಶವಾಗಿತ್ತು. ಇಬ್ಬರು ಜರ್ಮನ್ ಪಾದ್ರಿಗಳ ಕೊಲೆಯಾದ್ದನ್ನು ನೆಪ ಮಾಡಿಕೊಂಡು ಜರ್ಮನಿ ಧಾಳಿ ಯನ್ನಾರಂಭಿಸಿತು. ಕೊನೆಗೆ ಕಯೋಚೌ ಕೊಲ್ಲಿಯನ್ನು 90 ವರ್ಷಗಳ ಗುತ್ತಿಗೆಯ ಮೇಲೆ ಅದು ಪಡೆದುಕೊಂಡಿತಲ್ಲದೆ ಅದರ ಪಕ್ಕದಲ್ಲಿದ್ದ 518ಚ.ಕಿ.ಮೀ ವಿಸ್ತೀರ್ಣದ ಪ್ರದೇಶವನ್ನೂ ಪಡೆಯಿತು. ಷಾಂಟಂಗ್ ಪ್ರಾಂತ್ಯದಲ್ಲಿ ಖನಿಜ ಮತ್ತು ರೈಲ್ವೆ ರಸ್ತೆಯ ಮೇಲೆ ಸಂಪೂರ್ಣ ಅಧಿಕಾರವನ್ನೂ ಹೊಂದಿತು. ಇದೇ ಸಮಯದಲ್ಲಿ ರಷ್ಯ, ಬ್ರಿಟನ್ ಮತ್ತು ಫ್ರಾನ್ಸ್ ತಂತಮ್ಮ ಬೇಡಿಕೆಗಳನ್ನು ಮಂಡಿಸಿದುವು. ರಷ್ಯಕ್ಕೆ ಮಂಚೂರಿಯದ ಮೇಲೆ ಪೂರ್ಣ ಹತೋಟಿ ಲಭಿಸಿತು. ಬ್ರಿಟನ್ನಿಗೆ ನೌಕಾ ನೆಲೆಯೊಂದು ಸಿಕ್ಕಿತು. ಹೀಗೇ ವಿದೇಶೀ ರಾಷ್ಟ್ರಗಳು ತಂತಮ್ಮಲ್ಲಿ ಪೈಪೋಟಿ ನಡೆಸುತ್ತ ಚೀನವನ್ನು ದುರ್ಗತಿಗೆ ತಂದುವು. ಮಂಚೂರಿಯ ಮತ್ತು ಮಂಗೋಲಿಯಗಳು ರಷ್ಯದ ಅಧೀನದಲ್ಲೂ ಷಾಂಟಂಗ್ ಪ್ರಾಂತ್ಯ ಜರ್ಮನಿಯ ಸ್ವಾಧೀನದಲ್ಲೂ, ದಕ್ಷಿಣ ಚೀನದ ಬಹುಭಾಗ ಫ್ರಾನ್ಸಿನ ಆಧಿಪತ್ಯದಲ್ಲೂ, ಹಾಂಗ್‌ಕಾಂಗ್ ಮತ್ತು ಯಾಂಗ್‌ಟ್ಸೀ ಕಣಿವೆಯ ಭಾಗವೆಲ್ಲ ಬ್ರಿಟನ್ನಿನ ಪ್ರಯೋಜನ ಕ್ಕಾಗಿಯೂ ಇದ್ದುವು.

1899ರಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾನ್ ಹೇ ಎಂಬವನು ಚೀನಕ್ಕೆ ಸಂಬಂಧಿಸಿದಂತೆ ತೆರೆದ ಬಾಗಿಲ ನೀತಿಯನ್ನು ಪ್ರತಿಪಾದಿಸಿ, ಈ ಸೂತ್ರವನ್ನು ಚೀನದಲ್ಲಿ ಆಸಕ್ತಿಯುಳ್ಳ ಎಲ್ಲ ರಾಷ್ಟ್ರಗಳೂ ಅನುಮೋದಿಸಬೇಕೆಂದು ಕೇಳಿಕೊಂಡ. ಈ ಸೂತ್ರಕ್ಕೆ ಇಂಗ್ಲೆಂಡ್, ಜರ್ಮನಿ, ರಷ್ಯ ಮತ್ತು ಜಪಾನ್ ಒಪ್ಪಿಕೊಂಡುವು. ಇದರ ಪ್ರಕಾರ ಎಲ್ಲ ರಾಷ್ಟ್ರಗಳೂ ಚೀನ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ನಡೆದುಕೊಳ್ಳಬೇಕೆಂದು ಮತ್ತು ಚೀನದಲ್ಲಿ ಎಲ್ಲ ರಾಷ್ಟ್ರಗಳಿಗೂ ಸಮವಾದ ಅವಕಾಶಗಳಿರಬೇಕೆಂದು ಎಲ್ಲ ರಾಷ್ಟ್ರಗಳೂ ಒಪ್ಪಿಕೊಂಡುವು. ಈ ನೀತಿಯನ್ನೇ ಚೀನದಲ್ಲಿ ಅಮೆರಿಕ 1941ರ ವರೆಗೆ ಎತ್ತಿಹಿಡಿಯಿತು. ಜಪಾನ್ ಈ ನೀತಿಯನ್ನು ಅತಿಕ್ರಮಿಸಿದ್ದಾಗಲೆಲ್ಲ ಅಮೆರಿಕ ಅದನ್ನು ವಿರೋಧಿಸಿತು. ಈ ನೀತಿಯಿಂದ ಒಂದು ರೀತಿಯಲ್ಲಿ ಚೀನ ಪರರಾಷ್ಟ್ರಗಳ ವಸಾಹತಾಗುವುದನ್ನು ತಪ್ಪಿಸಿತೆಂದೇ ಹೇಳಬಹುದಾದರೂ ಆರ್ಥಿಕವಾಗಿ ಅದು ರಾಷ್ಟ್ರಗಳಿಗೆ ಅಧೀನವಾಯಿತು. ಬಗೆಬಗೆಯ ಪ್ರಭಾವಗಳಿಗೆ ತುತ್ತಾಯಿತು.

ಆಗ ಚೀನ ಎಚ್ಚೆತ್ತುಕೊಂಡು ತನ್ನ ಮುಂದಿದ್ದ ಅಪಾಯಗಳನ್ನು ಗ್ರಹಿಸಿತು. ಜಪಾನಿನಿಂದ ಚೀನ ಪರಾಭವಗೊಂಡದ್ದು ಅಲ್ಲಿ ಯುವಕ ಜನಾಂಗದಲ್ಲಿ ರೋಷ ಹುಟ್ಟಿಸಿತು. ಸುಧಾರಣೆಗಾಗಿ ಅವರು ಹಾತೊರೆದರು. ಅರಸನೂ ಇದನ್ನು ಸಹಾನುಭೂತಿಯಿಂದ ಕಂಡು ಆ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ. ನೂರು ದಿನಗಳ ಸುಧಾರಣೆಗಳು ಎಂದು ಇದು ಪ್ರಸಿದ್ಧವಾಗಿದೆ. ಆಧುನಿಕಯುಗಕ್ಕೆ ತಕ್ಕಂತೆ ಪಾಶ್ಚಾತ್ಯ ಮಾದರಿಯ ಶಿಕ್ಷಣ ವ್ಯವಸ್ಥೆ, ರೈಲ್ವೆ ಮತ್ತು ಕೈಗಾರಿಕೆಗಳ ಸ್ಥಾಪನೆ–ಇವು ಅವನು ಕೈಗೊಂಡ ಕ್ರಮಗಳು. ಆದರೆ ಸುಧಾರಣೆಗಳನ್ನು ಅರಸನ ಗುಂಪಿನವರೇ ವಿರೋಧಿಸಿದರು. ಬಲಾಢ್ಯವಾದ ಗುಂಪೊಂದು ರಾಜಮಾತೆಯ ನೇತೃತ್ವದಲ್ಲಿ ಹುಟ್ಟಿಕೊಂಡಿತು. ಅವಳು ಅರಸನನ್ನು ಮೂಲೆಗೆ ಕೂಡಿಸಿ ತಾನೇ ಅಧಿಕಾರ ಸ್ವೀಕಾರ ಮಾಡಿದಳು. ಪ್ರಮುಖ ಸುಧಾರಣಾವಾದಿಗಳನ್ನು ಕೊಲ್ಲಿಸಿದಳು.

ಬಾಕ್ಸರ್ ದಂಗೆ : ಚೀನದಲ್ಲಿ ಅನೇಕ ಶತಮಾನಗಳಿಂದ ಧಾರ್ಮಿಕ ಅಥವಾ ರಾಜಕೀಯ ಸಂಬಂಧದ ಗುಪ್ತ ಸಂಘಗಳಿದ್ದುವು. ಸುಧಾರಣಾ ಚಳವಳಿಯನ್ನು ಹತ್ತಿಕ್ಕಿದ ಮೇಲೆ ದೇಶದಲ್ಲಿ ಅಶಾಂತಿಯುಂಟಾಯಿತು. ಆಗ ಗುಪ್ತ ಸಂಘಗಳು ಪ್ರಬಲವಾಗಿ ಒಂದುಗೂಡಿದುವು. ಬಾಕ್ಸರ್‌ಗಳೆಂಬುದು ಪಾಶ್ಚಾತ್ಯರು ಈ ಸಂಘದವರಿಗೆ ಕೊಟ್ಟ ಹೆಸರು. ರಾಜಮಾತೆಯ ಪ್ರತಿಗಾಮಿತನವನ್ನು ವಿರೋಧಿಸುತ್ತಿದ್ದ ಈ ಗುಂಪು ಮೊದಮೊದಲು ಮ್ಯಾಂಚೂ ವಂಶಕ್ಕೆ ವಿರುದ್ಧವಾಗಿ ವರ್ತಿಸಿತು. 1899ರಲ್ಲಿ ಇದು ವಿದೇಶೀ ರಾಷ್ಟ್ರಗಳ ಮೇಲಿನ ಹಗೆತನದಲ್ಲಿ ಪರ್ಯವಸಾನವಾಯಿತು. ಈ ಗುಂಪಿನವರು ನೇರವಾಗಿಯೇ ಚಳವಳಿಯನ್ನೆಬ್ಬಿಸಿದರು. ಚೀನದಿಂದ ಎಲ್ಲ ಕ್ರೈಸ್ತರನ್ನೂ ವಿದೇಶೀ ಭೂತಗಳನ್ನೂ ಹೊರಡಿಸಬೇಕೆಂಬುದು ಇವರ ಘೋಷಣೆ. ಅನೇಕ ವಿದೇಶೀಯರು ಹತರಾದರು. ಜರ್ಮನ್ ಅಧಿಕಾರಿಯೊಬ್ಬ ಸತ್ತ. ಪೀಕಿಂಗಿನಲ್ಲಿ ರಾಯಭಾರ ವಸತಿಗಳು ಮುತ್ತಿಗೆಗೆ ಒಳಗಾದುವು. ಇಲ್ಲೂ ಬೇರೆ ಸ್ಥಳಗಳಲ್ಲೂ ಇದ್ದ ವಿದೇಶೀಯರು ತಿಂಗಳುಗಟ್ಟಲೆ ಅಪಾಯ ಸ್ಥಿತಿಯಲ್ಲಿದ್ದರು. ಕ್ರೈಸ್ತ ಹಳ್ಳಿಗಳು ನಾಶವಾದುವು. ಕ್ರೈಸ್ತರು ರಾಜಧಾನಿಯ ಸಮೀಪದಲ್ಲೇ ಕೊಲೆಗೆ ಒಳಗಾದರು. ಪರಿಸ್ಥಿತಿ ಹದಗೆಟ್ಟಿತು. ಚೀನೀ ಸೈನಿಕರೂ ಬಂಡಾಯ ಎದ್ದರು. ಈ ಘಟನೆಗಳು ಜರುಗಿದ್ದು 1900ರ ಮಧ್ಯಭಾಗದಲ್ಲಿ. ತಮ್ಮ ಅಸ್ತಿತ್ವಕ್ಕೆ ಸಂಚಕಾರ ವುಂಟಾಯಿತೆಂದು ಪಾಶ್ಚಾತ್ಯ ದೇಶಗಳು ಗಾಬರಿಗೊಂಡು ಸೇನಾಕಾರ್ಯಾಚರಣೆ ನಡೆಸಿದುವು. ರಾಯಭಾರ ವಸತಿಗಳಿದ್ದವರೆಲ್ಲ ಪಾರಾದರು. ವಿದೇಶೀ ರಾಜ್ಯಗಳ ಸೇನೆ ಪೀಕಿಂಗನ್ನು ವಶಪಡಿಸಿಕೊಂಡು ನಗರದೊಳಕ್ಕೆ ನುಗ್ಗಿತು. ರಾಜಪರಿವಾರವೆಲ್ಲ ಪರಾರಿಯಾಯಿತು. ಕೆಲವು ಕಾಲದವರೆಗೆ ಲಿ ಹಂಗ್ ಚಂಗ್ ಮತ್ತು ರಾಜಕುಮಾರ ಚಿಂಗ್‌ನೊಡನೆ ಸಂಧಾನ ಜರುಗಿ ಕಡೆಗೊಂದು ಶಾಂತಿ ಒಪ್ಪಂದವಾಯಿತು. (1901). ಅರಸ ಇದಕ್ಕೆ ಒಪ್ಪಿಗೆ ಕೊಡಲೇಬೇಕಾಯಿತು. ಜರ್ಮನ್ ಅಧಿಕಾರಿ ಮತ್ತು ಇತರ ರಾಷ್ಟ್ರಗಳ ನೌಕರರ ಕೊಲೆಗಾಗಿ ಚೀನ ಕ್ಷಮಾಪಣೆ ಬೇಡತಕ್ಕದ್ದು ; ಪೀಕಿಂಗಿನ ಸುತ್ತಲೂ ದೊಡ್ಡ ಪ್ರದೇಶದಲ್ಲಿ ವಿದೇಶೀ ರಾಷ್ಟ್ರಗಳು ಪಹರೆ ನಡೆಸತಕ್ಕದ್ದು ; ವಿದೇಶಗಳಿಗೆ 33 ಕೋಟಿ ಡಾಲರುಗಳಷ್ಟು ನಷ್ಟ ಕಟ್ಟಿಕೊಡತಕ್ಕದ್ದು ; ಚೀನ ಅಸ್ತ್ರಶಸ್ತ್ರಗಳನ್ನು ಹೊರಗಿನಿಂದ ತರಿಸುವುದಾಗಲಿ ತಯಾರಿಸುವುದಾಗಲಿ ಕೂಡದು ; ವಿದೇಶೀಯರ ವಿರುದ್ಧ ಬಂಡಾಯ ಏಳುವವರಿಗೆ ಮರಣದಂಡನೆ ವಿಧಿಸತಕ್ಕದ್ದು. ಇವು ಕೌಲಿನ ಕೆಲವು ಷರತ್ತುಗಳು. ಹೀಗೆ ಅಪಮಾನಕರವಾದ ರೀತಿಯಲ್ಲಿ ಚೀನದ ಮೇಲೆ ಒಪ್ಪಂದವನ್ನು ಹೊರಿಸಲಾಯಿತು. ಈ ಸಂದರ್ಭದಲ್ಲಿ ಅಮೆರಿಕ ತನಗೆ ಸಂದಾಯವಾಗಬೇಕಿದ್ದ ನಷ್ಟದ ಹಣವನ್ನು ಚೀನಕ್ಕೆ ಬಿಟ್ಟುಕೊಟ್ಟಿತು. ಮುಂದೆ ಚೀನೀ ಯುವಕರು ಅಮೆರಿಕನ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ನಡೆಸಲು ಈ ಹಣವನ್ನು ಚೀನ ಮೀಸಲಿಟ್ಟಿತು.

ಅದೇ ವರ್ಷ ವ್ಯಚಂಗ ಎಂಬಲ್ಲಿ ಮತ್ತೊಂದು ಗಲಭೆ ಉಂಟಾಯಿತು. ಇದನ್ನಡಗಿಸಲು ದೇಶದ ಸೇನೆ ಹೊರಟಿತು. ಮ್ಯಾಂಚೂಗಳ ಮೇಲೆ ದಂಗೆ ಏಳಲು ಸಮಯ ಕಾಯುತ್ತಿದ್ದ ಕ್ರಾಂತಿಕಾರರಿಗೆ ಇಂದೊಂದು ಅವಕಾಶ. ರಾಜವಂಶವನ್ನುಳಿಸಲು ಗೊತ್ತುಮಾಡಲಾಗಿದ್ದ ಪ್ರಧಾನಿ ಯುಯಾನ್ ಷಿರ್‌ಕೈ ಕ್ರಾಂತಿಕಾರರೊಡನೆ ಸಂಧಾನಕ್ಕಾಗಿ ಕೈಹಾಕಿ ವಿಫಲನಾದ. ರಾಜವಂಶದವರೂ ಮ್ಯಾಂಚೂ ಪ್ರಮುಖರೂ ಪೀಕಿಂಗಿನಿಂದ ಓಡಿಹೋದರು. ಕಡೆಗೆ 1912ರಲ್ಲಿ ಮ್ಯಾಂಚೂ ವಂಶದವರು ತಮ್ಮ ಹಕ್ಕುಗಳನ್ನೆಲ್ಲ ಬಿಟ್ಟುಕೊಟ್ಟರು. ಮ್ಯಾಂಚೂ ವಂಶದ ಆಡಳಿತ ಕೊನೆಗೊಂಡಿತು.

ಇದಕ್ಕೆ ಮುನ್ನ ಚೀನದಲ್ಲಿ ಸುಧಾರಣೆಗಳಿಗಾಗಿ ಒಂದು ಗುಂಪು ಪ್ರಯತ್ನ ನಡೆಸುತ್ತಿತ್ತು. ಪಾಶ್ಚಾತ್ಯ ಮಾದರಿಯ ನಡವಳಿಕೆಗಳೇ ಚೀನದ ಮುಕ್ತಿಗೆ ಸಾಧನ ಎಂಬುದು ಅದರ ಅಭಿಪ್ರಾಯ. ಬರುಬರುತ್ತ ಈ ಅಭಿಪ್ರಾಯ ಬಲಗೊಂಡು ಹಳೆಯ ಭಾವನೆಗಳು ಮಾಯವಾಗುತ್ತ ಬಂದುವು. ಚೀನೀ ತರುಣಜನಾಂಗ ಸಂಪೂರ್ಣ ಪರಿವರ್ತನೆಗಾಗಿ ಹಾತೊರೆಯುತ್ತಿತ್ತು. ಪ್ರತಿಗಾಮಿ ಅಧಿಕಾರಿಗಳೂ ಚೀನೀಯರೂ ಮ್ಯಾಂಚೂಗಳೂ ಉಳಿದಿರುವ ತನಕ ದೇಶ ಪ್ರಗತಿಗೊಳ್ಳುವುದು ಸಾಧ್ಯವಿಲ್ಲವೆಂಬುದು ಅವರ ನಂಬಿಕೆ. ಈ ಮಧ್ಯೆ ಮ್ಯಾಂಚೂ ಅರಸರು ಹಲವಾರು ಸುಧಾರಣೆಗಳನ್ನು ತರಲು ಯತ್ನಿಸಿದರು. ಸಂವಿಧಾನದ ರಚನೆಗಾಗಿ ಪ್ರಯತ್ನಿಸುವ ಭರವಸೆ ಇತ್ತರು. ಪ್ರಾಂತೀಯ ಸಭೆಗಳನ್ನು ಏರ್ಪಡಿಸಿದರು. ರಾಷ್ಟ್ರೀಯ ಸಭೆಯನ್ನೂ ಸೇರಿಸಿದರು. ಆದರೂ ಇವೆಲ್ಲ ಸತ್ಪರಿಣಾಮವನ್ನುಂಟುಮಾಡಲಿಲ್ಲ. ಸುಧಾರಣಾವಾದಿಗಳ ತಂಡ ಬೆಳೆಯಿತು. ಯುವಕ ಚೀನ ಪಕ್ಷದ ಕ್ರಾಂತಿಶಕ್ತಿ ಬಲಗೊಂಡಿತು. ಇದಕ್ಕೆ ಬುದ್ಧಿಜೀವಿ ಸಮಾಜದ ಒತ್ತಾಸೆ ದೊರಕಿತು. ಚೀನದ ಭವಿಷ್ಯ ಉತ್ತಮಗೊಳ್ಳುವ ಸೂಚನೆಗಳು ಕಾಣಬಂದುವು.

ಗಣರಾಜ್ಯ ಸ್ಥಾಪನೆ : ಇಲ್ಲಿಗೆ ಚೀನದ ಇತಿಹಾಸ ಮಾರ್ಪಟ್ಟು ಹೊಸ ಅಧ್ಯಾಯ ಆರಂಭವಾಯಿತು. ರಾಜಪ್ರಭುತ್ವ ಹೇಳಹೆಸರಿಲ್ಲದಂತಾಗಿ ಪ್ರಜಾಪ್ರಭುತ್ವಕ್ಕೆ ನಾಂದಿಯಾದ್ದು ಈ ಸಮಯದಲ್ಲೇ. ನವ ಚೀನದ ನಾಯಕ ಸುನ್ ಯಾಟ್‌ಸೆನ್. ಮ್ಯಾಂಚೂ ವಂಶ ನಾಮಾವಶೇಷವಾದ ಸಮಯದಲ್ಲಿ ಈತ ತನ್ನ ಗುರಿ ಸಾಧಿಸುವ ಅವಕಾಶ ಪಡೆದ. 1911ರಲ್ಲಿ ರೈಲ್ವೆಗಳ ನಿರ್ಮಾಣಕ್ಕಾಗಿ ವ್ಯವಸ್ಥೆಯಾಗಿದ್ದ ವಿದೇಶೀ ಸಾಲದ ಸಂಬಂಧದಲ್ಲಿ ಒಂದು ಕ್ರಾಂತಿ ಸಂಭವಿಸಿತು. ಎಲ್ಲ ಪ್ರಾಂತ್ಯಗಳಲ್ಲೂ ಈ ಕ್ರಾಂತಿ ಕಾಡ್ಗಿಚ್ಚಿನಂತೆ ಹರಡಿತು. ಕೆಲವೇ ವಾರಗಳೊಳಗಾಗಿ ಕ್ರಾಂತಿಕಾರರೆಲ್ಲ ನ್ಯಾನ್ಕಿಂಗ್‌ನಲ್ಲಿ ಕಲೆತು ಗಣರಾಜ್ಯ ಸ್ಥಾಪಿಸಿ, ಸುನ್ ಯಾಟ್‌ಸೇನನನ್ನೇ ಅದಕ್ಕೆ ಪ್ರಥಮ ಅಧ್ಯಕ್ಷನನ್ನಾಗಿ ಮಾಡಿದರು. 1911ರ ಡಿಸೆಂಬರ್ 28ರಂದು ಕ್ರಾಂತಿ ಸಂಭವಿಸಿದಾಗ ಈತ ಹೊರಗಿದ್ದ. ಇವನು ಸ್ವದೇಶಕ್ಕೆ ಹಿಂದಿರುಗುವುದಕ್ಕೆ ಮುನ್ನವೇ ಕ್ರಾಂತಿಕಾರರು ಅಂದಿನ ಪ್ರಬಲ ವ್ಯಕ್ತಿಯೂ ಸೈನಿಕ ಮುಖಂಡನೂ ಆಗಿದ್ದ ಯೂವಾನ್ ಷಿರ್‌ಕೈನೊಡನೆ ಸಂಧಾನ ನಡೆಸಿದ್ದರು. ಮ್ಯಾಂಚೂ ವಂಶದ ಅಂತಿಮ ಕಾಲ ಸನ್ನಿಹಿತವಾಯಿತೆಂದು ಇನ್ನೂ ಚಿಕ್ಕ ವಯಸ್ಸಿನವನಾಗಿದ್ದ ಅರಸನಿಗೆ ತಿಳಿದೊಡನೆಯೇ ರಾಜೀಗೆ ಬರಲು ಸಿದ್ಧನಾದ. ಅರಸ ಸಿಂಹಾಸನವನ್ನು ತ್ಯಜಿಸಿ ಗಣರಾಜ್ಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟದ್ದು 1912ರ ಫೆಬ್ರುವರಿ 12ರಂದು. ಷಿರ್‌ಕೈ ಗಣರಾಜ್ಯ ಸ್ಥಾಪಿಸುವಂತೆ ಅವನಿಗೆ ನಿರೂಪ ಹೋಯಿತು. ಸುನ್ ಯಾಟ್‌ಸೆನ್ ಅಧ್ಯಕ್ಷನಾಗಿರಲು ಒಪ್ಪಲಿಲ್ಲ. ಗುಂಪಿನೊಳಗೇ ಒಡಕುಂಟಾಗದಂತೆ ನೋಡುವುದೇ ಅವನ ಉದ್ದಿಶ್ಯವಾಗಿತ್ತು.

ಯೂವಾನ್ ಷಿರ್‌ಕೈ ಬಲಾಢ್ಯ. ಅವನ ಬಳಿ ದೊಡ್ಡ ಸೇನೆ ಇತ್ತು. ಗಣರಾಜ್ಯವಾದಿಗಳ ಬೆಂಬಲವೂ ಇತ್ತು. ಆದರೆ ಅವನಿಗೆ ಉದಾತ್ತ ಧ್ಯೇಯವಿರಲಿಲ್ಲ. ತಾನೇ ಸಾಮ್ರಾಟನಾಗ ಬೇಕೆಂಬುದು ಅವನ ಬಯಕೆ. 1912ರ ಮಾರ್ಚಿಯಲ್ಲಿ ಒಪ್ಪಲಾದ ಸಂವಿಧಾನದಲ್ಲಿ ಪಾರ್ಲಿಮೆಂಟಿನ ವ್ಯಾಪ್ತಿಯೊಳಗೆ ಅಧ್ಯಕ್ಷನಿರಬೇಕೆಂದು ವಿಧಿಸಲಾಗಿತ್ತು. ಮೊದಲಿನ ಪಾರ್ಲಿಮೆಂಟಿನಲ್ಲಿ ತೀವ್ರ ಪಂಥದವರೇ ಹೆಚ್ಚಾಗಿದ್ದರು. ಆಡಳಿತ ಸುಸೂತ್ರವಾಗಿ ಸಾಗಲಿಲ್ಲ. ಭಿನ್ನಾಭಿಪ್ರಾಯಗಳು ತಲೆದೋರಿ ತೊಡಕುಗಳುಂಟಾದುವು. 1913ರಲ್ಲಿ ಯೂವಾನ್ ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ರಷ್ಯದ ಬ್ಯಾಂಕುಗಳೊಡನೆ ಸಾಲದ ಒಪ್ಪಂದ ಮಾಡಿಕೊಂಡು ತನ್ಮೂಲಕ ಸರ್ಕಾರವನ್ನು ಆ ದೇಶದ ಪ್ರಭಾವಕ್ಕೊಳಪಡಿಸಿದಾಗ ಗಡಿಬಿಡಿಯೇ ಆಯಿತು. ದಕ್ಷಿಣದಲ್ಲಿ ತನ್ನವರನ್ನೇ ಅವನು ಸೈನಿಕ ಮುಖಂಡರನ್ನಾಗಿ ನೇಮಕ ಮಾಡಿದ್ದೂ ಅತೃಪ್ತಿಗೆ ಒಂದು ಕಾರಣ. ಮತ್ತೊಂದು ಬಂಡಾಯ ಬಲಿಯುತ್ತಿತ್ತು. ಇದಕ್ಕೆ ಸುನ್ ಯಾಟ್ ಸೇನ್ ಒಪ್ಪಿಗೆಯೂ ಇತ್ತು. ಯೂವಾನ್ ಷಿರ್‌ಕೈ ಈ ಬಂಡಾಯವನ್ನು ಯಶಸ್ವಿಯಾಗಿ ಎದುರಿಸಿದ. ಸುನ್ ಯಾಟ್ ಸೇನ್ ಜಪಾನಿಗೆ ಓಡಿಹೋದ. ಯೂವಾನ್ ಷಿರ್‌ಕೈ ಮತ್ತೆ ಪ್ರಬಲನಾದ. ಪಾರ್ಲಿಮೆಂಟಿನಲ್ಲಿದ್ದ ಗ್ವೋಮಿನ್‌ಟಾಂಗ್ ಪಕ್ಷದ ಸದಸ್ಯರನ್ನು ಬರ್ತರ್ಫ್ ಮಾಡಿದ. ಕಡೆಗೆ 1914ರಲ್ಲಿ ಪಾರ್ಲಿಮೆಂಟೇ ವಿಸರ್ಜನೆಗೊಂಡಿತು. 1915ರಲ್ಲಿ ಮ್ಯಾಂಚೂ ವಂಶವನ್ನು ಪುನರುಜ್ಜೀವನಗೊಳಿಸಿ ತಾನೇ ಅರಸನೆಂದು ಘೋಷಿಸುವುದರಲ್ಲಿದ್ದ. ಆದರೆ ಬಂಡಾಯ ವ್ಯಾಪಕವಾಗಿ ಹಬ್ಬಿತು. ಯೂವಾನ್ ಷಿರ್‌ಕೈ ಪ್ರಭಾವ ಅಳಿಯಿತು. ಅವನು 1917ರಲ್ಲಿ ಮೃತಪಟ್ಟ.

ಈ ಘಟನೆಯಾದ ಮೇಲೆ ಸುಮಾರು ಹತ್ತು ವರ್ಷಗಳ ಕಾಲ ಸರ್ಕಾರದಲ್ಲಿ ಸ್ಥಿರತೆ ಇರಲಿಲ್ಲ. ದೇಶದೊಳಗಿನ ತಿಕ್ಕಾಟ ಮತ್ತು ಹೊರಗೆ ಸಂಭವಿಸುತ್ತಿದ್ದ ಘಟನೆಗಳಿಂದ ಗಣರಾಜ್ಯ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು.

ಯೂವಾನ್ ಷಿರ್‌ಕೈ ಅಧ್ಯಕ್ಷತೆಯ ಕಾಲದಲ್ಲಿ ರಷ್ಯ ಮಂಗೋಲಿಯದಲ್ಲಿ, ಬ್ರಿಟನ್ ಟಿಬೆಟ್ಟಿನಲ್ಲಿ ತಮ್ಮ ಹಿತಾಸಕ್ತಿಗಳನ್ನು ಗೌರವಿಸಬೇಕೆಂದು ಒತ್ತಾಯಪಡಿಸುತ್ತಿದ್ದುವು. ಇದರಿಂದ ಮಂಗೋಲಿಯದಲ್ಲಾಗಲಿ ಟಿಬೆಟ್ಟಿನಲ್ಲಾಗಲಿ ಚೀನ ಅಲ್ಪ ಸ್ವಲ್ಪ ಬಿಟ್ಟು ಮಿಕ್ಕ ಸಾರ್ವಭೌಮಾಧಿಕಾರವನ್ನೆಲ್ಲ ಕಳೆದುಕೊಂಡಿತು. ಈ ಮಧ್ಯೆ ಒಂದನೆಯ ಮಹಾಯುದ್ಧ (1914–18) ಸಂಭವಿಸಿತು. ಚೀನ ತಟಸ್ಥ ದೇಶವೆಂದು ಘೋಷಿಸಿದ್ದರೂ ಅದರ ಪ್ರದೇಶಗಳು ಆಕ್ರಮಣಕ್ಕೆ ತುತ್ತಾದುವು. ಯೂವಾನ್ ಷಿರ್‌ಕೈ ಗಣರಾಜ್ಯದ ಅಧ್ಯಕ್ಷನಾಗಿದ್ದರೂ ಅವನು ಸರ್ವಾಧಿಕಾರಿಯಾಗಿದ್ದ. ಅವನ ಅನಂತರ ಲುಯಿಯಾನ್ ಹಂಗ್ ಮತ್ತು ಫಂಗ್‌ಕ್ವೊ ಚಂಗ್ ಎಂಬುವರು ಒಬ್ಬರಾಗುತ್ತಲೊಬ್ಬರು ಅಧ್ಯಕ್ಷಸ್ಥಾನಕ್ಕೆ ಬಂದರು. 1918ರಲ್ಲಿ ಹುಸ್ಯು ಷಿ ಚಂಗ್ ಚುನಾಯಿತನಾದ. ಚೀನ ಮಹಾಯುದ್ಧ ಸಮಯದಲ್ಲಿ ತಟಸ್ಥನೀತಿ ತಾಳಿದರೂ ಕೊನೆಗೆ ಮಿತ್ರ ಪಕ್ಷದವರೊಡನೆ ಸೇರಿಕೊಳ್ಳಬೇಕಾಯಿತು. ಯುದ್ಧಾನಂತರ ಷಾಂಟಂಗನ್ನು ಜಪಾನ್ ಸ್ವಾಧೀನ ಪಡಿಸಿಕೊಂಡದ್ದರಿಂದ ಚೀನದಲ್ಲಿ ಅಸಂತುಷ್ಟಿಯುಂಟಾಯಿತು. ಜಪಾನು ವಿಶ್ವದ ಅಭಿಪ್ರಾಯಕ್ಕೆ ತಲೆಬಾಗಿ ಅದನ್ನು ಚೀನಕ್ಕೆ ಒಪ್ಪಿಸಿತು.

ಚೀನದ ವಿಚಾರದಲ್ಲಿ ಜಪಾನು ಮೊದಲಿಂದಲೂ ಸ್ನೇಹದಿಂದಿರಲಿಲ್ಲ. ಸಮಯ ಸಿಕ್ಕಾಗಲೆಲ್ಲ ಚೀನದ ಮೇಲೆ ತನ್ನ ವಕ್ರದೃಷ್ಟಿ ಬೀರಲು ಯತ್ನಿಸುತ್ತಿತ್ತು. ಅಷ್ಟೇ ಅಲ್ಲ, ಅದರ ಪ್ರದೇಶಗಳನ್ನು ಒಂದೊಂದಾಗಿ ವಶಪಡಿಸಿಕೊಳ್ಳಲು ಸಂಚು ನಡೆಸುತ್ತಿತ್ತು. ಕೊರಿಯ ಅದರ ವಶವಾದ್ದು 1910ರಲ್ಲಿ. ಇನ್ನೂ ಅನೇಕ ಸಣ್ಣ ಪುಟ್ಟ ಗಳಿಕೆಗಳಾದವು. ಎಲ್ಲಕ್ಕಿಂತ ಆಶ್ಚರ್ಯಕರವಾದ್ದೆಂದರೆ ಅದು 1914ರ ಜನವರಿಯಲ್ಲಿ ಚೀನೀ ಅಧ್ಯಕ್ಷನಲ್ಲಿ 21 ಬೇಡಿಕೆಗಳನ್ನು ಮಂಡಿಸಿದ್ದು. ಚೀನದಲ್ಲಿ ಇದಕ್ಕೆ ಪ್ರತಿಭಟನೆ ಇತ್ತಾದರೂ ಜಪಾನನ್ನು ಎದುರಿಸಿ ನಿಲ್ಲುವಷ್ಟು ಶಕ್ತಿ ಅದಕ್ಕೆ ಇರಲಿಲ್ಲ. ಅದು 16 ಬೇಡಿಕೆಗಳಿಗೆ ಒಪ್ಪಿಗೆ ಕೊಟ್ಟಿತು. ಜಪಾನಿನ ಈ ಬೇಡಿಕೆಗಳಿಗೆ ಯೂರೋಪಿನ ರಾಷ್ಟ್ರಗಳೂ ಸಮ್ಮತಿ ನೀಡಿದುವು. ಅಮೆರಿಕ ಮಾತ್ರ ಇವನ್ನು ಬೆಂಬಲಿಸದಿದ್ದರೂ ಚೀನದಲ್ಲಿ ಜಪಾನಿಗೆ ಹಿತಾಸಕ್ತಿ ಇರುವುದನ್ನು ಅಂಗೀಕರಿಸಲೇ ಬೇಕು ಎಂಬುದು ಅದರ ವಾದ. ಚೀನ ಮಿತ್ರಪಕ್ಷದವರೊಡನೆ ಯುದ್ಧಭಾಗಿಯಾಗಿತ್ತೆಂಬ ಅಂಶವನ್ನು ಅವು ಈ ಸಂದರ್ಭದಲ್ಲಿ ಗಮನಿಸಲೇ ಇಲ್ಲ. ಬರುಬರುತ್ತ ಜಪಾನಿನ ಸಾಮ್ರಾಜ್ಯಕಾಂಕ್ಷೆ ಹೆಚ್ಚಿತು. ಚೀನದಲ್ಲಿ ಅದರ ಹಿತಾಸಕ್ತಿಗಳು ಹೆಚ್ಚಿದುವು. ಈ ಪ್ರವೃತ್ತಿಗಳು ಪಾಶ್ಚಾತ್ಯ ರಾಷ್ಟ್ರಗಳ ಗಮನ ಸೆಳೆಯದಿರಲಿಲ್ಲ. ಜಪಾನಿನ ಪ್ರಾಬಲ್ಯವನ್ನು ತಡೆಗಟ್ಟಬೇಕೆಂದು ಅಮೆರಿಕ ಮತ್ತು ಬ್ರಿಟನ್ ನಿರ್ಧರಿಸಿ ಸೂಕ್ತ ಕ್ರಮ ಕೈಗೊಂಡುವು. ಚೀನದ ಸ್ವಾತಂತ್ರ್ಯ, ಸಾರ್ವಭೌಮಾಧಿಕಾರ ಇವನ್ನು ಗೌರವಿಸಬೇಕೆಂದು 1922ರಲ್ಲಿ ಒಂಬತ್ತು ರಾಷ್ಟ್ರಗಳ ಒಂದು ಒಪ್ಪಂದವಾಯಿತು. ಆದರೂ ಅದರ ನೀತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ.

ಯೂವಾನ್ ಷಿರ್‌ಕೈ ಅಧಿಕಾರಚ್ಯುತಿಯ ಅನಂತರ ಸ್ವಲ್ಪ ಕಾಲ ದೇಶ ಇಬ್ಭಾಗವಾಯಿತು. ಎರಡು ಆಡಳಿತಗಳೇರ್ಪಟ್ಟವು. ಪೀಕಿಂಗಿನಲ್ಲಿ ಒಂದು ಆಡಳಿತವೂ, ಕ್ಯಾಂಟನ್ನಿನಲ್ಲಿ ಇನ್ನೊಂದೂ ಇದ್ದುವು. 1921ರಲ್ಲಿ ಸುನ್ ಯಾಟ್‌ಸೇನ್‌ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು. ಆದರೆ ಶಾಂತಿ ನೆಲೆಸಲಿಲ್ಲ. ಸರ್ಕಾರ ದುರ್ಬಲವಾಯಿತು. ಗುಂಪುಗುಳಿತನ ಹೆಚ್ಚಿತು. ರಾಜ್ಯದ ಆಡಳಿತಕ್ಕಾಗಿ ಪ್ರಮುಖರೇ ಕಚ್ಚಾಡುವಂತಾಯಿತು.

ಸುನ್ ಯಾಟ್‌ಸೇನ್ ಸಮರ್ಥ ಪ್ರಚಾರಕ ಹಾಗೂ ಕ್ರಾಂತಿಕಾರನಾಗಿದ್ದ. ಆದರೆ ದಕ್ಷ ಆಡಳಿತಗಾರನಾಗಿರಲಿಲ್ಲ. ಅವನು ಪ್ರತಿಪಾದಿಸುತ್ತಿದ್ದ ಸಾಮಾಜಿಕ ನೀತಿಗಳು ಮಾತ್ರ ಮುಂದಿನ ದಿನಗಳಲ್ಲಿ ಫಲಕಾರಿಯಾದುವು. ಪೀಕಿಂಗ್ ಆಡಳಿತವನ್ನು ಉರುಳಿಸಲು ಸುನ್ ಯಾಟ್‌ಸೇನ್ 1923ರಲ್ಲಿ ಅನ್ಯ ರಾಷ್ಟ್ರಗಳನ್ನು ಕೇಳಿ ವಿಫಲಗೊಂಡ. ಆಗ್ಗೆ ಅವನು ರಷ್ಯದ ಕೆಲವು ನಾಯಕರ ಸಲಹೆಯನ್ನು ಕೇಳಬೇಕಾದ ಪ್ರಸಂಗ ಒದಗಿತು. ರಷ್ಯದ ಈ ನಾಯಕರ ಸಲಹೆ ಮತ್ತು ಬೋಧನೆಗಳ ದೆಸೆಯಿಂದ ಗ್ವೋಮಿನ್‌ಟಾಂಗ್ ಸರ್ಕಾರ ರಷ್ಯದ ಕಮ್ಯುನಿಸ್ಟ್ ಪಕ್ಷದ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತು. ಅಂದಿನಿಂದ ಅದರ ನಿಲವೇ ಮಾರ್ಪಾಟಾಯಿತು. ಸುನ್ ಯಾಟ್‌ಸೇನ್ 1925ರಲ್ಲಿ ಮೃತಪಟ್ಟ. ಅವನು ಬಿಟ್ಟುಹೋದ ಉಯಿಲು ಮತ್ತು ಕೆಲವು ಗ್ರಂಥಗಳು ದೇಶಕ್ಕೆ ಮಾರ್ಗದರ್ಶಕವಾದುವು. ಈ ಪೈಕಿಯ ಗ್ರಂಥವೊಂದು ಆಡಳಿತದ ಗೀತೆಯಂತಾಯಿತು. ಅದರಲ್ಲಿ ಸೂಚಿತವಾದ ಮೂರು ತತ್ತ್ವಗಳು ಹೀಗಿವೆ : 1. ರಾಷ್ಟ್ರೀಯತೆ–ವಿದೇಶೀಯರ ಆಧಿಪತ್ಯವನ್ನು ಚೀನದಿಂದ ಹೊರಕ್ಕೆ ಅಟ್ಟುವುದು.; 2. ಪ್ರಜಾಸತ್ತೆ–ಸರ್ಕಾರ ಜನರಿಂದ, ಜನರಿಗಾಗಿ ; 3. ಜೀವನ–ಎಲ್ಲ ಜನರಿಗೂ ಆರ್ಥಿಕ ಸುರಕ್ಷತೆ.

1926ರಲ್ಲಿ ಸರ್ಕಾರದ ಸೇನೆಗಳು ಉತ್ತರಾಭಿಮುಖವಾಗಿ ನುಗ್ಗಿ ಕಾರ್ಯಾಚರಣೆ ನಡೆಸಿದುವು. ಇದರ ನಾಯಕರು ಚಿಯಾಂಗ್ ಕೈ–ಷೇಕ್. ಇವರ ಸೇನೆಗೆ ಸರಿಯಾದ ಪ್ರತಿಭಟನೆ ಬರಲಿಲ್ಲ. 1927ರ ಆದಿಭಾಗದಲ್ಲಿ ಇದು ಯಾಂಗ್‌ಟ್ಸೀ ಕಣಿವೆಯನ್ನು ಪ್ರವೇಶಿಸಿತು. ಷಾಂಗ್‌ಹೈನಂಥ ಮುಖ್ಯ ನಗರಗಳು ಇದರ ವಶವಾದುವು. ಆದರೆ ಈ ಸರ್ಕಾರದ ಗುಂಪಿನಲ್ಲಿ ಒಳಜಗಳಗಳು ಕಾಣಿಸಿಕೊಂಡುವು. ಮಂದಗಾಮಿಗಳು, ತೀವ್ರಗಾಮಿಗಳು ಎಂಬ ಎರಡು ಪಂಗಡಗಳಾದುವು. ಚಿಯಾಂಗರ ನಾಯಕತ್ವದಲ್ಲಿ ಮಂದಗಾಮಿಗಳು ನ್ಯಾನ್ಕಿಂಗಿನಲ್ಲಿ ಸರ್ಕಾರವನ್ನು ಸ್ಥಾಪಿಸಿದರು. ವಾಮಪಕ್ಷದ ಮೇಲೆ ಚಿಯಾಂಗ್ ಬಲಪ್ರಯೋಗ ಮಾಡಿದರು. ಕಮ್ಯುನಿಸ್ಟ್ ಸಂಬಂಧ ತೊಡೆದುಹಾಕಲು ಉಗ್ರಕ್ರಮಗಳನ್ನು ಅನುಸರಿಸಿದರು. ಕ್ಯಾಂಟನ್‌ನಲ್ಲಿ ಒಂದು ಬಂಡಾಯವೆದ್ದಿತು. ಇದನ್ನು ಅಡಗಿಸಲಾಯಿತು. ಇದರಲ್ಲಿ ಐದು ಸಾವಿರ ಜನ ಬಲಿಯಾದರು. ಕಮ್ಯುನಿಸ್ಟ್ ಸಲಹೆಗಾರರು ರಷ್ಯಕ್ಕೆ ವಾಪಸಾಗಬೇಕಾಯಿತು. ತೀವ್ರಗಾಮಿಗಳನೇಕರು, ಸುನ್ ಯಾಟ್‌ಸೇನ್‌ನ ಹೆಂಡತಿ ಕೂಡ, ದೇಶದಿಂದ ಉಚ್ಚಾಟನೆಗೊಂಡರು. ಆದರೆ ನ್ಯಾನ್ಕಿಂಗ್ ಸರ್ಕಾರಕ್ಕೆ ಹಣದ ಕೊರತೆಯುಂಟಾಯಿತು. ಕೊನೆಗೆ ಷಾಂಗ್‌ಹೈನ ವಿದೇಶೀ ಬ್ಯಾಂಕುಗಳ ನೆರವನ್ನು ಅವಲಂಬಿಸಬೇಕಾಯಿತು.

1927ರಲ್ಲಿ ಪ್ರಾಪ್ತವಾದ ಒಡಕು ಚೀನದ ಆಧುನಿಕ ಇತಿಹಾಸದಲ್ಲಿ ಅತ್ಯಂತ ಮುಖ್ಯ ಘಟನೆ. ಕ್ರಾಂತಿಕಾರಿ ಚಳವಳಿ ತ್ವರಿತವಾಗಿ ಮಾರ್ಕ್ಸ್ ತತ್ತ್ವಪ್ರತಿಪಾದನೆಯಲ್ಲಿ ತಲ್ಲೀನವಾಯಿತು. ಚಿಯಾಂಗ್ ಸರ್ಕಾರ ವಾಮ ಪಕ್ಷದವರ ಮೇಲೆ ನಡೆಸಿದ ಕಾರ್ಯಾಚರಣೆಗೆ ಪ್ರತಿಯಾಗಿ ತೆತ್ತ ಬೆಲೆ ಅಲ್ಪವಲ್ಲ. ಕೇವಲ ತೀವ್ರಪಂಥದವರು ಮಾತ್ರವಲ್ಲ, ನ್ಯಾಯವಾದ ಸುಧಾರಣೆಗಳು ಬೇಕೆನ್ನುತ್ತಿದ್ದ ಮಂದಗಾಮಿಗಳೂ ವಿರೋಧಿಗಳಾದರು. 1927ರ ತರುವಾಯ ರಾಷ್ಟ್ರೀಯ ಆಡಳಿತ ಕಂದಾಚಾರದ ನೀತಿಗಳಿಗೆ ಒಳಗಾಗಿ ಜನಸಾಮಾನ್ಯರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥವಾಯಿತು. ಅದರ ಸ್ವರೂಪವೇ ಮಾರ್ಪಟ್ಟಿತು. ಕ್ರಮೇಣ ಅದು ಪಟ್ಟಣಿಗರ, ಉದ್ಯಮಿಗಳ, ವ್ಯಾಪಾರಗಾರರ ಮತ್ತು ಬ್ಯಾಂಕಿಂಗ್ ಗುಂಪಿನ ಕೈಗೊಂಬೆಯಾಯಿತು.

1927ರಲ್ಲಿ ಚಿಯಾಂಗ್ ಕೈ–ಷೇಕ್ ಸುನ್ ಯಾಟ್‌ಸೇನ್‌ನ ಹೆಂಡತಿಯ ತಂಗಿಯನ್ನು ಮದುವೆಯಾದರು. ಮುಂದಿನ ವರ್ಷ ಪಕ್ಷದ ಸೇನೆಗಳು ಪುನಃ ಉತ್ತರಕ್ಕೆ ಸಾಗಿ ಪೀಕಿಂಗನ್ನು ಪ್ರವೇಶಿಸಿದುವು. ಶಾಂತಿ ಒಪ್ಪಂದವಾಗಿ ಮತ್ತೊಮ್ಮೆ ರಾಷ್ಟ್ರೈಕ್ಯದ ಸಾಧ್ಯತೆ ತೋರಿತು. ರಾಷ್ಟ್ರೀಯ ಜೀವನದಲ್ಲಿ ಹೊಂದಾಣಿಕೆ ಇರಲಿಲ್ಲ. ಅನೇಕ ಕಡೆಗಳಲ್ಲಿ ದರೋಡೆಗಳಾಗುತ್ತಿದ್ದುವು. ವಾಯವ್ಯದಲ್ಲಿ ಕ್ಷಾಮವುಂಟಾಗಿ ಲಕ್ಷಗಟ್ಟಲೆ ಜನ ಸತ್ತರು. 1929ರಲ್ಲಿ ಕೆಲವು ಸೇನಾಧಿಕಾರಿಗಳು ಸರ್ಕಾರದ ಆಡಳಿತ ನೀತಿ ಕುರಿತು ಅಸಮಾಧಾನಗೊಂಡು ಹೊರಬಿದ್ದು ದುಷ್ಕೃತ್ಯಗಳಲ್ಲಿ ನಿರತರಾದರು. ಚಿಯಾಂಗ್ ಸರ್ಕಾರ ಈ ವಿರೋಧವನ್ನೂ ಜಯಿಸಿ ಭದ್ರವಾಯಿತು.

1927ರ ಕಾರ್ಯಾಚರಣೆಯ ಫಲವಾಗಿ ದೇಶಭ್ರಷ್ಟವಾಗಿದ್ದ ಚೀನೀ ಕಮ್ಯೂನಿಸ್ಟರ ಗುಂಪು ಮತ್ತೆ ತಲೆ ಎತ್ತತೊಡಗಿತು. ಅವರು ದಕ್ಷಿಣ ಚೀನದ ಗುಡ್ಡಗಾಡುಗಳಲ್ಲಿ ಅವಿತುಕೊಂಡು ಸರ್ಕಾರವನ್ನು ಸ್ಥಾಪಿಸಿಕೊಂಡರು. ಜಿಯಾಂಗ್‌ಸೀ ಎಂಬಲ್ಲಿ ಇದು ಪ್ರಬಲವಾಯಿತು. 1931ರ ನವೆಂಬರ್ ತಿಂಗಳಲ್ಲಿ ಚೀನೀ ಸೋವಿಯೆತ್ ಗಣರಾಜ್ಯದ ಸ್ಥಾಪನೆಯಾಯಿತು.

ಕಮ್ಯೂನಿಸ್ಟ್ ಪಕ್ಷ ಹೀಗೆ ವ್ಯಾಪಕ ಕ್ರಾಂತಿಗಾಗಿ ಸನ್ನಾಹ ನಡೆಸುತ್ತಿತ್ತು. ಹಲವು ನಾಯಕರು ಸೋವಿಯೆತ್ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದವರು. ಅಂದಿನ ಸರ್ಕಾರದ ಉಪೇಕ್ಷೆಯಿಂದ ಗ್ರಾಮಪ್ರದೇಶಗಳಲ್ಲಿ ಜನಿಸಿದ್ದ ಅಸಂತುಷ್ಟಿಯನ್ನು ಈ ನಾಯಕರು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಯತ್ನಿಸಿದರು. ಮಾರ್ಕ್ಸ್ ತತ್ತ್ವಗಳನ್ನು ಹಬ್ಬಿಸಲು

ಅನುವಾದರು. ಚೀನದ ರಾಷ್ಟ್ರೀಯ ಪಕ್ಷದವರು ಚೀನವನ್ನು ಆಧುನಿಕಗೊಳಿಸಲು ಯತ್ನಿಸಿದರಾದರೂ ಅವರ ಗಮನವೆಲ್ಲ ಪಟ್ಟಣಗಳ ಕಡೆಗೇ ಇದ್ದದ್ದು ಬಾಧಕವೆನಿಸಿತು. ಇದನ್ನೆಲ್ಲ ಮಾವೊ ತ್ಸೆ-ಡುಂಗ್ ಚೆನ್ನಾಗಿ ಅರ್ಥಮಾಡಿಕೊಂಡು ಸಮಯ ಕಾಯುತ್ತಿದ್ದರು. ಒಟ್ಟಿನಲ್ಲಿ ರೈತರ ಕಷ್ಟ ಕಾರ್ಪಣ್ಯಗಳೇನು ಎಂಬುದನ್ನು ಮನನಮಾಡಿದರು. ಸುಧಾರಣೆಗೆ ಕೈ ಹಾಕಿದರು. ಇದರಿಂದ ರೈತರಲ್ಲಿ ನವಚೇತನವುಂಟಾಯಿತು. ಆಶೆ ಅಂಕುರಿಸಿತು. ಈ ಕಾರ್ಯದಲ್ಲಿ ಮಾವೊ ಯಶಸ್ವಿಯಾದಾಗ ಚಿಯಾಂಗ್ ಸರ್ಕಾರ ಕಣ್ತೆರೆಯಿತು. 1931ರ ಆರಂಭದಿಂದ ನಾಲ್ಕು ವರ್ಷಗಳವರೆಗೆ ಐದು ಸಾರಿ ಕಮ್ಯೂನಿಸ್ಟರ ಮೇಲೆ ಕಾರ್ಯಾಚರಣೆ ನಡೆಯಿತು. ಜರ್ಮನ್ ಸೈನ್ಯಾಧಿಕಾರಿಗಳ ನೇತೃತ್ವದಲ್ಲಿ ಹತ್ತು ಲಕ್ಷ ಸೈನಿಕರು ನುಗ್ಗಿದರು. ಕಮ್ಯೂನಿಸ್ಟರು ಸೋತು ದಿಕ್ಕಾಪಾಲಾಗಿ ಚದುರಿದರು. ಮಾವೊ ಮತ್ತು ಅವರ ಅನುಯಾಯಿಗಳು, ಸಾವಿರಾರು ಮೈಲಿಗಳ ದೂರ ನಡೆದು ಆಗಾಗ್ಗೆ ಸೈನಿಕ ಪ್ರಹಾರಗಳನ್ನು ಎದುರಿಸುತ್ತ, ಬಹಳ ಕಷ್ಟ ನಷ್ಟ ಅನುಭವಿಸಿದರು. ಕಡೆಗೆ ಅಳಿದುಳಿದಿದ್ದವರು 1935ರ ಅಕ್ಟೋಬರಿನಲ್ಲಿ ಷೆನ್ಸೀ ಪ್ರಾಂತ್ಯದಲ್ಲಿ ತಂಗಿ ಯನ್ನಾನ್ ನಗರದಲ್ಲಿ ಕಮ್ಯೂನಿಸ್ಟ್ ಸರ್ಕಾರ ಸ್ಥಾಪಿಸಲು ಉದ್ಯುಕ್ತರಾದರು. ಈ ಘಟನೆಗಳು ನಡೆಯುತ್ತಿದ್ದಾಗಲೇ ಜಪಾನ್ ಮತ್ತೊಮ್ಮೆ ಚೀನದ ಮೇಲೆ ದಾಳಿ ನಡೆಸಿತು. ಚೀನದ ನೈಸರ್ಗಿಕ ಸಂಪತ್ತು ಅಪಾರವಾಗಿದ್ದದ್ದು ಮಾತ್ರವಲ್ಲ. ಅದು ಜಪಾನೀ ಪದಾರ್ಥಗಳಿಗೆ ಒಳ್ಳೆಯ ಮಾರುಕಟ್ಟೆಯೂ ಆಗಿದ್ದುದು ಜಪಾನಿನ ಆಕ್ರಮಣಾಕಾಂಕ್ಷೆಗೆ ಮುಖ್ಯ ಕಾರಣ.

1931ರ ಸೆಪ್ಟೆಂಬರ್ ತಿಂಗಳಿನಲ್ಲಿ ಜಪಾನು ಎಚ್ಚರಿಕೆ ನೀಡದೆ ಮಂಚೂರಿಯಲ್ಲಿದ್ದ ಚೀನೀ ಸೈನಿಕರ ಮೇಲೆ ಬಿತ್ತು. ಜಪಾನಿನ ದಾಳಿಯನ್ನು ತಡೆಯಲಾರದೆ ರಾಷ್ಟ್ರಗಳ ಕೂಟಕ್ಕೆ (ಲೀಗ್ ಆಫ್ ನೇಷನ್ಸ್) ಚೀನ ವಿನಂತಿ ಮಾಡಿಕೊಂಡಿತು. ಆ ಸಂಸ್ಥೆ ಜಪಾನನ್ನು ಖಂಡಿಸಿತಾದರೂ ಇದಕ್ಕಿಂತ ಹೆಚ್ಚಿನದೇನನ್ನೂ ಮಾಡಲಿಲ್ಲ. ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂಬುದು ಚೀನಕ್ಕೆ ಹೊಳೆಯಲಿಲ್ಲ. ಮಿತ್ರರಿಲ್ಲದ ಸ್ಥಿತಿಗೆ ಬಂದಿತ್ತು. ಜಪಾನೀ ಸರಕುಗಳನ್ನು ಬಹಿಷ್ಕರಿಸಬೇಕೆಂದು ಅದು ದೇಶಕ್ಕೆ ಕರೆಕೊಟ್ಟಿತು (1932). ಇದರ ಪರಿಣಾಮವಾಗಿ ಷಾಂಗ್‌ಹೈ ನಗರಕ್ಕೆ ಅಪಾರ ನಷ್ಟ ಸಂಭವಿಸಿತು. ಮಂಚೂರಿಯವನ್ನು ಅದೇ ವರ್ಷದಲ್ಲಿ ಜಪಾನ್ ಆಕ್ರಮಿಸಿ ಅದಕ್ಕೆ ಮಂಚುಕೋ ಎಂದು ನಾಮಕರಣಮಾಡಿತು. ಸಿಂಹಾಸನತ್ಯಾಗ ಮಾಡಿದ್ದ ಮ್ಯಾಂಚೂ ಅರಸ ಹೊಸ ಆಡಳಿತದ ಪ್ರಥಮ ದೊರೆಯಾದ. ಜಪಾನ್ ತನ್ನ ದಂಡಯಾತ್ರೆಯನ್ನು ಮುಂದುವರಿಸಿ ತೀರ ದಕ್ಷಿಣಕ್ಕೆ ನುಗ್ಗಿತು. ಚೀನ ಜಪಾನಿನೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಮಂಚೂರಿಯ ಮತ್ತು ಉತ್ತರ ಚೀನಗಳ ಮೇಲೆ ಜಪಾನು ನಡೆಸಿದ ಆಕ್ರಮಣವನ್ನು ಅದು ಅಂಗೀಕರಿಸಲೇಬೇಕಾಗಿ ಬಂತು.

1933-1936ರಲ್ಲಿ ಜಪಾನ್ ಮತ್ತು ಚೀನಗಳ ನಡುವೆ ಶಾಂತಿ ನೆಲೆಸಿತ್ತು. ಉತ್ತರದಲ್ಲಿ ಜಪಾನ್ ತನ್ನ ಸ್ಥಾನಗಳನ್ನು ಭದ್ರಗೊಳಿಸಿಕೊಳ್ಳಲು ಯತ್ನಿಸುತ್ತಿದ್ದಾಗಲೇ ಚೀನದ ರಾಷ್ಟ್ರೀಯ ಸರ್ಕಾರ ಚಿಯಾಂಗರ ನಾಯಕತ್ವದಲ್ಲಿ ಒಳ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುತ್ತಿತ್ತು. ಈ ಸಮಯದಲ್ಲೇ ಚೀನದ ಎರಡು ಪ್ರಬಲ ಗುಂಪುಗಳಿಗೂ ಘರ್ಷಣೆಯುಂಟಾಯಿತು. ಕಮ್ಯೂನಿಸ್ಟರನ್ನು ನಾಶಗೊಳಿಸಲು ಚಿಯಾಂಗ್ ಯತ್ನಿಸಿದರು. ಇದು ಸಾಧ್ಯವಾಗಲಿಲ್ಲ. ಕಮ್ಯೂನಿಸ್ಟರು ನ್ಯಾನ್ಕಿಂಗ್ ಪ್ರದೇಶದಿಂದ ವಾಯವ್ಯಕ್ಕೆ ಓಡಿಹೋಗಲು ಮಾತ್ರ ಸಾಧ್ಯವಾಯಿತು. ಚಿಯಾಂಗ್ ಕೈ-ಷೇಕ್‌ರಿಗೂ ಕಮ್ಯೂನಿಸ್ಟರಿಗೂ ಧ್ಯೇಯಧೋರಣೆಗಳ ಸಂಬಂಧವಾದ ಘರ್ಷಣೆ ಅವ್ಯಾಹತವಾಗಿ ನಡೆಯಿತು. ಕಮ್ಯೂನಿಸ್ಟರ ಆರ್ಥಿಕ ತತ್ತ್ವಗಳನ್ನು ಚಿಯಾಂಗ್ ವಿರೋಧಿಸಿದರು. ಚಿಯಾಂಗರು ದೇಶೀಯರ ವಿರುದ್ಧ ಕಾದಾಡಲು ನಿಂತಿರುವರೇ ವಿನಾ ಜಪಾನೀ ದಾಳಿಕೋರರ ವಿರುದ್ಧ ಸೆಣಸಲು ಸಿದ್ಧರಿಲ್ಲವೆಂದು ಕಮ್ಯೂನಿಸ್ಟರು ಹೇಳುತ್ತಿದ್ದರು.

1935ರಲ್ಲಿ ಚೀನೀ ಕಮ್ಯೂನಿಸ್ಟ್ ಪಕ್ಷದ ಪ್ರಮುಖರು ಜಪಾನರನ್ನು ಎದುರಿಸಲು ಐಕ್ಯರಂಗವಾಗಬೇಕೆಂದು ಒತ್ತಾಯಪಡಿಸಿದರು. 1936ರ ಡಿಸೆಂಬರ್ 12ರಂದು ಚಿಯಾಂಗ್ ಕೈ-ಷೇಕರನ್ನು ಕಮ್ಯೂನಿಸ್ಟರು ಎರಡು ವಾರಗಳ ಕಾಲ ದಿಗ್ಬಂಧನದಲ್ಲಿಟ್ಟಿದ್ದು, ಶತ್ರುವನ್ನೆದುರಿಸುವ ಸಲುವಾಗಿ ಐಕ್ಯರಂಗವೇರ್ಪಡಬೇಕೆಂದೂ ಅವರು ಅದರ ನಾಯಕರಾಗಬೇಕೆಂದೂ ಹೇಳಿದರು. ಚಿಯಾಂಗ್ ನ್ಯಾನ್ಕಿಂಗಿಗೆ ಹಿಂದಿರುಗಿದರು. ರಾಷ್ಟ್ರೀಯ ಸರ್ಕಾರದವರು ಮತ್ತು ಕಮ್ಯೂನಿಸ್ಟರು ಸಹವರ್ತಿಸಿ ಜಪಾನಿನ ಮುಂದಿನ ದಾಳಿಯನ್ನು ಎದುರಿಸಲು ತಯಾರಾದರು.

ಹೊರಗಿನ ದಾಳಿಕಾರರನ್ನು ಹಿಮ್ಮೆಟ್ಟಿಸುವುದೇ ಪ್ರಥಮ ಕರ್ತವ್ಯವೆಂದು ಮಾವೊ ಬಗೆದು, ಒಗ್ಗಟ್ಟು ಸಾಧಿಸಲು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳಿಗೆ ಕೈಹಾಕಿದರು. ಇದರಲ್ಲಿ ಯಾವ ಸಂಶಯಕ್ಕೂ ಆಸ್ಪದವಿರಬಾರದೆಂಬುದು ಅವರ ಆಶಯ. ಮುಖ್ಯವಾಗಿ ನ್ಯಾನ್ಕಿಂಗ್ ಸರ್ಕಾರದ ವಿರುದ್ಧ ಹೋರಾಡುವುದಿಲ್ಲವೆಂದೂ ಜಪಾನಿನ ವಿರುದ್ಧ ಕಾದಾಡಲು ತಮ್ಮ ಸೇನೆಯನ್ನು ರಾಷ್ಟ್ರೀಯ ಸೇನೆಯೊಡನೆ ಮಿಲನಗೊಳಿಸುವುದಾಗಿಯೂ ಸಾರಿದರು.

ಜಪಾನ್ ಪುನಃ ಜುಲೈ 7ರಂದು ಚೀನದ ಮೇಲೆ ಬಿತ್ತು. ಮೊದಲು ಕದನ ಆರಂಭವಾದ್ದು ಉತ್ತರದಲ್ಲಿ. ಈ ಮಧ್ಯೆ ದಕ್ಷಿಣದಲ್ಲಿ ಜಪಾನಿಗಳು ಷಾಂಗ್ ಹೈಯನ್ನು ವಶಪಡಿಸಿಕೊಂಡು ನ್ಯಾನ್ಕಿಂಗ್ ಹಿಡಿಯಲು ಯಾಂಗ್‌ಟ್ಸೀ ಕಣಿವೆಯವರೆಗೆ ರಭಸದಿಂದ ನುಗ್ಗಿದರು. ಚೀನೀಯರು ಶರಣಾಗತರಾಗದೆ ಹಿಮ್ಮೆಟ್ಟಿ ಯಾಂಗ್‌ಟ್ಸೀ ಮೇಲ್ಭಾಗದ ಚುಂಗ್‌ಕಿಂಗ್ ಎಂಬಲ್ಲಿ ತಮ್ಮ ರಾಜಧಾನಿಯನ್ನು ಸ್ಥಾಪಿಸಿ ಅಲ್ಲಿಂದ ಯುದ್ಧ ಮುಂದುವರಿಸಿದರು. ಉತ್ತರದಲ್ಲಿ ಚೀನೀ ಸೈನಿಕರು ಹಿಮ್ಮೆಟ್ಟಿದರು. ಕಡೆಗೆ ಜಪಾನೀಯರ ಸರ್ಕಾರ ಪೈಪಿಂಗ್‌ನಲ್ಲಿ ಸ್ಥಾಪಿತವಾಯಿತು. ಯುದ್ಧ ಮುಂದುವರಿಯಿತು. 1941ರ ವೇಳೆಗೆ ಚೀನದ ಟಿನ್‌ಟ್ಸಿನ್ ಮತ್ತು ಪೀಕಿಂಗ್ ಪ್ರಾಂತ್ಯವೆಲ್ಲ ಜಪಾನಿನ ವಶವಾಯಿತು. ಅಲ್ಲದೆ ಷಾಂಗ್‌ಹೈ, ಹ್ಯಾಂಗ್‌ಚೌ, ನ್ಯಾನ್ಕಿಂಗ್ ಮುಂತಾದ ಪಟ್ಟಣಗಳೂ ರೇವುಗಳೂ ರೈಲ್ವೆಸಾರಿಗೆ ಸಂಪರ್ಕಗಳೂ ಅದರ ವಶವಾದುವು. ಗಣರಾಜ್ಯ ಸರ್ಕಾರ ಪಲಾಯನ ಮಾಡಿತು. ಜಪಾನು ನ್ಯಾನ್ಕಿಂಗ್‌ನಲ್ಲಿ ವಾಂಗ್ ಚಿಂಗ್ ಎಂಬುವನ ನೇತೃತ್ವದಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸಿತು.



**ಪ್ರತಿಜೀವಿರೋಧಕ ಮುಖವಾಡಗಳನ್ನು ಧರಿಸಿರುವ ಜನತಾ ವಿಮೋಚನಾ ಸೇನೆಯ ಸಮವಸ್ತ್ರಧಾರಿಗಳು**

ಇಷ್ಟಾದರೂ ಚೀನ ಧೃತಿಗೆಡಲಿಲ್ಲ. ಮತ್ತೊಮ್ಮೆ ಎಲ್ಲ ಭೇದಭಾವಗಳನ್ನು ಮರೆತು ಕಮ್ಯೂನಿಸ್ಟರೂ ರಾಷ್ಟ್ರೀಯ ಸರ್ಕಾರದವರೂ ಕಲೆತು ಜಪಾನನ್ನು ಎದುರಿಸಬೇಕೆಂದು ಸಂಕಲ್ಪಿಸಿದರು. ಆಗ ಚೀನಕ್ಕಿದ್ದದ್ದು ಜನಬಲ ಮತ್ತು ಆತ್ಮಬಲ ಮಾತ್ರ. ಈ ಬಲದಿಂದ ಬಲಾಢ್ಯವಾದ ಜಪಾನಿನೊಡನೆ ಬಲವಾಗಿ ಕಾದಾಡಿತು. ಚುಂಗ್‌ಕಿಂಗ್ ರಾಜಧಾನಿಯ ಸುತ್ತ ಹೊಸ ಪ್ರಾಂತ್ಯವನ್ನು ನಿರ್ಮಾಣ ಮಾಡಿ, ರಕ್ಷಣೆ, ಸಾರಿಗೆ ಸಂಪರ್ಕ, ಕೈಗಾರಿಕೆಗಳು, ಶಾಲೆಗಳು, ವಿಶ್ವವಿದ್ಯಾನಿಲಯಗಳು ಇವನ್ನೆಲ್ಲ ವ್ಯವಸ್ಥೆ ಮಾಡಿತು. ವಾಂಗ್ ಚಿಂಗ್ ಆಡಳಿತಕ್ಕೆ ಅಮೆರಿಕ ಅಂಗೀಕಾರ ಕೊಡಲಿಲ್ಲ. ಚೀನದಿಂದ ಕಾಲ್ತೆಗೆಯಬೇಕೆಂದು ಜಪಾನಿಗೆ ಅದು ಎಚ್ಚರಿಕೆ ನೀಡಿತು. ಎರಡನೆಯ ಮಹಾಯುದ್ಧದಲ್ಲಿ ಜಪಾನು ಸೋಲುತ್ತ ನಡೆದು ಕೊನೆಗೆ ಸಂಪೂರ್ಣವಾಗಿ ಶರಣಾಯಿತು.

ಜಪಾನಿನ ಪರಾಜಯದಿಂದ ಚೀನಕ್ಕೆ ಅನುಕೂಲವಾಯಿತು. 50 ವರ್ಷಗಳಲ್ಲಿ ಚೀನದಿಂದ ಜಪಾನು ಗಳಿಸಿದ್ದನ್ನೆಲ್ಲ ಚೀನಕ್ಕೆ ಬಿಟ್ಟುಕೊಡಬೇಕಾಗಿ ಬಂತು. ಕಮ್ಯೂನಿಸ್ಟ್ ಮತ್ತು ರಾಷ್ಟ್ರೀಯ ಚೀನ ಸರ್ಕಾರಗಳ ನಡುವೆ ಒಗ್ಗಟ್ಟು ಸಾಧಿಸಲು ನಡೆಸಿದ ಪ್ರಯತ್ನಗಳೆಲ್ಲ

ವಿಫಲವಾಗಿ ಇವೆರಡೂ ಮತ್ತೆ ಆಡಳಿತಕ್ಕಾಗಿ ಪರಸ್ಪರ ಸ್ಪರ್ಧಿಸಿದುವು. ಕಮ್ಯೂನಿಸ್ಟ್ ಆಡಳಿತ ದಕ್ಷವೂ ಸುವ್ಯವಸ್ಥಿತವೂ ಶಕ್ತಿಯುತವೂ ಆಗಿತ್ತು. ಕಮ್ಯೂನಿಸ್ಟರ ಕೈ ಮೇಲಾಗಿ 1849ರಲ್ಲಿ ಚಿಯಾಂಗ್ ಕೈ-ಷೆಕ್ ಫಾರ್ಮೋಸಕ್ಕೆ ಓಡಿಹೋಗಬೇಕಾಯಿತು. ಅಲ್ಲಿ ಅಮೆರಿಕನ್ನರ ರಕ್ಷಣೆಯಲ್ಲಿ ರಾಷ್ಟ್ರೀಯ ಸರ್ಕಾರವನ್ನು ಮುಂದುವರಿಸಿದರು. ಆ ವರ್ಷ ಕಮ್ಯೂನಿಸ್ಟರು ಚೀನೀ ಮೂಲ ನಾಡಿನಲ್ಲಿ ಜನತಾ ಗಣರಾಜ್ಯವನ್ನು ಘೋಷಿಸಿ ಅಧಿಕಾರ ಸ್ಥಾಪಿಸಿದರು. (ಎಂ.ವಿ.ಕೆ)

ಅನೇಕ ರಾಷ್ಟ್ರಗಳು ಕಮ್ಯೂನಿಸ್ಟ್ ಚೀನಕ್ಕೆ ಮನ್ನಣೆ ನೀಡಿದುವು. 1950ರಲ್ಲಿ ಕೊರಿಯ ಯುದ್ಧದಲ್ಲಿ ಚೀನ ಭಾಗವಹಿಸಿ, ಉತ್ತರ ಕೊರಿಯಕ್ಕೆ ಬೆಂಬಲ ನೀಡಿತು. ಅದೇ ವರ್ಷ ಚೀನೀ ಸೇನೆ ಟಿಬೆಟನ್ನು ವಶಪಡಿಸಿಕೊಂಡಿತು. 1956ರಲ್ಲಿ ಇಂಡೋನೇಷ್ಯದ ಬಾಂಡುಂಗ್‌ನಲ್ಲಿ ನಡೆದ ಏಷ್ಯ-ಆಫ್ರಿಕ ಸಮ್ಮೇಳನದಲ್ಲಿ ಭಾಗವಹಿಸಿತು. 1956ರಲ್ಲಿ ಟಿಬೆಟಿನಲ್ಲಿ ದಲೈ ಲಾಮಾರನ್ನು ಸರ್ಕಾರದ ಮುಖ್ಯಸ್ಥರನ್ನಾಗಿ ಮಾಡಲಾಯಿತು. ನಿಜವಾದ ಅಧಿಕಾರವೆಲ್ಲ ಕಮ್ಯೂನಿಸ್ಟ್ ಸರ್ಕಾರದ ಕೈಯಲ್ಲೇ ಇತ್ತು. 1959ರಲ್ಲಿ ಚೀನೀಯರ ವಿರುದ್ಧ ಟಿಬೆಟಿನಲ್ಲಿ ದಂಗೆ ನಡೆಯಿತು. ಚೀನೀಯರು ಅದನ್ನು ಹತ್ತಿಕ್ಕಿದರು. ದಲೈ ಲಾಮಾ ಭಾರತಕ್ಕೆ ಓಡಿಹೋದರು. ಪಂಚೆನ್ ಲಾಮಾ ಚೀನೀಯರ ನೆರವಿನಿಂದ ಅಧಿಕಾರಕ್ಕೆ ಬಂದರು. 1965ರಲ್ಲಿ ಮತ್ತೊಬ್ಬನನ್ನು ಅಧಿಕಾರಕ್ಕೆ ತರಲಾಯಿತು. 1962ರಲ್ಲಿ ಚೀನಕ್ಕೂ ಭಾರತಕ್ಕೂ ನಡುವೆ ಗಡಿ ಘರ್ಷಣೆ ನಡೆಯಿತು. ಇದರಿಂದ ಈ ಎರಡೂ ದೇಶಗಳ ಪರಸ್ಪರ ಸಂಬಂಧಗಳು ಹದಗೆಟ್ಟುವು. 1954ರಿಂದ 1972ರ ವರೆಗೆ ನಡೆದ ವಿಯೆಟ್ನಾಮ್ ಕಾಳಗದಲ್ಲಿ ಕಮ್ಯೂನಿಸ್ಟ್ ಚೀನ ಉತ್ತರ ವಿಯೆಟ್ನಾಮ್‌ಗೆ ನೆರವು ನೀಡುತ್ತಿತ್ತು. ದಕ್ಷಿಣ ವಿಯೆಟ್ನಾಂ ಸರ್ಕಾರದ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದ ಕಮ್ಯೂನಿಸ್ಟ್ ಪಡೆಗಳಿಗೂ ಚೀನೀಯರ ನೆರವು ದೊರಕಿತು. 1949ರಿಂದ 1971ರ ವರೆಗೆ ಚೀನೀ ಜನತಾ ಗಣರಾಜ್ಯಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನವಿರಲಿಲ್ಲ. ಅಮೆರಿಕ ಅದಕ್ಕೆ ಅಡ್ಡಿ ತರುತ್ತಿತ್ತು. ಭಾರತ, ಸೋವಿಯತ್ ದೇಶ ಮೊದಲಾದ ಹಲವು ರಾಷ್ಟ್ರಗಳು ಕಮ್ಯೂನಿಸ್ಟ್ ಚೀನಕ್ಕೆ ಸದಸ್ಯತ್ವ ಕೊಡಬೇಕೆಂದು ವಾದಿಸಿ, ಬೆಂಬಲ ನೀಡಿದವು. ಕಮ್ಯೂನಿಸ್ಟ್ ಚೀನೀ ಸರ್ಕಾರದ ಬದಲಾಗಿ ಫಾರ್ಮೋಸ (ಟೈವಾನ್) ಸರ್ಕಾರಕ್ಕೆ ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವವಿತ್ತು. ಈ ಬಗ್ಗೆ ಅಮೆರಿಕದ ಧೋರಣೆಯಲ್ಲಿ ಬದಲಾವಣೆಯಾದ್ದು 1971ರಲ್ಲಿ. ವಿಶ್ವಸಂಸ್ಥೆಯಲ್ಲಿ ಕಮ್ಯೂನಿಸ್ಟ್ ಚೀನದ ಸದಸ್ಯತ್ವಕ್ಕೆ ಅದು ಬೆಂಬಲ ನೀಡಿತು. 1971ರಲ್ಲಿ ಕಮ್ಯೂನಿಸ್ಟ್ ಚೀನ ವಿಶ್ವಸಂಸ್ಥೆಯ ಭದ್ರತಾ ಸಭೆಯಲ್ಲಿ ಖಾಯಂ ಸ್ಥಾನ ಪಡೆಯಿತು.



ಟಿಬೆಟ್ಟಿನ ಲಾಸ ನಗರದ ಪೊಟಾಲ ಅರಮನೆ

1950-1960ರಲ್ಲಿ ಕಮ್ಯೂನಿಸ್ಟ್ ಚೀನ-ಸೋವಿಯೆತ್ ಸಂಬಂಧಗಳು ಸೌಹಾರ್ದ ಪೂರ್ಣವಾಗಿದ್ದುವು. ಸೋವಿಯೆತ್ ದೇಶ ಚೀನಕ್ಕೆ ಎಲ್ಲ ರೀತಿಯ ಆರ್ಥಿಕ ನೆರವನ್ನೂ ನೀಡಿತು. ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಚೀನಕ್ಕೆ ಬೆಂಬಲ ತೋರಿಸಿತು. ಕ್ರಮೇಣ ಇವುಗಳ ನಡುವಣ ಬಾಂಧವ್ಯಗಳಲ್ಲಿ ವಿರಸವುಂಟಾಯಿತು. ಸೋವಿಯೆತ್ ನೀತಿಯನ್ನು ಚೀನ ವಿರೋಧಿಸಲು ಪ್ರಾರಂಭಿಸಿತು. ಏಷ್ಯ ಭೂಭಾಗದಲ್ಲಿ ತನ್ನ ಮಹತ್ವಾತ್ವವನ್ನು ಸ್ಥಾಪಿಸುವುದು ಚೀನದ ಹವಣಿಕೆ. ಈ ಕಾರಣಗಳಿಂದ ಈಚೆಗೆ ಈ ರಾಷ್ಟ್ರಗಳ ನಡುವಣ ಸಂಬಂಧಗಳು ಹಿತಕರವಾಗಿಲ್ಲ. 1950-1971ರ ಅವಧಿಯಲ್ಲಿ ಪರಸ್ಪರ ದ್ವೇಷ ಸಾಧಿಸುತ್ತಿದ್ದ ಚೀನ ಅಮೆರಿಕಗಳು ಪರಸ್ಪರ ಸ್ನೇಹಸಂಬಂಧ ಸ್ಥಾಪಿಸಿಕೊಂಡುವು. ಅಮೆರಿಕದ ಅಧ್ಯಕ್ಷ ನಿಕ್ಸನರು ಪೀಕಿಂಗಿಗೆ ಭೇಟಿ ನೀಡಿದರು. ಎರಡೂ ರಾಷ್ಟ್ರಗಳ ಬಾಂಧವ್ಯ ಇನ್ನೂ ಉತ್ತಮಗೊಳ್ಳುವ ಸೂಚನೆಗಳು ಕಂಡುಬಂದಿವೆ. ಇತ್ತೀಚೆಗೆ ಚೀನ ಪರಮಾಣು ಬಾಂಬ್ ಸ್ಫೋಟಿಸಿ ತಾನೂ ಪರಮಾಣು ಶಕ್ತಿ ರಾಷ್ಟ್ರಗಳ ಗುಂಪಿಗೆ ಸೇರಿತು.

ಕಮ್ಯೂನಿಸ್ಟ್ ಸರ್ಕಾರದ ನೇತೃತ್ವದಲ್ಲಿ ಆಂತರಿಕವಾಗಿ ಚೀನದಲ್ಲಿ ಬದಲಾವಣೆಗಳಾದವು. ಮಾವೋ ತ್ಸೆ ತುಂಗ್ ಚೀನದ ಮಹಾನಾಯಕ. ಅವರ ವಿಚಾರಧಾರೆಯಲ್ಲಿ ಚೀನೀಯರಿಗೆ ವಿಶ್ವಾಸವಿತ್ತು. ಆರ್ಥಿಕ ಪ್ರಗತಿ ಸಾಕಷ್ಟಾಯಿತು. ಆರ್ಥಿಕ ಯೋಜನೆಗಳು ಕಾರ್ಯಗತವಾದವು. ಮಾವೋ ಅಧಿಕಾರದ ವಿರುದ್ಧ ತಲೆಯೆತ್ತಿದ್ದ ವ್ಯಕ್ತಿಗಳನ್ನು, ಭಾವನೆಗಳನ್ನು ಹತ್ತಿಕ್ಕಲು 1966ರಲ್ಲಿ ಸಾಂಸ್ಕೃತಿಕ ಕ್ರಾಂತಿ ನಡೆಯಿತು. ಮಾವೋ ಪರವಾಗಿ ವಿದ್ಯಾರ್ಥಿಗಳು ರೆಡ್ ಗಾರ್ಡ್‌ಗಳೆಂಬ ಸಂಘ ರಚಿಸಿಕೊಂಡು ಮಾವೋ ವಿರುದ್ಧವಾಗಿದ್ದ ವ್ಯಕ್ತಿಗಳನ್ನು ನಾಶ ಮಾಡಿದರು. ವಿದ್ಯಾಭ್ಯಾಸ ಕ್ಷೇತ್ರದಲ್ಲೂ ಬದಲಾವಣೆಗಳಾದವು. (ಎಂ.ವಿ.ಕೆ.; ಜಿ.ಆರ್.ಆರ್.)

## V ಆರ್ಥಿಕ ಅಭಿವೃದ್ಧಿ

ಚೀನದ ಆಧುನಿಕ ಆರ್ಥಿಕ ಇತಿಹಾಸ 1842ರಲ್ಲಿ ಪ್ರಾರಂಭವಾಯಿತು ಎನ್ನಬಹುದು. ಆ ವರ್ಷ ಬ್ರಿಟಿಷರು ಭಾರತದ ಅಫೀಮನ್ನು ಚೀನದೊಳಕ್ಕೆ ತಂದರು. ಇದರಿಂದ ಚೀನ ಹೊರಜಗತ್ತಿಗೆ ಹೆಚ್ಚು ಪರಿಚಯವಾದಂತಾಯಿತು. ಆದರೆ ಈ ಅಫೀಮಿನ ವ್ಯವಹಾರ ಮತ್ತು ಅಭ್ಯಾಸದಿಂದ ಚೀನದ ಆರ್ಥಿಕ ಸ್ವಾವಲಂಬನೆ ಮತ್ತು ಆಂತರಿಕ ಭದ್ರತೆಯ ಬುಡವೇ ಅಲುಗಾಡುವಂತಾಯಿತು. ದೇಶ ಸ್ವತಂತ್ರ ಸಾರ್ವಭೌಮಾಧಿಕಾರವನ್ನು ಪಡೆದಿದ್ದರೂ ವಾಸ್ತವವಾಗಿ ಅದು ಅರೆವಸಾಹತಿನ ಮಟ್ಟಕ್ಕಿಳಿದಿತ್ತು. ಇದು ಆರ್ಥಿಕ, ಸಾಮಾಜಿಕ ಬೆಸುಗೆಯನ್ನು ಸಡಿಲಿಸುವುದರ ಜೊತೆಗೆ ಸಮಾಜದಲ್ಲಿ ವರ್ಗಭೇದವನ್ನು ಹೆಚ್ಚಿಸಿತು. ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕೀಕರಣದಿಂದ ಕೃಷಿಯ ಪ್ರಾಬಲ್ಯ ಕುಗ್ಗಿತು. ಕೈಗಾರಿಕೋದ್ಯಮ ಮತ್ತು ಬಂಡವಾಳ ಹೂಡಿಕೆಗಳಲ್ಲಿ ವಿದೇಶಿ ಸ್ವಾಮ್ಯ ಹೆಚ್ಚಿತು. ಪಾಶ್ಚಾತ್ಯ ದೇಶಗಳ ಪ್ರಭಾವ ಮತ್ತು ಸವಾಲು ಚೀನದ ನಾಗರಿಕತೆ ಮತ್ತು ಜೀವನಕ್ರಮಗಳನ್ನು ಬದಲಾಯಿಸಿದುವು. ಚೀನೀಯರು ಆಧುನೀಕರಣದೆಡೆಗೆ ತಮ್ಮ ಒಲವು ತೋರಿಸಿದರು. ಹೀಗೆ 19ನೆಯ ಶತಮಾನದಲ್ಲಿ ಚೀನದ ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳು ಕಾಣಿಸಿಕೊಂಡುವು. ನಿಧಾನವಾಗಿಯಾದರೂ ಪ್ರಗತಿ ನಡೆದಿತ್ತು ಎಂಬುದು ಗಮನಾರ್ಹ.

ಚೀನದ ಆರ್ಥಿಕತೆಯ ಸ್ವರೂಪವನ್ನು 1911ರಲ್ಲಿ ಬದಲಾಯಿಸಿದ ಕೀರ್ತಿ, ಪ್ರಗತಿಪರ ವಿಚಾರ ದೃಷ್ಟಿಯನ್ನಿಟ್ಟುಕೊಂಡಿದ್ದ ಸುನ್ ಯಾಟ್‌ಸೆನ್‌ಗೆ ಸಲ್ಲುತ್ತದೆ. ಆ ವರ್ಷ ಮ್ಯಾಂಚೂ ಮನೆತನದ ಆಡಳಿತವನ್ನು ಕಿತ್ತೊಗೆದು ಹೊಸ ಶಕೆಯೊಂದನ್ನು ಚೀನದ ಇತಿಹಾಸದಲ್ಲಿ ಪ್ರಾರಂಭಿಸಲಾಯಿತು. ಅನಂತರ ಪ್ರಾರಂಭವಾದ ಒಂದನೆಯ ಮಹಾಯುದ್ಧ ಚೀನದ ಆರ್ಥಿಕಾಭಿವೃದ್ಧಿಗೆ ಹೊಸ ಸ್ಫೂರ್ತಿಯನ್ನು ನೀಡಿತು. ಆದರೆ ವಿದೇಶೀಯರ ಹಸ್ತಕ್ಷೇಪ ದೇಶದ ಆರ್ಥಿಕ ವ್ಯವಸ್ಥೆಯನ್ನು ಹದಗೆಡಿಸಿತು. ಸನ್ ಯಾಟ್‌ಸೆನ್ ಕಟ್ಟಿದ ಗ್ವೋಮಿನ್ ಟಾಂಗ್ ಪಕ್ಷದಲ್ಲಿ 1929ರ ವೇಳೆಗೆ ಒಡಕುಂಟಾಯಿತು. ಪಕ್ಷದಲ್ಲಿ ಪ್ರಬಲರೆನಿಸಿಕೊಂಡಿದ್ದ ಕೆಲವರಿಗೆ ರಷ್ಯದ ಸಂಪರ್ಕವಾಗಲಿ ಸಮಾಜವಾದದ ಪ್ರಚಾರವಾಗಲಿ ಹಿಡಿಸಲಿಲ್ಲ. ಸಾಮ್ಯವಾದಿಗಳು ಪ್ರಬಲರಾಗುವರೆಂದು ತಿಳಿದ ಇವರು ಪ್ರತ್ಯೇಕ ರಾಷ್ಟ್ರನಿರ್ಮಾಣದ ಯೋಜನೆಯನ್ನು ಹಾಕಿಕೊಂಡರು. ಹೀಗೆ ಗ್ವೋಮಿನ್ ಟಾಂಗ್ ಸಾಮ್ಯವಾದ ವಿರೋಧಿ ಪಕ್ಷವೆನಿಸಿಕೊಂಡಿತು. ಈ ಭಿನ್ನಾಭಿಪ್ರಾಯದ ಫಲವಾಗಿ ರಾಷ್ಟ್ರೀಯ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಉದಯಿಸಿದುವು. ಅಂತರ್ಯುದ್ಧದಲ್ಲಿ ಕಮ್ಯೂನಿಸ್ಟ್ ಪಕ್ಷ ರಾಷ್ಟ್ರೀಯ ಪಕ್ಷದ ಮೇಲೆ ಜಯ ಗಳಿಸಿ ದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಈ ಮಧ್ಯೆ 1931ರಲ್ಲಿ ಜಪಾನೀ ಸೈನ್ಯ ಮಂಚೂರಿಯವನ್ನಾಕ್ರಮಿಸಿಕೊಂಡಿತು. 1937ರಲ್ಲಿ ಜಪಾನು ಇಡೀ ಚೀನವನ್ನು ಕಬಳಿಸುವ ಹವಣಿಕೆಯಲ್ಲಿತ್ತು. ಇದನ್ನರಿತ ಚೀನೀಯರು ಪಕ್ಷವಿಪಕ್ಷ ವೈಷಮ್ಯವನ್ನು ಮರೆತು ಒಟ್ಟುಗೂಡಿದರು. ಆದರೆ ಚಿಯಾಂಗ್ ಕೈ-ಷೇಕರ ಅಲಕ್ಷ್ಯ ಮನೋಭಾವದಿಂದಾಗಿ, ಜಪಾನೀಯರನ್ನು ಎದುರಿಸುವ ವೇಳೆಗಾಗಲೇ ಚೀನದ ವಿಸ್ತಾರ ಪ್ರದೇಶ ಜಪಾನೀಯರ ವಶವಾಗಿತ್ತು. ಇದು ದೇಶದ ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿತು.

ಚೀನ-ಜಪಾನ್ ಯುದ್ಧ 1939ರಲ್ಲಿ ಪ್ರಾರಂಭವಾದ ಎರಡನೆಯ ಮಹಾಯುದ್ಧದ ಒಂದು ಭಾಗವಾಗಿ ಪರಿಣಮಿಸಿತು. ಇದರ ಪರಿಣಾಮವಾಗಿ ಇತರ ದೇಶಗಳಂತೆ ಚೀನದಲ್ಲೂ ಆಶೆಬಡಕತನ, ಲಂಚ, ಸ್ವಜನಪಕ್ಷಪಾತ, ಅಧಿಕ ತೆರಿಗೆ, ಅಗಾಧ ಪ್ರಾಣನಷ್ಟ, ಮಾನವ ಹಕ್ಕುಗಳ ಬಗ್ಗೆ ಅಗೌರವ ಹಾಗೂ ತಿರಸ್ಕಾರ - ಇವು ಹೆಚ್ಚಿದುವು. 1945ರಲ್ಲಿ ಜಪಾನು ಸೋತು ಶರಣಾಯಿತು. ಆದರೆ ಚೀನದಲ್ಲಿ ರಾಜಕೀಯ ಐಕಮತ್ಯ ಮಾತ್ರ ಬಹುದೂರದ ಮಾತಾಗಿಯೇ ಉಳಿಯಿತು. ಜನರು ಪ್ರಸ್ತುತ ಸರ್ಕಾರದ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದರು. ಕಮ್ಯೂನಿಸ್ಟರು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಇಡೀ ದೇಶದ ಮೇಲೆ ಸ್ವಾಮ್ಯ ಪಡೆದು ಹೊಸ ಸರ್ಕಾರವೊಂದನ್ನು ಸ್ಥಾಪಿಸಿದರು. ಇದರ ಫಲವಾಗಿ ಚೀನದಲ್ಲಿ ಸಮತಾವಾದ ಸ್ವರೂಪದ ಹೊಸ ಅರ್ಥವ್ಯವಸ್ಥೆಯೊಂದು ರೂಪುಗೊಂಡಿತು.

ಚೀನ-ಜಪಾನ್ ಯುದ್ಧ, ಎರಡನೆಯ ಮಹಾಯುದ್ಧ ಮತ್ತು ಅಂತರ್ಯುದ್ಧಗಳಿಂದಾಗಿ ಆರ್ಥಿಕತೆ ಛಿದ್ರಗೊಂಡಿತ್ತು. ಇದನ್ನು ನಿವಾರಿಸಿ ಆರ್ಥಿಕ ಸ್ಥಿರತೆಯ ಭರವಸೆ ಹೊಂದಲು ಒಂದು ಮಹಾ ಪ್ರಯತ್ನವೇ ಅಗತ್ಯವೆನಿಸಿತು. ಕಮ್ಯೂನಿಸ್ಟರ ಶಕ್ತಿಸಾಹಸಕ್ಕೆ ಆಗ ಇದೊಂದು ಸವಾಲು.

ಚೀನ-ಜಪಾನ್ ಯುದ್ಧಾರಂಭದಿಂದ ಜನತಾ ಗಣರಾಜ್ಯ ಸ್ಥಾಪನೆಯವರೆಗಿನ (1937-1949) ಹನ್ನೆರಡು ವರ್ಷಗಳಲ್ಲಿ ಚೀನದ ಆರ್ಥಿಕತೆಯಲ್ಲಿ ಹಲವು ಬದಲಾವಣೆಗಳಾದುವು. ಆ ಸಮಯದಲ್ಲಿ ಚೀನದ ಆರ್ಥಿಕ ಪರಿಸ್ಥಿತಿ ತುಂಬ ಅಸಮರ್ಪಕವಾಗಿತ್ತು. ಚೀನ ಕೃಷಿಪ್ರಧಾನ

ನಾಡಾಗಿತ್ತು. ಆದರೆ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ ಮತ್ತು ಕೃಷಿ ಉತ್ಪನ್ನಶಕ್ತಿಗಳ ದೃಷ್ಟಿಯಿಂದ ಪ್ರಾದೇಶಿಕ ಸಮತೆ ಇರಲಿಲ್ಲ. ಉದಾಹರಣೆಗೆ ದೇಶದ ಈಶಾನ್ಯ ಭಾಗದ ಪ್ರದೇಶದಲ್ಲಿ ಗೋದಿ, ಸೊಯಾ ಬೀನ್ಸ್ ಬೆಳೆದರೆ ಮಧ್ಯ ಮತ್ತು ಉತ್ತರ ಭಾಗಗಳಲ್ಲಿ ಚಹ, ರೇಷ್ಮೆ, ಹತ್ತಿ ಮತ್ತು ಹೊಗೆಸೊಪ್ಪು ಬೆಳೆಯುತ್ತಿದ್ದುವು. ಷಿನ್‌ಜಿಯಾಂಗ್, ಜಜಿಯಾಂಗ್, ಷಾಂಗ್‌ಹೈ, ಟಿಬೆಟ್ ಪ್ರದೇಶಗಳಲ್ಲಿ ಗೋದಿ, ಮುಸುಕಿನ ಜೋಳ, ದಕ್ಷಿಣ ಭಾಗದ ಪ್ರದೇಶಗಳಲ್ಲಿ ಬತ್ತ ಮತ್ತು ಆಲೂಗೆಡ್ಡೆ ಬೆಳೆಯುತ್ತಿದ್ದುವು. ಈ ಉತ್ಪನ್ನಗಳ ಪೈಕಿ ಚಹ ಮತ್ತು ರೇಷ್ಮೆ ರಫ್ತಾಗುತ್ತಿದ್ದುವು. ಆದರೆ ವಿದೇಶಿ ಪೈಪೋಟಿಯಿಂದ ವಿಶ್ವ ಮಾರುಕಟ್ಟೆಯಲ್ಲಿ ಚೀನದ ಚಹ ಮತ್ತು ರೇಷ್ಮೆ ವಸ್ತುಗಳಿಗೆ ಬೇಡಿಕೆ ಕಡಿಮೆಯಾಯಿತು. ಇದು ಚೀನದ ವಿದೇಶಿ ವಿನಿಮಯ ಸಮಸ್ಯೆಗಳನ್ನು ಉಲ್ಬಣಗೊಳಿಸಿತು. ಚೀನದ ರೈತ ಇತರ ಕೃಷಿಪ್ರಧಾನ ದೇಶಗಳ ರೈತರಿಗಿಂತ ಹೆಚ್ಚು ಉತ್ಪಾದಿಸಿದರೂ ಸರಾಸರಿ ಹಂಚಿಕೆಯ ದೃಷ್ಟಿಯಿಂದ ಅದು ತೀರ ಕಡಿಮೆ ಎನಿಸಿತ್ತು. ಇದರ ಪರಿಣಾಮವಾಗಿ ರೈತ ಕುಟುಂಬಗಳು ಅರೆಹೊಟ್ಟೆ ಊಟ ಮಾಡಬೇಕಾದ ಪರಿಸ್ಥಿತಿ ಒದಗಿತ್ತು. ಅಧಿಕ ದರದ ತೆರಿಗೆ, ಗೇಣಿ ಮತ್ತು ಬಡ್ಡಿ ತೆತ್ತು ಬದುಕುವುದೇ ಒಂದು ಸಮಸ್ಯೆಯಾಗಿತ್ತು. ದೊಡ್ಡ ಜಮೀನುಗಳು ಐಶ್ವರ್ಯವಂತರ ಮತ್ತು ವರ್ತಕವರ್ಗದವರ ಆಸ್ತಿಯಾಗಿದ್ದುವು. ಇದರಿಂದ ಗೇಣಿದಾರರು ವಾಸ್ತವವಾಗಿ ಗುಲಾಮರಂತೆಯೇ ಬಾಳಬೇಕಾದ ಪರಿಸ್ಥಿತಿಯಿತ್ತು. ಭೂ ಸಮಸ್ಯೆಯನ್ನು ನಿವಾರಿಸಿ ಕೃಷಿಕ ಮತ್ತು ಗೇಣಿದಾರರಿಗೆ ನ್ಯಾಯ ದೊರಕಿಸಿಕೊಡುವುದು ಕೇವಲ ಕಾಗದದ ಮೇಲಿನ ಯೋಜನೆಯಾಗಿಯೇ ಉಳಿದುಕೊಂಡಿತ್ತು. ಹೀಗೆ ರೈತವರ್ಗದ ಸ್ಥಿತಿಗತಿಗಳು ತುಂಬ ಅಸಮರ್ಪಕವಾಗಿದ್ದುವು.

ಈ ಅವಧಿಯಲ್ಲಿ ಸಾರಿಗೆ ಸಂಕರ್ಕ ಸಾಧನಗಳು ಅಷ್ಟು ತೃಪ್ತಿಕರವಾಗಿರಲಿಲ್ಲ ಪಾಶ್ಚಾತ್ಯ ದೇಶಗಳು ಚೀನದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಆಸಕ್ತ ಪ್ರದೇಶಗಳಲ್ಲಿ ಮಾತ್ರ ರೈಲುಮಾರ್ಗಗಳನ್ನು ನಿರ್ಮಿಸಿಕೊಂಡಿದ್ದುವು. ಇದರ ಫಲವಾಗಿ 1936ರ ವೇಳೆಗೆ ದೇಶಾದ್ಯಂತ ಒಟ್ಟು ಕೇವಲ 16,000 ಕಿ.ಮೀ. ರೈಲು ಮಾರ್ಗಗಳಿದ್ದುವು. ಚೀನ–ಜಪಾನ್ ಯುದ್ಧದಿಂದ ಇದು ಅಪಾರನಷ್ಟಕ್ಕೆ ಒಳಗಾಗಿತ್ತು. ರಸ್ತೆ ಸಾರಿಗೆ, ಒಳನಾಡಿನ ಜಲಮಾರ್ಗ ಮತ್ತು ಸಮುದ್ರಯಾನ ಸೌಲಭ್ಯಗಳೂ ಅಗತ್ಯಕ್ಕನುಗುಣವಾಗಿರಲಿಲ್ಲ. ವಿದೇಶಿ ವ್ಯಾಪಾರ ಚೀನವನ್ನು ಆರ್ಥಿಕ ಶೋಷಣೆಗೆ ಒಳಪಡಿಸಿತು. ಬ್ರಿಟನ್ ಮತ್ತು ಇತರ ಪಾಶ್ಚಾತ್ಯ ರಾಷ್ಟ್ರಗಳು ಏಕಪಕ್ಷೀಯ ವ್ಯಾಪಾರನೀತಿಯನ್ನು ಅನುಸರಿಸಿದ್ದುವು. ಇದರಿಂದ ಚೀನದ ಆರ್ಥಿಕಾಭಿವೃದ್ಧಿಗೆ ಸಾಕಷ್ಟು ಅವಕಾಶ ಇರಲಿಲ್ಲ.

ದೇಶದಲ್ಲಿ ಕೈಗಾರಿಕೀಕರಣ ತೃಪ್ತಿಕರವಾಗಿ ನಡೆಯುತ್ತಿರಲಿಲ್ಲ. ಏಕೆಂದರೆ, ಸಾಮಾನ್ಯವಾಗಿ ಎಲ್ಲ ಕೈಗಾರಿಕೋದ್ಯಮಗಳೂ ಇದ್ದದ್ದು ವಿದೇಶಿ ಒಡೆತನ ಮತ್ತು ಆಡಳಿತಗಳಲ್ಲಿ. 1931ರಲ್ಲಿ ಒಟ್ಟು ಬಂಡವಾಳ ಹೂಡಿಕೆಯಲ್ಲಿ ಬ್ರಿಟನ್, ಜಪಾನ್, ಅಮೆರಿಕ ಮತ್ತು ಫ್ರಾನ್ಸ್ ದೇಶಗಳು ಅನುಕ್ರಮವಾಗಿ ಸೇಕಡ 49, 24, 19 ಮತ್ತು 8ರಷ್ಟು ಪಾಲು ಹೊಂದಿದ್ದವು. ಕೈಗಾರಿಕೋದ್ಯಮಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸ್ಥಿತಿಗತಿಗಳು ಸಹ ತೀರ ಅತೃಪ್ತಿಕರವಾಗಿದ್ದುವು. ಕಾರ್ಮಿಕ ಚಳವಳಿಯನ್ನು ಹತ್ತಿಕ್ಕುವ ಪ್ರಯತ್ನಗಳು ನಡೆದಿದ್ದುವು. ಕುಶಲ ಕೆಲಸಗಾರರ ಸ್ಥಿತಿಯಂತೂ ತುಂಬ ಅಸಮರ್ಪಕವಾಗಿತ್ತು.

ಆರ್ಥಿಕ ಕ್ಷೇತ್ರದಲ್ಲಿ ಹಣಕಾಸು ಮತ್ತು ಬ್ಯಾಂಕುಗಳ ಪಾತ್ರ ಮಹತ್ತ್ವಪೂರ್ಣವೆಂದು ಪರಿಗಣಿಸಲಾಗಿತ್ತು. ಚೀನ ರಜತ ಪ್ರಮಿತಿ ಹಣ ಪದ್ಧತಿಯನ್ನು ಜಾರಿಗೆ ತಂದಿದ್ದರೂ ವಾಸ್ತವವಾಗಿ ಆಗ ಒಂದು ಖಚಿತ ಹಣಪದ್ಧತಿ ಇರಲಿಲ್ಲವೆಂಬುದು ಅಂದಿನ ಆರ್ಥಿಕ ಅವ್ಯವಸ್ಥೆಯಿಂದ ಗೊತ್ತಾಗುತ್ತದೆ. ಚಲಾವಣೆಯಲ್ಲಿದ್ದ ನಾಣ್ಯಗಳು ಒಂದೇ ತೂಕ ಮತ್ತು ವಿನ್ಯಾಸದಿಂದ ಕೂಡಿರಲಿಲ್ಲ. ಕೇಂದ್ರೀಯ ನೋಟು ಮುದ್ರಣ ಪದ್ಧತಿಯೇನೂ ಇರಲಿಲ್ಲ. ವಿದೇಶಿ ಬ್ಯಾಂಕುಗಳು ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುತ್ತಿದ್ದುವು. 1935ರ ವೇಳೆಗೆ ರಜತ ಪ್ರಮಿತಿಯನ್ನು ರದ್ದುಪಡಿಸಿ ವಿದೇಶಿ ವಿನಿಮಯ ಪ್ರಮಿತಿಯನ್ನು ಜಾರಿಗೆ ತರುವುದರ ಮೂಲಕ ಹಣವ್ಯವಸ್ಥೆಯನ್ನು ಸರಿಪಡಿಸಲಾಯಿತು. ಆದರೆ ಚೀನ–ಜಪಾನ್ ಯುದ್ಧ ಇದನ್ನು ಮತ್ತೆ ಅಸ್ತವ್ಯಸ್ತಗೊಳಿಸಿತು. ಈ ಸಮಸ್ಯೆಗಳ ಸ್ವರೂಪವನ್ನು ತಿಳಿದು ಇವುಗಳಿಗೆ ಪರಿಣಾಮಕಾರಿ ಪರಿಹಾರಗಳನ್ನು ಕಂಡುಕೊಳ್ಳುವ ಗುರುತರ ಜವಾಬ್ದಾರಿ ಜನತಾ ಗಣರಾಜ್ಯ ಸರ್ಕಾರದ ಹೊಣೆಯಾಯಿತು.

ಆ ಹನ್ನೆರಡು ವರ್ಷಗಳ ಅವಧಿಯಲ್ಲಿ ಚೀನದ ಜನ ನಾನಾ ತೊಂದರೆಗಳನ್ನು ಅನುಭವಿಸಿದರು. ಎಲ್ಲ ಸಮಸ್ಯೆಗಳಿಗಿಂತ ಉತ್ಪಾದನೆ ಬಂಡವಾಳಗಳ ಸಮಸ್ಯೆಗಳು ಪ್ರಮುಖವೆನಿಸಿಕೊಂಡಿದ್ದುವು. ಜೊತೆಗೆ ಹಣದುಬ್ಬರ ತೀವ್ರವಾಗಿ ಆರ್ಥಿಕ ವಿಷಮತೆಯನ್ನು ಉಲ್ಬಣಾವಸ್ಥೆಗೇರಿಸಿತ್ತು. ಆದರೂ ಆ ವೇಳೆಗಾಗಲೇ ಚೀನದ ಆರ್ಥಿಕತೆಯ ಸ್ವರೂಪವನ್ನು ಬದಲಾಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ ಕೈಗಾರಿಕಾ ಸಹಕಾರೋದ್ಯಮಗಳು ಸಾಕಷ್ಟು ಅಭಿವೃದ್ಧಿ ಹೊಂದಿದ್ದುವು. ಈ ಸಹಕಾರ ಸಂಸ್ಥೆಗಳು ಕೆಲಕಾಲ ಗ್ವೋಮಿನ್ ಟಾಂಗ್ ಕೋಪಕ್ಕೆ ತುತ್ತಾದರೂ ನವ ಚೀನವನ್ನು ನಿರ್ಮಿಸುವ ಜನಾಂಗಕ್ಕೆ ತರಬೇತು ಕೇಂದ್ರಗಳೆನಿಸಿಕೊಂಡುವು.

ಕಮ್ಯೂನಿಸ್ಟರು ಜನತಾ ಗಣರಾಜ್ಯ ಸ್ಥಾಪಿಸಿಕೊಂಡು ಹೋರಾಟ ಮುಂದುವರಿಸಿದರು. ವಿಮೋಚಿತ ಪ್ರದೇಶಗಳಲ್ಲಿ ರೈತವರ್ಗದ ಹಾಗೂ ಇತರ ವೃತ್ತಿನಿರತ ಜನರ ಆಶೆಆಕಾಂಕ್ಷೆಗಳನ್ನು ಈಡೇರಿಸುವುದರಲ್ಲಿ ಯಶಸ್ವಿಯಾದರು. ರೈತರಿಗೆ ಗ್ರಾಮದೇವತೆಗಳ ಒಡೆತನ ನೀಡಿದರು. ಇದು ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿತು. ಊಳಿಗಮಾನ್ಯ ಪದ್ಧತಿಯನ್ನು ತೊಡೆದುಹಾಕಲಾಯಿತು. ಇದು ಪ್ರಜಾಸತ್ತೆಗೆ ದಾರಿ ಮಾಡಿಕೊಟ್ಟಿತು. ಇದರ ಫಲವಾಗಿ ಕಮ್ಯೂನಿಸ್ಟರು ಯುದ್ಧವನ್ನು ಗೆಲ್ಲುವುದರ ಜೊತೆಗೆ ಇಡೀ ಚೀನದ ಜನತೆಯ ಮನಸ್ಸನ್ನು ಗೆದ್ದುಕೊಂಡರು.

ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಸಂಘ ಸಂಸ್ಥೆಗಳಿಗೆ ವಿಶಿಷ್ಟ ಸ್ಥಾನ ಕೊಡಲಾಯಿತು. ಸಹಕಾರ ಸಾಧನದ ಮೂಲಕ ಆರ್ಥಿಕ ಶಕ್ತಿಯನ್ನು ಒಟ್ಟುಗೂಡಿಸುವ ಪ್ರಯತ್ನ ಯಶಸ್ವಿಯಾಯಿತು. ಸಹಕಾರ ತತ್ತ್ವಗಳು ಕೃಷಿ, ಕೈಗಾರಿಕೆ, ವ್ಯಾಪಾರ, ಸಾರಿಗೆ ಇವೇ ಮೊದಲಾದ ಕ್ಷೇತ್ರಗಳಲ್ಲಿ ಅನುಷ್ಠಾನಕ್ಕೆ ಬಂದವು. ಹೀಗೆ ರಾಷ್ಟ್ರ ಪುನರ್ನಿರ್ಮಾಣಕಾರ್ಯದಲ್ಲಿ ಸಹಕಾರ ನಿಯಮ ಪಾಲನೆಯ ಮೂಲಕ ಸರ್ಕಾರ, ಅಧಿಕಾರಿ, ನೌಕರ, ಕಾರ್ಮಿಕ, ರೈತ–ಇವರೆಲ್ಲರೂ ಮನಃಪೂರ್ವಕವಾಗಿ ದುಡಿಯ ಲಾರಂಭಿಸಿದರು. ಅಧ್ಯಕ್ಷ ಮಾವೋ ತ್ಸೆ ಡುಂಗ್ ಆದಿಯಾಗಿ ಎಲ್ಲರೂ ತಮ್ಮ ಶಕ್ತಿಯನ್ನು ಉತ್ಪಾದನಕ್ಷೇತ್ರದಲ್ಲಿ ವಿನಿಯೋಗಿಸಿದರು. ಇದರ ಫಲವಾಗಿ ಚೀನದ ಆರ್ಥಿಕತೆಗೆ ಒಂದು ಹೊಸ ರೂಪ ಬಂದಂತಾಯಿತು. ಹೀಗೆ ಕಮ್ಯೂನಿಸ್ಟ್ ಸರ್ಕಾರ ಆರ್ಥಿಕ ಸಾಮಾಜಿಕ ಪರಿಸ್ಥಿತಿಗನುಗುಣವಾಗಿ 1949ರಿಂದ 1952ರ ವರೆಗೆ ಆರ್ಥಿಕ ಪುನರ್ವ್ಯವಸ್ಥೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿತು. ಯುದ್ಧದ ಹಿಂದಿನ ಆರ್ಥಿಕ ಮಟ್ಟವನ್ನು ಮುಟ್ಟುವುದು ಸಾಧ್ಯವಾಯಿತು. ಈ ಮಧ್ಯೆ ಭೂಸುಧಾರಣೆ ಜಾರಿಗೆ ಬಂದದ್ದು ಒಂದು ಮುಖ್ಯ ಘಟನೆ. ಸರ್ಕಾರ ಕೈಗಾರಿಕೋದ್ಯಮ ಮತ್ತು ವಾಣಿಜ್ಯಗಳ ಮೇಲೆ ತನ್ನ ಹಿಡಿತ ವಿಸ್ತರಿಸಿತು. ಮೊದಲನೆಯ ಪಂಚವಾರ್ಷಿಕ ಯೋಜನೆಯ (1953–57) ಕೇಂದ್ರೀಕರಣಕಾರ್ಯಕ್ರಮಕ್ಕೆ ರಷ್ಯದ ಬಂಡವಾಳ ಹೂಡಲಾಯಿತು. ಕೈಗಾರಿಕಾ ಕ್ಷೇತ್ರವನ್ನು ಗಣನೀಯವಾಗಿ ವಿಸ್ತರಿಸಲು ಸಾಧ್ಯವಾದ್ದು ಇದರಿಂದ. ಕೃಷಿ ಮತ್ತು ಅನುಭೋಗ ವಸ್ತುಗಳ ಉತ್ಪಾದನೆಗೆ ಸಾಕಷ್ಟು ಗಮನ ನೀಡದಿದ್ದರೂ ಸಾಮುದಾಯಿಕ ಹಿಡುವಳಿಗಳ ವಿಂಗಡಣೆ, ಪರಸ್ಪರ ಸಹಾಯ, ಸಹಕಾರ ಸಂಘಗಳ ಸ್ಥಾಪನೆ ಇವು ಈ ಅವಧಿಯಲ್ಲಿ ಆದ ಕೆಲವು ಸಾಧನೆಗಳು.

ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿಯುವ ವೇಳೆಗೆ ಕೇಂದ್ರೀಕೃತ ಆರ್ಥಿಕಾಧಿಕಾರವನ್ನು ವರ್ಗಾಯಿಸಿ ವಿಕೇಂದ್ರೀಕರಣ ವಿಧಾನವನ್ನು ಜಾರಿಗೆ ತರಲಾಯಿತು. ಆದರೆ ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದ ವರ್ಷದಲ್ಲಿಯೇ ಕಮ್ಯೂನಿಸ್ಟ್ ಪಕ್ಷ ಶಕ್ತಿಸಮತೋಲವನ್ನು ಕಾಪಾಡಿಕೊಳ್ಳಲು ಆರ್ಥಿಕಾಧಿಕಾರದ ಕೇಂದ್ರೀಕರಣ ನೀತಿಯನ್ನು ಪುನಃ ಜಾರಿಗೆ ತಂದಿತು. ಆರ್ಥಿಕ ಕ್ಷೇತ್ರದಲ್ಲಿ ಅನುಸರಿಸಲಾಗುತ್ತಿದ್ದ ರಷ್ಯನ್ ಮಾದರಿಯನ್ನು ಕೈಬಿಡಲಾಗಿದ್ದು ಆಗ. ಹಳೆ ಮತ್ತು ಹೊಸ ವಿಧಾನಗಳನ್ನು ಬಳಸಿಕೊಂಡು ಆರ್ಥಿಕಾಭಿವೃದ್ಧಿ ಯನ್ನು ತೀವ್ರಗೊಳಿಸುವ ಪದ್ಧತಿ ಜಾರಿಗೆ ಬಂತು. ಇದರ ಫಲವಾಗಿ ಕೃಷಿ ಉತ್ಪಾದನೆ ಅಧಿಕವಾಯಿತು. ಸಹಕಾರ ಸಂಘಗಳು ಸಂಘಟಿಸಲ್ಪಟ್ಟುವು. ವಿವಿಧೋದ್ದೇಶ ಘಟಕ ಮತ್ತು ಜನತಾ ಕಮ್ಯೂನ್‌ಗಳು ರೂಪುಗೊಳ್ಳುವುದಕ್ಕೆ ದಾರಿಯಾದ್ದು ಇವುಗಳಿಂದ. ಇದರ ಪರಿಣಾಮವಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ನಿರೀಕ್ಷೆಗೆ ಮೀರಿದ ಪ್ರಗತಿ, ಫಲಗಳು ಗೋಚರಿಸಿದುವು. ಇದು ಚೀನದ ಆರ್ಥಿಕ ಇತಿಹಾಸದಲ್ಲಿ ಮಹಾ ಜಿಗಿತ ಎಂದು ಪ್ರಸಿದ್ಧವಾಗಿದೆ. ಆದರೆ ಮಹಾ ಜಿಗಿತದ ಮುಖ್ಯ ದೋಷವೆಂದರೆ ತೀವ್ರ ಕೇಂದ್ರೀಕರಣ ಪ್ರವೃತ್ತಿ. ಇದು ಸರ್ಕಾರಕ್ಕೆ ಮನವರಿಕೆಯಾದದ್ದು 1959ರ ವೇಳೆಗೆ. ಇದನ್ನು ಸರಿಪಡಿಸುವ ವೇಳೆಗೆ ಉತ್ಪಾದನೆ ಹೆಚ್ಚಿತ್ತು. 1962ನೆಯ ವರ್ಷ ಶುಭ ಸೂಚಕವೆಂದೆನಿಸಿಕೊಂಡಿತು. ಮೂರನೆಯ ಪಂಚವಾರ್ಷಿಕ ಯೋಜನೆ 1966ಕ್ಕೆ ಮೊದಲು ಪ್ರಾರಂಭವಾಗಲಿಲ್ಲ. ಮಹಾ ಜಿಗಿತದ ಕಹಿ ಅನುಭವದ ಫಲವಾಗಿ ಕೈಗಾರಿಕೀಕರಣ ನಿಧಾನವಾಗಿತ್ತು. ಆದ್ದರಿಂದ ಈ ಅವಧಿಯಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ರಾಂತಿಯನ್ನು ಪ್ರಾರಂಭಿಸಲಾಯಿತು. ಕಮ್ಯೂನಿಸ್ಟ್ ಪಕ್ಷ ಮತ್ತು ಸೇನಾ ವಿಭಾಗಗಳಿಗೆ ನಿಕಟ ಸಂಬಂಧವೇರ್ಪಟ್ಟಿದ್ದು ಇದರ ಫಲ. ಸರ್ಕಾರದ ಎಲ್ಲ ಮಟ್ಟದ ಅಧಿಕಾರವೂ ಪಕ್ಷದಲ್ಲಿ ಕೇಂದ್ರೀಕೃತವಾಯಿತು. ಆದರೆ 1966ರ ವೇಳೆಗೆ ಭಿನ್ನಾಭಿಪ್ರಾಯಗಳು ತಲೆದೋರಿದುವು. ಇವನ್ನು ಪರಿಹರಿಸುವುದು ಚೀನೀ ಸರ್ಕಾರಕ್ಕೆ ಒಂದು ದೊಡ್ಡ ಸಮಸ್ಯೆಯಾಗಿಯೇ ಪರಿಣಮಿಸಿತು.

ಇಂದು ಕಮ್ಯೂನಿಸ್ಟ್ ಪಕ್ಷ ಮತ್ತು ಸರ್ಕಾರಗಳು ಆಡಳಿತ ಮತ್ತು ಆರ್ಥಿಕಾಧಿಕಾರಗಳನ್ನು ಒಟ್ಟಿಗೆ ನಡೆಸಿದರೂ ಪಕ್ಷದ ತೀರ್ಮಾನವೇ ಕೊನೆಯದು. ಆರ್ಥಿಕ ವ್ಯವಹಾರ, ನೀತಿನಿರ್ಣಯ ಎಲ್ಲ ಹೊಣೆಯೂ ಅಂತಿಮವಾಗಿ ಪಕ್ಷದ್ದೇ. ಚೀನದ ಸಂವಿಧಾನದಲ್ಲಿ ಆರ್ಥಿಕತೆಯ ಬಗ್ಗೆ ಸ್ಪಷ್ಟ ವಿವರಣೆಯಿದೆ. ಅದರ ಪ್ರಕಾರ ಮುಖ್ಯವಾಗಿ ನಾಲ್ಕು ಬಗೆಯ

ಉತ್ಪಾದನೋದ್ಯಮ ಒಡೆತನವನ್ನು ವ್ಯವಸ್ಥೆಗೊಳಿಸಲು ಅವಕಾಶವಿದೆ : 1. ಸರ್ಕಾರಿ ಒಡೆತನ, 2. ಸಹಕಾರಿ ಅಥವಾ ಸಾಮೂಹಿಕ ಒಡೆತನ, 3. ವೈಯಕ್ತಿಕ ಒಡೆತನ, 4. ಬಂಡವಾಳ ಒಡೆತನ.

1. ಸರ್ಕಾರಿ ಒಡೆತನ ಕೆಲಸ ಮಾಡುವ ವಿಧಾನ ಹೀಗಿದೆ : ಚಿಯೆಹ್ ಎಂಬ ಸಂಸ್ಥೆಗಳು ವಿವಿಧ ಕೈಗಾರಿಕೆ ಮತ್ತು ಉದ್ಯಮಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತವೆ. ಈ ಸಂಸ್ಥೆಗಳು ಕುಂಗ್ಸ್‌ಜೆ ಎಂಬ ಮಹಾ ಸಂಸ್ಥೆಯ ಆಡಳಿತದಲ್ಲಿರುತ್ತವೆ. ಇದರಿಂದ ಸರ್ಕಾರ ಕೈಗಾರಿಕೋದ್ಯಮಿಗಳ ಮೇಲೆ ನೇರ ಹತೋಟಿ ಇಟ್ಟುಕೊಂಡಿರಲು ಸಾಧ್ಯವಾಗುತ್ತದೆ. ಕೆಲಸ ಮಾಡುವ ಕಾರ್ಮಿಕರಿಗೆ ವೇತನ ದೊರೆಯುತ್ತದೆ. ಲಾಭ ಖಜಾನೆಗೆ ಸೇರುತ್ತದೆ. ಕೈಗಾರಿಕೋದ್ಯಮಗಳು ಸ್ವಲ್ಪ ಮಟ್ಟಿಗೆ ಸ್ವಂತ ಆಸ್ತಿ ಪಡೆದುಕೊಳ್ಳಲು ಅವಕಾಶವುಂಟು. ತನ್ನ ಬಂಡವಾಳವನ್ನು ರಕ್ಷಿಸಿಕೊಳ್ಳುವ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಪ್ರತಿಯೊಂದು ಕೈಗಾರಿಕೋದ್ಯಮಕ್ಕೂ ಇದೆ. ಇದು ಆರ್ಥಿಕ ಗಣನೆಗೆ ಅನುಸಾರವಾಗಿ ನಡೆಯುತ್ತಿರುತ್ತದೆ.

2. ಸಹಕಾರ ಅಥವಾ ಸಾಮಾಜಿಕ ಒಡೆತನ ಮುಖ್ಯವಾಗಿ ಸಾಮೂಹಿಕ ಬೇಸಾಯ ಘಟಕ. ಇದು ಕರಕೌಶಲ, ಸರಬರಾಯಿ, ಮಾರುಕಟ್ಟೆ ಮತ್ತು ಲೇವಾದೇವಿ ಸಹಕಾರ ಸಂಘ ಹಾಗೂ ಘಟಕಗಳನ್ನು ಒಳಗೊಂಡಿರುವ ಆರ್ಥಿಕ ವ್ಯವಸ್ಥೆ. ಈ ಸಂಸ್ಥೆಗಳೂ ಸರ್ಕಾರಿ ಸ್ವಾಮ್ಯದ ವಲಯದಲ್ಲಿ ಕಾರ್ಯಾಚರಣೆ ನಡೆಸುತ್ತವೆ. ಎಲ್ಲ ಖರ್ಚನ್ನು ಕಳೆದು ಉಳಿದ ಆದಾಯದ ಒಂದು ಭಾಗವನ್ನು ಇವುಗಳಲ್ಲಿ ಕೆಲಸ ಮಾಡುವ ಕಾರ್ಮಿಕ ಮತ್ತು ನೌಕರರಿಗೆ ವೇತನ ರೂಪದಲ್ಲಿ ಕೊಡಲಾಗುತ್ತದೆ.

3. ಶ್ರಮಜೀವಿಗಳು ವಾಸಿಸುವ ಮನೆ, ರೈತರ ಖಾಸಗಿ ಗೃಹ, ಕುಶಲ ಕೆಲಸ, ಸಣ್ಣ ಗಾತ್ರದ ಕಾರ್ಯಾಗಾರ ಇವುಗಳಿಗೆ ಸಂಬಂಧಿಸಿದ್ದು ವೈಯಕ್ತಿಕ ಒಡೆತನ. ಕಾರ್ಯಾಗಾರಗಳಲ್ಲಿ ಪ್ರತ್ಯೇಕವಾಗಿ ಮೂರು ಜನ ಕಾರ್ಮಿಕರನ್ನು ಮಾತ್ರ ನೇಮಿಸಿಕೊಳ್ಳಬಹುದು. ಇದಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುವುದಾದರೆ ಅಂಥ ಉದ್ಯಮವನ್ನು ಸರ್ಕಾರಿ-ಖಾಸಗಿ ಜಂಟಿ ಉದ್ಯಮಘಟಕ ಅಥವಾ ತಯಾರಿಕಾ ಸಂಸ್ಥೆಯನ್ನಾಗಿ ಪರಿವರ್ತಿಸಲಾಗುತ್ತದೆ. ವೈಯಕ್ತಿಕ ಒಡೆತನ ಮತ್ತು ಆಸ್ತಿಪಾಸ್ತಿ

ಊರ್ಜಿತಪಡಿಸುವುದನ್ನು 1966ರಲ್ಲಿ ರೆಡ್ ಗಾರ್ಡ್‌ಗಳು ಪ್ರತಿಭಟಿಸಿದ್ದರು.

4. ಬಂಡವಾಳ ಒಡೆತನದ ಪ್ರಸ್ತಾಪ 1954ರ ಸಂವಿಧಾನದಲ್ಲಿದ್ದರೂ ಅನಂತರದ ವರ್ಷಗಳಲ್ಲಿ ಇದನ್ನು ಸರ್ಕಾರಿ-ಖಾಸಗಿ ಒಡೆತನವನ್ನಾಗಿ ಪರಿವರ್ತಿಸಲಾಯಿತು. ಇದರಲ್ಲಿ ಸರ್ಕಾರ ಹೆಚ್ಚು ಅಧಿಕಾರವನ್ನೂ ಹೊಂದಿದೆ. (ಕೆ.ಆರ್.ಎನ್.)

**ಚೀನ-ಜಪಾನ್ ಯುದ್ಧಗಳು :** 1894-95ರಲ್ಲೂ, 1937-45 ರಲ್ಲೂ ಚೀನಕ್ಕೂ ಜಪಾನಿಗೂ ನಡುವೆ ನಡೆದ ಯುದ್ಧಗಳು. ಕೊರಿಯದ ಮೇಲಣ ಸ್ವಾಮ್ಯಕ್ಕಾಗಿ ಈ ರಾಷ್ಟ್ರಗಳ ನಡುವೆ ಹುಟ್ಟಿದ ವ್ಯಾಜ್ಯದಿಂದಾಗಿ 1894-95ರ ಯುದ್ಧ ಸಂಭವಿಸಿತು. ಕೊರಿಯ ಬಹುಕಾಲದಿಂದ ಚೀನದ ಅಧೀನದಲ್ಲಿತ್ತು. ಆದರೆ ಈ ಅಧೀನತೆಯ ಸ್ವರೂಪ ಅಸ್ಪಷ್ಟವಾಗಿತ್ತು. 1880ರಿಂದ ಚೀನ ಅದರ ಮೇಲೆ ತನ್ನ ಹತೋಟಿ ಹೆಚ್ಚಿಸಿಕೊಳ್ಳಲು ಆರಂಭಿಸಿತು. ಎರಡು ಶತಮಾನಗಳ ಪ್ರತ್ಯೇಕತೆಯ ಸ್ಥಿತಿಯಿಂದ ಹೊರಬಂದು ಬಲಿಷ್ಠವಾಗಿ ಬೆಳೆಯತೊಡಗಿದ್ದ ಜಪಾನು ಕೊರಿಯದಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಕೊರಿಯದಲ್ಲಿದ್ದ ಕಲ್ಲಿದ್ದಲು ಮತ್ತು ಕಬ್ಬಿಣ ಅದಿರುಗಳ ನಿಕ್ಷೇಪಕ್ಕಾಗಿಯೂ ಅದರ ಆಯಕಟ್ಟಿನ ಸ್ಥಾನದಿಂದಾಗಿಯೂ ಜಪಾನಿಗೆ ಕೊರಿಯದಲ್ಲಿ ಆಸಕ್ತಿ ಬೆಳೆಯಿತು. ಅದೊಂದು ಸ್ವತಂತ್ರ ರಾಷ್ಟ್ರವೆಂಬಂತೆ ಅದರೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿತು. ಕೊರಿಯ ತನಗೆ ಪೊಗದಿ ಕೊಡುವ ದೇಶವೆಂದು ಹೇಳಿಕೊಳ್ಳುತ್ತಿದ್ದ ಚೀನ ಇದನ್ನು ಸಹಿಸಲಿಲ್ಲ. ಕೊರಿಯದಲ್ಲಿ ಆಗ ಎರಡು ಗುಂಪುಗಳಿದ್ದುವು. ಒಂದು ಗುಂಪು ಚೀನೀ ಪರ, ಇನ್ನೊಂದು ಜಪಾನೀ ಪರ. ಇವೆರಡರ ನಡುವೆ ಘರ್ಷಣೆ ಏರ್ಪಟ್ಟಾಗ ಚೀನ-ಜಪಾನ್‌ಗಳೆರಡೂ ಕೊರಿಯಕ್ಕೆ ತಂತಮ್ಮ ಸೈನ್ಯ ಕಳಿಸಿದುವು. ಚೀನೀಪರವಾದ ಗುಂಪಿನದು ಮೇಲುಗೈ ಆಗಿತ್ತು. ಆ ಸಮಯದಲ್ಲಿ ಜಪಾನು ಯುದ್ಧಮಾಡಲು ಇಚ್ಛಿಸಲಿಲ್ಲ (1887). ಇವುಗಳ ನಡುವೆ ಶಾಂತಿ ಕೌಲು ಏರ್ಪಟ್ಟಿತು.

1894ರಲ್ಲಿ ಇನ್ನೊಂದು ಬಿಕ್ಕಟ್ಟು ಒದಗಿತು. ಕೊರಿಯದಲ್ಲಿ ಎದ್ದಿದ್ದ ಭಾರಿ ಬಂಡಾಯವನ್ನು ಹತ್ತಿಕ್ಕಲು ಕೊರಿಯದ ದೊರೆಯ ಅಪೇಕ್ಷೆಯ ಮೇರೆಗೆ ಚೀನ ಅಲ್ಲಿಗೆ ಸೈನ್ಯ ಕಳಿಸಿತು. ಅದಕ್ಕೆ ಪ್ರತಿಯಾಗಿ ಜಪಾನೂ ಅಲ್ಲಿಗೆ ಸೈನ್ಯ ಕಳಿಸಿತು. ದಂಗೆಯನ್ನಡಗಿಸಿದ ಮೇಲೆ ಎರಡು ದೇಶಗಳ ಸೈನ್ಯಗಳು ವಾಪಸಾಗಬೇಕೆಂಬ ಚೀನೀ ಸಲಹೆಯನ್ನು ಜಪಾನ್ ಒಪ್ಪಲಿಲ್ಲ. ಇನ್ನೂ ಸಂಪೂರ್ಣವಾಗಿ ನೆಮ್ಮದಿ ನೆಲೆಸಿಲ್ಲವಾದ್ದರಿಂದ ಎರಡೂ ದೇಶಗಳು ಸಂಯುಕ್ತವಾಗಿ ಕೊರಿಯ ಸರ್ಕಾರದ ಸುಧಾರಣೆಗೆ ಶ್ರಮಿಸಬೇಕೆಂಬುದು ಅದರ ಅಭಿಪ್ರಾಯ. ಇದರಿಂದಾಗಿ ವಿರಸ ಬೆಳೆಯಿತು. 1894ರ ಆಗಸ್ಟಿನಲ್ಲಿ ಜಪಾನೀ ಹಡಗುಗಳ ಮೇಲೆ ಚೀನೀ ನೌಕೆಗಳು ಗುಂಡುಹಾರಿಸಿದುವು. ಯುದ್ಧ ಆರಂಭವಾಯಿತು.

ಈ ಯುದ್ಧದಲ್ಲಿ ಜಯ ಗಳಿಸುವ ಬಗ್ಗೆ ಚೀನಕ್ಕೆ ಆರಂಭದಿಂದಲೂ ಸಂದೇಹವಿತ್ತು. ಚಿಕ್ಕದಾದರೂ ದಕ್ಷವಾದ ಜಪಾನೀ ಸೈನ್ಯವನ್ನು ಅದು ಎದುರಿಸಲಾಗಲಿಲ್ಲ. ಆರೇ ತಿಂಗಳು ಕಳೆಯುವ ವೇಳೆಗೆ ಜಪಾನಿನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಚೀನ ಪ್ರಯತ್ನಿಸಿತು. 1895ರ ಮಾರ್ಚ್ ವೇಳೆಗೆ ವೈ-ಹೈ ಮತ್ತು ದಕ್ಷಿಣ ಮಂಚೂರಿಯಗಳು ಜಪಾನಿನ ವಶವಾದುವು. ಪೀಕಿಂಗಿಗೆ ವಿಪತ್ತು ಹತ್ತಿರವಾಗಿತ್ತು. ಚೀನದ ಪ್ರಮುಖ ರಾಜಕಾರಣಿ ಲಿ ಹಂಗ್-ಚಾಂಗ್ ಜಪಾನಿಗೆ ಧಾವಿಸಿ ಶಾಂತಿಭಿಕ್ಷೆ ಬೇಡಿದ. 1895ರ ಏಪ್ರಿಲ್ 17ರಂದು ಚೀನ-ಜಪಾನುಗಳ ನಡುವೆ ಷಿಮೊನೊಸೆಕಿ ಕೌಲು ಏರ್ಪಟ್ಟಿತು. ಚೀನ ಜಪಾನಿಗೆ 20,00,000,000 ಟೇಲುಗಳನ್ನು (ಚೀನೀ ನಾಣ್ಯ) ಪರಿಹಾರದ್ರವ್ಯವಾಗಿ ಕೊಡಬೇಕಾಯಿತಲ್ಲದೆ ಕೊರಿಯವನ್ನು ಸ್ವತಂತ್ರ ದೇಶವೆಂದು ಒಪ್ಪಿಕೊಳ್ಳಬೇಕಾಯಿತು. ಫಾರ್ಮೋಸ ಮತ್ತು ಇತರ ದ್ವೀಪಗಳನ್ನೂ ಮಂಚೂರಿಯದ ಲಿಯೌಡುಂಗ್ ಪರ್ಯಾಯ ದ್ವೀಪವನ್ನೂ ಜಪಾನಿಗೆ ಕೊಡಬೇಕೆಂಬುದೂ, ಚೀನದ ನಾಲ್ಕು ರೇವುಗಳಲ್ಲಿ ಜಪಾನಿಗೆ ಹೊಸದಾಗಿ ವ್ಯಾಪಾರಕ್ಕಾಗಿ ಪ್ರವೇಶ ದೊರಕಿಸಿಕೊಡಬೇಕೆಂಬುದೂ ಕೌಲಿನ ಇನ್ನೆರಡು ಷರತ್ತುಗಳು. ಈ ಕೌಲು ತುಂಬ ಕಠಿಣವೆಂದು ಜರ್ಮನಿ, ರಷ್ಯ, ಫ್ರಾನ್ಸ್‌ಗಳು ಭಾವಿಸಿ, ಇದನ್ನು ಬದಲಾಯಿಸಲು ಜಪಾನಿನ ಮೇಲೆ ಒತ್ತಾಯ ಹಾಕಿದುವು. ಜಪಾನು ವಿಧಿಯಿಲ್ಲದೆ ಇದರ ಷರತ್ತುಗಳನ್ನು ಸ್ವಲ್ಪ ಬದಲಾಯಿಸಬೇಕಾಯಿತು.

ಚೀನ ಈ ಯುದ್ಧದಲ್ಲಿ ಜಯ ಗಳಿಸುವುದೆಂಬ ಪಶ್ಚಿಮದ ರಾಷ್ಟ್ರಗಳ ನಿರೀಕ್ಷೆ ಸುಳ್ಳಾಯಿತು. ಚೀನದ ದೌರ್ಬಲ್ಯ ಅವಕ್ಕೆ ಅರಿವಾಗಿ, ಅವು ಅಬಾಧಿತವಾಗಿ ಚೀನದ ಮೇಲಿನ ಶೋಷಣೆಯನ್ನು ಮುಂದುವರಿಸಿದುವು. ಆಂತರಿಕವಾಗಿ ಕ್ರಾಂತಿಯ ಚಳವಳಿ ಬಿರುಸಾಗಿ, ಮ್ಯಾನ್‌ಚೂ ಪ್ರಭುತ್ವದ ಪತನದ ದಿನಗಳು ಹತ್ತಿರವಾದುವು. ಜಪಾನೂ ಕ್ರಮಕ್ರಮವಾಗಿ ಆಕ್ರಮಣ ಮುಂದುವರಿಸಿತು.

ಚೀನದ ಸ್ವಾತಂತ್ರ್ಯ ಹಾಗೂ ಸಮಗ್ರತೆಗೆ ಜಪಾನ್ ಒಂದು ಸವಾಲಾಗಿತ್ತು. ಮಂಚೂರಿಯದಲ್ಲಿ ಜಪಾನೀಯರು ಪಡೆದಿದ್ದ ಸೌಲಭ್ಯಗಳಿಂದ ಅಲ್ಲಿಯ ಚೀನೀ ಜನ ಅಸಂತುಷ್ಟರಾಗಿದ್ದರು. ತಮ್ಮ ರೈಲುಮಾರ್ಗಗಳ ಮೂಲಕ ಜಪಾನೀಯರು ದಕ್ಷಿಣ ಮಂಚೂರಿಯದ ಬಹುಭಾಗದ ಮೇಲೆ ಹತೋಟಿ ಹೊಂದಿದ್ದರು. ಜಪಾನೀ ರೈಲ್ವೆಯನ್ನು ಸುತ್ತುಗಟ್ಟಿ, ಜಪಾನೀಯರ ಹತೋಟಿಯಿಂದ ವಿಮುಕ್ತರಾಗುವ ಉದ್ದೇಶದಿಂದ ಚೀನೀಯರೂ ಅಲ್ಲಿ ರೈಲುಮಾರ್ಗಗಳನ್ನು ನಿರ್ಮಿಸಿದರು. ಮಂಚೂರಿಯದ ದೊರೆ ಚಾಂಗ್ ಷುಯೆಲ್ಯಾಂಗ್ ಚೀನದೊಂದಿಗೆ ಹೆಚ್ಚು ಹೆಚ್ಚಾಗಿ ಸ್ನೇಹ ಬೆಳೆಸಿದ.

1931ರಲ್ಲಿ ದಕ್ಷಿಣ ಮಂಚೂರಿಯದಲ್ಲಿ ಸಂಭವಿಸಿದ ಒಂದು ಆಸ್ಫೋಟನೆಯ ನೆವದಿಂದ ಜಪಾನೀಯರು ಮ್ಯೂಕ್‌ಡೆನ್ ನಗರವನ್ನು ಆಕ್ರಮಿಸಿಕೊಂಡರು. ಕ್ರಮೇಣ ಇವರು ಮಂಚೂರಿಯದ ಇತರ ನಗರಗಳನ್ನೂ ಹಿಡಿದುಕೊಂಡು, ಚಾಂಗ್ ಷುಯೆಲ್ಯಾಂಗ್‌ನ ಅಧಿಕಾರವನ್ನು ದುರ್ಬಲಗೊಳಿಸಿ, ಸ್ಥಳೀಯ ನಾಯಕರು ಅಲ್ಲಲ್ಲಿ ಸರ್ಕಾರ ಸ್ಥಾಪಿಸಲು ಪ್ರೋತ್ಸಾಹಿಸಿದರು. 1932ರಲ್ಲಿ ಇವನ್ನೆಲ್ಲ ಸಂಘಟಿಸಿ ಮ್ಯಾನ್ ಚೂಕೌ ಎಂಬ ರಾಜ್ಯ ಸ್ಥಾಪಿಸಿ ಚೀನದ ಕೊನೆಯ ಮ್ಯಾನ್‌ಚೂ ಚಕ್ರವರ್ತಿಯಾಗಿದ್ದ ಪ್ಯು-ಇ ಯನ್ನು ಅದರ ದೊರೆಯಾಗಿ ಮಾಡಿದರು.

ನ್ಯಾನ್‌ಕಿಂಗ್ ಸರ್ಕಾರ ರಾಷ್ಟ್ರಗಳ ಕೂಟದ (ಲೀಗ್ ಆಫ್ ನೇಷನ್ಸ್) ಮೊರೆಹೊಕ್ಕಿತು. ಜಪಾನ್ ತನ್ನ ಸೇನೆಯನ್ನು ದಕ್ಷಿಣ ಮಂಚೂರಿಯ ರೈಲುಮಾರ್ಗ ಪ್ರದೇಶಕ್ಕೆ ಹಿಂದೆಗೆದುಕೊಳ್ಳುವಂತೆ ರಾಷ್ಟ್ರಗಳ ಕೂಟ ಅದನ್ನು ಒಪ್ಪಿಸಿ, ವಿಚಾರಣಾ ಆಯೋಗವೊಂದನ್ನು ನೇಮಿಸಿತು. ಜಪಾನಿನದೇ ತಪ್ಪೆಂದು ಆಯೋಗ ತನ್ನ ವರದಿಯಲ್ಲಿ ತಿಳಿಸಿತು. 1933ರಲ್ಲಿ ರಾಷ್ಟ್ರಗಳ ಕೂಟ ಜಪಾನಿನ ಮೇಲೆ ಕ್ರಮ ಕೈಗೊಂಡಿತು. ಜಪಾನು ಕೂಟವನ್ನೇ ತ್ಯಜಿಸಿತು.

ನ್ಯಾನ್‌ಕಿಂಗ್ ಸರ್ಕಾರ ಜಪಾನನ್ನು ಎದುರಿಸಿ ಹೋರಾಡುವಂತಿರಲಿಲ್ಲ. ಅದು ಜಪಾನಿನೊಡನೆ ವ್ಯಾಪಾರವನ್ನು ನಿಷೇಧಿಸಿತು. ಇದರ ಫಲವಾಗಿ ಘರ್ಷಣೆ ಉದ್ಭವಿಸಿತು. ಷಾಂಗ್‌ಹೈ ನಗರದ ಬಹುಭಾಗವನ್ನು ಜಪಾನ್ ನಾಶಪಡಿಸಿ, ಚೀನೀ ಸೇನೆಯನ್ನು ಹಿಮ್ಮೆಟ್ಟಿಸಿತು. ರಾಷ್ಟ್ರಗಳ ಕೂಟದ ಮಧ್ಯಪ್ರವೇಶದಿಂದಾಗಿ ಮೂರು ತಿಂಗಳುಗಳ ಅನಂತರ ಹೋರಾಟ ನಿಂತಿತು.

ಮಂಚೂರಿಯದಲ್ಲಿ ಜಪಾನ್ ವಿರುದ್ಧ ಚಟುವಟಿಕೆಗಳು ಮುಂದುವರಿದುವು. ಮ್ಯಾನ್‌ಚೂಕೌಗೆ ಜೆಹೋಲ್ ಪ್ರಾಂತ್ಯವನ್ನು ಸೇರಿಸಲು ಜಪಾನ್ ಇಚ್ಛಿಸಿತು. 1933ರ ಏಪ್ರಿಲ್‌ನಲ್ಲಿ ಜಪಾನು ಮಹಾಗೋಡೆಯವರೆಗೆ ಮುನ್ನುಗ್ಗಿತು. ಚೀನೀಯರು ಹಿಮ್ಮೆಟ್ಟಿದರು. ಮೇ ತಿಂಗಳಲ್ಲಿ ನ್ಯಾನ್‌ಕಿಂಗ್ ಸರ್ಕಾರ ಶಾಂತಿ ಮಾಡಿಕೊಂಡು ಮಹಾಗೋಡೆಯ ಉತ್ತರದಲ್ಲಿ ನಿಸ್ಸೇನೀಕೃತ ವಲಯವನ್ನು ನಿರ್ಮಿಸಿತು. ಇಷ್ಟೆಲ್ಲ ಘರ್ಷಣೆಗಳು ನಡೆದರೂ ಅಧಿಕೃತವಾಗಿ ಈ ದೇಶಗಳ ನಡುವೆ ಯುದ್ಧ ಘೋಷಿತವಾಗಿರಲಿಲ್ಲ. ರಾಜತಾಂತ್ರಿಕ ಸಂಬಂಧಕ್ಕೆ ಚ್ಯುತಿ ಬಂದಿರಲಿಲ್ಲ. ಮ್ಯಾನ್‌ಚೂಕೌ ವಿಚಾರದಲ್ಲಿ ಚೀನೀಯರು ಅಸಂತುಷ್ಟರಾಗಿದ್ದರು. ಆ ರಾಜ್ಯವನ್ನು ಜಪಾನ್, ಇಟಲಿ ಮತ್ತು ಎಲ್ ಸಾಲ್ವಡಾರ್ ಮಾತ್ರ ಮಾನ್ಯ

ಮಾಡಿದ್ದುವು. ಜಪಾನು ಹೆಚ್ಚು ರೈಲುಮಾರ್ಗಗಳನ್ನು ನಿರ್ಮಿಸಿ ಅಲ್ಲಿಯ ಅನೇಕ ಪ್ರದೇಶಗಳಲ್ಲಿ ಸಂಪರ್ಕ ಕಲ್ಪಿಸಿದ್ದಲ್ಲದೆ ಕೊರಿಯಾಕ್ಕೂ ಅದಕ್ಕೂ ಸಂಬಂಧ ಏರ್ಪಡಿಸಿ, ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. 1934ರಲ್ಲಿ ಪ್ಯು-ಇ ಕಿರೀಟಧಾರಣೆ ಮಾಡಿಕೊಂಡ.

ಚೀನದ ಮಹಾಗೋಡೆಯ ಉತ್ತರದಲ್ಲಿದ್ದ ಪ್ರದೇಶವಷ್ಟರಿಂದಲೇ ಜಪಾನು ತೃಪ್ತಿ ಹೊಂದಿದ್ದಂತೆ ಕಾಣಲಿಲ್ಲ. ಇಡೀ ಚೀನ ತನಗೆ ಮೀಸಲೆಂದೂ ತನ್ನ ಒಪ್ಪಿಗೆಯಿಲ್ಲದೆ ಅಲ್ಲಿ ಯಾವ ದೇಶವೂ ಯಾವುದೇ ಬಗೆಯ ಆಚರಣೆಯಲ್ಲೂ ತೊಡಗಕೂಡದೆಂದೂ ಜಪಾನ್ 1934ರಲ್ಲಿ ಒಂದು ಪ್ರಕಟಣೆ ಹೊರಡಿಸಿತು. ಚೀನದ ಹಲವು ಪ್ರದೇಶಗಳ ಮೇಲೆ ಜಪಾನು ಹತೋಟಿ ಹೊಂದಿತು. ಚಿಯಾಂಗ್ ಕೈ-ಷೇಕ್‍ಗೆ ಇದನ್ನು ವಿರೋಧಿಸುವ ಧೈರ್ಯ ಇರಲಿಲ್ಲ.

1937ರ ಜುಲೈ ತಿಂಗಳಲ್ಲಿ ಪರಿಸ್ಥಿತಿ ವಿಷಮಿಸಿತು. ಚಿಯಾಂಗ್ ಕೈ-ಷೇಕ್ ಸರ್ಕಾರ ತಮಗೆ ಮಣಿಯುವುದಿಲ್ಲವೆಂದು ತಿಳಿದ ಜಪಾನೀಯರು ಅದನ್ನು ಕೊನೆಗಾಣಿಸಲು ತೀರ್ಮಾನಿಸಿದರು. ಚೀನದಲ್ಲಿ ಉದಯಿಸಿದ ರಾಷ್ಟ್ರೀಯತೆ ತಮ್ಮ ವಿರುದ್ಧವಾಗಿದ್ದುದನ್ನು ಅವರು ಸಹಿಸಲಿಲ್ಲ.

1937ರ ಜುಲೈ 7ರಂದು ಚೀನೀ-ಜಪಾನೀ ಸೈನ್ಯಗಳ ನಡುವೆ ನಡೆದ ಘರ್ಷಣೆ ವ್ಯಾಪಕವಾದ ಯುದ್ಧಕ್ಕೆ ನಾಂದಿಯಾಯಿತು. ಆದರೆ ಎರಡು ಪಕ್ಷಗಳಲ್ಲಿ ಯಾವುದೂ 1941ರ ವರೆಗೆ ಯುದ್ಧ ಘೋಷಿಸಲಿಲ್ಲ. 1937ರ ಶರತ್ಕಾಲದಲ್ಲಿ ಜಪಾನೀಯರು ಉತ್ತರ ಚೀನದ ಮೇಲೆ ಆಕ್ರಮಣ ನಡೆಸಿದರು. ಷಾಂಗ್‍ಹೈ ನಗರ ಅವರ ವಶವಾಯಿತು. ಆ ವರ್ಷದ ನವೆಂಬರ್ ವೇಳೆಗೆ ಯಾಂಗ್‍ಟ್ಸೀ ನದಿಯ ಮೇಲೆ ಜಪಾನೀ ಸೇನೆ ಮುನ್ನುಗ್ಗಿತು. ರೈಲುದಾರಿಗಳ ಉದ್ದಕ್ಕೂ ಇದ್ದ ನಗರಗಳು ಅದರ ಕೈವಶವಾದುವು. 1937ರ ನವೆಂಬರಿನಲ್ಲಿ ನ್ಯಾನ್‍ಕಿಂಗ್ ಪತನವಾಯಿತು. ಮರುವರ್ಷ ಅಕ್ಟೋಬರ್ ವೇಳೆಗೆ ಕ್ಯಾಂಟನ್, ಹ್ಯಾಂಗ್‍ಕೌ ಅದರ ವಶವಾದುವು. ಆಗ ಜಪಾನೀಯರನ್ನು ಎದುರಿಸುತ್ತಿದ್ದ ಬಲಗಳು ಎರಡು – ಚಿಯಾಂಗ್ ಸರ್ಕಾರದ ಸೇನೆ ಮತ್ತು ಕಮ್ಯೂನಿಸ್ಟ್ ಸೇನೆ. ಜಪಾನನ್ನು ಸಂಯುಕ್ತವಾಗಿ ಎದುರಿಸಬೇಕೆಂಬ ಉದ್ದೇಶದಿಂದ ಕಮ್ಯೂನಿಸ್ಟರು ಚಿಯಾಂಗ್ ಸರ್ಕಾರದ ನಾಯಕತ್ವವನ್ನು ಒಪ್ಪಿಕೊಂಡಿದ್ದರು.

ಎಷ್ಟೇ ಕಷ್ಟನಷ್ಟಗಳನ್ನು ಅನುಭವಿಸಿದರೂ ಚೀನೀಯರು ಶರಣಾಗತರಾಗಲಿಲ್ಲ. ಯುದ್ಧ ಮುಂದುವರಿಯಿತು. ನ್ಯಾನ್‍ಕಿಂಗ್ ಪತನದ ಅನಂತರ ಹ್ಯಾಂಗ್‍ಕೌಗೆ ವರ್ಗವಾಗಿದ್ದ ಚಿಯಾಂಗ್ ಸರ್ಕಾರ, ಆ ನಗರವೂ ಪತನವಾದಾಗ ಚುಂಗ್‍ಕಿಂಗ್‍ನ್ನು ರಾಜಧಾನಿಯಾಗಿ ಮಾಡಿಕೊಂಡಿತು. ಚೀನೀ ನಾಯಕರು ಸಸ್‍ವಾನ್ ಮತ್ತು ಯುನ್ನಾನ್ ಪ್ರದೇಶಗಳಲ್ಲಿ ವಲಸೆಹೋದರು. ಆಕ್ರಮಿತ ಪ್ರದೇಶದಲ್ಲಿ ಸರ್ಕಾರ ಸ್ಥಾಪಿಸುವ ಜಪಾನೀ ಯೋಜನೆಗೆ ಅಲ್ಲಿಯ ಗಣ್ಯರ ನೆರವು ದೊರೆಯದಾಯಿತು. ಕೆಲವು ಪಟ್ಟಣಗಳು ಮತ್ತು ರೈಲುಮಾರ್ಗಗಳಿಗೆ ಮಾತ್ರ ಜಪಾನಿನ ಹತೋಟಿ ಸೀಮಿತವಾಗಿತ್ತು. ಉಳಿದೆಡೆಗಳಲ್ಲಿ ಜಪಾನ್ ವಿರೋಧಿ ಚಟುವಟಿಕೆಗಳು ಮುಂದುವರಿದುವು. ಕಮ್ಯೂನಿಸ್ಟರು ಗ್ರಾಮೀಣ ಪ್ರದೇಶಗಳಲ್ಲಿ, ಜಪಾನೀ ಸೈನ್ಯದ ಹಿಂದೆ, ಕಾರ್ಯಾಚರಣೆ ನಡೆಸುತ್ತಿದ್ದರು. ಅಲ್ಲದೆ ಅವರು ಗ್ರಾಮರಕ್ಷಣಾ ತಂಡಗಳನ್ನು ಸಂಘಟಿಸಿ, ಸ್ಥಳೀಯ ಸರ್ಕಾರಗಳನ್ನು ಸ್ಥಾಪಿಸಿ, ತಮ್ಮ ಸೈನ್ಯವನ್ನು ವಿಸ್ತರಿಸಿದರು.

ಎರಡನೆಯ ಮಹಾಯುದ್ಧ ಆರಂಭವಾದ ಮೇಲೆ ಜಪಾನೀಯರು ರೇವುಗಳನ್ನೆಲ್ಲ ವಶಪಡಿಸಿಕೊಂಡು ಹೊರಗಿನಿಂದ ಸಮುದ್ರದ ಮೂಲಕ ಚೀನಕ್ಕೆ ಸಹಾಯ ಒದಗದಂತೆ ಮಾಡಿದರು. ಮಾಯನ್ಮಾರ್‍ನಿಂದ (ಹಿಂದಿನ ಬರ್ಮ) ಯುನ್ನಾನಿನ ಕುನ್‍ಮಿಂಗಿಗೆ ಹೋಗುವ ಮಾರ್ಗವನ್ನು ಮುಚ್ಚುವಂತೆ ಜಪಾನು ಬ್ರಿಟನ್ನನ್ನು ಪ್ರೇರೇಪಿಸಿತು. ಬ್ರಿಟನ್ ಇದಕ್ಕೆ ಒಪ್ಪಿ ಆ ಮಾರ್ಗವನ್ನು ಸ್ವಲ್ಪಕಾಲ ಮುಚ್ಚಿತ್ತು.

ಜಪಾನು ಪರ್ಲ್ ಹಾರ್ಬರ್ ಮೇಲೆ ಹಠಾತ್ತನೆ ದಾಳಿ ನಡೆಸಿದಾಗ ಅಮೆರಿಕ, ಬ್ರಿಟನ್‍ಗಳಿಗೂ ಜಪಾನಿಗೂ ನಡುವೆ ಯುದ್ಧ ಆರಂಭವಾಯಿತು. ಜಪಾನು ಚೀನದ ಪೂರ್ವತೀರದಲ್ಲಿ ಪ್ರಬಲವಾಯಿತಲ್ಲದೆ ಮಾಯನ್ಮಾರನ್ನು ಆಕ್ರಮಿಸಿಕೊಂಡಿತು. ಆದರೂ ಚೀನದಲ್ಲಿ ಜಪಾನು ಹೆಚ್ಚು ಪ್ರಭಾವ ಗಳಿಸಿರಲಿಲ್ಲ.

1944 ರ ವೇಳೆಗೆ ಯುದ್ಧವು ನಿರ್ಣಾಯಕ ಘಟ್ಟ ಮುಟ್ಟಿತ್ತು. ಅಮೆರಿಕನ್ನರು ಚೀನ ಸರ್ಕಾರಕ್ಕೆ ನೆರವು ನೀಡುತ್ತಿದ್ದುದಲ್ಲದೆ ಜಪಾನೀ ನೆಲೆಗಳನ್ನು ದಾಳಿ ಮಾಡುತ್ತಿದ್ದರು. ಆದರೆ ಚಿಯಾಂಗ್ ಸರ್ಕಾರ ಏಳು ವರ್ಷಗಳ ಯುದ್ಧದಿಂದ ದುರ್ಬಲವಾಗಿತ್ತು. ಚೀನೀ ಕಮ್ಯೂನಿಸ್ಟರು ಪ್ರಬಲರೂ ಪ್ರಭಾವಶಾಲಿಗಳೂ ಆಗಿದ್ದರು. ಪೆಸಿಫಿಕ್ ದ್ವೀಪಗಳಲ್ಲಿ ತೀವ್ರವಾಗಿದ್ದ ಕದನಗಳಲ್ಲಿ ಭಾಗವಹಿಸಲು ಜಪಾನು ತನ್ನ ಸೇನೆಗಳನ್ನು ಚೀನದಿಂದ ಹಿಂದಕ್ಕೆ ಕರೆಸಿಕೊಳ್ಳಲಾರಂಭಿಸಿತು. ಕೊನೆಗೆ ಜಪಾನು ಯುದ್ಧದಲ್ಲಿ ಸೋಲೊಪ್ಪಿ ಶರಣಾಗತವಾದಾಗ ಚೀನದಲ್ಲಿ ಅದರ ಆಕ್ರಮಣದ ತೆರವಾಯಿತು. ಚೀನ-ಜಪಾನ್ ಯುದ್ಧ ಕೊನೆಗೊಂಡಿತು. ಆದರೆ ಕಮ್ಯೂನಿಸ್ಟ್ ಸೇನೆಗಳಿಗೂ ಚಿಯಾಂಗ್ ಸರ್ಕಾರದ ಸೇನೆಗಳಿಗೂ ಹೋರಾಟ ಮುಂದುವರಿದು, 1949ರಲ್ಲಿ ಚೀನದಲ್ಲಿ ಕಮ್ಯೂನಿಸ್ಟರಿಂದ ಜನತಾ ಗಣರಾಜ್ಯ ಸ್ಥಾಪಿತವಾಯಿತು. (ಎಚ್.ಸಿ.ಕೆ.; ಜಿ.ಆರ್.ಆರ್.)

**ಚೀನದ ಮಹಾಗೋಡೆ :** ಹಳದಿ ಸಮುದ್ರದಲ್ಲಿರುವ ಚೀಲೀ ಖಾರಿಯಿಂದ ಮಧ್ಯ ಏಷ್ಯದವರೆಗೆ-ಸುಮಾರು 2400 ಕಿಮೀ ದೂರ-ಹಬ್ಬಿದ ಬೃಹತ್ ರಕ್ಷಣಾ ಗೋಡೆ, ಮಾನವ ಇದುವರೆಗೂ ಕೈಗೊಂಡಿರುವ ನಿರ್ಮಾಣ ಕಾರ್ಯಗಳಲ್ಲಿ ಅತ್ಯಂತ ದೊಡ್ಡದು. ಚೀನೀ ಚಕ್ರವರ್ತಿ ಚಿನ್ ಷಿ ಹ್ವಾಂಗ್ ಪ್ರಶ.ಪೂ. 3ನೆಯ ಶತಮಾನದಲ್ಲಿ ಇದನ್ನು ನಿರ್ಮಿಸಿದ. ಅವನಿಗೂ ಹಿಂದೆಯೇ, ಕನಿಷ್ಠ 4ನೆಯ ಶತಮಾನದಿಂದಲೇ ಚೀನದ ದೊರೆಗಳು ರಕ್ಷಣೆಗಾಗಿ ಎಲ್ಲೆಗಳ ಬಳಿ ಗೋಡೆಗಳನ್ನು ನಿರ್ಮಿಸಿದ್ದರು. ಚಿನ್ ಇಂಥ



ಚೀನದ ಮಹಾಗೋಡೆಯ ಒಂದು ನೋಟ

ಹಲವಾರು ಗೋಡೆಗಳನ್ನು ಸೇರಿಸಿ ಮಹಾಗೋಡೆಯನ್ನು ನಿರ್ಮಿಸಿದ. ಉತ್ತರದ ಹೂಣರ ಆಕ್ರಮಣವನ್ನು ತಡೆಗಟ್ಟುವುದೇ ಇದರ ನಿರ್ಮಾಣದ ಉದ್ದೇಶ. ಮಣ್ಣು ಮತ್ತು ಕಲ್ಲುಗಳಿಂದ ಇದನ್ನು ನಿರ್ಮಿಸಲಾಗಿತ್ತು. ಇದರ ಪೂರ್ವಭಾಗಗಳು ಇಟ್ಟಿಗೆಯಿಂದ ನಿರ್ಮಿತವಾಗಿದ್ದುವು. ಅನಂತರದ ಶತಮಾನಗಳಲ್ಲಿ ಇದನ್ನು ಆಗಿಂದಾಗ್ಗೆ ಬದಲಾಯಿಸಲಾಗುತ್ತಿತ್ತು. 15 ಮತ್ತು 16ನೆಯ ಶತಮಾನಗಳಲ್ಲಿ ಇದರ ಆವರಣವನ್ನು ಹಿಂದಿನದಕ್ಕಿಂತ ಕಿರಿದನ್ನಾಗಿ ಮಾಡಿ ಕಟ್ಟಲಾಯಿತು. 1220ಮೀ. ಎತ್ತರದ ಗುಡ್ಡಗಳ ಮೇಲೂ ಆಳವಾದ ಕಮರಿಗಳಿಗೆ ಅಡ್ಡವಾಗಿಯೂ ಘಟಸರ್ಪದ ಹಾಗೆ ಬಳಸಿ ಸಾಗುವ ಈ ಗೋಡೆಯ ಎತ್ತರ ಸುಮಾರು 9ಮೀ. ಇದು ಕೆಳಗೆ 7.5ಮೀ. ಮತ್ತು ಮೇಲೆ 4.5ಮೀ. ಅಗಲವಾಗಿದೆ. ಸೈನಿಕರ ಸಾಲು ಅನಾಯಾಸವಾಗಿ ಇದರ ಮೇಲೆ ಸಾಗಲು ಸಾಧ್ಯವಾಗುವಂತೆ ರಸ್ತೆಯನ್ನೂ ಪ್ರತಿ 230ಮೀ. ದೂರಕ್ಕೆ ಒಂದರಂತೆ 12ಮೀ. ಎತ್ತರದ 25,000 ಕಾವಲು ಗೋಪುರಗಳನ್ನೂ, ಇವಲ್ಲದೆ 15,000 ಗೋಪುರಗಳನ್ನೂ, ಬಹಿರ್ಭಾಗದಲ್ಲಿ 2ಮೀ. ಎತ್ತರದ ಕೋಟೆತೆನೆಗಳನ್ನೂ ನಿರ್ಮಿಸಲಾಗಿತ್ತು. ಗೋಡೆಯ ಹೊರಗಡೆ ಒಂದಾದ ಮೇಲೊಂದರಂತೆ ಮೂರು ಕಂದಕಗಳಿದ್ದುವು.

ಗೋಡೆಯಲ್ಲಿ 30 ಕೋಟಿ ಸಲೆಗಜ ಕಲ್ಲು ಸೇರಿಸಲಾಗಿದೆಯೆಂದು ಹೇಳಲಾಗಿದೆ. ಬೇರಾವ ಕಾಲದ ಯಾವುದೇ ಕಟ್ಟಡಕ್ಕೂ ಇದಕ್ಕೆ ಬಳಸಿದಷ್ಟು ಸಾಮಗ್ರಿ ಬಳಸಿಲ್ಲ. ಸೈನ್ಯ ಸಾಗಾಣಿಕೆ, ಗಾಡಿಗಳ ಓಡಾಟ, ಕಾವಲು ಠಾಣ್ಯಗಳು, ಸೈನಿಕ ನೆಲೆ, ಅಪಾಯದ ವಿರುದ್ಧ ರಕ್ಷಣೆಗಾಗಿ ಕಂದಕಗಳು, ಉಪಗೋಡೆಗಳು, ಆಹಾರ ಮತ್ತು ಯುದ್ಧಸಾಮಗ್ರಿ ಕೋಠಿ ಮುಂತಾದ ಎಲ್ಲ ವ್ಯವಸ್ಥೆಗಳಿಂದಲೂ ಇದು ಕೂಡಿತ್ತು. (ಎಚ್.ಸಿ.ಕೆ.; ಜಿ.ಆರ್.ಆರ್.)

**ಚೀನ ಸಮುದ್ರ :** ಚೀನದ ತೀರದಿಂದಾಚೆಗೆ ಜಪಾನಿನಿಂದ ಮಲಯ ಪರ್ಯಾಯದ್ವೀಪದ ದಕ್ಷಿಣ ತುದಿಯವರೆಗೆ ಹಬ್ಬಿರುವ ಪೆಸಿಫಿಕ್ ಸಾಗರದ ಒಂದು ಭಾಗವಾಗಿರುವ ಸಮುದ್ರ. ಟೈವಾನ್ ದ್ವೀಪದಿಂದಾಗಿ ಈ ಕಡಲು ಪೂರ್ವ ಚೀನ ಸಮುದ್ರ ಮತ್ತು ದಕ್ಷಿಣ ಚೀನ ಸಮುದ್ರ ಎಂದು ಎರಡು ಭಾಗಗಳಾಗಿ ಒಡೆದಿದೆ. ವಿಸ್ತೀರ್ಣ 3568246 ಚ.ಕಿಮೀ.

ಪೂರ್ವ ಚೀನ ಸಮುದ್ರ : ಡುಂಗ್‍ಹೈ ಎಂಬುದು ಇದರ ಚೀನೀ ಹೆಸರು. ಇದರ ಪಶ್ಚಿಮಕ್ಕೆ ಚೀನ ಭೂಪ್ರದೇಶ, ದಕ್ಷಿಣಕ್ಕೆ ಟೈವಾನ್, ಆಗ್ನೇಯಕ್ಕೆ ರೀಯೂಕ್ಯೂ ದ್ವೀಪಗಳು; ಈಶಾನ್ಯಕ್ಕೆ ಕೀಯೂಷೂ ದ್ವೀಪ ಮತ್ತು ಕೊರಿಯ ಇವೆ. ಇದರ ವಿಸ್ತೀರ್ಣ 1249158 ಚ.ಕಿಮೀ. ಹಳದಿ ಸಮುದ್ರ ಇದರ ಒಂದು ಭಾಗ. ಪೂರ್ವ ಚೀನ ಸಮುದ್ರಕ್ಕೆ ಕೊರಿಯ ಜಲಸಂಧಿಯ ಮೂಲಕ ಜಪಾನ್ ಸಮುದ್ರದೊಂದಿಗೂ ಫಾರ್ಮೋಸ ಜಲಸಂಧಿಯ ಮೂಲಕ ಜಪಾನ್ ಸಮುದ್ರದೊಂದಿಗೂ ರೀಯೂಕ್ಯೂ ದ್ವೀಪಗಳ ನಡುವಣ ಹಲವು ಜಲಸಂಧಿಗಳ ಮೂಲಕ ಫಿಲಿಪೀನ್ ಸಮುದ್ರದೊಂದಿಗೂ ಪೆಸಿಫಿಕ್ ಸಾಗರದ ಒಂದು ಭಾಗದೊಂದಿಗೂ ಸಂಪರ್ಕ ಏರ್ಪಟ್ಟಿದೆ.

ಪೂರ್ವಚೀನ ಸಮುದ್ರದ ಬಹುಭಾಗ ಖಂಡೀಯ ದಿಣ್ಣೆಯಿಂದ (ಕಾಂಟಿನೆಂಟಲ್ ಷೆಲ್ಫ್) ಕೂಡಿದ್ದು. ಅಲ್ಲಿ ಸಮುದ್ರ ಆಳ ಪಶ್ಚಿಮದಿಂದ ಪೂರ್ವದ ಕಡೆಗೆ ಹೋದಂತೆ 30.5 ಮೀ. ಯಿಂದ 183ಮೀ. ವರೆಗೆ ವ್ಯತ್ಯಾಸವಾಗುತ್ತದೆ. ರೀಯೂಕ್ಯೂ ದ್ವೀಪಗಳ

ಬಳಿಯಲ್ಲಿ 2782ಮೀ. ಆಳದ ಕಮರಿಯೊಂದು ಇದೆ. ಬೇಸಿಗೆಯಲ್ಲಿ ಮಳೆ. ಚಳಿಗಾಲ ಶುಷ್ಕ. ಬೇಸಿಗೆಯಲ್ಲಿ ಚಂಡಮಾರುತಗಳು ಬೀಸುವುದುಂಟು. ವರ್ಷಕ್ಕೆ ಮೂರು ನಾಲ್ಕು ಸಾರಿ ಇವುಗಳ ಆಗಮನ. ಜನವರಿಯಲ್ಲಿ ಉಷ್ಣತೆ ವಾಯವ್ಯದಲ್ಲಿ 40° ಫ್ಯಾ.ನಿಂದ ಆಗ್ನೇಯದಲ್ಲಿ 60°ಫ್ಯಾ.ವರೆಗೆ ವ್ಯತ್ಯಾಸವಾಗುತ್ತದೆ. ಜುಲೈ ಸರಾಸರಿ ಉಷ್ಣತೆ 80°ಫ್ಯಾ. ವಾರ್ಷಿಕ ಅವಪತನ ಪಶ್ಚಿಮದಲ್ಲಿ 45", ಪೂರ್ವದಲ್ಲಿ 90". ಮಧ್ಯ ಪೆಸಿಫಿಕ್ ಸಾಗರದ ಉತ್ತರ ಸಮಭಾಜಕೀಯ ಉಷ್ಣೋದಕ ಪ್ರವಾಹದ ಉತ್ತರದ ಕವಲು ಈ ಕಡಲಿನ ಪೂರ್ವಭಾಗದ ಮೇಲೆ ಪ್ರಭಾವ ಬೀರುತ್ತದೆ. ಈ ಸಮುದ್ರದ ನೀರಿನ ಲವಣತೆ ಸಾವಿರಕ್ಕೆ 34.5. ಆದರೆ ಯಾಂಗ್‍ಟ್ಸೀ ನದಿಯ ಮುಖಜಭೂಮಿಯ ಬಳಿಯಲ್ಲಿ 10%–5%ಕ್ಕೆ ಇಳಿಯುತ್ತದೆ. ಈ ಸಮುದ್ರಕ್ಕೆ ಸೇರುವ ನದಿಗಳಲ್ಲಿ ಯಾಂಗ್ ಟ್ಸೀ ಮುಖ್ಯ ನದಿ. ಚೀನ, ಟೈವಾನ್, ಜಪಾನ್, ಕೊರಿಯಗಳಲ್ಲಿ ಮೀನುಗಾರಿಕೆ ಒಂದು ಮುಖ್ಯ ಉದ್ಯೋಗ. ಇಲ್ಲಿ ಸಿಗುವ ಮೀನುಗಳಲ್ಲಿ ಸಾರ್ಡೀನ್, ಹಾಲುಮೀನು, ಟ್ಯೂನಾ, ಕಡಲ ಬ್ರೀಮ್, ಕ್ರೋಕರ್, ಚಿಪ್ಪುಮೀನು ಮುಖ್ಯವಾದವು. ಈ ಸಮುದ್ರದ ಮೇಲಿರುವ ಮುಖ್ಯ ಬಂದರುಗಳು ಫೂಚೌ, ವೆಂಚೌ, ನಿಂಗ್‍ಪೊ, ಷಾಂಗ್‍ಹೈ, ಸಿನ್‍ಹೇಲಿನ್, ಟ್ಸಿಂಗ್‍ಟೋ, ಟನ್‍ಟ್ಸಿನ್, ಚಿನ್–ಹ್ಯಾಂಗ್–ಟೋ, ಡೇರೆನ್, ಚಿನ್ನಾಂಪೊ, ಚೆಮುಉಲ್ಪೊ, ನಾಗಸಾಕೀ ಮತ್ತು ಚಿ–ಲುಂಗ್.

ದಕ್ಷಿಣ ಚೀನ ಸಮುದ್ರ : ನಾನ್ ಹೈ ಎಂಬುದು ಇದರ ಚೀನೀ ಹೆಸರು. ವಿಸ್ತೀರ್ಣ 2319088 ಚ.ಕಿಮೀ. ಈ ಸಮುದ್ರದ ಪಶ್ಚಿಮಕ್ಕೆ ಆಗ್ನೇಯ ಏಷ್ಯ ಭೂಪ್ರದೇಶ, ದಕ್ಷಿಣಕ್ಕೆ ಬೋರ್ನಿಯೊ, ಪೂರ್ವಕ್ಕೆ ಫಿಲಿಪೀನ್ಸಿನ ಪಲಾವನ್, ಮಿಂಡೋರೋ ಮತ್ತು ಲೂಜ಼ಾನ್, ಈಶಾನ್ಯಕ್ಕೆ ಟೈವಾನ್, ಉತ್ತರಕ್ಕೆ ಚೀನೀ ಭೂಪ್ರದೇಶ ಇವೆ. ದಕ್ಷಿಣ ಚೀನದ ಷೀ ಚೀಯಾಂಗ್, ಉತ್ತರ ವಿಯಟ್ನಾಮಿನ ಕೆಂಪು ನದಿ, ಲಾಹೋಸ್, ಕಾಂಬೋಡಿಯ ಮತ್ತು ದಕ್ಷಿಣ ವಿಯಟ್ನಾಮಿನ ಮೇಕಾಂಗ್ ಮತ್ತು ಥೈಲೆಂಡಿನ ಮೆನಾಮ್ ಚಾವೊ ಫ್ಯಾ ಈ ಸಮುದ್ರವನ್ನು ಸೇರುವ ಪ್ರಮುಖ ನದಿಗಳು. ಸಮುದ್ರದ ಮುಖ್ಯ ಭೂತೀರ ಹೆಚ್ಚು ಅಂಕುಡೊಂಕಾಗಿಲ್ಲ. ಟಾನ್‍ಕಿನ್ ಮತ್ತು ಸೈಯಾಮ್ ಕೊಲ್ಲಿಗಳು ಮಾತ್ರ ಮುಖ್ಯ. ಸಮುದ್ರದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಈ ಸಮುದ್ರದ ಬಹುಭಾಗದ ತಳ 150ಮೀ. ಗಿಂತ ಹೆಚ್ಚಿಲ್ಲ. ಇದು ಖಂಡೀಯ ದಿಣ್ಣೆಯಿಂದ ಕೂಡಿದ್ದು, ಈಶಾನ್ಯಭಾಗದಲ್ಲಿ ಸಮುದ್ರದ ಆಳ 4600ಮೀ. ಪೂರ್ವ ಚೀನ ಸಮುದ್ರದಲ್ಲಿ ದ್ವೀಪಗಳಿಲ್ಲ. ಆದರೆ ಈ ಸಮುದ್ರದಲ್ಲಿ ಅನೇಕ ದ್ವೀಪಗಳೂ ದಿಬ್ಬಗಳೂ ಇವೆ.

ದಕ್ಷಿಣ ಚೀನ ಸಮುದ್ರ ತಳ ಅನೇಕ ಭೂಕಂಪಗಳು ಮತ್ತು ಜ್ವಾಲಾಮುಖಿಗಳ ಸ್ಫೋಟಗಳಿಂದಾಗಿ ಅನೇಕ ಬದಲಾವಣೆಗಳಿಗೆ ಒಳಗಾಗುತ್ತದೆ. ಪೂರ್ವ ಚೀನ ಸಮುದ್ರದಂತೆ ಇದೂ ಮಾನ್ಸೂನ್ ಪ್ರಭಾವಿತ. ಆದರೆ ಇದು ಸಮಭಾಜಕ ವೃತ್ತಕ್ಕೆ ಹತ್ತಿರದಲ್ಲಿರುವುದರಿಂದ ಚಳಿಗಾಲದ ಉಷ್ಣತೆ ಪೂರ್ವ ಚೀನ ಸಮುದ್ರದಲ್ಲಿಯದಕ್ಕಿಂತ ಅಧಿಕ (60°ಫ್ಯಾ.–80°ಫ್ಯಾ). ವಾರ್ಷಿಕ ಅವಪತನ 100". ಇಲ್ಲಿ ಚಂಡಮಾರುತಗಳು ಹೆಚ್ಚು (ವರ್ಷದ ಸರಾಸರಿ 15). ಟ್ಯೂನ, ಚಾನ್–ಚಿಯಾಂಗ್, ಹೈಫಾಂಗ್, ಬ್ಯಾಂಗ್‍ಕಾಕ್ ಇವು ಮುಖ್ಯ ಬಂದರುಗಳು. ಯುರೋಪಿನಿಂದ ಸಿಂಗಪುರದ ಮುಖಾಂತರ ದೂರಪ್ರಾಚ್ಯಕ್ಕೆ ಹೋಗುವ ಹಡಗುಗಳು ದಕ್ಷಿಣ ಚೀನ ಸಮುದ್ರದ ಮೂಲಕ ಯಾನಮಾಡುತ್ತವೆ. (ಎಂ.ಎ.ಎಚ್.)

**ಚೀನ ಸೋಂಪು :** ಮ್ಯಾಗ್ನೋಲಿಯೇಸೀ ಕುಟುಂಬಕ್ಕೆ ಸೇರಿ ಪ್ರಸಿದ್ಧ ಸಂಬಾರ ಸಸ್ಯ(ಸ್ಟಾರ್ ಆನಿಸ್, ಚೈನೀಸ್ ಆನಿಸ್). ಚಕ್ರಮೊಗ್ಗು ಪರ್ಯಾಯನಾಮ. ಇಲಿಸಿಯಮ್ ವೇರಮ್ ಇದರ ಶಾಸ್ತ್ರೀಯ ಹೆಸರು. ಚೀನ, ಇಂಡೊ ಚೀನಗಳಲ್ಲಿ ಬೆಳೆಯುತ್ತದೆ. ಇದು 8–15ಮೀ. ಎತ್ತರ ಬೆಳೆಯುವ ಮತ್ತು ಸದಾ ಹಸಿರಾಗಿರುವ ಮರ. ಎಲೆಗಳು ಸರಳ; ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಅಂಡಾಕಾರ ಇಲ್ಲವೆ ಭರ್ಜಿಯಾಕಾರದ ಇವುಗಳ ಉದ್ದ 10–15ಸೆಂ.ಮೀ. ಅಗಲ 2.5–5ಸೆಂಮೀ. ಹೂಗಳು ಒಂಟೊಂಟಿಯಾಗಿ ಅರಳುತ್ತವೆ. ಅವುಗಳ ಬಣ್ಣ ಕೆಂಪಿನಿಂದ ಬಿಳಿಯವರೆಗೆ ವ್ಯತ್ಯಾಸವಾಗುತ್ತದೆ. ಫಲ ನಕ್ಷತ್ರದಾಕಾರದಲ್ಲಿ ಜೋಡಣೆಗೊಂಡಿರುವ 8 ಫಾಲಿಕಲ್ ಭಾಗಗಳನ್ನೊಳಗೊಂಡಿದೆ. ಈ ಕಾರಣದಿಂದಲೇ ಗಿಡಕ್ಕೆ ಚಕ್ರಮೊಗ್ಗು ಎಂಬ ಹೆಸರು ಬಂದಿರಬೇಕು. ಪ್ರತಿಯೊಂದು ಫಾಲಿಕಲಿನಲ್ಲೂ ಬೀಜಗಳಿವೆ. ಬೀಜಗಳು ಬಲುಗಟ್ಟಿ, ಹೊಳೆಯುತ್ತಿರುತ್ತವೆ. ಅವುಗಳ ಬಣ್ಣ ಕಂದು. ಚೀನಸೋಂಪನ್ನು ಬೀಜದಿಂದ ಬೆಳೆಯುತ್ತಾರೆ. ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಬಿತ್ತನೆ ಮಾಡುವುದು ವಾಡಿಕೆ. ಮೊಳಕೆಯೊಡೆದು ಬೆಳೆಯುವ ಸಸಿ ನಾಲ್ಕು ಎಲೆಗಳನ್ನು ಪಡೆದಮೇಲೆ ನರ್ಸರಿಗೆ ವರ್ಗಾಯಿಸಲ್ಪಡುತ್ತದೆ. ಮತ್ತೆ 3 ವರ್ಷಗಳ ಅನಂತರ ಶಾಶ್ವತ ಸ್ಥಳಕ್ಕೆ ನಾಟಿಮಾಡಲ್ಪಡುತ್ತದೆ. 10 ವರ್ಷ ವಯಸ್ಸಾದ ಮೇಲೆ ಮರಗಳು ಫಲ ಬಿಡಲು ಪ್ರಾರಂಭಿಸುತ್ತವೆ. ಮರದ ಆಯುಸ್ಸು ಸುಮಾರು 80 ರಿಂದ 100 ವರ್ಷಗಳು. ಫಲಕ್ಕೆ ಹಿತವಾದ, ಸುವಾಸನಾಯುಕ್ತ ಹಾಗೂ ಸಿಹಿರುಚಿ ಮತ್ತು ಮಧುರವಾದ ವಾಸನೆ ಇವೆ. ಖಾರದ ತಿಂಡಿ, ಮಿಠಾಯಿ, ಚೂಯಿಂಗ್‍ಗಮ್, ಔಷಧಿ ತಯಾರಿಕೆಗಳು, ಹೊಗೆಸೊಪ್ಪು ಮತ್ತು ಮಾದಕ ದ್ರವ್ಯಗಳಿಗೆ ವಾಸನೆ ಕಟ್ಟಲು ಇದನ್ನು ಬಳಸುತ್ತಾರೆ. ಸುಗಂಧ ದ್ರವ್ಯಗಳಲ್ಲೂ ಇದನ್ನು ಉಪಯೋಗಿಸುವುದುಂಟು. ಇದನ್ನು ಆವಿ ಆಸವೀಕರಣಗೊಳಿಸಿ ಪಡೆಯಲಾಗುವ

ತೈಲವನ್ನೂ ಇದೇ ರೀತಿ ಸುವಾಸನಾಕಾರಕವಾಗಿ ಬಳಸುವುದಿದೆ. ಕಾಯಿಗೆ ಔಷಧೀಯ ಗುಣಗಳೂ ಉಂಟು. ಇದು ಒಳ್ಳೆಯ ಪಚನಕಾರಿ. ಕೆಮ್ಮಿಗೆ ಬಳಸಲಾಗುವ ಕಷಾಯಗಳಲ್ಲೂ ಇದರ ಉಪಯೋಗ ಇದೆ. (ಎಸ್.ಐ.ಎಚ್.)

**ಚೀನೀ ಕಲೆ :** ಪ್ರಶ.ಪೂ. 3000 ವರ್ಷಗಳಷ್ಟು ಹಿಂದೆಯೇ, ಎಂದರೆ ನವಶಿಲಾಯುಗದಲ್ಲಿಯೇ, ಚೀನೀಕಲೆ ಮಣ್ಣಿನ ಗಡಿಗೆ, ಅಸ್ಥಿಕಳಸ, ಮುಂತಾದ ದಿನನಿತ್ಯ ಬಳಸುವ ಪಾತ್ರೆಗಳಲ್ಲಿ ಅಭಿವ್ಯಕ್ತವಾಯಿತು ಎಂದು ಆ್ಯಂಡರ್‍ಸನ್ ಮುಂತಾದ ಪುರಾತತ್ತ್ವ ಸಂಶೋಧಕರ ಶ್ರಮದಿಂದಾಗಿ ತಿಳಿದುಬಂದಿದೆ. ಇದೇ ಸುಮಾರಿನಲ್ಲೇ ಮೂಳೆಯಲ್ಲಿ ಕೊರೆದು ಮಾಡಿದ ಮುತ್ಥಳಿಗಳು ರೂಪತಳೆದುವು. ಈ ಕಲಾಪ್ರವೃತ್ತಿ ಕ್ರಿಸ್ತಪೂರ್ವ 1558ರ ಸುಮಾರಿಗೆ ಆರಂಭವಾದ ಷಾಂಗ್–ಇನ್ ಯುಗದಲ್ಲಿ ವಿಸ್ತೃತವಾಯಿತು. ಲೋಹಪ್ರತಿಮೆಗಳು, ತಾಮ್ರ ಹಿತ್ತಾಳೆಯಲ್ಲಿ ಎರಕ ಹೊಯ್ದು ಮಾಡಿದ ಪ್ರತಿಮೆಗಳು ಈ ಯುಗದಲ್ಲಿ ಮೂಡಿಬಂದವು. ಷಾಂಗ್ ಯುಗದ ಪಾತ್ರೆಗಳೂ ಪ್ರತಿಮೆಗಳೂ ಪ್ರಸಿದ್ಧವಾಗಿವೆ. ಈ ಪಾತ್ರೆಗಳ ಮೇಲೆ ಅಲಂಕಾರದ ಕೆತ್ತನೆ ಮತ್ತು ಕೊರೆತಗಳ ವಿನ್ಯಾಸಗಳಿವೆ. ಇವಲ್ಲದೆ ಹಾಲುಗಲ್ಲಿನಲ್ಲಿ ಕಡೆದ ಮೂರ್ತಿಗಳೂ ಈ ಯುಗದ ವೈಶಿಷ್ಟ್ಯ. ನೆಫ್ರೈಟ್ ಲೋಹಾಂಶ ಅಧಿಕವಾಗಿರುವ ಜೇಡ್ (ಚೀನೀ ಭಾಷೆಯಲ್ಲಿ ಯ್ಯುಯ್) ವಸ್ತುವಿನಲ್ಲಿ ಕೊರೆದು ಬಿಡಿಸಿದ ಕಲಾಕೃತಿಗಳು ಇಷ್ಟು ಪ್ರಾಚೀನಯುಗದಿಂದಲೇ ಪ್ರಖ್ಯಾತವಾಗಿವೆ. ಪ್ರಶ.ಪೂ. 1027ರಿಂದ ಪ್ರಶ.ಪೂ. 221ರ ವರೆಗೆ ಪ್ರವೃತ್ತವಾಗಿದ್ದ ಚೌ ರಾಜವಂಶದ ಯುಗದಲ್ಲಿ ಈ ಕಲಾಪ್ರಕಾರಗಳು ಇನ್ನಷ್ಟು ವಿಕಾಸಗೊಂಡುವು. ಧಾರ್ಮಿಕ ಪ್ರಯೋಜನಗಳಿಗಾಗಿ ಪೂಜಾಸಾಮಗ್ರಿಗಳು ಕಲಾವಿಶಿಷ್ಟವಾಗಿ ಹಿತ್ತಾಳೆಯಲ್ಲಿ ಬಹುವಾಗಿ ಬಂದುವು. ಬಿಳಿಜೇಡಿಮಣ್ಣು (ಸೆರ್ಯಾಮಿಕ್) ಕಲೆಗಾಗಿಯೂ ನಿತ್ಯೋಪಯೋಗದ ಪರಿಕರಗಳನ್ನು ಸಿದ್ಧ ಮಾಡುವುದಕ್ಕಾಗಿಯೂ ಹೆಚ್ಚು ಹೆಚ್ಚಾಗಿ ಬಳಕೆಗೆ ಬಂದಿತು. ಯಾವನೊಬ್ಬ ಗಣ್ಯವ್ಯಕ್ತಿ ತೀರಿಕೊಂಡರೆ ಅವನ ಸಮಾಧಿಯ ಸ್ಥಳದಲ್ಲಿ ನಿಲ್ಲಿಸಲು ಕಲ್ಲಿನ ವಿಗ್ರಹಗಳನ್ನು ಕಡೆಯುವುದು ಆರಂಭವಾಯಿತು. ಚೀನೀ ಭಾಷೆಯಲ್ಲಿ ಈ ಸಮಾಧಿ ವಿಗ್ರಹಗಳಿಗೆ ಯೊಂಗ್ ಎನ್ನುತ್ತಾರೆ. ಹೋನ್ಯಾನ್ ಜಿಲ್ಲೆಯಲ್ಲಿ, ಕೈಗಳೆರಡನ್ನೂ ಎದೆಯ ಮೇಲೆ ಇಟ್ಟುಕೊಂಡ ಇಂಥ ಸ್ಥಾನಕಮೂರ್ತಿಗಳ ಅವಶೇಷಗಳು ಬಹುವಾಗಿ ಇವೆ. ಛಾಂಗ್–ಶ ಎಂಬಲ್ಲಿ ಅತ್ಯಂತ ಪ್ರಾಚೀನವಾದ ಕುಂಚ ದೊರೆತಿದ್ದು ಇದು ಚೌ ಯುಗದ್ದೆಂದು ನಿರ್ಣಯವಾಗಿದೆ. ಇದೇ ಪ್ರದೇಶದಲ್ಲಿಯೇ ಜಿನ್–ಫಿಯು–ತ–ಶನ್ ಎಂಬ ಸಮಾಧಿಯಲ್ಲಿ ವರ್ಣಚಿತ್ರಗಳನ್ನು ಮೂಡಿಸಿದ್ದ ರೇಷ್ಮೆ ವಸ್ತ್ರದ ತುಂಡೂ ದೊರೆತಿತು. ಭೂತಗಳಿಂದ ಸುತ್ತಲ್ಪಟ್ಟ ಹೆಂಗಸೊಬ್ಬಳ ಚಿತ್ರ ಇಲ್ಲಿದೆ. ಇದೇ ಚೀನೀ ವರ್ಣಚಿತ್ರಕಲೆಯ ಅತಿ ಪ್ರಾಚೀನ ಉಲ್ಲೇಖವೆನ್ನುತ್ತಾರೆ.

ಹಾನ್‍ಯುಗ (ಪ್ರಶ.ಪೂ. 206ರಿಂದ ಪ್ರ.ಶ. 221) ಕಲೆಯ ದೃಷ್ಟಿಯಿಂದ ಪ್ರಮುಖವಾದುದು. ಊರ ಹೊರಗಿನ ಸಮಾಧಿಪ್ರದೇಶಕ್ಕೆ ಹೋಗುವ ದಾರಿಯ ಇಕ್ಕೆಲಗಳಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಪ್ರಾಣಿಗಳ, ಮನುಷ್ಯರ ಶಿಲಾಮೂರ್ತಿಗಳನ್ನು ನಿಲ್ಲಿಸುವ ಸಂಪ್ರದಾಯ ಈ ಯುಗದ್ದು. ಶ್ಮಶಾನಮಾರ್ಗಕ್ಕೆ ಚೀನೀ ಭಾಷೆಯಲ್ಲಿ ಶೆನ್–ತವೋ ಎಂಬ ಹೆಸರಿರುವುದರಿಂದ ಈ ಮೂರ್ತಿಗಳಿಗೂ ಇದೇ ಹೆಸರು ಬಳಕೆಯಲ್ಲಿ ಬಂತು. ಈ ಬೃಹನ್ಮೂರ್ತಿಗಳಲ್ಲದೆ, ಸಮಾಧಿಯ ಒಳಗೆ ಪ್ರೇತದ ಪ್ರಯೋಜನಕ್ಕೆಂದು ಇಡಲು ಪಾತ್ರೆ, ಆಟದ ಸಾಮಾನು, ನಿತ್ಯದ ಪರಿಕರಗಳು, ಸ್ತ್ರೀಪುರುಷಮೂರ್ತಿಗಳು ಸಣ್ಣ

ಸಣ್ಣ ಪ್ರಮಾಣದಲ್ಲಿ ಸಿದ್ಧವಾದುವು. ಈ ಯುಗದಲ್ಲಿ ಮೈದಳೆದು ಬಂದ ಪ್ರಾಣಿಗಳ ಮೂರ್ತಿಗಳು ತುಂಬ ಸಹಜವಾಗಿದ್ದು, ಅದ್ಭುತಕಲಾಕೃತಿಗಳೆಂದು ಪರಿಗಣಿತವಾಗಿವೆ. ಸಮಾಧಿಮಂಟಪಗಳ ಮೇಲ್ಹಾವಣಿಯ ಹಲಗೆಗಳ ಮೇಲೆ ದಿನದಿನದ ಪ್ರಸಂಗಗಳನ್ನು ತುಂಬ ನೈಜವಾಗಿ ಬಿಡಿಸುವ ಪದ್ಧತಿಯಿತ್ತು. ಜೇಡಿಮಣ್ಣಿನ ಮೇಲೆ ಮುದ್ರೆಯೊತ್ತಿ ಮಾಡಿದ ಕಲಾಕೃತಿಗಳೂ ಈ ಕಾಲದವೇ. ದೇವಾಲಯಗಳ ಪ್ರಾಂಗಣಗಳಲ್ಲಿ ನಿಲ್ಲಿಸಿರುವ ಶಿಲಾಫಲಕಗಳ ಮೇಲೆ ಉಬ್ಬುಚಿತ್ರಗಳನ್ನು ಮೂಡಿಸುತ್ತಿದ್ದರು. ಇವೆಲ್ಲ ಸ್ಮಾರಕ ಶಿಲಾಫಲಕಗಳೆಂದು ಪ್ರಸಿದ್ಧವಾಗಿವೆ. ಐತಿಹಾಸಿಕ ಘಟನೆಗಳೂ ಪೌರಾಣಿಕ ಕಥೆಗಳೂ ನಿರೂಪಿತವಾಗಿವೆ. ತಾಓ ಪಂಥ, ಕುಂಗ್–ಫು–ತ್ಸೆಯ ಬೋಧನೆಗಳು ಈ ಯುಗದಲ್ಲಿ ಕಲೆಯ ಮೇಲೆ ತುಂಬ ಪ್ರಭಾವವನ್ನು ಬೀರಿದುವು.

ಹೆನ್ ವು–ಟಿ (140–87 ಪ್ರಶ.ಪೂ) ಎಂಬ ಚಕ್ರವರ್ತಿಯ ಕಾಲದಲ್ಲಿ ಹಿತ್ತಾಳೆಯ ಹಲಗೆಯ ಮೇಲೆ ಮೂಡಿಸಿದ ಕನ್ನಡಿಗಳು ಬಳಕೆಗೆ ಬಂದುವು. ಕನ್ನಡಿಯ ಹಿಂಭಾಗದ ಹಿತ್ತಾಳೆಯ ಪಟ್ಟಿಯ ಮೇಲೆ ನಾಜೂಕಾದ ಕಲಾಕೃತಿಗಳನ್ನು ಅಳವಡಿಸುವ ಪರಿಪಾಠವೂ ಬಂತು. ಬಿಳಿ ಹುಲಿ, ನೀಲಿ ನಾಗದೈತ್ಯ (ಡ್ರ್ಯಾಗನ್) ಇವುಗಳ ಚಿತ್ರಣ ತುಂಬ ಜನಪ್ರಿಯವಾದ ವಸ್ತುಗಳಾಗಿದ್ದುವು. ತಾಓ ಪಂಥದ ದೇವತೆಗಳೂ (ಪೂರ್ವದಿಕ್ಕಿನ ರಾಜ ತುಂಗ್–ವಾಂಗ್–ಕುಂಗ್, ಪಶ್ಚಿಮ ದಿಗ್ಭಾಗದ ರಾಣಿ ಹ್ಸಿ–ವಾಂಗ್–ಮು ಮುಂತಾದವರು) ಕನ್ನಡಿಯ ಹಿಂದೆ ಮೂಡಿಬಂದುವು. ಛು ಪ್ರಾಂತ್ಯದಲ್ಲಿ ಲಾಕ್ಷಾಕೃತಿಗಳು ಪ್ರಸಿದ್ಧವಾಗಿದ್ದುವು. ಪ್ರಶ. 220 ರಿಂದ 589ರವರೆಗೆ ಚೀನದಲ್ಲಿ ಮೂರು ರಾಜ್ಯಗಳೂ ಆರು ರಾಜವಂಶಗಳೂ ಆಗಿಹೋದುವು. ಈ ಯುಗವನ್ನು ಆರು ರಾಜವಂಶಗಳ ಯುಗವೆಂದೇ ವ್ಯವಹರಿಸುತ್ತಾರೆ. ಆದರೂ ಈ ಯುಗದಲ್ಲಿ ಇಡೀ ಚೀನ ದೇಶ ಒಂದು ಆಡಳಿತಕ್ಕೆ ಬಂತು. ಸಾಮಾಜಿಕವಾಗಿ ರಾಜಕೀಯ ವ್ಯವಸ್ಥೆಯಲ್ಲಿ ತುಂಬ ಪ್ರಕ್ಷುಬ್ಧ ಪರಿಸ್ಥಿತಿಯಿದ್ದರೂ ಈ ಅವಧಿಯಲ್ಲಿ ಕಲೆ ಉಚ್ಚ್ರಾಯಸ್ಥಿತಿಯನ್ನು ಮುಟ್ಟಿತು. ಈ ಯುಗದಲ್ಲಿಯೇ ಬೌದ್ಧಧರ್ಮ ಚೀನದಲ್ಲಿ ಬೇರೂರಿತು. ಮಧ್ಯ ಏಷ್ಯದ ಕಾಲುದಾರಿಯಾದ ಈ ದೇಶವನ್ನು ಮುಟ್ಟಿದ ಬೌದ್ಧಧರ್ಮ ಆ ಪ್ರದೇಶದ ಕಲೆಯನ್ನೂ ತಂದಿತು. ಪ್ರ.ಶ. ಎರಡನೆಯ ಶತಮಾನದ ವೇಳೆಗಾಗಲೇ ಬೌದ್ಧಧರ್ಮ ಇಲ್ಲಿ ನೆಲೆಗೊಂಡಿತ್ತು. ಮಧ್ಯ ಏಷ್ಯ ಕಲೆಯ ಪ್ರಭಾವ ಭಾರತೀಯ ಕಲೆಯ ಪ್ರಭಾವಕ್ಕಿಂತ ಹೆಚ್ಚು ಸಮರ್ಥವಾಗಿತ್ತು. ಬೌದ್ಧಧರ್ಮ ಭಾರತೀಯವಾದುದಾದರೂ ಚೀನೀ ಭಾಷೆಗೆ ಪರಿವರ್ತಿತವಾದ ಗ್ರಂಥಗಳು ಸಂಸ್ಕೃತ ಮೂಲದಲ್ಲಿದ್ದರೂ ಭಾರತಕಲೆಯ ಪ್ರಭಾವ ಅಷ್ಟಾಗಿ ಚೀನೀ ಕಲೆಯ ಮೇಲೆ ಬೀಳಲಿಲ್ಲ. ಏಕೆಂದರೆ ಆ ವೇಳೆಗಾಗಲೇ ಚೀನೀಕಲೆಯ ಪ್ರಕಾರಗಳು ಸ್ಪಷ್ಟವಾಗಿ ಮೈದಳೆದಿದ್ದುವು. ಕಲೆಯ ವಸ್ತುಗಳು ಭಾರತೀಯವಾದರೂ ಕಲಾಶೈಲಿ ಚೀನೀ ಆಗಿಯೇ ಉಳಿಯಿತು. ಮಧ್ಯ ಏಷ್ಯ ಕಲೆಗೂ ಚೀನೀಕಲೆಗೂ ಮೊದಲಿನಿಂದ ಬಾಂಧವ್ಯವಿದ್ದುದು ಮಾತ್ರವಲ್ಲದೆ ಎರಡರ ಮೂಲಭೂತ ಕಲ್ಪನೆಗಳೂ ಒಂದೇ ಆಗಿದ್ದುವು.

ಮೂರು ನಾಲ್ಕನೆಯ ಶತಮಾನಗಳಲ್ಲಿ ಕನ್ನಡಿಗಳ ಹಿಂದೆ ಬುದ್ಧ, ಅಪ್ಸರೆಯರು ಮೈತ್ರೇಯ ಬೋಧಿಸತ್ತ್ವ–ಇವರ ಚಿತ್ರಣವೇ ಬೌದ್ಧ ಚೀನೀಕಲೆಯ ಆರಂಭದೆಶೆಯ ನಿದರ್ಶನಗಳು. ಅದಕ್ಕೆ ಮುಂಚೆ ಪ್ರಚಲಿತವಾಗಿದ್ದ ತಾಓ ಪಂಥದ ಸನ್ನಿವೇಶವನ್ನೇ ಬೌದ್ಧಚಿತ್ರಗಳಿಗೆ ಅಳವಡಿಸಿದುದು ಕಾಣಬರುತ್ತದೆ. ಮೆರಗುಹಾಕಿದ ಹಿತ್ತಾಳೆ ವಿಗ್ರಹಗಳೂ ಶಿಲಾವಿಗ್ರಹಗಳೂ ಬುದ್ಧಬೋಧಿಸತ್ತ್ವರನ್ನು ಪ್ರತಿಬಿಂಬಿಸಿ ರೂಪ ತಳೆದುವು. ಪ್ರಶ. 300 ರಿಂದ 501ರ ವರೆಗೆ ಮಾಡಿದ ಐವತ್ತೈದು ವಿಗ್ರಹಗಳು ಇಂದಿಗೂ ಉಳಿದಿವೆ. ಐದು–ಆರನೆಯ ಶತಮಾನಗಳಲ್ಲಿ ಚೀನೀ ಗುಹಾಂತರ್ದೇವಾಲಯಗಳು ನಿರ್ಮಿತವಾದುವು. ಉತ್ತರ ಚೀನದಲ್ಲಿ ತುನ್‌ಹು ಆಂಗ್‌ನಿಂದ ಮಂಚೂರಿಯದವರೆಗೂ ಇಂಥ ಗುಹಾ ದೇಗುಲಗಳು ಬೆಳೆದುವು. ಇಂಥ ವಿಹಾರ–ದೇಗುಲದಲ್ಲಿ ಮೂಡಿಬಂದ ಕಲೆ ಭಾರತೀಯ ಗುಹಾಂತರ್ದೇವಾಲಯಗಳ (ಅಜಂತ, ಬಾಗ್ ಮುಂತಾದ) ಕಲಾಪದ್ಧತಿಯನ್ನು ಅವಲಂಬಿಸಿ ನಿಂತಿದೆಯೆಂಬುದು ವ್ಯಕ್ತವಾಗುತ್ತದೆ. ಭಾರತೀಯ ಚೈತ್ಯಗಳ, ಸ್ತೂಪಗಳ ಮಾದರಿಯನ್ನು ಅನುಸರಿಸಿರುವುದೂ ಸ್ಪಷ್ಟವಾಗಿದೆ. ಈ ಗುಹಾದೇವಾಲಯಗಳಲ್ಲಿ ಬೃಹತ್ಪ್ರಮಾಣದ ಬುದ್ಧಮೂರ್ತಿಗಳನ್ನೂ ಬಂಡೆಗಳ ಮೆಲೆ ಬುದ್ಧಬೋಧಿಸತ್ತ್ವರ ಜೀವನ ಪ್ರಸಂಗಗಳನ್ನೂ ಕಡೆಯುವ ವಾಡಿಕೆ ಇತ್ತು. ಇಲ್ಲಿ ಗಾಂಧಾರಶೈಲಿಯ ಅಥವಾ ಗುಪ್ತ ಶೈಲಿಯ ಸಂವಿಧಾನಗಳನ್ನು ಬಳಸಿಲ್ಲ. ಮಧ್ಯ ಏಷ್ಯದ ಕಿಸೀಲ್ ಮುಂತಾದೆಡೆ ಇರುವ ಶಿಲ್ಪಗಳ ಶೈಲಿಯನ್ನು ಅನುಸರಿಸಿದ್ದಾರೆ. ಚೀನೀ ಬೌದ್ಧಕಲೆ ಚೀನೀಕಲೆಯ ಒಂದು ಪ್ರಕಾರವಾಗಿಯೇ ಉಳಿಯಿತು. ಅವಲೋಕಿತೇಶ್ವರ, ಮಂಜುಶ್ರೀ, ಪ್ರಭೂತ ರತ್ನ ಮುಂತಾದ ಬೋಧಿಸತ್ತ್ವರ ಶಿಲ್ಪಗಳನ್ನು ನೋಡಿದರೆ ಅವರು ಚೀನೀ ವ್ಯಕ್ತಿಗಳಂತೆಯೇ ಕಾಣುತ್ತಾರೆ; ಚೀನೀ ಮೈಕಟ್ಟು, ಚೀನೀ ಮುಖಚಹರೆ, ಚೀನೀ ಉಡಿಗೆ, ಚೀನೀ ನಿಲುವು; ಮೂಲ ಕಲ್ಪನೆ ಮಾತ್ರ ಭಾರತೀಯ; ಅಭಿವ್ಯಕ್ತಿಯೇನೋ ಚೀನೀ.

ಪ್ರಶ. 580ರ ಸುಮಾರಿಗೆ ಹೊಪ್ಯೆ ಪ್ರದೇಶದಲ್ಲಿ ಬೌದ್ಧಧರ್ಮ ಮತ್ತೊಂದು ವಿಶಿಷ್ಟವಾದ ಕಲಾಪದ್ಧತಿಯನ್ನು ಆರಂಭಿಸಿತು. ತಿಂಗ್–ಚೌ ಮತ್ತು ಪವೋಟಿಂಗ್ ಎಂಬ ಊರುಗಳಲ್ಲಿ ದೊರಕುತ್ತಿದ್ದ ಮಿರುಗುವ ಹಾಲುಗಲ್ಲನ್ನು ಉಪಯೋಗಿಸಿ ಮೂರ್ತಿಗಳನ್ನು ಕಡೆದು ನಿಲ್ಲಿಸುವ ಪದ್ಧತಿ ಇಲ್ಲಿ ಆರಂಭವಾಯಿತು. ಈಗ ಲಂಡನ್ ನಗರದ ಬ್ರಿಟಿಷ್ ಮ್ಯೂಸಿಯಂನಲ್ಲಿ ನಿಕ್ಷೇಪ ಮಾಡಿರುವ ಅಮಿತಾಭ ಬುದ್ಧನ ಪ್ರತಿಕೃತಿ ಈ ಕಾಲದ್ದು; ಅದು ಅದ್ಭುತ ಪ್ರಮಾಣದ ಶಿಲ್ಪ. ಆರನೆಯ ಶತಮಾನದ ಕಡೆಗಾಲದಲ್ಲಿ ಷಾಂಟೂಂಗ್ ಜಿಲ್ಲೆಯ ಕಲೆ ಪ್ರತಿಭಾಸಂಪನ್ನವಾಗಿ ಕಾಣಿಸಿಕೊಂಡಿತು. ಈ ಕಾಲದ ಸ್ಮಾರಕಗಳಾದ ತೋ–ಷಾನ್, ಯುಅನ್–ಮೇನ್–ಷಾನ್, ಯೂಯ್–ಹಾನ್ ಷಾನ್ ಶಿಲ್ಪಗಳು ವಿಶ್ವವಿಖ್ಯಾತವಾಗಿವೆ. ಈ ಕಲಾಕೃತಿಗಳಲ್ಲಿ ಗುಪ್ತಶೈಲಿಯ ಪ್ರಭಾವ ವ್ಯಕ್ತವಾಗುವುದು ಸ್ವಾರಸ್ಯವಾದ ವಿಚಾರ. ಈ ಯುಗದ ಅವಸಾನವಾಗುವ ವೇಳೆಗೆ ಕಲೆಗಾರನಿಗೆ ಸಮಾಜದಲ್ಲಿ ಗೌರವದ ಸ್ಥಾನ ಸಿದ್ಧವಾಗಿತ್ತು. ಕಲಾಕೃತಿಗಳನ್ನೂ ಕಲೆಗಾರರ ವ್ಯಕ್ತಿತ್ವ–ಪ್ರತಿಭೆ–ವೈಶಿಷ್ಟ್ಯಗಳನ್ನೂ ಅಧಿಕರಿಸಿ ಸಾಹಿತ್ಯವೂ ಮೈದಳೆಯಿತು. ಚೀನೀ ಚಿತ್ರಕಲೆಯ ವಿಚಾರವಾಗಿ ರಚಿತವಾದ ಗ್ರಂಥಗಳಲ್ಲಿ ಅತಿಪ್ರಾಚೀನವೆನಿಸಿದ ಕು–ಹುಯಿ–ಪಿ ಇನ್–ಲು (ಕಲೆಗಾರರ ವರ್ಗಣೆಯನ್ನು ಕುರಿತ ಪ್ರಾಚೀನ ನಿರೂಪಣೆ) ಎಂಬ ಗ್ರಂಥ ಈ ಯುಗದಲ್ಲಿ ಬಂತು. ಈ ಗ್ರಂಥವನ್ನು ಬರೆದ ಚೀ–ಹೊ ಎಂಬ ವಿದ್ವಾಂಸ ಐದನೆಯ ಶತಮಾನದ ಅಂತ್ಯಭಾಗದಲ್ಲಿ ಇದ್ದವ. ಈ ಗ್ರಂಥದಲ್ಲಿ ಚಿತ್ರಕಲೆಯ ಆರು ನಿಯಮ (ಷಡಂಗ)ಗಳನ್ನು ನಿದರ್ಶನಗಳೊಂದಿಗೆ ನಿರೂಪಿಸಿದ್ದಾನೆ. ಮುಂದಿನ ಚಿತ್ರಕಲಾವಿಕಾಸಕ್ಕೆ ಈ ಗ್ರಂಥ ಆಧಾರವಾಯಿತು. ಗುಹಾಂತರ್ದೇವಾಲಯಗಳ ಗೋಡೆಗಳ ಮೇಲೆ ವರ್ಣಚಿತ್ರಗಳನ್ನು ಬಿಡಿಸುವ ಪದ್ಧತಿಯಿಂದಲೇ ಸುವ್ಯವಸ್ಥಿತವಾದ ಚೀನೀ ವರ್ಣಚಿತ್ರಕಲೆ ಆರಂಭವಾಯಿತು. ಪ್ರ.ಶ. 345 ರಿಂದ 405ರ ವರೆಗೆ ಜೀವಿಸಿದ್ದ ಕು–ಕೈ–ಛಿ ಎಂಬ ಕಲಾವಿದನೇ ಚೀನೀ ಕಲಾವಿದರಲ್ಲಿ ಅತಿಪ್ರಾಚೀನ, ಅತಿ ಪ್ರಸಿದ್ಧ. ಮೇಲೆ ಹೇಳಿದ ಷೀ–ಹೊ ಈ ಕಲಾವಿದನನ್ನು ತನ್ನ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾನೆ. ಕು–ಕೈ–ಛಿಯ ಕಲಾಕೃತಿಗಳನ್ನು ಮುಂದಿನ ನೂರಾರು ಕಲೆಗಾರರು ಪ್ರತಿಕೃತಿಗಳಲ್ಲಿ ಕಾಪಿಟ್ಟಿದ್ದಾರೆ. ಅವನ ಮೂಲ ಕೃತಿಗಳು ಇಂದು ಉಪಲಬ್ಧವಿಲ್ಲ. ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿಟ್ಟಿರುವ ಚಿತ್ರಸುರುಳಿ (ಸ್ಕ್ರಾಲ್) ಕು–ಕೈ–ಛಿಯ ಪ್ರಸಿದ್ಧ ಕೃತಿಗಳಲ್ಲಿ ಒಂದು. ಕುಂಚದಿಂದ ದೃಢವಾಗಿ ಮೃದುವಾಗಿ ಹೆಂಗಸರ ಜೀವನದಲ್ಲಿ ಒದಗುವ ಪ್ರಸಂಗಗಳನ್ನು ನಿರೂಪಿಸುವ ಈ ಚಿತ್ರದ ಪ್ರಮಾಣವೂ ಅದ್ಭುತವಾದುದು. ಈ ಕಲೆಗಾರ ನಿಸರ್ಗ ಚಿತ್ರಣದಲ್ಲಿಯೂ ಎತ್ತಿದ ಕೈ. ಇದೇ ಯುಗದ ಇನ್ನೊಬ್ಬ ಪ್ರಖ್ಯಾತ ಕಲೆಗಾರನೆಂದರೆ ಚಾಂಗ್–ಸೆಂಗ್–ಯು. ಇವನ ಚಿತ್ರಗಳು ಇಂದಿಗೂ ಉಳಿದುಬಂದಿವೆ.

ಮುಂದೆ ಎಂದರೆ ಪ್ರ.ಶ. 581 ರಿಂದ 906ರ ವರೆಗೆ ನೆಲೆಗೊಂಡಿದ್ದ ಸುಯ್ ಮತ್ತು ಟ ಆಂಗ್ ರಾಜವಂಶಗಳು ಕಲೆಗೆ ತುಂಬ ಪ್ರೋತ್ಸಾಹವನ್ನಿತ್ತವು. ಈ ಯುಗದಲ್ಲಿ ಮೂಡಿಬಂದ ಕಲಾಕೃತಿಗಳ ಪಟ್ಟಿಯನ್ನು ಆ ಯುಗದ ಬರಹಗಾರರೇ ಪಟ್ಟಿಮಾಡಿ ಉಳಿಸಿದ್ದಾರೆ. ಇಂಥ ಕಲಾಪಕ್ಷಪಾತಿ ಲೇಖಕರಲ್ಲಿ ಪ್ರಸಿದ್ಧನಾಗಿದ್ದವ ಯೆನ್–ಯುಆನ್ (ಸುಮಾರು ಪ್ರ.ಶ. 847). ಇವನು ಉಲ್ಲೇಖಿಸಿರುವ ನೂರಾರು ಕಲೆಗಾರರಲ್ಲಿ ಪ್ರಮುಖನಾದವ ವು–ತವೋ–ತ್ಸು (ಪ್ರಶ. 700–770). ಇವನ ವಿಚಾರವಾಗಿ ಹಲವಾರು ಉದಂತಗಳು ಪ್ರಚಲಿತವಾಗಿವೆ. ಕುಂಚದ ಕೆಲಸವೆಂದರೆ ಇವನನ್ನು ಮೀರಿಸಿದವರು ಯಾವ ಕಾಲದಲ್ಲೂ ಇಲ್ಲವೆಂದು ಚೀನೀ ಜನರಲ್ಲಿ ಪ್ರತೀತಿ ಇದೆ. ಬಾಸ್ಟನ್ ನಗರದ ಲಲಿತಾಕಲಾಸಂಗ್ರಹಾಲಯದಲ್ಲಿ ಯೆನ್–ಲಿ–ಪೆನ್ (630–670) ಎಂಬ ಕಲೆಗಾರನ ಚಿತ್ರಸುರುಳಿಯೊಂದನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಇದರಲ್ಲಿ ವೇನ್–ಟಿ ಚಕ್ರವರ್ತಿಯಿಂದ ಸುಯ್ ರಾಜವಂಶದ ಯಾಂಗ್–ಟಿ ಚಕ್ರವರ್ತಿಯವರೆಗೆ ಚೀನದೇಶವನ್ನು ಆಳಿದ ಹದಿನಾರು ಅರಸರ ವ್ಯಕ್ತಿಚಿತ್ರಗಳಿವೆ.

ಚೀನೀ ಕಲೆಗಾರರಿಗೆ ನಿಸರ್ಗವೆಂದರೆ ಪ್ರಾಚೀನಕಾಲದಿಂದಲೂ ಅನುರಕ್ತಿ. ಆದರೆ ಮೊದಮೊದಲಲ್ಲಿ ವ್ಯಕ್ತಿಗಳ ಹಿನ್ನೆಲೆಯಲ್ಲಿ ಮಾತ್ರ ನಿಸರ್ಗವನ್ನು ಮೂಡಿಸುವ ಪರಿಪಾಠವಿತ್ತು. ಆದರೆ ಈ ಯುಗದಲ್ಲಿ ಪ್ರಕೃತಿಯನ್ನೇ ಸ್ವತಂತ್ರವಾಗಿ ಚಿತ್ರಿಸುವ, ನಿಸರ್ಗದ ವಿವಿಧ ಭಂಗಿಗಳನ್ನು ನಿರೂಪಿಸುವ ಹವ್ಯಾಸ ಮೊದಲಾಯಿತು. ಈ ಕಾರಣದಿಂದಲೇ ಚೀನೀ ಕಲೆಯಲ್ಲಿ ಮನುಷ್ಯನ ಅಥವಾ ಪ್ರಾಣಿಗಳ ಚಿತ್ರಣಕ್ಕಿಂತ, ಪ್ರಸಂಗಗಳ ನಿರೂಪಣೆಗಳಿಗಿಂತ, ನಿಸರ್ಗಚಿತ್ರಣ ಪ್ರಮುಖವಾಗಿದೆ. ಈ ಮನೋವೃತ್ತಿ ಅಂದಿನಿಂದ ಇಂದಿನವರೆಗೂ ಉಳಿದುಬಂದಿದೆ. ಈ ನಿಸರ್ಗಪಕ್ಷಪಾತವನ್ನು ಚೀನೀಕಲೆಯಲ್ಲಿ ಮೂಡಿಸಿದ ಪ್ರಾಚೀನ ಕಲಾವಿದರಲ್ಲಿ ಲಿ ಸ್ಯೂ–ಷುಯ್‌ನ್ (651–716) ಎಂಬುವನೂ ಅವನ ಮಗ ಲಿ ಚವೋ–ಟವೊ (675–730) ಎಂಬುವನೂ ಪ್ರಮುಖರಾದರು. ಇವರು ಹೊಸದೊಂದು ಸಂವಿಧಾನವೊಂದನ್ನೂ ಬಳಕೆಗೆ ತಂದರು. ತುಂಬ ಶ್ರಮಸಾಧ್ಯವಾದ ಸೂಕ್ಷ್ಮವಾದ ಕುಂಚಕ್ರಿಯೆಯಲ್ಲಿ ನೀಲಿ, ಹಸಿರು ಪ್ರಧಾನವಾದ ವರ್ಣವ್ಯವಸ್ಥೆಯನ್ನು ರಚನೆ ಮಾಡುವ ಈ ಸಂವಿಧಾನ ಮೊನ್ನೆ ಮೊನ್ನೆಯವರೆಗೂ ಜನಪ್ರಿಯವಾಗಿತ್ತು. ಸ್ವಪ್ನದೃಷ್ಟ ನಿಸರ್ಗಗಳ ಬಣ್ಣನೆಯಲ್ಲಿ ಕೂಡ ಈ ತಂದೆ ಮಕ್ಕಳು ಹೆಸರಾಂತ ಕಲಾವಿದರು; ಇವರ ಕಲ್ಪನೆಗಳು ತುಂಬ ಸ್ವಾರಸ್ಯವಾಗಿರುತ್ತವೆ. ಇವರ ಕಲಾಪದ್ಧತಿಯನ್ನು ಉತ್ತರಾದಿ ಶಾಖೆಯೆಂದು ವ್ಯವಹರಿಸುತ್ತಾರೆ. ಇದರಿಂದ ವಿಭಿನ್ನವಾದ ದಕ್ಷಿಣಾದಿ ಶಾಖೆಯ ಪ್ರವರ್ತಕ ವಾಂಗ್–

ವೈ (699–759) ಎಂಬ ಕಲೆಗಾರ; ಇವನು ಸುಪ್ರಸಿದ್ಧ ಕವಿಯೂ ಆಗಿದ್ದ. ಇವನ ಸಂಪ್ರದಾಯದಲ್ಲಿ ಚಿತ್ರಗಳು ಬಹುವರ್ಣದವಾಗಿರದೆ, ಒಂದೇ ಬಣ್ಣದವು, ಅದೂ ಕಾಡುಕಪ್ಪು ಬಣ್ಣದಿಂದಲೇ ಎಳೆ ಎಳೆಗಳಲ್ಲಿ ರಚಿತವಾದುವು. ಆದರೆ ಇವನೇ ನಿರ್ಮಿಸಿದ ಕಲಾಕೃತಿಗಳು ಇಂದು ಉಪಲಬ್ಧವಿಲ್ಲ. ಕೆಲವು ಪ್ರತಿಕೃತಿಗಳೇನೋ ಇವೆ.

ಮಿಂಗ್ ಹುಆಂಗ್ ಚಕ್ರವರ್ತಿಯ (712–756) ಆಸ್ಥಾನದಲ್ಲಿ ಕಲಾವಿದನಾಗಿದ್ದ ಹಾನ್ ಕಾನ್ ಕುದುರೆಗಳನ್ನು ಚಿತ್ರಿಸುವುದರಲ್ಲಿ ನಿಸ್ಸೀಮ. ಈತ ಅರಮನೆಗೆ ಸೇರಿದ್ದ ಕುದುರೆ ಲಾಯದಲ್ಲಿ ಬಹುಕಾಲ ಕಳೆದು ಕುದುರೆಗಳ ಆಕಾರವನ್ನೂ ಸ್ವಭಾವವನ್ನೂ ಚೆನ್ನಾಗಿ ಅಧ್ಯಯನ ಮಾಡಿದ್ದ. ಇವನ ಕೃತಿಗಳು ಇಂದಿಗೂ ಉಳಿದಿವೆ. ಆ ಕಾಲದ ಭಿತ್ತಿಚಿತ್ರಗಳಲ್ಲಿ ಅತ್ಯಂತ ಸುಪ್ರಸಿದ್ಧವಾದುವೆಂದರೆ ತುನ್ ಹುಆಂಗ್ ಸಮಾಧಿಯಲ್ಲಿ ಒಳಗೋಡೆಗಳ ಮೇಲೆ ಮೂಡಿಸಿರುವ ಚಿತ್ರಗಳು. ಇದರಲ್ಲಿ ಅತ್ಯುತ್ತಮವಾದ ಪುರುಷಚಿತ್ರಣಗಳಿವೆ, ಹಲವಾರು ದೇವತಾಚಿತ್ರಗಳೂ ಇವೆ. ಬುದ್ಧ, ಅಮಿತಾಭರಲ್ಲದೆ ಜಾತಕದ ಕಥೆಗಳನ್ನೂ, ಅಮಿತಾಭನ ಸ್ವರ್ಗವಾದ ಸುಖಾವತಿ ಮತ್ತು ಭೈಷಜ್ಯಗುರು, ಮೈತ್ರೇಯ ಇವರ ಸ್ವರ್ಗಗಳನ್ನೂ, ವಿಮಲಕೀರ್ತಿ ನಿರ್ದೇಶ ಸೂತ್ರದ ಪ್ರಸಂಗವನ್ನೂ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಇಲ್ಲಿನ ಶಿಲ್ಪಗಳು ಕೂಡ ನೈಜವಾಗಿ ಸುಂದರವಾಗಿವೆ.

ಚೀನೀ ಕಲೆಯ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ್ದ ತಾಂಗ್ ರಾಜವಂಶದವರ ಪತನವಾದ ಅನಂತರ ಐದು ರಾಜವಂಶದ ಯುಗ (902–960) ಆರಂಭವಾಯಿತು. ಚೆಂಗ್‌ಟು ಮತ್ತು ನ್ಯಾನ್‌ಕಿಂಗ್ ನಗರಗಳು ಹಲವಾರು ಪ್ರತಿಭಾವಂತ ಕಲೆಗಾರರನ್ನು ಆಕರ್ಷಿಸಿದುವು. ಇದೇ ಕಾಲದಲ್ಲಿ ಚೀನೀಯರು ಮುದ್ರಣಕಲೆಯನ್ನು ಕಂಡುಹಿಡಿದು ಜಗತ್ತಿಗೆ ಉಪಕಾರ ಮಾಡಿದರು. ಹತ್ತನೆಯ ಶತಮಾನದ ಆದಿಭಾಗದಲ್ಲಿ ಕಲೆಯ, ತತ್ರಾಪಿ ಚಿತ್ರಕಲೆಯ, ಪುನರುಜ್ಜೀವನ ಸಾಧ್ಯವಾಯಿತು. ಚಿತ್ರಕಲೆಯ ಹಲವು ಪ್ರಮುಖ ಪ್ರಕಾರಗಳು ರೂಪುಗೊಂಡವು. ಈ ಕಾಲದ ಹಲವು ಪ್ರಖ್ಯಾತ ಕಲೆಗಾರರ ಜೀವಿತಪ್ರಸಂಗಗಳನ್ನು ಇತಿಹಾಸಕಾರರು ಉಳಿಸಿದ್ದಾರೆ. ಇವರು ಸಂಪ್ರದಾಯದ ಜಾಡನ್ನು ಬಿಟ್ಟು ನವ್ಯವಾದ ಪದ್ಧತಿಗಳನ್ನು ಅನುಸರಿಸಿರುವುದು ಈ ಜೀವಿತಗಳಿಂದ ವ್ಯಕ್ತವಾಗುತ್ತದೆ. ಜಾನ್ (ಜಪಾನಿನ ಜೆನ್, ಸಂಸ್ಕೃತದ ಧ್ಯಾನ) ಬೌದ್ಧ ಪಂಥ ಇದೇ ಕಾಲದಲ್ಲಿ ಚೀನ ದೇಶದಾದ್ಯಂತ ಪ್ರಸರಿಸಿ ಅದರ ಪ್ರಭಾವದಿಂದ ಒಂದು ಕಲಾಪ್ರಕಾರ ಆರಂಭವಾಯಿತು. ಆಧ್ಯಾತ್ಮಿಕವಾದ, ಅಲೌಕಿಕವಾದ ಅನುಭವಗಳನ್ನು ಚಿತ್ರದಲ್ಲಿ ಮೂಡಿಸುವ ಸಂಪ್ರದಾಯ ಬಳಕೆಗೆ ಬಂತು. ಅಷ್ಟಲ್ಲದೆ, ನಿಸರ್ಗದ ಸಾರವನ್ನೂ ಸಂಬೋಧಿಯ ಅಂತರಾರ್ಥವನ್ನೂ ಶಾಂತಿಯ ಸ್ವರೂಪವನ್ನೂ ಚಿತ್ರಗಳಲ್ಲಿ ಬಿಡಿಸುವ ಉತ್ಸುಕತೆ ಕಾಣತೊಡಗಿತು. ಈ ಪಂಥದ ಮಡಿಲಿನಿಂದ ಸಂಬೋಧಿಯ ಶಾಂತಿ ಮೂರ್ತಿಮತ್ತಾಗಿ ಅರ್ಹನ್ (ಚೀನೀ ಭಾಷೆಯಲ್ಲಿ ಲೋಹನ್), ಅಥವಾ ಬುದ್ಧನ ಆಣತಿಯಂತೆ ಧ್ಯಾನಮಾರ್ಗವನ್ನು ಅನುಸರಿಸಿ ಮುಕ್ತಿ ಪಡೆದ ಶಿಷ್ಯರು ಕಲಾಕೃತಿಗಳಿಗೆ ವಸ್ತುಗಳಾದರು. ಬಂಡೆಗಳ ಮೇಲೆ ಕುಳಿತು ಬಂಡೆಗಳಂತೆಯೇ ಕಾಣುವ ಹದಿನಾರು ಲೋಹನ್‌ಗಳ ಚಿತ್ರಣ ಕಲೆಗಾರರಿಗೆ ತುಂಬ ಪ್ರಿಯವಾದ ಹವ್ಯಾಸ. ಇದೇ ಜಾಡನ್ನು ಹಿಡಿದು ನಿದ್ರೆಮಾಡುತ್ತಿರುವ ಹುಲಿಗಳ ಮೇಲೆ ಕುಳಿತ ಲೋಹನ್‌ಗಳನ್ನು ಚಿತ್ರಿಸಿದ ಷಿಹ್–ಕೊ (ಹತ್ತನೇ ಶತಮಾನದ ಅಂತ್ಯಭಾಗ) ಪ್ರಸಿದ್ಧನಾಗಿದ್ದಾನೆ. ಹಕ್ಕಿಗಳನ್ನೂ ಹೂವುಗಳನ್ನೂ ಚಿತ್ರಿಸುವ ಪದ್ಧತಿ ಈ ಕಾಲದಲ್ಲೇ ಹೆಚ್ಚು ಬಳಕೆಗೆ ಬಂತು. ನಿಸರ್ಗದಲ್ಲಿಯೂ ಪರ್ವತಗಳು, ಅದೂ ಬಿದಿರು ಕಡ್ಡಿ, ಎಲೆ ಮುಂತಾದವು ಮೆಚ್ಚಿಗೆಯ ವಸ್ತುಗಳು. ನಿಸರ್ಗವೆಂದರೆ ಅವರ ಪಾಲಿಗೆ ಮನುಷ್ಯನಿಂದ ಭಿನ್ನವಾದ ಬಾಹ್ಯ ವಾತಾವರಣವಲ್ಲ; ಮನುಷ್ಯನ ಅಂತರಾಳದಲ್ಲೇ ಗುಪ್ತವಾಗಿರುವ ನಿಸರ್ಗದ ಸಾರವನ್ನು ಚಿತ್ರಿಸುವುದೇ ಕಲೆಗಾರನ ಕರ್ತವ್ಯವೆಂದು ಅವರ ಅಭಿಮತ. ಚಿಂಗ್–ಹೊ, ಕುಅನ್–ತುಂಗ್, ಲಿ–ಚೆಂಗ್, ತುಂಗ್ ಯೂವಾನ್, ಚುಯ್–ಜಾನ್, ಫಾನ್‌ಕುಆನ್ ಮುಂತಾದ ಕಲಾವಿದರು ಈ ನಿಸರ್ಗದ ಪಾರಮ್ಯವನ್ನು ನಿರೂಪಿಸಿದವರು ಒಂಬತ್ತು ಶತಮಾನಗಳ ಅನಂತರ ಇಂದಿಗೂ ಅವರ ಹೆಸರುಗಳು ಚೀನೀ ಕಲೆಯಲ್ಲಿ ಉಳಿದಿವೆ. ಅವರ ಆದರ್ಶವನ್ನು ಪ್ರತಿಯೊಂದು ತಲೆಮಾರಿನ ಕಲಾವಿದರೂ ಅನುಕರಿಸಿದರು.

ಮುಂದೆ ಕಾಣುವ ವಸ್ತು ದೂರದ ಮಂಜುಮುಸುಕಿದ ಮಬ್ಬಿನಲ್ಲಿ ಬೆರೆತು ಕಾಣದಾಗುವಂತೆ ಕಲ್ಪನೆಯನ್ನು ಮೂಡಿಸುವ ಶೈಲಿ ಉತ್ತುಂಗದೂರ ಶೈಲಿಯಾದರೆ (ಹೈಡಿಸ್ಟನ್ಸ್ ಸ್ಟೈಲ್), ಮುಂದೆ ಕಾಣುವ ಬೆಟ್ಟ ಅದರ ಮುಂದಿರುವ ನದಿಯ ಆಚೆ (ಈಚೆ) ಇರುವ ಮತ್ತೊಂದು ಬೆಟ್ಟದಿಂದ ಕಾಣುವಂತೆ ಚಿತ್ರಿಸುವುದು ಸಮದೂರಶೈಲಿ(ಲೆವಲ್ ಹೈಡಿಸ್ಟನ್ಸ್ ಸ್ಟೈಲ್). ಚಿಂಗ್ ಹೊ, ಕುಆನ್ ತುಂಗ್ ಇವರು ಮೊದಲ ಶೈಲಿಯವರಾದರೆ ಲಿ ಚೆಂಗ್ ಎರಡನೆಯ ಶೈಲಿಯ ಪ್ರವರ್ತಕ. ಇವನಿಂದ ಪ್ರಭಾವಿತನಾದ ಕುಓ–ಷೀಯ (1025–1075) ವ್ಯಕ್ತಿತ್ವ ತುಂಬ ಸ್ವಾರಸ್ಯವಾದುದು. ಚೀನಿ ಕಲೆಗಾರರಲ್ಲೆಲ್ಲ ಇವನಷ್ಟು ಜನಪ್ರಿಯವಾದ ಕಲೆಗಾರ ಮತ್ತೊಬ್ಬನಿಲ್ಲ. ಇವನಿಂದಲೇ ಆಧುನಿಕ ಚೀನೀ ಕಲೆಯ ಮೂಲತತ್ತ್ವ ಪ್ರತಿಪಾದಿತವಾಯಿತು. ಹು ಆಂಗ್ ತಿ ಇಂಗಾ ಚಿಎನ್, ಸು ಷೀ ಮತ್ತು ಮಿಫೈ (1052–1107) ಇವರು ಕೂಡ ಈ ಕಾಲದ ಪ್ರತಿಭಾನ್ವಿತ ಕಲೆಗಾರರು. ಇದರಿಂದಾಗಿ ಚೀನದಲ್ಲಿ ನಾಗರ ಚಿತ್ರಕಲೆಯ (ಲಿಟರ್ಯಾಟಿ ಪೇಂಟಿಂಗ್) ವೆನ್ ಜೆನ್ ಹುವ ಶೈಲಿ ಶುರುವಾಗಿ ಹೆಮ್ಮರವಾಗಿ ಬೆಳೆಯಿತು. ಅಂದಲಿಪಿ ಲೇಖನಕಲೆಯ (ಕ್ಯಾಲಿಗ್ರಫಿ) ಆದರ್ಶಗಳನ್ನು ವರ್ಣಚಿತ್ರಗಳನ್ನು ಅಳವಡಿಸಿಕೊಂಡು ಕಲಾವಿದ ಬಿಡಿಬಿಡಿ ಗೆರೆಗಳಲ್ಲಿ ಬಿಂದುಗಳಲ್ಲಿ ತನ್ನ ಭಾವಗಳನ್ನು ಅಭಿವ್ಯಕ್ತಿಗೊಳಿಸುವುದು ಸಾಧ್ಯವೆಂಬುದನ್ನು ಇವರು ತೋರಿಸಿಕೊಟ್ಟರು. ಕಲೆಗಾರನಿಗೆ ಕಾಣುವ ವಸ್ತುವಿಗಿಂತ ಅದನ್ನು ಕಾಣುವ ವ್ಯಕ್ತಿತ್ವ ಮುಖ್ಯವೆಂಬುದು ಇವರ ವಾದ; ಈ ಕಾರಣದಿಂದ ಕಲಾಕೃತಿ ದೃಶ್ಯವಸ್ತುವಿನ ಪ್ರತಿಕೃತಿಯೇ ಆಗಿರಬೇಕೆಂಬ ನಿಲುವು ಸಲ್ಲದೆಂದು ಇವರು ವಾದಿಸಿದರು. ಇವರ ಕೃತಿಗಳಿಂದಾಗಿ ಚೀನೀ ಕಲಾವಿಮರ್ಶಕರು ಚೈತನ್ಯ ಅನುರಣನ (ಸ್ಪಿರಿಟ್ ರೆಸೊನೆನ್ಸ್) ಎಂಬ ಪಾರಿಭಾಷಿಕ ಶಬ್ದವನ್ನು ಸೃಷ್ಟಿ ಮಾಡಿದರು. ಕಲೆಯಲ್ಲಿ ಮೂಡಿಬರುವ ಯೋಗ್ಯವಾದಂಥ ಧರ್ಮ ವಸ್ತುವಿನಲ್ಲಿ ಇರಬೇಕಲ್ಲದೆ ಅದನ್ನು ಮೂಡಿಸುವ ಕ್ರಿಯೆಗೆ ಸಮರ್ಥವಾದ ಧರ್ಮವೂ ಕಲೆಗಾರನಲ್ಲಿರಬೇಕು ಎಂಬುದು ಈ ಕಲ್ಪನೆಯ ತತ್ತ್ವ. ಸಹಜವಾಗಿ ಕಲೆಗಾರನ ವ್ಯಕ್ತಿತ್ವವೇ ಮುಖ್ಯವೆಂದು ಬಗೆದ ಈ ಕಲೆಗಾರರು ಕಲಾಸಂವಿಧಾನಗಳನ್ನು ನಿಕೃಷ್ಟವಾಗಿ ಕಂಡರು. ಇದು ವಿಮರ್ಶಕರಿಗೆ ಅಷ್ಟಾಗಿ ಹಿಡಿಸಲಿಲ್ಲ. ಈ ಕಲೆಗಾರರು ಜೀವನಕ್ಕಾಗಿ ಕಲೆಯ ವೃತ್ತಿಯನ್ನು ಕೈಗೊಳ್ಳದೆ ಕೇವಲ ಸುಖಕ್ಕಾಗಿ ಚಿತ್ರ ಬರೆಯುತ್ತಿದ್ದರಾಗಿ ಇವರನ್ನು ವಿಮರ್ಶಕರು ಕಲಾವಿಲಾಸಿಗಳು (ಡಿಲೇಟಂಟ್ಸ್) ಎಂದು ಮೂದಲಿಸುತ್ತಾರೆ. ಈ ಕಲೆಗಾರರ, ಇವರ ಶೈಲಿಯ ಗುಣಾವಗುಣಗಳು ಏನೇ ಇರಲಿ, ಇವರಿಂದ ಬಿದಿರು(ವಂಶ)ನಾಳ ಕಲಾಕೃತಿಯ ಆದರ್ಶವಾಯಿತು. ಸುಷಿ (1063–1101) ಬಿದಿರು ನಾಳಗಳನ್ನು ಚಿತ್ರಿಸುವುದರಲ್ಲಿ ಅತ್ಯಂತ ಕುಶಲ. ಇನ್ನೊಬ್ಬ ನಾಗರ ಕಲೆಗಾರ ಮಿ ಯು–ಜೇನ್ (1086–1165) ಮತ್ತು ಅವನ ತಂದೆ ಮಿ ಫೈ ಇಬ್ಬರೂ ಇದೇ ಶೈಲಿಯಲ್ಲಿ ಪ್ರಕೃತಿ ಚಿತ್ರಣವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಸೂಂಗ್ ರಾಜವಂಶದ ಅರಸರು ಕಲೆಗಾರರನ್ನು ಮನಸಾರೆ ಪ್ರೋತ್ಸಾಹಿಸಿದ ಕಾರಣ ಇವರ ಆಶ್ರಯದಲ್ಲಿ ಕಲೆ ತುಂಬ ಬೆಳೆಯಿತು. ಅರಮನೆಗೆ ಸೇರಿದ ಕಲೆಗಾರರು ಚಿತ್ರಕರ್ಮ ಅಕಾಡೆಮಿಯೆಂಬ ಸಂಸ್ಥೆಯನ್ನು ಕಟ್ಟಿಕೊಂಡರು. 1101 ರಿಂದ 1126ರವರೆಗೆ ಆಳಿದ ಚಕ್ರವರ್ತಿ ಹುಯ್–ತ್ಸುಂಗ್ ಸ್ವತಃ ಪ್ರತಿಭಾವಂತನಾದ ಕಲೆಗಾರನಾಗಿದ್ದು ಈ ಸಂಸ್ಥೆಯ ಅಧ್ಯಕ್ಷನಾಗಿದ್ದ. ಈ ಸಂಸ್ಥೆಯ ಕಲಾವಿದರಿಂದ ಚೀನೀಕಲೆಯ ಪ್ರಕಾರಗಳು ನಿರ್ದಿಷ್ಟವಾದುವು. ಇವರಲ್ಲಿ ಲಿ ಕುಂಗ್–ಲಿನ್ (ಅಥವಾ ಲಿ ಲುಂಗ್ ಮೈನ್ 1040–1106) ಎಂಬವನು ಬೌದ್ಧಪ್ರಸಂಗಗಳನ್ನು ಅಧಿಕರಿಸಿ ಒಂದೇ ಬಣ್ಣದ ಮೈಗೆರೆಯ ಚಿತ್ರಗಳನ್ನು ರಮ್ಯವಾಗಿ ಬಿಡಿಸಿದ್ದಾನೆ. ಇವಕ್ಕೆ ಪಾಯ್–ಮಿಯವೊ (ಕಾಂಟೂರ್) ಚಿತ್ರಗಳೆಂದು ಹೆಸರು.

ತಾನು ಚಕ್ರವರ್ತಿಯಾದ ಮೇಲೆ ಕವೋ–ತ್ಸುಂಗ್ (1127–1162) ಅರಸೊತ್ತಿಗೆಯ ಅಕಾಡೆಮಿಯನ್ನು ಪುನರುಜ್ಜೀವನಗೊಳಿಸಲು ಯತ್ನಿಸಿದ. ಈ ಹೊಸ ಸಂಸ್ಥೆಯ ಅಧ್ಯಕ್ಷನಾಗಿ ವೃದ್ಧಕಲಾವಿದನಾಗಿದ್ದ ಲಿ ತಾಂಗ್ ನೇಮಿತನಾದ. ನಿಸರ್ಗಚಿತ್ರಣದಲ್ಲಿ ಕುಶಲನಾದ ಈತ ದೊಡ್ಡ ಕೊಡಲಿ ಸುಕ್ಕು (ಬಿಗ್ ಆ್ಯಕ್ಸ್ ರಿಂಕಲ್ಸ್) ಎಂಬ ಕುಂಚಶೈಲಿಯನ್ನು ಪ್ರವರ್ತಿಸಿದ. ಬೆಟ್ಟವನ್ನು ಚಿತ್ರಿಸುವಾಗ ಕಲ್ಲುಪದರಗಳು ಅಡ್ಡಡ್ಡವಾಗಿ ಪೇರಿಸಿಟ್ಟಂತೆ ಕಾಣಿಸುವುದು ಇವನ ಸಂವಿಧಾನ. ನೀರೆಮ್ಮೆಗಳನ್ನೂ ದನಕಾಯುವ ಹುಡುಗರನ್ನೂ ಇವನು ಸ್ವಾರಸ್ಯವಾಗಿ ಚಿತ್ರಿಸಿದ್ದಾನೆ. ಇದೇ ಪಂಥಕ್ಕೆ ಸಂಬಂಧಪಟ್ಟಂತೆ ಲಿ ಟಿ ಎಂಬ ಕಲೆಗಾರನೂ ಕೆಲಸ ಮಾಡಿದ. ಮಂಜು, ಹಕ್ಕಿಗಳು, ಗಿಡಗಳನ್ನು ಬಿಡಿಸುವುದರಲ್ಲಿ ಚತುರನಾದ ಲಿಆನ್–ಚುಂಗ್, ಮತ್ತು ಬೆಕ್ಕು ನಾಯಿಗಳನ್ನು ಚಿತ್ರಿಸುವುದರಲ್ಲಿ ಕುಶಲನಾದ ಮಾವೋ–ಇ (1170 ಸು.) ಇವರೂ ಈ ಪಂಥಕ್ಕೆ ಸೇರಿದವರೇ.

ಚೀನಾದ ಕಲಾಪ್ರಪಂಚದಲ್ಲಿ ಮಾ ಮನೆತನ ಪ್ರಸಿದ್ಧವಾದದ್ದು. ಈ ಮನೆತನದ ಐದು ತಲೆಮಾರುಗಳ ಕಲಾವಿದರು ಚೀನ ಚಕ್ರವರ್ತಿಯ ಆಸ್ಥಾನದಲ್ಲಿದ್ದರು. ಕವೊ–ತ್ಸುಂಗ್ ರಾಜನಾಗಿದ್ದಾಗಲೆ ಸೂಂಗ್ ಅಕಾಡೆಮಿಯಲ್ಲಿ ಕೆಲಸ ಮಾಡುತ್ತಿದ್ದ ಮಾ–ಫೆನ್ ಇವರಲ್ಲಿ ತುಂಬ ಪ್ರಸಿದ್ಧನಾದವ. ಕವಿ ಲಿ–ಪೊ ಮತ್ತು ತಪಸ್ವಿ ಯಒ–ಷಾನ್ ಇವರ ಸಂವಾದವನ್ನು ಮನೋಜ್ಞವಾಗಿ ಚಿತ್ರಿಸಿ ಪ್ರಸಿದ್ಧನಾದ ಚಿ ಕುಂಗ್–ಷಿಎನ್ ಇವನ ಮಗನೇ. ಮಾ–ಫೆನ್ನನ ಮೊಮ್ಮಗ–ಮಾ–ಯೂವಾನ್ ಆ ವಂಶದಲ್ಲೇ ಅತ್ಯಂತ ಪ್ರತಿಭಾಶಾಲಿಯಾದ ಕಲೆಗಾರ; ಅವನ ಮಗ ಮಾ–ಲಿನ್ ಕೂಡ ಅಷ್ಟೇ ಕುಶಲ, ಪ್ರಸಿದ್ಧ. ವಸ್ತುಗಳನ್ನೆಲ್ಲ ಒಂದು ಬದಿಯಲ್ಲಿ ಮೂಡಿಸಿ ಚಿತ್ರಫಲಕದ ಬಹುಭಾಗವನ್ನು ಆಕಾಶದಿಂದ ತುಂಬಿಸುವ ಶೈಲಿ ಮಾ–ಯೂವಾನನದು. ಇವನ ಮೇಲೆ ಲಿ–ತಾಂಗನ ಪ್ರಭಾವವೂ ಬಿದ್ದಿತ್ತು. ಮಾ–ಯುವಾನನೊಂದಿಗೇ ಅಕಾಡೆಮಿಯಲ್ಲಿ ಕೆಲಸಮಾಡುತ್ತಿದ್ದ. ಷಿಯ ಕುಯ್ಯೆನ (1200 ಸುಮಾರು) ಕುಂಚಕ್ರಿಯೆ ತುಂಬ ನಾಜೂಕಾದುದು. ಇವನ ಹಲವಾರು ಕೃತಿಗಳು ಉಳಿದುಬಂದಿವೆ. ಇವನ ಮತ್ತು ಮಾ–ಯುವಾನನ ಚಿತ್ರಗಳಲ್ಲಿ ಬಹುಮಟ್ಟಿನ ಸಾಮ್ಯವಿದ್ದರೂ ಷಿಯಾ ಕುಯ್ಯೆ ತನ್ನದೇ ಆದ ಶೈಲಿಯೊಂದನ್ನು ಆರಂಭಿಸಿದ. ಇವನ ನಿಸರ್ಗಚಿತ್ರದಲ್ಲಿ ಚಿತ್ರಫಲಕದ ಮಧ್ಯೆ ಬೆಟ್ಟಗಳನ್ನು ಮೂಡಿಸಿರುವುದು ಕಂಡುಬರುತ್ತದೆ.

ಚೀನದಲ್ಲಿ ಧ್ಯಾನಬೌದ್ಧಪಂಥ ಬೇರೂರಿದ ಮೇಲೆ ಈ ಅಕಾಡೆಮಿಯ ಪ್ರಭಾವ ವಿಹಾರದಲ್ಲಿದ್ದ ಕಲೆಗಾರ ಭಿಕ್ಷುಗಳ ಮೇಲೆ ಬಿದ್ದು ಪರಿಣಾಮವನ್ನು ಉಂಟುಮಾಡಿತು. ಅಕಾಡೆಮಿಯ ಅಧಿಕಾರಿಯಾಗಿದ್ದ ಲಿಯಾಂಗ್‌ಕೈ ತನ್ನ ವೃದ್ಧಾಪ್ಯದಲ್ಲಿ ಹಂಗ್‌ಚೌನ ಲಿಯ-ತುಂಗ್-ಸ್ಸೂ ವಿಹಾರದಲ್ಲಿ ನೆಲೆಯಾಗಿ ನಿಂತಮೇಲೆ ಈ ಧ್ಯಾನ ಚಿತ್ರಸಂಪ್ರದಾಯ ಆರಂಭವಾಯಿತು. ವಿಹಾರದಲ್ಲೇ ಇದ್ದ ಭಿಕ್ಷುಗಳು ಸರಳವಾದ ಕುಂಚಕ್ರಿಯೆಯಿಂದ ಅನಿರೀಕ್ಷಿತ ಸ್ಫೂರ್ತಿಯನ್ನು ಅಭಿವ್ಯಕ್ತಗೊಳಿಸಲು ಪ್ರಯತ್ನಿಸಿದರು. ನಿಸರ್ಗಚಿತ್ರಣಕ್ಕಿಂತ ಹೆಚ್ಚಾಗಿ, ಧ್ಯಾನಪಂಥಕ್ಕೆ ಸಂಬಂಧಿಸಿದ ಯತಿಗಳು, ಗೃಹಸ್ಥರು, ಆಶ್ರಯದಾತರು ಇವರ ವ್ಯಕ್ತಿಚಿತ್ರಗಳು ಬೆಳಕಿಗೆ ಬಂದುವು. ಬೌದ್ಧಪಂಥದ ದೇವದೇವತೆಗಳಿಗೆ ಈ ಸಂಪ್ರದಾಯದಲ್ಲಿ ಸ್ಥಾನ ಇರಲಿಲ್ಲ. ಅತ್ಯಲ್ಪ ವ್ಯವಧಾನದಿಂದ ಅತಿಮಹತ್ತ್ವದ ಅರ್ಥವನ್ನು ನಿರೂಪಿಸುವ ಕಾತರ ಈ ಕಲೆಗಾರರಿಗೆ ಇದ್ದಿತು. ಇವರಲ್ಲಿ ಹಲವಾರು ಯಶಸ್ವಿಗಳೂ ಆದರು. ಲಿಯಾಂಗ್ ಕೈನ ಕಲಾಕೃತಿಗಳಲ್ಲಿ ಕಾಣುವ ಅತಿವಿರಳ ಕುಂಚಕ್ರಿಯೆಯ ಸಂವಿಧಾನ (ಸಂಕ್ಷಿಪ್ತ ಕುಂಚಕರ್ಮ, ಚಿಎನ್-ಪಿ) ಇದಕ್ಕೆ ನಿದರ್ಶನ. ಈ ಪಂಥದ ಕಲೆಗಾರರಿಗೆ ಹಂಗ್‌ಚೌನ ಲಿಯ-ತುಂಗ್-ಸ್ಸೂ ವಿಹಾರವೇ ಕೇಂದ್ರವಾಗಿ ಪರಿಣಮಿಸಿತು. ಈ ಕಲಾಕೃತಿಗಳನ್ನು ಜಪಾನೀ ವಿಮರ್ಶಕರು ತುಂಬ ಮೆಚ್ಚಿಕೊಂಡು ಸಂಗ್ರಹಿಸಿದರು. ಇವರ ಸಂಗ್ರಹವೇ ಇಂದು ಉಪಲಬ್ಧವಾಗಿರುವುದು. ಲಿಯಂಗ್ ಕೈ, ಮು-ಚಿ, ಲೋಚುಅಂಗ್, ಲಿ-ಚುಎ, ಯೂಯ್ ಚಿಎನ್ ಮುಂತಾದವರು ಈ ಪಂಥದ ಪ್ರಸಿದ್ಧ ಕಲೆಗಾರರು. ಇವರು ಅಕಾಡೆಮಿ ಸಂಪ್ರದಾಯವನ್ನು ಬಿಟ್ಟು ನವ್ಯವಾದ ಪ್ರಯೋಗಗಳನ್ನು ಮಾಡಿದ್ದಾರೆ. ಇವರೆಲ್ಲರಿಗೂ ಒಂದೇ ಬಗೆಯ ಭಾವನೆಗಳಿಲ್ಲದೆ, ಧ್ಯಾನಚಿತ್ರದಂಥ ಬಹುಮುಖವಾದ ಸಂಪ್ರದಾಯವನ್ನು ತಳೆದರು. ಈ ಸಂಪ್ರದಾಯ ಮುಂದಿನ ಚೀನೀ ಕಲೆಗಿಂತ ಜಪಾನೀ ಕಲೆಯ ಮೇಲೆ ಸಾಕಷ್ಟು ಪ್ರಭಾವ ಬೀರಿತು.

ಮಂಗೋಲ ಅಳರಸರು ಚೀನೀ ರಾಜವಂಶವನ್ನು ಕೊನೆಗಾಣಿಸಿ ತಮ್ಮದೇ ಆದ ಯೂಆನ್ ವಂಶವನ್ನು 1260ರಲ್ಲಿ ಆರಂಭಿಸಿ 1368ರ ವರೆಗೂ ಚೀನದ ಮೇಲೆ ತಮ್ಮ ಪ್ರಭುತ್ವವನ್ನು ನಿರ್ವಹಿಸಿದರು. ಈ ಒಂದು ಶತಮಾನದ ಅವಧಿಯಲ್ಲಿ ಚೀನಿ ಕಲಾವಿದರಿಗೆ ರಾಜಾಶ್ರಯ ತಪ್ಪಿತು; ಈ ದುಃಸ್ಥಿತಿಯಲ್ಲಿ ಸೂಂಗ್ ಅಕಾಡೆಮಿಯ ಸಂಪ್ರದಾಯವನ್ನೇ ಉಳಿಸಿಕೊಂಡು ಬಂದ ಕಲೆಗಾರರಲ್ಲಿ ಚಿಎನ್ ಹ್ಯುಯಾನ್ (1235–1301) ಚೀನದ ಅತಿಶ್ರೇಷ್ಠ ಕಲಾವಿದರಲ್ಲಿ ಒಬ್ಬನೆಂದು ಪರಿಗಣಿತನಾಗಿದ್ದಾನೆ. ಹಕ್ಕಿಗಳನ್ನೂ ಪತಂಗಗಳನ್ನೂ ಬಿಡಿಸುವುದರಲ್ಲಿ ಅತ್ಯಂತ ಕುಶಲನಾದ ಇವನು ಜಪಾನೀ ಕಲೆಯ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿದ. ಸುನ್ ಚುಯ್‌ನ್-ಕ್ವೆ (14ನೇ ಶತಮಾನದ ಆದಿಭಾಗ) ಮುಂತಾದವರೂ ಸೂಂಗ್ ಅಕಾಡೆಮಿಯ ಸಂಪ್ರದಾಯವನ್ನೇ ಮುಂದುವರಿಸಿದರು. ಹಳೆಯ ಸಂಪ್ರದಾಯವನ್ನು ಬಿಟ್ಟು ಹೊಸಹೊಸ ವೈಯಕ್ತಿಕ ಪ್ರಯೋಗಗಳನ್ನು ನಡೆಸಿ ಯಶಸ್ವಿಗಳಾದ ಚಯೋ ಮೆಂಗ್-ಫು (1254–1322), ಮೆಂಗ್ ಯುಯ್, ಚವೊಯಂಗ್, ಮುಂತಾದವರೂ ಈ ಅವಧಿಯಲ್ಲಿಯೇ ಕಾಣಿಸಿಕೊಂಡರು. ಧ್ಯಾನಪಂಥದ ಭಿಕ್ಷುಕಲೆಗಾರರೂ ತಮ್ಮ ಕಲಾಕ್ರಿಯೆಯನ್ನು ತಮ್ಮ ಹಳೆಯ ಪದ್ಧತಿಯಲ್ಲಿಯೇ ಮುಂದುವರಿಸಿದರು. ಮುಂಗೋಲ್ ಅರಸರ ಬಳಿ ಅಧಿಕಾರಿಯಾಗಿದ್ದ ಲಿ ಕಅನ್ (1245–1320) ಮತ್ತು ಅವನ ಮಗ ಲಿ ಷಿಹ್-ತ್ಸಿಂಗ್ (1282–1328) ಇವರಿಬ್ಬರೂ ಈ ಯುಗದ ಪ್ರಸಿದ್ಧ ಕಲಾವಿದರು. ಬಿದಿರು, ಮೆಳೆಗಳನ್ನು ವಿಪುಲವಾಗಿ ಚಿತ್ರಿಸಿ ಹಳೆಯ ಪದ್ಧತಿಯನ್ನು ಉಳಿಸಿದರು. ಈ ಯುಗದ ನಿಸರ್ಗಚಿತ್ರಣದ ವೈಶಿಷ್ಟ್ಯವೆಂದರೆ, ಪೂರ್ವದ ಅಕಾಡೆಮಿಯುಗದಲ್ಲಿ ಮನುಷ್ಯನನ್ನು ಪ್ರಮುಖವಾಗಿ ಚಿತ್ರಿಸುವ ಪರಿಪಾಠ ಒದಗಿತ್ತು. ಆದರೆ ಈಗ ಮನುಷ್ಯನ ಚಿತ್ರಣ ಬಂದರೂ ಸಣ್ಣಗಾತ್ರದಲ್ಲಿ ನಿಸರ್ಗ ಮುಖ್ಯವಾಗಿ, ಮನುಷ್ಯ ಗೌಣವಾಗಿ ಉಳಿದ. ಪರತಂತ್ರವಾದ ಚೀನ ಈ ಯುಗದಲ್ಲಿ ಕೂಡ ಹೊಸ ಹೊಸ ಸಂವಿಧಾನಗಳ ಪ್ರಯೋಗಗಳನ್ನು ನಡೆಸಿತು. ಹೀಗೆ ಹೊಸ ಹಾದಿಯನ್ನು ಹಿಡಿದ ನಾಲ್ಕು ಮಂದಿ ಕಲಾವಿದರನ್ನು ಯೂಅನ್ ಯುಗದ ನಾಲ್ವರು ಆಚಾರ್ಯರು ಎಂದು ಚೀನೀ ಇತಿಹಾಸಕಾರರು ವ್ಯವಹರಿಸಿದ್ದಾರೆ. ಈ ನಾಲ್ವರು ಯಾರೆಂದರೆ ಹುವಾಂಗ್ ಕುಂಗ್-ವಂಗ್, (1268–1354), ವು ಚೆನ್ (1280–1354), ನಿ ತ್ಸಾನ್ (1301–1384) ಮತ್ತು ವಾಂಗ್ ಮೇಂಗ್ (1308–1385). ಇವರಲ್ಲದೆ ಫಾಂಗ್ ತ್ಸುಂಗ್ ಇ (1310–1380), ತ್ಸವೋಚಿಪೊ (1277–1360) ಮತ್ತು ಷೇಂಗ್ ಮೌ (1310–1361), ಇವರೂ ಸುಪ್ರಸಿದ್ಧ ಕಲೆಗಾರರಾಗಿದ್ದವರು. ಇವರೆಲ್ಲರೂ ನಿಸರ್ಗಚಿತ್ರಣದಲ್ಲಿಯೇ ಅನುರಕ್ತರಾದರು; ಅದೂ ಪರ್ವತಗಳನ್ನು ಬಿಡಿಸುವುದರಲ್ಲಿಯೇ ಕೃತಾರ್ಥರಾದರು. ಕವೊ ಕಹಿ-ಕುಂಗ್ (1248–1310 ಅನಂತರ) ಎಂಬುವನಂತೂ ಅದ್ಭುತ ಪರ್ವತಗಳನ್ನು ರಮಣೀಯ ಸನ್ನಿವೇಶಗಳಲ್ಲಿ ಸೃಷ್ಟಿ ಮಾಡಿದ್ದಾನೆ. ತುರ್ಕಿಸ್ಥಾನದಿಂದ ವಲಸೆ ಬಂದು ಈತ ಚೀನದಲ್ಲಿ ನೆಲಸಿದ. ಹಳೆಯ ಮ.ಫೈ ಕಲೆಗಾರನ ಪ್ರಭಾವ ಇವನ ಕೃತಿಗಳಲ್ಲಿ ಕಾಣುತ್ತದೆ.

ಇದೇ ಯುಗದ ಆರಂಭದಲ್ಲಿ ಶಿಲ್ಪಕಲೆಯೂ ಬಿಳಿಮಣ್ಣಿನ ಕಲೆಯೂ ಮರಗೆತ್ತನೆ ಕೆಲಸವೂ ಬೆಳೆದು ಬಂದುವು. ಬೌದ್ಧಮಂದಿರಗಳಿಗೆ ಹೊಂದಿಕೊಂಡಂತೆ ಶಿಲ್ಪ ಬೆಳೆಯಿತು. ನ್ಯಾನ್‌ಕಿಂಗ್‌ನ ಬಳಿ ಇರುವ ಚಿ-ಸಿಯಾ-ಸು ಮಂದಿರದಲ್ಲಿ ಅದ್ಭುತಶಿಲ್ಪಗಳೂ ಹಿತ್ತಾಳೆಮೂರ್ತಿಗಳೂ ಇವೆ. ಬುದ್ಧನ ಬಾಳುವೆಯನ್ನು ಚಿತ್ರಿಸುವ ಫಲಕಗಳಿವೆ. ಜೇಡಿಮಣ್ಣಿನ ಬೋಧಿಸತ್ತ್ವ, ಲೋಹನ್, ಮುಂತಾದವರ ಪ್ರತಿಕೃತಿಗಳನ್ನು ಮಾಡಿ ಮೇಲೆ ಸೊಗಸಾದ ಬಣ್ಣಗಳನ್ನು ಬಳಿದು ನಿಲ್ಲಿಸುವ ಪದ್ಧತಿ ಕೂಡ ಈ ಯುಗದ ವಿಶೇಷಗಳಲ್ಲಿ ಒಂದು. ಕುಅನ್-ಯಿನ್, ಸಮಂತಭದ್ರ, ಶಾಕ್ಯಮುನಿ, ಭೈಷಜ್ಯಗುರು, ಅಮಿತಾಭ ಮುಂತಾದ ದೇವತೆಗಳ ಶಿಲಾಪ್ರತಿಮೆಗಳು ಕಾಣಿಸಿಕೊಂಡುವು. ಕುಆನ್-ಯಿನ್ ಎಂಬ ಕಾರುಣ್ಯದೇವತೆಯ ಚಿತ್ರಣಗಳಂತೂ ವಿಪುಲವಾಗಿ ನಡೆಯಿತು. ನಿಂತ ಭಂಗಿಯಲ್ಲಿ, ಕೂತ ಭಂಗಿಯಲ್ಲಿ, ಮೀನುಬುಟ್ಟಿಯನ್ನು ಹಿಡಿದಂತೆ, ಮಹಾ ರಾಜಲೀಲೆಯಲ್ಲಿಹೀಗೆ ನಾನಾಭಂಗಿಗಳಲ್ಲಿ ಮರದ ಗೊಂಬೆಗಳಾಗಿ, ಶಿಲಾಪ್ರತಿಮೆಗಳಾಗಿ, ಹಿತ್ತಾಳೆ ಮುತ್ತಳಿಗಳಾಗಿ ಆಕೆ ಮೈದಳೆದಳು. ಮಹಾಯಾನ ಬೌದ್ಧಧರ್ಮದ ಅವಲೋಕಿತೇಶ್ವರನ ಚೀನೀ ರೂಪಾಂತರ ಈ ಕುಅನ್-ಯಿನ್. ಕಬ್ಬಿಣದಲ್ಲಿ ಎರಕಹೊಯ್ದು ಮಾಡಿದ ಗೊಂಬೆಗಳೂ ಈ ಯುಆನ್ ಯುಗದಲ್ಲಿ ಬಂದುವು. ಚಿಎನ್-ಪೊ-ಕೋ ಎಂಬಲ್ಲಿ ಸಹಸ್ರಬುದ್ಧ ಮಂಟಪದಲ್ಲಿ ನೂರಾರು ಬುದ್ಧನ ಪ್ರತಿಮೆಗಳನ್ನು ಈ ರೀತಿ ಮಾಡಿ ಇಟ್ಟಿದ್ದಾರೆ.

ಪರದೇಶದವರಾದ ಮಂಗೋಲ ಜನರ ಆಳ್ವಿಕೆ ಕೊನೆಗೊಂಡು 1368ರಲ್ಲಿ ಆರಂಭವಾದ ಮಿಂಗ್ ರಾಜವಂಶದ ಯುಗ 1644ರ ವರೆಗೂ ಉಳಿಯಿತು. ಈ ಅವಧಿಯಲ್ಲಿ ಕಲೆಗೆ ಅಮಿತವಾದ ಪ್ರೋತ್ಸಾಹ ದೊರಕಿತು. ಮೊದಲ ಮಿಂಗ್ ಚಕ್ರವರ್ತಿ ಸೂಂಗ್ ಯುಗದಲ್ಲಿದ್ದ ಅಕಾಡೆಮಿಯನ್ನು ಮತ್ತೆ ಪುನರುಜ್ಜೀವನಗೊಳಿಸಿದ. ಯೂಆನ್ ಯುಗದ ನಾಲ್ವರು ಆಚಾರ್ಯರ ಪರಂಪರೆ ಮುಂದುವರಿಯಿತು. ವಾಂಗ್ ಫು ನ ಶಿಷ್ಯ ತು-ಚಿಯುಂಗ್ (1396–1474), ಲಿಯು ಚಾಯ್‌ಹೆ (1410–1472) ಮತ್ತು ಷಿಯಾ-ಚುಆಂಗ್ (1388–1470) ಇವರು ಆ ಪರಂಪರೆಯಲ್ಲೇ ಬಂದವರು. ಮೊದಲ ಇಬ್ಬರು ನಿಸರ್ಗಚಿತ್ರಕಾರರು; ಮೂರನೆಯವ ವಂಶನಾಳಗಳ ಚಿತ್ರಣದಲ್ಲಿ ಕುಶಲನಾಗಿದ್ದ. ದಕ್ಷಿಣದ ಫುಕಿಯನ್ ಪ್ರದೇಶದಿಂದ ಹಲವಾರು ಕಲಾವಿದರು ಚಕ್ರವರ್ತಿಯ ಆಸ್ಥಾನವನ್ನು ಸೇರಿ ತಾವು ಉಳಿಸಿಕೊಂಡು ಬಂದಿದ್ದ ಮಾ ಸಂಪ್ರದಾಯ ಮತ್ತು ಷಿಯ ಸಂಪ್ರದಾಯಗಳನ್ನು ಮತ್ತೆ ಹರಡಲು ಉದ್ಯುಕ್ತರಾದರು. ಈಗ ಪುನರುಜ್ಜೀವಿತವಾದ ಅಕಾಡೆಮಿಯ ಪ್ರಮುಖ ನಿಸರ್ಗಚಿತ್ರಕಾರ ಲಿ-ತ್ಸಾಯ್, ಚೆ-ಪದ್ಧತಿಯ ಪ್ರವರ್ತಕನೆನಿಸಿದ ತಾಯ್-ಚಿನ್, ಇವರಿಬ್ಬರೂ ಸುಆನ್-ತೇ ಚಕ್ರವರ್ತಿಯ ಕಾಲದಲ್ಲಿದ್ದವರು. ಚೆ ಪದ್ಧತಿಯನ್ನೂ ಅಕಾಡೆಮಿಯ ಸಂಪ್ರದಾಯವನ್ನೂ ತನ್ನ ಶೈಲಿಯಲ್ಲಿ ಅಳವಡಿಸಿಕೊಂಡ ವು-ವೈ (1459–1508) ಇಬ್ಬರು ಚಕ್ರವರ್ತಿಗಳಿಂದಲೂ ಸನ್ಮಾನಿತನಾದವ. ಸ್ವಾರಸ್ಯವಾದ, ಹಾಸ್ಯರಸವನ್ನು ಸೂಸುವ ಇವನ ಚಿತ್ರಗಳು ಇಂದಿಗೂ ಪ್ರಸಿದ್ಧವಾಗಿವೆ. ಇವನನ್ನು ಹೊಸದೊಂದು ಪದ್ಧತಿಯ, ಚಿಯಾಂಗ್-ಸಿಯ ಎಂಬ ಹೆಸರಿನ ಪದ್ಧತಿಯ, ಪ್ರವರ್ತಕನೆಂದೂ ಕೆಲವು ಚೀನೀ ವಿಮರ್ಶಕರು ನಿರ್ದೇಶಿಸಿದ್ದಾರೆ.

ಸ್ವಚ್ಛಂದವಾದ, ಅನಿಯಂತ್ರಿತವಾದ, ಸ್ಥೂಲವಾದ ಮತ್ತು ಲವಲವಿಕೆಯ ಕುಂಚಕ್ರಿಯೆ ಈ ಯುಗದ ಅಕಾಡೆಮಿ ಚಿತ್ರಗಳಲ್ಲಿಯೂ ಚೆ-ಶೈಲಿಯ ಚಿತ್ರಗಳಲ್ಲಿಯೂ ಕಾಣಬರುತ್ತದೆ. ಚಾಂಗ್-ಲು (1464–1538), ಚಿಯಾಂಗ್-ಸೂಂಗ್ (ಸು.1500). ಲಿನ್-ಲಿಯಾಂಗ್ (ಅದೇ ಸುಮಾರು) ಇವರ ಚಿತ್ರಗಳೂ ಈ ಕುಂಚಕ್ರಿಯೆಗೆ ನಿದರ್ಶನಗಳು. ಲಿನ್-ಲಿಯಾಂಗನ ಹಕ್ಕಿಗಳು ಜೀವಂತವಾಗಿರುವಂತೆಯೇ ಭಾಸವಾಗುತ್ತವೆ. ವು-ಪದ್ಧತಿ ಬೆಳೆದದ್ದು ಈ ಯುಗದ ವೈಶಿಷ್ಟ್ಯಗಳಲ್ಲೊಂದು. ಯಾಂಗ್‌ಟ್ಸೀ ನದಿಯ ಪಕ್ಕದಲ್ಲಿ ಜಿಯಾಂಗ್ ಸೂ ಪ್ರದೇಶಕ್ಕೆ ಸೇರಿದ್ದ 'ವು' ಜಿಲ್ಲೆಯ ಹಳೆಯ ಕಲಾಸಂಪ್ರದಾಯಗಳನ್ನೇ ಉಳಿಸಿಕೊಂಡು ಬಂದಿತ್ತು; ಅರಸರ ಅಕಾಡೆಮಿಯೊಂದಿಗೆ ಇದು ಯಾವ ಸಂಬಂಧವನ್ನೂ ಇಟ್ಟುಕೊಂಡಿರಲಿಲ್ಲ. ಸೂ-ಚೌ ನಗರದ ಪರಿಸರದಲ್ಲಿ ಬೆಳೆದು ಬಂದ ಈ ಸಂಪ್ರದಾಯ ಆ ಜಿಲ್ಲೆಯ ಅಭಿಧಾನವನ್ನೇ ತಳೆದು ವು-ಪದ್ಧತಿ ಎನಿಸಿಕೊಂಡಿತು. ಷೇನ್-ಚೌ (1427–1509) ಎಂಬಾತ ಈ ಪದ್ಧತಿಯ ಪ್ರವರ್ತಕನೆಂದು ಹೇಳುತ್ತಾರೆ. ಶ್ರೀಮಂತರ ಮನೆತನದಲ್ಲಿ ಬಂದ ಈತ ಅರಸರ ಬಳಿ ಯಾವ ಹುದ್ದೆಯನ್ನೂ ಅಪೇಕ್ಷಿಸದೆ ಸ್ವತಂತ್ರವಾಗಿ ಇದ್ದುಕೊಂಡು ಚಿತ್ರಕರ್ಮ, ಕವಿತೆ, ಅಕ್ಷರಲೇಖನ ಕಲೆ ಮುಂತಾದ ಹವ್ಯಾಸಗಳಲ್ಲಿ ಕಾಲಕಳೆದ. ಇವನ ಚಿತ್ರಗಳಲ್ಲಿ ಹಲವಾರು ಹಳೆಯ ಕಲೆಗಾರರ ಪ್ರಭಾವ ಕಾಣುತ್ತದೆ. ಅಡ್ಡಾದಿಡ್ಡಿಯ ಕುಂಚಕ್ರಿಯೆಯನ್ನು ಈತನೇ ಆರಂಭಿಸಿ ಬಳಕೆಗೆ ತಂದನೆಂದು ಪ್ರತೀತಿ. ಇವನದೆಂದು ಹೇಳಲಾದ ಕೆಲವು ಒರಟು ಚಿತ್ರಗಳು ಉಳಿದು ಬಂದಿವೆ. ಷೇನ್-ಚೌಗೆ ಹಲವಾರು ಶಿಷ್ಯರಿದ್ದರು. ಅವರಲ್ಲಿ ವೇನ್-ಚೇಂಗ್_ಮಿಂಗ್ (1470–1559) ಎಂಬುವನು ಪ್ರಮುಖ. ಗುರುವಿನಂತಲ್ಲದೆ ಇವನದು ನಾಜೂಕು ಕೆಲಸ. ಇವನ ಮಗ ವೇನ್ ಚಿಯ (1501–1583) ಮತ್ತು ಸೋದರಳಿಯ ವೇನ್ ಪೋ-ಜೇನ್ (1502–1580) ಇವನ ಸಂಪ್ರದಾಯ

ವನ್ನು ಮುಂದುವರಿಸಿದರು. ಇವರಲ್ಲದೆ ಲು–ಚಿ (1496–1576) ಎಂಬ ಹೂಗಳ ಚಿತ್ರಕಾರ, ಚ್ ಎನ್–ಶುನ್ (1483–1514), ಮತ್ತು ಚ್ಎನ್–ಕು (1508–1572) ಇವರೂ ಇವನ ಶಿಷ್ಯರೇ. ಮಿಂಗ್ ಯುಗದ ನಾಲ್ವರು ಆಚಾರ್ಯರು ಎಂದು ಹೆಸರಾದ ತ್ಆಂಗ್–ಯಿನ್ (1470–1524), ಚಿಯು–ಯಿಂಗ್ (16ನೆಯ ಶತಮಾನದ ಆದಿಭಾಗ), ಇವರಿಬ್ಬರೂ ಮೇಲೆ ಹೇಳಿದ ಷೇನ್–ಚೌ ಮತ್ತು ಚೇಂಗ್–ಮಿಂಗ್ ಇವರೆಲ್ಲರೂ ಸೂಚೌ ನಗರದಲ್ಲೇ ಕೆಲಸ ಮಾಡುತ್ತಿದ್ದರು. ಇವರ ಪ್ರಭಾವ ಇರುವವರೆಗೆ ನಾಗರಪದ್ಧತಿ ಹಿಂದೆ ಬಿತ್ತು. ಆದರೆ ಈ ನಾಲ್ವರು ತೀರಿಕೊಂಡ ಅನಂತರ ಸುಚೌ ನಗರದಲ್ಲೂ ಯಾಂಗ್ಟ್ಸೆ ನದಿಯ ಪ್ರಸ್ಥಭೂಮಿಯಲ್ಲೂ ನಾಗರಪದ್ಧತಿ ಮತ್ತೆ ತಲೆಯೆತ್ತಿತು. ಈ ಪುನರುತ್ಥಾನಕ್ಕೆ ಕಾರಣರಾದವರು ಮಾ ಷಿ –ಲುಂಗ್ ಅವನ ಕ್ರಿಯಾಶೀಲ ಅವಧಿ (1570–1600), ಚ್–ಎನ್ ಚಿ–ಜು (1558–1639), ತುಂಗ್ ಚುಇಚಾಂಗ್ (1555–1636). ಇವರು ಚೀನೀ ಚಿತ್ರಕಲೆಯನ್ನು ಉತ್ತರಾದಿ, ದಕ್ಷಿಣಾದಿ ಎಂದು ವಿಭಾಗಮಾಡಿ ಪ್ರಚಾರವಾಗಿದ್ದ ಎಲ್ಲ ಕಲೆಗಾರರ ಹೆಸರನ್ನೂ ಪಟ್ಟಿ ಮಾಡಿ ಮುಂದಿನ ತಲೆಮಾರುಗಳಿಗೆ ಉಪಕಾರ ಮಾಡಿದ್ದಾರೆ. ಅಷ್ಟಲ್ಲದೆ ಚೀನೀ ಕಲೆಯ ಉಗಮ, ವಿಕಾಸಗಳ ವಿಚಾರವಾಗಿ ತಮ್ಮದೇ ಆದ ಸಿದ್ಧಾಂತವೊಂದನ್ನೂ ನಿರೂಪಿಸಿದ್ದಾರೆ. ಇವರಲ್ಲಿ ಒಬ್ಬೊಬ್ಬರೂ ಒಂದೊಂದು ಶಾಖೆಯನ್ನು ಪ್ರವರ್ತನೆಮಾಡಿ ಪ್ರಸಿದ್ಧರಾಗಿದ್ದಾರೆ. ಇವರೆಲ್ಲರ ಆಸಕ್ತಿಯ ಫಲವಾಗಿ ಚೀನೀ ಕಲೆಯಲ್ಲಿ ನಿಸರ್ಗ ಸರ್ವಪ್ರಮುಖವಾಗಿ ಉಳಿಯಿತು. ವೇನ್–ಜೇನ್–ಹುವಾ ಎಂಬ ಕಲಾಸಂಪ್ರದಾಯ ಬೇರೂರಿತು. ಇವರ ಸಮಕಾಲಿಕರಾಗಿ ಇಬ್ಬರು ಸ್ತ್ರೀಯರು ಗಿಡಗಂಟೆಗಳನ್ನು ಚಿತ್ರಿಸಿ ಪ್ರಸಿದ್ಧರಾಗಿದ್ದಾರೆ. ಇವರು ಮಾಷೌ–ಚಿನ್ (16ನೆಯ ಶತಮಾನದ ಅಂತ್ಯಭಾಗ) ಮತ್ತು ಸುಯ್ಎ–ವು (1564–1637).

ಮಿಂಗ್ ಯುಗದ ಕಲೆಗಾರರಲ್ಲೆಲ್ಲ ಅತ್ಯಂತ ಸ್ವಾರಸ್ಯವಾದ ವ್ಯಕ್ತಿ ಸೂಯ್–ವೈ (1521–1593). ಈ ವಿಚಿತ್ರವ್ಯಕ್ತಿಯ ಉದ್ದಂಡವರ್ತನೆಯಿಂದ ಇವನಿಗೆ ಉನ್ಮತ್ತನೆಂದೇ ಹೆಸರಿತ್ತು. ಕ್ರೂರಿ ಹಾಗೂ ಅನಿಯಂತ್ರಿತ ಚಿತ್ತವೃತ್ತಿಯವನಿವನು. ಇವನ ಕಲಾಕೃತಿಗಳೆಲ್ಲ ಬೀಭತ್ಸವಾಗಿವೆ. ಮಿಂಗ್ ಯುಗದಲ್ಲಿ ವ್ಯಕ್ತಿಚಿತ್ರಣಕ್ಕೆ ಅಷ್ಟಾಗಿ ಉತ್ತೇಜನ ದೊರೆಯಲಿಲ್ಲ. ಉದ್ಯಾನ, ವನ, ಪರ್ವತ, ನದಿ, ಪಶುಪಕ್ಷಿಗಳು, ಗಿಡಗಂಟಿ, ಪತಂಗಭೃಂಗಗಳು ಇವೇ ಚಿತ್ರಕಲೆಯ ಮುಖ್ಯವಸ್ತುಗಳಾಗಿ ಉಳಿದುವು. ಆದರೆ ಬೌದ್ಧಪಂಥ ಪ್ರಬಲವಾಗಿದ್ದೆಡೆ ಬುದ್ಧ, ಬೋಧಿಸತ್ತ್ವ, ಅರ್ಹನ್ (ಲೋಹನ್), ಬೌದ್ಧ ದೇವತೆಗಳು ಇವರ ಚಿತ್ರಣಗಳು ಮೂಡಿಬಂದುವು. ಈ ದಿಸೆಯಲ್ಲಿ ಪ್ರಮುಖರಾದವರು ಯುಆನ್–ಪ್–ಎಂಗ್ (ಸು. 1600) ಮತ್ತು ಚ್ಎನ್–ಹುಂಗ್–ಷು (1599–1652). ಇವರ ಪ್ರಭಾವವೇನೋ ಸಂಕುಚಿತವಾಗಿತ್ತು.

ಮಿಂಗ್ ಯುಗದ ಕಲೆ ಸೂಚೌ, ಹಾಂಗ್ಚೌ, ಪೀಕಿಂಗ್ ನಗರದಲ್ಲಿ ಬೆಳೆಯಿತು. ತುಂಗ್ ಚ್–ಇ–ಚ್ ಯಾಂಗನ ಕಲೆ ಸುಂಗ್‌ಚಿಯಾಂಗ್‌ನಲ್ಲೆ ಕಾಣಿಸಿಕೊಂಡಿತು. ಆದರೆ ಸೂಚೌ ಪ್ರಮುಖವಾದಷ್ಟು ಬೇರೆ ಯಾವ ನಗರವೂ ಆಗಲಿಲ್ಲ. ಸು–ಸುಂಗ್ ಎಂಬಲ್ಲಿ ಆ ಹೆಸರಿನ ಪದ್ಧತಿಯೊಂದು ಪ್ರವರ್ತಿತವಾಯಿತು. ಇದರ ಪ್ರವರ್ತಕ ಚಾಓಶ್ಲೋ (ಸು. 1600) ಎಂಬ ಪ್ರತಿಭಾಶಾಲಿ. ಇವನು ಸು–ಪದ್ಧತಿ, ಮತ್ತು ಸೂಂಗ್ ಪದ್ಧತಿ ಎರಡನ್ನೂ ಸೇರಿಸಿ ಇದನ್ನು ಆರಂಭಿಸಿದನಂತೆ. ಸು–ಪದ್ಧತಿ ಸೂಚೌ ನಗರದಲ್ಲಿ ಬೆಳೆದು ಬಂದದ್ದು, ಹಾಂಗ್‌ಚೌನಲ್ಲಿ ಹಳೆಯ ಚೀ ಪದ್ಧತಿ ಉಳಿದು ಬಂದಿತು.

ಮಿಂಗ್ ಯುಗದ ಅನಂತರ ಚೀನ ದೇಶದಲ್ಲಿ ಪ್ರಸಿದ್ಧವಾದದ್ದು ಚ್ಇಂಗ್ ರಾಜವಂಶ (1644–1912). ಈ ಅವಧಿ ಹೆಚ್ಚು ಕಡಿಮೆ ಕ್ರಾಂತಿಯಾಗುವವರೆಗೂ ಉಳಿದು ಬಂತು. ಈ ರಾಜರು ಮಂಚು ಜನಾಂಗದವರಾದರೂ ಚೀನೀ ಸಂಸ್ಕೃತಿಯ ಪಕ್ಷಪಾತಿಗಳಾಗಿ ಚೀನೀ ಕಲೆಗೆ ವಿಪುಲವಾದ ನೆರವನ್ನು ನೀಡಿದರು. ಇವರಲ್ಲಿ ಶೇಂಗ್ –ತ್ಸು (ಆಳ್ವಿಕೆ 1662–1722), ಷಿ–ತ್ಸುಂಗ್ (ಆಳ್ವಿಕೆ 1723–1735) ಮತ್ತು ಕಓ–ತ್ಸುಂಗ್ (1736–1795) ಇವರು ಕಲೆಯ ವಿಚಾರವಾಗಿ ವಿಶೇಷವಾದ ಆಸಕ್ತಿಯನ್ನು ತೋರಿಸಿದರು. ಹಳೆಯ ಕಲಾಕೃತಿಗಳನ್ನೆಲ್ಲ ಆಸ್ಥೆಯಿಂದ ಸಂಗ್ರಹಿಸಿದರು. ಕಲೆಗಾರರ ಜೀವಿತವೃತ್ತಾಂತಗಳನ್ನು ಕ್ರೋಡೀಕರಿಸಿದರು. ಇವರು ಕಲಾಸೃಷ್ಟಿಯ ವಿಚಾರಕ್ಕಿಂತಲೂ ಕಲಾಸಂಗ್ರಹದ ವಿಚಾರವಾಗಿ ಹೆಚ್ಚು ಶ್ರದ್ಧೆವಹಿಸಿದರು. ಸಂಸ್ಕೃತಿಯನ್ನು ತಲೆಮಾರುಗಳಲ್ಲಿ ಹರಿಸುವುದೇ ಮುಖ್ಯವಾದ ವಿಚಾರವೆಂದೂ ಹೊಸಕೃತಿಗಳನ್ನು ರಚನೆ ಮಾಡುವುದು ಶ್ಲಾಘ್ಯವಲ್ಲವೆಂದೂ ಕನ್‌ಫ್ಯೂಷಿಯಸ್ ಹೇಳಿದುದನ್ನು ಇವರು ಅನುಮೋದಿಸಿದರು. ಈ ದೃಷ್ಟಿಯಿದ್ದುದರಿಂದ ಕಲ್ಪನಾಪ್ರಮುಖರಾದ ಕಲೆಗಾರರಿಗೆ ಮೊದಮೊದಲು ಅಷ್ಟಾಗಿ ಪ್ರೋತ್ಸಾಹ ದೊರೆಯಲಿಲ್ಲ. ಪೀಕೀಂಗ್ ನಗರದಿಂದ, ಎಂದರೆ ಚ್ಇಂಗ್ ರಾಜರ ರಾಜಧಾನಿಯಿಂದ, ದೂರ ದಕ್ಷಿಣದಲ್ಲಿ ಇದ್ದ ಕಲೆಗಾರರು ತಮ್ಮ ಪಾಡಿಗೆ ತಾವು ಹಳೆಯ ಕಲಾ ಸಂಪ್ರದಾಯಗಳನ್ನು ಉಳಿಸಿಕೊಂಡು ಬೆಳೆಸುತ್ತಾ ಬರುತ್ತಿದ್ದರು. ಈ ಕಲೆಗಾರರಲ್ಲಿ ಲೌ–ತುಂಗ್ (ಅಥವಾ ತಾಯ್–ತ್ಸಂಗ್) ಶಾಖೆಗೆ ಸೇರಿದವರು ಪ್ರಮುಖರು. ವಾಂಗ್ ಷಿ–ಮಿನ್(1592–1680), ಮತ್ತು ವಾಂಗ್ ಚಿಎನ್ (1598–1677) ಇವರು ಈ ಶಾಖೆಯ ಪ್ರವರ್ತಕರೆನ್ನಬಹುದು. ಇವರ ಅನಂತರ ವಾಂಗ್‌ಷಿ–ಮಿನ್ನನ ಶಿಷ್ಯ ವಾಂಗ್ ಹುಯ್ (1632–1717) ಮತ್ತು ಮೊಮ್ಮಗ ವಾಂಗ್–ಯುಆಂಗ್ ಚ್ಇ (1642–1715) ಇವರಿಬ್ಬರು ಪ್ರಖ್ಯಾತರಾದರು. ಈ ನಾಲ್ಕೂ ಜನರನ್ನು ಒಟ್ಟಾರೆ ನಾಲ್ವರು ವಾಂಗ್‌ಗಳು ಎಂದು ವ್ಯವಹರಿಸುತ್ತಾರೆ. ಇವರು ಪ್ರಾಚೀನರಾದ ಹುಆಂಗ್ ಕುಂಗ್–ವಾಂಗ್ ಮತ್ತು ನಿ–ತ್ಸನ್ ಈ ಇಬ್ಬರು ಕಲೆಗಾರರನ್ನೂ ಆದರ್ಶಗಳೆಂದು ಪರಿಗ್ರಹಿಸಿ ಅವರ ಕಲಾಕೃತಿಗಳನ್ನು ಸಂಗ್ರಹಿಸಲು ತುಂಬ ಶ್ರಮ ವಹಿಸಿದರು, ಮತ್ತು ಅವರ ಕೃತಿಗಳಿಗೆ ಯಥಾವತ್ತಾಗಿ ಪ್ರತಿಕೃತಿಗಳನ್ನು ನಿರ್ಮಿಸಲೂ ಶ್ರಮಿಸಿದರು. ಈ ನೈಜ ಪ್ರತಿಕೃತಿಗಳು ಇಂದಿಗೂ ಉಳಿದಿವೆ. ಈ ನಾಲ್ವರು ವಾಂಗ್‌ಗಳಲ್ಲಿ ಯುಆಂಗ್–ಚ್ಇ 1708ರ ಸುಮಾರಿಗೆ ಚಕ್ರವರ್ತಿಯ ಅಪ್ಪಣೆಯಂತೆ ಚೀನೀ ಕಲೆಯ ವಿಶ್ವಕೋಶವನ್ನು ರಚಿಸಿದ.

ಈ ವಾಂಗ್‌ಗಳಿಗೆ ರಾಜಸನ್ಮಾನ ದೊರೆತರೂ ಅವರಿಗಿಂತ ಹೆಚ್ಚಿನ ಪ್ರಭಾವವನ್ನು ಬೀರಿದ ಷಿನ್‌ನಾನ್‌ನ ನಾಲ್ವರು ಕಲೆಗಾರರೂ ಯಾಂಗ್‌ಚೌನ ಎಂಟು ಮಂದಿ ವಿಚಿತ್ರವ್ಯಕ್ತಿಗಳೂ ಚಿನ್ ಲಿಂಗ್‌ನ ಎಂಟು ಮಂದಿ ಆಚಾರ್ಯರೂ ಇದೇ ಯುಗದವರು. ಷಿನ್ ನಾನ್ ಅನ್ಹ್ವೈ ಜಿಲ್ಲೆಯಲ್ಲಿನ ಊರು. ಈ ಊರಿನ ಚ್ಅ–ಷಿ–ಪಿಅಓ (1615–1698) ಎಂಬ ಅಧಿಕಾರಿಯೂ ಹುಂಗ್ ಜೇನ್ (ಸುಮಾರು 1663) ಎಂಬ ಬೌದ್ಧಬಿಕ್ಷುವೂ ಒಣಕುಂಚದ (ಡ್ರೈ ಬ್ರಷ್) ಸಂವಿಧಾನವನ್ನು ಬಳಕೆಗೆ ತಂದರು. ಚಿನ್‌ಲಿಂಗ್ ಎಂಬುದು ನ್ಯಾನ್‌ಕಿಂಗ್ ನಗರಕ್ಕೆ ಮೊದಲಿದ್ದ ಹೆಸರು. ಇಲ್ಲಿದ್ದ ಎಂಟು ಮಂದಿ ಆಚಾರ್ಯರಿಗೆ ಪರಸ್ಪರ ಯಾವ ಸಂಬಂಧವೂ ಇರಲಿಲ್ಲ. ನದಿಗಳನ್ನು ರಮ್ಯವಾಗಿ ಚಿತ್ರಿಸುತ್ತಿದ್ದ ಫಾನ್–ಚಿ (1616–1692) ಇವರಲ್ಲಿ ಒಬ್ಬ. ಸಂವಿಧಾನದ ಬಗ್ಗೆ ಆಳವಾದ ಆಸಕ್ತಿಯನ್ನು ತೋರಿಸಿದ ಕುಂಗ್ ಷಿಎನ್ (1625–1698ರ ಅನಂತರ) ಇನ್ನೊಬ್ಬ. ಇವನ ಶಿಷ್ಯ ವಾಂಗ್–ಕೈ ಚಿತ್ರಕಲೆಯ ವಿಶ್ವಕೋಶವೊಂದನ್ನು ಸಿದ್ಧಪಡಿಸಿದ. ಯಾವ ಸಂಪ್ರದಾಯಕ್ಕೂ ಸೇರದೆ ಸ್ವತಂತ್ರವಾಗಿ ಉಳಿದ ಕಲೆಗಾರರಲ್ಲಿ–ಕುಉನ್–ತ್ಸಾನ್ (ಶಿ:–ಛಿ) ಮತ್ತು ಶಿ–ತಓ ಇವರಿಬ್ಬರು ಪ್ರಖ್ಯಾತರು. ಇಬ್ಬರೂ ಬೌದ್ಧ ಭಿಕ್ಷುಗಳಾದರೂ ಸಂಪ್ರದಾಯಬಾಹ್ಯರು. ಧ್ಯಾನಪಂಥದ ಆದರ್ಶ ಇಬ್ಬರ ಕೃತಿಗಳಲ್ಲಿಯೂ ಕಾಣುತ್ತದೆ; ಪ್ರಕೃತಿಚಿತ್ರಣದಲ್ಲಿ ನಿಷ್ಠುರವಾದ ಏಕಾಂತ, ನಿಷ್ಕ್ರಿಯ ಶಾಂತಿ ಇವು ಮುಖ್ಯಗುಣಗಳು; ಮನುಷ್ಯನ ಚಿತ್ರಣ ತೀರ ಗೌಣವಾಗಿ ನಿಸರ್ಗವೇ ಮುಖ್ಯವಾಗಿ ಅಭಿವ್ಯಕ್ತವಾಗಿದೆ. ಇವರಿಬ್ಬರ ಕಲಾಕೃತಿಗಳಲ್ಲಿ ನಿಸರ್ಗ ಚಿತ್ರಣವೇ ಹೆಚ್ಚು; ಸಂವಿಧಾನದಲ್ಲಿಯೂ ವೈವಿಧ್ಯವಿದೆ. ಇದಕ್ಕೆ ಕಾರಣ ಅವರು ಯಾವೊಂದು ನಿರ್ದಿಷ್ಟವಾದ ಶೈಲಿಯನ್ನೂ ಅನುಸರಿಸದೇ ಇದ್ದುದು. ಚು–ಟ ಎಂಬ ಕಲಾವಿದ ಮಿಂಗ್ ಅರಸರ ನೆಂಟನಾಗಿದ್ದರೂ ಏಕಾಂತ ಪ್ರಿಯನಾಗಿದ್ದು, ಹಲವಾರು ರಮ್ಯಚಿತ್ರಗಳನ್ನು ಬಿಡಿಸಿದ್ದಾನೆ. ಹಕ್ಕಿ, ಮೀನು, ಹೂವು, ಬೆಟ್ಟ ಇವುಗಳ ಜೋಡಣೆ ತುಂಬ ಸ್ವಾರಸ್ಯವಾಗಿದೆ. ಆದರೆ ಇವನ ಕಲಾಕೃತಿಗಳೆಲ್ಲ ಹುಚ್ಚು ಮನಸ್ಸಿನ ಹತ್ತುಮುಖಗಳು; ಉದ್ವೇಗದ, ಆವೇಶದ ಭರದಲ್ಲಿ ಮೂಡಿಬಂದವು. ಆನ್‌ಹ್ವೇ ಜಿಲ್ಲೆಯವನಾದ ಮೈ–ಚಿಂಗ್ (1623–1697) ತನ್ನ ಊರಿನ ಬೆಟ್ಟವನ್ನು ತನ್ನ ಕೃತಿಗಳಿಂದ ಇಡೀ ಚೀನದೇಶದಲ್ಲಿ ಪ್ರಸಿದ್ಧಗೊಳಿಸಿದ. ಇವನೂ ಸ್ವತಂತ್ರವಾದ ಶೈಲಿಯನ್ನು ಪ್ರವರ್ತಿಸಿದ.

ಕುಂಚಕ್ಕೆ ಬದಲಾಗಿ ಬೆರಳನ್ನೇ ಬಣ್ಣದಲ್ಲಿ ಅದ್ದಿ ಚಿತ್ರ ಬರೆಯುವ ಪದ್ಧತಿಯನ್ನು ಮೊದಲನೆಯ ಮಂಚು ಚಕ್ರವರ್ತಿಯೇ ಆರಂಭಿಸಿದಂತೆ. ಆದರೆ ಈ ವಿಚಿತ್ರ ಸಂವಿಧಾನವನ್ನು ಬಹುವಾಗಿ ಬಳಕೆಗೆ ತಂದವ ಕಓ–ಚ್ಇ–ಪ್ಐ (1672–1734). ಕುಂಚಕ್ಕೆ ಬದಲಾಗಿ ಕಮಲದ ದಂಟನ್ನು ಉಪಯೋಗಿಸುವ ಪ್ರಯೋಗವನ್ನೂ ಇವನು ಮಾಡಿದ್ದ. ಇವನೂ ಇವನ ಸೋದರಳಿಯ ಚು ಲುನ್–ಹಾನ್ ಎಂಬುವನೂ ಬೆರಳುಚಿತ್ರಣದಲ್ಲಿ ತುಂಬ ಸಾಧನೆಗಳನ್ನು ನಡೆಸಿ ಜನಪ್ರಿಯ ಸಂವಿಧಾನವೊಂದನ್ನು ಮಾಡಿದರು. ಈ ಶೈಲಿ ಮುಂದೆ ಕೊರಿಯ ಜಪಾನ್‌ಗಳಲ್ಲಿ ವಿಶೇಷವಾಗಿ ಹರಡಿತು. ಚೀನದಲ್ಲಿ ಅಷ್ಟು ಬಳಕೆಗೆ ಬರಲಿಲ್ಲ.

ಹೊಸ ಯುಗದ ವೈಶಿಷ್ಟ್ಯ ಹೊರಗಿನ ಕಲಾವಿದರ ಪ್ರಭಾವವನ್ನು ಅರಗಿಸಿ ಕೊಳ್ಳುವುದಾಗಿತ್ತು. ಚ್–ಇಎನ್ – ಲುಂಗ್ ಚಕ್ರವರ್ತಿಯ ಆಸ್ಥಾನದಲ್ಲಿ ಇಟಲಿ ದೇಶದವನಾದ ಗ್ಯುಸೆಪ್ ಕ್ಯಾಸ್ಟಿಗ್ಲಿಯೋನ್ (1688–1766) ಎಂಬುವನು ಪ್ರಸಿದ್ಧ ಕಲಾವಿದನಾಗಿದ್ದ. ಇವನ ಚೀನೀ ಹೆಸರು ಲಾಂಗ್ ಷಿ–ನಿಂಗ್ ಎಂದಿತ್ತು. ಚೀನೀ ಕಲಾವಿದರಿಗೂ ಐರೋಪ್ಯ ಕಲಾವಿದರಿಗೂ ಸಂಪರ್ಕ ಪೂರ್ವದಲ್ಲಿಯೇ ಇದ್ದಿತಾದರೂ ಈ ಇಟಲಿಯ ಕಲಾವಿದ ಜನಪ್ರಿಯನಾದ ಕಾರಣ ಈ ಸಂಪರ್ಕ ಪ್ರೌಢವಾಯಿತು, ಸಾರ್ಥಕವಾಯಿತು. ಇವನಿಗೆ ಆಶ್ರಯದಾತನಾದ ಚ್–ಇಎನ್–ಲುಂಗ್ ಚಕ್ರವರ್ತಿಯೂ (1736–1795) ಕಲಾಪಕ್ಷಪಾತಿಯಾಗಿದ್ದುದು ಮಾತ್ರವಲ್ಲದೆ ಉತ್ತಮ ಸಂಗ್ರಾಹಕನೂ ಸ್ವತಃ ಕಲಾವಿದನೂ ಆಗಿದ್ದ. ತನ್ನ ಸಂಗ್ರಹದಲ್ಲಿ ಸೇರಿದ ಕಲಾಕೃತಿಗಳ ಮೇಲೆ ಉದ್ದುದ್ದನೆಯ ಪದ್ಯಗಳನ್ನು ಬರೆಯುವ ಹವ್ಯಾಸ ಅವನಿಗಿತ್ತು.

ಯಾಂಗ್ ಚೌನ ಎಂಟು ವಿಚಿತ್ರವ್ಯಕ್ತಿಗಳು ಎಂದು ಹೆಸರಾದ ಕಲಾವಿದರಲ್ಲಿ ಚಿನ್–ನುಂಗ್ (1687–1764), ಚೆಂಗ್ ಷ್ಎ (1693–1765) ಲೋ ಪ್ಇಂಗ್ (1733–1799), ಹುಳ ಯೆನ್ (1682–1760) ಮತ್ತು ಹುಯಾಂಗ್ ಷೇನ್ (1687–1768)

ಇವರು ಪ್ರಖ್ಯಾತರು. ಇವರಲ್ಲಿ ಚೆನ್–ನುಂಗ್‌ನ ಬರೆಹ ಸುಂದರ. ಬೌದ್ಧಸೂತ್ರಗಳನ್ನು ಈತ ತನ್ನ ಕೈಬರೆಹದಲ್ಲಿ ಕಲಾಪೂರ್ಣವಾಗಿ ಬರೆದಿದ್ದಾನೆ. ಇವನ ಕಲಾಶೈಲಿಯೂ ಸ್ವತಂತ್ರವಾದ್ದು. ಈ ಎಂಟು ಮಂದಿ ಕಲಾವಿದರು ಹಲವಾರು ಶತಮಾನಗಳ ಚೀನೀ ಕಲೆಯ ಅಂತಿಮ ಘಟ್ಟವನ್ನು ಜಾಜ್ವಲ್ಯಮಾನವನ್ನಾಗಿ ಮಾಡಿದವರು. ಇವರ ಅನಂತರ ಸಾಂಪ್ರದಾಯಿಕ ಚೀನೀ ಕಲೆ ಕಳೆಗುಂದಿತು; ಪ್ರತಿಭಾಶಾಲಿಗಳಾದ ಕಲಾವಿದರು ಯಾರೂ ಕಾಣಿಸಿಕೊಳ್ಳಲಿಲ್ಲ.

ಒಟ್ಟಿನಲ್ಲಿ ಈ ಯುಗವೂ ಕಲಾದೃಷ್ಟಿಯಿಂದ ಉನ್ನತಿಯ ಯುಗ ಎನ್ನುವ ಹಾಗಿಲ್ಲ. ಕೈಕೆಲಸದ ಕಲೆಗೂ ಅವನತಿಯ ಚಿಹ್ನೆಯನ್ನು ತೋರಿಸತೊಡಗಿದುವು. ಪೋರ್ಸಲಿನ್ (ಬಿಳಿಮಣ್ಣು) ಸಾಮಾನುಗಳನ್ನು ಅಧಿಕ ಪ್ರಮಾಣದಲ್ಲಿ ತಯಾರಿಸುವ ಉದ್ಯಮಗಳು ಮೈದಳೆದು ಕಲಾತ್ಮಕಸೃಷ್ಟಿ ಹಿಂದೆಬಿದ್ದಿತು. ರಫ್ತು ಮಾಡಲೆಂದೇ ಸಿದ್ಧವಾದ ಸಾಮಗ್ರಿಗಳಲ್ಲಿ ಕಲಾದೃಷ್ಟಿ ಊನವಾಗಿರುವುದು ಸಹಜವೇ. ಅದೂ ಅಲ್ಲದೆ ಬೇರೆ ಜನರ ಅಗತ್ಯ, ಸೌಕರ್ಯಗಳಿಗೆ ಅನುಗುಣವಾಗಿ ಕಲಾಕೃತಿಗಳನ್ನು ಸಿದ್ಧಮಾಡಬೇಕಾಗಿತ್ತು. ಈ ಕಾರಣದಿಂದಲೇ ಪೋರ್ಸಲಿನ್ ಸಾಮಾನುಗಳ ಮೇಲೆ ಕ್ರೈಸ್ತದೇವತೆಗಳ, ಸಂತರ ಚಿತ್ರಣ ಪ್ರಚುರವಾಯಿತು. ಚೀನೀ ಕಲಾವಿದರಿಗೆ ಸಹಜವಾದ, ಒಗ್ಗಿದ ಕಲ್ಪನೆಗಳು ಪರದೇಶದ ಕಲ್ಪನೆಗಳೊಂದಿಗೆ ಮಿಳಿತವಾಗಿ ಮಾರಾಟಕ್ಕೆಂದೇ ಕಲಾಕೃತಿಗಳು ಸಿದ್ಧವಾದದ್ದು ಈ ಅವನತಯುಗದ ವೈಶಿಷ್ಟ್ಯ. ಚೀನೀ ಕಲೆಯಲ್ಲಿ ನಾಗರ ಕಲೆಯ ಪ್ರಭಾವ ತುಂಬ ಇತ್ತು. ಈ ಶೈಲಿಯ ಪ್ರತಿಪಾದಕರು ತಮ್ಮ ಕಲೆ ರುಚಿಸಿದವರಿಗೆ ಮಾತ್ರ, ಅದು ಅರ್ಥವಾದವರಿಗೆ ಮಾತ್ರ ತಮ್ಮ ಕಲಾಕೃತಿಗಳನ್ನು ಕೊಡುತ್ತಿದ್ದರು; ಉಳಿದವರಿಗೆ ಎಷ್ಟೇ ಹಣಕ್ಕಾಗಲಿ ವಿಕ್ರಯ ಮಾಡುತ್ತಿರಲಿಲ್ಲ. ಇದು ಚೀನೀ ಕಲಾವಿದರ ಹೆಮ್ಮೆ. ಇದನ್ನು ದುರಭಿಮಾನ ಎಂದು ನಿಂದಿಸಿದ ವಿಮರ್ಶಕರೂ ಇದ್ದಾರೆ. ಆದರೆ ಇದು ಚೀನೀ ಕಲಾ ಸಂಪ್ರದಾಯದಲ್ಲಿ ಪ್ರಚಲಿತವಾದ ಮನೋಧರ್ಮ. ನಿ–ತ್ಸನ್ (1301–1374) ಎಂಬ ಅತಿ ಶ್ರೇಷ್ಠ ಚೀನೀ ಕಲಾವಿದನಲ್ಲಿ ಈ ಮನೋಧರ್ಮ ಪರಾಕಾಷ್ಠೆಯನ್ನು ಮುಟ್ಟಿತು. ಅವರ ದೃಷ್ಟಿ ಈ ಮನೋಧರ್ಮವನ್ನು ಉಂಟುಮಾಡಿತ್ತು. ಚೀನೀ ಕಲಾವಿದರಿಗೆ ಕಲೆ ಸ್ವಾಂತಃಸುಖಾಯ. ಈ ಮನೋಧರ್ಮ ಆಧುನಿಕ ಯುಗದ ಅವತರಣಿಕೆಯಲ್ಲಿ ಮರೆಯಾಯಿತು. ಕಲೆ ಉದ್ಯಮಕ್ಕೆ ಅನುವರ್ತಿಯಾಗಿಯೇ ಇರಬೇಕೆಂಬ ಅಗತ್ಯ ಈ ಮಾರ್ಪಾಡಿಗೆ ಕಾರಣವಾಯಿತು. ಇದೇ ಚೀನೀ ಕಲೆಯ ಅವನತಿಗೂ ಕಾರಣವಾಯಿತು.

ಲಲಿತಕಲೆಗೆ ಒದಗಿದ ಆತಂಕ ವಾಸ್ತುಶಿಲ್ಪದ ಅಭ್ಯುದಯಕ್ಕೆ ಎಡೆಮಾಡಿಕೊಟ್ಟಿತು. ಮಿಂಗ್ ರಾಜವಂಶದವರು ಭವ್ಯವಾದ ಸೌಧಗಳನ್ನೂ ಧರ್ಮ ಮಂದಿರಗಳನ್ನೂ ಅಲಂಕೃತ ಸಮಾಧಿಮಂದಿರಗಳನ್ನೂ ನಿರ್ಮಿಸುವುದರಲ್ಲಿ ತುಂಬ ಆಸಕ್ತಿಯನ್ನು ತೋರಿಸಿದ್ದರು. ಈ ಆಸಕ್ತಿಯ ಅಂಗವಾಗಿ ಶಿಲ್ಪ ಬೆಳೆದು ಬಂದಿತ್ತು. ಮಂಚು ಚಕ್ರವರ್ತಿಗಳು ಈ ಆಸಕ್ತಿಯನ್ನು ಇನ್ನಷ್ಟು ಬೆಳೆಸಿಕೊಂಡು ಬಂದರು. 1625ರಲ್ಲಿ ಅವರು ಮೂಕ್‌ಡೆನ್ ನಗರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಭವ್ಯವಾದ ಕಟ್ಟಡಗಳನ್ನು ಕಟ್ಟಿಸಿದರು. ಇಲ್ಲಿನ ಅರಮನೆ ಕಲಾಪೂರ್ಣವಾದುದು. ತಮ್ಮ ರಾಜಧಾನಿಯನ್ನು ಪೀಕಿಂಗಿಗೆ ವರ್ಗಾಯಿಸಿದ ಅನಂತರ ಈ ನಿರ್ಮಾಣಕ್ರಿಯೆಗೆ ಪೀಕಿಂಗ್ ಕೇಂದ್ರವಾಯಿತು. ನಗರದ ಹೊರಗೆ ಗುಡ್ಡವೊಂದರ ಮೇಲೆ ಸುಂದರನಿಸರ್ಗದ ಹಿನ್ನೆಲೆಯಲ್ಲಿ ಕಟ್ಟಿಸಿದ ಪೈ–ಟ್‌ಅ (1654) ಸೊಗಸಾಗಿದೆ. ಹಳೆಯ ಮಂದಿರಗಳನ್ನೂ ನವ್ಯಶೈಲಿಯಲ್ಲಿ ಪುನರ್ನಿರ್ಮಾಣ ಮಾಡಿದರು. ಲ್ಹಾಸದಲ್ಲಿ ದಲಾಯ್ ಲಾಮನ ಪೋತಾಲಕ ಅರಮನೆಯ ಮಾದರಿಯಲ್ಲಿಯೇ ಪುತೋ–ತ್ಸುಂಗ್–ಚೆಂಗ್ ಭವನ ಮೈದಳೆಯಿತು. ಟಿಬೆಟ್ ಕಲೆಯನ್ನು ವಾಸ್ತುಶಿಲ್ಪದಲ್ಲಿ ಜೀರ್ಣಿಸಿಕೊಳ್ಳಲು ಚೀನೀಯರು ಪ್ರಯತ್ನಿಸಿದರು. ಬುದ್ಧಗಯಾದ ಮಹಾಬೋಧಿ ದೇವಾಲಯದ ಆದರ್ಶವನ್ನು ಹಿಡಿದು ವಿಹಾರದೇವಾಲಯಗಳು ಕಾಣಿಸಿಕೊಂಡವು. ಸ್ವರ್ಗದೇವಾಲಯವೆಂಬ ಸಂಕೀರ್ಣ ದೇವಾಲಯ 1896ರಲ್ಲಿ ಕಟ್ಟಲ್ಪಟ್ಟಿತು. ಇದು ಹಲವಾರು ಸಂಪ್ರದಾಯಗಳ ಸಮನ್ವಯವನ್ನು ಪ್ರತಿಬಿಂಬಿಸಿದೆ. ಮಂಚು ಚಕ್ರವರ್ತಿಗಳು ವಿದೇಶದ ಕಟ್ಟಡಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರಾಗಿ ಆಯಾ ಶೈಲಿಗಳನ್ನು ತಮ್ಮ ಕಟ್ಟಡಗಳಲ್ಲಿಯೂ ಕಾಣಿಸಲು ಯತ್ನಿಸಿದರು. ಇದರಿಂದ ಚೀನೀ ಶೈಲಿಯ ಸಂಪತ್ತು ಹೆಚ್ಚಿತೆನ್ನುವ ಹಾಗಿಲ್ಲ. ಕೆಲವೊಮ್ಮೆ ವಿರುದ್ಧ ವಿವರಗಳು ಒಂದುಗೂಡಿ ಅವ್ಯವಸ್ಥೆಯ ಶೈಲಿ ರೂಪತಳೆಯಿತು. ಅಂತೂ ಪ್ರಯೋಜನವೇ ಪ್ರಮುಖವಾದ ಕಲಾಪ್ರಕಾರ ಈ ಯುಗದಲ್ಲಿ ಬೆಳೆಯಿತು. ಈ ದೃಷ್ಟಿ ಕಮ್ಯುನಿಸಂ ಆಡಳಿತದಲ್ಲಿ ಹೆಮ್ಮರವಾಗಿ ಬೆಳೆಯಿತು. ನೈಜವಾದ, ಶುದ್ಧವಾದ, ಮಾನವೀಯತೆಯ ಕಲೆ ತನ್ನ ತವರೂರಾದ ಚೀನ ದೇಶದಿಂದ ಮರೆಯಾಯಿತು. ಇದು ಸಾಂಸ್ಕೃತಿಕ ದೃಷ್ಟಿಯಿಂದ ದುರ್ದೈವದ ಸಂಗತಿ. (ಎಸ್.ಕೆ.ಆರ್.)

**ಚೀನೀ ಕುಂಭಕಲೆ :** ಇಂದು ವಿಶ್ವಾದ್ಯಂತ ಪಿಂಗಾಣಿ ವಸ್ತುಗಳನ್ನು ತಯಾರಿಸಿ ಬಳಸುತ್ತಿರುವವರಾದರೂ ಚೀನದ ಪಿಂಗಾಣಿ ತಯಾರಿಕೆಗೆ 1100 ವರ್ಷಗಳ ಇತಿಹಾಸವಿದೆ. 9ನೆಯ ಶತಮಾನದಲ್ಲೇ ತುಂಬ ಕಲಾತ್ಮಕವಾದ ಪಿಂಗಾಣಿ ವಸ್ತುಗಳನ್ನು ಚೀನೀಯರು ತಯಾರಿಸುತ್ತಿದ್ದರು. ಈಗಲೂ ಪಿಂಗಾಣಿ ಪಾತ್ರೆಗಳನ್ನು ಚೀನೀ ಪಾತ್ರೆಗಳು ಎಂದೇ ಕರೆಯುತ್ತಾರೆ. ಇಂಗ್ಲೆಂಡಿಗೆ 17ನೇ ಶತಮಾನದಿಂದಲೇ ಚೀನದಿಂದ ಪಿಂಗಾಣಿ ವಸ್ತುಗಳು ಆಮದಾಗುತ್ತಿದ್ದುವು. ಗುಣಮಟ್ಟಗಳ ದೃಷ್ಟಿಯಿಂದ ನೂರಾರು ವಿಧದ ಪಿಂಗಾಣಿ ವಸ್ತುಗಳಿವೆ. ಅವುಗಳ ತಯಾರಿಕೆ ಕ್ರಮವೂ ಬೇರೆ ಬೇರೆ. ಇಂದು ಪ್ರಪಂಚದಲ್ಲಿ ಅತಿ ಹೆಚ್ಚಾಗಿ ಬಳಸುತ್ತಿರುವ ಗೃಹೋಪಯೋಗಿ ಮತ್ತು ಭೋಜನಕಾಲೋಪಯೋಗಿ ಪಿಂಗಾಣಿ ಪಾತ್ರೆಗಳ ತಯಾರಿಕೆ ಕ್ರಮವನ್ನು ಮಾತ್ರ ಪರಿಶೀಲಿಸಿದೆ.

**ಚಿತ್ರಾಲಂಕೃತ ಪಿಂಗಾಣಿ ತಟ್ಟೆ**

ಹೊಳಪುಳ್ಳ ಅಪಾರದರ್ಶಕ ಪಿಂಗಾಣಿ ಪಾತ್ರೆಗಳೇ ಹೆಚ್ಚು ಬಳಕೆಯಲ್ಲಿವೆ. ಪಾರದರ್ಶಕ ಪಿಂಗಾಣಿ ಬಳಕೆ ಅತಿ ವಿರಳ. ಅತ್ಯಂತ ಉತ್ತಮ ವರ್ಗದ ಪಿಂಗಾಣಿ ಪಾತ್ರೆಗಳನ್ನು 1250°C 1300°C ಉಷ್ಣತೆಯಲ್ಲಿ ತಯಾರಿಸುತ್ತಾರೆ. ಇವು ಮೊದಲ ವರ್ಗದವು. ಇದಕ್ಕಿಂತ 1100°C –1200°C ಉಷ್ಣತೆಯಲ್ಲಿ ತಯಾರಾಗುವವು ಎರಡನೆಯ ವರ್ಗದವು.

ಬಹುಪಾಲು ದೇಶಗಳಲ್ಲಿ ತಮ್ಮವೇ ಆದ ಪಿಂಗಾಣಿ ಕಾರ್ಖಾನೆಗಳಿವೆಯಾದರೂ, ಚೀನೀ ಪಿಂಗಾಣಿಗಳು ಇಂದೂ ಅಲ್ಲಿಗೆ ಆಮದಾಗುತ್ತಿವೆ. ಪ್ರಾಚ್ಯ ವಸ್ತುಗಳ ಬಗ್ಗೆ ಅಭಿಲಾಷೆಯಿರುವ ಶ್ರೀಮಂತರು ಏಷ್ಯದ, ಅದರಲ್ಲೂ ಚೀನದ ಪಿಂಗಾಣಿಗಳನ್ನೇ ತರಿಸಿಟ್ಟುಕೊಳ್ಳುತ್ತಾರೆ. ಶ್ರೀಮಂತ ಭೋಜನಕೂಟಗಳಲ್ಲಿ ಭಾಗವಹಿಸುವವರು ಇಂಥ ಪಿಂಗಾಣಿಗಳನ್ನು ಮೆಚ್ಚಿ ಹೊಗಳುವುದೂ ಉಂಟು. ಅಮೆರಿಕ, ಭಾರತ ಮುಂತಾದ ದೇಶಗಳಲ್ಲಿ ಉತ್ತಮ ವರ್ಗದ ಪಿಂಗಾಣಿಗಳನ್ನು ಮೇಲೆ ಹೇಳಿರುವಂತೆ ಹೆಚ್ಚು ಉಷ್ಣತೆಯಲ್ಲೂ, ಎರಡನೆಯ ವರ್ಗದವನ್ನು ಕಡಿಮೆ ಉಷ್ಣತೆಯಲ್ಲೂ ತಯಾರಿಸುತ್ತಾರೆ. ಚೀನೀಯರಾದರೋ ಜಾಡಿಯನ್ನು ಅತಿ ಕಡಿಮೆ ಉಷ್ಣತೆಯಲ್ಲೂ (ಒಮ್ಮೊಮ್ಮೆ ಕಾಯಿಸುವುದೇ ಇಲ್ಲ) ಮೆರುಗು ನೀಡುವಾಗ ಅತ್ಯಂತ ಹೆಚ್ಚಿನ ಉಷ್ಣತೆಯಲ್ಲೂ ಅಂದರೆ 1350°C –1480°C ಉಷ್ಣತೆಯಲೂ ಕಾಯಿಸುತ್ತಾರೆ. ಹೀಗೆ ಕಾಯಿಸುವಾಗಲೇ ಹಸಿ ಜೇಡಿಯ ಮೈಕಟ್ಟು, ಮೆರುಗು ಕವಚ ಎರಡೂ ಹದಗೊಂಡು ಪಕ್ವವಾಗುತ್ತವೆ. ಚೆನ್ನಾಗಿ ಪಕ್ವವಾದ ಪಿಂಗಾಣಿ ಪಾತ್ರೆಗಳನ್ನು ಬಡಿದಾಗ ಘಂಟಾನಾದದ ಧ್ವನಿ ಅನುರಣಿಸಬೇಕು.

ಪಿಂಗಾಣಿ ತಟ್ಟೆ, ಪಾತ್ರೆ, ಕುಂಭಗಳ ತಯಾರಿಕೆಗೆ ಪ್ರಧಾನ ಕಚ್ಚಾ ವಸ್ತುವೆಂದರೆ ಚೀನೀ ಜೇಡಿ **(ನೋಡಿ– ಚೀನೀ–ಮಣ್ಣು)**. ಈ ಜೇಡಿಯನ್ನು ಕುಂಭತಜ್ಞರು ವಿಶ್ಲೇಷಿಸಿ ಅದರಲ್ಲಿರಬಹುದಾದ ಕಲ್ಮಷಗಳನ್ನು ಬೇರ್ಪಡಿಸುತ್ತಾರೆ. ಜೇಡಿಯಲ್ಲಿ ಎರಡು ಬಗೆ. ಒಂದು ಮೂಲಜೇಡಿ. ಇದು ಎಲ್ಲಿ ರೂಪಗೊಂಡಿರುತ್ತದೋ ಅಲ್ಲಿಯೇ ನೆಲೆಯಾಗಿರುತ್ತದೆ. ಮತ್ತೊಂದು ಜನಿತ ಅಥವಾ ಅಪ್ರಮುಖ ಜೇಡಿ. ಇದು ಮೂಲ ಶಿಲಾಸ್ಥಾವರಗಳು, ಕೊರೆತ ಮತ್ತಿತರ ಪ್ರಾಕೃತಿಕ ಕ್ರಿಯೆಗಳಿಂದ ಮೂಲಸ್ಥಾನದಿಂದ ಬಹುದೂರ ಹೋಗಿ ನೆಲಗೊಂಡಿರುತ್ತದೆ. ಹಿಗ್ಗುವ ಗುಣವುಳ್ಳ ಈ ಅಪ್ರಮುಖ ಜೇಡಿಯನ್ನೇ ಪಿಂಗಾಣಿ ತಯಾರಿಕೆಯಲ್ಲಿ ತುಂಬ ಹೆಚ್ಚಾಗಿ ಮೂಲವಸ್ತುವಾಗಿ ಬಳಸುತ್ತಾರೆ. ಭೂಮಿಯಲ್ಲಿ ದೊರೆಯುವ ಜೇಡಿಯಿಂದ ಯಾವ ಮಿಶ್ರಣವನ್ನೂ ಮಾಡದೆ ಒರಟು ಮಡಿಕೆಗಳನ್ನು ತಯಾರಿಸುತ್ತಾರೆ. ಉತ್ತಮ ವರ್ಗದ ಪಿಂಗಾಣಿ ಪಾತ್ರೆಗಳನ್ನು ತಯಾರಿಸುವಾಗ ಮೂಲ

ಜೇಡಿಗೆ ಸೆರಾಮಿಕ್ ಕಚ್ಚಾ ವಸ್ತುಗಳನ್ನು ಸೇರಿಸಿ ಪಿಂಗಾಣಿಯ ಗುಣಮಟ್ಟವನ್ನು ಕಾಪಾಡಬೇಕಾಗುತ್ತದೆ. ಸೆರಾಮಿಕ್ ಮಿಶ್ರಣದಿಂದ ತಯಾರಾದ ಈ ಜೇಡಿಯನ್ನು ಚೀನೀ ಜೇಡಿ ಅಥವಾ ಮೂಲ ಜೇಡಿ ಅಥವಾ ಪಿಂಗಾಣಿ ವರ್ಗವೆಂದು ಕರೆಯುತ್ತಾರೆ. ಶುದ್ಧ ಜೇಡಿ ಅಥವಾ ಕೆಯೊಲಿನ್‍ನಲ್ಲಿ ಶೇ.40 ರಿಂದ ಶೇ.50 ಚೀನೀ ಜೇಡಿ ಇರುತ್ತದೆ. ಈ ಜೇಡಿಯಿಂದ ಪಾರದರ್ಶಕ ಹಾಗೂ ಅಪಾರದರ್ಶಕ ಬಿಳಿಯ ಪಿಂಗಾಣಿ ಪಾತ್ರೆಗಳನ್ನು ತಯಾರಿಸುತ್ತಾರೆ. ಸುದ್ದೆ ಜೇಡಿಯಲ್ಲಿ ಒಮ್ಮೊಮ್ಮೆ ಮಡ್ಡಿ ಸೇರಿಕೊಂಡಿರುತ್ತದೆ. ಇದನ್ನು ಮೂಲ ಜೇಡಿಯೆಂದು ವರ್ಗೀಕರಿಸುತ್ತಾರೆ. ಸುದ್ದೆ ಜೇಡಿಯನ್ನು ಅತ್ಯಧಿಕ ಉಷ್ಣತೆಯಲ್ಲಿ ಬೇಯಿಸಿದರೂ ವಿರೂಪಗೊಳ್ಳುವುದಿಲ್ಲ. ಈ ಗುಣದಿಂದಲೇ ಇದನ್ನು ಚೀನೀ ಪಾತ್ರೆಗಳ ಮೈಕಟ್ಟು ತಯಾರಿಸಲು ಬಳಸುವುದು. ಬೆಂದು ಪಕ್ವವಾದಾಗ ಈ ಸುದ್ದೆ ಜೇಡಿ ತನ್ನ ಬಿಳುಪನ್ನು ಪಾತ್ರೆಗಳಿಗೆ ನೀಡುವುದರಿಂದ ಇದನ್ನು ಬಿಳಿ ಜೇಡಿ ಎಂದೂ ಕರೆಯುತ್ತಾರೆ.

ತುಂಬ ಹಿಂದೆಯೇ ಸುದ್ದೆ ಜೇಡಿಯನ್ನು ಚೀನೀಯರು ಕಂಡುಕೊಂಡರು. ಆದ್ದರಿಂದಲೇ ಅವರು 9ನೆಯ ಶತಮಾನದಿಂದಲೇ ಬಿಳಿ ಪಿಂಗಾಣಿ ಪಾತ್ರೆಗಳನ್ನು ತಯಾರಿಸಲು ಸಾಧ್ಯವಾಯಿತು. ಪ್ರಪಂಚದ ವಿವಿಧ ಭಾಗಗಳಲ್ಲಿ ಸುದ್ದೆ ಜೇಡಿಯನ್ನು ಪತ್ತೆ ಮಾಡಿದ್ದಾರೆ. ಕರ್ನಾಟಕದಲ್ಲಿ ಸುದ್ದೆ ಜೇಡಿನ ತೆರದ ಗಣಿಗಳು ಹಾಸನ ಜಿಲ್ಲೆಯ ಬಾಗೇಶಪುರ, ಶಿವಮೊಗ್ಗ ಜಿಲ್ಲೆಯ ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ ಮತ್ತು ಮಂಡ್ಯ ಹಾಗೂ ಮೇಲುಕೋಟೆ ಪ್ರದೇಶದಲ್ಲಿವೆ. ಪಶ್ಚಿಮ ಬಂಗಾಳದಲ್ಲೂ ಫ್ರಾನ್ಸ್, ಜರ್ಮನಿ ಮತ್ತು ಇಂಗ್ಲೆಂಡ್‍ಗಳ ಹಲವು ಪ್ರದೇಶಗಳಲ್ಲೂ ಬಿಳಿ ಜೇಡಿಯ ಗಣಿಗಳಿವೆ. ಸುದ್ದೆಯನ್ನು ಕಂಡುಹಿಡಿದ ಮೇಲೆ ಯೂರೋಪಿಯನ್ನರೂ ಅತ್ಯುತ್ತಮ ವರ್ಗದ ಚೀನೀ ಪಾತ್ರೆಗಳನ್ನು ತಯಾರಿಸಲು ಆರಂಭಿಸಿದರು. ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಉತ್ತರ ಕೆರೊಲೀನ, ಜಾರ್ಜಿಯ ಮತ್ತು ಫ್ಲಾರಿಡ ಪ್ರದೇಶಗಳಲ್ಲಿ ಬಿಳಿ ಜೇಡಿ ಹೇರಳವಾಗಿ ದೊರೆಯುತ್ತದೆ.

ಮುದ್ದೆಜೇಡಿ ಶೇ.10ರಿಂದ ಶೇ.15ರಷ್ಟು ಚೀನೀ ಜೇಡಿಯ ಅಂಶವನ್ನು ಹೊಂದಿರುತ್ತದೆ. ಪಾತ್ರೆಗಳ ಮೈಕಟ್ಟನ್ನು ರಚಿಸಲು ಜಲಜ ಜೇಡು ಮತ್ತು ಕುಲುಮೆ ಜೇಡುಗಳನ್ನು ಸೇರಿಸಿದಾಗ ಮೂಲಜೇಡಿಗೆ ಹೆಚ್ಚಿನ ಜಿಗುಟು ಬರುತ್ತದೆ. ಮೂಲ ಜೇಡಿಯ ವಿವಿಧ ಮಿಶ್ರಣಗಳನ್ನು ಒಂದುಗೂಡಿಸಿ ಗಾಜಿನಂಥ ಹೊಳಪು ತರಲೂ ಪಿಂಗಾಣಿ ಪಾತ್ರೆಗಳಿಗೆ ಗಡಸು ತಂದುಕೊಡಲೂ ಇದು ಅಗತ್ಯ. ಹೀಗೆ ಮಿಶ್ರಣಗೊಂಡ ಮುದ್ದೆ ಜೇಡಿಯನ್ನು ಕೆನೆಹದಕ್ಕೆ ಬರುವವರೆಗೂ ಕಾಯಿಸುತ್ತಾರೆ. ಯಾವುದೇ ಮಿಶ್ರಣವನ್ನು ಶೇ.15ಕ್ಕಿಂತ ಹೆಚ್ಚು ಸೇರಿಸಬಾರದು. ಕಾಯಿಸುವಾಗ ಜೇಡಿನಲ್ಲಿರುವ ಬಿಳುಪು ಮೆರುಗು ಕೊಟ್ಟಾಗ ನಾಶವಾಗದಂತೆ ಅಥವಾ ಮಸುಕಾಗದಂತೆ ಎಚ್ಚರ ವಹಿಸಬೇಕು. ಈ ಮುದ್ದೆಜೇಡಿ ಸುದ್ದೆ ಜೇಡಿಗಿಂತ ಹೇರಳವಾಗಿ ದೊರೆಯುತ್ತದೆ. ಇಂಗ್ಲೆಂಡಿನ ಡೆವನ್‍ಷೈರ್, ಡಾರ್‍ಸಿಟ್ ಪ್ರದೇಶಗಳಲ್ಲೂ ಅಮೆರಿಕೆಯ ಕೆಂಟುಕಿ, ಟೆನಿಸಿ ಪ್ರದೇಶಗಳಲ್ಲೂ ಹೇರಳವಾಗಿ ದೊರೆಯುತ್ತದೆ. ಈ ಜೇಡಿಯನ್ನು ಗಣಿಗಳಿಂದ ಹೊರತೆಗೆದು ಹಲವು ಪೌಂಡುಗಳ ಮುದ್ದೆಗಳನ್ನಾಗಿ ಮಾಡಿ ಮಾರಾಟ ಮಾಡುತ್ತಿದ್ದುದರಿಂದ ಇದಕ್ಕೆ ಮುದ್ದೆ ಜೇಡಿಯೆಂದೇ ಹೆಸರಾಯಿತು.

ಶುದ್ಧ ಸಿಕತ ಅಥವಾ ಫ್ಲಿಂಟ್ ಮರಳುಧಾತುವಿನಿಂದ ಕೂಡಿ ಸಣ್ಣ ಸಣ್ಣ ಉಂಡೆಗಳ ರೂಪದಲ್ಲಿ ದೊರೆಯುತ್ತದೆ. ಇದಕ್ಕೆ ಒಳಗೆ ಉಕ್ಕಿನ ಬೂದು ಬಣ್ಣವೂ ಹೊರಗೆ ಬಿಳಿಯ ಬಣ್ಣವೂ ಇರುತ್ತದೆ. ಅಮೆರಿಕದಲ್ಲಿ ವ್ಯಾಪಾರವಾಗುವ ಚೀನೀ ಜೇಡಿಯ ಪ್ರಮುಖ ಮಿಶ್ರಣ ಇದೇ. ಇಂಗ್ಲೆಂಡಿನಲ್ಲಿ ಬಳಸುವ ಮೂಳೆ ಜೇಡಿಗೆ ಇದನ್ನು ಬೆರೆಸುವುದಿಲ್ಲ. ಆದರೂ ಇದು ಪಿಂಗಾಣಿ ತಯಾರಿಕೆಯ ಒಂದು ಮುಖ್ಯ ಮಿಶ್ರಕ. ಇದು ಹಸಿ ಪಿಂಗಾಣಿ ಮೈಕಟ್ಟನ್ನು ಬೇಯಿಸುವಾಗ ಅದು ಸಂಕೋಚಗೊಳ್ಳದಂತೆ ಮಾಡುವುದೇ ಅಲ್ಲದೆ ಬೆಂದ ಪಿಂಗಾಣಿಗೆ ಗಡಸನ್ನೂ ಬಲವನ್ನೂ ತಂದುಕೊಡುತ್ತದೆ. ಹರಳೀಕೃತ ಬೆಣಚು ಅಥವಾ ಮರಳನ್ನು ಪುಡಿಮಾಡಿ ಇದನ್ನು ಸಿದ್ಧಗೊಳಿಸುತ್ತಾರೆ. ಪ್ರಪಂಚದಲ್ಲೆಲ್ಲ ಇದು ಹೇರಳವಾಗಿ ಸಿಗುತ್ತದೆ. ಅಮೆರಿಕದ ಇಲಿನಾಯ್, ಪಶ್ಚಿಮ ವರ್ಜೀನಿಯ ಮತ್ತು ಪೆನ್ಸಿಲ್‍ವೇನಿಯಗಳಲ್ಲೂ ಕರ್ನಾಟಕದ ಗುಲ್ಬರ್ಗ ಜಿಲ್ಲೆಯ ಗುರುಮಠಕಲ್, ಬೆಳಗಾಂವಿ ಜಿಲ್ಲೆಯ ಎಲ್ಲೂರುಗಳಲ್ಲೂ ಪುಣೆ, ನಾಗಪುರ, ಚಿಂದವಾರಗಳಲ್ಲೂ ಇದು ಹೇರಳವಾಗಿ ದೊರೆಯುತ್ತದೆ.

ಫೆಲ್‍ಸ್ಪಾರ್ ಎಂಬುದು ಬಿಳಿ ಅಥವಾ ನಸುಗೆಂಪು ಸ್ಫಟಿಕಾಕೃತಿಯ ಖನಿಜ ವಿಶೇಷ. ಕೈಗಾರಿಕಾ ಕ್ಷೇತ್ರದಲ್ಲಿ ಇದನ್ನು ಸ್ಪಾರ್ ಎನ್ನುತ್ತಾರೆ. ಮೂಲ ಚೀನೀ ಜೇಡಿಯ ಮಿಶ್ರಣಗಳನ್ನು ಒಂದುಗೂಡಿಸುವಲ್ಲಿ ಇದು ಅಭಿವಹನ ವಸ್ತುವಾಗಿ ಕೆಲಸ ಮಾಡುತ್ತದೆ. ಪಿಂಗಾಣಿ ಜೇಡಿಯನ್ನು ಬೇಯಿಸುವಾಗ ಇದು ಮೊದಲು ಕರಗಿ, ಉಳಿದ ಮಿಶ್ರಣಗಳನ್ನು ಕರಗಿಸಿ ಒಂದುಗೂಡಿಸುತ್ತದೆ; ಬೆಂದು ತಣ್ಣಗಾಗುತ್ತಿರುವ ಪಿಂಗಾಣಿಯಲ್ಲಿ ಗಡಸಾಗುತ್ತಾ ಉಳಿದ ಮಿಶ್ರಣಗಳನ್ನೂ ಬಂಧಿಸಿ, ಮೂಲ ಮಿಶ್ರಣ ಹೆಚ್ಚು ಗಡಸಾಗುವಂತೆಯೂ ಪಾರದರ್ಶಕ ವಾಗುವಂತೆಯೂ ಮಾಡುತ್ತದೆ.

ಫೆಲ್‍ಸ್ಪಾರ್ ವ್ಯಾಪಾರಿಗಳು ಕೊಂಡುಕೊಳ್ಳಬಯಸುವವರ ಅಪೇಕ್ಷೆಗನುಗುಣವಾಗಿ ಪೊಟ್ಯಾಷ್ ಅಥವಾ ಕ್ಷಾರೀಯ ಸ್ಪಾರ್‍ಗಳನ್ನು ಒದಗಿಸುತ್ತಾರೆ. ಪಿಂಗಾಣಿ ತಯಾರಿಕೆಯಲ್ಲಿ ಪೊಟ್ಯಾಷ್ ಸ್ಪಾರ್‍ಗಳ ಬಳಕೆಯೇ ಹೆಚ್ಚು. ಅಮೆರಿಕದಲ್ಲಿ ಬಳಸುವ ಫೆಲ್‍ಸ್ಪಾರ್‍ಗಳನ್ನು ಉತ್ತರ ಕೆರೊಲೀನ ಉತ್ಪತ್ತಿ ಮಾಡುತ್ತದೆ. ಬೆಂಗಳೂರು ಪಿಂಗಾಣಿ ಕಾರ್ಖಾನೆಯಲ್ಲಿ ಬಳಸುವ ಸ್ಪಾರ್‍ಗಳನ್ನು ಗೊಲ್ಲಹಳ್ಳಿ, ಅರ್ಜುನಹಳ್ಳಿ ಪ್ರದೇಶಗಳಿಂದ ತರುತ್ತಾರೆ.



ಚೀನೀ ಕುಂಭಕಲೆಗೊಂದು ನಿದರ್ಶನ

ಚೀನೀ ಪಿಂಗಾಣಿ ಅಥವಾ ಕಾರ್ನ್‍ವಾಲ್ ಶಿಲೆ: ಇಂಗ್ಲೆಂಡಿನ ಕಾರ್ನ್‍ವಾಲ್ ಪ್ರದೇಶದಲ್ಲಿ ಹೇರಳವಾಗಿ ದೊರೆಯುತ್ತದೆ. ಇದರಲ್ಲಿ ಶೇ.20 ರಿಂದ ಶೇ.30 ರಷ್ಟು ಎಲುಬು ಭಸ್ಮವಿದೆ. ಪಿಂಗಾಣಿ ವಸ್ತುಗಳಿಗೆ ಮೆರುಗು ಕೊಡುವಲ್ಲಿಯೂ ಮೈಕಟ್ಟನ್ನು ಸಿದ್ಧಗೊಳಿಸುವಲ್ಲಿಯೂ ಇದು ಅಭಿವಾಹಕವಾಗಿ ಕೆಲಸ ಮಾಡುತ್ತದೆ. ದನಕರುಗಳ ಮೂಳೆಗಳನ್ನು ಸಂಗ್ರಹಿಸಿ, ಅವುಗಳಲ್ಲಿರುವ ನೀರಿನ ಅಂಶ ಹೋಗುವವರೆಗೂ ಉರಿಸಿ ಅಥವಾ ಸುಟ್ಟು, ನುಣುಪಾಗುವಂತೆ ಕುಟ್ಟಿ ಪುಡಿಮಾಡಿದಾಗ ಎಲುಬು ಭಸ್ಮ ಸಿಗುತ್ತದೆ. ಇದರಲ್ಲಿ ಕ್ಯಾಲ್ಸಿಯಮ್ ಫಾಸ್ಫೇಟ್ ಇರುತ್ತದೆ. ಎತ್ತಿನ ಮೂಳೆಗಳು ಈ ಭಸ್ಮ ತಯಾರಿಕೆಗೆ ತುಂಬ ಉಪಯುಕ್ತವಾದವುಗಳೆಂಬುದು ಕುಂಭತಜ್ಞರ ಮತ. ಇಂಗ್ಲೆಂಡಿನ ಪಿಂಗಾಣಿ ವಸ್ತುವಿನಲ್ಲಿ ಇದು ಶೇ. 25–40 ರಷ್ಟು ಸೇರಿರುತ್ತದೆ. ಮೂಲ ಜೇಡಿಮಿಶ್ರಣದಲ್ಲಿ ಇದು ಅಭಿವಾಹಕವಾಗಿ ಕೆಲಸ ಮಾಡುವುದರ ಜೊತೆಗೆ ಸಿದ್ಧ ಪಾತ್ರೆಗಳಿಗೆ ಹೆಚ್ಚಿನ ಪಾರದರ್ಶಕತೆಯನ್ನೂ ತಂದುಕೊಡುತ್ತದೆ. ಸುದ್ದೆ ಜೇಡಿಗೆ ಇದನ್ನು ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಸೇರಿಸಿದರೆ ಪಿಂಗಾಣಿ ಮೈಕಟ್ಟು ಬೇಯುವಾಗ ಉಂಟಾಗಬಹುದಾದ ವಿರೂಪ, ವಕ್ರತೆಗಳು ತಪ್ಪುತ್ತವೆ.

ಇವಿಷ್ಟೇ ಅಲ್ಲದೆ ಬೇರೆ ಬೇರೆ ಪೂರಕ ಮಿಶ್ರಣಗಳನ್ನು ಮೂಲ ಜೇಡಿಗೆ ಸೇರಿಸುತ್ತಾರೆ. ಅವುಗಳಲ್ಲಿ ಡಾಲೊಮೈಟ್, ಬೆಂಟೊನೈಟ್ ಜಿಗುಟನ್ನು ತರುವ ಟಾಲ್ಕ್ ಅಥವಾ ಮೆಗ್ನೀಷಿಯಮ್ ಸಿಲಿಕೇಟ್ ಮತ್ತು ನೆಫಲಿನ್ ಸಯೋನೈಟುಗಳು ಮುಖ್ಯವಾದ ಕೆಲವು.

ಅಮೆರಿಕದಲ್ಲಿ ಗೃಹೋಪಯೋಗಿ ಪಿಂಗಾಣಿ ವಸ್ತುಗಳನ್ನು ಮಾಡುವಾಗ ಸುದ್ದೆ ಜೇಡಿ ಶೇ.4 ಮುದ್ದೆ ಜೇಡಿ ಶೇ.10 ಫೆಲ್‍ಸ್ಪಾರ್ ಶೇ.30, ಫ್ಲಿಂಟ್ ಶೇ.18, ಡಾಲೊಮೈಟ್ ಶೇ.2 ಈ ಮಿಶ್ರಣದಿಂದ ತಯಾರಾದ ಪಿಂಗಾಣಿ ಮೈಕಟ್ಟನ್ನು 1270°C ವರೆಗೆ ಉಷ್ಣತೆಯಲ್ಲಿ ಬೇಯಿಸುತ್ತಾರೆ. ಮೆರುಗು ಕೊಡುವಾಗ 1100°C –1200°C ವರೆಗೆ ಉಷ್ಣತೆಯಿರುತ್ತದೆ. ಸಾರ್ವಜನಿಕ ಭೋಜನಗೃಹಗಳಲ್ಲಿ ಬಳಸುವ ಪಿಂಗಾಣಿ ಪಾತ್ರೆಗಳನ್ನು ಈ ಮಿಶ್ರಣಸೂತ್ರದಿಂದ ತಯಾರಿಸುತ್ತಾರೆ ; ಸುದ್ದೆಜೇಡಿ 29.5%, ಮುದ್ದೆಜೇಡಿ 13%, ಫೆಲ್‍ಸ್ಪಾರ್ 21%, ಫ್ಲಿಂಟ್

35%, ಸುಣ್ಣ 1.5% ಇದರ ಹಸಿ ಮೈಕಟ್ಟನ್ನು 1270° C ಉಷ್ಣತೆಯಲ್ಲೂ, ಮೆರುಗನ್ನು 115°C ಉಷ್ಣತೆಯಲ್ಲೂ ಬೇಯಿಸುತ್ತಾರೆ. 18ನೆಯ ಶತಮಾನಕ್ಕೆ ಮೊದಲೇ ಇಂಗ್ಲೆಂಡಿನ ಬೋಪ್ ಜೆಲ್‌ಸಿ ಸ್ಥಾವರಗಳಲ್ಲಿ ಚೀನೀ ಪಿಂಗಾಣಿಯನ್ನು ಪ್ರಾಯೋಗಿಕವಾಗಿ ಉತ್ಪಾದಿಸಿದರು. ಅಲ್ಲಿಂದೀಚೆಗೆ ಪಿಂಗಾಣಿ ಉದ್ಯಮ ಅಧಿಕ ಪ್ರಮಾಣದಲ್ಲಿ ಬೆಳೆಯಿತು.

ಮೈಕಟ್ಟು ತಯಾರಿಕೆ : ತಯಾರು ಮಾಡಬೇಕಾದ ಪಿಂಗಾಣಿ ಪಾತ್ರೆಗಳಿಗೆ ಅಗತ್ಯವಾದ ಮಿಶ್ರಣಸೂತ್ರವನ್ನು ನಿರ್ಧರಿಸಿ, ಮಿಶ್ರಣಮಾಡಿ, ಇವುಗಳ ಜೊತೆಗೆ ಪೂರಕ ಘಟಕಾಂಶಗಳನ್ನು ಸೇರಿಸಿ ಚೆನ್ನಾಗಿ ಕಲಸಬೇಕು. ಮಿಶ್ರಣವನ್ನು ಶುದ್ಧಿಗೊಳಿಸಿ, ಸಂಸ್ಕರಣವಾದ ಮೇಲೆ ಅಗತ್ಯ ಪಾತ್ರೆಗಳ ರೂಪ ಕೊಡಲು ಅನುಕೂಲವಾಗುವಂತೆ ಸುಸಂಗತಗೊಳಿಸಿ ಸಿದ್ಧಪಡಿಸಬೇಕು. ಈ ಶುದ್ಧೀಕರಣ ಹಲವು ಮಜಲುಗಳಲ್ಲಿ ನಡೆಯುತ್ತದೆ. ಇದು ತಯಾರಾಗುವ ಪಾತ್ರೆಗಳಿಗನುಗುಣವಾಗಿ ಒಂದು ಸ್ಥಾವರದಿಂದ ಮತ್ತೊಂದು ಸ್ಥಾವರಕ್ಕೆ ತಯಾರಿಕಾ ಕ್ರಮದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಸರಿಸುಮಾರಾಗಿ ಅನುಸರಿಸುವ ಪದ್ಧತಿಯನ್ನು ಇಲ್ಲಿ ನೋಡಬಹುದು. ಮೊದಲು ಪಿಂಗಾಣಿ ಜೇಡಿ ಅಥವಾ ಮೂಲ ಜೇಡಿಯನ್ನು ನೀರಿನಲ್ಲಿ ಸೇರಿಸಿ ತಿರುಗುಯಂತ್ರದಲ್ಲಿ ಕಲಸುತ್ತಾರೆ. ಅನಂತರ ಮೈಕಟ್ಟನ್ನು ತಯಾರಿಸಲು ಸಿದ್ಧಗೊಳಿಸಿರುವ ಜೇಡಿಯನ್ನು ಅಗತ್ಯಕ್ಕೆ ಬೇಕಾದಷ್ಟು ನುಣುಪುಗೊಳಿಸಲು ಅರೆಯುವ ಯಂತ್ರಗಳಿಗೆ ಹಾಕಿ ಅರೆಯುತ್ತಾರೆ.

ಆಮೇಲೆ ಸಾಲುಸಾಲಾಗಿ ಜರಡಿಗಳನ್ನು ಅನುಗೊಳಿಸಿ ಮಿಶ್ರಜೇಡಿಯನ್ನು ಜರಡಿಯಾಡಿಸುತ್ತಾರೆ. ಅರೆಯುವ ಯಂತ್ರದಲ್ಲಿ ಉಳಿದಿರಬಹುದಾದ ಕಲ್ಮಷಗಳು ಇಲ್ಲಿ ಬೇರೆಯಾಗುತ್ತವೆ. ಮಿಶ್ರಣ–ದಲ್ಲಿರುಬಹುದಾದ ಕಬ್ಬಿಣದ ಪುಡಿಯನ್ನು ಪ್ರತ್ಯೇಕಿಸಲು ತೀಕ್ಷ್ಣವಾದ ವಿದ್ಯುತ್–ಕಾಂತವನ್ನು ಬಳಸುತ್ತಾರೆ. ಮಿಶ್ರಣದಲ್ಲಿ ಕಬ್ಬಿಣದ ಅಂಶ ಉಳಿದುಹೋದರೆ ಮೈಕಟ್ಟನ್ನು ಬೇಯಿಸಿದಾಗಾಗಲಿ, ಮೆರುಗು ಕೊಟ್ಟ ಮೇಲಾಗಲಿ ಸಿದ್ಧ ಪಿಂಗಾಣಿ ಪಾತ್ರೆಗಳ ಮೇಲೆ ಕಂದು ಅಥವಾ ಕಪ್ಪು ಚುಕ್ಕೆಗಳು ಮೂಡಿ ಅಂದಗೆಡುತ್ತದೆ. ಇದಾದ ಮೇಲೆ ನೀರು ತೆಗೆಯುವ ಕೆಲಸ. ಅಗತ್ಯಕ್ಕಿಂತ ಹೆಚ್ಚಾದ ನೀರನ್ನು ಮಿಶ್ರಣದಿಂದ ಹೊರತೆಗೆಯಲು ಬಸಿಯುವ ಲೋಹದ ಹಲಗೆಗಳನ್ನು ಬಳಸಿ, ಮಿಶ್ರಣವನ್ನು ಅದರ ಮೇಲೆ ಸುರಿದು ಒತ್ತುತ್ತಾರೆ. ಆಗ ನೀರೆಲ್ಲ ಬಸಿದು ಉಳಿದ ಜೇಡಿ ಮೆತುವಾಗಿ, ಸಾಕಷ್ಟು ಜಿಗುಟಾಗುತ್ತದೆ. ಮಿಶ್ರಣದಲ್ಲಿ ಸೇರಿರುವ ಗಾಳಿಗುಳ್ಳೆಗಳನ್ನು ಮೈಕಟ್ಟು ತಯಾರಿಸುವ ಮುಂಚೆಯೇ ತೆಗೆದಿರುತ್ತಾರೆ. ಸಂಗ್ರಹಿಸಿಡಲು ಅನುಕೂಲವಾಗುವಂಥ ಹಲಗೆಗಳನ್ನಾಗಿ ಇದನ್ನು ಕತ್ತರಿಸಿ, ಜೋಡಿಸಿಡುತ್ತಾರೆ.

ಚೀನೀ ಪಿಂಗಾಣಿ ತಟ್ಟೆ ಮತ್ತು ಭರಣಿ

ಪಿಂಗಾಣಿ ತಯಾರಿಕೆ ಮೊದಮೊದಲು ಮಾನವ ಶ್ರಮದಿಂದಲೇ ಚಿಕ್ಕ ಚಿಕ್ಕ ಯಂತ್ರಗಳಿಂದ ನಡೆಯುತ್ತಿತ್ತು. ಬೇಡಿಕೆ ಹೆಚ್ಚಿದಂತೆ ತಯಾರಿಕೆಯನ್ನು ತೀವ್ರಗೊಳಿಸಬೇಕಾಗಿ ಬಂದುದರಿಂದ ದೊಡ್ಡ ದೊಡ್ಡ ಯಂತ್ರಗಳ ನಿರ್ಮಾಣ ಅನಿವಾರ್ಯವಾಯಿತು. ಇಂದು ಬಹುಮಟ್ಟಿಗೆ ಸ್ವಯಂಚಾಲಿತ ಯಂತ್ರಗಳೇ ಈ ಕಾರ್ಯವನ್ನು ನಿರ್ವಹಿಸುತ್ತವೆ.

**ಕುಂಭ ತಯಾರಿಕೆ :** ಕಲಾತ್ಮಕ ಹಾಗೂ ಗೃಹೋಪಯೋಗಿ ಕುಂಭಗಳ ತಯಾರಿಕಾ ವಿಧಾನಗಳು ಹೀಗಿವೆ : 1. ಕುಂಬಾರ ಚಕ್ರ ಅಥವಾ ಸನ್ನೆ ಚಕ್ರ, 2. ಜಾಲಾಟದ ವಂದರಿ ಪೆಟ್ಟಿಗೆ, 3. ಜಾರು ಅಚ್ಚು, 4. ಒತ್ತು ಎರಕ.

1. ಕುಂಬಾರ ಚಕ್ರ ಅಥವಾ ಸನ್ನೆ ಚಕ್ರ : ಪಿಂಗಾಣಿ ಕುಂಭ ತಯಾರಿಕೆಯಲ್ಲೂ ಸಾಮಾನ್ಯ ಕುಂಬಾರನ ಕ್ರಮವನ್ನೇ ಅನುಸರಿಸುತ್ತಾರೆ. ಜೇಡಿಯನ್ನು ತಟ್ಟೆಯ ಮೇಲಿಟ್ಟು ಯಾವ ಆಕಾರ ಬೇಕೋ ಆ ಆಕಾರವನ್ನು ಕುಶಲಿ ಕುಂಭತಜ್ಞ ರೂಪಿಸುತ್ತಾನೆ. ಈ ಚಕ್ರವನ್ನು ಸನ್ನೆಯ ಸಹಾಯದಿಂದಲಾದರೂ ತಿರುಗಿಸಬಹುದು. ಬೇರೆ ಬೇರೆ ಆಕಾರದ ವಿಶೇಷ ಕುಂಭಗಳನ್ನು ತಯಾರಿಸಲು ಈ ಪದ್ಧತಿ ತುಂಬ ಅನುಕೂಲವಾದುದು. ಒಂದೇ ಆಕಾರದ ಸಹಸ್ರಾರು ಪಾತ್ರೆ ಅಥವಾ ಕುಂಭಗಳನ್ನು ತಯಾರಿಸಲು ಇದು ಸೂಕ್ತ ಪದ್ಧತಿಯಲ್ಲ. ಕುಂಭ ತಯಾರಾದ ಮೇಲೆ ಅದನ್ನು ತಟ್ಟೆಯಿಂದ ಹೊರತೆಗೆದು ಆರಲು ಇಡುತ್ತಾರೆ. ಚರ್ಮದಂತೆ (ಹಿಗ್ಗಿ ಕುಗ್ಗುವಷ್ಟು) ಒಣಗಿದ ಮೇಲೆ, ಬೇರೆಯಾಗಿ ತಯಾರಿಸಿದ ಕುಂಭದ ವಿವಿಧ ಭಾಗಗಳನ್ನು ಈ ಕುಂಭಕ್ಕೆ ಹೊಂದಿಸುತ್ತಾರೆ.

2. ಜಾಲಾಟದ ವಂದರಿ ಪೆಟ್ಟಿಗೆ : ಯಾಂತ್ರೀಕೃತ ಸನ್ನೆ ಚಕ್ರವನ್ನುಳ್ಳ ಈ ಯಂತ್ರದ ಮೂಲಕ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಒಂದೇ ಆಕಾರದ ಸಹಸ್ರಾರು ಪಾತ್ರೆಗಳನ್ನು ತಯಾರಿಸುತ್ತಾರೆ. ಪ್ಲಾಸ್ಟರ್ ಆಫ್ ಪ್ಯಾರಿಸ್ ಬಳಸಿ, ಮಾಡಬೇಕಾದ ಪಾತ್ರೆಯ ಹೊರಮೈ ಆಕಾರದ ಅಚ್ಚುಗಳನ್ನು ತಯಾರಿಸಿ ಅವನ್ನು ಸನ್ನೆ ಚಕ್ರದ ಮಧ್ಯೆ ಜೋಡಿಸುತ್ತಾರೆ. ತಯಾರಿಸಲು ಸಿದ್ಧವಾಗಿರುವ ಜೇಡಿಯನ್ನು ಅಚ್ಚಿನ ತುಂಬ ಹೊಯ್ಯುತ್ತಾರೆ. ಪಾತ್ರೆಯ ಒಳಭಾಗದ ಆಕಾರವನ್ನು ಮಾಡಿರುವ ಅಚ್ಚನ್ನು ಯಂತ್ರದ ಮೇಲುಭಾಗದಲ್ಲಿ ಎಳೆದತ್ತ ಬರುವ ಲೋಹ ಹಸ್ತಗಳಿಗೆ ಜೋಡಿಸಿರುತ್ತಾರೆ. ಚಕ್ರ ತಿರುಗಲು ಆರಂಭವಾದಂತೆ ಈ ಮೇಲಿನ ಅಚ್ಚನ್ನು ಜೇಡಿ ತುಂಬಿರುವ ಒಳಭಾಗಕ್ಕೆ ಇಳಿಸುತ್ತಾರೆ. ಕೆಳಗಿನ ಅಚ್ಚು ತಿರುಗುತ್ತಿರುವುದರಿಂದ ಇದನ್ನು ನಿಧಾನವಾಗಿ ಕೆಳಗಿಳಿಸಿದಾಗ ಹೆಚ್ಚಿನ ಜೇಡು ಹೊರಬಂದು ಒಳಪಾತ್ರೆಯ ಆಕಾರ ಮೂಡುತ್ತದೆ. ಜೇಡಿ ಈ ಎರಡು ಅಚ್ಚುಗಳ ಸಹಾಯದಿಂದ ಪಾತ್ರೆಯ ಆಕಾರವನ್ನು ತಾಳುತ್ತದೆ. ಪಾತ್ರೆ ಸಿದ್ಧವಾದ ಮೇಲೆ ಅದನ್ನು ಚಕ್ರದಿಂದ ಹೊರತೆಗೆದು, ಸ್ವಲ್ಪ ಆರಿದ ಮೇಲೆ ಅದರ ಉಳಿದ ಭಾಗಗಳನ್ನು ಲಗತ್ತಿಸುತ್ತಾರೆ. ಈ ಕ್ರಮದಲ್ಲಿ ಬಟ್ಟಲುಕುಂಭ ಇತ್ಯಾದಿಗಳನ್ನು ತಯಾರಿಸಬಹುದು.

ಕುಳಿ ಬಿದ್ದ ಪಟ್ಟೆ ತಯಾರಿಸುವಲ್ಲಿ ಅಚ್ಚುಗಳ ಮಾದರಿ ಅದಲುಬದಲಾಗುತ್ತದೆ. ಚಕ್ರದ ಮೇಲಿಡುವ ಅಚ್ಚನ್ನು ತಟ್ಟೆಯ ಒಳಭಾಗದ ಆಕಾರದಲ್ಲೂ ಮೇಲಿನ ಅಚ್ಚನ್ನು ತಟ್ಟೆಯ ಹೊರಭಾಗದ ಮಾದರಿಯಲ್ಲೂ ಮಾಡಿರುತ್ತಾರೆ. ಮೊಟ್ಟೆಯ ಆಕಾರದ, ಪಾತ್ರೆಗಳನ್ನು ತಯಾರಿಸುವಲ್ಲಿ ವಿಷಮ ಕೇಂದ್ರದಲ್ಲಿ ಸುತ್ತುವ ಚಕ್ರವನ್ನು ಬಳಸಿಕೊಳ್ಳುತ್ತಾರೆ. ಸ್ವಯಂಚಾಲಿತ ಅಚ್ಚುಯಂತ್ರಗಳಿಂದ ದಿನವೊಂದಕ್ಕೆ 240,000 ಭೋಜನೋಪಯೋಗಿ ಪಿಂಗಾಣಿ ಪಾತ್ರೆಗಳನ್ನು ತಯಾರಿಸಿದ ದಾಖಲೆ ಇದೆ.

3. ಜಾರು ಅಚ್ಚು : ಒಂದೇ ರೀತಿಯ ಸಹಸ್ರಾರು ಪಿಂಗಾಣಿ ಪಾತ್ರೆ ತಯಾರಿಕೆಗೆ ಇದು ಅತ್ಯಂತ ಸರಳ ಹಾಗೂ ಸುಲಭ ವಿಧಾನ. ಬಿಡಿಭಾಗಗಳ ತಯಾರಿಕೆಯಲ್ಲೂ ಇದು ಅಷ್ಟೇ ಪ್ರಮುಖವಾದುದು. ಟೀ ಮತ್ತು ಕಾಫಿ ಬಟ್ಟಲುಗಳನ್ನು ಈ ಪದ್ಧತಿಯಿಂದ ತಯಾರಿಸುತ್ತಾರೆ. ಜಾರು ಅಚ್ಚಿನಲ್ಲಿ ಜೋಡಿಸುವ ಕುಂಭದ ಅಥವಾ ಬಟ್ಟಲಿನ ಮಾದರಿ ಅಚ್ಚುಗಳನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಅವುಗಳ ಹೊರಭಾಗದ ಆಕಾರಕ್ಕೆ ಸರಿಯಾಗಿ ಮಾಡಿರುತ್ತಾರೆ. ಇಂಥ ಅಚ್ಚುಗಳನ್ನು ಸಿದ್ಧಪಡಿಸುವವ ತುಂಬ ಕುಶಲಿಯಾಗಿರಬೇಕು.

ಸುಮಾರು ಅರ್ಧ ಗಂಟೆ ಆರಿದ ಮೇಲೆ ಅಚ್ಚಿನಿಂದ ಪಾತ್ರೆಯನ್ನು ಹೊರತೆಗೆದು, ಒಳಗೆ ಅದರ ಮೈಗೆ ಅಂಟಿಕೊಂಡಿರಬಹುದಾದ ಹೆಚ್ಚಿನ ಜೇಡಿಯನ್ನು ಕೆರೆದು ಹಾಕಬೇಕು. ಗಾಳಿಯಿಂದ ಬಿದ್ದಿರಬಹುದಾದ ಕುಳಿಗಳನ್ನು ಮುಚ್ಚಿ, ತಲೆ ಮತ್ತು ತಳಭಾಗದ ಕಂಠಗಳನ್ನು ಸುತ್ತು ಚಕ್ರದ ಸಹಾಯದಿಂದ ಸಾಕಾರಗೊಳಿಸಿ ಕುಂಭ ಸಿದ್ಧಪಡಿಸಬೇಕು. ಅನಂತರ ಅದಕ್ಕೆ ಅಗತ್ಯವಿರುವ ಬೇರೆ ಬೇರೆ ಭಾಗಗಳನ್ನು ಅಂಟಿಸಬೇಕು. ಈಗ ಕುಂಭ ಬೇಯಿಸಲು ಸಿದ್ಧವಾಗುತ್ತದೆ.

ಆಕೃತಿಗಳನ್ನೋ ಮೂರ್ತಿರೂಪಗಳನ್ನೋ ತಯಾರಿಸಬೇಕಾದಾಗ ಆಕೃತಿಯ ವಿವಿಧ ಭಾಗಗಳ ಬೇರೆ ಬೇರೆ ಅಚ್ಚುಗಳನ್ನು ಮಾಡುತ್ತಾರೆ. ವಿವಿಧ ಎರಕಗಳಲ್ಲಿ ಅಚ್ಚಾಗಿ ಬಂದ ಆಕೃತಿಗಳನ್ನೂ ಅವು ಇನ್ನೂ ಮೆತುವಾಗಿ ಇರುವಾಗಲೇ ರೂಪಕ್ಕೆ ತಕ್ಕಂತೆ ಜೋಡಿಸುತ್ತಾರೆ. ಜೋಡಿಸಿದ ಭಾಗಗಳನ್ನು ಕ್ರಮಪಡಿಸಿ ಆರಲು ಇಡುತ್ತಾರೆ.

4. ಒತ್ತು ಎರಕ : ಪ್ಲಾಸ್ಟರ್ ಆಫ್ ಪ್ಯಾರಿಸ್ ಅಚ್ಚುಗಳನ್ನು ಮಾಡಿಕೊಂಡು ಒತ್ತಿ ಒತ್ತಿ ಪಾತ್ರೆಗಳನ್ನು ತಯಾರಿಸುತ್ತಾರೆ. ಅತಿ ಒಣಗಿದ ಮಿಶ್ರ ಜೇಡಿಯನ್ನು ಇಲ್ಲಿ ಬಳಸುತ್ತಾರೆ. ಹೆಂಚು, ಇಟ್ಟಿಗೆ ಮತ್ತು ವಿದ್ಯುದ್‌ವಾಹಕ ಪಿಂಗಾಣಿ ವಸ್ತುಗಳನ್ನು ತಯಾರಿಸಲು ಈ ಪದ್ಧತಿ ಒಳ್ಳೆಯದು, 1960ರಿಂದ ಈಚೆಗೆ, ಇವನ್ನು ತಯಾರಿಸಲು ಸ್ವಯಂಚಾಲಿತ ಯಂತ್ರಗಳು ಸ್ಥಾಪಿತವಾಗಿವೆ.

ತಿರುಗಣೆ ಯಂತ್ರ: ಸನ್ನೆ ಚಕ್ರದ ಪ್ರತಿರೂಪವಾದ ಇದನ್ನು ಹಸಿ ಕುಂಭಗಳನ್ನು ಸಂಸ್ಕರಿಸಲು ಉಪಯೋಗಿಸುತ್ತಾರೆ. ಅಚ್ಚಿನಿಂದ ಹೊರಬಂದ ಪಾತ್ರೆಗಳನ್ನು ಸ್ವಲ್ಪ ಆರಿಸಿ, ಅದು ಚರ್ಮದಂತೆ ಹಿಗ್ಗುವಂತಾದಾಗ ಈ ತಿರುಗಣೆ ಚಕ್ರದ ಮೇಲಿಟ್ಟುಕೊಳ್ಳುತ್ತಾರೆ. ಲೋಹದ ಉಪಕರಣಗಳನ್ನು ಬಳಸಿ ಅನಗತ್ಯ ಜೇಡಿಯನ್ನು ಹೆರೆದು ಹಾಕಿ, ತಳ ಮತ್ತು ಕಂಠ ಭಾಗಗಳ ಅಚ್ಚು ದೋಷವನ್ನು ಸರಿಪಡಿಸಿ ಸಂಸ್ಕರಣಗೊಳಿಸಲು ಈ ಯಂತ್ರ ಅಗತ್ಯ. ಒತ್ತುಯಂತ್ರದಿಂದ ಹೊರಬಂದ ಬಿಡಿಭಾಗಗಳಿಗೆ ರೂಪ ಕೊಡುವಲ್ಲಿಯೂ ಇದರ ಬಳಕೆ ಇದೆ. ಲೋಹವಸ್ತುಗಳನ್ನು ಸಂಸ್ಕರಿಸಲು ಬಳಸುವ ಲೇತುಗಳನ್ನು ಇಲ್ಲಿಯೂ ಬಳಸಬಹುದಾದರೂ ಕೆಲಸಗಾರ ತುಂಬ ಪರಿಣಿತನೂ ಕುಶಲಿಯೂ ಆಗಿರಬೇಕು. ಇಷ್ಟು ಆದಮೇಲೆ ಕುಂಭ ಅಥವಾ ಪಿಂಗಾಣಿ ಪಾತ್ರೆ ಬೇಯಿಸಲು ಸಿದ್ಧವಾಗುತ್ತದೆ.

ಹಸಿ ಕುಂಭಗಳನ್ನು ಬೇಯಿಸುವ ಕ್ರಮ : 1 ಒಲೆ ಗೂಡು ಹಾಕುವುದು; ಬೇಯಿಸಲು ತಯಾರಾಗಿರುವ ಎಲ್ಲ ಪಾತ್ರೆಗಳನ್ನೂ ಒಲೆಯೊಳಗೆ ಅಥವಾ ಆವಿಗೆಯಲ್ಲಿ ಕ್ರಮವಾಗಿ ಜೋಡಿಸಬೇಕು. ಜೋಡಣೆ ಸ್ವಲ್ಪ ಹೆಚ್ಚುಕಡಿಮೆಯಾದರೂ ಪಾತ್ರೆಗಳು ಅಂದಗೆಟ್ಟು ವಿಕಾರವಾಗಿ,

ಅರೆ ಬೆಂದು, ಬಣ್ಣ ಕಂದಿ ಅನುಪಯುಕ್ತವಾಗುತ್ತವೆ. ಈ ಕೆಲಸ ಮಾಡುವವರು ವಿಶೇಷ ತಜ್ಞರೇ ಆಗಿರಬೇಕು. ಸಿಕತದಿಂದ ಮಾಡಿದ ಸಿಂಬೆ ಅಥವಾ ಪಾದುಕೆಗಳ ಮೇಲೆ ಹಸಿ ಪಿಂಗಾಣಿ ಪಾತ್ರೆಗಳನ್ನಿಟ್ಟು, ಸುತ್ತಲೂ ಒಂದಕ್ಕೊಂದು ತಾಕದಂತೆ, ಅಲುಗಾಡದಂತೆ ಒತ್ತೆ ಕೊಟ್ಟು ಜೋಡಿಸುತ್ತಾರೆ. ನಾಜೂಕಾದ ಕಲಾತ್ಮಕ ಪಿಂಗಾಣಿ ಪಾತ್ರೆಗಳಿಗೆ ಆವಿಗೆಯ ಉಷ್ಣ ನೇರವಾಗಿ ತಾಗದಂತೆ ಮಾಡಲು ವಿಶಿಷ್ಟ ಪೆಟ್ಟಿಗೆಗಳೊಳಗಿಟ್ಟು ಹದವಾಗಿ ಬೇಯಿಸುತ್ತಾರೆ. ಈ ಪೆಟ್ಟಿಗೆಗಳನ್ನು ಬಳಸುವುದರಿಂದ ಅನಗತ್ಯವಾಗಿ ಒಡೆದು ಹೋಗುವುದನ್ನು ತಪ್ಪಿಸಬಹುದು.

ಹಿಂದೆ ಬಳಸುತ್ತಿದ್ದ ಸುಟ್ಟ ಮಣ್ಣಿನ ಕೋಶಗಳಿಗೆ ಬದಲಾಗಿ 1960ರಿಂದೀಚೆಗೆ ಸಿಲಿಕಾನ್ ಕಾರ್ಬೈಡ್ ಪೀಠೋಪಕರಣಗಳನ್ನೇ ಹೆಚ್ಚು ಹೆಚ್ಚಾಗಿ ಬಳಸುತ್ತಿದ್ದಾರೆ. ಇವು ಹೆಚ್ಚು ಭಾರವನ್ನು ಭರಿಸಬಲ್ಲವು.

ಆವಿಗೆಯೊಳಗಿನ ಉಷ್ಣತೆಯನ್ನು ಪೈರೋಮೀಟರ್ ಉಷ್ಣಮಾಪಕಗಳಿಂದ ಕಂಡುಕೊಳ್ಳುತ್ತಾರೆ. ಎರಡು ರೀತಿಯ ಪೈರೋಮೀಟರ್‌ಗಳಿರುತ್ತವೆ. ಒಂದು ಕುಲುಮೆ ಒಳಗಿನ ಉಷ್ಣತೆಯನ್ನು ತೋರಿಸಿದರೆ ಮತ್ತೊಂದು ಒಲೆಯೊಳಗಿರುವ ಪಿಂಗಾಣಿ ಪಾತ್ರೆಯೊಳಗಿನ ಉಷ್ಣತೆಯನ್ನು ತೋರಿಸುತ್ತದೆ.

ಬೇಯಿಸುವ ವಿಧಾನ: ಮಬ್ಬು ಬಣ್ಣದ ಹಸಿ ಪಿಂಗಾಣಿ ಜೇಡಿ ಬೆಳ್ಳಗೆ ಮಿರಮಿರನೆ ಹೊಳೆಯುವ ಗಾಜಿನಂಥ ಪಾತ್ರೆಗಳಾಗುವುದು. ಒಂದು ಪಾತ್ರೆ ಮೂರು ಹಂತಗಳಲ್ಲಿ ಬೇಯುತ್ತದೆ. ಹಸಿ ಪಿಂಗಾಣಿ ಜೇಡಿಯನ್ನು ಬೆಂದ ಪಾತ್ರೆ ಮಾಡಲು ಒಮ್ಮೆ, ಬೆಂದ ಪಾತ್ರೆಗೆ ಮೆರುಗು ಲೇಪನ ಹಾಕಿ ಮೆರುಗು ಕೊಡುವಾಗ ಮತ್ತೊಮ್ಮೆ, ಮೆರುಗು ಕೊಟ್ಟ ಪಾತ್ರೆಗೆ ಕುಸುರಿ ಕೆಲಸ ಮಾಡಿ ಬಣ್ಣ ಹಾಕಿ ಅದನ್ನು ಸ್ಥಿರಗೊಳಿಸಲು ಮಗದೊಮ್ಮೆಹೀಗೆ ಮೂರು ಬಾರಿ ಬೇಯುತ್ತದೆ. ಈ ಒಂದೊಂದು ಹಂತಕ್ಕೂ ಗರಿಷ್ಠ ಉಷ್ಣತೆಯ ಮಿತಿ ಗೊತ್ತಾಗಿರುತ್ತದೆ. ಕನಿಷ್ಠ 600°C ಯಿಂದ ಗರಿಷ್ಠ 2,000°C ಉಷ್ಣತೆಯ ಒಳಗೆ ಈ ಮೂರೂ ಹಂತಗಳಲ್ಲಿ ಬೇಯಿಸುತ್ತಾರೆ. ತಯಾರಿಸುವ ಪಾತ್ರೆಗಳಿಗನುಣವಾಗಿ ಇದು ವ್ಯತ್ಯಾಸವಾಗುತ್ತದೆ. ಸಾಮಾನ್ಯ ಪಿಂಗಾಣಿ ಪಾತ್ರೆಗಳನ್ನು 600°C ಯಲ್ಲೂ ಕೋಪೆನ್‌ಹೇಗನ್ ಪಿಂಗಾಣಿಯನ್ನು 1480°C ಯಲ್ಲೂ, ಕೈಗಾರಿಕಾ, ವಿದ್ಯುತ್ ಮತ್ತು ವೈಜ್ಞಾನಿಕ ಸ್ಥಾವರಗಳಲ್ಲಿ ಬಳಸುವ ಪಿಂಗಾಣಿ ವಸ್ತುಗಳನ್ನು 2000°C ಯಲ್ಲೂ ಬೇಯಿಸುತ್ತಾರೆ.

ಆವಿಗೆ : ಆಧುನಿಕ ಪಿಂಗಾಣಿ ಸ್ಥಾವರಗಳಲ್ಲಿ ಎರಡು ರೀತಿಯ ಆವಿಗೆಗಳಿರುತ್ತವೆ. ಒಂದು ಆವರ್ತನೀಯ ಆವಿಗೆ, ಇನ್ನೊಂದು ಸುರಂಗ ಅಥವಾ ಅವಿಚ್ಛಿನ್ನ ಆವಿಗೆ.

ತಣ್ಣಗಿನ ಆವಿಗೆಯಲ್ಲಿ ಪಿಂಗಾಣಿ ಪಾತ್ರೆಗಳನ್ನು ಜೋಡಿಸಿಟ್ಟು, ಉರಿಹಾಕಿ, ಕ್ರಮ ಕ್ರಮವಾಗಿ ಉಷ್ಣತೆಯನ್ನು ಹೆಚ್ಚಿಸುತ್ತ ಹೋಗಿ ಪಾತ್ರೆಗಳು ಪಕ್ವವಾಗುವ ಉಷ್ಣತೆಯನ್ನು ಉಂಟು ಮಾಡಿ, ಹದವಾಗಿ ಬೆಂದ ಮೇಲೆ ಉರಿ ತಗ್ಗಿಸಿ, ಪಾತ್ರೆಗಳನ್ನು ಆರ ಬಿಡುತ್ತಾರೆ. ಆನಂತರ ಅವುಗಳಿಗೆ ಮೆರುಗು ಕೊಡುತ್ತಾರೆ. ನಿರಂತರವಾಗಿ ಪಿಂಗಾಣಿ ತಯಾರು ಮಾಡದೇ ಇರುವ ಕಾರ್ಖಾನೆಗಳಿಗೆ ಈ ಆವರ್ತನೀಯ ಆವಿಗೆ ವಿಧಾನ ಉತ್ತಮ.

ಸುರಂಗ ಆವಿಗೆಗಳನ್ನು ನೇರವಾಗಿ ಅಥವಾ ವೃತ್ತಾಕಾರವಾಗಿ ನಿರ್ಮಿಸುತ್ತಾರೆ. ಒಳಮೈಯನ್ನು ಉಷ್ಣಾವಾಹಕ ಇಟ್ಟಿಗೆಗಳಿಂದ ಕಟ್ಟುತ್ತಾರೆ. ಸುರಂಗದ ವಿವಿಧ ವಲಯಗಳಲ್ಲಿ ಸಂಚರಿಸಲನುಕೂಲವಾಗುವಂತೆ ಯಂತ್ರನಿಯಂತ್ರಿತ ಸುರಂಗವಾಹಕ ಅಥವಾ ಚಲಿಸುವ ತಟ್ಟೆಗಳನ್ನು ಅಣಿಗೊಳಿಸುತ್ತಾರೆ. ಈ ಸುರಂಗವಾಹಕಗಳ ಮೇಲೆ ಹಸಿ ಪಿಂಗಾಣಿ ಪಾತ್ರೆಗಳನ್ನು ಕ್ರಮವಾಗಿ ಜೋಡಿಸಿಟ್ಟು ಸಂಚಲನೆಗೊಳಿಸುತ್ತಾರೆ. ಸುರಂಗ ಆವಿಗೆಯ ವಿವಿಧ ವಲಯಗಳಲ್ಲಿ ಬೇರೆ ಬೇರೆ ಮಟ್ಟದ ಉಷ್ಣತೆ ಇರುತ್ತದೆ.

ಸುರಂಗ ಆವಿಗೆಗಳ ಪಾತ್ರ ಮತ್ತು ವ್ಯಾಪ್ತಿ ಒಮ್ಮೆಗೆ ಎಷ್ಟು ಪಾತ್ರೆಗಳು ಬೇಯಬೇಕಾಗಿರುತ್ತದೋ ಅಷ್ಟು ದೊಡ್ಡದಾಗಿರುತ್ತವೆ. ಸುರಂಗ ವಾಹಕಗಳನ್ನು ಜೋಡಿಸಿರುವ ಸುರಂಗ ಆವಿಗೆಗಳ ಪ್ರವೇಶದ್ವಾರ 2ಮೀ ಅಗಲವಾಗಿಯೂ $2\frac{1}{2}$ ಮೀ ಎತ್ತರವಾಗಿಯೂ ಇರುತ್ತವೆ. ಇವುಗಳ ಸಾಮಾನ್ಯ ಉದ್ದ 275'.

ಆವಿಗೆಗಳ ಇಂಧನವಾಗಿ ಕಲ್ಲಿದ್ದಲು ಅಥವಾ ಸೌದೆಯನ್ನು ಬಳಸುತ್ತಿದ್ದಾರಾದರೂ ಎಣ್ಣೆ ಅಥವಾ ಎಣ್ಣೆ ಅನಿಲಗಳ ಬಳಕೆಯೇ ಹೆಚ್ಚು. ಕಲಾತ್ಮಕ ಅಲಂಕರಣ ಪಿಂಗಾಣಿ ತಯಾರಿಕೆಯಲ್ಲಿ ವಿದ್ಯುತ್ ಒಲೆಗಳೇ ಹೆಚ್ಚು ಬಳಕೆಯಲ್ಲಿವೆ.

ಮೆರಗು ಕೊಡುವಿಕೆ : ಚೀನೀ ಪಿಂಗಾಣಿ ಪಾತ್ರೆಗಳಿಗೆ ಗಾಜಿನಂಥ ಹೊಳಪು ಕೊಡುವುದನ್ನು ಮೆರಗು ಕೊಡುವಿಕೆ ಎನ್ನುತ್ತಾರೆ. ಮೆರುಗು ಗಾಜಿನ ಲಕ್ಷಣಗಳನ್ನೇ ಹೊಂದಿರುತ್ತದೆ. ಹೊಳಪುಳ್ಳ ಬಣ್ಣವಿರುವ ಅಥವಾ ಇಲ್ಲದಿರುವ, ಪಾರದರ್ಶಕ ಹಾಗೂ ಅಪಾರದರ್ಶಕ ಅಥವಾ ಹಾಲುಬಿಳಿ ಮೆರುಗುಗಳನ್ನು ಕೊಡಬಹುದು.

ಪಿಂಗಾಣಿ ಮೆರಗನ್ನು ಗಾಜಿನ ಮೂಲಧಾತುವಾದ ಸಿಲಿಕದಿಂದಲೇ ತಯಾರಿಸುತ್ತಾರೆ. ಸಿಲಿಕವನ್ನು ಸೋಡ ಸೀಸ, ಸುಣ್ಣ ಅಥವಾ ಬೋರ್‍ಯಾಕ್ಸ್ ಅಥವಾ ಇವುಗಳ ಸಂಮಿಶ್ರಣ ದೊಂದಿಗೆ ಬೆರೆಸುತ್ತಾರೆ. ಸಿಲಿಕವನ್ನು ಕಾಯಿಸಿದರೆ ಗಾಜಾಗುತ್ತದೆ. ಇದನ್ನೇ ಮೆರುಗಾಗಿ ಉಪಯೋಗಿಸುವುದಿಲ್ಲ. ಸೋಡ ಅಥವಾ ಇತರ ಲೋಹ ಆಕ್ಸೈಡುಗಳು ಸಿಲಿಕದೊಂದಿಗೆ ಸೇರಿ ಅಭಿವಾಹಕಗಳಾಗಿ ಕೆಲಸ ಮಾಡಿ, ತಾವು ಕರಗುವ ಕಡಿಮೆ ಉಷ್ಣತೆಯಲ್ಲೇ ಸಿಲಿಕವನ್ನು ಕರಗುವಂತೆ ಮಾಡಿ ಮೆರುಗು ದ್ರವ್ಯವಾಗುತ್ತದೆ. ಈ ದ್ರವ್ಯವನ್ನು ಮೆರುಗುಲೇಪವಾಗಿ ಬಳಸಬಹುದು. ಇವುಗಳ ಜೊತೆಗೆ ಅಗತ್ಯವಾದಷ್ಟು ಕಡಿಮೆ ಪ್ರಮಾಣದಲ್ಲಿ ಅಲ್ಯುಮಿನಿಯಮ್ಮನ್ನೂ ಈ ಮೆರಗು ದ್ರವ್ಯದೊಂದಿಗೆ ಬೆರೆಸಬೇಕು. ಅಲ್ಯೂಮಿನಿಯಮ್ ಸೇರುವುದರಿಂದ ಪಿಂಗಾಣಿಯ ಹೊರಮೈ ದ್ರವಬಿಂದುವೂ ಜಾರಿ ಬೀಳುವಷ್ಟು ನುಣುಪಾಗುತ್ತದೆ.

ಇವಿಷ್ಟೇ ಅಲ್ಲದೆ ಮೆರುಗು ದ್ರವ್ಯಕ್ಕೆ ಸತು, ಬೇರಿಯಮ್ ಮತ್ತು ಮೆಗ್ನೀಸಿಯಮ್ ಆಕ್ಸೈಡುಗಳನ್ನೂ ಸೇರಿಸುತ್ತಾರೆ. ಮಾರುಕಟ್ಟೆಯಲ್ಲಿ ದೊರೆಯುವ ಫೆಲ್‌ಸ್ಪಾರ್‌ನಲ್ಲಿ (ಮೆರಗು ತಯಾರಿಕೆಯ ಪ್ರಮುಖ ಘಟಕಾಂಶ) ಸೋಡ, ಪೋಟ್ಯಾಷ್, ಅಲ್ಯೂಮಿನಿಯಮ್ ಮತ್ತು ಸಿಲಿಕಗಳು ಸೇರಿರುತ್ತವೆ.

ಈ ಮೆರುಗಿಗೆ ಹೆಸರುಗಳನ್ನು ಕೊಡುವುದೂ ಉಂಟು. ಮೆರಗು ದ್ರವ್ಯಕ್ಕೆ ಸೇರಿರುವ ಪ್ರಧಾನ ಘಟಕಾಂಶಗಳ ಹೆಸರೇ ಆ ಮೆರುಗಿಗೆ ಬಂದಿರುತ್ತದೆ. ಸೋಡ ಸೇರಿದಾಗ ಸೋಡ ಮೆರಗೆಂದೂ, ಲೆಡ್ ಆಕ್ಸೈಡ್ ಸೇರಿದಾಗ ಸೀಸದ ಮೆರುಗೆಂದೂ ಕರೆಯುತ್ತಾರೆ.

ಚೀನೀ ಪಿಂಗಾಣಿಗಳಿಗೆ ಲೆಡ್ ಆಕ್ಸೈಡ್, ಬೊರಾನ್ ಆಕ್ಸೈಡ್, ಸಿಲಿಕ ಮತ್ತು ಅಲ್ಯೂಮಿನಿಯಂಗಳಿಂದ ಮಿಶ್ರಣಗೊಂಡ ಮೆರುಗನ್ನೇ ಬಹುಮಟ್ಟಿಗೆ ಕೊಡುತ್ತಾರೆ.

ಪಿಂಗಾಣಿ ಮೆರುಗಿನ ಘಟಕಾಂಶಗಳನ್ನೆಲ್ಲ ಸೇರಿಸಿ ಕುಟ್ಟಿ ಪುಡಿ ಮಾಡುತ್ತಾರೆ. ಆನಂತರ ಇದನ್ನು ನೀರಿನೊಂದಿಗೆ ಸೇರಿಸಿ ಚಕಮಕಿ ಕಲ್ಲುಗಳನ್ನು ಹೊಂದಿಸಿರುವ ಬಾಲ್‌ಮಿಲ್ಲುಗಳಿಗೆ ಹಾಕಿ ಅರೆಯುತ್ತಾರೆ.

ಮೆರುಗನ್ನು ಅರೆಯುವ ಮುಂಚೆಯೂ ಲೇಪನ ಮಾಡುವ ಮುಂಚೆಯೂ ನೀರಿನೊಂದಿಗೆ ಬೆರೆಸಬೇಕಾಗುತ್ತದೆ. ಮೆರುಗಿಗೆ ಸೇರುವ ಘಟಕಾಂಶಗಳು ನೀರಿನಲ್ಲಿ ಕರಗದಂಥವುಗಳಾಗಿರಬೇಕು. ಕರಗುವಾಗ ವಿಷಾನಿಲ ಉತ್ಪತ್ತಿ ಮಾಡದಂಥವುಗಳಾಗಿರಬೇಕು. ಹೀಗೆ ನೀರಿನಲ್ಲಿ ಕರಗದ ಘಟಕಾಂಶಗಳನ್ನು ಹೊಂದಿದ ಮೆರುಗನ್ನು ಕಚ್ಚಾಮೆರುಗೆಂದು ಕರೆಯುತ್ತಾರೆ. ಇದಕ್ಕೆ ಬೇರೆ ಪೂರಕ ಲೋಹಗಳನ್ನು ಸೇರಿಸಿ, ಸಿದ್ಧಪಡಿಸಿಯಾದ ಮೇಲೆ ಬೇರಾವ ಸಂಸ್ಕರಣವೂ ಇಲ್ಲದೆ ನೇರವಾಗಿ ಪಾತ್ರೆಗಳಿಗೆ ಲೇಪಿಸಬಹುದು.

ನೀರಿನಲ್ಲಿ ಕರಗುವಂಥ ಘಟಕಾಂಶಗಳನ್ನು ನಿಯಂತ್ರಿತ ವಾತಾವರಣದಲ್ಲಿ ಸಿಲಿಕ ಮತ್ತಿತರ ಅಗತ್ಯ ಘಟಕ ಲೋಹಗಳೊಂದಿಗೆ ಕರಗಿಸಿ ಗಾಜು ಮಾಡುತ್ತಾರೆ. ಇದನ್ನು ಫ್ರಿಟ್ ಅಥವಾ ಕಾಚು ಎನ್ನುತ್ತಾರೆ. ಇದನ್ನು ಪುಡಿಯಾಗುವಂತೆ ಅರೆದು ನೀರಿನಲ್ಲಿ ಕಲಸಿ ಮೆರಗು ದ್ರವ್ಯವಾಗಿಸಿ, ಲೇಪನ ಮಾಡಬಹುದು. ಇದೇ ಕಾಚು ಮೆರಗು. ಬಹುಪಾಲು ಚೀನೀ ಪಿಂಗಾಣಿಗಳಿಗೆ ಈ ಮೆರಗನ್ನು ಕೊಡುತ್ತಾರೆ.

ಮೆರುಗು ಸಿದ್ಧವಾದ ಮೇಲೆ ಅದನ್ನು ಪಿಂಗಾಣಿಗೆ ಲೇಪಿಸುವಲ್ಲಿ ಮೂರು ಪ್ರಧಾನ ವಿಧಾನಗಳಿವೆ. : 1. ಅದ್ದುವಿಕೆ: ಮೆರುಗು ದ್ರವ್ಯದೊಳಗೆ ಪಿಂಗಾಣಿ ಪಾತ್ರೆಯನ್ನು ಅನಾಮತ್ತಾಗಿ ಅದ್ದುವುದು. 2. ಚಿಮುಕಿಸುವಿಕೆ : ತಿರುಗು ಮೇಜಿನ ಮೇಲೆ ಪಿಂಗಾಣಿ ಪಾತ್ರೆಯನ್ನು ಇಟ್ಟು ಎರಚು ಬಂದೂಕದಿಂದ (ಸ್ಪ್ರೇ ಗನ್) ದ್ರವರೂಪಿ ಮೆರುಗನ್ನು ಸಮಾನವಾಗಿ ಚಿಮುಕಿಸುತ್ತಾರೆ. ಬಂದೂಕದಿಂದ ಮೆರಗನ್ನು ಬಯಸಿದಷ್ಟು ಮಂದವಾಗಿ ಅಥವಾ ತೆಳುವಾಗಿ ಕೊಡಲು ಅನುಕೂಲವಾಗುವದರಿಂದ ಈ ವಿಧಾನವೇ ಹೆಚ್ಚು ಬಳಕೆಯಲ್ಲಿದೆ. ಒಂದಕ್ಕಿಂತ ಹೆಚ್ಚು ಬಣ್ಣ ನೀಡುವಾಗಲೂ ಕೊರೆದ ಅಚ್ಚು ಕಾಗದವನ್ನು ಅಂಟಿಸಿದ ಪಿಂಗಾಣಿಗಳಿಗೂ ಈ ಬಂದೂಕದಿಂದಲೇ ಬಣ್ಣವನ್ನು ಚಿಮುಕಿಸುತ್ತಾರೆ. 3. ಬಣ್ಣ ಹಾಕುವಿಕೆ : ಕೈಗಳಿಂದಲೇ ಬಣ್ಣ ಹಾಕಬೇಕಾಗುತ್ತದೆ. ಬಂದೂಕಗಳಲ್ಲಿ ಚಿಮುಕಿಸಿದಾಗಲೂ ಬಣ್ಣ ಬೀಳದಂಥ ಭಾಗಗಳಿಗೆ ಕುಂಚವನ್ನು ಉಪಯೋಗಿಸಿಕೊಂಡು ಕೈಗಳಿಂದಲೇ ಬಣ್ಣ ಲೇಪನ ಮಾಡುತ್ತಾರೆ. ಕಲಾತ್ಮಕವಾದ ಒಡಲು, ಕಂಠ, ತಳ ರಚನೆ ಮಾಡುವಲ್ಲಿ ಇದು ಉತ್ತಮ ವಿಧಾನ.

ಮೆರುಗುಲೇಪನ ಮಾಡಿ ಆವರ್ತನೀಯ ಅಥವಾ ಸುರಂಗ ಅವಿಗೆಗಳಲ್ಲಿ ಪಿಂಗಾಣಿಗಳನ್ನು ಕ್ರಮವಾಗಿ ಜೋಡಿಸಿ ಇಡುತ್ತಾರೆ. ಪಿಂಗಾಣಿಯನ್ನು ಕಾಯಿಸಿದಾಗ ಹೊರಮೈಗೆ ಲೇಪಿಸಿರುವ ಮೆರುಗು ದ್ರವ್ಯ ಕರಗಿ, ಗಾಜಿನಂಥ ಹೊಳಪುಬಂದು ಪಿಂಗಾಣಿಯ ಹೊರಮೈಗೆ ಅಭೇದ್ಯವಾದ ಕವಚವಾಗಿ ಬೆಸದುಕೊಳ್ಳುತ್ತದೆ. ಆವಿಗೆಗಳಿಗೆ ಜೋಡಿಸುವಾಗ ಪಿಂಗಾಣಿಗಳು ಒಂದಕ್ಕೊಂದು ತಗುಲಿ, ಕರಗಿದ ಮೆರುಗ ಪರಸ್ಪರ ಅಂಟಿಕೊಳ್ಳದಂತೆ ಎಚ್ಚರವಹಿಸಬೇಕು. ಕಾವು ಜೇಡಿನಿಂದ ಮಾಡಿರುವ ಮುಟ್ಟುಗೋಲು, ಪಿನ್ನುಗಳು, ಚೋದಕಗಳು, ಸುತ್ತುಕಟ್ಟು, ಪೀಠ ಮುಂತಾದ ಆವಿಗೆ ಸಲಕರಣೆಗಳನ್ನು ಉಪಯೋಗಿಸಿ ಕೊಂಡು ಪಿಂಗಾಣಿಗಳನ್ನು ಆವಿಗೆಯಲ್ಲಿ ಜೋಡಿಸುತ್ತಾರೆ.

ಮೆರುಗು ಕೊಟ್ಟ ಪಿಂಗಾಣಿಗೆ ಅಲಂಕರಣವನ್ನು ಮೆರುಗಿನ ಹೊರಗೆ ಅಥವಾ ಮೆರುಗು ಕವಚದೊಳಗೆ ಮಾಡುತ್ತಾರೆ.

ಒಳಭಾಗದಲ್ಲಿ ಮಾಡಿದ ಅಲಂಕರಣ ಹೆಚ್ಚು ಬಾಳಿಕೆ ಬರುತ್ತದೆ. ಬಣ್ಣದ ಅಲಂಕರಣವೆಲ್ಲ ಮೆರುಗು ಕವಚದಿಂದ ರಕ್ಷಿತವಾಗಿರುವುದರಿಂದ ಮಂಕಾಗುವುದಿಲ್ಲ. ಮೆರಗು ಕೊಡಲು ಕೊಡುವ ಉಷ್ಣತೆಯ ಉನ್ನತ ಮಟ್ಟದಲ್ಲೇ ಅಲಂಕರಣವನ್ನೂ ಬೆಸೆಯ ಬೇಕಾಗಿರುವುದರಿಂದ ಹೆಚ್ಚು ಬಣ್ಣಗಳನ್ನು ಬಳಸಲಾಗುವುದಿಲ್ಲ. ಕೆಲವು ಬಣ್ಣಗಳು ಅಧಿಕ ಉಷ್ಣತೆಯಲ್ಲಿ ಕರಗಿ ಕಾಣೆಯಾಗುತ್ತವೆ. ಒಳ ಅಲಂಕರಣಕ್ಕೆ ಸಾಮಾನ್ಯವಾಗಿ ಕಬ್ಬಿಣ, ಕೋಬಾಲ್ಟ್ ಅಥವಾ ತಾಮ್ರದ ಆಕ್ಸೈಡ್‌ಗಳನ್ನು ಬೆಸುಗೆ ದ್ರವ್ಯ ಮತ್ತು ಉಷ್ಣವಾಹಕ ಫ್ಲಿಂಟ್ ಶಿಲೆಗಳೊಂದಿಗೆ ಸೇರಿಸಿ ಬಣ್ಣ ಮೂಡಿಸುತ್ತಾರೆ. ಹೀಗೆ ಮಾಡುವುದರಿಂದ ಒಳಗೆ ಮೂಡಿ ಬರುವ ಬಣ್ಣಗಳು ಕರಗಿ ಹರಿಯುವುದೂ ಇಲ್ಲ. ಮಬ್ಬುಗೊಳ್ಳುವುದೂ ಇಲ್ಲ.

ಮೆರುಗು ಕೊಟ್ಟು ಆರಿದ ಮೇಲೆ ಹೊರಗಿನ ಅಲಂಕರಣ ಮಾಡುತ್ತಾರೆ. ಅಲಂಕರಣಕ್ಕೆ ಎನಾಮೆಲ್ ಅಥವಾ ಗಾಜುಲೇಪನ ಬಣ್ಣಗಳನ್ನು ಬಳಸುತ್ತಾರೆ. ಗಾಜುಲೇಪ ಕೂಡ ಒಂದು ರೀತಿಯ ಮೆರುಗೇ. ಇದರಲ್ಲಿ ಮೆರುಗಿನ ಘಟಕಾಂಶಗಳೇ ಇರುತ್ತವೆ. ಇದು ಅಪೇಕ್ಷಿತ ಉಷ್ಣತೆಯಲ್ಲಿ, ಅಂದರೆ ಮೆರುಗು ಮೃದುವಾಗುವ ಉಷ್ಣತೆಯಲ್ಲಿ ಕರಗಿ, ಮೆರುಗು ಕವಚದಲ್ಲಿ ಸೇರಿಕೊಳ್ಳುತ್ತದೆ. ಒಮ್ಮೊಮ್ಮೆ ಮೆರುಗಿನ ಒಳಕ್ಕೂ ಇಳಿಯುವುದುಂಟು. ಈ ಅಲಂಕರಣಕ್ಕೆ ಸಾಮಾನ್ಯವಾಗಿ ಮಬ್ಬಾದ ಹಾಲುಬಣ್ಣ ಅಥವಾ ಅರೆಮಬ್ಬು ಬಣ್ಣಗಳನ್ನೂ ಸ್ವಲ್ಪ ಜೇಡಿ, ಗಾಜು (ಫ್ರಿಟ್), ಟಿನ್ ಆಕ್ಸೈಡ್, ಒಂದು ಅಥವಾ ಹೆಚ್ಚು ಬಣ್ಣಗಳನ್ನು ತರುವ ಕೋಬಾಲ್ಟ್, ಕಬ್ಬಿಣ, ತಾಮ್ರ, ಕ್ರೋಮ್, ನಿಕಲ್ ಮತ್ತು ಮ್ಯಾಂಗನೀಸ್ ಆಕ್ಸೈಡುಗಳನ್ನು ಸೇರಿಸಿ, ಅರೆದು, ಪಾತ್ರೆಗಳಿಗೆ ಲೇಪಿಸಿ, ಆವಿಗೆಯಲ್ಲಿ ಬೇಯಿಸಿ ಬೇರೆ ಬೇರೆ ಬಣ್ಣಗಳನ್ನೂ ಮೂಡಿಸುತ್ತಾರೆ.

ಇಂದು ವ್ಯಾಪಕವಾಗಿ ಮಾರುಕಟ್ಟೆಯಲ್ಲಿ ವ್ಯಾಪಾರವಾಗುತ್ತಿರುವ ಅಲಂಕರಣ ಪಿಂಗಾಣಿಗಳನ್ನು ವರ್ಗಾವಣೆ ಅಲಂಕರಣ ಪದ್ಧತಿಯಿಂದಲೇ (ಟ್ರಾನ್ಸ್‌ಫರ್ ಪ್ರಿಂಟಿಂಗ್) ತಯಾರಿಸುತ್ತಾರೆ. ಇದನ್ನು ಡಿಕಲ್‌ಕಮೇನಿಯ ವಿಧಾನವೆಂತಲೂ ಕರೆಯುವುದುಂಟು. ವಿಶೇಷ ರೀತಿಯ ಕಾಗದದ ಮೇಲೆ ಕಲಾತ್ಮಕ ನಕ್ಷೆ ಮೂಡಿಸಿ ಅದರ ಮೇಲೆ ಮೆತುಪಾಕವನ್ನು ಲೇಪಿಸಿ ಅದನ್ನು ನಕ್ಷೆಗನುಗುಣವಾಗಿ ಕೊರೆದು, ಚಕ್ರದ ಮೇಲೆ ಎನಾಮಲ್ ಬಣ್ಣಗಳನ್ನು ತುಂಬುತ್ತಾರೆ. ಬೆಂದು, ಮೆರುಗು ಕೊಟ್ಟು ಸಿದ್ಧವಾದ ಪಿಂಗಾಣಿಗಳ ಒಳ ಅಥವಾ ಹೊರ ಮೈಗೆ ವಾರ್ನಿಷ್ ಅಥವಾ ಗಟ್ಟಿ ಅಂಟನ್ನು ಸವರುತ್ತಾರೆ. ಇದರ ಮೇಲೆ ಬಣ್ಣದಿಂದ ತುಂಬಿದ ಡಿಕಲ್ ಕಮೇನಿಯ ಕೊರೆದ ಕಾಗದದ ಬಣ್ಣ ಹಾಕಿರುವ ಭಾಗವನ್ನು ಪಾತ್ರೆಗೆ ಎದುರಾಗಿ ಅಂಟಿಸುತ್ತಾರೆ. ಒರಟು ಉಣ್ಣೆ ಅಥವಾ ಬಿರುಸಾದ ರಬ್ಬರ್ ಚೌಕಗಳಿಂದ ನಕ್ಷೆ ಎತ್ತುವ ಕಾಗದದ ಮೇಲೆ ಒತ್ತಿ ಉಜ್ಜುತ್ತಾರೆ. ಹೀಗೆ ಉಜ್ಜಿದಾಗ ನಕ್ಷೆ ಎತ್ತುವ ಕಾಗದದಲ್ಲಿ ತುಂಬಿದ್ದ ಬಣ್ಣಗಳು ಪಾತ್ರೆಯ ವಾರ್ನಿಷ್ ಮೇಲೆ ಮೂಡುತ್ತವೆ. ಅನಂತರ ನೀರಿನಲ್ಲಿ ಅದ್ದಿ ನಕ್ಷಾ ಕಾಗದವನ್ನು ತೆಗೆಯುತ್ತಾರೆ. ಈ ಪಾತ್ರೆಯನ್ನು ಆವಿಗೆಯಲ್ಲಿ ಇಟ್ಟು 850₀C ಯಷ್ಟು ಉಷ್ಣತೆ ಒದಗಿಸುತ್ತಾರೆ. ಈ ಉಷ್ಣತೆಯಲ್ಲಿ ವಾರ್ನಿಷ್ ಕರಗಿಹೋಗಿ ಎನಾಮಲ್ ಬಣ್ಣಗಳು ಮೆರುಗಿನ ಹೊರಕವಚದ ಮೇಲೆ ಬೆಸೆದುಕೊಳ್ಳುತ್ತವೆ. ಈ ಡಿಕಲ್ ಅಥವಾ ವರ್ಗಾವಣೆ ನಕ್ಷಾ ಕಾಗದವನ್ನು ಮೆರಗುಕವಚದ ಒಳಗಿನ ಅಲಂಕರಣಕ್ರಿಯೆಗೆ ಉಪಯೋಗಿಸುವಾಗ ಅದಕ್ಕೆ ಸೂಕ್ತವಾದ ಬಣ್ಣಗಳನ್ನೇ ಬಳಸಬೇಕು.

ಸೂಕ್ಷ್ಮದರ್ಶಕದಲ್ಲಿ ಪಿಂಗಾಣಿ ಅಲಂಕರಣವನ್ನು ಪರಿಶೀಲಿಸಿದರೆ ಅದು ಕೈಗಳಿಂದ ಮಾಡಿದುದೇ ಅಥವಾ ವರ್ಗಾವಣೆ ಅಲಂಕರಣವಿಧಾನ ರೀತಿ ಮಾಡಿದುದೇ ಎಂಬುದನ್ನು ಸುಲಭವಾಗಿ ಗುರುತಿಸಬಹುದು. ಕೈಗಳಿಂದ ಬಣ್ಣ ಹಾಕಿದ್ದುದಾದರೆ ಕುಂಚದ ಗೆರೆಗಳು ಕಂಡುಬರುತ್ತವೆ. ವರ್ಗಾವಣೆ ಅಲಂಕರಣದಲ್ಲಿ ಒಮ್ಮೊಮ್ಮೆ ಅಂಚು ಕಟ್ಟುವಾಗ ಒಂದರ ಮೇಲೊಂದು ಬಿದ್ದಿರುತ್ತದೆ, ಅಥವಾ ನಕ್ಷಾ ಕಾಗದವನ್ನು ಬೇರೆ ಬೇರೆ ಆಕಾರದ ಪಾತ್ರೆಗಳಿಗೆ ಉಪಯೋಗಿಸುವಾಗ ಹೆಚ್ಚಾದರೆ ಮಡಿಸಿರುತ್ತಾರೆ. ಈ ಮಡಿಸಿದ ಗುರುತು ಪಾತ್ರೆಗಳ ಮೇಲೆ ಸೂಕ್ಷ್ಮವಾಗಿ ಬಿದ್ದಿರುತ್ತದೆ.

ಪಿಂಗಾಣಿ ಪಾತ್ರೆಗಳಿಗೆ ಅಲಂಕರಣವನ್ನು ಕೈಗಳಿಂದ ಮೆರುಗು ಕವಚದ ಮೇಲೂ ಒಳಗೂ ಮಾಡಲು ಸಾಧ್ಯ. ಮೇಲೆ ಹೇಳಿದ ಎನಾಮಲ್ ಬಣ್ಣಗಳನ್ನೇ ಇಲ್ಲೂ ಉಪಯೋಗಿಸಬಹುದು. ಬಣ್ಣಗಳ ಮಿಶ್ರಣವನ್ನು ಕುಟ್ಟಿ, ಪುಡಿ ಮಾಡಿ, ಟರ್ಪೆಂಟೈನ್, ಲಿನ್‌ಸೀಡ್ ಹಾಗೂ ಇತರ ಎಣ್ಣೆಗಳೊಂದಿಗೆ ಬೆರೆಸಿ ಕುಂಚದಿಂದ, ಪಾತ್ರೆಗಳ ಮೇಲೆ ಅಲಂಕಾರ ಮಾಡಬೇಕು. ಒಂದೇ ಪಾತ್ರೆಗೆ ವರ್ಗಾವಣೆ ನಕ್ಷಾ ಕಾಗದ ಮುದ್ರೆ ಮುದ್ರಿಸಿಯೂ ಕೈಗಳಿಂದಲೂ ಬಣ್ಣ ರಚನೆ ಮಾಡುವುದು ಉಂಟು. ಮೊದಲು ನಕ್ಷಾ ಕಾಗದದಿಂದ ಚಿತ್ರ ಬಿಡಿಸಿ, ಎಲೆ, ಹೂ, ಬಟ್ಟೆ ಅಥವಾ ನೀರು ಇವುಗಳನ್ನು ಕೈಗಳಿಂದ ಬಣ್ಣ ತುಂಬಿ ಅಲಂಕರಣ ಮಾಡುತ್ತಾರೆ.

ಸ್ವರ್ಣಲೇಪ: ಎನಾಮೆಲ್ ಬಣ್ಣಗಳಿಗಿಂತ ಕಡಿಮೆ ಉಷ್ಣತೆಯಲ್ಲಿ ಸ್ವರ್ಣಲೇಪನ ಮಾಡುತ್ತಾರೆ. ಉಪಯೋಗಿಸುವ ಚಿನ್ನದ ಪ್ರಮಾಣದಲ್ಲಿ ಮೇಲೆ ಸ್ವರ್ಣ ಲೇಪನದ ಹೊಳಪು ವ್ಯತ್ಯಾಸವಾಗುತ್ತದೆ. ಶುದ್ಧ ಚಿನ್ನವನ್ನು ಹೆಚ್ಚು ಪ್ರಮಾಣದಲ್ಲಿ ಬೆರೆಸಿ, ಬೇಯಿಸಿ ಆದ ಮೇಲೆ ಉಜ್ಜಿ ಮೆರುಗು ಕೊಡುತ್ತಾರೆ. ಚಿನ್ನವನ್ನು ಗೌಣವಾಗಿ ಬೆರೆಸಿ ಅಲಂಕರಣ ಮಾಡಿದ ಪಾತ್ರೆಗಳಲ್ಲಿ ಚಿನ್ನದ ಜಾಜ್ವಲ್ಯ ಹೊಳಪು ಹೆಚ್ಚಿರುತ್ತದೆಯೇ ಹೊರತು ಚಿನ್ನಾಂಶವಲ್ಲ. ಸ್ವರ್ಣಲೇಪ ತುಂಬಾ ಕಡಿಮೆ ಉಷ್ಣತೆಯಲ್ಲಿ ಕರಗುವುದರಿಂದ ಸ್ವರ್ಣಲೇಪನದ ಹೊಳಪು ಎನಾಮೆಲ್ ಬಣ್ಣಗಳಂತೆ ಹೆಚ್ಚು ಕಾಲ ಬಾಳದೆ ಬಹುಭಾಗ ಮಂಕಾಗಿ ಹೋಗುತ್ತವೆ.

ಕಾರ್ಖಾನೆ ಗುರುತು : ಪಿಂಗಾಣಿ ಪಾತ್ರೆಗಳ ತಳಭಾಗದಲ್ಲಿ ತಯಾರಾದ ಕಾರ್ಖಾನೆಯ ಹೆಸರು, ದೇಶಗಳನ್ನು ಸೂಚಿಸುವ, ಕೂಡಕ್ಷರ (ಮಾನೋಗ್ರಾಮ್), ಮುದ್ರೆ ಅಥವಾ ವ್ಯಾಪಾರಿ ಚಿಹ್ನೆಗಳನ್ನು ಅಚ್ಚು ಮಾಡುತ್ತಾರೆ. ಇವನ್ನು ಮೆರುಗಿನ ಮೇಲೂ ಒಳಗೂ ಹಾಕಬಹುದು: ಕೈಗಳಿಂದ ರಚಿಸಲೂ ಬಹುದು.; ಅಚ್ಚು ಮಾಡಲೂ ಬಹುದು; ಕೆಲವು ಕಾರ್ಖಾನೆಗಳಲ್ಲಿ ಹಸಿ ಪಿಂಗಾಣಿಗೇ ಈ ಮುದ್ರೆ ಅಚ್ಚು ಮಾಡುತ್ತಾರೆ. ಚಿನ್ನ, ಬೆಳ್ಳಿಗಳಿಗೆ ಅವುಗಳ ಗುಣಮಟ್ಟವನ್ನು ತಿಳಿಸುವ ಮುದ್ರೆಯಿರುವಂತೆ, ಪಿಂಗಾಣಿಗಳಿಗೂ ಈ ಮುದ್ರೆ ಮುಖ್ಯ. ಕೆಲವು ಪಿಂಗಾಣಿಗಳಲ್ಲಿ ಬಿಡಿಬಿಡಿ ಅಕ್ಷರಗಳೂ ಸಂಖ್ಯೆಗಳೂ ಇರುತ್ತವೆ. ಇವು ಕೆಲಸಗಾರನ ಸಂಜ್ಞೆಯನ್ನೂ ತಯಾರಿಸಿದ ದಿನವನ್ನೂ ವಿಭಾಗವನ್ನೂ ಸೂಚಿಸುತ್ತವೆ. ಕಾರ್ಯಾಗಾರದ ಮೇಲ್ವಿಚಾರಕರು ಮಾತ್ರ ಇವುಗಳಿಗೆ ವಿವರಣೆ ನೀಡಬಲ್ಲರು.

ಪಿಂಗಾಣಿಗಳನ್ನು ಭಾರತವೂ ಸೇರಿದಂತೆ ಪ್ರಪಂಚದ ಹಲವಾರು ರಾಷ್ಟ್ರಗಳು ತಯಾರಿಸುತ್ತವೆ. ಸಿಲಿಕೇಟ್ ಉದ್ಯಮದ ಒಂದು ಅಂಗವಾದ ಇದರಲ್ಲಿ ತಯಾರಾಗುವ ವಸ್ತುಗಳನ್ನು ದಿನಬಳಕೆಗೂ ವಿದ್ಯುದ್ರೋಧಕ್ಕೂ ಬಳಸುವುದಿದೆ. (ಜೆ.ಎಸ್.ಪಿ.ಎಂ.)

**ಚೀನೀ ಜಾನಪದ :** ಚೀನದಲ್ಲಿ ಜಾನಪದ ಒಂದು ಶಕ್ತಿಯುತವಾದ ಹಾಗೂ ಜೀವಂತವಾದ ಸಾಮಾಜಿಕ ಶಕ್ತಿಯಾಗಿದೆ. ಜಾನಪದ ಸಂಶೋಧಕನಿಗೆ ಚೀನಾದಲ್ಲಿ ಪರಂಪರಾಗತ ಪದ್ಧತಿ, ನಂಬಿಕೆ ಹಾಗೂ ಆಚರಣೆಗಳ ಬಗ್ಗೆ ಪ್ರಾಚೀನ ಕಾಲದಿಂದಲೂ ಉಳಿದು ಬಂದಿರುವ ಬಹಳಷ್ಟು ಸಾಮಗ್ರಿ ಭೌಗೋಳಿಕ ವ್ಯತ್ಯಯಗಳೊಡನೆ ಲಿಖಿತ ದಾಖಲೆಗಳಲ್ಲೂ ಹೇರಳವಾಗಿ ಸಿಗುತ್ತದೆ.

ಚೀನೀ ಸಾಂಪ್ರದಾಯಿಕ ನೃತ್ಯ ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿದೆ

ಪ್ರ.ಶ.ಪೂ. 5ನೆಯ ಶತಮಾನಕ್ಕೆ ಹಿಂದೆ ಚೀನೀ ಜಾನಪದ ಶ್ರೀಮಂತರ ಜ್ಞಾನ ಮತ್ತು ಜನಸಾಮಾನ್ಯರ ಜ್ಞಾನ ಎಂಬುದಾಗಿ ವರ್ಗೀಕೃತವಾಗಿತ್ತು. ದಾರ್ಶನಿಕ ಪಂಥಗಳ ಉಗಮ, ವಿವಿಧ ಧಾರ್ಮಿಕ ಪದ್ಧತಿಗಳ ಆಚರಣೆ ಹಾಗೂ ರಾಜಕೀಯ ಪರಿಸ್ಥಿತಿ – ಇವೆಲ್ಲವುಗಳಿಂದ ಚೀನೀ ಜಾನಪದ ಅಲ್ಲಿಂದೀಚೆಗೆ ಬಹುಮಟ್ಟಿಗೆ ಮಾರ್ಪಟ್ಟಿದೆ. ಆದರೆ ಅದರ ಮುಖ್ಯ ರೂಪರೇಖೆಗಳೆಲ್ಲ ಪ್ರಾಚ್ಯ ವಿಷ್ಯದ ನಂಬಿಕೆಗಳ ಮತ್ತು ಆಚರಣೆಗಳ ಆಧಾರವನ್ನೇ ಹೊಂದಿದೆ. ಈ ಲಕ್ಷಣವನ್ನು ಚೀನಾ ಈವರೆಗೂ ರಕ್ಷಿಸಿಕೊಂಡು ಬಂದಿದೆ. ಚೀನಾ ವಿವಿಧ ಸಂಸ್ಕೃತಿಗಳಿಂದ ಮತ್ತು ಅನೇಕ ಜನಾಂಗಗಳಿಂದ ಕೂಡಿದ ರಾಷ್ಟ್ರ; ಚೀನದ ಇಂದಿನ ಜನರ ಮೂಲಪುರುಷರು ಯಾರೆಂಬುದನ್ನು ನಿರ್ದಿಷ್ಟವಾಗಿ ಹೇಳುವಂತಿಲ್ಲ. ಅವರ ದಾಖಲೆಗಳು ಅವಿಚ್ಛಿನ್ನವಾಗಿ ಬಂದಿರುವುದರಿಂದ ಅವರ ಸಾಮಾಜಿಕ ಆಚರಣೆಗಳು ಹಾಗೂ ನಂಬಿಕೆಗಳು ಪಾಶ್ಚಾತ್ಯರ ಆಚರಣೆ ಹಾಗೂ ನಂಬಿಕೆಗಳನ್ನು ಹೋಲುತ್ತವೆ ಎಂಬ ಶಂಕೆಗೆ ಅವಕಾಶವಿದೆ. ವಿವಿಧ ಜಾನಪದಗಳು ಪರಸ್ಪರ ಹೋಲುವುದಕ್ಕೆ ಅವು ಎಲ್ಲೆಡೆ ವ್ಯಾಪಿಸಿಕೊಂಡಿರುವುದೇ ಕಾರಣವೆಂಬ ವ್ಯಾಪ್ತಿವಾದ ಮತ್ತು ಕಲ್ಪನೆಗಳು ಕ್ರೋಡೀಕರಿಸುವ ವಿಧಾನಗಳನ್ನು ಪರಿಶೋಧಿಸುವ ಪಾಶ್ಚಾತ್ಯರು ಚೀನೀಯರ ನಂಬಿಕೆಗಳನ್ನು ಮಾದರಿಗಳನ್ನಾಗಿಟ್ಟುಕೊಳ್ಳಲು ಪ್ರಯತ್ನಿಸಿದ್ದಾರೆ.

ಚೀನೀ ಜಾನಪದದ ವ್ಯಾಪ್ತಿ, ಅದು ವ್ಯಾಪಿಸಿರುವ ಪ್ರದೇಶ ಯಾವುದು, ಅದರ ಗಾತ್ರವೇನು ಎಂಬ ಬಗ್ಗೆ ಇರುವ ಅನಿರ್ದಿಷ್ಟತೆ, ಚೀನದಲ್ಲಿ ಆಗಿರುವ ವಿವಿಧ ಸಂಸ್ಕೃತಿಗಳ ಸೇರ್ಪಡೆ, ವಿವಿಧ ಜನಾಂಗಗಳು ಯಾವ ಅಡ್ಡಿ ಆತಂಕವೂ ಇಲ್ಲದೆ ಆಚರಣೆ ಮತ್ತು

ನಂಬಿಕೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡಿರುವುದು, ಅಧಿಕಾರ ಮತ್ತು ಗೌರವಸ್ಥಾನ ಪಡೆದ ಪಂಡಿತವರ್ಗದ ಪ್ರಾಬಲ್ಯ, ಜಾನಪದ ಸಾಮಗ್ರಿಗಳನ್ನು ವ್ಯವಸ್ಥೆಗೊಳಿಸಿರುವ ಪುರೋಹಿತವರ್ಗದ ಸಾಂಪ್ರದಾಯಿಕ ನಿಲುವು–ಮುಂತಾದವು ಚೀನೀ ಜಾನಪದದ ಅಧ್ಯಯನಕ್ಕಿರುವ ಅಡಚಣೆಗಳಾಗಿವೆ. ಚೀನೀಯರ ಲಿಖಿತ ಭಾಷೆಯ ಒಡೆತನ ಪಂಡಿತ ವರ್ಗದವರದ್ದಾದ್ದರಿಂದ ಅವರು ಶುದ್ಧ ಜಾನಪದವನ್ನು ಶಿಷ್ಟಗೊಳಿಸುವ ಸಾಧ್ಯತೆಯೇ ವಿಶೇಷವಾಗಿದೆ. ಇತರರ ಮೂಢನಂಬಿಕೆಗಳನ್ನು ಎತ್ತಿ ತೋರಲು ಮತಪ್ರಚಾರಕರು ಸಂಗ್ರಹಿಸಿದ ವಸ್ತು ಉಪಯುಕ್ತವಾಗಿ ಕಂಡರೂ ಚೀನದ ವಿವಿಧ ಭಾಗಗಳಲ್ಲಿನ ಪದ್ಧತಿ ಮತ್ತು ನಂಬಿಕೆಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಅದು ತೋರಿಸುವಂತಿಲ್ಲ.

ಚೀನಿ ಜಾನಪದದ ಪ್ರಾರಂಭ ಕಾಲದ ವಿವರಗಳ ಬಗ್ಗೆ ಸಂಗ್ರಹವಾಗಿರುವ ಮಾಹಿತಿಗಳು ತೃಪ್ತಿಕರವಾಗಿಲ್ಲ. ಪ್ರಶ.ಪೂ. ಸು. 1100–221 ರ ಅವಧಿಯ ಮೊದಲು ಚೀನೀ ಚರಿತ್ರೆ ಚೌ ಸಂತತಿಯ ಕಾಲದಲ್ಲಿ ರಚಿತವಾಗಿದ್ದು ಪ್ರಶ.ಪೂ. 206–ಪ್ರಶ.ಶ. 221 ರ ಚಿನ್ ಸಂತತಿಯ ಕಾಲದಲ್ಲಿ ನಾಶವಾಯಿತು. ಆದ್ದರಿಂದ ಪ್ರಾಚೀನ ಇತಿಹಾಸ ಹಾಗೂ ಜನಜೀವನದ ಬಗ್ಗೆ ಊಹಾಪೋಹಗಳು ಹೆಚ್ಚಾಗಿವೆ ; ಪುರಾತತ್ತ್ವ ಶೋಧನೆಗಳಿಂದ ದೊರೆಯುವ ಮಾಹಿತಿಗಳು ಅವನ್ನು ಸಮರ್ಥಿಸಬೇಕಾಗಿವೆ. ಹಾನ್ ಸಂತತಿಯ ಚರಿತ್ರಕಾರ ಸುಮಚೈಯೆನ್ ಪ್ರಾರಂಭ ಕಾಲದ ಇತಿಹಾಸದ ಬಗ್ಗೆ ವಿವರಗಳನ್ನು ನೀಡಿದ್ದಾನೆ. ಅವನ ಪ್ರಕಾರ ದೇವಲೋಕದ 12 ಜನ ಸಮ್ರಾಟರು ವಿಶ್ವದ ಮೊದಲ ಅರಸರು. ಅವರು ತಲಾ 18,000 ವರ್ಷಗಳಂತೆ ಒಟ್ಟು 1,98,000 ವರ್ಷಗಳ ಕಾಲ ಆಳಿದರು. ಭೂಲೋಕದ ಒಂಬತ್ತು ಮಂದಿ ಸಮ್ರಾಟರು 45,000 ವರ್ಷಗಳ ಕಾಲ ಮಾನವಕುಲವನ್ನು ಆಳಿದರು. ಸುಮಚೈಯೆನ್ ತಿಳಿಸುವ ಉಳಿದ 16 ಮಂದಿ ಸಮ್ರಾಟರ ಬಗ್ಗೆ ಮಾಹಿತಿಗಳು ದೊರತಿಲ್ಲ. ಇವರ ತರುವಾಯ ಸಾಹಸವೀರರೂ ಲಲಿತಕಲೆಗಳನ್ನು ಮತ್ತು ಕುಶಲಕಲೆಗಳನ್ನು ಕಂಡುಹಿಡಿದ ಫೂಷಿ ಮತ್ತು ಷೆನ್ ನುಂಗ್ ಎಂಬಿಬ್ಬರೂ ಬರುತ್ತಾರೆ. ಅವರಿಬ್ಬರಿಗೂ ಸರ್ಪಶರೀರ ಹಾಗೂ ಮಾನವ ಶಿರಗಳಿದ್ದವು. ಭೂಮಿಯನ್ನು ಮೊದಲು ಉತ್ತವ ಷೆನ್‌ನುಂಗ್. ಹ್ವಾಂಗ್‌ಡೀ ಎಂಬಾತ ಮಾನವ; ಇವನು ಅನಾಗರಿಕ ಜನರಿಗೆ ರಾಜ್ಯಾಡಳಿತ, ಕುಶಲಕಲೆ, ನಡೆನುಡಿ, ದೇವತೆ, ಪರ್ವತ, ನದಿ ಮುಂತಾದವುಗಳಿಗೆ ಯಜ್ಞಯಾಗಾದಿಗಳನ್ನು ಮಾಡುವ ಹಾಗೂ ಬಲಿ ನೀಡುವ ವಿಧಾನಗಳನ್ನು ಕಲಿಸಿಕೊಟ್ಟ.; ಯು ಎಂಬಾತ ಸ್ಥಾಪಿಸಿದ ಷ್ಯೆಯಾ ಸಂತತಿ (ಪ್ರಶ.ಪೂ. ಸು. 2205–1557) ಬಹುಶಃ ಪೂರ್ವ ಚೀನೀ ಸಂತತಿಯಾಗಿರಬಹುದು. ಯು 13 ವರ್ಷಗಳ ಕಾಲ ನದಿಗಳ ಪ್ರವಾಹವನ್ನು ತಡೆಗಟ್ಟಲು ಕಾರ್ಯನಿರತನಾದ. ಆಗ ಅವನು ತನ್ನ ಸಂಸಾರದ ಯೋಗಕ್ಷೇಮದ ಕಡೆಗೂ ಗಮನ ಕೊಡಲಿಲ್ಲವೆಂದು ಪ್ರತೀತಿ ಇದೆ. ಅವನೊಬ್ಬ ನಿಷ್ಠ ಅರಸ.

ಚೀನದಲ್ಲಿ ಜಾನಪದವನ್ನು ರಕ್ಷಿಸಿಕೊಂಡು ಬರುವ ಪ್ರವೃತ್ತಿ ಕಂಡುಬರುತ್ತದೆ. ಈ ಕಾರಣದಿಂದ ಚೀನೀಯರು ಪ್ರಾಚೀನ ನಂಬಿಕೆಗಳನ್ನು ಆಧುನಿಕ ಕಾಲದವರೆಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಹೀಗೆ ಅವನ ಯಿನ್–ಯಾಂಗ್ ಭವಿಷ್ಯ ಜ್ಞಾನ 'ವೂ' ಪಂಥಗಳು, ಪುರೋಹಿತ ದೊರೆಗಳು ಮತ್ತು ಅವರ ದೇವಲೋಕ, ಭೂಲೋಕ, ಭೂಮಿ ಮತ್ತು ಧಾನ್ಯಗಳು ಹಾಗೂ ಪಿತೃಪೂಜೆ ಇವುಗಳೆಲ್ಲ ಪ್ರಾರಂಭ ಕಾಲದಿಂದಲೂ ಬಂದವು. ಯಿನ್–ಯಾಂಗ್ ಭವಿಷ್ಯಜ್ಞಾನ ತರುವಾಯದ ಕಾಲದಲ್ಲಿ ತಾಓ ಪಂಥದವರಿಂದ ವಿಸ್ತಾರಗೊಂಡಿತು ; ಸಮತೋಲನ ಜೀವಿತದ ಧರ್ಮವೆಂಬ ಚೀನಿ ಸಂಸ್ಕೃತಿಯ ಕಲ್ಪನೆಯಿಂದ ಅದು ಬಂದದ್ದು; ಈ ನಂಬಿಕೆ ಸ್ಯೆನ್ (ಜ್ಯಾ) ವಕ್ರರೇಖೆಯಿಂದ ದ್ವಿಭಾಗಿಸಲ್ಪಟ್ಟ ವೃತ್ತ. ಅದು ವಿಶ್ವದ ವಾಸ್ತವ ಮತ್ತು ಅವಾಸ್ತವ ಬಲಗಳ ನಡುವಣ ಸಮತೋಲನ; ಸ್ತ್ರೀ ಮತ್ತು ಪುರುಷರನ್ನು ಪ್ರತಿನಿಧಿಸುವ ಸಂಕೇತ ಭೂಮ್ಯಾಕಾಶ; ಹೀಗೆ ಸಂಕೇತಗೊಂಡ ತತ್ತ್ವ ಲಾಮಾವಾದದಲ್ಲಿ ಮುಖ್ಯಸ್ಥಾನ ಹೊಂದಿದೆ. ಅಲ್ಲಿ ಸಂಭೋಗ ಅತ್ಯಂತ ಗರಿಷ್ಠ ಸಾಮರಸ್ಯ ಹಾಗೂ ಸಮತೋಲನ. ತಾಓ ಪಂಥದಲ್ಲಿಯೂ ಇದೇ ಕಲ್ಪನೆ ಇದೆ. ಸ್ತ್ರೀ ಮತ್ತು ಪುರುಷರಿಗೆ ಸಂಬಂಧಪಟ್ಟಂತೆ ಶುಭ ಮತ್ತು ಅಶುಭ ಕಾರ್ಯಗಳನ್ನು ಯಾವ ದಿನಗಳಲ್ಲಿ ಆಚರಿಸಬಹುದೆಂಬ ಪದ್ಧತಿ ಸಹ ಈ ಸಮತೋಲನ ವ್ಯವಸ್ಥೆಗೆ ಸಂಬಂಧಪಟ್ಟದ್ದು.

ಷಾಂಗ್ ಸಂತತಿಯ ಸಮ್ರಾಟರ ಕಾಲದಲ್ಲಿ ಭವಿಷ್ಯಜ್ಞಾನ ಶ್ರೀಮಂತರ ಪಂಥಕ್ಕೆ ಸೇರಿದ ವಿಷಯವಾಗಿತ್ತು. ಆಗಿನ ಕಾಲದಲ್ಲಿ ಜೋಯಿಸರು ಮೂಳೆಗಳ ಮೇಲೆ ಮತ್ತು ಆಮೆಯ ಚಿಪ್ಪಿನ ಮೇಲೆ ಭಾವಲಿಪಿಗಳನ್ನು ಬರೆದು ಬೆಂಕಿಯಲ್ಲಿ ಕಾಯಿಸಿ ಮೂಳೆ ಮತ್ತು ಅವುಗಳ ಮೇಲೆ ಕಂಡುಬಂದ ಸೀಳುಗಳ ಆಧಾರದ ಮೇಲೆ ಯಜ್ಞ, ಪ್ರಯಾಣ, ಯುದ್ಧ –ಇಂಥ ವಿಷಯಗಳ ಬಗ್ಗೆ ಭವಿಷ್ಯ ನುಡಿಯುತ್ತಿದ್ದರು. ಚೀನೀಯರಿಗೆ ಲಿಪಿ ಮತ್ತು ಸಂಕೇತಗಳೆಂದರೆ ಈಗಲೂ ಪೂಜ್ಯ ಭಾವನೆ ಇದೆ. ಭವಿಷ್ಯದ ವಿಷಯಗಳನ್ನೊಳಗೊಂಡ, ಮೂಳೆಗಳ ಮೇಲಣ ಭಾವಲಿಪಿಗಳನ್ನು ಅರ್ಥ ಮಾಡುವುದು ಚೀನೀ ಪುರೋಹಿತರ ಕೆಲಸ.

ವೂ ಪುರೋಹಿತರು ಶ್ರೀಮಂತ ಹಾಗೂ ಜಾನಪದ ಪಂಥಗಳೆರಡರಲ್ಲೂ ಪ್ರವೀಣರು. ವಿದ್ಯಾಪೀಠಗಳ ಮೂಲಕ ಅವರ ಜ್ಞಾನ ಪ್ರಸಾರವಾಗುತ್ತಿತ್ತು. ಯೋಗ ಸಮಾಧಿ, ಸಂಗೀತ, ನೃತ್ಯ–ಇವು ಅವರ ಮತಾಚರಣೆಗಳಾಗಿದ್ದವು. ಇವು ಚೀನೀ ನಾಟಕ ಕಲೆಗೆ ಬುನಾದಿಯಾಯಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಆಚರಣೆಗಳು ಮಂಗೋಲಿಯ, ಸೈಬೀರಿಯ ಮತ್ತು ಇತರ ಕಡೆ ಕಂಡುಬಂದಿರುವ ಆಚರಣೆಗಳನ್ನು ಹೋಲುತ್ತವೆ.

ಯಿನ್–ಯಾಂಗ್ ಕಲ್ಪನೆ ಭವಿಷ್ಯಜ್ಞಾನ ಮತ್ತು ವೃತ್ತಿನಿರತ ವೂ ಪುರೋಹಿತ ವರ್ಗ–ಇವೆಲ್ಲ ಷಾಂಗ್ ಸಂಸ್ಕೃತಿಯ ಭಾಗಗಳಾಗಿದ್ದುವು. ಪ್ರಶ.ಪೂ. 1000 ದಲ್ಲಿ ಅರಸ ಪುರೋಹಿತ ವ್ಯವಸ್ಥೆ, ಪುರುಷ ವಂಶೀಕರ ಪೂಜೆ, ತಾರಾಮಂಡಲದ ಪೂಜೆ ರೂಢಿಗೆ ಬಂದವು.

ಪುರೋಹಿತ ಅರಸರು ಸ್ವರ್ಗವನ್ನು ಶಮನ ಮಾಡುವ ಮುಖ್ಯ ಕರ್ತವ್ಯವನ್ನು ಹೊಂದಿದ್ದರು. ಸ್ವರ್ಗಲೋಕದ ಪುತ್ರನಾದ ಸಮ್ರಾಟ ಮಾತ್ರ ಸ್ವರ್ಗಲೋಕಕ್ಕೆ ಪೂಜೆ ಸಲ್ಲಿಸಲು ಅರ್ಹತೆ ಹೊಂದಿದ್ದ, ಸಾಮಂತರು ಮತ್ತು ಶ್ರೀಮಂತರು ಸಾಮಾನ್ಯ ಪೂಜೆಗಳನ್ನು ಮಾಡುತ್ತಿದ್ದರು. ಸ್ವರ್ಗಕ್ಕೆ ಯಾಗವನ್ನು ವ್ಯವಸಾಯ ವರ್ಷದ ಮೊದಲ ದಿನ ಆಚರಿಸುತ್ತಿದ್ದರು. ಚಾಂದ್ರಮಾನದಲ್ಲಿ ಇದು ವಸಂತಕಾಲದ ಪ್ರಾರಂಭದ ದಿನ. ಈ ಉತ್ಸವ ಸಮಯದಲ್ಲಿ ಸಮ್ರಾಟನ ಅಧಿಕೃತ ಪಂಚಾಂಗ ಹೊರಡುತ್ತಿತ್ತು. ಅದರಲ್ಲಿ ಆ ವರ್ಷಕ್ಕೆ ಸಂಬಂಧಿಸಿದ ವ್ಯವಸಾಯ, ಲೌಕಿಕ ವ್ಯವಹಾರ, ಗೃಹಕೃತ್ಯ ವಿಚಾರಗಳಿರುತ್ತಿದ್ದವು. ಸಮ್ರಾಟನ ಮಳಿಗೆಯಿಂದ ಧಾನ್ಯಗಳನ್ನು ಹಂಚಲಾಗುತ್ತಿತ್ತು ; ಬೆಳೆಗಳ ಸಮ್ರಾಟನೆನಿಸಿ ಕೊಳ್ಳುತ್ತಿದ್ದ ; ಅವನು ಹಸಿರು ಮತ್ತು ಹಳದಿ ವಸ್ತ್ರಗಳನ್ನು ಧರಿಸುತ್ತಿದ್ದ.

ಪಿತೃಪೂಜೆ ಆಧುನಿಕ ಚೀನದಲ್ಲಿ ಸಹ ಮುಖ್ಯವೆನಿಸಿರುವ ಸಂಸ್ಕಾರ. ಮಾನವನಿಗೆ ಎರಡು ಆತ್ಮಗಳಿವೆ ಎಂದು ಚೀನೀಯರು ನಂಬಿದ್ದರು. ಮೊದಲನೆಯದು ಪೊ ಆತ್ಮ (ಪ್ರಾಣಿ ಆತ್ಮ) ; ಗರ್ಭಧಾರಣೆಯ ಕಾಲದಲ್ಲಿ ಗರ್ಭವನ್ನು ಸೇರುತ್ತದೆ. ಎರಡನೆಯ ಹನ್ ಆತ್ಮ ; ಶಿಶು ಹುಟ್ಟಿದ ಕೂಡಲೇ ಅದರ ದೇಹವನ್ನು ಸೇರಿಕೊಳ್ಳುತ್ತದೆ. ಇದು ಅವರ ಕಲ್ಪನೆ. ಭೌತಿಕ ಆತ್ಮವಾದ ಪೊ ವ್ಯಕ್ತಿ ಮರಣ ಹೊಂದಿದ ಮೇಲೆ ಅವನ ದೇಹವನ್ನು ಅನುಸರಿಸುತ್ತದೆ. ಸತ್ತವನ ವಂಶಜರ ಪೂಜೆ ಪುರಸ್ಕಾರಗಳಿಂದ ಅದು ಸಂತೃಪ್ತವಾಗುತ್ತದೆ. ದೇಹ ಸಮಾಧಿಯಲ್ಲಿ ನಶಿಸಿದಂತೆಲ್ಲ ಈ ಆತ್ಮವೂ ನಶಿಸುತ್ತ ಬರುತ್ತದೆ. ವಂಶಜನ ಪೂಜೆ ಮತ್ತು ಬಲಿಗಳಿಲ್ಲದೆ ಹೋದರೆ ಈ ಆತ್ಮ ಪ್ರೇತವಾಗಿ ವಂಶಕ್ಕೆ ಅಪಾಯವೆಸಗಬಹುದು. ಆಧ್ಯಾತ್ಮಿಕ ಆತ್ಮವಾದ ಹನ್ ಸ್ವರ್ಗವನ್ನು ಮುಟ್ಟಿ ತನ್ನ ವಂಶಜರ ಹಿತಾಸಕ್ತಿಗಳನ್ನು ಕಾಪಾಡುತ್ತದೆ. ಒಂದು ವಂಶವೇ ನಾಶವಾದ ಪಕ್ಷದಲ್ಲಿ ಆ ವಂಶದ ಸತ್ತವರ ಆತ್ಮಗಳು ಪೂಜೆಗಳಿಲ್ಲದೆ ದೆಸೆಗೆಟ್ಟು ಅಲೆದಾಡಬಹುದು.

ಚೀನಿಯರು ಬಲಿ ನೀಡುವ ಪದ್ಧತಿ ಇತರ ಸಂಸ್ಕೃತಿಗಳಲ್ಲಿನ ಬಲಿ ವಿಧಾನಗಳನ್ನೇ ಹೋಲುತ್ತದೆ. ಪ್ರಾಚೀನ ಕಾಲದಲ್ಲಿ ಸತ್ತ ಶ್ರೀಮಂತನ ಹಿಂದೆ ಅವನ ಪರವಾಗಿ ಬಲಿಕೊಟ್ಟ ಅವನ ಮಡದಿಯರ ಮತ್ತು ಪರಿವಾರದವರ ಆತ್ಮಗಳೂ ಅವನ ಸೇವೆಗಾಗಿ ಹೋಗುತ್ತಿದ್ದವು. ಆಧುನಿಕ ಚೀನದಲ್ಲಿ ನರಬಲಿಗೆ ಬದಲಾಗಿ ಸತ್ತವನ ಹೆಂಡಿರನ್ನು ಮತ್ತು ಪರಿವಾರದವರನ್ನು ಪ್ರತಿನಿಧಿಸುವ ಕಾಗದಗಳನ್ನು ಸುಡುವ ಪದ್ಧತಿ ಇದೆ. ಪ್ರಾಚೀನ ಚೀನದಲ್ಲಿ ನದಿಗೆ ಪ್ರತಿವರ್ಷವೂ ಸುಂದರ ಕನ್ನಿಕೆಯನ್ನು ವಿವಾಹ ಮಾಡಿಕೊಡುವ ಪದ್ಧತಿ ಇತ್ತು. ಆಕೆಯನ್ನು ಮದುವಣಗಿತ್ತಿಯಂತೆ ಶೃಂಗರಿಸಿ ನಿಷೇಕ ಶಯ್ಯೆಯೊಡನೆ ಹಡಗಿನಲ್ಲಿ ತೇಲಿ ಬಿಡುತ್ತಿದ್ದರು. ನದಿಗೆ ಆಹುತಿಯಾಗಬೇಕಾದವರನ್ನು ಉಳಿಸುವುದು ಯುಕ್ತವಲ್ಲವೆಂಬ ನಂಬಿಕೆಯೇ ನದಿಯಲ್ಲಿ ಮುಳುಗುವವರನ್ನು ರಕ್ಷಿಸಲು ಈಗಲೂ ಚೀನಿಯರು ಅಂಜುವುದಕ್ಕೆ ಕಾರಣವಾಗಿದೆ. ವನದೇವತೆಗಳಿಗೆ ಮತ್ತು ಪರ್ವತಗಳಿಗೆ ಪೂಜೆ ಸಲ್ಲಿಸುವ ಪದ್ಧತಿಯೂ ಚೀನದಲ್ಲಿತ್ತು.

ವಿಚಾರವಾದಿಗಳು ಹಳೆಯ ಪದ್ಧತಿಗಳನ್ನು ನಾಶಮಾಡದೆ ರಕ್ಷಿಸಿಕೊಂಡು ಬರುವ ಪ್ರಯತ್ನ ಮಾಡಿದ್ದಾರೆ. ದಾರ್ಶನಿಕರು, ಇತಿಹಾಸಕಾರರು ಹಾಗೂ ಧರ್ಮಶಾಸ್ತ್ರಜ್ಞರು ಈ ವಿಷಯದಲ್ಲಿ ಆಸಕ್ತಿ ವಹಿಸಿದ್ದಾರೆ. ಚೌ ಸಂತತಿಯ ಸಮ್ರಾಟರ ಕಾಲದಲ್ಲಿ ಪ್ರಾಚೀನ ವೃತ್ತಿನಿರತ ಪುರೋಹಿತರ ಪಾಂಡಿತ್ಯವನ್ನು ಸಂಪಾದಿಸಿಕೊಂಡ ವಿದ್ವಾಂಸರು ಪ್ರಬಲ ರಾಗಿದ್ದರು. ಸಾಮ್ರಾಜ್ಯದ ವಿಘಟನೆಯಿಂದ ನಡೆನುಡಿ ಮತ್ತು ನೈತಿಕ ಮಟ್ಟಗಳು ಶಿಥಿಲವಾಗಿ ನೂರಾರು ಪಂಥಗಳು ಹುಟ್ಟಿಕೊಳ್ಳುವುದಕ್ಕೆ ಅವಕಾಶವಾಯಿತು. ವ್ಯತಿರಿಕ್ತವಾದ ಕಲ್ಪನೆಗಳು ಮೂಡಿದವು, ಕನ್‌ಫ್ಯೂಷಿಯಸ್ ಮತ್ತು ತಾಓ ಧರ್ಮಪಂಥಗಳು ಚೀನದಲ್ಲಿ ಹೊಸ ಭಾವನೆಗಳನ್ನು ಮೂಡಿಸಿದವು.

ಪ್ರಾಚೀನ ಚೀನದ ಪದ್ಧತಿಗಳಿಗೆ ಹಿಂದಿರುಗಬೇಕೆಂದು ಕನ್‌ಫ್ಯೂಷಿಯಸ್ ಬೋಧಿಸಿದ. ಪರಿಣಾಮವಾಗಿ ಹಳೆಯ ಪದ್ಧತಿಗಳ ಬಗ್ಗೆ ಸಂಶೋಧನೆ, ಐತಿಹ್ಯ ಹಾಗೂ ಧರ್ಮಾಚರಣೆಗಳಿಗೆ ಸಂಬಂಧವಾದ ಸಂಹಿತೆ–ಇವು ಕನ್‌ಫ್ಯೂಷಿಯಸನ ನಿಯಮಾವಳಿಗಳಿಗೆ ಸಂಬಂಧಿಸಿದ ಐದು ಅಭಿಜಾತ ಗ್ರಂಥಗಳಲ್ಲಿ ಶೇಖರಿಸಲ್ಪಟ್ಟವು. ಭವಿಷ್ಯವಿಜ್ಞಾನಕ್ಕೆ ಸಂಬಂಧಿಸಿದ ಚಿಂಗ್ ಗ್ರಂಥ, ಚರಿತ್ರೆಗೆ ಸಂಬಂಧಿಸಿದ ಷು ಚಿಂಗ್, ಧರ್ಮಾಚರಣೆಗಳನ್ನು ವಿವರಿಸುವ ಲೀ ಚಿ ಮತ್ತು ಚೌ ಲಿ, ಷಿಹಚಿನ್ ಕಾವ್ಯ ಮತ್ತು ಲೂ ಇತಿಹಾಸ–ಈ ಐದು ಗ್ರಂಥಗಳು

ಚೀನೀ ಜಾನಪದದ ಸಂಗ್ರಹಗಳು. ಇವುಗಳಲ್ಲಿ ಪ್ರಶ.ಪೂ. 5ನೆಯ ಶತಮಾನದ ಪ್ರಾಚೀನ ಚೀನೀಯರ ಅಭಿಪ್ರಾಯಗಳಿವೆ. ಕೆಲವು ವಿಷಯಗಳ ಮೂಲ ಸಂಶಯಾಸ್ಪದವಾಗಿದೆ. ಕನ್‌ಫ್ಯೂಷಿಯಸ್‌ನ ಪಂಥ 2,000 ವರ್ಷಗಳಿಂದ ಜನಪ್ರಿಯವಾಗಿದ್ದರೂ ಅವನ ಗ್ರಂಥಗಳಲ್ಲಿನ ಪ್ರಾಚೀನ ನಂಬಿಕೆಗಳು ಬದಲಾವಣೆಗೆ ಗುರಿಯಾಗಿವೆ. ಏನೇ ಆಗಲಿ ಈ ಗ್ರಂಥಗಳು ಅರ್ಥ ಮಾಡಲು ಪ್ರಯತ್ನಿಸುವ ಜಾನಪದ ತಜ್ಞನಿಗೆ ಸಂಪದ್ಯುಕ್ತ ವಿಷಯಗಳನ್ನೊದಗಿಸುತ್ತವೆ. ಹೀಗಿದ್ದರೂ ಕನ್‌ಫ್ಯೂಷಿಯಸ್ ಪಂಥಕ್ಕಿಂತ ತಾಓ ಪಂಥ ಚೀನೀ ಜಾನಪದದ ರಕ್ಷಣೆಗೆ ಹೆಚ್ಚು ಬೆಂಬಲ ನೀಡಿದೆ. ಈ ಪಂಥ 2,000 ವರ್ಷಗಳಿಂದ ಜನಪ್ರಿಯ ನಂಬಿಕೆಗಳಿಗೆ ಹಾಗೂ ಮೂಢನಂಬಿಕೆಗಳಿಗೆ ಎಡೆಕೊಟ್ಟಿದೆ. ಆ ತತ್ತ್ವದಲ್ಲಿ ಮಾನುಷ ಮತ್ತು ಅತಿಮಾನುಷ ಶಕ್ತಿಗಳ ನಡುವಣ ಸಾಮರಸ್ಯ ಕಾಣುತ್ತದೆ. ಅಲ್ಲಿಗೆ ಧರ್ಮಾಚರಣೆಯ ಪರಿಧಿಯಲ್ಲಿ ದೈಹಿಕ ವ್ಯಾಯಾಮಕ್ಕೆ ಹೆಚ್ಚು ಅವಕಾಶವಿದೆ ; ಭವಿಷ್ಯಜ್ಞಾನದಿಂದ ಘಟನೆಗಳನ್ನು ತಿಳಿಯಬಹುದೆಂಬ ನಂಬಿಕೆ ಇದೆ. ಮಂತ್ರಿಸಿದ ತಾಯಿತದಿಂದ ಕೆಟ್ಟದ್ದನ್ನು ನಿವಾರಿಸಿಕೊಳ್ಳಬಹುದೆಂಬ ವಾದವಿದೆ. ಹುಟ್ಟಿನಿಂದ ಸಾವಿನವರೆಗೆ ಅನುಸರಿಸುವ ವಿವಿಧ ಸಂಸ್ಕಾರಗಳು ಈ ಪಂಥದ ಬೋಧನೆಗಳಲ್ಲಿವೆ. ಈ ಎರಡು ಪಂಥಗಳ ಜೊತೆಗೆ ವಿದೇಶೀ ಧರ್ಮವಾದ ಬೌದ್ಧಧರ್ಮವನ್ನೂ ಚೀನೀಯರು ಆಹ್ವಾನಿಸಿ ಬೋಧಿಸತ್ತ್ವನನ್ನು ಭಗವಂತನೆಂದು ಭಾವಿಸಿದರು.

ಕನ್‌ಫ್ಯೂಷಿಯಸ್ ಪಂಥ ಹಾಗೂ ಮತ್ತಿತರ ಪಂಥಗಳು ಹುಟ್ಟಿಕೊಂಡ ಮೇಲೆ ಮೊದಲೇ ಇದ್ದ ಪುರಾಣಗಳಿಗೆಲ್ಲ ಧರ್ಮಗ್ರಂಥಗಳಲ್ಲಿ ಪುನರ್ ವಿವರಣೆ ಕೊಡಲಾಯಿತು. ಕೆಲವು ದೇವತೆಗಳು ಮತ್ತು ಪೌರಾಣಿಕ ವ್ಯಕ್ತಿಗಳನ್ನು ಅಮೂರ್ತ ತತ್ತ್ವಗಳಿಗೆ ಹೊಂದಿಸಲಾಯಿತು. ಉಳಿದವರನ್ನು ಪುರಾಣಾವರಣದ ಚಾರಿತ್ರಿಕ ವ್ಯಕ್ತಿಗಳನ್ನಾಗಿ ಮಾಡಲಾಯಿತು. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಪುರೋಹಿತ ಪ್ರಭುತ್ವಕ್ರಮ ಅತಿಮಾನುಷ ಜಗತ್ತಿನ ಮೇಲೆ ಪ್ರಭಾವ ಬೀರುವಂತೆ ಮಾಡಲಾಯಿತು. ಅನೇಕ ಆರ್ಷೇಯ ಪುರಾಣಗಳು ನಷ್ಟವಾಗಿವೆ. ಉಳಿದವು ಸಾಂದರ್ಭಿಕ ಉಲ್ಲೇಖಗಳಲ್ಲಿ, ಲೌಕಿಕ ಬರೆಹಗಳಲ್ಲಿ ಸೇರಿಕೊಂಡಿರುವ ಕೆಲವೊಂದು ಜನಪದ ಸಂಪ್ರದಾಯದ ಅವಶೇಷಗಳಾಗಿ ಮಾತ್ರ ಉಳಿದು ಬಂದಿವೆ. ಹಲವಾರು ಮೂಲನಿವಾಸಿ ಸಂಸ್ಕೃತಿಗಳ ಒಟ್ಟು ಸೇರುವಿಕೆಯಿಂದಾಗಿ ಚೀನದ ಪೌರಾಣಿಕ ಸಂಪ್ರದಾಯಗಳಲ್ಲಿ ವ್ಯಾಪಕವಾದ ಭಿನ್ನತೆ ಕಂಡುಬರುತ್ತದೆ. ವಿಶೇಷ ಲಕ್ಷಣ ಮಾದರಿಯ ಪುರಾಣ ಆಶಯಗಳು ಕಾಣಸಿಗುತ್ತವೆ.

ಪ್ರಾಚೀನ ಚೀನದ ಸೃಷ್ಟಿಗೆ ಸಂಬಂಧಿಸಿದ ಪುರಾಣಗಳ ಸಂಖ್ಯೆ ತೀರ ಕಡಿಮೆ. ಸ್ವರ್ಗ ಮತ್ತು ಮರ್ತ್ಯಗಳ ಪ್ರತ್ಯೇಕತೆಯನ್ನು ಕುರಿತು ವಿಸ್ತಾರವಾದ ಸಂಪ್ರದಾಯವೊಂದು ಕಂಡುಬರುತ್ತದೆ. ಈ ಸಂಪ್ರದಾಯ 'ಜಗತ್ತು ಮತ್ತು ತತ್ತಿ'ಯ ಆಶಯಕ್ಕೆ ಸಂಬಂಧಿಸಿದುದು. ಇದಲ್ಲದೆ ಸೃಷ್ಟಿಪೂರ್ವದ ಅವ್ಯವಸ್ಥಿತ ಕಲ್ಪನೆಗೆ ಕೆಲವೊಂದು ಸಾಕ್ಷ್ಯಾಧಾರವಿದ್ದು, ಅದರಿಂದ ಸ್ವರ್ಗ ಮತ್ತು ಮರ್ತ್ಯಗಳು ಬೇರೆಯಾಗಿದ್ದವೆಂದು ತಿಳಿದುಬರುತ್ತದೆ. ಮೂಲತಃ ಸ್ವರ್ಗವಾಸಿಗಳಾದ ದೇವತೆಗಳು ಹಾಗೂ ಮರ್ತ್ಯವಾಸಿಗಳಾದ ಮಾನವರು ಪರಸ್ಪರ ಸೇರುತ್ತಿರಲಿಲ್ಲ ; ಆದರೆ ಮಾಂತ್ರಿಕರ ಮತ್ತು ದೈವಿಕರ ಕುಟುಂಬಗಳ ಪ್ರಯತ್ನದ ಫಲವಾಗಿ ಈ ಪ್ರತ್ಯೇಕತೆ ಸಡಿಲಗೊಂಡು ಮಾನವರು ಸ್ವರ್ಗಕ್ಕೆ, ದೇವತೆಗಳು ಮರ್ತ್ಯಕ್ಕೆ ಹೋಗಿ ಬರುವಂತಾಯಿತು. ಈ ಪರಿಸ್ಥಿತಿಗೆ ಕೊನೆಯುಂಟಾದುದು ಅಧಿದೇವತೆಯ ಸ್ಥಾನವನ್ನು ಆಶಿಸಿದ ದೇವತೆಗಳಲ್ಲೊಬ್ಬನಿಂದ ಮತ್ತು ಅವನ ಕ್ರಾಂತಿಗೆ ನೆರವಾದ ಭ್ರಷ್ಟ ಮಾನವಜೀವಿಗಳಿಂದ. ಇದಾದ ಮೇಲೆ ಮಾನವರು ಸ್ವರ್ಗಕ್ಕೆ ಹೋಗದಂತಾಯಿತು. ಹಾಗೆಯೇ ದೇವತೆಗಳು ಮರ್ತ್ಯಕ್ಕೆ ಬರದಂತಾಯಿತು.

ಭೂಮಿ ಮತ್ತು ಲೌಕಿಕ ವಿಷಯದ ಮಾದರಿಯನ್ನು ಕುರಿತು ಹಲವಾರು ಇತರ ಸಂಪ್ರದಾಯಗಳಿವೆ. ಮಾನವ ಮುಖವೂ ಸರ್ಪಶರೀರವೂ ರಕ್ತವರ್ಣವೂ ಆದ ಚೂ-ಎನ್ ಎಂದು ಹೆಸರಾದ ಪೌರಾಣಿಕ ಜೀವಿ ತನ್ನ ಕಣ್ಣುಗಳನ್ನು ತೆರೆದಾಗ ಹಗಲಾಗುವುದೆಂದೂ ಮುಚ್ಚಿದಾಗ ಇರುಳಾಗುವುದೆಂದೂ ಬೇಸಗೆ ಮತ್ತು ಚಳಿಗಾಲಗಳು ಅದರ ಉಸಿರಾಟದ ಭಿನ್ನ ಸಾಮರ್ಥ್ಯವನ್ನವಲಂಬಿಸಿ ಉಂಟಾಗುತ್ತವೆಂದೂ ನಂಬಲಾಗಿದೆ.

ಪನ್-ಕು ಪುರಾಣದ ಪ್ರಕಾರ ಸ್ವರ್ಗ ಮತ್ತು ಮರ್ತ್ಯಗಳ ಪ್ರತ್ಯೇಕತೆ ಪನ್-ಕು ಬೆಳವಣಿಗೆಯಿಂದ ಉಂಟಾದುದಂತೆ. ಇವೆರಡರ ನಡುವೆ ಪ್ರತಿನಿತ್ಯ ಹತ್ತು ಅಡಿ ಅಂತರವಾಗುತ್ತ ಬಂದು ಪನ್-ಕು ಸತ್ತ ಮೇಲೆ ಅವನ ದೇಹದ ಭಾಗಗಳು ರೂಪಾಂತರಗೊಂಡವು. ಅವನ ಉಸಿರು ಗಾಳಿಯಾಯಿತು; ಅವನ ಧ್ವನಿ ಗುಡುಗಾಯಿತು; ಅವನ ಕಣ್ಣುಗಳು ಸೂರ್ಯಚಂದ್ರಾದರು; ಉಳಿದ ಭಾಗಗಳು ಪರ್ವತಗಳು, ನದಿಗಳು, ಕಲ್ಲುಮಣ್ಣು, ಗಿಡಮರ, ಲೋಹ ಮುಂತಾದವುಗಳಾದವು; ಅವನ ದೇಹದ ಹೇನುಗಳು ಮಾನವ ಜೀವಿಗಳಾಗಿ ಮಾರ್ಪಾಡಾದವು.

ಪ್ರಕೃತಿ ಪುರಾಣಗಳಲ್ಲಿ ಸೂರ್ಯಪುರಾಣ ಹೆಚ್ಚು ಸಂಪದ್ಯುಕ್ತವಾಗಿರುವಂತೆ ಕಾಣುತ್ತದೆ. ಸೂರ್ಯ ರಥದಲ್ಲಿ ಪ್ರಯಾಣ ಮಾಡುವಂತೆಯೂ ಪೆಡಂಭೂತ (ಡ್ರೇಗನ್) ಅದನ್ನು ಎಳೆಯುಂವತೆಯೂ ತಿಳಿದುಬರುವುದಲ್ಲದೆ ಮೂರು ಕಾಲಿನ ಡೊಂಬ ಕಾಗೆ ಕೂಡ ಸೂರ್ಯನ ಪ್ರಯಾಣಕ್ಕೆ ಸಹಕಾರಿ ಎಂಬ ಪುರಾಣವೂ ಕಾಣಸಿಗುತ್ತದೆ. ಮತ್ತೊಂದು ಗಮನಾರ್ಹ ಸಂಗತಿಯೆಂದರೆ ದಶಸೂರ್ಯರ ಕಲ್ಪನೆ. ಈಗ ಒಬ್ಬನೇ ಸೂರ್ಯ ಇರುವುದಕ್ಕೆ ಕಾರಣವನ್ನು ಹೀಗೆ ವಿವರಿಸಲಾಗಿದೆ: ಒಮ್ಮೆ ದಶಸೂರ್ಯರೂ ಏಕಕಾಲದಲ್ಲಿ ಆಕಾಶದಲ್ಲಿ ಕಾಣಿಸಿಕೊಂಡು ತಮ್ಮ ಸಂಯುಕ್ತ ಕಿರಣಗಳಿಂದ ಭೂಮಿಯನ್ನು ಸುಡಲಾರಂಭಿಸಿದರು. ಆಗ ರಾಜಕುಮಾರ ಒಂದನೆಯ ಆರ್ಚರ್ ಒಂಬತ್ತು ಮಂದಿ ಸೂರ್ಯರನ್ನು ಹೊಡೆದುರುಳಿಸಿ ಭೂಮಿಯನ್ನು ರಕ್ಷಿಸಿದನಂತೆ. ಸೂರ್ಯನನ್ನು ಗಂಡಸೆಂದು ಕಲ್ಪಿಸಲಾಗಿದೆ.

ಚಂದ್ರಪುರಾಣಗಳು ಉಳಿದು ಬಂದಿರುವುದು ಬಹಳ ಕಡಿಮೆ. ಇಲ್ಲಿಯೂ ಒಂದು ಸ್ವಾರಸ್ಯವೆಂದರೆ ದ್ವಾದಶಚಂದ್ರರ ಕಲ್ಪನೆ. ಆದರೆ ಏಕಾದಶಚಂದ್ರರು ಕಾಣದಾದ ಬಗೆಗೆ ಏನೊಂದು ವಿಚಾರವೂ ಉಲ್ಲೇಖವಾಗಿಲ್ಲ. ಉಳಿದಿರುವ ಚಂದ್ರ ಹೆಣ್ಣಾಗಿ ಮೈದೋರಿರುವುದು ಮತ್ತಷ್ಟು ಆಕರ್ಷಕ ವಿಚಾರ. ಇನ್ನೊಂದು ಕಡೆ ಕೆಲವು ಆದಿವಾಸಿ ಸಂಸ್ಕೃತಿಗಳಲ್ಲಿ ಪ್ರಾಚೀನಪುರುಷ ಚಂದ್ರದೇವತೆಯ ನಿದರ್ಶನ ಕಂಡುಬರುತ್ತದೆ.

ಇತರ ಪ್ರಕೃತಿ ಪುರಾಣಗಳಲ್ಲಿ ಪೆಡಂಭೂತ ಸಂಪ್ರದಾಯ ಪ್ರಾಚೀನತಮವಾದುದು. ಚೀನೀ ಪೆಡಂಭೂತ ಅನೇಕ ಅಂಶಗಳಲ್ಲಿ ಪಾಶ್ಚಾತ್ಯ ಪುರಾಣ ಪರಂಪರೆಯ ಪೆಡಂಭೂತದ ಲಕ್ಷಣಗಳನ್ನು ಹೊಂದಿದೆ. ಅದು ಕಡೆಯ ಪಕ್ಷ ವಿನಾಶಕಾರಿ ಹಿಂಸಾತ್ಮಕ ಪ್ರಾಣಿ ಮತ್ತು ಸಾಂದರ್ಭಿಕವಾಗಿ ವಿಧಿಪಾಲಕವಾಗಿ ಕಾಣಿಸಿಕೊಳ್ಳುತ್ತದೆ. ಇಷ್ಟೇ ಅಲ್ಲದೆ ಇದು ದೈವಿಕ ಅಥವಾ ಅತಿಮಾನುಷ ಪ್ರಯಾಣಸಾಧನವಾಗಿ ಮತ್ತು ಕಟ್ಟಕಡೆಗೆ ಸಾಮ್ರಾಜ್ಯದ ಗೌರವ ಹಾಗೂ ಶಕ್ತಿಸಂಕೇತವಾಗಿ ಕಾಣಿಸಿಕೊಂಡಿದೆ.

ಚೀನೀ ಪುರಾಣಗಳ ಪ್ರಕಾರ ಷಾಂಗ್ ಟಿ ಸ್ವರ್ಗಾಧಿಪತಿ ; ಅವನು ಭೌತಿಕ ಹಾಗೂ ಆಧ್ಯಾತ್ಮಿಕ ವಸ್ತುಗಳಿಗೆಲ್ಲ ಒಡೆಯ. ಅವನ ಸರ್ಕಾರವನ್ನು ಮೂರು ವಿಭಾಗಗಳು ನಡೆಸುತ್ತವೆ. ನಗರದೇವತೆಗಳ ವಿಭಾಗವು ಗ್ರಾಮ ಮತ್ತು ನಗರಗಳ ಜೀವಿತವನ್ನು ನಿಯಂತ್ರಿಸುತ್ತದೆ ; ಸ್ಥಳದೇವತೆಗಳ ವಿಭಾಗ ದೇಶವನ್ನು ನಿಯಂತ್ರಿಸುತ್ತವೆ. ಪಾಕಶಾಸ್ತ್ರದೇವತೆ ಗೃಹವನ್ನು ನಿಯಂತ್ರಿಸುತ್ತದೆ. ನರಕ ಅಥವಾ ಪಾತಾಳಲೋಕದಲ್ಲಿ ಧರ್ಮವಿಚಾರಣೆಗೆ ಹತ್ತು ನ್ಯಾಯಾಲಗಳಿವೆ. ಪ್ರತಿ ನ್ಯಾಯಾಲಯಕ್ಕೂ ಒಬ್ಬ ದೊರೆ ಅಧಿಕಾರಿ. ತೀವ್ರ ಅಪರಾಧಗಳನ್ನು ಮಾಡಿದವರನ್ನು ಸಿಡಿಲ ದೇವತೆ ಲೀ ಕುಂಗ್ ನಾಶ ಮಾಡುತ್ತಾನೆ. ಸ್ವರ್ಗದೇವತೆ ಮಾನವನ ಮರಣಕಾಲವನ್ನು ನಿರ್ಧರಿಸುತ್ತಾನೆ. ಆಗ ಮೃತನನ್ನು ಕರೆತರಲು ಸ್ವರ್ಗಾಧಿಕಾರಿಗಳನ್ನು ಐದನೆಯ ನ್ಯಾಯಾಲಯದ ದೊರೆ ಯೆನ್ ಹೊ ಕಳುಹಿಸುತ್ತಾನೆ. ಸತ್ತವರ ಆತ್ಮ ವಿಧಿಗ್ರಂಥದಲ್ಲಿ ದಾಖಲೆಯಾಗಿರುವ ಮೇರೆಗೆ, ಅವನ ಕೃತ್ಯಗಳಿಗನುಸಾರವಾಗಿ ನ್ಯಾಯ ತೀರ್ಮಾನಕ್ಕೊಳಗಾಗುವುದು. 128 ಅಗ್ನಿನರಕಗಳು, 8 ಶೀತಲನರಕಗಳು, 8 ಅಂಧಕಾರಮಯವಾದ ನರಕಗಳು, 84,000 ಇತರ ನರಕಗಳಿವೆ.

ಸಾಂಸ್ಕೃತಿಕ ಸಾಧನೆಗಳ ಮೂಲಕ ಸಂಬಂಧಿಸಿದ ಪುರಾಣಗಳ ಕುರುಹುಗಳು ದೊರೆತಿವೆ. ಇವು ಸಾಂಸ್ಕೃತಿಕ ವೀರರ ಕ್ರಮಾನುಕರಣೆಗೆ ಆರೋಪಿತವಾದವು. ಈ ಪೌರಾಣಿಕ ಕಥೆಗಳಿಗೆ ಚರಿತ್ರಾಧಾರವಿದೆಯೆಂದೂ ಮಾನವನ ಎಲ್ಲ ಚಟುವಟಿಕೆ ಮತ್ತು ನಿಯಮಗಳನ್ನು ಕರಾರುವಾಕ್ಕಾಗಿ ಅವರಿಗೆ ಆರೋಪಿಸಲಾಗಿದೆ. ಅವುಗಳಲ್ಲಿ ಹಲವು ಐತಿಹ್ಯದ ಚಕ್ರವರ್ತಿಗಳ ವಿಷಯಗಳಾದ ಬೇಟೆ, ಮೀನು ಹಿಡಿಯುವುದನ್ನು ಕಂಡುಹಿಡಿದದ್ದು, ಬೇಸಾಯ-ಇತ್ಯಾದಿಗಳನ್ನು ಅವರಲ್ಲಿ ಒಬ್ಬೊಬ್ಬರಿಗೊಂದೊಂದರಂತೆ ಹೊರಿಸಲಾಗಿದೆ. ಈ ಸಂಪ್ರದಾಯದಲ್ಲಿ ಕೆಲವಾದರೂ ನೈಜ ಪೌರಾಣಿಕ ಗುಣಗಳನ್ನು ಉಳಿಸಿಕೊಂಡು ಬಂದಿವೆ.

ವಿಶ್ವದ ಎಲ್ಲ ಕಡೆಗಳಲ್ಲೂ ಕಂಡುಬಂದಿರುವಂತೆ ಬುಡಕಟ್ಟುಗಳ ಮೂಲವನ್ನು ಕುರಿತ ಪುರಾಣಗಳೂ ಚೀನೀಯರಲ್ಲಿವೆ. ವೀರಪುರಾಣಗಳಲ್ಲೆಲ್ಲ ಒಂದನೆಯ ಆರ್ಚರ್‌ನನ್ನು ಕುರಿತ ಪುರಾಣ ಅತ್ಯಂತ ವಿಶದವಾಗಿದೆ. ಒಂಬತ್ತು ಮಂದಿ ಸೂರ್ಯರನ್ನು ಹೊಡೆದುರುಳಿಸಿದ್ದ ಸಾಹಸದ ಜೊತೆಗೆ ಅವನು ಅನೇಕ ವೀರಕಾರ್ಯಗಳನ್ನು ಎಸಗಿದ ಗೌರವಕ್ಕೆ ಪಾತ್ರನಾಗಿದ್ದಾನೆ. ಹೀಗಿದ್ದರೂ ಅವನು ಅನೇಕ ಕಡೆ ನಾಯಕನಂತೆ ಕಾಣಿಸಿಕೊಳ್ಳದೆ ಖಳನಾಯಕನಂತೆ ಕಂಡುಬರುತ್ತಾನೆ.

ಜಲಪ್ರಳಯದ ಪುರಾಣಗಳು ಚೀನಿಯರಲ್ಲಿ ಅಪಾರವಾಗಿ ಸಿಕ್ಕಿವೆ. ಜಲಪ್ರಳಯ ಸಾಮಾನ್ಯವಾಗಿ ಪಾಶ್ಚಾತ್ಯರಲ್ಲಿ ಚಾಲ್ತಿಯಲ್ಲಿರುವಂತೆ ಮಾನವ ಪಾಪದ ಪ್ರತೀಕಾರವಾಗಿ ಪರಿಗಣಿತವಾಗದೆ ಅಥವಾ ಮಾನವಕುಲದ ನಾಶಕ್ಕೆ ಕಾರಣವಾಗಿರದೆ, ಮನುಷ್ಯ ತನ್ನ ಮುಖ್ಯ ಆರ್ಥಿಕ ಚಟುವಟಿಕೆಯಾದ ವ್ಯವಸಾಯವನ್ನು ನಿರಾಕರಿಸಿದ ಆದಿ ಸ್ಥಿತಿಯದಾಗಿದೆ. ಇಷ್ಟೇ ಅಲ್ಲದೆ ಜಲಪ್ರಳಯ ತಾನಾಗಿಯೇ ಹಿಮ್ಮೆಟ್ಟುವುದಿಲ್ಲ. ಬದಲಾಗಿ ವಿಮೋಚನಾ ವೀರನ ಪ್ರಯತ್ನದಿಂದ ಜಯಿಸಲ್ಪಡುತ್ತದೆ. ಹೀಗಾಗಿ ಈ ಜಲಪ್ರಳಯ ಪುರಾಣ ಚೀನಿಸಮಾಜದ ಸೃಷ್ಟಿಗೆ ಸಂಬಂಧಿಸಿದ ಪುರಾಣವಾಗಿ ಪರಿಗಣಿತವಾಗಿದೆ. ಧಾರ್ಮಿಕ ಗ್ರಂಥ ಸಂಪ್ರದಾಯ ಈ ಬಗೆಯ ಅನೇಕ ಪ್ರಳಯ ಕಥೆಗಳನ್ನು ಹೊಂದಿದೆ.

ವಿಶೇಷ ಗಮನವನ್ನು ಹರಿಸುವಷ್ಟು ಜನಪದಕಥೆಗಳ ಶ್ರೀಮಂತ ಕಣಜ, ಚೀನ, ಇತರ ಜನಾಂಗಗಳು ಕೂಡಿಸಿರುವ ಜನಪದ ಕಥೆಗಳ ಸಂಗ್ರಹಕ್ಕಿಂತ ಚೀನದಲ್ಲಿ ಐತಿಹಾಸಿಕಕಾಲದಲ್ಲಿ ಸಂಗ್ರಹವಾದ ಕಥೆಗಳಲ್ಲಿ ವೈವಿಧ್ಯವಿರುವುದರಿಂದ ಅದನ್ನು ಗಮನಿಸುವುದು ಅಗತ್ಯ. ಚೀನದಲ್ಲಿ ಕಥೆಗಳನ್ನು ಜನಪದ ದೃಷ್ಟಿಯಲ್ಲೇ ಕಾಣುತ್ತಾರೆ; ಅವು ಜನಪ್ರಿಯವಾದವು. ಪಂಡಿತರ ದೃಷ್ಟಿಯನ್ನು ಮುಟ್ಟಲು ಯೋಗ್ಯವಲ್ಲ ಅವು ಎಂಬ ಭಾವನೆ ಇದ್ದಂತೆ ಕಾಣುತ್ತದೆ. ಈ ಪರಿಣಾಮವಾಗಿ ಇತ್ತೀಚಿನವರೆಗೂ ಜನಪ್ರಿಯ ಕಥೆಗಳು ಹಾಗೂ ಇತರ ಕಥೆಗಳ ನಡುವೆ ವ್ಯತ್ಯಾಸವಿಲ್ಲದಿರುವುದು ಕಂಡುಬರುತ್ತದೆ. ಎಲ್ಲ ಕಥೆಗಳಲ್ಲೂ ಜನಪದ ಕಥನಕ್ಕನುಗುಣವಾದ ವಿಷಯಗಳು ತುಂಬಿರುತ್ತವೆ. ಚೀನೀ ಜನಪದ ಕಥೆಗಳು ಯೂರೋಪಿನಲ್ಲಿ ಪ್ರಕಟವಾಗುವುದಕ್ಕೆ ನೂರಾರು ವರ್ಷಗಳ ಹಿಂದೆಯೇ ಚೀನದಲ್ಲಿ ಮೂಲಕಥೆಗಳನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಪ್ರಕಟಿಸಲಾಗಿತ್ತು. ಯೂರೋಪಿನಲ್ಲಿ ಪ್ರಚಲಿತವಾಗಿರುವ ಸಿಂಡ್ರೆಲ ಮಲಮಗಳೊಬ್ಬಳು ರಾಜಕುಮಾರನನ್ನು ಮದುವೆಯಾದ ಕಥೆ, ಅದರ ಜಾನಪದ ಅಂಶಗಳೊಂದಿಗೆ 700 ವರ್ಷಗಳ ಹಿಂದೆಯೇ ತಾಂಗ್ ರಾಜಸಂತತಿಯ ಕಾಲದಲ್ಲಿ ಟು ಅನ್ ಚುಂಗ್ ಷಿ ಎಂಬಾತನ ಯೂ ಯಾಂಗ್ ಟ್ಸಾ ಟ್ಸು ಗ್ರಂಥದಲ್ಲಿ ಪ್ರಕಟವಾಗಿತ್ತು. ಕೆಲವು ಸಂದರ್ಭಗಳಲ್ಲಿ ಚೀನದ ಐತಿಹಾಸಿಕ ಘಟನೆಗಳು, ಜನಪ್ರಿಯ ಕಥೆ, ಕಾದಂಬರಿ ಮತ್ತು ನಾಟಕಗಳ ರೂಪಕ್ಕೆ ಪರಿವರ್ತಿತವಾಗಿರುವುದೂ ಉಂಟು.

ಚೀನೀಯರಲ್ಲಿ ಎರಚಿದ ಮಣ್ಣಿನಿಂದ ಮತ್ತು ಚುಕ್ಕೆಗಳ ಗುರುತುಗಳಿಂದ ಶಾಸ್ತ್ರ ನುಡಿಯುವ ಪದ್ಧತಿ ಇದೆ. ಭವಿಷ್ಯ ಹೇಳುವುದರಲ್ಲಿ ಅವರು ಪ್ರವೀಣರು. ವರ್ಷ, ದಿನ ಮತ್ತು ಗಳಿಗೆಯ ಆಧಾರದ ಮೇಲೆ ಜನ್ಮಕುಂಡಲಿಯನ್ನು ಹಾಕುತ್ತಾರೆ. ಜೀವಿತಕ್ಕೆ ಸಂಬಂಧಪಟ್ಟಂತೆ ದೋಷಗಳಿದ್ದರೆ ಪರಿಹಾರ ನೀಡುತ್ತಾರೆ. ಜನ್ಮೋತ್ಸವ, ವಿವಾಹ ಮತ್ತು ಅಂತ್ಯಕ್ರಿಯೆಗಳನ್ನು ಪಂಚಾಂಗ ನೋಡಿ ನೆರವೇರಿಸುತ್ತಾರೆ. ಕೆಲವು ಆಹಾರಗಳ ಸೇವನೆ ಮತ್ತು ಸಂಭೋಗ ಇವುಗಳಿಗೂ ಶುಭಕಾಲಗಳು ಕ್ಲುಪ್ತವಾಗಿವೆ.

ಚೀನೀಯರ ಪಂಚಾಂಗದಲ್ಲಿಯೂ ಅವರ ಜಾನಪದ ಲಕ್ಷಣವನ್ನು ನೋಡಬಹುದಾಗಿದೆ. ಚೀನೀವರ್ಷ ಚಾಂದ್ರಮಾನವರ್ಷ ; ಅವರ ಪಂಚಾಂಗ ಸೂರ್ಯಪಂಚಾಂಗ. 12 ಚಾಂದ್ರಮಾನಮಾಸಗಳು; ಪ್ರತಿಮಾಸಕ್ಕೂ 28 ದಿನಗಳು. ಪ್ರತಿ ತಿಂಗಳಿಗೂ ಪ್ರಾಣಿಗಳ ಹೆಸರುಗಳನ್ನು ಇಟ್ಟಿದ್ದಾರೆ. ವರ್ಷದ ಮೊದಲ ಹುಣ್ಣಿಮೆಯೇ ಯುಗಾದಿ. ಇದು ಸರಿಸುಮಾರು ಚೈತ್ರಮಾಸದಲ್ಲಿ ಬರುತ್ತದೆ. ಅಂದು ಗೃಹದೇವತಾರಾಧನೆ ನಡೆಸುತ್ತಾರೆ. ಯುಗಾದಿಯ ಮೂರನೆಯ ದಿನ, ಶ್ರೀದೇವತೆಯನ್ನು ಅರ್ಚಿಸುತ್ತಾರೆ. ವರ್ಷದ ಮೊದಲ ತಿಂಗಳು ಅತ್ಯಂತ ಸಡಗರದ್ದು. ಆದರೆ ಮೊದಲ ದಿನ ಹಕ್ಕಿಗಳ ದಿನ, ಎರಡನೇ ದಿನ ನಾಯಿಗಳ ದಿನ, ಮೂರನೆಯದು ಹಂದಿಯದು. ಹೀಗೆ ಪ್ರತಿಯೊಂದು ದಿನಕ್ಕೂ ಒಂದೊಂದು ಪ್ರಾಣಿಯ ಪ್ರಾಮುಖ್ಯ ಇದೆ. ಬಾತುಗಳ ದಿನವಾದ ನಾಲ್ಕನೆಯ ದಿನ ಸಾರ್ವತ್ರಿಕ ಸ್ನಾನಗೃಹಗಳನ್ನು ತೆರೆಯುತ್ತಾರೆ. ಅಶ್ವದ ದಿನವಾದ ಏಳನೆಯ ದಿನ ಮನೆಯಲ್ಲೇ ಇದ್ದು ವರ್ಷವಿಡೀ ರೋಗಸಂಭವಿಸದಂತೆ ಕೆಂಪು ಅವರೆ ಬೀಜಗಳನ್ನು ತಿನ್ನುತ್ತಾರೆ. ಪುರುಷ 7 ಬೀಜಗಳನ್ನು, ಸ್ತ್ರೀ 14 ಬೀಜಗಳನ್ನು ತಿನ್ನಬೇಕು. ವಸಂತ ಕಾಲದಲ್ಲಿ (ಲೀ ಚುನ್) ದನ ಅಥವಾ ಕೋಣವನ್ನು ದೇವತೆಗಳಿಗೆ ಬಲಿಕೊಡುತ್ತಾರೆ. ವರ್ಷದ ಮೊದಲ ತಿಂಗಳ 15ದಿನ ದೀಪೋತ್ಸವ ಜರುಗುತ್ತದೆ. 19ನೆಯ ದಿನ ಇಲಿಗಳ ಮದುವೆ ನಡೆಯುವುದರಿಂದ ಎಲ್ಲರೂ ಬೇಗ ಮಲಗಿಕೊಳ್ಳುತ್ತಾರೆ. ಎರಡನೆಯ ಹುಣ್ಣಿಮೆಯಲ್ಲಿ ಸೂರ್ಯನಿಗೂ ಭೂದೇವಿಗೂ ಪೂಜೆ ಸಲ್ಲುತ್ತವೆ. ಮೂರನೆಯ ತಿಂಗಳು ಪಿತೃಗಳ ಸಮಾಧಿ ಪೂಜೆ ನಡೆಯುತ್ತದೆ. ನಾಲ್ಕನೆಯ ತಿಂಗಳು ಗೌತಮನ ಹುಟ್ಟು ಹಬ್ಬ; ಆರನೆಯ ತಿಂಗಳು ಸರ್ಪರಾಜ ಲುಂಗ್‌ವಾಂಗನಿಗೆ ಪೂಜೆ; ಏಳನೆಯ ತಿಂಗಳು ಹಸಿದ ಪ್ರೇತಗಳ ತಿಂಗಳು. ಆ ದಿನ ಸಣ್ಣ ಕಾಗದದ ದೋಣಿಗಳಲ್ಲಿ ಮೇಣದ ಬತ್ತಿಗಳನ್ನು ಹೊತ್ತಿಸಿ ನೀರಿನಲ್ಲಿ ತೇಲಿಬಿಡುತ್ತಾರೆ. ಎಂಟನೆಯ ತಿಂಗಳು ಸುಗ್ಗಿ; ಈ ತಿಂಗಳ 25ನೆಯ ದಿನ ನಗರದೇವತೆಯಾದ ಚೆಂಗ್ ಹುವಾಂಗನ ಹಬ್ಬ. ಒಂಬತ್ತನೇ ತಿಂಗಳು ಮೃತರನ್ನು ಸ್ಮರಿಸುವ ತಿಂಗಳು; ಹನ್ನೊಂದನೆಯ ತಿಂಗಳು ಮದುವೆಗಳ ಕಾಲ; ಹನ್ನೆರಡನೆಯ ತಿಂಗಳು ಮುಂಬರುವ ಹೊಸವರ್ಷಕ್ಕೆ ಸಿದ್ಧತೆಗಳಾಗುತ್ತವೆ. ಈ ತಿಂಗಳ 23ನೆಯ ದಿನ ಪಾಕಶಾಲೆಯ ದೇವತೆಯ ಚಿತ್ರವಿರುವ ಕಾಗದವನ್ನು ಸುಟ್ಟು ಅವನನ್ನು ಸ್ವರ್ಗಕ್ಕೆ ಕಳುಹಿಸುತ್ತಾರೆ. ಅವನು ಕುಟುಂಬದಲ್ಲಿ ಆ ವರ್ಷ ನಡೆದ ವಿಷಯಗಳನ್ನು ಮತ್ತು ಕುಟುಂಬದ ಜನರ ವರ್ತನೆಯನ್ನು ಸ್ವರ್ಗದಲ್ಲಿ ವರದಿ ಮಾಡುತ್ತಾನೆ.

ಜೀವಿತಕ್ಕೆ ಸಂಬಂಧಪಟ್ಟಂತೆ ಚೀನದಲ್ಲಿ ಹಲವಾರು ಹಬ್ಬಗಳಿವೆ. ಹುಟ್ಟಿನಿಂದ ಸಾವಿನವರೆಗೆ ಅನುಸರಿಸುವ ಸಂಸ್ಕಾರಗಳು ಜಾನಪದ ಹಾಗೂ ಸಾಮಾಜಿಕ ವೈಶಿಷ್ಟ್ಯವುಳ್ಳವು. ಅವುಗಳಲ್ಲಿ ಕೆಲವು ಮೂಢನಂಬಿಕೆಗಳಿಂದ ಕೂಡಿವೆ; ಕೆಲವು ಜೀವಿತ ಸಮಸ್ಯೆಗಳನ್ನು ಎದುರಿಸಲು ಧೈರ್ಯತಂದುಕೊಡುವ ಸಾಧನೆಗಳಾಗಿವೆ. ನಗರದಲ್ಲಿ ಗಾದೆ ಮತ್ತು ನಲ್ನುಡಿಗಳನ್ನು ಚೀಟಿಗಳಲ್ಲಿ ಬರೆದು ಗೋಡೆಗಳ ಮೇಲೆ ಅಂಟಿಸುವ ಪದ್ಧತಿಯೂ ಇತ್ತು.

ಪಿತೃಪ್ರಧಾನ ಕುಟುಂಬಗಳೇ ಹೆಚ್ಚಾಗಿರುವ ಚೀನದಲ್ಲಿ ಕುಟುಂಬದ ಯಜಮಾನ ಕುಟುಂಬದ ಪುರೋಹಿತ ಹಾಗೂ ಮುಖಂಡ. ಉಳಿದವರು ಅವನಿಗೆ ಅಧೀನ. ಪರಲೋಕವೈದಿದ ಪೂರ್ವಜರು ಜೀವಂತ ವಂಶಜರಿಗೆ ನೆರವು ನೀಡುತ್ತಾರೆ. ಕುವಾನ್‌ಯಿನ್ ದೇವತೆಯೇ ಅವರ ಮಹಾಮಾತೆ. ಮಗು ಹುಟ್ಟಿದಾಗ ಅವಳ ದೇಗುಲದಿಂದ ಹಳೆಯ ಪಾದರಕ್ಷೆಯನ್ನು ಕದ್ದು ಅದಕ್ಕೆ ಪ್ರತಿಯಾಗಿ ಹೊಸದನ್ನು ಇಟ್ಟುಬರುವ ಪದ್ಧತಿ ಇದೆ. ಇದು ಮಕ್ಕಳಿಗೆ ರಕ್ಷಣೆ. ಮಕ್ಕಳಾಗದವರು ಸಂತಾನಕ್ಕಾಗಿ ಅವಳನ್ನು ಪ್ರಾರ್ಥಿಸುತ್ತಾರೆ. ಪವಿತ್ರ ಪರ್ವತದ ಕುಮಾರಿಯರನ್ನು ಪೂಜಿಸುತ್ತಾರೆ. ಪರ್ವತರಾಣಿಯ ಹೆಸರು ಟೈಷನ್. ಆಕೆಯ ಸಖಿಯರು ಸಂವೃದ್ಧಿಯ ದೇವಿಯರು. ಮಕ್ಕಳನ್ನು ದಯಪಾಲಿಸುವವರು ಇತ್ಯಾದಿ. ಸಾಹಿತ್ಯಕ್ಕೂ ದೇವತೆಗಳಿದ್ದಾರೆ. ಪುಣ್ಯಸ್ಥಳಗಳಿಗೆ ಯಾತ್ರೆ ಹೋಗುವ ಪದ್ಧತಿ ಇದೆ. ಸಂಭೋಗಕ್ಕೆ ಶಾಸ್ತ್ರೀಯ ಆಚರಣೆಗಳಿವೆ. ಬರೀ ಹೆಣ್ಣು ಮಕ್ಕಳಾಗುವ ಮನೆಗಳಲ್ಲಿ ಕೊನೆಯ ಹೆಣ್ಣಿಗೆ ಹುಡುಗನ ಹೆಸರನ್ನಿಟ್ಟು ಹೆಣ್ಣುಮಕ್ಕಳಾಗದಂತೆ ತಡೆಯಬಹುದೆಂಬ ನಂಬಿಕೆ ಇದೆ. ಗರ್ಭಿಣಿ ಚಿನ್ನದ ಕತ್ತಿಯನ್ನು ಕೊರಳಿಗೆ ಕಟ್ಟಿಕೊಂಡು ಭೂತಚೇಷ್ಟೆಗಳಿಂದ ಪಾರಾಗಬಹುದು. ಹುಟ್ಟುವ ಮಗು ಹೆಣ್ಣೊ ಗಂಡೋ ಎಂಬುದಕ್ಕೆ ಭವಿಷ್ಯವನ್ನು ನುಡಿಯುತ್ತಾರೆ. ಹೆರಿಗೆ ಸುಗಮವಾಗಲು ಮಂತ್ರಿಸಿದ ಕಾಗದವನ್ನು ಸುಡುತ್ತಾರೆ; ಅಥವಾ ಗರ್ಭಿಣಿಯ ಕೊರಳಿಗೆ ಕಟ್ಟುತ್ತಾರೆ. ಇಲ್ಲವೆ ಚೂರು ಮಾಡಿ ಚಹದೊಂದಿಗೆ ಬೆರೆಸಿ ಕುಡಿಸುತ್ತಾರೆ. ಗರ್ಭಿಣಿಯರು ಸಣ್ಣ ಕನ್ನಡಿಗಳನ್ನು ಹೊತ್ತಿದ್ದರೆ ಭೂತಗಳು ಕನ್ನಡಿಯಲ್ಲಿ ತಮ್ಮ ಆಕೃತಿಯನ್ನು ನೋಡಿ ಹೆದರಿ ಗರ್ಭಿಣಿಯರ ಹತ್ತಿರಕ್ಕೆ ಬರದೆ ಓಡುತ್ತವೆ ಎಂಬ ನಂಬಿಕೆ ಚೀನಿಯರದು. ಸೂತಿಕಾಗೃಹದಲ್ಲಿ ಕೆಂಪು ಮೇಣದ ಬತ್ತಿಯನ್ನು ಉರಿಸಿದರೆ ಭೂತಗಳು ಮಗುವಿನ ಒಡಲನ್ನು ಪ್ರವೇಶಿಸುವುದಿಲ್ಲವೆಂಬ ನಂಬಿಕೆಯೂ ಇದೆ.

ವಿವಾಹಪದ್ಧತಿಯೂ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡಿದೆ. ದಳ್ಳಾಳಿಯ ಮೂಲಕ ಮದುವೆಯ ಬಗ್ಗೆ ವ್ಯವಹಾರ ನಡೆದಮೇಲೆ ಎಂಟು ಅಕ್ಷರಗಳಿಂದ ಕೂಡಿದ ಕಾಗದದ ಚೂರುಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಆ ತರುವಾಯ ವಿವಾಹ ಸಾಧ್ಯವೆ ಇಲ್ಲವೆ ಎಂಬುದನ್ನು ಜ್ಯೋತಿಷಿ ನಿಶ್ಚಯಿಸುತ್ತಾನೆ. ವಿವಾಹಗಳು ಶುಕ್ಲಪಕ್ಷದಲ್ಲಿ ನಡೆಯುತ್ತವೆಯೇ ಹೊರತು ಕೃಷ್ಣಪಕ್ಷದಲ್ಲಲ್ಲ. ವಿವಾಹಕ್ಕೆ ಮುಂಚೆ ವಧು ಮೃತಪಟ್ಟರೆ ಅವಳ ಪಾದರಕ್ಷೆಗಳನ್ನು ವರನಿಗೆ ಕೊಡುತ್ತಾರೆ. ವಿವಾಹ ನಡೆದ ಮೇಲೆ ವಧುವಿಗೆ ತಾಯಿತಗಳನ್ನು ಕಟ್ಟುತ್ತಾರೆ. ಅದರಿಂದ ಆಕೆ ಅತ್ತೆಯ ಕಾಟದಿಂದ ಪಾರಾಗುತ್ತಾಳೆ.

ಸತ್ತವನನ್ನು ಸ್ವರ್ಗಕ್ಕೇರಿಸುವ ಸಮಾರಂಭ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಅವಸಾನ ಸನ್ನಿಹಿತವಾದವನನ್ನು ಮನೆಯಿಂದ ಹೊರಗೆ ತಂದು ಮಲಗಿಸುವುದರಿಂದ ಪ್ರೇತ ಗೃಹಪ್ರವೇಶ ಮಾಡದಂತೆ ತಡೆಯುವುದು ಸಾಧ್ಯವೆಂಬ ನಂಬಿಕೆಯಿದೆ. ಅವನ ತಲೆದಿಂಬನ್ನು ಸುಡುತ್ತಾರೆ. ಮೆರವಣಿಗೆ ಕುರ್ಚಿಯಲ್ಲಿ ಶವವನ್ನು ಸ್ಥಳದೇವತೆಯ ಗುಡಿಗೆ ತೆಗೆದುಕೊಂಡು ಹೋಗುತ್ತಾರೆ. ಅವರ ಪರಲೋಕದ ಉಪಯೋಗಕ್ಕಾಗಿ ಆಹಾರ, ಹಣ ಮೊದಲಾದವು ಸಾಂಕೇತಿಕವಾಗಿ ವಸ್ತುಗಳ ರೂಪದಲ್ಲಿ ಅವನ ಹಿಂದೆ ಹೋಗುತ್ತವೆ. ಟುಟಿ ಎಂಬ ಗ್ರಾಮದೇವತೆಯ ಗುಡಿಯಲ್ಲಿ ಮೂರು ದಿನಗಳ ಸಂಸ್ಕಾರಗಳು ನಡೆದ ತರುವಾಯ ಶವವನ್ನು ಜಿಲ್ಲಾದೇವತೆಯ ಗುಡಿಗೆ ಕೊಂಡೊಯ್ಯುತ್ತಾರೆ. ವಂಶೀಕರ ಸಮಾಧಿಗಳಿರುವ ಸ್ಥಳದಲ್ಲಿ ಅವನನ್ನು ಹೂಳುತ್ತಾರೆ. ಜ್ಯೋತಿಷ್ಯನ ಲೆಕ್ಕಾಚಾರದ ಪ್ರಕಾರ ಒಂದು ಶುಭದಿನದಲ್ಲಿ ಮೃತನ ಹುಟ್ಟು, ಸಾವು ಹಾಗೂ ಗುಣಾತಿಶಯಗಳನ್ನು ವರ್ಣಿಸುವ ಸಮಾಧಿಶಿಲೆಯನ್ನು ನೆಡುತ್ತಾರೆ. ಸತ್ತವನಿಗೆ ಮತ್ತು ಇತರರಿಗೆ ಸಂತಾಪವನ್ನು ವ್ಯಕ್ತಪಡಿಸಲು ಹಣಕ್ಕಾಗಿ ನೇಮಕವಾಗಿರುವ ಜನ ಗಟ್ಟಿಯಾಗಿ ರೋದಿಸುತ್ತಾರೆ. ಮೃತನ ಸೂಳೆಯರ ಹಾಗೂ ಸೇವಕರ ಚಿತ್ರಗಳನ್ನು ಮತ್ತು ಅವನ ಪರಲೋಕದ ಖರ್ಚಿಗೆ ಬೇಕಾದ ಹಣ, ಆಹಾರ ಮೊದಲಾದ ಭೋಗವಸ್ತುಗಳ ಚಿತ್ರಗಳನ್ನು ಬರೆದ ಕಾಗದಗಳನ್ನು ಸಮಾಧಿ ಬಳಿ ಸುಡುತ್ತಾರೆ. ಮೃತನ ಆತ್ಮಶಾಂತಿಗೆ ಒಂದು ವರ್ಷಕಾಲ ಕ್ಲುಪ್ತಕಾಲಗಳಲ್ಲಿ ಸಂಸ್ಕಾರಗಳು ನಡೆಯುತ್ತವೆ.

ಸಾವಿರಾರು ವರ್ಷಗಳ ಹಿಂದೆ ಇದ್ದಂತೆ ಈಗಲೂ ಜೀವಂತವಾಗಿರುವ ಚೀನೀ ಜಾನಪದ ಚೀನೀಯರ ಸಾರ್ವತ್ರಿಕ ನಂಬಿಕೆಗಳನ್ನು ಹಾಗೂ ಪದ್ಧತಿಗಳನ್ನು ವ್ಯಕ್ತಪಡಿಸುತ್ತದೆ. ಚೀನೀಯರು ಹೊಸದೇವತೆಗಳನ್ನು ಸೃಷ್ಟಿಮಾಡುವುದರಲ್ಲಿ ಹಾಗೂ ವಿದೇಶೀ ದೇವತೆಗಳನ್ನು ಅಂಗೀಕರಿಸುವುದರಲ್ಲಿ ಪ್ರವೀಣರು, ಉದಾರಿಗಳು. ಈ ಪರಿಸ್ಥಿತಿಯಲ್ಲಿ ಹೊಸ ಐತಿಹ್ಯಗಳಿಗೂ ಅವರು ಅವಕಾಶ ನೀಡಿದ್ದಾರೆ. ಗ್ರೀಕರ ಇಲ್ಲವೆ ಭಾರತೀಯರ ಪುರಾಣಕಥೆ ಮತ್ತು ಆಖ್ಯಾನಕಗಳು ಮಿತವಾಗಿರುವುದರಿಂದ ಅವನ್ನು ಅಧ್ಯಯನ ಮಾಡಿ ರಕ್ಷಿಸಲು ಪ್ರಯತ್ನಗಳು ನಡೆದಿವೆ. ಆದರೆ ಚೀನೀಪುರಾಣ ಮತ್ತು ಐತಿಹ್ಯಗಳ ವ್ಯಾಪ್ತಿ ಗ್ರಹಿಸಲಾರದಷ್ಟು ಅಪಾರವಾದ್ದರಿಂದ ಅಧ್ಯಯನಕ್ಕೆ, ಸಂಗ್ರಹಕ್ಕೆ ತೊಡಕುಗಳಿವೆ. ಅವರಲ್ಲಿ ಸ್ವರ್ಗ ಪಾತಾಳಗಳಿಗೆ ಸಂಬಂಧಪಟ್ಟ ಶ್ರೀಮಂತವರ್ಗದ ದೇವತೆಗಳು ಲೆಕ್ಕವಿಲ್ಲದಷ್ಟು ಇದ್ದಾರೆ. ನಭೋಮಂಡಲದ ಲಕ್ಷಾಂತರ ಮಂದಿ ದೇವತೆಗಳು ನಕ್ಷತ್ರಗಳನ್ನು ಪ್ರತಿನಿಧಿಸುತ್ತಾರೆ. ಆತ್ಮನ ಬಗ್ಗೆ ಅಸಂಖ್ಯಾತ

ಭೂತ ಪ್ರೇತಗಳಿವೆ. ತಮ್ಮ ರೂಪವನ್ನು ಬದಲಾಯಿಸುವ ಪ್ರಾಣಿಗಳಿವೆ, ಸಸ್ಯಗಳಿವೆ, ಶಿಲೆಗಳಿವೆ. ಚೀನೀ ಪರಂಪರೆ, ನಂಬಿಕೆ, ರೂಢಿಗಳು ಸಮುದಾಯದ ಮತ್ತು ವ್ಯಕ್ತಿಯ ಯೋಗಕ್ಷೇಮಕ್ಕಾಗಿ ರಕ್ಷಿತವಾಗಿವೆ. ಚೀನೀಯರ ಭಯ–ಭೀತಿಗಳನ್ನು ಹಾಗೂ ಆಸೆ–ಆಕಾಂಕ್ಷೆಗಳನ್ನು ಅವು ಅಭಿವ್ಯಕ್ತಿಪಡಿಸುತ್ತವೆ. ಹೀಗಾಗಿ ವೈಚಿತ್ರ್ಯಮಯ ಸಾಮಾಜಿಕ ಪದ್ಧತಿಗಳನ್ನು ರೂಪಿಸಿರುವ ಚೀನೀ ಜಾನಪದದ ವೈಶಿಷ್ಟ್ಯವನ್ನು ಗ್ರಹಿಸುವುದು ಅಷ್ಟೇನೂ ಸುಲಭಸಾಧ್ಯವಲ್ಲ. (ಪಿ.ಕೆ.ಆರ್‌ಎ.)

**ಚೀನೀ–ಟಿಬೆಟನ್ ಭಾಷಾ ಪರಿವಾರ :** ಚೀನ, ಟಿಬೆಟ್, ಬರ್ಮ(ಈಗಿನ ಮಾಯನ್ಮಾರ್), ಥೈಲೆಂಡ್, ಸಯಾಮ್, ಇಂಡೋ–ಚೀನ ಮುಂತಾದ ದೇಶಗಳ ಕೆಲವು ಭಾಷೆಗಳು ಸೇರಿ ಆದ ಭಾಷಾಕುಟುಂಬ. ಇದರಲ್ಲಿ ಸುಮಾರು ಒಂದು ನೂರ ಹದಿನೈದಕ್ಕೂ ಹೆಚ್ಚು ಭಾಷೆಗಳು ಸೇರುತ್ತವೆ. ಈ ಪರಿವಾರವನ್ನು ಕೆಲವು ವಿದ್ವಾಂಸರು ಚೀನೀ ಭಾಷಾ ಪರಿವಾರವೆಂತಲೂ ಚೀನೀ–ಟಿಬೆಟನ್ ಭಾಷಾಪರಿವಾರವೆಂತಲೂ, ಏಕಾಕ್ಷರ ಪರಿವಾರವೆಂತಲೂ, ಸೈನೋ–ಟಿಬೆಟನ್ ಭಾಷಾಪರಿವಾರವೆಂತಲೂ, ಇಂಡೊ–ಚೀನೀ ಭಾಷಾ ಪರಿವಾರವೆಂತಲೂ ಕರೆದಿದ್ದಾರೆ. ಸದ್ಯಕ್ಕೆ ಇವನ್ನು ಸಿನೋ–ಟಿಬೆಟನ್ ಭಾಷಾ ಪರಿವಾರವೆಂದು ಕರೆಯುವುದು ವಾಡಿಕೆ. ಈ ಪರಿವಾರ ಜಗತ್ತಿನ ಹಿರಿಯ ಭಾಷಾಪರಿವಾರಗಳಲ್ಲಿ ಒಂದು.; ಈ ಪರಿವಾರದ ಭಾಷೆಗಳನ್ನು ಆಡುವ ಜನರ ಸಂಖ್ಯೆಯನ್ನು ಆಧರಿಸಿ ಹೇಳುವುದಾದರೆ, ಇಂಡೋ ಯೂರೋಪಿಯನ್ ಭಾಷಾ ಪರಿವಾರವನ್ನು ಬಿಟ್ಟರೆ, ವಿಶ್ವದಲ್ಲಿ ಇದೇ ಎರಡನೆಯ ದೊಡ್ಡ ಭಾಷಾ ಪರಿವಾರವೆನಿಸಿಕೊಳ್ಳುತ್ತದೆ. ಇಡೀ ಏಷ್ಯ ಖಂಡದಲ್ಲಿಯೇ ಹೆಚ್ಚು ಜನ ಆಡುತ್ತಿರುವ ಭಾಷೆಗಳು ಈ ಪರಿವಾರಕ್ಕೆ ಸೇರಿದವಾಗಿವೆ. ಇದರಲ್ಲಿ ಚೀನೀ ಭಾಷೆಯೇ ಬಹು ಮುಖ್ಯವಾದುದು. ಇದನ್ನು ಇಂಡೋಚೀನ, ಚೀನ ಮುಂತಾದ ದೇಶಗಳಲ್ಲಿನ ಹೆಚ್ಚು ಜನ ಬಳಸುತ್ತಿದ್ದಾರೆ.

ಚೀನೀ–ಟಿಬೆಟನ್ ಪರಿವಾರಕ್ಕೆ ಸೇರಿದ ಭಾಷೆಗಳನ್ನು ಮುಖ್ಯವಾಗಿ ಎರಡು ವರ್ಗಗಳಲ್ಲಿ ವಿಂಗಡಿಸಬಹುದು. ಒಂದು ಟಿಬೆಟೊ–ಬರ್ಮೀ ಭಾಷಾವರ್ಗ; ಮತ್ತೊಂದು ಟಿಬೆಟೊ–ಚೀನೀ ವರ್ಗ. ಕೆಲವು ವಿದ್ವಾಂಸರು ಈ ಭಾಷಾ ಪರಿವಾರವನ್ನು ಸೈನೋಟಿಬೆಟನ್ ಪರಿವಾರವೆಂದು ಕರೆದು ಟಿಬೆಟೊ–ಬರ್ಮೀ, ಟಿಬೆಟೊ–ಚೀನೀ ಮತ್ತು ಸ್ಯಾಮಿ–ಥೈ ಎಂದು ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ. ಮತ್ತೆ ಕೆಲವರು ಈ ಪರಿವಾರವನ್ನು ಚೀನೀ ಭಾಷಾಪರಿವಾರವೆಂದು ಕರೆದು ಇದನ್ನು ಚೀನೀ, ಸ್ಯಾಮಿ, ಟಿಬೆಟಿನ್ ಮತ್ತು ಬರ್ಮೀ ಭಾಷಾವರ್ಗಗಳೆಂದು ನಾಲ್ಕು ಬಗೆಯಲ್ಲಿ ವಿಂಗಡಿಸಿದ್ದಾರೆ. ಮೇಲಿನ ವರ್ಗೀಕರಣ ಏನೇ ಆಗಿದ್ದರೂ ಈ ಭಾಷೆಗಳಲ್ಲಿ ಕಂಡುಬರುವ ಕೆಲವು ಲಕ್ಷಣಗಳನ್ನು ಗಮನಿಸಿ ಟಿಬೆಟೊ–ಚೀನೀ ಮತ್ತು ಟಿಬೆಟೋ–ಬರ್ಮೀ ಭಾಷಾವರ್ಗಗಳೆಂದು ಎರಡಾಗಿ ವರ್ಗೀಕರಿಸುವುದು ಹೆಚ್ಚು ಸೂಕ್ತವಾಗಿ ತೋರುತ್ತದೆ.

1. ಟಿಬೆಟೊ–ಚೀನೀ ಭಾಷಾವರ್ಗ: ಈ ವರ್ಗದಲ್ಲಿ ಚೀನಿ–ಸ್ಯಾಮಿ, ಮತ್ತು ಚೀನೀ–ಥಾಯ್ ಎಂಬ ಎರಡು ಭಾಷಾಸಮುದಾಯಗಳು ಇವೆ. ಈ ವರ್ಗಕ್ಕೆ ಸೇರಿದ ಭಾಷೆಗಳಲ್ಲಿ ಸ್ಯಾಮಿ, ಶಾನ್, ಕರೆನ್, ಚೀನಿ, ಲಾವೋ, ಅಹೋಮ್, ಖಾಮ್ತಿ, ಅನಾಮಿ, ಮುಅಂಗ್ ಮುಂತಾದ ಭಾಷೆಗಳು ಮುಖ್ಯವಾಗಿವೆ. ಇವುಗಳಲ್ಲಿ ಚೀನೀಯೇ ಬಹು ಮುಖ್ಯವಾದ ಭಾಷೆ. ಇದರಲ್ಲಿ ಸಯಾಮ್ ಚೀನ, ಇಂಡೋಚೀನ, ಥೈಲೆಂಡ್ ಮುಂತಾದ ದೇಶಗಳ ಭಾಷೆಗಳು ಸೇರಿಕೊಂಡಿವೆ. ಇವುಗಳ ಲಕ್ಷಣವನ್ನು ಪರಸ್ಪರ ಹೋಲಿಸಿದಾಗ ಇವು ಹೆಚ್ಚು ಕಡಿಮೆ ಒಂದೇ ಆಗಿರುವುದು ಕಂಡುಬರುತ್ತದೆ. ಈ ಭಾಷೆಗಳನ್ನು ಕುರಿತು ಆಳವಾಗಿ ಆಲೋಚಿಸಿದಾಗ ಇವು ಆಯೋಗಾತ್ಮಕ ವರ್ಗದ ಭಾಷೆಗಳಾಗಿ ಕಂಡುಬರುತ್ತವೆ. ಮಾತ್ರವಲ್ಲದೆ, ಒಂದೇ ಪದ ಹತ್ತಾರು ಬೇರೆ ಬೇರೆ ಅರ್ಥಗಳನ್ನು ಸೂಚಿಸಬಲ್ಲ ಶಕ್ತಿಯನ್ನು ಪಡೆದುಕೊಂಡಿರುವುದು ಕಾಣುತ್ತದೆ. ಎರಡಕ್ಕಿಂತ ಹೆಚ್ಚು ಪದಗಳು ಸೇರಿ ವಿವಿಧ ವಾಕ್ಯಗಳಾಗುವ ಪರಿಪಾಟ ಈ ಭಾಷೆಗಳಿಗಿಲ್ಲ. ಪ್ರತಿಯೊಂದು ಪದವೂ ಸಾಮಾನ್ಯವಾಗಿ ಒಂದೇ ಅಕ್ಷರ ಉಳ್ಳದ್ದಾಗಿರುತ್ತದೆ. ಒಂದೇ ಸ್ಥಾನದಲ್ಲಿರುವ ಪದವನ್ನು ಉಚ್ಚಾರಣೆಯಲ್ಲಿ ಮಾತ್ರ ವ್ಯತ್ಯಾಸ ಮಾಡಿದರೆ ಅದು ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಒಂದೇ ಪದ ಇಲ್ಲಿ ನಾಮಪದ, ಕ್ರಿಯಾಪದ, ವಿಶೇಷಣ, ಕ್ರಿಯಾವಿಶೇಷಣವಾಗಿ ಕಾರ್ಯನಿರ್ವಹಿಸಬಲ್ಲದು. ಈ ಭಾಷೆಗಳಿಗೆ ಯಾವ ಒಂದು ನಿಯಮಬದ್ಧವಾದ ವ್ಯಾಕರಣವಿದ್ದಂತಿಲ್ಲ. ಕೆಲವು ಭಾಷೆಗಳಲ್ಲಿ ವ್ಯಾಕರಣಗಳು ಇವೆಯಾದರೂ ಅವುಗಳಲ್ಲಿ ಒಂದೇ ಬಗೆಯ ನಿಯಮ ಕಂಡುಬರುವುದಿಲ್ಲ. ಈ ಭಾಷೆಗಳಲ್ಲಿ ಅನುನಾಸಿಕ ಧ್ವನಿಗಳೇ ಹೆಚ್ಚು. ಇವನ್ನು ಟಿಬೆಟೋ–ಬರ್ಮೀ ಭಾಷಾವರ್ಗದ ಭಾಷೆಗಳೊಡನೆ ಹೋಲಿಸಿದಾಗ ಇವು ಸ್ವಲ್ಪ ಬೇರೆಯಾಗಿ ಕಂಡುಬರುತ್ತವೆ. ಮೂಲ ಲಕ್ಷಣಗಳು ಈ ಭಾಷೆಗಳಲ್ಲಿ ಇಲ್ಲದಿದ್ದರೂ ವ್ಯಾಕರಣ ವಿಚಾರಗಳಲ್ಲಿ ಇವು ಚೀನಿ–ಸ್ಯಾಮಿ ಭಾಷೆಗಳನ್ನೇ ಹೆಚ್ಚಾಗಿ ಹೋಲುತ್ತವೆ ಎನ್ನಬಹುದು. ಈ ವರ್ಗದ ಮಂಡರಿನ್, ಪೊಂಚೊ ನಿಂಗ್‌ಪೊ ಸ್ವತೊವೆಂಚೊ, ಮೆಹಸ್ಸೀನ್ ಮುಂತಾದ ಚೀನಿ ಉಪಭಾಷೆಗಳು ಬಹುಮಟ್ಟಿಗೆ ಹೆಚ್ಚು ಪ್ರಚಾರದಲ್ಲಿವೆ.

2. ಟಿಬೆಟೊ–ಬರ್ಮೀ ಭಾಷಾವರ್ಗ: ಈ ವರ್ಗಕ್ಕೆ ಸೇರಿದ ಭಾಷೆಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು.; ಟಿಬೆಟೊ ಹಿಮಾಲಯನ್ ಭಾಷಾ ಸಮುದಾಯ, ಉತ್ತರ ಅಸ್ಸಾಮಿ ಭಾಷಾ ಸಮುದಾಯ, ಅಸ್ಸಾಮಿ–ಬರ್ಮೀ ಭಾಷಾ ಸಮುದಾಯ. ಭಾರತ, ಚೀನ, ಬರ್ಮ ಮುಂತಾದ ದೇಶಗಳಲ್ಲಿ ಈ ಭಾಷೆಗಳು ಹೆಚ್ಚಾಗಿ ಕಂಡುಬರುತ್ತವೆ. ಚೀನ ಮತ್ತು ಭಾರತದ ನಡುವೆ ಇರುವ ಟಿಬೆಟ್ಟಿನ ಕೆಲವು ಭಾಗಗಳಲ್ಲಿ ಈ ಭಾಷೆಗಳನ್ನು ಆಡುವ ಜನ ಹೆಚ್ಚಾಗಿದ್ದಾರೆ. ಈ ಭಾಷೆಗಳು ಸಾಮಾನ್ಯವಾಗಿ ಚೀನೀ–ಸ್ಯಾಮಿ ಭಾಷೆಗಳಲ್ಲಿ ಕಂಡುಬರುವ ಕೆಲವು ಲಕ್ಷಣಗಳನ್ನು ಪಡೆದಿವೆಯಾದರೂ ಈ ವರ್ಗಕ್ಕೆ ಸೇರಿದ ಕೆಲವು ಇತರ ಭಾಷಾ ಪ್ರಭಾವಗಳ ಕಾರಣದಿಂದಾಗಿ ಮೂಲ ಲಕ್ಷಣವನ್ನು ಕಳೆದುಕೊಂಡಿವೆ. ಇವುಗಳಲ್ಲಿ ಕೆಲವು ತಮ್ಮದೇ ಆದ ಸಾಹಿತ್ಯವನ್ನು ಹೊಂದಿವೆ. ಬ್ರಾಹ್ಮೀ ಮತ್ತು ಖರೋಷ್ಠಿ ಲಿಪಿಗಳ ಮೂಲಕವೇ ಈ ಭಾಷೆಗಳ ಲಿಪಿಗಳಿಗೂ ಮೂಲವಿರಬಹುದೆಂದೂ ಸುಲಭವಾಗಿ ಊಹಿಸಬಹುದು. ಚೀನ, ಸಯಾಮ್, ಥೈಲೆಂಡ್ ಮುಂತಾದ ದೇಶದ ಭಾಷೆಗಳಲ್ಲಿನ ಕೆಲವು ಭಾಷೆಗಳು ಕೂಡ ಈ ಟಿಬೆಟೊ–ಬರ್ಮೀ ಭಾಷಾವರ್ಗದ ಲಕ್ಷಣವನ್ನು ಹೋಲುತ್ತವೆ.

ಟಿಬೆಟೊ–ಬರ್ಮೀ ಭಾಷಾವರ್ಗಕ್ಕೆ ಸೇರಿದ ಭಾಷೆಗಳನ್ನು ಹೀಗೆ ವರ್ಗೀಕರಿಸಬಹುದು:

(ಅ) ಟಿಬೆಟೊ–ಹಿಮಾಲಯನ್ ಭಾಷಾಸಮುದಾಯ :

1. ಪಶ್ಚಿಮೀ ವರ್ಗ : ಮಂಚಾಟಿ, ಛಂಭಾ, ಲಾಹುಲಿ, ಬುನ್ನ, ರಂಗ್ ಲೋಯಿ, ಕನಾಶೀ, ಕಸೌರಿ, ರಂಗ್‌ಕಾಸ್, ದರ್ಮಿಯಾ, ಚೌದಂಗ್‌ಸೀ ಮುಂತಾದ ಭಾಷೆಗಳು.

2. ಪೂರ್ವೀವರ್ಗ : ಧೀಮಾಲ್, ಥಾಮೀ, ಲಿಂಬೂ, ಯಾಖಾ, ಖಂಬು, ಜಿಮ್‌ದಾರ್, ಚೆಪಾಂಗ್, ಗುರುಂಗ್, ಮರ್ಮೀ, ಸುನ್ವರ್, ನೇವಾರಿ ಇತ್ಯಾದಿ ಭಾಷೆಗಳು.

(ಆ) ಉತ್ತರೀ ಅಸ್ಸಾಮಿ ಭಾಷಾ ಸಮುದಾಯ : ಅಕ್, ಧಫ್‌ಲಾ, ಅಬೋರ್ ಮಿರಿ ಮುಂತಾದ ಭಾಷೆಗಳು.

(ಇ) ಅಸ್ಸಾಮಿ–ಬರ್ಮೀ ಭಾಷಾ ಸಮುದಾಯ :

1 ಬೋಡೋನಾಗಾ : ಕಛಾರಿ, ಲಾಲುಂಗ್, ದಿಮಾಸಾ, ಗಾಕೋ, ರಾಭಾ, ತ್ರಿಪುರ ಮುಂತಾದ ಭಾಷೆಗಳು.

2 ಅಂಗಾಮಿ–ನಾಗಾಭಾಷಾವರ್ಗ ;

(a) ಪಶ್ಚಿಮೀ ವರ್ಗ: ಅಂಗಾಮೀ, ಸೇಮಾ ಮುಂತಾದ ಭಾಷೆಗಳು ಸೇರಿವೆ.

(b) ಮಧ್ಯ ವರ್ಗ: ಅ ಓ, ತೆನ್‌ಸ್ವಾನಾಗ, ಮುಂತಾದ ಭಾಷೆಗಳು ಇವೆ.

(c) ಪೂರ್ವೀ ವರ್ಗ: ಅಂಗ್‌ವಾಂಕ್, ತಮ್ಲು, ಬಗ್‌ಪರಾ, ಮುತೋನಿಅ, ನಮ್ ಸಂಗೀಯ, ಚಾಂಗ್ ಮುಂತಾದ ಭಾಷೆಗಳು ಸೇರಿವೆ.

3 ನಾಗ ಕುಕಿ–ಚಿನ್ ಭಾಷಾ ವರ್ಗ : ಕುಕಿ, ಚಿನ್ ಮುಂತಾದ ಭಾಷೆಗಳು ಸೇರಿವೆ.

ಟಿಬೆಟೊ–ಬರ್ಮೀ ಭಾಷಾವರ್ಗಕ್ಕೆ ಸೇರಿದ ಎಲ್ಲ ಭಾಷೆಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅವುಗಳಲ್ಲಿ ಚೀನೀ ಭಾಷೆಯ ಕೆಲವು ಗುಣಗಳು ಕಂಡುಬರುತ್ತವೆಯಾದರೂ ಕೆಲವು ಭಾಷೆಗಳಲ್ಲಿ ಆ ಗುಣಗಳು ಈಗ ಮಾಯವಾಗಿವೆ. ಈ ವರ್ಗದ ಕೆಲವು ಭಾಷೆಗಳು ಸಾಹಿತ್ಯ ಹಾಗೂ ಲಿಪಿ ಸೌಲಭ್ಯವನ್ನು ಪಡೆದುಕೊಂಡಿವೆ. ಹಿಮಾಲಯನ್ ಭಾಷಾಸಮುದಾಯದ ಕೆಲವು ಭಾಷೆಗಳಲ್ಲಿ ಮಾತ್ರ ಇಂಡೋಆರ್ಯನ್ ಭಾಷಾ ಪರಿವಾರದ ಕೆಲವು ಮುಖ್ಯ ಲಕ್ಷಣಗಳು ಕಂಡುಬರುತ್ತವೆ.

ಭಾರತದ ಹಲವಾರು ಕಡೆಗಳಲ್ಲಿ ಚೀನೀ–ಟಿಬೆಟನ್ ಪರಿವಾರಕ್ಕೆ ಸೇರಿದ ಭಾಷೆಗಳನ್ನು ಆಡುವ ಜನರಿದ್ದಾರೆ. ಭಾರತ ಹಾಗೂ ಟಿಬೆಟ್ ದೇಶಗಳ ನಡುವೆ ಕಂಡುಬರುವ ಹಲವಾರು ಕಡೆಗಳಲ್ಲಿ ಚೀನೀಭಾಷೆಯನ್ನು, ಅಸ್ಸಾಮಿನ ಕೆಲವು ಕಡೆಗಳಲ್ಲಿ ಕುಕಿ, ಚಿನ್, ಅಂಗಾಮಿ, ಸೇಮಾ ಕಛಾರಿ ಮುಂತಾದ ಭಾಷೆಗಳನ್ನು ತ್ರಿಪುರ ಮುಂತಾದ ಕಡೆಗಳಲ್ಲಿ ತ್ರಿಪುರಿ, ರಾಭಾ, ಆಕ್, ಮಿರಿ ಮುಂತಾದ ಭಾಷೆಗಳನ್ನು ಹಿಮಾಲಯನ್ ಭೂಭಾಗದಲ್ಲಿ ಚಂಬಾ, ಲಾಹುಲಿ, ಕಸೌರಿ ಮುಂತಾದ ಭಾಷೆಗಳನ್ನು ನೇಪಾಳ, ಭೂತಾನ ಮುಂತಾದ ಪ್ರದೇಶಗಳಲ್ಲಿ ಈ ವರ್ಗಕ್ಕೆ ಸೇರಿದ ಹಲವಾರು ಭಾಷೆಗಳನ್ನು–ಆಡುವ ಜನ ಅಲ್ಲಲ್ಲಿ ಕಂಡುಬರುತ್ತಾರೆ. ಹಾಗೆಯೇ ಬಾಂಗ್ಲಾ, ಪಶ್ಚಿಮಬಂಗಾಳ, ಅಸ್ಸಾಮಿನ ಹಲವಾರು ಕಡೆಗಳಲ್ಲಿ ಬರ್ಮೀಭಾಷೆಗಳನ್ನು ಆಡುವ ಜನರನ್ನು ಕಾಣಬಹುದು. (ಕೆ.ಕೆ.ಜಿ.)

**ಚೀನೀ ತತ್ತ್ವ :** ಚೀನೀತತ್ತ್ವ ಭಾರತದ ತತ್ತ್ವದಂತೆಯೇ ತುಂಬ ಪ್ರಾಚೀನವಾದ್ದು. ಬೌದ್ಧ ತತ್ತ್ವ ಚೀನಕ್ಕೆ ಹರಡಿ ಅಲ್ಲಿನ ತತ್ತ್ವಗಳಲ್ಲಿ ಒಂದು ಮುಖ್ಯ ತತ್ತ್ವವಾಗಿ, ಭಾರತದಲ್ಲಿ ಕ್ಷೀಣಗೊಂಡ ಮೇಲೂ ಅಲ್ಲಿ ಅದು ಸ್ಥಿರವಾಗಿ ನೆಲೆಸಿತು. ಪ್ರಶ. ಆರನೆಯ ಶತಮಾನದಲ್ಲಿ ಬೌದ್ಧನಾದ ಪರಮಾರ್ಥ ಭಾರತೀಯ ನ್ಯಾಯ ಗ್ರಂಥಗಳನ್ನು ಚೀನೀಭಾಷೆಗೆ ಪರಿವರ್ತಿಸಿದ. ಪ್ರಶ. ಏಳನೆಯ ಶತಮಾನದಲ್ಲಿ ಹ್ಯುಯೆನ್‌ತ್ಸಾಂಗ್ ತರ್ಕಗ್ರಂಥಗಳನ್ನು ಚೀನೀಭಾಷೆಗೆ ಭಾಷಾಂತರಿಸಿ ಚೀನಕ್ಕೆ ತೆಗೆದುಕೊಂಡು ಹೋದ. ಹ್ಯುಯೆನ್‌ತ್ಸಾಂಗನ ಶಿಷ್ಯ ಕ್ವೈ–ಚಿ ಶಂಕರಸ್ವಾಮಿ 'ನ್ಯಾಯಪ್ರವೇಶ'ದ ಮೇಲೆ ಆರು ಸಂಪುಟಗಳ ಮಹಾವ್ಯಾಖ್ಯಾನವನ್ನು

ಬರೆದ. ಇದು ಚೀನೀಯರಲ್ಲಿ ತರ್ಕವಿಚಾರವಾಗಿ ತುಂಬ ಆಸಕ್ತಿ ಹುಟ್ಟಿಸಿತು. ಚೀನೀ ತತ್ತ್ವವೆಂದರೆ ನಾವು ತಿಳಿದಿರುವುದು ಕೂಂಗ್ ಘೂಟ್ಸೆ ಮತ್ತು ಲಾವೋಟ್ಸು ತತ್ತ್ವವೆಂದೇ. ಅವೆರೆಡು ಅದರ ಪ್ರಧಾನ ತತ್ತ್ವಗಳಾದರೂ ಅವು ಬಹು ರೂಪಾಂತರ ಪಡೆದಿವೆ. ನವೀನ ಕೂಂಗ್ ಘೂಟ್ಸೆ ತತ್ತ್ವವೆಂದು ಪ್ರ.ಶ. ಹನ್ನೆರಡನೆಯ ಶತಮಾನದ ಚು ಷೀ ಪ್ರತಿಪಾದಿಸಿದ ತತ್ತ್ವವನ್ನು ಕೂಂಗ್ ಘೂಟ್ಸೆ ಪುನರ್ಜನ್ಮ ತಾಳಿ ನೋಡಿದ್ದರೆ ಬಹುಶಃ ಅದು ತನ್ನದೆಂದು ಗುರುತು ಹಿಡಿಯಲಾಗುತ್ತಿರಲಿಲ್ಲ. ಹಾಗೆಯೇ ನೂತನ ಲಾವೋ ಟ್ಸು ತತ್ತ್ವವೂ ಹಿಂದಿನ ಲಾವೋ ಟ್ಸು ತತ್ತ್ವದಿಂದ ಬಹುದೂರ ಸಾಗಿದೆ.

ಚೀನೀತತ್ತ್ವದ ಮುಖ್ಯ ಘಟ್ಟಗಳು ಇವು ; ಇತಿಹಾಸಪೂರ್ವ ತತ್ತ್ವ ಪ್ರಶ.ಪೂ. 3000ದಿಂದ ಪ್ರಶ.ಪೂ. 1800ದ ವರೆಗಿನದು. ಈ ತತ್ತ್ವ ಪೌರಾಣಿಕ ಸಂತ ದೊರೆಗಳದು. ಇದು ಕತೆಯ ರೂಪದಲ್ಲಿದೆ. ಈ ಕತೆಗಳು ಬಹುಶಃ. ಪ್ರಶ.ಪೂ. 1800ರ ಆಚೆ ಹುಟ್ಟಿದವು. ಪ್ರಶ.ಪೂ. 1766 ರಿಂದ ಪ್ರಶ.ಪೂ. 1123ರ ವರೆಗಿನ ಕಾಲ ಷಾನ್‌ವಂಶದ ಅರಸರ ಕಾಲ. ಈ ಕಾಲದ್ದು ಮಂತ್ರವಾದಿಗಳ ತತ್ತ್ವ. ನಿಜವಾಗಿ ತತ್ತ್ವಚಿಂತನೆ ಪ್ರಾರಂಭವಾದದ್ದು ಚೌ ವಂಶದ ಅರಸರ ಕಾಲದಲ್ಲಿ (ಪ್ರಶ.ಪೂ. 1100 ರಿಂದ ಕ್ರಿ.ಪೂ. 256) ಕೂಂಗ್ ಘೂಟ್ಸೆ, ತಾಓ ತತ್ತ್ವದ ಪ್ರಥಮ ಪ್ರತಿಪಾದಕ ಯಾಂಗ್ ಚು, ಕೂಂಗ್ ಘೂಟ್ಸೆಯ ಪಂಥದ ಮೆನ್ಸಿಯಸ್, ನಾಮತತ್ತ್ವ ಪಂಥದ ಟೆಂಗ್ ಷೀ, ಹ್ಯೂಯಿ ಷಿಷ್ ಮತ್ತು ಕುಂಗ್ ಸುಂಗ್ ಲಂಗ್, ತಾಓ ತತ್ತ್ವದ ದ್ವಿತೀಯ ಪ್ರತಿಪಾದಕ ಲಾವೋ ಟ್ಸು, ತಾಓ ತತ್ತ್ವದ ತೃತೀಯ ಪ್ರತಿಪಾದಕ ಚ್ವಾಂಗ್ ಟ್ಸು, ಕೂಂಗ್ ಘೂಟ್ಸೆ ಅನುಯಾಯಿಯಾದ ಹುಸನ್ ಟ್ಸು, ಕಾನೂನಿನ ತತ್ತ್ವವನ್ನು ಪ್ರತಿಪಾದಿಸಿದ ಹ್ಯಾನ್ – ಫೈ – ಟ್ಸು ಈ ಕಾಲದವರು. ಪ್ರಶ. 221–589 ರವರೆಗೆ ಹಾನ್ ವಂಶದ ರಾಜರ ಕಾಲದಲ್ಲಿ ಚೀನದಲ್ಲಿ ಬೌದ್ಧತತ್ತ್ವ ಮುಂದಕ್ಕೆ ಬಂತು. ಪ್ರಶ. 590–617 ರ ಸೂಯಿ ಸಂತತಿಯ ಕಾಲದಲ್ಲೂ ಪ್ರಶ. 618–906ರವರೆಗಿನ ಟಾನ್ ಸಂತತಿಯವರ ಕಾಲದಲ್ಲೂ ಬೌದ್ಧತತ್ತ್ವ ಚೀನದ ತುಂಬ ಪ್ರಬಲ ತತ್ತ್ವವಾಗಿತ್ತು. ಅಲ್ಲಿಂದಾಚೆಗೆ ಅದು ಕ್ಷೀಣದೆಶೆಗೆ ಇಳಿಯಿತು. ಪ್ರ.ಶ. 960–1279ರವರೆಗೆ ಸೂಂಗ್ ಮನೆತನದ ಆಳಿಕೆಯಲ್ಲಿ ಕೂಂಗ್ ಘೂಟ್ಸೆ ತತ್ತ್ವ ಹೊಸ ರೂಪ ತಾಳಿ ಪ್ರಾಬಲ್ಯಕ್ಕೆ ಬಂತು. ಪ್ರಶ. 1280–1367ರ ವರೆಗಿನ ಯೂಅನ್ ಎಂಬ ಮಂಗೋಲಿಯ ವಂಶದ ಆಳಿಕೆಯಲ್ಲಿ ತತ್ತ್ವದಲ್ಲಿ ಆಸಕ್ತಿ ಕಡಿಮೆಯಾಯಿತು. 1368ರಲ್ಲಿ ಮಿಂಗ್ ವಂಶದವರು ಚೀನದ ಪ್ರಭುಗಳಾದಾಗ ಕೂಗ್ ಘೂಟ್ಸೆ ತತ್ತ್ವ 'ವಿಶ್ವಚೇತನ ತತ್ತ್ವ' ಎಂಬ ಹೊಸ ರೂಪದಲ್ಲಿ ಪುನರುತ್ಥಾನಗೊಂಡಿತು. ಪ್ರಶ. 1544–1611ರವರೆಗೆ ಚೀನಾ ಪರಕೀಯರಾದ ಮ್ಯಾಂಚೂ ವಂಶದವರ ಆಳ್ವಿಕೆಗೆ ಒಳಪಟ್ಟಿತು. ಈ ಕಾಲದಲ್ಲಿ ಚೀನಕ್ಕೆ ಪಾಶ್ಚಾತ್ಯರ ಸಂಪರ್ಕ ಉಂಟಾಯಿತು. ಪ್ರಶ. 16–17ನೆಯ ಶತಮಾನಗಳಲ್ಲಿ ಚೀನೀಯರು ಜೆಸ್ಯುಯಿಟ್ ಕ್ರೈಸ್ತಮತ ಪ್ರಚಾರಕರಿಂದ ಪಾಶ್ಚಾತ್ಯರ ಗಣಿತ ಮತ್ತು ಖಗೋಳಶಾಸ್ತ್ರಗಳನ್ನು ಕಲಿತರು. 19ನೆಯ ಶತಮಾನದಲ್ಲಿ ಚೀನದಲ್ಲಿ ಕ್ರೈಸ್ತಮತ ಪ್ರಚಾರ ಹೆಚ್ಚಿದಾಗ ಟಾನ್ ಸು–ಟ್ಸುಂಗ್ ಎಂಬಾತ ಕುಂಗ್ ಘೂಟ್ಸೆಯ ತತ್ತ್ವವನ್ನು ಆಧುನಿಕ ಭಾವನೆಗಳಿಗನುಸಾರವಾಗಿ ಬೆಳೆಸಿದ. ಎನ್‌ಘೂ ಎಂಬಾತ ಇಂಗ್ಲೆಂಡಿಗೆ ಹೋಗಿ ಹಕ್ಸ್ಲೀ. ಆ್ಯಡಮ್ ಸ್ಮಿತ್, ಹರ್ಬರ್ಟ್ ಸ್ಪೆನ್ಸರ್, ಜೆ. ಎಸ್. ಮಿಲ್ ಮುಂತಾದವರ ತತ್ತ್ವಗಳನ್ನು ಅಧ್ಯಯನ ಮಾಡಿ ಅವರ ಕೆಲವು ಗ್ರಂಥಗಳನ್ನು 1864–1895ರ ವರೆಗೆ ಚೀನೀ ಭಾಷೆಗೆ ಪರಿವರ್ತಿಸಿದ. ಆದರೂ ಚೀನೀಯರಿಗೆ 1919ರ ವರೆಗೆ ಅತ್ಯಂತ ಪ್ರಭಾವಶಾಲಿಗಳಾದ ಪಾಶ್ಚಾತ್ಯ ತತ್ತ್ವಜ್ಞರ ಪರಿಚಯವಾಗಲಿಲ್ಲ. 1919ರಲ್ಲಿ ಜಾನ್ ಡ್ಯೂಯಿ ಮತ್ತು ಬರ್‌ಟ್ರಂಡ್ ರಸೆಲ್ ಅವರು ಚೀನದಲ್ಲಿ ಕೊಟ್ಟ ಉಪನ್ಯಾಸಗಳಿಂದ ಚೀನೀಯರಿಗೆ ಸ್ವಲ್ಪಮಟ್ಟಿಗೆ ಪಾಶ್ಚಾತ್ಯ ತತ್ತ್ವದ ಪರಿಚಯವಾಯಿತು. ಆದರೂ ಇವರಿಬ್ಬರೂ ತಮ್ಮ ಸ್ವಂತ ತತ್ತ್ವವನ್ನು ಬೋಧಿಸಿದರೇ ಹೊರತು, ಉಳಿದವರ ತತ್ತ್ವವನ್ನು ತಿಳಿಸಲಿಲ್ಲ; ಪಾಶ್ಚಾತ್ಯ ತತ್ತ್ವಚರಿತ್ರೆಯ ಪರಿಚಯ ಮಾಡಿಕೊಡಲಿಲ್ಲ. ಇಪ್ಪತ್ತನೆಯ ಶತಮಾನದಲ್ಲಿ ಅವರಿಗೆ ಪಾಶ್ಚಾತ್ಯ ತತ್ತ್ವ ಹೆಚ್ಚಾಗಿ ಪರಿಚಯವಾಯಿತು. ಅದರ ರೀತಿಯನ್ನು ಅನುಸರಿಸಿ ಅವರೂ ತಮ್ಮ ತತ್ತ್ವಗಳನ್ನು ಹೊಸ ರೀತಿಯಲ್ಲಿ ವಿಮರ್ಶಾತ್ಮಕವಾಗಿ ರೂಪಿಸುತ್ತಿದ್ದಾರೆ. ಫೂಂಗ್ ಯು–ಲಾನ್ ಎಂಬುವನು ಚೀನಿ ತತ್ತ್ವವನ್ನು ಕುರಿತು ಬರೆದ ಗ್ರಂಥವನ್ನು ಆಧರಿಸಿ ಇಲ್ಲಿ ವಿಷಯ ಸಂಗ್ರಹ ಮಾಡಲಾಗಿದೆ.

ಚೀನೀತತ್ತ್ವದ ಮನೋಭಾವವನ್ನು ಕುರಿತು ಅವನು ಹೀಗೆ ಹೇಳುತ್ತಾನೆ: ತಾತ್ತ್ವಿಕರನ್ನು ಎರಡು ಬಗೆಯಾಗಿ ವಿಂಗಡಿಸುವುದುಂಟು. ಇಹದಲ್ಲಿ, ಸಾಮಾಜಿಕ, ಸಾಂಸಾರಿಕ ಜೀವನದಲ್ಲಿ ಆಸಕ್ತರಾದವರು ಒಂದು ಗುಂಪಿನವರು. ಸಾಂಸಾರಿಕ ಜೀವನದಿಂದ ಹೊರಚ್ಚಾಗಿ ನಿಂತು, ಲೋಕಾತೀತ ವಸ್ತುಗಳಲ್ಲಿ ಆಸಕ್ತರಾಗಿರುವವರು ಇನ್ನೊಂದು ಗುಂಪಿನವರು. ಮೊದಲ ಗುಂಪಿನವರು ಲೋಕಾಯತರು, ಎರಡನೆಯ ಗುಂಪಿನವರು ಸಂನ್ಯಾಸಿಗಳು. ಸಾಮಾನ್ಯವಾಗಿ ಇವರಿಬ್ಬರ ತತ್ತ್ವ ಪರಸ್ಪರ ವಿರುದ್ಧವೆಂದು ಹೇಳುವುದುಂಟು. ಇವೆರಡನ್ನೂ ವಿರೋಧವಿಲ್ಲದೆ ಸಮನ್ವಯಗೊಳಿಸಲು ಚೀನೀ ತತ್ತ್ವ ಪ್ರಯತ್ನಿಸುತ್ತದೆ. ಇಹದಲ್ಲಿ ಪರವನ್ನೂ ಪರದಲ್ಲಿ ಇಹವನ್ನೂ ಕಾಣಬಯಸುತ್ತದೆ. ಹೀಗೆ ಬಯಸುವವರನ್ನು ಚೀನೀಯರು ಮಹಾಪ್ರಜ್ಞರೆಂದು, ಅಂದರೆ ತಾತ್ತ್ವಿಕರೆಂದು ಕರೆಯುತ್ತಾರೆ. ಅವರು ಒಳಗೆ ಪ್ರಾಜ್ಞ ಚಕ್ರವರ್ತಿಗಳು, ಹೊರಗೆ ಲೌಕಿಕ ಸಾರ್ವಭೌಮನಂತೆ ಲೋಕಹಿತದಲ್ಲಿ ಆಸಕ್ತರು. ಇಂಥ ಚಾರಿತ್ರ್ಯವನ್ನು ಬೆಳೆಸುವುದೇ ಚೀನೀ ತಾತ್ತ್ವಿಕರ ಮುಖ್ಯ ಧ್ಯೇಯ. ಚೀನೀ ತಾತ್ತ್ವಿಕ ಕುಟುಂಬಿ ಹಾಗೂ ವಿಶ್ವ ಕುಂಟುಂಬಿ. ಬರಿಯ ಕುಟುಂಬಿಯಾದವ ಸ್ವಾರ್ಥಿ. ವಿಶ್ವಕುಟುಂಬಿಯಾದವ ಎಲ್ಲವನ್ನೂ ಸಮದೃಷ್ಟಿಯಿಂದ ನೋಡುತ್ತಾನೆ. ಇಂಥ ವಿಶ್ವಕುಟುಂಬಿಯಾದವ ರಾಜಕೀಯದಲ್ಲಿ ಆಸಕ್ತಿ ವಹಿಸಲೇಬೇಕು. ಸಾರ್ವತ್ರಿಕ ಜನ ಜೀವನವನ್ನು ನಿಸ್ವಾರ್ಥ ಜೀವನವನ್ನಾಗಿ ಪರಿವರ್ತಿಸಬೇಕು. ಅವನ ತತ್ತ್ವ ಕೇವಲ ಸ್ವರ್ಗದಲ್ಲಿರುವ ಪವಿತ್ರ ತತ್ತ್ವವಾಗಿರದೆ ಅದು ಸಾರ್ವತ್ರಿಕ ಜನಜೀವನಕ್ಕೆ ಇಳಿದು, ಅದನ್ನು ವ್ಯಾಪಿಸಿ ಅದನ್ನು ಇಹದ ಸ್ವರ್ಗೀಯ ಜೀವನವನ್ನಾಗಿ ಪರಿವರ್ತಿಸಬೇಕು. ಆದ್ದರಿಂದ ಚೀನೀತತ್ತ್ವ ರಾಜಕೀಯ ತತ್ತ್ವಕ್ಕೆ ಆಂತರಿಕವಾದದ್ದು. ಪ್ರತಿಯೊಬ್ಬ ಚೀನೀ ತಾತ್ತ್ವಿಕನೂ ತನ್ನ ಅಧ್ಯಾತ್ಮಕ್ಕೆ ಸಂಗತವಾದ ರಾಜಕೀಯ ತತ್ತ್ವವನ್ನು ರೂಪಿಸಿರುತ್ತಾನೆ. ಚೀನೀಯರ ನಾಮತತ್ತ್ವ ಮೇಲ್ನೋಟಕ್ಕೆ ಕೇವಲ ಮಾತಿನ ಮೋಡಿಯಾಗಿ ಕಂಡರೂ ಅದನ್ನು ಕುಂಗ್–ಸನ್–ಲುಂಗ್ ರಾಜ ಮತ್ತು ಪ್ರಜೆಗಳ ವಿವಿಧ ಸಂಬಂಧಗಳಿಗೆ ಅನ್ವಯಿಸಿರುತ್ತಾನೆ. ಆದ್ದರಿಂದ ಚೀನೀ ತತ್ತ್ವ ಕೇವಲ ಒಣತತ್ತ್ವ ವಿವೇಚನೆಯಲ್ಲ. ಕಾರ್ಯರೂಪವಾದ ಅನುಭವ ತತ್ತ್ವ, ಜ್ಞಾನ ವಿವೇಕವಾಗಿ ಸದ್ಗುಣದಲ್ಲಿ ಪೂರ್ಣವಾಗಬೇಕು. ಒಬ್ಬನ ತತ್ತ್ವಕ್ಕೆ ಅವನ ಚಾರಿತ್ರ್ಯ ಒರೆಗಲ್ಲು. ಕೆಲವು ತಾತ್ತ್ವಿಕರಲ್ಲಿ, ಉದಾಹರಣೆಗೆ ಕೂಂಗ್ ಘೂಟ್ಸೆಯಲ್ಲಿ ಅವನ ಜೀವನಚರಿತ್ರೆಯೇ ಅವನ ತತ್ತ್ವವಾಗಿ ಪರಿಣಮಿಸಿದೆ.

ಚೀನೀ ತತ್ತ್ವ ಭಾರತೀಯ ದರ್ಶನಗಳಂತೆ, ಪ್ರಮಾಣ, ಪ್ರಮೇಯ, ಪ್ರಮಿತಿ, ಪ್ರಾಮಾಣ್ಯಗಳೆಂಬ ಚತುರಂಗಸಮೇತವಾಗಿ ತರ್ಕಬದ್ಧವಾಗಿ ನಿರೂಪಣೆಯಾದ ವ್ಯವಸ್ಥಿತ ತತ್ತ್ವವಲ್ಲ. ಚೀನೀ ತಾತ್ತ್ವಿಕರ ಬರೆವಣಿಗೆಯಲ್ಲಿ ಬಿಡಿಬಿಡಿ ಉಕ್ತಿಗಳು, ಉದಾಹರಣೆಗಳು, ಉಪಮಾನಗಳು ಕತೆಗಳು ಸೇರಿವೆ. ಕೆಲವು ವೇಳೆ ಆ ಉಕ್ತಿಗಳು ಪರಸ್ಪರ ವಿರೋಧಿಗಳಂತೆ ತೋರುತ್ತವೆ. ಅವುಗಳ ವಾಚ್ಯಾರ್ಥ ಅಪೂರ್ಣವಾದರೂ ಸೂಚ್ಯಾರ್ಥ ಅಪಾರವಾದದ್ದು, ಚೀನೀ ಕಲೆಯಲ್ಲಿ ವಾಚ್ಯಾರ್ಥಕ್ಕಿಂತಲೂ ಧ್ವನ್ಯರ್ಥಕ್ಕೆ ಹೆಚ್ಚು ಬೆಲೆ. ಹಾಗೆಯೇ ಅವರ ತತ್ತ್ವದ ಉಕ್ತಿಗಳಲ್ಲೂ ಸೂಚ್ಯಾರ್ಥಕ್ಕೆ ಪ್ರಾಧಾನ್ಯ. ಮಾತು ಮುಖ್ಯವಲ್ಲ. ಅದರ ಇಂಗಿತ ಮುಖ್ಯ. ಅದು ತಿಳಿದಾಗ ಅರ್ಥ ಮುಂದಾಗುತ್ತದೆ, ಮಾತು ಹಿಂದಕ್ಕೆ ಸರಿಯುತ್ತದೆ. ಕೆಲವು ವೇಳೆ ಚೀನೀ ತಾತ್ತ್ವಿಕರು ಕೇವಲ ಮೌನದಿಂದಲೇ ತಮ್ಮ ತತ್ತ್ವವನ್ನು ಧ್ವನಿಸುತ್ತಿದ್ದುದುಂಟು. ತಾಓ ತತ್ತ್ವದಲ್ಲಂತೂ ಈ ಸೂಚ್ಯಾರ್ಥಕ್ಕೆ ಹೆಚ್ಚು ಬೆಲೆ. ತಾಓ ಮಾತಿನಿಂದ ವರ್ಣಿಸಲಾಗದ್ದು. ಮೌನದಿಂದಲೇ ಅದನ್ನು ಧ್ವನಿಸಬೇಕು. ತಾವೋ ತತ್ತ್ವವನ್ನು ಕುರಿತು ಸಾವಿರ ಪುಟಗಳ ವಿವರಣ ಗ್ರಂಥವನ್ನು ರಚಿಸಬಹುದು. ಆದರೂ ಅದು ಲಾವೋಟ್ಸುವಿನ ಕಾರಿಕೆಗಳ ಸೂಚ್ಯಾರ್ಥವನ್ನು ಪೂರ್ಣವಾಗಿ ತಿಳಿಸಲಾರದು.

ಚೀನೀತತ್ತ್ವ ತುಂಬ ದೀರ್ಘಕಾಲದ್ದು, ಅದರ ಚರಿತ್ರೆಯನ್ನು ಬರೆದವರು ಅದರಲ್ಲಿ ನೂರು ಶಾಖೆಗಳಿದ್ದುವೆಂದು ಹೇಳುತ್ತಾರೆ. ಅದರ ಮೊದಲ ಚರಿತ್ರೆಯನ್ನು ಬರೆದ ಸ್ಸು–ಮಾ ಟ್ಯಾನ್ (ಪ್ರಶ.ಪೂ. 1ನೆಯ ಶತಮಾನ) ಅವನ್ನು ಆರಾಗಿ ವಿಂಗಡಿಸಿರುತ್ತಾನೆ. ಮೊದಲನೆಯದು ಲುನ್–ಯಾಂಗ್ ಶಾಖೆ. ಅದು ವಿಶ್ವದ ಸೃಷ್ಟಿಗೆ ಸ್ತ್ರೀ ಮತ್ತು ಪುಂ ತತ್ವಗಳ ಸಂಗಮ ಕಾರಣವೆಂದು ತಿಳಿಸುತ್ತದೆ. ಇದು ಇತಿಹಾಸಪೂರ್ವತತ್ತ್ವ. ಎರಡನೆಯದು ಜೂಚಿಯ ಶಾಖೆ. ಈ ಶಾಖೆಯವರು ಪುರಾತನ ಸಂಸ್ಕೃತಿಯ ಬೋಧಕರು. ಈ ಶಾಖೆಯ ಮುಖಂಡ ಕೂಂಗ್ ಘೂಟ್ಸೆ. ಮೂರನೆಯದು ಮೋ–ಚಿ ಅಥವಾ ಮೋಹಿಶಾಖೆ. ಅದರ ಮುಖಂಡ ಮೋಟ್ಸು. ನಾಲ್ಕನೆಯದು ಮಿಂಗ್–ಚಿಯ ಅಥವಾ ನಾಮತತ್ತ್ವ ಶಾಖೆ. ಶಬ್ದಗಳಿಗೂ ವಾಸ್ತವ ವಿಷಯಗಳಿಗೂ ಇರುವ ಸಂಬಂಧವೇ ಇವರ ತತ್ತ್ವದ ವಿಚಾರ ವಿಷಯ. ಐದನೆಯದು ಫಾ ಚಿಯ ಅಥವಾ ಕಾನೂನಿನ ಶಾಖೆ. ಈ ಶಾಖೆಯ ತಾತ್ತ್ವಿಕರು ಸರ್ಕಾರಕ್ಕೆ ಕಾನೂನೇ ಆಧಾರ, ಧಾರ್ಮಿಕ ನೀತಿಯಲ್ಲವೆಂದು ವಾದಿಸಿದರು. ಆರನೆಯದು ತಾಓ–ಟಿ–ಚಿಯ ಶಾಖೆ. ತಾಓ ಎಂದರೆ ಪಥ. ಈ ಶಾಖೆಯವರ ಧ್ಯೇಯವನ್ನು ಮುಟ್ಟುವ ದಾರಿಗೆ, ಹೆಚ್ಚು ಗಮನ ಕೊಡುತ್ತಾರೆ. ಇದರ ಮುಖಂಡ ಲಾವೋ ಟ್ಸು.

ಚೀನೀ ತತ್ತ್ವದ ಚರಿತ್ರೆಯನ್ನು ಬರೆದವರಲ್ಲಿ ಲ್ಯೂ ಹಸಿನ್ (ಪ್ರಶ.ಪೂ. 46) ಎರಡನೆಯವ. ಇವನು ನೂರು ಶಾಖೆಗಳನ್ನು ಹತ್ತಾಗಿ ವಿಭಾಗ ಮಾಡುತ್ತಾನೆ. ಈಗಾಗಲೇ ತಿಳಿಸಿರುವ ಆರು ಶಾಖೆಗಳಿಗೆ ನಾಲ್ಕು ಶಾಖೆಗಳನ್ನು ಸೇರಿಸುತ್ತಾನೆ. ಇವು (1) ತ್ಸೂಂಗ್–ಹೆಂಗ್ ಚಿಯ ಅಥವಾ ರಾಯಭಾರಿ ಶಾಖೆ, (2) ಟ್ಸುಚಿಯ ಅಥವಾ ಸಾರಸಂಗ್ರಹ ಶಾಖೆ, (3) ನುಂಗ್ ಚಿಯ ಅಥವಾ ಭೂ ವ್ಯವಸಾಯ ಶಾಖೆ ಮತ್ತು (4) ಹಷಿಯೋ–ಷೌ ಚಿಯ ಅಥವಾ ಕತೆಗಾರ ಶಾಖೆ. ಈ ಎಲ್ಲ ಶಾಖೆಗಳ ಹೆಸರುಗಳೂ ಚೀನೀ ತತ್ತ್ವದ ಒಂದು ಪ್ರಧಾನ ಲಕ್ಷಣವನ್ನು ನಮ್ಮ ಗಮನಕ್ಕೆ ತರುತ್ತವೆ. ಅವರ ತತ್ತ್ವಕ್ಕೂ ಅವರ ಸಂಸ್ಕೃತಿಗೂ ರಾಜಕೀಯಕ್ಕೂ ಮತ್ತು ಆರ್ಥಿಕ ಜೀವನಕ್ಕೂ ತುಂಬ ನಿಕಟ ಸಂಬಂಧವಿದೆ. ಕೌಟಿಲ್ಯನ ಕಾಲದಲ್ಲಿ ಭಾರತದದ ತತ್ತ್ವಕ್ಕೂ ಇಂಥ ವಿಶಾಲ ವ್ಯಾಪಕತೆಯಿದ್ದು ಈಚಿನ

ಕಾಲದಲ್ಲಿ ಅದಕ್ಕೂ ಆರ್ಥಿಕಕ್ಕೂ ರಾಜಕೀಯಕ್ಕೂ ಇದ್ದ ಸಂಬಂಧ ತಪ್ಪಿ ಕೇವಲ ಸಂಕುಚಿತಪರ ತತ್ತ್ವವಾಯಿತು. ಆರ್ಥಿಕ ವಿಷಯಗಳಿಗೂ ರಾಜಕೀಯಕ್ಕೂ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವ ಕಮ್ಯೂನಿಸ್ಟ್ ತತ್ತ್ವವನ್ನು ಚೀನೀಯರು ಈಗ ವಿಶೇಷವಾಗಿ ಆದರಿಸುತ್ತಿರುವುದಕ್ಕೆ ಅವರು ಹಿಂದಿನಿಂದ ಆರ್ಥಿಕಕ್ಕೂ ರಾಜಕೀಯಕ್ಕೂ ಕೊಟ್ಟ ಬೆಲೆ ಕಾರಣವೆಂದು ಹೇಳಬಹುದು.

ಇಲ್ಲಿ ಮುಖ್ಯವಾಗಿ ಆರು ಶಾಖೆಗಳಲ್ಲಿ ಇತಿಹಾಸಪೂರ್ವ ಯಿನ್–ಯಾಂಗ್ ಚಿಯ ಶಾಖೆಯನ್ನು ಕಾನೂನಿನ ಶಾಖೆಯನ್ನು ಬಿಟ್ಟು ಉಳಿದ ಶಾಖೆಗಳನ್ನು ಮಾತ್ರ ತುಂಬ ಸಂಗ್ರಹವಾಗಿ ವಿವರಿಸಿದೆ.

**ಕೂಂಗ್ ಫೂಟ್ಸೆ :** ಪ್ರಶ.ಪೂ. 551–470. ಪೌರಾಣಿಕ ಸಂತ ರಾಜರ ತತ್ತ್ವವನ್ನು ಬಿಟ್ಟರೆ ಕೂಂಗ್ ಫೂಟ್ಸೆಯ ತತ್ತ್ವ ಚೀನದ ಮೊಟ್ಟ ಮೊದಲನೆಯದು. ಕೂಂಗ್ ಫೂಟ್ಸೆಗೆ ಮುಂಚೆ ತತ್ತ್ವವನ್ನು ಬೋಧಿಸುತ್ತಿದ್ದವರು ರಾಜ್ಯದ ನ್ಯಾಯ, ನೀತಿ ಮತ್ತು ಆರ್ಥಿಕಕ್ಕೆ ಸಂಬಂಧಪಟ್ಟ ರಾಷ್ಟ್ರದ ಅಧಿಕಾರಿಗಳು. ಖಾಸಗಿಯಾಗಿ ತತ್ತ್ವವನ್ನು ಬೋಧಿಸಲು ಮೊಟ್ಟ ಮೊದಲಿಗೆ ಪ್ರಾರಂಭಿಸಿದವ ಕೂಂಗ್ ಫೂಟ್ಸೆ. ಅವನು ಒಂದು ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಅವಕ್ಕೆ ಸಮವಯಸ್ಕರಾದ ಮತ್ತು ತನ್ನಂತೆ ಚೀನಿ ಸಂಸ್ಕೃತಿಯಲ್ಲಿ ಆಸಕ್ತರಾದ ಸಹಾಧ್ಯಾಯಿಗಳನ್ನು ಸೇರಿಸಿಕೊಂಡು, ಪುರಾತನರ ಆರು ವಿದ್ಯೆಗಳನ್ನು ಅಧ್ಯಯನ ಮಾಡಿದ. ಈ ಆರು ವಿದ್ಯೆಗಳಿಗೆ ಲಿಯು ಯಿ ಎಂದು ಹೆಸರು. ಮೊದಲನೆಯ ವಿದ್ಯೆಯ ಗ್ರಂಥಕ್ಕೆ 'ಯಿ' ಎಂದು ಹೆಸರು. ಯಿ ಎಂದರೆ ಬದಲಾವಣೆಗಳನ್ನು ತಿಳಿಸುವ ಗ್ರಂಥ. ಎರಡನೆಯದು 'ಷಿಹ್'–ಕಾವ್ಯಗಳ ಗ್ರಂಥ. ಮೂರನೆಯದು 'ಷು'–ಚರಿತ್ರೆಯ ಗ್ರಂಥ, ನಾಲ್ಕನೆಯದು 'ಲಿ'–ಮತಸಂಸ್ಕಾರಗಳ ಗ್ರಂಥ. ಐದನೆಯದಾದ ಯೂಚ್–ಸಂಗೀತದ ಗ್ರಂಥ. ಆರನೆಯದಾದ 'ಚುನ್ ಚಿಯು'–ಲು ಅರಸರ ವಂಶವೃತ್ತಾಂತ. ಅವನು ಈ ಎಲ್ಲ ವಿದ್ಯೆಗಳನ್ನೂ ಹೊಸ ದೃಷ್ಟಿಯಿಂದ ವಿವೇಚಿಸಿ ಇವುಗಳಿಗೆ ಸಂಬಂಧಪಟ್ಟ ತತ್ತ್ವವನ್ನು ಸಂದರ್ಭೋಚಿತವಾಗಿ ವಚನಗಳ ಮೂಲಕ ಹೊರಗೆಡಹಿದ. ಇವನ್ನು ಕೂಂಗ್ ಫೂಟ್ಸೆ ಶಿಷ್ಯರು ಸೇರಿಸಿ ಅನಲೆಕ್ಟ್ಸ್ ಎಂಬ ವಚನಸಂಪುಟವನ್ನು ರೂಪಿಸಿದರು. ಇದೇ ಕೂಂಗ್ ಫೂಟ್ಸೆ ತತ್ತ್ವಕ್ಕೆ ಆಧಾರ ಗ್ರಂಥ.

1. ಈ ಆರು ವಿದ್ಯೆಗಳನ್ನು ಹಿಂದಿನ ಪಂಡಿತರಂತೆ ಅವನು ವ್ಯಾಸಂಗ ಮಾಡಲಿಲ್ಲ. ಅವನ್ನು ತಾನೇ ಸ್ವಾನುಭವದಿಂದ ಏರ್ಪಡಿಸಿಕೊಂಡ; ಹೊಸ ತತ್ತ್ವದೃಷ್ಟಿಯಿಂದ ಭಾಷ್ಯ ಮಾಡಿ ಅವುಗಳಿಗೆ ಹೊಸ ವರ್ಚಸ್ಸನ್ನು ಕೊಟ್ಟ. ಅವನು ಅವುಗಳಲ್ಲಿ ಉಪಯೋಗಿಸಿದ ಪದಗಳಿಗೆ ಹೊಸ ಅರ್ಥವನ್ನು ಕೊಟ್ಟು ಪುಷ್ಟಿಗೊಳಿಸಿದ. ಈ ವಿಧಾನವನ್ನು ತಾರ್ಕಿಕ ಪರಿಭಾಷೆಯಲ್ಲಿ ಲಕ್ಷಣ ನಿರೂಪಣೆ ಎಂದು ಕರೆಯಬಹುದು. ಒಂದು ಪದದ ಸಾರಾರ್ಥವೇನೆಂಬುದನ್ನು ನಿಷ್ಕರ್ಷಿಸಲು ಪ್ರಾರಂಭಿಸಿದಾಗ ಜ್ಞಾನ ಪ್ರಾರಂಭವಾಗುತ್ತದೆ. ಆ ಅರ್ಥನಿರೂಪಣೆ ಪೂರ್ಣವಾದಾಗ ಜ್ಞಾನ ಪೂರ್ಣವಾಗುತ್ತದೆ. ರಾಜ್ಯಶಾಸ್ತ್ರದ ಮಾತುಗಳನ್ನೂ ಸಮಾಜದ ಅಂಗಗಳನ್ನೂ ಅವುಗಳ ಸಂಬಂಧಸೂಚಕ ಪದಗಳ ಅರ್ಥವನ್ನೂ ನೀತಿ, ಕಾನೂನು, ಸಂಸ್ಕಾರಗಳಿಗೆ ಸಂಬಂಧಪಟ್ಟ ಪದಗಳ ಅರ್ಥವನ್ನೂ ಸಾಕ್ರಟೀಸ್ ಮತ್ತು ಪ್ಲೇಟೋಗಳಂತೆ ನಿರ್ಧರಿಸಲು ಆತ ಪ್ರಯತ್ನಿಸಿದ. ಹೆಸರಿಗೆ ತಕ್ಕಂತೆ ಒಬ್ಬ ವ್ಯಕ್ತಿಯ ನಡತೆ (ಉದಾಹರಣೆಗೆ ರಾಜ, ತಂದೆ, ಮಗ, ಸೋದರ, ಸ್ನೇಹಿತ, ಅಧಿಕಾರಿ) ಸಂಗತವಾಗಿದ್ದರೆ ಆಗ ಅವನಿಗೆ ಆ ಹೆಸರು ಒಪ್ಪುತ್ತದೆ. ಇಲ್ಲದಿದ್ದರೆ ಅವನು ಆ ಹೆಸರನ್ನು ಪಡೆಯಲು ಯೋಗ್ಯನಲ್ಲ. ಹಾಗೆಯೇ ಹೆಸರಿಗೆ ತಕ್ಕಂತೆ, ಕಾನೂನು, ಸದ್ಗುಣಗಳು, ಆಚಾರವ್ಯವಹಾರಗಳು ವಾಸ್ತವವಾದಾಗ, ಕಾರ್ಯಕಾರಿಯಾದಾಗ, ಅವು ಆ ಹೆಸರನ್ನು ಪಡೆಯಲು ಯೋಗ್ಯವಾಗುತ್ತವೆ; ಸಾರ್ಥಕವಾಗುತ್ತವೆ. ಇಲ್ಲದಿದ್ದರೆ ವ್ಯರ್ಥಾಲಾಪವಾಗುತ್ತವೆ. ಇದು ಅವನ ಮಾತಿನ ತತ್ತ್ವ. ಅದು ಮುಂದೆ ಹುಟ್ಟಿದ ನಾಮ ತತ್ತ್ವಕ್ಕೆ ಅಂಕುರಪ್ರಾಯವೆಂದು ಹೇಳಬಹುದು.

2. ಕೂಂಗ್ ಫೂಟ್ಸೆ ಶೀಲಶ್ರೀಮಂತಿಕೆಗೆ ತುಂಬ ಬೆಲೆ ಕೊಟ್ಟಿದ್ದಾನೆ. ಶೀಲಶ್ರೀಮಂತ ಎಂದರೆ ಶೀಲವನ್ನೇ ತನ್ನ ಉತ್ತಮೋತ್ತಮ ನಿಧಿಯಾಗಿ ಅಪೇಕ್ಷಿಸುವಾತ, ಆ ಶೀಲ ಎರಡಕ್ಕೆ ಸಂಬಂಧಿಸುತ್ತದೆ:– ಒಂದು ಮತ ಸಂಪ್ರದಾಯಗಳಿಗೆ, ಎರಡು ಮಾನವರೊಡನೆ ನಡೆದುಕೊಳ್ಳುವ ರೀತಿ. ಈ ಎರಡಕ್ಕೂ ತಳಹದಿ ಕರ್ತವ್ಯ ಭಾವನೆ. ಕರ್ತವ್ಯ ಎಂದರೆ ಕಡ್ಡಾಯವಾಗಿ ಮಾಡಬೇಕಾದದ್ದು. ಸಂಸ್ಕಾರಗಳನ್ನೂ ಪಿತೃಕಾರ್ಯಗಳನ್ನೂ ಮಾಡುವುದು ಸ್ವರ್ಗಲಾಭಕ್ಕಾಗಿ ಅಲ್ಲ; ಗತಿಸಿದವರಿಗೆ ಗೌರವ ಸೂಚಿಸುವುದಕ್ಕಾಗಿ ಮತ್ತು ಆತ್ಮಶುದ್ಧಿಗಾಗಿ. ನೇಮನಿಷ್ಠೆಗಳನ್ನು ಆಚರಿಸುವುದರಿಂದ ಸಂಯಮಶೀಲ ಏರ್ಪಡುತ್ತದೆ. ನಿಷ್ಠೆಯಿಂದ ಕರ್ಮ ಮಾಡುವುದನ್ನು ಕಲಿತವನಿಗೆ ಇತರ ಲೌಕಿಕ ಕಾರ್ಯಗಳಲ್ಲೂ ನಿಷ್ಠೆ ಸ್ವಾಭಾವಿಕವಾಗುತ್ತದೆ. ಹಿಂದಿನ ಮತಾನುಯಾಯಿಗಳು ಒಂದು ಹಂದಿಯನ್ನು ಬಲಿಕೊಟ್ಟು ನೂರು ವರಹಗಳನ್ನು ಕೇಳುತ್ತಿದ್ದರು. ಈ ಮನೋಭಾವ ಸರ್ಕಾರೀ ನೌಕರರ ನಡತೆಯಲ್ಲೂ ಕಾಣುತ್ತಿತ್ತು. ಒಂದು ಸಣ್ಣ ಕೆಲಸ ಮಾಡಿಕೊಟ್ಟು ನೂರು ವರಹಗಳನ್ನು ಕೇಳುತ್ತಿದ್ದರು. ಮತಾಚಾರಗಳಲ್ಲಿ ವಿನಿಮಯ ಬುದ್ಧಿಯನ್ನು ನಿರ್ಮೂಲಗೊಳಿಸಿದರೆ ಲೋಕವ್ಯವಹಾರದಲ್ಲೂ ಈ ಬುದ್ಧಿ ನಿರ್ಮೂಲವಾಗುತ್ತದೆ. ಯಾವುದೊಂದು ಫಲಾಪೇಕ್ಷೆಯೂ ಇಲ್ಲದೆ ಕೇವಲ ಕರ್ತವ್ಯವನ್ನೇ ಆಚರಿಸಿ ಅದಕ್ಕಾಗಿಯೇ ಅದನ್ನು ಮಾಡುವುದು ಸತ್‌ಶೀಲ. ಕೂಂಗ್ ಫೂಟ್ಸೆಯ ಕರ್ತವ್ಯಭಾವನೆ ಕಾಂಟನ ಕರ್ತವ್ಯಭಾವನೆಯನ್ನೂ ಭಗವದ್ಗೀತೆಯ ನಿಷ್ಕಾಮಕರ್ಮವನ್ನೂ ಹೋಲುತ್ತದೆ. ಲಾಭ ಪಡೆಯಬೇಕೆಂಬ ಉದ್ದೇಶದಿಂದ ಮಾಡಿದ ಕೆಲಸ ಕರ್ತವ್ಯವಲ್ಲ. ಲಾಭವನ್ನು ನಿರೀಕ್ಷಿಸದೆ ಮಾಡಿದ ಕರ್ತವ್ಯವನ್ನು ಅವನು 'ಯಿ' ಎಂದು ಕರೆದಿರುತ್ತಾನೆ. ಇದೇ ಶೀಲಶ್ರೀಮಂತಿಕೆ.

3. ಈ ಶೀಲಶ್ರೀಮಂತಿಕೆಯ ದಾರಿಯನ್ನು ಅವನು ತಾಓ ಎಂದು ಕರೆದಿದ್ದಾನೆ. ತಾಓ ಬಿಡಿಬಿಡಿ ಕರ್ತವ್ಯಗಳಲ್ಲ. ಅವೆಲ್ಲವನ್ನೂ ಸಮನ್ವಯಗೊಳಿಸುವ ತತ್ತ್ವ. ಎಲ್ಲ ಕರ್ತವ್ಯಗಳಿಗೂ ತಾಓ ಆಧಾರ. ಇದು ಹೊರಗಿನಿಂದ ಬಂದುದಲ್ಲ. ಇದು ಮಾನವನ ಹೃದಯದಲ್ಲಿ ಅಂತರ್ಗತವಾಗಿರುವಂಥದ್ದು. ತನ್ನೊಳಗಿರುವುದನ್ನು ಬೆಳೆಸುವುದು ಶೀಲಶ್ರೀಮಂತಿಕೆ.

4. ಕರ್ತವ್ಯ ನಿಯಮವನ್ನು ಎರಡು ವಿಧವಾಗಿ ಸೂತ್ರಿಸಬಹುದು. ನಿನಗೆ ಬೇಡವಾದ್ದನ್ನು ಇತರರಿಗೆ ಮಾಡಬೇಡ. ಇದು ಅಭಾವಸೂಚಕ ಕರ್ತವ್ಯಸೂತ್ರ. ಇದೇ 'ಯಿ' ಸೂತ್ರ. ನೀನು ಇಚ್ಛಿಸುವುದನ್ನು ಇತರರಿಗೂ ಲಭಿಸಲೆಂದು ಇಚ್ಛಿಸು. ಇದು ಭಾವಸೂಚಕ ಕರ್ತವ್ಯಸೂತ್ರ. ತನ್ನ ಆತ್ಮೋದ್ಧಾರಕ್ಕೆ ಅಗತ್ಯವಾದುದು ಇತರರ ಆತ್ಮೋದ್ಧಾರಕ್ಕೂ ಅಗತ್ಯ. ಇತರರು ಉದ್ಧಾರವಾದ ಹೊರತು ತನ್ನ ಉದ್ಧಾರವಿಲ್ಲ. ತನ್ನ ಸೌಖ್ಯ ಇತರರ ಸೌಖ್ಯ, ಇವೆರಡೂ ಅವಿಭಾಜ್ಯ. ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ.

5. ಕೇವಲ ಕರ್ತವ್ಯಭಾವನೆ ಒಣತತ್ತ್ವವಾಗುತ್ತದೆ. ಪೂರ್ಣವಾಗಬೇಕಾದರೆ ಅದು ಮಾನವಪ್ರೀತಿಯಿಂದ ಪ್ರೇರಿತವಾಗಿರಬೇಕು. ಪ್ರೀತಿ ಹುಟ್ಟಿದಾಗ ಪರಸ್ಪರತೆ ಬೆಳೆಯುತ್ತದೆ. ಪ್ರೀತಿಯಿಂದ ಪರಿಪೂರ್ಣವಾದ ಶೀಲವನ್ನು ಕೂ ಫೂ ಜೆನ್ ಎಂದು ಕರೆದಿರುತ್ತಾರೆ.

6 ಕೂಂಗ್ ಫೂಟ್ಸೆ ಶೀಲದ ಇನ್ನೊಂದು ಅಂಶವನ್ನು 'ಐ' ಎಂದು ಕರೆದಿರುತ್ತಾನೆ. ಐ ಎಂದರ ಔಚಿತ್ಯ. ಪರಸ್ಪರತೆಯದು ಸಾಮಾನ್ಯ ಸೂತ್ರ. ಸಾಮಾನ್ಯವಾಗಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಅದು ತಿಳಿಸುತ್ತದೆ. ಆದರೆ ಒಂದೊಂದು ಸಂದರ್ಭದಲ್ಲೂ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಅದು ತಿಳಿಸುವುದಿಲ್ಲ. ಕಾಂಟನ ಕರ್ತವ್ಯತತ್ತ್ವದಂತೆ ಅದು ತೀರ ವಿಶಾಲ ; ಎಲ್ಲಕ್ಕೂ ಒಂದೇ ಮಂತ್ರವನ್ನು ಅನ್ವಯಿಸುವುದು ಅಪಾಯಕಾರಿ. ಸಂದರ್ಭಕ್ಕೆ ಅನುಗುಣವಾಗಿ ವರ್ತಿಸಬೇಕಾದರೆ, ಔಚಿತ್ಯಜ್ಞಾನ ಅಗತ್ಯ.

7. ಒಂದೊಂದು ಸಂದರ್ಭಕ್ಕೂ ಉಚಿತವಾದದ್ದು ಯಾವುದು ಎಂಬುದನ್ನು ಕಂಡುಹಿಡಿಯುವುದು ಹೇಗೆ ಎಂಬುದು ಮುಂದಿನ ಪ್ರಶ್ನೆ. ಅದಕ್ಕೆ ತನ್ನ ಸ್ವಂತ ಅನುಭವದಿಂದ ಅವರು ಕೊಟ್ಟ ಉತ್ತರ ಇದು. ನಾನು ಅನ್ನ ನೀರಿಲ್ಲದೆ ಹಗಲು ರಾತ್ರಿ ಧ್ಯಾನದಲ್ಲಿ ಕಳೆದೆ. ಅದರಿಂದ ನನ್ನ ಸಮಸ್ಯೆ ಬಗೆಹರಿಯಲಿಲ್ಲ. ಅಂಥ ಸಂದರ್ಭಗಳಲ್ಲಿ ಓದಿದರೆ ಉತ್ತಮ. ಆದರೆ ಆಲೋಚನೆ ಇಲ್ಲದ ಓದು ವ್ಯರ್ಥಾಲಾಪ. ಅಧ್ಯಯನವಿಲ್ಲದ ಧ್ಯಾನ ಅಪಾಯಕರ. ಎಷ್ಟು ಯೋಚಿಸಿದರೂ ಸ್ವಲ್ಪ ಸಂಶಯ ಇದ್ದೇ ಇರುತ್ತದೆ. ಆಗ ನಾವು ಸಂಶಯಾಸ್ಪದವಾದ ಅಂಶವನ್ನು ಬಿಟ್ಟು ನಿಸ್ಸಂದೇಹವಾದ ಅಂಶದ ಆಧಾರದ ಮೇಲೆ ಯುಕ್ತವಾದುದನ್ನು ನಿರ್ಧರಿಸುವುದು ಹೆಚ್ಚು ಅಪಾಯಕರವಲ್ಲ. ಈ ನೀತಿಯನ್ನು ಕೂಡ ತಾತ್ಕಾಲಿಕ ನೀತಿಯೆಂದು ಭಾವಿಸಬೇಕು ; ಪರಮನೀತಿಯೆಂದು ಭಾವಿಸಬಾರದು.

ಔಚಿತ್ಯತತ್ತ್ವಕ್ಕೆ ಬಲ ಕೊಡುವ ಇನ್ನೊಂದು ಸಹಾಯಕ ಸೂತ್ರವಿದೆ. ಅದು ಮಾಧ್ಯಮಿಕ ಸೂತ್ರ. ಎರಡು ಅತಿಗಳನ್ನು ಬಿಟ್ಟು ಮಿತವಾದದ್ದನ್ನು ಅನುಸರಿಸಿದಾಗ ನಮ್ಮ ನಡತೆ ಸತ್ಯಕ್ಕೆ ಸಮೀಪವಾಗಿರುವ ಸಂಭವ ಹೆಚ್ಚು. ಮಾಧ್ಯಮಿಕ ಸೂತ್ರವನ್ನು ಅನುಸರಿಸಿದಾಗ ಒಬ್ಬ ಸ್ವಲ್ಪ ತಪ್ಪಿ ನಡೆಯಬಹುದು. ಆದರೆ ಅವನು ಮೂರ್ಖನಾಗುವುದಿಲ್ಲ. ಒಬ್ಬ ನಿನ್ನ ಎಡಕೆನ್ನೆಗೆ ಏಟು ಕೊಟ್ಟರೆ ಬಲಕೆನ್ನೆಯನ್ನು ತೋರಿಸು–ಎಂಬ ಕ್ರೈಸ್ತ ತತ್ತ್ವವನ್ನು ಕೂಂಗ್ ಫೂಟ್ಸೆ ಒಪ್ಪಲಿಲ್ಲ. ಅದನ್ನು ಅವನು ಔಚಿತ್ಯಸೂತ್ರಕ್ಕೆ ಒಳಪಡಿಸಿ ಈ ರೀತಿ ಮಾರ್ಪಡಿಸಿದ. ಕೇಡಿಗೆ ಕೇಡನ್ನೂ ಮಾಡಬೇಡ. ಒಳ್ಳೆಯದನ್ನೂ ಮಾಡಬೇಡ, ನ್ಯಾಯವಾದ ದಾರಿ ತೋರಿಸು. ಕೇಡಿಗನನ್ನು ಶಿಕ್ಷಿಸದೆ ಕ್ಷಮಿಸಿ ಅವನಿಗೆ ಸರಿಯಾದ ದಾರಿಯನ್ನು ತೋರಿಸುವುದು ವಿವೇಕಯುತವಾದ ಪ್ರೀತಿಯಲ್ಲವೆ?

ಶೀಲತತ್ತ್ವವೇ ಅವನಿಗೆ ಸಾರ್ವಭೌಮ ತತ್ತ್ವ. ಆದರೆ ಹೆದ್ದಾರಿಗಳನ್ನೂ ಸೀಳುದಾರಿಗಳನ್ನೂ ಕೂಡುದಾರಿಗಳನ್ನೂ ಅವನಂತೆ ಇಷ್ಟು ಸಮಗ್ರವಾಗಿ ವಿವೇಚಿಸಿದ ತತ್ತ್ವಜ್ಞಾನಿಗಳು ಅತಿ ವಿರಳ. ಅರಿಸ್ಟಾಟಲನ ಮಾಧ್ಯಮಿಕ ತತ್ತ್ವ , ಕ್ರಿಸ್ತನ ಪರಸ್ಪರತೆಯ ತತ್ತ್ವ, ಕಾಂಟನ ನಿಷ್ಕಾಮ ಕರ್ತವ್ಯತತ್ತ್ವ ಇವೆಲ್ಲವೂ ಸಮರಸವಾಗಿ ಸೇರಿರುವುದು ಕೂಂಗ್ ಫೂಟ್ಸೆಯೊಬ್ಬನಲ್ಲೇ.

9. ತಾಓ ತಾತ್ತ್ವಿಕರು ಕೂಂಗ್ ಫೂಟ್ಸೆ ಕೇವಲ ನೀತಿಗೆ, ಶೀಲಕ್ಕೆ ಮಾತ್ರ ಬೆಲೆ ಕೊಟ್ಟಿರುತ್ತಾನೆ, ಧರ್ಮಕ್ಕೆ ಮಿಗಿಲಾದ ಅಧ್ಯಾತ್ಮಕ್ಕೆ ಗಮನ ಕೊಡಲಿಲ್ಲ–ಎಂದು ಟೀಕಿಸುತ್ತಾರೆ. ಶೀಲಕ್ಕೆ ಅವನು ಹೆಚ್ಚು ಗಮನ ಕೊಟ್ಟದ್ದು ನಿಜ. ಆದರೆ ಶೀಲಾತೀತ ಬೆಲೆಗಳನ್ನು ಅವನು ನಿರಾಕರಿಸಲಿಲ್ಲ. ಶೀಲ ಅದಕ್ಕೆ ಅಗತ್ಯ ಸೋಪಾನ. ಜೀವನದ ಮುಕ್ಕಾಲು ಭಾಗ ಶೀಲ,

ಕಾಲುಭಾಗ ಶೀಲಾತೀತ ಬೆಲೆ. ಅದು ಶೀಲದ ಮೂಲಕ ಕೊನೆಯಲ್ಲಿ ಸಿದ್ಧಿಸುವಂಥದ್ದು. ಕೂಂಗ್ ಫೂಟ್ಸೆ ತನ್ನ ಜೀವನದಲ್ಲಿ ಆದ ಪರಿವರ್ತನೆಯನ್ನು ಈ ರೀತಿ ವರ್ಣಿಸಿರುತ್ತಾನೆ : ಮೊದಲು ಹದಿನೈದು ವರ್ಷಗಳಲ್ಲಿ ನಾನು ಅಧ್ಯಯನದಲ್ಲಿ ಮುಳುಗಿದ್ದೆ. ಮೂವತ್ತನ್ನು ಮುಟ್ಟಿದ್ದಾಗ ನಾನು ಶೀಲವನ್ನು ಕುದುರಿಸಿಕೊಂಡು ನನ್ನ ಕಾಲಿನ ಮೇಲೆ ನಾನು ನಿಂತೆ. ನಲವತ್ತನ್ನು ಮುಟ್ಟಿದಾಗ ನನಗೆ ಸಂದೇಹ ಪರಿಹಾರವಾಯಿತು. ಐವತ್ತನ್ನು ಮುಟ್ಟಿದಾಗ ಪರಿಚೇತನದ (ಸ್ವರ್ಗ) ನಿಯಮ ತಿಳಿಯಿತು. ಆರುವತ್ತನ್ನು ಮುಟ್ಟಿದಾಗ ಆ ನಿಯಮಗಳಿಗೆ ವಿಧೇಯನಾಗಿದ್ದೆ. ಎಪ್ಪತ್ತನ್ನು ಮುಟ್ಟಿದಾಗ ನನಗೆ ಯಾವ ನಿಯಮವನ್ನೂ ಮೀರದೆ ಸ್ವೇಚ್ಛೆಯಾಗಿ ವರ್ತಿಸಲು ಸಾಧ್ಯವಾಯಿತು.' ಅವನು ಎಪ್ಪತ್ತನ್ನು ಮುಟ್ಟಿದಾಗ ಜೀವನ್ಮುಕ್ತನಂತೆ ನಡೆದುಕೊಂಡ. ಆಗ ಅವನಿಗೆ ಪೂರ್ಣ ಸ್ವಾತಂತ್ರ್ಯ (ಬಿಡುಗಡೆ) ದೊರೆಯಿತು; ಶೀಲಾತೀತ ಪುರುಷಾರ್ಥ ಅವನಿಗೆ ಎಪ್ಪತ್ತರಲ್ಲಿ ಸಿದ್ಧಿಸಿತು. ಕೂಂಗ್ ಫೂಟ್ಸೆ ತತ್ತ್ವವನ್ನು ಖಂಡಿಸಿದ ಮೋಟ್ಸು ಅವನ ಪ್ರೀತಿತತ್ತ್ವವನ್ನು ಅಂಗೀಕರಿಸಿದ. ಆದರೆ ಅದಕ್ಕೆ ದೈವಭಕ್ತಿ ಅಗತ್ಯವೆಂದು ಹೇಳಿದ; ಕೂಂಗ್ ಪೂಟ್ಸೆ ಪುರುಷರೂಪವಾದ ದೈವವನ್ನು ಒಪ್ಪಲಿಲ್ಲ. ಅವನ ಅತೀತ ತತ್ತ್ವ ಕೇವಲ ಚೇತನ (ಸ್ವರ್ಗ). ಅದು ಪುರುಷರೂಪವಲ್ಲ.

10. ಅವನ ಅನಂತರ ಬಂದ ಅವನ ಅನುಯಾಯಿ ಮೆನ್ಸಿಯಸ್ (ಪ್ರಶ.ಪೂ. 371–289) ಶೀಲಾತೀತ ತತ್ತ್ವವನ್ನು ಬೆಳೆಸಿದ. ಅವನು ಅದನ್ನು 'ಹಾವೋಜಿನ್ ಚಿಃ ಚೀ' ಎಂದು ಕರೆದಿದ್ದಾನೆ. ಅದು ಮಹತ್ತರವಾದದ್ದು. ಸರ್ವಶಕ್ತಿಯುತವಾದದ್ದು. ಅದು ಸ್ವರ್ಗಮರ್ತ್ಯಗಳೆರಡನ್ನೂ ವ್ಯಾಪಿಸಿದೆ. ಮಾನವರೊಡನೆ ಬಾಳುವುದನ್ನು ಕಲಿಯುವುದು ಶೀಲಶ್ರೀಮಂತಿಕೆ. ಅಂತಿಮ ಧ್ಯೇಯ ಅದಕ್ಕಿಂತ ಮೇಲಿನದು; ಅದು ವಿಶ್ವವ್ಯಾಪಿಯಾದೊಡನೆ ತಾದಾತ್ಮ್ಯ ಪಡೆಯುವುದು. ಶೀಲಶ್ರೀಮಂತಿಕೆಯನ್ನು ಪಡೆದ ಅನಂತರ ಅದು ವಿಶ್ವದ ಎಲ್ಲದರೊಡನೆ ಐಕ್ಯ ಭಾವವನ್ನು ಹೊಂದಲು ಸಹಾಯ ಮಾಡುತ್ತದೆ. ಐಕ್ಯಭಾವನೆಯೇ ಜೀವನದ ಅಂತಿಮಗತಿ. ಮೆನ್ಸಿಯಸ್ ಕೂಂಗ್ ಫೂಟ್ಸೆ ತತ್ತ್ವವನ್ನು ಅನುಭಾವೀ ತತ್ತ್ವವನ್ನಾಗಿ ಪರಿವರ್ತಿಸಿದ.

11. ಕೂಂಗ್ ಫೂಟ್ಸೆಯ ಇನ್ನೊಬ್ಬ ಅನುಯಾಯಿ ಹುಸುನ್ ಟ್ಸುವಿನ (ಪ್ರಶ.ಪೂ. 551–479) ತತ್ತ್ವ ಮೆನ್ಸಿಯಸ್ಸನ ತತ್ತ್ವಕ್ಕೆ ಪ್ರತಿಯಾದದ್ದು. ಅವನದು ವಾಸ್ತವವಾದ. ಮೆನ್ಸಿಯಸ್ ಮಾನವ ಸ್ವಭಾವ ಒಳ್ಳೆಯದು ಎಂದು ಭಾವಿಸಿದರೆ, ಹುಸುನ್ ಟ್ಸು ಮಾನವ ಸ್ವಭಾವತಃ ಕೆಟ್ಟವನು, ಸ್ವಾರ್ಥಿ, ವಿಷಯಲಂಪಟ ಎಂದು ಭಾವಿಸಿದ. ಮಾನವನಲ್ಲಿ ಬುದ್ಧಿ ಅಂಕುರಿಸಿದಾಗ ಅವನಲ್ಲಿ ಸದ್ಭಾವನೆ ಹುಟ್ಟುತ್ತದೆ; ತಾನು ಸ್ವಾರ್ಥಿಯಾಗಿ ಉಳಿದಾಗ ತನಗೆ ಕೇಡು ಸಂಭವಿಸುತ್ತದೆ. ಕೇಡಿನಿಂದ ಪಾರಾಗಲು ಇತರರ ಸಹಾಯ ಅಗತ್ಯ–ಎಂದು ಅವನಿಗೆ ಅರಿವಾಗುತ್ತದೆ. ಅವನು ಇತರರೊಡನೆ ಸಹಕರಿಸಿ ಶೀಲವಂತನಾಗಿ ಬಲಪಡೆಯುತ್ತಾನೆ. ಹುಸುನ್ ಟ್ಸುವಿನ ನೀತಿತತ್ತ್ವ ಉಪಯೋಗ ತತ್ತ್ವ. ನಿಷ್ಕಾಮಕರ್ಮವೇ, ಫಲಾಪೇಕ್ಷೆ ಇಲ್ಲದೆ ಮಾಡಿದ ಕರ್ಮವೇ ಕರ್ತವ್ಯ, ಲಾಭಕ್ಕಾಗಿ ಮಾಡಿದ್ದಲ್ಲ–ಎಂದು ಕೂಂಗ್ ಫೂಟ್ಸೆ ಬೋಧಿಸಿದ. ಹುಸುನ್ ಟ್ಸು ಲಾಭಕ್ಕಾಗಿ ಶಕ್ತಿಯನ್ನು ಪಡೆಯುವುದಕ್ಕಾಗಿ ಮಾಡಿದ ಕರ್ಮವೇ ಕರ್ತವ್ಯವೆಂದು ಬೋಧಿಸಿದ.

ಅವನು ಕೂಂಗ್ ಫೂಟ್ಸೆ ನಾಮತತ್ತ್ವವನ್ನೂ ತನ್ನದೇ ಆದ ರೀತಿಯಲ್ಲಿ ಬೆಳೆಸಿದ. ಹೆಸರುಗಳು ಕೃತಕ ಸಂಕೇತಗಳು. ಜೀವನದ ಅಗತ್ಯಗಳು ಹೆಚ್ಚಿದಾಗ ಹೊಸ ಪದಗಳು ಹುಟ್ಟುತ್ತವೆ. ಹುಸುನ್ ಟ್ಸು ತನಗೆ ಮುಂಚೆ ಇದ್ದ ನಾಮತತ್ತ್ವ ಪಂಥವನ್ನು ಖಂಡಿಸಿದ್ದಾನೆ. ಆ ಪಂಥದವರು ಎರಡೆರಡು ಅರ್ಥಗಳಲ್ಲಿ ಉಪಯೋಗಿಸಿ ಸತ್ಯವನ್ನು ಅಸತ್ಯವಾಗಿಯೂ ಅಸತ್ಯವನ್ನು ಸತ್ಯವಾಗಿಯೂ ಕಾಣುವಂತೆ ವಾದಿಸಿ ಜನರ ಕಣ್ಣಿಗೆ ಮಣ್ಣೆರಚುತ್ತಿದ್ದರು. ಹುಸುನ್ ಟ್ಸು ಅವರ ವಾದಗಳಲ್ಲಿ ಕಂಡುಬರುವ ಮೂರು ಬಗೆಯ ಆಭಾಸಗಳನ್ನು ತೋರಿಸಿದ : (i) ಬಿಳಿ ಕುದುರೆ ಕುದುರೆಯಲ್ಲ ಎಂಬುದು ಒಂದು ಬಗೆಯ ಅಭಾಸ. ಬಿಳಿ ಕುದುರೆಯು ಕುದುರೆಗಳಲ್ಲಿ ಒಂದು ಬಗೆಯದ್ದು. ಕುದುರೆಯಲ್ಲದೆ ಬಿಳಿಯ ಕುದುರೆಯಾಗಲಾರದು. (ii) ಬೆಟ್ಟದ ಶಿಖರಗಳೂ ಕಂದಕಗಳೂ ಒಂದೇ ಮಟ್ಟದಲ್ಲಿರುತ್ತವೆ–ಎಂಬುದು ಇನ್ನೊಂದು ಅಭಾಸ. ಒಂದು ಬೆಟ್ಟದ ಮೇಲಿರುವ ಕಂದಕ, ಅದಕ್ಕಿಂತ ಕಡಿಮೆ ಎತ್ತರದ ಬೆಟ್ಟದ, ಮಟ್ಟದಲ್ಲಿರಬಹುದು. ಆದರೆ ಬೆಟ್ಟದ ಕೆಳಭಾಗದಲ್ಲಿರುವ ಕಂದಕವೂ ಅದರ ಮೇಲ್ಭಾಗವೂ ಒಂದೇ ಮಟ್ಟದಲ್ಲಿರಲಾರವು. (iii) ಹೇಸರಕತ್ತೆ ಕುದುರೆಯಲ್ಲ, ಇದು ಇನ್ನೊಂದು ಅಭಾಸ. ಕತ್ತೆ ಕುದುರೆಯಲ್ಲದಿರಬಹುದು, ಆದರೆ ಹೇಸರಕತ್ತೆ ಒಂದು ಬಗೆಯ ಕುದುರೆ; ಏಕೆಂದರೆ ಅದು ಕತ್ತೆಯಲ್ಲಿ ಕುದುರೆಗೆ ಹುಟ್ಟಿದ ಕುದುರೆಯ ತಳಿ.

12. ಲಾವೋ ಟ್ಸು ತತ್ತ್ವ ಪ್ರಬಲವಾದ ಕಾಲದಲ್ಲಿ ಕೂಂಗ್ ಫೂಟ್ಸೆ ತತ್ತ್ವಕ್ಕೆ ಬಲವಾದ ಪೆಟ್ಟುಬಿತ್ತು. ಲಾವೋ ಟ್ಸು ತತ್ತ್ವದ ಅಭಿಮಾನಿಯಾದ ಚಿನ್ ವಂಶದ ರಾಜ ಕೂಂಗ್ ಫೂಟ್ಸೆಯ ಗ್ರಂಥಗಳನ್ನು ಸುಟ್ಟು 20,000 ಕೂಂಗ್ ಫೂಟ್ಸೆ ಅನುಯಾಯಿಗಳನ್ನು ಕೊಲ್ಲಿಸಿದ. ಆದರೆ ಹಾನ್ ವಂಶದ ಸಾರ್ವಭೌಮನ ಕಾಲದಲ್ಲಿ (ಪ್ರಶ.ಪೂ. 140–87) ಆ ತತ್ತ್ವ ಅತ್ಯಂತ ಗೌರವಕ್ಕೆ ಪಾತ್ರವಾಗಿ ರಾಷ್ಟ್ರಮತವಾಗಿ ಪೋಷಿಸಲ್ಪಟ್ಟಿತು. ಕೂಂಗ್ ಫೂಟ್ಸೆಗೆ ದೇವರ ಪಟ್ಟ ದೊರೆಯಿತು. ಅಷ್ಟು ಹೊತ್ತಿಗೆ ಕೂಂಗ್ ಫೂಟ್ಸೆ ಅನುಯಾಯಿಗಳು ಲಾವೋ ಟ್ಸು ತತ್ತ್ವದ ಸಾರವನ್ನು ತಮ್ಮ ತತ್ತ್ವದಲ್ಲಿ ಸೇರಿಸಿಕೊಂಡಿದ್ದರು. ಆದರೆ ಸಾಂಪ್ರದಾಯಿಕ ಕೂಂಗ್ ಫೂಟ್ಸೆ ಶಾಖೆಯ ಮುಖಂಡನಾದ ವ್ಯಾಂಗ್‌ಚುಂಗ್ (ಪ್ರ.ಶ. 27–100) ಕೂಂಗ್ ಫೂಟ್ಸೆ ದೇವಪುತ್ರನಲ್ಲ, ಕೇವಲ ಮಾನವಸಂತ ಎಂದು ಸಾರಿದ.

13. ಪ್ರಶ. ಎಂಟನೆಯ ಮತ್ತು ಒಂಬತ್ತನೆಯ ಶತಮಾನಗಳಲ್ಲಿ ಹ್ಯಾನ್ ಯು ಮತ್ತು ಲಿ ಆವೋ ಎಂಬ ಇಬ್ಬರು ಕೂಂಗ್ ಫೂಟ್ಸೆ ಅನುಯಾಯಿಗಳು ನೂತನ ಕೂಂಗ್ ಫೂಟ್ಸೆ ಗ್ರಂಥವನ್ನು ರಚಿಸಿದರು. ಇವರು ಮುಖ್ಯವಾಗಿ ಬದಲಾವಣೆಗಳ ಪುಸ್ತಕದ ಅನುಬಂಧಗಳಲ್ಲಿ ಕಂಡುಬರುವ ವಿಶ್ವಸೃಷ್ಟಿ ತತ್ತ್ವವನ್ನು ಬೆಳೆಸಿದರು. ಟ್ವೈ ಚಿ ಎಂಬ ಪರತತ್ತ್ವದ ಚಲಸ್ಥಿತಿ 'ಯಾಂಗ್' ಚಲನೆ ತನ್ನ ಅಂತಿಮ ಗತಿಯನ್ನು ಮುಟ್ಟಿದಾಗ ಲಯಸ್ಥಿತಿ ಪ್ರಾರಂಭವಾಗುತ್ತದೆ. ಈ ಲಯ ಸ್ಥಿತಿಗೆ 'ಯಿನ್' ಎಂದು ಹೆಸರು. ಲಯಸ್ಥಿತಿ ಅಂತಿಮಗತಿಯನ್ನು ಮುಟ್ಟಿದಾಗ ಪುನಃ ಚಲಸ್ಥಿತಿ ಪ್ರಾರಂಭವಾಗುತ್ತದೆ. ಹೀಗೆ ಸೃಷ್ಟಿಯು ಲಯವನ್ನೂ ಲಯವು ಸೃಷ್ಟಿಯನ್ನೂ ಒಂದಕ್ಕೊಂದು ಕಾರಣವಾಗಿ ಒಂದನ್ನೊಂದು ಹಿಂಬಾಲಿಸುತ್ತವೆ. ಯಾಂಗ್ ಮತ್ತು ಯಿಂಗ್ ಇವೆರಡರ ಸಂಯೋಗದಿಂದ ಪಂಚಭೂತಗಳೂ ಋತುಗಳೂ ಹುಟ್ಟುತ್ತವೆ. ಯಾಂಗ್ ಪುರುಷತತ್ತ್ವ, ಯಿನ್ ಸ್ತ್ರೀತತ್ತ್ವ ಇವೆರಡರ ಕೂಡಿಕೆಯಿಂದ ವಿಶ್ವದ ಎಲ್ಲ ವಸ್ತುಗಳೂ ಪ್ರಾಣಿಗಳೂ ಉದ್ಭವವಾಗುತ್ತವೆ. ಮಾನವನಲ್ಲಿ ಈ ಎರಡು ತತ್ತ್ವಗಳೂ ಅತ್ಯಂತ ಉಚ್ಚ ರೂಪದಲ್ಲಿ ವಿಕಾಸವಾಗುತ್ತವೆ. ಸಂತನಾದವ ತನ್ನ ಶೀಲವನ್ನು ಬೆಳೆಸಿಕೊಂಡು ಯಾವ ಬಗೆಯ ಆಸೆಯೂ ಇಲ್ಲದವನಾಗಿ ಶಾಂತ ಸ್ಥಿತಿಯನ್ನು ಮುಟ್ಟುತ್ತಾನೆ. ಮಾನವರಿಗೆ ಆದರ್ಶಪ್ರಾಯವಾಗಿ ಅತಿಮಾನವನಾಗುತ್ತಾನೆ.

ಅತಿಮಾನವನಾಗುವುದು ಹೇಗೆ ಎಂಬ ಪ್ರಶ್ನೆಗೆ ನೂತನ ಕೂಂಗ್ ಫೂಟ್ಸೆ ತಾತ್ತ್ವಿಕರು ವಿಶೇಷ ಗಮನಕೊಟ್ಟರು. ಇವರು ಈ ಅತಿಮಾನುಷ ಸಂತಸ್ಥಿತಿಯನ್ನು ಮುಟ್ಟುವ ವಿಧಾನವನ್ನು ಬೌದ್ಧರಿಂದ ಕಲಿತರು. ಆದರೆ ಒಂದಂಶದಲ್ಲಿ ಇವರಿಗೂ ಬೌದ್ಧರಿಗೂ ಭೇದವಿದೆ. ಬೌದ್ಧರು ಅರ್ಹಂತನಾಗಲು ಸಂಸಾರವನ್ನು ತೊರೆದು ಸಂನ್ಯಾಸವನ್ನು ಅನುಸರಿಸಬೇಕೆಂದು ಹೇಳಿದರು. ಇವರಾದರೂ ಸಂಸಾರದಲ್ಲಿದ್ದುಕೊಂಡೇ ಸಂನ್ಯಾಸವನ್ನು ಸ್ವೀಕರಿಸದೆಯೇ ಮುಕ್ತರಾಗಬಹುದೆಂದು ವಾದಿಸಿದರು. ನಿಷ್ಪಕ್ಷಪಾತಬುದ್ಧಿ, ಸಮತಾಬುದ್ಧಿ, ಸಮತಾಭಾವನೆ, ವಿವೇಕಬುಈ ಮೂರನ್ನು ಮಾನವರ ಮಧ್ಯೆ ಇದ್ದುಕೊಂಡು ಬೆಳೆಸಿದವ ಸಂತನಾಗುತ್ತಾನೆ. ನಿಷ್ಪಕ್ಷಪಾತದಿಂದ ಸಮತಾಭಾವನೆಯೂ, ಸಮತಾಭಾವನೆಯಿಂದ ವಿವೇಕವೂ ವಿವೇಕದಿಂದ ಶಾಂತಿಯೂ ಲಭಿಸುತ್ತವೆ. ಈ ರೀತಿ ಇಹದಲ್ಲೇ ಶಾಂತ ಸ್ಥಿತಿಯನ್ನು ಮುಟ್ಟಿದವ ಅತಿಮಾನುಷ ಸಂತನಾಗುತ್ತಾನೆ.

14. ಪ್ರ.ಶ. 1011–1077 ರ ವರೆಗೆ ಬಾಳಿದ ಪಾವೋ ಯೂಂಗ್, 'ಯಂಗ್' ಮತ್ತು 'ಯಿನ' ತತ್ತ್ವಗಳ ಏರಿಳಿತಗಳನ್ನು ಅರವತ್ತುನಾಲ್ಕು ರೇಖಾಸಂಕೇತಗಳ ಮೂಲಕ ತೋರಿಸುತ್ತಾನೆ. ಗೆರೆಗಳಲ್ಲಿ ತುಂಡುಗೆರೆ ಉದ್ದನೆಯ ಗೆರೆಗಳಿಗೆ ಅರ್ಥ ವ್ಯತ್ಯಾಸವುಂಟು. ಈ ವ್ಯತ್ಯಾಸ ಅವುಗಳ ಸಂಖ್ಯೆಯನ್ನೂ ಅವಲಂಬಿಸುತ್ತದೆ.

ಒಂದರಿಂದ ಆರರವರೆಗೆ ತುಂಡುಗೆರೆ ಮತ್ತು ಉದ್ದನೆಯ ಗೆರೆಗಳನ್ನು ಸೇರಿಸುವುದರಿಂದ ಭೂಮಿ, ಸೂರ್ಯ, ಚಂದ್ರ, ಆಕಾಶ, ನಕ್ಷತ್ರ–ಇವುಗಳ ಚಲನೆಯ ಗತಿಯನ್ನೂ ಶಾಖೋಷ್ಣಗಳನ್ನೂ ಮೆತು ಗಡುಸುಗಳನ್ನೂ ತೋರಿಸಬಹುದು. ಪರಮವಾದುದನ್ನೂ ಚಲಿಸಲಾರದುದನ್ನೂ ನಿರಾಕಾರವಾದುದನ್ನೂ ಯಾವ ಸಂಕೇತದಿಂದಲೂ ತೋರಿಸಲಾಗುವುದಿಲ್ಲ. ಆ ಪರಮತತ್ತ್ವ ಎರಡಾದಾಗ ವಿವಿಧ ಸಂಖ್ಯೆಗಳನ್ನು ಹುಟ್ಟಿಸುತ್ತದೆ. ಆ ಸಂಖ್ಯೆಗಳು ವಿವಿಧ ಪದಾರ್ಥಗಳನ್ನು ಹುಟ್ಟಿಸುತ್ತವೆ. ತುಂಡು ಮತ್ತು ಉದ್ದಗೆರೆಗಳನ್ನು ವಿವಿಧ ರೀತಿಗಳಲ್ಲಿ ಸೇರಿಸಿ ಹನ್ನೆರಡು ಸಂಕೇತಗಳನ್ನು ಮಾಡಿಕೊಳ್ಳಲಾಗಿದೆ. ಸೃಷ್ಟಿಯ ಪೂರ್ಣಸ್ಥಿತಿಯಲ್ಲಿ ಮಾನವ ಉದ್ಭವಿಸುತ್ತಾನೆ. ವಿಶ್ವಸೃಷ್ಟಿ ಮತ್ತು ಲಯಗಳ ಅವಧಿ 1,29,600 ವರ್ಷಗಳು.

15. ಪ್ರಶ. 1020–1077ರ ವರೆಗೆ ಬಾಳಿದ ಚಾಂಗ್ ಟ್ಸೈ ಎಂಬ ನೂತನ ಕೂಂಗ್ ಫೂಟ್ಸೆ ವಾದಿಯ ಸೃಷ್ಟಿತತ್ತ್ವ ಅರಿಸ್ಟಾಟಲ್ ತತ್ತ್ವವನ್ನು ಹೋಲುತ್ತದೆ. ದ್ರವ್ಯದ ಪರಮಸ್ಥಿತಿಯಲ್ಲಿ ಚಲನೆ ಮತ್ತು ಜಡತೆ ಸಮಸ್ಥಿತಿಯಲ್ಲಿರುತ್ತವೆ. ಸಮಸ್ಥಿತಿ ತಪ್ಪಿದಾಗ ನಾನಾರೂಪಗಳು ಹುಟ್ಟುತ್ತವೆ. ಪರಿಣಾಮಗೊಳ್ಳುವ ಪರತತ್ತ್ವವೇ ತಾಓ. ಅದರ ನಿಯಮವನ್ನು ಪಾಲಿಸುವುದೇ ಸದ್ವರ್ತನೆ. ಎಲ್ಲದರಲ್ಲೂ ಈ ಪರವಸ್ತು ಅಭಿವ್ಯಕ್ತವಾಗಿದೆ. ನಾವೆಲ್ಲ ಅದರ ಭಾಗಗಳು. ಆದ್ದರಿಂದ ನಾವು ಸೋದರರು ಈ ಪರತತ್ತ್ವವನ್ನು ಪಿತೃವಿನಂತೆಯೂ ಉಳಿದೆಲ್ಲವನ್ನು ಭ್ರಾತೃಗಳೆಂದೂ ಭಾವಿಸಿ ಪ್ರೀತಿಸಬೇಕು. ಎಲ್ಲರನ್ನೂ ಪ್ರೀತಿಸಿದಾಗ ನಾವು ತಂದೆಯಂತಿರುವ ಪರತತ್ತ್ವವನ್ನೂ ಪ್ರೀತಿಸುತ್ತೇವೆ ; ಈ ಮೂಲಕ ನಮ್ಮ ಲೋಕಧರ್ಮ, ಅತೀತ ವಿಶ್ವಧರ್ಮವಾಗುತ್ತದೆ. ವಿಶ್ವಧರ್ಮವನ್ನು ಸಾಧಿಸಿದವ ಪರತತ್ತ್ವದಲ್ಲಿ ಐಕ್ಯಹೊಂದುತ್ತಾನೆ. ಅದೇ ಮುಕ್ತಿ, ಅದೇ ಶಾಶ್ವತ ಶಾಂತಿ.

16. ನೂತನ ಕೂಂಗ್ ಫೂಟ್ಸೆ ಪಂಥ ಮುಂದೆ ಪ್ರಶ. 1529ರವರೆಗೆ ಎರಡು ಪಕ್ಷಗಳಾಗಿ ಬೆಳೆಯಿತು. ಈ ಎರಡು ಪಕ್ಷಗಳಲ್ಲಿ ಒಂದು ಪಕ್ಷ ಚೆಂಗ್ ಯಿ (1033–1108) ಎಂಬುವನಿಂದಲೂ ಇನ್ನೊಂದು ಪಕ್ಷ ಅವನ ಅಣ್ಣ ಚೆಂಗ್ ಹಾವೋ (1032–1085) ಎಂಬುವನಿಂದಲೂ ಪ್ರಾರಂಭವಾದುವು. ಚೆಂಗ್ ಯಿ ಮತ್ತು ಅವನ ಅನುಯಾಯಿ ಚುಹಿಸಿ (1130–1200), ಇವರಿಬ್ಬರ ತತ್ತ್ವಗಳು ಬಹುಮಟ್ಟಿಗೆ ಪ್ಲೇಟೋವಿನ ತತ್ತ್ವವನ್ನು ಹೋಲುತ್ತವೆ. ಆಕಾರವಿಲ್ಲದ ಸಾಮಾನ್ಯಕ್ಕೆ 'ಲಿ' ಎಂದು ಹೆಸರು. ಆಕಾರ ಮತ್ತು ದೇಹವಿರುವ ಎಲ್ಲ ವಾಸ್ತವ ವಸ್ತುಗಳಿಗೂ 'ಹಿಸಿಂಗ್ ಹಿಸಿಯ' ಎಂದು ಹೆಸರು. ಪ್ರತಿಯೊಂದು ವಸ್ತುವೂ ಸಾರರೂಪವಾದ 'ಲಿ' ಯನ್ನು ಒಳಗೊಂಡಿದೆ. 'ಲಿ' ಸಾಮಾನ್ಯಗಳು, 'ಹಿಸಿಂಗ್ ಹಿಸಿಯ' ಪ್ರತ್ಯೇಕ ವಸ್ತುಗಳು. ಪ್ಲೇಟೋ ಹೇಳಿರುವಂತೆ ಪ್ರತ್ಯೇಕ ವಸ್ತುಗಳು ತಮಗೆ ಸಂಭವಿಸಿದ ಸಾಮಾನ್ಯದಲ್ಲಿ ಭಾಗವಹಿಸಿ ಇರುತ್ತವೆ. ಈ ಸಾಮಾನ್ಯಗಳು ಆದರ್ಶರೂಪಗಳು. ಒಂದು ವಸ್ತುವು ಅದರ ಸತ್ತ್ವವಾದ ಸಾಮಾನ್ಯವನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಫಲಿಸಿದಾಗ ಅದು ಆದರ್ಶರೂಪವನ್ನು ಸಮೀಪಿಸುತ್ತದೆ. ಪ್ರತಿಯೊಂದು ವಸ್ತುವೂ ಆದರ್ಶ ಸ್ವರ್ಗದಲ್ಲಿರುತ್ತದೆ. ಎಂದು ಪ್ಲೇಟೋ ಹೇಳಿರುತ್ತಾನೆ. ಉದಾಹರಣೆ : ಹಾಸಿಗೆ, ಹಡಗು, ಗಾಡಿ – ಇವುಗಳಿಗೆ ಸಮಾಂತರವಾಗಿ ಸ್ವರ್ಗದಲ್ಲಿ ಧ್ಯೇಯರೂಪದ ಹಾಸಿಗೆ, ಹಡಗು, ಗಾಡಿ ಇವೆ. ಒಂದೊಂದು ಧ್ಯೇಯರೂಪವೂ ಸ್ಥಿರವಾದದ್ದು. ಈ ಧ್ಯೇಯರೂಪವಾದ 'ಲಿ'ಗೆ 'ಚಿ' ಎಂದು ಹೆಸರು. ವಾಸ್ತವ ವಸ್ತುಗಳು ಬದಲಾವಣೆಗೆ ಒಳಪಟ್ಟವು. ಅವು ಸ್ಥಿರವಲ್ಲ. ವಾಸ್ತವ ವಸ್ತುಗಳು ಧ್ಯೇಯರೂಪವಾದ ಸಾಮಾನ್ಯಗಳನ್ನು ಬಿಟ್ಟು ಇರಲಾರವು. ಆದರೆ ವಾಸ್ತವ ವಸ್ತುಗಳಲ್ಲಿಯೇ ಧ್ಯೇಯರೂಪ ಇರಬಹುದು. ಸಾಂಸಾರಿಕ ಪ್ರಪಂಚದಲ್ಲಿ ಕಾಲದೇಶಗಳಿಗೆ ಒಳಪಟ್ಟ ಇವು ಒಂದನ್ನು ಬಿಟ್ಟು ಇನ್ನೊಂದು ಇಲ್ಲದಿದ್ದರೂ ತಾರ್ಕಿಕ ದೃಷ್ಟಿಯಿಂದ ಧ್ಯೇಯರೂಪಗಳು ವಾಸ್ತವ ವಸ್ತುಗಳಿಗೆ ಮುಂಚಿನವು. ಏಕೆಂದರೆ ಅವು ಅನಾದಿಯಾದ ಅನಂತರೂಪಗಳು. ಈ ಧ್ಯೇಯರೂಪಗಳು ನಿರ್ಜೀವವಸ್ತುಗಳಲ್ಲೂ ಇವೆ. 'ಲಿ' ಎಂದರೆ ಸ್ವಭಾವ. ಇಲ್ಲಿ ಸ್ವಭಾವ ಎಂದರೆ ಪ್ರಕೃತಿ ಎಂದು ತಿಳಿಯಕೂಡದು. ಯಾವುದಕ್ಕೆ ಅನುಸಾರವಾಗಿ ಯಾವುದರಿಂದ ಪ್ರೇರಿತವಾಗಿ ಒಂದು ವಸ್ತು ವರ್ತಿಸುತ್ತದೆಯೋ ಅದು ಅದರ ಸ್ವಭಾವ. ಸ್ವಭಾವಕ್ಕನುಗುಣವಾಗಿ ಬಾಳುವುದೇ ಶೀಲ. ಒಂದು ಹಡಗು ತನ್ನ ಪ್ರಭಾವಕ್ಕನುಗುಣವಾಗಿ ವರ್ತಿಸುವುದೇ ಅದರ ಶೀಲ. ಆಗ ಅದನ್ನು ಒಳ್ಳೆಯ ಹಡಗೆಂದು ಕರೆಯುತ್ತೇವೆ. ಹಾಗೆಯೇ ಮಾನವನಲ್ಲಿರುವ 'ಲಿ'ಗೆ ಅನುಗುಣವಾಗಿ ನಡೆದವ ಸತ್ಪುರುಷ. ಪ್ಲೇಟೋವಿನ ತತ್ತ್ವದಲ್ಲಿ 'ದಿ ಐಡಿಯ ಆಫ್ ದಿ ಗುಡ್' ಎಲ್ಲಕ್ಕೂ ಮೇಲಿನ ಆದರ್ಶರೂಪವಾಗಿರುವಂತೆಯೇ ಇವನ ತತ್ತ್ವದಲ್ಲೂ 'ಟೈ ಚಿ' ಎಲ್ಲ ಆದರ್ಶರೂಪಗಳನ್ನೂ ಒಳಗೊಂಡ ಏಕೈಕ ಆದರ್ಶರೂಪ. ಅದು ಬದಲಾವಣೆಗೆ ಮೀರಿದ್ದು ; ಮನಸ್ಸು ಮತ್ತು ಆಲೋಚನೆಗೆ ಮೀರಿದ್ದು. ಭೌತವಸ್ತು ಲಿ ಯ ಒಂದು ವಾಸ್ತವರೂಪವಾದರೆ, ಮನಸ್ಸು ಲಿ ಯ ಇನ್ನೊಂದು ವಾಸ್ತವ ರೂಪ. ಎಲ್ಲಕ್ಕಿಂತ ಮೇಲಿನದಾದ ಲಿ ಅಥವಾ ಟೈ ಚಿ ಭೌತ ಮತ್ತು ಮಾನಸಿಕ ಭೇದಗಳಿಗೆ ಅತೀತವಾದದ್ದು. ಇದನ್ನು ಬೌದ್ಧರ ಶೂನ್ಯಕ್ಕೆ ಹೋಲಿಸಬಹುದು. ಈ ಪಕ್ಷದವರು ಆ ಬೌದ್ಧ ತತ್ತ್ವವನ್ನು ತಮ್ಮ ತತ್ತ್ವದಲ್ಲಿ ಸೇರಿಸಿಕೊಂಡಿರುತ್ತಾರೆ.

ಈ ನೂತನ ಕೂಂಗ್ ಫೂಟ್ಸೆ ಪಂಥದ ರಾಜಕೀಯ ತತ್ತ್ವವೂ ಪ್ಲೇಟೋವಿನ ತತ್ತ್ವವನ್ನು ಹೋಲುತ್ತದೆ. ಧ್ಯೇಯರೂಪವಾದ 'ಚಿ' ಸಂಪೂರ್ಣವಾಗಿ ಒಬ್ಬನಲ್ಲಿ ಅಭಿವ್ಯಕ್ತವಾದಾಗ ಅವನು ಸಾಧು ಅಥವಾ ಸಂತನಾಗುತ್ತಾನೆ. ಅಂಥ ಸಂತರು ರಾಜರಾದಾಗ ಒಂದು ದೇಶದ ರಾಜಕೀಯ ಉನ್ನತಿ ಪಡೆಯುತ್ತದೆ. ರಾಜರಲ್ಲಿ ಈ 'ಚಿ' ಕಡಿಮೆಯಾದಾಗ ರಾಜಕೀಯದಲ್ಲಿ ಅವನತಿ ತೋರುತ್ತದೆ.

17 ಚೆಂಗ್ ಹಾವೋ ಪ್ರಾರಂಭಿಸಿದ ಇನ್ನೊಂದು ನೂತನ ಕೂಂಗ್ ಫೂಟ್ಸೆ ಪಂಥ ವ್ಯಾಂಗ್ ಷಾ–ಜೆನ್ ತತ್ತ್ವದ ಮೂಲಕ ಮುಗಿಲನ್ನು ಮುಟ್ಟಿತು. ಚೆಂಗ್ ಯಿ ಮನಸ್ಸು ಲಿ ಯ ಒಂದು ವಾಸ್ತವರೂಪವೆಂದೂ, ಅದು ಚೇತನಾತೀತವಾದದ್ದೆಂದೂ ಹೇಳಿದ. ಚೆಂಗ್ ಹಾವೋ ಮತ್ತು ಷಾ–ಜೆನರ ಪ್ರಕಾರ ಅದು ಚೇತನರೂಪವಾದದ್ದು. ಮಾನವನ ಮನಸ್ಸು ಅದರ ಸಂಕುಚಿತ ಅಥವಾ ಮಲಿನ ರೂಪ. ಲಿ ಯ ಚೇತನ ಸ್ವಚ್ಛವಾದದ್ದು, ಮಿತಿ ಇಲ್ಲದ್ದು. ಸ್ವಲ್ಪವಾಗಿ ಆಗಲಿ ಅಥವಾ ಹೆಚ್ಚಾಗಿ ಆಗಲಿ ಈ ಚೇತನ ಎಲ್ಲ ಮಾನವರಲ್ಲೂ ಇದೆ. ಸಂಕುಚಿತ ಚೇತನಗಳಲ್ಲಿ ಅದು ಅಜ್ಞಾನದಿಂದ ಮುಚ್ಚಿದೆ. ಜ್ಞಾನಿಯಾದವ ತನ್ನ ಜ್ಞಾನದಿಂದ ಆ ಅಜ್ಞಾನದ ಮೋಡವನ್ನು ಚದರಿಸಿ ತನ್ನ ಅಂತಃಕರಣವನ್ನು ಶುದ್ಧ ಕನ್ನಡಿಯಂತೆ ಪ್ರಕಾಶಮಾನವಾಗಿ ಮಾಡುತ್ತಾನೆ. ಮಾನವರಿಂದ ಹಿಡಿದು ಮೃಗಪಕ್ಷಿಗಳು, ಬೆಟ್ಟಗುಡ್ಡಗಳು, ನದಿಗಳು, ವೃಕ್ಷಗಳು–ಎಲ್ಲವನ್ನೂ ಪ್ರೀತಿಸುವುದರಿಂದ ಒಬ್ಬನ ಪ್ರೀತಿ ವಿಶಾಲವಾಗಿ ಆ ಶುದ್ಧ ಚೇತನ ಅವನಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ಕೊನೆಯಲ್ಲಿ ಅವನು ಆ ಚೇತನದಲ್ಲೇ ಐಕ್ಯವಾಗುತ್ತಾನೆ. ಅಜ್ಞಾನದಿಂದ ಮತ್ತು ಸ್ವಾರ್ಥದಿಂದ ಮಸುಕಾದ ಮನಸ್ಸುಳ್ಳವನು ತಾನು ಆ ಪರಮಚೇತನವೇ ಎಂಬುದನ್ನು ಮರೆತಿರುತ್ತಾನೆ. ಜ್ಞಾನವನ್ನೂ ಪ್ರೀತಿಯನ್ನೂ ಅವನು ಬೆಳೆಸಿಕೊಂಡಾಗ ಅವನಿಗೆ ಆ ಚೇತನವೇ ತಾನು ಎಂಬ ಸ್ಮರಣೆಯುಂಟಾಗುತ್ತದೆ. ಮರೆತಿದ್ದನ್ನೂ ಜ್ಞಾಪಿಸಿಕೊಳ್ಳುವುದೇ, ಪ್ರತ್ಯಭಿಜ್ಞೆಯೇ, ಜೀವನದ ಅಂತಿಮ ಗುರಿ. ವ್ಯಾಂಗ್ ಕ್ವಾ ಜೆನ್ ಪರಮಚೇತನ ಶೂನ್ಯವಲ್ಲ, ಲಾವೋ ಟ್ಸು ಪಂಥದವರ ನಿರ್ಗುಣ ತತ್ತ್ವವಲ್ಲ, ಅದು ಭಾವಪ್ರದವಾದದ್ದು ಎಂದು ತೋರಿಸಿ, ಆ ಎರಡು ತತ್ತ್ವಗಳನ್ನೂ ತಿದ್ದಿ ಪರಿಪೂರ್ಣ ಭಾವತತ್ತ್ವವನ್ನಾಗಿ ಮಾರ್ಪಡಿಸಿರುತ್ತಾನೆ. ಸುನ್–ಯಾತ್–ಸೇನ್ ಈ ತತ್ತ್ವವನ್ನು ಅನುಸರಿಸಿ ಅದನ್ನು ತನ್ನ ಅಂತಾರಾಷ್ಟ್ರೀಯ ತತ್ತ್ವಕ್ಕೆ ಆಧಾರವಾಗಿ ಮಾಡಿಕೊಂಡ. ಈಗ ಮಾರ್ಕ್ಸ್‌ವಾದ ಪ್ರಬಲಗೊಂಡುದರಿಂದ ಅದು ಮೂಲೆಗುಂಪಾಗಿದೆ.

## II

**ನಾಮ ತತ್ತ್ವಪಂಥ** : ಹೆಸರುಗಳನ್ನು ಸರಿಪಡಿಸುವುದನ್ನು ಕೂಂಗ್ ಫೂಟ್ಸೆ ತನ್ನ ಒಂದು ಕರ್ತವ್ಯವಾಗಿ ಎಣಿಸಿದ್ದ. ಆದರೆ ಹೆಸರುಗಳ ತತ್ತ್ವವೇ ಅವನ ಮುಖ್ಯ ತತ್ತ್ವವಲ್ಲ. ಅವನಿಂದಾಚೆ ಬಂದ ಕೆಲವು ತಾರ್ಕಿಕರು ನಾಮತತ್ತ್ವವನ್ನೇ ಮುಖ್ಯ ತತ್ತ್ವವನ್ನಾಗಿ ಮಾಡಿಕೊಂಡರು. ಇವರಿಗೆ 'ಮಿಂಗ್ ಚಿಯ' ಎಂದು ಹೆಸರು ಬಂತು. ಮಿಂಗ್ ಚಿಯ ಎಂದರೆ ಕುವಾದಿಗಳು. ಇವರು ಗ್ರೀಕರ ಸೋಫಿಸ್ಟರನ್ನು ಹೋಲುತ್ತಾರೆ. ಈ ಪಂಥವನ್ನು ಆರಂಭಿಸಿದವರು ಟೆಂಗ್ ಷೀ (ಪ್ರಶ.ಪೂ. 500), ಮತ್ತು ಹುಯಿ ಷಿಷ್ (ಪ್ರಶ.ಪೂ. 350–260). ಹುಯಿ ಷಿಷ್‌ನ ಗ್ರಂಥಗಳು ದೊರೆತಿಲ್ಲ. ಅವನ ವಾದ ಚ್ವಾಂಗ್–ಟ್ಸು ಎಂಬ ಗ್ರಂಥದ ಒಂದು ಅಧ್ಯಾಯದಲ್ಲಿ ವರ್ಣಿತವಾಗಿದೆ. ಪದಗಳ ಅರ್ಥ ಪರಮವಲ್ಲ. ಅದು ಸಾಪೇಕ್ಷವಾದುದು ಎಂಬುದು ಅವನ ಮೂಲ ಸಿದ್ಧಾಂತ. ರೇಖಾಗಣಿತದ ಒಂದು ನೇರವಾದ ಗೆರೆಗೆ ದಪ್ಪವಿಲ್ಲ. ತುಂಬ ತೆಳುವಾದ ರೇಷ್ಮೆಯ ನೂಲಿಗೂ ದಪ್ಪವಿದೆ. ನೇರವಾದ ಗೆರೆ ಅತ್ಯಂತ ಸಣ್ಣದರಲ್ಲಿ ಸಣ್ಣದಾದರೂ ಆ ಗೆರೆಗೆ ಕೊನೆಯಿಲ್ಲ. ಆದ್ದರಿಂದ ಅದು ದೊಡ್ಡದು. ಹೀಗೆ ಒಂದೇ ವಿಷಯ ಒಂದು ದೃಷ್ಟಿಯಿಂದ ಅಲ್ಪವಾದದ್ದಾಗಿಯೂ ಇರಬಹುದು. ಇನ್ನೊಂದು ದೃಷ್ಟಿಯಿಂದ ಮಹತ್ತರವಾದುದಾಗಿಯೂ ಇರಬಹುದು, ಹಾಗೆಯೇ ಎತ್ತರವಾದದ್ದೂ ತಗ್ಗಾದದ್ದೂ ಸಾಪೇಕ್ಷ ಅರ್ಥವುಳ್ಳ ಪದಗಳು. ಎತ್ತರವೆಂದು ಹೇಳುವ ಪ್ರಸ್ಥಭೂಮಿಯನ್ನು ಹಿಮಾಲಯಕ್ಕೆ ಹೋಲಿಸಿದರೆ ಅದು ತಗ್ಗಿನದು. ನೆತ್ತಿಯ ಮೇಲಿನ ಸೂರ್ಯನನ್ನು ಅರುಣೋದಯ ಸೂರ್ಯನಿಗೆ ಹೋಲಿಸಿದಾಗ ಅವನು ಏರುವ ಸೂರ್ಯ, ಆದರೆ ಅದೇ ನೆತ್ತಿಯ ಮೇಲಿನ ಸೂರ್ಯನನ್ನು ಅಸ್ತಮಿಸುವ ಸೂರ್ಯನಿಗೆ ಹೋಲಿಸಿದರೆ ಅವನು ಇಳಿಯುವ ಸೂರ್ಯನಾಗುತ್ತಾನೆ. ಎಲ್ಲಾ ವಸ್ತುಗಳೂ ಒಂದು ದೃಷ್ಟಿಯಿಂದ ಒಂದೇ; ಏಕೆಂದರೆ ಎಲ್ಲವೂ ಇವೆ. ಇನ್ನೊಂದು ದೃಷ್ಟಿಯಿಂದ ಎಲ್ಲವೂ ಭಿನ್ನಭಿನ್ನ. ಭಿನ್ನತೆ ಎಲ್ಲಕ್ಕೂ ಸಾಮಾನ್ಯ. ಎಲ್ಲವೂ ಒಂದೇ ಎಂಬ ಪ್ರತಿಜ್ಞೆಗೆ ಎರಡು ವಿರುದ್ಧ ಅರ್ಥಗಳನ್ನು ಕೊಡಬಹುದು. ಎಲ್ಲವೂ ಇವೆ ಆದ್ದರಿಂದ ಎಲ್ಲವೂ ಒಂದೇ ; ಎಲ್ಲವೂ ಭಿನ್ನ, ಅದರಿಂದ ಅವೆಲ್ಲ ಒಂದೇ. ಹೋಲಿಕೆಯ ದೃಷ್ಟಿಯಿಂದ ಎಲ್ಲವೂ ಒಂದಕ್ಕೊಂದು ಸಮೀಪ. ವ್ಯತ್ಯಾಸದ ದೃಷ್ಟಿಯಿಂದ ಒಂದಕ್ಕೊಂದು ಬಹುದೂರ. ವ್ಯತ್ಯಾಸದ ದೃಷ್ಟಿಯಿಂದ ಒಬ್ಬನ ಪಿತ್ತಕೋಶಕ್ಕೂ ಮೂತ್ರಕೋಶಕ್ಕೂ ಚು ಮತ್ತು ಯುಯೆ ದೇಶಗಳಿಗಿರುವಷ್ಟು ಅಂತರವಿದೆ.

ನಾಮತತ್ತ್ವದ ಇನ್ನೊಬ್ಬ ಮುಖಂಡ ಕುಂಗ್–ಸುಂಗ್–ಲಂಗ್ (ಪ್ರಶ.ಪೂ. 284–259) ಅವನು ಒಂದು ದೇಶದ ಗಡಿಯನ್ನು ಕುದುರೆಯ ಮೇಲೆ ಏರಿ ದಾಟುತ್ತಿದ್ದಾಗ, ಅಲ್ಲಿಯ ಕಾವಲುಗಾರರು ಕುದುರೆಗಳಿಗೆ ಈ ಮಾರ್ಗದಲ್ಲಿ ಪ್ರವೇಶವಿಲ್ಲ ಎಂದರಂತೆ. ಕುಂಗ್–ಸುಂಗ್–ಲಂಗ್ ತನ್ನ ಕುದುರೆ ಬಿಳುಪು, ಬಿಳುಪು ಕುದುರೆ ಕುದುರೆಯಲ್ಲ ಎಂದು ಹೇಳುತ್ತ ಗಡಿಯನ್ನು ದಾಟಿ ಹೊರಟೇ ಹೋದನಂತೆ. ಬಿಳಿಯ ಕುದುರೆ ಕುದುರೆಯಲ್ಲ ಎಂಬುದು ಅವನ ವಾದದ ಒಂದು ಪ್ರಖ್ಯಾತ ದೃಷ್ಟಾಂತ. ಕುಂಗ್–ಸುಂಗ್–ಲಂಗ್‌ಟ್ಸು ಎಂಬ ಅವನ ಗ್ರಂಥದಲ್ಲಿ ಅದಕ್ಕಾಗಿಯೇ ಒಂದು ಅಧ್ಯಾಯ ಮೀಸಲಾಗಿದೆ. ಬಿಳುಪು ಕುದುರೆ ಕುದುರೆಯಲ್ಲ ಎಂಬ ಪ್ರತಿಜ್ಞೆಯನ್ನು ಅವನು ಈ ರೀತಿ ಸಮರ್ಥಿಸುತ್ತಾನೆ. ಕುದುರೆ ಎಂಬ ಪದ ಒಂದು ಆಕೃತಿಯನ್ನು ನಿರ್ದೇಶಿಸುತ್ತದೆ. ಬಿಳುಪು ಎಂಬ ಪದ ಬಣ್ಣವನ್ನು ನಿರ್ದೇಶಿಸುತ್ತದೆ. ಆಕೃತಿ ಬಣ್ಣವಲ್ಲ. ಆಕೃತಿ ಕುದುರೆಗೆ ಸಂಬಂಧಿಸಿದ್ದು, ಬಿಳುಪು ಬಣ್ಣಕ್ಕೆ ಸಂಬಂಧಿಸಿದ್ದು. ಆದ್ದರಿಂದ ಬಿಳುಪು ಕುದುರೆಯೇ ಬೇರೆ, ಕುದುರೆಯೇ ಬೇರೆ. ಕುದುರೆಯನ್ನು ತೆಗೆದುಕೊಂಡು ಬಾ ಎಂದರೆ ಬಿಳುಪು ಕುದುರೆಯನ್ನೇ ತರಬೇಕಾಗಿದ್ದಿಲ್ಲ. ಬಣ್ಣ ಅಪ್ರಸಕ್ತ. ಇಲ್ಲಿ ಕುದುರೆ ಎಂಬ ಪದ ಬಿಳಿಯ ಕುದುರೆಯನ್ನು ನಿರ್ದೇಶಿಸುವುದಿಲ್ಲ. ಕುದುರೆ ಎಂಬ ಪದದ ನಿರ್ದೇಶನ ವಿಸ್ತಾರ; ಬಿಳಿಯ ಕುದುರೆ ಎಂಬ ಪದದ ನಿರ್ದೇಶನ ಸಂಕುಚಿತ. ಆದ್ದರಿಂದ ವಿಶಾಲ ನಿರ್ದೇಶನವುಳ್ಳ ಕುದುರೆ ಬೇರೆ, ಸಂಕುಚಿತ ನಿರ್ದೇಶನವುಳ್ಳ ಬಿಳಿಯ ಕುದುರೆ ಬೇರೆ. ಕುದುರೆ ಅಶ್ವತ್ವವೆಂಬ ಸಾಮಾನ್ಯ ; ಬಿಳಿಕುದುರೆ ಶ್ವೇತ ಅಶ್ವತ್ವವೆಂಬ ಸಾಮಾನ್ಯ. ಈ ಸಾಮಾನ್ಯಗಳು ಭಿನ್ನ, ಆದ್ದರಿಂದ ಬಿಳಿಯ ಕುದುರೆ ಕುದುರೆ ಅಲ್ಲ. ಈ ವಾದಗಳನ್ನು ತರ್ಕಾಭಾಸಗಳು ಎಂದು ತೋರಿಸಬಹುದು. ಅವು ಹೇಗೆ ಆಭಾಸಗಳು ಎಂಬುದನ್ನು ಹುಸೇನ್ ಟ್ಸು ತೋರಿಸಿದ್ದನ್ನು ಈಗಾಗಲೇ ನೋಡಿರುತ್ತೇವೆ.

ಇನ್ನೊಂದು ಅಧ್ಯಾಯದಲ್ಲಿ ಬಿಳಿಯ ಕಲ್ಲು ಮತ್ತು ಕಲ್ಲು ಬೇರೆ ಬೇರೆ ಆದ್ದರಿಂದ ಬಿಳಿಯ ಕಲ್ಲು ಕಲ್ಲಲ್ಲ ಎಂದು ವಾದಿಸಿರುತ್ತಾನೆ. ಕಲ್ಲಿಗೆ ಕಾಠಿಣ್ಯ ಸ್ವಾಭಾವಿಕ. ಕಲ್ಲಾಗಲು ಕಾಠಿಣ್ಯವಿದ್ದೇ ಇರಬೇಕು. ಕಲ್ಲಾಗಲು ಅದು ಬಿಳಿಯದೇ ಆಗಿರಬೇಕಾದ್ದಿಲ್ಲ. ಬಿಳಿಯದ್ದೆಲ್ಲವೂ ಕಲ್ಲಾಗಿರಬೇಕಾಗಿಲ್ಲ. ಕಾಠಿಣ್ಯ ಸ್ಪರ್ಶೇಂದ್ರಿಯದ ವಿಷಯ. ಬಿಳುಪು ಕಣ್ಣಿನ ವಿಷಯ. ಕಣ್ಣು ಕಾಠಿಣ್ಯವನ್ನು ತಿಳಿಯಲಾರದು. ಸ್ಪರ್ಶ ಬಣ್ಣವನ್ನು ತಿಳಿಯಲಾರದು. ಆದ್ದರಿಂದ ಕಣ್ಣು ತೋರಿಸುವ ಬಿಳಿಯದೇ ಬೇರೆ, ಸ್ಪರ್ಶ ತೋರಿಸುವ ಕಲ್ಲೇ ಬೇರೆ. ಆದ್ದರಿಂದ ಬಿಳಿಯ ಕಲ್ಲು ಕಲ್ಲಲ್ಲ. ಇನ್ನೊಂದು ಅಧ್ಯಾಯದಲ್ಲಿ ಅವನು ಪ್ರತ್ಯೇಕಗಳಿಗೂ, ಅಂದರೆ ವಿಶೇಷಗಳಿಗೂ ಸಾಮಾನ್ಯಗಳಿಗೂ ಇರುವ ಭೇದಗಳನ್ನು ತೋರಿಸುತ್ತಾನೆ. ಅವನು ಸಾಮಾನ್ಯಗಳನ್ನು ವಾಸ್ತವ ವಸ್ತುಗಳು ನಮ್ಮ ಕಣ್ಣಿಗೆ ಗೋಚರವಾಗುವಂಥವು. ಸಾಮಾನ್ಯಗಳು ಕಣ್ಣಿಗೆ ಗೋಚರವಲ್ಲ. ಆದ್ದರಿಂದ ಅವು ಬೇರೆ ಬೇರೆ 'ಚಿಹ್' ಎಂದೂ ವಾಸ್ತವ ವಸ್ತುಗಳನ್ನು 'ವು' ಎಂದೂ ಕರೆದಿದ್ದಾನೆ.

ಕೊನೆಯ ಅಧ್ಯಾಯದಲ್ಲಿ ಮೂರ್ತ ಮತ್ತು ಅಮೂರ್ತಗಳಿಗಿರುವ ಭೇದವನ್ನು ವಿವರಿಸಿದ್ದಾನೆ. ಅಮೂರ್ತವಾದ ಇರವಿಗೆ ರೂಪವಿಲ್ಲ. ಮೂರ್ತವಾದ ಇರವಿಗೆ ರೂಪವಿದೆ. ಮೂರ್ತವಾದವು ಕಾಲ, ದೇಶ ಮತ್ತು ಬದಲಾವಣೆಗಳಿಗೆ ಒಳಪಟ್ಟ ವಾಸ್ತವವಸ್ತುಗಳು. ಅಮೂರ್ತವಾದ ಇರವು ರೂಪರಹಿತವಾದದ್ದು; ಕಾಲ, ದೇಶ, ಬದಲಾವಣೆಗಳಿಗೆ ಮೀರಿದ್ದು. ಅಮೂರ್ತವಾದದ್ದು ಎಲ್ಲಕ್ಕೂ ಮೇಲಿನದು. ಅದಕ್ಕಿಂತ ಮೇಲಿನದಿಲ್ಲ. ಈ ಆಕಾರವಿಲ್ಲದ ಅಮೂರ್ತತತ್ತ್ವವನ್ನು ಇವನು ಬೆಳೆಸಲಿಲ್ಲ. ಅದನ್ನು ಲಾವೋಟ್ಸು ಬೆಳೆಸಿ ಅದನ್ನು ತನ್ನ ತತ್ತ್ವದ ಪ್ರಥಮ ತತ್ತ್ವವನ್ನಾಗಿ ಮಾಡಿಕೊಂಡ.

## III

**ತಾಓ ತತ್ತ್ವ** : ಸಾಮಾನ್ಯವಾಗಿ ಲಾವೋ ಟ್ಸು ತತ್ತ್ವವನ್ನು ತಾಓ ತತ್ತ್ವವೆಂದು ಭಾವಿಸಲಾಗಿದೆ. ತಾಓ ಅಂದರೆ ಪಥ ಎಂದು ಅರ್ಥ. ಈ ಅರ್ಥದಲ್ಲಿ ಕೂಂಗ್ ಫೂಟ್ಸೆಯೂ ತಾಓವನ್ನು ಅಂಗೀಕರಿಸಿರುತ್ತಾನೆ. ಲಾವೋ ಟ್ಸು ತತ್ತ್ವದಲ್ಲಿ ತಾಓ ಕೇವಲ ಪಥವಲ್ಲ ; ಅದು ಪರವಸ್ತು. ಕೂಂಗ್ ಫೂಟ್ಸೆ ಪರತತ್ತ್ವಕ್ಕೆ ಹೆಚ್ಚು ಗಮನ ಕೊಡಲಿಲ್ಲ. ಲಾವೋ ಟ್ಸು ಪರತತ್ತ್ವಕ್ಕೆ ಹೆಚ್ಚು ಗಮನ ಕೊಟ್ಟಿದ್ದಾನೆ. ಅವನು ತೋರಿಸಿದ ಪಥ ಅದಕ್ಕೆ ಸಂಬಂಧಿಸಿದ್ದು. ಶೀಲಶ್ರೀಮಂತಿಕೆಯನ್ನು ಬೆಳೆಸುವುದೇ ಜೀವನದ ಪಥವೆಂದು ಕೂಂಗ್ ಫೂಟ್ಸೆ ಬೋಧಿಸಿದ. ಪರವಸ್ತುವಿನಲ್ಲಿ ಐಕ್ಯವಾಗುವುದೇ ಜೀವನದ ಪಥವೆಂದು ಲಾವೋ ಟ್ಸು ಸಾರಿದ. ನೂತನ ಕೂಂಗ್ ಫೂಟ್ಸೆ ಪಂಥದವರೂ ನೂತನ ಲಾವೋ ಟ್ಸು ತಾತ್ತ್ವಿಕರಂತೆ ಬೌದ್ಧ ವಿಜ್ಞಾನವಾದದಿಂದ ಸ್ಫೂರ್ತಿ ಪಡೆದು ತಾಓ ಎಂಬ ಪರ ಚೇತನದಲ್ಲಿ ಐಕ್ಯವಾಗುವುದೇ ಪರಮಮುಕ್ತಿಯೆಂದು ಭಾವಿಸಿದರು.

ತಾಓ ಪಂಥದಲ್ಲಿ ಮೂರು ಮುಖ್ಯ ಘಟ್ಟಗಳಿವೆ. ಲಾವೋ ಟ್ಸುಗೆ ಮುಂಚಿನ ತರುಣಾವಸ್ಥೆಯ ತಾಓ ಪಂಥ, ಮಧ್ಯಕಾಲದ ಲಾವೋಟ್ಸು ಪಂಥ, ವ್ಯಾಖ್ಯಾನಕಾರರ ತಾಓ ಪಂಥ. ಅಲ್ಲಿಂದಾಚೆಗೆ ಬೆಳೆದದ್ದು ನೂತನ ತಾಓ ಪಂಥ.

1 ಲಾವೋ ಟ್ಸು ಎಂಬ ತಾಓ ತತ್ತ್ವಗ್ರಂಥದಲ್ಲಿ ಯಾಂಗ್ ಚುವಿನ (ಪ್ರಶ.ಪೂ. 470–381) ತತ್ತ್ವವನ್ನು ಕುರಿತ ಒಂದು ಅಧ್ಯಾಯವಿದೆ. ಆದರೆ ಇದರಲ್ಲಿ ಚಾರ್ವಾಕ ಜೀವತತ್ತ್ವದಂತೆ, ಇಂದ್ರಿಯಸುಖವೇ ಜೀವನದ ಪರಮೋದ್ದೇಶವೆಂದು ಹೇಳಿರುತ್ತದೆ. ಯಾಂಗ್ ಚುವಿನ ತತ್ತ್ವ ಇದಕ್ಕೆ ತೀರ ವಿರುದ್ಧವಾದದ್ದು. ಈ ಗ್ರಂಥ ಪ್ರಾಮಾಣಿಕವಲ್ಲವೆಂದು ಆಧುನಿಕ ಚೀನೀ ವಿದ್ವಾಂಸರ ಅಭಿಪ್ರಾಯ. ಆದ್ದರಿಂದ ಇವನ ತತ್ತ್ವವನ್ನು ಇತರ ಗ್ರಂಥಗಳ ಆಧಾರದ ಮೇಲೆ ರೂಪಿಸಿದೆ.

ಯಾಂಗ್ ಚುವಿನದು ಕೂಂಗ್ ಫೂಟ್ಸೆ ತತ್ತ್ವದಂತೆ ಲೋಕಸಂಗ್ರಹ ತತ್ತ್ವವಲ್ಲ. ಅವನದು ಲೋಕನಿರಾಕರಣೆಯ ತತ್ತ್ವ. ಲೋಕದಲ್ಲಿದ್ದು ಶಾಂತಿಯನ್ನು ಬಯಸುವುದೂ ಸಂತೆಯಲ್ಲಿದ್ದು ನಿಶ್ಶಬ್ದವನ್ನು ಬಯಸುವುದೂ ಒಂದೇ. ಸಂಸಾರ ಒಂದು ಮುಳ್ಳಿನ ಪೊದೆ. ಅದರಲ್ಲಿ ಸಿಕ್ಕಿದವನಿಗೆ ಶ್ರಮವೇ ಫಲ; ಅದರಿಂದ ಬಿಡಿಸಿಕೊಳ್ಳುವ ಹೊತ್ತಿಗೆ ಅವನ ಜೀವವೇ ಹಾರಿಹೋಗುತ್ತದೆ. ಸಂಸಾರ ಹಳೆಯ ಎಕ್ಕಡದಂತೆ; ಅದಕ್ಕೆ ಎಷ್ಟು ತೇಪೆ ಹಾಕಿದರೂ ನಿಲ್ಲುವುದಿಲ್ಲ. ಆದ್ದರಿಂದ ಜನರ ಸಂಪರ್ಕದಿಂದ ಸರಿದು ಏಕಾಕಿಯಾಗಿ ಬೆಟ್ಟದ ಗುಹೆಯಲ್ಲಿ ವಾಸಿಸಿದಾಗಲೇ ಸಂಸಾರದ ಸೆರೆಯಿಂದ ಬಿಡುಗಡೆ ಮತ್ತು ಶಾಂತಿ. ಒಬ್ಬನ ಬಿಡುಗಡೆಗೆ ಅವನು ತನ್ನಷ್ಟಕ್ಕೆ ತಾನು ಹೊರಚ್ಚಾಗಿ ಬಾಳಬೇಕು. ಕಾಲಿನ ಒಂದು ಕೂದಲನ್ನು ಕಿತ್ತುಕೊಟ್ಟ ಮಾತ್ರಕ್ಕೆ ಲೋಕ ಉದ್ಧಾರವಾಗುತ್ತದೆಂದು ಭರವಸೆ ಕೊಟ್ಟರೂ ನಾನು ಒಂದು ಕೂದಲನ್ನೂ ಕಿತ್ತುಕೊಡಲಾರೆ ಎಂದು ಅವನು ಹೇಳಿರುತ್ತಾನೆ. ಈ ಲೋಕವನ್ನು ಪುಗಸಟ್ಟೆ ನನಗೆ ಕೊಡುತ್ತೇನೆಂದರೂ ಅದು ನನಗೆ ಬೇಡ. ಸರ್ಕಾರದ ಸುಧಾರಣೆ ಸಮಾಜಸುಧಾರಣೆ, ಆರ್ಥಿಕ ಸುಧಾರಣೆ – ಇವೆಲ್ಲ ಹಗಲುಗನಸುಗಳು. ಒಬ್ಬೊಬ್ಬನೂ ಈ ಲೋಕದ ಲಾಭಗಳನ್ನು ನಿರಾಕರಿಸಿ ತನ್ನಷ್ಟಕ್ಕೆ ತಾನು ಬಾಳುವುದನ್ನು ಕಲಿತರೆ ಎಲ್ಲವೂ ತನ್ನಷ್ಟಕ್ಕೆ ತಾನೇ ಸರಿಹೋಗುತ್ತದೆ. ಯಾವ ಸರ್ಕಾರ ಹೆಚ್ಚು ಕಾಯದೆಗಳನ್ನು ಜನರ ಮೇಲೆ ಹೇರುವುದಿಲ್ಲವೋ ಅದೇ ಒಳ್ಳೆಯ ಸರ್ಕಾರ. ಯಾವ ಸಮಾಜ ಹೆಚ್ಚು ಕಟ್ಟುಗಳನ್ನು ನಿಯಮಿಸುವುದಿಲ್ಲವೋ ಅದು ಒಳ್ಳೆಯ ಸಮಾಜ. ನನ್ನಂತೆ ಪ್ರತಿಯೊಬ್ಬನೂ ಒಂದು ರೋಮಮಾತ್ರಕ್ಕೆ ಈ ಲೋಕದ ನಿಧಿಯನ್ನೆಲ್ಲ ಕೊಟ್ಟರೂ ಬೇಡವೆಂದು ನಿರಾಕರಿಸಿದರೆ ಸಮಾಜ ತನ್ನಷ್ಟಕ್ಕೆ ತಾನೇ ಸ್ವರ್ಗಲೋಕವಾಗುತ್ತದೆ. ಹೀಗೆ ಯಾಂಗ್ ಚು ತನ್ನ ವಾದವನ್ನು ಮುಕ್ತಾಯಗೊಳಿಸುತ್ತಾನೆ.

2 ಲಾವೋ ಟ್ಸು (ಪ್ರಶ.ಪೂ. 361–289) ಯಾಂಗ್ ಚುವಿನ ಈ ಭಾವನೆಗಳನ್ನು ಬೆಳೆಸಿದನಲ್ಲದೆ, ಪರತತ್ತ್ವವನ್ನು ಮೊಟ್ಟಮೊದಲಿಗೆ ಸ್ಥಾಪಿಸಿದ. ಲಾವೋ ಟ್ಸು ಎಂಬ ಹೆಸರಿನವನು ಕೂಂಗ್ ಫೂಟ್ಸೆ ಕಾಲದಲ್ಲಿದ್ದಿರಬಹುದು. ಆದರೆ ಲಾವೋ ಟ್ಸು ಎಂಬ ಗ್ರಂಥ ಮಾತ್ರ ತುಂಬ ಈಚಿನ ಕಾಲದ್ದಾದುದರಿಂದ ಲಾವೋ ಟ್ಸು ಅದರ ಕರ್ತೃವಾಗಿರಲಾರ. ಆ ಗ್ರಂಥದಲ್ಲಿ ಲಾವೋ ಟ್ಸು ಎಂಬುವನ ಹೇಳಿಕೆಗಳನ್ನು ಅವನ ಅನುಯಾಯಿಗಳು ಸೇರಿಸಿರಬಹುದು.

ಲಾವೋ ಟ್ಸು ಪ್ರಕಾರ ತಾಓ ಅನಂತವಾದ, ನಿರಾಕಾರವಾದ ಹೆಸರಿಲ್ಲದ ತತ್ತ್ವ. ಈ ದರ್ಶನದಲ್ಲಿ 'ಯು' ಎಂದರೆ ಶುದ್ಧ ಇರವು; 'ವು' ಎಂದರೆ ಶುದ್ಧ ಶೂನ್ಯ, ಇವೆರಡೂ ಒಂದೇ. ಏಕೆಂದರೆ ಎರಡೂ ನಿರಾಕಾರವಾದವು, ನಾಮರಹಿತವಾದವು. ಸ್ವರ್ಗ ಮತ್ತು ಭೂಮಿ ಇವೂ ನಾಮಸಹಿತವಾದವು. ಉಳಿದೆಲ್ಲ ವಸ್ತುಗಳೂ ಆ ಸ್ವರ್ಗ ಮತ್ತು ಭೂಮಿಯ ಬಗೆಬಗೆಯ ನಾಮಾಂತರಗಳು.

ನಾಮರಹಿತವಾದ ಸ್ವತ್ತನ್ನು ನಿರ್ದೇಶಿಸಬೇಕಾಗಿರುವುದರಿಂದ ವ್ಯವಹಾರಸೌಕರ್ಯಕ್ಕಾಗಿ ಅದನ್ನು ತಾಓ ಎಂದು ಕರೆಯಲಾಗಿದೆ. ಇತರ ಹೆಸರುಗಳು ಬದಲಾಯಿಸುತ್ತವೆ. ಆದರೆ ತಾಓ ಎಂಬ ಸಂಕೇತ ಬದಲಾಯಿಸುವುದಿಲ್ಲ; ಅದು ಅನಾದಿನಿತ್ಯ ನಾಮ. ಅದು ನಿಜವಾಗಿ ನಾಮರಹಿತವಾದುದುರಿಂದ ಅದನ್ನು ಅಭಾವವೆಂದು ಕರೆಯಬಹುದು. ಯಾವುದು ಇರಬೇಕಾದರೂ ಅದಕ್ಕೆ ಅಧಾರವಾಗಿ ಅದರ ಅಭಾವವಿರಬೆಕು. ಅಭಾವವೇ ಎಲ್ಲ ಭಾವಗಳಿಗೂ ಕಾರಣ. ಅಭಾವ 'ಯು' ಭಾವ 'ವು' ; ವು ಗೆ 'ಯು' ಆಧಾರ. 'ಯು' ಬದಲಾಯಿಸುವುದಿಲ್ಲ. ಅದು ಅಚಲ, ಆದರೂ ಅದು ಚಲನೆಯುಳ್ಳ, ಬದಲಾಯಿಸುವ ಎಲ್ಲಕ್ಕೂ ಆಧಾರ. ತಾಓ ಎಲ್ಲ ಚಲಿಸುವ ವಸ್ತುಗಳ ಚಲನೆಯನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿದೆ.

ತಾಓ ನಿಯಮದ ಪ್ರಕಾರ ಒಂದು ವಸ್ತುವಾಗಲಿ ಕ್ರಿಯೆಯಾಗಲಿ ಅತಿಯಾದಾಗ ಅದಕ್ಕೆ ವ್ಯತಿರಿಕ್ತವಾದುದರಲ್ಲಿ ಪರ್ಯವಸಾನಗೊಳ್ಳುತ್ತದೆ. ದುರಂತ ದಾರುಣವಾದಾಗ ಮಂಗಳಕರವಾದ ವಿವೇಕ ಅದರಿಂದ ಹುಟ್ಟುತ್ತದೆ. ಬಡತನದ ಅಂತಿಮ ಘಟ್ಟವನ್ನು ಮುಟ್ಟಿದವನಿಗೆ ಬುದ್ಧಿ ಬಂದು ಐಶ್ವರ್ಯ ಲಭಿಸುತ್ತದೆ. ಐಶ್ವರ್ಯದ ಮುಗಿಲನ್ನು ಮುಟ್ಟಿದವನಿಗೆ ದುರ್ಬುದ್ಧಿ ಹುಟ್ಟಿ ತಪ್ಪುದಾರಿ ಹಿಡಿದು ದಿವಾಳಿಯಾಗುತ್ತಾನೆ. ಅಪಾಯ ಹೆಚ್ಚಿದಾಗ ಅಶಕ್ತರು ಬಲಶಾಲಿಗಳನ್ನು ನಿಗ್ರಹಿಸುತ್ತಾರೆ. ಒಂದನ್ನು ಹೆಚ್ಚು ಮಾಡಿದರೆ ಅದು ಕಡಿಮೆಯಾಗುತ್ತದೆ. ಒಂದನ್ನು ಕಡಿಮೆ ಮಾಡಿದಾಗ ಅದು ಹೆಚ್ಚುತ್ತದೆ. ಇವು ಮೇಲ್ನೋಟಕ್ಕೆ ವಿರೋಧಾಭಾಸಗಳಾಗಿ ಕಾಣುತ್ತವೆ. ಆದರೆ ವಿರೋಧಾಭಾಸಗಳಲ್ಲಿ ಮಿತಿಮೀರಿದ್ದು ಅತಿಯಾದದ್ದು ತನ್ನನ್ನು ತಾನೇ ನಾಶಗೊಳಿಸುತ್ತದೆ. 'ಅತಿ ಸರ್ವತ್ರ ವರ್ಜಯೇತ್' ಎಂಬುದೇ ಈ ತಾಓ ನಿಯಮದ ಅರ್ಥ.

ಈ ನಿಯಮವನ್ನು ತಿಳಿಯುವುದೇ ವಿವೇಕ. ಈ ವಿವೇಕ ಪಡೆದವ ಉದಾರಚರಿತನಾಗುತ್ತಾನೆ. ಉದಾರಿಯಾದವನಿಗೆ ಪಕ್ಷಪಾತಬುದ್ಧಿ ಬಿಟ್ಟು ಹೋಗುತ್ತದೆ. ಪಕ್ಷಪಾತ ಬುದ್ಧಿ ತೊಲಗಿದಾಗ ಅವನು ಸರ್ವಗ್ರಾಹಿಯಾಗುತ್ತಾನೆ. ಸರ್ವಗ್ರಾಹಿಯಾದವ ವಿಶಾಲಹೃದಯಿಯಾಗುತ್ತಾನೆ ; ಸತ್ಯದಲ್ಲಿ ಸೇರಿಹೋಗುತ್ತಾನೆ ; ಪುನಃ ಜೀವನದಲ್ಲಿ ಆ ಸತ್ಯದಿಂದ ಜಾರುವುದಿಲ್ಲ. ಈ ಐಕ್ಯವನ್ನು ಜೀವನ್ಮುಕ್ತಿಗೆ ಹೋಲಿಸಬಹುದು.

ತಾಓವನ್ನು ಅರಿತವ ಯಾವುದನ್ನಾದರೂ ಸಾಧಿಸಬೇಕಾದರೆ ಅದಕ್ಕೆ ವಿರುದ್ಧವಾದುದರಿಂದ ಪ್ರಾರಂಭಿಸುತ್ತಾನೆ. ಪ್ರಬಲನಾಗಬೇಕೆಂಬಾತ ಅದಕ್ಕೆ ವಿರುದ್ಧವಾದ ವಿನೀತಭಾವವನ್ನು ತಳೆಯುತ್ತಾನೆ. ಮುಂದಕ್ಕೆ ಬರಬೇಕಾದರೆ ಎಲ್ಲರಿಗಿಂತಲೂ ಹಿಂದಿನವನಾಗುತ್ತಾನೆ. ಎಲ್ಲವನ್ನೂ ವರ್ಜಿಸಿದಾಗ ಅವನಿಗೆ ಎಲ್ಲವೂ ವಶವಾಗುತ್ತವೆ. ಎಲ್ಲರ ಕಣ್ಣು ತಪ್ಪಿಸಿಕೊಂಡು ಏಕಾಂಕಿಯಾದಾಗ ಅವನ ಖ್ಯಾತಿ ಎಲ್ಲೆಲ್ಲೂ ಹರಡುತ್ತದೆ. ವಿವೇಕಿಯಾದವ ವಿನೀತನಾಗಿ ನಮ್ರತೆಯಿಂದ ಸ್ವಲ್ಪದರಿಂದಲೇ ತೃಪ್ತನಾಗಿ ಬಾಳಬೇಕು. ಹೀಗೆ ಬಾಳುವುದು ಸಹಜವಾದ ತಾಓ ನಿಯಮ. ಈ ಸಹಜ ನಿಯಮ ಎಲ್ಲರಲ್ಲೂ ಇದ್ದೇ ಇದೆ. ಅದೇ ಸದ್ಗುಣ. ತಾಓದಿಂದ ಎಲ್ಲರೂ ಸ್ವಾಭಾವಿಕವಾಗಿ ಪಡೆದಿರುವ ಸದ್ಗುಣವನ್ನು ಲಾವೋ ಟ್ಸು 'ಟೆ' ಎಂದು ಕರೆದಿರುತ್ತಾನೆ. ಸ್ವಾಭಾವಿಕ ಸದ್ಗುಣಕ್ಕನುಸಾರವಾಗಿ ಬಾಳುವವನ ಜೀವನ ಸರಳ; ಸ್ವತಃ ಪ್ರೇರಿತವಾದ್ದು. ಅದಕ್ಕೆ ಪಾಂಡಿತ್ಯ ಬೇಕಿಲ್ಲ. ಪಾಂಡಿತ್ಯದಿಂದ ಜೀವನ ಕೃತಕವಾಗುತ್ತದೆ. ಕರ್ಮಾಡಂಬರ ಹೆಚ್ಚುತ್ತದೆ, ತಾಓವಿನ ಸರಳತೆ ಮರೆಯಾಗುತ್ತದೆ. ಒಳ್ಳೆಯದು, ಕೆಟ್ಟದ್ದು, ಸುಂದರವಾದದ್ದು ಕುರೂಪಿಯಾದದ್ದು ಎಂಬ

ದ್ವೈತಭಾವ ಹೆಚ್ಚಿ ಎಲ್ಲೆಲ್ಲೂ ತಾಂಡವವಾಡುತ್ತದೆ. ಹಸುಳೆಯ ನಿಷ್ಕಳಂಕ ಬುದ್ಧಿ ಹೋಗಿ ಎಲ್ಲದರಲ್ಲೂ ಪಾಪ, ಕಳಂಕ, ಕೊಳೆ ಕಾಣಿಸಿಕೊಳ್ಳುತ್ತವೆ. 'ಟೆ' ನಿಯಮದಂತೆ ಬಾಳಬೇಕೆಂಬಾತ ನಿಷ್ಕಳಂಕ ಹಸುಳೆಯಂತೆ ಬಾಳಬೇಕು. ನಿಷ್ಕಳಂಕ ಸರಳಸ್ವಭಾವವನ್ನು ಬೆಳೆಸಿಕೊಂಡವನೇ ಸಾಧು, ಸಂತ.

ಕೂಂಗ್ ಫೂಟ್ಸೆಯಂತೆ ಲಾವೋ ಟ್ಸು ಕೂಡ ಸಂತರು ರಾಜರಾದಾಗ ರಾಜ್ಯ ಸುಖೀರಾಜ್ಯವಾಗುತ್ತದೆ ಎಂದು ಹೇಳಿದ್ದಾನೆ. ಆದರೆ ಲಾವೋ ಟ್ಸುವಿನ ಸಂತ ಆಳುವ ಬಗೆ ಬೇರೆ. ಕೂಂಗ್ ಫೂಟ್ಸೆಯ ಸಂತ ಆಳುವ ಬಗೆ ಬೇರೆ. ಲಾವೋ ಟ್ಸುವಿನ ಸಂತ ಆಳದೆಯೆ ಆಳುತ್ತಾನೆ. ಕಾನೂನು ಹೆಚ್ಚಿದ್ದೇ ಅಪರಾಧ ಹೆಚ್ಚಿದ್ದಕ್ಕೆ ಕಾರಣ. ಆದ್ದರಿಂದ ಕಾನೂನುಗಳನ್ನು ಅವನು ಕಡಿಮೆ ಮಾಡುತ್ತಾನೆ. ಸಮಾಜದಲ್ಲಿ ಕಂಡುಬರುವ ಏರುಪೇರುಗಳನ್ನು ತೊಡೆದುಹಾಕಿ ಸಮಾನತೆಯನ್ನು ಏರ್ಪಡಿಸುತ್ತಾನೆ. ಅವನು ಅನುಸರಿಸಿದ ಸರಳ ನೀತಿ ಏನೂ ತಿಳಿಯದ ಮಗುವಿನ ನೀತಿಯೆಂದು ಭಾವಿಸಕೂಡದು. ಅದು ವಿವೇಕದಿಂದ ಕೃಷಿಮಾಡಿ ಅರ್ಜಿಸಿದ್ದು ; ಪಾಂಡಿತ್ಯದ ವಿವೇಕದಿಂದ ಪಾರಾಗಿ ಆರ್ಷ(ಜ್ಞಾನದಿಂದ ಹುಟ್ಟಿದ್ದು. ಆರ್ಷಜ್ಞಾನವೇ ಸರಳ ವಿವೇಕ. ಅದು ವ್ಯಾವಹಾರಿಕ) ಜ್ಞಾನವನ್ನು ಹೆಚ್ಚಿಸುವುದಿಲ್ಲ. ಪಾರಮಾರ್ಥಿಕ ಜ್ಞಾನವನ್ನು ಹೆಚ್ಚಿಸುತ್ತದೆ.

3. ಚ್ವಾಂಗ್ ಟ್ಸು ವಿನ (ಪ್ರಶ.ಪೂ. 360–286) ತತ್ತ್ವವು ತಾವೊ ತತ್ತ್ವದ ಮೂರನೆಯ ಘಟ್ಟ. ಸಾಧಾರಣವಾಗಿ ಇವನದೆಂದು ಭಾವಿಸಿರುವ 'ಚ್ವಾಂಗ್ ಟ್ಸು' ಗ್ರಂಥ ಬಹುಶಃ ಪ್ರಶ. ಮೂರನೆಯ ಶತಮಾನದಲ್ಲಿ ಕುವೋ ಷಿಯಾಂಗ್ ಕೂಡಿಸಿಟ್ಟ ಅನೇಕರ ಬರೆವಣಿಗೆಗಳ ಸಂಕಲನ. ಅದರಲ್ಲಿ ಮೊದಲನೆಯ, ಎರಡನೆಯ ಮತ್ತು ಮೂರನೆಯ ಘಟ್ಟಗಳ ತಾಓ ತತ್ತ್ವ ಸೇರಿದೆ. ಮೂರನೆಯ ಘಟ್ಟದ ತಾಓ ತತ್ತ್ವವನ್ನು ವಿವರಿಸಿದ ಅಧ್ಯಾಯಗಳಲ್ಲಿ ಬಹುಶಃ ಹೆಚ್ಚು ಭಾಗ ಚ್ವಾಂಗ್ ಟ್ಸುವಿನದಿರಬಹುದು. ಸ್ವಲ್ಪ ಭಾಗ ಇತರರಿಂದ ರಚಿತವಾಗಿರಬಹುದು.

ಇದರಲ್ಲಿ ಸೌಖ್ಯ ಪಡೆಯುವುದು ಹೇಗೆ ಎಂಬುದು ಒಂದು ಮುಖ್ಯ ವಿಷಯ. ಸ್ವಾಭಾವಿಕವಾಗಿ ಬಾಳುವುದೇ ಸೌಖ್ಯಕ್ಕೆ ಕಾರಣ: ಕೃತಕವಾಗಿ ಬಾಳುವುದು ದುಃಖಕ್ಕೆ ಕಾರಣ. ಪ್ರಕೃತಿಜನ್ಯವಾದದ್ದು ಸ್ವಾಭಾವಿಕ. ಮಾನವನಿಂದ ಕಲ್ಪನೆಯಾದುದು ಕೃತಕ. ಲೋಕದ ವಿವಿಧ ಪ್ರಾಣಿಗಳ ಸ್ವಾಭಾವಿಕಶಕ್ತಿ ಭಿನ್ನ. ಆ ಭಿನ್ನ ಸ್ವಭಾವಕ್ಕೆ ಅನುಗುಣವಾಗಿ ಒಂದೊಂದೂ ತನ್ನ ಶಕ್ತಿಯನ್ನು ಬೆಳೆಸಿಕೊಂಡಾಗ ಅವೆಲ್ಲವೂ ಒಂದೇ ಸಮವಾಗಿ ಸುಖವಾಗಿರುತ್ತವೆ. ಒಂದು ಪಕ್ಷಿ ದೂರ ಹಾರಿಹೋಗಬಲ್ಲದು; ಇನ್ನೊಂದು ಸ್ವಲ್ಪ ದೂರ ಮಾತ್ರ ಕುಪ್ಪಳಿಸಬಲ್ಲುದು. ಅವೆರಡೂ ತಮ್ಮ ಶಕ್ತಿಗೆ ತಕ್ಕಂತೆ ಬಾಳಿದರೆ ಎರಡೂ ಸಮ ಸುಖ ಪಡೆಯುತ್ತವೆ. ಒಂದು ಸರಾಗವಾಗಿ ಮಾಡಬಲ್ಲದನ್ನು ಇನ್ನೊಂದು ಮಾಡಲು ಯತ್ನಿಸಿದರೆ ದುಃಖಕ್ಕೆ ಈಡಾಗುತ್ತದೆ. ಬಾತುಕೋಳಿಯ ಕಾಲು ಮೋಟು. ಕೊಕ್ಕರೆಯ ಕಾಲು ಉದ್ದ. ಒಂದರ ಕಾಲನ್ನು ಉದ್ದವಾಗುವಂತೆಯೂ ಇನ್ನೊಂದರನ್ನು ಮೋಟಾಗುವಂತೆಯೂ ಮಾಡಿದರೆ ಎರಡಕ್ಕೂ ಸಂಕಟ ತಪ್ಪಿದ್ದಲ್ಲ. ಪಕ್ಷಿಗಳನ್ನು ಪಕ್ಷಿಗಳಂತೆ ಕಾಣಬೇಕು. ಅದರ ಬದಲು ಮಾನವರಿಗೆ ನಡೆಸುವ ಆದರಾತಿಥ್ಯವನ್ನು ಪಕ್ಷಿಗೆ ನಡೆಸಿದರೆ ಅವು ಸಂಕಟಕ್ಕೆ ಈಡಾಗುತ್ತವೆ. ಈ ವಿಚಾರದಲ್ಲಿ ಒಂದು ಕಥೆ ಇದೆ. ಲು ಪ್ರಾಂತ್ಯದ ರಾಜಧಾನಿಗೆ ಒಂದು ಹೊಸ ಬಗೆಯ ಸಮುದ್ರಪಕ್ಷಿ ಬಂದು ಇಳಿದಾಗ ಆ ಅಪೂರ್ವ ಪಕ್ಷಿಯನ್ನು ನೋಡಿ, ಅಲ್ಲಿಯ ಶ್ರೀಮಂತನೊಬ್ಬ ಅದಕ್ಕೆ ಮಾನವನಿಗೆ ಅತಿಥ್ಯ ನಡೆಸುವಂತೆ ಮೊದಲು ದ್ರಾಕ್ಷಾರಸವನ್ನು ಕೊಟ್ಟು ಅನಂತರ ಅದನ್ನು ಸಂತೋಷಗೊಳಿಸಲು ಸಂಗೀತವನ್ನು ಏರ್ಪಡಿಸಿದ. ಒಂದು ಗೂಳಿಯನ್ನು ಕೊಂದು ಅದರ ಮಾಂಸದಿಂದ ಭಕ್ಷ್ಯಗಳನ್ನು ಮಾಡಿಸಿ ಅದರ ಮುಂದಿಟ್ಟ. ದ್ರಾಕ್ಷಾರಸವನ್ನು ಕುಡಿದು ಸಂಗೀತವನ್ನು ಕೇಳಿದ ಆ ಪಕ್ಷಿಗೆ ಪ್ರಜ್ಞೆ ತಪ್ಪಿತು. ಅದು ಏನನ್ನೂ ತಿನ್ನಲಾರದೆ ಮೂರೇ ದಿವಸಗಳಲ್ಲಿ ಮರಣಹೊಂದಿತು. ಒಂದಕ್ಕೆ ಅಮೃತವಾದದ್ದು ಇನ್ನೊಂದಕ್ಕೆ ವಿಷ. ಮೀನಿಗೆ ನೀರಿನಲ್ಲಿ ಮುಳುಗಿದ್ದಾಗ ಸೌಖ್ಯ, ಮಾನವನಿಗೆ ಅದು ಮರಣ.

ಈ ತತ್ತ್ವವನ್ನು ಚ್ವಾಂಗ್ ಟ್ಸು ರಾಜಕೀಯಕ್ಕೂ ಅನ್ವಯಿಸಿರುತ್ತಾನೆ. ವ್ಯಕ್ತಿವೈಶಿಷ್ಟ್ಯವನ್ನು ಗಣಿಸದೆ ಸರ್ಕಾರ ಎಲ್ಲರ ಮೇಲೂ ಒಂದೇ ಕಾನೂನನ್ನು ಹೇರುತ್ತದೆ. ಇದರಿಂದ ಉದ್ದವಾದ ಕಾಲನ್ನು ಮೊಟಕು ಮಾಡಿದಾಗ ಮೊಟಕಾದುದನ್ನು ಉದ್ದವಾಗುವಂತೆ ಎಳೆದಾಗ ಹೇಗೋ ಹಾಗೆ ರಾಜ್ಯದಲ್ಲೂ ಪ್ರಜೆಗಳಿಗೆ ಹಿಂಸೆಯಾಗುತ್ತದೆ. ಕಾನೂನುಗಳ ಕಡತ ದೊಡ್ಡದಾಗಿ ಬೆಳೆದಾಗ ಜನರ ಜೀವನದ ಮಟ್ಟ ಇಳಿಯುತ್ತದೆ. ಕಟ್ಟುಗಳು ಹೆಚ್ಚಿದಷ್ಟೂ ಕಳವು ಮೋಸ ಅಪರಾಧಗಳು ಹೆಚ್ಚುತ್ತವೆ. ಕಾನೂನುಗಳು ಕಡಿಮೆಯಾಗಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಸಂಖ್ಯೆ ಕಡಿಮೆಯಾದಾಗ ಆ ರಾಜ್ಯ ಸುಖೀರಾಜ್ಯವಾಗುತ್ತದೆ.

ಆದರೂ ಸ್ವತಂತ್ರವಾದ ಸುಖೀರಾಜ್ಯದಲ್ಲಿ ಸ್ವತಂತ್ರವಾದ ಸುಖೀಸಮಾಜದಲ್ಲಿ ದೊರಕುವ ಸೌಖ್ಯ ಸಾಪೇಕ್ಷವಾದ್ದು. ಅದು ಪರಮಸೌಖ್ಯವಲ್ಲ. ಸರಳ ಕಾನೂನುಗಳ ಮೂಲಕ ಸರಳ ನೀತಿಯ ಮೂಲಕ ದೊರೆಯುವ ಸೌಖ್ಯಕ್ಕೆ ಮಿತಿ ಇದೆ. ಅದು ಶಾಶ್ವತ ಸೌಖ್ಯವೂ ಅಲ್ಲ. ಪರಮ ಸ್ವತಂತ್ರಜೀವನವೂ ಅಲ್ಲ. ಶಾಶ್ವತಸುಖವನ್ನು ಪಡೆಯುವುದಕ್ಕೆ ಎರಡು ಮಾರ್ಗಗಳಿವೆ. ಒಂದು ತಿಳಿವಿನಿಂದ ಭಾವೋದ್ರೇಕಗಳನ್ನು ತಡೆದಿಡುವುದು. ಮಗು ಹುಟ್ಟಿದಾಗ ಮಾನವರು ಕುಡಿದವರಂತೆ ಭಾವೋದ್ರೇಕದಿಂದ ಕುಣಿದಾಡುತ್ತಾರೆ. ಅದು ಸತ್ತಾಗ ವ್ಯಸನದಿಂದ ರೋದಿಸುತ್ತಾರೆ. ಹುಟ್ಟುಸಾವುಗಳು ಸ್ವಾಭಾವಿಕ, ಅನಿವಾರ್ಯ. ಜೀವನರೀತಿಯೇ ಇದು ಎಂದು ತಿಳಿದವನು ಹುಟ್ಟಿದ್ದನ್ನು ನೋಡಿ ಹಿಗ್ಗುವುದಿಲ್ಲ, ಸಾವನ್ನು ಕಂಡು ಕುಗ್ಗುವುದಿಲ್ಲ. ಹುಟ್ಟು ಸಾವುಗಳು ವಸಂತ, ಹೇಮಂತ ಋತುಗಳಂತೆ ಒಂದನ್ನೊಂದು ಅನಿವಾರ್ಯವಾಗಿ ಹಿಂಬಾಲಿಸುತ್ತವೆ. ಇದು ಅನಿವಾರ್ಯವೆಂದು ತಿಳಿಯದವನು ಭಾವೋದ್ರೇಕಗಳಿಗೆ ತುತ್ತಾಗುತ್ತಾನೆ. ಅದನ್ನು ತಿಳಿದವನು ಉದ್ರೇಕಗೊಳ್ಳುವುದಿಲ್ಲ. ಇದು ವಿಧಿನಿಯಮವೆಂದು ಸಮಾಧಾನದಿಂದ ಇರುತ್ತಾನೆ. ಈ ವಾದ ಸ್ಟೋಯಿಕ್ ಪಂಥದ ಸರ್ವಸಹಿಷ್ಣುಭಾವವನ್ನು ಹೋಲುತ್ತದೆ.

ಶಾಶ್ವತಸೌಖ್ಯ ಪಡೆಯಲು ಚ್ವಾಂಗ್ ಟ್ಸು ಇನ್ನೊಂದು ಮಾರ್ಗವನ್ನು ತಿಳಿಸಿರುತ್ತಾನೆ. ಈ ಮಾರ್ಗವನ್ನು ಅನುಸರಿಸಿದವನೂ ಲೋಕಸುಖಗಳನ್ನು ಸಾಪೇಕ್ಷ ಸುಖಗಳೆಂದು ತಿಳಿಯುತ್ತಾನೆ. ಆದರೆ ಅವನು ದ್ವಂದ್ವಗಳನ್ನು ದಾಟಿ ನಿರ್ದ್ವಂದ್ವದಲ್ಲಿ ಐಕ್ಯವಾಗಲು ಪ್ರಯತ್ನಿಸುತ್ತಾನೆ. ಆತ್ಮ–ದೇಹ, ತಿಳಿಯುವವನು–ತಿಳಿವಿನ ವಸ್ತು, ನಾನು–ಪರರು ಎಂಬ ಭೇದಗಳು ದುಃಖಕ್ಕೆ ಕಾರಣ. ನಿರ್ದ್ವಂದ್ವವಾದ, ಸದಾ ಒಂದೇ ಅದ ತಾಓ ಸದಾನಂದಮಯ. ಅದು ಏನನ್ನೂ ಬಯಸುವುದಿಲ್ಲ. ಆದ್ದರಿಂದ ಅದು ಏನನ್ನೂ ಮಾಡುವುದಿಲ್ಲ. ಮಾನವ ಆ ತಾಓದೊಂದಿಗೆ ಐಕ್ಯವಾದಾಗ ಸರ್ವದಾ ಸುಖಿಯಾಗಿರುತ್ತಾನೆ. ಅವನು ಅದನ್ನು ಬಿಟ್ಟು ಬೇರೆ ಯಾವುದನ್ನೂ ಬಯಸುವುದಿಲ್ಲ. ಅದರ ಧ್ಯಾನದಲ್ಲಿ ಮುಳುಗಿರುತ್ತಾನಲ್ಲದೆ ಯಾವುದೊಂದು ಕರ್ಮದಲ್ಲೂ ಪ್ರವೃತ್ತನಾಗುವುದಿಲ್ಲ. ಇದು ನಿವೃತ್ತಿಮಾರ್ಗ,

4. ಪ್ರ.ಶ. ಮೂರನೆಯ ಮತ್ತು ನಾಲ್ಕನೆಯ ಶತಮಾನಗಳಲ್ಲಿ ತಾಓ ಪಂಥ ನೂತನ ತಾಓ ಪಂಥವಾಗಿ ಮಾರ್ಪಟ್ಟಿತು. ಈ ಪಂಥದಲ್ಲಿ ಎರಡು ಶಾಖೆಗಳಿವೆ. ಒಂದು ವಿಚಾರಶಾಖೆ, ಇನ್ನೊಂದು ಭಾವಾಭಿವ್ಯಕ್ತಿ ಶಾಖೆ. ಮೊದಲನೆಯ ಶಾಖೆಯವರು ಭಾವಗಳನ್ನು ವಿಚಾರಬುದ್ಧಿಯಿಂದ ತಡೆದಿಡಬೇಕೆಂದು ವಾದಿಸುತ್ತಾರೆ. ಎರಡನೆಯ ಶಾಖೆಯವರು ಯಾವ ತಡೆಯೂ ಇಲ್ಲದೆ ಭಾವವನ್ನು ಅಭಿವ್ಯಕ್ತಗೊಳಿಸಬೇಕೆಂದು ವಾದಿಸುತ್ತಾರೆ.

(ಅ) ನಾಮಶಾಖೆಯವರು ಹೆಸರಿನಿಂದ ತಿಳಿಯಲಾಗುವಂಥದ್ದು. ಹೆಸರಿನಿಂದ ತಿಳಿಯಲಾಗದ್ದು ಎಂದು ಎರಡು ಭೇದಗಳನ್ನು ಕಲ್ಪಿಸಿದ್ದರು. ವಿಚಾರಶಾಖೆಯ ನೂತನ ತಾಓ ಪಂಥದವರು ಹೆಸರಿನಿಂದ ತಿಳಿಯಲಾಗದ್ದರ ತತ್ತ್ವವನ್ನು ಬೆಳೆಸಿದರು. ತಾಓ ಲೌಕಿಕವಾದ ಯಾವ ಹೆಸರಿನಿಂದಲೂ ವರ್ಣಿಸಲಾಗದ್ದು. ಆದ್ದರಿಂದ ಅವರು ತಾಓ ಅನಿರ್ವಚನೀಯವೆಂದು ಹೇಳಿದರು. ಈ ಅನಿರ್ವಚನೀಯವಾದಕ್ಕೆ ಬಹುಶಃ ಆಗ್ಗೆ ಚೀನದಲ್ಲಿ ಪ್ರಚಾರದಲ್ಲಿದ್ದ ಮಾಧ್ಯಮಿಕದ ಅನಿರ್ವಚನೀಯವಾದ ಪ್ರೇರಕವಿರಬಹುದು.

ತಾಓ ಪಂಥದವರಿಗೂ ಕೂಂಗ್ ಫೂಟ್ಸೆ ಪಂಥದವರಿಗೂ ವಿರೋಧವಿತ್ತು. ಆದರೆ ಈ ಪಂಥದವರು ಕೂಂಗ್ ಫೂಟ್ಸೆ ತತ್ತ್ವಕ್ಕೆ ವಿರೋಧಿಗಳಲ್ಲ. ಬದಲು ಅವರಿಗೆ ಕೂಂಗ್ ಫೂಟ್ಸೆ ಲಾವೋ ಟ್ಸುವಿಗಿಂತ ಮೆಚ್ಚಿನವನು. ಅವರಲ್ಲಿ ಕೆಲವರು ಲಾವೋ ಟ್ಸುಗಿಂತ ಕೂಂಗ್ ಫೂಟ್ಸೆಯೇ ತಾಓವನ್ನು ಚೆನ್ನಾಗಿ ತಿಳಿದವನು ಎಂದು ಹೇಳಿರುತ್ತಾರೆ. ಇದು ಈ ಪಂಥದ ಪ್ರಸಿದ್ಧ ಮುಖಂಡನಾದ ವ್ಯಾಂಗ್‌ಪಿ (ಪ್ರಶ. 226–249) ಮತ್ತು ಪೈ ಹುಯಿ ಸಂವಾದದಿಂದ ಸ್ಪಷ್ಟವಡುತ್ತದೆ. ವ್ಯಾಂಗ್ ಪಿಯನ್ನು ಹುಯಿ ಹೀಗೆ ಕೇಳಿದ. 'ವು' ಅಂದರೆ ಕಾಲದಲ್ಲಿ ಇಲ್ಲದ್ದು, ಅಥವಾ ಕಾಲಕ್ಕೆ ಮೀರಿದ್ದು, ಎಲ್ಲಕ್ಕೂ ಆಧಾರವಾದದ್ದು ಆದ್ದರಿಂದ ಕೂಂಗ್ ಫೂಟ್ಸೆ ಅದರ ವಿಚಾರ ಏಕೆ ಬೆಳಸಲಿಲ್ಲ ? ಲಾವೊಟ್ಸು ಅದರ ವಿಚಾರವಾಗಿ ಬಿಡುವಿಲ್ಲದೆ ಏಕೆ ಮಾತನಾಡಿದ? ಈ ಪ್ರಶ್ನೆಗಳಿಗೆ ಉತ್ತರವಾಗಿ ವ್ಯಾಂಗ್ ಪಿ ಹೀಗೆ ಹೇಳಿದ : 'ಸಂತ ಕೂಂಗ್ ಫೂಟ್ಸೆ 'ವು' ವಿನಲ್ಲಿ ಐಕ್ಯವಾಗಿದ್ದುದರಿಂದ, ಅದು ಅನಿರ್ವಚನೀಯ ಭಾವರೂಪವಾದ 'ಯು' ವಿಚಾರವಾಗಿ ಅವನು ಮಾತನಾಡಲಿಲ್ಲ. ಅದ್ದರಿಂದ ಅವನು ಭಾವರೂಪವಾದ 'ಯು' ವಿಚಾರವಾಗಿ ಮಾತನಾಡಿದ. ಆದರೆ ಲಾವೋ ಟ್ಸು ಮತ್ತು ಅವನ ಅನುಯಾಯಿ ಚ್ವಾಂಗ್ ಟ್ಸು ಇವರಿಬ್ಬರೂ ಆ 'ವು' ದೊಡನೆ ಐಕ್ಯವಾಗಲಿಲ್ಲವಾಗಿ ಅವರ ಜ್ಞಾನ ಕೊರೆಯಾಗಿತ್ತು. ಆದ್ದರಿಂದ ತಮ್ಮ ಕೊರತೆಯನ್ನು ಕುರಿತು ನಿರಂತರವಾಗಿ ಅಪಲಾಪಿಸಿದರು. ಅದನ್ನು ತಿಳಿದವರು (ಅದರ ವಿಚಾರವಾಗಿ) ಮಾತನಾಡುವುದಿಲ್ಲ. (ಅದರ ವಿಚಾರವಾಗಿ) ಮಾತನಾಡಿದವನಿಗೆ (ಅದು) ತಿಳಿದಿಲ್ಲ ಎಂಬ ವಚನವಿದೆ. ವ್ಯಾಂಗ್ ಪಿ ಆ ವಚನವನ್ನು ಲಾವೋ ಟ್ಸು ಮತ್ತು ಕೂಂಗ್ ಫೂಟ್ಸೆಗೆ ಅನ್ವಯಿಸಿ, ಕೂಂಗ್ ಫೂಟ್ಸೆ ತಿಳಿದವನು, ಲಾವೋ ಟ್ಸು ತಿಳಿಯದವನು ಎಂದು ಸ್ಪಷ್ಟಪಡಿಸಿದ್ದಾನೆ.

ಲಾವೋ ಟ್ಸು ಅನುಯಾಯಿಗಳು ಕೂಂಗ್ ಫೂಟ್ಸೆ ನಿರೀಶ್ವರವಾದಿಯೆಂದು ಆಪಾದಿಸುತ್ತಿದ್ದರು. ಈ ಪಂಥದವರು ಈ ವಿಶ್ವ ಸೃಷ್ಟಿಯಾದ್ದಲ್ಲ. ಅದು ತಾಓನ ಪರಿವರ್ತನೆ ಎಂದು ವಾದಿಸಿದರು. ಇಲ್ಲಿರುವುದೆಲ್ಲ ಅನಿರ್ವಚನೀಯವಾದುದುರ ಪರಿಣಾಮ. ಅದು

ವಚನೀಯವಾದುದೆಲ್ಲದರಲ್ಲೂ ಇದೆ. ಆದರೆ ವಚನೀಯವಾದುವು ಅದರಲ್ಲಿಲ್ಲ, ಇಲ್ಲಿರುವುದೆಲ್ಲ ಒಂದಕ್ಕೊಂದು ಹೆಣೆದುಕೊಂಡಿವೆ. ಆ ಪರಸ್ಪರ ಸಂಬಂಧ ಒಂದೊಂದರ ಪರಿಣಾಮವನ್ನೂ ನಿರ್ಧರಿಸುತ್ತದೆ. ಈ ಪರಸ್ಪರ ಸಂಬಂಧವನ್ನು ಅವರು ಸ್ವಭಾವವೆಂದು ಕರೆದಿದ್ದಾರೆ. ನಮ್ಮ ಜೀವನ ಸಂದರ್ಭಕ್ಕನುಸಾರವಾಗಿ ನಿರಂತರವಾಗಿ ಬದಲಾಯಿಸುತ್ತಿದೆ . ಹಿಂದಿನ ಪರಿಸ್ಥಿತಿಯೇ ಬೇರೆ, ಇಂದಿನ ಹೊಸ ಪರಿಸ್ಥಿತಿಯೇ ಬೇರೆ. ಹಿಂದಿನ ಪರಿಸ್ಥಿತಿಗೆ ತಕ್ಕಂತೆ ಕೆಲವು ಸಂಸ್ಥೆಗಳೂ ನೀತಿ ನಡವಳಿಕೆಗಳೂ ಹುಟ್ಟಿಕೊಂಡವು. ಅವು ಇಂದಿನ ಹೊಸ ಪರಿಸ್ಥಿತಿಗೆ ಅನುಪಯುಕ್ತ. ಅವುಗಳಿಗೆ ತಕ್ಕಂತೆ ಹೊಸ ಸಂಸ್ಥೆಗಳೂ ಹೊಸ ನೀತಿ ನಡವಳಿಕೆಗಳೂ ಹುಟ್ಟಬೇಕು. ಹಾಗೆ ಹುಟ್ಟದಿದ್ದರೆ ಹಳೆಯವು ಕೃತಕವಾಗುವುತ್ತವೆ. ನಾವು ಸ್ವಭಾವಕ್ಕೆ ವ್ಯತಿರಿಕ್ತವಾಗಿ ನಡೆಯುತ್ತೇವೆ. ಸ್ವಾತಂತ್ರ್ಯ ಅಂದರೆ ಸ್ವೇಚ್ಛೆಯಲ್ಲ, ಸರಳತೆ ಅಂದರೆ ಏನೂ ಅರಿಯದ ಶಿಶುವಿನಂತಿರುವುದಲ್ಲ. ಅಕ್ರಿಯೆಯೆಂದರೆ ಏನೂ ಮಾಡದೆ ನಿದ್ರಿಸುವುದಿಲ್ಲ. ಆಯಾ ಸಂದರ್ಭೋಚಿತವಾಗಿ ಹೊಂದಿಕೊಳ್ಳುವುದು ಸ್ವಾತಂತ್ರ್ಯ, ಭಾವೋಚಿತವಾಗಿ ನಡೆಯುವುದು ಸರಳತೆ, ಕಾಲದ ಪ್ರವಾಹ ಸುಳಿವನ್ನು ತಿಳಿದು ಅದರಲ್ಲಿ ತೇಲಿ ಹೋಗುವುದೂ, ತನ್ನ ಸ್ವಭಾವವನ್ನು ಮೀರದಂತೆ ನಡೆದುಕೊಳ್ಳುವುದೂ ಅಕ್ರಿಯೆ. ಕಾಲದ ಸುಳಿವನ್ನು ಅರಿತು ಸಂತ ಅದರೊಂದಿಗೆ ಸೇರಿ ಪಾರಾಗುತ್ತಾನೆ. ಅವನು ಸಾವಿರ ಕೆಲಸಗಳನ್ನು ಮಾಡಿದರೂ ಏನನ್ನೂ ಮಾಡದವನಂತೆ ಅವನಿಗೆ ಸ್ವಲ್ಪವೂ ಶ್ರಮವಿರುವುದಿಲ್ಲ. ಒಬ್ಬೊಬ್ಬ ಸಂತನೂ ತನ್ನ ಸ್ಥಿತಿಯನ್ನು ಅರಿತು ಸಹಜವಾಗಿ ವರ್ತಿಸುತ್ತಾನೆ. ಒಬ್ಬ ಸಂತ ಇನ್ನೊಬ್ಬನನ್ನು ಅನುಕರಿಸುವುದಿಲ್ಲ. ಹಾಗೆಯೇ ಪ್ರತಿಯೊಬ್ಬನೂ ತನ್ನ ಸ್ವಂತ ಸ್ವಭಾವದಂತೆ ವರ್ತಿಸಬೇಕು. ಹಿಂದಿನ ಸಂತರನ್ನು ಅನುಕರಿಸಬಾರದು. ಅನುಕರಣೆಯನ್ನು ಜನರು ಜ್ಞಾನವೆಂದು ತಿಳಿದಿರುತ್ತಾರೆ. ಇದು ಜ್ಞಾನವಲ್ಲ. ತಾನೇ ತಾನಾಗಿ ನೇರವಾಗಿ ಹುಟ್ಟಿದ ಅರಿವೇ ನಿಜವಾದ ಜ್ಞಾನ. ಅಂಥ ಜ್ಞಾನ ಪಡೆದವನು ಅನುಕರಿಸುವವನಂತೆ ಹರಟುವುದಿಲ್ಲ. ಅಜ್ಞಾನಿಯಂತೆ ಮೌನವಾಗಿ ಇರುತ್ತಾನೆ. ಈ ಮೌನ ಅವನ ಒಳತಿಳಿವಿನ ಕುರುಹು. ಆ ಒಳತಿಳಿವಿರುವವನು ಏನು ಮಾಡಿದರೂ ಅದು ಇತರರು ಮಾಡಿದ ಅನುಕರಣ ಕ್ರಿಯೆಯಂತೆ ಕ್ರಿಯೆಯಾಗುವುದಿಲ್ಲ. ಈ ಅರ್ಥದಲ್ಲಿ ಅದು ಅಕ್ರಿಯೆ.

ಅಂಥವನದು ಸರ್ವಸಮತಾದೃಷ್ಟಿ. ಒಂದನ್ನು ಉತ್ಕೃಷ್ಟವಾದುದೆಂದು, ಇನ್ನೊಂದನ್ನು ನಿಕೃಷ್ಟವಾದುದುದೆಂದು ಅವನು ಭೇದವೆಣಿಸುವುದಿಲ್ಲ. ಭೇದಭಾವನೆ ಸಂಕುಚಿತಭಾವನೆ. ತಾನು, ಪರರು ಎಂಬ ಭೇದ ಸಂಕುಚಿತಭಾವನೆಯಿಂದ ಹುಟ್ಟಿದ್ದು. ಪರಮ ವಿರಾಗಿ ಪರಮಸುಖಿ ; ತಾನು, ಬೇರೆಯವನು ಎಂಬ ಭೇದವನ್ನು ಮರೆತುಬಿಡುತ್ತಾನೆ. ಅವನಿಗೆ ಆಗ ಯಾವುದರ ಹಂಗೂ ಇಲ್ಲ. ಆದ್ದರಿಂದ ಸದಾ ಸುಖಿ. ಸ್ವಭಾವದ ರಥವೇರಿ ಅವನು ಜೀವನದ ಆಚೆಯ ದಡವನ್ನು ಮುಟ್ಟುತ್ತಾನೆ. ಸ್ವಭಾವದ ರಥವನ್ನೇರಿ ಎಲ್ಲರನ್ನೂ ಸಮವಾಗಿ ನೋಡುವುದು., ಅನಂತವಾದುದುರ ನಿಟ್ಟಿನಿಂದ ಎಲ್ಲವನ್ನೂ ಅವಲೋಕಿಸುವುದು 'ಟಿಯೆನ್'.

(ಆ) ಭಾವಾಭಿವ್ಯಕ್ತಿತತ್ತ್ವ ಈ ವಿಚಾರಶಾಖೆಗೆ ಪ್ರತಿಯಾದದ್ದು. ಈ ಶಾಖೆಯ ಮುಖಂಡರು ಲಿಯು ಯಿ ಚಿಂಗ್ (ಪ್ರಶ. 403–444), ಲಿಯು ಚುನ್ (ಪ್ರಶ. 463–521). ವಿಚಾರವಾದಿಗಳು ತಮ್ಮೊಳಗಿನ ವಿಚಾರಚೇತನಕ್ಕನುಗುಣವಾಗಿ ನಡೆಯುವುದೇ ಜೀವನದ ಗುರಿ ಎಂದು ವಾದಿಸಿದರು. ಭಾವಾಭಿವ್ಯಕ್ತಿವಾದಿಗಳಾದರೋ ತಮ್ಮೊಳಗೆ ಹುದುಗಿರುವ ಭಾವಗಳನ್ನು ಅಭಿವ್ಯಕ್ತಿಗೊಳಿಸುವುದೇ ಜೀವನದ ಗುರಿ ಎಂದು ವಾದಿಸಿದರು. ಭಾವಾಭಿವ್ಯಕ್ತಿಗೆ ಅವರು 'ಫೆಂಗ್ ಲಿಯ' ಎಂದು ಹೆಸರು ಕೊಟ್ಟರು. ಭಾವಾಭಿವ್ಯಕ್ತಿಯೆಂದರೆ, ಕಿವಿಯಿಂದ ಸಂಗೀತವನ್ನು ಸವಿಯುವುದು, ಕಣ್ಣಿನಿಂದ ಸೌಂದರ್ಯವನ್ನು ಸವಿಯುವುದು, ಮೂಗಿನಿಂದ ವಿವಿಧ ಪರಿಮಳಗಳನ್ನು ಸವಿಯುವುದು, ಬಾಯಿಮಾತಿನಿಂದ ಹರಟೆ ಹೊಡೆಯುವುದು – ಇವು ಅವರ ದಿನಚರಿಯ ಹವ್ಯಾಸವಾಗಿತ್ತು. ಒಟ್ಟಿನಲ್ಲಿ ಇವರನ್ನು ರಸಾಭಿಜ್ಞರೆಂದು ಕರೆಯಬಹುದು. ಕಲೆ ಮತ್ತು ಪ್ರಕೃತಿಯ ಸೌಂದರ್ಯ ಆರಾಧನೆಯೇ ಇವರಿಗೆ ಜೀವನದ ಪರಮಸೌಖ್ಯಕ್ಕೆ ದಾರಿ. ಇವರೂ ವಿಚಾರಶಾಖೆಯವರಂತೆ ಹಳೆಯ ಸಂಪ್ರದಾಯಗಳನ್ನು ತೀವ್ರವಾಗಿ ಖಂಡಿಸಿದರು.

ಈ ಶಾಖೆಯವರು ರಸಿಕರೆಂದರೆ ಕೇವಲ ಇಂದ್ರಿಯಸುಖವನ್ನು ಸ್ವೇಚ್ಛೆಯಾಗಿ ಬಯಸಿದವರೆಂದು ಭಾವಿಸಕೂಡದು. ವಿಚಾರಶಾಖೆಯವರು ಭಾವೋದ್ರೇಕವನ್ನು ವಿಚಾರ ಬುದ್ಧಿಯಿಂದ ತಡೆದಿಡುತ್ತಿದ್ದರು. ಇವರೂ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡರೂ ಇಂದ್ರಿಯಭಾವಗಳನ್ನು ತಮ್ಮ ಮನಸ್ಸಿನಿಂದ ತೊಡೆದುಹಾಕಲಿಲ್ಲ. ಅವನ್ನು ಕವಿಗಳಂತೆ ಉದಾತ್ತಗೊಳಿಸಿದರು. ಸ್ತ್ರೀಪುರುಷರ ಎಲ್ಲ ಭಾವಗಳಲ್ಲೂ ಇವರು ಆಸಕ್ತರು. ಆದರೆ ಅವುಗಳಲ್ಲಿ ಪ್ರವೃತ್ತರಾಗಿ ನಿಷ್ಪಕ್ಷಪಾತದೃಷ್ಟಿಯಿಂದ, ಕವಿಯಂತೆ ಅವಲೋಕಿಸಿ ರಸಾಭಿಜ್ಞರಾಗುವುದೇ ಇವರ ಉದ್ದೇಶವಾಗಿತ್ತು. ಸ್ತ್ರೀರೂಪದಲ್ಲಿ ಮೋಹವಿಲ್ಲದೆ ಅದರ ಸೌಂದರ್ಯವನ್ನು ಸವಿಯುವುದೇ ಇವರ ಉದ್ದೇಶ. 'ಷಿಃಮುವೋ' ಎಂಬ ಈ ಶಾಖೆಯವರ ಗ್ರಂಥದಲ್ಲಿರುವ ಒಂದು ಕತೆ ಇದನ್ನು ಸ್ಪಷ್ಟಗೊಳಿಸುತ್ತದೆ. ಜುವಾನ್ ಚೂ ಎಂಬ ಈ ಶಾಖೆಯ ಒಬ್ಬ ತಾತ್ತ್ವಿಕ ತನ್ನ ನೆರೆಯವನಾದ ಒಬ್ಬ ಮದ್ಯದ ವ್ಯಾಪಾರಿಯ ಮನೆಗೆ ಹೋಗಿ ಸುಂದರಿಯಾದ ಆ ವರ್ತಕನ ಹೆಂಡತಿಯೊಡನೆ ದ್ರಾಕ್ಷಾರಸವನ್ನು ಸೇವಿಸುತ್ತಿದ್ದ. ಮತ್ತೇರಿದಾಗ ಅವನು ಅವಳನ್ನು ಬೆತ್ತಲೆಯಾಗಿ ನಿಲ್ಲಿಸಿ ಅವಳನ್ನು ಅವಲೋಕಿಸುವುದರಲ್ಲಿ ತಲ್ಲೀನನಾಗುತ್ತಿದ್ದ. ಇವರಿಬ್ಬರ ನಡತೆಯ ವಿಚಾರವಾಗಿ ಆ ಸುಂದರಿಯ ಗಂಡನಿಗೆ ಅನುಮಾನ ಹುಟ್ಟಿತು. ಅವನು ಹಲವು ಬಾರಿ ಜಾಗರೂಕನಾಗಿ ಪರೀಕ್ಷಿಸಿದ. ಈ ಪರೀಕ್ಷೆಯಿಂದ ಅವನಿಗೆ ಜುವಾನ್ ಚೂ ಕೇವಲ ಸೌಂದರ್ಯಾರಾಧಕನೆಂದೂ ಶರೀರಸಂಬಂಧ ವಿಚಾರವಾಗಿ ಅವನು ನಿರಾಸಕ್ತನಾಗಿದ್ದನೆಂದೂ ಸ್ಪಷ್ಟವಾಯಿತು. ಹೀಗೆ ಸ್ಪಷ್ಟಪಡಿಸಿಕೊಂಡ ಈ ಮದ್ಯವ್ಯಾಪಾರಿ ತುಂಬ ತಾಳ್ಮೆಯವನಾಗಿರಬೇಕು.

IV

**ಮೋ ತತ್ತ್ವ:** ಇದರಲ್ಲಿ ಎರಡು ಶಾಖೆಗಳಿವೆ. ಒಂದು ಪ್ರಾಚೀನ. ಈ ಪಂಥದವರನ್ನು ಮೋಹಿಗಳೆಂದು ಕರೆಯುವುದುಂಟು. ಈ ತತ್ತ್ವಕ್ಕೆ ಮೋ ತತ್ತ್ವವೆಂದು ಹೆಸರು ಬಂದದ್ದು ಅವರ ಪ್ರಥಮ ಪ್ರತಿಪಾದಕನಾದ ಮೋಟ್ಸು (ಪ್ರಶ.ಪೂ.470–381) ಎಂಬುವನಿಂದ. ಮೋ ಎಂಬುದು ಅವನ ವಂಶದ ಹೆಸರು. ಟ್ಸು ಎಂಬುದು ಅವನ ಸ್ವಂತ ಹೆಸರು. ಇವನು 'ಮೋ–ಟ್ಸು' ಎಂಬ ಐವತ್ತಮೂರು ಅಧ್ಯಾಯಗಳ ಒಂದು ದೊಡ್ಡ ಗ್ರಂಥವನ್ನು ಬರೆದಿರುತ್ತಾನೆ. ಈಗಿನವರು ಆ ಗ್ರಂಥದ ಹೆಸರನ್ನೇ ಇವನಿಗೆ ಕೊಟ್ಟಿರುತ್ತಾರೆ. ಇವನು ಕೂಂಗ್ ಫೂಟ್ಸೆ ತತ್ತ್ವವನ್ನೂ ನಾಮತತ್ತ್ವವನ್ನೂ ಖಂಡಿಸಿದ್ದಾನೆ. ಇಲ್ಲಿ ಪ್ರಸಕ್ತವಾದದ್ದು ಅದರ ನಲವತ್ತರಿಂದ ನಲವತ್ತೈದನೆಯದರವರೆಗಿನ ಆರು ಅಧ್ಯಾಯಗಳು. ಇವು ನೂತನ ಮೋಹಿ ತತ್ತ್ವಕ್ಕೆ ಆಧಾರಗಳು, ಮೋಹಿತತ್ತ್ವ ಗೌತಮನ ನ್ಯಾಯದರ್ಶನವನ್ನು ಹೋಲುತ್ತದೆ. ಮೋಹಿ ತಾತ್ತ್ವಿಕರನ್ನು ಚೀನದ ನೈಯಾಯಿಕರೆಂದು ಕರೆಯಬಹುದು.

ಇವರು ನೈಯಾಯಿಕರಂತೆ ವಾಸ್ತವವಾದಿಗಳು. ತಿಳಿವಿನ ವಿಷಯಗಳನ್ನು ಅಂದರೆ ಪ್ರಮೇಯಗಳನ್ನು ನಾಲ್ಕಾಗಿ ಇವರು ವಿಭಾಗ ಮಾಡಿರುತ್ತಾರೆ. ಹೆಸರುಗಳು, ಹೆಸರುಗಳಿಗೆ ಸಂವಾದಿಯಾದ ವಾಸ್ತವ ವಸ್ತುಗಳು, ಹೆಸರುಗಳು ಮತ್ತು ವಾಸ್ತವ ವಿಷಯಗಳ ಸಂವಾದ, ಹೆಸರುಗಳು ಮತ್ತು ಕ್ರಿಯೆಗಳ ಸಂವಾದ, ತಿಳಿವಿನ ಕರಣಗಳನ್ನು, ಅಂದರೆ ಪ್ರಮಾಣಗಳನ್ನು, ಮೂರಾಗಿ ವಿಭಾಗಿಸಿರುತ್ತಾರೆ. ಪ್ರತ್ಯಕ್ಷ, ಶಬ್ದ ಮತ್ತು ಅನುಮಾನ. ಪ್ರತ್ಯಕ್ಷಾನುಭಾವಕ್ಕೆ ಇಂದ್ರಿಯಗಳು ಆಧಾರ. ಮನಸ್ಸು ಅನುಮಾನಕ್ಕೆ ಆಧಾರ. ಅನುಮಾನ ಎರಡು ಬಗೆಯಾಗಿದೆ. ನಿಗಮನ ಮತ್ತು ಅನುಗಮನ. ಹೆಸರುಗಳು ಮೂರು ವಿಧವಾಗಿವೆ –ಸರ್ವನಾಮಗಳು, ಅಂಕಿತನಾಮಗಳು ಮತ್ತು ಜಾತಿವಾಚಕಗಳು.

ವೈಚಾರಿಕ ವಿಧಾನವನ್ನು ಕುರಿತು ನಲವತ್ತನಾಲ್ಕನೆಯ ಮತ್ತು ನಲವತ್ತೈದನೆಯ ಅಧ್ಯಾಯಗಳಲ್ಲಿ ವಿವರಣೆಗಳೂ ಉದಾಹರಣೆಗಳೂ ಇವೆ. ಸಂಶಯ ನಿವಾರಣೆ, ಸತ್ಯಸ್ಥಾಪನೆಯ ಉದ್ದೇಶ. ವೈಚಾರಿಕ ವಿಧಾನಗಳನ್ನು ಏಳಾಗಿ ವಿಂಗಡಿಸಿದೆ. ಮೊದಲನೆಯದು ವಾಸ್ತವವಿಧಾನ. ಅದು ವಾಸ್ತವ ವಿಷಯಗಳನ್ನು ವಿವರಿಸುತ್ತದೆ. ಊಹಾತ್ಮಕ ವಿಧಾನ ಇರಬಹುದಾದುದನ್ನು ವಿಚಾರ ಮಾಡುತ್ತದೆ. ಅನುಕರಣ ವಿಧಾನ ಒಂದು ವಿಷಯ ಒಂದು ಧ್ಯೇಯರೂಪಕ್ಕೆ ಅನುಗುಣವಾಗಿದೆಯೇ ಎಂಬುದನ್ನು ವಿಚಾರ ಮಾಡುತ್ತದೆ. ಹೋಲಿಕೆಯ ಆಧಾರದ ಮೇಲೆ ವಿಷಯವನ್ನು ವಿವೇಚಿಸುತ್ತದೆ. ಸಮಾಂತರ ವಿಧಾನ ಎರಡು ಪ್ರತಿಜ್ಞೆಗಳು ಎಲ್ಲ ಸಂದರ್ಭಗಳಲ್ಲೂ ಸಂಗತವಾಗಿವೆಯೇ ಎಂಬುದನ್ನು ವಿಚಾರ ಮಾಡುತ್ತದೆ. ವಿಸ್ತರಣೆಯ ವಿಧಾನ ಹಿಂದೆ ತಿಳಿದುದರ ಆಧಾರದ ಮೇಲೆ ಮುಂದೆ ತಿಳಿಯಬಹುದಾದ್ದನ್ನು ನಿರ್ಧರಿಸುತ್ತದೆ. ಅನುಕರಣೆಯ ವಿಧಾನ ನಿಗಮನ ವಿಧಾನವನ್ನೂ ವಿಸ್ತರಣೆಯ ವಿಧಾನ ಅನುಗಮನ ವಿಧಾನವನ್ನೂ ಹೋಲುತ್ತದೆ.

ಮೋಹಿ ತಾತ್ತ್ವಿಕರು ಕಾರಣತತ್ತ್ವವನ್ನೂ ವಿಚಾರಮಾಡಿರುತ್ತಾರೆ. ಇನ್ನೊಂದರ ಹುಟ್ಟಿಗೆ ಯಾವುದು ಆಧಾರವೋ ಅದು ಅದಕ್ಕೆ ಕಾರಣ. ಕಾರಣಗಳನ್ನು ಎರಡು ಬಗೆಯಾಗಿ ವಿಂಗಡಿಸುತ್ತಾರೆ. 'ಹಸು ಒಂದು ಪ್ರಾಣಿ' ಎಂದು ಹೇಳಿದಾಗ, ಹಸುವಿಗೆ ಅಗತ್ಯವಾದ ಒಂದು ಅಂಶವನ್ನು ತಿಳಿಸುತ್ತದೆ. ಆದರೆ ಅಷ್ಟು ಮಾತ್ರ ಹೇಳಿದ್ದರಿಂದ ಕಾರಣ ಪೂರ್ಣವಾಗುವುದಿಲ್ಲ. ಅದು ಸೀಳು ಗೊರಸು ಮತ್ತು ಗಂಗೆದೊಗಲು ಉಳ್ಳ ಸಸ್ತನಿ ಎಂದು ಹೇಳಿದಾಗ ಕಾರಣನಿರೂಪಣೆ ಪೂರ್ಣವಾಗುತ್ತದೆ.

ನೀತಿವಿಚಾರದಲ್ಲಿ ಮೋಹಿತಾತ್ತ್ವಿಕರು ಜಾನ್ ಸ್ಟೂಅರ್ಟ್ ಮಿಲ್ಲಿನಂತೆ ಉಪಯೋಗವಾದಿಗಳು, ಉಪಯೋಗಕರವಾದುದನ್ನೂ ಸಂತೋಷಕರವಾದುದನ್ನೂ ಆಯ್ದುಕೊಳ್ಳುವುದು, ಅನುಪಯುಕ್ತವಾದುದನ್ನೂ ಹಾನಿಕಾರಕವಾದುದನ್ನೂ ದುಃಖಕರವಾದುದನ್ನೂ ಬಿಡುವುದು ಮಾನವನಿಗೆ ಸಹಜವಾದ ಧರ್ಮ. ಕೆಲವು ವೇಳೆ ಒಂದು ಸನ್ನಿವೇಶ ಸುಖದುಃಖಗಳೆರಡರಿಂದಲೂ ಕೂಡಿರುತ್ತದೆ. ವಿವೇಕಿಯಾದವ ಆಗ ಯಾವುದರಲ್ಲಿ ದುಃಖಕ್ಕಿಂತ ಸುಖದ ಪ್ರಮಾಣ ಹೆಚ್ಚಾಗಿರುತ್ತದೆಯೋ ಅದನ್ನು ಆಯ್ದುಕೊಳ್ಳಬೇಕು. ವಿವಿಧ ಸದ್ಗುಣಗಳನ್ನು ಉಪಯುಕ್ತತೆಯ ನಿಯಮಾನುಸಾರ ಅವರು ವರ್ಗೀಕರಿಸುತ್ತಾರೆ. ಸರಿಯಾದದುದನ್ನು ಮಾಡುವುದೆಂದರೆ ಉಪಯೋಗಕರವಾದದ್ದನ್ನು ಮಾಡುವುದು. ಪರೋಪಕಾರವೆಂದರೆ ಜನರಿಗೆ ಉಪಯುಕ್ತವಾದುದನ್ನು ಮಾಡುವುದು.

ಜನರಿಗೆ ಉಪಯುಕ್ತವಾದುದೆಂದರೆ ಹೆಚ್ಚು ಜನರಿಗೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಸುಖವನ್ನು ಏರ್ಪಡಿಸುವುದು. ಒಬ್ಬೊಬ್ಬನೂ ತನ್ನ ಸುಖವನ್ನು ಬಯಸಿದರೆ ಎಲ್ಲರೂ ಎಲ್ಲರ ಸುಖವನ್ನೂ ಬಯಸಿದಂತಾಗುತ್ತದೆ.

ಈ ತಾರ್ಕಿಕರು ನಾಮವಾದಿಗಳ ವಾದವನ್ನು ಖಂಡಿಸಿರುತ್ತಾರೆ. ಆದರೆ ನಾಮವಾದಿಗಳ ವಾದ ಎಷ್ಟು ಕೃತಕವಾಗಿದೆಯೋ ಇವರದೂ ಅಷ್ಟೇ ಕೃತಕ.

V

**ಚೀನೀ ಬೌದ್ಧ ತತ್ತ್ವ** : ಚೀನದಲ್ಲಿ ಬೌದ್ಧ ತತ್ತ್ವ ಬಹುವಾಗಿ ಬೆಳೆಯಿತು. ಭಾರತದಲ್ಲೇ ಅದರ ಹದಿನೆಂಟು ಶಾಖೆಗಳಿದ್ದುವು. ಚೀನದಲ್ಲಿ ಅದರ ಕೆಲವು ಶಾಖೆಗಳು ಬೇರೆ ಬೇರೆ ಹೆಸರುಗಳಲ್ಲಿ ರೂಪಗೊಂಡವು. ಇವುಗಳ ಹೆಚ್ಚಿನ ವಿವರಣೆಗೆ ವುಂಗ್ ಯು ಲನ್ನನ ಗ್ರಂಥವಲ್ಲದೆ ಪಿ.ಸಿ. ಬಗ್ಚಿ, ಜೆ.ಎ. ಎಚ್. ಸುಜೂಕಿ ಅವರ ಲೇಖನಗಳು ಆಧಾರ. ಪ್ರಶ.ಪೂ. 240ರ ವೇಳೆಗೆ ಬೌದ್ಧತತ್ತ್ವ ಭೂತಾನಕ್ಕೆ ಹಬ್ಬಿತ್ತು. ಅಲ್ಲಿಂದ ಅದು ಪ್ರಶ. ಒಂದನೆಯ ಶತಮಾನದಲ್ಲಿ ಉತ್ತರಕ್ಕೆ ಹರಡಿತು. ನಾವು ಇಲ್ಲಿ ಚೀನೀ ಬೌದ್ಧತತ್ತ್ವ ಮತ್ತು ಚೀನದಲ್ಲಿ ಬೌದ್ಧತತ್ತ್ವ ಇವೆರಡರ ವ್ಯತ್ಯಾಸವನ್ನು ಗಮನಿಸಬೇಕು. ಚೀನದಲ್ಲಿ ಕೆಲವು ಕಡೆ ಬೌದ್ಧತತ್ತ ವ್ವು ಚೀನೀ ತತ್ತ್ವದ ಸಂಪರ್ಕವಿಲ್ಲದೆ ಬೌದ್ಧತತ್ತ್ವವಾಗಿಯೇ ಬೆಳೆಯಿತು. ಅದರ ವ್ಯಾಪ್ತಿ ತುಂಬ ಸಂಕುಚಿತ. ಹೆಚ್ಚು ಜನರಲ್ಲಿ ಹರಡಿದ ಬೌದ್ಧತತ್ತ್ವವು ಚೀನೀತತ್ತ್ವದೊಂದಿಗೆ ಸೇರಿಕೊಂಡು ಬೆಳೆದ ತತ್ತ್ವ. ಬೌದ್ಧತತ್ತ್ವ ತಾಓ ತತ್ತ್ವದೊಡನೆ ಬೆರೆತು ತುಂಬ ಜನಪ್ರಿಯವಾದ ಚಾನ್ (ಧ್ಯಾನ) ಬೌದ್ಧತತ್ತ್ವವೆಂಬ ಹೆಸರು ಪಡೆಯಿತು. ಇದನ್ನು ಚೀನದಿಂದ ಪಡೆದ ಜಪಾನೀಯರು ಝೆನ್ ಬೌದ್ಧ ತತ್ತ್ವವೆಂದು ಕರೆಯುತ್ತಾರೆ. ಇಲ್ಲಿ ವಿವರಿಸುವುದು ಈ ತತ್ತ್ವವನ್ನೇ. ಇದಲ್ಲದೆ ಚೀನದಲ್ಲಿ ಇತರ ಬೌದ್ಧತತ್ತ್ವಶಾಖೆಗಳಿದ್ದುವು. ತಾಓ ಹುಸು ಆನ್ (ಏಳನೆಯ ಶತಮಾನ) ವಿನಯ ಶಾಖೆಯನ್ನು ಸ್ಥಾಪಿಸಿದ. ತಾಂತ್ರಿಕ ಬೌದ್ಧತತ್ತ್ವವನ್ನು ಪ್ರಶ. 720ರಲ್ಲಿ ಷಾನ್–ವು–ವೈ ಸ್ಥಾಪಿಸಿದ. ವಿಜ್ಞಾನವಾದವನ್ನು ಯುವಾನ್ ಚ್ವಾಂಗ್ ಬಹುಶಃ ಇದೇ ಕಾಲದಲ್ಲಿ ಸ್ಥಾಪಿಸಿದ. ಸುಖಾವ್ರತಿ ವ್ಯೂಹ ಬೌದ್ಧತತ್ತ್ವವನ್ನು ಟನ್–ಲನ್ ಅದೇ ಕಾಲದಲ್ಲಿ ಸ್ಥಾಪಿಸಿದ. ಅವತಂಸಕ ಬೌದ್ಧ ಶಾಖೆಯನ್ನು ಸ್ಥಾಪಿಸದವ ಫ–ಟ್ಸಾನ್ (699–712). ಚೀನದಲ್ಲಿ ಮಾಧ್ಯಮಿಕ ತತ್ತ್ವದ ಎರಡು ಶಾಖೆಗಳಿವೆ. ಇವು ಕುಮಾರಜೀವನ ಇಬ್ಬರು ಶಿಷ್ಯರಿಂದ ಸ್ಥಾಪಿತವಾದವು. ಮೊದಲನೆಯದಾದ ಹಳೆಯ ಶಾಖೆ ಪ್ರಶ. 5ನೆಯ ಮತ್ತು ಪ್ರ.ಶ. 6ನೆಯ ಶತಮಾನಗಳಲ್ಲಿ ಪ್ರಬಲವಾಗಿತ್ತು. ಎರಡನೆಯದಾದ ನೂತನ ಶಾಖೆ ಪ್ರಶ. 549 ರಿಂದ 623ರವರೆಗೆ ಪ್ರಬಲವಾಗಿತ್ತು. ಟಿ. ಯಂಟೈ ಶಾಖೆಯನ್ನು ಸ್ಥಾಪಿಸಿದವ ಚಿ ಕೈ (ಪ್ರಶ. 6ನೆಯ ಶತಮಾನ). ಇದೊಂದೇ ಈಗಲೂ ಜೀವಂತವಾಗಿ ಉಳಿದಿರುವ ಶಾಖೆ.

ಈ ಎಲ್ಲ ವಿಧವಾದ ಬೌದ್ಧ ಪಂಥಗಳಲ್ಲಿ ವ್ಯತ್ಯಾಸಗಳಿದ್ದರೂ ಕರ್ಮ ಮತ್ತು ಪುನರ್ಜನ್ಮ, ದುಃಖ, ವಿವೇಕದಿಂದ ದುಃಖನಿವಾರಣೆ, ನಿರ್ವಾಣ – ಇವು ಎಲ್ಲ ಪಂಥಗಳ ಸಾಮಾನ್ಯ ಆಧಾರಭಾವನೆಗಳು. ಚೀನದಲ್ಲಿ ವಿಶೇಷವಾಗಿ ಪ್ರಚಾರಕ್ಕೆ ಬಂದ ಪಂಥ ಮಹಾಯಾನ ಬೌದ್ಧಪಂಥ. ಇದರಲ್ಲಿ ಎರಡು ಶಾಖೆಗಳಿವೆ. ವಿಜ್ಞಾನವಾದ ಶಾಖೆ, ಮಾಧ್ಯಮಿಕ ಶಾಖೆ. ವಿಜ್ಞಾನವಾದ ಎಲ್ಲವೂ ಚೇತನವೆಂದೂ ಆ ಚೇತನದೊಂದಿಗೆ ಒಂದಾಗುವುದೇ ನಿರ್ವಾಣವೆಂದೂ ವಾದಿಸುತ್ತದೆ. ಮಾಧ್ಯಮಿಕವಾದ ಸತ್ಯವನ್ನು ಸಂವೃತಿ ಸತ್ಯ ಮತ್ತು ಪಾರಮಾರ್ಥಿಕ ಸತ್ಯ ಎಂದು ಎರಡಾಗಿ ವಿಭಾಗಿಸುತ್ತದೆ. ಸಂವೃತಿಸತ್ಯ ಸಾಪೇಕ್ಷತತ್ತ್ವ. ಅದು ಒಂದು ದೃಷ್ಟಿಯಿಂದ ವಸ್ತುಗಳು ಇವೆ (ಯು) ಎಂದು ಹೇಳುತ್ತದೆ. ಇನ್ನೊಂದು ದೃಷ್ಟಿಯಿಂದ ಅವು ಇಲ್ಲ (ವು) ಎಂದು ಹೇಳುತ್ತದೆ. ಇದೆ ಎಂದು ಹೇಳುವುದೂ ಏಕಪಕ್ಷೀಯ ಸತ್ಯ. ಇಲ್ಲ ಎಂದೂ ಹೇಳುವುದೂ ಏಕಪಕ್ಷೀಯ. ಪರಮಾರ್ಥ ಸತ್ಯ ಈ ಎರಡು ಭೇದಗಳನ್ನೂ ನಿರಾಕರಿಸುತ್ತದೆ. ಅದು 'ಯು' ಅಲ್ಲ, 'ವು' ಅಲ್ಲ. 'ಯು' ಮತ್ತು 'ವು' ನಾವು ಈಗಾಗಲೇ ನೋಡಿರುವಂತೆ ತಾಓ ತತ್ತ್ವದ ಪಾರಿಭಾಷಿಕ ಪದಗಳು. ಚೀನೀ ಮಾಧ್ಯಮಿಕರು ಮಾಧ್ಯಮಿಕತತ್ತ್ವವನ್ನೂ ಚ್ವಾಂಗ್ ಟ್ಸು ತಾಓ ತತ್ತ್ವಕ್ಕೆ ಅಳವಡಿಸಿಕೊಂಡಿರುತ್ತಾರೆ.

ಹೀಗೆ ಚ್ವಾಂಗ್ ಟ್ಸುನ ತಾಓ ತತ್ತ್ವವನ್ನು ಮಾಧ್ಯಮಿಕ ತತ್ತ್ವವಾಗಿ ಪರಿವರ್ತಿಸಿದವರಲ್ಲಿ ಮುಖ್ಯರಾದವರು ಸೆಂಗೆ ಚಾವೋ (ಪ್ರಶ. 384–414) ಮತ್ತು ತಾಓ ಷೆಂಗ್ (ಪ್ರಶ. 401–434). ಇವರು ಕುಮಾರಜೀವನ ಶಿಷ್ಯರು. ಇವರು ಸತ್ಯವನ್ನು ಮೂರು ಅಂತಸ್ತುಗಳಲ್ಲಿ ತಿಳಿಯಬಹುದೆಂದು ತೋರಿಸಿದರು. 'ಯು' ಇದೆ. ಅದು ಭಾವರೂಪವಾದದ್ದು ಎಂದು ತಿಳಿಯುವುದು ಮೊದಲನೆಯ ಅಂತಸ್ತಿನ ಸತ್ಯ. 'ವು' ಅಭಾವರೂಪವಾದದ್ದೆಂದು ತಿಳಿಯುವುದು ಎರಡನೆಯ ಅಂತಸ್ತಿನ ಸತ್ಯ. ಸತ್ಯ 'ಯು' ಅಲ್ಲ ; ಎರಡೂ ಅಲ್ಲ ಎಂದು ತಿಳಿಯುವುದು ಮೂರನೆಯ ಅಂತಸ್ತಿನ ಸತ್ಯ. ಇದೇ ಶೂನ್ಯ. ಇದೇ ತಾಓ. ಈ ತಾಓ ಚೇತನರೂಪವಾದದ್ದು ಎಂಬುದನ್ನು ಲಾವೋ ಟ್ಸು ಮತ್ತು ಚಾಂಗ್ ಟ್ಸು ಹೇಳಿರಲಿಲ್ಲ. ಅದು ಪರಮಚೇತನವೆಂದು ಕುಮಾರಜೀವನ ಇಬ್ಬರು ಶಿಷ್ಯರಲ್ಲಿ ಒಬ್ಬ ಸ್ಪಷ್ಟಪಡಿಸಿದ.

ಇದೇ ಕಾಲದಲ್ಲಿ ನವೀನ ಕೂಂಗ್ ಫೂಟ್ಸೆ ಪಂಥದವರೂ ಈ ಭಾವನೆಯನ್ನು ಕೂಂಗ್ ಫೂಟ್ಸೆ ತತ್ತ್ವಕ್ಕೆ ಅಳವಡಿಸಿಕೊಂಡರು. ಎಲ್ಲರಲ್ಲೂ ಸಂತನ ಪ್ರಭಾವ (ಯೋ ಅಥವಾ ಷುನ್) ಇದೆ. ಅದನ್ನು ಬೆಳೆಸಿಕೊಂಡು ಎಲ್ಲರೂ ಸಂತರಾಗಬಹುದು ಎಂದು ಇವರು ಹೇಳಿದರು. ನೂತನ ಕೂಂಗ್ ಫೂಟ್ಸೆ ಪಂಥದವರು ಮೆನ್ಸಿಯಸ್ಸನ ಹೇಳಿಕೆಯನ್ನು ಬೌದ್ಧ ತತ್ತ್ವಕ್ಕನುಗುಣವಾಗಿ ಪರಿವರ್ತಿಸಿದರು. ಎಲ್ಲರಲ್ಲೂ ಬುದ್ಧ ಚೇತನವಿದೆ. ಅದನ್ನು ಎಲ್ಲರೂ ಬೆಳೆಸಿಕೊಂಡು ಬುದ್ಧ ಸ್ಥಿತಿಯನ್ನು ಮುಟ್ಟಬಹುದು. ಸುಖವತೀ ಎಂಬ ಸ್ವರ್ಗಲೋಕ ಬೇರೆ ಎಲ್ಲೋ ಇಲ್ಲ. ಅದು ಇಲ್ಲೇ ಇದೆ. ಸಾಮಾನ್ಯರೂ ಸಂತನೂ ನೋಡುವ ವಿಶ್ವ ಒಂದೇ. ಸಾಮಾನ್ಯ ತೋರಿಕೆಯಾದ ಇದನ್ನು ಸತ್ಯವೆಂದು ಭಾವಿಸಿ ಸತ್ಯವನ್ನು ಕಾಣದೆ ಹೋಗುತ್ತಾನೆ. ಸಂತನ ಬೇರೆ ಬೇರೆ ಒಡವೆಗಳು ಚಿನ್ನದ ಭಿನ್ನರೂಪಗಳು ಮಾತ್ರವೇ; ಅವು ಚಿನ್ನದಿಂದ ಬೇರೆಯಲ್ಲವೆಂದು ತಿಳಿಯುವಂತೆ, ಭೇದಗಳು ತೋರಿಕೆಗಳೆಂದೂ ಅವುಗಳಲ್ಲಿ ಅಡಗಿರುವ ಸತ್ಯ ಒಂದೇ ಎಂದು ತಿಳಿದೂ ವಿವೇಕಿಯಾಗುತ್ತಾನೆ.

ಹೀಗೆ ತಾಓ ಮತ್ತು ಕೂಂಗ್ ಫೂಟ್ಸೆ ಪಂಥಗಳೊಡನೆ ಸೇರಿಕೊಂಡ ಬೌದ್ಧ ತತ್ತ್ವ ಮುಂದೆ ಚಾನ್(ಧ್ಯಾನ) ಬೌದ್ಧ ತತ್ತ್ವಕ್ಕೆ ದಾರಿಮಾಡಿಕೊಟ್ಟಿತು. ಇದನ್ನು ಚೀನದಲ್ಲಿ ಪ್ರಶ. 520 ಮತ್ತು 526ರ ಮಧ್ಯೆ ಸ್ಥಾಪಿಸಿದವ ಬೋಧಿ ಧರ್ಮ. ಇದು ಪ್ರಶ. ಎಂಟನೆಯ ಶತಮಾನದಲ್ಲಿ ಉತ್ತರಶಾಖೆ, ದಕ್ಷಿಣಶಾಖೆಗಳಿಗಾಗಿ ಒಡೆಯಿತು. ಷೆನ್–ಷೀಯ ಔತ್ತರೇಯ ಶಾಖೆಯ ಮುಖಂಡ. ಹುಯಿ–ಚಿಂಗ್ ದಾಕ್ಷಿಣಾತ್ಯ ಶಾಖೆಯ ಮುಖಂಡ.

ಈ ಶರೀರ ಬೋಧಿವೃಕ್ಷದಂತಿದೆ. ಮನಸ್ಸು ಕನ್ನಡಿಯಂತಿದೆ. ಕನ್ನಡಿಯ ಮೇಲೆ ಧೂಳು ಕವಿಯದಂತೆ ಪ್ರತಿನಿಮಿಷದಲ್ಲೂ ಅದನ್ನು ಜಾಗರೂಕನಾಗಿ ಶುಚಿಗೊಳಿಸು. ಇದು ಷೆನ್–ಷೀಯ ಒಂದು ಕವನದ ಭಾವ. ಮೊದಲೆಲ್ಲ ಬೋಧಿ ವೃಕ್ಷವಿರಲಿಲ್ಲ. ಕನ್ನಡಿಯೂ ಇರಲಿಲ್ಲ. ಮೊದಲಲ್ಲಿ ಯಾವುದೂ ಇರಲಿಲ್ಲವಾದ್ದರಿಂದ ಧೂಳು ಯಾವುದರ ಮೇಲೆ ಕವಿಯುತ್ತದೆ? ಇದು ಹುಯಿ–ಚಿಂಗನ ಕವನದ ಭಾವ. ಮನಸ್ಸೇ ಬುದ್ಧ ಎಂಬುದು ಮೊದಲನೆಯ ಪಕ್ಷದ ವಾದ, ಶೂನ್ಯವೇ ಸತ್ಯ ಎಂಬುದು ಎರಡನೆಯ ಪಕ್ಷದ ವಾದ.

ಎರಡನೆಯ ಪಕ್ಷ ಪ್ರಶ. ಒಂಬತ್ತು ಮತ್ತು ಹತ್ತನೆಯ ಶತಮಾನಗಳಲ್ಲಿ ವಿಶೇಷವಾಗಿ ಬೆಳೆಯಿತು. ಮಾತಿನಿಂದ ಪರಮಾರ್ಥವನ್ನು ತಿಳಿಸಲಾಗುವುದಿಲ್ಲ. ಅದು ಮೌನವಾದ ಧ್ಯಾನದಿಂದಲೇ ತಿಳಿಯಬಹುದಾದದ್ದು. ಧ್ಯಾನಪಂಥದ ವೆನ್–ಯಿ ಎಂಬುವನನ್ನು ಶಿಷ್ಯನೊಬ್ಬ ಪ್ರಥಮ ತತ್ತ್ವ ಯಾವುದು ಎಂದು ಕೇಳಿದಾಗ ಅವನು ಕೊಟ್ಟ ಉತ್ತರ ಇದು : ನಾನು ಅದನ್ನು ವಿವರಿಸಿದರೆ ಅದು ಪ್ರಥಮ ತತ್ತ್ವವಾಗಿ ಉಳಿಯುವುದಿಲ್ಲ ; ಅದು ಆ ಕೂಡಲೇ ಎರಡನೆಯ ತತ್ತ್ವವಾಗುತ್ತದೆ. ಅದನ್ನು ಮನಸ್ಸು, ಚೇತನ ಎಂದು ಯಾವ ರೀತಿಯಲ್ಲಿ ವಿವರಿಸಿದರೂ ಅದನ್ನು ವಿರೂಪಗೊಳಿಸಿದಂತಾಗುತ್ತದೆ. ಅದನ್ನು ಚೇತನವೆಂದು ಮಾತಿನ ಮೂಲಕ ತಿಳಿಯಬಹುದು., ಅಲ್ಲೇ ನಿಂತರೆ ಪರಮಾರ್ಥ ಸಿದ್ಧಿಸುವುದಿಲ್ಲ. ಆ ಎತ್ತರದಿಂದ ನೆಗೆದು ಧ್ಯಾನದ ಮೂಲಕ ಶೂನ್ಯದಲ್ಲಿ ಮುಳುಗಿಹೋಗುವುದೇ ಪರಮಾರ್ಥ. ಬುದ್ಧನ ಮಾತು ಮತ್ತು ಬೌದ್ಧ ಸಾಹಿತ್ಯ – ಇವನ್ನು ದಾಟಿಮುಂದೆ ಹೋಗಬೇಕು.

**ಇಂದಿನ ಚೀನೀತತ್ತ್ವ** : ಇಂದು ಚೀನದಲ್ಲಿ ಕೂಂಗ್ ಫೂಟ್ಸೆ, ಲಾವೋ ಟ್ಸು ಮತ್ತು ಬೌದ್ಧತತ್ತ್ವಗಳು ಹಿಮ್ಮೆಟ್ಟಿವೆ . ಅವನ್ನು ಈಗ ಅಧ್ಯಯನ ಮಾಡುವುದು ಅವನ್ನು ಖಂಡಿಸುವುದಕ್ಕಾಗಿಯೇ. ಚೀನದಲ್ಲಿ ಇಂದು ಪ್ರಬಲವಾಗಿರುವುದು ಕಾರ್ಲ್ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಮಾವೋ ತ್ಸೆ–ಡುಂಗ್ ಇವರ ಕಮ್ಯೂನಿಸ್ಟ್ ತತ್ತ್ವ. ಕಾರ್ಲ್ ಮಾರ್ಕ್ಸ್‌ನ ಭೌತ ವೈಚಾರಿಕತತ್ತ್ವದ ದೃಷ್ಟಿಯಿಂದ ಮಾವೋ ಚೀನೀತತ್ತ್ವದ ಬೆಳವಣಿಗೆಯನ್ನು ವಿಮರ್ಶಿಸಿರುತ್ತಾನೆ. ಯಾವುದಾದರೂ ಒಂದು ಚಳವಳಿ ಅದರ ಅಂತಿಮ ಘಟ್ಟವನ್ನು ಮುಟ್ಟಿದಾಗ, ಅದು ಅದಕ್ಕೆ ವ್ಯತಿರಿಕ್ತವಾದ ಚಳವಳಿಗೆ ದಾರಿ ಮಾಡಿಕೊಡುತ್ತದೆ. ಹೀಗೆ ಪರಸ್ಪರ ವಿರೋಧಗಳು ಒಂದನ್ನೊಂದು ಪೂರ್ಣಗೊಳಿಸುತ್ತವೆ. ಮಾವೋ ಹೊಸ ಪ್ರಜಾಸರ್ಕಾರ ಎಂಬ ತನ್ನ ಗ್ರಂಥದಲ್ಲಿ ಹಿಂದಿನ ಸಂಸ್ಕೃತಿಯಲ್ಲಿ ಸಾರವತ್ತಾದುದನ್ನು ಗ್ರಹಿಸಿ ಗಸಿಯನ್ನು ಬಿಸಾಡಬೇಕೆಂದು ಹೇಳಿರುತ್ತಾನೆ. ಆ ಸಾರವತ್ತಾದ್ದು ಯಾವುದು, ಗಸಿ ಯಾವುದು ಎಂಬ ಪ್ರಶ್ನೆಗಳಿಗೆ ಈ ರೀತಿ ಉತ್ತರ ಕೊಟ್ಟಿರುತ್ತಾನೆ. ಪ್ರಜಾಸರ್ಕಾರಕ್ಕೆ, ವಿಜ್ಞಾನಕ್ಕೆ ವಿರುದ್ಧವಾದ ಶ್ರೀಮಂತರ ತತ್ತ್ವ ಗಸಿ, ಸಾಮಾನ್ಯರ ಮತ್ತು ಬಹುಸಂಖ್ಯಾತರ ಹಿತಕ್ಕೆ ಅನುಕೂಲವಾದದ್ದು ಮತ್ತು ವಿಜ್ಞಾನಕ್ಕೆ ಸಂಗತವಾದದ್ದು ಸಾರವತ್ತಾದ ತತ್ತ್ವ. ಈ ದೃಷ್ಟಿಯಿಂದ ಈಗ ಚೀನಿಯರು ತಮ್ಮ ಹಿಂದಿನ ತತ್ತ್ವವನ್ನು ವಿಮರ್ಶಿಸುತ್ತಿದ್ದಾರೆ.

**ನೋಡಿ- ಕಮ್ಯೂನಿಸಂ** (ಜಿ.ಎಚ್.)

**ಚೀನೀ ನಾಟಕ** : ಚೀನೀ ರಂಗಭೂಮಿ ಕ್ರಿಸ್ತಪೂರ್ವಕ್ಕೆ ಸಾವಿರಾರು ವರ್ಷಗಳಷ್ಟು ಪ್ರಾಚೀನವಾದುದು. ಆಧುನಿಕ ಪ್ರಗತಿಪರ ರಂಗಭೂಮಿಯ ಅನೇಕ ವೈಶಿಷ್ಟ್ಯಗಳು ಅಂದಿನ ಕಾಲದಲ್ಲಿಯೇ ಇದ್ದುವು ಎಂಬ ಉತ್ಸಾಹೀ ತಜ್ಞರ ಜೊತೆ ಇಂದಿಗೂ ಚೀನೀ ನಾಟಕ ಎಂದಿನಂತೆಯೇ ಇದೆ ಎಂಬ ತಜ್ಞರೂ ಇದ್ದಾರೆ.

ಚೀನೀ ನಾಟಕದ ಉಗಮದ ಬಗ್ಗೆ ನಿಶ್ಚಿತವಾದ ಅಭಿಪ್ರಾಯವಿಲ್ಲ. ಆದರೆ ಪ್ರಾಚೀನ ಕಾಲದಲ್ಲಿಯ ಧಾರ್ಮಿಕ ವಿಧಿನಿಯಮಗಳ ಆಚರಣೆಯಲ್ಲಿ ಅದರ ಉಗಮವನ್ನು ಕಾಣಬಹುದು ಎಂಬುದನ್ನು ಸರ್ವಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ವಿಶೇಷವಾಗಿ ಸಾರ್ವಜನಿಕ, ಧಾರ್ಮಿಕ, ಉತ್ಸವಗಳಲ್ಲಿ, ಧರ್ಮಕ್ಕೆ ಸಂಬಂಧಿಸಿದ ಜಾತ್ರೆಗಳಲ್ಲಿ ಮುಂಚಿನಿಂದಲೂ ಗಾಯನ ಮತ್ತು ನೃತ್ಯ ನಡೆಯುತ್ತಿದ್ದುವು. ಇಂದಿನ ದೃಷ್ಟಿಯಿಂದ ಅವನ್ನು ನಾಟಕ ಎಂದು ಹೇಳಲಾಗದು. ಕ್ರಮೇಣ ಗಾಯನವಾಗಲೀ ನೃತ್ಯವಾಗಲೀ ಒಂದು ಕತೆಯನ್ನು ಹೇಳುವಲ್ಲಿ ಬಳಕೆಗೆ ಬಂತು. ಭಾರತದ ಪುರಾಣ ಪ್ರವಚನ ಇಲ್ಲವೆ ತರುವಾಯದ ಹರಿಕಥೆಗೆ ಇದನ್ನು ಹೋಲಿಸಬಹುದು. ನಾಟಕದ ಬೀಜವನ್ನು ಈ ಪ್ರಕಾರದಲ್ಲಿ ಕಾಣಬಹುದು; ಹಾಡಿನಲ್ಲಿ ಇಲ್ಲವೆ ಕುಣಿತದಲ್ಲಿ ಒಂದು ಕತೆಯನ್ನು ನಿವೇದಿಸುವುದು. ಇಲ್ಲಿ ಹಾಡಿಗೆ ಮತ್ತು ಕುಣಿತಕ್ಕೇ ಪ್ರಾಧಾನ್ಯವಿದ್ದರೂ ಅದರ ಜೊತೆ ಅಂಗದ ಚಲನವಲನಗಳು, ಧ್ವನಿಯ ಏರಿಳಿತಗಳು ಇದ್ದುದರಿಂದ ಇದೊಂದು ವಿಶಿಷ್ಟ ಸ್ವರೂಪದ್ದಾಯಿತು. ಸು. 6ನೆಯ ಶತಮಾನದಲ್ಲಿ ಈ ಸ್ವರೂಪಕ್ಕೆ ಒಂದು ಸ್ಥಿರತೆ ಬಂತು.

**ನಾಟಕ, ನೃತ್ಯ ಮತ್ತು ಸಂಗೀತ – ಇವು ಮೇಳೈಸಿರುವ ಪೀಕಿಂಗ್ ಗೇಯ ರೂಪಕದ ಒಂದು ನೃತ್ಯ**

ಚೀನೀ ನಾಟಕದ ಇನ್ನೊಂದು ವಿಶೇಷವೆಂದರೆ ಇದು ರಾಜರ ಮತ್ತು ಧನಿಕರ ಕಲೆಯಾಗಿತ್ತು. ಸಾಮಾನ್ಯ ಜನರ ರಂಗಭೂಮಿ ಎಂಬುದು ಕೇವಲ ಗೊಂಬೆಯಾಟಕ್ಕೆ ಮಾತ್ರ ಸೀಮಿತವಾಗಿತ್ತು. ಹೀಗಾಗಿ ಚೀನೀ ನಾಟಕ ಬೆಳೆದದ್ದು ರಾಜರ ಆಶ್ರಯದಲ್ಲಿ ಇಲ್ಲವೆ ನಗರಗಳಲ್ಲಿ, ಅದರಲ್ಲೂ ರಾಜಧಾನಿಗಳಲ್ಲಿ. ಇಂದು ಚೀನೀ ಭಾಷೆಯಲ್ಲಿ ನಾಟಕಕ್ಕೆ ಚಿಂಗ್ ಷೀ ಎಂಬ ಹೆಸರಿದ್ದು ಅದರ ಅರ್ಥ ರಾಜಧಾನಿಯಾದ ಪೀಕಿಂಗಿನ ನಾಟಕ ಎಂದು. 8ನೆಯ ಶತಮಾನದಲ್ಲಿ ಆಳಿದ ಸಮ್ರಾಟ್ ಮಿಂಗ್ ಹುವಾಂಗ್ ಎಂಬುವನ ಆಳ್ವಿಕೆಯಲ್ಲಿ ಚೀನೀ ರಂಗಭೂಮಿಯ ಉತ್ಕರ್ಷ ಪ್ರಾರಂಭವಾಯಿತೆಂದು ಊಹಿಸಲಾಗಿದೆ. ಇದೇ ಕಾಲದಲ್ಲಿ ನಾಟಕವನ್ನು ಸಾಮಾನ್ಯರಿಗೂ ಪ್ರಿಯವಾಗುವಂತೆ ಮಾಡುವ ಮೊದಲ ಪ್ರಯತ್ನ ನಡೆಯಿತು. ಮುಂದೆ ಸೂಂಗ್ ಮನೆತನದ ಆಳ್ವಿಕೆಯಲ್ಲಿ (960–1279) ರಂಗಭೂಮಿ ಬೆಳೆಯಿತು. ಕೊನೆಗೆ 1250–1368ರ ಯುಆನ್ ಆಳ್ವಿಕೆಯಲ್ಲಿ ರಂಗಭೂಮಿಯ ಬಗ್ಗೆ ನಿಯಮಗಳೂ ಶಾಸ್ತ್ರಗಳೂ ರಚಿತವಾಗಿ ಅದಕ್ಕೊಂದು ಸ್ಥಿರರೂಪ ಬಂತು. ಯುಆನ್ ನಾಟಕ ಎಂಬ ಹೆಸರೂ ಈ ರೂಪಕ್ಕೆ ಬಂತು. ಈ ಪ್ರಕಾರದ ನಾಟಕ ಮಿಂಗ್ ವಂಶದ ಆಳ್ವಿಕೆಯಲ್ಲಿ (1368–1644) ಬೆಳೆದು, ಮಿಕ್ಕ ಎಲ್ಲ ಪ್ರಕಾರಗಳನ್ನೂ ಹಿಂದೂಡಿ 19ನೆಯ ಶತಮಾನದವರೆಗೆ ಜನಪ್ರಿಯವಾಯಿತು.

ಅಭಿಜಾತ ಮತ್ತು ಜಾನಪದ ಎಂಬ ಭೇದ ಚೀನೀ ರಂಗಭೂಮಿಯಲ್ಲೂ ಕಾಣಬರುತ್ತದೆ. ಪ್ರಾರಂಭದಿಂದಲೂ ಅಭಿಜಾತವಾದ ಈ ರಂಗಭೂಮಿಯನ್ನು ಜನಪ್ರಿಯ ಮಾಡುವ ಪ್ರಯತ್ನ 8ನೆಯ ಶತಮಾನದಲ್ಲಿ ನಡೆಯಿತೆಂದು ಮೇಲೆ ಹೇಳಿದೆಯಷ್ಟೆ. ಈ ಸಂದರ್ಭದಲ್ಲಿ 3–4 ನೆಯ ಶತಮಾನಗಳವರೆಗೆ ಚೀನೀ ರಂಗಭೂಮಿಯಲ್ಲಿ ಎರಡು ಬೇರೆ ಬೇರೆ ಪ್ರಕಾರಗಳು ಬೆಳೆದುವು; ಒಂದು ಉತ್ತರ (ಚೀನ)ದ ಮಾರ್ಗ, ಇನ್ನೊಂದು ದಕ್ಷಿಣ(ಚೀನ)ದ ಮಾರ್ಗ; ಉತ್ತರ ಮಾರ್ಗದಲ್ಲಿ (ಕುನ್‌ತ್ಸೂ) ನಾಟಕದ ಭಾಷೆ ಬಳಕೆಯ ಭಾಷೆ, ಕತೆ ಐತಿಹಾಸಿಕ ಇಲ್ಲವೆ ಪ್ರಣಯಕ್ಕೆ ಸಂಬಂಧಿಸಿದ್ದು, ಮತ್ತು ಕತೆಯ ಬೆಳೆವಣಿಗೆಯಲ್ಲಿ ನಟರ ಕೈವಾಡ ಹೆಚ್ಚು. ದಕ್ಷಿಣ ಮಾರ್ಗದಲ್ಲಿ ಗೀತಗಳು ಛಂದೋಬದ್ಧ, ಬೆಳೆವಣಿಗೆ ನಿಯಮಬದ್ಧ. ಸಂಭಾಷಣೆ ಗ್ರಾಂಥಿಕ ಶೈಲಿಯದು. ಕೊನೆಗೆ 14ನೆಯ ಶತಮಾನದಿಂದ ದಕ್ಷಿಣ ಮಾರ್ಗವೇ, ಪ್ರಬಲವಾಗಿ ಜನಪ್ರಿಯವಾಯಿತು. ಒಂದು ಕಾಲದಲ್ಲಿ ಮಂಗೋಲರ ಪ್ರಭಾವದಿಂದ ಗೀತನಾಟಕ ಬೆಳೆಯಿತು. ಆದರೆ ಪ್ರಾರಂಭದಿಂದಲೂ ಸಂಗೀತ ಚೀನೀ ನಾಟಕದ ಒಂದು ಮಹತ್ತ್ವದ ಅಂಗವಾಗಿದ್ದು. ಯಾವ ಪ್ರಕಾರದಲ್ಲೂ ಅದು ಕಂಡು ಬರುತ್ತಿತ್ತಾದ್ದರಿಂದ ಗೀತನಾಟಕಗಳ ವೈಶಿಷ್ಟ್ಯ ಬಹುಕಾಲ ಬಾಳಲಿಲ್ಲ.

ಚೀನೀ ನಾಟಕ ಎರಡು ತರದ್ದು. ಒಂದು ವೀರರ ಕತೆಗೆ ಸಂಬಂಧಿಸಿದ್ದು, ಇನ್ನೊಂದು ಚೀನೀಯರೇ ಹೇಳುವಂತೆ ಸಾಂಸಾರಿಕ ನಾಟಕ. ಅನೇಕ ಪೂರ್ವದೇಶಗಳಲ್ಲಿಯಂತೆ ಚೀನೀ ನಾಟಕದಲ್ಲೂ ಸುಖಾಂತ (ಕಾಮೆಡಿ), ದುಃಖಾಂತ (ಟ್ರ್ಯಾಜಿಡಿ) ಎಂಬ ಭೇದವಿರಲಿಲ್ಲ. ನಾಟಕದಲ್ಲಿ ಎರಡು ವರ್ಗಗಳಿದ್ದಂತೆ, ನಟರಲ್ಲಿ ನಾಲ್ಕು ವರ್ಗಗಳಿದ್ದುವು– ಗಂಡು, ಹೆಣ್ಣು, ಬಣ್ಣದ ಮುಖ ಮತ್ತು ಹಾಸ್ಯಗಾರ ಎಂದು. ಚೀನೀ ನಾಟಕಗಳಲ್ಲಿ ಗಂಡಸೇ ಸ್ತ್ರೀಪಾತ್ರವನ್ನು ಮಾಡುತ್ತಿದ್ದುದರಿಂದ ಎರಡನೆಯ ವರ್ಗಕ್ಕೆ ಒಂದು ಮಹತ್ತ್ವವಿದೆ. ಈ ನಾಲ್ಕು ವರ್ಗಗಳ ನಟರ ಚಲನ–ವಲನ; ಹಾವ–ಭಾವ, ಮಾತಿನ ಶೈಲಿ ಇವು ಬೇರೆಬೇರೆಯಾಗಿರುತ್ತಿದ್ದುವು; ಇವುಗಳಲ್ಲಿ ಹಾಸ್ಯಗಾರನೊಬ್ಬನೇ ಬಳಕೆಯ ಭಾಷೆಯಲ್ಲಿ ಮಾತನಾಡುತ್ತಿದ್ದ. ಮಿಕ್ಕವರ ಶೈಲಿ ಗ್ರಾಂಥಿಕ. ಈ ವರ್ಗಗಳಿಗೆ ಇನ್ನೂ ಒಂದು ಕಾರಣಕ್ಕಾಗಿ ಮಹತ್ತ್ವವಿದೆ. ಅದೆಂದರೆ ಪ್ರಾಚೀನ ಕಾಲದಿಂದಲೂ ನಟರಿಗೆ ಶಿಕ್ಷಣ ಕೊಡಲ್ಪಡುತ್ತಿತ್ತು. ಅಭ್ಯರ್ಥಿಯನ್ನು ಚೆನ್ನಾಗಿ ಪರೀಕ್ಷಿಸಿ ಅವನ ಇಚ್ಛೆಯನ್ನೂ ಯೋಗ್ಯತೆಯನ್ನೂ ಒಲವನ್ನೂ ಒರೆ ಹಚ್ಚಿ ಆಮೇಲೆ ಅವನಿಗೆ ಪ್ರವೇಶವನ್ನು ಕೊಡಲಾಗುತ್ತಿತ್ತು. ಆತ ಶಿಕ್ಷಣ ಮುಗಿಯುವವರೆಗೆ ಕಠಿಣ ಬ್ರಹ್ಮಚರ್ಯ ವ್ರತವನ್ನು ಪಾಲಿಸುವವನಂತೆ ವಸತಿಗೃಹದಲ್ಲಿಯೇ ಇರಬೇಕಾಗುತ್ತಿತ್ತು. ಪ್ರತಿಯೊಬ್ಬನಿಗೂ ವ್ಯಾಯಾಮ ಕಡ್ಡಾಯವಾಗಿತ್ತು. ಆಮೇಲೆ ನಾಲ್ಕು ವರ್ಗಗಳ ನಟರಲ್ಲಿ ಯಾವ ವರ್ಗಕ್ಕೆ ಅವನು ಯೋಗ್ಯ ಎಂಬುದನ್ನು ನಿರ್ಧರಿಸಿ ಆಯಾ ವಿದ್ಯಾರ್ಥಿಯನ್ನು ಆಯಾ ವರ್ಗಕ್ಕಾಗಿ ತರಬೇತುಗೊಳಿಸಲಾಗುತ್ತಿತ್ತು. ಹೀಗೆ ಶಿಕ್ಷಣ ಪಡೆದರೂ ನಟರಿಗೆ ಸಮಾಜದಲ್ಲಿ ಸ್ಥಾನವಿದ್ದಿರಲಿಲ್ಲ. ಅವರು ಸಮಾಜಬಾಹಿರರೆಂದೇ ಪರಿಗಣಿಸಲ್ಪಡುತ್ತಿದ್ದರು. ಸರ್ಕಾರೀ ನೌಕರಿಗಳಿಗಾಗಿ ನಡೆಯುವ ಸ್ಪರ್ಧಾ ಪರೀಕ್ಷೆಗಳಿಗೆ ಕೂಡಲು ಅವರಿಗೆ ಅಧಿಕಾರವಿದ್ದಿರಲಿಲ್ಲ.

ಇಷ್ಟೊಂದು ನಿಯಮಬದ್ಧವಾದ ಚೀನೀ ನಾಟಕವನ್ನು ತೀರ ಸಾದಾ ಎನ್ನಿಸುವಂಥ ರಂಗಭೂಮಿಯಲ್ಲಿ ಪ್ರದರ್ಶಿಸಲಾಗುತ್ತಿತ್ತು. ರಂಗಸಜ್ಜಿಕೆಯ ಯಾವ ವಿಶಿಷ್ಟ ಸಲಕರಣೆಗಳೂ ಇರುತ್ತಿರಲಿಲ್ಲ. ಹಿಂದೆ ಒಂದು ಸಾದಾ ಪರದೆ, ರಂಗಸ್ಥಲದ ಮೇಲೆ ಒಂದು ಚಿಕ್ಕ ಮೇಜು ಮತ್ತು ಎರಡು ಸಾದಾ ಕುರ್ಚಿಗಳು, ನೆಲಕ್ಕೆ ಒಂದು ಹಾಸುಗೆ –ಇಷ್ಟೆ. ನಟರ ಪ್ರವೇಶಕ್ಕೆ ರಂಗಸ್ಥಲದ ಹಿಂತುದಿಯ ಎರಡೂ ಬದಿಗಳಲ್ಲಿ ಅವಕಾಶ. ಅವರ ಪ್ರವೇಶದ ಬಗ್ಗೆ ನಿಯಮಗಳಿವೆ. ಆದರೆ ಅದೇ ರಂಗಸ್ಥಲದಲ್ಲಿ ಕುಳಿತ ವಾದ್ಯಗಾರರ ಮತ್ತು ರಂಗಸ್ಥಲದ ಕೆಲಸಗಾರರ ಬಗ್ಗೆ ನಿಯಮಗಳಂತೂ ಇಲ್ಲ. ಜೊತೆಗೆ ಪೂರ್ತಿ ಸ್ವಾತಂತ್ರ್ಯವಿದೆ. ವಾದ್ಯಗಾರರು ಬೇಕಾದಾಗ ಎದ್ದು ಹೋಗಬಹುದು, ಮತ್ತೆ ಬಂದು ಕೂಡಬಹುದು– ನಾಟಕ ನಡೆದಾಗಲೆ. ಅದರಂತೆಯೇ ಕೆಲಸಗಾರರೂ ನಾಟಕ ನಡೆಯುತ್ತಿರುವಾಗಲೇ ಬೇಕಾದಾಗ ಬಂದು ಕುರ್ಚಿಯನ್ನಿಡಬಹುದು, ಖಡ್ಗವನ್ನು ಕೊಡಬಹುದು, ಯಾವುದನ್ನೂ ಮಾಡಬಹುದು. ಇತ್ತೀಚಿನವರೆಗೆ ಈ ವಾದ್ಯಗಾರರಿಗಾಗಲಿ ಕೆಲಸಗಾರರಿಗಾಗಲಿ ವೇಷದ ನಿರ್ಬಂಧವೂ ಇದ್ದಿರಲಿಲ್ಲ. ತಮ್ಮ ದಿನನಿತ್ಯದ ಬಟ್ಟೆಯಲ್ಲಿಯೇ ಅವರಿರುತ್ತಿದ್ದರು. ಪ್ರೇಕ್ಷಕರ ಬಗ್ಗೆಯೂ ಕೆಲಮಟ್ಟಿಗೆ ಈ ಸ್ವಾತಂತ್ರ್ಯವಿದೆ. ಚೀನೀ ಜನ ಅತ್ಯಂತ ರಸಿಕರು, ವಿಲಾಸಿಗಳು ಎಂದು ಎಲ್ಲ ತಜ್ಞರೂ ಹೇಳುತ್ತಾರೆ. ನಾಟಕವನ್ನು ನೋಡಲು ಕುಟುಂಬದ ಜನರೆಲ್ಲ ಬರುವರಲ್ಲದೆ ಜೊತೆಗೆ ಬಾಯಾಡಿಸಲು (ಕಡಲೆಕಾಯಿಯಂತೆ) ಏನನ್ನಾದರೂ ತರುವರಂತೆ. ನಾಟಕ ಸಾಮಾನ್ಯವಾಗಿ ಸಂಜೆಯ ಹೊತ್ತಿಗೆ ಪ್ರಾರಂಭವಾಗಿ ಮಧ್ಯರಾತ್ರಿಯ ತರುವಾಯದ ತುಸುಹೊತ್ತಿಗೆ ಮುಗಿಯುವುದು. ಆದರೆ ಮುಖ್ಯ (ತಾರಾ) ನಟನ ಪ್ರವೇಶ ಮಾತ್ರ ರಾತ್ರಿ ಏರಿದ ಮೇಲೆಯೇ. ಚೀನದ ಪ್ರತಿಯೊಂದು ನಗರದಲ್ಲೂ ಕನಿಷ್ಠ 15–20 ನಾಟಕ ಗೃಹಗಳಿರುವುವಂತೆ.

ಚೀನದೇಶದ ರಂಗಭೂಮಿಗೆ ಆಧುನಿಕತೆಯ ಗಾಳಿ 20ನೇ ಶತಮಾನದ ಪ್ರಾರಂಭದವರೆಗೂ ಸೋಂಕಿರಲಿಲ್ಲ. ನೃತ್ಯ, ಸಂಗೀತ ಮತ್ತು ಸಂಭಾಷಣೆ – ಈ ಮೂರೂ ಅಂಶಗಳನ್ನೊಳಗೊಂಡ ವೀರಯೋಧರ ಇಲ್ಲವೆ ಸಾಂಸಾರಿಕ (ಇದೂ ಹೆಚ್ಚಾಗಿ ದಂತಕತೆಗಳಿಗೆ ಸಂಬಂಧಿಸಿದ್ದು) ಕತೆಗಳ ಮತ್ತು ಪ್ರೌಢ, ವ್ಯಾಕರಣಬದ್ಧ, ಗ್ರಾಂಥಿಕ ಶೈಲಿಯಲ್ಲಿ ಬರೆದ ನಾಟಕಗಳೇ ಚೀನೀ ರಂಗಭೂಮಿಯ ವೈಶಿಷ್ಟ್ಯವಾಗಿದ್ದುವು. ಗದ್ಯನಾಟಕ (ಯಾವುದಕ್ಕೆ ಇಂದು ನಾವು ಸ್ಟ್ರೇಟ್ ಡ್ರಾಮ ಎನ್ನುತ್ತೇವೆಯೊ ಅದು), ತತ್ಕಾಲೀನ ಸಮಸ್ಯೆಗಳನ್ನು ಕುರಿತ ನಾಟಕ ಒಂದೂ ಇದ್ದಿರಲಿಲ್ಲ. ಅಷ್ಟೇಕೆ ಗದ್ಯ ಶೈಲಿಯೇ ಬೆಳೆದಿರಲಿಲ್ಲ. 1907ರಲ್ಲಿ ಲಾ ದಾಮ್ ಓ ಕೆಮೆಲಿಯಾ ಎಂಬ ಫ್ರೆಂಚ್ ನಾಟಕದ ಮತ್ತು ಅಂಕಲ್ ಟಾಮ್ಸ್ ಕ್ಯಾಬಿನ್ ಎಂಬ ಇಂಗ್ಲಿಷ್ ನಾಟಕದ ಅನುವಾದಗಳ ಪ್ರಯೋಗವೇ ಆಧುನಿಕ ನಾಟಕದ ಪ್ರಾರಂಭವೆನ್ನಬಹುದು. ಈ ತರದ ನಾಟಕಗಳಿಗೆ ಹೊಸ ಇಲ್ಲವೆ

ಮಾತನಾಡುವ ನಾಟಕ ಎಂದೇ ಕರೆಯಲಾಗುತ್ತಿದೆ. ಆಧುನಿಕ ಚೀನೀ ನಾಟಕದ ಬೆಳವಣಿಗೆಗೆ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳು ಹೆಚ್ಚಾಗಿ ಪ್ರೇರಕರಾಗಿದ್ದಾರೆ. ಚೀನೀ ನಾಟಕಗಳ ಸಂಭಾಷಣಾ ಶೈಲಿ ಕೃತಕವಾಗಿತ್ತು; ಗದ್ಯ ಎಂಬುದು ವ್ಯಾಕರಣನಿಯಮಬದ್ಧವಾಗಿತ್ತು. ಮೇಲೆ ಹೇಳಿದ ಎರಡು ನಾಟಕಗಳ ಅನುವಾದಗಳ ಪ್ರಯೋಗಕ್ಕೂ ಈ ಮಾತು ಅನ್ವಯಿಸುತ್ತಿತ್ತು. ಆದರೆ ಸುಮಾರು 1919–20ರಲ್ಲಿ ಚೀನೀ ವಿದ್ಯಾರ್ಥಿಗಳು ಚಳವಳಿ ಹೂಡಿ ನಾಟಕಗಳಲ್ಲಿ ಬಳಕೆಯ ಭಾಷೆಯನ್ನು ಉಪಯೋಗಿಸುವಂತೆ ಒತ್ತಾಯಪಡಿಸಿದರು. ಮುಂದೆ ನ್ಯಾನ್‌ಕಿಂಗ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇಬ್ಸೆನ್ನನ ಎನಿಮಿ ಆಫ್ ದಿ ಪೀಪಲ್ ಎಂಬ ನಾಟಕದ ಅನುವಾದವನ್ನು ಪ್ರಯೋಗಿಸಿದ್ದು ಸಾಮಾಜಿಕ ಸ್ವತಂತ್ರ್ಯನಾಟಕಗಳ ರಚನೆಗೆ ಪ್ರೇರಣೆ ಕೊಟ್ಟಿತು. 1930ರ ಸುಮಾರಿಗೆ, ಸಾಮಾಜಿಕ ಸಮಸ್ಯೆಗಳನ್ನು ಕುರಿತಾದ ನಾಟಕಗಳ ರಚನೆ ಹೆಚ್ಚಿತಲ್ಲದೆ ಈ ಮಾದರಿಯ ಆಧುನಿಕ ನಾಟಕಗಳು ಜನಪ್ರಿಯವಾಗಲು ತೊಡಗಿದವು. ಇಬ್ಸೆನ್ನನ ನಾಟಕಗಳ ಮಾದರಿಯಲ್ಲಿ ಏಕಾಂಕ ನಾಟಕಗಳ ರಚನೆಯೂ ಪ್ರಾರಂಭವಾಯಿತು. ನಾಟಕಕಾರರೆಂಬುವವರೂ ಅಸ್ತಿತ್ವಕ್ಕೆ ಬರತೊಡಗಿದರು.

ಎರಡನೆಯ ಮಹಾಯುದ್ಧದ ತರುವಾಯ ರಂಗಭೂಮಿ ಆಧುನಿಕತೆಯ ವಾತಾವರಣದಿಂದ ಬದಲಾಗತೊಡಗಿತು. ಈಚೆಗೆ ನಾಟಕ ತಯಾರಿಕೆಯ ರೀತಿ ತೀರ ಬದಲಾಗಿದೆ, ಉತ್ತಮಗೊಂಡಿದೆ. ಹೊಸ ಹೊಸ ನಾಟಕಕಾರರು ಹುಟ್ಟುತ್ತಲಿದ್ದಾರೆ, ಶ್ರೇಷ್ಠನಟರು ಕಾಣತೊಡಗಿದ್ದಾರೆ. ಚೀನದ ಆಡಳಿತ ವರ್ಗದಲ್ಲಿ ಬದಲಾವಣೆಯಾಗಿದ್ದರೂ ನಾಟಕಗಳಿಗೆ, ನಾಟಕಗೃಹಗಳಿಗೆ ಮತ್ತು ಜನರ ರಸಿಕತೆಗೆ ಕೊರತೆ ಇಲ್ಲ ಎಂದು ಹೇಳಲಾಗುತ್ತಿದೆ. ಸಾಮಾಜಿಕ ಸಮಸ್ಯೆಗಳ ಬದಲಾಗಿ ರಾಜಕೀಯ ಪ್ರಚಾರ ನಾಟಕಗಳ ವಿಷಯವಾಗಿರಬಹುದಾದರೂ ಚೀನೀ ರಂಗಭೂಮಿಯ ಬೆಳವಣಿಗೆಗೆ ಚ್ಯುತಿ ಬಂದಿಲ್ಲ ಎಂದು ಹೇಳಲಾಗುತ್ತಿದೆ. ಕಾಲಕ್ಕೆ ತಕ್ಕಂತೆ ಬದಲಾಯಿಸುವುದು ರಂಗಭೂಮಿಯ ಜೀವಂತಿಕೆಯ ಲಕ್ಷಣ, ಆ ಲಕ್ಷಣ ಚೀನೀ ರಂಗಭೂಮಿಯಲ್ಲಿ ಕಾಣುತ್ತಿದೆ. (ಎ.ಆರ್.ಎ.)

**ಚೀನೀ ನ್ಯಾಯ:** ಪ್ರಾಚೀನಕಾಲದಿಂದಲೂ ಚೀನೀಯರಿಗೆ ನೈಸರ್ಗಿಕ ನಿಯಮಗಳಲ್ಲೇ ಹೆಚ್ಚು ವಿಶ್ವಾಸ. ಅದೇ ಅವರ ಬಹುತೇಕ ಕಾನೂನುಗಳಿಗೆ ತಳಹದಿ. ಉಳಿದೆಲ್ಲ ದೇಶಗಳಂತೆ ಅಲ್ಲೂ ಸಾರ್ವಜನಿಕ ನ್ಯಾಯ ಖಾಸಗಿ ಅಥವಾ ವ್ಯಕ್ತಿಗತ ನ್ಯಾಯಕ್ಕಿಂತ ಪೂರ್ವದಲ್ಲೇ ಜಾರಿಯಲ್ಲಿ ಬಂತೆಂದು ನಂಬಬಹುದಾದರೂ ಅತಿ ಪುರಾತನವಾದ ದಾಖಲೆಗಳಲ್ಲಿ ವಿವಾಹ ಮತ್ತು ವಾರಸುದಾರಿಕೆಯ ಬಗ್ಗೆ ನಿಯಮಗಳನ್ನು ಮಾಡಿಟ್ಟ ಉಲ್ಲೇಖವಿದೆ. ಆದರೆ ಅವಕ್ಕೆ ಪರಿಪೂರ್ಣವಾಗಿ ಕಾನೂನಿನ ಸ್ವರೂಪವೇ ಇತ್ತೆಂಬ ಬಗ್ಗೆ ಸಂದೇಹವುಂಟು. ಚೀನೀಯರ ಪುರಾತತ್ತ್ವ 5 ಬಗೆಯ ಮಾನವೀಯ ಸಂಬಂಧಗಳನ್ನು ಕುರಿತು ಹೇಳುತ್ತದೆ. ರಾಜ ಮತ್ತು ಪ್ರಜೆ, ತಂದೆ ಮತ್ತು ಮಗ, ಗಂಡ ಮತ್ತು ಹೆಂಡತಿ, ಅಣ್ಣ ಮತ್ತು ತಮ್ಮ ಹಾಗೂ ಗೆಳೆಯ ಮತ್ತು ಗೆಳೆತಿ. ಇವರ ನಡುವೆಯೇ ಅಲ್ಲದೆ, ಪಂಚಗ್ರಹ, ಪಂಚಧ್ವನಿ, ಪಂಚಲೋಹ, ಪಂಚಧಾನ್ಯ, ಪಂಚವರ್ಣಗಳೇ ಮುಂತಾದವುಗಳ ಪರಸ್ಪರ ಸಂಬಂಧವನ್ನು ಕುರಿತೂ ಹೇಳುತ್ತದೆ.

ಜಾದೂ, ಜಾತಕ ಮೊದಲಾದವುಗಳಿಗೆ ಅವರು ಮಹತ್ತ್ವ ನೀಡುತ್ತಿದ್ದರು. ನಿಸರ್ಗ ನಿಯಮಗಳಲ್ಲಿ ಹಾಗೂ ನೈತಿಕ ಮೌಲ್ಯಗಳಲ್ಲಿ ಆಂತರಿಕವಾಗಿ ಪರಸ್ಪರಸಂಬಂಧವನ್ನು ಅವರು ಕಲ್ಪಿಸುತ್ತಿದ್ದರು. ಉದಾ:– ಚಳಿಗಾಲದಲ್ಲಿ ಬೆಚ್ಚನೆಯ ದಪ್ಪ ಬಟ್ಟೆಗಳನ್ನು ತೊಡುವುದು, ಬೇಸಗೆಯಲ್ಲಿ ವಿರಳವಾಗಿ ಅಥವಾ ತೆಳ್ಳನೆಯ ಬಟ್ಟೆಗಳನ್ನು ಧರಿಸುವುದು ಸ್ವಾಭಾವಿಕ ಧರ್ಮ. ನಿಸರ್ಗಕ್ಕೆ ವಿರುದ್ಧವಾಗಿ ವರ್ತಿಸಿದರೆ ಋತುಚಕ್ರ ಸರಿಯಾಗಿ ತಿರುಗಲಾರದೆಂಬುದು ಅವರ ನಂಬಿಕೆಯಾಗಿತ್ತು. ತಮ್ಮ ಅನೈತಿಕ ಅಪಕೃತ್ಯಗಳಿಂದ ವಿಶ್ವದ ನಿಯಮ ಮತ್ತು ಕಾಲಚಕ್ರಗಳನ್ನು ತಲೆಕೆಳಗು ಮಾಡಿದ ಚಕ್ರವರ್ತಿಗಳ ಕಥೆಗಳಿಂದ ಚೀನೀ ಇತಿಹಾಸ ತುಂಬಿದೆ. ಕನ್‌ಫ್ಯೂಷಿಯಸ್ ಧರ್ಮಕ್ಕೆ ಸೇರಿದ ಜುಂಗ್ ಯುಂಗ್ ಎಂಬ ಪುಸ್ತಕ ಇಂಥ ಪೂರ್ವಪೀಠಿಕೆಗಳಿಂದಲೇ ಪ್ರಾರಂಭವಾಗುತ್ತದೆ. ನಿಸರ್ಗನಿಯಮಗಳು ಮಾನವಹೃದಯದಲ್ಲಿ ದೈವದತ್ತವಾಗಿಯೇ ಅಳವಡಿಸಲ್ಪಟ್ಟಿವೆಯೆಂಬುದು ಕನ್‌ಫ್ಯೂಷಿಯಸನ ನಂಬಿಕೆಯಾಗಿತ್ತು. ಇಂಥ ನಿಯಮಗಳಿಗೆ ಅನುಗುಣವಾಗಿ ನಡೆಯುವುದರಿಂದಲೇ ಜೀವನ ಪರಿಪೂರ್ಣವಾಗುತ್ತದೆ. ಚೀನೀ ತರ್ಕಶಾಸ್ತ್ರ ಕೂಡ ಈ ದೃಷ್ಟಿಯನ್ನು ಪ್ರತಿಪಾದಿಸುತ್ತಿದೆ.

ಚೀನದ ಪ್ರಥಮ ಲಿಖಿತ ಕಾನೂನುಗಳನ್ನು ಕಂಚಿನ ಮುಕ್ಕಾಲ್ಮಣೆಗಳ ಮೇಲೆ ಬರೆಯಲಾಗುತ್ತಿತ್ತು (ಪ್ರಶ. ಪೂ. 6ನೆಯ ಶತಮಾನ). ಜನರ ಹಕ್ಕುಬಾಧ್ಯತೆಗಳನ್ನು ಲಿಖಿತಗೊಳಿಸಿ, ದೊರೆಗಳ ಹಾಗೂ ಊಳಿಗಮಾನ್ಯಪ್ರಭುಗಳ ಅಧಿಕಾರವನ್ನು ಮಿತಿಗೊಳಿಸುವುದು ಶಾಸಕರ ಉದ್ದೇಶವಾಗಿತ್ತು. ಈ ನ್ಯಾಯಪಟ್ಟಿಕೆಗಳಿಂದ ಸಮಾಜವ್ಯವಸ್ಥೆ ಅಸ್ತವ್ಯಸ್ತಗೊಳ್ಳುವ ಅಪಾಯವಿದೆಯೆಂದು ಕನ್‌ಫ್ಯೂಷಿಯಸ್ ಹೇಳಿದ. ಕಾನೂನುಗಳ ಆವಶ್ಯಕತೆಯ ಬಗ್ಗೆ ಆಗಿನಿಂದ ತೀವ್ರವಾದ ವಿವಾದಗಳು ನಡೆಯುತ್ತಲೇ ಬಂದುವು. ಸಾರ್ವತ್ರಿಕವಾದ, ಸರ್ವಸಮಾನವಾದ, ನಿರುಪಾಧಿಕವಾದ, ದುಷ್ಟಶಿಕ್ಷಣ, ಶಿಷ್ಟಪರಿಪಾಲನ ಮಾಡುವ ನ್ಯಾಯವ್ಯವಸ್ಥೆಯೊಂದು ಅಗತ್ಯವೆಂದು ನ್ಯಾಯಪಂಡಿತರು ವಾದಿಸುತ್ತಿದ್ದರು. ಪ್ರಶ.ಪೂ. 221ರಲ್ಲಿ ಚಿನ್ ರಾಜವಂಶದ ಆಳ್ವಿಕೆ ಆರಂಭವಾದಾಗ ಈ ವಾದಕ್ಕೆ ಪುರಸ್ಕಾರ ದೊರಕಿತು. ಆ ರಾಜವಂಶ ಸಾರ್ವಭೌಮತ್ವವನ್ನು ಪಡೆಯಿತು. ಅಪರಾಧಗಳನ್ನು ತಡೆಯಲು ಕಟ್ಟುನಿಟ್ಟಾದ ಕಾನೂನುಗಳು ಅಗತ್ಯವೆಂಬ ಅಂಶ ಮನವರಿಕೆಯಾಯಿತು. ಚೀನೀ ನ್ಯಾಯಸೂತ್ರಗಳು ರಚನೆಯಾದುವು. ಕನ್‌ಫ್ಯೂಷಿಯಸ್ ಧರ್ಮದ ತತ್ತ್ವಾರಾಧಕರಿಂದ ಇದಕ್ಕೆ ಪ್ರಬಲ ವಿರೋಧವೂ ಇತ್ತು. ಶಾಸಕರು ಎಷ್ಟೇ ಪ್ರಯತ್ನಮಾಡಿದರೂ ಕನ್‌ಫ್ಯೂಷಿಯಸನ ತತ್ತ್ವಗಳು ಎಲ್ಲ ಕಾನೂನುಗಳನ್ನೂ ಮೀರಿ ನಿಲ್ಲತೊಡಗಿದುವು. ವಾಣಿಜ್ಯ ವ್ಯವಹಾರಗಳಿಗೆ ಕಾನೂನುಗಳ ಬದಲು ಹಿಂದಿನ ವ್ಯವಹಾರಗಳ ರೂಢಿಯೇ ಮುಂದುವರಿಯಿತು, ಸಾರ್ವಜನಿಕ ಶಾಂತಿಗೆ ತೀರ ತೊಂದರೆ ಬರುವ ಸಂದರ್ಭದಲ್ಲಿ ಮಾತ್ರ ಕಾಯಿದೆಗಳನ್ನು ಅನ್ವಯಿಸಲಾಗುತ್ತಿತ್ತು. ಹಳೆಯ ಬರೆಹಗಳನ್ನೂ ಹೇಳಿಕೆಗಳನ್ನೂ ನೈತಿಕ ಮತ್ತು ನೈಸರ್ಗಿಕ ನ್ಯಾಯಪದ್ಧತಿಯನ್ನೂ ಗತಿಸಿದ ಚಾಣಾಕ್ಷ ಚಕ್ರವರ್ತಿಗಳ ಅನುಭವವನ್ನೂ ಅನುಸರಿಸಿ ನ್ಯಾಯಸಂಹಿತೆಯನ್ನು ನಿರ್ಮಿಸಲಾಯಿತು. ಅನಂತರ ಪ್ರತಿಯೊಂದು ರಾಜವಂಶವೂ ತನಗೆ ಸೂಕ್ತ ಕಂಡಂತೆ ನ್ಯಾಯಸಂಹಿತೆಯನ್ನು ರಚಿಸಿಕೊಳ್ಳಲಾರಂಭಿಸಿತು. ಈ ಸಂಹಿತೆಗಳಲ್ಲಿ ಅತ್ಯಂತ ಪ್ರಸಿದ್ಧವಾದ್ದು ಟಾಂಗ್ ಸಂಹಿತೆ (653). ಅನಂತರದ ಎಲ್ಲ ಸಂಹಿತೆಗಳಿಗೂ ಇದು ಮಾದರಿಯಾಗಿ ಪರಿಣಮಿಸಿತು. ಮಾಂಚೂ ವಂಶದವರೆಗೂ (1644–1912) ಇದರ ಪ್ರಭಾವ ಮುಂದುವರಿಯಿತು. ಕೊರಿಯ, ಜಪಾನ್, ಅನ್ನಾಂ ರಾಜ್ಯಗಳೂ ಇದನ್ನು ಅನುಸರಿಸಿ ಕಾನೂನು ರಚಿಸಿಕೊಂಡುವು.

ಚೀನೀಯರು ದಂಡನ್ಯಾಯದಲ್ಲಿ ನಿಷ್ಣಾತರಾಗಿದ್ದರು. ಇಂದಿನ ನಾಗರಿಕ ಕಾನೂನುಗಳು ಕೂಡ ಅಳವಡಿಸಿಕೊಳ್ಳಬಹುದಾದಂಥ ದಂಡನ್ಯಾಯವನ್ನು ಅವರ ಸುದೀರ್ಘ ಇತಿಹಾಸದಲ್ಲಿ ಕಾಣಬಹುದು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂಬ, ಕಣ್ಣಿಗೆ ಕಣ್ಣು ಹಲ್ಲಿಗೆ ಹಲ್ಲು ಎಂಬ ಜನಪ್ರಿಯ ನ್ಯಾಯಕ್ಕೆ ಅವರು ಮಾರುಹೋಗಲಿಲ್ಲ. ಬದಲಾಗಿ ಜವಾಬ್ದಾರಿಯನ್ನು ನಿರ್ದುಷ್ಟವಾಗಿ ಹೊರಿಸತಕ್ಕ, ಹಾಗೂ ಅಪರಾಧವನ್ನೆಸಗಲು ನಿರುತ್ತೇಜಕವಾದ ಕಾನೂನುಗಳಿಗೆ ಪ್ರಾಶಸ್ತ್ಯ ನೀಡಿದರು. ನಿಸರ್ಗದಲ್ಲಿ ಏನೇ ಬದಲಾವಣೆಯಾದರೂ ಯಾರೋ ಎಲ್ಲೋ ತಪ್ಪು ಮಾಡಿದ್ದಾರೆಂಬ ಭಾವನೆಯಿಂದಾಗಿ ಮಕ್ಕಳು ಮೂರ್ಖರು, ಕೊನೆಗೆ ಪ್ರಾಣಿ–ಯಾರಾದರೂ ಸರಿ–ಶಿಕ್ಷೆ ಅನುಭವಿಸುವುದು ಅಗತ್ಯವೆಂದೆಣಿಸಲಾಗಿತ್ತು. ಸಾಮಾಜಿಕ ಅಪಾಯ, ಅದರ ವಿರುದ್ಧ ಮುನ್ನೆಚ್ಚರಿಕೆ ಹಾಗೂ ಭದ್ರತೆ ಮುಂತಾದ ಇಂದಿನ ಯುಗದ ವಿಚಾರಗಳ ತಿಳಿವಳಿಕೆ ಪ್ರಾಚೀನ ರೂಪದಲ್ಲಾದರೂ ಅವರಿಗೆ ಇತ್ತು.

ಚೀನೀ ನ್ಯಾಯಪದ್ಧತಿಯಲ್ಲಿ ಸಿವಿಲ್ ವಾಣಿಜ್ಯ ಕಾನೂನುಗಳಾಗಲೀ, ಅಂತಾರಾಷ್ಟ್ರೀಯ ಕಾನೂನಾಗಲೀ ಇರಲಿಲ್ಲ. ಎಲ್ಲ ದೇಶಗಳೂ ಚೀನಕ್ಕೆ ಅಧೀನವೆಂಬುದೂ ಅದಕ್ಕೆ ಅವು ಕಪ್ಪ ಒಪ್ಪಿಸಬೇಕೆಂಬುದೂ ಅದರ ಧೋರಣೆ. ಇಂಥ ನ್ಯಾಯಪದ್ಧತಿ 19ನೆಯ ಶತಮಾನದ ವೇಳೆಗೆ ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಯಿತು. ಅನೇಕ ಸುಧಾರಣೆಗಳು ಬಂದುವು. ಸಿವಿಲ್ ಅಪರಾಧಗಳಿಗೆ ಚಡಿ ಏಟು ಕೊಡುವುದೇ ಮುಂತಾದ ದಂಡನೆಯ ಕ್ರಮಗಳು ರದ್ದಾದುವು. 20ನೆಯ ಶತಮಾನದ ಆದಿಯಲ್ಲಿ ಜರ್ಮನ್ ಹಾಗೂ ಜಪಾನೀ ಮಾದರಿಯಲ್ಲಿ ಹೊಸ ಕಾನೂನುಗಳನ್ನು ರಚಿಸಲು ಯತ್ನ ನಡೆಯಿತು. ಅದರೆ ವಾಸ್ತವವಾಗಿ ಇವು ಮಾಂಚೂ ಮನೆತನದ ಕಾಲದ ನ್ಯಾಯಸಂಹಿತೆಯ ಅಧುನಿಕ ರೂಪಗಳೆನ್ನಬಹುದು.

ಅಂದಿನ ಚೀನೀ ನ್ಯಾಯ ಮೂರು ಮುಖ್ಯ ತತ್ತ್ವಗಳನ್ನು ಒಳಗೊಂಡಿತ್ತು. ಅವು ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸಾಮಾನ್ಯ ಜನರ ಆರ್ಥಿಕ ಪ್ರಗತಿ. ಹೊಸದಾಗಿ ರಚಿತವಾದ ಕಾನೂನುಗಳಿಗೆ ಹಳೆಯ ಸಾಂಪ್ರದಾಯಿಕ ನ್ಯಾಯ ಪೂರಕವಾಗಿತ್ತು. ಹಲವು ಸಾಂಪ್ರದಾಯಿಕ ವಿಧಿಗಳೇ ಮುಂದುವರಿದುವು. ಯಾವುದೇ ವಿಚಾರದಲ್ಲಿ ಕಾನೂನಿನ ಅಭಾವವಿದ್ದಾಗ ಸಾಂಪ್ರದಾಯಿಕ ವಿಧಿಗಳನ್ನೇ ನ್ಯಾಯಾಲಯಗಳು ಅನುಸರಿಸತಕ್ಕದ್ದು ಎಂದು ಸಿವಿಲ್ ಸಂಹಿತೆಯ 1ನೆಯ ಕಲಮಿನಲ್ಲಿ ಹೇಳಲಾಗಿತ್ತು. ಸರ್ವೋಚ್ಚ ನ್ಯಾಯಾಲಯ 1912ರಿಂದ ಈ ಬಗ್ಗೆ ಅನೇಕ ನಿಯಮಗಳನ್ನು ರಚಿಸಿತು. ಈ ಕಾನೂನುಗಳು 1931ರ ವರೆಗೆ ಜಾರಿಯಲ್ಲಿದ್ದುವು. ಪಾಶ್ಚಾತ್ಯ ಮಾದರಿಯಲ್ಲಿ ಸಿವಿಲ್ ನ್ಯಾಯಸಂಹಿತೆಯನ್ನೂ ತಾತ್ಕಾಲಿಕ ಸಂವಿಧಾನವನ್ನೂ ರಚಿಸಲು ಗ್ವೊಮಿನ್ ಟಾಂಗ್ ಸರ್ಕಾರ ಒಂದು ವಿಧಾಯಕ ನ್ಯಾಯಾಲಯವನ್ನು ನೇಮಿಸಿತು. ಅದರೆ ಅಂತರ್ಯುದ್ಧ ಹಾಗೂ ಜಪಾನೀ ಆಕ್ರಮಣಗಳಿಂದಾಗಿ ಈ ಹೊಸ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಲಿಲ್ಲ.

1949ರಲ್ಲಿ ಚೀನೀ ಜನತಾ ಗಣರಾಜ್ಯ ಸ್ಥಾಪಿತವಾದ ಮೇಲೆ ಆ ಸರ್ಕಾರ ಪಾಶ್ಚಾತ್ಯ ನ್ಯಾಯಪದ್ಧತಿಯನ್ನು ರದ್ದುಮಾಡಿ ಸಮಗ್ರವಾದ ಸುಧಾರಣೆಗಳನ್ನು ಜಾರಿಗೆ ತಂದಿತು. ಜಮೀನು, ವಿವಾಹ ಮುಂತಾದ ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ಮೂಲಭೂತ ಕಾನೂನುಗಳು ಬಂದುವು. ಹೊಸ ಸಂವಿಧಾನ ಜಾರಿಗೆ ಬಂತು. ಪರಮೋಚ್ಚ ಜನತಾ ನ್ಯಾಯಾಲಯವೂ ನಿಯೋಗಗಳೂ ಸ್ಥಳೀಯ ಹಾಗೂ ವಿಶೇಷ ಜನತಾ ನ್ಯಾಯಾಲಯಗಳೂ ವಿವಿಧ ಹಂತಗಳಲ್ಲಿ ನ್ಯಾಯವಿತರಣೆ ಮಾಡುತ್ತವೆ. ರಾಷ್ಟ್ರೀಯ ಜನತಾ ಕಾಂಗ್ರೆಸ್ ಆಗಿಂದಾಗ್ಗೆ ಸೂಕ್ತ ಕಂಡ ಕಾನೂನುಗಳನ್ನೂ ವಿಧಿಗಳನ್ನೂ ಹೊರಡಿಸುತ್ತದೆ. (ಬಿ.ಡಿ.ಎಚ್.)

**ಚೀನೀ ಪುರಾಣ :** ಚೀನದಲ್ಲಿ ಮೂರು ಧರ್ಮಗಳು ಬಳಕೆಯಲ್ಲಿದ್ದುವು–ಬೌದ್ಧಧರ್ಮ, ತಾಓ ಧರ್ಮ ಮತ್ತು ಕನ್‌ಫ್ಯೂಷಿಯಸ್ ಧರ್ಮ. ತುಂಬ ಪ್ರಾಚೀನ ಕಾಲದಿಂದ ಚೀನದ ಆಡಳಿತ ಧರ್ಮ ಕನ್‌ಫ್ಯೂಷಿಯಸ್ ಧರ್ಮವೇ ಆಗಿದ್ದಿತು. ಚಕ್ರವರ್ತಿಯಾದವ ಕಾಲಕಾಲಕ್ಕೆ ಕನ್‌ಫ್ಯೂಷಿಯಸ್, ಪಿತೃದೇವತೆಗಳು ಮತ್ತು ಸ್ವರ್ಗ, ಸೂರ್ಯ, ಚಂದ್ರ, ಪೃಥ್ವಿ, ಸಮರದೇವತೆ–ಇವರಿಗೆಲ್ಲ ಬಲಿಯನ್ನು ಸಲ್ಲಿಸುತ್ತಿದ್ದ. ಇದರಂತೆ ತಾಓ ಧರ್ಮವೂ ಪ್ರಬಲವಾಗಿದ್ದಿತು. ಕನ್‌ಫ್ಯೂಷಿಯಸ್ಸನ ಕಾಲದಲ್ಲೇ ಇದ್ದನೆಂದು ಹೇಳಲಾದ ಲಾವೋಟ್ಸು ಎಂಬಾತನೇ ತಾಓ ಧರ್ಮದ ಪ್ರವರ್ತಕನಾದರೂ 20ನೆಯ ಶತಮಾನದ ಮೊದಲ ಭಾಗದಲ್ಲಿದ್ದ ಚಂಗ್ ತಾಓ ಲಿಂಗ್ ಎಂಬಾತನೇ ಈ ಧರ್ಮವನ್ನು ವಿಶೇಷವಾಗಿ ಪರಿಷ್ಕರಿಸಿದ. ಇವನು ದಿವ್ಯಾಚಾರ್ಯ (ತಿಎನ್–ಷಿ) ಎಂದು ಪ್ರಸಿದ್ಧನಾಗಿದ್ದಾನೆ; 8ನೆಯ ಶತಮಾನದಲ್ಲಿ ಇವನನ್ನು ದೇವತೆಯೆಂದು ಪರಿಗಣಿಸಿದರು. ಇದೇ ಸುಮಾರಿಗೆ ಬೌದ್ಧಧರ್ಮವೂ ಚೀನ ದೇಶವನ್ನು ಪ್ರವೇಶಿಸಿ ಅಲ್ಲಿನ ಜನರ ಮನೋಧರ್ಮ ಮತ್ತು ದೇಶದ ಲಕ್ಷಣಗಳನ್ನನುಸರಿಸಿ ವಿಶಿಷ್ಟವಾದ ರೂಪವನ್ನು ತಳೆಯಿತು. ಚೀನೀ ಜನರ ಪುರಾಣ ಕಲ್ಪನೆಗಳಲ್ಲಿ ಮತ್ತು ಕತೆಗಳಲ್ಲಿ ಈ ಮೂರು ಧರ್ಮಗಳಲ್ಲಿನ ವಿವರಗಳು ಕಲೆತಿರುವುದನ್ನು ಕಾಣಬಹುದು. ಆದರೆ ತಾಓ ಧರ್ಮವೇ ಚೀನೀ ಪುರಾಣಗಳಿಗೆ ಪ್ರಮುಖವಾದ ಆಕರವೆನ್ನಬಹುದು. ಚೀನೀ ಜನರ ದೇವತೆಗಳೆಲ್ಲ ಬಹುಮಟ್ಟಿಗೆ ತಾಓ ಧರ್ಮದವರೇ.

ಚೀನೀ ಪುರಾಣಗಳಲ್ಲಿ ಮುಖ್ಯವಾಗಿ ಬರುವ ದೇವತೆಗಳು ಚೀನೀ ರಾಜ್ಯಭಾರ ಕ್ರಮದಲ್ಲಿ ಅಧಿಕಾರಿಗಳಿದ್ದಂತೆಯೇ. ಒಬ್ಬೊಬ್ಬ ದೇವತೆಗೆ ಒಂದೊಂದು ಅಧಿಕಾರ, ಕಾರ್ಯಗೌರವ, ಸ್ಥಾನಮಾನ; ಅವರಲ್ಲಿಯೂ ಭಾರತೀಯರಲ್ಲಿರುವಂತೆಯೇ ತಾರತಮ್ಯಗಳುಂಟು. ದೇವತೆಗಳು ತಂತಮ್ಮ ಕಾರ್ಯಗಳನ್ನು ನಿರ್ವಹಿಸದಿದ್ದರೆ ಅವರಿಗೆ ಪದಚ್ಯುತಿಯೂ ಉಂಟು. ಈ ದೃಷ್ಟಿಯಿಂದ ದೇವತಾ ತಾರತಮ್ಯದಲ್ಲಿ ವ್ಯತ್ಯಾಸಗಳಾಗುವುದು ಸಾಧ್ಯ. ಯಾವೊಬ್ಬ ದೇವತೆಯ ಸ್ಥಾನಮಾನವೂ ಶಾಶ್ವತವಲ್ಲ; ಆ ದೇವತೆ ನಿರ್ವಹಿಸುವ ಕೆಲಸ ಮಾತ್ರ ಶಾಶ್ವತವಾದುದು. ಹೀಗಾಗಿ ಚೀನೀ ದೇವತೆಗಳಲ್ಲಿ ಹೊಸಬರು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಾರೆ. ಇದಕ್ಕೆ ಕಾರಣವೇನೆಂದರೆ ಚೀನೀ ದೇವತೆಗಳು ಮನುಷ್ಯ ಅಧಿಕಾರಿಗಳ ಪಡಿಯಚ್ಚಿನಲ್ಲಿಯೇ ಸಿದ್ಧರಾದವರು.



**ಬೀಜಿಂಗಿನಲ್ಲಿರುವ ಸ್ವರ್ಗದೇಗುಲ. ಮೂರು ಹಂತದ ಅಮೃತಶಿಲೆಯ ಕಟ್ಟೆಯ ಮೇಲಿರುವ ಇದನ್ನು ಅಮೃತಶಿಲೆಯಲ್ಲಿ ಮಾಡಿದ್ದಾರೆ.**

ಚೀನೀ ಪುರಾಣಗಳಲ್ಲಿ ದೇವತೆಗಳ ಸಂಖ್ಯೆ ತುಂಬ ದೊಡ್ಡದು. ಇವರೆಲ್ಲರೂ ಒಂದೇ ಸ್ವರ್ಗದಲ್ಲಿರುವುದಿಲ್ಲ; ಪ್ರತಿಯೊಬ್ಬ ದೇವತೆಗೂ ಪ್ರತ್ಯೇಕ ಕ್ಷೇತ್ರವಿರುವುದು ಇಲ್ಲಿನ ಸ್ವಾರಸ್ಯ. ಸ್ವರ್ಗದಲ್ಲಿಯೂ ನೆಲೆಗಳಿವೆ; ಒಂದು ಕಲ್ಪನೆಯಂತೆ ಒಂಬತ್ತು, ಇನ್ನೊಂದರಂತೆ ಮೂವತ್ತಮೂರು ನೆಲೆಗಳು. ದೇವಾಧಿದೇವತೆ ಮೇಲಿನ ನೆಲೆಯಲ್ಲಿರುತ್ತಾನೆ. ಈ ನೆಲೆಯಲ್ಲಿರುವ ದೇವತೆಗೆ ಯು–ತಿ ಎಂದು ಹೆಸರು; ಈ ಮಾತಿಗೆ 'ಜೇಡ್‌ನ ದಿವ್ಯವ್ಯಕ್ತಿ' ಎಂದರ್ಥ. ಇವನನ್ನು ದಿವ್ಯಚಕ್ರವರ್ತಿ ಎಂದೂ ಪಿತೃಶ್ರೀಸ್ವರ್ಗ (ಲಾಓ–ತಿಎನ್–ಯೆ) ಎಂದೂ ಕರೆಯುವುದುಂಟು. ಇವನೇ ಆದಿದೇವತೆ: ಮನುಷ್ಯರನ್ನು ಸೃಷ್ಟಿಸಿದವ. ಇವನು ಮಣ್ಣಿನಲ್ಲಿ ಗೊಂಬೆಗಳನ್ನು ಮಾಡಿ ಅವನ್ನು ಬಿಸಿಲಿಗೆ ಒಣಗಲಿಟ್ಟನಂತೆ; ಆ ಸಮಯಕ್ಕೆ ಸರಿಯಾಗಿ ಭಾರಿ ಮಳೆ ಬಿದ್ದುದರಿಂದ ಗೊಂಬೆಗಳನ್ನು ಎತ್ತಿ ಒಳಗಿರಿಸಿದನಂತೆ. ಅಷ್ಟರಲ್ಲಿ ಕೆಲವು ಗೊಂಬೆಗಳು ನೀರಿನಿಂದ ತೊಯ್ದು ಬಿರುಕುಬಿಟ್ಟುವು. ಕೆಲವು ಕೈಕಾಲು ಕರಗಿ ನಿಂತುವು; ಕೆಲವು ಏನೂ ಆಗದೆ ಸರಿಯಾಗಿದ್ದುವು. ಈ ಗೊಂಬೆಗಳೇ ಮುಂದೆ ಮನುಷ್ಯರಾದರು. ಸರಿಯಾಗಿದ್ದ ಗೊಂಬೆಗಳು ಅರೋಗದೃಢಕಾಯರಾದ ಮನುಷ್ಯರಾದುವು; ಮಳೆಗೆ ಒಡೆದುಹೋದವು ರೋಗಿಗಳು, ಅಂಗವಿಕಲರು, ಕುರೂಪಿಗಳು ಆದುವು.

ಪಿತೃಶ್ರೀಸ್ವರ್ಗ ದೇವಾಧಿದೇವತೆಯಾದರೂ ಅವನಿಗಿಂತ ಮೇಲಿನ ದೇವತೆ ಆದಿಕಾರಣ–ಸ್ವರ್ಗೇಶ. ಇವನ ಅನಂತರವೇ ಪಿತೃಶ್ರೀಸ್ವರ್ಗ ಮೈದಳೆದುದು. ಪಿತೃಶ್ರೀಸ್ವರ್ಗದೇವತೆ ತನ್ನದೇ ಆದ ಅರಮನೆಯಲ್ಲಿದ್ದುಕೊಂಡು, ತನ್ನದೇ ಆದ ಸೇನೆಯೊಂದಿಗೆ ತನ್ನ ಸಂಸಾರದೊಂದಿಗೆ ವಿಹರಿಸುತ್ತಾನೆ. ಎಪ್ಪತ್ತೆರಡು ಬಗೆಗಳಲ್ಲಿ ಇವನು ತನ್ನ ರೂಪವನ್ನು ಮಾರ್ಪಡಿಸಿಕೊಳ್ಳಬಲ್ಲ. ಇವನಿಗೆ ಚೀನದಲ್ಲಿ ಸಾವಿರಾರು ದೇವಾಲಯಗಳಿದ್ದುವು. ಇವನ ಮಗ ಎರ್‍ಲಂಗ್ ಪಾಪಗಳನ್ನು ದೂರಮಾಡುವ ದೇವತೆ; ಭಾರತದ ಅಘಮರ್ಷಣನಂತೆ. ಪಿತೃಶ್ರೀಸ್ವರ್ಗ ದೇವತೆಯ ಶಕ್ತಿ ರಾಜಮಾತೆ ವಂಗ್–ಮು. ಸುರಸುಂದರಿಯಾದ ಈಕೆಗೆ ತನ್ನ ಪರಿವಾರವಿದೆ. ಅಮೃತಸಮಾರಾಧನೆಗಳಲ್ಲಿ ಈಕೆ ಪ್ರಮುಖಳು; ಅಮೃತದ ಗುಣವಿರುವ ಪೀಚ್ ಹಣ್ಣುಗಳನ್ನು ಈಕೆ ಈ ಸಂದರ್ಭದಲ್ಲಿ ದೇವತೆಗಳಿಗೆಲ್ಲ ಹಂಚುವವಳು. ದೇವತೆಗಳ ರಾಜ್ಯದಲ್ಲಿ ಮೂರು ಸಾವಿರ ವರ್ಷಗಳಿಗೊಮ್ಮೆ ಹಣ್ಣಾಗುವ ಪೀಚ್ ಅವರಲ್ಲಿ ಅಮೃತವೆಂದು ಕಲ್ಪನೆ; ಈಗಲೂ ಚೀನೀಯರಲ್ಲಿ ಪೀಚ್ ದೀರ್ಘಾಯುಸ್ಸಿನ ಸಂಕೇತ.

ಇವರಲ್ಲದೆ ಚೀನೀಯರಲ್ಲಿ ಕೆಲವು ಪ್ರಕೃತಿದೇವತೆಗಳು ಇವೆ. ಇವರ ಪ್ರಸ್ತಾಪ ಅವರ ಪುರಾಣಗಳಲ್ಲಿ ಬರುತ್ತದೆ. ಸೂರ್ಯ ಮೊದಲಿಗೆ ಹುಂಜದ ಆಕಾರದಲ್ಲಿದ್ದು ಸತ್ವಫವನ್ನು ಹಿಡಿದು ಮನುಷ್ಯನ ಮುಖವನ್ನು ಪಡೆದ ದೇವತೆ. ವರ್ಷಾರಂಭದಲ್ಲಿ ಈ ದೇವತೆಗೆ ಎಡೆಯಿಡುವ ಪದ್ಧತಿಯಿದೆ. ಚಂದ್ರನ ಪೂಜೆ ಇನ್ನಷ್ಟು ಸಡಗರದಿಂದ ನಡೆಯುತ್ತದೆ. ಚಂದ್ರನಲ್ಲಿ ಚಂಗ್–ಹೋ ಎಂಬ ದೇವತೆಯಿದ್ದು ಈಕೆ ಅತ್ಯಂತ ಸಮರ್ಥ ಬಿಲ್ಲಾಳು ಐ ಎಂಬಾತನ ಹೆಂಡತಿಯೆಂಬ ಕಲ್ಪನೆಯಿದೆ. ಚೀನೀ ಪುರಾಣಗಳಲ್ಲಿ ಒಮ್ಮೆ ಹತ್ತು ಸೂರ್ಯರು ಒಂದೇ ಬಾರಿಗೆ ಕಾಣಿಸಿಕೊಂಡು ಭೂಮಿಯನ್ನು ಉರಿಸಲಾರಂಭಿಸಿದ ಕತೆ ಬರುತ್ತದೆ. ಆಗ ಈ ಬಿಲ್ಲಾಳು ತನ್ನ ಬಾಣಗಳಿಂದ ಒಂಬತ್ತು ಸೂರ್ಯರನ್ನು ಹೊಡೆದು ಕೆಳಗುರುಳಿಸಿದ. ಇದರಿಂದ ಸಂತೋಷಗೊಂಡ ದೇವತೆಗಳು ಇವನಿಗೆ ಅಮೃತವನ್ನು ಕುಡಿಯಲು ಕೊಟ್ಟರು. ಆತ ಅದನ್ನು ಮನೆಗೊಯ್ದು ಇಟ್ಟಿದ್ದಾಗ ಅವನಿಗೆ ಕಾಣದಂತೆ ಅವನ ಹೆಂಡತಿ ಕುಡಿದುಬಿಟ್ಟಳು. ಇದನ್ನು ತಿಳಿದ ಬಿಲ್ಲಾಳು ಸಿಟ್ಟಿಗೇಳಲು ಹೆಂಡತಿ ಚಂದ್ರನಲ್ಲಿಗೆ ಓಡಿಬಿಟ್ಟಳು. ಅಲ್ಲಿದ್ದ ಮೊಲ ಆಕೆಗೆ ರಕ್ಷೆಯನ್ನು ಕೊಟ್ಟು ಆಕೆಯ ಗಂಡನೊಂದಿಗೆ ಹೋರಾಡಿ ಅವನನ್ನು ಸೋಲಿಸಿತು. ಅಂದಿನಿಂದ ಆಕೆ ಚಂದ್ರನಲ್ಲಿಯೇ ಇದ್ದಾಳೆ. ಲೈ–ಕುಂಗ್ ಗುಡುಗಿನ ದೇವತೆ; ನೀಲಿಬಣ್ಣದ ಬೊಜ್ಜುದೇಹ, ಕುರೂಪ, ಉದ್ದನೆಯ ಉಗುರುಗಳು ರೆಕ್ಕೆಗಳು ಇರುವ ದೇವತೆ. ಬರಿಮೈಯಲ್ಲಿ ತಿರುಗುವ ಈ ದೇವತೆ ಕೈಯಲ್ಲಿ ಉಳಿ, ಸುತ್ತಿಗೆಗಳನ್ನು ಹಿಡಿದು, ಬಗಲಿಗೆ ಢಕ್ಕೆಗಳನ್ನು ನೇತುಹಾಕಿಕೊಂಡು, ಪಾಪಿಗಳನ್ನು ಸುತ್ತಿಗೆಯಿಂದ ಹೊಡೆಯುತ್ತಾನೆ. ಮನುಷ್ಯರಿಗೆ ತಿಳಿಯದ ಪಾಪಗಳೂ ಇವನಿಗೆ ತಿಳಿಯದೆ ಇರುವುದಿಲ್ಲ. ಮುಖ್ಯವಾಗಿ ಮನುಷ್ಯರಿಗೆ ತೊಂದರೆಯನ್ನುಂಟುಮಾಡುವ ದೇವತೆ. ಆದರೆ ಕೆಲವೊಮ್ಮೆ ಮನುಷ್ಯರ ನೆರವೂ ಇವನಿಗೆ ಬೇಕಾಗುತ್ತದೆ.

**ಸ್ವರ್ಗದ ಹರಿಕಾರ – ಷಿಯೆನ್ ಕ್ವಾನ್**

ಒಮ್ಮೆ ಒಬ್ಬ ಬೇಡ ಬೇಟೆಯಾಡುತ್ತ ಕಾಡಿನ ನಡುವೆ ದಾರಿತಪ್ಪಿದ; ಸಂಜೆಯಾಗಿ ಬಿರುಗಾಳಿ, ಜಡಿಮಳೆ ಆರಂಭವಾಯಿತು. ಗುಡುಗು–ಸಿಡಿಲುಗಳು ಹೊಡೆಯತೊಡಗಿದುವು. ಬೇಡನು ದೊಡ್ಡದೊಂದು ಮರದ ಕೆಳಗೆ ನಿಂತಿದ್ದಾಗ, ಮಿಂಚೆರಗಿ ಅವನು ಕತ್ತೆತ್ತಿ ನೋಡಲು ಮರದ ಮೇಲೆ ಮಗುವೊಂದು ಸಣ್ಣ ಕಡ್ಡಿಗೆ ಬಾವುಟವೊಂದನ್ನು ಸಿಕ್ಕಿಸಿಕೊಂಡು ನಿಂತಿದ್ದಿತು. ಅದರ ಬಳಿ ಬಂದೊಡನೆ ಗುಡುಗು ಹಿಂದೆ ಸರಿಯುತ್ತಿತ್ತು. ಅಶುಚಿಯಾದ ಪದಾರ್ಥಗಳಿಗೆ, ಕರಿಯ ನಾಯಿಯ ರಕ್ತಕ್ಕೆ ದೇವತೆಗಳು ಹೆಸುವರೆಂದು ಕಲ್ಪನೆ. ಮಗು ಹಿಡಿದಿದ್ದ ಕಡ್ಡಿಯೂ ಬಾವುಟವೂ ಅಶುಚಿ–ಯಾದುವೆಂದು ಬೇಡನಿಗೆ ತಟ್ಟನೆ ತಿಳಿದು, ದೇವತೆಗಳ ಕೆಲಸಕ್ಕೆ ನೆರವಾಗುವ ಉದ್ದೇಶದಿಂದ ಮಗುವನ್ನು ಬಾಣದಿಂದ ಹೊಡೆದು

ಕೆಳಗುರುಳಿಸಿದ. ಒಡನೆಯೇ ಸಿಡಿಲು ಮರಕ್ಕೆ ಹೊಡೆದು, ಬೇಡ ಎಚ್ಚರ ತಪ್ಪಿ ಬಿದ್ದ. ಎಚ್ಚರ ತಿಳಿದು ಎದ್ದಾಗ ಪಕ್ಕದಲ್ಲಿ ಚೀಟಿಯೊಂದು ಬಿದ್ದಿದ್ದಿತು; ಅದರಲ್ಲಿ ದೇವತೆಗಳ ಕೆಲಸಕ್ಕೆ ನೆರವಾದುದಕ್ಕೆ ಹನ್ನೆರಡು ವರ್ಷ ಆಯಸ್ಸು ಹೆಚ್ಚಿದೆ ಎಂಬ ಬರೆಹವಿದ್ದಿತು. ಸಮೀಪದಲ್ಲಿಯೇ ತನ್ನ ಬಾಣದಿಂದ ಸತ್ತು ಬಿದ್ದಿದ್ದ ದೊಡ್ಡದೊಂದು ಹಲ್ಲಿಯ ಆಕೃತಿಯೂ ಇದ್ದಿತು. ಇದೇ ಮಗುವಿನ ರೂಪ ತಳೆದು ಗುಡುಗಿಗೆ ಅಡ್ಡಿಮಾಡುತ್ತಿದ್ದ ಮಗು ಎಂದು ಅವನಿಗೆ ಸ್ಪಷ್ಟವಾಯಿತು.

ಗುಡುಗಿನ ದೇವತೆಗೆ ಗುಡಿಗಳಿಲ್ಲ; ಈ ದೇವತೆಯಿಂದ ದೊರೆಯುವುದು ಸಾವು, ತೊಂದರೆ ಅಷ್ಟೆ. ಜನ ಇವನನ್ನು ಆರಾಧಿಸುವುದಿಲ್ಲ. ಮಾಂತ್ರಿಕರು ಮಾತ್ರ ಇವನ ಮೊರೆ ಹೊಕ್ಕು ಇತರರಿಗೆ ತೊಂದರೆಯನ್ನು ತಂದೊಡ್ಡುತ್ತಾರೆ. ಗುಡುಗು ದೇವತೆಯ ಪರಿವಾರದಲ್ಲಿ ಮಳೆರಾಯ, ಮೋಡಗಳ ಹುಡುಗ, ಗಾಳಿರಾಯ ಇವೂ ದೇವತೆಗಳೇ. ಲುಂಗ್-ವಂಗ್ ಭಾರತದ ವರುಣನಿದ್ದಂತೆ. ಪಿತೃಶ್ರೀಸ್ವರ್ಗ ದೇವತೆಯ ಅಪ್ಪಣೆಯ ಮೇರೆ ಈ ದೇವತೆ ಆಯಾ ಪ್ರದೇಶಗಳಿಗೆ ಅಷ್ಟಷ್ಟು ಮಳೆ ಬೀಳಿಸುತ್ತಾನೆ. ಭೂಮಿಯ ಸುತ್ತಲೂ ನಾಲ್ಕು ಸಮುದ್ರಗಳಿದ್ದು, ಒಂದೊಂದು ಸಮುದ್ರಕ್ಕೂ ಅಧಿಪತಿಯಾಗಿ ಒಬ್ಬೊಬ್ಬ ಲುಂಗ್-ವಂಗ್ (ಅಹಿರಾಜ) ಇದ್ದಾನೆ. ಇವರು ಸಹೋದರರೆಂದು ಜನರ ಎಣಿಕೆ. ಒಬ್ಬೊಬ್ಬರಿಗೂ ಸಮುದ್ರದಡಿಯಲ್ಲಿ ರತ್ನಪ್ರಾಸಾದವಿದ್ದು, ಮೀನು, ಏಡಿ ಮೊದಲಾದ ಜಲಚರ ಪ್ರಾಣಿಗಳ ಪರಿವಾರವಿರುತ್ತದೆ. ಆಓ ಖುವಂಗ್, ಆಓ ಜುನ್, ಆಓ ಷುನ್ ಮತ್ತು ಆಓ ಚಿನ್ ಇವರೇ ನಾಲ್ವರು ಅಹಿರಾಜರು. ಇವರಲ್ಲದೆ ನದಿಗಳ ಬಳಿ, ಕೊಳ ಬಾವಿಗಳ ಬಳಿ ಒಂದೊಂದು ಅಹಿರಾಜನ ಸನ್ನಿಧಿಯಿರುತ್ತದೆ. ಕ್ಷಾಮ-ಅನಾವೃಷ್ಟಿ ಸಮಯಗಳಲ್ಲಿ ಇವಕ್ಕೆ ಪೂಜೆ ನಡೆಯುತ್ತದೆ. ಬಟ್ಟೆಯಲ್ಲಿ ಹಾವಿನ ಆಕೃತಿಯನ್ನು ಮಾಡಿ ಅದನ್ನು ಊರುಗಳಲ್ಲಿ ಮೆರವಣಿಗೆಯಲ್ಲಿ ಒಯ್ಯುವುದುಂಟು; ಇದು ಲುಂಗ್-ವಂಗ್ ದೇವತೆಯ ಪ್ರತೀಕ. ಹೀಗೆ ಮಾಡಿದರೆ ಮಳೆಯಾಗುವುದೆಂದು ಕಲ್ಪನೆ.

ಐಶ್ವರ್ಯದ ಅಧಿದೇವತೆ ತ್ಸಾಯ್-ಶೆನ್

ವೆನ್-ಚಾಂಗ್ ಸಾಹಿತ್ಯಾಭಿಮಾನಿ ದೇವತೆ. ಹದಿನೇಳು ಜನ್ಮಗಳನ್ನೆತ್ತಿ ಸಾಹಸದ ಕೆಲಸಗಳನ್ನು ಮಾಡಿ ಪಿತೃಶ್ರೀಸ್ವರ್ಗ ದೇವತೆಯನ್ನು ಮೆಚ್ಚಿಸಿದ ಬಳಿಕವೇ ಇದು ದೇವತೆಯಾದುದು. ಪ್ರತಿಯೊಬ್ಬ ಪಂಡಿತನ ಮನೆಯಲ್ಲಿಯೂ ಈ ದೇವತೆಯ ವಿಗ್ರಹವಿರುತ್ತಿದ್ದಿತು. ಕೈಯಲ್ಲಿ ದಂಡವನ್ನು ಹಿಡಿದು ಕುಳಿತಂತೆ ಈ ದೇವತೆಯನ್ನು ಚಿತ್ರಿಸುತ್ತಿದ್ದರು. ವೆನ್-ಚಾಂಗ್ ಎಂದರೆ ಪರೀಕ್ಷೆಗಳ ದೇವತೆ ಎಂದರ್ಥ. ಪಂಡಿತರಾಗುವ ಮೊದಲು ಹಲವಾರು ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕಾಗಿದ್ದಿತು. ಒಂದೊಂದು ಪರೀಕ್ಷೆಯಲ್ಲಿ ಉತ್ತೀರ್ಣನಾಗಲೂ ಈ ದೇವತೆಯ ಅನುಗ್ರಹ ಆವಶ್ಯಕವಾಗಿದ್ದಿತು. ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನು ಅಳೆಯಲು ಕೊಳಗವನ್ನು ಬಳಸುವ ಈ ದೇವತೆ ಕೂರ್ಮಾಸನದ ಮೇಲೆ ಕುಳಿತು ಆ ವರ್ಷದ ಆ ತರಗತಿಯ ವಿದ್ಯಾರ್ಥಿಗಳೆಲ್ಲರ ಪಟ್ಟಿಯನ್ನು ಪಿತೃಶ್ರೀಸ್ವರ್ಗ ದೇವತೆಯ ಮುಂದಿಟ್ಟು, ಉತ್ತೀರ್ಣನಾಗುವ ವಿದ್ಯಾರ್ಥಿಯ ಹೆಸರಿನಡಿಯಲ್ಲಿ ಕುಂಚದಿಂದ ಗುರುತೊಂದನ್ನು ಮೂಡಿಸುತ್ತಾನೆ. ಈ ದೇವತೆ ಮನುಷ್ಯನಾಗಿದ್ದಾಗ ಪರೀಕ್ಷೆಗಳೆಲ್ಲದರಲ್ಲಿಯೂ ಪ್ರಪ್ರಥಮನಾಗಿ ಉತ್ತೀರ್ಣನಾದನಂತೆ. ಆದರೆ ಈತ ತುಂಬ ಕುರೂಪಿಯಾಗಿದ್ದುದರಿಂದ ಚಕ್ರವರ್ತಿ ಇವನಿಗೆ ಸನ್ಮಾನ ಮಾಡಲು ಹಿಂಜರಿದನಂತೆ. ಆಗ ನಿರಾಶನಾಗಿ ಈತ ಪ್ರಾಣ ಕಳೆದುಕೊಳ್ಳಲಿಚ್ಛಿಸಿ ಸಮುದ್ರಕ್ಕೆ ಹಾರಲು ಆಮೆಯೊಂದು ಈತನನ್ನು ಮೇಲಕ್ಕೆತ್ತಿಕೊಂಡು ಬಂದಿತಂತೆ. ಇದು ಕೂರ್ಮಾಸನದ ಕಥೆ.

ಮಕ್ಕಳದಾತೆಯಾದ ಕ್ವಾನ್-ಯಿನ್ ದೇವತೆಯ ಪೋರ್ಸಲಿನ್ ವಿಗ್ರಹ. ಪ್ಯಾರಿಸಿನ ಗ್ಯುಮೆ ವಸ್ತುಸಂಗ್ರಹಾಲಯದಲ್ಲಿದೆ

ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಯೊಬ್ಬ ಪರೀಕ್ಷೆಯಲ್ಲಿ ಪ್ರಬಂಧವೊಂದನ್ನು ಬರೆಯಬೇಕಾಯಿತು. ಪ್ರಬಂಧ ಅವನಿಗೆ ಸಮರ್ಪಕವಾಗಿರಲಿಲ್ಲ; ತಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಲಾರನೆಂಬುದು ಖಚಿತವಾಯಿತು. ಮನೆಗೆ ಬಂದು ವೆನ್-ಚಾಂಗನ ಮರೆಹೊಕ್ಕು ನಿದ್ರೆಮಾಡಿದಾಗ ಅವನಿಗೊಂದು ಕನಸು. ಅದರಲ್ಲಿ ವೆನ್-ಚಾಂಗ್ ಕಾಣಿಸಿಕೊಂಡು ಹಲವಾರು ಪ್ರಬಂಧಗಳನ್ನು ಬೆಂಕಿಗೆ ಹಾಕುತ್ತಿದ್ದ; ಅದರಲ್ಲಿ ಆ ವಿದ್ಯಾರ್ಥಿಯದೂ ಇದ್ದಿತು. ಅನಂತರ ಒಂದು ಚಿಮ್ಮಟದಿಂದ ಈ ಪ್ರಬಂಧವನ್ನೇ ಮತ್ತೆ ಬೆಂಕಿಯಿಂದ ಮೇಲೆತ್ತಿದ. ಅದು ಸಂಪೂರ್ಣವಾಗಿ ಬೇರೆಯಾಗಿದ್ದಿತು. ವೆನ್-ಚಾಂಗ್ ಅದನ್ನು ವಿದ್ಯಾರ್ಥಿಗೆ ಕೊಟ್ಟು ಕಂಠಪಾಠ ಮಾಡುವಂತೆ ಹೇಳಿದ. ವಿದ್ಯಾರ್ಥಿ ಎಚ್ಚೆತ್ತು ಹೊರಗೆ ಬಂದಾಗ ಪರೀಕ್ಷಾಮಂದಿರವೆಲ್ಲ ಆಕಸ್ಮಿಕವಾಗಿ ಬೆಂಕಿಗೆ ತುತ್ತಾಗಿದ್ದಿತು. ಪರೀಕ್ಷೆ ಮತ್ತೆ ನಡೆಯಬೇಕಾಯಿತು. ಕನಸಿನಲ್ಲಿ ಕಂಠಪಾಠ ಮಾಡಿದ್ದ ಪ್ರಬಂಧವನ್ನು ವಿದ್ಯಾರ್ಥಿ ಬರೆದು ಪರೀಕ್ಷೆಯಲ್ಲಿ ಉತ್ತೀರ್ಣನಾದ.

ಸುಖಕ್ಕೆ ಕಾರಣರಾದ ದೇವತೆಗಳಲ್ಲಿ ದೀರ್ಘಾಯುಷ್ಯವನ್ನು ಕೊಡುವ ಷೌ-ಸ್ಸಿಂಗ್ ಪ್ರಮುಖನಾದವ. ಬಕ್ಕ ತಲೆಯ ಮುದುಕ ಕೋಲೂರಿ ನಿಂತಿರುವಂತೆ ಚಿತ್ರಿಸುತ್ತಾರೆ, ಈ ದೇವತೆಯನ್ನು. ಪ್ರತಿಯೊಬ್ಬ ಚೀನೀಯನ ಹುಟ್ಟಿದ ಹಬ್ಬದಂದು ಈ ದೇವತೆಯ ಪೂಜೆ ನಡೆಯುತ್ತದೆ. ಪ್ರತಿಯೊಬ್ಬನ ಆಯುಷ್ಯವನ್ನೂ ಈ ದೇವತೆ ಮೊದಲೇ ನಿಶ್ಚಯಿಸಿ ಬರೆದಿಡುತ್ತಾನೆ. ಅದನ್ನು ತಪ್ಪಿಸುವುದು ಯಾರಿಂದಲೂ ಸಾಧ್ಯವಿಲ್ಲ. ಆದರೆ ಈ ದೇವತೆಯೇ ಅದನ್ನು ಬದಲಾಯಿಸಬಹುದು. ಒಮ್ಮೆ ಒಬ್ಬ ಹುಡುಗನ ಆಯುಷ್ಯವನ್ನು ಈ ದೇವತೆ 19 ಎಂದು ನಿರ್ಣಯಿಸಿದ್ದ. ಆದರೆ ಆ ಹುಡುಗ ದೇವತೆಗೆ ಪ್ರಿಯವಾದ ಸುರೆಯನ್ನು ಸಮರ್ಪಿಸಲು, ದೇವತೆ ಪ್ರಸನ್ನವಾಗಿ 19 ಎಂದಿದ್ದುದನ್ನು 91 ಎಂದು ತಿರುಗು ಮುರುಗು ಮಾಡಿಬಿಟ್ಟ! ಸಂತೋಷದ ದೇವತೆಯಾದ ಫು-ಸ್ಸಿಂಗ್ ಮತ್ತು ಸಂಬಳದ ದೇವತೆಯಾದ ಲು-ಸ್ಸಿಂಗ್ ಇಬ್ಬರೂ ಈ ಆಯುಷ್ಯದ ದೇವತೆಯ ಒಡನಾಡಿಗಳು. ಮೂವರನ್ನೂ ತ್ರಿಮೂರ್ತಿಗಳೆನ್ನುತ್ತಾರೆ. ಮೂವರೂ ಮೊದಲು ಮನುಷ್ಯರಾಗಿದ್ದು ಅನಂತರ ದೇವತೆಗಳಾದವರು.

ದಿವ್ಯಕನ್ಯೆಯೆಂದು ಪ್ರಸಿದ್ಧಳಾದ ಚಿ-ನ್ಯೆ ದೇವತೆಯ ಬಗ್ಗೆ ಕಥೆಗಳು ಬಹಳ ಇವೆ. ಪಿತೃಶ್ರೀ ಸ್ವರ್ಗ ದೇವತೆಯ ಮಗಳಾದ ಈಕೆ ತಂದೆಗೆ ಹೊಲಿಗೆಯಿಲ್ಲದ ಬಟ್ಟೆಗಳನ್ನು ಸಿದ್ಧಮಾಡಿಕೊಡುತ್ತಿದ್ದಳು. ಅವಳು ಒಂಟಿಯಾಗಿಯೇ ಇದ್ದುದರಿಂದ ಆಕೆಗೆ ಅನುರೂಪನಾದ ವರನನ್ನು ತಂದೆ ಕರುಣಿಸಿದ ಕಥೆ ಹೀಗಿದೆ; ಒಂದೂರಿನಲ್ಲಿ ಒಬ್ಬ

**18ನೆಯ ಶತಮಾನದ ಸುಖಾಭಿಮಾನಿ ದೇವತೆಗಳ ವಿಗ್ರಹಗಳು**

ದನಕಾಯುವ ಗೊಲ್ಲನಿದ್ದ. ಅವನಿಗೆ ಸ್ವಲ್ಪ ಭೂಮಿಯಿದ್ದು ಅದನ್ನು ಉಳುತ್ತಿದ್ದ. ಉಳುಮೆಗೆ ಒಂದು ಎತ್ತೂ ಇದ್ದಿತು. ಮದುವೆಯ ವಯಸ್ಸಾದರೂ ಆತ ಒಂಟಿಯಾಗಿಯೇ ಇದ್ದ. ಒಂದು ದಿನ ಎತ್ತು 'ಒಡೆಯ, ಹಣದ ವೆಚ್ಚವಿಲ್ಲದೆ ಸುಂದರಿಯಾದ ಹುಡುಗಿಯೊಬ್ಬಳು ನಿನಗೆ ದೊರೆಯಬೇಕೆಂದರೆ ನಾನು ಹೇಳಿದಂತೆ ಮಾಡು. ಈ ರಾತ್ರಿ ಹಳ್ಳಿಯ ಕೊಳದ

**ಎಂಟು ಮಂದಿ ಅಮರರು. 18ನೆಯ ಶತಮಾನದ ವಿಗ್ರಹಗಳು**

ಬಳಿ ಇರು; ಕೊಳದಲ್ಲಿ ಕೆಲವು ಹುಡುಗಿಯರು ಸ್ನಾನಮಾಡುತ್ತಿರುತ್ತಾರೆ. ಅವರ ಬಟ್ಟೆಗಳೆಲ್ಲ ದಡದ ಮೇಲಿರುತ್ತವೆ. ಅವುಗಳಲ್ಲಿ ಸೊಗಸಾದ ಒಂದು ಉಡುಪನ್ನು ಎತ್ತಿಕೊಂಡು ಬಂದುಬಿಡು'- ಎಂದು ಹೇಳಿತು. ಗೊಲ್ಲ ಅದರಂತೆಯೇ ಆ ರಾತ್ರಿ ಕೊಳಕ್ಕೆ ಹೋಗಿ ದಡದ ಮೇಲಿದ್ದ ಉಡುಪುಗಳಲ್ಲಿ ತುಂಬ ಚೆನ್ನಾಗಿದ್ದುದನ್ನು ಎತ್ತಿಕೊಂಡು ಬಂದು ತನ್ನ ಮನೆಯ ಹಿಂದಿನ ಬಾವಿಯಲ್ಲಿ ಹಾಕಿಬಿಟ್ಟ. ಆ ಉಡುಪು ದಿವ್ಯ ಕನ್ಯೆಯದು; ವರ್ಷದಲ್ಲಿ ಒಂದು ರಾತ್ರಿ ತನ್ನ ಸಖಿಯರೊಂದಿಗೆ ಈ ಕೊಳಕ್ಕೆ ಬಂದು ವಿಹರಿಸುತ್ತಿದ್ದಳು. ತನ್ನ ಉಡುಪಿಲ್ಲದೆ ಸ್ವರ್ಗಕ್ಕೆ ಹೋಗುವುದು ಆಗದು; ಹೀಗಾಗಿ ಆಕೆ ಗೊಲ್ಲನನ್ನೇ ಮದುವೆಯಾಗಿ ಅಲ್ಲೇ ಇದ್ದುಬಿಟ್ಟಳು; ಅವರಿಗೆ ಇಬ್ಬರು ಮಕ್ಕಳೂ ಆದರು. ಹಲವಾರು ವರ್ಷಗಳಾದ ಮೇಲೆ ಆಕೆ ಗಂಡನನ್ನು ಕುರಿತು "ನಾವು ಮದುವೆಯಾಗಿ ಇಷ್ಟು ವರ್ಷಗಳಾದುವು; ಮಕ್ಕಳೂ ಆಗಿದ್ದಾರೆ. ಈಗಲಾದರೂ ಹೇಳು, ಅಂದು ನನ್ನ ಬಟ್ಟೆಯನ್ನು ಕದ್ದು ಎಲ್ಲಿ ಮುಚ್ಚಿಟ್ಟೆ?" ಎಂದು ಕೇಳಿದಳು. ಗೊಲ್ಲ ಬಾವಿಯಲ್ಲಿ ಎಂದು ಹೇಳಿಬಿಟ್ಟ. ಮರುದಿನವೇ ಆಕೆ ಬಾವಿಯಿಂದ ಉಡುಪನ್ನು ತೆಗೆದುಕೊಂಡು ಸ್ವರ್ಗಕ್ಕೆ ಹಿಂದಿರುಗಿಬಿಟ್ಟಳು. ಗೊಲ್ಲನಿಗೆ ವಿರಹವ್ಯಥೆ ತೀರದಾಯಿತು. ಮತ್ತೆ ತನ್ನ ಎತ್ತನ್ನು ಕೇಳಿದ. ಅದು ಹೇಳಿತು "ನಿನ್ನ ಇಬ್ಬರು ಮಕ್ಕಳನ್ನು ಎರಡು ಬುಟ್ಟಿಗಳಲ್ಲಿ ಕೂಡಿಸಿ ಒಂದು ಕಾವಡಿಗೆ ಕಟ್ಟಿ ನಿನ್ನ ಹೆಗಲ ಮೇಲೇರಿಸಿಕೊಂಡು, ನನ್ನ ಬಾಲವನ್ನು ಹಿಡಿದು ಹಿಂಬಾಲಿಸು" ಎಂದು. ಅವನು ಹಾಗೆಯೇ ಮಾಡಲು ಎತ್ತು ಅವರನ್ನು ಸ್ವರ್ಗಕ್ಕೆ ಒಯ್ದು ಅಲ್ಲಿ ದಿವ್ಯಕನ್ಯೆಯ ತಂದೆಯಾದ ಪಿತೃಶ್ರೀಸ್ವರ್ಗ ದೇವತೆಯ ಬಳಿಗೆ ಕರೆತಂದಿತು. ಗೊಲ್ಲ ಅಲ್ಲಿ ತನ್ನ ಕಥೆಯನ್ನು ಹೇಳಿಕೊಂಡು ತನಗೆ ದಿವ್ಯಕನ್ಯೆಯನ್ನು ಹಿಂದಿರುಗಿಸಬೇಕೆಂದು ಬೇಡಿಕೊಳ್ಳಲು, ದೇವತೆ ತನ್ನ ಮಗಳನ್ನು ಕರೆಸಿ ಆಕೆಯಿಂದ ಗೊಲ್ಲನ ಕಥೆ ನಿಜವೆಂಬುದನ್ನರಿತು, ಗೊಲ್ಲನನ್ನು ಅಮರನನ್ನಾಗಿ ಮಾಡಿ ಸ್ವರ್ಗದಲ್ಲೇ ಇರಿಸಿಕೊಂಡ.

ಪಿತೃಶ್ರೀ ಸ್ವರ್ಗದಿಂದ ಆಜ್ಞಪ್ತನಾಗಿ ಪೂರ್ವಶಿಖರಮಹಾಚಕ್ರವರ್ತಿ (ತಾಯ್ ಯುಹೇ-ಟ-ತಿ) ಎಂಬಾತ ಮನುಷ್ಯಲೋಕದ ಆಗುಹೋಗುಗಳನ್ನು ನೋಡಿಕೊಳ್ಳುತ್ತಾನೆ. ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಅವನ ಕರ್ಮಾನುಸಾರ ನಿಯತಿಯಾಗಿ ನಡೆಯತಕ್ಕ ವಿದ್ಯಮಾನಗಳೆಲ್ಲವನ್ನೂ ಇವನೇ ನಿರ್ಧರಿಸುತ್ತಾನೆ. ಇವನ ಗುಡಿಗಳೇ ಚೀನದಲ್ಲಿ ಹಿಂದೆ ತುಂಬ ಜನಪ್ರಿಯವಾಗಿದ್ದುವು. ಇವನದು ದೊಡ್ಡ ಪರಿವಾರ, ಪಾಪ ಪುಣ್ಯ ಲೆಕ್ಕ ಇಡುವ ಚಿತ್ರಗುಪ್ತರು ಈ ಪರಿವಾರದಲ್ಲಿ ಪ್ರಮುಖರು. ಇವನ ಮಗಳು ಮೇಘಶ್ರೀಮಾತೆ (ಪಿ-ಹ್ಸಿಯು-ಯುವಾನ್-ಚುನ್) ಹೆಂಗಸರನ್ನೂ ಮಕ್ಕಳನ್ನೂ ಕಾಪಿಡುವವಳು. ಇವಳ ಪೂಜೆಯೂ ಪ್ರಾಚೀನ ಚೀನದಲ್ಲಿ ವಿಶೇಷವಾಗಿ ನಡೆಯುತ್ತಿತ್ತು.

ಇವರಲ್ಲದೆ ಚೀನದ ಪ್ರತಿಯೊಂದು ಪ್ರಾಂತ್ಯಕ್ಕೂ, ಪಟ್ಟಣಕ್ಕೂ ಪ್ರತ್ಯೇಕವಾದ ದೇವತೆಗಳಿದ್ದರು. ನಗರದ ನಿವಾಸಿಗಳನ್ನು ನೋಡಿಕೊಳ್ಳುವ ಇವರಿಗೆ ಗೋಡೆಯ ದೇವತೆ, ಕಂದಕದ ದೇವತೆ ಎಂದು ಮೊದಲಾಗಿ ಹೆಸರುಗಳಿದ್ದುವು. ಇವರೆಲ್ಲರೂ ಸಾಮಾನ್ಯವಾಗಿ ಮನುಷ್ಯರಾಗಿದ್ದವರೇ; ತಮ್ಮ ಶೀಲದಿಂದ, ಸಾಹಸದಿಂದ ದೇವತ್ವ ಪಡೆದವರು. ತೀರಿಕೊಂಡ ನಂತರ ಅವರಿಗೆ ಪುನರ್ಜನ್ಮ ಬಾರದಂತೆ ಕರುಣಿಸಿ ಪಿತೃಶ್ರೀಸ್ವರ್ಗ ಒಂದೊಂದು ಪ್ರದೇಶದ ಯೋಗಕ್ಷೇಮವನ್ನು ಒಬ್ಬೊಬ್ಬರಿಗೆ ವಹಿಸಿಕೊಡುತ್ತಾನೆ. ಚೀನೀ ಪುರಾಣಗಳಲ್ಲಿ ಹಲವಾರು ಇವರಿಗೆ ಸಂಬಂಧಿಸಿದುವು. ಇವರನ್ನು ನೇಮಕ ಮಾಡುವ ಮೊದಲು ಪ್ರದೇಶದ ನಿವಾಸಿಗಳಿಗೆ ಇದರ ವಿಚಾರವಾಗಿ ಕನಸಾಗುತ್ತದೆ. ಒಂದು ನಿರ್ದಿಷ್ಟವಾದ ದಿನದಂದು ಈತ ಅಧಿಕಾರವಹಿಸಿಕೊಳ್ಳುವನೆಂಬ ಸೂಚನೆ ಕನಸಿನಲ್ಲಿಯೇ ಒದಗಿದ್ದು, ಅಂದು ರಾತ್ರಿ ಬೀದಿಗಳಲ್ಲಿ ಗದ್ದಲ, ಮೇಳ, ಕೇಳಿಸಿಕೊಳ್ಳುತ್ತವೆ. ದೇವತೆ ಬಂದನೆಂದು ಇದರ ಅರ್ಥ. ಈ ದೇವತೆಯ ಪ್ರತಿಮೆಗಳನ್ನೂ ಮಾಡಿಟ್ಟು ಜನ ಪೂಜಿಸುತ್ತಾರೆ.

ಗೃಹದೇವತೆಗಳೂ (ತ್ಸಓ-ವಂಗ್) ದ್ವಾರದೇವತೆಗಳೂ (ಮೆನ್-ಶೆನ್) ಇದ್ದಾರೆ. ಮನೆಯಲ್ಲಿರುವವರ ಕೆಲಸಗಳನ್ನೂ ಆಲೋಚನೆಗಳನ್ನೂ ಮಾತುಕತೆಗಳನ್ನೂ ಗೃಹದೇವತೆ ಪರೀಕ್ಷಿಸುತ್ತದೆ; ಅದರ ಸ್ಥಾನ ಒಲೆ, ವರ್ಷಕ್ಕೊಮ್ಮೆ (ಅವರ ಪಂಚಾಂಗದಲ್ಲಿ 12ನೆಯ ತಿಂಗಳ 23ನೇ ದಿನ ಈ ದೇವತೆ ಸ್ವರ್ಗಕ್ಕೆ ಹೋಗಿ ತನ್ನ ವರದಿಯನ್ನೊಪ್ಪಿಸುತ್ತದೆ. ಈ ದೇವತೆಗೆ ಪ್ರತಿಮೆಗಳಿಲ್ಲ. ಕಾಗದದ ಮೇಲೆ ಇದರ ಚಿತ್ರವನ್ನು ಬರೆದು ಅಡುಗೆ ಮನೆಯಲ್ಲಿ ಇಟ್ಟಿರುತ್ತಾರೆ. ಅವನೊಂದಿಗೆ ಇರುವ ತ್ಸಓ-ವಂಗ್-ನೈ-ನೈ ಎಂಬ ಹೆಣ್ಣುದೇವತೆ ಮನೆಯಲ್ಲಿರುವ ಹೆಂಗಸರ ದಿನಚರಿಯನ್ನು ಗಮನಿಸುತ್ತದೆ. ತ್ಸಾಯ್-ಶೆನ್ ಭಾರತದ

ಕುಬೇರನಿದ್ದಂತೆ. ಐಶ್ವರ್ಯಕ್ಕೆ ಅಭಿಮಾನಿದೇವತೆ. ಕುವಾನ್–ಟಿ ಸಮರ ದೇವತೆ, ಇಂದ್ರನಿದ್ದಂತೆ. ಆದರೆ ತಾಓ ಧರ್ಮದ ಎಣಿಕೆಯಂತೆ ಈ ದೇವತೆಯೇ ಲೋಕಪಾಲಕ, ಜನಗಣನಾಯಕ. ಇವನನ್ನು ಚಕ್ರವರ್ತಿಯೆಂದೂ ಕರೆಯುತ್ತಾರೆ. ಇವನು ಮೊದಲಿಗೆ ಹಾನ್ ದೇಶದ ಒಡೆಯನಾಗಿದ್ದವ, ಕ್ರಿಸ್ತಾಬ್ದ 770ರಲ್ಲಿ ಇವನನ್ನು ದೇವತೆಯೆಂದು ಪರಿಗಣಿಸಲಾರಂಭಿಸಿದರು. ಚೀನೀ ಪುರಾಣಗಳಲ್ಲಿ ವೃತ್ತಿದೇವತೆಗಳೂ ವಿಶೇಷವಾಗಿ ಕಾಣಿಸಿಕೊಳ್ಳುತ್ತಾರೆ. ನರಕದ ಕಲ್ಪನೆಯೂ ಇವರಲ್ಲಿ ಇದ್ದು, ಯಮನ (ಯೆನ್–ವಂಗ್) ಕಲ್ಪನೆಯೂ ಇದೆ. ಹದಿನೆಂಟು ನರಕಗಳನ್ನು ಇವರು ಹೇಳುತ್ತಾರೆ.

ಬೌದ್ಧಧರ್ಮದ ಪ್ರಭಾವವನ್ನು ತಳೆದು ಕ್ಷಿತಿಗರ್ಭ (ತಿ–ತ್ಸಂಗ್ ವಂಗ್–ಪುಸ) ಬೋಧಿಸತ್ವನೆಂಬ ಪರಮಕಾರುಣಿಕ ದೇವತೆ ಪಾಪಿಗಳನ್ನು ಉದ್ಧಾರಮಾಡುವುದಕ್ಕೆಂದು ನರಕಗಳಲ್ಲಿ ಅಲೆದಾಡುತ್ತಿರುತ್ತಾನೆ. ಚೀನೀ ಜನರಲ್ಲಿ ಯಾರಾದರೂ ಸತ್ತಾಗ ಈ ದೇವತೆಯನ್ನು ಸ್ಮರಿಸಿಕೊಳ್ಳುವ ಪದ್ಧತಿಯಿದ್ದಿತು. ಬೌದ್ಧ ಭಿಕ್ಷುವಿನಂತೆಯೇ ಈ ದೇವತೆಯನ್ನು ಚಿತ್ರಿಸಿಕೊಂಡಿದ್ದಾರೆ. ಇವನ ಕೈಯಲ್ಲಿರುವ ಮಣಿಯಿಂದ ಪಾಪಿಗಳಿಗೆ ಒಳ್ಳೆಯ ದಾರಿ ಬೆಳಗುತ್ತದೆ. ಅದು ಇಲ್ಲದಿದ್ದರೆ ನರಕದಲ್ಲಿ ಕಾಳಕತ್ತಲೆಯೇ.

ಚೀನೀ ಪುರಾಣಗಳಲ್ಲಿ ನರಕದ ಪ್ರಸ್ತಾಪ ಮುಖ್ಯವಾಗಿಯೇ ಬರುತ್ತದೆ. ಮನುಷ್ಯನ ಆಯುಸ್ಸು ತೀರಿದೊಡನೆ ಯಮ ಇಬ್ಬರು ದೂತರನ್ನು ಕಳುಹಿಸಿ ಜೀವಿಯ ಜೀವವನ್ನು ಸೆರೆಹಿಡಿದು ತಂದು ನರಕದ ನ್ಯಾಯಾಲಯದ ಮುಂದೆ ನಿಲ್ಲಿಸುವ ಪ್ರಯತ್ನ ಮಾಡುತ್ತಾನೆ. ಇಬ್ಬರು ದೂತರಲ್ಲಿ ಒಬ್ಬ ವೃಷಭಮುಖಿ, ಇನ್ನೊಬ್ಬನು ಅಶ್ವಮುಖಿ. ಇವರಿಬ್ಬರು ಯಮನ ಆಣತಿಯನ್ನು ಪಡೆದು ಮನುಷ್ಯನ ಮನೆಗೆ ಬಂದಾಗ, ಮನೆಯ ದ್ವಾರದೇವತೆಗಳು ಯಮನ ಆಣತಿಯನ್ನು ಪರೀಕ್ಷಿಸಿ ದೂತರನ್ನು ಒಳಗೆ ಬಿಡುತ್ತಾರೆ. ಆಮೇಲೆ ದೂತರು ಜೀವವನ್ನು ದೇಹದಿಂದ ಬೇರ್ಪಡಿಸಿ ಒಯ್ದು ಗೋಡೆ ದೇವತೆಗಳು ಮತ್ತು ಕಂದುಕದ ದೇವತೆಗಳ ಮುಂದೆ ನಿಲ್ಲಿಸುತ್ತಾರೆ. ಈ ದೇವತೆಗಳು ಜೀವವನ್ನು 49 ದಿನಗಳ ಕಾಲ ಪರೀಕ್ಷೆಗೆ ಒಳಪಡಿಸಿ, ಅನಂತರ ಅದರ ಕರ್ಮಾನುಸಾರವಾಗಿ ಶಿಕ್ಷೆಗೆ ಒಳಪಡಿಸುತ್ತಾರೆ, ಇಲ್ಲವೇ ಬಿಟ್ಟುಬಿಡುತ್ತಾರೆ. ಕೆಲವೊಮ್ಮೆ ಹೆಸರಿನ ಸಾದೃಶ್ಯದಿಂದ ದೂತರು ಬೇರೊಂದು ಜೀವವನ್ನು ತಂದುಬಿಟ್ಟಿರುವುದುಂಟು. ಇಂತಹ ಸಂದರ್ಭಗಳಲ್ಲಿ ಈ ದೇವತೆಗಳು ಜೀವ ಮತ್ತೆ ಭೂಮಿಗೆ ಬಂದು ತನ್ನ ಹಳೆಯ ದೇಹದೊಳಗೆ ಪ್ರವೇಶ ಮಾಡಲು ಅವಕಾಶಮಾಡಿಕೊಡುತ್ತಾರೆ. ಈ ಕಾರಣಕ್ಕಾಗಿಯೇ ಚೀನೀ ಜನ ಮೃತದೇಹವನ್ನು ಹಲವಾರು ದಿನಗಳು (ಕನಿಷ್ಠ ಪಕ್ಷ 7, ಹೆಚ್ಚೆಂದರೆ 49) ಇರಿಸಿಕೊಂಡಿದ್ದು ಅನಂತರ ಹೂಳುತ್ತಾರೆ. ಹೀಗೆ ದೇವತೆಗಳು 49 ದಿನಗಳು ಪರೀಕ್ಷೆ ಮಾಡಿದ ಮೇಲೆ ಜೀವವನ್ನೇ ಯಮನಿಗೆ ಒಪ್ಪಿಸುತ್ತಾರೆ. ಯಮ ಶ್ರೇಷ್ಠ ನ್ಯಾಯಾಧೀಶನಂತೆ ಕೆಲಸ ಮಾಡಿ ಜೀವಕ್ಕೆ ಸಲ್ಲಬೇಕಾದ ಗತಿಯನ್ನು ನಿರ್ಧರಿಸುತ್ತಾನೆ. ಪುಣ್ಯ ಮಾಡಿದ ಜೀವಗಳು ಪಶ್ಚಿಮದಲ್ಲಿರುವ ಬುದ್ಧಕ್ಷೇತ್ರಕ್ಕೆ ಅಥವಾ ಕ್ಯುನ್ ಲುನ್ ಪರ್ವತದ ಮೇಲಿರುವ ಅಮರರ ವಿಹಾರಭೂಮಿಗೆ ತೆರಳಿ ಅಲ್ಲಿ ಸುಖಪಡುತ್ತವೆ. ಪಾಪಿಗಳು ನರಕದಲ್ಲಿ ಅಸಹ್ಯ ಯಾತನೆಯನ್ನು ಅನುಭವಿಸಬೇಕಾಗುತ್ತದೆ. ಮನುಷ್ಯಜೀವಗಳು ಪಾಪ ಮಾಡಿ ಪಶುಪಕ್ಷಿಗಳ ದೇಹಕ್ಕೆ ಸಂಸರ್ಗವಾಗುವುದೂ ಉಂಟು. ಬೌದ್ಧಧರ್ಮದ ಪ್ರಭಾವದಿಂದಾಗಿ ಚೀನೀ ಪುರಾಣಗಳಲ್ಲಿ ಪುನರ್ಜನ್ಮದ ಕಲ್ಪನೆ ದೃಢವಾಗಿ ಬೇರೂರಿರುವುದು ಕಾಣುತ್ತದೆ.

ನರಕ ದೊಡ್ಡದೊಂದು ರಾಜ್ಯ. ಅದರಲ್ಲಿ ಪಟ್ಟಣಗಳಿವೆ, ಹಳ್ಳಿಗಳಿವೆ, ಉದ್ಯಾನಗಳಿವೆ. ಮೃತನ ಜೀವ ರಾಕ್ಷಸದ್ವಾರದಿಂದ (ಕುವಿ–ಮೆನ್–ಕುವಾನ್) ನರಕದ ಮುಖ್ಯ ಪಟ್ಟಣವಾದ ಫೆಂಗ್–ತುವನ್ನು ಪ್ರವೇಶಿಸುತ್ತದೆ. ಇದರಲ್ಲಿ ಯಮನ ಅರಮನೆ, ನ್ಯಾಯಾಲಯ, ಯಾತನಾಕ್ಷೇತ್ರಗಳಿರುತ್ತವೆ. ಯಮನ ಪರಿವಾರದವರೂ ಅಧಿಕಾರಿಗಳೂ ಇಲ್ಲಿಯೇ ತಂತಮ್ಮ ಮನೆಗಳಲ್ಲಿ ವಾಸಮಾಡುತ್ತಾರೆ. ರಾಕ್ಷಸದ್ವಾರಕ್ಕೆ ಎದುರುಭಾಗದಲ್ಲಿ ಹೌನೈಹೋ ಎಂಬ ನದಿಯಿದ್ದು ಅದನ್ನು ದಾಟಲು ಮೂರು ಸೇತುವೆಗಳಿರುತ್ತವೆ; ದೇವತೆಗಳಿಗಾಗಿ ಸ್ವರ್ಣಸೇತುವೆ, ಪುಣ್ಯ ಮಾಡಿದ ಜೀವಗಳಿಗಾಗಿ ಬೆಳ್ಳಿಸೇತುವೆ, ಪಾಪಿಗಳಿಗಾಗಿ ತುಂಬ ಉದ್ದದ ಕಟಕಟೆಯಿಲ್ಲದ ಸೇತುವೆ. ಪಾಪಿಗಳು ತಮ್ಮ ಸೇತುವೆಯ ಮೇಲೆ ನಡೆಯುವಾಗ ನದಿಯೊಳಗೆ ಬೀಳದೆ ವಿಧಿಯಿಲ್ಲ. ಹಾಗೆ ಬಿದ್ದಾಗ ನದಿಯಲ್ಲಿ ಹಾವುಗಳೂ ನಾಯಿಗಳೂ ಅವರನ್ನು ಕಚ್ಚಿ, ಹರಿದು, ಚೂರುಚೂರು ಮಾಡುತ್ತವೆ. ಈ ಪಟ್ಟಣದ ಹತ್ತಿರದಲ್ಲಿ ಇನ್ನೊಂದು ಪಟ್ಟಣವಿದ್ದು ಅದರಲ್ಲಿ ಆಕಸ್ಮಿಕದಿಂದ, ಅಪಘಾತದಿಂದ, ಆತ್ಮಹತ್ಯೆಯಿಂದ ಸತ್ತವರ ಜೀವಗಳಿರುತ್ತವೆ. ಆಯುಸ್ಸು ತೀರುವ ಮೊದಲೇ ಸತ್ತ ಇವರು ಈ ಪಟ್ಟಣದಲ್ಲಿ ಹಸಿದ ಪಿಶಾಚಿಗಳಂತೆ ಆಯುಸ್ಸು ತೀರುವವರೆಗೂ ಇರಬೇಕಾಗುತ್ತದೆ. ಅಲ್ಲಿಯವರೆಗೆ ಅವರಿಗೆ ಪುನರ್ಜನ್ಮವಿರದು.

ಸ್ವರ್ಗ ಪುಣ್ಯಜೀವಿಗಳ ವಿಹಾರಕ್ಷೇತ್ರ. ಪಶ್ಚಿಮದಿಗ್ಭಾಗದಲ್ಲಿರುವ, ಅಮಿತಾಭ ಬುದ್ಧ ಆಳುವ ಸುಖಾವತಿ ಇಂಥದೊಂದು ಸ್ವರ್ಗ. ಕ್ಯುನ ಲುನ್ ಪರ್ವತ ಇನ್ನೊಂದು ಸ್ವರ್ಗ. ಇದು ಗ್ರೀಕರ ಒಲಿಂಪಸ್ ಇದ್ದಹಾಗೆ. ಆದರೆ ಕ್ಯುನ್ ಲುನ್ ಭೂಮಿಯ ಮಧ್ಯಭಾಗದಲ್ಲಿ, ಚೀನಕ್ಕೆ ತುಂಬ ದೂರ ಇರುವ ಕಾಲ್ಪನಿಕ ಪರ್ವತ. ಪಿತೃಶ್ರೀಸ್ವರ್ಗ ದೇವತೆಯ ಹೆಂಡತಿ ವಂಗ್–ಮಾತೆಯೇ ಈ ಪರ್ವತವನ್ನು ಆಳುವವಳು ಪರ್ವತದ ತುತ್ತತುದಿಯಲ್ಲಿ ಒಂಬತ್ತು ಅಂತಸ್ತುಗಳ ಅರಮನೆ ಸಂಪೂರ್ಣವಾಗಿ ಜೇಡ್‌ನಲ್ಲಿಯೆ ನಿರ್ಮಿತವಾಗಿದ್ದು ಅಲ್ಲಿ ವಂಗ್–ಮಾತೆ ವಾಸಿಸುತ್ತಾಳೆ. ಅರಮನೆಯ ಸುತ್ತಲೂ ರಮಣೀಯವಾದ ಉದ್ಯಾನವಿದ್ದು ಬಗೆಬಗೆಯ ಸುಖಸಂತೋಷಗಳಿರುತ್ತವೆ. ಅಮರತ್ವವನ್ನು ಕೊಡುವ ಪೀಚ್ ಹಣ್ಣಿನ ಮರ ಇರುವುದು ಅಲ್ಲಿಯೇ. ಪುಣ್ಯಜೀವಿಗಳು ಆ ಉದ್ಯಾನದಲ್ಲಿ ವಿಹರಿಸಿ ಪೀಚ್‌ಹಣ್ಣನ್ನು ಸವಿಯಬಹುದು.

ಹೀಗೆ ಚೀನೀ ಪುರಾಣಗಳಲ್ಲಿ ಹಲವಾರು ನೆಲೆಯ ಪ್ರಾಚೀನ ಕಲ್ಪನೆಗಳು ಸೇರಿಕೊಂಡಿವೆ. ಭೂಮಿಯ ಮೇಲಿನ ಬದುಕು ನೀತಿಯುತವಾಗಿರಬೇಕು ಎನ್ನುವುದೇ ಈ ಪುರಾಣಕಥೆಗಳ ಸಂದೇಶ. (ಎಸ್.ಕೆ.ಆರ್.)

**ಚೀನೀ ಭಾಷೆ :** ಸೈನೋ–ಟಿಬೆಟನ್ ಅಥವಾ ಟಿಬೆಟೊ–ಬರ್ಮೀ ಅಥವಾ ಇಂಡೋ–ಸಿನಿಟಿಕ್ ಮುಂತಾಗಿ ಕರೆಯುವ ಬಹು ದೊಡ್ಡ ಭಾಷಾ ಕುಟುಂಬದಲ್ಲಿನ ಒಂದು ಸ್ವತಂತ್ರವಾದ ಭಾಷೆ. ಈ ಭಾಷಾಕುಟುಂಬ ಚೀನೀ ಥಾಯ್, ಟಿಬೆಟನ್, ಬರ್ಮೀ ಮುಂತಾದ ಭಾಷೆಗಳಲ್ಲದೆ ಬೋಡೋ–ನಾಗಾ–ಕಚಿನ್, ಮಿಯಾವೊ, ಕೊಲೋ ಮತ್ತು ಮಾನ–ಖ್ಮೆರ್ ಭಾಷೆಗಳ ಗುಂಪುಗಳನ್ನೂ ಒಳಗೊಂಡಿದೆ.

ಚೀನೀ ಸಾಂಪ್ರದಾಯಿಕ ದಾಖಲೆಗಳ ಪ್ರಕಾರ ಚೀನೀ ಬರೆವಣಿಗೆ ಸುಮಾರು ಪ್ರಶ.ಪೂ. 29ನೆಯ ಶತಮಾನದಲ್ಲಿದ್ದ ಪೂಷ್ಸಿ ಎಂಬ ರಾಜನಿಗೆ ಹಳದಿ ನದಿಯಿಂದ ಉದ್ಭವವಾದ ಪೆಡಂಭೂತದ ಬೆನ್ನಿನ ಮೇಲೆ ಗೋಚರಿಸಿದ ರಹಸ್ಯವಾದ ಸಂಕೇತಗಳ ವೀಕ್ಷಣೆಯಿಂದ ವೇದ್ಯವಾಯಿತೆಂದು ತಿಳಿದುಬರುತ್ತದೆ. ಸುಮಾರು ಪ್ರಶ.ಪೂ. 1500ರ ಸುಮಾರಿನದು ಎನ್ನಲಾದ ಚೀನೀ ಬರೆವಣಿಗೆಯ ತುಣುಕುಗಳು ಲಭ್ಯವಾಗಿರುವುದಂತೂ ನಿಜ. ಬರೆವಣಿಗೆಗೆ ಇಂಥ ಪರಿಷ್ಕಾರ ಬರಲು ಶತಮಾನಗಳ ವ್ಯವಸಾಯ ನಡೆದಿದೆ ಎಂಬುದನ್ನು ಇಲ್ಲಿನ ಬರೆವಣಿಗೆಯ ಮಾದರಿಗಳು ತೋರಿಸುತ್ತವೆ.




ಚೀನೀ ಬರೆಹದ ಮಾದರಿಯಾಗಿ ಅನೇಕ ಶತಮಾನಗಳವರೆಗೆ ಬಳಸುತ್ತಿದ್ದ ಪುಸ್ತಕವೊಂದರಿಂದ ತೆಗೆದ ಮೊದಲ ಆರು ಸಂಕೇತಗಳು

ಕಾಲಾನುಕಾಲಕ್ಕೆ ಚೀನೀ ಭಾಷೆಯಲ್ಲಿ ಅನೇಕ ವಿಧವಾದ ಬೆಳವಣಿಗೆಯೂ ಬದಲಾವಣೆಗಳೂ ಆಗಿವೆ. ಚೀನೀಯರಲ್ಲದ ಜನಗಳ ಸಂಪರ್ಕದಿಂದಾಗಿ ಚೀನೀ ಭಾಷೆಯ ಮೇಲೆ ಇತರ ಸಂಸ್ಕೃತಿಗಳೂ ಸಾಕಷ್ಟು ಪ್ರಭಾವ ಬೀರಿವೆ. ಚೀನೀ ಭಾಷೆಯ ಇತಿಹಾಸವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಅತಿಪ್ರಾಚೀನ ಕಾಲ ಅನಾದಿಕಾಲದಿಂದ ಪ್ರ.ಶ. 500ರ ವರೆಗಿನದು. ಪ್ರ.ಶ. ಸುಮಾರು 500 ರಿಂದ ಹಿಡಿದು 900 ವರೆಗಿನ ಪ್ರಾಚೀನ ಕಾಲ, ಪ್ರ.ಶ. 900 ರಿಂದ ಪ್ರ.ಶ. 1200 ರವರೆಗಿನ ಮಧ್ಯಕಾಲ, 1200 ರಿಂದ ಈಚಿನ ಆಧುನಿಕ ಕಾಲ.

ಉಚ್ಚಾರಣೆಯಲ್ಲಿ ಮತ್ತು ಬರೆವಣಿಗೆಯ ಶೈಲಿಯಲ್ಲಿನ ಅನೇಕ ಬದಲಾವಣೆಗಳ ಹೊರತು ಚೀನೀ ಭಾಷೆ ಯಾವ ಅನ್ಯಭಾಷೆಯಿಂದಲೂ ಬಹುಮಟ್ಟಿಗೆ ಪದಸ್ವೀಕಾರ ಮಾಡಿಲ್ಲ ಮತ್ತು ಸಾಹಿತ್ಯ ಮಾಧ್ಯಮವಾಗಿ ಅದರ ಮೂಲ ಗುಣಗಳು ಸ್ವಲ್ಪವೂ ಬದಲಾವಣೆಗೊಂಡಿಲ್ಲ. ಇದೇ ಕಾರಣಕ್ಕಾಗಿ ಕ್ರಿಸ್ತಪೂರ್ವದ ಕನ್‌ಫ್ಯೂಷಿಯಸನ ಕಾಲದ ಪ್ರಾಚೀನ ಗ್ರಂಥಗಳ ಭಾಷೆ ಇಂದಿನವರೆಗೆ ಅರ್ಥವಾಗುವಂತಿದೆ.

ಅಕ್ಷರ ಬರೆಹವುಳ್ಳ ಭಾಷೆಗಳಲ್ಲಾದರೆ ಆಡುಮಾತಿನಲ್ಲಿನ ಉಚ್ಚಾರಣಾ ವಿವರಗಳು, ವ್ಯತ್ಯಾಸಗಳು ಬರೆಹದಲ್ಲೂ ಕಾಣಸಿಗುತ್ತವೆ. ಆದರೆ ಚೀನಿ ಲಿಪಿ ಅಂಥ ಯಾವ ಧ್ವನಿವ್ಯತ್ಯಾಸಗಳನ್ನೂ ತೋರುವಂಥದಲ್ಲ. ಹೀಗಾಗಿ ಚೀನೀ ಬರೆಹದಲ್ಲಿ ಕಾಲಾನುಕಾಲಕ್ಕೆ ಕಂಡುಬಂದ ವ್ಯತ್ಯಾಸಗಳು ಕಡಿಮೆ. ಆಡುಮಾತು ಕಿವಿಗೆ ತೃಪ್ತಿ ತರುವಂತೆ ಬರೆದ ಮಾತು ಕಣ್ಣಿಗೆ ತೃಪ್ತಿ ತರುತ್ತದಷ್ಟೆ. ಇದೇ ಕಾರಣದಿಂದಾಗಿ ಆಡುಮಾತಿನಲ್ಲಿ ಹೆಚ್ಚಿನ ಬದಲಾವಣೆಗಳಾಗಿದ್ದರೂ ಬರೆಹದಲ್ಲಿ ಮಾತ್ರ ಚೀನೀ ಭಾಷೆ ಚೀನ ಮತ್ತು ಪೂರ್ವ ಏಷ್ಯಗಳಲ್ಲಿ ಒಂದೇ ರೀತಿಯದಾಗಿದೆ.

ಬಹುಮುಖ್ಯವಾದ ಆಧುನಿಕ ಚೀನೀ ಉಪಭಾಷೆಗಳನ್ನು ಕೆಳಗೆ ಹೇಳಿರುವ ಆರು ಗುಂಪುಗಳಾಗಿ ವಿಂಗಡಿಸಬಹುದು; ಮಂಡಾರಿನ್, ವು, ಕನ್ –ಹಕ್ಕಾ, ಮಿನ್, ಕ್ಯಾಂಟನ್ ಮತ್ತು ಸಿಯಾಂಗ್. ಮಂಡಾರಿನ್ ಗುಂಪನ್ನು ಮತ್ತೆ ಮೂರು ಉಪಗುಂಪುಗಳಾಗಿ ವಿಂಗಡಿಸಬಹುದು ; ಔತ್ತರೇಯ, ದಾಕ್ಷಿಣಾತ್ಯ ಮತ್ತು ನೈರುತ್ಯ. ಔತ್ತರೇಯ (ಉಪಗುಂಪಿನ ಭಾಷೆಯನ್ನು ಮಂಚೂರಿಯ, ಉತ್ತರ ಚೀನ, ಷಿನ್‍ಜಿಯಾಂಗ್, ಕ್ಯಾನ್ಸೂ ಮತ್ತು ಹೂಪೇ, ಅನ್‍ಹ್ವೇ) ಮತ್ತು ಜಿಯಾಂಗ್‍ಸೂ ಪ್ರಾಂತ್ಯಗಳ ಭಾಗಗಳಲ್ಲಿ ಮಾತನಾಡುತ್ತಾರೆ. ಪೀಪಿಂಗ್ ಉಪಭಾಷೆ ಈ ಉಪಗುಂಪಿನಲ್ಲಿ ಪ್ರಸಿದ್ಧಿಯಾದ ಭಾಷೆ. ದಾಕ್ಷಿಣಾತ್ಯ ಉಪಗುಂಪಿನ ಭಾಷೆಯನ್ನು ಆನ್‍ಹ್ವೇ, ಕಿಂಗ್‍ಸು ಮತ್ತು ಹೂಪೇ ಮೊದಲಾಗಿ ಯಾಂಗ್‍ಟ್ಸೀ ನದಿಯ ಕೆಳಭಾಗದ ಪ್ರಾಂತ್ಯದಲ್ಲಿ ಮಾತನಾಡುತ್ತಾರೆ. ನೈರುತ್ಯ ಉಪಗುಂಪಿನ ಭಾಷೆಯನ್ನು ಸೆಚುಯಾಂಗ್, ಯುನ್ನಾನ್, ಗ್ವೇಜೋ ಮತ್ತು ಹೂಪೇ ಹಾಗೂ ಗ್ವಾಂಗ್‍ಸೀ ಪ್ರಾಂತ್ಯಗಳ ಭಾಗಗಳಲ್ಲಿ ಮಾತನಾಡುತ್ತಾರೆ. ಷಾಂಗ್‍ಹೈ, ವೆಂಜೋ ಮತ್ತು ಷೂಜೋ ಉಪಭಾಷೆಗಳನ್ನೊಳಗೊಂಡ ಗುಂಪಿನ ಭಾಷೆಯನ್ನು ಜಿಯಾಂಗ್‍ಸೂ, ಜಜಿಯಾಂಗ್ ಮತ್ತು ಪೂರ್ವ ಜಿಯಾಂಗ್‍ಸೀ ಪ್ರಾಂತ್ಯಗಳಲ್ಲಿ ಮಾಡನಾಡುತ್ತಾರೆ. ಫೂಚೌ, ಆಮಾಯ್ ಮತ್ತು ಸ್ವಾಟು ಉಪ ಭಾಷೆಗಳನ್ನೊಳಗೊಂಡ ಮಿನ್ ಗುಂಪಿನ ಭಾಷೆಯನ್ನು ಉತ್ತರ ಫೂಕೈನ್ ಮತ್ತು ಪೂರ್ವ ಗ್ವಾಂಗ್‍ಡುಂಗ್ ಪ್ರಾಂತ್ಯಗಳಲ್ಲೂ ಹೈನಾನ್ ದ್ವೀಪ ಹಾಗೂ ಲೀಚೋ, ಪರ್ಯಾಯ ದ್ವೀಪಗಳಲ್ಲೂ ಮಾತನಾಡುತ್ತಾರೆ. ಕ್ಯಾಂಟನ್ ಗುಂಪಿನ ಭಾಷೆಯನ್ನು ಮುಖ್ಯವಾಗಿ ಗ್ವಾಂಗ್‍ಡುಂಗ್ ಮತ್ತು ಗ್ವಾಂಗ್‍ಸೀ ಪ್ರಾಂತ್ಯಗಳಲ್ಲಿ ಮಾತನಾಡುತ್ತಾರೆ. ಷೀಯಾನ್ ಗುಂಪಿನ ಭಾಷೆಯನ್ನು ಮುಖ್ಯವಾಗಿ ಹೂನಾನ್ ಪ್ರಾಂತ್ಯದಲ್ಲಿ ಮಾತನಾಡುತ್ತಾರೆ. ಈ ಮುಖ್ಯವಾದ ಗುಂಪುಗಳಲ್ಲದೆ ದಕ್ಷಿಣ ಆನ್‍ಹ್ವೇ, ಹೂನಾನ್ ಮತ್ತು ವಾಯವ್ಯ ಗ್ವಾಂಗ್‍ಸೀ ಪ್ರಾಂತ್ಯಗಳಲ್ಲಿ ಮಾತನಾಡುವ ಕೆಲವು ಪ್ರತ್ಯೇಕವಾದ ಉಪಭಾಷೆಗಳಿವೆ.

ಪ್ರಾಚೀನ ಚೀನೀ ಭಾಷೆಯ–ಮ್,–ಪ್,–ತ್,–ಕ್ ವ್ಯಂಜನಗಳನ್ನು ಉಳಿಸಿಕೊಂಡಿರುವ ಅಥವಾ ಕೈಬಿಟ್ಟಿರುವ ಸಂದರ್ಭದ ಮೇಲೂ ಸಾಮಾನ್ಯ ಅಘೋಷಿತವಾದ ಬ್' ದ್' ಗ್' ದ್' ಮುಂತಾದ ಆದಿ ಘೋಷಗಳನ್ನು ಉಳಿಸಿಕೊಂಡಿರುವುದರ ಮೇಲೂ ಈ ಉಪಭಾಷೆಗಳನ್ನು ಸ್ಥೂಲವಾಗಿ ವಿಂಗಡಿಸಲಾಗಿದೆ.

ಚೀನೀ ಬರೆವಣಿಗೆಯ ವಿಧಾನ ಇತಿಹಾಸ ಪ್ರಾರಂಭಕಾಲದಲ್ಲಿ ಚಿತ್ರಗಳಿಂದ ಕೂಡಿದ ಬರೆವಣಿಗೆಯಲ್ಲಿ ಬಳಕೆಯಲ್ಲಿದ್ದಂಥ ಬಹುತೇಕ ಸಂಜ್ಞೆಗಳನ್ನೂ ಅಕ್ಷರಗಳನ್ನೂ ಹೊಂದಿದೆ. ಅಮೂರ್ತ ಹಾಗೂ ಮೂರ್ತ ಅರ್ಥವನ್ನೂ ಕೊಡಬಹುದಾದ ಸಂಜ್ಞೆಗಳ ಆವಶ್ಯಕತೆ ಹೆಚ್ಚಿದಂತೆ ಮತ್ತು ಅನೇಕ ಅಭಿಪ್ರಾಯಗಳನ್ನು ಚಿತ್ರಗಳ ಮೂಲಕ ಹೇಳುವುದು ಅಸಾಧ್ಯವೆಂದು ಕಂಡುಬಂದಾಗ ಭಾವಲಿಪಿ (ಐಡಿಯೋಗ್ರ್ಯಾಫಿಕ್) ಮತ್ತು ಸೂಚಕ (ಸಜೆಸ್ಟಿವ್) ಅಕ್ಷರಗಳನ್ನು ಕಂಡು ಹಿಡಿಯಲಾಯಿತು. ಹೀಗೆ ಬರೆವಣಿಗೆಯ ಏಳು ವಿಧಾನಗಳು ಅಭಿವೃದ್ಧಿಗೊಂಡವು. ಅವುಗಳಲ್ಲಿ ಬಹಳ ಹಳೆಯದಾದುದು ಸಾಂಪ್ರದಾಯಿಕವಾಗಿ ಪ್ರಶ.ಪೂ. 1760–1122ರ ಕಾಲದ ಚಿಯಾಕುವೆನ್ ಬರೆವಣಿಗೆ (ಆರಕಲ್ ಬೋನ್ ರೈಟಿಂಗ್) ಇದರ ಅನಂತರ ಪ್ರಶ.ಪೂ. 1122–221 ರ ಕಾಲದ ತಚುವಾನ್ ಅಥವಾ ಮಹಾಮುದ್ರೆ ವಿಧಾನ. ಸಿಯಾವೋ ಚುವಾನ್ ಅಥವಾ ಕನಿಷ್ಠ ಮುದ್ರೆ ವಿಧಾನ ಅನಂತರದಲ್ಲಿದ್ದು ಉಷೂ ಅಥವಾ ಸರ್ಕಾರಿ, ಕೈ ಷೂ ಅಥವಾ ಮಾದರಿ ವಿಧಾನ. ಸಿಂಗ್ ಷೂ ಅಥವಾ ಶೀಘ್ರಗಾಮಿ ಮತ್ತು ಕೊನೆಯದಾಗಿ ಸಾವೋ ಷೂ ಅಥವಾ ಕರ್ಸಿವ್ ವಿಧಾನಗಳು ಆಮೇಲೆ ಬಂದವು. ಚೀನೀಭಾಷೆ ಇತರ ಭಾಷೆಗಳಲ್ಲಿರುವಂತೆ ವರ್ಣಮಾಲೆಯನ್ನು ಹೊಂದಿಲ್ಲ. ಪ್ರತಿ ಅಕ್ಷರವೂ ಒಂದು ಪದವನ್ನು ಪ್ರತಿನಿಧಿಸುವುದರಿಂದ ಎಷ್ಟು ಪದಗಳಿದ್ದರೆ ಅಷ್ಟು ಅಕ್ಷರಗಳಿವೆ.

ಕೆಳಗೆ ಹೇಳಿರುವಂತೆ ನಾನಾವಿಧವಾದ ಕೊಟ್ಟುಗಳ ಆಧಾರದ ಮೇಲೆ ಅಕ್ಷರಗಳ ಸ್ವರೂಪವನ್ನು ಗುರುತಿಸಬಹುದು.

ಉದ್ದವಾದ ಗೆರೆ ।

ಅಡ್ಡವಾದ ಗೆರೆ –

ಎಡ ಕೊಕ್ಕೆ )

ಬಲ ಕೊಕ್ಕೆ (

ಈ ಅಕ್ಷರಗಳನ್ನು ಎಡದಿಂದ ಬಲಕ್ಕೆ ಅಥವಾ ಬಲದಿಂದ ಎಡಕ್ಕೆ ಅಥವಾ ಮೇಲಿಂದ ಕೆಳಕ್ಕೆ ಬರೆಹಗಾರನ ಶೈಲಿಯನ್ನು ಅನುಸರಿಸಿ ಬರೆಯಬಹುದು. (ಐ.ಎಸ್.ಐ.)

**ಚೀನೀ ಲಿಪಿ:** ಮೊದಲಿನ ಚಿತ್ರಲಿಪಿ ವಿಧಾನವನ್ನು ಪ್ರಾಚೀನ ಚೀನಿಯರು ಕೈಬಿಡಲಿಲ್ಲ. ಇದಕ್ಕೆ ಕಾರಣಗಳೇನೆಂಬುದು ನಮಗೆ ತಿಳಿಯದು. ಬದಲಾಗಿ ಈ ಹಾದಿಯಲ್ಲಿ ಅವರು ಮತ್ತಷ್ಟು ಮುಂದುವರಿದರು. ಉದಾಹರಣೆ, ಮಹತ್ತರವಾದುದು ಅಥವಾ ಹಿರಿದಾದುದು ಎಂಬುದನ್ನು ಸೂಚಿಸಲು ಅವರು ದೊಡ್ಡ ಮನುಷ್ಯನೊಬ್ಬನ ಚಿತ್ರವನ್ನು (**ಚಿತ್ರ 1**) ಬರೆದರು ; ಈ ದೊಡ್ಡ ಮನುಷ್ಯನ ಚಿತ್ರದ ತಲೆಮೇಲೆ ಅಡ್ಡಲಾಗಿ ಒಂದು ಗೆರೆಯನ್ನು ಎಳೆಯುವುದರ ಮೂಲಕ (**ಚಿತ್ರ 2**) ಸ್ವರ್ಗ ಎಂಬುದನ್ನು ಸೂಚಿಸುವ ಮತ್ತೊಂದು ಶಬ್ದವನ್ನು ರೂಪಿಸಿಕೊಂಡರು. ಮಾನವ ಎಷ್ಟೇ ಶಕ್ತಿಶಾಲಿಯಾದರೂ ಸ್ವರ್ಗದ ನಿಯಂತ್ರಣಕ್ಕೆ ಒಳಪಟ್ಟಿದ್ದಾನೆ ಎಂಬುದನ್ನು ಇದು ಸೂಚಿಸುತ್ತದೆ. ಚೀನೀ ಭಾಷೆಯಲ್ಲಿ ಸ್ವರ್ಗ ಎಂಬುದು ದೇವರಿಗೆ ಪರ್ಯಾಯವಾಗಿರುವ ಶಬ್ದ. ಮೇಲಿನ ಈ ಗೆರೆಯನ್ನು ತಳಭಾಗಕ್ಕೆ ವರ್ಗಾಯಿಸುವುದರ ಮೂಲಕ (**ಚಿತ್ರ 3**) ನೆಲೆ ಎಂಬುದನ್ನು ಸೂಚಿಸುವ ಶಬ್ದ ರೂಪಿತವಾಯಿತು. ಏಕೆಂದರೆ ಅಡ್ಡಲಾಗಿ ಎಳೆದ ಗೆರೆ ನೆಲವನ್ನು ಸೂಚಿಸುತ್ತದೆ. ಮುಂದೆ ಇಬ್ಬರು ದೊಡ್ಡ ಮನುಷ್ಯರು ನೆಲದಮೇಲೆ ನಿಂತಿರುವಂಥ ಚಿತ್ರವನ್ನು (**ಚಿತ್ರ 4**) ರಚಿಸಿದರು. ಇದು ಜೊತೆಯನ್ನು ಸೂಚಿಸುವ ಶಬ್ದವಾಯಿತು. ಈ ಶಬ್ದದ ಕೆಳಗೆ ಸೂರ್ಯನನ್ನು ಚಿತ್ರಿಸುವುದರ ಮೂಲಕ (**ಚಿತ್ರ 5**) ಜನಪ್ರಿಯ ಶಬ್ದ ರೂಪುಗೊಂಡಿತು. (ಸೂರ್ಯ




ಚೀನೀ ಚಿತ್ರಲಿಪಿಯ ಕೆಲವು ಸಂಕೇತಗಳು

ಯಾರೋ ಒಬ್ಬರಿಗಲ್ಲದೆ ಎಲ್ಲರಿಗೂ ಆನಂದವನ್ನುಂಟುಮಾಡುತ್ತಾನೆ ಎಂಬುದೇ ಈ ವ್ಯುತ್ಪತ್ತಿಯ ಹಿನ್ನೆಲೆಯಲ್ಲಿರುವ ತರ್ಕ) ಮೇಲ್ಕಂಡ ರೀತಿಯಲ್ಲಿ ಸೃಷ್ಟಿಸಲಾದ ಶಬ್ದಗಳು ಚಿತ್ರ ಮಾತ್ರವಾಗಿ ಉಳಿಯಲಿಲ್ಲ ; ಅವು ಭಾವಲಿಪಿ–ಸಂಬಂಧಿಗಳೂ ಆಗಿ ಪರಿಣಮಿಸಿದುವು. ಇವುಗಳ ಹಿಂದೆ ಭಾವಗಳು ಅಡಕಗೊಂಡಿದ್ದುದೇ ಇದಕ್ಕೆ ಕಾರಣ. ಲಿಖಿತಸಂಕೇತಗಳನ್ನು ಧ್ವನಿಸಂಕೇತಗಳನ್ನಾಗಿ ಪರಿವರ್ತಿಸುವುದಕ್ಕೆ ಮುಂಚೆ ಪ್ರಾಚೀನ ಗ್ರೀಕರಾಗಲೀ ಈಜಿಪ್ಷಿಯನ್ನರಾಗಲೀ ಭಾವಲಿಪಿ ವಿಧಾನದ ಬಗ್ಗೆ ಯೋಚಿಸಿರಲಿಲ್ಲ. ಇಷ್ಟಾಗಿಯೂ ಧ್ವನಿಸಂಕೇತಗಳ ಉಪಯುಕ್ತತೆಯನ್ನು ಚೀನೀಯರು ನಿರ್ಲಕ್ಷಿಸಿರಲಿಲ್ಲ. ವರ್ಣಮಾಲೆಯನ್ನು ಬಳಸುವುದಕ್ಕಿಂತ ಭಿನ್ನವಾದ ರೀತಿಯಲ್ಲಿ ಅವರು ಧ್ವನ್ಯಂಶಗಳನ್ನು ಬಳಸಿಕೊಂಡರು. ಮೇಲೆ ಹೇಳಿದಂತೆ ಚಿಹ್ನೆಗಳನ್ನೂ, ಸಂಕೇತಗಳನ್ನೂ ಹೆಚ್ಚಿಸುವುದರ ಮೂಲಕ ಹೊಸಶಬ್ದಗಳನ್ನು ಅವರು ರೂಪಿಸುತ್ತ ನಡೆದರು. ಆದರೆ ಕೆಲವು ಸಂಕೇತಗಳು ಧ್ವನಿಸಂಕೇತಗಳಾಗಿ ಬಳಕೆಗೆ ಬರತೊಡಗಿದುವು. ಮೇಲೆ ಹೇಳಿದ ಶಬ್ದವನ್ನು ಪಿಂಗ್ ಎಂದು ಉಚ್ಚರಿಸುತ್ತಾರೆ. ಕಲ್ಲು ಎಂಬುದನ್ನು ಸೂಚಿಸುವ ಮತ್ತೊಂದು ಸಂಕೇತವನ್ನು (**ಚಿತ್ರ 6**) ರಲ್ಲಿ ಕಾಣಿಸಿದೆ. ಇದರೊಡನೆ ಸೇರಿದಾಗ ರೂಪಿತವಾಗುವ ಹೊಸಶಬ್ದ (**ಚಿತ್ರ7**) ಆಧುನಿಕ ಬರೆಹದಲ್ಲಿ (**ಚಿತ್ರ 8**) ಘರ್ಷಣೆ (ಜೊತೆಯಾಗಿರುವ ಎರಡು ಕಲ್ಲುಗಳು) ಎಂಬುದನ್ನು ಸೂಚಿಸುತ್ತದೆ. ಇದನ್ನು ಪ್' ಎಂಗ್ ಎಂದು ಉಚ್ಚರಿಸುತ್ತಾರೆ. ಇದೇ ರೀತಿ ಮೇಲೆ ಕಾಣಿಸಿದ ಜನಪ್ರಿಯ ಎಂಬ ಅರ್ಥವನ್ನು ಸೂಚಿಸುವ ಶಬ್ದವನ್ನು ಪ್' ಉ ಎಂದು ಉಚ್ಚರಿಸುತ್ತಾರೆ. ಮಾತು ಎಂಬುದನ್ನು ಸೂಚಿಸುವ ಚಿಹ್ನೆಯೊಂದನ್ನು ಇದರ ಎಡಪಾರ್ಶ್ವಕ್ಕೆ ಸೇರಿಸಿದ ಬಳಿಕವೂ ಇದನ್ನು ಪ್ ಉ ಎಂದೇ ಉಚ್ಚರಿಸುತ್ತಾರಾದರೂ ಪದ್ಯವೊಂದನ್ನು ಸಂಗೀತಕ್ಕೆ ಅಥವಾ ಲಯಕ್ಕೆ ಒಳಪಡಿಸುವುದು ಎಂಬುದಾಗಿ ಅರ್ಥ ಬದಲಾಗುತ್ತದೆ. ಮಾತು ಎಂಬುದನ್ನು ಸೂಚಿಸುವ ಅಂಶ ಅದರೊಡನೆ ಸೇರಿಕೊಂಡಿರುವುದೇ ಇದಕ್ಕೆ ಕಾರಣ. (ಮಾತು ಎಂಬುದು ಎಲ್ಲ ಪರಿಷ್ಕೃತ ನುಡಿಗಳನ್ನೂ– ಉದಾ ; ಸಾಹಿತ್ಯವನ್ನೂ–ಒಳಗೊಳ್ಳುತ್ತದೆ).

ಹೀಗೆ ವರ್ಣಮಾಲೆ ಇಲ್ಲದೆ, ಚೀನಿಯರು ತಮ್ಮವೇ ಆದ ಶಬ್ದಸಂಪತ್ತನ್ನು ಹೊಂದಿದ್ದರು. ಇವುಗಳಲ್ಲಿ ಪ್ರತಿಯೊಂದು ಶಬ್ದವೂ ಯಾವುದೋ ಒಂದು ಭಾವನೆಯನ್ನು ಪ್ರತಿನಿಧಿಸುತ್ತದೆ. ಅದಕ್ಕೆ ಒಂದು ನಿರ್ದಿಷ್ಟ ಧ್ವನಿಯನ್ನು ಗೊತ್ತುಪಡಿಸಲಾಗುತ್ತದೆ. ಈ ಧ್ವನಿ ಅಥವಾ ಉಚ್ಚಾರ ಒಂದಕ್ಕಿಂತಲೂ ಹೆಚ್ಚು ಶಬ್ದಗಳಿಗೆ ಸಾಮಾನ್ಯವಾಗಿರಬಹುದು. ಆದರೆ, ಗೊಂದಲವನ್ನು ದೂರ ಮಾಡುವ ದೃಷ್ಟಿಯಿಂದ ಚೀನೀಯರು ಸಾಮಾನ್ಯವಾಗಿ ಸಮಾಸಶಬ್ದಗಳನ್ನು ಬಳಸುತ್ತಾರೆ. ಉದಾಹರಣೆಗೆ ಪ್ ಉ ಎಂಬ ಚೀನೀ ಶಬ್ದ ಜನಪ್ರಿಯ ಅಥವಾ ರಾಗ ಅಥವಾ ಸ್ವರೂಪ, ಮತ್ತು ಪರಸ್ಪರ ಭಿನ್ನವಾದ ಅರ್ಥಗಳನ್ನು ಹೊಂದಿರುವ ಅನೇಕ ಶಬ್ದಗಳನ್ನು ಸೂಚಿಸಬಹುದು. ಹೀಗಾಗಿ ಚೀನೀಯರು ಎರಡೆರಡು ಶಬ್ದಗಳನ್ನು

ಬಳಸುತ್ತಾರೆ. ಪ್'ಉ–ತ್'–ಉಂಗ್ ಎಂಬುದನ್ನು ಜನಪ್ರಿಯ ಎಂಬುದಕ್ಕೂ ಕೆ ಪ್ ಉ ಎಂಬುದನ್ನು ರಾಗಕ್ಕೂ ಬಳಸುತ್ತಾರೆ. ಒಂದು ರೀತಿಯಲ್ಲಿ ಈ ತಂತ್ರಕ್ಕಾಗಿ ಚೀನೀಯರು ಭಾರತಕ್ಕೆ ಋಣಿಯಾಗಿದ್ದಾರೆ. ಪ್ರಾಚೀನ ಸಂಸ್ಕೃತ, ಧರ್ಮ–ಚಕ್ರ, ಮಹಾಯಾನದಂಥ ಸಮಾನಶಬ್ದಗಳಿಂದ ತುಂಬಿತ್ತು. ಬೌದ್ಧಧರ್ಮಗ್ರಂಥಗಳ ಜೊತೆಯಲ್ಲಿ ಇವುಗಳೂ ಚೀನೀಯರಿಗೆ ಪರಿಚಿತವಾದುವು. ಎರವಲು–ಶಬ್ದಗಳಿಗೆ ಶರಣಾದ ವಿದೇಶೀ ಪಾರಿಭಾಷಿಕಶಬ್ದಗಳನ್ನು ಹೇಗೆ ಅಳವಡಿಸಿಕೊಳ್ಳಬಹುದೆಂಬುದನ್ನು ಅವರು ಚೀನೀಯರಿಗೆ ಕಲಿಸಿಕೊಟ್ಟರು. ಕೆಳಗೆ ಕೆಲವು ಆಧುನಿಕ ಉದಾಹರಣೆಗಳನ್ನು ಕೊಟ್ಟಿದೆ:

ತಿಎನ್–ಹುಅ (ವಿದ್ಯುತ್–ಮಾತು)–ದೂರವಾಣಿ (ಟೆಲಿಫೋನ್)

ಮಿನ್–ಛು (ಜನತೆ–ಪ್ರಭು)–ಗಣತಂತ್ರ

ಯಂಗ್ ಛ್'ಇ (ಪೋಷಕ–ಅನಿಲ)–ಆಕ್ಸಿಜನ್

ಧ್ವನ್ಯಾತ್ಮಕ ಭಾಷೆಯಲ್ಲಿ ವರ್ಣ (ಅಥವಾ ಅಕ್ಷರ), ಶಬ್ದ ಮತ್ತು ವಾಕ್ಯಗಳು ಮೂಲಘಟಕಗಳಾಗಿದ್ದರೆ, ಚೀನೀ ಭಾಷೆಯಲ್ಲಿ ಶಬ್ದ (ಇವನ್ನು ನಾವು ಚಿಹ್ನೆಯೆಂದು ಕರೆಯುತ್ತೇವೆ), ಸಮಾಸಶಬ್ದ ಮತ್ತು ವಾಕ್ಯಗಳಲ್ಲಿ ಮೂಲ ಘಟಕಗಳಾಗಿವೆ. ಇಷ್ಟಾಗಿಯೂ ಮುದ್ರಣ ಹಾಗೂ ಬರೆಹದಲ್ಲಿ ಚೀನೀವಾಕ್ಯ ಕೇವಲ ಚಿಹ್ನೆಗಳನ್ನು ಮಾತ್ರ ತೋರಿಸುತ್ತದೆ. ಇವನ್ನು ಮೇಲಿನಿಂದ ಕೆಳಕ್ಕೆ, ಈಗಿನ ದಿನಗಳಲ್ಲಿ ಕೆಲವೊಮ್ಮೆ ಎಡದಿಂದ ಬಲಕ್ಕೆ, ಅವುಗಳ ನಡುವೆ ಸಮಾನ ಅಂತರವನ್ನು ಬಿಟ್ಟು ಜೋಡಿಸುತ್ತಾರೆ. ಸಮಾಸಶಬ್ದವನ್ನು ಸೂಚಿಸುವುದಕ್ಕಾಗಿ ಚೀನೀ ಬರೆಹದಲ್ಲಾಗಲೀ, ಮುದ್ರಣದಲ್ಲಾಗಲೀ ಕೂಡುಗೆರೆ (ಹೈಫನ್) ಯನ್ನು ಬಳಸುವುದಿಲ್ಲ. ತಜ್ಞ ಕಣ್ಣುಗಳು ಮಾತ್ರವೇ ಶಬ್ದಗಳ ನಡುವಣ ಅದೃಶ್ಯಕೊಂಡಿಗಳನ್ನು ಗುರುತಿಸಬಲ್ಲವು.

ಉಚ್ಚಾರಣೆಯ ದೃಷ್ಟಿಯಿಂದ ಪ್ರತಿಯೊಂದು ಚಿಹ್ನೆಯೂ ಪ್ರತ್ಯೇಕ ಘಟಕವಾಗಿರುತ್ತದೆ. ಹೀಗಾಗಿ, ಈ ಭಾಷೆ ಏಕಾಕ್ಷರ ವ್ಯವಸ್ಥೆಯುಳ್ಳದ್ದೆಂಬಂತೆ ತೋರುತ್ತದೆ. ನಲವತ್ತು ಸಾವಿರಕ್ಕೂ ಹೆಚ್ಚು ಚಿಹ್ನೆಗಳಿವೆ. ಇವುಗಳಲ್ಲಿ ಏಳರಿಂದ ಹತ್ತು ಸಾವಿರ ಚಿಹ್ನೆಗಳು ಇಂದು ಬಳಕೆಯಲ್ಲಿವೆ. ಆದರೆ ಪೀಕಿಂಗಿನ ಉಪಭಾಷೆಯಲ್ಲೇ (ಈ ಉಚ್ಚಾರಣೆಯೇ ಶಿಷ್ಟ ಉಚ್ಚಾರಣೆಯೆಂದು ಪರಿಗಣಿತವಾಗಿದೆ) ಕೇವಲ ನಾಲ್ಕುನೂರು ಧ್ವನಿಗಳಿವೆ. ಅಂತೆಯೇ ಚೀನೀ ಚಿಹ್ನೆಗಳಲ್ಲಿ ಸಮಸ್ವನಗಳು ಸಾಮಾನ್ಯವಾಗಿ ಕಾಣದೊರೆಯುತ್ತವೆ. ಹೀಗಾಗಿ ಚೀನೀ ಭಾಷೆಯ ಶ್ರುತ್ಯಾತ್ಮಕ ಉಚ್ಚಾರಣೆಯೊಂದೇ ಇದಕ್ಕಿರುವ ಏಕೈಕ ಪರಿಹಾರ. ಬೀಜಿಂಗಿನ ಉಪಭಾಷೆಯಲ್ಲಿ ಪ್ರತಿಯೊಂದು ಧ್ವನಿಯನ್ನು ನಾಲ್ಕು ಭಿನ್ನ ಶೃತಿಗಳಲ್ಲಿ ಉಚ್ಚರಿಸಲಾಗುತ್ತದೆ ; ಇತರ ಉಪಭಾಷೆಗಳಲ್ಲಿ ಇನ್ನೂ ಹೆಚ್ಚು ಶೃತಿಗಳಲ್ಲಿ ಕಾಣಬರುತ್ತವೆ. ಚೀನದಲ್ಲಿ ಮೊರಡಿಗಳು, ತೊರೆಗಳು ಹೇಗೆ ಅಸಂಖ್ಯಾತವಾಗಿಯೋ ಹಾಗೆಯೇ ಉಪಭಾಷೆಗಳೂ ಅಸಂಖ್ಯವಾಗಿವೆ.

ಇತರ ಭಾಷೆಗಳಲ್ಲಿರುವಂತೆ ಲಿಂಗ, ಕಾಲ, ವಚನ, ವಿಭಕ್ತಿ, ಕರ್ತರೀ–ಕರ್ಮಣಿ ಪ್ರಯೋಗಗಳು ಇವೇ ಮೊದಲಾದವಕ್ಕೆ ಸಂಬಂಧಿಸಿದಂತೆ ಚೀನೀಭಾಷೆಯಲ್ಲಿ ನಿರ್ದಿಷ್ಟ ನಿಯಮಗಳಿಲ್ಲ. ಇಷ್ಟಾಗಿಯೂ ಚೀನೀ ಭಾಷೆ ಅವ್ಯವಸ್ಥಿತವಾದ ಬರೆಹಕ್ಕೆ ಎಡಗೊಟ್ಟಿಲ್ಲ. ಶುದ್ಧ ಚೀನೀ ಭಾಷೆಯಲ್ಲಿ ಬರೆಯಬೇಕಾದರೆ ಕೆಲವೊಂದು ವಾಕ್ಯರಚನಾಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಸಂದರ್ಭಾನುಗುಣವಾಗಿ ಶಬ್ದವರ್ಗಗಳನ್ನು–ನಾಮಪದ ಕ್ರಿಯಾಪದ ಇತ್ಯಾದಿ–ನಿರ್ಧರಿಸಲಾಗುತ್ತದೆ. ಒಂದೇ ಶಬ್ದ ಒಂದೆಡೆ ಕ್ರಿಯಾಪದವಾಗಿ, ಇನ್ನೊಂದೆಡೆ ನಾಮಪದವಾಗಿ, ಮತ್ತೊಂದೆಡೆ ಗುಣವಾಚಕವಾಗಿ ಕಾಣಿಸಿಕೊಳ್ಳಬಹುದು. ಚೀನೀ ಭಾಷೆಯ ತತ್ತ್ವಾಧಾರ ಅಥವಾ ಯುಕ್ತಿಸಾಂಗತ್ಯ ಅಡಗಿರುವುದು ಅದರ ತಾರ್ಕಿಕ ವಿಶ್ಲೇಷಣೆಯಲ್ಲೇ ಹೊರತು ವ್ಯಾಕರಣ ನಿಯಮಗಳಲ್ಲಲ್ಲ.

ಮಾನವ ಇತಿಹಾಸದ ಏಳುಬೀಳುಗಳನ್ನು ಮೀರಿ ನಿಂತಿರುವುದರ ಮೂಲಕ ಸಾವಿರಾರು ವರ್ಷಗಳ ಕಾಲ ಚೀನೀಭಾಷೆ ತನ್ನ ಸತ್ತ್ವವನ್ನು ತೋರಿಸಿದೆ. ನಾಡು ವಿಚ್ಛಿನ್ನವಾಗಿ ಹೋಗದಂತಾಗುವಲ್ಲಿ ಈ ಭಾವಲಿಪಿಭಾಷೆ ನೆರವಾಗಿದೆ ; ಈ ಭಾಷೆ ನಶಿಸಿ ಹೋದಂತಾಗುವಲ್ಲಿ ಪರಮಾಧಿಕಾರ ವ್ಯವಸ್ಥೆಯನ್ನುಳ್ಳ ಈ ನಾಡು ನೆರವಾಗಿದೆ. ಚೀನೀಭಾಷೆ ಮತ್ತು ಚೀನದ ಮಹತ್ತ್ವಪೂರ್ಣ ಪ್ರತ್ಯೇಕತೆ – ಇವು ಒಂದು ಮತ್ತೊಂದರ ದೀರ್ಘಕಾಲದ ಬಾಳುವೆಗೆ ಕಾರಣವಾಗಿವೆ. ಚೀನದ ಬೌದ್ಧಿಕ ಪ್ರಗತಿ ಎಲ್ಲಿಯವರೆಗೆ ವಿಶ್ವದ ಇತರ ರಾಷ್ಟ್ರಗಳ ಪ್ರಗತಿಗಿಂತ ತುಂಬ ಮುಂದಾಗಿತ್ತೋ ಅಥವಾ ಎಲ್ಲಿಯವರೆಗೆ ಅದು ಹೆಗಲೆಣೆಯಾಗಿ ಸಾಗುತ್ತಿತ್ತೋ ಅಲ್ಲಿಯವರೆಗೆ ಭಾಷಾ ಸುಧಾರಣೆಗೆ ಸಂಬಂಧಪಟ್ಟಂತೆ ಉಗ್ರ ಕ್ರಮಗಳನ್ನು ಕೈಗೊಳ್ಳುವ ಅಗತ್ಯ ಚೀನದ ಬುದ್ಧಿಜೀವಿಗಳಿಗೆ ತೋರಲಿಲ್ಲ. ಚೀನದ ಬುದ್ಧಿಜೀವಿಗಳ ಹಾಗೂ ಚೀನೀಭಾಷೆಯ ಹೊನ್ನಿನ ದಿನಗಳೂ ಈಚಿನ ಶತಮಾನಗಳಲ್ಲಿ ಹಿಂದಿನ ಕಥೆಗಳಾಗಿ ಪರಿಣಮಿಸಿದುವು. ಈ ಭಾಷೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆಯಾದರೂ ಚೀನದಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನಗಳ ತೀವ್ರ ಪ್ರಗತಿಗೆ ಇದು ಅಡ್ಡಗಲ್ಲಾಗಿ ಪರಿಣಮಿಸಿದೆಯೆಂಬ ಭಾವನೆ ದಿನೇ ದಿನೇ ಹೆಚ್ಚುತ್ತಿದೆ. ಜ್ಞಾನಸಾಧನೆಯ ಉಪಕರಣವೊಂದರ ಮೇಲೆ ಪ್ರಭುತ್ವವನ್ನು ಸಾಧಿಸಿಕೊಳ್ಳುವುದಕ್ಕಾಗಿ ಚೀನದ ವಿಜ್ಞಾನ ವಿದ್ಯಾರ್ಥಿಗಳು ತುಂಬ ಕಾಲವನ್ನು ವ್ಯಯ ಮಾಡಬೇಕಾಗಿ ಬಂದಿದೆ. ಚೀನೀ ಭಾಷೆಯನ್ನು ಕಲಿಯುವುದು ವಿದೇಶಿಯರಿಗೆ ಎಷ್ಟು ಕಷ್ಟವೋ ಚೀನಿಯರಿಗೂ ವಿದೇಶೀ ಭಾಷೆಯನ್ನು ಕಲಿಯುವುದು ಅಷ್ಟೇ ಕಷ್ಟವಾಗಿ ಪರಿಣಮಿಸಿದೆ. ಹೀಗಾಗಿ, ಚೀನೀ ವೈಜ್ಞಾನಿಕ ಸಂಶೋಧನ ಕ್ಷೇತ್ರದಲ್ಲಿನ ಇತರ ದೇಶಗಳ ಅತ್ಯಾಧುನಿಕ ಸಾಧನೆಗಳಿಂದ ತತ್‌ಕ್ಷಣವೇ ಲಾಭ ಪಡೆಯಲಾರದಂಥ ಸ್ಥಿತಿಯಲ್ಲಿದೆ. ಭಾವಲಿಪಿ ಸಂಬಂಧಿಯಾಗಿರುವ ಚಿಹ್ನೆಗಳನ್ನು ತಂತಿಯ ಮೂಲಕ ಕಳುಹಿಸಲು ಸಾಧ್ಯವಿಲ್ಲ. ಕಾಲ ಮತ್ತು ಶ್ರಮಗಳ ಉಳಿತಾಯವಾಗುವಂತೆ ಅಚ್ಚುಕಟ್ಟಾಗಿರುವ ಬೆರಳಚ್ಚು ಯಂತ್ರವನ್ನು ರೂಪಿಸಲು ಸಾಧ್ಯವಿಲ್ಲ. (ಚೀನದಲ್ಲೇನೋ ತಂತಿ ಕಚೇರಿಗಳೂ ಚೀನೀ ಬೆರಳಚ್ಚು ಯಂತ್ರಗಳೂ ಕೆಲಸ ಮಾಡುತ್ತಿವೆ). ಈಚಿನ ವರ್ಷಗಳಲ್ಲಿ ಚೀನೀಭಾಷೆಯನ್ನು ಲ್ಯಾಟಿನೀಕರಿಸುವ ತೀವ್ರ ಪ್ರಯತ್ನಗಳೂ ನಡೆದಿವೆ.

(ಟಿ.ಸಿ.ಎಚ್.)

**ಚೀನೀ ಮಣ್ಣು :** ಪಿಂಗಾಣಿ ಪಾತ್ರೆಗಳನ್ನು ರಚಿಸಲು ಉಪಯೋಗಿಸುವ ಬಿಳಿಮಣ್ಣು. ಕೆಯೊಲಿನ್ ಪರ್ಯಾಯನಾಮ. ಬಿಳುಪಾದ ಬಣ್ಣ, ಸ್ವಚ್ಛತೆ, ನೀರಿನಲ್ಲಿ ಸುಲಭವಾಗಿ ಕದಡಿಹೋಗುವ ಗುಣ, ಕಬ್ಬಿಣಸಂಬಂಧವಾದ ಯಾವ ಕಲ್ಮಷವೂ ಇಲ್ಲದಿರುವಿಕೆ–ಈ ಲಕ್ಷಣಗಳಿಂದ ಕೆಯೊಲಿನ್ ದರ್ಜೆಯ ಮಣ್ಣುಗಳನ್ನು ಗುರುತಿಸಬಹುದು. ರಾಸಾಯನಿಕವಾಗಿ ಇದು ನೀರಿನ ಅಂಶವನ್ನು ಒಳಗೊಂಡಿರುವ ಅಲುಮಿನಿಯಮ್ ಸಿಲಿಕೇಟ್, $Al_2O_3\ SiO_2\ 2H_2O$. ಶುದ್ಧರೂಪದ ಕೆಯೊಲಿನಿನಲ್ಲಿ 46% ಸಿಲಿಕಾನ್, 40% ಅಲುಮಿನ ಮತ್ತು 14% ನೀರಿನ ಅಂಶ ಇರುತ್ತವೆ. ಇದರ ಸಾಪೇಕ್ಷ ಸಾಂದ್ರತೆ 2.6, ಉಷ್ಣತೆ $1750^0$ C. ಮೀರಿದ ಮೇಲೆ ಇದು ಕರಗುವ ಲಕ್ಷಣ ತೋರಿಸುತ್ತದೆ.

ಸಾಮಾನ್ಯವಾಗಿ ಗ್ರಾನೈಟ್ ಸಂಬಂಧದ ಕಲ್ಲುಗಳು ಕ್ಷಯಿಸುವುದರಿಂದ ಕೆಯೊಲಿನ್ ಉತ್ಪತ್ತಿಯಾಗುತ್ತದೆ. ಪ್ರಪಂಚದ ನಾನಾ ದೇಶಗಳಲ್ಲಿ ಕೆಯೊಲಿನ್ ದೊರೆತರೂ ಉತ್ತಮ ದರ್ಜೆಯದು ಹೇರಳವಾಗಿ ದೊರೆಯುವುದು ಬ್ರಿಟನಿನ ಕಾರನ್‌ವಾಲ್ ಮತ್ತು ದವನ್ ಜಿಲ್ಲೆಗಳಲ್ಲಿ ಹಾಗೂ ಚೆಕೋಸ್ಲೊವಾಕಿಯ, ಜರ್ಮನಿ, ಫ್ರಾನ್ಸ್, ದೇಶಗಳಲ್ಲಿ. ಬ್ರಿಟನಿನಲ್ಲಿ ಉತ್ಪತ್ತಿಯಾಗುವ ಕೆಯೊಲಿನ್ ಪ್ರಪಂಚದ ನಾನಾ ಭಾಗಗಳಿಗೆ ರಫ್ತಾಗುತ್ತದೆ. ಪಿಂಗಾಣಿ ಸಾಮಾನುಗಳ ತಯಾರಿಕೆ, ಕಾಗದ ತಯಾರಿಕೆ, ಉತ್ತಮ ದರ್ಜೆಯ ಮಲ್ಲು ಬಟ್ಟೆಗಳ ತಯಾರಿಕೆ, ಬಿಳುಪು ಬಣ್ಣಗಳನ್ನು ಕೊಡುವಿಕೆ, ಬಟ್ಟೆ ಮತ್ತು ಕಾಗದವನ್ನು ನುಣುಪು ಮಾಡುವಿಕೆ, ಒಳ್ಳೆಯ ಹೊಳಪು ಕೊಡುವಿಕೆ ಮುಂತಾದ ಕಾರ್ಯಗಳಲ್ಲಿ ಚೀನೀ ಮಣ್ಣಿನ ಉಪಯೊಗ ಉಂಟು. ಬಣ್ಣಗಳ ತಯಾರಿಕೆಯಲ್ಲಿ ಹಾಗೂ ರಬ್ಬರ್ ಮತ್ತು ಪ್ಲಾಸ್ಟಿಕುಗಳ ತಯಾರಿಕೆಯಲ್ಲಿ ಕೂಡ ಚೀನೀ ಮಣ್ಣು ಅತಿಶಯವಾಗಿ ಉಪಯೋಗವಾಗುತ್ತದೆ.

ಭಾರತದಲ್ಲಿ ಚೀನೀ ಮಣ್ಣು ಪ್ರಾಯಶಃ ಎಲ್ಲ ರಾಜ್ಯಗಳಲ್ಲೂ ದೊರೆಯುತ್ತದೆ. ಕಾಗದ, ಬಟ್ಟೆ, ಪಿಂಗಾಣಿ, ಕಾವಿಟ್ಟಿಗೆ, ರಬ್ಬರ್ ಮೊದಲಾದ ಕೈಗಾರಿಕೆಗಳು ದೇಶದಲ್ಲಿ ಬೆಳೆದಂತೆಲ್ಲ ಚೀನೀ ಮಣ್ಣಿನ ಕೈಗಾರಿಕೆ ಅಭಿವೃದ್ಧಿಗೊಳ್ಳುತ್ತ ಬಂದಿದೆ. ಉತ್ಪತ್ತಿಯಾದ ಚೀನೀ ಮಣ್ಣಿನ ಕೈಗಾರಿಕೆಗಳಲ್ಲಿ ಉಪಯೋಗವಾಗುತ್ತದೆ. ಎಲ್ಲೊ ಸ್ವಲ್ಪ ಮಟ್ಟಿಗೆ ಅತಿ ಉತ್ತಮ ದರ್ಜೆಯ ಚೀನೀ ಮಣ್ಣು ಮಾತ್ರ ವಿದೇಶದಿಂದ ಆಮದಾಗುತ್ತದೆ. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ 1972 ರಲ್ಲಿ ಉತ್ಪತ್ತಿಯಾದ ಚೀನೀ ಮಣ್ಣಿನ ಪರಿಮಾಣವನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದೆ.

| ರಾಜ್ಯ | ಪರಿಮಾಣ (ಮೆಟ್ರಿಕ್‌ಟನ್ನುಗಳಲ್ಲಿ) |
|---|---|
| ಆಂಧ್ರಪ್ರದೇಶ | 13.278 |
| ಬಿಹಾರ | 18,240 |
| ದೆಹಲಿ | 87,236 |
| ಗುಜರಾತ್ | 2,320 |
| ಹರಿಯಾಣ | 10,640 |
| ಕೇರಳ | 620 |
| ಮಧ್ಯಪ್ರದೇಶ | 11,994 |
| ಮಹಾರಾಷ್ಟ್ರ | 2,009 |
| ಕರ್ನಾಟಕ | 7,853 |
| ಒರಿಸ್ಸ | 1,469 |
| ರಾಜಸ್ಥಾನ | 68,179 |
| ತಮಿಳುನಾಡು | 5,963 |
| ಪಶ್ಚಿಮಬಂಗಾಲ | 15,045 |

1968 ರಿಂದ 1972ರವರೆಗೆ ಚೀನೀ ಮಣ್ಣಿನ ಉತ್ಪಾದನೆ ಭಾರತದಲ್ಲಿ ಯಾವ ರೀತಿ ಬೆಳೆಯುತ್ತ ಬಂದಿದೆಯೆಂಬುದನ್ನು ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿದೆ:

| | ಪರಿಮಾಣ (ಮೆಟ್ರಿಕ್ ಟನ್ನುಗಳು) | ಮೌಲ್ಯ (ರೂಪಾಯಿಗಳಲ್ಲಿ) |
|---|---|---|
| 1968 | 1,77,443 | 18,76,000 |
| 1969 | 1,83,025 | 17,85,000 |
| 1970 | 1,90,994 | 16,95,000 |
| 1971 | 2,21,526 | 21,16,000 |
| 1972 | 2,80,846 | 29,82,000 |

ಗಣಿಯಿಂದ ತೋಡಿದ ಚೀನೀ ಮಣ್ಣನ್ನು ತೊಳೆದು ಶುದ್ಧೀಕರಿಸಬೇಕಾಗುತ್ತದೆ. ಮಣ್ಣನ್ನು ನೀರಿನಲ್ಲಿ ಮಿಶ್ರಮಾಡಿ ಬೇರೆ ಬೇರೆ ಹಂತಗಳಲ್ಲಿ ತೊಳೆಯುವುದರಿಂದ ಅದರಲ್ಲಿ ಬೆರೆತಿರುವ ಬೆಣಚು, ಮರಳು, ಕಲ್ಮಷಗಳೆಲ್ಲವೂ ಕಳೆದು ಶುದ್ಧ ಬಿಳಿಯ ಮಣ್ಣು ಹಾಲಿನ ಕೆನೆಯಂತೆ ಕೊನೆಗೆ ಉಳಿಯುತ್ತದೆ. ಇದನ್ನು ಬಟ್ಟೆಯ ಮಧ್ಯೆ ಒತ್ತಿ ನೀರೆಲ್ಲವನ್ನೂ ತೆಗೆದು ಒಣಗಿಸಿ ಮಾರಾಟಕ್ಕಾಗಿ ಸಿದ್ಧಪಡಿಸುತ್ತಾರೆ. ಕರ್ನಾಟಕದಲ್ಲಿ ಈ ರೀತಿ ಮಣ್ಣನ್ನು ಶುದ್ಧೀಕರಿಸುವ ಕಾರ್ಖಾನೆಗಳು ಹಾಸನ ಜಿಲ್ಲೆಯ ಬಾಗೇಶಪುರದ ಬಳಿಯೂ, ತೀರ್ಥಹಳ್ಳಿಯ ದೇವಂಗಿ ಬಳಿಯೂ ಇವೆ. ಶುದ್ಧೀಕರಿಸಿದ ಚೀನೀ ಮಣ್ಣಿನ ರಾಸಾಯನಿಕ ಲಕ್ಷಣಗಳು ಈ ಕೆಳಗಿನಂತಿವೆ:

| | ಶೇಕಡಾವಾರು |
|---|---|
| ಸಿಲಿಕ | 46–48 |
| ಅಲುಮಿನ | 38–39 |
| ಕಬ್ಬಿಣ ಆಮ್ಲ | 0.4–0.6 |
| ಟೈಟೇನಿಯಮ್ ಆಮ್ಲ | 0.2–0.4 |
| ಇತರ | 0.2–0.4 |
| ನೀರಿನ ಅಂಶ | 12–14 |

ಕರ್ನಾಟಕದಲ್ಲಿ ಚೀನೀ ಮಣ್ಣಿನ ನಿಕ್ಷೇಪಗಳ ಕೆಲಸ ಮುಖ್ಯವಾಗಿ ನಡೆಯುತ್ತಿರುವುದು ಹಾಸನ ಜಿಲ್ಲೆಯ ಬಾಗೇಶಪುರ ಮತ್ತು ಶಿವಮೊಗ್ಗ ಜಿಲ್ಲೆಯ ದೇವಲಗಿ ಬಳಿ. ಇಲ್ಲಿನ ಗಣಿಗಳನ್ನು ಮೈಸೂರು ಮಿನರಲ್ಸ್ ಸಂಸ್ಥೆ ನಡೆಸುತ್ತಿದೆ. ಕರ್ನಾಟಕದ ನಾನಾ ಜಿಲ್ಲೆಗಳಲ್ಲಿ ಚೀನಿ ಮಣ್ಣು ದೊರೆಯುವ ಮುಖ್ಯ ಸ್ಥಳಗಳನ್ನು ಕೆಳಗಿನ ಪಟ್ಟಿಯಲ್ಲಿ ಹೆಸರಿಸಿದೆ.

| | |
|---|---|
| ಬೆಂಗಳೂರು | ಗೊಲ್ಲರಹಳ್ಳಿ |
| ಬೆಳಗಾವಿ | ಕಾರಲಗಿ, ಖಾನಾಪುರ |
| ಚಿತ್ರದುರ್ಗ | ಭೀಮಸಮುದ್ರ |
| ಧಾರವಾಡ | ಮಾಸೂರು,ಶೇಷಗಿರಿ,ಅಡೂರು |
| ಹಾಸನ | ಬಾಗೇಶಪುರ, ನಂದೀಹಳ್ಳಿ |
| ಕೋಲಾರ | ಗೋಕುಂಟ, ಕರಡಿಬಂಡೆ |
| ಶಿವಮೊಗ್ಗ | ದೇವಂಗಿ,ಹೊಸನಗರ,ಆನಂದಪುರ |
| ದಕ್ಷಿಣ ಕನ್ನಡ | ಗುರುವಾಯನ ಕೆರೆ, ಉಳ್ಳಾಲ |
| ಬೀದರ್ | ಕಮಧಾನ |

(ಬಿ.ಪಿ.ಆರ್.)

**ಚೀನೀ ಯಾತ್ರಿಕರು (ಭಾರತದಲ್ಲಿ) :** ಬೌದ್ಧ ಯಾತ್ರಾಸ್ಥಳಗಳನ್ನು ಸಂದರ್ಶಿಸಿ ಬುದ್ಧನಿಗೆ ಸಂಬಂಧಿಸಿದ ಪಳೆಯುಳಿಕೆಗಳನ್ನೂ ಬೌದ್ಧ ಗ್ರಂಥಗಳನ್ನೂ ಸಂಗ್ರಹಿಸಿ ತಮ್ಮ ದೇಶಕ್ಕೆ ಕೊಂಡೊಯ್ಯುವ ಉದ್ದೇಶದಿಂದ ಭಾರತಕ್ಕೆ ಭೇಟಿ ಕೊಟ್ಟ ಚೀನೀ ಬೌದ್ಧರು. ಪ್ರ.ಶ. 5, 6, 7 ಮತ್ತು 8ನೆಯ ಶತಮಾನಗಳಲ್ಲಿ ಭಾರತಕ್ಕೆ ಭೇಟಿ ಕೊಟ್ಟ ಚೀನೀ ಯಾತ್ರಿಕರಲ್ಲಿ ಕನಿಷ್ಠ ಪಕ್ಷ 162 ಮಂದಿ ಯಾತ್ರಿಕರಾದರೂ ತಮ್ಮ ಪ್ರವಾಸಗಳನ್ನು ಕುರಿತ ಪ್ರಾಮಾಣಿಕ ದಾಖಲೆಗಳನ್ನೂ ಭಾರತೀಯ ಜೀವನದ ಸಮಸ್ತ ಅಂಶಗಳ ಬಗ್ಗೆ ಅಮೂಲ್ಯ ಪ್ರತ್ಯಕ್ಷದರ್ಶಿ ವರದಿಗಳನ್ನೂ ಬಿಟ್ಟು ಹೋಗಿದ್ದಾರೆ. ಈ ವರದಿಗಳ ಬೆಳಕಿನಲ್ಲಿ ಭಾರತೀಯ ಜನಜೀವನದ ಚಿತ್ರವನ್ನು ಪುನಾರಚಿಸುವುದು ಹಾಗೂ ಅದಕ್ಕೆ ಮತ್ತೆ ಬೆಲೆಕಟ್ಟುವುದು ಸಾಧ್ಯವಾಗಿರುವುದು ಮಾತ್ರವಲ್ಲ, ಅಗತ್ಯವೂ ಆಗಿದೆ.

ಅಶೋಕನ ಕಾಲದಲ್ಲಿ ಭಾರತದಲ್ಲಿ ಹರಡಿದ್ದ ಬೌದ್ಧಮತ, ಚೀನದಲ್ಲಿ ಉತ್ತರ ಹಾನ್ ವಂಶದ ಚಕ್ರವರ್ತಿ ಮಿಂಗನ (58–75) ಆಡಳಿತದ ಅವಧಿಯಲ್ಲಿ ಚೀನದಲ್ಲೂ ಪ್ರಚಾರಕ್ಕೆ ಬಂತು. ಮಧ್ಯ ಏಷ್ಯದ ರಾಷ್ಟ್ರಗಳ ಹಾಗೂ ಸಮುದ್ರಮಾರ್ಗಗಳ ಮೂಲಕ ಪ್ರವರ್ಧಮಾನವಾಗಿದ್ದ ಭಾರತ–ಚೀನ ವ್ಯಾಪಾರ ಸಂಪರ್ಕಗಳಿಂದಾಗಿ ಬುದ್ಧನ ಉಪದೇಶಗಳ ಪ್ರಸಾರಕ್ಕೆ ಅನುಕೂಲ ಒದಗಿ ಬಂತು. ಎರಡು, ಮೂರು ಮತ್ತು ನಾಲ್ಕನೆಯ ಶತಮಾನಗಳಲ್ಲಿ ಅನೇಕ ಭಾರತೀಯ ಭಿಕ್ಷುಗಳು ಅಪಾರ ಕಷ್ಟ ಸಂಕಟಗಳನ್ನು ಎದುರಿಸಿ ಚೀನಕ್ಕೆ ಪ್ರಯಾಣ ಮಾಡಿದರು. ತಮ್ಮ ಜೀವನದ ಬಹುಭಾಗವನ್ನು ಬೌದ್ಧ ಧರ್ಮಗ್ರಂಥಗಳ ಭಾಷಾಂತರಕ್ಕಾಗಿ ಮೀಸಲಾಗಿಟ್ಟರು. ಭಾರತ ಮತ್ತು ಇತರ ದೇಶಗಳಲ್ಲಿ ತಾವು ಕೈಗೊಂಡ ಪ್ರವಾಸಗಳ ಬಗ್ಗೆ ಐತಿಹಾಸಿಕ ದಾಖಲೆಗಳನ್ನು ಬಿಟ್ಟುಹೋಗಿರುವ ಚೀನೀ ಯಾತ್ರಿಕರಲ್ಲಿ ಮೊದಲಿಗನಾದ ಫಾಹಿಯನ್ನನ ಕಾಲಕ್ಕೆ ಮೊದಲೇ ಕನಿಷ್ಠ ಪಕ್ಷ ಇಪ್ಪತ್ತೈದು ಮಂದಿ ಭಾರತೀಯ ಭಿಕ್ಷುಗಳು ಈ ಕಾರ್ಯದಲ್ಲಿ ನಿರತರಾಗಿದ್ದರು. ಕುಮಾರಜೀವನೆಂಬ ಪ್ರಸಿದ್ಧ ಭಾರತೀಯ ಭಿಕ್ಷು (344–413) ಚಾಂಗನ್ ಎಂಬಲ್ಲಿ 800 ಮಂದಿ ಪ್ರಸಿದ್ಧ ವಿದ್ವಾಂಸ ಭಿಕ್ಷುಗಳನ್ನೊಳಗೊಂಡಿದ್ದ ಭಾಷಾಂತರ ವಿಭಾಗವೊಂದನ್ನು ಸಂಘಟಿಸಿದ್ದ ; 300 ಕ್ಕೂ ಹೆಚ್ಚು ಸಂಪುಟಗಳನ್ನು ಸಿದ್ಧಪಡಿಸಿದ.

ಚೀನವನ್ನು ತಲುಪಿದ ಪ್ರಾಚೀನ ಬೌದ್ಧ ಧರ್ಮಗ್ರಂಥಗಳಲ್ಲಿ ಬಹುಪಾಲಿನವು ಮಧ್ಯ ಏಷ್ಯದ ರಾಜ್ಯಗಳಿಂದ ಬಂದವು. ಚೀನದಲ್ಲಿ ಬೌದ್ಧ ಧರ್ಮದ ಪ್ರಾಚುರ್ಯ ಹೆಚ್ಚುತ್ತ ಬಂದಂತೆ ಭಿಕ್ಷುಗಳಿಂದಲೂ ಚೀನೀ ರಾಜರಿಂದಲೂ ಹೆಚ್ಚಿನ ಹಾಗೂ ಮತ್ತಷ್ಟು ಪ್ರಾಮಾಣಿಕವಾದ ಶಾಸ್ತ್ರಗ್ರಂಥಗಳಿಗೆ ತುರ್ತಿನ ಬೇಡಿಕೆಯುಂಟಾಯಿತು. ಇದು ಸಾಹಸಶೀಲರಾದ ಚೀನೀ ಭಿಕ್ಷುಗಳ ಪ್ರಸಿದ್ಧ ಯಾತ್ರೆಗಳ ಪ್ರವಾಹಕ್ಕೆ ಕಾರಣವಾಯಿತು. ಇವರು ಮರಳುಗಾಡನ್ನೂ ಬೆಟ್ಟಗುಡ್ಡಗಳನ್ನೂ ದಾಟಿ ಸಾವಿರಾರು ಮೈಲಿಗಳ ಪ್ರಯಾಣವನ್ನು ಕೈಗೊಳ್ಳಬೇಕಾಗಿತ್ತು. ಆಧ್ಯಾತ್ಮಿಕ ಲಾಭದ ಜೊತೆಗೆ, ಪ್ರಮಾಣಬದ್ಧ ಶಾಸ್ತ್ರಗಂಥಗಳನ್ನು ಸಂಪಾದಿಸುವುದೂ ಮತ್ತು ಬೌದ್ಧ ಸಂಪ್ರದಾಯ ಹಾಗೂ ಆಚಾರವಿಚಾರಗಳ ಪ್ರತ್ಯಕ್ಷ ಪರಿಚಯ ಪಡೆದುಕೊಳ್ಳುವುದೂ ದೇಶೀಯ ಟೌ ಪಂಥದ ನಂಬಿಕೆಗಳಿಂದಲೂ ನಡವಳಿಕೆಗಳಿಂದಲೂ ಅತಿಯಾಗಿ ಕಲುಷಿತವಾಗಿದ್ದ ಚೀನೀ ಬೌದ್ಧ ಧರ್ಮವನ್ನು ಶುದ್ಧೀಕರಿಸುವುದೂ ಅದರಲ್ಲಿ ಸುಧಾರಣೆಗಳನ್ನುಂಟುಮಾಡುವುದೂ ಇವರ ಧ್ಯೇಯವಾಗಿತ್ತು.

ಭಾರತದಲ್ಲಿಯ ತನ್ನ ಪ್ರವಾಸದ ವಿವರಗಳನ್ನು ಬರೆದಿಟ್ಟಿರುವ ಮೊದಲ ಚೀನೀ ಯಾತ್ರಿಕನೆಂದರೆ ಚಿ–ಟೌ–ಅನ್. ನಾಲ್ಕನೆಯ ಶತಮಾನದ ಆರಂಭದ ಅವಧಿಯಲ್ಲಿ ಎಂದರೆ ಫಾಹಿಯನ್ ಭಾರತಕ್ಕೆ ಆಗಮಿಸುವುದಕ್ಕಿಂತ ಸು. 80 ವರ್ಷ ಹಿಂದೆ–ಈತ ಭಾರತಪ್ರವಾಸ ಮಾಡಿದ. ಪಾಶ್ಚಾತ್ಯ ರಾಷ್ಟ್ರಗಳ (ಭಾರತ) ವಿವರಣೆ ಎಂಬ ಪುಸ್ತಕವನ್ನು ಈತ ರಚಿಸಿದ್ದುದಾಗಿ ತಿಳಿದುಬಂದಿದೆ. ಈ ಪುಸ್ತಕ ಬಹುಶಃ ನಷ್ಟವಾಗಿದೆ. ಚೀನೀ ವಿಶ್ವಕೋಶಗಳಲ್ಲೂ ಜೀವನಚರಿತೆಗಳಲ್ಲೂ ಲಭ್ಯವಿರುವ ಇದರ ಸಂಕ್ಷಿಪ್ತ ಉಲ್ಲೇಖಗಳಿಂದ ಇದರ ಸ್ವರೂಪವನ್ನು ಊಹಿಸಬಹುದಾಗಿದೆ. ಚಿ–ಟೌ–ಅನ್ ಅನಂತರ ಬಂದವನು ಫಾಹಿಯನ್. ಈತನ ಫೋಎ ಕೊಉಎ ಕಿ (ಬೌದ್ಧ ರಾಷ್ಟ್ರಗಳನ್ನು ಕುರಿತ ದಾಖಲೆಗಳು) ಎಂಬ ಪ್ರಸಿದ್ಧ ಗ್ರಂಥ ಇಂದು ಉಪಲಬ್ಧವಿರುವ ಈ ಬಗೆಯ ದಾಖಲೆಗಳಲ್ಲಿ ಅತ್ಯಂತ ಪ್ರಾಚೀನವಾದ್ದು. ಫಾಹಿಯನ್ ಮೂವತ್ತು ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದ ; 399–414 ರಲ್ಲಿ ಭಾರತದಲ್ಲಿದ್ದ ಫಾಹಿಯನ್ನನ ಅನಂತರ ಸು. 100 ವರ್ಷಗಳ ತರುವಾಯ ಹೊಎಇ–ಸೊಂಗ್ ಮತ್ತು ಸುಂಗ್–ಯುನ್ ಎಂಬ ಇಬ್ಬರು ಯಾತ್ರಿಕರು ಸಾಮ್ರಾಜ್ಞಿಯೊಬ್ಬಳ ಸೂಚನೆಯ ಮೇರೆಗೆ ಭಾರತಕ್ಕೆ ಭೇಟಿ ಕೊಟ್ಟಿದ್ದರು. ಅವರು ತಮ್ಮ ಪ್ರವಾಸದ ನೆನಪುಗಳನ್ನು ಕುರಿತ ಪುಸ್ತಕ ಬರೆದಿದ್ದಾರೆ. ಈ ಭಿಕ್ಷುಗಳ ಸಂಚಾರ ಬಹುಮಟ್ಟಿಗೆ ಉತ್ತರಭಾರತಕ್ಕೆ ಸೀಮಿತವಾಗಿತ್ತು. ಉದಯನನ ಸಾಮ್ರಾಜ್ಯದಲ್ಲಿ (ಇಂದಿನ ಲದ್ದಾಖ್) ಇವರು ಎರಡು ವರ್ಷ ಕಳೆದರು. 629–646 ರಲ್ಲಿ ಯುವಾನ್–ಚ್ವಾಂಗ್ ಐತಿಹಾಸಿಕ ಯಾತ್ರೆಯೊಂದನ್ನು ಕೈಗೊಂಡ. ಸಿ–ಯು–ಕಿ (ಪಾಶ್ಚಾತ್ಯ ರಾಷ್ಟ್ರಗಳನ್ನು ಕುರಿತ ವೃತ್ತಾಂತಗಳು) ಎಂಬ ಪ್ರಸಿದ್ಧ ಕೃತಿಯನ್ನು ಈತ ರಚಿಸಿದ್ದಾನೆ. ಇದು ಫಾಹಿಯನನ ಕೃತಿಯ ಸು. 10–12ರಷ್ಟು ವಿಸ್ತಾರವಾಗಿದೆಯೆಂದು ಹೇಳಲಾಗಿದೆ. ವೈಜ್ಞಾನಿಕ ನಿಷ್ಪಕ್ಷಪಾತ ಹಾಗೂ ವೈವಿಧ್ಯದ ದೃಷ್ಟಿಯಿಂದ ಈ ಕೃತಿ ಈ ಬಗೆಯ ದಾಖಲೆಗಳಲ್ಲೇ ಅತ್ಯಂತ ಬೋಧಪ್ರದವಾದ್ದು.

ಸು. ಇಪ್ಪತ್ತಾರು ವರ್ಷಗಳ ತರುವಾಯ–671ರಲ್ಲಿ–ಇತ್ಸಿಂಗ್ ಎಂಬ ಮತ್ತೊಬ್ಬ ಸಾಹಸಿ ಭಿಕ್ಷು ಭಾರತಯಾತ್ರೆ ಕೈಗೊಂಡ. ಈತ ಸಮುದ್ರಮಾರ್ಗವಾಗಿ ಬಂದು ಆ ಮಾರ್ಗವಾಗಿಯೇ ತೆರಳಿದ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೌದ್ಧ ಧರ್ಮದ ಅನ್ವೇಷಣೆಗಾಗಿ ಹೊರಟ ಪ್ರಸಿದ್ಧ ಭಿಕ್ಷುಗಳ ವೃತ್ತಾಂತಗಳನ್ನು ಹಾಗೂ ಭಾರತ ಮತ್ತು ಮಲಯ ದ್ವೀಪಸ್ತೋಮದಲ್ಲಿ ಪ್ರಚುರವಾಗಿರುವ ಬೌದ್ಧಧರ್ಮವನ್ನು ಕುರಿತ ಎರಡು ಕೃತಿಗಳನ್ನು ಈತ ಬಿಟ್ಟು ಹೋಗಿದ್ದಾನೆ. ಇವು ಸ್ವಾರಸ್ಯಪೂರ್ಣವಾದವು. ಇತರ ಕೃತಿಗಳಿಗಿಂತ ಚಿಕ್ಕವು. ಕೊನೆಯದಾಗಿ ದೊರಕುವ ಪ್ರವಾಸಕಥನವೆಂದರೆ ಖಿ–ನಿಯೆ ಎಂಬುವನದು. ಇವನು ಸಮ್ರಾಟನ ಸೂಚನೆಯ ಮೇರೆಗೆ ನಿಯೋಗವೊಂದರ ನಾಯಕನಾಗಿ 964ರಲ್ಲಿ ಚೀನದಿಂದ ಹೊರಟ. ಇವನ ಸಂಗ್ರಹಲೇಖಗಳು ವ್ಯಾಖ್ಯಾನಗ್ರಂಥವೊಂದರಲ್ಲಿ ಉಪಲಬ್ಧವಾಗಿವೆ.

ಈ ಭಿಕ್ಷು–ಯಾತ್ರಿಕರೇ ಅಲ್ಲದೆ ಸೇನಾಧಿಕಾರಿಗಳ ಹಾಗೂ ಸಾಮ್ರಾಜ್ಯಾಧಿಕಾರಿಗಳ ನಿಯೋಗಗಳೂ ಪ್ರವಾಸ ಕೈಗೊಂಡಿದ್ದುವು. ಆ ನಿಯೋಗಿಗಳೂ ಹಿಂದಿರುಗುವಾಗ ತಮ್ಮೊಂದಿಗೆ ಉಪಯುಕ್ತ ದಾಖಲೆಗಳನ್ನು ಚೀನಕ್ಕೆ ತಂದರು.

ಆರೇಳು ಶತಮಾನಗಳ ಅವಧಿಯಲ್ಲಿ ಭಾರತದಿಂದ ತೆಗೆದುಕೊಂಡು ಬಂದ ಕೃತಿಗಳ ಸಂಖ್ಯೆ ಎಷ್ಟು ಹೆಚ್ಚಿತೆಂದರೆ, ಅವುಗಳ ಸೂಚಿಗಳನ್ನು ಸಿದ್ಧಪಡಿಸುವುದು ಅನಿವಾರ್ಯವಾಯಿತು. ಅನುಕ್ರಮವಾಗಿ 730, 788, 1011, 1037 ಮತ್ತು 1306ರಲ್ಲಿ ಸೂಚಿಗಳು ಹೊರಬಂದುವು. (ಬಿ.ಟಿ.)

**ಚೀನೀ ವಾಸ್ತು :** ಚೀನದ ನಾಗರಿಕತೆ ಬಹಳ ಪುರಾತನವಾದ್ದಾದರೂ ಅದರ ಕಲೆಯ ಇತಿಹಾಸದ ಪುರಾವೆಗಳು ಪ್ರಾರಂಭಕಾಲದಿಂದ ದೊರಕುತ್ತಿದ್ದರೂ ಅಲ್ಲಿಯ ವಾಸ್ತುಕೃತಿಗಳ ಅವಶೇಷಗಳು ಅಖಂಡವಾಗಿ ಕಂಡುಬರುವುದು 14ನೆಯ ಶತಮಾನದ ಮಿಂಗ್ ರಾಜವಂಶದ ಆಳ್ವಿಕೆಯ ಕಾಲದಿಂದಲೇ. ಆ ವೇಳೆಗೆ ಚೀನೀ ವಾಸ್ತುವಿನ ರೀತಿನಿಯಮಗಳು ನಿರ್ದಿಷ್ಟ ರೂಪ ಪಡೆದು, ಪರಾಕಾಷ್ಠೆ ತಲುಪಿ, ಕ್ರಮೇಣ ಅವನತಿಯಾಗಿದ್ದವು. ಸಾಮಾನ್ಯವಾಗಿ ಚೀನದ ಪುರಾತನ ವಾಸ್ತು ಕೃತಿಗಳು ಶೀಘ್ರವಾಗಿ ನಾಶವಾಗುವ ಮಣ್ಣು ಮತ್ತು ಮರದಿಂದ ನಿರ್ಮಿತವಾಗಿದ್ದುದರಿಂದ ಕಣ್ಮರೆಯಾಗಿವೆ. ಆದರೂ ಪ್ರಾಚೀನ ಕಾಲದ ಹಲವಾರು ವಾಸ್ತುರಚನೆಗಳ ಬಗ್ಗೆ ಲಭ್ಯವಿರುವ ಸಾಹಿತ್ಯಕ ಆಧಾರಗಳಿಂದಲೂ, ಅವುಗಳ ಮಾದರಿಯಲ್ಲಿ ಜಪಾನ್ ಮತ್ತು ಕೊರಿಯಗಳಲ್ಲಿ ನಿರ್ಮಾಣವಾಗಿ ಉಳಿದು ಬಂದಿರುವ ಅವಶೇಷಗಳಿಂದಲೂ ಅವನ್ನು ಕುರಿತ ಅನೇಕ ಮಾಹಿತಿಗಳು ದೊರಕುತ್ತವೆ. ಭೂಮಿಯಲ್ಲಿ ಹೂತುಹೋಗಿದ್ದ ಮತ್ತು ಅಲ್ಲಲ್ಲಿ ಉಳಿದು ಬಂದಿರುವ ವಾಸ್ತು ನಿರ್ಮಾಣಗಳ ಪರಿಚಯ ಈಚೆಗೆ ನಡೆಯುತ್ತಿರುವ ಪ್ರಾಕ್ತನಶಾಸ್ತ್ರೀಯ ಅಧ್ಯಯನಗಳಿಂದ ಆಗುತ್ತದೆ. ಈ ಎಲ್ಲ ಆಧಾರಗಳ ಆಳವಾದ ಸಮೀಕ್ಷೆಯಿಂದ ಚೀನೀ ವಾಸ್ತು ಇತಿಹಾಸವನ್ನು ಪುನಾರಚಿಸಬೇಕಾಗುತ್ತದೆ.

ಹೋನ್ಯಾನ್ ಪ್ರಾಂತ್ಯದ ಆಗಿನ ರಾಜಧಾನಿ ಅನ್ಯಾಂಗ್ ಬಳಿ ನಡೆದ ಉತ್ಖನನಗಳಲ್ಲಿ ಷಾಂಗ್ ವಂಶದ (ಪ್ರಶ.ಪೂ.1300–1028) ರಾಜಧಾನಿಯ ಕೆಲವು ಕಟ್ಟಡಗಳ ಅವಶೇಷಗಳು ದೊರಕಿವೆ. ಅವುಗಳಲ್ಲಿ ಹೆಚ್ಚು ಸಾಲುಮರದಲ್ಲಿ ನಿರ್ಮಿತವಾಗಿದ್ದುವು. ಅವು ನಾಶವಾಗಿವೆ. ಆದರೆ ಮಣ್ಣಿನ ವೇದಿಕೆಯ ಅಡಿಪಾಯದ ನಕ್ಷೆ ಮತ್ತು ಮರದ ಕಂಬಗಳಿಗಾಗಿ ಒದಗಿಸಿದ್ದ ಕಲ್ಲಿನ ಆಧಾರಗಳು ದೊರಕಿವೆ. ಈ ವಿವರಗಳಿಂದ ತಿಳಿದುಬರುವಂತೆ, ಒಂದು ದೊಡ್ಡ (27ಮೀ. ಉದ್ದ) ಆಯಾಕಾರದ ಹಜಾರವಿತ್ತು. ಈ ತಳಕಟ್ಟಿನ ನಕ್ಷೆ ಚೀನದ ಅನಂತರ ಕಾಲದ ಕಟ್ಟಡಗಳ ಅಡಿಪಾಯವನ್ನು ಹೋಲುವುದರಿಂದ ಇತಿಹಾಸದುದ್ದಕ್ಕೂ ಈ ಪದ್ಧತಿ ಮುಂದುವರಿಯಿತೆಂದು ಹೇಳಬಹುದು. ಎರಡು ಪ್ರಮುಖ ಅಂಶಗಳೆಂದರೆ ಗ್ರಾಮ ಅಥವಾ ನಗರದ ಸುತ್ತಲಿನ ಕೆಳಭಾಗದಲ್ಲಿ 3.6ಮೀ. ದಪ್ಪದ ಮಣ್ಣಿನ ಪೌಳಿಗೋಡೆ, ಪ್ರಮುಖ ಕಟ್ಟಡಗಳಿಗಾಗಿ ನಿರ್ಮಿಸುತ್ತಿದ್ದ ಮಣ್ಣಿನ ವೇದಿಕೆ–ಇವು ಆ ಕಾಲದಲ್ಲಿ ರೂಢಿಗೆ ಬಂದ ಎರಡು ಪ್ರಮುಖ ಅಂಶಗಳೆಂಬುದನ್ನು ಮತ್ತೆ ನಡೆಸಿದ ಉತ್ಖನನಗಳಲ್ಲಿ ದೊರೆತ ಮಾಹಿತಿಗಳಿಂದ ಊಹಿಸಬಹುದಾಗಿದೆ. ಚೀನೀ ವಾಸ್ತು ನಿರ್ಮಾಣಗಳ ನಿರಂತರ ಲಕ್ಷಣಗಳಾಗಿ ಇವು ಮುಂದುವರಿದುವು. ಕೋಟೆ ಗೋಡೆಗಳಲ್ಲಿ ಅಲ್ಲಲ್ಲಿ ಕಾವಲುಗಾರರಿಗಾಗಿ ಬತೇರಿಗಳನ್ನು ಕಟ್ಟಲಾಗುತ್ತಿತ್ತು. ಕಟ್ಟಡಗಳನ್ನು ಸಾಮಾನ್ಯವಾಗಿ ದಕ್ಷಿಣಾಭಿಮುಖವಾಗಿ ನಿರ್ಮಿಸುತ್ತಿದ್ದರು. ಅನ್ಯಾಂಗ್‌ನಲ್ಲಿರುವ ಸಮಾಧಿಗಳು ಭೂಮಟ್ಟದಿಂದ 12ಮೀ. ಆಳದಲ್ಲಿ, ನಾಲ್ಕು ಪಾರ್ಶ್ವಗಳಿಂದಲೂ ಸೋಪಾನಗಳಿದ್ದ, ಚಚ್ಚೌಕವಾದ ಮರದ ಹಲಗೆಗಳಿಂದ ನಿರ್ಮಿಸಿದ ಗೋಡೆಗಳುಳ್ಳ, ಒಬ್ಬ ಮನುಷ್ಯನೆತ್ತರದ ಕೋಣೆಗಳಾಗಿರುತ್ತಿದ್ದುವು. ದಕ್ಷಿಣದ ಸೋಪಾನಗಳು ವಿಶಾಲವಾಗಿರುತ್ತಿದ್ದುವು ; ಕಡಿದಾಗಿರುತ್ತಿರಲಿಲ್ಲ. ಉಳಿದ ಮೂರು ದಿಕ್ಕುಗಳ ಸೋಪಾನಗಳು ಇಕ್ಕಟ್ಟಾಗಿಯೂ ಕಡಿದಾಗಿಯೂ ಇರುತ್ತಿದ್ದುವು. ಮನೆಗಳ ಚಾವಣಿಗಳು ಸಾಮಾನ್ಯವಾಗಿ ಹುಲ್ಲಿನವು.

ಉತ್ತರ ಚೀನದಲ್ಲಿ ಷಾಂಗ್ ಮತ್ತು ಅದಕ್ಕೂ ಹಿಂದಿನ ಕಾಲದಲ್ಲಿ ಭೂಮಿಯೊಳಗೆ ಅಗೆದು ನಿರ್ಮಿಸಿದ ಗುಂಡಿಮನೆಗಳಲ್ಲಿ ಅಥವಾ ಹುಲ್ಲು–ಎಲೆಗಳಿಂದ ನಿರ್ಮಿಸಿದ ದೊಡ್ಡ ಗೂಡುಗಳಲ್ಲಿ ಅಥವಾ ಪರ್ವತಪ್ರದೇಶಗಳ ಗುಹೆಗಳಲ್ಲಿ ಜನರು ವಾಸಿಸುತ್ತಿದ್ದುದಾಗಿ ಸಾಹಿತ್ಯಾಧಾರಗಳಿಂದ ತಿಳಿಯುತ್ತದೆ. ಗುಂಡಿಮನೆಗಳ ಚಾವಣಿಯನ್ನು ಭೂಮಟ್ಟದಿಂದ ಮೇಲೆ ಎಲೆ ಅಥವಾ ಹುಲ್ಲಿನಿಂದ ಮಾಡಲಾಗುತ್ತಿತ್ತು. ಈಗಲೂ ಗುಂಡಿಮನೆ ಅಥವಾ ಗುಹೆಗಳಲ್ಲಿ ವಾಸಿಸುತ್ತಿರುವ ಜನ ಆ ಪ್ರದೇಶದಲ್ಲಿ ಕಾಣಬರುತ್ತಾರೆ. ದುಷ್ಟಮೃಗಗಳ, ಹಾವುಗಳ ಮತ್ತು ಪ್ರವಾಹಗಳ ಬಾಧೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಎತ್ತರವಾದ ಮರದ ಅಟ್ಟಣೆಗಳ ಮೇಲೆ ಹುಲ್ಲು–ಎಲೆಗಳಿಂದ ನಿರ್ಮಿಸಿದ ದೊಡ್ಡ ಗೂಡುಮನೆಗಳಲ್ಲಿ (ಬೆಚ್ಚಗಿನ ಹವೆಯಲ್ಲಿ) ವಾಸಿಸುತ್ತಿದ್ದರು. ದಕ್ಷಿಣ ಚೀನದ ಉಷ್ಣಪ್ರದೇಶದಲ್ಲಿ ಈಚಿನವರೆಗೂ ಇಂಥ ವಸತಿಗಳು ಬಳಕೆಯಲ್ಲಿದ್ದುವು.

ಚೌ ವಂಶದ (ಪ್ರ.ಶ. ಪೂ. 1027–256) ಕೊನೆಯ ಕಾಲದಲ್ಲಿ ಗೋಡೆಗಳ, ವೇದಿಕೆಗಳ ಮತ್ತು ಚಾವಣಿಯ ಹೆಂಚುಗಳ ಅವಶೇಷಗಳು ಉತ್ಖನನಗಳಲ್ಲಿ ಕಂಡುಬಂದಿವೆ. ಅವನ್ನು ಬಿಟ್ಟರೆ ಆ ಕಾಲದ ವಾಸ್ತು ನಿರ್ಮಿತಿಗಳ ಬಗ್ಗೆ ಕೇವಲ ಸಾಹಿತ್ಯಕ ಆಧಾರಗಳು ಮಾತ್ರ ದೊರೆಯುತ್ತವೆ. ಅವುಗಳಿಂದ ಹೆಚ್ಚು ಮಾಹಿತಿಗಳು ಸಿಕ್ಕುವುದಿಲ್ಲ. ಆಗಿನ ಕಟ್ಟಡಗಳಲ್ಲಿ ಅರಮನೆಗಳು, ಪುರಾತನ ಸ್ಮಾರಕ ಮಂದಿರಗಳು ಮುಖ್ಯವಾದವು. ಮರಗಳಿಂದ ನಿರ್ಮಿಸಿದ ಆ ಕಟ್ಟಡಗಳು ವಿಶಾಲವಾಗಿಯೂ ಕೌಶಲಪೂರ್ಣವಾಗಿಯೂ ಇದ್ದುವು. ಅವುಗಳ ದೊಡ್ಡ ಕಂಬಗಳು, ವಿಶಾಲವಾದ ಹಜಾರಗಳು, ಪ್ರಾಂಗಣಗಳು ಗಮನಾರ್ಹವಾಗಿದ್ದುವು. ಕಟ್ಟಡಗಳ ಅಲಂಕರಣಕ್ಕೆ ಪ್ರಾಧಾನ್ಯ ನೀಡಲಾಗಿತ್ತು. ವ್ಯಕ್ತಿಗಳ ಸಾಮಾಜಿಕ ಅಂತಸ್ತುಗಳಿಗನುಸಾರವಾಗಿ ಅವರ ವಾಸಗೃಹಗಳು ವಿಶಾಲವಾಗಿಯೂ ಅಲಂಕಾರಯುತ ವಾಗಿಯೂ ವಿವಿಧ ಬಣ್ಣಗಳಿಂದ ಚಿತ್ರಿತವಾಗಿಯೂ ಇರಬೇಕಾಗಿತ್ತು. ರಾಜರ, ಶ್ರೀಮಂತವರ್ಗದವರ ಅರಮನೆಗಳ ಮೇಲೆ ಕಾವಲುಗಾರ ಗೋಪುರಗಳಿರುತ್ತಿದ್ದುವು. ಕ್ರಿಸ್ತಪೂರ್ವಕಾಲದಲ್ಲಿ ಮಿಂಗ್–ಟ್ಯಾಂಗ್ ಅಥವಾ ಸ್ವರ್ಗಸದೃಶವಾದ, ಹುಲ್ಲಿನ ಚಾವಣಿಯಿದ್ದ, ಕಟ್ಟಡಗಳಲ್ಲಿ ರಾಜರು ವಾಸಿಸುತ್ತಿದ್ದರಲ್ಲದೆ ತಮ್ಮ ಅಂತಸ್ತಿಗೆ ತಕ್ಕುದಾದ ಧಾರ್ಮಿಕ ವ್ರತಗಳನ್ನು ಅಂಥ ಕಟ್ಟಡಗಳಲ್ಲಿ ನಡೆಸಬೇಕಾಗಿತ್ತು ಎಂಬುದು ಸಾಹಿತ್ಯದಿಂದ ಗೊತ್ತಾಗುತ್ತದೆ. ಕ್ರಮೇಣ ಶ್ರೀಮಂತ ವರ್ಗದವರೂ ಮಿಂಗ್–ಟ್ಯಾಂಗ್ ಕಟ್ಟಡಗಳನ್ನು ಉಪಯೋಗಿಸ ಲಾರಂಭಿಸಿದರು.

ಕ್ರಿಸ್ತಯುಗದ ಪ್ರಾರಂಭದ ವೇಳೆಗೆ ಮಿಂಗ್–ಟ್ಯಾಂಗ್ ಒಂಬತ್ತು ಅಂಕಣಗಳ ದೊಡ್ಡ ಚಚ್ಚೌಕವಾಗಿತ್ತು. ಅದರ ತಳಹದಿ ಚೌಕವಾಗಿಯೂ ಮೇಲ್ಭಾಗ ದುಂಡಾಗಿಯೂ ಇರುತ್ತಿತ್ತು. ಚೀನ 1937–45ರ ವರೆಗೆ ಜಪಾನೀಯರ ವಶದಲ್ಲಿದ್ದಾಗ ಜಪಾನೀ ಪ್ರಾಕ್ತನಶಾಸ್ತ್ರಜ್ಞರು ನಡೆಸಿದ ಉತ್ಖನನಗಳಿಂದ ಕೆಲವು ಅಂಶಗಳು ತಿಳಿದುಬಂದವು. ಷಾನ್‌ಟಂಗ್ ಪ್ರಾಂತ್ಯದ ಲಿನ್–ಟುಜ ನೆಲೆ ಚಿ ವಂಶದ ಕಾಲದಲ್ಲಿ ರಾಜಧಾನಿಯಾಗಿತ್ತೆಂದು ಗುರುತಿಸಲಾಗಿದೆ. ಪೂರ್ವಪಶ್ಚಿಮವಾಗಿ 2ಕಿ.ಮೀ ಮತು ಉತ್ತರ ದಕ್ಷಿಣವಾಗಿ 4ಕಿ.ಮೀ. ಪ್ರದೇಶವನ್ನು ಗೋಡೆಗಳಿಂದ ರಕ್ಷಿಸಲಾಗಿದೆ. ಅದರ ನೈರುತ್ಯ ಭಾಗದಲ್ಲಿ ಮತ್ತೊಂದು ಸಣ್ಣ ಆಯಾಕಾರದ ಪ್ರದೇಶದ ಸುತ್ತ ಒಳಕೋಟೆಯಿದೆ. ಅದು ಬಹುಶಃ ಅರಮನೆಯಿದ್ದ ಪ್ರದೇಶ. ಒಳಕೋಟೆಯ ಗೋಡೆ 9 ಮೀ. ಎತ್ತರವಿದ್ದಂತೆ ಕಾಣುತ್ತದೆ. ವಂಶದ ರಾಜಧಾನಿಯಾಗಿದ್ದಿರಬಹುದಾದ ಹೋಪೇ ಪ್ರಾಂತ್ಯದ ಇ–ಹ್ಸಿಯೆನ್ ಎಂಬಲ್ಲಿ ಮೊದಲಿನ ಎರಡರಷ್ಟು ವಿಶಾಲವಾದ ಕೋಟೆಯ ಅವಶೇಷಗಳಿವೆ. ಅವುಗಳೆಲ್ಲದರ ವಿನ್ಯಾಸಗಳು ಕ್ರಮಬದ್ಧವಾಗಿಲ್ಲ.

ಚಿನ್ ರಾಜವಂಶದ ಕಾಲದಲ್ಲಿ (ಪ್ರಶ.ಪೂ. 221–206) ದೇಶದ ಏಕತೆ ಸಾಧಿಸಿದ್ದರ ಫಲವಾಗಿ ಗಮನಾರ್ಹ ಅರಮನೆಗಳು, ರಾಜಮಾರ್ಗಗಳು ಮತ್ತು ವಿಶ್ವಪ್ರಸಿದ್ಧವಾದ ಚೀನದ ಮಹಾಗೋಡೆ ನಿರ್ಮಿತವಾದುವು. ರಾಷ್ಟ್ರೀಯ ಮಹತ್ವವನ್ನು ಲಕ್ಷ್ಯದಲ್ಲಿಟ್ಟುಕೊಂಡ ಮೊದಲ ನಿರ್ಮಾಣಗಳಿವು. ವಿವಿಧ ಪ್ರಾಂತ್ಯಗಳಲ್ಲಿ ತಲೆದೋರಿದ ಪ್ರಾದೇಶಿಕ ಶೈಲಿಗಳು ಕೇಂದ್ರೀಯ ರಾಜಧಾನಿಯಲ್ಲಿ ಪ್ರತಿಬಿಂಬಿತವಾಗಿದ್ದುವಲ್ಲದೆ ಕಾಲಾನುಕ್ರಮದಲ್ಲಿ ಅವೆಲ್ಲದರ ಸಮ್ಮಿಲನದಿಂದ ಒಂದು ಹೊಸ ರಾಷ್ಟ್ರೀಯ ಶೈಲಿ ಬೆಳೆಯಲು ಸಾಧ್ಯವಾಯಿತು. ಮತ್ತೆ ವಿವಿಧ ಪ್ರಾದೇಶಿಕ ಶೈಲಿಗಳನ್ನು ಒಂದೆಡೆ ಕಾಣುವಂತಾಯಿತು. ಚಿನ್ ಅರಸನ ಅರಮನೆ ಒಂದು ಬೃಹತ್ ಯೋಜನೆಯಾಗಿದ್ದು ಅದರ ಮುಂಭಾಗದ ಹಜಾರ 457ಮೀ. ಚೌಕವಾಗಿತ್ತು. ಅದರ ವೇದಿಕೆಯ ಎತ್ತರ 15ಮೀ.ಗೂ ಹೆಚ್ಚಿತ್ತು.

ಹಾನ್ ವಂಶದ ಮೊದಲ ದೊರೆ (ಪ್ರಶ.ಪೂ. 200) ತನ್ನ ರಾಜಧಾನಿ ಚಾಂಗ್–ಅನ್‌ನಲ್ಲಿ ಕಟ್ಟಿಸಿದ ವೈ–ಯಾಂಗ್ ಅರಮನೆ ವಿಶಾಲವಾಗಿತ್ತು. ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ ಗೋಪುರಗಳುಳ್ಳ ಹೆಬ್ಬಾಗಿಲುಗಳು, ದರ್ಬಾರಿನ ಹಜಾರ, ಆಯುಧಾಗಾರ ಮತ್ತು ದೊಡ್ಡ ಉಗ್ರಾಣಗಳು ಅದರಲ್ಲಿದ್ದುವು. ಖ್ಯಾತ ದೊರೆ ವು–ಟಿ (ಪ್ರಶ. ಪೂ. 140–87) ಅಮೋಘವಾದ ವಿಶ್ರಾಂತಿಧಾಮಗಳನ್ನೂ ಪಾರಲೌಕಿಕ ಸಂಬಂಧಸೂಚಕ ಮಂದಿರಗಳನ್ನೂ ನಿರ್ಮಿಸಿದನೆಂದು ಸಾಹಿತ್ಯದಿಂದ ತಿಳಿದುಬರುತ್ತದೆ. ಪ್ರಶ. 3–4ನೆಯ ಶತಮಾನಗಳಲ್ಲಿ ಅರಾಜಕತೆ ನೆಲಸಿದ್ದರೂ ವಾಸ್ತುಕಲೆಯ ಸುವರ್ಣಯುಗವೆಂದು ವರ್ಣಿಸಲಾದ ಕಟ್ಟಡಗಳು ಹಾನ್ ದೊರೆಗಳ ಆಶ್ರಯದಲ್ಲಿ ನಿರ್ಮಾಣವಾದುವು.

ಆಗಿನ ಚೀನೀ ವಾಸ್ತು ನಿರ್ಮಿತಿಗಳಲ್ಲಿ ಅಗ್ರಸ್ಥಾನ ಅರಮನೆಗೆ ಸೇರಿದ ಆಸ್ಥಾನ ಹಜಾರಕ್ಕೆ ಸಲ್ಲುತ್ತದೆ. ಅವು ಬೇರೆ ಬೇರೆ ಕಾಲಗಳಲ್ಲಿ ವಿವಿಧ ರಾಜಧಾನಿಗಳಲ್ಲಿ 122ಮೀ.X33.5ಮೀX152ಮೀX46ಮೀ ವಿಸ್ತಾರವಾಗಿರುತ್ತಿದ್ದುವು. ಜಪಾನಿನಲ್ಲಿ 8ನೆಯ ಶತಮಾನಗಳಲ್ಲಿ ಅವುಗಳ ಮಾದರಿಯಲ್ಲಿ ಕಟ್ಟಿದ ಅತಿ ದೊಡ್ಡ ದೇವಾಲಯ ಟೋಡೈಜಿಯ ಬುದ್ಧ ಹಜಾರ 61ಮೀ.x52ಮೀ. ವಿಸ್ತೀರ್ಣವಾಗಿತ್ತು. ಆಸ್ಥಾನದ ಹಜಾರಗಳ ಅನಂತರ ಪ್ರಧಾನವಾದ್ದೆಂದರೆ ವಿವಿಧ ರೀತಿಯ ಗೋಪುರಗಳು. ಮಣ್ಣಿನ ಘನವಾದ ಗೋಡೆಗಳ ಮೇಲೆ ಕಟ್ಟಿದ ಈ ಗೋಪುರಗಳು ದೊಡ್ಡವಾದರೆ ಕಾವಲುಗಾರರ ನೆಲೆಗಳಾಗಿಯೂ ಸಣ್ಣವಾದರೆ ಗೋಡೆಯ ಮೇಲಿನ ಕಂಬಗಳಾಗಿಯೂ ಇರುತ್ತಿದ್ದುವು. ಈ ಗೋಪುರಗಳು ಎರಡರಿಂದ ಹದಿನೈದು–ಹದಿನೇಳು ಅಂತಸ್ತುಗಳಷ್ಟು ಎತ್ತರವಾಗಿದ್ದುವು.

ಚೀನೀ ಅರಮನೆಗಳಲ್ಲಿ ವೈಶಾಲ್ಯ ಮತ್ತು ಎತ್ತರಕ್ಕೆ ಗಮನ ಕೊಟ್ಟ ರೀತಿಯಲ್ಲೇ ಅವುಗಳ ಅಲಂಕರಣಕ್ಕೂ ಆದ್ಯತೆ ನೀಡಲಾಗಿತ್ತು. ಶಿಲ್ಪಗಳಿಂದ, ವಿವಿಧ ಬಣ್ಣಗಳ ಲೇಪನ ದಿಂದ ಅವನ್ನು ಅಲಂಕರಿಸಲಾಗುತ್ತಿತ್ತು. ಕಟ್ಟಡಗಳ ಅವಶೇಷಗಳು ಉಳಿದುಬಂದಿಲ್ಲವಾದರೂ

ಸಾಹಿತ್ಯಕ ವರ್ಣನೆಗಳು, ವರ್ಣಚಿತ್ರಗಳು, ಕಲ್ಲಿನ ಉಬ್ಬುಚಿತ್ರಗಳು ಮತ್ತು ಸುಟ್ಟ ಮಣ್ಣಿನ ಮಾದರಿ ಕೃತಿಗಳಿಂದ ಅವುಗಳ ಸೂಕ್ಷ್ಮ ನೋಟ ದೊರಕುತ್ತದೆ. ಹಾನ್ ಕಾಲದಲ್ಲಿ (ಪ್ರಶ.ಪೂ. 206–ಪ್ರಶ. 221) ಜನಸಾಮಾನ್ಯರು ಹುಲ್ಲಿನ ಗುಡಿಸಿಲುಗಳಲ್ಲಿ ವಾಸಿಸುತ್ತಿದ್ದರು. ಶ್ರೀಮಂತವರ್ಗ ಅಂಗಣದಿಂದ ಕೂಡಿದ ವಿಶಾಲ ಭವನಗಳಲ್ಲಿ ವಾಸಿಸುತ್ತಿದ್ದರು. ಈ ಮನೆಗಳಲ್ಲಿ ಅಂಗಣದ ಎರಡು ಬದಿಗಳಲ್ಲಿ ಕೋಣೆಗಳೂ ಹಿಂಬದಿಯಲ್ಲಿ ಹಜಾರವೂ ಇರುತ್ತಿದ್ದುವು. ಹೆಚ್ಚು ಸ್ಥಳಾವಕಾಶ ಒದಗಿಸಿಕೊಳ್ಳಲು ಒಂದರ ಹಿಂದೆ ಒಂದರಂತೆ ಹೆಚ್ಚು ಒಳಾಂಗಣಗಳನ್ನು ಸೇರಿಸಬಹುದಾಗಿತ್ತು. ಪಾರ್ಶ್ವಗಳಲ್ಲಿ ಮತ್ತು ಮುಂಭಾಗದಲ್ಲಿ ಪ್ರವೇಶದ್ವಾರಗಳಿದ್ದುವು. ಅನೇಕ ಕಟ್ಟಡಗಳಲ್ಲಿ ಎರಡು ಅಥವಾ ಹೆಚ್ಚು ಅಂತಸ್ತುಗಳಿರುತ್ತಿದ್ದುವು. ವಿಶಾಲವಾದ ಒಳಗಿನ ಹಜಾರಗಳು ಬಹಳ ಅಗಲವಾಗಿರುತ್ತಿದ್ದುದರಿಂದ ಅವನ್ನು ಪ್ರತ್ಯೇಕ ಅಂಕಣಗಳನ್ನಾಗಿ ವಿಭಾಗಿಸಿ ಪ್ರತಿಯೊಂದು ಅಂಕಣದ ಚಾವಣಿಗೂ ಪ್ರತ್ಯೇಕ ಸಾಲುಕಂಬಗಳ ಆಧಾರಗಳನ್ನು ಒದಗಿಸಿದ್ದಿರಬೇಕು.



**ದ್ವಾದಶಕೋನಗಳ ಪಗೋಡ, ಪ್ರಶ. 520**

ಪೂರ್ವ ಪ್ರದೇಶದಲ್ಲಿ ಆಳುತ್ತಿದ್ದ ಹಾನ್ ದೊರೆಗಳ ಕಾಲದಲ್ಲಿ (25–221) ಬೌದ್ಧಧರ್ಮ ಚೀನವನ್ನು ಪ್ರವೇಶಿಸಿದಾಗ ಕೆಲವು ಬೌದ್ಧವಿಹಾರಗಳ ನಿರ್ಮಾಣವಾಯಿತು. ರಾಜಾಶ್ರಯದಲ್ಲಿ ನಿರ್ಮಿತವಾದ, ರಾಜ್ಯ ಕಚೇರಿಗಳನ್ನು ಹೋಲುತ್ತಿದ್ದ, ಆ ವಿಹಾರಗಳನ್ನು ಸ್ಸು ಎಂದು ಕರೆಯಲಾಗುತ್ತಿತ್ತು. ಭಾರತದ ಸ್ತೂಪಗಳ ಮಾದರಿಯಲ್ಲಿ ಹುಟ್ಟಿಕೊಂಡ ವಿಹಾರ ಅನಂತರಕಾಲದ ಚೀನೀ ಪಗೋಡದ ಆಕಾರದ ಪ್ರಥಮ ಹಂತ. ಎರಡು ಅಂತಸ್ತುಗಳ ಮಂದಿರದ ಮೇಲೆ ಒಂಬತ್ತು ಹಂತಗಳ ಕಂಚಿನ ಚಾವಣಿಯನ್ನು ನಿರ್ಮಿಸಲಾಗುತ್ತಿತ್ತಂತೆ. ಹಾನ್ ವಾಸ್ತುಶಿಲ್ಪಿಗಳಿಗೆ ಕಮಾನಿನ ಪರಿಚಯವಿತ್ತು. ಸಮಾಧಿಗಳಲ್ಲಿ ಇಟ್ಟಿಗೆಗಳಿಂದ ಕಮಾನುಗಳನ್ನು ನಿರ್ಮಿಸಿದ್ದಾರೆ. ಮೊದಲಿಗೆ ಚಾಚು ಆಧಾರದ ಕಮಾನುಗಳನ್ನು ನಿರ್ಮಿಸುತ್ತಿದ್ದರೂ ಮಂಚೂರಿಯದ ಯಿಂಗ್–ಚೆಂಗ್–ಟ್ಸು ಸಮಾಧಿಯಲ್ಲಿ ನೈಜವಾದ ಕಮಾನು ಕಾಣಬರುತ್ತದೆ. ಆರು ರಾಜವಂಶಗಳ ಕಾಲದಲ್ಲಿ (265–581)ವಾಸ್ತುಕಲೆ ಕ್ಷೀಣಿಸಿತು. ಹಾನ್ ಕಾಲದ ನಿರ್ಮಾಣಗಳ ಅನುಕರಣೆ ಕಂಡುಬಂದರೂ ಅವುಗಳ ಚಾತುರ್ಯ, ತಾಂತ್ರಿಕ ನೈಪುಣ್ಯ ಕಣ್ಮರೆಯಾದವು. ಆದರೆ ಬೌದ್ಧಧರ್ಮ ಪ್ರಬಲವಾದಂತೆ ವಾಸ್ತುಕಲೆ ಪುನಶ್ಚೇತನಗೊಂಡು, ಉತ್ತರ ವೇ ಮತ್ತು ಲಿಯಾಂಗ್ ಅರಸರ ಆಶ್ರಯದಲ್ಲಿ ಉತ್ತಮ ನಿರ್ಮಾಣಗೊಳಾದವು. ಲೋಯಾಂಗ್ ನಗರದಲ್ಲಿ 42 ಪಗೋಡ, ಚೈತ್ಯಾಲಯಗಳಿದ್ದುದಾಗಿ ಹೇಳಲಾಗಿದೆ. ಲೋಯಾಂಗ್ ಪರಿಸರದಲ್ಲಿ ಒಟ್ಟು 500 ಬೌದ್ಧ ಮಂದಿರಗಳಿದ್ದುವು. ವೇ ರಾಜ್ಯದ ಚೈತ್ಯಗಳ ಸಂಖ್ಯೆ 13,727. 570ರ ಸುಮಾರಿಗೆ ಬೌದ್ಧ ನಿರ್ಮಾಣಗಳ ಸಂಖ್ಯೆ 30,000 ಕ್ಕೆ ಏರಿತು.

ಭಾರತದಲ್ಲಿ ಬೌದ್ಧಧರ್ಮದ ಪ್ರಧಾನ ಕಟ್ಟಡ ಸ್ತೂಪವಾದರೆ ಚೀನದಲ್ಲಿ ಪಗೋಡ ಆ ಸ್ಥಾನವನ್ನಾಕ್ರಮಿಸಿತು. ಆ ಧರ್ಮ ಬೆಳೆದಂತೆ ಪಗೋಡಗಳ ಅಂತಸ್ತುಗಳು ಹೆಚ್ಚುತ್ತ ಹೋದುವು. 5ನೆಯ ಶತಮಾನದಲ್ಲಿ ಲಿಯಾಂಗ್ ದೊರೆ ವು–ಟಿ (ಆಳ್ವಿಕೆ 502–549) ಐದು ಅಂತಸ್ತುಗಳ ಪಗೋಡವನ್ನು ಕಟ್ಟಿಸಿದ ; ಅರಮನೆಯ ಸರಹದ್ದಿನಲ್ಲಿ ತನ್ನ ಪೂಜಾಕಾರ್ಯಕ್ಕಾಗಿ 9 ಅಂತಸ್ತುಗಳ ಮತ್ತೊಂದು ಪಗೋಡವನ್ನು ನಿರ್ಮಿಸಿದ. 30ಮೀ. ಎತ್ತರದ 3 ಅಂತಸ್ತುಗಳ ಇನ್ನೊಂದು ಪಗೋಡವೂ ನಿರ್ಮಿತವಾಯಿತು. 516ರಲ್ಲಿ ಲೋಯಾಂಗ್ ರಾಜಧಾನಿ ಆದ ಅನಂತರ 9 ಅಂತಸ್ತುಗಳ ಸು. 122ಮೀ. ಎತ್ತರದ, ಅದರ ಮೇಲೆ 23ಮೀ. ಎತ್ತರದ ಕಂಬವಿದ್ದ ಮರದ ಪಗೋಡ ನಿರ್ಮಿತವಾಯಿತು. ಕಂಬದ ತುದಿಯಲ್ಲಿ ಚಿನ್ನದ ಕಲಶವಿತ್ತು. ಪಗೋಡದ ನಾಲ್ಕು ಪಾರ್ಶ್ವಗಳಲ್ಲಿ ಒಂದೊಂದು 43ಮೀ. ಉದ್ದವಿತ್ತು. ಪ್ರತಿಯೊಂದು ಪಾರ್ಶ್ವದಲ್ಲೂ ಮೂರು ಬಾಗಿಲುಗಳೂ ಆರು ಕಿಟಕಿಗಳು ಇದ್ದುವು. ಬಾಗಿಲುಗಳಿಗೆ ಕೆಂಪು ಅರಗನ್ನು ಲೇಪಿಸಲಾಗಿತ್ತು. ಅವನ್ನು ಚಿನ್ನದ ಮೊಳೆಗಳಿಂದ ಭದ್ರಪಡಿಸಲಾಗಿತ್ತು. ಪ್ರತಿ ಅಂತಸ್ತಿನ ಮೂಲೆಗಳಲ್ಲೂ ಬೃಹದಾಕಾರದ ಚಿನ್ನದ ಗಂಟೆಗಳು ತೂಗುತ್ತಿದ್ದುವು. ಪಗೋಡದ ಉತ್ತರ ದಿಕ್ಕಿನಲ್ಲಿ ರಾಜಾಸ್ಥಾನದ ದರ್ಬಾರ್ ಹಜಾರವನ್ನು ಹೋಲುತ್ತಿದ್ದ ಬುದ್ಧ ಹಜಾರವಿತ್ತು. ಅದರ ಮಧ್ಯದಲ್ಲಿ 5.5ಮೀ. ಎತ್ತರದ ಚಿನ್ನದ ಬುದ್ಧ ಪ್ರತಿಮೆಯೂ ಜೀವಂತ ಮಾನವ ಗಾತ್ರದ ಹತ್ತು ಸುವರ್ಣ ವಿಗ್ರಹಗಳೂ ಸ್ಥಾಪಿತವಾಗಿದ್ದುವು. ಅದರ ಪಾರ್ಶ್ವದಲ್ಲಿ ಗೋಪುರಗಳಿಂದ ಅಲಂಕೃತವಾದ ಭಿಕ್ಷುಗಳ ವಾಸದ ಕೋಣೆಗಳನ್ನು 100ರ ಸರಣಿಗಳಲ್ಲಿ ನಿರ್ಮಿಸಲಾಗಿತ್ತು. ಅದರ ನಾಲ್ಕು ಪಾರ್ಶ್ವಗಳಲ್ಲೂ ಒಂದೊಂದು ಬಾಗಿಲಿತ್ತು. ದಕ್ಷಿಣ ಭಾಗದಲ್ಲಿ ಮೂರು ದ್ವಾರಗಳೂ ಅವುಗಳ ಮೇಲೆ ಮೂರಂತಸ್ತುಗಳ ಗೋಪುರವೂ ಇದ್ದುವು. 60ಮೀ. ಎತ್ತರದ ಆ ಗೋಪುರ ಅರಮನೆಯ ಹೊರದ್ವಾರವನ್ನು ಹೋಲುತ್ತಿತ್ತು.

ಚೀನೀಯರು ಕುಷಾನ್ ದೊರೆ ಕನಿಷ್ಕನ ಪೆಷಾವರ್ ಸ್ತೂಪದ ಮಾದರಿಯಲ್ಲಿ ತಮ್ಮ ಪಗೋಡಗಳನ್ನು ನಿರ್ಮಿಸುತ್ತಿದ್ದರು. ಕೆಳಗಿನ ಅಂತಸ್ತಿನ ಮಾದರಿಯಲ್ಲಿ ಅಂದರೆ ಸಣ್ಣ ಪ್ರಮಾಣದಲ್ಲಿ ಮೇಲಂತಸ್ತನ್ನೂ ಅದಕ್ಕಿಂತ ಸಣ್ಣದಾಗಿ ಅದರ ಮೇಲಂತಸ್ತನ್ನೂ ನಿರ್ಮಿಸಿ ಎಲ್ಲಕ್ಕೂ ಮೇಲೆ ಎತ್ತರವಾದ ಕಂಬದ ಮೇಲೆ ಛತ್ರಾವಳಿಗಳನ್ನು ರೂಪಿಸುತ್ತಿದ್ದರು.

ಆಯಾಕಾರದ ಅನೇಕ ಅಂತಸ್ತುಗಳ ಪಗೋಡವಲ್ಲದೆ ಭಾರತದ ಗುಪ್ತ ಚಕ್ರವರ್ತಿಗಳ ಕಾಲದ ಮಂದಿರಗಳ ಮಾದರಿಯಲ್ಲಿ ಕಟ್ಟಡಗಳನ್ನು 6ನೆಯ ಶತಮಾನದಲ್ಲಿ ನಿರ್ಮಿಸಲಾಯಿತು. ಹೋನ್ಯಾನ್ ಪ್ರಾಂತ್ಯದ ಸುಂಗ್ ಪರ್ವತದ ಮೇಲಿರುವ ಸುಂಗ್–ಯು–ಸ್ಸುನಲ್ಲಿರುವ ಹನ್ನೆರಡು ಮೂಲೆಗಳಿರುವ 15 ಅಂತಸ್ತುಗಳ ಪಗೋಡ ಎತ್ತರವಾದ ಸರಳ ವೇದಿಕೆಯ ಮೇಲೆ ನಿಂತಿದೆ. ಅದರ ಪ್ರತಿಯೊಂದು ಮೂಲೆಯಲ್ಲೂ ಕಂಬಗಳಿವೆ. ಮೇಲಿನ ಅಂತಸ್ತುಗಳು ಕ್ರಮೇಣ ಚಿಕ್ಕವಾಗುತ್ತ ಹೋಗಿವೆ. ತುದಿಯಲ್ಲಿ ಛತ್ರಾವಳಿ ಇದೆ. ಅದರ ವೈಯಕ್ತಿಕ ಅಲಂಕರಣದ ಅಂಶಗಳಲ್ಲಿ ಭಾರತೀಯ ಪ್ರಭಾವಗಳು ಸ್ಪಷ್ಟವಾಗಿವೆ. ಇಂಥ ಪಗೋಡಗಳು ಅಲ್ಲಲ್ಲಿ ಕಾಣಬರುತ್ತವೆ. ಭಾರತೀಯ ಸ್ತೂಪದ ಮಾದರಿಯ ಕಟ್ಟಡಗಳು ಜನಪ್ರಿಯವಾಗಿದ್ದುವು. ಅನೇಕ ಕಟ್ಟಡಗಳ ಅಲಂಕರಣದಲ್ಲಿ ಇಂಥ ಸ್ತೂಪದ ಉಬ್ಬುಚಿತ್ರಗಳ ಮಾದರಿಗಳನ್ನು ಕೆತ್ತಲಾಗಿದೆ.

ಚೀನದ ಪಗೋಡ ಮತ್ತು ಬುದ್ಧ ಹಜಾರಗಳ ಮಾಲಿಕೆಗೆ ಸೇರಿದಂತೆ ಭಿಕ್ಷುಗಳ ಸಭೆ ಮತ್ತು ಧಾರ್ಮಿಕ ಗೋಷ್ಠಿಗಳಿಗೆ ಮೀಸಲಾದ ಉಪನ್ಯಾಸ ಮಂದಿರಗಳನ್ನು ನಿರ್ಮಿಸಲಾಗುತ್ತಿತ್ತು.

ಸುಯಿ (581–618) ಮತ್ತು ಟ್ಯಾಂಗ್ (618–906) ವಂಶಗಳ ದೊರೆಗಳು ಚೀನವನ್ನು ಪುನಃ ಒಂದುಗೂಡಿಸಿ ಸಾರ್ವಭೌಮತ್ವವನ್ನು ಸ್ಥಾಪಿಸಿದ ಅನಂತರ ಬೌದ್ಧಧರ್ಮಕ್ಕೂ ತತ್ಸಂಬಂಧವಾದ ವಾಸ್ತುಕಲೆಗೂ ಅಮಿತ ಪ್ರೋತ್ಸಾಹ ದೊರಕಿತು. ಹೊಸ ತಂತ್ರ ಮತ್ತು ಪರಿಪಕ್ವವಾದ ಸೌಂದರ್ಯಪೂರ್ಣ ಶೈಲಿ ಬಳಕೆಗೆ ಬಂದುವು.

ಲೋಯಾಂಗ್ ನಗರ ನಿರ್ಮಿಸಿದ ವಾಸ್ತುಶಿಲ್ಪಿ ಯಾಂಗ್ಸ್–ಸ್ಸು ಮತ್ತು ಯು–ವೆನ್ಕಾಯ್ ಇವರಿಬ್ಬರೂ ಈ ಹೊಸ ಶೈಲಿಯ ಹೊಸ ವಾಸ್ತುಕಲಾಯುಗದ ನಿರ್ಮಾಪಕರು. ಟ್ಯಾಂಗ್ ದೊರೆಗಳ ಆಶ್ರಯದಲ್ಲಿ 7ನೆಯ ಶತಮಾನದಲ್ಲಿ ವಾಸ್ತು ನಿರ್ಮಾಣದಲ್ಲಿ ಹೊಸ

ಪ್ರಯೋಗಗಳು ನಡೆದು ಉತ್ತಮ ಕಟ್ಟಡಗಳು ನಿರ್ಮಿತವಾದುವು. 845 ರಲ್ಲಿ ಬೌದ್ಧಧರ್ಮಕ್ಕೆ ರಾಜಾಶ್ರಯ ತಪ್ಪಿ ಕಿರುಕುಳ ಉಂಟಾದಾಗ ಈ ಅಸಂಖ್ಯಾತ ಸುಂದರ ಕಟ್ಟಡಗಳು ಬಹುತೇಕ ನಾಶಗೊಂಡುವು. ತರುವಾಯ ಆ ಧರ್ಮದತ್ತ ರಾಜದೃಷ್ಟಿ ಹೊರಳಿದಾಗ ಮತ್ತೆ ಅನೇಕ ಸುಂದರ ಮಂದಿರಗಳ ನಿರ್ಮಾಣವಾಯಿತು.

ಹೊಸ ರಾಜಧಾನಿ ಚಾಂಗ್–ಅನ್ ನಗರ ಆಯಾಕಾರವಾಗಿತ್ತು. ಮತ್ತು ನೇರವಾದ ಮುಖ್ಯ ಮತ್ತು ಅಡ್ಡರಸ್ತೆಗಳಿಂದಲೂ ಬೃಹತ್ತಾದ ರಕ್ಷಣಾ ಕೋಟೆಯಿಂದಲೂ ಕೂಡಿತ್ತು. ಅದರ ವಿಸ್ತೀರ್ಣ 6 ½ X 6 ಚ.ಕಿ.ಮೀ. ಅದರ ಹಿಂಬದಿಯ 2/5 ಭಾಗ ರಾಜಮನೆತನದವರ ವಸತಿಗಳಿಗೆ ಮೀಸಲಾಗಿತ್ತು. ಆ ಭಾಗದಲ್ಲಿ ರಾಜ್ಯದ ಕಚೇರಿಗಳೂ ಅರ್ಧ ಭಾಗವನ್ನಾಕ್ರಮಿಸಿಕೊಂಡ ಅರಮನೆಗಳೂ ಇದ್ದುವು. ಕೋಟೆಯ ಹೊರಭಾಗದಲ್ಲಿ ಈಶಾನ್ಯಕ್ಕೆ ಮತ್ತೊಂದು ದೊಡ್ಡ ಅರಮನೆ ಟಾ–ಮಿಂಗ್ ಇತ್ತು. ಈ ಅರಮನೆಗಳ ಪ್ರಧಾನ ಅಂಗಗಳೆಂದರೆ ಮೂರು ವಿಶಾಲ ಹಜಾರಗಳು. ಈ ವಿಶಾಲ ಹಜಾರಗಳು 105ಮೀ.X54ಮೀ. ವಿಸ್ತೀರ್ಣವಾಗಿಯೂ 37ಮೀ. ಎತ್ತರವಾಗಿಯೂ ಇದ್ದುವು. ಬೌದ್ಧ ವಾಸ್ತು ಈ ಕಾಲದಲ್ಲಿ ಪರಮೋಚ್ಚ ಶಿಖರ ಮುಟ್ಟಿತು. ಸುಯಿ ಅರಸರ ಆಶ್ರಯದಲ್ಲಿ

8ನೇ ಶತಮಾನದ ಒಂದು ಪಗೋಡ

ಅನೇಕ ಧಾರ್ಮಿಕ ಮಂದಿರಗಳು ನಿರ್ಮಾಣವಾಗಿ ವಾಸ್ತುಶೈಲಿಯಲ್ಲಿ ಹೊಸದೊಂದು ರಾಷ್ಟ್ರೀಯ ಶೈಲಿ ಬೆಳೆಯಿತು. ಈ ಕಟ್ಟಡಗಳು ಈಗ ನಾಶವಾಗಿದ್ದರೂ ಇವನ್ನು ಅನುಕರಿಸಿ ನಿರ್ಮಿತವಾದ ಜಪಾನೀ ಮಂದಿರಗಳ ಅವಶೇಷಗಳಿಂದ ಇವುಗಳ ಲಕ್ಷಣಗಳನ್ನು ಊಹಿಸಲಾಗಿದೆ. ವಿಶಾಲವಾದ ಪ್ರಾಂಗಣದ ಎರಡು ತುದಿಗಳಲ್ಲೂ ಎರಡು ದೊಡ್ಡ ಪಗೋಡಗಳನ್ನು ನಿರ್ಮಿಸಿ ಮಧ್ಯ ಮುಂಭಾಗದಲ್ಲಿ ಬೃಹತ್ಪ್ರಮಾಣದ ಬುದ್ಧ ಹಜಾರವನ್ನು ನಿರ್ಮಿಸಲಾಗುತ್ತಿತ್ತು. ಇದರಿಂದ ಪಗೋಡಗಳಿಗಿಂತ ಬುದ್ಧ ಹಜಾರಕ್ಕೆ ಹೆಚ್ಚು ಪ್ರಾಧಾನ್ಯ ದೊರಕುತ್ತಿತ್ತು. ಪಗೋಡಗಳಲ್ಲಿ ಒಟ್ಟು 99ಮೀ. ಎತ್ತರದ ಏಳು ಅಂತಸ್ತುಗಳಿದ್ದುವು. ಪ್ರಾಕಾರದಲ್ಲಿ ಮಹಾದ್ವಾರ. ವರಾಂಡ ಮತ್ತು ಹಜಾರಗಳಿದ್ದುವು.

ಈ ಶೈಲಿಯ ಎರಡು ಗಮನಾರ್ಹ ಅಂಶಗಳೆಂದರೆ, ಪಗೋಡಗಳು ಎರಡು ತುದಿಗಳಲ್ಲಿ ಕಟ್ಟುವುದರಿಂದ ಚೀನೀ ಅರಮನೆಗಳ ಸಿಂಹಾಸನದ ಹಜಾರವನ್ನು ಹೋಲುವಂತೆ ಬುದ್ಧ ಹಜಾರದ ಪ್ರಾಮುಖ್ಯವನ್ನು ಎತ್ತಿತೋರಿಸಲಾಗಿತ್ತು. ಧಾರ್ಮಿಕ ಆವಶ್ಯಕತೆಗಳಿಗಿಂತ ಚೀನೀ ರಾಷ್ಟ್ರೀಯ ಮನೋಭಾವಕ್ಕೆ ಆದ್ಯತೆ ನೀಡಿ ಭಾರತೀಯ ಮೂಲದ ವಿದೇಶೀ ಶೈಲಿಯನ್ನು ರಾಷ್ಟ್ರೀಕರಿಸಲಾಯಿತು. ಇದರಿಂದ ಪಗೋಡಗಳ ನಿರ್ಮಾಣದ ಖರ್ಚು ಹೆಚ್ಚುವಂತಾಯಿತು. ಟ್ಯಾಗ್ ದೊರೆಗಳ ಆಶ್ರಯದಲ್ಲಿ ಮತ್ತೊಂದು ಹೊಸ ಕಟ್ಟಡದ ಮಾದರಿಗೆ ಆದ್ಯತೆ ನೀಡಲಾಯಿತು. ಪಗೋಡದ ಮತ್ತು ಬುದ್ಧ ಹಜಾರಗಳಿಗಿಂತ ಅಲಂಕೃತ ಆವರಣಗಳು–ಕೋ–ಹೆಚ್ಚುಹೆಚ್ಚಾಗಿ ನಿರ್ಮಿತವಾದುವು. ಪ್ರಸಿದ್ಧ ಆವರಣವೊಂದು ಒಂಬತ್ತು ಅಂಕಣಗಳಷ್ಟು ವಿಶಾಲವೂ ಮೂರು ಅಂತಸ್ತುಗಳಲ್ಲಿ 30 ಮೀ.ಎತ್ತರವೂ ಆಗಿತ್ತು. 820ರ ಸುಮಾರಿನಲ್ಲಿ ರಾಜಧಾನಿಯ ಮುಖ್ಯ ದೇವಾಲಯದ ಆವರಣ ವಿಶ್ವದಲ್ಲಿ ಅತಿ ದೊಡ್ಡದಾಗಿತ್ತೆಂದು ಹೇಳಲಾಗಿದೆ.



ಟ ಯೆನ್ ಟ ಪಗೋಡ (8ನೆಯ ಶತಮಾನ) ಷೆನ್‌ಷೀ ಪ್ರಾಂತ್ಯ

ವು ಚಕ್ರವರ್ತಿನಿಯ ಇಚ್ಛೆಯಂತೆ 688ರಲ್ಲಿ ಲೋಯಾಂಗ್‌ದಲ್ಲಿ ನಿರ್ಮಿಸಲಾದ ಮಿಂಗ್–ಟಾಂಗ್ ಗಮನಾರ್ಹವಾದ್ದು. ಮೂರು ಅಂತಸ್ತುಗಳಲ್ಲಿ ಈ ಕಟ್ಟಡದ ಎತ್ತರ 90ಮೀ. ಒಂದೊಂದು ಪಾರ್ಶ್ವದ ಉದ್ದ 91 ಮೀ. ಮೊದಲ ಅಂತಸ್ತು ವರ್ಷದ ನಾಲ್ಕು ಋತುಗಳನ್ನೂ ಎರಡನೆಯದು ಹನ್ನೆರಡು ಮಾಸಗಳನ್ನೂ ಮೇಲಿನದು ವರ್ಷದ 24 ಸೌರಮಾನ ವಿಭಾಗಗಳನ್ನೂ ಪ್ರತಿನಿಧಿಸುತ್ತಿದ್ದುವು. ತುದಿಯಲ್ಲಿ 3ಮೀ. ಎತ್ತರದ ಕಬ್ಬಿಣದ ಫೀನಿಕ್ಸ್ ಪಕ್ಷಿಯ ವಿಗ್ರಹ ಇಡಲಾಗಿತ್ತು. ಕಟ್ಟಡದ ಅಡಿಯಿಂದ ತುದಿಯವರೆಗೂ 10 ಗೇಣು ದಪ್ಪದ ಮರದ ಕಂಬವಿತ್ತು. ಸ್ತೂಪಗಳ ಮಧ್ಯಭಾಗದಲ್ಲಿ ಭುವನತ್ರಯದ ಆಧಾರಸ್ತಂಭವೆಂದು ಪರಿಗಣಿಸಲಾದ ಕಂಬದ ಮಾದರಿಯಲ್ಲಿ ಇದನ್ನು ರೂಪಿಸಲಾಗಿತ್ತು. ವು ಚಕ್ರವರ್ತಿನಿಯ ಕಾಲದ ಮತ್ತೊಂದು ಪ್ರಮುಖ ನಿರ್ಮಾಣವೆಂದರೆ ದೇವರ ಹಜಾರ. ಐದು ಅಂತಸ್ತುಗಳ ಗೋಪುರವಿದ್ದ ಈ ಕಟ್ಟಡದಲ್ಲಿ ಬೃಹತ್ತಾದ ಬುದ್ಧ ವಿಗ್ರಹವನ್ನಿಡಲಾಗಿತ್ತು. ಮತ್ತೊಂದು ಗಮನಾರ್ಹ ನಿರ್ಮಾಣವೆಂದರೆ ಸುತ್ತುವ ಆವರಣ. ಒಮ್ಮೆಗೆ ನೂರಾರು ಅತಿಥಿಗಳು ಕೂಡಬಹುದಾದ ಈ ಭವನವನ್ನು ಅದರ ತಳಭಾಗದಲ್ಲಿದ್ದ ಯಂತ್ರದ ಸಹಾಯದಿಂದ ಸುತ್ತು ತಿರುಗಿಸಬಹುದಾಗಿತ್ತು. ಟಾಂಗ್ ಕಾಲದಿಂದ ಉಳಿದು ಬಂದಿರುವ ಪಗೋಡಗಳ ಅವಶೇಷಗಳು ಸಾಮಾನ್ಯವಾಗಿ ಇಟ್ಟಿಗೆಯ ಕಟ್ಟಡಗಳು. ಬೌದ್ಧ ಸ್ತೂಪದ

ಚೀನೀ ಪ್ರಭೇದವಾದ ಪಗೋಡದ ಮೂಲರೂಪದಲ್ಲಿ ಸರಳ ಮುನ್‌ಚಾಚಿದ ಕಪೋತ. ಅದರ ಮೇಲೆ ಹೆಚ್ಚು ಕಡಿಮೆ ಗೋಪುರಾಕಾರದ ನಿರ್ಮಾಣ, ಮೇಲ್ತುದಿಯಲ್ಲಿ ಶಿಖರ–ಇವೇ ಮುಖ್ಯಾಂಶಗಳು. ಹೊನ್ಯಾನ್‌ನ ಸುಂಗ್ ಪರ್ವತದಲ್ಲಿರುವ, 791ರಲ್ಲಿ ಮರಣಹೊಂದಿದ ಧ್ಯಾನಿ ಸಂತ ಫಾ–ಯುಆನ್‌ನ ಸಮಾಧಿ ಪಗೋಡ ಈ ರೀತಿಯದು. ಟಾಂಗ್ ಕಾಲದಲ್ಲಿ ಇದರ ಸುಧಾರಿಸಿದ ಆವೃತ್ತಿ ಬಳಕೆಗೆ ಬಂತು. ಹೆಂಚುಗಳ ಚಾವಣಿಯನ್ನು ನಿರ್ಮಿಸಲಾಯಿತು. ಬಾಗಿಲುವಾಡದ ಮೇಲೆ ಚೂಪಾದ ಕಮಾನಿನಾಕೃತಿಯನ್ನೂ ಬಾಗಿಲ ಪಾರ್ಶ್ವಗಳಲ್ಲಿ ದ್ವಾರಪಾಲಕರ ವಿಗ್ರಹಗಳನ್ನೂ ಸೇರಿಸಲಾಯಿತು. ಬೀಜಿಂಗಿನ ನೈಋತ್ಯಕ್ಕಿರುವ ಫ್ಯಾಂಗ್ ಪರ್ವತದ ಮೇಲಿರುವ ಪಗೋಡ ಇದಕ್ಕೆ ನಿದರ್ಶನ. ಇದರ ಮುಂದಣ ಹೆಜ್ಜೆಯೆಂದರೆ ಸಾಮಾನ್ಯವಾಗಿ ಶಿಖರದಲ್ಲಿರುವ ಪರಸ್ಪರ ನಿಕಟವಾದ ಏಳು ಮಾಡಗಳ ನಿರೂಪಣೆ. ಲಿಯಾವೋ ವಂಶದ ಕಾಲಕ್ಕೆ ಸೇರಿದ (907–1125) ಯುನ್–ಚು–ಸ್ಸು ಎಂಬಲ್ಲಿಯ ಇಟ್ಟಿಗೆಯ ಪಗೋಡದ ವಿಶಾಲ ಆಯಾಕಾರದ ವೇದಿಕೆಯ ನಾಲ್ಕು ಮೂಲೆಗಳಲ್ಲಿ ನಾಲ್ಕು ಪಗೋಡಗಳನ್ನು ಕಟ್ಟಲಾಗಿದೆ. ಭಾರತದ ಬೋಧಗಯೆಯಲ್ಲಿರುವ ಮಹಾಬೋಧಿ ಸ್ತೂಪದ ಮಾದರಿಯಲ್ಲಿ, ಬೌದ್ಧ ಧರ್ಮದಲ್ಲಿ ಹೇಳಲಾಗಿರುವ ಮಧ್ಯದ ಮತ್ತು ನಾಲ್ಕು ದಿಕ್ಕುಗಳ ಲೋಕಗಳನ್ನು ಇದು ಪ್ರತಿಬಿಂಬಿಸುತ್ತದೆ. ಸಮತಲ ಪ್ರದೇಶದಿಂದ ಆಕಾಶದತ್ತ ರಮ್ಯವಾದ ಡೊಂಕಿನಾಕಾರದಲ್ಲಿ ಪಗೋಡ ಪ್ರಮಾಣಬದ್ಧವಾಗಿದೆ. ತನ್ನ ಮೃತಪತಿಯ ಸ್ಮಾರಕಾರ್ಥವಾಗಿ ಚಕ್ರವರ್ತಿನಿ 684ರಲ್ಲಿ ಚಾಂಗ್–ಅನ್ ನಲ್ಲಿ ಕಟ್ಟಿಸಿದ ಪಗೋಡದಲ್ಲಿ ಮೊದಲು 18 ಮಾಡಗಳಿದ್ದುವು. ಮೇಲಿನ ಎರಡು ಮಾಡಗಳು ಬಿದ್ದುಹೋದ ಅನಂತರ ಅದರ ಎತ್ತರ 38ಮೀ. ಯುನ್ಯಾನ್ ಪ್ರಾಂತ್ಯದ ಟಾ–ಲಿ–ಫು ನಲ್ಲಿರುವ ಹದಿನಾರು ಮಾಡಗಳ ಬೃಹತ್ ಚೌಕಾಕಾರದ ಶಿಖರದ ಎತ್ತರ 100ಮೀ. ಇದರ ಕಾಲ ಬಹುಶಃ 9ನೆಯ ಶತಮಾನ.

10ನೆಯ ಶತಮಾನದ ಮರದ ಕಟ್ಟಡಗಳ ಆಲಂಕಾರಿಕ ರಚನೆ ದೇಶಾದ್ಯಂತ ಜನಪ್ರಿಯವಾಯಿತಲ್ಲದೆ ಕಲ್ಲು ಇಟ್ಟಿಗೆಗಳ ನಿರ್ಮಾಣಗಳಲ್ಲೂ ಇದು ಅಭಿವ್ಯಕ್ತವಾಗ ಲಾರಂಭಿಸಿತು. 7ನೆಯ ಶತಮಾನದ ಕೊನೆಯಲ್ಲಿ ನಿರ್ಮಿತವಾದ, ಹ್ಸಿಯಾಂಗ್–ಚಿ–ಸ್ಸುನಲ್ಲಿರುವ ಇಟ್ಟಿಗೆಯ ದೊಡ್ಡ ಗೋಪುರದಲ್ಲಿ ಪ್ರತಿಯೊಂದು ಮಾಡದ ಮೇಲೂ ಪ್ರತ್ಯೇಕ ಅಂತಸ್ತುಗಳಿವೆ. ಮರದ ಮಾದರಿಗಳ ಅನುಕರಣೆಯೆಂಬಂತೆ ಮಾಡಗಳ ಅಂತರದಲ್ಲಿ ಗೋಡೆಗಂಬಗಳನ್ನು, ಬೋದಿಗೆಗಳನ್ನು ರೂಪಿಸಲಾಗಿದೆ. ಹ್ಯೂ–ಎನ್–ತ್ಸಾಂಗನ ಸ್ವಂತ ಊರಿನಲ್ಲಿರುವ ಟಿಯೆನ್–ಟ ಪಗೋಡದಲ್ಲಿ ಈ ಅಂಶ ಎದ್ದು ಕಾಣುತ್ತದೆ. ಮರದಲ್ಲಿ ನಿರ್ಮಿಸಿದ ಪಗೋಡಗಳ ಮಾದರಿಯಲ್ಲಿ, ಮೇಲಕ್ಕೆ ಹೋದಂತೆ ಕ್ರಮೇಣ ಸಣ್ಣದಾಗುವ ಏಳು ಅಂತಸ್ತುಗಳೂ ಇವೆ. ಮುನ್‌ಚಾಚಿದ ಸೂರುಗಳಿದ್ದರೂ, ಉದ್ದವೂ ಚಪ್ಪಟೆಯೂ ಆದ ಗೋಡೆಗಂಬಗಳಿವೆ. ಮೆಟ್ಟಿಲು ಮೆಟ್ಟಿಲಾಗಿ ಮೇಲೇರುವ ಆಯಾಕಾರದ ಪಿರಮಿಡ್ಡಿನಂತೆ ಈ ಕಟ್ಟಡಗಳು ಘನತ್ವವನ್ನು ಸೂಚಿಸುತ್ತವೆ. 53ಮೀ. ಎತ್ತರದ ಐದು ಅಂತಸ್ತುಗಳ ಟು–ಯೆನ್–ಟವನ್ನು 652 ರಲ್ಲಿ ಮೊದಲಿಗೆ ನಿರ್ಮಿಸಲಾಯಿತು. 701–705ರಲ್ಲಿ ಅದರ ಜೀರ್ಣೋದ್ಧಾರವಾದಾಗ ಅದರಲ್ಲಿ 58ಮೀ. ಎತ್ತರದ ಏಳು ಅಂತಸ್ತುಗಳಾದುವು.

ಇದೇ ಸುಮಾರಿನಲ್ಲಿ ಪಗೋಡದ ನಿರ್ಮಾಣದಲ್ಲಿರುವ ಇನ್ನೆರಡು ಬದಲಾವಣೆಗಳು ಗಮನಾರ್ಹ. ಆಧುನಿಕ ಹ್ಸಿ–ಅನ್–ಫು ಬಳಿ ನಿರ್ಮಿಸಿದ ಹ್ಯೂ–ಎನ್–ತ್ಸಾಂಗನ ಸಮಾಧಿಗೆ ಐದು ಅಂತಸ್ತುಗಳಿವೆ. ಗೋಡೆಯನ್ನು ವಿಭಾಗಿಸುವ ಉದ್ದ ಗೋಡೆಗಂಬಗಳು ಎಂಟು ಮೂಲೆಗಳ ಮರದ ಕಂಬಗಳನ್ನು ಹೋಲುತ್ತವೆ. ಅವುಗಳ ಮೇಲಿನ ಬೋದಿಗೆಗಳು ಲಂಬಿತವಾಗಿದ್ದು, ಅಡ್ಡತೊಲೆಗಳಿಗೆ ಆಧಾರವಾಗಿರುವಂತೆ ಮರದ ವಾಸ್ತುಶಿಲ್ಪ ಲಕ್ಷಣಗಳನ್ನು ಪ್ರದರ್ಶಿಸುತ್ತವೆ. 669ರಲ್ಲಿ ನಿರ್ಮಿತವಾದ ಈ ಕಟ್ಟಡ 828ರ ಸುಮಾರಿನಲ್ಲಿ ಅಥವಾ 1175ರಲ್ಲಿ ಚಿನ್ ದೊರೆಗಳ ಆಶ್ರಯದಲ್ಲಿ ಪುನರ್ನಿಮಿತವಾದಾಗ ಈ ಲಕ್ಷಣಗಳನ್ನು ಅಳವಡಿಸಿರಬಹುದು.

ಷ್ಯಾನ್‌ಟಂಗ್‌ನ ಷೆನ್–ಟಿಂಗ್–ಸ್ಸು ಪಗೋಡದಲ್ಲಿ ಅನಂತರದ ಕಾಲದ ಸುಂಗ್ ವಾಸ್ತುಶೈಲಿಯನ್ನು ಹೋಲುವ ಲಕ್ಷಣಗಳು ಪ್ರಧಾನವಾಗಿವೆ. ಇದು ಚೀನೀ ವಾಸ್ತುಶಿಲ್ಪದ ಮುನ್ನಡೆಯ ಹಂತವನ್ನು ಪ್ರತಿನಿಧಿಸುತ್ತದೆ. ಹೋನ್ಯಾನ್ ಪ್ರಾಂತ್ಯದ ಸುಂಗ್ ಪರ್ವತದ ಮೇಲಿನ ಹುಯಿ–ಷಾನ್–ಸ್ಸುದ ಪ್ರಾಕಾರದಲ್ಲಿರುವ ಧ್ಯಾನಿ ಸಂತ ಚಿಂಗ್–ತ್ಸಾಂಗ್‌ನ ಸಮಾಧಿ ಪಗೋಡ ಮತ್ತೊಂದು. ಇದರ ಕಾಲ ನಿರ್ದಿಷ್ಟವಾಗಿಲ್ಲ. ಇದು ಮರ ಮತ್ತು ಕಲ್ಲಿನ ಕಟ್ಟಡಗಳ ಲಕ್ಷಣಗಳನ್ನೊಳಗೊಂಡಿದೆ. ಕಂಬಗಳು ಸರಳವಾಗಿದ್ದರೂ ಅಷ್ಟಕೋನದ ಕಂಬಗಳ ಅನುಕರಣೆಯಾಗಿದೆ. ಬಾಗಿಲು ಮತ್ತು ಕಿಟಕಿಗಳ ನಿರೂಪಣೆಯಲ್ಲೂ ಈ ಅನುಸರಣೆ ಕಾಣಬರುತ್ತದೆ. ಹ್ಯೂ–ಎನ್–ತ್ಸಾಂಗ್ ಸಮಾಧಿಯ ಪ್ರತಿಬಿಂಬವನ್ನಿಲ್ಲಿ ಕಾಣಬಹುದಾದರೂ ಕಮಲದಳಗಳ ಸೂರುಗಳ ಮೇಲಿರುವ ಶಿಖರದ ನಿರೂಪಣೆಯಲ್ಲಿ ಭಾರತದ ದೇವಾಲಯದ ಶಿಖರಗಳ ಛಾಯೆ ಕಂಡುಬರುತ್ತದೆ.

ಟಾಂಗ್ ಕಾಲದಿಂದ ಉಳಿದುಬಂದಿರುವ 9ನೆಯ ಶತಮಾನದ ಮರದ ಪಗೋಡ ಫೊ–ಕುಅಂಗ್–ಸ್ಸು ಒಂದು ಸುಂದರ ನಿರ್ಮಾಣ. ಇದು ಚೀನೀ ವಾಸ್ತುಕಲೆಯ ಇತಿಹಾಸದಲ್ಲಿ ಒಂದು ಪ್ರಮುಖ ಹಂತವನ್ನು ಸೂಚಿಸುತ್ತದೆ. ಮುನ್‌ಚಾಚಿದ ಸೂರುಗಳು, ಅಷ್ಟಾಸ್ರಾಕೃತಿಯ ಶಿಖರಗಳು ಉಳ್ಳ ಒಂದಂತಸ್ತಿನ ಈ ಪಗೋಡದ ಮೂಲವನ್ನು ಭಾರತದ ಅಜಂತದಲ್ಲಿ ಗುಪ್ತ ದೊರೆಗಳ ಕಾಲದ ಸ್ತೂಪಗಳಲ್ಲಿ ಕಾಣಬಹುದು. ಇದು 8ನೆಯ ಶತಮಾನದಲ್ಲಿ ಹೊಸ ತಾಂತ್ರಿಕ ಬೌದ್ಧ ಪಂಥದ ಪ್ರಭಾವದೊಂದಿಗೆ ಚೀನವನ್ನು ಪ್ರವೇಶಿಸಿತು. ಈ ಪಗೋಡದ ಪ್ರತಿಬಿಂಬದಂತಿರುವ ಅನೇಕ ಮಂದಿರಗಳನ್ನು ಜಪಾನಿನಲ್ಲಿ 10–11ನೆಯ ಶತಮಾನದಲ್ಲಿ ನಿರ್ಮಿಸಲಾಗಿದೆ.

ಹ್ಯೂ–ಎನ್–ತ್ಸಾಂಗನ ಸಮಾಧಿ ಪಗೋಡದ ಒಂದು ಭಾಗ

ಹೋಪೇ ಪ್ರಾಂತ್ಯದ ಚೆಂಗ್–ಟಿಂಗ್–ಹ್ಸಿಯೆನ್‌ನಲ್ಲಿರುವ ಕನ್‌ಫ್ಯೂಷಿಯಸ್ ಮಂದಿರ ಚೀನದಲ್ಲಿರುವ ಟಾಂಗ್ ಕಾಲದ ಮತ್ತೊಂದು ಮರದ ಕಟ್ಟಡ. ಇದು ಫ್ಯೊ–ಕುಅಂಗ್–ಸ್ಸು ಮಂದಿರಕ್ಕಿಂತ ಬಹಳ ಭಿನ್ನವಾದ್ದು. ದಪ್ಪ ಇಟ್ಟಿಗೆ ಗೋಡೆಗಳ ಈ ಸಣ್ಣ ಕಟ್ಟಡದಲ್ಲಿ ಕಂಬಗಳಿಂದ ಬೇರ್ಪಡಿಸಿದ ಇಕ್ಕಟ್ಟಾದ ಅಂಕಣಗಳಿವೆ. ಒಳಭಾಗಗಳ ಎತ್ತರ, ಚಾವಣಿಯ ಇಳಿಜಾರು, ಇವು ಈ ಕಟ್ಟಡದಲ್ಲಿ ಪ್ರಧಾನ. ಅನಂತರಕಾಲದ ಸುಂಗ್ ಶೈಲಿಯ ಪೂರ್ವ ಪೀಠಿಕೆಯಂತಿರುವ ಈ ಕಟ್ಟಡದಲ್ಲಿ ಆ ಶೈಲಿಗೆ ಹೊರತಾದ ಇತರ ಲಕ್ಷಣಗಳು ಕಂಡುಬರುವುದರಿಂದ ಇದನ್ನು ಪ್ರಾಚೀನ ಮತ್ತು ಅರ್ವಾಚೀನ ಶೈಲಿಗಳ ನಡುವಣ ಕೊಂಡಿಯೆಂದು ಪರಿಗಣಿಸಬಹುದು.

ಹತ್ತನೆಯ ಶತಮಾನದ ಆದಿಭಾಗದಿಂದ ಆ ಶತಮಾನದ ಏಳನೆಯ ದಶಕದವರೆಗೆ ಆಳುತ್ತಿದ್ದ ಐದು ರಾಜವಂಶಗಳ ಆಳ್ವಿಕೆಯಲ್ಲಿ ಹೆಚ್ಚಿನ ಬದಲಾವಣೆಗಳೇನೂ ಆಗಲಿಲ್ಲ. ದಕ್ಷಿಣಭಾಗದ ಶಾಂತಿಯುತ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ವಾಸ್ತು ನಿರ್ಮಾಣ ಕಾರ್ಯ ನಡೆದು, ಬೌದ್ಧ ಮಂದಿರಗಳು ನಿರ್ಮಿತವಾದವು. ಆ ಕಾಲದ ಅನೇಕ ಮೋಹಕ ಪಗೋಡಗಳು ಜೀರ್ಣಾವಸ್ಥೆಯಲ್ಲಿ ಇನ್ನೂ ಉಳಿದುಬಂದಿವೆ. ಸುಂಗ್ ದೊರೆಗಳು ದೇಶದ ಐಕಮತ್ಯವನ್ನು ಸಾಧಿಸಿದ ಅನಂತರ ಮತ್ತೆ ವಾಸ್ತುಕಲೆ ಬೆಳೆಯಲಾರಂಭಿಸಿತು. ಹ್ಯಾಂಗ್–ಚೌ ನಗರದ ಯು–ಹಾವೊ ಆ ಕಾಲದ ಪ್ರಸಿದ್ಧ ವಾಸ್ತುಶಿಲ್ಪಿ ಸುಂಗ್ ದೊರೆಗಳ

ಹೊಸ ರಾಜಧಾನಿ ಪಿಯೆನ್-ಚೆಂಗ್ (ಈಗಿನ ಹೋನ್ಯಾನ್ ಪ್ರಾಂತ್ಯದ ಕೈ-ಫೆಂಗ್-ಫು) ನಿರ್ಮಿತವಾಯಿತು. ಆ ಮೊದಲಿನ ರಾಜಧಾನಿ ಚಾಂಗ್-ಅನ್‌ಗಿಂತ ವಿಸ್ತಾರವಾದ ಈ ನಗರ ಚಚ್ಚೌಕವಾಗಿತ್ತು. ಇದರ ರಕ್ಷಣಾ ವ್ಯವಸ್ಥೆ ಸಮರ್ಪಕವಾಗಿಲ್ಲದ್ದರಿಂದ 1126ರಲ್ಲಿ ನಡೆದ ಚಿನ್-ತಾರ್ತರರ ದಾಳಿಗಳಲ್ಲಿ ಇದು ಭಸ್ಮವಾಯಿತು. ಇಲ್ಲಿದ್ದ ಅನೇಕ ದೇವಾಲಯಗಳಲ್ಲಿ, ಹ್ಸಿಯಂಗ್-ಕುವೊ-ಸ್ಸು ಎಂಬುದು ಟ್ಯಾಂಗ್ ಕಾಲದಿಂದ ಉಳಿದುಬಂದಿರುವ ಪ್ರಮುಖ ದೇವಾಲಯ. ಸುಂಗ್ ಕಾಲದಲ್ಲಿ ಬಹಳ ವಿಸ್ತೃತಗೊಂಡ ಈ ಮಂದಿರದ ಎರಡು ತುದಿಗಳ ಪಗೋಡಗಳು ಮತ್ತು ಮಧ್ಯಭಾಗದ ಬುದ್ಧ ಹಜಾರ, ಗಂಟೆ ಸೂತ್ರದ ಗೋಪುರಗಳು ಗಮನಾರ್ಹವಾದವು.

ಶಕ್ತಿಶಾಲಿ ವಿದೇಶಿ ಅಧಿಕಾರಷಾಹಿಯ ನೆರಳಿನಲ್ಲೇ ಬಾಳಬೇಕಾಗಿದ್ದುದರಿಂದ ಸುಂಗ್ ಕಾಲದಲ್ಲಿ ಕಲೆಗೆ ಹೆಚ್ಚಿನ ಗಮನ ದೊರಕಲಿಲ್ಲವೆಂದರೆ ತಪ್ಪಾಗಲಾರದು. ಆಗಿನ ಸಾಮಾಜಿಕ, ರಾಜಕೀಯ ಪರಿಸ್ಥಿತಿಗನುಗುಣವಾಗಿ ವಿವೇಕಯುತ ಸಮತಾಪೂರ್ಣ ಜೀವನವನ್ನು ಪ್ರತಿನಿಧಿಸುವ ರೀತಿಯ ಕಟ್ಟಡಗಳೇ ಕಾಣಬರುತ್ತವೆ. ಆದರೆ 1014ರಲ್ಲಿ ನಿರ್ಮಿತವಾದ ಯು-ಚಿಂಗ್-ಚಾವೊ-ಯಿಂಗ್-ಕುಂಗ್ ಮಂದಿರ ಇದಕ್ಕೆ ಅಪವಾದವಾಗಿದೆ. ಸಾಮ್ರಾಜ್ಯದ ವಿವಿಧ ಭಾಗಗಳಿಂದ ಸಂಗ್ರಹಿಸಿದ ಅಪೂರ್ವ ವಸ್ತುಗಳಿಂದ ನಿರ್ಮಿಸಿದ ಈ ಕಟ್ಟಡ ಬಲು ದೊಡ್ಡದು. ಇದರಲ್ಲಿ ಹಜಾರಗಳೂ 2,620 ಕಂಬಗಳೂ ಇದ್ದುವು. ಈ ಭವ್ಯಮಂದಿರ ಕೆಲವೇ ವರ್ಷಗಳ ತರುವಾಯ ಅಗ್ನಿಗೆ ಅಹುತಿಯಾದ ಅನಂತರ ಅಷ್ಟು ದೊಡ್ಡ ನಿರ್ಮಾಣಗಳು ನಡೆಯಲಿಲ್ಲ. ಆದರೂ ಅನಂತರದ ಕಾಲದ ಹಲವಾರು ಕಟ್ಟಡಗಳು ಗಮನಾರ್ಹವಾಗಿ ದೊಡ್ಡವಾಗಿದ್ದುವು.

ಸುಂಗ್ ಕಾಲದ ವಾಸ್ತುಕಲೆಯಲ್ಲಿ ತಾಂತ್ರಿಕ ನೈಪುಣ್ಯ, ನಯಗಾರಿಕೆ ಇವೆ. ಚಾವಣಿಯ ಸೂರುಗಳನ್ನು ಬಳ್ಳಿಯಂತೆ ಡೊಂಕಾಗಿಸಿ ಅಂದವನ್ನು ಹೆಚ್ಚಿಸಲಾಗಿದೆ. 989ರಲ್ಲಿ ರಾಜಧಾನಿ ಪಿಯೆನ್‌ನಲ್ಲಿ ಯು-ಹಾವೆನ್ ನೇತೃತ್ವದಲ್ಲಿ ನಿರ್ಮಿತವಾದ ಪಗೋಡ ಅಷ್ಟಪ್ರಾಕಾರವಾಗಿ ಹನ್ನೊಂದು ಅಂತಸ್ತುಗಳಿಂದ ಕೂಡಿತ್ತು. ಅದರ ಎತ್ತರ 110ಮೀ. 1037ರಲ್ಲಿ ಅದು ಸುಟ್ಟು ಹೋಯಿತಾದರೂ 1072ರ ವೇಳೆಗೆ ಪುನರ್ನಿರ್ಮಿತವಾಯಿತು. ಆಗ ಅದರಲ್ಲಿ 9 ಅಂತಸ್ತುಗಳಿದ್ದುವು. ಅದರ ಎತ್ತರ 67ಮೀ. ಅದರ ಒಳಭಾಗ ಪೂರ್ಣ ಟೊಳ್ಳಾಗಿತ್ತು. ಪಿಯೆನ್‌ನಲ್ಲಿ ಅನೇಕ ಗೋಪುರಗಳಿದ್ದುವು. ಹ್ಸಿಯಂಗ್-ಕುವೊ-ಸ್ಸುದ ಎರಡು ತುದಿಗಳಲ್ಲಿದ್ದ ಪಗೋಡಗಳ ಮತ್ತು ಮಧ್ಯದ ಬುದ್ಧ ಹಜಾರದ ಚಾವಣಿಗಳನ್ನು ಸೇತುವೆಗಳ ಮೂಲಕ ಸೇರಿಸಿದ್ದುದರಿಂದ ಮೂರು ಮಂದಿರಗಳಲ್ಲೂ ಒಟ್ಟಿಗೆ ಪೂಜೆ ಮಾಡಬಹುದಾಗಿತ್ತೆಂದು 1072ರಲ್ಲಿ ಅದನ್ನು ಸಂದರ್ಶಿಸಿದ ಜಪಾನೀ ಯಾತ್ರಿಕ ಜೋಜಿನ್ ತಿಳಿಸಿದ್ದಾನೆ. ಅದರ ಭವ್ಯ ಸಂಪದ್ಭರಿತ ಸೌಂದರ್ಯದಿಂದ ದಿಗ್ಭ್ರಮೆಗೊಂಡ ಜೋಜಿನ್ ಅದು ಚಿನ್ನ, ಬೆಳ್ಳಿ ರತ್ನಗಳಿಂದ ಅಲಂಕೃತವಾದ ಅಪೂರ್ವ ಮಂದಿರವೆಂದು ತಿಳಿಸಿದ್ದಾನೆ. ಅಷ್ಟೇ ಸೌಂದರ್ಯ ಪೂರ್ಣವಾದ ಇತರ ಮಂದಿರಗಳು ಆ ನಗರದಲ್ಲಿ ಇದ್ದುವೆಂದು ಹೇಳಿದ್ದಾನೆ.

ಜೋಜಿನ್ ವರ್ಣಿಸಿರುವ ಮತ್ತೊಂದು ಅಮೋಘ ನಿರ್ಮಾಣವೆಂದರೆ ಹುಅಯಿ ನದಿಯ ದಡದಲ್ಲಿರುವ ಪು-ಚಾವೊ-ವಾಂಗ್-ಸ್ಸು. ಅದರ ಚಾವಣಿಯನ್ನು ಹೊಳೆಯುವ ವರ್ಣರಂಜಿತ ಗಾಜಿನ ಹೆಂಚುಗಳಿಂದ ಮಾಡಲಾಗಿತ್ತು. ಬುದ್ಧ ಹಜಾರದ ಚಾವಣಿ ಹಳದಿಯದಾಗಿದ್ದರೆ ಅದರ ತಳಭಾಗ ಹಸಿರುಬಣ್ಣದ್ದಾಗಿತ್ತು. ಅದರ ಪ್ರಾಕಾರದ ನೆಲಗಟ್ಟು ಅಪೂರ್ವ ಶೋಭೆಯನ್ನು ನೀಡುತ್ತಿದ್ದ ಜೇಡ್ ಹಸಿರು ಮತ್ತು ಹಳದಿ ಹೆಂಚುಗಳಿಂದ ಕೂಡಿತ್ತು. ಅಷ್ಟಪ್ರಾಕಾರಗಳ 13 ಅಂತಸ್ತುಗಳ ಸು. 49ಮೀ. ಎತ್ತರದ ಈ ಸುಂದರ ನಿರ್ಮಿತಿ ಸುಂಗ್ ಕಟ್ಟಡಗಳ ಅಸಾಧಾರಣ ಚಾತುರ್ಯದ ಉತ್ತಮ ನಿದರ್ಶನವೆಂದು ಚೋಜಿನ್ ಅಭಿಪ್ರಾಯಪಟ್ಟಿದ್ದಾನೆ. ಪ್ರತಿ ಅಂತಸ್ತಿನ ಹೊರಭಾಗದಲ್ಲಿ ಬುದ್ಧ, ಬೋಧಿಸತ್ತ್ವ, ದೇವತೆಗಳು ಮತ್ತು ಭಿಕ್ಷುಗಳ ಪ್ರತಿಮೆಗಳಿವೆ. ಒಳಭಾಗದ ಮಟ್ಟ ನಿಧಿ ಹಜಾರದಲ್ಲಿ ಚಿನ್ನ ಬೆಳ್ಳಿಗಳಲ್ಲಿ ಮಾಡಿದ ಅವಶೇಷಗಳ ಸಂಪುಟಗಳನ್ನು ಕಾದಿರಿಸಲಾಗಿತ್ತು. ಒಳಗಿನ ಕಂಬಗಳ ಮೇಲೆ ಸ್ವರ್ಣಲೇಪಿತ ಬೋಧಿಸತ್ತ್ವ ವಿಗ್ರಹಗಳನ್ನು ನಿಲ್ಲಿಸಲಾಗಿತ್ತು. ಆಸ್ಥಾನಶಿಲ್ಪಿ ಲಿ-ಚೈ 1100ರಲ್ಲಿ ರಚಿಸಿದ ಯಿಂಗ್- ತ್ಸಾವೊ ಫಾಷೀ ಎಂಬ ವಾಸ್ತುಶಾಸ್ತ್ರಗ್ರಂಥದಲ್ಲಿ ಗಿಲೀಟುಮಾಡುವ ಕಲೆಯ ತಾಂತ್ರಿಕ ನಿರೂಪಣೆ ನೀಡಿದ್ದಾನೆ. ವಾಸ್ತುಕಲೆಯ ವಿವಿಧ ಮುಖಗಳ ಸಮಗ್ರ ನಿರೂಪಣೆಯಿಂದ ಆ ಗ್ರಂಥ ಈಗಲೂ ಉಳಿದು ಬಂದಿದೆ. ವಾಸ್ತುಕಲೆಯ ಅಧ್ಯಯನಕ್ಕೆ ಅದೊಂದು ಅಮೂಲ್ಯ ಕೊಡುಗೆ, ಸುಂಗ್ ವಂಶದ ಕೊನೆಯ ಕಾಲದ ನಿರ್ಮಾಣಗಳ ಅನುಕರಣೆಯಿಂದ 13-14ನೆಯ ಶತಮಾನಗಳಲ್ಲಿ ಜಪಾನಿನಲ್ಲಿ ನಿರ್ಮಿಸಿದ ಝೆನ್ ಬೌದ್ಧ ಮಂದಿರಗಳು ಸುಂಗ್ ವಾಸ್ತುನಿರ್ಮಾಣಗಳ ಬಗ್ಗೆ ಉತ್ತಮ ಮಾಹಿತಿ ನೀಡುತ್ತವೆ.

ಸುಂಗ್ ಮತ್ತು ಅದಕ್ಕೂ ಮೊದಲ ಐದು ರಾಜವಂಶಗಳ ಕಾಲದಲ್ಲಿ ನಿರ್ಮಿತವಾದ 10-12ನೆಯ ಶತಮಾನಗಳ ಸು. 60 ಪಗೋಡಗಳು ಉಳಿದುಬಂದಿವೆ. ಇವುಗಳಲ್ಲಿ ಅರ್ಧಕ್ಕೂ ಹೆಚ್ಚಿನವು ಯಾಂಗ್‌ಟ್ಸೀ ನದಿಯ ಕೆಳಬಯಲಿನಲ್ಲಿವೆ. ಇವು ಬಹುಮಟ್ಟಿಗೆ ಹಿಂದಿನ ಶೈಲಿಯವು. ಆದರೆ ಅವುಗಳ ಸೂರುಗಳು ಹೆಚ್ಚು ಅಲಂಕೃತ. ಹೊರಗೋಡೆಗಳ ಮೇಲ್ಮೈಯನ್ನು ಹಸಿರು ಹೆಂಚುಗಳಿಂದ ಮುಚ್ಚಲಾಗಿದೆ. ಚಾವಣಿಗಳ ಮಾಡಗಳಿಗೂ ಹಸಿರು ಹೆಂಚುಗಳನ್ನು ಜೋಡಿಸಿ ಅವುಗಳ ವಕ್ರತೆಯನ್ನು ಹೆಚ್ಚಿಸಲಾಗಿದೆ. ಆ ಕಾಲದ ಪಗೋಡಗಳು ಮರದ ಕಟ್ಟಡಗಳ ಅನುಕರಣೆಗಳು. ಅವುಗಳ ಹೆಂಚಿನ ಚಾವಣಿಗಳಿಗೆ ಆಧಾರವಾಗಿ ಮರದ ಅಡ್ಡತೊಲೆಗಳನ್ನು ಬಳಸಲಾಗಿದೆ. ಆ ಕಾಲದ ಉತ್ತರ ಚೀನದ ಪಗೋಡಗಳಿಗಿಂತ ದಕ್ಷಿಣ ಭಾಗದ ಪಗೋಡಗಳು ಹೆಚ್ಚು ಎತ್ತರವಾಗಿವೆ.

ಮೊನಿ-ಟಿಯೆನ್‌ನ ಹಜಾರದ ಮುಖಭಾಗ

ಸುಂಗ್ ಪ್ರಾರಂಭ ಕಾಲದ ಪಗೋಡಗಳ ಶೈಲಿ ಸರಳವೂ ಶಕ್ತಿಯುತವೂ ಆಗಿತ್ತು. ಅವುಗಳ ಸೂರುಗಳೂ ಮೂಲೆಗಳಲ್ಲಿ ಸ್ವಲ್ಪಮಟ್ಟಿಗೆ ಮೇಲ್ಮುಖವಾಗಿ ಬಾಗಿರುತ್ತಿದ್ದುವು. ಪಗೋಡಗಳ ನಿರ್ಮಾಣದಲ್ಲಿ ಕಬ್ಬಿಣದ ಬಳಕೆ ಹೆಚ್ಚು ಉಪಯೋಗಕ್ಕೆ ಬಂದ 12ನೆಯ ಶತಮಾನದ ಕಟ್ಟಡಗಳಲ್ಲಿ ಪ್ರಮುಖವಾದ ಚೆನಿಂಗ್ ಪಗೋಡ (1105) ಹೊಸ ಬೆಳವಣಿಗೆಯತ್ತ ಮೊದಲ ಹೆಜ್ಜೆ. ದಕ್ಷಿಣಭಾಗದಲ್ಲಿ ಅವುಗಳಿಗೆ ಕಲ್ಲಿನ ಹೊದಿಕೆಯನ್ನು ಜೋಡಿಸಲಾಯಿತು. ಸೂ-ಔನಲ್ಲಿರುವ ಔತ್ತರೇಯ ಪಗೋಡ ಅಷ್ಟಪ್ರಕಾರಗಳ ಬುಡ ಮತ್ತು ದುಂಡಾದ ಮೇಲ್ಭಾಗಗಳಿರುವ ಪ್ರಾಚೀನ ಸಾಂಪ್ರದಾಯಿಕ ಶೈಲಿಯಲ್ಲಿದೆ.

ಸುಂಗ್ ಕಾಲದ ಮರದ ಹೊರಮೈಯುಳ್ಳ ಕಟ್ಟಡಗಳಲ್ಲಿ ಪ್ರಮುಖವಾದವನ್ನು ಹೋಪೇ ಪ್ರಾಂತ್ಯದ ಚೆಂಗ್-ಟಿಂಗ್-ಹ್ಸಿಯೆನ್‌ನಲ್ಲಿ ಕಾಣಬಹುದು. ಅಲ್ಲಿರುವ ನಾಲ್ಕು ಕಟ್ಟಡಗಳಲ್ಲಿ ಮೂರು ಸುಸ್ಥಿತಿಯಲ್ಲಿವೆ. ಮತ್ತೊಂದು ಕಟ್ಟಡ ಜೀರ್ಣವಾಗಿದೆ, ವಿಶಾಲವಾಗಿದೆ. ಕಿರಿ ಅಗಲದ ಉದ್ದವಾದ ಆ ಕಟ್ಟಡಗಳ ಹಿಂಭಾಗದಲ್ಲಿ ವಿಶಾಲವಾದ ಪ್ರಾಂಗಣಗಳುಂಟು. ಆ ಪ್ರಾಂಗಣಗಳಲ್ಲೊಂದರಲ್ಲಿ 971ರಲ್ಲಿ ನಿರ್ಮಿತವಾದ 23ಮೀ. ಎತ್ತರದ, 72 ಕೈಗಳುಳ್ಳ ಕುಅನ್-ಯಿನ್ ಬೋಧಿಸತ್ವ ವಿಗ್ರಹವನ್ನು ನಿಲ್ಲಿಸಲಾಗಿದೆ. ಆ ಪ್ರಾಂಗಣದ ಗೋಡೆಗಳ ಮೇಲೆ ಗಾರೆಯ ಗಚ್ಚಿನಲ್ಲಿ ಮಾಡಿದ ಉಬ್ಬುಚಿತ್ರಗಳು ಬೋಧಿಸತ್ತ್ವರ ಮತ್ತು ಅವರ ಹಿಂಬಾಲಕರ ಮೆರವಣಿಗೆಗಳನ್ನು ನಿರೂಪಿಸುತ್ತವೆ. ಉತ್ತರ ದಿಕ್ಕಿನ ಗೋಡೆಯ ಮೇಲೆ 1089ರ ಒಂದು ಶಾಸನವುಂಟು. ಹಿಂಭಾಗದ ಈ ಪ್ರಾಂಗಣದ ಎರಡು ಪಾರ್ಶ್ವಗಳಲ್ಲೂ ಒಂದೇ ಮಾದರಿಯ ಅಂಗಳಗಳಿವೆ. ಪಶ್ಚಿಮ ಮತ್ತು ಪೂರ್ವದಲ್ಲಿರುವ ಇವನ್ನು ಅನುಕ್ರಮವಾಗಿ ಸೂತ್ರಗ್ರಂಥಾಗಾರ ಮತ್ತು ಮೈತ್ರೇಯ ಅಂಗಳಗಳೆಂದು ಕರೆಯಲಾಗಿದೆ. ಇವು ಬಹುಶಃ ಅನಂತರದ ಚಿನ್ ಕಾಲಕ್ಕೆ ಸೇರುತ್ತವೆ. ಇವಕ್ಕೆ ಸೇರಿದಂತಿರುವ ಇತರ ಕೆಲವು ಕಟ್ಟಡಗಳು ಟಾಂಗ್ ಶೈಲಿಯಿಂದ ಭಿನ್ನವಾದವು.

ಇಲ್ಲಿರುವ 10ನೇ ಶತಮಾನದ ಮೊ-ನಿ-ಟಿಯೆನ್ ಹೊಸ ಜಾಡಿಗೆ ಸೇರಿದ ಹಜಾರ. ಇದರ ನಾಲ್ಕು ಪಾರ್ಶ್ವಗಳಲ್ಲೂ ಒಂದೊಂದು ಪ್ರವೇಶಮಂಟಪವುಂಟು. ವಿಶಾಲವಾದ ಈ ಹಜಾರದ ಮತ್ತು ಪ್ರವೇಶಮಂಟಪಗಳ ಚಾವಣಿಗಳು ಮೂಲೆಗಳಲ್ಲಿ ಮೇಲ್ಮುಖವಾಗಿ ಬಾಗಿವೆ.

ಸುಂಗ್ ವಾಸ್ತುಶಿಲ್ಪಿಗಳು ರಚನಾಚಾತುರ್ಯದೊಂದಿಗೆ ಪ್ರೇಕ್ಷಣೀಯತೆಯನ್ನೂ ಸಮ್ಮಿಲನಗೊಳಿಸಿಕೊಂಡಿದ್ದುದರಿಂದ ಅವರ ನಿರ್ಮಾಣಗಳಲ್ಲಿ ಒಂದು ನವೀನತೆಯನ್ನು ಕಾಣಬಹುದು. ಇದರೊಂದಿಗೆ ಅವರು ಅನೇಕ ಸಣ್ಣಪುಟ್ಟ ಸುಧಾರಣೆಗಳನ್ನು ಅಳವಡಿಸಿ ಕೊಂಡು ಕಟ್ಟಡಗಳ ಸರಳತೆ ಮತ್ತು ಸೌಂದರ್ಯಗಳನ್ನು ಹೆಚ್ಚಿಸಿದ್ದಾರೆ. ಈ ಸುಧಾರಣೆಗಳಿಗೆ ಬಹುಮಟ್ಟಿಗೆ ದಕ್ಷಿಣದ ಶಿಲ್ಪಿಗಳು ಕಾರಣ. ತತ್ಪೂರ್ವದ ವಾಸ್ತುಸಂಪ್ರದಾಯ, ಭಾರತ ಮತ್ತು ಇತರ ಪ್ರದೇಶಗಳ ಕಟ್ಟಡಗಳ ಪ್ರಭಾವ ಮತ್ತು ಸೃಜನಾತ್ಮಕ ಚಾತುರ್ಯಗಳ ಸಮ್ಮಿಲನದಿಂದ ಒಂದು ಹೊಸ ಶೈಲಿಯನ್ನು ರೂಢಿಸಿಕೊಂಡಿದ್ದರು. ಆ ಕಾಲದ ಕಂಬಗಳಲ್ಲಿ ಆಗಿರುವ ಸುಧಾರಣೆಗಳು ಗಮನಾರ್ಹ. ಮೊದಲಿನ ಸರಳ ದುಂಡು ಕಂಬಗಳ ಬದಲು ಕೆಳಭಾಗದಲ್ಲಿ 4, 6 ಅಥವಾ 8 ಮುಖಗಳುಳ್ಳ, ಮೇಲ್ಭಾಗದಲ್ಲಿ ದುಂಡಗಿರುವ ಕಂಬಗಳು

ಕ್ರಮೇಣ ಬಂದುವು. ಕಂಬದ ತುದಿಯಲ್ಲಿ ಬೋದಿಗೆಗಳು ರೂಢಿಗೆ ಬಂದುವು. ತರುವಾಗ ಬೋದಿಗೆಗಳ ಬದಲು ಅವಿಭಾಜ್ಯವಾದ T ಆಕಾರದ ಕಂಬಗಳು ಬಳಕೆಗೆ ಬಂದುವು. ಸುಂಗ್ ಕಾಲದಲ್ಲಿ ಗುಮ್ಮಟಾಕಾರದ ಚಾವಣಿಗೆ ಆಧಾರವಾದ ಈ T ಆಕಾರದ ಕಂಬಗಳ ತುದಿಯಲ್ಲಿ ಒಂದರ ಮೇಲೊಂದರಂತೆ ಜೋಡಿಸಲಾದ ಚಾಚುಪೀಠಗಳ ಮೇಲೆ ಕಂಸಗಳನ್ನು ನಿಲ್ಲಿಸುವ ಪದ್ಧತಿ ಬಂತು. ಕಾಲಕ್ರಮದಲ್ಲಿ ಅದೇ ಒಂದು ವಿಶಿಷ್ಟ ವಾಸ್ತು ಲಕ್ಷಣವಾಯಿತೆನ್ನಬಹುದು. ಇಂಥ ಕಂಬಗಳ ನಿದರ್ಶನಗಳನ್ನು 10ನೆಯ ಶತಮಾನದ ಕೊನೆಯ ಭಾಗಕ್ಕೆ ಸೇರಿದ, ಹೋಪೇ ಪ್ರಾಂತ್ಯದ ಟು-ಲೊ-ಸ್ಸುನಲ್ಲಿರುವ ಕುಅನ್-ಉಯಿನ್-ಕೊ ಮಂದಿರದಲ್ಲಿ ನೋಡಬಹುದು. ಈ ಕಂಬಗಳ ಅನುಕರಣೆಯನ್ನು ಜಪಾನಿನ ತೋಷೋಡೈಜಿ ಮತ್ತು ಹೊರ್ಯೂಜಿ ಮಂದಿರಗಳಲ್ಲೂ ಕಾಣಬಹುದು.



**ಕುಅನ್ ಯಿನ್ ಕೊ ಮಂದಿರದ ಮುಂಭಾಗ**

ದಕ್ಷಿಣ ಸುಂಗ್ ಶೈಲಿಯ, 12ನೆಯ ಶತಮಾನದ ಕಟ್ಟಡಗಳಲ್ಲಿ ಉತ್ತಮವಾದುದೆಂದರೆ ಸೂ-ಚೌ ಪ್ರಾಂತ್ಯದ ಟೌ ಧರ್ಮಕ್ಕೆ ಸೇರಿದ ಯುಅನ್-ಮಿಯವೋ-ಕುಅನ್. ನಿರ್ಮಾಣವಾದ ಸ್ವಲ್ಪಕಾಲಕ್ಕೆ ಇದು ಅಗ್ನಿಗೆ ಆಹುತಿಯಾದ್ದರಿಂದ 1179ರಲ್ಲಿ ಇದನ್ನು ಪುನರ್ನಿರ್ಮಿಸಲಾಯಿತು. ಇದರ ವಿಸ್ತೀರ್ಣ 48ಥ25ಮೀ. ಇದರ ಮಾದರಿಯಲ್ಲಿ ನಿರ್ಮಿತವಾದ ಜಪಾನಿನ ಕರಾಯೊ ಈಗಲೂ ಉಳಿದು ಬಂದಿದೆ. ಇಟ್ಟಿಗೆಯ ದಪ್ಪ ಗೋಡೆಗಳ ಬದಲು ತೆಳುವಾದ ಮರದ ತಡಿಕೆಗಳಿಂದ ಅದನ್ನು ವಿಭಾಗಿಸಲಾಗಿದೆ. ಅದರಲ್ಲಿ ಬಹಳ ಕ್ಲಿಷ್ಟವಾದ, ಮರದ ಅನೇಕ ಕಂಸ ತೊಲೆಗಳನ್ನು ಉಪಯೋಗಿಸಲಾಗಿದೆ.

ಸುಂಗ್ ವಂಶದ ಕಾಲದಲ್ಲಿ ಉತ್ತರಭಾಗದಲ್ಲಿ ಆಳುತ್ತಿದ್ದ ಲಿಯಾವೋ ಮತ್ತು ಅನಂತರ ಕಾಲದ ಆನ್ ವಂಶಗಳ ಕಾಲದಲ್ಲಿ (907-1367) ಅನಾಗರಿಕ ಟಾರ್ಟರ್ ಅಥವಾ ಮಂಗೋಲ್ ಬುಡಕಟ್ಟಿನ ಜನರು ಕಲೆ ಮತ್ತಿತರ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿರಲಿಲ್ಲ. ಅವರ ಕಾಲದಲ್ಲಿ ಕಟ್ಟಡಗಳು ವೈಶಾಲ್ಯ ಮತ್ತು ಭವ್ಯತೆಗೆ ಪ್ರಾಧಾನ್ಯ ದೊರಕಿತೇ ವಿನಾ ತಾಂತ್ರಿಕ ನೈಪುಣ್ಯ ಮತ್ತು ರಚನಾಚಾತುರ್ಯಗಳಿಗೆ ಗಮನಹರಿಸಲಿಲ್ಲ. ಆದರೂ ಚಾರಿತ್ರಿಕ ವಿಕಾಸದ ದೃಷ್ಟಿಯಿಂದ ಅವುಗಳ ಅಧ್ಯಯನ ಅವಶ್ಯ. ಯುಅನ್ ವಾಸ್ತುನಿರ್ಮಾಣಗಳನ್ನು ಸುಂಗ್ ಶೈಲಿಯ ಉಪಸಂಹಾರವೆಂದು ಪರಿಗಣಿಸಬಹುದು. ಬಲಾತ್ಕಾರದಿಂದ ಹಿಡಿದು ತಂದ ವಾಸ್ತುಶಿಲ್ಪಿಗಳು ಮತ್ತು ಕಲಾಕಾರರಿಂದ, ತತ್ಪೂರ್ವದ ವಾಸ್ತುಶೈಲಿಯಲ್ಲಿ ಮತ್ತು ಮುಖ್ಯ ಕಟ್ಟಡಗಳ ಮಾದರಿಯಲ್ಲಿ ಕಟ್ಟಿಸಿದ ಮಂದಿರಗಳು ಸಹಜವಾಗಿಯೇ ಸತ್ತ್ವಪೂರ್ಣವೂ ಸ್ವೋಪಜ್ಞವೂ ಆಗಿರಲಿಲ್ಲ. 13ನೆಯ ಶತಮಾನದ ಮಂಗೋಲ್ ಆಕ್ರಮಣಗಳು ಆ ಮೊದಲಿನ ಸಾಂಸ್ಕೃತಿಕ



**ತೋಷೋ ಡೈಜಿ ಮತ್ತು ಹೋರ್ಯೂಜಿ ಮಂದಿರಗಳ ಕಂಬಗಳ ಮಾದರಿಗಳು**

ಪರಂಪರೆಯನ್ನು ಪೂರ್ಣವಾಗಿ ನಾಶಗೊಳಿಸಿದುವು. ಆ ಕಾಲದ ಮುಖ್ಯ ನಗರಗಳಾದ ಬೀಜಿಂಗ್, ಷಾನ್‍ಸೀ ಪ್ರಾಂತ್ಯದ ಟಾ-ಟುಂಗ್-ಫು ಮತ್ತು ಹೋನ್ಯಾನ್ ಪ್ರಾಂತ್ಯದ ಕೈ-ಫೆಂಗ್-ಫುಗಳಲ್ಲಿ ಗೋಡೆಗಳು, ವೇದಿಕೆಗಳು, ಪಗೋಡಗಳು ಮತ್ತಿತರ ವಾಸ್ತುನಿರ್ಮಾಣಗಳ ಅವಶೇಷಗಳನ್ನು ಕಾಣಬಹುದು. ಡಾಟುಂಗ್ ನಗರದಲ್ಲಿ ಲಿಯಾವೊ ಮತ್ತು ಚಿನ್ ವಂಶಗಳ ಕಾಲಕ್ಕೆ ಸೇರಿದ ಏಳು ಕಟ್ಟಡಗಳನ್ನೊಳಗೊಂಡ ಎರಡು ವಿಹಾರಗಳ ಅವಶೇಷಗಳೂ ಇವೆ. ಪರಂಪರಾಗತ ಚೀನೀ ಶೈಲಿಯಲ್ಲೇ ಆದರೂ ಹೆಚ್ಚು ವಿಸ್ತಾರವೂ ಭವ್ಯವೂ ಆದ ಕಟ್ಟಡಗಳನ್ನು ನಿರ್ಮಿಸಲು ಮಂಗೋಲರು ಕಾರಣರಾದರು.

ಪ್ಲಿಂಗ್-ಷೆಂಗ್ ಅರಮನೆಯ ರಾಣಿವಾಸದಲ್ಲಿ ಮೂರು ವಿಶಾಲ ಭಾಗಗಳಿದ್ದುವು. 61ಮೀ.ಥ29ಮೀ. ವಿಸ್ತಾರವಿದ್ದ ಮುಂದಿನ ಭಾಗ ಏಳು ಅಂಕಣಗಳಷ್ಟು ವಿಸ್ತೀರ್ಣವಾಗಿತ್ತು. ಅದರ ಮೊಗಸಾಲೆಯ ಮೂಲಕ ಅರಸನ ಶಯ್ಯಾಗೃಹವನ್ನು ತಲುಪಬಹುದಿತ್ತು. 5 ಅಂಕಣಗಳ ಶಯ್ಯಾಗೃಹದ ಎರಡು ಬದಿಗಳಲ್ಲೂ 3 ಅಂಕಣಗಳ ಅಗಲದ 23ಮೀ. ಉದ್ದದ ಸುವಾಸನಾಮಂದಿರವಿತ್ತು. ಅಂಥ ಕಟ್ಟಡಗಳ ಸೌಂದರ್ಯವನ್ನು ಹೆಚ್ಚಿಸಲು ಗೇಬಲ್ ರೀತಿಯ ಹಂತಹಂತವಾದ ಚಾವಣಿಗಳನ್ನು ನಿರ್ಮಿಸಲಾರಂಭಿಸಿದರು. 24ಮೀ.ಗಳ ಚೌಕದ ಯುಅನ್ ಕಾಲದ ಕ್ರೀಡಾಗಾರದ ಚಾವಣಿಯನ್ನು ಶಿಲುಬೆಯಾಕಾರದಲ್ಲಿ ನೀಲಿ ಗಾಜಿನ ಹೆಂಚುಗಳಿಂದ ಮಾಡಲಾಗಿತ್ತು.

ಲಿಯಾವೋ ಕಾಲದ ಇಟ್ಟಿಗೆಯ ಪಗೋಡಗಳು ವೈಶಿಷ್ಟ್ಯಪೂರ್ಣವೂ ಗಾಂಭೀರ್ಯಸೌಂದರ್ಯಪೂರಿತವೂ ಆಗಿವೆ. ಅಷ್ಟಸ್ರಾಕೃತಿಯ ಈ ಮಂದಿರಗಳಲ್ಲಿ ಕೆಳ, ಮಧ್ಯ ಮತ್ತು ಅಗ್ರಭಾಗಗಳು ಪ್ರತ್ಯೇಕ ಅಂಗಗಳಾಗಿರುತ್ತಿದ್ದುವು. ಮಧ್ಯಭಾಗದ ಹೊರಗೋಡೆಗಳ ಮೇಲೆ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ದೃಶ್ಯಗಳ ಉಬ್ಬುಚಿತ್ರಗಳನ್ನು ಕೆತ್ತಿರುತ್ತಿತ್ತು. ಅಗ್ರಭಾಗದಲ್ಲಿ ಸಾಮಾನ್ಯವಾಗಿ ಹಂತಹಂತವಾದ 13 ಅಂತಸ್ತುಗಳು ಇದ್ದುವು. ಕೆಳ ಅಂತಸ್ತುಗಳ ಚಾವಣಿಗಳು ಚೀನೀ ಸಂಪ್ರದಾಯದ ಕಂಸಗಳಾಕಾರದಲ್ಲಿದ್ದರೆ ಮೇಲಂತಸ್ತುಗಳ ಸೂರುಗಳು ಹೊರಚಾಚಿರುತ್ತಿದ್ದುವು. ತುದಿಯಲ್ಲಿ ಶಿಖರವಿರುತ್ತಿತ್ತು. ಈ ಪಗೋಡಗಳ ಶೈಲಿಯ ಉಗಮ ಮತ್ತು ವಿಕಾಸಗಳನ್ನು ಗುರುತಿಸುವುದು ಕಷ್ಟಸಾಧ್ಯ. ಟಾಂಗ್ ಕಾಲದಲ್ಲಿ ಇದನ್ನು ಹೋಲುವ ಪಗೋಡ ಶೈಲಿ ರೂಢಿಯಲ್ಲಿದ್ದರೂ, ಲಿಯಾವೋ ಪಗೋಡಗಳಿಗೆ ಅದು ನೇರ ಮೂಲವಾಗಿರಲಾರದು. ಬಹುಶಃ ಈ ಎರಡು ಶೈಲಿಗಳೂ ಭಾರತದ ತಾಂತ್ರಿಕ ಬೌದ್ಧಪಂಥಗಳಿಂದ ಹುಟ್ಟಿಕೊಂಡಿರಬೇಕು. ಲಿಯಾವೋ ಪಗೋಡ ಶೈಲಿ ಚಿನ್‍ವಂಶ ಕಾಲದಲ್ಲೂ ಮುಂದುವರಿಯಿತು.

ಆ ಕಾಲದ ಪಗೋಡಗಳಲ್ಲಿ ಜೆಹೋಲ್ ಪ್ರಾಂತ್ಯದ ಟಾ-ಮಿಂಗ್-ಚಿಂಗ್‍ನ ದೊಡ್ಡ ಪಗೋಡ ಮುಖ್ಯವಾದ್ದು. ಇದರ ಎತ್ತರ 82ಮೀ. ಆಗಿನ ಸಣ್ಣ ಪಗೋಡಗಳು ಕೇವಲ 18ಮೀ. ಇರುತ್ತಿದುವು. ಅವುಗಳ ನಿರ್ದಿಷ್ಟ ಆಕಾರ ಮತ್ತು ಔನ್ನತ್ಯಗಳಿಗೆ ಅನುಗುಣವಾಗಿ ಅನೇಕ ಮಾರ್ಪಾಟುಗಳನ್ನು ಮಾಡಲು ಸಾಧ್ಯವಿತ್ತು. ಸಣ್ಣ ಪಗೋಡಗಳು ಆರು ಮುಖಗಳಿಂದ ಕೂಡಿರುತ್ತಿದ್ದುವು. ಅವುಗಳಲ್ಲಿ 9 ಅಥವಾ 7 ಅಂತಸ್ತುಗಳಿರುತ್ತಿದ್ದುವು. ಜೆಹೋಲ್ ಪ್ರದೇಶದ ಕೆಲವು ಮಂದಿರಗಳು ಚತುರಸ್ರಾಕೃತಿಯಲ್ಲೂ ಇವೆ. ಟಾಂಗ್

ಪಗೋಡಗಳ ಪ್ರಭಾವಗಳನ್ನು ಇವುಗಳಲ್ಲಿ ಕಾಣಬಹುದು. ಪಗೋಡಗಳ ಹೊರಗೋಡೆಗಳ ಮೇಲೆ ವಿಶಿಷ್ಟ ಆಸನದ ಮೇಲೆ ತಾಂತ್ರಿಕ ಪಂಥದ ದೊಡ್ಡ ಬುದ್ಧಮೂರ್ತಿಯನ್ನೂ ಅದರ ಎರಡು ಪಾರ್ಶ್ವಗಳಲ್ಲೂ ಪರಿವಾರವರ್ಗವನ್ನೂ ಆಚೆಗೆ ಪಗೋಡಗಳ ಉಬ್ಬುಚಿತ್ರಗಳ ಮಾದರಿಗಳನ್ನೂ ಕೆತ್ತಿರುತ್ತಿತ್ತು. ತಾಂತ್ರಿಕ ಪಂಥಕ್ಕನುಗುಣವಾಗಿ ನಾಲ್ಕು ದಿಕ್ಕುಗಳಲ್ಲಿ ಬುದ್ಧನ ಮೂರ್ತಿಗಳನ್ನೂ ಮಹಾಯಾನ ಪಂಥಾನುಸಾರವಾಗಿ ಎಂಟು ಮಹಾಸ್ತೂಪಗಳನ್ನೂ ಪಗೋಡಗಳ ಮೇಲೆ ನಿರೂಪಿಸಲಾಗುತ್ತಿತ್ತೆಂದು ಆ ಚಿತ್ರಗಳ ವಿವರಗಳಿಂದ ತಿಳಿಯಬಹುದು. ನಾಲ್ಕು ದಿಕ್ಕುಗಳ ಬುದ್ಧ ಮೂರ್ತಿಗಳು ತಾಂತ್ರಿಕ ನಂಬಿಕೆಗನುಸಾರವಾಗಿ ಕೇಂದ್ರಸ್ಥ ವೈರೋಚನ ಬುದ್ಧನ ಬಾಹ್ಯರೂಪಗಳಾಗಿದ್ದು, ಮಧ್ಯದಲ್ಲಿ ಪಗೋಡದಲ್ಲಿರುವ–ವೈರೋಚನನನ್ನು ಪ್ರತಿನಿಧಿಸುತ್ತವೆ. ಯುಅನ್–ಟುಂಗ್ ಸ್ಸು ದಲ್ಲಿರುವ 12ನೆಯ ಶತಮಾನದ ಅಷ್ಟಸ್ರಾಕೃತಿಯ ಪಗೋಡದ ಎಂಟು ಮುಖಗಳ ಮೇಲೆ ಅನುಕ್ರಮವಾಗಿ ಬುದ್ಧ ಮತ್ತು ಬೋಧಿಸತ್ವರನ್ನು ರೂಪಿಸಲಾಗಿದ್ದರೆ, ಟಾ–ಮಿಂಗ್–ಚೆಂಗ್‌ನ ಮಹಾಪಗೋಡದಲ್ಲಿ ಎಂಟು ಮಹಾಬೋಧಿಸತ್ವರನ್ನು ಕೆತ್ತಲಾಗಿದೆ. ಕೆಳಗಿನ ವೇದಿಕೆಯ ಮೇಲೆ ಸುಂದರ ಶಿಲ್ಪಗಳನ್ನು ಕೆತ್ತ ಲಾಗಿದೆ. ಪ್ರತಿಯೊಂದು ಪಾರ್ಶ್ವ ದಿಂದಲೂ ಸಿಂಹಮುಖಗಳು ಮುನ್ ಚಾಚಿಕೊಂಡಿವೆ. ತಾಂತ್ರಿಕ ಪಂಥದ ಪ್ರಕಾರ ವೈರೋಚನ ಬುದ್ಧನ ವಾಹನ ಸಿಂಹ.

ಏಳು ಅಂತಸ್ತುಗಳ ಬಿಳಿಯ ಪಗೋಡ, ಜೆಹೊಲ್
11–12ನೆಯ ಶತಮಾನ

ಹೋಪೇ ಪ್ರಾಂತ್ಯದ ಪಗೋಡಗಳಲ್ಲಿ ಶಿಲ್ಪಕಲೆ ವಿರಳವಾಗಿದೆ. ವಾಸ್ತು ಅಲಂಕರಣ ವಿಧಾನಗಳಿಗೆ ಅಲ್ಲಿ ಪ್ರಾಧಾನ್ಯ. ಕಂಬಗಳ ಬೋದಿಗೆಗಳ ಮೇಲೆ ಗಮನಾರ್ಹವಾದ ಕಂಸಗಳ ವಿವಿಧ ರೂಪಗಳನ್ನು ಬಳಸಿಕೊಂಡು ಅದರಿಂದ ಒಂದು ವಿಚಿತ್ರ ಸೌಂದರ್ಯವನ್ನು ಸೃಷ್ಟಿಸಲಾಗಿದೆ. ಮೊದಮೊದಲು ಹೆಚ್ಚು ಬಲವಾಗಿದ್ದ ಕಂಸಗಳು ಕ್ರಮೇಣ ನಾಜೂಕಾದುವು. ಅವುಗಳ ಸಂಖ್ಯೆ ಹೆಚ್ಚಿತು. ಆ ಪ್ರದೇಶದ ಎಲ್ಲ ಪಗೋಡಗಳಲ್ಲೂ ಕಂಸಗಳಿಂದ ಕೂಡಿದ ಮೊಗಸಾಲೆಗಳು ಕಂಡುಬರುತ್ತವೆ.

ಅನೇಕ ಅಂತಸ್ತುಗಳಿದ್ದ ಇಟ್ಟಿಗೆಯ ಪಗೋಡಗಳು ಲಿಯಾವೊ ಪ್ರದೇಶಗಳಲ್ಲಿ ವಿರಳ. ಮಂಚೂರಿಯದಲ್ಲಿರುವ ಬಿಳಿಯ ಪಗೋಡಗಳಲ್ಲಿ ಏಳು ಅಂತಸ್ತುಗಳುಂಟು. ಮರದ ಪಗೋಡಗಳ ಮಾದರಿಯಲ್ಲಿ ನಿರ್ಮಿತವಾದ ಈ ಇಟ್ಟಿಗೆಯ ಪಗೋಡಗಳ ನಾಲ್ಕು ಪಾರ್ಶ್ವಗಳಲ್ಲೂ ಕೆಳ ಅಂತಸ್ತುಗಳಲ್ಲಿ ಕಮಾನಿರುವ ಪ್ರವೇಶದ್ವಾರಗಳನ್ನೂ ಮೇಲು ಅಂತಸ್ತುಗಳಲ್ಲಿ ಬಾಗಿಲನ್ನು ಹೋಲುವ ಗೂಡು ಅಥವಾ ಪಗೋಡಗಳ ಉಬ್ಬುಚಿತ್ರಗಳನ್ನೂ ಕಡೆಯಲಾಗಿರುತ್ತಿತ್ತು. ಸುಂಗ್ ಪಗೋಡಗಳ ಪ್ರಭಾವಗಳನ್ನು ಇವುಗಳಲ್ಲಿ ಕಾಣಬಹುದು. ಕಂಸಗಳ ಮಧ್ಯದಲ್ಲಿರುವ ಗೋಡೆಗಳ ಮೇಲೆ ಹೂಬಳ್ಳಿಗಳ ಕೆತ್ತನೆಗಳನ್ನು ಮಾಡಲಾಗಿದೆ.

ಯುಅನ್ ಕಾಲದ ಪಗೋಡಗಳಲ್ಲಿ ಹೊಸತೇನೂ ಕಂಡುಬರುವುದಿಲ್ಲ. ದಕ್ಷಿಣ ಪ್ರದೇಶಗಳಲ್ಲಿ ಸುಂಗ್ ಕಟ್ಟಡಗಳ ಅಡಿಪಾಯದ ಮೇಲೆ, ಆ ಕಾಲದ ಅಂಶಗಳನ್ನೊಳಗೊಂಡಿರುವ ಪಗೋಡಗಳನ್ನು ನಿರ್ಮಿಸಲಾಗಿದೆ. ಉತ್ತರದಲ್ಲಿ–ಬೀಜಿಂಗ್‌ನಲ್ಲಿರುವ 14ನೆಯ ಶತಮಾನದ ಎರಡು ಪಗೋಡಗಳಲ್ಲಿ–ಲಿಯವೊ ಶೈಲಿಯ ಪ್ರಭಾವ ಹೆಚ್ಚಾಗಿದೆ. ಮಂಗೋಲರ ಆಳ್ವಿಕೆಯಲ್ಲಿ ಲಾಮಾ ಬೌದ್ಧ ಪಂಥಕ್ಕೆ ಹೆಚ್ಚು ಪ್ರಾಧಾನ್ಯ ದೊರಕಿದ್ದರಿಂದ ಸೀಸೆಯಾಕಾರದ ಟಿಬೆಟನ್ ಸ್ತೂಪಗಳು ಚೀನದಲ್ಲಿ ಬಳಕೆಗೆ ಬಂದಿರಬೇಕು. ಕುಬ್ಲೈಖಾನ್ ಕಟ್ಟಿಸಿದಂಥ ಒಂದು ಸ್ತೂಪ ಬೀಜಿಂಗಿನಲ್ಲಿ ಇನ್ನೂ ಉಳಿದು ಬಂದಿದೆ.

ಲಿಯಾವೊ ಕಾಲದ ಮರದ ಕಟ್ಟಡಗಳಲ್ಲಿ ಅತ್ಯಂತ ಪ್ರಾಚೀನವಾದ, 984ರಲ್ಲಿ ಕಟ್ಟಿದ ಟು–ಲೋ–ಸ್ಸು ಮಂದಿರ ಹೋಪೇ ಪ್ರಾಂತ್ಯದ ಜಿ–ಹ್ಸಿಯೆನ್‌ನಲ್ಲಿದೆ. ಅದರ ಗಮನಾರ್ಹ ಅಂಗಗಳೆಂದರೆ ಷಾನ್‌ಮೆನ್ ಅಥವಾ ಪ್ರವೇಶಮಂಟಪ ಮತ್ತು ಕುಅನ್ –ಯಿನ್–ಕೋ ಅಥವಾ ಅವಲೋಕಿತೇಶ್ವರ ಮಂಟಪ. ಪ್ರವೇಶ ಮಂಟಪ 17ಮೀ.X9ಮೀ. ಇದೆ. ಇದಕ್ಕೆ ಒಂದು ಅಂತಸ್ತು ಇದೆ. ಅವಲೋಕಿತೇಶ್ವರ ಮಂಟಪದ ವಿಸ್ತೀರ್ಣ 20X14ಮೀ. ಜಗತಿಯ ಮೇಲೆ 21ಮೀ. ಎತ್ತರದ ಎರಡು ಅಂತಸ್ತುಗಳಿವೆ. ಇದರ ಚಾವಣಿಯ ಮಧ್ಯಭಾಗದಿಂದ ಅವಲೋಕಿತೇಶ್ವರನ ಪ್ರತಿಮೆ ಎದ್ದು ಕಾಣುತ್ತದೆ. ಚಾವಣಿಯ ಸೂರುಗಳಲ್ಲಿ 24 ಪ್ರತ್ಯೇಕ ರೀತಿಯ ಕಂಸಗಳನ್ನು ಬಳಸಲಾಗಿದೆ. ಇದರಿಂದ ಕಟ್ಟಡ ನಿರ್ಮಾಣದ ಅನೇಕ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಒದಗಿಸಲು ಸಾಧ್ಯವಾಗಿದೆ.


ಬಿಳಿಯ ಪಗೋಡದ ಒಂದು ಭಾಗದ ವಿವರಗಳು

ಷಾನ್ ಸೀ ಮತ್ತು ಮಂಗೋಲಿಯಗಳ ಎಲ್ಲೆಯಲ್ಲಿರದ ಟಾ–ಟುಂ ಅದು ಟಾರ್ಟನರ ರಾಜಧಾನಿಯಾಗಿದ್ದಾಗ ನಿರ್ಮಿತವಾದ ಎರಡು ಮಂದಿರಗಳುಂಟು. ಅವುಗಳಲ್ಲಿ ಹು–ಯೆನ್–ಸ್ಸು ಪ್ರಮುಖವಾದ್ದು. ಅದರಲ್ಲಿ ಖಿಟಾನ್ ದೊರೆಗಳ ಪ್ರತಿಮೆಗಳನ್ನು 1062ರಿಂದ ಕಾದಿರಿಸಲಾಗಿತ್ತು. ಎರಡನೆಯದಾದ ಫು ಅಥವಾ ಷಾನ್–ಹುಅ–ಸ್ಸುದಲ್ಲಿ ಲಿಯಾವೊ ಕಾಲದ ಎರಡು ಕಟ್ಟಡಗಳನ್ನೂ, ಅನಂತರದ ಚಿನ್ ಕಾಲದ ಎರಡು ಕಟ್ಟಡಗಳನ್ನೂ ಕಾಣಬಹುದು. ಹು–ಯೆನ್–ಸ್ಸು ಮಂದಿರ ಪೂರ್ವಾಭಿಮುಖವಾಗಿದೆ. ಅಕ್ಕಪಕ್ಕಗಳಲ್ಲಿರುವ ಎರಡು ಗರ್ಭಗುಡಿಗಳಲ್ಲಿ ಉತ್ತರಕ್ಕಿರುವ ಮೇಲಣ ಗುಡಿಯಲ್ಲಿ ಚಿನ್ ಕಾಲದ ವಿಶಾಲ ಹಜಾರವೂ ದಕ್ಷಿಣಕ್ಕಿರುವ ಕೆಳಗಿನ ಗುಡಿಯಲ್ಲಿ 1038ರಲ್ಲಿ ನಿರ್ಮಿಸಿದ ಗ್ರಂಥಾಗಾರವೂ ಗಮನಾರ್ಹ. ಗ್ರಂಥಾಗಾರದ ವಿಸ್ತೀರ್ಣ 26ಮೀ.X19ಮೀ. ಒಳಭಾಗದಲ್ಲಿ ಅರ್ಚಕರ

ಕಟಕಟೆಯುಳ್ಳ ವೇದಿಕೆ ಮತ್ತು ಪ್ರದಕ್ಷಿಣ ಪಥಗಳುಂಟು. ಇಟ್ಟಿಗೆಯಿಂದ ಕಟ್ಟಲಾದ ವೇದಿಕೆ ಶಿಲ್ಪಗಳಿಂದ ಅಲಂಕೃತ. ಈ ಕಟ್ಟಡದ ಮುಖ್ಯ ಅಂಗವಾದ ಪುಸ್ತಕ ಕಪಾಟುಗಳನ್ನು ಎರಡು ಅಂತಸ್ತುಗಳಲ್ಲಿ, ಸುತ್ತಲೂ ಗೋಡೆಗೆ ಹೊಂದಿದಂತೆ ನಿರ್ಮಿಸಲಾಗಿದೆ. ಇಲ್ಲಿರುವ



ಹು-ಯೆನ್ ಸ್ಸುವಿನಲ್ಲಿರುವ ಪುಸ್ತಕ ಕಪಾಟು

ಮೂರು ಪೂಜಾಮೂರ್ತಿಗಳ ಮೇಲೂ ಚಾವಣಿಯಲ್ಲಿ ಅರ್ಧಗೋಲಾಕೃತಿಯ ಗುಮ್ಮಟ ಅಥವಾ ಭುವನೇಶ್ವರಿಗಳಿವೆ. ಎರಡನೆಯದಾದ ಷಾನ್-ಹುಅ-ಸ್ಸು ದಕ್ಷಿಣಾಭಿಮುಖವಾದ ಮೂರು ಕಟ್ಟಡಗಳನ್ನೊಳಗೊಂಡಿದೆ. ಪ್ರವೇಶ ಮಂಟಪ ಮತ್ತು ಮೂವರು ಪವಿತ್ರಾತ್ಮರ ಹಜಾರ-ಇವನ್ನು 1120ರ ಸುಮಾರಿನಲ್ಲಿ ಚಿನ್ ದೊರೆಗಳ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಯಿತು. ಇದರ ಮಧ್ಯ ಹಜಾರದಲ್ಲಿರುವ ಬುದ್ಧನ ಮೂರ್ತಿಯ ತಲೆಯ ಮೇಲಿನ ಚಾವಣಿಯಲ್ಲಿ ಎಂಟು ಮೂಲೆಗಳುಳ್ಳ ಸುಂದರ ಭುವನೇಶ್ವರಿಯಿದೆ.

ಚಿನ್ ಕಾಲದ ನಿರ್ಮಾಣಗಳಲ್ಲಿ ಹು-ಯೆನ್-ಸ್ಸುದಲ್ಲಿರುವ ಒಂಬತ್ತು ಅಂಕಣ ಉದ್ದ ಐದು ಅಂಕಣ ಅಗಲ ಇರುವ ವಿಶಾಲ ಹಜಾರ ಗಮನಾರ್ಹ. ಲಿಯಾವೊ ಶೈಲಿಯ ಪರಂಪರೆ ಮತ್ತು ಸುಂಗ್ ನವೀನತೆಗಳ ಮಿಶ್ರಣವಾದ ಈ ಹಜಾರದ ಒಳನೋಟ ಈಗಲೂ ಪ್ರೇಕ್ಷಣೀಯ. ಇದರಲ್ಲಿ ತಾಂತ್ರಿಕ ಬೌದ್ಧಪಂಥದ ರಹಸ್ಯಪೂರ್ಣ ಅಸ್ಪಷ್ಟತೆ ತುಂಬಿದೆ. ಅಲ್ಲಿಯ ಉಳಿದ ಎರಡು ಕಟ್ಟಡಗಳು ಸುಂಗ್ ಪ್ರಭಾವದವು. ಚಿನ್ ಕಾಲದ ಇತರ ನಿರ್ಮಾಣಗಳಲ್ಲೂ ಇಂಥ ಪ್ರಭಾವಗಳನ್ನು ಗುರುತಿಸಬಹುದು.

ಯುಆನ್ ಕಾಲದ ನಿರ್ಮಾಣಗಳಲ್ಲಿ ಯಾವುದರಲ್ಲೂ ಗಮನಾರ್ಹ ಸುಧಾರಣೆಗಳಾಗಲಿಲ್ಲ. ಮಿಂಗ್ ಮತ್ತು ಚಿಂಗ್ ರಾಜವಂಶಗಳ ಕಾಲದ ವಾಸ್ತುನಿರ್ಮಾಣಗಳಲ್ಲಿ ಹೊಸತೇನೂ ಇಲ್ಲದಿದ್ದುದು ಮಾತ್ರವಲ್ಲ, ವಾಸ್ತುಕಲೆ ಆಗ ಅವನತಿ ಹೊಂದತೊಡಗಿತು. ಆ ಕಾಲದ ಪ್ರಾರಂಭದ ಹಂತದಲ್ಲಿ ವಿಶಿಷ್ಟ ವಾಸ್ತುಶೈಲಿಯನ್ನು ನಿರ್ಮಿಸುವ ಪ್ರಯತ್ನಗಳೇನೋ ನಡೆದುವು. ಅದರ ಫಲಿತಾಂಶವಾಗಿ ಸುಂಗ್ ಶೈಲಿಗೆ ಒಂದು ನಿರ್ದಿಷ್ಟ ರೂಪ ದೊರಕಿತಷ್ಟೆ. ಅದಕ್ಕೆ ಹಿಂದಿನ ಕಾಲದ ಚೀನೀ ಕಟ್ಟಡಗಳನ್ನು ಅನುಕರಿಸಿ ಅನೇಕ ಅರಮನೆ ದೇವಾಲಯಗಳು ನಿರ್ಮಿತವಾದುವು. ವಿಶಾಲವಾದ ಅಂಗಳ ಮತ್ತು ಮಹಾದ್ವಾರಗಳುಳ್ಳ ದೊಡ್ಡ ಹಜಾರಗಳು, ಸರೋವರಗಳ ಸುತ್ತ ಹರಡಿದ್ದ ಕ್ರೀಡಾಮಂದಿರಗಳು-ಇವು ಗಮನಾರ್ಹವಾಗಿದ್ದರೂ ವಾಸ್ತುಕಲೆಯ ಅವನತಿಗೆ ಇವು ಉತ್ತಮ ನಿದರ್ಶನಗಳಾಗಿವೆ. ಲಿಯಾವೊ ಮತ್ತು ಸುಂಗ್ ಪ್ರಭಾವಗಳು 1600ರ ಸುಮಾರಿನಲ್ಲಿ ನಿರ್ಮಿಸಲಾದ ಕಟ್ಟಡಗಳಲ್ಲೂ ಕಾಣಬರುತ್ತವೆ.

1444 ಸುಮಾರಿಗೆ ಮಿಂಗ್ ದೊರೆಗಳ ಆಶ್ರಯದಲ್ಲಿ ರಾಜಧಾನಿ ಪೀಕಿಂಗಿನಲ್ಲಿ ಕಟ್ಟಲಾದ ಚೀ-ಹುಅ-ಸ್ಸು ಆ ಕಾಲದ ಪ್ರಾತಿನಿಧಿಕ ಕಟ್ಟಡ. ಅನಂತರದ ಕಾಲದಲ್ಲಿ ಚೀನದಲ್ಲಿ ನಿರ್ಮಿತವಾದ ಅನೇಕ ಕಟ್ಟಡಗಳಿಗೆ ಅದು ಮಾದರಿಯಾಯಿತು. ಇಕ್ಕಟ್ಟಾದ ಮತ್ತು ಉದ್ದವಾದ ಆಯಾಕಾರದ ಆ ಕಟ್ಟಡದಲ್ಲಿ ಒಂದರ ಹಿಂದೆ ಒಂದರಂತೆ ಬೇರೆಬೇರೆ ಅಳತೆಗಳ ಅನೇಕ ಅಂಗಳಗಳಿದ್ದುವು. ಮೊದಲ ಅಂಗಳದಲ್ಲಿ ಗಂಟೆ ಮತ್ತು ಕೊಳಗದಾಕಾರದ ಮಂಟಪಗಳು ಪ್ರಧಾನವಾಗಿದ್ದರೆ ಎರಡನೆಯ ಅಂಗಳದಲ್ಲಿ ಪ್ರವೇಶಮಂಟಪ ಮತ್ತು ನಾಲ್ಕು ಪಾಲಕ ದೊರೆಗಳ ವಿಗ್ರಹಗಳು ಗಮನಾರ್ಹ. ಅನಂತರ ಬುದ್ಧ ಹಜಾರ, ಸುಂದರವಾದ ಶಿಲ್ಪಗಳು ಮತ್ತು ಗ್ರಂಥಾಗಾರಗಳಿರುತ್ತಿದ್ದುವು. ದೇವಾಲಯದ ಮುಖ್ಯ ಭಾಗವಾದ ಜು-ಲೈ-ಟಿಯೆನ್ ಎರಡಂತಸ್ತಿನ ಗರ್ಭಗುಡಿ ಮೂರನೆಯ ಅಥವಾ ನಾಲ್ಕನೆಯ ಅಂಗಳದಲ್ಲಿ ಪ್ರತ್ಯೇಕವಾಗಿರುತ್ತಿತ್ತು. ಅದರ ಹಿಂಭಾಗದಲ್ಲಿ ಸಣ್ಣ ಗುಡಿಗಳನ್ನೂ ಭಿಕ್ಷುಗಳ



ಷಾನ್-ಹುಅ-ಸ್ಸುವಿನ ಮಧ್ಯ ಹಜಾರದ ಭುವನೇಶ್ವರಿ

ವಸತಿಗಳನ್ನೂ ಒಳಗೊಂಡ ಮತ್ತೊಂದು ಅಂಗಳವಿರುತ್ತಿತ್ತು. ಸಾಮಾನ್ಯವಾಗಿ ಇವೆಲ್ಲ ಕಟ್ಟಡಗಳೂ ಸಣ್ಣವಾಗಿರುತ್ತಿದ್ದುವಲ್ಲದೆ ಅವನತಿಯನ್ನು ಸೂಚಿಸುವಂತಿದ್ದುವು. ಜು-ಲೈ-ಟಿಯೆನ್ ಕೇವಲ 18ಮೀ.X12ಮೀ. ಇರುತ್ತಿತ್ತು. ಮ್ಯಾಂಚೂ ದೊರೆಗಳ ಆಶ್ರಯದಲ್ಲಿ ಬೆಳೆಯುತ್ತಿದ್ದ ಲಾಮಾ ಪಂಥದ ಮಂದಿರಗಳು ಇದಕ್ಕೆ ಅಪವಾದವಾಗಿ ದೊಡ್ಡವಾಗಿದ್ದವು.

ಜು–ಲೈ–ಟಿಯೆನ್ ಪ್ರಮಾಣಬದ್ಧ ಕಟ್ಟಡವಾಗಿರಲಿಲ್ಲ. ಕಂಬಗಳನ್ನು ಯಾವುದೇ ವ್ಯವಸ್ಥಿತ ರೀತಿಯಲ್ಲಿ ಬಳಸಿಲ್ಲದಿದ್ದುದರಿಂದ ಮಧ್ಯ ಅಂಕಣ ವಿಸ್ತಾರವಾಗಿಯೂ ನಾಲ್ಕು ಮೂಲೆಗಳ ಭಾಗಗಳು ಇಕ್ಕಟ್ಟಾಗಿಯೂ ಇದ್ದುವು. ಕಮಾನುಗಳು ಮತ್ತು ಕಂಸಗಳು ಬಹಳ ಗಿಡ್ಡಾಗಿದ್ದು ತಮ್ಮ ಮೊದಲಿನ ಭವ್ಯತೆಯನ್ನು ಕಳೆದುಕೊಂಡಿದ್ದುವು. ಅದರ ಮುಂಭಾಗ ಮತ್ತು ಎರಡನೆಯ ಅಂತಸ್ತಿನ ಕಮಾನುಗಳು ಮಾತ್ರ ಪ್ರೇಕ್ಷಣೀಯವಾಗಿದ್ದುವು. ಒಳಭಾಗವೂ ಅಲ್ಲಿಯ ಅರ್ಧವರ್ತುಲಾಕಾರದ ಗುಮ್ಮಟವೂ ಸುಂದರವಾದವು.

ಮಂಗೋಲರ ಕಾಲದಲ್ಲಿ 15ನೆಯ ಶತಮಾನದಲ್ಲಿ ಹೊ ಏಷ್ಯದ ಪ್ರಭಾವಗಳಿಂದಾಗಿ ಪ್ರವೇಶದ್ವಾರಗಳು ಸುರಂಗಗಳನ್ನು ಹೋಲುವ ಓಣಿಗಳಾದುವು. 16ನೆಯ ಶತಮಾನದ ಸುರಂಗಗಳನ್ನು ಹೋಲುವ ಎರಡು ದೊಡ್ಡ ದೇವಾಲಯಗಳಲ್ಲಿ ಮತ್ತು ಬೀಜಿಂಗಿನ ಪಶ್ಚಿಮಕ್ಕಿರುವ ಚಿಯೆನ್–ಲುಂಗ್ ಚಕ್ರವರ್ತಿಯ ಬೇಸುಗೆ ಅರಮನೆಯಲ್ಲಿ ಉತ್ತರ ಕಾಲೀನ ಐರೋಪ್ಯ ವಕ್ರಶೈಲಿಯ (ಬರೋಕ್) ಪ್ರಭಾವಗಳನ್ನು ಕಾಣಬಹುದು.

ಜು ಲೈ–ಟಿಯೆನ್‌ನ ಗುಮ್ಮಟದ ಒಳಚಾವಣಿ

ಚೀನದ ಈ ಕಾಲದ ವಾಸ್ತುನಿರ್ಮಾಣಗಳಲ್ಲಿ ತಾಂತ್ರಿಕ ನೈಪುಣ್ಯ, ರಚನಾಕೌಶಲಗಳು ಮರೆಯಾಗಿ ಕಣ್ಣಿಗೆ ಸುಂದರವೆನಿಸುವ ಆಲಂಕಾರಿಕ ಅಂಶಗಳಿಗೆ ಗಮನಕೊಡಲಾಗಿದೆ. ಅರಮನೆಯ ಕಟ್ಟಡಗಳಲ್ಲಿ ಬೃಹದ್ಗಾತ್ರ ಸರಳ ನಿರೂಪಣೆಗಳಿಗೆ ಪ್ರಾಧಾನ್ಯ ನೀಡಲಾಗಿದೆ. ಟೆ–ಮಿಯಾವೊದ ಅನೇಕ ಸುತ್ತು ಪ್ರಾಕಾರಗಳಲ್ಲಿ ಮತ್ತು ಬಾಗಿಲುಗಳಲ್ಲಿ ಈ ಅಂಶಗಳನ್ನು ಕಾಣಬಹುದು. ಮಂಚೂ ದೊರೆಗಳ ಕಾಲದಲ್ಲಿ ಸಣ್ಣ ಶಿಲ್ಪಗಳನ್ನು ಅಲಂಕಾರಣಕ್ಕೆ ಬಳಸಿಕೊಳ್ಳಲಾಗಿತ್ತು. ಬೀಜಿಂಗಿನಲ್ಲಿ ಚಿಂಗ್ ಅರಸರ ಅಭಿರುಚಿ ಉತ್ತಮವಾಗಿದ್ದಿತು. ಅವರು ತಮ್ಮ ಕಟ್ಟಡಗಳನ್ನು ವಿವಿಧ ಬಣ್ಣಗಳಿಂದ ಅಲಂಕರಿಸುತ್ತಿದ್ದರು. ಕಟ್ಟಡದ ಚಾವಣಿಯನ್ನು ಹೊಳೆಯುವ ನೀಲಿಗಾಜಿನ ಹೆಂಚುಗಳಿಂದಲೂ ಅದರ ಮೇಲಿನ ಶಿಖರವನ್ನು ಹಳದಿ, ನೀಲಿ ಅಥವಾ ಹಸಿರು ಬಣ್ಣದಿಂದಲೂ ಕೆಲವು ಬಾರಿ ಗೋಡೆಗಳ ಹೊರ ಭಾಗಗಳನ್ನು ವಿವಿಧ ಬಣ್ಣಗಳಿಂದಲೂ ಅಲಂಕರಿಸಲಾಗುತ್ತಿತ್ತು.

ದೀರ್ಘಕಾಲ ರಾಜಧಾನಿಯಾಗಿದ್ದ ಬೀಜಿಂಗ್ ನಗರದಲ್ಲಿ ಕೊನೆಯ ಕಾಲದ ವಾಸ್ತು ನಿರ್ಮಾಣಗಳು ಕೇಂದ್ರೀಕೃತವಾಗಿವೆ. ಅವುಗಳಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಪದ್ಧತಿಗಳ ಸಂಗಮ ಮತ್ತು ಚೀನೀ ವಾಸ್ತುಪರಂಪರೆಯ ಕ್ರಮಾಗತ ಅವನತಿಗಳನ್ನು ಕಾಣಬಹುದು. ನಗರನಿರ್ಮಾಣದ ತಳವಿನ್ಯಾಸದಲ್ಲಿ ಔಪಚಾರಿಕತೆ ಮತ್ತು ಅಸಮತೆಗಳ ನಡುವಣ ತಾಕಲಾಟ ಗಮನಾರ್ಹ. ನಗರದ ಉತ್ತರ ಭಾಗದಲ್ಲಿರುವ, 24ಕಿ.ಮೀ. ಸುತ್ತಳತೆಯುಳ್ಳ, ಟಾರ್ಟರರ ನಗರ ಮತ್ತು ದಕ್ಷಿಣ ಭಾಗದಲ್ಲಿರುವ 8X3ಕಿ.ಮೀ. ವಿಸ್ತಾರದ ಚೀನೀ ನಗರ–ಇಲ್ಲಿ ಈ ಅಂಶ ಸ್ಪಷ್ಟವಾಗಿದೆ. ಟಾರ್ಟರ ನಗರದಲ್ಲಿ ರಾಜವಂಶದ ನಿವಾಸಗಳು, ಪ್ರಮುಖ ಸರ್ಕಾರಿ ಕಚೇರಿಗಳು, ಹಿರಿಯ ಅಧಿಕಾರಿಗಳ ಮತ್ತು ಶ್ರೀಮಂತರ ವಸತಿಗಳು, ಕೃತಕ ಸರೋವರಗಳು, ಉದ್ಯಾನಗಳು ಮತ್ತು ವಿಶಾಲ ದೇವಮಂದಿರಗಳು ಇರುವುದರಿಂದ ಅದಕ್ಕೆ ಹೆಚ್ಚಿನ ಪ್ರಾಮುಖ್ಯವಿದೆ. ಆ ಭಾಗದ ಕೋಟೆಯ ಗೋಡೆಯ ಎತ್ತರ 15ಮೀ. ಗೋಡೆಗಳನ್ನು ಬಲಗೊಳಿಸಲು ನಿರ್ಮಿಸಲಾಗಿರುವ ಒತ್ತುಗೋಡೆಗಳೂ ಒಂಬತ್ತು ಅಮೋಘವಾದ ಹೆಬ್ಬಾಗಿಲುಗಳೂ ವೈಶಿಷ್ಟ್ಯಪೂರ್ಣವಾಗಿವೆ. ಚೀನೀ ನಗರದ ಕೋಟೆ ಸಣ್ಣದು. ಅದರ ಇಕ್ಕಟ್ಟಾದ ರಸ್ತೆಗಳು ಕ್ರಮಬದ್ಧವಾಗಿಲ್ಲ. ಈ ಭಾಗದಲ್ಲಿ ಸಂಪ್ರದಾಯಾನುಗುಣವಾಗಿ ನಗರದ ದಕ್ಷಿಣ ದಿಕ್ಕಿನಲ್ಲಿರಬೇಕಾದ ಎರಡು ಮರದ ಪ್ರಾರ್ಥನಾವೇದಿಕೆಗಳನ್ನು ಬಿಟ್ಟರೆ ಮತ್ತಾವ ಗಮನಾರ್ಹ ನಿರ್ಮಾಣವೂ ಇಲ್ಲ.

ಬೀಜಿಂಗ್ ನಗರದ ನಿರ್ಮಾಣ ಬಹಳ ಅಸಂಬದ್ಧವಾಗಿದೆ. ಪ್ರಮುಖ ರಸ್ತೆಗಳು ಸಹ ನೇರವಾಗಿಲ್ಲ. ಬಹುಶಃ ಅಲ್ಲಿ ಆಳಿದ ನಾಲ್ಕು ರಾಜಮನೆತನಗಳ ಕಾಲದಲ್ಲಿ ಉಂಟಾದ ಮಾರ್ಪಾಟುಗಳು ಅವುಗಳ ಅಸಂಬದ್ಧತೆಗೆ ಕಾರಣ. ಒಳಗಿನ ನಿಷಿದ್ಧ ನಗರದಲ್ಲಿ ಚೌ ಕಾಲದ ಪ್ರಭಾವಗಳನ್ನು ಸೂಚಿಸುವ ಕೆಲವು ಧಾರ್ಮಿಕ ಕಟ್ಟಡಗಳಿವೆ. ರಾಜವಂಶದ ಪುರಾತನರ ಮಂದಿರ ಅಥವಾ ಟೈ–ಮಿಯಾವೊ, ಭೂಮಿ ಮತ್ತು ಸುಗ್ಗಿದೇವತೆಗಳ ಪೂಜಾವೇದಿಕೆಗಳು ಮುಖ್ಯವಾದವು. ಮೊದಲನೆಯದು ಅರಮನೆಗಳ ಮಾದರಿಯಲ್ಲಿದೆ. ಅದರಲ್ಲಿ ಮಿಂಗ್ ಮತ್ತು ಚಿಂಗ್ ದೊರೆಗಳ ಪಾರ್ಥಿವ ದೇಹಗಳನ್ನು ಹೂಳಲಾಗಿದೆ. ನಿಷಿದ್ಧ ನಗರವನ್ನು ಅನೇಕ ಗೋಡೆಗಳಿಂದ ವಿಭಾಗಿಸಲಾಗಿದೆ. ದರ್ಬಾರು ಹಜಾರಗಳು ಇರುವ ಭಾಗ ಪ್ರಧಾನವಾದ್ದು. ಅದರ ಹಿಂಭಾಗದಲ್ಲಿ ರಾಜರ ವಾಸಗೃಹಗಳಿವೆ. ಅವುಗಳ ಸುತ್ತ ಇತರ ಪ್ರಮುಖರ ವಾಸಸ್ಥಾನಗಳೂ ಸ್ತ್ರೀಯರ ಅಂತಃಪುರಗಳೂ ದೇವಮಂದಿರಗಳೂ ಇವೆ. ಆಗ್ನೇಯ ಮತ್ತು ನೈಋತ್ಯ ದಿಕ್ಕುಗಳಲ್ಲಿ ಅರಸರ ಗ್ರಂಥಭಂಡಾರ ಮತ್ತು ಅಚ್ಚುಕೂಟಗಳಿವೆ.

ಬೀಜಿಂಗ್ ವಾಸ್ತುವಿನಲ್ಲಿ ದರ್ಬಾರು ಹಜಾರಗಳು ಗಮನಾರ್ಹ ಕಟ್ಟಡಗಳು. ಮಿಂಗ್ ಮತ್ತು ಚಿಂಗ್ ಕಾಲದ ಅಲಂಕರಣ ಕಲೆಯ ಉತ್ಕೃಷ್ಟ ನಿದರ್ಶನಗಳು ಅವು. ವಿಸ್ತಾರ, ಪ್ರಮಾಣಬದ್ಧ ನಿರ್ಮಾಣ, ಆಕಾರ ಮತ್ತು ಸ್ಥಳಪರಿಮಿತಿಯ ಪರಿಣಾಮಗಳನ್ನು ಹೆಚ್ಚಿಸುವ ಎತ್ತರ ಅವುಗಳಲ್ಲಿ ಎದ್ದುಕಾಣುತ್ತವೆ. ಅವುಗಳ ವರ್ಣಸಂಯೋಜನೆಯೂ ಅದ್ಭುತ. ವೇದಿಕೆಗಳ, ಸೋಪಾನಪಂಕ್ತಿಗಳ, ಕಟಕಟೆಗಳ ಅಮೃತಶಿಲೆಯ ಬಿಳುಪು, ಚಾವಣಿಯ ಹೆಂಚುಗಳ ಹೊಳೆಯುವ ಹಳದಿ, ಮರಗೆಲಸದ ಪ್ರಕಾಶಮಾನವಾದ ಕೆಂಪು, ಸೂರುಗಳ ವಿವಿಧ ವರ್ಣಗಳ ಚಿತ್ರಗಾರಿಕೆಯ ಮಿನುಗು ನಿಜವಾಗಿಯೂ ಅಪೂರ್ವವಾದದ್ದು.

ಐದು ಅಮೃತಶಿಲೆಯ ಸೇತುವೆಗಳನ್ನು ದಾಟಿದ ಮೇಲೆ ಸಿಗುವ ಮಹಾದ್ವಾರದ ಅನಂತರ 60ಮೀ. ಅಗಲದ ವಿಶಾಲ ಪ್ರಾಂಗಣದ ಹಿಂಬದಿಯಲ್ಲಿರುವ ಮೂರು ಪ್ರತ್ಯೇಕ ಸೋಪಾನಗಳ ಮೇಲ್ತುದಿಯಲ್ಲಿರುವ ಮೂರು ಬೇರೆ ಬೇರೆ ಆಕಾರದ ಜಗತಿ ಕಟ್ಟೆಗಳಲ್ಲಿ ಎಡಬದಿಯದು ರಾಜಪೀಠವುಳ್ಳ ದರ್ಬಾರು ಹಜಾರ ಅಥವಾ ಟೈ–ಹೊ–ಟಿಯೆನ್ (ವಿಸ್ತೀರ್ಣ ಸು. 60X30ಮೀ). ಮಧ್ಯದಲ್ಲಿರುವುದು ಶ್ರೀಮಂತರು, ಆಸ್ಥಾನಿಕರು ಕಾಯುವ ಚುಂಗ್ – ಹೋ– ಟಿಯೆನ್ (ವಿಸ್ತೀರ್ಣ ಸು. 30ಮೀ. X 30ಮೀ). ಮತ್ತು ಬಲಬದಿಯ ದೊರೆಗಳ ಉತ್ಸವಕೂಟಗಳ ಹಜಾರ (ವಿಸ್ತೀರ್ಣ ಸು. 60ಮೀ. X 30ಮೀ). ಇವು ಆ ಕಟ್ಟಡಗಳ ಗಮನಾರ್ಹ ವಿಭಾಗಗಳು.

ಚೀನೀ ನಗರದಲ್ಲಿರುವ ಸ್ವರ್ಗದ ವೇದಿಕೆ 1420ರಲ್ಲಿ ನಿರ್ಮಿತವಾಗಿ 1754ರಲ್ಲಿ ಜೀರ್ಣೋದ್ಧಾರವಾಯಿತು. ಆ ಸಮಯದಿಂದ ಈವರೆಗೂ ಅಚ್ಚಳಿಯದೆ ಉಳಿದುಬಂದಿರುವ ವಾಸ್ತು ಅಂಶಗಳನ್ನು ಚೀನೀ ಶೈಲಿಯ ಅಖಂಡತೆಗೆ ಉತ್ತಮ ನಿದರ್ಶನಗಳೆಂದು ಪರಿಗಣಿಸಬಹುದಾಗಿದೆ. (ಬಿ.ಕೆ.ಜಿ.)

**ಚೀನೀ ಶಿಕ್ಷಣ ಪದ್ಧತಿ :** ಭಾರತ, ಗ್ರೀಸ್, ರೋಮ್ ಮುಂತಾದ ದೇಶಗಳಂತೆ ಚೀನವೂ ಪ್ರಾಚೀನ ನಾಗರಿಕತೆಗೆ ಹೆಸರಾಗಿದ್ದು ಅನೇಕ ಪೌರಸ್ತ್ಯ ದೇಶಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತ ಬಂದಿದೆ. ಎರಡೂವರೆ ಸಹಸ್ರವರ್ಷಗಳ ಹಿಂದೆಯೇ ಅದು ಸಾಂಸ್ಕೃತಿಕ ಕ್ಷೇತ್ರದಲ್ಲಿ ಶಿಕ್ಷಣದ ಪ್ರಭಾವವನ್ನು ಕಂಡುಕೊಂಡಿತ್ತು. ಪ್ರಶ.ಪೂ. 551–479ರಲ್ಲಿ ಬದುಕಿದ್ದ ತತ್ತ್ವಚಿಂತಕ, ಕನ್‌ಫ್ಯೂಷಿಯಸನ ಪ್ರಭಾವ ಇದಕ್ಕೆ ಮುಖ್ಯ ಕಾರಣ ವೆನ್ನಬಹುದು. ಮಾನವನ ಸ್ವಭಾವಕ್ಕೆ ಸಂಬಂಧಿಸಿದ ತತ್ತ್ವಗಳಿಗೂ ಸಾಮಾಜಿಕ ಆದರ್ಶ ಗಳಿಗೂ ಅವನ ದೃಷ್ಟಿಯನ್ನು ರಾಷ್ಟ್ರ ಆಧಾರ ಮಾಡಿಕೊಂಡಿತ್ತು. ನೈತಿಕ ಪರಿಪೂರ್ಣತೆಯನ್ನು ಸಾಧಿಸಲು ಮಾನವತ್ವಕ್ಕೆ ಸಂದಿರುವ ವಿಶಿಷ್ಟ ಲಕ್ಷಣಗಳನ್ನು ಅರಿಯುವುದು ಅಗತ್ಯ. ಹಾಗೆ ಸಾಧಿಸಿದ ಜ್ಞಾನ ಅವನಿಗೆ ನಿಸರ್ಗದೊಡನೆಯೂ ಇತರ ಮಾನವರೊಡನೆಯೂ ಸಮರಸವಾಗಿ ನಡೆದುಕೊಳ್ಳುವ ವಿವೇಕವನ್ನೊದಗಿಸುವುದಲ್ಲದೆ ಸಮಾಜವನ್ನು ವಿಹಿತಮಾರ್ಗದಲ್ಲಿ ನಿರ್ದೇಶಿಸುವ ಶಕ್ತಿಯನ್ನೂ ದೃಷ್ಟಿ ಧ್ಯೇಯಗಳನ್ನೂ ದೊರಕಿಸುತ್ತದೆ. ಸ್ವಭಾವತಃ ಎಲ್ಲ ಮಾನವರೂ ಏಕರೀತಿಯಾಗಿದ್ದರೂ ಅನುಭವ ಅಥವಾ ಅಭ್ಯಾಸಗಳು ಅವರಲ್ಲಿ ಭಿನ್ನತೆಯನ್ನು ಕಲ್ಪಿಸುವುವು. ನಾಯಕನ ಗುಣಶೀಲಗಳೂ ನಡೆನುಡಿ ಗಳೂ ಇತರರ ಮೇಲೆ ವ್ಯಾಪಕವಾಗಿ ಪರಿಣಾಮ ಬೀರುವುದರಿಂದ ನಾಯಕರಾಗತಕ್ಕವರು ನೈತಿಕ ಮಹಾದರ್ಶವನ್ನು ಸಾಧಿಸಬೇಕು. ಅದಕ್ಕೆ ಉಚಿತ ಶಿಕ್ಷಣವೇ ರಾಜಮಾರ್ಗ–ಇದು ಕನ್‌ಫ್ಯೂಷಿಯಸನ ಅಭಿಮತ. ಆದ್ದರಿಂದ

ಅನಂತರದ ದಿನಗಳಲ್ಲಿ ಆರಂಭವಾದ ಸಾಮ್ರಾಜ್ಯಯುಗದಲ್ಲಿ ಅವನ ತತ್ತ್ವದೃಷ್ಟಿಯನ್ನು ಆಳರಸರು ಆಧಾರ ಮಾಡಿಕೊಂಡರು. ಅದರಂತೆ ಕನ್‌ಫ್ಯೂಷಿಯಸನ ತತ್ತ್ವವನ್ನು ಅರಿತಿದ್ದು ನೈತಿಕ ಸಂಸ್ಕಾರವನ್ನು ಪಡೆದಿದ್ದವರನ್ನು ಆಯ್ದು ರಾಜ್ಯದ ಸಾರ್ವಜನಿಕ ಸ್ಥಾನಗಳಿಗೆ ನೇಮಿಸುವ ಸಂಪ್ರದಾಯವನ್ನು ಅನುಷ್ಠಾನಕ್ಕೆ ತಂದರು. ಅದರ ಫಲವಾಗಿ ಇಡೀ ಸಾಮ್ರಾಜ್ಯದಲ್ಲಿ ಒಂದು ರೀತಿಯ ನೈತಿಕ ಆದರ್ಶಸಾಧನೆಯ ಸ್ಪರ್ಧೆ ಆರಂಭವಾಯಿತು. ಆ ಸ್ಪರ್ಧೆಯಲ್ಲಿ ವಿಜಯ ಗಳಿಸಲು ಜ್ಞಾನಾರ್ಜನೆ ರಾಜಮಾರ್ಗವೆನಿಸಿದ್ದು. ಶಿಕ್ಷಣವು ರಾಷ್ಟ್ರದಲ್ಲಿ ಆದ್ಯತೆಯ ವ್ಯವಸ್ಥೆಯಾಯಿತು. ಸಾಮಾನ್ಯವಾಗಿ ಅಂದು ನಾಯಕರಾಗತಕ್ಕವರು ಶ್ರೀಮಂತ ಸಮಾಜಕ್ಕೆ ಸೇರಿದ್ದು ಅವರು ಮಾತ್ರ ಕನ್‌ಫ್ಯೂಷಿಯಸನ ತತ್ತ್ವದೃಷ್ಟಿಯನ್ನು ಅರಿತವರಾಗಿದ್ದರು. ಆದ್ದರಿಂದ ಸ್ಪರ್ಧೆಯಲ್ಲಿ ಅವರಿಗೆ ಜಯವಾಗಿ ಅವರು ಮಾತ್ರ ಮಾನ್ಯತೆಯ ಸ್ಥಾನಗಳನ್ನು ಆಕ್ರಮಿಸುವಂತಾಗುತ್ತಿತ್ತು. ಈ ಸಂಭವವನ್ನು ತಪ್ಪಿಸಲು ಅವನು ಎಲ್ಲರಿಗೂ ಶಿಕ್ಷಣಸೌಲಭ್ಯವನ್ನು ಪ್ರತಿಪಾದಿಸಿ, ಸಾಮಾನ್ಯರೂ ಜ್ಞಾನಾರ್ಜನೆಮಾಡಿ ಸಾರ್ವಜನಿಕ ಸ್ಥಾನಗಳನ್ನಲಂಕರಿಸಬಹುದಾದ ಅವಕಾಶವನ್ನು ಕಲ್ಪಿಸಿದ್ದನು. ಎಂದರೆ ವ್ಯಕ್ತಿಗಳಿಗೆ ನೀಡತಕ್ಕ ಗೌರವವು ಜನ್ಮವನ್ನವಲಂಬಿಸಿರದೆ ಆಯಾ ವ್ಯಕ್ತಿಯ ದಕ್ಷತೆಯನ್ನು ಆಧಾರ ಮಾಡಿಕೊಳ್ಳಬೇಕೆಂಬ ವಾದವನ್ನು ಅವನು ಎತ್ತಿ ಹಿಡಿದಿದ್ದನು. ಕನ್‌ಫ್ಯೂಷಿಯಸನ ಈ ತತ್ತ್ವದೃಷ್ಟಿ ಪ್ರಾಚೀನ ಚೀನದ ಶಿಕ್ಷಣದ ಸ್ವರೂಪವನ್ನು ರೂಪಿಸಿದ್ದಲ್ಲದೆ ಅದಕ್ಕೆ ರಾಷ್ಟ್ರದಲ್ಲೂ ಸಮಾಜದಲ್ಲೂ ಗೌರವದ ಸ್ಥಾನವನ್ನು ದೊರಕಿಸಿಕೊಟ್ಟಿತು. ಅವನ ಈ ಪ್ರಭಾವ ಚೀನಿ ಶಿಕ್ಷಣದ ಮೇಲೆ 19ನೇ ಶತಮಾನದ ಮಧ್ಯಕಾಲದವರೆಗೂ ನಡೆದು ಬಂತೆನ್ನಬಹುದು.

**ಪ್ರಾಚೀನ ಚೀನದಲ್ಲಿ ಶಿಕ್ಷಣ:** ಕನ್‌ಫ್ಯೂಷಿಯಸನ ತತ್ತ್ವದೃಷ್ಟಿಯನ್ನೊಪ್ಪಿದ ಸಾಮ್ರಾಜ್ಯ ಸರ್ಕಾರ ಪ್ರಶ.ಪೂ. 3ನೆಯ ಶತಮಾನದಲ್ಲೇ ಆಡಳಿತದ ಉನ್ನತ ಸ್ಥಾನಗಳಿಗೆ ಅತ್ಯಂತ ದಕ್ಷರಾದವರನ್ನು ಆರಿಸಲು ಪರೀಕ್ಷಾಪದ್ಧತಿಯನ್ನು ಆಚರಣೆಗೆ ತಂದಿತು. ಪ್ರಶ.ಪೂ. 202ರಿಂದ ಪ್ರಶ. 220 ರವರೆಗೆ ಅಸ್ತಿತ್ವದಲ್ಲಿದ್ದ ಹಾನ್ ವಂಶದವರು ಮೊಟ್ಟಮೊದಲು ಅದನ್ನು ಅದರ ಮೂಲಸ್ವರೂಪದಲ್ಲಿ ಆರಂಭಿಸಿದರು. ವಿಶಾಲ ಭೂಭಾಗದಲ್ಲಿ ಹರಡಿದ್ದ ಸಾಮ್ರಾಜ್ಯದ ಆಡಳಿತಕ್ಕಾಗಿ ಲಕ್ಷಾಂತರ ಮಂದಿ ಅಧಿಕಾರಿಗಳನ್ನು ಆರಿಸಬೇಕಾಗಿತ್ತು. ಮೊದಮೊದಲು ಸಚಿವರೂ ಖ್ಯಾತವ್ಯಕ್ತಿಗಳೂ ಸಾಮಾಜಿಕ ಸಂಘಗಳೂ ನೀಡುತ್ತಿದ್ದ ಅರ್ಹತಾ ಪತ್ರಗಳನ್ನು ಆಧಾರ ಮಾಡಿಕೊಂಡು ಉದ್ಯೋಗಕ್ಕೆ ಅಭ್ಯರ್ಥಿಗಳನ್ನು ಆರಿಸುತ್ತಿದ್ದರೂ ಕ್ರಮಕ್ರಮವಾಗಿ ಸಂದರ್ಶನ ಮತ್ತು ವಿಧಿವತ್ತಾದ ಪರೀಕ್ಷೆಗಳನ್ನು ಆ ಕಾರ್ಯಕ್ಕಾಗಿ ಅನುಸರಿಸತೊಡಗಿದರು. ವೈಯಕ್ತಿಕವಾಗಿ ಅವರ ನೈತಿಕ ನಿಷ್ಠೆಯನ್ನೂ ಆಧಾರ ಮಾಡಿಕೊಳ್ಳುತ್ತಿದ್ದರು. ಚಕ್ರವರ್ತಿಗಳೇ ದೊಡ್ಡ ದೊಡ್ಡ ಸ್ಥಾನಗಳಿಗೆ ಸ್ವತಃ ರಾಜಧಾನಿಯಲ್ಲಿ ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸಿ ಯೋಗ್ಯತೆ ನಿರ್ಧರಿಸುತ್ತಿದ್ದರು. ಅಭ್ಯರ್ಥಿಗಳ ನೈತಿಕ ದೃಢತೆ ಮತ್ತು ಪರೀಕ್ಷೆಯ ಮೂಲಕ ನಿರ್ಧರಿಸಿದ ಅವರ ಪಾಂಡಿತ್ಯ–ಇವೆರಡರ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆರಿಸುವ ಈ ಪದ್ಧತಿ ಮುಂದಿನ ರಾಜಮನೆತನಗಳಿಗೂ ಅನುಕರಣಯೋಗ್ಯವಾಗಿ ಪರಿಣಮಿಸಿತು.

ಪರೀಕ್ಷೆಯನ್ನು ಸರ್ಕಾರದ ಅಧಿಕಾರಸ್ಥಾನಗಳಿಗೆ ಅಭ್ಯರ್ಥಿಗಳನ್ನು ಆಯಲು ಸಾಧನವನ್ನಾಗಿ ಮಾಡಿಕೊಂಡ ಹಾನ್ ರಾಜಮನೆತನದವರು ಪ್ರಶ.ಪೂ. ದಲ್ಲೇ ರಾಜಧಾನಿಯಲ್ಲಿ ಸರ್ಕಾರದ ಪರಿಷತ್ತನ್ನು (ಅಕೆಡಮಿ) ಆರಂಭಿಸಿದರು. ಸರ್ಕಾರ ಸೂಕ್ತವೆಂದು ಪರಿಗಣಿಸಿದ 3,000 ಮಂದಿ ವಿದ್ಯಾರ್ಥಿಗಳಿಗೆ ಅಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಅದಕ್ಕಾಗಿ ಅಲ್ಲಿ ಅನೇಕ ಪಂಡಿತರನ್ನು ನೇಮಿಸಲಾಗುತ್ತಿತ್ತು. ಕ್ರಮ ಕ್ರಮವಾಗಿ ಸಾಮ್ರಾಜ್ಯದ ಪ್ರತಿ ರಾಜ್ಯವೂ ಒಂದೆರಡು ವಿದ್ಯಾಲಯಗಳನ್ನು ಪಡೆದುಕೊಂಡವು. ಅಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸರ್ಕಾರ ಸ್ಥಾಪಿಸಿದ್ದ ರಾಜಧಾನಿಯ ಪರಿಷತ್ತಿಗೆ ಪರೀಕ್ಷೆಯೊಂದರ ಮೂಲಕ ಸೇರಲು ಅರ್ಹತೆ ಪಡೆಯಬೇಕಾಗಿತ್ತು. ಅಲ್ಲಿ ಶಿಕ್ಷಣ ಪಡೆದ ಅನಂತರ ಅವರಿಗೆ ಅಂತಿಮ ಪ್ರವೇಶಪರೀಕ್ಷೆಯೊಂದನ್ನು ನಡೆಸಿ ಅವರಿಗೆ ಕೊಡಬೇಕಾದ ಸರ್ಕಾರದ ಅಧಿಕಾರಸ್ಥಾನವನ್ನು ನಿರ್ಧರಿಸಲಾಗುತ್ತಿತ್ತು. ಪ್ರಾಂತೀಯ ಮತ್ತು ಸಾಮ್ರಾಜ್ಯ ಪರಿಷತ್ತು ಮತ್ತು ವಿದ್ಯಾಲಯಗಳಲ್ಲಿ ಮುಖ್ಯವಾಗಿ ಕನ್‌ಫ್ಯೂಷಿಯಸ್ ತತ್ತ್ವಪಂಥದ ಸಿದ್ಧಾಂತದ ಅಧ್ಯಯನ ನಡೆಯುತ್ತಿತ್ತು. ಅಂದಿಗಾಗಲೆ ಅದಕ್ಕೆ ಪ್ರತಿಸ್ಪರ್ಧಿಯಾಗಿ ನೈಯಾಯಿಕಸಿದ್ಧಾಂತವೊಂದು ಪ್ರಚಾರಕ್ಕೆ ಬಂದಿದ್ದರೂ ಸಮ್ರಾಟರು ಕನ್‌ಫ್ಯೂಷಿಯಸ್ ಸಿದ್ಧಾಂತವನ್ನೇ ಅಧಿಕೃತ ತತ್ತ್ವದೃಷ್ಟಿಯಾಗಿ ಅಂಗೀಕರಿಸಿದ್ದರು. ಅವರು ಅಂದಿಗಂದಿಗೆ ಆ ಸಿದ್ಧಾಂತದ ಪಂಡಿತರ ಸಮ್ಮೇಳನಗಳನ್ನು ನಡೆಸಿ ಆ ತತ್ತ್ವ ಸಿದ್ಧಾಂತಗಳನ್ನು ಶುದ್ಧರೂಪದಲ್ಲಿ ನಿರ್ಧರಿಸಲು ಯತ್ನಿಸುತ್ತಿದ್ದರು. ಪ್ರಶ. 175ರಲ್ಲಿ ಅಧಿಕೃತ ಸ್ವರೂಪದಲ್ಲಿ ಅದನ್ನು ಪ್ರಕಟಿಸಲಾಯಿತು. ಆ ತತ್ತ್ವವನ್ನು ಸಾಮ್ರಾಜ್ಯದ ಅಧಿಕೃತ ತತ್ತ್ವದೃಷ್ಟಿಯನ್ನಾಗಿ ಅಂಗೀಕರಿಸಿದ್ದರಿಂದ ರಾಷ್ಟ್ರದಲ್ಲಿ ಅಧಿಕಾರ ಸ್ಥಾನಗಳಿಗೆ ವಂಶ, ಜಾತಿ, ಐಶ್ವರ್ಯ ಇವುಗಳಿಗೆ ಬದಲಾಗಿ ಪಾಂಡಿತ್ಯ ಮತ್ತು ನೈತಿಕ ಸಚ್ಚಾರಿತ್ರ್ಯಗಳನ್ನು ಆಧಾರ ಮಾಡಿಕೊಳ್ಳುವುದು ಆಚರಣೆಗೆ ಬಂತು. ಅಲ್ಲದೆ, ತಮ್ಮ ಮಂತ್ರಾಲೋಚನವರ್ಗದಲ್ಲೂ ಪಂಡಿತರಿಗೇ ಸ್ಥಾನವೀಯುತ್ತಿದ್ದರು. ಸಚ್ಚಾರಿತ್ರ್ಯ ಮತ್ತು ಪಾಂಡಿತ್ಯ ಎರಡೂ ಶಿಕ್ಷಣದಿಂದ ಲಭಿಸಬೇಕಾಗಿದ್ದುದರಿಂದ ಸಾಮ್ರಾಜ್ಯದ ಹಿತದೃಷ್ಟಿಯಲ್ಲಿ ಶಿಕ್ಷಣಪ್ರಸಾರಕ್ಕೆ ಸರ್ಕಾರ ಆದ್ಯತೆ ನೀಡುತ್ತ ಬಂತು. ಕನ್‌ಫ್ಯೂಷಿಯಸ್‌ನ ತತ್ತ್ವ ಸಮ್ರಾಟರಿಗೆ ಪರಮ ಪವಿತ್ರ ಸ್ಥಾನವನ್ನೂ ಪರಮೋನ್ನತ ಅಧಿಕಾರವನ್ನೂ ನೀಡಿತ್ತು. ಇದರಿಂದ ಸಮ್ರಾಟರಿಗೆ ಸ್ವಾಭಾವಿಕವಾಗಿ ಆ ತತ್ತ್ವದೃಷ್ಟಿ ಪ್ರಿಯವೆನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.



ಪೀಕಿಂಗಿನ ಅಂತರ್‌ನಗರದಲ್ಲಿರುವ ಭವ್ಯ ಶಾಲಾಭವನ. ಚಕ್ರವರ್ತಿ ಕುಮಾರ–ಕುಮಾರಿಯರ ವಿದ್ಯಾಭ್ಯಾಸಕ್ಕೆ ಮೀಸಲಾದ್ದು

ಪ್ರ.ಶ. 25ರಲ್ಲಿ ಆರಂಭವಾಗಿ 220ರ ವರೆಗೂ ನಡೆದುಕೊಂಡು ಬಂದ, ಹಾನ್ ಸಮ್ರಾಟರ ಅನಂತರದ ಕಾಲದಲ್ಲಿ ಅಧಿಕಾರಸ್ಥಾನಕ್ಕೆ ಅಭ್ಯರ್ಥಿಗಳನ್ನು ಆರಿಸುವಾಗ ಪರೀಕ್ಷೆಯ ಬಳಕೆಯನ್ನು ಕ್ರಮಕ್ರಮವಾಗಿ ಕಡೆಗಣಿಸಲಾಯಿತು. ಹಾಗೂ ಆ ವಂಶದ ಕೊನೆಯ ಸಮ್ರಾಟರ ಕಾಲದಲ್ಲಿ ಆರ್ಥಿಕ ಮುಗ್ಗಟ್ಟಿನ ಫಲವಾಗಿ ಲಂಚರುಷುವತ್ತುಗಳು ಹೆಚ್ಚಿಕೊಂಡು ಹಣಕೊಟ್ಟವರಿಗೆ ಅಧಿಕಾರ ಸ್ಥಾನವನ್ನು ಕೊಡುವ ಸಂಪ್ರದಾಯ ಬೆಳೆದು ಬಂತು. ಪರಿಷತ್ತುಗಳಲ್ಲಿ ಶಿಕ್ಷಣ ಪಡೆದವರು ಪರೀಕ್ಷೆಗಳ ಮೂಲಕ ಅಧಿಕಾರಸ್ಥಾನಕ್ಕೆ ಬರುವ ಅವಕಾಶ ಕಡಿಮೆಯಾಗಿ ಅಲ್ಲಿ ನೀಡುತ್ತಿದ್ದ ಶಿಕ್ಷಣಕ್ಕೆ ಮೊದಲಿದ್ದ ಗೌರವ ಇಲ್ಲವಾಯಿತು. 7ನೆಯ ಶತಮಾನದವರೆಗೆ ಪರೀಕ್ಷೆಯೂ ಅದರೊಡನೆ ಶಿಕ್ಷಣ ವ್ಯವಸ್ಥೆಯೂ ಹಿಂಬದಿಗೆ ಬಿದ್ದುವು.

ಪ್ರ.ಶ. 589ರಲ್ಲಿ ಸಿಂಹಾಸನಕ್ಕೆ ಬಂದ ಸೂರ್ಯವಂಶದ ಸಮ್ರಾಟರು ಮತ್ತೆ ಪರೀಕ್ಷೆಗಳನ್ನೂ ಅದರೊಡನೆ ಪರಿಷತ್ತು ಮತ್ತು ವಿದ್ಯಾಲಯಗಳನ್ನೂ ಆರಂಭಿಸಿದರು. ಅವರ ಅನಂತರ 618ರಲ್ಲಿ ಅಧಿಕಾರಕ್ಕೆ ಬಂದ ತಾಂಗ್ ವಂಶದ ಸಮ್ರಾಟರ ಕಾಲದಲ್ಲೂ ಪರೀಕ್ಷೆ ಅಭ್ಯರ್ಥಿಗಳನ್ನು ಕೆಲಸಕ್ಕೆ ಆರಿಸಿಕೊಳ್ಳಲು ಪ್ರಧಾನ ಉಪಕರಣವಾಯಿತು. ಆ ವಂಶದ ಚಕ್ರವರ್ತಿನಿ ವೂ ಎಂಬುವಳ ಕಾಲದಲ್ಲಿ ಅದು ಇನ್ನೂ ಪ್ರಮುಖ ಸಾಧನವಾಗಿ ಪರಿಣಮಿಸಿತು. ಆಗ ತಾನೆ ಗಳಿಸಿದ್ದ ತನ್ನ ಅಧಿಕಾರವನ್ನು ಭದ್ರಗೊಳಿಸಿಕೊಳ್ಳಲು ಯತ್ನಿಸುವಾಗ ತನ್ನ ವಿರುದ್ಧ ಇದ್ದ ಹಳೆಯ ಅಧಿಕಾರಿಗಳನ್ನು ಬಡ್ತಿಕೊಟ್ಟು ಮೇಲ್ದರ್ಜೆಗೇರಿಸುವುದಾಗಲಿ ಶಿಫಾರಸುಗಳ ಮೂಲಕ ಆರಿಸಿಕೊಳ್ಳುವುದಾಗಲಿ ಅವಳಿಗೆ ಸರಿಬೀಳಲಿಲ್ಲ. ಪರೀಕ್ಷೆಯ ಮೂಲಕ ಆಯ್ದು ಹೊಸ ಜನರನ್ನು ಆರಿಸಿಕೊಳ್ಳುವುದರಿಂದ ತನ್ನ ಅಧಿಕಾರಕ್ಕೆ ಬೆಂಬಲವಾಗುವುದೆಂದು ಅವಳು ಪರೀಕ್ಷೆಗೆ ಮಹತ್ತ್ವ ನೀಡಿದಳು. ನೂತನ ಪದವೀಧರ ಅಧಿಕಾರಿಗಳು ತನಗೆ ಬೆಂಬಲವಿತ್ತು ತನ್ನ ಅಧಿಕಾರವನ್ನು ಭದ್ರಗೊಳಿಸಿದ್ದನ್ನು ಕಂಡಂತೆ ಪರೀಕ್ಷೆಗೆ ಏಕಪ್ರಕಾರವಾಗಿ ಮಹತ್ತ್ವವಿತ್ತು ಆಕೆ ಶಿಕ್ಷಣ ವ್ಯವಸ್ಥೆಗೆ ಹೆಚ್ಚಿನ ಅವಕಾಶ ಕಲ್ಪಿಸುತ್ತಾ ಹೋದಳು. ಅಲ್ಲಿಯ ತನಕ ಪರೀಕ್ಷೆ ನಡೆಸುವ ಮತ್ತು ಅಧಿಕಾರಕ್ಕೆ ನೇಮಿಸಿಕೊಳ್ಳುವ ಕಾರ್ಯ ಹಳೆಯ ಅಧಿಕಾರಿಗಳನ್ನೊಳಗೊಂಡ ಮಂಡಲಿಯೊಂದಕ್ಕೆ ಸೇರಿತ್ತು. ಆಗ ಪರೀಕ್ಷೆ ನಡೆಸುವ ಮಂಡಲಿಯನ್ನು ಅಧಿಕಾರಕ್ಕೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವ ಮಂಡಲಿಯಿಂದ ಪ್ರತ್ಯೇಕಿಸಲಾಯಿತು. ಆ ಮೂಲಕ ಪರೀಕ್ಷೆಯ ವ್ಯವಸ್ಥೆಗೆ ಒಂದು ಸ್ವತಂತ್ರ ಆಸ್ತಿತ್ವವೂ ಹೆಚ್ಚಿನ ಸ್ಥಾನಮಾನಗಳೂ ದೊರಕಿದುವು.

10ನೆಯ ಶತಮಾನದ ಮಧ್ಯೆ ಅಧಿಕಾರಕ್ಕೆ ಬಂದ ಸೂಂಗ್ ವಂಶದ ಚಕ್ರವರ್ತಿಗಳು ಪರಿಷತ್ತುಗಳಿಗೆ, ಶಿಕ್ಷಣಕ್ಕೆ ಆಯ್ದುಕೊಳ್ಳುವಾಗ ಅರ್ಹತಾಪತ್ರ, ಶಿಫಾರಸುಗಳನ್ನು ಆಧಾರಮಾಡಿಕೊಳ್ಳದೆ ಸಾಹಿತ್ಯದಲ್ಲಿ ಪರಿಶ್ರಮ ಹೊಂದಿರುವ ಯಾರು ಬೇಕಾದರೂ ಅಲ್ಲಿನ ಪ್ರವೇಶಪರೀಕ್ಷೆಗೆ ಕೂಡಲು ಅವಕಾಶ ಕಲ್ಪಿಸಿದರು. ಅದರಲ್ಲಿ ಉತ್ತೀರ್ಣರಾದವರು ರಾಜಧಾನಿಯಲ್ಲಿ ನಡೆಯುತ್ತಿದ್ದ ಆಯ್ಕೆಯ ಪರೀಕ್ಷೆಗೆ ಕೂಡಬಹುದಾದ ಅವಕಾಶ ಕಲ್ಪಿಸಿತ್ತು. ಆ ಮೂಲಕ ಗ್ರಾಮಾಂತರಪ್ರದೇಶದ ಬಡರೈತನ ಮಗನೂ ರಾಜ್ಯದ ಉನ್ನತಾಧಿಕಾರಕ್ಕೆ ಬರುವ ಅವಕಾಶವನ್ನು ಕಲ್ಪಿಸಿಕೊಟ್ಟರು. ಪ್ರಾಚೀನ ಚೀನದ ಶಿಕ್ಷಣದ ಇತಿಹಾಸದಲ್ಲಿ ಇದನ್ನು ಪ್ರಮುಖ ಘಟನೆಯೆಂದು ಪರಿಗಣಿಸಬಹುದು. ಏಕೆಂದರೆ ಎಲ್ಲರಿಗೂ ಅಧಿಕಾರಕ್ಕೆ ಬರುವ ಅವಕಾಶ ಕಲ್ಪನೆಯಾದಂತೆ ಸಾರ್ವತ್ರಿಕವಾಗಿ ಶಿಕ್ಷಣ ಪ್ರಚಾರಕ್ಕೆ ಬರಲು ಅನುಕೂಲವಾಯಿತು. ಪರಿಷತ್ತಿನಲ್ಲಿ ಮತ್ತು ರಾಜಧಾನಿಯಲ್ಲಿ ನಡೆಯುವ ಪರೀಕ್ಷೆಗೆ ಕೂಡಲು ಸಿದ್ಧತೆ ಪಡೆಯಲು ದೇಶಾದ್ಯಂತ ಜನ ಆಶಿಸಿದರು. ಅದಕ್ಕಾಗಿ ಶಾಲೆಗಳು ಆರಂಭವಾದವು. ಅಲ್ಲದೆ ಪೂರ್ವ ಹಾಗೂ ಆಗ್ನೇಯ ಚೀನದ ಜನರೇ ಪರೀಕ್ಷೆಗಳಲ್ಲಿ

ಉತ್ತೀರ್ಣರಾಗಿ ಅಧಿಕಾರಸ್ಥಾನಗಳೆಲ್ಲ ಅವರಿಗೇ ಮೀಸಲಾಗಿ ಹೋಗುತ್ತಿದ್ದುವು ; ಅಲ್ಲಿನವರು ಅದಕ್ಕಾಗಿ ಹೆಚ್ಚಿನ ಶಿಕ್ಷಣವ್ಯವಸ್ಥೆಯನ್ನೂ ಮಾಡಿಕೊಂಡಿದ್ದರು. ಇತರ ಪ್ರದೇಶಗಳಲ್ಲಿ ಶಿಕ್ಷಣ ವ್ಯಾಪಕವಾಗಿ ಹರಡಿರಲಿಲ್ಲ. ರಾಜ್ಯದ ಆಡಳಿತಶಾಖೆಗಳಲ್ಲಿ ಒಂದೇ ಪ್ರದೇಶದವರು ಹೆಚ್ಚಿಕೊಂಡು ಸಾಮ್ರಾಜ್ಯದಲ್ಲಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡಿದ್ದರು. ಈ ಪ್ರಾದೇಶಿಕ ಅಸಮಾನತೆಯನ್ನೂ ಆಗ್ನೇಯ ಪ್ರಾಂತ್ಯದವರ ಸರ್ವಾಧಿಕಾರವನ್ನೂ ಮುರಿಯಲು ಸೂಂಗ್ ವಂಶದ ಸಮ್ರಾಟರು ಆಡಳಿತ ಸ್ಥಾನಗಳನ್ನು ಪ್ರಾದೇಶಿಕವಾಗಿ ವಿಭಜಿಸಿ ಆಯಾ ಪ್ರದೇಶದವರಿಗೆ ಇಷ್ಟಿಷ್ಟೆಂದು ನಿಗದಿ ಮಾಡಿದರು. ಇದರಿಂದ ಸಾಮ್ರಾಜ್ಯದ ಎಲ್ಲ ಪ್ರದೇಶದವರಿಗೂ ಅಧಿಕಾರ ಸ್ಥಾನಕ್ಕೆ ಬರುವ ಅವಕಾಶ ಹೆಚ್ಚಿತು. ಅದರೊಡನೆ ಅಲ್ಲಿನ ಶಿಕ್ಷಣಸಂಸ್ಥೆಗಳ ಸಂಖ್ಯೆಯೂ ಹೆಚ್ಚಲಾರಂಭಿಸಿ, ಶಿಕ್ಷಣ ಸೌಲಭ್ಯದಲ್ಲಿ ಪ್ರಾದೇಶಿಕ ಸಮಾನತೆ ಏರ್ಪಡುತ್ತ ಬಂತು.

**ಮಧ್ಯಯುಗದಲ್ಲಿ ಶಿಕ್ಷಣ :** 1368ರಲ್ಲಿ ಸಿಂಹಾಸನಕ್ಕೇರಿದ ಮಿಂಗ್ ಮತ್ತು ಚಿಂಗ್ ವಂಶದ ಸಮ್ರಾಟರು ಶಿಕ್ಷಣವ್ಯವಸ್ಥೆಗೆ ಹಿಂದಿನ ಪ್ರಾಮುಖ್ಯವನ್ನೇ ಮುಂದುವರಿಸಿಕೊಂಡು ಬಂದರು. ಅಲ್ಲದೆ ಅವರೂ ಮೂರು ವಿಶಿಷ್ಟ ಹಂತಗಳಲ್ಲಿ ಪರೀಕ್ಷೆ ನಡೆಸಿ ಮೂರು ಹಂತದಲ್ಲಿ ಪದವಿನೀಡುವ ಸಂಕೀರ್ಣ ವ್ಯವಸ್ಥೆಯನ್ನು ಮಾಡಿದರು. ಮೊದಲು ಪೂರ್ವಭಾವಿ ಪರೀಕ್ಷೆಯೊಂದನ್ನು ಆಯಾ ಅಭ್ಯರ್ಥಿಯ ಪ್ರದೇಶದಲ್ಲೇ ನಡೆಸಲಾಗುತ್ತಿತ್ತು. ಅದರಲ್ಲಿ ಉತ್ತೀರ್ಣರಾದವರು ಮೂರು ವರ್ಷಕ್ಕೆ ಎರಡಾವರ್ತಿ ನಡೆಸುತ್ತಿದ್ದ ಪ್ರಥಮ ಅಂತಸ್ತಿನ ಪದವಿಪರೀಕ್ಷೆಗೆ ಸಿದ್ಧರಾಗುತ್ತಿದ್ದರು. ಅದರಲ್ಲಿ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದುದಲ್ಲದೆ ಅನೇಕ ವಿಷಯಗಳಲ್ಲಿ ಪರೀಕ್ಷೆ ಕೊಡಬೇಕಾಗುತ್ತಿತ್ತು. ಸಹಸ್ರಗಟ್ಟಲೆ ವಿದ್ಯಾರ್ಥಿಗಳು ಆ ಪರೀಕ್ಷೆಗೆ ಕೂಡುತ್ತಿದ್ದರೂ ಕೇವಲ ಕೆಲವರು ಮಾತ್ರ ಉತ್ತೀರ್ಣ ರಾಗುತ್ತಿದ್ದರು. ಪ್ರಥಮ ಪದವಿ ಪಡೆದವರು ಮೂರು ವರ್ಷಕ್ಕೊಮ್ಮೆ ನಡೆಸುತ್ತಿದ್ದ ಎರಡನೆಯ ಹಂತದ ಪರೀಕ್ಷೆಗೆ ಕೂಡುತ್ತಿದ್ದರು. ಮೂರು ದಿನಗಳ ತನಕ ನಡೆಯುತ್ತಿದ್ದ ಈ ಪರೀಕ್ಷೆಗೂ ಸಹಸ್ರಾರು ಮಂದಿ ಕೂಡುತ್ತಿದ್ದರು. ಆದರೆ ಅವರಲ್ಲಿ ಕೇವಲ ಸ್ವಲ್ಪ ಮಂದಿ ಮಾತ್ರ ಉತ್ತೀರ್ಣರಾಗುತ್ತಿದ್ದರು. ಹಾಗೆ ಉತ್ತೀರ್ಣರಾದವರು ಮಾತ್ರ ಸಮ್ರಾಟರ ರಾಜಧಾನಿಯಲ್ಲಿ ನಡೆಯುತ್ತಿದ್ದ ಮೂರನೆಯ ಪದವಿಯ ಮತ್ತೊಂದು ಪರೀಕ್ಷೆಗೆ ಕೂಡಬೇಕಾಗಿತ್ತು. ಅದರಲ್ಲಿ ಉತ್ತೀರ್ಣರಾದವರನ್ನು ಸಮ್ರಾಟರೇ ಸ್ವತಃ ಪರೀಕ್ಷಿಸುತ್ತಿದ್ದರು. ಈ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಆಯ್ಕೆಯಾಗಿ ಸಾಮ್ರಾಜ್ಯದ ಘನ ಪಂಡಿತರೆನಿಸಿ ಕೊಳ್ಳುತ್ತಿದ್ದರಲ್ಲದೆ ಪ್ರಸಿದ್ಧ ಹ್ಯಾನ್‌ಲಿನ್ ವಿದ್ಯಾಪೀಠದಲ್ಲಿ ನೇಮಕವಾಗುತ್ತಿದ್ದರು.

ಪೀಹೈ ಉದ್ಯಾನದಲ್ಲಿ ಬಾಲವಿಹಾರ. ತಾಯಂದಿರ ಮತ್ತು ಚಿಕ್ಕ ಮಕ್ಕಳ ದೃಷ್ಟಿಯಿಂದ ಚೀನದಲ್ಲಿ ಅನೇಕ ಶೈಕ್ಷಣಿಕ ಹಾಗೂ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಮಿಂಗ್ ಸಮ್ರಾಟರ ಕಾಲದಲ್ಲಿ ವ್ಯಾಸಂಗ ವಿಷಯಗಳೂ ಅವುಗಳ ವ್ಯವಸ್ಥೆಯೂ ಜಟಿಲವಾಗುತ್ತ ಬಂದುವು. ಜೂ ಷೀ ಪಂಡಿತ ಕನ್‌ಫ್ಯೂಷಿಯಸನ ತತ್ತ್ವಸಿದ್ಧಾಂತಗಳನ್ನು ಕುರಿತು ರಚಿಸಿದ ವ್ಯಾಖ್ಯಾನ 12ನೆಯ ಶತಮಾನದ ಕೊನೆಕೊನೆಗೆ ದೇಶಾದ್ಯಂತ ಪ್ರಚಾರಕ್ಕೆ ಬಂತು. ಅದನ್ನೇ ವಿದ್ಯಾಪೀಠಗಳೆಲ್ಲ ಅಂಗೀಕರಿಸಿದ್ದುವು. ಪರೀಕ್ಷೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಸ್ವೋಪಜ್ಞತೆಯನ್ನು ಪ್ರದರ್ಶಿಸಲು ಅವಕಾಶವಿರಲಿಲ್ಲ. ಆದ್ದರಿಂದ ಶಿಕ್ಷಣಸಂಸ್ಥೆಗಳೆಲ್ಲ ಜೂಷೀಯ ವ್ಯಾಖ್ಯಾನಗಳನ್ನು ಮಕ್ಕಿ ಕಾ ಮಕ್ಕಿ ಅಧ್ಯಯನ ಮಾಡುತ್ತಿದ್ದು ಜ್ಞಾನರಾಜ್ಯದ ಬೆಳವಣಿಗೆಗೆ ಅಗತ್ಯವಾದ ನಮ್ಯತೆ ಇಲ್ಲವಾಗುತ್ತ ಬಂತು. 1487ರಲ್ಲಿ 8 ಪಾದಗಳಲ್ಲಿ ಉತ್ತರಿಸುವ ಪ್ರಬಂಧ ಶೈಲಿಯನ್ನೂ ನಿಗದಿ ಮಾಡಿದರು. ಅದರಲ್ಲಿ ಇಷ್ಟೇ ಪದಗಳನ್ನೂ ಪದಪುಂಜಗಳನ್ನೂ ಬಳಸಬೇಕೆಂಬ ನಿಯಮವೂ ಆಚರಣೆಗೆ ಬಂದು ಪರೀಕ್ಷೆಯೂ ಅದಕ್ಕೆ ಸಿದ್ಧತೆ ನೀಡುತ್ತಿದ್ದ ವಿದ್ಯಾಪೀಠಗಳೂ ಒಂದು ಬಗೆಯ ಹಳೆಯ ಜ್ಞಾನದ ಕಸರತ್ತಿನ ಕೇಂದ್ರಗಳಾಗುತ್ತ ಬಂದುವು. ಇದನ್ನು ಅಲ್ಲಿನ ಜ್ಞಾನರಾಜ್ಯದ ಕುರುಡು (ಕತ್ತಲ) ಯುಗವೆಂದು ಕರೆಯಬಹುದು. ಶಿಕ್ಷಣಕ್ಷೇತ್ರದ ಈ ಪರಿಸ್ಥಿತಿ ಚಿಂಗ್ ವಂಶದ ಕೊನೆಕೊನೆಯವರೆಗೂ ಮುಂದುವರಿಯುತ್ತ ಹೋಯಿತು.

**ಶಿಕ್ಷಣ ವ್ಯವಸ್ಥೆ :** ಪ್ರಾಚೀನ ಚೀನದಲ್ಲಿ ಶಿಕ್ಷಣ ಪರೀಕ್ಷೆಗಾಗಿಯೂ ಪರೀಕ್ಷೆ ಅಧಿಕಾರಸ್ಥಾನಗಳ ಗಳಿಕೆಗಾಗಿಯೂ ನಡೆಯುತ್ತ ಬಂದು ಪರೀಕ್ಷೆಗಳು ಶಿಕ್ಷಣದ ಹಾಗೂ ಶಿಕ್ಷಣಸಂಸ್ಥೆಗಳ ಸ್ವರೂಪವನ್ನು ನಿರ್ಧರಿಸುತ್ತ ಬಂದುದನ್ನು ಮೇಲಿನ ವಿವರಣೆಯಲ್ಲಿ ಕಾಣಬಹುದು. ಆಧುನಿಕ ಶಿಕ್ಷಣಮೀಮಾಂಸೆಯ ದೃಷ್ಟಿಯಲ್ಲಿ ಇದು ತೀರ ಹಾಸ್ಯಾಸ್ಪದವಾಗಿ ಕಾಣುವುದು ಸ್ಪಷ್ಟವಾಗಿದೆ. ಹೇಗೇ ಆಗಲಿ, ಅತಿ ಪ್ರಾಚೀನಕಾಲದಲ್ಲಿ ಅಲ್ಲಿ ಪರೀಕ್ಷೆಗಿದ್ದ ಪ್ರಾಮುಖ್ಯದ ಫಲವಾಗಿ ಶಿಕ್ಷಣಸಂಸ್ಥೆಗಳು ಪ್ರಚಾರಕ್ಕೆ ಬಂದುವು. ಹಾನ್ ವಂಶದ ಸಮ್ರಾಟರ ವಿದ್ಯಾಪೀಠಕ್ಕೆ ವಿದ್ಯಾರ್ಥಿಗಳು ಪ್ರಾದೇಶಿಕ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣ ಪಡೆದು ಬರುತ್ತಿದ್ದರು. ಆದರೆ ಈ ಪ್ರಾದೇಶಿಕ ವಿದ್ಯಾಸಂಸ್ಥೆಗಳು ಸಾರ್ವತ್ರಿಕವಾಗಿ ವ್ಯವಸ್ಥೆಗೊಂಡಿರಲಿಲ್ಲ. ಅವು ಬಹುಮಟ್ಟಿಗೆ ಪರೀಕ್ಷಾ ಸಂಸ್ಥೆಗಳಂತಿದ್ದುವು. ವಿದ್ಯಾರ್ಥಿಗಳು ವಿಧವಿಧವಾದ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಪಡೆದು ಅವುಗಳ ಪರೀಕ್ಷೆಗೆ ಕೂಡುತ್ತಿದ್ದರು. ಮುಂದೆ ಸೂಂಗ್-ಮಿಂಗ್ ವಂಶದ ಸಮ್ರಾಟರ ಕಾಲದಲ್ಲಿ ಅವಕ್ಕೆ ಬೋಧಿಸುವ ಕಾರ್ಯವನ್ನೂ ವಹಿಸಲಾಯಿತು. ಅವು ಕೇವಲ ಮುಖ್ಯಸ್ಥಳಗಳಲ್ಲಿರುತ್ತಿದ್ದುವು. ಪ್ರಾಚೀನ ಕಾಲದಿಂದಲೂ ವಿದ್ಯಾರ್ಥಿಗಳಿಗೆ ಮೂಲಶಿಕ್ಷಣವನ್ನು ನೀಡುತ್ತಿದ್ದ ಖಾಸಗಿ ಶಿಕ್ಷಣಸಂಸ್ಥೆಗಳು ಅಲ್ಲಿನ ಶಿಕ್ಷಣವ್ಯವಸ್ಥೆಯಲ್ಲಿ ಮುಖ್ಯಪಾತ್ರ ವಹಿಸುತ್ತಿದ್ದುವು. ಕೆಲವು ಶ್ರೀಮಂತರು ತಮ್ಮ ಕುಟುಂಬದವರಿಗಾಗಿ ಸಂಬಳದ ಮೇಲೆ ಅಧ್ಯಾಪಕರನ್ನು ನೇಮಿಸಿಕೊಂಡು ನಡೆಸುತ್ತಿದ್ದರು. ಅವು ದಕ್ಷತೆಯಿಂದ ಕೆಲಸ ಮಾಡುತ್ತಿದ್ದುವು ; ಪಕ್ಷಪಂಗಡಗಳೂ ತಮ್ಮ ಮಕ್ಕಳಿಗಾಗಿ ಶಾಲೆಗಳನ್ನು ಏರ್ಪಡಿಸಿಕೊಂಡಿದ್ದುವು. ಅವು ಅಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿರಲಿಲ್ಲ. ಮತ್ತೆ ಕೆಲವು ಊರೊಟ್ಟಿನ ಶಾಲೆಗಳಾಗಿದ್ದು ಅವು ತೀರ ಅಸಮರ್ಪಕವಾಗಿ ನಡೆಯುತ್ತಿದ್ದುವು. ಇವೆಲ್ಲ ಬಹುಮಟ್ಟಿಗೆ ಪ್ರಾಥಮಿಕ ಮಟ್ಟದ ಶಿಕ್ಷಣವನ್ನೊದಗಿಸುತ್ತಿದ್ದುವು. ಇವುಗಳಂತೆ ಪ್ರೌಢಶಾಲಾ ಮಟ್ಟದ ಖಾಸಗಿ ಶಿಕ್ಷಣ ಸಂಸ್ಥೆಗಳೂ (ಶೂಯ್ವಾನ್) ಅಸ್ತಿತ್ವದಲ್ಲಿದ್ದುವು. ಈ ಪ್ರೌಢವಿದ್ಯಾಸಂಸ್ಥೆಗಳು ಬೋಧಿಸುವುದರ ಜೊತೆಗೆ ಸಂಶೋಧನೆಗಳನ್ನೂ ನಡೆಸುತ್ತಿದ್ದವು. ಅಲ್ಲಿ ರಾಷ್ಟ್ರದ ಖ್ಯಾತ ಪಂಡಿತರು ಕೆಲಸ ಮಾಡುತ್ತಿದ್ದರು. ಸುಂಗ್ ಮತ್ತು ಚಿಂಗ್ ವಂಶದ ಸಮ್ರಾಟರ ಕಾಲದಲ್ಲಿ ಅವನ್ನು ಅರೆಸರ್ಕಾರಿ ಸಂಸ್ಥೆಗಳಾಗಿ ಮಾನ್ಯ ಮಾಡಲಾಯಿತು. ಚಿಂಗ್ ಅರಸುಗಳ ಕಾಲದಲ್ಲಿ ಪ್ರಾಂತೀಯ ಮುಖ್ಯಸ್ಥಳಗಳ ಪ್ರೌಢ ಶಿಕ್ಷಣಸಂಸ್ಥೆಗಳು ಆ ಪ್ರಾಂತ್ಯದಲ್ಲಿ ಕೀರ್ತಿವೆತ್ತ ಕೇಂದ್ರಗಳಾಗಿರುತ್ತಿದ್ದುವು. ಅಲ್ಲಿನ ವಿದ್ಯಾರ್ಥಿಗಳು ಪ್ರಾಂತೀಯ ಪರೀಕ್ಷೆಗಳಿಗೆ ಕೂಡಬಹುದಾಗಿತ್ತು. ಜಿಲ್ಲಾ ಮಟ್ಟದಲ್ಲೂ ಮುಖ್ಯಸ್ಥಳಗಳಲ್ಲಿ ಇಂಥ ಖಾಸಗಿ ಸಂಸ್ಥೆಗಳು ಅಸ್ತಿತ್ವದಲ್ಲಿದ್ದುವು.

**ಆಧುನಿಕ ಚೀನದಲ್ಲಿ ಶಿಕ್ಷಣ:** ಇತರ ಪೌರಸ್ತ್ಯ ದೇಶಗಳಂತೆ ಚೀನದಲ್ಲೂ ಶಿಕ್ಷಣದ ಆಧುನಿಕ ಯುಗ 19ನೇ ಶತಮಾನದಲ್ಲಿ ಆರಂಭವಾಯಿತು. ಪಾಶ್ಚಾತ್ಯರು ಅಲ್ಲಿಗೆ ಬರಲಾರಂಭಿಸಿದಾಗ ಅವರೊಡನೆ ಹೋರಾಡಬೇಕಾದ ಅನಿವಾರ್ಯವೊದಗಿದಾಗ ತಮ್ಮ ಶಿಕ್ಷಣಪದ್ಧತಿ ಆಧುನಿಕ ಜೀವನಕ್ಕೆ ಹೊಂದಿಕೊಳ್ಳದಿದ್ದ ಅಂಶ ವ್ಯಕ್ತವಾಯಿತು. ಕೇವಲ ಪರೀಕ್ಷೆಗಳೇ ಪ್ರಧಾನವಾಗಿದ್ದ ಶಿಕ್ಷಣಪದ್ಧತಿಯನ್ನು ಪುನರ್ವ್ಯವಸ್ಥೆಗೊಳಿಸಿ ಆಧುನಿಕ ಜೀವನಕ್ಕೆ ಹೊಂದಿಸಿಕೊಳ್ಳುವ ನಿರ್ದಿಷ್ಟ ಯತ್ನ ಆಗ ಆರಂಭವಾಯಿತು. ಈ ಯತ್ನದ ಫಲವಾಗಿ ಪಾಶ್ಚಾತ್ಯ ದೇಶಗಳಲ್ಲಿ ಆಗಲೇ ಪ್ರಚಾರಕ್ಕೆ ಬಂದಿದ್ದ ಶಿಕ್ಷಣವ್ಯವಸ್ಥೆಯ ನೂತನ ಅಂಶಗಳು ಅನುಷ್ಠಾನಕ್ಕೆ ಬರಹತ್ತಿದುವು. ಅದರೊಡನೆ ಅಲ್ಲಿನ ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯೂ ಮಾರ್ಪಡುತ್ತ ಬಂತು.

ಚೀನದ ಆಧುನಿಕ ಶಿಕ್ಷಣದ ಇತಿಹಾಸದಲ್ಲಿ ಮೂರು ಮುಖ್ಯ ಘಟ್ಟಗಳನ್ನು ಕಾಣಬಹುದು. ಮೊದಲ ಘಟ್ಟ 1862ರಲ್ಲಿ ಆರಂಭವಾಗಿ ಹಿಂದಿನಿಂದ ನಡೆದುಕೊಂಡು ಬಂದಿದ್ದ ಶಿಕ್ಷಣಸಂಸ್ಥೆಗಳಲ್ಲಿ ಪಾಶ್ಚಾತ್ಯ ತಂತ್ರಗಳನ್ನು ಅನುಗೊಳಿಸುವ ಯತ್ನ ನಡೆಯಿತು. ಆದರೆ ತಮ್ಮದೇ ಆದ ವೈಶಿಷ್ಟ್ಯವನ್ನು ಎರಡು ಸಹಸ್ರ ವರ್ಷಗಳ ತನಕ ಉಳಿಸಿ ಬೆಳೆಸಿಕೊಂಡು ಬಂದಿದ್ದ ಶಿಕ್ಷಣಸಂಸ್ಥೆಗಳಲ್ಲಿ ಮೂಲಭೂತ ಬದಲಾವಣೆಗಳನ್ನು ತರಲು ಇಚ್ಛಿಸದೆ ಮೂರು ನೂತನ ಮಾದರಿಯ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಭಾಷೆಯ ವ್ಯಾಸಂಗ, ತಾಂತ್ರಿಕ ಶಿಕ್ಷಣ, ಸೈನಿಕ ವಿದ್ಯಾಪೀಠಗಳು ಅಲ್ಲಲ್ಲಿ ಆರಂಭವಾದುವು. ಮಿಂಗ್ ವಂಶದ ಚಕ್ರವರ್ತಿಗಳ ಕಾಲದಿಂದ ಪ್ರಚಾರದಲ್ಲಿದ್ದ ಕನ್‌ಫ್ಯೂಷಿಯಸನ ನವೀಕೃತ ಸಿದ್ಧಾಂತಗಳ ಜೊತೆಗೆ ಪರೀಕ್ಷೆಯಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳೂ ಸೇರಲು ಆರಂಭವಾಯಿತು. ಆದ್ದರಿಂದ ಅದರ ಬೋಧನೆಗೆ ಸಾಂಪ್ರದಾಯಿಕ ಮತ್ತು ನೂತನ ಶಾಲೆಗಳಲ್ಲಿ ಸ್ವಲ್ಪಮಟ್ಟಿನ ಅವಕಾಶ ಕಲ್ಪನೆಯಾಯಿತು. ಆದರೆ ಅದಷ್ಟರಿಂದ ಶಿಕ್ಷಣ ಆಧುನಿಕ ಜೀವನಕ್ಕೆ ಹೊಂದಿಕೊಳ್ಳಲಾಗಲಿಲ್ಲ. 1895ರಲ್ಲಿ ಜಪಾನ್ ಚೀನವನ್ನು ಸೋಲಿಸಿದಾಗ ಈ ಅಂಶ ಚೆನ್ನಾಗಿ ವ್ಯಕ್ತಪಟ್ಟಿತು. ತಮ್ಮ ಗತಕಾಲದ ಶಿಕ್ಷಣಪದ್ಧತಿಯನ್ನು ಅಲ್ಪಸ್ವಲ್ಪ ತೇಪೆಹಾಕಿ ನೇರ

ಮಾಡುವುದು ಸಾಧ್ಯವಿಲ್ಲವೆಂಬುದು ಅರಿವಾಗಿಹೋಯಿತು. ಆಗ ಅಲ್ಲಿನ ತತ್ತ್ವಚಿಂತಕರೂ ಶಿಕ್ಷಣವೇತ್ತರೂ ತಮ್ಮ ಆರ್ಷೇಯ ಶಿಕ್ಷಣದ ರಚನೆಯನ್ನೂ ಅದರ ಗುರಿಯನ್ನೂ ಆಮೂಲಾಗ್ರವಾಗಿ ಬದಲಾಯಿಸಲು ನಿರ್ದಿಷ್ಟವಾಗಿ ಕಾರ್ಯಪ್ರವೃತ್ತರಾದರು.

ರೈತ ಹುಡುಗಿಯರ ಚಳಿಗಾಲದ ತರಗತಿ

ಚೀನೀ ಶಿಕ್ಷಣದ ಆಧುನೀಕರಣದ ಎರಡನೆಯ ಘಟ್ಟ ಈ ಶತಮಾನದ ಮೊದಲ ದಶಕದಲ್ಲಿ ಆರಂಭವಾಯಿತು. ಹಿಂದಿನಿಂದ ಬಂದಿದ್ದ ವಿದ್ಯಾಪೀಠಗಳನ್ನು ಸರ್ಕಾರ ಸಾರ್ವಜನಿಕ ಶಾಲೆಗಳನ್ನಾಗಿ ಪರಿವರ್ತಿಸಿತು. ಪ್ರಾಂತೀಯ ಮುಖ್ಯಸ್ಥಳಗಳಲ್ಲಿದ್ದ ಉನ್ನತ ವಿದ್ಯಾಪೀಠಗಳು ಕಾಲೇಜುಗಳಾದುವು. ಪ್ರತಿ ಪ್ರಾಂತ್ಯದ ಜಿಲ್ಲಾ ಕೇಂದ್ರಗಳಲ್ಲೂ ತಾಲ್ಲೂಕು ಕೇಂದ್ರಗಳಲ್ಲೂ ದೊಡ್ಡ ದೊಡ್ಡ ಗ್ರಾಮಗಳಲ್ಲೂ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಆರಂಭವಾದುವು. ಅಲ್ಲಿ ಕೆಲವು ನೂತನ ವಿಷಯಗಳನ್ನು ಬೋಧಿಸಲು ಆರಂಭಿಸಿದ್ದರೂ ದೇಶೀಯ ಪದ್ಧತಿಯ ಶಿಕ್ಷಣ ಇನ್ನೂ ಪ್ರಧಾನವಾಗೇ ಇತ್ತು. ಈ ಸ್ಥಿತಿಗೆ ವಿರುದ್ಧವಾಗಿ ಅಲ್ಲಿಗೆ ವಲಸೆ ಬಂದಿದ್ದ ಕ್ರೈಸ್ತ ಪಾದ್ರಿಗಳು ಆರಂಭಿಸಿದ್ದ ಖಾಸಗಿ ಪಾಠಶಾಲೆಗಳು ತೀವ್ರವೇಗದಲ್ಲಿ ಆಧುನಿಕ ಪದ್ಧತಿಯನ್ನು ಅನುಸರಿಸತೊಡಗಿದುವು. ಅನೇಕರಿಗೆ ಅವುಗಳ ಶಿಕ್ಷಣ ಆಕರ್ಷಣೀಯವಾಗಿ ಕಂಡಿತು. ಇದರ ಫಲವಾಗಿ ಸರ್ಕಾರ 1905ರಲ್ಲಿ ಪರೀಕ್ಷಾ ಪ್ರಾಧಾನ್ಯದ ಶಿಕ್ಷಣಪದ್ಧತಿಯ ಲೋಪದೋಷಗಳನ್ನು ಮನಗಂಡು ಆ ಪರೀಕ್ಷಾಪದ್ಧತಿಯನ್ನೇ ಕೈಬಿಟ್ಟಿತು. ಅಂದಿಗಾಗಲೇ ಅನೇಕರು ಜಪಾನಿನಲ್ಲಿ ಶಿಕ್ಷಣ ಪಡೆದು ಮಾತೃಭೂಮಿಗೆ ಹಿಂದಿರುಗಿದ್ದರು. ಅವರೆಲ್ಲ ತಮ್ಮ ರಾಷ್ಟ್ರದ ಉಳಿವಿಗೂ ಅಭಿವೃದ್ಧಿಗೂ ಇಡೀ ಶಿಕ್ಷಣ ವ್ಯವಸ್ಥೆ ನವೀಕರಣವಾಗಬೇಕೆಂದು ಆಗ್ರಹದಿಂದ ಸೂಚಿಸತೊಡಗಿದರು.

ಆ ಸುಮಾರಿಗಾಗಲೇ ಎಲ್ಲ ದೇಶಗಳಂತೆ ಚೀನದಲ್ಲೂ ನೂತನ ರಾಷ್ಟ್ರೀಯ ಭಾವನೆ ಹೊಸರೂಪವನ್ನು ತಾಳುತ್ತ ಬರುತ್ತಿತ್ತು. ಹೊಸದಾಗಿ ರೂಪುವೆತ್ತಿದ್ದ ಶಿಕ್ಷಣ ಪದ್ಧತಿಯನ್ನು ಸರ್ಕಾರ ಪೂರ್ಣವಾಗಿ ನಿಯಂತ್ರಿಸುತ್ತಿತ್ತು. ಅದಕ್ಕಾಗಿ ಶಿಕ್ಷಣ ಸಚಿವಾಲಯವೂ ಅಸ್ತಿತ್ವಕ್ಕೆ ಬಂದಿತ್ತು. ಜನಾಂಗವನ್ನು ಪುನರುಜ್ಜೀವನಗೊಳಿಸುವುದೂ ರಾಷ್ಟ್ರದ ಸೇನೆಯನ್ನು ಬಲಪಡಿಸುವುದೂ ಶಿಕ್ಷಣದ ಪ್ರಧಾನ ಉದ್ದೇಶಗಳೆಂದು ಸರ್ಕಾರ ಘೋಷಿಸಿತು. ಜಪಾನಿನಲ್ಲಿದ್ದಂತೆ ಶಾಲೆಗಳನ್ನು ಪುನರ್ವ್ಯವಸ್ಥೆಗೊಳಿಸಿ, ಅಲ್ಲಿ ವಿಜ್ಞಾನ ಮತ್ತು ಸೈನಿಕ ಶಿಕ್ಷಣಕ್ಕೆ ಪ್ರಾಶಸ್ತ್ಯವೀಯಲಾಯಿತು. ಶಿಕ್ಷಣ ರಾಷ್ಟ್ರವನ್ನು ಬಲಪಡಿಸುವುದಕ್ಕೆಂಬ ಭಾವನೆ ದೇಶಾದ್ಯಂತ ಹರಡಿತು. ಈ ಪ್ರವೃತ್ತಿ, ಸಹಸ್ರಾರು ವರ್ಷಗಳಿಂದ ಬಂದಿದ್ದ ಸಮ್ರಾಟರ ಆಳ್ವಿಕೆಯನ್ನು ಕೊನೆಗಾಣಿಸಿ 1912ರಲ್ಲಿ ಗಣರಾಜ್ಯವನ್ನು ಸ್ಥಾಪಿಸಿದ ಮೇಲೂ ಮುಂದುವರಿಯುತ್ತಿತ್ತು. ಆದರೆ 1916ರಲ್ಲಿ ಗಣರಾಜ್ಯದ ಕೇಂದ್ರ ಸರ್ಕಾದ ಕುಸಿತದಿಂದ ಉದ್ಭವಿಸಿದ ಪ್ರಾಂತೀಯ ಮಹಾ ಸೇನಾನಿ ಪಾಳೆಯಗಾರರ ಆಳ್ವಿಕೆಯಲ್ಲಿ ಶಿಕ್ಷಣದ ರಾಷ್ಟ್ರೀಯ ಸೇನಾ ಶಕ್ತಿವರ್ಧನದ ಉದ್ದೇಶ ಹಿಂಬದಿಗೆ ಬಿತ್ತು. ಒಂದನೆಯ ಮಹಾಯುದ್ಧದಲ್ಲಿ ಪಾಶ್ಚಾತ್ಯ ಪೌರಪ್ರಭುತ್ವಗಳು ಗಳಿಸಿದ ಜಯದಿಂದ ಅಲ್ಲಿನ ಶಿಕ್ಷಣಪದ್ಧತಿಯ ವರಿಷ್ಠ ವರ್ಚಸ್ಸು ಚೀನದ ಶಿಕ್ಷಣ ಮೇಲೆ ಹೊಸ ಪ್ರಭಾವವನ್ನು ಬೀರಿತು. ಅಂದಿಗಾಗಲೇ ಅನೇಕರು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಶಿಕ್ಷಣ ಪಡೆದು ಹಿಂದಿರುಗಿದ್ದರು. ಅವರ ಮುಂದಾಳುತನದಲ್ಲಿ ಪಾಶ್ಚಾತ್ಯ ಮಾದರಿಯಲ್ಲಿ ಶಿಕ್ಷಣವನ್ನು ಪುನರ್ವ್ಯವಸ್ಥೆಗೊಳಿಸುವ ಕಾರ್ಯ ಮೊದಲಾಯಿತು. ಅಮೆರಿಕದಲ್ಲಿ ಪ್ರಚಾರಕ್ಕೆ ಬರುತ್ತಿದ್ದ 'ಪ್ರಗತಿಶೀಲ ಶಿಕ್ಷಣ'ದ ಪೌರಜೀವನ ಶಿಕ್ಷಣ ತತ್ತ್ವದೃಷ್ಟಿ ಅವರ ಕಾರ್ಯದಲ್ಲಿ ಮಾರ್ಗದರ್ಶನ ಮಾಡುತ್ತಿತ್ತು. ಜೊತೆಗೆ 1915ರಿಂದ ಆರಂಭವಾಗಿದ್ದ, ಜಪಾನಿನ ವಿರುದ್ಧ ಭಾವನೆಯ ಪರಿಣಾಮವಾಗಿ ತಮ್ಮೆಲ್ಲ ಪುನರ್ವ್ಯವಸ್ಥೆಯ ಕಾರ್ಯದಲ್ಲೂ ಜಪಾನಿನದನ್ನು ತಿರಸ್ಕರಿಸಿ ಅಮೆರಿಕದ್ದನ್ನು ಅಂಗೀಕರಿಸುವ ಮನೋಭಾವ ತೀವ್ರ ವೇಗದಲ್ಲಿ ಬೆಳೆಯಿತು. ಅಲ್ಲಿಯ ತನಕ ತಮ್ಮ ಶಿಕ್ಷಣದಲ್ಲಿ ಅನುಷ್ಠಾನಕ್ಕೆ ಬಂದಿದ್ದ ಜಪಾನಿನ ಅನುಕರಣವನ್ನು ಕಿತ್ತು ಹಾಕಿ ಅಮೆರಿಕವನ್ನು ಅನುಕರಿಸುವುದು ಆರಂಭವಾಯಿತು. ಕೇಂದ್ರದ ಅಧಿಕಾರ ಹಾಗೂ ಶಿಕ್ಷಣ ಸಚಿವಾಲಯದ ಹಿಡಿತ ಕುಂದುತ್ತ ಬಂದಂತೆ ಆಡಳಿತದಲ್ಲೂ ಶಿಕ್ಷಣಕ್ಷೇತ್ರದಲ್ಲೂ ಪೌರಪ್ರಭುತ್ವದ ತತ್ತ್ವಗಳನ್ನು ಆಚರಣೆಗೆ ತರಬೇಕೆಂದು ಪ್ರಮುಖ ತತ್ತ್ವಚಿಂತಕರೂ ಪ್ರಧಾನ ವಿದ್ಯಾಲಯಗಳೂ ಪ್ರತಿಪಾದಿಸಿದುವು. ಆ ಕಾರ್ಯ ಸಾಧಿಸಲು ಅವರು 1919ರ ಮೇ 4ರ ಚಳವಳಿಯನ್ನು ಆಶ್ರಯಿಸಿದರು. ಆ ಚಳಿವಳಿಗಾರರು ರಾಷ್ಟ್ರದಲ್ಲಿ ಹೆಸರಿಗೆ ಮಾತ್ರ ಗಣರಾಜ್ಯ ಅಸ್ತಿತ್ವಕ್ಕೆ ಬಂದಿದ್ದರೂ ಪೌರಪ್ರಭುತ್ವ ಆಚರಣೆಯಲ್ಲಿಲ್ಲದ್ದಕ್ಕಾಗಿ ಆಗ್ರಹಗೊಂಡು ಅದನ್ನು ಅನುಷ್ಠಾನಕ್ಕೆ ತರಲು ಹೊರಟಿದ್ದರು. ಶಿಕ್ಷಣದಲ್ಲೂ ಲೋಕಸತ್ತೆಯ ತತ್ತ್ವವನ್ನು ಆಚರಣೆಗೆ ತರುವುದು ಆ ಉದ್ದೇಶದಲ್ಲಿ ಅಂತರ್ಗತವಾಯಿತು. ರಾಷ್ಟ್ರದಲ್ಲಿ ಅಂಥ ನೂತನ ಸಂಸ್ಕೃತಿಯೊಂದಕ್ಕೆ ಅಸ್ತಿಭಾರವನ್ನು ಹಾಕುವ ಅವರ ಯತ್ನ ಮಹಾಸೇನಾನಿಗಳ ಆಳ್ವಿಕೆಯಲ್ಲಿ ಯಶಸ್ಸು ಕಾಣದಂತಾಯಿತು. ಸೌಮ್ಯವಾದಿಗಳು ಶಿಕ್ಷಣವನ್ನು ರಾಜಕೀಯದಿಂದ ಪ್ರತ್ಯೇಕವಾಗಿಡಲು ಆಶಿಸಿದರು. ಜೊತೆಗೆ ಶಿಕ್ಷಣಸಂಸ್ಥೆಗಳು ಪರೀಕ್ಷೆಗಳಿದ್ದ ಕಾಲದಲ್ಲಿ ಹೊಂದಿದ್ದ ಅಧಿಕಾರವನ್ನು ಈಗ ಪಡೆದಿರಲಿಲ್ಲವಾಗಿ ತಮ್ಮ ಚಳವಳಿಯನ್ನು ಕಾರ್ಯರೂಪಕ್ಕಿಳಿಸಲು ಅವಕಾಶವಿಲ್ಲವಾಯಿತು. ಆದ್ದರಿಂದ ಉದ್ದೇಶಿಸಿದ ಪುನರ್ವ್ಯವಸ್ಥೆ ಕಾರ್ಯಗತವಾಗಿಲ್ಲಿಲ್ಲ. ಆದರೂ ಇದ್ದ ಅವಕಾಶದಲ್ಲಿ ಹಲಕೆಲವು ಪ್ರಗತಿದಾಯಕ ಅಂಶಗಳು ಶಿಕ್ಷಣಕ್ಷೇತ್ರವನ್ನು ಪ್ರವೇಶಿಸಿದುವು. ಮೇ 4ರ ಚಳವಳಿಯ ಅಂಗವಾದ ಸಾಹಿತ್ಯ ಸುಧಾರಣೆಯ ಹುರುಪಿನಿಂದ ಪ್ರೇರಿತವಾದ ಶಿಕ್ಷಣವೇತ್ತರು. ಪಠ್ಯಪುಸ್ತಕಗಳನ್ನು ಪ್ರಾದೇಶಿಕ ಮಾತೃಭಾಷೆಯಲ್ಲಿ ರಚಿಸಲಾರಂಭಿಸಿದರು. ಅಲ್ಲಿಯ ತನಕ, ವ್ಯವಹಾರಕ್ಕೆ ಅನುಪಯುಕ್ತವಾಗಿದ್ದ ಚೀನದ (ಗ್ರೀಕ್, ಲ್ಯಾಟಿನ್, ಸಂಸ್ಕೃತಗಳಂಥ) ಲಾಕ್ಷಣಿಕ ಭಾಷೆಯನ್ನು ಶಿಕ್ಷಣರಂಗದಲ್ಲಿ ಬಳಸಬೇಕಾಗಿತ್ತು. ಲೋಕಸತ್ತೆಗೆ ಅದು ಉಚಿತವಲ್ಲವೆಂದು ಎಲ್ಲ ಪ್ರಾಂತೀಯ ಸರ್ಕಾರಗಳೂ ಅದರ ಸ್ಥಳದಲ್ಲಿ ಪ್ರಾಂತೀಯ ಮಾತೃಭಾಷೆಗಳನ್ನು ಪ್ರಚಾರಕ್ಕೆ ತಂದುವು. ಅಮೆರಿಕದಲ್ಲಿ ಶಿಕ್ಷಣ ಪಡೆದುಬಂದು ನ್ಯಾನ್‍ಕಿಂಗ್ ಮತ್ತು ಬೀಜಿಂಗ್ ಅಧ್ಯಾಪಕರ ಕಾಲೇಜುಗಳಲ್ಲಿ ವೃತ್ತಿನಿರತರಾಗಿದ್ದ ಶಿಕ್ಷಣವೇತ್ತರು ದೇಶಾದ್ಯಂತ ಶಿಕ್ಷಣದ ಪುನರ್ವ್ಯವಸ್ಥೆಯ ಚಳವಳಿಗೆ ಅಗತ್ಯ ಪ್ರಚಾರವನ್ನು ಕೈಗೊಂಡರು. 1922ರಲ್ಲಿ ಸರ್ಕಾರ ಜಪಾನಿನ ಮಾದರಿಯನ್ನು ತಿರಸ್ಕರಿಸಿ, ಅಮೆರಿಕದ ಸಂಯುಕ್ತಸಂಸ್ಥಾನದ ಶಿಕ್ಷಣವನ್ನು ಅನುಕರಿಸಲು ಕಾನೂನು ಮಾಡಿತು.

ರಾಷ್ಟ್ರದಲ್ಲಿ 1922ರಲ್ಲಿ ಕೇಂದ್ರಸರ್ಕಾರ ಅಸ್ತಿತ್ವಕ್ಕೆ ಬಂದಂತೆ ಶಿಕ್ಷಣದ ಆಧುನೀಕರಣ ಮೂರನೆಯ ಘಟ್ಟವನ್ನು ಮುಟ್ಟಿತು. 1927ರಲ್ಲಿ ಇಡೀ ರಾಷ್ಟ್ರವನ್ನು ಮತ್ತೆ ಒಟ್ಟುಗೂಡಿಸಿದ ಕ್ವೊಮಿನ್‍ಟಾಂಗ್ ಪಕ್ಷದ ಆಡಳಿತದಲ್ಲಿ ಶಿಕ್ಷಣಕ್ಕೂ ರಾಜಕೀಯಕ್ಕೂ ಮತ್ತೆ ಸಂಬಂಧ ಸ್ಥಾಪನೆಯಾಯಿತು. ಅದು ಆಡಳಿತಗಾರರನ್ನು ತನ್ನ ತತ್ತ್ವದೃಷ್ಟಿಯಲ್ಲಿ ಕೆಲಸಮಾಡುವಂತೆ ಮಾಡಿದ್ದಲ್ಲದೆ ಪಠ್ಯಪುಸ್ತಕಗಳಲ್ಲಿ ಹಾಗೂ ಪ್ರತಿ ಶಾಲೆಯಲ್ಲೂ ಸೂನ್-ಯಾತ್-ಸೇನ್‍ನ ಜನತಾತತ್ತ್ವತ್ರಯವನ್ನು ವ್ಯಾಸಂಗಮಾಡಬೇಕೆಂದು ಕಾನೂನು ಮಾಡಿ, ಇಡೀ ರಾಷ್ಟ್ರದ ಶಿಕ್ಷಣಕ್ಷೇತ್ರವನ್ನು ಪಕ್ಷದ ತತ್ತ್ವದೃಷ್ಟಿಯಲ್ಲಿ ಸುಧಾರಣೆಗೊಳಪಡಿಸಲು ಯತ್ನಿಸಿತು. ಆದರೆ ಅಂದಿಗಾಗಲೆ ಬಲಿಷ್ಠವೆನಿಸಿದ್ದ ಶಿಕ್ಷಣ ಸಚಿವಶಾಖೆ ಮತ್ತೆ ಸಾಂಪ್ರದಾಯಿಕ ಶಿಕ್ಷಣವನ್ನು ಪ್ರತಿಪಾದಿಸತೊಡಗಿತು. ಅದರಿಂದ ಜುಗುಪ್ಸೆಗೊಂಡ ಉದಾರವಾದಿಗಳನೇಕರು ತಮ್ಮ ದೃಷ್ಟಿಕೋನಕ್ಕೆ ಅಂಟಿಕೊಂಡಿದ್ದು ರಾಜಕೀಯವಾಗಿ ಹಿಂದುಳಿದರು. ಮಿಕ್ಕವರು ಗ್ರಾಮಾಂತರ ಪ್ರದೇಶಗಳಿಗೆ ತೆರಳಿ ತಮ್ಮ ನೂತನ ಭಾವನೆಗಳನ್ನು ಅಲ್ಲಿನ ಶಾಲೆಗಳಲ್ಲಿ ಪ್ರಯೋಗಿಸ ತೊಡಗಿದರು.

ಈ ಶತಮಾನದ ಮೂರನೆಯ ದಶಕದಲ್ಲಿ ಅಲ್ಲಿನ ಶಿಕ್ಷಣ ಗಣನೀಯ ಪ್ರಗತಿ ಯನ್ನೇನೋ ಸಾಧಿಸಿತು. ರಾಷ್ಟ್ರದಲ್ಲಿ ಸ್ಥಿರವಾದ ಸರ್ಕಾರ ಏರ್ಪಟ್ಟಿದ್ದುದರಿಂದ ರಾಷ್ಟ್ರಾದ್ಯಂತ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿ ಶಿಕ್ಷಣದ ಸೌಲಭ್ಯವನ್ನು ವಿಸ್ತರಿಸುವುದೂ ಬೋಧನೆಯ ಮಟ್ಟವನ್ನು ಉತ್ತಮಪಡಿಸುವುದೂ ಸಾಧ್ಯವಾಯಿತು. ವಿಶ್ವವಿದ್ಯಾಲಯಗಳ ಶಿಕ್ಷಣ ಸೌಲಭ್ಯವೂ ದೇಶಾದ್ಯಂತ ವ್ಯವಸ್ಥೆಗೊಂಡಿತು. ಆದರೆ 1937ರಲ್ಲಿ ಜಪಾನಿನ ದಾಳಿಯಿಂದಾಗಿ ಕ್ವೊಮಿನ್‍ಟಾಂಗ್ ಪಕ್ಷದ ಆಡಳಿತ ಒಳನಾಡಿನ ಪ್ರಾಂತ್ಯಗಳಿಗೆ ಸೀಮಿತವಾಯಿತು. ಜಪಾನಿನ 8 ವರ್ಷಗಳ ಆಕ್ರಮಣಕಾಲದಲ್ಲಿ ಅನೇಕ ವಿಶ್ವವಿದ್ಯಾಲಯಗಳು ಮುಚ್ಚಿಹೋದುವು. ಕೆಲವು ಸ್ಥಳಾಂತರವಾದುವು. ಒಟ್ಟಿನಲ್ಲಿ 1922ರಿಂದ ಆರಂಭವಾಗಿದ್ದ ಶಿಕ್ಷಣದ ಪ್ರಗತಿಗೆ ಅಡ್ಡಿಯುಂಟಾಯಿತು. 8 ವರ್ಷಗಳ ಅನಂತರ ಜಪಾನರ ದಾಳಿಯಿಂದ ಮುಕ್ತವಾದ ದೇಶ ಮತ್ತೆ ಅಂತರ್ಯುದ್ಧದ ಬೀಡಾಯಿತು.

**ಕಮ್ಯೂನಿಸ್ಟ್ ಚೀನದಲ್ಲಿ ಶಿಕ್ಷಣ :** ಮಹಾಯುದ್ಧಕ್ಕೆ ಮುಂಚೆ ಆಚರಣೆಗೆ ಬಂದಿದ್ದ ಸುಧಾರಣೆಗಳು ಕಮ್ಯೂನಿಸ್ಟರ ರಾಜಕೀಯ ದೃಷ್ಟಿಗೆ ಹಿಡಿಸಲಿಲ್ಲ. 1949ರಲ್ಲಿ ಅಧಿಕಾರಕ್ಕೆ ಬಂದ ಕಮ್ಯೂನಿಸ್ಟ್ ಸರ್ಕಾರ ಆ ಸುಧಾರಣೆಗಳನ್ನೆಲ್ಲ ಮೊಟಕುಮಾಡಿ ಶಿಕ್ಷಣವನ್ನು ತನ್ನ ಪೂರ್ಣ ಹತೋಟಿಗೆ ತೆಗೆದುಕೊಂಡಿತು. ಹಿಂದೂ ಸಾಂಪ್ರದಾಯಿಕ ಶಿಕ್ಷಣದಲ್ಲಿ ರಾಜಕೀಯ

ಶಿಕ್ಷಣವನ್ನು ಗಂಟುಹಾಕಿದ್ದ ಸಂಬಂಧವನ್ನು ಮತ್ತೆ ಎತ್ತಿಹಿಡಿಯಿತು. ಆದರೆ ಅದರ ಉದ್ದೇಶವೇನೋ ಬೇರೆಯಾಗಿತ್ತು. ಅದು ಅವರ ರಾಜಕೀಯ ದೃಷ್ಟಿಗೆ ಅನುಗುಣವಾಗಿದ್ದು, ಆ ಮೂಲ ಉದ್ದೇಶವನ್ನು ಘೋಷಿಸುವಂತಿರಬೇಕೆಂಬುದು ಕಮ್ಯೂನಿಸ್ಟರ ತತ್ತ್ವ. ಈ ತತ್ತ್ವ ಅಂದಿಗಂದಿಗೆ ತೀವ್ರತೆಯಲ್ಲಿ ಏರಿಳಿತಗಳನ್ನು ವ್ಯಕ್ತಪಡಿಸಿದ್ದರೂ ಇಂದಿಗೂ ಚೀನದಲ್ಲಿ ಅನುಷ್ಠಾನದಲ್ಲಿದೆ. ಬಂಡವಾಳಶಾಹಿ ಪಂಥವು ಶಿಕ್ಷಣದಲ್ಲಿ ಊಳಿಗಮಾನ್ಯಪದ್ಧತಿಯನ್ನೂ ವಸಾಹತು ಪದ್ಧತಿಯನ್ನೂ ಎತ್ತಿಹಿಡಿದಿತ್ತೆಂದು ಅದನ್ನು ಖಂಡಿಸಿ ತಮ್ಮ ರಾಜಕೀಯಕ್ಕೆ ಪೋಷಕವಾಗಿರುವಂತೆ ಅದನ್ನು ಪುನಾರಚಿಸಲು ಮೊದಲುಮಾಡಿತು. ದೇಶಾದ್ಯಂತ ಪ್ರಚಾರದಲ್ಲಿದ್ದ ಕ್ರೈಸ್ತ ಪಾದ್ರಿಗಳ ಪಾಠಶಾಲೆಗಳನ್ನು ತೊಡೆದು ಹಾಕಿ ಸರ್ಕಾರ ತನ್ನ ಶಾಲೆಗಳನ್ನು ಆರಂಭಿಸಿತು.

ಕೇಂದ್ರ ಕಮ್ಯೂನಿಸ್ಟ್ ಪಕ್ಷ ಶಿಕ್ಷಣದ ನೀತಿಯನ್ನು ನಿರ್ಧರಿಸುತ್ತದೆ. ಆ ನೀತಿಗೆ ಅಧ್ಯಕ್ಷ ಮಾವೊ ಧೋರಣೆ ಆಧಾರವಾಗಿರುತ್ತದೆ. 1957ರ ಫೆಬ್ರುವರಿ 27ರಂದು ಅವನು ಪ್ರತಿಯೊಬ್ಬನಿಗೂ ನೈತಿಕ, ಬೌದ್ಧಿಕ, ದೈಹಿಕವಾಗಿ ಅಭಿವೃದ್ಧಿ ಹೊಂದುವ ಸೌಲಭ್ಯವಿದ್ದು ಅವರೆಲ್ಲ ಸುಸಂಸ್ಕೃತ ಸಮಾಜವಾದಿ ಕಾರ್ಯಕರ್ತರಾಗುವಂತೆ ಮಾಡುವುದು ದೇಶದ ಶಿಕ್ಷಣನೀತಿಯಾಗಿರಬೇಕೆಂದು ಸೂಚಿಸಿದರು. ಕಮ್ಯೂನಿಸ್ಟ್ ಚೀನ ಕಾರ್ಮಿಕರ ರಾಜ್ಯವಾದ್ದರಿಂದ ಅಲ್ಲಿನ ಕಾರ್ಮಿಕವರ್ಗದ ಸೇವೆಗಾಗಿ ಶಿಕ್ಷಣ ಎಂದು ನಿರ್ದೇಶಿಸಿ, ಅದು ವರ್ಗಕಲಹ ಮತ್ತು ಉತ್ಪನ್ನಗಳಿಗೆ ಸಂಬಂಧಿಸಿದ ಜ್ಞಾನ ನೀಡಬೇಕೆಂದೂ ದ್ವಂದ್ವಾತ್ಮಕ ಭೌತಿಕವಾದ ಅವರ ಆಲೋಚನೆಯ ಶಕ್ತಿಯನ್ನು ಹೆಚ್ಚಿಸುವುದೆಂದೂ ಶಿಕ್ಷಣನೀತಿಗೆ ಸ್ಥೂಲವಾದ ಮಾರ್ಗದರ್ಶನ ಮಾಡಿದ್ದಾನೆ. ಪಕ್ಷ ನಿರ್ಧರಿಸುವ ನೀತಿಗನುಗುಣವಾಗಿ ಶಿಕ್ಷಣ ಸಚಿವರು ಅದನ್ನು ವ್ಯವಸ್ಥೆಗೊಳಿಸಿ ಆಡಳಿತ ನಡೆಸುತ್ತಾರೆ. 1957–58ರಲ್ಲಿ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವಾಗ ಶಿಕ್ಷಣ ಮತ್ತು ಬೌದ್ಧಿಕ ಜೀವನದಲ್ಲಿ ಶ್ರೀಮಂತ ಪ್ರವೃತ್ತಿಗಳನ್ನು ತೊಡೆದುಹಾಕಲು ಪಠ್ಯಪುಸ್ತಕಗಳ ಮೂಲಕ ಮತಾಂತರ ಪ್ರಚಾರ (ಪ್ರಾಪಗ್ಯಾಂಡ) ಕೈಕೊಳ್ಳಲಾಯಿತು. ಇಂದಿಗೂ ಅದು ಇಡೀ ಶಿಕ್ಷಣದ ವ್ಯವಸ್ಥೆಯಲ್ಲಿ ಮುಂದುವರಿಯುತ್ತ ರಾಜಕೀಯಕ್ಕೆ ಶಿಕ್ಷಣ ಅಡಿಯಾಳಾಗಿ ಸೇವೆ ಸಲ್ಲಿಸುತ್ತ ಬರುತ್ತಿದೆ. 1958ರ ಅನಂತರ ವಿದ್ಯಾರ್ಥಿಗಳಂತೆ ಅಧ್ಯಾಪಕರು ಉತ್ಪನ್ನಕಾರ್ಯದಲ್ಲಿ ತೊಡಗುವುದು ಅಗತ್ಯವೆಂದೂ, ಅದಿಲ್ಲದಿದ್ದರೆ ಶಿಕ್ಷಣಕ್ಕೆ ವಾಸ್ತವಿಕ ಸ್ವರೂಪ ಬರುವುದಿಲ್ಲವೆಂದೂ ನಿಗದಿಮಾಡಿದೆ. ಶಿಕ್ಷಣವನ್ನು ಕಮ್ಯೂನುಗಳಿಗೆ ವಹಿಸಿರುವ ಮುಖ್ಯ ಉದ್ದೇಶವೇ ಇದು. 1953ರಲ್ಲಿ ಅನುಷ್ಠಾನಕ್ಕೆ ಬಂದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಾಲೆಗಳನ್ನು ಆರಂಭಿಸುವ ಕಾರ್ಯಕ್ಕೆ ಆದ್ಯತೆ ದೊರಕಿತು. ಶಾಲೆಗಳ ಸಂಖ್ಯೆ ಬಹುಬೇಗ ಹೆಚ್ಚಿತಲ್ಲದೆ, ಅಲ್ಲಿ ಮಕ್ಕಳ ಸಂಖ್ಯೆಯೂ ಅಗಾಧವಾಗಿ ಹೆಚ್ಚಿತು. ರಾಷ್ಟ್ರದಲ್ಲಿ ಹಿಂದಿನ ಅರಾಜಕತೆಯ ಫಲವಾಗಿ ಹೆಚ್ಚಿಕೊಂಡಿದ್ದ ನಿರಕ್ಷರಸ್ಥರ ಸಂಖ್ಯೆಯನ್ನು ಕಡಿಮೆಮಾಡಲು ಭಾಗಶಃ ಕಾಲದ ಮತ್ತು ಅಂಚೆ ಶಿಕ್ಷಣದ ಸೌಲಭ್ಯಗಳೂ ಆಚರಣೆಗೆ ಬಂದುವು. ರಾಷ್ಟ್ರದಲ್ಲಿ ಶಿಕ್ಷಣಕ್ಕೂ ರಾಜಕೀಯಕ್ಕೂ ಆರಂಭವಾಗಿದ್ದ ಬಾಂಧವ್ಯ ಜನತೆಯಲ್ಲಿ ನೂತನ ಆಸಕ್ತಿಯನ್ನು ಮೂಡಿಸಿ ಶಿಕ್ಷಣಸೌಲಭ್ಯಕ್ಕಾಗಿ ದೇಶಾದ್ಯಂತ ಬೇಡಿಕೆ ಹೆಚ್ಚತೊಡಗಿತು. ಆ ಬೇಡಿಕೆಯನ್ನು ಪೂರೈಸಲು ಸರ್ಕಾರ ಎಷ್ಟು ಶಾಲೆಗಳನ್ನು ಆರಂಭಿಸಿದರೂ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಆಗ ತಾನೆ ಅಸ್ತಿತ್ವಕ್ಕೆ ಬಂದಿದ್ದ ಕಾರ್ಖಾನೆಗಳೂ ಕಮ್ಯೂನುಗಳೂ ಆ ಕಾರ್ಯವನ್ನು ಕೈಗೊಳ್ಳಬೇಕಾಗಿ ಪಕ್ಷ ಉತ್ತೇಜನವಿತ್ತಿತು. ಅದರ ಫಲವಾಗಿ ಹೊಸ ಮಾದರಿಯ ನೂತನ ಶಿಕ್ಷಣಸಂಸ್ಥೆಗಳ ಉದಯಕ್ಕೆ ಅವಕಾಶವಾಯಿತು. ಸರ್ಕಾರದ ಹಣದ ಬೆಂಬಲವಲ್ಲದೆ ಆ ಕಮ್ಯೂನುಗಳೂ ಕಾರ್ಖಾನೆಗಳೂ ಆ ಶಾಲೆಗಳನ್ನು ತಮ್ಮ ಸ್ವಂತ ವೆಚ್ಚದಿಂದ ಆರಂಭಿಸಿ ನಡೆಸುತ್ತಿದ್ದುವು. ಇದು ಇಂದಿಗೂ ಮುಂದುವರಿಯುತ್ತಿದೆ.

ಕಮ್ಯೂನಿಸ್ಟರು ರಾಷ್ಟ್ರದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸುವಾಗ ರಷ್ಯದ ಮೇಲ್ಪಂಕ್ತಿಯೂ ಸಹಾಯವೂ ದೊರಕಿದಂತೆ ಅಲ್ಲಿನ ಶಿಕ್ಷಣವನ್ನು ಪುನರ್ವ್ಯವಸ್ಥೆಗೊಳಿಸುವುದಕ್ಕೂ ರಷ್ಯದಲ್ಲಿ ಆಗಲೇ ಅಸ್ತಿತ್ವದಲ್ಲಿದ್ದ ಶಿಕ್ಷಣಪದ್ಧತಿ ಮೇಲ್ಪಂಕ್ತಿಯಾಯಿತು. ಸಮಾಜವಾದಿ ರಾಷ್ಟ್ರಗಳಲ್ಲಿ ಹಿರಿಯ ರಾಷ್ಟ್ರವೆನಿಸಿದ್ದ ರಷ್ಯದ ಶಿಕ್ಷಣವೇತ್ತರು ಚೀನಕ್ಕೆ ಆಗಮಿಸಿ ಇಲ್ಲಿನ ಶಿಕ್ಷಣದ ಪುನರ್ವ್ಯವಸ್ಥೆಗೆ ನೆರವು ನೀಡುತ್ತಿದ್ದರು. ಅನೇಕರು ರಷ್ಯಕ್ಕೆ ಹೋಗಿ ಉನ್ನತ ಶಿಕ್ಷಣ ಪಡೆದು ಬರುತ್ತಿದ್ದರು. ಕಮ್ಯೂನಿಸ್ಟ್ ಶಿಕ್ಷಣದೃಷ್ಟಿಯನ್ನು ಅರಿತು ಅರಗಿಸಿಕೊಂಡು ತಮ್ಮ ದೇಶಕ್ಕೆ ಬಂದು ಅಲ್ಲೂ ಅದನ್ನು ಆಚರಣೆಗೆ ತರಲು ಯತ್ನಿಸುತ್ತಿದ್ದರು. ರಷ್ಯದ ವಿಜ್ಞಾನಿಗಳೂ ತಂತ್ರಜ್ಞರೂ ಚೀನದ ಆಧುನಿಕ ಉದ್ಯೋಗಗಳಿಗೆ ನೆರವಾಗುವಂತೆ ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ, ವಿಶೇಷ ಸಲಹೆಗಾರರಾಗಿ ಕೆಲಸಮಾಡುತ್ತಿದ್ದರು. ಕ್ಯೊಮಿನ್‌ಟಾಂಗ್ ಪಕ್ಷದ ನೇತೃತ್ವದಲ್ಲಿ ಪ್ರಚಾರಕ್ಕೆ ಬಂದಿದ್ದ ಡ್ಯೂಯಿ ತತ್ತ್ವದೃಷ್ಟಿಯನ್ನೂ ಅಮೆರಿಕದ ಶಿಕ್ಷಣಪದ್ಧತಿಯ ಪ್ರಭಾವವನ್ನೂ ತೊಡೆದುಹಾಕಿ ನಿಜವಾದ ಸಮಾಜವಾದಿ ತತ್ತ್ವ ದೃಷ್ಟಿಯನ್ನು ಶಿಕ್ಷಣಕ್ಷೇತ್ರದಲ್ಲಿ ಸ್ಥಾಪಿಸುವ ಕಾರ್ಯದಲ್ಲಿ ರಷ್ಯದ ಪ್ರಭಾವ ಪರಿಣಾಮಕಾರಿಯಾಗಿ ಕೆಲಸಮಾಡಿತು. ದೇಶದಲ್ಲಿ ಡ್ಯೂಯಿಯ ಹಾಗೂ ಅಮೆರಿಕನ್ ಶಿಕ್ಷಣಪದ್ಧತಿಯ ಅನುಯಾಯಿಗಳನ್ನು ಮೂಲೆಗೊತ್ತಲು ಆ ಮುಖವಾಗಿ ರಚನೆಯಾಗಿದ್ದ ಗ್ರಂಥಗಳನ್ನೂ ಲೇಖನ, ವರದಿ, ಯೋಜನೆ ಮುಂತಾದವನ್ನೂ ಬಹಿಷ್ಕರಿಸುವುದು ಭರದಿಂದ ಸಾಗುತ್ತ ಬಂತು.

ಮೂಕ್‌ಡೆನ್ನಿನ ವೈದ್ಯಕೀಯ ಕಾಲೇಜಿನ ಒಂದು ಪ್ರಯೋಗ ಮಂದಿರ

ಕಮ್ಯೂನಿಸ್ಟ್ ಶಿಕ್ಷಣ, ಉತ್ಪನ್ನವನ್ನು ಶಿಕ್ಷಣದೊಡನೆ ಸಂಬಂಧಿಸಿ ಹೊಸ ಮನ್ವಂತರವೊಂದನ್ನು ಆರಂಭಿಸಿತು. ಇದು ಪಕ್ಷದ ಅಧ್ಯಕ್ಷನೂ ನಿರ್ದೇಶಕನೂ ಆದ ಮಾವೊ ಸಿದ್ಧಾಂತಕ್ಕೆ ಅನುಗುಣವಾಗಿದ್ದು, ತತ್ತ್ವಕ್ಕೂ ಅನುಷ್ಠಾನಕ್ಕೂ ಸಂಬಂಧವಿರಬೇಕೆಂಬ ಅವನ ದೃಷ್ಟಿಯನ್ನು ಕಾರ್ಯರೂಪಕ್ಕಿಳಿಸಲು ಸಾಧ್ಯವಾಗಿತ್ತು. ಜೊತೆಗೆ ಶಿಕ್ಷಣದಿಂದ ಕೇವಲ ಬುದ್ಧಿಜೀವಿಗಳನ್ನೇ ಸೃಷ್ಟಿಸಿ ಅವರದೇ ಒಂದು ಉನ್ನತ ಸಮಾಜವನ್ನು ರೂಪಿಸುವ ಅಹಿತ ಪ್ರಸಂಗವೂ ತಪ್ಪುವಂತಾಗಿತ್ತು. ಶಿಕ್ಷಣದೊಡನೆ ಉತ್ಪನ್ನವನ್ನು ಸಂಬಂಧಿಸಿದ್ದರ ಫಲವಾಗಿ ವಿದ್ಯಾರ್ಥಿಗಳೂ ಸಮಾಜದ ಉಪಯುಕ್ತ ಪ್ರಜೆಗಳಾಗಿದ್ದು ಅದರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಕಾರ್ಯದಲ್ಲಿ ಭಾಗಿಯಾಗಲು ಅವಕಾಶವಾಯಿತು. ಪ್ರೌಢಶಾಲೆಗಳಲ್ಲೂ ಕಾಲೇಜುಗಳಲ್ಲೂ 'ಅರ್ಧಕಾಲ ವ್ಯಾಸಂಗ–ಅರ್ಧಕಾಲ ಕೆಲಸ'ದ ತತ್ತ್ವವನ್ನು ಆಚರಣೆಗೆ ತಂದಂತೆ ಮೇಲಿನ ಉದ್ದೇಶ ಹೆಚ್ಚು ಸಮರ್ಪಕವಾಗಿ ಈಡೇರುವಂತಾಯಿತು. ಇದರಿಂದ ಸಮಾಜದಲ್ಲಿದ್ದ ಅನಕ್ಷರತೆಯನ್ನು ಕಡಿಮೆ ಮಾಡಲೂ ಸಹಾಯವಾಯಿತು. ವಿದ್ಯಾರ್ಥಿಗಳು ಕಾರ್ಖಾನೆ ಮತ್ತು ಹೊಲಗದ್ದೆಗಳಲ್ಲಿ ಕೆಲಸದಲ್ಲಿ ತೊಡಗಿದಾಗ ಅಲ್ಲಿನ ಕಾರ್ಮಿಕರಿಗೆ ಬಿಡುವು ದೊರೆತು ಅಕ್ಷರಾಭ್ಯಾಸ, ಓದುಗಾರಿಕೆ ಅಥವಾ ಮುಂದುವರಿದ ಶಿಕ್ಷಣ ಇತ್ಯಾದಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಾಯಿತು. ಜೊತೆಗೆ ಬುದ್ಧಿಜೀವಿಗಳಿಗೂ ಶ್ರಮಜೀವಿಗಳಿಗೂ ಇದ್ದ ಅಂತರವನ್ನು ಕೊನೆಗಾಣಿಸಲೂ ಈ ವಿಧಾನ ಅವಕಾಶ ಕಲ್ಪಿಸಿತು.

ಶಿಕ್ಷಣವನ್ನು ಉತ್ಪನ್ನದೊಡನೆ ಸಂಬಂಧಿಸಿದ್ದರ ಫಲವಾಗಿ ಶಿಕ್ಷಣದ ಮಟ್ಟ ಸ್ವಾಭಾವಿಕವಾಗಿ ಕುಸಿದುಹೋಯಿತು. ಜೊತೆಗೆ ಮಾವೊ ತತ್ತ್ವದಂತೆ, ಶಿಕ್ಷಣ ಹಾಗೂ ತಾಂತ್ರಿಕ ಜ್ಞಾನಕ್ಕಿಂತ ರಾಜಕೀಯ ಪ್ರಜ್ಞೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂಬ ತತ್ತ್ವವನ್ನು ಜೊತೆಯಲ್ಲೇ ಆಚರಣೆಗೆ ತರುವ ಯತ್ನವೂ ನಡೆದು ವಿದ್ಯಾರ್ಥಿಗಳಂತೆ ಅಧ್ಯಾಪಕರನ್ನೂ ಆಡಳಿತಗಾರರನ್ನೂ ಅವರ ತಾಂತ್ರಿಕ ಜ್ಞಾನಕ್ಕೆ ಬದಲು ಅವರ ರಾಜಕೀಯ ದೃಷ್ಟಿಯ ಆಧಾರದ ಮೇಲೆ ತೂಗಿನೋಡುವುದು ಮೊದಲಾಯಿತು. 1958ರಲ್ಲಿ ರಾಷ್ಟ್ರ ಶೀಘ್ರವಾಗಿ ಆರ್ಥಿಕೋನ್ನತಿ ಸಾಧಿಸಲು ಆರಂಭಿಸಿದ್ದ ಬೃಹತ್ ಮುನ್ನಡೆಯ ಆಂದೋಲನದಲ್ಲಿ ವಿದ್ಯಾರ್ಥಿಗಳ ಉತ್ಪನ್ನ ಕಾರ್ಯಕ್ಕೆ ಇನ್ನೂ ಹೆಚ್ಚಿನ ಪ್ರಾಧಾನ್ಯ ಬಂತು. ಅವರು ಕಾರ್ಖಾನೆ ಮತ್ತು ಬೇಸಾಯ ಕ್ಷೇತ್ರಗಳಲ್ಲಿ ನಿರ್ವಹಿಸಬೇಕಾದ ಕಾರ್ಯವನ್ನು ಎರಡು ವರ್ಷಗಳ ಕಾಲ ತೀವ್ರಗೊಳಿಸಲಾಯಿತು. ಪ್ರೌಢಶಾಲೆಯ ಮಟ್ಟದ ಅನೇಕ ತಾಂತ್ರಿಕ ಶಾಲೆಗಳು ಕಾಲೇಜಿನ ಮಟ್ಟದವಾಗಿ ಪರಿವರ್ತನೆಯಾದುವು. 'ಕೆಲಸ–ವ್ಯಾಸಂಗ'ದ ವಿಶ್ವವಿದ್ಯಾಲಯಗಳೂ ಬೇಕಾದ ಹಾಗೆ ಅಸ್ತಿತ್ವಕ್ಕೆ ಬಂದುವು. ಪಾಠಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವ ಭರದಲ್ಲಿ ಕೆಲವು ಶಾಲೆಗಳನ್ನು ಸುಮ್ಮನೆ ಇಬ್ಭಾಗ ಮಾಡಲಾಯಿತು. ಇವೆಲ್ಲದರ ಫಲವಾಗಿ ಆಗಲೇ ಅರಂಭವಾಗಿದ್ದ ಶಿಕ್ಷಣಮಟ್ಟದ ಇಳಿತಾಯದ ಜೊತೆಗೆ ಬೋಧನೆಯೂ ಶಿಕ್ಷಣದ ಆಡಳಿತವೂ ಗೊಂದಲಕ್ಕಿಡಾದುವು. ಶಿಕ್ಷಣದಲ್ಲಿ ಆಸಕ್ತಿಯುಳ್ಳವರು ಅದನ್ನು ಬಾಯಿಬಿಟ್ಟು ಹೇಳುವಂತಿರಲಿಲ್ಲ. ಹೇಳಿದರೆ ಅವರ ಬಣ್ಣ ಹೊರಕ್ಕೆ ಬಂದು ರಾಜಕೀಯವಾಗಿ ಉಚ್ಚಾಟನೆ ಕಾದಿರುತ್ತಿತ್ತು.

ಬೃಹತ್ ಮುನ್ನಡೆ 1960ರ ವೇಳೆಗೆ ಪೂರ್ಣವಾಗಿ ವಿಫಲವಾಯಿತು. ಕಮ್ಯೂನಿಸ್ಟ್ ನಾಯಕರು ಆರ್ಥಿಕ ಮುನ್ನಡೆಗೆ ಶಿಕ್ಷಣ ಮತ್ತು ತಂತ್ರಶಾಸ್ತ್ರಗಳನ್ನು ಬಲಪಡಿಸುವ ಅಗತ್ಯವನ್ನು ಆಗ ಕಂಡುಕೊಂಡರು. ಜೊತೆಗೆ ನಿಯೋಜಿತ ಆರ್ಥಿಕ ಪ್ರಗತಿ ಸಾಧನೆಯಾಗದ ಕಾರಣ ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿ ಹಣಕಾಸಿಗೆ ಕತ್ತರಿಪ್ರಯೋಗ ಮಾಡಬೇಕಾಯಿತು. ಇದ್ದ ಅವಕಾಶದಲ್ಲಿ ಶಿಕ್ಷಣದ ಗುಣಮಟ್ಟವನ್ನೂ ತಾಂತ್ರಿಕ ಶಿಕ್ಷಣವನ್ನೂ ಹೆಚ್ಚಿಸುವ ಪ್ರಯತ್ನ ನಡೆಯಿತು.

ಬೃಹತ್ ಮುನ್ನಡೆಯ ಆಂದೋಲನದ ಕಾಲದಲ್ಲಿ ಶಿಕ್ಷಣ ರಾಜಕೀಯದ ಕಟ್ಟುನಿಟ್ಟಿಗೆ ಸಿಕ್ಕಿ ಇಡೀ ಶಿಕ್ಷಣವ್ಯವಸ್ಥೆ ಅಸ್ತವ್ಯಸ್ತಗೊಂಡ ಅನಂತರ ಮುಂದಿನ ದಿನಗಳಲ್ಲಿ ಸರ್ಕಾರ ರಾಜಕೀಯ ಶಿಕ್ಷಣದ ಬಗ್ಗೆ ಅತ್ಯಂತ ನಿರಾಸಕ್ತಿಯನ್ನು ತಾಳುತ್ತ ಬಂತು. ಪಕ್ಷದ ನಾಯಕರು ಶಿಕ್ಷಣದಲ್ಲಿ ಕೈಹಾಕುವುದು ನಿಂತು ಕ್ರಮಕ್ರಮವಾಗಿ ವ್ಯವಸ್ಥೆಯಲ್ಲಿ ದೃಢತೆ ನೆಲೆಸುತ್ತ ಬಂತು. ವಿದ್ಯಾರ್ಥಿಗಳನ್ನು ಅಷ್ಟಾಗಿ ಕೆಲಸಕ್ಕೆ ಹಚ್ಚದೆ ಅವರು ನಿರಾತಂಕವಾಗಿ ತಮ್ಮ ಅಧ್ಯಯನದಲ್ಲಿ ಆಸಕ್ತಿಯಿಂದಿರುವ ಅವಕಾಶ ಕಲ್ಪನೆಯಾಯಿತು. ಜೊತೆಗೆ ವಿದ್ಯಾರ್ಥಿಗಳು ಅವರವರ ಅಭಿರುಚಿ ಆಸಕ್ತಿಗಳಿಗನುಗುಣವಾಗಿ ವಿಶೇಷ ಶಿಕ್ಷಣ ಪಡೆದು ರಾಷ್ಟ್ರಕ್ಕೆ ಅವರ

ಕಾರ್ಮಿಕರ ರಾತ್ರಿಶಾಲೆ

ವಿಶಿಷ್ಟ ಸೇವೆ ಲಭಿಸುವಂತಾಗಬೇಕೆಂಬ ವಾದಕ್ಕೆ ಪಕ್ಷದ ಬೆಂಬಲ ದೊರೆತು ಸರ್ಕಾರ ಅದಕ್ಕೆ ಅವಕಾಶ ಕಲ್ಪಿಸಿಕೊಟ್ಟಿತು. ಇಂಥ ವಿವೇಕವೂ ದೂರದೃಷ್ಟಿಯುತವೂ ಆದ ಧೋರಣೆಯ ಫಲವಾಗಿ ಶಿಕ್ಷಣ ಕ್ರಮಕ್ರಮವಾಗಿ ಉತ್ತಮಗೊಳ್ಳುತ್ತ ಬರುತ್ತಿತ್ತು. ಆದರೆ ಈ ಪ್ರಗತಿಯ ಯತ್ನಕ್ಕೆ 1966 ರಲ್ಲಿ ಮತ್ತೆ ಅಡಚಣೆಯೊದಗಿತು. ಆಗ ಆರಂಭಿಸಲಾದ ಸಾಂಸ್ಕೃತಿಕ ಕ್ರಾಂತಿಯ ಫಲವಾಗಿ ಮತ್ತೆ ಶಿಕ್ಷಣವ್ಯವಸ್ಥೆ ಗೊಂದಲಕ್ಕೀಡಾಯಿತು. ರಾಜಕೀಯ, ಶಿಕ್ಷಣದ ಮೇಲೆ ಮತ್ತೆ ತನ್ನ ಪ್ರಭಾವವನ್ನು ಆರಂಭಿಸಿತು. ಪರಿಷ್ಕರಣವಾದವನ್ನು ಜನಜೀವನದ ಯಾವುದೇ ಕ್ಷೇತ್ರದಲ್ಲಾಗಲಿ ಖಂಡಿಸಿ ಕ್ರಾಂತಿಯ ಸಂದೇಶವನ್ನು ದೇಶದ ಮೂಲೆಮೂಲೆಗೂ ಕೊಂಡೊಯ್ಯಬೇಕಾಗಿ ಮಾವೊ ವಿದ್ಯಾರ್ಥಿಗಳಿಗೆ ಅನುಮತಿ ನೀಡಿದನು. ವಿದ್ಯಾರ್ಥಿ 'ಕೆಂಪುಸೇನೆ' ಪಡೆಗಟ್ಟಿಕೊಂಡು ಬಂಡವಾಳಷಾಹಿ ಶ್ರೀಮಂತಸಂಸ್ಕೃತಿಯ ಪ್ರವೃತ್ತಿಯನ್ನು ಬೆಳೆಸುತ್ತಿದ್ದ ಶಿಕ್ಷಣದ ಪರಿಷ್ಕರಣವಾದಿ ಪ್ರವೃತ್ತಿಯನ್ನು ಪುಡಿಗುಟ್ಟುವೆವೆಂದುಕೊಂಡು ರಾಷ್ಟ್ರದಲ್ಲಿ ಅರಾಜಕತೆಯನ್ನೆಬ್ಬಿಸಿತು. ಶಾಲಾಕಾಲೇಜುಗಳಿಗೆ ಪ್ರವೇಶಪರೀಕ್ಷೆಯನ್ನು ಉಳಿಸಿಕೊಳ್ಳುವುದು ಶ್ರೀಮಂತ ಕುಟುಂಬದ ಮಕ್ಕಳಿಗೆ ಮಾತ್ರ ಅವಕಾಶಕೊಡುವ ಯತ್ನವೆಂದು ಹಳೆಯ ವ್ಯವಸ್ಥೆಯನ್ನು ಧ್ವಂಸಮಾಡುವ ಮನೋಭಾವವನ್ನು ಬೆಳೆಸಿಕೊಂಡಿತು. ಹಿಂದೆಲ್ಲ ಸಾಮ್ರಾಜ್ಯಯುಗದಲ್ಲಿ ಆಚರಣೆಯಲ್ಲಿದ್ದ ಪರೀಕ್ಷಾಪದ್ಧತಿ ಶ್ರೀಮಂತ ಸುಸಂಸ್ಕೃತ ಕುಟುಂಬಗಳವರು ಮಾತ್ರ ಮುಂದುವರಿಯಲೆಂದು ರೂಪುಗೊಂಡಿದ್ದ ಕುತಂತ್ರವೆಂದು ಘೋಷಿಸಿ ಅದನ್ನು ತೆಗೆದುಹಾಕಲು ಪ್ರಚಾರಮಾಡಿದ್ದಲ್ಲದೆ ಅದರ ಪರವಾಗಿದ್ದವರ ಮೇಲೆ ಆಕ್ರಮಣ ನಡೆಸಿತು. ಪಕ್ಷಕ್ಕೂ ಸರ್ಕಾರಕ್ಕೂ ಈ ಚಳವಳಿ ಪ್ರಿಯವೆನಿಸಿತ್ತು. ಪರೀಕ್ಷಾ ಪದ್ಧತಿಯಿಂದ ಇಷ್ಟೆಲ್ಲ ಅನರ್ಥವಾಗುತ್ತಿತ್ತೊ ಇಲ್ಲವೊ ಅಂತೂ 1966ರಲ್ಲಿ ಸರ್ಕಾರ ಆ ಪದ್ಧತಿಯನ್ನು ಶಾಸನವೊಂದರ ಮೂಲಕ ತೊಡೆದುಹಾಕಿತು.

ಕಮ್ಯೂನಿಸ್ಟ್ ಶಿಕ್ಷಣದ ಸಾಮಾನ್ಯ ಉದ್ದೇಶ : ಮಕ್ಕಳನ್ನು ಸಮಾಜವಾದ ರಾಷ್ಟ್ರದ ಪ್ರಜೆಗಳನ್ನಾಗಿ ಬೆಳೆಸುವುದು, ಸ್ವಾವಲಂಬನ ಶಕ್ತಿಯನ್ನು ಮೂಡಿಸುವುದು, ಸ್ಪರ್ಧೆಗೆ ಬದಲು ಸಹಕಾರ ಮನೋಭಾವವನ್ನೂ ತನ್ನ ಕಾರ್ಯ ಜನತೆಯ ಹಿತಕ್ಕೆಂಬ ಪ್ರಜ್ಞೆಯನ್ನೂ ರೂಢಿಸಿ ವರ್ಗರಹಿತ ಸಮಾಜವನ್ನು ಪೋಷಿಸುವುದೂ ಇಂದಿನ ಕಮ್ಯೂನಿಸ್ಟ್ ಶಿಕ್ಷಣದ ಸಾಮಾನ್ಯ ಉದ್ದೇಶಗಳಾಗಿವೆ. ಸಾಂಸ್ಕೃತಿಕ ಕ್ರಾಂತಿಯ ಅನಂತರ ಈ ಉದ್ದೇಶಗಳು ಈಡೇರುವಂತೆ ಅಲ್ಲಿನ ಕಾರ್ಯಕ್ರಮಗಳನ್ನು ಬಹು ಎಚ್ಚರಿಕೆಯಿಂದ ಏರ್ಪಡಿಸಲಾಗುತ್ತಿದೆ.

ನವಚೀನದಲ್ಲಿ ಸ್ತ್ರೀಯರು ಪುರುಷರಿಗೆ ಸಮಾನಹಕ್ಕನ್ನು ಹೊಂದಿದ್ದು ಸೇ. 90 ರಷ್ಟು ಮಂದಿ ಕಾರ್ಖಾನೆ, ಕಾರ್ಯಾಲಯ, ಹೊಲಗದ್ದೆ ಮುಂತಾದೆಡೆಗಳಲ್ಲಿ ಕೆಲಸಮಾಡಿ ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಭಾಗವಹಿಸುವರು. ಇದಕ್ಕೆ ಅನುಕೂಲಿಸುವಂತೆ ರಾಷ್ಟ್ರ ಅವರ ಮಕ್ಕಳ ಲಾಲನೆಪಾಲನೆಗಾಗಿ ತಕ್ಕ ವ್ಯವಸ್ಥೆ ಮಾಡಿದೆ. ದೇಶಾದ್ಯಂತ ಶಿಶುಕೇಂದ್ರಗಳೂ ಶಿಶುಗೃಹಗಳೂ ಕಿಂಡರ್‌ಗಾರ್ಟನ್ ಶಾಲೆಗಳೂ ಪ್ರಾಥಮಿಕ ಪೂರ್ವದ ಶಿಕ್ಷಣ ವ್ಯವಸ್ಥೆಯ ಅಂಗವಾಗಿ ಏರ್ಪಟ್ಟಿವೆ. ತಂದೆ ಅಥವಾ ತಾಯಿ ಮಕ್ಕಳನ್ನು ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟು ಅನಂತರ ತಮ್ಮ ಕೆಲಸಕ್ಕೆ ಹೋಗುವುದು ವಾಡಿಕೆ. ಸಾಮಾನ್ಯವಾಗಿ ತಾಯಂದಿರಿಗೆ 56 ದಿನಗಳ ಪ್ರಸವಕಾಲದ ರಜ ಮಾತ್ರವಿದ್ದು ಆನಂತರ ಅವರು ಕೆಲಸಕ್ಕೆ ಹೋಗಬೇಕಾಗಿರುವುದರಿಂದ ಮೇಲಿನ ವ್ಯವಸ್ಥೆ ಅನಿವಾರ್ಯವಾಗುತ್ತದೆ. ಸಾಮಾನ್ಯವಾಗಿ ಕಿಂಡರ್‌ಗಾರ್ಟನ್ ಮಾದರಿಯ ಶಿಶುಶಾಲೆಗಳು ಅಸ್ತಿತ್ವದಲ್ಲಿವೆ. ಆದರೆ ಅಲ್ಲಿನ ಕಾರ್ಯಕ್ರಮಗಳು ಪಾಶ್ಚಾತ್ಯ ಕಿಂಡರ್‌ಗಾರ್ಟನ್ನುಗಳಿಗಿಂತ ತೀರ ಭಿನ್ನವಾಗಿವೆ. ಸಮಾಜವಾದದ ಹಾಗೂ ವರ್ಗರಹಿತ ರಾಷ್ಟ್ರದಲ್ಲಿ ಸಹಕಾರ ಜೀವನವನ್ನೂ ಸ್ವಾವಲಂಬನೆಯನ್ನೂ ರಾಷ್ಟ್ರದ ಹಿತವನ್ನೂ ಸಾಧಿಸಲು ನೆರವಾಗುವ ಗುಣಗಳನ್ನು ಶಿಶುಶಾಲೆಗಳಲ್ಲೇ ರೂಢಿಗೆ ತರುವಂಥ ಕಾರ್ಯಕ್ರಮಗಳನ್ನು ಅಲ್ಲಿ ಕಾಣಬಹುದು. ಮಕ್ಕಳು ಆ ಶಾಲೆಗಳಲ್ಲಿ 7ನೆಯ ವರ್ಷದವರೆಗೂ ಇರಬಹುದು. ಚಿಕ್ಕ ಮಕ್ಕಳಾದರೂ ತಮ್ಮ ಕೆಲಸದಿಂದ ಉತ್ಪನ್ನಮುಖವಾಗಿರುವಂತೆ ಅಂದಿನಿಂದ ರೂಢಿಗೆ ತರುತ್ತಿರುವುದು ಆ ಹಂತದ ಶಿಕ್ಷಣದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಯೆನ್ನಬಹುದು.

ಈ ಮಧ್ಯೆ ಪರಿಷ್ಕರಣವಾದಿಗಳ ವಿರುದ್ಧ ಚಳವಳಿಯ ಬೊಬ್ಬೆಹಾಕುತ್ತ ವಿದ್ಯಾರ್ಥಿಗಳು ಊರಿಂದೂರಿಗೆ ದಾಳಿಯಿಡುತ್ತಿದ್ದರು. ಶಾಲಾ ಕಾಲೇಜುಗಳು ಮುಚ್ಚಿಹೋದುವು. ವಿದ್ಯಾರ್ಥಿಗಳ ಖಂಡನೆಗೆ ತುತ್ತಾಗಿ ಅನೇಕ ಪಂಡಿತರೂ ಪ್ರಾಧ್ಯಾಪಕರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಹಲವು ವಿಶ್ವವಿದ್ಯಾನಿಲಯಗಳ ಅಧ್ಯಕ್ಷರೂ ರಾಜೀನಾಮೆ ಕೊಡಬೇಕಾಯಿತು. ಈ ಸಾಂಸ್ಕೃತಿಕ ಕ್ರಾಂತಿಯಿಂದ ಯಾವ ಫಲ ಸಾಧನೆಯಾಯಿತೊ ಏನೋ ಅಂತೂ ಶಾಲಾಕಾಲೇಜುಗಳು ಒಂದು ವರ್ಷಕ್ಕೂ ಹೆಚ್ಚು ಕಾಲ ಬಾಗಿಲು ಮುಚ್ಚಿದುವು. ಆದರೆ ಚೀನದ ಶಿಕ್ಷಣವನ್ನು ಅದು ಪರಿಶುದ್ಧಗೊಳಿಸಿತೆಂಬ ಭಾವನೆ ಮಾವೊ ಮತ್ತು ಪಕ್ಷದ ಇತರ ನಾಯಕರಲ್ಲಿ ದೃಢವಾಗಿ ನೆಲೆಗೊಂಡಿತು. ಪ್ರತಿ ಶಾಲೆಯಲ್ಲೂ ಪಕ್ಷದ ತಂಡಗಳು ಏರ್ಪಟ್ಟು ಅವೇ ತಮ್ಮ ಸಹಪಾಠಿಗಳ ಶಿಕ್ಷಣಾಭಿವೃದ್ಧಿಯ ಮೌಲ್ಯಮಾಪನ ಮಾಡತೊಡಗಿದುವು. ಆ ಕಾರ್ಯದಲ್ಲಿ ವಿದ್ಯಾರ್ಜನೆ, ಜ್ಞಾನಕೌಶಲ್ಯಾದಿಗಳನ್ನು ಅಳೆಯುವುದಕ್ಕಿಂತ ವಿದ್ಯಾರ್ಥಿ ಎಷ್ಟರಮಟ್ಟಿಗೆ ಪಕ್ಷದ ಆದರ್ಶವನ್ನು ಅರಿತು ಅನುಸರಿಸುತ್ತಿರುವನು, ವರ್ಗಕಲಹ ಮತ್ತು ಉತ್ಪನ್ನಗಳಲ್ಲಿ ಎಷ್ಟರಮಟ್ಟಿಗೆ ಪಾತ್ರ ವಹಿಸುತ್ತಿರುವನು ಮುಂತಾದ ಅಂಶಗಳನ್ನು ಆಧಾರಮಾಡಿಕೊಂಡು ಮೌಲ್ಯಮಾಪನ ಮಾಡುವುದು ಪ್ರಚಾರಕ್ಕೆ ಬಂತು. 1950–60 ರ ತನಕ ಪ್ರಚಾರದಲ್ಲಿದ್ದ ಉತ್ಪನ್ನದ ಅಂಶ ಮತ್ತೆ ಶಿಕ್ಷಣದ ಪ್ರಮುಖ ಉದ್ದೇಶವಾಗುಳಿದುಕೊಂಡಿತು. ಯಾವುದೇ ಪದವಿಪರೀಕ್ಷೆಗೆ ಪ್ರವೇಶ ಕೋರುವ ಮುನ್ನ ವಿದ್ಯಾರ್ಥಿ ಐದು ವರ್ಷಕಾಲ ಶ್ರಮಜೀವನ ನಡೆಸಿರುವುದು ಅಗತ್ಯವಾಗುತ್ತ ಬಂತು. ಸಾಂಸ್ಕೃತಿಕ ಕ್ರಾಂತಿಯ ಕಾವು ಇಳಿಯುತ್ತ ಹೋದಂತೆ ಶಿಕ್ಷಣದ ಮೇಲೆ ರಾಜಕೀಯ ಹತೋಟಿ ಕಡಿಮೆಯಾಗುವುದೆಂದು ಅನೇಕರು ಭಾವಿಸಿದ್ದರು. ಇದು ಬಹುಶಃ ಸಾಧ್ಯವಾಗಿದ್ದರೂ ಕಳೆದ 25 ವರ್ಷಗಳ ಇತಿಹಾಸವನ್ನು ಪರೀಕ್ಷಿಸಿದರೆ ಆ ಹತೋಟಿ ಒಂದೇ ಸಮನಾಗಿರದೆ ಕಾಲಕಾಲಕ್ಕೆ ತೀವ್ರತೆಯಲ್ಲಿ ಹೆಚ್ಚು ಕಡಿಮೆಯಾಗುತ್ತ ಮುಂದುವರಿಯುವುದೆಂದು ತೋರುತ್ತದೆ.

**ಟೈವಾನ್ ಶಿಕ್ಷಣ :** ಎರಡನೆಯ ಮಹಾಯುದ್ಧ ಮುಗಿಯುವವರೆಗೆ ಟೈವಾನ್ ಜಪಾನಿನ ಆಕ್ರಮಣದಲ್ಲಿದ್ದುದರಿಂದ ಅಲ್ಲಿ ಜಪಾನಿನ ವಸಾಹತು ಆಡಳಿತವಿತ್ತು. ಸಾರ್ವತ್ರಿಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಆಚರಣೆಯಲ್ಲಿದ್ದರೂ ತಕ್ಕಷ್ಟು ಶಿಕ್ಷಣ ಸೌಲಭ್ಯವಿರಲಿಲ್ಲ. ತಾಂತ್ರಿಕ ಮತ್ತು ಉನ್ನತ ಶಿಕ್ಷಣ ಸೌಲಭ್ಯ ಅಷ್ಟಾಗಿ ವಿಸ್ತರಿಸಲಿಲ್ಲ. ಚೀನದ ಗಣರಾಜ್ಯದ ಕೇಂದ್ರ ಸರ್ಕಾರ ಅಂತರ್ಯುದ್ಧದ ಫಲವಾಗಿ ತನ್ನ ಮುಖ್ಯಸ್ಥಳವನ್ನು ಮುಖ್ಯ ಭೂಭಾಗದಿಂದ ಈ ದ್ವೀಪಕ್ಕೆ ವರ್ಗಾಯಿಸಿದ ಮೇಲೆ ಇಲ್ಲಿನ ಶಿಕ್ಷಣದ ಅಭಿವೃದ್ಧಿಗೆ ಪ್ರಚೋದನೆ ದೊರಕಿತು. ಶಾಲಾಕಾಲೇಜುಗಳು ಸಂಖ್ಯೆಯಲ್ಲೂ ವೈವಿಧ್ಯದಲ್ಲೂ ಆವಶ್ಯಕತೆಗನುಗುಣವಾಗಿ ಹೆಚ್ಚಿದುವು; ವಿದ್ಯಾರ್ಥಿಸೇರ್ಪಡೆ ಅಧಿಕ ಪ್ರಮಾಣದಲ್ಲಿ ಹೆಚ್ಚಿತು. 1920ರ ಸುಮಾರಿನಿಂದ ಜಪಾನಿನ ಶಿಕ್ಷಣಪದ್ಧತಿಯನ್ನು ತೊರೆದು ಅಮೆರಿಕದ ಶಿಕ್ಷಣಪದ್ಧತಿಯಂತೆ ಶಿಕ್ಷಣವನ್ನು ವ್ಯವಸ್ಥೆ ಮಾಡಲು ಆರಂಭವಾಗಿದ್ದ ಯತ್ನ ಕಮ್ಯೂನಿಸ್ಟರ ಆಳ್ವಿಕೆಗೊಳಗಾಗಿದ್ದ ಮುಖ್ಯ ಭೂಭಾಗದಲ್ಲಿ ಮೊಟಕಾದರೂ ಇಲ್ಲಿ ಮುಂದುವರಿಯಿತು. ಸದ್ಯದಲ್ಲಿ ದ್ವೀಪದ ಜನಸಂಖ್ಯೆಯ ಕಾಲುಭಾಗ ಶಾಲಾಕಾಲೇಜುಗಳಲ್ಲಿ ಸೇರಿರುವರು.

ಪ್ರಾಥಮಿಕ ಶಿಕ್ಷಣ : ವಸಾಹತು ಕಾಲಕ್ಕೆ ಹಿಂದಿನಿಂದಲೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಆಚರಣೆಯಲ್ಲಿದ್ದರೂ ತಕ್ಕಷ್ಟು ಪಾಠಶಾಲೆಗಳಾಗಲೀ ನಿಷ್ಠೆಯಿಂದ ಆಚರಣೆಗೆ ತರುವುದಾಗಲೀ ಇರಲಿಲ್ಲ. 6 ವರ್ಷಗಳ ಕಾಲದ ಕಡ್ಡಾಯ ಶಿಕ್ಷಣದ ಕಾಲಾವಧಿಯನ್ನು 1968 ರಲ್ಲಿ 9 ವರ್ಷಕ್ಕೆ ಹೆಚ್ಚಿಸಲಾಯಿತು. ಅದುವರೆಗೂ ಅಸ್ತಿತ್ವದಲ್ಲಿದ್ದ 6–3–3–4 ರ ಶಿಕ್ಷಣ ವ್ಯವಸ್ಥೆ ಈಗ 9–3–4 ಕ್ಕೆ ಮಾರ್ಪಟ್ಟಿತು. ಕಡ್ಡಾಯ ಶಿಕ್ಷಣದ 9 ವರ್ಷಗಳ ಕಾಲವನ್ನು ಒಂದು ಹಂತದ ಶಾಲೆಗೆ ನಿಗದಿ ಮಾಡುವಂತಾಯಿತು. ನಿಷ್ಠೆಯಿಂದ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತಂದುದರ ಫಲವಾಗಿ ಆ ವಯೋಮಾನದ ಶೇ. 97ಕ್ಕೂ ಹೆಚ್ಚು ಮಂದಿ ಶಾಲೆಗೆ ಸೇರುವಂತಾಯಿತು. ಸು. 25 ಲಕ್ಷಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಶಾಲೆಗೆ ಸೇರಿರುವರು.

ಪ್ರಾಥಮಿಕಪೂರ್ವದ ಶಿಕ್ಷಣ : ಇಲ್ಲಿ ಶಿಕ್ಷಣ ಅಮೆರಿಕದ ಮಾದರಿಯನ್ನು ಅನುಸರಿಸಿ ವ್ಯವಸ್ಥೆಗೊಂಡಿರುವುದರಿಂದ ಪ್ರಾಥಮಿಕಪೂರ್ವದ ಹಂತದಲ್ಲಿ ಕಿಂಡರ್‍ಗಾರ್ಟನ್ ಮಾದರಿಯ ಶಾಲೆಗಳನ್ನು ಆರಂಭಿಸಿದೆ.

ಪ್ರೌಢಶಿಕ್ಷಣ : ಆರು ವರ್ಷದ ಪ್ರೌಢಶಿಕ್ಷಣದ ಮೊದಲ ಹಂತ ಕಡ್ಡಾಯ ಶಿಕ್ಷಣದ ಅವಧಿಗೆ ಸೇರಿಹೋದ್ದರಿಂದ ಈಗ ಅದು ಮೂರು ವರ್ಷದ ಉನ್ನತ ಪ್ರೌಢಶಿಕ್ಷಣವಾಗಿ ಉಳಿದಿದೆ. ಇದನ್ನು ಎರಡು ಮುಖಗಳಲ್ಲಿ ವ್ಯವಸ್ಥೆಗೊಳಿಸಿದೆ –ಸಾಂಸ್ಕೃತಿಕ ಮತ್ತು ಔದ್ಯೋಗಿಕ ಪ್ರೌಢಶಾಲೆಗಳು, ಸಾಂಸ್ಕೃತಿಕ ಪ್ರೌಢಶಾಲೆಗಳಲ್ಲಿ ಶೇ. 80ರಷ್ಟು ವಿದ್ಯಾರ್ಥಿಗಳಿದ್ದರೆ ಔದ್ಯೋಗಿಕ ಪ್ರೌಢಶಾಲೆಗಳಲ್ಲಿ ಶೇ. 20ರಷ್ಟು ಮಾತ್ರ ವಿದ್ಯಾರ್ಥಿಗಳಿರುವರು. ಕೃಷಿ, ವಾಣಿಜ್ಯ, ಉದ್ಯೋಗ, ಔಪಚಾರಿಕೆ, ಗೃಹಕಾರ್ಯ ನಿರ್ವಹಣೆ ಅಲ್ಲಿ ಪ್ರಚಾರದಲ್ಲಿರುವ ವಿಷಯಗಳು.

**ಉನ್ನತ ಶಿಕ್ಷಣ :** ಉನ್ನತ ಶಿಕ್ಷಣ ಜೂನಿಯರ್ ಕಾಲೇಜುಗಳಲ್ಲೂ ವಿಶ್ವವಿದ್ಯಾಯಗಳಲ್ಲೂ ವ್ಯವಸ್ಥೆಗೊಂಡಿದೆ. 1960ರ ವೇಳೆಗೆ 79 ಜೂನಿಯರ್ ಕಾಲೇಜುಗಳೂ 13 ಕಾಲೇಜುಗಳೂ 9 ವಿಶ್ವವಿದ್ಯಾನಿಲಯಗಳೂ ಇದ್ದುವು. ಪ್ರಥಮ ಪದವಿಯ ನಾಲ್ಕು ವರ್ಷದ ಶಿಕ್ಷಣ ಕಾಲೇಜುಗಳಲ್ಲೂ ವಿಶ್ವವಿದ್ಯಾನಿಲಯದಲ್ಲೂ ಏರ್ಪಟ್ಟಿದೆ. ಒಂದು ಸಂಸ್ಥೆ ವಿಶ್ವವಿದ್ಯಾಲಯ ಆಗಬೇಕಾದರೆ ತನಗೆ ಸೇರಿದಂತೆ ಕಲಾಶಾಸ್ತ್ರ, ವಿಜ್ಞಾನ, ಕೃಷಿ, ವಾಣಿಜ್ಯ, ವೈದ್ಯ, ನ್ಯಾಯ, ಇಂಜಿನಿಯರಿಂಗ್–ಇವಾವುದಾದರೂ ಮೂರು ಕಾಲೇಜುಗಳನ್ನು ಹೊಂದಿರಬೇಕು. ಉನ್ನತ ಶಿಕ್ಷಣದಲ್ಲಿರುವ ಸು. 1½ ಲಕ್ಷ ವಿದ್ಯಾರ್ಥಿಗಳಲ್ಲಿ ಶೇ. 20ರಷ್ಟು ಇಂಜಿನಿಯರಿಂಗ್ ಕಾಲೇಜುಗಳಲ್ಲೂ ಶೇ. 10ರಷ್ಟು ವೈದ್ಯಶಾಸ್ತ್ರದ ಕಾಲೇಜುಗಳಲ್ಲೂ ಶೇ. 5ರಷ್ಟು ಕೃಷಿಕಾಲೇಜುಗಳಲ್ಲೂ ಓದುತ್ತಿರುವರು ಮಿಕ್ಕವರು ಸಾಂಸ್ಕೃತಿಕ ಕಾಲೇಜುಗಳಲ್ಲಿರುವವರು. ಕಲಾಶಾಸ್ತ್ರದ ವಿದ್ಯಾರ್ಥಿಗಳಿಗಿಂತ ವಿಜ್ಞಾನಶಾಸ್ತ್ರದ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುವುದು.

ಚೀನದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆ ಸತತವಾಗಿ ಬೆಳೆಯುತ್ತಿದೆ ಮತ್ತು ಬದಲಾಗುತ್ತಿದೆ. 2012ರಲ್ಲಿ ಸು. 2000 ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳೂ, ಒಟ್ಟು 6 ಮಿಲಿಯನ್ ವಿದ್ಯಾರ್ಥಿಗಳೂ ಓದುತ್ತಿದ್ದರು.

ವಯಸ್ಕರ ಶಿಕ್ಷಣ : ಕಡ್ಡಾಯ ಶಿಕ್ಷಣ ಆಚರಣೆಯಲ್ಲಿರುವುದರಿಂದ ಅನಕ್ಷರಸ್ಥರ ಸಂಖ್ಯೆ ತೀರ ಕಡಿಮೆಯಿದ್ದರೂ ರಾಷ್ಟ್ರ ಘಟನೆಯ ಪ್ರಕಾರ ಪ್ರಾಥಮಿಕ ಶಿಕ್ಷಣವನ್ನು ಪಡೆಯಲಾಗದಿದ್ದ ವಯಸ್ಕರಿಗೆ ಉಚಿತ ಶಿಕ್ಷಣವ್ಯವಸ್ಥೆ ಮಾಡಲಾಗಿದೆ. ಅದು ಬಹುಮಟ್ಟಿಗೆ ಸಾಮಾಜಿಕ ಶಿಕ್ಷಣದ ಸ್ವರೂಪವನ್ನು ತಾಳಿದೆ.

ಚೀನದ ಜನತಾ ವಿಶ್ವವಿದ್ಯಾಲಯ

ಅಧ್ಯಾಪಕರ ಶಿಕ್ಷಣ : ಪ್ರಾಥಮಿಕ ಶಾಲೆಯ ಅಧ್ಯಾಪಕರ ಪ್ರಶಿಕ್ಷಣ ನಾರ್ಮಲ್ ಶಾಲೆಗಳಲ್ಲೂ ಪ್ರೌಢಶಾಲೆಯ ಅಧ್ಯಾಪಕರ ಶಿಕ್ಷಣ ನಾರ್ಮಲ್ ಕಾಲೇಜುಗಳಲ್ಲೂ ವ್ಯವಸ್ಥೆಗೊಂಡಿದೆ. ಈಚೆಗೆ ಅವೆರಡು ಹಂತಗಳ ಶಿಕ್ಷಣದ ಮಟ್ಟವನ್ನು ಉತ್ತಮಪಡಿಸುವ ಯತ್ನ ನಡೆದಿದೆ. ಟೈವಾನಿನ ನಾರ್ಮಲ್ ಕಾಲೇಜು ಈಗ ಪೂರ್ಣಪ್ರಮಾಣದ ನಾರ್ಮಲ್ ವಿಶ್ವವಿದ್ಯಾಲಯವಾಗಿ ವಿಸ್ತರಿಸಿದೆ.

ಪರೀಕ್ಷಾ ವ್ಯವಸ್ಥೆ : ಪ್ರಾಚೀನ ಮತ್ತು ಮಧ್ಯಯುಗಗಳ ಚೀನದಲ್ಲಿದ್ದ ಪರೀಕ್ಷೆಯ ಪ್ರಾಮುಖ್ಯ ಸ್ವಲ್ಪಮಟ್ಟಿಗೆ ಇಲ್ಲಿ ಉಳಿದುಕೊಂಡೇ ಬಂದಿದೆ. ಇಲ್ಲಿಯ ತನಕ ಪ್ರಾಥಮಿಕ ಶಾಲೆಯ ಹಂತದಲ್ಲಿದ್ದ ಪರೀಕ್ಷೆಯನ್ನು 1968ರಿಂದ ತೆಗೆದುಹಾಕಿದೆ. ಇದರಿಂದ ಪ್ರಾಥಮಿಕ ಶಾಲೆಯಿಂದ ವಿದ್ಯಾರ್ಥಿಗಳು ನೇರವಾಗಿ ಜೂನಿಯರ್ ಪ್ರೌಢಶಾಲೆಗೆ ಸೇರಬಹುದು. 9 ವರ್ಷದ ಶಿಕ್ಷಣವನ್ನು ಕಡ್ಡಾಯಮಾಡಿರುವ ಪ್ರಯುಕ್ತ ಪ್ರಾಥಮಿಕ ಶಾಲೆಯೊಡನೆ ಜೂನಿಯರ್ ಪ್ರೌಢಶಾಲೆಯನ್ನು ಸಮಾವೇಶಗೊಳಿಸಿಕೊಂಡು 9 ವರ್ಷಗಳ, ಪರಿಣಾಮಕಾರಿಯಾಗಬಲ್ಲ ಪಠ್ಯಕ್ರಮವನ್ನು ಈಗ ರೂಪಿಸುವ ಯತ್ನದಲ್ಲಿ ಶಿಕ್ಷಣವೇತ್ತರು ತೊಡಗಿರುವರು.

ನೂತನ ಪ್ರವೃತ್ತಿಗಳು : ಟೈವಾನನ್ನು ಜಪಾನ್ ಚೀನಕ್ಕೆ ವಹಿಸಿದಮೇಲೆ ರಾಷ್ಟ್ರೀಯ ಭಾವನೆಯ ಬೆಳೆವಣಿಗೆ ಶಿಕ್ಷಣದ ಪ್ರಮುಖ ಉದ್ದೇಶಗಳಲ್ಲೊಂದಾಗುತ್ತ ಬಂದಿದೆ. ಚೀನೀ ಆಡುಭಾಷೆಯನ್ನು ಸಾರ್ವತ್ರಿಕ ಸಾಮಾನ್ಯ ಸ್ವರೂಪಕ್ಕೆ ಮಾರ್ಪಡಿಸಿ ಪ್ರಾದೇಶಿಕ ಪ್ರಭೇದಗಳನ್ನು ನಿವಾರಿಸುವುದರ ಮೂಲಕ ಅಲ್ಲಿನ ಶಿಕ್ಷಣ ರಾಷ್ಟ್ರೀಯ ಭಾವನೆಯನ್ನು ಪರಿಣಾಮಕಾರಿಯಾಗಿ ಪ್ರಚಾರ ಮಾಡುತ್ತಿದೆ. ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಲು ರಾಷ್ಟ್ರೀಯ ವಿಜ್ಞಾನಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಸಂಶೋಧನೆಗಳಿಗೆ ಅಗತ್ಯವಾದ ಧನಸಹಾಯವನ್ನೂ ನೀಡಲಾಗುತ್ತಿದೆ. ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಉನ್ನತ ಶಿಕ್ಷಣಸಂಸ್ಥೆಗಳಲ್ಲಿ, ಮುಖ್ಯವಾಗಿ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ ಮತ್ತು ಸಂಶೋಧನೆಗಳನ್ನು ಗುಣಮಟ್ಟದಲ್ಲೂ ಪ್ರಮಾಣದಲ್ಲೂ ಉತ್ತಮಪಡಿಸಲಾಗುತ್ತಿದೆ. ನ್ಯಾಷನಲ್ ಟ್ಸಿಂಗುಹಾ ವಿಶ್ವವಿದ್ಯಾಲಯದ ನ್ಯೂಕ್ಲಿಯರ್ ಇನ್‍ಸ್ಟಿಟ್ಯೂಟ್, ಚಯೋಟುಂಗ್ ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ ಇನ್‍ಸ್ಟಿಟ್ಯೂಟ್ ಉನ್ನತಮಟ್ಟದ ಸಂಶೋಧನೆಗೆ ಹೆಸರಾಗಿವೆ.

(ಎನ್.ಎಸ್.ವಿ.)

**ಚೀನೀ ಶಿಲ್ಪ :** ಪ್ರಪಂಚದ ಇತರ ಪ್ರದೇಶಗಳಂತೆ ಚೀನದಲ್ಲೂ ಇತಿಹಾಸ ಪೂರ್ವ ಕಾಲದಿಂದಲೂ ಆಯುಧೋಪಕರಣಗಳನ್ನು ನಿರ್ಮಿಸಲಾಗುತ್ತಿತ್ತು. ಪ್ರಶ.ಪೂ. 3000ದ ಸುಮಾರಿನಲ್ಲಿ ಪ್ರಾರಂಭವಾದ ನವಶಿಲಾಯುಗ ಕಾಲದಿಂದಲೇ ಕಲಾಭಿರುಚಿಯುಳ್ಳ ವಸ್ತುಗಳ ಸೃಷ್ಟಿಕಾರ್ಯ ಕಾಣಬರುತ್ತದೆ. ವ್ಯವಸ್ಥಾಯ ಮುಖ್ಯ ಕಸುಬಾಗಿದ್ದ ನವಶಿಲಾಯುಗದ ಜನ ತಮ್ಮ ಮಡಿಕೆ ಕುಡಿಕೆಗಳ ಮೇಲೆ ಹಲವು ರೀತಿಯ ಚಿತ್ರಗಳನ್ನು ಬಿಡಿಸಲಾರಂಭಿಸಿದರು. ಆದರೆ ಪ್ರಶ.ಪೂ. 1500ರ ಸುಮಾರಿನಲ್ಲಿ ಸ್ಥಾಪಿತವಾದ ಷಾಂಗ್ ರಾಜವಂಶದ ಕಾಲದಿಂದ ನಿಜವಾಗಿಯೂ ಕಲಾತ್ಮಕವಾದ ವಸ್ತುಗಳು ನಿರ್ಮಿತವಾದುವು. ಅದಕ್ಕೂ ಮೊದಲಿಗೆ ಇತ್ತೆಂದು ಹೇಳಲಾದ ಷ್ಸಿಯಾ ರಾಜ್ಯದ ಕಾಲಕ್ಕೆ ಇಲ್ಲವೆ ಷಾಂಗ್ ಕಾಲಕ್ಕೆ ಸೇರಬಹುದಾದ, ಮೂಳೆಯಲ್ಲಿ ಕೆತ್ತಿದ ವಸ್ತುಗಳು ಗಮನಾರ್ಹ, ಚಿತ್ರಲಿಪಿಯಿಂದ ಕೂಡಿದ ಆ ವಸ್ತುಗಳು ಆ ಕಾಲದ ಸಂಸ್ಕೃತಿಯ ಪ್ರಗತಿಪರತೆಯನ್ನು ಸೂಚಿಸುತ್ತವೆ. ರಾಜಮನೆತನದವರ ಸಮಾಧಿಗಳಲ್ಲಿ ದೊರಕಿರುವ ರಥ, ಕುದುರೆ, ಜೀನು, ಆಯುಧ ಮುಂತಾದ ವಸ್ತುಗಳು ಕಲೆಯ ಅಭ್ಯಾಸಕ್ಕೆ ಸಾಧನಗಳಾಗಿವೆ. ಷಾಂಗ್ ಕಾಲಕ್ಕೆ ಸೇರಿದ ಕೆಲವು ಶಿಲ್ಪಗಳು ಅನ್ಯಾಂಗ್‍ನ ಭೂಸಂಶೋಧನೆಗಳಲ್ಲಿ ಸಿಕ್ಕಿವೆ. ಈ ಶಿಲ್ಪಗಳು ಔಪಚಾರಿಕ ಶೈಲಿಯಿಂದ ಕೂಡಿದ ವೈಶಿಷ್ಟ್ಯರಹಿತ ಕೃತಿಗಳಾಗಿವೆ. ಘನಾಕೃತಿಯ ಈ ಶಿಲ್ಪಗಳಲ್ಲಿ ಪ್ರತ್ಯೇಕ ಅಂಗಗಳಿಗೆ ಪ್ರಾಮುಖ್ಯ ನೀಡದೆ ಸಮಗ್ರ ರೂಪದ ಅಂದಕ್ಕೆ ಗಮನವೀಯಲಾಗಿದೆ. ಬಹುಶಃ ಗೂಬೆ ಮತ್ತು ಹುಲಿಯನ್ನು ಹೋಲುವ ಒಂದು ಪ್ರಾಣಿಯ ಶಿಲ್ಪಗಳು ತಾಂತ್ರಿಕ ದೃಷ್ಟಿಯಿಂದ ಉತ್ತಮ ಮಟ್ಟಕ್ಕೆ ಸೇರುತ್ತವೆ. ಅವು ಶಿಲ್ಪಿಗಳ ದೀರ್ಘ ಅನುಭವದ ನಿದರ್ಶನಗಳಾಗಿವೆ. ಗೂಬೆಯ 0.45ಮೀ. ಎತ್ತರದ ಶಿಲ್ಪದಲ್ಲಿ ಕಿವಿ ಮತ್ತು ಕಣ್ಣೆವೆಗಳು ಮನುಷ್ಯನನ್ನು ಹೋಲುತ್ತವೆ. ಕಣ್ಣುಗಳು ಆಳವಾಗಿವೆ; ಕಾಲುಗಳು ದಪ್ಪವೂ ಶಕ್ತಿಯುತವೂ ಆಗಿವೆ. ತಲೆಯ ಭಾಗದ ಮತ್ತು ರೆಕ್ಕೆಗಳ ಗರಿಗಳನ್ನು ಸೂಕ್ಷ್ಮವಾಗಿ ರೂಪಿಸಲಾಗಿದೆ. ಅದರ ಅಂಗಗಳ ಮೇಲೆ ವಿವಿಧ ಪ್ರಾಣಿಗಳನ್ನು ಹೋಲುವ ಆಕಾರಗಳನ್ನು ಕೆತ್ತಲಾಗಿದೆ. ಅದೇ ಕಾಲಕ್ಕೆ ಸೇರಿದ, ಮುಂಗಾಲುಗಳ ಮೇಲೆ ನಿಂತ ಹುಲಿಯ ಶಿಲ್ಪ ಸಹ ಇದೇ ಬಗೆಯದು. ಇಂಥ ಶಿಲ್ಪಗಳನ್ನು ಶುಭಸೂಚಕ ವಸ್ತುಗಳೆಂದು ಪರಿಗಣಿಸಿ ಇವಕ್ಕೆ ಮಂತ್ರಶಕ್ತಿಯನ್ನು ಆರೋಪಿಸಲಾಗಿತ್ತೆಂಬುದನ್ನು ಮೇಲಿನ ಚಿತ್ರಗಳಿಂದಲೂ ಆ ಶಿಲ್ಪಗಳನ್ನು ಸಮಾಧಿಗಳಲ್ಲಿ ಇಟ್ಟಿದ್ದರೆಂಬುದರಿಂದಲೂ ಊಹಿಸಲಾಗಿದೆ.

ಅಮೃತಶಿಲೆಯಲ್ಲಿ ಕಡೆದ ಗೂಬೆಯ ಶಿಲ್ಪ
(ಷಾಂಗ್ ರಾಜವಂಶ ಕಾಲ)

ಷಾಂಗ್ ಶಿಲ್ಪಿಗಳು ಮಾನವರೂಪಗಳನ್ನು ಸಹ ಔಪಚಾರಿಕ ಶೈಲಿಯಲ್ಲೇ ನಿರ್ಮಿಸುತ್ತಿದ್ದರು. 5¾" ಎತ್ತರದ, ಕುಳಿತ ಮನುಷ್ಯ ವಿಗ್ರಹ ಬೇರಾವುದೋ ವಸ್ತುವಿನ ತಳಭಾಗವಾಗಿದ್ದಿರಬಹುದು. ಚಪ್ಪಟೆಯಾದ ತಲೆಯ ಮೇಲಿರುವ ತಗ್ಗು, ದೇಹದ ಗಾತ್ರ,

ಅದರ ಕೆಳಭಾಗದ ವೈಶಾಲ್ಯ, ಮುಂಚಾಚಿರುವ ತಲೆ–ಇವೆಲ್ಲ ಮೇಲಿನ ಊಹೆಗೆ ಪೂರಕವಾಗಿವೆ. ದೇಹವು ಪ್ರಮಾಣಬದ್ಧವಾಗಿದ್ದು, ದೇಹದ ಮೇಲೆ ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಇತರ ಕೆಲವು ಪ್ರಾಣಿಗಳ ಕೆತ್ತನೆಯಲ್ಲಿ ಸಹಜತೆಗೆ ಗಮನ ನೀಡಿಲ್ಲವಾದರೂ ಅದು ಸತ್ತ್ವಪೂರ್ಣವಾದದ್ದು. ತುಂಬುಶರೀರದ ಆನೆ, ಒರಗಿದಂತಿರುವ ನೀರಾನೆ ಇವುಗಳ ಶಿಲ್ಪಗಳು ಬೇರಾವುದೋ ಆಸುರೀಲೋಕದ ಕೃತಿಗಳಂತೆ ಕಾಣುತ್ತವೆ. ನೀರಾನೆಯ ದೇಹದ ಗಾತ್ರ, ಅದರ ಅಂಗಗಳನ್ನು ರೂಪಿಸಿರುವ ಕೌಶಲ ಅಸ್ಖಲಿತವಾದ್ದು. ದೇಹದ ಮೇಲಿನ ರೇಖಾಚಿತ್ರಗಳು ಶಿಲ್ಪದ ಗಾಂಭೀರ್ಯವನ್ನು ಹೆಚ್ಚಿಸಿವೆ.

ಇವೆಲ್ಲ ಸಣ್ಣ ಗಾತ್ರದ ಕೃತಿಗಳಾದರೂ ಷಾಂಗ್ ಶಿಲ್ಪಿಗಳು ಬೃಹದಾಕಾರದ ಕೃತಿಗಳನ್ನು ನಿರ್ಮಿಸಿದ್ದರೆಂದು ಊಹಿಸಲು ಆಧಾರಗಳಿವೆ. ಉಬ್ಬುಶಿಲ್ಪಗಳ ಕೆತ್ತನೆ ಅವರ ವೈಶಿಷ್ಟ್ಯವಾಗಿತ್ತು. ಕಲ್ಲಿನ ಮತ್ತು ಕಂಚಿನ ಪಾತ್ರೆಗಳ ಮೇಲೆ ತಂತ್ರ ದೃಷ್ಟಿಯಿಂದ ಉತ್ತಮವಾದ, ಕಲಾಪೂರ್ಣವಾದ ಉಬ್ಬುಚಿತ್ರಗಳಿವೆ. ಷಾಂಗ್ ಕಾಲದ ಕಂಚಿನ ಶಿಲ್ಪಗಳು ಚೀನೀ ಕಲೆಯ ಇತಿಹಾಸದಲ್ಲೇ ಆದರ್ಶಯುತವಾದಂಥವು. ಆಗಿನ ಕಲಾವಸ್ತುಗಳ ಸಂಖ್ಯೆಯೂ ಅಧಿಕ. ಬಹಳ ಹಿಂದಿನಿಂದಲೂ ಮರ, ಜೇಡಿಮಣ್ಣು ಮುಂತಾದವುಗಳಿಂದ ಕಲಾವಸ್ತುಗಳನ್ನು ತಯಾರಿಸಲಾಗುತ್ತಿತ್ತು. ಇವು ಬೇಗ ನಾಶವಾಗುತ್ತಿದ್ದುವು. ಕ್ರಮೇಣ ಇವನ್ನು ಕಂಚಿನಲ್ಲಿ ನಿರ್ಮಿಸುವ ಪದ್ಧತಿ ಬೆಳೆಯಿತು. ಇವು ನುರಿತ ಕಲೆಗಾರಿಕೆಯ ನಿದರ್ಶನಗಳು.

ಷಾಂಗ್ ಕಾಲದ ಕಂಚಿನ ಶಿಲ್ಪಕಲೆ ಅನಂತರದ ಚೌ ವಂಶದ ಪ್ರಾರಂಭಕಾಲದಲ್ಲೂ ಮುಂದುವರಿದುದರಿಂದ ಇವೆರಡೂ ಕಾಲದ ಶಿಲ್ಪಗಳನ್ನು ಪ್ರತ್ಯೇಕಿಸುವುದು ಕಷ್ಟಸಾಧ್ಯ. ಒಂದೆರಡು ತಲೆಮಾರುಗಳ ಕಾಲದಲ್ಲಿ ಚೌ ಕಾಲದ ವಿಶಿಷ್ಟ ಶೈಲಿ ರೂಪುಗೊಂಡಿತು.



ಷಾಂಗ್ ದೊರೆಗಳ ಕಾಲದ ಇನ್ನೊಂದು ಶಿಲ್ಪ ಆಸೀನ ಮಾನವ (ಅಮೃತಶಿಲೆ)

ಷಾಂಗ್ ಕಂಚಿನ ಶಿಲ್ಪಗಳು ಸರಳ ಸೌಮ್ಯವಾಗಿದ್ದರೆ ಚೌ ಶಿಲ್ಪಗಳು ಸತ್ತ್ವಪೂರ್ಣವೂ ಚಲನಾತ್ಮಕವೂ ಆದಂಥವು. ಕ್ರಮೇಣ ಈ ಲಕ್ಷಣಗಳು ಕಣ್ಮರೆಯಾಗಿ, ಉಪಯುಕ್ತ ಆಲಂಕಾರಿಕ ಶೈಲಿ ಪ್ರಧಾನವಾಯಿತು. ಪ್ರಾಣಿಶಿಲ್ಪಗಳು ಅಸಹಜವಾಗಿ ಕಾಲ್ಪನಿಕ ರೂಪಗಳು ಹೆಚ್ಚಿದುವು. ಈ ಕಾಲಕ್ಕೆ ಸೇರಿದ ಹುಲಿಜೋಡಿಯ ಶಿಲ್ಪಗಳು ಪ್ರಾತಿನಿಧಿಕ ನಿದರ್ಶನಗಳೆಂದು ಗಣಿಸಬಹುದು. ಬೇರಾವುದೋ ವಸ್ತುಗಳ ಆಧಾರಗಳಾಗಿ ಉಪಯೋಗಿಸಿದಂತಿರುವ ಪ್ರಾಣಿಶಿಲ್ಪಗಳಿಗೆ ಶಕ್ತಿಯುತ ಸದೃಢ ದೇಹಗಳುಂಟು. ಮೊದಲಿನ ಶಿಲ್ಪಗಳ ನೈಜತೆ ಕಾಣದಾಗಿ ಇವುಗಳಲ್ಲಿ ಸಾಂಪ್ರದಾಯಿಕ ಸಮನ್ವಯ ಶೈಲಿ ಎದ್ದು ಕಾಣುತ್ತದೆ. ಹುಲಿಯ ದೌಷ್ಟ್ಯವನ್ನು ನಿರೂಪಿಸುವ ಯತ್ನದಲ್ಲಿ ಅವುಗಳ ವೈಯಕ್ತಿಕತೆ ನಷ್ಟವಾಗಿದೆ. ಆದರೆ ದೇಹದ ಮೇಲಿರುವ ರೇಖಾಚಿತ್ರಗಳಲ್ಲಿ ಅದರ ದುಷ್ಟಗುಣ ಅತ್ಯಂತ ಪ್ರಭಾವಶಾಲಿಯಾಗಿ ನಿರೂಪಿತವಾಗಿದೆ.

ಚೌ ಯುಗದ ಮಧ್ಯಕಾಲದ (ಪ್ರಶ.ಪೂ. 950–750) ಕೆಲವು ಕೃತಿಗಳಲ್ಲಿ ಪರಂಪರಾಗತ ಲಕ್ಷಣಗಳಿಗಿಂತ ಹೊರಗಿನ ಪ್ರಭಾವಗಳು ಪ್ರಧಾನ. ಅನಂತರ ಕಾಲದ ಕಂಚಿನ ಶಿಲ್ಪಗಳ ಮೇಲೆ (ಪ್ರಶ.ಪೂ. 600–249) ಭಯೋತ್ಪಾದಕ ಚಿತ್ರಗಳ ಬದಲು ಕ್ರೀಡಾಸಕ್ತಿಯನ್ನು ಸೂಚಿಸುವ ಚಿತ್ರಗಳು ಪ್ರಧಾನ. ಮೊದಲು ಧಾರ್ಮಿಕ, ಮಾಂತ್ರಿಕ ನಿರೂಪಣೆಗಳು ಅಧಿಕವಾಗಿದ್ದುವು. ಅನಂತರದ ಕಾಲದಲ್ಲಿ ಸಾಮಾಜಿಕ ದೃಶ್ಯಗಳಿಗೆ, ತಾಂತ್ರಿಕ ಕೌಶಲಕ್ಕೆ ಗಮನ ಸಂದಿತು.

ಪ್ರಶ.ಪೂ. 6ನೆಯ ಶತಮಾನದಲ್ಲಿ ಸಂಭವಿಸಿದ ರಾಜಕೀಯ ಸಾಮಾಜಿಕ ಆಂದೋಲನಗಳಿಂದ ಉಂಟಾದ ಪರಿಸ್ಥಿತಿಯಲ್ಲಿ ಕನ್‌ಫ್ಯೂಷಿಯಸನ ಬೌದ್ಧಿಕ–ನೈತಿಕವಾದ ಮತ್ತು ಲೌ–ಟ್ಸುವಿನ ಟಾವ್ ಮತದ ಧ್ಯಾನಕರ್ಮರಹಿತ ವಿರಕ್ತಿವಾದಗಳ ನಡುವೆ ಗೊಂದಲ ಏರ್ಪಟ್ಟಿತು. ಇದರ ಪ್ರಭಾವ ಚೀನದ ಶಿಲ್ಪಕ್ಷೇತ್ರದಲ್ಲೂ ಕಂಡುಬರುತ್ತದೆ. ಆಗ ದೇಶಾದ್ಯಂತ ಶ್ರೀಮಂತ ಮನೆತನಗಳವರು ಪ್ರಬಲವಾಗಿದ್ದರು. ಚಿನ್ನ–ಬೆಳ್ಳಿ ಕೆತ್ತನೆಗಳಿಂದ ಕೂಡಿದ ಕಂಚು, ಪಚ್ಚೆಕಲ್ಲು ಮತ್ತು ಅರಗಿನ ಶಿಲ್ಪಗಳ ತಯಾರಿಕೆಗೆ ಅವರಿಂದ ಅಧಿಕ ಬೇಡಿಕೆಯಿತ್ತು. ಮೆರಗಿನಿಂದ ಕೂಡಿದ ಕಂಚಿನ ಕನ್ನಡಿಗಳ ಹಿಂಭಾಗದಲ್ಲಿ ಕಂಚಿನ ಶಿಲ್ಪಗಳ ಮಾದರಿಯ ಉಬ್ಬುಶಿಲ್ಪಗಳನ್ನು ಕೆತ್ತಲಾಗುತ್ತಿತ್ತು. ಕಂಚಿನ ಪಾತ್ರೆಗಳ ಮೇಲಿನ ಉಬ್ಬು ಶಿಲ್ಪಗಳ ತಾಂತ್ರಿಕ ನೈಪುಣ್ಯ ಉನ್ನತ ಮಟ್ಟ ತಲುಪಿತ್ತು. ಕುಸುರಿ ಕೆಲಸದಲ್ಲಿ ಶಿಲ್ಪಿಗಳು ಪರಸ್ಪರ ಸ್ಪರ್ಧಿಸುತ್ತಿದ್ದಿರಬೇಕು. ಸೈಬೀರಿಯದ ಸಿಥಿಯನರ ಪ್ರಾಣಿಚಿತ್ರಣ ಕಲೆಯ ಪ್ರಭಾವ ಈ ಕಾಲದಲ್ಲಿ ಚೀನವನ್ನು ತಲುಪಿದಂತೆ ತೋರುತ್ತದೆ. ಉತ್ತರಕಾಲೀನ ಚೌ ವಂಶದ ಅನೇಕ

ಅಮೃತಶಿಲೆಯಲ್ಲಿ ಕಡೆದ ನೀರೆಮ್ಮೆ (ಷಾಂಗ್ ರಾಜವಂಶ)

ಕಂಚಿನ ಶಿಲ್ಪಗಳು ಹೇರಳವಾಗಿ ದೊರಕಿವೆ. ಪ್ರಶ.ಪೂ. 6–3ನೆಯ ಶತಮಾನಗಳ ಈ ಶಿಲ್ಪಗಳಲ್ಲಿ ಬೇಟೆಯ ದೃಶ್ಯಗಳನ್ನು ಹಾಗೂ ಧಾರ್ಮಿಕ ಮತ್ತು ಮಾಂತ್ರಿಕ ವಿಷಯಗಳನ್ನು ರೂಪಿಸಲಾಗಿದೆ. ಆಗಿನ ಚಿತ್ರಕಲೆಯ ಪ್ರಭಾವಗಳನ್ನು ತೋರುವ ಈ ಶಿಲ್ಪಗಳು ಸಣ್ಣವಾದರೂ ಗಮನಾರ್ಹ. ಒಂದು ಕಂಚಿನ ಶಿಲ್ಪದ ಮೇಲೆ ಸಾಂಪ್ರದಾಯಿಕ ಡ್ರೇಗನ್ ಕೆತ್ತನೆ ಇದೆ. ಲೋಯಾಂಗ್ ಬಳಿಯ ಚಿನ್–ಟ್ಸುನ್ ಎಂಬಲ್ಲಿ ಹಾನ್ ವಂಶದ ಪ್ರಾಂತ್ಯಾಧಿಕಾರಿಗಳ ಸಮಾಧಿಗಳಲ್ಲಿ ಕುದುರೆಗಳ ಮತ್ತು ಮಾನವರ ಕಂಚಿನ ಪ್ರತಿಮೆಗಳು ದೊರಕಿವೆ. ಅದೇ ಕಾಲಕ್ಕೆ ಸೇರಿದ ಈ ಶಿಲ್ಪಗಳು ಸರಳವಾಗಿಯೂ ದುಂಡಗೂ ಇವೆ. ಕೆಲವು ಶಿಲ್ಪಗಳಲ್ಲಿ ಎಚ್ಚರಿಕೆಯಿಂದಲೂ ಕೌಶಲದಿಂದಲೂ ದೇಹವನ್ನು ರೂಪಿಸಲಾಗಿದೆ. ಮಾನವಶಿಲ್ಪಗಳಲ್ಲಿ ಬಹು ಸಂಖ್ಯೆಯವು ಕುಳಿತಂತೆಯೋ ಮೊಳಕಾಲೂರಿ ನಿಂತಂತೆಯೋ ಇವೆ. ತೆರೆದ

ಖಡ್ಗಮೃಗ, ಕಂಚಿನ ಶಿಲ್ಪ (ಪ್ರಶ.ಪೂ. ಸು. 12–11ನೆಯ ಶ.)

ಬಾಹುಗಳು ಬರಿದಾದ ಪಾತ್ರೆಯೊಂದನ್ನು ಹಿಡಿದಿವೆ. ಆ ಶಿಲ್ಪಗಳ ಕೆಳಭಾಗದಲ್ಲಿರುವ ರಂಧ್ರಗಳಿಂದ ಅವನ್ನು ಬೇರಾವುದೋ ವಸ್ತುವಿಗೆ ಜೋಡಿಸಿದ್ದಂತೆ ಕಾಣುತ್ತದೆ. ಕೆಲವು ಶಿಲ್ಪಗಳ ತಲೆಗಳು ದೊಡ್ಡವು. ಮುಖ ಚಪ್ಪಟೆ. ಆದ್ದರಿಂದ ಅವು ಮಂಗೋಲಿಯನ್ ಬುಡಕಟ್ಟಿನ ಜನರನ್ನು ಪ್ರತಿನಿಧಿಸುತ್ತಿರಬಹುದು. ಅಂಗವಸ್ತ್ರಗಳ ನಿರೂಪಣೆ ಅಸಹಜವಾಗಿದ್ದರೂ ಪ್ರಮಾಣಬದ್ಧವೂ ಸುಲಲಿತವೂ ಪರಿಣಾಮಕಾರಿಯೂ ಆದ್ದು. ಚಲನಾತ್ಮಕವೂ ಸತ್ತ್ವಪೂರ್ಣವೂ ಆದ, ಕುಸ್ತಿಪಟುಗಳ ಶಿಲ್ಪಗಳೂ ಉಂಟು. ಇವು

ಕೌಶಲಪೂರಿತ; ಶಿಲ್ಪಿಗಳ ಪ್ರೌಢಿಮೆಗೆ ಸಾಕ್ಷೀಭೂತ. ಇವುಗಳಲ್ಲಿ ಹೆಚ್ಚಿನವು ಸತ್ತವರ ಎಡಮೇಲ್ಭಾಗ ಆತ್ಮಗಳ ತೃಪ್ತಿಗಾಗಿ ಸಮಾಧಿಗಳಲ್ಲಿ ಹೂತಿಡಲು ನಿರ್ಮಿಸಿದವು. ಅದೇ ಕಾಲಕ್ಕೆ ಸೇರಿದ ಮರದ ಶಿಲ್ಪಗಳು ಹೂನಾನ್ ಪ್ರಾಂತ್ಯದ ಚಾಂಗ್‍ಷಾದಲ್ಲಿ ದೊರಕಿವೆ. ಇವು ಚೀನದ ಇತರ ಪ್ರದೇಶಗಳ ಶಿಲ್ಪಗಳಿಗಿಂತ ಬಹಳ ಭಿನ್ನವಾದಂಥವು. ಉದ್ದ ನಾಲಗೆಗಳೂ ಜಿಂಕೆಯ ಕೊಂಬುಗಳೂ ಉಳ್ಳ ಮುಖಗಳ, ವರ್ಣಲೇಪಿತವಾದ ಈ ಶಿಲ್ಪಗಳು ಚೌ ವಂಶದ ಕೊನೆಯ ಕಾಲದಲ್ಲಿ ಒಂದು ಹೊಸ ಶೈಲಿಯನ್ನು ಸೃಷ್ಟಿಸಿದುವು. ವಿಶಾಲವೂ ಸಂಪದ್ಭರಿತವೂ ಆದ ಚು ರಾಜ್ಯದ ಆಶ್ರಯದಲ್ಲಿ ಈ ಶೈಲಿ ಬೆಳೆದು ಬಂತು. ಸಮಾಧಿಗಳಲ್ಲಿ ಹೂತಿಡಲೆಂದೇ ನಿರ್ಮಿಸಿದ ಈ ಮಾನವಶಿಲ್ಪಗಳು 2.4ಮೀ. ಎತ್ತರವಾಗಿವೆ; ಇವಕ್ಕೆ ಚಪ್ಪಟೆಯಾದ ತಲೆ, ಮುಖ, ವರ್ಣಮಯ ಕಣ್ಣುಗಳು ಚೂಪಾದ ಗಡ್ಡ ಇವೆ; ಕಣ್ಣುಗಳನ್ನು ಬಣ್ಣಗಳಿಂದ ಚಿತ್ರಿಸಲಾಗಿದೆ. ಸರಳ ಸಹಜ ಕತ್ತನೆ. ಈ ಶೈಲಿ ಕೆಲವು ಬದಲಾವಣೆಗಳಿಂದ ಮುಂದಿನ ಹಾನ್ ವಂಶದ ಕಾಲದವರೆಗೂ ಉಳಿದು ಬಂತು.

ಹಾನ್ ವಂಶದ ಕಾಲದ ಶಿಲ್ಪಗಳು ಮುಖ್ಯವಾಗಿ ಸಮಾಧಿಗಳಲ್ಲಿ ದೊರಕಿವೆ. ಮರ, ಇಟ್ಟಿಗೆ, ಹೆಂಚು ಅಥವಾ ಕಲ್ಲಿನಲ್ಲಿ ನಿರ್ಮಿತವಾದ ಸಮಾಧಿಗಳ ಗೋಡೆಗಳ ಒಳಮುಖದಲ್ಲಿ ಗಾರೆಯ ಗಿಲಾವು ಮಾಡಿ ಅದರ ಮೇಲೆ ಭಿತ್ತಿಚಿತ್ರಗಳನ್ನು ಬಿಡಿಸಲಾಗಿದೆ. ಸಮಾಧಿಯ ಬಳಿಗೆ ಒಯ್ಯುವ ಮಾರ್ಗದ ಪಾರ್ಶ್ವಗಳಲ್ಲಿನ ಕಲ್ಲಿನ ಶಿಲ್ಪಗಳನ್ನು ಸಾಲಾಗಿ ಇಡಲಾಗಿತ್ತು.

ಕಂಚಿನ ಹುಲಿಗಳು (ಪ್ರ.ಶ.ಪೂ. ಸು. 12ನೆಯ ಶ.)

ಸಮಾಧಿಗಳ ಬಳಿ ಬಲಿಸಮರ್ಪಣೆಗಾಗಿ ಸ್ಮಾರಕ ಗುಡಿಗಳನ್ನು ನಿರ್ಮಿಸಲಾಗುತ್ತಿತ್ತು. ಅಂಥ ಗುಡಿಗಳ ಗೋಡೆಗಳು ಶಿಲ್ಪಗಳಿಂದ ಅಲಂಕೃತವಾಗಿರುತ್ತಿದ್ದುವು. ಹಾನ್ ವಂಶದ ಪ್ರಾರಂಭಕಾಲದಿಂದ ಷೆನ್‍ಸೀ ಬಳಿಯಲ್ಲಿ ಉಳಿದುಬಂದಿರುವ ದಳಪತಿ ಹೋ-ಚು-ಷಿಂಗ್‍ನ ಸಮಾಧಿಗೆ ಸಂಬಂಧಿಸಿದ, ಶಿಲ್ಪಗಳಲ್ಲಿ (ಪ್ರಶ.ಪೂ. 117) ಪ್ರಸಿದ್ಧವಾದದ್ದು ಗಾಯಗೊಂಡು ಬಿದ್ದಿರುವ ಯೋಧನ ಮೇಲೆ ನಿಂತ ಸದೃಢವಾದ ಕುದುರೆಯ ಶಿಲ್ಪ. ಯೋಧನ ಎಡಗೈಯಲ್ಲಿ ಬಿಲ್ಲೂ ಬಲಗೈಯಲ್ಲಿ ಕುದುರೆಗೆ ತಿವಿಯುತ್ತಿರುವ ಸಣ್ಣ ಭರ್ಜಿಯೂ ಇವೆ. ಹಾನ್ ದೊರೆಗಳು ನೆರೆಹೊರೆಯ ಅನಾಗರಿಕ ಶತ್ರುಗಳನ್ನು ಕುದುರೆ ಸೈನ್ಯದ ಸಹಾಯದಿಂದ ಸೋಲಿಸಿದ್ದರ ಸ್ಮಾರಕವಾಗಿ ಇಂಥ ಶಿಲ್ಪಗಳನ್ನು ನಿರ್ಮಿಸಿರಬಹುದು. ಅದೇ ಪರಿಸರದಲ್ಲಿ ಬಂಡೆಗಳ ಮೇಲೆ ಕೆತ್ತಲಾದ ಮತ್ತೆರಡು ಕುದುರೆಗಳ ಶಿಲ್ಪಗಳುಂಟು. ಒರಗಿದ ನೀರಾನೆ, ಜಿಗಿಯಲುದ್ಯುಕ್ತವಾದ ಹುಲಿ, ಬೇಟೆಯನ್ನು ಕಬಳಿಸುತ್ತಿರುವ ಕೋಣನಾಕಾರದ ದೈತ್ಯಪ್ರಾಣಿ, ಕರಡಿಯೊಂದನ್ನು ಅಪ್ಪಿ ಹಿಡಿದು ಕಚ್ಚುತ್ತಿರುವ ರಾಕ್ಷಸ ಮುಂತಾದವು ಅಲ್ಲಿರುವ ಉಬ್ಬುಶಿಲ್ಪಗಳು. ಇವುಗಳಲ್ಲಿ ಅಷ್ಟೇನೂ ಸಹಜತೆಯಿಲ್ಲ. ಇವು ಉತ್ತಮ ಕಲಾಕೃತಿಗಳಲ್ಲ. ಇವು ಪಾಶ್ಚಾತ್ಯ ಪ್ರದೇಶಗಳಿಂದ ಪ್ರವೇಶಿಸಿದ ನೂತನ ಪ್ರಭಾವಗಳ ಫಲವಿರಬಹುದೆಂದು ಊಹಿಸಲಾಗಿದೆ. ವಿಚಿತ್ರ ಹಾಗೂ ದುಷ್ಟ ಶಕ್ತಿಗಳ ಸಮೂಹದಂತೆ ಕಾಣುವ ಈ ಶಿಲ್ಪಗಳ ವಸ್ತು ಬಹುಶಃ ಪಾರಲೌಕಿಕವಾದ್ದು.

ಅನಂತರದ ಕಾಲದ ಹಾನ್ ಶಿಲ್ಪಗಳು, ಮುಖ್ಯವಾಗಿ 2-3ನೆಯ ಶತಮಾನಗಳ ಶಿಲ್ಪಗಳು, ಹೆಚ್ಚು ಸಂಖ್ಯೆಯಲ್ಲಿ ಉಳಿದುಬಂದಿವೆ. 5ನೆಯ ಶತಮಾನದಿಂದ ಬೌದ್ಧಮತದ ಪ್ರಸಾರ ಹೆಚ್ಚಿದಂತೆ ಕಲ್ಲಿನ ಶಿಲ್ಪಗಳು ಹೆಚ್ಚಾಗಿ ನಿರ್ಮಾಣವಾದುವು.



ಕಂಚಿನ ಡ್ರೇಗನ್ (ಪ್ರ.ಶ.ಪೂ. ಸು. 6-3ನೆಯ ಶ.)

ಹೋನ್ಯಾನ್, ಷ್ಯಾನ್‍ಟಂಗ್ ಮತ್ತು ಸಚ್‍ವಾನ್ ಪ್ರದೇಶಗಳಲ್ಲಿ ಸ್ಮಶಾನದ ಪ್ರಾಕಾರದಿಂದ ಸ್ಮಶಾನಗುಡ್ಡದ ಬಳಿಗೆ ಒಯ್ಯುವ ಪ್ರೇತಮಾರ್ಗಗಳ ಆರಂಭದಲ್ಲಿ ನೆಡುತ್ತಿದ್ದ ಕಂಬಗಳು ಗಮನಾರ್ಹ. ಸಚ್‍ವಾನ್ ಪ್ರಾಂತ್ಯದ ಚು-ಹ್ಸಿಯೆನ್‍ನಲ್ಲಿರುವ ಷೆನ್ ಎಂಬ ಅಧಿಕಾರಿಯ ಸಮಾಧಿಯ ಮುಂದಿರುವ ಕಂಬಗಳ ಮೇಲೆ ಸುಂದರವಾದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಬಹುಶಃ 2ನೆಯ ಶತಮಾನಕ್ಕೆ ಸೇರಿದ ಈ ಕಂಬಗಳ ಮೇಲಿರುವ ಹುಲಿ, ದೈತ್ಯ ಪ್ರಾಣಿ ಮತ್ತು ಫೀನಿಕ್ಸ್ ಪಕ್ಷಿಗಳ ಕೆತ್ತನೆಗಳು ತೆಳುವಾದ ಉಬ್ಬುಚಿತ್ರಗಳು. ಇತರ ಕೆಲವು ಕೆತ್ತನೆಗಳೂ ಪ್ರಮುಖವಾಗಿವೆ. ಆದರೂ ಇವು ಕೆಲವು ಶತಮಾನಗಳಷ್ಟು ಹಿಂದಿನ ಚೌ ವಂಶದ ಶಿಲ್ಪಗಳಷ್ಟು ಕಲಾತ್ಮಕವಾಗಿಲ್ಲ. ಅದೇ ಕಾಲದ ಕಂಚಿನ ಕರಡಿಯ ಶಿಲ್ಪಗಳು ಕಲಾಪೂರ್ಣ ಮತ್ತು ಜೀವಂತ. ಇತರ ಕಂಚಿನ ಪ್ರಾಣಿಶಿಲ್ಪಗಳು ಚೀನೀಯರಲ್ಲಿ ಬಹಳ ಜನಪ್ರಿಯವಾಗಿದ್ದಂತೆ ಕಾಣುತ್ತದೆ. ಸಮಾಧಿಗಳಲ್ಲಿಡಲು ಪಚ್ಚೆಕಲ್ಲಿನಲ್ಲಿ (ಜೇಡ್) ಮತ್ತು ಜೇಡಿಮಣ್ಣಿನಲ್ಲಿ ಸಹ ಇಂಥ ಶಿಲ್ಪಗಳನ್ನು ಮಾಡಲಾಗುತ್ತಿತ್ತು.

ಮೊಣಕಾಲೂರಿದ ಮಾನವ, ಪ್ರ.ಶ.ಪೂ. ಸು. 6-3ನೆಯ ಶ. ಕಂಚಿನ ಶಿಲ್ಪ

ಕಲ್ಲಿನ ದೊಡ್ಡ ಸಿಂಹಗಳ ಶಿಲ್ಪಗಳು ಷಾಂಟುಂಗ್‍ನವು ವಂಶದ ದೇವಾಲಯಗಳಲ್ಲಿವೆ. ಅವುಗಳ ಕಾಲ 117. ಬಹುಶಃ ಹೊರಗಿನ ಪ್ರಭಾವದಿಂದಾಗಿ ಈ ಕೃತಿಗಳಲ್ಲಿ ನೈಜತೆ ಇಲ್ಲ. ಜಿಂಗ್‍ಸೂ ಪ್ರಾಂತ್ಯದ ನ್ಯಾನ್‍ಕಿಂಗ್ ಮತ್ತು ಟ್ಯಾನ್‍ಯಾಂಗ್‍ಗಳಲ್ಲಿ ಬೃಹತ್ತಾದ ರೆಕ್ಕೆಗಳಿರುವ ನಿಂತ ಸಿಂಹಗಳ ಶಿಲ್ಪಗಳುಂಟು. 5-6ನೆಯ ಶತಮಾನಗಳ ಈ ಶಿಲ್ಪಗಳು ಸತ್ತ್ವಪೂರ್ಣ, ನೈಜ, ಕುಶಲ ನಿರ್ಮಾಣಗಳು. ಸಿಂಹದ ಮುಖ, ಆಡಿನ ದೇಹ ಮತ್ತು ಸರ್ಪದ ಬಾಲವುಳ್ಳ ಕೈಮೀರ ಪ್ರಾಣಿಶಿಲ್ಪಗಳು ಗಮನಾರ್ಹ. ಪ್ರಶ.ಪೂ. 3-2ನೆಯ ಸಹಸ್ರಮಾನಗಳಿಂದ ಮೆಸಪೊಟೇಮಿಯದಲ್ಲಿ ರೂಢಿಯಲ್ಲಿದ್ದ

ಈ ಪ್ರಾಣಿಗಳ ನಿರೂಪಣೆ ಕ್ರಮೇಣ ಮಧ್ಯ ಏಷ್ಯದ ಮಾರ್ಗವಾಗಿ ಚೀನಕ್ಕೆ ಬಂದಿರಬಹುದು. ಸಿಂಹ ಮತ್ತು ಕೈಮೀರ ಪ್ರಾಣಿಗಳ ಚಿತ್ರಣ ಹಾನ್ ವಂಶದ ಕಾಲದ ಸಮಾಧಿ ಗೃಹಗಳಲ್ಲಿರುವ ಕಲ್ಲಿನ ಕೆತ್ತನೆಗಳನ್ನು ಕೆಲವರು ಶಿಲ್ಪಗಳೆಂದು ಮರ್ಣಿಸಿದ್ದರೂ ಅವು ಚಿತ್ರಕಲೆಯ ಪ್ರತಿಕೃತಿಗಳೆನ್ನಬಹುದು.

ಅನಂತರಕಾಲದಲ್ಲಿ ಚೀನದ ಆಡಳಿತ ಅಸ್ತವ್ಯಸ್ತವಾಗಿ ದೇಶದಲ್ಲೆಲ್ಲ ಅನಾಯಕ ಪರಿಸ್ಥಿತಿ ತಲೆದೋರಿತು. ಅಂತರ್ಯುದ್ಧದಲ್ಲಿ ನಿರತರಾದ ಕೆಲವು ಚೀನೀ ನಾಯಕರೂ ಅನಾಗರಿಕ ಜನರೂ ದೇಶದ ಪ್ರಭುತ್ವಕ್ಕಾಗಿ ಹೊಡೆದಾಡುತ್ತಿದ್ದಾಗ, ಕಲೆ ಮೂಲೆಗುಂಪಾದದ್ದು ಸಹಜ. ಆದರೆ 5ನೆಯ ಶತಮಾನದ ವೇಳೆಗೆ ಭಾರತದಿಂದ ಬೌದ್ಧಧರ್ಮ ಮತ್ತು ಕಲೆಗಳು ಚೀನವನ್ನು ಪ್ರವೇಶಿಸಿ, ಅನಾಯಕತ್ವದಿಂದ ಬೇಸತ್ತ ಜನತೆಗೆ ಹೊಸ ಆಕರ್ಷಣೆ ಒದಗಿಸಿದುವು. ಮಧ್ಯ ಏಷ್ಯದ ಮೂಲಕ ಭಾರತ–ಚೀನಗಳ ಮಧ್ಯೆ ಏರ್ಪಟ್ಟ ಸಾಂಸ್ಕೃತಿಕ ಸಂಪರ್ಕಗಳು ಉತ್ತರದಲ್ಲಿ ತಕ್ಲಮಕಾನ್ ಮರಳುಗಾಡಿನ ಮಾರ್ಗವಾಗಿಯೂ ದಕ್ಷಿಣದಲ್ಲಿ ಕೋಟಾನ್ ಮತ್ತು ಕುಚ ಮಾರ್ಗವಾಗಿಯೂ ಚೀನವನ್ನು ಪ್ರವೇಶಿಸಿದುವು. ಮತ್ತೆ ಭೂಮಾರ್ಗವಾಗಿ ಬಂದ ಭಾರತದ ನೇರ ಪ್ರಭಾವಗಳೂ ಆಗ್ನೇಯ ಏಷ್ಯದ ಫೂನಾನ್ ಮಾರ್ಗವಾಗಿ ಬಂದ ಪ್ರಭಾವಗಳೂ ದಕ್ಷಿಣ ಮತ್ತು ಮಧ್ಯಚೀನದಲ್ಲಿ ಪ್ರಬಲವಾದವು.

ಮಾನವ ಮೂರ್ತಿ, ಮರದ ಶಿಲ್ಪ.
ಪ್ರಶ.ಪೂ. ಸು. 6–3ನೆಯ ಶ.

5ನೆಯ ಶತಮಾನದ ಪೂರ್ವಾರ್ಧಕ್ಕೆ ಸೇರುವ (437) ಧ್ಯಾನಿ ಬುದ್ಧನ ವಿಗ್ರಹ ಮೊದಲ ಚೀನೀ ಬೌದ್ಧ ಕಲೆಯ ನಿದರ್ಶನ. ಚೀನೀ ಪದ್ಧತಿಯಂತೆ, ದೇಹಕ್ಕೆ ಹೊಂದಿಕೊಂಡ ಉಡುಪನ್ನು ಪದರಪದರವಾಗಿ ರೂಪಿಸಲಾಗಿದೆ. ಆದರೆ ಶಿಲ್ಪದಲ್ಲಿ ಸ್ವಾಭಾವಿಕ ಚಲನೆಯಿಲ್ಲ. ಪದ್ಮಾಸನದಲ್ಲಿರುವ ದೇಹದ ತಳಭಾಗ ಸ್ತೂಪವನ್ನು ಹೋಲುವ ಶಿರೋಭಾಗಕ್ಕೆ ಆಧಾರವಾದಂತೆ ಕಾಣುತ್ತದೆ.

ಬೌದ್ಧ ಧರ್ಮದ ವಿರುದ್ಧ 444ರಲ್ಲಿ ನಡೆದ ತೀವ್ರ ಆಂದೋಲನದ ಫಲವಾಗಿ ಅವರೆಗಿನ ಧಾರ್ಮಿಕ ಕಲಾವಸ್ತುಗಳು ನಾಶವಾದುವು. 452ರಲ್ಲಿ ಅಧಿಕಾರಕ್ಕೆ ಬಂದ, ವೇಯ ಟೊ–ಪ ವಂಶದ ಅರಸರು ಬೌದ್ಧಧರ್ಮದ ಅನುಯಾಯಿಗಳಾಗಿದ್ದುದರಿಂದ ಈ ವಿನಾಶಕಾರಿ ಕೃತ್ಯಗಳು ನಿಂತವು. ಅವರ ಆಶ್ರಯದಲ್ಲಿ 35 ವರ್ಷಗಳ ಕಾಲ ಸತತವಾಗಿ ಸಾವಿರಾರು ಕೆಲಸಗಾರರು ಉತ್ತರ ಷೆನ್‌ಸೀ ಪ್ರಾಂತ್ಯದ ಯುನ್–ಕಾಂಗ್ ಬಳಿ ಇರುವ ಮರಳ್ಗಲ್ಲು ಗುಡ್ಡಗಳಲ್ಲಿ ದುಡಿದು 20 ವಿಶಾಲ ಮತ್ತು ಅನೇಕ ಸಣ್ಣ ಗುಹಾಂತರ್ದೇವಾಲಯಗಳನ್ನು ನಿರ್ಮಿಸಿದರು. ಪೌರಸ್ತ್ಯ ದೇಶಗಳಲ್ಲಿಯ ಅದ್ಭುತ ಕಲಾಕೃತಿಗಳ ಶ್ರೇಣಿಗೆ ಸೇರಿದ ಈ ಮಂದಿರಗಳು ಆಫ್ಘಾನಿಸ್ತಾನ ಮಧ್ಯ ಏಷ್ಯಗಳ ಮಾರ್ಗವಾಗಿ ಭಾರತದಿಂದ ಚೀನಕ್ಕೆ ಪ್ರವೇಶಿಸಿದ ಪ್ರಭಾವಗಳ ಫಲವೆನ್ನಬಹುದು. ಇಲ್ಲಿ 20ನೆಯ ಗುಹೆಯಲ್ಲಿರುವ ಬೃಹತ್ ಬುದ್ಧ ವಿಗ್ರಹ ಅಪೂರ್ವ ಕಲಾಕೃತಿ. ಪದ್ಮಾಸನಸ್ಥ ಬುದ್ಧ ಧ್ಯಾನಮುದ್ರೆಯಲ್ಲಿದ್ದಾನೆ. ಸಮತೋಲನವಾದ ದೇಹ ಅಂತಶ್ಶಕ್ತಿಯನ್ನು ಸೂಚಿಸುತ್ತದೆ. ಸೌಮ್ಯ ಮುಖ, ನಸುನಗು ಆ ಮೂರ್ತಿಯ ಸೌಂದರ್ಯವನ್ನು ಹೆಚ್ಚಿಸಿವೆ. ದೇಹದ ಮೇಲಿನ ಉಡುಪು ಭಾರತೀಯ ಮಾದರಿಯಲ್ಲಿ ಅಲೆಅಲೆಯಾಗಿ ರೂಪಿತವಾಗಿಲ್ಲ; ಉಪವೀತದ ರೀತಿಯಲ್ಲಿ ಧರಿಸಿದ ಮೇಲುಡುಗೆಯ



ಕುದುರೆಯೊಂದರ ಶಿಲ್ಪ ; ಪದತಲದಲ್ಲಿ ಬರ್ಬರ, ಪ್ರ.ಶ.ಪೂ. 117

ಕೊನೆಗಳನ್ನು ಬೆಂಕಿಯ ಜ್ವಾಲೆಗಳಂತೆ ತೋರಿಸಲಾಗಿದೆ. ಅನಂತರ ಕಾಲದ ಕಂಚಿನ ಬುದ್ಧವಿಗ್ರಹಗಳಿಗೆ ಇದು ಮಾದರಿಯಾಯಿತು. 477ಕ್ಕೆ ಸೇರಿದ ಮೈತ್ರೇಯನ ಕಂಚಿನ ವಿಗ್ರಹಗಳಲ್ಲಿ ಕಾಣುವ ನೈಜತೆ ಮತ್ತು ಚಲನೆ ಗಮನಾರ್ಹ. ಯುದ್ಧಗಳಿಂದಾಗಿ ಕ್ಯಾನ್ಸೂ ಪ್ರದೇಶದಿಂದ ವೇ ರಾಜಧಾನಿಯಾದ ಪಿಂಗ್–ಚೆಂಗ್‌ಗೆ ವಲಸೆ ಬಂದ ಶಿಲ್ಪಿಗಳು ಇದರ ಬೆಳವಣಿಗೆಗೆ ಕಾರಣವಾಗಿರಬಹುದು.

ಯುನ್ ಕಾಂಗ್‌ನ 20ನೆಯ ಗುಹೆಯಲ್ಲಿರುವ ಬೃಹತ್ ಬುದ್ಧವಿಗ್ರಹ.
ಪ್ರ.ಶ. 5ನೆಯ ಶತಮಾನದ ಉತ್ತರಾರ್ಧ

ಕ್ರಮೇಣ ಈ ಶೈಲಿಯ ಸಹಜತೆ ಮಾಯವಾಗಿ ಜ್ಯಾಮಿತೀಯ ನಕ್ಷೆಗಳು ಕಂಡುಬರುತ್ತವೆ. 5ನೆಯ ಶತಮಾನದ ವೇಳೆಗೆ ಗ್ರೀಸ್, ಗಾಂಧಾರ, ಇರಾನ್, ಭಾರತ, ಮಧ್ಯ ಏಷ್ಯ ಪ್ರದೇಶಗಳಿಂದ ಚೀನಕ್ಕೆ ಪ್ರವೇಶಿಸಿದ ಪ್ರಾದೇಶಿಕ ಶೈಲಿಗಳ ಮಿಲನದಿಂದ ಚೀನದ ಹೊಸ ಶೈಲಿಯ ಉಗಮವಾಯಿತು.

ಯುನ್–ಕಾಂಗ್‌ನ 6ನೆಯ ಗುಹೆಯಲ್ಲಿ ಅಧಿಕ ಸಂಖ್ಯೆಯ ಮತ್ತು ಸುವ್ಯವಸ್ಥಿತ ಶಿಲ್ಪಸಮೂಹಗಳುಂಟು. ಅವುಗಳ ಕಾಲ ಸು. 491. ಹೊರಭಾಗದ ಪ್ರಾಕಾರಗಳ ಗೋಡೆಗಳಲ್ಲಿರುವ ಗೂಡುಗಳಲ್ಲಿ ಕುಳಿತ ಅಥವಾ ನಿಂತ ಬುದ್ಧವಿಗ್ರಹಗಳಿವೆ. ಅವನ್ನು

ಸುತ್ತುವರಿದು ಬೋಧಿಸತ್ತ್ವ, ಗಂಧರ್ವ, ಅಪ್ಸರೆಯರನ್ನು ಕೆತ್ತಲಾಗಿದೆ. ಕೆಳಭಾಗದ ಚಿತ್ರಪಟ್ಟಿಕೆಯಲ್ಲಿ ಗೌತಮ ಬುದ್ಧನ ಜೀವಿತದ ಕೆಲವು ಘಟನೆಗಳನ್ನು ಚಿತ್ರಿಸಲಾಗಿದೆ. ಸರಳ ಸತ್ತ್ವಪೂರ್ಣ ನಿರೂಪಣೆಯಿಂದ ಇವು ಚೀನದ ಬೌದ್ಧ ಶಿಲ್ಪಕಲೆಯ ಆರಂಭಕಾಲದ



ಉಬ್ಬುಶಿಲ್ಪದ ಸಮಾಧಿ ಸ್ತಂಭಗಳು. ಪ್ರ.ಶ. 2ನೆಯ ಶತಮಾನ

ಕೃತಿಗಳಲ್ಲಿ ಅಪೂರ್ವ ಸ್ಥಾನ ಪಡೆದಿವೆ. ವೇ ಕಾಲದ ಧಾರ್ಮಿಕ ಶಿಲ್ಪಗಳಲ್ಲಿ ತಾರುಣ್ಯದ ಸೌಮ್ಯತೆ ಎದ್ದು ಕಾಣುತ್ತದೆಂಬುದು ಒಬ್ಬ ವಿಮರ್ಶಕನ ಅಭಿಪ್ರಾಯ.

6ನೆಯ ಶತಮಾನದ ಆರಂಭದಲ್ಲಿ ನಿರ್ಮಿಸಲಾದ ಹಲವು ಗುಹೆಗಳಲ್ಲಿ ಈ ಕಲೆ ಮುನ್ನಡೆಯಿತು. ಇದು ಬಹುಮಟ್ಟಿಗೆ ಶುದ್ಧ ಚೀನೀ ಶೈಲಿಯಲ್ಲಿದೆ. ಚೀನೀ ಬೌದ್ಧಶೈಲಿಯ ಪರಾಕಾಷ್ಠೆಯನ್ನು ತಲುಪಿದ ಈ ಹಂತದ ಕೃತಿಗಳಲ್ಲಿ 11ನೆಯ ಗುಹೆಯಲ್ಲಿರುವ ತ್ರಿಮೂರ್ತಿಗಳ ಮಧ್ಯದ ಬುದ್ಧಮೂರ್ತಿ ಗಮನಾರ್ಹ. ಕೃಶವಾದ ದೇಹ, ಅಭಯ ಮುದ್ರೆಯಲ್ಲಿರುವ ಬಲಗೈ, ವರದ ಮುದ್ರೆಯ ಎಡಗೈ, ಚಪ್ಪಟೆಯಾದ ಹಣೆ, ಚೂಪಾದ ಗಲ್ಲ, ನಸುನಗುವನ್ನು ಸೂಸುತ್ತಿರುವ ಬಾಯಿ, ಕಮಾನಿನಾಕಾರದ ಹುಬ್ಬು–ಇವು ಈ ಮೂರ್ತಿಯ ಆಕರ್ಷಕ ಸೌಂದರ್ಯವನ್ನು ಹೆಚ್ಚಿಸಿವೆ. ಉಡುಪನ್ನು ಕಲಾಪೂರ್ಣವಾಗಿ ರೂಪಿಸಿದೆ. ಪಾರ್ಶ್ವಗಳಲ್ಲಿರುವ ಬೋಧಿಸತ್ತ್ವ ಮೂರ್ತಿಗಳು ಉದ್ದವಾದ ಕಿರೀಟಗಳನ್ನು ಧರಿಸಿವೆ. ಅವೂ ಆಕರ್ಷಕವಾದ ಕೆತ್ತನೆಗಳು.

ಮೈತ್ರೇಯ. ಹೊಳಪು ಕಂಚು, ಪ್ರ.ಶ. 477

495ರ ಅನಂತರ, ವೇ ವಂಶಕ್ಕೆ ಲೋಯಾಂಗ್ ರಾಜಧಾನಿಯಾದ ಮೇಲೆ, ಬೌದ್ಧ ಶಿಲ್ಪಗಳು ಪೂರ್ಣ ವಾಗಿ ಚೀನೀ ಶೈಲಿಯಲ್ಲಿವೆ. ರಾಜಧಾನಿಯ ದಕ್ಷಿಣಕ್ಕೆ 16 ಕಿ.ಮೀ. ದೂರದಲ್ಲಿರುವ ಲುಂಗ್–ಮೆನ್ ಬಳಿಯ ಸುಣ್ಣದಕಲ್ಲಿನ ಗುಡ್ಡಗಳಲ್ಲಿ ಚೀನೀ ಶಿಲ್ಪಿಗಳು ತಮ್ಮ ಕುಶಲ ಕೆತ್ತನೆಗಳನ್ನು ಮಾಡಿದ್ದಾರೆ. ಅಲ್ಲಿಯ ಕುಯಾಂಗ್ ಗುಹೆಯಲ್ಲಿಯ ಗೂಡುಗಳು ಅವ್ಯವಸ್ಥಿತ. ಆದರೆ ಪ್ರತಿಯೊಂದು ಗೂಡನ್ನೂ ಪ್ರತ್ಯೇಕ ವಾಗಿ ಪರಿಶೀಲಿಸಿದರೆ ಅವು ಯುನ್–ಕಾಂಗ್ ಗುಹೆಗಳಿಗಿಂತಲೂ ಅರ್ಥ ಪೂರ್ಣವೂ ಸುಂದರವೂ ಆಗಿರು ವುದು ವ್ಯಕ್ತವಾಗುತ್ತದೆ. ಹ್ಯಾನ್ ವಂಶಕಾಲದ ಸತ್ತ್ವಶಾಲಿ ಚಲನಾತ್ಮಕ ಶೈಲಿ ಇನ್ನೂ ಪ್ರಭಾವಯುತವಾಗಿತ್ತು. ಹಾರುತ್ತಿರುವ ಅಪ್ಸರೆಯರು, ಅಲೆಅಲೆಯಾದ ಮೋಡಗಳ ಸಮೂಹ, ಕೃಶವಾದ ಗಿಡಬಳ್ಳಿಗಳು, ಇವು ಆ ಪ್ರಭಾವಗಳ ನೆನಪನ್ನುಂಟು ಮಾಡುತ್ತವೆ. ಬೌದ್ಧ ಆದರ್ಶಗಳಾದ ತ್ಯಾಗ, ವೈರಾಗ್ಯ, ದೈವಿಕ ಸಿದ್ಧಿಗಳು ಇಲ್ಲಿಯ ಬುದ್ಧ ಬೋಧಿಸತ್ತ್ವ ಶಿಲ್ಪಗಳಲ್ಲಿ ನಿರೂಪಿತವಾಗಿವೆ.

523ರಲ್ಲಿ ನಿರ್ಮಿಸಲಾದ ಪಿನ್–ಯಾಂಗ್ ಗುಹೆಯ ಅಗಲ 7.6ಮೀ. ಉದ್ದ 6ಮೀ.ವಿಶಾಲ ದ್ವಾರದೆದುರು ಹಿಂದಿನ ಗೋಡೆಗೆ ಹೊಂದಿಕೊಂಡಿರುವ 5.8ಮೀ. ಅಗಲದ ಜಗತಿಯ ಮೇಲೆ ಶಿಷ್ಯರಾದ ಆನಂದ ಮತ್ತು ಮಹಾಕಾಶ್ಯಪರಿಂದಲೂ ಇಬ್ಬರು ಬೋಧಿಸತ್ತ್ವರಿಂದಲೂ ಆವೃತನಾದ ಬುದ್ಧ ಪದ್ಮಾಸನದಲ್ಲಿ ಕುಳಿತಿದ್ದಾನೆ. ಈ ಮೂರ್ತಿ ಪ್ರಾಚೀನ ಚೀನದ ಅತ್ಯಂತ ಸುಂದರ ಮೂರ್ತಿಗಳಲ್ಲೊಂದು. ವಸ್ತ್ರಾಚ್ಛಾದಿತ ದೇಹ, ಅಭಯ, ವರದ ಮುದ್ರೆಗಳಲ್ಲಿರುವ ಕೈಗಳು, ಕೃಶವಾದ ಕತ್ತಿನ ಮೇಲಿರುವ ಆಯಾಕಾರದ ಮುಖ, ತಲೆಯ ಮೇಲಿನ ಉಷ್ಣೀಷ, ಅಗಲವಾದ ಕಿವಿಗಳು–ಈ ಲಕ್ಷಣಗಳು ಸುವ್ಯವಸ್ಥಿತ ವಾಸ್ತುನಿರ್ಮಾಣವೊಂದರ ಕಲ್ಪನೆಯನ್ನು ಉಂಟುಮಾಡುತ್ತವೆ. ವಿಶ್ವಾಸ ತುಂಬಿರುವ ಈ ಮೂರ್ತಿ ಧಾರ್ಮಿಕ ಶಿಲ್ಪಗಳಲ್ಲಿ ವಿಶಿಷ್ಟವೂ ಅಪೂರ್ವವೂ ಆಗಿದ್ದು, ತಲೆಯ ಸುತ್ತ ಇರುವ ಪ್ರಭಾವಲಯದ ಅಂಚಿನಲ್ಲಿ ರೂಪಿಸಿರುವ ಜ್ವಾಲೆಗಳು ಚಾವಣಿಯವರೆಗೂ



ಕಲ್ಲಿನ ಕೈಮೀರ

ಹಬ್ಬಿವೆ. ಅವುಗಳ ಮಧ್ಯೆ ಚಿತ್ರಿಸಿರುವ ಕಿನ್ನರ–ಗಂಧರ್ವರ ಕೆತ್ತನೆಗಳು ಮುಖ್ಯಶಿಲ್ಪದ ಅಂದವನ್ನೂ ಧಾರ್ಮಿಕ ಗಹನತೆಯನ್ನೂ ದ್ವಿಗುಣಗೊಳಿಸಿವೆ. 7ನೆಯ ಶತಮಾನದ ಜಪಾನಿನ ಹೊರ್ಯೂಜಿಯ ಕಂಚಿನ ಶಿಲ್ಪಗಳಿಗೆ ಇವು ಮಾದರಿಗಳು. ಪಕ್ಕದ ಗೋಡೆಗಳ ಮೇಲೆ ಬುದ್ಧನ ಮತ್ತು ಅವನ ಇಕ್ಕೆಲಗಳಲ್ಲಿ ಅವಲೋಕಿತೇಶ್ವರ ಮತ್ತು ಮಹಾಸ್ತಾಮಪ್ರಾಪ್ತ ಬೋಧಿಸತ್ತ್ವರ ಮೂರ್ತಿಗಳಿವೆ. ಅವುಗಳ ಪ್ರಭಾವಳಿಗಳ ಮಧ್ಯೆ ಭಕ್ತಸಮೂಹ. ಮೇಲ್ಭಾಗದಲ್ಲಿ ಹಾರುತ್ತಿರುವ ದೇವತೆಗಳ ಕೆತ್ತನೆ ಸ್ವರ್ಗದ ಕಲ್ಪನೆಯನ್ನುಂಟುಮಾಡುತ್ತದೆ. ಬಾಗಿಲಿನ ಎಡಬಲಬದಿಗಳಲ್ಲಿರುವ ಮುಂದಿನ ಗೋಡೆಗಳನ್ನು ನಾಲ್ಕು ಅಡ್ಡಪಟ್ಟಿಕೆಗಳನ್ನಾಗಿ ವಿಭಾಗಿಸಲಾಗಿದೆ. ಕೆಳಗಿನ ಪಟ್ಟಿಕೆಯಲ್ಲಿ ಗಿಡ, ಮರ, ಗಾಳಿ, ಪರ್ವತಗಳ ಅಧಿದೇವತೆಗಳಂತಿರುವ ವ್ಯಕ್ತಿಗಳು ಅದರ ಮೇಲಿನ ಪಟ್ಟಿಕೆಯಲ್ಲಿ ಎಡಪಾರ್ಶ್ವದಲ್ಲಿ ಚಕ್ರವರ್ತಿ ಮತ್ತು ಬಲಬದಿಯಲ್ಲಿ ಚಕ್ರವರ್ತಿನಿ ಮತ್ತು ಅವರ ಪರಿವಾರಗಳು ಈ ಗುಹೆಯ ನಿರ್ಮಾಣಕ್ಕೆ ಕಾರಣರಾಗಿರಬಹುದು. ಮೂರನೆಯ ಪಟ್ಟಿಕೆಯಲ್ಲಿ ಜಾತಕಕಥೆಗಳನ್ನು ಚಿತ್ರಿಸಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಬಲಗಡೆ ವಿಮಲಕೀರ್ತಿ ಮತ್ತು ಎಡಗಡೆ ಮಂಜುಶ್ರೀ. ಮಹಾಯಾನ ಪಂಥಕ್ಕೆ ಸೇರಿದ ವಿಮಲಕೀರ್ತಿ ನಿರ್ದೇಶನದಲ್ಲಿ ನೀಡಲಾದ ಧರ್ಮೋಪದೇಶ ಘಟನೆಯ ನಿರೂಪಣೆಯಲ್ಲಿ ಇವರನ್ನು ತೋರಿಸಲಾಗಿದೆ. ಈ ಅಡ್ಡಪಟ್ಟಿಕೆಗಳಲ್ಲಿ ಕೆಳಗಿನಿಂದ ಮೇಲಕ್ಕೆ ಹೋದಂತೆ ಭೂತಲದ ಪ್ರಾಣಿವರ್ಗ, ಮರ್ತ್ಯ–ಲೋಕದ ಜನ, ಜಾತಕಕಥೆಗಳು,

ಮತ್ತು ತುತ್ತತುದಿಯಲ್ಲಿ ದೈವೀ ಉಪದೇಶಾಮೃತ ಮತ್ತು ದೈವೀ ವ್ಯಕ್ತಿಗಳ ಚಿತ್ರಗಳಿವೆ. ಇವು ಕ್ರಮಾಗತ ಮುನ್ನಡೆಯ ಸಂಕೇತಗಳಾಗಿವೆಯೆನ್ನಬಹುದು. ಷಿನ್-ಯಾಂಗ್ ಗುಹೆಯ ಧಾರ್ಮಿಕ ಶಿಲ್ಪಗಳಾದ ಬುದ್ಧ-ಬೋಧಿಸತ್ತ್ವ ವಿಗ್ರಹಗಳ ಮತ್ತು ಲೌಕಿಕ ಶಿಲ್ಪಗಳಾದ ಚಕ್ರವರ್ತಿ-ಚಕ್ರವರ್ತಿನಿಯರ ಮತ್ತು ಜಾತಕ-ಕಥೆಗಳ ಲೌಕಿಕ ನಿರೂಪಣೆಗಳಲ್ಲಿ ಗಮನಾರ್ಹ ವ್ಯತ್ಯಾಸಗಳು ಕಾಣಬರುತ್ತವೆ. ಧಾರ್ಮಿಕ ಲೌಕಿಕ ಶಿಲ್ಪಗಳ ನಿರೂಪಣೆಯಲ್ಲಿ ಸಾಂಪ್ರದಾಯಿಕ ನಿಯಮಗಳನ್ನು ಅನುಸರಿಸ ಬೇಕಾಗಿದ್ದುದರಿಂದ ಶಿಲ್ಪಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶವಿರಲಿಲ್ಲ. ಆದರೆ ಲೌಕಿಕ ವಸ್ತು ನಿರೂಪಣೆಯಲ್ಲಿ ಪ್ರತಿಭಾ ಸ್ವಾತಂತ್ರ್ಯವಿತ್ತು. ಅವುಗಳಲ್ಲಿ ಕಂಡುಬರುವ ನಿರೂಪಣಾ ವೈವಿಧ್ಯಕ್ಕೆ ಇದು ಕಾರಣ.

ತ್ರಿಮೂರ್ತಿ (ಪ್ರ.ಶ. 6ನೆಯ ಶತಮಾನದ ಆರಂಭಕಾಲ)

ಆ ಕಾಲದ ದೇವಾಲಯಗಳೂ ಅವುಗಳಲ್ಲಿದ್ದ ಕಂಚಿನ ಪ್ರತಿಮೆಗಳೂ ಬಹುಮಟ್ಟಿಗೆ ಕಣ್ಮರೆಯಾಗಿದ್ದರೂ ಕೆಲವು ಕಲ್ಲಿನ ವಿಗ್ರಹಗಳು ಉಳಿದುಬಂದಿವೆ. ಸಾರ್ವಜನಿಕರ ದತ್ತಿಗಳಿಂದ ನಿರ್ಮಿಸಿ, ದೇವಾಲಯಗಳ ಬಳಿ ಸ್ಥಾಪಿಸುತ್ತಿದ್ದ ಶಿಲಾಫಲಕಗಳು ಅವುಗಳಲ್ಲಿ ಮುಖ್ಯವಾದವು. ಶಿಲಾಫಲಕಗಳಲ್ಲಿ ಎರಡು ಬಗೆ. ಮೊದಲನೆಯದರಲ್ಲಿ ಆಯಾಕಾರದ, ಆದರೆ ಮೇಲ್ಭಾಗ ದುಂಡಾದ, ಕಲ್ಲಿನ ಫಲಕಗಳ ಮೇಲೆ ಎರಡು, ನಾಲ್ಕು ಅಥವಾ ಆರು ಚೀನೀ ಡ್ರ್ಯಾಗನ್‌ಗಳುಂಟು. ಇದು ಚೀನದಲ್ಲಿ ಬೌದ್ಧ-ಪೂರ್ವಕಾಲದಿಂದಲೂ ರೂಢಿಯಲ್ಲಿದ್ದ ವಿನ್ಯಾಸ. ಇಂಥ ಫಲಕಗಳ ಮೇಲೆ ಮೊದಲಿಗೆ ಸ್ಮಾರಕ ಶಾಸನಗಳನ್ನು ಕಡೆಯಲಾಗುತ್ತಿತ್ತು. ಬೌದ್ಧ ಮತದ ಕಾಲದಲ್ಲಿ ಶಾಸನಗಳನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿ ಅಥವಾ ಪೂರ್ಣ ಕೈಬಿಟ್ಟು, ತೆರವಾದ ಸ್ಥಳದಲ್ಲಿ ಬೌದ್ಧ ದೇವತೆಗಳನ್ನೋ ಧಾರ್ಮಿಕ ದೃಶ್ಯಗಳನ್ನೋ ಕಡೆಯಲಾಗುತ್ತಿತ್ತು. ಎರಡನೆಯ ಬಗೆಯ ಫಲಕ ದೊಡ್ಡ ಎಲೆಯ ಆಕಾರದಲ್ಲಿರುತ್ತಿತ್ತು. ಅದರ ಮೇಲೆ ಬೌದ್ಧಮತದ ತ್ರಿಮೂರ್ತಿ ಗಳನ್ನೂ ಇಕ್ಕೆಲಗಳಲ್ಲಿ ಬೋಧಿಸತ್ತ್ವನ ಮೂರ್ತಿಗಳನ್ನೂ ಕೆತ್ತಲಾಗುತ್ತಿತ್ತು. ಕೇವಲ ಬುದ್ಧ ವಿಗ್ರಹ ಇರುತ್ತಿದ್ದ ನಿದರ್ಶನಗಳೂ ಉಂಟು. ಇದು ಸಾಮಾನ್ಯವಾಗಿ ಕಂಚಿನ ಪ್ರಭಾ ವಲಯದಿಂದ ಕೂಡಿದ ಬುದ್ಧ ವಿಗ್ರಹಗಳನ್ನು ಹೋಲುತ್ತದೆ. ಚೀನದಲ್ಲಿ ಮರ, ಕಲ್ಲು ಮತ್ತು ಜೇಡಿಮಣ್ಣಿನ ವಿಗ್ರಹಗಳಿಗೆ ಬಣ್ಣ ಹಚ್ಚಿ ಅಲಂಕರಿಸು ತ್ತಿದ್ದುದರಿಂದ, ಅಗ್ಗವಾದರೂ ಕಲ್ಲಿನ ಫಲಕಗಳು ಕಂಚಿನ ವಿಗ್ರಹಗಳಂತೆ ಸುಂದರವಾಗಿ ಕಾಣುತ್ತಿದ್ದು, ಪೂಜೆಗೆ ಉಪಯೋಗಿಸಲ್ಪಡುತ್ತಿದ್ದುವು. ಸುತ್ತಲಿನ ಪ್ರಭಾವಲಯದ ಮೇಲೆ ಜ್ವಾಲೆಗಳನ್ನು ಸುಂದರವಾಗಿ ನಿರೂಪಿಸಲಾಗುತ್ತಿತ್ತು. ಜ್ವಾಲೆಗಳ ಮಧ್ಯೆ ಗಂಧರ್ವ ಅಪ್ಸರೆಯರ ಚಿತ್ರಗಳನ್ನು ತೋರಿಸಲಾಗುತ್ತಿತ್ತು. ಹೂಬಳ್ಳಿಗಳು, ಸಣ್ಣ ಪ್ರಾಣಿಗಳ ಚಿತ್ರಗಳು ಅವುಗಳ ಅಂದವನ್ನು ಹೆಚ್ಚಿಸು ತ್ತಿದ್ದವು. ಇಂಥ ಫಲಕಗಳಲ್ಲಿ ಸುಪ್ರಸಿದ್ಧವಾದ್ದು ಈಗ ಪ್ಯಾರಿಸಿನ ವಸ್ತುಸಂಗ್ರಹಾಲಯದಲ್ಲಿ ಇಟ್ಟಿರುವ ಪ್ರಭೂತರತ್ನ ಮತ್ತು ಗೌತಮ ಬುದ್ಧರನ್ನು ತೋರಿಸುವ ಸಂಯುಕ್ತ ಫಲಕದಲ್ಲಿ ಕಾಣಬಹುದು. ಬರ್ನಾರ್ಡ್ ಬೆರೆನ್‌ಸನ್ನನ ಸಂಗ್ರಹದಲ್ಲಿರುವ ಫಲಕವೂ ಗಮನಾರ್ಹ. ಅನಂತರಕಾಲದ ಉತ್ತರ ಚೌ ವಂಶದ ಶಿಲ್ಪಶೈಲಿಗೆ ಇದು ಮಾದರಿಯಾಯಿತೆಂದು ಹೇಳಲಾಗಿದೆ. 6ನೆಯ ಶತಮಾನದ ಬೌದ್ಧಧರ್ಮದ ಜನಪ್ರಿಯತೆಯ ಕಾರಣದಿಂದ ಮಧ್ಯ ಏಷ್ಯ, ಗಾಂಧಾರ ಮತ್ತು ಭಾರತಗಳತ್ತ ಚೀನೀಯರು ಧಾರ್ಮಿಕ ಪ್ರವಾಸ ಕೈಗೊಳ್ಳುವಂತಾಯಿತು. ಮತ್ತೆ ಆ ಪ್ರದೇಶಗಳಿಂದಲೂ ಚೀನಕ್ಕೆ ಅಧಿಕ ಸಂಖ್ಯೆಯಲ್ಲಿ ಬೌದ್ಧಭಿಕ್ಷುಗಳು ಬರಲಾರಂಭಿಸಿದರು. ಅದರ ಫಲವಾಗಿ ಬೌದ್ಧ ಧರ್ಮದ ಕೇಂದ್ರಸ್ಥಾನವಾದ ಭಾರತದ ಬೌದ್ಧಶಿಲ್ಪಶೈಲಿ ನೇರವಾಗಿ ತನ್ನ ಪ್ರಭಾವವನ್ನು ಚೀನದ ಮೇಲೆ ಬೀರುವಂತಾಯಿತು. ಈಗ ನೆಲ್ಸನ್ ಕಲಾಶಾಲೆಯಲ್ಲಿರುವ, ಮೊದಲಿಗೆ ಷಾನ್‌ಸೀಯ ವಾಯವ್ಯಪ್ರದೇಶಕ್ಕೆ ಸೇರಿದ್ದ, 535-40ರಲ್ಲಿ ಕೆತ್ತಲಾದ ಬುದ್ಧ ಬೋಧಿಸತ್ತ್ವ ಮತ್ತು ಪರಿವಾರ ವರ್ಗ ದವರನ್ನೊಳಗೊಂಡ ಫಲಕದಲ್ಲಿ ಈ ಪ್ರಭಾವ ಕಾಣಬರುತ್ತದೆ. ಈ ಪ್ರತಿಮೆಗಳ ಅಂಗಾಂಗಗಳ, ಉಡುಪಿನ ಮತ್ತು ಅಲಂಕರಣವಿಶೇಷಗಳ ನಿರೂಪಣೆಯಲ್ಲಿ

ಬೋಧಿಸತ್ತ್ವರ ನಡುವೆ ಬುದ್ಧ, ಷಿನ್-ಯಾಂಗ್ ಗುಹೆ

ಭಾರತೀಯ ಶೈಲಿ ಎದ್ದು ಕಾಣುತ್ತದೆ. ಆದರೂ ಕೆಲವು ಅಂಶಗಳಲ್ಲಿ ಪ್ರಾಚೀನ ಚೀನೀ ಶೈಲಿಯ ಪ್ರಭಾವವೂ ಉಳಿದುಬಂದಿದೆ. ಹ್ಸಿಯಾಂಗ್-ಟ್ಯಾಂಗ್‌ಷ್ಯಾನ್‌ನಲ್ಲಿ ಜಾತಕಕಥೆಗಳ ಮತ್ತು ಲೌಕಿಕ ದೃಶ್ಯಗಳ ನಿರೂಪಣೆಗೆ ಮೀಸಲಾದ ಹಲವಾರು ಉಬ್ಬುಶಿಲ್ಪಗಳುಂಟು. ಚೀನದಲ್ಲಿ ಮೊದಲಿಗೆ ಹೀನಯಾನ-ಮಹಾಯಾನ ಪಂಥಗಳೆರಡಕ್ಕೂ ಸಾಕಷ್ಟು ಅನುಯಾಯಿ ಗಳಿದ್ದರೂ ಕ್ರಮೇಣ ಮಹಾಯಾನ ಪಂಥ ಪ್ರಬಲವಾಯಿತು. ಅದರ ಪರಿಣಾಮವಾಗಿ ಧಾರ್ಮಿಕ ಶಿಲ್ಪಗಳಲ್ಲಿ ಹೆಚ್ಚಿನ ವೈವಿಧ್ಯ ತಲೆದೋರಿತು. ಸ್ವರ್ಗದ ಆಕರ್ಷಕ ದೃಶ್ಯಗಳು, ಅಲಂಕಾರಯುತ ಅಮಿತಾಭ, ಮೈತ್ರೇಯ ಬೋಧಿಸತ್ತ್ವ ಇವರ ಸುಂದರಶಿಲ್ಪಗಳು ಜನಪ್ರಿಯವಾದುವು. ಫ್ರೀಯರ್ ಕಲಾಶಾಲೆಯಲ್ಲಿರುವ ಅಮಿತಾಭ ಬುದ್ಧನ ಉಬ್ಬುಶಿಲ್ಪ ಈ ಹೊಸ ಕಲಾನಿರ್ಮಾಣಗಳಿಗೆ ಒಂದು ಉತ್ತಮ ನಿದರ್ಶನ. ರತ್ನಗಳಿಂದ ಅಲಂಕೃತವಾದ ಛತ್ರದ ಕೆಳಗೆ ಕುಳಿತ ಅಮಿತಾಭನ ಸುತ್ತ ಇತರ ದೇವತೆಗಳನ್ನು ಕೆತ್ತಲಾಗಿದೆ. ಆಕಾಶದಲ್ಲಿ ಹೂಗಳು, ಸಂಗೀತವಾದ್ಯಗಳು, ಹಾರುತ್ತಿರುವ ಯಕ್ಷಗಂಧರ್ವರು ಚಿತ್ರಿತರಾಗಿದ್ದಾರೆ. ಪುಣ್ಯಜೀವಿಗಳಿಗೆ ಮೀಸಲಾದ ಭವ್ಯ ಅರಮನೆಗಳು ಉನ್ನತ ಗೋಪುರಗಳೊಂದಿಗೆ ಕಂಗೊಳಿಸುತ್ತಿವೆ. ಪುಣ್ಯಜೀವಿಗಳು ಈ ಸ್ವರ್ಗದಲ್ಲಿ ಕಮಲಪುಷ್ಪಗಳಿಂದ ಹುಟ್ಟಿಬರುತ್ತಿರುವಂತೆ ತೋರಲಾಗಿದೆ. ಈ ಕಾಲದಲ್ಲೂ ಶಿಲಾಫಲಕಗಳನ್ನು ಅಧಿಕಸಂಖ್ಯೆಯಲ್ಲಿ ನಿರ್ಮಿಸಲಾಗುತ್ತಿತ್ತು. ಈ ಶಿಲ್ಪಗಳನ್ನು ಮಾಡುತ್ತಿದ್ದ ಕಲೆಗಾರರು ತಮ್ಮ ಕಾರ್ಯದಲ್ಲಿ ಔನ್ನತ್ಯವನ್ನು ಸಾಧಿಸಿದ್ದರೆಂದು ಹೇಳಬಹುದು. ಗುಹೆಗಳ ಬಾಗಿಲುವಾಡ, ಕಂಬ ಮತ್ತು ಗೋಡೆಗಳ ಮೇಲೆ ಹೂಬಳ್ಳಿ, ಕಮಲಪುಷ್ಪ ಮತ್ತಿತರ ಅಲಂಕಾರ ಸಾಧನಗಳನ್ನು ಬಳಸಿದೆ. ಆಗಿನ ಕಾಲದಲ್ಲಿ ಚೀನೀ ಶಿಲ್ಪಿಗಳು ಭಾರತೀಯ ಮಾದರಿಗಳನ್ನು ತಮ್ಮ ಶೈಲಿಗೆ ಹೊಂದಿಸಿಕೊಳ್ಳುತ್ತಿದ್ದುದು ಇವುಗಳಿಂದ ವ್ಯಕ್ತವಾಗುತ್ತದೆ.

6ನೆಯ ಶತಮಾನದ ಮಧ್ಯಭಾಗದಲ್ಲಿ ಚೀನದ ಮಹಾಗೋಡೆಯ ಉತ್ತರದಲ್ಲಿ ಮತ್ತು ಮಧ್ಯ ಏಷ್ಯದಲ್ಲಿ ತುರ್ಕರು ಅಧಿಕಾರಕ್ಕೆ ಬಂದರು. ಮಂಗೋಲಿಯದಿಂದ ಆಫ್ಘಾನಿಸ್ಥಾನದವರೆಗೂ ಹಬ್ಬಿದ್ದ ಅವರ ಆಡಳಿತದಲ್ಲಿ ಹೊಸ ಪ್ರಭಾವಗಳು ತಲೆದೋರಿದುವು. ಶವಸಂಸ್ಕಾರಕ್ಕೆ ಸಂಬಂಧಿಸಿದ ಕಲ್ಲಿನ ಮಂಚ ವೊಂದು ಈ ಹೊಸ ಪ್ರಭಾವಗಳ ಉತ್ತಮ ನಿದರ್ಶನ. ಉತ್ತರ ಲೆಯಿ ವಂಶದ ಕಾಲಕ್ಕೆ ಸೇರಿದ ಮಂಚದ ವಿವಿಧ ಭಾಗಗಳು ಬೇರೆ ಬೇರೆ ವಸ್ತುಸಂಗ್ರಹಾಲಯಗಳಲ್ಲಿ ಸೇರಿಹೋಗಿವೆ. ಇದರ ಅಲಂಕರಣ ಕೆತ್ತನೆಗಳಲ್ಲಿ ಭಾರತೀಯ ಬೌದ್ಧ, ಮತ್ತು ಪರ್ಷಿಯದ ಸಸೇನಿಯನ್ ಮಾದರಿಗಳ ಪ್ರಭಾವಗಳು ಸಮ್ಮಿಳಿತವಾಗಿವೆ; ಚೀನೀ ಮಾದರಿಗಳು, ಸಂಪ್ರದಾಯಗಳು ಕಣ್ಮರೆಯಾಗಿವೆ. ಬಹುಶಃ ಚೀನದಲ್ಲಿ ಪರ್ಷಿಯ ಅಥವಾ ಮಧ್ಯ ಏಷ್ಯದ ಶ್ರೀಮಂತ ವ್ಯಕ್ತಿಯೊಬ್ಬನ ಸಮಾಧಿಗಾಗಿ ಈ ಮಂಚವನ್ನು ನಿರ್ಮಿಸಿದ್ದಿರಬಹುದು.

ಬೌದ್ಧ ಶಿಲಾಫಲಕ – ಪ್ರ.ಶ. ಸು. 535–40

ಮೆಟ್ರೋಪಾಲಿಟನ್ ಸಂಗ್ರಹಾಲಯದಲ್ಲಿರುವ ಈ ಕಾಲದ ಒಂದು ಕಲ್ಲಿನ ಫಲಕ ಚೀನೀ ಶಿಲ್ಪಿಗಳ ಕೌಶಲದ ಅತ್ಯುತ್ತಮ ನಿದರ್ಶನ. ಇದರಲ್ಲಿ ತೋರಿಸಿರುವ ಧೂಪದ ಬಟ್ಟಲು, ವಿದೇಶೀ ಉಡುಪುಗಳಲ್ಲಿರುವ ದೃಢಕಾಯರಾದ ತರುಣರು, ತಲೆಬುರುಡೆ ಮತ್ತು ಪಕ್ಷಿಗಳನ್ನು ಹಿಡಿದು ಕೊಂಡಿರುವ ಇಬ್ಬರು ಸಂನ್ಯಾಸಿಗಳ ಶಿಲ್ಪಗಳು ವೈಯಕ್ತಿಕ ಶಿಲ್ಪಕೌಶಲದ ಚಲನಾತ್ಮಕ ಸರಳಶೈಲಿಯ ಸುಂದರ ಕೆತ್ತನೆಗಳು. ಆದರೆ ಬುದ್ಧನ ಉಡುಪಿನ ಮಡಿಕೆಗಳಲ್ಲಿ ಮೊದಲಿನ ಜಡತೆ ಕಂಡುಬರುತ್ತದೆ. ಕೆಳಗಿನ ಪಟ್ಟಿಕೆಯಲ್ಲಿ ಆಗ ಬಹಳ ಜನಪ್ರಿಯವಾಗಿದ್ದ ವಿಮಲಕೀರ್ತಿ ಸೂತ್ರದಿಂದ ಆಯ್ದ ದೃಶ್ಯ ವೊಂದರಲ್ಲಿ ಬೋಧಿಸತ್ತ್ವ ಮಂಜುಶ್ರೀಯೊಂದಿಗೆ ಸಂಭಾಷಣೆಯಲ್ಲಿ ತೊಡಗಿರುವ ಶ್ರೀಮಂತನ ಚಿತ್ರ, ಒಬ್ಬ ಭಿಕ್ಷು ಮತ್ತು ಅಪ್ಸರೆ, ಅವರ ಸುತ್ತಲೂ ಹಿಂಬದಿಯಲ್ಲಿ ಬೆಳೆದು ನಿಂತಿರುವ ವೃಕ್ಷಲತಾ ಸಮೂಹ ಇವನ್ನು ಬಹಳ ಸುಂದರವಾಗಿ ಹಾಗೂ ನೈಜವಾಗಿ ಕಡೆಯಲಾಗಿದೆ. ಈ ಶೈಲಿಯಲ್ಲಿ ಅಲಂಕಾರವಿನ್ಯಾಸಗಳಿಗೂ ಅವುಗಳ ಆಕರ್ಷಕ ಗುಣಗಳಿಗೂ ಪ್ರಾಧಾನ್ಯ ನೀಡಲಾಗಿದೆ.ಇದರಿಂದ ಮೂಲಚಿತ್ರಗಳ ದೈವೀ ಸ್ವಭಾವಕ್ಕೆ ಸ್ವಲ್ಪಮಟ್ಟಿಗೆ ಧಕ್ಕೆ ಉಂಟಾಗಿದೆ ಎನ್ನಬಹುದು.

ಅಮಿತಾಭ ಬುದ್ಧನ ಉಬ್ಬುಶಿಲ್ಪ ಪ್ರ.ಶ. 550–77

ಹೋಪೇ ಪ್ರಾಂತ್ಯದ ಟಿಂಗ್–ಚೌ ಮತ್ತು ಪಾವೊ–ಟಿಂಗ್ ಪ್ರದೇಶಗಳಲ್ಲಿ ವಿಗ್ರಹ ನಿರ್ಮಾಣದ ಹಲವಾರು ಕೇಂದ್ರಗಳಿದ್ದುವು. ಅಲ್ಲಿಯ ಶಿಲ್ಪಿಗಳು ಸ್ಥಳೀಯವಾಗಿ ದೊರಕುತ್ತಿದ್ದ ಅಮೃತಶಿಲೆಯಲ್ಲಿ ದೊಡ್ಡಗಾತ್ರದ ಬುದ್ಧಬೋಧಿಸತ್ತ್ವರ ವಿಗ್ರಹಗಳನ್ನು ಉತ್ತಮ ಕೌಶಲದಿಂದ, ಆದರೆ ಸಾಂಪ್ರದಾಯಿಕ ನಿಯಮಗಳಿಗನುಸಾರವಾಗಿ, ನಿರ್ಮಿಸುತ್ತಿದ್ದರು. ಉಡುಪಿನೊಳಗೆ ದೇಹವನ್ನು ಸೂಚ್ಯವಾಗಿ ತೋರಿಸಲಾಗುತ್ತಿತ್ತು. ಮುಖದಲ್ಲಿ ಆಂತರಿಕ ಶಾಂತಿ ಸೌಮ್ಯತೆಗಳು ಪ್ರತಿಬಿಂಬಿತವಾಗುತ್ತಿದ್ದವು. ಭಾರತದ ಗುಪ್ತರ ಕಾಲದ ಬೌದ್ಧಶಿಲ್ಪಗಳನ್ನು ಹೋಲುವ ಈ ಕೃತಿಗಳು 6ನೆಯ ಶತಮಾನದ ಉತ್ತರಾರ್ಧಕ್ಕೆ ಸೇರುತ್ತವೆ. ಈ ವಿಗ್ರಹಗಳು ನೈಜವಾಗಿವೆ. ನಿಜ ಜೀವನದಲ್ಲಿ ಉಪಯೋಗಿಸುತ್ತಿದ್ದ ಕೆಲವು ಪ್ರತಿಮೆಗಳಲ್ಲಿ ವ್ಯಕ್ತಿಚಿತ್ರಣವನ್ನು ಹೋಲುವ ಅನೇಕ ಕೃತಿಗಳನ್ನು ಶಿಲ್ಪಿಗಳು ನಿರ್ಮಿಸಿದ್ದಾರೆ. ಇವರಿಗೆ ತಮ್ಮ ಪರಿಸರದ ನಿಕಟ ಪರಿಚಯವಿತ್ತೆಂಬುದು ಸ್ಪಷ್ಟವಾಗುತ್ತದೆ. ಧಾರ್ಮಿಕ ಕೃತಿಗಳಲ್ಲೂ ಮಾನವ–ದೈವೀವಸ್ತುಗಳ ಸಾಮೀಪ್ಯವನ್ನು ಹೆಚ್ಚಿಸಿ ದೈವೀಪ್ರತಿಮೆಗಳಲ್ಲಿ ದಯೆ, ಆರ್ದ್ರತೆ ಮತ್ತು ಮಾನವೀಯತೆಗಳನ್ನು ರೂಪಿಸುವ ಕಾರ್ಯದಲ್ಲಿ ಇವರು ಸಫಲರಾಗಿದ್ದಾರೆ.

ಪ್ರ.ಶ. 6ನೆಯ ಶತಮಾನದ ಒಂದು ಕಲ್ಲಿನ ಫಲಕ

ಸಮಕಾಲೀನ ಪೂರ್ವ ಮತ್ತು ಉತ್ತರ ಚೀನಗಳಲ್ಲಿ ಬೇರೊಂದು ರೀತಿಯ ಮತ್ತು ಭಾರತೀಯ ಶೈಲಿಯನ್ನು ಪ್ರತಿನಿಧಿಸುತ್ತಿದ್ದ ಶಿಲ್ಪಕೃತಿಗಳು ನಿರ್ಮಿತವಾಗುತ್ತಿದ್ದವು. ಸರಳ, ಸೌಮ್ಯ ಹಾಗೂ ಸಂಪದ್ಭರಿತವಾದ ಈ ಶೈಲಿ ಪ್ರಾಚೀನ ರಾಜಧಾನಿಯಾದ ಷೆನ್‌ಸೀ ಪ್ರಾಂತ್ಯದ ಚಾಂಗ್–ಆನ್‌ನಲ್ಲಿ ಕೇಂದ್ರೀಕೃತವಾಗಿತ್ತು. ದೊಡ್ಡ ಗಾತ್ರದ ಮತ್ತು ಸ್ಥೂಲವಾದ ಈ ಬೌದ್ಧವಿಗ್ರಹಗಳು ಅಗಲವಾದ ಮುಖವನ್ನೂ ದಪ್ಪವೂ ಜಡವೂ ಆದ ಉಡುಪಿನ ಮಡಿಕೆಗಳನ್ನೂ ಉಳ್ಳವಾದರೂ ಇವು ಭಾರತೀಯ ವಿಗ್ರಹಗಳ ಅನುಕರಣೆ. ಬಾಸ್ಟನ್ ಸಂಗ್ರಹಾಲಯದಲ್ಲಿರುವ ಅವಲೋಕಿತೇಶ್ವರನ ವಿಗ್ರಹ ಈ ಶೈಲಿಗೆ ಸೇರಿದ್ದು. ಇದರ ಕೈಗಳು, ಪಾದಗಳು ಮತ್ತು ಮುಖ ದುಂಡಾಗಿ ಭಾವಪೂರ್ಣವಾಗಿವೆ. ದೇಹದ ಮೇಲೆ ಅನೇಕ ಆಭರಣಗಳಿವೆ.

ಬೌದ್ಧ ಶಿಲಾಫಲಕ, ಪ್ರ.ಶ. 527

590ರಲ್ಲಿ ಚೀನವನ್ನು ಒಗ್ಗೂಡಿಸಿದ ಸ್ವಿ ವಂಶದ ಪ್ರಮುಖ ದೊರೆಗಳಾದ ವನ್–ಟಿ ಮತ್ತು ಯಾಂಗ್–ಟಿ ಪ್ರಖರ ಬೌದ್ಧಧರ್ಮೀಯರು. ವನ್–ಟಿ ಒಂದು ಲಕ್ಷ ಹೊಸ ಬುದ್ಧ ವಿಗ್ರಹಗಳನ್ನೂ, 15 ಲಕ್ಷ ಹಳೆಯ ವಿಗ್ರಹಗಳ ದುರಸ್ತಿಯನ್ನೂ ಮಾಡಿಸಿದನೆಂದು ಹೇಳಲಾಗಿದೆ. ಆ ಕಾಲಕ್ಕೆ ಸೇರಿದ, ಈಗ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿರುವ 5.8ಮೀ. ಎತ್ತರದ ಅಮಿತಾಭ ಬುದ್ಧ ವಿಗ್ರಹ ಉತ್ತಮ ಕಲಾಕೃತಿ. ಇದರ ಕಾಲ 585.

ಚೀನದ ಶಿಲ್ಪಕಲೆಯ ಪರಮೋನ್ನತ ಕಾಲವಾದ ಈ ಶತಮಾನದ ಅನೇಕ ಕೃತಿಗಳು ನಾಶವಾಗಿವೆ. ದೊಡ್ಡ ಕಂಚಿನ ಶಿಲ್ಪಗಳನ್ನು ಲೋಹಕ್ಕಾಗಿ ಕರಗಿಸಿರಬಹುದು. ಮರ, ಜೇಡಿಮಣ್ಣು ಮತ್ತು ಅರಗಿನ ಸಾವಿರಾರು ವಿಗ್ರಹಗಳೂ ನಾಶವಾಗಿವೆ. ಉಳಿದುಬಂದಿರುವ ಕೆಲವೇ ಕಲಾಕೃತಿಗಳ ಆಧಾರದ ಮೇಲೆ ಆಗಿನ ಶಿಲ್ಪಕಲೆಯ ಅಮೋಘ ಸಾಧನೆಯ ನಿಜವಾದ ಮಟ್ಟವನ್ನು ಅಳೆಯುವುದು ಕಷ್ಟ. ಈಗ ಬಾಸ್ಟನ್ ಸಂಗ್ರಹಾಲಯದಲ್ಲಿರುವ 593ರಲ್ಲಿ ಮಾಡಲಾದ, ಅಮಿತಾಭ ಬುದ್ಧ ವಿಗ್ರಹ ನಿಜವಾಗಿಯೂ ಉತ್ತಮ ಕಲಾಕೃತಿ. ನಾಲ್ವರು ಶಿಷ್ಯರು, ದಾಳಿಂಬೆ ಹಣ್ಣನ್ನು ಹಿಡಿದಿರುವ ಅವಲೋಕಿತೇಶ್ವರ, ಅಂಜಲಿಬದ್ಧ

ಮಹಾಸ್ಥಾಮಪ್ರಾಪ್ತ –ಇವರು ರತ್ನಖಚಿತ ಪದ್ಮಾಸನದ ಮೇಲೆ ಕುಳಿತ ಅಮಿತಾಭನನ್ನು ಸುತ್ತುವರಿದಿದ್ದಾರೆ. ಆಸನದ ಮೇಲ್ಭಾಗದ ಆಯಾಕಾರದ ಪ್ರಭಾವಳಿಯನ್ನು ಪದ್ಮಪುಷ್ಪಗಳಿಂದ ಅಲಂಕರಿಸಲಾಗಿದೆ.

**ಪ್ರಭೂರತ್ನ ಮತ್ತು ಗೌತಮ ಬುದ್ಧ. ಕಂಚಿನ ಫಲಕ, ಪ್ರಶ. 518**

ಸ್ವಿ ವಂಶದ ಆಡಳಿತದಲ್ಲಿ ಐಕಮತ್ಯ ಸಾಧಿಸಿದ ಚೀನ ಸ್ವಲ್ಪ ಕಾಲಾನಂತರ ಮತ್ತೆ ಹರಿದು ಹಂಚಿಹೋಯಿತು. ಟ್ಯಾಂಗ್ ವಂಶಸ್ಥಾಪಕ ಲಿಷಿ–ಮಿನ್ 618ರಲ್ಲಿ ಇಡೀ ದೇಶವನ್ನು ಪುನಃ ಒಂದುಗೂಡಿಸಿದ. ದೇಶದಲ್ಲಿ ಜನಸಾಂದ್ರತೆ ಹೆಚ್ಚಿತು. ನಾಡು ಸಂಪದ್ಭರಿತವಾಯಿತು. ಸುವ್ಯವಸ್ಥಿತ ನಗರಗಳ ನಿರ್ಮಾಣವಾಯಿತು. ಪ್ರಪಂಚದ ವಿವಿಧ ಭಾಗಗಳಿಂದ ಬಂದ ಧಾರ್ಮಿಕ ವ್ಯಕ್ತಿಗಳು, ರಾಜದೂತರು, ವ್ಯಾಪಾರಿಗಳು ಚೀನದಲ್ಲಿ ನೆಲಸಿ ಅಲ್ಲಿಯ ಜನಜೀವನದಲ್ಲಿ ಪಾಲ್ಗೊಂಡರು. ಸಾಮಾಜಿಕ ಜೀವನದಲ್ಲಿ ಒಂದು ರೀತಿಯ ವಿಶ್ವಪ್ರಜ್ಞಾದೃಷ್ಟಿ ಕಂಡುಬರಲಾರಂಭವಾಯಿತು.

ಇಂಥ ಅನುಕೂಲ ಪರಿಸ್ಥಿತಿಯಲ್ಲಿ ವಿಶಾಲ ಧಾರ್ಮಿಕ ಮತ್ತು ಕಲಾಪ್ರಗತಿ ಆಗಿದ್ದು ಆಶ್ಚರ್ಯವಲ್ಲ. 700ರಲ್ಲಿ ಬೌದ್ಧಧರ್ಮ ಸುವ್ಯವಸ್ಥಿತ ಧಾರ್ಮಿಕ ಸಂಸ್ಥೆಯಾಗಿ ಜನಜೀವನದಲ್ಲಿ ಹೆಚ್ಚಿನ ಪ್ರಭಾವ ಬೀರಲಾರಂಭಿಸಿತು. 7ನೆಯ ಶತಮಾನದಲ್ಲಿ ಚೀನದ ಬೌದ್ಧ ಧರ್ಮೀಯರು ಬೌದ್ಧಧರ್ಮಕ್ಷೇತ್ರ ಸಂದರ್ಶನ ಮತ್ತು ಧರ್ಮಗ್ರಂಥ ಸಂಚಯನಕ್ಕಾಗಿ ಭಾರತದತ್ತ ಅಧಿಕ ಸಂಖ್ಯೆಯಲ್ಲಿ ಪ್ರವಾಸ ಕೈಗೊಂಡರು. ಅಂಥವರಲ್ಲಿ ಪ್ರಮುಖನೆಂದರೆ ಹ್ಯು–ಎನ್‍ತ್ಸಾಂಗ್. ಚೀನದಲ್ಲಿ ಬೌದ್ಧ ಧರ್ಮ ಪ್ರಬಲವಾಯಿತು. ಅದರೊಂದಿಗೆ ಕೆಲವು ಹೊಸ ಬೌದ್ಧಪಂಥಗಳೂ ಬೌದ್ಧಪಂಡಿತರೂ ಚೀನವನ್ನು ಪ್ರವೇಶಿಸುವಂತಾಯಿತು. 719ರಲ್ಲಿ ಬಂದು 732ರವರೆಗೂ ಕಾರ್ಯತತ್ಪರನಾಗಿದ್ದ ವಜ್ರಬೋಧಿ, 774ರವರೆಗೂ ಕಾರ್ಯನಿರತನಾಗಿದ್ದ ಅಮೋಘವಜ್ರ ಇವರಿಂದ ಹುಟ್ಟಿಕೊಂಡ ಚೆನ್–ಯೆನ್ (ಜಪಾನಿನ ಷಿಂಗಾನ್) ಎಂಬ ತಂತ್ರಪ್ರಧಾನ ಬೌದ್ಧಪಂಥ ಇವುಗಳಲ್ಲಿ ಮುಖ್ಯವಾದದ್ದು. ಹಿಂದೂ ತಾಂತ್ರಿಕ ಪಂಥಗಳ ಪ್ರಭಾವಕ್ಕೊಳಗಾದ ಆ ಪಂಥೀಯರಲ್ಲಿ ಮಾಂತ್ರಿಕ ವ್ಯವಹಾರ ಮತ್ತು ಕರ್ಮನಿಷ್ಠ ಪದ್ಧತಿಗಳು ಪ್ರಧಾನವಾಗಿದ್ದುವು. ಇದರಿಂದ ಅನೇಕ ಹೊಸ ದೇವತೆಗಳೂ ಹಳೆಯ ದೇವತೆಗಳ ಹೊಸ ರೂಪಗಳೂ ಹುಟ್ಟಿಕೊಂಡುವು. ತಂತ್ರಪದ್ಧತಿ–ಗನುಸಾರವಾಗಿ ಧರ್ಮಗುರುಗಳು ವಿಧಿಸುತ್ತಿದ್ದ ಕಟ್ಟುಪಾಡುಗಳಿಗೆ ಒಳಪಟ್ಟು ಶಿಲ್ಪಿಗಳು ವಿಗ್ರಹನಿರ್ಮಾಣ ಮಾಡ–ಬೇಕಾಗಿದ್ದುದರಿಂದ ಕಲಾಪ್ರಗತಿ ಬಹಳ ಕುಂಠಿತವಾಯಿತೆನ್ನಬಹುದು. ಆದರೆ ಇದರೊಂದಿಗೆ ಬೌದ್ಧತತ್ತ್ವ ಶಾಸ್ತ್ರದಲ್ಲಿ ಉಂಟಾದ ಬೌದ್ಧಿಕ ಪ್ರಗತಿಯಾಗಿ ಚಾನ್ (ಜಪಾನಿನ ಝೆನ್) ಪಂಥ ಹುಟ್ಟಿಕೊಂಡಿತು. ಅದರ ಪ್ರತಿಕ್ರಿಯೆ ಶಿಲ್ಪದಲ್ಲೂ ಕಂಡುಬರುತ್ತದೆ.

**ಬರ್ನಾರ್ಡ್ ಬೆರೆನ್‍ಸನ್ ಸಂಗ್ರಹದಲ್ಲಿರುವ ಕಂಚಿನ ಫಲಕ, ಪ್ರಶ. 529**

ಟಾಂಗ್ ವಂಶದ ಮೊದಲ ಎರಡು ಶತಮಾನಗಳಲ್ಲಿ ಬೌದ್ಧಧರ್ಮ ಪ್ರಬಲವಾಗಿದ್ದರೂ ಉಳಿದುಬಂದಿರುವ ಶಿಲ್ಪಗಳು ಕಡಿಮೆ. ಕಂಚು, ಮರ, ಜೇಡಿಮಣ್ಣು ಮತ್ತು ಅರಗಿನಂಥ ಸುಲಭವಾಗಿ ರೂಪಿಸಬಹುದಾದ, ಆದರೆ ಬೇಗ ನಾಶವಾಗುವ ವಸ್ತುಗಳಿಂದ ಶಿಲ್ಪಗಳನ್ನು ನಿರ್ಮಿಸುತ್ತಿದ್ದುದೂ ರೂಪಿಸಲು ಕಷ್ಟಸಾಧ್ಯವಾದ ಕಲ್ಲಿನ ಬಳಕೆಯನ್ನು ಕೈಬಿಟ್ಟಿದೂ ಬಹುಶಃ ಇದಕ್ಕೆ ಮುಖ್ಯ ಕಾರಣ. ಅನಂತರ ಕಾಲದ, ಮುಖ್ಯವಾಗಿ 845ರಲ್ಲಿ ಸಂಭವಿಸಿದ, ಬೌದ್ಧಧರ್ಮ ದ್ವೇಷ ಮತ್ತು ವಿಧ್ವಂಸ ಕೃತ್ಯಗಳು ಕೂಡ ಆ ಶಿಲ್ಪಗಳ ನಾಶಕ್ಕೆ ಕಾರಣ ವಾಗಿರಬಹುದು. ಟ್ಯಾಂಗ್ ಕಾಲದ ಶಿಲ್ಪಕಲೆಯ ಔನ್ನತ್ಯವನ್ನು ತಿಳಿಯಲು ಜಪಾನಿನ ಹಕುಹೊ ಮತ್ತು ಟೆಂಪ್ಯೊ ಸಾಮ್ರಾಜ್ಯಗಳ ಕಾಲದ ಶಿಲ್ಪಗಳನ್ನು ಪರೀಕ್ಷಿಸಬೇಕಾಗುತ್ತದೆ.

ಚೀನದಲ್ಲಿ ಆ ಕಾಲದ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿ ಹೊನ್ನಾನಿನ ಲುಂಗ್ ಮೆನ್ ಗುಹೆಗಳ ಫಂಗ್–ಹ್ಸಿಯೆನ್ ಮಂದಿರದಲ್ಲಿವೆ. 650–683ರ ನಡುವೆ ಆಳಿದ ಚಕ್ರವರ್ತಿ ಕಾವೋ–ಟ್ಸುಂಗನ ಆಶ್ರಯದಲ್ಲಿ ಆ ಮಂದಿರದ ನಿರ್ಮಾಣವಾಯಿತು. ಮಧ್ಯದಲ್ಲಿರುವ ಬುದ್ಧ ವೈರೋಚನ ವಿಗ್ರಹದ ದೇಹ 10.5ಮೀ. ಎತ್ತರ; ಪೀಠದ ಅಡಿಯಿಂದ ತೇಜೋವಲಯದ ತುದಿಯವರೆಗಿನ ಎತ್ತರ 15ಮೀ. ವೈರೋಚನನ ಆಸನವಾದ ಕಮಲದ ಸಾವಿರ ದಳಗಳು ಸಾವಿರ ಲೋಕಗಳನ್ನು ಪ್ರತಿನಿಧಿಸುತ್ತವೆ. ಪ್ರತಿಯೊಂದು ಲೋಕಕ್ಕೂ ಪ್ರತ್ಯೇಕ ಬುದ್ಧನಿರುತ್ತಾನೆ. ಪ್ರತಿಯೊಂದು ಲೋಕವೂ ನೂರಾರು ದಶಲಕ್ಷ ಬುದ್ಧ ಪ್ರಪಂಚಗಳನ್ನು ಪ್ರತಿನಿಧಿಸುತ್ತವೆ. ಇಂಥ ಕಲ್ಪನೆಯ ಪ್ರತೀಕವಾದ ಮೂರ್ತಿಯ ಘನತೆಯನ್ನು ಈ ವಿಗ್ರಹದಲ್ಲಿ ರೂಪಿಸುವ ಕಾರ್ಯದಲ್ಲಿ ಶಿಲ್ಪಿಗಳು ಸಫಲರಾಗಿದ್ದಾರೆ. ದುಂಡಾದ ತುಂಬುಮುಖ, ವಿಶಾಲ ಕಣ್ಣುಗಳು, ನೀಳವಾದ ಕಮಾನಿನಂಥ ಕಣ್ಣೆವೆಗಳು ಈ ಮೂರ್ತಿಯ ಘನತೆಯನ್ನು ಹೆಚ್ಚಿಸುತ್ತವೆ; ಎಡಭಾಗದಲ್ಲಿರುವ ಬೋಧಿಸತ್ತ್ವ ವಿಗ್ರಹ ಈ ಪರಿಣಾಮವನ್ನು ದ್ವಿಗುಣಿಸುತ್ತದೆ. ಷಾನ್ ಸೀ ಪ್ರಾಂತ್ಯದ ಟಿಯೆನ್–ಲುಂಗ್ ಷಾನ್‍ನಲ್ಲಿರುವ ಬೌದ್ಧ ಗುಹೆಗಳ ಶಿಲ್ಪಗಳಲ್ಲಿ (ಸು. 684–755) ಲುಂಗ್ ಮೇನ್‍ನಲ್ಲಿ ಕಾಣಿಸಿಕೊಳ್ಳುವ ನೈಜತೆಯ ನಿರೂಪಣೆಗೆ ಹೆಚ್ಚು ಗಮನ ಕೊಡಲಾಗಿದೆ. 21ನೆಯ ಗುಹೆಯಲ್ಲಿರುವ ಬುದ್ಧ ಬೋಧಿಸತ್ತ್ವರ ಪ್ರತಿಮೆಗಳಲ್ಲಿ ಈ ಲಕ್ಷಣಗಳು ಕಾಣುತ್ತವೆ. ಸಹಜವಾಗಿ ಕುಳಿತಿರುವ ಎರಡು ವಿಗ್ರಹಗಳಲ್ಲೂ ತಲೆ ಮತ್ತು ದೇಹಗಳು ಒಂದು ಕಡೆಗೆ ಸ್ವಲ್ಪ ವಾಲಿದ್ದು, ದೇವತೆಗಳಿಗೆ ಸಹಜವಾದ ಘನತೆ ಸೌಮ್ಯತೆಗಳು ಪ್ರಧಾನವಾಗಿವೆ.

**ಪ್ರಶ. 593ರ ಕಂಚಿನ ವಿಗ್ರಹ, ಅಮಿತಾಭ ಬುದ್ಧ**

ಅದೇ ಕಾಲಕ್ಕೆ ಸೇರಿದ ಇನ್ನು ಕೆಲವು ಶಿಲ್ಪಗಳಲ್ಲಿ ಈ ನೈಜತೆ ಇಲ್ಲ. ಮೊದಲಿನ ಜಡತೆ ಮತ್ತು ಸಾಂಪ್ರದಾಯಿಕತೆ ಉಳಿದುಬಂದಿವೆ. ಫ್ರೀಯರ್ ಸಂಗ್ರಹದ ಹನ್ನೊಂದು ತಲೆಗಳ ಕು ಅನ್‍ಯಿನ್ ಬೋಧಿಸತ್ತ್ವ ಶಿಲ್ಪದಲ್ಲಿ ನೇರವೂ ಸ್ಥಿರವೂ ಆದ ದೇಹನಿರೂಪಣೆ

ಪ್ರಧಾನ. ವಿಗ್ರಹದ ಮುಖ್ಯ ತಲೆಯ ಮೇಲಿರುವ ಎತ್ತರವಾದ ಕಿರೀಟದ ಮೇಲೆ ಮೂರು ಸಾಲುಗಳಲ್ಲಿ ಹತ್ತು ತಲೆಗಳನ್ನು ತೋರಿಸುವ ಮೂಲಕ, ಹನ್ನೊಂದು ತಲೆಗಳನ್ನು ತೋರಿಸುವ ನಿರೂಪಣ ಸಮಸ್ಯೆಯನ್ನು ಬಗೆಹರಿಸಲಾಗಿದೆ.

ಈ ಕಾಲದ ಕಲ್ಲಿನಫಲಕಗಳಲ್ಲಿ ಮೆಟ್ರೋ-ಪಾಲಿಟನ್ ಸಂಗ್ರಹದ ಇಬ್ಬರು ಬೃಹತ್ ಬೋಧಿಸತ್ತ್ವರನ್ನು ತೋರಿಸುವ ಕಪ್ಪುಕಲ್ಲಿನ ಫಲಕ ಮುಖ್ಯವಾದ್ದು. ಸುಲಭ ಶೈಲಿಯಲ್ಲಿ ನಿಂತ ಪ್ರಮಾಣಬದ್ಧ ದೇಹಗಳನ್ನು ಹೊಂದಿರುವ ಈ ಮೂರ್ತಿಗಳು ಶಾಂತಿ, ಸೌಮ್ಯತೆ, ಘನತೆಗಳನ್ನು ಸೂಸುತ್ತವೆ. ಅವುಗಳ ನಿರೂಪಣೆಯಲ್ಲಿ ತಾಂತ್ರಿಕ ಪರಿಪೂರ್ಣತೆ ಮತ್ತು ಹಿಡಿತ ಕಾಣುತ್ತವೆ; ಅವುಗಳ ನಿಲುವು ಸರಳವೂ ಆಹ್ಲಾದಕರವೂ ಆದದ್ದು. ಈ ಶೈಲಿ 14ನೆಯ ಶತಮಾನದವರೆಗೂ ರೂಢಿಯಲ್ಲಿತ್ತು.

ಕು ಆನ್-ಯಿನ್‌ನ ಬೋಧಿಸತ್ತ್ವ

ನಿಜವಾದ ದುಂಡು ಶಿಲ್ಪಗಳು ಟ್ಯಾಂಗ್ ಅರಸರ ಆಶ್ರಯದಲ್ಲಿ 8ನೆಯ ಶತಮಾನದಲ್ಲಿ ಮೊದಲ ಬಾರಿಗೆ ನಿರ್ಮಾಣವಾದುವು. ಆವರೆಗಿನ ಹೆಚ್ಚಿನ ಶಿಲ್ಪಗಳು ಮುನ್ನೋಟಕ್ಕೆ ಪರಿಣಾಮಕಾರಿಗಳಾಗಿ ಕಂಡರೂ ಅವುಗಳ ಪಾರ್ಶ್ವಗಳನ್ನು ಮತ್ತು ಹಿಂಬದಿಗಳನ್ನು ಸಹ ಪೂರ್ಣವಾಗಿ ರೂಪಿಸಲಾಗುತ್ತಿತ್ತು. ಇದರ ಉತ್ತಮ ನಿದರ್ಶನವೆಂದರೆ ಫ್ರೀಯರ್ ಕಲಾಶಾಲೆಯಲ್ಲಿರುವ ಬೋಧಿಸತ್ತ್ವ ವಿಗ್ರಹ. ಅದರ ನೈಜ ಸರಳ ನಿಲುವು ಮತ್ತು ಉಡುಪಿನ ನಿರೂಪಣೆಗಳಲ್ಲಿ ಈ ಅಂಶ ಎದ್ದು ಕಾಣುತ್ತದೆ.

ಹೋಪೇ ಪ್ರಾಂತ್ಯದ ಶಿಲ್ಪಗಳು ಉತ್ತರ ಚೀ ವಂಶದ ಕಾಲದಿಂದ ಬೆಳೆದುಬಂದಿದ್ದ ಕಲಾನೈಪುಣ್ಯದಿಂದ ಈ ಕಾಲದಲ್ಲೂ ಉತ್ತಮ ಕೃತಿಗಳನ್ನು ನಿರ್ಮಿಸುತ್ತಿದ್ದರು. ಕ್ಲೀವ್‌ಲೆಂಡ್ ಸಂಗ್ರಹಾಲಯದ ಬೋಧಿಸತ್ತ್ವ ವಿಗ್ರಹದಲ್ಲಿ ದೃಢತೆ ಮತ್ತು ಸತ್ತ್ವಯುಕ್ತ ನಿಲುವನ್ನು ಕಾಣಬಹುದು. ಅದರ ಒಟ್ಟು ಸೌಂದರ್ಯ ಮೇಲಿನ ಕೃತಿಯಷ್ಟು ಗಮನಾರ್ಹವಾಗಿಲ್ಲ. ಬಹುಶಃ ವಿಗ್ರಹದ ಬೇರೆಬೇರೆ ಭಾಗಗಳನ್ನೂ ಕೈಗಳನ್ನೂ ಪ್ರತ್ಯೇಕವಾಗಿ ಮಾಡಿ ಕಬ್ಬಿಣದ ಕೊಕ್ಕೆಗಳಿಂದ ಅವನ್ನು ಮುಂಡದೊಂದಿಗೆ ಕೂಡಿಸುತ್ತಿದ್ದಂತೆ ಕಂಡುಬರುತ್ತದೆ. ಒಟ್ಟಿನಲ್ಲಿ ಈ ಶಿಲ್ಪಿಗಳು ಉತ್ತಮ ಮಟ್ಟದ ಕೌಶಲವನ್ನು ಪ್ರದರ್ಶಿಸಿದ್ದಾರೆ.

ರೆಕ್ಕೆಗಳಿರುವ ಶಿಲಾಶ್ವ. ಗಾವೊ-ಡ್ಸುಂಗ್‌ನ ಸಮಾಧಿ. 7ನೆಯ ಶತಮಾನ

ಈಗ ಫಾಗ್ ಸಂಗ್ರಹಾಲಯದಲ್ಲಿರುವ, ಮೊದಲಿಗೆ ಟುನ್-ಹುವಾಂಗ್‌ನ 143ನೆಯ ಗುಹೆಯಲ್ಲಿದ್ದ, ಜೇಡಿಮಣ್ಣಿನ, ವಿವಿಧ ವರ್ಣಗಳಿಂದ ಕೂಡಿದ, ಪೂಜಾಮಗ್ನ ಬೋಧಿಸತ್ತ್ವನ ವಿಗ್ರಹ ಗಮನಾರ್ಹ. ಅದರ ಸುಂದರ ಸರಳ ವಿಶ್ವಾಸಪೂರ್ಣ ಗಂಭೀರ ಮುಖದಲ್ಲಿ ಧಾರ್ಮಿಕ ಕಳೆ ಹೊಮ್ಮುತ್ತದೆ.

ಟ್ಯಾಂಗ್ ಕಾಲದ ಕಂಚಿನ ಸಣ್ಣ ಶಿಲ್ಪಗಳಲ್ಲಿ ಮೆಟ್ರೋಪಾಲಿಟನ್ ಸಂಗ್ರಹಾಲಯದಲ್ಲಿರುವ ಧರ್ಮಚಕ್ರ ಪ್ರವರ್ತನ ಮುದ್ರೆಯಲ್ಲಿರುವ ಗೌತಮ ಬುದ್ಧನ ವಿಗ್ರಹ ಗಮನಾರ್ಹವಾದದ್ದು. ಆ ವಂಶದ ಕೊನೆಗಾಲದಲ್ಲಿ ಕ್ಲಿಷ್ಟವಾದ ರೂಪಗಳ ನಿರೂಪಣೆಗೆ ಆದ್ಯತೆ ನೀಡಿದ್ದಂತೆ ಕಾಣುತ್ತದೆ. 9ನೆಯ ಶತಮಾನಕ್ಕೆ ಸೇರಿದ, ಈಗ ಫಿಲಡೆಲ್ಫಿಯ ಸಂಗ್ರಹಾಲಯದಲ್ಲಿರುವ, ಬೋಧಿಸತ್ತ್ವಮೂರ್ತಿ ಇದಕ್ಕೆ ನಿದರ್ಶನ. ಪೂರ್ಣ ಪ್ರಕಾಶಗೊಂಡ ಈ ಮೂರ್ತಿಯ ಸೌಂದರ್ಯ, ಪೀಠದಲ್ಲಿ ಸಿಕ್ಕಿಕೊಂಡಂತಿರುವ ಉಡುಪಿನ ಹಲವು ಮಡಿಕೆಗಳು, ದೇಹದ ಮೇಲ್ಭಾಗದ ಅನೇಕ ಆಭರಣಗಳು ಈ ಶೈಲಿಯ ಕುರುಹುಗಳು.

ಬೋಧಿಸತ್ತ್ವ, 8ನೆಯ ಶತಮಾನ

ದೊಡ್ಡಗಾತ್ರದ ಅನೇಕ ಕುದುರೆ ಸಿಂಹಗಳ ಮತ್ತು ರಾಜಾಸ್ಥಾನದ ಪ್ರಮುಖ ವ್ಯಕ್ತಿಗಳ ವಿಗ್ರಹಗಳನ್ನು ಆ ಕಾಲದಲ್ಲಿ ನಿರ್ಮಿಸಲಾಗುತ್ತಿತ್ತು. ಬಹುಶಃ ಈ ವಿಗ್ರಹಗಳನ್ನು ಚಕ್ರವರ್ತಿಗಳ ಮತ್ತು ಶ್ರೀಮಂತರ ಸಮಾಧಿಗಳ ಮುಂದಿನ ಮಾರ್ಗಗಳ ಪಾರ್ಶ್ವಗಳಲ್ಲಿ ನೆಡಲಾಗುತ್ತಿತ್ತು. ಗಾವೋ-ಡ್ಸುಂಗನ (628-683) ಸಮಾಧಿಯ ಬಳಿ ಇಂಥ ದುಂಡುಶಿಲ್ಪಗಳಿವೆ. ಇವು ಶಿಲ್ಪಿಗಳ ಶ್ರಮಪೂರ್ಣವಾದ, ಆದರೆ ಕೌಶಲರಹಿತವಾದ ಒರಟು ಕೃತಿಗಳು. ಇವುಗಳಲ್ಲಿ ರೆಕ್ಕೆಗಳುಳ್ಳ ಒಂದು ಕುದುರೆಯ ಶಿಲ್ಪ ಮಾತ್ರ ನೈಜ ಸರಳ ಸುಂದರ ಕೃತಿ. ಪ್ರಾಣಿಗಳ ಸಣ್ಣ ಶಿಲ್ಪಗಳಲ್ಲಿ ನೈಜತೆಗೆ ಪ್ರಾಧಾನ್ಯ ನೀಡಲಾಗಿದೆ. ಪ್ರಾಣಿಗಳ ದೇಹ ಸೌಷ್ಠವವನ್ನು ಎಚ್ಚರಿಕೆಯಿಂದ ಅವು ಟಾಂಗ್ ಶಿಲ್ಪಕಲೆಯ ಅತ್ಯುತ್ತಮ ನಿದರ್ಶನಗಳೆಂದು ಪರಿಗಣಿಸ ಬಹುದು. ಟಿಂಗ್-ಚೌ ಮತ್ತು ಪಾವೋಟಿಂಗ್ ಪ್ರದೇಶದಲ್ಲಿ ಅಮೃತಶಿಲೆ ಯಲ್ಲಿ ಕಡೆದ ಸಿಂಹದ ಶಿಲ್ಪ (700-750) ಪ್ರಮಾಣ ಬದ್ಧವಾದ ದೇಹ ಮತ್ತು ನೈಜ ಚಿತ್ರಣಗಳಿಂದ ಕೂಡಿದ ಉತ್ತಮ ಕೃತಿ. ಕೃಶವಾದರೂ ಮಾಂಸಖಂಡಯುಕ್ತವಾದ ಶರೀರ. ಹೊಳೆಯುವ ಕಣ್ಣುಗಳು, ಗರ್ಜಿಸು ತ್ತಿರುವ ಬಾಯಿ, ಇವು ಸಿಂಹದ ಶಕ್ತಿಯನ್ನೂ ರೌದ್ರತೆಯನ್ನೂ ನಿರೂಪಿಸುತ್ತವೆ. 10-12ನೆಯ ಶತಮಾನಗಳಲ್ಲಿ ಚೀನದ ಟಾಂಗ್ ಆಡಳಿತ ಆಗ್ನೇಯದ ಕಡೆಯಿಂದ ಬಂದ ಆಕ್ರಮಣಕಾರರಿಂದ ನಾಶವಾಯಿತು. 13ನೆಯ ಶತಮಾನದಲ್ಲಿ ಅದನ್ನು ಮಂಗೋಲರು ಆಳಲಾರಂಭಿಸಿದರು. ಅಂತರಿಕ ಗಲಭೆಗಳಿಂದ ಕೂಡಿದ ಈ ಕಾಲದಲ್ಲಿ ಕಲಾಭಿವೃದ್ಧಿಗೆ ಗಮನ ದೊರೆಯಲಿಲ್ಲ. 11ನೆಯ ಶತಮಾನದ ಆದಿಭಾಗದಲ್ಲಿ ಅಧಿಕಾರಕ್ಕೆ ಬಂದ ಸುಂಗ್ ದೊರೆಗಳು ಬೌದ್ಧಧರ್ಮೀಯರು. ರಾಜಕೀಯವಾಗಿ ಅವರು ಆಕ್ರಮಣಕಾರರ ಅಧೀನದಲ್ಲಿದ್ದರು. ಅವರ ಆಶ್ರಯದಲ್ಲಿ ಬೌದ್ಧ ಕಲೆ ಕ್ಷೀಣದಶೆಯಲ್ಲಿತ್ತು. ಆದರೂ ಶಿಲ್ಪಗಳ ಮಾದರಿಯಲ್ಲಿ ಕೃತಿಗಳ ರಚನೆ ಮುಂದುವರಿಯಿತು. ಹೋಪೇ ಪ್ರಾಂತ್ಯದ ಚೆಂಗ್-ಟಿಂಗ್ ದೇವಾಲಯ ದಲ್ಲಿರುವ 13.7ಮೀ. ಎತ್ತರದ ಕಂಚಿನ ಕುಅನ್-ಯಿನ್ ಶಿಲ್ಪ ಈ ಕಾಲದ (971) ಉತ್ತಮ ಕೃತಿ. ಇದು ಚೀನದ ಅತ್ಯಂತ ಎತ್ತರವಾದ ಕಂಚಿನ ಶಿಲ್ಪ. ಪೂರ್ಣವಾಗಿದ್ದಾಗ 42 ಕೈಗಳಿದ್ದ ಈ ಬೃಹತ್ಕೃತಿ ಬಹಳ ಗಮನಾರ್ಹವೂ ಅದ್ಭುತವೂ ಆಗಿದ್ದಿರಬೇಕು. ಈಗ ಬಹುಮಟ್ಟಿಗೆ ಒಡೆದು ವಿರೂಪಗೊಂಡಿದೆ.

ಅಮೃತಶಿಲಾ ಸಿಂಹ

ಉತ್ತರ ಭಾಗದಲ್ಲಿ ಬೌದ್ಧಧರ್ಮ ತಾತ್ತ್ವಿಕ ದೃಷ್ಟಿಯಿಂದಲ್ಲದಿದ್ದರೂ ಜನಪ್ರಿಯ ಪಂಥವಾಗಿ ಉಳಿದಿತ್ತು. 11–13ನೆಯ ಶತಮಾನಗಳಲ್ಲಿ ಅಲೆಮಾರಿ ಪಂಗಡಗಳ ಆಶ್ರಯದಲ್ಲಿ ಈ ಧರ್ಮ ಸ್ವಲ್ಪ ಪ್ರಭಾವಗಳಿಸಿತ್ತು. ಉತ್ತರ ಷಾನ್‌ಸೀ ಪ್ರಾಂತ್ಯದ ವು ಟೈ ಷಾನ್ ಈ ಪಂಥದ ಕೇಂದ್ರವಾಗಿತ್ತು. ಷಾನ್ಸೀ ಮತ್ತು ಹೋಪೇ ಪ್ರಾಂತ್ಯಗಳಲ್ಲಿ ಮತ್ತು ಮಹಾಗೋಡೆಯ ಉತ್ತರ ಭಾಗಕ್ಕೆ ಅನೇಕ ದೇವಾಲಯಗಳ ನಿರ್ಮಾಣ ವಾಯಿತು. ಆ ಮಂದಿರಗಳಲ್ಲಿರುವ ಶಿಲ್ಪಗಳಲ್ಲಿ ಎರಡು ಪ್ರತ್ಯೇಕ ಶೈಲಿಗಳಿವೆ. ಮೊದಲನೆಯದು ಕಲ್ಲಿನ ಶಿಲ್ಪಗಳಲ್ಲಿ ಕಂಡುಬಂದಿರುವ ಪ್ರಾಚೀನ ಪರಂಪರಾಗತ ಶೈಲಿ. ಪ್ರಾಚೀನ ಕಲಾಕೇಂದ್ರವಾದ ಯುನ್ ಕಾಂಗ್‌ನಲ್ಲಿ ಈ ಶೈಲಿಯ ಉತ್ತಮ ಕೃತಿಗಳು ನಿರ್ಮಿತವಾದವು. ಅಲ್ಲಿಯ ಅಪೂರ್ಣ ವಿಶಾಲ ಗುಹೆಯೊಂದರಲ್ಲಿ ಇಬ್ಬರು ಬೋಧಿಸತ್ತ್ವರ ನಡುವೆ ಇರುವ ಪದ್ಮಾಸನಸ್ಥ ಬುದ್ಧನ ದೊಡ್ಡ ವಿಗ್ರಹ ಗಮನಾರ್ಹ. ಪಾವೋ ಟಿಂಗ್‌ನ ಸುತ್ತ ಇರುವ ಅನೇಕ ಶಿಲ್ಪಗಳೂ ಈ ಶೈಲಿಗೆ ಸೇರಿದವು. ಎರಡನೆಯ ಶೈಲಿಯ ಕೃತಿಗಳನ್ನು ಬಹುವಾಗಿ ಜೇಡಿಮಣ್ಣು ಮತ್ತು ಮರದಿಂದ ಮಾಡಲಾಗುತ್ತಿತ್ತು. ಚೀನದ ಆವರೆಗಿನ ಶಿಲ್ಪಕಲೆಯ ಮಾದರಿಗಳಿಂದ ಬಹುಮಟ್ಟಿಗೆ ಪ್ರತ್ಯೇಕವಾದ ಈ ಶೈಲಿಯಲ್ಲಿ ಟಾಂಗ್ ಶಿಲ್ಪದ ಕೆಲವು ಲಕ್ಷಣಗಳಿದ್ದರೂ, ಇದು ಆ ಶೈಲಿಯ ಅಂಧಾನುಕರಣೆಯಲ್ಲ. ಜೀವಂತ ಕಳೆಯಿಂದ ಕೂಡಿದ ಈ ಕೃತಿಗಳ ಆಹ್ಲಾದಕರ ಸರಳ ನೈಜತೆ ಗಮನಾರ್ಹ. ಪದ್ಮಾಸನದಲ್ಲಿರುವ ಗಿಡ್ಡ ಕಾಲುಗಳು, ನೇರವೂ ನೀಳವೂ ಆದ ಮುಂಡ, ಸ್ವಲ್ಪ ಹಿಂದಕ್ಕೆ ವಾಲಿದಂತಿರುವ ತಲೆ ಈ ಲಕ್ಷಣಗಳಿಂದ ಕೂಡಿದ ಈ ಶಿಲ್ಪಗಳ ಉತ್ತಮ ನಿದರ್ಶನವೆಂದರೆ ಷಾನ್‌ಸೀ ಪ್ರಾಂತ್ಯದ ಫ್ಲಿಯ-ಹುಲ-ಯೆನ್-ಸುದಲ್ಲಿ ಬೋಧಿಸತ್ತ್ವ ಮತ್ತು ದ್ವಾರ ಪಾಲಕರಿಂದ ಸುತ್ತುವರಿಯಲ್ಪಟ್ಟ ಮೂರು ಬುದ್ಧನ ವಿಗ್ರಹಗಳು (1038). ದೊಡ್ಡ ಕಮಲದ ಮೇಲೆ ಅಂದವಾದ ಬಣ್ಣಗಳಿಂದ ಅಲಂಕೃತವಾದ ಮರದ ಪ್ರಭಾವಳಿಯಿಂದ ಕೂಡಿದ ಶಾಕ್ಯಮುನಿ ಬುದ್ಧನನ್ನು ಪ್ರತಿಯೊಂದರಲ್ಲೂ ರೂಪಿಸಲಾಗಿದೆ. ಜೇಡಿಮಣ್ಣಿನ ವಿಗ್ರಹಗಳಿಗೆ ಬಣ್ಣಗಳನ್ನು ಹಚ್ಚಲಾಗಿದೆ. ಪ್ರಮಾಣಬದ್ಧ ದೇಹ, ಸರಳವೂ ಅಂದವೂ ಆದ ಉಡುಪಿನ ಮಡಿಕೆಗಳು, ಮುಖದ ಗಾಂಭೀರ್ಯ ಇವು ಈ ಮೂರ್ತಿಗಳ ಸೌಂದರ್ಯವನ್ನು ಹೆಚ್ಚಿಸಿವೆ. ಬೋಧಿಸತ್ತ್ವ ವಿಗ್ರಹಗಳು ಸಹ ಅಷ್ಟೇ ಸುಂದರವೂ ಗಮನಾರ್ಹವೂ ಆದಂಥವು


ಶಾಕ್ಯಮುನಿ ಬುದ್ಧ, ಹೊಳಪು ಕಂಚು. 11ನೆಯ ಶತಮಾನ


ಲೋಹನ್ ಶಿಲ್ಪ (1099)

ಕ್ಯಾನ್ಸಾಸ್ ನಗರದ ನೆಲ್ಸನ್ ಕಲಾಶಾಲೆಯಲ್ಲಿ 11–12ನೆಯ ಶತಮಾನಗಳಿಗೆ ಸೇರಿದ ಕಂಚಿನ ಶಾಕ್ಯಮುನಿ ಬುದ್ಧ ವಿಗ್ರಹವಿದೆ. ದುಂಡು ಮುಖ, ಮಾಟವಾದ ಕಣ್ಣುರೆಪ್ಪೆಗಳು, ಸುಂದರವಾದ ಬಾಯಿ, ಪ್ರಮಾಣ ಬದ್ಧವಾದ ದೇಹಕ್ಕೆ ಹೊಂದಿಕೊಂಡ ಉಡುಪು – ಇವುಗಳಿಂದ ಕೂಡಿದ ಕುಶಲಶಿಲ್ಪವಿದು.

12–14ನೆಯ ಶತಮಾನಗಳಲ್ಲಿ ನಿರ್ಮಿಸಲಾದ ಮರದ ಕೃತಿಗಳೂ ಟ್ಯಾಂಗ್ ಕಾಲದ ಅನಂತರ ಸೃಷ್ಟಿಯಾದ ಬೌದ್ಧಶಿಲ್ಪಗಳ ಉತ್ತಮ ನಿದರ್ಶನಗಳು. ಇವು ಅಧಿಕ ಸಂಖ್ಯೆಯಲ್ಲಿ ಉಳಿದುಬಂದಿವೆ. ಈ ಶಿಲ್ಪಗಳಿಗೂ ಗೋಡೆಗಳ ಮೇಲೆ ರಚಿಸಿದ ವರ್ಣಚಿತ್ರಗಳಿಗೂ ಬಹಳ ಹೋಲಿಕೆಗಳುಂಟು. ವಿದೇಶೀ ಪ್ರಭಾವಗಳು, ಮುಖ್ಯವಾಗಿ ಭಾರತೀಯ ಪ್ರಭಾವಗಳು, ಈ ಕಾಲದಲ್ಲಿ ವಿರಳವಾಗಿ, ಚೀನೀ ಶೈಲಿ ಬೆಳೆದು ಬಂತು. ವಿಗ್ರಹಗಳ ಧಾರ್ಮಿಕ ಸ್ವರೂಪಕ್ಕೆ ಗಮನ ನೀಡದೆ, ನೈಜವಾದ ತುಂಬುದೇಹದ ಮತ್ತು ನೋಡುವವರಿಗೆ ಆಹ್ಲಾದ ನೀಡುವ ಸುಂದರರೂಪಗಳನ್ನು ಬಿಡಿಸುವ ಪ್ರಯತ್ನ ನಡೆಯಿತು. ಚಲನಾತ್ಮಕವಾದ, ಜೀವಂತ ಕಳೆಯನ್ನು ಸೂಸುವ, ಸಂಪದ್ಭರಿತವಾದ ಮೂರು ಆಯಾಮಗಳ ಕಲ್ಪನೆ ಇದರ ಗುರಿಯಾಗಿದ್ದಂತೆ ಕಾಣುತ್ತದೆ. ಷಾನ್ ಸೀಯ ಕುಅಂಗ್-ಸ್ಸು ಎಂಬಲ್ಲಿಯ

ಕುಅನ್-ಯಿನ್, ಬೋಧಿಸತ್ತ್ವ, ವರ್ಣರಂಜಿತ ಮರ. ಸು. 1150

ಮೇಲ್ಗುಹೆಯಲ್ಲಿರುವ, ಸಿಂಹದ ಮೇಲೆ ಕುಳಿತ ಮಂಜುಶ್ರೀ ಮತ್ತು ಆನೆಯ ಮೇಲೆ ಕುಳಿತ ಸಮಂತಭದ್ರ ಬೋಧಿಸತ್ತ್ವರ ಮಧ್ಯೆ ಕುಳಿತ ಗೌತಮಬುದ್ಧ (ಸು. 1150) ಈ ಕಲೆಯ ಉತ್ತಮ ನಿದರ್ಶನ. ಆನೆಯನ್ನು ಅಂಕುಶದಿಂದ ಚುಚ್ಚಿ ನಡೆಸುತ್ತಿರುವ ಭಾರತೀಯ ಸೇವಕನ ಮತ್ತು ಸಿಂಹವಾಹನ ಮಂಜುಶ್ರೀಯ ಶಿಲ್ಪಗಳಲ್ಲಿ ನಾಟಕೀಯತೆಯೂ ನೈಜತೆಯೂ ಬೆರೆತಿವೆ. ಕ್ಯಾನ್ಸಾಸ್ ನಗರದ ನೆಲ್ಸನ್ ಕಲಾಶಾಲೆಯಲ್ಲಿರುವ 12–13ನೆಯ ಶತಮಾನಗಳಿಗೆ ಸೇರಿದ, ವಿವಿಧ ವರ್ಣಲೇಪಿತವಾದ, ಮರದ ಕುಅನ್-ಯಿನ್ ಬೋಧಿಸತ್ತ್ವ ವಿಗ್ರಹವೊಂದುಂಟು. ಇದೊಂದು ಸೂಕ್ಷ್ಮ ಕೆತ್ತನೆ, ಪದ್ಮದ ಮೇಲೆ ಸರಳವಾಗಿ ಮಹಾರಾಜ ಲೀಲಾಭಂಗಿಯಲ್ಲಿ ಕುಳಿತ ಮೂರ್ತಿಯದು. ಆಸನದ ಮೇಲೆ ಇಟ್ಟ ಬಲಗಾಲು; ಮೊಳಕಾಲಿನ ಮೇಲೆ ಊರಿದ ನೀಳ ಬಲಗೈ; ಆಸನದ ಮುಂಭಾಗದಲ್ಲಿ ತೂಗುತ್ತಿರುವ ಎಡಗಾಲು; ತಳದಲ್ಲಿ ಪದ್ಮ, ಥಟ್ಟನೆ ಎದ್ದು ಬರಲಿರುವಂತೆ ಕಾಣುವ ಈ ಮೂರ್ತಿಯಲ್ಲಿ ಇಹಲೋಕ ವಿಮುಖನಾದ ಬೋಧಿಸತ್ತ್ವನ ಪಾರಮಾರ್ಥಿಕತೆ ಕಾಣುವುದಿಲ್ಲ. 14ನೆಯ ಶತಮಾನದ ವೇಳೆಗೆ ಈ ಶೈಲಿ ಕ್ಷೀಣವಾಗತೊಡಗಿತು. ಅಂಗಸೌಷ್ಠವವಿಲ್ಲದ, ಒರಟಾದ, ಅಕುಶಲವಾದ ದಪ್ಪ ಶಿಲ್ಪಗಳು ಕಂಡುಬಂದುವು.

ಬುದ್ಧನ ಪರಿಚಾರಕ ವರ್ಗ ಹಾಗೂ ಟಾವೋ ಧರ್ಮದ ಅನುಯಾಯಿಗಳ ಸಮ್ಮಿಳನದಿಂದ ಹುಟ್ಟಿದ ಲೋಹನ್ ವಿಗ್ರಹಗಳು ಈ ಕಾಲದಲ್ಲಿ ಹೆಚ್ಚಾಗಿ ನಿರ್ಮಾಣವಾದುವು. ಕುಶಲ ಶಿಲ್ಪಿಗಳು ಪ್ರೌಢ ಚಿತ್ರಕಾರರ ಮಾದರಿಗಳನ್ನು ಅನುಸರಿಸಿ ಲೋಹನ್ ಶಿಲ್ಪಗಳನ್ನು

ರಚಿಸುತ್ತಿದ್ದರು. ದಕ್ಷಿಣ ಚೀನದ ಷೆನ್ ಸೀ ಪ್ರಾಂತ್ಯದಲ್ಲಿ 1099ರಲ್ಲಿ ನಿರ್ಮಿಸಿದ ಲೋಹನ್ ಶಿಲ್ಪದಲ್ಲಿ ಸರಳ ನಿರೂಪಣೆಯಿದೆ. ಮರದಲ್ಲಿ ಮಾಡಿದ ಬೋಧಿಸತ್ತ್ವ ವಿಗ್ರಹಗಳನ್ನು ಇದು ಹೋಲುತ್ತದೆ. ಈ ಶೈಲಿ ಬಹಳ ಕಾಲ ರೂಢಿಯಲ್ಲಿದ್ದು, 17ನೆಯ ಶತಮಾನದ ಕುಅನ್-ಯಿನ್ ಶಿಲ್ಪಗಳಲ್ಲೂ ಪ್ರತಿಬಿಂಬಿತವಾಯಿತು. ಈ ಶಿಲ್ಪಗಳ ತಂತ್ರ ಸಹ ವಿನೂತನವಾದದ್ದು. ಜೇಡಿಮಣ್ಣಿನ ಮೂಲ ವಿಗ್ರಹದ ಮೇಲೆ ಅರಗಿನಲ್ಲಿ ತೋಯಿಸಿದ ಬಟ್ಟೆಯನ್ನು ಮೆತ್ತಿ ಆಕೃತಿಯನ್ನು ರೂಪಿಸಿ ಮೇಲ್ಮೈಯಲ್ಲಿ ಅರಗನ್ನು ದಪ್ಪವಾಗಿ ಲೇಪಿಸಿ, ಅದರಲ್ಲಿ ಅಂಗಗಳನ್ನು ಸೂಕ್ಷ್ಮವಾಗಿ ಬಿಡಿಸಲಾಗುತ್ತಿತ್ತು. ಅನಂತರ ಒಳಗಿನ ಜೇಡಿಮಣ್ಣನ್ನು ಕೊರೆದು ತೆಗೆಯುತ್ತಿದ್ದುದರಿಂದ ಶಿಲ್ಪ ಹಗುರವಾಗುತ್ತಿತ್ತು. ಜಪಾನಿನ ಟೆಂಪ್ಯೋ ವಂಶದ ಕಾಲದಲ್ಲಿ ಇಂಥ ಒಣ ಅರಗಿನ ಶಿಲ್ಪಗಳು ಬಳಕೆಯಲ್ಲಿದ್ದುವು.

ಹೋಪೇ ಪ್ರಾಂತ್ಯದ ಐ-ಚೌ ಗುಹೆಗಳಲ್ಲಿರುವ, ಮೆರುಗುಗೊಳಿಸಿದ ಜೇಡಿಮಣ್ಣಿನ, ಲೋಹದ ಶಿಲ್ಪಗಳಲ್ಲಿ ಪ್ರತಿಕೃತಿಗಳ ಲಕ್ಷಣ ಕಾಣುತ್ತದೆ. ಇಂಥ ಶಿಲ್ಪಗಳ ಉತ್ತಮ ನಿದರ್ಶನವೆಂದರೆ ನ್ಯೂಯಾರ್ಕಿನ ಮೆಟ್ರೋಪಾಲಿಟನ್ ಸಂಗ್ರಹಾಲಯದಲ್ಲಿರುವ ಸಂತನ ಮೂರ್ತಿ. ಧ್ಯಾನ್ಯಮಗ್ನನಾದ ಸಂತ ಉಪದೇಶ ಮಾಡಲು ಸಿದ್ಧನಾಗಿ ಕುಳಿತಂತೆ ಚಿತ್ರಿಸಲಾಗಿದೆ.

11-14ನೆಯ ಶತಮಾನದ ಬೌದ್ಧಶಿಲ್ಪವನ್ನು ಚೀನೀ ಶಿಲ್ಪದ ಕೊನೆಯ ಹಂತವೆಂದು ಪರಿಗಣಿಸಲಾಗಿದೆ. ಬೌದ್ಧ ಧರ್ಮ ಕ್ಷೀಣದೆಶೆ ಹೊಂದಿತ್ತು. ಟಿಬೆಟ್ಟಿನ ಲಾಮ ಪಂಥ ಅನಂತರ ಮೇಲುಗೈ ಪಡೆಯಿತು. ತಾಂತ್ರಿಕ ಆಚಾರಗಳಿಂದ ತುಂಬಿದ್ದ ಈ ಪಂಥದ ಶಿಲ್ಪಗಳಲ್ಲಿ ಭಾರತದ ಬಿಹಾರ ಪ್ರಾಂತ್ಯದ ತಾಂತ್ರಿಕ ವಿಧಿಗಳಿಗೆ ಅನುಗುಣವಾಗಿ ಶಿಲ್ಪನಿರ್ಮಾಣ ಆಯಿತು. ಅದರಲ್ಲಿ ಹೊಸದೇನೂ ಇರಲಿಲ್ಲ. ಚೀನೀ ಶಿಲ್ಪಶೈಲಿಗೆ ಸೇರಿದ್ದೆಂದು ಅದನ್ನು ಪರಿಗಣಿಸಲು ಸಾಧ್ಯವಿಲ್ಲ. (ಬಿ.ಕೆ.ಜಿ.)

**ಚೀನೀ ಸಂಗೀತ :** ಚೀನೀಯರು ತಮ್ಮ ಸಂಗೀತವನ್ನು ಪೂರ್ಣ ಜಗತ್ತಿನ ಪ್ರತಿಬಿಂಬವೆಂದು ಪರಿಗಣಿಸಿ ಅದಕ್ಕೆ ಪವಿತ್ರವಾದ ಸ್ಥಾನವನ್ನು ಕೊಟ್ಟಿದ್ದರು. ಮನುಷ್ಯನ ಇಂದ್ರಿಯಗಳ ತೃಪ್ತಿ ಮಾತ್ರಕ್ಕಾಗಿಯೇ ಸಂಗೀತವನ್ನು ಬಳಸುವ ಪದ್ಧತಿಗಿಂತ ಸತ್ಯತತ್ತ್ವವನ್ನು ಪ್ರತಿಪಾದಿಸುವ ಸುಂದರಮಾರ್ಗವಾಗಿಯೂ ಸಾಧನವಾಗಿಯೂ ಅದನ್ನು ಬಳಸುವ ಪದ್ಧತಿ ರೂಢಿಯಲ್ಲಿತ್ತು.

3000 ವರ್ಷಗಳಿಗೂ ಹಿಂದಿನವಾದ, ಸನಾತನ ಧರ್ಮಜನ್ಯವಾದ ಪುರಾಣ ಮತ್ತು ಐತಿಹ್ಯಗಳ ಕಾಲವನ್ನೇ ಚೀನೀ ಸಂಗೀತ ಚರಿತ್ರೆಯ ಉಗಮ ಕಾಲವೆನ್ನುವುದು ಸಂಪ್ರದಾಯ. ಆ ಕಾಲದಲ್ಲಿ ಆಳಿದ ಪ್ರತಿಯೊಬ್ಬ ಚಕ್ರವರ್ತಿಯೂ ತನ್ನದೇ ಆದ ಒಂದು ಸಂಗೀತಪದ್ಧತಿಯನ್ನು ಪಾಲಿಸಿಕೊಂಡು ಬರುತ್ತಿದ್ದ. ಆ ಚಕ್ರವರ್ತಿಯ ಹೆಸರೂ ಅವನ ಸಂಗೀತ ಪದ್ಧತಿಯ ನಾಮವನ್ನೇ ಸೂಚಿಸುತ್ತಿತ್ತು. ಫೂ (ಫೂ ಲಾಯ್ ಎಂದು ಕರೆವುದಿದೆ) ಎಂಬ ಶಬ್ದ ಪೂ ಷೀ ಎಂಬ ರಾಜನ ಹೆಸರನ್ನು ಅವನ ಕಾಲದ ಸಂಗೀತಪದ್ಧತಿಯ ಹೆಸರನ್ನೂ ಸೂಚಿಸುತ್ತದೆ. ಈತ ಐವರು ಪವಿತ್ರ ದೊರೆಗಳಲ್ಲಿ ಒಬ್ಬನೆನಿಸಿ ಪ್ರಶ.ಪೂ. 2852 ರಲ್ಲಿ ಆಡಳಿತವನ್ನು ಸ್ಥಾಪಿಸಿ ಸಂಗೀತವನ್ನು ಬೆಳೆಸಿದವ.

ಚೀನೀಯರ ತತ್ತ್ವಶಾಸ್ತ್ರ ಮತ್ತು ಅಧ್ಯಾತ್ಮಶಾಸ್ತ್ರಗಳನ್ನೊಳಗೊಂಡ ಸಂಗೀತಶಾಸ್ತ್ರಕ್ಕೆ ಫೂ ಷೀ ಹಾಕಿದ ತಳಹದಿಯೇ ಹಲವಾರು ಶತಮಾನಗಳವರೆಗೂ ರೂಢಿಯಲ್ಲಿತ್ತು. ಚೀನೀಯರ ಪ್ರಧಾನ ವಾದ್ಯಗಳಾಗಿದ್ದ ಚಿನ್ ಮತ್ತು ಸೆ ವಾದ್ಯಗಳೂ ಗೋಳಾಕೃತಿಯ ಕೊಳಲನ್ನು ಹೋಲುವ ಷ್ಯಾನ್ ಮತ್ತು ಷೆಂಙ್ ಎಂಬ ಸುಷಿರವಾದ್ಯಗಳೂ ಈತನಿಂದಲೇ ರೂಪಿಸಲ್ಪಟ್ಟವೆಂದು ತಿಳಿದುಬರುತ್ತದೆ. ಚೀನದ ಪವಿತ್ರ ದೊರೆಗಳಲ್ಲಿ ಮೂರನೆಯವನಾದ ಷೆನ್‍ಯಾಂಗನ ಕಾಲದಲ್ಲಿ ಫ್ಯೂಟೊ ಅಥವಾ ಷ್ಯಾ ಮೌ ಎಂಬ ಸಂಗೀತಪದ್ಧತಿಯೂ ಮತ್ತೊಬ್ಬ ಪವಿತ್ರ ದೊರೆಯಾದ ಹ್ವಾಂಗ್ ಡೀ ಎಂಬುವನ ಕಾಲದಲ್ಲಿ ಷಿಯೆನ್ ಚಿ ಎಂಬ ಸಂಗೀತ ಪದ್ಧತಿಯೂ ರೂಢಿಯಲ್ಲಿತ್ತು. ಈ ಕಾಲದಲ್ಲಿಯೇ ಚೀನೀ ಸಂಗೀತಕ್ಕೆ ಆಧಾರ ಸ್ಥಾಯಿಯಾದ ಹ್ವಾಂಗ್ ಚಿಂಗ್ ಎಂಬ ಮತ್ತು ಲೂ ಎಂಬ ಹನ್ನೆರಡು ಸ್ವರಸ್ಥಾನಗಳ ಕ್ರಮಗಳು ಬಳಕೆಗೆ ಬಂದುವು. ಈ ಪದ್ಧತಿ 20ನೆಯ ಶತಮಾನದವರೆಗೂ ಬಳಕೆಯಲ್ಲಿತ್ತು. ಇತರ ಪವಿತ್ರ ರಾಜರಾಜರಾದ ಷಾ-ಹೌ ಮತ್ತು ಚ್ವಾನ್ ಷ್ಯೂ ಎಂಬುವರ ಕಾಲದಲ್ಲಿ ಚೀನದಲ್ಲಿನ ಸಂಗೀತದ ಸ್ಥಾನಮಾನಗಳ ವಿವರಗಳು ಅಷ್ಟಾಗಿ ತಿಳಿದಿಲ್ಲ. ಅನಂತರದ ವರ್ಷಗಳಲ್ಲಿ ರಾಜ್ಯಭಾರ ನಡೆಸುತ್ತಿದ್ದ ಯು ಎಂಬ ರಾಜನ ಕಾಲದಲ್ಲಿ ಟಾ-ಚ್ಯಾಂಗ್ ಎಂಬ ಸಂಗೀತಪದ್ಧತಿ ರೂಢಿಯಲ್ಲಿತ್ತು. ಷನ್ ರಾಜನ ಕಾಲದಲ್ಲಿ ಮನಶ್ಶಾಸ್ತ್ರ, ತತ್ತ್ವಶಾಸ್ತ್ರ ಮುಂತಾದ ಶಾಸ್ತ್ರಗಳಿಗಿರುವಂತೆಯೇ ಸಂಗೀತದ ಬಗ್ಗೆಯೂ ಒಂದು ಶಾಸ್ತ್ರೀಯ ಅಧ್ಯಯನಕ್ಕೆ ಅವಕಾಶ ಒದಗಿತು. ಸಂಗೀತದ ಪ್ರಭಾವ, ಪಾತ್ರವನ್ನು ಕುರಿತು ಜನ ವಿವೇಚನೆ ಮಾಡಲಾರಂಭಿಸಿದರು. ಈತ ಸಂಗೀತವಾದ್ಯಗಳನ್ನು ಫೂ ಷೀ ಎಂಬುವರ ಕಾಲದ ಭೌತವಿಜ್ಞಾನದ ಆಧಾರದ ಮೇಲೆ 8 ವರ್ಗಗಳನ್ನಾಗಿ ವಿಂಗಡಿಸಿದ. ಪ್ಯಾನ್ ಪೈಪ್ ಎಂಬ ಸುಷಿರವಾದ್ಯ, 5 ತಂತಿಗಳಿದ್ದ ಚ್ಯೂ ಎಂಬ ಸಿತಾರ್ ವಾದ್ಯ ಷನ್ ರಾಜನ ಕಾಲದಲ್ಲಿ ನಿರ್ಮಾಣಗೊಂಡವು. ಈತನ ಕಾಲದ ಸಂಗೀತವನ್ನು ಟಾ-ಷಾವೋ ಎಂದು ಕರೆಯಲಾಗುತ್ತಿತ್ತು. ಈತನೇ ಮೊಟ್ಟ ಮೊದಲಿಗೆ ಸಾಂಪ್ರದಾಯಿಕ ಸಂಗೀತದಲ್ಲಿ ನೃತ್ಯವನ್ನು ಸೇರಿಸಿದವನೆಂದು ತಿಳಿದುಬರುತ್ತದೆ. ಅನಂತರ ರಾಜ್ಯವಾಳಿದ ಟಾಹಿಯ ಎಂಬ ರಾಜ ಟಾಹಿಯ ಎಂಬ ಹೆಸರಿನ ಸಂಗೀತವನ್ನೇ ಬಳಕೆಗೆ ತಂದ.

ಷಾಂಗ್ ಮನೆತನದ ಆಳ್ವಿಕೆಯಲ್ಲಿ ಅವನದೇ ಆದ ಕು ಎಂಬ ವಾದ್ಯ ಮತ್ತು ಚೆಂಗ್ ಎಂಬ ಘಂಟೆ ಬಳಕೆಗೆ ಬಂದಿತೆಂದೂ ಮತಸಂಬಂಧವಾದ ಸಂಗೀತದಲ್ಲಿ ನೃತ್ಯವಿದ್ದು ಹಿಮ್ಮೇಳದಲ್ಲಿ ವಾದ್ಯಮೇಳವೂ ಇರುತ್ತಿತ್ತೆಂದೂ ತಿಳಿದುಬರುತ್ತದೆ. ಈ ಕಾಲಕ್ಕೆ ಸಂಬಂಧಿಸಿದಂಥ ಭೂಸಂಶೋಧನೆಯ ವರದಿಯ ಪ್ರಕಾರ ಅತಿ ಪ್ರಾಚೀನ ವಾದ್ಯವಾದ ಷ್ಯುಯೆನ್ ಎಂಬ ಸುಷಿರವಾದ್ಯವೂ ಮಧುರಸ್ವರವನ್ನು ಕೊಡುವ ನಾದಸ್ತಂಭಗಳೂ ಇದ್ದುವೆನ್ನಲಾಗಿದೆ. ಧರ್ಮನಿಷ್ಠ ತತ್ತ್ವಜ್ಞಾನಿ ಲಾವೋ ಟ್ಸೆಯೂ ಕನ್‍ಫ್ಯೂಷಿಯಸನ ಅನುಯಾಯಿಯಾಗಿದ್ದ ಕಾಂಗ್-ಟ್ಸೀ ಎಂಬುವನೂ ಚೀನದ ಸಂಗೀತಚರಿತ್ರೆಯಲ್ಲಿ ಪ್ರಮುಖ ವ್ಯಕ್ತಿಗಳು; ಲೌಕಿಕ ಮತಸಂಬಂಧವಾದ ಸಂಗೀತದಲ್ಲಿ ಲಕ್ಷ್ಯದ ಪ್ರಾಧಾನ್ಯವನ್ನು ಎತ್ತಿ ಸಾರಿದವರಿವರು. ಚೀನದ ಶ್ರೇಷ್ಠ ಸಾಹಿತ್ಯವನ್ನು ಪರಿಷ್ಕರಿಸಿ ಸಂಗೀತದ ಚಾರಿತ್ರಿಕ ಹಿನ್ನೆಲೆಗೆ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಲು ಅನುಕೂಲ ವಾತಾವರಣ ಇವರ ಕಾಲದಲ್ಲಿ ಒದಗಿತು. ಈಜಿಂಗ್ ಎಂಬ ಚೀನೀ ಕೃತಿಯಲ್ಲಿ ಸಂಗೀತಕ್ಕೆ ಸಂಬಂಧಿಸಿದ ಆಧ್ಯಾತ್ಮಿಕ ತತ್ತ್ವಗಳು ಪ್ರತಿಪಾದಿತವಾಗಿವೆ. ಸ್ಯೂ ಜಿಂಗ್ ಎಂಬ ಕೃತಿಯಲ್ಲಿ ಪದ್ಯಗಳ ಜೊತೆಗೆ ಭಾವಗೀತಗಳೂ ಸಂಗೀತಕ್ಕೆ ಸಂಬಂಧಿಸಿದಂಥ ಹಲವಾರು ಅಂಶಗಳೂ ಉಲ್ಲೇಖಗೊಂಡಿವೆ. ಚರಿತ್ರೆಗೆ ಸಂಬಂಧಿಸಿದಂಥ ಷೂ ಜಿಂಗ್ ಎಂಬ ಕೃತಿಯಲ್ಲಿ ಯೋಕೀ ಎಂಬ ಅಧ್ಯಾಯವಿದೆ. ಸಂಗೀತದ ತತ್ತ್ವಜ್ಞಾನ, ಲಕ್ಷಣ ಮತ್ತು ಮಂತ್ರ ಕ್ರಿಯಾವಿಧಿಗಳಲ್ಲಿ ಸಂಗೀತದ ಪ್ರಾಮುಖ್ಯವನ್ನು ಕುರಿತಂತೆ ಈ ಅಧ್ಯಾಯದಲ್ಲಿ ವಿವರಣೆಗಳಿವೆ. ಚೀನೀ ಲಕ್ಷಣಕಾರನಾದ-ಲೂಫ್ಯೂ-ವೀ ಎಂಬುವ ಷೀ-ಚಿನ್-ಟ್ಸಿಯ ಎಂಬ ಚೀನೀಸಂಗೀತದ ಪ್ರಥಮ ಲಕ್ಷಣಗ್ರಂಥಗಳನ್ನು ಬರೆದಿದ್ದಾನೆ. ಈ ಕಾಲಕ್ಕೆ ಚೀನೀರಾಜಾಸ್ಥಾನಗಳಲ್ಲಿ ವೈವಿಧ್ಯಮಯ ವಾದ್ಯಮೇಳಗಳನ್ನು ಕೂಡಿಸುವುದು ಬಳಕೆಗೆ ಬಂತು. ಸಂಗೀತ, ಸಾಹಿತ್ಯ, ನೃತ್ಯಗಳು ಋತುಹಬ್ಬಗಳಲ್ಲಿಯೂ ಬೇಸಾಯದ ಸಂದರ್ಭಗಳಲ್ಲೂ ಹಾಡುವ ಹಾಡುಗಳುಜಿಇವೇ ಮುಂತಾದವುಗಳನ್ನು ಮದುವೆ ಸಂದರ್ಭಗಳಲ್ಲೂ ಬಳಸುವುದು ರೂಢಿಗೆ ಬಂತು.

ಪ್ರಾಚೀನ ಚೀನೀ ಸಂಗೀತದ ಇತಿಹಾಸ ಚೌ ಮನೆತನದವರೆಗೂ ಬೆಳೆದು ಬಂದಿದ್ದು, ಚಿನ್ ಮನೆತನದ ಷೀ ಹ್ವಾಂಗ್ ಟೀ ಎಂಬ ರಾಜ ಅಂದು ಉಪಲಬ್ಧವಿದ್ದ ಗ್ರಂಥಗಳನ್ನೂ ಸಂಗೀತವಾದ್ಯಗಳನ್ನೂ ನಾಶ ಮಾಡಲು ಆಜ್ಞಾಪಿಸಿದನೆಂದು ತಿಳಿದುಬರುತ್ತದೆ. ಆದಕಾರಣ ಆತನ ಕಾಲವನ್ನು ಚಿನ್ ಕಾಲವೆಂದೇ (ಗ್ರಂಥನಿರ್ಮೂಲನ ಕಾಲ) ಅನ್ವರ್ಥವಾಗಿ ಸಂಬೋಧಿಸಲಾಯಿತು. ಅನಂತರ ಹಾನ್ ಎಂಬ ರಾಜ ಹಲವಾರು ಗ್ರಂಥಗಳನ್ನು ಪ್ರಚುರಪಡಿಸಿದನಲ್ಲದೆ ಭೂಸಂಶೋಧನೆಯನ್ನು ನಡೆಸಿ ಗತಕಾಲದ ಹಲವಾರು ವಾದ್ಯಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸಿದ. ಈ ಸಂಶೋಧನೆಯಲ್ಲಿ ದೊರೆತ ಸ್ಟೋನ್ ಚೈಮ್ ಎಂಬ ವಾದ್ಯದ ಆಧಾರದ ಮೇಲೆ ಮತ್ತಷ್ಟು ವೈವಿಧ್ಯಪೂರ್ಣವಾದ ಹೊಸ ಮಾದರಿಯ ಚೈಮ್ ಎಂಬ ವಾದ್ಯವನ್ನು ಸೃಜಿಸಲಾಯಿತು. ಟ್ಸಿಯಾನ್-ಯೆನ್-ಷೀಯಾನ್ ಎಂಬ ತಜ್ಞನೊಬ್ಬ 64 ಸ್ವರಪದ್ಧತಿಯ ಕ್ರಮವನ್ನು ವಿವರಿಸಿದ. ಸಾಂಪ್ರದಾಯಿಕ ಸಂಗೀತ, ಜಾನಪದ ಸಂಗೀತದ ಮೇಲ್ವಿಚಾರಣೆಗಳಿಗೆ ಸಂಬಂಧಿಸಿದಂತೆ ಇರುವ ಸ್ಥಿರ ಆಧಾರಸ್ಥಾಯಿ ಮುಂತಾದವುಗಳನ್ನು ಸ್ಥಿರಪಡಿಸಲು ವೂ ಎಂಬ ರಾಜ ಯೂ-ಫ್ಯೂ ಎಂಬ ಸಾಮ್ರಾಜ್ಯ ಸಂಗೀತ ಸಂಸ್ಥೆಯನ್ನು ಸ್ಥಾಪಿಸಿದ. ವಿದ್ವಾಂಸನಾದ ಫ್ಯಾಂಗ್ ಎಂಬ ರಾಜ 53 ಮತ್ತು 60 ಸ್ವರಕ್ರಮಗಳನ್ನು ವ್ಯಾಖ್ಯಾನಿಸಿದ. ಪಶ್ಚಿಮ ತುರ್ಕಿಸ್ಥಾನದಿಂದ ಹಲವಾರು ಹೊಸ ಹೊಸ ವಾದ್ಯಗಳು ಚೀನಕ್ಕೆ ಬಂದು ಅವುಗಳ ಬಳಕೆ ಹೆಚ್ಚಾಯಿತು. ಇದೇ ಕಾಲದಲ್ಲಿ ಬೌದ್ಧಮತ ಭಾರತದಿಂದ ಚೀನಕ್ಕೂ ವ್ಯಾಪಿಸಿತು. ಬೌದ್ಧ ಭಿಕ್ಷುಗಳು ತಮ್ಮ ಮಂತ್ರೋಚ್ಚಾರಣೆಯ ಸಂಗೀತದ ಜೊತೆಗೆ ಚೀನದ ವಾದ್ಯವಾದ ಚಿನ್ ಎಂಬ ತಂತೀವಾದ್ಯವನ್ನು ಉಪಯೋಗಿಸಿ ಭಾರತದಲ್ಲಿ ಬಳಕೆಯಲ್ಲಿರುವ ಗಮಕ ತಂತ್ರಗಳನ್ನೂ ನುಡಿಸಲು ಪ್ರಯತ್ನಪಟ್ಟು ಯಶಸ್ವಿಯಾದರು.

ಕಚ್ ರಾಜ್ಯದ ಅವನತಿಯ ಅನಂತರ ಚೀನವು ಪರ್ಷಿಯ ದೇಶದಲ್ಲಿ ಬಳಕೆಯಲ್ಲಿದ್ದ ಕ್ಯಾಂಕ್ ಎಂಬ ತಂತಿವಾದ್ಯವನ್ನು ಕಂಗ್-ಹ್ಯು ಎಂಬ ಹೆಸರಿನಲ್ಲಿ ಬಳಸಿಕೊಂಡು ಪ್ರಧಾನ ವಾದ್ಯವನ್ನಾಗಿ ಮಾರ್ಪಡಿಸಿಕೊಂಡಿತು. ಇದೇ ಮಾದರಿಯ ಹಲವಾರು ಅವನದ್ಧ ವಾದ್ಯಗಳೂ ಘನವಾದ್ಯಗಳೂ ಪರದೇಶದಿಂದ ಬಂದು ಸೇರಿಕೊಂಡವು. ಹಾಟ್‍ಚಂಗ್ ಟಿಯೆನ್ ಎಂಬ ಖಗೋಳಶಾಸ್ತ್ರಜ್ಞ ಸಮಾನಾಂತರ ಶ್ರೇಣಿಯ ಬಗ್ಗೆ ಒಂದು ಪ್ರಬಂಧವನ್ನು ಬರೆದ. ಸಾಂಗ್ ವೆನ್ಲಿ ಎಂಬ ರಾಜನ ಆಸ್ಥಾನದಲ್ಲಿದ್ದ ಟ್ಸಿಯೆನ್-ಯೋ-ಚೀ ಎಂಬ ತಜ್ಞ 360 ಸ್ವರಗಳನ್ನು ಕುರಿತು ವಿಮರ್ಶೆ ಮಾಡಿರುವುದು ತಿಳಿದಿದೆ. ಯಂಗ್-ಮಿಂಗ್ ಎಂಬ ಚಕ್ರವರ್ತಿಯ ಕಾಲದಲ್ಲಿ ನೃತ್ಯ ಕನ್‍ಫ್ಯೂಷಿಯಸನ ಆಚಾರವಿಧಿಗಳಲ್ಲಿ ಪ್ರಮುಖ

ಭಾಗವನ್ನು ಅಳವಡಿಸಿಕೊಂಡಿತು. ಪ್ರಶ.ಪೂ. 586ರಲ್ಲಿ ತುರ್ಕಿಯ ರಾಜಕುಮಾರಿಯೊಬ್ಬಳು ಚೀನದ ರಾಜಕುಮಾರ ವ್ಯೂ-ಟೀ ಎಂಬುವವನನ್ನು ಮದುವೆಯಾಗಿ ಕುಚ ದೇಶಕ್ಕೆ ಸೇರಿದ ಹಲವಾರು ಸಂಗೀತಜ್ಞರನ್ನು ಮತ್ತು ಷ್ಯು-ಚಿಪೋ ಎಂಬ ವಿದ್ವಾಂಸನನ್ನು ತನ್ನೊಡನೆ ಕರೆತಂದಳು. ಪರ್ಷಿಯದ ಹೆಸರುಗಳನ್ನೇ ಹೊಂದಿದ ಏಳು ರಾಗಗಳ ಪರಿಚಯ ಚೀನದಲ್ಲೂ ಆಯಿತು. ಕೋಲಿ, ಭಾರತ, ಬುಕಾರ ಮತ್ತು ಕುಚ ದೇಶಗಳ ವಾದ್ಯಮೇಳಗಳನ್ನನುಸರಿಸಿ ಏಳು ವಿಧವಾದ ವಾದ್ಯಮೇಳಗಳನ್ನು ಚೀನದಲ್ಲಿ ಪ್ರಚಾರಕ್ಕೆ ತರಲಾಯಿತು. ಕುಚ ವಾದ್ಯಮೇಳ 20 ವಾದಕ ಗಾಯಕರನ್ನು ಒಳಗೊಂಡಿತ್ತೆಂದು ತಿಳಿದುಬರುತ್ತದೆ. ಚೀನದ ಸಂಗೀತ 5ನೆಯ ಶತಮಾನದಲ್ಲಿ ಕೊರಿಯಕ್ಕೂ 6ನೆಯ ಶತಮಾನದಲ್ಲಿ ಜಪಾನಿಗೂ ವ್ಯಾಪಿಸಿತು.

ಸುಯಿ ಮನೆತನದವರ ಆಳ್ವಿಕೆಯಲ್ಲಿ ವಾದ್ಯಮೇಳಗಳೂ ಸಂಗೀತಗಾರರೂ ಬುಕಾರ, ಸಮರ್‌ಖಂಡ್, ಕಾಷ್‌ಗರ್ ಮತ್ತು ಕುಚ ದೇಶಗಳಿಂದ ಚೀನಕ್ಕೆ ಆಗಮಿಸಿದರು. ಟಾಂಗ್ ಮನೆತನದವರ ಆಳ್ವಿಕೆಯಲ್ಲಿ ವಾದ್ಯಮೇಳಗಳು ಪುನರುತ್ಥಾನಗೊಂಡು ಮತ್ತಷ್ಟು ಶೋಭಿಸಿದುವು. ನಿರ್ದೇಶಕನ ಸ್ಥಾನಕ್ಕೆಂದೇ ವಾದ್ಯಮೇಳಗಳಲ್ಲಿ ಪ್ರತ್ಯೇಕ ಸ್ಥಳಗಳು ಏರ್ಪಟ್ಟವು. ಮಿಂಗ್ ಹ್ವಾಂಗ್ ಚಕ್ರವರ್ತಿಯ ಕಾಲದಲ್ಲಿ 6 ಮಂದಿ ನಿಂತೂ 8 ಮಂದಿ ಕುಳಿತೂ ನುಡಿಸತಕ್ಕ ವಾದ್ಯಮೇಳಗಳೂ ಬಳಕೆಯಲ್ಲಿತ್ತೆಂಬುದಾಗಿ ತಿಳಿದುಬರುತ್ತದೆ. ಈ ಮೇಳಗಳಲ್ಲಿ ಸು. 500ರಿಂದ 700ರ ವರೆಗೆ ಕಲಾವಿದರು ಪಾಲ್ಗೊಳ್ಳುತ್ತಿದ್ದರೆನ್ನಲಾಗಿದೆ. ಲೀ-ಯೂಯೆನ್ ಎಂಬ ಸಾಮ್ರಾಜ್ಯ ಸಂಗೀತವಿದ್ವತ್‌ಸಭೆ ರಾಜಾಸ್ಥಾನಕ್ಕೆ ಶೋಭಿಸುವಂಥ ಸಂಗೀತ ಮತ್ತು ನೃತ್ಯಪ್ರವೀಣರನ್ನು ಒದಗಿಸುತ್ತಿತ್ತು.

ಸೂಂಗ್ ಮತ್ತು ಟಾಂಗ್ ರಾಜರ ಆಳ್ವಿಕೆಯಲ್ಲಿ ಚೀನದ ಶಾಸ್ತ್ರೀಯ ಸಂಗೀತದ ಪರ್ವಕಾಲವೆನ್ನಬಹುದು. ಲಕ್ಷ್ಯ ಲಕ್ಷಣಗಳೆರಡೂ ಒಂದಕ್ಕೊಂದು ಪೂರಕವಾಗಿ ಅತ್ಯುತ್ತಮವಾದ ಸ್ಥಾನಮಾನಗಳನ್ನು ಪಡೆದಿದ್ದವು. ಟ್ಸೈ-ಯೂಯೆನ್-ಟಿಂಗ್ ಎಂಬ ತಜ್ಞ ಲಕ್ಷಣ ರೀತ್ಯಾ 18 ಸ್ವರಗಳನ್ನೂ ನೂತನ 9 ಸ್ವರಗಳನ್ನೊಳಗೊಂಡ ಒಂದು ಸ್ವರಶ್ರೇಣಿಯ ಬಗ್ಗೆಯೂ ಸಂಶೋಧನೆ ನಡೆಸಿದ. ರಾಜರ ಆಸ್ಥಾನಕ್ಕೆ ಸೇರಿಕೊಂಡಂತೆ ಅತ್ಯುನ್ನತ ನಾಟಕಗೃಹವೂ ನಿರ್ಮಾಣವಾಯಿತು. ಹೀಗಾಗಿ ಸಂಗೀತದಲ್ಲಿ ಇದ್ದ ಮಡಿವಂತಿಕೆ ಸ್ವಲ್ಪ ಸಡಿಲವಾಗಿ ಲಘು ಸಂಗೀತವೂ ಬಳಕೆಗೆ ಬರಲಾರಂಭಿಸಿತು.

ಯೂಯಾನ್ ಅಥವಾ ಮಂಗೋಲಿಯನ್ನರ ಆಳ್ವಿಕೆಯ ಕಾಲದಲ್ಲಿ ಚೀನದ ಸಂಗೀತಕ್ಕೆ ಹೆಚ್ಚಿನ ಮಹತ್ತ್ವ ಬಂತು. ರಾಜರು ಸ್ಥಳೀಯ ಸಂಗೀತವನ್ನೂ ಕಲಾವಿದರನ್ನೂ ಪ್ರೋತ್ಸಾಹಿಸುವುದರ ಜೊತೆಗೆ ಹಲವಾರು ವೈವಿಧ್ಯಮಯ ವಾದ್ಯಗಳನ್ನೂ ತಮ್ಮದೇ ಆದ ನೂತನ ಸ್ವರಶ್ರೇಣಿಗಳನ್ನೂ ಜನತೆಗೆ ಪರಿಚಯ ಮಾಡಿಸಿದರು. ಆವೇಶಪೂರಿತ ಭಾಷಣ, ವೈವಿಧ್ಯಮಯ ಸಂಗೀತ, ಮೂಕನಾಟಕ ಪ್ರದರ್ಶನ ಮುಂತಾದ ಭಾಗಗಳನ್ನೊಳಗೊಂಡು ನಾಟಕ ನವಚೈತನ್ಯವನ್ನು ತಾಳಿತು. ಇದನ್ನು ಮತ್ತಷ್ಟು ಪ್ರೋತ್ಸಾಹಿಸಿ ನಾಟಕದ ಮಹತ್ತ್ವವನ್ನು ರಾಜರು ಹೆಚ್ಚಿಸಿದರು. ಸಂಗೀತದಿಂದಾಗಿ ನಾಟಕಕ್ಕೆ ಹೊಸ ಮೆರಗು ಬಂತು.

ಟ್ಸೈ-ಯು ಎಂಬ ರಾಜ ವೈಜ್ಞಾನಿಕ ದೃಷ್ಟಿಯಿಂದ ಸಮಾನಾಂತರ ಸ್ವರಶ್ರೇಣಿಯ ಸೂತ್ರವನ್ನು ಸ್ಪಷ್ಟಪಡಿಸಿದ. ಚೀನೀ ಸಂಗೀತವನ್ನು ಪ್ರತಿಪಾದಿಸುವ ಹಲವಾರು ಅಮೂಲ್ಯ ಬೃಹತ್ ಗ್ರಂಥಗಳನ್ನು ಪ್ರಚುರಪಡಿಸಿದ. ಇದೇ ಕಾಲದಲ್ಲಿ ರೋಮನರ ದೇವಾಲಯದ ಸಂಗೀತ (ಚರ್ಚ್ ಮ್ಯೂಸಿಕ್) ಚೀನದಲ್ಲೂ ಆಚರಣೆಗೆ ಬಂತು. ಪಾದ್ರಿಗಳಲ್ಲದೆ ಧರ್ಮಪ್ರಚಾರಕ ಸಂಸ್ಥೆಗಳೂ ಸಂಗೀತಗ್ರಂಥಗಳನ್ನು ಪ್ರಚುರಪಡಿಸದವು. ಚಿಂಗ್ ರಾಜರ ಆಳ್ವಿಕೆಯಲ್ಲಿ ಪಾಶ್ಚಾತ್ಯ ಸಂಗೀತದ ಪ್ರಭಾವ ಸಾಕಷ್ಟಿತ್ತು. ಪೆರೇರ ಮತ್ತು ಪೇಡ್ರಿನಿ ಎಂಬ ತಜ್ಞರು ಸಂಸ್ಥಾನದ ಸಂಗೀತ ಪ್ರಾಧ್ಯಾಪಕರಾಗಿ ನೇಮಕವಾದರು. ಪೇಡ್ರಿನಿ ಎಂಬಾತ ಹಲವಾರು ವಾದ್ಯಗಳನ್ನೂ ಪೆರಿ ಏಮಿಯಟ್ ಎಂಬ ಲಾಕ್ಷಣಿಕ ಪ್ರಖ್ಯಾತ ಚೀನೀ ಸಂಗೀತದ ಲಕ್ಷಣ ಗ್ರಂಥವನ್ನೂ ಬರೆದರು. 19ನೆಯ ಶತಮಾನದಲ್ಲಿ ಷೆಂಗ್ ಮುಂತಾದ ವಾದ್ಯಗಳು ಬಳಕೆಗೆ ಬಂದುವು. ಕಾಲಕ್ರಮೇಣ ಶಾಸ್ತ್ರೀಯ ನಾಟಕ ಮತ್ತು ಸಂಗೀತದಲ್ಲಿ ಸ್ವಲ್ಪ ಇಳಿಮುಖ ಕಂಡುಬಂತು. ಕಲಾವಿದರು ಅವುಗಳಲ್ಲಿ ಇಟ್ಟಿದ್ದ ಪವಿತ್ರ ಭಾವನೆಯನ್ನು ಒತ್ತಟ್ಟಿಗಿಡಲು ಪ್ರಾರಂಭಿಸಲಾಗಿ ತಮ್ಮ ಶ್ರೇಷ್ಠ ಸ್ಥಾನಮಾನಗಳನ್ನು ಕಳೆದುಕೊಳ್ಳಬೇಕಾಯಿತು. 1912ರಲ್ಲಿ ಚಕ್ರವರ್ತಿಯ ಆಳ್ವಿಕೆ ಕೊನೆಗೊಂಡು ಪ್ರಜಾಪ್ರಭುತ್ವ ಸ್ಥಾಪಿತವಾಯಿತು.

20ನೆಯ ಶತಮಾನದಲ್ಲಿ ಸ್ಥಳಜನ್ಯ ಚೀನೀ ಸಂಗೀತದೊಂದಿಗೆ ಪಾಶ್ಚಾತ್ಯ ಸಂಗೀತವೂ ಕೂಡಲಾರಂಭಿಸಿತು. ಆಧುನಿಕ ಶಿಕ್ಷಣ ಕ್ರಮ, ವಾದ್ಯಮೇಳಗಳ ರಚನೆ ಮುಂತಾದವುಗಳಲ್ಲಿ ಐರೋಪ್ಯ ಸಂಗೀತದ ಅನುಕರಣೆಯಾಗಿದೆ. ಚೀನದ ಪ್ರಾಚೀನ ಸಂಸ್ಥಾನ ಸಂಗೀತ ಪದ್ಧತಿಯ ಕುರುಹು ಈಗ ಸ್ವಲ್ಪಮಟ್ಟಿಗೆ ಜಪಾನೀ ಸಂಗೀತದಲ್ಲಿ ಉಳಿದಿರುವುದನ್ನು ಕಾಣಬಹುದು. ಸ್ಥಳಜನ್ಯಸಂಗೀತ ಚೀನದಲ್ಲಿ ಅಲ್ಪವಾಗಿ ಉಳಿದಿದ್ದರೂ ಅದರ ಪ್ರಭಾವ ಪೂರ್ವದೇಶಗಳಲ್ಲಿ ಇಂದಿಗೂ ಕಾಣಸಿಗುತ್ತದೆ. ಹ್ವಾಂಗ್ ಚಂಗ್ ಎಂಬ ಘಂಟೆಯಲ್ಲಿ ಹೊರಡುವ ನಾದವೇ ಪ್ರಾರಂಭ ಸ್ವರವಾಗಿ ಮೊದಲಿಗೆ ಕುಂಗ್ ಎಂದು ಸಂಬೋಧಿಸಲ್ಪಡುತ್ತಿದೆ. ಪ್ರಧಾನ ಪೂರ್ವ ಶೃತಿಸಿದ್ಧವಾದ ವಾದ್ಯಗಳಲ್ಲಿ ಹ್ವಾಂಗ್ ಚಿಂಗ್ ಸ್ವರ ಪಾಶ್ಚಾತ್ಯ ಪದ್ಧತಿಯ D ಯನ್ನು (ಕರ್ನಾಟಕ ಸಂಗೀತದ ರಿ ಸ್ವರ) ಹೋಲುತ್ತದೆ ಎಂದು ಕೆಲವರೂ F ನ್ನು (ಕರ್ನಾಟಕ ಸಂಗೀದ ಮ ಸ್ವರ) ಹೋಲುತ್ತದೆ ಎಂದು ಮತ್ತೆ ಕೆಲವರೂ ಅಭಿಪ್ರಾಯಪಡುವರು.

12 ಲೂ ಅಥವಾ ಸ್ವರಸ್ಥಾನಗಳಿಗೆ ಹ್ವಾಂಗ್ ಚಿಂಗ್ ಸ್ವರವೇ ಆಧಾರವೆಂದು ತಿಳಿದುಬರುತ್ತದೆ. ಈ ಸ್ವರಗಳನ್ನು ಒಂದು ಸ್ಥಾಯಿಯಲ್ಲಿ ಅನುಕ್ರಮವಾಗಿ ಕೆಳಕಂಡಂತೆ ಅಳವಡಿಸಲಾಗಿದೆ. ಈ ಕ್ರಮದಲ್ಲಿ ಸಂಖ್ಯೆಗಳ ಮತ್ತು ಹೆಸರುಗಳ ಸಂಬಂಧ ಹೀಗಿದೆ:




ಈ 12 ಸ್ವರಗಳನ್ನು ಮಂದ್ರ (ಗ್ರೇವ್), ಮಧ್ಯಮ (ಮಿಡ್ಲ್) ಮತ್ತು ಊರ್ಧ್ವ (ಅಕ್ಯೂಟ್) ಎಂಬ ಮೂರು ಸ್ಥಾಯಿ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ. ಈ ಶ್ರೇಣಿಯನ್ನು ಚೀನದ ಕ್ರೊಮ್ಯಾಟಿಕ್ ಸ್ವರಶ್ರೇಣಿ ಎಂದು ಕರೆದರು. ಇದಕ್ಕಿಂತಲೂ ಪ್ರಖ್ಯಾತವಾದ ಪುರಾತನ ಔಡವ ಶ್ರೇಣಿ "ಮ ಪ ದ ಸ ರಿ" ಎಂಬ ಸ್ವರಗಳನ್ನು ಹೊಂದಿದೆ. ಬಹುಶಃ ಚೌ ಆಳ್ವಿಕೆಯಲ್ಲಿ ಸಪ್ತಸ್ವರಗಳನ್ನೊಳಗೊಂಡ ಶ್ರೇಣಿಯನ್ನು ಮತಾನುಸಂಬಂಧವಾದ ಸಂಗೀತದಲ್ಲಿ ಬಳಸಲಾಯಿತು. ಆ ಶ್ರೇಣಿ "ಮ ಪ ದ ನಿ ಸ" ಎಂಬ 7 ಸ್ವರಗಳನ್ನು ಹೊಂದಿದ್ದು ಔಡವ ಶ್ರೇಣಿಗೆ 4ನೆಯ ನಿ ಮತ್ತು 7ನೆಯ ಗ ಎಂಬ ಎರಡು ಹೊಸ ಸ್ವರಗಳು ಸೇರಲ್ಪಟ್ಟವು.

ಚೀನ ಮಂಗೋಲಿಯನ್ನರ ಆಳ್ವಿಕೆಗೆ ಬಂದ ಅನಂತರ ಯೂಆನ್ ಆಳ್ವಿಕೆಯ ಕಾಲದಲ್ಲಿ ಮಧ್ಯ ಏಷ್ಯದಲ್ಲಿ ಬಳಕೆಯಲ್ಲಿದ್ದ ಒಂದು ಶ್ರೇಣಿ ಯೂಆನ್ ಎಂಬ ಹೆಸರಿನಿಂದ ಬಳಕೆಗೆ ಬಂತು. ಕಾಲಕ್ರಮೇಣ 9 ಸ್ವರಗಳನ್ನುಳ್ಳ ಶ್ರೇಣಿಯಲ್ಲಿ ಎರಡು ಸ್ವರಗಳನ್ನು ಸಹಾಯಕ ಸ್ವರಗಳೆಂದು ತೆಗೆದುಕೊಂಡು ರೂಪಿಸಿದ ಒಂದು ಹೊಸ ಶ್ರೇಣಿ ಬಳಕೆಗೆ ಬಂದಿತು.

ಚೀನೀ ಸಂಗೀತವಾದ್ಯಗಳಲ್ಲಿ ಚರ್ಮವನ್ನು ಬಿಗಿದ ಹಲವಾರು ವಾದ್ಯಗಳನ್ನು ಕಾಣಬಹುದು. ಅವುಗಳಲ್ಲಿ ಅವರ್ ಗ್ಲಾಸ್ ಡ್ರಮ್, ಕೆಟಲ್ ಡ್ರಮ್. ಬ್ಯಾರೆಲ್ ಡ್ರಮ್ ಮುಂತಾದವು ಗಮನಾರ್ಹ. ಇವಲ್ಲದೆ ಹಲವಾರು ಸುಷಿರವಾದ್ಯಗಳೂ ತಂತಿವಾದ್ಯಗಳೂ ಇವೆ. ಚೀನದ ಸಂಗೀತವನ್ನು ನಾಲ್ಕಾರು ಬಗೆಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಕ್ರಿಯಾವಿಧಿಗಳಲ್ಲಿ ಬಳಸುವ ಸಂಗೀತ (ರಿಚುಯಲ್ ಮ್ಯೂಸಿಕ್), ಗೃಹಸಂಗೀತ (ಚೇಂಬರ್ ಮ್ಯೂಸಿಕ್), ಗೀತನಾಟಕಗಳು(ಮ್ಯೂಸಿಕಲ್ ಡ್ರಾಮ), ಪಕ್ಕವಾದ್ಯಗಳ ಸಮೇತ ಹಾಡುವ ಸಂಗೀತ (ಮಿನ್‌ಸ್ಟ್ರೆಲ್‌ಸೀ)—ಇವು ಮುಖ್ಯವಾದುವು. ಚೀನೀ ಜಾನಪದ ಸಂಗೀತ ಹೆಚ್ಚು ಜನಪ್ರಿಯವಾಗಿದೆ. ಈ ಪ್ರಭೇದಗಳಲ್ಲಿ ಒಂದು ಮತ್ತು ಎರಡನೆಯ ವರ್ಗದ ಸಂಗೀತವನ್ನು ಶಾಸ್ತ್ರೀಯ ಸಂಗೀತವೆಂತಲೂ ಉಳಿದವನ್ನು ಜನಪ್ರಿಯ ಸಂಗೀತವೆಂತಲೂ ಕರೆಯಲಾಗಿದೆ.

(ಎಂ.ವಿ.ಆರ್.ಎ.)

**ಚೀನೀ ಸಾಹಿತ್ಯ :** ಪ್ರಪಂಚದ ಪ್ರಾಚೀನ ಸಾಹಿತ್ಯಗಳಲ್ಲೊಂದು. ಕ್ರಿಸ್ತಪೂರ್ವ ಕಾಲದಿಂದಲೂ ಇದು ಅವಿಚ್ಛಿನ್ನವಾಗಿ ಸಾಗಿಬಂದಿದೆ. ಚೀನೀ ಸಾಹಿತ್ಯವನ್ನು, ಅದರ ಬಹುಮುಖ ವೈವಿಧ್ಯವನ್ನು ಗಮನಿಸದೆ ಅಧ್ಯಯನ ಮಾಡಲು ಸಾಧ್ಯವಿಲ್ಲ. ಚೀನ ಕಾಗದ ಹಾಗೂ ಮುದ್ರಣವನ್ನು ಕಂಡುಹಿಡಿದ ಮೊಟ್ಟಮೊದಲ ದೇಶ; ಅದು ಗ್ರಂಥಗಳ ನಾಡು. ಹಾನ್ ಸಮ್ರಾಟ ಜುಂಗ್ (ಪ್ರಶ.ಪೂ. 32-7) ಚೀನದಲ್ಲಿ ರಚಿತವಾದ ಎಲ್ಲ ಗ್ರಂಥಗಳನ್ನೂ ಸಂಗ್ರಹಿಸುವಂತೆ ಅಪ್ಪಣೆ ಮಾಡಿದ. ಅವನ ಇಬ್ಬರು ಸಚಿವರಾದ ಲಿಯು ಷಿಯಂಗ್ ಮತ್ತು ಲಿಯು ಷಿನ್ (ತಂದೆ ಮತ್ತು ಮಗ) ದೇಶಾದ್ಯಂತ ಸಂಗ್ರಹಿಸಿದ ಗ್ರಂಥಗಳನ್ನು ಸಾರಾಂಶಗೊಳಿಸಿ ಸಾಮ್ರಾಟನಿಗಾಗಿ ಗ್ರಂಥಸೂಚಿಯೊಂದನ್ನು ತಯಾರಿಸಿದರು. ಹಾನ್ ಸಂತತಿಯ (ಪ್ರಶ.ಪೂ. 206 ರಿಂದ ಪ್ರಶ. 220) ಪ್ರಸಿದ್ಧ ಇತಿಹಾಸಕಾರ ಬಾನ್ ಗೂ (ಪ್ರಶ. 32-92) ಹಾನ್ ಸಂತತಿಯ ಹಾನ್ ಷು ಅಧಿಕೃತ ಇತಿಹಾಸ ಗ್ರಂಥದಲ್ಲಿ 13,269 ಮುಖ್ಯ ಗ್ರಂಥಗಳನ್ನು ದಾಖಲೆ ಮಾಡಿದ್ದಾನೆ. ಪ್ರಶ. 2ನೆಯ ಶತಮಾನಕ್ಕೆ ಹಿಂದೆ ಚೀನದಲ್ಲಿ ಬರೆದ ಗ್ರಂಥಗಳ ಸಂಖ್ಯೆ ಅಷ್ಟು ಅಪಾರ. ಮಿಂಗ್ ಸಂತತಿಯ ಸಮ್ರಾಟ ಜಂಗ್-ಟ್ಸು (ಪ್ರಶ. 1403-1424) ಹಾನ್ ಸಂತತಿಯ ಜಂಗನ ಆದೇಶವನ್ನು ಮುಂದುವರಿಸಿದಾಗ ಪ್ರಶ. 1403-1406ರ ನಡುವೆ ಒಂದು ದಶಲಕ್ಷ ಗ್ರಂಥಗಳು ರಾಜ್ಯದ ಎಲ್ಲ ಭಾಗಗಳಿಂದ ಸಂಗ್ರಹವಾಗಿ ಪೀಕಿಂಗ್ ನಗರದ ಹೊಸ ಅರಮನೆಯ ಗ್ರಂಥಾಲಯವನ್ನು ಸೇರಿದವು. ಈ ಸಂಗ್ರಹವನ್ನು ಯಂಗ್-ಲಿ-ಟ-ಟಿಯೆನ್ (ಯುಂಗ್-ಲಿ ಯುಗದ ಅಮೋಘ ಸಂಗ್ರಹ) ಎಂದು ಕರೆದಿದ್ದಾರೆ. ಈ ಸಂಗ್ರಹದಲ್ಲಿ ಅನೇಕ ಗ್ರಂಥಗಳು ಬಿಟ್ಟು ಹೋಗಿದ್ದುದಲ್ಲದೆ ಸಂಗ್ರಹವಾದ ಗ್ರಂಥಗಳಲ್ಲಿ ಅನೇಕವು ಚೀನದ ಮೇಲೆ ಶತ್ರುಗಳು ನಡೆಸಿದ ವಿನಾಶಕಾರಿ ದಾಳಿಗಳಿಂದ ನಾಶವಾದವು. ಆದರೂ 1750ಕ್ಕೆ ಹಿಂದೆ ಚೀನದಲ್ಲಿ

ರಚಿತವಾದ ಅಥವಾ ಮುದ್ರಿತವಾದ ಗ್ರಂಥಗಳಿಗಿಂತ ಹೆಚ್ಚೆಂದು ಚೀನೀ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅನೇಕ ರಾಷ್ಟ್ರಗಳಲ್ಲಿ ಕೆಲವು ಶತಮಾನಗಳ ಹಿಂದಿನ ಕೃತಿಗಳನ್ನು ಅಭಿಜಾತ ಸಾಹಿತ್ಯವೆಂದು ಕರೆಯುತ್ತಾರೆ; ಅವು ತೀರ ಹಳೆಯವೆಂಬುದು ಅಲ್ಲಿನವರ ಅಭಿಪ್ರಾಯ. ಆದರೆ ಕ್ರೈಸ್ತಯುಗ ಪ್ರಾರಂಭವಾಗುವುದಕ್ಕೆ ಅನೇಕ ಶತಮಾನಗಳ ಹಿಂದೆ ಜೀವಿಸಿದ್ದ ಕನ್‌ಫ್ಯೂಷಿಯಸ್ ಮತ್ತು ಇತರ ದಾರ್ಶನಿಕರ ಕೃತಿಗಳನ್ನು ಚೀನೀಯರು ಸಾಮಾನ್ಯವಾಗಿ ಅಭಿಜಾತ ಸಾಹಿತ್ಯವೆಂದು ಕರೆಯುತ್ತಾರೆ. ಇಂದಿನ ದಿನ ಪ್ರಾಚೀನ ಶೈಲಿಯಲ್ಲಿ ಕವನಗಳನ್ನು ರಚಿಸುವ ಚೀನಿಯರಿರುವ ಕಾರಣ ಅವರ ಕವನಗಳು ಹಳೆಯವೆ ಅಥವಾ 7ನೆಯ ಶತಮಾನದಲ್ಲಿ ರಚಿತವಾದ ಕವನಗಳು ಹಳೆಯವೆ ಎಂಬುದನ್ನು ನಿರ್ಧರಿಸುವ ಬಗ್ಗೆ ಶಂಕೆಯುಂಟಾಗುತ್ತದೆ. ಇಂಥ ಪ್ರಾಚೀನತೆ ಚೀನಿ ಸಾಹಿತ್ಯಕ್ಕೆ ವಿಶಿಷ್ಟವಾದದ್ದು.

ಚೀನೀ ಸಾಹಿತ್ಯದ ಆದಿಸ್ವರೂಪವನ್ನು ಆರಂಭದ ಕಾವ್ಯದಲ್ಲಿ ಕಾಣಬಹುದು. ಅಂಥ ಕಾವ್ಯವನ್ನು ಕೆಲವು ಆಂಗ್ಲ ಸಾಹಿತ್ಯ ವಿಮರ್ಶಕರು ಸಾಮಾನ್ಯ ಭಾಷೆಯ ಆಲಂಕಾರಿಕ ಶೈಲಿ ಎಂದಿದ್ದಾರೆ. ಈ ವಿಧವಾದ ಶೈಲಿಯಲ್ಲಿ ಷಾಂಗ್ ಸಂತತಿಯ ಕಾಲಕ್ಕೆ (ಪ್ರಶ.ಪೂ. 1766–1402) ಸಂಬಂಧಿಸಿದ, ಮೂಳೆಯ ಚೂರುಗಳ ಮೇಲೆ ಕೊರೆದಿರುವ ಮಂತ್ರಗಳೂ ಸೇರಿವೆ. ಆದರೆ ಚೀನೀ ಸಾಹಿತ್ಯಕ್ಕೆ ದಾರಿ ಮಾಡಿಕೊಟ್ಟಿದ್ದು ಷೂ–ಜಿಂಗ್ (ಕಾವ್ಯಗ್ರಂಥ). ಅದು ಚೌ ಸಂತತಿಯ (ಪ್ರಶ.ಪೂ. 1122–247) ಕಾಲದಲ್ಲಿ ಜೀವಿಸಿದ್ದ ಅನಾಮಿಕ ಕವಿಗಳು ರಚಿಸಿದ ಕವನಗಳ ಮತ್ತು ಹಾಡುಗಳ ಸಂಕಲನ. ಈ ಕವನಸಂಕಲನದ ಸಂಪಾದಕ ಕನ್‌ಫ್ಯೂಷಿಯಸ್ (ಪ್ರಶ.ಪೂ. 551–479). ಅವನು ತನಗೆ ದೊರೆತ ಮೂರು ಸಾವಿರಕ್ಕೂ ಹೆಚ್ಚಿನ ಕವನಗಳಲ್ಲಿ 305 ಕವನಗಳನ್ನು ಆರಿಸಿಕೊಂಡ. ಗ್ರಂಥದ ಪೀಠಿಕೆಯಲ್ಲಿ ಅವನು ಕವಿತೆಯನ್ನು ಚಿಹ್ ಅಥವಾ ಶ್ರದ್ಧಾಪೂರ್ಣಚಿಂತನೆಯ ಮೌಖಿಕ ಅಭಿವ್ಯಕ್ತಿ ಎಂದಿದ್ದಾನೆ. (1) ಘಟನೆಗಳು ಒಳ್ಳೆಯವಾಗಿರಲಿ, ಕೆಟ್ಟವಾಗಿರಲಿ, ಸರಿಯಾದುವಾಗಿರಲಿ, ತಪ್ಪಾದುವಾಗಿರಲಿ, ಯಶಸ್ಸಿನಿಂದ ಕೂಡಿರಲಿ ಅಥವಾ ಅಪಜಯ ಸೂಚಕವಾಗಿರಲಿ–ಅವುಗಳ ಬಗ್ಗೆ ಎಚ್ಚರಿಕೆ ನೀಡುವುದು; (2) ಸ್ವರ್ಗ ಮತ್ತು ಭೂಲೋಕಗಳ ಗಮನವನ್ನು ಸೆಳೆದು ದೇವದಾನವರ ಭಾವನೆಗಳನ್ನು ಬಡಿದೆಬ್ಬಿಸುವುದು; (3) ಗಂಡಹೆಂಡಿರ ಬಾಂಧವ್ಯವನ್ನು ಕ್ರಮಗೊಳಿಸುವುದು, ತಾಯಿತಂದೆಗಳಲ್ಲಿ ಭಕ್ತಿ, ಹಿರಿಯರಲ್ಲಿ ಗೌರವ, ಪೂರ್ಣ ಸಾಮಾಜಿಕ ಸಾಮರಸ್ಯ, ಸಂಸ್ಕೃತಿ ಮತ್ತು ನಾಗರಿಕತೆಗಳ ಅಭಿವೃದ್ಧಿ, ಪರಂಪರೆ ಮತ್ತು ಸಂಪ್ರದಾಯಗಳನ್ನು ಯುಕ್ತರೀತಿಯಲ್ಲಿ ಸಾಗಿಸುವುದು–ಇವು ಕವಿತೆಯ ಕರ್ತವ್ಯವೆಂದು ಕನ್‌ಫ್ಯೂಷಿಯಸ್ ತಿಳಿಸುತ್ತಾನೆ.

ಇವೇ ವಿಚಾರಗಳಿಂದ ಪ್ರಭಾವಿತರಾದ, ಅನಂತರ ಬಂದ ಕನ್‌ಫ್ಯೂಷಿಯಸ್ ಅನುಯಾಯಿಗಳು, ಷೂ–ಜಿಂಗ್ ಸಂಗ್ರಹದ ಕಾವ್ಯನಿಯಮಗಳನ್ನು ಚೀನ ಸಾಮ್ರಾಜ್ಯದ ಎಲ್ಲ ಬುದ್ಧಿಜೀವಿಗಳೂ ಅನುಸರಿಸಬೇಕೆಂದು ವಿಧಿಸಿದರು.

ಕನ್‌ಫ್ಯೂಷಿಯಸ್ ಅಂದು ಕಾವ್ಯಕ್ಕೆ ಗೊತ್ತುಪಡಿಸಿದ ನಿಯಮಗಳು ಕೇವಲ ಧಾರ್ಮಿಕ ಆದರ್ಶಗಳೆನಿಸಿಕೊಂಡಿವೆ. ಕಳೆದ ಎರಡು ಸಾವಿರ ವರ್ಷಗಳಿಂದ ಕಾವ್ಯ ಬಹುಮಟ್ಟಿಗೆ ವಿಲಾಸಜೀವಿಗಳಾದ ಶ್ರೀಮಂತರ ಮನೋರಂಜನೆಯ ಸಾಧನವೆನಿಸಿಕೊಂಡಿದೆ. ಮೊದಲು ಕವಿಗಳು ಸಮ್ರಾಟನ ಆಸ್ಥಾನದಲ್ಲಿ ಹಾಡುವ ಸಂಪ್ರದಾಯವಿತ್ತು. ಚೀನೀ ಅರಸರು ಒಳ್ಳೆಯ ಇಲ್ಲವೆ ತಕ್ಕಮಟ್ಟಿನ ಕವನಗಳನ್ನು ರಚಿಸುವ ಸಾಮರ್ಥ್ಯ ಹೊಂದಿದ್ದರು. ಅವರಲ್ಲಿ ಟ್ಸೌ–ಟ್ಸೌ (ಪ್ರಶ. 155–220) ಟ್ಸೌ ಪೀ (ಪ್ರಶ. 187–226) ಮತ್ತು ಲೀ ಯೂ (ಪ್ರಶ.? 978)ಇವರಂಥ ಸಮ್ರಾಟರು ಒಳ್ಳೆಯ ಕವಿಗಳಾಗಿದ್ದರು. ಚೀನಿ ಸಾಮ್ರಾಟರ ಆಸ್ಥಾನದಲ್ಲಿ ಆಶ್ರಯ ಪಡೆದ ಅನೇಕ ಕವಿಗಳು ಚೀನೀ ಕಾವ್ಯದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರನ್ನು ಆಸ್ಥಾನಕವಿಗಳೆಂದು ಕರೆಯಬಹುದು. ಅರಸರ ಹಿರಿಮೆ, ಪ್ರತಾಪ ಹಾಗೂ ವೈಭವಗಳನ್ನಲ್ಲದೆ ಮತ್ತೇನನ್ನೂ ಈ ಕವಿಗಳು ತಮ್ಮ ಕಾವ್ಯವಿಷಯವನ್ನಾಗಿ ಮಾಡಿಕೊಳ್ಳಲಿಲ್ಲ. ಅವರ ಬರೆವಣಿಗೆಯಲ್ಲಿ ಶಬ್ದಾಡಂಬರ, ಸಾಂಪ್ರದಾಯಿಕತೆ ಹೆಚ್ಚು. ಆದ್ದರಿಂದಲೇ ಆ ಶೈಲಿಯಲ್ಲಿ ಸ್ವಾಭಾವಿಕತೆ ಕಾಣುವುದಿಲ್ಲ. ಟಾಂಗ್ ಸಂತತಿಯ (ಪ್ರಶ. 618–907) ಸಮ್ರಾಟರು ಆಳುತ್ತಿದ್ದ ಕಾಲಕ್ಕೆ ಹಿಂದೆಯೇ ಅಸ್ಥಾನದಲ್ಲಿ ಕಾವ್ಯದ ಸ್ವರೂಪದ ಬಗ್ಗೆ ಕಟ್ಟುನಿಟ್ಟಾದ ನಿಯಮಗಳನ್ನು ರಚಿಸಿ, ಒಂದೇ ಮಾದರಿಯ ರಚನೆಗಳ ಕ್ರಮವನ್ನು ರೂಢಿಗೆ ತಂದರು. ಎಲ್ಲ ಕವಿಗಳೂ ತಮ್ಮ ಮನೋಭಾವಗಳನ್ನು ಅಥವಾ ಶುದ್ಧ ಚಿಂತನೆಯನ್ನು ನಿಯಮಬದ್ಧ ಚೀನೀ ಕಾವ್ಯರಚನೆಗೆ ಒಳಪಡಿಸಬೇಕಾಗಿತ್ತು. ಇಂಥ ರಚನೆ ಕ್ರಮವಾದ ಐದು ಅಥವಾ ಏಳು ಪದಗಳ ಪಾದಗಳಿಂದ ಹಿಡಿದು ಒಂದೇ ಮಾದರಿಯ ಕ್ರಮರಹಿತ ಸಾಲುಗಳನ್ನು ಉಳ್ಳದ್ದು. ಕವನದ ಪದಗಳು ಕ್ರಮಬದ್ಧವಾಗಿರಲಿ ಕ್ರಮವಿಹೀನವಾಗಿರಲಿ, ಕವಿಗಳು ಕ್ಲುಪ್ತ ಮಾದರಿಯ ಪ್ರಾಸಯೋಜನೆ, ಕ್ಲುಪ್ತ ಪದವಿನ್ಯಾಸ, ಕ್ಲುಪ್ತ ಸಂಖ್ಯೆಯ ಶಬ್ದಗಳು ಹಾಗೂ ಶಬ್ದಗಳಿಗೆ ಕ್ಲುಪ್ತ ಸ್ವರ ಸಂಯೋಜನೆ–ಇವನ್ನು ಅನುಸರಿಸಬೇಕಾಗಿತ್ತು. ಅದೃಷ್ಟವಶಾತ್ ಚೀನೀ ಭಾಷೆ ಕಾವ್ಯಯೋಗ್ಯವಾದದ್ದು. ಈ ಭಾಷೆ ಕಾವ್ಯಕ್ಕೆ ಉತ್ತಮ ಇಂಪನ್ನು ನೀಡುವುದಾಗಿದೆ. ಕಾವ್ಯರಚನೆಗೆ ಬೌದ್ಧಿಕ ಸಾಮರ್ಥ್ಯವೂ ಅಗತ್ಯ. ಇಂಥ ಶ್ರೇಷ್ಠ ಚೀನೀ ಕಾವ್ಯ ಪರಂಪರೆಯಲ್ಲಿ ಉತ್ತಮ ಕೃತಿಗಳು ರಚನೆಯಾಗಿವೆ. ಅವನ್ನು ಇತರ ಸಾಹಿತ್ಯಗಳಲ್ಲಿನ ಶ್ರೇಷ್ಠ ಕೃತಿಗಳೊಂದಿಗೆ ಹೋಲಿಸಬಹುದು.

ಚೀನದ ಮೊದಲ ಖ್ಯಾತ ಕವಿ ಜೂ ಯುಆನ್ (ಪ್ರಶ.ಪೂ. 340?–280?). ಅವನ ಆದರ್ಶಗಳು ಕನ್‌ಫ್ಯೂಷಿಯಸ್ ಆದರ್ಶಗಳಿಗೆ ನಿಕಟವಾಗಿವೆ. ಅವನು ಚು ರಾಜ್ಯದ ದೇಶಪ್ರೇಮಿ ಆಸ್ಥಾನಿಕ. ದುಷ್ಟರ ಬೋಧನೆಗಳಿಗೆ ತನ್ನ ಅರಸ ಕಿವಿಗೊಡದಂತೆ ಪ್ರಭಾವಯುಕ್ತವೂ ಸುಮಧುರವೂ ಆದ ಕವನಗಳನ್ನು ರಚಿಸಿದ್ದಾನೆ. ಕೊನೆಗೆ ತನ್ನ ಆಸೆಗಳೆಲ್ಲ ಭಂಗವಾಗಿ ಶತ್ರುಗಳ ಆಕ್ರಮಣದಿಂದ ದೇಶ ಅಪಮಾನಕ್ಕೀಡಾಗಲು ಅವನು ನದಿಯಲ್ಲಿ ದುಮುಕಿ ಪ್ರಾಣ ನೀಗಿದನೆನ್ನಲಾಗಿದೆ. ಈಗಲೂ ಸಹ ಸರ್ಪ–ನೌಕೆ ಹಬ್ಬದ (ಡ್ರ್ಯಾಗನ್ ಬೋಟ್ ಫೆಸ್ಟಿವಲ್) ಕಾಲದಲ್ಲಿ ಚೀನಿಯರು ಅವನ ಜನ್ಮದಿನವನ್ನು ಆಚರಿಸುತ್ತಾರೆ. ಜೂ ಯುಆನ್ ವಾಣಿ ಇದು :

> ವಂಚಕರ ಹೇಯ ವರ್ತನೆಯನ್ನನುಸರಿಸುವುದಕ್ಕಿಂತ
> ದೇಶಭ್ರಷ್ಟನಾಗಿ ಸಾವನ್ನಪ್ಪುವುದೇ ಲೇಸು ಲೇಸೆನಗೆ

ಸತ್ಯಮಾರ್ಗವನ್ನು ಬಿಡದ ಇಂಥ ಭವ್ಯ ಭಾವನೆಗಳು ಚೀನದ ಮಾನವೀಯ ಕವಿಗಳ ಶ್ರೇಣಿಯನ್ನು ಪ್ರಜ್ವಲಿಸಿವೆ. ನೀತಿಗೆಟ್ಟ ಅರಸರಿಗಾಗಿ ಕಾವ್ಯ ರಚಿಸುವಾಗ ಅವರು ತಮ್ಮ ಆತ್ಮಸಾಕ್ಷಿಗೆ ದ್ರೋಹವೆಸಗಿಲ್ಲ :

> ಹುಳಿಹೆಂಡ, ಕೊಳೆತು ನಾರುವ ಮಾಂಸ
> ಶ್ರೀಮಂತ ಭವನಗಳ ಹಿಂದೆ.
> ಮಂಜುಮುಸುಕಿ ಸೆಡೆತ ಶವಗಳು
> ಹಾದಿಬೀದಿಗಳಲಿ ರಾಶಿ ರಾಶಿ!
> ಹಿಗ್ಗಿನಾಸಿರಿ, ಕುಗ್ಗಿದಾ ಬಡತನಕೆ
> ಹಲವು ಮಾರುಗಳ ಅಂತರ!

ಮೇಲಿನ ಸಾಲುಗಳಲ್ಲಿ ಡೂ–ಫೂ (ಪ್ರಶ. 712–770) ಜೂ ಯುಆನ್ ಕವಿಯ ವಾಣಿಯನ್ನು ಮರುನುಡಿದಿದ್ದಾನೆ. ಡೂಫೂ ಕವಿ ಮಾತ್ರವೇ ಲೀ ಬೋ (710–762) ಬೈ ಚು ಯೀ (772–843), ಸೂ ಷಿರ್ (1036–1101), ಲು ಯು (1125–1210) ಹಾಗೂ ಇತರ ಕವಿಗಳೊಡನೆ ಚೀನೀ ಕಾವ್ಯದ ಅಮೋಘ ಪರಂಪರೆಯನ್ನು ಸ್ಥಾಪಿಸಿದ. ಇವರ ಕವನಗಳು ಮಾನವೀಯತೆ ಹಾಗೂ ಮನೋಭಾವಗಳ ಅಭಿವ್ಯಕ್ತಿಗೆ ಪ್ರಸಿದ್ಧವಾಗಿರುವುದಲ್ಲದೆ ಮನಮೋಹಕವಾಗಿಯೂ ಸ್ವಾಭಾವಿಕವಾಗಿಯೂ ಇವೆ.

ಇಷ್ಟಾದರೂ ಈ ಕವಿಗಳು ಜನತೆಯ ಮನವೊಲಿಸಿಕೊಂಡವರಲ್ಲ. ಹೆಚ್ಚೆಂದರೆ ಅವರು ಮಧ್ಯಮವರ್ಗದ ಪಂಡಿತರಾಗಿದ್ದರೆಂದು ಹೇಳಬಹುದು; ಅವರು ಚೀನದ ರಾಜರುಗಳ ಆಸ್ಥಾನಗಳಿಗೆ ಸೇರಿದವರು. ಸಮಾಜದಲ್ಲಿ ಮಧ್ಯಮವರ್ಗದ ಪ್ರತಿಯೊಬ್ಬ ಪಂಡಿತನೂ ಉನ್ನತ ಅಂತಸ್ತನ್ನು ಹೊಂದಬೇಕೆಂಬ ಆಕಾಂಕ್ಷೆಯನ್ನು ಬಾಲ್ಯದಿಂದ ಹೊಂದಿರುತ್ತಿದ್ದ. ಈ ಆಕಾಂಕ್ಷೆಗಳು ಫಲಿಸದಿದ್ದಾಗ ಮಾತ್ರ ಅವನು ದೇಶದ ನೈಜ ಪರಿಸ್ಥಿತಿಯನ್ನರಿತುಕೊಳ್ಳುತ್ತಿದ್ದ. ಈ ಪಂಡಿತವರ್ಗ ಮಾತ್ರ ರಾಜಾಶ್ರಯದಿಂದ ಹೊರಬರಲಿಲ್ಲ. ತೀವ್ರ ಅಸಮಾಧಾನ ಮತ್ತು ಕೋಪದಲ್ಲಿ ಸಹ ಅವರ ಪ್ರತಿಭಟನೆ ಅರೆಮನಸ್ಸಿನದಾಗಿತ್ತು. ನೈಜಪರಿಸ್ಥಿತಿಯನ್ನು ಮರೆಯುವ ಪ್ರಯತ್ನದಲ್ಲಿ ಅವರು ಪರಸ್ಪರ ಸಂಧಿಸಿ ದೀರ್ಘಕಾಲ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು; ಮದ್ಯಸೇವನೆಯಿಂದ ಮೈಮರೆತುಕೊಳ್ಳುತ್ತಿದ್ದರು. ಸ್ಫೂರ್ತಿಬಂದಾಗ ಅಮೋಘ ಕಾವ್ಯವನ್ನು ರಚಿಸುತ್ತಿದ್ದರು. ಆಂಗ್ಲ ಕವಿಗಳಂತೆ ಚೀನೀ ಕವಿಗಳು ಅದ್ಭುತರಮ್ಯ ಭಾವನೆಗಳನ್ನು ಅಭಿವ್ಯಕ್ತಿಸಿಲ್ಲ. ಅವರಿಗೆ ಪ್ರಣಯಾನುಭವವೇ ಇಲ್ಲವೆನ್ನುವಷ್ಟು ಮಟ್ಟಿಗೆ ಅವರ ಕವನಗಳು ಪ್ರಣಯಶೂನ್ಯವಾಗಿವೆ. ಆದಾಗ್ಯೂ ಅವರು ಸ್ತ್ರೀಸೌಂದರ್ಯವನ್ನು ಕಾವ್ಯದಲ್ಲಿ ವರ್ಣಿಸಲಾರದಷ್ಟು ಅರಸಿಕರಾಗಿರಲಿಲ್ಲ. ಅವರ ಕವನಗಳಲ್ಲಿ ಅನೇಕವು ಪ್ರಸಿದ್ಧ ಸುಂದರಿಯರ ವರ್ಣನೆಗೆ ಮೀಸಲಾಗಿವೆ. ಎಲ್ಲಕ್ಕೂ ಮಿಗಿಲಾಗಿ, ಚೀನೀ ಕವಿಗಳು ತಮ್ಮ ನಾಡ ಸೊಬಗಿಗೆ ಮೈಮರೆತವರು, ಮನಸೋತವರು. ದೇಶದ ಬಗ್ಗೆ ಘನವಾದ ಭಾವನೆಗಳು ಅವರ ಕವನಗಳಲ್ಲಿ. ಹಳದಿ ನದಿಯ ತಟದಿಂದ ಹಿಡಿದು ಹೈನಾನ್ ದ್ವೀಪದವರೆಗಿನ ಚೀನೀ ನಾಡಿನ ಭವ್ಯ ಸೌಂದರ್ಯವನ್ನು ಅವರ ಭಾವಗೀತೆಗಳು ಮನಮೋಹಕವಾಗಿ ವರ್ಣಿಸುತ್ತವೆ.

ಟಾಂಗ್ ಸಂತತಿಯ ಕಾಲವನ್ನು ಕಾವ್ಯದ ಸುವರ್ಣಯುಗವೆಂದು ಕರೆಯುತ್ತಾರೆ. ಆದರೆ ಈ ರಾಜಸಂತತಿಯ ತರುವಾಯ ಬಂದ ಸೂಂಗ್ ಸಂತತಿಯ (960–1279) ಕಾಲದಲ್ಲಿ ಹೆಚ್ಚು ಸಾಮರಸ್ಯವೂ ಸುಮಧುರವೂ ಆದ ಕವನಗಳು ರಚನೆಯಾದವು. ರಚನಾತಂತ್ರ ಪರಿಪೂರ್ಣತೆಯತ್ತ ಮತ್ತಷ್ಟು ಸಾಗಿತು. ಛಂದಸ್ಸಿನ ನಿಯಮಗಳಿಗೆ ಬದ್ಧವಲ್ಲದ ಸರಳ ಧಾಟಿಯ ಸಾಲುಗಳು ಕವನದಲ್ಲಿ ಕಾಣಿಸಿಕೊಂಡವು. ಅದರಿಂದ ಚೀನೀ ಕಾವ್ಯಶೈಲಿ ಶ್ರೀಮಂತಗೊಂಡಿತು. ಈ ಕಾಲದಲ್ಲಿ ಸೂಷಿರ್ ಮತ್ತು ಲು ಯು ಕವಿಗಳು ಮಾತ್ರವಲ್ಲದೆ ಲೀ ಟಿಂಗ್–ಚೌ (1081–1145) ಎಂಬ ಪ್ರಸಿದ್ಧ ಕವಯಿತ್ರಿ ಇದ್ದಳು. ಚೀನೀ ಸಾಹಿತ್ಯಕ್ಕೆ ಅಮೋಘ ಕೊಡುಗೆಯನ್ನು ನೀಡಿದ ಸ್ತ್ರೀಯರಲ್ಲಿ ಆಕೆಯೂ ಒಬ್ಬಳು.

ಚೀನದಲ್ಲಿ ಗದ್ಯರಚನೆ ಚೀನಿ ಕಾವ್ಯದಷ್ಟೆ ಹಳೆಯದು. ಚೀನೀ ಇತಿಹಾಸದ ಜನ್-ಚಿಯು (ವಸಂತ ಮತ್ತು ಮಾಗಿ) ಹಾಗೂ ಚಾನ್ ಕ್ವೊ (ಯುದ್ಧಾಸಕ್ತ ರಾಷ್ಟ್ರಗಳ) ಕಾಲದಲ್ಲಿ (ಪ್ರಶ.ಪೂ. 722-247), ಅದರಲ್ಲೂ ವಿಶೇಷವಾಗಿ ಪ್ರಶ.ಪೂ. 6ನೆಯ ಶತಮಾನದಿಂದ ಹಿಡಿದು 3ನೆಯ ಶತಮಾನದವರೆಗೆ ಪ್ರಖ್ಯಾತ ದಾರ್ಶನಿಕರನೇಕರು ಕಾಣಿಸಿಕೊಂಡರು. ಲೌ-ಡ್ಜು, ಕನ್‌ಫ್ಯೂಷಿಯಸ್, ಮೆನ್‌ಷಿಯಸ್, ಜು ಆಂಗ್ ಡ್ಜು, ಷನ್ ಡ್ಜ ಮತ್ತು ಮೋಡ್ಜು-ಇವರು ದಾರ್ಶನಿಕರಲ್ಲಿ ಕೆಲವರು. ಅವರೆಲ್ಲ ಬಿಗಿಯಾದ ಗದ್ಯದಲ್ಲಿ ತಮ್ಮ ಸಿದ್ಧಾಂತಗಳನ್ನು ಬರೆದರು (ಕೆಲವು ಸಂದರ್ಭಗಳಲ್ಲಿ ಅವರ ಶಿಷ್ಯರು ಅವರ ಸಿದ್ಧಾಂತಗಳನ್ನು ಸಂಗ್ರಹಿಸಿದ್ದಾರೆ). ಈ ದಾರ್ಶನಿಕರ ಕೃತಿಗಳಲ್ಲಿ ಅನೇಕವು ಡ್ಜೋ ಚಿವೂ ಮಿಂಗ್ ರಚಿಸಿದ ಡ್ಜೊ ಚು ಆನ್ ಗ್ರಂಥದಲ್ಲಿಯೂ ಡ್ಜೋ-ಮಾ, ಚೀನ್ (ಪ್ರಶ.ಪೂ. 145-?) ರಚಿಸಿದ ಷಿಹಿ-ಚೀ ಗ್ರಂಥದಲ್ಲೂ ಸಂಗ್ರಹವಾಗಿವೆ. ವಿಶಿಷ್ಟವಾಗಿ ಷಿಹಿ-ಚೀ ಗ್ರಂಥ ಚೀನೀ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮೈಲಿಗಲ್ಲು. ಅನಾದಿ ಕಾಲದಿಂದ ಹಿಡಿದು ಪ್ರಶ.ಪೂ. ಎರಡನೆಯ ಶತಮಾನದವರೆಗಿನ ಇತಿಹಾಸವನ್ನು ಈ ಗ್ರಂಥ ಚಿತ್ರಿಸುವುದಾದರೂ ಅದು ವಾಸ್ತವಿಕವಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳನ್ನು ಚರ್ಚಿಸುವ ಉದ್ಗ್ರಂಥ. ಅದರಲ್ಲಿ ಆಖ್ಯಾನಗಳು ಟೀಕೆಗಳಿಂದ ಕೂಡಿವೆ. ಡ್ಜೋ-ಮಾ ಚೀನ್‌ನ ಶೈಲಿ ಸರಳಸುಂದರವಾದದ್ದು.

ಡ್ಜೋ-ಮಾ ಚಿನ್ ಸ್ಥಾಪಿಸಿ, ಪನ್ ಕು ಮತ್ತು ಇತರ ಇತಿಹಾಸಶಾಸ್ತ್ರಜ್ಞರು ಮುಂದುವರಿಸಿದ ಶ್ರೇಷ್ಠ ಗದ್ಯಪರಂಪರೆ ಬೇಗ ಅದೃಶ್ಯವಾಯಿತು. ದಕ್ಷಿಣ ಮತ್ತು ಉತ್ತರ ಚೀನ ರಾಜಸಂತತಿಗಳ ಕಾಲದಿಂದ (ಪ್ರಶ. 386-589) ಪಿಯಿನ್-ವೆನ್ ಎಂಬ ವಿಶಿಷ್ಟ ಗದ್ಯಶೈಲಿ ರೂಢಿಗೆ ಬಂತು; ಶಬ್ದಾಡಂಬರ ಈ ಶೈಲಿಯ ಮುಖ್ಯಲಕ್ಷಣ. ಈ ಶೈಲಿ, ಆಂಗ್ಲ ಸಾಹಿತ್ಯದ ದ್ವಿಪದಿಯಂತೆ ಸಮಾಂತರ ವಾಕ್ಯಗಳಿಂದ ಹಾಗೂ ಸರಿಸಂಖ್ಯೆಯ ಪದಗಳಿಂದ ಕೂಡಿದೆ. ಗದ್ಯದಲ್ಲಿ ಆಲಂಕಾರಿಕ ಸೊಬಗನ್ನು ತರಲು ಲೇಖಕರು ಸ್ಪಷ್ಟತೆ ಹಾಗೂ ಸ್ವಾಭಾವಿಕ ರಸಭಾವಗಳನ್ನು ಬದಿಗಿಡುತ್ತಿದ್ದರು. ಟಾಂಗ್ ಸಂತತಿಯ ಕಾಲದಲ್ಲಿ ಈ ಆಲಂಕಾರಿಕ ಶೈಲಿಯ ಬಗ್ಗೆ ಚಪಲ ಬಲವಾಗಲು ಅದನ್ನು ಹಾನ್ ಯೂ (768-824) ತೀವ್ರವಾಗಿ ಖಂಡಿಸಿ, ಪ್ರಾಚೀನ ಲೇಖಕರ ಸರಳವಾದ ಹಾಗೂ ಸುಸ್ಪಷ್ಟವಾದ ಶೈಲಿಯನ್ನು ಅನುಸರಿಸಬೇಕೆಂದು ಚಳವಳಿ ಪ್ರಾರಂಭಿಸಿದ. ಈ ಚಳವಳಿಯಿಂದ ಎಂಟು ವರ್ಷಗಳ ಕಾಲ ಶಿಥಿಲಾವಸ್ಥೆಯಲ್ಲಿದ್ದ ಚೀನೀ ಸಾಹಿತ್ಯಕ್ಕೆ ನವಚೇತನ ತಂದನೆಂಬ ಖ್ಯಾತಿ ಹಾನ್ ಯೂಗೆ ಬಂತು. ಇಷ್ಟಾದರೂ ಹಾನ್ ಯೂ ಮತ್ತು ಅವನ ಅನುಯಾಯಿಗಳಿಗೆ ಸಾಂಪ್ರದಾಯಿಕ ಪರಿಸ್ಥಿತಿಯನ್ನು ಸುಧಾರಿಸಲಾಗಲಿಲ್ಲ. ಮಿಂಗ್ (1368-1644) ಮತ್ತು ಚಿಂಗ್ (1614-1911) ಸಂತತಿಗಳ ಕಾಲದಲ್ಲಿ ಚೀನೀ ಗದ್ಯಸಾಹಿತ್ಯದಲ್ಲಿ ಸಾಂಪ್ರದಾಯಿಕ ಶೈಲಿ ಪ್ರಬಲವಾಗಿದ್ದ ಕಾರಣ ಸರ್ಕಾರ ನಡೆಸುತ್ತಿದ್ದ ಪರೀಕ್ಷೆಗಳಲ್ಲಿ ಪ-ಕು-ವೆನ್ ಅಥವಾ ಎಂಟು ಪಾದದ ಪ್ರಬಂಧವೆಂಬ ವಿಶಿಷ್ಟ ಗದ್ಯಶೈಲಿಯನ್ನು ವಿಧಿಸಲಾಯಿತು. ಪ್ರಬಂಧದಲ್ಲಿರಬೇಕಾದ ಶಬ್ದಸಂಖ್ಯೆಯನ್ನು (ಕೆಲವು ಸಂದರ್ಭಗಳಲ್ಲಿ 500 ಇತ್ಯಾದಿ) ಗೊತ್ತುಪಡಿಸಲಾಯಿತು. ಅಂಥ ಪ್ರಬಂಧರಚನೆಯನ್ನು ಆಧುನಿಕ ಚಕ್ರಬಂಧ ಆಟಕ್ಕೆ ಹೋಲಿಸಬಹುದು. ಚೀನೀ ಸಾಹಿತ್ಯದ ಅಭ್ಯಾಸಿಗಳಿಗೆ ಇದೊಂದು ಸಾಹಿತ್ಯಕ ಹಿಂಸೆಯಾಗಿತ್ತು.

ಇಂಥ ಅಹಿತ ಪ್ರವೃತ್ತಿಗಳಿದ್ದರೂ ಚೀನೀ ಸಾಹಿತ್ಯದಲ್ಲಿ ಉತ್ತಮ ಪ್ರಬಂಧಗಳಿಲ್ಲದಿಲ್ಲ. ವಿಶೇಷವಾಗಿ ಸಾಹಿತ್ಯವಿಮರ್ಶೆಗೆ ಸಂಬಂಧಪಟ್ಟಂತೆ ಶ್ರೇಷ್ಠ ಪ್ರಬಂಧಗಳಿವೆ. ಇಷ್ಟಾದರೂ ಇಂಗ್ಲಿಷ್ ಮತ್ತು ಫ್ರೆಂಚ್ ಸಾಹಿತ್ಯದಲ್ಲಿ ಕಂಡುಬರುವ ಪರಿಪೂರ್ಣವಾದ ಹಾಗೂ ಉತ್ತಮ ಮಟ್ಟದ ಸಾಹಿತ್ಯವಿಮರ್ಶೆಯನ್ನು ನಾವು ಚೀನೀ ಸಾಹಿತ್ಯದಲ್ಲಿ ಕಾಣುವುದಿಲ್ಲ. ಆದರೆ ವೆನ್-ಷಿನ್ ಟಯೊ-ಲುಂಗ್ ಅಥವಾ ಸಾಹಿತ್ಯ ಹೃದಯಗೂಡಿನಿಂದ ಡ್ರೇಗನ್ ಪೆಡಂಭೂತವನ್ನು ಹೊತ್ತು ಬರುವುದು-ಎಂಬ ಸಾಹಿತ್ಯ ವಿಮರ್ಶಾ ಗ್ರಂಥವನ್ನು ಲಿಯುಷಿಯೆನ್ (ಪ್ರಶ. 455-?) ರಚಿಸಿದ್ದಾನೆ. ವಿಶ್ವಸಾಹಿತ್ಯ ಚರಿತ್ರೆಯಲ್ಲಿ ಸಾಹಿತ್ಯವಿಮರ್ಶೆಗೆ ಸಂಬಂಧಪಟ್ಟ ಗ್ರಂಥಗಳಲ್ಲಿ ಇದರ ಸ್ಥಾನ ವಿಶಿಷ್ಟವಾದುದು.

ಚೀನೀ ಸಾಹಿತ್ಯದಲ್ಲಿ ನಾಟಕ ಮತ್ತು ಕಾದಂಬರಿ ಬಹುಕಾಲದ ಮೇಲೆ ವೃದ್ಧಿಗೊಂಡವು. ಟಾಂಗ್ ಸಂತತಿಯ ಕಾಲದಲ್ಲಿ ಬುದ್ಧನ ಆಧ್ಯಾತ್ಮಿಕ ಬೋಧನೆಗಳಿಗೆ ಜನಸಾಮಾನ್ಯರನ್ನು ಆಕರ್ಷಿಸಲು ಬೌದ್ಧಮತ ಪ್ರಚಾರಕರು ಪಿಯೆನ್-ವೆನ್ ಅಥವಾ ಪರಿವರ್ತಿತ ಸಾಹಿತ್ಯವೆಂಬ ಶೈಲಿಯನ್ನು ಕಂಡುಹಿಡಿದರು.

ಬೌದ್ಧಧರ್ಮಗ್ರಂಥಗಳ ಸ್ವಾರಸ್ಯವಾದ ಕಥೆಗಳನ್ನು ಮತ್ತು ಸ್ಫೂರ್ತಿದಾಯಕ ಆದರ್ಶಗಳನ್ನು ವರ್ಣಿಸಲು ಸರಳವಾದ ಹಾಗೂ ಆಡುಭಾಷೆಯ ಈ ಶೈಲಿಯನ್ನು ಬಳಸುತ್ತಿದ್ದರು. ಜನಸಾಮಾನ್ಯರಿಗೆ ಓದು ಬರೆಹ ತಿಳಿಯದ ಪ್ರಯುಕ್ತ ಪಿಯೆನ್ ವೆನ್ ಸಾಹಿತ್ಯವನ್ನು ಪ್ರಕಟಿಸುವ ಉದ್ದೇಶವಿರಲಿಲ್ಲ. ಕಥೆ ಹೇಳುವುದು ಇಲ್ಲವೆ ಜನರ ಮುಂದೆ ಸರಳ ಸಂಭಾಷಣೆಯ ನಾಟಕಗಳ ಅಭಿನಯ ಈ ಉದ್ದೇಶಗಳಿಗೆ ಈ ಶೈಲಿ ಉಪಯುಕ್ತವಾಗಿತ್ತು; ಅದು ಚೀನೀ ಕಾದಂಬರಿ ಮತ್ತು ನಾಟಕಗಳಿಗೆ ಮೊದಲ ಹೆಜ್ಜೆ. ಚೀನೀ ಸಾಹಿತ್ಯದಲ್ಲಿ ಈ ಬಗೆಯ ಸಾಹಿತ್ಯರಚನೆಯನ್ನು ನಿಲ್ಲಿಸುವಂತೆ ಸಂಪ್ರದಾಯಬದ್ಧ ಪಂಡಿತರು ಒಂಬತ್ತನೆಯ ಶತಮಾನದ ಕೊನೆಯಲ್ಲಿ ಸರ್ಕಾರವನ್ನು ಒತ್ತಾಯಪಡಿಸಿದರು.

ವಾಣಿಜ್ಯ ನಗರಗಳ ಬೆಳವಣಿಗೆ ಮತ್ತು ಮಧ್ಯಮವರ್ಗದ ಪಂಡಿತರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಹೀನ ಪರಿಸ್ಥಿತಿಗಳಿಂದ ಚೀನೀ ಸಾಹಿತ್ಯದಲ್ಲಿ ಬೃಹತ್ ಬದಲಾವಣೆಗಳಾದವು. ಸೂಂಗ್ ಸಂತತಿಯ ಕಾಲದಲ್ಲಿ ಚೀನದಲ್ಲಿ ವಾಣಿಜ್ಯ ಕ್ರಾಂತಿ ಯುಂಟಾಯಿತು. ವಾಣಿಜ್ಯ ವರ್ಗ ಅಪಾರ ಸಿರಿಯನ್ನು ಸಂಗ್ರಹಿಸಿಕೊಂಡು ಸಮಾಜದಲ್ಲಿ ಬಲಿಷ್ಠ ವರ್ಗವಾಯಿತು. ವ್ಯಾಪಾರಿಗಳು ಹಿಂದೆ ತಮಗೆ ದೊರಕದಿದ್ದ ಸಾಹಿತ್ಯಿಕ ಮನರಂಜನೆಯನ್ನು ಪಡೆಯತೊಡಗಿದರು. ಮತ್ತೊಂದು ಕಡೆ ಸರ್ಕಾರದಲ್ಲಿ ಹುದ್ದೆಗಳಿಗೆ ಸ್ವಜನರ ನೇಮಕ ಮತ್ತು ಭ್ರಷ್ಟಾಚಾರ ಹೆಚ್ಚಾಗಿ ಸರ್ಕಾರಿ ಆಡಳಿತದಲ್ಲಿ ವಿದ್ಯಾವಂತರಿಗೆ ಅವಕಾಶವಿಲ್ಲದೆ ಹೋಯಿತು. ಅನೇಕ ಸಾಹಿತಿಗಳಿಗೆ ಆಡಳಿತವರ್ಗದ ಪೋಷಣೆ ಇಲ್ಲದೆ ಅವರಲ್ಲಿ ಬಹುಮಂದಿ ಉಪಾಧ್ಯಾಯ, ವಕೀಲಿ ಮತ್ತು ಗುಮಾಸ್ತ ವೃತ್ತಿಗಳನ್ನು ಅನುಸರಿಸಿ, ಅವಿದ್ಯಾವಂತರಾದರೂ ಶ್ರೀಮಂತರಾಗಿದ್ದ ಜಮೀನುದಾರರ ಮತ್ತು ವ್ಯಾಪಾರಿಗಳ ಸೇವೆಗೆ ನಿಂತರು. ಹಲವರು ಸಂಪ್ರದಾಯಬದ್ಧ ಚೀನೀ ಸಮಾಜದಲ್ಲಿ ಅತ್ಯಂತ ಕೀಳು ವೃತ್ತಿಯವರೆನಿಸಿದ ಕಲೆಗಾರರ ಸಹಪಾಠಿಗಳಾದರು. ಈ ಮಧ್ಯೆ ಬುದ್ಧಿಜೀವಿಗಳ ಹಾಗೂ ಸಾಮಾನ್ಯ ಜನರ ನಡುವಣ ವಿವಾಹಗಳೂ ಚೀನೀ ಸಾಹಿತ್ಯಕ್ಕೆ ಹೊಸ ಮಾರ್ಗವನ್ನು ಸೃಷ್ಟಿಸಿದುವು. ಕಾವ್ಯ ವೈಯಕ್ತಿಕ ಭಾವನೆಗಳ ಅಭಿವ್ಯಕ್ತಿಯೆನಿಸದೆ ಸಾಮಾನ್ಯ ಜನರ ಮನರಂಜನೆಗೆ ಸೃಷ್ಟಿಯಾಗತೊಡಗಿತು. ಅದು ಕಟ್ಟುನಿಟ್ಟಾಗಿ ಒಂದೇ ಮಾದರಿಯಲ್ಲಿರುತ್ತಿದ್ದ ಸಣ್ಣ ಭಾವಗೀತೆಗಳಿಂದ ಕಳಚಿಕೊಂಡು ನಾಟಕದ ಆಖ್ಯಾಯಿಕೆ, ಸ್ವಗತ ಭಾಷಣ ಹಾಗೂ ಸಂಭಾಷಣೆಯ ರೂಪ ತಾಳಿತು. ಈ ರೀತಿ ಚೀನದಲ್ಲಿ ಸಂಗೀತ ನಾಟಕ ಹುಟ್ಟಿತು. ಯುಆನ್ ರಾಜಸಂತತಿಯ ಕಾಲದಲ್ಲಿ (1280-1368) ಗ್ವಾನ್ ಹಾನ್ ಚಿಂಗ್ ಮತ್ತು ವಾಂಗ್ ಷಿರ್ ಫು ಇವರಂಥ ಪ್ರಸಿದ್ಧ ಸಂಗೀತನಾಟಕರಚನಕಾರರಿದ್ದರು. ಈ ಇಬ್ಬರು ಸಾಹಿತಿಗಳು ಜೀವಿಸಿದ್ದ ವರ್ಷಗಳಾವುವೆಂಬುದು ನಮಗೆ ತಿಳಿದುಬಂದಿಲ್ಲ. ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಷಿ-ಷಿಯೆಂಗ್ ಚೀ (ಪಶ್ಚಿಮದ ಕೋಣೆ) ಷಿರ್‌ಫುನ ಪ್ರಸಿದ್ಧ ನಾಟಕ.

ಮಿಂಗ್ ಮತ್ತು ಚಿಂಗ್ ಸಂತತಿಗಳ ಕಾಲದಲ್ಲಿ, ಅಂದರೆ ಹದಿನಾಲ್ಕನೆಯ ಶತಮಾನದಿಂದಾಚೆಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾದಂಬರಿ ಉಚ್ಚಸ್ಥಾನ ಪಡೆದುಕೊಂಡಿತು. ಶ್ರೇಷ್ಠ ಕಾದಂಬರಿಗಳು ಒಂದರ ಮೇಲೊಂದರಂತೆ ಹೊರ ಬಂದವು. ಷಿರ್ ನೈ ಆನ್ (ಪ್ರಶ. 1296?-1370?) ಬರೆದ ಷಯಿ-ಹು-ಚುಆನ್ (ನೀರಿನ ಅಂಚು); ಲೊ ಕುಅನ್-ಚುಂಗ್ (14ನೇ ಶತಮಾನ) ಬರೆದ ಸನ್-ಕುವೊ ಯೆನ್ ಈ (ಮೂರು ರಾಜ್ಯಗಳ ರಮ್ಯ ಕಥೆ); ವೂ ಚೆಂಗ್-ಎನ್ (1500?-1582) ಬರೆದ ಷಿ-ಯು-ಚೀ (ಪಾಶ್ಚಾತ್ಯ ಯಾತ್ರಿಕ) 16ನೆಯ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದ ಅನಾಮಿಕ ಲೇಖಕನೊಬ್ಬನ ಕೃತಿ ಚಿನ್ ಷಿಂಗ್-ಮಿ ಈ (ಸುವರ್ಣ ಕುಂಡದ ಪುಷ್ಪ); ಪು ಸುಂಗ್-ಲಿಂಗ್ (ಪ್ರಶ. 1640-1715) ಬರೆದ ಜು-ಲಿನ್ ವೈಷಿಹಿ (ಪಂಡಿತರ ಕಥೆಗಳು); ಮತ್ತು ಟ್ಸೌ ಟ್ಸೂಷ್ ಚೀನ್ (1723?-1764) ಬರೆದ ಹಂಗ್-ಲೌ-ಮೆಂಗ್ (ಕೆಂಪು ಕೋಣೆಯ ಕನಸು) - ಇವು ಕೆಲವು ಪ್ರಸಿದ್ಧ ಕಾದಂಬರಿಗಳು. ಅವನತಿಗೆ ಬಂದ ಶ್ರೀಮಂತ ಕುಟುಂಬದ ವರ್ಣನೆ; ಆಸ್ಥಾನದ ಪರೀಕ್ಷೆಗಳ ಮುಖಾಂತರ ವಿಶಿಷ್ಟ ಜೀವನವನ್ನು ಸಾಗಿಸಬಹುದಾದ ಅವಕಾಶವನ್ನು ತ್ಯಾಗ ಮಾಡುವ ವಿದ್ಯಾವಂತನ ಚಿತ್ರಣ; ಐತಿಹಾಸಿಕ ವೀರರ ಕಥನ; ರಾಜಕೀಯ ಪ್ರಾಬಲ್ಯಕ್ಕಾಗಿ ಸ್ಪರ್ಧಿಸುವ ಉತ್ಸಾಹಿ ಯೋಧರ ಮತ್ತು ಪಂಡಿತರ ಜೀವನ; (ಕಾಲ್ಪನಿಕ ಹಾಗೂ ಅದ್ಭುತ ಶೈಲಿಯಲ್ಲಿ) ಭಾರತಕ್ಕೆ ಯಾತ್ರೆ ಹೊರಟ ಸಂನ್ಯಾಸಿ ಹ್ಯುಯೆನ್‌ತ್ಸಾಂಗನ ಪ್ರವಾಸ ಕಥನ; ವ್ಯಭಿಚಾರಿಯ ಅಥವಾ ಕಳ್ಳರ ಕೂಟದ ಕಥೆ-ಇವನ್ನು ವಸ್ತುವನ್ನಾಗಿ ಆರಿಸಿಕೊಂಡು ಕಾದಂಬರಿಕಾರ ಹಿಂದಿನ ಮತ್ತು ಸಮಕಾಲೀನ ಚೀನಿ ಸಮಾಜದ ವಿವಿಧ ಮುಖಗಳನ್ನು ತೋರಿಸತೊಡಗಿದ.


ಆಧುನಿಕ ಚೀನೀ ಸಾಹಿತ್ಯದ ಜನಕನೆಂದೆನಿಸಿರುವ ಸಾಹಿತಿ ಲೂ ಷುನ್ (1881-1936)

19ನೆಯ ಶತಮಾನದ ಮಧ್ಯಭಾಗದಿಂದ ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಪ್ರಭುತ್ವ ಸಾಂಪ್ರದಾಯಿಕ ಚೀನೀ ಸಂಸ್ಕೃತಿಯಲ್ಲಿ ಭಾರಿ ಬದಲಾವಣೆಗಳನ್ನು ತರಲಾರಂಭಿಸಿತು. ಪರಿಣಾಮವಾಗಿ ಪ್ರಾಚೀನ ಚೀನೀಸಾಹಿತ್ಯದ ಸೌಧವೇ ಕಳಚಿ ಬಿದ್ದಿತು. 19ನೆಯ ಶತಮಾನದ

ಕೊನೆ ಹಾಗೂ 20ನೆಯ ಶತಮಾನದ ಮೊದಲಲ್ಲಿ ಬದುಕಿದ್ದ ಸಾಹಿತಿ ಲೂ ಷ್ಯನ್ ಆಧುನಿಕ ಚೀನೀ ಸಾಹಿತ್ಯದ ಜನಕನೆಂದು ಪ್ರಸಿದ್ಧನಾಗಿದ್ದಾನೆ. 1930 ರಲ್ಲಿ ಈತ ಸ್ಥಾಪಿಸಿದ ಪ್ರಗತಿಶೀಲ ಸಾಂಸ್ಕೃತಿಕ ಚಳವಳಿ ಅಂದಿನ ಲಲಿತ ಕಲೆ, ವಿಜ್ಞಾನ ಮತ್ತು ನಾಟಕರಂಗಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿತು. 1919ರ ಮೇ 4ರ ಚಳವಳಿ ಸಾಂಪ್ರದಾಯಿಕವಾದ ಸಾಹಿತ್ಯಿಕ ಅಭಿವ್ಯಕ್ತಿಗಳನ್ನು ಕೊನೆಗಾಣಿಸಿತು. ಆಡುಭಾಷೆಯ, ಜನಪ್ರಿಯವಾದ ಹಾಗೂ ಕ್ರಾಂತಿಕಾರಿ ಸಾಹಿತ್ಯ ಪ್ರಾಬಲ್ಯಕ್ಕೆ ಬಂದಿತು. ಈ ಸಾಹಿತ್ಯ ಕಾಲದ ಅಗತ್ಯಗಳಿಗೆ ಹೊಂದಿಕೊಂಡಿದೆ. ಅದು ಸ್ವಾಭಾವಿಕವಾದದ್ದು, ದೇಶಭಕ್ತಿಯನ್ನು ಕೆರಳಿಸುವಂಥದು ಹಾಗೂ ಸ್ಫೂರ್ತಿದಾಯಕವಾದದ್ದು. ಈ ನವಸಾಹಿತ್ಯದಿಂದ ಚೀನದ ಈಗಿನ ಅನೇಕ ರಾಜಕೀಯ ವ್ಯಕ್ತಿಗಳು ಕ್ರಾಂತಿಯನ್ನು ಕಂಡರು. ಆದರೆ ಈ ಸಾಹಿತ್ಯ ಕೇವಲ ಸಮಕಾಲೀನ ವಿಷಯಗಳೊಂದಿಗೆ ನಿಕಟವಾಗಿ ಬೆಸೆದುಕೊಂಡು, ತಾತ್ಕಾಲಿಕ ಮೌಲ್ಯಗಳನ್ನು ಹೊಂದಿ ಬದಲಾವಣೆ ಹೊಂದುತ್ತಿರುವ ಚೀನಿ ಸಮಾಜದಲ್ಲಿ ತ್ವರಿತವಾಗಿ ಅದೃಶ್ಯವಾಗುತ್ತಿದೆ. ಜಪಾನೀ ದಾಳಿಗಳ ವಿರುದ್ಧ ಸಾಹಸದಿಂದ ಹೋರಾಡಿದ ಕಾಲದಲ್ಲಿ ರಚಿಸಿದ ಸಾಹಿತ್ಯಿಕ ಶ್ರೇಷ್ಠ ಕೃತಿಗಳು ಇದಕ್ಕೆ ನಿದರ್ಶನ. ಚೀನೀ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನವು ಸ್ತಿಮಿತ ಹಂತವನ್ನು ಮುಟ್ಟಿದಾಗ ಚೀನದ ಈ ಕ್ರಾಂತಿಕಾರಿ ನವ ಸಾಹಿತ್ಯದ ಮೌಲ್ಯಮಾಪನ ಸಾಧ್ಯವಾದೀತು. (ಟಿ.ಸಿ.ಎಚ್.)

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಚೀನೀ ಬರಹಗಾರರು ಸಮಕಾಲೀನ ಬದುಕಿನ ದೋಷ, ಕುರೂಪಗಳಿಗೆ ಕನ್ನಡಿ ಹಿಡಿದರು. ಸಾಹಿತ್ಯವು ಸಮಾಜದಲ್ಲಿನ ದುಷ್ಟತನವನ್ನು ಎದುರಿಸುವ ಆಯುಧವಾಯಿತು, ವರ್ಗಕಲಹದ ಪರಿಕಲ್ಪನೆಯನ್ನು ಹರಡುವ ಸಾಧನವಾಯಿತು. ಚೀನೀ ಸಾಹಿತ್ಯದ ಮನೋಧರ್ಮ ಬದಲಾಯಿತು, ಆದರೆ ಪಾತ್ರಗಳು, ಘಟನೆಗಳು ಎಲ್ಲಾ ಚೀನೀಯವಾಗಿ ಉಳಿದವು.

1966–78ರವರೆಗೆ ಸಂಸ್ಕೃತಿ ಕ್ರಾಂತಿಯ ಅವಧಿ, ಸಾಹಿತಿಗಳು ಕಲಾವಿದರೂ ಜನತೆಯ ಅಗತ್ಯಗಳನ್ನು ಪೂರೈಸಬೇಕೆಂಬ ಆದೇಶದ ಕಾಲ 'ಬೂರ್ಷ್ವಾಸೀ' ಪಾಶ್ಚಾತ್ಯ ಸಾಹಿತ್ಯವನ್ನು ಅದರ ಪ್ರಭಾವವನ್ನು ಉಗ್ರವಾಗಿ ವಿರೋಧಿಸಿದ ಕಾಲ. 1981ರಿಂದ ಈಚೆಗೆ ಸ್ವಲ್ಪ ಸ್ವಾತಂತ್ರ್ಯವು ಲಭ್ಯವಾಗಿದೆ. ಪಾಶ್ಚಾತ್ಯ ಸಾಹಿತ್ಯ ಮತ್ತು ಅದರ ಮೌಲ್ಯಗಳ ಬಗ್ಗೆ ಒಂದಿಷ್ಟು ಸಹನೆ ಕಾಣಬರುತ್ತಿದೆ. (ಎಲ್.ಎಸ್.ಎಸ್)

**ಚೀನೊಪೋಡಿಯೇಸೀ :** ಚಕ್ಕೋತಸೊಪ್ಪಿನ ಗಿಡದ ಕುಟುಂಬ. ಸೆಂಟ್ರಾಸ್ಪರ್ಮೆ ಗಣಕ್ಕೆ ಸೇರಿದೆ. ಇದರಲ್ಲಿ 75 ಜಾತಿಗಳು, 500 ಪ್ರಭೇದಗಳು ಇವೆ. ಈ ಕುಟುಂಬಕ್ಕೆ ಸೇರಿದ ಕೆಲವು ಸಸ್ಯಗಳಲ್ಲಿ ಮರುಭೂಮಿಯಲ್ಲಿ ಬೆಳೆಯುವ ಸಸ್ಯಗಳ (ಜೀರೋಫೈಟ್ಸ್) ಲಕ್ಷಣಗಳನ್ನು ಕಾಣುತ್ತೇವೆ. ಏಕೆಂದರೆ ಇವು ಲವಣಮಿಶ್ರಿತ ನೀರಿರುವ ಸಮುದ್ರತೀರಗಳಲ್ಲಿ ಬೆಳೆಯುತ್ತವೆ. ಸಮುದ್ರತೀರದ ಮಣ್ಣಿನಲ್ಲಿ ಲವಣದ ಅಂಶ ಅಧಿಕವಾಗಿರುವುದರಿಂದ ಸಸ್ಯಗಳು ಸಾಕಷ್ಟು ನೀರನ್ನು ಹೀರಿಕೊಳ್ಳಲಾರವು. ಹೀಗಾಗಿ ಈ ಪರಿಸ್ಥಿತಿಯಲ್ಲಿ ಬೆಳೆಯುವ ಸಸ್ಯಗಳಲ್ಲಿ ಬಾಷ್ಪವಿಸರ್ಜನಾ ಕ್ರಿಯೆ ಅನಿವಾರ್ಯವಾಗಿ ಅತ್ಯಲ್ಪ ಪ್ರಮಾಣದಲ್ಲಿ ನಡೆಯಬೇಕು. ಇದಕ್ಕಾಗಿ ಇವುಗಳ ದೇಹದಲ್ಲಿ ಕೆಲವು ವಿಶಿಷ್ಟ ಪರಿವರ್ತನೆಗಳನ್ನು ಕಾಣಬಹುದು. ಈ ಸಸ್ಯಗಳು ಸಾಮಾನ್ಯವಾಗಿ ಪುಟ್ಟಗಿಡಗಳ ರೂಪದಲ್ಲೂ ಪೊದೆಗಳ ರೂಪದಲ್ಲೂ ಚಿಕ್ಕ ಮರಗಳ ರೂಪದಲ್ಲೂ ಬೆಳೆಯುತ್ತವೆ. ಚೀನೊಪೋಡಿಯಮ್, ಸ್ಯಾಲಿಕಾರ್ನಿಯ, ಸುಯೇಡ, ಹ್ಯಾಲೊಸೈಲಾನ್, ಬೀಟ, ಸ್ಪಿನೇಷಿಯ ಓಲರೇಸಿಯ ಮುಂತಾದ ಜಾತಿಯ ಸಸ್ಯಗಳು ಈ ಕುಟುಂಬಕ್ಕೆ ಸೇರಿವೆ. ಸ್ಪಿನೇಷಿಯ ಓಲರೇಸಿಯ ಸಸ್ಯವನ್ನು ಸಾಮಾನ್ಯವಾಗಿ ಚಕ್ಕೋತಸೊಪ್ಪಿನ ಗಿಡ ಎಂದು ಕರೆಯುತ್ತಾರೆ. ಕೀನೊಪೋಡಿಯೇಸೀ ಕುಟುಂಬದ ಸಸ್ಯಗಳ ಬೇರುಗಳು ಭೂಮಿಯಲ್ಲಿ ಬಹು ಆಳಕ್ಕೆ ಹೋಗಿ ಬೆಳೆಯುತ್ತವೆ. ಎಲೆಗಳು ಚಿಕ್ಕವಾಗಿದ್ದು ವಿವಿಧರೂಪಗಳಲ್ಲಿ ಇರುತ್ತವೆ. ಕೆಲವು ಸಸ್ಯಗಳಲ್ಲಿ ಎಲೆಗಳು ದಪ್ಪನಾಗಿ, ರಸಭರಿತವಾಗಿ ಕಾಣುತ್ತವೆ. ಎಲೆಗಳ ಮೇಲೆ ಕೂದಲುಗಳು ಬೆಳೆಯುವುದೂ ಉಂಟು. ಕೆಲವು ಸಸ್ಯಗಳಲ್ಲಿ ಎಲೆಗಳೇ ಇಲ್ಲದಿರಬಹುದು. ಕಾಂಡ ಪಾಪಾಸ್ ಕಳ್ಳಿಯಲ್ಲಿರುವಂತೆ ದಪ್ಪವಾಗಿರಬಹುದು. ಕೆಲವು ಪ್ರಭೇದಗಳಲ್ಲಿ ಕಾಂಡ ಖಂಡಖಂಡಗಳಾಗಿ ವಿಭಾಗವಾಗಿದೆ. ಕಾಂಡವನ್ನು ಕತ್ತರಿಸಿನೋಡಿದಾಗ ಜೀರೊಫೈಟ್ ಸಸ್ಯಗಳ ಗುಣಗಳನ್ನೇ ನೋಡಬಹುದು. ಹೂಗೊಂಚಲುಗಳು ಪ್ರಥಮವಾಗಿ ಅಂತ್ಯಾರಂಭಿ ಮಾದರಿಯಲ್ಲಿ ಜೋಡಣೆಯಾಗಿದ್ದು ಅದರ ಕವಲುಗಳಲ್ಲಿ ಮಧ್ಯಾರಂಭಿ ಜೋಡಣೆ ಇರುತ್ತದೆ. ಹೂಗಳು ಬಹಳ ಚಿಕ್ಕಗಾತ್ರದವು; ಏಕಲಿಂಗಿ ಅಥವಾ ದ್ವಿಲಿಂಗಿಗಳಾಗಿರಬಹುದು. ಹೂವಿನ ಪೆರಿಯಾಂತ್ ಭಾಗ ಸರಳ ರೀತಿಯದು. ಕೆಲವೊಮ್ಮೆ ಪೆರಿಯಾಂತ್ ಭಾಗವೇ ಇರುವುದಿಲ್ಲ. ಕೇಸರಗಳ ಸಂಖ್ಯೆ ಪೆರಿಯಾಂತ್ ಸಂಖ್ಯೆಯಷ್ಟೆ, ಅಥವಾ ಕಡಿಮೆ. ಅಂಡಾಶಯ ಉಚ್ಚಸ್ಥಾನದ್ದು. ಫಲ ಚಿಕ್ಕದಾಗಿದ್ದು ಅದಕ್ಕೆ ಏಕೀನ್ ಅಥವಾ ನಟ್ ಎಂದು ಹೆಸರಿದೆ.

ಚೀನೊಪೋಡಿಯಮ್ ಆಲ್ಬಂ ಮತ್ತು ಕೀ. ಆಂಬ್ರಸಾಯ್ಡಿಸ್ ಪ್ರಭೇದಗಳಿಂದ ಒಂದು ಬಗೆಯ ಎಣ್ಣೆಯನ್ನು ತೆಗೆಯುತ್ತಾರೆ. ಕರುಳಿನಲ್ಲಿನ ಪರತಂತ್ರ ಜೀವಿಗಳು, ಕೊಕ್ಕೆಹುಳು, ಜಂತುಹುಳುಗಳ ನಿರ್ಮೂಲನಕ್ಕಾಗಿ ಔಷಧರೂಪದಲ್ಲಿ ಈ ಎಣ್ಣೆಯನ್ನು ಉಪಯೋಗಿಸುತ್ತಾರೆ. ಈ ಕುಟುಂಬಕ್ಕೆ ಸೇರಿದ ಕ್ವಿನೋವ ಎಂಬ ಸಸ್ಯ ದಕ್ಷಿಣ ಅಮೆರಿಕದಲ್ಲಿ ಒಂದು ಆಹಾರ ಬೆಳೆ. ಅದರ ಬೀಜಗಳನ್ನು ಅಕ್ಕಿಯಂತೆ ಆಹಾರವಾಗಿ ಸೇವಿಸುತ್ತಾರೆ. ಇದನ್ನು ಕೋಳಿಗಳ ಆಹಾರವಾಗಿಯೂ ಬಳಸುತ್ತಾರೆ. ಚಕ್ಕೋತಸೊಪ್ಪನ್ನು (ಸ್ಪಿನೇಷಿಯ ಓಲರೇಸಿಯ) ಹಸಿಯಾಗಿಯೊ ಬೇಯಿಸಿಯೊ ಉಪಯೋಗಿಸುತ್ತಾರೆ. ಇದರ ಎಲೆ ಮತ್ತು ಬೀಜಗಳು ಔಷಧರೂಪದಲ್ಲಿಯೂ ಉಪಯುಕ್ತ. ಬೀಟ್‌ರೂಟ್ ಎಂಬುದರಿಂದ ವಿವಿಧ ಜಾತಿಯ ಬೀಟಗಡ್ಡೆ ದೊರೆಯುತ್ತವೆ. ಇವನ್ನು ತರಕಾರಿಯಾಗಿ ಬಳಸುವುದು ಹೆಚ್ಚು. ಇದರಲ್ಲಿ ಸಕ್ಕರೆಯ ಅಂಶ ಅಧಿಕವಾಗಿರುವುದರಿಂದ ಐರೋಪ್ಯ ದೇಶಗಳಲ್ಲಿ ಇದರಿಂದ ಸಕ್ಕರೆಯನ್ನು ಉತ್ಪಾದಿಸುತ್ತಾರೆ. (ಬಿ.ಪಿ.)

**ಚೀಬೀ ಗಿಡ :** ಅಕ್ಯಾಂತೇಸೀ ಕುಟುಂಬಕ್ಕೆ ಸೇರಿದ ಒಂದು ಪೊದೆಸಸ್ಯ. ಚೀಬೀರ ಸೊಪ್ಪು ಪರ್ಯಾಯ ನಾಮ. ಪೆರಿಸ್ಟ್ರೋಫೆ ಬೈಕ್ಯಾಲಿಕ್ಯುಲೇಟ ಇದರ ಶಾಸ್ತ್ರೀಯ ಹೆಸರು. ಏಷ್ಯ ಹಾಗೂ ಆಫ್ರಿಕಗಳ ಉಷ್ಣ ಮತ್ತು ಉಪೋಷ್ಣ ವಲಯಗಳಲ್ಲೆಲ್ಲ ಇದರ ವ್ಯಾಪ್ತಿ ಉಂಟು. ಭಾರತದಲ್ಲಿ ಎಲ್ಲ ಕಡೆಯಲ್ಲೂ ಕಂಡುಬರುತ್ತದೆ. 60–180 ಸೆಂಮೀ. ಎತ್ತರಕ್ಕೆ ಬೆಳೆಯುವ ಗಿಡ ಇದು. ಎಲೆ ಸರಳ ಮಾದರಿಯವು ; ಅಭಿಮುಖ ಬಗೆಯಲ್ಲಿ ಜೋಡಣೆಗೊಂಡಿವೆ. ಆಕಾರ ಅಂಡದಂತೆ. ಹೂಗಳೂ ಗುಲಾಬಿ, ನೇರಿಳೆ ಇಲ್ಲವೆ ಊದಾ ಬಣ್ಣದವು. ಪ್ಯಾನಿಕಲ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಫಲ ಸಂಪುಟ ರೀತಿಯದು.

ಚೀಬೀ ಗಿಡವನ್ನು ಬೀಜದಿಂದ ವೃದ್ಧಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಇದರ ಸೊಪ್ಪನ್ನು ಕುದುರೆಗಳ ಮೇವಾಗಿ ಬಳಸುತ್ತಾರೆ. ಇದರಿಂದ ಹಸಿರು ಗೊಬ್ಬರವನ್ನು ತಯಾರಿಸುವುದುಂಟು. ಅಲ್ಲದೆ ಆವಿ ಆಸವೀಕರಣದಿಂದ ಹಳದಿ ಬಣ್ಣದ ಎಣ್ಣೆಯೊಂದನ್ನು ಪಡೆಯಲಾಗುತ್ತದೆ. ಈ ಎಣ್ಣೆಗೆ ಕ್ಷಯಕ್ರಿಮಿವಿರೋಧಿ ಗುಣ ಇದೆಯೆಂದು ಹೇಳಲಾಗಿದೆ. (ಎಸ್ಐ.ಎಚ್.)

**ಚುಂಚನಕಟ್ಟೆ :** ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಒಂದು ಹೋಬಳಿ; ಕುಪ್ಪೆ ಗ್ರಾಮಪಂಚಾಯಿತಿಗೆ ಒಳಪಟ್ಟ ಒಂದು ಯಾತ್ರಾ ಸ್ಥಳ. ಕಾವೇರಿ ನದಿಯ ದಡದಲ್ಲಿದೆ.



ಕಾವೇರಿ ಜಲಪಾತ

ಶ್ರೀರಾಮಭಕ್ತನಾದ ಚುಂಚ ಎಂಬ ಋಷಿ ಇಲ್ಲಿದ್ದನೆಂದೂ ಈ ಸ್ಥಳಕ್ಕೆ ಅವನ ಹೆಸರೇ ಬಂದಿದೆಯೆಂದೂ ಶ್ರೀರಾಮ ಅರಣ್ಯವಾಸದಲ್ಲಿದ್ದಾಗ ಸೀತೆ ಹಾಗೂ ಲಕ್ಷ್ಮಣ ಸಮೇತನಾಗಿ ಇಲ್ಲಿಗೆ ಬಂದಿದ್ದನೆಂದೂ ಸ್ಥಳಪುರಾಣ ಹೇಳುತ್ತದೆ. ಚುಂಚನಕಟ್ಟೆಯ ಬಳಿ ಕಾವೇರಿ ನದಿ 18–24ಮೀ. ಎತ್ತರದಿಂದ ಧುಮುಕುತ್ತದೆ. ಪ್ರವಾಹದ ಕಾಲದಲ್ಲಿ ಈ ಜಲಪಾತ ರಮ್ಯವಾಗಿ ಕಾಣುತ್ತದೆ. ಜಲಪಾತದ ಬಳಿಯಲ್ಲೆ, ನದಿಯ ಬಲದಂಡೆಯ ಮೇಲೆ, ಶ್ರೀ ಕೋದಂಡರಾಮನ ದೇವಾಲಯವಿದೆ. ಇದು ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನ. ಇದರ ದೊಡ್ಡ ಪ್ರಾಕಾರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿದರು. ದೇವಾಲಯ ಸಾಮಾನ್ಯವಾದ್ದು. ವರ್ಣರಂಜಿತ ಭಿತ್ತಿ ಪ್ರಾಕಾರದ ಒಳಗೆ 1932ರಲ್ಲಿ ಕಟ್ಟಲಾದ ಕಲ್ಯಾಣಮಂಟಪದಲ್ಲಿ ದಶಾವತಾರ ಚಿತ್ರಗಳಿವೆ. ದೇವಾಲಯದ ಪ್ರವೇಶದ್ವಾರದ ಎಡ ಬಲ ಗೋಡೆಗಳಲ್ಲಿ ನಾಗಬಂಧದ ಶಿಲಾಫಲಕಗಳಿವೆ. ದೇವಾಲಯದ ಸುತ್ತಲೂ ಅನೇಕ ಪುಟ್ಟ ಮಂಟಪಗಳೂ ದೇವಾಲಯದ ಎದುರು ಒಂದು ಸುಂದರವಾದ ಕಲ್ಯಾಣಮಂದಿರವೂ ಉಂಟು.

ಜಲಪಾತದ ತಲೆಯ ಬಳಿಯಿಂದ ಸ್ವಲ್ಪ ಮೇಲೆ ಕಾವೇರಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲಾಗಿದೆ. ಈ ಸೇತುವೆಗೆ ಉತ್ತರದಲ್ಲಿ ಇರುವುದು 333ಮೀ.ಉದ್ದದ ರಾಮಸಮುದ್ರ ಅಣೆಕಟ್ಟು. ಈ ಅಣೆಕಟ್ಟಿನಿಂದ ಹೊರಡುವ ರಾಮಸಮುದ್ರ ನಾಲೆಯ ಉದ್ದ 60 ಕಿ.ಮೀ. ಇದು. ಕೃಷ್ಣರಾಜನಗರದವರೆಗೆ ಹೋಗುತ್ತದೆ. ಇದರ ಅಚ್ಚುಕಟ್ಟು 5,808

ಎಕರೆಗಳು. ಅಣೆಕಟ್ಟೆಯನ್ನೂ ನಾಲೆಯನ್ನೂ ಚಿಕ್ಕದೇವರಾಜ ಒಡೆಯರು ನಿರ್ಮಿಸಿದರು. ಸು. 30ಮೀ. ದೂರದಲ್ಲಿ ಇನ್ನೊಂದು ಅಣೆಕಟ್ಟು ಇದೆ. ಇದರ ಎಡದಂಡೆಯಿಂದ ಹೊರಡುವ ಮಿರ್ಲೆ ನಾಲೆ ಒಂದು ಮೈಲಿ ದೂರ ಪ್ರವಹಿಸಿದ ಅನಂತರ ಮೂಲನಾಲೆ, ಹೊಸನಾಲೆ ಮತ್ತು ಅತಿಕಟ್ಟೆನಾಲೆ (10 ಕಿಮೀ. ಉದ್ದ) ಎಂಬ ಮೂರು ಶಾಖೆಗಳಾಗಿ ಒಡೆಯುತ್ತದೆ. ಮುಂದೆ ಈ ಕವಲುಗಳು ಒಂದು ಕಣಿವೆಯಲ್ಲಿ ಒಂದುಗೂಡುತ್ತವೆ. ಅಲ್ಲಿಂದ ಮುಂದೆ ಇದು ಹಂಪಾಪುರದ ನಾಲೆ ಎಂಬ ಹೆಸರು ಪಡೆದು 26 ಕಿ.ಮೀ. ದೂರ ಮುಂದುವರಿದು ಗುಳ್ಳಿಗೆ ಕೆರೆಯಲ್ಲಿ ಸೇರುತ್ತದೆ. ಬಲ ದಂಡೆಯ ಕಡೆ ಚಾಮರಾಜ ನಾಲೆಯನ್ನು ನಿರ್ಮಿಸಲಾಗಿದೆ.

ಪ್ರತಿ ವರ್ಷ ಜನವರಿ ತಿಂಗಳಲ್ಲಿ ಚುಂಚನಕಟ್ಟೆಯಲ್ಲಿ ರಾಮದೇವರ ರಥೋತ್ಸವದ ಸಂದರ್ಭದಲ್ಲಿ ಒಂದು ದೊಡ್ಡ ಜಾತ್ರೆ ನಡೆಯುತ್ತದೆ. ಈ ಸಂದರ್ಭದಲ್ಲಿ ಸೇರುವ ದನಗಳ ಪರಿಷೆಗೆ ನೂರಾರು ಕಿ.ಮೀ.ಗಳಿಂದ ದನಗಳು ಬರುತ್ತವೆ. ಜಾತ್ರೆಗೆ ಸುಮಾರು ಎರಡು ಲಕ್ಷ ಜನ ಬರುತ್ತಾರೆ. (ಕೆ.ಆರ್.ಆರ್.)

**ಚುಂಬನ :** ತುಟಿಗಳಿಂದ ಇನ್ನೊಬ್ಬರ ತುಟಿಗಳನ್ನೋ ಕೆನ್ನೆ ಕೈ ಕಪೋಲಾದಿ ಗಳಲ್ಲೊಂದನ್ನೋ ಸ್ಪರ್ಶಿಸುವುದು (ಕಿಸ್). ಪ್ರೀತಿ, ಉಚ್ಚ ನಾಗರಿಕತೆಗಳಲ್ಲೆಲ್ಲ ಪ್ರಣಯ, ಭಕ್ತಿ, ಗೌರವ ಮುಂತಾದ ಮನೋಭಾವಗಳ ಪ್ರಕಾಶನಕ್ಕೆ ಚುಂಬನ ಒಂದು ಮುಖ್ಯ ಸಾಧನವೆಂದು ಪರಿಗಣಿತವಾಗಿದೆ. ಸಾಮಾನ್ಯ ಬಳಕೆಯಲ್ಲಿ ಕೇವಲ ಸಾಂಕೇತಿಕವಾಗಿದ್ದರೂ ಮಾತೃವಾತ್ಸಲ್ಯ ಹಾಗೂ ಪ್ರಣಯಲೀಲೆಗಳ ಅಂಗವಾಗಿ ಉಪಯುಕ್ತವಾದಾಗ ಇದು ಮನೋವಿಕಾರದ ಆವಿಷ್ಕಾರವಷ್ಟೇ ಆಗಿರದೆ ಕಾಮೋದ್ರೇಕಕಾರಿಯೂ ಆಗುತ್ತದೆ.

ಚುಂಬನ, ಖಜುರಾಹೊ

ಕಾಮವೇ ಮುಂತಾದ ಮೂಲ ಪ್ರವೃತ್ತಿಗಳ ಮೂಲಕ ಒದಗುವ ಶರೀರಸ್ಪರ್ಶದ ಸುಸಂಸ್ಕೃತ ರೂಪವೇ ಚುಂಬನವೆಂದು ಮನೋವಿಜ್ಞಾನಿಗಳ ಮತ. ಅಸಂಸ್ಕೃತ ಸಮಾಜಗಳಲ್ಲಿ ಪರಿಷ್ಕೃತ ರೂಪದ ಚುಂಬನ ಕಂಡುಬಾರದಿದ್ದರೂ ಉನ್ನತ ಸಾಮಾಜಿಕ ವರ್ಗಗಳಲ್ಲಿ ತುಂಬಾ ಪ್ರಚಾರದಲ್ಲಿರುವುದೇ ಅದು ಮೂಲಭೂತ ಪ್ರವೃತ್ತಿಯೆಂಬುದನ್ನು ಸಿದ್ಧ ಮಾಡುತ್ತದೆ. ಚುಂಬನದ ಬಳಕೆಯುಂಟೇ ಇಲ್ಲವೇ ಎಂಬುದರ ಮೇಲಿಂದಲೇ ನಾಗರಿಕತೆಗಳ ಉಚ್ಚನೀಚ ಭಾವವನ್ನು ಊಹಿಸಬಹುದಾಗಿದೆ. ಉದಾಹರಣೆಗೆ, ಪ್ರಾಚೀನ ಈಜಿಪ್ಟಿನವರಿಗೆ ಚುಂಬನ ಗೊತ್ತಿರಲಿಲ್ಲ; ಪ್ರಾಚೀನ ಗ್ರೀಸ್ ಮತ್ತು ಅಸೀರಿಯಗಳಲ್ಲಿ ಅದು ತುಂಬ ಪ್ರಾಮುಖ್ಯವನ್ನು ಪಡೆದಿತ್ತು.; ಭಾರತದಲ್ಲಿ ಕೂಡ ಆರ್ಯರ ಕಾಲಕ್ಕಾಗಲೇ ಬಳಕೆಗೆ ಬಂದಾಗಿತ್ತು.

ಇಂದ್ರಿಯಗಳಲ್ಲೆಲ್ಲ ಸ್ಪರ್ಶೇಂದ್ರಿಯ ಪ್ರಧಾನವಾದುದು. ಪಶುಪಕ್ಷಿಗಳಲ್ಲಿ ಕೂಡ ಪರಸ್ಪರ ಸ್ಪರ್ಶನವಿರುವ ಚೇಷ್ಟೆಗಳನ್ನು ಇಲ್ಲಿ ನೋಡುತ್ತೇವೆ. ಪ್ರಾಣಿಗಳು ಒಂದನ್ನೊಂದು ಮುದ್ದಿಸುವುದನ್ನು ಇಲ್ಲಿ ಉದಾಹರಿಸಬಹುದು. ಕೋತಿಗಳಂತವು ಮಾನವರಂತೆ ಆಘ್ರಾಣಿಸುತ್ತವೆ, ಚುಂಬಿಸುತ್ತವೆ. ಇದರ ಸಂಸ್ಕರಣವೇ ಮಾನವನ ಚುಂಬನ.

ಚುಂಬನದ ನೀಚ ಪ್ರಕಾರಗಳಲ್ಲಿ ಮೂಗನ್ನು ಪರಸ್ಪರ ಉಜ್ಜುವ ಅಭ್ಯಾಸ ಸೇರುತ್ತದೆ. ಇದು ಮಲಯ ದ್ವೀಪವಾಸಿಗಳ, ಆಸ್ಟ್ರೇಲಿಯದ ಮೂಲನಿವಾಸಿಗಳ, ಎಸ್ಕಿಮೋಗಳ ವ್ಯವಹಾರದಲ್ಲಿ ಕಾಣಸಿಗುತ್ತದೆ. ಕೆನ್ನೆಗೆ ಮೂಗು ಬಾಯಿಗಳನ್ನೊತ್ತಿ ಆಘ್ರಾಣಿಸುವುದು ಇದಕ್ಕಿಂತ ಸ್ವಲ್ಪ ಸುಸಂಸ್ಕೃತವಾದ ಚುಂಬನ ಪ್ರಕಾರ. ಇದು ಚೀನೀಯರಲ್ಲೂ ಯೂರೋಪಿನ ಲ್ಯಾಪ್ಸ್ ಜನರಲ್ಲೂ ಬಳಕೆಯಲ್ಲಿದೆ. ಆದರೆ ಇನ್ನೂ ಪರಿಷ್ಕೃತವಾದ ಚುಂಬನ ಪ್ರಕಾರ ಯೂರೋಪಿಯನರದು; ತುಟಿಗಳನ್ನು ಒಬ್ಬನ ಮುಖದ ಅಥವಾ ಶರೀರದ ಯಾವುದಾದರೊಂದು ಭಾಗಕ್ಕೆ ಒತ್ತುವುದು ಮತ್ತು ಮೂಗಿನಿಂದ ಆಘ್ರಾಣಿಸದೆ ಇರುವುದೇ ಅದರ ವೈಶಿಷ್ಟ್ಯ. ಇದರಲ್ಲಿ ಹಲ್ಲಿಗೆ ಕಚ್ಚುವ, ನಾಲಗೆಗೆ ರಸಾಸ್ವಾದ ಮಾಡುವ ಯಾವುದೇ ಪಾತ್ರವಿರುವುದಿಲ್ಲ. ಚುಂಬನದ ಸವಿಯೆಲ್ಲ ತುಟಿಗಳಿಗೆ ಮಾತ್ರ ಸಂಬಂಧಿಸಿದ್ದು. ಪ್ರಣಯದಲ್ಲಿ ಚುಂಬನದ ರೀತಿ ನೀತಿಗಳೇ ಬೇರೆ. ದೇಹದ ಯಾವ ಭಾಗವೂ ಪ್ರಣಯಿಯ ದೃಷ್ಟಿಯಲ್ಲಿ ಚುಂಬನಯೋಗ್ಯವೇ ತುಟಿ ತುಟಿಗೆ ಸೇರಿದಾಗ ಅಧರಾಮೃತ ಪಾನಮಾಡುವುದು, ತುಟಿಗಳನ್ನು ಮೃದುವಾಗಿ ಕಚ್ಚುವುದು, ನಾಲಗೆಯ ತುದಿಯನ್ನು ವದನಾವಕಾಶದಲ್ಲಿ ಇಳಿಸಿ ಸಹಭಾಗಿಯ ನಾಲಗೆಯನ್ನು ಪೀಡಿಸುವುದು–ಇವೆಲ್ಲ ಅಲ್ಲಿ ಉಂಟು.

ಪ್ರಾಚೀನ ರೋಮಿನಲ್ಲಿ ಚುಂಬನದ ನಾನಾ ವಿಧಗಳ ಬಗೆಗೆ ಸ್ಪಷ್ಟ ಕಲ್ಪನೆಗಳು ಬೆಳೆದು ಬಂದಿದ್ದವು; ಮುಖ ಮತ್ತು ಕೆನ್ನೆಗಳ ಚುಂಬನಕ್ಕೆ ಆಸಕ್ಯಲಮ್ ಎಂದೂ ತುಟಿತುಟಿಗಳ ಚುಂಬನಕ್ಕೆ ಬಾಸಿಯಮ್ ಎಂದೂ, ಕೇವಲ ಕಾಮುಕಲೀಲೆಯಾದ ತುಟಿಗಳ ಚುಂಬನಕ್ಕೆ ಸಾವಿಯಮ್ ಎಂದೂ ಬೇರೆ ಬೇರೆ ಹೆಸರುಗಳಿದ್ದುವು. ಈಗಲೂ ಯೂರೋಪಿಯನರು ಕೆನ್ನೆಯ ಚುಂಬನಕ್ಕೂ ವದನಚುಂಬನಕ್ಕೂ ಭೇದವನ್ನು ಕಲ್ಪಿಸುತ್ತಾರೆ.

ಪಾಶ್ಚಾತ್ಯರಲ್ಲಿ ಮಾತಾಪಿತೃಗಳು ಮಕ್ಕಳನ್ನು ಪ್ರೀತಿಗಾಗಿ ಚುಂಬಿಸುವುದು, ಪ್ರಣಯಿಗಳು ಪರಸ್ಪರ ಚುಂಬಿಸುವುದು, ಮಿತ್ರರು ಮಿತ್ರನನ್ನು ಅಥವಾ ಮಿತ್ರೆಯರನ್ನು ಚುಂಬಿಸುವುದು ಹಿಂದಿನಿಂದಲೂ ನಡೆದು ಬಂದ ರೂಢಿ. ಕ್ರೈಸ್ತ ಧರ್ಮದಲ್ಲಿ ಕೂಡ ಪವಿತ್ರ ಚುಂಬನಕ್ಕೆ ಪ್ರವೇಶ ದೊರೆತಿದೆ. ಯೂಕರಿಸ್ಟ್ ಪೂಜಾವಿಧಿಗಳಲ್ಲಿ ಚುಂಬನಕ್ಕೂ ಸ್ಥಾನವುಂಟು. ಬರಬರುತ್ತ ಸ್ತ್ರೀಯರು ಪುರುಷರನ್ನೂ ಪುರುಷರು ಸ್ತ್ರೀಯರನ್ನೂ ಪೂಜಾಂಗವಾಗಿ ಚುಂಬಿಸುವ ರೂಢಿ ತಪ್ಪಿಹೋದರೂ ಚುಂಬನವು ವಿಶ್ವಾಸದ ಕುರುಹಾಗಿ ಸಮಾಜದಲ್ಲಿ ಉಳಿದಿದೆ. ಹಾಗೆಯೇ ರಾಜಾಸ್ಥಾನದ ಮರ್ಯಾದೆಗಳಲ್ಲಿ ಕೂಡ ಚುಂಬನಕ್ಕೆ ವಿಶೇಷ ಸ್ಥಾನವಿದೆ. ಇಬ್ಬರು ರಾಜರು ಸಂದರ್ಶನ ಮಾಡುವಾಗ ಪರಸ್ಪರ ಕಪೋಲವನ್ನು ಚುಂಬಿಸುವರು; ಪ್ರಜೆ ರಾಜನನ್ನು ಗೌರವಿಸುವಾಗ ಹಸ್ತವನ್ನು ಚುಂಬಿಸುತ್ತಾನೆ. ಉಚ್ಚಕುಲದ ಸ್ತ್ರೀಯರನ್ನು ಗೌರವಿಸುವಾಗಲೂ ಹಸ್ತಚುಂಬನದ ಸಂಪ್ರದಾಯವಿದೆ. ಪೋಪ್ ಧರ್ಮಗುರುವಿನ ಪಾದವನ್ನು ಭಕ್ತರು ಚುಂಬಿಸುತ್ತಾರೆ. ದೇವತಾಪೂಜೆಯ ಅಂಗವಾಗಿ ದೇವತಾ ಪ್ರತಿಮೆ ಮುಂತಾದುವನ್ನು ಚುಂಬಿಸುವ ಸಂಪ್ರದಾಯವೂ ಪ್ರಾಚೀನ ಗ್ರೀಕ್, ರೋಮನ್, ಅರೇಬಿಯನ್ ಜನರಲ್ಲಿದ್ದಿತಂತೆ, ಪಾಶ್ಚಾತ್ಯ ಸಾಹಿತ್ಯದಲ್ಲಿ ಸುಪ್ತಸುಂದರಿ ರಮಣನ ಚುಂಬನದಿಂದ ಎಚ್ಚರಗೊಳ್ಳುವ ವಸ್ತು ಕಾಣಸಿಗುತ್ತದೆ. ಫ್ರೆಂಚ್ ಕಲಾಕಾರ ರೋಡಿನ್ (1840–1917) ಮುಂತಾದವರ ಚುಂಬನಚಿತ್ರಗಳು ತುಂಬ ರಸಿಕಪ್ರಿಯವಾಗಿವೆ.

ಭಾರತೀಯ ಕಾಮಶಾಸ್ತ್ರದಲ್ಲಿ ಬಾಹ್ಯರತದ ಅಂಗವಾಗಿ ಹತ್ತಾರು ಬಗೆಯ ಚುಂಬನ ವಿಧಿಗಳನ್ನು ವಾತ್ಸ್ಯಾಯನ ಹೇಳಿದ್ದಾನೆ. ತುಟಿಗಳಲ್ಲದೆ, ಹಣೆ, ಕೆನ್ನೆ, ಕಣ್ಣು, ಸ್ತನಗಳನ್ನೂ ಅವನು ಚುಂಬನಸ್ಥಾನಗಳೆಂದಿದ್ದಾನೆ. ಇವುಗಳಲ್ಲಿ ಗಟ್ಟಿತ, ಸಮ, ವಕ್ರ, ಉದ್ಭ್ರಾಂತ, ಆಕೃಷ್ಟ, ಸಂಪುಟಕ, ಜಿಹ್ವಾರೂಢ ಮುಂತಾದ ಪ್ರಕಾರಗಳಿವೆ. ಈ ಪ್ರಕಾರಗಳನ್ನೆಲ್ಲ ಕೋಣಾರ್ಕ, ಖಜುರಾಹೊ ಮುಂತಾದ ದೇವಸ್ಥಾನಗಳ ಶಿಲ್ಪಕಲಾಕೃತಿಗಳು ಸುಂದರವಾಗಿ ಚಿತ್ರಿಸಿವೆ. (ಕೆ.ಕೆ.)

**ಚುಕ್ಕಾಣಿ :** ದೋಣಿ ನಡೆಸುವಾಗ ಅದನ್ನು ಮುಂದೂಡುವುದಕ್ಕೂ ಅದರ ಚಲನದಿಶೆ ಮತ್ತು ಗತಿಯನ್ನು ನಿಯಂತ್ರಿಸುವುದಕ್ಕೂ ಬಳಸುವ ಸಾಧನ (ರಡರ್). ವ್ಯಾಪಕಾರ್ಥದಲ್ಲಿ ವಿಮಾನ ಮತ್ತು ಹಡುಗುಗಳಲ್ಲಿ ದಿಕ್ಸೂಯಂತ್ರಕವಾಗಿ ವರ್ತಿಸುವ ಅಳವಡಿಕೆ. ಹಡಗಿನಲ್ಲಿ ಚುಕ್ಕಾಣಿ ಅಗಲ, ಚಪ್ಪಟೆ ಮತ್ತು ನುಣುಪಾಗಿ ಇರುವ ಮರದ ಅಥವಾ ಉಕ್ಕಿನ ಅಲಗುಗಳ ಒಂದು ಚೌಕಟ್ಟು, ಹಡಗಿನ ಹಿಂಬದಿಯ ಮಧ್ಯದ ಕೆಳಭಾಗದಲ್ಲಿ, ಅದರ ಹೊರಮೈಯಲ್ಲಿ ನೆಟ್ಟಗೆ ನಿಂತಿರುವ ಬೆನ್ನುಕಂಬಕ್ಕೆ, ಚುಕ್ಕಾಣಿ ತಿರುಗಣಿ ಕೀಲಿನಿಂದ ಭದ್ರವಾಗಿ ನೆಟ್ಟಗೆ ಬಿಗಿಯಲ್ಪಟ್ಟಿರುತ್ತದೆ. ಇದನ್ನು ತಿರುಗಣಿ ಕೀಲಿನ ಮೇಲೆ ಪಕ್ಕದಿಂದ ಪಕ್ಕಕ್ಕೆ ತಿರುಗಿಸಲಾಗುತ್ತದೆ. ಪೈಲಟ್ ಹೌಸ್ ಎಂಬ ಕೊಠಡಿಯಲ್ಲಿರುವ ಚುಕ್ಕಾಣಿಚಕ್ರವನ್ನು (ಸ್ಟಿಯರಿಂಗ್ ವೀಲ್) ದಪ್ಪವಾದ ಕೇಬಲುಗಳಿಂದ ಅಥವಾ ಎಣ್ಣೆ ತುಂಬಿದ ನಳಿಗೆಗಳಿಂದ ಚುಕ್ಕಾಣಿಗೆ ಸೇರಿಸಿದೆ. ಆ ಚಕ್ರವನ್ನು ತಿರುಗಿಸಿ ಚುಕ್ಕಾಣಿಯನ್ನು ಬೇಕಾದ ಕಡೆಗೆ ತಿರುಗಿಸಲಾಗುತ್ತದೆ. ದೋಣಿಗಳಲ್ಲಿ ಅದನ್ನು ಕೈಯಿಂದ ತಿರುಗಿಸಬಹುದು. ದೊಡ್ಡ ಹಡಗುಗಳಲ್ಲಿ ಹೀಗೆ ಮಾಡಲಾಗುವುದಿಲ್ಲ. ಕ್ವೀನ್ ಎಲಿಜೆಬೆತ್ ಎಂಬ ದೊಡ್ಡ ಹಡಗಿನ ಚುಕ್ಕಾಣಿಯ ತೂಕ 140 ಟನ್ನುಗಳು. ಅಂಥ ಚಕ್ರಗಳನ್ನು ಉಗಿಯಂತ್ರ ಅಥವಾ ವಿದ್ಯುತ್ ಯಂತ್ರದಿಂದ ತಿರುಗಿಸಲಾಗುತ್ತದೆ. ಹಡಗಿನ ಅತ್ಯಂತ ತಳಭಾಗದ ಹಲಗೆಯ ಮಟ್ಟದಲ್ಲಿ ಚುಕ್ಕಾಣಿ ಇರುವಾಗ ಅದನ್ನು ಹಾದುಹೋಗುವ ನೀರಿನ ಒತ್ತಡ ಅದರ ಎರಡು ಪಾರ್ಶ್ವಗಳಲ್ಲಿಯೂ ಒಂದೇ ಸಮವಾಗಿರುವುದರಿಂದ ಚುಕ್ಕಾಣಿ ಸಮಸ್ಥಿತಿಯಲ್ಲಿರುತ್ತದೆ. ಚಕ್ರವನ್ನು ತಿರುಗಿಸಿ ಚುಕ್ಕಾಣಿಯನ್ನು ಒಂದು ಪಾರ್ಶ್ವಕ್ಕೆ ಹೊರಳಿಸಿದರೆ, ಅದರ ಎದುರು ಪಕ್ಕದಲ್ಲಿ ನೀರಿನ ಒತ್ತಡ ಕಡಿಮೆಯಾಗುತ್ತದೆ ಮತ್ತು ಚುಕ್ಕಾಣಿಯನ್ನು ತಿರುಗಿಸಿದ ಪಾರ್ಶ್ವದಲ್ಲಿ ನೀರಿನ ಒತ್ತಡ ಹೆಚ್ಚಾಗುತ್ತದೆ. ಆಗ ಚುಕ್ಕಾಣಿ ನೀರಿನ ಅಸಮ ಒತ್ತಡದ ನಿಯಮದ ಪ್ರಕಾರ ವರ್ತಿಸುತ್ತದೆ. ನೀರು ತಿರುಗಣಿ ಗೂಟವನ್ನು ಗುರುತ್ವ ಕೇಂದ್ರವನ್ನಾಗಿ ಮಾಡಿಕೊಂಡು ಚುಕ್ಕಾಣಿಯನ್ನು ಹೆಚ್ಚು ಒತ್ತಡದ ಪಾರ್ಶ್ವದಿಂದ ದಬ್ಬುತ್ತದೆ. ಆಗ ಹಡಗಿನ ಹಿಂಭಾಗ ತಿರುಗುತ್ತದೆ ಮತ್ತು ಹಡಗಿನ ಮುಂಭಾಗ ಚುಕ್ಕಾಣಿ ತಿರುಗಿದ ದಿಶೆಯಲ್ಲಿ ತಿರುಗುತ್ತದೆ. ಆದ್ದರಿಂದ ಹಡಗು ಮೊದಲು ಹೋಗುತ್ತಿದ್ದ ಹಾದಿಯಿಂದ

ತಿರುಗಿ ಬೇರೆ ದಿಶೆಯಲ್ಲಿ ಹೋಗುತ್ತದೆ. ಚುಕ್ಕಾಣಿಗಾರ ಚಕ್ರವನ್ನು ಎಡ ಬದಿಗೆ ತಿರುಗಿಸಿದಾಗ ಚುಕ್ಕಾಣಿ ಎಡಕ್ಕೆ ತಿರುಗುತ್ತದೆ. ಆಗ ನೀರಿನ ರಭಸ ಚುಕ್ಕಾಣಿಯ ಎಡಬದಿಯನ್ನು ಒತ್ತುತ್ತದೆ; ಚುಕ್ಕಾಣಿ ಬಲಕ್ಕೆ ಚಲಿಸುತ್ತದೆ. ಆಗ ಹಡಗಿನ ಮುಂಭಾಗ ಎಡಗಡೆಗೆ ತಿರುಗುತ್ತದೆ. ಚಕ್ರವನ್ನು ಹಡಗಿನ ಬಲಗಡೆಗೆ ತಿರುಗಿಸಿದರೆ ಚುಕ್ಕಾಣಿ ಬಲಪಾರ್ಶ್ವಕ್ಕೆ ತಿರುಗುತ್ತದೆ. ಹಡಗು ಬಲಗಡೆಗೆ ಹೋಗುತ್ತದೆ. ಈ ರೀತಿ ಚುಕ್ಕಾಣಿ ಕೆಲವು ಸಲ ನೀರಿನ ಒಂದು ಬದಿಯಲ್ಲೂ ಮತ್ತೆ ಕೆಲವು ಸಲ ಇನ್ನೊಂದು ಬದಿಯಲ್ಲೂ ನೀರನ್ನು ಎದುರಿಸಿ ಎರಡನೆಯ ವರ್ಗದ ಸನ್ನೆಕೋಲಿನಂತೆ (ಲಿವರ್) ವರ್ತಿಸಿ, ಹಡಗು ಇತ್ತ ಕಡೆ, ಅತ್ತಕಡೆ, ಬೇಕಾದ ದಿಕ್ಕಿನಲ್ಲಿ ಸಂಚಲಿಸುವಂತೆ ಮಾಡುತ್ತದೆ. ಹಡಗು ಹಿಮ್ಮೊಗವಾಗಿ ಹೋಗಲೂ ವ್ಯವಸ್ಥೆ ಉಂಟು. ಹಡಗುಗಳನ್ನು ಇನ್ನೂ ಹೆಚ್ಚು ಪ್ರಬಲವಾಗಿ ನಡೆಸಲು ವಿಶೇಷ ಬಗೆಯ ಚುಕ್ಕಾಣಿಗಳಿವೆ. ಅವುಗಳಿಗೆ ವಿವಿಧ ಆಕಾರಗಳ ಅಲಗುಗಳಿವೆ. ಕಿಟ್‍ಚಿನ್ ಚುಕ್ಕಾಣಿಗೆ ಅರ್ಧ ವರ್ತುಳಾಕೃತಿಯ ಎರಡು ಅಲಗುಗಳಿವೆ. ಅವನ್ನು ನೀರಿನ ಪ್ರವಾಹಕ್ಕೆ ವಿವಿಧ ಕೋನಗಳಲ್ಲಿ ಅಳವಡಿಸಿ ನೀರೊತ್ತಡದ ದಿಕ್ಕನ್ನು ಬದಲಿಸಲು ಸಾಧ್ಯ.

ವಾಯುಯಾನದಲ್ಲಿ ಬಳಸುವ ಎಲ್ಲ ಸಾಧನೆಗಳಿಗೂ ಚುಕ್ಕಾಣಿಗಳಿವೆ. ವಿಮಾನದ ಹಿಂಭಾಗದಲ್ಲಿ ಮೇಲುಗಡೆಗೆ ಚುಕ್ಕಾಣಿಯನ್ನು ಅಳವಡಿಸಿರುತ್ತಾರೆ. ಚಾಲಕ ತನ್ನ ಸ್ಥಾನದಲ್ಲಿ ಕುಳಿತು ಚುಕ್ಕಾಣಿಯ ವಿನ್ಯಾಸವನ್ನು ನಿಯಂತ್ರಿಸುವ ಏರ್ಪಾಡು ಉಂಟು. ಅತ್ಯಂತ ವೇಗಯುತವಾದ ವಿಮಾನಗಳಲ್ಲಿ ಮಾನವರಹಿತ ಕ್ಷಿಪಣಿ ಮುಂತಾದವುಗಳಲ್ಲಿ ಸ್ವಯಂಚಲಿ ಚುಕ್ಕಾಣಿಗಳನ್ನು ಅಳವಡಿಸಲಾಗಿರುವುದು. (ಎಂ.ಜಿ.ಕೆ.ಎಂ.)

**ಚುಕ್ಕಾಣಿ ಗಿಯರ್ :** ಚಲಿಸುತ್ತಿರುವ ವಾಹನದ ಚಲನ ದಿಶೆಯನ್ನು ಬದಲಾಯಿಸಲು ಉಪಯೋಗಿಸುವ ಯಾಂತ್ರಿಕ ಸಾಧನ (ಸ್ಟಿಯರಿಂಗ್ ಗಿಯರ್). ವಾಹನದ ಚಾಲಕ ಚುಕ್ಕಾಣಿ ಚಕ್ರವನ್ನು ತಿರುಗಿಸಿದಾಗ ಅದರ ದಂಡದ ಕೊನೆಯಲ್ಲಿರುವ ತಿರುಪು (ವರ್ಮ್) ಮತ್ತು ಇದರ ಜೊತೆ ಕೂಡಿರುವ ವೃತ್ತಖಂಡ ಸಂವಾದಿಯಾಗಿ ತಿರುಗುತ್ತವೆ. ಈ ವೃತ್ತಖಂಡದ ದಂಡಕ್ಕೆ ತಗುಲಿಸಿರುವ ಇಳಿತೋಳು ಎಂಬ ಸನ್ನೆ ಚುಕ್ಕಾಣಿಚಕ್ರದ ತಿರುಗುವಿಕೆಗೆ ಅನುಸಾರವಾಗಿ ಹಿಂದಕ್ಕೆ ಮುಂದಕ್ಕೆ ಆಡುತ್ತದೆ. ಇಳಿತೋಳಿಗೂ ಚುಕ್ಕಾಣಿತೋಳಿಗೂ ಎಳೆಯುವ ಕೊಂಡಿಯ ಮೂಲಕ ಸಂಬಂಧ ಉಂಟು (**ಚಿತ್ರ 1**). ಚುಕ್ಕಾಣಿ ತೋಳು ಮತ್ತು ಮುಂದಿನ ಒಂದು ಚಕ್ರದ ತುಂಡು ಅಕ್ಷ ಕೂಡಿಕೊಂಡಿವೆ. (**ಚಿತ್ರ 2**) ಈ ತುಂಡುಚಕ್ರದ ಚಲನೆ ಕೂಡುಕಂಬಿಯ ಮೂಲಕ ಇನ್ನೊಂದು ಮುಂದಿನ ಚಕ್ರದ ತುಂಡು ಅಕ್ಷಕ್ಕೂ ಸಾಗಿಸಲ್ಪಡುತ್ತದೆ. ಈ ಎಲ್ಲ ಜೋಡಣೆಯಿಂದಾಗಿ ಚುಕ್ಕಾಣಿ ಚಕ್ರ ಸುತ್ತಿದಾಗ ಮುಂದಿನ ಎರಡು ಮಾರ್ಗಚಕ್ರಗಳೂ ಒಂದು ನಿರ್ದಿಷ್ಟ ರೀತಿಯಲ್ಲಿ ಜೊತೆಯಾಗಿ ತಿರುಗಿ ವಾಹನದ ಚಲನೆಯ ದಿಶೆಯನ್ನು ಬದಲಾಯಿಸುತ್ತವೆ.

ವಾಹನದಲ್ಲಿ ಉಪಯೋಗಿಸುವ ಚುಕ್ಕಾಣಿ ಗಿಯರಿಗೆ ಈ ಕೆಳಗಿನ ಕೆಲವು ಮುಖ್ಯ ಲಕ್ಷಣಗಳು ಇರಬೇಕು:




ಚಿತ್ರ 1

1. ಯಾಂತ್ರಿಕ ಪ್ರಯೋಜನ : ಚಾಲಕ ವಿಶೇಷ ಪ್ರಯಾಸವಿಲ್ಲದೆ ವಾಹನದ ಮಾರ್ಗ ಚಕ್ರಗಳನ್ನು ತಿರುಗಿಸುವಂತಿರಬೇಕು. ಈ ಪ್ರಯೋಜನವನ್ನು ಪಡೆಯಬೇಕಾದರೆ ಮಾರ್ಗಚಕ್ರಗಳು ಸ್ವಲ್ಪ ತಿರುಗಿದರೆ, ಚುಕ್ಕಾಣಿಚಕ್ರ ಇನ್ನೂ ಹೆಚ್ಚಿನ ಪರಿಮಾಣದಲ್ಲಿ ಸುತ್ತಬೇಕಾಗುವುದು.

ಆಧುನಿಕ ಕಾರುಗಳಲ್ಲಿ ಮಾರ್ಗಚಕ್ರಗಳನ್ನು ಎಡಗಡೆಯ ಒಂದು ಕಡೆಯಿಂದ ಬಲಗಡೆಯ ಇನ್ನೊಂದು ಕಡೆಗೆ ಪೂರ್ತಿ ತಿರುಗಿಸಬೇಕಾದರೆ, ಚುಕ್ಕಾಣಿ ಚಕ್ರವನ್ನು ಮೂರು ಅಥವಾ ನಾಲ್ಕು ಸುತ್ತು ತಿರುಗಿಸಬೇಕಾಗುವುದು. ಇಂಥ ವ್ಯವಸ್ಥೆಯಿಂದ ವಾಹನದ ಚಕ್ರಗಳು ಬಹುಸೂಕ್ಷ್ಮವಾದ ನಿಯಂತ್ರಣಕ್ಕೆ ಒಳಪಡುತ್ತವೆ.




ಚಿತ್ರ 2

2. ಅರ್ಧ ವಿಪರ್ಯಯಶೀಲತೆ (ಸೆಮಿರಿವರ್ಸಿಬಿಲಿಟಿ) : ವಾಹನಗಳು ಚಲಿಸುವಾಗ ಉಂಟಾಗುವ ಮಾರ್ಗಚಕ್ರಗಳ ಮೇಲಿನ ಆಘಾತ ನೇರವಾಗಿ ಚುಕ್ಕಾಣಿಚಕ್ರಕ್ಕೆ ಸಾಗಿದರೆ ಚಾಲಕನ ಕೈಗಳಿಗೆ ಏಟು ತಗುಲಿ ಆತ ವಾಹನವನ್ನು ನಡೆಸುವುದು ತ್ರಾಸವಾಗುತ್ತದೆ. ಈ ದೋಷವನ್ನು ತಪ್ಪಿಸುವುದಕ್ಕೆ ಅವಿಪರ್ಯಯಶೀಲ (ಇರ್ರಿವರ್ಸಿಬಲ್) ವ್ಯವಸ್ಥೆಯನ್ನು ಬಳಸಬೇಕಾಗುತ್ತದೆ. ಅಂದರೆ ಚುಕ್ಕಾಣಿ ಚಕ್ರ ತಿರುಗಿದಾಗ ಮಾತ್ರ ಮಾರ್ಗಚಕ್ರಗಳು ತಿರುಗಬೇಕೇ ಹೊರತು, ಮಾರ್ಗಚಕ್ರಗಳು ತಿರುಗಿದಾಗ ಚುಕ್ಕಾಣಿ ಚಕ್ರ ತಿರುಗಕೂಡದು. ಆದರೆ ಇಂಥ ಗಿಯರುಗಳು ಇನ್ನೊಂದು ದೃಷ್ಟಿಯಿಂದ ಅನಪೇಕ್ಷಣೀಯ. ಏಕೆಂದರೆ ಅವಿಪರ್ಯಯಶೀಲ ಲಕ್ಷಣವುಳ್ಳ ಗಿಯರು ಬಹಳ ಜಡವಾಗಿರುವುದರಿಂದ ಚಾಲಕನು ರಸ್ತೆಯ ಸ್ಥಿತಿಯನ್ನು ಅರಿಯಲಾರ. ಚಾಲಕನಿಗೆ ಇಂಥ ಸ್ಪರ್ಶಜ್ಞಾನ ಆವಶ್ಯಕ ಎಂದು ಅನುಭವದಿಂದ ತಿಳಿದುಬಂದಿದೆ. ಅಲ್ಲದೆ ಗಿಯರಿನ ಜಡತೆಯಿಂದ ಕೊಂಡಿಗಳ ಸವೆತ ಹೆಚ್ಚಿ ಗಿಯರು ಬಹುಬೇಗ ನಿಷ್ಪ್ರಯೋಜಕವಾಗುವುದು. ಈ ದೋಷವನ್ನು ತಪ್ಪಿಸುವುದಕ್ಕೆ ಮಧ್ಯಮಾರ್ಗವನ್ನು ಅನುಸರಿಸಿ ಈಗಿನ ಕಾರುಗಳನ್ನು ಅರ್ಧ ವಿಪರ್ಯಯಶೀಲತೆ ಇರುವಂತೆ ಏರ್ಪಡಿಸಿದೆ. ಈ ವಿಧಾನದಲ್ಲಿ ಮಾರ್ಗಚಕ್ರಗಳು ತಿರುಗಿಸುವುದಕ್ಕೆ ಬಹಳ ಶಕ್ತಿಬೇಕಾಗುತ್ತದೆ. ಅಲ್ಲದೆ ಚುಕ್ಕಾಣಿ ಗಿಯರಿನ ಕೊಂಡಿ ಮತ್ತು ಸನ್ನೆಗಳಲ್ಲಿ ಸ್ಪ್ರಿಂಗಿನ ಜೋಡಣೆ ಇರುವುದರಿಂದ ಮಾರ್ಗಚಕ್ರಗಳ ಮೇಲಿನ ಆಘಾತ ನೇರವಾಗಿ ಚುಕ್ಕಾಣಿ ಚಕ್ರಕ್ಕೆ ಸಾಗುವುದಿಲ್ಲ.

3. ಪೂರ್ವ ಸ್ಥಿತಿಗೆ ಹಿಂತಿರುಗುವಿಕೆ (ರಿಕವರಿ) : ಮಾರ್ಗಚಕ್ರಗಳನ್ನು ತಿರುಗಿಸಿದ ತರುವಾಯ ಚಾಲಕನು ಚುಕ್ಕಾಣಿ ಚಕ್ರದ ಮೇಲೆ ತನ್ನ ಹಿಡಿತವನ್ನು ಸಡಿಲಿಸಿದರೆ ಮಾರ್ಗಚಕ್ರಗಳು ಪುನಃ ಪೂರ್ವಸ್ಥಿತಿಗೆ ಹಿಂತಿರುಗಿ ನೇರವಾಗಿ ಓಡಲು ಪ್ರಾರಂಭಿಸಬೇಕು. ಕೆಲವು ಓರೆಯಾದ ಕೊಂಡಿಗಳು ಮತ್ತು ಸ್ಪ್ರಿಂಗುಗಳ ಬಳಕೆಯಿಂದ ಈ ಸೌಲಭ್ಯ ಫಲಿಸುವಂತೆ ಮಾಡಲಾಗಿದೆ.

ಚುಕ್ಕಾಣಿ ಗಿಯರು ಪೆಟ್ಟಿಗೆ : ಇದು ಚುಕ್ಕಾಣಿಚಕ್ರದ ತಿರುಗುವಿಕೆಯನ್ನು ಇಳಿತೋಳಿನ ಚಲನೆಯನ್ನಾಗಿ ಮಾರ್ಪಡಿಸುವ ಸಾಧನ. ಇದರಲ್ಲಿ ಅನೇಕ ವಿಧಗಳಿವೆ. ಬಹಳ ಬಳಕೆಯಲ್ಲಿರುವುದು ವರ್ಮ್ ಮತ್ತು ನಟ್ ಗಿಯರುಪೆಟ್ಟಿಗೆ. ಎಲ್ಲ ದೊಡ್ಡ ಮತ್ತು ಸಣ್ಣ ಕಾರುಗಳಲ್ಲಿಯೂ ಈ ಪೆಟ್ಟಿಗೆಯನ್ನು ಉಪಯೋಗಿಸುತ್ತಾರೆ. ಇದರ ರಚನೆ ಹೀಗಿದೆ.

ಚುಕ್ಕಾಣಿದಂಡದ ಕೊನೆಯಲ್ಲಿರುವ ಚೌಕಾಕಾರದ ಸ್ಕ್ರೂ ಎಳೆಯುಳ್ಳ ತಿರುಪು ಒಂದು ನಟ್ಟಿನೊಳಗೆ ತಿರುಗುತ್ತದೆ. ಚುಕ್ಕಾಣಿದಂಡ ತಿರುಗಿದಾಗ ಈ ನಟ್ಟು ಮೇಲಕ್ಕೆ ಕೆಳಗೆ ಚಲಿಸಿ L ಆಕಾರದ ಒಂದು ಸನ್ನೆಯ ಮೂಲಕ ಇಳಿತೋಳನ್ನು ತಳ್ಳುವುದು ಅಥವಾ ಎಳೆಯುವುದು.

ಇನ್ನೂ ಸುಭದ್ರವಾದ, ಘರ್ಷಣೆ ಕಡಿಮೆ ಉಂಟುಮಾಡುವ, ಬಹಳ ಬಾಳಿಕೆ ಬರುವ ಅನೇಕ ಗಿಯರು ಪೆಟ್ಟಿಗೆಗಳಿವೆ. ಇವುಗಳಲ್ಲಿ ಮುಖ್ಯವಾದವು: 1 ವರ್ಮ್ ಮತ್ತು ಚಕ್ರದ ಗಿಯರು ಪೆಟ್ಟಿಗೆ, 2 ಮಾರ್ಲೆಸ್ ಕ್ಯಾಮ್ ಮತ್ತು ರೋಲರ್ ಗಿಯರು ಪೆಟ್ಟಿಗೆ, 3 ನಿರಂತರ ಬಾಲ್ ಜೇರಿಂಗ್ ವಿಧಾನದ ಗಿಯರು ಪೆಟ್ಟಿಗೆ.

ಚುಕ್ಕಾಣಿ ಗಿಯರಿನ ಸೈದ್ಧಾಂತಿಕ ಆವಶ್ಯಕತೆ : ವಾಹನ ತಿರುಗುವಾಗ ನಾಲ್ಕು ಮಾರ್ಗಚಕ್ರಗಳೂ ನೆಲದ ಮೇಲೆ ಜಾರದಂತೆ ಸರಾಗವಾಗಿ ಉರುಳಬೇಕು. ಚಕ್ರಗಳು ನೆಲದ ಮೇಲೆ ಜಾರಿದರೆ ಘರ್ಷಣೆಯಿಂದ ಟೈರುಗಳು ಬಹಳ ಬೇಗ ಸವೆದು ಹೋಗುವುವು. ಆದ್ದರಿಂದ ಎಲ್ಲ ಚಕ್ರಗಳೂ ಸರಾಗವಾಗಿ ಉರುಳಬೇಕೇ ವಿನಾ ಜಾರಬಾರದು. ಯಾಂತ್ರಿಕ ನಿಯಮದ ಪ್ರಕಾರ ಹೀಗಾಗಬೇಕಾದರೆ ನಾಲ್ಕು ಚಕ್ರಗಳ ಅಕ್ಷಗಳೂ ಒಂದು ಕೇಂದ್ರ ಬಿಂದುವಿನಲ್ಲಿ ಸಂಧಿಸಬೇಕು. (ಚಿತ್ರ 2) ಆಗ ಎಲ್ಲ ಚಕ್ರಗಳೂ ಈ ತಾತ್ಕ್ಷಣಿಕ ಕೇಂದ್ರಬಿಂದುವಿನ ಸುತ್ತ ಜಾರದೆ ತಿರುಗುತ್ತವೆ. ಹಿಂದಿನ ಚಕ್ರಗಳ ಅಕ್ಷ ಸ್ಥಿರವಾಗಿರುತ್ತದೆ. ಮುಂದಿನ ಎರಡು ಚಕ್ರಗಳ ಅಕ್ಷಗಳೂ ವಾಹನ ತಿರುಗುವ ವೃತ್ತದ ತ್ರಿಜ್ಯಕ್ಕೆ ಅನುಗುಣವಾಗಿ ಬೇರೆ ಬೇರೆ ಪರಿಮಾಣಗಳಲ್ಲಿ ತಿರುಗಬೇಕಾಗುವುದು. ಆಕರ್‌ಮನ್, ಡೆವಿಸ್ ಮುಂತಾದ ಚುಕ್ಕಾಣಿ ಗಿಯರುಗಳ ಸನ್ನೆಕೊಂಡಿಗಳ ಜೋಡಣೆ ಈ ಸೈದ್ಧಾಂತಿಕ ಆವಶ್ಯಕತೆಯನ್ನು ಪೂರೈಸುವುದು.

ಚುಕ್ಕಾಣಿ ಗಿಯರಿನಲ್ಲಿ ಶಕ್ತಿಯ ಬಳಕೆ : ಬಹಳ ದೊಡ್ಡ ಮತ್ತು ಭಾರವಾದ ವಾಹನಗಳಲ್ಲಿ ಮಾರ್ಗಚಕ್ರಗಳು ದೊಡ್ಡ ಗಾತ್ರದಲ್ಲಿರುವುದರಿಂದಲೂ ಗಿಯರಿನ ಭಾಗಗಳೆಲ್ಲ ಭಾರವಾಗಿರುವುದರಿಂದಲೂ ಮುಂದಿನ ಚಕ್ರಗಳನ್ನು ತಿರುಗಿಸುವುದು ಶ್ರಮಸಾಧ್ಯವಾದ ಕೆಲಸ. ಚಾಲಕನ ಶ್ರಮವನ್ನು ಕಡಿಮೆ ಮಾಡುವುದಕ್ಕೆ ಶಕ್ತಿಯುತ ಚುಕ್ಕಾಣಿ ವಿಧಾನ ಬಳಕೆಯಲ್ಲಿದೆ. ವಾಹನದ ಎಂಜಿನ್ ಚಾಲನೆಯಲ್ಲಿದ್ದಾಗ ಎಣ್ಣೆಯ ಪಂಪು ಕೆಲಸ ಮಾಡಿ ಒತ್ತಡದ ಎಣ್ಣೆಯನ್ನು ಸರ್ವೋ ಮೋಟರಿಗೆ ಒದಗಿಸುತ್ತದೆ. ಇದು ಚುಕ್ಕಾಣಿ ಗಿಯರಿಗೆ ಬೇಕಾದ ಶಕ್ತಿಯನ್ನು ಉತ್ಪಾದಿಸುತ್ತದೆ. (ಬಿ.ಪಿ.ಜಿ.)

**ಚುಕ್ಕೆಜಿಂಕೆ :** ಭಾರತ ಮತ್ತು ಶ್ರೀಲಂಕಾಗಳಲ್ಲಿ ಕಾಣಬರುವ ಒಂದು ಸುಂದರವಾದ ಜಿಂಕೆ (ಸ್ಪಾಟೆಡ್ ಡಿಯರ್, ಚಿತಾಲ್, ಆಕ್ಸಿಸ್ ಡಿಯರ್). ಆರ್ಟಿಯೊಡ್ಯಾಕ್ಟಿಲ ಗಣದ ಸರ್ವಿಡೀ ಕುಟುಂಬಕ್ಕೆ ಸೇರಿದೆ. ಆಕ್ಸಿಸ್ ಆಕ್ಸಿಸ್ ಎಂಬುದು ಇದರ ಶಾಸ್ತ್ರೀಯ ಹೆಸರು.



ಮೈದಾನಸೀಮೆಯ ಕುರುಚಲು ಇಲ್ಲವೆ ಪರ್ಣಪಾತಿಗಿಡಗಳ ಕಾಡುಗಳಲ್ಲಿ, ಹುಲ್ಲುಗಾವಲು ಗಳಲ್ಲಿ ವಾಸಿಸುತ್ತದೆ. ಸಮುದ್ರಮಟ್ಟದಿಂದ ಸು.1220ಮೀ. ಎತ್ತರದ ಪ್ರದೇಶಗಳಲ್ಲೂ ಕಾಣದೊರೆಯುತ್ತದೆ. ಭಾರತದ ಅಸ್ಸಾಮ್, ಪಂಜಾಬ್ ಮತ್ತು ರಾಜಾಸ್ಥಾನಗಳನ್ನುಳಿದು ಇನ್ನೆಲ್ಲ ರಾಜ್ಯಗಳಲ್ಲೂ ಇದರ ವ್ಯಾಪ್ತಿ ಉಂಟು. ಮಧ್ಯಪ್ರದೇಶ, ಕರ್ನಾಟಕ, ತಮಿಳುನಾಡು ಇಲ್ಲೆಲ್ಲ ಇದು ಹೇರಳವಾಗಿದೆ. ಮಾಟವಾದ ಹೊನ್ನಿನ ಬಣ್ಣದ ದೇಹ, ಮೈಯ ಚೆಲುವನ್ನು ಹೆಚ್ಚಿಸುವಂತೆ ಇರುವ ಬಿಳಿಬಣ್ಣದ ಚುಕ್ಕೆಗಳು, ಕಾತರವನ್ನು ಹೊರಸೂಸುವಂತಿರುವ ವಿಶಾಲವಾದ ಕಣ್ಣುಗಳು, ಸದ್ದುಬಂದ ಕಡೆ ನಿಮಿರಿ ತಿರುಗಿನಿಲ್ಲುವ ಕಿವಿಗಳು – ಈ ಲಕ್ಷಣಗಳು ಚುಕ್ಕೆ ಜಿಂಕೆಯನ್ನು ಜಿಂಕೆಗಳಲ್ಲೆಲ್ಲ ಅತ್ಯಂತ ಸುಂದರವಾದ ಹಾಗೂ ಆಕರ್ಷಣೀಯವಾದ ಪ್ರಾಣಿಯನ್ನಾಗಿ ಮಾಡಿವೆ.

ಮಧ್ಯಮಗಾತ್ರದ ಜಿಂಕೆಯಿದು ; ಗಂಡು ಜಿಂಕೆಯು ಉದ್ದ 1–1.75ಮೀ. ಭುಜದ ಬಳಿಯ ಎತ್ತರ 0.6–1ಮೀ; ತೂಕ 50–90ಕಿಗ್ರಾಂ. ಗಂಡುಜಿಂಕೆಯಲ್ಲಿ ಮಾತ್ರ ಒಂದು ಜೊತೆ ಕೊಂಬುಗಳಿವೆ. ಒಂದೊಂದು ಕೊಂಬಿನಲ್ಲೂ 3 ಕವಲುಗಳುಂಟು. ಕೊಂಬುಗಳ ಉದ್ದ ಸು. 75–100ಸೆಂಮೀ. ವರ್ಷಕ್ಕೊಮ್ಮೆ ಕೊಂಬುಗಳು ಉದುರಿಹೋಗುತ್ತವೆ. ಚುಕ್ಕೆಜಿಂಕೆಯ ಬಾಲ ತೆಳುವಾಗಿಯೂ ಉಳಿದ ಜಿಂಕೆಗಳ ಬಾಲಕ್ಕಿಂತ ಉದ್ದವಾಗಿಯೂ ಇದೆ. ಇದು ಯಾವಾಗಲೂ 20–100 ಪ್ರಾಣಿಗಳ ಹಿಂಡುಗಳಲ್ಲೇ ಓಡಾಡುತ್ತದೆ. ಹುಲ್ಲು, ಎಳೆ ಚಿಗುರು ಇದರ ಪ್ರಧಾನ ಆಹಾರ. ನೆಲಕ್ಕುದುರಿದ ಹೂಗಳೂ ಹಣ್ಣುಗಳೂ ಇದಕ್ಕೆ ಅಚ್ಚುಮೆಚ್ಚು. ಸಾಮಾನ್ಯವಾಗಿ ಬೆಳಗಿನ ಜಾವದಲ್ಲೊಮ್ಮೆ ಮತ್ತು ಸಂಜೆ ಕತ್ತಲಾಗುವ ಮುನ್ನ ಒಮ್ಮೆ ಹುಲ್ಲು ಮೇಯುತ್ತ ಅಲೆದಾಡುತ್ತಿದ್ದು ಮಧ್ಯಾಹ್ನ ಮರಗಳ ನೆರಳಿನಲ್ಲಿ ವಿಶ್ರಮಿಸುತ್ತದೆ. ತುಂಬ ಚೆನ್ನಾಗಿ ಈಜಬಲ್ಲ ಇದು ಆಗಿಂದಾಗ್ಗೆ ನೀರಿಗಿಳಿಯುವುದೂ ಉಂಟು. ಗಂಡು ಹೆಣ್ಣುಗಳು ಕೂಡುವ ಕಾಲ ಸಾಧಾರಣವಾಗಿ ಏಪ್ರಿಲ್ –ಮೇ. 7–8 ತಿಂಗಳ ಗರ್ಭಾವಸ್ಥೆಯ ಅನಂತರ 2 ಮರಿಗಳು ಹುಟ್ಟುತ್ತವೆ. ಚುಕ್ಕೆ ಜಿಂಕೆಯ ಆಯುಸ್ಸು 10–15 ವರ್ಷಗಳು. ಬಲು ಸುಂದರವಾಗಿರುವುದರಿಂದ ಇದನ್ನು ಸಾಕುವುದುಂಟು. ಇದರ ಚರ್ಮ ಹಾಗೂ ಕೊಂಬು ಗೃಹಾಲಂಕರಣದ ವಸ್ತುಗಳಾಗಿವೆ. ಕೊಂಬಿಗೆ ಔಷಧೀಯ ಗುಣಗಳೂ ಉಂಟು. ಇದರ ಮಾಂಸ ಬಲುರುಚಿಯೆಂದು ಹೇಳಲಾಗಿದೆ. (ಕೆ.ಎಸ್.ಎ.)

**ಚುಕ್ಕೆ ಬೇನೆ :** ಟ್ರಿಪೋನೀಮ ಕೆರೇಟಿಯಮ್ ಹೆಸರಿನ ಜೀವಾಣುವಿನಿಂದ ಹರಡುವ ರೋಗ (ಪಿಂಟ). ರಕ್ತಹೀರುವ ನೊಣ ಇಲ್ಲವೇ ಕೀಟಗಳು ರೋಗವನ್ನು ಹರಡುತ್ತವೆ. ರೋಗ ತೀರ ಬಲಿತಾಗ ಗುಂಡಿಗೆ ರಕ್ತನಾಳಗಳಿಗೂ ಹತ್ತಬಹುದು. 60% ರೋಗಿಗಳಲ್ಲಿ ಉಪದಂಶ (ಸಿಫಿಲಿಸ್) ರೋಗಿಗಳಲ್ಲಿದ್ದಂತೆ ವಾಸರ್ಮನ್ ಪ್ರತಿಕ್ರಿಯೆ ಧನಾತ್ಮಕ ಆಗಿರುವುದು. ಇದು ಯಾಸ್ ಬೇನೆಯನ್ನು ಹೋಲುತ್ತದೆ. ಹಸುಗೂಸುಗಳಲ್ಲಿ ಅಪರೂಪ. ವಯಸ್ಕ ಕರಿಯ ಜನರಲ್ಲಿ ಹೆಚ್ಚು. ಮೈಯಲ್ಲಿ ಅಲ್ಲಲ್ಲಿ ಬಣ್ಣ ಕಳೆದು ಚರ್ಮ ಗಂಟು ಕಟ್ಟುತ್ತದೆ. 6–12 ತಿಂಗಳಲ್ಲಿ ಕಾಣಿಸಿಕೊಳ್ಳುವ ಚಪ್ಪಟೆಯಾದ ಕೆಂಪು ಚುಕ್ಕೆಗಳಂಥ ದದ್ದುಗಳು ಏಳುತ್ತವೆ. ಇವು ಒಟ್ಟುಗೂಡಿ ಬಗೆ ಬಗೆಯ ಆಕಾರ ಹೊಂದಿ ಬೇರೆ ಚರ್ಮರೋಗಗಳನ್ನು ಹೋಲುತ್ತವೆ. ಈ ರೋಗ ಪೆನಿಸಿಲಿನ್ ಮದ್ದಿನಿಂದ ಪೂರ್ತಿ ಗುಣವಾಗುತ್ತದೆ. **(ನೋಡಿ– ಯಾಸ್)** (ಡಿ.ಎಸ್.ಎಸ್.)

**ಚುಕ್ಕೆ ಸೊಪ್ಪು :** ಪಾಲಿಗೊನೇಸೀ ಕುಟುಂಬಕ್ಕೆ ಸೇರಿದ ಜನಪ್ರಿಯ ಸೊಪ್ಪು ತರಕಾರಿ. ಹುಳಿಬಸಳೆ ಸೊಪ್ಪು ಇದರ ಪರ್ಯಾಯ ನಾಮ. ರೂಮೆಕ್ಸ್ ವೆಸಿಕೇರಿಯಸ್ ಇದರ ಶಾಸ್ತ್ರೀಯ ನಾಮ. ಇದು ಆಫ್ರಿಕದ ಮೂಲದ್ದು. ಭಾರತದಲ್ಲೂ ಕಂಡುಬರುತ್ತದೆ.



ಇದು ಒರಟು ಜಾತಿಯ ಏಕವಾರ್ಷಿಕ ಸಸ್ಯ; 15–40 ಸೆಂ.ಮೀ. ಎತ್ತರ ಬೆಳೆಯುತ್ತದೆ. ಮೆತುವಾದ ರಸವತ್ತಾದ ಕಾಂಡ ಮತ್ತು ಎಲೆಗಳಿವೆ. ಎಲೆಗಳ ಆಕಾರ ಅಂಡದಂತೆ; ಜೋಡಣೆ ಅಭಿಮುಖ ಮಾದರಿಯದು. ಇದನ್ನು ಬೀಜದಿಂದ ಬೆಳೆಸುತ್ತಾರೆ. ಚುಕ್ಕೆಸೊಪ್ಪಿನ ಫಲವು ಸಣ್ಣದಾಗಿಯೂ, ಗಟ್ಟಿಯಾಗಿಯೂ ಇರುತ್ತದೆ. ಇದು ಮಾರ್ಚ್–ಮೇ ತಿಂಗಳುಗಳಲ್ಲಿ

ಹೂ ಬಿಡುತ್ತದೆ. ಬೇರೆ ಸೊಪ್ಪನ್ನು ಬೆಳೆಯುವಾಗ ಹದಮಾಡುವಂತೆ ಭೂಮಿಯನ್ನು ಹದಗೊಳಿಸಿ, ಮಡಿಗಳನ್ನು ಅಥವಾ ಪಾತಿಗಳನ್ನು ಮಾಡಿ ಗಿಡದಿಂದ ಗಿಡಕ್ಕೆ 8–10 ಸೆಂ.ಮೀ. ಅಂತರವಿಟ್ಟು ಮತ್ತು ಸಾಲಿನಿಂದ ಸಾಲಿಗೆ 30 ಸೆಂ.ಮೀ. ಅಂತರವಿರುವಂತೆ ಬೀಜ ಬಿತ್ತಲಾಗುತ್ತದೆ. ಬಿತ್ತುವ ಕಾಲ ಅಕ್ಟೋಬರ್. ವಾರಕ್ಕೊಂದಾವರ್ತಿ ನೀರನ್ನು ಕಟ್ಟುತ್ತಿದ್ದರೆ ಸಾಕು. ಚುಕ್ಕೆ ಸೊಪ್ಪಿನ ರಸವನ್ನು ತಂಪುಕಾರಕವಾಗಿಯೂ ಹಲ್ಲುನೋವಿಗೆ ಔಷಧಿಯಾಗಿಯೂ ಬಳಸುತ್ತಾರೆ. ಇದರ ಬೀಜ ಮತ್ತು ಬೇರುಗಳಿಗೆ ಸಹ ಔಷಧೀಯ ಗುಣಗಳಿವೆ. (ಎಂ.ಎಚ್.ಎಂ.; ಎನ್.ಆರ್.ವಿ.)

**ಚುಚ್ಚುಮದ್ದು ವಿಧಾನ :** ದೇಹದ ನಿರ್ದಿಷ್ಟ ಭಾಗವನ್ನು ಚುಚ್ಚಿ ದೇಹದೊಳಕ್ಕೆ ವಿಶಿಷ್ಟ ವಸ್ತುವನ್ನು ಸೇರಿಸುವಿಕೆ. ಸೋಂಕಿನಿಂದ ರಕ್ಷಣೆ ಪಡೆಯಲು ಅನುಸರಿಸುವ ಚುಚ್ಚುಮದ್ದಿನ ವಿಧಾನಕ್ಕೆ ಇನಾಕ್ಯುಲೇಷನ್ ಎಂದೂ ರೋಗಚಿಕಿತ್ಸೆ ಮತ್ತು ಇತರ ಸಂದರ್ಭಗಳಲ್ಲಿ ಅನುಸರಿಸುವ ವಿಧಾನಕ್ಕೆ ಇನ್ಜೆಕ್ಷನ್ ಎಂದೂ ಹೆಸರುಂಟು. ಚುಚ್ಚುಮದ್ದು ರೋಗಚಿಕಿತ್ಸಕ ವಸ್ತುವಾಗಿರಬಹುದು, ದೇಹಪೋಷಕ ವಸ್ತುವಾಗಿರಬಹುದು. ಆದ್ದರಿಂದ ದೇಹದೊಳಗೆ ತೂರಿಸುವ ವಸ್ತುವಿನ ಮೊತ್ತ ಆಯಾ ಸಂದರ್ಭವನ್ನು ಅನುಸರಿಸಿ ಇರುತ್ತದೆ. ಜೀವಂತ ವ್ಯಕ್ತಿಗಳಿಗೆ ಚುಚ್ಚುಮದ್ದಿನ ಪ್ರಯೋಗ ಸಾಮಾನ್ಯ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಶವಗಳಿಗೂ ಚುಚ್ಚುಮದ್ದನ್ನು ಕೊಡುವುದುಂಟು. ಜೀವಂತವಾಗಿರುವ, ಆದರೆ ಶಕ್ತಿಗುಂದಿದ ಇಲ್ಲವೆ ಜೀವರಹಿತವಾದ ರೋಗಾಣುಗಳನ್ನು ಚುಚ್ಚುಮದ್ದಿನ ರೀತಿ ದೇಹಕ್ಕೆ ಕೃತಕವಾಗಿ ಸೇರಿಸಿದರೆ ಈ ಅಣುಗಳು ಪ್ರತಿರೋಧಜನಕಗಳಾಗಿ (ಆ್ಯಂಟಿಜೆನ್ಸ್) ವರ್ತಿಸಿ ದೇಹದಲ್ಲಿ ತಮ್ಮ ವೈಯಕ್ತಿಕ ಪ್ರತಿವಸ್ತುಗಳ (ಆ್ಯಂಟಿಬಾಡೀಸ್) ಉತ್ಪತ್ತಿಯನ್ನು ಪ್ರಚೋದಿಸುತ್ತವೆ. ಈ ಪ್ರಚೋದನೆ ಪರವಸ್ತುಗಳು ದೇಹಕ್ಕೆ ಸೇರಿದ ಒಂದು ವಾರದಿಂದ ಕೆಲವು ತಿಂಗಳುಗಳವರೆಗೂ ಇರುತ್ತದೆ. ಈ ಕಾಲದಲ್ಲಿ ಉತ್ಪತ್ತಿಯಾದ ಪ್ರತಿವಸ್ತುಗಳು ಅದೇ ರೋಗಾಣುಗಳಿಂದ ಮುಂದೆ ತಗಲಬಹುದಾದ ಆಗಾಧ ಸೋಂಕುಗಳ ವಿರುದ್ಧ ರಕ್ಷಣೆಯನ್ನು ಒದಗಿಸಿ ವ್ಯಕ್ತಿಗೆ ಸು. 1–100 ವರ್ಷಗಳ ವರೆಗೆ, ಕೆಲವು ಸಂದರ್ಭಗಳಲ್ಲಿ ಜೀವಮಾನ–ಪರ್ಯಂತ, ರೋಗ ಬಾರದಂತೆ ರಕ್ಷಣೆ ಕೊಡುತ್ತವೆ. ಚುಚ್ಚುಮದ್ದಿನಿಂದ ರಕ್ಷಣೆ ಪಡೆಯುವ ಈ ವಿಧಾನಕ್ಕೆ ಇನಾಕ್ಯುಲೇಷನ್ ಎಂದು ಹೆಸರು.

ಮೊದಲಿಗೆ ಇನಾಕ್ಯುಲೇಷನ್ನನ್ನು ಸಿಡುಬು (ಮೈಲಿ ಬೇನೆ, ದೇವಿ, ಅಮ್ಮ) ರೋಗದಿಂದ ರಕ್ಷಣೆ ಪಡೆಯಲು ಅನುಸರಿಸುತ್ತಿದ್ದರೆಂದು ತಿಳಿದುಬರುತ್ತದೆ. ಬಹುಶಃ ಏಷ್ಯ ಖಂಡದಲ್ಲಿ ಮಾತ್ರ ಸಿಡುಬು ಇದ್ದುದರಿಂದ ಅಲ್ಲಿಯ ಜನರೇ ಇನಾಕ್ಯುಲೇಷನ್ ವಿಧಾನವನ್ನು ಮೊತ್ತ ಮೊದಲು ಅರಿತಿದ್ದವರೆಂದು ತಿಳಿಯಬಹುದು. ಸಿಡುಬು ಬಹುಶಃ ಗ್ರೀಕರಿಗೂ ರೋಮನ್ನರಿಗೂ ತಿಳಿದಿರಲಿಲ್ಲವೆಂದು ತೋರುತ್ತದೆ. ಕ್ರೂಸೇಡುಗಳ ಕಾಲದಲ್ಲಿ ವಾಪಸಾದ ಸೈನಿಕರಿಂದ ಸಿಡುಬು ಏಷ್ಯದ ಟರ್ಕಿಯಿಂದ ಯೂರೋಪಿಗೆ ಹರಡಿತೆಂದೂ ಸಿಡುಬಿನ ವಿರುದ್ಧ ರಕ್ಷಣೆಗಾಗಿ ಏಷ್ಯದಲ್ಲಿ ಅನುಸರಿಸಲಾಗುತ್ತಿದ್ದ ಇನಾಕ್ಯುಲೇಷನ್ ವಿಧಾನವನ್ನು ಯೂರೋಪಿನಲ್ಲಿ ಮೊದಲು ಬಡಜನರೂ ಅನಂತರ ಧನಿಕರೂ ಪ್ರಾರಂಭಿಸಿದರೆಂದು ತಿಳಿದುಬಂದಿದೆ. ಇಂಗ್ಲೆಂಡಿನ ಲೇಡಿ ಮೇರಿ ವರ್ಟ್ಲಿ ಮಾಂಟೇಗ್ಯೂ ಎಂಬಾಕೆ 18ನೆಯ ಶತಮಾನದ ಆದಿಯಲ್ಲಿ ಟರ್ಕಿಗೆ ಭೇಟಿ ಇತ್ತಿದ್ದಳೆಂದೂ ಅಲ್ಲಿ ಆಗ ತೀವ್ರವಾಗಿ ಸಿಡುಬಿನ ಪಿಡುಗು ಇದ್ದಿತೆಂದೂ ಅದರ ವಿರುದ್ಧ ರಕ್ಷಣೆ ಪಡೆಯಲು ತನ್ನ ಮಗನಿಗೆ ಟರ್ಕಿಯಲ್ಲಿ ಅನುಸರಿಸುತ್ತಿದ್ದ ರೀತಿ ಇನಾಕ್ಯುಲೇಷನ್ ಮಾಡಿಸಿ ಪ್ರಯೋಜನ ಪಡೆದಳೆಂದೂ ಇಂಗ್ಲೆಂಡಿಗೆ ವಾಪಸಾದ ಮೇಲೆ ಆ ವಿಧಾನವನ್ನು ಜನಪ್ರಿಯವನ್ನಾಗಿ ಮಾಡಲು ಅವಿರತವಾಗಿ ಶ್ರಮಿಸಿದಳೆಂದೂ ತಿಳಿಯುತ್ತದೆ. ಸಹಜವಾಗಿಯೇ ಜನತೆಯಲ್ಲೂ ವೈದ್ಯವೃಂದದಲ್ಲೂ ಈ ನೂತನ ಇನಾಕ್ಯುಲೇಷನ್ ವಿಧಾನಕ್ಕೆ ಬಹು ವಿರೋಧ ವ್ಯಕ್ತವಾಯಿತು. ಆದರೂ ಜೇಮ್ಸ್ ಜಾರಿನ್ ಎಂಬ ವೈದ್ಯ ಸಿಡುಬಿನ ವಿಚಾರದಲ್ಲಿ ಇನಾಕ್ಯುಲೇಷನ್ ರೀತಿಯಿಂದ ಗ್ರೇಟ್ ಬ್ರಿಟನ್ನಿನಲ್ಲಿ ಹಾಗೂ ಲಂಡನ್ನಿನಲ್ಲಿ ಎಷ್ಟು ಅನುಕೂಲವಾಗಿದೆ ಎಂಬುದನ್ನು ಅಂಕಿಅಂಶಗಳಿಂದ ವ್ಯಕ್ತಪಡಿಸಿ (1724) ಮುಂದಿನ ಮೂರು ವರ್ಷಗಳೂ ಇದೇ ರೀತಿ ಲಂಡನ್ನಿಗೆ ಅನ್ವಯಿಸಿದ ಅಂಕಿ ಅಂಶಗಳನ್ನು ಒದಗಿಸಿ ಇನಾಕ್ಯುಲೇಷನ್ ಪದ್ಧತಿಯನ್ನು ಜನಾದರಣೀಯವನ್ನಾಗಿ ಮಾಡಲು ಶ್ರಮಿಸಿದ. ಆತನ ಪ್ರಯತ್ನಕ್ಕೆ ಸಾಕಷ್ಟು ವಿರೋಧವಿತ್ತು. ಆದರೆ 1746ರಲ್ಲಿ ಸಿಡುಬಿನ ವಿರುದ್ಧ ಇನಾಕ್ಯುಲೇಷನ್ ಮಾಡುವುದಕ್ಕೆಂದೇ ಸಾರ್ವಜನಿಕ ಸಂಸ್ಥೆಗಳು ಸ್ಥಾಪಿಸಲ್ಪಟ್ಟಾಗ ಅವನ ಶ್ರಮ ಸಫಲವಾಯಿತು. ಮುಂದೆ ಎಸೆಕ್ಸಿನ ವೈದ್ಯ ಸಟ್ಟನ್ ಎಂಬಾತನಿಂದ ಈ ಇನಾಕ್ಯುಲೇಷನ್ ವಿಧಾನ ಹೆಚ್ಚು ಉಪಯೋಗಕರವಾಗುವಂತೆ ಪರಿಷ್ಕರಿಸಲ್ಪಟ್ಟಿತು (1767). ಈ ವಿಧಾನದಲ್ಲಿ ವ್ಯಕ್ತಿಯ ಇನಾಕ್ಯುಲೇಷನ್‌ಪೂರ್ವ ತಯಾರಿಕೆಗೆ ಒಂದು ತಿಂಗಳಿಂದ ಕೆಲವು ದಿವಸಗಳಿಗೆ ಮಿತಿಗೊಳಿಸಲ್ಪಟ್ಟಿತು. ಅಲ್ಲದೆ ಇನಾಕ್ಯುಲೇಷನ್ ಆದ ಬಳಿಕ ವ್ಯಕ್ತಿ ಗಾಳಿ ಬೆಳಕಿನಲ್ಲಿ ಇರಬಹುದಾಗಿತ್ತು. ಇನಾಕ್ಯುಲೇಷನ್ ವಿಧಾನದಲ್ಲಿ ಸಿಡುಬಿನ ಲಸಿಕೆಯನ್ನು ಆರೋಗ್ಯವಾಗಿರವ ವ್ಯಕ್ತಿಯ ಚರ್ಮದ ಗಾಯದ ಮೂಲಕ ದೇಹದ ಒಳಹೊಗಿಸುತ್ತಿದ್ದರು. ಆಗ ವ್ಯಕ್ತಿಗಳಲ್ಲಿ ಸಿಡುಬು ರೋಗವೇ ಉಂಟಾಗುತ್ತಿತ್ತು. ಇದರಿಂದ ಗುಣಹೊಂದಿದ ಮೇಲೆ ವ್ಯಕ್ತಿಗೆ ಪುನಃ ಸಿಡುಬು ಅಂಟುತ್ತಿರಲಿಲ್ಲ. ಇನಾಕ್ಯುಲೇಷನ್ನಿನಿಂದ ಉಂಟಾದ ರೋಗ ಪ್ರಬಲವಾಗಿರುವುದಿಲ್ಲವೆಂದು ಆಶಿಸಲಾಗುತ್ತಿತ್ತು. ಆದರೆ ಇನಾಕ್ಯುಲೇಷನ್ ವಿಧಾನದಿಂದ ಉಂಟಾದ ಪರಿಣಾಮ ಅನೇಕವೇಳೆ ಮಾರಕವೇ ಆಗುತ್ತಿದ್ದುದರಿಂದ ಅದರಿಂದ ರಕ್ಷಣೆ ಒದಗುವ ಬದಲು ಹಾನಿಯೇ ಆಗುತ್ತಿತ್ತು. ಅಲ್ಲದೆ ಇನಾಕ್ಯುಲೇಷನ್ ಆದ ವ್ಯಕ್ತಿಯಿಂದ ಸಿಡುಬು ನೆರೆಯವರಿಗೂ ಹರಡುತ್ತಿತ್ತು.

1780–85ರ ವೇಳೆಯಲ್ಲಿ ಇಂಗ್ಲೆಂಡಿನ ವೈದ್ಯ ಎಡ್ವರ್ಡ್ ಜೆನ್ನರ್ ಎಂಬಾತ ಸಿಡುಬಿನ ವಿಚಾರವಾಗಿ ಅಧ್ಯಯನ ಮಾಡುತ್ತಿದ್ದಾಗ ಸಿಡುಬಿನಿಂದ ಪೀಡಿತವಾದ ಹಸುಗಳ ಸಂಪರ್ಕದಿಂದ ಅವುಗಳ ಹಾಲು ಕರೆಯುವ ಹೆಂಗೆಳೆಯರಿಗೆ ದನದ ಸಿಡುಬು ಅಂಟುತ್ತಿತ್ತೆಂದೂ ಅದು ಮಾರಕವಾಗಿರದೆ ಎಲ್ಲರೂ ಗುಣಹೊಂದುತ್ತಿದ್ದರೆಂದೂ ಗಮನಿಸಿದ್ದ. ಇಂಥವರಿಗೆ ಮಾನವ ಸಿಡುಬು ಅಂಟುವುದಿಲ್ಲವೆಂಬುದು ಅಂಥ ಒಬ್ಬ ಕಾವಾಡಗಿತ್ತಿಯ ಮಾತಿನಿಂದ ವ್ಯಕ್ತಪಟ್ಟು ಅದು ನಿಜವಿರಬಹುದೆಂದು ಬೇರೆ ದೃಷ್ಟಾಂತಗಳಿಂದಲೂ ಜೆನ್ನರ್‌ಗೆ ಅರಿವಾಯಿತು. ಅಲ್ಲದೆ ಮಾನವರಲ್ಲಿ ದನದ ಸಿಡುಬು ಮಾನವನ ಸಿಡುಬಿನಂತೆ ವ್ಯಾಪಕವಾಗಿ ಮೈಮೇಲೆಲ್ಲ ಏಳದೆ ಸೋಂಕುಂಟಾದ ಒಂದೆರಡು ಸ್ಥಳಗಳಲ್ಲಿ ಮಾತ್ರ ಕಾಣಿಸಿಕೊಳ್ಳುವುದನ್ನೂ ಜೆನ್ನರ್ ತಿಳಿದಿದ್ದ. ದನದ ಸಿಡುಬಿನ ಲಸಿಕೆಯನ್ನು ಇನಾಕ್ಯುಲೇಷನ್ ಮಾಡಿ ಬೇರೆ ವ್ಯಕ್ತಿಯಲ್ಲಿ ಕೂಡ ಹೀಗೆ ಸ್ಥಳೀಯವಾಗಿ ದನದ ಸಿಡುಬು ಉಂಟಾಗುವಂತೆ ಮಾಡಬಹುದೆಂದೂ ಇದರಿಂದ ಅವರೂ ಮಾನವಸಿಡುಬಿನಿಂದ ರಕ್ಷಣೆ ಪಡೆಯಬಲ್ಲರೆಂದೂ ಜೆನ್ನರ್ ತರ್ಕಿಸಿದ. ಅದರಂತೆ 1796ನೇ ಮೇ 14ನೆಯ ತಾರೀಕಿನಂದು ಸಾರಾ ನ್ಯೂಲ್ಮ್ ಎಂಬ ಕಾವಾಡಗಿತ್ತಿಯ ದನಸಿಡುಬಿನ ರಸಿಕೆಯನ್ನು ಫಿಪ್ಸ್ ಎಂಬ ಹುಡುಗನ ತೋಳಿನ ಚರ್ಮದ ಗಾಯದೊಳಕ್ಕೆ ಹುಗಿಸಿದ. ಅವನ ತರ್ಕಕ್ಕೆ ಸರಿಯಾಗಿ ದನದ ಸಿಡುಬು ಆ ಹುಡುಗನಲ್ಲಿ ಕಾಣಿಸಿಕೊಂಡು ಅನಂತರ ಮಾಮೂಲಿ ನಂತೆಯೇ ವಾಸಿಯಾಯಿತು. ಇದಾದ ಬಳಿಕ ಆ ಹುಡುಗನಿಗೆ ಮಾನವ ಸಿಡುಬಿನ ಲಸಿಕೆಯನ್ನು ಇನಾಕ್ಯುಲೇಷನ್ ಮಾಡಿದಾಗಲೂ ಜೆನ್ನರ್ ತರ್ಕಿಸಿದ್ದಂತೆಯೇ, ಸಿಡುಬು ಅಂಟಲಿಲ್ಲ. ಮುಂದೆ ಸುಮಾರು 2 ವರ್ಷಗಳು ದನಗಳಲ್ಲಿ ಸಿಡುಬು ಕಾಣಬರಲಿಲ್ಲವಾಗಿ ಜೆನ್ನರ್ ಈ ವ್ಯಾಸಂಗವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. 1798ರಲ್ಲಿ ದನಗಳಲ್ಲಿ ಪುನಃ ಸಿಡುಬು ತಲೆದೋರಿತು. ಆಗ ಜೆನ್ನರ್ ಪುನಃ ಪ್ರಯೋಗಗಳಿಂದ ತಾನು ಕಂಡುಹಿಡಿದಿದ್ದ ವಿಷಯವನ್ನು ಸ್ಥಿರೀಕರಿಸಿದ. ದನ ಸಿಡುಬಿಗೆ ವ್ಯಾಕ್ಸೀನಿಯ ಎಂಬ ಹೆಸರಿದ್ದು ಮಾನವ ಸಿಡುಬುರೋಗದಿಂದ ರಕ್ಷಣೆ ಪಡೆಯಲು ತಾನು ಅನುಸರಿಸುತ್ತಿದ್ದ ವಿಧಾನಕ್ಕೆ ಜೆನ್ನರ್ ವ್ಯಾಕ್ಸಿನೇಷನ್ ಎಂದು ಕರೆದ. ವ್ಯಾಕ್ಸಿನೇಷನ್ ಪ್ರಚಾರಕ್ಕೆ ಬಂದ ತರುವಾಯ ಸಿಡುಬಿನಿಂದ ರಕ್ಷಣೆ ಪಡೆಯಲು ಸಟ್ಟನ್ನನ ಇನಾಕ್ಯುಲೇಷನ್ ವಿಧಾನ ಕೈಬಿಡಲ್ಪಟ್ಟಿತು ಮತ್ತು 1840ರಲ್ಲಿ ಕಾನೂನು ರೀತಿ ಬಹಿಷ್ಕರಿಸಲ್ಪಟ್ಟಿತು. 1853ರಲ್ಲಿ ಇಂಗ್ಲೆಂಡಿನಲ್ಲಿ ಸಿಡುಬು ನಿರ್ಮೂಲನಕ್ಕಾಗಿ ವ್ಯಾಕ್ಸಿನೇಷನ್ ಕಡ್ಡಾಯ ವಿಧಾನವಾಯಿತು. ಅಲ್ಲಿಂದೀಚೆಗೆ ಪ್ರಪಂಚದ ಎಲ್ಲ ಕಡೆಯೂ ವ್ಯಾಕ್ಸಿನೇಷನ್ ಬಳಕೆಯಲ್ಲಿದೆ.

ಅಲೆಕ್ಸಾಂಡರ್ ವುಡ್ ಮತ್ತು ಚಾರ್ಲ್ಸ್ ಗೇಬ್ರಿಯಲ್ ಪ್ರಾವೆಸ್ ಎಂಬವರು 1853ರಲ್ಲಿ ಟೊಳ್ಳು ಸೂಜಿಯನ್ನು ಉಪಜ್ಞಿಸಿದರು. ಇದರಿಂದ ಇನಾಕ್ಯುಲೇಷನ್ನುಗಳಿಗೆ ಪಿಚಕಾರಿಯನ್ನು ಟೊಳ್ಳುಸೂಜಿಯನ್ನು ಉಪಯೋಗಿಸಲು ಅನುಕೂಲವಾಯಿತು. ಸ್ಪ್ಲೀನಿಕ್ ಜ್ವರದಿಂದ (ನೆರಡಿರೋಗ, ಆ್ಯಂಥ್ರಾಕ್ಸ್) ರಕ್ಷಣೆ ಪಡೆಯುವುದಕ್ಕೋಸ್ಕರ ಸೂಜಿ ಪಿಚಕಾರಿಗಳಿಂದ ಇನಾಕ್ಯುಲೇಷನ್ನನ್ನು ಪ್ರಾಣಿಗಳಲ್ಲಿ ಉಪಯೋಗಿಸಲಾಯಿತು (1881). ಕೃತಕ ಮಾಧ್ಯಮದಲ್ಲಿ ಕೃಷಿಮಾಡಿ ಸಾರಗುಂದಿಸಿದ ವಿಷಾಣುಗಳನ್ನು ಪಿಚಕಾರಿ ಸೂಜಿಗಳ ಮೂಲಕ ಕುರಿದನಗಳ ದೇಹದೊಳಹೊಗಿಸಿದರೆ ಅವುಗಳಲ್ಲಿ ರೋಗಲಕ್ಷಣಗಳು ಬಹು ಅಲ್ಪವಾಗಿ ಕಾಣಿಸಿಕೊಳ್ಳುತ್ತವೆ. ಅನಂತರ ಅವು ಪ್ರಬಲ ಸೋಂಕಿನಿಂದಲೂ ಆಕ್ರಮಣಗೊಳ್ಳಲಾರವೆಂದು ಲೂಯಿ ಪಾಸ್ಟರ್ (1822–1895) ಖಚಿತವಾದ ಪ್ರಯೋಗದಿಂದ ತೋರಿಸಿದ (1881). ಇದೇ ರೀತಿ ನಾಯಿಗಳಲ್ಲೂ ಮಾನವರಲ್ಲೂ ನಾಯಿಹುಚ್ಚನ್ನು ತಡೆಗಟ್ಟಬಹುದು ಎಂದು ಕೂಡ ಪಾಸ್ಟರ್ ತೋರಿಸಿದ. ರಾಬರ್ಟ್ ಕಾಕ್ (ನೋಡಿ ಕಾಕ್, ರಾಬರ್ಟ್) ಎಂಬ ಜರ್ಮನ್ ವೈದ್ಯ ಕೃತಕವಾಗಿ ಬೆಳೆಸಿದ ಕ್ಷಯಾಣುಗಳಿಂದ ತಯಾರಾದ ಟ್ಯುಬರ್‌ಕ್ಯುಲಿನ್ ಎಂಬ ವಸ್ತುವನ್ನು ಇನಾಕ್ಯುಲೇಷನ್ ಮಾಡಿ ಕ್ಷಯರೋಗ ಸೋಂಕಿನ ವಿರುದ್ಧ ರಕ್ಷಣೆ ಪಡೆಯಲು ಪ್ರಯತ್ನಿಸಿದ (1892). ಆದರೆ ಇದು ತಕ್ಕಷ್ಟು ಪರಿಣಾಮಕಾರಿಯಾಗಿರದೆ ಪ್ರಸಕ್ತ ಕಾಲದಲ್ಲಿ ಈ ಚುಚ್ಚುಮದ್ದನ್ನು ಮಾನವನಲ್ಲಿ ಮತ್ತು ಮುಖ್ಯವಾಗಿ ಕರಾವಿನ ದನಗಳಲ್ಲಿ ಕ್ಷಯರೋಗ ಪತ್ತೆಗೆ ಉಪಯೋಗಿಸಲಾಗುತ್ತಿದೆ. ರೋಗರಕ್ಷಣೆಗೆ ಉಪಯೋಗಿಸುವ ಚುಚ್ಚುಮದ್ದು ಅಥವಾ ಇನಾಕ್ಯುಲೇಷನ್ನುಗಳನ್ನು ಹಳದಿ ಜ್ವರ, ವಿಷಮಶೀತಜ್ವರ, ಪ್ಲೇಗ್, ಕಾಲರ, ಡಿಫ್ತೀರಿಯ, ನಾಯಿಕೆಮ್ಮು ಮತ್ತು ಟೆಟನಸ್ ರೋಗಗಳನ್ನು ತಡೆಗಟ್ಟಲೂ ಹಾವುಕಡಿತದ ಸಂದರ್ಭಗಳಲ್ಲೂ ಬಳಸಲಾಗುತ್ತಿದೆ.

ಪಿಚಕಾರಿ ಸೂಜಿಗಳಿಂದ ರೋಗಚಿಕಿತ್ಸೆ ಮತ್ತು ಇತರ ಉದ್ದೇಶಗಳಿಗಾಗಿ ನಿರ್ದಿಷ್ಟ ದ್ರವ್ಯಗಳನ್ನು ದೇಹದೊಳಹೊಗಿಸುವ ವಿಧಾನಕ್ಕೆ ಇನ್ಜೆಕ್ಷನ್ ಎಂದು ಹೆಸರು. ಇನ್ಜೆಕ್ಷನ್ ಮತ್ತು ಇನಾಕ್ಯುಲೇಷನ್ನುಗಳಿಗೆ ಸೂಜಿಮದ್ದು ಎಂದು ಕರೆಯಬಹುದು. ಇವುಗಳಿಗೆ

ಉಪಯೋಗಿಸುವ ಪಿಚಕಾರಿಗಳನ್ನು ಸಾಧಾರಣವಾಗಿ ಗಾಜಿನಿಂದ ಪ್ಲಾಸ್ಟಿಕ್ಕಿನಿಂದ ಮಾಡಿರುತ್ತಾರೆ. ಇವುಗಳ ಉದ್ದ ಗಾತ್ರ ಆಕಾರಗಳು ಸಂದರ್ಭಕ್ಕೆ ಅನುಗುಣವಾಗಿ ಬೇರೆ ಬೇರೆ ಆಗಿರುತ್ತವೆ. ಪಿಚಕಾರಿಯ ತುದಿಗೆ ಟೊಳ್ಳು ಸೂಜಿಯನ್ನು ಬಿಗಿಯಾಗಿ ಸಿಕ್ಕಿಸಬಹುದು. ಸೂಜಿ ಕಳಚಿಕೊಳ್ಳದಂತೆ ಕೆಲವು ಪಿಚಕಾರಿಗಳಲ್ಲಿ ಲ್ಯೂವರ್ ಲಾಕ್ ಎಂಬ ವಿಶೇಷ ಏರ್ಪಾಡು ಉಂಟು. ಉಪಯೋಗಿಸುವ ದ್ರವ್ಯದ ಮಂದತ್ವವನ್ನು ಅನುಸರಿಸಿ ವಿವಿಧ ಗಾತ್ರದ ಸೂಜಿಗಳನ್ನೂ ಇನ್ಜೆಕ್ಷನ್ ಮಾಡುವ ಆಳವನ್ನು ಅನುಸರಿಸಿ ವಿವಿಧ ಉದ್ದದ ಸೂಜಿಗಳನ್ನೂ ಉಪಯೋಗಿಸಲಾಗುತ್ತದೆ. ಇನ್ಜೆಕ್ಷನ್ ಮಾಡುವ ದ್ರವ್ಯದ ಪರಿಮಾಣವನ್ನು ತಿಳಿಯಲು ಪಿಚಕಾರಿಯಲ್ಲಿ ಅಳತೆ ಗುರುತುಗಳಿರುತ್ತವೆ. ಚಿಕಿತ್ಸಕ ವಸ್ತುಗಳನ್ನು ಬಾಯಿಮೂಲಕ ತೆಗೆದುಕೊಳ್ಳುವುದಕ್ಕಿಂತ ಬಹು ಕಡಿಮೆ ಪರಿಮಾಣದಲ್ಲಿ ಇನ್ಜೆಕ್ಷನ್ ಮೂಲಕ ತೆಗೆದುಕೊಂಡರೆ ಸಾಕು ; ಮತ್ತು ಹಾಗೆ ತೆಗೆದುಕೊಂಡ ಕೇವಲ ಹತ್ತು ಮಿನಿಟುಗಳಲ್ಲಿ ಅವುಗಳ ಪ್ರಯೋಜನ ಕಂಡುಬರುತ್ತದೆ. ಈ ಕಾರಣದಿಂದ ನೋವು ಶಮನ ಮಾಡಿ ನಿದ್ರೆಬರಿಸುವುದಕ್ಕೋಸ್ಕರ ಮಾರ್ಫೀನನ್ನೂ ಹೆರಿಗೆಯಾದ ಮೇಲೆ ಗರ್ಭಕೋಶವನ್ನು ಸಂಕುಚಿಸಿ ರಕ್ತಸ್ರಾವವನ್ನು ತಡೆಗಟ್ಟಲು ಎರ್ಗಾಟ್ ಸಾರವನ್ನೂ ಕ್ಷಿಪ್ರ ಮತ್ತು ಅಲ್ಪಪ್ರಯಾಸದ ವಮನವನ್ನುಂಟುಮಾಡಲು ಅಪೋಮಾರ್ಫೀನನ್ನೂ ಇನ್ಜೆಕ್ಷನ್ ವಿಧಾನದಿಂದ ಉಪಯೋಗಿಸುತ್ತಾರೆ. ಇನ್ಜೆಕ್ಷನ್ನುಗಳನ್ನು ಚರ್ಮದ ಕೆಳಗಾಗಲಿ ಸ್ನಾಯುಗಳ ಒಳಗಾಗಲಿ ರಕ್ತನಾಳಗಳ ಒಳಗಾಗಲಿ ಸೂಜಿಯನ್ನು ಚುಚ್ಚಿ ಮಾಡಲಾಗುತ್ತದೆ. ಇವಕ್ಕೆ ಅನುಕ್ರಮವಾಗಿ ಸಬ್‌ಕ್ಯುಟೇನಿಯಸ್/ ಹೈಪೋಡರ್ಮಿಕ್, ಇಂಟ್ರಮಸ್ಕ್ಯುಲರ್/ ಇಂಟ್ರವ್ಯಾಸ್ಕ್ಯುಲರ್ ಇನ್ಜೆಕ್ಷನುಗಳೆಂದು ಹೆಸರು. ಸೂಜಿಯನ್ನು ಮಿದುಳು ಮತ್ತು ಮಿದುಳು ಬಳ್ಳಿಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ಚುಚ್ಚಿ ಇನ್ಜೆಕ್ಷನ್ ಕೊಡುವುದೂ ಉಂಟು. ಇವಕ್ಕೆ ಇಂಟ್ರೀಕಲ್ ಮತ್ತು ಸ್ಪೈನಲ್ ಇನ್ಜೆಕ್ಷನುಗಳೆಂದು ಹೆಸರು. ವಿಶೇಷ ಸಂದರ್ಭಗಳಲ್ಲಿ ಗುಂಡಿಗೆಯೊಳಕ್ಕೆ ಸೂಜಿಯನ್ನು ಚುಚ್ಚಿ ಇನ್ಜೆಕ್ಷನ್ ಕೊಡುವುದೂ ಉಂಟು. ಇದಕ್ಕೆ ಇಂಟ್ರಕಾರ್ಡಿಯಾಕ್ ಇನ್ಜೆಕ್ಷನ್ ಎಂದು ಹೆಸರು.

ಟ್ಯುಬರ್‌ಕ್ಯುಲಿನ್ನಿನಿಂದ ರೋಗನಿಧಾನಕ್ಕೆ ಉಪಯೋಗಿಸುವ ವಸ್ತುಗಳನ್ನು ಚರ್ಮಕ್ಕೆ ಮಾತ್ರವೇ ಚುಚ್ಚಿ ಮಾರನೇ ದಿನ ದದ್ದು ಬರುವುದೋ ಇಲ್ಲವೋ ಎಂದು ನೋಡುತ್ತಾರೆ. ಡಿಫ್ತೀರಿಯ, ಸ್ಕಾರ್ಲೆಟ್ ಜ್ವರ ಇವುಗಳಿಗೆ ತುತ್ತಾಗುವುವವರನ್ನು ಪತ್ತೆ ಮಾಡುವುದಕ್ಕೂ ಒಗ್ಗದಿಕೆಯನ್ನು ಉಂಟುಮಾಡುವ ವಸ್ತುಗಳ ಪತ್ತೆ ಮೂಡುವುದಕ್ಕೂ ಇಂಥ ಇನ್ಜೆಕ್ಷನುಗಳನ್ನು ಕೊಡುತ್ತಾರೆ. ಇವಕ್ಕೆ ಇಂಟ್ರಡರ್ಮಲ್ ಇನ್ಜೆಕ್ಷನುಗಳೆಂದು ಹೆಸರು. ನೀರಿನಲ್ಲಿ ಕರಗುವ ವಸ್ತುಗಳನ್ನು ಎಲ್ಲ ರೀತಿಯ ಇನ್ಜೆಕ್ಷನುಗಳಾಗಿ ಉಪಯೋಗಿಸಬಹುದು. ಇಂಟ್ರಮಸ್ಕ್ಯುಲರ್ ಇನ್ಜೆಕ್ಷನ್ ಹೈಪೋಡರ್ಮಿಕ್ ಇನ್ಜೆಕ್ಷನ್ನಿಗಿಂತ ಬೇಗಲೂ ಇಂಟ್ರವ್ಯಾಸ್ಕ್ಯುಲರ್ ಇನ್ಜೆಕ್ಷನ್ (ಇಂಟ್ರವೀನಸ್ ಇನ್ಜೆಕ್ಷನ್) ಇಂಟ್ರಮಸ್ಕ್ಯುಲರ್ ಇನ್ಜೆಕ್ಷನ್ನಿಗಿಂತ ಬೇಗಲೂ ಕೆಲಸ ಮಾಡುತ್ತವೆ. ಔಷಧ ನಿಧಾನವಾಗಿ ಕೆಲಸಮಾಡಬೇಕಾದರೆ ಹೈಪೋಡರ್ಮಿಕ್ ಇನ್ಜೆಕ್ಷನ್ನಾಗಿ ಕೊಡಲ್ಪಡುತ್ತದೆ. ಇನ್ಸುಲಿನ್, ಸ್ಥಳಿಕ ಸಂವೇದನಾ ನಾಶಕಗಳು ಇಂಥವು. ವಿಷಮಶೀತಜ್ವರದ, ಹಳದಿಜ್ವರದ ಟೆಟನಸ್ ಡಿಫ್ತೀರಿಯಗಳ ಇನಾಕ್ಯುಲೇಷನ್ನುಗಳೂ ಇಂಥವೇ. ಮದ್ದು ಊತಕವನ್ನು ನಾಶಪಡಿಸುವಂಥದ್ದಾದರೆ ಅಥವಾ ಬಹು ನೋವನ್ನು ಉಂಟುಮಾಡುವಂತಿದ್ದರೆ ಇಂಟ್ರಮಸ್ಕ್ಯುಲರ್ ಅಥವಾ ಇಂಟ್ರವೀನಸ್ ಇನ್ಜೆಕ್ಷನ್ನಾಗಿ ಕೊಡಬೇಕಾಗುತ್ತದೆ. ಕೆಲವು ಜೀವಸತ್ತ್ವಗಳು, ಕ್ವಿನೀನ್ ಎಮಿಟೇನಿನಂಥ ಊತಕ ಮಾರಕವಸ್ತುಗಳು ಪೆನಿಸಿಲಿನ್ನಿನಂಥ ಜೀವಿರೋಧಕಗಳನ್ನು ಹೀಗೆ ಕೊಡುವುದುಂಟು. ನೀರಿನಲ್ಲಿ ಕರಗದ ಪದಾರ್ಥವಾದರೆ ಅಥವಾ ಜಿಡ್ಡು ಪದಾರ್ಥವಾದರೆ ಅದನ್ನು ಇಂಟ್ರಮಸ್ಕ್ಯುಲರ್ ಇನ್ಜೆಕ್ಷನ್ನಾಗಿಯೇ ಕೊಡಬೇಕಾಗುತ್ತದೆ. ಪ್ರೋಕೇನ್ ಪೆನಿಸಿಲಿನ್, ಲೈಂಗಿಕ ಹಾರ್ಮೋನುಗಳನ್ನು ಈ ರೀತಿ ಕೊಡಲಾಗುತ್ತದೆ.

ಬಾಯಿಮೂಲಕ ತೆಗೆದುಕೊಳ್ಳಲಾಗದಂಥ, ತೆಗೆದುಕೊಂಡರೆ ಪ್ರಯೋಜನವಿಲ್ಲದಂಥ ಸಂದರ್ಭಗಳಲ್ಲಿ ಅಗತ್ಯ ವಸ್ತುಗಳನ್ನು ಇನ್ಜೆಕ್ಷನುಗಳಿಂದ ದೇಹದೊಳಕ್ಕೆ ಸೇರಿಸಬಹುದು. ವಿಪರೀತ ವಾಂತಿ ಭೇದಿಗಳಿಂದ, ಇಲ್ಲವೆ ಅನ್ನನಾಳದ ಮೇಲೆ ಶಸ್ತ್ರಚಿಕಿತ್ಸೆಯಿಂದ ಆಹಾರಸೇವನೆ ಅಸಾಧ್ಯ ಅಥವಾ ಅಪ್ರಯೋಜಕವಾದ ದೇಹಕ್ಕೆ ದ್ರವ ಮತ್ತು ಆಹಾರವನ್ನು ಔಷಧ ಸಾಮಗ್ರಿಗಳನ್ನು ಒದಗಿಸಲು ಇನ್ಜೆಕ್ಷನ್ ವಿಧಾನವನ್ನು ಅನುಸರಿಸಬಹುದು. ಅಭಿಧಮನಿಯೊಳಗೆ ಸೂಜಿಯನ್ನು ತೂರಿಸಿ ಸ್ಥಿರವಾಗಿಟ್ಟು ತೊಟ್ಟು ತೊಟ್ಟಾಗಿ ಗ್ಲೂಕೋಸ್, ಉಪ್ಪು, ಔಷಧಗಳು– ಇವು ಇರುವ ದ್ರವವನ್ನು ಕೆಲವು ಗಂಟೆಗಳು ನಿರಂತರವಾಗಿ ಕೊಡಲಾಗುತ್ತದೆ. ತತ್‌ಕ್ಷಣದ ದ್ರವಪೂರೈಕೆಗೆ ಸ್ವಾಭಾವಿಕವಾಗಿಯೇ ಇಂಟ್ರವೀನಸ್ ವಿಧಾನವನ್ನು ಅನುಸರಿಸಲಾಗುತ್ತದೆ. ಗುಂಡಿಗೆ ಹಠಾತ್ ನಿಂತುಹೋದಾಗ ಇಲ್ಲವೇ ವ್ಯಕ್ತಿ ಘೋರಘಾತದಿಂದ ಸಂಮರ್ದನನಾಗಿದ್ದಾಗ ಅವನಿಗೆ ಅಪಧಮನಿಯೊಳಗಿನ ಒಗ್ಗುವ ಪರರಕ್ತವನ್ನು ಇನ್ಜೆಕ್ಷನ್ ಮೂಲಕ (ಇಂಟ್ರ–ಆರ್ಟೀರಿಯಲ್ ಇನ್ಜೆಕ್ಷನ್) ವ್ಯಕ್ತಿಯ ದೇಹದೊಳಕ್ಕೆ ಸೇರಿಸಲಾಗುತ್ತದೆ. ಇನ್ಜೆಕ್ಷನ್ ಕೊಟ್ಟು ಊತಕನಾಶದಿಂದ ಸ್ಥಳೀಯವಾಗಿ ರಕ್ತನಾಳ ಕುಗ್ಗುವಂತೆ ಮಾಡಿ ಮೊಳೆರೋಗವನ್ನು (ಮೂಲವ್ಯಾಧಿ) ಕಾಲುತೊಡೆಗಳಲ್ಲಿನ ಉಡಿತರಕ್ತನಾಳಗಳನ್ನೂ (ವೇರಿಕೋಸ್ ವೇನ್ಸ್ (ಕೊಂಕಿದ ಸಿರಗಳು) ಚಿಕಿತ್ಸೆ ಮಾಡಲಾಗುತ್ತದೆ. ಗುದದ್ವಾರದಲ್ಲಿ ಸೀಳು ಉಂಟಾಗಿ ಅತಿನೋವು ಉಂಟಾದಾಗ ನೋವು ಶಮನಕ್ಕೆ ಮದ್ದನ್ನು ಇನ್ಜೆಕ್ಷನ್ ಮೂಲಕ ಗುದದ ಲೋಳೆಪೊರೆಯೊಳಕ್ಕೆ ಚುಚ್ಚಲಾಗುತ್ತದೆ. ಎಕ್ಸ್‌ಕಿರಣಕ್ಕೆ ಪಾರಕವಾಗಿಲ್ಲದ ವಸ್ತುಗಳ ದ್ರವವನ್ನು ಅಭಿಧಮನ್ಯಂತರ ಇನ್ಜೆಕ್ಷನ್ ರೀತಿ ಬಳಸಿ ಎಕ್ಸ್ ಕಿರಣಗಳ ನೆರವಿನಿಂದ ರಕ್ತನಾಳ ಪರೀಕ್ಷೆಯನ್ನು ಮಾಡಲಾಗುತ್ತದೆ. ಇದಕ್ಕೆ ಇಂಟ್ರವೀನಸ್ ಪಯಯಲೋಗ್ರಫಿ ಎಂದು ಹೆಸರು. ಬೆನ್ನುಹುರಿ ಇನ್ಜೆಕ್ಷನುಗಳಿಂದ ಮಿದುಳು ಬಳ್ಳಿಯ ಸಂದೇಶವಾಹಕ ಸಾಮರ್ಥ್ಯವನ್ನು ತಾತ್ಕಾಲಿಕವಾಗಿ ನಾಶಮಾಡಿ ಸಂವೇದನ ನಾಶವನ್ನೂ ಚಲನಸಾಮರ್ಥ್ಯ ನಾಶವನ್ನೂ ಉಂಟುಮಾಡಿ ಶಸ್ತ್ರಕ್ರಿಯೆಗೆ ಅನುಕೂಲ ಮಾಡಿಕೊಳ್ಳಲಾಗುತ್ತದೆ.

ಶವಗಳಲ್ಲಿ ಇನ್ಜೆಕ್ಷನ್ ಕೊಡುವುದು ಎರಡು ಕಾರಣಕ್ಕಾಗಿ. ಮೊದಲನೆಯದು ಶವವನ್ನು ಸ್ವಲ್ಪಕಾಲ ಕೊಳೆಯದಂತೆ ಸಂರಕ್ಷಿಸುವುದಕ್ಕೆ. ಎರಡನೆಯದಾಗಿ ಅಂಗಛೇದನೆ ವ್ಯಾಸಂಗದಲ್ಲಿ ಅಭಿಧಮನಿ ಅಪಧಮನಿಗಳನ್ನು ಬೇರೆ ಬೇರೆಯಾಗಿ ಗುರುತಿಸುವುದಕ್ಕೆ.

(ಎಸ್.ಆರ್.ಆರ್.ಆರ್.ಎಸ್.ವಿ.)

**ಚುಜ್ಜಲು :** ಲೆಗ್ಯೂಮಿನೋಸೀ ಕುಟುಂಬದ ಮೈಮೋಸೀ ಉಪಕುಟುಂಬಕ್ಕೆ ಸೇರಿದ ಒಂದು ಪರ್ಣಪಾತಿ ಮರ. ಆಲ್‌ಬಿಜಿಯ ಅಮರ ಇದರ ವೈಜ್ಞಾನಿಕ ಹೆಸರು. ಇದು ದಕ್ಷಿಣ ಭಾರತದ ಒಣಹವೆಯ ಪ್ರದೇಶದಲ್ಲಿ ಬೆಳೆಯುತ್ತದೆ. ಇದು 2.5–3ಮೀ.ಎತ್ತರಕ್ಕೆ ಬೆಳೆಯುವ ಸಣ್ಣಗಾತ್ರದ ಮರ. ಕಾಂಡ ಎಳೆಯದಾಗಿರುವಾಗ ಹಳದಿ ಬೂದು ಬಣ್ಣದ ತುಪ್ಪಳಿನಿಂದ ಆವೃತವಾಗಿರುತ್ತದೆ. ಎಲೆಗಳು ಗರಿರೂಪದ ಸಂಯುಕ್ತ ಮಾದರಿಯವು. ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಪ್ರತಿಯೊಂದು ಎಲೆಯ ಬುಡದಲ್ಲಿ ವೃಂತಪರ್ಣ ಉಂಟು. ಹೂಗೊಂಚಲು ಕದಿರು ಬಗೆಯದು ; ಒಂದೊಂದರಲ್ಲೂ 19–20 ಹೂಗಳಿವೆ. ತೊಟ್ಟಿಲ್ಲ. ಬ್ರ್ಯಾಕ್ಟುಗಳಿವೆ. ಹೂಗಳು ದ್ವಿಲಿಂಗಿಗಳು ಮತ್ತು ಸುವಾಸನಾಯುಕ್ತ. ಹೂವಿನಲ್ಲಿ 5 ಪುಷ್ಪಪತ್ರಗಳು, 5 ದಳಗಳು, 5 ಕೇಸರಗಳು ಮತ್ತು ಉಚ್ಚಸ್ಥಾನದ ಒಂದು ಅಂಡಾಶಯ ಇವೆ. ಫಲ ಪಾಡ್ ಮಾದರಿಯದು ; 6–8 ಬೀಜಗಳನ್ನೊಳಗೊಂಡಿದೆ. ಚುಜ್ಜಲು ಮರ ಬಹಳ ಗಟ್ಟಿಯಾಗಿರುವುದರಿಂದ ವ್ಯವಸಾಯದ ಸಲಕರಣೆಗಳು ಮತ್ತು ಇತರ ಮರದ ಸಲಕರಣೆಗಳಾದ ಕೊಡತಿದಾಂಡು, ನಾರು ಹಣಿಗೆ ಮುಂತಾದವುಗಳ ತಯಾರಿಕೆಗೆ ಉಪಯುಕ್ತವೆನಿಸಿದೆ. ಕೇರಳದಲ್ಲಿ ಇದನ್ನು ಹಸಿರು ಗೊಬ್ಬರಕ್ಕಾಗಿ ಬೆಳೆಸುವುದುಂಟು. ಕೆಲವು ಕಡೆ ಇದನ್ನು ಸಾಲುಮರವಾಗಿ ನೆಡುತ್ತಾರೆ. ಇದರ ಎಲೆಯನ್ನು ಒಣಗಿಸಿ ಪುಡಿಮಾಡಿ ಸೀಗೆಪುಡಿಯೊಂದಿಗೆ ಬೆರೆಸಿ ಸ್ನಾನಮಾಡುವಾಗ ಬಳಸುವುದಿದೆ.

ಚುಜ್ಜಲು ಗಿಡದ ಎಲೆಗಳನ್ನು ಚಹಾ ಪುಡಿಯೊಂದಿಗೆ ಕಲಬೆರಕೆಮಾಡಲು ಬಳಸುತ್ತಾರೆ. ಇದರ ಎಲೆಗಳು ಒಳ್ಳೆಯ ಪಶುಆಹಾರವಾಗಿರುತ್ತದೆ. ಇದರ ರೆಂಬೆ ಹಾಗೂ ಕಾಂಡಗಳನ್ನು ಉರುವಲು ಹಾಗೂ ಇದ್ದಿಲಿಗಾಗಿ ಬಳಸುತ್ತಾರೆ. ಇದರ ತೊಗಟೆಯಿಂದ 'ಟ್ಯಾನಿನ್'ನ್ನು ಪಡೆಯಬಹುದು. ಬೀಜಗಳು ವಿಷಕಾರಿಯಾಗಿರುತ್ತವೆ. ಈ ಮರದ ಗೋಂದನ್ನು ಹುಣ್ಣುಗಳಿಗೆ ಔಷಧಿಯಾಗಿ, ಬೀಜಗಳನ್ನು 'ಮಲೇರಿಯಾ' ಹಾಗೂ ಕೆಮ್ಮು ವಾಸಿಮಾಡಲು ಬಳಸುತ್ತಾರೆ.

(ಕೆ.ಎನ್.ಜಿ.)

**ಚುಟುವಂಶ :** ಕರ್ನಾಟಕದಲ್ಲಿ ಆಳಿದ ಒಂದು ಪ್ರಾಚೀನ ಮನೆತನ. ಶಾತವಾಹನರ ಮಾಂಡಲಿಕರಾಗಿ 2ನೆಯ ಶತಮಾನದಲ್ಲಿ ಕರ್ನಾಟಕದ ಬಹುಭಾಗವನ್ನು, ಮುಖ್ಯವಾಗಿ ಕುಂತಲವನ್ನು, ಈ ಮನೆತನದವರು ಆಳಿದಂತೆ ತೋರುತ್ತದೆ. ಅವರ ರಾಜಧಾನಿ ವೈಜಯಂತೀಪುರ ಅಥವಾ ಬನವಾಸಿ. ಚಿತ್ರದುರ್ಗದ ಬಳಿಯಲ್ಲಿದ್ದ ಚಂದ್ರವಳ್ಳಿಯೂ ಇವರ ಒಂದು ಪ್ರಾಂತೀಯ ರಾಜಧಾನಿಯಾಗಿದ್ದಿರಬೇಕೆಂದು ಅಲ್ಲಿ ದೊರೆತಿರುವ ಇವರ ಹಲವಾರು ನಾಣ್ಯಗಳಿಂದ ತಿಳಿಯಬಹುದು. ಇವರಿಗೆ ಶಾತಕರ್ಣಿಗಳೆಂಬ ಹೆಸರೂ ಉಂಟು. ಇವರಲ್ಲಿ ಪ್ರಮುಖನಾದವನು ವಿಣ್ಹುಕಡ್ಡ ಚುಟುಕುಲಾನಂದ ಶಾತಕರ್ಣಿ. ಈತನ ಶಾಸನಗಳು ಶಿಕಾರಿಪುರ ತಾಲ್ಲೂಕಿನ ಮಳವಳ್ಳಿಯಲ್ಲೂ ಬನವಾಸಿಯಲ್ಲೂ ದೊರೆತಿವೆ. ಈ ವಂಶದವರು ಹಾರಿತೀ ಪುತ್ರರೆಂದು ಮಾನವ್ಯಸಗೋತ್ರಕ್ಕೆ ಸೇರಿದವರೆಂದೂ ಈತನ ಶಾಸನಗಳಿಂದ ತಿಳಿದುಬರುತ್ತದೆ. ಮಳವಳ್ಳಿಯ ಶಾಸನ ಇವನ ಆಳ್ವಿಕೆಯ 2ನೇ ವರ್ಷಕ್ಕೆ ಸೇರಿದ್ದು. ಸಹಲಾಟವಿ ಎಂಬ ಗ್ರಾಮವನ್ನು ತಕಿಂಚಿಯ ಮಗ ಕೊಂಡಮಾಣನೆಂಬ ಬ್ರಾಹ್ಮಣನಿಗೆ ಮಟ್ಟಪಟ್ಟಿದೇವರಿಗಾಗಿ ಬ್ರಹ್ಮಾದೇಯವಾಗಿ ಬಿಡುವಂತೆ ರಜ್ಜುಕಮಹಾವಲ್ಲಭನಿಗೆ ಅಪ್ಪಣೆ ಮಾಡಿದುದಾಗಿ ಶಾಸನ ತಿಳಿಸುತ್ತದೆ. ವಿಣ್ಹುಕಡ್ಡ ಚುಟುಕುಲಾನಂದನ ಮಗಳು ಮಹಾಭೋಜಿ ಸಿವಖಡ ನಾಗಸಿರಿ ಎಂಬುವಳು ಬನವಾಸಿಯಲ್ಲಿ ನಾಗರಕಲ್ಲೊಂದನ್ನು ನಿಲ್ಲಿಸಿ ಕೆರೆಯನ್ನೂ ವಿಹಾರವನ್ನೂ ಕಟ್ಟಿಸಿದ್ದಾಳೆ. ನಾಗರಕಲ್ಲು ಆ ಕಾಲದ ಶಿಲ್ಪಶೈಲಿಗೆ ಮಾದರಿಯಾಗಿ ಈಗಲೂ ನಿಂತಿದೆ. ಶಾತಕರ್ಣಿಗಳು ತಾಳಗುಂದದ ಪ್ರಣವೇಶ್ವರ ದೇವರನ್ನು ಪೂಜಿಸುತ್ತಿದ್ದರೆಂದು ಅಲ್ಲಿಯ ಕದಂಬ ಶಾಂತಿವರ್ಮನ ಶಾಸನ ತಿಳಿಸುತ್ತದೆ.

ಚಂದ್ರವಳ್ಳಿಯಲ್ಲಿ ನಡೆಸಿದ ಉತ್ಖನನಗಳಲ್ಲಿ ಚುಟು ವಂಶದವರ ಹಲವಾರು ನಾಣ್ಯಗಳು ದೊರೆತಿವೆ. ಇವು ಸೀಸ ಮತ್ತು ಮಿಶ್ರಲೋಹದವು. ಇವುಗಳಲ್ಲಿ ಚುಟು ವಂಶದ ಚುಟುಕುಲಾನಂದ ಮತ್ತು ಮುಡಾನಂದರ ನಾಣ್ಯಗಳು ಹಲವು ಉಂಟು. ಅವುಗಳ

ಮುಂಬದಿಯಲ್ಲಿ ಮೂರು ಅಂತಸ್ತುಗಳಾಗಿ ತೋರಿಸಿರುವ ಗುಡ್ಡವೂ ಅದರ ಸುತ್ತಲೂ ರಾಜ್ಞೋ ಚುಟುಕಲಾನಂದಸ ಎಂದೋ ರಾಜ್ಞೋ ಮುಡಾನಂದಸ ಎಂದೋ ಬ್ರಾಹ್ಮೀ ಲಿಪಿಯ ಅಂಕನವೂ ಇವೆ. ಹಿಂಬದಿಯಲ್ಲಿ ಕಟಾಂಜನದೊಳಗಿನ ವೃಕ್ಷದ ಚಿಹ್ನೆ ಮತ್ತು ನಂದಿಪಾದಗಳ ಜೊತೆಗೆ ಸ್ವಸ್ತಿಕ, ನಾಗ ಮತ್ತು ತ್ರಿಕೋಣಾಕೃತಿಗಳು ಇವೆ. ರಾಜನ ಹೆಸರಿಲ್ಲದೆ ಬರಿಯ ಚಿಹ್ನೆಗಳಿಂದಲೇ ಕೂಡಿದ ಹಲವು ಸಣ್ಣ ನಾಣ್ಯಗಳೂ ಇವುಗಳೊಂದಿಗೆ ದೊರೆತಿವೆ. ಅವೂ ಈ ವಂಶದ ರಾಜರಿಗೇ ಸೇರಿದುವೆಂಬುದು ಸ್ಪಷ್ಟ. ಈ ನಾಣ್ಯಗಳ ಜೊತೆಯಲ್ಲಿ ರೋಮನ್ ನಾಣ್ಯಗಳೂ ಮೆಡಿಟರೇನಿಯನ್ ಮೃತ್ಪಾತ್ರೆಗಳೂ ದೊರೆತಿವೆ ಯಾದ್ದರಿಂದ ಇವರ ಕಾಲದಲ್ಲಿ ಹೊರದೇಶಗಳೊಡನೆ ವ್ಯಾಪಾರ ನಡೆಯುತ್ತಿತ್ತೆಂದು ಹೇಳಬಹುದು. ಅಲ್ಲಿ ದೊರೆತಿರುವ ಅನೇಕ ಬಗೆಯ ವಸ್ತುಗಳು ಆಗಿನ ಸಂಸ್ಕೃತಿಯನ್ನು ಸೂಚಿಸುತ್ತವೆ. ಮೂರನೆಯ ಶತಮಾನದ ಮಧ್ಯ ಭಾಗದವರೆಗೂ–ಎಂದರೆ ಕದಂಬರ ಆಳ್ವಿಕೆ ಆರಂಭವಾಗುವವರೆಗೂ–ಈ ವಂಶದವರ ಆಡಳಿತ ಮುಂದುವರಿದಿರಬೇಕು.

(ಎಂ.ಎಚ್.)

**ಚುನಾವಣೆ :** ಒಂದು ಅಧಿಕಾರ ಸ್ಥಾನಕ್ಕೆ ಅಥವಾ ಒಂದು ಸಂಸ್ಥೆಯ ಸದಸ್ಯತ್ವಕ್ಕೆ ಮತದಾರರು ಒಬ್ಬ ವ್ಯಕ್ತಿಯನ್ನು ಗುಪ್ತಮತದಾನದಿಂದಲೋ ಕೈ ಎತ್ತುವುದರಿಂದಲೋ ಧ್ವನಿಯಿಂದಲೋ ಆರಿಸುವ ಕ್ರಿಯೆ (ಇಲೆಕ್ಷನ್). ಒಂದು ಸಂಘಟನೆಯಲ್ಲಿರುವ ಎಲ್ಲರೂ ಅಥವಾ ಅವರಲ್ಲಿ ಹಲವರು ತಮ್ಮೊಳಗಿನ ಕೆಲವು ಜನರನ್ನು ಅಥವಾ ಒಬ್ಬನನ್ನು ಆ ಸಂಘಟನೆಯ ಪದಾಧಿಕಾರ ವಹಿಸಲು ಆಯ್ಕೆ ಮಾಡುವಂತೆ ತಾವೇ ರಚಿಸಿಕೊಂಡ ನಿಯಮಗಳಿಂದ ಮನ್ನಣೆ ಪಡೆದ ವಿಧಾನವೇ ಚುನಾವಣಾ ವಿಧಾನ.

### ಇತಿಹಾಸ

ಪಾಶ್ಚಾತ್ಯ ದೇಶಗಳಲ್ಲಿ: ಚುನಾವಣೆಯ ಇತಿಹಾಸ ಪಾಶ್ಚಾತ್ಯ ದೇಶಗಳಲ್ಲಿ ಪ್ರಶ.ಪೂ. 6–5ನೆಯ ಶತಮಾನಗಳಿಂದಲೇ ಆರಂಭವಾಯಿತೆಂದು ಹೇಳಬಹುದು. ಪ್ರಾಚೀನ ಐರೋಪ್ಯ ಸಮಾಜಗಳಲ್ಲಿ ಚುನಾವಣೆ ಒಂದು ಸಾಮಾಜಿಕ ಅಗತ್ಯವಾಗಿ ರೂಪುಗೊಂಡಂತೆ ತೋರುತ್ತದೆ. ಗ್ರೀಕರ ನಗರರಾಜ್ಯಗಳಲ್ಲಿ ಚುನಾವಣೆಗೆ ರಾಜಕೀಯ ಮಹತ್ತ್ವವಿತ್ತು. ಈ ಪದ್ಧತಿಯ ಕುರುಹುಗಳನ್ನು ಇತರ ಕಡೆಗಳಲ್ಲೂ ಕಾಣಬಹುದಾದರೂ ಅವುಗಳ ವ್ಯವಸ್ಥಿತ ಅಧ್ಯಯನ ಇನ್ನೂ ಆಗಬೇಕಾಗಿದೆ. ಹೋಮರನ ಕವಿತೆಯಲ್ಲಿ ವರ್ಣಿತರಾದ ರಾಜರು ನಿರಂಕುಶಾಧಿಪತಿಗಳಾಗಿರಲಿಲ್ಲ. ಈಗ ಆಫ್ರಿಕನ್ ಸಮಾಜಗಳಲ್ಲಿ ಕಾಣುವಂತೆ ಅವರು ರಾಜಮನೆತನದವರಾದರೂ ಒಂದು ವಿಧದಲ್ಲಿ ತಂಡದ ಧುರೀಣರಾಗಿ (ಪೈಪೋಟಿ ಯಿಂದಾದರೂ ಸರಿ) ರೂಪುಗೊಂಡವರಾಗಿರುತ್ತಿದ್ದರು. ಅಗಮೆಮ್ನಾನ್ ಇತರ ರಾಜರುಗಳಲ್ಲಿ ಹೀಗೆ ಮುಖಂಡತ್ವ ಸಂಪಾದಿಸಿದ್ದ. ಯೂರೋಪಿನ ಇತರ ದೇಶಗಳಲ್ಲೂ ಇಂಥ ನಿದರ್ಶನಗಳು ಸಿಕ್ಕುತ್ತವೆ. ಮಾನವ ನಾಗರಿಕತೆಯ ಇತಿಹಾಸದಲ್ಲಿ ಅಲೆಮಾರಿ ಯುಗದ ಅನಂತರ ಕೃಷಿಯುಗ ಪ್ರಾರಂಭವಾಗಿ, ಸ್ಥಿರ ವಸತಿ, ವ್ಯಾಪಾರ, ವಲಸೆ ಇವು ಬೆಳೆದಾಗ, ಶ್ರೀಮಂತ ಹಾಗೂ ಬಡವರ ನಡುವಣ ಘರ್ಷಣೆ ಪ್ರಾರಂಭವಾಗಿರಬೇಕು. ಆಗ ರಾಜಕೀಯ ಸಂಸ್ಥೆಗಳನ್ನು ಕುರಿತ ಗ್ರೀಕರ ವಿಚಾರ ಹಾಗೂ ರೂಢಿಗಳ ಮೇಲೆ ವಿಶಿಷ್ಟ ಪರಿಣಾಮವಾದ್ದು ಕಂಡುಬರುತ್ತದೆ. ಈ ಘರ್ಷಣೆ ಹೆಚ್ಚಾದಾಗ ಗ್ರೀಕ್ ಚುನಾವಣೆಗೆ ಹೊಸ ರೂಪ ಬಂತು. ಜನಾಭಿಪ್ರಾಯ, ಸಂಧಾನ–ಎರಡೂ ಮಾರ್ಗಗಳ ಬಳಕೆಯಾದ್ದು ಕಂಡುಬರುತ್ತದೆ.

ನಾಗರಿಕರ ಸಭೆ ಆಗ ರೂಪುಗೊಂಡ ಒಂದು ಸಂಸ್ಥೆ. ಅಲ್ಲಿ ವಿಷಯಗಳು ಮತದಾನದ ಮೂಲಕ ತೀರ್ಮಾನವಾಗುತ್ತಿದ್ದುವು. ಕೈಯೆತ್ತಿ ಮತವನ್ನು ಸೂಚಿಸಲಾಗುತ್ತಿತ್ತು ಅಥವಾ ಬೆಣಚುಕಲ್ಲುಗಳೇ ಮತಗಳಂತೆ (ಬ್ಯಾಲೆಟ್) ಬಳಕೆಯಾಗುತ್ತಿದ್ದವು. ಈ ಸಭೆಗೊಬ್ಬ ಅನೌಪಚಾರಿಕ ಅಧಿಕಾರಿ (ಮುಂದಾಳು) ಇರುತ್ತಿದ್ದ. ಪೆರಿಕ್ಲೀಸ್ (ಮ. ಪ್ರಶ.ಪೂ. 429) ಕ್ಲೀಯಾನ್ (ಮ.ಪ್ರಶ.ಪೂ. 422) ಡಿಮಾಸ್ಥನೀಸ್ (ಪ್ರಶ.ಪೂ. 385–322)–ಇವರು ಇಂಥ ಅಧಿಕಾರಿಗಳು. ಈ ವ್ಯವಸ್ಥೆಯಲ್ಲಿ ಜನರ ನಡುವೆ ನಾಗರಿಕರು ಹಾಗೂ ಸಾಮಾನ್ಯರು ಎಂಬ ಭೇದವಿರುತ್ತಿತ್ತೆಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಅಧಿಕಾರಿಗಳ (ಸೇನಾಧಿಪತಿ ಮುಂತಾದವರು) ಆಯ್ಕೆ ಸ್ಥಾನಿಕವಲ್ಲದ, ಎಂದರೆ ವಿವಿಧ ತಂಡಗಳ (ಟ್ರೈಬ್ಸ್). ಮತಕ್ಷೇತ್ರದಿಂದ ಆಗುತ್ತಿತ್ತು.

ಅಥೀನಿಯನ್ (ಅಥೆನ್ಸಿನ) ಪ್ರಜಾಸತ್ತಾತ್ಮಕ ಸಿದ್ಧಾಂತದಲ್ಲಿ ಚುನಾವಣಾ ತತ್ತ್ವವನ್ನು ಅರೆಮನಸ್ಸಿನಿಂದ ಒಪ್ಪಿದಂತಿತ್ತು. ಏಕೆಂದರೆ ನಾಗರಿಕರಲ್ಲಿ ಸಮಾನತಾ ಭಾವಕ್ಕೆ ಅಡ್ಡಿಯಾಗಿ ಹಳೆಯ ಪ್ರಭಾವಿ ಮನೆತನಗಳ ಆಕರ್ಷಕ ಹಾಗೂ ಮಹತ್ವಾಕಾಂಕ್ಷಿ ಯುವಕರಿಗೆ ನಿರಂತರ ಅಧಿಕಾರ ಕೊಡುವ ಅಪಾಯ ಈ ವ್ಯವಸ್ಥೆಯಲ್ಲಿ ಇತ್ತೆಂದು ಭಾವಿಸಲಾಗಿತ್ತು. ಅಲ್ಲದೆ ಸಾರ್ವಜನಿಕರಲ್ಲಿ ಧಾಡಸಿ (ಮುನ್ನುಗ್ಗುವ) ಪ್ರವೃತ್ತಿಯವರು ಬಲಪ್ರಯೋಗದಿಂದ ಚುನಾವಣಾ ವಿಜಯವನ್ನು ಖಾಯಂ ಆಗಿ ಉಳಿಸಿಕೊಳ್ಳುವ ಗಂಡಾಂತರವಿತ್ತು–ಇವು ಗ್ರೀಕ್ ದೌರ್ಜನ್ಯದ ಉದಾಹರಣೆಗಳು.

ನಾಗರಿಕರು ಪಾಳಿಯಿಂದ ಅಧಿಕಾರ ವಹಿಸಬೇಕೆಂಬುದು ಆಗಿನ ಮತ್ತೊಂದು ಭಾವುಕ ಸಿದ್ಧಾಂತ. ಈ ಪಾಳಿಯನ್ನು ಚೀಟಿ ಎತ್ತಿ (ಬೈ ಲಾಟ್) ನಿರ್ಧರಿಸಬೇಕಾಗುತ್ತಿತ್ತು. 500 ಜನರ ಸಭೆ ಚೀಟಿ ಎತ್ತುವ ವಿಧಾನದಿಂದ ಅಧಿಕಾರಿಗಳನ್ನೂ ನ್ಯಾಯದರ್ಶಿಗಳನ್ನೂ (ಜೂರಿ) ಆರಿಸುತ್ತಿತ್ತಲ್ಲದೆ ಸಾರ್ವಜನಿಕ ಕೆಲಸದ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತಿತ್ತು.

ಅರಿಸ್ಟಾಟಲ್ (ಪ್ರಶ.ಪೂ. 384–322) ಮತದಾನ ಪದ್ಧತಿಯನ್ನು ಬಹಳ ವಿಶದವಾಗಿ ವಿವರಿಸಿದ್ದಾನೆ. ಇಂಗ್ಲಿಷ್ ಮತ್ತು ಅಮೆರಿಕನ್ ಹಳೆಯ ಪದ್ಧತಿಗಳೂ ಹೀಗೆಯೇ ಇದ್ದುವು. ಚಿಕ್ಕವಾದ ಸ್ವಯಂಪ್ರೇರಿತ ಸಮಾಜಗಳಲ್ಲಿ ಪಾಳಿಯಿಂದ ಅಧಿಕಾರವಹಿಸುವ ರೂಢಿ ಈಗಲೂ ಇದೆ. ಅಥೀನಿಯನರು ಪ್ರತಿನಿಧಿಗಳ ಆಯ್ಕೆಗೆ ಚೀಟಿ ಎತ್ತುವ ಪದ್ಧತಿಯನ್ನೂ ತಜ್ಞ ಅಧಿಕಾರಿಗಳ ಆಯ್ಕೆಗೆ ಮತದಾನ (ಬ್ಯಾಲಟ್) ಪದ್ಧತಿಯನ್ನೂ ಅನುಸರಿಸಿದರು. ಆಧುನಿಕ ಪದ್ಧತಿಯಲ್ಲಿ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತದೆ. ಪ್ರತಿನಿಧಿಗಳ ಆಯ್ಕೆ ಮತದಾನದಿಂದ ನಡೆಯುತ್ತದೆ.

ರೋಮನ್ ಗಣರಾಜ್ಯದಲ್ಲಿ ಸಹ ಒಬ್ಬನಿಗೆ ಒಂದು ಮತ ಎಂಬ ತತ್ತ್ವವನ್ನು ಒಪ್ಪಿರಲಿಲ್ಲ. ಮತಕ್ಷೇತ್ರ ಆಂತರಿಕ ಆಯ್ಕೆ ಒಬ್ಬನಿಗೆ ಒಂದು ಮತದ ಆಧಾರದ ಮೇಲೆ ಆಗುತ್ತಿತ್ತಾದರೂ ಗಣರಾಜ್ಯದ ತೀರ್ಮಾನಗಳು ಹಾಗೂ ಆಯ್ಕೆಗಳು ಸಮ್ಮಿಶ್ರ ತಂಡಗಳ ಮೂಲಕ ಆಗುತ್ತಿದ್ದುವು. ಮಧ್ಯಯುಗದ ಚರ್ಚಿನವರು ಪ್ರಾಚೀನ ಚುನಾವಣಾ ಪದ್ಧತಿಯನ್ನು ಕಾಯ್ದುಕೊಂಡು ಬಂದರು. ಪೋಪ್, ಬಿಷಪ್ ಮುಂತಾದವರನ್ನು ಇವರಿಗಿಂತ ದರ್ಜೆಯಲ್ಲಿ ಕಿರಿಯರಾದವರನ್ನೊಳಗೊಂಡ ಮತಕ್ಷೇತ್ರದಿಂದ ಚುನಾವಣೆಯ ಮೂಲಕ ಆರಿಸಲಾಗುತ್ತಿತ್ತು. ಆದರೆ ಕೆಲವೇ ಜನರಿಗೆ ಚುನಾವಣಾಧಿಕಾರವಿದ್ದ ಈ ವ್ಯವಸ್ಥೆಯನ್ನು ಎಲ್ಲ ಶ್ರದ್ಧಾವಂತರೂ ಪ್ರತಿಭಟಿಸುತ್ತಿದ್ದರು.

ಮಾಂಡಲಿಕರ ಸಮ್ಮತಿ, ಶಾಸನಗಳ ಮತ್ತು ರೂಢಿಗಳ ಪರಿಧಿ–ಇವಕ್ಕೆ ರಾಜಸತ್ತೆ ಸೀಮಿತವಾಗಿರುತ್ತಿತ್ತು. ಅನಂತರ ಮಾಂಡಲಿಕರು, ಪರಿಷತ್ತು ಮತ್ತು ಸಭೆಗಳ ಸಲಹೆ ಪಡೆಯುವ ಪದ್ಧತಿ ಬಂತು. ಇಲ್ಲಿ ಒಂದು ಬಗೆಯ ಪ್ರಾತಿನಿಧ್ಯ ಪ್ರಾರಂಭವಾಯಿತು. ಈ ಸಭೆಗಳೇ ಮುಂದೆ ಯೂರೋಪಿನಲ್ಲಿ ಸಂಸದೀಯ (ಪಾರ್ಲಿಮೆಂಟರಿ) ಸಂಪ್ರದಾಯಕ್ಕೆ ನಾಂದಿಯಾದುವು. ಪ್ರಾತಿನಿಧ್ಯ ಮೊದಲು ಸೀಮಿತವಾಗಿತ್ತು. ಆಸ್ತಿಗಳ ಆಧಾರದ ಮೇಲೆ ಪ್ರಾತಿನಿಧ್ಯ ನೀಡಲಾಗುತ್ತಿತ್ತು. (ಉದಾ: ಗ್ರೇಟ್ ಲಾರ್ಡ್ಸ್, ಗ್ರೇಟ್ ಕ್ಲರ್ಜಿ, ಕಡಿಮೆ ವರ್ಗದ ಲಾರ್ಡುಗಳು, ಕೃಷಿಕರು ಇತ್ಯಾದಿ). ಇನ್ನೊಂದು ಪ್ರಕಾರದಲ್ಲಿ ಸ್ಥಳೀಯ ಸಮಾಜಗಳಿಗೆ ಪ್ರಾತಿನಿಧ್ಯ ಕೊಡಲಾಯಿತು; ವ್ಯಕ್ತಿಗಳಿಗಲ್ಲ. ಕಾಮನ್ಸ್ ಸಭೆಗೆ (ಹೌಸ್ ಆಫ್ ಕಾಮನ್ಸ್) ಪ್ರತಿಯೊಂದು ಷೈರ್‌ನಿಂದ ಇಬ್ಬರು ಸರದಾರರನ್ನೂ ಪ್ರತಿ ಬರೋದಿಂದ ಇಬ್ಬರು ಬರ್ಗೆಸ್‌ಗಳನ್ನೂ ಪ್ರತಿನಿಧಿಗಳೆಂದು ತೆಗೆದುಕೊಳ್ಳಲಾಗುತ್ತಿತ್ತು. ಇವರನ್ನು ಆರಿಸಿ ಕಳಿಸುವ ಜವಾಬ್ದಾರಿ ಆಯಾ ಸಮಾಜದ್ದಾಗಿತ್ತು.

ಪ್ರ.ಶ. 7–8ನೆಯ ಶತಮಾನಗಳಲ್ಲಿ ಆಸ್ತಿವಂತರ ಸಭೆಗಳು ಹೋಗಿ ನಿರಂಕುಶ ಆಧುನಿಕ ರಾಜಸತ್ತೆಗಳು ಬಂದವಾದರೂ ಇಂಗ್ಲೆಂಡಿನಲ್ಲಿ ಚುನಾವಣೆಯ ಒಂದಂಶವೂ ಸ್ಕಾಟ್ಲೆಂಡ್, ಸ್ವೀಡನ್‌ಗಳಲ್ಲಿ ಸಂಸತ್ತುಗಳೂ ಉಳಿದುವು. ಜನಸಮ್ಮತಿ, ಮತಾಧಿಕಾರ, ಪ್ರಾತಿನಿಧ್ಯ ಮುಂತಾದವನ್ನು ತತ್ಕಾಲಕ್ಕೆ ರೂಢಿಯಲ್ಲಿ ತರಲಾಗದಿದ್ದರೂ, ಮೂಲತತ್ತ್ವಗಳು ರೂಪುಗೊಂಡುವು. ಅವು ಆದರ್ಶಗಳೆಂದು ಒಪ್ಪಿಕೊಳ್ಳಲಾಯಿತು. 1640–1650ರ ಇಂಗ್ಲಿಷ್ ಮುಖಂಡರ ಹೇಳಿಕೆಗಳು ಅಥೀನಿಯನ್ ಪ್ರಜಾಸತ್ತೆಯ ಅಸಮ್ಮತ ಜನಸ್ತೋಮದ ಭಾಷೆಯನ್ನು ನೆನಪಿಗೆ ತರುತ್ತವೆ. ಆಳಿಸಿಕೊಳ್ಳುವವರ ಒಪ್ಪಿಗೆಯೇ ಎಲ್ಲ ಸರ್ಕಾರಗಳ ಅಧಿಕಾರದ ಮೂಲ. ಆ ಒಪ್ಪಿಗೆ ಸಾರ್ವತ್ರಿಕ ಮತದಾನದಿಂದ ಸ್ವತಂತ್ರವಾಗಿ ಆಯ್ಕೆಹೊಂದಿದ ಪ್ರತಿನಿಧಿಗಳ ಮೂಲಕವೇ ವ್ಯಕ್ತವಾಗಬೇಕು. ಇದು ಇವರ ವಾದದ ತಿರುಳು.

ಮತದಾರ ಹಾಗೂ ವಿಧಾನಸಭೆಯ ನಡುವೆ ಇರುವ ಸಂಸ್ಥೆಯೇ ಪಕ್ಷ. ಮೊದಲು ಅಮೆರಿಕದ ಅಧ್ಯಕ್ಷರ ಆಯ್ಕೆಯಲ್ಲಿ ಪ್ರಧಾನವಾಗಿ ಕಂಡ ಈ ಪಕ್ಷಸಂಸ್ಥೆ 19ನೆಯ ಶತಮಾನದಲ್ಲಿ ಎಲ್ಲ ಕಡೆಗೂ ಹಬ್ಬಿ ಪಕ್ಷ ಮತ್ತು ಚುನಾವಣೆಗೆ ಪರಸ್ಪರಾವಲಂಬಿಗಳಾದುವು. ಈ ಪಕ್ಷತತ್ತ್ವ ರಾಷ್ಟ್ರೀಯ ವ್ಯಾಪ್ತಿಗೆ ಸೀಮಿತವಾಗಿ ಉಳಿಯಲಿಲ್ಲ. ಕಾರ್ಮಿಕ ಸಂಘಗಳೇ ಮುಂತಾದವುಗಳ ರೂಪದಲ್ಲಿ ಅಂತಾರಾಷ್ಟ್ರೀಯ ವ್ಯಾಪ್ತಿ ಪಡೆಯಿತು. ಈಗ ಚುನಾವಣೆ ಕೇವಲ ಪಕ್ಷಗಳಿಗೆ ಸಂಬಂಧಿಸಿದಂತೆಯೇ ಅರ್ಥವಾಗುತ್ತದೆ. ರಾಷ್ಟ್ರೀಯ ಚುನಾವಣೆಯ ವಿವಿಧ ಹಂತಗಳನ್ನು ಪಕ್ಷಗಳೇ ನಿಯಂತ್ರಿಸುತ್ತವೆ. ಹೀಗಾಗಿ ಸ್ವೇಚ್ಛಿಕ ಮತದಾನವೆಂಬುದು ಸಂದಿಗ್ಧವಾದ ಮಾತಾಗಿದೆ. ಪಕ್ಷದ ಕಾರ್ಯಕ್ರಮ, ಪಕ್ಷದ ಹಿತ, ಒಡಂಬಡಿಕೆಗಳು, ಆಳುವ ಪಕ್ಷದ ಪ್ರಭಾವ ಇತ್ಯಾದಿಗಳಿಂದ ಮತದಾನ ಪ್ರಭಾವಿತವಾಗುತ್ತ ಬಂದಿದೆ. ಚುನಾವಣೆಯೆನ್ನುವುದು ಒಂದು ಔಪಚಾರಿಕ ವಿಧಿ. ಪಕ್ಷ ಆಗಲೇ ನಿರ್ಧರಿಸಿದಂಥ, ಅಧಿಕಾರ ವಹಿಸಲು ನಿಯೋಜಿಸಿದಂಥ ಒಬ್ಬನ ಆಯ್ಕೆಯನ್ನು ಸಕ್ರಮಗೊಳಿಸುವ ಕ್ರಮವಾಗುತ್ತದೆ – ಮದುವೆ ಮಾಡಿಕೊಳ್ಳಲು ನಿರ್ಧರಿಸಿ ಚರ್ಚಿಗೋ, ನೋಂದಣಿ ಕಚೇರಿಗೋ ಹೋದ ಭಾವೀ ದಂಪತಿಗಳಲ್ಲಿ ಒಬ್ಬೊಬ್ಬರನ್ನೂ ನೀನು ಇವನ(ಳ)ನ್ನು

ನ್ಯಾಯಬದ್ಧ ಗಂಡ/ಹೆಂಡತಿ ಎಂದು ಸ್ವೀಕರಿಸಲು ಸಿದ್ಧನಿರುವೆಯಾ ಎಂದು ಕೇಳಿದಂತೆ. ಆಗ ಒಲ್ಲೆನೆನ್ನುವ ಪ್ರಶ್ನೆಯೇ ಇಲ್ಲ. ಅದು ಆಯ್ಕೆ ಅಥವಾ ನಿರ್ಧಾರದ ಸಮಯವೇ ಅಲ್ಲ. ಒಬ್ಬನಿಗೆ ಒಂದು ಮತ ಎನ್ನುವ ತತ್ತ್ವ ರೂಢಿಗೆ ಬರಲು ಇಂಗ್ಲೆಂಡಿನಲ್ಲಿ ಸಹ ಒಂದು ಶತಮಾನವೇ ಕಳೆಯಿತು. ಹೆಂಗಸರಿಗೆ ಮತಾಧಿಕಾರವೂ ತಡವಾಗಿ ಬಂತು. 1832ರ ಸುಧಾರಣಾ ಅಧಿನಿಯಮದಲ್ಲಿದ್ದದ್ದು ಸೀಮಿತ ಮತದಾನ, ಅನೇಕ ಮತದಾನ ರದ್ದಾದ್ದು 1948ರಲ್ಲಿ. 1866ರಲ್ಲಿ ಸ್ವೀಡನಿನಲ್ಲಿ ಸ್ವತ್ತಿನ ಆಧಾರದ ಪ್ರಾತಿನಿಧ್ಯ ಹೋಯಿತು. 1917ರಲ್ಲಿ ಬೆಲ್ಜಿಯಮ್‌ನಲ್ಲಿ 25 ವರ್ಷದವರಿಗೆ ಮತಾಧಿಕಾರ ಕೊಡಲಾಯಿತಾದರೂ ಅದು ಸುಶಿಕ್ಷಿತರಿಗೆ, ಇತರ ವಿಶಿಷ್ಟರಿಗೆ ಸೀಮಿತವಾಗಿತ್ತು. ಫ್ರಾನ್ಸಿನಲ್ಲಿ 1789ರ ವರೆಗೂ ಪರೋಕ್ಷ ಚುನಾವಣೆ ಇತ್ತು. ಸರದಾರರ, ಪಾದ್ರಿಗಳ ಮತಕ್ಷೇತ್ರಗಳಿದ್ದುವು. ಕೊಡುವ ತೆರಿಗೆಯ ಆಧಾರದ ಮೇಲೆ ಮತಾಧಿಕಾರ 1791ರಲ್ಲೂ ವಯಸ್ಕ ಮತದಾನ 1793ರಲ್ಲೂ ಬಂದುವು. ಅದರೆ ಇದು ತಾತ್ಕಾಲಿಕವಾಗಿತ್ತು. ಮುಂದೆ ಕ್ರಾಂತಿಯಾಯಿತು. ಮತ್ತೆ ವ್ಯಾಪಕ ಮತಾಧಿಕಾರ ಬಂದದ್ದು ಅನಂತರವೇ. ಒಂದನೆಯ ಮಹಾಯುದ್ಧದ ಹೊತ್ತಿಗೆ ಯೂರೋಪಿನ ಎಲ್ಲ ರಾಜ್ಯಗಳಲ್ಲೂ ವಯಸ್ಕ ಮತದಾನ ಜಾರಿಗೆ ಬಂತು. ಕೆಲವು ಕಡೆ ಮಹಿಳೆಯರಿಗೂ ಮತಾಧಿಕಾರ ಪ್ರಾಪ್ತವಾಯಿತು.

ಆಸ್ತಿವಾದಿಗಳು ಒಬ್ಬನಿಗೆ ಒಂದು ಮತ ಎಂಬ ತತ್ತ್ವವನ್ನು ವಿರೋಧಿಸಿದರು. ಸಾಂಸ್ಕೃತಿಕವಾದ ಮತ್ತು ಆರ್ಥಿಕವಾದ ಒತ್ತಡಗಳನ್ನು ತಡೆಯಲು ಸಮರ್ಥರಾದವರಿಗೆ ಮಾತ್ರ ಮತಾಧಿಕಾರವಿರಬೇಕು. ದುರ್ಬಲರು ಇಂಥ ಒತ್ತಡಕ್ಕೆ ಒಳಗಾಗಿ ಸ್ವವಿವೇಕವನ್ನು ಬಳಸಲು ಅಸಮರ್ಥರಾಗುತ್ತಾರೆ–ಎಂಬುದು ಇವರ ವಾದ. ಬಹಿರಂಗವಾಗಿ ಮತ್ತು ಬಾಯಿ ಹೇಳಿಕೆಯ ಮೂಲಕ ಮತ ಚಲಾಯಿಸುವ ಪದ್ಧತಿ ಡೆನ್ಮಾರ್ಕಿನಲ್ಲಿ 1901ರವರೆಗೂ, ಐಸ್‌ಲೆಂಡಿನಲ್ಲಿ 1906ರವರೆಗೂ, ಹಂಗರಿಯಲ್ಲಿ 1930ರವರೆಗೂ ಇದ್ದುವು. ಇಂಗ್ಲೆಂಡ್ ಮಾತ್ರ 1867ರ ಅಧಿನಿಯಮವಾದ ಐದು ವರ್ಷಗಳಲ್ಲೇ ಗುಪ್ತಮತದಾನ ಪದ್ಧತಿಯನ್ನು ಜಾರಿಗೆ ತಂದಿತು.

ಬಹುಮತ ತತ್ತ್ವವೆಂದರೆ ಅಂಶದ ಇಚ್ಛೆಯೇ ಪೂರ್ಣದ ಇಚ್ಛೆ ಎಂದಂತೆ. ಸರಳ ಬಹುಮತ ತತ್ತ್ವ ಇಂಗ್ಲೆಂಡಿನಲ್ಲಿ ಮಧ್ಯಯುಗದಿಂದಲೇ ಜಾರಿಯಲ್ಲಿ ಬಂತು. ಅಮೆರಿಕದಲ್ಲೂ ಇದು ಪ್ರಮಾಣಿತ ಪದ್ಧತಿಯಾಯಿತು. ಖಚಿತ ಬಹುಮತ, ಪರೋಕ್ಷ ಚುನಾವಣೆ, ಏಕಸದಸ್ಯ ಮತ್ತು ಬಹುಸದಸ್ಯ ಚುನಾವಣಾ ಕ್ಷೇತ್ರಗಳು, ಅನುಪಾತೀಯ ಪ್ರಾತಿನಿಧ್ಯ (ಪ್ರಪೋರ್ಷನಲ್ ರೆಪ್ರೆಸೆಂಟೇಷನ್) – ಇವನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

**ಭಾರತದಲ್ಲಿ :** ಭಾರತದಲ್ಲಿ ರಾಜ್ಯಶಾಸ್ತ್ರಾಧ್ಯಯನ ಪ್ರಶ.ಪೂ. 500ರಿಂದಲೇ ವ್ಯವಸ್ಥಿತವಾಗಿ ಪ್ರಾರಂಭವಾಯಿತೆನ್ನಬಹುದು. ಆರಂಭದೆಶೆಯಲ್ಲಿ ರಾಜಕೀಯಶಾಸ್ತ್ರಕ್ಕೆ ಮೀಸಲಾದ ಗ್ರಂಥಗಳು ಇರದಿದ್ದರೂ ವೇದ ಹಾಗೂ ಬ್ರಾಹ್ಮಣಗಳಲ್ಲಿ ಅಲ್ಲಲ್ಲಿ ಪಸರಿಸಿರುವ ವಾಕ್ಯವೃಂದಗಳು ತತ್ಕಾಲೀನ ಆಡಳಿತ ವ್ಯವಸ್ಥೆಯನ್ನು ಕುರಿತ ಸಿದ್ಧಾಂತ ಹಾಗೂ ರೂಢಿಗಳ ಮೇಲೆ ಕೆಲವೊಮ್ಮೆ ಅಸ್ಪಷ್ಟವಾಗಿಯೂ ಕೆಲವೊಮ್ಮೆ ಸ್ಫುಟವಾಗಿಯೂ ಬೆಳಕು ಚೆಲ್ಲುತ್ತವೆ. ಋಗ್ವೇದದಲ್ಲಿ ಈ ವಿಷಯ ಸ್ವಲ್ಪ ಬಂದಿದೆ. ಆದರೆ ಅಥರ್ವವೇದದಲ್ಲಿ ಸಾಕಷ್ಟು ವಿಪುಲವಾಗಿ ಇದರ ಪ್ರಸ್ತಾಪವುಂಟು. ಬ್ರಾಹ್ಮಣಗಳಲ್ಲಿ ಮತ್ತು ಯಜುಸ್ಸಂಹಿತೆಗಳಲ್ಲಿ ರಾಜನ ಪಟ್ಟಾಭಿಷೇಕದ ವಿವರಗಳು ಸಿಗುತ್ತವೆ. ಇಲ್ಲೆಲ್ಲ ರಾಜನ ಸ್ಥಾನಮಾನ, ಇತರ ಜಾತಿಯ–ವಿಶೇಷತಃ ಬ್ರಾಹ್ಮಣ ಕ್ಷತ್ರಿಯರ ಹಕ್ಕು ಮತ್ತು ಸ್ಥಾನ ಗೌರವಗಳ ಕುತೂಹಲಕರ ವಿವರಗಳುಂಟು. ಪ್ರಶ.ಪೂ. 7–8ನೆಯ ಶತಮಾನಗಳ ಹೊತ್ತಿಗೆ ರಾಜ್ಯಶಾಸ್ತ್ರಕ್ಕೆ ಮೀಸಲಾದ ಗ್ರಂಥಗಳೇ ರಚಿತವಾಗಿದ್ದಿರ ಬಹುದು. ಅವು ಈಗ ಉಪಲಬ್ಧವಿಲ್ಲದಿದ್ದರೂ ಮಹಾಭಾರತದ ಶಾಂತಿಪರ್ವದಲ್ಲಿಯ ಭೀಷ್ಮ ಯುಧಿಷ್ಠಿರ ಸಂವಾದದಿಂದ ಅಂಥ ವ್ಯವಸ್ಥಿತ ಅಧ್ಯಯನ ಆಗಿದ್ದಂತೆ ಭಾವಿಸಬಹುದು. ಅಲ್ಲಿ ಮಾಂಧಾತ ಮುಂತಾದ ರಾಜರ ಉದಾಹರಣೆ ಹೇಳಿ, ಅವರಿಗೆ ಸಲಹೆಗಾರರಾಗಿದ್ದ ಋಷಿಗಳ ಮತ್ತು ತಜ್ಞ ವಿದ್ವಾಂಸರ ವಿಚಾರವನ್ನೂ ಭೀಷ್ಮ ಪ್ರಸ್ತಾವಿಸುತ್ತಾನೆ. ರಾಜನಿಗೆ ಒಂದು ತಜ್ಞ ಸಲಹಾಮಂಡಲಿಯಿರುತ್ತಿತ್ತೆಂದು ತಿಳಿದುಬರುತ್ತದೆ. ಇಂಥ ಸಲಹಾಮಂಡಳಿ – ರಾಜನ ಆಯ್ಕೆಯದೇ ಆಗಿದ್ದರೂ ಪ್ರಜಾಸಮೂಹಕ್ಕೆ ಸಮೀಪವರ್ತಿಗಳಾಗಿದ್ದವರನ್ನು ಒಳಗೊಂಡಿರುತ್ತಿತ್ತೆಂದು ಹೇಳಬಹುದು. ಪ್ರಶ.ಪೂ. 4ನೆಯ ಶತಮಾನದಲ್ಲಿ ಬರೆಯಲಾದ ಕೌಟಿಲ್ಯನ ಅರ್ಥಶಾಸ್ತ್ರ ಈ ವಿಚಾರದಲ್ಲಿ ದೊರೆತ ಮಹತ್ತ್ವದ ಗ್ರಂಥ. ಇದರಲ್ಲಿ ರಾಜ್ಯಶಾಸ್ತ್ರದ ವಿವಿಧ ವಿಷಯಗಳೂ ವಿವಿಧ ಪ್ರಕಾರಗಳ ರಾಜ್ಯಗಳ ವಿವರಗಳೂ ಸಿಗುತ್ತವೆ. ಮದ್ರ, ಕಾಂಭೋಜ, ಲಿಚ್ಛವಿ ಹಾಗೂ ಮಲ್ಲರ ಗಣರಾಜ್ಯಗಳ ಪ್ರಸ್ತಾಪ ಬರುತ್ತದೆ. ಇವೆಲ್ಲ ಮೌರ್ಯರ ಕಾಲದ ಆರಂಭದಲ್ಲಿ ಅಸ್ತಿತ್ವದಲ್ಲಿ ಇದ್ದುದಾಗಿ ತಿಳಿದುಬಂದಿದೆ.

ಭಾರತದಲ್ಲೂ ಪ್ರಭುತ್ವ ಒಂದು ಸಾಮಾಜಿಕ ಆವಶ್ಯಕತೆಯಾಗಿ ಅಸ್ತಿತ್ವದಲ್ಲಿ ಬಂತು. ಅನಾಯಕತ್ವದಿಂದ ಬೇಸತ್ತ ಜನಸಮೂಹ ಮೊದಲು ಸಮಾಜವ್ಯವಸ್ಥೆಯ ನಿಯಮಗಳನ್ನು ಸ್ವಸಮ್ಮತಿಯಿಂದ ಮಾಡಿಕೊಂಡಿತು. ಅವು ಸಫಲವಾಗದಿದ್ದಾಗ ರಾಜತ್ವವೆಂಬ ಸಂಸ್ಥೆಯ ನಿರ್ಮಾಣಕ್ಕೆ ಅವಕಾಶವಾಯಿತು. ರಾಜನ ಆಳುವ ಹಕ್ಕು ಭಾಗಶಃ ದೈವದತ್ತವೆಂದೂ ಭಾಗಶಃ ಆಳಿಸಿಕೊಳ್ಳುವ ಜನರ ಸಮ್ಮತಿಗೆ ಒಳಪಟ್ಟದ್ದೆಂದೂ ಶಾಂತಿಪರ್ವ ಹೇಳುತ್ತದೆ. ದೀರ್ಘನಿಕಾಯ ಗ್ರಂಥದಲ್ಲಿ ಅನಾಯಕತ್ವದಿಂದ ಬೇಸತ್ತ ಜನರು ಮಹಾಜನಸಮ್ಮತ ನೊಬ್ಬನನ್ನು ಆರಿಸಿಕೊಂಡು, ಆತ ಮಾಡುವ ಸೇವೆಗೆ–ಶಾಂತಿ, ಸುವ್ಯವಸ್ಥೆಗಳಿಗೆ–ಬದಲಾಗಿ ತಾವು ಬೆಳೆದ ಬತ್ತದ ಭಾಗ ಕೊಡಲು ಒಪ್ಪಿದುದಾಗಿ ಹೇಳಲಾಗಿದೆ. ಮನುವನ್ನು ಸಹ ಜನರೇ ರಾಜನನ್ನಾಗಿ ಮಾಡಿದರೆಂದು ಹೇಳಬಹುದಾಗಿದೆ.

ರಾಜರ ಅಧಿಕಾರಗಳು ಅನಿಯಂತ್ರಿತವಾಗಿರಲಿಲ್ಲ. ಅವು ಧರ್ಮಶಾಸ್ತ್ರಗಳ ನೇಮಗಳಿಂದ ನಿಯಂತ್ರಿತವಾಗಿದ್ದುವು. ವಿರಜ, ಕರ್ದಮ, ಅನಂಗ ಇವರೆಲ್ಲ ಇಂಥ ಸೀಮಿತ ಅಧಿಕಾರದ ರಾಜರಾಗಿದ್ದರು. ವೇನ ರಾಜನ ನಿರಂಕುಶ ಆಳ್ವಿಕೆಯಿಂದ ಬೇಸತ್ತ ಜನ ಅವನನ್ನು ಕೊಂದುಹಾಕಿದರೆನ್ನಲಾಗಿದೆ. ಏಕಾಧಿಪತ್ಯವಿದ್ದರೂ ರಾಜಸತ್ತೆ ಧರ್ಮಶಾಸ್ತ್ರನಿಯಮಗಳನ್ನೂ ಜನಸಮ್ಮತಿಯನ್ನೂ ಆಶ್ರಯಿಸಿದ್ದುದಕ್ಕೆ ಹೀಗೆ ಅಲ್ಲಲ್ಲಿ ನಿದರ್ಶನಗಳು ಸಿಗುತ್ತವೆ. ರಾಜ್ಯಗಳ ವಿಸ್ತಾರ ಹೆಚ್ಚಿದಂತೆಲ್ಲ ರಾಜರು ಮಹಾರಾಜರಾಗಿ, ಸಮ್ರಾಟರಾಗಿ, ಚಕ್ರವರ್ತಿಗಳಾಗಿ ಹೆಚ್ಚು ನಿರಂಕುಶರಾದದ್ದು ಕಂಡುಬರುತ್ತದೆ. ಈ ಚಕ್ರವರ್ತಿಗಳು ರಾಜರ ಸಭೆಗಳನ್ನು ಏರ್ಪಡಿಸಿದ್ದ ಪ್ರಸ್ತಾಪ ವೇದಗಳಲ್ಲಿ ಬರುತ್ತದೆ. ಇವು ರಾಜರನ್ನೊಳಗೊಂಡುದೇ ಆದರೂ ಇದಕ್ಕೆ ಪ್ರಾಮುಖ್ಯವಿದ್ದಂತೆ ಕಾಣುತ್ತದೆ.

ಉತ್ತರ ಕುರು ಹಾಗೂ ಉತ್ತರ ಮದ್ರ ರಾಜ್ಯಗಳಲ್ಲಿ ವೈರಾಜ್ಯ (ರಾಜನಿಲ್ಲದ ಪ್ರಭುತ್ವ) ಇತ್ತೆಂದು ಐತರೇಯ ಬ್ರಾಹ್ಮಣದಲ್ಲಿ ಹೇಳಿದೆ. ವಿರಾಟ್ ಎಂಬುದು ರಾಜವಾಚಕವಲ್ಲ, ಜನವಾಚಕ ಎಂದು ಇದರಿಂದ ಹೇಳಬಹುದು. ಅಲೆಗ್ಸಾಂಡರ್ ಭಾರತಕ್ಕೆ ಬಂದಾಗ ಇಂಥ ಗಣರಾಜ್ಯಗಳಿದ್ದುದನ್ನು ಆಗಿನ ಗ್ರೀಕ್ ಲೇಖಕರು ಪ್ರಸ್ತಾಪಿಸಿದ್ದಾರೆ. ನ್ಯಾಸ ಮತ್ತು ಸಿಬಿ ಎಂಬುವು ನಗರರಾಜ್ಯಗಳಾಗಿದ್ದುವೆಂದೂ ನಾಗರಿಕರಿಗೆ ಸ್ವಾತಂತ್ರ್ಯವಿತ್ತೆಂದೂ ಗ್ರೀಕ್ ಇತಿಹಾಸದಿಂದ ತಿಳಿದುಬರುತ್ತದೆ. ಇಂಥ ಅನೇಕ ನಗರರಾಜ್ಯಗಳ ಸಂಯುಕ್ತ ವ್ಯವಸ್ಥೆ ರೂಪುಗೊಂಡು ಅದಕ್ಕೊಬ್ಬ ಮುಖಂಡರಾಜನನ್ನು ಆರಿಸಿಕೊಳ್ಳುವ ಪರಿಪಾಟವಿತ್ತೆಂಬುದಕ್ಕೆ ಕುರುಪಾಂಚಾಲ, ಶೂದ್ರಕ, ಮಾಳವ ಮತ್ತು ಲಿಚ್ಛವಿ ಮಲ್ಲರ ಸಂಯುಕ್ತ ವ್ಯವಸ್ಥೆಗಳೇ ನಿದರ್ಶನ. ಲಿಚ್ಛವಿ ಮಲ್ಲರ ಸಂಯುಕ್ತ ಸಭೆಯಲ್ಲಿ 18 ಸದಸ್ಯರು–ಅವರಲ್ಲಿ 9 ಜನ ಸಂಯುಕ್ತ ವ್ಯವಸ್ಥೆಗೊಳಪಟ್ಟ ರಾಜ್ಯಗಳಿಂದ ಚುನಾಯಿತರಾದವರು–ಇರುತ್ತಿದ್ದರು. ಹೀಗೆ ಅಲ್ಲಿ ಒಂದು ವಿಧದ ಚುನಾವಣೆ ರೂಪುಗೊಳ್ಳುತ್ತ ಬಂದಿತ್ತು.

ಸಮಿತಿ ಎಂಬ ಸಂಸ್ಥೆಗೆ ವೇದಕಾಲದಿಂದಲೂ ಪ್ರಾಧಾನ್ಯವಿದ್ದಂತೆ ಕಾಣುತ್ತದೆ. ಇದು ವಿಶಃ ಎಂದು ಆಗ ಹೆಸರಾದ ಜನಾಂಗದ ಜನರ ಸಭೆಯಾಗಿತ್ತೆಂದು ತೋರುತ್ತದೆ. ವಿದಥ ಎಂಬ ಮೂಲ ಜನಸಂಸ್ಥೆಯ ವಿವಿಧ ರೂಪಗಳೇ ಸಮಿತಿ, ಸಭೆ, ಸೇನಾ ಮುಂತಾದವು. ಕಾರ್ಯವ್ಯಾಪ್ತಿಯಲ್ಲಿ ಇವುಗಳಲ್ಲಿ ವ್ಯತ್ಯಾಸವಿದ್ದಿತು. ಸಮಿತಿ ಸಭೆಗಳ ಪರಸ್ಪರ ಸಂಬಂಧದ ವಿವರ ಸಿಗುವುದಿಲ್ಲ. ಸಹಧರ್ಮಿಗಳಾದ ಸಜ್ಜನರಿಂದ ಕೂಡಿದ್ದು ಸಭಾ–ಎಂದು ಪಾರಸ್ಕರ ಗೃಹ್ಯಸೂತ್ರ ಹೇಳುತ್ತದೆ. ಇಲ್ಲಿ ಆಯ್ಕೆ ಸೀಮಿತ ಪರಿಧಿಯಲ್ಲಿತ್ತೆಂದು ಸಹಜವಾಗಿ ತಿಳಿಯಬಹುದು. ಸಮಿತಿ ಹೆಚ್ಚು ಪ್ರಭಾವಶಾಲಿಯಾಗಿದ್ದಂತೆ ತೋರುತ್ತದೆ. ಸಮಿತಿಗಳಲ್ಲಿ ಸದಸ್ಯರು ಮನಂಬುಗುವಂತೆ ಮಾತನಾಡಬೇಕಿತ್ತು. ಶ್ವೇತಕೇತುವು ಪಾಂಚಾಲರ ಸಮಿತಿಗೆ ಬಂದು ಭಾಗವಹಿಸಿದನಂತೆ. ಚರ್ಚೆ, ವಾಕ್‌ಸ್ವಾತಂತ್ರ್ಯ ಒಂದು ಮಟ್ಟ ತಲುಪಿದುದನ್ನು ಇದು ಸೂಚಿಸುತ್ತದೆ. ಸಮಿತಿಯ ಮುಖಂಡನಿಗೆ ಈಶಾನ ಎಂದು ಕರೆಯಲಾಗುತ್ತಿತ್ತು. ಸಮಿತಿಯ ಸದಸ್ಯರು ಪ್ರತಿನಿಧಿಗಳಾಗಿರುತ್ತಿದ್ದರು. ಗ್ರಾಮ ಎಂಬುದು ಸಹ ಕುಟುಂಬದ ಅನಂತರ ರೂಪುಗೊಂಡ ಜನಸಂಸ್ಥೆ. ಗ್ರಾಮದ ಮುಖ್ಯನಿಗೆ ಗ್ರಾಮಣಿ ಎಂದು ಕರೆಯಲಾಗುತ್ತಿತ್ತು. ಗ್ರಾಮಗಳೇ ಸಮಿತಿಗೆ ಆಧಾರವಾಗಿದ್ದುವು. ಇವೆಲ್ಲವುಗಳಲ್ಲಿ ಚುನಾವಣೆಯ ಒಂದು ಅಂಶ ಹಾಸುಹೊಕ್ಕಾಗಿ ಇದ್ದುದು ನಿಸ್ಸಂದೇಹವಾಗಿದ್ದರೂ ಚುನಾವಣೆಯ ಪದ್ಧತಿ ಸ್ಪಷ್ಟವಾಗಿ ತಿಳಿಯುವುದಿಲ್ಲ. ಸಾಮ್ರಾಜ್ಯ ಪದ್ಧತಿಗಳು ಪ್ರಬಲವಾದ ಅನಂತರ ಈ ಸಮಿತಿಗಳು ಕಾಣುವುದಿಲ್ಲ.

ಭಾರತೀಯ ಗಣರಾಜ್ಯಗಳು ವೇದಾನಂತರದ ಕಾಲದಲ್ಲಿ ಇದ್ದುವು. ರಾಜರಹಿತ ಹಿಂದೂ ಆಡಳಿತಪದ್ಧತಿಯ ವಿವರಣೆ ಭಾರತೀಯ ಜನಾಂಗದ ವೈಧಾನಿಕ ಇತಿಹಾಸದಲ್ಲೇ ಮಹತ್ತ್ವಪೂರ್ಣವಾದದ್ದು. ಸಂಘ, ಜನಪದ, ಗಣ ಇವು ಈ ರಾಜರಹಿತ ರಾಜ್ಯ ಘಟಕಗಳಿಗಿದ್ದ ಹೆಸರುಗಳು. ಮೆಗಾಸ್ತನೀಸ್ ಇಂಥ ರಾಜ್ಯಗಳ ಅಸ್ತಿತ್ವವನ್ನು ಪ್ರಸ್ತಾವಿಸುತ್ತಾನೆ. ಬುದ್ಧನ ಪ್ರದೇಶದ ಸುತ್ತ ಗಣರಾಜ್ಯಗಳಿದ್ದುವು. ಜನಚಿತ್ತ ಎಂಬುದನ್ನು ಪಬ್ಲಿಕ್ ಮೈಂಡ್ ಎಂಬ ಅರ್ಥದಲ್ಲಿ ಬಳಸಲಾಗಿದೆ. ಒಳ್ಳೆಯ ಮನಸ್ಸುಗಳ ಸಮೂಹವುಳ್ಳ ಜನತೆಯೇ ಗಣ ಎಂಬುದು ಅಭಿಧಾನ ರಾಜೇಂದ್ರದ ಮಾತು. ಗಣರಾಜ್ಯ ಎಂಬುದನ್ನು ಸಂಖ್ಯೆಯ ಆಡಳಿತ, ಸಮೂಹದ ಆಡಳಿತ ಎಂಬಂತೆ ಬೌದ್ಧ ಸಾಹಿತ್ಯದಲ್ಲಿ, ಮಹಾಭಾರತದಲ್ಲಿ ಬಳಸಲಾಗಿದೆ. ಸಂಘವನ್ನು ಗಣ ಎಂಬ ಅರ್ಥದಲ್ಲಿ ಕೌಟಿಲ್ಯ ಬಳಸಿದ್ದಾನೆ.

ಮುಂಚಿನ ಸಮಿತಿಗಳಿಗಿಂತ ಹೆಚ್ಚಾಗಿ ಚುನಾವಣೆ ಈ ಗಣರಾಜ್ಯಗಳಲ್ಲಿ ಹೆಚ್ಚು ಸ್ಪಷ್ಟರೂಪ ತಳೆದಂತೆ ಕಂಡುಬರುತ್ತದೆ. ಸಂಘದ ಆಡಳಿತಪದ್ಧತಿಯ ವಿಚಾರವಾಗಿ ಬುದ್ಧನನ್ನು ಕೇಳಿದಾಗ, ಗಣರಾಜ್ಯಪದ್ಧತಿಯನ್ನು ಹೋಲುವ ಮತಗಣನೆ, ಬಹುಮತ, ಕೋರಂ

ಮುಂತಾದವುಗಳ ಬಗ್ಗೆ ಭಿಕ್ಷುಗಳಿಗೆ ಆತ ವಿವರಿಸುತ್ತಾನೆ. ಮತ ಹಾಕುವ ಸಾಧನಕ್ಕೆ (ಬ್ಯಾಲಟ್) ಶಲಾಕಾ ಎಂದು ಹೆಸರಿತ್ತಂತೆ. ಕನಿಷ್ಠ ಪೂರಕ ಸದಸ್ಯಸಂಸ್ಥೆಯನ್ನು ಪರಿಶೀಲಿಸುವಾತ ಗಣಪೂರಕ ಎಂಬ ಅಧಿಕಾರಿ. ಬೌದ್ಧ ಸಂಘಗಳಲ್ಲಿ ಮತದಾನ ಗುಪ್ತವಾಗಿಯೂ (ಗೂಲ್ಹಕ) ಕೆಲವು ಸಲ ಮೆಲ್ಲಗೆ ಉಸುರುವುದರಿಂದಲೂ (ಸಕರ್ಣಜಾಪಕಮ್) ಕೆಲವು ಸಲ ಬಹಿರಂಗವಾಗಿಯೂ (ವಿವಾಟಕಮ್) ನಡೆಯುತ್ತಿತ್ತು. ಮತ ಸಂಚಯಿಸುವವನಿಗೆ ಶಲಾಕಾಗ್ರಾಹಕನೆನ್ನಲಾಗುತ್ತಿತ್ತು. ಹೀಗೆ ಇಂಥ ಚುನಾವಣೆಯನ್ನು ಅನುಸರಿಸುವ ಸಂಘ ಅಥವಾ ಗಣಗಳು ಧಾರ್ಮಿಕಸಂಸ್ಥೆಗಳೂ ಆಗಿದ್ದವು, ರಾಜಕೀಯ ಸಂಸ್ಥೆಗಳೂ ಆಗಿದ್ದವು. ಮನುಷ್ಯ ನಾಗರಿಕ ಮಾರ್ಗದಲ್ಲಿ ನಿರ್ಮಿಸಿಕೊಂಡ ಒಂದು ಸಂಸ್ಥೆಯೇ ಗಣವಾಗಿತ್ತು. ಯೌಧೇಯ, ಶಾಕ್ಯ, ಮಾಳವ, ಲಿಚ್ಛವಿಗಳು ಇಂಥ ಗಣಗಳಾಗಿದ್ದವು. ಇವು ಇಂದು ನಾವು ತಿಳಿದ ಅರ್ಥದಲ್ಲಿ ಪ್ರಜಾಸತ್ತಾತ್ಮಕ ಗಣರಾಜ್ಯಗಳಾಗಿದ್ದುವೆಂದು ಹೇಳುವದು ಕಷ್ಟವಾದರೂ ಒಂದು ಅರ್ಥದಲ್ಲಿ ಇವು ಗಣರಾಜ್ಯಗಳಾಗಿದ್ದುವು. ಸಾರ್ವಭೌಮಾಧಿಕಾರ ಎಲ್ಲ ಜನರಲ್ಲಿ ಅಲ್ಲವಾದರೂ ಕೆಲವು ಜನರ ಸಮೂಹದಲ್ಲಿ ಅಧಿಷ್ಠಿತವಾಗಿರುತ್ತಿತ್ತು. ಏಕಾಧಿಪತ್ಯವಿರುತ್ತಿದ್ದಿಲ್ಲ. ಅನೇಕ ಸಲ ವಿಶಿಷ್ಟ ಪ್ರದೇಶದಲ್ಲಿ ನೆಲಸಿದ ಅಥವಾ ಜನ ನೆಲಸುವಂತೆ ನೆರವಾದ ಕ್ಷತ್ರಿಯಕುಲಸಮೂಹವೇ ಗಣವಾಗುತ್ತಿತ್ತು. ಈ ಗಣರಾಜ್ಯಗಳು ಅಥೆನ್ಸ್, ಸ್ಪಾರ್ಟ ಮತ್ತು ವೆನಿಸ್ಸಿನ ರಿಪಬ್ಲಿಕ್ ಮಾದರಿಯವಾಗಿದ್ದುವೆಂದು ಹೇಳಬಹುದು. ಆಳುವ ವರ್ಗದ ಆಯ್ಕೆಯಿಂದ ಕ್ಷತ್ರಿಯರಲ್ಲದವರನ್ನು ಹೊರಗಿಟ್ಟ ನಿದರ್ಶನಗಳು ಬೇಕಾದಷ್ಟು ಸಿಗುತ್ತವೆ.

**ಭಾರತದ ಐದನೆಯ ಮಹಾಚುನಾವಣೆಗಳು (1971). ಮೊರಾರ್ಜಿ ದೇಸಾಯಿಯವರಿಂದ ಮತದಾನ**

ಈ ಗಣರಾಜ್ಯಗಳಲ್ಲಿ ಕೇಂದ್ರಸಭೆಗಳ ಪಾತ್ರ ಮಹತ್ತ್ವದ್ದಾಗಿತ್ತು. ಸಾರ್ವಭೌಮ ಅಧಿಕಾರ ಈ ಸಭೆಯಲ್ಲಿ ನಿಷ್ಠವಾಗಿರುತ್ತಿತ್ತು. ಯೌಧೇಯ ಗಣದ ಸಭಾಸದರ ಸಂಖ್ಯೆ 5,000 ಲಿಚ್ಛವಿಗಳ ಗಣದ ಸಭಾಸದರ ಸಂಖ್ಯೆ 7,707. ಶೂದ್ರಕರು ತಮ್ಮ ಗಣದ 150 ಮುಖಂಡರನ್ನು ಅಲೆಗ್ಸಾಂಡರನ ಹತ್ತಿರ ಸಂಧಾನಕ್ಕಾಗಿ ಕಳಿಸಿದ್ದರು. ಈ ವ್ಯವಸ್ಥೆಯಲ್ಲಿ ಕ್ಷತ್ರಿಯರಿಗೆ ಸಮಾನರಾದ ಗೌರವ ಬ್ರಾಹ್ಮಣರಿಗೆ ಇದ್ದಂತೆ ತೋರುತ್ತದೆ. ಇನ್ನೊಂದು ಪ್ರಭಾವಿ ವರ್ಗವಾದ ವೈಶ್ಯರಿಗೂ ಇತರ ಪ್ರತಿಷ್ಠಿತರಿಗೂ ಒಂದು ಬಗೆಯ ಪ್ರಾತಿನಿಧ್ಯವಿದ್ದಿರಲು ಶಕ್ಯವಿದೆ. ಹಲವಾರು ಸದಸ್ಯರು ಬಹುಶಃ ಶ್ರೀಮಂತ ಕ್ಷತ್ರಿಯ ವಂಶದವರಾಗಿದ್ದು, ರಾಜ್ಯದಲ್ಲಿ ವಿವಿಧ ಪದಾಧಿಕಾರಿಗಳಾಗಿದ್ದಿರಬಹುದು. ಜನಸಾಮಾನ್ಯರ ಪ್ರಾತಿನಿಧ್ಯ ದೊರಕಿಸಲು ನಿಯತಕಾಲಿಕ ಚುನಾವಣೆಗಳು ನಡೆಯುತ್ತಿದ್ದುವೆನ್ನಲು ಸಾಕ್ಷ್ಯ ಸಿಗುವುದಿಲ್ಲ. ಆದರೆ ಆಡಳಿತಾಂಗ ಸಂಪೂರ್ಣವಾಗಿ ಈ ಕೇಂದ್ರ ಸಭೆಗೆ ಅಧೀನವಾಗಿರುತ್ತಿದ್ದುದು ಮಾತ್ರ ಸ್ಪಷ್ಟವಿದೆ. ಈ ಸಭೆಯಲ್ಲಿ ಗುಂಪುಗಾರಿಕೆ, ಅಧಿಕಾರ, ಪ್ರಭಾವಗಳ ಸೆಳೆತಗಳಿದ್ದ ನಿದರ್ಶನಗಳೂ ಕಾಣಬರುತ್ತವೆ. (ಮಹಾಭಾರತ, ಅರ್ಥಶಾಸ್ತ್ರ ಹಾಗೂ ಬೌದ್ಧಸಾಹಿತ್ಯ). ಈ ಗಣರಾಜ್ಯ ಪದ್ಧತಿಯಲ್ಲಿ ರಾಜಕೀಯ ಪಕ್ಷಗಳಿದ್ದುವೆಂಬುದು ಗಮನಾರ್ಹವಾದ ವಿಚಾರ. ದ್ವಂದ್ವ, ವ್ಯುತ್ಕ್ರಮ್ಯ, ವರ್ಗ್ಯ, ಗೃಹ್ಯ, ಪಕ್ಷ್ಯ ಇತ್ಯಾದಿ ಶಬ್ದಗಳನ್ನು ಗಮನಿಸಬೇಕು. ಆಯಾ ಮುಖಂಡರ ಹೆಸರಿನಲ್ಲೇ ಸಾಮಾನ್ಯವಾಗಿ ಪಕ್ಷಗಳು ಇರುತ್ತಿದ್ದುವು (ಉದಾ: ವಾಸುದೇವ ವರ್ಗ್ಯ, ಅಕ್ರೂರ ಪಕ್ಷ್ಯ). ಈ ಪಕ್ಷಗಳ ಮತ್ತು ಸಭೆಗಳ ಪರಸ್ಪರ ಸಂಬಂಧ ಮತ್ತು ವ್ಯವಹಾರ ನಿಯಮಗಳ ವ್ಯವಸ್ಥಿತ ವಿವರ ಸಿಗುವುದಿಲ್ಲವಾದರೂ ಈ ಬೆಳೆವಣಿಗೆಗೆ ಪುಷ್ಟವಾದ ಹಿನ್ನೆಲೆ ಇರುವುದನ್ನು ಒಪ್ಪಲೇಬೇಕಾಗುತ್ತದೆ. ಏಕಾಧಿಪತ್ಯವುಳ್ಳ ರಾಜ್ಯಗಳು ವಿಸ್ತಾರಗೊಂಡಂತೆ ಈ ಗಣರಾಜ್ಯಗಳು ಮಾಯವಾಗುತ್ತ ಬಂದುವು. ಅಂತೂ ಭಾರತದಲ್ಲಿ ಚುನಾವಣೆಯ ಪದ್ಧತಿ ಕ್ರಿಸ್ತಪೂರ್ವದ ಶತಮಾನಗಳಲ್ಲಿಯೇ ಸಮಿತಿ, ಸಭೆ, ಆಮೇಲೆ ಸಂಘ, ಜನಪದ, ಗ್ರಾಮ, ಗಣ ಮುಂತಾದ ರಾಷ್ಟ್ರೀಯ ಘಟಕಗಳಲ್ಲಿ ಕಂಡುಬರುತ್ತದೆ. ಆದರೆ ಸಮಾಜದ ಪ್ರತಿಯೊಬ್ಬನಿಗೂ ಮತಾಧಿಕಾರ ದೊರೆತು, ಇಂದಿನ ವ್ಯಾಪಕ ಅರ್ಥದಲ್ಲಿ ಪ್ರಾತಿನಿಧ್ಯತತ್ತ್ವ ಕಾರ್ಯರೂಪದಲ್ಲಿ ಬಂದದ್ದು ಇತ್ತೀಚಿನ ಕಾಲದಲ್ಲೇ ಎಂದು ಹೇಳಬೇಕಾಗುತ್ತದೆ.

**ಆಧುನಿಕ ಯುಗ :** ಆಧುನಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಚುನಾವಣೆಗಳಿಗೆ ಮೂಲಭೂತ ಮಹತ್ತ್ವ ಬಂದಿದೆ. ಪ್ರಾಚೀನ ಗ್ರೀಕ್ ಮತ್ತು ಭಾರತೀಯ ಜನರು ತಿಳಿದಿದ್ದ ಲೋಕಸತ್ತೆಯ ಕಲ್ಪನೆಗೂ ಇಂದು ನಾವು ತಿಳಿದುಕೊಂಡಿರುವ ಲೋಕಸತ್ತೆಯ ಕಲ್ಪನೆಗೂ ಮಹದಂತರವಿದೆ. ಪ್ರಾಚೀನ ನಗರ ರಾಜ್ಯ ಹಾಗೂ ಸಂಘ, ಗಣಗಳಲ್ಲಿ ಪ್ರಜಾಸತ್ತೆಯೆಂದರೆ ಪ್ರಜೆಗಳು ನೇರವಾಗಿ ಭಾಗವಹಿಸುವ ಸರ್ಕಾರ ಎಂಬಂತೆ ಅನೇಕ ಸಲ ತಿಳಿಯಲಾಗುತ್ತಿತ್ತು. ಆಗ ಗ್ರಾಮ, ನಗರ, ಮುಂತಾದ ಘಟಕಗಳು ಚಿಕ್ಕವಿದ್ದು ಸೀಮಿತ ಜನಸಂಖ್ಯೆಯುಳ್ಳವಾಗಿರುತ್ತಿದ್ದುದರಿಂದ, ಆಗಿನ ಸಮಸ್ಯೆಗಳೂ ಕೆಲವೇ ಇರುತ್ತಿದ್ದುದರಿಂದ ವಯಸ್ಕ ನಾಗರಿಕರು ಪ್ರತ್ಯಕ್ಷವಾಗಿ ಸಭೆ, ಸರ್ಕಾರಗಳಲ್ಲಿ ಸೇರಿ ನಿರ್ಣಯ ತೆಗೆದುಕೊಳ್ಳುವುದು ಸಾಧ್ಯವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಸಹಜವಾಗಿ ಚುನಾವಣೆಗೆ ಆನುಷಂಗಿಕ ಮಹತ್ತ್ವವಿರುತ್ತಿತ್ತು. ಇಂದಿನ ಪರಿಸ್ಥಿತಿ ಬೇರೆ. ಇಂದು ವಿಶಾಲ ಕ್ಷೇತ್ರ. ದೊಡ್ಡ ಜನಸಂಖ್ಯೆ. ವಿಪುಲ ಮತ್ತು ಜಟಿಲ ಸಮಸ್ಯೆಗಳುಳ್ಳ ದೇಶ, ರಾಜ್ಯಗಳು (ಕಂಟ್ರಿ, ಸ್ಟೇಟ್ಸ್) ಇರುವುದರಿಂದ ನಿರ್ಣಯಗಳಿಗಾಗಿ ಜನರೆಲ್ಲ ಒಂದೆಡೆ ಸೇರುವುದಾಗಲಿ, ಜಟಿಲ ಸಮಸ್ಯೆಗಳ ವಿಚಾರಕ್ಕೆ ಅಗತ್ಯವಾದ ಶಿಕ್ಷಣವನ್ನೂ ವಿಶಿಷ್ಟಜ್ಞಾನವನ್ನೂ ಅನುಭವಗಳನ್ನೂ ಜನಸಾಮಾನ್ಯರಲ್ಲಿ ನಿರೀಕ್ಷಿಸುವುದಾಗಲಿ ವ್ಯಾವಹಾರ್ಯವಾಗುವುದಿಲ್ಲ. ಇದಕ್ಕೆಂದೇ ಜನಮತಸಂಗ್ರಹ (ರಿಫರೆಂಡಮ್) ಮುಂತಾದ ಉಪಾಯಗಳನ್ನು ಅನೇಕ ಆಧುನಿಕ ಪ್ರಜಾರಾಜ್ಯಗಳಲ್ಲಿ ಸಹ ಕೈಬಿಡಲಾಗಿದೆ.

ಆಧುನಿಕ ಅರ್ಥದಲ್ಲಿ ಲೋಕಸತ್ತೆಯೆಂದರೆ ಜನರು ತಾವೇ ಆಡಳಿತದಲ್ಲಿ ಭಾಗವಹಿಸುವುದಿಲ್ಲ. ಆಡಳಿತವನ್ನು ಪರಿಣಾಮಕಾರಿಯಾಗಿ ಹತೋಟಿಯಲ್ಲಿ ಇಟ್ಟುಕೊಳ್ಳುವುದು. ಸಾರ್ವಭೌಮಾಧಿಕಾರ ಪ್ರಜಾನಿಷ್ಠವಾದ್ದೆಂಬ ತತ್ತ್ವವನ್ನು ಒಪ್ಪಿಕೊಂಡಿರುವ ಕಾರಣ ಪ್ರಜೆಗಳು ಈ ತಮ್ಮ ಅಧಿಕಾರವನ್ನು ಬಳಸುವುದು ಹೇಗೆಂಬುದು ಮುಂದಿನ ವಿಚಾರವಾಗುತ್ತದೆ. ಪ್ರತ್ಯಕ್ಷವಾಗಿ ತಾವೇ ಸರ್ಕಾರದಲ್ಲಿ ಪಾಲುಗೊಳ್ಳುವುದು ಸಾಧ್ಯವಿಲ್ಲವಾದ ಕಾರಣ ತಮ್ಮ ಹತೋಟಿಯಲ್ಲಿ ಇರುವಂಥ ಒಂದು ಸರ್ಕಾರದ ರಚನೆಗಾಗಿ ಜನರು ತಮ್ಮ ಅಧಿಕಾರವನ್ನು ಬಳಸಬೇಕಾಗುತ್ತದೆ. ಅದಕ್ಕಾಗಿ ತಮ್ಮೊಳಗಿನ ಕೆಲವರನ್ನು ನಿರ್ದಿಷ್ಟ ಅವಧಿಗಾಗಿ ಚುನಾಯಿಸಿ ತಮ್ಮ ಮೇಲೆಯೇ ಅಧಿಕಾರ ನಡೆಸುವುದಕ್ಕಾಗಿ, ತಮಗೆ ಅನುಕೂಲವಾಗುವಂಥ ನಿರ್ಣಯಗಳನ್ನು ಮಾಡುವುದಕ್ಕಾಗಿ ನೇಮಿಸಿಕೊಳ್ಳಬೇಕಾಗುತ್ತದೆ. ಈ ವ್ಯವಸ್ಥೆಯೇ ಪ್ರಜಾಸತ್ತಾತ್ಮಕ ವ್ಯವಸ್ಥೆ. ಚುನಾವಣೆಗಳ ಮೂಲಕ ಜನ ತಮ್ಮ ಅಭಿಪ್ರಾಯಗಳನ್ನೂ ಆಯ್ಕೆಯನ್ನೂ ವ್ಯಕ್ತಪಡಿಸುತ್ತಾರೆ. ಈ ಸ್ವಾತಂತ್ರ್ಯ ಜನಸಾಮಾನ್ಯರಲ್ಲಿ ನಿಷ್ಠವಾಗಿರುವುದೆಂಬ ಪ್ರಜ್ಞೆಯೇ ಚುನಾಯಿತ ಪ್ರತಿನಿಧಿಗಳನ್ನು ಜನಾಭಿಪ್ರಾಯದತ್ತ ಎಚ್ಚರಿಕೆಯಿಟ್ಟು ಕೆಲಸ ಮಾಡುವಂತೆ ಪ್ರೇರೇಪಿಸುತ್ತದೆ. ಅದಕ್ಕೆಂದೇ ಚುನಾವಣೆಗಳಿಗೆ ಅಷ್ಟೊಂದು ಮಹತ್ತ್ವ. ಚುನಾವಣೆಯೆಂದರೆ ಜನ ತಮಗಾಗಿ ತಾವೇ ಮಾತನಾಡುವ ಒಂದು ಮಹಾಘಟನೆ. ಚುನಾವಣೆಗಳು ಅಯಶಸ್ವಿಯಾದರೆ ಪ್ರಜಾಸತ್ತೆ ಸತ್ತುಹೋಗುವುದು.

ಮತದಾರನ ವೈಯಕ್ತಿಕ ದೃಷ್ಟಿಯಿಂದಲೂ ಚುನಾವಣೆಗೆ ವಿಶೇಷ ಮಹತ್ತ್ವವಿದೆ. ರಾಜಕೀಯ ಅಧಿಕಾರದಲ್ಲಿ ತನ್ನದೊಂದು ಚಿಕ್ಕದಾದರೂ ಪಾಲು ಇದೆ ಎಂಬ ಹೆಮ್ಮೆ ಸಮಾಜದಲ್ಲಿ ತನಗೂ ಒಂದು ಸ್ಥಾನವಿದೆಯೆಂಬ ಭಾವನೆ ಎಂಥ ದಲಿತನಿಗೂ ಇತರರಿಂದ ಕಡೆಗಣಿಸಲ್ಪಟ್ಟವನಿಗೂ ಬರಲು ಇದು ಒಂದು ಸಂದರ್ಭ. ಇದರಿಂದ ಸಾಮಾನ್ಯ ಮನುಷ್ಯನಿಗೂ ಒಂದು ಮಾನಸಿಕ ಸಮಾಧಾನ ಉಂಟಾಗುತ್ತದೆ. ಪ್ರಜಾಸತ್ತಾತ್ಮಕ ಸಮಾನತೆಯಂಥ ಆದರ್ಶಸಾಧನೆಗೆ ಇಂಥ ಮನೋಭಾವ ರೂಪುಗೊಳ್ಳುವುದು ಅಗತ್ಯ.

ಸರ್ವಾಧಿಕಾರಿ ರಾಷ್ಟ್ರಗಳಲ್ಲೂ ಚುನಾವಣೆಗಳಾಗುವುದಾದರೂ ಅವಕ್ಕೆ ಹೆಚ್ಚಿನ ಮಹತ್ತ್ವವಿರುವುದಿಲ್ಲ. ಅದೊಂದು ಔಪಚಾರಿಕತೆ. ಪೂರ್ವನಿಶ್ಚಿತವಾದ ಫಲಿತಾಂಶ ಸುಮಾರಾಗಿ ತಿಳಿದೇ ಇರುತ್ತದೆ. ಜನತೆ ಅನಿವಾರ್ಯವೆಂದು ಚುನಾವಣೆಯಲ್ಲಿ

ಭಾಗವಹಿಸುತ್ತದೆ. ಮುಕ್ತಮನಸ್ಸಿನ ಮತ್ತು ನ್ಯಾಯಸಮ್ಮತ ಅಭಿಪ್ರಾಯ ಪ್ರಕಟಣೆಗೆ ಅಲ್ಲಿ ಅವಕಾಶ ಇರುವುದಿಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅನೇಕ ವಿಭಾಗಗಳಿವೆ. ರಾಷ್ಟ್ರದ ಜನರು, ಮತದಾರರು, ರಾಜಕೀಯ ಪಕ್ಷಗಳು, ಶಾಸನಸಭೆಗಳು ಮತ್ತು ಕಾರ್ಯಾಂಗ. ಈ ಎಲ್ಲ ವಿಭಾಗಗಳ ದೃಷ್ಟಿಯಿಂದಲೂ ಯೋಗ್ಯವೆನಿಸಿದಾಗ ಮಾತ್ರ ಚುನಾವಣೆಗಳು ಯೋಗ್ಯ ಹಾಗೂ ನ್ಯಾಯಸಮ್ಮತವೆಂದು ಹೇಳಬಹುದು. ಆದರೆ ಒಂದು ವಿಭಾಗಕ್ಕೆ ಸೇರಿಕೊಂಡ ಚುನಾವಣಾ ಪದ್ಧತಿ ಇನ್ನೊಂದಕ್ಕೆ ಸರಿಯೆನಿಸದಿರಬಹುದು. ಉದಾಹರಣೆಗೆ ಅನುಪಾತೀಯ ಪ್ರಾತಿನಿಧ್ಯ (ಪ್ರೊಪೋರ್ಷನಲ್ ರೆಪ್ರಸೆಂಟೇಷನ್). ಬಹುಸದಸ್ಯ ಚುನಾವಣಾಕ್ಷೇತ್ರಕ್ಕೆ (ಮಲ್ಟಿ-ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ) ಸಂಬಂಧಿಸಿದಂತೆ ಈ ಚುನಾವಣಾಪದ್ಧತಿ ರಾಜಕೀಯ ಪಕ್ಷಗಳ ದೃಷ್ಟಿಯಿಂದ ಸರಿಕಾಣಬಹುದು. ಏಕೆಂದರೆ ಅವರಲ್ಲಿಯ ಬಹುಜನರಿಗೆ ಶಾಸನಸಭೆಗಳಲ್ಲಿ ಪ್ರಾತಿನಿಧ್ಯ ಸಿಗುವಂತಾಗುತ್ತದೆ. ಆದರೆ ಪಾರ್ಲಿಮೆಂಟರಿ ಮಾದರಿಯ ಸರ್ಕಾರವಿದ್ದಲ್ಲಿ ಕಾರ್ಯಾಂಗದ ದೃಷ್ಟಿಯಿಂದ ಈ ತರದ ಚುನಾವಣೆ ಸರಿಯೆನಿಸದು. ಏಕೆಂದರೆ ಇದು ಅಸ್ಥಿರ ಸಮ್ಮಿಶ್ರ ಸರ್ಕಾರಕ್ಕೆ ದಾರಿ ಮಾಡಿಕೊಡಬಹುದು. ಆದ್ದರಿಂದ ವಿವಿಧ ಚುನಾವಣಾ ಪದ್ಧತಿಗಳ ಗುಣದೋಷಗಳನ್ನು ತೂಗಿ ನೋಡಿ ಒಂದು ದೇಶದ ವಿಶಿಷ್ಟ ಪರಿಸ್ಥಿತಿಗಳಿಗೆ ಹೆಚ್ಚು ಅನುಕೂಲವಾಗಬಲ್ಲಂಥ ಒಂದು ಸಮತೂಕದ ಚುನಾವಣಾ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ.

### ಮತಾಧಿಕಾರ

ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಎಷ್ಟು ಜನರಿಗೆ ಮತಾಧಿಕಾರವಿರುವುದೋ ಅಷ್ಟರಮಟ್ಟಿಗೆ ಚುನಾವಣೆ ನ್ಯಾಯಸಮ್ಮತವೆಂದು ಜನ ಪರಿಗಣಿಸುತ್ತಾರೆ. ಸಾರ್ವತ್ರಿಕ ವಯಸ್ಕ ಮತದಾನದ ಪದ್ಧತಿ ನ್ಯಾಯಸಮ್ಮತ ಚುನಾವಣೆಗೆ ಅಗತ್ಯವೆನ್ನುವುದು ಈ ಕಾರಣದಿಂದಲೇ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಮತಾಧಿಕಾರಕ್ಕೆ ಕನಿಷ್ಠ ವಯೋಮಿತಿ 18-25 ವರ್ಷ. ಭಾರತದ ಸಂವಿಧಾನದ 326ನೆಯ ಅನುಚ್ಛೇದದ ಪ್ರಕಾರ 21 ವರ್ಷಗಳಿಗೆ ಕಡಿಮೆಯಿಲ್ಲದ ವಯಸ್ಸಿನ ಪ್ರತಿಯೊಬ್ಬ ಭಾರತೀಯನಿಗೂ, ಆತ ಇತರ ಯಾವುದೇ ಕಾನೂನಿನ ಪ್ರಕಾರ ಅನರ್ಹನೆನಿಸದಿದ್ದರೆ (ಉದಾ: ಬುದ್ಧಿಭ್ರಮಣೆ, ದುರಾಚಾರ, ಅಕ್ರಮ ವರ್ತನೆ ಇತ್ಯಾದಿ) ಮತದಾರನೆಂದು ಪಟ್ಟಿಯಲ್ಲಿ ಸೇರ್ಪಡೆಯಾಗಲು ಹಕ್ಕು ಇರುತ್ತದೆ.

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಭಾರತದಲ್ಲಿದ್ದ ಮತಾಧಿಕಾರಕ್ಕೂ ಈಗಿನ ವಯಸ್ಕ ಮತಾಧಿಕಾರಕ್ಕೂ ಬಹಳಷ್ಟು ಅಂತರವಿದೆ. 1919ರ ಭಾರತ ಸರ್ಕಾರ ಅಧಿನಿಯಮದಲ್ಲಿ ಪ್ರಪ್ರಥಮವಾಗಿ ವಿಧಾನಸಭೆಗಳಿಗೆ ನೇರ ಚುನಾವಣೆಯ ಅವಕಾಶ ಕಲ್ಪಿಸಲಾಯಿತು. ಈ ಅಧಿನಿಯಮದ ಪ್ರಕಾರ ಮತಾಧಿಕಾರ ಆಸ್ತಿವಂತರಿಗೆ ಹಾಗೂ ನಿರ್ದಿಷ್ಟ ತೆರಿಗೆ ಕೊಡುವವರಿಗೆ ಮಾತ್ರ ದೊರೆಯಿತು. ಇಂಥ ಮತದಾರರು ಇಡೀ ದೇಶದಲ್ಲಿ ಕೇವಲ 50 ಲಕ್ಷ-ಒಟ್ಟು ಜನಸಂಖ್ಯೆಯ ಶೇ. 2ರಷ್ಟು ಮತ್ತು ವಯಸ್ಕ ಪುರುಷರ ಶೇ. 9-ಇದ್ದರು. 1935ರ ಅಧಿನಿಯಮ ಮತಾಧಿಕಾರವನ್ನು ಸ್ವಲ್ಪ ಹೆಚ್ಚಿಸಿ ಕನಿಷ್ಠ ಒಂದು ನಿರ್ದಿಷ್ಟ ಮಟ್ಟದ ಶಿಕ್ಷಣ ಪಡೆದವರಿಗೂ ಮತಾಧಿಕಾರ ಕೊಟ್ಟಿತು. ಆಗ ಮತಾಧಿಕಾರ ಪಡೆದಿದ್ದವರ ಸಂಖ್ಯೆ 350 ಲಕ್ಷ. ಇದು ಜನಸಂಖ್ಯೆಯ ಶೇ. 14. ಇದಾದ 15 ವರ್ಷಗಳ ಅನಂತರ ಜಾರಿಗೆ ಬಂದ ಸ್ವತಂತ್ರ ಭಾರತ ಸಂವಿಧಾನದಿಂದ ಸಾರ್ವತ್ರಿಕ ವಯಸ್ಕ ಮತಾಧಿಕಾರ ಜಾರಿಗೆ ಬಂತು.

ಪಶ್ಚಿಮದ ಅನೇಕ ದೇಶಗಳಲ್ಲಿ ಸಾರ್ವತ್ರಿಕ ವಯಸ್ಕ ಮತಾಧಿಕಾರ ಪಡೆಯಲು ಜನರು ಹೋರಾಟ ನಡೆಸಬೇಕಾಯಿತು. ಇಂಗ್ಲೆಂಡಿನಲ್ಲಿ 1838ರಲ್ಲೇ ಮತಾಧಿಕಾರದ ವಿಸ್ತರಣೆ ಆರಂಭವಾದರೂ ಅಲ್ಲಿಯ ಹೆಂಗಸರಿಗೆ ಮತದಾನದ ಹಕ್ಕು ದೊರೆತದ್ದು 1928ರಲ್ಲಿ. ಅಮೆರಿಕದಲ್ಲಿ ಎಲ್ಲ ಮಾನವರೂ ಸಮಾನರಾಗಿಯೇ ಹುಟ್ಟಿದ್ದಾರೆ ಎಂಬ ಘೋಷಣೆಯನ್ನೊಳಗೊಂಡ ಸ್ವಾತಂತ್ರ್ಯ ಘೋಷಣೆಯಾದ 65 ವರ್ಷಗಳ ಅನಂತರ 1840ರಲ್ಲಿ ಪುರುಷರಿಗೆ ವಯಸ್ಕ ಮತದಾನ ಲಭಿಸಿತು. ಮತ್ತೆ 80 ವರ್ಷಗಳ ಅನಂತರ ಮಹಿಳೆಯರಿಗೆ ಆ ಅಧಿಕಾರ ಸಿಕ್ಕಿತು. ಫ್ರಾನ್ಸಿನಲ್ಲಿ ಕ್ರಾಂತಿಯಾಗಿ ಮಾನವ ಹಕ್ಕುಗಳ ಮಹಾಘೋಷಣೆಯಾದ 85 ವರ್ಷಗಳ ಅನಂತರ, 1875ರಲ್ಲಿ ಪುರುಷ ವಯಸ್ಕ ಮತದಾನದ ಹಕ್ಕು ಲಭಿಸಿತು. ಅಲ್ಲಿ ಮಹಿಳೆಯರಿಗೆ ಮತಾಧಿಕಾರ ಲಭಿಸಿದ್ದು 1944ರಷ್ಟು ಈಚೆಗೆ. ಪುರೋಗಾಮಿ ಪ್ರಜಾಸತ್ತೆಗಳೆನಿಸಿಕೊಳ್ಳುವ ಸ್ವಿಡನ್ನಿನಂಥ ದೇಶಗಳಲ್ಲಿ ಇಂದಿಗೂ ಮಹಿಳೆಯರಿಗೆ ಮತಾಧಿಕಾರವಿಲ್ಲ. ಇತ್ತೀಚೆಗೆ ಸ್ವಾತಂತ್ರ್ಯ ಪಡೆದ ಅನೇಕ ಏಷ್ಯನ್ ಮತ್ತು ಆಫ್ರಿಕನ್ ದೇಶಗಳಲ್ಲಿ ಯಾವ ಹೋರಾಟವೂ ಇಲ್ಲದೆ ಒಮ್ಮೆಲೇ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು ದೊರೆತದ್ದು ಗಮನಾರ್ಹವಾದ ಸಂಗತಿ. ಆದರೆ ಕೆಲವು ಜನ ಸಮರ್ಥ ನಿರೀಕ್ಷಕರ ಅಭಿಪ್ರಾಯವೇನೆಂದರೆ ನಿಧಾನವಾಗಿ, ಹಂತಹಂತವಾಗಿ, ಹೋರಾಟದ ಮೂಲಕ ಮತಾಧಿಕಾರ ಪಡೆದ ಕ್ರಮ ಹೆಚ್ಚು ಒಳ್ಳೆಯದಾಗಿ ಕಾಣುತ್ತದೆ. ಏಕೆಂದರೆ ಜನರಲ್ಲಿ ಮತದ ಮೌಲ್ಯದ ಪರಿಜ್ಞಾನ ಚೆನ್ನಾಗಿ ಉಂಟಾಗಿ ಪ್ರಜಾಸತ್ತಾತ್ಮಕ ಸಂಸ್ಥೆಗಳ ಸ್ಥಿರತೆಗೆ ಅದು ಸಹಾಯಕವಾಗಿರುತ್ತದೆ.

ಮತದಾನಕ್ಕೆ ಯೋಗ್ಯತೆಯನ್ನು ಅಳೆಯುವುದಕ್ಕಾಗಿ ಆಸ್ತಿ, ತೆರಿಗೆ ಕೊಡುವುದು, ಲಿಂಗ, ಜಾತಿ, ಶಿಕ್ಷಣಮಟ್ಟ, ವಯಸ್ಸು ಇತ್ಯಾದಿಗಳನ್ನು ಅಳತೆಗೋಲನ್ನಾಗಿ ಭಾವಿಸಬೇಕೆಂದು ವಾದಿಸುವವರು ಈಗಲೂ ಇಲ್ಲದಿಲ್ಲ. ವಿಚಿತ್ರವಾದ ಮಾತೆಂದರೆ, ನಾಗರಿಕ ನಿತ್ಯ ವ್ಯವಹರಿಸುವ ವಿಚಾರಗಳಲ್ಲಿ, ಎಂದರೆ ತನಗಾಗಿ ವಕೀಲನನ್ನೊ, ವೈದ್ಯನನ್ನೊ, ಶಿಕ್ಷಕನನ್ನೊ, ಯಂತ್ರವನ್ನೊ ಆರಿಸಿಕೊಳ್ಳುವಲ್ಲಿ, ಆತನ ಯೋಗ್ಯತೆಯ ಬಗ್ಗೆ ಯಾರೂ ಪ್ರಶ್ನಿಸುವುದಿಲ್ಲ. ಸಾಮಾನ್ಯವಾಗಿ ಒಳ್ಳೆಯ ಹೆಸರು ಗಳಿಸಿದವನನ್ನು ಅಥವಾ ಒಳ್ಳೆಯ ಯಂತ್ರವನ್ನು ಅವನು ಆರಿಸಿಕೊಳ್ಳುತ್ತಾನೆ. ಅವಶ್ಯವೆನಿಸಿದರೆ ಸ್ನೇಹಿತರ ಸಲಹೆ ಪಡೆಯುತ್ತಾನೆ. ತನ್ನ ವಿಧಾನಸಭಾ ಪ್ರತಿನಿಧಿಯನ್ನು

ಮೊದಲ ಸೋವಿಯತ್ ಚುನಾವಣೆಯಲ್ಲಿ ಸ್ಟಾಲಿನ್‌ರಿಂದ ಮತದಾನ (1937)

ಆರಿಸುವ ಸಮಸ್ಯೆ ಇಂಥ ಆಯ್ಕೆಗಿಂತ ಹೆಚ್ಚು ಜಟಿಲವಾದ್ದೇನೂ ಅಲ್ಲ. ಇತರ ಕ್ಷೇತ್ರಗಳಂತೆ ಇಲ್ಲೂ ಅವನು ಉಮೇದುವಾರನ ಯೋಗ್ಯತೆಯ ಮೇಲೆ, ಅವನು ಮಾಡಿದ ಕೆಲಸಗಳ ಪರಿಣಾಮಗಳ ಮೇಲೆ ನಿರ್ಣಯಕ್ಕೆ ಬರುತ್ತಾನೆ. ಆದ ಕಾರಣ ಚುನಾವಣೆಗಾಗಿಯೇ ನಾಗರಿಕನಿಗೆ ಪ್ರತ್ಯೇಕ ಯೋಗ್ಯತೆ ಇರಬೇಕೆಂಬ ವಾದದಲ್ಲಿ ವಿಶೇಷ ಅರ್ಥವಿಲ್ಲ. ವಿಶಿಷ್ಟ ಶಿಕ್ಷಣ, ಆಸ್ತಿ ಇತ್ಯಾದಿಗಳನ್ನು ಹೊಂದಿದವರಿಂದ ರಾಜಕೀಯ ನಿರ್ಣಯಗಳ ಮೇಲೆ ಗಮನಾರ್ಹವಾದ ಪರಿಣಾಮವಾಗಿದೆಯೆಂಬುದು ಅಮೆರಿಕ, ಇಂಗ್ಲೆಂಡ್‌ಗಳಲ್ಲಿ ನಡೆದ ಮತದಾನ ವರ್ತನೆಗಳ ಅಧ್ಯಯನದಿಂದಲೂ ಕಂಡುಬಂದಿಲ್ಲ. ಅಲ್ಲದೆ ಮತದಾರನಿಗೆ ಇರಬೇಕಾದ ಯೋಗ್ಯತೆಯೇನೆಂಬುದನ್ನು ನಿರ್ಧರಿಸುವುದೂ ಅಸಾಧ್ಯವೇ.

ಚುನಾವಣೆ ಪ್ರಧಾನವಾಗಿ ಮಹತ್ತ್ವದ ಪ್ರಶ್ನೆಗಳಿಗೆ ಸಂಬಂಧಿಸಿರುವುದರಿಂದ ಆ ಪ್ರಶ್ನೆಗಳನ್ನು ಮತದಾರ ಅರ್ಥ ಮಾಡಿಕೊಳ್ಳಬಲ್ಲನಾಗಿರಬೇಕೆಂಬ ತತ್ತ್ವದ ಮೇಲೆ ಇಂಥ ವಾದ ಮಂಡಿಸಲಾಗುತ್ತದೆ. ಆದರೆ ಇದು ಒಂದು ಭ್ರಮೆ. ರಾಜಕೀಯ ಪಕ್ಷಗಳು ತಮ್ಮ ಧ್ಯೇಯ ಧೋರಣೆಗಳ ಘೋಷಣಾಪತ್ರಗಳನ್ನು ಪ್ರಕಟಿಸುವುವಾದರೂ ಅವಕ್ಕೆ ಚುನಾವಣೆಗಳಲ್ಲಿ ಹಾಗೂ ಅನಂತರ ಕೇವಲ ಆನುಷಂಗಿಕ ಮಹತ್ತ್ವವಿರುವುದು ಎಲ್ಲರಿಗೂ ತಿಳಿದ ವಿಚಾರ. ಮತದಾರ ಚುನಾವಣೆಯಲ್ಲಿ ಪ್ರಧಾನವಾಗಿ ಮತ ಹಾಕುವುದು ವ್ಯಕ್ತಿಗಾಗಿ ಅಥವಾ ಪಕ್ಷಕ್ಕಾಗಿ. ಧೋರಣೆಯ ಪ್ರಶ್ನೆಗಳಿಗಾಗಿ ಅಲ್ಲ. ಮತದಾರರ ಪೈಕಿ ಬಹಳ ಮಂದಿಗೆ ಪಕ್ಷಗಳ ಧ್ಯೇಯ ಮತ್ತು ಕಾರ್ಯಕ್ರಮಗಳ ಪರಿಜ್ಞಾನವೇ ಇರುವುದಿಲ್ಲವೆಂಬುದು ಮುಂದುವರಿದ ಮತ್ತು ಸುಶಿಕ್ಷಿತ ಮತದಾರರಿರುವ ದೇಶಗಳಲ್ಲಿ ನಡೆಸಿದ ಅಧ್ಯಯನಗಳಿಂದ ತಿಳಿದುಬಂದಿದೆ. ಪಕ್ಷಗಳು ಅಸ್ಪಷ್ಟವಾಗಿ ಹೇಳುವ ಅನೇಕ ವಿಷಯಗಳ ತಿಳಿವಳಿಕೆ ಮತದಾರನಿಗೆ ಇರುವುದೂ ಶಕ್ಯವಿಲ್ಲ. ತನಗೇ ನೇರವಾಗಿ ಸಂಬಂಧಿಸುವ ಯುದ್ಧ ಅಥವಾ ಅರ್ಥವ್ಯವಸ್ಥೆಯಂಥ ಕೇಂದ್ರ ಸಮಸ್ಯೆಯ ಬಗ್ಗೆ ಖಚಿತ ಮತವನ್ನು ಕೇಳಿದರೆ ಹೇಳಬಹುದು. ಇತರ ಅನೇಕ ಸಮಸ್ಯೆಗಳ ಬಗ್ಗೆ ಮತದಾರ ಮತಕೊಡುವುದಾದರೆ ಪ್ರಜಾಪ್ರಭುತ್ವ ನಡೆಯುವುದೇ ಕಷ್ಟವಾದೀತು. ಆದಕಾರಣ ಸಾಮಾನ್ಯವಾಗಿ ಮತದಾನವಾಗುವುದು ವ್ಯಕ್ತಿಗೆ, ಪಕ್ಷಕ್ಕೆ, ಶ್ರೀಮಂತರ ಅಥವಾ ಬುದ್ಧಿಜೀವಿಗಳ ಸರ್ಕಾರ ಬೇಕೆನ್ನುವವರ ಮತ್ತು ಪ್ರಜಾಪ್ರಭುತ್ವವಾದಿಗಳ ನಡುವೆ ಈ ವಿವಾದ ಇನ್ನೂ ನಡೆದೇ ಇದೆ. ಭಾರತದಲ್ಲೂ ವಯಸ್ಕ ಮತದಾನ ಒಂದು ಶಾಪವಾಯಿತೆಂದು ಮರುಗುವವರು ಇದ್ದಾರೆ. ಇವರ ಉದ್ವಿಗ್ನತೆಗೆ ಕಾರಣವಿಲ್ಲದೆ ಇಲ್ಲ. ಅಶಿಕ್ಷಿತರಿರುವ ಹಾಗೂ ಹಿಂದುಳಿದ ದೇಶಗಳಲ್ಲಿ ಸಾರ್ವತ್ರಿಕ ಮತದಾನ ನಿಷ್ಪ್ರಯೋಜಕ. ಏಕೆಂದರೆ ಅಲ್ಲಿ ಮತಗಳನ್ನು ಮಾರಲಾಗುತ್ತದೆ. ಮತಗಳನ್ನು ಖರೀದಿ ಮಾಡಬಲ್ಲಂಥ ಕೆಲವರೇ ಅಧಿಕಾರಕ್ಕೆ ಬರುತ್ತಾರೆ. ಅಲ್ಲದೆ, ಸಮಾಜಶಾಸ್ತ್ರದ ಪ್ರಕಾರ, ಎಲ್ಲ ಸಂಸ್ಥೆಗಳಲ್ಲೂ ಒಂದು ಬಗೆಯ ಅಲ್ಪಜನಾಧಿಪತ್ಯ ಕೆಲಸ ಮಾಡುತ್ತಿರುತ್ತದೆ. ಹಣ, ಜಾತಿ, ಭಾಷೆ, ಪಕ್ಷಗಳಂಥವುಗಳ ನೆರವಿನಿಂದ ಕೆಲವೇ ಜನರೇ ಯಾವಾಗಲೂ ಅಧಿಕಾರಸ್ಥಾನದಲ್ಲಿ

ಇರುತ್ತಾರೆ. ಇಂಥವರ ಮೇಲೆ ಜನಸಮೂಹದ ನಿಯಂತ್ರಣ ಎಂದೂ ಶಕ್ಯವಾಗುವುದಿಲ್ಲ. ರಾಜಕೀಯ ಅಧಿಕಾರ ಆರ್ಥಿಕ ಅಧಿಕಾರದ ಕೈಗೊಂಬೆಯಾಗಿರುವುದರಿಂದ ರಾಜ್ಯದ ಅರ್ಥವ್ಯವಸ್ಥೆಯಲ್ಲಿ ನಿಯಂತ್ರಕ ಸಾಮರ್ಥ್ಯ ಪಡೆದವರೇ ರಾಜಕೀಯ ಅಧಿಕಾರವನ್ನು ಒಂದಿಲ್ಲೊಂದು ರೀತಿಯಲ್ಲಿ ಚಲಾಯಿಸುವರೆಂಬುದು ಮಾರ್ಕ್ಸ್‌ವಾದಿಗಳ ವಿಚಾರ. ಸಾರ್ವತ್ರಿಕ ವಯಸ್ಕ ಮತದಾನದಿಂದ ಪರಿಸ್ಥಿತಿಯಲ್ಲಿ ವಿಶೇಷ ಮಾರ್ಪಾಡು ಬರಲಾರದೆಂಬುದು ಈ ಎಲ್ಲ ವಾದಗಳ ನಿರ್ಣಯ.

ಆದರೆ ಮತಾಧಿಕಾರದ ವ್ಯಾಪ್ತಿಯನ್ನು ವಿಸ್ತರಿಸಿದ್ದರಿಂದ ಪೊಲೀಸ್‌ರಾಜ್ಯ ಹೋಗಿ ಕಲ್ಯಾಣರಾಜ್ಯ ಬರುವ ಭರವಸೆಯುಂಟಾದ್ದನ್ನೂ ಅಲ್ಪಜನಾಧಿಪತ್ಯ ಬಂದರೂ ಒಂದೇ ಗುಂಪಿನ ಆಳ್ವಿಕೆ ಶಾಶ್ವತವಾಗದೆ ಚುನಾವಣೆಗಳ ಮೂಲಕ ಬದಲಾಗುವ ಸಾಧ್ಯತೆ ಇರುವುದನ್ನೂ ಪೈಪೋಟಿ ನಡೆಸುವ ಪಕ್ಷಗಳಿರುವುದರಿಂದ ಜನನಿಯಂತ್ರಣ ಹೆಚ್ಚು ಸಫಲವಾಗುವ ಸಂಭಾವ್ಯತೆಯನ್ನೂ ಜನರ ನಡುವೆ ವರ್ಗಭೇದವಿರದ ಹಾಗೆ ಚುನಾವಣೆ ಸಮಾನತಾ ತತ್ತ್ವವನ್ನು ತಂದದ್ದನ್ನೂ ಮರೆಯುವ ಹಾಗಿಲ್ಲ. ಜನರು ಮತದಾನ ಮಾಡದಿರುವುದರಿಂದ ಕೆಲವು ಸಲ ನಿರಾಶೆಯಾಗುವುದಾದರೂ ಮತಾಧಿಕಾರವನ್ನು ಜನ ಕಾಪಾಡಿಕೊಂಡು ಹೋಗುವುದೇ ಪ್ರಜಾಪ್ರಭುತ್ವದ ಯಶಸ್ಸಿನ ಭರವಸೆಯಾಗಿದೆ. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಮುಂದೊಡ್ಡಿದ ಒಂದು ಸಮಸ್ಯೆಯೆಂದರೆ, ಕೋಟಿಗಟ್ಟಲೆ ಮತದಾರರನ್ನು ಸಂಘಟಿಸಿ ಅವರಿಗೆ ಸರಿಯಾದ ಮಾರ್ಗದರ್ಶನ ಮತ್ತು ತಿಳುವಳಿಕೆಗಳನ್ನು ಒದಗಿಸುವ ಕೆಲಸ. ಚುನಾವಣೆಗೆ ತಗಲುವ ಭಾರಿ ವೆಚ್ಚದ್ದು ಇನ್ನೊಂದು ಸಮಸ್ಯೆ. ಇವು ಸಾಮಾನ್ಯ ಮನುಷ್ಯನ ಹಿಡಿತಕ್ಕೆ ನಿಲುಕಲಾರವಾದ್ದರಿಂದ ಪಕ್ಷಗಳ ಅಗತ್ಯ ಉಂಟಾಗಿದೆ. ಈ ಪಕ್ಷಗಳು ಧನಸಂಗ್ರಹ ಮಾಡುವ ರೀತಿಯಿಂದಾಗಿ ಪ್ರಜಾಪ್ರಭುತ್ವಕ್ಕೆ ಮಾರಕವಾಗುವಂಥ ಸೂತ್ರಚಾಲಕ ಶಕ್ತಿ ವಿಶಿಷ್ಟ ಹಿತಾಸಕ್ತಿಗಳಿಗೆ ಲಭಿಸುವ ಅಪಾಯವಿದೆ. ಸಾರ್ವತ್ರಿಕ ವಯಸ್ಕ ಮತಾಧಿಕಾರ ಅಪೇಕ್ಷಣೀಯ, ಯೋಗ್ಯ ಮತ್ತು ಅನಿವಾರ್ಯವಾದರೂ ಅದರೊಂದಿಗೇ ಬೆರೆತು ಬಂದ ಈ ಅಪಾಯಗಳನ್ನು ದೂರಮಾಡುವ ಉಪಾಯವನ್ನು ಹುಡುಕಬೇಕಾಗಿದೆ.

**ಮತದಾರರು ಮತ್ತು ಚುನಾವಣಾಕ್ಷೇತ್ರಗಳು :** ನಾಗರಿಕರ ರಾಜಕೀಯ ಸಮಾನತಾ ತತ್ತ್ವದ ಅಭಿವ್ಯಕ್ತಿಗೆ ಸಾರ್ವತ್ರಿಕ ಮತದಾನ ಕೇವಲ ಒಂದು ಸಾಧನ. ಅದು ಅರ್ಥಪೂರ್ಣವಾಗಬೇಕಾದರೆ ಅಷ್ಟೇ ಮಹತ್ತ್ವದ ಇತರ ಮಾರ್ಗಗಳೂ ಇವೆ. ಎಲ್ಲ ವಯಸ್ಕರಿಗೆ ಮತಾಧಿಕಾರ ಕೊಟ್ಟರೆ ಸಾಲದು. ಈ ಮತಕ್ಕೆ ಸಮಾನ ಮೌಲ್ಯ ಇರಬೇಕಾಗುತ್ತದೆ. ಒಬ್ಬ ಮತದಾರನಿಗೆ ಒಂದು ಮತದ ಅಧಿಕಾರ ಇದ್ದರೆ ಮಾತ್ರ ಇದು ಸಾಧ್ಯ. ಯಾವ ಕಾರಣಕ್ಕಾಗಿಯಾದರೂ ಹಲವರಿಗೆ ಅನೇಕ ಮತಾಧಿಕಾರ (19ನೆಯ ಶತಮಾನದಲ್ಲಿ ಹಾಗೆ ಹೇಳುವವರಿದ್ದರು) ಕೊಟ್ಟರೆ ಪ್ರಜಾಸತ್ತಾತ್ಮಕ ಸಮಾನತೆ ಹಾಗೂ ಸಾರ್ವತ್ರಿಕ ಮತದಾನ ತತ್ತ್ವಗಳಿಗೆ ಭಂಗ ಬರುತ್ತದೆ. ಇಂದು ಮುಂದುವರಿದ ರಾಷ್ಟ್ರಗಳಲ್ಲಿ ಎಲ್ಲೂ ಈ ಪದ್ಧತಿ ಉಳಿದಿಲ್ಲ. ಪ್ರಜಾಪ್ರಭುತ್ವ ಶೈಶವಾವಸ್ಥೆಯಲ್ಲಿ ಇರುವಂಥ ಕೀನ್ಯದಂಥ ರಾಷ್ಟ್ರದಲ್ಲಿ ಈಗಲೂ ಆಸ್ತಿ, ವರಮಾನ, ಶಿಕ್ಷಣ, ವಯಸ್ಸಿನಲ್ಲಿ ಹಿರಿತನ ಮುಂತಾದ ಯೋಗ್ಯತೆಗಳನ್ನು ಗಮನಿಸಿ ಒಬ್ಬೊಬ್ಬನಿಗೂ ಒಂದು, ಎರಡು, ಮೂರು ಅಥವಾ ಇನ್ನೂ ಹೆಚ್ಚು ಮತಗಳ ಅಧಿಕಾರ ಕೊಡುವ ಪದ್ಧತಿ ಇದೆ.

ಭಾರತದಲ್ಲಿ ವಿಧಾನಸಭೆ, ಲೋಕಸಭೆಗಳ ಚುನಾವಣೆಗಳಲ್ಲಿ ಅನೇಕ ಮತದಾನ ಪದ್ಧತಿ ಬಳಕೆಯಲ್ಲಿ ಇಲ್ಲ. ಆದರೆ ರಾಜ್ಯಗಳ ವಿಧಾನಪರಿಷತ್ತುಗಳ ಚುನಾವಣೆಯಲ್ಲಿ ಅನೇಕ ಮತದಾನ ಪದ್ಧತಿ ಕಂಡುಬರುತ್ತದೆ. ಅನೇಕ ಮತಾಧಿಕಾರವಿಲ್ಲದಿದ್ದರೂ ಆಸ್ತಿ, ಶಿಕ್ಷಣ ಇತ್ಯಾದಿಗಳಿರುವ ಜನರು ಚುನಾವಣೆಗಳಲ್ಲಿ ಇತರರಿಗಿಂತ ಹೆಚ್ಚು ಪ್ರಭಾವ ಬೀರುವರೆಂಬುದನ್ನು ಗಮನಿಸಿದಾಗ ಶಾಸನಬದ್ಧವಾಗಿ ಅನೇಕ ಮತಾಧಿಕಾರ ನೀಡುವುದು ಅನಗತ್ಯವಾಗುತ್ತದೆ.

ಮತದಾರನ ಮತಕ್ಕೆ ಸಾಮಾನ್ಯ ಮೌಲ್ಯ ಬರಲು ಇರಬೇಕಾದ ಇನ್ನೊಂದು ಅಗತ್ಯವೆಂದರೆ ಸಮಾನ ವ್ಯಾಪ್ತಿಯ ಚುನಾವಣಾಕ್ಷೇತ್ರ. ಸುಮಾರಾಗಿ ಸಮಾನಸಂಖ್ಯೆಯ ಮತದಾರರಿರುವ ಕ್ಷೇತ್ರಗಳಿದ್ದರೆ ಅವುಗಳಿಂದ ಆಯ್ಕೆಯಾದ ಉಮೇದುವಾರರಿಗೆ ಬೀಳುವ ಮತಗಳ ಬೆಲೆ ಸಮಾನವಾಗಿರುತ್ತದೆ. ಚುನಾವಣಾ ಕ್ಷೇತ್ರಗಳಲ್ಲಿ ಅಸಮಾನತೆಯಿದ್ದರೆ ನೀಡಲಾದ ಮತಗಳ ಶೇಕಡವಾರು ಗಣನೆಯಲ್ಲೂ ಅವುಗಳ ಬೆಲೆಯಲ್ಲೂ ವ್ಯತ್ಯಾಸ ವುಂಟಾಗುತ್ತದೆ. ಇದು ಮತದಾರ, ಉಮೇದುವಾರ–ಇಬ್ಬರ ದೃಷ್ಟಿಯಿಂದಲೂ ಅಸಾಧುವಾದ್ದು. ಆದ್ದರಿಂದ ಜನಸಂಖ್ಯೆಯ ದೃಷ್ಟಿಯಿಂದ ಚುನಾವಣಾ ಕ್ಷೇತ್ರಗಳು ಸಮಾನವಾಗಿರಬೇಕು. ಭಾರತ ಸಂವಿಧಾನದ 8(2)ನೆಯ ಅನುಚ್ಛೇದದಲ್ಲಿ ಈ ತತ್ತ್ವವನ್ನು ಒಪ್ಪಿಕೊಳ್ಳಲಾಗಿದೆ. ಲೋಕಸಭೆಯ ಸ್ಥಾನಗಳನ್ನು ರಾಜ್ಯಗಳಿಗೆ ಹಂಚುವಾಗ ಸಾಧ್ಯವಾದ ಮಟ್ಟಿಗೆ ಎಲ್ಲ ರಾಜ್ಯಗಳಿಗೂ ಅವುಗಳ ಜನಸಂಖ್ಯೆಗಳಿಗೆ ಅನುಗುಣವಾಗಿ ಸ್ಥಾನಗಳನ್ನು ಹಂಚುವುದಲ್ಲದೆ, ರಾಜ್ಯಗಳಲ್ಲೂ ಪ್ರಾದೇಶಿಕ ಚುನಾವಣಾಕ್ಷೇತ್ರಗಳ ರಚನೆಯಲ್ಲೂ ಜನಸಂಖ್ಯಾ ಸಮಾನತೆಯನ್ನು ಅನುಸರಿಸಲಾಗುತ್ತದೆ. ವಿಧಾನಸಭೆಗಳಿಗೆ ಸಂಬಂಧಿಸಿದಂತೆಯೂ ಸಂವಿಧಾನದ 170 (2)ನೆಯ ಅನುಚ್ಛೇದದ ಪ್ರಕಾರ ಇದೇ ತತ್ತ್ವವನ್ನೇ ಅನುಸರಿಸಲಾಗುತ್ತದೆ.

ಈ ತತ್ತ್ವಪಾಲನೆಗಾಗಿ ಭಾರತದಲ್ಲಿ 1961ರಲ್ಲಿ ದ್ವಿಸದಸ್ಯತ್ವ ರದ್ದು ಮಾಡುವ ಅಧಿನಿಯಮ ಬಂದದ್ದರಿಂದ ಈಗ ಎಲ್ಲ ಚುನಾವಣಾ ಕ್ಷೇತ್ರಗಳೂ ಏಕಸದಸ್ಯ ಕ್ಷೇತ್ರಗಳಾಗಿವೆ. ಆದರೂ ಸಮಾನ ಚುನಾವಣಾಕ್ಷೇತ್ರಗಳನ್ನು ರೂಪಿಸುವುದು ಇನ್ನೂ ಪೂರ್ಣ ಸಾಧಿಸಿಲ್ಲ. ಉದಾಹರಣೆಗೆ ಹಿಮಾಚಲ ಪ್ರದೇಶದ ಒಂದು ಕ್ಷೇತ್ರದಲ್ಲಿ 2 ಲಕ್ಷಕ್ಕೂ ಕಡಿಮೆ ಮತದಾರರು, ಇನ್ನೊಂದರಲ್ಲಿ 5 ಲಕ್ಷಕ್ಕಿಂತ ಹೆಚ್ಚು ಮತದಾರರು ಇರುವುದುಂಟು. ಈ ಪರಿಸ್ಥಿತಿ ಇತರ ದೇಶಗಳಲ್ಲೂ ಕಂಡುಬರುತ್ತದೆ. ಚುನಾವಣಾ ಕ್ಷೇತ್ರದ ಸೀಮಾ ನಿರ್ಧಾರದಲ್ಲಿ (ಡೀಲಿಮಿಟೇಷನ್) ಪರಿಗಣಿಸಬೇಕಾದ ಹಲವಾರು ಅಂಶಗಳಿವೆ: 1 ಆಡಳಿತಾನುಕೂಲ, 2 ಆಡಳಿತ ಘಟಕವಾದಂಥ ತಾಲ್ಲೂಕುಗಳಿಗೆ ಅದನ್ನು ಸೀಮಿತಗೊಳಿಸುವ ಅಗತ್ಯ. 3. ನೈಸರ್ಗಿಕ ಗಡಿಯನ್ನು ಗಮನಿಸಬೇಕಾದ ಅನಿವಾರ್ಯತೆ, 4. ಗ್ರಾಮ ಹಾಗೂ ನಗರವಾಸಿ ಮತದಾರರ ವಿಭಿನ್ನ ಆಸಕ್ತಿಗಳು ಮತ್ತು ಧೋರಣೆಗಳು. ಇಂಥ ಕಾರಣಗಳಿಂದಾಗಿ ಕ್ಷೇತ್ರಗಳಲ್ಲಿ ಸಮಾನತೆ ತರುವುದು ಶಕ್ಯವಾಗುವುದಿಲ್ಲ. ಅಲ್ಪಸಂಖ್ಯಾತರ ಸೌಲಭ್ಯಕ್ಕಾಗಿ ಇಡೀ ಜನಸಂಖ್ಯೆಯ ದೃಷ್ಟಿಯಿಂದ ಸಮರ್ಥನೀಯವಲ್ಲದಿದ್ದರೂ, ಮೀಸಲು ಕ್ಷೇತ್ರಗಳನ್ನು ನಿರ್ಮಿಸಿದಾಗ ಕೂಡ ಚುನಾವಣಾಕ್ಷೇತ್ರ ರಚನೆಯಲ್ಲೂ ಈ ಬಗೆಯ ವ್ಯತ್ಯಾಸ ಸಂಭವಿಸುತ್ತದೆ. ಒಟ್ಟಿನಲ್ಲಿ ಅಕ್ಷರಶಃ ಸಮಾನ ವಿಸ್ತೀರ್ಣದ ಕ್ಷೇತ್ರಗಳ ರಚನೆ ಸಾಧ್ಯವೂ ಇಲ್ಲ, ಅಪೇಕ್ಷಣೀಯವೂ ಅಲ್ಲ. ತತ್ತ್ವವನ್ನು ಸಾಮಾನ್ಯವಾಗಿ ಒಪ್ಪಿ ಅದನ್ನು ಕಾರ್ಯರೂಪಕ್ಕೆ ತಂದಾಗ ಸಂಭವಿಸುವ ವ್ಯತ್ಯಾಸ ಸಮರ್ಥನೀಯವಾಗಿರಬೇಕು. ಅಕ್ಕಪಕ್ಕದ ಮತಕ್ಷೇತ್ರಗಳಲ್ಲಿ ವಿವಿಧ ಪಕ್ಷಗಳ ಪರ ವಿರೋಧಿ ಮತದಾರರ ಗುಂಪುಗಳಿರುವ ವಿಭಾಗಗಳನ್ನರಿತು ಯಾವುದೋ ಒಂದು ಪಕ್ಷಕ್ಕೆ ಅನುಕೂಲವಾಗುವ ಹಾಗೆ ದುರುದ್ದೇಶದಿಂದ ಆ ವಿಭಾಗಗಳನ್ನು ವಿಚ್ಛೇದಿಸಿಯೋ ಬೇರೆ ರೀತಿಯಲ್ಲಿ ಜೋಡಿಸಿಯೋ ಚುನಾವಣಾಕ್ಷೇತ್ರ ರಚಿಸುವುದು ಅಪ್ರಾಮಾಣಿಕವಾದ ಮತ್ತು ಅಪಾಯಕರವಾದ ಕ್ರಮ. ಆದ್ದರಿಂದ ಚುನಾವಣಾಕ್ಷೇತ್ರ ಸೀಮಾನಿರ್ಧಾರಣ ಆಯೋಗ ಪಕ್ಷಾತೀತವಾಗಿರುವುದು ಅಗತ್ಯ. ಜನಸಂಖ್ಯೆಯ ವ್ಯತ್ಯಾಸ ಮತ್ತು ಚಲನೆಗಳಿಗೆ ಅನುಗುಣವಾಗಿ ಆಗಾಗ ಮತಕ್ಷೇತ್ರಗಳ ಪರಿಷ್ಕರಣವಾಗಬೇಕೆಂದೂ ಜನಸಂಖ್ಯೆಗೆ ಅನುಗುಣವಾಗಿ ಸ್ವೀಕೃತ ತತ್ತ್ವದ ಆಧಾರದ ಮೇಲೆ, ಕ್ಷೇತ್ರಗಳ ಸೀಮಾ ನಿರ್ಧಾರವಾಗಬೇಕೆಂದೂ ಸಂವಿಧಾನದಲ್ಲಿ ವಿಧಿಸಲಾಗಿದೆ.

**ಏಕಸದಸ್ಯ ಮತ್ತು ಅನೇಕ ಸದಸ್ಯ ಕ್ಷೇತ್ರಗಳು :** ಭಾರತದಲ್ಲಿ ಅನೇಕಸದಸ್ಯ ಚುನಾವಣಾ ಕ್ಷೇತ್ರಗಳನ್ನು 1961ರಲ್ಲಿ ರದ್ದುಪಡಿಸಲಾಯಿತು. ಅನೇಕಸದಸ್ಯ ಕ್ಷೇತ್ರ ಬೇಕೆನ್ನುವವರ ವಾದ ಹೀಗಿದೆ: 1. ಅನುಪಾತೀಯ ಪ್ರತಿನಿಧಿತ್ವವನ್ನು ದೊರಕಿಸುವುದು ಅನೇಕಸದಸ್ಯ ಕ್ಷೇತ್ರದಲ್ಲಿಯೇ ಶಕ್ಯ. 2. ಅನೇಕಸದಸ್ಯಕ್ಷೇತ್ರದಲ್ಲಿ ನಿಲ್ಲುವ ಉಮೇದುವಾರ ಹೆಚ್ಚು ಜನಪ್ರಿಯ ಹಾಗೂ ಸಮರ್ಥನಿರಬೇಕಾಗುತ್ತದೆ. ಏಕೆಂದರೆ ಕ್ಷೇತ್ರದ ವಿಸ್ತಾರ ಹೆಚ್ಚಾಗಿರುವುದರಿಂದ ಪೈಪೋಟಿಯೂ ಹೆಚ್ಚಾಗಿರುತ್ತದೆ. ಚಿಕ್ಕ ಕ್ಷೇತ್ರ ಚಿಕ್ಕ ಪ್ರತಿನಿಧಿಯನ್ನೇ ಹುಟ್ಟಿಸುವುದೆಂಬುದು ಫ್ರಾನ್ಸಿನ ಒಂದು ಜನನುಡಿ. 3 ವಿಸ್ತಾರಕ್ಷೇತ್ರದ ಮತದಾರರ ದೃಷ್ಟಿಕೋನವೂ ವಿಶಾಲವಾದ್ದಾಗಿ ಸ್ಥಾನಿಕ, ಸಂಕುಚಿತ ಆಸಕ್ತಿಗಳ ಸೆಳೆತ ಕಡಿಮೆಯಾಗುವ ಸಂಭವವಿದೆ. 4 ಸರ್ಕಾರ ಮತ್ತು ಪಕ್ಷಗಳ ಪ್ರಭಾವವೂ ವ್ಯಾಪಕ ಕ್ಷೇತ್ರದಲ್ಲಿ ಕಡಿಮೆ ಎಂಬುದು ಇನ್ನೊಂದು ವಾದ. ಆದರೆ ಭಾರತದಲ್ಲಿ ಈಗಾಗಲೇ ಇತರ ದೇಶಗಳಿಗಿಂತ ದೊಡ್ಡ ವಿಸ್ತೀರ್ಣದ ಮತಕ್ಷೇತ್ರಗಳಿವೆ. ಇವನ್ನು ಸೇರಿಸಿ ಅನೇಕ ಸದಸ್ಯಕ್ಷೇತ್ರಗಳನ್ನು ರಚಿಸಿದರೆ ಅವು ವ್ಯವಹರಿಸಲು ಅಸಾಧ್ಯವಾಗುವಷ್ಟು ದೊಡ್ಡವಾಗುವುವು. ಅಲ್ಲದೆ ಭಾರತದಲ್ಲಿ ಉಮೇದುವಾರರಾಗಿ ನಿಲ್ಲುವವರಿಗೆ ಸ್ಥಾನಿಕ ಕ್ಷೇತ್ರ ನಿರ್ಬಂಧವಿಲ್ಲದ ಕಾರಣ ಸ್ಥಾನಿಕವಾದ ಸಂಕುಚಿತ ಸೆಳೆತಗಳಿಗೆ ಅವಕಾಶ ಕಡಿಮೆ. ಎಲ್ಲಕ್ಕೂ ಹೆಚ್ಚಾಗಿ ಇಂದು ಉಮೇದುವಾರರನ್ನು ಪಕ್ಷಗಳೇ ಆರಿಸುವುದರಿಂದ ಅವರ ಗುಣಮಟ್ಟದ ಹೊಣೆ ಪಕ್ಷಗಳದ್ದು. ಕ್ಷೇತ್ರದ ವ್ಯಾಪ್ತಿಗೆ ಅಲ್ಲಿ ಮಹತ್ತ್ವವೇ ಇಲ್ಲ. ಸರ್ಕಾರ ಮತದಾರರ ಮೇಲೆ ಒತ್ತಡ ತರುವುದಾದರೆ, ಎಲ್ಲ ಕಡೆಗೂ ಅದರ ಅಧಿಕಾರಿಗಳೇ ಇರುವಾಗ ಕ್ಷೇತ್ರದ ವಿಸ್ತಾರ ಸಂಕೋಚಗಳು ಅದಕ್ಕೇನೂ ಅಡ್ಡಿಯಾಗಲಾರವು. ಕ್ಷೇತ್ರ ವಿಸ್ತಾರವಾದರೆ ಪ್ರತಿನಿಧಿಗೆ ತನ್ನ ಮತದಾರರ ಸಂಪರ್ಕ ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ. ದುರ್ಬಲ ಪಕ್ಷಗಳಿಗೆ ಚುನಾವಣಾ ಪ್ರಚಾರದ ವೆಚ್ಚ ಅಸಾಧ್ಯವಾಗಿ ಪರಿಣಮಿಸುತ್ತದೆ. ಅನುಪಾತೀಯ ಪ್ರತಿನಿಧಿತ್ವ ಅಥವಾ ಐಚ್ಛಿಕ ಮತದಾನ ಇರದಿದ್ದರೆ ಅನೇಕ ಸದಸ್ಯ ಕ್ಷೇತ್ರದಲ್ಲಿ ಎಲ್ಲ ಸ್ಥಾನಗಳೂ ಬಲಿಷ್ಠ ಪಕ್ಷಕ್ಕೇ ಹೋಗುವ ಸಂಭವವುಂಟು. ಈ ಕಾರಣಗಳಿಂದಾಗಿ ಅನೇಕಸದಸ್ಯ ಚುನಾವಣಾಕ್ಷೇತ್ರಗಳನ್ನು ಹಲವು ದೇಶಗಳಲ್ಲಿ ತೆಗೆದುಹಾಕಲಾಯಿತು.

ಏಕಸದಸ್ಯ ಕ್ಷೇತ್ರಗಳಲ್ಲೂ ಹಲವು ದೋಷಗಳುಂಟು. ಏಕಸದಸ್ಯ ಕ್ಷೇತ್ರದಲ್ಲಿ ಸೋತ ಸ್ಪರ್ಧಿಗೆ ಬಿದ್ದ ಮತಗಳಿಗೆ ಏನೂ ಮೌಲ್ಯವಿಲ್ಲ. ಅವೆಲ್ಲ ವ್ಯರ್ಥವಾಗುತ್ತವೆ. ಕೆಲವು ಸಲ ಗೆದ್ದ ಉಮೇದುವಾರನಿಗೆ ಬಿದ್ದ ಮತಗಳಲ್ಲಿ ಗೆಲ್ಲುವುದಕ್ಕೆ ಬೇಕಾಗುವಷ್ಟು ಬಿಟ್ಟು ಉಳಿದ ಮತಗಳೆಲ್ಲ ವ್ಯರ್ಥವಾದಂತೆಯೇ. ಅವಕ್ಕೆ ಯಾವ ಮೌಲ್ಯವೂ ಇಲ್ಲ. ಇದಕ್ಕೂ ಹೆಚ್ಚಿನ ದೋಷವೆಂದರೆ ಒಂದು ಏಕಸದಸ್ಯ ಕ್ಷೇತ್ರದಲ್ಲಿ ನಾಲ್ಕೈದು ಜನ ಉಮೇದುವಾರರಿದ್ದಾಗ ಅವರಲ್ಲಿ ಮತಗಳು ಹಂಚಿಹೋಗಿ ಅಲ್ಪಸಂಖ್ಯೆಯ ಮತಗಳಿಂದ ಒಬ್ಬ ಗೆಲ್ಲುತ್ತಾನೆ. ಈ

ರೀತಿ ಗೆದ್ದ ಉಮೇದುವಾರರು ರಚಿಸಿದ ಸರ್ಕಾರ ನ್ಯಾಯವಾಗಿ ನೋಡಿದರೆ ಅಲ್ಪಸಂಖ್ಯಾತ ಮತದಾರರಿಂದ ಆಯ್ಕೆ ಹೊಂದಿದವರ ಸರ್ಕಾರವಾಗುತ್ತದೆ. ಇದು ಇಂಥ ಪ್ರಜಾಪ್ರಭುತ್ವದ ಒಂದು ವಿಪರ್ಯಾಸ ಪರಿಸ್ಥಿತಿ.




**ಬ್ರಿಟನ್ನಿನ ಮಹಾಚುನಾವಣೆಗಳು (1959). ಲೇಬರ್ ಪಕ್ಷದ ಒಂದು ಭಿತ್ತಿ ಪತ್ರ**

**ಅನುಪಾತೀಯ ಪ್ರತಿನಿಧಿತ್ವ :** ಇಂಥ ದೋಷಗಳನ್ನು ನಿವಾರಿಸುವುದಕ್ಕಾಗಿ ಅನುಪಾತೀಯ ಪ್ರತಿನಿಧಿತ್ವವುಳ್ಳ ಅನೇಕ ಸದಸ್ಯಕ್ಷೇತ್ರಗಳೂ ಬೇಕೆಂದು ಹೇಳಲಾಗುತ್ತದೆ. ಉಮೇದುವಾರರಿಗೆ ಹಾಗೂ ಪಕ್ಷಗಳಿಗೆ ಹಾಕಲಾದ ಮತಗಳಿಗೆ ಅನುಪಾತೀಯವಾಗಿ ಸ್ಥಾನಗಳನ್ನು ಕೊಡುವುದೇ ಇದರ ತತ್ತ್ವ. ಇದರ ಪ್ರಕಾರ ಒಂದು ಪಕ್ಷ ಶೇ. 45 ಮತಗಳಿಸಿದರೆ ಅದಕ್ಕೆ ಶೇ. 45 ಸ್ಥಾನಗಳು ದೊರೆಯುವುವೇ ಹೊರತು ಅವಕ್ಕಿಂತ ಹೆಚ್ಚಲ್ಲ. ಅಂತೆಯೇ ಇತರ ಪಕ್ಷಗಳಿಗೂ ಅವು ಪಡೆದ ಮತಗಳಿಗೆ ಅನುಗುಣವಾಗಿ ಸ್ಥಾನಗಳು ಸಿಗುತ್ತವೆ. ಒಂದು ಕ್ಷೇತ್ರದಲ್ಲಿ ಒಂದೇ ಸದಸ್ಯ ಸ್ಥಾನವಿದ್ದಲ್ಲಿ ಅದನ್ನು ಉಮೇದುವಾರರು ಗಳಿಸಿದ ಮತಗಳ ಸಂಖ್ಯೆಗೆ ಅನುಗುಣವಾಗಿ ವಿಭಾಗಿಸಲಾಗುವುದಿಲ್ಲ ವಾದ್ದರಿಂದ ಈ ವ್ಯವಸ್ಥೆಯಲ್ಲಿ ಅನೇಕ ಸದಸ್ಯ ಕ್ಷೇತ್ರರಚನೆ ಅಗತ್ಯವಾಗುತ್ತದೆ. 3–7 ಸದಸ್ಯರಿರುವ ಕ್ಷೇತ್ರ ಹೆಚ್ಚು ಸಮರ್ಪಕವೆಂದು ಹೇಳಲಾಗಿದೆ. ಇದಕ್ಕೆ ಅತ್ಯಂತ ಉಚಿತವಾದ ಮತದಾನ ಪದ್ಧತಿಯೆಂದರೆ ಏಕವರ್ಗಾಸಾಧ್ಯ ಮತ (ಸಿಂಗಲ್ ಟ್ರಾನ್ಸ್‌ಫರಬಲ್ ವೋಟ್) ಪದ್ಧತಿ ಎಂದು ವಾದಿಸಲಾಗಿದೆ. ಐರ್ಲೆಂಡ್, ಟಾಸ್ಮೇನಿಯ, ಮಾಲ್ಟ ಮತ್ತು ಆಸ್ಟ್ರೇಲಿಯದ ಮತ್ತು ದಕ್ಷಿಣ ಆಫ್ರಿಕದ ಸೆನೆಟ್ ಚುನಾವಣೆಗಳಲ್ಲಿ ಜಾರಿಯಲ್ಲಿರುವ ಪದ್ಧತಿಯಿದು. ಮತದಾರರು ಮತಚೀಟಿಯ ಮೇಲೆ ಮುದ್ರಿತವಾಗಿರುವ ಉಮೇದುವಾರರ ಹೆಸರುಗಳ ಮುಂದೆ–ಅವರಿಗೆ ತಾವು ನೀಡುವ ಪ್ರಾಶಸ್ತ್ಯಾನುಗುಣವಾಗಿ–1, 2, 3 ಇತ್ಯಾದಿ ಸಂಖ್ಯೆಗಳನ್ನು ಬರೆಯುತ್ತಾರೆ. ಮತಚೀಟಿಗಳ ಮೇಲೆ ನಮೂದಿಸಲಾದ ಪ್ರಥಮ ಪ್ರಾಶಸ್ತ್ಯ (ಅಧಿಮಾನ) ಮತಗಳಿಗೆ ಅನುಗುಣವಾಗಿ ಮೊದಲು ಅವುಗಳ ಎಣಿಕೆ ಮಾಡಲಾಗುತ್ತದೆ. ಯಾವ ಉಮೇದುವಾರನಿಗೆ ಅಗತ್ಯವಾದ ಡ್ರೂಪ್ ಕೋಟ (ಎಚ್. ಆರ್. ಡ್ರೂಪ್ ಎಂಬುವನು ಕಂಡುಹಿಡಿದ ಕೋಟ) ಎಂದರೆ –

$$\frac{\text{ಚಲಾಯಿಸಲಾದ ಕ್ರಮಬದ್ಧ (ವ್ಯಾಲಿಡ್) ಮತಗಳು ಸಂಖ್ಯೆ}}{\text{ಸ್ಥಾನಗಳ ಸಂಖ್ಯೆ} + 1} + 1$$

ಪ್ರಥಮ ಪ್ರಾಶಸ್ತ್ಯ ಮತಗಳು ಬಂದಿರುತ್ತವೋ ಅವನು ಚುನಾಯಿತನಾದನೆಂದು ಘೋಷಿಸಲಾಗುತ್ತದೆ. ಐದು ಸದಸ್ಯರ ಕ್ಷೇತ್ರದಲ್ಲಿ ಒಬ್ಬ ಗೆಲ್ಲಲು ಒಟ್ಟು ಮತಗಳಲ್ಲಿ ಕನಿಷ್ಠ 1/5 ಮತಗಳನ್ನು ಗಳಿಸಬೇಕಾದ್ದಿಲ್ಲ. ಆರು ಮಂದಿ ಉಮೇದುವಾರರು ಒಟ್ಟು ಮತಗಳಲ್ಲಿ ತಲಾ 1/6 ಮತಗಳನ್ನು ಪಡೆಯಬಹುದು. ಆದರೆ ಐವರು ಮಾತ್ರ ಹೆಚ್ಚು ಗಳಿಸುವುದು ಸಾಧ್ಯ. ಚಲಾಯಿಸಲಾದ ಒಟ್ಟು ಮತಗಳ 1/6ಕ್ಕಿಂತ ಒಂದೇ ಒಂದು ಅಧಿಕ ಮತವನ್ನಾದರೂ ಯಾವನೇ ಮತದಾರ ಗಳಿಸಿದರೂ ಅವನು ಐವರು ಚುನಾಯಿತ ಸದಸ್ಯರಲ್ಲಿ ಒಬ್ಬನಾಗುತ್ತಾನೆ. ಕೋಟಗಿಂತ ಅಧಿಕಮತಗಳು ಬಂದಾಗ, ಆ ವಿಜಯಿ ಉಮೇದುವಾರನ ಎಲ್ಲ ಮತಗಳನ್ನೂ ಅವುಗಳಲ್ಲಿ ನಮೂದಾಗಿರುವ ದ್ವಿತೀಯ ಪ್ರಾಶಸ್ತ್ಯ ಮತಗಳಿಗೆ ಅನುಗುಣವಾಗಿ ವಿಂಗಡಿಸಲಾಗುತ್ತದೆ. ಇತರರಲ್ಲಿ ಪ್ರತಿಯೊಬ್ಬನಿಗೂ ಎಷ್ಟೆಷ್ಟು ಮತಗಳು ಬಂದಿವೆಯೆಂದು ಎಣಿಸಲಾಗುತ್ತದೆ. ವಿಜಯಿ ಉಮೇದುವಾರನಿಗೆ ಅವನ ಕೋಟಾಗಿಂತ ಎಷ್ಟು ಅಧಿಕ ಮತಗಳು ಬಂದಿವೆಯೋ ಅಷ್ಟನ್ನು ಮಾತ್ರ ಇತರರಿಗೆ ಹಂಚಬೇಕು. ಉದಾಹರಣೆಗೆ, ಕೋಟಾಗಿಂತ 1/3 ರಷ್ಟು ಅಧಿಕಮತಗಳು ಅವನಿಗೆ ಬಂದಿದ್ದರೆ ಇತರ ಉಮೇದುವಾರರಲ್ಲಿ ಒಬ್ಬೊಬ್ಬರಿಗೂ ಸೂಚಿಸಲಾಗಿರುವ ಆದ್ಯ ಪ್ರಾಶಸ್ತ್ಯ ಮತಗಳಲ್ಲಿ 1/3 ಭಾಗವನ್ನು ಅವರಲ್ಲಿ ಹಂಚಲಾಗುತ್ತದೆ. ಅನಂತರ ವಿಜಯಗಳಿಸುವ ಉಮೇದುವಾರರ ಅಧಿಕ ಮತಗಳನ್ನೂ ಹೀಗೆಯೇ–ಅಗತ್ಯವಿರುವ ತನಕ–ಹಂಚಬೇಕು. ಹಾಗೂ ಯಾವ ಸ್ಥಾನಗಳಾದರೂ ಇನ್ನೂ ಖಾಲಿಯಾಗಿದ್ದ ಪಕ್ಷದಲ್ಲಿ, ಕನಿಷ್ಠ ಮತಚೀಟಿಗಳನ್ನು ಪಡೆದ ಉಮೇದುವಾರನನ್ನು ಕೈಬಿಟ್ಟು ಅವನ ಎಲ್ಲ ಮತಗಳನ್ನೂ ಅವುಗಳಲ್ಲಿ ಸೂಚಿತವಾಗಿರುವ ದ್ವಿತೀಯ ಪ್ರಾಶಸ್ತ್ಯಾನುಗುಣವಾಗಿ ಉಳಿದವರಲ್ಲಿ ಹಂಚಲಾಗುವುದು. ಎಲ್ಲ ಸ್ಥಾನಗಳೂ ಭರ್ತಿಯಾಗುವ ತನಕ ಈ ಪ್ರಕ್ರಿಯೆಯನ್ನು ಮುಂದುವರಿಸತಕ್ಕದ್ದು. ಮತದಾರರು ನೀಡುವ ಪ್ರಾಶಸ್ತ್ಯಾನುಗುಣ ವಾಗಿ ಫಲಿತಾಂಶಗಳಿರುತ್ತವೆ. ಯಾವ ಮತವೂ ವ್ಯರ್ಥವಾಗುವುದಿಲ್ಲ. ಆಯ್ಕೆ ಮಾಡಲು ಮತದಾರನಿಗೆ ಹೆಚ್ಚು ವ್ಯಾಪಕವಾದ ಅವಕಾಶ ದೊರೆತಂತಾಗುತ್ತದೆ. ವ್ಯಕ್ತಿಗಳಿಗೂ ಪಕ್ಷಗಳಿಗೂ ಬೆಂಬಲ ನೀಡಿದಂತಾಗುತ್ತದೆ.

ಭಾರತದಲ್ಲಿ ಲೋಕಸಭೆ, ವಿಧಾನಸಭೆಗಳಿಗೆ ಚುನಾವಣೆಗಳು ಏಕಸದಸ್ಯ ಮತಕ್ಷೇತ್ರದಿಂದ ನಡೆಯುವುವಾದರೂ ರಾಜ್ಯಸಭೆ, ವಿಧಾನಪರಿಷತ್ತು ಮತ್ತು ಕೆಲವು ಸಮಿತಿಗಳಿಗೆ ಆದ್ಯತಾ ಮತದಾನ (ಪ್ರಿಫರೆನ್ಷಿಯಲ್ ಟಿಂಗ್) ಪದ್ಧತಿಯನ್ನು ಅನುಸರಿಲಾಗುತ್ತದೆ. ಯೂರೋಪಿನ ಅನೇಕ ಪ್ರಜಾಸತ್ತಾತ್ಮಕ ದೇಶಗಳಲ್ಲಿ ಅನುಪಾತೀ ಪ್ರತಿನಿಧಿತ್ವ ಪದ್ಧತಿ ಇದೆ. ಅಲ್ಲಿ ಸ್ಥಿರವಾದ, ಸಮರ್ಥವಾದ ಸರ್ಕಾರಗಳಿವೆ.

ಅನುಪಾತೀ ಪ್ರತಿನಿಧಿತ್ವ ಪದ್ಧತಿಯಲ್ಲಿ ಅನೇಕ ಒಳ್ಳೆಯ ಅಂಶಗಳಿದ್ದರೂ ಈ ಪದ್ಧತಿ ಭಾರತದಂಥ ದೊಡ್ಡ ದೇಶಕ್ಕೆ ಅತ್ಯಂತ ಸಮರ್ಪಕವೆಂದು ಹೇಳಲಾಗದು. ಚುನಾವಣೆ ಅನೇಕ ಅಗತ್ಯಗಳನ್ನು ಪೂರೈಸಬೇಕಾಗುತ್ತದೆ. ಜಾತಿ, ಭಾಷೆ, ಮತ ಮುಂತಾದ ಅನೇಕ ವಿಚ್ಛಿನ್ನಕಾರಿ ಶಕ್ತಿಗಳಿರುವ ಭಾರತದಲ್ಲಿ ಪ್ರತಿಯೊಂದು ಚಿಕ್ಕಗುಂಪಿಗೂ ಸ್ಥಾನ, ಪ್ರಾತಿನಿಧ್ಯಗಳ ಆಶೆ ಹುಟ್ಟಿಸಿ ಅವನ್ನು ಪಡೆಯಲು ಎಲ್ಲ ಬಗೆಯ ಅಸಮರ್ಪಕ ಒಪ್ಪಂದ ಮತ್ತು ಪ್ರಚಾರಗಳಿಗೆ ಈ ಪದ್ಧತಿ ಎಡೆಮಾಡಿಕೊಡುತ್ತದೆ. ರಾಷ್ಟ್ರೀಯ ಏಕತೆಗೆ ಬುನಾದಿಯಂತಿರುವ ಸಂಯುಕ್ತ ಮತಕ್ಷೇತ್ರದ ಅಂತಃಸತ್ತ್ವವನ್ನೇ ಇದು ನಾಶಮಾಡಬಲ್ಲದು. ಅನೇಕ ಪಕ್ಷಗಳ ಉದ್ಭವವಾಗಿ ಶಾಸನಸಭೆಗಳಲ್ಲೂ ಕಾರ್ಯಾಂಗದ ಮೇಲೂ ಗೊಂದಲದ ಪರಿಣಾಮ ಉಂಟಾಗಬಹುದು. ಇಂಥ ಸ್ಥಿತಿಯಲ್ಲಿ ಸರ್ಕಾರದ ಅವ್ಯವಸ್ಥೆಯ, ಸೋಲುಗಳ ಹೊಣೆಯನ್ನು ಯಾವ ಒಂದು ಪಕ್ಷದ ಮೇಲೂ ಹೊರಿಸುವುದು ದುಸ್ತರವಾಗುವುದು. ಅನುಪಾತೀ ಪ್ರತಿನಿಧಿತ್ವದಲ್ಲಿರುವಂತೆ ಏಕಸದಸ್ಯ ಮತಕ್ಷೇತ್ರ ಪದ್ಧತಿಯಲ್ಲಿ ವಿವಿಧ ಅಭಿಪ್ರಾಯಗಳ ಯೋಗ್ಯ ಪ್ರಾತಿನಿಧ್ಯ ಸೌಕರ್ಯವಿಲ್ಲವಾದರೂ ಭಾರತದಲ್ಲಿ ಏಕಸದಸ್ಯ ಪದ್ಧತಿ ಸ್ಥಿರವಾದ ಮತ್ತು ಬಲವಾದ ಸರ್ಕಾರವನ್ನು ಈವರೆಗೆ ಒದಗಿಸಿದೆ.

**ಮತೀಯ ಅಥವಾ ಜಾತೀಯ ಪ್ರಾತಿನಿಧ್ಯ :** ಮತಕ್ಷೇತ್ರಗಳು ಪ್ರಾದೇಶಿಕವಾಗಿರಬೇಕೇ? ಅಥವಾ ಜಾತೀಯ ವ್ಯಾಪ್ತಿಗೊಳಪಟ್ಟಿರಬೇಕೆ? ಎಂಬ ಪ್ರಶ್ನೆಗಳಿಂದಾಗಿ ಸೈದ್ಧಾಂತಿಕ ವಿಚಾರದ ಪ್ರಸ್ತಾಪ ಅಗತ್ಯವಾಗುತ್ತದೆ. ವ್ಯಕ್ತಿಗೆ ಆತ ಒಬ್ಬ ವ್ಯಕ್ತಿಯೆಂದೇ ರಾಜಕೀಯ ಹಕ್ಕನ್ನು ಪ್ರಜಾಸತ್ತೆಯ ಸಿದ್ಧಾಂತ ಕೊಡಮಾಡುವುದೇ ಹೊರತು, ಆತ ವಿಶಿಷ್ಟ ಜಾತಿ ಅಥವಾ ಸಮಾಜಕ್ಕೆ ಸೇರಿದವನೆಂಬ ಕಾರಣಕ್ಕಾಗಿ ಅಲ್ಲ. ಅಂಥ ಗುಂಪುಗಳಿಲ್ಲವೆಂದು ಇದರ ಅರ್ಥವಲ್ಲ. ರಾಜಕೀಯ ಹಕ್ಕು ಬಾಧ್ಯತೆಗಳಿಗೂ ಇಂಥ ಗುಂಪುಗಳಿಗೂ ಸಂಬಂಧವಿಲ್ಲವೆಂಬುದು ಮುಖ್ಯ. ರಾಷ್ಟ್ರೀಯ ಪ್ರಜ್ಞೆ ಪ್ರಬಲವಾಗಿರುವಂಥ ದೇಶಗಳ ನಾಗರಿಕರಲ್ಲಿ ಗುಂಪುಗಳಿಗೆ ಅನುಗುಣವಾದ ಲಾಭಗಳ ಭಾವನೆ ಬರುವುದು ಶಕ್ಯವಿಲ್ಲ. ಇದನ್ನು ಅನೇಕ ದೇಶಗಳಲ್ಲಿ ಕಾಣಬಹುದು. ಆದರೆ ಏಷ್ಯ ಹಾಗೂ ಆಫ್ರಿಕದ ಕೆಲವು

ದೇಶಗಳಲ್ಲಿ ರಾಷ್ಟ್ರೀಯ ಪ್ರಜ್ಞೆ ಪೂರ್ತಿಯಾಗಿ ಇಲ್ಲವೆ ಅಥವಾ ಆಳವಾಗಿ ಬೇರೂರಿಲ್ಲ. ಇಂಥ ಸಮಾಜಗಳಲ್ಲಿ ವ್ಯಕ್ತಿ ರಾಷ್ಟ್ರಕ್ಕಿಂತ ಹೆಚ್ಚಾಗಿ ತನ್ನದೆಂದುಕೊಂಡ ಜಾತಿ, ಗುಂಪು ತಂಡಗಳಿಗೆ ಅಂಟಿಕೊಂಡಿರುತ್ತಾನೆ. ಇಂಥಲ್ಲಿ ಅತೃಪ್ತಿ, ಸಂಶಯ ಹೊಗೆಯಾಡುತ್ತವೆ. ಒಂದು ಗುಂಪನ್ನು ಇನ್ನೊಂದು ಗುಂಪಿನವ ಪ್ರತಿನಿಧಿಸಬಲ್ಲನೆಂಬ ಬಗ್ಗೆ ವಿಶ್ವಾಸವಿರುವುದಿಲ್ಲ. ಅದಕ್ಕಾಗಿ ಜಾತೀಯ ಪ್ರಾತಿನಿಧ್ಯ, ಮತಕ್ಷೇತ್ರ ಮುಂತಾದವುಗಳ ಬೇಡಿಕೆ ಮುಂದೆ ಬರುತ್ತದೆ. ಇದೊಂದು ಅಪ್ರಬುದ್ಧ ಸ್ಥಿತಿ; ಪ್ರಜಾಸತ್ತೆಗೆ ಪ್ರತಿಕೂಲಕರ. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ಜಾತೀಯ ಮತಕ್ಷೇತ್ರಗಳಿದ್ದುವು. ಭಾರತದ ವಿಭಜನೆಗೂ ಈ ಜಾತೀಯ ಮತಕ್ಷೇತ್ರಗಳೇ




ಲೇಬರ್ ಪಕ್ಷದ ಕೆಲವು ಚುನಾವಣಾ ಭಿತ್ತಿಪತ್ರಗಳು (ಬ್ರಿಟನ್ನಿನ ಮಹಾ ಚುನಾವಣೆಗಳು–1959)

ಕಾರಣವಾದವು. ಇವುಗಳಿಂದ ಅನೈಕ್ಯ ಹೆಚ್ಚಲು ಅವಕಾಶವಾಯಿತು. ಗಣರಾಜ್ಯ ಭಾರತದಲ್ಲಿ ಜಾತೀಯ ಮತಕ್ಷೇತ್ರಗಳಿಲ್ಲ. ಆದರೂ ಅನುಸೂಚಿತ ವರ್ಗಗಳಿಗೆ ಸ್ಥಾನಗಳನ್ನು ಕಾದಿರಿಸಲಾಗಿದೆ. ಈ ಸೌಲಭ್ಯ ಮೊದಲು ಹತ್ತು ವರ್ಷಗಳಿಗೆ ಸೀಮಿತವಾಗಿತ್ತು. ಈಗ ಇದು ಮುಂದುವರಿದಿದೆ. ಸಾಮಾಜಿಕ ವರ್ಗಗಳ ಆಧಾರದ ಮೇಲೆ ಸ್ಥಾನಗಳನ್ನು ಕಾಯ್ದಿರಿಸುವುದೂ ಮತಕ್ಷೇತ್ರ ರಚಿಸುವುದೂ ಜಾತಿವೈಷಮ್ಯವನ್ನು ಶಾಶ್ವತಗೊಳಿಸಲು ಸಹಾಯಕವಾಗುವುದೆಂದು ವಾದಿಸಲಾಗಿದೆ. ವರ್ಗೀಯ ಅಥವಾ ಜಾತೀಯ ಪ್ರಾತಿನಿಧ್ಯ ಪದ್ಧತಿಯಲ್ಲಿ ಮತದಾನ ಸ್ವಾತಂತ್ರ್ಯ ಕುಂಠಿತವಾಗುತ್ತದೆ. ಆದ ಕಾರಣ ಯಾವುದೇ ರೀತಿಯಲ್ಲಿ ವರ್ಗೀಯ ಅಥವಾ ಜಾತೀಯ ಪ್ರಾತಿನಿಧ್ಯ ಪದ್ಧತಿ ರಾಷ್ಟ್ರೀಯ ಭಾವನೆಗೆ ಪೋಷಕವಾದುದಲ್ಲವೆನ್ನಬಹುದು.

ಪ್ರತ್ಯಕ್ಷ ಹಾಗೂ ಪರೋಕ್ಷ ಚುನಾವಣೆ : ಭಾರತದಲ್ಲಿ ಲೋಕಸಭೆ, ವಿಧಾನಸಭೆಗಳಿಗೆ ಮತದಾರರಿಂದ ನೇರವಾಗಿ ಸದಸ್ಯರ ಚುನಾವಣೆ ಆಗುತ್ತದೆ. ಇತರ ಅನೇಕ ದೇಶಗಳಲ್ಲಿ ಇದೇ ಪದ್ಧತಿ ಉಂಟು. ಪರೋಕ್ಷ ಚುನಾವಣೆಯಲ್ಲಿ ನಿಶ್ಚಿತ ಸಂಖ್ಯೆಯ ಮತದಾರರಿಂದ ಮತ ಪಡೆದು ಆಯ್ಕೆಯಾದವರನ್ನೊಳಗೊಂಡ ಪ್ರತಿನಿಧಿಗಳದೇ ಒಂದು ಮತಕ್ಷೇತ್ರ ರಚಿತವಾಗುತ್ತದೆ. ಅಲ್ಲಿಂದ ಅವರು ಪ್ರತಿನಿಧಿಗಳನ್ನು ಆರಿಸುತ್ತಾರೆ. ಕೊನೆಗೆ ಪ್ರತಿನಿಧಿಯಾಗಿ ಅಧಿಕಾರ ಪಡೆದು ನಿಲ್ಲುವಾತ ಮತದಾರರ ಪ್ರತಿನಿಧಿಗಳ ಮತಗಳಿಂದ ಆಯ್ಕೆ ಹೊಂದುತ್ತಾನೆ. ಇದು ಪರೋಕ್ಷ ಚುನಾವಣೆ. ಪ್ರತ್ಯಕ್ಷ ಚುನಾವಣೆಯಲ್ಲಿ ಸರ್ಕಾರದ ಮೇಲೆ ಮತದಾರನ ನೇರ ಹತೋಟಿ ಇರುವುದು ಸಾಧ್ಯ. ಅಲ್ಲದೆ ಮತದಾರರ ಸಂಖ್ಯೆ ಹಾಗೂ ಕ್ಷೇತ್ರ ಸಂಕುಚಿತವಾದಷ್ಟೂ ಲಂಚ, ಒತ್ತಾಯಗಳ ಪ್ರಭಾವ ಹೆಚ್ಚು. ಈ ಚುನಾವಣೆಗಳಲ್ಲಿ ಮತದಾರರ ಸಂಖ್ಯೆ ಅಲ್ಪವಾಗಿರುವುದೇ ಎಲ್ಲ ದುರ್ನಡತೆಗಳಿಗೆ ಕಾರಣವಾಗಿದೆಯೆಂದು ಪಂಚಾಯಿತಿ ರಾಜ್ಯ ಚುನಾವಣೆಗಳನ್ನು ಕುರಿತು ವರದಿ ಮಾಡಲು ನೇಮಕವಾದ ಸಂತಾನಂ ಸಮಿತಿ (1964) ವರದಿ ನೀಡಿದೆ.

ಆದರೂ ಭಾರತದಲ್ಲಿ ಪರೋಕ್ಷ ಚುನಾವಣೆಗಳ ಪ್ರತಿಪಾದಕರೂ ಇದ್ದಾರೆ. ಭಾರತದಲ್ಲಿ ಪಂಚಾಯಿತಿಯಿಂದಾರಂಭಿಸಿ ವಿಧಾನಮಂಡಲದವರೆಗೆ ಐದು ಹಂತಗಳಲ್ಲಿ ಸರ್ಕಾರವಿದೆ. ಒಂದು ಸಂಸ್ಥೆಯ ಪ್ರತಿನಿಧಿಗಳು ತಮ್ಮ ಮೇಲಿನ ಹಂತದ ಸಂಸ್ಥೆಗೆ ಪ್ರತಿನಿಧಿಗಳನ್ನು ಆರಿಸುವಂತೆ ಮಾಡಿ ಅವುಗಳಲ್ಲಿ ಪರಸ್ಪರ ಸಂಬಂಧ ಕಲ್ಪಿಸಬೇಕೆಂದು ವಾದಿಸಲಾಗಿದೆ. ಮತದಾರರು ಗ್ರಾಮ ಪಂಚಾಯಿತಿಯನ್ನು, ಪಂಚಾಯಿತಿ ಸದಸ್ಯರು ಪಂಚಾಯಿತಿ ಸಮಿತಿಯ ಸದಸ್ಯರನ್ನು (ತಾಲ್ಲೂಕು ಅಭಿವೃದ್ಧಿ ಮಂಡಲ), ಆ ಸಮಿತಿಯ ಸದಸ್ಯರು ಜಿಲ್ಲಾ ಪರಿಷತ್ತಿನ ಸದಸ್ಯರನ್ನು, ಪರಿಷತ್ ಸದಸ್ಯರು ವಿಧಾನಸಭಾ ಸದಸ್ಯರನ್ನು, ಅವರು ಸರ್ಕಾರದ ಮಂತ್ರಿಮಂಡಲವನ್ನು–ಹೀಗೆ ಆಯ್ಕೆಮಾಡುತ್ತ ಹೋಗಬೇಕೆಂಬುದು ಇವರ ಮತ.

ಮತದಾರನಿಗಿಂತ ಚುನಾಯಿತ ಸದಸ್ಯ ಹೆಚ್ಚು ಬುದ್ಧಿವಂತನಿರುತ್ತಾನೆ ಮತ್ತು ವಿವಿಧ ಹಂತಗಳ ಸಂಸ್ಥೆಗಳಲ್ಲಿ ಪರಸ್ಪರ ಸಂಬಂಧ ಉಳಿದುಬರುತ್ತದೆ ಎಂಬುದು ಈ ವ್ಯವಸ್ಥೆಯ ಪ್ರತಿಪಾದಕರು ನೀಡುವ ಕಾರಣ. ಇದು ಸಂದಿಗ್ಧವಾದ ವಿಚಾರ. ಈ ಪದ್ಧತಿಯಿಂದ ಮತದಾರನ ಸ್ವಾತಂತ್ರ್ಯ ಸೀಮಿತವಾಗುತ್ತದೆ. ಚುನಾವಣೆಯ ಅಧಿಕಾರ ಕ್ರಮೇಣ ಕೆಲಕೆಲವೇ ಜನರಲ್ಲಿ ಕೇಂದ್ರೀಕೃತವಾಗುತ್ತ ಹೋಗಿ, ಅದು ದುರ್ವ್ಯವಹಾರಕ್ಕೆ ಹೆಚ್ಚು ಆಸ್ಪದ ನೀಡುತ್ತದೆ. ಆಡಳಿತದ ವಿವಿಧ ಹಂತಗಳ ಸಂಬಂಧಗಳ ಬಿಗಿ ಹೆಚ್ಚಿದಂತೆ ಮೇಲಣ ಹಂತದ ರಾಜಕೀಯ ಕೆಳಗಿನ ಹಂತಕ್ಕೂ ಹಬ್ಬುತ್ತದೆ. ಆದ್ದರಿಂದ ಪ್ರಜಾಪ್ರಭುತ್ವವೂ ಪರೋಕ್ಷ ಚುನಾವಣೆಯೂ ಜೊತೆಜೊತೆಯಾಗಿ ಹೋಗಲಾರವು ಎಂಬುದು ಪರೋಕ್ಷ ಚುನಾವಣೆಯ ವಿರೋಧಿಗಳ ವಾದ.

### ಉಮೇದುವಾರ ಮತ್ತು ರಾಜಕೀಯ ಪಕ್ಷಗಳು

ಚುನಾವಣೆಯಲ್ಲಿ ಭಾಗವಹಿಸುವವರು ಇಬ್ಬರು; ಮತದಾರ ಮತ್ತು ಉಮೇದುವಾರ. ಒಂದು ಸ್ಥಾನಕ್ಕೆ ಒಬ್ಬನೇ ಉಮೇದುವಾರನಿದ್ದರೆ ಚುನಾವಣೆ ಅಗತ್ಯವಿಲ್ಲ. ಒಂದು ಸ್ಥಾನಕ್ಕೆ ಚುನಾವಣೆ ನಡೆಯಬೇಕಾದರೆ ಕನಿಷ್ಠ ಇಬ್ಬರು ಉಮೇದುವಾರರಿರಬೇಕು. ಚುನಾವಣೆಯಲ್ಲಿ ಉಮೇದುವಾರನಾಗಿ ನಿಲ್ಲುವವನಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕೆಂಬುದು ಆದರ್ಶ.

**ಅರ್ಹತೆ :** ಭಾರತದಲ್ಲಿ ಮತದಾರನಿಗೆ ಅರ್ಹತಾ ವಯಸ್ಸು 21 ವರ್ಷಗಳಾದರೆ ಲೋಕಸಭೆ, ವಿಧಾನಸಭೆಗಳ ಪ್ರತಿನಿಧಿಯಾಗಬಯಸುವ ಉಮೇದುವಾರನಿಗೆ 25 ವರ್ಷಗಳಾಗಿರಬೇಕೆಂಬುದು ಸಂವಿಧಾನದ ವಿಧಿ. ಮತದಾರನಿಗಿಂತ ಅಭ್ಯರ್ಥಿ ತಿಳಿವಳಿಕೆಯಲ್ಲಿ ಹೆಚ್ಚು ಸಮರ್ಥನಾಗಿರಬೇಕೆಂಬುದು ಇದರ ಹಿಂದಿನ ಆಶಯ. 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ (ರೆಪ್ರೆಸೆಂಟೇಷನ್ ಆಫ್ ಪೀಪಲ್ಸ್ ಆ್ಯಕ್ಟ್) ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆದಾಗ ವಯಸ್ಸಿನೊಂದಿಗೆ ಶಿಕ್ಷಣವೇ ಮುಂತಾದ ಅರ್ಹತೆಗಳನ್ನೂ ವಿಧಿಸುವ ಬಗ್ಗೆ ಚರ್ಚೆಯಾಯಿತು. ಆದರೆ ಸಮರ್ಪಕವಾದ ಅರ್ಹತಾಸೂತ್ರ ಕಂಡುಹಿಡಿಯುವುದು ಅಸಾಧ್ಯವೆಂದು ತೋರಿ, ರಾಜಕೀಯ ಪಕ್ಷಗಳೇ ತಮ್ಮ ಉಮೇದುವಾರರನ್ನು ಆರಿಸುವಾಗ ಆ ಬಗ್ಗೆ ಗಮನ ಕೊಡಬೇಕೆಂದು ಆ ವಿಚಾರ ಕೈಬಿಡಲಾಯಿತು. ಒಟ್ಟಿನಲ್ಲಿ ಅಧಿನಿಯಮವಿಲ್ಲದೆಯೇ ಈ ಕರಾರು ಪೂರ್ತಿಯಾದಂತಾಗಿದೆ. 1952ರಲ್ಲಿ ಚುನಾಯಿತರಾದ 499 ಮಂದಿ ಲೋಕಸಭಾ ಸದಸ್ಯರಲ್ಲಿ 301 ಜನ ಪದವೀಧರರು, 66 ಜನ ಇಂಟರ್ಮೀಡಿಯೆಟ್ ಓದಿದವರು, 60 ಜನ ಪ್ರೌಢಶಾಲೆ ತಲುಪಿದವರು, 7 ಜನ ಮಾಧ್ಯಮಿಕ ಶಾಲೆಯವರೆಗೆ ಬಂದವರು ಇದ್ದರು. ಉಳಿದವರಲ್ಲಿ 24 ಜನ ಬೇರೆ ಬಗೆಯ ಶಿಕ್ಷಣ ಪಡೆದವರಿದ್ದರು. 127 ಜನ ವಕೀಲರು, 38 ಜನ ಪತ್ರಕರ್ತರು, 34 ಜನ ಶಿಕ್ಷಣತಜ್ಞರು, 34 ಜನ ಇತರ ವೃತ್ತಿನಿರತರು, 70 ಜನ ವ್ಯಾಪಾರಿಗಳು, 122 ಜನ ಭೂಮಿಗೆ ಸಂಬಂಧಿಸಿದವರು. ಬೇರಾವ ದೇಶದಲ್ಲೂ ಈ ಬಗೆಯ ಅರ್ಹತೆಯನ್ನು ಕುರಿತ ಪ್ರತ್ಯೇಕ ಅಧಿನಿಯಮಗಳಿಲ್ಲ. ಉಮೇದುವಾರ ನಿಲ್ಲುವ ಕ್ಷೇತ್ರದಲ್ಲಿ ಅವನು ಮತದಾರನಾಗಿರಬೇಕೆಂಬ ನಿರ್ಬಂಧ ಕೆಲವು ದೇಶಗಳಲ್ಲಿದೆ. ಭಾರತದಲ್ಲಿ ಈ ನಿರ್ಬಂಧವೂ ಇಲ್ಲ. ಇತರ ದೃಷ್ಟಿಗಳಿಂದ ಅರ್ಹತೆಯುಳ್ಳ ನಾಗರಿಕ ಯಾವ ಕ್ಷೇತ್ರದಲ್ಲಾದರೂ ಚುನಾವಣೆಗೆ ಸ್ಪರ್ಧಿಸಬಹುದು.

ಇನ್ನೊಂದು ನಿಬಂಧನೆ ಠೇವಣಿಯನ್ನು ಕುರಿತದ್ದು. ಲೋಕಸಭೆ, ವಿಧಾನಸಭೆಗಳಿಗೆ ಉಮೇದುವಾರರು ಠೇವಣಿಯನ್ನು ನಾಮನಿರ್ದೇಶ ಪತ್ರದೊಂದಿಗೆ ಕೊಡಬೇಕಾಗುತ್ತದೆ. ಠೇವಣಿಯ ಮೊಬಲಗನ್ನು ಆಗಿಂದಾಗ್ಗೆ ಹೆಚ್ಚಿಸಲಾಗುತ್ತದೆ. ಅನುಸೂಚಿತ ವರ್ಗದ ಉಮೇದುವಾರರಿಗೆ ರಿಯಾಯಿತಿ ನೀಡಲಾಗಿದೆ. ಬೇರೆ ಬೇರೆ ಸಂಸ್ಥೆಗಳ ಚುನಾವಣೆಗಳಿಗೆ ಠೇವಣಿಯ ಮೊತ್ತ ಬೇರೆಬೇರೆ. ಉಮೇದುವಾರರು ಹೊಣೆಗೇಡಿಗಳಾಗದಂತೆ ತಡೆಯಲು ಠೇವಣಿ ಅಗತ್ಯವೆಂದು ವಾದಿಸಲಾಗಿದೆ. ಒಂದು ಕ್ಷೇತ್ರದಿಂದ ಚಲಾಯಿಸಲಾದ ಒಟ್ಟು ಮತಗಳ 1/8ಕ್ಕಿಂತ ಕಡಿಮೆ ಮತ ಗಳಿಸಿದ ಉಮೇದುವಾರನ ಠೇವಣಿ ಹಣ ಸರ್ಕಾರಕ್ಕೆ ಮುಟ್ಟುಗೋಲಾಗುತ್ತದೆ. ಯೋಗ್ಯ ಹಾಗೂ ಬಡವನಾದ ಉಮೇದುವಾರನ ಹಿತದೃಷ್ಟಿಯಿಂದ ಠೇವಣಿಯ ಮೊಬಲಗಿಗೆ ಸಂಬಂಧಿಸಿದಂತೆ ಮತ್ತು ಅದನ್ನು ಮರಳಿಸುವ ಬಗ್ಗೆ ನಿಯಮಗಳನ್ನು ಸಡಿಲಗೊಳಿಸಬೇಕೆಂದು ಅನೇಕ ಸೂಚನೆಗಳು ಬರುತ್ತಿವೆ.

**ಉಮೇದುವಾರರ ಅನರ್ಹತೆಗಳು :** ಭಾರತದ ಮತ್ತು ಇತರ ಕಾಮನ್‌ವೆಲ್ತ್ ರಾಷ್ಟ್ರಗಳ ಚುನಾವಣಾ ಅಧಿನಿಯಮಗಳ ಪ್ರಕಾರ, ಆಯಾ ದೇಶಗಳ ನಾಗರಿಕರಲ್ಲದವರು, ಮತಿವಿಕಲರು, ದಿವಾಳಿಯಾದವರು, ಸರ್ಕಾರಿ ಸ್ಥಾನದಲ್ಲಿರುವವರು, ಸರ್ಕಾರದಿಂದ ಕಾಂಟ್ರಾಕ್ಟ್ ಪಡೆದವರು–ಇವರು ವಿಧಾನಸಭೆ ಹಾಗೂ ಲೋಕಸಭೆಗಳ ಸದಸ್ಯರಾಗಲು ಅನರ್ಹರು. ಆದ್ದರಿಂದ ಇಂಥವರು ಉಮೇದುವಾರರಾಗಿ ಸ್ಪರ್ಧಿಸಲಾರರು. ಈ ಅನರ್ಹತೆಗಳ ಬಗ್ಗೆ ಭಿನ್ನಾಭಿಪ್ರಾಯಗಳೇ ಇಲ್ಲ.

ಆಫ್ರಿಕದ ಅನೇಕ ದೇಶಗಳಲ್ಲಿ ಬಹುತೇಕ ಸುಶಿಕ್ಷಿತರೆಲ್ಲ ಸರ್ಕಾರಿ ಕೆಲಸಗಳಲ್ಲಿರುವ ಕಾರಣ ಇಂಥ ನಿರ್ಬಂಧದಿಂದಾಗಿ ಅನಕ್ಷರಸ್ಥರಿಗೇ ಸರ್ಕಾರದಲ್ಲಿ ಅವಕಾಶ ಉಂಟಾಗಿದೆ. ಈ ಪರಿಸ್ಥಿತಿಯನ್ನು ನಿವಾರಿಸಲು ಪ್ರಯತ್ನ ನಡೆದಿದೆ. ಯೂರೋಪಿನ ಕೆಲವು ದೇಶಗಳಲ್ಲಿ ಲೋಕಸೇವಾ ಅಧಿಕಾರಿಗಳಿಗೂ ವಿಧಾನಸಭೆಗಳ ಸದಸ್ಯರಾಗಲು ಕೆಲವು ಷರತ್ತುಗಳ ಮೇಲೆ ಅವಕಾಶ ನೀಡಲಾಗಿದೆ. ಆದರೆ ವಿಧಾನ ಸಭಾಸದಸ್ಯನಾದ ಅಧಿಕಾರಿ ಸರ್ಕಾರವನ್ನು ಟೀಕಿಸುವ, ಯಾವುದಾದರೊಂದು ಪಕ್ಷಕ್ಕೆ ಹೊಂದಿಕೊಂಡು ಕೆಲಸ ಮಾಡುವ ಸಂದರ್ಭ

ಬರುವುದರಿಂದ, ಆತನ ಸದಸ್ಯತ್ವದ ಅವಧಿ ಮುಗಿದ ಮೇಲೆ ಸರ್ಕಾರಿ ಕೆಲಸಕ್ಕೆ ಅವನು ಮರಳಿದಾಗ ಮಂತ್ರಿಗಳಿಗೆ ವಿಶ್ವಾಸ ಮೂಡುವುದು ಕಷ್ಟವಾಗುವುದೆಂಬುದು ಒಂದು ವಾದ. ಆದ್ದರಿಂದಲೇ ಇವರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಇಲ್ಲದಿರುವುದು ಆರೋಗ್ಯಕರವಾದ ಸ್ಥಿತಿಯೆಂದು ಭಾವಿಸಲಾಗಿದೆ. ಆದರೆ ಸರ್ಕಾರದ ಕಾರ್ಯ ವ್ಯಾಪಕವಾದಂತೆ ಸರ್ಕಾರಿ ನೌಕರರ ಸಂಖ್ಯೆ ಕೋಟಿಗಟ್ಟಲೆ ಆದಾಗ ವಿದ್ಯಾವಂತ ಪ್ರೌಢರ ಇಷ್ಟು ದೊಡ್ಡ ಭಾಗವನ್ನು ರಾಜಕೀಯ ಹಕ್ಕುಗಳಿಂದ ವಂಚಿತರನ್ನಾಗಿ ಇಡುವುದು ಸಾಧುವೆ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇದಕ್ಕೆ ಭವಿಷ್ಯವೇ ಉತ್ತರಿಸಬೇಕು. ಸಾಮಾನ್ಯವಾಗಿ ಹೇಳುವುದಾದರೆ, ಇಂದು ಚುನಾವಣೆಯಲ್ಲಿ ಉಮೇದುವಾರನಾಗುವ ನಾಗರಿಕನ ಮೇಲೆ ಹೆಚ್ಚು ಸ್ವಾತಂತ್ರ್ಯವಿದೆಯೆಂದು ಹೇಳಲಾಗಿದೆ. ಆದರೆ ಈ ಸ್ವಾತಂತ್ರ್ಯ ವಾಸ್ತವವಾಗಿ ಎಷ್ಟರಮಟ್ಟಿಗೆ ಲಭಿಸಿದೆ? ಇಂದಿನ ಚುನಾವಣಾ ಕ್ಷೇತ್ರಗಳ ವ್ಯಾಪ್ತಿ, ಚುನಾವಣೆಗೆ ತಗಲುವ ವೆಚ್ಚ ಇವನ್ನು ನೋಡಿದರೆ ಕಾನೂನಿನಿಂದ ಲಭ್ಯವಾದ ಸ್ವಾತಂತ್ರ್ಯ, ನೂರಾರು ಜನ ಕಾರ್ಯಕರ್ತರನ್ನು ಲಕ್ಷಾನುಗಟ್ಟಲೆ ಹಣದ ವೆಚ್ಚದಲ್ಲಿ ಸಂಘಟಿಸಬಲ್ಲ ಶ್ರೀಮಂತನಿಗೆ ಮಾತ್ರ ಸಿಗುವಂತಿದೆ. ಲೋಕಸತ್ತೆಯ ಹಿತಕ್ಕಾಗಿ ಈ ಸ್ಥಿತಿ ಬದಲಾಗಬೇಕೆಂದು ವಾದಿಸಲಾಗಿದೆ.

ಚುನಾವಣೆಯ ಖರ್ಚುಗಳ ಅಧಿನಿಯಮದ ಪ್ರಕಾರ ಲೋಕಸಭೆಗೆ ರೂ. 25,000, ವಿಧಾನಸಭೆಗೆ ರೂ. 7,000 ವರೆಗೆ ಖರ್ಚುಮಾಡಬಹುದೆಂದು ಮೊದಲು ನಿಗದಿಯಾಗಿದ್ದರೂ ಆ ಗರಿಷ್ಠ ಮಿತಿಗಳು ಏರುತ್ತಾ ಹೋಗಿ, ಈಗ ಅದು ಕ್ರಮವಾಗಿ, 40 ಲಕ್ಷ ಹಾಗೂ 16 ಲಕ್ಷ ಆಗಿದೆ ಸಾಮಾನ್ಯ ಉಮೇದುವಾರ ಸಾಮರ್ಥ್ಯವನ್ನು ಮೀರಿ, ಅವನನ್ನು ಒಂದು ರೀತಿಯಲ್ಲಿ ಸ್ಪರ್ಧೆಗೆ ಅನರ್ಹನನ್ನಾಗಿ ಮಾಡಿವೆ. ಕಾನೂನುಬದ್ಧ ಖರ್ಚುಗಳೇ ಇಷ್ಟು ಹೆಚ್ಚಿದಾಗ, ಚುನಾವಣಾ ಕ್ಷೇತ್ರದಲ್ಲಿ ಮತದಾರರನನ್ನು ಸಂತೋಷವಾಗಿಡಲು, ಅವರ ಸ್ಥಾನಿಕ ಮುಂದಾಳುಗಳನ್ನು ಸಂತೃಪ್ತಿಯಿಂದ ಇಡಲು ಮಾಡಬೇಕಾದ ಖರ್ಚುಗಳು ಸರ್ಕಾರದ ಗಮನಕ್ಕೆ ಬರುವುದಿಲ್ಲ. ಹಣವಂತರು ಇದಕ್ಕೆಲ್ಲ ಸಾಕಷ್ಟು ಖರ್ಚುಮಾಡಬಲ್ಲರು. ಕಾನೂನಿಗೆ ಅನುಗುಣವಾದ ಖರ್ಚಿನ ಪರಿಮಿತಿ ಸಹ ಧನವಂತ ಹಾಗೂ ಧನಹೀನರ ನಡುವಣ ಅಂತರವನ್ನು ಕಡಿಮೆ ಮಾಡುವಲ್ಲಿ ಸಫಲವಾಗಿಲ್ಲವೆನ್ನಬಹುದು. ಚುನಾವಣೆಯ ಎಲ್ಲ ಖರ್ಚುಗಳನ್ನೂ ಸರ್ಕಾರವೇ ವಹಿಸಬೇಕೆಂಬ ಸಲಹೆಗಳೂ ಬಂದಿವೆ. ಆದರೆ ಇದು ರಾಜಕೀಯ ಮತ್ತು ಆಡಳಿತ ಕಾರಣಗಳಿಂದಾಗಿ ಗ್ರಾಹ್ಯವಾಗಿಲ್ಲ. ಈ ಸಂಬಂಧವಾಗಿ ಯೋಚಿಸುವಾಗ ರಾಜಕೀಯ ಪಕ್ಷಗಳ ಪಾತ್ರವನ್ನೂ ಪರಿಗಣಿಸಬೇಕಾಗುತ್ತದೆ. ಈ ಪಕ್ಷಗಳು ದುರ್ಬಲರಾದ, ಆದರೆ ಅರ್ಹರಾದ ಉಮೇದುವಾರರ ಬೆಂಬಲಕ್ಕೆ ನಿಂತು ಧನಸಹಾಯ, ಜನಸಹಾಯ ಮಾಡಿ ಚುನಾವಣೆಯಲ್ಲಿ ಅವರನ್ನು ದಾಟಿಸಲು ಸಮರ್ಥವಾಗಬಹುದು.

**ರಾಜಕೀಯ ಪಕ್ಷಗಳ ಪಾತ್ರ :** ಪ್ರಜಾಸತ್ತಾತ್ಮಕ ಸಂವಿಧಾನಗಳಲ್ಲಿ ಸಂಘ ಸ್ವಾತಂತ್ರ್ಯವೂ ಒಂದು ಮೂಲಭೂತ ಹಕ್ಕು. ಕ್ರಿಯಾಶೀಲರೂ ಚಟುವಟಿಕೆಯವರೂ ಆದ ನಾಗರಿಕರು ಪ್ರತಿಯೊಂದು ಪ್ರಜಾಸತ್ತಾತ್ಮಕ ದೇಶದಲ್ಲಿ ಈ ಸ್ವಾತಂತ್ರ್ಯವನ್ನು ಬಳಸಿಕೊಂಡು ರಾಜಕೀಯ

ಡೈಲಿ ಸ್ಕೆಚ್ ಮತ್ತು ಡೈಲಿ ಮಿರರ್ ಪತ್ರಿಕೆಗಳಲ್ಲಿ ಪ್ರಕಟವಾದ ಬ್ರಿಟಿಷ್ ಮಹಾಚುನಾವಣಾ ಪ್ರಚಾರಚಿತ್ರಗಳು

ಪಕ್ಷಗಳನ್ನು ಕಟ್ಟಿಕೊಂಡಿದ್ದಾರೆ. ಪಕ್ಷ ಎಂಬ ಶಬ್ದಕ್ಕೆ ಅನೇಕ ಅರ್ಥಗಳನ್ನು ಹೇಳಬಹುದಾದರೂ ಸರ್ಕಾರದ ಮೇಲೆ ನಿಯಂತ್ರಣ ಸಾಧಿಸಬೇಕೆನ್ನುವ ಮುಖಂಡರ ಸಂಸ್ಥೆಯೇ ಪಕ್ಷವೆಂಬುದು ಪ್ರಕೃತಕ್ಕೆ ಒಪ್ಪುವ ವ್ಯಾಖ್ಯೆ. ಮತದಾರರಿಗೆ ಮುಖಂಡರ ಒಂದು ಗುಂಪಿನಿಂದ ಬೇಸರ ಬಂದರೆ ಇನ್ನೊಂದು ಗುಂಪನ್ನು ಅಧಿಕಾರದಲ್ಲಿ ತರುವುದು ಈ ರಾಜಕೀಯ ಪಕ್ಷಗಳಿರುವುದರಿಂದ ಸಾಧ್ಯವಾಗುತ್ತದೆ. ಈ ಪಕ್ಷಗಳಿಂದಾಗುವ ಇನ್ನೊಂದು ಲಾಭವೆಂದರೆ ಬಡವರೂ ಬುದ್ಧಿವಂತರೂ ಸದ್ಗುಣಿಗಳೂ ಸಮರ್ಥರೂ ಆದ ಜನರು ಅಗಾಧ ಹಣ ಖರ್ಚುಮಾಡಿ ಚುನಾವಣೆಯಲ್ಲಿ ಶ್ರೀಮಂತರೊಂದಿಗೆ ಸ್ಪರ್ಧಿಸುವುದು ಅಸಾಧ್ಯವಾದಾಗ, ಪಕ್ಷಗಳು ಅಂಥ ಯೋಗ್ಯರನ್ನು ತನ್ನ ಉಮೇದುವಾರರೆಂದು ಆರಿಸಿ, ಧನ ಜನ ಬೆಂಬಲದಿಂದ ವಿಧಾನಸಭೆ, ಸಂಸತ್ತುಗಳಿಗೆ ಆರಿಸಿ ತರಬಹುದು. ಬಂಡವಾಳ ವ್ಯವಸ್ಥೆ ಮತ್ತು ಅಸಮಾನ ಸಂಪತ್ತಿನ ಹಂಚಿಕೆ ಇರುವಾಗಲೂ ಅನೇಕ ದೇಶಗಳಲ್ಲಿ ಶ್ರಮಿಕವರ್ಗದ ಪ್ರತಿನಿಧಿಗಳು ವಿಧಾನಸಭೆಗಳಿಗೆ ಆರಿಸಿ ಬಂದು ಸರ್ಕಾರ ರಚಿಸುವ ಸಾಮರ್ಥ್ಯ ಸಂಪಾದಿಸಿದ್ದು ಇಂಥ ರಾಜಕೀಯ ಪಕ್ಷಗಳ ಉದಯ, ಪ್ರಚಾರ ಹಾಗೂ ಬೆಂಬಲದಿಂದ ಸಾಧ್ಯವಾಗಿದೆ. ಇಂದಿನ ವಿಶಾಲವಾದ ಪ್ರಜಾಸತ್ತಾತ್ಮಕ ದೇಶಗಳಲ್ಲಿ ಚುನಾವಣೆಗಳಲ್ಲಿ ಪ್ರಧಾನವಾದ ಅಂಶವೆಂದರೆ ಮತದಾರರ ಅಜ್ಞಾನ ಹಾಗೂ ಅನಾಸಕ್ತಿ ಎಂಬುದು ಅನೇಕ ಅಧ್ಯಯನಶೀಲರಿಗೆ ಕಂಡುಬಂದಿದೆ. ಅನೇಕ ಬುದ್ಧಿಜೀವಿಗಳಿಗೂ ಚುನಾವಣೆ ಒಂದು ತಮಾಷೆಯಂತೆ ಹಗುರಾಗಿ ಕಾಣುತ್ತದೆ. ಇಂಥ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಚುರುಕಿನ ಪ್ರಚಾರವೇ ಮತದಾರರಲ್ಲಿ ತಮ್ಮ ಹೊಣೆಗಾರಿಕೆಯ ಕಲ್ಪನೆಯನ್ನು ಜಾಗೃತಗೊಳಿಸಿ ಹೆಚ್ಚು ಹೆಚ್ಚು ಭಾಗವಹಿಸುವಂತೆ ಪ್ರೇರೇಪಿಸಿದೆ. ಪಂಚಾಯಿತಿ ಚುನಾವಣೆಗಳಲ್ಲಿ ಮತದಾರರಿಗೆ ಉಮೇದುವಾರನ ನೇರ ಪರಿಚಯವಿರುತ್ತದೆ. ಆದರೆ ವಿಧಾನಸಭೆ ಹಾಗೂ ಲೋಕಸಭೆಗಳ ಚುನಾವಣೆಗಳಲ್ಲಿ ಉಮೇದುವಾರನ ಬಗ್ಗೆ ಯೋಗ್ಯ ಕಲ್ಪನೆಯನ್ನು ಮತದಾರರ ಮನಸ್ಸಿನಲ್ಲಿ ಉಂಟುಮಾಡುವುದು ಎಲ್ಲರ ದೃಷ್ಟಿಯಿಂದಲೂ ಅಗತ್ಯವಾಗುತ್ತದೆ. ಏಕೆಂದರೆ ಮತದಾರರಿಗೆ ಅವರ ಪ್ರತ್ಯಕ್ಷ ಪರಿಚಯವಿರುವುದು ವಿರಳ. ಈ ಕೆಲಸವನ್ನು ಪಕ್ಷಗಳು ಪ್ರಚಾರದ ಮೂಲಕ ಮಾಡುತ್ತವೆ. ಜನಾಭಿಪ್ರಾಯವನ್ನು ರೂಪಿಸುತ್ತವೆ. ವಿರೋಧಪಕ್ಷ, ಆಳುವ ಪಕ್ಷ–ಇವೆರಡರ ರಚನೆಗೂ ಇದು ಅಗತ್ಯ. ಪ್ರಜಾರಾಜ್ಯದಲ್ಲಿ ಪಕ್ಷಗಳು ಕೇವಲ ಚುನಾವಣೆಗಾಗಿ ಮಾತ್ರ ಇರುವುದಿಲ್ಲ. ಅವು ರಾಜ್ಯ, ರಾಷ್ಟ್ರಗಳಂತೆ ನಿರಂತರ ಉಳಿಯುವುವು. ಏಕೆಂದರೆ ಸಾರ್ವತ್ರಿಕ ಚುನಾವಣೆಗಳ ನಡುವೆ ಅನೇಕ ಕಾರಣಗಳಿಗಾಗಿ ತೆರವಾದ ಸ್ಥಳಗಳಿಗಾಗಿಯೂ ವಿವಿಧ ಹಂತದ ಸಂಸ್ಥೆಗಳಿಗಾಗಿಯೂ ಚುನಾವಣೆ ಉಪಚುನಾವಣೆಗಳು ನಡೆಯುತ್ತಲೇ ಇರುತ್ತವೆ. ಚುನಾವಣೆಗಳು ಬೇರೆಬೇರೆಯಾದರೂ ಮತದಾರರು ಅವರೇ ಆದ ಕಾರಣ, ಪರಸ್ಪರ ವಿರುದ್ಧವಾದ ವಿಚಾರಗಳ ನಡುವೆ ಒಂದು ಅಭಿಪ್ರಾಯ ರೂಪಿಸುವ ಹಾಗೂ ಮತದಾರರ ಮೆಚ್ಚಿಕೆ ಕಾಪಾಡಿಕೊಳ್ಳುವ ಕೆಲಸ ನಿರಂತರ ಇದ್ದೇ ಇರುತ್ತದೆ. ಹೀಗೆ ಲೋಕಸತ್ತೆಯ ಚಲನಶೀಲತೆಗೆ ರಾಜಕೀಯ ಪಕ್ಷಗಳು ಒಂದು ಬಗೆಯ ಶಕ್ತಿಮೂಲವಿದ್ದಂತೆ. ಭಾರತದಲ್ಲಿ ಪಕ್ಷರಹಿತ ಪ್ರಜಾಪ್ರಭುತ್ವ ಬೇಕೆನ್ನುವವರೂ ಇದ್ದಾರೆ. ಆದರೆ ಮತದಾರರಿಗೆ ಪ್ರಚಾರದ ಮೂಲಕ ಅಭಿಪ್ರಾಯ ರೂಪಿಸಲು ನೆರವಾಗುವಂಥ ಹಾಗೂ ದುರ್ಬಲ ಉಮೇದುವಾರರಿಗೆ ಧನ, ಜನ ಬೆಂಬಲ ನೀಡುವಂಥ ಪರ್ಯಾಯ ಸಂಸ್ಥೆ ಯಾವುದೆಂಬುದನ್ನು ಅವರು ಹೇಳುವುದಿಲ್ಲ. ಸರ್ಕಾರದ ಶಾಂತಿಯುತ ಬದಲಾವಣೆಗೆ ಪಕ್ಷಗಳಿಂದಾಗುವ ಲಾಭವನ್ನು ಮರೆಯುವಂತಿಲ್ಲ. ಹೀಗೆಂದರೆ ಪಕ್ಷವ್ಯವಸ್ಥೆಯಲ್ಲಿ ದೋಷಗಳಿಲ್ಲವೆಂದಲ್ಲ. ಅಲ್ಲಿ ಕಂಡುಬಂದ ದೋಷಗಳೇ ಪಕ್ಷಗಳ ಬಗ್ಗೆ ಸಂಶಯ ಹುಟ್ಟಿಸಲು ಕಾರಣವಾಗಿದೆ.

**ಉಮೇದುವಾರರ ನಾಮನಿರ್ದೇಶನ :** ಚುನಾವಣೆಯಲ್ಲಿ ಎರಡು ಹಂತಗಳುಂಟು: 1 ಉಮೇದುವಾರನ ನಾಮನಿರ್ದೇಶ ಅಥವಾ ನಾಮಕರಣ, 2 ವಾಸ್ತವ ಮತದಾನ. ನಾಮನಿರ್ದೇಶಿತವಾದ ಉಮೇದುವಾರನ ಪರವಾಗಿ ಮತ ಹಾಕುವ ಅಥವಾ ಹಾಕದಿರುವ ಸ್ವಾತಂತ್ರ್ಯ ಮತದಾರನಿಗಿದೆ. ಎಲ್ಲ ಉಮೇದುವಾರರೂ ಅಯೋಗ್ಯರೆಂದು ಕಂಡರೆ ಮತದಾರ ಬೇರೆಯವರನ್ನು ತರಲಾರ. ಆದಕಾರಣ ನಾಮನಿರ್ದೇಶದ ಹಂತ ಚುನಾವಣೆಯಲ್ಲಿ ಬಹು ಮುಖ್ಯವಾದ್ದು. ದೊಡ್ಡ ಪ್ರಜಾಸತ್ತಾತ್ಮಕ ದೇಶಗಳಲ್ಲೆಲ್ಲ ಪಕ್ಷಗಳೇ ಉಮೇದುವಾರರನ್ನು ಆರಿಸುತ್ತವೆ. ಸ್ವತಂತ್ರವಾಗಿ ಕೆಲವರು ನಿಂತರೂ ಹಾಗೆ ನಿಲ್ಲುವವರಿಗೆ ಧನ, ಜನ, ಬಲ, ಕಡಿಮೆ. ಅಂಥವರು ಆರಿಸಿ ಬರುವುದೂ ಕಡಿಮೆ. ಆದಕಾರಣ ಪಕ್ಷಗಳು ಬುದ್ಧಿವಂತ, ಪ್ರಾಮಾಣಿಕ ಹಾಗೂ ದಕ್ಷರಾದ ಉಮೇದುವಾರರನ್ನು ನಾಮನಿರ್ದೇಶ ಮಾಡಿದರೆ ಒಳ್ಳೆಯ ಸರ್ಕಾರದ ರಚನೆ ಸಾಧ್ಯವಾಗುತ್ತದೆ. ಉಮೇದುವಾರರು ಕೆಟ್ಟವರಿದ್ದರೆ ಸರ್ಕಾರ ಕೆಟ್ಟದಾಗುವುದು ಅನಿವಾರ್ಯ. ರಾಜಕೀಯ ತಜ್ಞರೊಬ್ಬರು ಹೇಳುವಂತೆ, ಪ್ರಜಾರಾಜ್ಯದಲ್ಲಿ ಪಕ್ಷವೆಂಬುದು ರಾಜನೂ ಹೌದು, ರಾಜನಿರ್ಮಾಪಕನೂ ಹೌದು.

ಎಲ್ಲ ರಾಜಕೀಯ ಪಕ್ಷಗಳಲ್ಲಿ (ಕೆಲವೇ ಅಪವಾದಗಳ ಹೊರತಾಗಿ), ವಿಶೇಷವಾಗಿ ದೊಡ್ಡ ದೊಡ್ಡ ಪಕ್ಷಗಳಲ್ಲಿ, ಮೇಲ್ಮಟ್ಟದ ಕೆಲವೇ ಮುಖಂಡರು ಪಕ್ಷದ ಮೇಲೆ ಹಿಡಿತವಿಟ್ಟುಕೊಳ್ಳುವ ಪ್ರವೃತ್ತಿ ಕಂಡುಬರುತ್ತದೆ. ಇಂಥ ಪಕ್ಷಗಳು ಬಹುಕಾಲದವು. ಬಹುಕಾಲದವರೆಗೆ ಆಳ್ವಿಕೆ ಮಾಡಿದವು ಮತ್ತು ಭವಿಷ್ಯದಲ್ಲೂ ಆಳುವ ಅವಕಾಶ ಪಡೆದು ಮುಂದುವರಿಯುವಂಥವು ಆಗಿದ್ದರಂತೂ ತೀರಿತು. ಒಂದು ಚಿಕ್ಕ ಗುಂಪೇ ಪ್ರಬಲವಾಗಿರುತ್ತದಲ್ಲದೆ ಅಂಥ ಪ್ರಭಾವವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನೇ ಮಾಡುತ್ತಿರುತ್ತದೆ. ಇಂಥ ಪಕ್ಷದ ಆಂತರಿಕ ವ್ಯವಹಾರದಲ್ಲಿ ಪ್ರಜಾಸತ್ತಾತ್ಮಕ ರೂಢಿಗಳಿಗೆ ಹೆಚ್ಚು ಬೆಲೆ ಇರುವುದಿಲ್ಲ. ಉಮೇದುವಾರರನ್ನು ನಿರ್ಧರಿಸುವುದರಲ್ಲಿ, ಸರ್ಕಾರದ ರಚನೆಯಲ್ಲಿ

ಈ ಪ್ರಭಾವಿ ಗುಂಪಿನದೇ ಕೊನೆಯ ನಿರ್ಣಯ. ಅದನ್ನು ಪ್ರತಿಭಟಿಸುವ ಸಾಮರ್ಥ್ಯವಿರುವವರು ಬಹು ವಿರಳ. ಹೀಗಾಗಿ ಒಂದು ಚಿಕ್ಕ ಗುಂಪಿನ ಹತ್ತೋ ಹನ್ನೆರಡೋ ಜನರದೇ ಸರ್ವಾಧಿಕಾರ ಬೆಳೆಯುತ್ತದೆ. ಮತದಾರರು ಯಾರಿಗೆ ಮತ ಹಾಕಬೇಕೆಂಬುದನ್ನು ಸಹ ಈ ಗುಂಪು ನಿರ್ಧರಿಸುತ್ತದೆ. ಯಾರು ದೇಶವನ್ನಾಳಬೇಕು ಎಂಬುದನ್ನು ಕೂಡ ಈ ಗುಂಪಿನವರೇ ಹೇಳುವ ಪರಿಸ್ಥಿತಿ ಬರುತ್ತದೆ. ರಾಷ್ಟ್ರದ ಭವಿಷ್ಯವೇ ಕೆಲವರ ಕೈಯಲ್ಲಿರುತ್ತದೆ. ಇದೊಂದು ವಿಪರ್ಯಾಸ.

ಇಂಥ ವಿಪರ್ಯಾಸ 19ನೆಯ ಶತಮಾನದಲ್ಲಿ ಅಮೆರಿಕದಲ್ಲಿ ಬಹಳ ಹಾನಿಯನ್ನುಂಟು ಮಾಡಿತು. ಉಮೇದುವಾರರ ನಾಮನಿರ್ದೇಶದಲ್ಲಿ ಹಲವು ಬಗೆಯ ದುರ್ವ್ಯವಹಾರಗಳು ನಡೆದುವು. ಕೆಲವೇ ಜನರು ನಾಮನಿರ್ದೇಶದ ಅಧಿಕಾರದ ಬಲದಿಂದ ಪ್ರಜಾಸತ್ತೆಯ ಹೆಸರಿನಲ್ಲಿ ಅಧಿಕಾರ ಮತ್ತು ಲಾಭಕರ ಸ್ಥಾನಗಳನ್ನು ಸ್ನೇಹಿತರಲ್ಲಿ, ಬಳಗದವರಲ್ಲಿ ಹಂಚಿ-ಕೊಳ್ಳುತ್ತಿದ್ದರು. ಇದನ್ನು ಪ್ರತಿಭಟಿಸಿದ ಜನರು ಪಕ್ಷದ ಆಂತರಿಕ ವ್ಯವಸ್ಥೆಯಲ್ಲೂ ಪ್ರಜಾಸತ್ತಾತ್ಮಕ ರೂಢಿಗಳನ್ನು ತರಲು ಪ್ರಯತ್ನಿಸಿದರು. ನಾಮನಿರ್ದೇಶನದ ಅಧಿಕಾರವನ್ನು ಪ್ರಾಥಮಿಕ ಘಟ್ಟದ ಸಂಸ್ಥೆಗಳ ಸದಸ್ಯರಿಗೆ ಕೊಡಲಾಯಿತು. ಪಕ್ಷಗಳ ವ್ಯವಹಾರ ಖಾಸಗಿಯಾದು-ದಲ್ಲವೆಂದು, ಅದರ ವ್ಯವಹಾರಗಳನ್ನು ಬಹಿರಂಗಪಡಿಸುವ ವ್ಯವಸ್ಥೆಯಾಯಿತು. ಆದರೆ ಒಳಗೇ ಕೈವಾಡ ಮಾಡುವಂಥ ಪ್ರವೃತ್ತಿಯನ್ನು ಇದು ಎಷ್ಟುಮಟ್ಟಿಗೆ ತಡೆದಿದೆಯೆಂಬುದು ವಿಚಾರಣೀಯವಾದ ಅಂಶ.




**ಬ್ರಿಟನ್ನಿನ 1959ರ ಮಹಾಚುನಾವಣೆಗಳು. ಎಡಚಿತ್ರ : ಮತಗಳ ಎಣಿಕೆ; ಬಲಚಿತ್ರ : ಸರ್ ಆಂತೊನಿ ಈಡನರಿಂದ ಮತನೀಡಿಕೆ**

ನಾಮನಿರ್ದೇಶದಲ್ಲಿ ಆದ್ಯ ಗಮನವನ್ನು ಉಮೇದುವಾರನ ಗೆಲ್ಲುವ ಸಾಧ್ಯತೆಗೇ ಕೊಡಲಾಗುತ್ತದೆ. ಉಮೇದುವಾರನ ನೈಜವಾದ ಯೋಗ್ಯತೆಯನ್ನರಿತು, ಅವನಿಗೆ ಗೆಲ್ಲುವ ಅವಕಾಶಗಳು ಕಡಿಮೆಯಿದ್ದರೂ ಪ್ರಚಾರಬಲದಿಂದ ಜನಾಭಿಪ್ರಾಯವನ್ನೂ ರೂಪಿಸಿ ಗೆಲ್ಲಿಸುವ ಪ್ರಯತ್ನ ಮಾಡಲು ಪಕ್ಷದಲ್ಲಿ ನೈತಿಕ ಸ್ಥೈರ್ಯ ಇರಬೇಕಾಗುತ್ತದೆ. ಅದಿಲ್ಲದಿದ್ದರೆ, ಕಡಿಮೆ ಯೋಗ್ಯತೆಯ ಉಮೇದುವಾರರಾದರೆ, ಆಯಾ ಕ್ಷೇತ್ರಗಳಲ್ಲಿ ಪ್ರಧಾನವಾಗಿರುವ ಮತದಾರರ ಜಾತಿಯವರ ಅಥವಾ ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಅಗತ್ಯಕ್ಕನುಗುಣವಾಗಿ ಆ ವರ್ಗಗಳಿಗೆ ಸೇರಿದವರು ಉಮೇದುವಾರರಾಗಿ ಆರಿಸಲ್ಪಡುತ್ತಾರೆ. ಇದಕ್ಕಿಂತ ಹೆಚ್ಚಾಗಿ, ಪಕ್ಷಪ್ರಮುಖರಿಗೆ ಅನುಕೂಲವಾಗಿರುವವರೇ ಹೆಚ್ಚಾಗಿ ನಿರ್ದೇಶಿತರಾಗುತ್ತಾರೆಯೇ ಹೊರತು, ಯೋಗ್ಯರಿದ್ದರೂ ಪ್ರತಿಭಟನೆಯ ಪ್ರವೃತ್ತಿ ಇರುವವರಿಗೆ ಅವಕಾಶ ಸಿಗುವುದಿಲ್ಲ. ಹೀಗಾಗಿ ಅತ್ಯುತ್ತಮರಿಗೆ ಅಧಿಕಾರ ಬರುವ ಬದಲು ಎರಡನೆಯ, ಮೂರನೆಯ ದರ್ಜೆಯವರಿಗೆ ಅವಕಾಶ ದೊರೆಯುತ್ತದೆ. ಜಾತಿಸಮಾಜಗಳ ಭಾವನೆಗಳಿಗಾಗಿ ಮತದಾರರನ್ನು ದೂಷಿಸುವ ಮೊದಲು, ಪಕ್ಷಪ್ರಮುಖರಲ್ಲಿ ಅನೇಕರು ಇಂಥ ರೋಗಗ್ರಸ್ತರಿರುವುದನ್ನು ಗಮನಿಸಬೇಕು. ನಾಮನಿರ್ದೇಶಕ್ಕಾಗಿ ಅರ್ಜಿ ಕೊಟ್ಟವರೆಲ್ಲರ ಯೋಗ್ಯತೆ, ಶಿಕ್ಷಣ, ಸೇವೆ ಮುಂತಾದ ವಿವರಗಳನ್ನು ಪಕ್ಷಗಳು ಮೊದಲೇ ಪ್ರಕಟಿಸಿ ಜನಾಭಿಪ್ರಾಯ ಸಂಗ್ರಹಿಸುವುದು ಒಂದು ಅಪೇಕ್ಷಣೀಯ ಪ್ರಯತ್ನವೆನಿಸಬಹುದು. ಏಕೆಂದರೆ ಸರಿಯಾದ ಉಮೇದುವಾರರನ್ನು ನಿರ್ಣಯಿಸುವುದು ಪಕ್ಷಗಳು ಮಾಡುವ ಒಂದು ಸಾರ್ವಜನಿಕ ಕರ್ತವ್ಯ. ಇಂಥ ಕರ್ತವ್ಯ ನಿರ್ವಹಿಸುವಲ್ಲಿ ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಯೋಗ್ಯ.

**ಪಕ್ಷನಿಧಿಗಳು :** ರಾಜಕೀಯ ಪಕ್ಷಗಳಲ್ಲಿ ಕೆಲವು ಶ್ರೀಮಂತವಾದವು. ಇನ್ನು ಕೆಲವಕ್ಕೆ ಅಷ್ಟು ಹಣಬಲವಿರುವುದಿಲ್ಲ. ವ್ಯಕ್ತಿಗಳಿಂದಲೂ ಕಾರ್ಖಾನೆ, ವ್ಯಾಪಾರ ಮತ್ತು ಇತರ ಹಿತಾಸಕ್ತಿ ಸಂಸ್ಥೆಗಳಿಂದಲೂ ಹೆಚ್ಚು ಹಣ ಸಂಗ್ರಹಿಸಬಲ್ಲ ಪಕ್ಷ ಸ್ವಾಭಾವಿಕವಾಗಿ ಪ್ರಚಾರದಲ್ಲೂ ಇತರ ಚಟುವಟಿಕೆಗಳಲ್ಲೂ ಹೆಚ್ಚು ಹಣ ವಿನಿಯೋಗಿಸಿ, ಎಲ್ಲ ಸಾಧನಗಳನ್ನೂ ತನ್ನ ಪಕ್ಷದ ಹಾಗೂ ಪಕ್ಷದ ಉಮೇದುವಾರರ ಯಶಸ್ಸಿಗಾಗಿ ಸಮರ್ಥವಾಗಿ ಬಳಸಿಕೊಳ್ಳುತ್ತದೆ. ಈ ಅವಕಾಶ ಧನಬಲವಿಲ್ಲದ ಪಕ್ಷಕ್ಕೆ ಹಾಗೂ ಅಂಥ ಪಕ್ಷದ ಉಮೇದುವಾರರಿಗೆ ಲಭಿಸುವುದಿಲ್ಲ. ಹೀಗಾಗಿ ಪ್ರಜಾಪ್ರಭುತ್ವಕ್ಕೆ ಬುನಾದಿಯಂತಿರುವ ಸಮಾನ ಅವಕಾಶ ತತ್ತ್ವಕ್ಕೆ ಧನಸೌಲಭ್ಯ ಧಕ್ಕೆಯುಂಟುಮಾಡುತ್ತದೆ. ಇದಲ್ಲದೆ ದೊಡ್ಡ ಮೊತ್ತದಲ್ಲಿ ಹಣವನ್ನು ದೇಣಿಗೆಯಾಗಿ ಕೊಡುವವರು ಸಹ ಪ್ರತಿಫಲಾಪೇಕ್ಷೆಯಿಲ್ಲದೆ ಕೊಡಲಾರರು. ಜಯವಾದ ಅನಂತರ ರಾಯಭಾರಿ ಪದವಿ, ಕಾರ್ಪೊರೇಷನ್ ಅಧ್ಯಕ್ಷತೆ ಮುಂತಾದ ಸ್ಥಾನಗಳು ತಮ್ಮ ಹಿತಾಸಕ್ತಿಗೆ ಅನುಕೂಲವಾದಂಥ ಅಧಿನಿಯಮ ಸೌಲಭ್ಯಗಳು ಇಂಥಾ ದಾನಿಗಳಿಗೆ ದೊರೆಯುತ್ತವೆ. ಹೀಗೆ ವಿಶಿಷ್ಟ ಹಿತಾಸಕ್ತ ಗುಂಪು ಹಿತ್ತಲ ಬಾಗಿಲಿನಿಂದ ಸರ್ಕಾರವನ್ನು ನಿಯಂತ್ರಿಸುವ ಸ್ಥಿತಿ ಏರ್ಪಡುತ್ತದೆ.

**ಭಾರತದ ಚುನಾವಣೆಗಳು : ಪ್ರಧಾನಿ ಇಂದಿರಾ ಗಾಂಧಿಯವರಿಂದ ಮತದಾನ**

ಪ್ರಜಾಸತ್ತಾತ್ಮಕ ವ್ಯವಸ್ಥೆ ಪರಿಣಾಮಕಾರಿಯಾಗಿ ಕೆಲಸಮಾಡಲು ಪಕ್ಷಗಳೂ ಬೇಕು, ಚಟುವಟಿಕೆಗಳೂ ಬೇಕು. ಅದಕ್ಕಾಗಿ ಹಣವೂ ಬೇಕು. ಆದರೆ ವಿವಿಧ ಪಕ್ಷಗಳ ಧನಾನುಕೂಲದ ಅಸಮಾನತೆಯನ್ನು ಕಡಿಮೆಮಾಡಿ ಚುನಾವಣೆ ನ್ಯಾಯಸಮ್ಮತವಾಗುವಂತೆ ಮಾಡಲು ಪ್ರಯತ್ನ ನಡೆಸಬೇಕಾದ್ದು ಅಗತ್ಯ. ಪಕ್ಷಗಳು ಶೇಖರಿಸುವ ಧನದ ಮೂಲವನ್ನು ಬಹಿರಂಗಪಡಿಸಬೇಕು. ಅಂದರೆ ಯಾವ ಪಕ್ಷ ಎಂಥ ಹಣದಿಂದ ಪೋಷಿತವಾಗಿದೆ ಯೆಂಬುದು ಮತದಾರರಿಗೆ ತಿಳಿಯಬೇಕು. ಇಂಥ ಹಣದ ಬಳಕೆಯ ಮೇಲೆ ಹತೋಟಿ, ಲೆಕ್ಕಪತ್ರಗಳ ಪ್ರಕಟಣೆ ಕಡ್ಡಾಯವಾಗಬೇಕು. ದೇಣಿಗೆಗಳ ಮೊತ್ತಕ್ಕೆ ಒಂದು ಗರಿಷ್ಠ ಮಿತಿ ಏರ್ಪಡಬೇಕು. ಇವೆಲ್ಲ ಸ್ವಲ್ಪಮಟ್ಟಿಗೆ ಭಾರತದ ಕೆಲವು ರಾಜ್ಯಗಳಲ್ಲಿ ಜಾರಿಯಲ್ಲಿ ಬಂದಿವೆಯಾದರೂ ಇವುಗಳ ಪರಿಣಾಮಕತೆ ಇನ್ನೂ ಹೆಚ್ಚಬೇಕಾಗಿದೆ. ಉಮೇದುವಾರನಾಗುವ ಸ್ವಾತಂತ್ರ್ಯ, ಸಮಾನ ಅವಕಾಶ (ಧನದ ದೃಷ್ಟಿಯಿಂದ), ಪಕ್ಷಗಳು ಉಮೇದುವಾರನಿ

ಗಾಗಿಯೂ ಪಕ್ಷಕ್ಕಾಗಿಯೂ ವೆಚ್ಚ ಮಾಡುವ ಸ್ವಾತಂತ್ರ್ಯ, ಉಮೇದುವಾರರನ್ನು ನಾಮನಿರ್ದೇಶ ಮಾಡುವ ಸ್ವಾತಂತ್ರ್ಯ, ಪಕ್ಷಗಳ ಚಟುವಟಿಕೆಗಳಿಗಾಗಿ ಧನ ಸಂಗ್ರಹಿಸುವ ಸ್ವಾತಂತ್ರ್ಯಗಳೂ ಈಗ ಯೋಗ್ಯ ಪ್ರಮಾಣದಲ್ಲಿ ದೊರೆತಿವೆ. ಆದರೆ ಇಂಥ ಸ್ವಾತಂತ್ರ್ಯವೇ ಕೆಲವು ಸಮಸ್ಯೆಗಳಿಗೆ ಕಾರಣವಾಗಿದೆ. ಅವಕ್ಕೆ ಪರಿಹಾರ ಇನ್ನೂ ಸಿಗಬೇಕಾಗಿದೆ.

**ಅಸ್ವತಂತ್ರ, ನ್ಯಾಯಸಮ್ಮತವಲ್ಲದ ಚುನಾವಣೆ**

ಚುನಾವಣೆಯೂ ಒಂದು ಕ್ರೀಡೆ. ಕ್ರೀಡೆಗಳಲ್ಲಿ ಕೆಲವು ಸರ್ವಸಮ್ಮತ ನಿಯಮಗಳನ್ನು ಪಾಲಿಸಬೇಕಾಗುವಂತೆ ಚುನಾವಣೆಯಲ್ಲೂ ಪಾಲಿಸಬೇಕಾಗುತ್ತದೆ. ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದರಿಂದ ಹಿಡಿದು ಚುನಾವಣೆಯ ಫಲಿತಾಂಶ ಪ್ರಕಟಣೆ, ಅದರ ವಿವಾದಗಳೆಲ್ಲದರ ಇತ್ಯರ್ಥ–ಇವುಗಳವರೆಗೂ ಮತದಾರ, ಉಮೇದುವಾರ, ಅಧಿಕಾರಿಗಳು, ಪಕ್ಷಗಳು, ಅಧಿಕಾರದಲ್ಲಿ ಇರುವ ಸರ್ಕಾರ–ಎಲ್ಲರೂ ಪಾಲಿಸಬೇಕಾದ ನಿಯಮಗಳಿವೆ. ಇವರಲ್ಲಿ ಯಾರೇ ಅತಿಕ್ರಮಿಸಿದರೂ ಚುನಾವಣೆ ನ್ಯಾಯಸಮ್ಮತವಾಗಿರುವುದಕ್ಕೆ ಭಂಗ ಉಂಟಾಗುತ್ತದೆ. ಲಂಚ, ಬೆದರಿಕೆ, ಅಧಿಕಾರದ ದುರುಪಯೋಗ ಇವು ಚುನಾವಣೆಗೆ ಅನ್ಯಾಯ ಮಾಡುವ ಮೂರು ಪ್ರಧಾನ ದೋಷಗಳು. ಮತದಾರರಿಗೆ, ಉಮೇದುವಾರರಿಗೆ, ಅಧಿಕಾರಿಗಳಿಗೆ,

ಹಿಮಾಚಲ ಪ್ರದೇಶದ ಮತಗಟ್ಟೆಯೊಂದರಲ್ಲಿ

ಸ್ಥಾನಿಕ ಮುಖಂಡರಿಗೆ ಲಂಚ ಕೊಡಬಹುದು, ಕೊಡಿಸಬಹುದು, ಲಂಚದ ಆಸೆ ಹುಟ್ಟಿಸಬಹುದು. ಪಕ್ಷದ ಧನ ಮತ್ತು ಜನ ಬಲದಿಂದ ಆಳುವ ಸರ್ಕಾರಿ ಶಕ್ತಿಯಿಂದ ಬೆದರಿಕೆ ಹಾಕಬಹುದು. ಆಳುವ ಸರ್ಕಾರದ ಮಂತ್ರಿಗಳು ಚುನಾವಣೆ ಹತ್ತಿರವಿರುವಾಗ ವಿಶಿಷ್ಟ ಕ್ಷೇತ್ರಗಳಲ್ಲಿ ಸರ್ಕಾರಿ ವೆಚ್ಚದ ವಿಶೇಷ ಸೌಲಭ್ಯಗಳನ್ನು ಏರ್ಪಡಿಸಬಹುದು. ಕಾಮಗಾರಿಗಳನ್ನು ಮಾಡಿಸಬಹುದು. ಇವು ಲಂಚ ಅಥವಾ ಅಕ್ರಮವರ್ತನೆಯನ್ನು ವಿರೋಧಿಸುವ ಕಾನೂನಿನ ಪರಿಮಿತಿಯಲ್ಲಿ ಬರದಿದ್ದರೂ, ಅಧಿಕಾರದ ದುರುಪಯೋಗದಿಂದ ಮತದಾರರ ಮೇಲೆ ಪ್ರಭಾವಬೀರುವ ಪ್ರಯತ್ನವಂತೂ ಆಗುತ್ತದೆ. ಜಾತೀಯ ಉಚ್ಚನೀಚ ಭಾವಗಳನ್ನು ಉದ್ರೇಕಿಸುವ ಅಥವಾ ಪೋಷಿಸುವ ಮೂಲಕ ಮತ್ತು ಧರ್ಮಗುರುಗಳನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುವ ಮೂಲಕ ಮತದಾರರ ಮೇಲೆ ಒತ್ತಡ ತರಬಹುದು. ಮತದಾರರಿಗೆ ಭೋಜನ, ಮಾದಕ ಪಾನೀಯ, ವಾಹನಸೌಕರ್ಯಗಳ ಏರ್ಪಾಟು ಮುಂತಾದುವುಗಳ ಮೂಲಕ ಅವರ ಅಭಿಪ್ರಾಯವನ್ನು ಕೊಂಡುಕೊಳ್ಳಬಹುದು. ಸಾಹುಕಾರರ ಪ್ರಭಾವವನ್ನು ಸಾಲಗಾರರ ಮೇಲೆ, ಜಮೀನುದಾರರ ಪ್ರಭಾವವನ್ನು ಗೇಣಿದಾರರ ಮೇಲೆ, ಕಾರ್ಖಾನೆ ಮಾಲೀಕರ ಪ್ರಭಾವವನ್ನು ಕೂಲಿಗಾರರ ಮೇಲೆ ಪ್ರಯೋಗಿಸಬಹುದು. ಇಂಥ ದುರ್ವ್ಯವಹಾರಗಳನ್ನು ಅನೇಕ ದೇಶಗಳಲ್ಲಿ–ಭಾರತದಲ್ಲಿ ಸಹ–ಹೆಚ್ಚು ಕಡಿಮೆ ಪ್ರಮಾಣಗಳಲ್ಲಿ ಇರುವುದು ಕಂಡುಬಂದಿದೆ. ಇವೆಲ್ಲವೂ ಚುನಾವಣೆಗಳ ಪಾವಿತ್ರ್ಯವನ್ನು ಹಾಳುಮಾಡುತ್ತವೆ. ಇವುಗಳ ವಿರುದ್ಧ ಪ್ರಬಲವಾದ ಜನಾಭಿಪ್ರಾಯ ನಿರ್ಮಾಣವಾಗಬೇಕಾಗಿದೆ.

ಮತದಾನದ ಕಾಲದಲ್ಲಿ ಅಂಗವಿಕಲರ ಜೊತೆಗೆ ಅವರಿಗೆ ಸಹಾಯಕರಾಗಿ ಬರುವವರು ಅನೇಕ ಸಲ ಮತದಾರರ ಇಚ್ಛೆಯ ವಿರುದ್ಧ ಮತ ಹಾಕಬಹುದು. ಒಬ್ಬನ ಮತವನ್ನು ಮತ್ತೊಬ್ಬ ಬಂದು ಹಾಕಿ ಹೋಗಿಬಿಡಬಹುದು. ಕೆಲವು ಸಲ ಒಂದು ಪಕ್ಷದವರು ತಮ್ಮ ಬೆಂಬಲಿಗರನ್ನೇ ಮೊದಲು ಮತಗಟ್ಟೆಗೆ ತಂದು ನಿಲ್ಲಿಸಿ, ಇತರ ಮತದಾರರು ಮತಕೊಡಲು ಸಮಯ ಸಿಗದಂತೆ ಮಾಡಬಹುದು. ಮತಪೆಟ್ಟಿಗೆಗಳನ್ನು ಸಾಗಿಸುವಾಗ–ವಿವಿಧ ಹಂತಗಳಲ್ಲಿ–ಅವನ್ನು ಬದಲಾಯಿಸಬಹುದು. ಮತಗಣನೆಯಾಗುವಾಗಲೂ ಅಕ್ರಮವಾಗಬಹುದು. ಇವೆಲ್ಲಕ್ಕೂ ಸಂಬಂಧಿಸಿದ ಕಾನೂನುಗಳಿವೆ; ವಿಚಾರಣಾಕ್ರಮವಿದೆ. ಆದರೆ ವಿಚಾರಣೆಯ ವಿಳಂಬದಿಂದ ಚುನಾವಣೆಯ ಅನ್ಯಾಯಗಳಿಗೆ ಬೆಂಬಲ ದೊರಕುತ್ತದೆ. ಕಾನೂನುಗಳಿದ್ದರೂ ಈ ದುರ್ವ್ಯವಹಾರಗಳನ್ನು ಸಂಪೂರ್ಣ ನಿರ್ಮೂಲ ಮಾಡುವುದಾಗಿಲ್ಲ. ಶಾಸನಗಳ ಹಿಡಿತಕ್ಕೆ ಸಿಕ್ಕದ ಎಷ್ಟೋ ಅಕ್ರಮಗಳು ನಡೆಯಬಹುದು. ಈ ದುರ್ವ್ಯವಹಾರಗಳು ಮತ್ತು ಅಕ್ರಮಗಳು ವ್ಯಕ್ತಿಗಳಿಂದ, ಗುಂಪುಗಳಿಂದ ಆದಾಗ ಅವನ್ನು ಹೇಗೋ ತಡೆಯಲು ಪ್ರಯತ್ನಿಸಬಹುದು. ಅದರೆ ಆಳುವ ಸರ್ಕಾರದಿಂದಲೇ ಅಕ್ರಮವಾಗುವುದಾದರೆ ಅದನ್ನು ತಡೆಯುವುದು ಕಷ್ಟಸಾಧ್ಯ. ಆಳುವ ಪಕ್ಷ ಸ್ವಾಭಾವಿಕವಾಗಿ ತಾನು ಮತ್ತೊಮ್ಮೆ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿರುತ್ತದೆ. ಆದ್ದರಿಂದ ಚುನಾವಣೆಯ ಕಾರ್ಯನಿರ್ವಹಣೆಯೆಲ್ಲ ಸರ್ಕಾರದ ನಿಯಂತ್ರಣದಲ್ಲಿ ಇರುವುದು ಅಪಾಯಕರವೆಂದು ಭಾವಿಸಲಾಗಿದೆ.

ಅಮೆರಿಕದಲ್ಲಿ ಚುನಾವಣೆಗಳು : ಬರಾಕ್ ಒಬಾಮರವರಿಂದ ಪ್ರಚಾರ ಭಾಷಣ

**ಭಾರತದ ಚುನಾವಣಾ ಆಯೋಗ :** ಚುನಾವಣೆ ಹಾಗೂ ಅದರ ಅಂಗಸಂಸ್ಥೆಗಳು ಆಳುವ ಸರ್ಕಾರದ ಹತೋಟಿಯಲ್ಲಿ ಇರಕೂಡದೆಂಬ ವಿಚಾರವನ್ನು ಅನುಸರಿಸಿಯೇ ಭಾರತದ ಸಂವಿಧಾನದಲ್ಲಿ ಪ್ರತ್ಯೇಕ ಚುನಾವಣಾ ಆಯೋಗದ ನೇಮಕಕ್ಕೆ ಅವಕಾಶ ಮಾಡಿಕೊಡಲಾಗಿದೆ. ಚುನಾವಣೆಗಳ ಮೇಲ್ವಿಚಾರಣೆ ನಿರ್ದೇಶನ ಹಾಗೂ ನಿಯಂತ್ರಣವೆಲ್ಲ ಈ ಆಯೋಗದ ಅಧಿಕಾರದಲ್ಲಿದೆ. ರಾಷ್ಟ್ರಾಧ್ಯಕ್ಷರೇ ನೇಮಿಸುವ ಈ ಆಯೋಗದಲ್ಲಿ ಮುಖ್ಯ ಚುನಾವಣಾ ಕಮಿಷನರೂ ಸದಸ್ಯ ಕಮಿಷನರೂ ಇರುತ್ತಾರೆ. ಪ್ರಾದೇಶಿಕ ಚುನಾವಣಾ ಕಮಿಷನರುಗಳನ್ನೂ ಹೀಗೇ ನೇಮಿಸಲಾಗುತ್ತದೆ. ಸಂವಿಧಾನದ ನಿಯಮಗಳ ಪ್ರಕಾರ

ಭಾರತದ ಐದನೆಯ ಮಹಾಚುನಾವಣೆಗಳು (1971). ಪಶ್ಚಿಮ ಬಂಗಾಳದ ಬೋಲ್ಪುರದಲ್ಲಿ ಇಂದಿರಾಗಾಂಧಿಯವರ ಚುನಾವಣಾ ಪ್ರಚಾರದ ಒಂದು ದೃಶ್ಯ

ಮುಖ್ಯ ಚುನಾವಣಾ ಕಮಿಷನರನ ನೇಮಕವನ್ನು ಪರಮೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ವಜಾ ಮಾಡುವ ರೀತಿಯಲ್ಲಿ ಮಾತ್ರ ವಜಾ ಮಾಡಲು ಶಕ್ಯವಿದೆ. ಹೀಗೆ ಕಾರ್ಯಾಂಗದಿಂದ ಈ ಆಯೋಗ ಸಂಪೂರ್ಣ ಸ್ವತಂತ್ರವಾಗಿರಲು ಅವಕಾಶ ಒದಗಿಸಲಾಗಿದೆ. ಭಾರತ ಒಕ್ಕೂಟಕ್ಕೆ ಸಂಬಂಧಿಸಿದ ರಾಷ್ಟ್ರಪತಿಗಳೂ ರಾಜ್ಯಗಳಲ್ಲಿ ರಾಜ್ಯಪಾಲರೂ ಈ ಆಯೋಗಕ್ಕೆ, ಇದರ ಅಂಗಸಂಸ್ಥೆಗಳಿಗೆ ಸಿಬ್ಬಂದಿ ಒದಗಿಸುವ ಹೊಣೆ ಹೊತ್ತಿದ್ದಾರೆ.

ಇಷ್ಟೆಲ್ಲ ಇದ್ದರೂ ಚುನಾವಣಾ ಆಯೋಗ ಹಾಗೂ ಸಿಬ್ಬಂದಿ ಸರ್ಕಾರದ ಹಿಡಿತದಿಂದ, ಪ್ರಭಾವದಿಂದ ಮುಕ್ತವಾಗಿದೆಯೆ? – ಎಂದು ಪ್ರಶ್ನಿಸಲಾಗುತ್ತಿದೆ. ಏಕೆಂದರೆ ಚುನಾವಣಾ ಆಯೋಗಕ್ಕೆ ಪ್ರತ್ಯೇಕವಾದ ಸಿಬ್ಬಂದಿಯಿಲ್ಲ. ಪ್ರತ್ಯೇಕ ಸಿಬ್ಬಂದಿ ವ್ಯವಸ್ಥೆ ಅಸಾಧಾರಣ

ಪೆಚ್ಚದ್ದಾಗುವುದೇನೋ ನಿಜ. ಮತದಾರರ ಪಟ್ಟಿ ಮತ್ತು ಮತಕ್ಷೇತ್ರಗಳನ್ನು ತಯಾರಿಸುವವರು, ಚುನಾವಣೆ ನಡೆಸುವವರು–ಇವರೆಲ್ಲ ಸದ್ಯಕ್ಕಂತೂ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮಮಟ್ಟಗಳ ರೆವಿನ್ಯೂ ಇಲಾಖೆಯ ಮತ್ತು ಇತರ ಇಲಾಖೆಗಳ ಅಧಿಕಾರಿಗಳು. ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳು ಸಹ ಆಡಳಿತಸೇವೆಗೆ ಸಂಬಂಧಿಸಿದವರು. ಇವರೆಲ್ಲ ಅಂತಿಮವಾಗಿ ರಾಜ್ಯಸರ್ಕಾರಗಳ ಮಂತ್ರಿಗಳಿಗೆ ವಿಧೇಯರೆಂಬುದನ್ನು ಮರೆಯಲಾಗುವುದಿಲ್ಲ. ಈ ಸ್ಥಿತಿಯಲ್ಲಿ ಚುನಾವಣೆಗಳನ್ನು ತತ್ಕಾಲೀನ ಸರ್ಕಾರದ ಹತೋಟಿಯಿಂದ ಬೇರ್ಪಡಿಸುವುದು ದುಸ್ಸಾಧ್ಯವಾಗಬಹುದು. ಮಂತ್ರಿಗಳು ಅಧಿಕಾರಿಗಳ ಮೇಲೆ ಪ್ರಭಾವ ಬೀರದಿರುವ, ಚುನಾವಣಾ ಅಧಿಕಾರಿಗಳು ಅಂಥ ಪ್ರಭಾವವನ್ನು ವಿರೋಧಿಸುವ, ಅದರಿಂದ ದೂರವಿರುವ ಆರೋಗ್ಯಕರ ಸಂಪ್ರದಾಯ ಬೆಳೆದರೆ ಮಾತ್ರ ಈ ವಿಚಾರದಲ್ಲಿ ಒಳ್ಳೆಯ ಫಲಿತಾಂಶವನ್ನು ನಿರೀಕ್ಷಿಸಬಹುದು.

ಚುನಾವಣಾ ಆಯೋಗಕ್ಕೆ ಪ್ರತ್ಯೇಕವಾದ ಸಿಬ್ಬಂದಿಯಿದ್ದು, ಅದು ಸ್ವತಂತ್ರವಾಗಿದ್ದರೂ ತತ್ಕಾಲೀನ ಸರ್ಕಾರ ಪರೋಕ್ಷವಾಗಿ ಚುನಾವಣೆಯನ್ನು ನಿಯಂತ್ರಿಸುವುದು ಶಕ್ಯವಿದೆ. ಪ್ರಜಾಪ್ರಭುತ್ವಕ್ಕೆ ವಾಕ್‌ಸ್ವಾತಂತ್ರ್ಯ, ಪತ್ರಿಕಾಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ, ಚಲನವಲನ ಸ್ವಾತಂತ್ರ್ಯ, ಸಭೆ ಸಮ್ಮೇಳನ ಸ್ವಾತಂತ್ರ್ಯ ಇವೆಲ್ಲ ಅಗತ್ಯ. ಇವೆಲ್ಲಕ್ಕೂ ಸಂವಿಧಾನದಲ್ಲಿ ಪ್ರಾಶಸ್ತ್ಯ ಕೊಡಲಾಗಿದೆ. ಇವಕ್ಕೆ ಸರ್ಕಾರ ಸಮಯಾನುಸಾರ ತಡೆಯುಂಟುಮಾಡಿದರೆ ಪರಿಹಾರಕ್ಕಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ದೂರೊಯ್ಯಬಹುದು. ಜನರೂ ಪಕ್ಷಗಳೂ ಇಂಥ ಸ್ವಾತಂತ್ರ್ಯಗಳ ದುರುಪಯೋಗವನ್ನು ಹೇಗೆ ಮಾಡಿಕೊಳ್ಳಬಹುದೋ ಹಾಗೆ ಸರ್ಕಾರವೂ ತನ್ನಲ್ಲಿರುವ ಅಸಾಧಾರಣ ಅಧಿಕಾರಗಳನ್ನು ದುರುಪಯೋಗಪಡಿಸಿಕೊಳ್ಳಬಹುದು. ಎಲ್ಲ ಪ್ರಜಾಪ್ರಭುತ್ವಗಳೂ ಎದುರಿಸಬೇಕಾಗಿರುವ ದೊಡ್ಡ ಸಮಸ್ಯೆ ಇದು.

**ಮತದಾರನ ಕರ್ತವ್ಯ :** ಚುನಾವಣೆಯಲ್ಲಿ ಮತದಾನ ಅತ್ಯಂತ ಮಹತ್ತ್ವದ ಹಾಗೂ ಅಂತಿಮ ಘಟ್ಟ. ಮತದಾರರ ಪಟ್ಟಿ ತಯಾರಿಕೆ, ಕ್ಷೇತ್ರ ನಿರ್ಧಾರ, ಉಮೇದುವಾರನ ನಾಮಕರಣ, ಆತನ ನಾಮನಿರ್ದೇಶ ಪತ್ರದ ಪರಿಶೀಲನೆ, ಮತದಾನದ ವ್ಯವಸ್ಥೆ, ಪಕ್ಷಗಳಿಂದ ತಮ್ಮ ನೀತಿ ಮತ್ತು ಕಾರ್ಯಕ್ರಮಗಳ ಘೋಷಣೆ, ಉಮೇದುವಾರರ ಬಗ್ಗೆ ಪ್ರಚಾರ, ಇದೆಲ್ಲ ನಡೆಯುವುದು ಮತದಾನ ಅನುಕೂಲಕರವಾಗಿಯೂ ಅರ್ಥಪೂರ್ಣವಾಗಿಯೂ ಆಗಬೇಕೆಂದೇ. ನಾಗರಿಕನ ಮತ ಅಮೂಲ್ಯವಾದ್ದು; ಅದರ ಮಹತ್ತ್ವವನ್ನರಿತು ಆತ ತನ್ನ ಹಕ್ಕನ್ನು ಚಲಾಯಿಸುತ್ತಾನೆ ಎಂಬ ನಂಬಿಕೆಯಿಂದಲೇ ಇದೆಲ್ಲ ಜರುಗುತ್ತದೆ.

ಭಾರತದಲ್ಲಿ ಇದುವರೆಗೆ ನಡೆದ ಚುನಾವಣೆಗಳಲ್ಲಿ ಮತದಾರರಲ್ಲಿ ಬಹಳ ಜನ ತಮ್ಮ ಮತಗಳನ್ನು ಚಲಾಯಿಸದಿರುವುದು ಕಂಡುಬಂದಿದೆ. ಇತರ ದೇಶಗಳಲ್ಲಿ ಕೂಡ ಹಲವರು ಮತ ನೀಡದಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಹೆಂಗಸರಿಗಿಂತ ಗಂಡಸರು, ಕಡಿಮೆ ಓದಿದವರಿಗಿಂತಲೂ ಹೆಚ್ಚು ವಿದ್ಯಾವಂತರು, ಗ್ರಾಮೀಣ ಜನತೆಗಿಂತ ನಗರವಾಸಿಗಳು, 33–35ರ ನಡುವಣ ವರ್ಷ ವಯಸ್ಸುಗಳವರು, ಕಿರಿಯರಿಗಿಂತ ಹಿರಿಯರು, ಅವಿವಾಹಿತರಿಗಿಂತ ವಿವಾಹಿತರು, ಬಿಡಿಜನರಿಗಿಂತ ಹೆಚ್ಚಾಗಿ ಸಂಸ್ಥೆಗಳ ಸದಸ್ಯರು ಮತದಾನಗಳಲ್ಲಿ ಭಾಗವಹಿಸುವುದು ಅಮೆರಿಕ, ಆಸ್ಟ್ರೇಲಿಯ ಮತ್ತು ಐರೋಪ್ಯ ದೇಶಗಳಲ್ಲಿ ಕಂಡುಬಂದಿದೆ.

ಭಾರತದಲ್ಲಿ ಮತದಾನದಲ್ಲಿ ಭಾಗವಹಿಸದೆ ಇರುವವರ ಅಧಿಕ ಸಂಖ್ಯೆ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾಗಿದೆ. ಮತದಾರರಲ್ಲಿ ಅನೇಕರಿಗೆ ಮತದಾನದಲ್ಲಿ ಆಸಕ್ತಿಯಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಇದರ ಪರಿಣಾಮವಾಗಿ ಅಲ್ಪಸಂಖ್ಯಾತ ಮತಗಳಿಸಿದ ಪಕ್ಷಗಳು ಸರ್ಕಾರ ರಚಿಸುವಂಥ, ಪ್ರಜಾಪ್ರಭುತ್ವ ತತ್ತ್ವಕ್ಕೆ ಸಲ್ಲದ ಪರಿಸ್ಥಿತಿ ಬರಬಹುದು. ಸಮಾಜದ ಎಷ್ಟೋ ಅಂಗಗಳಿಗೆ ಪ್ರಾತಿನಿಧ್ಯ ಸಿಗದೆ ಹೋಗುತ್ತದೆ.

ಮತದಾರರ ಅನಾಸಕ್ತಿಯೂ ಒಂದು ಬಗೆಯ ಪ್ರತಿಭಟನೆ; ಸರ್ಕಾರದ ನೀತಿಯ ಬಗ್ಗೆ ಜನ ತೋರಿಸುವ ಅಸಮ್ಮತಿ; ಪಕ್ಷಗಳು ನಿಲ್ಲಿಸಿದ ಉಮೇದುವಾರರಲ್ಲಿ ತಮಗೆ ನಂಬಿಕೆಯಿಲ್ಲವೆಂದು ಜನ ಘೋಷಿಸಿದ ಹಾಗೆ. ಮಹಾತ್ಮ ಗಾಂಧಿಯವರು ಸಹ 1920ರ ಚುನಾವಣೆಗಳನ್ನು ಬಹಿಷ್ಕರಿಸಲಿಲ್ಲವೆ?–ಎಂದು ವಾದಿಸುವವರೂ ಇದ್ದಾರೆ. ಆದರೆ ಆಗ ಪ್ರಜಾಪ್ರಭುತ್ವ ಇರಲಿಲ್ಲ. ಭಾರತದಲ್ಲಿ ಪ್ರಜಾಪ್ರಭುತ್ವ ಸ್ಥಿರವಾಗಬೇಕಾಗಿದೆ. ಸರ್ಕಾರದ ನೀತಿಯ ಮೇಲೆ ಹತೋಟಿ ಸಂಪಾದಿಸಲು ಬೇರೆ ಉಪಾಯಗಳಿರಬಹುದಾದರೂ ಮತದಾನ ಅತ್ಯಂತ ಮಹತ್ತ್ವದ ವಿಧಾನ. ಸಂತಾನಂ ಸಮಿತಿಯವರು ಕಡ್ಡಾಯ ಮತದಾನವನ್ನು ವಿಧಿಸುವ ಸೂಚನೆ ಮಾಡಿದರು. ಈ ಸೂಚನೆಗೆ ಬಹಳ ವಿರೋಧವಿದೆಯಾದರೂ ಭಾರತದಂಥ ದೇಶದಲ್ಲಿ ಇರುವ ವಿಶಿಷ್ಟ ಸನ್ನಿವೇಶಗಳ ದೃಷ್ಟಿಯಿಂದ ಇದನ್ನು ಪರಿಶೀಲಿಸಬೇಕಾಗಿದೆ. ಪ್ರಜಾಪ್ರಭುತ್ವ ಪದ್ಧತಿಯನ್ನು ಒಪ್ಪಿಕೊಂಡ ನಾಗರಿಕನ ಮೇಲೆ ಇರುವ ಮುಖ್ಯ ಕರ್ತವ್ಯಗಳು ಮೂರು: ಮತದಾನ ಮಾಡುವುದು, ಪ್ರಾಮಾಣಿಕವಾಗಿ ಮತದಾನ ಮಾಡುವುದು ಮತ್ತು ಜಾಣತನದಿಂದ ಮತದಾನ ಮಾಡುವುದು. ಈ ಕರ್ತವ್ಯಗಳ ನಿರ್ವಹಣೆ ಆಗದಿದ್ದರೆ ಚುನಾವಣೆ ಸ್ವತಂತ್ರ ಹಾಗೂ ನ್ಯಾಯ ಎನಿಸಲಾರದು. (ಜಿ.ಆರ್.ವಿ.)

**ಚುನಿ ಗೋಸ್ವಾಮಿ :** 1938–. ಹೆಸರಾಂತ ಭಾರತೀಯ ಫುಟ್‌ಬಾಲ್ ಆಟಗಾರ; ಹುಟ್ಟೂರು ಕಲ್ಕತ್ತ, ನಿಜನಾಮ ಸುಬೀಮಲ್ ಗೋಸ್ವಾಮಿ. ಬಂಗಾಳದ ಪ್ರಸಿದ್ಧ ಫುಟ್‌ಬಾಲ್ ಕೋಚ್ ಬಿ.ಡಿ. ಚಟರ್ಜಿಯವರಿಂದ ನೇರವಾಗಿ ತರಬೇತಿ ಪಡೆದರು. ಚುನಿ ಗೋಸ್ವಾಮಿ ಉತ್ತಮ ಫಾರ್ವರ್ಡ್ ಆಟಗಾರ. 1954ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ಪಂದ್ಯದಲ್ಲಿ ಭಾಗವಹಿಸಿ ಬಹು ಬೇಗ ರಾಷ್ಟ್ರಿಯ ಆಟಗಾರರಾದರು. 1958 ಮತ್ತು 1962ರ ಏಷ್ಯನ್ ಕ್ರೀಡಾಕೂಟ ಮತ್ತು 1960ರ ರೋಮ್ ಒಲಿಂಪಿಕ್ ಪಂದ್ಯಗಳಲ್ಲಿ ಭಾಗವಹಿಸಿದರು. 1960ರಿಂದ ಮೋಹನ್ ಬಗಾನ್ ಮತ್ತು ಬಂಗಾಳ ರಾಜ್ಯ ತಂಡಗಳ ನಾಯಕರಾದರು. 1962ರಿಂದ ಭಾರತೀಯ ಫುಟ್‌ಬಾಲ್ ತಂಡದ ನಾಯಕರಾದರು.



80ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಿದ ಚುನಿ ಗೋಸ್ವಾಮಿ 500ಕ್ಕೂ ಹೆಚ್ಚು ಗೋಲುಗಳನ್ನು ಹೊಡೆದಿದ್ದಾರೆ. 1963ರಲ್ಲಿ ಇವರಿಗೆ ಅರ್ಜುನ ಪ್ರಶಸ್ತಿ ದೊರಕಿತು. 1967ರಿಂದ 1969ರವರೆಗೆ ಆಲ್ ಇಂಡಿಯಾ ಕೌನ್ಸಿಲ್ ಆಫ್ ಸ್ಪೋರ್ಟ್ಸ್ ಸಮಿತಿಯ ಸದಸ್ಯರಾಗಿದ್ದರು.

ಇವರು ಉತ್ತಮ ಕ್ರಿಕೆಟ್ ಆಟಗಾರರೂ ಹೌದು. ರಣಜಿ ಮತ್ತು ದುಲೀಪ್ ಟ್ರೋಫಿ ಕ್ರಿಕೆಟ್ ಪಂದ್ಯಗಳಲ್ಲಿ ಭಾಗವಹಿಸಿದ್ದಾರೆ. 1972ರ ರಣಜಿ ಪಂದ್ಯಗಳಲ್ಲಿ ಇವರು ಬಂಗಾಳ ತಂಡದ ನಾಯಕರಾಗಿದ್ದರು. (ಎಸ್.ಎಚ್.)

**ಚುರುಚುರುಕೆ ಗಿಡ :** ಆರ್ಟಿಕೇಸೀ ಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಕಾಡುಸಸ್ಯ (ಸ್ಟಿಂಗಿಂಗ್ ನೆಟಲ್). ಅರ್ಟಿಕ ಡಯಾಯಿಕ ಇದರ ಶಾಸ್ತ್ರೀಯ ಹೆಸರು. ಸಾಧಾರಣವಾಗಿ ಬಯಲು ಪ್ರದೇಶದಲ್ಲಿ ಕಂಡುಬರುತ್ತದೆ. ಸು. 1 ಮೀ. ಎತ್ತರಕ್ಕೆ ಬೆಳೆಯುವ ಮೂಲಿಕೆ ಸಸ್ಯ ಇದು. ಪ್ರತಿಯೊಂದು ಗಿಣ್ಣಿನ ಮೇಲೆ 4 ಚಿಕ್ಕ ವೃಂತಪರ್ಣಗಳಿವೆ. ಎಲೆಗಳು ಸರಳರೀತಿಯವು. ಅವುಗಳ ಆಕಾರ ಅಂಡದಂತೆ ; ಉದ್ದ 5–7.5 ಸೆಂಮೀ.; ತುದಿ ಚೂಪು ; ಅಂಚು ಗರಗಸದಂತೆ ; ಎಲೆಗಳ ಹಾಗೂ ಕಾಂಡದ ಮೇಲೆ ಬಿರುಸಾದ ರೋಮಗಳಿವೆ. ಇವು ಏಕಕೋಶಿಗಳು. ಇವುಗಳ ತಳಭಾಗ ಅಂಡಾಕೃತಿಯದಾಗಿದ್ದು, ಮೇಲ್ಭಾಗ ಚಾವಟಿಯಂತಿದೆ. ಚಾವಟಿಯಂತಿರುವ ಭಾಗ ಮೈಗೆ ತಗುಲಿದಾಗ ಚರ್ಮದ ಒಳಹೊಕ್ಕು ಮುರಿಯುತ್ತದೆ. ತಳಭಾಗದಲ್ಲಿ ಅಂಡದಂತಿರುವ ಚೀಲದಲ್ಲಿ ಒಂದು ರೀತಿಯ ತೀಕ್ಷ್ಣರಸವಿದೆ. ಇದರಲ್ಲಿ ಅಸಿಟೈಲ್ ಕೋಲೀನ್ ಮತ್ತು ಹಿಸ್ಟಮೀನುಗಳಿವೆಯೆಂದು ತಿಳಿದುಬಂದಿದೆ. ಈ ರಸ ದೇಹದೊಳಗೆ ಸೇರಿದಾಗ ಚುರುಗುಟ್ಟುವುದರಿಂದಲೇ ಈ ಸಸ್ಯಕ್ಕೆ ಚುರುಚುರುಕೆ ಗಿಡ ಎಂದು ಹೆಸರು. ಇದರ ಕಾರ್ಯವಿಧಾನವನ್ನು ವೈದ್ಯರು ಉಪಯೋಗಿಸುವ ಪಿಚಕಾರಿಗೆ ಹೋಲಿಸಬಹುದು. ಹೂಗೊಂಚಲು ಅಂತ್ಯಾರಂಭಿ ಮಾದರಿಯದು ; ಇದರ ಉದ್ದ 10 ಸೆಂ.ಮೀ. ಹೂಗಳು ಸಣ್ಣವು ; ಏಕಲಿಂಗಿಗಳು ; ಆಕರ್ಷಕವಾಗಿಲ್ಲ. ಪತ್ರದಳಗಳು 4 ; ಕೇಸರಗಳು 4 ; ಮೊಗ್ಗಿನಲ್ಲಿ ಒಳಾಭಿಮುಖವಾಗಿ ಬಾಗಿರುತ್ತವೆ. ಹೂ ಅರಳಿದಾಗ ಪರಾಗಕೋಶದಿಂದ ಪರಾಗ ಸಣ್ಣಮೋಡದಂತೆ ಮೇಲೇಳುತ್ತದೆ. ಅಂಡಾಶಯ ಉಚ್ಚಸ್ಥಾನದ್ದು ; ಒಂದೇ ಕೋಶವಿದೆ, ಕೋಶದಲ್ಲಿ ಒಂದೇ ಅಂಡಕವಿದೆ. ಫಲ ಏಕೀನ್ ರೀತಿಯದು. ಫಲಗಳಿರುವ ಹೂಗೊಂಚಲು ಅಧೋಮುಖವಾಗಿರುತ್ತದೆ. ಪತ್ರದಳಗಳು ಫಲದಲ್ಲೂ ಉಳಿದಿರುತ್ತವೆ. ಇದರ ಕೆಲವು ಬಗೆಗಳಿಂದ ತೆಗೆದ ನಾರನ್ನು ನೇಯ್ದು ಬಟ್ಟೆ ಮಾಡುತ್ತಾರೆ. ಚುರುಕೆ ಗಿಡದ ರಸವನ್ನು ಮೂತ್ರಸಂಬಂಧಿ ಹಾಗೂ ಹೃದಯಸಂಬಂಧಿ ಕಾಯಿಲೆಗಳಲ್ಲಿ ಔಷಧಿಯಾಗಿ ಬಳಸುತ್ತಾರೆ. ಟಿಂಕ್ಚರ್ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ರಕ್ತಹೀನತೆ, ಸಂಧಿವಾತ, ಜ್ವರ ಹಾಗೂ ನೋವು ನಿವಾರಣೆಗಾಗಿ ಬಳಸುತ್ತಾರೆ. ತಲೆಹೊಟ್ಟು ತಡೆಯುವ ದ್ರಾವಣಗಳಲ್ಲಿಯೂ ಇದರ ಬಳಕೆ ಉಂಟು. ಚರ್ಮರೋಗಗಳಲ್ಲಿಯೂ ಸಹಕಾರಿ. ರಕ್ತಸ್ರಾವವನ್ನು ತಡೆಯುವಲ್ಲಿ ಬೇಕಾಗಿರುವ ವಿಟಮಿನ್ k ಯನ್ನು ಇದು ಹೆಚ್ಚು ಪ್ರಮಾಣದಲ್ಲಿ ಹೊಂದಿದೆ. ಇದರ ಸಸ್ಯವನ್ನು ವಿವಿಧ ದೇಶಗಳಲ್ಲಿ ಆಹಾರವಾಗಿ ಮತ್ತು ಅಡುಗೆಗಳಲ್ಲಿ ಬಳಸುತ್ತಾರೆ. ಗಿಡಗಳನ್ನು ನೀರಿನಲ್ಲಿ ನೆನೆಸುವುದರಿಂದ ಹಾಗೂ ಬೇಯಿಸುವುದರಿಂದ ಇದರ ಚುರುಗುಟ್ಟುವ ಗುಣ

ನಾಶವಾಗುತ್ತದೆ. ಯೂರೋಪಿನ ಕೆಲವು ಭಾಗಗಳಲ್ಲಿ ಇದರಿಂದ ವಿವಿಧ ರೀತಿಯ ಪಾನೀಯಗಳನ್ನು ತಯಾರಿಸುತ್ತಾರೆ. ಇದನ್ನು ಕೆಲವು ಸಿಹಿತಿಂಡಿಗಳನ್ನು ತಯಾರಿಸಲು ಬಳಸುತ್ತಾರೆ. ವಿವಿಧ ರೀತಿಯ ಕಡಿತಗಳನ್ನು ಶಮನ ಮಾಡುವ ಮುಲಾಮುಗಳ ತಯಾರಿಕೆಯಲ್ಲಿ ಇದನ್ನು ಬಳಸುತ್ತಾರೆ. ಇದರಲ್ಲಿ ಹೆಚ್ಚಿನ ನಾರು ಇರುವುದರಿಂದ ಇದನ್ನು ವಸ್ತ್ರಗಳನ್ನು ತಯಾರಿಸಲೂ ಹಾಗೂ ಬಣ್ಣ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. (ಸಿ.ಆರ್.ಎನ್)

**ಚೂಡಾಕರಣ :** ಇದನ್ನು ಚೌಲಕರ್ಮ ಎಂದೂ ಕರೆಯುವುದುಂಟು. ಸಾಧಾರಣವಾಗಿ ಮಗು ಹುಟ್ಟಿದ ಮೂರನೆಯ ವರ್ಷದಲ್ಲಿ, ಶುಭದಿನ, ಶುಭನಕ್ಷತ್ರದಲ್ಲಿ ಈ ಸಂಸ್ಕಾರವನ್ನು ಆಚರಿಸಲಾಗುವುದು. ಚೂಡಾಕರಣವನ್ನು ಎಲ್ಲ ಸ್ಮೃತಿಗಳಲ್ಲಿಯೂ ನಿರೂಪಿಸಲಾಗಿದೆ. ಚೂಡಾ ಎಂದರೆ ಕೇಶಚ್ಛೇದವಾದ ಮೇಲೆ ಶಿರದ ಮೇಲೆ ಉಳಿದಿರುವ ಕೇಶ. ಇದಕ್ಕೆ ಹೋಮವುಂಟು. 4 ಪಾತ್ರೆಗಳಲ್ಲಿ ಅಕ್ಕಿ, ಜವೆ, ಮಾಷ ಮತ್ತು ಎಳ್ಳುಗಳನ್ನಿಡಬೇಕು. ಶಿಶುವನ್ನು ತಾಯಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತನ್ನ ಪತಿಯೊಂದಿಗೆ ಹೋಮ ಮಾಡಬೇಕು. ಶಮಿ, ಗೋಮಯ, ದರ್ಭೆಗಳನ್ನೂ, ಉದುಂಬರ ವೃಕ್ಷದ ಕತ್ತಿ ಇಲ್ಲವೆ, ಕ್ಷೌರದ ಕತ್ತಿಯನ್ನೂ ಹೋಮ ಮಾಡುವಾಗ ಎದುರಿನಲ್ಲಿ ಇಟ್ಟುಕೊಳ್ಳಬೇಕು. ಅನಂತರ ತಂದೆಯಾದವ ಮಂತ್ರಪೂರ್ವಕವಾಗಿ ಮಗುವಿನ ಶಿರೋಭಾಗದ ಕೇಶವನ್ನು ಕತ್ತರಿಸಬೇಕು. ಹಾಗೆಯೇ ಎಡಭಾಗದಲ್ಲಿಯೂ ಕತ್ತರಿಸಬೇಕು. ಹೀಗೆ ಕತ್ತರಿಸಿದ ಕೇಶವನ್ನು ಶಮೀಪತ್ರದೊಂದಿಗೆ ತಾಯಿಯಾದವಳು ತೆಗೆದುಕೊಳ್ಳಬೇಕು. ಮಂತ್ರವನ್ನು ಉಚ್ಚರಿಸುತ್ತ ಹೀಗೆ 4 ಸಲ ಕತ್ತರಿಸಿದ ಅನಂತರ ಕ್ಷೌರಿಕನಿಂದ ಸರಿಮಾಡಿಸಿ ಮಗುವಿಗೆ ಅಭ್ಯಂಜನ ಮಾಡಿಸಬೇಕು. ಮಂತ್ರೋಚ್ಚಾರದಿಂದ ಕತ್ತರಿಸಿದ ಕೇಶವನ್ನು ಗೋಶಾಲೆಯಲ್ಲಿ ಇಲ್ಲವೆ ಸರೋವರದಲ್ಲಿ ಇಲ್ಲವೆ ಉದುಂಬರ ವೃಕ್ಷದ ಅಡಿಯಲ್ಲಿ ಹಾಕಬೇಕು. ಕ್ಷೌರಿಕನಿಗೆ ವಸ್ತ್ರಾದಿಗಳನ್ನು ದಾನಮಾಡಬೇಕು. ಬ್ರಾಹ್ಮಣರಿಗೆ ಭೋಜನ ಮಾಡಿಸಿ ದಾನ ದಕ್ಷಿಣೆಗಳನ್ನು ಕೊಡಬೇಕು. ಹಿಂದೆ ಹೆಣ್ಣು, ಗಂಡು ಮಕ್ಕಳಿಬ್ಬರಿಗೂ ಈ ಸಂಸ್ಕಾರವಿತ್ತು. ಹೆಣ್ಣುಮಕ್ಕಳಿಗೆ ಕೇಶಚ್ಛೇದ ಮಾಡುವಾಗ ಮಂತ್ರವಿಲ್ಲ. ಕೆಲವು ಸ್ಮೃತಿಗಳು ಉಪನಯನ ಕಾಲದಲ್ಲಿಯೇ ಇದನ್ನು ಮಾಡಬಹುದೆಂದು ಹೇಳಿವೆ. ಸ್ವಲ್ಪ ಕೇಶವನ್ನು ಅಂದರೆ ಶಿಖೆಯನ್ನು ಇಟ್ಟುಕೊಳ್ಳಬೇಕೆಂದೂ, ಅದು ಕತ್ತರಿಸಿ ಹೋದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದೂ ಸ್ಮೃತಿಗಳು ಹೇಳಿವೆ. ಶಿಖೆಯನ್ನು ಬಿಡುವ ಸ್ಥಾನದಲ್ಲಿಯೇ ಪ್ರಾಣಕ್ಕೆ ಆಧಾರವಾದ ಶಕ್ತಿಯಿರುವುದರಿಂದ ಅದನ್ನು ಶಿಖೆಯಿಂದ ಕಾಪಾಡಬೇಕೆಂಬ ಅಭಿಪ್ರಾಯವೂ ಇದೆ.

ಕೇಶಚ್ಛೇದನದಿಂದ ಮಾನವನಿಗೆ ಶುಚಿತ್ವ ಲಭಿಸುತ್ತದೆ: ಆರೋಗ್ಯ ಸೌಂದರ್ಯಗಳು ಹೆಚ್ಚುತ್ತವೆ. (ಎಸ್.ಎಸ್.ಆರ್)

**ಚೂಡಾಲಾ :** ಸೌರಾಷ್ಟ್ರಾಧಿಪತಿಯ ಮಗಳು; ಮಾಲವಪುರದ ರಾಜ ಶಿಖಿಧ್ವಜನ ಪತ್ನಿ. ಕೆಲಕಾಲ ಸಂಸಾರಸುಖವನ್ನು ಅನುಭವಿಸಿದ ಈಕೆ ಭೋಗಮಯಜೀವನ ನಶ್ವರವೆಂದು ತಿಳಿದು ಮನಸ್ಸನ್ನು ಆತ್ಮಜ್ಞಾನದ ಕಡೆಗೆ ಹರಿಸಿ ಭೋಗಜೀವನದಿಂದ ಬೇರೆಯಾದಳು. ಆತ್ಮಜ್ಞಾನಿಯಾದ ಈಕೆಯ ಉಪದೇಶದಿಂದ ಶಿಖಿಧ್ವಜನೂ ಜ್ಞಾನಸಂಪನ್ನನಾದ. ಇಬ್ಬರೂ ರಾಜ್ಯವನ್ನು ತೊರೆದು ಅರಣ್ಯಕ್ಕೆ ತೆರಳಿದರೆಂದು ಯೋಗವಾಸಿಷ್ಠದ ನಿರ್ವಾಣಪ್ರಕರಣದಲ್ಲಿ ಹೇಳಲಾಗಿದೆ. (ಎನ್.ಎಸ್.ಆರ್.ಬಿ.)

**ಚೂಡೆ ಮೀನು :** ಕ್ಲೂಪಿಯಿಫಾರ್ಮೀಸ್ ಗಣದ ಕ್ಲೂಪಿಯಿಡೀ ಕುಟುಂಬಕ್ಕೆ ಸೇರಿದ ಒಂದು ಸಾಗರವಾಸಿ ಆಹಾರಮೀನು. ಸಾರ್ಡಿನ್ ಮತ್ತು ಹೆರಿಂಗ್‌ಮೀನುಗಳ ಹತ್ತಿರ ಸಂಬಂಧಿ. ಇದರ ಶಾಸ್ತ್ರೀಯ ಹೆಸರು ಸ್ಟ್ರಾಟೆಲಾಯ್ಡಿಸ್ ಅಥವಾ ಕ್ಲೂಪಿಯ. ಭಾರತದ ಪಶ್ಚಿಮ ತೀರಸಮುದ್ರದಲ್ಲಿ ಹೇರಳವಾಗಿ ಸಿಗುತ್ತದೆ. ತಮಿಳುನಾಡಿನ ಮಂಡಪಮ್ ಬಳಿಯ ಸಮುದ್ರದಲ್ಲೂ ವಿಪುಲವಾಗಿದೆ. ಚಿಕ್ಕಗಾತ್ರದ ಮೀನು. ಪೂರ್ತಿ ಬೆಳೆದಾಗ ಇದರ ಉದ್ದ ಸುಮಾರು 13 ಸೆಂಮೀ. ದೇಹದ ಬಣ್ಣ ಹಳದಿಮಿಶ್ರಿತ ಬಿಳಿ. ದೇಹದ ಎರಡು ಪಕ್ಕಗಳಲ್ಲಿಯೂ ಬೆಳ್ಳಿಗೆರೆಯಂತೆ ಹೊಳೆಯುವ ಪಾರ್ಶ್ವರೇಖೆಗಳಿವೆ. ಮೂತಿ, ನೆತ್ತಿ, ಬೆನ್ನು, ಬಾಲ ಹಾಗೂ ಗುದದ ಬಳಿಯ ಪ್ರದೇಶಗಳು ಕೊಂಚ ಕಪ್ಪಗಿವೆ. ನೀರಿನಲ್ಲಿ ವಾಸಿಸುವ ಸಣ್ಣಪುಟ್ಟ ತೇಲುಸಸ್ಯಗಳು, ಸಂಧಿಪದಿಗಳು ಈ ಮೀನಿನ ಆಹಾರ. ಇದರ ಸಂತಾನೋತ್ಪತ್ತಿಯ ಕಾಲ ಏಪ್ರಿಲ್–ಮೇ. ಒಂದು ಹೆಣ್ಣು ಒಂದು ಪ್ರಾಯದಲ್ಲಿ ಸುಮಾರು 3 ಲಕ್ಷ ಮೊಟ್ಟೆಗಳನ್ನಿಡುತ್ತದೆಯೆಂದು ಅಂದಾಜು ಮಾಡಲಾಗಿದೆ. ಮೊಟ್ಟೆಗಳು 3 ದಿವಸಗಳಲ್ಲಿ ಒಡೆಯುತ್ತವೆ. ಆಗಸ್ಟ್‌ನಿಂದ ನವೆಂಬರ್ ತಿಂಗಳ ನಡುವಣ ಕಾಲದಲ್ಲಿ ಇವು ಅಪಾರ ಸಂಖ್ಯೆಯಲ್ಲಿ ಕರಾವಳಿಯಿಂದ 8–10 ಕಿಮೀ. ದೂರದವರೆಗಿನ ಸಮುದ್ರದಲ್ಲಿ ಕಂಡಬರುತ್ತವೆ. ಇವನ್ನು ಹಿಡಿಯಲು ಈ ಕಾಲವೇ ಅತ್ಯಂತ ಉತ್ತಮ. ಹಲವಾರು ದೋಣಿಗಳಿಗೆ ಒಟ್ಟಿಗೆ ಕಟ್ಟಿ ಒಡ್ಡುವ ಕಿವಿರುಬಲೆಗಳನ್ನೊ (ಗಿಲ್ ನೆಟ್ಸ್) ಇಲ್ಲವೆ ಎರಡು ದೋಣಿಗಳ ಹಿಂಬದಿಗೆ ಕಟ್ಟಿ ಒಡ್ಡುವ ಸಂಚಿಬಲೆಗಳನ್ನೂ (ಬೋಟ್ ಸೇನ್) ಉಪಯೋಗಿಸಿ ಇವನ್ನು ಹಿಡಿಯಲಾಗುತ್ತದೆ. ಒಳ್ಳೆಯ ಆಹಾರಮೀನುಗಳೆಂದು ಹೆಸರಾಗಿರುವ ಇವನ್ನು ಒಣಗಿಸಿ ಉಪ್ಪಿನೊಂದಿಗೆ ಸೇರಿಸಿ ಪರದೇಶಗಳಿಗೆ ರಫ್ತು ಮಾಡಲಾಗುತ್ತದೆ. ಇದರಿಂದಾಗಿ ಇವು ಭಾರತದ ಮೀನುಗಾರಿಕೆ ಉದ್ಯಮದಲ್ಲಿ ಸಾಕಷ್ಟು ಪ್ರಸಿದ್ಧವಾಗಿವೆ. (ಸಿ.ಜಿ.ಕೆ.; ಎಂ.ಎನ್.ಎಚ್.ಇ.)

**ಚೆಂಗಲರಾಯ ರೆಡ್ಡಿ, ಕ್ಯಾಸಂಬಳ್ಳಿ :** 1902–1976. ಮೈಸೂರು ರಾಜ್ಯದ ಮುಖ್ಯಮಂತ್ರಿ (1947–52). ಭಾರತ ಒಕ್ಕೂಟದ ಮಂತ್ರಿಯೂ ಮಧ್ಯಪ್ರದೇಶದ ರಾಜ್ಯಪಾಲರೂ ಆಗಿದ್ದರು. ಜನನ 1902ರ ಮೇ 4ರಂದು, ಕೋಲಾರ ಜಿಲ್ಲೆಯ

ಕ್ಯಾಸಂಬಳ್ಳಿಯಲ್ಲಿ. ತಂದೆ ಬಿ. ವೆಂಕಟ ರೆಡ್ಡಿ. ಚಿಕ್ಕಂದಿನಿಂದಲೂ ಪರೀಕ್ಷೆಗಳಲ್ಲಿ ಉನ್ನತ ವರ್ಗಗಳಲ್ಲಿ ತೇರ್ಗಡೆ ಹೊಂದುತ್ತಿದ್ದ ರೆಡ್ಡಿಯವರು ಮದರಾಸಿನ ಪಚ್ಚಯ್ಯಪ್ಪ ಕಾಲೇಜಿನಲ್ಲಿ ಓದಿ ಉನ್ನತ ದರ್ಜೆಯ ಬಿ.ಎ. ಪದವಿಯನ್ನೂ ಪಾರಿತೋಷಕವನ್ನೂ ಲಾ ಕಲೇಜಿನಲ್ಲಿ ಓದಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿ ಎಲ್.ಎಲ್.ಬಿ ಪದವಿಯನ್ನೂ ಪಡೆದು ವಕೀಲವೃತ್ತಿಯನ್ನು ಆರಂಭಿಸಿದರಲ್ಲದೆ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ಮೈಸೂರು ಸಂಸ್ಥಾನದ ಪ್ರಜಾಪಕ್ಷದ ಅಧ್ಯಕ್ಷರಾಗಿದ್ದರು (1935–37). ರಾಜ್ಯಶಾಸನ ಸಭೆಗೆ ಚುನಾಯಿತರಾದರು. ಇವರು ಕೋಲಾರ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ಆಗಿದ್ದರು (1934–40). ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ಬಿರುಸಾದಾಗ ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಬೇಡಿಕೆಯನ್ನು ಮೈಸೂರು ಕಾಂಗ್ರೆಸ್ ಮಂಡಿಸಿತು. ರೆಡ್ಡಿಯವರು ಆ ಪಕ್ಷದ ಮುಂಚೂಣಿಯ ನಾಯಕರಾದರು. ರಾಜ್ಯಾದ್ಯಂತ ಜನತೆಯಲ್ಲಿ ಹೊಸ ಚೇತನ ತುಂಬಿ, ಹೋರಾಟಕ್ಕೆ ತೀವ್ರಗತಿ ಬರುವಂತೆ ಮಾಡುವಲ್ಲಿ ಇವರ ಪಾತ್ರವೂ ಮುಖ್ಯವಾದ್ದು. 1937–38ರಲ್ಲಿ ಇವರು ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು ; ಸೆರೆಮನೆ ವಾಸ ಅನುಭವಿಸಿದರು. ಮಹಾತ್ಮ ಗಾಂಧಿಯವರ ಸೇವಾಗ್ರಾಮ ಆಶ್ರಮದಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಸ್ವಲ್ಪಕಾಲ ಇರುವ ಅವಕಾಶ ಇವರಿಗೆ ಲಭಿಸಿತ್ತು. 1944–45ರಲ್ಲಿ ಅಖಿಲಭಾರತ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತಿನ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿ ಇವರು ಚುನಾಯಿತರಾಗಿದ್ದರು. 1946–47ರಲ್ಲಿ ಇವರು ಮತ್ತೆ ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು.

1947ರ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೋರಾಟ ಉಗ್ರ ರೂಪ ತಾಳಿತು. ಸೆಪ್ಟೆಂಬರ್ 19ರಂದು ರೆಡ್ಡಿಯವರ ನಾಯಕತ್ವದಲ್ಲಿ ಸತ್ಯಾಗ್ರಹ ಆರಂಭವಾಯಿತು. ಕೊನೆಗೆ ಸಂಸ್ಥಾನ ಸರ್ಕಾರ ಮಣಿದು, ಪ್ರಜೆಗಳ ಬೇಡಿಕೆಗಳನ್ನು ಈಡೇರಿಸಬೇಕಾಯಿತು. ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ರೆಡ್ಡಿಯವರಿಗೂ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೂ ರಾಜಕೀಯ ಒಪ್ಪಂದ ಆಯಿತು. ಮೈಸೂರಿನಲ್ಲಿ ಪ್ರಜಾಪ್ರತಿನಿಧಿಗಳ ಮಂತ್ರಿಮಂಡಲ ರಚನೆಯಾಯಿತು. ರೆಡ್ಡಿಯವರು ಮೈಸೂರಿನ ಪ್ರಥಮ ಕಾಂಗ್ರೆಸ್ ಮುಖ್ಯಮಂತ್ರಿಯಾಗಿ, ಸಚಿವ ಸಂಪುಟ ರಚಿಸಿ 1952ರ ವರೆಗೂ ಅಧಿಕಾರದಲ್ಲಿದ್ದರು. 1952ರಿಂದ ಮುಂದೆ ರೆಡ್ಡಿಯವರು ರಾಜ್ಯಸಭೆಯ (1952–57) ಮತ್ತು ಲೋಕಸಭೆಯ (1957–64) ಸದಸ್ಯರಾಗಿದ್ದರು. ಅವರು 1952–57ರಲ್ಲಿ ಕೇಂದ್ರ ಸರ್ಕಾರದ ಕೈಗಾರಿಕಾ ಉತ್ಪಾದನ ಸಚಿವರಾಗಿಯೂ 1957–61ರಲ್ಲಿ ಗೃಹನಿರ್ಮಾಣ ಮತ್ತು ಸರಬರಾಯಿ ಸಚಿವರಾಗಿಯೂ 1961–63ರಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾಗಿಯೂ ಇದ್ದರು. 1963–64ರಲ್ಲಿ ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಚುನಾಯಿತರಾಗಿದ್ದರು. ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಸೋವಿಯತ್ ದೇಶ ಮತ್ತು ಯೂರೋಪಿನ ಇತರ ರಾಜ್ಯಗಳಲ್ಲಿ ಇವರು ಸಂಚಾರಮಾಡಿದರು. 1965ರ ಫೆಬ್ರವರಿ 11ರಂದು ಮಧ್ಯಪ್ರದೇಶದ ರಾಜ್ಯಪಾಲರಾಗಿ ನೇಮಕ ಹೊಂದಿದರು. ಆ ರಾಜ್ಯದ ಗೊಂದಲಮಯ ಜಟಿಲ ರಾಜಕಾರಣದಲ್ಲಿ ಆಡಳಿತವನ್ನು ಸುಮುಖವಾಗಿ ನಡೆಸಿಕೊಂಡು ಹೋದರು. ಈಗ ನಿವೃತ್ತರು. ಅರ್ಥಶಾಸ್ತ್ರದಲ್ಲಿ ನಿಪುಣರೂ ಅನುಭವಿಗಳೂ ಆದವರೆಂದು ಹೆಸರಾಂತಿರುವ ರೆಡ್ಡಿಯವರು ದೆಹಲಿ ಅರ್ಥಶಾಸ್ತ್ರ ಶಾಲೆಯ (ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್) ಸ್ಥಾಪಕ

ಸದಸ್ಯರಲ್ಲೊಬ್ಬರು. ರೆಡ್ಡಿಯವರು ಕನ್ನಡ ಪತ್ರಿಕೋದ್ಯಮದಲ್ಲೂ ಕೆಲಸಮಾಡಿದ್ದಾರೆ. ಅವರು ಸ್ವಲ್ಪ ಕಾಲ 'ಜನವಾಣಿ' ಕನ್ನಡ ದಿನಪತ್ರಿಕೆಯ ಸಂಪಾದಕರಾಗಿದ್ದರು. ಇವರು ಫೆಬ್ರವರಿ 27, 1976ರಂದು ನಿಧನರಾದರು. (ಜ.ವಿ.ಎನ್.)

**ಚೆಂಗಾಳ್ವ :** ಕೊಡಗು, ಹಾಸನಜಿಲ್ಲೆಯ ಕೆಲವು ಭಾಗಗಳು, ಮೈಸೂರು ಜಿಲ್ಲೆ–ಈ ಪ್ರದೇಶದಲ್ಲಿ 11ನೆಯ ಶತಮಾನದಿಂದ ರಾಜ್ಯಾಡಳಿತ ನಡೆಸುತ್ತಿದ್ದ ಕಿರಿಯ ಅರಸು ಮನೆತನ. ಈ ಮನೆತನದ ಅರಸರು ಆಳುತ್ತಿದ್ದ ಪ್ರದೇಶ ಚೆಂಗನಾಡೆನಿಸಿತು.

ಇದುವರೆಗೆ ತಿಳಿದಿರುವಂತೆ ಈ ಮನೆತನದ ಮೊದಲ ಅರಸ ನನ್ನಿ ಚೆಂಗಾಳ್ವ. ರಾಜೇಂದ್ರ ಚೋಳನೆಂದು ಕರೆದುಕೊಂಡಿರುವ ಈತ ಬಹುಶಃ ಚೋಳರಿಗೆ ಸೋತು, ಅವರ ಮಾಂಡಲಿಕನಾಗಿರಲು ಒಪ್ಪಿಕೊಂಡಂತೆ ತೋರುತ್ತದೆ. 1034ರಿಂದ ಸು. 45 ವರ್ಷಗಳ ಕಾಲ ಅಧಿಕಾರದಲ್ಲಿದ್ದ. ಈತ ಹನಸೋಗೆಯ ಜೈನಬಸದಿಯನ್ನು ಜೀರ್ಣೋದ್ಧಾರ ಮಾಡಿದ. 1090ರ ಶಾಸನದಲ್ಲಿ ಉಕ್ತನಾದ ನಿಗಳಂಕ ಮಲ್ಲ ಮಾದೆಯರಸ ಚೆಂಗಾಳ್ವ, ಶಾಸನದ ಮಹಾದೇವ (ಮಾಧವಣ್ಣ) ಆಗಿರಬಹುದೆಂದು ಊಹಿಸಲಾಗಿದೆ. ಕೊಡಗು ಜಿಲ್ಲೆಯ 13ನೆಯ ಶತಮಾನದ ಶಾಸನಗಳಲ್ಲಿ ಹೆಸರಿಸಲಾಗಿರುವ ಮುನಿವರಾದಿತ್ಯ, ಮಲ್ಲಿದೇವ ಮತ್ತು ಹರಿಹರದೇವರು ಚೆಂಗಾಳ್ವರೆಂದು ಭಾವಿಸಲಾಗಿದೆ. ಆದರೆ ಇವರಲ್ಲಿ ಮುನಿವರಾದಿತ್ಯ ಚೆಂಗಾಳ್ವನೆಂಬುದು ಸಂದೇಹಾಸ್ಪದ. ಮಲ್ಲಿದೇವನನ್ನು ಕುಲೋತ್ತುಂಗ ಚೋಳವೀರ ಚೆಂಗಾಳ್ವನೆಂದು ಹಾಸನ ಜಿಲ್ಲೆಯ ಶಾಸನವೊಂದರಲ್ಲಿ ಕರೆಯಲಾಗಿದೆ. ಈತನ ಮಗ ಹರಿಹರದೇವ. ಮಲ್ಲಿದೇವನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಹರಿಹರದೇವನೂ ರಾಜ್ಯಭಾರದಲ್ಲಿ ತಂದೆಯೊಡನೆ ಭಾಗವಹಿಸಿದ್ದ. 1296ರ ಶಾಸನದಲ್ಲಿ ಇವನನ್ನು ಹರಿಹರದೇವ ಚೋಳದೇವನೆಂದು ಸಂಬೋಧಿಸಲಾಗಿದೆ. ಆದರೆ ಇದಕ್ಕೂ ಮೊದಲಿನ (1252) ಶಾಸನದಲ್ಲಿ ತುಂಗಚೋಳ ವೀರ ಚೆಂಗಾಳು ಸೋಮದೇವ ಬೊಪ್ಪ ದೇವರಸರು ರಾಜ್ಯಭಾರ ಮಾಡುತ್ತಿದ್ದರು ಎಂದು ಹೇಳಿದೆ. ಇವರ ಪರಸ್ಪರ ಸಂಬಂಧ ತಿಳಿಯದು. ತಂದೆ–ಮಗ ಆಗಿರಬಹುದು.

ಆರಂಭದಲ್ಲಿ ಚೋಳರ ಸಾಮಂತರಾಗಿದ್ದು, ಬಹುಕಾಲ ಹೊಯ್ಸಳರ ವಿರೋಧಿಗಳಾಗಿದ್ದ ಚೆಂಗಾಳ್ವರು 13ನೆಯ ಶತಮಾನದ ಅಂತ್ಯದಲ್ಲಿ ಹೊಯ್ಸಳರ ಸಾಮಂತರಾಗಿರಲು ಒಪ್ಪಿಕೊಂಡರು. ಸೋಮದೇವ–ಬೊಪ್ಪದೇವರು ಈ ಸಾಮಂತ ವರ್ಗಕ್ಕೆ ಸೇರಿದವರು.

ಅನಂತರ ಸುಮಾರು 150 ವರ್ಷಗಳ ಕಾಲದ ಇವರ ಇತಿಹಾಸ ತಿಳಿಯದು. 1544ರ ಶಾಸನದಲ್ಲಿ ಈ ವಂಶದ ಶ್ರೀಕಂಠರಸನೆಂಬೊಬ್ಬನ ಉಲ್ಲೇಖವಿದೆ. ನಮಗೆ ಕಾಣಿಸುವ ಇನ್ನೊಬ್ಬ ಚೆಂಗಾಳ್ವ ನಂಜುಂಡ ಅಥವಾ ನಂಜ. ಈತನ ಶಾಸನಗಳಲ್ಲಿ ಇವನ ಪೂರ್ವಜರಾದ ಪಿರಿಯಣ್ಣ ರಂಗ ಮತ್ತು ನಾಗಣ್ಣರ ಉಲ್ಲೇಖವಿದೆ. ಈ ನಂಜರಾಜನೇ ಕೊಡಗಿನ ನಂಜರಾಜಪಟ್ಟಣವನ್ನು ಸ್ಥಾಪಿಸಿದವನೆಂದು ತೋರುತ್ತದೆ. ಪೆರಿಯಾಪಟ್ಟಣ ಈ ಅರಸರ ರಾಜಧಾನಿಯಾಗಿತ್ತು.

ಈ ಮನೆತನದ ಕೊನೆಯ ಅರಸ ವೀರರಾಜಯ್ಯ. 17ನೆಯ ಶತಮಾನದ ಮಧ್ಯಭಾಗದಲ್ಲಿ ಈತನನ್ನು ಮೈಸೂರಿನ ಅರಸನಾದ ಕಂಠೀರವ ನರಸರಾಜ ಒಡೆಯ ಸೋಲಿಸಿದ. ವೀರರಾಜಯ್ಯ ಈ ಅವಮಾನವನ್ನು ತಾಳಲಾರದೆ ತನ್ನ ಹೆಂಡಿರು ಮಕ್ಕಳನ್ನೆಲ್ಲ ಕೊಂದು ತಾನು ವೀರಸ್ವರ್ಗ ಪಡೆದ. ಇವನೊಂದಿಗೆ ಚೆಂಗಾಳ್ವರ ಮನೆತನ ಅಸ್ತಂಗತವಾಯಿತು. (ಜ.ಬಿ.ಆರ್.)

**ಚೆಂಚಲಿ ಸೊಪ್ಪು :** ಕೃಷಿ ಭೂಮಿಗಳಲ್ಲಿ, ಗೋಮಾಳಗಳಲ್ಲಿ, ಬೆಂಗಾಡು ಪ್ರದೇಶಗಳಲ್ಲಿ ಕಳೆಗಿಡವಾಗಿ ಬೆಳೆಯುವ ಒಂದು ಏಕವಾರ್ಷಿಕ ಇಲ್ಲವೆ, ಬಹುವಾರ್ಷಿಕ ಮೂಲಿಕೆ ಸಸ್ಯ. ಅಮರ್ಯಾಂತೇಸೀ ಕುಟುಂಬಕ್ಕೆ ಸೇರಿದೆ. ಡೈಜೆರ ಮ್ಯೂರಿಕೇಟ ಇದರ ಶಾಸ್ತ್ರೀಯ ಹೆಸರು. ಇದು ಏಷ್ಯ ಹಾಗೂ ಆಫ್ರಿಕಗಳ ಉಷ್ಣಪ್ರದೇಶಗಳ ಮೂಲದ್ದು. ಭಾರತದಲ್ಲಿ ಬಂಗಾಳಿ ಹಾಗೂ ಕರ್ನಾಟಕಗಳಲ್ಲಿ ಇದರ ವ್ಯಾಪ್ತಿ ಹೆಚ್ಚು. 30–60 ಸೆಂಮೀ. ಎತ್ತರಕ್ಕೆ ಬೆಳೆಯುವ ಇದರ ಎಳೆಯ ಎಲೆಗಳನ್ನು ತರಕಾರಿಯಾಗಿ ಬಳಸುತ್ತಾರೆ. ಹಲವೆಡೆ ಕಾಲ್ನಡೆಗಳ ಮೇವಾಗಿ ಉಪಯೋಗಿಸುವುದುಂಟು. ಹೆಚ್ಚು ಪ್ರಮಾಣದಲ್ಲಿ ಇದರ ಎಲೆಗಳನ್ನು ತಿಂದರೆ ಭೇದಿ ಉಂಟಾಗುತ್ತದೆ. ಮೂತ್ರಸಂಬಂಧಿ ಕಾಯಿಲೆಗಳಲ್ಲಿ ಇದರ ಹೂ ಮತ್ತು ಬೀಜಗಳನ್ನು ಕೊಡುವುದಿದೆ. (ಎಸ್.ಐ.ಎಚ್.)

**ಚೆಂಡುಮಲ್ಲಿಗೆ :** ಆಸ್ಟರೇಸೀ ಕುಟುಂಬಕ್ಕೆ ಸೇರಿದ ಒಂದು ಸುಪ್ರಸಿದ್ಧ ಏಕವಾರ್ಷಿಕ ಅಲಂಕಾರಸಸ್ಯ (ಮ್ಯಾರಿಗೋಲ್ಡ್). ಟೆಜೆಟಾಸ್ ಎಂಬುದು ಶಾಸ್ತ್ರೀಯ ಹೆಸರು. ಇದನ್ನು ಉದ್ಯಾನಗಳಲ್ಲಿ ಮಡಿಸಸ್ಯವಾಗಿ ಇಲ್ಲವೆ ಕುಂಡಸಸ್ಯವಾಗಿ ಬೆಳೆಸುತ್ತಾರೆ. ಇದರ ಕೆಲವು ಬಗೆಗಳ ಹೂಗಳನ್ನು ಹೂದಾನಿಗಳಲ್ಲಿಟ್ಟು ಗೃಹಾಲಂಕರಣಕ್ಕೆ ಬಳಸುವುದೂ ಉಂಟು. ಇದರಲ್ಲಿ ಫ್ರೆಂಚ್ ಮ್ಯಾರಿಗೋಲ್ಡ್ (ಟಪ್ಯಾಟುಲ) ಮತ್ತು ಆಫ್ರಿಕನ್ ಮ್ಯಾರಿಗೋಲ್ಡ್ (ಟ.ಎರೆಕ್ಟ) ಎಂಬ ಎರಡು ಮುಖ್ಯ ಬಗೆಗಳುಂಟು. ಇವುಗಳ ಬೆಳವಣಿಗೆಯ ಸ್ವಭಾವ ಹಾಗೂ ಹೂಗಳ ರಚನೆಯಲ್ಲಿ ವ್ಯತ್ಯಾಸಗಳಿವೆ. ಆಫ್ರಿಕನ್ ಬಗೆಯದು ದೃಢಕಾಯದ್ದಾಗಿದ್ದು 1ಮೀ. ಎತ್ತರಕ್ಕೆ ಬೆಳೆಯುತ್ತದೆ. ಇದರ ಹೂಗಳು ಕಿತ್ತಳೆ ಅಥವಾ ಹಳದಿ ಬಣ್ಣದವು; ಹೂದಳಗಳು ಒಂಟಿ ಇಲ್ಲವೆ ಹಲವಾರು ಸುತ್ತುಗಳಲ್ಲಿವೆ. ಫ್ರೆಂಚ್ ಬಗೆಯ ಗಿಡ ಪುಟ್ಟಗಾತ್ರದ್ದು; 20 ಸೆಂ.ಮೀ ಬೆಳೆಯುತ್ತದೆ. ಇದರ ಹೂಗಳ ಬಣ್ಣ ಹಳದಿ ಇಲ್ಲವೆ ಕೆಂಗಂದು ಮಿಶ್ರಿತ ಹಳದಿ. ಇವೆರಡು ಬಗೆಗಳಲ್ಲೂ ಹಲವಾರು ಸುಪ್ರಸಿದ್ಧ ತಳಿಗಳುಂಟು. ಎಲ್ಲ ತಳಿಗಳಲ್ಲೂ ಎಲೆಗಳು ಮಾತ್ರ ಒಂದೇ ಮಾದರಿಯವು; ಅವುಗಳ ಜೋಡಣೆ ಅಭಿಮುಖ ರೀತಿಯದು; ಎಲೆಯ ಪತ್ರಭಾಗ ಅನೇಕ ಭಾಗಗಳಾಗಿ ಸೀಳುಗೊಂಡಿದೆ. ಅಂಚು ಗರಗಸದಂತೆ,

ಹೂಗೊಂಚಲು ಚೆಂಡುಮಂಜರಿ ಬಗೆಯದು. ಚೆಂಡುಮಲ್ಲಿಗೆಯ ಬಗೆಗಳನ್ನು ಸಾಮಾನ್ಯವಾಗಿ ಬೀಜ ಮತ್ತು ಕಾಂಡದ ತುಂಡುಗಳಿಂದ ವೃದ್ಧಿಸುವುದುಂಟು. ಎಲ್ಲ ತರದ ಮಣ್ಣು ಮತ್ತು ಹವಾಗುಣದಲ್ಲಿ ಇದನ್ನು ಬೆಳೆಸಬಹುದು. ಫಲವತ್ತಾದ ಮತ್ತು ಚೆನ್ನಾಗಿ ನೀರು ಬಸಿದುಹೋಗುವಂಥ ಮಣ್ಣು ಉತ್ತಮ. ಅತಿಚಳಿ ಹಾನಿಕರ. ಬೀಜಗಳನ್ನು ಫೆಬ್ರುವರಿ–ಜೂನ್ ತಿಂಗಳ ನಡುವಣ ಕಾಲದಲ್ಲಿ ಮಡಿಗಳಲ್ಲಾಗಲಿ, ಕುಂಡಗಳಲ್ಲಾಗಲಿ, ಪೆಟ್ಟಿಗೆಗಳಲ್ಲಾಗಲಿ ಬಿತ್ತಬಹುದು. ಬೆಟ್ಟಸೀಮೆಗಳಲ್ಲಿ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಬಿತ್ತುವುದು ಉತ್ತಮ. ಬಿತ್ತಿದ ಬೀಜಗಳು 4–6 ದಿವಸಗಳಲ್ಲಿ ಮೊಳೆತು, ಒಂದು ತಿಂಗಳ ಅನಂತರ ನಾಟಿ ಮಾಡಲು ಸಿದ್ಧವಾಗುತ್ತವೆ. ಸಸಿಗಳು ಸುಮಾರು 66 ಸೆಂ.ಮೀ. ಎತ್ತರ ಬೆಳೆದ ಮೇಲೆ ಬಿದಿರುಕಡ್ಡಿಯ ಆಧಾರವನ್ನು ಕೊಡುವುದು ಉತ್ತಮ. ಗಿಡ ಹುಲುಸಾಗಿ ಬೆಳೆಯುವಂತೆ ಮಾಡಲು ಮೊದಲು ಬಿಟ್ಟ ಕುಡಿಗಳನ್ನು ಚಿವುಟಿಹಾಕಬೇಕು. ಗಿಡಗಳಿಗೆ ಹೆಚ್ಚು ಗೊಬ್ಬರ ಹಾಕಬಾರದು. ಇಲ್ಲವಾದರೆ ಎಲೆಗಳೇ ಹೆಚ್ಚು ಬೆಳೆದು ಹೂಗಳು ಕಡಿಮೆಯಾಗುತ್ತವೆ.

ಚೆಂಡುಮಲ್ಲಿಗೆಯಲ್ಲಿನ ಮುಖ್ಯ ತಳಿಗಳಿವು: 1 ಆಫ್ರಿಕನ್ ಬಗೆ : ಜಯಂಟ್ ಆರೆಂಜ್, ಗಿನಿಗೋಲ್ಡ್, ಪ್ರಿನ್ಸ್ ಆರೆಂಜ್, ಪ್ರಿಮ್‌ರೋಸ್ ಕ್ವೀನ್, ಸನ್ ಜಯಂಟ್, ಯೆಲೊ ಸುಪ್ರೀಮ್, ಕ್ರೌನ್ ಆಫ್ ಗೋಲ್ಡ್, ಗ್ಲಿಟರ್ಸ್, ಗೋಲ್ಡ್‌ಸ್ಮಿತ್, ಕ್ಯೂಪಿಡ್, ಹ್ಯಾಪಿನೆಸ್, ಹವಾಯ್ ಇತ್ಯಾದಿ.

2. ಫ್ರೆಂಚ್ ಬಗೆ : ಲೀಜನ್ ಆಫ್ ಆನರ್, ನಾಟಿ ಮೇರಿಯೆಟ, ಸ್ಟಾರ್ ಆಫ್ ಇಂಡಿಯ, ಯೆಲೊ ಕ್ರೌನ್, ಹಾರ್ಮನಿ, ಗೋಲ್ಡನ್ ಬಾಲ್, ರಸ್ಟಿ ರೆಡ್, ಫೈರ್‌ಗ್ಲೋ, ಬ್ರೌನಿ, ಜಿಪ್ಸಿ, ಸನ್‌ಕಿಸ್ಟ್ ಟಾಮ್‌ತಮ್ ಮುಂತಾದವು. (ಎಂ.ಎಚ್.ಎಂ.; ಕೆ.)

**ಚೆಕ್ ಭಾಷೆ :** ಇಂಡೋ–ಯುರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದ ಈ ಭಾಷೆ ಬೊಹೀಮಿಯ, ಮೊರೇವೀಯ ಮತ್ತು ಸಿಲೇಷ ಪ್ರದೇಶಗಳ ಜನರ ಮಾತೃಭಾಷೆ. ಈ ಎಲ್ಲ ಪ್ರದೇಶಗಳೂ ಚೆಕೊಸ್ಲೊವಾಕ್ ಗಣರಾಜ್ಯದಲ್ಲಿವೆ. ಸ್ಲೋವ್ಯಾಕ್ ಭಾಷೆ ಸ್ಲೊವಾಕಿಯದ ಆಡಳಿತ ಭಾಷೆ. ಚೆಕ್ ಹಾಗೂ ಸ್ಲೋವ್ಯಾಕ್ ಭಾಷೆಗಳನ್ನು ಒಂದುಮಾಡುವ ನಿಷ್ಪ್ರಯೋಜಕ ಪ್ರಯತ್ನಗಳು ಇತ್ತೀಚೆಗೆ ನಡೆದಿವೆ. ಆದರೂ ಈ ಎರಡು ಭಾಷೆಗಳು ಸ್ಲೋವ್ಯಾನಿಕ್ ಉಪಗುಂಪಿನ ಹೆಚ್ಚು ಸಮೀಪದ ಭಾಷೆಗಳು. ಅಲ್ಲದೆ ಅವುಗಳ ಗಡಿಯೂ ಪರಸ್ಪರ ಹೊಂದಿಕೊಂಡಿದೆ. ಈ ಭಾಷೆಗಳು ಸಾಂಸ್ಕೃತಿಕವಾಗಿ, ರಾಜಕೀಯವಾಗಿ 1918ರಿಂದ ಒಂದುಗೂಡಿವೆ. ಚೆಕ್ ಭಾಷೆಯನ್ನು ಸು. 12 ಮಿಲಿಯನ್ ಜನ ಬಳಸುತ್ತಿದ್ದಾರೆ.

ಚೆಕ್ ಭಾಷೆಯ ಹಳೆಯ ಹೆಸರು ಬೊಹೀಮಿಯನ್ ಎಂದು. ಈ ಪದ ಕ್ರಿಸ್ತಪೂರ್ವದಲ್ಲಿ ಸೆ(ಕೆ)ಲ್ಟಿಕ್ ಬುಡಕಟ್ಟಿನ ಬೋಯಿ ಜನಾಂಗದ ತೌರೂರಾದ ಬೊಹೀಮಿಯ ಎಂಬ ಪದದಿಂದ ಬಂದಿದೆ; ಆಧುನಿಕ ಜರ್ಮನ್ ಭಾಷೆಯಲ್ಲಿ ಇದು ಬೊಹ್‌ಮೆನ್ ಆಗಿದೆ.

ಸಂಪ್ರದಾಯರೀತ್ಯಾ ಚೆಕ್ ಎಂಬುದು ಒಬ್ಬ ಸ್ಲೋವ್ಯಾನಿಕ್ ಮುಖಂಡನ ಹೆಸರು. ಚೆಕೊಸ್ಲೊವಾಕಿಯದ ಪಶ್ಚಿಮ ಭಾಗವನ್ನು ಚೆಕಿ ಎಂದು ಕರೆಯುತ್ತಾರೆ. ಚೆಕ್ ಜನರನ್ನು ಚೆಕ್ (ಏಕವಚನ) ಚೆಸಿ (ಬಹುವಚನ) ಎನ್ನುತ್ತಾರೆ. ಚೆಸ್ಕಿ ಎಂಬುದು ಗುಣವಾಚಕ. ಅಂತೂ ಈ ಪದದ ಮೂಲದ ಬಗ್ಗೆ ಸದ್ಯಕ್ಕೆ ಖಚಿತವಾಗಿ ಏನನ್ನೂ ಹೇಳುವಂತಿಲ್ಲ.

ವಿಂಗಡಣೆ : ಪಶ್ಚಿಮ ಸ್ಲಾವೋನಿಕ್ ಭಾಷೆಗಳಾದ ಚೆಕ್, ಸ್ಲೋವ್ಯಾಕ್, ಲುಸೇಷಿಯನ್ ಮತ್ತು ಪೋಲಿಷ್ ಭಾಷೆಗಳು ಇತರ ಸ್ಲಾವೋನಿಕ್ ಭಾಷೆಗಳಿಂದ ಉಚ್ಚಾರಣೆಯ ಕೆಲವು ಅಂಶಗಳಲ್ಲಿ ಭಿನ್ನವಾಗಿವೆ. 6–10ನೆಯ ಶತಮಾನದವರೆಗಿನ ಸ್ಲಾವೋನಿಕ್ ಭಾಷೆಯ ಚೆಕ್ ಆವೃತ್ತಿ ಹಳೆಯ ಚರ್ಚ್ ಸ್ಲಾವೋನಿಕ್ ಭಾಷೆಗಿಂತ ಹೆಚ್ಚು ಭಿನ್ನವಾಗಿಲ್ಲ. ಹಳೆಯ ಚರ್ಚ್ ಸ್ಲಾವೋನಿಕ್ ಭಾಷೆಯಲ್ಲಿ ಬೆರೆತುಹೋಗಿರುವ ಚೆಕ್ ಪದಗಳು ಆ ಭಾಷೆ 11ನೆಯ ಶತಮಾನದಷ್ಟು ಹಿಂದಿನದು ಎಂಬುದನ್ನು ಪುಷ್ಟೀಕರಿಸುತ್ತವೆ. ಚೆಕ್ ಪಾರಿಭಾಷಿಕ ಶಬ್ದಗಳು 12ನೆಯ ಶತಮಾನದ ಲ್ಯಾಟಿನ್ ಮತ್ತು ಜರ್ಮನ್ ಗ್ರಂಥಗಳಲ್ಲಿ ಕಂಡುಬರುತ್ತವೆ. ಭಾಷಾಸ್ವರೂಪ ಒಂದೇ ಆಗಿರದಿದ್ದರೂ 13ನೆಯ ಶತಮಾನದಲ್ಲೇ ಚೆಕ್ ಸಾಹಿತ್ಯ ರೂಪಗೊಂಡಿತ್ತು ಎಂದು ಹೇಳಲು ಆಧಾರಗಳಿವೆ. ಅಲ್ಲದೆ ಉಪಭಾಷೆಗಳು ಖಚಿತವಾಗಿ ಬೇರೆ ಬೇರೆ ಗುಣಗಳನ್ನು ತೋರುತ್ತಿದ್ದುವಲ್ಲದೆ ಪ್ರಾಂತೀಯತೆ ಸ್ಪಷ್ಟವಾಗಿತ್ತು. ಈ ಭಾಷೆಯ ಧ್ವನಿಪ್ರಭೇದಗಳಿಂದುಂಟಾದ ಅಕ್ಷರಸಂಯೋಜನೆಯ ಬದಲಾವಣೆಗಳು ಮೂರು ಮುಖ್ಯವಾದ ಕಾಲಗಳಲ್ಲಿ ಆಗಿವೆ.

1. ಪೂರ್ವಕಾಲ (11ರಿಂದ 14ನೆಯ ಶತಮಾನ); ಈ ಕಾಲದಲ್ಲಿ ಬಹುಮುಖ್ಯವಾದ ಬದಲಾವಣೆಗಳಾದವು. ಇತರ ಸ್ಲಾವೋನಿಕ್ ಭಾಷೆಗಳಿಂದ ಬೇರ್ಪಡುವ ಚೆಕ್ ಭಾಷೆಯ ವಿಶೇಷ ಗುಣವೆಂದರೆ ಅ–ಎ, ಉ–ಇ ಮುಂತಾದ ಸ್ವರಗಳ ಮಾರ್ಪಾಟು (ಮ್ಯೂಟೇಷನ್), ಏ–ಈ ಮುಂತಾದ ಸ್ವರಗಳ ಸಂಕೋಚನ ಮತ್ತು ಸಂಯುಕ್ತ ಸ್ವರ, ಸಾಧಾರಣವಾದ, ಅದರಲ್ಲೂ ಧಾತುವಿನ ಆಖ್ಯಾತ ರೂಪದ ಮಾದರಿಯ ಮಿತಗೊಳಿಕೆ. ದ್ವಿವಚನವನ್ನು ಬಹುವಚನದ ಪರವಾಗಿ ಕೈಬಿಡಲಾಯಿತು. ಇದ್ದ ಮೂರು ಭೂತಕಾಲಗಳಿಗೆ ಪ್ರತಿಯಾಗಿ ಒಂದು ಉಳಿಯಿತು. ಅನಿಶ್ಚಿತ ಭೂತಕಾಲದ ವೆದ್ ಎಕ್ ಮತ್ತು ದೋಷಯುಕ್ತವಾದ ಅಥವಾ ಅಪೂರ್ಣವಾದ ವೆದ್ಎಕ್ ಪದಗಳು ವೆದ್ಲ್ ಯೆಸೆಮ್ ಎಂದು ಮಾರ್ಪಟ್ಟವು.

2 ಮಧ್ಯಕಾಲ (15–16ನೆಯ ಶತಮಾನ) : ಮತೋದ್ಧಾರಕನೂ ಚೆಕ್ ಭಾಷೆಯಲ್ಲಿ ಹೊಸ ರೀತಿಯನ್ನು ಪ್ರತಿಪಾದಿಸಿದವನೂ ಆದ ಜಾನ್ ಹಸ್ (ಸು. 1370–1415) ಎಂಬಾತ ಪದಸಂಗ್ರಹ ಮತ್ತು ಅಕ್ಷರ ಸಂಯೋಜನೆಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾದ. ಈತ ಬಳಸಿದ / ಮತ್ತು ಎಂಬ ವಿಶೇಷ ಸೂಚಕವಾದ ಉಚ್ಚಾರಣಾ ಚಿಹ್ನೆಗಳು ಇಂದಿಗೂ ರೂಢಿಯಲ್ಲಿವೆ.

3 ಆಧುನಿಕ ಕಾಲ : (ಸು. 1620ರಿಂದ 1918) ಈ ಕಾಲದಲ್ಲಿ ಜರ್ಮನ್ ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳಿಂದಾಗಿ ಚೆಕ್ ಭಾಷೆಯ ಅಭಿವೃದ್ಧಿ ಕುಂಠಿತವಾಯಿತು. ಇತ್ತೀಚೆಗೆ ಚೆಕೊಸ್ಲೊವಾಕಿಯದಲ್ಲಿ ಭಾಷಾ ವೈಜ್ಞಾನಿಕ ಪ್ರಕಟಣಾ ಸಾಮಗ್ರಿಗಳಲ್ಲಿ ಬಹುಮಟ್ಟಿನವು ಚೆಕ್ ಭಾಷೆಗೆ ಸಂಬಂಧಪಟ್ಟವುಗಳಾಗಿವೆ. (ಕೆ.ಎಸ್.ಜಿ.)

**ಚೆಕಾಫ್, ಅಂತೋನ್ ಪಾವ್ಲೊವಿಚ್ :** 1860–1904. ರಷ್ಯದ ಪ್ರಸಿದ್ಧ ಕತೆಗಾರ ಮತ್ತು ನಾಟಕಕಾರ. ಈತನ ಸಣ್ಣಕತೆಗಳು ಮತ್ತು ನಾಟಕಗಳು ವಿಶ್ವದಾದ್ಯಂತ ಜನಪ್ರಿಯತೆ ಗಳಿಸಿವೆ. ಈತ ತಗಾನ್‌ರಾಗ್ ಎಂಬಲ್ಲಿ ಬಡಕುಟುಂಬವೊಂದರಲ್ಲಿ ಜನಿಸಿದ. ಈತನ ತಾತ ಜೀತದಾಳಾಗಿ ಬಹಳ ವರ್ಷ ದುಡಿದು ವಿಮೋಚನೆ ಹೊಂದಿದವ. ತಂದೆ ಪುಟ್ಟ ಅಂಗಡಿಯ ಮಾಲೀಕನಾಗಿ ಸಂಸಾರದ ಹೊಣೆಯನ್ನು ನಿರ್ವಹಿಸುತ್ತಿದ್ದ. ಅಂಗಡಿಯ ವರಮಾನದಿಂದ ಸಂಸಾರದ ನಿರ್ವಹಣೆ ದುಸ್ಸಾಧ್ಯವಾದಾಗ ಚೆಕಾಫ್ ಮಕ್ಕಳಿಗೆ ಪಾಠ ಹೇಳಿಕೊಟ್ಟು ಹಣ ಸಂಪಾದಿಸಿ ಸಂಸಾರದ ನಿರ್ವಹಣೆಯಲ್ಲಿ ನೆರವಾಗುತ್ತಿದ್ದ. ಬಾಲ್ಯದ ದಿನಗಳು ತನಗೂ ತನ್ನ ಸೋದರರಿಗೂ ದುರ್ಭರವಾಗಿದ್ದವು; ತನ್ನ ಜೀವನದಲ್ಲಂತೂ ಬಾಲ್ಯದ ದಿನಗಳು ಇಲ್ಲವಾದವು ಎಂದು ತಾನೇ ಹೇಳಿಕೊಂಡಿದ್ದಾನೆ.

ಚೆಕಾಫ್ ಗ್ರೀಕ್ ಶಾಲೆಯಲ್ಲಿ ತನ್ನ ಶಿಕ್ಷಣವನ್ನು ಆರಂಭಿಸಿದ. ಆದರೆ ಒಂದು ವರ್ಷ ಮುಗಿಯುವುದರೊಳಗಾಗಿ ಈತನ ತಂದೆ ಈತನನ್ನು ಸ್ಥಳೀಯ ಶಾಲೆಗೆ (ಗಿಮ್ನಾಜಿ) ಸೇರಿಸಿದ (1869). ಚೆಕಾಫನಿಗೆ ಹದಿನೇಳು ವರ್ಷಗಳು ನಡೆಯುತ್ತಿದ್ದಾಗ ಈತನ ತಂದೆ ಎಲ್ಲವನ್ನೂ ಕಳೆದುಕೊಂಡು ತುಂಬ ಹೀನಸ್ಥಿತಿಗೆ ಬಂದ. ಇಡೀ ಸಂಸಾರ ತಗಾನ್‌ರಾಗ್ ಊರನ್ನು ಬಿಟ್ಟು ಮಾಸ್ಕೊಗೆ ಪ್ರಯಾಣ ಬೆಳೆಸಬೇಕಾಯಿತು (1876). ಮಾಸ್ಕೊದ ಓಣಿಯೊಂದರಲ್ಲಿ ಚೆಕಾಫ್‌ನ ತಂದೆ ಬಿಡಾರಹೂಡಿದ. ಆದರೆ ಚೆಕಾಫ್ ತನ್ನ ಶಿಕ್ಷಣ ಪೂರೈಸುವವರೆಗೂ ಒಬ್ಬಂಟಿಗನಾಗಿ ತಗಾನ್‌ರಾಗ್‌ನಲ್ಲಿರಬೇಕಾಯಿತು. ಈತನಿಗೆ ಸಹಾಯ ಮಾಡುವ ಸ್ಥಿತಿಯಲ್ಲಿ ತಂದೆತಾಯಿಗಳಿರಲಿಲ್ಲ. ತಂದೆಗೆ ಸರಿಯಾಗಿ ಕೆಲಸವಿಲ್ಲದಿದ್ದುದರಿಂದ ಎಷ್ಟೋ ವೇಳೆ ಇಡೀ ಸಂಸಾರ ಹಸಿವಿನಿಂದ ನರಳಬೇಕಾಗುತ್ತಿತ್ತು.

ಚೆಕಾಫ್‌ನಿಗೆ ಚಿಕ್ಕಂದಿನಿಂದಲೂ ಬರೆಯುವ ಹವ್ಯಾಸ. ತಾನು ಅರೆಹೊಟ್ಟೆಯಿಂದ ಇದ್ದರೂ ತಂದೆತಾಯಿಗಳಿಗೆ, ಸೋದರರಿಗೆ ಹಾಸ್ಯಪೂರಿತ ಪತ್ರಗಳನ್ನು ಬರೆಯುತ್ತಿದ್ದ. ಸೋದರರಿಗಾಗಿ ಜ್ಞಾಯ್‌ಕ ಎಂಬ ಕೈಬರೆಹದ ಹಾಸ್ಯ ಪತ್ರಿಕೆಯನ್ನು ಕಳುಹಿಸುತ್ತಿದ್ದ. ಮಾಸ್ಕೊ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಈತನ ಹಿರಿಯ ಅಣ್ಣ ಅಲೆಕ್ಸಾಂಡರನ ಪ್ರಭಾವ ಈತನ ಮೇಲೆ ಈ ಅವಧಿಯಲ್ಲಿ ಬಹುಮಟ್ಟಿಗೆ ಉಂಟಾಯಿತು. ರಷ್ಯದ ಮಧ್ಯಮವರ್ಗದ ಕುಟುಂಬಗಳಿಗೆ ಜೀವನ ದುಸ್ಸಹವಾಗಿತ್ತು. ಈ ಪರಿಸ್ಥಿತಿ ಚೆಕಾಫನ ಮೇಲೆ ತುಂಬ ಪರಿಣಾಮ ಬೀರಿತು. ಶಾಲಾಶಿಕ್ಷಣ ಪೂರೈಸಿದೊಡನೆಯೇ (1879) ಈತನಿಗೆ ಮಾಸ್ಕೊ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದಲ್ಲಿ ಪ್ರವೇಶ ದೊರಕಿತು. ವೈದ್ಯಕೀಯ ಶಿಕ್ಷಣ ತನ್ನ ಸಾಹಿತ್ಯಕ ಕೃತಿಗಳ ಮೇಲೆ ಪ್ರಭಾವ ಬೀರಿತೆಂದು ಚೆಕಾಫ್ ಹೇಳಿಕೊಂಡಿದ್ದಾನೆ. ವೈದ್ಯಕೀಯ ಶಿಕ್ಷಣದಲ್ಲಿ ತೊಡಗಿದ್ದಾಗಲೇ ಸ್ವಲ್ಪ ಕಾಲ ಈತ ಆಸ್ಪತ್ರೆಗಳಲ್ಲಿ ಕೆಲಸ ಮಾಡಬೇಕಾಯಿತು. ಮುಂದೆ ವಿಶ್ವವಿದ್ಯಾಲಯ ಶಿಕ್ಷಣವನ್ನು ಮುಗಿಸಿದೊಡನೆಯೇ (1884) ಚೆಕಾಫ್ ವೈದ್ಯವೃತ್ತಿಯನ್ನು ಬಿಟ್ಟುಕೊಟ್ಟ. ಕೆಲಕಾಲ ಹಳ್ಳಿಗಳಿಗೆ ಹೋಗಿ ರೈತರಿಗೆ ಓದುಬರಹ ಕಲಿಸಿದ. ಹೀಗಾಗಿ ಜನಸಂಪರ್ಕ ನಿಕಟವಾಯಿತು.

1881–1887ರ ಅವಧಿಯಲ್ಲಿ ಈತ ಅಸಂಖ್ಯಾತ ಕೃತಿಗಳನ್ನು ರಚಿಸಿದ. 1885ರಲ್ಲಿ ಪೀಟರ್ಸ್‌ಬರ್ಗ್‌ನ ಪ್ರಸಿದ್ಧ ಪತ್ರಿಕೆ ಎನಿಸಿದ ನೋವಯ ವ್ರೆಮ್ಯದ (ಹೊಸಕಾಲ) ಸಂಪಾದಕ ಸವೊರಿನ್‌ನ ಪರಿಚಯವಾಯಿತು. ಆ ಪತ್ರಿಕೆಯ ಸಾಹಿತ್ಯಕ ಪುರವಣಿಗೆ ಈತ ಕಾಯಂ ಬರೆಹಗಾರನಾದ. ಇವರಿಬ್ಬರ ಸ್ನೇಹ ಗಾಢವಾಗಿ ಇಬ್ಬರೂ ಜೊತೆಯಲ್ಲೇ ಇಟಲಿ ದೇಶವನ್ನು ಸುತ್ತಿದರು. ಇವರಿಬ್ಬರ ನಡುವೆ ನಡೆದ ಪತ್ರ ವ್ಯವಹಾರ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದುದು. 1886ರಲ್ಲಿ ಈತ ತನ್ನ ಮೊದಲ ಕಥಾಸಂಕಲನವನ್ನೂ 1887ರಲ್ಲಿ ಇವಾನೊ ಎಂಬ ಮೊದಲ ನಾಟಕವನ್ನೂ ಪ್ರಕಟಿಸಿದ. ಈತ ಟಾಲ್‌ಸ್ಟಾಯ್‌ನ ಪ್ರಭಾವಕ್ಕೆ ಒಳಗಾಗಿದ್ದರೂ ಆತನ ಭೇಟಿಯಾದುದು 1895ರಲ್ಲಿ. ಅಪರಾಧಿಗಳ ಸ್ಥಿತಿಗತಿಗಳನ್ನರಿಯಲೋಸುಗ ಈಗ ಸಹಾಲಿನ್ ದ್ವೀಪದ ಪ್ರವಾಸವನ್ನು ಕೈಗೊಂಡ. ಈ ಪ್ರವಾಸದ ಫಲವಾಗಿ ಈತ ಸಹಾಲಿನ್ ದ್ವೀಪ ಎಂಬ ಕೃತಿಯನ್ನು ರಚಿಸಿದ. ಅಲ್ಲಿನ ದುಃಸ್ಥಿತಿಗೆ ದೇಶದ ಪ್ರತಿಯೊಬ್ಬ ಪ್ರಜೆಯೂ ಹೊಣೆಯೆಂದು ಅದರಲ್ಲಿ ಟೀಕಿಸಿದ. ಹಾಗಾಗಿ ಅಪರಾಧಿಗಳ ಸ್ಥಿತಿಗತಿಯಲ್ಲಿ ಸುಧಾರಣೆಗಳಾದವು. 1901ರಲ್ಲಿ ಈತ ವೋಲ್ಗಾ ಲಿಯೊನಾರ್ಡೋ ನೀಪರ್ ಎಂಬಾಕೆಯನ್ನು ವಿವಾಹವಾದ.

ಚೆಕಾಫ್ ಕ್ಷಯರೋಗಪೀಡಿತನಾಗಿದ್ದುದರಿಂದ 1892ರಲ್ಲಿ ಮಾಸ್ಕೊದಿಂದ 60 ಕಿಮೀ. ದೂರವಿದ್ದ ಮೆಲೀಹವ ಎಂಬ ಹಳ್ಳಿಗೆ ಬಂದು ಅಲ್ಲಿ 6 ವರ್ಷಗಳ ಕಾಲ ವಾಸವಾಗಿದ್ದ. ಈ ಅವಧಿಯಲ್ಲಿ ಈತನ ಸೃಜನಾತ್ಮಕ ಸಾಹಿತ್ಯ ಸಿದ್ಧಿಯ ನೆಲೆಯನ್ನು ಮುಟ್ಟಿತೆಂದು ಹೇಳಬಹುದು. ಈತನ ಆರೋಗ್ಯ ದಿನದಿನಕ್ಕೂ ಕೆಡುತ್ತಾ ಹೋದಾಗ ವಿಶ್ರಾಂತಿಗಾಗಿ ಕ್ರಿಮ್‌ನಲ್ಲಿರುವ ಯಾಲ್ತಾ ಎಂಬ ನಗರಕ್ಕೆ ಬಂದ (1892). ಅಲ್ಲಿ ಈತನಿಗೆ ಗಾರ್ಕಿಯ ಸ್ನೇಹ ಲಭಿಸಿತು. ರಷ್ಯದಲ್ಲಿ ಇಂದಿಗೂ ಚೆಕಾಫ್, ಗಾರ್ಕಿ, ಟಾಲ್‌ಸ್ಟಾಯ್ ಈ ಮೂವರನ್ನು ರಷ್ಯದ ಸಾಹಿತ್ಯತ್ರಯರೆಂದು ಗಣಿಸಲಾಗಿದೆ.

1900ರಲ್ಲಿ ಈತ ರಷ್ಯನ್ ಅಕಾಡೆಮಿ ಆಫ್ ಸೈನ್ಸ್ (ಸಾಹಿತ್ಯ ವಿಭಾಗ) ಸಂಸ್ಥೆಯ ಗೌರವಸದಸ್ಯನಾಗಿ ಚುನಾಯಿತನಾದ. ಆದರೆ ಝಾರ್ ದೊರೆಯ ಆದೇಶದ ಮೇರೆಗೆ ಗಾರ್ಕಿಯ ಆಯ್ಕೆಯನ್ನು ರದ್ದುಗೊಳಿಸಿದ್ದರಿಂದ ಈತ ರಾಜೀನಾಮೆ ನೀಡಿದ.

ಈತನಿಗೆ ಯೂಕ್ರೇನಿಯನ್ ಸಾಹಿತ್ಯದ ಪರಿಚಯವಿತ್ತು. ಈತನ ಅಜ್ಜಿ ಯೂಕ್ರೇನಿಯನ್ನಳು. ಚಿಕ್ಕಂದಿನಲ್ಲಿ ಅಜ್ಜಿಯಿಂದ ಯೂಕ್ರೇನಿಯನ್ ಹಾಡುಗಳನ್ನೂ ಕತೆಗಳನ್ನೂ ಕೇಳಿದ್ದ. ಯೂಕ್ರೇನ್‌ನಲ್ಲಿ ಹರಿಯುವ ಹರೋಲ್ ನದಿಯ ದಂಡೆಯಲ್ಲಿ ವಾಸಿಸಬೇಕೆಂದು ಎಷ್ಟೋ ಬಾರಿ ಈತ ಕನಸು ಕಂಡಿದ್ದುಂಟು. ಯೂಕ್ರೇನಿಯನ್ನರ ಸರಳತೆ, ಸಜ್ಜನಿಕೆ, ಹರಿತವಾದ ಬುದ್ಧಿಶಕ್ತಿ ಇವೇ ಮೊದಲಾದ ಸದ್ಗುಣಗಳಿಗೆ ಮಾರುಹೋಗಿ ಈತ ತನ್ನಲ್ಲೂ ಆ ಗುಣಗಳನ್ನು ಅಳವಡಿಸಿಕೊಂಡಿದ್ದ. ವಿದ್ಯಾರ್ಥಿ ದೆಸೆಯಿಂದಲೂ ನಾಟಕರಂಗದ ಬಗ್ಗೆ ಈತನಿಗೆ ಆಸಕ್ತಿ; ಯೂಕ್ರೇನಿಯನ್ ಜನಜೀವನವನ್ನು ಆಧರಿಸಿ ಒಂದು ನಾಟಕವನ್ನು ಬರೆಯಬೇಕೆಂಬ ಅಭಿಲಾಷೆ; ಆದರೆ ಅದು ಸಾಧ್ಯವಾಗದೆ ಹೋಯಿತು. ಆದರೆ ಈತನ ಜೀವಿತಕಾಲದಲ್ಲೇ ಈತನ ಕೃತಿಗಳು ಯೂಕ್ರೇನಿಯನ್ ಭಾಷೆಗೆ ಅನುವಾದಗೊಂಡವು. ಇವಾನ್ ಫ್ರಾಂಕೊ, ಎಂ. ಕೊತ್ಸುಬಿನ್‌ಸ್ಕಿ ಮತ್ತಿತರರು ಈತನ ಕೃತಿಗಳನ್ನು ಅನುವಾದಿಸಿದ್ದಾರೆ.

ಈತನ ನಾಟಕಗಳಲ್ಲಿ ವಿಷ್ ನ್ಯೋವಿ ಸಾದ್ (ಚೆರಿ ಹಣ್ಣಿನ ತೋಟ), ಡಾಜ್ಯಾವಾನ್ಯಾ (ವಾನ್ಯಾ ಚಿಕ್ಕಪ್ಪ), ಚಾಯಕ್ (ಕಡಲ ಕಾಗೆ), ತ್ರ್ಯೋಹ್ ಸ್ಯೊಸ್ತ್ರಿ (ಮೂವರು ಸಹೋದರಿಯರು), ಇವಾನೋ ಮುಖ್ಯವಾದುವು, ಚೆರಿಹಣ್ಣಿನ ತೋಟ ಎಂಬ ಕೃತಿಯಂತೂ ಜಗತ್ಪ್ರಸಿದ್ಧವಾಗಿದೆ. (ಎಚ್.ಎಸ್.ಎಚ್.)

ಜಮೀನ್ದಾರ ವರ್ಗಕ್ಕೆ ಸೇರಿದ ಓರ್ವ ಮಹಿಳೆ ಮತ್ತು ಅವಳ ಸಹೋದರನ ಕತೆಯನ್ನು ಚೆರಿ ತೋಟ ನಾಟಕದಲ್ಲಿ ಕಾಣಬಹುದು. ವ್ಯಕ್ತಿಗಳ ಆಸೆ ಕನಸುಗಳನ್ನು ಲಕ್ಷಿಸದೆ ಸಾಗುವ ಜಗತ್ತಿಗೆ ಹೊಂದಿಕೊಳ್ಳಲಾರದ ವ್ಯಕ್ತಿಗಳ ಆಸೆ ಭರವಸೆಗಳ ದುರಂತ ನಾಶ ಈ ಕೃತಿಯ ವಸ್ತು. ಚೆರಿತೋಟ ಈ ಆಸೆ ಭರವಸೆಗಳ ಪ್ರತೀಕ. ನಿರೂಪಣೆಯ ಸೌಮ್ಯತೆ ನಾಟಕದ ಪರಿಣಾಮವನ್ನು ಹೆಚ್ಚಿಸಿದೆ.

ಕಷ್ಟಾಂಕ ಎಂಬುದು ಸರ್ಕಸ್ಸಿನಲ್ಲಿ ಕೆಲಸ ಮಾಡುವ ಒಂದು ನಾಯಿಯ ಕತೆ. ನಿರೂಪಣೆ ಅದ್ಭುತವಾದುದು. ಇದು ಎಳೆಯ ಹೃದಯಗಳನ್ನು ಸೂರೆಗೊಳ್ಳುವ ಅತ್ಯಂತ ಯಶಸ್ವಿ ಕತೆ. ಈತನ ಕತೆಗಳಲ್ಲಿ ಮುಖ್ಯವಾಗಿ ಪ್ರತಿ ವ್ಯಕ್ತಿಯ ಆಂತರ್ಯದ ಒಂಟಿತನ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದರ ಮತ್ತು ಒಬ್ಬರು ಮತ್ತೊಬ್ಬರಿಗೆ ತಮ್ಮ ಆಂತರ್ಯವನ್ನು ವ್ಯಕ್ತಪಡಿಸುವುದರ ಅಸಾಧ್ಯತೆ ಇವು ಚಿತ್ರಿತವಾಗಿವೆ. ಇದರಿಂದ ಚೆಕಾಫ್‌ನ ಕತೆಗಳ ಕ್ರಿಯೆ ವಿಷಾದ, ಬೇಸರ, ನಿಸ್ಸಹಾಯಕತೆಯ ಅರಿವು–ಇವು ಬೆರೆತ ವಾತಾವರಣದಲ್ಲಿ ಸಾಗುತ್ತದೆ.

ಈತ ತನ್ನದೇ ಆದ ವಿಶಿಷ್ಟ ಶೈಲಿಯನ್ನು ನಿರ್ಮಿಸಿಕೊಂಡ. 'ಬೇಸರದ ಕತೆ', 'ಸಾಹಿತ್ಯದ ಪ್ರಾಧ್ಯಾಪಕ' ಮೊದಲಾದವು ಸುಪ್ರಸಿದ್ಧ ಕತೆಗಳು. 'ವಾರ್ಡ್ ನಂ.6' ಪ್ರತಿಮೆಯ ಬಳಕೆಯಲ್ಲಿ ಅದ್ಭುತ ಸಾಧನೆ.

ಈತ ತುರ್ಗೆನೆಫ್ ಮತ್ತು ಆಸ್ಟ್ರೌಸ್ಕಿ ಇವರುಗಳ ಪ್ರಯೋಗಗಳನ್ನು ಬೆಳೆಸಿದ. ಈತನ ನಾಟಕಗಳಲ್ಲಿ ಘಟನೆಗಳು ನಡೆಯುವಂತೆ ಭಾಸವಾದರೂ ವಾಸ್ತವವಾಗಿ ಕ್ರಿಯೆ ಮುಂದುವರೆದಿರುವುದಿಲ್ಲ. ಸಣ್ಣ ಪುಟ್ಟ ಸಂಗತಿಗಳು ಮತ್ತು ವಿವರಗಳನ್ನು ಬಳಸಿಕೊಂಡು ನಿರಾಸೆಯ ವಾತಾವರಣವನ್ನು ಸೃಷ್ಟಿಸುವ ಈತನ ಕೌಶಲ ಅನುಕರಣೀಯವಾದುದು. ಆಳವಾದ ಅನುಕಂಪದಿಂದ ಕೂಡಿದ ಪಾತ್ರನಿರೂಪಣೆ, ಪ್ರತಿಮಾವಿಧಾನದ ಬಳಕೆ, ವಿಶಿಷ್ಟ ವಾತಾವರಣದ ಸೃಷ್ಟಿ–ಇವು ಈತನ ನಾಟಕಗಳ ವೈಶಿಷ್ಟ್ಯ. ಇವು ರಂಗಭೂಮಿಯ ಮೇಲೂ ಬಹಳ ಯಶಸ್ವಿಯಾಗಿವೆ.

ಪಾಶ್ಚಾತ್ಯ ಜಗತ್ತಿನಲ್ಲಿ 19ನೆಯ ಶತಮಾನದ ಶ್ರೇಷ್ಠ ನಾಟಕಕಾರರಲ್ಲಿ ಈತ ಒಬ್ಬ. ತಾನು ನಾಟಕವನ್ನು ಹೇಗೆ ಕಲ್ಪಿಸಿಕೊಳ್ಳುತ್ತೇನೆ ಎನ್ನುವುದನ್ನು ಅವನು ಹೀಗೆ ವಿವರಿಸಿದ್ದಾನೆ. ನಾಟಕ ಹೇಗಿರಬೇಕೆಂದರೆ ಜನರು ಬಂದು ಹೋಗಬೇಕು, ಊಟಮಾಡಬೇಕು, ಹವೆಯ ವಿಷಯ ಮಾತನಾಡಬೇಕು, ಇಸ್ಪೀಟ್ ಆಡಬೇಕು, ಆದರೆ ಇದೆಲ್ಲವನ್ನು ನಾಟಕಕಾರ ಬಯಸುತ್ತಾನೆ ಎಂದು ಮಾಡಬಾರದು. ನಿಜಜೀವನದಲ್ಲಿ ಆಗುವುದು ಇದೇ ಎನ್ನುವುದಕ್ಕಾಗಿ ಮಾಡಬೇಕು. ರಂಗಭೂಮಿಯ ಮೇಲಿನ ಬದುಕು, ವಾಸ್ತವ ಬದುಕಿನಂತೆಯೇ ಇರಬೇಕು, ಅಲ್ಲಿ ಕಾಣುವ ಜನರೂ ನಿಜಜೀವನದಲ್ಲಿ ಇರುವಂತೆಯೂ ಇರಬೇಕು. ಆದರೆ ತೀರ ಸಾಮಾನ್ಯವೆಂದು ಕಾಣುವ, ಅಮುಖ್ಯವೆಂದು ಕಾಣುವ ಈ ಕ್ರಿಯೆಗಳು ನಡೆಯುತ್ತಿರುವಾಗಲೇ ಪಾತ್ರಗಳ ಬದುಕಿನ ದಿಕ್ಕುಗಳೇ ಬದಲಾಗುತ್ತಿವೆ, ಹೃದಯಗಳು ಒಡೆಯುತ್ತವೆ. ರಂಗಭೂಮಿಯ ಮೇಲಿನ ಕ್ರಿಯೆ ಬದುಕಿನ ಏರಿಳಿತಗಳನ್ನೂ ಸಾತತ್ಯವನ್ನೂ ಅನುಭವಕ್ಕೆ ತಂದುಕೊಡಬೇಕು ಎಂದು ಇವನ ಅಭಿಪ್ರಾಯ. ಇವನ ನಾಟಕಗಳನ್ನು "ನಗೆ ಮತ್ತು ಉತ್ಪ್ರೇಕ್ಷೆಗಳಿಲ್ಲದ ಕಾಮಿಡಿ, ಎದೆ ಬಡಿಯುವುದು ಮತ್ತು ದುಷ್ಟತನಗಳಿಲ್ಲದ ಟ್ರಾಜಿಡಿ" ಎಂದು ವರ್ಣಿಸಿದೆ. (ಎಂದರೆ ಎದೆ ಬಡಿಯುವುದು ರಂಗಭೂಮಿಯ ಮೇಲಿನ ಕ್ರಿಯೆಯ ಭಾಗವಲ್ಲ). ಇವನ ನಾಟಕಗಳ ಕೇಂದ್ರದಲ್ಲಿ ಒಬ್ಬ ನಾಯಕ ಅಥವಾ ನಾಯಕಿ ಇರುವುದಿಲ್ಲ, ಒಂದು ಗುಂಪು ಇರುತ್ತದೆ. ನಾಟಕದಲ್ಲಿ ಕಥಾವಸ್ತು ಬೆಳೆಯುತ್ತದೆ ಎನ್ನುವುದಕ್ಕಿಂತ ಒಂದು ಸನ್ನಿವೇಶ ಅನಾವರಣವಾಗುತ್ತ ಹೋಗುತ್ತದೆ ಎನ್ನಬಹುದು. ಕಾಮಿಡಿ ಮತ್ತು ವಿಷಾದಗಳ ಅಸಿಧಾರಾ ಸಮತೋಲನವನ್ನು ಇವನ ನಾಟಕಗಳಲ್ಲಿ ಕಾಣಬಹುದು. (ಎಲ್.ಎಸ್.ಎಸ್.)

**ಚೆಕೊಸ್ಲೊವಾಕ್ ಸಾಹಿತ್ಯ :** ಈಗ ಚೆಕೊಸ್ಲೊವಾಕಿಯ ಎಂದು ಪ್ರಚಲಿತವಿರುವ ಪ್ರದೇಶದಲ್ಲಿ ದೇಶೀಯ ಭಾಷೆಯಲ್ಲಿ ಬರೆಹ ಪ್ರಾರಂಭವಾದದ್ದು ಪ್ರ.ಶ. 863ರಲ್ಲಿ. ಆ ವರ್ಷ ಗ್ರೇಟ್ ಮೊರೇವಿಯದ ರಾಜಕುಮಾರ ರಾಸ್ಟಿಸ್ಲಾವ್ ಅಂದು ಪ್ರಬಲವಾಗಿದ್ದ ಜರ್ಮನ್ ಪ್ರಭಾವವನ್ನು ಎದುರಿಸಲು ಪೂರ್ವ ಬೈಜ಼ಾಂಟಿಯಮ್‌ನ ನೆರವನ್ನು ಬಯಸಿದ. ಅವನ ಅಪೇಕ್ಷೆಯ ಮೇರೆಗೆ ಬೈಜ಼ಾಂಟಿಯಮ್ ಚಕ್ರವರ್ತಿ ಮೂರನೆಯ ಮೈಕೆಲ್ ಒಂದು ಧರ್ಮಪ್ರಚಾರ ಮಂಡಳಿಯನ್ನು ಕಳುಹಿಸಿಕೊಟ್ಟ. ಆ ಮಂಡಳಿಯ ನೇತೃತ್ವ ವಹಿಸಿದವರು ಉದ್ದಾಮ ವಿದ್ವಾಂಸನೂ ರಾಯಭಾರಿಯೂ ಆಗಿದ್ದ ಕಾನ್‌ಸ್ಟಂಟೀನ್ ಮತ್ತು ಅವನ ಸಹೋದರ ಮೆಥೋಡಿಯಸ್. ಇವರಿಬ್ಬರೂ ಸೇರಿ ಕ್ರಿಸ್ತಧರ್ಮಗ್ರಂಥಗಳ ಬಹುಭಾಗವನ್ನೂ ಕ್ರಿಸ್ತಧರ್ಮದ ಪೂಜಾವಿಧಿಗೆ ಸಂಬಂಧಿಸಿದ ಕೆಲವು ಭಾಗಗಳನ್ನೂ ಸ್ಲೊವ್ಯಾನಿಕ್ ದೇಶಭಾಷೆಗೆ ತುರ್ಜುಮೆ ಮಾಡಿದರು. ಈ ಸಹೋದರರಿಬ್ಬರ ಜೀವನಚರಿತ್ರೆಗಳು ಪ್ರಸಿದ್ಧಿ ಪಡೆದಿವೆ. ಸೇಂಟ್ ವೆನ್‌ಸೆಸ್‌ಲಾಸ್ ಮತ್ತು ಅವನ ಅಜ್ಜಿ ಲುಡ್‌ಮಿಲರನ್ನು ಕುರಿತ ಆಖ್ಯಾಯಿಕೆಗಳು ಹತ್ತನೆಯ ಶತಮಾನದ ಇನ್ನೊಂದು ಕೃತಿ. ಅನಂತರ ಲ್ಯಾಟಿನ್‌ನಲ್ಲಿ ರಚಿತವಾದ ಸಾಧು ಸಂತರ ಜೀವನಚರಿತ್ರೆಗಳಿಂದ ಬೊಹೀಮಿಯ ರಾಜ್ಯದ ಆರಂಭದೆಸೆಯಲ್ಲಿ ಸಾಹಿತ್ಯ ಚಟುವಟಿಕೆಗಳು ಭರವಾಗಿ ಸಾಗಿತ್ತೆಂದು ಊಹಿಸಬಹುದು.

ಚೆಕ್ ಭಾಷೆಯಲ್ಲಿ ಲಭ್ಯವಾಗಿರುವ ಅತ್ಯಂತ ಹಳೆಯ ಗ್ರಂಥಗಳು 13ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದವು. ಅಂದಿನ ಸ್ತೋತ್ರಗೀತೆಗಳು ನಿರಾಡಂಬರ ಶೈಲಿಯ ಕವನರೂಪದಲ್ಲಿದ್ದುವು. ಇವನ್ನು ಬಿಟ್ಟರೆ 13ನೆಯ ಶತಮಾನ ಮುಗಿಯುವ ಹೊತ್ತಿಗೆ ಚೆಕ್ ಭಾಷೆಯಲ್ಲಿ ಮಹತ್ತ್ವಪೂರಿತವಾದ ಯಾವುದೇ ಸಾಹಿತ್ಯ ನಿರ್ಮಾಣದ ಸ್ಪಷ್ಟ ನಿದರ್ಶನವಿಲ್ಲ.

14ನೆಯ ಶತಮಾನದಲ್ಲಿ ಮಹಾಕಾವ್ಯ, ಭಾವಗೀತೆ, ನಾಟಕ, ಗದ್ಯ ಕ್ಷೇತ್ರಗಳಲ್ಲಿ ಸಮೃದ್ಧವಾದ ಸಾಹಿತ್ಯ ಸೃಷ್ಟಿಯಾಯಿತು. ಆ ಶತಮಾನದ ಮೊದಲ ವರ್ಷಗಳಲ್ಲಿ ಲೆಜೆಂಡ್ಸ್ ಎಂಬ ಕವನಗುಚ್ಛದಲ್ಲಿ (ಗ್ರಂಥಕರ್ತ ಒಬ್ಬನೋ ಒಂದು ಗುಂಪೋ ಗೊತ್ತಿಲ್ಲ) ಕಾವ್ಯತಂತ್ರದ ಬಗ್ಗೆ ತಕ್ಕಮಟ್ಟಿನ ಜಾಣ್ಮೆ ಕಂಡುಬರುತ್ತದೆ. ಅಲೆಕ್ಸಾಂಡ್ರೀಸ್ ಎಂಬ ಕೃತಿ ಅಲೆಕ್ಸಾಂಡರ್ ಮಹಾಶಯನ ಜೀವನಚರಿತ್ರೆಯನ್ನು ವಸ್ತುವಾಗುಳ್ಳ ಲೌಕಿಕ ಮಹಾಕಾವ್ಯ. ಈ ಕಾವ್ಯ ಅಷ್ಟಮಾತ್ರೆಗಳ ದ್ವಿಪದಿಗಳಲ್ಲಿದೆ. ಡಾಲಿಮಿಲ್ ಕ್ರಾನಿಕಲ್ ಎಂಬ ಇನ್ನೊಂದು ಕಾವ್ಯ ಚೆಕ್ ಜನರ ಇತಿಹಾಸವನ್ನು ನೇರ, ಸ್ಪಷ್ಟ ಶೈಲಿಯಲ್ಲಿ ಬಣ್ಣಿಸುತ್ತದೆ. ಚಕ್ರವರ್ತಿ ನಾಲ್ಕನೆಯ ಚಾರ್ಲ್ಸ್ (1346–78) ವಿದ್ಯಾಪ್ರಸಾರಕ್ಕೂ ಸಾಹಿತ್ಯಕ್ಕೂ ನೀಡಿದ ಪ್ರೋತ್ಸಾಹದಿಂದ ಬೊಹೀಮಿಯದಲ್ಲಿ ಚೆಕ್ ಮತ್ತು ಜರ್ಮನ್ ಭಾಷೆಗಳೆರಡೂ ಅಭಿವೃದ್ಧಿ ಹೊಂದಿದವು. ಅವನು ಲ್ಯಾಟಿನ್ ಭಾಷೆಯಲ್ಲಿ ಬರೆದ ಆತ್ಮಕಥೆ ಚೆಕ್ ಭಾಷೆಗೆ ಅನುವಾದಗೊಂಡಿತು. ಲೆಜೆಂಡ್ ಆಫ್ ಸೇಂಟ್ ಕ್ಯಾತರೀನ್ ಎಂಬ ಕಾವ್ಯ ಆ ಶತಮಾನದ ಅತ್ಯುನ್ನತ ಸಾಧನೆಯೆಂದು ಪರಿಗಣಿಸಲಾಗಿದೆ.

ಧರ್ಮಸ್ತೋತ್ರಗಳಲ್ಲದೆ ಲೌಕಿಕ ವಿಷಯಗಳನ್ನೊಳಗೊಂಡ ಭಾವಗೀತೆಗಳೂ ರಚಿತವಾದುವು. ಸಾಹಿತ್ಯದ ಪ್ರಭಾವದೊಡನೆ ಜಾನಪದ ಅಂಶಗಳೂ ಸೇರಿಕೊಂಡಿವೆ. ದೇಶೀಯ ಭಾಷೆಯಲ್ಲಿ ನಾಟಕವೂ ರಚಿತವಾಗಿತ್ತೆಂಬುದಕ್ಕೆ ದಿ ಕ್ವ್ಯಾಕ್ ಎಂಬ ಹಾಸ್ಯನಾಟಕದ ನಿದರ್ಶನ ದೊರೆತಿದೆ. ವೀರಯುಗದ ಸಾಹಸಗಳನ್ನು ವಸ್ತುವಾಗುಳ್ಳ ಜರ್ಮನ್ ಪದ್ಯಗಳನ್ನು ಆಧರಿಸಿ ಬರೆದ ಚೆಕ್ ಕವನಗಳು ಅನೇಕವಿವೆ. ಉದಾಹರಣೆಗೆ ಟ್ರಿಸ್ಟಾನ್, ಟಾಂಡನಿಯಸ್ ಮತ್ತು ಪ್ಲೊರಿಬೆಲ್ಲ.

1350ರಿಂದ ಗದ್ಯಕ್ಷೇತ್ರದಲ್ಲೂ ಹೆಚ್ಚಿನ ಕೆಲಸ ನಡೆಯಿತು. ಸಂತರ ಜೀವನಗಳು ಉದಂತಗಳು ಸ್ವಾರಸ್ಯ ಪ್ರಸಂಗಗಳ ನಿರೂಪಣೆಗಳು, ಮಧ್ಯಯುಗದ ಜನಪ್ರಿಯ ಕತೆಗಳಿಂದ ಆಯ್ದ ಪ್ರಕರಣಗಳು ಮುಂತಾದುವು ರಚಿತವಾದವು. ಹೀಗೆಯೇ ವ್ಯಂಗ್ಯ ಮತ್ತು ನೀತಿಬೋಧಕ ಕವನಗಳೂ ಹೊರ ಬಂದವು. ಸ್ಮಿಲ್ ಫ್ಲಾಸ್ಕಾ (1349–1403) ಬರೆದ ರಾಜಕೀಯ ರೂಪಕ ಒಂದು ವಿಶಿಷ್ಟ ಕೃತಿ. ದೊರೆಯ ಅಧಿಕಾರದ ವಿರುದ್ಧ ಬೊಹೀಮಿಯದ ಶ್ರೀಮಂತ ವರ್ಗದ ಹಕ್ಕುಗಳನ್ನು ಪ್ರತಿಪಾದಿಸುವುದೇ ಇದರ ವಿಷಯ. ಇದೇ ರೀತಿಯ ಸಾಮಾಜಿಕ ಕಾಳಜಿ ತಾಮಸ್ ಸ್ಟಿಟ್ನಿಯ ನೀತಿಬೋಧಕ ಗದ್ಯ ಬರೆವಣಿಗೆಗಳಲ್ಲೂ ವ್ಯಕ್ತವಾಗಿದೆ. 14ನೆಯ ಶತಮಾನದ ಕೊನೆಯಲ್ಲಿ ಬಂದ ಸಾಹಿತ್ಯದಲ್ಲಿ ಸಾಮಾಜಿಕ ಮತ್ತು ನೈತಿಕ ವಿಷಯಗಳಿಗೆ ಹೆಚ್ಚು ಗಮನ ನೀಡಲಾಯಿತು. ಈ ಹೊತ್ತಿಗೆ ಜಾನ್ ಹಸ್ (1370–1418) ಪ್ರಾರಂಭಿಸಿದ ಧಾರ್ಮಿಕ ಸುಧಾರಣಾ ಚಳವಳಿಯ ಪರಿಣಾಮವಾಗಿ ಚೆಕ್ ಲೇಖಕರ ಗಮನ ಬಹುಮಟ್ಟಿಗೆ ವಾಸ್ತವಿಕ ಮತ್ತು ವಿವಾದಾತ್ಮಕ ವಿಷಯಗಳಿಗೆ ಮೀಸಲಾಯಿತು. ಹಸ್ ದೇಶೀಯ ಭಾಷೆಯಲ್ಲಿ ನೀಡಿದ ಉಪದೇಶಗಳು ಮತ್ತು ಅವನು ಬರೆದ ಪತ್ರಗಳು ಅತ್ಯಂತ ಸರಳ ಶೈಲಿಯವಾಗಿದ್ದವು. ಇವುಗಳಿಂದ ಪ್ರಭಾವಿತರಾದ ಹಸ್‌ನ ಅನುಯಾಯಿಗಳು ರಚಿಸಿದ ಸ್ತೋತ್ರಗಳು ಅತ್ಯಂತ ಹೃದಯಸ್ಪರ್ಶಿಯಾಗಿವೆ.


ಜಾನ್ ಹಸ್

ಹಸ್ ಅನಂತರ ಬಂದ ಲೇಖಕರಲ್ಲಿ ಅತ್ಯಂತ ಮೇಧಾವಿಯಾದ ಪೀಟರ್ ಚೆಲ್‌ಸಿಕಿ (1390–1460). ತನ್ನ ಕ್ರಾಂತಿಕಾರಕ ಸಾಮಾಜಿಕ ಚಿಂತನೆಗಳನ್ನೂ ಯುದ್ಧವಿರುದ್ಧದ ಅಭಿಪ್ರಾಯಗಳನ್ನೂ ಪ್ರಬಂಧಗಳಲ್ಲಿ ಹೊರಗೆಡಹಿದ. ಈತನ ಬರೆಹಗಳಿಂದ ಸ್ಫೂರ್ತಿ ಪಡೆದ ಬೊಹೀಮಿಯನ್ ಬ್ರದರನ್ ಎಂಬ ಗುಂಪು ಮುಂದಿನ ಎರಡು ಶತಮಾನಗಳ ಕಾಲ ದೇಶೀಯ ಚೆಕ್ ಭಾಷೆಯಲ್ಲಿ ಸಾಹಿತ್ಯನಿರ್ಮಾಣಕ್ಕೆ ಉತ್ತೇಜನ ನೀಡಿತು. 16ನೆಯ

ಶತಮಾನದಲ್ಲಿ ದೇಶೀಯ ಭಾಷೆಯ ಕಾವ್ಯಕ್ಷೇತ್ರದಲ್ಲಿ ಯಾವ ಹೊಸ ಚೈತನ್ಯವೂ ಕಾಣಲಿಲ್ಲ. ನೀತಿಬೋಧೆಗೂ ವಿದ್ವತ್ತಿಗೂ ಪ್ರಾಶಸ್ತ್ಯ ನೀಡಿದ ಗದ್ಯಸಾಹಿತ್ಯವೇ ಹೇರಳವಾಗಿದೆ. ಮಾರ್ಕೊ ಪೋಲೋನ ಮಿಲಿಯನ್ ಎಂಬ ಕೃತಿಯ ಅನುವಾದದಿಂದ ಉತ್ತೇಜನಗೊಂಡು ಅನೇಕ ಲೇಖಕರು ಪ್ರವಾಸಸಾಹಿತ್ಯವನ್ನು ರಚಿಸಿದರು.

ಚೆಕ್ ಗದ್ಯದ ಬೆಳವಣಿಗೆಯ ಪೂರ್ಣಫಲ ದೊರೆತದ್ದು ವಿದ್ವಾಂಸರ ತಂಡವೊಂದು ಕೈಗೊಂಡ ಬೈಬಲ್ ಅನುವಾದದಿಂದ (1579–93). ಈ ಕೃತಿಯ ಭಾಷೆ ಅಭಿಜಾತ ಚೆಕ್ ಶೈಲಿಗೆ ಮಾದರಿಯಾಯಿತು. ಈ ಹೊತ್ತಿಗೆ ಡೇನಿಯಲ್ ಆ್ಯಡಮ್ ಝಡ್ ವೆಲಿಸ್ಲಾವಿನ (1545–99) ಎಂಬ ವಿದ್ವಾಂಸ ರಚಿಸಿದ ನಿಘಂಟುಗಳಲ್ಲಿ ಚೆಕ್ ಭಾಷೆಗೆ ಸುವ್ಯವಸ್ಥಿತ ರೂಪ ಬಂತು; ಅಲ್ಲಿಯವರೆಗೂ ಬೆಳೆದು ಬಂದಿದ್ದ ಚೆಕ್ ಸಾಹಿತ್ಯಕೃತಿಗಳ ಪರಂಪರೆಯ ಸಂಪತ್ತನ್ನು ಆತ ಬೆಳಕಿಗೆ ತಂದ. 1620ರಲ್ಲಿ ನಡೆದ ಕದನದಲ್ಲಿ ಪ್ರಾಟೆಸ್ಟಂಟ್ ಪಂಥದ ಬೋಹೀಮಿಯನ್ ಪಡೆಗಳಿಗೆ ಸೋಲಾಯಿತು. ಅದರ ಪರಿಣಾಮವಾಗಿ ಹಳೆಯ ಶ್ರೀಮಂತ ವರ್ಗವೇ ನಿರ್ಮೂಲಗೊಂಡಿತು. ಅದರ ಸ್ಥಾನದಲ್ಲಿ ಬಂದ ಹೊಸಬರಿಗೆ ಚೆಕ್ ಭಾಷೆಯ ತಿಳುವಳಿಕೆಯೇ ಇರಲಿಲ್ಲ. ಪ್ರಾಟೆಸ್ಟಂಟ್ ಪ್ರಭಾವದಿಂದ ರೂಪುಗೊಂಡಿದ್ದ ಎರಡು ಶತಮಾನಗಳ ಸಾಹಿತ್ಯ ಪರಂಪರೆಗೆ ಮುಟ್ಟುಗೋಲು ಹಾಕಲಾಗಿತ್ತು. ಅದು ಜೀವಂತವಾಗಿ ಉಳಿದಿದ್ದು ವಲಸೆಹೋದ ಲೇಖಕರಲ್ಲಿ ಮಾತ್ರ. ಆ ಪೈಕಿ ಜಾನ್ ಆಮೋಸ್ ಕೊಮೆನ್‌ಸ್ಕಿ (1592–1670) ಅತ್ಯಂತ ಪ್ರಸಿದ್ಧನಾದವ. ಚೆಕ್ ಭಾಷೆಯಲ್ಲಿ ಅವನು ರಚಿಸಿದ ಕೃತಿಗಳು ಅವನನ್ನು ಮಹಾ ಮೇಧಾವಿ ಎಂದು ತೋರಿಸುತ್ತವೆ. ಅವನ ಲ್ಯಾಬಿರಿಂತ್ ಆಫ್ ದಿ ವರ್ಲ್ಡ್ ಅಂಡ್ ಪ್ಯಾರಡೈಸ್ ಆಫ್ ದಿ ಹಾರ್ಟ್ ಎಂಬ ಕೃತಿ ಚೆಕ್ ಗದ್ಯ ಸಾಹಿತ್ಯದಲ್ಲಿ ಮೇರುಕೃತಿಯೆಂದು ಹೆಸರು ಪಡೆದಿದೆ.

ಕ್ಯಾಥೊಲಿಕ್ ಪಂಥದ ಸಾಹಿತ್ಯಕ್ಕೆ ದೇಶದೊಳಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಅದು ಮುಖ್ಯವಾಗಿ ಸಂತರ ಚರಿತ್ರೆ, ಭಕ್ತಸಾಹಿತ್ಯ, ಧಾರ್ಮಿಕ ಕಾವ್ಯ ಮತ್ತು ಸ್ತೋತ್ರಗಳನ್ನು ಒಳಗೊಂಡಿತು. ಬೆಡ್ರಿಚ್ ಬ್ರೈಡೆಲ್ (1619–1680) ಬರೆದ ಕಾವ್ಯ ಉನ್ನತ ಮಟ್ಟದ್ದು ಎಂದು ಪರಿಗಣಿಸಲಾಗಿದೆ.

ಲ್ಯಾಟಿನ್ ಭಾಷೆಯಲ್ಲಿ ಬರೆದವರ ಪೈಕಿ ಜೆಸೂಯಿಟ್ ಪಂಥಕ್ಕೆ ಸೇರಿದ ಬೊಹುಸ್ಲಾವ್ ಬಾಲ್ಬಿನ್ (1621–88) ಅಗ್ರಗಣ್ಯ. ಈತ ಉಜ್ವಲ ದೇಶಭಕ್ತಿಯಿಂದ ಪ್ರೇರಣೆಗೊಂಡು ತನ್ನ ದೇಶದ ಗತಕಾಲವನ್ನು ಕುರಿತ ಅಧ್ಯಯನಗಳನ್ನೂ ಚೆಕ್ ಭಾಷೆಯ ಸಮರ್ಥನೆಯನ್ನೂ ಪ್ರಕಟಿಸಿದ. 18ನೆಯ ಶತಮಾನದ ಮೊದಲಲ್ಲಿ ಚೆಕ್ ಭಾಷೆಯನ್ನು ಶ್ರೇಷ್ಠ ಮಟ್ಟದ ಸಾಹಿತ್ಯ ರಚನೆಗೆ ಬಳಸುವುದನ್ನು ನಿಲ್ಲಿಸಲಾಗಿತ್ತು. ಆದರೂ ನಗರಗಳ ಬಡಜನರ ಮತ್ತು ಹಳ್ಳಿಗಳ ರೈತರ ಮನೋರಂಜನೆಗೋಸ್ಕರ ಒರಟು ಶೈಲಿಯ ದೇಶೀಯ ನಾಟಕಗಳು ಹಾಗೂ ಜನಪದ ಕಥೆಗಳೂ ಲಾವಣಿಗಳೂ (ಚ್ಯಾಪ್ ಬುಕ್ಸ್) ರಚಿತವಾಗುತ್ತಿದ್ದವು. ಈ ಹೊತ್ತಿಗೆ ಬಡರೈತರಲ್ಲಿ ಹೊಗೆಯಾಡುತ್ತಿದ್ದ ಅತೃಪ್ತಿಯನ್ನು ಹೊರಗೆಡಹುವ ಪದ್ಯಗಳೂ ಜನಪದಗೀತೆಗಳೂ ಭಾವಗೀತೆಗಳೂ ಜನಪ್ರಿಯವಾದುವು.

ಚೆಕ್ ಭಾಷೆಗೆ ಹೊಸ ಚೈತನ್ಯವನ್ನೂ ಸ್ವರೂಪವನ್ನೂ ಕೊಟ್ಟವ ಜೋಸೆಫ್ ಡೊಬ್ರೊವ್‌ಸ್ಕಿ. ಇವನು ಚೆಕ್ ಭಾಷೆಯ ಸ್ವರೂಪವನ್ನು ನಿರ್ಣಯಿಸಿ ಕ್ರೋಡೀಕರಿಸಿದ. ರಾಜಾಶ್ರಯದಿಂದ ದೊರೆತ ವಿರಾಮವನ್ನು ಡೊಬ್ರೊವ್‌ಸ್ಕಿ ಮಧ್ಯಯುಗದ ಮತ್ತು ಪುನರುಜ್ಜೀವನ ಕಾಲದ ಚೆಕ್ ಸಾಹಿತ್ಯದ ಕೂಲಂಕಷ ಅಧ್ಯಯನಕ್ಕೆ ಮೀಸಲಿಟ್ಟ. ಈತ ಒಂದು ವ್ಯಾಕರಣವನ್ನು ರಚಿಸಿ ಚೆಕ್ ಭಾಷೆಯ ನಿರ್ದಿಷ್ಟ ಪ್ರಯೋಗಕ್ಕೆ ಮಾರ್ಗದರ್ಶನ ನೀಡಿದ. ಹಳೆಯ ಚೆಕ್ ಸಾಹಿತ್ಯಚರಿತ್ರೆಯಲ್ಲಿ ಕಣ್ಮರೆಯಾಗಿದ್ದ ಒಳ್ಳೆಯ ಬರೆಹಗಾರರ ಮಾದರಿಗಳನ್ನೂ ಬೆಳಕಿಗೆ ತಂದ. ಆಂಟೋನಿನ್ ಜಿರೋಸ್ಲಾವ್ ಪುಕ್‌ಮಜೆ (1769–1820) ಚೆಕ್ ಭಾಷೆಗೆ ಪುನರುಜ್ಜೀವನ ಕೊಟ್ಟವರಲ್ಲಿ ಇನ್ನೊಬ್ಬ ಮುಖ್ಯವ್ಯಕ್ತಿ. 18ನೆಯ ಶತಮಾನದ ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆಗಳು ಚೆಕ್ ಸಾಹಿತ್ಯವನ್ನು ಆಸಕ್ತಿಯಿಂದ ಓದುವ ಓದುಗರನ್ನು ನಿರ್ಮಿಸಿದವು. ಜೋಸೆಫ್ ಯುಂಗ್‌ಮನ್ ಎಂಬಾತ ಮಿಲ್ಟನ್‌ನ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯದ ಅನುವಾದದಿಂದಲೂ (1811) ಅತ್ಯಂತ ಮಹತ್ತ್ವಪೂರ್ಣವಾದ ಚೆಕ್–ಜರ್ಮನ್ ನಿಘಂಟಿನಿಂದಲೂ ತನ್ನ ಭಾಷೆಯನ್ನು ಶ್ರೀಮಂತಗೊಳಿಸಿದ. ಭಾಷಾಶಾಸ್ತ್ರಜ್ಞನೂ ಪ್ರಾಚೀನ ಶೋಧಕನೂ ಆಗಿದ್ದ ಪವೆಲ್ ಜೋಸೆಫ್ ಸಫ್ರಿಕ್ (1795–1861) ಮತ್ತು ಮೊರೇವಿಯನ್ ಚರಿತ್ರಕಾರ ಫ್ರಾಂಟಿಸೆಕ್ ಪಲಾಕಿ (1798–1876) ಇವರಿಬ್ಬರೂ ಚೆಕ್ ರಾಷ್ಟ್ರೀಯ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಸಕ್ರಿಯವಾಗಿ ದುಡಿದ ಉದ್ದಾಮ ಪಂಡಿತರು. ಇವರು ಬರೆದ ಬೊಹೀಮಿಯ ಮತ್ತು ಮೊರೇವಿಯ ಚರಿತ್ರೆ ಅಭಿಜಾತ ಚೆಕ್ ಶೈಲಿಯ ಮೇರುಕೃತಿಯೆಂದು ಪ್ರಸಿದ್ಧಿಯಾಗಿದೆ.

19ನೆಯ ಶತಮಾನದ ಆದಿಭಾಗದಲ್ಲಿ ಪುನರುಜ್ಜೀವನಗೊಂಡ ಚೆಕ್ ಭಾಷೆಯಲ್ಲಿ ರಚಿತವಾದ ದಿ ಡಾಟರ್ ಆಫ್ ಸ್ಲಾವಾ ಎಂಬ ಪ್ರಸಿದ್ಧರೂಪಕ ಸಾನೆಟ್ ಮಾಲೆಯನ್ನು ಬರೆದವನ ಜಾನ್ ಕೊಲ್ಲಾರ್ (1793–1852). ಈ ಕವನಮಾಲೆಯಲ್ಲಿ ಎದ್ದು ಕಾಣುವುದು ತನ್ನ ರಾಷ್ಟ್ರದ ಉಜ್ವಲಭವಿಷ್ಯದ ಬಗ್ಗೆ ಕವಿ ತಾಳಿದ ಆಶಾಭಾವನೆ. ಫ್ರಾಂಟಿಸೆಕ್ ಲಾಡಿಸ್ಲಾವ್ ಸೆಲಕೋವ್‌ಸ್ಕಿ (1799–1852) ಬರೆದ ಲಾವಣಿಗಳಲ್ಲಿ ಜಾನಪದದ ಬನಿಯೂ ಸೊಗಡೂ ಇವೆ. ಜೋಸೆಫ್ ಕಜೆಟನ್ ಟಿಗ್ಲ್ (1808–56) ಮತ್ತು ವಾಕ್ಲಾವ್ ಕ್ಲಿಮೆಂಟ್ ಕ್ಲಿಕ್‌ಪೀರಾ (1792–1859) ಬರೆದ ನಾಟಕಗಳು ಚೆಕ್ ಪರಂಪರೆಯನ್ನು ಸ್ಥಾಪಿಸಿದುವು. ಚೆಕ್ ಕವಿಗಳಲ್ಲೆಲ್ಲ ಅತ್ಯಂತ ಶ್ರೇಷ್ಠನಾದ ಕೆರೆಲ್ ಹೈನೆಕ್ ಮಾಚಾ ರೋಮ್ಯಾಂಟಿಕ್ ಸಂಪ್ರದಾಯಕ್ಕೆ ಸೇರಿದವ. ಆತ ಬರೆದ ಮಾಜ್ ಎಂಬ ಕೃತಿ ಭಾವಗೀತೆಯ ಮಹಾಕಾವ್ಯವೆಂದು ಹೆಸರು ಪಡೆದಿದೆ. ಈ ಕೃತಿಯಲ್ಲಿ ಇಂಗ್ಲೆಂಡಿನ ಬೈರನ್, ಸ್ಕಾಟ್ ಕವಿಗಳ ಹಾಗೂ ಪೋಲೆಂಡಿನ ರೊಮ್ಯಾಂಟಿಕ್ ಸಂಪ್ರದಾಯದ ಬರೆಹಗಾರರ ಪ್ರಭಾವ ಬಾಹ್ಯರೂಪದ ಕೆಲವು ಅಂಶಗಳಲ್ಲಿ ಕಂಡುಬರುತ್ತದೆ. ಈ ಕೃತಿಯಲ್ಲಿ ಕವಿ ಬಾಳನ್ನು ಕುರಿತು ಮಾಡಿರುವ ಚಿಂತನೆಗಳಲ್ಲಿ ತನ್ನ ನಿರಾಶಾಭಾವನೆಯನ್ನು ವ್ಯಕ್ತಪಡಿಸಿದ್ದಾನೆ.

1840ರ ಅನಂತರ ರೊಮ್ಯಾಂಟಿಕ್ ಸಂಪ್ರದಾಯದ ವಿರುದ್ಧ ಮೂಡಿಬಂದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದವರಲ್ಲಿ ಕರೆಲ್ ಹ್ಯಾವ್ಲಿಸೆಕ್ ಬರೋವ್‌ಸ್ಕಿ (1821–56) ಮತ್ತು ಬೋಜೇನ ನೆಮ್‌ಕೋವಾ (1820–82) ಮುಖ್ಯರು. ಇವರ ಆಸಕ್ತಿ ವ್ಯಾವಹಾರಿಕ ವಿಷಯಗಳಲ್ಲಿ ಹೆಚ್ಚಾಗಿತ್ತೇ ಹೊರತು ನಾಡಿನ ಗತಕಾಲದ ವೈಭವ ಅಥವಾ ಭವಿಷ್ಯದ ಮಹಿಮೆಯ ಬಗ್ಗೆ ಕನಸು ಕಾಣುತ್ತ ಕಲ್ಪನಾಲೋಕದಲ್ಲಿ ವಿಹರಿಸುವಂಥದಲ್ಲ. ಇವರಿಬ್ಬರೂ ಚೆಕ್ ಗದ್ಯಶೈಲಿಯ ಪ್ರಯೋಗದಲ್ಲಿ ಕುಶಲರಾಗಿದ್ದರಲ್ಲದೆ ಚೆಕ್ ಭಾಷೆಯನ್ನು ನಿತ್ಯಬಳಕೆಯ ಭಾಷೆಯ ಮಟ್ಟಕ್ಕೆ ತಂದರು. ಬೋಜೇನ ನೆಮ್‌ಕೋವಾ ಚೆಕ್ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದವರಲ್ಲಿ ಮೊದಲ ಮಹಿಳೆ. ಆದರ್ಶ ಕಲ್ಪನೆಯಿಂದಲೂ ವಾಸ್ತವಿಕ ವಿವರಗಳಿಂದಲೂ ಕೂಡಿದ ಈಕೆ ಬರೆದ ಗ್ರ್ಯಾಂಡ್‌ಮದರ್ ಎಂಬ ಕೃತಿ ಹಳ್ಳಿಜೀವನದ ಚಿತ್ರಗಳನ್ನು ಕೊಡುವುದರಲ್ಲಿ ಯಶಸ್ವಿಯಾಗಿದೆ. ಜಾನ್ ನೆರೂಡ ಎಂಬಾತ ವೃತ್ತಪುಟದ ಕೆಳಭಾಗದಲ್ಲಿ ಪ್ರಕಟವಾಗುತ್ತಿದ್ದ 'ಫಯ್ಯುಟಾನ್' ಎಂಬ ಹೊಸ ಬಗೆಯ ಗದ್ಯಶೈಲಿಯ ಶಿಲ್ಪಿ. ಆತ ಭಾವಗೀತೆಯ ಸಮರ್ಥ ಕವಿಯೂ ಆಗಿದ್ದ. ಅವನ ಕವನಗಳಲ್ಲಿ ರಾಜಕೀಯ ಮತ್ತು ರಾಷ್ಟ್ರೀಯ ಪ್ರಜ್ಞೆ ಹೆಚ್ಚಾಗಿ ಮೂಡಿಬಂದಿದೆ. ನೆರೂಡನ ಸಮಕಾಲೀನನಾದ ವಿಟೆಜ್‌ಸ್ಲಾವ್ ಹಲೆಕ್ ಎಂಬಾತ ಮಾಜ್ ಎಂಬ ಹೆಸರಿನ ಹೊಸ ಸುಧಾರಣಾ ಚಳವಳಿಯ ಮುಖಂಡನಾದ (ಮಾಜ್ ಎಂಬುದು ಹಲೆಕ್ ಮತ್ತು ನೆರೂಡ ಸಂಪಾದಿಸುತ್ತಿದ್ದ ಪತ್ರಿಕೆಯ ಹೆಸರು). ಈ ಗುಂಪಿಗೆ ಸೇರಿದ ಪ್ರಮುಖ ಕಾದಂಬರಿಕಾರಳು ಕ್ಯಾರೋಲಿನಾ ಸ್ವೆಟ್ಲಾ 19ನೆಯ ಶತಮಾನದಲ್ಲಿ ಸ್ತ್ರೀಯರ ಸ್ಥಾನವನ್ನು ಕುರಿತು ಮುಖ್ಯವಾಗಿ ನೈತಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ತನ್ನ ಕಾದಂಬರಿಗಳಲ್ಲಿ ವಿವೇಚಿಸಿದ್ದಾಳೆ. ರೂಚ್ ಎಂಬ ನಿಯತಕಾಲಿಕೆಯಲ್ಲಿ 1870–80ರ ದಶಕದಲ್ಲಿ ಬರೆಯುತ್ತಿದ್ದ ಲೇಖಕರಲ್ಲಿ ಮುಖ್ಯರಾದ ಸ್ವಟೋಪ್ಲುಕ್‌ಚೆಕ್ ಮತ್ತು ಅಲಾಯ್ಸ್ ಜಿರಾಸೆಕ್ ಎಂಬುವರು ತಮ್ಮ ಭಾವಗೀತೆ, ಮಹಾಕಾವ್ಯ ಹಾಗೂ ಕಾದಂಬರಿಗಳಲ್ಲಿ ರಾಷ್ಟ್ರೀಯ ಪ್ರಜ್ಞೆಗೆ ಹೊಸರೂಪ ಕೊಟ್ಟರು. ಲುಮೀರ್ ಹೆಸರಿನ ಇನ್ನೊಂದು ಪ್ರಭಾವಶಾಲಿ ಲೇಖಕರ ಗುಂಪಿನ ಮುಖ್ಯಸ್ಥರಾಗಿದ್ದ ಕವಿಗಳು ಜರಾಸ್ಲಾವ್ ವ್ರಿಚ್‌ಲಿಕಿ ಮತ್ತು ಜೂಲಿಯಸ್ ಜೆಯೆರ್. ಇವರ ಕೃತಿಗಳಲ್ಲಿ ತಮ್ಮ ರಾಷ್ಟ್ರಕ್ಕೆ ಮಾತ್ರ ಸೀಮಿತಗೊಳ್ಳದ ವಿಶಾಲದೃಷ್ಟಿಯೂ ರಸಜ್ಞತೆಯೂ ವಿಶೇಷವಾಗಿ ವ್ಯಕ್ತವಾಗುತ್ತವೆ.

ಆಧುನಿಕ ಚೆಕ್ ಸಾಹಿತ್ಯ ಈ ಕಾಲಕ್ಕೆ ಚೆನ್ನಾಗಿ ಮೈಗೂಡಿತ್ತು. ತನ್ನದೇ ಆದ ಹೊಸ ಕಾವ್ಯಭಾಷೆಯೂ ಗದ್ಯಶೈಲಿಯ ಪರಂಪರೆಯೂ ನಿರ್ಮಾಣವಾಗಿತ್ತು. 1890ರಿಂದೀಚೆಗೆ ವಿಶಾಲ ಚೆಕ್ ಸಾಹಿತ್ಯ ಯೂರೋಪ್ ಸಾಹಿತ್ಯಕ್ಕೆ ಜೊತೆಜೊತೆಯಾಗಿ ಬೆಳೆದುಬಂದಿತ್ತು. ಮ್ಯಾಸಿರಿಕ್ ಎಂಬುವನ ಚಿಂತನೆಗೂ ಮಚಾರ್‌ನ ಕಾವ್ಯವೂ ಈ ದಿಶೆಯಲ್ಲಿ ಮುಖ್ಯವಾದುವು. ಯಾವುದನ್ನೂ ಪರೀಕ್ಷೆ ಮಾಡದೆ ಒಪ್ಪದಂಥ ಸಂದೇಹವಾದವು ರೊಮ್ಯಾಂಟಿಕ್ ಸಂಪ್ರದಾಯಕ್ಕೆ ವಿರುದ್ಧವಾದ ನಿಲವೂ ಇವರ ಕೃತಿಗಳಲ್ಲಿ ಕಾಣಬರುವುವು.

20ನೆಯ ಶತಮಾನದ ಪ್ರಾರಂಭದಲ್ಲಿ ಪ್ರಸಿದ್ಧಿಗೆ ಬಂದ ಅತ್ಯಂತ ಶ್ರೇಷ್ಠ ಚೆಕ್ ಕವಿ ಪೀಟರ್ ಬೆಜ್‌ಕುಕ್ ಉತ್ಕಟ ನಿರಾಶಾವಾದದಿಂದ ತನ್ನದೇ ಆದ ವೈಯಕ್ತಿಕ ತತ್ತ್ವಸಿದ್ಧಾಂತವನ್ನು ಸ್ವಚ್ಛಂದ ಛಂದಸ್ಸುಗಳಲ್ಲಿ ಹೊರಗೆಡಹಿದ. ಅನಂತರ ಬಂದ ಅನೇಕ ಕವಿಗಳಲ್ಲಿ ಇದರ ಮರುದನಿ ಕೇಳಿಬರುತ್ತದೆ. ಅನಂತರ ಬಂದ ಅನೇಕ ಸಮರ್ಥ ಕವಿಗಳು ಮುಖ್ಯವಾಗಿ ಆ್ಯಂಟೊನಿನ್ ಸೊವಾ ಫ್ರಾನಸ್ರಮೆಕ್ ಮತ್ತು ನ್ಯೂಮಾನ್ ಎಂಬುವರು ಭಾವಗೀತೆಯಲ್ಲಿ ಹೆಚ್ಚಿನ ಪ್ರಯೋಗ ನಡೆಸಿದರು. ಮೊದಲ ಮಹಾಯುದ್ಧ ಮುಗಿದಮೇಲೆ ಸಮಾಜ ಮತ್ತು ಸಮತಾವಾದಗಳಿಂದ ಸ್ಫೂರ್ತಿಗೊಂಡ ಭಾವಗೀತೆಗಳು ಹೆಚ್ಚಾಗಿ ರಚಿತವಾದವು. ಈ ಬಗೆಯ ಭಾವಗೀತೆಗಳನ್ನು ಬರೆದವರಲ್ಲಿ ಮುಖ್ಯರಾದವರು ಜಿರಿಲ್ ವೋಲ್ಕರ್ ಮತ್ತು ಜೋಸೆಫ್ ಹೋರ. ಇದರ ಜೊತೆಜೊತೆಯಲ್ಲಿಯೇ ಅನೇಕ ಕವಿಗಳು ಸರ್‌ರಿಯಲಿಸ್ಟ್ ತಂತ್ರಗಳನ್ನು ಬಳಸಿದರು. ಈ ಪೈಕಿ ಬಹಳ ಹೆಸರುಪಡೆದ ಕವಿ ವಿಟೆಜ್‌ಸ್ಲಾವ್ ನೆಜ್‌ವಾಲ್.

ಎರಡನೆಯ ಮಹಾಯುದ್ಧ ಮತ್ತು ಮ್ಯೂನಿಕ್ ಪ್ರಕರಣಗಳ ಪರಿಣಾಮವಾಗಿ ಅನೇಕ ಭಾವಗೀತೆಯ ಕವಿಗಳು ಮತ್ತೊಮ್ಮೆ ಸಾಂಪ್ರದಾಯಿಕ ಶೈಲಿ ಹಾಗೂ ರಾಷ್ಟ್ರೀಯ ಮನೋಭಾವದ ವಸ್ತುಗಳ ಕಡೆ ಗಮನವಿತ್ತರು. ಇವರ ಪೈಕಿ ನೈಜ್‌ವಾಲ್ ಮತ್ತು

ಹೋರಾ ಎಂಬುವರು ಮುಖ್ಯರಾದವರು. 1918ರ ಮುನ್ನ ಕೇಪೆಕ್ಸ್ ಜೋಡ್ ಎಂಬಾತ ಸಾಮಾಜಿಕ ಕಾದಂಬರಿ ಮತ್ತು ಸಣ್ಣಕಥೆಗಳನ್ನು ಸತ್ವಯುತವಾಗಿ ಬರೆಯುವುದರಲ್ಲಿ ಯಶಸ್ವಿಯಾದ. ಅನಂತರ ಕವೇಲ್ ಕೇಪೆಕ್ ತನ್ನ ಚಿಂತನಶೀಲ ಕಾದಂಬರಿ ಮತ್ತು ಸಣ್ಣಕಥೆಗಳ ಮೂಲಕ ಚೆಕ್ ಗದ್ಯಶೈಲಿಯನ್ನು ಹೆಚ್ಚು ಪರಿಪಕ್ವಗೊಳಿಸಿ ಆಡುಮಾತಿನ ಬಳಕೆಯಿಂದ ಭಾಷೆಗೆ ಒಂದು ಹೊಸ ಸತ್ವ ಕೊಟ್ಟ. ಭಾಷೆಯನ್ನು ಇಷ್ಟೇ ಶ್ರೀಮಂತಗೊಳಿಸಿದ ಇನ್ನೊಬ್ಬ ಲೇಖಕ ವ್ಲಾಡಿಸ್ಲಾವ್ ವಾಂಕೂರ. ರುತೇನಿಯ ಪ್ರದೇಶದ ಜನಗಳ ಕಷ್ಟಕಾರ್ಪಣ್ಯಗಳನ್ನು ವಿವರಿಸುವ ಕೃತಿಗಳನ್ನು ಬರೆದ ಇನ್ನೊಬ್ಬ ಮುಖ್ಯ ಕಾದಂಬರಿಕಾರ ಐವಾನ್ ಓಲ್‌ಬ್ರಾಕ್. ಎಲ್ಲರಿಗಿಂತ ಮಿಗಿಲಾಗಿ ಕಾರ್ಮಿಕರ ಜೀವನ ಮತ್ತು ಹೋರಾಟವನ್ನು ಕುರಿತು ಬರೆದ ಮರೀ ಮಾಜೆರೋವಾ ಅತ್ಯಂತ ಖ್ಯಾತಿವೆತ್ತ ಕಾದಂಬರಿಕಾರ. ಈತ ಆಮೇಲೆ ಬಂದ ವಾಸ್ತವಿಕ ದೃಷ್ಟಿಯ ಸಮಾಜವಾದೀ ಬರೆಹಗಾರರ ಮುಂಚೂಣಿಯಾದ.

ಚೆಕ್ ನಾಟಕ ಪ್ರಾರಂಭವಾದದ್ದು ರಾಷ್ಟ್ರೀಯ ಪುನರುಜ್ಜೀವನದ ಚಳವಳಿಯ ಕಾಲದಲ್ಲಿ. ಅವು ಬಹುಮಟ್ಟಿಗೆ ಹೊರದೇಶಗಳಲ್ಲಿ ರಚಿತವಾಗಿದ್ದ ನಾಟಕಗಳ ಮಾದರಿಯಲ್ಲಿದ್ದವು. ಅಲ್ಲದೆ ಕಾವ್ಯ, ಕಾದಂಬರಿ ಸಣ್ಣಕಥೆಯ ಮಟ್ಟಕ್ಕೆ ನಾಟಕ ಏರಲಿಲ್ಲ. 1918ರ ಅನಂತರ ಫ್ರಾಂಟಿಸೆಕ್ ಲಾನ್‌ಜೆರ್ ಮತ್ತು ಕೆರೇಲ್ ಕೇಪೆಕ್ ಎಂಬುವರ ಕೃತಿಗಳಲ್ಲಿ ನಾಟಕ ಒಂದು ಹೊಸ ವರ್ಚಸ್ಸನ್ನು ಪಡೆಯಿತು. ಬಹುಮಟ್ಟಿಗೆ ಇವರ ನಾಟಕಗಳು ಆದರ್ಶದೃಷ್ಟಿಯ ಮತ್ತು ವಿಡಂಬನಾತ್ಮಕ ನಾಟಕಗಳು. ಜೆರೊಸ್ಲಾವ್ ವ್ರಿಕ್‌ಲಿಕಿ ಎಂಬ ನಾಟಕಕಾರನು ಷೇಕ್ಸ್‌ಪಿಯರ್, ಗಯಟೆ ಮೊದಲಾದವರ ಕೃತಿಗಳನ್ನು ಅನುವಾದ ಮಾಡಿದ್ದು ಒಂದು ವಿಶೇಷ ಸಾಧನೆ. ಎರಡನೆಯ ಮಹಾಯುದ್ಧಾನಂತರದ ರಾಜಕೀಯ ವಿಪ್ಲವದ ಫಲವಾಗಿ 1948ರ ಬಳಿಕ ಚೆಕ್ ಸಾಹಿತ್ಯ ನಿರ್ಮಾಣದಲ್ಲಿ ಮಾರ್ಕ್ಸ್ ಕ್ರಾಂತಿಕಾರಕ ತತ್ತ್ವಗಳಿಗೆ ಅನುಗುಣವಾಗಿ ಸಾಹಿತ್ಯ ನಿರ್ಮಾಣ ಮಾಡುವ ಧೋರಣೆ ರೂಪುಗೊಂಡಿತು. ಶ್ರೀಮಂತವರ್ಗದ ಶೋಷಣೆಯನ್ನು ಪ್ರತಿಭಟಿಸುವ ಹಾಗೂ ಕಾರ್ಮಿಕ ಮತ್ತು ರೈತ ವರ್ಗಗಳ ಹೋರಾಟದ ಮೂಲಕವೇ ಜನತೆಯ ಉದ್ಧಾರವೆಂಬ ಆದರ್ಶ ಈಚಿನ ಸಾಹಿತಿಗಳಿಗೆ ಸ್ಫೂರ್ತಿಯಾಗಿದೆ. ಅಲ್ಲದೆ ನ್ಯಾಯ, ಸಮಾನತೆಗಳ ಆಧಾರದ ಮೇಲೆ ಕಟ್ಟಬೇಕಾಗಿರುವ ಹೊಸ ಸಮಾಜನಿರ್ಮಾಣಕ್ಕೆ ಸಾಹಿತಿಗಳು ಹೊಣೆಗಾರರೆಂಬ ದೃಷ್ಟಿಯೂ ಈಚಿನ ಬರೆಹಗಾರರಲ್ಲಿ ವಿಶೇಷವಾಗಿ ಪ್ರಕಟವಾಗಿದೆ. (ಎಚ್.ಜಿ.ಎಸ್.ಆರ್.)

**ಚೆಕೊಸ್ಲೊವಾಕಿಯ :** ಮಧ್ಯ ಯುರೋಪಿನ ಒಂದು ಸಮಾಜವಾದಿ ಗಣರಾಜ್ಯ. ನೆಲದಿಂದ ಆವೃತವಾದ, ಕಂಬಳಿಹುಳುವಿನಂತಿರುವ ಈ ದೇಶ ಪೂ.ರೇ. 12°5'–22°34' ಮತ್ತು ಉ.ಅ. 47°44'–51°33' ನಡುವೆ ಇದೆ. ಜರ್ಮನ್ ಒಕ್ಕೂಟ ಗಣರಾಜ್ಯ



(ಪಶ್ಚಿಮ ಜರ್ಮನಿ), ಜರ್ಮನ್ ಪ್ರಜಾಪ್ರಭುತ್ವವಾದಿ ಗಣರಾಜ್ಯ (ಪೂರ್ವ ಜರ್ಮನಿ), ಪೋಲೆಂಡ್, ಸೋವಿಯತ್ ದೇಶ, ಹಂಗರಿ, ಆಸ್ಟ್ರಿಯಗಳು ಇದನ್ನು ಸುತ್ತುವರಿದಿವೆ. ವಿಸ್ತೀರ್ಣ 49,371 ಚ.ಮೈ.(1,27,870 ಚ.ಕಿಮೀ.). ಜನಸಂಖ್ಯೆ 15,600,000 (1993). ರಾಜಧಾನಿ ಪ್ರಾಗ್ (ಪ್ರಾಹ). 1919ರಲ್ಲಿ ಅಸ್ತಿತ್ವಕ್ಕೆ ಬಂದ ಚೆಕೊಸ್ಲೊವಾಕಿಯ ಗಣರಾಜ್ಯದಲ್ಲಿ ಬೊಹೀಮಿಯ, ಮೊರೇವಿಯ, ಸ್ಲೊವಾಕಿಯ ಮತ್ತು ಆಸ್ಟ್ರಿಯನ್ ಸೈಲೀಷಿಯ ಭೂಭಾಗಗಳು ಸೇರಿಕೊಂಡಿದ್ದುವು. ಮುಂದೆ ಸಬ್–ಕಾರ್ಪೇತಿಯನ್ ರುಥೇನಿಯ ಕೂಡ ಇದಕ್ಕೆ ಸೇರಿಕೊಂಡಿತು. 1938ರ ಮ್ಯೂನಿಕ್ ಒಪ್ಪಂದದಂತೆ, ಈ ಗಣರಾಜ್ಯದ ಕೆಲವು ಭಾಗಗಳನ್ನು ಜರ್ಮನಿ, ಪೋಲೆಂಡ್ ಮತ್ತು ಹಂಗರಿಗಳು ಹಂಚಿಕೊಂಡಿದ್ದುವು. 1939ರ ಹೊತ್ತಿಗೆ ಜರ್ಮನಿ ಇದನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿತು. ಆದರೆ ಎರಡನೆಯ ಮಹಾಯುದ್ಧದಲ್ಲಿ ಜರ್ಮನಿ ಸೋತಮೇಲೆ ಈ ಗಣರಾಜ್ಯವನ್ನು ಪುನಃ ಸ್ಥಾಪಿಸಲಾಯಿತು. 1945ರ ಜುಲೈ 29ರ ಮಾಸ್ಕೋ ಒಪ್ಪಂದದಂತೆ ಸಬ್–ಕಾರ್ಪೇತಿಯನ್ ರುಥೇನಿಯವನ್ನು ಸೋವಿಯೆತ್ ಒಕ್ಕೂಟಕ್ಕೆ ಬಿಟ್ಟುಕೊಡಲಾಯಿತು.

1965ರ ಜನಗಣತಿಯ ಮೇರೆಗೆ ಈ ಗಣರಾಜ್ಯದ ಜನಸಂಖ್ಯೆ ಸುಮಾರು 1.42 ಕೋಟಿಯಾಗಿತ್ತು. ಜನಸಾಂದ್ರತೆ ಪ್ರತಿ ಚದರ ಕಿಮೀ.ಗೆ 110. ಪಶ್ಚಿಮಕ್ಕಿರುವ ಬೊಹೀಮಿಯ ಮತ್ತುಮೊರೇವಿಯ–ಸೈಲೀಷಿಯ ವಲಯಗಳು ಹಿಂದಿನಿಂದಲೂ ಸ್ಲವಾನಿಕ್ ಜನತೆಯ ನೆಲೆವೀಡುಗಳು. ಉತ್ತರದಲ್ಲಿ ಸ್ಯಾಕ್ಸನರೂ ದಕ್ಷಿಣದಲ್ಲಿ ಬವೇರಿಯನರೂ ಇದ್ದಾರೆ. ಒಟ್ಟಿನಲ್ಲಿ ಜನಸಂಖ್ಯೆಯ ಶೇ.65ರಷ್ಟು.ಮಂದಿ ಚೆಕ್ಕರು ; ಶೇ.29 ಮಂದಿ ಸ್ಲೋವಾಕರು ; ಶೇ. 6ಮಂದಿ ಇತರರು. ಎರಡನೆಯ ಮಹಾಯುದ್ಧದ ಅನಂತರದಲ್ಲಿ ಸುಡಿಟೀಜ಼್‌ಗಡಿಯಲ್ಲಿದ್ದ ಜರ್ಮನರನ್ನು ಜರ್ಮನಿಗೆ ಸ್ಥಳಾಂತರಿಸಲಾಯಿತು. ಚೆಕ್ ಮತ್ತು ಸ್ಲೊವಾಕ್ ಇಲ್ಲಿಯ ಅಧಿಕೃತ ಭಾಷೆಗಳು. (ಪಿ.ಜಿ.ಡಿ.)

**ಭೂವಿಜ್ಞಾನ:** ಚೆಕೊಸ್ಲೊವಾಕಿಯದ ಪ್ರದೇಶ ಎರಡು ಸ್ಪಷ್ಟ ಸಮುದಾಯಗಳಿಗೆ ಸೇರಿದೆ ಹಾಗೂ ಎರಡು ಪ್ರತ್ಯೇಕ ವರ್ಗಗಳನ್ನು ಬಿಂಬಿಸುತ್ತದೆ. ಈ ದೇಶದ ಬೊಹೀಮಿಯ ಮತ್ತು ವಾಯ್ವದಲ್ಲಿರುವ ಮೊರೇವಿಯ–ಸೈಲೀಷಿಯಗಳಿಂದ ಕೂಡಿದ ಪಶ್ಚಿಮಾರ್ಧ ಭಾಗ ಹಾಗೂ ಈ ಭಾಗಕ್ಕೆ ಸೇರಿಕೊಂಡಿರುವ ಆಸ್ಟ್ರಿಯ, ಪೋಲೆಂಡ್ ಮತ್ತು ಜರ್ಮನಿಯ ಭಾಗ–ಇವು ಬೊಹೀಮಿಯನ್ ಪರ್ವತಶ್ರೇಣಿಯಾಗಿ ವಾರೀಸ್ಕನ್ ಮಂಡಲಕ್ಕೆ ಸೇರಿವೆ. ಸ್ಲೊವಾಕಿಯ ಮತ್ತು ಮೊರೇವಿಯದ ನೈರುತ್ಯ ಭಾಗದಿಂದ ಕೂಡಿದ ಚೆಕೊಸ್ಲೊವಾಕಿಯದ ಪೂರ್ವಾರ್ಧ ಭಾಗ ಪಶ್ಚಿಮ ಕಾರ್ಪೇತೀಯನ್ ಪರ್ವತಶ್ರೇಣಿಯಾಗಿ ಅಲ್ಪೈನ್ ಮಂಡಲಕ್ಕೆ ಸೇರಿದೆ. ಈ ಎರಡು ಪ್ರದೇಶಗಳನ್ನು ಭೂವಿಜ್ಞಾನ ಮತ್ತು ಭೂವಿನ್ಯಾಸ ಕ್ರಮದಿಂದ ಪ್ರತ್ಯೇಕ ವರ್ಗಗಳಾಗಿ ವಿಂಗಡಿಸಬಹುದು. ಇವುಗಳ ಎಲ್ಲೆ ಮೊರೇವಿಯದ ಜೊಮೊದಿಂದ ಹಾದು ಬ್ರನಾದ ದಕ್ಷಿಣವಲಯ, ವ್ಯಸ್‌ಕಾಫ್ ಕಣಿವೆ ಮತ್ತು ಪರಾಫ್‌ಗಳಿಂದ ರಾನ್‌ಸದ ಪೂರ್ವದ ಪ್ರದೇಶದವರೆಗೂ ಹಬ್ಬಿದೆ.

ಬೊಹೀಮಿಯುನ್ ಪರ್ವತಶ್ರೇಣಿಗೂ ಕಾರ್ಪೇತೀಯನ್ ಶ್ರೇಣಿಗೂ ಪ್ರಾಚೀನ ಭೂವಿವರಣೆ, ಸ್ತರವಿವರಣೆ, ಭೂ ಚಲನೆ ಮತ್ತು ಭೂಮುಖಶಾಸ್ತ್ರ ವಿವರಣೆಗಳಲ್ಲಿ ವ್ಯತ್ಯಾಸಗಳಿವೆ. ಈ ಶ್ರೇಣಿಗಳು ಟರ್ಷಿಯರಿ ಭೂಕಾಲದ ಬಾಹ್ಯಾಸ್ತ ಶಿಲೆಗಳಿಂದಲೂ ಭಿನ್ನವಾಗಿವೆ. ಇವು ವಾರೀಸ್ಕನ್ ಕಾಲದಲ್ಲಿ ಘನೀಭವಿಸಿದುವು. ಆದರೆ ಪಶ್ಚಿಮ ಕಾರ್ಪೇತೀಯನ್ ಪ್ರದೇಶ ವಾರೀಸ್ಕನ್ ಪರ್ವತ ರೂಪಗೊಂಡ ಬಳಿಕ ಮಹಾ ಸಮುದಾಯುವಾಗಿ ಪರಿಣಮಿಸಿತು. ಬೊಹೀಮಿಯನ್ ಶ್ರೇಣಿ ಬಹುಪುರಾತನ ಪರ್ವತ ಶ್ರೇಣಿ. ಇದು ಶಿಥಿಲೀಕರಣಕ್ಕೆ ಒಳಗಾಗಿ ಸಮಭೂಮಿಯಾಗಿ ಮತ್ತೆ ಸ್ಯಾಕ್ಸನಿಕ್ ಪರ್ವತೋದ್ಭವದ ಚಲನಶಕ್ತಿಯಿಂದ ಈಗಿನ ಸ್ಥಿತಿಯಲ್ಲಿರುವುದಾಗಿ ತಿಳಿಯಲಾಗಿದೆ. ಪಶ್ಚಿಮ ಕಾರ್ಪೇತೀಯನ್ ಪ್ರದೇಶ ಇತ್ತೀಚಿನ ಮಡಿಕೆಗಳಿಂದ ಕೂಡಿದ ಪರ್ವತಶ್ರೇಣಿ. ಇದರಲ್ಲಿ ಪರ್ವತಗಳ ವೈವಿಧ್ಯವನ್ನು ಕಾಣಬಹುದು. ಈ ಎರಡು ಪರ್ವತ ಭಾಗಗಳ ಈಗಿನ ಆಕಾರಕ್ಕೆ ಪ್ರಾಚೀನ ಕಾಲದ ಜಟಿಲ ಭೂಚರಿತ್ರೆಯು ಪರಿಣಾಮಗಳೇ ಕಾರಣ. ಇವುಗಳ ಭೂವಿಜ್ಞಾನದ ವ್ಯಾಪ್ತಿ ಅಲ್ಗಾಂಗ್‌ಕಿಯನ್ ಉದಯಕಾಲ ಅಥವಾ ಆರ್ಷೇಯ ಜೀವಯುಗದ ಕೊನೆಯ ಕಾಲದಿಂದ ಹಿಡಿದು ಕ್ವಾಟರ್ನರಿ ಭೂಯುಗದವರೆಗೂ ಉಂಟು. ಈ ಎರಡು ಭಾಗಗಳ ರಚನೆಯಲ್ಲಿ ಮಧ್ಯ ಯೂರೋಪಿನಲ್ಲಾದ ಭೂಮಿಗಳಿಂದಲೂ ಕೂಡಿದ್ದು. ಮೊರೇವಿಯ–ಸೈಲೀಷಿಯದ ಉತ್ತರ ಪಶ್ಚಿಮ ಭಾಗಗಳು ಪರ್ವತಪ್ರದೇಶಗಳು. ಸ್ಲೊವಾಕಿಯದ ಟಾಟ್ರಾ ಈ ದೇಶದ

ಅತ್ಯುನ್ನತ ಪರ್ವತ ಶ್ರೇಣಿ. ಈ ಶ್ರೇಣಿಯ ಜರ್ಲಾಕಾಫ್‌ಕಾ ಶಿಖರ 8,737' ಎತ್ತರವಾಗಿದೆ. ಈ ಶ್ರೇಣಿಯ ದಕ್ಷಿಣದಲ್ಲಿ ಇಳಿಜಾರಾದ ಬೆಟ್ಟಗಳೂ ಬಯಲುಗಳೂ ಇವೆ. ಚೆಕೊಸ್ಲೊವಾಕಿಯ ನೆಲದಿಂದ ಸುತ್ತುವರಿಯಲ್ಪಟ್ಟ ದೇಶವಾದ್ದರಿಂದ ಇದರ ನದಿಗಳಿಗೆ ವಿಶೇಷ ಪ್ರಾಮುಖ್ಯವಿದೆ.

ಪಶ್ಚಿಮ ಚೆಕೊಸ್ಲೊವಾಕಿಯದ ಕರ್ಲಾವಿ ವಾರಿ (ಕಾರ್ಲ್ಸ್‌ಬಾದ್) ಪಟ್ಟಣದಲ್ಲಿ ಖನಿಜಜಲದ ಚಿಲುಮೆಗಳು ಹಲವಿವೆ. ದೇಹಾರೋಗ್ಯಕ್ಕೆ ಒಳ್ಳೆಯದೆನಿಸುವ ಈ ನೀರನ್ನು ಅಲ್ಲಿಯ ಜನ ಕುಡಿಯಲನುಕೂಲವಾಗುವಂತೆ ಕೊಳಾಯಿಗಳನ್ನು ನಿರ್ಮಿಸಲಾಗಿದೆ.

ಸ್ಲೊವಾಕಿಯದ ಡ್ಯಾನ್ಯೂಬ್ ನದಿಯೂ ಬೊಹೀಮಿಯದ ಎಲ್ಬೆ ಮತ್ತು ಮಾಲ್‌ಡೌ (ವಲ್ಟವ) ನದಿಗಳೂ ಚೆಕೊಸ್ಲೊವಾಕಿಯದಿಂದ ಅನುಕ್ರಮವಾಗಿ ಕಪ್ಪು ಸಮುದ್ರಕ್ಕೂ ಉತ್ತರ ಸಮುದ್ರಕ್ಕೂ ಬಾಲ್ಟಿಕ್ ಸಮುದ್ರಕ್ಕೂ ಮುಖ್ಯ ಹೊರದಾರಿಗಳು.

ಕಾರ್ಲ್‌ಸ್ಟೆಜೆನ್‌ನ್ನಿರುವ ಗಾತಿಕ್ ವಾಸ್ತುಶೈಲಿಯ ಒಂದು ಕೋಟೆ ಮನೆ

**ವಾಯುಗುಣ:** ಚೆಕೊಸ್ಲೊವಾಕಿಯದ್ದು ಮಧ್ಯ ಯೂರೋಪಿಯನ್ ಹಿತಮಿತ ವಾಯುಗುಣ. ಎತ್ತರಕ್ಕೆ ಅನುಗುಣವಾಗಿ ಸ್ಥಳದಿಂದ ಸ್ಥಳಕ್ಕೆ ಅದು ಬದಲಾಗುತ್ತದೆ. ಒಟ್ಟಿನಲ್ಲಿ ಚೆಕ್ ಪ್ರದೇಶದಲ್ಲಿ ಸಾಧಾರಣವಾದ ಸಾಗರೀಯ ವಾಯುಗುಣವೂ ಸ್ಲೊವಾಕಿಯದಲ್ಲಿ ಖಂಡೀಯ ವಾಯುಗುಣವೂ ಇವೆ. ಪಶ್ಚಿಮ ಮಾರುತಗಳಿಂದ ಮಳೆಯಾಗುತ್ತದೆ. ನೆಲದ ಎತ್ತರಕ್ಕೆ ಅನುಗುಣವಾಗಿ ಇದು ವ್ಯತ್ಯಾಸವಾಗುತ್ತದೆ. ಮಳೆಯ ಅಂತರ 22'–50'. ಪಶ್ಚಿಮ ಬೊಹೀಮಿಯ ಮತ್ತು ದಕ್ಷಿಣ ಮೊರೇವಿಯದಲ್ಲಿ 23 ಗಿಂತ ಕಡಿಮೆ. ಗರಿಷ್ಠ ಮಳೆಯಾಗುವುದು ಸ್ಲೊವಾಕಿಯದ ಟಾಟ್ರಾ ಪರ್ವತದಲ್ಲಿ. ವಸಂತ ಹಾಗೂ ಬೇಸಗೆಯಲ್ಲೇ ಹೆಚ್ಚು ಮಳೆ. ಇದು ಕೃಷಿಗೆ ಅನುಕೂಲಕರ.

ನೈಸರ್ಗಿಕ ಸಸ್ಯ, ಪ್ರಾಣಿಗಳು: ಇಲ್ಲಿ ಮಧ್ಯ ಐರೋಪ್ಯ ಸಸ್ಯಗಳೂ ಪ್ರಾಣಿಗಳೂ ಇವೆ. ಯೂರೋಪಿನಲ್ಲಿ ಅತ್ಯಂತ ಹೆಚ್ಚು ಅರಣ್ಯಮಯ ದೇಶ ಇದು. ಒಟ್ಟು ನೆಲದಲ್ಲಿ 35% ಅರಣ್ಯಾವೃತ. ಸ್ಲೊವಾಕಿಯದಲ್ಲಿ 38% ಭಾಗ ಕಾಡುಗಳಿಂದ ಕೂಡಿದೆ. ಶಂಕುಧಾರಿ ವೃಕ್ಷಗಳೇ ವಿಶೇಷ. ಬೊಹೀಮಿಯದ ಕಾಡುಗಳಲ್ಲಿ 85% ರಷ್ಟೂ ಮೊರೇವಿಯ–ಸೈಲೀಷಿಯದ ಕಾಡುಗಳಲ್ಲಿ 62%ರಷ್ಟೂ ಶಂಕುಧಾರಿ ಮರಗಳು. ಆದರೆ ಸ್ಲೊವಾಕಿಯದ ಕಾಡುಗಳಲ್ಲಿ ಶೇ. 70ರಷ್ಟು ಪರ್ಣಪಾತಿ ಕಾಡುಗಳು. ಸ್ಲೊವಾಕಿಯ ಮತ್ತು ಮೊರೇವಿಯ ಬಯಲುಗಳಲ್ಲಿ ಬಹುಭಾಗ ಈಗ ಕೃಷಿಗೆ ಒಳಪಟ್ಟಿದೆ. ಆದರೆ ಅಲ್ಲಿ ಈಗಲೂ ಕೆಲವು ಕಡೆ ಮೂಲ ಸ್ಟೆಪ್ ಹುಲ್ಲುಗಾವಲುಗಳುಂಟು.

ಚೆಕೊಸ್ಲೊವಾಕಿಯದ ವೈವಿಧ್ಯ ಪೂರ್ಣ ಅರಣ್ಯಗಳು ಅನೇಕ ಸಸ್ಯ ಶಾಸ್ತ್ರಜ್ಞರನ್ನು ಆಕರ್ಷಿಸಿವೆ. ಹಲವಾರು ವರ್ಷಗಳ ಸತತ ಪ್ರಯತ್ನದಿಂದ ಬೊಹೀಮಿಯ ಮತ್ತು ಮೊರೇವಿಯ–ಸೈಲೀಷಿಯ ವಲಯಗಳ ಅರಣ್ಯಗಳನ್ನು ಸಂರಕ್ಷಿಸಿಕೊಂಡುಬರಲಾಗಿದೆ. ಚೌಬೀನೆ ಮಾರುಕಟ್ಟೆಯಲ್ಲಿ ದೇಶದ ಮೇಲುಗೈ ಉಳಿಸಿ ಬೆಳೆಸಿಕೊಂಡು ಬರುವ ದೃಷ್ಟಿಯಿಂದ ಅರಣ್ಯ ಸಂವರ್ಧನ ಕಾರ್ಯ ಕೈಗೊಳ್ಳಲಾಗಿದೆ. ದಕ್ಷಿಣ ಬೊಹೀಮಿಯದ ಸುಮಾವಾ ಪರ್ವತಶ್ರೇಣಿಯಲ್ಲಿ ಮಾತ್ರ ಸಂರಕ್ಷಿತ ಮೂಲ ಅರಣ್ಯಪ್ರದೇಶವನ್ನು ಕಾಣಬಹುದು. ಸ್ಪ್ರೂಸ್, ಫರ್, ಲಾರ್ಚ್ ಮತ್ತು ಸ್ಕಾಟ್ಸ್‌ಪೈನ್ ಇಲ್ಲಿಯ ಮುಖ್ಯ ಮರಗಳು. ಎಲ್ಬೆ ನದಿಯ ಉತ್ತರಕ್ಕಿರುವ ಮರಳುಕಲ್ಲು ಪ್ರದೇಶದಲ್ಲಿ ಓಕ್ ವೃಕ್ಷಗಳು ಹೇರಳ, ಸ್ಲೊವಾಕಿಯದಲ್ಲೂ ವ್ಯವಸ್ಥಿತ ಅರಣ್ಯಸಂವರ್ಧನ ಕಾರ್ಯ ನಡೆದಿದ್ದಾಗ್ಯೂ ಬೊಹೀಮಿಯದಷ್ಟು ಹಳೆಯ ಇತಿಹಾಸ ಅದಕ್ಕಿಲ್ಲ. ಅಲ್ಲಿಯ ವೃಕ್ಷಗಳು ಅಷ್ಟು ಉತ್ಕೃಷ್ಟವಲ್ಲ. ಉಪಕಾರ್ಪೇತಿಯನ್ ರುಥೇನಿಯದ ಗಡಿನಾಡಿನ ಬಳಿ ಇರುವ ಬೀಚ್ ಅರಣ್ಯಗಳು ತುಂಬ ಸುಂದರ. ಸ್ಲೊವಾಕಿಯದ ಅರಣ್ಯಗಳಲ್ಲಿ ಆಲ್ಪೈನ್ ಸಸ್ಯವರ್ಗವೂ ಉಂಟು.

ಟಾಟ್ರಾ ಪರ್ವತ ಪ್ರದೇಶದಲ್ಲಿಯ ಒಂದು ವಿಹಾರಕೇಂದ್ರ

ಇಲ್ಲಿಯ ಸ್ವಾಭಾವಿಕ ಪ್ರಾಣಿವರ್ಗ ಮಧ್ಯ ಐರೋಪ್ಯ ರೀತಿಯದು. ಕರಡಿ, ತೋಳ, ಚಿರತೆ, ಲಿಂಕ್ಸ್ ಮೊದಲಾದುವು ವಿರಳವಾಗಿಯೂ ಬ್ಯಾಡ್ಜರ್, ಪೋಲ್ ಕ್ಯಾಟ್, ಮಾರ್ಟ್ಸ್, ಮಿಂಕ್, ಜಿಂಕೆ, ಕಾಡುಹಂದಿ ಮೊದಲಾದವು ಬಹುಸಂಖ್ಯೆಯಲ್ಲೂ ಇವೆ. ಕೆಲವು ಬಗೆಯ ಹಗಾವುಗಳೂ ದ್ವಿಚರಿಗಳೂ ಉಂಟು. ಆಸ್ಪ್ರೆ, ಗ್ರಿಫನ್ ಹದ್ದು, ರಣಹದ್ದು, ಗೂಬೆ ಮತ್ತು ಕೆಲವು ಬಗೆಯ ನೀರುಹಕ್ಕಿಗಳಿವೆ. ಚೆಕೊಸ್ಲೊವಾಕಿಯದ ನದಿಗಳಲ್ಲಿ ಬಗೆಬಗೆಯ ಮೀನುಗಳುಂಟು. 200 ಪೌಂ.ಗಿಂತ ಹೆಚ್ಚು ಭಾರವಾಗಿರುವ ಮೀನುಗಳು ಡ್ಯಾನ್ಯೂಬ್ ನದಿಯಲ್ಲಿವೆ.

**ಕೃಷಿ:** ಕೃಷಿ ಜಮೀನಿನ ಬಹುಭಾಗ ಸಮಾಜೀಕೃತ ವಲಯದಲ್ಲಿದೆ. ಶೇ.56 ರಷ್ಟು ನೆಲ (71 ಲಕ್ಷ ಹೆಕ್ಟೇರ್) ಕೃಷಿಗೆ ಒಳಪಟ್ಟಿದೆ. ಧಾನ್ಯ ಪ್ರಧಾನ. ರಾಷ್ಟ್ರೀಯ ವರಮಾನದಲ್ಲಿ 10.5% ಕೃಷಿಯ ಪಾಲು. ಒಟ್ಟು ಕಾರ್ಮಿಕರಲ್ಲಿ 18% ಮಂದಿ ಕೃಷಿನಿರತು. ಗೋದಿ, ರೈ, ಬಾರ್ಲಿ, ಓಟ್ಸ್, ಸಕ್ಕರೆ ಬೀಟ್, ಆಲೂಗಡ್ಡೆ, ಗೆಣಸು., ಪ್ರಾಣಿಗಳ ಮೇವು, ಎಣ್ಣೇಬೀಜ, ಫ್ಲಾಕ್ಸ್ ಮುಖ್ಯ ಬೆಳೆಗಳು. ನೆಲದ ಶೇ. 20 ಭಾಗದಲ್ಲಿ ಗೋದಿ ಬೆಳೆಯುತ್ತದೆ. ಅದೇ ಪ್ರಧಾನ ಬೆಳೆ. 1908ರಲ್ಲಿ ಸುಮಾರು 3ಲಕ್ಷ ಟನ್ ಗೋದಿ ಬೆಳೆಯಿತು. ಆದರೂ ಹೊರಗಿನಿಂದ ಗೋದಿ ತರಿಸಿಕೊಳ್ಳಲಾಗುತ್ತಿದೆ.

ಜಾನುವಾರುಗಳಲ್ಲಿ ದನಗೂ ಮುಖ್ಯ. 1908ರಲ್ಲಿ ಚೆಕೊಸ್ಲೊವಾಕಿಯದಲ್ಲಿ 19,03,000 ದನಗಳಿದ್ದುವು. ಕುಕ್ಕುಟಗಳ ಸಂಖ್ಯೆ 3.25 ಕೋಟಿ. ಕುರಿ 9,06,000. 1968ರಲ್ಲಿ 12,74,920 ಮೆ. ಟನ್ ಮಾಂಸ ತಯಾರಾಯಿತು. ಹಾಲು ಉತ್ಪಾದನೆ 4.42 ಕೋಟಿ ಹೆಕ್ಟೊಲೀಟರ್. ಒಟ್ಟು ಕೃಷಿ ಉತ್ಪಾದನೆಯಲ್ಲಿ ಅರ್ಧ ಭಾಗ ಪ್ರಾಣಿ ಜನ್ಯ.

**ಮೀನುಗಾರಿಕೆ :** ಮೀನುಗಾರಿಕೆ ಅಷ್ಟು ಮುಖ್ಯವಲ್ಲ. ಮತ್ಸ್ಯೋತ್ಪಾದನೆಯಲ್ಲಿ ಸಿಂಹಪಾಲು ಬರುವುದು ಕೊಳಗಳಿಂದ, ನದಿಗಳಲ್ಲೂಜಮುಖ್ಯವಾಗಿ ಬೆಟ್ಟ ತೊರೆಗಳಲ್ಲಿಜಮೀನು ಹಿಡಿಯುತ್ತಾರೆ. ಆಂತರಿಕ ಉತ್ಪಾದನೆಯ ಜೊತೆಗೆ ಹೊರಗಿನಿಂದ ಮೀನನ್ನು ತರಿಸಿಕೊಳ್ಳಲಾಗುತ್ತದೆ.

**ಗಣಿಗಾರಿಕೆ:** ಚೆಕೊಸ್ಲೊವಾಕಿಯದಲ್ಲಿ ಖನಿಜಕ್ಷೇಪಗಳು ಲಹೆಚಚಾಗಿಲ್ಲ. ಕಲ್ಲಿದ್ದಲು, ಆಂಟಿಮೊನಿ, ಪಾದರಸ, ಯುರೇನಿಯಂ, ಗ್ರಾಫೈಟ್, ಕೇಯೊಲಿನ್, ಗಾಜಿನ ಮರಳು, ಸುಣ್ಣಕಲ್ಲು, ಕಬ್ಬಿಣ, ತಾಮ್ರ, ಬೆಳ್ಳಿ, ಮೆಗ್ನೀಷಿಯಂ, ಪೈರೈಟ್ ಮುಖ್ಯ ಖನಿಜಗಳು. ಸೈಲೀಷಿಯದಲ್ಲಿ ಕಲ್ಲಿದ್ದಲು ಗಣಿಗಳೂ, ಚೆಕ್ ಪ್ರದೇಶದಲ್ಲಿ ಗ್ರಾಫೈಟ್ ಗಣಿಗಳೂ ಕಾರ್ಪೇತಿಯನ್ ಪರ್ವತ ವಲಯದಲ್ಲಿ ಕಬ್ಬಿಣ, ತಾಮ್ರ, ಮ್ಯಾಂಗನೀಸ್ ಹಾಗೂ ಲಿಗ್ನೈಟ್ ಗಣಿಗಳೂ ಇವೆ. ಕಬ್ಬಿಣ ಅದುರು. ಪೆಟ್ರೋಲಿಯಂ, ಕಲ್ಲಿದ್ದಲು ಇವನ್ನು ಸೋವಿಯೆತ್ ದೇಶದಿಂದ ಅಧಿಕ ಪರಿಮಾಣಗಳಲ್ಲಿ ಆಮದು ಮಾಡಿಕೊಳ್ಳುತ್ತದೆ.

ವಲ್ಟವ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಒಂದು ಕಟ್ಟೆ

**ಕೈಗಾರಿಕೆ, ವಾಣಿಜ್ಯ:** ಚೆಕೊಸ್ಲೊವಾಕಿಯದ ಪ್ರಮುಖ ಕೈಗಾರಿಕೆಗಳು ಉಕ್ಕು, ರಾಸಾಯನಿಕಗಳು (ರಾಸಾಯನಿಕ ಗೊಬ್ಬರವೂ ಸೇರಿದಂತೆ), ಗಾಜು, ಎಂಜಿನಿಯರಿಂಗ್, ಸಿಮೆಂಟ್, ಕಾಗದ, ಜವಳ, ಆಹಾರ ಪದಾರ್ಥ, ಕೃತಕ ರಬ್ಬರ್, ಇಲ್ಲಿಯ ಅರಣ್ಯ ಸಂಪತ್ತು ವದೇಶೀ ವಿನಿಮಯ ಗಳಿಕೆಗೆ ನೆರವಾಗಿರವುದೇ ಅಲ್ಲದೆ, ಪೀಠೋಪಕರಣ, ಬೆಂಕಿಪೊಟ್ಟಣ, ಕಾಗದ, ಸೆಲ್ಯುಲೋಸ್ ಮತ್ತು ರೇಯಾನ್ ಕೈಗಾರಿಕೆಗಳಿಗೆ ಆಧಾರವಾಗಿದೆ. ವಿದೇಶೀ ವ್ಯಾಪಾರವೂ ಸೇರಿದಂತೆ ಎಲ್ಲ ವಾಣಿಜ್ಯೋದ್ಯಮಗಳೂ ರಾಷ್ಟ್ರೀಕೃತವಾಗಿವೆ. ವಿಶೇಷ ವ್ಯಾಪಾರ ಸಂಪರ್ಕ ಇರುವುದು ಸೋವಿಯೆತ್ ಒಕ್ಕೂಟ, ಜರ್ಮನ್ ಪ್ರಜಾಪ್ರಭುತ್ವವಾದಿ ಗಣರಾಜ್ಯ, ಪೋಲೆಂಡ್ ಮತ್ತು ಹಂಗರಿಗಳೊಡನೆ.

ಬ್ರಟಿಸ್ಲಾವದ ಬಳಿಯಿರುವ ಪೆಟ್ರೋರಸಾಯನ ಕಾರ್ಖಾನೆಯ ಒಂದು ಭಾಗ

ಸುಡೀಟೀಜ಼್ ಮತ್ತು ದಕ್ಷಿಣ ಮೊರೇವಿಯವನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಜಲವಿದ್ಯುತ್ತನ್ನು ಅಷ್ಟಾಗಿ ಅಭಿವೃದ್ಧಿಪಡಿಸಿಕೊಂಡಿಲ್ಲವಾದ್ದರಿಂದ ಕಲ್ಲಿದ್ದಲೇ ಪ್ರಮುಖ ಶಕ್ತಿಮೂಲ. ಪ್ರಾಗ್ (ಪ್ರಾಹ) ಮತ್ತು ಇತರ ಪ್ರಮುಖ ನಗರಗಳಿಗೆ ವಿದ್ಯುತ್ತನ್ನು ಒದಗಿಸುತ್ತಿರುವ ಸ್ಥಾವರಗಳು ಕಲ್ಲಿದ್ದಲು ಮತ್ತು ಲಿಗ್ನೈಟನ್ನೇ ಅವಲಂಬಿಸಿವೆ. ಈಚೆಗೆ ಕಾರ್ಪೇತಿಯನ್ ವಲಯ ಹಾಗೂ ಸ್ಲೊವಾಕಿಯದಲ್ಲಿ ಜಲವಿದ್ಯುತ್ತನ್ನು ಉತ್ಪಾದಿಸಲು, ಅಭಿವೃದ್ಧಿಪಡಿಸಲು ಯೋಜನೆಗಳನ್ನು ಸಿದ್ಧಪಡಿಸಿ, ಅವನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ನಡೆದಿದೆ.

ಸುಡಿಟೀಜ಼್‌ನಲ್ಲಿ ಜಲವಿದ್ಯುತ್ ನೆರವು ದೊರೆತಿರುವುದರಿಂದ ಅಲ್ಲಿ ಅನೇಕ ಆಧುನಿಕ ಗಿರಣಿಗಳು ತಲೆಯೆತ್ತಿವೆ. ಸ್ಥಳೀಯ ಮರಳನ್ನು ಆಶ್ರಯಿಸಿಕೊಂಡು ಯಾಬ್ಲಾನೆಟ್ಸ್‌ನಲ್ಲಿ ಗಾಜಿನ ಕಾರ್ಖಾನೆ ಸ್ಥಾಪಿಸಲಾಗಿದೆ. ಸೆಡೆಲೆಕ್‌ನಲ್ಲಿ ದೊರೆಯುವ ಕಾಯೊಲಿನ್ ಮಣ್ಣು ಕಾರ್ಲ್ಸ್‌ಹಾಡ್‌ನಲ್ಲಿ ಹಾಗೂ ಅದರ ಸುತ್ತಮುತ್ತ ಪಿಂಗಾಣಿ ಕಾರ್ಖಾನೆಗಳ ಸ್ಥಾಪನೆಗೆ ಕಾರಣವಾಗಿದೆ. ಟೆಪ್ಲೈಸ್–ಸನೋವ್ ಪ್ರದೇಶದಲ್ಲಿಯ ಸುಣ್ಣಕಲ್ಲು ಗಣಿಗಳು ಸಿಮೆಂಟ್ ಕಾರ್ಖಾನೆಗೆ ಇಂಬಾಗಿವೆ. ಚರ್ಮದ ಕೈಗಾರಿಕೆಯೂ ಈ ದೇಶದ ಒಂದು ಮುಖ್ಯ ಕೈಗಾರಿಕೆ. ಗಾಟ್‌ವಲ್‌ಡಾಫ್‌ನ ಚರ್ಮದ ಕಾರ್ಖಾನೆಗಳು ಜಗತ್ಪ್ರಸಿದ್ಧವಾದವು. ಪಿಲ್ಸನ್‌ನಲ್ಲಿ ಮದ್ಯ ತಯಾರಾಗುತ್ತದೆ.

ನ್ಯಿತ್ರ ಪಟ್ಟಣದ ಕೃಷಿ ಕಾಲೇಜು

ಚೆಕೊಸ್ಲೊವಾಕಿಯ ಕಬ್ಬಿಣ ಅದುರ, ಹತ್ತಿ ಮುಂತಾದ ಕೆಲವು ಕಚ್ಚಾಸಾಮಗ್ರಿಗಳನ್ನು ಆಮದು ಮಾಡಿಕೊಂಡು ಯಂತ್ರೋಪಕರಣ, ಗಾಜಿನ ವಸ್ತು, ರಾಸಾಯನಿಕ, ಜವಳಿ ಚರ್ಮದ ವಸ್ತು ಮುಂತಾದವನ್ನು ರಫ್ತು ಮಾಡುತ್ತದೆ. ಒಟ್ಟು ರಫ್ತಿನ ಶೇ.40ಕ್ಕೂ ಹೆಚ್ಚು ಭಾಗ ಯಂತ್ರೋಪಕರಣಗಳನ್ನೊಳಗೊಂಡಿರುತ್ತದೆ.

ಬ್ರನಾ ಪಟ್ಟಣದಲ್ಲಿರುವ ಒಂದು ಅಂತಾರಾಷ್ಟ್ರೀಯ ಹೋಟೆಲು

**ಸಾರಿಗೆ:** ಚೆಕೊಸ್ಲೊವಾಕಿಯದ ಸಂಪರ್ಕ ವ್ಯವಸ್ಥೆ-ರಸ್ತೆಗಳು ಮತ್ತು ರೈಲು ಮಾರ್ಗಗಳು ತುಂಬ ಸಮರ್ಪಕ. ಸುಮಾರು 8,198 ಮೈ. ಉದ್ದದ ರೈಲುಮಾರ್ಗಗಳು ಇಲ್ಲಿಯ ಸಂಪರ್ಕ ವ್ಯವಸ್ಥೆಯ ಉತ್ಕೃಷ್ಟ ಸಾಧನೆಯ ಪ್ರತೀಕ. ಪ್ರತಿ ಆರು ಚ.ಮೈ. ವಿಸ್ತೀರ್ಣಕ್ಕೆ ಒಂದು ಮೈ. ರೈಲುಮಾರ್ಗವುಂಟು. ಈ ವಿಚಾರದಲ್ಲಿ ಇದಕ್ಕೆ ಯೂರೋಪಿನಲ್ಲಿ ಎಂಟನೆಯ ಸ್ಥಾನ. ಪ್ರಯಾಣಿಕರ ಹಾಗೂ ಸರಕು ಸಾರಿಗೆಯ ಬಹುಭಾಗ ನಡೆಯುವುದು ರೈಲುಮಾರ್ಗಗಳ ಮೂಲಕವೇ. ಆಂತರಿಕ ಜಲಮಾರ್ಗಗಳ ಮುಲಕ ಸಾಗುವ ಸರಕು ರೈಲುಸಾಗಣೆಯ 1/20ರಷ್ಟು ಮಾತ್ರ . ಚೆಕ್ ವಿಮಾನ ವ್ಯವಸ್ಥೆ ಯೂರೋಪಿನ ಅನೇಕ ಭಾಗಗಳೊಡನೆ ಹಾಗೂ ಏಷ್ಯ ಮತ್ತು ಆಫ್ರಿಕದ ಹಲವು ಮುಖ್ಯ ನಗರಗಳೊಡನೆ ಸಂಪರ್ಕ ಕಲ್ಪಿಸಿದೆ. ಪ್ರಾಗ್, ಬ್ರನಾ, ಆಲಾಮೋಟ್ಸ್, ಕಾಷಿಟ್ಸೆ ಮತ್ತು ಬ್ರಟಿಸ್ಲಾವಜಿಇವು ಇಲ್ಲಿಯ ಪ್ರಮುಖ ವಿಮಾನ ನಿಲ್ದಾಣಗಳು.

ಚೆಕೊಸ್ಲೊವಾಕಿಯದ ಮುಖ್ಯ ನಗರಗಳಿವು: ಪ್ರಾಗ್ (12,41,664), ಬ್ರನಾ (3,37,673), ಆಸ್ಟ್ರವ (2,99,622), ಪಲ್ಜೆನ್ (1,70,322), ಲಿಬೆರೆಕ್ (1,02,005) ಮತ್ತು ಉಟ್ಸೀನಾಡ್ ಲಾಬೆಮ್ (95,464).

ಚೆಕೊಸ್ಲೊವಾಕಿಯದ ಅತ್ಯಂತ ಜನಪ್ರಿಯ ಕ್ರೀಡೆಗಳು ಫುಟ್‌ಬಾಲ್, ಅಥ್ಲೆಟಿಕ್ಸ್, ಕೈಚೆಂಡು, ಬ್ಯಾಸ್ಕೆಟ್‌ಬಾಲ್, ಬರ್ಫ ಹಾಕಿ, ಜಲಕ್ರೀಡೆ ಮತ್ತು ಚದುರಂಗ. ದೇಶದ ನಾಣ್ಯ ಕಾರುನಾ.

(ಪಿ.ಜಿ.ಡಿ.;ಎನ್.ಬಿ.ಕೆ.ಆರ್.)

**ಇತಿಹಾಸ:** ಒಂದನೆಯ ಮಹಾಯುದ್ಧದ ನಂತರ, 1918ರಲ್ಲಿ ಜನಾಂಗಗಳ ಆತ್ಮನಿರ್ಣಯ ಹಕ್ಕಿಗೆ ಅನುಗುಣವಾಗಿ ಚೆಕೊಸ್ಲೊವಾಕಿಯ ಗಣರಾಜ್ಯ ರೂಪುಗೊಂಡಿತು. 1,400 ವರ್ಷಗಳಷ್ಟು ಹಿಂದಿನಿಂದಲೂ ಚೆಕ್ಕರು ಮತ್ತು ಸ್ಲೊವಾಕರು ಇಲ್ಲಿ ವಾಸಿಸುತ್ತಿದ್ದಾರೆ.

ಬೊಹೀಮಿಯ, ಮೊರೇವಿಯ–ಸೈಲೀಷಿಯ, ಸ್ಲೊವಾಕಿಯ, ಕಾರ್ಪೇತಿಯನ್ ರುಥೀನಿಯ ಎಂಬ ನಾಲ್ಕು ಪ್ರಧಾನ ಪ್ರದೇಶಗಳಿಂದ ಕೂಡಿದ ಭೂಭಾಗವಿದು. ಚೆಕೊಸ್ಲೊವಾಕಿಯದ ಪ್ರಾಚೀನ ಇತಿಹಾಸ ಬೊಹೀಮಿಯದ ಇತಿಹಾಸವೇ ಎನ್ನಬಹುದು. ಚೆಕೊಸ್ಲೊವಾಕಿಯದ ಮೂಲನಿವಾಸಿಗಳು ಬೋಯೀಗಳು, ಇವರಿಂದಲೇ ಬೊಹೀಮಿಯ ಎಂಬ ಹೆಸರು

ಪೂರ್ವ ಸ್ಲೊವಾಕಿಯದಲ್ಲಿನ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯ ಒಂದು ಸಂಕೀರ್ಣ

ಬಂತು. ಬೋಯೀಗಳನ್ನು ಮಾರ್ಕೊಮ್ಯಾನೀಗಳು ನಾಶಮಾಡಿದರು. ಈ ಘಟನೆ ನಡೆದದ್ದು ಕ್ರಿಸ್ತಶಕೆಯ ಆರಂಭದ ವರ್ಷಗಳಲ್ಲಿ. 9ನೆಯ ಶತಮಾನದಲ್ಲಿ ಮೊರೇವಿಯದಿಂದ ಚೆಕೊಸ್ಲೊವಾಕಿಯವನ್ನು ಪ್ರವೇಶಿಸಿತು. ಬೊಹೀಮಿಯದ ರಾಜಕುಮಾರ ಬೋರಿವೋಜ಼ನನ್ನು ಕ್ರೈಸ್ತಧರ್ಮಕ್ಕೆ ಮೆಥೋಡಿಯಸ್ ಮತಾಂತರಗೊಳಿಸಿದ. ಅದೇ ಶತಮಾನದ ಕೊನೆಯ ಭಾಗದಲ್ಲಿ ಚೆಕೊಸ್ಲೊವಾಕಿಯ ಪ್ರದೇಶ ಬೃಹತ್ ಮೊರೇವಿಯನ್ ರಾಜ್ಯದ ಭಾಗವಾಗಯಿತು. ಚೆಕ್ ರಾಜವಂಶಗಳಲ್ಲಿ ಪ್ರಿಮಿಸ್ಲೈಡ್ ಪ್ರಸಿದ್ಧವಾದ್ದು. ಸಂತ ವೆನ್ಸೆಸ್‌ಲಾಸ್ ಈ ವಂಶದ ಪ್ರಖ್ಯಾತ ಅರಸು. ಪ್ರಶ. 929ರಲ್ಲಿ ವೆನ್ಸೆಸ್‌ಲಾಸ್‌ನ ಸಹೋದರ ಒಂದನೆಯ ಬೋಲೆಸ್ಲಾವ್ ಅಧಿಕಾರಕ್ಕೆ ಬಂದ. ಎರಡನೆಯ ಬೋಲೆಸ್ಲಾವ್ ಮೊರೇವಿಯ, ಸೈಲೀಷಿಯ ಮತ್ತು ಪೋಲೆಂಡ್‌ಗಳಲ್ಲಿ ರಾಜ್ಯ ವಿಸ್ತರಣೆ ಮಾಡಿದ. ಮುರನೆಯ ಬೋಲೆಸ್ಲಾವ್ ಈ ವಿದೇಶಿ ಪ್ರಾಂತ್ಯಗಳನ್ನು ಕಳೆದುಕೊಳ್ಳಲಿಲ್ಲ. ಇವನನ್ನು ಸಿಂಹಾಸನದಿಂದ ತಳ್ಳಿ ವ್ಲಾದಿವೋಜ಼್‌ನ ಮರಣಾನಂತರ ಪ್ರಿಮಿಸ್ಲೈಡ್ ವಂಶದ ಆಳ್ವಿಕೆ ಮತ್ತೆ ಆರಂಭವಾಯಿತು. ಮತ್ತೆ 1029ರಲ್ಲಿ ಮೊರೇವಿಯ ಪ್ರಾಂತ್ಯ ಬೊಹೀಮಿಯದ ಭಾಗವಾಯಿತು. 1198ರಲ್ಲಿ 1ನೆಯ ಪ್ರಿಮ್‌ಸಲ್

ಚೆಕೊಸ್ಲೊವಾಕಿಯದ ಒಂದು ಸಾಮೂಹಿಕ ವ್ಯಾಯಾಮ ಪ್ರದರ್ಶನ

ಓಟ್ಟಕರ್ ಬೊಹೀಮಿಯದ ರಾಜನಾದ. 1230ರಲ್ಲಿ ಒಂದನೆಯ ವೆನ್ಸೆಸ್‌ಲಾಸ್ ಪಟ್ಟಕ್ಕೆ ಬಂದ. ಅವನ ಮಗ 2ನೆಯ ಪ್ರಮ್‌ಸಲ್ ಓಟ್ಟಕರ್ ಬೊಹೀಮಿಯ ರಾಜ್ಯವನ್ನು ಏಡ್ರಿಯಾಟಿಕ್ ಸಮುದ್ರದವರೆಗೂ ವಿಸ್ತರಿಸಿದ. ಓಟ್ಟಕರ್‌ನ ಹೆಚ್ಚಿನ ರಾಜ್ಯದ ಮೇಲೆ ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿ 2ನೆಯ ರೂಡಾಲ್ಫ್ ತನ್ನ ಹಕ್ಕು ಸ್ಥಾಪಿಸಿದ. ಇದರಿಂದ ಯುದ್ಧ ನಡೆಯಿತು. ಮಾರ್ಕ್‌ಫೆಲ್ಡ್ ಓಟ್ಟಕರ್ ಕದನದಲ್ಲಿ ಸೋತು 1278ರಲ್ಲಿ ಕೊಲ್ಲಲ್ಪಟ್ಟ. ಅನಂತರ ಅವನ ಮತ್ತು 2ನೆಯ ವೆನ್ಸೆಸ್‌ಲಾಸ್ ಪಟ್ಟಕ್ಕೆ ಬಂದ. ಈ ಕಾಲದಲ್ಲಿ ಬೊಹೀಮಿಯದಲ್ಲಿ ಪ್ರಗತಿಯುಂಟಾಯಿತು; ಐಶ್ವರ್ಯ ಹೆಚ್ಚಿತು. 1306ರಲ್ಲಿ ಮೂರನೆಯ ವೆನ್ಸೆಸ್‌ಲಾಸ್‌ನ ಕೊಲೆಯೊಡನೆ ಪ್ರಿಮಿಸ್ಲೈಡ್ ವಂಶದ ಆಳ್ವಿಕೆ ಕೊನೆಗೊಂಡಿತು. ಅನಂತರ ಹ್ಯಾಪ್ಸ್‌ಬರ್ಗ್ ವಂಶದ ರೂಡಾಲ್ಫ್ ಮತ್ತು ಕಾರಿಂಥಿಯದ ಹೆನ್ರಿ ಸ್ವಲ್ಪ ಕಾಲ ಪ್ರಭುತ್ವ ನಡೆಸಿದರು. 1310ರಲ್ಲಿ ಬೊಹೀಮಿಯನರು ಜರ್ಮನಿಯ ರಾಜನ ಮಗ ಜಾನನನ್ನು ಅರಸನನ್ನಾಗಿ ಆಯ್ಕೆ ಮಾಡಿದರು. 1346ರಲ್ಲಿ ಜಾನ್ ಕ್ರೇಸೀ ಮರಣ ಹೊಂದಿದ. ಅವನ ಮಗ ಅಧಿಕಾರಕ್ಕೆ ಬಂದ. ಇವನೇ 1348ರಲ್ಲಿ ನಾಲ್ಕನೆಯ ಚಾರ್ಲ್ಸ್ ಚಕ್ರವರ್ತಿಯಾಗಿ ಜರ್ಮನಿಯನ್ನಾಳಿದ. ಪ್ರಾಗ್ ಪಟ್ಟಣ ಇವನ ರಾಜಧಾನಿಯಾಯಿತು. ಇವನು ವಿಯೆನ್ನ ಮತ್ತು ಪ್ರಾಗ್ ವಿಶ್ವವಿದ್ಯಾಲಯಗಳನ್ನು ಸ್ಥಾಪನೆಮಾಡಿದ. 1356ರಲ್ಲಿ ಶಾಸನವೊಂದನ್ನು ಹೊರಡಿಸಿ ಸಿಂಹಾಸನಕ್ಕೆ ನಡೆಯುವ ಚುನಾವಣೆಗಳನ್ನು ನಿಯಂತ್ರಿಸಿದ. ಚಾರ್ಲ್ಸ್‌ನ ಮಗಳು ಆನ್ ಇಂಗ್ಲೆಂಡಿನ ದೊರೆ 2ನೆಯ ರಿಚರ್ಡನನ್ನು ಮದುವೆಯಾದಳು. 1378ರಲ್ಲಿ ಚಾರ್ಲ್ಸ್ ಮರಣಹೊಂದಿದ ಮೇಲೆ ಅವನ ಮಗ 4ನೆಯ ವೆನ್ಸೆಸ್‌ಲಾಸ್ ಅಧಿಕಾರ ನಡೆಸಿದ. ಇವನು ಜರ್ಮನ್ ಚಕ್ರವರ್ತಿಯಾಗಿ ಆಡಳಿತ ನಡೆಸಿದ. ಈ ಕಾಲದಲ್ಲಿ ವಿಕ್ಲಿಫನ ವಿಚಾರಧಾರೆ ಬೊಹೀಮಿಯಕ್ಕೆ ಬಂತು. ಜಾನ್ ಹಸ್ ಈ ಭಾವನೆಗಳನ್ನು ಉತ್ಸಾಹದಿಂದ ಸ್ವಾಗತಿಸಿದ. ಇದರಿಂದ ಧಾರ್ಮಿಕ ಕ್ರಾಂತಿ ಉಂಟಾಯಿತು. ಹಸ್ ಮತ್ತು ಜರೋಂ ಎಂಬ ಮತಸುಧಾರಕರನ್ನು ಜೀವಸಹಿತ ಸುಡಲಾಯಿತು. 1410ರಲ್ಲಿ ಸಿಜಿಸ್‌ಮುಡ್ ಎಂಬುವನು ಜರ್ಮನಿಯ ಅರಸನಾಗಿ ಆಯ್ಕೆಯಾದ. ಅವನನ್ನು ಬೊಹೀಮಿಯ ರಾಜನಾಗಿ ಒಪ್ಪಲಿಲ್ಲ. 1437ರಲ್ಲಿ ಅವನು ಮರಣಹೊಂದಿದ. ಎರಡನೆಯ ಆಲ್ಬರ್ಟ್ ಪಟ್ಟಕ್ಕೆ ಬಂದು ಎರಡು ವರ್ಷಗಳ ಕಾಲ ಅಧಿಕಾರ ನಡೆಸಿದ. ಅವನ ಮರಣಾನಂತರ ಹುಟ್ಟಿದ ಮಗು ಲ್ಯಾಡಿಸ್ಲಾಸನಿಗೆ 1452ರಲ್ಲಿ ಪಟ್ಟವಾಯಿತು. 1457ರಲ್ಲಿ ಲ್ಯಾಡಿಸ್ಲಾಸ್ ಮರಣಹೊಂದಿದ ಮೇಲೆ ಜಾರ್ಜ್ ಪ್ರಾದ್ಯೆ ಬ್ರಾಟ್‌ನನ್ನು ರಾಜನನ್ನಾಗಿ ಚುನಾಯಿಸಲಾಯಿತು. ಇವನ ಕಾಲದಲ್ಲಿ ಹಂಗೇರಿಯೊಡನೆ ಯುದ್ಧಗಳು ನಡೆದವು. ಪ್ರಾದ್ಯೆಬ್ರಾಟ್ ಮರಣಾನಂತರ ಪೋಲೆಂಡಿನ ರಾಜ 4ನೆಯ ಕಾಸಿಮಿರನ ಮಗ

ಎರಡನೆಯ ಮಹಾಯುದ್ಧ ಕಾಲದಲ್ಲಿ ಸ್ಲೊವಾಕಿಯದ ಪೂರ್ವ ಗಡಿಯ ಬಳಿ ನಡೆದ ಡಕ್ಲ ಕಣಿವೆ ಕಾರ್ಯಾಚರಣೆಯಲ್ಲಿ ಮಡಿದ ಚೆಕೊಸ್ಲೊವಾಕಿಯ ಮತ್ತು ಸೋವಿಯೆತ್ ಯೋಧರ ಸ್ಮಾರಕ

ಲ್ಯಾಡಿಸ್ಲಾಸನನ್ನು ಸಿಂಹಾಸನಕ್ಕೆ 1471ರಲ್ಲಿ ತರಲಾಯಿತು. 1490ರಲ್ಲಿ ಲ್ಯಾಡಿಸ್ಲಾಸ್ ಹಂಗರಿಯ ರಾಜನೂ ಆದ. ಈತ ದಕ್ಷ ಆಡಳಿತಗಾರನಾಗಿರಲಿಲ್ಲ. ಆದರೆ ಇವನು ಎರಡು ಪ್ರಮುಖ ವಿವಾಹಗಳನ್ನು ಏರ್ಪಡಿಸಿದ ; ತನ್ನ ಮಗನಾದ ಲೂಯಿಗೆ ಚಕ್ರವರ್ತಿ 1ನೆಯ ಮ್ಯಾಕ್ಸಿಮಿಲಿಯನನ ಮೊಮ್ಮಗಳನ್ನು ತಂದುಕೊಂಡೂ ಮ್ಯಾಕ್ಸಿಮಿಲಿಯನನ ಮೊಮ್ಮಗನಿಗೆ ತನ್ನ ಮಗಳಾದ ಆನಳನ್ನು ಕೊಟ್ಟೂ ವಿವಾಹ ಮಾಡಿದ. ಈತನ ಮಗ 2ನೆಯ ಲೂಯಿ (ಹಂಗರಿಯ ರಾಜ) 1526ರಲ್ಲಿ ಮೊಹಾಕ್ಸ ಯುದ್ಧರಂಗದಲ್ಲಿ ಮರಣ ಹೊಂದಿದ. ಅನಂತರ ಮ್ಯಾಕ್ಸಿಮಿಲಿಯನನ ಮೊಮ್ಮಗ ಹಾಗೂ ಲ್ಯಾಡಿಸ್ಲಾಸನ ಅಳಿಯನಾಗಿದ್ದ ಫರ್ಡಿನೆಂಡ್ ತನ್ನ ಪತ್ನಿಯ ಮೂಲಕ ಲಹಂಗರಿ ಮತ್ತು ಬೊಹೀಮಿಯಗಳ ಲಮೇಲೆ ತನ್ನ ಹಕ್ಕು ಸ್ಥಾಪಿಸಿದ. ಅವನನ್ನು ಬೊಹೀಮಿಯ ರಾಜ್ಯಕ್ಕೆ ರಾಜನನ್ನಾಗಿ ಆಯ್ಕೆ ಮಾಡಲಾಯಿತು. ಇವನು ಹಂಗರಿಯ ಸಿಂಹಾಸನವನ್ನು ಗಿಟ್ಟಿಸಿಕೊಂಡ. 1547ರಲ್ಲಿ ತನ್ನನ ಸಿಂಹಾಸನದ ಹಕ್ಕು ವಂಶಪಾರಂಪರ್ಯವಾಗಿ ಬಂದದ್ದು, ಚುನಾವಣೆಯಿಂದಲ್ಲ ಎಂಬುದನ್ನು ಸ್ಥಾಪಿಸಲು ಯತ್ನಿಸಿ ಜಯ ಪಡೆದ. ಇದರಿಂದ ಬೊಹೀಮಿಯ ಹ್ಯಾಪ್ಸ್‌ಬರ್ಗ್ ವಂಶೀಯರ ಕೈಸೇರಿತು. 1556ರಲ್ಲಿ ಫರ್ಡಿನೆಂಡ್ ಜರ್ಮನರ ರಾಜನಾದ. ಅವನ ಮರಣಾನಂತರ ಪಟ್ಟಕ್ಕೆ ಬಂದವನು 2ನೆಯ ರೂಡಾಲ್ಫ್. 1609ರಲ್ಲಿ ಬೊಹೀಮಿಯನರು 2ನೆಯ ರೂಡಾಲ್ಫ್‌ನಿಂದ ಧಾರ್ಮಿಕ ಸಹಿಷ್ಣುತೆಯ ಹಕ್ಕು ಪಡೆದರು. 1611ರಲ್ಲಿ ಅವರು ಅವನನ್ನು ಬಲವಂತವಾಗಿ ಸಂಹಾಸನದಿಂದ ಇಳಿಸಿ ಅವನ ಸಹೋದರ ಮತಿಯಾಸನನ್ನು ಅದರ ಮೇಲೆ ಕುಳ್ಳಿರಿಸಿದರು. ಮತಿಯಾಸ್ ಮರಣ ಹೊಂದಿದ ಮೇಲೆ 1619ರಲ್ಲಿ 1ನೆಯ ಫರ್ಡಿನೆಂಡನ ಮೊಮ್ಮಗ 2ನೆಯ ಫರ್ಡಿನೆಂಡ್ ಪಟ್ಟಕ್ಕೆ ಬಂದ. ಇವನ ಕಾಲದಲ್ಲಿ ಪ್ರಾಟೆಸ್ಟಂಟರಿಗೂ ಕ್ಯಾಥೋಲಿಕರಿಗೂ 30 ವರ್ಷಗಳ ಯುದ್ಧ ಆರಂಭವಾಯಿತು. 1620ರಲ್ಲಿ

ಪ್ರಾಗ್ ನಗರದ ಬಳಿ ನಡೆದ ಯುದ್ಧದಲ್ಲಿ ಬೊಹೀಮಿಯದ ಪ್ರಾಟೆಸ್ಟಂಟು ಡೋತುಹೋದು. ಪ್ರಾಟೆಸ್ಟಂಟ್ ಜಮೀನುದಾರರ ಭೂಮಿಗಳನ್ನು ವಶಪಡಿಸಿಕೊಂಡು ಪ್ರಾಟೆಸ್ಟಂಟ್ ಧರ್ಮವನ್ನು ಹತ್ತಿಕ್ಕಲಾಯಿತು. ವೆಸ್ಟ್‌ಫೇಲ್ಯ ಒಪ್ಪಂದವಾದ ತರುವಾಯ ವಿಯನ್ನದ ಚಕ್ರವರ್ತಿಗಳ ಆಡಳಿತ ಕಾಲದಲ್ಲಿ ಬೊಹೀಮಿಯದ ಇತಿಹಾಸ ಆಸ್ಟರಿಯದ ಇತಿಹಾಸದಲ್ಲಿ ಸೇರಿ ಹೊಯಿತು. ಎರಡನೆಯ ಜೋಸೆಫನ ಕಾಲದಲ್ಲಿ ಜನರಿಗೆ ಧಾರ್ಮಿಕ ಹಕ್ಕುಗಳನ್ನು ಮತ್ತೆ ನೀಡಲಾಯಿತು.

ಯೂರೋಪಿನ ಇತಿಹಾಸದಲ್ಲಿ 1848 ಒಂದು ಮೈಲಿಗಲ್ಲು. ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದ ಎಲ್ಲ ರಾಷ್ಟ್ರಗಳಲ್ಲೂ ಸಾಮ್ರಾಜ್ಯವಾದದ ವಿರುದ್ಧವಾಗಿ ಆಗ ಹೋರಾಟ ತಲೆ ಎತ್ತಿತು. ಅದೇ ರೀತಿ ಆಸ್‌ರಿಯ ಚಕ್ರಾಧಿಪತ್ಯದ ವಿರುದ್ಧವಾಗಿ ಅದರ ಅಧೀನ ರಾಜ್ಯಗಳಲ್ಲೆಲ್ಲ ಹೋರಾಟ ಆರಂಭವಾಯಿತು. ಪ್ರಾಗ್ ನಗರದಲ್ಲಿ 1848ರಲ್ಲಿ ಪಾನ್–ಸ್ಲಾವ ಕಾಂಗ್ರೆಸ್ ಸಭೆ ನಡೆಯಿತು. ಆಸ್ಟ್ರಿಯದಿಂದ ವಿಮೋಚನೆ ಹೊಂದಲು ಜನ ದಂಗೆಯೆದ್ದರು. ಆದರೆ ಆ ದಂಗೆಯನ್ನು ಹತ್ತಿಕ್ಕಲಾಯಿತು. 1861ರಲ್ಲಿ ಬೊಹೀಮಿಯಕ್ಕೆ ಶಾಸನಸಭೆ ನೀಡಲಾಯಿತು. ಚೆಕ್ ಭಾಷೆಯನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಲಾಯಿತು. ಬೊಹೀಮಿಯದಲ್ಲಿ ಸರ್ಕಾರಿ ಉದ್ಯೋಗದಲ್ಲಿರುವ ಪ್ರತಿಯೊಬ್ಬರೂ ಚೆಕ್ ಭಾಷೆಯನ್ನು ಕಲಿತಿಬೇಕೆಂದು ಘೋಷಿಸಲಾಯಿತು. ಈ ರೀತಿಯಾಗಿ 19ನೆಯ ಶತಮಾನದ ಕೊನೆಯ ವೇಳೆಗೆ ಚೆಕ್ ಜನಾಂಗದಲ್ಲಿ ಸಾಂಸ್ಕೃತಿಕ ಐಕ್ಯ ಮೂಡಿತು. ರಾಜಕೀಯ ಐಕ್ಯ ಚಳವಳಿ ಆರಂಭವಾಯಿತು. ಹ್ಯಾಪ್ಸ್‌ಬರ್ಗ್ ವಂಶದ ಆಡಳಿತಗಾರರು ಪ್ರಜೆಗಳ ಆಶೋತರಗಳನ್ನು ಈಡೇರಿಸುವುದಕ್ಕೆ ಪ್ರತಿಯಾಗಿ ದಮನ ರೀತಿಯಿಂದ ತಮ್ಮ ಆಧಿಪತ್ಯವನ್ನು ಭದ್ರಪಡಿಸಿಕೊಳ್ಳಲು ಹವಣಿಸಿದರು. ಚೆಕ್ ಜನರಲ್ಲಿ ರಾಜಕೀಯ ಜಾಗೃತಿಯಿದ್ದರೂ 20ನೆಯ ಶತಮಾನದ ಆದಿಭಾಗದಲ್ಲೂ ಅವರು ಆಸ್ಟ್ರಿಯದ ಆಡಳಿತದಲ್ಲೇ ತೊಳಲಬೇಕಾಯಿತು. ಈ ಪರಿಸ್ಥಿತಿಯನ್ನು ಬದಲಾಯಿಸಲು ಅನುವಾಗಿ ಎರಡು ಪ್ರಮುಖ ಕಾರಣಗಳು ಒದಗಿಬಂದುವು. ಒಂದನೆಯದಾಗಿ ಬಾಲ್ಕನ್ ರಾಜ್ಯಗಳ ಸ್ವಾತಂತ್ರ್ಯ ಹೋರಾಟ, ಎರಡನೆಯದಾಗಿ ಒಂದನೆಯ ಮಹಾಯುದ್ಧ. ಈ ಕಾಲದಲ್ಲಿ ಚೆಕ್ಕರ ರಾಷ್ಟ್ರೀಯ ಆಂದೋಲನಕ್ಕೆ ಪ್ರಾಣಪ್ರತಿಷ್ಠೆ ಮಾಡಿದವನು ತಾಮಾಷ್ ಗಾರಿಗ್ ಮ್ಯಾಸಾರಿಕ್ (1850–1937). ಈತ 1900ರಲ್ಲಿ ಪ್ರಗತಿಪಕ್ಷ ಎಂಬ ರಾಜಕಿಯ ಪಕ್ಷವನ್ನು ಸ್ಥಾಪಿಸಿದ. ಇದು ವಾಸ್ತವವಾದಿ ಪಕ್ಷವೆಂಬ ಹೆಸರಿನಿಂದ ಜನಪ್ರಿಯವಾಯಿತು. ಈತ 1907ರಲ್ಲಿ ಶಾಸನಸಭೆಯ ಚುನಾಯಿತನಾದ. ತನ್ನ ರಾಜ್ಯವನ್ನು ಆಳುತ್ತಿದ್ದ ಆಸ್ಟ್ರಿಯ ದೇಶ ಜರ್ಮನಿಗೆ ದಾಸ್ಯದಲ್ಲಿರುವ ಸ್ಥಿತಿಯನ್ನು ಉಗ್ರವಾಗಿ ಖಂಡಿಸಿದ. ಇದರಿಂದ ಈತ ಅಧಿಕಾರಿಗಳ ಕೋಪಕ್ಕೂ ರಾಜವಂಶದ ಅಸಂತುಷ್ಟಿಗೂ ಗುರಿಯಾಗಬೇಕಾಯಿತು. ಆದರೆ ಹೊರದೇಶಗಳಲ್ಲಿ ರಾಷ್ಟ್ರೀಯ ನಾಯಕನೆಂಬ ಖ್ಯಾತಿ ಪಡೆದ.

1914ರಲ್ಲಿ ಒಂದನೆಯ ಮಹಾಯುದ್ಧ ಆರಂಭವಾಯಿತು. ಇವನು ದೇಶತ್ಯಾಗ ಮಾಡಿ ನಾಲ್ಕು ವರ್ಷಗಳ ಕಾಲ ಸ್ವಿಟ್‌ಜ಼ರ್ಲೆಂಡ್, ಫ್ರಾನ್ಸ್, ರಷ್ಯ ಮತ್ತು ಸಂಯುಕ್ತ ಸಂಸ್ಥಾನಗಳಲ್ಲಲಿ ಸಂಚರಿಸಿ, ಚೆಕೊಸ್ಲೊವಾಕಿಯದ ಬಿಡುಗಡೆಗಾಗಿ ಪ್ರಚಾರ ಮಾಡಿದ. ಹೊರದೇಶಗಳಲ್ಲಿದ್ದ ಚೆಕ್ ಪ್ರಜೆಗಳನ್ನು ಒಂದುಗೂಡಿಸಿ, ಚೆಕೊಸ್ಲೊವಾಕಿಯ ರಾಷ್ಟ್ರೀಯ ಕೌನ್ಸಿಲ್ ಎಂಬ ಸಂಸ್ಥೆಯನ್ನು ಸಂಸ್ಥೆಯನ್ನು ಸ್ಥಾಪಿಸಿ, ಅದರ ಅಧ್ಯಕ್ಷನಾದ. ಈ ಕಾರ್ಯದಲ್ಲಿ ಆತನಿಗೆ ನೆರವಾದವನು ಎಡ್ವಡ್ ಬೆನೆಷ್ (1884–1948). ಅವನು ಆ ಸಂಸ್ಥೆಯ ಕಾರ್ಯದರ್ಶಿ. ಆತನೂ ಅಧಿಕಾರಿಗಳ ಕೋಪಕ್ಕೆ ತುತ್ತಾಗಿ, ದೇಶತ್ಯಾಗ ಮಾಡಿ, ತನ್ನ ನಾಡಿನ ಬಿಡುಗಡೆಗಾಗಿ ಹೊರದೇಶಗಳಲ್ಲಿ ಪ್ರಚಾರ ಮಾಡುತ್ತಿದ್ದ.

ಮ್ಯಾಸರಿಕ್ 1917ರಲ್ಲಿ ರಷ್ಯ ಪ್ರವಾಸ ಕೈಗೊಂಡು, ರಷ್ಯನರ ಕೈಸೆರೆ ಸಿಕ್ಕಿದ್ದ ಸಾವಿರಾರು ಚೆಕ್ಕರಿಂದ ಕೂಡಿದ ಒಂದು ಸ್ವತಂತ್ರ ಸೈನ್ಯ ಪಡೆಯನ್ನು ಕಟ್ಟಿದ. 1918ರಲ್ಲಿ ಸಂಯುಕ್ತ ಸಂಸ್ಥಾನಗಳಿಗೆ ಹೋದ. ಆಗಲೇ ಮಿತ್ರರಾಷ್ಟ್ರಗಳು ಚೆಕೊಸ್ಲೊವಾಕಿಯದ ರಾಷ್ಟ್ರೀಯ ಕೌನ್ಸಿಲ್ ಅನ್ನು ಚೆಕೊಸ್ಲೊವಾಕಿಯದ ನ್ಯಾಯ ಬದ್ಧ ಸರ್ಕಾರವೆಂದು ಅಂಗೀಕರಿಸಿ ಘೋಷಣೆ ಮಾಡಿದ್ದು.

ಯುದ್ಧ ಮುಗಿದ ತರುವಾಯ ಮ್ಯಾಸಾರಿಕ್ ಸ್ವದೇಶಕ್ಕೆ ಹಿಂದಿರುಗಿ 1918ರ ನವೆಂಬರ್ 14ರಂದು ಪ್ರಥಮ ಪ್ರಜಾರಾಜ್ಯವನ್ನು ಸ್ಥಾಪಿಸಿ, ಅದರ ಅಧ್ಯಕ್ಷನಾಗಿ ಚುನಾಯಿತನಾದ. 1935ರವರೆಗೂ ಅವನು ಅಧ್ಯಕ್ಷನಾಗಿದ್ದ.

ಮ್ಯಾಸರಿಕನ ತರುವಾಯ ಬೆನೆಷ್ ಅಧ್ಯಕ್ಷನಾಗಿ ಚುನಾಯಿತನಾದ. ದೇಶದ ಸಮಸ್ಯೆಗಳು ಅಗಾಧವಾಗಿದ್ದುವು. ಆರ್ಥಿಕ, ವ್ಯಾವಸಾಯಿಕ ಸಮಸ್ಯೆಗಳು ಒಂದು ಕಡೆಯಾದರೆ, ಇದಕ್ಕಿಂತ ಹೆಚ್ಚಾಗಿ ಇನ್ನೊಂದು ಕಡೆ ರಾಜ್ಯದ ಸೂಡೇಟನ್ ವಿಭಾಗದ ಅಲ್ಪ ಸಂಖ್ಯಾತ ಜರ್ಮನ್ ಜನರ ಸಮಸ್ಯೆಯನ್ನು ಎದುರಿಸಬೇಕಾಗಿತ್ತು.

ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್ ಪ್ರಾಬಲ್ಯಕ್ಕೆ ಬಂದಕೂಡಲೇ (1929) ಚೆಕೊಸ್ಲೊವಾಕಿಯದಲ್ಲಿ ಸೂಡೇಟನ್ ಜರ್ಮನ್ ಅಲ್ಪಸಂಖ್ಯಾತರ ಪಕ್ಷ ವ್ಯವಸ್ಥೆಗೊಂಡು ಬಲಗಳಿಸಿತು. ಆ ವಿಭಾಗದ ಜನರು ಗಣರಾಜ್ಯದಿಂದ ಪ್ರತ್ಯೇಕವಾಗಲು ಬಯಸಿದರು. ಹಿಟ್ಲರ್ ಇದಕ್ಕೆ ಉತ್ತೇಜನವಿತ್ತ. 1938ರಲ್ಲಿ ಅವನು ಆಸ್ಟ್ರಿಯದ ಮೇಲೆ ದಾಳಿಮಾಡಿದ. ಸೂಡೇಟನ್ ವಿಭಾಗವನ್ನೂ ಸ್ವಾಧೀನಪಡಿಸಿಕೊಂಡ. ಆ ಸಮಯದಲ್ಲಿ ರಾಷ್ಟ್ರಗಳ ಕೂಟವಾಗಲಿ ಬ್ರಿಟನ್, ಫ್ರಾನ್ಸ್‌ಗಳಾಗಲಿ ಕೌಲುಗಳ ಪ್ರಕಾರ ಚೆಕೊಸ್ಲೊವಾಕಿಯದ ನರವಿಗೆ ಬರಲಿಲ್ಲ. ಇದಕ್ಕೆ ಬದಲಾಗಿ ವಿಶ್ವಶಾಂತಿಯ ಹೆಸರಿನಲ್ಲಿ 1938ರ ಸೆಪ್ಟಂಬರ್ 29ರಂದು ಮ್ಯೂನಿಕ್ ಒಪ್ಪಂದವಾಯಿತು. ಇದರ ಪರಿಣಾಮವಾಗಿ ಚೆಕೊಸ್ಲೊವಾಕಿಯದ ಪ್ರಥಮ ವಿಭಜನೆಯಾಯಿತು. ಕಲವೇ ತಿಂಗಳಲ್ಲಿ ಮ್ಯಾಸಾರಿಕ್ ಕಟ್ಟಿದ ಗನರಾಜ್ಯ ಇಲ್ಲವೆನ್ನು ವಂತಾಯಿತು. ಅದು ನಾಟ್ಸಿ ಆಧಿಪತ್ಯಕ್ಕೊಳ ಪಟ್ಟಿತು; ಬೊಹೀಮಿಯ ಮೊರೇವಿಯ ಎಂಬ ಜರ್ಮನ್ ಅರಕ್ಷಿತ ರಾಜ್ಯ ರೂಪಿತವಾಯಿತು.

ಬೆನೆಷ್ ಪುನಃ ದೇಶತ್ಯಾಗ ಮಾಡಿದ. ಇಂಗ್ಲೆಂಡಿನಲ್ಲಿ ರಾಷ್ಟ್ರೀಯ ಸರ್ಕಾರ ರಚಿಸಿದ. ಬ್ರಿಟನ್, ಫ್ರಾನ್ಸ್ ಮತ್ತು ಸೋವಿಯೆತ್ ಸರ್ಕಾರಗಳು ಇದಕ್ಕೆ ಮಾನ್ಯತೆಯಿತ್ತುವು. ಆ ಕಾಲಕ್ಕೆ ಎರಡನೆಯ ಮಹಾಯುದ್ಧ ಆರಂಭವಾಯಿತು. ಆ ಯುದ್ಧದ ಕಾಲದಲ್ಲೆಲ್ಲ ಸ್ವತಂತ್ರ ಚೆಕ್ ಸರಕಾರ ಬೆನೆಷ್‌ನ ನೇತೃತ್ವದಲ್ಲಿ ಮಿತ್ರ ರಾಷ್ಟ್ರಗಳ ನೆರವಿನಿಂದ ಅಸ್ತಿತ್ವದಲ್ಲಿತ್ತು. ಸಂಯುಕ್ತ ಸಂಸ್ಥಾನಗಳ ಸರ್ಕಾರವೂ ಇದಕ್ಕೆ 1942ರಲ್ಲಿ ಮಾನ್ಯತೆ ನೀಡಿತು. 1944ರಲ್ಲಿ ರೂಪಿತವಾದ ವಿರ್ಶವಸಂಸ್ಥೆಯ ಪ್ರಣಾಳಿಕೆಗೆ ಇತರ ರಾಷ್ಟ್ರಗಳ ಜೊತೆಯಲ್ಲಿ ಈ ಸರ್ಕಾರವೂ ಸಹಿ ಹಾಕಿತು.

1945ರಲ್ಲಿ ಸೋವಿಯೆತ್ ಮತ್ತು ಅಮೆರಿಕನ್ ಸೈನ್ಯಗಳು ಚೆಕೊಸ್ಲೊವಾಕಿಯವನ್ನು ನಾಟ್ಸಿ ಆಡಳಿತದಿಂದ ಮುಕ್ತಗೊಳಿಸಿದವು. ಅಧ್ಯಕ್ಷ ಬೆನೆಷ್‌ನ ಸರ್ಕಾರ ಪ್ರಾಗ್ ಪಟ್ಟಣದಲ್ಲಿ ಮತ್ತೆ ಅಧಿಕಾರ ವಹಿಸಿಕೊಂಡಿತು. ಚೆಕೊಸ್ಲೊವಾಕಿಯ ಪೂರ್ವ ಮತ್ತು ಪಶ್ಚಿಮ ಯೂರೋಪುಗಳಿಗೆ ಸೇತುವೆಯಂತಿರಬೇಕೆಂಬುದು ಬೆನೆಸನಿಗಿದ್ದ ಆಶಯ.

1946ರಲ್ಲಿ ನಡೆದ ಚುನಾವಣೆಗಳಲ್ಲಿ ಕಮ್ಯೂನಿಸ್ಟರು ಬಹುಮತ ಗಳಿಸಿದರು. ಅವನ ನಾಯಕ ಕ್ಲೆಮೆಂಟ್ ಗಾಟ್‌ವಾಲ್ಡ್ ಪ್ರಧಾನಮಂತ್ರಿಯಾದ. 1948ರಲ್ಲಿ ಕಮ್ಯೂನಿಸ್ಟರಿಗೆ ಸಕಲ ಅಧಿಕಾರಗಳೂ ಲಭಿಸಿದವು. ಎಡ್ವರ್ಡ್ ಬೆನೆಷನ ಸ್ಥಾನದಲ್ಲಿ ಗಾಟ್‌ವಾಲ್ಡ್ ಅಧ್ಯಕ್ಷನಾಗಿ 1953ರ ವರೆಗೂ ಆ ಅಧಿಕಾರದಲ್ಲಿ ಮುಂದುವರಿದ. ಚೆಕೊಸ್ಲೊವಾಕಿಯ ಪೂರ್ವ ಐರೋಪ್ಯ ಗುಂಪಿಗೆ ಸೇರಿ ವಾರ್ಸಾ ಕೌಲಿಗೆ ಸಹಿ ಹಾಕಿತು. ಗಾಟ್‌ವಾಲ್ಡನ ಸರ್ಕಾರ ಸ್ಟಾಲಿನ್ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿತ್ತು. ಗಾಟ್‌ವಾಲ್ಡನ ಅನಂತರ ಅನುಕ್ರಮವಾಗಿ ಆಂಟೋನಿನ್ ಜ಼ೋಪೊಟೊಕಿ ಮತ್ತು ಆಂಟೋನಿನ್ ನೊವೋಟ್ನಿ ಅಧಿಕಾರಕ್ಕೆ ಬಂದರು. 1963ರಲ್ಲಿ ಯೋಸೆಫ್ ಲೊನಾರ್ಟನ ನಾಯಕತ್ವದಲ್ಲಿ ಹೊಸ ಸರ್ಕಾರ ಸ್ಥಾಪಿತವಾಯಿತು. 1968ರಲ್ಲಿ ಅಲೆಕ್ಸಾಂಡರ್ ಡೂಬ್‌ಚೆಕ್ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯಾದ. ಅದೇ ವರ್ಷ ಲಡ್‌ವಿಗ್ ಸ್ವೊವೋಡ ಅಧ್ಯಕ್ಷನಾದ. ಹೊಸ ಸರ್ಕಾರ ಅನೇಕ ಸುಧಾರಣೆಗಳನ್ನು ತಂದಿತು. ಇದು ಕಮ್ಯೂನಿಸ್ಟ್ ಶಿಸ್ತಿಗೆ ವಿರುದ್ಧವಾಗಿದೆಯೆಂದೂ ದೇಶ ಪಾಶ್ಚಾತ್ಯ ಪದ್ಧತಿಗೆ ಜಾರುತ್ತಿದೆಯೆಂದೂ ವಾರ್ಸಾ ಕೌಲಿನ ರಾಷ್ಟ್ರಗಳು ಭಾವಿಸಿ ಚೆಕೊಸ್ಲೊವಾಕಿಯದ ಮೇಲೆ ಸೈನಿಕ ಕಾರ್ಯಾಚರಣೆ ನಡೆಸಿದುವು. ಸುಧಾರಣಾವಾದಕ್ಕೆ ತಡೆ ಬಿತ್ತು. ಡೂಬ್ಚೆಕನ ಸ್ಥಾನದಲ್ಲಿ ಗಸ್ಟಾಫ್ ಹ್ಯೂಸಾಕ್ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯಾದ. **(ಕೆ.ಎಸ್.ಎಸ್.; ಜಿ.ವಿ.ಎನ್.)**

**ಆಡಳಿತ:** ಚೆಕ್ಕರು ಮತ್ತು ಸ್ಲೊವಾಕರೆಂಬ, ಸಮಾನಾಧಿಕಾರಿಗಳುಳ್ಳ, ಎರಡು ರಾಷ್ಟ್ರಗಳ ಒಕ್ಕೂಟವಿದು. ಒಂದೊಂದು ಪ್ರತ್ಯೇಕ ಸರ್ಕಾರವುಳ್ಳ ಗಣರಾಜ್ಯ, 1 ಒಕ್ಕೂಟ, 2 ರಾಷ್ಟ್ರೀಯ ಗಣರಾಜ್ಯ, 3 ಪ್ರಾದೇಶಿಕ ಮತ್ತು ಸ್ಥಳೀಯ ಸರ್ಕಾರಗಳು – ಹೀಗೆ ಆಡಳಿತ ವ್ಯವಸ್ಥೆ ಮೂರು ಮಟ್ಟಗಳಲ್ಲಿ ನಡೆಯುತ್ತದೆ.

ಒಕ್ಕೂಟದ ಮಟ್ಟದಲ್ಲಿ ಸಂಸತ್ತು ಸಂವಿಧಾನಾತ್ಮಕವಾಗಿ ಅತ್ಯಂತ ಮುಖ್ಯವಾದ ರಾಜಕೀಯ ಸಂಸ್ಥೆ. ಇದರಲ್ಲಿ ಲೋಕಸಭೆ, ರಾಷ್ಟ್ರಗಳ ಸಭೆ ಎಂಬ ಎರಡು ಸದನಗಳುಂಟು. ಇನ್ನೂರು ಜನ ಸದಸ್ಯರಿರುವ ಲೋಕಸಭೆಯಲ್ಲಿ ಜನಸಂಖ್ಯೆ ಆಧಾರದ ಮೇಲೆ ಚುನಾಯಿತರಾದ 138 ಮಂದಿ ಚೆಕ್ ಮತ್ತು 62 ಮಂದಿ ಸ್ಲೊವಾಕ್ ಪ್ರತಿನಿಧಿಗಳು ಇದ್ದಾರೆ. 150 ಸದಸ್ಯರುಳ್ಳ ರಾಷ್ಟ್ರಗಳ ಸಭೆಯಲ್ಲಿ ಎರಡು ರಾಷ್ಟ್ರಗಳಿಗೂ ಸಮನಾದ ಪ್ರಾನಿಧ್ಯವುಂಟು. ತಲಾ 75 ಚೆಕ್ ಮತ್ತು ಸ್ಲೊವಾಕ್ ಪ್ರತಿನಿಧಿಗಳು ಅದರಲ್ಲಿರುತ್ತಾರೆ.

ಚೆಕೊಸ್ಲೊವಾಕಿಯದ ಕಾರ್ಯಾಂಗದಲ್ಲಿ ಅಧ್ಯಕ್ಷರೂ ಮಂತ್ರಿಮಂಡಲವೂ ಇವೆ. ಅಧ್ಯಕ್ಷರು ಐದು ವರ್ಷಗಳಿಗೊಮ್ಮೆ ಲೋಕಸಭೆಯಿಂದ ಚುನಾಯಿತರಾಗುತ್ತಾರೆ. ಮಂತ್ರಿಮಂಡಲ ಅಧ್ಯಕ್ಷರಿಂದ ನೇಮಕಗೊಳ್ಳುತ್ತದೆ. ಮಂತ್ರಿಮಂಡಲದಲ್ಲಿ ಪ್ರಧಾನಿ, ಉಪಪ್ರಧಾನಿಗಳು, ಮಂತ್ರಿಗಳು ಮತ್ತು ಕಾರ್ಯದರ್ಶಿಗಳಿರುತ್ತಾರೆ. 7 ಸಚಿವ ಶಾಖೆಗಳು, 7 ಒಕ್ಕೂಟ ಸಮಿತಿಗಳು ಮತ್ತು ಇತರ ಸಂಸ್ಥೆಗಳಿವೆ.

ಚೆಕ್ ಮತ್ತು ಸ್ಲೊವಾಕಿಯ ರಾಷ್ಟ್ರೀಯ ಗಣರಾಜ್ಯಗಳ ಮಟ್ಟದಲ್ಲಿ ಬೇರೆ ಬೇರೆ ರಾಷ್ಟ್ರೀಯ ಪರಿಷತ್‌ಗಳು ಮತ್ತು ಸರ್ಕಾರಗಳು ಉಂಟು. ಪ್ರತಿ ರಾಷ್ಟ್ರೀಯ ಪರಿಷತ್ತನ್ನೂ 5 ವರ್ಷಗಳಿಗೊಮ್ಮೆ ಚುನಾಯಿಸುತ್ತಾರೆ. ಚೆಕ್ ರಾಷ್ಟ್ರಿಯ ಪರಿಷತ್ತಿನಲ್ಲಿ 200 ಸದಸ್ಯರೂ

ಸ್ಲೊವಾಕಿಯ ಪರಿಷತ್ತಿನಲ್ಲಿ 150 ಸದಸ್ಯರೂ ಇದ್ದಾರೆ. ರಾಷ್ಟ್ರೀಯ ಮಂತ್ರಿಮಂಡಲಗಳಲ್ಲೂ ಪ್ರಧಾನಿ, ಉಪಪ್ರಾಧಾನಿ ಮತ್ತು ಮಂತ್ರಿಗಳ ಸ್ಥಾನಗಳುಂಟು. ವಿದೇಶಾಂಗ ಮತ್ತು ರಕ್ಷಣಾ ಇಲಾಖೆಗಳನ್ನು ಬಿಟ್ಟು ಮಿಕ್ಕೆಲ್ಲ ಇಲಾಖೆಗಳೂ ರಾಷ್ಟ್ರೀಯ ಗಣರಾಜ್ಯಗಳ ಮಟ್ಟದಲ್ಲೂ ಇವೆ.

ಪ್ರಾದೇಶಿಕ, ಜಿಲ್ಲಾ ಮತ್ತು ಸ್ಥಳೀಯ ಮಟ್ಟಗಳಲ್ಲಿ ಆಡಳಿತ ಪ್ರಜಾಸತ್ತಾತ್ಮಕವಾಗಲು ರಾಷ್ಟ್ರೀಯ ಸಮಿತಿಗಳನ್ನು ರಚಿಸಲಾಗಿದೆ. ನಿಯತಕಾಲಿಕವಾಗಿ ಚುನಾಯಿಸಲ್ಪಡುವ ಈ ಸಮಿತಿಗಳು ಸ್ಥಳೀಯ ಕಾಲರ್ಮಿಕ ಜನರ ಮತ್ತು ಸಂಸ್ಥೆಗಳ ಸಹಕಾರದೊಂದಿಗೆ ಕೆಲಸ ಮಾಡುತ್ತವೆ. ತನಗೆ ಸಹಾಯ ಮಾಡಲು ಪ್ರತಿ ಸಮಿತಿಯೂ ವಿವಿಧ ಆಯೋಗಗಳನ್ನು ಚುನಾಯಿಸಿ ಅವಕ್ಕೆ ಕಾರ್ಯವಹಿಸುತ್ತದ. ಈ ಸಮಿತಿಗಳು ಮತ್ತು ಆಯೋಗಗಳು ಸ್ಥಳೀಯ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ, ಯೋಜನೆ, ಕಾನೂನು ನಿರ್ವಹಣೆ ಮತ್ತು ಪಾಲನೆ, ಸಮಾಜವಾದಿ ವ್ಯವಸ್ಥೆಯ ರಚನೆ ಮತ್ತು ಪಾಲನೆಯ ಕಾರ್ಯಗಳಲ್ಲಿ ಪಾಲುಗೊಳ್ಳುತ್ತವೆ.

ಚೆಕೊಸ್ಲೊವಾಕಿಯದ ನ್ಯಾಯವ್ಯವಸ್ಥೆ ಚೆಕೊಸ್ಲೊವಾಕಿಯ ಸಮಾಜವಾದಿ ಗಣರಾಜ್ಯದ ಶ್ರೇಷ್ಠ ನ್ಯಾಯಾಲಯ, 2 ಪ್ರಾದೇಶಿಕ ನ್ಯಾಯಾಲಯ ಮತ್ತು 3 ಜಿಲ್ಲಾ ನ್ಯಾಯಾಲಯಗಳಿಂದ ಕೂಡಿದ್ದು. ನ್ಯಾಯಾಧೀಶರು ಚುನಾಯಿತರು. ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರು ಲೋಕಸಭೆಯಿಂದಲೂ ಇತರ ನ್ಯಾಯಾಲಯಗಳ ನ್ಯಾಯಾಧೀಶರು ಆಯಾ ರಾಷ್ಟ್ರೀಯ ಪರಿಷತ್ ಮತ್ತು ಸಮಿತಿಗಳಿಂದಲೂ ಚುನಾಯಿತರಾಗುತ್ತಾರೆ. ತಜ್ಞರೇ ಅಲ್ಲದೆ ಸಾಮಾನ್ಯರೂ ಚುನಾಯಿತರಾಗಬಹುದು. ನ್ಯಾಯಾಂಗದ ಮೇಲ್ವಿಚಾರಣೆ ನಡೆಸಲು ಲರಆಷ್ಟ್ರಪತಿಯಿಂದ ನೇಮಿಸಲ್ಪಟ್ಟ ಮತ್ತು ಲೋಕಸಭೆಗೆ ಉತ್ತರಿಸಬೇಕಾದ ಪ್ರಾಕ್ಯುರೇಟರ್ ಜನರಲ್ ಎಂಬ ಉನ್ನತ ನ್ಯಾಯಾಧಿಕಾರಿ ಇರುತ್ತಾನೆ.

18 ವರ್ಷ ತುಂಬಿದ ಎಲ್ಲ ಪೌರರಿಗೂ ಮತನೀಡುವ ಹಕ್ಕು 21 ವರ್ಷ ತುಂಬಿರದವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕೂ ಉಂಟು. ತನ್ನ ಚುನಾವಣಾ ಕ್ಷೇತ್ರದೊಡನೆ ಸತತ ಸಂಪರ್ಕವಿಟ್ಟುಕೊಂಡು ಸೇವೆ ಸಲ್ಲಿಸಬೇಕಾದ್ದು ಪ್ರತಿಯೊಬ್ಬ ಪ್ರತಿನಿಧಿಯ ಕರ್ತವ್ಯ. ಹಾಗೆ ಮಾಡದಿದ್ದಲ್ಲಿ ಕ್ಷೇತ್ರದ ಮತದಾರರಿಗೆ ಪ್ರತಿನಿಧಿಯನ್ನು ಹಿಂದಕ್ಕೆ ಕರೆಯುವ ಅಧಿಕಾರವಿದೆ. 1968ರಿಂದೀಚೆಗೆ ಚುನಾವಣಾ ವ್ಯವಸ್ಥೆಯಲ್ಲಿ ಕೊಂಚ ಸುಧಾರಣೆಯಾಗಿದೆ. ಕ್ಷೇತ್ರಗಳನ್ನು ದೊಡ್ಡವನ್ನಾಗಿ ಮಾಡಿದೆ. ಪ್ರತಿ ಕ್ಷೇತ್ರದಿಂದಲೂ 4ರಿಂದ 8ರ ವರೆಗೆ ಪ್ರತಿನಿಧಿಗಳನ್ನು ಚುನಾಯಿಸಲಾಗುತ್ತದೆ. ಚುನಾವಣೆಗಳಲ್ಲಿ ಪ್ರತಿ ಸ್ಥಾನಕ್ಕೂ ಒಬ್ಬನಿಗಿಂತ ಹೆಚ್ಚು ಸ್ಪರ್ಧಿಗಳು ಇರುವುದು ಸಾಧ್ಯ. ಆದರೆ ಎಲ್ಲ ಸ್ಪರ್ಧಿಗಳೂ ಕಮ್ಯೂನಿಸ್ಟರ ಹತೋಟಿ ಮತ್ತು ನೇತೃತ್ವದಲ್ಲಿರುವ ರಾಷ್ಟ್ರೀಯ ರಂಗದ ಅಭ್ಯರ್ಥಿಗಳೇ ಆಗಿರಬೇಕು. ಅಭ್ಯರ್ಥಿಗಳಲ್ಲಿ ಅತಿ ಹೆಚ್ಚು ಮತ ಪಡೆದವರನ್ನು ಪ್ರತಿನಿಧಿಗಳಾಗಿಯೂ ಅವರಿಗಿಂತ ಕಡಿಮೆ ಮತ ಪಡೆದ, ಆದರೆ ನೀಡಲಾದ ಒಟ್ಟು ಮತಗಳಲ್ಲಿ 50ಕ್ಕಿಂತ ಹೆಚ್ಚಾಗಿ ಮತ ಪಡೆದ, ಇತರ ಅಭ್ಯರ್ಥಿಗಳನ್ನು ಬದಲಿ ಪ್ರತಿನಿಧಿಗಳಾಗಿಯೂ ಘೋಷಿಸುತ್ತಾರೆ. ಬದಲಿ ಪ್ರತಿನಿಧಿ ಸ್ಥಾನದ ಉದ್ದೇಶ ಎರಡು: 1 ಬದಲಿ ಪ್ರತಿನಿಧಿಗಳಿಗೆ ತರಬೇತು ನೀಡುವುದು ಮತ್ತು 2 ಪ್ರತಿನಿಧಿಗಳ ಸ್ಥಾನ ಖಾಲಿಯಾದಾಗ ಉಪಚುನಾವಣೆಗಳಿಲ್ಲದೆಯೇ ಆ ಸ್ಥಾನಗಳನ್ನು ಭರ್ತಿ ಮಾಡುವುದು. ಚಲಾಯಿಸಲಾದ ಮತಗಳಲ್ಲಿ ಪ್ರತಿನಿಧಿ ಮತ್ತು ಬದಲಿ ಪ್ರತಿನಿಧಿ ಇಬ್ಬರೂ 80ಕ್ಕಿಂತಲೂ ಹೆಚ್ಚು ಪಡೆಯಬೇಕೆಂಬುದು ನಿಯಮ. ಆಡಳಿತವನ್ನು ನಿಯಂತ್ರಿಸಿ ನಿರ್ದೇಶಿಸುವ ಹೊಣೆ ಅಲ್ಲಿಯ ಕಮ್ಯೂನಿಸ್ಟ್ ಪಕ್ಷದ್ದು. ಚೆಕೊಸ್ಲೊವಾಕಿಯ ಸಮಾಜವಾದಿ ಪಕ್ಷ, ಜನತಾಪಕ್ಷ ಮತ್ತಿತರ 5 ಪಕ್ಷಗಳು ಇದ್ದರೂ ಅವೆಲ್ಲ ಕಮ್ಯೂನಿಸ್ಟ್ ಪಕ್ಷದ ಹತೋಟಿ ಮತ್ತು ನೇತೃತ್ವದಲ್ಲಿರುವ ರಾಷ್ಟ್ರೀಯ ರಂಗದ ಚೌಕಟ್ಟಿನಲ್ಲೆ ಕೆಲಸ ಮಾಡುತ್ತವೆ. ಚೆಕೊಸ್ಲೊವಾಕಿಯ ಕಮ್ಯೂನಿಸ್ಟ್ ಪಕ್ಷದ ಮಹಾ ಕಾರ್ಯದರ್ಶಿಯೇ ರಾಷ್ಟ್ರೀಯ ರಂಗದ ಅಧ್ಯಕ್ಷನಾಗಿರುತ್ತಾನೆ.

**ವಾಸ್ತು, ಶಿಲ್ಪ, ಕಲೆ :** ಪ್ರಾಚೀನ ಶಿಲಾಯುಗದ ಆರಂಭ ಕಾಲದಿಂದಲೂ (ಪ್ರ.ಶ. ಪೂ.2000) ಚೆಕೊಸ್ಲೊವಾಕಿಯ ಪ್ರದೇಶದ ಜನ ಕಲೆಯಲ್ಲಿ ಆಸಕ್ತಿವಹಿಸಿದ್ದರೆಂದು ತೋರುತ್ತದೆ. ಮಧ್ಯ ಮೊರೇವಿಯದ ಒಂದು ಪ್ರಾಚೀನ ನಿವೇಶನದಲ್ಲಿ ಸುಮಾರು. 1000 ಬೃಹದ್ಗಜಗಳ ಅಸ್ಥಿಪಂಜರಗಳ ಜೊತೆಗೆ ಮೂಳೆಯಲ್ಲಿ ಕೊರೆಯಲಾದ, ಅತಿ ಸಣ್ಣದಾದ, ಆರಂಭಾವಸ್ಥೆಗೆ ಸೇರಿದುವೆನ್ನಬಹುದಾದ, ಪ್ರತಿಕೃತಿಗಳು ದೊರೆತಿವೆ. ದಕ್ಷಿಣ ಮೊರೇವಿಯದಲಲ್ಲಿ ಲಮುರು ಆಯಾಮಗಳುಳ್ಳ, ಜೇಡಿಮಣ್ಣಿನಲ್ಲಿ ಮಾಡಲಾದ ಸ್ತ್ರೀಯರ ಹಾಗೂ ಪ್ರಾಣಿಗಳ ವಿಗ್ರಹಗಳು ಲಭಿಸಿವೆ. ಇವನ್ನು ಗಮನಿಸಿದಾಗ, ಇದೇ ಕಾಲದ ಪಶ್ಚಿಮ ಭಾಗದ ಸಹಜರೂಪದ ಶೈಲಿಗೂ ಪೂರ್ವಭಾಗದ ರೇಖಾಶೈಲಿಗೂ ನಡುವಣ ಪ್ರತ್ಯೇಕವಾದ ಶೈಲಿಯೊಂದುಇಲ್ಲಿ ರೂಪುಗೊಂಡಂತೆ ತೋರುತ್ತದೆ.

ನವಶಿಲಾಯುಗದಲ್ಲಿ ಯುರೋಪಿನ ಇತರ ಕಡೆಗಳಲ್ಲಿದ್ದಂತೆ ಇಲ್ಲೂ ಒಂದು ಸಾಂಸ್ಕೃತಿಕ ಬದಲಾವಣೆ ಗೋಚರವಾಗುತ್ತದೆ. ಕಿರಿದಾದ, ಆದರೆ ಅತ್ಯಂತ ಉದ್ದವಾದ ಆಯಾಕಾರದ ಮನೆಗಳು ಬಂದುವು. ಮನೆಯ ಕಿರಿದಾದ ಪ್ರದೇಶವನ್ನು ಸಮಾನಾಂತರ ಕಂಬ ಸಾಲುಗಳಿಂದ ಐದು ಭಾಗಗಳಾಗಿ ವಿಂಗಡಿಸಲಾಗುತ್ತಿತ್ತು. ಮೂರು ಕಂಬಗಳು ಮಾಳಿಗೆಗೂ ಇನ್ನೆರಡು ಕಂಬಗಳು ಮಣ್ಣಿನಿಂದ ಮೆತ್ತಲಾದ, ಮರದ ಟೊಂಗೆಗಳಿಂದ ಮಾಡಲಾದ, ಗೋಡೆಗಳಿಗೂ ಆಧಾರವಾಗಿದ್ದುವು. ಆನಂತರದ ಯುಗದಲ್ಲಿ ಈ ಮನೆಗಳು ಚಿಕ್ಕವಾಗಿರುತ್ತಿದ್ದುವು. ಗುಡ್ಡಗಲ ಮೇಲೆ ಸಣ್ಣಸಣ್ಣ ಮನೆಗಳ ಗುಂಪುಗಳಾದುವು. ಇವು ಕೋಟೆಯಿಂದಾವೃತವಾದ ಗ್ರಾಮಗಳಾದುವು.

ಪ್ರಶ.ಪೂ.8–7ನೆಯ ಶತಮಾನಗಳಲ್ಲಿ ಇಲ್ಲಿಯ ಜನ ಕಬ್ಬಿಣದ ಆಯುಧಗಳನ್ನು ಉಪಯೋಗಿಸತೊಡಗಿದರು. ಯೂರೋಪಿನ ಹಾಲ್‍ಸ್ಟಾಟ್ ಸಂಸ್ಕೃತಿಯ ಪ್ರಭಾವ ವಿಸ್ತರಿಸಿತು. ಮಡಕೆಗಳ ಮೇಲೆ ವರ್ಣರಂಜಿತವಾದ ತ್ರಿಕೋನಾಕಾರದ, ವಜ್ರಾಕೃತಿಯ ಚಿತ್ರಗಳು ಕಂಡುಬಂದುವು. ಈ ಕಾಲದ ಶ್ರೀಮಂತ ವರ್ಗದವರು ಹೆಣಗಳನ್ನು ದೊಡ್ಡ ಗೋರಿಗಳಲ್ಲಿ ಹುಗಿಯುತ್ತಿದ್ದರು. ಗೋರಿಗಳ ಮಧ್ಯದ ಕೊಠಡಿ ಮರದಿಂದ ಮಾಡಿದ್ದು. ಆದರೆ ಇಂಥ ಗೋರಿಗಳು ವಿರಳ. ಸಾಮಾನ್ಯ ಜನರು ಮಡಕೆಗಳನ್ನೇ ಉಪಯೋಗಿಸುತ್ತಿದ್ದರು.

**ಟೆಲ್ಕ್ ಪಟ್ಟಣದ ಮಧ್ಯಭಾಗದಲ್ಲಿರುವ ಒಂದು ಹಳೆಯ ಕಟ್ಟಡ. ಪುರಾತನ ಕಟ್ಟಡಗಳ ರಕ್ಷಣೆಗೆ ಚೆಕೊಸ್ಲೊವಾಕಿಯದಲ್ಲಿ ಹೆಚ್ಚು ಗಮನವೀಯಲಾಗುತ್ತಿದೆ**

ಪ್ರಶ.ಪೂ. 3ನೆಯ ಶತಮಾನದ ವೇಳೆಗೆ ಸೆಲ್ಟ್ ಜನಾಂಗ ಈ ಪ್ರದೇಶವನ್ನು ಆಕ್ರಮಿಸಿತು. ಕೋಟೆಗಳಿಂದಾವೃತವಾದ ದೊಡ್ಡ ನಗರಗೂ ತಲೆ ಎತ್ತಿದುವು. ಜನರಿಗೆ ತೂಕ ಮತ್ತು ಅಳತೆಗಳ ಪರಿಚಯವಿತ್ತು. ಚಿನ್ನದ, ಬೆಳ್ಳಿಯ ನಾಣ್ಯಗಳ ಉಪಯೋಗ ತಿಳಿದಿತ್ತು. ಚಿನ್ನದ ನಾಣ್ಯಗಳು ಗ್ರೀಕ್ ನಾಣ್ಯಗಳಿಂದ ಪ್ರಭಾವಿತಗೊಂಡಿದ್ದರೆ, ಬೆಳ್ಳಿಯ ನಾಣ್ಯಗಳು ರೋಮಿನ ನಾಣ್ಯಗಳಿಂದ ಪ್ರಭಾವಿತವಾಗಿದ್ದುವು. ಅವುಗಳ ಮೇಲೆ ಸಮಾಜದ ಮುಖಂಡರ ನಾಯಕರ ಹೆಸರುಗಳು ಕೆತ್ತಲ್ಪಟ್ಟಿದ್ದುವು. ಆ ಕಾಲಕ್ಕೆ ಸೇರಿದ ಮನುಷ್ಯರ, ಪ್ರಾಣಿಗಳ, ಮುಖ್ಯವಾಗಿ ಕಾಡು ಹಂದಿಯ ವಿಗ್ರಹಗಳು ಹೇರಳವಾಗಿ ದೊರೆತಿವೆ.

ಕ್ರಿಸ್ತಶಕಾರಂಭದಲ್ಲಿ ಈ ಪ್ರದೇಶ ಸಂಪೂರ್ಣವಾಗಿ ಜರ್ಮನರ ಸ್ವಾಧೀನಕ್ಕೆ ಬಂತಾದರೂ ಅನಂತರ ರೋಂ ಚಕ್ರವರ್ತಿ ಮಾರ್ಕಸ್ ಆರೀಲಿಯಸ್ ಇದನ್ನು ವಶಪಡಿಸಿ ಕೊಂಡ. ಇವನ ಆನಂತರ ಬಂದ ಅರಸರು ರಅಜ್ಯವನ್ನು ಡ್ಯಾನ್ಯೂಬ್ ನದಿಯಿಂದಾಚೆಗೂ ವಿಸ್ತರಿಸುವ ಯತ್ನಗಳನ್ನು ಕೈಬಿಟ್ಟರಾದರೂ, ಜರ್ಮನ್ ಮತ್ತು ರೋಮನ್ ಸಂಸ್ಕೃತಿಗಳ ಪ್ರಭಾವ ಈ ದೇಶದಲ್ಲಿ ಈ ವೇಳೆಗೆ ಉಂಟಾಗಿತ್ತು. ರೋಮ್ ಸಾಮ್ರಾಜ್ಯದಿಂದ ಬಂದ ಅನೇಕ ಕಂಚು ಕಂಭಗಳು ಮಧ್ಯ ಬೊಹೀಮಿಯದಲ್ಲಿ ದೊರೆತಿವೆ. ಅಲ್ಲದೆ ಮಡಕೆಗಳೂ ನಾಣ್ಯಗಳೂ ಲಭಿಸಿವೆ. ಇವೂ ರೋಮನ್ ಚಕ್ರಾಧಿಪತ್ಯದಿಂದ ಆಮದು ಮಾಡಿಕೊಂಡ ವಸ್ತುಗಳು.

9ನೆಯ ಶತಮಾನದಲ್ಲಿ ಬೊಹೀಮಿಯ ಅರಸ ಕ್ರೈಸ್ತಧರ್ಮವನ್ನವಲಂಬಿಸಿದಾಗ ಈ ಪ್ರದೇಶ ಲ್ಯಾಟಿನ್ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಯಿತು. ಮೊದಲಬಾರಿಗೆ ಮತೀಯವಾದ ಕಲ್ಲಿನ ಕಟ್ಟಡಗಳು (ಉದಾ: ಪ್ರಾಗ್ ನಗರದ ಬಸಲಿಕನ್ ಚರ್ಚ್) ಕಟ್ಟಲ್ಪಟ್ಟುವು. ಶುಲುಬೆಯಾಕಾರದಲ್ಲಿ, ಉದ್ದವಾದ, ಆದರೆ ಅಡ್ಡಭಾಗಗಳಿಲ್ಲದ ತೆರೆದ ಕ್ರೈಸ್ತ ದೇವಾಲಯಗಳೂ (ಬಸಿಲಿಕ) 11ನೆಯ ಶತಮಾನದಲ್ಲಿ ಬಂದುವು. ಅನಂತರದ ಶತಮಾನದಲ್ಲಿ ಪ್ರಾಗ್ ನಗರದಲಿ ಕೋಟೆ, ಒಳಗಡೆ ಚದರಕ್ಕಲ್ಲಿನಿಂದ ಕಟ್ಟಿದ ಕಮಾನು ಚಾವಣಿಯ ಸಭಾಂಗಣವನ್ನೊಳಗೊಂಡ ಅರಮನೆ, ದೊಡ್ಡ ಕಮಾನಿನ ಸೇತುವೆ, ಮತ್ತು ಇತರ ಬೇರೆಬೇರೆ ಕಟ್ಟಡಗಳು ನಿರ್ಮಾಣವಾದುವು.

ಕ್ರಮೇಣ ಗಾತಿಕ್ ಶೈಲಿಯ ಕ್ರೈಸ್ತ ಮಂದಿರಗಳೂ ಇತರ ಲೌಕಿಕ ಕಟ್ಟಡಗಳೂ ಅಸ್ತಿತ್ವಕ್ಕೆ ಬಂದುವು. ಪ್ರಾಗ್‍ನ ಯೆಹೂದ್ಯರ ಆರಾಧನ ಮಂದಿರದ್ದು ಸ್ವಚ್ಛವಾದ ಗಾತಿಕ್ ಶೈಲಿ. ಆದರೆ ಈ ಶೈಲಿಯೊಡನೆ ಇತರ ಸ್ಥಳೀಯ ಶೈಲಿಗಳೂ ಬೆರೆತ ಕಟ್ಟಡಗಳುಂಟು. ಇಕ್ಕೆಲದ ಹಜಾರಗಳೂ ಸಭಾಂಗಣವೂ ಸಮಾನ ಎತ್ತರವಾಗಿರುವುದು ಇವುಗಳ ಲಕ್ಷಣ. ಪಿಲ್ಸೆನ್‍ದ ಬಾರ್ತೊಲೋಮ್ಯೊ ಚರ್ಚ್ ಕಟ್ಟಡವನ್ನು ಇಲ್ಲಿ ಉದಾಹರಿಸಬಹುದು. ಕ್ರಮೇಣ

ಗಾತಿಕ್ ಶೈಲಿಯೊಡನೆ ಬೊಹೀಮಿಯ ಶೈಲಿ ಬೆರೆಯಿತು. ನಾಲ್ಕನೆಯ ಚಾರ್ಲ್ಸನ ರಾಜ್ಯಭಾರದ ಕಾಲದಲ್ಲಿ ಈ ಮಿಶ್ರ ಶೈಲಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಮುಖಭಾಗದ ಎರಡು ಗೋಪುರಗಳಿಲ್ಲದಿರುವುದು, ಒಳಗಡೆಯ ಕಮಾನು ಚಾವಣಿಗಳು ಅಲಂಕಾರರಹಿತವಾದ ಸಾಮಾನ್ಯ ಬೋದಿಗೆಗಳನ್ನು ಆಧರರಿಸಿರುವುದು ಇದರ ವೈಶಿಷ್ಟ್ಯ. ಕಮಾನುಗಳ ಮಧ್ಯದ ಆಧಾರಕಂಬಗಳ ಗೊಂಚಲು ಮಾಯವಾಯಿತು. ಇಕ್ಕೆಲದಲ್ಲೂ ಹಜಾರಗಳುಳ್ಳ ಮಂದಿರಗಳು ಕಟ್ಟಲ್ಪಟ್ಟವು.

ಉತ್ತರ ಬೊಹೀಮಿಯದ ಜೆಸ್ಟಡ್ ಪರ್ವತದ ಮೇಲಿರುವ ಟೆಲಿವಿಷನ್ ಗೋಪುರ

ಪೇಟರ್ ಪಾರ್ಲರ್ 14ನೆಯ ಶತಮಾನದ ಖ್ಯಾತ ಶಿಲ್ಪಿ. ನೆಲದಿಂದ ಅವಿಚ್ಛಿನ್ನವಾಗಿ ಮೇಲೇರುವ ನಕ್ಷತ್ರಾಕಾರದ ಗಾಯಕವೃದಸ್ಥಳದ ಕಮಾನುಚಾವಣಿ ಈತ ರೂಪಿಸಿದ ಶೈಲಿಗಳಲ್ಲೊಂದು. ಇದು ಚೆಕ್ ಶೈಲಿ ಎನಿಡಿಕೊಂಡಿತು. ಇಂಥ ಚಾವಣಿಗಳು ಅನೇಕ ಕಟ್ಟಡಗಳಲ್ಲಿ ಕಾಣಿಸಿಕೊಂಡುವು. ಕ್ರಮೇಣ ಇವನ್ನು ಇತರ ನಗರದ ಒಂದು ಇಡೀ ಭಾಗ ಪಾರ್ಲರನ್ ಈ ಶೈಲಿಯಿಂದ ಪರಿಶೋಭಿತವಾಯಿತು. ಅರಸ 4ನೆಯ ಚಾರ್ಲ್ಸ್ ಇದಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದ.

ಸುಮಾರು 12ನೆಯ ಶತಮಾನದವರೆಗೂ ಮೂರ್ತಿಶಿಲ್ಪ ಕೇವಲ ಅಲಂಕಾರಿಕ ಸ್ವರೂಪದ್ದಾಗಿತ್ತು. ಬೊಹೀಮಿಯ ನಾಣ್ಯಗಳಲ್ಲಿ ಕಾಣಿಸಿಕೊಂಡ ಮೂರ್ತಿಗಳೇ ಈ ಕಲೆಯ ಆರಭವೆನ್ನಬಹುದು. 13ನೆಯ ಶತಮಾನದ ಮೂರ್ತಿಶಿಲ್ಪ ರೋಮನೆಸ್ಕ್ ಶೈಲಿಗೆ ಹೊಂದಿಕೊಂಡಿತ್ತು. ಆ ಶತಮಾನದ ಉತ್ತರಾರ್ಧದಲ್ಲಿ ಮೂರ್ತಿಗಳ ವಸ್ತ್ರಾಲಂಕರಣದಲ್ಲಿ ಹೆಚ್ಚಿನ ಅಭಿರುಚಿ ಕಂಡುಬಂತು. ಮುಖದಲ್ಲಿ ಹೆಚ್ಚು ಸೌಮ್ಯಭಾವ ಕಾಣುವಂತೆ ಮೂರ್ತಿಗಳನ್ನು ಕಡೆಯುವ ಸಂಪ್ರದಾಯ ಆರಂಭವಾಯಿತು. 14ನೆಯ ಶತಮಾನದಲ್ಲಿ, ನಾಲ್ಕನೆಯ ಚಾರ್ಲ್ಸನ ಕಾಲದಲ್ಲಿ ಮೂರ್ತಿಶಿಲ್ಪ ಪರಿಪೂರ್ಣತೆ ಪಡೆಯಿತು. ಬೊಹೀಮಿಯದ ಎಲ್ಲ ಕಡೆಯಲ್ಲೂ ಮೂರ್ತಿಗಳು ಕಡೆಯಲ್ಪಟ್ಟುವು.

ವರ್ಣಕಲೆಯ ಆರಂಭವನ್ನು ಹನ್ನೊಂದನೆಯ ಶತಮಾನದ ಆರಂಭದಲ್ಲಿ ಗುರುತಿಸ ಬಹುದು. ಪ್ರಾಗ್ ವಸ್ತುಸಂಗ್ರಹಾಲಯದಲ್ಲಿ ಆ ಕಾಲದ ಅರಸರ ವರ್ಣಚಿತ್ರಗಳನ್ನು ಕಾಣಬಹುದು. ಚಾರ್ಲ್ಸನ ಕಾಲದಲ್ಲಿ ಇಟಲಿಯ ಕಲೆಗಾರರ ಶೈಲಿಯ ಪ್ರಭಾವ ಇಲ್ಲಿಯ ಚಿತ್ರಗಳ ಮುಖಭಂಗಿಗಳಲ್ಲಿ ಕಂಡುಬಂತು. ಆ ಕಾಲದ ಶ್ರೇಷ್ಠ ಚಿತ್ರಕಾರ ತಿಯೊಡೊರಿಕ್. ಆಗ ಅನೇಕ ಗ್ರಂಥಗಳ ಹಸ್ತಪ್ರತಿಗಳಲ್ಲೂ ವರ್ಣಚಿತ್ರಗಳನ್ನು ಮೂಡಿಸುವ ಸಂಪ್ರದಾಯ ಕೂಡ ಬೆಳೆಯಿತು. ಭಿತ್ತಿಚಿತ್ರಗಳು ಮಾತ್ರ ಅಷ್ಟೇನು ಸುಬದ್ಧವಾಗಿರಲಿಲ್ಲ. ಪ್ರಾಗ್‌ನ ಎಮೌಸ್ ಮೊನಾಸ್ಟರಿಯಲ್ಲಿರುವ ಭಿತ್ತಿ ಚಿತ್ರಗಳು ಈ ಮಾತಿಗೆ ಸಾಕ್ಷಿ. 1500ರ ವೇಳೆಗೆ ಚಾವಣಿಯ ಒಳಮೈಯ ಜಲವರ್ಣ ಚಿತ್ರಗಳಲ್ಲಿ ಸ್ವತಂತ್ರ ಸ್ಥಳೀಯ ಶೈಲಿಯನ್ನು ಅಳವಡಿಸಿಕೊಳ್ಳಲಾಯಿತು.

ಚೆಕೊಸ್ಲೊವಾಕಿಯದಲ್ಲಿ ಕುಶಲವೃತ್ತಿಗೆ ಹೆಚ್ಚಿನ ಪ್ರೋತ್ಸಾಹವಿದೆ. ಬೊಹೀಮಿಯದಲ್ಲಿ ಗಾಜಿನ ಕುಶಲಕರ್ಮಿಗಳಿದ್ದಾರೆ

18ನೆಯ ಶತಮಾನದಲ್ಲಿ ಜೀನ್ ಮ್ಯಾಥೆ ಮತ್ತು ಇತರರು ವಾಸ್ತು ಶಿಲ್ಪದಲ್ಲಿ ಅಸಮರೂಪಿ ಶೈಲಿಯನ್ನು ಬೆಳೆಸಿದರು. ಒಂದು ವಿಧದಲ್ಲಿ ಇದು ಚೆಕೊಸ್ಲೊವಾಕಿಯದ ವೈಶಿಷ್ಟ್ಯವೆಂದೇ ಹೇಳಬೇಕು. ಇಟಲಿಯ ಶಿಲ್ಪಿಗಳಿಂದ ಪ್ರಭಾವಿತವಾಗಿದ್ದ ಬೊಹೀಮಿಯ ಶಿಲ್ಪಶೈಲಿ ಇದೇ ಶತಮಾನದಲ್ಲಿ ಕಾಣಿಸಿಕೊಂಡಿತು. ಬ್ರಾನ್ ಮತ್ತು ಬ್ರೊಕಾಫ್ ಅಂದಿನ ಬೊಹೀಮಿಯ ಶಿಲ್ಪಿಗಳಲ್ಲಿ ಪ್ರಮುಖರು. ಇವರ ಸಾಧನೆಗಳಿಂದ ಈ ದೇಶವೂ ಸಮಕಾಲೀನ ಐರೋಪ್ಯ ಕಲಾಮಟ್ಟ ಪಡೆಯಿತು. ವರ್ಣ ಚಿತ್ರಗಳಲ್ಲಿ ಪೇಟರ್ ಬ್ರಾಂಡ್ ಇದೇ ಕಾಲದಲ್ಲಿ ಖ್ಯಾತಿ ಪಡೆದ. ಇವನು ಅಸಮರೂಪಿ ಶೈಲಿಯ ಚಿತ್ರಗಳಲ್ಲೂ ನೈಸರ್ಗಿಕತೆ ಎದ್ದು ಕಾಣುವಂತಾದ್ದು ಇವನ ಕಲಾ ಹಿರಿಮೆಗೆ ಸಾಕ್ಷಿ. (ಜಿ.ಬಿ.ಆರ್.)

**ಶಿಕ್ಷಣ :** 10ನೆಯ ಶತಮಾನದ ಪ್ರಾರಂಭದಿಂದಲೂ ಚೆಕೊಸ್ಲೊವಾಕಿಯದಲ್ಲಿ ಚರ್ಚುಗಳೂ ಮಠಗಳೂ ಸಾಂಪ್ರದಾಯಿಕ ಶಿಕ್ಷಣವೀಯಲು ಆರಂಭಿಸಿದ್ದುವು. 13ನೆಯ ಶತಮಾನದ ವೇಳೆಗೆ ಪಟ್ಟಣಗಳಲ್ಲಿ ಪ್ರತ್ಯೇಕ ಪಾಠಶಾಲೆಗಲು ಅಸ್ತಿತ್ವಕ್ಕೆ ಬಂದುವು. ಆದರೆ ಅವೆಲ್ಲ ಬಹುಮಟ್ಟಿಗೆ ಶ್ರೀಮಂತರ ಮಕ್ಕಳಿಗಾಗಿ ಮೀಸಲಾಗಿದ್ದಂಥವು. ಧಾರ್ಮಿಕಶಿಕ್ಷಣ ಪಡೆದು ಪಾದ್ರಿಗಳಾಗಲು ಬಯಸುವವರಿಗೆ ಚರ್ಚುಗಳೇ ಶಿಕ್ಷಣಸಂಸ್ಥೆಗಳನ್ನು ನಡೆಸುತ್ತಿದ್ದುದುಂಟು. ದೇಶದಲ್ಲಿ ಸಾರ್ವತ್ರಿಕ ಶಿಕ್ಷಣದ ಭಾವನೆ ರೂಪುಗೊಂಡದ್ದು 17ನೆಯತ ಶತಮಾನದಲ್ಲಿ. ಚೆಕ್ ರಾಜ್ಯ 18ನೆಯ ಶತಮಾನದಿಂದ ಆಸ್ಟ್ರಿಯದ ಕೈಕೆಳಗಿದ್ದುದರಿಂದ ಆಸ್ಟ್ರಿಯದ ಮೂಲ ಶಿಕ್ಷಣಪದ್ಧತಿಯೇ 1774ರಲ್ಲಿ ಚೆಕೊಸ್ಲೊವಾಕಿಯ ರಾಷ್ಟ್ರಕ್ಕೂ ಅನ್ವಯವಾಯಿತು. ಜನತಾಶಾಲೆಗಳು ಅಸ್ತಿತ್ವಕ್ಕೆ ಬಂದು 6–12 ವರ್ಷದ ಮಕ್ಕಳಿಗೆ ಹಾಜರಾತಿ ಕಡ್ಡಾಯವಾಯಿತು. ಅಲ್ಲಿ ಓದುಗಾರಿಕೆ, ಬರೆವಣಿಗೆ, ಲೆಕ್ಕಜಿಇವನ್ನು ಕಲಿಸಲಾಗುತ್ತಿತ್ತು. ಗ್ರಾಮಾಂತರ ಶಾಲೆಗಳಲ್ಲಿ ವ್ಯವಸಾಯದ ಶಿಕ್ಷಣಕ್ಕೆ ಮತ್ತು ನಗರಗಲ ಶಾಲೆಗಳಲ್ಲಿ ಸವಲ್ಪಮಟ್ಟಿನ ಔದ್ಯೋಗಿಕ ಶಿಕ್ಷಣಕ್ಕೆ ಅವಕಾಶವಿತ್ತು. ನಗರದ ಶಾಲೆಗಳಲ್ಲಿ ಲ್ಯಾಟಿನ್, ಭೂವಿವರಣೆ, ಚರಿತ್ರೆ ಮತ್ತು ಅರ್ಥಶಾಸಸ್ತ್ರವು ಬೋಧಿಸಲಾಗುತ್ತಿದ್ದ ವಿಷಯಗಳು. ಅಂದು ರಾಜ್ಯಶಾಸನದಲ್ಲಿ ಕಡ್ಡಾಯ ಶಿಕ್ಷಣವನ್ನು ಅನುಮೋದಿಸಿದ್ದರೂ ಆಚರಣೆಗೆ ಅದನ್ನು ತರುವುದು ಕಷ್ಟವಾಗಿತ್ತು. ಆದರೆ ಪ್ರಚಾರ. ಒತ್ತಾಯ ಆಕರ್ಷಣೆಗಳ ಮೂಲಕ 18ನೆಯ ಶತಮಾನದ ಕೊನೆಯ ವೇಳೆಗೆ ಆ ವಯೋಮಾನದ ಸುಮಾರು 60 ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಲು ಸಾಧ್ಯವಾಯಿತು.

ಅಂದು ಮೊರೇವಿಯದ ಪ್ರಸಿದ್ಧ ಶಿಕ್ಷಣ ತತ್ತ್ವಚಿಂತಕನೆನಿಸಿದ್ದ ಕೊಮೀನಿಯಸ್ (1592–1670) ಎಂಬುವ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆಗಳನ್ನು ತಂದ. ಆತ ಪ್ರತಿಪಾದಿಸಿದ ಶಿಕ್ಷಣಸುಧಾರಣೆಗಳೂ ನೂತನತತ್ತ್ವ ದೃಷ್ಟಿಯೂ ಯೂರೋಪಿನ ಶಿಕ್ಷಣ ಕ್ಷೇತ್ರದ ಮೇಲೆ ಬಹುಮುಖ ಪ್ರಭಾವವನ್ನು ಬೀರಿದುವು. ಕ್ರಮಕ್ರಮವಾಗಿ ಪ್ರಪಂಚದ ಇತರ ದೇಶಗಳಿಗೂ ಈತನ ಪ್ರಭಾವ ಹರಿದು ಶಿಕ್ಷಣ ಕ್ಷೇತ್ರವನ್ನು ಪರಿಣಾಮಗೊಳಿಸಿತು.

1918ರ ಮೂಲುಶಿಕ್ಷಣ ಶಾಸನ, ಅನಂತರ ಅದಕ್ಕೆ ಸೇರಿದ ತಿದ್ದುಪಡಿಗಳು, ಗಣರಾಜ್ಯದ ಸಂಘಟನ ಶಾಸನಇಇವುಗಳನ್ನನುಸರಿಸಿ ಇಲ್ಲಿನ ಶಿಕ್ಷಣದ ಆಡಳಿತ ಪದ್ಧತಿ ರೂಪುಗೊಂಡಿದೆ. ಕೇಂದ್ರ ಸರ್ಕಾರ ಶಾಲಾಕಾಲೇಜುಗಳ ಆಡಳಿತವನ್ನು ನಿಯಂತ್ರಿಸುತ್ತದೆಯಲ್ಲದೆ ಅಗತ್ಯವಾದ ಹಣಕಾಸನ್ನೂ ಒದಗಿಸುತ್ತದೆ. ವೈದ್ಯಶಿಕ್ಷಣ ಸಂಸ್ಥೆಗಳು (ಸೆಕೆಂಡರಿ ಮೆಡಿಕಲ್ ಸ್ಕೂಲ್ಸ್) ಆರೋಗ್ಯ ಸಚಿವಾಲಯದ ನಿರ್ದೇಶನದಲ್ಲೂ ಕೆಲಸ ಮಾಡುತ್ತವೆ. ಶಿಕ್ಷಣಸಂಸ್ಥೆಗಳ ದಿನಚರಿ ಆಡಳಿತ ಮತ್ತು ಹಣಕಾಸಿನ ವಿಷಯ ಇವನ್ನು ಕೇಂದ್ರ ಸರ್ಕಾರ ಜಿಲ್ಲಾ ಮತ್ತು ಪ್ರಾದೇಶಿಕ ಪ್ರಾಧಿಕಾರ ಗಳೊಡನೆ ಹಂಚಿಕೊಂಡಿದೆ. ಸಂಘಟನ ಶಾಸನದ ಪ್ರಕಾರ ಸ್ಲೊವಾಕಿಯಕ್ಕೆ 1966–69ರಿಂದ ಪ್ರತ್ಯೇಕ ಶಿಕ್ಷಣ ಸಚಿವಾಲಯ ಏರ್ಪಟ್ಟು ಅಲ್ಲಿನ ಶಿಕ್ಷಣ ಈ ಸಚಿವಾಲಯುದ ನಿರ್ದೇನಕ್ಕೆ ಒಳಪಟ್ಟಿದೆ. 1869ರಲ್ಲಿ ರಾಜ್ಯಶಾಸನ ವೊಂದರ ಮೂಲಕ ಶಿಕ್ಷಣವನ್ನು ರಾಷ್ಟ್ರದ ಎಲ್ಲ ಮಕ್ಕಳಿಗೂ ಕಡ್ಡಾಯ ಮಾಡಲಾಗಿದ್ದು 1948ರ ತನಕವೂ 8 ವರ್ಷಗಳ ಅವಧಿಯ ಕಡ್ಡಾಯ ಶಿಕ್ಷಣ ಆಚರಣೆಯಲ್ಲಿತ್ತು. 1948ರರ ಶಾಸನದ ಪ್ರಕಾರ ಅದನ್ನು 9 ವರ್ಷಕ್ಕೆ ಹೆಚ್ಚಿಸಿದ್ದರೂ 1953ರಲ್ಲಿ ಮತ್ತೆ 8 ವರ್ಷಕ್ಕೆ ಇಳಿಸಲಾಯಿತು. 1960ರಿಂದ ಈ ಅವಧಿ ಮತ್ತೆ 9 ವರ್ಷಕ್ಕೆ ಹೆಚ್ಚಿದೆ.



ಜಾನ್ ಏಮಸ್ ಕೊಮೀನೀಯಸ್
(ಮೊರೇವಿಯದ ಶಿಕ್ಷಣ ಸುಧಾರಕ)

**ಪ್ರಾಥಮಿಕ ಪೂರ್ವದ ಶಿಕ್ಷಣ :** ಪ್ರಾಥಮಿಕ ಪೂರ್ವದ ಶಿಕ್ಷಣ ಎರಡು ಹಂತಗಳಲ್ಲಿ, ಹಾಗೂ ಎರಡು ವಿಭಿನ್ನ ಸಂಸ್ಥೆಗಳಲ್ಲಿ ವ್ಯವಸ್ಥೆಗೊಂಡಿದೆ. ಮುರು ವರ್ಷ ವಯಸ್ಸಿನವರೆಗಿನ ಮಕ್ಕಳಿಗಾಗಿ ಶಿಶುಪಾಲನ ಗೃಹಗಳೂ (ನರ್ಸರಿ) 3–6 ವರ್ಷದವರೆಗಿನ ಮಕ್ಕಳಿಗಾಗಿ ಕಿಂಡರ್‌ಗಾರ್ಟನ್ ಶಾಲೆಗಳೂ ಏರ್ಪಟ್ಟಿವೆ. ಇವೆರಡು ವಿಧದ ಸಂಸ್ಥೆಗಳಲ್ಲಿ ರಾಷ್ಟ್ರದ ಆ ವಯೋಮಾನದ ಮಕ್ಕಳಲ್ಲಿ ಅರ್ಧದಷ್ಟು ಶಿಕ್ಷಣ ಪಡೆಯುತ್ತಾರೆ. ಈಚೆಗೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಾತೆಯರಿಗೆ ಅನುಕೂಲವಾಗುವಂತೆ ಮಾಡಲು ಹೆಚ್ಚು ಮಕ್ಕಳನ್ನು ಪಾಲನಗೃಹಗಳಿಗೂ ಕಿಂಡರ್‌ಗಾರ್ಟನ್ ಶಾಲೆಗಳಿಗೂ ಸೇರಿಸುವ ಯತ್ನ ಹುರುಪಿನಿಂದ ಸಾಗಿದೆ. ಇದರಿಂದಾಗಿ ಆ ವಯೋಮಾನದ 90%ರಷ್ಟು ಮಕ್ಕಳು ಈಗ ಶಾಲೆಗೆ ಸೇರುವಂತಾಗಿದೆ. ಮೇಲಿನ ಸಂಸ್ಥೆಗಳ ಜೊತೆಗೆ ಶಾಲಾಮಕ್ಕಳ ಕೇಂದ್ರಗಳೆಂಬ ಸಂಸ್ಥೆಗಳೂ ಚೆಕೊಸ್ಲೊವಾಕಿಯದಲ್ಲಿ ಏರ್ಪಟ್ಟಿವೆ. ಅಲ್ಲಿ ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಶಾಲೆಯ ನೇತೃತ್ವದಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. 3–5 ವರ್ಷದ ಮಕ್ಕಳಿಗೆ ಮುಖ್ಯವಾಗಿ ದೈಹಿಕ ಶಿಕ್ಷಣ, ನಿರ್ದಿಷ್ಟವಾಗಿ ಆಲೋಚಿಸುವುದು, ದಿನಚರಿ ಅಭ್ಯಾಸಗಳು, ಸೈನಿಕ ಶಿಕ್ಷಣ, ಗುಣಗ್ರಹಣಇಈ ಅಂಶಗಳನ್ನೊಳಗೊಂಡ ಚಟುವಟಿಕೆಗಳನ್ನು ಪಠ್ಯಕ್ರಮದಲ್ಲಿ ಸೇರಿಸಿದೆ. ಆರನೆಯ ವರ್ಷದವರಿಗೆ ಪ್ರತ್ಯೇಕ ಪಠ್ಯಕ್ರಮವನ್ನು ಗೊತ್ತುಮಾಡಿದ್ದರೂ ಅವರು ಮೇಲಿನ ಅಂಶಗಳನ್ನೂ ಕಲಿಯಬೇಕಾಗುತ್ತದೆ.

**ಪ್ರಾಥಮಿಕ ಶಿಕ್ಷಣ :** ಪ್ರಾರಂಭಿಕ ಶಿಕ್ಷಣದ ಅವಧಿ ಒಂಬತ್ತು ವರ್ಷದ್ದಾಗಿದ್ದು ಎರಡು ಹಂತಗಳಲ್ಲಿ ವ್ಯವಸ್ಥೆಗೊಂಡಿದೆ. ಕಿರಿಯ ಪ್ರಾಥಮಿಕ ಶಾಲೆ ಐದು ವರ್ಷ ಅವಧಿಯ ಶಿಕ್ಷಣವನ್ನೂ ಹಿರಿಯ ಪ್ರಾಥಮಿಕ ಶಾಲೆ ನಾಲ್ಕು ವರ್ಷ ಅವಧಿಯ ಶಿಕ್ಷಣವನ್ನೂ ನೀಡುತ್ತದೆ. ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಒಬ್ಬ ಅಧ್ಯಾಪಕರೇ ಎಲ್ಲ ಪಾಠಗಳನ್ನೂ ಬೋಧಿಸುವರು. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೇರೆ ಬೇರೆ ವಿಷಯಗಳನ್ನು ಆಯಾ ವಿಷಯದಲ್ಲಿ ವಿಶಿಷ್ಟ ಶಿಕ್ಷಣ ಪಡೆದ ಅಧ್ಯಾಪಕರು ಬೋಧಿಸುತ್ತಾರೆ. 9 ವರ್ಷದ ಪ್ರಾಥಮಿಕ ಶಾಲೆಯ ಪ್ರತಿ ತರಗತಿಯಲ್ಲೂ ಚೆಕ್, ಸ್ಲೋವಾಕ್, ಪೋಲಿಷ್ ಅಥವಾ ಹಂಗೇರಿಯನ್ನ ಮಾತೃಭಾಷೆ ಮತ್ತು ಸಾಹಿತ್ಯಗಳ ಅಭ್ಯಾಸವುಂಟು. ಇತರ ವಿಷಯಗಳ ಅಧ್ಯಯನಕ್ಕಿಂತ ಭಾಷೆಯ ಅಧ್ಯಯನಕ್ಕೆ ಹೆಚ್ಚು ಕಾಲವನ್ನು ಗೊತ್ತು ಮಾಡಲಾಗಿದೆ. ಮೊದಲ ನಾಲ್ಕು ವರ್ಷಗಳಲ್ಲಿ ಅಂಕಗಣಿತವನ್ನೂ ಐದನೆಯ ವರ್ಷದಿಂದ ಗಣಿತದ ಇತರ ವಿಭಾಗಗಳನ್ನೂ ಬೋಧಿಸಲಾಗುತ್ತದೆ. ರಷ್ಯನ್ ಭಾಷೆಯನನು ಕೊನೆಯ ನಾಲ್ಕು ತರಗತಿಗಳಲ್ಲೂ ಹೇಳಿಕೊಡಲಾಗುತ್ತದೆ. ಮೊದಲ ಐದು ವರ್ಷಗಳಲ್ಲಿ ಪೌರನೀತಿಯನ್ನೂ ಅನಂತರದ ನಾಲ್ಕು ವರ್ಷಗಳಲ್ಲಿ ಸಮಾಜಪಾಠಗಳನ್ನೂ ಬೋಧಿಸುವ ಏರ್ಪಾಡು ಉಂಟು. ಐದನೆಯ ತರಗತಿಯಲ್ಲಿ ಸಾಮಾನ್ಯ ವಿಜ್ಞಾನವನ್ನೂ ಆರನೆಯ ತರಗತಿಯಿಂದ ರಸಾಯನಶಾಸ್ತ್ರವನ್ನೂ ವಿಜ್ಞಾನದ ಇತರ ಪ್ರಕಾರಗಳನ್ನೂ ಬೋಧಿಸುವರು. ದೈಹಿಕ ಶಿಕ್ಷಣ, ಸಂಗೀತ, ಕೈಕೆಲಸ, ಚಿತ್ರ ಬರೆಯುವುದು ಎಲ್ಲ ತರಗತಿಗಳ ಪಠ್ಯಕ್ರಮದಲ್ಲೂ ಸೇರಿದೆ. ಮನೆಯ ಲೆಕ್ಕಾಚಾರ, ವೃಂದಗಾನ, ಅನ್ಯಭಾಷೆ ಪ್ರಯೋಗಾಲಯದ ಕಾರ್ಯ–ಈ ಮುಂತಾದ ಐಚ್ಛಿಕ ವಿಷಯಗಳ ಬೋಧನೆ ಪ್ರಾರಂಭವಾಗುವುದು ಆರನೆಯ ತರಗತಿಯಿಂದ.

**ಪ್ರೌಢ (ಸೆಕೆಂಡರಿ) ಶಿಕ್ಷಣ :** 9 ವರ್ಷದ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅನಂತರ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣಕ್ಕೆ ಸೇರುವರು. ಜಿಮ್ನಾಷಿಯಂ ಎಂದು ಕರೆಯುವ ವಿಶಿಷ್ಟ ಪ್ರೌಢಶಾಲೆಗಳಲ್ಲಿ ಸಾಂಸ್ಕೃತಿಕ ಶಿಕ್ಷಣಕ್ಕೆ ಪ್ರಾಧಾನ್ಯವಿದೆ. ಅಲ್ಲಿನ ಶಿಕ್ಷಣ ಮುಗಿಸಿದವರು ವಿಶ್ವವಿದ್ಯಾಲಯಕ್ಕೆ ಸೇರಲು ಅರ್ಹತೆ ಪಡೆಯುತ್ತಾರೆ. ಇಂಥ ಪ್ರೌಢಶಾಲೆಗಳಲ್ಲಿ ಸುಮಾರು 15%ರಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇವಲ್ಲದೆ ದೇಶಾದ್ಯಮತ ಇತರ ಬಗೆಯ ಪ್ರೌಢಶಾಲೆಗಳೂ ಉಂಟು. ಅವುಗಳಲ್ಲಿ ವಿಶೇಷ ರೀತಿಯ ತರಬೇತು ನೀಡುವ ಕೇಂದ್ರಗಳು, ಉದ್ಯೋಗಶಾಲೆಗಳು, ಯಂತ್ರಸ್ಥಾಔರ ತಾಂತ್ರಿಕ ಶಲೆಗಳು, ವೃತ್ತಿಪ್ರೌಢಶಾಲೆಗಳು, ಸಂರಕ್ಷಣಾಲಯಗಳು (ಕನ್‌ಸರ್ವೇಟರಿಸ್)ಇ ಮುಖ್ಯವಾದವು. ಇವು ನೀಡುವ ಶಿಕ್ಷಣ ಪ್ರೌಢಶಾಲಾಮಟ್ಟದ್ದು. ಚೆಕೊಸ್ಲೊವಾಕಿಯದ ಪ್ರೌಢಶಿಕ್ಷಣದಲ್ಲಿ ಔದ್ಯೋಗಿಕ ಯಂತ್ರಗಳ ತರಬೇತು ಬಹುಮುಖ್ಯ ಅಂಶವೆನಿಸಿದೆ. ಅಲ್ಲಿ ತಾಂತ್ರಿಕ ಶಿಕ್ಷಣದ ಜೊತೆಗೆ ಉಮೇದುವಾರಿ ಶಿಕ್ಷಣವನ್ನು ದೊರಕಿಸುವರು. ಸಣ್ಣ ಪಾಠಶಾಲೆಗಳಲ್ಲಿ ತಾಂತ್ರಿಕ ತರಬೇತನ್ನು ಮಾತ್ರ ನೀಡಲಾಗುತ್ತದೆ. ದೊಡ್ಡ ಶಾಲೆಗಳಲ್ಲಿ ಇಂಥ ತರಬೇತಿನ ಜೊತೆಗೆ ಸೈದ್ಧಾಂತಿಕ ಜ್ಞಾನದ ತರಗತಿಗಳನ್ನೂ ನಡೆಸುವರು. ಈ ಶಾಲೆಗಳು ಕೆಲವು ಐದು ವರ್ಷಗಳ ಅವಧಿಯ ವೃತ್ತಿಶಿಕ್ಷಣ ನೀಡುತ್ತವೆ. ಮಿಕ್ಕವು 2–4 ವರ್ಷಗಳ ಅವಧಿಯ ಶಿಕ್ಷಣವೀಯುವಂಥವು. ಪ್ರೌಢಶಾಲಾ ಮಟ್ಟದ ವೃತ್ತಿಶಿಕ್ಷಣ ಮುಗಿಸಿ ಕೆಲಸಕ್ಕೆ ಸೇರಿರುವ ವಯಸ್ಕರಿಗೆ ಆ ವೃತ್ತಿಯಲ್ಲಿ 2–3 ವರ್ಷದ ಅವಧಿಯ ಮುಂದುವರಿದ ಉನ್ನತ ಶಿಕ್ಷಣವನ್ನೀಯುವ ಕೇಂದ್ರಗಳೂ ಇವೆ. ಆ ವಯೋಮಾನದ 50%ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವಿಶಿಷ್ಟ ರೀತಿಯ ತರಬೇತು ಕೇಂದ್ರಗಳಲ್ಲಿ ಸೇರಿ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಶಿಕ್ಷಣವನ್ನು ಪಡೆಯುತ್ತಾರೆ. ಸಾಂದ್ರ ರೀತಿಯ ಪ್ರಾಯೋಗಿದ ಶಿಕ್ಷಣವನ್ನೂ ಕೊನೆಯ ವರ್ಷದಲ್ಲಿ ನೀಡಲಾಗುವುದು. ಇಂಥ ವೃತ್ತಿಶಿಕ್ಷಣ ವ್ಯವಸ್ಥೆ ದೇಶದ ವಿವಿಧ ಉದ್ಯೋಗಗಳಿಗೆ ಅಗತ್ಯವಾಗುವ ಕುಶಲಕೆಲಸಗಾರನ್ನೂ ತಾಂತ್ರಿಕ ಜನಬಲವನ್ನೂ ಒದಗಿಸುತ್ತದೆ. ಪ್ರೌಢ ಶಿಕ್ಷಣವನ್ನು ಉದ್ಯೋಗಮುಖಕ್ಕೆ ತಿರುಗಿಸಿ ರಾಷ್ಟ್ರದ ಔದ್ಯೋಗಿಕ ಪ್ರಗತಿಯ ಕಡೆ ಗಮನವೀಯಲಾಗಿದೆ. ಕಾರ್ಮಿಕರ ಪ್ರೌಢಶಾಲೆಗಳು ಯಂತ್ರಸ್ಥಾವರಗಳ ಶಿಕ್ಷಣಕ್ಕಿಂತಲೂ ಉನ್ನತ ಸೈದ್ಧಾಂತಿಕ ಶಿಕ್ಷಣವೀಯುತ್ತವೆ. ಅಲ್ಲಿನ ನಾಲ್ಕು ವರ್ಷದ ಅವಧಿಯ ಶಿಕ್ಷಣದ ಅನಂತರ ಅವರು ವಿಶ್ವವಿದ್ಯಾಲಯದ ವೃತ್ತಿಶಿಕ್ಷಣದ ಪದವಿ ತರಗತಿಗೆ ಸೇರಲು ಅರ್ಹತೆ ಪಡೆಯುತ್ತಾರೆ. ವೃತ್ತಿಶಾಲೆಗಳಲ್ಲಿ ಶಿಕ್ಷಣ 3 ವರ್ಷದ ಅವಧಿಯದು. ಇಲ್ಲಿ ಶಿಕ್ಷಣ ಮುಗಿಸಿದವರಿಗೆ ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಸೇರಲು ಅವಕಾಶವಿಲ್ಲ. ಸಾಮಾನ್ಯವಾಗಿ ಅಲ್ಲಿ ಅಧ್ಯಾಪನ ವೃತ್ತಿ, ಕಾರ್ಖಾನೆ ಕೆಲಸ, ಉಪಚಾರಿಕೆ, ಹಣಕಾಸಿನ ಆಡಳಿತ, ಅರಣ್ಯಶಾಸ್ತ್ರ, ಸಂಗೀತ, ಗ್ರಂಥಾಲಯ ವಿಜ್ಞಾನ, ಕೃಷಿ–ಈ ಉದ್ಯಮಗಳಿಗೆ ಸಂಬಂಧಿಸಿದಂತೆ ತರಬೇತು ನೀಡಲಾಗುತ್ತದೆ. ಸಂರಕ್ಷಣಾಲಯಗಳಲ್ಲಿ ಸಂಗೀತ ಮತ್ತು ನೃತ್ಯಕಲೆಗಳಲ್ಲಿ ಶಿಕ್ಷಣವೀಯ ಲಾಗುತ್ತದೆ. ಸಾಮಾನ್ಯ ಅಥವಾ ಇತರ 2–3 ವರ್ಷಗಳ ಅವಧಿಯ ಶಿಕ್ಷಣವೀಯುವ ಪ್ರೌಢಶಾಲೆಗಳಲ್ಲಿ ವೃತ್ತಿಶಿಕ್ಷಣ ಪಡೆದವರು ವೃತ್ತಿಪ್ರೌಢಶಾಲೆಗಳಲ್ಲಿ ಮತ್ತೆರಡು ವರ್ಷ ಅವಧಿಯ ಶಿಕ್ಷಣ ಪಡೆದು ವಿಶ್ವವಿದ್ಯಾನಿಲಯಕ್ಕೆ ಸೇರಲು ಅರ್ಹತೆ ಪಡೆಯಬಹುದು.

ಪ್ರೌಢಶಾಲೆಗಳ ಪಠ್ಯಕ್ರಮ ಬಹುಮಟ್ಟಿಗೆ ಆಯಾ ಪ್ರದೇಶದ ಔದ್ಯೋಗಿಕ ಅವಶ್ಯಕತೆಯನ್ನು ಪೂರೈಸುವ ರೀತಿಯಲ್ಲಿ ರೂಪುಗೊಂಡಿರುತ್ತದೆ. ಆದರೆ ಜಿಮ್ನಾಷಿಯಂ ಪ್ರೌಢಶಾಲೆಗಳಲ್ಲಿ ಮಾತ್ರ ಲ್ಯಾಟಿನ್, ಗ್ರೀಕ್, ಕಲಾಶಾಸ್ತ್ರ, ವಿಜ್ಞಾನ, ಗಣಿತಶಾಸ್ತ್ರ ಮುಂತಾದ ವಿಷಯಗಳ ಬೋಧನೆಗೆ ಪ್ರಾಧಾನ್ಯವಿರುತ್ತದೆ. ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಕ್ಕೆ ಸಿದ್ಧಪಡಿಸುವುದು ಇಂಥ ಶಾಲೆಗಳ ಪ್ರಮುಖ ಉದ್ದೇಶ.

**ಉನ್ನತ ಶಿಕ್ಷಣ :** ಎರಡನೆಯ ಮಹಾಯುದ್ಧಕ್ಕೆ ಮೊದಲು ಚೆಕೊಸ್ಲೊವಾಕಿಯದಲ್ಲಿ ಉನ್ನತಶಿಕ್ಷಣಕ್ಕಾಗಿ ಕೇವಲ 19 ಶಿಕ್ಷಣ ಸಂಸ್ಥೆಗಳಿದ್ದು ಅಲ್ಲಿ ಒಟ್ಟು 19,000 ವಿದ್ಯಾರ್ಥಿಗಳಿದ್ದರು. ಈಗ 35ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಿವೆ. ಅವುಗಳಲ್ಲಿ ಒಟ್ಟು ಒಂದೂವರೆ ಲಕ್ಷ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. 1348ರಲ್ಲಿ ಆರಂಭವಾದ ಪ್ರಾಗಿನ ಚಾರ್ಲ್ಸ್ ವಿಶ್ವವಿದ್ಯಾಲಯವೇ ಅಲ್ಲಿನ ಪ್ರಾಚೀನತಮ ವಿಶ್ವವಿದ್ಯಾಲಯ. ಆಲಾಮೋಡ್ಸ್ ವಿಶ್ವವಿದ್ಯಾಲಯ 1576ರಲ್ಲಿ ಆರಂಭವಾಯಿತು. 1709ರಲ್ಲಿ ಪ್ರಾಗಿನಲ್ಲಿ ಸ್ಥಾಪನೆಯಾದ ಟೆಕ್ನಾಲಜಿ ಸಂಸ್ಥೆ ಪ್ರಪ್ರಥಮವಾಗಿ ಆರಂಭವಾದ ಯೂರೋಪಿನ ತಾಂತ್ರಿಕ ಶಿಕ್ಷಣ ಸಂಸ್ಥೆ. ಸಾಂಸ್ಕೃತಿಕ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳನ್ನು ಬಿಟ್ಟರೆ ಉನ್ನತ ಶಿಕ್ಷಣಕ್ಕೆ ಬರತಕ್ಕ ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಬರತಕ್ಕವರೇ ಅಧಿಕ. ಕೃಷಿ, ಅರ್ಥಶಾಸ್ತ್ರ, ಲಲಿತಕಲೆ, ಧರ್ಮಇಈ ಕ್ಷೇತ್ರಗಳಲ್ಲಿ ಮಿಕ್ಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವರು.

**ವಿಶಿಷ್ಟ ಶಿಕ್ಷಣ :** ದೀನ ಮತ್ತು ಅನಾಥಮಕ್ಕಳ ಶಿಕ್ಷಣ ರಕ್ಷಣೆಗಳಿಗಾಗಿ ಚೆಕೊಸ್ಲೊವಾಕಿಯದಲ್ಲಿ 360 ಸಂಸ್ಥೆಗಳಿದ್ದು ಅಲ್ಲಿ 22,000ಕ್ಕೂ ಹೆಚ್ಚು ಮಂದಿ ಶಿಕ್ಷಣ ರಕ್ಷಣೆಗಳನ್ನು ಪಡೆಯುವರು. ನಿರ್ಗತಿಕ ಯುವಜನಕ್ಕೆಂದೇ 74 ಯುವಜನ ಗೃಹಗಳು ಇವೆ. ಮಾನಸಿಕ ಮತ್ತು ದೈಹಿಕ ನ್ಯೂನತೆಗಳುಳ್ಳ ಮಕ್ಕಳಿಗಾಗಿ ಸುಮಾರು 1,000ಅಂಗವಿಕಲರ ಶಾಲೆಗಳಿವೆ.

ಪ್ರಾಗ್ ವಿಶ್ವವಿದ್ಯಾಲಯದ ಉತ್ಸವ ಸಭಾಂಗಣ

**ಅಧ್ಯಾಪಕರ ಪ್ರಶಿಕ್ಷಣ :** ಕಿಂಡರ್‌ಗಾರ್ಟನ್ ಶಾಲೆಯ ಶಿಕ್ಷಕರ ಪ್ರಶಿಕ್ಷಣಕ್ಕಾಗಿ ರಾಷ್ಟ್ರದಲ್ಲಿ 22 ವೃತ್ತಿ ಶಿಕ್ಷಣ ಪ್ರೌಢಶಾಲೆಗಳಿವೆ. 9 ವರ್ಷ ಅವಧಿಯ ಪ್ರಾಥಮಿಕ ಶಿಕ್ಷಣದ ಅನಂತರ ಇಲ್ಲಿ 4ವರ್ಷ ಅವಧಿಯ ಶಿಕ್ಷಣ ಪಡೆಯಬೇಕು. ಪ್ರಶಿಕ್ಷಣ ಪಡೆದವರನ್ನು ಮಾತ್ರ ಕೆಲಸಕ್ಕೆ ಸೇರಿಸಿಕೊಳ್ಳಲಾಗುವುದು. ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಲಿಚ್ಛಿಸುವವರು ಜಿಮ್ನಾಷಿಯಂನಲ್ಲಿ ಶಿಕ್ಷಣ ಮುಗಿಸಿದ ಮೇಲೆ ಶಿಕ್ಷಣಶಾಸ್ತ್ರದ ವೃತ್ತಿಶಿಕ್ಷಣ ಶಾಲೆಗಳಲ್ಲಿ ನಾಲ್ಕು ವರ್ಷಗಳ ಕಾಲ ವ್ಯಾಸಂಗ ಮಾಡಬೇಕು. ಇದಕ್ಕಾಗಿಯೇ 11 ಶಿಕ್ಷಣ ಸಂಸ್ಥೆಗಳಿವೆ. ಜಿಮ್ನಾಷಿಯಂ ಅಥವಾ ಇತರ ಪ್ರೌಢಶಾಲೆಗಳಲ್ಲಿ ಅಧ್ಯಾಪಕರಾಗಲಿಚ್ಛಿಸುವವರು ವಿಶ್ವವಿದ್ಯಾಲಯದ ಶಿಕ್ಷಣಶಾಸ್ತ್ರದ ವಿದ್ಯಾಲಯಗಳಲ್ಲಿ ಅಥವಾ ಇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 5 ವರ್ಷಗಳ ಕಾಲ ಶಿಕ್ಷಣ ಪಡೆಯಬೇಕು. ಜಿಮ್ನಾಷಿಯಂ ಮತ್ತು ಪ್ರೌಢವೃತಿ ಪಾಠಶಾಲೆಗಳ ಅಧ್ಯಾಪಕರನ್ನು ಪ್ರಾಧ್ಯಾಪಕರೆನ್ನುತ್ತಾರೆ.

**ಆಧುನಿಕ ಪ್ರವೃತ್ತಿಗಳು :** ಇಲ್ಲಿನ ಶಿಕ್ಷಣವ್ಯವಸ್ಥೆಯಲ್ಲಿ ದೃಢತೆಯಾಗಲಿ ದೀರ್ಘಾವಧಿಯ ತನಕ ವ್ಯವಸ್ಥೆಯನ್ನು ಮುಂದುವರಿಸುವುದಾಗಲಿ ಕಂಡುಬರುವುದಿಲ್ಲ. ಇಡೀ ಶಿಕ್ಷಣವ್ಯವಸ್ಥೆಯಲ್ಲಿ ನಮ್ಯತೆ ವ್ಯಕ್ತಪಡಿಸುತ್ತದೆ. 1948ರಲ್ಲಿ 5 ವರ್ಷಅವಧಿಯ ಕಿರಿಯ ಮತ್ತು 4 ವರ್ಷ ಅವಧಿಯ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಮತ್ತು 4 ವರ್ಷ ಅವಧಿಯ ಜಿಮ್ನಾಷಿಯಂ ಶಿಕ್ಷಣವನ್ನೂ ಆಚರಣೆಗೆ ತರಲಾಯಿತು. 5+4+4ರ ಈ ವ್ಯವಸ್ಥೆ ಮೂರೇ ವರ್ಷ ಅಸ್ತಿತ್ವದಲ್ಲಿದ್ದು 1953ರಲ್ಲಿ 5+3+3ಕ್ಕೆ ಬದಲಾಯಿತು. ಮತ್ತೆ ಇದು 1960ರಲ್ಲಿ 5+4+3ಕ್ಕೆ ಮಾರ್ಪಟ್ಟಿತು. 1968 ರಿಂದ ಮತ್ತೆ 5+4+4ಕ್ಕೆ ಬದಲಾಯಿಸುವ ಪ್ರವೃತ್ತಿ ಆರಂಭವಾಗಿದೆ. ಅನೇಕ ಜಿಮ್ನಾಷಿಯಂಗಳು ಈಗ 8 ವರ್ಷ ಅವಧಿಯ ಶಿಕ್ಷಣವನ್ನು ಪ್ರಾಯೋಗಿಕವಾಗಿ ಆರಂಭಿಸಿವೆ. ಶಿಕ್ಷಣ ಎಲ್ಲಾ ಹಂತದಲ್ಲೂ ಉಚಿತ ಮತ್ತು 6 ರಿಂದ 15ರ ವರ್ಷದವರಿಗೆ ಕಡ್ಡಾಯ.

ವೈಯಕ್ತಿಕ ಬೋಧನ ವಿಧಾನದಲ್ಲಿ ವಿದ್ಯಾರ್ಥಿಗಳ ಅಭಿರುಚಿ ಆಸಕ್ತಿಗಳನ್ನು ಅನ್ವೇಷಿಸಿ ಅವರ ಶಿಕ್ಷಣ ಮಾರ್ಗವನ್ನು ನಿರ್ದೇಶಿಸುವುದರಲ್ಲು ಯಥೇಚ್ಛವಾಗಿ ಪರಯೋಗಗಳು ನಡೆಯುತ್ತಿವೆ. ಅನ್ಯ ಭಾಷಾ ಬೋಧನೆ, ದೈಹಿಕ ಶಿಕ್ಷಣ–ಈ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸಲೆಂದು ವಿಶೇಷ ರೀತಿಯ ಸಂಸ್ಥೆಗಳನ್ನು ಚೆಕೊಸ್ಲೊವಾಕಿಯದಲ್ಲಿ ಸ್ಥಾಪಿಸಲಾಗಿದೆ.

(ಎನ್.ಎಸ್.ವಿ)

**ಚೆಕ್ಕು :** ಲಂಡನ್ನಿನ ಅಕ್ಕಸಾಲಿಗರು ಆಧುನಿಕ ಜಗತ್ತಿನ ಮೊಟ್ಟಮೊದಲ ಬ್ಯಾಂಕರುಗಳು. ಈ ಅಕ್ಕಸಾಲಿಗರು ಹಣದ ಪಾವತಿಗೆ ಬರೆಯುತ್ತಿದ್ದ ಚಿಕ್ಕ ಚಿಕ್ಕ ಪತ್ರಗಳೇ ಮೊದಲನೇ ಚೆಕ್ಕುಗಳು. ಈ ಚೆಕ್ಕುಗಳು 1844ರ ಪೀಲ್ಸ್ ಕಾಯಿದೆಯ ನಂತರ ಪ್ರಸಿದ್ಧಿಯನ್ನು ಪಡೆಯಿತು. ಈ ಚೆಕ್ಕುಗಳ ಹಿಂಬದಿಯಲ್ಲಿ ಸ್ಟಾಂಪ್‌ಗಳನ್ನು ಅಂಟಿಸಬೇಕಾಗಿತ್ತು. ನಂತರ ಈ ಪದ್ಧತಿಯನ್ನು ರದ್ದುಪಡಿಸಲಾಯಿತು. ಭಾರತೀಯ ಸಂವಿಧಾನದಲ್ಲಿ ಅಂಗೀಕೃತವಾದ ಯಾವ ಭಾಷೆಯಲ್ಲಿ ಬೇಕಾದರೂ ಚೆಕ್ಕುಗಳನ್ನು ಬರೆಯಬಹುದು. ಧನಾದೇಶ ಪತ್ರ ಎಂಬುದು ಕನ್ನಡದ ಸಮಾನಾಂತರ ಪದವಾದರೂ ಚೆಕ್ಕು ಎಂಬ ಪದವೇ ಹೆಚ್ಚು ಬಳಕೆಯಲ್ಲಿದೆ.

ಹಣದ ಒಂದು ನಿಶ್ಚಿತ ಮೊಬಲಗನ್ನು ಒಬ್ಬ ನಿಶ್ಚಿತ ವ್ಯಕ್ತಿಗೋ ಅವನ ಆದೇಶ (ಆರ್ಡರ್) ಪಡೆದವನಿಗೋ, ಇಲ್ಲವೇ ವಾಹಕನಿಗೋ (ಬೇರರ್) ಪಾವತಿ ಮಾಡಬೇಕೆಂದು ಒಂದು ಬ್ಯಾಂಕಿನ ಗ್ರಾಹಕನೋ ಅವನ ಅಧಿಕಾರ ಪಡೆದವನೋ ಆ ಬ್ಯಾಂಕಿಗೆ ಲಿಖಿತವಾಗಿ ನೀಡಿದ ಆದೇಶ (ಚೆಕ್). ಅದನ್ನು ಹಾಜರುಪಡಿಸಿ ಹಣ ಬೇಕೆಂದು ಕೇಳಿದಾಗ, ಅದರಲ್ಲಿ ಸೂಚಿಸಿರುವಷ್ಟು ಹಣವನ್ನು ಅದರ ಧಾರಕನಿಗೆ (ಹೋಲ್ಡರ್) ಬ್ಯಾಂಕು (ಸಾಮಾನ್ಯ ಸಂದರ್ಭಗಳಲ್ಲಿ) ಪಾವತಿ ಮಾಡಬೇಕಾಗುತ್ತದೆ. ಗ್ರಾಹಕನ ಲೆಕ್ಕದಲ್ಲಿ ಅವನಿಗೆ ಅನುಕೂಲವಾಗಿ ಇರುವ ಶಿಲ್ಕಿನ ಮಿತಿಯೊಳಗೆ ಅಥವಾ ಬ್ಯಾಂಕು ಗ್ರಾಹಕನಿಗೆ ಸೂಚ್ಯವಾಗಿಯೋ ವಾಚ್ಯವಾಗಿಯೋ ಕೊಡಲೊಪ್ಪಿದ ಓವರ್‌ಡ್ರಾಫ್ಟಿನ (ಮೀರೆಳೆತ) ಮೊಬಲಗಿನ ಮಿತಿಯೊಳಗೆ ಬ್ಯಾಂಕಿನ ಮೇಲೆ ಗ್ರಾಹಕ ಅಥವಾ ಅವನಿಂದ ಅಧಿಕಾರ ಪಡೆದವನು ನೀಡುವ ಚೆಕ್ಕುಗಳನ್ನೆಲ್ಲ ಆದರಿಸಲು (ಆನರ್) ಬ್ಯಾಂಕು ಬದ್ಧವಾಗಿರುತ್ತದೆ. ಅದೊಂದು ವ್ಯವಹಾರ್ಯ ಸಾಧನ. ಹುಂಡಿ (ಬಿಲ್ ಆಫ್ ಎಕ್ಸ್‌ಚೇಂಜ್) ಅಥವಾ ವಚನಪತ್ರದಂತೆ (ಪ್ರಾಮಿಸರಿ ನೋಟ್) ಚೆಕ್ಕೂ ಬಂದು ವ್ಯವಹಾರ್ಯ ಸಾಧನ. ಹುಂಡಿಯಂತೆ ಇದೂ ಒಂದು ಆದೇಶಜಬ್ಯಾಂಕಿಗೆ ನೀಡಿದ ಆದೇಶ. ಒಬ್ಬ ನಿಶ್ಚಿತ ಬ್ಯಾಂಕರನ ಮೇಲೆ ಬರೆಯಲಾದ, ಕೇಳಿದಾಗ ಅಲ್ಲದೆ ಅನ್ಯಥಾ ಪಾವತಿ ಮಾಡಬೇಕೆಂದು ಅಭಿವ್ಯಕ್ತವಾಗಿಲ್ಲದ ಹುಂಡಿಯೇ ಚೆಕ್ಕು–ಎಂಬುದು ಚೆಕ್ಕಿಗೆ ಭಾರತದ ವ್ಯವಹಾರ್ಯ ಸಾಧನ ಅಧಿನಿಯಮ ನೀಡಿರುವ ವ್ಯಾಖ್ಯೆ.

ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆಯ ಅಧಿನಿಯಮ 5 ಮತ್ತು 6 ರಲ್ಲಿ ಚೆಕ್ಕು ಮತ್ತು ಹುಂಡಿ ಬಿಲ್ ಆಫ್ ಎಕ್ಸ್‌ಛೇಂಜ್)ಗಳನ್ನು ವಿವರಿಸಲಾಗಿದೆ. ಚೆಕ್ಕು ನಿರ್ದಿಷ್ಟ ಬ್ಯಾಂಕಿನ ಶಾಖೆಯ ಮೇಲೆ ಬೇಡಿಕೆಯ ಮೂಲಕ ಮಾತ್ರ ಪಾವತಿ ಮಾಡುವಂತೆ ಹುಂಡಿಯಾಗಿದೆ. ಒಂದು ಬಿಳಿಯ ಹಾಳೆಯ ಮೇಲಿನ ಅಧಿನಿಯಮದ ಪ್ರಕಾರ ಬರೆದಲ್ಲಿ ಅದನ್ನು ಮಾನ್ಯಮಾಡಬೇಕು. ಆದರೆ ವಾಸ್ತವವಾಗಿ ಎಲ್ಲ ಬ್ಯಾಂಕುಗಳೂ ತಮ್ಮದೇ ಆದ ರೀತಿಯಲ್ಲಿ ಚೆಕ್ಕುಗಳನ್ನು ಮುದ್ರಿಸಿ ತಮ್ಮ ಗ್ರಾಹಕರಿಗೆ ನೀಡಿ ಅದನ್ನೇ ಬಳಸುವ ಪದ್ಧತಿಯನ್ನು ತಂದಿರುವುದರಿಂದ ಅದೇ ನಿಯಮವಾಗಿದೆ.




ಚೆಕ್ಕು ಹಾಳೆ

ಒಂದು ಸಂಲೇಖವನ್ನು ಚೆಕ್ ಎಂದು ಪರಿಭಾವಿಸಬೇಕಾದರೆ ಅದು ಪೂರೈಸಬೇಕಾದ ಆವಶ್ಯಕತೆಗಳು (ರಿಕ್ವಿಸಿಟ್ಸ್) ಇವು:

1 ಅದು ಒಂದು ಲಿಖಿತ ಸಂಲೇಖ : ಮೌಖಿಕ ಆದೇಶವಲ್ಲ. ಚೆಕ್ಕನ್ನು ನೀಡುವ ಅಧಿಕಾರ ಹೊಂದಿರತಕ್ಕವನು ಬ್ಯಾಂಕಿನಿಂದ ಪಡೆದ ಅಚ್ಚಾದ ನಮೂನೆಯಲ್ಲಿಯೇ ಅದನ್ನು ಬರೆಯಬೇಕು. ಕಾನೂನಿನ ಪ್ರಕಾರ ಚೆಕ್ಕನ್ನು ಯಾವ ಕಾಗದದ ಮೇಲಾದರೂ ಬರೆಯಬಹುದು. ಕೈಯಲ್ಲೇ ಅದನ್ನು ಪೂರ್ತಿಯಾಗಿ ಬರೆಯಬಹುದು. ಆದರೆ ವಾಡಿಕೆಯಲ್ಲಿ ಬ್ಯಾಂಕು ಕೆಲವು ನಿರ್ಬಂಧಗಳನ್ನು ವಿಧಿಸುತ್ತದೆ. ಯಾವುದಾದರೂ ಕಾಗದದ ಮೇಲೆ ಬರೆದ ಆದೇಶಕ್ಕೆ ಸಾಮಾನ್ಯವಾಗಿ ಬ್ಯಾಂಕು ಮಾನ್ಯತೆ ನೀಡುವುದಿಲ್ಲ. ತನ್ನ ಗ್ರಾಹಕರಿಗೆ ಒದಗಿಸಿದ ಅಚ್ಚಾದ ನಮೂನೆಗಳಲ್ಲೇ ಅವರು ಚೆಕ್ಕುಗಳನ್ನು ಬರೆಯಬೇಕೆಂದು ಪ್ರತಿಯೊಂದು ಬ್ಯಾಂಕೂ ನಿಬಂಧನೆಗಳನ್ನು ರಚಿಸಿಕೊಂಡಿರುತ್ತದೆ. ಚೆಕ್ಕನ್ನು ಯಾವುದರಿಂದ ಬರೆಯಬೇಕೆಂಬುದನ್ನು ಕಾನೂನಿನಲ್ಲಿ ಸೂಚಿಸಿಲ್ಲ. ಅದನ್ನು ಬೆರಳಚ್ಚು ಮಾಡಬಹುದು ಅಥವಾ ಮಸಿಯಲ್ಲಿ ಬರೆಯಬಹುದು. ಸೀಸದ ಕಡ್ಡಿಯಿಂದ ಬರೆದ ಚೆಕ್ಕುಗಳನ್ನು ಬ್ಯಾಂಕುಗಳು ಸಾಮಾನ್ಯವಾಗಿ ಆದರಿಸುವುದಿಲ್ಲ.

2 ಚೆಕ್ಕನ್ನು ಒಂದು ನಿಶ್ಚಿತ ಬ್ಯಾಂಕಿನ ಮೇಲೆಯೇ ಬರೆಯಬೇಕು. ಒಬ್ಬ ಇನ್ನೊಬ್ಬನ ಮೇಲೆ ಬರೆದ ಆದೇಶ ಹುಂಡಿಯಾಗಬಹುದು. ಆದರೆ ಚೆಕ್ ಆಗುವುದಿಲ್ಲ.

3 ಚೆಕ್ಕು ಒಂದು ಬೇಷರತ್ ಆದೇಶ, ಪ್ರಾರ್ಥನೆಯಲ್ಲ, ದಯವಿಟ್ಟು ಎಂಬ ಪದವಿದ್ದರೂ ಅದು ಆದೇಶವೇ. ಚೆಕ್ಕಿನ ಪಾವತಿಗೆ ಮುನ್ನ ಅದರ ಗ್ರಾಹಿ (Payee) ರಶೀತಿ ಪಡೆದುಕೊಳ್ಳತಕ್ಕದ್ದೆಂದು ಬ್ಯಾಂಕಿಗೆ ಸೂಚನೆ ನೀಡಿದರೆ ಚೆಕ್ಕು ಬೇಷರತ್ ಆದೇಶವಾಗುವುದಿಲ್ಲ. ಎಂದರೆ ಅದು ಚೆಕ್ಕೆನಿಸುವುದಿಲ್ಲ.

4 ಕೇಳಿದ ಒಡನೆಯೇ ಚೆಕ್ಕಿನ ಮೊಬಲಗು ಪಾವತಿಯಾಗಬೇಕು. ಕೇಳಿದ ಒಡನೆಯೇ ಎಂಬ ಶಬ್ದಗಳನ್ನು ಚೆಕ್ಕಿನಲ್ಲಿ ಬಳಸುವ ಅವಶ್ಯವಿಲ್ಲ. ಹಣವನ್ನು ಎಂದು ಪಾವತಿ ಮಾಡಬೇಕೆಂಬುದನ್ನು ಪಾವತಿಗೆ ವಾಯಿದೆಯನ್ನು, ಸೂಚಿಸದಿದ್ದರೆ ಅದು ಕೇಳಿದ ಒಡನೆಯೇ ಪಾವತಿಯಾಗತಕ್ಕದ್ದೆಂಬುದು ಕಾನೂನಿನ ವಿಧಿ. ಕೇಳಿದ ಒಡನೆ ಅಲ್ಲದೆ ಬೇರೆ ಎಂದಾದರೂ ಪಾವತಿಯಾಗಬೇಕೆಂದು ಬರೆದರೆ ಅದು ಚೆಕ್ಕಾಗುವುದಿಲ್ಲ.

5 ಚೆಕ್ಕಿನ ಮೇಲೆ ಅದರ ಕರ್ತನ ಅಥವಾ ರಚಕನ ಸಹಿ ಇರಬೇಕು. ಸಹಿ ಇಲ್ಲದ ಚೆಕ್ಕು ಆದೇಶವಲ್ಲ. ಅಂಥದನ್ನು ಬ್ಯಾಂಕು ಆಧರಿಸಬೇಕಾದ್ದಿಲ್ಲ. ಚೆಕ್ಕಿಗೆ ಸಹಿ ಮಾಡಬೇಕಾದವನ ಮಾದರಿ ಸಹಿ ಬ್ಯಾಂಕಿನ ಬಳಿ ಇರುತ್ತದೆ.

6 ಎಷ್ಟು ಹಣ ಕೊಡಬೇಕೆಂಬುದೂ ಚೆಕ್ಕಿನಲ್ಲಿ ನಿಶ್ಚಿತವಾಗಿರಬೇಕು ಅಥವಾ ಅದನ್ನು ನಿಶ್ಚಿತವಾಗಿ ಗೊತ್ತುಪಡಿಸುವುದು ಸಾಧ್ಯವಾಗುವಂತಿರಬೇಕು. ಯಾವ ದೇಶದ ಬ್ಯಾಂಕಿನ ಮೇಲೆ ಚೆಕ್ಕನ್ನು ಬರೆಯಲಾಗಿದೆಯೋ ಆ ದೇಶದ ಹಣದಲ್ಲಿ ಈ ಚೆಕ್ಕಿನ ಪಾವತಿ ಆಗತಕ್ಕದ್ದು. ಪಾವತಿಯ ದಿನದಂದು ಚಾಲ್ತಿಯಲ್ಲಿರುವ ವಿನಿಮಯ ದರದಲ್ಲಿ ವಿದೇಶಿ ಹಣವನ್ನು ಪಾವತಿದಾರ ಬ್ಯಾಂಕಿನ ದೇಶದ ಹಣಕ್ಕೆ ಪರಿವರ್ತಿಸತಕ್ಕದ್ದು.

7 ಚೆಕ್ಕಿನಲ್ಲಿ ಸೂಚಿಸಿರುವ ಹಣ ಅದರಲ್ಲಿ ಉಲ್ಲೇಖವಾಗಿರುವ ಒಬ್ಬ ನಿಶ್ಚಿತ ವ್ಯಕ್ತಿಗಾಗಲೀ (ಸರ್ಟನ್ ಪರ್ಸನ್) ಆ ವ್ಯಕ್ತಿಯ ಆದೇಶಕ್ಕಾಗಲೀ ಚೆಕ್ಕು ಹೊಂದಿರುವವನಿಗಾಗಲಿ (ಬೇರರ್) ಪಾವತಿಯಾಗತಕ್ಕದ್ದೆಂದು ಅದರಲ್ಲಿ ಬರೆದಿರಬೇಕು.

ಚೆಕ್ಕುಗಳಿಗೆ ಸಂಬಂಧಿಸಿದಂತೆ ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆಯ ಅಧಿನಿಯಮಗಳಾದ 85, 131, ಮತ್ತು 138 ಬಹು ಮುಖ್ಯವಾಗಿವೆ.. ಅಧಿನಿಯಮ ಸಂಖ್ಯೆ 85 ಹಣವನ್ನು ತನ್ನ ಗ್ರಾಹಕನ ಲೆಕ್ಕದಿಂದ ತೆಗೆದು ಯಾವ ಬ್ಯಾಂಕಿನಿಂದ ಚೆಕ್ಕು ತನಗೆ ಬಂದಿದೆಯೋ ಅವರಿಗೆ ವರ್ಗಾಯಿಸುವ ಹೊಣೆಗಾರಿಕೆಯನ್ನು ತಿಳಿಸುತ್ತದೆ. ಅಧಿನಿಯಮ 131 ಹಣವನ್ನು ತನ್ನ ಗ್ರಾಹಕನಿಗೆ ಬೇರೆ ಬ್ಯಾಂಕಿನಿಂದ ತರಿಸಿ ಅವನ (ತನ್ನ ಗ್ರಾಹಕನ) ಖಾತೆಗೆ ಜಮಾ ಮಾಡುವ ಜವಾಬ್ದಾರಿ ಮತ್ತು ಹೊಣೆಗಾರಿಕೆಗಳನ್ನು ತಿಳಿಸುತ್ತದೆ. ಅಧಿನಿಯಮ 138 ಯಾವುದೇ ಗ್ರಾಹಕನು ತನ್ನ ಖಾತೆಯಲ್ಲಿ ಸಾಕಷ್ಟು ಹಣವನ್ನು ಇಡದೆ ಚೆಕ್ಕುಗಳನ್ನು ಇತರರಿಗೆ ಕೊಟ್ಟಾಗ ಆಗುವ ನಷ್ಟವನ್ನು ನ್ಯಾಯಾಲಯದ ಮುಂದೆ ದಾವೆ ಹೂಡುವ ವಿಷಯವನ್ನು ತಿಳಿಸುತ್ತದೆ.

ಪ್ರತಿಯೊಂದು ಚೆಕ್ಕಿಗೂ ಮೂರು ಕಕ್ಷಿಗಳುಂಟು : 1 ಚೆಕ್ಕಿನ ಕರ್ತ ಅಥವಾ ರಚಕ– ಇವನು ಬ್ಯಾಂಕಿನ ಗ್ರಾಹಕ, ಅಥವಾ ಅವನ ಪರವಾಗಿ ಚೆಕ್ಕು ಬರೆಯಲು ಅವನಿಂದ ಅಧಿಕಾರ ಪಡೆದವನು. 2. ಸ್ವೀಕರ್ತ (ಡ್ರಾಯೀ)–ಪಾವತಿದಾರ ಬ್ಯಾಂಕು (ಪೇಯಿಂಗ್ ಬ್ಯಾಂಕ್) – ಹಣ ಪಾವತಿ ಮಾಡಲು ಯಾವ ಬ್ಯಾಂಕಿಗೆ ಆದೇಶ ನೀಡಲಾಗಿದೆಯೋ ಆ ಬ್ಯಾಂಕು. 3. ಪ್ರಾಪ್ತಿಕರ್ತ (ಪೇಯೀ)–ಯಾರಿಗೆ ಹಣ ಪಾವತಿ ಮಾಡಬೇಕೆಂದು ಚೆಕ್ಕಿನಲ್ಲಿ ಬರೆಯಲಾಗಿದೆಯೋ ಆತ.

ಚೆಕ್ಕುಗಳನ್ನು ಬರೆಯಲು ಬ್ಯಾಂಕು ಒದಗಿಸಿದ ಚೆಕ್ಕುಪುಸ್ತಕದ ಹಾಳೆಗಳನ್ನೇ ಚೆಕ್ಕುರಚಕ ಉಪಯೋಗಿಸುವುದರಿಂದ ಅನೇಕ ಸೌಕರ್ಯಗಳುಂಟು. ಬ್ಯಾಂಕೇ ಅಚ್ಚು ಮಾಡಿಸಿ ಒದಗಿಸಿದ ನಮೂನೆ ಕಾನೂನಿಗೆ ಅನುಗುಣವಾಗಿರುತ್ತದೆ. ಅದನ್ನು ತುಂಬುವುದು ಸುಲಭ. ಪಾವತಿದಾರ ಬ್ಯಾಂಕಿನ ಹೆಸರು ವಿಳಾಸಗಳು ಅದರಲ್ಲಿ ಅಚ್ಚಾಗಿರುವುದರಿಂದ ಪಡೆದವನು ಅದರ ಮೇಲೆ ಹಣ ಪಡೆಯಲು ಅದನ್ನು ಎಲ್ಲಿ ಹಾಜರುಪಡಿಸಬೇಕೆಂಬ ಬಗ್ಗೆ ಸಂದೇಹ ಇರುವುದಿಲ್ಲ. ಪ್ರತಿಯೊಂದು ಚೆಕ್ಕುಹಾಳೆಯಲ್ಲೂ ಎರಡು ಭಾಗಗಳಿರುತ್ತವೆ. ಈ ಎರಡು ಭಾಗಗಳ ನಡುವೆ ಅವನು ಪ್ರತ್ಯೇಕಗೊಳಿಸುವುದು ಸುಲಭವಾಗುವಂತೆ ಸಾಲುರಂಧ್ರಗಳಿರುತ್ತವೆ. ಸಾಲುರಂಧ್ರಗಳ ಬಲಕ್ಕಿರುವ ಭಾಗವೇ ಚೆಕ್ಕು ನಮೂನೆ. ಎಡಭಾಗ ಪ್ರತಿಹಾಳೆ (ಕೌಂಟರ್‌ಫಾಯಿಲ್). ಅದು ಚೆಕ್ಕುಪುಸ್ತಕದಲ್ಲೇ ಉಳಿಯುತ್ತದೆ. ಚೆಕ್ಕುರಚಕ ಸ್ವಂತ ಅವಗಾಹನೆಗಾಗಿ ಚೆಕ್ಕಿನ ವಿವರಗಳನ್ನು ಪ್ರತಿಹಾಳೆಯಲ್ಲಿ ಬರೆದು ಇಟ್ಟುಕೊಳ್ಳಬಹುದು. ಚೆಕ್ಕುನಮೂನೆಗಳನ್ನು ಅಚ್ಚು ಮಾಡಲು ಬ್ಯಾಂಕು ವಿಶೇಷವಾದ ಕಾಗದವನ್ನು ಬಳಸುವುದರಿಂದ ಅವುಗಳ ಮೇಲೆ ಬರೆದದ್ದನ್ನು ಪತ್ತೆಯಾಗದಂತೆ ವ್ಯತ್ಯಾಸ ಮಾಡುವುದು ಸುಲಭವಲ್ಲ. ಆದ್ದರಿಂದ ಮೋಸದ ಸಂಭವ ಕಡಿಮೆ. ಪ್ರತಿಯೊಂದು ಚೆಕ್ಕಿಗೂ ಒಂದು ಸಂಖ್ಯೆ ಇರುತ್ತದೆ. ಚೆಕ್ಕಿನ ವಿಚಾರವಾಗಿ ವ್ಯವಹರಿಸುವಾಗ ಈ ಸಂಖ್ಯೆಯನ್ನು ಸೂಚಿಸಬಹುದು. ಇದರಿಂದ ವ್ಯವಹಾರ ಎಷ್ಟೋ ಸುಲಭವಾಗುತ್ತದೆ. ಪ್ರತಿಯೊಬ್ಬ ಗ್ರಾಹಕನಿಗೂ ಒದಗಿಸಲಾದ ಚೆಕ್ಕುಪುಸ್ತಕದ ಹಾಳೆಗಳ ಕ್ರಮಸಂಖ್ಯೆಗಳನ್ನು ಬ್ಯಾಂಕು ದಾಖಲೆಯಿಟ್ಟುಕೊಂಡಿರುವುದರಿಂದ ಬೇರೆ ಯಾರಾದರೂ ಬೇರೊಂದು ಹಾಳೆಯ ಮೇಲೆ ಆತನ ಲೆಕ್ಕಕ್ಕೆ ಚೆಕ್ಕು ಬರೆದು ಅದರಿಂದ ಹಣ ಪಡೆಯುವುದು ಸಾಧ್ಯವಿಲ್ಲ. ಈ ಹಲವು ಕಾರಣಗಳಿಂದ ಬ್ಯಾಂಕು ಒದಗಿಸಿದ ಚೆಕ್ಕು ಪುಸ್ತಕದಲ್ಲೇ ಚೆಕ್ಕು ಬರೆಯುವುದು ಒಳ್ಳೆಯದು.

ಚೆಕ್ಕು ಬರೆಯುವವರು ತಕ್ಕಮಟ್ಟಿನ ಎಚ್ಚರಿಕೆ ವಹಿಸಬೇಕು. ಅನ್ಯರು ಅದನ್ನು ತಿದ್ದಿ ಮೋಸಪಡಿಸಲು ಅವಕಾಶ ನೀಡಬಾರದು. ತಿದ್ದಲು ಅವಕಾಶ ಹೇಗೆ ಒದಗಬಹುದೆಂಬುದನ್ನು ತೋರಿಸಲು ಒಂದು ಉದಾಹರಣೆ ಕೊಡಬಹುದು. ಎಂಟು ರೂಪಾಯಿಗಳಿಗೆ ಒಂದು ಚೆಕ್ಕನ್ನು ಬರೆಯುವಾಗ ಎಂಟು ಎಂಬ ಪದದ ಹಾಗೂ ಅಂಕಿಯ ಹಿಂದೆಯೂ ಮುಂದೆಯೂ ಸ್ಥಳ ಬಿಡಬಾರದು. ಈ ಎಚ್ಚರಿಕೆ ವಹಿಸದಿದ್ದರೆ ಎಂಟು ಎಂಬುದನ್ನು ಎಂಟುನೂರು ಅಥವಾ ನೂರ ಎಂಟು ಎಂದು ಬದಲಾಯಿಸುವ ಸಾಧ್ಯತೆಯುಂಟು. ಚೆಕ್ಕು ಬರೆಯುವಾಗ ಅದರ ಕರ್ತ ಸಾಮಾನ್ಯವಾದ ಎಲ್ಲ ಎಚ್ಚರಿಕೆಯನ್ನೂ ಲಕ್ಷ್ಯವನ್ನೂ ವಹಿಸುವನೆಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ.

**ಚೆಕ್ಕಿನ ದಿನಾಂಕ :** ಚೆಕ್ಕಿನ ಬಲ ಮೇಲ್ತುದಿಯಲ್ಲಿ ದಿನಾಂಕ ಬರೆಯಲು ಸ್ಥಳವಿದೆ. ಚೆಕ್ಕು ಬರೆಯುತ್ತಿರುವಂದಿನ ತಾರೀಕನ್ನು ಅಲ್ಲಿ ಬರೆಯಲಾಗುತ್ತದೆ. ಅದಕ್ಕೆ ಹಿಂದಿನ ದಿನಾಂಕವನ್ನು ಬರೆದರೂ ತಪ್ಪಿಲ್ಲ. ಚೆಕ್ಕಿನ ಮೇಲೆ ಬರೆಯಲಾದ ದಿನಾಂಕದಂದು ಅದನ್ನು ನೀಡಲಾಗಿದೆಯೆಂಬುದು ಕಾನೂನಿನ ಪರಿಭಾವನೆ. ಕಳೆದು ಹೋದ ದಿನಾಂಕವನ್ನು ಚೆಕ್ಕಿನ ಮೇಲೆ ಬರೆದಿದ್ದರೆ ಅದು ಗತ ದಿನಾಂಕದ (ಆ್ಯಂಟಿ–ಡೇಟೆಡ್) ಚೆಕ್ಕು. ಇನ್ನೂ ಬಾರದಿರುವ ದಿನಾಂಕವನ್ನು ಚೆಕ್ಕಿನ ಮೇಲೆ ಬರೆಯಲಾದರೆ ಅದು ಮುಂದಿನ ತೇದಿಯ (ಪೋಸ್ಟ್–ಡೇಟೆಡ್) ಚೆಕ್ಕು. ಕಾನೂನಿನ ದೃಷ್ಟಿಯಲ್ಲಿ ಮುಂದಿನ ತೇದಿಯ ಚೆಕ್ಕು ಚೆಕ್ಕೇ ಅಲ್ಲ. ಏಕೆಂದರೆ, ಕೇಳಿದಾಗ ಅಲ್ಲದೆ ಇನ್ನೆಂದೋ ಹಣ ಪಾವತಿ ಮಾಡಬೇಕೆಂದು ಆದೇಶ ನೀಡಬೇಕೆಂದು ಆದೇಶ ನೀಡಿದಂತಾಗುತ್ತದೆ. ಮುಂದಿನ ತೇದಿಯ ಚೆಕ್ಕು ವಾಯಿದೆ ಹುಂಡಿಯಂತೆ. ಭಾರತದಲ್ಲಿ ಚೆಕ್ಕುಗಳಿಗೆ ಸ್ಟಾಂಪು ಶುಲ್ಕದಿಂದ ವಿನಾಯಿತಿಯುಂಟು. ಕಾನೂನುರೀತ್ಯಾ ಮುಂದಿನ ತೇದಿಯ ಚೆಕ್ಕಿಗೆ ವಾಯಿದೆ ಹುಂಡಿಯಂತೆ ಸ್ಟಾಂಪು ಹಚ್ಚಬೇಕಾದೀತು. ಆದರೂ ಮುಂದಿನ ತೇದಿಯನ್ನು ಚೆಕ್ಕೆಂದೇ ಕೊಡುವ, ಪಡೆದುಕೊಳ್ಳುವ ವಾಡಿಕೆಯಿದೆ. ಆದರೆ ಚೆಕ್ಕಿನ ದಿನಾಂಕಕ್ಕೆ ಮುನ್ನ ಅದನ್ನು ಬ್ಯಾಂಕಿಗೆ ಹಾಜರು ಪಡಿಸಿದರೆ ಪಾವತಿದಾರ ಅದನ್ನು ಆದರಿಸುವುದಿಲ್ಲ. ಒಂದು ವೇಳೆ ಅದನ್ನು ಆದರಿಸಿದರೆ ಪಾವತಿದಾರ ಬ್ಯಾಂಕಿಗೆ ಒದಗುವ ಪರಿನಿಯತ ರಕ್ಷಣೆ (ಸ್ಟಾಟ್ಯುಟರಿ ಪ್ರೊಟೆಕ್ಷನ್) ಅದಕ್ಕೆ ಲಭಿಸುವುದಿಲ್ಲ. ಏಕೆಂದರೆ ಅದು ಚೆಕ್ಕೇ ಅಲ್ಲ. ಆದ್ದರಿಂದ ಅದು ಗ್ರಾಹಕನ ಆದೇಶವಲ್ಲ. ಗ್ರಾಹಕನ ಆದೇಶವಲ್ಲವಾದ್ದರಿಂದ ಅದರ ಮೇಲೆ ಪಾವತಿ ಮಾಡಿದ ಮೊಬಲಗನ್ನು ಗ್ರಾಹಕನ ಲೆಕ್ಕಕ್ಕೆ ಋಣಿಸುವಂತಿಲ್ಲ. ಋಣಿಸಿದ ಪಕ್ಷದಲ್ಲಿ ನಷ್ಟಸಂಭವವುಂಟು. ಚೆಕ್ಕಿನ ದಿನಾಂಕದವರೆಗೂ ಅದರ ಮೇಲೆ ಪಾವತಿಯಾಗುವುದಿಲ್ಲವೆಂದು ಗ್ರಾಹಕ ಭಾವಿಸಿ, ತತ್ಕಾಲದಲ್ಲಿ ಪಾವತಿಗಾಗಿ ಅವನು ಇತರರಿಗೆ ಚೆಕ್ಕು ಕೊಟ್ಟಿರಬಹುದು. ಮುಂದಿನ ತೇದಿಯ ಚೆಕ್ಕಿನ ದಿನಾಂಕದ ವೇಳೆಗೆ ಅದರ ಪಾವತಿಗಾಗಿ ಬಂದ ಚೆಕ್ಕನ್ನು ಮುಂದಿನ ತೇದಿಯ ಚೆಕ್ಕಿನ ಮೇಲೆ ಪಾವತಿ ಲೆಕ್ಕದಲ್ಲಿಲ್ಲದೆ ಅದನ್ನು ಬ್ಯಾಂಕು ಅನಾದರಿಸಬೇಕಾಗಿ ಬರಬಹುದು. ಇದರಿಂದ ಗ್ರಾಹಕನಿಗೆ ಆದ ನಷ್ಟ ಮತ್ತು ಮರ್ಯಾದಾಭಂಗಕ್ಕಾಗಿ ಬ್ಯಾಂಕು ಅವನಿಗೆ ಪರಿಹಾರ ನೀಡಬೇಕಾಗಿ ಬಂದೀತು. ಮುಂದಿನ ತೇದಿಯ ಚೆಕ್ಕನ್ನು ಅದರ ದಿನಾಂಕದ ಆಗಮನಾನಂತರ ಪಾವತಿಗಾಗಿ ಹಾಜರುಪಡಿಸಿದರೆ ಪಾವತಿದಾರ ಬ್ಯಾಂಕು ಅದನ್ನು ಕ್ರಮಬದ್ಧವಾಗಿ ನೀಡಲಾದ ಚೆಕ್ಕೆಂದೇ ಪರಿಭಾವಿಸಿ ಪಾವತಿ ಮಾಡಲು ಅಭ್ಯಂತರವಿಲ್ಲ.

ಚೆಕ್ಕು ಬರೆಯುವವ ಅದನ್ನು ನೀಡುವುದಕ್ಕೆ ಮುಂಚೆ ಅದರ ಮೇಲೆ ದಿನಾಂಕವನ್ನು ಹಾಕಬೇಕು. ಒಂದು ವೇಳೆ ಅವನು ಹಾಕದಿದ್ದರೆ ಚೆಕ್ಕಿನ ಧಾರಕ (ಹೋಲ್ಡರ್) ಅದನ್ನು ತುಂಬಬಹುದು. ದಿನಾಂಕ ಇಲ್ಲದ ಚೆಕ್ಕನ್ನು ಹಾಜರುಪಡಿಸಿದರೆ ಪಾವತಿದಾರ ಬ್ಯಾಂಕು ಆದರಿಸುವುದಿಲ್ಲ. ಪ್ರತಿ ಚೆಕ್ಕೂ ಅದನ್ನು ನೀಡಿದ ದಿನಾಂಕದಿಂದ ಸಾಮಾನ್ಯವಾಗಿ 3 ತಿಂಗಳುಗಳ ಕಾಲ ಚಲಾವಣೆಯಲ್ಲಿರುತ್ತದೆ. ಅದುವರೆಗೂ ಅದನ್ನು ಪರಾಕ್ರಾಮಣಗೊಳಿಸಬಹುದು (ನೆಗೋಷಿಯೇಟ್). ಈ ಅವಧಿಯ ಅನಂತರ ಅದು ಕಾಲಾತೀತ (ಸ್ಟೇಲ್) ಚೆಕ್ಕು ಎನಿಸಿಕೊಳ್ಳುತ್ತದೆ. ಕಾಲಾತೀತ ಚೆಕ್ಕನ್ನು ಅದರ ರಚಕ ದೃಢೀಕರಿಸಬೇಕು (ಕನ್‌ಫರ್ಮ್).

**ವಾಹಕ ಚೆಕ್ಕು ಮತ್ತು ಆದಿಷ್ಟ ಚೆಕ್ಕು :** ಯಾರಿಗೆ ಚೆಕ್ಕಿನ ಮೊಬಲಗು ಪಾವತಿಯಾಗಬೇಕೋ ಅವನ, ಪ್ರಾಪ್ತಿಕರ್ತನ, ಹೆಸರಿಗಾಗಿ ಚೆಕ್ಕಿನಲ್ಲಿ ಬಿಟ್ಟಿರುವ ಸ್ಥಳದ ಅನಂತರ, ಆ ಸಾಲಿನ ಕೊನೆಯಲ್ಲಿ 'ರಿಗೆ ಅಥವಾ ವಾಹಕನಿಗೆ' ಎಂಬ ಶಬ್ದಗಳು ಅಚ್ಚಾಗಿರುತ್ತವೆ. ಪ್ರಾಪ್ತಿಕರ್ತನ ಹೆಸರು ಬರೆದ ಮೇಲೆ 'ಅಥವಾ ವಾಹಕನಿಗೆ' ಎಂಬ ಶಬ್ದಗಳನ್ನು ಹಾಗೆಯೇ ಬಿಡಬಹುದು. ಆಗ ಅದು ವಾಹಕ ಚೆಕ್ಕು (ಬೇರರ್ ಚೆಕ್) ಆಗುತ್ತದೆ. ಅಂಥ ಚೆಕ್ಕಿನ ಧಾರಕ ಅದರ ಹಿಂದೆ ಸಹಿ ಹಾಕದೆಯೇ ಅದನ್ನು ಪರಾಕ್ರಮಿಸಬಹುದು. ಅದರ ಮೇಲೆ ಹಣ ಪಡೆಯುವವನು ಪಾವತಿಗಾಗಿ ಅದನ್ನು ಪರಾಕ್ರಮಿಸಬಹುದು. ಅದರ ಮೇಲೆ ಹಣ ಪಡೆಯುವವನು ಪಾವತಿಗಾಗಿ ಅದನ್ನು ಬ್ಯಾಂಕಿಗೆ ಹಾಜರು ಪಡಿಸುವಾಗ ಅದರ ಹಿಂದೆ ಸಹಿ ಹಾಕಬೇಕೆಂದು ಕಾನೂನಿನಲ್ಲಿಲ್ಲ. ಆದರೆ ಭಾರತೀಯ ಬ್ಯಾಂಕುಗಳು ಸಹಿ ಪಡೆದುಕೊಳ್ಳುತ್ತವೆ. ಇಲ್ಲದಿದ್ದರೆ ಹಣ ಸಂದಾಯವಾದ್ದಕ್ಕೆ ರಸೀತಿ ಕೊಡಬೇಕೆಂದು ಬ್ಯಾಂಕು ಕೇಳಬಹುದು. ಮೊಬಲಗು ಇಪ್ಪತ್ತು ರೂಪಾಯಿಗಳಿಗಿಂತ ಕಡಿಮೆಯಿಲ್ಲವಾದರೆ ಆ ರಸೀತಿಗೆ ಸ್ಟಾಂಪು ಶುಲ್ಕದಿಂದ ವಿನಾಯಿತಿಯುಂಟು.

'ಅಥವಾ ವಾಹಕನಿಗೆ' ಎಂಬ ಶಬ್ದಗಳಲ್ಲಿ 'ವಾಹಕನಿಗೆ' ಎಂಬ ಶಬ್ದವನ್ನು ಹೊಡೆದು ಹಾಕಿ 'ಆದೇಶಕ್ಕೆ' ಎಂದು ಬರೆದರೆ ಅದರು ಆದಿಷ್ಟ ಚೆಕ್ಕು (ಆರ್ಡರ್ ಚೆಕ್) ಆಗುತ್ತದೆ. ನಿಶ್ಚಿತ ಪ್ರಾಪ್ತಿಕರ್ತನಿಗೆ ಅಥವಾ (ಅವನ) ಆದೇಶಕ್ಕೆ ಪಾವತಿ ಮಾಡಬೇಕಾದ ಚೆಕ್ಕು ಅದು.

ಅದನ್ನು ಪರಾಕ್ರಮಣ ಮಾಡುವ ಮುನ್ನ ಚೆಕ್ಕಿನ ಧಾರಕ ಅದರ ಹಿಂಬದಿಯಲ್ಲಿ ತನ್ನ ಸಹಿ ಹಾಕಬೇಕು. ಪಾವತಿ ಪಡೆಯುವವನು ಕೂಡ ಬ್ಯಾಂಕಿಗೆ ಹಾಜರುಪಡಿಸುವಾಗ ತನ್ನ ಸಹಿ ಹಾಕಬೇಕು. 'ಅಥವಾ ವಾಹಕನಿಗೆ' ಎಂಬ ಶಬ್ದಗಳನ್ನು ಹೊಡೆದುಹಾಕಿ 'ಮಾತ್ರ' ಎಂದು ಬರೆದರೆ ಚೆಕ್ಕಿನಲ್ಲಿ ನಮೂದಿಸಲಾದ ಪ್ರಾಪ್ತಿಕರ್ತನಿಗೆ ಮಾತ್ರ ಅದರ ಮೊಬಲಗು ಪಾವತಿಯಾಗತಕ್ಕದ್ದು.

**ಮೊಬಲಗು:** ಚೆಕ್ಕಿನ ಮೊಬಲಗನ್ನು ಅಕ್ಷರಗಳಲ್ಲೂ ಅಂಕಿಯಲ್ಲೂ ಬರೆಯಬೇಕು. ಅದಕ್ಕಾಗಿ ಚೆಕ್ಕಿನಲ್ಲಿ ಸ್ಥಳ ಉಂಟು. ಚೆಕ್ಕಿನ ಮೊಬಲಗು ಅಕ್ಷರಗಳಲ್ಲೂ ಅಂಕಿಗಳಲ್ಲೂ ಒಂದೇ ಆಗಿರಬೇಕು. ಇವೆರಡರಲ್ಲಿ ವ್ಯತ್ಯಾಸವಿದ್ದರೆ ಅಕ್ಷರಗಳಲ್ಲಿರುವ ಮೊಬಲಗೇ ಚೆಕ್ಕಿನ ಮೊಬಲಗೆಂಬುದು ಕಾನೂನಿನ ನಿರ್ಣಯ. ಆದರೆ ಬ್ಯಾಂಕು ಸಾಮಾನ್ಯವಾಗಿ ಅಂಥ ಚೆಕ್ಕುಗಳನ್ನು ಮಾನ್ಯಮಾಡುವುದಿಲ್ಲ.

**ರೇಖನ :** ಚೆಕ್ಕುಗಳ ಮೇಲೆ ಅಡ್ಡಗೀರು ಹಾಕುವ (ಕ್ರಾಸ್) ಪದ್ಧತಿ, ಎಂದರೆ ಅವುಗಳ ಮೇಲೆ ಸಮಾನಾಂತರವಾದ ಎರಡು ಅಡ್ಡಗೆರೆಗಳನ್ನು ಎಳೆಯುವ ಪದ್ಧತಿ, ಉಗಮಗೊಂಡದ್ದು ಇಂಗ್ಲೆಂಡಿನಲ್ಲಿ, ಬಹಳ ಹಿಂದೆ. ಆ ಕಾಲದಲ್ಲಿ ಸಾರಿಗೆ ಸೌಕರ್ಯ ಸಮರ್ಪಕವಾಗಿರಲಿಲ್ಲ. ಅಂಚೆಪತ್ರಗಳೂ ಇತರ ಪತ್ರಗಳೂ ಸಾಗಲು ಬಹಳ ಕಾಲ ಹಿಡಿಸುತ್ತಿತ್ತು. ಒಂದು ಬ್ಯಾಂಕು ತನ್ನ ಗ್ರಾಹಕರಿಗೆ ಇನ್ನೊಂದು ಬ್ಯಾಂಕಿನಿಂದ ಬರಬೇಕಾದ ಚೆಕ್ಕುಗಳ ಹಣವನ್ನು ಆ ಬ್ಯಾಂಕಿನಿಂದ ಪಡೆಯುವ ಸಲುವಾಗಿ ಆ ಚೆಕ್ಕುಗಳನ್ನು ಕಳಿಸಿದಾಗ, ಮಾರ್ಗಮಧ್ಯದಲ್ಲಿ ದರೋಡೆಖೋರರು ಅವನ್ನು ದರೋಡೆ ಮಾಡಿ, ಆ ಸುದ್ದಿ ಪಾವತಿದಾರ ಬ್ಯಾಂಕಿಗೆ ತಲುಪುವುದರೊಳಗೆ ಆ ಚೆಕ್ಕುಗಳನ್ನು ಅಲ್ಲಿ ಕೊಟ್ಟು ಪಡೆಯುವ ಅಪಾಯವಿತ್ತು. ಈ ಸಂಭವವನ್ನು ತಪ್ಪಿಸುವ ಸಲುವಾಗಿ ಇಂಥ ಚೆಕ್ಕುಗಳ ಮೇಲೆ ಹಿಂದೆ ಹೇಳಿದಂತೆ ಅಡ್ಡಗೆರೆ ಎಳೆಯುವ ಪದ್ಧತಿ ಬಂತು. ಈ ಅಡ್ಡಗೆರೆಗಳು ಪಾವತಿದಾರ ಬ್ಯಾಂಕಿಗೆ ಸೂಚನೆ. ರೇಖಿಸಲಾದ ಚೆಕ್ಕಿನ ಮೇಲೆ ಹಣ ಪಾವತಿ ಮಾಡುವ ಬ್ಯಾಂಕು ತನ್ನ ಪಾವತಿ ಮೇಜಿನ ಮೇಲೆ ಯಾವ ವ್ಯಕ್ತಿಗೂ ಪಾವತಿ ಮಾಡುವಂತಿಲ್ಲ. ಅದನ್ನು ಇನ್ನೊಂದು ಬ್ಯಾಂಕಿಗೆ ಪಾವತಿ ಮಾಡಬೇಕು. ಇದು ಚೆಕ್ಕಿನ ರೇಖನದ (ಕ್ರಾಸಿಂಗ್) ಸಾಮಾನ್ಯ ಅರ್ಥ. ಚೆಕ್ಕಿನ ರೇಖನ ಇಂದು ಬಹಳ ಸಾಮಾನ್ಯವಾಗಿ ಬಳಕೆಯಲ್ಲಿದೆ; ಇದು ಕಾನೂನುಬದ್ಧವಾಗಿದೆ.

ರೇಖನದಲ್ಲಿ ಎರಡು ಪ್ರರೂಪಗಳುಂಟು : 1. ಸಾಮಾನ್ಯ ರೇಖನ (ಜನರಲ್ ಕ್ರಾಸಿಂಗ್), 2. ವಿಶೇಷ ರೇಖನ (ಸ್ಪೆಷಲ್ ಕ್ರಾಸಿಂಗ್). ಒಂದು ಚೆಕ್ಕಿನ ಮುಖದ ಮೇಲೆ ಅಡ್ಡಲಾಗಿ ಎರಡು ಸಮಾನಾಂತರ ರೇಖೆಗಳನ್ನು ಬರೆದರೆ ಅದು ಸಾಮಾನ್ಯ ರೇಖನ. ಈ ರೇಖೆಗಳ ನಡುವೆ ಮತ್ತು ಕಂಪನಿ ಅಥವಾ ಆ ಪದಗಳ ಯಾವುದಾದರೂ ಸಂಕ್ಷಿಪ್ತ ರೂಪವನ್ನು ಬರೆಯಬಹುದು; ಅಥವಾ ಬರೆಯದಿರಬಹುದು.

ಚೆಕ್ಕಿನ ಮೇಲೆ ಸಾಮಾನ್ಯ ರೇಖನ ಮಾಡಿದಾಗ, ಪಾವತಿದಾರ ಬ್ಯಾಂಕು ಅದರಲ್ಲಿ ಸೂಚಿಸಿರುವ ಮೊಬಲಗನ್ನು ಇನ್ನೊಂದು ಬ್ಯಾಂಕಿಗಲ್ಲದೆ ಬೇರೆ ಯಾರಿಗೂ ಕೊಡಕೂಡದು. ಅಂಥ ಚೆಕ್ಕನ್ನು ಪಡೆದಿರುವವನು ನೇರವಾಗಿ ಪಾವತಿದಾರ ಬ್ಯಾಂಕಿನಿಂದ ಹಣ ಪಡೆಯುವುದು ಸಾಧ್ಯವಿಲ್ಲ. ಅವನು ತನ್ನ ಗ್ರಾಹಕನಾಗಿದ್ದರೆ ಮಾತ್ರವೇ ಒಂದು ಬ್ಯಾಂಕು ಆತನ ಚೆಕ್ಕನ್ನು ಪಾವತಿದಾರ ಬ್ಯಾಂಕಿನಿಂದ ವಸೂಲಿ ಮಾಡುವುದಕ್ಕೆ ಒಪ್ಪುತ್ತದೆ. ಗ್ರಾಹಕನಲ್ಲದವನ ಚೆಕ್ಕನ್ನು ವಸೂಲಿ ಮಾಡಿದ ಪಕ್ಷದಲ್ಲಿ ವಸೂಲಿದಾರ ಬ್ಯಾಂಕಿಗೆ ಪರಿನಿಯತ ರಕ್ಷಣೆ (ಸ್ಟಾಚ್ಯುಟರಿ ಪ್ರೊಟೆಕ್ಷನ್) ದೊರಕುವುದಿಲ್ಲ.

ಒಂದು ಚೆಕ್ಕಿನ ಮೇಲೆ ಯಾವುದಾದರೂ ಬ್ಯಾಂಕಿನ ಹೆಸರನ್ನು ಅಡ್ಡಲಾಗಿ ಬರೆದಿದ್ದರೆ ಆಗ ಚೆಕ್ಕನ್ನು ವಿಶೇಷ ರೇಖನ ಮಾಡಿದೆಯೆಂದು ತಿಳಿಯಬೇಕು. ಬ್ಯಾಂಕಿನ ಹೆಸರಿನ ಜೊತೆಗೆ ಎರಡು ಸಮಾನಾಂತರ ರೇಖೆಗಳನ್ನು ಎಳೆಯಬಹುದು. ಇಲ್ಲವೇ ಬಿಡಬಹುದು. 'ಪರಕ್ರಾಮ್ಯವಲ್ಲ' ಎಂದು ಬರೆಯಬಹುದು. ಬರೆಯದೆಯೂ ಇರಬಹುದು. 'ಪ್ರಾಪ್ತಿಕರ್ತನ ಲೆಕ್ಕ' ಎಂದು ಬರೆಯುವುದೂ ಬಿಡುವುದೂ ರೇಖನಕಾರನ ಇಷ್ಟಕ್ಕೆ ಸೇರಿದ್ದು. ಚೆಕ್ಕನ್ನು ವಿಶೇಷ ರೇಖನ ಮಾಡಿದ್ದರೆ ಆಗ ಪಾವತಿದಾರ ಬ್ಯಾಂಕು ಚೆಕ್ಕಿನ ಮೊಬಲಗನ್ನು ವಿಶೇಷ ರೇಖನದಲ್ಲಿ ಸೂಚಿಸಿರುವ ಬ್ಯಾಂಕಿಗೇ, ಅಥವಾ ಅದು ಮತ್ತೆ ರೇಖನ ಮಾಡಿ, ತನ್ನ ಪ್ರತಿನಿಧಿಯಾಗಿ ಸೂಚಿಸುವ ಬ್ಯಾಂಕಿಗೇ, ಕೊಡಬೇಕು.

ಚೆಕ್ಕಿನ ರೇಖನದ ಅಂಗವಾಗಿ ಬರೆಯುವ 'ಪರಕ್ರಾಮ್ಯವಲ್ಲ' ಎಂಬುದಕ್ಕೆ ವಿಶೇಷವಾದ ಅರ್ಥವುಂಟು. ಹಾಗೆಂದು ಬರೆದರೆ ಚೆಕ್ಕನ್ನು ವರ್ಗಾಯಿಸುವ ಹಕ್ಕು ಕಳೆದುಹೋಗುವುದಿಲ್ಲ. ಆದರೆ ಅದರ ಪರಕ್ರಾಮ್ಯ ಗುಣವನ್ನು ತೆಗೆದು ಹಾಕಿದಂತೆ. ಅದನ್ನು ಕೊಡುವವನ ಹಕ್ಕಿನಲ್ಲಿ ಏನಾದರೂ ದೋಷವಿದ್ದರೆ, ಆ ಚೆಕ್ಕನ್ನು ಯಥಾಕ್ರಮದಲ್ಲಿ, ಸದ್ಭಾವನೆಯಿಂದ, ಪ್ರತಿಫಲಕ್ಕೆ ಪಡೆದವನಿಗೂ ಅದರ ಮೇಲೆ ಹಕ್ಕು ಪ್ರಾಪ್ತವಾಗುವುದಿಲ್ಲ. ವರ್ಗದಾರನ ಹಕ್ಕಿನ ಬಗ್ಗೆ ಖಾತರಿ ಮಾಡಿಕೊಂಡ ಮೇಲೆಯೇ ವರ್ಗಸ್ವೀಕರ್ತ ಅದನ್ನು ಪಡೆಯುವುದು ಅವನ ಹಿತದೃಷ್ಟಿಯಿಂದ ಸೂಕ್ತ. ಇಂಥ ಚೆಕ್ಕು ಒಂದು ವೇಳೆ ಕಳವಾದರೂ ಅದನ್ನು ಪಡೆದವನಿಗೆ ಅದರ ಮೇಲೆ ಹಕ್ಕು ಪ್ರಾಪ್ತವಾಗುವುದಿಲ್ಲ.

'ಪ್ರಾಪ್ತಿಕರ್ತನ ಲೆಕ್ಕ': ರೇಖನದ ಅಂಗವಾಗಿ ಹೀಗೆಂದು ಬರೆಯುವುದು ಕೂಡ ರಕ್ಷಣೆಯ ಉದ್ದೇಶದಿಂದಲೇ. ಪ್ರಾಪ್ತಿಕರ್ತನ ಪರವಾಗಿ ಚೆಕ್ಕಿನ ಮೊಬಲಗನ್ನು ವಸೂಲು ಮಾಡುವ ಬ್ಯಾಂಕು ಅದನ್ನು ಪ್ರಾಪ್ತಿಕರ್ತನ ಲೆಕ್ಕಕ್ಕೇ ಜಮಾ ಮಾಡಬೇಕೆಂಬ ಸೂಚನೆ ಇದು.

ಚೆಕ್ಕಿನ ರೇಖನದಿಂದ ಅದರ ಮೊಬಲಗು ಅನ್ಯರಿಗೆ ಪಾವತಿಯಾಗದಂತೆ ಎಚ್ಚರಿಕೆ ವಹಿಸಿದಂತಾಗುತ್ತದೆ. ಸಾಮಾನ್ಯ ರೇಖನ ಮಾಡಿದ್ದರೆ ಪಾವತಿದಾರ ಬ್ಯಾಂಕು ಇನ್ನೊಂದು ಬ್ಯಾಂಕಿಗಲ್ಲದೆ ಬೇರೆ ಯಾರಿಗೂ ಹಣ ಕೊಡದು. ವಿಶೇಷ ರೇಖನ ಮಾಡಿದ್ದರಂತೂ ಪಾವತಿ ಪಡೆಯಬೇಕಾದ ಬ್ಯಾಂಕೂ ನಿಶ್ಚಿತವಾಗಿರುತ್ತದೆ. ಪರಕ್ರಾಮ್ಯವಲ್ಲ ಎಂದು ಬರೆದಿದ್ದರೆ, ಪರಹಸ್ತಗತವಾದ ಚೆಕ್ಕು ಅನಧಿಕೃತರಿಗೆ ಪಾವತಿಯಾಗದಂತೆ ತಡೆಯಾಗುತ್ತದೆ. ಪ್ರಾಪ್ತಿಕರ್ತನ ಲೆಕ್ಕ ಎಂದು ಬರೆದಿದ್ದರೆ ಪ್ರಾಪ್ತಿಕರ್ತನ ಲೆಕ್ಕಕ್ಕೇ ಆ ಹಣ ಸೇರುವುದೆಂಬ ಭರವಸೆಯಿರುತ್ತದೆ. ಇಂಥ ಚೆಕ್ಕನ್ನು ಸಾಮಾನ್ಯ ಅಂಚೆಯ ಮೂಲಕ ಕಳಿಸಿದಾಗ ಒಂದು ವೇಳೆ ಚೆಕ್ಕು ಮಾರ್ಗಮಧ್ಯದಲ್ಲಿ ಕಳೆದುಹೋದರೂ ನಷ್ಟದ ಭಯವಿಲ್ಲ. ರೇಖನದ ಸೂಚನೆಗೆ ಅನುಗುಣವಾಗಿಯಲ್ಲದೆ ಅನ್ಯಥಾ ಪಾವತಿದಾರ ಬ್ಯಾಂಕು ಮೊಬಲಗನ್ನು ಪಾವತಿ ಮಾಡಿದ್ದರೆ, ಹಕ್ಕಿಲ್ಲದವನು ಪಾವತಿ ಪಡೆದುಕೊಂಡಿದ್ದರೆ, ಆಗ ಪಾವತಿದಾರ ಬ್ಯಾಂಕು ಚೆಕ್ಕಿನ ಒಡೆಯನಿಗೆ ಈ ಮೊಬಲಗನ್ನು ಪಾವತಿ ಮಾಡಲು ಬಾಧ್ಯವಾಗಿರುತ್ತದೆ. ತನಗೂ ಅವನಿಗೂ ಕರಾರಿನ ಸಂಬಂಧವಿಲ್ಲವೆಂದು ಅದು ವಾದಿಸಲಾರದು. ವಸೂಲಿದಾರ ಬ್ಯಾಂಕು ಕೂಡ ತನ್ನ ಗ್ರಾಹಕನ ಪರವಾಗಿ ಅಲ್ಲದೆ ಅನ್ಯನ ಪರವಾಗಿ ಚೆಕ್ಕಿನ ವಸೂಲಿ ಮಾಡಲಾಗದು.

ಚೆಕ್ಕಿನ ರೇಖನ ಚೆಕ್ಕಿನ ಸಾರಭೂತ (ಮೆಟೀರಿಯಲ್) ಅಂಗ. ಒಂದು ಸಾರಿ ಅದನ್ನು ಹಾಕಿದ ಮೇಲೆ ಚೆಕ್ಕು ಬರೆದವನ ವಿನಾ ಯಾರೂ ಅದನ್ನು ತೆಗೆಯುವಂತಿಲ್ಲ.

**ಪಾವತಿದಾರ ಬ್ಯಾಂಕಿನ ಕರ್ತವ್ಯಗಳು :** ಚೆಕ್ಕು ಹಾಜರಾದಾಗ ಪಾವತಿದಾರ ಬ್ಯಾಂಕು ಪರಿಗಣಿಸಬೇಕಾದ ಅಂಶಗಳಿವು: 1. ಚೆಕ್ಕು ಆ ಕಚೇರಿಯ ಮೇಲೇ ಬರೆದದ್ದಾಗಿರಬೇಕು. ಅದೇ ಬ್ಯಾಂಕಿನ ಇನ್ನೊಂದು ಕಚೇರಿಯ ಮೇಲೆ ಬರೆಯಲಾದ ಚೆಕ್ಕನ್ನು ಸಾಮಾನ್ಯವಾಗಿ ಆಧರಿಸಬಾರದು. 2. ಚೆಕ್ಕು ಕಾಲಾತೀತವಾದ್ದಾಗಲಿ, ಅನಾಗತ ದಿನಾಂಕದ್ದಾಗಲಿ ಆಗಿರಬಾರದು. 3. ಕಾನೂನಿನಲ್ಲಿ ವಿಧಿಸಿದಂತೆ ಚೆಕ್ಕನ್ನು ಬರೆದಿರಬೇಕು. 4. ಚೆಕ್ಕನ್ನು ಬ್ಯಾಂಕಿನ ವ್ಯವಹಾರದ ವೇಳೆಯಲ್ಲೇ ಹಾಜರುಪಡಿಸಿರಬೇಕು. ಇಲ್ಲವೆ ಚೆಕ್ಕಿನ ಡಬ್ಬದಲ್ಲಿ ಹಾಕಬೇಕು 5. ಚೆಕ್ಕನ್ನು ಪಾವತಿ ಮಾಡಲು ಗ್ರಾಹಕನ ಲೆಕ್ಕದಲ್ಲಿ ಸಾಕಷ್ಟು ಸಿಲ್ಕು ಇರಬೇಕು. ಓವರ್‌ಡ್ರಾಫ್ಟ್ ಒಡಂಬಡಿಕೆಯಿದ್ದರೆ ಲಭ್ಯವಿರುವ ಓವರ್‌ಡ್ರಾಫ್ಟ್ ಪರಿಮಿತಿಯೊಳಗೆ ಚೆಕ್ಕಿನ ಮೊಬಲಗು ಇರಬೇಕು. 6. ಚೆಕ್ಕು ಮಲಿನಗೊಂಡೋ ವಿಕೃತಗೊಂಡೋ ಹರಿದೋ ಇರಬಾರದು. ಅದರಿಂದ ಚೆಕ್ಕಿನ ರೇಖನ ಸಂಖ್ಯೆ, ದಿನಾಂಕ ಮುಂತಾದ ಸಾರಭೂತ ಅಂಗ ನಷ್ಟವಾಗಿದ್ದಿರಬಹುದು. 7. ಚೆಕ್ಕು ರೇಖಿತವೇ, ತೆರೆದದ್ದೇ? ರೇಖಿತವಾಗಿದ್ದರೆ ಅದು ಸಾಮಾನ್ಯ ರೇಖನವೇ ವಿಶೇಷ ರೇಖನವೇ? ಎಂಬುದನ್ನು ಪರಿಶೀಲಿಸಿ ಅದಕ್ಕನುಗುಣವಾಗಿ ಪಾವತಿ ಮಾಡಬೇಕಾಗುತ್ತದೆ. 8. ಚೆಕ್ಕಿನ ಹಿಂಬರಹ (ಎಂಡಾರ್ಸ್‌ಮೆಂಟ್) ಕ್ರಮಬದ್ಧವಾಗಿರುವುದು ಅವಶ್ಯ. 9. ಚೆಕ್ಕುಕರ್ತನ ಸಹಿಯನ್ನು ಬ್ಯಾಂಕು ತನ್ನೊಡನಿರುವ, ಅವನ ಮಾದರಿ ಸಹಿಯೊಂದಿಗೆ ಹೋಲಿಸಿ, ಸಹಿ ಆತನದೇ ಎಂದು ಮನವರಿಕೆ ಮಾಡಿಕೊಳ್ಳುವುದು ಅವಶ್ಯ. 10. ಚೆಕ್ಕು ಹಾಜರುಪಡಿಸಿದ ಸಂದರ್ಭದಲ್ಲಿ ಸಂದೇಹಾಸ್ಪದವಾದ್ದೇನೂ ಇರಬಾರದು. ಬ್ಯಾಂಕಿನ ಕರ್ತವ್ಯದಲ್ಲಿ ಲೋಪವೇನಾದರೂ ಆಗಿದ್ದರೆ ಅದು ಮಾಡಿದ ಪಾವತಿ ಸಕ್ರಮವಾಗದು. ಅಂಥ ಪಾವತಿಗಾಗಿ ಬ್ಯಾಂಕಿಗೆ ಪರಿನಿಯತ ರಕ್ಷಣೆ ದೊರಕುವುದಿಲ್ಲ.

ಚೆಕ್ಕಿನ ಪಾವತಿ ಮಾಡಕೂಡದೆಂದು ಅದನ್ನು ಬರೆದವ ಬ್ಯಾಂಕಿಗೆ ತಿಳಿವಳಿಕೆ ಬಂದಾಗ, ಗ್ರಾಹಕ ತೀರಿಕೊಂಡನೆಂಬ ಅಥವಾ ಮತಿವಿಕಲನಾದನೆಂಬ ಅಥವಾ ದಿವಾಳಿಯಾದನೆಂಬ ತಿಳಿವಳಿಕೆ ಬಂದಾಗ, ಗ್ರಾಹಕನ ಲೆಕ್ಕದಲ್ಲಿರುವ ಹಣವನ್ನು ಪಾವತಿ ಮಾಡಲಾಗದೆಂದು ನ್ಯಾಯಾಲಯದಿಂದ ಬ್ಯಾಂಕಿಗೆ ಆದೇಶ ಬಂದಾಗ, ಗ್ರಾಹಕ ತನ್ನ ಲೆಕ್ಕದ ಸಿಲ್ಕನ್ನು ಇನ್ನೊಬ್ಬನಿಗೆ ವಹಿಸಿಕೊಟ್ಟಿರುವ ಸಂಗತಿ ಬ್ಯಾಂಕಿಗೆ ಗೊತ್ತಾದಾಗ, ಠೇವಣಿ ಹಣ ಯಾವುದಾದರೂ ನ್ಯಾಸಕ್ಕೆ (ಟ್ರಸ್ಟ್) ಸಂಬಂಧಿಸಿದ್ದಾಗಿದ್ದು, ಗ್ರಾಹಕ ಅದನ್ನು ನ್ಯಾಸೋದ್ದೇಶಕ್ಕೆ ವ್ಯತಿರಿಕ್ತವಾಗಿ ಬಳಸಲಿದ್ದಾನೆಂಬುದು ಬ್ಯಾಂಕಿಗೆ ಗೊತ್ತಾದಾಗ ಬ್ಯಾಂಕು ಚೆಕ್ಕನ್ನು ಆದರಿಸತಕ್ಕದ್ದಲ್ಲ.

ಬ್ಯಾಂಕು ಚೆಕ್ಕನ್ನು ಅನಾದರಿಸಿದಾಗ ಅದಕ್ಕೆ ಕಾರಣ ತಿಳಿಸುವ ಚೀಟಿಯೊಂದಿಗೆ ಅದನ್ನು ಹಿಂದಿರುಗಿಸುವುದು ರೂಢಿ. ಅನಾದರಣೆಗೆ ಕಾರಣ ಕೊಡುವಾಗ ಎಚ್ಚರಿಕೆ ವಹಿಸಬೇಕು. ಅದು ಸತ್ಯವಾಗಿಯೂ ಗ್ರಾಹಕನ ಮರ್ಯಾದೆಗೆ ಊನವಾಗದಂತೆಯೂ ಗ್ರಾಹಕನ ಲೆಕ್ಕದ ಸ್ಥಿತಿಯ ರಹಸ್ಯ ಭಂಗವಾಗದಂತೆಯೂ ಇರುವುದು ಅವಶ್ಯ. ಅನಾದರಣೆಗೆ ಸಾಮಾನ್ಯವಾದ ಕಾರಣಗಳನ್ನೆಲ್ಲ ಪಟ್ಟಿ ಮಾಡಿ ಅಚ್ಚಿಸಿದ ನಮೂನೆಯಲ್ಲಿ ಪ್ರಸಕ್ತ ಚೆಕ್ಕಿನ ಅನಾದರಣೆಗೆ ಸಂಬಂಧಿಸಿದ ಕಾರಣದ ಹಿಂದೆ ಗುರುತು ಮಾಡಿ ಚೆಕ್ಕಿಗೆ ಲಗತ್ತಿಸುವುದು ಪದ್ಧತಿ.

**ವಸೂಲಿದಾರ ಬ್ಯಾಂಕು :** ತನ್ನ ಗ್ರಾಹಕನಿಗೆ ಬಂದ ಚೆಕ್ಕನ್ನು ಅವನ ಪರವಾಗಿ ವಸೂಲಿ ಮಾಡುವ ಹೊಣೆಯನ್ನು ಬ್ಯಾಂಕು ಹೊರುವುದುಂಟು. ಅಂಥ ಚೆಕ್ಕಿನ ಮೊಬಲಗನ್ನು ವಸೂಲಿದಾರ ಬ್ಯಾಂಕು ಮುಂದಾಗಿಯೇ ಧಾರಕನಿಗೆ (ಹೋಲ್ಡರ್) ಪಾವತಿ ಮಾಡಿದ್ದರೆ ಆಗ ಅದು ಅವನಿಂದ ಚೆಕ್ಕನ್ನು ತನ್ನ ಹೆಸರಿನಲ್ಲಿ ಪಡೆದುಕೊಂಡಂತೆ. ಆಗ ಅದೇ ಚೆಕ್ಕಿನ ಧಾರಕ. ಚೆಕ್ಕಿನ ವಸೂಲಿಯಾದ ಮೇಲೆಯೇ ಗ್ರಾಹಕನ ಲೆಕ್ಕಕ್ಕೆ ಧನಿಸುವ ಷರತ್ತಿನ ಮೇಲೆ ಚೆಕ್ಕನ್ನು ಅದು ಪಡೆದುಕೊಂಡಿದ್ದರೆ ಅದು ಗ್ರಾಹಕನ ಏಜೆಂಟಾಗಿ ವಸೂಲಿ ಮಾಡುತ್ತದೆ. ಏಜೆಂಟಾಗಿ ಅದು ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದರೆ ಅದಕ್ಕೆ ಪರಿನಿಯತ ರಕ್ಷಣೆಯುಂಟು. ವಸೂಲಿಗೆ ಮುಂಚೆಯೇ ಚೆಕ್ಕಿನ ಮೊಬಲಗನ್ನು ಧಾರಕನ ಲೆಕ್ಕಕ್ಕೆ ಧನಿಸಿದ್ದರೂ ಬ್ಯಾಂಕು ಅವನ ಏಜೆಂಟೆಂದೇ ಪರಿಗಣಿತವಾಗಿ ಪರಿನಿಯತ ರಕ್ಷಣೆ ಅದಕ್ಕೆ ದೊರಕುತ್ತದೆ.

**ಪ್ರಯಾಣಿಕರ ಚೆಕ್ಕುಗಳು** : ಊರಿಂದೂರಿಗೆ ಪ್ರಯಾಣ ಮಾಡುವವರ ಸೌಲಭ್ಯಕ್ಕಾಗಿ ಬ್ಯಾಂಕು ನೀಡುವ ಚೆಕ್ಕುಗಳು (ಟ್ರಾವೆಲರ್ಸ್ ಚೆಕ್ಸ್). ಈ ಚೆಕ್ಕುಗಳನ್ನು ಪಡೆಯುವ ಪ್ರಯಾಣಿಕರು ಪರಸ್ಥಳಗಳಲ್ಲಿ ಬ್ಯಾಂಕಿನ ಕಚೇರಿಗಳಲ್ಲಿ ಹಾಜರುಪಡಿಸಿ ಇವುಗಳಲ್ಲಿ ನಮೂದಿಸಲಾಗಿರುವ ಮೊಬಲಗುಗಳನ್ನು ಪಡೆಯಬಹುದು. ಅವರು ಇವುಗಳ ಮೇಲೆ ಎರಡು ಸಹಿ ಹಾಕಬೇಕು– ಇವನ್ನು ನೀಡುವ ಬ್ಯಾಂಕಿನ ಸಮ್ಮುಖದಲ್ಲಿ ಒಂದು, ಪಾವತಿ ಮಾಡುವಾಗ ಇನ್ನೊಂದು. ಇವೆರಡು ಸಹಿಗಳೂ ಒಬ್ಬನದೇ ಎಂಬುದು ಖಚಿತವಾದಾಗ ಬ್ಯಾಂಕು ಮೊಬಲಗನ್ನು ಪಾವತಿ ಮಾಡುತ್ತದೆ. ಪ್ರಯಾಣ ಮಾಡುವಾಗ ಹೆಚ್ಚು ನಗದನ್ನು ತೆಗೆದುಕೊಂಡು ಹೋಗುವ ತೊಂದರೆ ಈ ಚೆಕ್ಕುಗಳಿಂದ ತಪ್ಪುತ್ತದೆ.

**ಚೆಕ್ಕುಗಳ ಅನುಕೂಲಗಳು :** ಒಳನಾಡಿನ ವ್ಯವಹಾರಗಳಲ್ಲಿ ಚೆಕ್ಕು ಅತ್ಯಂತ ಉಪಯುಕ್ತ ಪಾವತಿ ಸಾಧನವಾಗಿದೆ. ಒಬ್ಬರು ಇನ್ನೊಬ್ಬರಿಗೆ ಹಣ ಕೊಡಬೇಕಾದಾಗ ಚೆಕ್ಕಿನ ರೂಪದಲ್ಲಿ ಪಾವತಿ ಮಾಡುವುದು ಅತ್ಯಂತ ಅನುಕೂಲಕರ. ತೇವಣಿ ವಿಧಿಮಾನ್ಯವಲ್ಲವಾದರೂ ಎಲ್ಲ ಮುಂದುವರಿದ ದೇಶಗಳಲ್ಲೂ ಚೆಕ್ಕು ವಿಶೇಷವಾಗಿ ಮಾನ್ಯವಾಗಿರುತ್ತದೆ. ಇದಕ್ಕೆ ನಂಬಿಕೆಯೇ ಆಧಾರ. ಬ್ಯಾಂಕು ತೇವಣಿಗಳ ಸುರಕ್ಷತೆಗೆ ಸರ್ಕಾರ ಸೂಕ್ತ ಏರ್ಪಾಡು ಮಾಡಿರುತ್ತದೆ. ಚೆಕ್ಕುಗಳನ್ನು ಹಣವಾಗಿ ಬಳಸುವುದರಿಂದ ಅನೇಕ ಅನುಕೂಲಗಳುಂಟು. ಕಳವಿನ ನಷ್ಟಸಂಭವ ಕಡಿಮೆ. ಪಾವತಿ, ಸ್ವೀಕೃತಿ ಅನುಕೂಲಕರ. ನಗದನ್ನು ಹೊರುವ ಅಗತ್ಯವಿಲ್ಲ. ಚಿಲ್ಲರೆ ಕೊಡುವ, ಪಡೆಯುವ ಕಷ್ಟವಿಲ್ಲ. ಅವುಗಳ ಸಾಗಣೆ ಸುಲಭ. ಲೆಕ್ಕ ಸರಳ, ಪ್ರತ್ಯೇಕ ರಸೀತಿ ಪಡೆಯದಿದ್ದರೂ ಪಾವತಿಗೆ ದಾಖಲುಂಟು. ಒಂದು ವೇಳೆ ಪಾವತಿ ಮಾಡಿದ್ದು ತಪ್ಪಾಯಿತೆನಿಸಿದರೆ, ಚೆಕ್ಕು ವ್ಯವಹಾರ್ಯ ಸಾಧನವಾದ್ದರಿಂದ ಅದಕ್ಕೆ ಚಲಾವಣೆ ನೀಡಬಹುದು. ಅದನ್ನು ಕೈಯಿಂದ ಕೈಗೆ ವರ್ಗಾಯಿಸಬಹುದು. ಆದರೆ ವಿಧಿಮಾನ್ಯ ಹಣದಂತೆ (ಲೀಗಲ್ ಟೆಂಡರ್ ಮನಿ) ಇದಕ್ಕೆ ಸಾರ್ವತ್ರಿಕ ಸ್ವೀಕಾರಗುಣ (ಯೂನಿವರ್ಸಲ್ ಅಕ್ಸೆಪ್ಟಬಿಲಿಟಿ) ಇಲ್ಲದಿರುವುದೊಂದೇ ಮುಖ್ಯ ಕೊರತೆ. (ಎಚ್.ಎಸ್.ಕೆ.)

**ಚೆಟ್ಟಿ, ಎಂ.ಎ. :** 1907–2002. ಮುರಿಗೆಪ್ಪ ಅಡವೆಪ್ಪ ಚೆಟ್ಟಿಯವರು ಬೆಳಗಾವಿಯ ಅಥಣಿಯಲ್ಲಿ 8–3–1907 ರಂದು ಜನಿಸಿದರು. ಮಾಧ್ಯಮಿಕ ಶಿಕ್ಷಣದೊಂದಿಗೆ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮುಂಬಯಿಯ ಜೆ.ಜೆ. ಕಲಾಶಾಲೆಯಿಂದ ಚಿನ್ನ ಹಾಗೂ ಬೆಳ್ಳಿ ಪದಕ ಸಹಿತ ಡಿಪ್ಲೊಮಾ ಪದವಿ ಪಡೆದರು. ಮುಂದೆ ಸೊಲ್ಲಾಪುರದಲ್ಲಿದ್ದಾಗ ಕಲಾ ಸ್ಪರ್ಧೆಯೊಂದರಲ್ಲಿ ವಿಶ್ವರೂಪದರ್ಶನ ಚಿತ್ರ ರಚಿಸಿ ಪ್ರಥಮ ಬಹುಮಾನ ಪಡೆದುದು ಮುಂದಿನ ಕಲಾವೃತ್ತಿ ಜೀವನಕ್ಕೆ ನಾಂದಿಯಾಯಿತು. ಅಲ್ಲಿ ಸಾಕಷ್ಟು ಕಲಾಕೃತಿಗಳ ರಚನೆ ಮಾಡಿದ್ದು ಮುಂದೆ ತಮ್ಮ ಎಂದಿನ ಆಶ್ರಯದಾತ ಚಿಕ್ಕಪ್ಪನವರ ಆದೇಶದಂತೆ ಗದುಗಿಗೆ ಬಂದು ಅಲ್ಲಿಯೇ ನೆಲೆನಿಂತರು. ಕೌಟುಂಬಿಕ ಸಾಲಗಳ ತೀರುವಳಿಯಲ್ಲದೆ ಈಗಾಗಲೇ ವಿವಾಹಿತರಾಗಿದ್ದ ಚೆಟ್ಟಿಯವರ ಸಾಂಸಾರಿಕ ವೆಚ್ಚಗಳ ಪೂರೈಕೆಯೂ ಕಲಾಕೃತಿ ರಚನೆಗಳಿಂದ ನಡೆಯುತ್ತಿತ್ತು ಮತ್ತು ಅವರು ಸಾಕಷ್ಟು ಸಂಖ್ಯೆಯಲ್ಲಿ ಕಲಾ ಕೃತಿರಚನೆ ಮಾಡಿದರು.

ಇದೇ ವೇಳೆಗೆ ಟಿ.ಪಿ.ಅಕ್ಕಿಯವರು ಆರಂಭಿಸಿದ ವಿಜಯ ಕಲಾ ಮಂದಿರದಲ್ಲಿ ಕಲಾಶಿಕ್ಷಕರಾಗಿ, ನಂತರ ಉಪ ಪ್ರಾಚಾರ್ಯರಾಗಿ ಸೇವೆಸಲ್ಲಿಸುವ ಅವಕಾಶ ದೊರೆಯಿತು. 1947–72ರವರೆಗೆ ಸೇವೆ ಸಲ್ಲಿಸಿದ್ದು ನಿವೃತ್ತಿಯ ಅನಂತರವೂ ಕಲಾಶಾಲೆಯೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು. ಕಲಾಶಿಕ್ಷಕರಾಗಿದ್ದಾಗ ಮುಂಬಯಿ ಹಾಗೂ ಪುಣೆಗಳಲ್ಲಿ ಕಲಾಪರೀಕ್ಷಕರಾಗಿಯೂ ಸೇವೆ ಸಲ್ಲಿಸಿದ್ದರು. ಗೋಕಾಕ್ ವರದಿ ಜಾರಿಗಾಗಿ ಉಳಿದವರೊಂದಿಗೆ ಉಪವಾಸ ಸತ್ಯಾಗ್ರಹ ಕೂಡ ಮಾಡಿದ್ದರು.

ಚೆಟ್ಟಿಯವರು ರಚಿಸಿದ ಕಲಾಕೃತಿಗಳ ಲೆಕ್ಕ ಪೂರ್ಣವಾಗಿ ದೊರೆಯುವುದಿಲ್ಲ. ಶ್ರವಣಬೆಳಗೊಳದ ಭಿತ್ತಿಚಿತ್ರಗಳನ್ನು ಪ್ರತಿಮಾಡುವುದೂ ಸೇರಿದಂತೆ ಕಿತ್ತೂರು ಚೆನ್ನಮ್ಮ, ಡಿ.ಸಿ.ಪಾವಟೆ, ರಂಗರಾವ್ ದಿವಾಕರ, ತೋಂಟದಾರ್ಯ ಜಗದ್ಗುರುಗಳು, ಹಳ್ಳಿಕೇರಿ ಗುದ್ಲೆಪ್ಪ, ಮುರುಘರಾಜೇಂದ್ರ ಶ್ರೀಗಳು, ಇಂದಿರಾಗಾಂಧಿ, ಜಯಚಾಮರಾಜೇಂದ್ರ ಒಡೆಯರ್ ಮುಂತಾದವರ ಭಾವಚಿತ್ರಗಳು, ಭಗವದ್ಗೀತೆಯೂ ಸೇರಿದಂತೆ, ಚಳ್ಳಗುರ್ಕಿ ಎರ್ರಿ ತಾತರ ಚರಿತ್ರೆ, ಅಪರಾಧಿಯ ಫಿಲಾರೇಶ್ವರ ಪುರಾಣ, ನಿಜಲಿಂಗೇಶ್ವರ ಪುರಾಣ, ಸಾವಳಗಿ ಶಿವಲಿಂಗೇಶ್ವರ ಪುರಾಣ, ಬಸವಪುರಾಣ, ಮುರುಘರಾಜೇಂದ್ರ ಪುರಾಣ, ಚಾಮರಸನ ಪ್ರಭುಲಿಂಗಲೀಲೆ, ಚನ್ನಬಸವಪುರಾಣ, ಮುಳಗುಂದದ ಬಾಲಲೀಲಾಸ್ವಾಮಿ ಪುರಾಣ ಇವೇ ಮುಂತಾದ ಪುಸ್ತಕಗಳಲ್ಲಿ ಪೂರಕ ಚಿತ್ರಗಳೆಂಬಂತೆ ಅಳವಡಿಸಲು ಸಾವಿರಾರು ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಚೆಟ್ಟಿಯವರದೇ ದಿನಚರಿಯಿಂದ 1928 ರಿಂದ 87ರ ವರೆಗೆ ಸುಮಾರು ಒಂಬತ್ತು ಸಾವಿರ ಕಲಾಕೃತಿಗಳನ್ನು ರಚಿಸಿದಂತೆ ತಿಳಿದುಬರುತ್ತದೆ. ಮುರಿಗೆಪ್ಪ ಚೆಟ್ಟಿಯವರ ಬಗ್ಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯ ದಿಂದ ಸಂಶೋಧನಾ ಗ್ರಂಥ ರಚಿಸಿ ಪಿಎಚ್.ಡಿ ಪದವಿ ಪಡೆದಿರುವ ಲಕ್ಷ್ಮೀದೇವಿ ಗವಾಯಿಯವರು ಚೆಟ್ಟಿಯವರ ಜೀವನ, ಸಹಪಾಠಿಗಳು, ವೃತ್ತಿಸಾಧನೆ ಹಾಗೂ ಕಲಾಕೃತಿಗಳ ಬಗ್ಗೆ ಆಳವಾಗಿ ಅಭ್ಯಾಸಮಾಡಿದ್ದಾರೆ. ಗ್ರಂಥದಲ್ಲಿ ಚೆಟ್ಟಿಯವರ ರೇಖಾಚಿತ್ರಗಳು, ಭಾವಚಿತ್ರ, ಸಂಯೋಜನಾ ಚಿತ್ರ, ಗ್ರಂಥಗಳಿಗೆ ಪೂರಕ ಚಿತ್ರಗಳು ಇತ್ಯಾದಿ ಸು. 400 ಚಿತ್ರಗಳನ್ನು ವಿಮರ್ಶಿಸಿದ್ದಾರೆ.

ಬೇಡಿಕೆಗಾಗಿ ಪೂರೈಸಿದ ಭಾವಚಿತ್ರಗಳು ಭಾವಪೂರ್ಣವಾಗಿ ನೈಜಶೈಲಿಯಲ್ಲಿದ್ದರೂ ಉಳಿದಂತೆ ರೂಪದರ್ಶಿ ಇರಿಸಿ ಅಭ್ಯಾಸಕ್ಕಾಗಿ ಹಾಗೂ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ನೀಡುವ ವೇಳೆಯಲ್ಲಿ ರಚಿಸಿರುವುದು. ಇವುಗಳಲ್ಲೂ ತೀರ ಜನಸಾಮಾನ್ಯರು, ಆರ್ಥಿಕವಾಗಿ ಹಿಂದುಳಿದವರ, ಲಂಬಾಣಿಗಳ ಆದರೆ ಚಿತ್ರರಚನೆಗೆ ಸೂಕ್ತವೆಂಬಂತೆ ಮೈಕಟ್ಟು ಉಳ್ಳವರ ಚಿತ್ರಗಳಿದ್ದು, ಚೆಟ್ಟಿಯವರ ಕಲಾತ್ಮಕ ದೃಷ್ಟಿ ಸ್ಪಷ್ಟವಾಗಿ ಕಂಡುಬರುತ್ತದೆ. ಸಂಯೋಜನಾ ಚಿತ್ರಗಳು ಸ್ವಲ್ಪಮಟ್ಟಿಗೆ ಜನಪದ ಶೈಲಿ ಎಂದೆನಿಸಿದರೂ ನೈಜ ಶೈಲಿಯ ಹಲವಾರು ವ್ಯಕ್ತಿಗಳು, ಪ್ರಕೃತಿ, ಹಿನ್ನೆಲೆ–ಮುನ್ನೆಲೆಗಳಿಂದ ಕೂಡಿ ಒಂದು ಕಥಾ ಸಂದರ್ಭದ ದೃಶ್ಯವನ್ನು ವಿವರವಾಗಿ ಪುನಃ ಉಲ್ಲೇಖಿಸುವಂತೆ ಮಾಡುತ್ತದೆ. ಫಲಕದಲ್ಲಿ ಅಷ್ಟೊಂದು ವ್ಯಕ್ತಿಗಳು, ವಸ್ತುಗಳು ಇದ್ದರೂ ವಿವರಗಳು ಗೊಂದಲವಾಗದಂತೆ ಆಕಾರಗಳು ಅಡ್ಡಹಾಯ್ದುಹೋಗದಂತೆ ಜಾಣ್ಮೆಯಿಂದ ರೂಪಿಸಿರುವಂತಹವು. ಆಕಾರಗಳ ಭಾವಭಂಗಿಗಳು ವೈವಿಧ್ಯ ಹೊಂದಿದ್ದು ವಿವಿಧ ದೃಷ್ಟಿಕೋನಗಳಿಂದ ಕಾಣುವಂತೆ ರಚಿಸಿರುವಂತಹವು. ಈ ಬಗೆಯ ಸಂಯೋಜನೆ ಸಾಧ್ಯವಾಗಿರುವುದು ಚೆಟ್ಟಿಯವರು ದೈನಂದಿನ ಕಾಯಕವೆಂಬಂತೆ, ಪ್ರತಿನಿತ್ಯದ ದೃಶ್ಯಗಳನ್ನು 'ಸ್ಕೆಚ್' ಮಾಡುತ್ತಿದ್ದುದೇ ಆಗಿದೆ. ಈ ಬಗೆಯ ಶ್ರೇಷ್ಠ ಬಿಡುಗೈ ರೇಖಾಚಿತ್ರಗಳ (ರ್‍ಯಾಪಿಡ್ ಸ್ಕೆಚಿಂಗ್) ಸಂಪುಟಗಳೇ ಅವರಲ್ಲಿದ್ದುವು.

ಚೆಟ್ಟಿಯವರು ವ್ಯಾಪಕವಾಗಿ ದೇಶಸಂಚಾರ ನಡೆಸಿ ಸ್ಥಳದಲ್ಲೇ ಚಿತ್ರ ರಚಿಸಿರುವರಾದರೂ ವ್ಯವಸ್ಥಿತವಾಗಿ ಪ್ರದರ್ಶಿಸಿದ ಅಥವಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು ಕಡಿಮೆ. ಸ್ಥಳೀಯವಾಗಿ ಏಕವ್ಯಕ್ತಿ ಪ್ರದರ್ಶನ ಮಾಡಿದ್ದಿರಬಹುದಾದರೂ ಹೊರ ಶಹರ, ರಾಜ್ಯಗಳಲ್ಲಿ ಮಾಡಿದಂತಿಲ್ಲ. ಸೊಲ್ಲಾಪುರದಲ್ಲಿ ಭಗವದ್ಗೀತೆಯ ಚಿತ್ರಕ್ಕೇ ಬಹುಮಾನ ಬಂದಂತೆ ಅಕ್ಕಲಕೋಟೆಯ ಮಹಾರಾಜರು ಇವರ ಕಲಾಕೃತಿಗಳನ್ನು ಮೆಚ್ಚಿ ಸುವರ್ಣ ಪದಕವಿತ್ತು ಗೌರವಿಸಿದ್ದರು. ವಿದ್ಯಾರ್ಥಿದೆಸೆಯಲ್ಲಿದ್ದಾಗ ಗ್ಲಾಡ್‌ಸ್ಟನ್ ಸಾಲೋಮನ್ ಅವರ ವಿದ್ಯಾರ್ಥಿವೇತನ (1936) ಪ್ರದರ್ಶನ, ಸೊಲ್ಲಾಪುರದ ಪ್ರದರ್ಶನ (1939), ಅಖಿಲಭಾರತ 45ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕಾರವಾರ (1965) ಮೈಸೂರು ದಸರಾ ಪ್ರದರ್ಶನ (1975), ಏಳನೇ ಅಖಿಲ ಕರ್ನಾಟಕ ಜನಪದ ಸಮ್ಮೇಳನ (1980), ಅಖಿಲ ಭಾರತ ವೀರಶೈವ ಮಹಾಸಭಾದ ಇಪ್ಪತ್ತನೇ ಅಧಿವೇಶನ (ಮೈಸೂರು 1983) ಗಳಲ್ಲಿ ಪ್ರಶಸ್ತಿ, ಸನ್ಮಾನಗಳು ಬಂದಿದ್ದವು. ರಾಜ್ಯ ಲಲಿತಕಲಾ ಪ್ರಶಸ್ತಿ (1988) ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ (1996) ಹಾಗೂ ಎಂ ಟಿ ವಿ ಆಚಾರ್ಯ ಪ್ರಶಸ್ತಿ (1996)ಗಳು ದೊರೆತಿದ್ದವು. ಚೆಟ್ಟಿಯವರು 25.5.2002ರಂದು ನಿಧನಹೊಂದಿದರು. *

**ಚೆನ್ನಕೇಶವಯ್ಯ, ಎನ್. :** 1895–1986. ಕರ್ಣಾಟಕ ಸಂಗೀತ ವಿದ್ವಾಂಸರು. ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ನಾಟಹಳ್ಳಿಯಲ್ಲಿ ಜನಿಸಿದರು. ತಂದೆ ಕೇಶವಯ್ಯ, ತಾಯಿ ಲಕ್ಷ್ಮೀದೇವಮ್ಮ. ಹೇಮಾವತಿ ನದೀತೀರದ ಪ್ರಶಾಂತ ವಾತಾವರಣದಲ್ಲಿ ವಾಸ ಮಾಡುತ್ತಿದ್ದ ಕೇಶವಯ್ಯನವರು ಸಂಗೀತದಲ್ಲಿ ತಕ್ಕಮಟ್ಟಿನ ಸಾಧನೆ ನಡೆಸಿದ್ದರು. ದೇವರ ನಾಮಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದ ಇವರು ಭಾರತವಾಚನದಲ್ಲೂ ವಿಶೇಷವಾದ ಆಸಕ್ತಿ ಬೆಳೆಸಿಕೊಂಡಿದ್ದರು. ತಮ್ಮ ಸಂಗೀತಪ್ರೇಮದಿಂದ ಸುತ್ತಣ ಜನರ ಪ್ರೀತಿ ವಿಶ್ವಾಸ ಗಳಿಸಿದ್ದ ಕೇಶವಯ್ಯನವರು ಸಂಗೀತದ ಸಣ್ಣಪ್ಪನವರೆಂದೇ ಪ್ರಸಿದ್ಧರಾಗಿದ್ದರು. ತಾಯಿ ಲಕ್ಷ್ಮೀದೇವಮ್ಮನವರೂ ಸಂಗೀತಪ್ರಿಯೆ. ತಾಯಿ ತುಂಬಿದ ಭಕ್ತಿಭಾವದಿಂದ ದೇವರನಾಮಗಳನ್ನು ಹಾಡುತ್ತಿದ್ದರು. ತಂದೆ ತಾಯಿಗಳ ಸಂಗೀತದ ಒಲುಮೆ ಚಿಕ್ಕಂದಿನಲ್ಲಿಯೇ ಇವರ ಮೇಲೆ ಪ್ರಭಾವ ಬೀರಿತು.

ಇವರು ಲೋಯರ್ ಸೆಕೆಂಡರಿ ಪರೀಕ್ಷೆಯನ್ನು (1909) ಮುಗಿಸಿ ಮೈಸೂರಿನಲ್ಲಿ ವ್ಯಾಸಂಗ ಮುಂದುವರಿಸಿ ಅಪ್ಪರ್ ಸೆಕೆಂಡರಿ (1912), ಉಪಾಧ್ಯಾಯ ತರಬೇತಿ (1914), ಡ್ರಾಯಿಂಗ್ ಡಿಪ್ಲೊಮಾ, ವ್ಯವಸಾಯ ಮತ್ತು ಪಶುವೈದ್ಯ ತರಬೇತಿ ಪರೀಕ್ಷೆಗಳಲ್ಲೂ

ಜಯಶೀಲರಾದರು. ಸಂಗೀತವೇ ಇವರ ಬಾಳಿನ ಸಕಲವಾಗಿತ್ತಾದರೂ ಜೀವನಕ್ಕೆ ಬೇರೆ ವೃತ್ತಿಯನ್ನವಲಂಬಿಸಿ ಸಂಗೀತಸಾಧನೆಯನ್ನು ಸ್ವಂತ ಸುಖಕ್ಕಾಗಿ ಮುಂದುವರಿಸಬೇಕೆಂಬುದು ಇವರ ಅಭಿಲಾಷೆಯಾಗಿತ್ತು. ಇದಕ್ಕಾಗಿ ಇವರು ಮೈಸೂರಿನಲ್ಲಿ ವೈಣಿಕ ವಿದ್ವಾನ್ ಶಿವರಾಮಯ್ಯನವರಲ್ಲಿ ನಾಲ್ಕು ವರ್ಷಗಳ ಕಾಲ ಸಂಗೀತಾಭ್ಯಾಸ ಮಾಡಿದರು. ಶಿವರಾಮಯ್ಯನವರ ತಂದೆಯವರಾದ ಪದ್ಮನಾಭಯ್ಯನವರು ಮೈಸೂರು ವಾಸುದೇವಾಚಾರ್ಯರ ಗುರುಗಳಾಗಿದ್ದುದರಿಂದ ಇವರ ಸಂಗೀತಕ್ಕೂ ವಾಸುದೇವಚಾರ್ಯರದಕ್ಕೂ ಇರುವ ಸಾಮ್ಯವನ್ನು ಗುರುತಿಸಬಹುದು. ಪ್ರತಿಯೊಂದು ಗಮಕವೂ ಸರಿಯಾದ ಪ್ರಮಾಣದಲ್ಲಿರುವಂತೆ ಶ್ರುತಿಪೂರ್ಣವಾದ, ಭಾವಪೂರ್ಣವಾದ, ಪ್ರಶಾಂತಮನಸ್ಕವಾದ ಹಾಡುಗಾರಿಕೆಗೆ ಇವರು ಪ್ರಸಿದ್ಧರಾಗಿದ್ದರು.

ಶಿವರಾಮಯ್ಯನವರ ಮನೆಯಲ್ಲಿ ಪ್ರತಿ ಏಕಾದಶಿಯಂದು ನಡೆಯುತ್ತಿದ್ದ ಭಜನೆಯಲ್ಲಿ ವಾಸುದೇವಾಚಾರ್ಯರೂ ಭಾಗವಹಿಸುತ್ತಿದ್ದರು. ಚೆನ್ನಕೇಶವಯ್ಯನವರು ಅವರ ಹಾಡುಗಾರಿಕೆಯಿಂದ ಪ್ರಭಾವಿತರಾದರಲ್ಲದೆ, ಅವರಲ್ಲೂ ಅಭ್ಯಾಸ ಮಾಡಿದರು. ಶಿವರಾಮಯ್ಯನವರಿಂದ ಸಂಗೀತದ ಲಕ್ಷ್ಯ ಹಾಗೂ ಲಕ್ಷಣದ ಖಚಿತ ನಿರ್ಣಯಜ್ಞಾನ ಪಡೆದಿದ್ದ ಚೆನ್ನಕೇಶವಯ್ಯನವರು ವಾಸುದೇವಾಚಾರ್ಯರ ನಿಕಟ ಸಹವರ್ತಿಯಾಗಿ ಹಲವು ವರ್ಷಗಳ ಕಾಲ ಸಾಧನೆ ಮಾಡಿದರಲ್ಲದೆ, ಆಚಾರ್ಯರ ಕೃತಿಗಳನ್ನು ಸ್ವರಸಹಿತ ಬರೆದು ಅವುಗಳ ಸಂಕಲನದ ಪ್ರಕಟನೆಯಲ್ಲಿ ನೆರವಾದರು. ವಾಸುದೇವಾಚಾರ್ಯರು ತಮ್ಮ ಹೊಸ ಕೃತಿಗಳನ್ನು ಚೆನ್ನಕೇಶವಯ್ಯನವರಿಗೆ ಹೇಳಿ ಅವರಿಂದ ಬರೆಯಿಸುತ್ತಿದ್ದರು. ಚೆನ್ನಕೇಶವಯ್ಯನವರು ಈ ಕೆಲಸವನ್ನು ಮುಂದುವರಿಸಿ ಅನೇಕ ಅಪೂರ್ವ ಕೃತಿಗಳನ್ನು ಸಂಗ್ರಹಿಸಿದರು.

ಚೆನ್ನಕೇಶವಯ್ಯವನವರು ಮೈಸೂರಿನಲ್ಲಿ ಶಾರದಾವಿಲಾಸ ಶಾಲೆಯಲ್ಲಿ ಉಪಾಧ್ಯಾಯರಾದರು. ಉದ್ಯೋಗದ ವೇಳೆ ಬಿಟ್ಟು ಇವರ ದಿನದ ಉಳಿದ ಕಾಲವೆಲ್ಲ ಸಂಗೀತಕ್ಕೆ ಮೀಸಲಾಯಿತು. ದೇಶದ ಅನೇಕ ಕಡೆಗಳಲ್ಲಿ ಇವರ ಕಚೇರಿಗಳು ಏರ್ಪಡುತ್ತಿದ್ದವು. ತಮ್ಮ ಬಿಡುವಿನ ವೇಳೆಯಲ್ಲಿ ಇವರು ಅನೇಕ ಶಿಷ್ಯರಿಗೆ ಪಾಠ ಹೇಳಿಕೊಟ್ಟರು. ಅವರಲ್ಲಿ ಅನೇಕರು ಸುಪ್ರಸಿದ್ಧ ಸಂಗೀತಗಾರರು.

ಚೆನ್ನಕೇಶವಯ್ಯನವರು 1944ರಲ್ಲಿ ಮೈಸೂರಿನ ಆಸ್ಥಾನವಿದ್ವಾಂಸರಾದರು. ಜಯಚಾಮರಾಜ ಒಡೆಯರು ರಚಿಸಿದ ತೊಂಬತ್ತಾರು ಕೀರ್ತನೆಗಳನ್ನು ಇವರು ಮಹಾರಾಜರ ಸಮ್ಮುಖದಲ್ಲಿ ಹಾಡಿದರಲ್ಲದೆ ಅವನ್ನು ಚಿಟ್ಟೆಸ್ವರ ಸಹಿತ ಬರೆದಿಟ್ಟರು. ಮೈಸೂರಿನಲ್ಲಿ ಸೇರಿದ್ದ ಸಂಗೀತ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು (1963). ಆ ಸಮಯದಲ್ಲಿ ಇವರಿಗೆ ಗಾನಕಲಾಸಿಂಧು ಎಂಬ ಪ್ರಶಸ್ತಿ ದೊರಕಿತು. ಸಂಗೀತ ಕಲಾರತ್ನ, ಸಂಗೀತ ವಿದ್ಯಾನಿಧಿ ಇವರಿಗೆ ದೊರೆತಿದ್ದ ಇತರ ಬಿರುದುಗಳು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಪ್ರಾಪ್ತವಾದ್ದು 1972ರಲ್ಲಿ.

ಹಾಡುಗಾರಿಕೆಯ ಜೊತೆಗೆ ಸಂಶೋಧನ ಪ್ರವೃತ್ತಿಯೂ ಚೆನ್ನಕೇಶವಯ್ಯನವರಲ್ಲಿ ಬೆಳೆದುಬಂದಿದೆ. ವಾಸುದೇವಾಚಾರ್ಯ ಹಾಗೂ ಜಯಚಾಮರಾಜ ಒಡೆಯರ ಕೃತಿಗಳಲ್ಲದೆ ಇವರು ಮೈಸೂರು ಸದಾಶಿವರಾಯರು, ಚಿಂತಲಪಲ್ಲಿ ವೆಂಕಟರಾಯರ ತಾತಂದಿರಾದ ಗವಿರಂಗದಾಸರು ಮೊದಲಾದ ಅನೇಕ ವಾಗ್ಗೇಯಕಾರರ ಕೃತಿಗಳನ್ನು ಸ್ವರಹಾಕಿ ಬರೆದಿಟ್ಟಿದ್ದಾರೆ. ಹರಿದಾಸ ಕೀರ್ತನಸುಧಾಸಾಗರ ಎಂಬುದು ಚೆನ್ನಕೇಶವಯ್ಯನವರ ಮಹತ್ತರ ಕೃತಿ. ಇದಲ್ಲದೆ ಇವರು ಇನ್ನೂ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಕೆಲವನ್ನು ಪ್ರಕಟಿಸಿದ್ದಾರೆ. ವೀಣೆ ಸುಬ್ಬಣ್ಣನವರ ಜೀವನ ಸಾಧನೆಗಳನ್ನು ಕುರಿತ ಪುಸ್ತಕ ರಚಿಸಿದ್ದಾರೆ. ಆಲಾಪನಾ ಪದ್ಧತಿ, ತಾನ ಮತ್ತು ಪಲ್ಲವಿ ಎಂಬುದು ಇವರ ಇನ್ನೊಂದು ಕೃತಿ.

(ಎಚ್.ಎಸ್.ಕೆ.)

**ಚೆನ್ನಪ್ಪ :** ಸು. 1750. ವೀರಶೈವ ಕವಿ. ಹಂಪೆಗೆ ದಕ್ಷಿಣದಲ್ಲಿರುವ ನಿಡಗಲ್ಲು ಈತನ ಸ್ಥಳ. ಗುರು ಪಂಚವಣ್ಣಿಗೆ ಚೆನ್ನಮಲ್ಲಿಕಾರ್ಜುನ. ಈತನ ಗ್ರಂಥ ಶಿವಶರಣ ಲೀಲಾಮೃತ. ಹನ್ನೊಂದು ಸಂಧಿಗಳಿರುವ ಈ ಕೃತಿ ಯಕ್ಷಗಾನದ ಧಾಟಿಯಲ್ಲಿದೆ. ಬಸವಣ್ಣನವರ ಮತ್ತು ಅವರ ಕಾಲದಲ್ಲಿನ ಶಿವಶರಣರ ಚರಿತಗಳನ್ನು ಇದರಲ್ಲಿ ಹೇಳಿದೆ. ಗ್ರಂಥಾರಂಭದಲ್ಲಿ ಹರಿಹರ, ರಾಘವಾಂಕ, ಭೀಮಕವಿ, ಚಾಮರಸ, ಗುಬ್ಬಿಯ ಮಲ್ಲಣ್ಣಾರ್ಯ ಮೊದಲಾದ ಪೂರ್ವ ಕವಿಗಳ ಸ್ಮರಣೆ ಬರುತ್ತದೆ.

ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ (ಸು.1825) ರಚಿತವಾದ ಸಿರಿಯಾಳ ಚರಿತ್ರೆ ಎಂಬ ಯಕ್ಷಗಾನಕ್ಕೆ ಚೆನ್ನಪ್ಪ ಕವಿಯ ಈ ಕೃತಿಯೇ ಆಧಾರವೆಂಬ ವಿಷಯ ಆ ಗ್ರಂಥದಿಂದ ತಿಳಿದುಬರುತ್ತದೆ.

(ಜಿ.ಎಸ್.ಎಸ್.)

**ಚೆನ್ನಬಸವಣ್ಣ :** ಸು. 1143–67. ಬಸವಣ್ಣನವರ ಸೋದರಳಿಯ. ನಾಗಲಾಂಬಿಕೆಯ ಪುತ್ರ. ಬಸವಣ್ಣನವರು ಈತನ ದೀಕ್ಷಾಗುರುವೂ ಹೌದು. ಶಿವಪ್ರಸಾದೋದ್ಭವನೆಂದೂ ಬಸವಪ್ರಸಾದೋದ್ಭವನೆಂದೂ ಕಕ್ಕಯ್ಯ ಪ್ರಸಾದೋದ್ಭವನೆಂದೂ ಈತನ ಜನನ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಸಿಂಗಿರಾಜ ಪುರಾಣದ ಪ್ರಕಾರ ಈತನನ್ನು ಶಿವದೇವರ ಪುತ್ರನೆಂದು ಹೇಳಬಹುದು. ತಾಯಿ ನಾಗಲಾಂಬಿಕೆಯ ಹುಟ್ಟೂರು ಇಂಗಳೇಶ್ವರವಾದರೂ ಈತ ಹುಟ್ಟಿದುದು ಕಲ್ಯಾಣದಲ್ಲಿ. ಈತನ ಹುಟ್ಟು, ಬಾಲ್ಯ, ಬೆಳವಣಿಗೆಗಳೆಲ್ಲ ಬಸವಣ್ಣ, ನಾಗಲಾಂಬಿಕೆ, ಗಂಗಾಂಬಿಕೆ ಮತ್ತು ಅಸಂಖ್ಯಾತ ಶರಣರ ಪರಿಸರದಲ್ಲಿಯೇ ಸಾಗಿಕೊಂಡು ಬಂದುದರಿಂದ ಈತ ಮಹಾಜ್ಞಾನಿ, ಕ್ರಿಯಾಜ್ಞಾನಿ, ದಿವ್ಯಜ್ಞಾನಿಯಾಗಿ ಪರಿಣಮಿಸಿದ. ಅಲ್ಲದೆ ವೀರಶೈವ ಷಟ್‌ಸ್ಥಲಸಿದ್ಧಾಂತವನ್ನು ಕ್ರಮಬದ್ಧವಾಗಿ, ಶಾಸ್ತ್ರೀಯವಾಗಿ ಅಳವಡಿಸಿ ವಚನಗಳನ್ನು ರಚಿಸಿದುದರಿಂದ ಈತನನ್ನು ಷಟ್‌ಸ್ಥಲ ಚಕ್ರವರ್ತಿ, ಷಡುಸ್ಥಲ ಸಮ್ರಾಟ ಮೊದಲಾದ ಅಭಿಧಾನಗಳಿಂದ ಕರೆಯಲಾಗಿದೆ. ಈತನ ಜೀವಿತದ ಅವಧಿ ಕೇವಲ ಇಪ್ಪತ್ನಾಲ್ಕು ವರ್ಷಗಳಿದ್ದರೂ ಈತನ ಕಾರ್ಯಕ್ಷೇತ್ರ ಅಪರಿಮಿತವಾಗಿತ್ತು. ಈತ ತನ್ನ ಅತುಲ ಪ್ರತಿಭೆ, ಅಪಾರ ಪಾಂಡಿತ್ಯಗಳಿಂದ ಹೆಚ್ಚಿನ ಮನ್ನಣೆ ಪಡೆದ. ಅಂದಿನ ಶರಣಸಮೂಹದಲ್ಲಿ ಈತ ಅತಿ ಕಿರಿಯನಾದರೂ ಪ್ರಭುದೇವರು ಏರಿದ ಶೂನ್ಯಸಿಂಹಾಸನಕ್ಕೆ ಉತ್ತರಾಧಿಕಾರಿಯಾಗುವ ಹಿರಿಮೆಯನ್ನು ತೋರಿದ. ಬಿಜ್ಜಳನ ರಾಜ್ಯದಲ್ಲಿ ಚಿಕ್ಕದಣ್ಣಾಯಕ ಪದವಿಯಲ್ಲಿದ್ದುದರಿಂದ ರಾಜಕೀಯ ಕ್ಷೇತ್ರದಲ್ಲಿಯೂ ಈತ ಉಲ್ಲೇಖನೀಯನಾಗಿದ್ದಾನೆ. ಅನುಭವಮಂಟಪದ ಚಟುವಟಿಕೆಗಳ ಕೇಂದ್ರಬಿಂದುವಾದ ಬಸವಣ್ಣನವರ ಬಲಗೈಯಂತಿದ್ದ ಈತ ಸೊನ್ನಲಿಗೆಯ ಶಿವಯೋಗಿ ಸಿದ್ಧರಾಮನಿಗೆ ಇಷ್ಟಲಿಂಗಧಾರಣೆ ಮಾಡಿ, ವೀರಶೈವ ಧಾರ್ಮಿಕ ಇತಿಹಾಸದಲ್ಲಿ ಸ್ಮರಣೀಯನಾಗಿದ್ದಾನೆ. ಅಂತೆಯೇ ಪ್ರಭುದೇವ, ಬಸವಣ್ಣ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ ಮೊದಲಾದ ತನ್ನ ಸಮಕಾಲೀನರಾದ ಅಸಂಖ್ಯಾತ ಶರಣರಿಂದಲೂ ಮಹಾಜ್ಞಾನಿ ಎಂದು ಹೊಗಳಿಸಿಕೊಂಡಿದ್ದಾನೆ. ಧಾರ್ಮಿಕ, ಆಧ್ಯಾತ್ಮಿಕ, ರಾಜಕೀಯ ಕ್ಷೇತ್ರಗಳಲ್ಲಿ ಗಣ್ಯನಾದ ಈತ ಅದೇ ಸ್ಥಾನವನ್ನು ಸಾಹಿತ್ಯದಲ್ಲಿಯೂ ಪಡೆದಿದ್ದಾನೆ. ಕೂಡಲ ಚೆನ್ನಸಂಗಮನಾಥ ಈತನ ವಚನಗಳ ಅಂಕಿತ. ಇಂದು ಈತನ 1,503 ವಚನಗಳು ಉಪಲಬ್ಧವಿವೆ. ಅಲ್ಲದೆ, ಕರಣಹಸಿಗೆ, ಮಿಶ್ರಾರ್ಪಣ, ಹಿರಿಯ ಮಂತ್ರ ಗೋಪ್ಯ, ಪದಮಂತ್ರ ಗೋಪ್ಯ ಸಕೀಲದ ವಚನಗಳು ಎಂಬ ಗ್ರಂಥಗಳನ್ನೂ ಈತ ರಚಿಸಿದ್ದಾನೆ. ಈತನ ವಚನಗಳು ಪಾಂಡಿತ್ಯಪೂರ್ಣವಾಗಿ ವಿಚಾರಪರಿಪ್ಲುತವೂ ಆಗಿವೆ. ಇಲ್ಲಿ ಕೆಲವು ವಚನಗಳನ್ನು ನೋಡಬಹುದು:

ಕಟಕ ಸೂತ್ರದ ಗೂಡು ಮಾಡಿಕೊಂಡಿಪ್ಪಲ್ಲಿ,
ಸೂತ್ರಕ್ಕೆ ನೂಲನು ಅದೆಲ್ಲಿಂದ ತಂದಿತ್ತು?
ರಾಟಿ ಇಲ್ಲ; ಹಂಜಿ ಇಲ್ಲ
ತನ್ನಲ್ಲಿಯೇ ನೂಲ ಕಲ್ಪಿಸಿ, ತಾನದನು ಅಂಟಿಸಿಕೊಂಡು ಆಡಿ,
ಅಡಗಿಸಿಕೊಂಡು ಹೋಹಂತೆ,
ತನ್ನ ಲೀಲೆಗೆ ತಾನೇ ಮಾಡಿಕೊಂಡ ವಿಶ್ವಪ್ರಪಂಚವ
ತನ್ನಲ್ಲಿಯೇ ಲಯವನ್ನೈದಿಸಿಕೊಂಡು,
ಕೂಡಲ ಚನ್ನಸಂಗಯ್ಯ ನಿರ್ವಯಲಾದನು.

ಗುಬ್ಬಿ ಹೆಜಿರ ಮನೆಯ ತನ್ನ ಮನೆಯೆಂಬಂತೆ
ಧರೆ, ಧನ, ವನಿತೆಯರು ಎನ್ನವರು ತನ್ನವರೆಂದು,
ಹೋರಿ ಹೋರಿ ಸಾಯುತ್ತಿದೆ ಜೀವ

ಅರಸನ ಭಕ್ತಿ ಅಹಂಕಾರದಿಂದ ಕೆಟ್ಟಿತ್ತು
ಸೂಳೆಯ ಭಕ್ತಿ ಎಂಜಲ ತಿಂದಾಗಲೆ ಹೋಯಿತ್ತು.
ನಂಟುತನದ ಭಕ್ತಿ ನಾಯಕ ನರಕ,
ಬಡವನ ಭಕ್ತಿ ನಿಧಾನ,
ಇದು ಕಾರಣ, ಕೂಡಲ ಚನ್ನಸಂಗಮ ದೇವಾ,
ನಿಮ್ಮ ಭಕ್ತಂಗೆ ಬಡತನವೇ ಕೊಡು.

ದಾಸಿಯ ಸಂಗ ಕಸನೀರ ಹೊರಸಿತ್ತು,
ವೇಸಿಯ ಸಂಗ ಎಂಜಲ ತಿನಿಸಿತ್ತು.

ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ ನಾರಿ
ಸಮತೆಯೆಂಬ ತಿರುವ ಮೆಟ್ಟಿ ಜೇವಡೆಗೈದು,
ಶಿಷ್ಯನೆಂಬ ಅಂಬ ತೊಡಚಿ
ಗುರುವೆಂಬ ವ್ಯಾಧನು ಲಿಂಗವೆಂಬ ಬಯಲ ಗುಜೆಯನೆಚ್ಚಡೆ
ಗಜೆದೋಜೆದಂತೆ ಮುಳುಗಿಯಡಗಿತ್ತು.
ಆ ಗುಜೆಯನು ಬಾಣವನು ಅಜಿಸಲುಂಟೆ
ಕೂಡಲ ಚನ್ನಸಂಗಾ, ನಿಮ್ಮಲ್ಲಿ.

ಇನ್ನುಳಿದ ಗ್ರಂಥಗಳು ಈತನಿಗೆ ತತ್ತ್ವಶಾಸ್ತ್ರಗಳಲ್ಲಿರುವ ಅಪಾರವಾದ ಶಕ್ತಿಯನ್ನು ವ್ಯಕ್ತಪಡಿಸುತ್ತವೆ. ಇವಲ್ಲದೆ, ರುದ್ರಭಾರತ, ಮೇಘಚಕ್ರ, ಭೂಚಕ್ರ, ಜಪದ ಸಕೀಲ ಮುಂತಾದ ಅನೇಕ ಚಿಕ್ಕ ಗ್ರಂಥಗಳು ಈತನ ಹೆಸರಿಗೆ ಅಂಟಿಕೊಂಡಿವೆ. ಅವನ್ನು ನೋಡಿದಾಗ ಇವು ಈತನ ಗ್ರಂಥಗಳಲ್ಲವೆನಿಸುತ್ತದೆ. ಒಟ್ಟಿನಲ್ಲಿ ವಚನಕರ್ತೃವಾಗಿ, ಶಾಸ್ತ್ರಗ್ರಂಥಗಳ ರಚಕನಾಗಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ರಾಜಕೀಯ ಕ್ರಾಂತಿಗಳ ಮುಖಾಂತರ ಲೋಕೋದ್ಧಾರಕನಾಗಿ ಬೆಳಗಿದ ಚೆನ್ನಬಸವಣ್ಣನ ಹೆಸರು ವಿಶೇಷವಾಗಿ ಕರ್ನಾಟಕದಲ್ಲಿ ಸ್ಮರಣಾರ್ಹವಾಗಿದೆ.

ಎಲ್ಲ ವೀರಶೈವ ಕವಿಗಳೂ ಕಾವ್ಯಾರಂಭದಲ್ಲಿ ಈತನನ್ನು ಸ್ಮರಿಸಿದ್ದಾರೆ. ವಿರೂಪಾಕ್ಷ ಪಂಡಿತ ಈತನನ್ನು ಕುರಿತು ಚನ್ನಬಸವೇಶ್ವರ ಪುರಾಣವನ್ನು ಬರೆದಿದ್ದಾನೆ. ಅಕ್ಕನಾಗಮ್ಮ, ಹಡಪದ ರೇಚಣ್ಣ, ಪ್ರಸಾದಿ ಭೋಗಣ್ಣ, ಏಲೇಶ್ವರದ ಕೇತಯ್ಯ, ಕನ್ನಡಿ ಕಾಯಕದ ಅಮುಗಿದೇವಯ್ಯ, ನುಲಿಯ ಚಂದಯ್ಯ ಮೊದಲಾದ ಶರಣರು ಈತನ ಅಂಕಿತನಾಮವನ್ನಿಟ್ಟುಕೊಂಡು ವಚನ ರಚಿಸಿದ್ದಾರೆ. ಪ್ರಭುದೇವ, ಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕ, ನಾಗಲಾಂಬಿಕೆ, ಆಯ್ದಕ್ಕಿ ಮಹಾದೇವಿ, ಮೋಳಿಗೆಯ ಮಹಾದೇವಿ, ಮೋಳಿಗೆಯ ಮಾರಯ್ಯ, ಮಡಿವಾಳ ಮಾಚಿದೇವ, ಸಕಲೇಶ ಮಾದರಸ, ಮರುಳ ಶಂಕರದೇವ, ಆದಯ್ಯ, ಉರಿಲಿಂಗ ಪೆದ್ದಿ, ಬಹುರೂಪಿ ಚೌಡಯ್ಯ, ಕೆಂಭಾವಿ ಭೋಗಣ್ಣ, ತೋಂಟದ ಸಿದ್ಧಲಿಂಗ, ಢಕ್ಕೆಯ ಬೊಮ್ಮಣ್ಣ, ಉಗ್ಗಡಿಸುವ ಗಬ್ಬಿದೇವ, ಬಾಹೂರ ಬೊಮ್ಮಣ್ಣ, ತುರುಗಾಹಿ ರಾಮಣ್ಣ, ಕಂಬದ ಮಾರಿತಂದೆ, ಭರಿತಾರ್ಪಣದ ಚನ್ನಸಂಗಣ್ಣ, ಬೊಕ್ಕಸ ಚಿಕ್ಕಣ್ಣ, ಗಣದಾಸಿ ವೀರಣ್ಣ, ಷಣ್ಮುಖಸ್ವಾಮಿ ಮೊದಲಾದ ವಚನಕಾರರು ಚೆನ್ನಬಸವಣ್ಣನ ಪಾಂಡಿತ್ಯ, ಪ್ರತಿಭೆ, ಮುಂತಾದವನ್ನು ತಮ್ಮ ವಚನಗಳಲ್ಲಿ ಬಣ್ಣಿಸಿ ಈತನ ಉನ್ನತ ವ್ಯಕ್ತಿತ್ವಕ್ಕೆ ಸತ್ಯದ ಸಾಕ್ಷಿಯನ್ನಿತ್ತಿದ್ದಾರೆ. ಈತ ಉಳಿವೆಯಲ್ಲಿ ಲಿಂಗೈಕ್ಯನಾದ; ಅಲ್ಲಿ ಈತನ ಸಮಾಧಿಯಿದೆ. ವರ್ಷಕ್ಕೊಮ್ಮೆ ಅಲ್ಲಿ ಜಾತ್ರೆ ಸೇರುತ್ತದೆ; ರಥೋತ್ಸವ ನಡೆಯುತ್ತದೆ.

(ಎಸ್.ಜಿ.ಎಚ್.)

**ಚೆನ್ನಮ್ಮ, ಕಿತ್ತೂರು ರಾಣಿ :** 1778–1829. ಸ್ವಾತಂತ್ರ್ಯ ಸಾಧನೆಗಾಗಿ ಬ್ರಿಟಿಷರೊಂದಿಗೆ ಹೋರಾಡಿದ ವೀರ ಕನ್ನಡ ಮಹಿಳೆ. ಹುಟ್ಟಿದ್ದು ಬೆಳಗಾಂವಿಯ ಹತ್ತಿರದ ಕಾಕತಿ ಗ್ರಾಮದಲ್ಲಿ (ಅಕ್ಟೋಬರ್ 23, 1778), ದೇಸಾಯಿ ಮನೆತನದಲ್ಲಿ. ಇತಿಹಾಸ, ಪುರಾಣ, ಶಾಸ್ತ್ರ ಶಸ್ತಾಸ್ತ್ರವಿದ್ಯೆಗಳಲ್ಲಿ ಪಾರಂಗತಳಾಗಿದ್ದಳು. 15ನೆಯ ವಯಸ್ಸಿನಲ್ಲಿ ಕಿತ್ತೂರಿನ ಮಲ್ಲಸರ್ಜನನ್ನು ವಿವಾಹವಾದಳು.

ಮಲ್ಲಸರ್ಜ ತೀರಿಕೊಂಡ ಬಳಿಕ (1816) ಆತನ ಚಿಕ್ಕ ರಾಣಿಯ ಮಗ ಶಿವಲಿಂಗ ರುದ್ರಸರ್ಜ ಎಂಟು ವರ್ಷಗಳ ಕಾಲ ಕಿತ್ತೂರನ್ನಾಳಿದ. ಈತನಿಗೆ ಮಕ್ಕಳಿರಲಿಲ್ಲವಾದ್ದರಿಂದ ಇವನು ಸಾಯುವುದಕ್ಕೆ ಕೆಲವು ದಿನ ಮೊದಲು ಶಿವಲಿಂಗಪ್ಪನೆಂಬ ಬಾಲಕನನ್ನು ದತ್ತು ತೆಗೆದುಕೊಂಡು ಕಿತ್ತೂರು ಸಂಸ್ಥಾನದ ಆಡಳಿತದ ಮೇಲ್ವಿಚಾರಣೆಯನ್ನು ಆಗ ಚೆನ್ನಮ್ಮನೇ ನೋಡಿಕೊಳ್ಳುತ್ತಿದ್ದಳು. ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡಿದ್ದನ್ನು ಧಾರವಾಡದಲ್ಲಿ ಇಂಗ್ಲಿಷ್ ಕಲೆಕ್ಟರ್ ಆಗಿದ್ದ ಥ್ಯಾಕರೆ ಮಾನ್ಯ ಮಾಡಲಿಲ್ಲ. ಕಿತ್ತೂರು ಸಂಸ್ಥಾನವನ್ನು ಹೇಗಾದರೂ ಕಬಳಿಸಬೇಕೆಂಬುದು ಆತನ ಸಂಚಾಗಿತ್ತು. ಆತನಿಗೆ ಬೆಂಬಲವಾಗಿ ನಿಂತವ ದಖನಿನ ಕಮಿಷನರ್ ಚಾಪ್ಲಿನ್. ಇವರಿಬ್ಬರೂ ಮುಂಬಯಿಯ ಗವರ್ನರ್ ಎಲ್ಫಿನ್‍ಸ್ಟನನಿಗೆ ಕಿತ್ತೂರಿನ ಪರಿಸ್ಥಿತಿಯನ್ನು ತಿಳಿಸಿದರು. ಕಿತ್ತೂರಿನ ಆಡಳಿತವನ್ನು ಥ್ಯಾಕರೆಗೆ ಒಪ್ಪಿಸಲು ರಾಣಿ ಚೆನ್ನಮ್ಮ ಮತ್ತು ಕಿತ್ತೂರಿನ ಇತರ ಹಿರಿಯರು ಒಪ್ಪಲಿಲ್ಲ. ಥ್ಯಾಕರೆ ಕಿತ್ತೂರಿನ ಮೇಲೆ ದಾಳಿ ಮಾಡಿದ (1824). ಚೆನ್ನಮ್ಮನ ನೇತೃತ್ವದಲ್ಲಿ ಕಿತ್ತೂರಿನ ಜನರು ಇಂಗ್ಲಿಷರ ವಿರುದ್ಧ ಹೋರಾಡಿದರು. ಯುದ್ಧದಲ್ಲಿ ಥ್ಯಾಕರೆಯನ್ನೊಳಗೊಂಡಂತೆ ನೂರಾರು ಇಂಗ್ಲಿಷ್ ಸೈನಿಕರು ಸತ್ತರು. ಯುದ್ಧದಲ್ಲಿ ಆದ ಸೋಲು ಇಂಗ್ಲಿಷರನ್ನು ಅಪಯಶಕ್ಕೆ ಈಡುಮಾಡಿತು. ಕಿತ್ತೂರಿನ ಮೇಲೆ ಸೇಡು ತೀರಿಸಿಕೊಳ್ಳಲು ಬ್ರಿಟಿಷರು ನಿರ್ಧರಿಸಿ ಮೈಸೂರು, ಶೋಲಾಪುರ ಮತ್ತು ಇತರ ಸೈನಿಕ ಕೇಂದ್ರಗಳಿಂದ ಭಾರಿ ಸಂಖ್ಯೆಯಲ್ಲಿ ಸೈನ್ಯವನ್ನು ಕಿತ್ತೂರಿಗೆ ತಂದರು. ಈ ಮಧ್ಯೆ ಚೆನ್ನಮ್ಮ ಯುದ್ಧ ತಪ್ಪಿಸಲು ಕಿತ್ತೂರಿನ ಪರಿಸ್ಥಿತಿಯನ್ನು ವಿವರಿಸಿ ಗವರ್ನರ್ ಎಲ್ಫಿನ್‍ಸ್ಟನನಿಗೂ ಚಾಪ್ಲಿನನಿಗೂ ಪತ್ರ ಬರೆದಳು. ಆದರೆ ಹೆಚ್ಚಿನ ಪ್ರಯೋಜನವೇನೂ ಆಗಲಿಲ್ಲ. ಚಾಪ್ಲಿನ್ ಕಿತ್ತೂರು ಕೋಟೆಯನ್ನು ಮುತ್ತಲು ಸೈನ್ಯಕ್ಕೆ ಆಜ್ಞೆ ನೀಡಿದ. ಚೆನ್ನಮ್ಮನ ನೇತೃತ್ವದಲ್ಲಿ ಕನ್ನಡಿಗರು 12 ದಿವಸಗಳ ಕಾಲ ಸತತವಾಗಿ ಬ್ರಿಟಿಷರ ವಿರುದ್ಧ ಹೋರಾಡಿದರು. ಚೆನ್ನಮ್ಮನ ಯುದ್ಧಕೌಶಲ ಮತ್ತು ದೇಶಾಭಿಮಾನ ಇಂಗ್ಲಿಷರನ್ನು ಚಕಿತಗೊಳಿಸಿದುವು. ಆದರೆ ಕಿತ್ತೂರಿನ ಕೆಲವು ದ್ರೋಹಿಗಳು ಮದ್ದಿನಲ್ಲಿ ಮಣ್ಣು ಸಗಣಿಗಳನ್ನು ಕೂಡಿಸಿದ್ದರಿಂದ ತೋಫುಗಳು ನಿಷ್ಫಲವಾದುವು. 1824ರ ಡಿಸೆಂಬರಿನಲ್ಲಿ ಕಿತ್ತೂರು ಬ್ರಿಟಿಷರ ವಶವಾಯಿತು. ಇಂಗ್ಲಿಷರು ಚೆನ್ನಮ್ಮನನ್ನು ಬಂಧಿಸಿ ಬೈಲಹೊಂಗಲದ ದುರ್ಗದಲ್ಲಿ ಸೆರೆ ಇಟ್ಟರು. ತನ್ನ ಸಂಸ್ಥಾನ ಎಂದಾದರೊಂದು ದಿನ ಸ್ವತಂತ್ರವಾಗುವುದೆಂಬ ಭರವಸೆ ಚೆನ್ನಮ್ಮನಿಗೆ ಇತ್ತು. ಪ್ರಾರ್ಥನೆ, ಪುರಾಣಶ್ರವಣ, ಶಿವಪೂಜೆಗಳಲ್ಲಿ ಆಕೆ ತನ್ನ ಕಾರಾಗೃಹ ಜೀವನವನ್ನು ಕಳೆದಳು. ಅವಳು 1829ರ ಫೆಬ್ರುವರಿ 21ರಂದು ತೀರಿಕೊಂಡಳು. (ಪಿ)

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಚೆನ್ನಮ್ಮನ ಹೆಸರು ಅಜರಾಮರವಾಗಿದೆ. ಅವಳ ಕಥೆಯನ್ನು ಲಾವಣಿಯಾಗಿ ಇಂದಿಗೂ ಹಾಡುತ್ತಾರೆ. ಅವಳ ಬಗ್ಗೆ ಕನ್ನಡದಲ್ಲಿ ಹಲವಾರು ಕಥೆ, ಕಾದಂಬರಿ, ನಾಟಕಗಳು ಬಂದಿವೆ. ಬಿ.ಆರ್.

ಪಂತಲು ಅವರು ಚೆನ್ನಮ್ಮನ ಜೀವನ ಕುರಿತ ಚಲನಚಿತ್ರವೊಂದನ್ನು ತಯಾರಿಸಿದ್ದಾರೆ.

**(ನೋಡಿ– ಕರ್ನಾಟಕದಲ್ಲಿ–ಸ್ವಾತಂತ್ರ್ಯ–ಚಳವಳಿ); ಕಿತ್ತೂರು** *

**ಚೆನ್ನಮ್ಮ, ಕೆಳದಿಯ ರಾಣಿ :** ಕರ್ನಾಟಕದ ಒಬ್ಬ ವೀರಮಹಿಳೆ. ಕೆಳದಿಯ ರಾಣಿ (1671–1698). ಒಂದನೆಯ ಸೋಮಶೇಖರನಾಯಕನ (1664–79) ಮಡದಿ. ಲಿಂಗಣ್ಣಕವಿಯ ಕೆಳದಿನೃಪವಿಜಯ ಎಂಬ ಗ್ರಂಥ ಹಾಗೂ ಇತರ ಆಧಾರಗಳಿಂದ ಚೆನ್ನಮ್ಮನ ಆಳ್ವಿಕೆಯ ಮುಖ್ಯ ಘಟನೆಗಳು ತಿಳಿದುಬರುತ್ತವೆ. ಸೋಮಶೇಖರನಾಯಕ ಪ್ರಾರಂಭದಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದರೂ ದುರ್ಜನರ ಸಹವಾಸದಿಂದ ದುಶ್ಚಟಗಳಿಗೆ ಬಲಿಯಾಗಿ ಮತಿವಿಕಲನಾಗಿ ಕೊನೆಗೆ 1671ರಲ್ಲಿ ಕೊಲೆಯಾದ. ಕೆಳದಿ ಸಂಸ್ಥಾನದಲ್ಲಿ ಅರಾಜಕತೆಯುಂಟಾಯಿತು. ನಾಯಕ ಮನೆತನದ ವಿರೋಧಿಗಳು ತಮಗೆ ಬೇಕಾದವನೊಬ್ಬನನ್ನು ನಾಯಕಪಟ್ಟಕ್ಕೆ ತರಲು ಹವಣಿಸಿದರು. ಅಂಥ ದುರ್ಭರ ಸನ್ನಿವೇಶದಲ್ಲಿ ಚೆನ್ನಮ್ಮ ಆಡಳಿತವನ್ನು ವಹಿಸಿಕೊಂಡು ಅಸಾಧಾರಣ ಜಾಣ್ಮೆಯಿಂದ ಸಂಸ್ಥಾನದಲ್ಲಿ ಶಾಂತಿ ಸ್ಥಾಪಿಸಿದಳು. ಕೆಳದಿಯಲ್ಲುಂಟಾಗಿದ್ದ ದುಃಸ್ಥಿತಿಯನ್ನು ಉಪಯೋಗಿಸಿಕೊಂಡು ಬಿಜಾಪುರದ ಸುಲ್ತಾನ ಮತ್ತು ಇತರ ಪಾಳೆಯಗಾರರು ಕೆಳದಿಯನ್ನು ಕಬಳಿಸಲು ಹೊಂಚು ಹಾಕಿದ್ದರು. ವೈರಿಗಳ ಸಂಚಿನಿಂದಾಗಿ ಚೆನ್ನಮ್ಮ ಒಮ್ಮೆ ರಾಜಧಾನಿಯಿಂದ ತಲೆತಪ್ಪಿಸಿಕೊಳ್ಳಬೇಕಾಯಿತು. ಅವಳು ತನ್ನ ನೆಚ್ಚಿನ ಸಚಿವನಾದ ಗುರು ಬಸಪ್ಪದೇವ ಮತ್ತು ದಂಡನಾಯಕರಾದ ಕೃಷ್ಣಪ್ಪಯ್ಯ ಹಾಗೂ ತಿಮ್ಮರಸಯ್ಯ ಇವರ ಸಹಾಯದಿಂದ ವೈರಿಗಳನ್ನು ಸದೆಬಡಿದು ಸಂಸ್ಥಾನವನ್ನು ವಿಪತ್ತಿನಿಂದ ರಕ್ಷಿಸಿದಳು.

ಮೈಸೂರು ಮತ್ತು ಕೆಳದಿಯ ಮಧ್ಯೆ ರಾಜ್ಯವಿಸ್ತರಣೆಗಾಗಿ ನಡೆಯುತ್ತಿದ್ದ ಯುದ್ಧಗಳು ರಾಣಿ ಚೆನ್ನಮ್ಮಾಜಿಯ ಕಾಲದಲ್ಲೂ ಮುಂದುವರಿದುವು. ಚೆನ್ನಮ್ಮ ಮೈಸೂರಿನ ಒಡೆಯರ ರಾಜ್ಯವಿಸ್ತರಣ ಕಾರ್ಯವನ್ನು ಎದುರಿಸಿದಳು. ಆದರೂ ಪರಾಕ್ರಮಿಯಾದ ಚಿಕ್ಕದೇವರಾಜ

ಒಡೆಯರ್ 1695ರ ವೇಳೆಗೆ ಕೆಳದಿಯ ಬಲವನ್ನು ಸೋಲಿಸಿ ಅರಕಲಗೂಡು, ಹಾಸನ ಪ್ರದೇಶಗಳನ್ನು ವಶಪಡಿಸಿಕೊಂಡು ಚಿಕ್ಕಮಗಳೂರು ಜಿಲ್ಲೆಯ ಸಕ್ಕರೆಪಟ್ಟಣದವರೆಗೂ ರಾಜ್ಯವನ್ನು ವಿಸ್ತರಿಸಿದ.

ರಾಣಿ ಚೆನ್ನಮ್ಮ ಛತ್ರಪತಿ ಶಿವಾಜಿಯ ಎರಡನೆಯ ಮಗನಾದ ರಾಜಾರಾಮನಿಗೆ ನೀಡಿದ ಆಶ್ರಯ ಮತ್ತು ಅದರ ಪರಿಣಾಮ ಇವು ಅವಳ ಆಳ್ವಿಕೆಯ ಅತ್ಯಂತ ಮಹತ್ತ್ವದ ಸಂಗತಿಗಳು. ರಾಜಾರಾಮ ಸಕಲಬಲ ಸಂಪನ್ನನೂ ಪ್ರಬಲ ಪರಾಕ್ರಮಿಯೂ ಆದ ಮೊಗಲ್ ಬಾದಶಹ ಔರಂಗ್‌ಜೇಬನ ಸೇನೆಯ ಎದುರು ಹಿಮ್ಮೆಟ್ಟಿ ಉತ್ತರ ಭಾರತದಲ್ಲಿಯೂ ಆಶ್ರಯ ದೊರೆಯದೆ ದಕ್ಷಿಣದತ್ತ ಪಲಾಯನ ಮಾಡಿದ. ಮೊಗಲ್ ಸೈನ್ಯಗಳು ಅವನನ್ನು ಬೆನ್ನಟ್ಟಿದುವು. ಕೊನೆಗೆ ಅವನು ಕೆಳದಿಯ ಆಶ್ರಯ ಕೋರಿದ. ಮೊಗಲರ ಅಜೇಯ ಬಲದ ಅರಿವಿದ್ದರೂ ಆಶ್ರಿತ ರಕ್ಷಣೆಯ ಕರ್ತವ್ಯದಿಂದ ರಾಣಿ ವಿಮುಖಳಾಗಲಿಲ್ಲ. ಅವಳು ರಾಜಾರಾಮನನ್ನು ಗೌರವಾದರಗಳಿಂದಲೂ ರಾಜೋಚಿತ ಮರ್ಯಾದೆಯಿಂದಲೂ ಬರಮಾಡಿಕೊಂಡು ಅವನಿಗೆ ಅಭಯಹಸ್ತ ನೀಡಿದಳು. ಇದರಿಂದ ಕುಪಿತನಾದ ಔರಂಗ್‌ಜೇಬ್ ಕೆಳದಿಯ ವಿರುದ್ಧ ಪಡೆಯೊಂದನ್ನು ಕಳುಹಿಸಿದ. 1690ರಲ್ಲಿ ಕೆಳದಿ ಮತ್ತು ಮೊಗಲ್ ಸೈನ್ಯಗಳ ನಡುವೆ ಯುದ್ಧ ನಡೆಯಿತು. ಕದನದಲ್ಲಿ ಮೊಗಲ್ ಸೇನೆ ಪರಾಭವಗೊಂಡು ಪಲಾಯನ ಮಾಡಿತು. ಮೊಗಲರ ಸೋಲಿನಿಂದ ರಾಣಿ ಚೆನ್ನಮ್ಮಾಜಿಯ ಕೀರ್ತಿ ಇಡೀ ಭಾರತದಲ್ಲಿ ಹಬ್ಬಿತು. ಈ ಸಂಗತಿಯನ್ನು ಕುರಿತ ಜನಪದ ಗೀತೆಗಳು ಇಂದಿಗೂ ಕನ್ನಡನಾಡಿನಲ್ಲಿ ಪ್ರಚಾರದಲ್ಲಿವೆ.

ದಕ್ಷ ಆಡಳಿತಗಾರಳಾದ ಚೆನ್ನಮ್ಮ ಮತವಿಚಾರಗಳಲ್ಲಿ ಉದಾರ ನೀತಿ ಹೊಂದಿದ್ದಳು. ಜಂಗಮರಿಗೆ ಮಠಗಳನ್ನು ಕಟ್ಟಿಸಿಕೊಟ್ಟಳು. ತನ್ನ ಪತಿಯ ಹೆಸರಿನಲ್ಲಿ ಅನೇಕ ಅಗ್ರಹಾರಗಳನ್ನು ನಿರ್ಮಿಸಿದಳು. ಒಂದು ಅಗ್ರಹಾರವನ್ನು ತನ್ನ ಸ್ವಂತ ಹೆಸರಿನಿಂದ ಚೆನ್ನಮ್ಮಾಂಬಪುರ ಎಂಬುದಾಗಿ ಕರೆದಳು. ಕೆಳದಿಯ ವೀರಭದ್ರ ದೇವಾಲಯದ ಮುಂದಿನ ಧ್ವಜಸ್ತಂಭವನ್ನು ನೆಡಿಸಿದವಳು ಈಕೆಯೇ. ಮೂಕಾಂಬ ದೇವಾಲಯಕ್ಕೆ ಈಕೆ ವಿಶೇಷ ದಾನ ನೀಡಿದಳು. ತನ್ನ ರಾಜ್ಯದಲ್ಲಿ ಚರ್ಚುಗಳನ್ನು ನಿರ್ಮಿಸಲು ಪೋರ್ಚುಗೀಸರಿಗೆ ಅನುಮತಿ ನೀಡಿದಳು. ಚೆನ್ನಮ್ಮನಿಗೆ ಸಂತತಿ ಇರಲಿಲ್ಲವಾದ್ದರಿಂದ ಬಸಪ್ಪ ಎಂಬ ಕುಮಾರನನ್ನು ದತ್ತುವಾಗಿ ಸ್ವೀಕರಿಸಿದಳು. ಅವನಿಗೆ ಯುದ್ಧ ಮತ್ತು ಆಡಳಿತದಲ್ಲಿ ಶಿಕ್ಷಣ ಕೊಟ್ಟು 1696ರಲ್ಲಿ ಕೆಳದಿ ಬಸವಭೂಪಾಲನೆಂದು ಹೆಸರಿಟ್ಟು ಆಡಳಿತ ವಹಿಸಿಕೊಟ್ಟಳು. ಎರಡು ವರ್ಷಗಳ ಅನಂತರ 1698ರಲ್ಲಿ ಈಕೆ ಮರಣ ಹೊಂದಿದಳೆಂದು ತಿಳಿದುಬರುತ್ತದೆ. ತನ್ನ ಸ್ಥಿರಸಂಕಲ್ಪ, ದೂರದೃಷ್ಟಿ ಹಾಗೂ ಕಲಿತನಗಳಿಂದ ಇಕ್ಕೇರಿ ಸಂಸ್ಥಾನವನ್ನು ವಿಪತ್ತಿನಿಂದ ಪಾರು ಮಾಡಿದಳೆಂದು ಚೆನ್ನಮ್ಮ ಪ್ರಸಿದ್ಧಳಾಗಿದ್ದಾಳೆ. (ಜಿ.ಆರ್.ಆರ್.)

**ಚೆನ್ಲಾ :** ಈಗಿನ ಕಾಂಬೋಡಿಯ ಪ್ರದೇಶದಲ್ಲಿ ಸು. 550–802ರ ಅವಧಿಯಲ್ಲಿ ಪ್ರವರ್ಧಮಾನವಾಗಿದ್ದ ರಾಜ್ಯ. ಈ ರಾಜ್ಯವನ್ನಾಳುತ್ತಿದ್ದ ಈಶಾನವರ್ಮನ್ ಎಂಬ ದೊರೆ 616 ಅಥವಾ 617ರಲ್ಲಿ ಚೀನಕ್ಕೆ ರಾಯಭಾರಿಯನ್ನು ಕಳಿಸಿದನೆಂದು ಉಲ್ಲೇಖವಿದೆ. ಇತಿಹಾಸದಲ್ಲಿ ಚೆನ್ಲಾದ ಹೆಸರು ಮೊಟ್ಟ ಮೊದಲ ಬಾರಿಗೆ ಉಲ್ಲೇಖವಾಗಿದ್ದು ಆಗಲೇ. ಚೆನ್ಲಾ ಮೊದಲು ಫೂನಾನ್ ರಾಜ್ಯಕ್ಕೆ ಅಧೀನವಾಗಿತ್ತೆಂದೂ ಚಿತ್ರಸೇನ ಫೂನಾನ್ ಮೇಲೆ ದಂಡೆತ್ತಿ ಹೋಗಿ ಅದನ್ನು ಪರಾಜಯಗೊಳಿಸಿದನೆಂದೂ ಹೇಳಲಾಗಿದೆ. ಚೆನ್ಲಾ ಪ್ರದೇಶವೇ ಕಾಂಬೋಡಿಯವೆಂದು ಪಾಲ್ ಪೆಲಿಯೋ ಎಂಬ ಪೌರಸ್ತ್ಯ ಇತಿಹಾಸತಜ್ಞ ಅಭಿಪ್ರಾಯಪಟ್ಟಿದ್ದಾನೆ. ಚೆನ್ಲಾದ ರಾಯಭಾರಿಯನ್ನು ಚೀನಕ್ಕೆ ಕಳುಹಿಸುವ ವೇಳೆಗಾಗಲೇ ಆ ರಾಜ್ಯಕ್ಕೆ ಬಹುಶಃ ಸುಮಾರು ಇನ್ನೂರು ವರ್ಷಗಳ ಇತಿಹಾಸವಿತ್ತೆಂದು ತಿಳಿದುಬರುತ್ತದೆ. ಅದರ ಮೊದಲನೆಯ ರಾಜವಂಶ ಅಳಿದು, ಇನ್ನೊಂದು ರಾಜವಂಶ ಆಳುತ್ತಿತ್ತು. ಬಹುಶಃ ಇದು ವಿದೇಶಿ ವಂಶ. ಈ ವಂಶದ ಮೂರನೆಯ ದೊರೆಯೇ ಈಶಾನವರ್ಮನ್. ಚೆನ್ಲಾದ ಮೊದಲ ನೆಲೆ ಇದ್ದದ್ದು ಮೇಕಾಂಗ್ ನದಿಯ ಮೇಲಣ ಬಸಾಕ್ ಪ್ರದೇಶದಲ್ಲಿ. ಅದು ಈಗಿನ ಲವೋಸಿನ ಆಗ್ನೇಯ ಭಾಗ. ಚೆನ್ಲಾದ ಮೊದಮೊದಲ ದೊರೆಗಳು ದಕ್ಷಿಣಾಭಿಮುಖವಾಗಿ ರಾಜ್ಯ ವಿಸ್ತರಿಸಿದರು. ಭವವರ್ಮ ಹಾಗೂ ಚಿತ್ರಸೇನರು ಫೂನಾನ್ ಪ್ರದೇಶವನ್ನು, ಮುನ್ ನದೀ ಕಣಿವೆಯ ಕೆಳಭಾಗವನ್ನು ಮತ್ತು ತಾನ್ಲಾ ಸ್ಯಾಪ್ ಸರೋವರಕ್ಕೆ ದಕ್ಷಿಣದಲ್ಲಿರುವ ಪ್ರದೇಶದ ಸ್ವಲ್ಪ ಭಾಗವನ್ನು ಆಕ್ರಮಿಸಿಕೊಂಡರು. ಈಶಾನಸೇನ ತಾನ್ಲಾ ಸ್ಯಾಪಿನ ಉತ್ತರಭಾಗವನ್ನು ಮತ್ತು ಪ್ರಾಯಶಃ ಈಗಿನ ಪೂರ್ವ ಸೈಯಾಮ್ ಪ್ರದೇಶವನ್ನು ವಶಪಡಿಸಿಕೊಂಡ. 7ನೆಯ ಶತಮಾನದ ಮಧ್ಯಭಾಗದಲ್ಲಿ ದ್ವಾರಾವತೀ (ಮೀನಾಮ್ ನದೀ ಕಣಿವೆಯ ಕೆಳಭಾಗ), ಮಹಾಚಂಪ–ಇವುಗಳ ನಡುವಣ ಪ್ರದೇಶ ಈಶಾನಪುರಕ್ಕೆ (ಚೆನ್ಲಾ) ಸೇರಿತ್ತೆಂದು ಹ್ಯುಯೆನ್ ತ್ಸಾಂಗ್ ಹೇಳುತ್ತಾನೆ. ಎಂಟನೆಯ ಶತಮಾನದ ಆದಿಕಾಲದಲ್ಲಿ ಈಶಾನ್ಯದಲ್ಲಿ ಅನ್ನಾಂ ರಾಜ್ಯವೂ ಉತ್ತರದಲ್ಲಿ ನಾನ್ ಚಾವೊವೂ (ತೈ ರಾಜ್ಯ) ಇದರ ಎಲ್ಲೆಗಳಾಗಿದ್ದುವೆಂದೂ, ಆದರೆ ಫೂನಾನ್ ಆಶ್ರಿತ ರಾಜ್ಯಗಳು ಬಹುಶಃ ಇದಕ್ಕೆ ಸೇರಿರಲಿಲ್ಲವೆಂದೂ ಹೇಳಲಾಗಿದೆ. ಇದರ ಉತ್ತರ ಭಾಗ ಪರ್ವತಗಳಿಂದಲೂ ಕಣಿವೆಗಳಿಂದಲೂ ದಕ್ಷಿಣ ಭಾಗ ನದಿಗಳಿಂದಲೂ ಸರೋವರಗಳಿಂದಲೂ ಕೂಡಿತ್ತು. ತಗ್ಗಾದ ದಕ್ಷಿಣ ಭಾಗ ವರ್ಷೇ ವರ್ಷೇ ಪ್ರವಾಹದ ಅನಾಹುತಕ್ಕೆ ತುತ್ತಾಗುತ್ತಿತ್ತು. ಚೆನ್ಲಾದ ಮೂಲನಿವಾಸಿಗಳು ಮಾನ್ ಜನಗಳಿರಬಹುದು. ಖ್ಮೆರ್‌ಗಳು ಬಹುಶಃ ಇವರೊಡನೆ ಬೆರೆತುಕೊಂಡಿರಬೇಕು. ಖ್ಮೆರ್ ಜನರು ಚಾಮ್‌ಗಳಿಂದ ಈ ಪ್ರದೇಶವನ್ನು ಗೆದ್ದುಕೊಂಡ ರೆಂಬುದು ಪ್ರಾಚೀನ ಐತಿಹ್ಯಗಳಿಂದಲೂ ಅನಂತರದ ಉದಂತಗಳಿಂದಲೂ ತಿಳಿದುಬರುತ್ತದೆ. ಭಾರತದ ಕೋರಮಂಡಲ ತೀರದಿಂದ ವ್ಯಾಪಾರಿಗಳೂ ವಿದ್ವಾಂಸರೂ ಇಲ್ಲಿ ಬಂದು ನೆಲೆಸಿ ಭಾರತೀಯ ಧರ್ಮಗಳ ಪ್ರಚಾರಕ್ಕೆ ಕಾರಣರಾದರು. ಮೊದಲು ಇವರು ಫೂನಾನ್ ಪ್ರಭುತ್ವಕ್ಕೆ ಸಾಮಂತರಾಗಿದ್ದರು. ಇಲ್ಲಿಯ ಜನರನ್ನು ವಿಮೋಚನೆಗೊಳಿಸಿದವನು ಶ್ರುತವರ್ಮನ್.

ಖ್ಮೆರ್ ಜನ ಇಲ್ಲಿಗೆ ಬರುವುದಕ್ಕೂ ಮುಂಚಿನಿಂದಲೂ ಭಾರತೀಯ ಧರ್ಮಗಳು ಇಲ್ಲಿ ಪ್ರಚಾರದಲ್ಲಿದ್ದಿರಬೇಕು. ಬೌದ್ಧ, ಶೈವ, ವೈಷ್ಣವ ಧರ್ಮಗಳು ಈ ದೇಶದಲ್ಲಿ ಪ್ರಚಾರದಲ್ಲಿದ್ದುವೆಂಬುದು ಇಲ್ಲಿ ಉಪಲಬ್ಧವಿರುವ, ನಿರ್ದಿಷ್ಟ ಸರಳ ಸಂಸ್ಕೃತ ಭಾಷೆಯಲ್ಲಿ ರಚಿತವಾದ, ಶಾಸನಗಳಿಂದ ತಿಳಿದುಬರುತ್ತದೆ. ಶಾಸನಗಳನ್ನು ಪಲ್ಲವ ಹಾಗೂ ಬಾದಾಮಿ ಚಾಳುಕ್ಯರ ಕಾಲದ ಲಿಪಿಯಲ್ಲಿ ಕೆತ್ತಲಾಗಿದೆ. ಭಾರತೀಯ ಪುರಾಣ, ಕಾವ್ಯ, ಧರ್ಮಶಾಸ್ತ್ರ, ಅರ್ಥಶಾಸ್ತ್ರ, ವೈದ್ಯ ಗ್ರಂಥಗಳು ಹಾಗೂ ತತ್ತ್ವಶಾಸ್ತ್ರ ಗ್ರಂಥಗಳು ಇಲ್ಲಿಯವರೆಗೆ ವ್ಯಾಪಕವಾಗಿ ಪರಿಚಯವಿದ್ದುವೆಂಬುದು ಈ ಶಾಸನಗಳಿಂದ ತಿಳಿದುಬರುತ್ತದೆ. ಧಾರ್ಮಿಕ ಕ್ಷೇತ್ರವೇ ಅಲ್ಲದೆ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಭಾರತದ ಪ್ರಭಾವ ವಿಶೇಷವಾಗಿತ್ತು. ಚೆನ್ಲಾದ ವಾಸ್ತು ಹಾಗೂ ಮೂರ್ತಿಶಿಲ್ಪಗಳು ಭಾರತದ ಸಂಪರ್ಕದಿಂದ ರೂಪುಗೊಂಡುವು. ಇಟ್ಟಿಗೆ ಮತ್ತು ಕಲ್ಲುಗಳಿಂದ ಚತುರಸ್ರ ಹಾಗೂ ಸಮ ಚತುರಸ್ರ ಆಕಾರಗಳಲ್ಲಿ ದೇವಾಲಯದ ಕಟ್ಟಡಗಳು ಅಲ್ಲಿ ನಿರ್ಮಾಣವಾದುವು. ವಾಟ್ ಫು, ಸಾಂಬೋರ ಪ್ರೇಕುಕ್, ಹ್ಯಾಂಚೆ, ಪ್ರಸಾತ್ ಬಯಾಂಗ್ ಮೊದಲಾದ ದೇವಾಲಯಗಳು ಚೆನ್ಲಾ ವಾಸ್ತುವಿನ ಉತ್ತಮ ಮಾದರಿಗಳು. ಅತ್ಯಂತ ಸುಂದರವಾದ ಅರೆ ಉಬ್ಬು ಚಿತ್ರಗಳು, ದ್ವಾರಬಂಧ ಹಾಗೂ ಕಂಬಗಳ ಮೇಲೆ ಎತ್ತಿಹಿಡಿದಂತೆ ಕಾಣುವ ಮನೋಜ್ಞವಾದ ಮೂರ್ತಿಗಳು ನಿರ್ಮಾಣವಾದವು. ಹರಿಹರ ವಿಗ್ರಹಗಳು ಅತ್ಯಂತ ಸುಂದರವಾಗಿವೆ; ಪ್ರಾಮುಖ್ಯಗಳಿಸಿವೆ. ಬುದ್ಧ, ವಿಷ್ಣು, ಸ್ತ್ರೀ ಹಾಗೂ ಪುರುಷ ಮೂರ್ತಿಗಳನ್ನು ಅತ್ಯಂತ ನಾಜೂಕಾಗಿ ಬಿಡಿಸಲಾಗಿದೆ. ಚೊಕ್ಕ, ಉದ್ದನೆಯ, ಬಿಗಿಯಾದ, ಅಂಚುಗಳಿಂದ ಕೂಡಿದ, ಉಡುಪುಗಳನ್ನು ಧರಿಸಿರುವ ಸ್ತ್ರೀವಿಗ್ರಹಗಳು ಚೆನ್ಲಾ ದೇಶೀಯ ಶೈಲಿಯ ವಿಶಿಷ್ಟ ಶಿಲ್ಪಗಳು.

(ಎಸ್.ವಿ.ಎಸ್.ಬಿ.)

**ಚೆಮ್ಸ್‌ಫರ್ಡ್–ಫ್ರೆಡ್ರಿಕ್ ಜಾನ್ ನೇಪಿಯರ್ ತೆಸಿಜರ್ :** 1868–1933. ಬ್ರಿಟಿಷ್ ರಾಜಕಾರಣಿ. ಪ್ರಥಮ ವೈಕೌಂಟ್. ಭಾರತದ ವೈಸ್‌ರಾಯಿ (1916–21). ಎರಡನೆಯ ಬ್ಯಾರನ್ ಚೆಮ್ಸ್‌ಫರ್ಡನ ಹಿರಿಯ ಮಗ. 1868ರ ಆಗಸ್ಟ್ 12ರಂದು ಲಂಡನಿನಲ್ಲಿ ಜನಿಸಿದ. ವಿಂಚೆಸ್ಟರಿನಲ್ಲೂ ಆಕ್ಸ್‌ಫರ್ಡಿನ ಮ್ಯಾಗ್ಡಲೀನ್ ಕಾಲೇಜಿನಲ್ಲೂ ವಿದ್ಯಾಭ್ಯಾಸ ಮಾಡಿ, 1893ರಲ್ಲಿ ನ್ಯಾಯವಾದಿಯಾದ. 1900ರಿಂದ 1904ರವರೆಗೆ ಲಂಡನ್ ಶಾಲಾ ಮಂಡಲಿಯ ಸದಸ್ಯನಾಗಿದ್ದ. 1904–05ರಲ್ಲಿ ಲಂಡನ್ ಕೌಂಟಿ ಕೌನ್ಸಿಲಿನಲ್ಲಿದ್ದ. ಈತ ಬ್ಯಾರನ್ ಚೆಮ್ಸ್‌ಫರ್ಡ್ ಆಗಿ ತಂದೆಯ ಉತ್ತರಾಧಿಕಾರಿಯಾದ್ದು 1905ರಲ್ಲಿ. 1905–09ರಲ್ಲಿ ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡಿನಲ್ಲೂ 1909–13ರಲ್ಲಿ ನ್ಯೂ ಸೌತ್‌ವೇಲ್ಸಿನಲ್ಲೂ ರಾಜ್ಯಪಾಲನಾಗಿದ್ದ. 1912ರಲ್ಲಿ ಇವನಿಗೆ ನೈಟ್ ಪದವಿ ಲಭಿಸಿತು. 1913ರಲ್ಲಿ ಈತ ಆಸ್ಟ್ರೇಲಿಯವನ್ನು ಬಿಟ್ಟು, ಒಂದನೆಯ ಮಹಾಯುದ್ಧದ ಆರಂಭದ ಕಾಲದಲ್ಲಿ ಡಾರ್ಸೆಟ್ ರೆಜಿಮೆಂಟಿನಲ್ಲಿ ಭಾರತದಲ್ಲಿದ್ದ.

ಲಾರ್ಡ್ ಚೆಮ್ಸ್‌ಫರ್ಡ್ 1916–21ರಲ್ಲಿ ಭಾರತದ ಗವರ್ನರ್–ಜನರಲ್ ಹಾಗೂ ವೈಸ್‌ರಾಯಿಯಾಗಿದ್ದ. ತತ್ಕಾಲದ ಭಾರತದ ರಾಜಕೀಯದಲ್ಲಿ ಇವನ ಪಾತ್ರ ಬಹು ನಿಷ್ಕ್ರಿಯವಾದ್ದೆಂದು ಹೇಳಬಹುದು. ಭಾರತದಲ್ಲಿ ಇವನ ಆಡಳಿತ ಆರಂಭವಾದ್ದು ಮೆಸಪೊಟೇಮಿಯದಲ್ಲಿ ಬ್ರಿಟಿಷ್ ಸೈನ್ಯ ಪರಾಜಯಗೊಂಡ ಕಾಲದಲ್ಲಿ. ಒಂದನೆಯ ಮಹಾಯುದ್ಧದ ಆರಂಭದಿಂದಲೂ ಭಾರತ ಸ್ವಪ್ರೇರಣೆಯಿಂದ ತೋರಿದ ನಿಷ್ಠೆ ಪರಾಕ್ರಮಗಳಿಗೆ ಬ್ರಿಟನ್ ಯಾವುದೇ ಬಗೆಯ ಪ್ರೋತ್ಸಾಹದಾಯಕ ಸ್ಪಷ್ಟ ಪ್ರತಿಕ್ರಿಯೆಯನ್ನು ತೋರಿಸದಿದ್ದದ್ದು ಭಾರತಕ್ಕೆ ಅತೃಪ್ತಿಯನ್ನುಂಟುಮಾಡಿತ್ತು. ಭಾರತದಲ್ಲಿ ಕ್ರಮಕ್ರಮವಾಗಿ ಜವಾಬ್ದಾರಿಯುತ ಸರ್ಕಾರವನ್ನು ಸ್ಥಾಪಿಸುವುದೇ ಬ್ರಿಟಿಷ್ ಸರ್ಕಾರದ ಗುರಿ ಎಂದು ಭಾರತದ ಸ್ಟೇಟ್ ಸೆಕ್ರೆಟರಿ ಎಡ್ವಿನ್ ಮಾಂಟೆಗ್ಯೂ 1917 ಆಗಸ್ಟ್ 30ರಂದು ಲಂಡನ್ನಿನ ಕಾಮನ್ಸ್ ಸಭೆಯಲ್ಲಿ ಹೇಳಿಕೆ ನೀಡಲು ಕಾರಣವಾದ ಬ್ರಿಟಿಷ್ ನೀತಿಯನ್ನು ರೂಪಿಸುವಲ್ಲಿ ಚೆಮ್ಸ್‌ಫರ್ಡನ ಪಾತ್ರವೇನೂ ಇರಲಿಲ್ಲ. 1917ರಲ್ಲಿ ಮಾಂಟೆಗ್ಯೂ ಭಾರತಕ್ಕೆ ಬಂದಾಗ ಚೆಮ್ಸ್‌ಫರ್ಡ್‌ನೂ ಅವನ ಜೊತೆಯಲ್ಲಿ ಪ್ರವಾಸ ಮಾಡಿದ. ಭಾರತದ ಸಂವಿಧಾನಾತ್ಮಕ ಸುಧಾರಣೆಗಳನ್ನು ಕುರಿತು 1918ರಲ್ಲಿ ನೀಡಲಾದ ವರದಿಯ ನಿಜವಾದ ಕರ್ತೃವಾದ

ಮಾಂಟೆಗ್ಯೂನ ಹೆಸರಿನೊಂದಿಗೆ ಇವನ ಹೆಸರೂ ಸೇರಿಕೊಂಡಿದೆ. ಮಾಂಟೆಗ್ಯೂ-ಚೆಮ್ಸ್‌ಫರ್ಡ್ ವರದಿಯ ಆಧಾರದ ಮೇಲೆ ರೂಪಿತವಾದ 1919ರ ಭಾರತ ಸರ್ಕಾರ ಅಧಿನಿಯಮವನ್ನು ರಚಿಸುವಲ್ಲೂ ಚೆಮ್ಸ್‌ಫರ್ಡನ ಪಾತ್ರವೇನೂ ಇರಲಿಲ್ಲ. ಭಾರತದ ಪರಿಸ್ಥಿತಿಯನ್ನು ಚೆಮ್ಸ್‌ಫರ್ಡ್ ಸರಿಯಾಗಿ ನಿರ್ವಹಿಸಲಾರದಾದ. ರೌಲಟ್ ಸಮಿತಿಯ ಸಲಹೆಗಳಿಗೆ ಅನುಗುಣವಾಗಿ ಲಾರ್ಡ್ ಚೆಮ್ಸ್‌ಫರ್ಡ್ 1919ರಲ್ಲಿ ಜಾರಿಗೆ ತಂದ ಕಾನೂನುಗಳು ತುಂಬ ಉಗ್ರವಾಗಿದ್ದುವು. ಈ ಕಾನೂನುಗಳ ಮೂಲಕ ನ್ಯಾಯಾಧೀಶರಿಗೆ ನ್ಯಾಯದರ್ಶಿಗಳ ನೆರವಿಲ್ಲದೆಯೇ ರಾಜಕೀಯ ಮೊಕದ್ದಮೆಗಳ ವಿಚಾರಣೆ ನಡೆಸುವ ಅಧಿಕಾರ ನೀಡಲಾಯಿತು. ರಾಜಕೀಯ ಕಾರಣಗಳಿಗಾಗಿ ಯಾರನ್ನಾದರೂ ವಿಚಾರಣೆಯಿಲ್ಲದೆ ಬಂಧಿಸಿಡುವ ವ್ಯಾಪಕ ಅಧಿಕಾರ ಪ್ರಾಂತ್ಯಸರ್ಕಾರಗಳಿಗೆ ಪ್ರಾಪ್ತವಾಯಿತು. ಸಾಮ್ರಾಜ್ಯ ವಿಧಾನ ಪರಿಷತ್ತಿನ ಎಲ್ಲ ಖಾಸಗಿ ಸದಸ್ಯರೂ ವಿರುದ್ಧವಾಗಿದ್ದಾಗ್ಯೂ ಈ ಅಧಿನಿಯಮಗಳು ಅನುಮೋದಿತವಾದವು. ಇದು ಸಾರ್ವತ್ರಿಕ ಅಸಮಾಧಾನಕ್ಕೆ ಕಾರಣವಾಯಿತು. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ದೇಶಾದ್ಯಂತ ಪ್ರತಿಭಟನಾ ಸಭೆಗಳು ನಡೆದವು. ಹರತಾಳಗಳಾದವು. ಇಂಥ ಸಭೆಗಳಲ್ಲೊಂದು ಅಮೃತಸರದ ಜಲಿಯನ್ ವಾಲಾ ಬಾಗಿನಲ್ಲಿ ನಡೆಯುವುದಿತ್ತು. ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸೇರಿದ್ದ ಈ ಸಭೆಯನ್ನು ಚದುರಿಸಲು ಜನರಲ್ ಡೈಯರನ ಸೇನೆ ಗುಂಡು ಹಾರಿಸಿತು. ಆ ಸಭೆಯಿಂದ ಹೊರಕ್ಕೆ ಹೋಗಲು ಇದ್ದ ಒಂದೇ ದಾರಿಯನ್ನು ಪ್ರತಿಬಂಧಿಸಿ ನಿರಸ್ತ್ರರೂ ಅಸಹಾಯಕರೂ ಆದ ಜನರ ಮೇಲೆ ಡೈಯರನ ಸೇನೆ ನಡೆಸಿದ ಅತ್ಯಾಚಾರ ಭೀಕರವಾದ್ದು. ಗಂಡಸರು ಹೆಂಗಸರು ಮಕ್ಕಳು ಸೇರಿ ನೂರಾರು ಜನ ಮಡಿದರು. ಕಾನೂನನ್ನು ಉಲ್ಲಂಘಿಸಿದವರಿಗೆ ಉಗ್ರ ದಂಡನೆ ವಿಧಿಸಲಾಯಿತು. ವೈಸ್‌ರಾಯ್ ಲಾರ್ಡ್ ಚೆಮ್ಸ್‌ಫರ್ಡನಿಗೆ ಈ ಕೃತ್ಯಗಳೆಲ್ಲ ಗೊತ್ತಿದ್ದರೂ ಇವನ್ನು ನಿಲ್ಲಿಸಲು ಅವನು ಏನೂ ಕ್ರಮಕೈಗೊಳ್ಳಲಿಲ್ಲ. ಜನಾಭಿಪ್ರಾಯವನ್ನು ಲೆಕ್ಕಿಸಲಿಲ್ಲ. ಕೊನೆಗೆ ಇಷ್ಟವಿಲ್ಲದೆ ಅವನು ಈ ಘಟನೆಗಳ ವಿಚಾರಣೆಗಾಗಿ ಹಂಟರ್ ಸಮಿತಿಯನ್ನು ನೇಮಿಸಿದ. ಈ ಸಮಿತಿ ವಿಚಾರಣೆಯನ್ನಾರಂಭಿಸುವ ಮೊದಲೇ ಅವನು ಅಪಕೃತ್ಯಗಳಲ್ಲಿ ತೊಡಗಿದ್ದ ಎಲ್ಲ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳಿಗೂ ರಕ್ಷಣೆ ನೀಡುವ ಅಧಿನಿಯಮವೊಂದನ್ನು ಜಾರಿಗೆ ತಂದ. ವಿಚಾರಣಾ ಸಮಿತಿ ಜನರಲ್ ಡೈಯರನನ್ನು ಖಂಡಿಸಿತಲ್ಲದೆ, ಲಷ್ಕರಿ ಕಾನೂನಿನ ಆಡಳಿತವನ್ನು ಟೀಕಿಸಿತು. ಈ ವರದಿಯಂತೆ ಲಾರ್ಡ್ ಚೆಮ್ಸ್‌ಫರ್ಡ್ ಸೂಕ್ತ ಕ್ರಮ ಕೈಗೊಳ್ಳದೆ ಹೋದ. ಭಾರತ-ಬ್ರಿಟನ್ ಸೌಹಾರ್ದಕ್ಕೆ ಇದರಿಂದ ಭಾರಿ ಪೆಟ್ಟು ಬಿತ್ತು. 1857ರ ಬಂಡಾಯದ ಅನಂತರದ ಬೇರೆ ಯಾವ ಘಟನೆಯೂ ಭಾರತದ ಜನರ ಮನಸ್ಸಿನ ಮೇಲೆ ಇದರಷ್ಟು ತೀವ್ರ ಪರಿಣಾಮವನ್ನುಂಟುಮಾಡಲಿಲ್ಲ. ಮಹಾತ್ಮ ಗಾಂಧಿಯವರ ಅಹಿಂಸಾತ್ಮಕ ಪ್ರಭಾವದಿಂದಾಗಿ ಇವನ ಆಡಳಿತದ ವಿರುದ್ಧ ಭಾರತದಲ್ಲಿ ಕ್ರಾಂತಿ ಆಗಲಿಲ್ಲವೆನ್ನಬಹುದು.

1921ರಲ್ಲಿ ನಿವೃತ್ತನಾದ ಮೇಲೆ ಚೆಮ್ಸ್‌ಫರ್ಡ್ ವೈಕೌಂಟ್ ಆದ. 1924ರಲ್ಲಿ ರಾಮ್ಸೇ ಮ್ಯಾಕ್ಡೊನಾಲ್ಡನ ಲೇಬರ್ ಸರ್ಕಾರದಲ್ಲಿ ಆಡ್ಮಿರಾಲ್ಟಿಯ (ನೌಕಾಶಾಖೆ) ಪ್ರಥಮ ಲಾರ್ಡ್ ಆಗಿದ್ದ. ಲಾರ್ಡ್ ಚೆಮ್ಸ್‌ಫರ್ಡ್ ತೀರಿಕೊಂಡದ್ದು 1933ರ ಏಪ್ರಿಲ್ 1ರಂದು.

(ಎಚ್.ಎಂ.ಎಸ್.ಆರ್.)

**ಚೆರಿ :** ರೋಸೇಸೀ ಕುಟುಂಬಕ್ಕೆ ಸೇರಿದ ಒಂದು ಜನಪ್ರಿಯ ಹಣ್ಣಿನ ಮರ. ಬಾದಾಮಿ, ಸಕ್ಕರೆಬಾದಾಮಿ, ಪ್ಲಮ್, ಪೀಚ್ ಮರಗಳಿಗೆ ಬಲು ಹತ್ತಿರ ಸಂಬಂಧಿ. ಅನೇಕ ಶತಮಾನಗಳಿಂದ-ಬಹುಶಃ ಬೇಸಾಯದ ಆರಂಭಕಾಲದಿಂದ-ಯೂರೋಪ್ ಹಾಗೂ ಏಷ್ಯಗಳ ಸಮಶೀತೋಷ್ಣವಲಯಗಳಲ್ಲಿ ಇದು ಒಂದು ಪ್ರಮುಖ ಹಣ್ಣಿನ ಮರವಾಗಿದೆ. ಹುಟ್ಟಿಹಾಕಿದ ಸ್ವಲ್ಪ ಕಾಲದಲ್ಲೇ ಸಮೃದ್ಧವಾಗಿ ಹಣ್ಣು ಬಿಡುವುದರಿಂದ ಪ್ರತಿವರ್ಷ ತಪ್ಪದೇ ಫಲ ಕೊಡುವುದರಿಂದ ಮತ್ತು ಇದನ್ನು ಬಲು ಸುಲಭವಾಗಿ ಬೇಸಾಯ ಮಾಡಬಹುದಾದ್ದರಿಂದ ಚೆರಿ ಮರ ಬಹಳ ಜನಪ್ರಿಯವಾಗಿದೆ. ಈ ಜಾತಿಯ ವೈಜ್ಞಾನಿಕ ಹೆಸರು ಪ್ರೂನಸ್. ಇದರಲ್ಲಿ ಸಿಹಿಚೆರಿ (ಪ್ರೂನಸ್ ಏವಿಯಮ್) ಮತ್ತು ಹುಳಿಚೆರಿ (ಪ್ರೂನಸ್ ಸೆರೇಸಸ್) ಎಂಬ ಎರಡು ಬಗೆಗಳುಂಟು. ಸಿಹಿ ಚೆರಿ ಹಣ್ಣನ್ನು ಹಾಗೆಯೇ ತಿನ್ನಬಹುದು. ಹುಳಿ ಚೆರಿ ಹಣ್ಣನ್ನು ಬೇಯಿಸಿ ತಿನ್ನಬೇಕು. ಎರಡು ಬಗೆಗಳಿಂದಲೂ ತಂಪು ಪಾನೀಯವನ್ನು ತಯಾರಿಸಬಹುದು. ಅಲ್ಲದೆ ಇವನ್ನು ಅಲಂಕಾರಕ್ಕೋಸ್ಕರ ರಸ್ತೆಯ ಅಕ್ಕಪಕ್ಕಗಳಲ್ಲಿ ಬೆಳೆಸುವುದೂ ಉಂಟು.

ಸಿಹಿಚೆರಿ: ಇದು ಮೂಲತಃ ದಕ್ಷಿಣ ಮತ್ತು ಮಧ್ಯ ಯೂರೋಪ್ ಹಾಗೂ ಪಶ್ಚಿಮ ಏಷ್ಯದ ಗಿಡ. ಜರ್ಮನಿ, ಫ್ರಾನ್ಸ್, ಚೆಕೊಸ್ಲೊವಾಕಿಯ, ಪೋಲೆಂಡ್, ಇಟಲಿ, ಆಸ್ಟ್ರೇಲಿಯ (ವಿಶೇಷವಾಗಿ ಟ್ಯಾಸ್ಮೇನಿಯ) ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇದರ ಬೇಸಾಯ ಅಧಿಕ. ಭಾರತದಲ್ಲಿ ಕಾಶ್ಮೀರ, ಸಿಮ್ಲಾ ಕುಲು ಕಣಿವೆಗಳ 1,500-2,000 ಮೀ. ಎತ್ತರದ ಬೆಟ್ಟ ಪ್ರದೇಶಗಳಲ್ಲಿ ಲಘು ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಉತ್ತರ ಪ್ರದೇಶ, ಹಿಮಾಚಲ ಪ್ರದೇಶಗಳಲ್ಲೂ ಇದರ ಬೇಸಾಯ ಉಂಟು. ಸಿಹಿಚೆರಿ ಸುಮಾರು 2.5 ಮೀ. ಎತ್ತರಕ್ಕೆ ಗೋಪುರದಾಕಾರದಲ್ಲಿ ಬೆಳೆಯುವ ಮರ. ಎಲೆಗಳು ಆಯತಾಕಾರದವು; 6-15 ಸೆಂಮೀ. ಉದ್ದ ಇವೆ. ಇವುಗಳ ತುದಿ ಮೊನಚು; ಅಂಚು ಗರಗಸದಂತೆ. ಹೂಗಳು ಸೈಮೋಸ್ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ; ಬಣ್ಣ ಬಿಳಿ. ಹಣ್ಣುಗಳು ಗುಂಡಗೆ ನಯವಾಗಿವೆ; ಬಣ್ಣ ಹಳದಿ, ಕೆಂಪು ಇಲ್ಲವೆ ಕಪ್ಪು. ತಿರುಳು ಮೃದು ಇಲ್ಲವೆ ದೃಢ. ಸಿಹಿ ಅಥವಾ ಕಿರುಗಹಿ. ಸಿಹಿಚೆರಿ ಗಿಡವನ್ನು ಕಸಿ ಕಟ್ಟುವುದರಿಂದ (ಗ್ರ್ಯಾಫ್ಟಿಂಗ್) ಇಲ್ಲವೆ ಕಣ್ಣುಕಸಿ ಮಾಡುವುದರಿಂದ (ಬಡಿಂಗ್) ವೃದ್ಧಿಸಲಾಗುತ್ತದೆ. ಹೀಗೆ ಮಾಡುವಾಗ ಏವಿಯಮ್ ಪ್ರಭೇದದ ಕಾಂಡವನ್ನು ಇಲ್ಲವೆ ಮೊಗ್ಗನ್ನು ತಾಳುಸಸ್ಯವನ್ನಾಗಿಯೂ ಸೆರಸಾಯ್ಡಿಸ್ ಪ್ರಭೇದದ ಇಲ್ಲವೆ ಮಹಾಲೆಬ್ ಅಥವಾ ಸೆರೇಸಸ್ ಪ್ರಭೇದದ ಕಾಂಡವನ್ನು ಬೊಡ್ಡೆಯಾಗಿಯೂ ಬಳಸಲಾಗುತ್ತದೆ. ಇದರ ಬೇಸಾಯಕ್ಕೆ ಬಳಸಲಾಗುವ ಭೂಮಿ ಚೆನ್ನಾಗಿ ನೀರು ಬಸಿದು ಹೋಗುವಂತಿರಬೇಕಲ್ಲದೆ. ಬೇರುಗಳು ಆಳಕ್ಕೆ ಇಳಿಯಲು ಅನುಕೂಲವಾಗಿಯೂ ಫಲವತ್ತಾಗಿಯೂ ಇರಬೇಕು. ಬೇಸಾಯದ ಮೊದಲೆರಡು ವರ್ಷ ಗಿಡಗಳಿಗೆ ಚೆನ್ನಾಗಿ ನೀರು ಹಾಯಿಸಬೇಕು. ಮರಗಳು ಹುಲುಸಾಗಿ, ಹರಡಿಕೊಂಡು ಬೆಳೆಯುವುದರಿಂದ ಮರದಿಂದ ಮರಕ್ಕೆ ಸುಮಾರು 7.5-9.0 ಮೀ. ಅಂತರ ಇರುವುದು ಒಳ್ಳೆಯದು. ಒಂದು ಮರಕ್ಕೆ ವರ್ಷಕ್ಕೆ 75 ಕಿಗ್ರಾಂ. ಕೊಟ್ಟಿಗೆ ಗೊಬ್ಬರ, 5-4 ಕಿಗ್ರಾಂ. ಅಮೋನಿಯಮ್ ಸಲ್ಫೇಟ್ ಹಾಕಬೇಕು. ಗೊಬ್ಬರವನ್ನು ಒಂದೇ ಸಲಕ್ಕೆ ಒಟ್ಟಿಗೆ ಹಾಕದೆ 2-3 ಕಂತಿನಲ್ಲಿ ಹಾಕುವುದು ಒಳ್ಳೆಯದು. ಅಮೆರಿಕ ಮುಂತಾದೆಡೆ ಓಟ್ಸ್, ಬಾರ್ಲಿ, ಅಲಸಂದೆ ಇಲ್ಲವೆ ಕ್ಲೋವರ್ ಸಸ್ಯಗಳನ್ನು ಹೊದರುಗಿಡಗಳಾಗಿ ಬೆಳೆಸುವುದುಂಟು. ಇದರಿಂದ ಭೂಮಿಯ ಫಲವಂತಿಕೆ ಹೆಚ್ಚುತ್ತದೆಯಾದ್ದರಿಂದ ಚೆರಿ ಬೇಸಾಯಕ್ಕೆ ಒಳ್ಳೆಯದು. ಹಣ್ಣುಗಳನ್ನು ಕೀಳಲು ಅನುಕೂಲವಾಗಲೆಂದು ನಾಟಿ ಮಾಡಿದ ಮೊದಲೆರಡು ವರ್ಷ ಗಿಡದ ಮುಖ್ಯ ಕಾಂಡ ಹಾಗೂ ಕೆಲವು ರೆಂಬೆಗಳನ್ನು ಕತ್ತರಿಸಿ ಮರ ಪೊದೆಯಂತೆ ಹರಡಿಕೊಂಡು ಬೆಳೆಯುವಂತೆ ಮಾಡಲಾಗುತ್ತದೆ. ಕಸಿ ಮಾಡಿ ಬೆಳೆಸಿದ 4-5 ವರ್ಷಗಳ ಅನಂತರ ಚೆರಿಮರ ಫಲವನ್ನೀಯಲು ಆರಂಭಿಸುತ್ತದೆ. ಗರಿಷ್ಠ ಇಳುವರಿ ಮರಕ್ಕೆ 10 ವರ್ಷ ವಯಸ್ಸಾದ ಮೇಲೆಯೇ. ಇಳುವರಿಯ ಮೊತ್ತ 10-18 ಕಿಗ್ರಾಂ. ಒಂದು ಮರ 40-60 ವರ್ಷದ ವರೆಗೆ ಹಣ್ಣು ಬಿಡುತ್ತ ಹೋಗುತ್ತದೆ. ಹಣ್ಣುಗಳು ಕೊಯ್ಲಿಗೆ ಸಿದ್ಧವಾಗುವ ಕಾಲ ಮೇ-ಜುಲೈ. ಅವು ಚಿಕ್ಕ ಗಾತ್ರದವಾದ್ದರಿಂದ ಕೊಯ್ಲು ಮತ್ತು ಡಬ್ಬ ಇಲ್ಲವೆ ಬುಟ್ಟಿಗಳಲ್ಲಿ ತುಂಬಿಡುವುದು ದುಬಾರಿ ಖರ್ಚಿನ ಕೆಲಸ. ಸಾಮಾನ್ಯವಾಗಿ ಅವನ್ನು ತೊಟ್ಟು ಸಹಿತ ಬಿಡಿಸಿ 2-4 ಕೆಜಿ. ಹಣ್ಣು ಹಿಡಿಯುವಂಥ ಬುಟ್ಟಿಗಳಲ್ಲೊ 4.5 ಕಿಗ್ರಾಂ. ಹಿಡಿಯುವಂಥ ಪೆಟ್ಟಿಗೆಗಳಲ್ಲೊ ತುಂಬುತ್ತಾರೆ. ಸಿಹಿಚೆರಿಯ ಕೆಲವು ಬಗೆಗಳ ಹಣ್ಣುಗಳು (ಉದಾಹರಣೆಗೆ ಎಂಪರರ್ ಫ್ರಾನ್ಸಿಸ್) ಮಳೆ ಇಲ್ಲವೆ ಕಾವಳಕ್ಕೆ ಈಡಾದರೆ ಬಿರಿದು ಹೋಗುತ್ತವೆ. ಇಂಥ ಸಂದರ್ಭಗಳಲ್ಲಿ ಹಣ್ಣನ್ನು ಇಳಿಸುವ ಮುನ್ನ ಬೋರ್ಡೊ ದ್ರಾವಣ ಇಲ್ಲವೆ ಸುಣ್ಣವನ್ನು ಸಿಂಪಡಿಸುವುದರಿಂದ ಅಥವಾ ಮಣ್ಣಿಗೆ ಬೊರ್‍ಯಾಕ್ಸ್ ಹಾಕುವುದರಿಂದ ಬಿರಿಯುವಿಕೆಯನ್ನು ತಡೆಗಟ್ಟಬಹುದು.

ಸಿಹಿಚೆರಿಗೆ ಹೆಚ್ಚು ಹಾನಿಕರವಾದ ಬೂಷ್ಟು ರೋಗಗಳಾಗಲಿ, ಕೀಟ ಪಿಡುಗುಗಳಾಗಲಿ ಅಂಟುವುದಿಲ್ಲ. ಭಾರತದಲ್ಲಿ ಸರ್ಕೊಸ್ಪೊರ ರೂಬ್ರೊಟಿಂಕ್ಟ ಬೂಷ್ಟಿನಿಂದ ಬರುವ ಎಲೆಮಚ್ಚೆರೋಗ, ಅಮೆರಿಕ ಮತ್ತು ಯೂರೋಪುಗಳಲ್ಲಿ ಸ್ಕ್ಲಿರೊಟೀನಿಯ ಫ್ರಕ್ಟೀಜೆನದಿಂದ ಬರುವ ಕಂದುಬಣ್ಣದ ಕೊಳೆರೋಗ, ಸಿಲಿಂಡ್ರೊಸ್ಪೋರಿಯಮ್ ಪಾಡಿಯಿಂದ ಬರುವ ಎಲೆಬೂಷ್ಟು ರೋಗ ಮುಖ್ಯವಾದವು. ಬೋರ್ಡೊ ದ್ರಾವಣವನ್ನು ಸಿಂಪಡಿಸುವುದರಿಂದ ಇದನ್ನು ಯಶಸ್ವಿಯಾಗಿ ನಿರೋಧಿಸಬಹುದು. ಕೀಟಪಿಡುಗುಗಳಲ್ಲಿ ಮುಖ್ಯವಾದವು ಈಯೊಲೆಸ್ಟಿಸ್ ಹಲೋಸೆರಿಸಿಯ ಕೀಟದ ಡಿಂಬ, ಪ್ರೋಟೋಯೀಷಿಯ<ಇಂಪ್ಯಾವಿಡ, ಸ್ಟಲಾಗೋಸೋಮ ಆಲ್ಬೆಲ, ಮಿಮೆಲ ಪ್ಯಾಸರಿಸಿಯೈ ಹಾಗೂ ಮಿಲೊಸೆಸಸ್ ಲೆಫ್ರಾಯ್ಯೆ ಎಂಬ ಜೀರುಂಡೆಗಳು.

ಸಿಹಿಚೆರಿಯಲ್ಲಿ ಅನೇಕ ತಳಿಗಳಿವೆ. ಇವುಗಳಲ್ಲಿ ಮುಖ್ಯವಾದವು; ಮಜಾರ್ಡ್ (ಏವಿಯಮ್), ಹಾರ್ಟ್‌ಚೆರಿ (ಜೂಲಿಯಾನ), ಜಿಗಾರೊ (ಡ್ಯೂರಸೀನ).

ಹುಳಿಚೆರಿ: ಇದು ಪಶ್ಚಿಮ ಏಷ್ಯ ಮತ್ತು ಆಗ್ನೇಯ ಯೂರೋಪಿನ ಮೂಲದ್ದು. ಯೂರೋಪ್, ಅಮೆರಿಕಗಳಲ್ಲಿ ಹಣ್ಣಿಗಾಗಿ ಮಾತ್ರವಲ್ಲದೆ ಅಲಂಕಾರಕ್ಕಾಗಿ ಕೂಡ ಬೆಳೆಸುತ್ತಾರೆ. ಭಾರತದಲ್ಲೂ ಕಾಶ್ಮೀರ, ಕುಮಾಂವ್, ಗಢವಾಲ್ ಮುಂತಾದೆಡೆ ಅಲ್ಪಸ್ವಲ್ಪ ಪ್ರಮಾಣದಲ್ಲಿ ಬೆಳೆಸಲಾಗುತ್ತದೆ. ಇದು ಸಿಹಿಚೆರಿಗಿಂತ ಹೆಚ್ಚು ದೃಢಕಾಯದ ಮರವಾಗಿದ್ದು ಹೆಚ್ಚು ಆರೈಕೆಯಿಲ್ಲದೆ ಬೆಳೆಯಬಲ್ಲದು. ಅಲ್ಲದೆ ಇದಕ್ಕೆ ಬೂಷ್ಟು ರೋಗಗಳ ಹಾಗೂ ಕೀಟಗಳ ವಿರುದ್ಧ ಹೆಚ್ಚು ನಿರೋಧ ಸಾಮರ್ಥ್ಯ ಉಂಟು. ಇದರ ಕೃಷಿ ಸಿಹಿಚೆರಿಯದರಂತೆಯೇ. ಹಣ್ಣುಗಳಲ್ಲಿ ಆಮ್ಲೀಯತೆ ಹೆಚ್ಚಾಗಿರುವುದರಿಂದ ಸಿಹಿಚೆರಿ ಹಣ್ಣುಗಳಿಗಿಂತ ಇವು ಹೆಚ್ಚು ಹುಳಿಯಾಗಿವೆ. ಹುಳಿಚೆರಿಯಲ್ಲಿ ಅಮರೆಲ್‌ಚೆರಿ (ಸೆರೇಸಸ್), ಮೊರೆಲೊ ಚೆರಿ (ಆಸ್ಟರ) ಮತ್ತು ಮರಾಸ್ಕ ಚೆರಿ ಎಂಬ ಬಗೆಗಳಿವೆ. ಸಿಹಿಚೆರಿ ಮತ್ತು ಹುಳಿಚೆರಿಯ ಕೆಲವು ಬಗೆಗಳನ್ನು ಅಡ್ಡಹಾಯಿಸಿ ಪಡೆಯಲಾಗಿರುವ ಡ್ಯೂಕ್ ಚೆರಿ ಎಂಬ ತಳಿಯೂ ಬೇಸಾಯದಲ್ಲಿದೆ.

ಚೆರಿಹಣ್ಣುಗಳ ರಾಸಾಯನಿಕ ಸಂಯೋಜನೆ: ತೇವಾಂಶ ಶೇ. 83, ಪ್ರೋಟೀನ್ ಶೇ. 1.1 ಕೊಬ್ಬು ಶೇ. 0.5, ನಾರು ಶೇ. 0.3, ಕಾರ್ಬೊಹೈಡ್ರೇಟು ಶೇ. 14.2, ಖನಿಜಾಂಶ ಶೇ. 0.6 ಮತ್ತು ಪ್ರತಿ 100 ಗ್ರಾಂ. ತಿರುಳಿನಲ್ಲಿ 18 ಮಿ.ಗ್ರಾಂ. ಕ್ಯಾಲ್ಸಿಯಮ್, 20 ಮಿ.ಗ್ರಾಂ. ರಂಜಕ, 0.4 ಮಿ.ಗ್ರಾಂ. ಕಬ್ಬಿಣ, 8 ಮಿ.ಗ್ರಾಂ. ಆಸ್ಕಾರ್ಬಿಕ್ ಆಮ್ಲ ಮತ್ತು ಅತ್ಯಲ್ಪ ಮೊತ್ತದ ರೈಬೋಫ್ಲೇವಿನ್ ಹಾಗೂ ನಯಾಸಿನ್ ವಿಟಮಿನ್‌ಗಳು ಇವೆ. ಕಾಯಿಯಾಗಿದ್ದಾಗ ಇರುವ ಹುಳಿ ಇಲ್ಲವೆ ಒಗಚು ರುಚಿ ಹಣ್ಣು ಮಾಗಿದಂತೆ ಕಡಿಮೆಯಾಗಿ ಹಣ್ಣು ಸಿಹಿಯಾಗುತ್ತದೆ. ಸಕ್ಕರೆಯ ಅಂಶ ಗ್ಲೂಕೋಸ್ ಮತ್ತು ಫ್ರಕ್ಟೋಸ್ ರೂಪದಲ್ಲಿರುತ್ತದೆ. ಸಿಹಿಚೆರಿಯಲ್ಲಿ ಶೇ 0.64 ಆಮ್ಲ (ಮ್ಯಾಲಿಕ್ ಆಮ್ಲ) ಇದ್ದರೆ ಹುಳಿಚೆರಿಯಲ್ಲಿ ಇದರ ಮೊತ್ತ ಶೇ. 1.4. ಇದರಿಂದಾಗಿಯೇ ಹುಳಿಚೆರಿ ಹೆಚ್ಚು ಹುಳಿಯಾಗಿದೆ.

**ಉಪಯೋಗ:** ಸಿಹಿಚೆರಿಯನ್ನು ಹೆಚ್ಚಾಗಿ ಊಟವಾದ ಮೇಲೆ ತಿನ್ನಲು ಉಪಯೋಗಿಸಲಾಗುತ್ತದೆ. ಇದು ಬಲುಬೇಗ ಕೆಟ್ಟುಹೋಗುವುದರಿಂದ ಸಾಮಾನ್ಯವಾಗಿ ಸಕ್ಕರೆ ಪಾಕ ಇಲ್ಲವೆ ಸಲ್ಫರ್ ಡೈ ಆಕ್ಸೈಡ್ ಮತ್ತು ಕ್ಯಾಲ್ಸಿಯಮ್ ಕಾರ್ಬೊನೇಟ್ ದ್ರಾವಣಗಳ ಮಿಶ್ರಣದಲ್ಲಿ ನೆನೆಯಿಸಿ ಸಂಗ್ರಹಿಸಿಡಲಾಗುತ್ತದೆ. ಹೀಗೆ ಇಡುವಾಗ ಒಳಗಿನ ಬೀಜವನ್ನು ತೆಗೆಯಬಹುದು ಇಲ್ಲವೆ ಹಾಗೆಯೇ ಬಿಡಬಹುದು. ಕೆಲವು ಸಲ ಚೆರಿ ಹಣ್ಣುಗಳನ್ನು ಶೀತಲಿಸಿ ಇಲ್ಲವೆ ಬಿಸಿಲಿನಲ್ಲಿ ಒಣಗಿಸಿ ಇಡುವುದೂ ಉಂಟು. ಒಣಗಿಸುವ ಮುನ್ನ ಲೈ ದ್ರಾವಣ ಮತ್ತು ಗಂಧಕಗಳಿಂದ ಹಣ್ಣುಗಳನ್ನು ಸಂಸ್ಕರಿಸಲಾಗುತ್ತದೆ. ಚೆರಿ ಹಣ್ಣುಗಳನ್ನು ಸ್ಯಾಲಡ್, ಐಸ್‌ಕ್ರೀಮ್ ಮುಂತಾದ ಭಕ್ಷ್ಯಗಳ ತಯಾರಿಕೆಗೆ ಬಳಸಲಾಗುತ್ತದೆ. ಸಿಹಿಚೆರಿಯ ರಸದಿಂದ ಕಿರ್ಷ್‌ವಾಸರ್ ಎಂಬ ಮಾದಕ ಪಾನೀಯವನ್ನೂ ತಯಾರಿಸುವುದಿದೆ. ಈ ಉಪಯೋಗಗಳಲ್ಲದೆ ಚೆರಿಬೀಜದಿಂದ ಒಂದು ರೀತಿಯ ಎಣ್ಣೆಯನ್ನೂ ಪಡೆಯುವುದುಂಟು. ಚೌಬೀನೆ ತುಂಬ ಸೊಗಸಾಗಿ ಮೆರುಗನ್ನು ತೆಗೆದುಕೊಳ್ಳುವುದರಿಂದಲೂ ದೃಢವಾಗಿರುವುದರಿಂದಲೂ ಇದನ್ನು ಪೀಠೋಪಕರಣಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. (ಬಿ.ಎ.ಸಿ.)

**ಚೆರುಶ್ಶೇರಿ ನಂಬೂದಿರಿ :** ಮಲಯಾಳಂ ಸಾಹಿತ್ಯದಲ್ಲಿ ಪ್ರಸಿದ್ಧನಾದ ಒಬ್ಬ ಕವಿ. ಕಾಲ, ಹದಿನೈದನೆಯ ಶತಮಾನ. ಕೃತಿ, ಕೃಷ್ಣಗಾಥಾ, ಮಣಿ ಪ್ರವಳ ಕಾಲಘಟ್ಟದಲ್ಲೂ ಬದುಕಿದ್ದ ಕವಿಯಾದರೂ ಅದರ ಪ್ರಭಾವಕ್ಕೆ ಸಂಪೂರ್ಣ ಒಳಗಾದವನಲ್ಲ, ಮಲೆಯಾಳಂ ಭಾಷೆಯ ಸೊಗಡನ್ನೇ ನಾಶಮಾಡಿಬಿಡುವಷ್ಟು ಸಂಸ್ಕೃತ ಬೆರಕೆಯನ್ನು ಆತ ತನ್ನ ಕಾವ್ಯದಲ್ಲಿ ಅಂಗೀಕರಿಸಲಿಲ್ಲ. ವ್ಯವಹಾರ ಭಾಷೆಗೆ ತೀರ ಹತ್ತಿರವಾದ ಒಂದು ಶೈಲಿಯನ್ನು ಆತ ಕಂಡುಕೊಂಡು ಅದನ್ನೇ ಕಾವ್ಯದಲ್ಲಿ ಬಳಸಿದ್ದಾನೆ. ಕವಿ ಪ್ರಗಲ್ಭ ಪಂಡಿತನಾಗಿದ್ದುದಲ್ಲದೆ ಪುರಾಣೇತಿಹಾಸಗಳಲ್ಲಿ ಚೆನ್ನಾಗಿ ಪಳಗಿದ ವ್ಯಕ್ತಿಯೂ ಆಗಿದ್ದ. ಆದರೂ ತನ್ನವರಿಗೆ, ತನ್ನ ಭಾಷೆಯಲ್ಲಿ ಕಾವ್ಯರಚನೆ ಮಾಡುತ್ತಿದ್ದೇನೆ ಎಂಬುದನ್ನು ಆತ ಎಂದೂ ಮರೆಯಲಿಲ್ಲ. ಎಟುತ್ತಚ್ಚನಿಗಿಂತ ಮೊದಲು ಪುರಾಣಕತೆಗಳನ್ನು ಕಾವ್ಯದಲ್ಲಿ ಅಳವಡಿಸಿಕೊಂಡ ಕವಿಗಳಲ್ಲಿ ಆತ ತೀರ ಪ್ರಮುಖನಾದವ. ಮಲಯಾಳಂ ಕವಿಗಳ ಪೈಕಿ ಆಧುನಿಕತೆಯನ್ನು ಮೊಟ್ಟ ಮೊದಲು ಪ್ರದರ್ಶಿಸಿದವ ಆತನೆ ಎಂದು ಹೇಳಲಾಗಿದೆ.

ಅಕ್ಲಿಷ್ಟ ಕೋಮಲವಾದ ರಚನಾವೈಭವವೇ ಚೆರುಶ್ಶೇರಿಯ ಪ್ರಧಾನ ವೈಶಿಷ್ಟ್ಯ. ಸರಳವೂ ಋಜುವೂ ಆದ ಅವನ ಭಾಷಾಶೈಲಿಯಲ್ಲಿ ಅವ್ಯಕ್ತತೆಯ ಸಣ್ಣ ಕುರುಹು ಕೂಡ ಸಿಗದು. ಅರ್ಥಾಲಂಕಾರಗಳ ಸಮೃದ್ಧಿಯಲ್ಲಿ ಕೃಷ್ಣಗಾಥಾದೊಡನೆ ಹೆಗಲೆಣೆಯಾಗಿ ನಿಲ್ಲುವ ಕಾವ್ಯ ಮಲಯಾಳಂನಲ್ಲಿ ಬೇರೆ ಇಲ್ಲವೆಂದೇ ಹೇಳಬಹುದು. ಈ ಅಲಂಕಾರಗಳಲ್ಲಾದರೋ ಸ್ವಾಭಾವಿಕತೆ ತಾನೇತಾನಾಗಿ ಸ್ಫುರಿಸುತ್ತದೆ. ಉಪಮೆ, ಉತ್ಪ್ರೇಕ್ಷೆಗಳಿಗಂತೂ ಚೆರುಶ್ಶೇರಿ ಎತ್ತಿದ ಕೈ.

ಶ್ರೀಕೃಷ್ಣನ ಬಾಲ್ಯದ ವರ್ಣನೆಯಂತೂ ಅತ್ಯಮೋಘವಾಗಿದೆ. ಅಕ್ರೂರನ ಆಗಮನ, ರಾಸಕ್ರೀಡೆ ಮೊದಲಾದ ಸನ್ನಿವೇಶಗಳಲ್ಲಂತೂ ಕವಿ ತನ್ನ ವರ್ಣನಾವೈಖರಿಯನ್ನು ನಿರರ್ಗಳವಾಗಿ ಹರಿಸಿದ್ದಾನೆ. ಕವಿ ಎಂಥ ವಿಷಯವನ್ನೂ ಮಾನವೀಯ ಭಾವಗಳಿಂದ ಮಧುರೀಕರಿಸಬಲ್ಲನೆಂಬುದಕ್ಕೆ ಕಂಸವಧಾನಂತರ ಶ್ರೀಕೃಷ್ಣ ನಂದಗೋಪನನ್ನು ಆಲಿಂಗಿಸಿ ಹೇಳುವ ಮಾತುಗಳೇ ನಿದರ್ಶನ.

ಸರಸತೆಗೂ ಹಾಸ್ಯಕ್ಕೂ ಸಂದರ್ಭಗಳು ಲಭಿಸಿದಾಗ ಅವನ್ನು ಎಲ್ಲೂ ಅವಜ್ಞೆ ಮಾಡಿಲ್ಲ. ಸಂನ್ಯಾಸಿ ವೇಷಧಾರಿಯಾದ ಅರ್ಜುನನಿಗೆ ಭಿಕ್ಷೆ ನೀಡುವ ಸುಭದ್ರೆ ಅನುರಾಗ ವೇಶದಿಂದ ಉಂಟಾಗುವ ಗಾಬರಿಯ ನಿಮಿತ್ತ ಹಣ್ಣಿಗೆ ಬದಲು ಸಿಪ್ಪೆಯನ್ನು ಬಡಿಸುವುದು–ಮೊದಲಾದ ಸಂದರ್ಭಗಳಲ್ಲಿ ಸಹಜವಾದ ಹಾಸ್ಯವನ್ನು ಬೆಳಗಿಸಿದ್ದಾನೆ.

ಕೃಷ್ಣಗಾಥಾಕ್ಕೆ ಮಲಯಾಳಂ ಸಾಹಿತ್ಯದಲ್ಲಿ ಬಹಳ ಮುಖ್ಯವಾದ ಒಂದು ಸ್ಥಾನವಿದೆ. ಇಷ್ಟಾದರೂ ಚೆರುಶ್ಶೇರಿ ಆಚಾರ್ಯಪ್ರಭಾವವುಳ್ಳ ಕವಿಯಾಗಿ ಉಳಿಯಲಿಲ್ಲವೆಂಬುದು ಗಮನಾರ್ಹವಾದ ಸಂಗತಿ. (ಕೆ.ಕೆ.ಎಸ್.)

**ಚೆಲಿಯನ್ :** ಪೂರ್ವ ಶಿಲಾಯುಗದ ಕೈಗೊಡಲಿ ಸಂಸ್ಕೃತಿಯ ಎರಡನೆಯ ಹಂತವನ್ನು ನಿರ್ದೇಶಿಸಲು ಬಳಸಲಾಗಿರುವ ಹೆಸರು. ಇತ್ತೀಚೆಗೆ ಇದನ್ನು ಅಬ್ಬೆವಿಲಿಯನ್ ಸಂಸ್ಕೃತಿಯೆಂದೂ ಕರೆಯುತ್ತಾರೆ. ಫ್ರಾನ್ಸಿನಲ್ಲಿ ಪ್ಯಾರಿಸ್ ನಗರದ ಪೂರ್ವಕ್ಕಿರುವ ಚೆಲಿ–ಸುರ್–ಮಾರ್ನ್ ಎಂಬಲ್ಲಿ ಮೊದಲ ಬಾರಿಗೆ ಈ ಸಂಸ್ಕೃತಿಯ ಅವಶೇಷಗಳನ್ನು ಕಂಡುಹಿಡಿದುದರಿಂದ ಈ ಹೆಸರು ಬಂದಿದೆ. ಆಫ್ರಿಕದಲ್ಲಿ ಹುಟ್ಟಿದ ಈ ಸಂಸ್ಕೃತಿ ಕ್ರಮೇಣ ಯೂರೋಪ್ ಏಷ್ಯಗಳಲ್ಲಿ, ಭಾರತದವರೆಗೆ, ಹಬ್ಬಿತ್ತು.

ಪೂರ್ವ ಆಫ್ರಿಕದ ಟಾನ್‌ಜಾನಿಯ ರಾಜ್ಯದ ಓಲ್ಡವೇ ಕಮರಿಯಲ್ಲಿ ವಿಶ್ವದ ಅತ್ಯಂತ ಪ್ರಾಚೀನ ಮಾನವನ ಮತ್ತು ಅವನಿಂದ ನಿರ್ಮಿತವಾದ ಸಂಸ್ಕೃತಿಯ ಅವಶೇಷಗಳು ದೊರಕಿವೆ. ಕ್ರಮೇಣ ಆ ಸಂಸ್ಕೃತಿಯಿಂದ ಕೈಗೊಡಲಿ ಸಂಸ್ಕೃತಿ ಹುಟ್ಟಿಕೊಂಡಿತು. ಅಲ್ಲಿಯ ಮೊದಲ ಹಂತವಾದ ಓಲ್ಡೊವನ್ ಮತ್ತು ಮೂರನೆಯ ಹಂತವಾದ ಅಷ್ಯೂಲಿಯನ್ ಸಂಸ್ಕೃತಿಗಳ ನಡುವಣ ಈ ಚೆಲಿಯನ್ ಹಂತದಲ್ಲಿ ಕೈಗೊಡಲಿಗಳು ಬಹಳ ಒರಟಾಗಿರುತ್ತಿದ್ದುವು. ಆಯುಧ ತಯಾರಿಕೆಗೆ ಬಳಸುತ್ತಿದ್ದ ಉಂಡೆಕಲ್ಲುಗಳಿಂದ ಚಕ್ಕೆಗಳನ್ನು ತೆಗೆಯುವ ಕಲೆ ಇನ್ನೂ ಸುಧಾರಿಸಿರಲಿಲ್ಲವಾಗಿ ಕೈಗೊಡಲಿಗಳ ಅಂಚುಗಳು ಮತ್ತು ಮೇಲ್ಮೈ ಅಂಕುಡೊಂಕಾಗಿರುತ್ತಿದ್ದುವು. ಆದ್ದರಿಂದ ಆಯುಧಗಳು ಹರಿತ ವಾಗಿರುತ್ತಿರಲಿಲ್ಲ. ಚೆಲಿಯನ್ ಹಂತದ ಆಯುಧಗಳ ಸುಧಾರಣೆಯ ಪ್ರಗತಿಯನ್ನು ಮೂರು ಹಂತಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಹಂತದಲ್ಲಿ ಓಲ್ಡೊವನ್ ಆಯುಧಗಳಿಗಿಂತ ಸ್ವಲ್ಪ ನಾಜೂಕಾದ ದಪ್ಪವಾದ ಅಂಚುಗಳು ಇರುತ್ತಿದ್ದುವು. ಎರಡನೆಯ ಹಂತದಲ್ಲಿ ಸುಧಾರಿತ ರೀತಿಯಲ್ಲಿ ಚಕ್ಕೆಗಳನ್ನು ತೆಗೆದ ದೊಡ್ಡವಾದ ಮತ್ತು ಕೊಕ್ಕಿನಾಕಾರದ ತುದಿಯುಳ್ಳ ಕೈಗೊಡಲಿಗಳು ಬಳಕೆಗೆ ಬಂದುವು. ಕಡೆಯ ಹಂತದಲ್ಲಿ ಚಕ್ಕೆ ತೆಗೆಯುವ ವಿಧಾನದಲ್ಲಿ ಹೆಚ್ಚಿನ ಪ್ರಗತಿ ಉಂಟಾಗಿ, ಮೊನೆಯಾದ ತುದಿಯುಳ್ಳ, ತಳಭಾಗ ಚಪ್ಪಟೆಯಾಗಿಯೂ ಮೇಲ್ಭಾಗ ಉಬ್ಬಿಕೊಂಡೂ ಇದ್ದ ಕೈಗೊಡಲಿಗಳು ಬಳಕೆಗೆ ಬಂದುವು. (ಬಿ.ಕೆ.ಜಿ.)

**ಚೆಲುವಾಂಬೆ :** ಸು. 1725. ಕನ್ನಡ ಕವಯಿತ್ರಿ. ಮೈಸೂರಿನ ದೊರೆ ದೊಡ್ಡ ಕೃಷ್ಣರಾಜನ (1713–31) ರಾಣಿ. ಕಳಲೆ ಕಾಂತನೃಪನ ಮಗಳು. ಕನ್ನಡದೊಂದಿಗೆ ಸಂಸ್ಕೃತವನ್ನೂ ಆಳವಾಗಿ ಅಭ್ಯಾಸ ಮಾಡಿದ್ದಳು. ವರನಂದೀ ಕಲ್ಯಾಣ, ವೆಂಕಟಾಚಲ ಮಾಹಾತ್ಮ್ಯ ಲಾಲಿಪದ, ಅಲಮೇಲುಮಂಗೆ ಲಾಲಿಪದ, ತುಲಾಕಾವೇರಿ ಮಾಹಾತ್ಮ್ಯ ಹಾಗೂ ಕೃಷ್ಣಕರ್ಣಾಮೃತ ವ್ಯಾಖ್ಯೆ–ಇವು ಈಕೆಯ ಕೃತಿಗಳು. ವರನಂದೀ ಕಲ್ಯಾಣ 881 ಪದ್ಯಗಳಿರುವ ಏಳುಸಂಧಿಗಳು ಸಾಂಗತ್ಯ ಶೃಂಗಾರ ಭಕ್ತಿರಸಗಳ ಎರಕದಲ್ಲಿ ರೂಪುಗೊಂಡಿದೆ. ದೆಹಲಿಯ ಬಾದಶಹನ ಮಗಳಾದ ವರನಂದಿ ಮೇಲುಕೋಟೆಯ ಚೆಲುವರಾಯನನ್ನು ಮದುವೆಯಾದದ್ದು ಇದರ ವಸ್ತು. ದ್ವಾಪರದಲ್ಲಿ ಸತ್ಯಭಾಮೆ ಪ್ರಣಯಕೋಪದಿಂದ ಕೃಷ್ಣನಿಗೆ ಹೇಳಿದಳಂತೆ–ಈಗ ನೀನು ಬಲವಂತದಿಂದ ನನ್ನನ್ನು ಲಗ್ನವಾದಂತೆ ಕಲಿಯುಗದಲ್ಲಿ ನಾನು ಬಲವಂತದಿಂದ ನಿನ್ನನ್ನು ಲಗ್ನವಾಗುತ್ತೇನೆ ಎಂದು. ಆ ಪ್ರಕಾರ ಸತ್ಯಭಾಮೆ ವರನಂದಿಯಾಗಿ ಜನಿಸಿ ಮೇಲುಕೋಟೆಯ ಚೆಲುವರಾಯನನ್ನು ಲಗ್ನವಾದ ಕಥೆ ಈ ಕಾವ್ಯದಲ್ಲಿ ಬರುತ್ತದೆ. ಚೆಲುವಾಂಬೆ ವರನಂದಿಯ ಯೌವನದ ಸೊಬಗನ್ನು ಸೊಗಸಾಗಿ ವರ್ಣಿಸಿದ್ದಾಳೆ. ಆಕೆಯ ವಿರಹವ್ಯಥೆ ಮನಕರಗುವಂತಿದೆ. ಮದುವೆಯ ಮಂಗಳ ಮಹೋತ್ಸವಗಳ ವರ್ಣನೆ ರಮ್ಯವಾಗಿದೆ. ತುಲಾಕಾವೇರಿ ಮಾಹಾತ್ಮ್ಯವನ್ನು ಶ್ರೀನಿವಾಸನೆಂಬವನು ರಚಿಸಿ ಚೆಲುವಾಂಬೆಗೆ ಅಂಕಿತಗೊಳಿಸಿರಬಹುದೆಂದು ಕವಿಚರಿತೆಕಾರರ ಅಭಿಪ್ರಾಯ. ಇವಳ ಎಲ್ಲ ಕೃತಿಗಳಲ್ಲೂ ಭಕ್ತಿರಸವೇ ಪ್ರಧಾನ. ವೈಷ್ಣವಭಕ್ತಿಪರಂಪರೆಯಲ್ಲಿ ಈ ಕೃತಿಗಳು ಮೂಡಿಬಂದಿವೆ. ಕೃಷ್ಣಕರ್ಣಾಮೃತವ್ಯಾಖ್ಯೆ ಈಕೆಯ ಸಂಸ್ಕೃತ ಕನ್ನಡ ಪಾಂಡಿತ್ಯಕ್ಕೆ ಕೈಗನ್ನಡಿ. ಸಂಸ್ಕೃತ, ಮೂಲಕೃತಿಗೆ ಶಬ್ದಶಃ ಕನ್ನಡ ಟೀಕೆಯನ್ನು ಇಲ್ಲಿ ಕೊಡಲಾಗಿದೆ.

ಪತಿಯ ಆಜ್ಞೆಯಂತೆ ತಾನು ಕಾವ್ಯರಚಿಸಿದುದಾಗಿಯೂ ಕೃತಿಗೆ ಕರ್ತ ಚೆಲ್ವರಾಯ, ತನಗೆ ಸನ್ಮತಿಯಿತ್ತವನು ಶ್ರೀನಿವಾಸ–ಎಂದು ಚೆಲುವಾಂಬೆ ತನ್ನ ಭಕ್ತಿಭಾವವನ್ನು ವ್ಯಕ್ತಗೊಳಿಸಿದ್ದಾಳೆ. ಅಚ್ಚಗನ್ನಡದ ಇನಿವಾತುಗಳಲ್ಲಿ ಕೃತಿರಚನೆ ಮಾಡಿರುವ ಚೆಲುವಾಂಬೆ ಕನ್ನಡ ಕವಯಿತ್ರಿಯರ ಶ್ರೇಣಿಯಲ್ಲಿ ಪ್ರಮುಖಳಾಗಿದ್ದಾಳೆ. (ಎಸ್.ಎಚ್.ಎಂ.)

**ಚೆಲ್ಲಕೇತನ :** 9–10ನೆಯ ಶತಮಾನಗಳಲ್ಲಿ ಬನವಾಸಿ ಮಂಡಲದ ಅಧಿಕಾರಿಗಳಾಗಿದ್ದವರ ಒಂದು ಪ್ರಮುಖ ಮನೆತನ. ಎದಿಬಿಕೋರಿ ಎಂಬುವನು ಇದರ ಮೊದಲಿಗ. ಕೊಳನೂರಾಧೀಶ್ವರನೆನಿಸಿದ ಧೋರ ಈತನ ಮಗ. ಧೋರನ ಮಗ ಬಂಕೆಯ. ಈತನ ತಾಯಿ ವಿಜಯಾಂಕಾ, ಬಂಕೆಯನನ್ನು ಶಾಸನಗಳಲ್ಲಿ ಬಂಕೇಶ, ಬಂಕೆಯರಸ ಎಂದೂ ಕರೆಯಲಾಗಿದೆ. ಈತ ರಾಷ್ಟ್ರಕೂಟ 1ನೆಯ ಅಮೋಘವರ್ಷನ ಮಾಂಡಲಿಕನಾಗಿ ಬನವಾಸಿನಾಡನ್ನು ಆಳುತ್ತಿದ್ದ. ಕುಂದಟ್ಟೆ ಮತ್ತು ಲೋಕಾದಿತ್ಯ (ಲೋಕಟೆ) ಇವನ ಮಕ್ಕಳು. ಹಿರಿಯ ಮಗ ನಿಡುಗುಂದಗೆ–12 ಎಂಬ ಸಣ್ಣ ಭಾಗದ ಅಧಿಕಾರಿಯಾಗಿದ್ದ. ಲೋಕಾದಿತ್ಯ ಸು. 895ರಿಂದ ಒಂದು ದಶಕಕ್ಕೂ ಹೆಚ್ಚು ಕಾಲ ಬನವಾಸಿ ಪ್ರಾಂತ್ಯಾಧಿಕಾರಿ ಯಾಗಿದ್ದ. ಇವನ ಮಗ ಕಲಿವಿಟ್ಟ ಇವನ ಅಧೀನದಲ್ಲಿ ಪುನ್ನವಂತಿ (ಹೊನ್ನತಿ)–12ರ ಅಧಿಕಾರಿಯಾಗಿದ್ದ. 916ರ ಹಾಗೂ 928ರ ಶಾಸನಗಳಲ್ಲಿ ಬಂಕೆಯನೆಂಬಾತ ಬನವಾಸಿ

ಪ್ರಾಂತ್ಯಾಧಿಕಾರಿಯಾಗಿದ್ದನೆಂದು ಹೇಳಿದೆ. ಈತ ಲೋಕಟೆಯ ಮಗನಾಗಿರಬೇಕು. 914ರ ಶಾಸನವೊಂದರಲ್ಲಿ ಧೋರನೆಂಬಾತ ಈ ಪ್ರಾಂತ್ಯವನ್ನು ಆಳುತ್ತಿದ್ದನೆಂದು ಹೇಳಿದೆ. ಆದ್ದರಿಂದ ಈತ ಇಮ್ಮಡಿ ಬಂಕೆಯನ ಸೋದರನಾಗಿರಬಹುದು. ಕಲಿವಿಟ್ಟನೆಂಬುವನು ಲೋಕಟೆಯ ಮಗನೆಂದು ಹೇಳಿರುವ ಕಾರಣದಿಂದಲೂ ಆತನ ಶಾಸನಗಳು ಧೋರನ ಶಾಸನಕ್ಕೂ ಮೊದಲಿನವಾದ್ದರಿಂದಲೂ ಕಲಿವಿಟ್ಟನಿಗೆ ಧೋರ ಕಿರಿಯ ಸೋದರನೆಂದು

**ಚೆಲ್ಲಕೇತನ ವಂಶಾವಳಿ**

ಎಱಕೋರಿ
|
ಧೋರ I
|
ಬಂಕೆಯ I (800)
- ಕುಂದಟ್ಟೆ (860)
- ಲೋಕಟೆ (ಲೋಕಾದಿತ್ಯ (896–905)
  - ಕಲಿವಿಟ್ಟ I (913–14)
  - ಧೋರ II (915–16)
  - ಬಂಕೆಯ II (916–928)
    - ಕಲಿವಿಟ್ಟ II (928–945)

ಊಹಿಸಬಹುದು. ಕಲಿವಿಟ್ಟ 929ರಲ್ಲಿ ಬೆಳ್ವೊಲ–200 ಪ್ರಾಂತ್ಯವನ್ನು ಆಳುತ್ತಿದ್ದ. ಅದೇ ಹೆಸರಿನ ಒಬ್ಬಾತ ಬನವಾಸಿಯನ್ನು 945–46ರಲ್ಲಿ ಆಳುತ್ತಿದ್ದನೆಂದೂ ಶಾಸನಗಳಿಂದ ತಿಳಿದಿದೆ. 928ರವರೆಗೆ ಬಂಕೆಯ ಬನವಾಸಿ ನಾಡಧಿಕಾರಿಯಾಗಿದ್ದ ಕಾರಣ, ಅವನ ಅನಂತರ ಅವನ ಮಗನಾದ ಈ ಕಲಿವಿಟ್ಟ ಮೊದಲ ಬೆಳ್ವಲ ಹಾಗೂ ಅನಂತರ ಬನವಾಸಿ ಪ್ರಾಂತ್ಯಗಳ ಅಧಿಕಾರಿಯಾಗಿದ್ದನೆಂದು ಊಹಿಸಬೇಕಾಗಿದೆ. ಈ ವಿವರಗಳನ್ನೊಟ್ಟುಗೂಡಿಸಿ ಚೆಲ್ಲಕೇತನ ಮನೆತನದ ವಂಶಾವಳಿಯನ್ನು ಹೇಗೆ ರೂಪಿಸಬಹುದು ಎಂಬುದನ್ನು ಚಿತ್ರದಲ್ಲಿ ತೋರಿಸಿದೆ. (ಜಿ.ಬಿ.ಆರ್.)

**ಚೆಸ್‌ನಟ್‌ಮರ :** ಚೆಸ್‌ನಟ್ ಎಂದೂ ಪ್ರಯೋಗ. ಫ್ಯಾಗೇಸೀ ಕುಟುಂಬಕ್ಕೆ ಸೇರಿದ ಅತ್ಯಂತ ಬೆಲೆಬಾಳುವ ವೃಕ್ಷ. ವೈಜ್ಞಾನಿಕ ಹೆಸರು ಕ್ಯಾಸ್ಟಾನಿಯ. ಕ್ಯಾಸ್ಟಾನಿಯ ಜಾತಿಯಲ್ಲಿ ಅನೇಕ ಪ್ರಭೇದಗಳಿವೆಯಾದರೂ ಈ ಮುಂದಿನ ಕೇವಲ ನಾಲ್ಕು ಪ್ರಭೇದಗಳಿಗೆ ಮಾತ್ರ ಚೆಸ್‌ನಟ್ ಮರಗಳೆಂದು ಹೆಸರು: ಕ್ಯಾ ಸೇಟಿವ (ಯೂರೋಪಿನ ಚೆಸ್‌ನಟ್), ಕ್ಯಾ.ಡೆಂಟೇಟ (ಅಮೆರಿಕನ್ ಚೆಸ್‌ನಟ್), ಕ್ಯಾ. ಕ್ರಿನೇಟ (ಜಪಾನಿನ ಚೆಸ್‌ನಟ್). ಕಾ, ಮಾಲಿಸಿಮ (ಚೈನೀಸ್ ಚೆಸ್‌ನಟ್). ಉಳಿದ ಪ್ರಭೇದಗಳನ್ನು ಚಿನ್ ಕ್ವಾಪಿನ್ಸ್ ಎನ್ನುತ್ತಾರೆ. ಹಿಪ್ಪೊಕ್ಯಾಸ್ಟನೇಸೀ ಕುಟುಂಬಕ್ಕೆ ಸೇರಿದ ಹಾರ್ಸ್, ಚೆಸ್‌ನಟ್ ಎನ್ನುವ ವೃಕ್ಷಕ್ಕೂ ನಿಜವಾದ ಚೆಸ್‌ನಟ್ಟಿಗೂ ಯಾವ ಸಂಬಂಧವೂ ಇಲ್ಲ.

ಚೆಸ್‌ನಟ್‌ಗಳು 15–30 ಮೀ. ಎತ್ತರಕ್ಕೆ ಬೆಳೆಯುತ್ತವೆ. ಎಲೆಗಳು ಸರಳ ಹಾಗೂ ಪರ್ಯಾಯ ರೀತಿಯಲ್ಲಿ ಜೋಡಣೆಯಾಗಿವೆ. ಬೇಸಿಗೆಯಲ್ಲಿ ಉದುರುವುದುಂಟು. ಎಲೆಗಳ ಅಂಚಿನಲ್ಲಿ ಬಿರುಗೂದಲಿನಂಥ ಕೂದಲುಗಳಿವೆ. ಹೂಗಳು ಸಣ್ಣವು ಮತ್ತು ಏಕಲಿಂಗಿಗಳು; ಕ್ಯಾಟ್ಕಿನ್ ಪುಷ್ಪಮಂಜರಿಗಳಲ್ಲಿ ಸಮಾವೇಶಗೊಂಡಿವೆ. ಕೆಲವು ಪುಷ್ಪಮಂಜರಿಗಳಲ್ಲಿ ಕೇವಲ ಗಂಡು ಹೂಗಳು ಮಾತ್ರ ಇವೆ. ಇನ್ನುಳಿದವುಗಳಲ್ಲಿ ಎರಡೂ ಬಗೆಯ ಹೂಗಳಿರುವುದಂಟು. ಇಂಥ ಗೊಂಚಲುಗಳಲ್ಲಿ ಹೆಣ್ಣು ಹೂಗಳು ಮಂಜರಿಯ ಕೆಳಭಾಗದಲ್ಲಿರುತ್ತವೆ. ಹಣ್ಣಿನ ಸುತ್ತ ಚರ್ಮಿಲ ರೀತಿಯ ಸಿಪ್ಪೆ ಇದೆ. ಬೀಜಗಳು 2 ಅಥವಾ 3.

ಚೆಸ್‌ನೆಟ್ ಮರಗಳಿಗೆ ನೀರಿನ ಆವಶ್ಯಕತೆ ಅಧಿಕ. ಆದರೆ ನೆಲದಲ್ಲಿ ಒಮ್ಮೆ ಸರಿಯಾಗಿ ಬೇರೂರಿದವೆಂದರೆ ಬಹಳ ಕಾಲ ನೀರಿನ ಅಭಾವವನ್ನು ತಡೆದುಕೊಳ್ಳಬಲ್ಲವು. ಆಮ್ಲೀಯ ಅಥವಾ ತಟಸ್ಥ ಮಣ್ಣಿನಲ್ಲಿ ಮರಗಳು ಚೆನ್ನಾಗಿ ಬೆಳೆಯುತ್ತವೆ. ಮರವನ್ನು ಕಡಿದ ಮೇಲೆ ಕಾಂಡದ ಬುಡದಿಂದ ಅನೇಕ ಚಿಗುರುಗಳು ಹೊರಡುವುದು ಚೆಸ್ಟ್‌ನಟ್ ಮರಗಳ ಮುಖ್ಯ ಲಕ್ಷಣಗಳಲ್ಲೊಂದು. ಇದು ಅಲಿಂಗ ರೀತಿಯ ಸಂತಾನಾಭಿವೃದ್ಧಿಗೆ ಸಹಾಯಕ. ಮರದ ತಿರುಳು ಮತ್ತು ತೊಗಟೆಯಿಂದ ಟ್ಯಾನಿನ್ ಸಿಗುತ್ತದೆ. ಇದನ್ನು ಚರ್ಮ ಹದ ಮಾಡುವುದಕ್ಕೆ ಉಪಯೋಗಿಸುತ್ತಾರೆ. ಚೆಸ್‌ನಟ್ ಹಣ್ಣುಗಳು ತಿನ್ನಲು ರುಚಿ. ಕಾಂಡ ಹಾಗೂ ಕೊಂಬೆಗಳನ್ನು ಕಂಬ, ದೊಣ್ಣೆ, ದೋಣಿಯ ಹುಟ್ಟು ಮುಂತಾದವನ್ನು ಮಾಡಲು ಉಪಯೋಗಿಸುತ್ತಾರೆ. ದೊಡ್ಡ ದಿಮ್ಮಿಗಳನ್ನು ಕೊಯ್ದು ಹಲಗೆಗಳನ್ನಾಗಿ ಮಾಡಿ, ಮರದ ಸಾಮಾನುಗಳನ್ನು ಮೇಜು ಕುರ್ಚಿಗಳನ್ನು ಇನ್ನಿತರ ಅಲಂಕರಣ ಸಾಮಗ್ರಿಗಳ ತಯಾರಿಕೆಗೆ ಉಪಯೋಗಿಸುವುದುಂಟು. ಮರಕ್ಕೆ ಚೆನ್ನಾಗಿ ಹೊಳಪು ಕೊಡಬಹುದಾದ್ದರಿಂದ ವಿಶೇಷ ಬೇಡಿಕೆಯಿದೆ. ಎಲೆಗಳ ಕಷಾಯವನ್ನು ಕೆಮ್ಮು ಮತ್ತಿತರ ಉಸಿರಾಟದ ತೊಂದರೆಗಳ ನಿವಾರಣೆಗೆ ಬಳಸುತ್ತಾರೆ.

ಚೆಸ್‌ನಟ್ ಕಾಯಿಗಳು

ಚೆಸ್‌ನಟ್ಟಿನ ವಿವಿಧ ಪ್ರಭೇದಗಳ ಮುಖ್ಯ ಲಕ್ಷಣಗಳು ಈ ರೀತಿ ಇವೆ:

1 ಯೂರೋಪಿನ ಚೆಸ್‌ನಟ್; ಅತ್ಯಂತ ಬೆಲೆಬಾಳುವ ಮರ. 1,000 ಮೀ. ಗಳಿಗಿಂತ ಕೆಳಮಟ್ಟದ ಪ್ರದೇಶಗಳಲ್ಲಿ ಮಾತ್ರ ಬೆಳೆಯುತ್ತದೆ. ಮರಗಳು ಬೃಹದಾಕಾರದವು. ಎಲ್ಲಕ್ಕಿಂತ ದೊಡ್ಡ ವೃಕ್ಷವಾದ ಸಿಲಿಸಿಯ ಎಂಬುದು ಎಟ್ನ ಪರ್ವತದ ಬುಡದಲ್ಲಿತ್ತು. 1850ರಲ್ಲಿ ಇದರ ಸುತ್ತಳತೆ 62 ಮೀ. ಮತ್ತು ವಯಸ್ಸು ಎರಡು ಸಾವಿರಕ್ಕೂ ಮೀರಿತ್ತು. ಇದು ಎಟ್ನದಲ್ಲಿ ಉಂಟಾದ ಲಾವ ಪ್ರವಾಹದಿಂದ ನಾಶವಾಯಿತು. ಈ ಪ್ರಭೇದ ಅನೇಕ ಸಹಸ್ರ ಸಂಖ್ಯೆಯಲ್ಲಿ ಹಣ್ಣುಗಳನ್ನು ಬಿಡುತ್ತದೆ. ದೊಡ್ಡ ಹಣ್ಣುಗಳಿಗೆ ಮ್ಯಾರಾನ್‌ಗಳೆಂದು ಹೆಸರು. ಇವನ್ನು ಹಸಿಯಾಗಿ ಇಲ್ಲವೆ ಹುರಿದು ತಿನ್ನಬಹುದು. ಹಣ್ಣು ಬಲಿತ ಮೇಲೆ ಒಣಗಿಸಿ, ಹಿಟ್ಟು ಮಾಡಿಸಿ, ಏಕದಳ ಧಾನ್ಯಗಳಿಗೆ ಬದಲಾಗಿ ಬ್ರೆಡ್, ಸೂಪ್ ಮತ್ತಿತರ ಪದಾರ್ಥಗಳ ತಯಾರಿಕೆಯಲ್ಲಿ ಬಳಸುವುದಿದೆ.

2 ಜಪಾನ್ ಚೆಸ್‌ನೆಟ್ : 800 ಮೀ. ಗಳಿಗಿಂತ ಕೆಳಮಟ್ಟದಲ್ಲಿ ಬೆಳೆಯುತ್ತದೆ. ಮರಗಳು ಹೆಚ್ಚು ಎತ್ತರ ಬೆಳೆಯುವುದಿಲ್ಲ. ಅಪರೂಪವಾಗಿ ಎತ್ತರ 20 ಮೀ. ದಪ್ಪ 1. ಮೀ. ಇರಬಹುದು. ಇದರ ಹಣ್ಣುಗಳನ್ನು ತಿನ್ನಬಹುದು. ಗುಣದಲ್ಲಿ ಯೂರೋಪಿಯನ್ ಚೆಸ್‌ನಟ್‌ಗಿಂತ ಇದು ಕಡಿಮೆ ದರ್ಜೆಯದು.

3 ಚೀನಿ ಚೆಸ್‌ನಟ್ : ಜಪಾನ್ ಚೆಸ್‌ನಟ್ ನಷ್ಟೇ ಎತ್ತರ ಬೆಳೆಯುತ್ತದೆ. ಹಣ್ಣುಗಳು ಸಣ್ಣವಾದರೂ ಬಲುರುಚಿ. ಇದರಲ್ಲಿ ಬಾರ್‌ಪ್ಲೆಟ್‌ಕಾರ್, ಹಾಚ್ಸನ್, ಮಿಲ್ ಪೋರ್ಡ್, ರಿಲೆಯನ್ಸ್, ಯಾಂಕೀ, ಜಿಮ್ಮರ್ ಮ್ಯಾನ್ ಮುಂತಾದ ಉಪಪ್ರಭೇದಗಳಿವೆ.

4 ಅಮೆರಿಕನ್ ಚೆಸ್‌ನಟ್ : ಇದು ಸಹ ಅತ್ಯಂತ ಬೆಲೆಬಾಳುವ ಮರ. ಮರಗಳ ಎತ್ತರ 30 ಮೀ. ಗಳಿಗಿಂತ ಹೆಚ್ಚು. ಸುತ್ತಳತೆ 1.5 ಮೀ.

ಭಾರತದಲ್ಲಿ ಚೆಸ್‌ನಟ್‌ಗಳು ಸ್ವಾಭಾವಿಕವಾಗಿ ಬೆಳೆಯುವುದಿಲ್ಲ. ಇವನ್ನು ಹಿಮಾಲಯ ಪರ್ವತ ಮತ್ತು ಖಾಸಿ ಬೆಟ್ಟಗಳಲ್ಲಿ ಬೆಳೆಸುವುದುಂಟು. ಈಗ ಹೆಚ್ಚು ಬೆಳೆಸುತ್ತಿರುವುದು ಯೂರೋಪಿಯನ್ ಚೆಸ್ಟ್‌ನಟ್. ಇದರ ಹಣ್ಣಿನ ತಿರುಳು ಮತ್ತು ಹಿಟ್ಟನ್ನು ಆಹಾರವಾಗಿ ಉಪಯೋಗಿಸುತ್ತಾರೆ.

ಚೆಸ್‌ನಟ್ ಹಣ್ಣಿನ ತಿರುಳಿನ ರಾಸಾಯನಿಕ ಸಂಯೋಜನೆ ಹೀಗಿದೆ : ತೇವಾಂಶ ಶೇ.29.34, ಪಿಷ್ಟ ಪದಾರ್ಥಗಳು ಶೇ.32.64, ಸಕ್ಕರೆ ಶೇ.21.60, ಪ್ರೋಟೀನ್‌ಶೇ. 10.90, ಕೊಬ್ಬು ಶೇ.1.84, ಬೂದಿ (ಖನಿಜಗಳು) ಶೇ.2.25 ಮತ್ತು ನಾರು ಶೇ. 1.43.

ಚೆಸ್‌ನಟ್ಟಿನ ರೋಗಗಳಲ್ಲಿ ಮುಖ್ಯವಾದುದು ಚೆಸ್‌ನಟ್ ಬ್ಲೈಟ್, 20ನೆಯ ಶತಮಾನದ ಆದಿಭಾಗದಲ್ಲಿ ಅಮೆರಿಕನ್ ಚೆಸ್ಟ್‌ನಟ್ ಮರ ಎಂಡೋಥಿಯ ಪ್ಯಾರಸಿಟಿಕ ಎಂಬ ಶಿಲೀಂಧ್ರ ರೋಗಕ್ಕೆ ತುತ್ತಾಯಿತು. ಸುಮಾರು ಮೂವತ್ತೈದು ವರ್ಷಗಳ ಕಾಲ ಅವ್ಯಾಹತವಾಗಿ ನಡೆದ ಈ ರೋಗದ ದಾಳಿಗೆ ಅನೇಕ ಮರಗಳು ಬಲಿಯಾದವು. ಇತ್ತೀಚೆಗೆ ಕೆಲವು ಬ್ಲೈಟ್ ನಿರೋಧಕ ತಳಿಗಳನ್ನು ಉತ್ಪಾದಿಸಲಾಗಿದ್ದರೂ ಅವನ್ನು ಬೃಹತ್ ಪ್ರಮಾಣದಲ್ಲಿ

ಬೆಳೆಸಲು ಸಾಧ್ಯವಾಗಿಲ್ಲ. ಅಮೆರಿಕನ್ ಮತ್ತು ಜಪಾನ್ ಪ್ರಭೇದಗಳ ನಡುವಣ ಸಂಕರತಳಿಗಳು ರೋಗನಿರೋಧಕ ಗುಣಗಳನ್ನು ಪಡೆದಿವೆಯೆಂದು ಹೇಳಲಾದರೂ ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ನಡೆದಿಲ್ಲ. (ಎಸ್.ಎಸ್.ಯು.)

**ಚೆಸ್ಟರ್‌ಟನ್, ಗಿಲ್ಬರ್ಟ್ ಕೀತ್ :** 1874–1936. ಇಂಗ್ಲೆಂಡಿನ ಪತ್ರಿಕೋದ್ಯಮಿ, ಗ್ರಂಥಕರ್ತ, ವಿಮರ್ಶಕ, ವಾದಪಟು, ಆಲಂಕಾರಿಕ (ರೆಟರಿಕಲ್) ಕವಿಯಾಗಿ ಪ್ರಸಿದ್ಧಿ ಪಡೆದ ಸಾಹಿತಿ. ತುಂಬಿ ತುಳುಕುವ ಉತ್ಸಾಹ, ವಾಕ್‌ಚತುರತೆ ಮತ್ತು ಭೀಮಕಾಯದಿಂದ ಎಲ್ಲರ ಮನಸೆಳೆದ ಮೋಹಕ ವ್ಯಕ್ತಿ. ಜನನ, ಲಂಡನ್ನಿನಲ್ಲಿ. ಸೇಂಟ್ ಪಾಲ್ಸ್ ಶಾಲೆಯಲ್ಲಿ ಮೊದಲ ಶಿಕ್ಷಣ ಪಡೆದ. ಚಿಕ್ಕ ವಯಸ್ಸಿನಲ್ಲೇ ಇಂಗ್ಲಿಷ್ ಕಾವ್ಯ ರಚನೆಗೆ ಮಿಲ್ಟನ್ ಬಹುಮಾನ ಗಳಿಸಿದ (1890). ಕಲೆಯನ್ನೇ ವೃತ್ತಿಯಾಗಿ ಅನುಸರಿಸಬೇಕೆಂಬ ಆಸಕ್ತಿಯಿಂದ (1892–1895ರವರೆಗೆ) ಸ್ಲೇಡ್ ಶಾಲೆಯನ್ನು ಸೇರಿದ. ಅದೇ ಅವಧಿಯಲ್ಲಿ ಲಂಡನ್ನಿನ ಯೂನಿವರ್ಸಿಟಿ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಅಭ್ಯಾಸ ಮಾಡಿದ. ಸಹಜ ಒಲವು ಇದ್ದುದು ಸಾಹಿತ್ಯದ ಕಡೆಗೆ. ಆಗ ಇವನಿಗೆ ಪರಿಚಯವಾದ ಅರ್ನೆಸ್ಟ್ ಹಾಡರ್ ವಿಲಿಯಮ್ಸ್ ಎಂಬಾತ ಸಾಹಿತ್ಯದಲ್ಲಿರುವ ಇವನ ಸಹಜ ಒಲವನ್ನು ಗುರುತಿಸಿ ಸಮರ್ಥ ಲೇಖಕನಾಗುವ ಶಕ್ತಿಯಿದೆಯೆಂದು ಭರವಸೆ ಕೊಟ್ಟ. ಅವನ ಒತ್ತಾಯದ ಮೇರೆಗೆ ಬುಕ್‌ಮನ್ ಪತ್ರಿಕೆಗೆ ಅನೇಕ ಪುಸ್ತಕಗಳನ್ನು ವಿಮರ್ಶೆ ಮಾಡಿ ತನ್ಮೂಲಕ ಚೆಸ್ಟರ್‌ಟನ್ ಪತ್ರಿಕಾವೃತ್ತಿಯಲ್ಲಿ ಅಡಿಯಿಟ್ಟ. 1900 ರಲ್ಲಿ ದಿ ವೈಲ್ಡ್ ಎಂಬ ಒಂದು ಪದ್ಯಸಂಕಲನ ಪ್ರಕಟಿಸಿದ. ಅನಂತರ ಸ್ಪೀಕರ್ ಮತ್ತು ಡೆಯ್ಲಿ ನ್ಯೂಸ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯತೊಡಗಿದ. ಜಿ.ಕೇಸ್ ವೀಕ್ಲಿ ಎಂಬ ವಾರಪತ್ರಿಕೆಯ ಸಂಪಾದಕನಾದ. ಕೆಲವು ವರ್ಷ ಇಲಸ್ಟ್ರೇಟೆಡ್ ಲಂಡನ್ ನ್ಯೂಸ್ ಎಂಬ ಪತ್ರಿಕೆಯಲ್ಲಿ ಪ್ರತಿ ವಾರವೂ ಒಂದು ಪುಟದಷ್ಟು ಸಂಭಾಷಣ ರೂಪದ ಲೇಖನ ಬರೆದ.



ಶಾಲೆಯಲ್ಲಿದ್ದಾಗ ಇವನ ಬಗ್ಗೆ ಬಂದ (1892) ಒಂದು ವರದಿ ಹೀಗಿತ್ತು : ಚುರುಕು ಬುದ್ಧಿಯವನಲ್ಲ; ಆದರೆ ನಿಧಾನವಾಗಿ ಚಲಿಸುವ ವಕ್ರವಕ್ರವಾದ ಕಲ್ಪನಾಶಕ್ತಿಯುಳ್ಳವ. ನಡತೆ ಯಾವಾಗಲೂ ಮೆಚ್ಚುವಂಥದು. ಆದರೆ ಮುಂದೆ ಇವನ ವಿಚಾರದಲ್ಲಿ ಈ ಅಭಿಪ್ರಾಯ ಪೂರ್ತಿಯಾಗಿ ಸುಳ್ಳಾಯಿತು. ಒಮ್ಮೆ ಶಾಲೆಯ ಮುಖ್ಯೋಪಾಧ್ಯಾಯ ಚೆಸ್ಟರ್‌ಟನ್ನನ ತಾಯಿಗೆ ಹೀಗೆ ಹೇಳಿದರಂತೆ–ಆರಡಿ ಉದ್ದದ ಪ್ರತಿಭಾಶಾಲಿ. ಇವನನ್ನು ಸರಿಯಾಗಿ ಬೆಳೆಸು. ಈ ಭವಿಷ್ಯ ಮಾತ್ರ ನಿಜವಾಯಿತು. ವಾದ ವಿವಾದದಲ್ಲಿ, ಚರ್ಚೆಯಲ್ಲಿ, ಭಾಷಣಕಲೆಯಲ್ಲಿ, ಪತ್ರಿಕಾವೃತ್ತಿಯಲ್ಲಿ, ವಿಲಕ್ಷಣ ಕಟ್ಟುಕಥೆಗಳ ರಚನೆಯಲ್ಲಿ ಚೆಸ್ಟರ್‌ಟನ್ ಅತ್ಯಂತ ಹರಿತವಾದ ಬುದ್ಧಿಯಿಂದ ಜನರನ್ನು ಅಚ್ಚರಿಗೊಳಿಸಿದ. ಇವನ ಬುದ್ಧಿ ಎಷ್ಟು ವಿಚಿತ್ರವಾಗಿ ಕೆಲಸ ಮಾಡುತ್ತಿತ್ತೆಂದರೆ ವಿಕ್ಟೋರಿಯನ್ ಯುಗದ ಸಾಂಪ್ರದಾಯಿಕ ಹಳಸಲು ಉಕ್ತಿಗಳನ್ನು ವಿರೋಧಾಭಾಸದ ಅಸ್ತ್ರದಿಂದ ಈತ ತಲೆಕೆಳಗು ಮಾಡಿದ. ಅಂದಿನ ಸತ್ತ್ವಗುಂದಿದ ಮನೋಧರ್ಮವನ್ನು ಗೇಲಿ ಮಾಡಿದ. ಆಗಿನ ಕಾಲದ ನಿರಾಶಾವಾದಿಗಳನ್ನು (ದಿ ಡಿಫೆಂಡೆಂಟ್ ಎಂಬ ಪುಸ್ತಕದಲ್ಲಿ) ಖಂಡಿಸಿದ. ಕ್ರೈಸ್ತ ಧರ್ಮಶಾಸ್ತ್ರದ ಗಹನ ದ್ವಂದ್ವಾರ್ಥಗಳನ್ನು ಚುರುಕುಬುದ್ಧಿಯಿಂದ ಒಳಹೊಕ್ಕು ಶೋಧಿಸಿದಂತೆಲ್ಲ ಇವನ ವಿರೋಧೋಕ್ತಿ ಮಹತ್ತ್ವದ ಕೆಲಸ ಮಾಡತೊಡಗಿತು. ಇವನು ಸಾಂಪ್ರದಾಯಿಕತೆಯನ್ನು ಅಸಾಂಪ್ರದಾಯಿಕ ರೀತಿಯಲ್ಲಿ ಎಷ್ಟು ಚಮತ್ಕಾರವಾಗಿ ಪ್ರತಿಪಾದಿಸಿದನೆಂದರೆ ಇವನಿಗೆ ವಿರೋಧಾಭಾಸದ ಅಗ್ರಗಣ್ಯ ಎಂದು ಹೆಸರು ಬಂತು.

ಇವನ ಮೊದಲ ಬರೆಹಗಳು (1910ರ ವರೆಗೆ) ಮೂರು ಮುಖ್ಯ ವಿಷಯಗಳಿಗೆ ಸಂಬಂಧಪಟ್ಟವು:

(1) ಸಾಮಾಜಿಕ ವಿಮರ್ಶೆ – ಬಹು ಪಾಲು ಇವನ ಪತ್ರಿಕಾವಿಮರ್ಶೆಗಳಲ್ಲಿ ಹರಡಿಹೋಗಿದೆ. ದಿ ಡಿಫೆಂಡೆಂಟ್ (1901). ಟ್ವೆಲ್ವ್ ಟೈಪ್ಸ್ (1902), ಹೆರಿಟಿಕ್ಸ್–ಎಂಬವು ಕೆಲವು ಲೇಖನಗಳ ಸಂಕಲನಗಳು. ದಕ್ಷಿಣ ಆಫ್ರಿಕದಲ್ಲಿ ನಡೆದ ಬೋಯರ್ ಯುದ್ಧದ ಬಗ್ಗೆ ಇವನ ಧೋರಣೆಗಳೂ ಅಭಿಪ್ರಾಯಗಳೂ ಕಟುವಾಗಿದ್ದುವು. ಅವು ಉಜ್ವಲ ದೇಶಾಭಿಮಾನವುಳ್ಳವಾಗಿದ್ದರೂ ಅವುಗಳ ಸಹಾನುಭೂತಿ ಮಾತ್ರ ಬೋಯರ್ ಪರವಾಗಿತ್ತು. 1912ರಲ್ಲಿ ಮಾರ್ಕೊನಿ ಪ್ರಕರಣದಲ್ಲಿ ಈತ ರಾಜಕೀಯ ಅನಾಚಾರವನ್ನು ಖಂಡಿಸಿ ಬರೆದ ಲೇಖನ ತೀಕ್ಷ್ಣವಾಗಿತ್ತು. ತನ್ನ ಆತ್ಮಚರಿತ್ರೆಯಲ್ಲಿ ಬರುವ ದಿ ಕೇಸ್ ಎಗೇನ್ಸ್ಟ್ ಕರಪ್ಷನ್ ಎಂಬ ಅಧ್ಯಾಯದಲ್ಲಿ ಈತ ರಾಜಕೀಯ ಜೀವನದಲ್ಲಿ ನಿಷ್ಠೆ, ಪ್ರಾಮಾಣಿಕತೆಗಳ ಆವಶ್ಯಕತೆ ಬಗ್ಗೆ ಉಜ್ಜ್ವಲವಾಗಿ ಬರೆದಿದ್ದಾನೆ. ಆರಂಭದಲ್ಲಿ ಇವನ ಒಲವು ತೀವ್ರಗಾಮಿ ಪಕ್ಷದ ಕಡೆ ಇದ್ದಿತು. ಸ್ವಲ್ಪ ಕಾಲದ ಮೇಲೆ (ಗೆಳೆಯನಾದ ಹಿಲೇರ್ ಬೆಲಾಕನ ಜೊತೆ) ಡಿಸ್ಟ್ರಿಬ್ಯೂಟಿಸ್ಟ್ ಪಂಥಕ್ಕೆ ಸೇರಿದ. ಇದರ ತತ್ತ್ವ ಬಹಳ ಸರಳವೆಂದೂ ಕೆಲವೇ ಶ್ರೀಮಂತರ ಸ್ವತ್ತಾದ ಭೂಮಿಯನ್ನು ಪುನಃ ಸ್ವಾಧೀನ ಪಡೆಯುವುದೇ ಇದರ ಉದ್ದೇಶವೆಂದೂ ಆ ಪಂಥದ ಧೋರಣೆಯನ್ನು ಎತ್ತಿ ಹಿಡಿದ. ಫ್ರಾನ್ಸಿಸ್ ಬೇಕನ್ ಪ್ರತಿಪಾದಿಸಿದ ಸೂತ್ರವನ್ನೇ ಈತ ಅನುಮೋದಿಸುತ್ತಾನೆ; ಹಣ ಗೊಬ್ಬರವಿದ್ದಂತೆ. ಅದನ್ನು ಹರಡದಿದ್ದರೆ ಒಳ್ಳೆಯದಲ್ಲ.

(2) ಸಾಹಿತ್ಯವಿಮರ್ಶೆ : ಇದು ಈತನ ಜೀವನದ ಎರಡನೆಯ ಆಸಕ್ತಿಯಾದರೂ ಈತ ಕೆಲವು ಉತ್ತಮ ಸಾಹಿತ್ಯ ವಿಮರ್ಶಾಕೃತಿಗಳನ್ನು ನೀಡಿದ್ದಾನೆ. ದಿ ಇಂಗ್ಲಿಷ್ ಮೆನ್ ಆಫ್ ಲೆಟರ್ಸ್ ಎಂಬ ಮಾಲೆಯಲ್ಲಿ ರಾಬರ್ಟ್ ಬ್ರೌನಿಂಗ್ ಕವಿಯನ್ನು ಕುರಿತು ಈತ ಸುದೀರ್ಘ ವಿಮರ್ಶೆಯನ್ನು ಬರೆದ (1903). ಬ್ರೌನಿಂಗ್ ಕವಿಯ ವ್ಯಕ್ತಿತ್ವ ಸಂಕೀರ್ಣತೆಯಿಂದಲೂ ವಿರೋಧಾಭಾಸದಿಂದಲೂ ಕೂಡಿದೆ. ಆ ಗುಣಗಳು ಹಾಗೆಯೇ ಈ ಕೃತಿಯಲ್ಲಿ ಪ್ರತಿಬಿಂಬಿತವಾಗಿವೆ. ಪ್ರಖ್ಯಾತ ಕಾದಂಬರಿಕಾರ ಚಾರ್ಲ್ಸ್ ಡಿಕನ್ಸ್ ಬಗ್ಗೆ ಬರೆದ ವಿಮರ್ಶೆ (1906) ಇದಕ್ಕಿಂತಲೂ ಗಹನವಾದ ಕೃತಿ. ಅಪ್ರೀಸಿಯೇಷನ್ಸ್ ಅಂಡ್ ಕ್ರಿಟಿಸಿಸಮ್ಸ್ ಆಫ್ ಚಾರ್ಲ್ಸ್ ಡಿಕನ್ಸ್ ಎಂಬ ಕೃತಿಯಲ್ಲಿ ಡಿಕನ್ಸ್‌ನ ಎಲ್ಲ ಕೃತಿಗಳಿಗೂ ಪ್ರತ್ಯೇಕವಾಗಿ ಪೀಠಿಕಾರೂಪದ ವಿಮರ್ಶೆಗಳನ್ನು ಈತ ಬರೆದಿದ್ದಾನೆ. ಡಿಕನ್ಸನನ್ನು ಮಾನವೀಯತೆ ಮತ್ತು ಅನುಕಂಪೆಯಿಂದ ಕೂಡಿದ ಶ್ರೇಷ್ಠ ಕಾದಂಬರಿಕಾರನೆಂದು ಮುಕ್ತಕಂಠದಿಂದ ಹೊಗಳಿದ್ದಾನೆ. ಪಿಕ್‌ವಿಕ್ ಪೇಪರ್ಸ್‌ನ ಘನತೆ ಕರುಣೆ; ಗ್ರೇಟ್ ಎಕ್ಸ್‌ಪೆಕ್ಟೇಷನ್ಸ್‌ನ ಶಾಂತ ವ್ಯಂಗ್ಯ–ಇವನ್ನು ಎತ್ತಿತೋರಿಸುವ ಇವನ ಮೆಚ್ಚಿಗೆ ವಿಮರ್ಶೆಗೆ ಅಪೂರ್ವ ಕೊಡುಗೆಗಳು. ಬರ್ನಾರ್ಡ್ ಷಾ (1909), ದಿ ವಿಕ್ಟೋರಿಯನ್ ಏಜ್ ಇನ್ ಲಿಟರೇಚರ್ (1930), ವಿಲಿಯಂ ಬ್ಲೇಕ್ (ಸ್ಟಡೀಸ್) 1910, ವಿಲಿಯಂ ಕಾಬೆಟ್ (1925) ಮತ್ತು ಆರ್.ಎಲ್.ಸ್ಟೀವನ್‌ಸನ್ (1927) ಇವರನ್ನು ಕುರಿತ ಇವನ ವಿಮರ್ಶೆಗಳಲ್ಲಿ ನಿರರ್ಗಳತೆ, ಸ್ವಚ್ಛಂದತೆ ಇದೆ. ಅನೇಕ ಪಂಡಿತ ವಿಮರ್ಶಕರ ಕೃತಿಗಳನ್ನು ಮೀರಿಸುವ ಈ ಸ್ವಚ್ಛಂದ ಗುಣ ವಿಮರ್ಶೆಗೆ ವಿಶೇಷ ಪ್ರಾಶಸ್ತ್ಯ ನೀಡಿದೆ. ಈ ಕೃತಿಗಳು ಇವನ ಒಲವು, ಅಭಿರುಚಿಗಳನ್ನು ವ್ಯಕ್ತಪಡಿಸುವ ವೈಯಕ್ತಿಕ ವಿಮರ್ಶೆಗೆ ನಿದರ್ಶನಗಳಾಗಿವೆ. ಅವುಗಳಲ್ಲಿ ಸಾಹಿತ್ಯವಿಮರ್ಶೆಗೆ ಸಂಬಂಧಪಟ್ಟಂಥ ತಾತ್ತ್ವಿಕ ನೆಲೆಯಾಗಲಿ, ಮೌಲ್ಯಗಳ ಚಿಂತನೆಯಾಗಲಿ ಇಲ್ಲ. ತನ್ನ ಮನಸ್ಸಿನ ಮೇಲೆ ಸಾಹಿತ್ಯಕೃತಿಗಳು ಬೀರಿರುವ ಪ್ರಭಾವವನ್ನು ತನ್ನದೇ ಆದ ರೀತಿಯಲ್ಲಿ ಹೇಳಿರುವುದೇ ಇದರ ವೈಶಿಷ್ಟ್ಯ. ಸಾಹಿತ್ಯಕೃತಿಗಳನ್ನು ತೂಗಿ ನೋಡಬೇಕಾದರೆ ಆವಶ್ಯಕವಾದ ವಾಸ್ತವಾಂಶಗಳಿಗೂ ಆಕರಗಳಿಗೂ ಇವನು ನಿರ್ಲಕ್ಷ್ಯತೋರಿದ. ಆದರೂ ಸೇಂಟ್ ತಾಮಸ್ ಅಕ್ವಿನಸ್‌ನ ಬಗೆಗಿನ ಇವನ ಕೃತಿ ಅತ್ಯಂತ ಮೆಚ್ಚಿಗೆಗೆ ಪಾತ್ರವಾಗಿದೆ. ಆ ಮಹಾಚೇತನ ಇವನ ಮೇಲೆ ಹೇಗೆ ಪ್ರಭಾವ ಬೀರಿತೆಂಬುದನ್ನು ತೋರಿಸಿರುವುದೇ ಇದರ ಸೊಗಸು.

(3) ಇವನ ಮೂರನೆಯ ಮುಖ್ಯ ಆಸಕ್ತಿ ಮತಶಾಸ್ತ್ರ ಮತ್ತು ಧಾರ್ಮಿಕ ವಿಚಾರಗಳ ಬಗೆಗಿನ ಚರ್ಚೆ. 1922ರಲ್ಲಿ ಚೆಸ್ಟರ್‌ಟನ್ ರೋಮನ್ ಕ್ಯಾಥೊಲಿಕ್ ಚರ್ಚಿಗೆ ಸೇರಿಕೊಂಡ. ಈ ಪ್ರಸಂಗ ಚೆಸ್ಟರ್‌ಟನ್ನನ ಧಾರ್ಮಿಕ ಮತ್ತು ಸಾಮಾಜಿಕ ವಾದವಿವಾದಗಳಿಗೆ ಒಂದು ತೀಕ್ಷ್ಣತೆಯನ್ನೂ ಸ್ವಾರಸ್ಯವನ್ನೂ ಕೊಟ್ಟಿದೆ. ಇವನು ಕ್ಯಾಥೊಲಿಕ್ ಪಂಥಕ್ಕೆ ಸೇರಿದ ಫಲವಾಗಿ ಬರೆದ ಸೇಂಟ್ ಫ್ರಾನ್ಸಿಸ್ ಆಫ್ ಅಸಿಸಿ (1923) ಕುರಿತ ಗ್ರಂಥ ಯಾವ ವಾದವಿವಾದಗಳ ಕೋಲಾಹಲಕ್ಕೆ ಎಡೆಕೊಡದ, ನಿರುದ್ವೇಗದಿಂದ ಕೂಡಿದ ಜೀವನಚರಿತ್ರೆಯಾಗಿದೆ.

ಕಾವ್ಯ, ಪ್ರಬಂಧ, ಸಣ್ಣಕತೆ ಮುಂತಾದ ಸಾಹಿತ್ಯಕೃತಿಗಳನ್ನು ನಿರ್ಮಿಸುವುದರಲ್ಲೂ ಚೆಸ್ಟರ್‌ಟನ್ ಶಕ್ತನಾಗಿದ್ದ. ಈ ಬಗೆಯ ಕೃತಿಗಳನ್ನು ಹೇರಳವಾಗಿ ಬರೆದದ್ದು ಇವನ ಸೃಜನಾತ್ಮಕ ಸಾಹಿತ್ಯಶಕ್ತಿಯ ದ್ಯೋತಕ. ಇವನು ಎರಡು ನಾಟಕಗಳನ್ನು ಬರೆದದ್ದುಂಟು. ಮೊದಲ ನಾಟಕವಾದ ಮ್ಯಾಜಿಕ್ ಎಂಬುದು ಬರ್ನಾರ್ಡ್ ಷಾನ ಒತ್ತಾಯದ ಮೇಲೆ ಬರೆದದ್ದು. ರಂಗದ ಮೇಲೆ ಅದು ಯಶಸ್ವಿಯಾಗಲಿಲ್ಲ. ಹಾಗೆಯೇ ದಿ ಜಜ್‌ಮೆಂಟ್ ಆಫ್ ಜಾನ್‌ಸನ್ ಕೂಡ ಹೆಚ್ಚು ಪರಿಣಾಮಕಾರಿಯಾಗಲಿಲ್ಲ. ಇವನ ಕಾವ್ಯ ನಿಜಕ್ಕೂ ಜನಪ್ರಿಯವಾಯಿತು. ಲಘುಧಾಟಿಯ ಕವನಗಳನ್ನು ಬರೆಯುವುದರಲ್ಲಿ ಅತ್ಯಂತ ಕುಶಲತೆಯನ್ನು ಈತ ಪ್ರದರ್ಶಿಸಿದ. ಇವನ ಕಾವ್ಯದಲ್ಲಿ ನಾವು ಕಾಣುವುದು ಚಮತ್ಕಾರ ಇಲ್ಲವೆ ಹಾಸ್ಯ. ಲಾವಣಿ ರೂಪದ ಕವನಗಳನ್ನು ಬರೆಯುವುದರಲ್ಲೂ ಈತ ಬಹಳ ಸಮರ್ಥ. ಲೆಪಾಂಟೊ, ಬ್ಯಾಲಡ್ ಆಫ್ ದಿ ವೈಟ್ ಹಾರ್ಸ್, ದಿ ಸಾಂಗ್ ಆಫ್ ದಿ ವೀಲ್ಸ್ ಎಂಬ ಕವನಗಳು ಈ ಮಾದರಿಗೆ ಉತ್ತಮ ನಿದರ್ಶನಗಳು. ದಿ ಫ್ಲೈಯಿಂಗ್ ಇನ್ ಎಂಬ ಕವನದಲ್ಲಿರುವ ಕುಡಿತದ ಹಾಡುಗಳು ಲಘು ಹಾಸ್ಯದಿಂದ ಕೂಡಿವೆ, ನೀತಿಪ್ರದವಾಗಿವೆ. 1927ರಲ್ಲಿ ಪ್ರಕಟವಾದ ಕಲೆಕ್ಟೆಡ್ ಅಂಡ್ ನ್ಯೂ ಪೊಯಮ್ಸ್ ಸಂಕಲನದಲ್ಲಿ ಇವನ ಉತ್ತಮ ಕವನಗಳು ಸಂಗ್ರಹವಾಗಿವೆ.

ಪ್ರಬಂಧಗಳಲ್ಲಿ ಚೆಸ್ಟರ್‌ಟನ್ನನ ವಿರೋಧಾಭಾಸದ ಶೈಲಿಯ ಚಮತ್ಕಾರವನ್ನು ಪೂರ್ತಿಯಾಗಿ ನೋಡಬಹುದು. ಇವನಿಗೆ ಅಲ್ಪದರಲ್ಲಿ ಮಹತ್ತನ್ನು ಕಾಣುವ ಒಂದು ಕಣ್ಣಿದೆ. ಬಾಳನ್ನು ವಿಲಕ್ಷಣ ರೀತಿಯಲ್ಲಿ ನೋಡುವುದೇ ಇವನ ಗುಟ್ಟು. ಅತಿ ಸಾಧಾರಣವೆಂದು ನಾವು ಭಾವಿಸುವ ಘಟನೆಗಳಲ್ಲೂ ಈತ ಸ್ವಾರಸ್ಯ, ಸೊಗಸುಗಳನ್ನು ತೆಗೆದು ತೋರಿಸುತ್ತಾನೆ. ಟ್ರೆಮಂಡಸ್ ಟ್ರೈಫಲ್ಸ್, ರನ್ನಿಂಗ್ ಆಫ್ಟರ್ ಒನ್ಸ್ ಹ್ಯಾಟ್, ದಿ ರೋಮ್ಯಾಂಟಿಕ್ ಇನ್ ರೇನ್ – ಮುಂತಾದ ನೂರಾರು ಪ್ರಬಂಧಗಳಲ್ಲಿ ಬಹಳ ಹಗುರವಾದ ವಿಷಯಗಳನ್ನು ತೆಗೆದುಕೊಂಡು ತನ್ನ ಕಲ್ಪನಾವಿಲಾಸದಿಂದ ಗಹನವಾದ ತತ್ತ್ವಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾನೆ. ನಿತ್ಯಜೀವನದ ಬೇಸರಗಳನ್ನು ರಸಘಳಿಗೆಗಳಾಗಿ ಮಾಡುವ ಶಕ್ತಿ ಇವನಿಗೆ ಒಲಿದಿದೆ. ವಿರೋಧಾಭಾಸದ ಮನೋಧರ್ಮ ನಮ್ಮನ್ನು ಗಂಭೀರ ಚಿಂತನೆಯ ಅಂತಿಮ ಘಟ್ಟಕ್ಕೆ ಕೊಂಡೊಯ್ಯುವ ಪವಾಡವನ್ನೇ ಇಲ್ಲಿ ಸಾಧಿಸಲಾಗಿದೆ. ಪ್ರತಿಯೊಂದು ಪ್ರಬಂಧದಲ್ಲೂ ಇವನ ವಿರೋಧೋಕ್ತಿಗಳಿಂದ ಕೂಡಿದ ತಿರುವುಮುರುವುಗಳು ಓದುಗರನ್ನು ದಿಗ್ಭ್ರಾಂತಗೊಳಿಸುತ್ತವೆ. ಅತ್ಯಂತ ಸತ್ಯವೆಂದು ಕಾಣುವ ತತ್ತ್ವಗಳನ್ನೆಲ್ಲ ತಿರುಗುಮುರುಗಾಗಿ ಮಾಡುವ ಇಲ್ಲಿನ ರೀತಿ ನಿಜಕ್ಕೂ ಚಕಿತಗೊಳಿಸುವಂಥದು. ಸಾಧಾರಣ ತತ್ತ್ವಗಳ ಮೇಲೆ ಹೊಸ ಬೆಳಕನ್ನು ಬೀರಿ ಅವುಗಳ ಹೊಸ ಮುಖವನ್ನು ಇಲ್ಲಿ ತೋರಿಸಲಾಗಿದೆ. ಸವಕಲು ತತ್ತ್ವಗಳಿಗೆ ಹೊಸಜೀವ ಕೊಡಬಲ್ಲ ಈ ಅಸಂಬದ್ಧತೆಗಳನ್ನು ಈತ ಎತ್ತಿಹಿಡಿಯುವ ರೀತಿಯಂತೂ ಮೋಹಕವಾಗಿದೆ. ಎ ಡಿಫೆನ್ಸ್ ಆಫ್ ನಾನ್‌ಸೆನ್ಸ್ (1901) ಕೃತಿಯಲ್ಲಿ ಅಸಂಬದ್ಧತೆಯ ಪ್ರತಿಪಾದನೆಯಲ್ಲಿಯೇ ಗಹನವಾದ ಸತ್ಯಗಳನ್ನು ಬೆಳಕಿಗೆ ತರಲಾಗಿದೆ. ತರ್ಕವಿಧಾನದಿಂದ ವಸ್ತುಗಳ ಆತ್ಮವನ್ನು ಹೊರಗೆಡಹುವುದು ಸಮುದ್ರದ ದೊಡ್ಡ ಹಡಗನ್ನು ಒಂದು ಚಿಕ್ಕ ಕೊಂಡಿಯಿಂದ ಎಳೆಯುವಷ್ಟೇ ಅಸಾಧ್ಯವೆಂಬ ಸತ್ಯವನ್ನು ಘೋಷಿಸುವ ಎರಡು ಮಹಾಸಾಂಕೇತಿಕ ಘೋಷಣೆಗಳೆಂದರೆ–ಅಬದ್ಧ (ನಾನ್ಸೆನ್ಸ್) ಮತ್ತು ಶ್ರದ್ಧೆ (ಫೇತ್). ಇವನ ದೃಷ್ಟಿಯಲ್ಲಿ ಶ್ರದ್ಧೆಯ ಮೂಲಕ ಸತ್ಯವನ್ನು ಕಾಣುವ ಹಾಗೆಯೇ ಅಬದ್ಧದ ಮೂಲಕವೂ ಕಾಣುವುದು ಸಾಧ್ಯ. ಅದರ ಸಾಧನವಾಗಿಯೇ ಈತ ಅಪ್ರತಿಮವಾಗಿ ಬಳಸಿದ ಅಸ್ತ್ರವೆಂದರೆ ವಿರೋಧಾಭಾಸ. ಅಂತೆಯೇ ಇವನಿಗೆ ವಿರೋಧಾಭಾಸದ ಅಗ್ರಗಣ್ಯ ಎಂಬ ಬಿರುದು ಸಾರ್ಥಕನಾಮ.

ಪತ್ತೆದಾರಿ ಕಥೆಗಳು : ಚೆಸ್ಟರ್‌ಟನ್ ಬರೆದ ಪತ್ತೇದಾರಿ ರೂಪದ ಫಾದರ್ ಬ್ರೌನ್ ಕಥೆಗಳು ತುಂಬ ಜನಪ್ರಿಯವಾಗಿವೆ. ಇವನ ಕಲ್ಪನಾಶಕ್ತಿ ಈ ಕ್ಷೇತ್ರದಲ್ಲಿ ಸ್ವಚ್ಛಂದವಾಗಿ ಹರಿದಿದೆ. ದಿ ನೆಪೋಲಿಯನ್ ಆಫ್ ನಾಟಿಂಗ್ ಹಿಲ್ ಎಂಬುದು ಲಂಡನ್ನಿನ ಉಪನಗರಗಳ ನಡುವೆ ನಡೆಯುವ ಅಂತರ್ಯುದ್ಧಗಳ ಕನಸು ರೂಪದ ಕಥೆ. ಕಲೆಕ್ಷನ್ ಆಫ್ ಷಾರ್ಟ್ ಸ್ಟೋರಿಸ್ (1905); ದಿ ಮ್ಯಾನ್ ಹೂ ವಾಸ್ ಥರ್ಸ್‌ಡೇ (1908), ದಿ ಬ್ಯಾಲಡ್ ಅಂಡ್ ದಿ ಕ್ರಾಸ್ (1910)–ಈ ಕೃತಿಗಳಲ್ಲಿ ಜೀವನತತ್ತ್ವವನ್ನು ಕಟ್ಟುಕಥೆಗಳೊಡನೆ ಹೆಣೆಯುವ ಪ್ರವೃತ್ತಿ ಹೆಚ್ಚಾಗಿ ಕಾಣುತ್ತದೆ. ಈ ಕೃತಿಗಳನ್ನು ರೂಪಕಗಳೆಂದು ಕರೆದರೂ ತಪ್ಪಾಗಲಾರದು. ಇವನ ವಿಶಿಷ್ಟ ಸಾಮಾಜಿಕ ಧೋರಣೆಗಳಿಗೆ ರೂಪುಕೊಟ್ಟಿರುವ ಅತ್ಯಂತ ಯಶಸ್ವೀ ಕಾದಂಬರಿಗಳೆಂದರೆ ಫಾದರ್ ಬ್ರೌನ್ ಕತೆಗಳು : ದಿ ಇನೊಸೆನ್ಸ್ ಆಫ್ ಫಾದರ್ ಬ್ರೌನ್, ದಿ ವಿಸ್‌ಡಮ್ ಆಫ್ ಫಾದರ್ ಬ್ರೌನ್, ದಿ ಇನ್‌ಕ್ರೆಡ್ಯುಲಿಟಿ ಆಟ್ ಫಾದರ್ ಬ್ರೌನ್, ದಿ ಸೀಕ್ರೆಟ್ ಆಫ್ ಫಾದರ್ ಬ್ರೌನ್, ದಿ ಸ್ಕ್ಯಾಂಡಲ್ ಆಫ್ ಫಾದರ್ ಬ್ರೌನ್. ಇವನು ಸೃಷ್ಟಿಸಿರುವ ಫಾದರ್ ಬ್ರೌನನ ಪಾತ್ರ ಇವನ ಕಲ್ಪನಾಶಿಶುವಾದರೂ ಇದು ಇವನ ಸ್ನೇಹಿತನಾದ ರೆವರೆಂಡ್ ಜಾನ್ ಓಕೊನಾರ್‌ನ ವ್ಯಕ್ತಿತ್ವವನ್ನು ಪ್ರತಿಫಲಿಸುತ್ತದೆ. ಈ ಕತೆಗಳಲ್ಲಿ ಪತ್ತೇದಾರಿ ನಡೆಯುವ ರೀತಿ ನೇರವಾದದ್ದು. ಫಾದರ್ ಬ್ರೌನನ ಸರಳತೆ, ಮುಗ್ಧತೆ ಮತ್ತು ಒಳದೃಷ್ಟಿಯ ಅಪೂರ್ವ ಸಂಗಮ ಇದು.

ಚೆಸ್ಟರ್‌ಟನ್ನನಲ್ಲಿದ್ದ ಇನ್ನೊಂದು ವಿಶೇಷ ಗುಣವೆಂದರೆ ಎಚ್.ಜಿ.ವೆಲ್ಸ್, ಬರ್ನಾರ್ಡ್ ಷಾ, ಹಿಲೇರ್ ಬೆಲಾಕ್‌ನಂಥ ವಿರುದ್ಧ ಸ್ವಭಾವಗಳ ಜನರೊಡನೆ ಗೆಳೆತನವನ್ನು ಬೆಳೆಸಬಲ್ಲ ಸ್ನೇಹಪರತೆ. ತನ್ನ ಬದುಕಿನ ಸುಮಾರು ಐವತ್ತು ವರ್ಷಗಳ ಕಾಲ ಈತ ಯಾವುದೇ ಪ್ರಮುಖ ಚಳವಳಿಯಲ್ಲಿಯೂ ಪರವಾಗಿ ಇಲ್ಲವೆ ವಿರುದ್ಧವಾಗಿ ಸಕ್ರಿಯವಾಗಿ ಭಾಗವಹಿಸದೆ ಇರಲಿಲ್ಲ. ರೊನಾಲ್ಡ್ ನಾಕ್ಸ್ ಚೆಸ್ಟರ್‌ಟನ್ನನನ್ನು ಕುರಿತು ಈ ಮಾತುಗಳನ್ನು ಹೇಳುತ್ತಾನೆ–ಚೆಸ್ಟರ್‌ಟನ್ನನೊಡನೆ ಹೋಲಿಸಿದರೆ ಯಾವ ವ್ಯಕ್ತಿಯಾಗಲಿ ತುಂಬಾ ಸಾಧಾರಣವಾಗಿ ಕಾಣುತ್ತಾನೆ. ಅವನ ಜೀವನಚರಿತ್ರೆಯನ್ನು ಓದಿದರೆ ನಮ್ಮ ಮುಂದೆ ಬಂದು ನಿಲ್ಲುವುದು ಜೀವನದ ಬಗ್ಗೆ ಗಾಢಶ್ರದ್ಧೆ, ಆಸಕ್ತಿ ಉತ್ಸಾಹಗಳನ್ನುಳ್ಳ ವ್ಯಕ್ತಿಯೊಬ್ಬನ ಚಿತ್ರ. ಜೀವನದುದ್ದಕ್ಕೂ ಐಹಿಕ ನಾಗರಿಕತೆಯ ಬೆಡಗು ಥಳುಕಿನ ವಿರುದ್ಧ ಆತ ಹೊಡೆದಾಡಿದನಲ್ಲದೆ ಸಾಧಾರಣವಾಗಿ ಲೋಕ ಮರೆಯಬಹುದಾದ ಸತ್ಯದ ಮುಖದ ಮೇಲೆ ಬೆಳಕು ಹರಿಸಿದ. ನಕ್ಕು ನಗಿಸುವುದು ಅವನ ಜೀವನಧರ್ಮವೇ ಆಯಿತು. ಅವನ ಹಾಗೆ ಗಂಭೀರವಾದ ಚಿಂತನೆಯೊಂದಿಗೆ ಉಲ್ಲಾಸದ ಲೇವಡಿಯನ್ನು ಬೆರೆಸಿದ ಲೇಖಕರು ಅತಿವಿರಳ. ಚೆಸ್ಟರ್‌ಟನ್ ತನ್ನ ಬಹುಮುಖ ಕಾರ್ಯಕ್ರಮಗಳ ನಡುವೆ ನೂರು ಗ್ರಂಥಗಳನ್ನು ರಚನೆ ಮಾಡಿದ್ದಾನೆ. ಸ್ಥೂಲಕಾಯ, ಉಡುಗೆ ನಡತೆಗಳಲ್ಲಿ ಅಚ್ಚುಕಟ್ಟಿಲ್ಲ. ಮರೆವು ಹೆಚ್ಚು. ಆದರೂ ಒಳ್ಳೆಯವ. ಹಾಸ್ಯ ಪ್ರಕೃತಿಯವ. ವಿರೋಧಾಭಾಸಗಳಲ್ಲಿ ಎತ್ತಿದ ಕೈ. ಚೆಸ್ಟರ್‌ಟನ್ ತನ್ನ ಕಾಲದ ಬಹು ಜನಪ್ರಿಯ ಲೇಖಕರಲ್ಲೊಬ್ಬನೆನಿಸಿದ್ದ. (ಎಚ್.ಜಿ.ಎಸ್.ಆರ್.)

**ಚೆಳ್ಳಗುರ್ಕಿ :** ಬಳ್ಳಾರಿ ತಾಲ್ಲೂಕಿನ ಅನಂತಪುರ ರಸ್ತೆಯಲ್ಲಿ ಬಳ್ಳಾರಿಯಿಂದ 26.ಕಿ.ಮೀ. ದೂರದಲ್ಲಿರುವ ಗ್ರಾಮ. ಎರ್ರಿತಾತ ಎಂಬ ಮಹಾಪುರುಷನ ಜೀವಸಮಾಧಿ ಇಲ್ಲಿರುವುದರಿಂದ ಪ್ರಸಿದ್ಧ ಯಾತ್ರಾಸ್ಥಳವೆನಿಸಿದೆ. ಈ ಮಹಾಪುರುಷ ಬಡಕುಟುಂಬದಲ್ಲಿ ಜನಿಸಿ ಸಾಕಷ್ಟು ವಿದ್ಯಾಭ್ಯಾಸವೂ ಇಲ್ಲದೆ ಬೆಳೆದು ಉತ್ತಮ ಸಾಧನಾಜೀವಿಯಾಗಿ ತನ್ನ ಆಧ್ಯಾತ್ಮಿಕ ವರ್ಚಸ್ಸಿನಿಂದ ಸಾಧುವಾಗಿ ಮಾರ್ಪಟ್ಟ. 1898ರಲ್ಲಿ ಈತ ಚೆಳ್ಳಗುರ್ಕಿಗೆ ಬಂದು ನೆಲಸಿದ. 25 ವರ್ಷ ಅಲ್ಲಿ ವಾಸವಾಗಿದ್ದು 1922ರಲ್ಲಿ ಸಮಾಧಿಸ್ಥನಾದ. ಅನೇಕ ಪವಾಡಗಳನ್ನೂ ಮಹಿಮೆಗಳನ್ನೂ ಮೆರೆದ ಖ್ಯಾತಿ ಈತನದು. ಈಗಲೂ ಕರ್ನಾಟಕದ ಮೂಲೆ ಮೂಲೆಗಳಿಂದ ಯಾತ್ರಿಕರು ಬಹುಸಂಖ್ಯೆಯಲ್ಲಿ ಇಲ್ಲಿಗೆ ಬಂದು ಪೂಜೆಸಲ್ಲಿಸಿ ಹೋಗುತ್ತಾರೆ. ಪ್ರತಿವರ್ಷ ಇಲ್ಲಿ ರಥೋತ್ಸವದ ವೇಳೆಯಲ್ಲಿ ದೊಡ್ಡ ಜಾತ್ರೆ ಸೇರುತ್ತದೆ. ಈ ಕ್ಷೇತ್ರದಲ್ಲಿ ಯಾತ್ರಿಕರಿಗೆ ಊಟವಸತಿಯ ಸೌಕರ್ಯಗಳಿವೆ. ಇಲ್ಲಿನ ಜನರಿಗಾಗಿ ಪ್ರೌಢಶಾಲೆ, ಆಸ್ಪತ್ರೆಗಳನ್ನು ನಡೆಸಲಾಗುತ್ತಿದೆ.

**ಚೆಳ್ಳೆಹಣ್ಣು :** ಬೊರ್‍ಯಾಜಿನೇಸೀ ಕುಟುಂಬಕ್ಕೆ ಸೇರಿದ ಒಂದು ಕಾಡು ಮರ. ವೈಜ್ಞಾನಿಕ ಹೆಸರು ಕಾರ್ಡಿಯ ಮಿಕ್ಸ ಅಥವಾ ಡೈಕಾಟೊಮ. ಇದು ಭಾರತದ ಮೂಲದ್ದು. ಶ್ರೀಲಂಕಾದಲ್ಲೂ ಇದರ ವ್ಯಾಪ್ತಿಯಿದೆ. ಇದು 6–12 ಮೀ. ಎತ್ತರಕ್ಕೆ ಬೆಳೆಯುವ ಮಧ್ಯಮ ಗಾತ್ರದ ಮರ. ಮುಖ್ಯಕಾಂಡದ ದಪ್ಪ ಸುಮಾರು 1–1.3 ಮೀ. ಎಲೆಗಳು ಚರ್ಮಿಲ, ಬಣ್ಣ ದಟ್ಟ ಹಸಿರು. ಫಲಗಳು 12–25 ಸೆಂಮೀ ಗಾತ್ರದವು. ಮಾಗಿದಾಗ ಕಂದುಮಿಶ್ರಿತ ಹಳದಿಬಣ್ಣವನ್ನು ತಳೆಯುತ್ತವೆ. ಹಣ್ಣಿನೊಳಗೆ ಲೋಳೆಯಂಥ ತಿರುಳೂ ಒಂದು ಬೀಜವೂ ಇವೆ. ತಿರುಳಿಗೆ ಸಿಹಿ ರುಚಿಯಿದೆ. ಇದನ್ನು ತಿನ್ನಬಹುದು. ಇದಕ್ಕೆ ಜಂತುನಾಶಕ, ಮೂತ್ರಸ್ರಾವ ಉತ್ತೇಜಕ, ಶಾಮಕ ಹಾಗೂ ಕಫಹಾರಕ ಗುಣಗಳಿವೆಯಾಗಿ ಇದನ್ನು ಶ್ವಾಸಕೋಶ ಹಾಗೂ ಮೂತ್ರಪಿಂಡದ ರೋಗಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಬೀಜವನ್ನು ಗಜಕರ್ಣ ವ್ಯಾಧಿಗೂ, ತೊಗಟೆಯ ರಸವನ್ನು ಅಜೀರ್ಣ ಹಾಗೂ ಜ್ವರಗಳಲ್ಲೂ ಉಪಯೋಗಿಸುತ್ತಾರೆ. ತಿರುಳನ್ನು ಗೋಂದಾಗಿ ಬಳಸುವುದುಂಟು. ಚೌಬೀನೆಯಿಂದ ದೋಣಿ, ಹಲಗೆ, ಕೃಷಿ ಉಪಕರಣಗಳು, ಬಂದೂಕಿನ ಹಿಡಿ ಮುಂತಾದವನ್ನು ತಯಾರಿಸುವುದಿದೆ. ದೋರಗಾಯಿಗಳಿಂದ ಉಪ್ಪಿನಕಾಯಿ ಮಾಡುವುದುಂಟು. (ಎಸ್‌ಐ.ಎಚ್.)

**ಚೇಂಬರ್ಲಿನ್, (ಜೋಸೆಫ್) ಆಸ್ಟಿನ್ :** 1863–1937. ಬ್ರಿಟನ್ನಿನ ರಾಜಕಾರಣಿ. 1863 ಅಕ್ಟೋಬರ್ 16ರಂದು ಬರ್ಮಿಂಗ್‌ಹ್ಯಾಮ್‌ನಲ್ಲಿ ಜನಿಸಿದ. ತಂದೆ ಜೋಸೆಫ್ ಚೇಂಬರ್ಲಿನ್, ತಾಯಿ ಹ್ಯಾರಿಯೆಟ್ ಕೆನ್ರಿಕ್. ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನಲ್ಲೂ ಪ್ಯಾರಿಸ್, ಬರ್ಲಿನ್‌ಗಳಲ್ಲೂ ವಿದ್ಯಾಭ್ಯಾಸ ಮಾಡಿದ. ತನ್ನ ತಂದೆಯ ಕಾರ್ಯದರ್ಶಿಯಾಗಿ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ ಚೇಂಬರ್ಲಿನ್ 1892ರಲ್ಲಿ ಸಂಸತ್ತಿನ ಸದಸ್ಯನಾಗಿ ಚುನಾಯಿತನಾಗಿ ಜೀವನಪರ್ಯಂತ ಆ ಸ್ಥಾನವನ್ನು ಉಳಿಸಿಕೊಂಡಿದ್ದ. 1895–1900ರಲ್ಲಿ ನೌಕಾಪಡೆಯ ನಾಗರಿಕ ಅಧಿಕಾರಿಯಾಗಿಯೂ 1900–02ರಲ್ಲಿ ಖಜಾನೆಯ ಹಣಕಾಸು ಕಾರ್ಯದರ್ಶಿಯಾಗಿಯೂ 1902ರಲ್ಲಿ ಪೋಸ್ಟ್ ಮಾಸ್ಟರ್ ಜನರಲ್ ಆಗಿಯೂ ಕಾರ್ಯನಿರ್ವಹಿಸಿದ. ಆಗ ಅವನ ತಂದೆ ವಸಾಹತು ಕಾರ್ಯದರ್ಶಿಯಾಗಿದ್ದ. 1903ರಲ್ಲಿ ತಂದೆ ಜೋಸೆಫ್ ಚೇಂಬರ್ಲಿನ್ ಸರ್ಕಾರಕ್ಕೆ ರಾಜೀನಾಮೆ ಕೊಟ್ಟನಾದರೂ ಆಸ್ಟಿನ್ ಚೇಂಬರ್ಲಿನ್ ತಂದೆಯ ಒಪ್ಪಿಗೆಯೊಡನೆ ಸರ್ಕಾರದಲ್ಲಿ ಮುಂದುವರಿದ. 1903–05ರಲ್ಲಿ ಚಾನ್ಸಲರ್ ಆಫ್ ದಿ ಎಕ್ಸ್‌ಚೆಕರ್ ಆಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ.

1915ರ ಮೇ ತಿಂಗಳಿನಲ್ಲಿ ಆಸ್ಕ್ವಿತ್ತನ ಸರ್ಕಾರದಲ್ಲಿ ಅವನಿಗೆ ಭಾರತದ ಸ್ಟೇಟ್ ಸೆಕ್ರೆಟರಿಯ ಸ್ಥಾನ ಲಭಿಸಿತು. ಲಾಯ್ಡ್ ಜಾರ್ಜನ ಸರ್ಕಾರದಲ್ಲೂ ಅವನು ಆ ಸ್ಥಾನದಲ್ಲಿ ಮುಂದುವರಿದನಾದರೂ 1917ರಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಬೇಕಾಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಮೆಸೊಪೊಟೇಮಿಯ ಕದನದಲ್ಲಿ (1917) ಸಾಕಷ್ಟು ಔಷಧ ಮತ್ತಿತರ ಸರಬರಾಯಿಯಲ್ಲಿ ಅವನ ಇಲಾಖೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಿಲ್ಲವೆಂಬುದು ಅಪವಾದ. 1918ರಲ್ಲಿ ಅವನು ಮತ್ತೆ ಸರ್ಕಾರ ಪ್ರವೇಶಿಸಿದ. ಮತ್ತೆ ಅವನಿಗೆ ಚಾನ್ಸಲರ್ ಆಫ್ ದಿ ಎಕ್ಸ್‌ಚೆಕರ್ ಸ್ಥಾನ ಪ್ರಾಪ್ತವಾಯಿತು (1919). 1921ರಲ್ಲಿ ಕನ್ಸರ್ವೆಟಿವ್ ಪಕ್ಷದ ನಾಯಕನಾಗಿ ಆಯ್ಕೆ ಹೊಂದಿದ. 1922–24ರಲ್ಲಿ ಅವನು ಸರ್ಕಾರದಿಂದ ಹೊರಗಿದ್ದು 1924ರಲ್ಲಿ ಬಾಲ್ಡ್‌ವಿನ್ ಮತ್ತೆ ಸರ್ಕಾರ ರಚಿಸಿದಾಗ ವಿದೇಶಾಂಗ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ.

1925ರ ಲೋಕಾರ್ನೊ ಒಪ್ಪಂದ ಚೇಂಬರ್ಲಿನನ ಮಹತ್ತ್ವದ ಸಾಧನೆಯೆಂದು ಹೇಳಲಾಗಿದೆ. ಜರ್ಮನಿಯ ಪಶ್ಚಿಮ ಎಲ್ಲೆಗಳಿಗೆ ಭರವಸೆ ನೀಡುವ, ರಾಷ್ಟ್ರಗಳ ಕೂಟಕ್ಕೆ ಜರ್ಮನಿಯ ಪ್ರವೇಶ ದೊರಕಿಸಿಕೊಂಡ ಒಪ್ಪಂದವದು. ಶಾಂತಿಸ್ಥಾಪನೆಗೆ ಲೋಕಾರ್ನೊ

ಮನೋಭಾವ ಸಾಧಕವಾಗಿದೆಯೆಂದು ಆಗ ನಂಬಲಾಗಿತ್ತು. 1925ರಲ್ಲಿ ಅವನಿಗೆ ನೈಟ್ ಪದವಿಯೂ ಚಾರ್ಲ್ಸ್ ಡಸ್ ಒಂದಿಗೆ ನೊಬೆಲ್ ಶಾಂತಿ ಪಾರಿತೋಷಕವೂ ದೊರಕಿದುವು. ಆದರೆ ಅನಂತರ (1927–28) ಒಂದಾದಮೇಲೊಂದರಂತೆ ನಡೆದ ಘಟನೆಗಳು ಅವನ ಜನಪ್ರಿಯತೆಯನ್ನು ಕುಗ್ಗಿಸಿದುವು. ಸೋವಿಯತ್ ದೇಶದೊಡನೆ ರಾಜತಾಂತ್ರಿಕ ಸಂಬಂಧ ಭಂಗ, ನೌಕಾಶಸ್ತ್ರಸಂನ್ಯಾಸದ ಬಗ್ಗೆ ಜಿನೀವ ಸಮ್ಮೇಳನದ ವೈಫಲ್ಯ, ಶಸ್ತ್ರಸಂನ್ಯಾಸದ ಬಗ್ಗೆ ಅನಾವಶ್ಯಕವಾಗಿ ರಹಸ್ಯವಾಗಿ ನಡೆದ ಆಂಗ್ಲೊ–ಫ್ರೆಂಚ್ ಸಂಧಾನ, ಚೀನ–ಈಜಿಪ್ಟ್‌ಗಳೊಂದಿಗೆ ಅವನ ವ್ಯವಹಾರ–ಇವು ಅಂಥ ಕೆಲವು ಘಟನೆಗಳು. 1931ರ ಆಗಸ್ಟ್ ತಿಂಗಳಲ್ಲಿ ರ್‍ಯಾಮ್ಸೆ ಮ್ಯಾಕ್‌ಡೊನಾಲ್ಡನ ಮಂತ್ರಿಮಂಡಲದಲ್ಲಿ ಚೇಂಬರ್ಲಿನ್ ನೌಕಾಸೇನೆಯ ಪ್ರಥಮ ಲಾರ್ಡ್ ಆಗಿದ್ದ. 1931ರ ಅಕ್ಟೋಬರ್‌ನಲ್ಲಿ ನಡೆದ ಮಹಾಚುನಾವಣೆಗಳ ಅನಂತರ ಅವನಿಗೆ ಯಾವ ಅಧಿಕಾರವೂ ದೊರಕಲಿಲ್ಲ. ಡೌನ್ ದಿ ಯಿಯರ್ಸ್ (1938)ಪಾಲಿಟಿಕ್ಸ್ ಫ್ರಮ್ ಇನ್‌ಸೈಡ್ (1936) – ಇವು ಚೇಂಬರ್ಲಿನ್ ಬರೆದ ಆತ್ಮವೃತ್ತಗಳು. (ಎಸ್.ಎಸ್.ಇ.)

**ಚೇಂಬರ್ಲಿನ್, ಓವನ್ :** 1920–2006. ಅಮೆರಿಕ ದೇಶದ ಭೌತ ವಿಜ್ಞಾನಿ. ಸಾನ್‌ಫ್ರಾನ್ಸಿಸ್ಕೊದ ಕ್ಯಾಲಿಫೋರ್ನಿಯದಲ್ಲಿ 1920ರ ಜುಲೈ 10ರಂದು ಜನನ. ಡಾರ್ಟ್‌ಮೊತ್ ಕಾಲೇಜಿನಲ್ಲಿ ಸ್ನಾತಕ ಪದವಿಯನ್ನು ಗಳಿಸಿ (1941) ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಭೌತವಿಜ್ಞಾನದ ಇಲಾಖೆಯಲ್ಲಿ ಸಂಶೋಧಕ ವಿದ್ಯಾರ್ಥಿಯಾಗಿ ಸೇರಿದ. ಮೊದಲಿಗೆ ಜೀವವಿಜ್ಞಾನದಲ್ಲಿ ಆಸಕ್ತಿ ಇದ್ದಿತಾದರೂ ಎಮಿಲಿಯೋ ಸೇಗ್ರೆ (ನೋಡಿ–ಸೇಗ್ರ, ಎಮಿಲಿಯೊ) ಎಂಬ ಪ್ರಸಿದ್ಧ ಭೌತವಿಜ್ಞಾನಿಯ ಪರಿಚಯದ ಪರಿಣಾಮವಾಗಿ ಈ ಆಸಕ್ತಿ ಭೌತವಿಜ್ಞಾನದತ್ತ ಹೊರಳಿತು. ಈ ವಿಜ್ಞಾನಿಯ ನೇತೃತ್ವದಲ್ಲಿ ನಡೆಯುತ್ತಿದ್ದ ಮ್ಯಾನ್‌ಹಾಟನ್ ಯೋಜನೆಯಲ್ಲಿ 1942 ರಿಂದ 1946ರ ವರೆಗೆ ಪರಮಾಣು ಬಾಂಬ್ ನಿರ್ಮಾಣದ ಮೇಲೆ ಕೆಲಸ ಮಾಡಿದ. ಎರಡನೆಯ ಮಹಾಯುದ್ಧ ಮುಗಿದ ಬಳಿಕ ಚೇಂಬರ್ಲಿನ್ ಇಲಿನಾಯ್ ಸಂಸ್ಥಾನದ ಷಿಕಾಗೋ ನಗರದ ಬಳಿ ಇರುವ ಆರ್ಗೋನೆ ರಾಷ್ಟ್ರೀಯ ಪ್ರಯೋಗಶಾಲೆಯನ್ನು ಸೇರಿ ಮತ್ತೊಬ್ಬ ಪ್ರಖ್ಯಾತ ವಿಜ್ಞಾನಿ ಎನ್ರಿಕೋ ಫರ್ಮಿಯೊಂದಿಗೆ **(ನೋಡಿ– ಫರ್ಮಿ,–ಎನ್ರಿಕೊ)** ಕೆಲಸ ಮಾಡಿದ. ದ್ರವ್ಯಗಳಿಂದ ನ್ಯೂಟ್ರಾನುಗಳ ನಮನ (ನ್ಯೂಟ್ರಾನ್ ಡಿಫ್ರ್ಯಾಕ್ಷನ್ ಫ್ರಮ್ ಲಿಕ್ವಿಡ್ಸ್) ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಯನ್ನು ಗಳಿಸಿದ (1949). ತರುವಾಯ ಬರ್ಕ್‌ಲಿಗೆ ಅಧ್ಯಾಪಕನಾಗಿ ಹಿಂತಿರುಗಿ ಪುನಃ ಸೇಗ್ರೆಯೊಂದಿಗೆ ಅಧ್ಯಯನ ಪ್ರಾರಂಭಿಸಿದ. ಅಧ್ಯಯನದ ವಿಷಯ ಅಲ್ಫ ಕಣಗಳ ಕ್ಷಯ (ಆಲ್ಫ–ಪಾರ್ಟಿಕಲ್ ಡಿಕೇ) ಮತ್ತು ನ್ಯೂಕ್ಲಿಯಾನ್–ನ್ಯೂಕ್ಲಿಯಾನ್ ಚದರಿಕೆ (ಸ್ಕ್ಯಾಟರಿಂಗ್), ಲಾರೆನ್ಸ್ ವಿಕಿರಣ ಪ್ರಯೋಗಾಲಯದ ಉಚ್ಚ ಶಕ್ತಿ ಬೀಟಾಟ್ರಾನ್ ಎಂಬ ವೇಗೋತ್ಕರ್ಷಕ ಯಂತ್ರವನ್ನು ಸ್ಥಾಪಿಸಿದ ಬಳಿಕ ಅದರಲ್ಲಿ ಉಂಟಾಗುವ ಪ್ರಬಲವಾದ ಪ್ರೋಟಾನುಗಳನ್ನು ಉಪಯೋಗಿಸಿ ಆ್ಯಂಟಿಪ್ರೋಟಾನುಗಳನ್ನು ಈತ ಉತ್ಪಾದಿಸಿದ (1955). (ಎಲ್ಲ ಪರಮಾಣುಗಳಲ್ಲೂ ಪ್ರೋಟಾನ್ ಎಂಬ ಧನ ಕಣಗಳಿರುತ್ತವೆ. ಆ್ಯಂಟಿಪ್ರೋಟಾನುಗಳು ಪ್ರೋಟಾನಿನಂತೆಯೇ ಇರುವ ಋಣ ಕಣಗಳು). ಇಂಥ ಕಣಗಳಿರಬೇಕೆಂದು ಬಹಳ ಕಾಲದಿಂದ ಶಂಕಿಸಲಾಗಿದ್ದ ಆ್ಯಂಟಿಪ್ರೋಟಾನುಗಳನ್ನು ಆವಿಷ್ಕರಿಸಿದ ಸೇಗ್ರೆ ಮತ್ತು ಚೇಂಬರ್‌ಲಿನವರಿಗೆ 1959ನೆಯ ಸಾಲಿನ ಭೌತವಿಜ್ಞಾನದ ನೊಬೆಲ್ ಪ್ರಶಸ್ತಿ ದೊರೆಯಿತು. ಚೇಂಬರ್ಲಿನ್‌ಗೆ 1985ರಲ್ಲಿ ಪಾರ್ಕಿನ್‌ಸನ್ ವ್ಯಾಧಿ ತಗುಲಿ, 2006ರ ಫೆಬ್ರವರಿ 28ರಂದು ಬರ್ಕಲಿಯಲ್ಲಿ (85 ನೇ ವಯಸ್ಸಿನಲ್ಲಿ) ಮೃತನಾದ. (ಎನ್.ವಿ.ಎಂ.)



**ಚೇಂಬರ್ಲಿನ್, ಚಾರ್ಲ್ಸ್ ಜೋಸೆಫ್ :** 1863–1943. ಅಮೆರಿಕದ ಪ್ರಸಿದ್ಧ ಸಸ್ಯವಿಜ್ಞಾನಿ. ನಗ್ನಬೀಜ ಹಾಗೂ ಆವೃತಬೀಜ ಸಸ್ಯಗಳ ರೂಪರಚನಾಶಾಸ್ತ್ರಗಳ ಬಗ್ಗೆ ಗಮನಾರ್ಹ ಕೊಡುಗೆ ನೀಡಿದ ಕೆಲವೇ ವಿಜ್ಞಾನಿಗಳಲ್ಲಿ ಒಬ್ಬ. ಅಮೆರಿಕದ ಒಹೈಓ ಪ್ರಾಂತ್ಯದ ಸಲಿವಾನ್ ಎಂಬಲ್ಲಿ 1863ರ ಫೆಬ್ರುವರಿ 23ರಂದು ಈತ ಜನಿಸಿದ. ಸುಪ್ರಸಿದ್ಧ ಭೂವಿಜ್ಞಾನಿಯಾಗಿದ್ದ ಎ. ಎ. ರೈಟ್‌ನ ಮಾರ್ಗದರ್ಶನದಲ್ಲಿ ಓಬರ್ಲಿನ್ ಕಾಲೇಜಿನಲ್ಲಿ ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನಗಳನ್ನು ಅಭ್ಯಾಸಮಾಡಿದ. ಆ ವೇಳೆಯಲ್ಲಿ, ಸಸ್ಯ ಅಂಗಾಂಶಗಳ ಬಗ್ಗೆ, ಕೋಶಗಳನ್ನು ತಾಂತ್ರಿಕ ಹಾಗೂ ವೈಜ್ಞಾನಿಕ ರೀತಿನೀತಿಗಳಿಂದ ಅಭ್ಯಸಿಸುವ ಬಗ್ಗೆ ಈತನಿಗೆ ಕುತೂಹಲ ಮೂಡಿ, ಪೇಲಿಯೋಜೋಯಿಕ್ ಕಾಲದ ಪ್ರಾಚೀನ ಸಸ್ಯವರ್ಗಗಳಿಂದ ಇತ್ತೀಚಿನ ಕೆಲವು ವರ್ಗಗಳು ಹೇಗೆ ಉಗಮಗೊಂಡಿರಬಹುದು ಎಂಬುದನ್ನು ಕುರಿತು ಯೋಚಿಸತೊಡಗಿದ. ಮುಂದೆ 1888 ರಲ್ಲಿ ಪದವೀಧರನಾಗಿ ಮಾರ್ಥ ಲೈಫ್ ಎಂಬವಳನ್ನು ವಿವಾಹವಾದ. ಅನಂತರ ಒಹೈಓ ಹಾಗೂ ಮಿನಿಸೋಟಗಳ ಸಾರ್ವಜನಿಕ ಶಾಲೆಗಳಲ್ಲಿ ಉಪಾಧ್ಯಾಯನಾಗಿ ಕೆಲಸ ಮಾಡಿದ. ಅನೇಕ ವರ್ಷಗಳವರೆಗೆ ಮಿನಿಸೋಟದ ಕ್ರೂಕ್ಸ್‌ಟನ್ನಿನ ಪ್ರೌಢಶಾಲೆಯ ಮುಖ್ಯಾಧಿಕಾರಿಯೂ ಆಗಿದ್ದ. ಬೇಸಗೆಯ ವಿರಾಮಕಾಲದಲ್ಲಿ ಸಸ್ಯವಿಜ್ಞಾನದ ಅಧ್ಯಯನವನ್ನು ಮುಂದುವರಿಸಿ 1894ರಲ್ಲಿ ಓಬರ್ಲಿನ್ನಿನಿಂದ ಮಾಸ್ಟರ್ ಪದವಿಯನ್ನೂ, 1897ರಲ್ಲಿ ಚಿಕಾಗೊ ವಿಶ್ವವಿದ್ಯಾಲಯದ ಡಾಕ್ಟೊರೇಟ್ ಪದವಿಯನ್ನೂ ಪಡೆದ. ಆಮೇಲೆ ಚೇಂಬರ್ಲಿನ್‌ನ ಆಸಕ್ತಿ ನಗ್ನಬೀಜ ಮತ್ತು ಆವೃತ ಬೀಜಸಸ್ಯಗಳ ರೂಪರಚನೆ ಹಾಗೂ ಭ್ರೂಣಶಾಸ್ತ್ರಗಳ ಕಡೆಗೆ ಹರಿಯಿತು. ಚಿಕಾಗೊ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದಲ್ಲಿ ವರ್ಷಗಳ ಕಾಲ ಸದಸ್ಯನಾಗಿದ್ದ. 1901 ರಿಂದ 1902ರ ವರೆಗೆ ಜರ್ಮನಿಯ ಬಾನ್‌ನಲ್ಲಿ ಅಂದಿನ ಸುಪ್ರಸಿದ್ಧ ಸಸ್ಯವಿಜ್ಞಾನಿಯಾಗಿದ್ದ ಎಡ್ವರ್ಡ್ ಸ್ಟ್ರಾಸ್‌ಬರ್ಗರ್‌ನ ಪ್ರಯೋಗಶಾಲೆಯಲ್ಲಿ ಸಂಶೋಧನೆಗಳಲ್ಲಿ ತೊಡಗಿದ್ದ. 1915ರಲ್ಲಿ ಈತನನ್ನು ಚಿಕಾಗೊ ವಿಶ್ವವಿದ್ಯಾಲಯ ರೂಪರಚನಾಶಾಸ್ತ್ರ ಹಾಗೂ ಕೋಶಶಾಸ್ತ್ರಗಳ ಪ್ರಾಧ್ಯಾಪಕನನ್ನಾಗಿ ನೇಮಿಸಿತು. 1929ರ ತರುವಾಯ ಇಮೆರಿಟಸ್ ಪ್ರಾಧ್ಯಾಪಕನಾಗಿ ಮುಂದುವರಿದ.

ಸಸ್ಯವಿಜ್ಞಾನದ ಬೆಳವಣಿಗೆಗೆ ಚೇಂಬರ್ಲಿನ್ ಸಲ್ಲಿಸಿರುವ ಸೇವೆ ಅಷ್ಟಿಷ್ಟಲ್ಲ. 1902ರಲ್ಲಿ ಬೊಟಾನಿಷೆಸ್ ಟ್ಸೆಂಟ್ರಾಲ್‌ಬ್ಲಾಟ್ ಎಂಬ ಜರ್ಮನ್ ನಿಯತಕಾಲಿಕಕ್ಕೆ ಕೋಶಶಾಸ್ತ್ರ ಸಂಪಾದಕನಾಗಿದ್ದ. ಅನೇಕ ಅಂತಾರಾಷ್ಟ್ರೀಯ ಸಸ್ಯವಿಜ್ಞಾನ ಸಂಘಗಳ ಉಪಾಧ್ಯಕ್ಷ ಹಾಗೂ ಅಧ್ಯಕ್ಷನಾಗಿದ್ದುಕೊಂಡು ಸಸ್ಯವಿಜ್ಞಾನದ ಪುರೋಭಿವೃದ್ಧಿಗೆ ಮನಸಾರೆ ಸಹಾಯಮಾಡಿದ. 1931–32ರಲ್ಲಿ ಅಮೆರಿಕದ ಸಸ್ಯವಿಜ್ಞಾನ ಸಂಘದ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ.

ತಾಳಕಲ್ಪ ಸಸ್ಯಗಳ (ಸೈಕ್ಯಾಡ್ಸ್) ಉಗಮ ಮತ್ತು ವಿಕಾಸಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿದವರಲ್ಲಿ ಚೇಂಬರ್ಲಿನ್ ಮೊದಲಿಗ. ಅವುಗಳ ಪ್ರಾಚೀನ ಇತಿಹಾಸವನ್ನೆಲ್ಲ ಅಭ್ಯಸಿಸಿ ಹಿಂದಿನ ತಾಳಕಲ್ಪಗಳ ಮತ್ತು ಆಧುನಿಕ ತಾಳಕಲ್ಪಗಳ ಅಂತರ ಸಂಬಂಧಗಳ ಬಗ್ಗೆ ವಿವರಣೆಗಳನ್ನು ನೀಡಿದ. ತಾಳಕಲ್ಪಗಳನ್ನು ಅವುಗಳ ನೈಸರ್ಗಿಕ ಆವರಣಗಳಲ್ಲೇ ಅಭ್ಯಸಿಸಲು ಅವು ಬೆಳೆಯುವ ಅನೇಕ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡ ಈತ 1904, 1906, 1908 ಮತ್ತು 1910ರಲ್ಲಿ ಮೆಕ್ಸಿಕೋವನ್ನೂ 1911–12ರಲ್ಲಿ ಆಸ್ಟ್ರೇಲಿಯ, ನ್ಯೂಜೀಲೆಂಡ್ ಮತ್ತು ದಕ್ಷಿಣ ಆಫ್ರಿಕಗಳನ್ನೂ ಸಂದರ್ಶಿಸಿದ. ಅನಂತರ ಕ್ಯೂಬಕ್ಕೆ ಎರಡು ಬಾರಿ ಹೋಗಿ ಬಂದ. ಈತನ ಪುಸ್ತಕ ಜೀವಂತ ತಾಳಕಲ್ಪ (ದಿ ಲಿವಿಂಗ್ ಸೈಕ್ಯಾಡ್) ಈ ಎಲ್ಲ ಸಂಶೋಧನೆಗಳ ಹಾಗೂ ಸಮಕಾಲೀನ ಸಂಶೋಧನೆಗಳ ಬಗ್ಗೆ ವಿಶದವಾದ ವಿವರಗಳಿರುವ ಒಂದು ಉದ್ಗ್ರಂಥವಾಗಿದೆ. ಪ್ರಪಂಚದ ತಾಳಕಲ್ಪಗಳ ಬಗ್ಗೆ ಇಷ್ಟೊಂದು ವಿವರಣಾತ್ಮಕ ಹಾಗೂ ಅಧಿಕಾರಯುತ ಗ್ರಂಥ ಇನ್ನೊಂದಿಲ್ಲ. ಇದೇ ಕಾಲದಲ್ಲಿ ಪ್ರಪಂಚದ ವಿವಿಧ ಪ್ರದೇಶಗಳಿಂದ ಸಂಗ್ರಹಿಸಿದ ತಾಳಕಲ್ಪಗಳನ್ನು ಚಿಕಾಗೊ ವಿಶ್ವವಿದ್ಯಾಲಯದ ಸಸ್ಯವಿಜ್ಞಾನ ವಿಭಾಗದ ತೋಟದಲ್ಲಿ ಬೆಳೆಸಲು ಪ್ರಯತ್ನಿಸಿದ. ಇಂದು ಈ ತೋಟ ಪ್ರಪಂಚದಲ್ಲೇ ಅತಿ ಹೆಚ್ಚು ತಾಳಕಲ್ಪಗಳನ್ನು ಪಡೆದಿರುವ ಒಂದು ಅಪೂರ್ವ ಉದ್ಯಾನವನವಾಗಿದೆ. ತಾಳಕಲ್ಪಗಳ ಎಲ್ಲ 9 ಜಾತಿಗಳು ಹಾಗೂ ಅರ್ಧ ಭಾಗಕ್ಕಿಂತಲೂ ಹೆಚ್ಚಿನ ಪ್ರಭೇದಗಳು ಇಲ್ಲಿವೆ. ಚೇಂಬರ್ಲಿನ್ ಬರೆದ ಪುಸ್ತಕಗಳಲ್ಲಿ ಮುಖ್ಯವಾದವು ಇವು : ಮಾರ್ಫಾಲಜಿ ಆಫ್ ಸ್ಪರ್ಮಟೋಫೈಟ್ಸ್ (1901), ಮಾರ್ಫಾಲಜಿ ಆಫ್ ಏಂಜಿಯೋಸ್ಪರ್ಮ್ಸ್ (1903), ಮಾರ್ಫಾಲಜಿ ಆಫ್ ಜಿಮ್ನೋಸ್ಪರ್ಮ್ಸ್ (1910, 1917), ಮೆಥಡ್ಸ್ ಇನ್ ಪ್ಲಾಂಟ್ ಹಿಸ್ಟಾಲಜಿ, (1901, 1903, 1915, 1924 ಮತ್ತು 1932), ದಿ ಲಿವಿಂಗ್ ಸೈಕ್ಯಾಡ್ಸ್ (1919), ಎಲಿಮೆಂಟ್ಸ್ ಆಫ್ ಪ್ಲಾಂಟ್ ಸೈನ್ಸ್ (1930) ಮತ್ತು ಜಿಮ್ನೋಸ್ಪರ್ಮ್ಸ್: ಸ್ಟ್ರಕ್ಚರ್ ಎಂಡ್ ಎವಲ್ಯೂಷನ್ (1935). ಇವನು 1943ರ ಜನವರಿ 5 ರಂದು ಇಲಿನಾಯ್‌ನಲ್ಲಿ ನಿಧನನಾದ. (ಎಸ್.ಎನ್.ಆರ್.)

**ಚೇಂಬರ್ಲಿನ್, ಜೋಸೆಫ್ :** 1836–1914. ಬ್ರಿಟಿಷ್ ಮುತ್ಸದ್ದಿ. ಸಾಮ್ರಾಜ್ಯದ ಏಕತೆ ಮತ್ತು ಸುಂಕ ನೀತಿಯ ಸುಧಾರಣೆಗಳ ವಿಚಾರಗಳಿಗಾಗಿ ಪ್ರಸಿದ್ಧಿ ಪಡೆದ ಈತ 1836ರ ಜುಲೈ 8ರಂದು ಲಂಡನ್‌ನಲ್ಲಿ ಜನ್ಮತಾಳಿದ. ಈತನ ತಂದೆಯ ಹೆಸರೂ ಜೋಸೆಫ್ ಚೇಂಬರ್‌ಲಿನ್. ಮನೆತನದ ಉದ್ಯೋಗ ಪಾದರಕ್ಷೆಗಳ ತಯಾರಿಕೆ ಹಾಗೂ ಮಾರಾಟ. ತರುಣ ಜೋಸೆಫ್ 1852ರಲ್ಲಿ ತಂದೆಯ ಸಂಸ್ಥೆಯಲ್ಲೇ ಸೇರಿ ಅದರ ಲಂಡನ್ ಕಾರ್ಯಾಲಯದಲ್ಲಿ ಎರಡು ವರ್ಷ ದುಡಿದ. ಆಮೇಲೆ ಬರ್ಮಿಂಗ್‌ಹ್ಯಾಮ್‌ನಲ್ಲಿ

ತಂದೆಯ ಪ್ರತಿನಿಧಿಯಾಗಿ ನೆಟ್ಲ್ ಫೋಲ್ಡ್ ಸ್ಕ್ರೂ ತಯಾರಿಕೆಯ ಅಂಗಡಿಗೆ ಕಳಿಸಲ್ಪಟ್ಟ. ಅಲ್ಲಿ ಈತ ಅತ್ಯಂತ ಯಶಸ್ವೀ ವ್ಯಾಪಾರಿಯಾಗಿ 1874ರಲ್ಲಿ ಒಂದು ಲಕ್ಷ ಪೌಂಡುಗಳಷ್ಟು ಸಂಪತ್ತುಗಳಿಸಿ ವಿಶ್ರಾಂತಿ ಪಡೆದ.

ಬರ್ಮಿಂಗ್‍ಹ್ಯಾಮ್‍ನಲ್ಲಿ 1808ರಲ್ಲಿ ಸ್ಥಳೀಯ ಲಿಬರಲ್ ಅಸೋಸಿಯೇಷನ್ ಪ್ರಾರಂಭವಾದಾಗ ಜೋಸೆಫ್ ಮುನಿಸಿಪಲ್ ಹಾಗೂ ರಾಜಕೀಯ ಜೀವನ ಪ್ರವೇಶಿಸಿದ. ಜೋಸೆಫ್ ಬಹಳ ಪುರೋಗಾಮಿ ವಿಚಾರದವನಾಗಿದ್ದ. 1869ರಲ್ಲಿ ಬರ್ಮಿಂಗ್‍ಹ್ಯಾಮ್ ನಗರಸಭೆಗೆ ಆಯ್ಕೆಹೊಂದಿದ ಜೋಸೆಫ್ 1873ರ ವರೆಗೂ ಅಲ್ಲಿದ್ದು ಪೌರ-ಸುಧಾರಣೆಯ ಅನೇಕ ಕಾರ್ಯಗಳನ್ನು ಜಾರಿಗೆ ತಂದ. 1873ರಲ್ಲಿ ನಗರಸಭೆಯಲ್ಲಿ ಲಿಬರಲ್ ಪಕ್ಷಕ್ಕೆ ಬಹುಮತ ಬಂತು. ಜೋಸೆಫ್ ಮೇಯರ್ ಆಗಿ ಆಯ್ಕೆ ಹೊಂದಿದ. 1876ರ ವರೆಗೆ ಆತ ಆ ಸ್ಥಾನದಲ್ಲಿದ್ದ.

ಜೋಸೆಫ್ ಚೇಂಬರ್ಲಿನ್ ಬರ್ಮಿಂಗ್‍ಹ್ಯಾಮ್ ನಗರದ ಮೇಯರ್ ಆಗಿ ಮಾಡಿದ ಕೆಲಸ ಆ ದೇಶದ ಪೌರ ಆಡಳಿತ ವ್ಯವಸ್ಥೆಗೊಂದು ಮಾದರಿ-ಯಾಗುವಷ್ಟು ಕ್ರಾಂತಿಕಾರಿಯಾಯಿತು.

1875ರ ಜನವರಿಯಲ್ಲಿ ಆತ ನಡೆಸಿದ ಸ್ಥಳೀಯ ನೈರ್ಮಲ್ಯ ಅಧಿಕಾರಿಗಳ ಸಮ್ಮೇಳನದಿಂದ ನಗರ ನೈರ್ಮಲ್ಯ ಹಾಗೂ ಉತ್ತಮ ನಗರಜೀವನ ವ್ಯವಸ್ಥೆಯ ಧ್ಯೇಯವುಳ್ಳ ಆಧುನಿಕ ಆಂದೋಲನವೇ ಪ್ರಾರಂಭವಾಯಿತೆಂದು ಹೇಳಬಹುದು. ಈ ಆಂದೋಲನದಲ್ಲಿ ಆತ ಬಹುಮಟ್ಟಿಗೆ ಯಶಸ್ವಿಯೂ ಜನಪ್ರಿಯನೂ ಆದನಲ್ಲದೆ ನಗರದ ಹೊರಗೂ ಗಮನಾರ್ಹ ವ್ಯಕ್ತಿಯಾದ. ಜೋಸೆಫ್ ಶಾಂತವಾಗಿ ಮತ್ತು ನೇರವಾಗಿ ಮನಮುಟ್ಟುವಂತೆ ಹೇಳಬಲ್ಲ ಮಾತುಗಾರನಾಗಿದ್ದ. ಆತನ ತೆಳ್ಳಗಿನ ಆಕಾರ, ಕೆತ್ತಿ ತೆಗೆದಂತಿದ್ದ ಮುಖಲಕ್ಷಣಗಳು ಮತ್ತು ಆತ ಹಾಕುತ್ತಿದ್ದ ಒಕ್ಕನ್ನಡಕ-ಇವು ಬಹು ಬೇಗ ವ್ಯಂಗ್ಯಚಿತ್ರಕಾರರಿಗೆ ಪ್ರಿಯವಾದವು. ಸ್ನೇಹಿತರಲ್ಲಿ ಔದಾರ್ಯ ತೋರಿಸುವ ಸ್ವಭಾವ ಅವನದಾದರೂ ಸಹಜವಾದ ಉಗ್ರಸ್ವಭಾವದಿಂದಾಗಿ ಅವನು ವಿರೋಧಿಗಳನ್ನು ಗಳಿಸಿಕೊಂಡಿದ್ದ. ಬರ್ಮಿಂಗ್‍ಹ್ಯಾಮ್ ವಿಶ್ವವಿದ್ಯಾಲಯದ ಪ್ರಥಮ ಮತ್ತು ಸಂಸ್ಥಾಪಕ ಕುಲಪತಿಯಾಗಿ (1900) ಜೋಸೆಫ್ ಕೊನೆಯವರೆಗೂ ಬರ್ಮಿಂಗ್‍ಹ್ಯಾಮ್ ನಗರದಲ್ಲಿ ಆಸಕ್ತಿ ಕಾಪಾಡಿಕೊಂಡಿದ್ದ.

ಷೆಫೀಲ್ಡ್‍ನಿಂದ 1874ರಲ್ಲಿ ಪಾರ್ಲಿಮೆಂಟ್ ಚುನಾವಣೆಗೆ ನಿಂತು ಸೋತ ಜೋಸೆಫ್ 1876ರ ಚುನಾವಣೆಯಲ್ಲಿ ಬರ್ಮಿಂಗ್‍ಹ್ಯಾಮ್‍ನಿಂದ ನಿಂತು ಅವಿರೋಧವಾಗಿ ಹೌಸ್ ಆಫ್ ಕಾಮನ್ಸ್‍ಗೆ ಆರಿಸಿ ಬಂದ. 1870ರಲ್ಲೇ ನ್ಯಾಷನಲ್ ಎಜುಕೇಷನ್ ಲೀಗ್‍ನ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾಗಿ ಜೋಸೆಫ್ ಶಿಕ್ಷಣದ ವಿಚಾರದಲ್ಲಿ ತನಗಿದ್ದ ಆಸಕ್ತಿಯನ್ನು ತೋರಿಸಿದ್ದ. ಸಂಸತ್ತಿನಲ್ಲಿ ಆತನ ಮೊದಲ ಭಾಷಣ (1876ರ ಆಗಸ್ಟ್ 4) ಲಾರ್ಡ್ ಸ್ಯಾಂಡರ್ಸನ ಶೈಕ್ಷಣಿಕ ಶಾಸನದ ಮಸೂದೆಯನ್ನು ಕುರಿತದ್ದಾಗಿತ್ತು.

1880ರ ಸಾರ್ವತ್ರಿಕ ಚುನಾವಣೆಗಳ ಅನಂತರ ಪ್ರಧಾನಮಂತ್ರಿಯಾಗಿ ಬಂದ ಗ್ಲಾಡ್‍ಸ್ಟನ್ ಪುರೋಗಾಮಿಗಳ ಕರ್ತೃತ್ವಶಕ್ತಿಯನ್ನು ಮನ್ನಿಸಿ ಸರ್ ಚಾರ್ಲ್ಸ್ ಡಿಲ್ಕ್ ಮತ್ತು ಚೇಂಬರ್ಲಿನರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಬೇಕಾಯಿತು. ಚೇಂಬರ್ಲಿನ್ ಮೊದಲು ಬೋರ್ಡ್ ಆಫ್ ಟ್ರೇಡ್‍ನ ಅಧ್ಯಕ್ಷನಾಗಿ ಸೇರಿ ಆಮೇಲೆ ಸ್ಥಾನಿಕ ಸರ್ಕಾರದ ಬೋರ್ಡಿನ ಅಧ್ಯಕ್ಷನಾದ. ಡಿಲ್ಕ್ ಮತ್ತು ಚೇಂಬರ್ಲಿನ್ ಇಬ್ಬರೂ ಬಹಳ ಪುರೋಗಾಮಿ ವಿಚಾರದವರಿದ್ದರು. ಆದರೆ ಗ್ಲಾಡ್‍ಸ್ಟನ್ ತನ್ನ ಹಳೆಯ ಮಂದಗಾಮಿ ಸ್ನೇಹಿತರ ಪರವಾಗಿದ್ದ. ಐರ್ಲೆಂಡಿನ ವಿಚಾರದಲ್ಲಿ ಮಾತ್ರ ಬಿರುಕು ಬಹಳ ಆಳವಾಯಿತು. ಚೇಂಬರ್ಲಿನ್ ದಬ್ಬಾಳಿಕೆಯನ್ನು ವಿರೋಧಿಸುತ್ತಿದ್ದ. ಐರಿಷ್ ರಾಷ್ಟ್ರೀಯ ನಾಯಕ ಪಾರ್ನೆಲನೊಂದಿಗೆ ಮಾತುಕತೆ ನಡೆಸಲು ಚೇಂಬರ್ಲಿನ್ 1882ರಲ್ಲಿ ನಿಯುಕ್ತನಾದ. ಸಂಧಾನ ಫಲಿಸಿ ಒಪ್ಪಂದವಾಯಿತು. ಪಾರ್ನೆಲನನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. ಐರಿಷ್ ಕಾರ್ಯದರ್ಶಿ ಫಾರ್‌ಸ್ಟರ್ ರಾಜೀನಾಮೆ ಕೊಟ್ಟ. ಆತನ ಉತ್ತರಾಧಿಕಾರಿಯಾಗಿ ಬಂದ ಲಾರ್ಡ್ ಎಫ್. ಕ್ಯಾವಿಂಡಿಷ್ ಕೊಲೆಗೆ ಈಡಾದ. ಚೇಂಬರ್ಲಿನನನ್ನೇ ಈ ಅಪಾಯದ ಸ್ಥಾನಕ್ಕೆ ಆರಿಸಲಾಯಿತು. ಆತ ಅದಕ್ಕೆ ಸಿದ್ಧನೂ ಆಗಿದ್ದ. ಆದರೆ ಆತನ ನೇಮಕವಾಗಲಿಲ್ಲ. ಕೊನೆಗೆ 1885ರಲ್ಲಿ ಚೇಂಬರ್ಲಿನ್ ಸಾರ್ವಭೌಮ ಸಂಬಂಧಗಳನ್ನು ದುರ್ಬಲಗೊಳಿಸದೆಯೇ ಐರ್ಲೆಂಡಿಗೆ ಸ್ವಾಯತ್ತತೆ ನೀಡುವ ಯೋಜನೆಯೊಂದನ್ನು ಮಂಡಿಸಿದ. ಇದಕ್ಕೂ ಸಂಸತ್ತಿನಲ್ಲಿ ವಿರೋಧ ಬಂತು. ಡಿಲ್ಕ್ ಮತ್ತು ಚೇಂಬರ್ಲಿನ್ ತಮ್ಮ ಸ್ಥಾನಗಳಿಗೆ ರಾಜೀನಾಮೆಕೊಟ್ಟರು. ಸರ್ಕಾರವೂ ಮುಂಗಡಪತ್ರದ ವಿಚಾರದಲ್ಲಿ ಬಹುಮತ ಕಳೆದುಕೊಂಡು ಸೋತಿತು (ಜೂನ್ 1885). ಅನಂತರವೂ ಚೇಂಬರ್ಲಿನ್ ತನ್ನ ಮೆಚ್ಚಿನ ವಿಷಯಗಳಲ್ಲಿ ಸಕ್ರಿಯವಾದ ಆಸಕ್ತಿ ಉಳಿಸಿಕೊಂಡು ಬಂದ.

1885ರ ನವೆಂಬರ್ ಚುನಾವಣೆಗಳಲ್ಲಿ ಮತ್ತೆ ಆರಿಸಿ ಬಂದ ಚೇಂಬರ್ಲಿನ್ ಆಗ ಐರ್ಲೆಂಡ್ ಮತಗಳ ಅಗತ್ಯವನ್ನು ಕಂಡುಕೊಂಡಿದ್ದ. ಗ್ಲಾಡ್‍ಸ್ಟನ್ನನಿಗೆ ನೆರವಾಗಲು ಆತನ ಹೋಮ್ ರೂಲ್ ವಿಧೇಯಕದ ಬೆಂಬಲಕ್ಕೆ ನಿಂತ. ಆದರೆ ಮೊದಲಿನಿಂದಲೂ ಐರ್ಲೆಂಡ್ ಬಗ್ಗೆ ಉದಾರವಾಗಿದ್ದು, ಅದಕ್ಕೆ ಅಧಿಕಾರಗಳನ್ನು ಕೊಡಬೇಕೆಂದು ವಾದಿಸುತ್ತಿದ್ದ ಚೇಂಬರ್ಲಿನ್‍ಗೆ ಹೋಮ್ ರೋಲ್ ವಿಧೇಯಕದಲ್ಲಿ ನಿರೀಕ್ಷಿತ ಸೌಲಭ್ಯಗಳು ಕಾಣಲಿಲ್ಲ. ಆದ್ದರಿಂದ ಆತ ತನ್ನ ಬೆಂಬಲವನ್ನು ಹಿಂತೆಗೆದುಕೊಂಡ. ಪರಿಣಾಮವಾಗಿ ಆ ಶಾಸನ ಸಂಸತ್ತಿನಲ್ಲಿ ಬಿದ್ದುಹೋಯಿತು. ಮುಂದಿನ ಚುನಾವಣೆಗಳ ಅನಂತರ ಗ್ಲಾಡ್‍ಸ್ಟನ್ ಸರ್ಕಾರದ ಹೊರಗೇ ಉಳಿಯಬೇಕಾಯಿತು.

ಚೇಂಬರ್ಲಿನನ ಪ್ರಭಾವ ಸಂಪಾದಿಸುವುದಕ್ಕಾಗಿ ಕನ್ಸರ್‌ವೇಟಿವ್ ಪಕ್ಷ ಆತನ ಪುರೋಗಾಮಿ ಸಾಮಾಜಿಕ ನೀತಿಯನ್ನು ಒಪ್ಪಿಕೊಳ್ಳಬೇಕಾಯಿತು. 1892ರ ಹೊತ್ತಿಗೆ ಲಾರ್ಡ್ ಸಾಲ್ಸ್‍ಬರಿಯ ಮಂತ್ರಿಮಂಡಲ ಅನೇಕ ಪುರೋಗಾಮಿ ಅಧಿನಿಯಮಗಳನ್ನು ಜಾರಿಗೆ ತಂದಾಗ ಚೇಂಬರ್ಲಿನನಿಗೆ ಸಮಾಧಾನವಾಯಿತು. ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ನಡುವಣ ಮೀನುಗಾರಿಕೆ ವ್ಯಾಜ್ಯದ ತೀರ್ಮಾನಕ್ಕಾಗಿ ಚೇಂಬರ್ಲಿನನನ್ನು ರಾಯಭಾರಿಯಾಗಿ ನೇಮಿಸಿ ಕಳಿಸಲಾಯಿತು. 1885ರಲ್ಲಿ ಎರಡು ದೇಶಗಳ ನಡುವೆ ಒಪ್ಪಂದವಾಯಿತು.

1892ರಲ್ಲಿ ಚೇಂಬರ್ಲಿನ್ ಮತ್ತೆ ಸಂಸತ್ತಿಗೆ ಆಯ್ಕೆಯಾದ. ಆದರೆ ಆತನ ಯೂನಿಯನಿಸ್ಟ್ ಪಕ್ಷ ಬಹುಮತ ಗಳಿಸಲಿಲ್ಲ. ಗ್ಲಾಡ್‍ಸ್ಟನ್ ಎರಡನೆಯ ಹೋಮ್ ರೂಲ್ ವಿಧೇಯಕ ತಂದಾಗ ಚೇಂಬರ್ಲಿನ್ ಅದನ್ನು ತೀವ್ರವಾಗಿ ಖಂಡಿಸಿದ.

1895ರಲ್ಲಿ ಲಾರ್ಡ್ ಸಾಲ್ಸ್‍ಬರಿಯ ಮಂತ್ರಿಮಂಡಲದಲ್ಲಿ ಚೇಂಬರ್ಲಿನ್ ವಸಾಹತು ಶಾಖೆಯ ಸಚಿವನಾಗಿ ನೇಮಕವಾದ. ಕಾರ್ಮಿಕ ಪರಿಹಾರ ವಿಧೇಯಕದಲ್ಲಿ ಚೇಂಬರ್ಲಿನ್ ಪ್ರಭಾವವಿತ್ತು. ಈ ನಡುವೆ ದಕ್ಷಿಣ ಆಫ್ರಿಕ ಹೆಚ್ಚಿನ ಗಮನ ಸೆಳೆಯಿತು. 1895ರಿಂದ 1900ರವರೆಗೆ ಚೇಂಬರ್ಲಿನ್ ಅಧಿಕಾರದಲ್ಲಿದ್ದ ಅವಧಿಯಲ್ಲಿ ಬ್ರಿಟಿಷ್ ವಸಾಹತುಗಳ ಮತ್ತು ಅವುಗಳ ಮಾತೃದೇಶದ ನಡುವಣ ಸಂಬಂಧಗಳಲ್ಲಿ ಒಂದು ಗಮನಾರ್ಹ ತಿರುವು ಸಂಭವಿಸಿತೆಂದು ಹೇಳಲಾಗುತ್ತದೆ. ಆತ ವಾಸ್ತವವಾಗಿ ಸಂರಕ್ಷಣೆ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಸ್ನೇಹ ಸಂಬಂಧದ ಸ್ಥಾಪನೆಗಾಗಿ ದುಡಿದ. ಆಸ್ಟ್ರೇಲಿಯನ್ ಕಾಮನ್‍ವೆಲ್ತ್ ಅಧಿನಿಯಮ ಆತನ ಮಹತ್ಸಾಧನೆಗಳಲ್ಲೊಂದು. ದಕ್ಷಿಣ ಆಫ್ರಿಕ ಯುದ್ಧಗಳಲ್ಲಿ ಸ್ವಾಧಿಕಾರ ಪಡೆದ ವಸಾಹತುಗಳು ಬ್ರಿಟನ್ನಿಗೆ ನೀಡಿದ ನೆರವಿನಿಂದ ಚೇಂಬರ್ಲಿನ್ನನ ಏಕೀಕೃತ ಸಾಮ್ರಾಜ್ಯ ಸೂತ್ರಕ್ಕೆ ಇನ್ನಷ್ಟು ಪುಷ್ಟಿ ದೊರೆಯಿತು.

ಸಾಮ್ರಾಜ್ಯದ್ಯಂತ ರಾಜಕೀಯ ಏಕತೆಗೆ ಮುಖ್ಯವಾಗಿ ಅಗತ್ಯವಾದ್ದೆಂದರೆ ತೆರಿಗೆ ನೀತಿಯ ಸುಧಾರಣೆಯೇ ಎಂಬುದು 1902ರಲ್ಲಿ ನೆರೆದ ಸಾಗರೋತ್ತರ ವಸಾಹತುಗಳ ಪ್ರಧಾನಿಗಳ ಸಭೆಯಲ್ಲಿ ವ್ಯಕ್ತವಾಯಿತು. ಚೇಂಬರ್ಲಿನ್ ಈ ದಿಶೆಯಲ್ಲಿ ಪ್ರಥಮ ಹೆಜ್ಜೆಯಾಗಿ ಸಾಮ್ರಾಜ್ಯ ಅಭಿಮಾನ (ಇಂಪೀರಿಯಲ್ ಪ್ರಿಫರೆನ್ಸ್) ಸೌಲಭ್ಯ ಕ್ರಮವನ್ನು ಮಂಡಿಸಿದ. ಸಾಮ್ರಾಜ್ಯಾಂತರ್ಗತ ಪ್ರದೇಶಗಳಲ್ಲಿ ಪರಸ್ಪರ ವಾಣಿಜ್ಯ ವ್ಯವಹಾರಗಳಲ್ಲಿ ತೆರಿಗೆಯ ವಿಚಾರದಲ್ಲಿ ವಿಶೇಷ ಸವಲತ್ತುಗಳಿರಬೇಕೆಂಬುದು ಆತನ ಆಶಯವಾಗಿತ್ತು. ಆ ಪ್ರಕಾರ ವಸಾಹತುಗಳಿಂದ ಆಮದಾದ ಧಾನ್ಯದ ಮೇಲಿನ ನೋಂದಣಿ ಸುಂಕವನ್ನು ಬಿಡಬೇಕಾಗುತ್ತಿತ್ತು. ಬ್ರಿಟನ್ನಿನ ಅರ್ಥಮಂತ್ರಿ ಇದಕ್ಕೆ ಗೊಣಗಿದ. ಚೇಂಬರ್ಲಿನ್ ಸೂಚನೆ ಬಿದ್ದುಹೋಯಿತು. ತೆರಿಗೆ ಸುಧಾರಣಾಕ್ರಮ ಸರ್ಕಾರದ ಪರಿಧಿಯನ್ನು ದಾಟಿ ಸಾರ್ವಜನಿಕ ಆಂದೋಲನದ ಸ್ವರೂಪ ಪಡೆಯಿತು. ಚೇಂಬರ್ಲಿನ್ ಅದರ ಮುಖಂಡನಾದ. 1906ರ ಚುನಾವಣೆಯಲ್ಲಿ ಯೂನಿಯನಿಸ್ಟ್ ಪಕ್ಷ ಸೋತರೂ ಚೇಂಬರ್ಲಿನ್ ಹಾಗೂ ಆತನ ಅನುಯಾಯಿಗಳು ಜಯಶೀಲರಾದರು.

1906ರಲ್ಲಿ ಸಂಸತ್ತಿನ ಮೊದಲ ಅಧಿವೇಶನದಲ್ಲಿ ಚೇಂಬರ್ಲಿನ್ ವಿರೋಧ ಪಕ್ಷದ ನಾಯಕನಾಗಿ ಕೆಲಸಮಾಡಿದ. ಆದರೆ ಆತನಿಗೆ ಹಾಗೆ ಮುಂದುವರಿಯುವ ಇಚ್ಛೆ ಇರಲಿಲ್ಲ. ಆ ಅಧಿವೇಶನದ ನಡುವೆಯೇ ಆತನ ರಾಜಕೀಯ ಚಟುವಟಿಕೆಗೆ ತಡೆಯುಂಟಾಯಿತು. ಬರ್ಮಿಂಗ್‍ಹ್ಯಾಮ್‍ನಲ್ಲಿ ಆತನ 70ನೆಯ ಹುಟ್ಟುಹಬ್ಬವನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ಅನಂತರ ಅವನು ಪಾರ್ಶ್ವವಾಯುವಿನಿಂದ ನರಳಿದ. 1910ರಲ್ಲಿ ಮತ್ತೆ ಅವನು ಅವಿರೋಧವಾಗಿ ಸಂಸತ್ತಿಗೆ ಆಯ್ಕೆಯಾದನಾದರೂ ಮುಂದೆಂದೂ

ಆತ ಸಾರ್ವಜನಿಕ ಸಭೆಯಲ್ಲಿ ಮಾತನಾಡಲಾಗಲಿಲ್ಲ. 1914ರ ಜುಲೈ 2 ರಂದು ಜೋಸೆಫ್ ಚೇಂಬರ್ಲಿನ್ ತೀರಿಕೊಂಡ. ಬ್ರಿಟನ್ನಿನ ಮಹಾಪುರುಷರಿಗೆ ಮೀಸಲಾದ ವೆಸ್ಟ್‌ಮಿನ್‌ಸ್ಟರ್ ಅಬೆಯಲ್ಲಿ ಅವನ ಸಮಾಧಿಗೆ ಅವಕಾಶ ಕೊಡುವ ಗೌರವಯುಕ್ತ ಸೂಚನೆ ಬಂದರೂ ಆತನ ಬಂಧುಗಳು ಅದನ್ನು ನಿರಾಕರಿಸಿ ಆತನ ಇಚ್ಛೆಯಂತೆ ಬರ್ಮಿಂಗ್‌ಹ್ಯಾಮ್‌ನಲ್ಲೇ ಅವನ ಶವಸಂಸ್ಕಾರ ಮಾಡಿದರು.

ಜೋಸೆಫ್ ಚೇಂಬರ್ಲಿನ್ ಮೂರು ಸಲ ಮದುವೆಯಾಗಿದ್ದ. ಹ್ಯಾರಿಯೆಟ್ ಕೆನ್ರಿಕ್ (1863ರಲ್ಲಿ ನಿಧನ), ಫ್ಲಾರೆನ್ಸ್ ಕೆನ್ರಿಕ್ (1875ರಲ್ಲಿ ನಿಧನ) ಮತ್ತು ಮೇರಿ ಎಂಡಿಕಾಟ್– ಈ ಮೂವರು ಆತನ ಪತ್ನಿಯರು. ಆಸ್ಟಿನ್ ಅವನ ಮೊದಲ ಪತ್ನಿಯ ಮಗ. ನೆವಿಲ್ ಎರಡನೆಯಾಕೆಯ ಮಗ. ಈ ಇಬ್ಬರೂ ಪ್ರಖ್ಯಾತ ರಾಜಕಾರಣಿಗಳಾಗಿ ಹೆಸರಾದರು.

(ಜಿ.ಆರ್.ಪಿ)

**ಚೇಂಬರ್ಲಿನ್, ಥಾಮಸ್ ಕ್ರೌಡರ್ :** 1843–1928. ಅಮೆರಿಕನ್ ಭೂವಿಜ್ಞಾನಿ. ಹಿಮಾಶ್ಮಗಳ (ಗ್ಲೇಷಿಯರ್ಸ್) ಬಗ್ಗೆ ಸಂಶೋಧನೆ ಮಾಡಿದ. ಇದರಿಂದ ಪ್ರೇರಿತನಾಗಿ ಭೂಮಿಯ ಇತಿಹಾಸದಲ್ಲಿ ಆಸಕ್ತಿ ತಳೆದು, ಭೂಮಿ ಮತ್ತು ಇತರ ಗ್ರಹಗಳ ಹುಟ್ಟಿನ ಬಗ್ಗೆ ಒಂದು ಸಿದ್ಧಾಂತವನ್ನೇ ಮಂಡಿಸಿ ಪ್ರಸಿದ್ಧನಾದ. ಜನನ 1843ರ ಸೆಪ್ಟೆಂಬರ್ 25ರಂದು ಇಲಿನಾಯ್ ಸಂಸ್ಥಾನದ ಮಟೂನ್ ಎಂಬಲ್ಲಿ. ವಿಸ್ಕಾನ್ಸಿನ್ ಸಂಸ್ಥಾನದ ಬೆಲಾಯಿಟ್ ನಗರದಲ್ಲಿರುವ ಬೆಲಾಯಿಟ್ ಕಾಲೇಜಿನಲ್ಲಿ ಶಿಕ್ಷಣ. ಪದವೀಧರನಾದದ್ದು 1866ರಲ್ಲಿ. ಕೆಲಕಾಲ ಮಿಚಿಗನ್ ಮತ್ತು ವಿಸ್ಕಾನ್ಸಿನ್ ವಿಶ್ವವಿದ್ಯಾಲಯಗಳಲ್ಲಿ ಕೆಲಸಮಾಡುತ್ತಿದ್ದು 1873ರಲ್ಲಿ ತನ್ನ ವಿದ್ಯಾಮಾತೆಯಾದ ಬಿಲಾಯಿಟ್ ಕಾಲೇಜಿಗೆ ಹಿಂತಿರುಗಿ ಅಲ್ಲಿ ಭೂವಿಜ್ಞಾನದ ಪ್ರಾಧ್ಯಾಪಕನಾದ. 1876ರ ವರೆಗೆ ವಿಸ್ಕಾನ್ಸಿನ್ ಸಂಸ್ಥಾನದ ಸಹಾಯಕ ಭೂವಿಜ್ಞಾನಿಯಾಗಿಯೂ ಕೆಲಸ ಮಾಡಿದ. ಆ ವರ್ಷ ವಿಸ್ಕಾನ್ಸಿನ್ ಭೂವೈಜ್ಞಾನಿಕ ಸರ್ವೆಯ ಪ್ರಧಾನ ಭೂವಿಜ್ಞಾನಿಯಾಗಿ ನೇಮಕಗೊಂಡ. ಆ ಸ್ಥಾನದಲ್ಲಿ ಆರು ವರ್ಷ ಕೆಲಸ ಮಾಡಿ 1882ರಲ್ಲಿ ಸಂಯುಕ್ತ ಸರ್ಕಾರದ ಸೇವೆಯನ್ನು ಕೈಗೊಂಡು ಅಮೆರಿಕದ ಸಂಯುಕ್ತಸಂಸ್ಥಾನಗಳ ಭೂವೈಜ್ಞಾನಿಕ ಸರ್ವೆಯ ಹಿಮಾಶ್ಮ ವಿಭಾಗದ ಭೂವಿಜ್ಞಾನಿಯಾಗಿ ಅಧಿಕಾರ ವಹಿಸಿಕೊಂಡ. ಇಲ್ಲಿ ಐದು ವರ್ಷ ಕಾಲ ಕೆಲಸಮಾಡಿದ. ತರುವಾಯ 1887ರಲ್ಲಿ ಮ್ಯಾಡಿಸನಿನಲ್ಲಿರುವ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಅಧ್ಯಕ್ಷನಾದ. ಅಲ್ಲಿಂದ ಐದು ವರ್ಷಗಳ ಬಳಿಕ 1892ರಲ್ಲಿ ಷಿಕಾಗೋ ವಿಶ್ವವಿದ್ಯಾಲಯದ ಭೂವಿಜ್ಞಾನ ಇಲಾಖೆಯ ಮುಖ್ಯಸ್ಥನಾಗಿ ನೇಮಕಗೊಂಡು, ಇಪ್ಪತ್ತೇಳು ವರ್ಷಕಾಲ, ಅಂದರೆ 1919ರ ವರೆಗೆ ಆ ಸ್ಥಾನದಲ್ಲಿದ್ದ. ಆ ವರ್ಷ ಅಲ್ಲಿಂದ ನಿವೃತ್ತನಾದರೂ ಎಮೆರಿಟಸ್ ಪ್ರಾಧ್ಯಾಪಕನಾಗಿ ಅಲ್ಲಿಯೇ ಮುಂದುವರಿದ. 1928ರ ನವೆಂಬರ್ 15ರಂದು ಷಿಕಾಗೊ ನಗರದಲ್ಲಿ ನಿಧನ ಹೊಂದಿದ.

1878ರಲ್ಲಿ ಸ್ವಿಟ್ಜರ್ಲೆಂಡಿನಲ್ಲಿಯೂ 1894ರಲ್ಲಿ ಗ್ರೀನ್ಲೆಂಡಿನಲ್ಲಿಯೂ ಹಿಮಾಶ್ಮಗಳ ಅಧ್ಯಯನವನ್ನು ಕೈಗೊಂಡ ಚೇಂಬರ್ಲಿನ್ ಕ್ರಮೇಣ ಭೂಗ್ರಹದ ಇತಿಹಾಸದಲ್ಲಿ ಆಸಕ್ತನಾದ. ಹಿಮಾಶ್ಮಗಳ ಕ್ರಿಯೆಯಿಂದ ರೂಪುಗೊಂಡ ನಿಕ್ಷೇಪಗಳ ಅಧ್ಯಯನ ಮಾಡಿ ಯುಗ ಯುಗಾಂತರಗಳಲ್ಲಿ ವಾಯುಗುಣ ಯಾವ ಯಾವ ರೀತಿ ಬದಲಾಯಿಸಿದೆಯೆಂಬ ಬಗ್ಗೆ ಅಭಿಪ್ರಾಯವನ್ನು ಮಂಡಿಸಿದ. ಭೂಮಿಯ ಮೇಲೆ ಜೀವ ಮೊತ್ತ ಮೊದಲು ಮಣ್ಣಿನಲ್ಲಿ ಉದ್ಭವಿಸಿತೆಂಬ ಒಂದು ವಾದವನ್ನು ಮುಂದಿಟ್ಟ. 1899ರಲ್ಲಿ ಷಿಕಾಗೊ ವಿಶ್ವವಿದ್ಯಾಲಯವನ್ನು ಅಧ್ಯಾಪಕನಾಗಿ ಸೇರಿದ ಖಗೋಳವಿಜ್ಞಾನಿ ಎಫ್.ಆರ್. ಮಾಲ್ಟನಿನೊಂದಿಗೆ ಭೂಗ್ರಹದ ಉಗಮವನ್ನು ಕುರಿತ ಪರಿಶೀಲನೆಯನ್ನು ಕೈಗೊಂಡ. ಅದರ ಫಲವಾಗಿ ಮರುವರ್ಷ 1900ರಲ್ಲಿ ಅವರಿಬ್ಬರೂ ಸೇರಿ ಒಂದು ಸಿದ್ಧಾಂತವನ್ನು ಪ್ರತಿಪಾದಿಸಿದರು. ಸುಮಾರು ಒಂದೂವರೆ ಶತಮಾನಗಳಷ್ಟು ಮುಂಚೆ ಫ್ರಾನ್ಸಿನ ಪ್ರಕೃತಿವಿಜ್ಞಾನಿ ಬ್ಯೂಫಾನೊ ಪ್ರತಿಪಾದಿಸಿದ ಸಿದ್ಧಾಂತದ ಪರಿಷ್ಕೃತ ರೂಪವೆಂದು ಪರಿಗಣಿಸಬಹುದಾದ ಅವನ ಸಿದ್ಧಾಂತದ ಪ್ರಕಾರ ಆಕಸ್ಮಿಕವಾಗಿ ಸೂರ್ಯನನ್ನು ಸಮೀಪಿಸಿದ ಒಂದು ನಕ್ಷತ್ರ ಆಕರ್ಷಣೆಯ ಫಲವಾಗಿ ಸೂರ್ಯನ ಮೈಮೇಲಿನಿಂದ ಒಂದು ಬೃಹತ್ತಾದ ಅನಿಲರಾಶಿ ಎದ್ದು ಸೂರ್ಯನನ್ನು ಸುತ್ತು ಹಾಕಲು ಪ್ರಾರಂಭಿಸಿತು. ಅದು ಆರುತ್ತ ಹೋದಂತೆ ಅದರಿಂದ ಅನೇಕಾನೇಕ ಚಿಕ್ಕ ಚಿಕ್ಕ ದ್ರವ್ಯರಾಶಿಗಳು ರೂಪುಗೊಂಡುವು. ಅವು ಇನ್ನೂ ಆರಿ ಅಸಂಖ್ಯಾತ ಘನಕಾಯಗಳಾದುವು. ಈ ರೀತಿ ಉತ್ಪತ್ತಿಯಾದ ಗ್ರಹಾಣುಗಳು (ಪ್ಲಾನೆಟಿಸಿಮಲ್ಸ್) ಪರಸ್ಪರ ಆಕರ್ಷಣೆಯಿಂದ ಒಂದುಗೂಡುತ್ತ ಹೋಗಿ ಇಂದಿನ ಗ್ರಹಗಳು ಜನ್ಮತಾಳಿದುವು.

ಮೌಲ್ಟನ್–ಚೇಂಬರ್ಲಿನ್ ಸಿದ್ಧಾಂತದ ಒಂದು ಅಂಶಕ್ಕೆ ಈಗಲೂ ಮಾನ್ಯತೆ ಉಂಟು. ಚಿಕ್ಕ ಚಿಕ್ಕ ಘನಕಾಯಗಳು ಸಾಮಾನ್ಯ ಉಷ್ಣತೆಯಲ್ಲಿ ಒಂದರೊಡನೊಂದು ಸೇರಿಕೊಂಡು ಗ್ರಹಗಳು ರೂಪುಗೊಂಡುವೆಂಬುದು ಅನೇಕ ಆಧುನಿಕ ವಿಜ್ಞಾನಿಗಳ ಅಭಿಪ್ರಾಯ. ಆದರೆ ನಕ್ಷತ್ರವೊಂದರ ಆಕರ್ಷಣೆಯ ಫಲವಾಗಿ ಸೂರ್ಯನಿಂದ ಕಿತ್ತುಬಂದ ಭಾಗವೇ ಅದಕ್ಕೆ ಅಗತ್ಯವಾದ ವಸ್ತುವನ್ನು ಒದಗಿಸಿತೆಂಬ ವಾದಕ್ಕೆ ಈಗ ಮಾನ್ಯತೆ ಇಲ್ಲ. ಪ್ರಖ್ಯಾತ ಬ್ರಿಟಿಷ್ ಖಗೋಳವಿಜ್ಞಾನಿ ಜೇಮ್ಸ್ ಜೀನ್ಸ್ ಅಲ್ಲಿಂದ ಇಪ್ಪತ್ತು ವರ್ಷಗಳ ಬಳಿಕ ಈ ಅಭಿಪ್ರಾಯಕ್ಕೆ ಪುನರ್ಜನ್ಮ ನೀಡಿ ಪ್ರಬಲವಾಗಿ ಬೆಂಬಲ ನೀಡಿದನಾದರೂ ಅದಕ್ಕೆ ಹೆಚ್ಚಿನ ಮನ್ನಣೆ ದೊರೆತಿಲ್ಲ.

ಚೇಂಬರ್ಲಿನ್ನನೇ ಸ್ಥಾಪಿಸಿದ 'ಜರ್ನಲ್ ಆಫ್ ಜಿಯಾಲಜಿ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಅನೇಕ ಲೇಖನಗಳೂ ಅಮೆರಿಕ ಸಂಯುಕ್ತ ಸಂಸ್ಥಾನದ ಭೂವೈಜ್ಞಾನಿಕ ಸರ್ವೆಯ ಹಿಮಾಶ್ಮ ವಿಭಾಗದ ವರದಿಗಳೂ ಅಲ್ಲದೆ ನಾಲ್ಕು ಸಂಪುಟಗಳ ವಿಸ್ಕಾನ್ಸಿನ್ ಸಂಸ್ಥಾನದ ಭೂವೈಜ್ಞಾನಿಕ ವೃತ್ತಾಂತ (ಜಿಯಾಲಜಿ ಆಫ್ ವಿಸ್ಕಾನ್ಸಿನ್) ಮತ್ತು ಮೂರು ಸಂಪುಟಗಳ ಭೂವಿಜ್ಞಾನದ ಒಂದು ಪ್ರಕರಣಗ್ರಂಥ (ಟ್ರೀಟೈಸ್ ಆನ್ ಜಿಯಾಲಜಿ)– ಇವುಗಳನ್ನೊಳಗೊಂಡಂತೆ ಚೇಂಬರ್ಲಿನ್ ಹಲವಾರು ಗ್ರಂಥಗಳನ್ನು ರಚಿಸಿದ್ದಾನೆ.

(ಜಿ.ಆರ್.ಎಲ್.)

**ಚೇಂಬರ್ಲಿನ್, (ಆರ್ಥರ್) ನೆವಿಲ್ :** 1869–1940. ಬ್ರಿಟಿಷ್ ರಾಜಕಾರಣಿ. 1937ರಿಂದ 1940ರವರೆಗೆ ಬ್ರಿಟನ್ನಿನ ಪ್ರಧಾನಮಂತ್ರಿಯಾಗಿದ್ದ. ಎರಡನೆಯ ಮಹಾಯುದ್ಧಕ್ಕೆ ಸ್ವಲ್ಪ ಮುಂಚೆ ಜರ್ಮನಿಯ ಮನವೊಲಿಸುವ ರಾಜನೀತಿಯ ಪುರಸ್ಕರ್ತರೆಂದು ಹೆಸರು ಪಡೆದ ಬ್ರಿಟಿಷ್ ರಾಜಕಾರಣಿಗಳಲ್ಲಿ ಅಗ್ರಗಣ್ಯನೆಂದು ಪರಿಗಣಿತನಾದ. ಜನನ 1869ರ ಮಾರ್ಚ್ 18ರಂದು, ಬರ್ಮಿಂಗ್‌ಹ್ಯಾಮ್ ಪ್ರದೇಶದ ಎಜ್‌ಬ್ಯಾಸ್ಟನಿನಲ್ಲಿ. ತಂದೆ ಪ್ರಖ್ಯಾತ ರಾಜಕಾರಣಿ ಜೋಸೆಫ್ ಚೇಂಬರ್ಲಿನ್. ಜೋಸೆಫ್‌ನ ಎರಡನೆಯ ಹೆಂಡತಿ ಫ್ಲಾರೆನ್ಸ್



ಕೆನ್ರಿಕ್ ಇವನ ತಾಯಿ. ಮಗ ವಾಣಿಜ್ಯ ವ್ಯವಹಾರಗಳಿಗೆ ತರಬೇತು ಪಡೆಯ ಬೇಕೆಂಬುದು ತಂದೆಯ ಉದ್ದೇಶ. ಆದ್ದರಿಂದ ಇವನ ವಿದ್ಯಾಭ್ಯಾಸ ಬರ್ಮಿಂಗ್‌ಹ್ಯಾಮ್‌ನ ರಗ್ಬೀ ಮತ್ತು ಮೇಸನ್ ಕಾಲೇಜುಗಳಲ್ಲೂ ಆ ನಂತರ ಅಲ್ಲಿಯ ವಿಶ್ವವಿದ್ಯಾಲಯ ದಲ್ಲೂ ನಡೆಯಿತು. ಆಮೇಲೆ ಇವನು ತಂದೆಯ ಆಸ್ತಿಯಾಗಿದ್ದ ತೋಟವನ್ನು ಅಭಿವೃದ್ಧಿಗೊಳಿಸಲು ಬಹಾಮ ದಲ್ಲಿಯ ಆ್ಯಂಡ್ರೋಸ್ ದ್ವೀಪಕ್ಕೆ ಹೋಗಿ ಅಲ್ಲಿ ಏಳು ವರ್ಷಕಾಲ ಈತ ಏಕಾಕಿಯಾಗಿ ಶ್ರಮಿಸಿದ. ಆದರೆ ಯಶಸ್ಸೇನೂ ಸಿಗಲಿಲ್ಲ. 1897ರಲ್ಲಿ ಮರಳಿದ ನೆವಿಲ್ ಬರ್ಮಿಂಗ್ ಹ್ಯಾಮಿನಲ್ಲಿ ವ್ಯಾಪಾರ ಪ್ರಾರಂಭಿಸಿದ. ಅಲ್ಲಿ ಈತನಿಗೆ ಯಶಸ್ಸು ಸಿಗತೊಡಗಿತು. ಇವನು ಎರಡು ಚಿಕ್ಕವಾದ ಲೋಹ ವ್ಯವಹಾರ ಅಂಗಡಿಗಳ ಮುಖ್ಯಸ್ಥನಾದ. ವಾಣಿಜ್ಯ ಸಂಘದ ಕಲಾಪಗಳಲ್ಲಿ ಭಾಗವಹಿಸಿದ. ಸಾರ್ವಜನಿಕ ಆಸ್ಪತ್ರೆಯ ಅಧ್ಯಕ್ಷನಾದ. 1911ರಲ್ಲಿ ನಗರ ಪರಿಷತ್ತಿನಲ್ಲಿ ಸೇರಿ 1915ರಲ್ಲಿ ಲಾರ್ಡ್ ಮೇಯರ್ ಪದವಿಗೇರಿದ. ಬರ್ಮಿಂಗ್‌ಹ್ಯಾಮಿನ ಮುನಿಸಿಪಲ್ ಸೇವಿಂಗ್ಸ್ ಬ್ಯಾಂಕ್ (1916) ಈತನ ಸಾಧನೆಗಳಲ್ಲೊಂದು.

ಆಗ ಬ್ರಿಟಿಷ್ ಪ್ರಧಾನಮಂತ್ರಿಯಾಗಿದ್ದ ಡೇವಿಡ್ ಲಾಯ್ಡ್ ಜಾರ್ಜ್ ಇವನನ್ನು 1916ರಲ್ಲಿ ಡೈರೆಕ್ಟರ್ ಜನರಲ್ ಆಫ್ ನ್ಯಾಷನಲ್ ಸರ್ವಿಸ್ ಆಗಿ ನೇಮಕಮಾಡಿ ಲಂಡನ್ನಿಗೆ ಆಹ್ವಾನಿಸಿದ. ಆದರೆ ಈ ಸ್ಥಾನಕ್ಕೆ ಸಾಕಷ್ಟು ಅಧಿಕಾರಿಗಳಿರದ ಕಾರಣ ಚೇಂಬರ್ಲಿನ್ ಕೇವಲ ಏಳು ತಿಂಗಳುಗಳಲ್ಲಿ ರಾಜೀನಾಮೆ ಕೊಟ್ಟ. ಈ ಘಟನೆಯಿಂದ ಉಂಟಾದ ವಿರಸ ಕೊನೆಯವರೆಗೂ ಈ ಇಬ್ಬರು ರಾಜಕಾರಣಿಗಳ ನಡುವೆ ಉಳಿದುಕೊಂಡು ಬಂತು.

1918ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ, ತನ್ನ 50ನೆಯ ವಯಸ್ಸಿನಲ್ಲಿ, ಬರ್ಮಿಂಗ್‌ಹ್ಯಾಮಿನ ಲೇಡಿವುಡ್ ವಿಭಾಗದಿಂದ ಕನ್ಸರ್‌ವೇಟಿವ್ ಪಕ್ಷದ ಉಮೇದುವಾರನಾಗಿ ಚೇಂಬರ್ಲಿನ್ ಆಯ್ಕೆ ಹೊಂದಿದ. 1922ರಲ್ಲಿ ಲಾಯ್ಡ್ ಜಾರ್ಜನ ಸಮ್ಮಿಶ್ರ ಸರ್ಕಾರ ಪತನ ಹೊಂದಿದಾಗ ಚೇಂಬರ್ಲಿನ್ ಮಲಸೋದರನೂ ರಾಜಕಾರಣಿಯೂ ಆದ ಆಸ್ಟಿನನಿಂದ ತಾತ್ಕಾಲಿಕವಾಗಿ ದೂರ ಸರಿದ. ಆಂಡ್ರ್ಯೂ ಬೋನಾರ್ ಲಾ ರಚಿಸಿದ ಕನ್ಸರ್‌ವೇಟಿವ್ ಪಕ್ಷದ ಸರ್ಕಾರದಲ್ಲಿ ಪೋಸ್ಟ್‌ಮಾಸ್ಟರ್ ಜನರಲ್ ಹುದ್ದೆ ಇವನಿಗೆ ಲಭಿಸಿತು. 1923ರ ಫೆಬ್ರವರಿಯಲ್ಲಿ ಚೇಂಬರ್ಲಿನ್ ಆರೋಗ್ಯಮಂತ್ರಿಯಾಗಿ ಬ್ರಿಟಿಷ್ ಸಂಪುಟವನ್ನು ಸೇರಿದ. ಅದೇ ವರ್ಷದ ಆಗಸ್ಟ್‌ನಲ್ಲಿ ಸ್ಟ್ಯಾನ್ಲಿ ಬಾಲ್ಡ್‌ವಿನನ ಸರ್ಕಾರದಲ್ಲಿ ಅರ್ಥಮಂತ್ರಿ ಪದವಿ ಪ್ರಾಪ್ತವಾಯಿತು. ಆದರೆ ಮುಂದಿನ ಜನವರಿಯಲ್ಲಿ ಆ ಸರ್ಕಾರ ಬಿದ್ದುಹೋಯಿತು. 1924ರ ನವೆಂಬರ್‌ನಲ್ಲಿ ಕನ್ಸರ್‌ವೇಟಿವ್ ಪಕ್ಷ ಮಾತ್ರ ಅಧಿಕಾರಕ್ಕೆ ಬಂದಾಗ ಚೇಂಬರ್ಲಿನ್ ಮತ್ತೆ ಆರೋಗ್ಯಮಂತ್ರಿಯಾದ. ಅನೇಕ ಪ್ರಗತಿಪರ ಅಧಿನಿಯಮಗಳ ಜಾರಿಗೆ ಈತ

ಕಾರಣನಾದ್ದರಿಂದ ಬಾಲ್ಡ್‌ವಿನನ ಅನಂತರದ ನಾಯಕತ್ವ ಈತನಿಗೆ ಸ್ಥಿರವಾಯಿತು. 1930ರಲ್ಲಿ ಪಕ್ಷದ ಅಧ್ಯಕ್ಷನಾಗಿ ಈತ ಕನ್ಸರ್‌ವೇಟಿವ್ ಪಕ್ಷದ ಕೇಂದ್ರೀಯ ಕಾರ್ಯಾಲಯವನ್ನು ಪುನಃ ಸಂಘಟಿಸಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡ.

ಬಾಲ್ಡ್‌ವಿನನ ಬಲಗೈಯಂತೆ ಕೆಲಸ ಮಾಡಿದ ಚೇಂಬರ್ಲಿನ್ 1931ರ ಆಗಸ್ಟ್‌ನಲ್ಲಿ ರ‍್ಯಾಮ್ಸೆ ಮ್ಯಾಕ್ಡೊನಾಲ್ಡನ ರಾಷ್ಟ್ರೀಯ ಸರ್ಕಾರವನ್ನು ರೂಪಿಸುವುದರಲ್ಲಿ ವಹಿಸಿದ ಪಾತ್ರ ಬಹು ಮಹತ್ತ್ವದ್ದು. ಅದರಲ್ಲಿ ಈತನಿಗೆ ಆರೋಗ್ಯಮಂತ್ರಿಸ್ಥಾನ ದೊರಕಿತು. 1931ರ ಅಕ್ಟೋಬರ್‌ನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ರಾಷ್ಟ್ರೀಯ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂತು. ಚೇಂಬರ್ಲಿನ್ ಅರ್ಥಮಂತ್ರಿಯಾದ. ಇಟಲಿ 1935ರಲ್ಲಿ ಅಬಿಸೀನಿಯದ (ಈಗಿನ ಇಥಿಯೋಪಿಯ) ಆಕ್ರಮಣ ನಡೆಸಿದಾಗ ಇಟಲಿಯ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಚೇಂಬರ್ಲಿನ್ ಬೆಂಬಲ ನೀಡಿದನಾದರೂ 1936ರಲ್ಲಿ ಇಂಥ ನೀತಿಯನ್ನು ಬಿಡಬೇಕೆಂದು ಸಾರ್ವಜನಿಕವಾಗಿ ಘೋಷಿಸಿದ ಮಂತ್ರಿಗಳಲ್ಲಿ ಈತನೇ ಮೊದಲಿಗ.

1937ರ ಆಗಸ್ಟ್ 28ರಂದು ಬಾಲ್ಡ್‌ವಿನನ ಸ್ಥಾನದಲ್ಲಿ ಚೇಂಬರ್ಲಿನ್ ಪ್ರಧಾನಮಂತ್ರಿಯಾದ. ಈತನ ಪ್ರಧಾನಮಂತ್ರಿತ್ವದ ಅವಧಿಯಲ್ಲಿ ಯೂರೋಪಿನಲ್ಲಿ ಹಿಟ್ಲರನ ಜರ್ಮನಿಯ ಆಕ್ರಮಣ ಮನೋಭಾವ ತುಂಬ ಪ್ರಬಲವಾಯಿತು. ಆಕ್ರಮಣವನ್ನು ರಾಜಕೀಯ ಮಾತುಕತೆಗಳ ಮೂಲಕ ಸೀಮಿತಗೊಳಿಸುವ ಉದ್ದೇಶದಿಂದ ಚೇಂಬರ್ಲಿನ್ ಪ್ರಧಾನ ಮಂತ್ರಿಗೆ ಅಸಹಜವೆನಿಸುವಷ್ಟು ಅತಿಯಾಗಿ ವೈಯಕ್ತಿಕವಾಗಿ ಭಾಗವಹಿಸಿದ. ಪ್ರಬಲವಾದ ಜರ್ಮನಿಯ ಬೇಡಿಕೆಗಳಿಗೆ ಮನ್ನಣೆ ನೀಡಿ ಅದನ್ನು ಶಮನಗೊಳಿಸುವ ನೀತಿ ಆಗ ಪ್ರಧಾನವಾಗಿತ್ತು. ಆ ಸಂದರ್ಭದಲ್ಲಿ ಚೇಂಬರ್ಲಿನ್ ಮೂರು ಸಲ ಜರ್ಮನಿಗೆ ಭೇಟಿ ಕೊಟ್ಟು ಚೆಕೊಸ್ಲೊವಾಕಿಯದ ಭಾಗಗಳಿಗಾಗಿ ಜರ್ಮನಿ ಹಾಕುತ್ತಿದ್ದ ಒತ್ತಡಗಳನ್ನು ತಡೆಯಲು ಉದ್ದೇಶಿಸಿದ. 1937ರ ಸೆಪ್ಟೆಂಬರಿನಲ್ಲಿ ಆದ ಮ್ಯೂನಿಚ್ ಒಪ್ಪಂದದ ಫಲವಾಗಿ ಹಿಟ್ಲರನ ಬೇಡಿಕೆಗಳಿಗೆ ಮನ್ನಣೆ ಲಭಿಸಿತು. ಚೆಕೊಸ್ಲೊವಾಕಿಯಕ್ಕೆ ರಕ್ಷಣೆ ಇಲ್ಲದಂತಾಯಿತು.

ಚೇಂಬರ್ಲಿನ್ ತಾತ್ಕಾಲಿಕವಾಗಿ ಗೆದ್ದವನಂತೆ ಮೆರೆಳಿದನಾದರೂ ಕೂಡಲೇ ಆತ ಪ್ರಾರಂಭಿಸಿದ ಶಸ್ತ್ರಸನ್ನಾಹ ಕಾರ್ಯಕ್ರಮದಿಂದಾಗಿ ಆ ಒಪ್ಪಂದದಿಂದ ಪಡೆದಿದ್ದ ಅಸ್ಥಿರ ಶಾಂತಿಯ ಅತಂತ್ರತೆ ಎಲ್ಲರಿಗೂ ಅರ್ಥವಾಗುವಂತಿತ್ತು. 1939ರ ಮಾರ್ಚ್ 15ರಂದು ಹಿಟ್ಲರ್ ಚೆಕೊಸ್ಲೊವಾಕಿಯದ ಉಳಿದ ಭಾಗಗಳನ್ನೂ ಕಬಳಿಸಿದ. ಚೇಂಬರ್ಲಿನ್ ಕೂಡಲೇ ಜರ್ಮನ್ ಶಮನ ನೀತಿಯನ್ನು ತ್ಯಜಿಸಿದ. ಆಕ್ರಮಣದ ವಿರುದ್ಧ ಪೋಲೆಂಡಿಗೆ ಬ್ರಿಟಿಷ್ ರಕ್ಷಣೆಯ ಆಶ್ವಾಸನೆ ನೀಡಿದ. ಬ್ರಿಟನ್ನಿನಲ್ಲಿ ಕಡ್ಡಾಯ ಸೈನಿಕ ಭರ್ತಿ ಆರಂಭವಾಯಿತು. ಹಿಟ್ಲರನಿಗೆ ಎಚ್ಚರಿಕೆ ನೀಡಿ ಅವನ ಆಕ್ರಮಣವನ್ನು ತಡೆಯುವ ಪ್ರಯತ್ನಗಳೊಂದಿಗೆ ಯುದ್ಧಸನ್ನಾಹವೂ ಚೇಂಬರ್ಲಿನನ ಗಮನ ಸೆಳೆದುವು. ಯುದ್ಧ ಅನಿವಾರ್ಯವಾದಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ಸೋವಿಯತ್ ದೇಶಗಳು ಒಂದಾಗಿ ಹೋರಾಡುವ ಒಪ್ಪಂದದ ಪ್ರಯತ್ನಗಳು ಪ್ರಾರಂಭವಾದವು. ಈ ನಡುವೆ ಆಗಸ್ಟ್ 23ರಂದು ಸೋವಿಯತ್–ಜರ್ಮನ್ ಒಪ್ಪಂದದಿಂದ ಚೇಂಬರ್ಲಿನ್ನನ ಈ ನೀತಿಗೆ ಧಕ್ಕೆ ತಗುಲಿತು. ಸೆಪ್ಟೆಂಬರ್ 1ರಂದು ಪೋಲೆಂಡಿನ ಮೇಲೆ ಜರ್ಮನಿ ಆಕ್ರಮಣ ನಡೆಸಿತು. ಸೆಪ್ಟೆಂಬರ್ 3ರಂದು ಚೇಂಬರ್ಲಿನ್ ಜರ್ಮನಿಯ ಮೇಲೆ ಯುದ್ಧ ಸಾರಿದ.

ಯುದ್ಧದ ಆರಂಭದ ದಿನಗಳಲ್ಲಿ ಚರ್ಚಿಲರನ್ನು ಸಂಪುಟದಲ್ಲಿ ಸೇರಿಸಿಕೊಂಡು ಅದನ್ನು ಸುಧಾರಿಸಲು ಚೇಂಬರ್ಲಿನ್ ಯತ್ನ ನಡೆಸಿದ. ಲಿಬರಲ್ ಸದಸ್ಯರು ಅವನ ಸರ್ಕಾರದಲ್ಲಿ ಸೇರಲು ನಿರಾಕರಿಸಿದರು. 1940ರ ಏಪ್ರಿಲ್‌ನಲ್ಲಿ ಕೈಗೊಂಡ ಬ್ರಿಟಿಷ್ ಕಾರ್ಯಾಚರಣೆ ವಿಫಲವಾಗಿ ಚೇಂಬರ್ಲಿನ್ ನೀತಿಯ ಬಗ್ಗೆ ಸಂಸತ್ತಿನಲ್ಲಿ ತೀವ್ರ ಚರ್ಚೆಯಾಗಿ ಅನೇಕ ಕನ್ಸರ್‌ವೇಟಿವ್ ಸದಸ್ಯರೇ ಅವನಿಗೆ ಬೆಂಬಲ ನೀಡದೆ ಹೋದಾಗ ಚೇಂಬರ್ಲಿನ್ ಪ್ರಧಾನಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿದ (ಮೇ 10). ಮುಂದೆ ಚರ್ಚಿಲನ ಸಮ್ಮಿಶ್ರ ಸರ್ಕಾರದಲ್ಲಿ ಅವನು ಕೌನ್ಸಿಲಿನ ಲಾರ್ಡನ ಪ್ರೆಸಿಡೆಂಟ್ ಆಗಿ ಸ್ವಲ್ಪ ಕಾಲ ಮುಂದುವರಿದ. ಮುಂದೆ ಅನಾರೋಗ್ಯದ ಕಾರಣದಿಂದ ಅಧಿಕಾರಕ್ಕೂ ಕನ್ಸರ್‌ವೇಟಿವ್ ಪಕ್ಷದ ನಾಯಕತ್ವಕ್ಕೂ ರಾಜೀನಾಮೆ ಕೊಡಬೇಕಾಯಿತು. 1940ರ ನವೆಂಬರ್ 9ರಂದು ನೆವಿಲ್ ಚೇಂಬರ್ಲಿನ್ ಮೃತನಾದ.

ಚೇಂಬರ್ಲಿನ್ ತೋರಿಕೆಗೆ ಸ್ವಲ್ಪ ಬಿರುಸು; ಅವನ ಮುಖದಲ್ಲಿ ವಿಷಣ್ಣತೆಯಿರುತ್ತಿತ್ತು. ಆದರೆ ಆತನೊಬ್ಬ ಸಮರ್ಥ ಕಾರಭಾರಿ. ಅತ್ಯಂತ ಸ್ಪಷ್ಟ ವಿಚಾರವಂತ, ರೀತಿ ರಿವಾಜಿನಲ್ಲಿ ಸ್ವಲ್ಪ ಶ್ರೀಮಂತಿಕೆಯ ದರ್ಪವಿತ್ತು. ತನಗಿಂತ ಕಡಿಮೆ ಬುದ್ಧಿಯವರನ್ನು ಕಂಡರೆ ಅವನಿಗೆ ಅಸಹನೆ. ಆದರೆ ಆತನ ರಾಜಕೀಯ ನೀತಿಯನ್ನು ವಿರೋಧಿಸುತ್ತಿದ್ದವರಂತೆಯೇ ಸಮರ್ಥಿಸುತ್ತಿದ್ದವರೂ ಉಂಟು. 1940ರಲ್ಲಿ ಚರ್ಚಿಲ್ ತನ್ನ ಉತ್ತರಾಧಿಕಾರಿಯಾಗಬೇಕೆಂದು ಚೇಂಬರ್ಲಿನ್ ಬೆಂಬಲ ನೀಡಿದ. ಇದರಲ್ಲಿ ಅವನ ಔದಾರ್ಯ ವ್ಯಕ್ತವಾಗುತ್ತದೆ. (ಜಿ.ಆರ್.ವಿ.)

**ಚೇಂಬರ್ಲಿನ್, ಹೂಸ್ಟನ್ ಸ್ಟೂಅರ್ಟ್ :** 1855–1927. ಆಂಗ್ಲೋ–ಜರ್ಮನ್ ಲೇಖಕ. ಇಂಗ್ಲೆಂಡಿನ ಸೌತ್ ಸೀ ಎಂಬಲ್ಲಿ ಹುಟ್ಟಿದ. ತಂದೆ ಬ್ರಿಟಿಷ್ ನೌಕಾ ಸೇನಾಧಿಪತಿ; ತಾಯಿ ನೌಕಾಧಿಪತಿಯ ಮಗಳು. ಈತ ತನ್ನ ವ್ಯಾಸಂಗವನ್ನು ವರ್ಸೈ, ಜಿನೀವ, ಡ್ರೇಸ್ಡನ್‌ಗಳಲ್ಲಿ ಪೂರೈಸಿ ಸಂಗೀತ, ತತ್ತ್ವಶಾಸ್ತ್ರ ಹಾಗೂ ಸೌಂದರ್ಯಮೀಮಾಂಸೆಗಳಲ್ಲಿ ಪರಿಣತನಾದ. 1908ರ ಅನಂತರ ಬೈರೂತ್‌ನಲ್ಲಿ ನೆಲಸಿ ಜರ್ಮನಿಯ ಆಪೆರ ಕರ್ತೃ ರಿಚರ್ಡ್ ವ್ಯಾಗ್ನರ್‌ನ ಶಿಷ್ಯನಾಗಿ ಆತನ ಮಗಳನ್ನು ಮದುವೆಯಾದ. ಮುಂದೆ ಚೇಂಬರ್‌ಲಿನ್ ಜರ್ಮನರ ಪರವಾದಿಯಾಗಿಯೂ ಬ್ರಿಟಿಷರ ಉಗ್ರ ವಿರೋಧಿಯಾಗಿಯೂ ಬಾಳಿದ. ಈತನ ಮುಖ್ಯ ಕೃತಿ ಡೀ ಗ್ರುಂಟ್ ಲಾಗೆನ್ ಡೆಸ್ ನಾಯ್ನ್ ಟ್ಸೆಂಟೆನ್ ಯಾರ್ ಹುಂಡೆರ್ಟ್ಸ್ (1899)–ಇದರ ಇಂಗ್ಲಿಷ್ ಅನುವಾದ ಫೌಂಡೇಷನ್ಸ್ ಆಫ್ ದಿ ನೈನ್‌ಟೀನ್ ಸೆಂಚುರಿ (1910)–ಇದು ಜನಾಂಗ ಸಿದ್ಧಾಂತವನ್ನು ಬೋಧಿಸುವ ಮುಖ್ಯ ಗ್ರಂಥವೆನಿಸಿದೆ. ಇಂದಿನ ಆಧುನಿಕ ಜಗತ್ತಿನ ಮಹತ್ಸಾಧನೆಗಳಿಗೆಲ್ಲ ಜರ್ಮನರೇ ಕಾರಣರೆಂದು ಈತನ ವಾದ. ಈತ ಶ್ರೀಮಂತವರ್ಗದವರ ಪರವಾದರೂ ಉಗ್ರ ಆ್ಯಂಟಿ–ಸಿಮಿಟಿಸಂ ವಾದಿ. ಈತನ ಜನಾಂಗ ಸಿದ್ಧಾಂತ ಹಲವರ ಮೆಚ್ಚುಗೆ ಗಳಿಸಿದುದಲ್ಲದೆ ಅನೇಕರು ಈತನ ಅನುಯಾಯಿಗಳಾದರು. ಇದರಿಂದಾಗಿ ಈ ತತ್ತ್ವಕ್ಕೆ ಮಹತ್ತ್ವ ದೊರಕಿತು. ಈತನ ತತ್ತ್ವವನ್ನು ರಾಷ್ಟ್ರೀಯ ಸಮಾಜವಾದಿಗಳು ಮತ್ತು ಅಡಾಲ್ಫ್ ಹಿಟ್ಲರ್ ತಮ್ಮ ಉಪಯೋಗಕ್ಕೆ ಬಳಸಿಕೊಂಡಾಗ ಈ ತತ್ತ್ವ ಪರಾಕಾಷ್ಠತೆಯನ್ನು ಮುಟ್ಟಿತು. ಈತನ ತತ್ತ್ವಗಳು ಕೌಂಟ್ ಡ ಗೋಬಿನೋ ಎಂಬುವವನಿಂದ ಪ್ರಭಾವಿತವಾದವು.

ಈತ ಕೊನೆಕೊನೆಯಲ್ಲಿ ಸಂಪೂರ್ಣವಾಗಿ ಜರ್ಮನನಾದ. ಮೊದಲ ಮಹಾಯುದ್ಧದಲ್ಲಿ ಜರ್ಮನರ ಪರವಾಗಿದ್ದುದಲ್ಲದೆ 1916ರಲ್ಲಿ ಜರ್ಮನ್ ಪ್ರಜೆಯಾಗಿ ಪರಿವರ್ತನೆ ಹೊಂದಿದ. (ಎನ್.ಎಸ್.ಆರ್.ಎ.)

**ಚೇಂಬರ್ಸ್, ರಾಬರ್ಟ್ :** 1802–1871. ಸ್ಕಾಟ್ಲೆಂಡಿನ ಬರೆಹಗಾರ ಮತ್ತು ಪ್ರಕಾಶಕ. ವಿಲಿಯಂ ಚೇಂಬರ್ಸ್‌ನ ಸಹೋದರ. ಈತ ತನ್ನ ಜೀವಿತದ ಬಹುಭಾಗವನ್ನು ವಾಣಿಜ್ಯೋದ್ಯಮದಲ್ಲಿ ಕಳೆದನೆಂದು ಹೇಳಲಾಗಿದೆ. ಆಗಿನ ಪ್ರಮುಖ ಬರೆಹಗಾರರೆನಿಸಿದ ವಾಲ್ಟರ್ ಸ್ಕಾಟ್ ಮುಂತಾದವರ ಗೆಳೆಯನಾಗಿದ್ದ. ಈತನ ಮುಖ್ಯ ಕೃತಿಯಾದ ಟ್ರೆಡಿಷನ್ಸ್ ಆಫ್ ಎಡಿನ್‌ಬರೋವನ್ನು (1824) ಸ್ಕಾಟ್ ತುಂಬ ಪ್ರಶಂಸಿಸಿದ್ದಾನೆ. ಇದಲ್ಲದೆ ಚೇಂಬರ್ಸ್ ವೈಯಕ್ತಿಕ ಸಂಶೋಧನೆಯನ್ನು ಆಧರಿಸಿ ಸಾಹಿತ್ಯ, ಇತಿಹಾಸ ಮತ್ತು ಭೂಗರ್ಭ ಶಾಸ್ತ್ರಗಳ ಮೇಲೆ ಗ್ರಂಥಗಳನ್ನು ರಚಿಸಿದ್ದಾನೆ. ಅನಾಮಧೇಯವಾಗಿ ಮೊದಲು ಪ್ರಕಟಗೊಂಡ ಈತನ ವೆಸ್ಟಿಜಸ್ ಆಫ್ ದಿ ನ್ಯಾಚುರಲ್ ಹಿಸ್ಟ್ರಿ ಆಫ್ ಕ್ರಿಯೇಷನ್ (1844) ಎಂಬ ಗ್ರಂಥ ವಿವಾದಕ್ಕೆ ಒಳಗಾಗಿದ್ದರೂ ಡಾರ್ವಿನ್ನನ ವಿಕಾಸವಾದವನ್ನು ಸ್ವೀಕರಿಸಲು ಒಳ್ಳೆಯ ಅಡಿಪಾಯ ಹಾಕಿಕೊಟ್ಟ ಕೃತಿ ಎಂದು ಪರಿಗಣಿತವಾಗಿದೆ. 1832ರಲ್ಲಿ ಚೇಂಬರ್ಸ್ ಎಡಿನ್‌ಬರೊ ಜರ್ನಲ್‌ನ್ನು ತನ್ನ ಸಹೋದರ ವಿಲಿಯಂನೊಂದಿಗೆ ಆರಂಭಿಸಿದುದಲ್ಲದೆ ಚೇಂಬರ್ಸ್ ವಿಶ್ವಕೋಶದ ಸ್ಥಾಪನೆಗೂ ಕಾರಣನಾದ. (ಎನ್.ಎಸ್.ಆರ್.ಎ)

**ಚೇಂಬರ್ಸ್, ವಿಲಿಯಂ[1] :** 1723–1796. ಇಂಗ್ಲೆಂಡಿನ ಶಿಲ್ಪಶಾಸ್ತ್ರಜ್ಞ. ಸ್ವೀಡನ್ನಿನ ಗಾಟನ್‌ಬರ್ಗ್‌ನಲ್ಲಿ ವ್ಯಾಪಾರಿಯೊಬ್ಬನ ಮಗನಾಗಿ ಹುಟ್ಟಿದ ಈತ ಇಂಗ್ಲೆಂಡಿನಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ ಸ್ವೀಡಿಷ್ ಈಸ್ಟ್ ಇಂಡಿಯ ಕಂಪನಿ ಸೇರಿ ಅನೇಕ ಬಾರಿ ಸಮುದ್ರಯಾನಗಳನ್ನು ಮಾಡಿದ. 1749ರಲ್ಲಿ ರೋಮ್ ಮತ್ತು ಪ್ಯಾರಿಸ್‌ಗಳಲ್ಲಿ ಶಿಲ್ಪಶಾಸ್ತ್ರಾಭ್ಯಾಸ ಮಾಡಿ ಇಂಗ್ಲೆಂಡಿಗೆ ಮರಳಿ ವೇಲ್ಸ್‌ನ ರಾಜಕುಮಾರನಿಗೆ (3ನೆಯ ಜಾರ್ಜ್) ಅದನ್ನು ಬೋಧಿಸಿದ. ಚೀನದ ಕ್ಯಾಂಟನ್ ಎಂಬಲ್ಲಿಗೆ ಪ್ರಯಾಣ ಮಾಡಿ ಬಂದು ಡಿಸೈನ್ಸ್ ಆಫ್ ಚೈನೀಸ್ ಬಿಲ್ಡಿಂಗ್ಸ್ (1757) ಎಂಬ ಪುಸ್ತಕವನ್ನು ಬರೆದ. ಮುಂದೆ ಇಂಗ್ಲೆಂಡಿನ ದೊಡ್ಡ ಶಿಲ್ಪಶಾಸ್ತ್ರಜ್ಞನಾಗಿ, 1788ರಲ್ಲಿ ರಾಯಲ್ ಅಕ್ಯಾಡಮಿಯನ್ನು ಸ್ಥಾಪಿಸಲು ನೆರವಾದ. 1771ರಲ್ಲಿ 3ನೆಯ ಜಾರ್ಜ್ ದೊರೆ ಈತನಿಗೆ ಸರ್ ಪದವಿಯನ್ನು ಕೊಟ್ಟು ಗೌರವಿಸಿದ.

ಸಾಮರ್‌ಸೆಟ್ ಹೌಸ್, ಡಬ್ಲಿನ್ ಬಳಿ ಇರುವ ಕ್ಯಾಸಿನೊ ಮ್ಯಾರಿನೊ, ಕ್ಯೂ ಪ್ಯಾಲೇಸ್, ಸರೆ ನಗರದ ಹಲವು ಆಲಂಕಾರಿಕ ಕಟ್ಟಡಗಳು–ಇವು ಈತನ ಮುಖ್ಯ ಕಲಾಕೃತಿಗಳಲ್ಲಿ ಹೆಸರಿಸತಕ್ಕವು. ಕೊನೆ ಕೊನೆಯಲ್ಲಿ ಎಲ್ಲ ಪಂಥಗಳಿಂದಲೂ ತನಗೆ ಸರಿತೋರಿದುದನ್ನು ಆಯ್ದುಕೊಳ್ಳುವ ರೊಮ್ಯಾಂಟಿಕ್ ಗತಿಗೆ ವಾಲಿದನಾದರೂ ಈತ ಮುಖ್ಯವಾಗಿ ಯೂರೋಪಿನ, ಅದರಲ್ಲೂ ಫ್ರಾನ್ಸಿನ, ಶಿಲ್ಪಕಲೆಯನ್ನು ಬಹುವಾಗಿ ಉಪಯೋಗಿಸಿಕೊಂಡ ಸಂಪ್ರದಾಯಬದ್ಧ ಶಿಲ್ಪಶಾಸ್ತ್ರಜ್ಞನೆನಿಸಿಕೊಂಡಿದ್ದಾನೆ. ಎ ಟ್ರೀಟೈಸ್ ಆನ್ ಸಿವಿಲ್ ಆರ್ಕಿಟೆಕ್ಚರ್ (1759) ಎಂಬ ಪುಸ್ತಕ ಈತ ಶಿಲ್ಪಶಾಸ್ತ್ರದ ಮೇಲೆ ಬರೆದ ಉದ್ಗ್ರಂಥವಾಗಿದೆ. ಮಿನ್‌ಸ್ಟರ್ ಆಬೆಯಲ್ಲಿ ಈತನ ಸಮಾಧಿ ಇದೆ. (ಎನ್.ಎಸ್.ಆರ್.ಎ.)

**ಚೇಂಬರ್ಸ್, ವಿಲಿಯಂ[2] :** 1800–1883. ಸ್ಕಾಟ್ಲೆಂಡಿನ ಬರೆಹಗಾರ ಮತ್ತು ಪ್ರಕಾಶಕ. ಆರಂಭದಲ್ಲಿ ಎಡಿನ್‌ಬರೊ ಪುಸ್ತಕ ವ್ಯಾಪಾರಿಗಳೊಬ್ಬರಲ್ಲಿ ಉದ್ಯೋಗಾರ್ಥಿಯಾಗಿದ್ದ. ಐದು ವರ್ಷಗಳ ಅನಂತರ ತಾನೇ ಸ್ವಂತವಾಗಿ ಪುಸ್ತಕ ವ್ಯಾಪಾರವನ್ನು ಆರಂಭಿಸಿದ. ಅನಂತರ ತನ್ನ ವ್ಯಾಪಾರವನ್ನು ದ್ವಿಗುಣಗೊಳಿಸಲು ಪ್ರಕಾಶಕನಾದ. 1825–30 ರ ಅವಧಿಯಲ್ಲಿ ಈತನ ಬುಕ್ ಆಫ್ ಸ್ಕಾಟ್ಲೆಂಡ್ ಕೃತಿ ರಚನೆಯಾಯಿತು. ಇದರ ಜೊತೆಯಲ್ಲಿ ತನ್ನ ಕಿರಿಯ ಸಹೋದರ ರಾಬರ್ಟ್ ಚೇಂಬರ್ಸ್‌ನನ್ನು ಸೇರಿಸಿಕೊಂಡು

ಸ್ಕಾಟ್ಲೆಂಡಿನ ಗೆಜೆಟಿಯರನ್ನು ಸಂಪಾದಿಸಿದ. 1832ರಲ್ಲಿ ಚೇಂಬರ್ಸ್ ಜರ್ನಲನ್ನು ಸ್ಥಾಪಿಸಿ ಸ್ಕಾಟ್ಲೆಂಡಿನಲ್ಲೇ ಸುಲಭದರದಲ್ಲಿ ಸಾಹಿತ್ಯವನ್ನು ಒದಗಿಸುವಲ್ಲಿ ಮೊದಲಿಗನಾದ. ಅಷ್ಟಕ್ಕೇ ತೃಪ್ತನಾಗದೆ ಜಗತ್ತಿನ ಜ್ಞಾನದಾಹವನ್ನು ಅಡಗಿಸಲು ಯೋಜನೆಯೊಂದನ್ನು ಹಾಕತೊಡಗಿದ. ಅದೇ ವರ್ಷ ತನ್ನ ಸಹೋದರ ರಾಬರ್ಟನನ್ನು ಜೊತೆಗೂಡಿಸಿಕೊಂಡು ವಿಲಿಯಂ ಮತ್ತು ರಾಬರ್ಟ್ ಚೇಂಬರ್ಸ್ ಸಂಸ್ಥೆಯನ್ನು ಸ್ಥಾಪಿಸಿದ. ಅಲ್ಲಿ ಬರೆವಣಿಗೆ, ಸಂಪಾದನ ಕಾರ್ಯ, ಮುದ್ರಣ ಹಾಗೂ ಪ್ರಕಾಶನ ಕಾರ್ಯಗಳಿಗೆ ಆದ್ಯತೆ ನೀಡಿದ. ತತ್ಫಲವಾಗಿ ಇನ್‍ಫರ್ಮೇಷನ್ ಫಾರ್ ದಿ ಪೀಪಲ್ (2 ಸಂಪುಟ), ಚೇಂಬರ್ಸ್ ಮಿಸೆಲೆನಿ (20 ಸಂಪುಟ) ಮತ್ತು ಚೇಂಬರ್ಸ್ ಎನ್‍ಸೈಕ್ಲೋಪೀಡಿಯದ ಹತ್ತು ಸಂಪುಟಗಳನ್ನು ಹೊರತಂದ. ಈ ವಿಶ್ವಕೋಶ ಈವರೆಗೂ ಅನೇಕ ಪರಿಷ್ಕೃತ ಆವೃತ್ತಿಗಳನ್ನು ಪಡೆದಿದೆ. ಅಲ್ಲದೆ ಈತ ಎಡಿನ್‍ಬರೋದ ಸಾರ್ವಜನಿಕ ಜೀವನದಲ್ಲಿ ಮುಖ್ಯ ಪಾತ್ರ ವಹಿಸಿದ. ಎರಡು ಬಾರಿ ಲಾರ್ಡ್ ಪ್ರೊವೊಸ್ಟನಾಗಿ ಚುನಾಯಿತನಾದ. ತನ್ನ ಸ್ವಂತ ಖರ್ಚಿನಲ್ಲಿ ಸೇಂಟ್ ಗಿಲ್ಸ್ ಕೆಥೀಡ್ರಲ್‍ನ ಜೀರ್ಣೋದ್ಧಾರ ಮಾಡಿದ. ತನ್ನ ಹುಟ್ಟೂರಾದ ಪೀಬರ್ಸ್ ಕೌಂಟಿಯಲ್ಲಿ ಸಮಾಜಾಭಿವೃದ್ಧಿ ಸಂಸ್ಥೆಯೊಂದನ್ನು ಸ್ಥಾಪಿಸಿದ. *

**ಚೇಕಡಿಹಕ್ಕಿ :** ಪ್ಯಾಸೆರಿಫಾರ್ಮೀಸ್ ಗಣದ ಪ್ಯಾರಿಡೀ ಕುಟುಂಬಕ್ಕೆ ಸೇರಿದ ಒಂದು ಪುಟ್ಟಹಕ್ಕಿ (ಟಿಟ್, ಟಿಟ್‍ಮೌಸ್). ಇದರಲ್ಲಿ ಅನೇಕ ಪ್ರಭೇದಗಳಿವೆ. ಬಹಳ ಮುಖ್ಯವಾದವು ಪ್ಯಾರಸ್ ಜಾತಿಗೆ ಸೇರಿದ 45 ಪ್ರಭೇದಗಳು. ದಕ್ಷಿಣ ಅಮೆರಿಕ ಮತ್ತು ಆಸ್ಟ್ರೇಲಿಯಗಳನ್ನುಳಿದು ಪ್ರಪಂಚಾದ್ಯಂತ ಇವು ಕಾಣಸಿಗುತ್ತವೆ. ಭಾರತದಲ್ಲಿ ಪ್ಯಾರಸ್ ಮೇಜರ್ ಎಂಬ ಪ್ರಭೇದದ ಜೊತೆಗೆ ಹಳದಿ ಕೆನ್ನೆಯ ಚೇಕಡಿ ಹಕ್ಕಿ (ಪಾರಸ್ ಜ಼ಾಂಥೊಜೆನಿಸ್) ಹಾಗೂ ಬಿಳಿ ನೆತ್ತಿಯ ಚೇಕಡಿ ಹಕ್ಕಿ (ಪಾರಸ್ ನುಚಲಿಸ್) ಕಂಡುಬರುತ್ತವೆ. ಇದರಲ್ಲಿ ಬಿಳಿ ನೆತ್ತಿಯ ಚೇಕಡಿ ಹಕ್ಕಿ ನಿರ್ನಾಮವಾಗುವ ಅಪಾಯಕ್ಕೆ ಪಕ್ಕಾಗುವ ಹಂತದಲ್ಲಿದೆ. ಬಯಲು ಪ್ರದೇಶಗಳಿಂದ ಹಿಡಿದು 1830 ಮೀ. ಎತ್ತರದವರೆಗಿನ ಬೆಟ್ಟ ಸೀಮೆಗಳಲ್ಲಿ ಇದರ ವಾಸ. ಒಂಟೊಂಟಿಯಾಗಿ ಇಲ್ಲವೆ ಗುಂಪುಗಳಲ್ಲಿ ಬಲು ಚಟುವಟಿಕೆಯಿಂದ ಹಾರಾಡುತ್ತಾ ತಿರುಗುವುದುಂಟು. ಸಣ್ಣಪುಟ್ಟ ಕೀಟಗಳು, ಡಿಂಭಗಳು, ಮೊಗ್ಗುಗಳು, ಬೀಜಗಳು, ಕಿರುಗಾತ್ರದ ಹಣ್ಣುಗಳು ಇದರ ಮೆಚ್ಚಿನ ಆಹಾರ. ಆಹಾರವನ್ನು ಅರಸುವಾಗ ಮರಗಿಡಗಳ ರೆಂಬೆಗಳಿಂದ ತಲೆಕೆಳಕಾಗಿ ತೂಗು ಬೀಳುವುದು, ಒಂದೇ ಕಾಲಿನಲ್ಲಿ ರೆಂಬೆಯಿಂದ ರೆಂಬೆಗೆ ಜಿಗಿಯುವುದು ಮುಂತಾಗಿ ದೊಂಬರಾಟವಾಡುತ್ತದೆ. ಜೊತೆಗೆ ಜೋರಾಗಿ ಸಿಳ್ಳು ಹಾಕಿದಂತೆ ವೀ–ಚಿಚಿ, ವೀ–ಚಿಚಿ ಎಂದು ಸಂತಸದಿಂದ ಹಾಡುವುದು. ಚೇಕಡಿ ಹಕ್ಕಿ ಬಹಳ ಸಣ್ಣ ಗಾತ್ರದ ಹಕ್ಕಿ; ಗುಬ್ಬಚ್ಚಿಯಷ್ಟಿದೆ. ಇದರ ತಲೆ ಕಪ್ಪು. ಕೆನ್ನೆಗಳ ಬಳಿ ಬಿಳಿ ಮುಚ್ಚೆಗಳಿವೆ. ಬೆನ್ನು ಬೂದುಬಣ್ಣದ್ದು. ಹೊಟ್ಟೆ ಬಿಳಿ. ಕತ್ತಿನಿಂದ ಬಾಲದ ಬುಡದವರೆಗೆ ಉದರಭಾಗದಲ್ಲಿ ಕರಿಯ ಪಟ್ಟಿಯೊಂದಿದೆ. ಗಂಡು ಹೆಣ್ಣುಗಳೆರಡೂ ನೋಡಲು ಒಂದೇ ತರಹ ಇವೆ. ಫೆಬ್ರವರಿ–ನವೆಂಬರ್ ತಿಂಗಳುಗಳು ಚೇಕಡಿಹಕ್ಕಿ ಮೊಟ್ಟೆಯಿಡುವ ಕಾಲ. ಮರದ ಪೊಟರೆ, ಗೋಡೆಗಳ ಬಿರುಕು ಮುಂತಾದೆಡೆ ಹಾವಸೆ, ಗರಿ ಮೊದಲಾದವನ್ನು ಬಳಸಿ ಗೂಡುಕಟ್ಟುತ್ತದೆ. ಮೊಟ್ಟೆಗಳ ಸಂಖ್ಯೆ ಒಂದು ಸೂಲಿಗೆ 4–6. ಗಂಡು, ಹೆಣ್ಣು ಹಕ್ಕಿಗಳೆರಡೂ ಕಾವು ಕೊಡುವ, ಮರಿಗಳನ್ನು ಪೋಷಿಸುವ ಕಾರ್ಯದಲ್ಲಿ ಪಾಲುಗೊಳ್ಳುತ್ತವೆ. (ಎನ್.ಎಂ.)



**ಚೇನ್, ಅರ್ನ್ಸ್ಟ್ ಬೋರಿಸ್ :** 1906–1979. ಜರ್ಮನ್–ಇಂಗ್ಲಿಷ್ ರಸಾಯನ ವಿಜ್ಞಾನಿ. ಮನುಷ್ಯರಿಗೆ ತಗಲುವ ಬ್ಯಾಕ್ಟೀರಿಯ ಸೋಂಕುಗಳ ನಿವಾರಣೆಗೆ ಪೆನಿಸಿಲಿನ್ನನ್ನು ಉಪಯೋಗಿಸುವ ಸಾಧ್ಯತೆಯನ್ನು ತೋರಿಸಿಕೊಟ್ಟುದಕ್ಕಾಗಿ ಮತ್ತು ಆ ಮೂಲಕ ಪ್ರತಿಜೀವಕ (ಆಂಟಿಬಯೋಟಿಕ್) ಯುಗಕ್ಕೆ ನಾಂದಿ ಹಾಕಿದುದಕ್ಕಾಗಿ ಅಲೆಕ್ಸಾಂಡರ್ ಫ್ಲೆಮಿಂಗ್ ಹಾಗೂ ಹೊವಾರ್ಡ್ ಫ್ಲೋರಿ (ನೋಡಿ– ಫ್ಲೆಮಿಂಗ್,–ಅಲೆಕ್ಸಾಂಡರ್; ಫ್ಲೋರಿ ಹೊವಾರ್ಡ್) ಅವರೊಡನೆ ಈತನಿಗೂ ನೊಬೆಲ್ ಪುರಸ್ಕಾರ ದೊರೆಯಿತು (1945). ಚೇನನ ಪೂರ್ವಜರು ಜರ್ಮನಿಯಲ್ಲಿ ಬಂದು ನೆಲೆಸಿದ್ದ ರಷ್ಯನ್ ಯೆಹೂದ್ಯರು. ಇವನು ಜನಿಸಿದ್ದು 1906ರ ಜೂನ್ 19ರಂದು, ಬರ್ಲಿನ್ ನಗರದಲ್ಲಿ. ತಂದೆ ವೃತ್ತಿಯಲ್ಲಿ ರಸಾಯನಿ. ಆತನ ಕಾರ್ಖಾನೆ ಮತ್ತು ಪ್ರಯೋಗಾಲಯಕ್ಕೆ ಭೇಟಿ ಕೊಡುತ್ತಿದ್ದ ಚೇನನಿಗೆ ಚಿಕ್ಕಂದಿನಲ್ಲಿಯೇ ರಸಾಯನ ವಿಜ್ಞಾನದಲ್ಲಿ ಆಸಕ್ತಿ ಹುಟ್ಟಿತು. ಬರ್ಲಿನ್ನಿನ ಫ್ರೆಡರಿಕ್ ವಿಲ್ಹೆಲ್ಮ್ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನ ಮತ್ತು ಶರೀರವಿಜ್ಞಾನಗಳಲ್ಲಿ ಶಿಕ್ಷಣ ಪಡೆದು ಪದವೀಧರನಾಗಿ (1930) ಮುಂದೆ ಬರ್ಲಿನ್ನಿನ ಚಾರಿಟಿ ಆಸ್ಪತ್ರೆಯ ಇನ್‍ಸ್ಟಿಟ್ಯೂಟ್ ಆಫ್ ಪೆಥಾಲಜಿಯ

ರಸಾಯನವಿಜ್ಞಾನ ಇಲಾಖೆಯಲ್ಲಿ ಸಂಶೋಧನೆ ನಡೆಸಿದ. 1933ರಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದ ಕೂಡಲೇ ಜರ್ಮನಿಯನ್ನು ಬಿಟ್ಟುಹೋಗುವುದು ಅನಿವಾರ್ಯವೆಂಬುದನ್ನು ಅರಿತುಕೊಂಡು ಇಂಗ್ಲೆಂಡಿಗೆ ನಿಷ್ಕ್ರಮಿಸಿದ. ಕೇಂಬ್ರಿಜಿನಲ್ಲಿ ಫ್ರೆಡರಿಕ್ ಗೌಲ್ಯಾಂಡ್ ಹಾಪ್‍ಕಿನ್ಸನ **(ನೋಡಿ–ಹಾಪ್‍ಕಿನ್ಸ್, ಫ್ರೆಡರಿಕ್ ಗೇಲ್ಯಾಂಡ್)** ನೇತೃತ್ವದಲ್ಲಿ ಸಂಶೋಧನೆ ನಡೆಸಿದ. 1935ರಲ್ಲಿ ಹೊವಾರ್ಡ್ ಫ್ಲೋರಿ ಎಂಬಾತನ ಆಹ್ವಾನದ ಮೇರೆಗೆ ಆಕ್ಸ್‍ಫರ್ಡ್ ವಿಶ್ವವಿದ್ಯಾಲಯಕ್ಕೆ ತೆರಳಿ ಅಲ್ಲಿ ರಾಸಾಯನಿಕ ರೋಗಶಾಸ್ತ್ರದ ಅಧ್ಯಾಪಕನಾಗಿ ಹದಿಮೂರು ವರ್ಷ ಕಾಲ ದುಡಿದ. ಈ ಅವಧಿಯಲ್ಲಿಯೇ ಅವನು ಪೆನಿಸಿಲಿನನ್ನು ಕುರಿತ ಸಂಶೋಧನೆಯನ್ನು ನಡೆಸಿದ್ದು. ಎರಡನೆಯ ಮಹಾಯುದ್ಧ ಮುಗಿದ ಬಳಿಕ 1948ರಲ್ಲಿ ಅವನು ರೋಮಿನ ಇನ್‍ಸ್ಟಿಟ್ಯೂಟೊ ಸುಪೀರಿಯೊರ್ ಡಿ ಸ್ಯಾನಿಟ ಸಂಸ್ಥೆಯಲ್ಲಿರುವ ರಾಸಾಯನಿಕ ಸೂಕ್ಷ್ಮಜೀವವಿಜ್ಞಾನದ ಅಂತಾರಾಷ್ಟ್ರೀಯ ಸಂಶೋಧನಾ ಕೇಂದ್ರದ ವೈಜ್ಞಾನಿಕ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡ. 1961ರಲ್ಲಿ ಇಂಗ್ಲೆಂಡಿಗೆ ಹಿಂತಿರುಗಿ ಲಂಡನ್ ವಿಶ್ವವಿದ್ಯಾಲಯದ ಇಂಪೀರಿಯಲ್ ಕಾಲೇಜಿನಲ್ಲಿ ಜೀವರಸಾಯನವಿಜ್ಞಾನದ ಪ್ರಾಧ್ಯಾಪಕನಾದ. ಅಲ್ಲಿ ಅವನಿಗಾಗಿ ಒಂದು ಹೊಸ ಸಂಶೋಧನಾಲಯವನ್ನೇ ನಿರ್ಮಿಸಿಕೊಟ್ಟರು.

ಅಲೆಕ್ಸಾಂಡರ್ ಫ್ಲೆಮಿಂಗ್ ಪೆನಿಸಿಲಿನ್ನನ್ನು ಅವಿಷ್ಕರಿಸಿದ್ದು ಒಂದು ಆಕಸ್ಮಿಕದ ಫಲವಾಗಿ. ವಿವಿಧ ರೋಗಕಾರಕ ಸೂಕ್ಷ್ಮಜೀವಿಗಳನ್ನು ಕೃಷಿ ಮಾಡುವುದರಲ್ಲಿ ತೊಡಗಿದ್ದ ಫ್ಲೆಮಿಂಗ್ ಒಂದು ಬಾರಿ (1928) ಸ್ಟಾಫಿಲೊಕಾಕಸ್ ಬ್ಯಾಕ್ಟೀರಿಯಗಳನ್ನು ಬೆಳೆಸಿದ್ದ ಒಂದು ತಟ್ಟೆಯನ್ನು ಪ್ರಯೋಗಶಾಲೆಯ ಕಿಟಕಿಯೊಂದರಲ್ಲಿಟ್ಟು ಒಂದೆರಡು ದಿನ ಅದನ್ನು ಮರೆತುಬಿಟ್ಟ. ಆಮೇಲೆ ಒಂದು ದಿನ ಅದರ ಕಡೆ ಗಮನಹರಿಸಿದಾಗ ತಟ್ಟೆಯಲ್ಲಿದ್ದ ಕೃಷಿಕೆಗೆ ಬೂಷ್ಟು ಹಿಡಿದಿದ್ದುದು ಕಂಡುಬಂದಿತು. ತಟ್ಟೆಯ ತುಂಬ ಹರಡಿಕೊಂಡಿದ್ದ ಬ್ಯಾಕ್ಟೀರಿಯ ಕೃಷಿಕೆಯ ಮೇಲೆ ಎಲ್ಲೆಲ್ಲಿ ಬೂಷ್ಟು ತಗಲಿ, ಬೂಷ್ಟು ಬೆಳೆಯಲು ಪ್ರಾರಂಭಿಸಿತ್ತೋ ಅದರ ಸುತ್ತಲೂ ಸ್ವಲ್ಪ ಪ್ರದೇಶದಲ್ಲಿ ಬ್ಯಾಕ್ಟೀರಿಯ ನಾಶವಾಗಿಹೋಗಿತ್ತು. ಕೃಷಿಕೆ ಕೆಟ್ಟುಹೋಯಿತೆಂದುಕೊಂಡು ತಟ್ಟೆಯನ್ನು ತೊಳೆದುಬಿಡುವುದರಲ್ಲಿದ್ದ ಫ್ಲೆಮಿಂಗನಿಗೆ ಥಟ್ಟನೆ ಒಂದು ವಿಷಯ ಹೊಳೆಯಿತು. ಬೂಷ್ಟಿನ ಸುತ್ತಲೂ ಸ್ಟಾಫಿಲೋಕಾಕಸ್ ನಾಶವಾಗಿದ್ದುದನ್ನು ನೋಡಿದರೆ ಆ ಬೂಷ್ಟು ಉತ್ಪತ್ತಿಮಾಡುತ್ತಿದ್ದ ಯಾವುದೋ ಒಂದು ಪದಾರ್ಥ ಸ್ಟಾಫಿಲೊಕಾಕಸ್ ಬ್ಯಾಕ್ಟೀರಿಯಕ್ಕೆ ಮಾರಕವಾಗಿರಬೇಕು ಎನ್ನಿಸಿತು. ಆ ಬೂಷ್ಟನ್ನು ಅದರಿಂದ ಪ್ರತ್ಯೇಕಿಸಿ ಶುದ್ಧವಾಗಿ ಕೃಷಿ ಮಾಡಿ ಅದನ್ನು ಪೆನಿಸಿಲಿಯಮ್ ನೋಟ್ಯಾಟಮ್ ಎಂದು ಗುರುತಿಸಿದ. ಅನಂತರ ಇತರ ಬ್ಯಾಕ್ಟೀರಿಯಗಳು ಆ ಬೂಷ್ಟಿಗೆ ಯಾವ ಪ್ರತಿಕ್ರಿಯೆಯನ್ನು ತೋರಿಸುವುವೆಂದು ಪರೀಕ್ಷಿಸಿ ನೋಡಲಾಗಿ, ಕೆಲವು ಬ್ಯಾಕ್ಟೀರಿಯಗಳು ಅದರ ಸನಿಹದಲ್ಲಿ ವೃದ್ಧಿಯಾಗುತ್ತಿದ್ದುದೂ ಇನ್ನು ಕೆಲವು ಬಗೆಯ ಬ್ಯಾಕ್ಟೀರಿಯಗಳು ಆ ಬೂಷ್ಟಿನ ಸುತ್ತ ಹಲವಾರು ಸೆಂಟಿಮೀಟರಿನಷ್ಟು ದೂರದಲ್ಲಿ ನಾಶವಾಗಿಬಿಡುತ್ತಿದ್ದುದೂ ಕಂಡುಬಂದಿತು. ಪೆನಿಸಿಲಿಯನ್ ನೊಟ್ಯಾಟಮನ್ನು ದ್ರವಮಾಧ್ಯಮದಲ್ಲಿ ಬೆಳೆಸಿ ಅನಂತರ ಆ ದ್ರವವನ್ನು ಪರೀಕ್ಷಿಸಲಾಗಿ ಅದಕ್ಕೂ ಬ್ಯಾಕ್ಟೀರಿಯ ನಿರೋಧಕ ಗುಣವಿದ್ದುದು ಕಂಡುಬಂದಿತು. ಬೂಷ್ಟು ಉತ್ಪತ್ತಿಮಾಡುವುದೆಂದು ನಂಬಲಾದ ಆ ಪದಾರ್ಥಕ್ಕೆ ಪೆನಿಸಿಲಿನ್ ಎಂದು ಅವನು ನಾಮಕರಿಸಿದ ಮತ್ತು ಪ್ರಾಣಿಗಳಿಗೆ ಅದು ವಿಷಕರವಲ್ಲವೆಂದು ಖಚಿತಮಾಡಿಕೊಂಡ. ಮನುಷ್ಯರಿಗೆ ತಗಲುವ ಸೋಂಕುರೋಗಗಳ ಚಿಕಿತ್ಸೆಗೆ ಪೆನಿಸಿಲಿನ್ನನ್ನು ಬಳಸಬಹುದೆಂಬ ಆಶೆಗೆ ಅದು ದಾರಿ ಮಾಡಿಕೊಟ್ಟಿತಾದರೂ ಫ್ಲೆಮಿಂಗ್ ಆ ಕೆಲಸವನ್ನು ಮುಂದುವರಿಸಲಿಲ್ಲ. ಏಕೆಂದರೆ ಅವನಿಗೆ ರಸಾಯನ ವಿಜ್ಞಾನದಲ್ಲಿ ಹೆಚ್ಚಿನ ಪರಿಶ್ರಮವಿರಲಿಲ್ಲವಾದುದರಿಂದ ಪೆನಿಸಿಲಿನ್ನನ್ನು ದ್ರವಮಾಧ್ಯಮದಲ್ಲಿ ಸಾರೀಕರಿಸುವುದಾಗಲೀ ಅದನ್ನು ಶುದ್ಧರೂಪದಲ್ಲಿ ಪ್ರತ್ಯೇಕಿಸುವುದಾಗಲೀ ಅವನಿಗೆ ಸಾಧ್ಯವಾಗಲಿಲ್ಲ.

ಈ ಕೆಲಸವನ್ನು ಕೈಗೊಂಡವರು ಹೊವಾರ್ಡ್ ಫ್ಲೋರಿ ಮತ್ತು ಚೇನ್‍ರವರು. ಸೂಕ್ಷ್ಮಜೀವಿಗಳು ಉತ್ಪತ್ತಿಮಾಡುವ ಬ್ಯಾಕ್ಟೀರಿಯ ನಿರೋಧಕ ಪದಾರ್ಥಗಳ ಕ್ರಮಬದ್ಧ ಅನ್ವೇಷಣೆ ನಡೆಸಬೇಕೆಂದು 1938ರಲ್ಲಿ ನಿರ್ಧರಿಸಿದ ಫ್ಲೋರಿ ಮತ್ತು ಚೇನ್ ಹತ್ತು ವರ್ಷ ಮುಂಚೆ ಫ್ಲೇಮಿಂಗ್ ಆವಿಷ್ಕರಿಸಿದ ಪೆನಿಸಿಲಿನ್ ಕಡೆ ತಮ್ಮ ಗಮನ ಹರಿಸಿದರು. ಮೊತ್ತಮೊದಲನೆಯದಾಗಿ ಬ್ಯಾಕ್ಟೀರಿಯ ಕೃಷಿಕೆಗಳ ಮೇಲೆ ಪೆನಿಸಿಲಿನ್‍ಯುತ ದ್ರಾವಣಗಳ ವರ್ತನೆಯನ್ನು ಆಧಾರವಾಗಿಟ್ಟುಕೊಂಡು ಆ ದ್ರಾವಣಗಳ ಸಾರತೆಯನ್ನು ನಿರ್ಣಯಿಸಲು ಒಂದು ವಿಧಾನವನ್ನು ರೂಪಿಸಿಕೊಂಡರು. ಅನಂತರ ಪೆನಿಸಿಲಿನ್ನನ್ನು ಶುದ್ಧೀಕರಿಸುವ ಕಾರ್ಯಕ್ಕೆ ಕೈಹಾಕಿದರು. ಮೂರು ವರ್ಷಗಳ ಕಾಲ ನಡೆಸಿದ ಕ್ರಮಬದ್ಧ ಸಂಶೋಧನೆಗಳ ಫಲವಾಗಿ ಪೆನಿಸಿಲಿನ್ ಮನುಷ್ಯದೇಹಕ್ಕೆ ಗಣನೀಯವಾದ ಯಾವ ಕೆಡುಕನ್ನೂ ಮಾಡದೆ, ದೇಹದಲ್ಲಿನ ರೋಗಕಾರಕ ಬ್ಯಾಕ್ಟೀರಿಯಗಳನ್ನು ನಾಶಮಾಡಿ ರೋಗವನ್ನು ನಿರ್ಮೂಲ ಮಾಡಬಲ್ಲದೆಂಬುದು ಸ್ಥಿರಪಟ್ಟಿತು. ಈ ಸಾಧನೆಗಾಗಿ 1945 ರಲ್ಲಿ ಫ್ಲೆಮಿಂಗ್, ಫ್ಲೋರಿ ಮತ್ತು ಚೇನ್‍ರವರಿಗೆ ವೈದ್ಯವಿಜ್ಞಾನ ಮತ್ತು ಶರೀರವಿಜ್ಞಾನದ ನೊಬೆಲ್ ಪಾರಿತೋಷಕ ಲಭಿಸಿತು.

ಇದು ಮಾತ್ರವಲ್ಲದೆ ಇನ್ನೂ ಅನೇಕ ಮೌಲಿಕ ಸಂಶೋಧನೆಗಳನ್ನು ಚೇನ್ ನಡೆಸಿದ್ದಾನೆ. ಇ.ಪಿ. ಅಬ್ರಹಾಮ್ ಎಂಬವನೊಂದಿಗೆ ಕೆಲಸಮಾಡಿ ಸ್ಫಟಿಕೀಯ ಪೆನಿಸಿಲಿನ್ನಿನ ರಾಸಾಯನಿಕ ರಚನೆಯನ್ನು ನಿರ್ಣಯಿಸಿ ರಚನೆಯಲ್ಲಿ ಸೂಕ್ಷ್ಮ ವ್ಯತ್ಯಾಸವಿರುವ ನಾಲ್ಕು ಬೇರೆ ಬೇರೆ ಪೆನಿಸಿಲಿನ್ನುಗಳಿವೆ ಎಂಬುದನ್ನು ತೋರಿಸಿಕೊಟ್ಟ. ಪೆನಿಸಿಲಿನ್ನನ್ನು ನಾಶಮಾಡಬಲ್ಲ ಪೆನಿಸಿಲಿನೇಸ್ ಎಂಬ ಎಂಜೈಮನ್ನು ಶೋಧಿಸಿದ. ಕೆಲವು ಬ್ಯಾಕ್ಟೀರಿಯಗಳು ಪೆನಿಸಿಲಿನ್ನಿಗೆ ಮಣಿಯದಿರುವುದಕ್ಕೆ ಅವು ಉತ್ಪತ್ತಿ ಮಾಡುವ ಈ ರಕ್ಷಣಾಸಾಧನವೇ ಕಾರಣ ಎಂದು ತೋರಿಸಿದ. ಹಾವಿನ ವಿಷಗಳ ಕ್ರಿಯಾವಿನ್ಯಾಸವನ್ನು ಕುರಿತು ಉಪಯುಕ್ತ ಮಾಹಿತಿಯನ್ನು ಪಡೆದಿದ್ದಾನೆ. ಕೆಲವು ಬಗೆಯ ಬೂಷ್ಟುಗಳ ಕಿಣ್ವನಗಳನ್ನೂ (ಫರ್ಮೆಂಟೇಷನ್ಸ್) ಪ್ರತಿ ಜೀವಕಗಳನ್ನೂ ಕುರಿತು ಉಪಯುಕ್ತ ಸಂಶೋಧನೆ ನಡೆಸಿದ್ದಾನೆ.

ತನ್ನ ವೈಜ್ಞಾನಿಕ ಸಾಧನೆಗಳಿಂದಾಗಿ ಚೇನ್ ಅನೇಕ ಗೌರವಗಳನ್ನೂ ಪ್ರಶಸ್ತಿಗಳನ್ನೂ ಪಡೆದಿದ್ದಾನೆ. ಕಮ್ಯಾಂಡರ್ ಆಫ್ ದಿ ಲೀಜನ್ ಆಫ್ ಆನರ್ ಆಗಿ ಚುನಾಯಿತನಾದದ್ದು, 1949ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತವಾದದ್ದು, 1954ರಲ್ಲಿ ಪಾಲ್ ಎರ್ಲಿಕ್ ಶತಮಾನೋತ್ಸವ ಬಹುಮಾನವನ್ನು ಪಡೆದಿದ್ದು ಇವು ಮುಖ್ಯವಾದವು.

ಈತ ಆಗಸ್ಟ್ 12, 1979ರಂದು ಮೇಯೋ ಜನರಲ್ ಹಾಸ್ಪಿಟಲ್‍ನಲ್ಲಿ ಮೃತಪಟ್ಟ. ಲಂಡನ್ನಿನ ಇಂಪೀರಿಯಲ್ ಕಾಲೇಜಿನ ಜೀವರಸಾಯನವಿಜ್ಞಾನದ ಕಟ್ಟಡಕ್ಕೆ ಮತ್ತು ಕ್ಯಾಸಲ್‍ಬಾರ್‌ನ ಒಂದು ರಸ್ತೆಗೆ ಈತನ ಹೆಸರನ್ನು ಇಡಲಾಗಿದೆ. (ಜಿ.ಆರ್.ಎಲ್.)

**ಚೇರ** : ದಕ್ಷಿಣ ಭಾರತದ ಅತ್ಯಂತ ನೈಋತ್ಯ ಭಾಗದಲ್ಲಿದ್ದ ರಾಜ್ಯವನ್ನಾಳುತ್ತಿದ್ದ ರಾಜವಂಶ. ಅವರ ನಾಡಿನಲ್ಲಿದ್ದ ತೊಂಡಿ, ಮುಶಿರಿಯ ಮುಂತಾದ ಬಂದರುಗಳ ಮೂಲಕ ಪ್ರಾಚೀನಕಾಲದಲ್ಲಿ ಹಿನ್ನಾಡಿನ ಅಮೂಲ್ಯ ಪದಾರ್ಥಗಳಾದ ಮೆಣಸು, ದಂತ, ಗಂಧದ ಮರ ಮುಂತಾದ ಅಮೂಲ್ಯ ಸರಕುಗಳು ವಿದೇಶಗಳಿಗೆ ರಫ್ತಾಗುತ್ತಿದ್ದುವು. ಇತರ ಕಡೆಗಳಲ್ಲಿ ದುರ್ಲಭವಾಗಿದ್ದ ಸಾಂಬಾರ ಪದಾರ್ಥಗಳು ಮತ್ತು ಅರಣ್ಯೋತ್ಪನ್ನಗಳು ಈ ನಾಡಿನಲ್ಲಿ ಸಮೃದ್ಧವಾಗಿದ್ದುವು. ಪಶ್ಚಿಮದ ಬಂದರಾಗಿದ್ದ ತೊಂಡಿಯಿಂದಲೂ ಒಳನಾಡಿನ ಪಟ್ಟಣವಾಗಿದ್ದ ಕರುವೂರ ಅಥವಾ ವಂಜಿಯಿಂದಲೂ ರಾಜ್ಯವಾಳುತ್ತಿದ್ದರು.

ಚೇರ ಶಬ್ದದ ಅರ್ಥವೇನೆಂಬುದು ಸ್ಪಷ್ಟವಾಗಿಲ್ಲ. ಪೆರಿಪ್ಲಸ್‍ನಲ್ಲಿ ಹೇಳಲಾಗಿರುವ ಸೆರೆಬೋತ್ರ ಎಂಬುದೂ ಅಶೋಕನ ಕೇರಲಪುತ್ರ ಎಂಬುದೂ ಇವರನ್ನು ಕುರಿತ ಉಲ್ಲೇಖಗಳು. ಪಾಂಡ್ಯರು ತಮ್ಮದು ಚಂದ್ರವಂಶವೆಂದೂ ಚೋಳರು ತಮ್ಮನ್ನು ಸೂರ್ಯವಂಶದವರೆಂದೂ ಕರೆದುಕೊಂಡಿದ್ದರಿಂದ ಚೇರರು ತಾವು ಅಗ್ನಿವಂಶಜರೆಂದು ಹೇಳಿಕೊಂಡರೆಂದು ಕಾಣುತ್ತದೆ. ಚೇರಲ, ಇರುಂಪೊರೈ, ಕೋದೈ–ಇವು ಬೇರೆಬೇರೆ ರಾಜಧಾನಿಗಳಿಂದ ಆಳುತ್ತಿದ್ದ ಚೇರವಂಶದ ವಿಭಿನ್ನ ಶಾಖೆಗಳು. ಇಮಯವರಂಬನ್ ನೆಡುಂಚೇರಲ್ ಆದನ್, ಸೆಂಗುಟ್ಟುವನ್ ಮೊದಲಾದವರು ಮೊದಲ ಶಾಖೆಗೆ ಸೇರಿದವರು. ಪೆರುಂಚೇರಲ್ ಮತ್ತು ಇಳಂಚೇರಲ್ ಇರುಂಪೊರೈ, ಕನ್ಯೆಕ್ಕಲ್ ಇರುಂಪೊರೈ ಮೊದಲಾದವರು ಎರಡನೆಯ ಶಾಖೆಗೆ ಸೇರಿದವರು. ಕೊಕ್ಕೋದೈ ಮಾರ್ಬನ್, ಮುಕ್ಕೋದೈ ಮುಂತಾದವರು ಮೂರನೆಯ ಶಾಖೆಗೆ ಸೇರಿದವರು. ಅವರು ಸಂಗಮ್ ಯುಗದಲ್ಲಿ ಆಳುತ್ತಿದ್ದರು. ಅವರ ಉಚ್ಛ್ರಾಯ ಕಾಲದಲ್ಲಿ ಕೊಂಗುನಾಡು ಅವರ ಮೇರೆಗೆ ಒಳಪಟ್ಟಿತ್ತು; ಆದ್ದರಿಂದ ತಗಡೂರಿನ ಅಡಿಗೈಮಾನರು ಅವರ ಸಾಮಂತರಾಗಿದ್ದರು.

ಚೇರರ ಇತಿಹಾಸವನ್ನು ಪ್ರಶ.ಪೂ. 3ನೆಯ ಶತಮಾನಕ್ಕೂ ಹಿಂದಿನಿಂದ ಗುರುತಿಸಬಹುದು. ಹಿಂದೆ ಹೇಳಿದಂತೆ ಅಶೋಕನ ಶಾಸನಗಳಲ್ಲಿ ಇವರ ಉಲ್ಲೇಖವಿದೆ. ಸಂಗಮ್ ಯುಗದಲ್ಲೂ ಇವರು ಪ್ರವರ್ಧಮಾನರಾಗಿದ್ದರು. ಪದಿಟುಪ್ಪಾಟ್ಟು ಗ್ರಂಥದಲ್ಲಿ ಇವರ ಪ್ರಶಂಸೆಯಿದೆ. ಅವರಲ್ಲಿ ಅತ್ಯಂತ ಪ್ರಸಿದ್ಧನಾದ ಸೆಂಗುಟ್ಟುವನ್ ಸಿಂಹಳದ 1ನೆಯ ಗಜಬಾಹುವಿನ (ಪ್ರಶ. 2ನೆಯ ಉತ್ತರಭಾಗ) ಸಮಕಾಲೀನನಾಗಿದ್ದ. ಇವರ ರಾಜ್ಯ ಕಳಭರ ಆಧಿಪತ್ಯಕ್ಕೆ ಒಳಪಟ್ಟಾಗ ತಮಿಳುನಾಡಿನ ಇತಿಹಾಸದಲ್ಲಿ ಅವರ ಪ್ರಾಮುಖ್ಯ ತಗ್ಗಿತು. ಅನಂತರ ಅವರು ಪಾಂಡ್ಯರಿಗೆ ಇಲ್ಲವೇ ಚೋಳರಿಗೆ ಅಧೀನರಾಗಿ ಆಳಿದರು. ಮುಂದೆ ಚೇರರ ವಂಶದ ಶಾಖೆಯೊಂದರ ಅರಸನಾದ ಆಯರು ದಕ್ಷಿಣ ಕೇರಳದಲ್ಲಿ ಸಾಮಂತರಾಗಿ ಆಳಿದರು. ತಮ್ಮ ಆಡಳಿತದ ಕೊನೆಯ ಹಂತದಲ್ಲಿ ಚೇರರಿಗೆ ಪೆರುಮಾಳರೆಂಬ ಹೆಸರಿತ್ತು. ಅವರಲ್ಲಿ ಅತ್ಯಂತ ಪ್ರಸಿದ್ಧನಾದ ದೊರೆ ಚೇರಮಾನ್ ಪೆರುಮಾಳ್ ನಾಯನಾರ್. ಈತ 9ನೆಯ ಶತಮಾನದ ಆದಿಕಾಲದಲ್ಲಿದ್ದ. ಇವನು ಕಾಲಾಧೀನನಾದ ಮೇಲೆ ಚೇರ ಪರಂಪರೆ ಕೊನೆಗೊಂಡಿತು. ಆಗ ಕೊಲ್ಲಮ್ ಶಕೆ ಆರಂಭವಾಯಿತು (ಸು. 825). ಕೇರಳದ ಮುಂದಿನ ರಾಜವಂಶಗಳು ಬಹುಶಃ ಪ್ರಾಚೀನ ಚೇರರ ವಂಶಜರೇ ಆಗಿದ್ದಿರಬೇಕು. (ಎನ್.ಎಸ್.ಯು.)

**ಚೇರಮಾಂಕ** : ಸು. 1526. ಈತ ವಾರ್ಧಕ ಷಟ್ಪದಿಯ ಚೇರಮ ಕಾವ್ಯದ ಕರ್ತೃ. ವೀರಶೈವ. ಈತನ ಪಿತಾಮಹ ಆದಯ್ಯ ಸಿರಿಯಾಳನನ್ವಯೋದ್ದಾಮನೂ ಚಿಕ್ಕ ವೀರೇಶಕರಜಾತನೂ ಆದ ನಾಗಲಿಂಗ ಸೆಟ್ಟಿ. ತಂದೆ ರಾಜಪೂಜ್ಯನಾದ ಗಂಗಪ್ಪ ಸೆಟ್ಟಿ. ಗುರು ಚೆನ್ನವೀರೇಶ. ಗುಬ್ಬಿ ಮಲ್ಲಣಾರ್ಯನ (1513) ಕೃಪೆಯಿಂದ ತಾನು ಗ್ರಂಥರಚನೆ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ.

ಪೂರ್ವಕವಿಗಳಲ್ಲಿ ವಾಲ್ಮೀಕಿ, ಮಯೂರ, ಹಲಾಯುಧ, ಪಾಲ್ಕುರಿಕೆ ಸೋಮ, ಭೋಜ, ಬಾಣ, ಕರೆಯಪದ್ಮರಸ, ಕುಮಾರಪದ್ಮರಸ, ಹರೀಶ್ವರ–ಇವರನ್ನು ಸ್ಮರಿಸಿದ್ದಾನೆ. ದೇವತೆಗಳಲ್ಲಿ ಪಾರ್ವತಿ, ಗಣೇಶ, ಷಣ್ಮುಖ, ನಂದಿ, ಭಂಗಿ, ವೀರಭದ್ರ–ಇವರನ್ನು ಸ್ತುತಿಸಿದ್ದಾನೆ. ಗುರುಗಳಲ್ಲಿ ತನ್ನ ಗುರು ಚೆನ್ನವೀರೇಶ, ಗುಬ್ಬಿಯ ಮಲ್ಲಣಾರ್ಯ, ಸೋಲೂರ ಚಿಕ್ಕಬಸವ–ಇವರನ್ನು ಹೊಗಳಿದ್ದಾನೆ. ಈತ ತನ್ನನ್ನು ನವರಸಭಾವ ಲಕ್ಷಾಲಂಕಾರನಿಪುಣ ಎಂದು ವಿಶೇಷಿಸಿಕೊಂಡಿದ್ದಾನೆ.

ಚೇರಮ ಕಾವ್ಯದಲ್ಲಿ 11 ಸಂಧಿಗಳಿದ್ದು 555 ಪದ್ಯಗಳಿವೆ. ಶಿವಭಕ್ತ ಚೇರಮನ ಕಥೆಯೇ ಈ ಕಾವ್ಯದ ವಸ್ತು. ಈತ ನಂಬಿಯಣ್ಣನ ಜೊತೆಯಿದ್ದು ಆತ ಕೈಲಾಸಕ್ಕೆ ಹಿಂದಿರುಗಿದೊಡನೆಯೇ ತಾನೂ ಕೈಲಾಸವನ್ನು ಸೇರಿ ಅಲ್ಲಿ ಶಿವನಿಗೆ ಚಾರುಕಾವ್ಯವನ್ನು ಕೇಳಿಸಿದ ಎಂಬುದೇ ಇದರ ಕಥಾವಸ್ತು. ಸಗ್ಗದ ಸುಧೆಯ ಸವಿ, ಮನವಲರ್ದು ನಟ್ಟುಕೂಡುವ ಲತಾಂಗಿಯ ಸೋಂಕು, ಪುಳಕವಳವಟ್ಟು ಹಾಡುವ ಗಾನರಸದಿಂಪು, ಚಾಜಿಯೊಳ್ಪಲರ ಕಂಪುಗಳ ಸೊಂಪು, ಕಟ್ಟಕ್ಕಜುನ ಸುತನ ರೂಪು, ನಲ್ಪಿನ ಸೈಪು–ಇವೆಲ್ಲವೂ ತನ್ನ ಕಾವ್ಯದಲ್ಲಿ ಎಸೆಯುವುದಾಗಿಯೂ ಮುಟ್ಟಿ ಪಂಚೇಂದ್ರಿಯಂ ನಲಿವವೋಲ್ ತಾನು ಕಾವ್ಯವನ್ನು ಹೇಳಿರುವುದಾಗಿಯೂ ಕವಿ ಸ್ವಪ್ರಶಂಸೆ ಮಾಡಿಕೊಂಡಿದ್ದಾನೆ. ಆದರೆ ಈತನ ಕಾವ್ಯ ಒಂದು ಮಧ್ಯಮ ದರ್ಜೆಯ ಲಕ್ಷಣಯುಕ್ತ ಷಟ್ಪದೀಕಾವ್ಯ. (ಜಿ.ಜಿಯು.)

**ಚೇರಮಾನ್, ಪೆರುಮಾಳ್ ನಾಯನಾರ್** : 63 ನಾಯನಾರುಗಳಲ್ಲಿ ಒಬ್ಬ. ಈತನ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆಯಾದರೂ ಆತ ಪ್ರಶ. 9ನೆಯ ಶತಮಾನದವನೆಂದು ಬಹು ಜನರ ಅಭಿಮತ. ಈತ ಅರಸುಕುಲಕ್ಕೆ ಸೇರಿದವ. ಈತನ ನಿಜನಾಮಧೇಯ ಪೆರುಮಾಕ್ಕೋದೆಯಾರ್. ಪಶುಪಕ್ಷಿಗಳ ಮಾತುಗಳನ್ನು ಅರಿಯಬಲ್ಲವನಾದ್ದರಿಂದ ಕಳರಿಟ್ರರಿವಾರ್ (ಸರ್ವಜ್ಞ) ಎಂದೂ ಚೇರನಾಡನ್ನು ಪಾಲಿಸಿದ್ದರಿಂದ ಚೇರಮಾನ್ ನಾಯನಾರ್ ಎಂದೂ ಈತನನ್ನು ಕರೆದಿದ್ದಾರೆ.

ದೈವಭಕ್ತನಾದ ಈತ ಶಿವಸೇವೆಯನ್ನು ಪ್ರಾರಂಭಿಸಿದ್ದು ಸಂಘಯುಗದ ಚೇರನಾಡಿನ ಪ್ರಭು ಸೆಂಗೋಲ್ ಪೊರೈಯನ್ ವೃದ್ಧಾಪ್ಯದಿಂದ ವಾನಪ್ರಸ್ಥಾಶ್ರಮ ಸ್ವೀಕರಿಸಿದಾಗ ಪ್ರಜೆಗಳ ಪ್ರೀತಿಯ ಕರೆಗೆ ಓಗೊಟ್ಟು, ಶಿವನ ಆಣತಿಯ ಮೇರೆಗೆ ಚೇರಮಾನ್ ಪೆರುಮಾಳೇ ರಾಜ್ಯಾಧಿಕಾರ ವಹಿಸಿಕೊಂಡ. ರಾಜ್ಯಾಭಿಷೇಕದಂದು ಚೇರಮಾನ್ ಚೌಳುಮಣ್ಣಿನಿಂದ ಲೇಪಿತವಾದ ಅಗಸನೊಬ್ಬನನ್ನು ಕಂಡು ಚೌಳು ವಿಭೂತಿಯಂತೆ ಭಾಸವಾಗಲಾಗಿ ಅಗಸನೇ ಶಿವಶರಣನೆಂದು ತಿಳಿದು ಅಡಿಗೆರಗಿದನೆಂದು ಹೇಳಲಾಗಿದೆ.

ಶಿವಪೂಜೆಯ ಅನಂತರ ಚೇರಮಾನನಿಗೆ ಶಿವನ ಅಂದುಗೆಯ ಸದ್ದು ಕೇಳುತ್ತಿತ್ತೆಂದೂ ಅದನ್ನು ಕೇಳಕೇಳುತ್ತ ಆತ ಸುಖಿಸುತ್ತಿದ್ದನೆಂದೂ ಪ್ರತೀತಿ.

ಸುಂದರಮೂರ್ತಿ ನಾಯನಾರ್ ಮತ್ತು ಚೇರಮಾನ್ ಇಬ್ಬರೂ ಆತ್ಮೀಯ ಗೆಳೆಯರು. ತಿರುವಾರೂರ್, ತಿರುಮರೈಕ್ಕಾಡು (ವೇದಾರಣ್ಯಂ) ಮೊದಲಾದ ತೀರ್ಥಸ್ಥಳಗಳಲ್ಲಿ ಇಬ್ಬರೊಂದಿಗೆ ಶಿವಾರ್ಚನೆ ನಡೆಸಿದರು. ಸುಂದರಮೂರ್ತಿ ನಾಯನಾರ್‌ಗೆ ಶಿವಪ್ಪೆರುಮಾನ್ ಬಿಳಿಯ ಆನೆಯೊಂದನ್ನು ಕೊಟ್ಟು ಕೈಲೈಗೆ ಬರುವಂತೆ ಹೇಳಿದಾಗ ಇದನ್ನರಿತ ಚೇರಮಾನ್ ಕುದುರೆಯನ್ನೇರಿ ಅವನ ಜೊತೆಯಲ್ಲೇ ಕೈಲೈಗೆ ಹೋದ.

ಚೇರಮಾನ್ ಬರೆದಿರುವ ಗ್ರಂಥಗಳು ಮೂರು: ಪೊನ್‍ವಣ್ಣತಂದಾತಿ, ತಿರುವಾರೂರ್ ಮುಮ್ಮಣಿಕ್ಕೋವೈ, ತಿರುಕ್ಕಯಿಲಾಯ ಜ್ಞಾನವುಲಾ. (ವಿ.ಪಿಇ.)

**ಚೇಳು :** ಆರ್ಯಾಕ್ನಿಡ ವರ್ಗದ ಸ್ಕಾರ್ಪಿಯಾನೀಸ್ ಗಣ ಹಾಗೂ ಸ್ಕಾರ್ಪಿಯಾನಿಡೀ ಕುಟುಂಬಕ್ಕೆ ಸೇರಿದ ಒಂದು ದೊಡ್ಡ ಸಂಧಿಪದಿ (ಸ್ಕಾರ್ಪಿಯನ್). ಇದರಲ್ಲಿ 400 ಕ್ಕೂ ಹೆಚ್ಚು ಪ್ರಭೇದಗಳಿವೆ. ಹೆಚ್ಚುಕಡಿಮೆ ಎಲ್ಲವೂ ಪ್ರಪಂಚದ ಉಷ್ಣ ಹಾಗೂ ಉಪೋಷ್ಣ ಪ್ರದೇಶಗಳಲ್ಲಿ ಮಾತ್ರ ಕಾಣಸಿಗುತ್ತವೆ. ಚೇಳಿನ ವಿವಿಧ ಬಗೆಗಳ ಗಾತ್ರದಲ್ಲಿ ಬಹಳ ವ್ಯತ್ಯಾಸ ಇದೆಯಾದರೂ ಎಲ್ಲಕ್ಕೂ ಸಮಾನವೆನಿಸುವ ಮತ್ತು ಇವಕ್ಕೆ ಮಾತ್ರ ವಿಶಿಷ್ಟವಾದ ಕೆಲವು ಲಕ್ಷಣಗಳಿರುವುದರಿಂದ ಚೇಳುಗಳನ್ನು ಸುಲಭವಾಗಿ ಗುರುತಿಸಬಹುದು. ದೇಹದಲ್ಲಿ

ಆರು ಖಂಡಗಳಿಂದ ಕೂಡಿದ ಶಿರೋರ ಅಥವಾ ಪ್ರೋಸೋಮ ಮತ್ತು ಹನ್ನೆರಡು ಖಂಡಗಳಿಂದ ಕೂಡಿದ ಒಫಿಸ್ಥೋಸೋಮ ಅಥವಾ ಉದರ ಭಾಗಗಳನ್ನು ಗುರುತಿಸಬಹುದು. ಉದರದಲ್ಲಿ ಏಳು ಖಂಡಗಳಿರುವ ಮೀಸೋಸೋಮ ಮತ್ತು ಐದು ಖಂಡಗಳುಳ್ಳ ಮೆಟಸೋಮ ಭಾಗಗಳಿವೆ. ಮೆಟಸೋಮದ ತುದಿಯಲ್ಲಿ ವಿಷಗ್ರಂಥಿಯುಳ್ಳ ಕೊಂಡಿಯಿದೆ. ಶಿರೋರವೆಂಬುದು ತಲೆ ಮತ್ತು ಎದೆಯ ಭಾಗದ ಒಕ್ಕೂಟ. ಅದರ ಮೇಲುಹೊದಿಕೆಯಾದ ಕೈಟನ್ ಫಲಕದ (ಕ್ಯಾರಪೇಸ್) ಮಧ್ಯಭಾಗದಲ್ಲಿ ಒಂದು ಜೊತೆ ಮತ್ತು ಮುಂದಿನ ತುದಿಯ ಎಡಬಲ ಪಕ್ಕದ ಅಂಚಿನಲ್ಲಿ ಮೂರು ಜೊತೆ ಸರಳ ರಚನೆಯ ಕಣ್ಣುಗಳು ಉಂಟು. ಶಿರೋರದಲ್ಲಿ ಆರು ಜೊತೆ ಉಪಾಂಗಗಳೂ ಬಾಯಿಯ ಇಕ್ಕೆಡೆಗಳಲ್ಲಿ ಒಂದು ಜೊತೆ ಕೆಲಿಸೆರಿ ಉಪಾಂಗಗಳೂ ಇವೆ. ಇವುಗಳಲ್ಲಿ ತಲಾ 3 ಖಂಡಗಳಿವೆ. ಚಿಕ್ಕದಾದ ಬುಡದ ಖಂಡವನ್ನು ಶಿರೋರದ ಫಲಕದ ಮುಂಭಾಗ ಮುಚ್ಚಿರುವುದು. ಮುಂದಿರುವ ಎರಡು ಖಂಡಗಳು ಆಹಾರವನ್ನು ಬಿಗಿಯಾಗಿ ಹಿಡಿಯಲು ಸಹಕರಿಸುತ್ತವೆ. ಶಿರೋರದ ಎರಡನೆಯ ಜೊತೆ ಉಪಾಂಗಗಳಾದ ಪೆಡಿಪಾಲ್ಪಿಗಳು ದೊಡ್ಡವು. ಇವುಗಳಲ್ಲೂ ತಲಾ 6 ಖಂಡಗಳಿವೆ. ತುದಿಯಲ್ಲಿರುವ ಎರಡು ಖಂಡಗಳು ಚಿಮುಟದ ಅಲಗುಗಳಂತಿದ್ದು ಇತರ ಪ್ರಾಣಿಗಳನ್ನು ಹಿಡಿಯುವುದಕ್ಕೆ ಸಹಾಯಕವಾಗಿವೆ. ಶಿರೋರದ ಮೂರನೆಯ, ನಾಲ್ಕನೆಯ, ಐದನೆಯ ಮತ್ತು ಆರನೆಯ ಜೊತೆಯ ಉಪಾಂಗಗಳು ನಡೆಯಲು ನೆರವಾಗುವ ಕಾಲುಗಳು, ಒಂದೊಂದರಲ್ಲೂ ಏಳು ಖಂಡಗಳೂ ತುದಿಯ ಖಂಡದಲ್ಲಿ ಎರಡೆರಡು ನಖಗಳೂ ಇವೆ.

ಮೀಸೋಸೋಮದ ಪ್ರತಿ ಖಂಡದ ಮೇಲಿರುವ ಟರ್ಗಮ್ ಮತ್ತು ತಳಭಾಗದಲ್ಲಿರುವ ಸ್ಟರ್ನಮ್ ಫಲಕಗಳ ನಡುವೆ ತೆಳುವಾದ ಕೈಟಿನ್ ಪೊರೆ ಇದೆ. ಮೊದಲನೆಯ ಖಂಡದ ಸ್ಟರ್ನಮ್ ಫಲಕದ ಮಧ್ಯೆ ಐದು ಮೂಲೆಗಳುಳ್ಳ ಜೆನೈಟಲ್ ಫಲಕ ಉಂಟು. ಇದು ಹೆಣ್ಣಿನಲ್ಲಿ ಅಖಂಡವಾಗಿದೆ. ಗಂಡಿನಲ್ಲಿ ಉದ್ದುದ್ದಕ್ಕೆ ಎರಡಾಗಿ ಸೀಳಿದೆ. ಜನನೇಂದ್ರಿಯ ದ್ವಾರವಿರುವುದು ಈ ಫಲಕದಲ್ಲೇ. ಎರಡನೆಯ ಖಂಡದ ಸ್ಟರ್ನಮ್ ಫಲಕದ ಮೇಲೆ ಬಾಚಣಿಗೆಯ ಹಲ್ಲುಗಳಂತಿರುವ ಪೆಕ್ಟೀನ್ಸ್ ಎಂಬ ಎರಡು ರಚನೆಗಳಿವೆ. ಉಳಿದ ಐದು ಖಂಡಗಳಲ್ಲಿ ಉಪಾಂಗಗಳಿಲ್ಲ. ಮೂರು, ನಾಲ್ಕು, ಐದು ಮತ್ತು ಆರನೆಯ ಖಂಡಗಳ ಸ್ಟರ್ನಮ್ ಫಲಕಗಳಲ್ಲಿ ಕಿಂಡಿಗಳಂತಿರುವ ದ್ವಾರಗಳಿವೆ. ಇವು ಶ್ವಾಸಾಂಗಗಳ ಹೊರ ದ್ವಾರಗಳು. ಮೆಟಸೋಮದಲ್ಲಿ ಆರು ಖಂಡಗಳಿವೆ. ಪ್ರತಿ ಖಂಡದಲ್ಲೂ ಉದ್ದವಾದ ಕೈಟಿನ್ ಉಂಗುರುಗಳಿವೆ. ಆದರೆ ಈ ಭಾಗದಲ್ಲಿ ಉಪಾಂಗಗಳಿಲ್ಲ. ಈ ಭಾಗದ ಹಿಂತುದಿಯಲ್ಲಿ ಕೊಂಡಿಯಿದೆ.

ಒಳರಚನೆ : ದೇಹದ ಒಳಗೆ ವರ್ಣರಹಿತ ರಕ್ತ ತುಂಬಿದ ದೇಹಾಂತರಾವಕಾಶವೂ ಅದರಲ್ಲಿ ಜೀರ್ಣಾಂಗಗಳು, ಹೃದಯ, ಜನನೇಂದ್ರಿಯ ಮತ್ತು ಇತರ ಅಂಗಗಳೂ ಇವೆ. ಅನ್ನನಾಳ ಮತ್ತು ಕರುಳು ಕಿರಿದಾದ ನಾಳಗಳು. ಕರುಳಿಗೆ ಸೇರಿದಂತೆ ದೊಡ್ಡ ಕುಡಿಗಳಿವೆ. ಇವು ಉದರದಲ್ಲಿ ತುಂಬಿರುವ ಜೀರ್ಣಗ್ರಂಥಿಯೊಳಗೆ ಹುದುಗಿವೆ. ಚೇಳು ಇತರ ಜೀವಿಗಳ ದೇಹದಿಂದ ತನಗೆ ಬೇಕಾಗುವ ಆಹಾರವನ್ನು ಹೀರುವುದು. ಹೃದಯ ಉದ್ದಕೊಳವೆಯಂತಿದೆ. ಅಕ್ಕಪಕ್ಕದಲ್ಲಿ ಏಳು ಜೊತೆ ಆಸ್ಟಿಯೋಲ್ ದ್ವಾರಗಳಿವೆ. ದೊಡ್ಡ ಶುದ್ಧ ರಕ್ತನಾಳಗಳು ಮತ್ತು ಮಲಿನ ರಕ್ತನಾಳಗಳೂ ಉಂಟು. ಮೀಸೋಸೋಮದ ಮೂರು, ನಾಲ್ಕು, ಐದು ಮತ್ತು ಆರನೆಯ ಖಂಡಗಳಲ್ಲಿ ನಾಲ್ಕು ಜೊತೆ ಶ್ವಾಸಕೋಶಗಳಿವೆ. ಕೊಂಡಿಯಲ್ಲಿ ಒಂದು ಜೊತೆ ದೊಡ್ಡ ವಿಷಗ್ರಂಥಿಗಳಿವೆ. ಇವುಗಳಿಂದ ಹೊರಡುವ ಸೂಕ್ಷ್ಮವಾದ ನಾಳಗಳು ಕೊಂಡಿಯ ಮುಳ್ಳಿನ ತುದಿಯಲ್ಲಿ ಹೊರತೆರೆಯುತ್ತವೆ.

ಕಸಕಡ್ಡಿ, ಮನೆಗಳ ಹೆಂಚುಗಳ ಬುಡದಲ್ಲೊ, ಅಡಗಿದ್ದು ಕತ್ತಲಾದ ಅನಂತರ ಆಹಾರವನ್ನು ಅರಸಿಕೊಂಡು ಹೊರಬರುತ್ತದೆ. ಸಣ್ಣಪುಟ್ಟ ಕೀಟಗಳು ಇದರ ಮುಖ್ಯ ಆಹಾರ. ಇದು ಆಹಾರವನ್ನು ಸೇವಿಸುವ ಕ್ರಮ ಬಲು ವಿಚಿತ್ರ. ಯಾವುದಾದರೂ ಕೀಟವೊಂದು ಸಿಕ್ಕರೆ ಅದನ್ನು ತನ್ನ ಪೆಡಿಪಾಲ್ಪಿಗಳಿಂದ ಬಿಗಿಯಾಗಿ ಹಿಡಿದು, ಕೊಂಡಿಯಿಂದ ಕುಟುಕಿ, ಕೆಲಿಸರಿಗಳ ಸಹಾಯದಿಂದ ಅರೆದು, ಆ ಪ್ರಾಣಿಯೊಳಕ್ಕೆ ತನ್ನ ಕಿಣ್ವಗಳನ್ನು ಸೇರಿಸುತ್ತದೆ. ಕಿಣ್ವಗಳ ಚಟುವಟಿಕೆಯಿಂದ ಆಹಾರ ಪ್ರಾಣಿಯ ಒಳ ಅಂಗಾಂಶಗಳೆಲ್ಲ ದ್ರವರೂಪಕ್ಕೆ ತಿರುಗುತ್ತದೆ. ಆಗ ಅದಕ್ಕೆ ತನ್ನ ಬಾಯಿ ಹಚ್ಚಿ ಆಹಾರದ್ರವವನ್ನು ಹೀರಿಕೊಳ್ಳುತ್ತದೆ. ಚೇಳು ಆಹಾರವಿಲ್ಲದೆ ಬಹಳ ದಿನ, ಕೆಲವೊಮ್ಮೆ ವರ್ಷಕ್ಕೂ ಹೆಚ್ಚು ಕಾಲ ಬದುಕಿರಬಲ್ಲದು. ಹಾಗೆಯೇ ಅದಕ್ಕೆ ನೀರಿನ ಆವಶ್ಯಕತೆಯೂ ಬಹಳ ಕಡಿಮೆ.

ಚೇಳು ಒಂಟಿ ಜೀವಿ. ಯಾವ ತೆರನ ಸಂಘಜೀವನವನ್ನೂ ಇದು ಪ್ರದರ್ಶಿಸುವುದಿಲ್ಲ. ಆದರೆ ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಹೆಣ್ಣುಗಳು ಜೊತೆಗೂಡಿ ಕೊಂಚಕಾಲ ಪ್ರಣಯಕೇಳಿಯಲ್ಲಿ ತೊಡಗಿದ್ದು ಅನಂತರ ಸಂಭೋಗ ನಡೆಸುತ್ತವೆ. ಆ ಕಾಲದಲ್ಲಿ ಗಂಡುಹೆಣ್ಣುಗಳು ಕೈಗಳನ್ನು ಹಿಡಿದುಕೊಂಡು ನೃತ್ಯ ಮಾಡುವುದುಂಟು. ಸಂಭೋಗಕ್ರಿಯೆಯ ಅನಂತರ ಹೆಣ್ಣು ಗಂಡುಚೇಳನ್ನು ತಿಂದುಹಾಕಿಬಿಡುತ್ತದೆ. ಗರ್ಭಾಂಕುರಗೊಂಡ ಅಂಡಗಳು ತಾಯ ದೇಹದಲ್ಲೇ ಬೆಳೆದು ಮರಿಗಳಾಗಿ ತಾಯಿ ಗರ್ಭದಿಂದ ಹೊರಬರುತ್ತವೆ. ಹೊರಬಂದಾಗ ಬಹಳ ಅಸಹಾಯಕ ಸ್ಥಿತಿಯಲ್ಲಿರುವ ಇವು ಕೆಲವು ಕಾಲ ತಾಯ ಬೆನ್ನನ್ನು ಏರಿ ಸವಾರಿ ಮಾಡುತ್ತಿದ್ದು, ಕೊಂಚ ದೊಡ್ಡವಾದ ಮೇಲೆ ಸ್ವತಂತ್ರ ಜೀವನ ನಡೆಸತೊಡಗುತ್ತವೆ. ತಾಯಿಯ ಬೆನ್ನನ್ನು ಭೇದಿಸಿಕೊಂಡು ಮರಿಗಳು ಹೊರಬರುತ್ತವೆ ಎಂಬ ಭಾವನೆ ಜನಜನಿತವಾಗಿದ್ದರೂ ಇದು ವೈಜ್ಞಾನಿಕ ಸತ್ಯವಲ್ಲ. ಹುರಿದ ಚೇಳನ್ನು ಚೀನಾದಲ್ಲಿ ತಿನ್ನುತ್ತಾರೆ. ಚೇಳಿನ 'ವೈನು' ಮತ್ತು ಹಾವಿನ 'ವೈನ'ನ್ನು ನೋವುನಿವಾರಕ ಹಾಗೂ ಮದ್ದಾಗಿ ಚೀನಾ ವೈದ್ಯದಲ್ಲಿ ಬಳಸುತ್ತಾರೆ. (ಪಿ.ಎ.ಆರ್.)

**ಚೇಳುಕೊಂಡಿ ಗಿಡ :** ಬೊರ್ರ್ಯಾಜಿನೇಸೀ ಕುಟುಂಬಕ್ಕೆ ಸೇರಿದ ಹೀಲಿಯೋಟ್ರೋಪಿಯಂ ಇಂಡಿಕಮ್ ಎಂಬ ವೈಜ್ಞಾನಿಕ ಹೆಸರಿನ ಪುಟ್ಟ ಮೂಲಿಕೆ ಗಿಡ. ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ ಸಾಮಾನ್ಯವಾಗಿ ರಸ್ತೆಗಳ ಪಕ್ಕದಲ್ಲಿ ಅಥವಾ ಪಾಳು ಸ್ಥಳಗಳಲ್ಲಿ ಕಳೆಗಿಡವಾಗಿ ಬೆಳೆಯುತ್ತದೆ. ಇದು ಸಾಧಾರಣವಾಗಿ 0.6 ಮೀ. ಎತ್ತರಕ್ಕೆ ಬೆಳೆಯುವ ಒರಟಾದ ಏಕವಾರ್ಷಿಕ ಸಸ್ಯ. ರೆಂಬೆಗಳು ಉದ್ದ; ತುಪ್ಪಳಿನಿಂದ ಆವೃತವಾಗಿವೆ. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಎಲೆಗಳ ಆಕಾರ ಅಂಡದಂತೆ; ತುದಿ ಮೊಂಡು; ಅಂಚು ಗರಗಸದಂತೆ; ಹೂಗೊಂಚಲು ಸೈಮೋಸ್ ಮಾದರಿಯದು; ಚೇಳಿನ ಕೊಂಡಿಯಂತೆ ಬಾಗಿದೆ. ಇದರಿಂದಲೇ ಗೊಂಚಲಿಗೆ ಸ್ಕಾರ್ಪಿಯಾಯ್ಡ್ ಸೈಮ್ ಎಂದು ಹೆಸರು. ಹೂಗಳು ನೀಲಿ ಇಲ್ಲವೆ ಊದಾ ಬಣ್ಣದವು. ಕಾಯಿಗಳು ನಟ್‌ಲೆಟ್ ಮಾದರಿಯವು. ಒಂದೊಂದರಲ್ಲೂ ಕೊಕ್ಕೆಯಂಥ ಎರಡು ಬೀಜಗಳಿವೆ. ಚೇಳುಕೊಂಡಿ ಗಿಡ ಬಹಳ ಕಹಿ. ಇದಕ್ಕೆ ಅನೇಕ ವೈದ್ಯಕೀಯ ಗುಣಗಳಿವೆ. ಕೆಲವೆಡೆ ಇದನ್ನು ಹುಣ್ಣುಗಳಿಗೆ, ಗಾಯಗಳಿಗೆ, ವಾತ ಮತ್ತು ಕೀಟಗಳ ಮುಳ್ಳಿನ ನೋವು ನಿವಾರಣೆಗೆ ಮತ್ತು ಕೆಲವು ಚರ್ಮರೋಗಗಳಿಗೆ ಹೊರ ಔಷಧವಾಗಿ ಉಪಯೋಗಿಸಲಾಗುತ್ತದೆ. ಜ್ವರ ನಿವಾರಣೆಗೂ ಬಳಸುವುದುಂಟು. ಕಾಂಬೋಡಿಯದಲ್ಲಿ ಎಲೆಗಳ ಮತ್ತು ಎಳೆಯ ಕುಡಿಗಳ ಕಷಾಯವನ್ನು ತುರಿಕೆ, ಎದೆ ಸಂಬಂಧಿ ರೋಗಗಳು ಮತ್ತು ಕಜ್ಜಿಗಳಿಗೆ ಬಳಸುತ್ತಾರೆ. ಹಾಗೆಯೇ ಬೇರಿನ ಕಷಾಯವನ್ನು ಕೆಮ್ಮು ಮತ್ತು ಜ್ವರಕ್ಕೆ ಉಪಯೋಗಿಸುವುದಿದೆ. ಹೂಗಳು ಕಡಿಮೆ ಪ್ರಮಾಣದಲ್ಲಿ ಔಷಧವಾಗಿಯೂ ಅಧಿಕ ಪ್ರಮಾಣದಲ್ಲಿ ಗರ್ಭಸ್ರಾವಕವಾಗಿಯೂ ಬಳಕೆಯಲ್ಲಿದೆ ; ಮುಂಬಯಿ ಮತ್ತು ಇತರ ಕಡೆಗಳಲ್ಲಿ ಗಿಡದ ರಸವನ್ನು ಹಾವು ಚೇಳುಗಳ ಕಡಿತಕ್ಕೆ ಔಷಧವಾಗಿ ಉಪಯೋಗಿಸುವುದುಂಟು. ಎಲೆಗಳನ್ನು ಮೇಹ ಹಾಗೂ ದದ್ದುರೋಗ ಚಿಕಿತ್ಸೆಗೂ, ರಸವನ್ನು ಮೊಡವೆ, ಒಸಡು ಕುರು ಮತ್ತು ಕಣ್ಣುಬೇನೆಗಳ ಚಿಕಿತ್ಸೆಗೂ ಬಳಸಬಹುದು. ಆಯುರ್ವೇದದ ಪ್ರಕಾರ ಗಿಡದ ರಸ ಹುಣ್ಣುಗಳನ್ನು ಶಮನ ಮಾಡುವುದಲ್ಲದೆ ಹರಳೆಣ್ಣೆಯೊಂದಿಗೆ ಕುಡಿಸಿದಾಗ ಚೇಳಿನ ವಿಷದಿಂದ ಉಂಟಾದ ಉರಿಯನ್ನೂ ನಾಯಿಕಡಿತವನ್ನೂ ವಾಸಿ ಮಾಡುವುದೆಂದು ಹೇಳಲಾಗಿದೆ. (ಕೆ.ಎಸ್.ಎನ್.ಎ.)

**ಚೇಳು ಮೀನು :** ಸಾಗರದ ಅಳಿವೆಗಳಲ್ಲೂ ನದಿಗಳಲ್ಲೂ ಕಾಣಬರುವ ಒಂದು ಒಳ್ಳೆಯ ಆಹಾರ ಮೀನು, ಗೊಡ್ಲೆ, ಬಾಳೆ ಮುಂತಾದ ಮೀಸೆ ಮೀನುಗಳಿಗೆ ಹತ್ತಿರ ಸಂಬಂಧಿ. ಹೆಟರೋನ್ಯೂಸ್ಟಿಡೀ ಕುಟುಂಬಕ್ಕೆ ಸೇರಿದೆ. ಇದರ ಶಾಸ್ತ್ರೀಯ ಹೆಸರು ಹೆಟರೋನ್ಯೂಸ್ಟಸ್ ಫಾಸಿಲಿಸ್. 25–35 ಸೆಂ.ಮೀ. ಉದ್ದಕ್ಕೆ ಬೆಳೆಯುವ ಮೀನಿದು. ತಲೆ

ಮೇಲಿನಿಂದ ಕೆಳಕ್ಕೆ ಒತ್ತಲ್ಪಟ್ಟು ಚಪ್ಪಟೆಯಾಗಿದೆ. ಕಣ್ಣು ಚಿಕ್ಕವು, ಕಿವಿರುಗೂಡಿನಲ್ಲಿ ಸಹಾಯಕ ಶ್ವಸನೇಂದ್ರಿಯ ಇದೆ. ಇದರಿಂದ ನೀರಿನಿಂದ ಹೊರಗೆ ಬಹುಕಾಲ ಜೀವಂತ ಇರಬಲ್ಲದು. ಮೂತಿಯ ಮೇಲೆ ಬಲು ಉದ್ದವಾದ ಮೀಸೆಗಳುಂಟು. ಬೆನ್ನಿನ ಮತ್ತು ತೋಳಿನ ಈಜುರೆಕ್ಕೆಗಳು ಬಲು ಚಿಕ್ಕವು. ಆಸನದ ಈಜುರೆಕ್ಕೆ ಅತಿ ಉದ್ದ. ಬಾಲದ ಈಜುರೆಕ್ಕೆ ವರ್ತುಲಾಕಾರದ್ದು. ಈ ಮೀನು ನೀರಿನ ತಳದಲ್ಲಿ ವಾಸಿಸುತ್ತದೆ. ಕೀಟಗಳು, ಹುಳುಗಳು, ಪಾಚಿ, ಇತರ ಬಗೆಯ ಮೀನುಮರಿಗಳು ಇದರ ಮುಖ್ಯ ಆಹಾರ. ಮರಿ ಹಾಕುವ ಕಾಲ ಏಪ್ರಿಲ್–ಜೂನ್ ಅವಧಿ. ಚೇಳು ಮೀನು ಬಲು ರುಚಿಯಾದದ್ದೆಂದು ಪ್ರಸಿದ್ಧವಾಗಿದೆ. ಬೀಸುಬಲೆ, ದಾವಣಿಬಲೆಗಳಿಂದ ಇದನ್ನು ಹಿಡಿಯುವುದುಂಟು. ಕೈಯಲ್ಲಿ ಹಿಡಿಯುವಾಗ ಬಹಳ ಎಚ್ಚರದಿಂದಿರಬೇಕು. ಏಕೆಂದರೆ ತನ್ನ ತೋಳಿನ ಈಜುರೆಕ್ಕೆಯ ತುದಿಯಲ್ಲಿರುವ ಮುಳ್ಳಿನಿಂದ ಇದು ಬಲವಾದ ಗಾಯ ಮಾಡುತ್ತದೆ. ಕೆಲವು ಸಲ ಈ ಗಾಯ ನಂಜಿಗೆ ತಿರುಗಿ ಮೀನುಗಾರರು ಸಾವಿಗೀಡಾಗಿರುವುದೂ ಉಂಟು. (ಬಿ.ಎನ್.)

**ಚೈತ್ ಸಿಂಗ್ :** ಬನಾರಸಿನ ರಾಜನಾಗಿದ್ದ. ಅಯೋಧ್ಯೆಯ ನವಾಬನ ಸಾಮಂತನಾಗಿದ್ದನಾದರೂ 1775ರ ಜುಲೈ ತಿಂಗಳಲ್ಲಿ ಇಂಗ್ಲಿಷರೊಂದಿಗೆ ಒಂದು ಕೌಲು ಮಾಡಿಕೊಂಡು ಈಸ್ಟ್ ಇಂಡಿಯ ಕಂಪನಿಯ ಪ್ರಭುತ್ವವನ್ನು ಒಪ್ಪಿಕೊಂಡು ಕಂಪನಿಗೆ ವರ್ಷಕ್ಕೆ 22½ಲಕ್ಷ ರೂ. ಕಪ್ಪ ಕೊಡಲು ಸಮ್ಮತಿಸಿದ. ಈ ಹಣವನ್ನು ಹೆಚ್ಚಿಸುವುದಿಲ್ಲವೆಂದೂ ಬನಾರಸ್ ಸಂಸ್ಥಾನದ ಮೇಲೆ ಚೈತ್ ಸಿಂಗನ ಅಧಿಕಾರವನ್ನು ಪ್ರಶ್ನಿಸುವುದಿಲ್ಲವೆಂದೂ ಅಲ್ಲಿ ಶಾಂತಿಗೆ ಭಂಗ ತರುವುದಿಲ್ಲವೆಂದೂ ಕಂಪನಿ ವಾಗ್ದಾನ ಮಾಡಿತು. ಆದರೆ 1778ರಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಭಾರತದಲ್ಲಿ ಯುದ್ಧ ಆರಂಭವಾದ್ದರಿಂದ ಮತ್ತು ಇಂಗ್ಲಿಷರು ಮೈಸೂರು ಮತ್ತು ಮರಾಠ ಯುದ್ಧಗಳಲ್ಲೂ ತೊಡಗಿದ್ದರಿಂದ ಅವರಿಗೆ ಹಣದ ಆವಶ್ಯಕತೆ ಹೆಚ್ಚಾಯಿತು. ಯುದ್ಧಕ್ಕೆ ದೇಣಿಗೆಯಾಗಿ 5 ಲಕ್ಷ ರೂ. ಕೊಡಬೇಕೆಂದು ಚೈತ್ ಸಿಂಗನನ್ನು ಗವರ್ನರ್–ಜನರಲ್ ವಾರನ್ ಹೇಸ್ಟಿಂಗ್ಸ್ ಕೇಳಿದನಲ್ಲದೆ, ಹಣ ಕೊಡದಿದ್ದರೆ ಸೈನಿಕ ಕಾರ್ಯಾಚರಣೆ ನಡೆಸುವುದಾಗಿ ಬೆದರಿಕೆ ಹಾಕಿದ. ಚೈತ್ ಸಿಂಗ್ ಅದನ್ನೂ ಪಾವತಿ ಮಾಡಿದ. (ಬಿ.ಎಸ್.ಕೆ.)

1780ರಲ್ಲಿ ಮತ್ತೆ ಹೇಸ್ಟಿಂಗ್ಸ್ ಹಣ ಕೇಳಿದ. ಚೈತ್ ಸಿಂಗ್ ಹೇಸ್ಟಿಂಗ್ಸ್‌ನಿಗೆ ಸ್ವಂತ ಕಾಣಿಕೆಯಾಗಿ 2 ಲಕ್ಷ ರೂ. ಕಳಿಸಿದ. ಹೇಸ್ಟಿಂಗ್ಸ್ ಈ ಹಣವನ್ನು ಸ್ವೀಕರಿಸಿ ತೃಪ್ತನಾಗಬಹುದೆಂದು ಅವನ ಭಾವನೆ. ಹೇಸ್ಟಿಂಗ್ಸ್ ಈ ಹಣವನ್ನು ಸ್ವೀಕರಿಸಿ ಕಂಪನಿಯ ಸೈನ್ಯಕ್ಕೆ ಬಳಸಿದನಾದರೂ ಅಷ್ಟರಿಂದ ತೃಪ್ತನಾಗದೆ 2,000 ಕುದುರೆ ಸವಾರರನ್ನು ಕಳುಹಿಸಬೇಕೆಂದು ಕೇಳಿದ. ಇಷ್ಟು ಕೊಡಲು ತನಗೆ ಸಾಧ್ಯವಾಗದೆಂದು ದೊರೆ ಹೇಳಿಕೊಂಡಾಗ ಈ ಸಂಖ್ಯೆಯನ್ನು 1,000 ಕ್ಕೆ ಇಳಿಸಲಾಯಿತು. ಚೈತ್ ಸಿಂಗ್ ಕೊನೆಗೆ 500 ಕುದುರೆ ಸವಾರರನ್ನೂ 500 ಕಾಲಾಳುಗಳನ್ನೂ ಸಂಗ್ರಹಿಸಿ ಅವರನ್ನು ಕಂಪನಿಯ ಸೇವೆಗೆ ಒಪ್ಪಿಸುವುದಾಗಿ ಹೇಸ್ಟಿಂಗ್ಸ್‌ನಿಗೆ ತಿಳಿಸಿದ. ಆದರೆ ಹೇಸ್ಟಿಂಗ್ಸ್‌ನಿಂದ ಏನೂ ಉತ್ತರ ಬರಲಿಲ್ಲ. ಚೈತ್ ಸಿಂಗನಿಗೆ 50 ಲಕ್ಷ ರೂ. ದಂಡ ವಿಧಿಸಬೇಕೆಂದು ಹೇಸ್ಟಿಂಗ್ಸ್ ನಿರ್ಧರಿಸಿ, ತನ್ನ ಯೋಜನೆಯನ್ನು ಕಾರ್ಯಗತ ಮಾಡಲು ಸ್ವತಃ ವಾರಣಾಸಿಗೆ ಹೋಗಿ ರಾಜನನ್ನು ಅರಮನೆಯಲ್ಲೇ ಬಂಧನದಲ್ಲಿಟ್ಟ. ರಾಜ ತೆಪ್ಪಗೆ ಶರಣಾಗತನಾದರೂ ಅವನ ಸೈನಿಕರು ತಮ್ಮ ದೊರೆಗೆ ಆದ ಅವಮಾನವನ್ನು ಸಹಿಸದೆ ಹೇಸ್ಟಿಂಗ್ಸನೊಡನೆ ಬಂದಿದ್ದ ಸೈನಿಕರನ್ನು ಕೊಂದರು. ಹೇಸ್ಟಿಂಗ್ಸ್ ಆತ್ಮರಕ್ಷಣೆಗಾಗಿ ಚೂನಾರಿಗೆ ಹಿಂದಿರುಗಿ ಬಳಿಕ ಅಧಿಕ ಸೈನ್ಯದೊಡನೆ ವಾರಣಾಸಿಯನ್ನು ಹಿಡಿದುಕೊಂಡು ಅರಮನೆಯನ್ನು ಲೂಟಿ ಹೊಡೆಸಿದ. ಚೈತ್ ಸಿಂಗ್ ದೇಶಭ್ರಷ್ಟನಾಗಿ ಗ್ವಾಲಿಯರ್‌ನಲ್ಲಿ ಆಶ್ರಯ ಪಡೆದ. ಇಂಗ್ಲಿಷರು ಅವನ ಸೋದರಳಿಯನನ್ನು ರಾಜನೆಂದು ಘೋಷಿಸಿದರು. ಅವನು ಕಂಪನಿಗೆ 22½ ಲಕ್ಷ ರೂ.ಗೆ ಬದಲಾಗಿ 40 ಲಕ್ಷ ರೂ. ಕಪ್ಪ ಸಲ್ಲಿಸಬೇಕೆಂದು ವಿಧಿಸಲಾಯಿತು. ಇದು ಆ ಪುಟ್ಟ ಸಂಸ್ಥಾನಕ್ಕೆ ಹೊರಲಾರದ ಹೊರೆಯಾಯಿತು.

ಚೈತ್ ಸಿಂಗನ ವಿಷಯದಲ್ಲಿ ವಾರನ್‌ಹೇಸ್ಟಿಂಗ್ಸನ ನಡವಳಿಕೆ ಅವನ ಕ್ರೌರ್ಯ, ಅನ್ಯಾಯ, ದಬ್ಬಾಳಿಕೆಗಳಿಗೆ ಸಾಕ್ಷಿಯಾಗಿದೆಯೆಂದು ಆಗಿನ ಬ್ರಿಟಿಷ್ ಪ್ರಧಾನಿ ಪಿಟ್ಟನ ಅಭಿಪ್ರಾಯವಾಗಿತ್ತು. ಚೈತ್‌ಸಿಂಗ್ ರಾಜನಾಗಿರಲಿಲ್ಲವೆಂದೂ ಅವನೊಬ್ಬ ಸಾಮಾನ್ಯ ಜಮೀನ್ದಾರನಾಗಿದ್ದನೆಂದೂ ವಾದಿಸಿ, ಹೇಸ್ಟಿಂಗ್ಸನ ವರ್ತನೆಯನ್ನು ಕೆಲವರು ಸಮರ್ಥಿಸಿದರಾದರೂ, ಉಳಿದ ಜಮೀನ್ದಾರರನ್ನು ಪೀಡಿಸದೆ ಚೈತ್ ಸಿಂಗನನ್ನು ಮಾತ್ರ ಹೇಸ್ಟಿಂಗ್ಸ್ ಹೀಗೆ ಪೀಡಿಸಿದ್ದು ತರವಲ್ಲವೆಂಬುದಂತೂ ನಿಜ.

ವಾರನ್ ಹೇಸ್ಟಿಂಗ್ಸನನ್ನು ಬ್ರಿಟನ್ನಿನಲ್ಲಿ ವಿಚಾರಣೆಗೆ ಗುರಿಪಡಿಸಿದಾಗ ಅವನ ಮೇಲೆ ಹೊರಿಸಲಾದ ಇಪ್ಪತ್ತೆರಡು ಆರೋಪಗಳ ಪೈಕಿ ಅವನು ಚೈತ್ ಸಿಂಗನ ಮೇಲೆ ಕೈಗೊಂಡ ಅನ್ಯಾಯದ ಕ್ರಮವೂ ಒಂದು. *

**ಚೈತನ್ಯ :** ಚೈತನ್ಯ ಮಹಾಪ್ರಭು ಎಂದೂ ಹೆಸರು. ಸು. 1485–ಸು.1534. ಬಂಗಾಳದ ವೈಷ್ಣವ ಪಂಥಕ್ಕೆ ನಿಷ್ಕೃಷ್ಟ ರೂಪವನ್ನು ಕೊಟ್ಟ ಮಹಾಭಕ್ತ ಚೈತನ್ಯ ಸಂಪ್ರದಾಯದ ಪ್ರವರ್ತಕ. ಚೈತನ್ಯ ಎಂಬುದು ಕೃಷ್ಣ ಚೈತನ್ಯ ಎಂಬ ಹೆಸರಿನ ಸಂಕ್ಷಿಪ್ತರೂಪ. ತಂದೆ ತಾಯಿ ಈತನಿಗಿಟ್ಟ ಹೆಸರು ವಿಶ್ವಂಭರ ಎಂದು. ಗೌರವರ್ಣದ ಜನ ಬಾಲನನ್ನು ಗೌರಾಂಗ ಎಂದೂ ಬೇವಿನ ಮರದಡಿಯಲ್ಲಿ ಹುಟ್ಟಿದ್ದರಿಂದ ನಿಮಾಯಿ ಎಂದೂ ಕರೆದರು. ಚೈತನ್ಯನಿಗೆ ಮುಂಚೆ ಹುಟ್ಟಿದ ಎಲ್ಲಾ ಮಕ್ಕಳೂ ಸತ್ತುಹೋಗಿದ್ದರಿಂದ ಈ ಮಗುವೂ ಹಾಗೇ ಆಗಬಹುದೆಂದು ಭಾವಿಸಿದ್ದರು. ಚೈತನ್ಯ ನವದ್ವೀಪದ (ಈಗಿನ ನದಿಯಾ) ವೈದಿಕ ಬ್ರಾಹ್ಮಣ ಜಗನ್ನಾಥ ಮಿಶ್ರನ ಮಗ; ತಾಯಿ ಶಚೀದೇವಿ. ಎಳೆವಯಸ್ಸಿನಲ್ಲಿ ಈತ ಆಟದಲ್ಲೇ ಹೆಚ್ಚು ಆಸಕ್ತನಾಗಿದ್ದಂತೆ ತೋರುತ್ತದೆ.



ಚೈತನ್ಯ, ನಿತ್ಯಾನಂದರು ನವದ್ವೀಪದಲ್ಲಿ ಸಂಕೀರ್ತನೆ ಮಾಡುತ್ತಿರುವ ದೃಶ್ಯ

ಒಂದು ಪಾಠಶಾಲೆಯಲ್ಲಿ ಕೆಲವು ದಿನ ಅಕ್ಷರ ಕಲಿತು ಅನಂತರ ಗಂಗಾದಾಸ್ ಪಂಡಿತನಲ್ಲಿ ಈತ ವಿದ್ಯೆ ಕಲಿತ. ಅಲ್ಲಿ ಎರಡು ವರ್ಷ ವ್ಯಾಕರಣ, ಎರಡು ವರ್ಷ ಸಾಹಿತ್ಯ ಅಭ್ಯಸಿಸಿದ. ಅನಂತರ ವಿಷ್ಣು–ಮಿಶ್ರನಲ್ಲಿ ಸ್ಮೃತಿ ಮತ್ತು ಜ್ಯೋತಿಷ್ಯವನ್ನೂ ಸುದರ್ಶನ ಮಿಶ್ರನಲ್ಲಿ ಷಡ್ದರ್ಶನವನ್ನೂ ಕಲಿತ. ಪಂಡಿತರ ವಂಶಕ್ಕೆ ಸೇರಿದ ಈತ ತುಂಬ ಚುರುಕಾಗಿದ್ದ. ಹದಿನೈದರ ವಯಸ್ಸಿನಲ್ಲಿಯೇ ಈತನಿಗೆ ಪಂಡಿತ ಎಂಬ ಗೌರವ ದೊರಕಿತು. ಈ ವೇಳೆಗೆ ಇವನ ತಂದೆ ತೀರಿಕೊಂಡು, ಇವನ ಒಬ್ಬನೇ ಜೀವಂತ ಸೋದರ ವಿಶ್ವರೂಪ ಎಂಬಾತ ಎತ್ತಲೋ ಹೊರಟುಹೋಗಿ, ಈ ಕಿರಿಯ ತನ್ನ ತಾಯ ಹಂಬಲದ ಏಕವಸ್ತುವಾಗಿ ಉಳಿದ. ಹದಿನಾರನೆಯ ವಯಸ್ಸಿನಲ್ಲಿಯೇ ಸ್ವಂತ ಪಾಠಶಾಲೆಯೊಂದನ್ನು ತೆರೆದು ವ್ಯಾಕರಣವನ್ನು ಹೇಳಿಕೊಡಲು ಪ್ರಾರಂಭಿಸಿದ. ವಲ್ಲಭಾಚಾರ್ಯನ ಪುತ್ರಿ ಲಕ್ಷ್ಮೀಪ್ರಿಯಾಳ ಜೊತೆ ಇವನಿಗೆ ಪ್ರಥಮ ವಿವಾಹವಾಯಿತು. ಅನಂತರ ಅಂದಿನ ತರುಣ ಪಂಡಿತರ ರೂಢಿಯಂತೆ ಚೈತನ್ಯ ದೇಶಯಾತ್ರೆಗೆ ಹೊರಟ. ಯಾತ್ರೆಯಿಂದ ಹಿಂತಿರುಗುವ ಮುನ್ನ ಹೆಂಡತಿ ಸರ್ಪದಂಶನದಿಂದ ತೀರಿಕೊಂಡಿದ್ದಳು. ಮರಳಿ ಮದುವೆಯಾದ. ಈ ಹೆಂಡತಿಯ ಹೆಸರು ವಿಷ್ಣುಪ್ರಿಯಾ. ಅವಳು ನವದ್ವೀಪದ ಸನಾತನಮಿಶ್ರ ಎಂಬ ಪಂಡಿತನ ಮಗಳು. ಈ ವಯಸ್ಸಿನಲ್ಲಿ ಚೈತನ್ಯನು ಮನೆತನದ ವೈಷ್ಣವಾಚಾರಕ್ಕಿಂತ ಪಾಂಡಿತ್ಯದಲ್ಲಿ ಹೆಚ್ಚು ಶ್ರದ್ಧೆ ತೋರುತ್ತಿದ್ದ. ಮಾಧ್ವ ಸಿದ್ಧಾಂತದ ಒಬ್ಬ ಸಂನ್ಯಾಸಿಯಾದ ಈಶ್ವರಪುರಿ ಎಂಬ ವೈಷ್ಣವ ಹಿರಿಯ ಇವನನ್ನು ತನ್ನ ಪಂಥದತ್ತ ಸೆಳೆಯಲು ಪ್ರಯತ್ನಿಸಿ ಸೋತ. ಆದರೆ ಐದು ವರ್ಷದ ಅನಂತರ ತಂದೆಯ ಶ್ರಾದ್ಧ ಮಾಡಲು ಗಯೆಗೆ ಹೋದ ವೇಳೆ ಈಶ್ವರಪುರಿಯನ್ನು ಅಲ್ಲಿ ಕಂಡು ಅವನನ್ನು ಗುರುವಾಗಿ ಸ್ವೀಕರಿಸಿ ಭಕ್ತನಾದ. ಗಯೆಯಲ್ಲಿ ವಿಷ್ಣುಪಾದದ ದರ್ಶನವಾದ ಕೂಡಲೇ ಚೈತನ್ಯನಲ್ಲಿ ಒಮ್ಮಿಂದೊಮ್ಮೆ ಬದಲಾವಣೆಯಾಗಿ ಆತ ಭಕ್ತನಾದ ಎಂದೂ ಹೇಳಲಾಗಿದೆ. ಅನಂತರ ನವದ್ವೀಪಕ್ಕೆ ಹಿಂತಿರುಗಿ ಪಾಂಡಿತ್ಯದ ಎಲ್ಲ ಕಲಾಪವನ್ನೂ ತೊರೆದು ವೈಷ್ಣವ ಪಂಥದ ಭಕ್ತಿಕೂಟಗಳಲ್ಲಿ ಸೇರಿ ಭಕ್ತಿ ಗ್ರಂಥಗಳ ಪಾಠದಲ್ಲಿ ಕೀರ್ತನೆಗಳಲ್ಲಿ ಲೀನನಾದ. ಸಂಜೆಯ ಈ ಪ್ರವಚನ ಕೀರ್ತನೆಗಳು ಶ್ರೀವಾಸ ಎಂಬ ಹೆಸರಿನ ಪ್ರಮುಖ ಭಕ್ತನ ಮನೆಯ ತೋಟ್ಟಿಯಲ್ಲಿ ನಡೆಯುತ್ತಿದ್ದುವು. ಪಾಂಡಿತ್ಯದಲ್ಲಿ ಹೇಗೋ ಹಾಗೆ ಕೀರ್ತನದಲ್ಲಿಯೂ ಚೈತನ್ಯನದು ತೀವ್ರ ಸಿದ್ಧಿ. ಈ ವೇಳೆಗೆ ಚೈತನ್ಯ ಶಿಷ್ಯರನ್ನು ಅಂಗೀಕರಿಸಲು ತೊಡಗಿದ್ದ. ಶಿಷ್ಯರೊಡನೆ ಕೀರ್ತನೆ ಮಾಡುತ್ತ ನಗರವನ್ನು ಸುತ್ತುವ ಪರಿಪಾಟ ಮೊದಲಾಯಿತು. ಅಂದಿಗೆ ನವದ್ವೀಪ ವೈಷ್ಣವ ಭಕ್ತಿಗೆ ಕೇಂದ್ರವೆಂದು ಹೆಸರು ಗಳಿಸಿತ್ತು. ಚೈತನ್ಯನಿಗಿಂತ ಎಷ್ಟೋ ವರ್ಷ ಹಿರಿಯನಾದ ಅದ್ವೈತಾಚಾರ್ಯ ಎಂಬ ಒಬ್ಬ ಪಂಡಿತನೂ ಕೆಲವು ವರ್ಷ ಹಿರಿಯನಾದ ನಿತ್ಯಾನಂದ ಎಂಬ ಒಬ್ಬ ಸಂನ್ಯಾಸಿಯೂ ಇವನ ಶಿಷ್ಯರಾದರು. ಕೀರ್ತನೆಗಳಲ್ಲದೆ ಚೈತನ್ಯ ಕೃಷ್ಣನ ಕಥೆಯ ಪ್ರಸಂಗಗಳನ್ನು ನಾಟಕ ಮಾಡಿ ಆಡಿಸಲು ತೊಡಗಿದ. ಅಂಥ ಆಟಗಳಲ್ಲಿ ತಾನೇ ರುಕ್ಮಿಣಿಯ ಪಾತ್ರವನ್ನು ವಹಿಸುತ್ತಿದ್ದ. ಇದೇ ಕಾಲದಲ್ಲಿ, ಕೃಷ್ಣನ ಲೀಲೆಯ ಸ್ಥಾನವಾದ ಬೃಂದಾವನವನ್ನು ಉಜ್ಜೀವನಗೊಳಿಸಲು ನಿಶ್ಚಯಿಸಿ ಲೋಕನಾಥ ಗೋಸ್ವಾಮಿ ಎಂಬ ತನ್ನ ಶಿಷ್ಯನನ್ನು ಆ ಕೆಲಸಕ್ಕಾಗಿ ಅಲ್ಲಿಗೆ ಕಳುಹಿಸಿದ. ನಾಲ್ಕು ವರ್ಷ ಭಕ್ತಿಸಾಧನೆಯ ಅನಂತರ ನವದ್ವೀಪದಿಂದ ಸ್ವಲ್ಪ ದೂರದ ಕಟ್ವಾಯ್ ಎಂಬ ಗ್ರಾಮದಲ್ಲಿ ಕೇಶವಭಾರತಿ ಎಂಬ ಸಂನ್ಯಾಸಿಯಿಂದ ಗುಪ್ತವಾಗಿ ಸಂನ್ಯಾಸ ಸ್ವೀಕಾರ ಮಾಡಿದ. ಅಂದಿನಿಂದ ಗೌರಾಂಗ ಮಹಾಪ್ರಭುವಾದ. ಸಂನ್ಯಾಸಸ್ವೀಕಾರದಿಂದ ತಾಯಿ, ಹೆಂಡತಿ ತುಂಬ ನೊಂದರು. ಅನಂತರ ಬೃಂದಾವನ ಯಾತ್ರೆಗೆ ಹೊರಟ. ಮಿತ್ರರೂ ತಾಯಿಯೂ ತಡೆದರು; ಜಗನ್ನಾಥಪುರಿಯಲ್ಲಿ ನಿಲ್ಲುವುದಾಗಿ

ತಾಯಿಗೆ ಮಾತುಕೊಟ್ಟು ಆ ಕ್ಷೇತ್ರಕ್ಕೆ ಹೋದ; ಅಲ್ಲಿಯ ಮೂರ್ತಿಯನ್ನು ನೋಡಿ ಭಾವಪರವಶನಾಗಿ ಸಮಾಧಿಯಲ್ಲಿ ಕೆಡೆದ. ಕ್ಷೇತ್ರದ ಪ್ರಖ್ಯಾತ ವೇದಾಂತಿ ವಾಸುದೇವ ಸಾರ್ವಭೌಮ ಇವನನ್ನು ತನ್ನ ಮನೆಗೆ ಒಯ್ದು ಶುಶ್ರೂಷೆ ಮಾಡಿದನಲ್ಲದೆ ಕೆಲವು ದಿವಸಗಳಾದ ಮೇಲೆ ಚೈತನ್ಯನ ಭಕ್ತಿಪಂಥವನ್ನು ಸೇರಿದ. ಈ ವೇಳೆಗೆ ಚೈತನ್ಯ ಶ್ರೀಕೃಷ್ಣನ ಅಪರಾವತಾರ ಎಂಬ ನಂಬಿಕೆ ಬೆಳೆದಿತ್ತು. ಕೆಲವು ತಿಂಗಳ ಅನಂತರ ಚೈತನ್ಯ ಕ್ಷೇತ್ರಯಾತ್ರೆ ಹೊರಟು ಶ್ರೀ ಕೂರ್ಮ, ರಾಜಮಹೇಂದ್ರ, ಕಾಂಚೀಪುರ, ಚಿದಂಬರ, ಶ್ರೀರಂಗ, ಮಧುರೆ, ರಾಮೇಶ್ವರ, ತಿರುವನಂತಪುರ, ಶೃಂಗೇರಿ, ಉಡುಪಿ, ಕೊಲ್ಹಾಪುರ, ಪಂಢರಪುರ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿದ. ರಾಜಮಹೇಂದ್ರದಲ್ಲಿ ರಾಮಾನಂದರಾಯ ಎಂಬ ಪ್ರಸಿದ್ಧ ಭಕ್ತನ ಪರಿಚಯವಾಯಿತು. ಶ್ರೀರಂಗದಲ್ಲಿ, ಉಡುಪಿಯಲ್ಲಿ ವೈಷ್ಣವರೊಂದಿಗೆ ಚರ್ಚೆ ನಡೆಯಿತು. ಹಿಂದಿರುಗಿ ಬರುತ್ತ ಬ್ರಹ್ಮಸಂಹಿತಾ, ಕೃಷ್ಣಕರ್ಣಾಮೃತ ಎಂಬ ಎರಡು ಗ್ರಂಥಗಳನ್ನು ತಂದ. ಜಯದೇವನ ಗೀತಗೋವಿಂದ ಅಂದಿಗೆ ವಂಗದೇಶದಲ್ಲಿ ಬಳಕೆಯಲ್ಲಿದ್ದ ವೈಷ್ಣವಮತ ಗ್ರಂಥ. ಹೊಸ ಗ್ರಂಥಗಳೆರಡೂ ಇದರೊಂದಿಗೆ ಚೈತನ್ಯ ಪಂಥದ ಮುಖ್ಯ ಗ್ರಂಥಗಳಾದವು. ಪುರಿಯ ದೊರೆ ಪ್ರತಾಪರುದ್ರ ಚೈತನ್ಯನ ಶಿಷ್ಯನಾದ.

ಚೈತನ್ಯ ಮಹಾಪ್ರಭುಗಳ ಹುಟ್ಟೂರು ನವದ್ವೀಪದಲ್ಲಿರುವ ಯೋಗಪೀಠ

ಭಕ್ತನಿಗೆ ಯುಕ್ತವಾದ ನೈಚ್ಯಸಂಧಾನದಲ್ಲಿ ಆಲಯದ ಯಾವ ಊಳಿಗವನ್ನೂ ಮಾಡುವ ಸಂತೋಷವನ್ನು ಚೈತನ್ಯ ಅನುಭವಿಸಿದ. ಇದು ಮೊದಲು ತಮ್ಮ ನಾಯಕನನ್ನು ದರ್ಶನ ಮಾಡಲು ನವದ್ವೀಪ ಮತ್ತು ಅದರ ಸುತ್ತಲ ವೈಷ್ಣವ ಭಕ್ತರು ತಂಡತಂಡವಾಗಿ ಜಾತ್ರೆ ನಡೆಸಿಕೊಂಡು ಬಂದರು. ಮಗನ ದರ್ಶನ ಪಡೆಯಲು ತಾಯಿಯೂ ಬರಲಾಗಿ ಚೈತನ್ಯ ಆಕೆಯನ್ನು ರಾಮಕಾಳಿ ಎಂಬ ಸ್ಥಳದಲ್ಲಿ ಎದುರುಗೊಂಡ. ಒಬ್ಬ ನವಾಬನಲ್ಲಿ ಅಧಿಕಾರಿಗಳಾಗಿದ್ದ ಸ್ಮಾರ್ತ ಸೋದರರಿಬ್ಬರನ್ನು ಅಲ್ಲಿ ಶಿಷ್ಯರಾಗಿ ಅಂಗೀಕರಿಸಿದ. ಇವರೇ ಆಮೇಲೆ ಚೈತನ್ಯ ಪಂಥದಲ್ಲಿ ಪ್ರಸಿದ್ಧರಾದ ರೂಪ ಗೋಸ್ವಾಮಿ ಮತ್ತು ಸನಾತನ ಗೋಸ್ವಾಮಿ. ಆಮೇಲೆ ಚೈತನ್ಯ ವಾರಾಣಸಿ, ಮಥುರಾ, ಗೋವರ್ಧನ, ಬೃಂದಾವನ ಕ್ಷೇತ್ರಗಳಿಗೆ ಹೋದ. ಬೃಂದಾವನದಲ್ಲಿ ಪ್ರಚಂಡ ಅನುಭಾವದಲ್ಲಿ ಸ್ವಲ್ಪ ಕಾಲ ಕಳೆದು ಪ್ರಯಾಗಕ್ಕೆ ಮರಳಿ ಅಲ್ಲಿಂದ ವಾರಾಣಸಿಗೆ, ಅಲ್ಲಿಂದ ಪುರಿಗೆ ಬಂದ. ವಾರಾಣಸಿಯಲ್ಲಿ ಪ್ರಕಾಶಾನಂದ ಸರಸ್ವತಿ ಎಂಬ ಪ್ರಮುಖ ವೇದಾಂತ ವಿದ್ವಾಂಸನನ್ನು ತನ್ನ ಪಂಥಕ್ಕೆ ಸೇರಿಸಿಕೊಂಡ. ಜಗನ್ನಾಥ ಪುರಿಯಲ್ಲಿ ಹದಿನೆಂಟು ವರ್ಷ ದೈವ ಸನ್ನಿಧಿಯಲ್ಲಿದ್ದು 1534ರಲ್ಲಿ ಇಹಜೀವನವನ್ನು ಮುಗಿಸಿದ. ಈತ ತೀರಿಕೊಂಡ ರೀತಿಯನ್ನು ಕುರಿತು ಹಲವು ಕಥನಗಳಿವೆ. ಕಾಲಲ್ಲಿ ಕಾಣಿಸಿಕೊಂಡ ಒಂದು ವ್ರಣದಿಂದ ತೀರಿಕೊಂಡ. ಎನ್ನುವುದು ಒಂದು. ಸಮಾಧಿಯಲ್ಲಿದ್ದ ವೇಳೆ ಸಮುದ್ರದೊಳಕ್ಕೆ ನಡೆದು ಜೀವನ ಮುಗಿಸಿದ ಎನ್ನುವುದು ಇನ್ನೊಂದು. ಜಗನ್ನಾಥನ ಮೂರ್ತಿಯಲ್ಲಿ ಲೀನವಾಗಿ ಕಣ್ಮರೆಯಾದ ಎನ್ನುವುದು ಮತ್ತೊಂದು.

ಅಂದಿನ ಸಾಮಾಜಿಕ ಜೀವನದ ಮೇಲೆ ಚೈತನ್ಯನ ಪ್ರಭಾವ ಅಪಾರ. ಚೈತನ್ಯ ವರ್ಣವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿದ. ಈ ವಿಚಾರ ಕ್ರಾಂತಿ ಅಂದಿನ ಸಮಾಜದ ಮೇಲೆ ದೊಡ್ಡ ಪರಿಣಾಮ ಬೀರಿತು. ಜಾತಿವಾದವನ್ನು ತೊಡೆಯಲು ಹಿಂದೂ ಮುಸಲ್ಮಾನರ ವೈಷಮ್ಯವನ್ನು ಅಳಿಸಲು ಚೈತನ್ಯ ಬಹುವಾಗಿ ಶ್ರಮಿಸಿದ. (ಎಂ.ಎ.ಐ.; ಕೆ.ಕೆ.)

ಮಹಾ ವಿದ್ವಾಂಸನಾದರೂ ಚೈತನ್ಯನು ಗ್ರಂಥರಚನೆಗೆ ಕೈಹಾಕಲಿಲ್ಲ. ಈತ ರಚಿಸಿದ್ದೆಂಬ ಪ್ರತೀತಿ ಇರುವ ಕೃತಿ ಒಂದೇ ಒಂದು. ಅದರಲ್ಲಿ ಎಂಟು ಶ್ಲೋಕಗಳಿವೆ. ದೇವರ ಹೆಸರು ಅವನ ಶಕ್ತಿಯನ್ನು ವೃದ್ಧಿ ಮಾಡುತ್ತದೆ; ಅದನ್ನು ಯಾವ ಹೊತ್ತಿನಲ್ಲೂ ನೆನೆಯಬಹುದು. ಆದರೂ ನಾನು ನಿನ್ನಲ್ಲಿ ಭಕ್ತಿಯಿಡುವುದನ್ನು ಕಲಿತಿಲ್ಲ. ಕೃಷ್ಣನ ಹೆಸರನ್ನು ಹೇಳಬಯಸುವ ಮನುಷ್ಯ ವಿನಯವನ್ನೂ ಸಹನೆಯನ್ನೂ ಅನುಷ್ಠಾನ ಮಾಡಬೇಕು; ತಾನು ನೈಚ್ಯಾನುಸಂಧಾನ ಮಾಡಿ ಹೆರವರಿಗೆ ಗೌರವ ತೋರಬೇಕು. ಭಗವಂತನಲ್ಲಿ ವಿಶ್ವಾಸ ಇಡುವುದಕ್ಕಿಂತ ಹೆಚ್ಚಿನ ಸಂಪತ್ತು ಇನ್ನೊಂದು ಇಲ್ಲ. ಆದ್ದರಿಂದ ಮನುಷ್ಯನಾದವ ಭಕ್ತಿಪರವಶನಾಗಬೇಕು. ಅಷ್ಟೇ ದಿಟವಾಗಿ ದೈವದಿಂದ ಆಗಲಿರುವುದು ದೌರ್ಭಾಗ್ಯದಲ್ಲಿ ಹೆಚ್ಚಿನ ದೌರ್ಭಾಗ್ಯ. ಭಗವನ್ನಾಮಕ್ಕೆ ಜಯ, ನನ್ನನ್ನು ಎಲ್ಲಿಯೇ ನಿಲ್ಲಿಸಿದರೂ ನನ್ನ ಹೃದಯದ ನಾಥನಾಗಿರುವ ಓ ನನ್ನ ದೈವವೇ ನನ್ನನ್ನು ಅಂಗೀಕರಿಸು. ಇದು ಈ ಶ್ಲೋಕಗಳ ಸಾರ.

**ಚೈತನ್ಯ ಪಂಥ :** ವಂಗದೇಶದ ವೈಷ್ಣವಪಂಥ ಚೈತನ್ಯನಿಗೂ ಹಿಂದಿನಿಂದ ಬೆಳೆದು ಬಂದಿತ್ತು. ಇದು ಮೂಲತಃ ಶ್ರೀಮಧ್ವಾಚಾರ್ಯರ ಅನುಯಾಯಿಗಳ ಶಾಖೆಯಾಗಿದ್ದು ಶ್ರೀ ಭಾಗವತಪುರಾಣವನ್ನು ಆಧಾರಗ್ರಂಥವಾಗಿ ಅವಲಂಬಿಸಿತ್ತು. ಕಾಲಾನುಕ್ರಮದಲ್ಲಿ ರಾಧಾಕೃಷ್ಣರ ಪ್ರೇಮವನ್ನು ಹಾಡಿದ ಬಂಗಾಳೀ ಗೀತಕಾರ ಭಕ್ತರಿಂದ ಮುಂದುವರಿದು ಜಯದೇವನ ಗೀತಗೋವಿಂದವನ್ನು ಒಂದು ಮುಖ್ಯ ಗ್ರಂಥವಾಗಿ ಗ್ರಹಿಸಿತ್ತು. ಬ್ರಹ್ಮಸಂಹಿತೆ, ಶ್ರೀಕೃಷ್ಣಕರ್ಣಾಮೃತ ಗ್ರಂಥಗಳನ್ನು ಚೈತನ್ಯ ತನ್ನ ಗ್ರಂಥಗಳಾಗಿ ಅಂಗೀಕರಿಸಿದನಷ್ಟೆ. ಚೈತನ್ಯ ಸ್ವತಃ ಗ್ರಂಥರಚನೆ ಮಾಡದಿದ್ದರೂ ಸನಾತನ ಗೋಸ್ವಾಮಿಗೆ ಪಂಥದ ಸ್ಮೃತಿಯನ್ನು ನಿರ್ಮಿಸಲು ಆದೇಶವಿತ್ತ; ಅದರ ರೂಪರೇಖೆಯನ್ನು ಸೂಚಿಸಿದ. ಸನಾತನ ಗೋಸ್ವಾಮಿ ಹರಿಭಕ್ತಿವಿಲಾಸ ಎಂಬ ಗ್ರಂಥವನ್ನು ರಚಿಸಿದ. ಇತರ ಭಕ್ತರು ಇತರ ಗ್ರಂಥಗಳನ್ನು ಬರೆದರು. ಬ್ರಹ್ಮಸೂತ್ರಗಳಿಗೆ ಈ ಪಂಥವನ್ನನುಸರಿಸಿದ ಒಂದು ಭಾಷ್ಯೆ ಆವಶ್ಯಕವೆಂದು ಕಂಡಾಗ ಬಲದೇವ ವಿದ್ಯಾಭೂಷಣ ಎಂಬ ಪಂಡಿತ ಒಂದು ಭಾಷ್ಯವನ್ನು ರಚಿಸಿದ. ಪಂಥದ ಭಕ್ತರನೇಕರು ಗೀತೆಗಳನ್ನು ರಚಿಸಿದರು. ಅವು ಜನಪ್ರಿಯವಾಗಿ ನಾಡಿನಲ್ಲೆಲ್ಲ ಹರಡಿದವು. ಚೈತನ್ಯ ಪಂಥೀಯವರಿಗೆ ಇವೆಲ್ಲ ಧಾರ್ಮಿಕ ಗ್ರಂಥಗಳಾಗಿ ಉಳಿದಿವೆ.

ಪಂಥದ ಉಪದೇಶಕ್ಕೆ ಗುರು ಚೈತನ್ಯನ ಜೀವನವೇ ಆಧಾರ. ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಹಾಗೆಯೇ ಗೀತೆ ಹೇಳಿರುವಂತೆ ದೇವರು ಸರ್ವೋತ್ತಮ ಸತ್ಯ. ಆನಂದ ಅವನ ಸ್ವರೂಪ. ಈ ಅತ್ಯುನ್ನತ ಸತ್ಯದ ಹೆಸರು ಕೃಷ್ಣ. ಈ ದೈವದೊಂದಿಗೆ ಬೆಳೆಸಬೇಕಾದ ಉತ್ಕೃಷ್ಟ ಸಂಬಂಧ ಪ್ರೇಮ. ಕರ್ಮ, ಜ್ಞಾನ, ಯೋಗ ಇದಕ್ಕೆ ಸಮನಲ್ಲ. ಈ ಪ್ರೇಮದ ಅತಿ ಶ್ರೇಷ್ಠ ಆದರ್ಶ ರಾಧೆ. ಚೈತನ್ಯಮಹಾಪ್ರಭುವು ರಾಧಾಕೃಷ್ಣರಿಬ್ಬರೂ ಸೇರಿದ ಒಂದು ಅವತಾರ. ಬ್ರಹ್ಮ, ವಿಷ್ಣು, ಶಿವ–ಇವರು ಕೃಷ್ಣನ ಆವಿಷ್ಕಾರಗಳು. ಕೃಷ್ಣನಿಗೆ ಮೂರು ಶಕ್ತಿ ಇವೆ. ಚಿತ್, ಮಾಯಾ, ಜೀವ. ಚಿತ್ ಪರಮಾತ್ಮ; ಅದರ ಮುಖ್ಯ ಲಕ್ಷಣ ಹ್ಲಾದ. ಮಾಯೆಯಿಂದ ಲೋಕ, ಜೀವದಿಂದ ಜೀವಾತ್ಮಗಳು ನಿರ್ಮಾಣವಾಗುತ್ತವೆ. ಜೀವಾತ್ಮ ಪರಮಾತ್ಮಗಳ ಸಂಬಂಧ ಅಚಿಂತ್ಯ. ಅವು ಎಷ್ಟರ ಮಟ್ಟಿಗೆ ಭಿನ್ನವೋ ಅಷ್ಟರ ಮಟ್ಟಿಗೆ ಅಭಿನ್ನ. ಇದು ಅನುಭವೈಕವೇದ್ಯ. ಭೂಲೋಕದ ಬೃಂದಾವನದ ಕೃಷ್ಣಲೀಲೆ ಪರಲೋಕದ ಜೀವ ಪರಮಾತ್ಮ ಲೀಲೆಯ ಒಂದು ಪ್ರತಿ. ಕೆಲವು ಜೀವಾತ್ಮಗಳು ರಾಧೆಯ ಸ್ಥಿತಿಯಲ್ಲಿರುತ್ತವೆ; ಅನೇಕ ಅವಳ ಗೆಳತಿಯರ ಸ್ಥಿತಿಯಲ್ಲಿರುತ್ತವೆ. ಜೀವಾತ್ಮ ಪರಮಾತ್ಮರ ಸಂಬಂಧವನ್ನು ಗಂಡು ಹೆಣ್ಣಿನ ಮಧ್ಯದ ಪ್ರೇಮ ಎಂದು ವರ್ಣಿಸುವುದು ವಿವರಣೆಯ ಸಲುವಾಗಿ; ಅದನ್ನು ವಿಷಯಸುಖ ಎಂದು ಭಾವಿಸಲಾಗದು. ಭಕ್ತನಾದ ಜೀವ ಆ ಭಕ್ತಿಯಿಂದ ಉದ್ಧಾರವಾಗುತ್ತದೆ; ಆದಕಾರಣ ಭಕ್ತಜೀವದ ಜಾತಿ, ಕುಲ, ಗೋತ್ರ, ಲಿಂಗ, ವಿದ್ಯೆ, ಇವು ಗೌಣ. ಲೋಕ ಭಗವಂತನಿಗೆ ಸೇವೆ ಸಲ್ಲಿಸುವ ಕ್ಷೇತ್ರ. ಭಕ್ತನಾದವ ತನ್ನ ಆವರಣದಲ್ಲಿ ಎಲ್ಲೆಡೆಯೂ ದೈವವನ್ನು ಕಾಣುತ್ತಾನೆ. ಜೊತೆಯ ಜೀವಗಳಿಗೆ ಸೇವೆ ಸಲ್ಲಿಸುತ್ತಾನೆ. ಮನುಷ್ಯನಿಗೆ ಈ ಜ್ಞಾನ ಅವನ ಒಳಗಿರುವ ಗುರುವಿನಿಂದ ಬರುತ್ತದೆ. ಆ ಗುರುವೇ ದೈವ, ಬೇರೆ ಅಲ್ಲ. ಈ ನಿಲುವು ಋಜುಜೀವನದಿಂದ ಬರುತ್ತದೆ, ಯುಕ್ತಿಯಿಂದ ಅಲ್ಲ. ಇದು ಪಂಥದ ಉಪದೇಶಸಾರ.

ಚೈತನ್ಯನ ಅನುಯಾಯಿಗಳು ಕೆಲವು ಕಾಲದ ಮೇಲೆ ರಾಧೆ ಕೃಷ್ಣನ ಪ್ರೇಯಸಿಯೇ, ಪತ್ನಿಯೇ ಎಂಬ ಪ್ರಶ್ನೆಯನ್ನು ಹಿಡಿದು ಪರಕೀಯವಾದಿ, ಸ್ವಕೀಯವಾದಿ ಎಂದು ಎರಡು ಪಂಗಡಗಳಾದರು. ಪತ್ನಿಯ ಪ್ರೇಮ ಕರ್ತವ್ಯ; ಪತ್ನಿ ಅಲ್ಲದವಳ ಪ್ರೇಮ ಅದಕ್ಕಿಂತ ಶ್ರೇಷ್ಠ. ಹೀಗೆ ವಾದಿಸಿದ ಪರಕೀಯವಾದಿಗಳು ಮೇಲುಗೈಯಾದರು. ಚೈತನ್ಯ ಪಂಥದ ಈ ವಾದ ತಂತ್ರಗಳ ಸಹಜೀಯವಾದದ ರೀತಿಯದಾಗಿದೆ. ಆ ವಾದದಿಂದಲೇ ಮೂಡಿಯೂ ಇರಬಹುದು. ಹೇಗೂ ಹೆಣ್ಣುಗಂಡಿನ ಪ್ರೇಮದ ಭಾಷೆ ಸುಲಭಗ್ರಹಣಕ್ಕಾಗಿ ಬಂದಿದೆಯೇ ಹೊರತು ವಸ್ತುಸ್ಥಿತಿಯ ವರ್ಣನಕ್ಕಾಗಿ ಅಲ್ಲ ಎನ್ನುವುದನ್ನು ನೆನಪಿನಲ್ಲಿಟ್ಟರೆ ಈ ವಾದಗಳ ಗೊಂದಲ ಅನಾವಶ್ಯಕ ಎನ್ನುವುದು ಸ್ಪಷ್ಟವಾಗುತ್ತದೆ. ಭಗವದನುಭವಕ್ಕೆ ಕೀರ್ತನ ಸರಿಯಾದ ಮಾರ್ಗವೇ, ಧ್ಯಾನ ಸರಿಯಾದ ಮಾರ್ಗವೇ ಎಂಬ ಪ್ರಶ್ನೆಯ ಕಾರಣದಿಂದಲೂ ಅನುಯಾಯಿಗಳಲ್ಲಿ ಕೆಲವು ವೇಳೆ ಭೇದ ಮೂಡಿತು. ಇದೂ ಅನಗತ್ಯವಾದ ಚರ್ಚೆ. ಭಕ್ತನ ಗುರಿ ಹೃದಯದ ರಾಸ ಸ್ಥಿತಿ, ರಸಾನುಭೂತಿ. ಇದನ್ನು ಒಬ್ಬ ಕೀರ್ತನದಿಂದ ಪಡೆಯುವಂತೆ ಬೇರೊಬ್ಬ ಧ್ಯಾನದಿಂದ ಪಡೆಯುತ್ತಾನೆ.

ಚೈತನ್ಯಪಂಥ ವೈಷ್ಣವನಿಗೆ ಉನ್ನತ ಪ್ರೇಮವನ್ನು ವಿಧಿಸಿದೆ. ಅವನು ದಯಾಳು, ನಿರ್ಮತ್ಸರ, ನಿರಹಂಕಾರಿ, ಪೂರ್ಣ ಸತ್ಯವಂತ, ಅಕಳಂಕ, ಕ್ಷಮಾವಂತ, ಸೌಮ್ಯ ಶುದ್ಧ ಆಗಿರಬೇಕು. ಆಕಿಂಚನನಾಗಿ ಸರ್ವಭೂತಹಿತಕಾರಿಯಾಗಿ ಶಾಂತನಾಗಿ ಇರಬೇಕು; ನಿಷ್ಕಾಮ, ಅಹಿಂಸಕ, ಸ್ಥಿರ ಆಗಿ ಕೃಷ್ಣಾರ್ಪಿತ ಸರ್ವಸ್ವನಾಗಿರಬೇಕು; ದಮದಿಂದ ಕೂಡಿ, ಹೆರವರನ್ನು ಗೌರವಿಸುವನಾಗಿ, ಗಂಭೀರ ವಾತ್ಸಲ್ಯಪೂರ್ಣ, ಸ್ನೇಹಪರ, ಕಾವ್ಯಪರ, ಕುಶಲ, ಮೌನಿ ಆಗಿರಬೇಕು.

ಇಂದು ಚೈತನ್ಯ ಸಂಪ್ರದಾಯ ಬಂಗಾಳ, ಬಿಹಾರ, ಒರಿಸ್ಸ ಮುಂತಾದ ಉತ್ತರ ಭಾರತದ ರಾಜ್ಯಗಳಲ್ಲಿ ಪ್ರಚಾರದಲ್ಲಿದೆ.

ಶ್ರೀಕೃಷ್ಣನನ್ನು, ಶ್ರೀಹರಿಯನ್ನು ಚಿಂತಿಸಿ, ಧ್ಯಾನಿಸಿ, ಜಪಿಸಿ, ಪೂಜಿಸಿ ಮರ್ತ್ಯನು ಅಮರ್ತ್ಯನಾಗಬಲ್ಲ, ಪಾಪಿ ಪುಣ್ಯಾತ್ಮನಾಗಬಲ್ಲ, ಸಂಸಾರಿ ಭವಸಾಗರವನ್ನು ದಾಟಬಲ್ಲ; ಭಕ್ತಿಯು ಭವಸಾಗರವನ್ನು ದಾಟಿಸಬಲ್ಲ ನೌಕೆ; ಭಕ್ತಿಯಿಂದ ಮುಕ್ತಿ. ಭಗವಂತನ ಸಾಕ್ಷಾತ್ಕಾರಕ್ಕೆ ಜ್ಞಾನಯೋಗ ಸುಲಭವಾದ ಮಾರ್ಗವೆಂದು ಸಾರಿದವರು ಚೈತನ್ಯರು. ಈ ಶರಣಾಗತಿ ತತ್ತ್ವವನ್ನು ಜಗತ್ತಿಗೆ ಸಾರಲು ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿರುವ ಚೈತನ್ಯ ಮಹಾಪ್ರಭುಗಳ ಚಿತ್ರವನ್ನು ಅಥವಾ ವಿಗ್ರಹವನ್ನು ನಾವು ಎಲ್ಲ ಕಡೆ ನೋಡುತ್ತೇವೆ.

ಚೈತನ್ಯರ ಉಪದೇಶಗಳು ಭಾರತೀಯ ಸಮಾಜದ ಮೇಲೆ ಐದು ಶತಮಾನಗಳ ಹಿಂದೆಯಷ್ಟೇ ಅಲ್ಲದೆ ಈಗಲೂ ಪ್ರಭಾವ ಬೀರುತ್ತಿವೆ ; ಮುಂದೆಯೂ ಬೀರುತ್ತವೆ.

ಚೈತನ್ಯರು ರಚಿಸಿದ **"ಶಿಕ್ಷಾಷ್ಟಕ"** ವೆಂಬ ಎಂಟು ಶ್ಲೋಕಗಳು ಅವರ ಉಪದೇಶ ಸಾರವನ್ನು ತಿಳಿಸುತ್ತವೆ.

ಚೈತನ್ಯರು ರೂಪ ಗೋಸ್ವಾಮಿ ಮತ್ತು ಸನಾತನ ಗೋಸ್ವಾಮಿಗಳಿಗೆ ನೀಡಿದ ಉಪದೇಶಗಳನ್ನು ಕೃಷ್ಣರಾಜ ಕವಿರಾಜ ಗೋಸ್ವಾಮಿಯವರು 'ಚೈತನ್ಯ ಚರಿತಾಮೃತ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. (ಎಂ.ವಿ.ಐ.; ಬಿ.ವಿ.ಶ್ರೀ.)

**ಚೈತ್ಯ :** ಬೌದ್ಧರ ಪೂಜಾಸ್ಥಳಗಳಿಗೆ ಈ ಹೆಸರಿದೆ. ಇದನ್ನು ಬೌದ್ಧ ದೇವಾಲಯವೆಂದೂ ಕರೆಯಲಾಗಿದೆ. ಸಾಮಾನ್ಯವಾಗಿ ಚೈತ್ಯದೊಳಗೆ ಸ್ತೂಪವೋ (ನೋಡಿ– ಸ್ತೂಪ)

ಚೈತ್ಯಾಲಯ, ಔರಂಗಾಬಾದ್

ಬೋಧಿವೃಕ್ಷವೋ ಧರ್ಮಚಕ್ರವೋ ಬುದ್ಧನ ಪಾದಗಳೋ ಇರುತ್ತವೆ. ಇವನ್ನು ಪೂಜೆ ಮಾಡಿ ಪ್ರದಕ್ಷಿಣೆ ಮಾಡಿ ಬರಲು ಪ್ರದಕ್ಷಿಣಾಪಥವನ್ನೊಳಗೊಂಡ ಮಂದಿರವೇ ಚೈತ್ಯ (ಪಾಳಿಯಲ್ಲಿ ಚೇತಿಯ). ಈ ಕಟ್ಟಡಗಳ ಶೈಲಿ ತೋಡರ ಗುಡಿಸಲುಗಳನ್ನು ಹೋಲುತ್ತದೆ; ಮೌರ್ಯರ ಕಾಲದ ಕೃತಿಯೆನ್ನುವ ಲೋಮಶ ಋಷಿಗುಹೆ (ಗಯಾ ಬಳಿ ಬರಾಬರ್ ಬೆಟ್ಟದಲ್ಲಿದೆ) ಚೈತ್ಯ ಶೈಲಿಗೆ ಬುನಾದಿಯೆನ್ನುತ್ತಾರೆ. ಪ್ರಾಚೀನ ಚೈತ್ಯಗಳಲ್ಲಿ ಬುದ್ಧನ ಮೂರ್ತಿಗಳಿರಲಿಲ್ಲ. ಮುಂದಿನ ಚೈತ್ಯಗಳಲ್ಲಿ ಬುದ್ಧನ ಸ್ಥಾನಕ ಅಥವಾ ಆಸೀನ (ಭೂಮಿಸ್ಪರ್ಶ ಅಥವಾ ಬೋಧಿ ಪ್ರವಚನ) ಅಥವಾ ಶಯಾನ (ಪರಿನಿರ್ವಾಣ) ಮೂರ್ತಿಗಳನ್ನು ಕಡೆದು ಇಡುವ ಪದ್ಧತಿ ಬಂತು. ನಿದರ್ಶನಕ್ಕೆ ಅಜಂತ ಗುಹಾಚೈತ್ಯಗಳಲ್ಲಿ ಬುದ್ಧನ ಸೊಗಸಾದ ಮೂರ್ತಿಗಳಿವೆ. ಮೂರ್ತಿಯ ಮೇಲ್ಭಾಗದಲ್ಲೋ ದ್ವಾರದ ಮೇಲೋ ಅರ್ಧವರ್ತುಲಾಕಾರದ ತೋರಣನಕ್ಷೆಯನ್ನು ಮೂಡಿಸುವುದೂ ಈ ಚೈತ್ಯ ವಾಸ್ತುವಿನ ಲಕ್ಷಣವೆನ್ನಬಹುದು. ಈ ನಕ್ಷೆಯೊಳಗೆ ಗಂಧರ್ವಮುಖಗಳನ್ನೂ ಚಿತ್ರಿಸುತ್ತಿದ್ದರು. ಪ್ರ.ಶ. ಎರಡನೆಯ ಶತಮಾನದ ಕಾರ್ಲಿ ಚೈತ್ಯ ಜಗತ್ಪ್ರಸಿದ್ಧವಾಗಿದೆ. ಕಣ್ಹೇರಿಯ ಚೈತ್ಯವೂ ಅದೇ ಕಾಲದ್ದು. ಬೇಡ್ಸಾ, ನಡಸೂರ್, ಮಾನ್ಮೋದ ಇವೂ ಕಾರ್ಲಿ, ಕಣ್ಹೇರಿಗಳಂತೆ ಪಶ್ಚಿಮಘಟ್ಟಗಳಲ್ಲಿರುವ ಚೈತ್ಯಗಳು. ಔರಂಗಾಬಾದ್ ಮತ್ತು ಭಾಜಗಳಲ್ಲೂ ಚೈತ್ಯಾಲಯಗಳಿವೆ. (ಎಸ್.ಕೆ.ಆರ್.)

**ಚೈತ್ರಮಾಸ :** ಭಾರತೀಯ ಚಾಂದ್ರಮಾನ ಪದ್ಧತಿಯಂತೆ ಒಂದು ವರ್ಷದಲ್ಲಿ ಬರುವ 12 ಮಾಸಗಳಲ್ಲಿ ಮೊದಲನೆಯದು. ಚೈತ್ರ ಮತ್ತು ವೈಶಾಖ ಮಾಸಗಳು ಸೇರಿ ವಸಂತಋತು ಎನಿಸಿಕೊಳ್ಳುತ್ತದೆ. ಈ ಮಾಸದ ಪೂರ್ಣಿಮೆಯಂದು ಚಿತ್ರ ನಕ್ಷತ್ರವಿರುತ್ತದಾಗಿ ಇದಕ್ಕೆ ಚೈತ್ರವೆಂಬ ಹೆಸರು. ಇದನ್ನು ಮಧುಮಾಸ, ಚೈತ್ರಿಕ ಎಂಬ ಹೆಸರುಗಳಿಂದಲೂ ಕರೆವುದಿದೆ.

ಸೃಷ್ಟಿಕರ್ತನಾದ ಬ್ರಹ್ಮ ಚೈತ್ರಮಾಸದ ಶುಕ್ಲಪಕ್ಷದ ಮೊದಲ ದಿನದಂದು ಸೂರ್ಯೋದಯದಿಂದ ಹಿಡಿದು ಕಾಲಗಣನೆಯನ್ನು ಪ್ರಾರಂಭಿಸಿದನೆಂದು ಪುರಾಣ ವಚನವಿದೆ. ಈ ಚೈತ್ರಮಾಸದೊಡನೆ ಮೀನ (ಸೌರದ ಕೊನೆಯ ಮಾಸ) ಸೇರಿದಾಗ ಮೀನ ಚೈತ್ರದಲ್ಲಿ ಯಾವ ಶುಭಕರ್ಮಾರ್ಹತೆಯೂ ಇಲ್ಲವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಈ ಮಾಸದಲ್ಲಿ ಹುಟ್ಟಿದವನನ್ನು ಸತ್ಕರ್ಮಶಾಲೀ ವಿನಯೀ ಸುವೇಷಃ ಭೋಗೀ ಸುಖೀ ಸ್ಯಾನ್ಮಧುರಾನ್ನಭೋಜೀ। ಸತ್ಸಂಗಯುಕ್ತೋ ದ್ವಿಜದೇವಭಕ್ತಃ ಭವೇನ್ಮನುಷ್ಯೋ ಮಧುಮಾಸಜನ್ಮಾ ॥ ಎಂದು ಹೊಗಳಿದ್ದಾರೆ. ಈ ಮಾಸದ ಮೊದಲ ದಿನವಾದ ಪಾಡ್ಯವೇ ಚಾಂದ್ರಮಾನ ಯುಗಾದಿ ಹಬ್ಬ. ಅಂದಿನಿಂದ ವಸಂತ ನವರಾತ್ರ ವ್ರತಾರಂಭ. ಈ ಮಾಸದಲ್ಲಿಯೇ ಅಶೋಕಾಷ್ಟಮಿ, ಶ್ರೀರಾಮನವಮೀ, ಅನಂಗತ್ರಯೋದಶೀ, ಮದನಚತುರ್ದಶೀ, ಚಿತ್ರಾಪೂರ್ಣಿಮಾ, ಮೊದಲಾದ ಮಹಾದಿನಗಳೂ ಶೈವ–ವೈಷ್ಣವಾದಿ ಕಲ್ಪೋಕ್ತ ಪೂಜಾವಿಶೇಷಗಳೂ ಬರುತ್ತವೆ. (ಎಸ್.ಎಸ್.ಆರ್.ಬಿ.)

**ಚೈಲ್ಡ್, ಗೋರ್ಡನ್ :** 1892–1957. ಆಸ್ಟ್ರೇಲಿಯನ್ ಪ್ರಾಗಿತಿಹಾಸಜ್ಞ. ಜನನ 1892ರ ಆಗಸ್ಟ್ 14ರಂದು, ಆಸ್ಟ್ರೇಲಿಯದ ಸಿಡ್ನಿ ನಗರದಲ್ಲಿ. ಸಿಡ್ನಿ ವಿಶ್ವವಿದ್ಯಾಲಯದಲ್ಲಿ ಪದವೀಧರರಾಗಿ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿದ್ಯಾಲಯದ ಕ್ವೀನ್ಸ್ ಕಾಲೇಜಿನಲ್ಲಿ ಆನರ್ಸ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ಆಕ್ಸ್‌ಫರ್ಡಿನಲ್ಲಿ ಆರ್ತರ್ ಇವಾನ್ಸ್ ಮತ್ತು ಜಾನ್ ಲಿಂಟನ್ ಮೈರ್ಸರ ಮಾರ್ಗದರ್ಶನದಲ್ಲಿ ಇವರು ಇಂಡೋ–ಯೂರೋಪಿಯನ್ ಭಾಷೆಗಳ ಮೇಲೆ ಪರಿಣಾಮ ಬೀರಿದ ಪುರಾತತ್ತ್ವ ವಿಚಾರಗಳನ್ನು ಕುರಿತ ಸಂಶೋಧನೆ ನಡೆಸಿದರು. ಗ್ರೀಸ್, ಬಾಲ್ಕನ್ಸ್ ಮತ್ತು ಮಧ್ಯ ಯೂರೋಪಿನಲ್ಲಿ ಪ್ರವಾಸ ಕೈಗೊಂಡು ಆ ಭಾಗಗಳ ಪ್ರಾಗಿತಿಹಾಸವನ್ನು ಆಳವಾಗಿ ಅಭ್ಯಸಿಸಿದರು. ಅನಂತರ ಲಂಡನ್ ನಗರದ ರಾಯಲ್ ಆ್ಯಂತ್ರೋಪಲಾಜಿಕಲ್ ಇನ್‌ಸ್ಟಿಟ್ಯೂಟಿನ ಗ್ರಂಥಪಾಲರಾಗಿದ್ದರು. ಇವರ ದಿ ಆರ್ಯನ್ ಎಂಬ ಕೃತಿ 1926ರಲ್ಲಿ ಪ್ರಕಟವಾಯಿತು. ಇವರು 1927ರಲ್ಲಿ ಎಡಿನ್‌ಬರೊ ವಿಶ್ವವಿದ್ಯಾಲಯದಲ್ಲಿ ಪ್ರಾಗಿತಿಹಾಸ ಪುರಾತತ್ತ್ವದ ಪ್ರಥಮ ವಿಭಾಗದ ನಿರ್ದೇಶಕರಾದರು. ಪ್ರ.ಶ.ಪೂ. 3ನೆಯ ಮತ್ತು 2ನೆಯ ಸಹಸ್ರಮಾನಗಳ ಐರೋಪ್ಯ ಪ್ರಾಗಿತಿಹಾಸವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿ ಯೂರೋಪಿಗೂ ಪ್ರಾಚ್ಯಕ್ಕೂ ಇದ್ದ ಸಂಬಂಧಗಳೇನೆಂಬುದನ್ನು ವಿವೇಚಿಸಿದರು. ಯೂರೋಪಿನ ಪ್ರಾಚೀನ ಅನಾಗರಿಕ ಸಂಸ್ಕೃತಿಗಳ ಸ್ವರೂಪ ಗುಣಗಳ ಪರಿಶೀಲನೆ ನಡೆಸಿದರು. ವಿಶಾಲ ಜ್ಞಾನಕ್ಷೇತ್ರದ ಅಧ್ಯಯನ ಮಾಡಿ, ವೈವಿಧ್ಯಪೂರಿತವಾದ ನಾನಾ ಅಂಶಗಳ ನಡುವಣ ಸಾಮರಸ್ಯವನ್ನು ತೋರಿಸಿಕೊಟ್ಟಿದ್ದು ಇವರ ಮಹಾಸಾಧನೆ. ಪ್ರಾಗಿತಿಹಾಸಾಭ್ಯಾಸದಲ್ಲಿ ಅಂತಾರಾಷ್ಟ್ರೀಯ ದೃಷ್ಟಿಯಿರಬೇಕೆಂಬುದು ಇವರು ತಳೆದಿದ್ದ ನಿಲುವು. ಇದು ಪ್ರಾಗಿತಿಹಾಸ ಅಧ್ಯಯನದ ಹೊಸ ಪರಂಪರೆಯನ್ನೇ ಸ್ಥಾಪಿಸಿತೆನ್ನಬಹುದು. ಸಾಮಾಜಿಕ ಹಾಗೂ ತಂತ್ರಶಾಸ್ತ್ರೀಯ ಅಭಿವೃದ್ಧಿಯ ಬೆಳಕಿನಲ್ಲಿ ಇವರು ಬರೆದ ಗ್ರಂಥಗಳು ಹೆಚ್ಚು ಜನಪ್ರಿಯವಾಗಿವೆ. ಪ್ರಪಂಚದಲ್ಲೇ ಇವರು ಆ ತಲೆಮಾರಿನ ಮಹಾ–ಪುರಾತತ್ತ್ವಜ್ಞರೆನ್ನಬಹುದು. 1925ರಲ್ಲಿ ಇವರ ದಿ ಡಾನ್ ಆಫ್ ಯೂರೋಪಿಯನ್ ಸಿವಿಲಿಸೇಷನ್ ಪ್ರಕಟವಾಯಿತು. ಇವರು ಬದುಕಿದ್ದಾಗ ಈ ಗ್ರಂಥ ಆರು ಆವೃತ್ತಿಗಳನ್ನು ಕಂಡಿತು. ದಿ ಡ್ಯಾನ್ಯೂಬ್ ಇನ್–ಪ್ರಿ–ಹಿಸ್ಟೊರಿ 1929ರಲ್ಲಿ

ಪ್ರಕಟವಾದ ಗ್ರಂಥ. ಯೂರೋಪಿನ ಪ್ರಾಗಿತಿಹಾಸವನ್ನು ಕುರಿತ ಅಭಿಜಾತ ಕೃತಿಯಿದು. ಪೀಸಿಂಗ್ ಟುಗೆದರ್ ದಿ ಪಾಸ್ಟ್, ನ್ಯೂ ಲೈಟ್ ಆನ್ ದಿ ಮೋಸ್ಟ್ ಏನ್ಷಂಟ್ ಈಸ್ಟ್, ಮ್ಯಾನ್ ಮೇಕ್ಸ್ ಹಿಮ್ಸೆಲ್ಫ್ –ಇವು ಇವರ ಇತರ ಕೃತಿಗಳು.

ಚೈಲ್ಡ್ 1936ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನಡೆದ ಕಲೆ ಮತ್ತು ವಿಜ್ಞಾನ ಸಮ್ಮೇಳನಕ್ಕೆ ಪ್ರಾಗಿತಿಹಾಸ ವಿಭಾಗದ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು. 1940ರಲ್ಲಿ ಬ್ರಿಟಿಷ್ ಅಕಾಡೆಮಿಯ ಫೆಲೊ ಆದರು. 1937ರ ಅಕ್ಟೋಬರ್ 19ರಂದು ಇವರು ನಿಧನ ಹೊಂದಿದರು. (ಎಂ.ಎಸ್.ಎನ್.ಎ.)

**ಚೈಲ್ಡ್, ಜೊಸೈಯ :** 1630–1699. ಒಬ್ಬ ಇಂಗ್ಲಿಷ್ ವ್ಯಾಪಾರಿ. ಈಸ್ಟ್ ಇಂಡಿಯ ಕಂಪನಿಯ ಗವರ್ನರ್ ಆಗಿದ್ದವ. ಅರ್ಥವಿಚಾರಗಳನ್ನು ಬಲ್ಲವನಾಗಿದ್ದ. ಜನನ 1630ರಲ್ಲಿ, ಲಂಡನ್ನಿನಲ್ಲಿ. ನೌಕಾಪಡೆಗೆ ಸಾಮಗ್ರಿ ಸರಬರಾಯಿಗಾರನಾಗಿ ಈತ ಅಗಾಧ ಲಾಭ ಗಳಿಸಿ ಶ್ರೀಮಂತನಾದ. ಈಸ್ಟ್ ಇಂಡಿಯ ಕಂಪನಿಯ ಬಂಡವಾಳದಲ್ಲಿ ಹಣ ಹೂಡಿದ. ಈಸ್ಟ್ ಇಂಡಿಯ ಕಂಪನಿಗೆ ರಾಜಕೀಯಾಧಿಕಾರ ದೊರಕಬೇಕು, ವ್ಯಾಪಾರದಲ್ಲಿ ಅದರೊಂದಿಗೆ ಪೈಪೋಟಿ ನಡೆಯದಂತೆ ನಿರ್ಬಂಧ ವಿಧಿಸಬೇಕು–ಎಂದು ಈತ ನಡೆಸಿದ ಪ್ರಚಾರ ಇವನಿಗೆ ಕಂಪನಿಯ ಷೇರುದಾರರ ವಿಶ್ವಾಸವನ್ನು ಗಳಿಸಿಕೊಟ್ಟಿತು. 1677ರಲ್ಲಿ ಚೈಲ್ಡ್ ಅದರ ನಿರ್ದೇಶಕನಾದ. ಆಮೇಲೆ ಅನುಕ್ರಮವಾಗಿ ಅವನಿಗೆ ಡೆಪ್ಯುಟಿ ಗವರ್ನರ್ ಮತ್ತು ಗವರ್ನರ್ ಹುದ್ದೆಗಳು ದೊರೆತವು. ಸ್ವಲ್ಪ ಕಾಲ ಅವನು ಕಂಪನಿಯ ಏಕೈಕ ಮಾಲೀಕನೆಂಬಂತೆ ವಿಶೇಷ ಅಧಿಕಾರ ಚಲಾಯಿಸಿ ವ್ಯವಹಾರ ನಡೆಸಿದ. ಅರ್ಥಶಾಸ್ತ್ರ ವಿಚಾರದಲ್ಲಿ ಇವನು ವಿಶೇಷ ಚಿಂತನೆ ಹರಿಸಿದನಲ್ಲದೆ ಕೆಲವು ಕೃತಿಗಳನ್ನೂ ರಚಿಸಿದ. ಕಡಿಮೆ ಬಡ್ಡಿ ಮತ್ತು ಉದಾರ ವ್ಯಾಪಾರನೀತಿಗಳಿಂದಾಗಿ ಡಚ್ಚರು ಪ್ರವರ್ಧಮಾನ ಹೊಂದಿದ್ದಾರೆಂದು ಇವನು ವಾದಿಸಿದ. ಬ್ರಿಟಿಷರೂ ಅಂಥ ನೀತಿ ತಳೆಯಬೇಕೆಂಬುದು ಇವನ ಪ್ರತಿಪಾದನೆಯಾಗಿತ್ತು. ಒಂದು ದೇಶಕ್ಕೆ ತನ್ನ ವಸಾಹತುಗಳೊಂದಿಗಿನ ವ್ಯಾಪಾರದಲ್ಲಿ ಏಕಸ್ವಾಮ್ಯ ಇರತಕ್ಕದ್ದೆಂಬುದು ಇವನ ಇನ್ನೊಂದು ತರ್ಕ. ಬ್ರೀಫ್ ಆಬ್ಸರ್ವೇಷನ್ಸ್ ಕನ್ಸರ್ನಿಂಗ್ ಟ್ರೇಡ್ ಅಂಡ್ ದಿ ಇಂಟರೆಸ್ಟ್ ಆಫ್ ಮನಿ, ಎ ನ್ಯೂ ಡಿಸ್ಕೋರ್ಸ್ ಆಫ್ ಟ್ರೇಡ್–ಇವು ಈತನ ಕೃತಿಗಳಲ್ಲಿ ಎರಡು. ಸರ್ ಪದವಿ ಗಳಿಸಿದ್ದ ಜೊಸೈಯ ಚೈಲ್ಡ್ 1699ರ ಜೂನ್ 22ರಂದು ನಿಧನನಾದ. (ಬಿ.ಎಸ್.ಎ.)

**ಚೊಳೆ ಮೀನು :** ಸೈಪ್ರಿನಿಫಾರ್ಮೀಸ್ ಗಣದ ಸೈಪ್ರಿನಿಡೆ ಕುಟುಂಬಕ್ಕೆ ಸೇರಿದ ಒಂದು ಆಹಾರ ಮೀನು. ಚೆತ್ತೆಮೀನು, ಚಿಲ್ವಾಮೀನು ಪರ್ಯಾಯನಾಮಗಳು. ಚೇಲ ಆತ್ರ (ಚೇಲ ಹೋರೈ) ಶಾಸ್ತ್ರೀಯ ಹೆಸರು. ಭಾರತದ ನದಿಗಳಲ್ಲಿ ಕಾಣಸಿಗುತ್ತದೆ. ಉದ್ದ ಸುಮಾರು 9"; ಬಣ್ಣ ಬಿಳಿ. ನದಿ, ಕೆರೆ ಮುಂತಾದೆಡೆ ಕಂಡುಬರುವ ಕೀಟ ಮತ್ತು ಸೊಳ್ಳೆಗಳ ಡಿಂಬಗಳನ್ನು ತಿಂದು ಬದುಕುತ್ತದೆ. ಇದರಿಂದ ಇದು ಒಳ್ಳೆಯ ಡಿಂಬನಾಶಕವೆಂದು ಹೆಸರಾಗಿದೆ. ಸಂತಾನೋತ್ಪತ್ತಿಯ ಸಮಯ ಮುಂಗಾರು ಮಳೆಗಾಲ. (ಬಿ.ಎನ್.)

**ಚೋಖಾಮೇಳ :** ಪಂಢರಪುರದ ವಿಟ್ಠಲನ ಪರಮಭಕ್ತ. ಜಾತಿಯಲ್ಲಿ ಅಸ್ಪೃಶ್ಯ. ಈತ ಹದಿಮೂರನೆಯ ಶತಮಾನದ ಕೊನೆಗೆ ಹಾಗೂ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಮಂಗಳವೀಡಿನಲ್ಲಿದ್ದವ. ಯಾತ್ರಾರ್ಥಿಗಳಾದ ಜ್ಞಾನದೇವ ಮತ್ತು ನಾಮದೇವರ ಗುಂಪಿನಲ್ಲಿ ಈತನೂ ಇರುತ್ತಿದ್ದ.

ಈತ ಯಾವಾಗಲೂ ವಿಟ್ಠಲ ದೇವಾಲಯದ ಹೊರಗಡೆ ಇದ್ದು ಆತನನ್ನು ಭಜಿಸುತ್ತಿದ್ದ. ಮಂಗಳವೀಡಿನ ಕೋಟೆಯನ್ನು ಕಟ್ಟುವಾಗ ಗೋಡೆ ಕುಸಿದುದರಿಂದ ಅದರಡಿ ಸಿಕ್ಕಿ ಮರಣ ಹೊಂದಿದ (1338). ನಾಮದೇವನ ಸಲಹೆಯಂತೆ ವಿಟ್ಠಲನ ಭಕ್ತರು ಈತನ ಎಲುಬುಗಳಲ್ಲಿರುವ ವಿಟ್ಠಲನಾಮಸ್ಮರಣೆಯನ್ನು ಗುರುತಿಸಿ, ಅವನ್ನು ಪಂಢರಪುರಕ್ಕೆ ತಂದು ಅಲ್ಲಿನ ವಿಟ್ಠಲ ಗುಡಿಯ ಮಹಾದ್ವಾರದ ಎದುರಿಗೆ ಸಮಾಧಿ ಮಾಡಿದರು.

ಈತ ಕೆಲವು ಅಭಂಗಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಹೀನಕುಲದವನಾದ ತನ್ನ ಭಕ್ತಿಯನ್ನು ದೇವರು ಸ್ವೀಕರಿಸುವನೆ ಎಂದು ಕೊರಗಿದ್ದಾನೆ. ಇನ್ನೊಂದು ಅಭಂಗದಲ್ಲಿ ತಾನು ಹೊಲೆಯವನಾದ ಮಾತ್ರಕ್ಕೆ ತನ್ನ ಹೃದಯ ಹೊಲೆಯೆ–ಎಂದು ಕೇಳಿದ್ದಾನೆ. ಈತನಿಗೆ ದೇಹವೇ ಪಂಢರಪುರ, ಆತ್ಮನೇ ವಿಟ್ಠಲ, ಶಾಂತಿಯೇ ರುಕ್ಮಿಣಿ. ಇದೇ ಈತನ ಧ್ಯಾನದ ವಿಧಾನ. ವಿಟ್ಠಲನ ನಾಮವನ್ನು ನೆನೆವಾಗ ಚಿಂತೆ ಬೇಡ, ಅಂಜಿಕೆ ಬೇಡ; ದುರುಳರೆಲ್ಲ ಇಲ್ಲಿ ಬಂದು ಪಾವನರಾಗಬೇಕು–ಇದು ಈತನ ಸಂದೇಶ. ವಿಟ್ಠಲ ನಮ್ಮ ಮನೆಗೆ ಬಂದಾಗ ಪಂಚಪ್ರಾಣದ ಆರತಿಯನ್ನು ಎತ್ತಿದೆ. ಷಡ್‌ರಸದ ಪಕ್ವಾನ್ನವ ನೀಡಿದೆ. ಅವನಿಗೆ ತಕ್ಕ ಅನ್ನ ನಮ್ಮಲ್ಲಿರದಿದ್ದರೂ ಅದನ್ನವನು ಸವಿ ನೋಡಿದ–ಎಂಬುದು ಈತನ ಶ್ರದ್ಧೆ. (ಎಂ.ಎ.)

**ಚೋದನಿಕಗಳು : ನೋಡಿ–ಹಾರ್ಮೋನುಗಳು.**

**ಚೋದನೆಗಳು :** ಒಂದು ವ್ಯಕ್ತಿಯಲ್ಲಿ ಕಂಡುಬರುವ ಅಭಿಪ್ರೇರಿತ ವರ್ತನೆಯಲ್ಲಿ (ಮೋಟಿವೇಟೆಡ್ ಬಿಹೇವಿಯರ್) ಸಾಮಾನ್ಯವಾಗಿ ಕಂಡುಬರುವ ಮೂರು ಅಂಶಗಳಲ್ಲೊಂದು (ಡ್ರೈವ್). ಉಳಿದೆರಡು ಅಂಶಗಳೆಂದರೆ ಗುರಿ ಅಥವಾ ಪರಿಹಾರದ ಮುನ್ನರಿವು (ಫೋರ್‌ಸೈಟ್) ಮತ್ತು ಗುರಿಯ ಸಾಧನ ಮತ್ತು ಪ್ರಯತ್ನಗಳು. ಶಾರೀರಿಕ ಅಗತ್ಯದಿಂದ ಉಂಟಾದ ಚೋದನೆ ಜೀವಿಯನ್ನು ಕಾರ್ಯೋನ್ಮುಖಗೊಳಿಸುತ್ತದೆ. ಉದಾ: ಆಹಾರದ ಅಗತ್ಯ ಬಿದ್ದಾಗ ಉಂಟಾಗುವ ಚೋದನೆ (ಹಸಿವು) ಜೀವಿಯನ್ನು ಆಹಾರಾನ್ವೇಷಣೆಗೆ ಮುಂದೂಡುತ್ತದೆ. ಹೀಗೆ, ಅಗತ್ಯಬಿದ್ದಾಗ ಜೀವಿಯನ್ನು ಕಾರ್ಯೋನ್ಮುಖಗೊಳಿಸುವ ಆಂತರಿಕ ಅಭಿಪ್ರೇರಣೆಗಳೇ ಚೋದನೆಗಳು. ಚಿತ್ರ–1 ಶಾರೀರಕ ಚೋದನೆಗಳು ಮತ್ತು ಆರ್ಜಿತ ಅಭಿ–ಪ್ರೇರಣೆಗಳು ಎಂಬ ಎರಡು ವರ್ಗಗಳಲ್ಲೂ ಚೋದನೆಗಳು ಅಡಕವಾಗುತ್ತವೆ. ಶಾರೀರಿಕ ಚೋದನೆಗಳಿಗೂ ಸಮತೋಲಸ್ಥಿತಿಗೂ ನಿಕಟ ಸಂಬಂಧವಿದೆ. ಜೀವಿಯಲ್ಲಿ ಸದಾಕಾಲ ನಡೆಯುತ್ತಿರುವ ಚಯಾಪಚಯ ಕ್ರಿಯೆಯಿಂದಾಗಿ ಶರೀರಕ್ಕೆ ಬೇಕಾಗುವ ಯಾವುದೋ ರಚನಾಂಶದ (ಉದಾ: ಆಹಾರ, ನೀರು, ವಿರಾಮ, ಇತ್ಯಾದಿ) ಕೊರತೆಯಿಂದಾಗಿ ಸಂಬಂಧಪಟ್ಟ ಶರೀರಕ್ರಿಯೆಗಳಲ್ಲಿ ಏರುಪೇರುಗಳುಂಟಾಗುತ್ತವೆ. ಈ ರೀತಿ ಉಂಟಾದ ಏರುಪೇರುಗಳನ್ನು ಸರಿಪಡಿಸಲು, ಅಂದರೆ ಶರೀರದಲ್ಲಿ ಉಂಟಾಗುವ ಅಗತ್ಯವನ್ನು ಪೂರೈಸಿಕೊಳ್ಳಲು ಕಾರ್ಯೋನ್ಮುಖವಾಗಲು ಜೀವಿ ಚೋದಿತವಾಗುತ್ತದೆ. ಹೀಗೆ ಚೋದಿಸಲ್ಪಟ್ಟ ಜೀವ ಸಮರ್ಪಕ ಸಾಧನದ ನೆರವಿನಿಂದ ಸೂಕ್ತ ಗುರಿಯನ್ನು ತಲುಪಿದಾಗ ಉಂಟಾಗಿದ್ದ ಕೊರತೆ ನೀಗಿ ಸಮತೋಲ ಸ್ಥಿತಿ ಸ್ಥಾಪಿತವಾಗುತ್ತದೆ. ಹೀಗೆ ಸ್ಥಾಪಿತವಾದ ಸ್ಥಿತಿ ತಾತ್ಕಾಲಿಕವಾಗಿದ್ದು, ಚಯಾಪಚಯಕ್ರಿಯೆಗೆ ಅನುಗುಣವಾಗಿ ಸಮತೋಲ–ಅಸಮತೋಲ ಸ್ಥಿತಿ ಚಕ್ರ ನಿರಂತರವಾಗಿ ಸುತ್ತುತ್ತಿರುತ್ತದೆ.

ಚಿತ್ರ 1. ವಾರ್ಡನನ ಪ್ರತಿಬಂಧಕ ಪೆಟ್ಟಿಗೆಯ ನೆಲಗಟ್ಟಿನ ನಕ್ಷೆ. ಅ–ಪ್ರಯೋಗ ಪಶುವಿರುವ ಅಂಕಣ, ಆ–ವಿದ್ಯುತ್ ಚೌಕಟ್ಟು (ಪ್ರತಿಬಂಧಕ), ಇ ಮತ್ತು ಈ–ಅಗತ್ಯ ಪರಿಹಾರ ವಸ್ತುಗಳಿರುವ ಅಂಕಣಗಳು

ಶಾರೀರಿಕ ಚೋದನೆಗಳಲ್ಲಿ ಮುಖ್ಯವಾದವುಗಳೆಂದರೆ, ಉಸಿರು, ನೀರಡಿಕೆ, ಹಸಿವು, ತಾಯ್ತನದ ಚೋದನೆ, ಮೈಥುನ, ನಿದ್ರೆ ಮತ್ತು ಉಷ್ಣತಾ ಚೋದನೆ. ಇವು ಅನುವಂಶೀಯವಾದವುಗಳೆಂಬುದು ಸಿದ್ಧವಾಗಿದೆ. ಹೇಗೆಂದರೆ ಅವು ಅನುವಂಶೀಯವೆಂಬುದಕ್ಕೆ ಮೂರು ಪ್ರಮಾಣಗಳನ್ನು ಕೊಡಲಾಗಿದೆ: 1 ಸರ್ವವ್ಯಾಪಕತೆ (ಯೂನಿವರ್ಸ್ಯಾಲಿಟಿ); ಅಂದರೆ ಒಂದು ಪ್ರಭೇದದ ಎಲ್ಲ ಜೀವಿಗಳಲ್ಲಿಯೂ ಕಂಡುಬರುವುದು; 2 ವೈಕಾಸಿಕ ತಳಹದಿ. ಸಾಮಾನ್ಯವಾಗಿ ಜೀವವಿಕಾಸ ಶ್ರೇಣಿಯ ವಿವಿಧ ಹಂತಗಳಲ್ಲಿ ಕಂಡುಬರುವ ಗುಣ; 3. ಶಾರೀರಿಕ ಬದಲಾವಣೆ. ಚೋದನೆಗೆ ಸಂಬಂಧಿಸಿದ ಯಾವುದೋ ವಿಶಿಷ್ಟ ಶಾರೀರಿಕ ಕ್ರಿಯೆ. ಉದಾ: ಹಸಿವು. ಈ ಚೋದನೆ ಒಂದು ಪ್ರಭೇದಕ್ಕೆ ಸೇರಿರುವ ಎಲ್ಲ ಜೀವಿಗಳಲ್ಲಿಯೂ ವಿಕಾಸಶ್ರೇಣಿಯ ವಿವಿಧ ವರ್ಗದ ಜೀವಿಗಳಲ್ಲಿಯೂ ಕಂಡುಬರುವುದಲ್ಲದೆ, ಹಸಿವಾದಾಗ ಕೆಲವು ವಿಶಿಷ್ಟ ಶಾರೀರಿಕ ಬದಲಾವಣೆಗಳು ನಡೆಯುತ್ತವೆ. ಈ ಕಾರಣಗಳಿಂದ ಹಸಿವು ವ್ಯಕ್ತಿಗೆ ಅನುವಂಶೀಯವಾಗಿ ಬಂದ ಚೋದನೆ ಎಂಬುದು ಸಿದ್ಧವಾಗುತ್ತದೆ. ಇತರ ಚೋದನೆಗಳನ್ನೂ ಇದೇ ರೀತಿ ವಿಶ್ಲೇಷಿಸುವುದರಿಂದ ಅವುಗಳ ಅನುವಂಶೀಯತೆ ಪ್ರಕಟವಾಗುತ್ತದೆ. ಆದರೆ, ಈ ಚೋದನೆಗಳು ಅನುವಂಶೀಯವಾದಾಗ್ಯೂ ವ್ಯಕ್ತಿ ಪ್ರತ್ಯಾವರಣದೊಂದಿಗೆ ವ್ಯವಹರಿಸುವಾಗ, ಅವುಗಳ ಅಭಿವ್ಯಕ್ತಿಯಲ್ಲಿ ಗಣನೀಯ ಮಾರ್ಪಾಡುಗಳಾಗುತ್ತವೆ.



ಚಿತ್ರ 2. ಚಟುವಟಿಕೆಯ ಪಂಜರ

ಅರಿಯುವ ಆಶಯದಿಂದ ಚೋದನೆಗಳನ್ನು ಪ್ರತ್ಯೇಕವಾಗಿ ಪರಿಗಣಿಸಿದರೂ ಅವುಗಳಲ್ಲಿ ಪರಸ್ಪರ ಸಾಹಚರ್ಯ ಇರುತ್ತದೆ. ಏಕಕಾಲದಲ್ಲಿ ಎರಡು ಅಥವಾ ಹೆಚ್ಚು ಚೋದನೆಗಳು ಕೆಲಸ ಮಾಡುವ ಸಾಧ್ಯತೆ ಇದೆ.

ಚೋದನೆಗಳು ತಮ್ಮ ಬಲದಲ್ಲಿ ಸಾಪೇಕ್ಷವಾಗಿ ವ್ಯತ್ಯಾಸಹೊಂದಿರುತ್ತವೆ. ತಾಯ್ತನದ ಮತ್ತು ಮೈಥುನದ ಚೋದನೆಗಳು ಪ್ರಭೇದದ ಇರುವಿಕೆಗೆ ಅತ್ಯಾವಶ್ಯಕವೆನಿಸಿದರೆ, ಉಳಿದ ಎಲ್ಲ ಚೋದನೆಗಳೂ ವ್ಯಕ್ತಿಯ ಇರುವಿಕೆಗೆ ಅತ್ಯವಶ್ಯ. ಹೀಗಿದ್ದರೂ ಬಲದ ದೃಷ್ಟಿಯಿಂದ

ಇವುಗಳಲ್ಲಿಯೇ ಸಾಪೇಕ್ಷವಾಗಿ ಭೇದವಿರುವುದು ಪ್ರಾಯೋಗಿಕ ಅಧ್ಯಯನಗಳಿಂದ ವ್ಯಕ್ತವಾಗಿದೆ. ಚೋದನೆಗಳ ಸಾಪೇಕ್ಷಬಲವನ್ನು ತಿಳಿಯಲು ಉಪಯೋಗಿಸುವ ಪ್ರಯೋಗಸಾಧನಗಳಲ್ಲಿ ಬಹು ಮುಖ್ಯವಾದವುಗಳೆಂದರೆ ಪ್ರತಿಬಂಧಕ ಪೆಟ್ಟಿಗೆ (**ಚಿತ್ರ 1**) ಮತ್ತು ಚಟುವಟಿಕೆ ಪಂಜರ(**ಚಿತ್ರ 2**). ಜೀವಿಯ ವಿವಿಧ ಚೋದನೆಗಳ ಬಗ್ಗೆ ವಾರ್ಡನ್ ಮತ್ತು ಆತನ ಸಂಗಡಿಗರು ಮಾಡಿದ ಪ್ರಯೋಗದಲ್ಲಿ ಕೆಳಗೆ ಕಾಣಿಸಿದ ಫಲಿತಾಂಶಗಳು ಹೊರಬಿದ್ದವು:

| ಪರೀಕ್ಷಿಸಲಾದ ಚೋದನೆಗಳು | 20 ನಿಮಿಷಗಳ ಅವಧಿಯಲ್ಲಿ ಪ್ರತಿಬಂಧಕವನ್ನು ಎಷ್ಟು ಸಲ ದಾಟಲಾಯಿತು (ಸರಾಸರಿ) |
|---|---|
| ತಾಯ್ತನದ ಚೋದನೆ | 22.4 |
| ನೀರಡಿಕೆ | 20.4 |
| ಹಸಿವು | 18.2 |
| ಮೈಥುನ | 13.8 |
| ಅನ್ವೇಷಣೆ | 6.0 |
| ಪರಿಹಾರವನ್ನು ಕೊಡದಿದ್ದಾಗ | 3.5 |

ತಾಯ್ತನದ ಚೋದನೆ ಮತ್ತು ನೀರಡಿಕೆಗಳನ್ನು ಬಿಟ್ಟರೆ ಹಸಿವೇ ಅತ್ಯಂತ ಹೆಚ್ಚು ಪ್ರಬಲವಾದ ಅಭಿಪ್ರೇರಣೆ ಎಂಬುದು ಮೇಲಿನ ಅಂಕಿ ಅಂಶಗಳಿಂದ ಸಿದ್ಧವಾಗುತ್ತದೆ. ಅಲ್ಲದೆ ಮೈಥುನದ ಹಂಬಲವೂ ಇತರ ಕೆಲವು ಚೋದನೆಗಳಷ್ಟು ಪ್ರಬಲವಾದುದಲ್ಲ ಎಂಬುದೂ ಇಲ್ಲಿ ಸ್ಪಷ್ಟ.

ಶಾರೀರಿಕ ಚೋದನೆಗಳು ಇತರ ಅಭಿಪ್ರೇರಣೆಗಳೊಡನೆಯೂ ಸಂಬಂಧ ಹೊಂದಿವೆ. ಶಾರೀರಿಕ ಚೋದನೆಗಳೊಂದಿಗೆ ವೈಯಕ್ತಿಕ ಮತ್ತು ಸಾಮಾಜಿಕ ಅಭಿಪ್ರೇರಣೆಗಳು ಹಾಗೂ ಸಂವೇಗಗಳೂ (ಇಮೋಷನ್ಸ್) ಸೇರಿದಾಗ, ಅಭಿಪ್ರೇರಣೆಗಳು ಹಾಗೂ ಒಂದು ಜಟಿಲ ಜಾಲವೇ ವೈವಿಧ್ಯಪೂರ್ಣವಾದ ವ್ಯಕ್ತಿ–ವರ್ತನೆಯನ್ನು ನಿರ್ದೇಶಿಸುತ್ತದೆ. ಇಲ್ಲಿಯೂ ಯಾವ ಅಭಿಪ್ರೇರಣೆಗಳು ಸಾಪೇಕ್ಷವಾಗಿ ಹೆಚ್ಚು ಬಲಯುತವಾಗಿರುತ್ತವೆ ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಖಚಿತವಾಗಿ ಉತ್ತರ ಹೇಳಲು ಸಾಧ್ಯವಿಲ್ಲದಿದ್ದರೂ ಮಾಸ್ಲೋ ಎಂಬ ಮನೋವಿಜ್ಞಾನಿ ಅಭಿಪ್ರೇರಣೆಗಳ ಶ್ರೇಣಿ ಎಂಬ ಕಲ್ಪಿತಾಭಾವವನ್ನು ಮುಂದಿಟ್ಟಿದ್ದಾನೆ. ಈ ಶ್ರೇಣಿ ಒಂದು ರೀತಿಯಲ್ಲಿ ವ್ಯಕ್ತಿತ್ವದ ಬೆಳೆವಣಿಗೆಯ ದಿಸೆಯನ್ನು ನಿರ್ದೇಶಿಸುತ್ತದೆ ಎಂದು ಹೇಳಬಹುದು.




**ಚಿತ್ರ 3. ಅಗತ್ಯಗಳ ಅನುಕ್ರಮ ಶ್ರೇಣಿ**

ಶ್ರೇಣಿಯ ಬುಡದಲ್ಲಿ ಕಾಣಿಸಲಾಗಿರುವ ಹಸಿವು ನೀರಡಿಕೆಯಂಥ ಮೂಲ ಅಗತ್ಯಗಳು ಸಾಕಷ್ಟು ಪೂರ್ಣಗೊಳ್ಳುವವರೆಗೆ ವ್ಯಕ್ತಿಯ ವರ್ತನೆಯನ್ನು ಬಹುಮಟ್ಟಿಗೆ ತಮ್ಮ ಅಂಕೆಯಲ್ಲಿಟ್ಟುಕೊಳ್ಳುತ್ತವೆ (ಉದಾ: ಬಡತನದ ಬೇಗೆಯಲ್ಲಿ ಬೇಯುತ್ತಿರುವವರ ಚಟುವಟಿಕೆಗಳು, ಆಸೆ ಆಕಾಂಕ್ಷೆಗಳು ಬಹುಮಟ್ಟಿಗೆ ಆಹಾರಾನ್ವೇಷಣೆಗೆ ಸಂಬಂಧಿಸಿರುತ್ತವೆ ಎಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ. ಆದರೆ ಈ ಮೂಲ ಅಗತ್ಯಗಳು ಸಾಪೇಕ್ಷವಾಗಿ ಪೂರ್ಣಗೊಂಡ ಅನಂತರ, ವ್ಯಕ್ತಿ ಮೇಲು ಮೇಲಿನ ಅಗತ್ಯಗಳ ಪೂರೈಕೆಯಲ್ಲಿ ತನ್ನ ಶಕ್ತಿಸಾಮರ್ಥ್ಯಗಳನ್ನು ತೊಡಗಿಸುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ, ಒಬ್ಬ ವ್ಯಕ್ತಿಯ ಅಥವಾ ಒಂದು ಸಂಸ್ಕೃತಿಯ ಉನ್ನತಿ ಹಾಗೂ ಅವನತಿಗಳು ಅಭಿಪ್ರೇರಣಾಶ್ರೇಣಿಯ ವಿವಿಧ ಹಂತಗಳಲ್ಲಿರುವ ಅಗತ್ಯಗಳ ತೃಪ್ತಿ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಅವಲಂಬಿಸಿರುತ್ತದೆ. ಉದಾ: ಅಹಂ ವಾಸ್ತವೀಕರಣದಂಥ ಅತ್ಯುನ್ನತ ಅಗತ್ಯದ ಪೂರೈಕೆಗೆ ಪ್ರಯತ್ನ ನಡೆಯಬೇಕಾದರೆ, ಸಾಮಾನ್ಯವಾಗಿ ಕೆಳಕೆಳಗಿನ ಅಗತ್ಯಗಳೂ ಸಾಪೇಕ್ಷವಾಗಿ ಪರಿಪೂರ್ಣ ಹೊಂದಿರಬೇಕು. ಮೂಲ ಅಗತ್ಯಗಳನ್ನು ಪೂರ್ಣಗೊಳಿಸಲು ವಿಫಲವಾಗಿ, ಕೇವಲ ಧಾರ್ಮಿಕ ಹಾಗೂ ನೈತಿಕ ಮೌಲ್ಯಗಳನ್ನು ಪಾಲಿಸುವಂತೆ ಜನತೆಗೆ ಕರೆನೀಡುವ ನಮ್ಮ ಧುರೀಣರುಗಳಿಗೆ ಈ ತಥ್ಯಾಂಶ ವೇದ್ಯವಾಗುವುದಾದರೆ ಅನುಕೂಲವಾಗಬಹುದು.

ಒಟ್ಟಿನಲ್ಲಿ ಶಾರೀರಿಕ ಚೋದನೆಗಳು ಮೂಲ ಅಭಿಪ್ರೇರಣೆಗಳಾಗಿದ್ದು ಅಗತ್ಯಬಿದ್ದಾಗ ವ್ಯಕ್ತಿಯನ್ನು ಕಾರ್ಯೋನ್ಮುಖನನ್ನಾಗಿ ಮಾಡುತ್ತವೆ. ವ್ಯಕ್ತಿಯಲ್ಲಿ ಸಹಜವಾಗಿರುವ ಈ ಚೋದನೆಗಳು ಬಲದ ದೃಷ್ಟಿಯಿಂದ ತಮ್ಮಲ್ಲಿಯೇ ಸಾಪೇಕ್ಷವಾಗಿ ವ್ಯತ್ಯಾಸ ಹೊಂದುತ್ತವೆ. ಆದರೂ ಅವುಗಳಲ್ಲಿ ಸಾಹಚರ್ಯವನ್ನು ಕಾಣಬಹುದು. ಮೂಲತಃ ಈ ಚೋದನೆಗಳು ವ್ಯಕ್ತಿಯ ವರ್ತನೆಯನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳುವುದಾದರೂ ಅವು ಸಾಪೇಕ್ಷವಾಗಿ ತೃಪ್ತಿ ಹೊಂದಿದ ಮೇಲೆ ಮೇಲ್ಮಟ್ಟದ ಅಭಿಪ್ರೇರಣೆಗಳು, ಹೆಚ್ಚು ಹೆಚ್ಚಾಗಿ ವ್ಯಕ್ತಿಯ ಆಲೋಚನೆಗಳು, ಮಾತು ಮತ್ತು ಕೃತಿಗಳನ್ನು ನಿರ್ದೇಶಿಸತೊಡಗುತ್ತವೆ. ಆದ್ದರಿಂದ ವ್ಯಕ್ತಿಯ ಅಥವಾ ಸಂಸ್ಕೃತಿಯ ವಿಕಾಸದ ದೃಷ್ಟಿಯಿಂದ ಈ ಮೂಲ ಅಭಿಪ್ರೇರಣೆಗಳ ಸಂತೃಪ್ತಿ ಅತ್ಯಗತ್ಯ. (ಡಿ.)

**ಚೋಳ :** ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ರಾಜಮನೆತನಗಳಲ್ಲೊಂದು. ಚೇರ ಪಾಂಡ್ಯರ ಜೊತೆಗೆ ಚೋಳರು ಪ್ರಶ.ಪೂ.ದಲ್ಲೇ ಇದ್ದುದಕ್ಕೆ ಆಧಾರಗಳಿವೆ. ಕಾವೇರಿ ತೀರ ಇವರ ಮೂಲನೆಲೆ. ಕಾವೇರಿಯ ಮುಖದಲ್ಲಿಯ ಕಾವೇರಿ ಪಟ್ಟಣ ಮತ್ತು ಅದೇ ನದಿಯ ದಡದ ಮೇಲಿರುವ ಒರೆಯೂರ್ ಇವರ ಪ್ರಾಚೀನ ನಗರಗಳು. ಚೋಳ ಎಂಬ ಹೆಸರು ಬರಲು ಕಾರಣ ತಿಳಿಯದು. ಕಪ್ಪು ಎಂಬ ಅರ್ಥವುಳ್ಳ ಕಾಲ ಎಂಬ ಸಂಸ್ಕೃತ ಶಬ್ದದಿಂದಾಗಲಿ, ಇಲ್ಲಿಯ ಮೂಲನಿವಾಸಿಗಳನ್ನು ನಿರ್ದೇಶಿಸುವ ಕೋಲ ಎಂಬ ಪದದಿಂದಾಗಲಿ ಒಂದು ಧಾನ್ಯದ ಹೆಸರಾದ (ಜೋಳ) ಎಂಬುದರಿಂದಾಗಲಿ ಈ ಹೆಸರು ಬಂದಿರಬಹುದೆಂಬ ವಾದಗಳು ಸಮಂಜಸವಾಗಿ ಕಾಣಿಸವು. ಚೋಳರಿಗೆ ಕಿಳ್ಳಿ, ವಳವನ್, ಶೆಂಬಿಯನ್ ಎಂಬ ಹೆಸರುಗಳೂ ಉಂಟು.

ಚೋಡ ಎಂಬ ಹೆಸರು ಕಾತ್ಯಾಯನನಿಗೆ ತಿಳಿದಿತ್ತು. ಅಶೋಕನ ಶಾಸನಗಳಲ್ಲಿ ಪಾಂಡ್ಯರ ಜೊತೆಗೆ ಚೋಳರನ್ನು ಹೆಸರಿಸಿದೆ. ಪೆಪ್ಲಸ್ ಮಾರಿಸ್ ಏರಿತ್ರೈ ಎಂಬ ಗ್ರೀಕ್ ಗ್ರಂಥದಲ್ಲಿ ಚೋಳರ ಹೆಸರಿಲ್ಲದಿದ್ದರೂ ಅರ್ಗರು ಅಥವಾ ಒರೆಯೂರಿನ ಹೆಸರಿದೆ. ಸೊರಂಗೇಯನ್ನು–ಎಂದರೆ ಚೋಳರ ರಾಜಧಾನಿ ಅರ್ಥುರಾ ಅಥವಾ ಒರೆಯೂರನ್ನು–ಟಾಲಮಿ ಸ್ಪಷ್ಟವಾಗಿ ತಿಳಿಸುತ್ತಾನೆ. ಎಳಾಲ ಎನ್ನುವವನು ಚೋಳರಾಷ್ಟ್ರದಿಂದ ಸಿಂಹಳಕ್ಕೆ ಹೋಗಿ 42 ವರ್ಷಗಳ ಕಾಲ ಆಳಿದನೆನ್ನುವ ವಿಷಯ ಮಹಾವಂಶದಲ್ಲಿದೆ.

ಪ್ರ.ಶ. ಸು. 2–3ನೆಯ ಶತಮಾನಗಳಲ್ಲಿ ರಚಿತವಾಗಿದ್ದಿರಬಹುದಾದ ಸಂಗಂ ತಮಿಳು ಸಾಹಿತ್ಯದಲ್ಲಿ ಹಲವು ಚೋಳರಾಜರ ಕಥೆಗಳು ಹೆಣೆದುಕೊಂಡಿದ್ದರೂ ಆಗಿನ ಚೋಳರಾಜರ ವಂಶಾವಳಿಯನ್ನು ಗುರುತಿಸಲು ಸಾಧ್ಯವಾಗದು. ಇವು ತಿಳಿಸುವ ರಾಜರಲ್ಲಿ ಪ್ರಸಿದ್ಧನಾದವನು ಇರುಜೆಟ್ ಚೆನ್ನಿಯ ಮಗ ಕರಿಕಾಲ. ಕರಿಕಾಲ ಚಿಕ್ಕಂದಿನಲ್ಲಿ ಅಗ್ನಿಯ ಅನಾಹುತಕ್ಕೊಳಗಾಗಿ ಅವನ ಕಾಲು ಸುಟ್ಟದ್ದರಿಂದ ಅವನಿಗೆ ಕರಿಕಾಲನೆಂದು ಹೆಸರು ಬಂತು. ಅವನು ರಾಜ್ಯಕ್ಕೆ ಬಂದ ತರುಣದಲ್ಲೇ ಅವನನ್ನು ಹಿಡಿದು ಸೆರೆಯಲ್ಲಿ ಹಾಕಲಾಯಿತು. ಆದರೆ ಕೆಚ್ಚಿನಿಂದ ತಪ್ಪಿಸಿಕೊಂಡು ರಾಜ್ಯಕ್ಕೆ ಮತ್ತೆ ಅಧಿಪತಿಯಾದ. ವೆಣ್ಣಿ ಎಂಬಲ್ಲಿ ನಡೆದ ಯುದ್ಧದಲ್ಲಿ ಪಾಂಡ್ಯಚೇರರನ್ನು ಸೋಲಿಸಿ ಹಲವಾರು ರಾಜರನ್ನು ಓಡಿಸಿದ. ವಾಹೈ ಪರಂದಲೈ ಎಂಬಲ್ಲಿ ಅವನು ನಡೆಸಿದ ಮತ್ತೊಂದು ಯುದ್ಧದಲ್ಲಿ ಒಂಬತ್ತು ಜನ ಶತ್ರುರಾಜರು ಅವನಿಗೆ ಶರಣಾಗತರಾದರು. ಅವನ ಕಾಲದ ಕಾವೇರಿಪಟ್ಟಣದ ಸುಂದರವಾದ ವರ್ಣನೆ ಈ ಸಾಹಿತ್ಯದಲ್ಲಿ ತುಂಬಿದೆ.

ಚೋಳರಾಜಪುತ್ರರ ಅಂತಃಕಲಹದ ಉಲ್ಲೇಖವೂ ಈ ಸಾಹಿತ್ಯದಲ್ಲಿದೆ. ನಲಂಗಿಳ್ಳಿ ಮತ್ತು ನೆಡುಂಗಿಳ್ಳಿ ಇವರ ನಡುವೆ ಕಾಡಿಯೂರಿನಲ್ಲಿ ನಡೆದ ಯುದ್ಧವನ್ನು ಹಲವು ಬಗೆಯಲ್ಲಿ ವಿವರಿಸಿದೆ. ಇವರು ಪುಹಾರ್ ಅಥವಾ ಕಾವೇರಿಪಟ್ಟಣ ಮತ್ತು ಒರೆಯೂರ್‌ಗಳಲ್ಲಿ ಆಳುತ್ತಿದ್ದ ಎದುರಾಳಿ ಚೋಳರಾಜಕುಮಾರರು. ಇವರಲ್ಲದೆ ಕಿಳ್ಳವಳವನ್, ಕೋಪ್ಪಿರುಂಜನ್, ಚೋಳನ್, ಪೆರುನಾರ್ ಕಿಳ್ಳಿ, ಕೋಚ್ಚಂಗಣಾನ್ ಮೊದಲಾದವರ ಹೆಸರುಗಳೂ ಅವರ ಸಾಹಸಗಳೂ ಆ ಕಾಲದ ಕಾವ್ಯದ ವಸ್ತುಗಳಾಗಿ ಉಳಿದುಬಂದಿವೆ.

ಸಂಗಂ ಕಾಲವಾದ ಮೇಲೆ ಚೋಳರ ವಿಷಯ ಹೆಚ್ಚು ತಿಳಿದುಬರುವುದಿಲ್ಲ. ತಮಿಳುನಾಡಿನ ಉತ್ತರದಲ್ಲಿ ಪಲ್ಲವರು, ದಕ್ಷಿಣದಲ್ಲಿ ಪಾಂಡ್ಯರು ಪ್ರಬಲರಾಗಿ ಮುನ್ನೂರು ವರ್ಷಗಳ ಕಾಲ ಆಳುತ್ತಿದ್ದಾಗ ಬಹುಶಃ ಚೋಳರು ಸಣ್ಣಸಣ್ಣ ಪಾಳೆಯಪಟ್ಟುಗಳಾಗಿ ಅವರ ಅಧೀನರಾಗಿ ಅಲ್ಲಲ್ಲಿ ಆಳುತ್ತಿದ್ದರು. ಒರೆಯೂರು ಚೋಳರ ಅಧಿಕಾರದಲ್ಲೇ ಉಳಿದಿದ್ದಿರಬೇಕು ಮತ್ತು ಈ ಮನೆತನದವರು ತಮ್ಮ ತಾಯಿನಾಡಿನಿಂದ ದೂರವಾಗಿ ಬೇರೆಬೇರೆ ಪ್ರಾಂತ್ಯಗಳಲ್ಲಿ ಹರಡಿ ಹೋಗಿದ್ದರೆಂಬುದಕ್ಕೆ ಕಾಂದಾಲೂರು, ಶಿಯ್ಯಾಳಿ, ಮಾಲೆಪಾಡು, ನೆಕ್ಕುಂದಿ ಮೊದಲಾದ ಕಡೆ ಇದ್ದ ಸಣ್ಣಪುಟ್ಟ ರಾಜರು ತಾವು ಚೋಳ ಮನೆತನಕ್ಕೆ ಸೇರಿದವರೆಂದು ಹೇಳಿಕೊಂಡಿರುವುದನ್ನು ನೋಡಬಹುದು. ಆಂಧ್ರ ಮತ್ತು ಕರ್ನಾಟಕಗಳಲ್ಲಿ ನೆಲೆಸಿದ್ದ ಚೋಳರು ಕಾಶ್ಯಪ ಗೋತ್ರದವರೆಂದೂ ಕರಿಕಾಲನ ವಂಶಸ್ಥರೆಂದೂ ಒರೆಯೂರು ಪುರವರಾಧೀಶ್ವರರೆಂದೂ ಹೇಳಿಕೊಂಡಿದ್ದಾರೆ. ಪಲ್ಲವರ ಮತ್ತು ಬಾದಾಮಿ ಚಾಳುಕ್ಯರ ಶಾಸನಗಳಲ್ಲಿ ಚೋಳರಾಜ್ಯದ ಉಲ್ಲೇಖ ಅಲ್ಲಲ್ಲಿ ಕಂಡುಬರುತ್ತದೆ. ಬುದ್ಧವರ್ಮ ಚೋಳಸೈನ್ಯವೆಂಬ ಸಮುದ್ರಕ್ಕೆ ಬಡಬಾನಲನಾಗಿದ್ದ. ಕಾವೇರೀ ತೀರದಲ್ಲಿ ಅಡಕೆ ತೋಟಗಳು ಮತ್ತು ಬತ್ತದ ಗದ್ದೆಗಳಿಂದ ಸಮೃದ್ಧವಾಗಿದ್ದ ಚೋಳನಾಡನ್ನು ಸಿಂಹವಿಷ್ಣು ಆಕ್ರಮಿಸಿಕೊಂಡಿದ್ದ. ಒಂದನೆಯ ವಿಕ್ರಮಾದಿತ್ಯ ಚೋಳರಾಜ್ಯವನ್ನು ಗೆದ್ದುದಾಗಿಯೂ ಒರೆಯೂರಿನಲ್ಲಿ ಬೀಡು ಬಿಟ್ಟದ್ದಾಗಿಯೂ ಅವನ ಗದ್ವಾಲ್ ಶಾಸನ ತಿಳಿಸುತ್ತದೆ. ಹೀಗೆ ಚೋಳರು 3–4ನೆಯ ಶತಮಾನಗಳಿಂದ ಹೆಚ್ಚು ಪ್ರವರ್ಧಮಾನರಾಗದೆ ಹೋದರೂ 9ನೆಯ ಶತಮಾನದವರೆಗೂ ಅಲ್ಲಲ್ಲಿ ಚಿಕ್ಕಪುಟ್ಟ ಪಾಳೆಯಪಟ್ಟುಗಳಲ್ಲಿ ಅಸ್ತಿತ್ವದಲ್ಲಿದ್ದರೆಂಬುದಕ್ಕೆ ಆಧಾರಗಳೂ ದೊರೆಯುತ್ತವೆ.

9ನೆಯ ಶತಮಾನದಲ್ಲಿ ಪಲ್ಲವರ ಅವನತಿಯ ಆರಂಭದೊಂದಿಗೆ ಚೋಳರು ಉತ್ಕರ್ಷಕ್ಕೆ ಬಂದರು. ಚೋಳ ರಾಜ್ಯವನ್ನು ಭದ್ರಗೊಳಿಸಲು ಮೂಲ ಕಾರಣನಾದವನು ವಿಜಯಾಲಯ. ಇವನು ಪಲ್ಲವರ ಸಾಮಂತನಾಗಿದ್ದು ಒರೆಯೂರಿನ ಬಳಿ ಒಂದು ಚಿಕ್ಕ ರಾಜ್ಯವನ್ನು ಆಳುತ್ತಿದ್ದುದಾಗಿ ತೋರುತ್ತದೆ. ಆ ಕಾಲದಲ್ಲಿ ತಂಜಾವೂರಿನ ಸುತ್ತಮುತ್ತಣ ಪ್ರದೇಶವನ್ನು ಮುತ್ತರೆಯರು ಎಂಬ ಪುಟ್ಟ ರಾಜಮನೆತನದವರು ಶಂದಲೈ ಎಂಬಲ್ಲಿಂದ ಆಳುತ್ತಿದ್ದರು. ಇವರು ಸಮಯಕ್ಕೆ ತಕ್ಕಂತೆ ಪಲ್ಲವರ ಅಥವಾ ಪಾಂಡ್ಯರ ಅಧೀನರಾಗಿ ವರ್ತಿಸುತ್ತಿದ್ದರು. ಪಾಂಡ್ಯ ವರಗುಣನ ಆಳ್ವಿಕೆಯಲ್ಲಿ ಮುತ್ತರೆಯರು ಪಾಂಡ್ಯರ ಪಕ್ಷ ವಹಿಸಿದ್ದಂತೆ ತೋರುತ್ತದೆ. ಪಲ್ಲವ ಸಾಮಂತನಾಗಿದ್ದ ವಿಜಯಲನು ತಂಜಾವೂರನ್ನು ಮುತ್ತಿ ವಶಪಡಿಸಿಕೊಂಡ. ಈ ವಿಜಯ ಮುಂದೆ ದೊಡ್ಡದಾದ ಚೋಳ ಚಕ್ರಾಧಿಪತ್ಯದ ನಿರ್ಮಾಣಕ್ಕೆ ನಾಂದಿಯಾಯಿತ್ತೆನ್ನಬಹುದು. ಇದು ನಡೆದದ್ದು 850ಕ್ಕೆ ಮೊದಲು. ಸುಮಾರು 871ರ ವರೆಗೂ ವಿಜಯಾಲಯ ಆಳುತ್ತಿದ್ದ. ಇವನನ್ನು ಶಾಸನಗಳು ತಂಜೈಕೊಂಡ ಪರಕೇಸರಿ ಎಂದು ವರ್ಣಿಸಿವೆ. ಈತ ಪಲ್ಲವಸಾಮಂತನಾಗಿಯೇ ಮುಂದುವರಿದರೂ ಶಾಸನಗಳಲ್ಲಿ ತನ್ನ ಆಳ್ವಿಕೆಯ ವರ್ಷಗಳನ್ನು ತಿಳಿಸಿರುವುದು ಇವನು ಪ್ರಬಲನಾಗುತ್ತಿದ್ದನೆನ್ನುವುದರ ಸೂಚನೆ. ಇವನು ತಂಜಾವೂರಿನಲ್ಲಿ ನಿಶುಂಭಸೂದಿನಿಯ ದೇವಾಲಯವನ್ನು ಕಟ್ಟಿಸಿದ. ಮುಂದೆ ತಂಜಾವೂರು ಚೋಳರ ರಾಜಧಾನಿಯಾಯಿತು. (ಡಿ.ಎಚ್.ಕೆ.; ಎಂ.ಎಸ್.)

ಮುತ್ತರೆಯರ ಸೋಲಿಗೆ ಪ್ರತೀಕಾರವಾಗಿ ಪಲ್ಲವರ ಮೇಲೆ ಪಾಂಡ್ಯರ ಇಮ್ಮಡಿ ವರಗುಣವರ್ಮ ಯುದ್ಧ ಹೂಡಿ ಕಾವೇರಿ ತೀರದಲ್ಲಿರುವ ಇಡವೈವರೆಗೂ ನುಗ್ಗಿದ. ಆದರೆ ಆಗ ಆಳುತ್ತಿದ್ದ ಪಲ್ಲವ ಯುವರಾಜ ಅಪರಾಜಿತ ವಿಜಯಾಲಯನ ಮಗ ಒಂದನೆಯ ಆದಿತ್ಯ ಮತ್ತು ಗಂಗ ಒಂದನೆಯ ಪೃಥಿವೀಪತಿ ಇವರನ್ನು ಕೂಡಿಕೊಂಡು, ಕುಂಭಕೋಣದ ಬಳಿ ಶ್ರೀಪುರಂಬಿಯಮ್ ಎಂಬಲ್ಲಿ 880ರಲ್ಲಿ ಅವನನ್ನೆದುರಿಸಿದ. ಈ ಯುದ್ಧದಲ್ಲಿ ಪೃಥಿವೀಪತಿ ಸತ್ತರೂ ಪಾಂಡ್ಯರಿಗೆ ಸೋಲಾಯಿತು. ಮುತ್ತರೆಯನಿಂದ ವಿಜಯಾಲಯ ಪಡೆದಿದ್ದ ಪ್ರದೇಶಗಳ ಜೊತೆಗೆ ಇನ್ನಷ್ಟು ಪ್ರದೇಶವನ್ನು ಅವನ ಮಗ ಆದಿತ್ಯ ಪಡೆದ. ಆದರೆ ಸಾಮಂತನಾಗಿ ಉಳಿಯುವುದರಲ್ಲಿ ತೃಪ್ತಿಯಿಲ್ಲದ ಆದಿತ್ಯ 897ರಲ್ಲಿ ತೊಂಡೈಮಂಡಲದ ಮೇಲೆ ನುಗ್ಗಿ ಅಪರಾಜಿತನನ್ನು ಕೊಂದು ಪಲ್ಲವ ರಾಜ್ಯವನ್ನು ವಶಪಡಿಸಿಕೊಂಡು ಸ್ವತಂತ್ರನಾದ. ಮುಂದೆ ಸ್ವಲ್ಪ ಕಾಲದಲ್ಲೇ ಗಂಗ ಇಮ್ಮಡಿ ಪೃಥಿವೀಪತಿಯೂ ಇವನ ಅಧೀನನಾದ. ಆದಿತ್ಯ ಅನಂತರ ಪಾಂಡ್ಯರಾಜ ಪರಾಂತಕ ವೀರನಾರಾಯಣನಿಂದ ಕೊಂಗುದೇಶವನ್ನು ಗೆದ್ದುಕೊಂಡ. ಆದಿತ್ಯನೊಡನೆ ಚೇರರ ಸ್ಥಾಣುರವಿ ಸ್ನೇಹ ಬೆಳೆಸಿದ; ಅವನ ಮಗ ಪರಾಂತಕನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ.

ಆದಿತ್ಯನಿಗೆ ಕೋದಂಡರಾಮ ಎಂಬ ಮತ್ತೊಂದು ಹೆಸರೂ ಉಂಟು. ಅವನು ಕಾವೇರಿಯ ಎರಡು ದಡಗಳ ಮೇಲೂ ಹಲವಾರು ಉನ್ನತ ಶಿವಾಲಯಗಳನ್ನು ಕಟ್ಟಿಸಿದ ಉಲ್ಲೇಖಗಳಿವೆ. ಅವನು ಕಾಳಹಸ್ತಿಯ ಬಳಿ ತೊಂಡೈಮಾನಾಡಿನಲ್ಲಿ ತೀರಿಕೊಂಡಾಗ ಅವನ ಮಗ ಪರಾಂತಕ ಅವನ ಹೆಸರಿನಲ್ಲಿ ಆದಿತ್ಯೇಶ್ವರ ದೇವಾಲಯವನ್ನು ಕಟ್ಟಿಸಿದ. ಚಿಕ್ಕ ರಾಜ್ಯವೊಂದರಲ್ಲಿ ಸಾಮಂತನಾಗಿ ಆಳಲಾರಂಭಿಸಿದ ಆದಿತ್ಯ ಸ್ವತಂತ್ರವಾದ ವಿಸ್ತಾರವಾದ ರಾಜ್ಯವೊಂದನ್ನು ತನ್ನ ಮಗ ಪರಾಂತಕನಿಗೆ ಬಿಟ್ಟುಹೋದ. ವಿಜಯಾಲಯನ ವಂಶದವರು ಆ ಹೊತ್ತಿಗಾಗಲೇ ತಾವು ಸೂರ್ಯವಂಶಕ್ಕೆ ಸೇರಿದವರೆಂದು ತಮ್ಮ ಪೌರಾಣಿಕ ವಂಶಾವಳಿಯನ್ನು ಕೊಡಲಾರಂಭಿಸಿದ್ದರು.

ಪರಾಂತಕ ಪಟ್ಟಕ್ಕೆ ಬಂದದ್ದು 907ರಲ್ಲಿ. ಈತ 48 ವರ್ಷಗಳ ಕಾಲ ರಾಜ್ಯಭಾರ ಮಾಡಿದ. 910ರಲ್ಲಿ ಪಾಂಡ್ಯರಾಜ್ಯದ ಮೇಲೆ ದಂಡೆತ್ತಿ ಹೋಗಿ ಮಧುರೈಕ್ಕೊಂಡ ಎಂಬ ಬಿರುದು ಪಡೆದ. ಪಾಂಡ್ಯರಾಜ ಇಮ್ಮಡಿ ರಾಜಸಿಂಹ ಮಾರವರ್ಮ (900–920) ಸಿಂಹಳದ 5ನೆಯ ಕಶ್ಯಪನ ಸಹಾಯ ಕೋರಿದ. ಆದರೆ ಪರಾಂತಕ ಈ ಇಬ್ಬರ ಸೈನ್ಯವನ್ನು ವೆಲ್ಲೂರಿನ ಬಳಿ ಸೋಲಿಸಿದ. ರಾಜಸಿಂಹ ಸಿಂಹಳಕ್ಕೆ ಓಡಿಹೋದ. ಪಾಂಡ್ಯ ರಾಜ್ಯ ಚೋಳರ ವಶವಾಯಿತು.

ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಮಗಳೊಬ್ಬಳನ್ನು ಆದಿತ್ಯ ಮದುವೆಯಾಗಿದ್ದ. ಅವಳ ಮಗ ಕನ್ನರದೇವ, ಆದಿತ್ಯನ ಅನಂತರ ಪರಾಂತಕ ಪಟ್ಟಕ್ಕೆ ಬಂದಾಗ ಕನ್ನರದೇವನ ಪಕ್ಷವನ್ನು ಕೃಷ್ಣ ವಹಿಸಿ, ಬಾಣ ಮತ್ತು ವೈದುಂಬರನ್ನು ಕೂಡಿಕೊಂಡು ಚೋಳ ರಾಜ್ಯಕ್ಕೆ ಮುತ್ತಿಗೆ ಹಾಕಿದ. ಪರಾಂತಕನಿಗೆ ಗಂಗರ ಇಮ್ಮಡಿ ಪೃಥಿವೀಪತಿಯ ನೆರವು ದೊರೆಯಿತು. ವಲ್ಲಾಲದ (ತಿರುವಲ್ಲಂ) ಬಳಿ ನಡೆದ ಯುದ್ಧದಲ್ಲಿ ಕೃಷ್ಣ ಸೋತುಹೋದ. ಬಾಣರಾಜ್ಯ ಪೃಥಿವೀಪತಿಗೆ ಸೇರಿತು. ವೈದುಂಬರೂ ನಷ್ಟವನ್ನನುಭವಿಸಿದರು. ಈ ಯುದ್ಧ ನಡೆದದ್ದು 916ಕ್ಕೆ ಮೊದಲು. ಬಹುಬೇಗನೆ ವಿಸ್ತರಿಸಿದ ತನ್ನ ಚಕ್ರಾಧಿಪತ್ಯವನ್ನು ಎಲ್ಲ ದಿಕ್ಕುಗಳಿಂದಲೂ ಸಮರ್ಥವಾಗಿ ರಕ್ಷಿಸಿಕೊಳ್ಳುವುದು ಪರಾಂತಕನಿಗೆ ಅಸಾಧ್ಯವೆನಿಸಿತು. 940ರಿಂದ ಈಚೆಗೆ ಪರಾಂತಕನಿಗೆ ಕಷ್ಟದ ದಿನಗಳು ಪ್ರಾಪ್ತವಾದುವು. ಅವನ ನಂಬಿಕೆಯ ಸಾಮಂತ ಇಮ್ಮಡಿ ಪೃಥಿವೀಪತಿ ತೀರಿಕೊಂಡಿದ್ದ. ಮುಮ್ಮಡಿ ಕೃಷ್ಣನ ಸೋದರಿಯನ್ನು ಗಂಗರ ಇಮ್ಮಡಿ ಬೂತುಗ ಮದುವೆಯಾಗಿದ್ದುದರಿಂದ ಗಂಗರೂ ರಾಷ್ಟ್ರಕೂಟರೂ ಒಂದಾಗಿದ್ದರು. ಬಾಣ ವೈದುಂಬರು ರಾಷ್ಟ್ರಕೂಟರ ಅಧೀನರಾಗಿದ್ದರು. ತನ್ನ ರಾಜ್ಯದ ವಾಯವ್ಯ ಭಾಗದಲ್ಲಿ ಇವರಿಂದ ಆಗಬಹುದಾದ ಮುತ್ತಿಗೆಯನ್ನು ಎದುರಿಸಲು ಪರಾಂತಕ ತನ್ನ ಹಿರಿಯ ಮಗ ರಾಜಾದಿತ್ಯನನ್ನು ದೊಡ್ಡ ಸೈನ್ಯದೊಂದಿಗೆ ಅಲ್ಲಿ ಇರಿಸಿದ್ದ. ಅವನಿಗೆ ಸಹಾಯಕನಾಗಿ ತನ್ನ ಇನ್ನೊಬ್ಬ ಮಗ ಅರಿಕುಲ ಕೇಸರಿಯನ್ನು ಅಲ್ಲಿಗೆ ಕಳುಹಿಸಿದ್ದ. ಮುಮ್ಮಡಿ ಕೃಷ್ಣ 949ರಲ್ಲಿ ಬೂತುಗನನ್ನು ಕೂಡಿಕೊಂಡು ಚೋಳರಾಜ್ಯಕ್ಕೆ ದಂಡೆತ್ತಿ ಬಂದಾಗ ಅರಕೋಣದ ಬಳಿ ತಕ್ಕೋಲಂ ಎಂಬಲ್ಲಿ ಘೋರವಾದ ಯುದ್ಧ ನಡೆಯಿತು. ರಾಜಾದಿತ್ಯ ಶತ್ರುಸೈನ್ಯಕ್ಕೆ ಹೆಚ್ಚಾದ ನಷ್ಟವನ್ನುಂಟು ಮಾಡಿದರೂ ಬೂತುಗ ಕೆಚ್ಚೆದೆಯಿಂದ ರಾಜಾದಿತ್ಯನಿದ್ದ ಆನೆಯನ್ನೇರಿ ಅವನನ್ನಿರಿದು ಕೊಂದು ಕೃಷ್ಣನಿಗೆ ಜಯ ಲಭಿಸುವಂತೆ ಮಾಡಿದ. ಚೋಳರು ಅನುಭವಿಸಿದ ಈ ಸೋಲಿನಿಂದ ಅವರ ರಾಜ್ಯದ ಬುಡ ಅಲುಗಿತು. ಕ್ರಮೇಣ ಕೃಷ್ಣ ಈ ರಾಜ್ಯದ ಉತ್ತರಭಾಗವನ್ನೆಲ್ಲ ಆಕ್ರಮಿಸಿದ. ಕಂಚಿಯಿಂದ ತಂಜಾವೂರಿನವರೆಗೆ ರಾಷ್ಟ್ರಕೂಟರ ಆಧಿಪತ್ಯ ನಡೆಯುವಂತಾಯಿತು. ಇದಾದ ಸ್ವಲ್ಪ ಕಾಲದಲ್ಲೇ ರಾಜ್ಯದ ದಕ್ಷಿಣಭಾಗದ ಸಾಮಂತರು ದಂಗೆಯೆದ್ದು ಸ್ವತಂತ್ರರಾದರು. ನೂರು ವರ್ಷಗಳಷ್ಟು ಕಾಲ ಬೆಳೆಸಿಕೊಂಡು ಬಂದಿದ್ದ ಚೋಳ ರಾಜ್ಯ ಉಡುಗಿಹೋಯಿತು. ಪರಾಂತಕನ ಆಳ್ವಿಕೆ ಮುಗಿದ ಮೇಲೆ ಮೂವತ್ತು ವರ್ಷಗಳ ಕಾಲ ಚೋಳ ಮನೆತನ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿತ್ತು. ಪರಾಂತಕನ ಅನಂತರ ಅವನ ಮಕ್ಕಳು ಗಂಡರಾದಿತ್ಯ ಮತ್ತು ಅರಿಂಜಯರು ಅನುಕ್ರಮವಾಗಿ ಸ್ವಲ್ಪ ಕಾಲ ಆಳಿದ ಮೇಲೆ ಅರಿಂಜಯನ ಮಗ ಸುಂದರ ಚೋಳ ಇಮ್ಮಡಿ ಪರಾಂತಕ 957ರಲ್ಲಿ ಪಟ್ಟಕ್ಕೆ ಬಂದ. ಸ್ವಲ್ಪ ಕಾಲದಲ್ಲೇ ಇವನು ತನ್ನ ಮಗ ಇಮ್ಮಡಿ ಆದಿತ್ಯನನ್ನು ಯುವರಾಜನನ್ನಾಗಿ ಮಾಡಿದ. ದಕ್ಷಿಣದಲ್ಲಿ ಸ್ವಾತಂತ್ರ್ಯ ಘೋಷಿಸಿದ್ದ ವೀರಪಾಂಡ್ಯನ ಕಡೆಗೆ ಮೊದಲು ಸುಂದರನ ಗಮನ ಹರಿಯಿತು. ಸಿಂಹಳದ ದೊರೆ ನಾಲ್ವಡಿ ಮಹಿಂದನ ನೆರವಿನಿಂದ ವೀರಪಾಂಡ್ಯ ಅವನನ್ನೆದುರಿಸಿದರೂ ಎರಡೂ ಬಾರಿ ಯುದ್ಧ ನಡೆದು ಕಡೆಗೆ ಇಮ್ಮಡಿ ಆದಿತ್ಯ ವೀರಪಾಂಡ್ಯನನ್ನು ಕೊಂದು ಸಿಂಹಳಕ್ಕೆ ಮುತ್ತಿಗೆಹಾಕಿದ (959). ಆದರೂ ಅಲ್ಲಿ ಚೋಳರ ಆಧಿಪತ್ಯವನ್ನು ಸ್ಥಾಪಿಸಲಾಗಲಿಲ್ಲ. ರಾಜ್ಯದ ಉತ್ತರಭಾಗದಲ್ಲಿ ಸುಂದರಚೋಳ ಯುದ್ಧ ಮಾಡುತ್ತಿದ್ದಾಗಲೇ ಕಂಚಿಯಲ್ಲಿ 973ರಲ್ಲಿ ತೀರಿಕೊಂಡ. ಇವನ ಕಡೆಗಾಲದಲ್ಲಿ ಗಂಡರಾದಿತ್ಯನ ಮಗ ಉತ್ತಮ ಚೋಳ ಯುವರಾಜ ಇಮ್ಮಡಿ ಆದಿತ್ಯನನ್ನು ಕೊಲ್ಲಿಸಿ, ಆದಿತ್ಯನ ತಮ್ಮ ಅರುಮಳಿದೇವನ ಬದಲು ತನ್ನನ್ನೇ ಉತ್ತರಾಧಿಕಾರಿಯನ್ನಾಗಿ ಮಾಡುವಂತೆ ರಾಜನನ್ನು ನಿರ್ಬಂಧಿಸಿದ. ಅದರಂತೆ ಸುಂದರಚೋಳನ ಮರಣಾನಂತರ ಉತ್ತಮ ಚೋಳ ಪಟ್ಟಕ್ಕೆ ಬಂದ. ಆ ವೇಳೆಗೆ ತೊಂಡೈಮಂಡಲದ ಬಹುಭಾಗವನ್ನು ರಾಷ್ಟ್ರಕೂಟರಿಂದ ಹಿಂದಕ್ಕೆ ಗೆದ್ದುಕೊಳ್ಳಲಾಗಿತ್ತು.

ಇಮ್ಮಡಿ ಪರಾಂತಕಸುಂದರಚೋಳ ಮತ್ತು ವಾನವನ್ ಮಹಾದೇವಿಯವರ ಮಗ ರಾಜಕೇಸರಿ ಅರುಮೋಳಿವರ್ಮ 985ರಲ್ಲಿ ರಾಜರಾಜನೆಂಬ ಹೆಸರಿನಿಂದ ಪಟ್ಟಕ್ಕೆ ಬಂದ. ಇವನು 30 ವರ್ಷಗಳ ಕಾಲ ಆಳಿದ. ಪಟ್ಟಕ್ಕೆ ಬಂದಾಗ ಅಷ್ಟೇನೂ ದೊಡ್ಡದಾಗಿರದಿದ್ದ ಚೋಳನಾಡನ್ನು ವಿಸ್ತಾರವಾದ ಚಕ್ರಾಧಿಪತ್ಯವಾಗಿ ಸಮುದ್ರದಾಚೆಗೂ ಪಸರಿಸುವಂತೆ

ಮಾಡಿದ ರಾಜರಾಜ ದಕ್ಷತೆಯಿಂದ ಆಡಳಿತ ನಿರ್ವಹಿಸಿದ. ಅತ್ಯಂತ ಸತ್ತ್ವಶಾಲಿಯಾದ ರಾಜನೆಂಬ ಕೀರ್ತಿ ಪಡೆದ. ಮುಮ್ಮಡಿ ಚೋಳದೇವ ಎಂಬುದು ಇವನ ಮೊದಲಿನ ಬಿರುದುಗಳಲ್ಲೊಂದು. ಪಟ್ಟಕ್ಕೆ ಬರುತ್ತಿದ್ದಂತೆಯೇ ಕೇರಳದ ಮೇಲೆ ದಂಡೆತ್ತಿಹೋಗಿ ಕಾಂದಳೂರ್ಶಾಲೈಕ್ಕಳ ಮರುತ್ತ ಎಂಬ ಬಿರುದು ಹೊತ್ತ. ಇವನ ದಕ್ಷಿಣದ ದಂಡಯಾತ್ರೆ ಪಾಂಡ್ಯಚೇರರ ಮೇಲೆ ಒಟ್ಟಾಗಿ ನಡೆಯಿತು. ಅಷ್ಟೇ ಅಲ್ಲ, ಹಲವು ಸಲ ಇವನು ಈ ದಂಡಯಾತ್ರೆಗಳನ್ನು ನಡೆಸಿರಬೇಕು. ಕೊಲ್ಲಂ ಎಂಬಲ್ಲಿ ನಡೆಸಿದ ಯುದ್ಧ ಇವುಗಳಲ್ಲೊಂದು. ಇದರಂತೆ ಮಲೆನಾಡಿನಲ್ಲಿ ಚೇರ ಪಾಂಡ್ಯರನ್ನು ಅವನು ಎದುರಿಸಿದನೆಂದು ತಂಜಾವೂರಿನ ಶಾಸನದಲ್ಲಿ ತಿಳಿಸಿರುವ ಯುದ್ಧ ಕಾಂದಲೂರು ಮತ್ತು ವಿಳಿನಂ ಯುದ್ಧಗಳಿಗಿಂತ ಬೇರೆಯಾಗಿರಬೇಕು. ಇವನು ಈಳ ಮಂಡಳವನ್ನು (ಸಿಂಹಳ) ಗೆದ್ದ ವಿಷಯವನ್ನು 993ರ ಹೊತ್ತಿಗೇ ಶಾಸನಗಳು ತಿಳಿಸುತ್ತವೆ. ಸಿಂಹಳದಲ್ಲಿ ಚೋಳರ ಆಧಿಪತ್ಯ ಸ್ಥಾಪಿತವಾದ ಮೇಲೆ, ಅಲ್ಲಿ ಬಹುಕಾಲದಿಂದ ರಾಜಧಾನಿಯಾಗಿದ್ದ ಅನುರಾಧಪುರದ ಬದಲು ಪೊಲೊನ್ನರುವವನ್ನು ಅವರು ರಾಜಧಾನಿಯಾಗಿ ಮಾಡಿಕೊಂಡರು. ಅದಕ್ಕೆ ಜನನಾಥ ಮಂಗಲ ಎಂಬ ನಾಮಕರಣವಾಯಿತು; ಅಲ್ಲಿ ಒಂದು ಶಿವದೇವಾಲಯವೂ ನಿರ್ಮಿತವಾಯಿತು. ದಕ್ಷಿಣದ ದಿಗ್ವಿಜಯ ಮುಗಿಯುತ್ತಿದ್ದಂತೆಯೇ ರಾಜರಾಜನ ಕಣ್ಣು ತಲಕಾಡಿನ ಗಂಗರ ಮೇಲೆ ಬಿತ್ತು. ಅಷ್ಟು ಹೊತ್ತಿಗೆ ರಾಷ್ಟ್ರಕೂಟ ಸಾಮ್ರಾಜ್ಯ ಅಳಿದಿತ್ತು; ಚಾಳುಕ್ಯರು ಕುಂತಳವನ್ನಾಕ್ರಮಿಸಿದ್ದರು. ಇದರಿಂದ ಗಂಗರ ಶಕ್ತಿ ಉಡುಗಿತ್ತು. ರಾಜಾದಿತ್ಯನನ್ನು ಬೂತುಗ ಕೊಂದಿದ್ದಕ್ಕೆ ಸೇಡು ತೀರಿಸಿಕೊಳ್ಳಲು ಚೋಳ ಸೈನ್ಯ ಕೊಂಗುನಾಡಿನ ಮೂಲಕ ಸಾಗಿ ಕಾವೇರಿಯನ್ನು ದಾಟಿ ನುಗ್ಗಿ ಸುಲಭವಾಗಿ ತಲಕಾಡನ್ನು ವಶಪಡಿಸಿಕೊಂಡಿತು. ಇದರಿಂದ ಗಂಗವಾಡಿಯ ಬಹುಭಾಗ ಚೋಳ ರಾಜ್ಯಕ್ಕೆ ಸೇರಿದಂತಾಯಿತು. ಆಗ ಕರ್ನಾಟಕದ ದಕ್ಷಿಣಭಾಗದಲ್ಲಿ ಬಲವಾದ ರಾಜ್ಯವೊಂದಿರಲಿಲ್ಲ. ಆದರೂ ಅಳಿದುಳಿದ ಚಿಕ್ಕಪುಟ್ಟ ರಾಜರು ಸೇರಿ ಚೋಳರನ್ನೆದುರಿಸುವ ಸಾಹಸ ನಡೆಸಿ ರಾಜರಾಜನ ದಂಡನಾಯಕ ಅಪ್ರಮೇಯನನ್ನು ಕಲಿಯೂರಿನ ಬಳಿ ಎದುರಿಸಿ ಸಂಪೂರ್ಣವಾಗಿ ಸೋತುಹೋದರು. ಅವರಲ್ಲಿ ಹೊಯ್ಸಳ, ನೊಳಂಬ, ಗಂಗ ಮೊದಲಾದ ಮನೆತನಗಳಿಗೆ ಸೇರಿದವರಿದ್ದರು. ರಾಜರಾಜ ರಟ್ಟವಾಡಿಯನ್ನು ಗೆದ್ದನೆಂದು ಅವನ ಶಾಸನಗಳು ತಿಳಿಸುತ್ತವೆ. ಆದರೆ ಚೋಳ ಸೈನ್ಯ ರಟ್ಟವಾಡಿಗೆ ನುಗ್ಗಿ ಕೊಲೆ ಸುಲಿಗೆ ನಡೆಸಿ ತುಂಬ ಹಾವಳಿ ಮಾಡಿತೇ ಹೊರತು ಆ ರಾಜ್ಯವನ್ನಾಗಲಿ ಅದರ ಯಾವ ಭಾಗವನ್ನಾಗಲಿ ಚೋಳ ರಾಜ್ಯಕ್ಕೆ ಸೇರಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಲಿಲ್ಲವೆಂದು ಹೊಟ್ಟೂರು ಶಾಸನದಿಂದ ಗೊತ್ತಾಗುತ್ತದೆ. ಚಾಳುಕ್ಯ ಸತ್ಯಾಶ್ರಯ ಅವರನ್ನು ಹಿಮ್ಮೆಟ್ಟಿಸಿದ. ಈ ಯುದ್ಧಗಳಲ್ಲೆಲ್ಲ ಮಹಾದಂಡನಾಯಕನಾಗಿ ಬಂದಿದ್ದವನು ಪಂಚವನ್ಮಹಾರಾಯನೆಂಬ ಬಿರುದು ಪಡೆದಿದ್ದ ರಾಜೇಂದ್ರ ಚೋಳ, ರಾಜರಾಜನ ಮಗ.

ರಾಜರಾಜ ತನ್ನ ರಾಜ್ಯದ ಉತ್ತರ ಭಾಗದಲ್ಲಿ ಹಿಂದೆ ಪರಾಂತಕನ ಕಾಲದಲ್ಲಿ ಚೋಳರಾಜ್ಯಕ್ಕೆ ಸೇರಿದ್ದ ಭಾಗಗಳನ್ನು ಪುನಃ ವಶಪಡಿಸಿಕೊಳ್ಳಲು ಅತ್ತಕಡೆ ಸೈನ್ಯವನ್ನು ಕಳಿಸಿದ. ವೆಂಗಿನಾಡಿನಲ್ಲಿ ಅಂತರ್ಯುದ್ಧವಾಗಿ, ದಾನಾರ್ಣವನ ಮಕ್ಕಳು ಶಕ್ತಿವರ್ಮ ಮತ್ತು ವಿಮಲಾದಿತ್ಯರು ಚೋಳನಾಡಿನಲ್ಲಿ ನೆಲೆಸಿದ್ದರು. ರಾಜರಾಜ ಪಟ್ಟಕ್ಕೆ ಬಂದಮೇಲೆ ಇವರ ಪಕ್ಷ ವಹಿಸಿ ವೆಂಗಿಯ ರಾಜಕೀಯದಲ್ಲಿ ತಲೆಹಾಕಿದ. ಚೋಳರ ಸಹಾಯದಿಂದ ಶಕ್ತಿವರ್ಮ ವೆಂಗಿಯ ಅಧಿಪತಿಯಾಗಿ ಅದರ ಸಾಮಂತನಾದ. ಹೀಗೆ ರಾಜರಾಜ ವೆಂಗಿನಾಡಿನಲ್ಲಿ ಅಂತರ್ಯುದ್ಧವನ್ನು ಕೊನೆಗಾಣಿಸಿ ಅಲ್ಲಿ ಸುಸ್ಥಿತಿ ನೆಲೆಸುವಂತೆ ಮಾಡಿದನಾದರೂ ಗಂಗವಾಡಿಯಂತೆ ವೆಂಗಿನಾಡನ್ನು ಪೂರ್ಣವಾಗಿ ತನ್ನ ರಾಜ್ಯಕ್ಕೆ ಸೇರಿಸುವ ಯೋಚನೆ ಮಾಡಲಿಲ್ಲ. ವೆಂಗಿನಾಡಿನಲ್ಲಿ ಶಕ್ತಿವರ್ಮನ ಅನಂತರ ವಿಮಲಾದಿತ್ಯ ಪಟ್ಟಕ್ಕೆ ಬಂದ. ರಾಜರಾಜ ತನ್ನ ಮಗಳು ಕುಂದವೆಯನ್ನು ಅವನಿಗೆ ಕೊಟ್ಟು ಮದುವೆ ಮಾಡಿದ. ಕಡೆಯದಾಗಿ ರಾಜರಾಜ ತನ್ನ ನೌಕಾಬಲವನ್ನು ಕಳುಹಿಸಿ ಮಾಲ್ಡೀವ್ ದ್ವೀಪಗಳನ್ನು ಗೆದ್ದನೆಂದು ಅವನ ಆಳ್ವಿಕೆಯ ಕೊನೆಯ ವರ್ಷಗಳ ಶಾಸನಗಳು ತಿಳಿಸುತ್ತವೆ. ಮುಂದೆ ಅವನ ಮಗ ರಾಜೇಂದ್ರ ನೌಕಾದಳವನ್ನು ವಿಸ್ತರಿಸಿ ದೂರದೇಶಗಳನ್ನು ಗೆದ್ದ. ಇದಕ್ಕೆ ದೊಡ್ಡದಾದ ನೌಕಾಸೈನ್ಯವಿದ್ದುದೇ ಕಾರಣ.

ಬಾಣ ರಾಜನೊಬ್ಬನನ್ನು ರಾಜರಾಜ ಓಡಿಸಿದನೆಂದೂ ಭೋಗದೇವ ಎನ್ನುವವನ ತಲೆಯನ್ನು ಕತ್ತರಿಸಿದನೆಂದೂ ಕರಂದೈ ಶಾಸನ ತಿಳಿಸುತ್ತದೆ. ಆದರೆ ಇವರು ಯಾರೆಂಬುದಕ್ಕೆ ವಿವರಗಳಿಲ್ಲ.

ರಾಜರಾಜನ ಆಳ್ವಿಕೆಯ ಕಡೆಯ ವರ್ಷಗಳಲ್ಲಿ ಅವನ ಮಗ ರಾಜೇಂದ್ರ ಆಡಳಿತದಲ್ಲಿ ಪಾಲ್ಗೊಂಡಿದ್ದ. 1012ರಲ್ಲಿ ರಾಜರಾಜ ಅವನನ್ನು ಯುವರಾಜನನ್ನಾಗಿ ನೇಮಿಸಿದ. ರಾಜರಾಜನ ಮಹತ್ತ್ವಪೂರ್ಣ ಆಡಳಿತ 1014ರಲ್ಲಿ ಕೊನೆಗೊಂಡಿತು. ಅವನು ತಂಜಾವೂರಿನಲ್ಲಿ ಕಟ್ಟಿಸಿದ ರಾಜರಾಜೇಶ್ವರ ದೇವಾಲಯ ಚೋಳ ಸಾಮ್ರಾಜ್ಯದ ವೈಭವದ ಪ್ರತೀಕವಾಗಿ ನಿಂತಿದೆ. ರಾಜರಾಜ ದಕ್ಷ ಆಡಳಿಗಾರನಾಗಿ ಆಡಳಿತದಲ್ಲಿ ಹೆಚ್ಚಿನ ಸುಧಾರಣೆ ತಂದ. ಗೆದ್ದ ರಾಜ್ಯವನ್ನು ತನ್ನ ಆಡಳಿತಕ್ಕೆ ನೇರವಾಗಿ ಸೇರಿಸಿಕೊಂಡು ಅವುಗಳ ಆಡಳಿತಕ್ಕೆ ಅಧಿಕಾರಿಗಳನ್ನು ನೇಮಿಸಿದ. ಬಲವಾದ ಸೈನ್ಯ ವ್ಯವಸ್ಥೆಯನ್ನು ಏರ್ಪಡಿಸಿದ. ಅವನಿಗೆ ಚೋಳೇಂದ್ರ ಸಿಂಹ, ಶಿವಪಾದಶೇಖರ, ಕ್ಷತ್ರಿಯ ಶಿಖಾಮಣಿ, ಜನನಾಥ, ಸಿಗರಿಲಿಶೋವಿ, ರಾಜೇಂದ್ರ ಸಿಂಹ, ಚೋಳ ಮಾರ್ತಾಂಡ, ರಾಜಾಶ್ರಯ, ರಾಜಮಾರ್ತಾಂಡ, ನಿತ್ಯವಿನೋದ, ಪಾಂಡ್ಯ ಕುಲಾಶಿನಿ, ಕೇರಳಾಂತಕ, ಶಿಂಗಳಾಂತಕ, ರವಿಕುಲಮಾಣಿಕ್ಯ, ತೆಲಿಂಗಕುಲಕಾಲ ಮುಂತಾದ ಹಲವು ಬಿರುದುಗಳಿದ್ದುವು.

ರಾಜರಾಜ ಮತ್ತು ವಾಣವನ್ ಮಹಾದೇವಿ ಅಥವಾ ತ್ರಿಭುವನ ಮಹಾದೇವಿ ಇವರ ಮಗ ಪರಕೇಸರಿವರ್ಮ ರಾಜೇಂದ್ರ ಚೋಳವರ್ಮ 1014ರಲ್ಲಿ ರಾಜರಾಜನ ಅನಂತರ ಪಟ್ಟಕ್ಕೆ ಬಂದ. ಅವನನ್ನು ರಾಜರಾಜ ಯುವರಾಜನನ್ನಾಗಿ ನೇಮಿಸಿದ 1012ನೆಯ ವರ್ಷವನ್ನೇ ತನ್ನ ಆಡಳಿತದ ಆರಂಭವರ್ಷವನ್ನಾಗಿ ಶಾಸನಗಳಲ್ಲಿ ಎಣಿಸಿದ್ದಾನೆ. ರಾಜರಾಜ ಸುಭದ್ರವಾದ, ವಿಸ್ತಾರವಾದ ರಾಜ್ಯವನ್ನು ಇವನಿಗೆ ಬಿಟ್ಟುಹೋದ, ಚೋಳರಾಜ್ಯ ತಮಿಳುನಾಡು, ಕೇರಳ, ಕರ್ನಾಟಕದ ದಕ್ಷಿಣಭಾಗ, ಆಂಧ್ರಪ್ರದೇಶ ಮತ್ತು ಸಿಂಹಳದ ಭಾಗವನ್ನು ಒಳಗೊಂಡಿತ್ತು. ರಾಜರಾಜನನ್ನು ಮೀರಿಸಿದ ಪ್ರಬಲವಾದ ಚಕ್ರವರ್ತಿ ರಾಜೇಂದ್ರ ಚೋಳ. ಇವನ 33 ವರ್ಷಗಳ ಆಡಳಿತದ ಮೊದಲ ಭಾಗವೆಲ್ಲ ಯುದ್ಧಗಳು ಮತ್ತು ರಾಜ್ಯ ವಿಸ್ತರಣೆಗಳಿಂದ ತುಂಬಿತ್ತು.

ರಾಜೇಂದ್ರ ತನ್ನ ಆಳ್ವಿಕೆ ಆರಂಭವಾದ ತರುಣದಲ್ಲೇ 1018ರಲ್ಲಿ ತನ್ನ ಮಗ ರಾಜಾಧಿರಾಜನನ್ನು ಯುವರಾಜನನ್ನಾಗಿ ಆರಿಸಿ ತನ್ನ ಆಡಳಿತದಲ್ಲಿ ನೆರವಾಗುವಂತೆ ಏರ್ಪಡಿಸಿದ. ರಾಜಾಧಿರಾಜ 25 ವರ್ಷಗಳ ಕಾಲ ಯುವರಾಜನಾಗಿದ್ದು ಚಕ್ರಾಧಿಪತ್ಯದ ಆಡಳಿತದ ಹೊಣೆ ಹೊತ್ತು ತನ್ನ ತಂದೆಗೆ ನೆರವಾದ. ಇದೇ ರೀತಿ ರಾಜೇಂದ್ರನ ಬೇರೆಬೇರೆ ಮಕ್ಕಳು ಪ್ರಾಂತ್ಯಾಧಿಕಾರಿಗಳಾಗಿ ರಾಜ್ಯ ನಿರ್ವಹಣೆ ಮಾಡಿದರು. ಇದರಿಂದ ರಾಜ್ಯದ ಆಡಳಿತ ಬಿಗಿಯಾಗಿ, ಉತ್ತರಾಧಿಕಾರ ನಿರಾತಂಕವಾಗುವಂತಾಯಿತು. ರಾಜೇಂದ್ರ ಚೋಳನ ಶಾಸನಗಳಲ್ಲಿ ಕಂಡುಬರುವ ಅವನ ಪ್ರಶಸ್ತಿಗಳು ರಾಜರಾಜ ಹಾಕಿಕೊಟ್ಟ ಮೇಲ್ಪಂಕ್ತಿಯನ್ನನುಸರಿಸಿ ಅವನ ಆಡಳಿತದ ಆರಂಭವರ್ಷದಿಂದ ಕ್ರಮಕ್ರಮವಾಗಿ ಅವನು ನಡೆಸಿದ ಯುದ್ಧಗಳನ್ನೂ ಮಹತ್ಸಾಧನೆಗಳನ್ನೂ ವಿವರಿಸುತ್ತ ಹೋಗುವುದರಿಂದ ಅವನ ಆಡಳಿತದ ವಿವರಗಳನ್ನು ಅರಿಯಲು ಅವು ಸಹಾಯಕವಾಗಿವೆ.

ರಾಜೇಂದ್ರನ ಆಳ್ವಿಕೆಯ ಮೂರನೆಯ ವರ್ಷದ ಶಾಸನಗಳಲ್ಲೇ ಅವನು ಎಡತೊರೆನಾಡು, ಬನವಾಸಿ, ಕೊಳ್ಳಿಪಾಕಿ, ಮಣ್ಣೈಕಡಕಂ ಅಥವಾ ಮಾನ್ಯಖೇಟ ಇವುಗಳನ್ನು ಗೆದ್ದ ಉಲ್ಲೇಖವಿದೆ. ತನ್ನ ತಂದೆಯ ಕಾಲದಲ್ಲೇ ಅವನು ಈ ಪ್ರದೇಶಗಳಲ್ಲಿ ನಡೆಸಿದ ಯುದ್ಧಗಳನ್ನು ಬಹುಶಃ ಅವು ಸೂಚಿಸುತ್ತವೆ. ಅವನ ಮುಂದಿನ ದಂಡಯಾತ್ರೆ ನಡೆದದ್ದು ಈಳಮಂಡಳ ಅಥವಾ ಸಿಂಹಳದ ಮೇಲೆ. ಈ ದಂಡಯಾತ್ರೆ ಅವನ ಆಳ್ವಿಕೆಯ 5ನೆಯ ವರ್ಷದಲ್ಲಿ. ಎಂದರೆ 1017–18 ರಲ್ಲಿ, 5ನೆಯ ವರ್ಷದಲ್ಲಿ, ಎಂದರೆ 1017–18ರಲ್ಲಿ, 5ನೆಯ ಮಹಿಂದ ಅಲ್ಲಿ ಆಳುತ್ತಿದ್ದಾಗ ನಡೆದಿರಬೇಕು. ಹಿಂದೆಯೇ ಸಿಂಹಳದಲ್ಲಿ ಸೈನಿಕರು ದಂಗೆಯೆದ್ದಿದ್ದ ಸಮಯವನ್ನು ಸಾಧಿಸಿ ರಾಜರಾಜ ಚೋಳ ಆ ರಾಜ್ಯದ ಬಹುಭಾಗವನ್ನಾಕ್ರಮಿಸಿದ್ದ. ಆದರೂ ಅದರ ದಕ್ಷಿಣದ ಸ್ವಲ್ಪಭಾಗ ಸಿಂಹಳೀಯರ ವಶದಲ್ಲೇ ಉಳಿದಿತ್ತು. ರಾಜೇಂದ್ರನ ದಂಡಯಾತ್ರೆಯಿಂದ ಮಹಿಂದನೂ ಅವನ ಪರಿವಾರದವರೂ ಸೆರೆಸಿಕ್ಕಿದರಲ್ಲದೆ ಅಪಾರವಾದ ಸಂಪತ್ತು ರಾಜೇಂದ್ರನ ಕೈವಶವಾಯಿತು. ಮಹಿಂದನನ್ನು ಚೋಳ ರಾಜ್ಯದಲ್ಲಿ ಸೆರೆಯಿಡಲಾಯಿತು. ಸಿಂಹಳ ಚೋಳರಾಜ್ಯದ ಒಂದು ಪ್ರಾಂತ್ಯವಾಯಿತು. ಈ ಕಾಲದಲ್ಲಿ ಪೋಲನ್ನುರುವದಲ್ಲಿ ಶೈವ ಮತ್ತು ವೈಷ್ಣವ ದೇವಾಲಯಗಳನ್ನು ಕಟ್ಟಿಸಿದಂತೆ ತೋರುತ್ತದೆ. ರಾಜೇಂದ್ರ ಸಿಂಹಳವನ್ನು ಗೆದ್ದ 12 ವರ್ಷಗಳ ಅನಂತರ ಚೋಳರ ಮೇಲೆ ಮಹಿಂದನ ಮಗ ಕಸ್ಸಪ ತಿರುಗಿಬಿದ್ದು ಸ್ವತಂತ್ರವಾಗಿ ರೋಹಣದಿಂದ ಆಳಲಾರಂಭಿಸಿದ. ರಾಜೇಂದ್ರ ಸಿಂಹಳವನ್ನು ಗೆದ್ದ ಅನಂತರ, ಅವನ ಆಳ್ವಿಕೆಯ 6ನೆಯ ವರ್ಷದಲ್ಲಿ, ಕೇರಳ ಅವನಿಗೆ ಸೋತು ಶರಣಾಯಿತು. ರಾಜೇಂದ್ರ ತನ್ನ ಮಗ ಜಟಾವರ್ಮ ಚೋಳಪಾಂಡ್ಯನೆಂಬ ಬಿರುದಿನಿಂದ ಪಾಂಡ್ಯ ರಾಜ್ಯದಲ್ಲಿ ಮಧುರೈಯಲ್ಲಿ ರಾಜಪ್ರತಿನಿಧಿಯನ್ನಾಗಿ ನೇಮಿಸಿದ. ಅನಂತರ ಸ್ವಲ್ಪ ಕಾಲದಲ್ಲೇ ಅವನು ಕೇರಳದಲ್ಲೂ ರಾಜಪ್ರತಿನಿಧಿಯಾದ. ರಾಜಪ್ರತಿನಿಧಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಇರುತ್ತಿತ್ತು.

ರಾಜೇಂದ್ರ 1021 ಮತ್ತು 1022ರಲ್ಲಿ ಚಾಳುಕ್ಯ ಚಕ್ರವರ್ತಿ ಜಯಸಿಂಹನ ಮೇಲೆ ಮತ್ತೆ ಯುದ್ಧವನ್ನಾರಂಭಿಸಿದ. ಮುಷಂಗಿ ಅಥವಾ ಮುಯಂಗಿ ಎಂಬಲ್ಲಿ ನಡೆದ ಯುದ್ಧದಲ್ಲಿ ರಾಜೇಂದ್ರ ಜಯಗಳಿಸಿದುದಾಗಿ ಶಾಸನಗಳು ತಿಳಿಸಿದರೂ ಅದರಿಂದ ಅವನ ರಾಜ್ಯವಿಸ್ತರಣೆಯೇನೂ ಆದಂತೆ ತೋರುವುದಿಲ್ಲ. ವೆಂಗಿಯಲ್ಲಿ ವಿಮಲಾದಿತ್ಯ 1019ರಲ್ಲಿ ತೀರಿಕೊಂಡಾಗ ಅವನ ಮಗ ರಾಜರಾಜ ತನ್ನ ಸೋದರಮಾವನಾದ ರಾಜೇಂದ್ರನ ನೆರವನ್ನು ಕೋರಿದ. ಆದ್ದರಿಂದ ಚೋಳರ ದಂಡನಾಯಕ ಅರೈಯನ್ ರಾಜರಾಜನ್ ಅಥವಾ ವಿಕ್ರಮಚೋಳ ಚೋಳಿಯ ವರಯ್ಯನ್ ಎಂಬುವನು ವೆಂಗಿಯ ಕಡೆ ದಂಡೆತ್ತಿದಾಗ

ವಿಜಯಾದಿತ್ಯ ಓಡಿಹೋದ. ಇದೇ ಸಂದರ್ಭದಲ್ಲಿ ಈ ಚೋಳ ದಂಡನಾಯಕ ತನ್ನ ದಂಡಯಾತ್ರೆಯನ್ನು ಮುಂದುವರಿಸಿ ಗಂಗಾತೀರದವರೆಗೂ ನುಗ್ಗಿ, ರಾಜೇಂದ್ರ ಹೊಸದಾಗಿ ಕಟ್ಟಿಸುತ್ತಿದ್ದ ರಾಜಧಾನಿಗೆ ಪವಿತ್ರ ಗಂಗಾಜಲವನ್ನು ತಂದ. ಈ ಸಂದರ್ಭದಲ್ಲಿ ರಾಜೇಂದ್ರ ಗೋದಾವರಿಯವರೆಗೂ ಬಂದಿದ್ದು, ಗಂಗೆಯ ಕಡೆಗೆ ಹೊರಟಿದ್ದ ತನ್ನ ಸೈನ್ಯದ ಮೇಲೆ ಕಳಿಂಗರೂ ಓಡ್ರರೂ ತಿರುಗಿಬೀಳದಂತೆ ನೋಡಿಕೊಂಡ. ಗಂಗಾತೀರದವರೆಗೆ ದಂಡಯಾತ್ರೆ ಹೋಗಿದ್ದ ಸೈನ್ಯ ಗೆದ್ದ ರಾಜರಲ್ಲಿ ಇಂದ್ರರಥ, ರಣಶೂರ, ಧರ್ಮಪಾಲ ಮುಂತಾದವರ ಹೆಸರುಗಳು ಬರುತ್ತವೆ. ಈ ವಿಜಯದ ನೆನಪಿಗಾಗಿ ರಾಜೇಂದ್ರ ತನ್ನ ರಾಜಧಾನಿಯಲ್ಲಿ ಚೋಳಗಂಗ ಎಂಬ ಕೆರೆಯನ್ನು ಕಟ್ಟಿಸಿದ. ಚೈತ್ರಯಾತ್ರೆಯ ಅಂತ್ಯದಲ್ಲಿ ರಾಜರಾಜ ನರೇಂದ್ರನ ಪಟ್ಟಾಭಿಷೇಕ ನೆರವೇರಿತ್ತು. ಅದೇ ಕಾಲದಲ್ಲಿ ಅವನು ರಾಜೇಂದ್ರನ ಮಗಳು ಅಮ್ಮಂಗಾದೇವಿಯನ್ನು ವಿವಾಹವಾದ. ರಾಜರಾಜ ನರೇಂದ್ರ ವೆಂಗಿಯಲ್ಲಿ 41 ವರ್ಷಗಳ ಕಾಲ ಆಳಿದರೂ ಅನೇಕ ಬಾರಿ ದೇಶವನ್ನು ಬಿಟ್ಟು ಓಡಿಹೋಗಬೇಕಾದ ಪರಿಸ್ಥಿತಿ ಉಂಟಾಗಿತ್ತು. ಚೋಳಸೈನ್ಯಕ್ಕೆ ಹೆದರಿ ಓಡಿಹೋಗಿದ್ದ ವಿಜಯಾದಿತ್ಯ ಚಾಳುಕ್ಯರ ಸಹಾಯದಿಂದ ರಾಜರಾಜನನ್ನು ಓಡಿಸಿ ತಾನೇ ವೆಂಗಿಯ ರಾಜನಾಗಿ 1031ರಲ್ಲಿ ಪಟ್ಟಕ್ಕೆ ಬಂದ. ರಾಜರಾಜ ನರೇಂದ್ರ ಪುನಃ ರಾಜೇಂದ್ರನತ್ತ ಸಹಾಯಕ್ಕಾಗಿ ತಿರುಗಬೇಕಾಯಿತು. ಬ್ರಹ್ಮಮಹಾರಾಜನೆಂಬ ದಂಡನಾಯಕನೊಡನೆ ಬಲವಾದ ಸೈನ್ಯವನ್ನು ರಾಜೇಂದ್ರ ಕಳುಹಿಸಿದ. ಅವನೊಂದಿಗೆ ಉತ್ತಮ ಚೋಳ ಮೆಲಾಡುಡೈಯಾನ್ ಮತ್ತು ಉತ್ತಮ ಚೋಳ ಚೋಳಕೋನ್ ಎಂಬ ಅಧಿಕಾರಿಗಳು ಇದ್ದರು. ಕಲಿದಿಂಡಿ ಎಂಬಲ್ಲಿ ನಡೆದ ಯುದ್ಧದಲ್ಲಿ ಈ ಮೂವರೂ ಸತ್ತರು. ಆದರೂ ರಾಜರಾಜ ನರೇಂದ್ರ ಜಯಗಳಿಸಿ ಮತ್ತೆ ಸು. 1035ರ ವೇಳೆಗೆ ವೆಂಗಿರಾಜ್ಯದ ರಾಜನಾದಂತೆ ತೋರುತ್ತದೆ. 1042ರ ಹೊತ್ತಿಗೆ ಚಾಳುಕ್ಯ 1ನೆಯ ಸೋಮೇಶ್ವರ ವೆಂಗಿಯ ಮೇಲೆ ದಂಡೆತ್ತಿ ಬಂದಾಗ ರಾಜರಾಜ ಪುನಃ ರಾಜೇಂದ್ರನ ಸಹಾಯ ಕೋರಬೇಕಾಯಿತು. ರಾಜೇಂದ್ರನ ಮಗ ರಾಜಾಧಿರಾಜ ಸೈನ್ಯದೊಂದಿಗೆ ವೆಂಗಿನಾಡಿಗೆ ಹೋದಾಗ ಪುನಃ ಚೋಳ ಚಾಳುಕ್ಯರ ನಡುವೆ ಯುದ್ಧವಾಯಿತು.

ರಾಜೇಂದ್ರನ 14ನೆಯ ವರ್ಷದ ಶಾಸನದಲ್ಲಿ ಮೊದಲ ಬಾರಿಗೆ ಅವನು ಕಡಾರದ ಮೇಲೆ ಯುದ್ಧಕ್ಕೆ ಹೋದ ವಿಷಯ ಕಂಡುಬರುತ್ತದೆ. ಅನೇಕ ಹಡಗುಗಳಲ್ಲಿ ಸಮುದ್ರ ದಾಟಿ, ಕಡಾರದ ರಾಜ ಸಂಗ್ರಾಮ ವಿಜಯೋತ್ತುಂಗ ವರ್ಮನನ್ನು ಸೆರೆಹಿಡಿದು, ವಿದ್ಯಾಧರ ತೋರಣ, ಶ್ರೀವಿಜಯ, ಪಣ್ಣೈ, ಮಲೆಯೂರ್, ನೂಯಿರುಡಿಂಗಂ ಇಲಂಗಾಶೋಕ, ಮಾಪಪ್ಪಾಳಂ, ಮೋವಿಳಂಬಂಗ, ನಳೈಪ್ಪಂದೂರ್, ತಲೈತ್ತಕ್ಕೋಲಂ, ಮಾದಮಾಲಿಂಗಂ, ಇಲಾಮುರಿದೇಶಂ, ಮಾನಕ್ಕವಾರಂ ಮತ್ತು ಕಡಾರಗಳನ್ನು ಗೆದ್ದನೆಂದು ಅವನ ಪ್ರಶಸ್ತಿ ಸಾರುತ್ತದೆ. ಹೀಗೆ ಅವನ ರಾಜ್ಯ ಸಮುದ್ರದಾಚೆಗೂ ಹರಡುವಂತಾಯಿತು. ಇನ್ನು ಮುಂದೆ ರಾಜೇಂದ್ರ ಯುದ್ಧಗಳಲ್ಲಿ ತಾನೇ ಭಾಗವಹಿಸದೆ ತನ್ನ ಮಕ್ಕಳಿಗೆ ಆ ಅವಕಾಶವನ್ನೊದಗಿಸಿದ. ಪಾಂಡ್ಯ ಕೇರಳ ರಾಜ್ಯಗಳಲ್ಲಿ ದಂಗೆಯೆದ್ದಾಗ ಅದನ್ನು ಅಡಗಿಸಿದವನು ರಾಜಾಧಿರಾಜ. ಇದೇ ರೀತಿ ಸಿಂಹಳದಲ್ಲಿ 1ನೆಯ ವಿಕ್ರಮಬಾಹುವಿನೊಂದಿಗೆ ರಾಜಾಧಿರಾಜ ನಡೆಸಿದ ಯುದ್ಧಗಳು ರಾಜೇಂದ್ರನ ಆಳ್ವಿಕೆಯಲ್ಲೇ ಆರಂಭವಾದುವು.

ಹೀಗೆ ರಾಜೇಂದ್ರನ ಆಳ್ವಿಕೆ ವಿಜಯಾಲಯನ ಪೀಳಿಗೆಯ ಚೋಳ ವಂಶದಲ್ಲೇ ಅಮೋಘವಾದ್ದಾಗಿತ್ತು. ಅವನ ರಾಜ್ಯ ಅತ್ಯಂತ ವಿಸ್ತಾರವಾದ್ದಾಯಿತು. ಸೈನ್ಯ ಮತ್ತು ನೌಕಾಬಲ ಅತ್ಯಂತ ಬಲಯುತವಾದ್ದಾಗಿತ್ತು. ರಾಜೇಂದ್ರನಿಗೆ ಹಲವಾರು ಬಿರುದುಗಳಿದ್ದುವು. ಅವುಗಳಲ್ಲಿ ಮುಖ್ಯವಾದವು ಮುಡಿಗೊಂಡ ಚೋಳ, ಪಂಡಿತ ಚೋಳ, ಗಂಗೈಕೊಂಡ ಚೋಳ. ಗಂಗೈಕೊಂಡ ಚೋಳನೆಂಬ ಬಿರುದು ಅವನಿಗೆ ಅತ್ಯಂತ ಪ್ರಿಯವಾದದ್ದು. ಈ ಹೆಸರಿನಿಂದ ಅವನು ಹೊಸ ರಾಜಧಾನಿಯನ್ನು ಕಟ್ಟಿಸಿ ಅಲ್ಲಿ ಭವ್ಯವಾದ ಗಂಗೈಕೊಂಡ ಚೋಳೇಶ್ವರ ದೇವಾಲಯವನ್ನು ಕಟ್ಟಿಸಿದ. 1044ರಲ್ಲಿ ರಾಜೇಂದ್ರ ಕಾಲವಾದ. ಅವನ ರಾಣಿಯರಲ್ಲಿ ವೀರಮಹಾದೇವಿ ಅವನೊಂದಿಗೆ ಸಹಗಮನ ಮಾಡಿದಳು. ಅವನ ಮಕ್ಕಳಲ್ಲಿ ರಾಜಾಧಿರಾಜ, ರಾಜೇಂದ್ರ ಮತ್ತು ವೀರರಾಜೇಂದ್ರರು ಅವನ ಅನಂತರ ಅನುಕ್ರಮವಾಗಿ ರಾಜ್ಯಭಾರ ಮಾಡಿದರು.

ರಾಜೇಂದ್ರ ಚೋಳನ ಮರಣದೊಂದಿಗೆ ಚೋಳ ಸಾಮ್ರಾಜ್ಯದ ಒಂದು ಹಿರಿಯ ಅಧ್ಯಾಯ ಮುಕ್ತಾಯವಾದಂತಾಯಿತು. 1044ರಲ್ಲಿ ಅವನ ಅನಂತರ ಅವನ ಮಗ 1ನೆಯ ರಾಜಾಧಿರಾಜ ಪಟ್ಟಕ್ಕೆ ಬಂದ. ವೆಂಗಿಯಲ್ಲಿ ಚೋಳರ ಆಧಿಪತ್ಯವನ್ನು ಮುಂದುವರಿಸಬೇಕೆಂಬ ಇಚ್ಛೆಯಿಂದ ಅವನು ರಾಜನಾದ ಕೂಡಲೇ ಅತ್ತಕಡೆ ಚೈತ್ರಯಾತ್ರೆ ಹೊರಟ. ದನ್ನಡ ಅಥವಾ ಧ್ಯಾನ್ಯಕಟಕದ ಬಳಿ ಚಾಳುಕ್ಯರ ಸೈನ್ಯವನ್ನು ಸೋಲಿಸಿ ವಿಕ್ರಮಾದಿತ್ಯ ಮತ್ತು ವಿಜಯಾದಿತ್ಯರನ್ನು ಹಿಮ್ಮೆಟ್ಟಿಸಿ ಚಾಳುಕ್ಯರ ರಾಜ್ಯದೊಳಗೆ ನುಗ್ಗಿ ಪಶ್ಚಿಮದ ಕಡೆಕೊಲ್ಲಿಪಾಕಿಗೆ ಬೆಂಕಿಯಿಟ್ಟ. ಪಶ್ಚಿಮದ ಕಡೆ ನುಗ್ಗಿದ ಅವನ ಸೈನ್ಯ ಅನೇಕ ಚಾಳುಕ್ಯ ದಂಡನಾಯಕರನ್ನೂ ಸಾಮಂತರನ್ನೂ ಬಂಧಿಸಿ ಕಂಪಿಲಿಯಲ್ಲಿಯ ಚಾಳುಕ್ಯ ಅರಮನೆಯನ್ನು ದೋಚಿ ನಾಶಮಾಡಿತು. ಕಡೆಗೆ ಕೃಷ್ಣಾ ನದಿಯ ದಡದಲ್ಲಿ ಪೂಂಡೂರಿನ ಬಳಿ ನಡೆದ ಘೋರ ಯುದ್ಧದಲ್ಲಿ ಶತ್ರುಸೈನ್ಯ ಸೋತುಹೋಯಿತು. ಚೋಳಸೈನ್ಯ ಕೃಷ್ಣಾ ನದಿಯನ್ನು ದಾಟಿ ಯಾದಗಿರಿಯಲ್ಲಿ ಬೀಡುಬಿಟ್ಟು ವಿಜಯಸ್ತಂಭ ಸ್ಥಾಪಿಸಿತು. ವಿಜಯದಿಂದ ಮುಂದುವರಿದ ಈ ಸೈನ್ಯ ಕಡೆಗೆ ಚಾಳುಕ್ಯ ರಾಜಧಾನಿ ಕಲ್ಯಾಣವನ್ನು ಸೂರೆ ಮಾಡಿತು. ರಾಜಾಧಿರಾಜ ಶತ್ರುವಿನ ರಾಜಧಾನಿಯಲ್ಲೇ ವೀರಾಭಿಷೇಕ ಮಾಡಿಕೊಂಡು ವಿಜಯರಾಜೇಂದ್ರ ಎಂಬ ಬಿರುದನ್ನು ತಳೆದ. ಆದರೆ 1050ರ ಹೊತ್ತಿಗೆ ಚಾಳುಕ್ಯ ಸೋಮೇಶ್ವರ ಚೋಳರನ್ನು ತನ್ನ ರಾಜ್ಯದಿಂದ ಓಡಿಸಿದನಲ್ಲದೆ ವೆಂಗಿಯಲ್ಲಿ ರಾಜರಾಜ ಚೋಳರನ್ನು ಬಿಟ್ಟು ತನ್ನನ್ನು ಅಧಿರಾಜನನ್ನಾಗಿ ಸ್ವೀಕರಿಸುವಂತೆ ಮಾಡಿದ. ಚೋಳ ರಾಜ್ಯದಲ್ಲಿ ಕಂಚಿಯವರೆಗೂ ಸೈನ್ಯ ನುಗ್ಗಿಸಿದ. ಇದಕ್ಕೆ ಪ್ರತೀಕಾರವಾಗಿ ರಾಜಾಧಿರಾಜ ತನ್ನ ತಮ್ಮ ಯುವರಾಜ ಇಮ್ಮಡಿ ರಾಜೇಂದ್ರನೊಂದಿಗೆ ಚಾಳುಕ್ಯ ರಾಜ್ಯದೊಳಗೆ ನುಗ್ಗಿ ಕೃಷ್ಣಾನದಿಯ ದಡದಲ್ಲಿ ರೊಪ್ಪಂ (ಕೊಪ್ಪಳ) ಎಂಬಲ್ಲಿ ಚಾಳುಕ್ಯ ಸೈನ್ಯವನ್ನೆದುರಿಸಿದ. ಅಲ್ಲಿ ನಡೆದ ತೀವ್ರ ಹೋರಾಟದಲ್ಲಿ ರಾಜಾಧಿರಾಜ ಹತನಾದರೂ ಇಮ್ಮಡಿ ರಾಜೇಂದ್ರ ಪರಾಕ್ರಮದಿಂದ ಹೋರಾಡಿ ಜಯಗಳಿಸಿದ. ಚಾಳುಕ್ಯರ ಕಡೆ ಹಲವು ದಂಡನಾಯಕರು ಸತ್ತರು. ಹೇರಳವಾದ ಸೂರೆ ರಾಜೇಂದ್ರನ ವಶವಾಯಿತು. ಯುದ್ಧಭೂಮಿಯಲ್ಲೇ ಪಟ್ಟ ಕಟ್ಟಿಸಿಕೊಂಡ ಇಮ್ಮಡಿ ರಾಜೇಂದ್ರ ಕೊಲ್ಲಾಪುರದವರೆಗೂ ನುಗ್ಗಿ ವಿಜಯಸ್ತಂಭವನ್ನು ನಿಲ್ಲಿಸಿ ಹಿಂದಿರುಗಿದ. ಇದಕ್ಕಾಗಿ ಸೇಡು ತೀರಿಸಲು ಸೋಮೇಶ್ವರ ಯುದ್ಧವನ್ನು ಮರುಕಳಿಸಿದರೂ ಕೂಡಲಸಂಗಮದಲ್ಲಿ ನಡೆದ ಯುದ್ಧದಲ್ಲಿ ಸೋತು ಹಿಂದಿರುಗಬೇಕಾಯಿತು. ಇದಾದ ಸ್ವಲ್ಪ ಕಾಲದಲ್ಲೇ ಚೋಳ ಯುವರಾಜ ಮಹೇಂದ್ರ ಮತ್ತು ಇಮ್ಮಡಿ ರಾಜೇಂದ್ರರು ತೀರಿಕೊಂಡರು. ವೀರರಾಜೇಂದ್ರ 1063ರಲ್ಲಿ ರಾಜನಾದ. ಚೋಳ–ಚಾಳುಕ್ಯರ ತಿಕ್ಕಾಟ ಮುಂದುವರಿಯಿತು. ವೆಂಗಿನಾಡಿನಲ್ಲಿ ಸೋಮೇಶ್ವರ ತನ್ನ ಸಾಮಂತರಾದ ಧಾರಾವರ್ಷ, ಗಂಗರ ಮುಮ್ಮಡಿ ವಜ್ರಹಸ್ತರ ನೆರವನ್ನು ಪಡೆದು ಪರಮಾರ ಜನನಾಥನನ್ನು ದೊಡ್ಡ ಸೈನ್ಯದೊಡನೆ ಬೆಜವಾಡದ ಬಳಿ ಇರಿಸಿದ್ದ. ಪಶ್ಚಿಮದಲ್ಲಿ ವಿಜಯಾದಿತ್ಯ ಚೋಳ ರಾಜ್ಯದೊಳಗೆ ನುಗ್ಗಿದ. ಪಟ್ಟವಾದ ಮೇಲೆ ವೀರ ರಾಜೇಂದ್ರ ಯುದ್ಧರಂಗಕ್ಕೆ ಹಿಂದಿರುಗಿದ. ಮೊದಲು ಚೋಳರಿಗೆ ಹೆಚ್ಚಿನ ಜಯ ದೊರೆಯಲಿಲ್ಲ. ಆದರೆ 1066ರಲ್ಲಿ ತುಂಗಭದ್ರಾತೀರದಲ್ಲಿ ಸೋಮೇಶ್ವರನ ಪಡೆಯನ್ನು ಸೋಲಿಸಿದ. ಆದರೂ ಮತ್ತೊಮ್ಮೆ ಕೂಡಲ ಸಂಗಮದಲ್ಲಿ ಯುದ್ಧದ ಸಿದ್ಧತೆಗಳು ನಡೆದುವು. ಕಡೆಗೆ ವೀರ ರಾಜೇಂದ್ರ ಚಾಳುಕ್ಯರ ಮೇಲೆ ಬಿದ್ದು ಅವರನ್ನು ಸಂಪೂರ್ಣವಾಗಿ ಸೋಲಿಸಿ ಜಯಸ್ತಂಭ ನಿಲ್ಲಿಸಿದ. ಆಗ ಅವನ ಗಮನ ವೆಂಗಿಯತ್ತ ತಿರುಗಿತು. ಅಲ್ಲೂ ಬೆಜವಾಡದ ಬಳಿ ನಡೆದ ಯುದ್ಧದಲ್ಲಿ ಚಾಳುಕ್ಯರಿಗೆ ಸೋಲಾಯಿತು. ವೀರರಾಜೇಂದ್ರ ಕೃಷ್ಣಾ ನದಿಯನ್ನು ದಾಟಿ ಕಳಿಂಗದತ್ತ ಮುನ್ನುಗ್ಗಿದ. ಚಾಳುಕ್ಯರ ಕಡೆ ವಿಜಯಾದಿತ್ಯ ಮತ್ತು ಮುಮ್ಮಡಿ ವಜ್ರಹಸ್ತನ ಮಗ ರಾಜರಾಜರಲ್ಲದೆ ವಿಕ್ರಮಾದಿತ್ಯನೂ ಚೋಳರ ಕಡೆ ಮುಂದೆ 1ನೆಯ ಕುಲೋತ್ತುಂಗನೆಂಬ ಹೆಸರಿನಿಂದ ಆಳಿದ ರಾಜೇಂದ್ರನೂ ಯುದ್ಧದಲ್ಲಿ ಭಾಗವಹಿಸಿದರು. ಸಿಂಹಳದಲ್ಲಿ ವಿಜಯಬಾಹು ಸ್ವತಂತ್ರನಾಗಲು ಪ್ರಯತ್ನಿಸಿದ್ದರಿಂದ 1067ರಲ್ಲಿ ವೀರ ರಾಜೇಂದ್ರ ಸೈನ್ಯವನ್ನು ಕಳುಹಿಸಿ ಅವನನ್ನು ಸೋಲಿಸಿದ. ಸಿಂಹಳದ ರಾಣಿ ಸೆರೆಸಿಕ್ಕಳು. 1068ರಲ್ಲಿ ವೀರ ರಾಜೇಂದ್ರ ನೌಕಾಪಡೆಯೊಂದನ್ನು ಕಳುಹಿಸಿ ಕಡಾರವನ್ನು ಗೆದ್ದ. ಇಷ್ಟರಲ್ಲಿ ಸೋಮೇಶ್ವರ ತೀರಿಕೊಂಡ. ಇಮ್ಮಡಿ ಸೋಮೇಶ್ವರ ಪಟ್ಟಕ್ಕೆ ಬರುತ್ತಿದ್ದಂತೆಯೇ ವೀರರಾಜೇಂದ್ರ ಅವನ ಮೇಲೆ ಯುದ್ಧಕ್ಕೆ ಬಂದು ಗುತ್ತಿಯನ್ನು ಮುತ್ತಿದ. ಅದೇ ಕಾಲದಲ್ಲಿ ಸೋಮೇಶ್ವರನಿಗೆ ವಿಕ್ರಮಾದಿತ್ಯ ಎದುರುಬಿದ್ದು ವೀರ ರಾಜೇಂದ್ರನೊಡನೆ ಸಂಧಾನ ನಡೆಸಿದ. ಇದರಿಂದ ಚೋಳ ಚಾಳುಕ್ಯರ ನಡುವಣ ಸಂಬಂಧ ವ್ಯತ್ಯಸ್ತಗೊಂಡಿತು. ವೀರರಾಜೇಂದ್ರನಿಗೆ ವಿಜಯಾದಿತ್ಯ ಶರಣಾಗಿ ಅವನಿಗೆ ಅಧೀನವಾಗಿ ವೆಂಗಿಯನ್ನು ಆಳಲಾರಂಭಿಸಿದ. ವೀರ ರಾಜೇಂದ್ರ ತನ್ನ ಒಬ್ಬ ಮಗಳನ್ನು ವಿಕ್ರಮಾದಿತ್ಯನಿಗೂ ಇನ್ನೊಬ್ಬ ಮಗಳನ್ನು ಕಳಿಂಗ ಗಂಗರ ರಾಜಕುಮಾರ ರಾಜರಾಜನಿಗೂ ಕೊಟ್ಟ. ಇದರಿಂದ ಚೋಳ ಚಾಳುಕ್ಯರ ನಡುವಣ ದ್ವೇಷ ಕೊನೆಗೊಂಡಂತೆ ಆಯಿತು. ಆದರೆ 1070ರಲ್ಲಿ ವೀರ ರಾಜೇಂದ್ರ ತೀರಿಕೊಂಡಾಗ ಮತ್ತೆ ಪರಿಸ್ಥಿತಿ ಬದಲಾಯಿಸಿತು.

ವೆಂಗಿಯಲ್ಲಿ 7ನೆಯ ವಿಜಯಾದಿತ್ಯ ವೀರ ರಾಜೇಂದ್ರನನ್ನು ಪಟ್ಟಕ್ಕೆ ತಂದಿದ್ದರಿಂದ ಆ ರಾಜ್ಯದ ಹಕ್ಕುದಾರನಾಗಿದ್ದ. ರಾಜೇಂದ್ರನ ಮಗಳ ಮಗನೂ ಇಮ್ಮಡಿ ರಾಜೇಂದ್ರನ ಮಗಳಾದ ಮಧುರಾಂತಕಿಯ ಗಂಡನೂ ಆಗಿದ್ದ. ರಾಜೇಂದ್ರ ವೆಂಗಿ ಮತ್ತು ಚೋಳ ಸಿಂಹಾಸನಗಳೆರಡಕ್ಕೂ ಹಕ್ಕು ಸ್ಥಾಪಿಸಲು ಪ್ರಯತ್ನಿಸಿದ. ವೀರರಾಜೇಂದ್ರನ ಮಗ ಅಧಿರಾಜೇಂದ್ರನ ಪರವಾಗಿ ವಿಕ್ರಮಾದಿತ್ಯ ಕಂಚಿಗೆ ಹೋಗಿ ಅಲ್ಲಿಯ ದಂಗೆಯನ್ನಡಗಿಸಿ ಗಂಗೈಕೊಂಡ ಚೋಳಪುರದಲ್ಲಿ ಅಧಿರಾಜೇಂದ್ರನಿಗೆ ಪಟ್ಟಗಟ್ಟಿ ಹಿಂದಿರುಗಿದ. ಆದರೆ ಸ್ವಲ್ಪ ಸಮಯದಲ್ಲೇ ಅಧಿರಾಜ ಹತನಾದ. ವೆಂಗಿಯಿಂದ ವಿಜಯಾದಿತ್ಯನನ್ನು ಓಡಿಸಿದ್ದ ರಾಜರಾಜ ಚೋಳ ಚಕ್ರವರ್ತಿಯಾಗಿ 1ನೆಯ ಕುಲೋತ್ತುಂಗನೆಂಬ ಹೆಸರಿನಿಂದ

ಆಳಲಾರಂಭಿಸಿದ. ವಿಕ್ರಮಾದಿತ್ಯನಿಗೆ ಇಕ್ಕಟ್ಟಿನ ಸ್ಥಿತಿಯೊದಗಿತು. ಇಮ್ಮಡಿ ಸೋಮೇಶ್ವರ ಕುಲೋತ್ತುಂಗನ ಸ್ನೇಹ ಬೆಳೆಸಿದ. 1075ರ ಹೊತ್ತಿಗೆ ಕುಲೋತ್ತುಂಗನಿಗೂ ವಿಕ್ರಮಾದಿತ್ಯನಿಗೂ ನರಿಗಲಿಯ ಬಳಿ ಯುದ್ಧ ಸಂಭವಿಸಿತು. ಚಾಳುಕ್ಯ ಸೈನ್ಯವನ್ನು ಕುಲೋತ್ತುಂಗ ಸೋಲಿಸಿ ತುಂಗಭದ್ರೆಯವರೆಗೂ ನುಗ್ಗಿದ. ಗಂಗವಾಡಿಯ ಬಹುಭಾಗ ಅವನ ವಶವಾಯಿತು. ಆದರೆ ಅವನಿಗೆ ಸಹಾಯ ಮಾಡಲು ಬಂದ ಸೋಮೇಶ್ವರ ಮಾತ್ರ ವಿಕ್ರಮಾದಿತ್ಯನಿಗೆ ಸೆರೆಸಿಕ್ಕಿದ. ವಿಕ್ರಮಾದಿತ್ಯ ಚಾಳುಕ್ಯ ಚಕ್ರವರ್ತಿಯಾದ. ಸಿಂಹಳದಲ್ಲಿ ವಿಜಯಬಾಹು ತನ್ನೆಲ್ಲ ಬಲದೊಂದಿಗೆ ಚೋಳರನ್ನು ಓಡಿಸಿ ಸ್ವತಂತ್ರನಾದ.

ಪಾಂಡ್ಯ ಕೇರಳ ರಾಜ್ಯಗಳಲ್ಲಿಯ ದಂಗೆಯನ್ನಡಗಿಸಲು ಕುಲೋತ್ತುಂಗ ದಕ್ಷಿಣದ ಕಡೆ ದಂಡೆಯಾತ್ರೆ ಹೊರಟು ಶೆಂಪೋನ್ಮಾರಿ, ಕೊಟ್ಟಾಋ, ವಿಲಿನಂ ಮತ್ತು ಶಾಲೈಗಳಲ್ಲಿ ನಡೆದ ಯುದ್ಧಗಳಲ್ಲಿ ತನ್ನನ್ನು ಎದುರಿಸಿದ ಪಾಂಡ್ಯ ಕೇರಳ ರಾಜಕುಮಾರರನ್ನು ಬಗ್ಗು ಬಡಿದು ತನ್ನ ಅಧೀನಕ್ಕೆ ತಂದ.

1084–5ರಲ್ಲಿ ವಿಜಯಬಾಹು ಚೋಳರ ಮೇಲೆ ಯುದ್ಧ ಹೂಡಲು ಯತ್ನಿಸಿದಾಗ ಅವನ ಸೈನ್ಯದಲ್ಲೇ ದಂಗೆ ನಡೆಯಿತು. ಅವನು ಕಡೆಗೆ ಅದನ್ನು ಅಡಗಿಸಿದ. ಕುಲೋತ್ತುಂಗ ಅವನೊಡನೆ ರಾಜಿಯಾಗಿ, ತನ್ನ ಮಗಳೊಬ್ಬಳನ್ನು ಸಿಂಹಳದ ರಾಜಕುಮಾರ ವೀರಪ್ಪೆರುಮಾಳನಿಗೆ ಕೊಟ್ಟು ಮದುವೆ ಮಾಡಿದ. ವೆಂಗಿಯಲ್ಲಿ 7ನೆಯ ವಿಜಯಾದಿತ್ಯ ತೀರಿಕೊಂಡ ಮೇಲೆ (1076) ಕುಲೋತ್ತುಂಗ ತನ್ನ ಮಕ್ಕಳನ್ನು ರಾಜಪ್ರತಿನಿಧಿಗಳಾಗಿ ಆಳಲು ಅಲ್ಲಿಗೆ ಕಳುಹಿಸಿದ. ವಿಕ್ರಮಚೋಳ ಅಲ್ಲಿ ಆಳುತ್ತಿದ್ದಾಗ 1097ರಲ್ಲಿ ಕಳಿಂಗದ ಅನಂತವರ್ಮನೂ ತನ್ನ ಅಧೀನವಾಗುವಂತೆ ಮಾಡಿದ. ಮುಂದೆ 1110ರಲ್ಲಿ ಅನಂತವರ್ಮ ಕಪ್ಪ ಕೊಡುವುದನ್ನು ನಿಲ್ಲಿಸಿದಾಗ ಎರಡನೆಯ ಬಾರಿ ಕಳಿಂಗದ ಮೇಲೆ ಚೋಳಸೈನ್ಯ ನುಗ್ಗಿತು. ಈ ಸೈನ್ಯದ ದಂಡನಾಯಕ ಕರುಣಾಕರ ತೊಂಡೈಮಾನ ಅನಂತವರ್ಮನನ್ನು ಸೋಲಿಸಿ ಹೇರಳವಾದ ಐಶ್ವರ್ಯವನ್ನು ದೋಚಿಕೊಂಡು ಬಂದ.

1115ರ ವರೆಗೂ ಚೋಳ ಚಕ್ರಾಧಿಪತ್ಯ ಸಿಂಹಳವನ್ನು ಬಿಟ್ಟು ಉಳಿದಂತೆ ವಿಸ್ತಾರವಾದ್ದಾಗಿಯೇ ಮುಂದುವರಿಯಿತು. ಆದರೆ ಅಷ್ಟುಹೊತ್ತಿಗೆ ಪ್ರಬಲನಾಗಿದ್ದ ಹೊಯ್ಸಳ ದೊರೆ ವಿಷ್ಣುವರ್ಧನ ತಲಕಾಡಿನಲ್ಲಿ ಚೋಳರ ಅಧಿಕಾರಿಯಾಗಿದ್ದ ಆದಿಯಮನನ್ನು ಸೋಲಿಸಿ ಗಂಗವಾಡಿಯಿಂದ ಚೋಳರನ್ನು ಓಡಿಸಿದ. ಅದೇ ಸಮಯದಲ್ಲಿ ವಿಕ್ರಮಾದಿತ್ಯ ವೆಂಗಿಯ ಮೇಲೆ ತನ್ನ ಕಣ್ಣು ಹಾಯಿಸಿದ. 1118ರ ಹೊತ್ತಿಗೆ ವಿಕ್ರಮಚೋಳ ವೆಂಗಿಯಿಂದ ಹಿಂದಿರುಗಿದ್ದ. ಅಲ್ಲಿ ವಿಕ್ರಮಾದಿತ್ಯನ ದಂಡನಾಯಕ ಅನಂತಪಾಲ ಆಳುತ್ತಿದ್ದ. ಹೀಗೆ ಕುಲೋತ್ತುಂಗನ ಆಳ್ವಿಕೆಯ ಕೊನೆಯ ವರ್ಷಗಳ ಹೊತ್ತಿಗೆ ಚೋಳರಾಜ್ಯ ತಮಿಳು ಸೀಮೆಗೆ ಮಾತ್ರ ಸೀಮಿತವಾಗಿತ್ತು. ಕುಲೋತ್ತುಂಗ ಚೋಳರಲ್ಲಿ ಪ್ರಸಿದ್ಧರಾಗಿದ್ದ ದೊರೆಗಳಲ್ಲಿ ಒಬ್ಬ. ಅನಾವಶ್ಯಕವಾಗಿ ಯುದ್ಧದಲ್ಲಿ ಭಾಗಿಯಾಗದೆ, ದೇಶವನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಲು ಪ್ರಯತ್ನಿಸಿದ. ಜನಗಳ ಮೇಲೆ ತೆರಿಗೆಯ ಹೊರೆಯನ್ನು ಹೊರಿಸದೆ, ಶುಂಗಂ ಪವಿತನ್ (ಸುಂಕವನ್ನು ತೆಗೆದುಹಾಕಿದವನು) ಎಂಬ ಬಿರುದು ಪಡೆದ. ಉಳಿದಷ್ಟು ರಾಜ್ಯ ಮುಂದೆ ನೂರು ವರ್ಷಗಳ ಕಾಲ ಭದ್ರವಾಗಿ ಮುಂದುವರಿಯಲು ಇವನ ರಾಜನೀತಿ ಸಹಾಯಕವಾಯಿತು.

ಕುಲೋತ್ತುಂಗ 1122ರ ವರೆಗೂ ಬದುಕಿದ್ದರೂ ವಿಕ್ರಮಚೋಳನ ಆಳ್ವಿಕೆ 1118ರಿಂದಲೇ ಆರಂಭವಾಗುತ್ತದೆ. 1133ರ ಹೊತ್ತಿಗೆ ವಿಕ್ರಮಚೋಳ ವೆಂಗಿಯನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಂಡ. ಇವನ 17 ವರ್ಷಗಳ ಆಳ್ವಿಕೆ ಸಾಮಾನ್ಯವಾಗಿ ಶಾಂತಿಯಿಂದ ಕೂಡಿತ್ತು. ಇವನು ಚಿದಂಬರ ನಟರಾಜನ ದೇವಾಲಯವನ್ನು ಬಹುವಾಗಿ ವಿಸ್ತರಿಸಿದ. ಇವನ ಮಗ ಇಮ್ಮಡಿ ಕುಲೋತ್ತುಂಗ 1133ರಿಂದ 1150ರವರೆಗೂ ಅನಂತರ ಇವನ ಮಗ ಇಮ್ಮಡಿ ರಾಜರಾಜ 1173ರ ವರೆಗೂ ಆಳಿದರು. ಇವರ ಆಳ್ವಿಕೆಯ ಕಾಲವೂ ಸಾಮಾನ್ಯವಾಗಿ ಶಾಂತಿಯಿಂದ ಕೂಡಿತ್ತು. ರಾಜರಾಜನಿಗೆ ಮಕ್ಕಳಿಲ್ಲದ್ದರಿಂದ ವಿಕ್ರಮಚೋಳನ ಮಗಳ ಮಗ ಇಮ್ಮಡಿ ರಾಜಾಧಿರಾಜನನ್ನು ಯುವರಾಜನನ್ನಾಗಿ ಆರಿಸಿದ. ರಾಜರಾಜನ ಆಳ್ವಿಕೆಯಲ್ಲಿ ಆಡಳಿತದ ಬಿಗಿ ಕುಸಿಯುತ್ತಿತ್ತು. ಸಾಮಂತರಾಜರು ಹೆಚ್ಚುಹೆಚ್ಚು ಸ್ವತಂತ್ರರಾಗಿ ವರ್ತಿಸತೊಡಗಿದರು. ಪಾಂಡ್ಯ ನಾಡಿನಲ್ಲಿ ಸಿಂಹಾಸನಕ್ಕಾಗಿ ನಡೆದ ಹೋರಾಟದಲ್ಲಿ ಚೋಳರೂ ಸಿಂಹಳದವರೂ ವಿರುದ್ಧ ಪಕ್ಷ ವಹಿಸಿ ಕಾದಾಡಿದರು. ಪರಾಕ್ರಮ ಮತ್ತು ಕುಲಶೇಖರರಲ್ಲಿ ನಡೆದ ಅಂತರ್ಯುದ್ಧದಲ್ಲಿ ಪರಾಕ್ರಮನ ಪಕ್ಷ ವಹಿಸಿ ಸಿಂಹಳದ ಪರಾಕ್ರಮಬಾಹು ಲಂಕಾಪುರನೊಂದಿಗೆ ಸೈನ್ಯ ಕಳುಹಿಸಿದ. ಆದರೆ ಕುಲಶೇಖರ ಅವನು ಬರುವುದರೊಳಗೆ ಪರಾಕ್ರಮನನ್ನೂ ಅವನ ತಾಯಿ ಮತ್ತು ಮಕ್ಕಳನ್ನೂ ಕೊಂದುಹಾಕಿದ್ದ. ಆದರೂ ಯುದ್ಧ ನಡೆಯಿತು. ಇದರಿಂದ ಕುಲಶೇಖರ ಚೋಳರ ಸಹಾಯ ಕೋರಿದ. ಮೊದಲು ಸಿಂಹಳದ ಸೈನ್ಯಕ್ಕೆ ಗೆಲುವು ಉಂಟಾಗಿ, ಪರಾಕ್ರಮನ ಮಕ್ಕಳಲ್ಲಿ ಒಬ್ಬನಾಗಿದ್ದ ವೀರಪಾಂಡ್ಯನನ್ನು ಸಿಂಹಾಸನದ ಮೇಲೆ ಲಂಕಾಪುರ ಕೂಡಿಸಿದ. ಆದರೆ ಚೋಳರ ಕಡೆ ಪಲ್ಲವರಾಯ ಸಿಂಹಳದ ಸೈನ್ಯವನ್ನು ಸೋಲಿಸಿ ಲಂಕಾಪುರ ಮತ್ತು ಇತರ ದಂಡನಾಯಕರ ತಲೆಗಳನ್ನು ಊರ ಬಾಗಿಲಿಗೆ ನೇತುಹಾಕಿಸಿದ. ಈ ಸುದ್ದಿಯನ್ನು ಕೇಳಿದ ಪರಾಕ್ರಮಬಾಹು ಮತ್ತೊಮ್ಮೆ ಯುದ್ಧಸನ್ನಾಹ ನಡೆಸುತ್ತಿರುವಷ್ಟರಲ್ಲಿ ಪಲ್ಲವರಾಯ ಸಿಂಹಳಕ್ಕೆ ದಂಡೆತ್ತಿ ಹಲವು ಸ್ಥಳಗಳನ್ನು ಹಿಡಿದ. ಪಾಂಡ್ಯನ ಪಕ್ಷ ವಹಿಸಿದ್ದರಿಂದ ತನಗಾದ ಅನಾಹುತವನ್ನರಿತ ಪರಾಕ್ರಮಬಾಹು ಆ ಪಕ್ಷವನ್ನು ಬಿಟ್ಟು, ಕುಲಶೇಖರನೇ ಪಾಂಡ್ಯರಾಜ್ಯದ ಉತ್ತರಾಧಿಕಾರಿಯೆಂದು ತಿಳಿಸಿ ಚೋಳರಿಗೆ ವಿರುದ್ಧವಾಗಿ ಅವನೊಡನೆ ಸ್ನೇಹ ಬೆಳೆಸಿದ. ಕುಲಶೇಖರನ ದ್ರೋಹವನ್ನರಿತ ಪಲ್ಲವರಾಯ ಕುಲಶೇಖರನನ್ನಟ್ಟಿ ವೀರಪಾಂಡ್ಯನಿಗೆ ಪಟ್ಟಗಟ್ಟಿದ.

ರಾಜರಾಜನ ಅನಂತರ ಪಟ್ಟಕ್ಕೆ ಬಂದ 2ನೆಯ ರಾಜಾಧಿರಾಜನ ಕಾಲದಲ್ಲಿ ಕೇಂದ್ರ ಬಲ ಮತ್ತಷ್ಟು ಕುಗ್ಗಿ ಸಾಮಂತರ ಪ್ರಾಬಲ್ಯ ಹೆಚ್ಚಾಗುತ್ತಾ ಬಂತು. ಅವರು ತಮ್ಮತಮ್ಮಲ್ಲೇ ಕಾದಾಡತೊಡಗಿದರು. 1182ರ ವರೆಗೂ ಇಮ್ಮಡಿ ರಾಜಾಧಿರಾಜ ಆಳುತ್ತಿದ್ದರೂ ಮುಮ್ಮಡಿ ಕುಲೋತ್ತುಂಗ 1178ರಲ್ಲೇ ಆಡಳಿತ ನಡೆಸಲಾರಂಭಿಸಿದ. ಈ ಕುಲೋತ್ತುಂಗನಿಗೂ ರಾಜಾಧಿರಾಜನಿಗೂ ಇದ್ದ ಸಂಬಂಧ ಎಂಥದೆಂಬುದು ತಿಳಿಯದು. ಕುಲೋತ್ತುಂಗನೇ ಚೋಳ ಚಕ್ರವರ್ತಿಗಳಲ್ಲಿ ಕಡೆಯವನೆಂದು ಹೇಳಬಹುದು. ಅವನು ಪಟ್ಟಕ್ಕೆ ಬರುತ್ತಿದ್ದಂತೆಯೇ ಪಾಂಡ್ಯ ರಾಜ್ಯದ ಕಡೆ ಗಮನ ಹರಿಸಬೇಕಾಯಿತು. ವೀರ ಪಾಂಡ್ಯನೊಡನೆ ಸಿಂಹಳದ ಪರಾಕ್ರಮಬಾಹು ಸೇರಿ ಚೋಳರನ್ನೆದುರಿಸುವ ಸಿದ್ಧತೆಯಲ್ಲಿದ್ದ. ಬಹುಶಃ ಕುಲಶೇಖರನಿಗೆ ಸಂಬಂಧಿಸಿದ ವಿಕ್ರಮಪಾಂಡ್ಯ ವೀರಪಾಂಡ್ಯನಿಗೆ ಎದುರಾಗಿ ಕುಲೋತ್ತುಂಗನ ಸಹಾಯ ಬೇಡಿದ. ಈ ಯುದ್ಧದಲ್ಲಿ ವೀರಪಾಂಡ್ಯ ಓಡಿಹೋದ. ವಿಕ್ರಮಪಾಂಡ್ಯ ಮಧುರೆಯಲ್ಲಿ ಸಿಂಹಾಸನವನ್ನೇರಿದ. ವೀರಪಾಂಡ್ಯ ತನ್ನ ಸಂಗಡಿಗರೊಡಗೂಡಿ ಮತ್ತೆ ಯುದ್ಧಕ್ಕೆ ಬಂದಾಗ ನೆತ್ತೂರು ಎಂಬಲ್ಲಿ ಸಂಪೂರ್ಣವಾಗಿ ಸೋತುಹೋದ. ಅನಂತರ ವೀರಪಾಂಡ್ಯ ಶರಣಾಗತನಾದ. ಹೊಯ್ಸಳರೊಂದಿಗೆ ಕುಲೋತ್ತುಂಗ ಮಧುರಬಾಂಧವ್ಯ ಹೊಂದಿದ್ದಂತೆ ತೋರುತ್ತದೆ. ಚೋಳ ಮನೆತನದ ಚೋಳಮಹಾದೇವಿಯನ್ನು ಇಮ್ಮಡಿ ಬಲ್ಲಾಳ ಲಗ್ನವಾಗಿದ್ದ. ಬಹುಶಃ ತನ್ನ ಮಗಳು ಸೋಮಲದೇವಿಯನ್ನು ಕುಲೋತ್ತುಂಗನಿಗೆ ಕೊಟ್ಟಿದ್ದ.

ವಿಕ್ರಮಪಾಂಡ್ಯನಾದ ಮೇಲೆ ಜಟಾವರ್ಮ ಕುಲಶೇಖರ 1190ರಲ್ಲಿ ಪಾಂಡ್ಯ ಸಿಂಹಾಸನವನ್ನೇರಿದ. ಇವನು ಚೋಳರ ಆಧಿಪತ್ಯವನ್ನು ತಿರಸ್ಕರಿಸಿದ. ಆದ್ದರಿಂದ 1205ರಲ್ಲಿ ಕುಲೋತ್ತುಂಗ ಮೂರನೆಯ ಬಾರಿಗೆ ಪಾಂಡ್ಯನಾಡಿಗೆ ದಂಡೆತ್ತಿ ಹೋಗಿ ರಾಜಧಾನಿಯನ್ನು ಸೂರೆಮಾಡಿದ. 10 ವರ್ಷಗಳ ಅನಂತರ ಕುಲೋತ್ತುಂಗನ ಆಳ್ವಿಕೆಯ ಕೊನೆಯಲ್ಲಿ ಪಾಂಡ್ಯರಾಜ್ಯಕ್ಕೆ ಪಟ್ಟಕ್ಕೆ ಬಂದ ಜಟಾವರ್ಮ ಕುಲಶೇಖರನ ತಮ್ಮ ಮಾರವರ್ಮ ಸುಂದರಪಾಂಡ್ಯ ಇದಕ್ಕೆ ಸೇಡು ತೀರಿಸಿಕೊಳ್ಳಲು ಚೋಳ ನಾಡಿನ ಮೇಲೆ ದಂಡೆತ್ತಿ ಒರೆಯೂರು, ತಂಜಾವೂರುಗಳನ್ನು ಸೂರೆಮಾಡಿ ತನ್ನ ಅಧಿರಾಜನಾಗಿದ್ದ ಕುಲೋತ್ತುಂಗನನ್ನೂ ಅವನ ಮಗ ಯುವರಾಜ ಮುಮ್ಮಡಿ ರಾಜರಾಜನನ್ನೂ ದೇಶಾಂತರ ಹೋಗುವಂತೆ ಮಾಡಿ ವೀರಾಭಿಷೇಕ ಮಾಡಿಕೊಂಡ. ಹಿಂದೆ ಪಾಂಡ್ಯ ರಾಜ್ಯದ ಮೇಲೆ ಕುಲೋತ್ತುಂಗ ನಡೆಸಿದ್ದ ಕ್ರೌರ್ಯವನ್ನು ಸುಂದರ ಪಾಂಡ್ಯ ಅಷ್ಟೇ ಬಿರುಸಾಗಿ ಹಿಂದಿರುಗಿಸಿದ್ದ. ಚೋಳರ ಸ್ವಾತಂತ್ರ್ಯಹರಣವಾಯಿತು. ಸುಂದರ ಪಾಂಡ್ಯ ಕೊನೆಗೆ ಚೋಳರಾಜ್ಯವನ್ನು ಕುಲೋತ್ತುಂಗನಿಗೆ ಹಿಂದಿರುಗಿಸಬೇಕಾಗಿ ಬಂದರೂ ಅಧಿರಾಜನಾಗಿದ್ದ ಕುಲೋತ್ತುಂಗ ಸಾಮಂತನಾಗಿದ್ದ ಪಾಂಡ್ಯನನ್ನು ಅಧಿರಾಜನೆಂದು ಒಪ್ಪಿಕೊಳ್ಳಬೇಕಾಯಿತು. ಆದರೆ ಸುಂದರಪಾಂಡ್ಯ ಚೋಳರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳದೆ ಕುಲೋತ್ತುಂಗನಿಗೆ ಹಿಂದಿರುಗಿಸಲು ಮುಖ್ಯವಾದ ಕಾರಣ ಆಗ ಕರ್ನಾಟಕದಲ್ಲಿ ಪ್ರಬಲರಾಗಿದ್ದ ಹೊಯ್ಸಳರ ಮಧ್ಯಪ್ರವೇಶ. ಯುದ್ಧದಲ್ಲಿ ಹಿಮ್ಮೆಟ್ಟಿ ಓಡಿಹೋದ ಕುಲೋತ್ತುಂಗ ಹೊಯ್ಸಳ ಇಮ್ಮಡಿ ಬಲ್ಲಾಳನ ಸಹಾಯವನ್ನು ಕೋರಿದ. ಬಲ್ಲಾಳ ತನ್ನ ಮಗ ನರಸಿಂಹನನ್ನು ಸೈನ್ಯದೊಡನೆ ಶ್ರೀರಂಗದ ಕಡೆಗೆ ಕಳುಹಿಸಿದ. ಸುಂದರಪಾಂಡ್ಯ ಸಂಧಿ ಮಾಡಿಕೊಳ್ಳಬೇಕಾಯಿತು. ಚೋಳರಾಜ್ಯವನ್ನು ಕುಲೋತ್ತುಂಗನಿಗೆ ಬಿಟ್ಟುಕೊಡಬೇಕಾಯಿತು. ಬಲ್ಲಾಳನಿಗೆ ಚೋಳರಾಜ್ಯ ಪ್ರತಿಷ್ಠಾಚಾರ್ಯ, ಪಾಂಡ್ಯ ಗಜಕೇಸರಿ ಎಂಬ ಬಿರುದುಗಳು ಬಂದುವು. ಹಾಗೆಯೇ ನರಸಿಂಹನನ್ನೂ ಶಾಸನಗಳು ಚೋಳಕುಲರಕ್ಷಕನೆನ್ನುತ್ತವೆ; ಮತ್ತು ಅವನು ಆ ಯುದ್ಧದಲ್ಲಿ ತೋರಿಸಿದ ಪರಾಕ್ರಮವನ್ನು ವರ್ಣಿಸುತ್ತವೆ; ಇದಾದ ಸ್ವಲ್ಪ ಕಾಲದಲ್ಲೇ (1218) ಕುಲೋತ್ತುಂಗ ತೀರಿಕೊಂಡ.

ಕುಲೋತ್ತುಂಗನಿಗೆ ವೀರರಾಜೇಂದ್ರದೇವ ಎಂಬ ಮತ್ತೊಂದು ಹೆಸರು ಇತ್ತು. ಕೊಮರ ಅಥವಾ ಕುಮಾರ ಕುಲೋತ್ತುಂಗ, ಮುಡಿನ ವಿಂಗುಶೋಱ, ತ್ರಿಭುವನವೀರ ಚೋಳದೇವ, ತ್ರಿಭುವನ ಚಕ್ರವರ್ತಿ ಚೋಳ ಕೇರಳದೇವ ಮುಂತಾದವು ಇವನ ಬಿರುದುಗಳು. ಗಂಗೈಕ್ಕೊಂಡಚೋಳಪುರ ಇವನ ರಾಜಧಾನಿಯಾಗಿತ್ತು. ತಂಜಾವೂರು, ಒರೆಯೂರು, ಆಯಿರತ್ತಳಿ ಮತ್ತು ವಿಕ್ರಮಚೋಳಪುರಗಳು ಮುಖ್ಯಪಟ್ಟಣಗಳಾಗಿದ್ದುವು. ಕುಲೋತ್ತುಂಗ ಅನೇಕ ದೇವಾಲಯಗಳನ್ನು ಕಟ್ಟಿಸಿದ. ಅವುಗಳಲ್ಲೆಲ್ಲ ತ್ರಿಭುವನದಲ್ಲಿ ಕಟ್ಟಿಸಿದ ತ್ರಿಭುವನೇಶ್ವರ ದೇವಾಲಯ (ಕಂಪಹರೇಶ್ವರ) ಭವ್ಯವಾಗಿದೆ. ತಂಜಾವೂರಿನ ಬೃಹದೀಶ್ವರದ ಮಾದರಿಯಲ್ಲೇ

**ಚೋಳ ವಂಶಾವಳಿ**

- ವಿಜಯಾಲಯ (850–70)
  - ಆದಿತ್ಯ I (870–97)
    - ಪರಾಂತಕ I (907–55)
      - ರಾಜಾದಿತ್ಯ
      - ಗಂಡರಾದಿತ್ಯ
        - ಉತ್ತಮಚೋಳ (971–87)
      - ಅರಿಂಜಯ
        - ಸುಂದರ ಚೋಳ(957–71) (ಪರಾಂತಕ II)
          - ಆದಿತ್ಯ II(962–68)
          - ರಾಜರಾಜ I (985–1014)
            - ರಾಜೇಂದ್ರ ಚೋಳ I (1012–44)
              - ರಾಜಾಧಿರಾಜ I (1018–54)
              - ರಾಜೇಂದ್ರ II (1054–64)
              - ವೀರರಾಜೇಂದ್ರ (1064–68)
                - ಆದಿರಾಜೇಂದ್ರ (1067–70)
              - ಅಮ್ಮಂಗದೇವಿ (ಪತಿ: ರಾಜರಾಜ ವೆಂಗಿ ಚಾಲುಕ್ಯ)
                - ಕುಲೋತ್ತುಂಗ I (1070–1118)
                  - ವಿಕ್ರಮ ಚೋಳ (1118–36)
                    - ಕುಲೋತ್ತುಂಗ II (1133–50)
                      - ರಾಜರಾಜ II (1150–73)
                    - ಮಗಳು
                      - ರಾಜಾಧಿರಾಜ II (1173–82)
                        - ಕುಲೋತ್ತುಂಗ III (1178–1216)
                          - ರಾಜರಾಜ III (1216–56)
                            - ರಾಜೇಂದ್ರ III (1264)
            - ಕುಂದವ್ವೆ ವಿಮಲಾದಿತ್ಯ

ಇರುವ ಈ ದೇವಾಲಯದ ಹೊರಗೋಡೆಗಳ ಮೇಲೆ ರಾಮಾಯಣ, ಭಾರತಗಳಲ್ಲದೆ ಅಲಂಕರಣಶಿಲ್ಪಗಳೂ ತುಂಬಿವೆ. ಇದರೊಂದಿಗೆ ಚಿದಂಬರದಲ್ಲಿ ಸಭಾಪತಿಯ ಮುಖಮಂಟಪ ಪ್ರಾಕಾರ ಹರ್ಮ್ಯ ಮತ್ತು ಶಿವಕಾಮಿ ದೇವಾಲಯದ ಮೇಲಿನ ಗೋಪುರಗಳನ್ನೂ ತಿರುವಾಯೂರಿನಲ್ಲಿ ಸಭಾಮಂಟಪ ಮತ್ತು ವಲ್ಮೀಕೇಶ್ವರ ದೇವಾಲಯದ ಬೃಹದ್ಗೋಪುರ ಮೊದಲಾದವನ್ನೂ ಕಟ್ಟಿಸಿದ.

ಕುಲೋತ್ತುಂಗನ ಅನಂತರ ಮುಮ್ಮಡಿ ರಾಜರಾಜ ಪಟ್ಟಕ್ಕೆ ಬಂದ. ಇವನು ದಕ್ಷನಾಗಿರಲಿಲ್ಲ. ದಕ್ಷಿಣದಲ್ಲಿ ಪಾಂಡ್ಯರು, ಪಶ್ಚಿಮದಲ್ಲಿ ಹೊಯ್ಸಳರು ಪ್ರಬಲರಾಗಿದ್ದರು. ಇವರಿಬ್ಬರಿಗೂ ಇದ್ದ ವೈಷಮ್ಯವನ್ನೇ ಚೋಳರಾಜ್ಯದ ಉಳಿವು ಹೊಂದಿಕೊಂಡಿತ್ತು. ಸುಂದರಪಾಂಡ್ಯನ ಕೈಯಲ್ಲಿ ಇವರು ಸೋತುದರಿಂದ ಚೋಳರ ಸಾಮಂತರು ತಮ್ಮ ನಿಷ್ಠೆಯನ್ನು ಬದಲಾಯಿಸಲು ಸಿದ್ಧರಾಗಿದ್ದರು. ರಾಜರಾಜ ತನ್ನ ಪರಿಸ್ಥಿತಿಯನ್ನರಿಯದೆ ಪಾಂಡ್ಯರ ಅಧಿಕಾರವನ್ನು ಅಲ್ಲಗಳೆದ. ಸುಂದರಪಾಂಡ್ಯ ಅವನನ್ನು ಸೋಲಿಸಿ ಅಪಾರವಾದ ಐಶ್ವರ್ಯವನ್ನು ಕೊಳ್ಳೆ ಹೊಡೆದು ಅವನ ರಾಣಿಯನ್ನು ಸೆರೆಹಿಡಿದ. ರಾಜರಾಜ ತನ್ನ ಮಿತ್ರರೊಂದಿಗೆ ಕೂಡಿಕೊಳ್ಳಲು ಪ್ರಯತ್ನಿಸಿದ. ಆದರೆ ಪಾಂಡ್ಯರ ಪಕ್ಷಕ್ಕೆ ಸೇರಿದ್ದ ಕಾಡನ ಕೊಪ್ಪೆರುಂಜಿಂಗ ಅವನನ್ನು ತೆಳ್ಳಾರು ಎಂಬಲ್ಲಿ ಸೋಲಿಸಿ ಸೆರೆಹಿಡಿದ. ಇದನ್ನು ಕೇಳಿದ ಹೊಯ್ಸಳ ನರಸಿಂಹ ಅವನ ಸಹಾಯಕ್ಕೆ ಬಂದು, ಕಾಡವನ ಮಿತ್ರನಾಗಿದ್ದ, ಮಗರ ರಾಜ್ಯದ ರಾಜನನ್ನು ಸೋಲಿಸಿ ಶ್ರೀರಂಗದ ಕಡೆಗೆ ಹೊರಟು ತನ್ನ ದಂಡನಾಯಕರು ಅಪ್ಪಣ್ಣ ಮತ್ತು ಗೋಪಯ್ಯರನ್ನು ಕೊಪ್ಪೆರುಂಜಿಂಗನ ಮೇಲೆ ಕಳುಹಿಸಿದ. ಅವರು ಕೊಪ್ಪೆರುಂಜಿಂಗನ ಹಲವು ಊರುಗಳನ್ನು ಹಿಡಿದ ಶೆಂದಮಂಗಲಕ್ಕೆ ಮುತ್ತಿಗೆ ಹಾಕಿದರು. ಕೊಪ್ಪೆರುಂಜಿಂಗ ಚೋಳರಾಜನನ್ನು ಸೆರೆಯಿಂದ ಬಿಡಿಸಿದ. ಅದೇ ಸಮಯದಲ್ಲಿ ನರಸಿಂಹನೂ ಸುಂದರಪಾಂಡ್ಯನನ್ನು ಸೋಲಿಸಿದ. ಹೀಗೆ ಎರಡನೆಯ ಬಾರಿಗೆ ಚೋಳರಾಜ್ಯ ಪಾಂಡ್ಯರಾಜ್ಯದಲ್ಲಿ ವಿಲೀನವಾಗುವ ಅವಕಾಶ ಹೊಯ್ಸಳರಿಂದ ತಪ್ಪಿತು. ರಾಜರಾಜ ಚೋಳಚಕ್ರಾಧಿಪತ್ಯದಲ್ಲಿ ಮುಂದುವರಿದ. ಮುಮ್ಮಡಿ ಕುಲೋತ್ತುಂಗನ ಕಾಲದಲ್ಲಿದ್ದಷ್ಟೇ ವಿಸ್ತಾರವಾಗಿದ್ದರೂ ಚೋಳರಾಜ್ಯ ಶಕ್ತಿಹೀನವಾಗಿತ್ತು; ಮತ್ತು ಈ ರಾಜ್ಯದ ಮೇಲೆ ಹೊಯ್ಸಳರ ಪ್ರಭಾವ ಹೆಚ್ಚುತ್ತ ಹೋಯಿತು. ಈ ಪ್ರಭಾವವನ್ನು ತಡೆಯಲು ರಾಜರಾಜನಿಗೆ ಸಾಧ್ಯವಾಗದಾಯಿತು. ಪ್ರಬಲನಾದ ಜಟಾವರ್ಮ ಸುಂದರಪಾಂಡ್ಯ ಪಟ್ಟಕ್ಕೆ ಬರುವವರೆಗೂ ಪಾಂಡ್ಯರೂ ಹೊಯ್ಸಳರ ಪ್ರಭಾವಕ್ಕೆ ಮನ್ನಣೆ ಕೊಡಬೇಕಾಯಿತು.

1246ರಲ್ಲೇ ಯುವರಾಜನಾಗಿ ಆರಿಸಲ್ಪಟ್ಟ ರಾಜೇಂದ್ರ 1260ರಲ್ಲಿ, ರಾಜರಾಜ ಕಾಲವಾದ ಮೇಲೆ, ಪಟ್ಟಕ್ಕೆ ಬಂದ. ಇವನು ರಾಜರಾಜನಿಗಿಂತ ಶಕ್ತನಾದ ದೊರೆಯಾಗಿದ್ದು ಯುವರಾಜನಾಗಿದ್ದಾಗಲೇ ಹೆಚ್ಚು ಪ್ರಭಾವಶಾಲಿಯಾಗಿದ್ದ. ಇವನ ಪ್ರಶಸ್ತಿಗಳಲ್ಲಿ ಪಾಂಡ್ಯನ ತಲೆಯನ್ನು ಕತ್ತರಿಸಿದ ಮತ್ತು ಪಾಂಡ್ಯ ರಾಜ್ಯವನ್ನು ಸೂರೆಹೊಡೆದ ವಿಷಯವಿದೆ. ಪಾಂಡ್ಯ ರಾಜ್ಯದಲ್ಲಿ 1ನೆಯ ಮಾರವರ್ಮ ಸುಂದರ ಪಾಂಡ್ಯನ ಅನಂತರ ಬಂದ ಇಮ್ಮಡಿ ಸುಂದರಪಾಂಡ್ಯ ಅಷ್ಟು ಶಕ್ತನಾಗಿರಲಿಲ್ಲ. ಆಗ ಅವನ ರಾಜ್ಯದಲ್ಲೂ ಹೊಯ್ಸಳರ ಪ್ರಭಾವ ಹೆಚ್ಚಿತು. ರಾಜೇಂದ್ರ ಆ ಕಾಲದಲ್ಲಿ ಪಾಂಡ್ಯರ ಮೇಲೆ ಯುದ್ಧ ಹೂಡಿ ಜಯ ಪಡೆದಿರಬಹುದು. ಆದರೆ ಹೊಯ್ಸಳರನ್ನು ಧಿಕ್ಕರಿಸಿ ಪಾಂಡ್ಯರ ಮೇಲೆ ಅವನು ನುಗ್ಗಿದಾಗ ಹೊಯ್ಸಳ ವೀರ ಸೋಮೇಶ್ವರ ಪಾಂಡ್ಯರ ಪಕ್ಷ ವಹಿಸಿ ಚೋಳ ರಾಜೇಂದ್ರನನ್ನು ಸೋಲಿಸಿ ಪಾಂಡ್ಯಕುಲ ಸಂರಕ್ಷಣ ದಕ್ಷದಕ್ಷಿಣ ಭುಜನೆಂಬ ಬಿರುದು ಪಡೆದ. ಹೀಗೆ ಹೊಯ್ಸಳರು ಪಾಂಡ್ಯ ಚೋಳರಲ್ಲಿ ಕಡಿಮೆ ಬಲವುಳ್ಳವರ ಪಕ್ಷ ವಹಿಸಿ ಅವರಿಬ್ಬರಲ್ಲಿ ಸಮತೋಲನವನ್ನುಂಟು ಮಾಡಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡರು. ಪಾಂಡ್ಯರ ಮೇಲಿನ ಯುದ್ಧವನ್ನು ರಾಜೇಂದ್ರ ಕೈಬಿಡಬೇಕಾಯಿತು. ಇದರಿಂದ ಸೋಮೇಶ್ವರನಿಗೂ ರಾಜೇಂದ್ರನಿಗೂ ವೈಮನಸ್ಯ ಬೆಳೆಯಿತು. ಆಗ ಹೊಯ್ಸಳ ವಿರೋಧಿಯಾಗಿದ್ದ ರಾಜೇಂದ್ರ ನೆಲ್ಲೂರಿನ ತೆಲುಗು ಚೋಡರಾಜ ತಿಕ್ಕನ್ನಪನ ಸ್ನೇಹ ಬೆಳೆಸಿದ. ತಿಕ್ಕನ್ನಪ ಸೋಮೇಶ್ವರನನ್ನು ಸೋಲಿಸಿ ಚೋಳಸ್ಥಾಪನಾಚಾರ್ಯ ಎಂಬ ಬಿರುದು ಪಡೆದಂತೆ ತಿಳಿದುಬರುತ್ತದೆ. ಆದರೆ ಮುಂದೆ ಚೋಳರೂ ಹೊಯ್ಸಳರೂ ಸ್ನೇಹದಿಂದಿದ್ದು ಹೆಚ್ಚು ನಿಕಟವರ್ತಿಗಳಾದರು. ಇದಕ್ಕೆ ಕಾರಣ ಪಾಂಡ್ಯ ಪ್ರಾಬಲ್ಯ. 1251ರಲ್ಲಿ ಪಟ್ಟಕ್ಕೆ ಬಂದ ಜಟಾವರ್ಮ ಸುಂದರಪಾಂಡ್ಯ ಅತ್ಯಂತ ಪ್ರಬಲನಾಗಿದ್ದು ತನ್ನ ಆಳ್ವಿಕೆಯ ಏಳನೆಯ ವರ್ಷದಲ್ಲಿ ಚೋಳರು ಮತ್ತು ಹೊಯ್ಸಳರನ್ನು ಚೋಳ ರಾಜ್ಯದಿಂದ ಅಟ್ಟಿದ. ಸೋಮೇಶ್ವರ 1264ರಲ್ಲಿ ಮತ್ತೆ ಯುದ್ಧಕ್ಕೆ ಬಂದಾಗ ಕಣ್ಣನೂರಿನಲ್ಲಿ ಯುದ್ಧ ನಡೆದು

ದುರ್ಗಾ, ಈಶ್ವರ ದೇವಾಲಯ, ಪುಂಜೈ

ಸೋಮೇಶ್ವರ ಹತನಾದ. ಜಟಾವರ್ಮ ಬಹು ಬೇಗನೆ ಕಾಡವ, ತೆಲುಗು ಚೋಳರನ್ನು ಸೋಲಿಸಿ ವೀರಾಭಿಷೇಕ ಮಾಡಿಕೊಂಡ. ರಾಜೇಂದ್ರ ಮತ್ತು ಹೊಯ್ಸಳ ರಾಮನಾಥರಿಬ್ಬರೂ ಈ ಪ್ರಬಲ ಶತ್ರುವಿನ ಮುಂದೆ ಒಂದಾಗಿ ಯುದ್ಧ ಮಾಡಬೇಕಾಯಿತು. 1279ರಲ್ಲಿ ಜಟಾವರ್ಮನ ಮಗ ಮಾರವರ್ಮ ಕುಲಶೇಖರ ಇವರಿಬ್ಬರನ್ನೂ ಸೋಲಿಸಿದ. ಅಲ್ಲಿಗೆ 400 ವರ್ಷಗಳಷ್ಟು ದೀರ್ಘಕಾಲ ವೈಭವದಿಂದ ಮೆರೆದ ಚೋಳ ಸಾಮ್ರಾಜ್ಯ ಹೆಸರಿಲ್ಲದಂತೆ ಉಡಗಿದಂತೆ ಆಯಿತು. ಪಾಂಡ್ಯ ಚಕ್ರಾಧಿಪತ್ಯದಲ್ಲಿ ಚೋಳ ರಾಜ್ಯ ಒಂದು ಪ್ರಾಂತ್ಯವಾಗಿ, ಚೋಳಮಂಡಲವೆಂಬ ಹೆಸರಿನಿಂದ ಬಹುಕಾಲ ಮುಂದುವರಿಯಿತು. ಮುಂದೆ ಚೋಳಮಂಡಲ ಎಂಬ ಹೆಸರು ಅಪಭ್ರಂಶ ಹೊಂದಿ ಕೋರಮಂಡಲ ಎಂದು ರೂಪಾಂತರ ಹೊಂದಿತ್ತು. ಚೋಳ ವಂಶದವರೆಂದು ಹೇಳಿಕೊಳ್ಳುವ ಕೆಲವು ಚಿಕ್ಕಪುಟ್ಟ ಮಾಂಡಲಿಕರು ಸ್ವಲ್ಪ ಕಾಲ ಅಲ್ಲಲ್ಲಿ ಆಳುತ್ತಿದ್ದರು.

**ಆಡಳಿತ :** ಚೋಳ ರಾಜ್ಯದಲ್ಲಿ ಆ ಕಾಲದ ಇತರ ರಾಜ್ಯಗಳಲ್ಲಿದ್ದಂತೆ ಆಡಳಿತದ ಎಲ್ಲ ವಿಷಯಗಳಲ್ಲೂ ರಾಜನದೇ ಪರಮಾಧಿಕಾರ. ರಾಜತ್ವ ವಂಶಪಾರಂಪರ್ಯವಾಗಿ ನಡೆದು ಬರುತ್ತಿತ್ತು. ರಾಜರಾಜನ ಕಾಲದಲ್ಲಿ ವಿಸ್ತಾರವಾದ ಸಾಮ್ರಾಜ್ಯ ಹೊಂದಿದ್ದ ಚೋಳ ಚಕ್ರವರ್ತಿಗಳು ತಮ್ಮ ರಾಜ್ಯದಲ್ಲಿ ಹುಟ್ಟುವಳಿಯಾಗುತ್ತಿದ್ದ ಅಥವಾ ಯುದ್ಧಗಳಲ್ಲಿ ದೋಚಿ ತಂದ ಅಪಾರ ಐಶ್ವರ್ಯವನ್ನು ತಮ್ಮ ವೈಭವಯುತ ಜೀವನಕ್ಕೆ ವಿನಿಯೋಗಿಸುವುದರೊಂದಿಗೆ ರಾಜ್ಯರಕ್ಷಣೆಗೂ ಅನೇಕ ಜನೋಪಯೋಗಿ ಸಾಮಾಜಿಕ ಕಾರ್ಯಗಳಿಗೂ ಉಪಯೋಗಿಸುತ್ತಿದ್ದರು. ಹಬ್ಬ ಹರಿದಿನಗಳು ಮತ್ತು ವಿಶೇಷ ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತಿದ್ದವು. ರಾಜರ ಪಟ್ಟಾಭಿಷೇಕಗಳು ವಿಶೇಷವಾದ ವೈಭವದಿಂದ ಕೂಡಿರುತ್ತಿದ್ದುವು. ಮುಖ್ಯಪಟ್ಟಣಗಳಾದ ತಂಜಾವೂರು, ಗಂಗೈಕ್ಕೊಂಡ ಚೋಳಪುರ, ಚಿದಂಬರ, ಕಾಂಚೀಪುರ ಮೊದಲಾದೆಡೆ ನಡೆಯುತ್ತಿದ್ದುವು. ದೊರೆಗಳು ಆ ಸಂದರ್ಭದಲ್ಲಿ ಉದಾರವಾದ ದಾನಧರ್ಮಾದಿಗಳನ್ನು ಮಾಡುತ್ತಿದ್ದರು. ಯುದ್ಧದಲ್ಲಿ ಗೆದ್ದು, ಶತ್ರುರಾಜ್ಯವನ್ನಾಕ್ರಮಿಸಿಕೊಂಡಾಗ ಅವರು ಶತ್ರುವಿನ ರಾಜಧಾನಿಯಲ್ಲೇ ವೀರಾಭಿಷೇಕ ಮಾಡಿಕೊಳ್ಳುತ್ತಿದ್ದದ್ದೂ ಉಂಟು. ರಾಜನ ಹಿರಿಯ ಮಗನೇ ಪಟ್ಟಕ್ಕೆ ಬರುವ ರೂಢಿ ಇತ್ತು. ರಾಜರು ತಮ್ಮ ಜೀವಿತಕಾಲದಲ್ಲೇ ಯುವರಾಜನನ್ನು ಆರಿಸುವ ಪದ್ಧತಿ ಇಟ್ಟುಕೊಂಡಿದ್ದರಿಂದ ಉತ್ತರಾಧಿಕಾರಕ್ಕಾಗಿ ಪೈಪೋಟಿಗೆ ತಡೆಯುಂಟಾಗುತ್ತಿತ್ತು. ಆದರೂ ಒಮ್ಮೊಮ್ಮೆ ಪೈಪೋಟಿ ನಡೆಯುತ್ತಿದ್ದದ್ದುಂಟು. ಇಮ್ಮಡಿ ಆದಿತ್ಯನನ್ನು ಉತ್ತಮಚೋಳ ಕೊಲ್ಲಿಸಿ, ತನ್ನನ್ನು ಉತ್ತರಾಧಿಕಾರಿಯನ್ನಾಗಿ ಆರಿಸುವಂತೆ ಪರಾಂತಕನ ಮೇಲೆ ಒತ್ತಡ ತಂದದ್ದು ಒಂದು ನಿದರ್ಶನ.

ಕರಂದೈ ತಾಮ್ರಪಟಗಳ ಮೇಲಿರುವ ಚೋಳರ ರಾಜಮುದ್ರೆ

ರಾಜಪರಿವಾರ ಹಿರಿದಾಗಿತ್ತು. ಅರಮನೆಯಲ್ಲಿ ಬೇರೆಬೇರೆ ಕೆಲಸಗಳನ್ನು ನೋಡಿಕೊಳ್ಳಲು ಬೇರೆಬೇರೆ ಸೇವಕ ಪಡೆಗಳೇ ಇರುತ್ತಿದ್ದುವು. ಅರಮನೆಯ ಊಳಿಗದವರನ್ನು ಬೇರೆಬೇರೆ ವೇಳೆಗಳಾಗಿ ಏರ್ಪಡಿಸಲಾಗಿತ್ತು. ಅವರು ರಾಜಧಾನಿಯ ಬೇರೆಬೇರೆ ಭಾಗಗಳಲ್ಲಿ ನೆಲೆಸಿರುತ್ತಿದ್ದರು. ಭೋಜನಕೂಟಗಳಲ್ಲಿ ರಾಜನ ಆವಶ್ಯಕತೆಗಳನ್ನು ನೋಡಿಕೊಳ್ಳಲೂ ಅಂಗರಕ್ಷಣೆಗೂ 3,000 ಸುಂದರಿಯರು ಸರದಿಯ ಮೇಲೆ ಹಾಜರಿರುತ್ತಿದ್ದರೆಂದು ಚೀನೀ ಯಾತ್ರಿಕನೊಬ್ಬ ತಿಳಿಸಿದ್ದಾನೆ. ರಾಜನಂತೆ ಉಳಿದ ರಾಜಮನೆತನದವರೂ ತಮ್ಮ ಅಂತಸ್ತಿಗೆ ತಕ್ಕಂತೆ ಊಳಿಗದವರ ಪಡೆ ಹೊಂದಿರುತ್ತಿದ್ದರು.

ಚೋಳ ಚಕ್ರಾಧಿಪತ್ಯದ ಆಡಳಿತ ಕೇಂದ್ರೀಕೃತವಾಗಿ ಹೆಚ್ಚು ಬಿಗಿಯದಾಗಿತ್ತು. ಕೇಂದ್ರಕ್ಕೂ ಸಾಮಂತರಿಗೂ ನಡುವಣ ಆಗುಹೋಗುಗಳನ್ನು ಸಂಧಿವಿಗ್ರಹಿಗಳು ನೋಡಿಕೊಳ್ಳುತ್ತಿದ್ದರು. ಮುಖ್ಯಭಾಗಗಳಲ್ಲಿ ರಾಜಕುಮಾರರನ್ನು ರಾಜಪ್ರತಿನಿಧಿಗಳನ್ನಾಗಿ ನೇಮಿಸಲಾಗುತ್ತಿತ್ತು. ಸೋತ ರಾಜರನ್ನು ತಮ್ಮ ಸಾಮಂತರನ್ನಾಗಿ ಸ್ವೀಕರಿಸಿ ಅವರಿಂದ ಕಪ್ಪಗಳನ್ನು ಪಡೆಯುವಷ್ಟಕ್ಕೇ ಚೋಳ ರಾಜರು ತೃಪ್ತರಾಗಿರಲಿಲ್ಲ. ರಾಜ್ಯಗಳನ್ನು ಗೆದ್ದಂತೆಲ್ಲ ಆ ಭಾಗಗಳನ್ನು ನೇರವಾಗಿ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಅಲ್ಲಿ ತಮ್ಮ ಅಧಿಕಾರಿಗಳನ್ನು ನೇಮಿಸುವ ಪದ್ಧತಿ ಬೆಳೆಸಿಕೊಂಡರು. ರಾಜರಾಜ ಗಂಗಮಂಡಲವನ್ನು ಗೆದ್ದಾಗ ಗಂಗವಂಶ ಅಳಿಸಿಹೋಯಿತು. ಗಂಗಮಂಡಲ ಚೋಳಸಾಮ್ರಾಜ್ಯದ ಒಂದು ಪ್ರಾಂತ್ಯವಾಯಿತು. ತಲಕಾಡಿನಲ್ಲಿ ಚೋಳ ಅಧಿಕಾರಿ ಆಡಳಿತ ನಡೆಸಲಾರಂಭಿಸಿದ.

ಚೋಳ ಸಾಮ್ರಾಜ್ಯದ ಸೈನ್ಯಬಲ ಅಪಾರವೂ ಸುಶಿಕ್ಷಿತವೂ ಆಗಿತ್ತು. ಸಾಮ್ರಾಜ್ಯ ಬೆಳೆದಂತೆಲ್ಲ ಸೈನ್ಯ ಮತ್ತು ನೌಕಾಬಲವೂ ಬೆಳೆದಂತೆ ತೋರುತ್ತದೆ. ಸೈನ್ಯವನ್ನು ಅನೇಕ ತುಕಡಿಗಳಾಗಿ ಭಾಗಿಸಲಾಗಿತ್ತು. ಒಂದೊಂದು ತುಕಡಿಗೂ ತನ್ನದೇ ಆದ ಹೆಸರು. ಈ ಹೆಸರು ಸಾಮಾನ್ಯವಾಗಿ ರಾಜನ ಬಿರುದುಗಳಲ್ಲಿ ಒಂದಾಗಿರುತ್ತಿತ್ತು. ಆ ತುಕಡಿಗಳನ್ನು ಯಾರ ಕಾಲದಲ್ಲಿ ಸ್ಥಾಪಿಸಲಾಯಿತೆನ್ನುವುದು ಅವುಗಳ ಹೆಸರುಗಳಿಂದ ಗೊತ್ತಾಗುತ್ತದೆ. ಸಮರಕೇಸರಿ, ವಿಕ್ರಮಶಿಂಗ, ತಾಯತೊಂಗ ಮುಂತಾದ ಹಲವಾರು ಹೆಸರುಗಳನ್ನು ಶಾಸನಗಳಲ್ಲಿ ನೋಡಬಹುದು. ರಾಜರಾಜನ ಕಾಲದಲ್ಲಿ ಇಂಥ ತುಕಡಿಗಳ ಸುಮಾರು ಮೂವತ್ತು ಹೆಸರುಗಳಿವೆ. ಚೋಳರ ಕಾಲದಲ್ಲಿ ಎಪ್ಪತ್ತಕ್ಕೂ ಹೆಚ್ಚು ತುಕಡಿಗಳಿದ್ದ ಸೂಚನೆ ಶಾಸನಗಳಲ್ಲುಂಟು. ಒಂದೊಂದು ಸೈನ್ಯದಲ್ಲೂ ಬೇರೆ ಬೇರೆ ಭಾಗಗಳು ಇದ್ದುವು. ಕುಂಚರ ಮಲ್ಲರು ವಿಲ್ಲಿಗಳು (ಬಿಲ್ಲುಗಾರರು), ವಾಳ್ಪಿಟ್ರ ಕೈಕ್ಕೋಳರು (ಕತ್ತಿ ಹಿಡಿದು ಯುದ್ಧ ಮಾಡುವವರು), ವೇಳೆಕಾರರು ಇತ್ಯಾದಿ. ಸೈನ್ಯಗಳು ನಡೆಸಿದ ಕಾರ್ಯಾಚರಣೆಯಲ್ಲಿ ಕೆಲವನ್ನು ಕುರಿತ ವಿವರಗಳೂ ದೊರೆತಿವೆ. ಬಹುಶಃ ರಾಜರಾಜ ಮತ್ತು ರಾಜೇಂದ್ರರ ಕಾಲಕ್ಕೆ ಸೇರಿದ್ದ ಮೂನ್ರುಕೈ ಮಹಾಸೇನೈ ಎಂಬ ಒಂದು ದೊಡ್ಡ ತುಕಡಿ ನಡೆಸಿದ ಮಹಾ ಸಾಹಸಗಳ ವಿವರಗಳು ದೊರೆಯುತ್ತವೆ. ಅದು ಕನ್ನರನನ್ನು ಸೋಲಿಸಿ ಅಟ್ಟಿಸಿಕೊಂಡುಹೋಯಿತು. ಗಾಂಗೇಯನನ್ನು ಕೊಂದಿತು; ಕಲ್ಮಾಡವನ್ನು ಹಿಡಿದು ವಿಟೆನವನ್ನು ನಾಶಮಾಡಿತು; ಸಮುದ್ರವನ್ನು ದಾಟಿ ಮಾತೋಟ್ಟವನ್ನು ನೆಲಸಮ ಮಾಡಿತು; ವಲ್ಲಭನನ್ನು ಓಡಿಸಿ ವನವಾಸಿ ಉಚ್ಚಂಗಿಗಳನ್ನು ಹಿಡಿಯಿತು; ವಾತಾಪಿಯ ಕೋಟೆಯನ್ನು ಹಾಳುಗೆಡವಿತು. ಇಂಥ ಸಾಹಸಗಳನ್ನು ನಡೆಸಿದ ಈ ಚೋಳ ಸೈನ್ಯ ಹಲವು ದೇವಾಲಯಗಳ ರಕ್ಷಣೆ ಪೋಷಣೆಗಳನ್ನು ನಿರ್ವಹಿಸುತ್ತಿತ್ತು.

ಚೋಳರ ಸೈನ್ಯದಲ್ಲಿ ಅರುವತ್ತು ಸಾವಿರ ಆನೆಗಳಿದ್ದುವೆಂದೂ ಒಂದೊಂದು ಆನೆಯ ಮೇಲೂ ಹಲವು ಸೈನಿಕರು ಕುಳಿತು ಬಿಲ್ಲುಬಾಣಗಳಿಂದಲೂ ಈಟಿಗಳಿಂದಲೂ ಯುದ್ಧ ಮಾಡುತ್ತಿದ್ದರೆಂದೂ, ಗೆದ್ದ ಆನೆಗಳಿಗೆ ಮೆಚ್ಚಿಕೆಯ ಹೆಸರುಗಳನ್ನಿಡುತ್ತಿದ್ದುದಲ್ಲದೆ ಅವನ್ನು ವಿಶೇಷವಾಗಿ ಶೃಂಗರಿಸುತ್ತಿದ್ದರೆಂದೂ ಚೀನದ ಲೇಖಕನೊಬ್ಬ ತಿಳಿಸಿದ್ದಾನೆ.

ಅಸಂಖ್ಯಾತ ಹಡಗುಗಳನ್ನು ಭೋರ್ಗರೆವ ಸಮುದ್ರವನ್ನು ದಾಟಿ ಶ್ರೀವಿಜಯವನ್ನು ಗೆದ್ದು ಬಂದ ವಿವರವನ್ನು ರಾಜೇಂದ್ರನ ಶಾಸನಗಳು ತಿಳಿಸುತ್ತವೆ. ಇವರ ಕಾಲದ ನೌಕಾಬಲ ಅತ್ಯಂತ ಬಲಯುತವಾಗಿತ್ತೆಂಬುದು ಇದರಿಂದ ಸ್ಪಷ್ಟ.

ರಾಜ್ಯದ ನಾನಾಭಾಗಗಳಲ್ಲಿ ಸೈನ್ಯಗಳು ನೆಲೆಸುವಂತೆ ಮಾಡಿದ್ದುದರ ಸೂಚನೆಯುಂಟು. ಸೈನ್ಯಗಳು ನೆಲೆಸಿದ್ದ ಇಂಥ ಸ್ಥಳಗಳಿಗೆ ಕಟಕ ಎಂಬ ಹೆಸರಿತ್ತು. ಎನಮಲ್ಲೂರು ಕಟಕದ ವಿಲ್ಲಿಗಳು, ಇವ್ರೂಪ್ಪಡ್ಡೈ ತಲೈವನ್ ಮುಂತಾದ ಉಲ್ಲೇಖಗಳು ಶಾಸನಗಳಲ್ಲಿ ಕಂಡುಬರುತ್ತವೆ. ಹೀಗೆ ಅಲ್ಲಲ್ಲಿ ಕಟಕಗಳಿರುತ್ತಿದ್ದುದರಿಂದ ಸೈನಿಕರಿಗೆ ತರಬೇತು ನೀಡಲಾಗುತ್ತಿತ್ತೆಂಬುದು ಸ್ಪಷ್ಟ ಆಡಳಿತದ ಮುಖ್ಯ ವಿಷಯಗಳಲ್ಲಿ ರಾಜನೇ ಆಜ್ಞೆ ಮಾಡುತ್ತಿದ್ದ. ಅಧಿಕಾರಿಗಳು ಈ ಆಜ್ಞೆಗಳನ್ನು ಶ್ರೀಮುಖಗಳನ್ನಾಗಿ ಹೊರಡಿಸಿ ಇವು ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುತ್ತಿದ್ದರು. ಸಾಮಾನ್ಯ ಜನತೆಯ ನಿತ್ಯಜೀವನಕ್ಕೆ ಸಂಬಂಧಿಸಿದ ಆಡಳಿತಕ್ಕೆ ರಾಜನ ಅಧಿಕಾರಿಗಳು ಕೈಹಾಕದೆ ಅದನ್ನು ಆಯಾ ಭಾಗದ ಗ್ರಾಮದ ಸಭೆಗಳಿಗೆ ಬಿಟ್ಟಿದ್ದರು. ಸಮರ್ಥರೂ ದಕ್ಷರೂ ಆಗಿದ್ದ ಅಧಿಕಾರಿಗಳಿಗೆ ಏನಾದಿ, ಮಾರಾಯ ಮುಂತಾದ ಬಿರುದುಗಳಿರುತ್ತಿದ್ದುವು. ಮೇಲಧಿಕಾರಿಗಳನ್ನು ಪೆರುಂದರಮ್ ಎಂದೂ ಕೆಳಗಿನ ಅಧಿಕಾರಿಗಳನ್ನು ಶಿರುತರಮ್ ಎಂದೂ ಕರೆಯುತ್ತಿದ್ದರು. ಕರುಮಿಗಳು, ಪಣಿಮಕ್ಕಳು ಮುಂತಾದ ವರ್ಗಗಳೂ ಇದ್ದುವು.

ಚೋಳ ರಾಜ್ಯದಲ್ಲಿ ಪ್ರತಿ ಗ್ರಾಮಕ್ಕೂ ಅದರದೇ ಆದ ಆಡಳಿತಯಂತ್ರವಿತ್ತು. ಅದೊಂದು ಸ್ವತಂತ್ರ ಘಟಕವಾಗಿತ್ತು. ಹಲವು ಹಳ್ಳಿಗಳು ಸೇರಿ ಒಂದು ಕೂಟ್ರ ಅಥವಾ ನಾಡು, ಹಲವು ಕೂಟ್ರಗಳು ಸೇರಿ ವಳನಾಡು, ವಳನಾಡುಗಳ ಗುಂಪು ಮಂಡಲ, ಮಂಡಲಗಳು ತಕ್ಕಷ್ಟು ವಿಸ್ತಾರವಾಗಿದ್ದ ಪ್ರಾಂತ್ಯಗಳು. ರಾಜರಾಜನ ವಿಸ್ತಾರವಾದ ಸಾಮ್ರಾಜ್ಯ ಎಂಟು

ಅಥವಾ ಒಂಬತ್ತು ಮಂಡಲಗಳಾಗಿ ವಿಭಾಗವಾಗಿತ್ತು. ರಾಜರಾಜರನ ಅನಂತರವೂ ಅಷ್ಟಕ್ಕಿಂತ ಹೆಚ್ಚಿನ ಮಂಡಲಗಳು ಇದ್ದಂತೆ ತೋರುವುದಿಲ್ಲ. ಮಂಡಲ ಮತ್ತು ವಳನಾಡುಗಳಿಗೂ ಕೆಲವು ನಾಡು ಮತ್ತು ಊರುಗಳಿಗೂ ಅವುಗಳವೇ ಆದ ಹೆಸರುಗಳನ್ನು ಕೊಡುವ ಪದ್ಧತಿ ಇತ್ತು. ಹೀಗಾಗಿ, ಮುಡಿಗೊಂಡ ಶೋಟಮಂಡಲ ಮತ್ತು ನಿಗರಿಲಿ ಶೋಟಮಂಡಲಗಳಲ್ಲಿ ಗಂಗವಾಡಿ ಸೇರಿಹೋಯಿತು. ತಲಕಾಡು ರಾಜರಾಜಪುರ ವಾಯಿತು. ನಾಡು, ವಳನಾಡುಗಳನ್ನು ಪುನರ್ವಿಂಗಡಿಸುತ್ತಿದ್ದುದು ಸಾಮಾನ್ಯವಾಗಿದ್ದುದರಿಂದ ಚೋಳರ ಕಾಲದಲ್ಲಿದ್ದ ನಾಡು, ವಳನಾಡುಗಳನ್ನು ಸ್ಪಷ್ಟವಾಗಿ ಗುರುತಿಸುವುದು ಕಠಿಣ.

ನಟರಾಜನ ಕಂಚಿನ ವಿಗ್ರಹ, ಗಂಗಾಧರ ದೇವಾಲಯ, ಗೋವಿಂದಪುತ್ತೂರು

ರಾಜರಿಗೆ ಆಡಳಿತದಲ್ಲಿ ನೆರವಾಗಲು ಸಚಿವರನ್ನು ನೇಮಿಸುವ ಪದ್ಧತಿ ಇದ್ದುದು ಸ್ಪಷ್ಟವಾಗಿಲ್ಲ. ಆದರೆ ರಾಜನ ಆಪ್ತಾಲೋಚನೆಗಾಗಿ ಹಿರಿಯ ಅಧಿಕಾರಿಗಳಿಂದ ಕೂಡಿದ ಉಡನ್ ಕೂಟ್ಟಮ್ ಎಂಬ ಮಂತ್ರಾಲೋಚನಾ ಸಭೆ ಇದ್ದುದಾಗಿ ತಿಳಿದುಬರುತ್ತದೆ. ಈ ಸಭೆಯಲ್ಲಿ ಬಹುಶಃ ಆಡಳಿತದ ಎಲ್ಲ ಭಾಗಗಳನ್ನು ಪ್ರತಿನಿಧಿಸುವ ಅಧಿಕಾರಿಗಳೂ ಇದ್ದರು. ರಾಜಾಜ್ಞೆಗಳು ಸರಿಯಾದ ರೀತಿಯಲ್ಲಿ ಜಾರಿಯಾಗಿ ಅವು ನೆರವೇರಿದುದನ್ನು ರಾಜನಿಗೆ ಅರಿಕೆ ಮಾಡುವುದು ಅವರ ಕರ್ತವ್ಯವಾಗಿತ್ತು. ರಾಜನೇ ಅಲ್ಲಲ್ಲಿ ಸಂಚರಿಸಿ ಗ್ರಾಮಾಂತರಗಳ ಆಡಳಿತವನ್ನು ಪರೀಕ್ಷಿಸುತ್ತಿದ್ದುದೂ ಉಂಟು.

ನ್ಯಾಯನಿರ್ವಹಣೆಯಲ್ಲಿ ಗ್ರಾಮಸಭೆಗಳ ಪಾತ್ರ ಹಿರಿದಾದ್ದು. ಶಾಸನಗಳಲ್ಲಿ ಬರುವ ಧರ್ಮಾಸನ ಎಂಬುದು ರಾಜನ ನ್ಯಾಯಪೀಠವಾಗಿತ್ತು. ಅಲ್ಲಿ ನ್ಯಾಯನಿರ್ವಹಣೆಗೆ ಧರ್ಮಾಸನ ಭಟ್ಟರು ನೆರವಾಗುತ್ತಿದ್ದರು. ಕೊಲೆ, ಸುಲಿಗೆ, ಕಳ್ಳತನ ಮುಂತಾದವನ್ನೂ ಸಾಮಾನ್ಯವಾದ ಅಪರಾಧಗಳಂತೆ ವಿಚಾರಣೆ ನಡೆಸಿ ದಂಡ ವಿಧಿಸಲಾಗುತ್ತಿತ್ತು. ಕೊಲೆ ಮಾಡಿದವರು ಕೂಡ, ದೇವಸ್ಥಾನಗಳಿಗೆ ನಂದಾದೀಪಕ್ಕಾಗಿ ಮತ್ತು ಇತರ ಪೂಜೆಗಳಿಗಾಗಿ ದತ್ತಿ ಬಿಟ್ಟು, ಅಪರಾಧದಿಂದ ಬಿಡುಗಡೆ ಹೊಂದಬಹುದಾಗಿತ್ತು. ರಾಜದ್ರೋಹದ ಆಪಾದನೆಗಳಲ್ಲಿ ರಾಜನೇ ತೀರ್ಪು ನೀಡುತ್ತಿದ್ದ. ರಾಜರಾಜನ ಅಣ್ಣ ಇಮ್ಮಡಿ ಆದಿತ್ಯನ ಕೊಲೆಗೆ ಕಾರಣರಾದವರ ಆಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಳ್ಳುವಂತೆ ರಾಜರಾಜ ಆಜ್ಞೆ ಮಾಡಿದ. ಚೋಳ ರಾಜ್ಯದಲ್ಲಿ ಸಾಧಾರಣವಾದ ತಪ್ಪಿಗೆ ಛಡಿ ಏಟಿನ ಮತ್ತು ತೀವ್ರ ಅಪರಾಧಗಳಿಗೆ ತಲೆ ಕತ್ತರಿಸುವ ಅಥವಾ ಆನೆಯ ಕಾಲಿನಿಂದ ತುಳಿಸಿ ಕೊಲ್ಲಿಸುವ ಶಿಕ್ಷೆ, ಮರಣದಂಡನೆ, ವಿಧಿಸಲಾಗುತ್ತಿತ್ತೆಂದು ಚೀನೀಯಾತ್ರಿಕ ಚೌಜುಕುವ ತಿಳಿಸಿದ್ದಾನೆ.

ಗ್ರಾಮಗಳ ಆಡಳಿತ ಮುಖ್ಯವಾಗಿ ಆಯಾ ಗ್ರಾಮಗಳ ಸಭೆಗಳಿಗೆ ಸೇರಿತ್ತು. ಸಭೆ, ಮಹಾಸಭೆ, ಕುರಿ, ಪೆರುಂಗುರಿ ಮಹಾಸಭೆ ಎಂದು ಮುಂತಾಗಿ ಕರೆಯಲಾಗುತ್ತಿದ್ದ ಈ ಸಂಸ್ಥೆಗಳನ್ನು ತಮ್ಮ ಪರಿಮಿತಿಯೊಳಗಿನ ಪ್ರದೇಶದ ಎಲ್ಲ ಆಗುಹೋಗುಗಳನ್ನು ನೋಡಿಕೊಳ್ಳುವ, ಅಧಿಕಾರ ನಡೆಸುವ ಸ್ವಾತಂತ್ರ್ಯ ಹೊಂದಿದ್ದುವು. ಈ ಸಭೆಗಳಿಗೆ ಚುನಾವಣೆಗಳು ನಡೆಯುತ್ತಿದ್ದ ರೀತಿ ಆಶ್ಚರ್ಯಕರವಾಗಿದೆ. ಚುನಾವಣೆಗೆ ನಿಲ್ಲುವ ಉಮೇದುವಾರರಿಗೆ ಹಲವು ಅರ್ಹತೆಗಳಿರಬೇಕಾಗಿತ್ತು. ಅವರ ಸ್ಥಿತಿಗಳು, ವಯೋಮಿತಿ, ನಡತೆ ಮುಂತಾದವು ನಿರ್ಧರಿಸಲ್ಪಟ್ಟಿದ್ದುವು. ಅನರ್ಹತೆಗಳೇಂಬುದನ್ನು ಶಾಸನಗಳು ವಿವರಿಸಿವೆ. ಚುನಾವಣೆಗಾಗಿ ಗ್ರಾಮವನ್ನು ಹಲವು ಭಾಗಗಳನ್ನಾಗಿ ಮಾಡಿ ಚುನಾವಣೆ ನಡೆಸಲು ಒಂದೊಂದು ಭಾಗದಲ್ಲೂ ಬಾಯಿಕಟ್ಟಿದ ಒಂದೊಂದು ಮಡಕೆಯನ್ನಿಡುತ್ತಿದ್ದರು. ಮತ ಚೀಟಿ ಹಾಕಲು ಅದರಲ್ಲಿ ಒಂದು ಸೀಳುಗಂಡಿ ಇರುತ್ತಿತ್ತು. ತಾಲಪತ್ರದ ಚಿಕ್ಕ ಚಿಕ್ಕ ಚೀಟಿಗಳ ಮೇಲೆ ಚುನಾವಣೆಗೆ ನಿಂತವರ ಹೆಸರು ಬರೆದು ಅದರೊಳಗೆ ಹಾಕುತ್ತಿದ್ದರು. ಚುನಾವಣೆಯ ದಿನ ಎಲ್ಲ ಮಡಕೆಗಳ ಚೀಟಿಗಳನ್ನೂ ಖಾಲಿ ಮಡಕೆಯೊಂದಕ್ಕೆ ಸುರಿದು ಹಳ್ಳಿಯ ಎಲ್ಲ ಪ್ರಜೆಗಳೆದುರಿಗೂ ಒಬ್ಬ ಹುಡುಗನಿಂದ ಒಂದು ಚೀಟಿಯನ್ನೆತ್ತಿಸಿ ಹೆಸರನ್ನು ಓದುತ್ತಿದ್ದರು. ಹೀಗೆ ಒಂದೊಂದು ಭಾಗದಿಂದ ಒಬ್ಬೊಬ್ಬರಂತೆ ಚುನಾಯಿತರಾದ ಪ್ರತಿನಿಧಿಗಳ ಸಭೆಯಿಂದ ಗ್ರಾಮದ ಬೇರೆ ಬೇರೆ ಕೆಲಸಗಳನ್ನು ನೋಡಿಕೊಳ್ಳಲು ಬೇರೆಬೇರೆ ಸಮಿತಿಗಳನ್ನು ರಚಿಸುತ್ತಿದ್ದರು. ತೋಟಗಳು, ಕೆರೆಗಳು, ಹೊಲಗದ್ದೆಗಳು, ಹಣ, ನ್ಯಾಯನಿರ್ವಹಣೆ ಎಲ್ಲಕ್ಕೂ ಬೇರೆಬೇರೆ ಸಮಿತಿಗಳಿದ್ದುವು. ಈ ಸಮಿತಿಗಳಿಗೆ ವಾರಿಯಮ್‍ಗಳೆಂದು ಹೆಸರು. ಊರಿನ ಏಳಿಗೆಗಾಗಿ ತೆರಿಗೆಗಳನ್ನು ಎತ್ತುವ, ಅವನ್ನು ಮನ್ನಾ ಮಾಡುವ ಅಧಿಕಾರ ಗ್ರಾಮಸಭೆಗೆ ಇತ್ತು. ಭೂಕಂದಾಯವೇ ರಾಜ್ಯದ ಮುಖ್ಯ ಆದಾಯವಾದ್ದರಿಂದ ಭೂಮಿಯನ್ನು ಸರಿಯಾಗಿ ಅಳತೆಮಾಡಿಸಿ ತೆರಿಗೆಯ ಪ್ರಮಾಣವನ್ನು ಎಚ್ಚರಿಕೆಯಿಂದ ನಿಗದಿಗೊಳಿಸಲಾಗುತ್ತಿತ್ತು. ಪ್ರತಿ ಊರಿನಲ್ಲೂ ಜನ ವಾಸಿಸುವ ಪ್ರದೇಶ, ದೇವಾಲಯಗಳು, ಕೆರೆಗಳು, ಕಾಲುವೆಗಳು, ಪರಚ್ಚೇರಿ ಕಮ್ಮಾಣಚ್ಚೇರಿ (ಕುಶಲ ಕಲೆಗಾರರ ಕೇರಿ), ಸುಡುಗಾಡು–ಇವಕ್ಕೆ ಯಾವ ತೆರಿಗೆಯೂ ಇರುತ್ತಿರಲಿಲ್ಲ. ಒಟ್ಟು ಭೂಮಿಯಲ್ಲಿ ಇವುಗಳ ವಿಸ್ತೀರ್ಣವನ್ನು ಕಳೆದು ಉಳಿದ ಭೂಮಿಯನ್ನು ಗುಣಮಟ್ಟ ಮತ್ತು ಬೆಳೆಗನುಸಾರವಾಗಿ ವಿಂಗಡಿಸಿ ಅದರ ಮೇಲೆ ತೆರಿಗೆ ನಿರ್ಧರಿಸುತ್ತಿದ್ದರು. ರಾಜನ ಬೊಕ್ಕಸಕ್ಕೆ ಗ್ರಾಮದಿಂದ ತುಂಬಬೇಕಾದ ಒಟ್ಟು ತೆರಿಗೆಗೆ ಇಡೀ ಗ್ರಾಮವೇ ಹೊಣೆಯಾಗಬೇಕಾಗಿತ್ತು. ತೆರಿಗೆಯನ್ನು ಹಣದ ರೂಪದಲ್ಲಾಗಲಿ ಧಾನ್ಯರೂಪದಲ್ಲಾಗಲಿ ಕೊಡಬಹುದಾಗಿತ್ತು. ಭೂಮಿಯ ಮೇಲಿನ ತೆರಿಗೆಗಳಲ್ಲದೆ ಸಾರಿಗೆಯ ಸುಂಕ, ಮನೆ ತೆರಿಗೆ, ವೃತ್ತಿ ತೆರಿಗೆ, ಮದುವೆಯೇ ಮುಂತಾದ ವಿಶೇಷ ಸಮಾರಂಭಗಳ ಮೇಲಿನ ತೆರಿಗೆ, ಅಪರಾಧಗಳಿಗಾಗಿ ತೆರಬೇಕಾದ ದಂಡ ಮುಂತಾದವೂ ರಾಜ್ಯಕ್ಕೆ ಆದಾಯ ತರುತ್ತಿದ್ದುವು. ಹೀಗೆ ಬರುತ್ತಿದ್ದ ಆದಾಯವನ್ನು ಸೈನ್ಯ, ಆಡಳಿತ, ಅರಮನೆಗಳ ವೆಚ್ಚ ಕಳೆದು ಉಳಿದುದರ ಬಹುಭಾಗ ಕೆರೆಗಳು, ದೇವಾಲಯಗಳು, ವಿದ್ಯಾಲಯಗಳು, ಆಸ್ಪತ್ರೆಗಳು ಮುಂತಾದವನ್ನು ಕಟ್ಟಿಸುವುದು, ಅದನ್ನು ನಡೆಸಿಕೊಂಡು ಹೋಗುವುದು ಮುಂತಾದ ಜನೋಪಯೋಗಿ ಕಾರ್ಯಗಳಿಗಾಗಿ ವಿನಿಯೋಗಿಸಲಾಗುತ್ತಿತ್ತು. ಇವುಗಳಲ್ಲಿ ದೇವಾಲಯಗಳ ಪಾತ್ರ ಹಿರಿದಾದದ್ದು. ಅವು ಸಂಸ್ಕೃತಿ, ವಿದ್ಯೆ, ಕಲೆ ಮೊದಲಾದವುಗಳ ಕೇಂದ್ರವಾಗಿ ಜನಜೀವನದ ಮೇಲೆ ಮಹತ್ತರ ಪರಿಣಾಮ ಬೀರಿದ್ದವು.

**ವಾಸ್ತು, ಶಿಲ್ಪ :** ಚೋಳರು ಆಳಿದ 400 ವರ್ಷಗಳ ಕಾಲದಲ್ಲಿ (850–1250) ಚೋಳ ಸಾಮ್ರಾಜ್ಯದಲ್ಲಿ ವಾಸ್ತುಶಿಲ್ಪಶೈಲಿ ಅದ್ಭುತ ಪ್ರಗತಿ ಹೊಂದಿತು. ಪಲ್ಲವರು ಆರಂಭಿಸಿ ಬೆಳೆಸಿಕೊಂಡು ಬಂದಿದ್ದ ಶೈಲಿಯನ್ನೇ ಚೋಳರು ಮೊದಲು ಬಳಸಿದರೂ ಅವರು ಮುಂದುವರಿದಂತೆಲ್ಲ ತಮ್ಮದೇ ಆದ ರೀತಿಯನ್ನು ಅವುಗಳಲ್ಲಿ ಹೆಚ್ಚಾಗಿ ಅಳವಡಿಸುತ್ತ ಹೋಗಿ ಕಡೆಗೆ ಚೋಳ ಶೈಲಿ ಎಂದು ಸ್ಪಷ್ಟವಾಗಿ ಗುರುತಿಸಬಹುದಾದಷ್ಟು ಖಚಿತವಾದ ಸ್ವರೂಪವನ್ನು ಅದಕ್ಕೆ ಕೊಟ್ಟರು. ಅವರು ಕಟ್ಟಿಸಿದ ದೇವಾಲಯಗಳಿಗೆ ಲೆಕ್ಕವಿಲ್ಲ. ಚೋಳ ರಾಜ್ಯದಲ್ಲಷ್ಟೇ ಅಲ್ಲ, ಅವರು ಗೆದ್ದ ಸಿಂಹಳ, ಕರ್ಣಾಟಕ, ಆಂಧ್ರಗಳ ಭಾಗಗಳಲ್ಲೂ ತಮ್ಮ ವಾಸ್ತುಶಿಲ್ಪ ಶೈಲಿಯನ್ನು ಅನುಷ್ಠಾನಕ್ಕೆ ತಂದರು. ಸಮುದ್ರದಾಚೆಗಿನ ಮಲಯ, ಸುಮಾತ್ರ, ಜಾವ ಈ ದ್ವೀಪಗಳಲ್ಲಿ ಕೂಡ ಇದರ ಪ್ರಭಾವವನ್ನು ಕಾಣಬಹುದು. ಈ ಅಸಂಖ್ಯಾತ ದೇವಾಲಯಗಳಲ್ಲಿ ಹಲವನ್ನು ಕಟ್ಟಿದ ಕಾಲ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೂ ಕಟ್ಟಡಗಳ ರಚನೆ, ಶೈಲಿ, ಶಿಲ್ಪಗಳ ಸೂಕ್ಷ್ಮ ಪರಿಶೀಲನೆಯಿಂದ ಅವುಗಳ ಕಾಲವನ್ನು ಸ್ಥೂಲವಾಗಿ ಹೇಳಲು ಸಾಧ್ಯ.

ಚೋಳರು ಸ್ವತಂತ್ರರಾಗುವ ಹೊತ್ತಿಗೆ ಪಲ್ಲವರಲ್ಲಿ ಗುಹಾವಾಸ್ತು ಕೊನೆಗೊಂಡು, ಇಟ್ಟಿಗೆಯ, ಕಲ್ಲಿನ ಸಣ್ಣಸಣ್ಣ ದೇವಾಲಯಗಳನ್ನು ಕಟ್ಟುವ ಪದ್ಧತಿ ಬೆಳೆದಿತ್ತು. ಅದನ್ನೇ ಮುಂದುವರಿಸಿದ ಮೊದ ಮೊದಲಿನ ಚೋಳರಾಜರು ಇಟ್ಟಿಗೆಯ ಕಟ್ಟಡಗಳಿಗಿಂತ ಕಲ್ಲುಕಟ್ಟಡಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರು. ಆಗಲೇ ಕಟ್ರಾಳಿಯನ್ನು (ಪೂರ್ಣವಾಗಿ

ಶಿಲೆಯಿಂದ ನಿರ್ಮಿತವಾದ ದೇವಾಲಯ) ಕಟ್ಟಿಸುವುದು ಹೆಮ್ಮೆಯಿಂದ ಹೇಳಿಕೊಳ್ಳುವ ವಿಷಯವಾಗಿತ್ತು. ಹಿಂದಿನ ಹಲವು ಇಟ್ಟಿಗೆ ಕಟ್ಟಡಗಳನ್ನು ಅವರು ಹೀಗೆ ಕಲ್ಲುಕಟ್ಟಡಗಳಾಗಿ ಮಾರ್ಪಡಿಸಿದ ನಿದರ್ಶನಗಳುಂಟು. ತಿರುಕ್ಕುಳಕುಂಡ್ರದಲ್ಲಿದ್ದ ಇಟ್ಟಿಗೆ ಕಟ್ಟಡಕ್ಕೆ ಬದಲಾಗಿ



ಮೂವರ್ ಕೋಯಿಲ್, ಕೊಡುಂಬಾದು

1ನೆಯ ಆದಿತ್ಯ ಕಲ್ಲಿನ ಕಟ್ಟಡವನ್ನು ಕಟ್ಟಿಸಿ ಆ ದೇವಾಲಯಕ್ಕೆ ಹಿಂದೆ ಸ್ಕಂದ ಶಿಷ್ಯ ಬಿಟ್ಟಿದ್ದ ದತ್ತಿಯನ್ನು ಮುಂದುವರಿಸಿದಂತೆ ತಿಳಿಸುವ ಶಾಸನಗಳು ಅಲ್ಲಿವೆ. ಆದಿತ್ಯ ಸಹ್ಯಾದ್ರಿಯಿಂದ ಸಮುದ್ರದವರೆಗೂ ಕಲ್ಲಿನಿಂದ ದೇವಾಲಯಗಳನ್ನು ಕಟ್ಟಿಸಿದುದಾಗಿ ಶಾಸನಗಳು ತಿಳಿಸುತ್ತವೆ. ಅದರೂ ಇಟ್ಟಿಗೆ ಕಟ್ಟಡಗಳನ್ನೂ ಈ ಕಾಲದಲ್ಲಿ ಕಟ್ಟಿದ್ದುಂಟು. ಆದಿತ್ಯನ ಸಾಮಂತ ಕಂದನ್ ಮಾರವರ್ಮನ್ ಎಂಬುವನು ಇಟ್ಟಿಗೆಯಲ್ಲಿ ಕಟ್ಟಿಸಿದ್ದ ತಿರುತೊಟ್ಟಮುಡ್ಯೆಯ ಮಹಾದೇವರ ದೇವಾಲಯವನ್ನು 1ನೆಯ ಕುಲೋತ್ತುಂಗ ಚೋಳನ ಕಾಲದಲ್ಲಿ ಕಲ್ಲಿನಿಂದ ಪುನರ್ನಿರ್ಮಾಣ ಮಾಡಿದಂತೆ ಕಂಡುಬರುತ್ತದೆ. ಚೋಳರ ಕಾಲದಲ್ಲಿ ಇಟ್ಟಿಗೆಯಲ್ಲಿ ಕಟ್ಟಿದ ಕೆಲವು ದೇವಾಲಯಗಳು ಈಗಲೂ ಉಳಿದುಬಂದಿವೆ.

ಬ್ರಹ್ಮ. ತಿರುವುರಲ್ ಮಹಾದೇವ ದೇವಾಲಯ, ತಕ್ಕೋಲಂ

10ನೆಯ ಶತಮಾನದವರೆಗಿನ ಕಾಲದ ದೇವಾಲಯಗಳ ಗಾತ್ರ ಹೇಳುವಂಥದೇನೂ ಅಲ್ಲ. ಆದರೂ ಆ ಕಾಲದಲ್ಲಿ ಅವನು ಕಟ್ಟಿಸಿದ ದೇವಾಲಯುಗಳಲ್ಲಿ ಹಂತಹಂತವಾದ ಬೆಳೆವಣಿಗೆಯನ್ನು ಕಾಣಬಹುದು. ಆರಂಭಕಾಲದ, ಅಂದರೆ ವಿಜಯಾಲಯ ಮತ್ತು 1ನೆಯ ಆದಿತ್ಯನ ಕಾಲದ, ದೇವಾಲಯಗಳು ಸಣ್ಣ ಅಥವಾ ಮಧ್ಯಮ ಪ್ರಮಾಣದವಾಗಿದ್ದುವು. ಅವು ಹೆಚ್ಚಾಗಿ ಪಲ್ಲವ ಶೈಲಿಯಂತೆಯೇ ಇವೆ. ವಿಶಾಲೂರು, ತಿರುಪ್ಪೂರು, ಕಾಳಿಯಾಪಟ್ಟಿ, ಪನಂಗುಡಿ, ಏನಾದಿ ಮುಂತಾದ ಕಡೆ ಇರುವ ಚಿಕ್ಕ ಗುಡಿಗಳು ಈ ಗುಂಪಿಗೆ ಸೇರುತ್ತವೆ. ಇವುಗಳಲ್ಲಿ ಕಾಣುವ ಉಪಪೀಠ, ಗೂಡುಗಳು, ಅರೆಗಂಬಗಳು, ವಿಮಾನ ಎಲ್ಲವೂ ಪಲ್ಲವರು ಕಂಚಿಯಲ್ಲಿ ಕಟ್ಟಿಸಿರುವ ಮತಂಗೇಶ್ವರ, ಮುಕ್ತೇಶ್ವರ ದೇವಾಲಯಗಳ ಅನುಕರಣೆ. ಗರ್ಭಗೃಹ ಮತ್ತು ಅಂತರಾಳಗಳೆರಡನ್ನೂ ಸೇರಿಸಿಕೊಂಡು ಮೇಲೇಳುವ ಪಲ್ಲವರ ವಿಮಾನ ಚೋಳರ ಕಾಲಕ್ಕೆ ಗರ್ಭಗುಡಿಯ ಮೇಲೆ ಮಾತ್ರ ಇರುತ್ತವೆ. ಹಾಗೆಯೇ ಸಿಂಹಸ್ತಂಭಗಳು ಕಡಿಮೆಯಾಗಿ ಕ್ರಮೇಣ ಬಿಟ್ಟುಹೋದವು. ಇನ್ನೊಂದು ಮುಖ್ಯ ವ್ಯತ್ಯಾಸವೆಂದರೆ, ಪಲ್ಲವರಲ್ಲಿ ಮೂಲ ದೇವಾಲಯದ ಸುತ್ತಲೂ ಅದರ ಗೋಡೆಗಳಿಗೆ ಹೊಂದಿಕೊಂಡಂತೆ ಹೊರಮುಖವಾದ ಕಿರುಗುಡಿಗಳಿದ್ದರೆ, ಚೋಳ ಸಂಪ್ರದಾಯದಲ್ಲಿ ಮಧ್ಯದ ಮೂಲೆಗುಡಿಯ ಸುತ್ತಲೂ ಪ್ರಾಕಾರಕ್ಕೆ ಹೊಂದಿಕೊಂಡಂತೆ ಒಳಮುಖವಾಗಿರುವ ಕಿರುಗುಡಿಗಳಿರುತ್ತವೆ. ನಾರ್ತಾಮಲೈಯಲ್ಲಿರುವ ವಿಜಯಾಲಯ ಚೋಳೇಶ್ವರ ಇಂಥ ದೇವಾಲಯಗಳಲ್ಲೆಲ್ಲ ಮಾದರಿಯಾದ್ದು. ಅದರ ಹೆಸರೇ ತಿಳಿಸುವಂತೆ ಅದು ವಿಜಯಾಲಯನ ಕಾಲದಲ್ಲಿ ನಿರ್ಮಿತವಾದಂತೆ ತೋರುತ್ತದೆ. ನಡುವೆ ಮೂಲದೇವಾಲಯ, ಸುತ್ತಲೂ ಏಳು ಚಿಕ್ಕಚಿಕ್ಕ ಗುಡಿಗಳು. ನುಣುಪಾದ ಹೊರಮೈಯುಳ್ಳ ಬೆಣಚುಕಲ್ಲಿನ ದಪ್ಪ ದಿಮ್ಮಿಗಳಿಂದ ನಿರ್ಮಿತವಾಗಿರುವ ಮೂಲದೇವಾಲಯದ ಗರ್ಭಗುಡಿ ವೃತ್ತಾಕಾರವಾಗಿದೆ. ಅದರ ಗೋಡೆಗಳ ದಪ್ಪ 1.5 ಮೀ. ಗರ್ಭಗುಡಿಯನ್ನು ಬಳಸಿದ ಮತ್ತೊಂದು ಚೌಕನೆಯ ಕಟ್ಟಡ ಇದೆ. ದಕ್ಷಿಣಾಪಥ ಇರುವುದು ಇವುಗಳ ನಡುವೆ. ಮುಂದೆ 6 ಕಂಬಗಳ ಮೇಲೆ

ವೀಣಾಧರ ದಕ್ಷಿಣಾಮೂರ್ತಿ. ಅಗಸ್ತ್ಯೇಶ್ವರ ದೇವಾಲಯ, ಕಿಳೈಯೂರು

ನಿಂತಿರುವ ಅಂತರಾಳ. ಇದರ ಹೊರಗೋಡೆಯ ಮೇಲಿರುವ ಅಲಂಕೃತ ಅರೆಗಂಬಗಳು ಚೋಳಶಿಲ್ಪದ ವೈಶಿಷ್ಟ್ಯ. ಆದರೆ ನಡುವೆ ಗೂಡುಗಳಿಲ್ಲ. ಲೋವೆಯ ಕೆಳಭಾಗದಲ್ಲಿ ಕುಬ್ಜರ ಸಾಲು. ಮೇಲೆ ಯಾಳಿಗಳ ಸಾಲು, ಮಂಟಪದ ಕಂಬಗಳು ಕೆಳಗೆ ಮತ್ತು ಮೇಲೆ ಚೌಕಾಕೃತಿಯಲ್ಲಿದ್ದು, ನಡುವೆ ಅಷ್ಟಮುಖವುಳ್ಳವಾಗಿ ಪಲ್ಲವ ಶೈಲಿಯನ್ನುಳಿಸಿಕೊಂಡಿವೆ. ಪ್ರವೇಶದ್ವಾರದ ಎರಡೂ ಕಡೆಯೂ ಅರೆಮಂಟಪದಲ್ಲಿ ಎದುರುಮುಖವಾಗಿದ್ದು ದೇಹವನ್ನು ಬಾಗಿಲ ಕಡೆ ತಿರುಗಿಸಿ ಅಡ್ಡಗಾಲು ಹಾಕಿ ನಿಂತಿರುವ ದ್ವಾರಪಾಲಕ ಮೂರ್ತಿಗಳಿವೆ. ಅವುಗಳಿಗೆ ಪಲ್ಲವರ ದ್ವಾರಪಾಲಕ ಮೂರ್ತಿಗಳಂತೆ ಎರಡೇ ಕೈಗಳು. ಮೇಲಿನ ವಿಮಾನ

ಮೂರು ಅಂತಸ್ತುಗಳಲ್ಲಿದೆ. ಮೂರನೆಯದು ವೃತ್ತಾಕಾರ, ಸುತ್ತಲೂ ಇರುವ ಕೈಪಿಡಿಯ ಪಂಜರಗಳ ಗೂಡುಗಳಲ್ಲಿ ಮನೋಹರವಾದ ನಾಟ್ಯಭಂಗಿಯಲ್ಲಿರುವ ನರ್ತಕಿಯರ ಮೂರ್ತಿಗಳಿವೆ. ಕಣ್ಣನೂರಿನಲ್ಲಿ 1ನೆಯ ಆದಿತ್ಯನ ಕಾಲದಲ್ಲಿ ಕಟ್ಟಿಸಿದ ಬಾಲಸುಬ್ರಹ್ಮಣ್ಯ ದೇವಾಲಯ ಇದೇ ಮಾದರಿಯದು. ಕುಂಭಕೋಣದ ಸುಂದರವಾದ ನಾಗೇಶ್ವರ ದೇವಾಲಯವೂ ಇದೇ ರೀತಿಯಲ್ಲಿದ್ದರೂ ಇದರ ಗರ್ಭಗೃಹದ ಹೊರಗೋಡೆಗಳಲ್ಲಿರುವ ಗೂಡುಗಳಲ್ಲಿ ಅರ್ಧನಾರಿ, ಬ್ರಹ್ಮ, ದಕ್ಷಿಣಾಮೂರ್ತಿಯರ ವಿಗ್ರಹಗಳಿವೆ. ಉಳಿದ ಗೂಡುಗಳಲ್ಲಿ ಆಳೆತ್ತರದ ಸುಂದರವಾದ ಭಂಗಿಗಳಲ್ಲಿರುವ ಸ್ತ್ರೀಪುರುಷರ ಅರೆಯುಬ್ಬು ಮೂರ್ತಿಗಳುಂಟು. ಇವಲ್ಲದೆ ಜಗತಿಯಲ್ಲಿ ಅರೆಗಂಬಗಳ ಕೆಳಗಿರುವ ಪೌರಾಣಿಕ ವಸ್ತುಗಳ ಶಿಲ್ಪಗಳು ಕುಸುರಿ ಕೆಲಸದಿಂದ ತುಂಬಿವೆ.

ಕೊರಂಗನಾಥ ದೇವಾಲಯ, ಶ್ರೀನಿವಾಸನಲ್ಲೂರು

ಶ್ರೀನಿವಾಸನಲ್ಲೂರಿನಲ್ಲಿರುವ ಕೊರಂಗನಾಥ ದೇವಾಲಯ 1ನೆಯ ಪರಾಂತಕನ ಕಾಲದ್ದು. ಇದು ಮುಂದಿನ ಹಂತ. ಚೌಕವಾದ ಗರ್ಭಗೃಹ, ಉದ್ದುದ್ದನೆಯ ಮಂಟಪ 15 ಮೀ. ಗಳಷ್ಟು ಎತ್ತರವಾಗಿರುವ ಶಿಖರ. ಇದೊಂದು ಮಧ್ಯ ಗಾತ್ರದ ದೇವಾಲಯ. ಇದರಲ್ಲಿ ಹಿಂದಿನ ದೇವಾಲಯಗಳಲ್ಲಿಯ ಸರಳತೆ ಇದೆ. ಆದರೆ ಒಳಗೆ ಚೋಳ ರೀತಿಯ ಕಂಬಗಳು. ಸ್ತಂಭಾಗ್ರದಲ್ಲಿ ಕಳಶದ ಆಕೃತಿಯನ್ನಳವಡಿಸಿದೆ. ಅದರ ಮೇಲೆ ಹೆಚ್ಚು ಅಗಲವಾದ ಪುಷ್ಪಬೋದಿಗೆಗಳಿವೆ. ಈ ದೇವಾಲಯದ ಹೊರಗೂಡುಗಳಲ್ಲಿರುವ ದಕ್ಷಿಣಾಮೂರ್ತಿ, ವಿಷ್ಣು, ಬ್ರಹ್ಮ ಇವರ ಮತ್ತು ಇತರ ಸ್ತ್ರೀಪುರುಷರ ಮೂರ್ತಿಗಳು ಬಹುತೇಕ ಪೂರ್ಣವಾಗಿ ಬಿಡಿಸಲ್ಪಟ್ಟಿವೆ. ಇವು ಕಲಾಪೂರ್ಣವಾಗಿವೆ. ಕೋಡಂಬಾಳೂರಿನ ಮೂವರ್ ಕೋಯಿಲ್ ಸೊಗಸಾದ ವಾಸ್ತುಶೈಲಿಗೂ ಮೂರ್ತಿಶಿಲ್ಪಗಳ ಸೌಂದರ್ಯಕ್ಕೂ ಹೆಸರಾಗಿವೆ. ಇಮ್ಮಡಿ ಪರಾಂತಕನ ಕಾಲದಲ್ಲಿ ಅವನ ಸಾಮಂತ ಭೂತ್ರಿವಿಕ್ರಮ ಕೇಸರಿ ಕಟ್ಟಿಸಿದ. ಒಂದು ಸಾಲಿನಲ್ಲಿರುವ, ಈ ಮೂರೂ ಗುಡಿಗಳಲ್ಲಿ ಒಂದೊಂದೂ 6.5 ಮೀ. ಚೌಕವಾಗಿದೆ. ಒಂದಕ್ಕೂ ಇನ್ನೊಂದಕ್ಕೂ 3 ಮೀ. ಅಂತರ. ಒಂದೊಂದರ ಮುಂದೆಯೂ ಒಂದೊಂದು ಅರ್ಧ ಮಂಟಪವುಂಟು. ಇವುಗಳ ಮುಂದೆ 2.5 ಮೀ. ಅಂತರದಲ್ಲಿ ಇವು ಮೂರಕ್ಕೂ ಸೇರುವ ಒಂದು ದೊಡ್ಡ ಮಹಾಮಂಟಪ–ಇದರ ಮುಂದೆ, ನಡುವೆ, ಒಂದು ನಂದಿಮಂಟಪ; ಈ ಮಂಟಪಕ್ಕೂ ಪ್ರಾಕಾರದ್ವಾರಕ್ಕೂ ನಡುವೆ ಬಲಿಪೀಠ ಅಥವಾ ಧ್ವಜಸ್ತಂಭ; ಇವೆಲ್ಲವನ್ನೂ ಒಳಗೊಂಡಂತೆ ಸುತ್ತಾಲಯ; ಅದಕ್ಕೆ ಸೇರಿದಂತೆ ಸುತ್ತಲೂ 15 ಕಿರುಗುಡಿಗಳು. ಹೊರಪ್ರಾಕಾರ ದಪ್ಪ ಗೋಡೆಯದು. ಪಶ್ಚಿಮದಲ್ಲಿ ಪ್ರವೇಶದ್ವಾರ ಗೋಪುರವೊಂದಿತ್ತು. ಹೊರಗೋಡೆಯ ಶಿಲ್ಪಗಳು ಇತರ ದೇವಾಲಯಗಳಲ್ಲಿರುವಂತೆಯೇ ಇವೆ. ಆದರೆ ಅವು ಹೆಚ್ಚು ನವುರವು. ಲೋವೆಯ ಕೆಳಗಿನ ಗಣಗಳು ಹಲವು ಭಂಗಿಗಳಲ್ಲಿ ಆಕರ್ಷಕವಾಗಿವೆ. ಅಲ್ಲಿಯ ಶಿಲ್ಪಗಳಲ್ಲಿ ಅರ್ಧನಾರಿ, ವೀಣಾಧರ, ದಕ್ಷಿಣಾಮೂರ್ತಿ, ಗಜಾರಿ, ಗಂಗಾಧರ ಮುಂತಾದವು ಗಮನಿಸಬೇಕಾದವು. ಕಿಳಿಯನೂರಿನ ಅಗಸ್ತ್ಯೇಶ್ವರ, ತಿಂಡಿವನದ ತಿರುತ್ತಿಂಡೀಶ್ವರ, ತಿರುವೆರುಂಬಿಯೂರಿನ ಪಿಪೀಲಿಕೇಶ್ವರ, ಬ್ರಹ್ಮದೇಶದ ತಿರುವಾಳೀಶ್ವರ ಮೊದಲಾದವು ಈ ಗುಂಪಿಗೆ ಸೇರುತ್ತವೆ.

ರಾಜರಾಜ ಮತ್ತು ರಾಜೇಂದ್ರರ ಕಾಲದಲ್ಲಿ ಚೋಳರ ವಾಸ್ತುಶಿಲ್ಪಶೈಲಿ ಪರಾಕಾಷ್ಠೆ ಮುಟ್ಟಿತು. ಬೃಹತ್ತಿಗೂ ಮಹತ್ತಿಗೂ ಹೆಸರಾಯಿತು. ಅವರ ಸಾಮ್ರಾಜ್ಯ ದೊಡ್ಡದಾದಂತೆ ಅವರು ದೊಡ್ಡ ದೇವಾಲಯಗಳನ್ನು ಕಟ್ಟಿಸಿ ವಾಸ್ತುಶಿಲ್ಪ ಇತಿಹಾಸದಲ್ಲಿ ಚೋಳಶೈಲಿಗೆ ಪ್ರಮುಖ ಸ್ಥಾನ ದೊರಕಿಸಿಕೊಟ್ಟರಲ್ಲದೆ ತಮ್ಮ ಕೀರ್ತಿಯನ್ನು ಅಜರಾಮರಗೊಳಿಸಿಕೊಂಡರು. ಇವರ ಸಾಮ್ರಾಜ್ಯದ ಉದ್ದಗಲಕ್ಕೂ ದೇವಾಲಯಗಳು ಹರಡಿಕೊಂಡುವು. ರಾಜರಾಜನ ಆಳ್ವಿಕೆಯ ಮೊದಲ ಭಾಗದಲ್ಲಿ ಅವನು ಕಟ್ಟಿಸಿದ ದೇವಾಲಯಗಳು ಹಿಂದಿನ ದೇವಾಲಯಗಳಿಗಿಂತ ದೊಡ್ಡವಾಗಿದ್ದರೂ ಮುಂದೆ ಅವನು ತಂಜಾವೂರಿನಲ್ಲಿ ಕಟ್ಟಿಸಿದ ರಾಜರಾಜ ದೇವಾಲಯದ (ಬೃಹದೀಶ್ವರ ದೇವಾಲಯ) ಮುಂದೆ ತೀರ ಚಿಕ್ಕವೇ. ಇವುಗಳಲ್ಲಿ ತಿರುವಾಳೇಶ್ವರ ದೇವಾಲಯ ತನ್ನ ಶಿಲ್ಪಬಾಹುಳ್ಯ ಮತ್ತು ವೈವಿಧ್ಯದಿಂದ ಅತ್ಯಂತ ಆಕರ್ಷಕವಾಗಿದೆ. ಅದರಲ್ಲೂ ಲೋವೆಯ ಕೆಳಗಿನ ಗಣಗಳ ವಿವಿಧ ನಾಟ್ಯಭಂಗಿಗಳು, ವಿಚಿತ್ರ ಮುಖಮುದ್ರೆಗಳು, ಹಾಸ್ಯಮಯವಾದ ನಡೆನೋಟಗಳು ಗಮನಾರ್ಹವಾಗಿವೆ.

ಬ್ರಹ್ಮ, ಕೊರಂಗನಾಥ ದೇವಾಲಯ, ಶ್ರೀನಿವಾಸನಲ್ಲೂರು

ತಂಜಾವೂರಿನಲ್ಲಿ ರಾಜರಾಜ ಕಟ್ಟಿಸಿದ ರಾಜರಾಜೇಶ್ವರ ಮತ್ತು ಗಂಗೈಕೊಂಡ ಚೋಳಪುರದಲ್ಲಿ 1ನೆಯ ರಾಜೇಂದ್ರ ಕಟ್ಟಿಸಿದ ಗಂಗೈಕೊಂಡ ಚೋಳೇಶ್ವರ ದೇವಾಲಯಗಳು ಚೋಳಶೈಲಿಯ ಉತ್ತುಂಗ ಶಿಖರಗಳು. ಗಾತ್ರದಲ್ಲಷ್ಟೇ ಅಲ್ಲ, ರಚನೆಯಲ್ಲಿ, ಶಿಲ್ಪದಲ್ಲಿ, ಯಾವುದೇ ದೃಷ್ಟಿಯಿಂದಲೂ ಇವನ್ನು ಮೀರಿಸಿದ ಚೋಳ ದೇವಾಲಯಗಳಿಲ್ಲ. ರಾಜರಾಜೇಶ್ವರ ಅಥವಾ ಬೃಹದೀಶ್ವರ ದೇವಾಲಯ ರಾಜರಾಜನ ಅತ್ಯದ್ಭುತ ಸಾಧನೆ. 1003ರಲ್ಲಿ ಆರಂಭವಾದ ಈ ದೇವಾಲಯ ನಿರ್ಮಾಣ 1009–10 ರ ಹೊತ್ತಿಗೆ, ಎಂದರೆ ರಾಜರಾಜನ ಆಳ್ವಿಕೆಯ 25ನೆಯ ವರ್ಷದಲ್ಲಿ ಮುಗಿಯಿತು. ಚೋಳರ ಬಲ ಮತ್ತು ಐಶ್ವರ್ಯಗಳು ರಾಜರಾಜನ ಕಾಲದಲ್ಲಿ ಹೇಗೆ ಬೆಳೆದುವೆಂಬುದಕ್ಕೆ ಇದು ಸಾಕ್ಷಿಯಾಗಿದೆ. 55ಮೀ. ಉದ್ದವಿರುವ ದೇವಾಲಯದ ವಿಮಾನ 58ಮೀ. ಎತ್ತರವಾಗಿದೆ. ಇದು ಭಾರತದಲ್ಲೇ ಅತ್ಯುನ್ನತ ದೇವಾಲಯ. ವಿಮಾನ, ಅರ್ಧಮಂಟಪ, ಮಹಾಮಂಟಪ, ನಂದಿಮಂಟಪಗಳು. ಅವನ್ನು ಬಳಸಿದ ಒಂದು ದೊಡ್ಡ ಪ್ರಾಕಾರ, ಆ ಪ್ರಾಕಾರದ ಒಳಭಾಗದಲ್ಲಿ 35 ಸಣ್ಣ ಗುಡಿಗಳು. ಪ್ರಾಕಾರದ ಪ್ರವೇಶದ್ವಾರದ ಮೇಲೊಂದು ಗೋಪುರ; ಅಲ್ಲಿಂದ ಹೊರಗಡೆಗೆ

ಎರಡನೆಯ ಪ್ರಾಕಾರಕ್ಕೆ ಸೇರಿದಂತೆ ಮತ್ತೊಂದು ಗೋಪುರ; ಇದರ ಭವ್ಯವಾದ ವಿಮಾನ 30ಮೀ. ಚೌಕದ ಭದ್ರವಾದ ಬುನಾದಿಯ ಮೇಲೆ ನಿಂತಿದೆ. ಹೊರಮುಖದಲ್ಲಿರುವ ಹಲವು ಭಾಗಗಳು ಒಳಸರಿದೋ ಹೊರಚಾಚಿಯೋ ಇದ್ದು ದೇವಾಲಯದ ಒಟ್ಟಿನ ಆಕೃತಿಗೆ ಮೆರಗು ನೀಡಿವೆ. ಗರ್ಭಗೃಹದ ಗೋಡೆಯ ಎತ್ತರ 15 ಮೀ. ಅದರ ಮೇಲೆ

ಚೋಳೀಶ್ವರ ದೇವಾಲಯ, ಕಿಳೈಯೂರು

13 ಅಂತಸ್ತುಗಳಲ್ಲಿ ಗೋಪುರಾಕೃತಿಯಲ್ಲಿ ನೇರವಾಗಿ ಮೇಲೆದ್ದಿರುವ ವಿಮಾನದ ತುದಿಯಲ್ಲಿ ಗುಂಡಾದ ಶಿಖರವಿದೆ. ಅದರ ಭವ್ಯತೆ ಅಡಗಿರುವುದು ವಿಮಾನದ ಸರಳವಾದ ನೇರವಾದ ನಿಲುವಿನಲ್ಲಿ ಮತ್ತು ಅದರ ಮೇಲಿನ ಗೋಳಾಕೃತಿಯ ಬೃಹತ್ ಶಿಖರದಲ್ಲಿ. ಮಧ್ಯದಲ್ಲಿ ಅಡ್ಡವಾಗಿ ಹಾದುಹೋಗಿರುವ ದಿಂಡುಕಲ್ಲಿನಿಂದ ಹೊರಗೋಡೆ ಎರಡು ಭಾಗವಾಗಿದೆ. ಈ ದಿಂಡಿನ ಕೆಳಗೂ ಮೇಲೂ ಅರೆಗಂಬಗಳ ಸಾಲು ಮತ್ತು ಇತರ ಅಲಂಕೃತ

ಬೃಹದೀಶ್ವರ ದೇವಾಲಯ, ತಂಜಾವೂರು

ಶಿಲ್ಪಗಳಿವೆ. ಗೋಡೆಗೆ ಹಲವು ಮುಖಗಳಿವೆ. ಒಂದೊಂದು ಮುಖದಲ್ಲೂ ಅರೆಮಂಟಪಗಳು ಅಥವಾ ಆಳವಾದ ದೇವಗೋಷ್ಠಗಳಿವೆ. ಅವುಗಳಲ್ಲಿ ಅತ್ಯಂತ ಸುಂದರವಾಗಿ ಕಡೆದ ಮೂರ್ತಿಶಿಲ್ಪಗಳು ತುಂಬಿವೆ. ಮೇಲೇರುತ್ತ ಕಿರಿದಾಗುವ ವಿಮಾನದ 13 ಅಂತಸ್ತುಗಳೂ ರಚನೆಯಲ್ಲಿ ಒಂದೇ ಬಗೆ. ಒಂದೊಂದರಲ್ಲೂ ಅಲಂಕೃತ ಕಿರುಗೋಪುರಗಳ ಸಾಲು. ಇದು ಅತ್ಯಂತ ಸುಂದರವಾದ ಶಿಲ್ಪ ಜೋಡಣೆ. ಚೌಕಾಕೃತಿಯಲ್ಲೇ ಮೇಲೆದ್ದ ಈ ವಿಮಾನದ ತುದಿಯಲ್ಲಿಯ ಕಂಠಭಾಗದಿಂದ ಅದರ ಮೇಲೆ ನಾಲ್ಕು ಕಡೆಯೂ ಅಲಂಕೃತ ಗೂಡುಗಳಿರುವ ಗೋಲಾಕೃತಿಯ ದೊಡ್ಡ ಶಿಖರದಿಂದ ಅದರ ಸೌಂದರ್ಯ ಇಮ್ಮಡಿಸಿದೆ. 14ಮೀ.ಚೌಕದ ಗರ್ಭಗೃಹದ ಸುತ್ತಲೂ ಇರುವ 2ಮೀ. ಅಗಲದ ಪ್ರದಕ್ಷಿಣಾಪಥದ ಒಳಚಾವಣಿ ಆ ಕಾಲದ ಸೊಗಸಾದ ವರ್ಣಚಿತ್ರಗಳಿಂದ ತುಂಬಿದೆ. ಗರ್ಭಗೃಹದಲ್ಲಿರುವ ಲಿಂಗ, ನಂದಿಮಂಟಪದಲ್ಲಿರುವ ನಂದಿ ಎರಡೂ ದೊಡ್ಡವು. ಅರ್ಧಮಂಟಪದ ಹೊರಗೋಡೆಗಳ ಗೂಡುಗಳಲ್ಲಿರುವ ದೇವತಾಮೂರ್ತಿಗಳು ಕಲಾತ್ಮಕವಾದವು. ಒಟ್ಟಿನಲ್ಲಿ ಈ ದೇವಾಲಯದ ರಚನೆ ಸುಭದ್ರ, ಸ್ಥೂಲ, ಭವ್ಯ ಮತ್ತು ಪ್ರಮಾಣಬದ್ಧ. ರಾಜರಾಜೇಂದ್ರ ಸು. 1030ರಲ್ಲಿ ಕಟ್ಟಿಸಿದ ಗಂಗೈಕೊಂಡ ಚೋಳೇಶ್ವರ ದೇವಾಲಯ ಇದೇ ಮಾದರಿಯದು. ಇದು ವಿಸ್ತಾರದಲ್ಲಿ ಹಿರಿದಾಗಿದ್ದರೂ ಗಾತ್ರದಲ್ಲಿ ಕಿರಿದು. ಇದರ 8 ಅಂತಸ್ತುಗಳ 49ಮೀ.ಎತ್ತರದ

ಕಲ್ಯಾಣ ಸುಂದರಮೂರ್ತಿ. ಉಮಾಮಹೇಶ್ವರ ದೇವಾಲಯ, ಕೋನೇರಿರಾಜಪುರ

ವಿಮಾನದಲ್ಲಿ ರಾಜರಾಜೇಶ್ವರ ದೇವಾಲಯದ ನೇರವಾದ ನೀಳ ರಚನೆ ಇಲ್ಲ. ಅದರ ಬುಡ ಅಗಲ; ಮೇಲೇರುತ್ತಿದ್ದಂತೆ ಹೊರರಚನೆಯಲ್ಲಿ ಒಂದು ಬಳುಕಿದೆ. ಅದರಲ್ಲಿ ರಾಜರಾಜೇಶ್ವರ ದೇವಾಲಯದ ಗಂಡುತನ ಇಲ್ಲದಿದ್ದರೂ ಗಾಂಭೀರ್ಯವಿದೆ. ದೇವಾಲಯದ ಹೊರ ರಚನೆಯಲ್ಲೂ ಅಲಂಕರಣ ಹೆಚ್ಚು. ದ್ವಾರಪಾಲಕರು, ಹೊರಗೋಡೆಯ ಮೇಲಿನ ಮೂರ್ತಿಗಳು ಜೀವಂತ ಸೌಂದರ್ಯವನ್ನು ಹೊಮ್ಮಿಸುವ ಮಹತ್ತರ ಕೃತಿಗಳು. ಮುಂದೆ ಒಂದು ಶತಮಾನಕಾಲ ಚೋಳ ವಾಸ್ತುಶಿಲ್ಪಗಳು ಬಹುಮುಖವಾಗಿ ಬೆಳೆದುವು. ಅನೇಕ ದೇವಾಲಯಗಳ ನಿರ್ಮಾಣವಾಯಿತು. ಇವುಗಳಲ್ಲಿ ದಾರಾಸುರದ ಐರಾವತೇಶ್ವರ ದೇವಾಲಯ ಇಮ್ಮಡಿ ರಾಜರಾಜನ ಕಾಲದ ಭವ್ಯ ಕಟ್ಟಡ. ಇದು ತಂಜಾವೂರಿನ ಮಾದರಿಯಲ್ಲೇ ಇದ್ದರೂ ಇದನ್ನು ಹಲವು ಪ್ರಾಕಾರಗಳು ಸುತ್ತುವರಿದಿವೆ. ಅಲ್ಲದೆ ಇದರ ಮಹಾಮಂಟಪದ ಮುಂದೆ ರಾಜಗಂಭೀರವೆಂಬ ಮತ್ತೊಂದು ಮಂಟಪವಿದೆ. ಅದು ಆನೆಗಳು ಎಳೆಯುತ್ತಿರುವ ರಥದ ಮಾದರಿಯಲ್ಲಿದೆ. ಮುಮ್ಮಡಿ ಕುಲೋತ್ತುಂಗನ ಕಾಲದಲ್ಲಿ ತ್ರಿಭುವನದಲ್ಲಿ ಕಟ್ಟಿದ ಕಂಪಹರೇಶ್ವರ ದೇವಾಲಯವೂ ಮೇಲೆ ತಿಳಿಸಿದ ಬೃಹ ದ್ದೇವಾಲಯಗಳ ಮಾದರಿಯದೇ ಆದರೂ ಅದರಲ್ಲಿ ಚೋಳರ ಕಾಲದ ಅನಂತರ ಬೆಳೆದ ದೇವಾಲಯಗಳ ರಚನೆಯ ವೈವಿಧ್ಯವನ್ನು ಗುರುತಿಸಬಹುದು.

ಚೋಳರ ಕಾಲದ ಮೂರ್ತಿಶಿಲ್ಪ ಜೀವಂತ ವಾದ ಶಿಲ್ಪಮಾದರಿ. ಪಲ್ಲವರ ಕಾಲದಲ್ಲಿ ತೆಳುವುಬ್ಬು ಶಿಲ್ಪದಲ್ಲಿರುತ್ತಿದ್ದ ಮೂರ್ತಿಗಳು ಚೋಳರ ದೇವಾಲಯಗಳ ಮೇಲೆ ಹೆಚ್ಚು ಗುಂಡು ರೂಪ ತಾಳುತ್ತವೆ. ಅವರ ಕಾಲದ ಕಂಚು ಶಿಲ್ಪಗಳಂತೂ ಲೋಕಪ್ರಸಿದ್ಧವಾಗಿವೆ.

**ಶಾಸನಗಳು :** ವಿಜಯಾಲಯನ ಕಾಲದಿಂದ ಆರಂಭವಾಗುವ ಚೋಳವಂಶದ ದೊರೆಗಳು ಹೆಚ್ಚಿನ ಸಂಖ್ಯೆಯ ಶಾಸನಗಳನ್ನು ಹಾಕಿಸಿದ್ದಾರೆ. ಇವುಗಳಲ್ಲಿ ಕೆಲವು ತಾಮ್ರಶಾಸನಗಳು, ಹೆಚ್ಚಿನವು ಶಿಲಾಶಾಸನಗಳು. ಈ ಶಾಸನಗಳನ್ನು ಸಾಮಾನ್ಯ ವಾಗಿ ದೇವಾಲಯಗಳ ತಳಪಾಯದ ದಿಂಡುಗಳ ಮೇಲೆ, ಹೊರಭಿತ್ತಿಗಳ ಮೇಲೆ, ಕಂಬಗಳ ಬುಡದಲ್ಲಿ, ಮೂರ್ತಿಗಳ ಕೆಳಗೆ, ಪ್ರಾಕಾರದ ಗೋಡೆಗಳ ಮೇಲೆ ಹಾಕಿಸಿರುತ್ತದೆ. ಕೆಲವು ದೇವಾಲಯಗಳ ಗೋಡೆಗಳಂತೂ ಶಾಸನ ಗಳಿಂದ ತುಂಬಿಹೋಗಿವೆ. ದೊಡ್ಡ ದೇವಾಲಯಗಳೊಂದೊಂದರಲ್ಲೂ ಚೋಳರ ನೂರಾರು ಶಾಸನಗಳನ್ನು ಕಾಣಬಹುದು. ಅಲ್ಲಲ್ಲಿ ಕಲ್ಲಿನ ಹಲಗೆಗಳ ಮೇಲೆ ಹಾಕಿಸಿರುವ ಶಾಸನಗಳುಂಟು. ಇಟ್ಟಿಗೆಯ ದೇವಾಲಯಗಳನ್ನು

ಕಲ್ಲಿನಿಂದ ಹೊಸದಾಗಿ ಕಟ್ಟಿಸಿದಾಗ ಹಳೆಯ ದೇವಾಲಯಗಳ ಮೇಲಿದ್ದ ಶಾಸನಗಳನ್ನು ಹೊಸ ದೇವಾಲಯದ ಗೋಡೆಗಳ ಮೇಲೆ ಪ್ರತಿಮಾಡಿಸುವ ಪದ್ಧತಿಯನ್ನು ಚೋಳರು ಆಚರಣೆಗೆ ತಂದಿದ್ದರು.

ಚೋಳರ ತಾಮ್ರಶಾಸನಗಳು ಅತ್ಯಂತ ದೊಡ್ಡವು. ಚೆನ್ನಾಗಿ ತಟ್ಟಿ ಮಾಡಿದ ಅಗಲವಾದ ಹಲಗೆಗಳನ್ನು ದೊಡ್ಡದಾದ ಬಳೆಯೊಂದಕ್ಕೆ ಪೋಣಿಸಿ ಬಳೆಯ ತುದಿಗಳನ್ನು ಗುಂಡು ಮುದ್ರೆಯೊಂದಕ್ಕೆ ಬೆಸೆದು ಸೇರಿಸಿರುತ್ತದೆ. ಅವುಗಳಲ್ಲಿ ಒಂದೊಂದೂ ಹೆಚ್ಚು ತೂಕವುಳ್ಳವಾಗಿರುತ್ತವೆ. ಲೇಡನ್ ವಸ್ತು ಸಂಗ್ರಹಾಲಯದಲ್ಲಿರುವ 1ನೆಯ ರಾಜರಾಜನ ತಾಮ್ರಶಾಸನದಲ್ಲಿ 21 ಹಲಗೆಗಳಿವೆ; 443 ಪಂಕ್ತಿಗಳುಂಟು. ರಾಜೇಂದ್ರ ಚೋಳನ 6ನೆಯ ವರ್ಷದ ತಿರುವಾಲಂಗಾಡು ಶಾಸನದಲ್ಲಿ 31 ಹಲಗೆಗಳಿವೆ. ಇದು ದೊಡ್ಡದಾದ ಬಳೆ ಮುದ್ರೆಗಳಿಂದ ಕೂಡಿ, 7,980 ತೊಲ ತೂಗುತ್ತದೆ. ಇದರಲ್ಲಿ 816 ಪಂಕ್ತಿಗಳುಂಟು. ಇದುವರೆಗೆ ದೊರೆತಿರುವ ತಾಮ್ರಶಾಸನಗಳಲ್ಲೆಲ್ಲ ಅತ್ಯಂತ ದೊಡ್ಡದಾದ್ದು 1ನೆಯ ರಾಜೇಂದ್ರನ ಕರಂದೈ ಶಾಸನ. ಗಳ 55 ಹಲಗೆಗಳ ಮೇಲೆ 2,500 ಪಂಕ್ತಿಗಳಿಗೂ ಉದ್ದವಾದ ಶಾಸನವಿದೆ. ಇದರ ತೂಕ 8,645 ತೊಲಗಳು. ಜೊತೆಗೆ ಇದರ ಮುದ್ರೆ ಮತ್ತು ಉಂಗುರಗಳ ತೂಕ 753 ತೊಲಗಳು. 1,500 ಪಂಕ್ತಿಗಳಲ್ಲಿ ಚೋಳರ ದೀರ್ಘವಾದ ವಂಶಾವಳಿಯನ್ನು ಕೊಟ್ಟಿರುವ ಈ ಶಾಸನದಲ್ಲಿ 1,073 ಬ್ರಾಹ್ಮಣರಿಗೆ ದತ್ತಿಯನ್ನು ಕೊಟ್ಟ ವಿಷಯವನ್ನು ವಿವರವಾಗಿ ತಿಳಿಸಿದೆ. ಈ ತಾಮ್ರಶಾಸನಗಳಲ್ಲಿ ಸೂರ್ಯವಂಶದ ಪೌರಾಣಿಕ ರಾಜಮನೆತನದಿಂದ ಆರಂಭಿಸಿ ಅತಿ ದೀರ್ಘವಾಗಿ ಚೋಳ ವಂಶಾವಳಿಯ ಪಟ್ಟಿ ಕೊಟ್ಟಿದೆಯಲ್ಲದೆ ರಾಜರ ಪ್ರಶಸ್ತಿಗಳನ್ನೂ ತಿಳಿಸಿದೆ. ಚೋಳರ ಮೊದಮೊದಲಿನ ತಾಮ್ರಶಾಸನಗಳಲ್ಲಿ ಸ್ವಲ್ಪಭಾಗ ಸಂಸ್ಕೃತದಲ್ಲೂ ಉಳಿದ ಭಾಗ ತಮಿಳಿನಲ್ಲೂ ಇರುವುದು ರೂಢಿ; ರಾಜರಾಜನ ಲೇಡನ್ ಶಾಸನ, ರಾಜೇಂದ್ರನ ತಿರುವಾಲಂಗಾಡು ಶಾಸನ, ಸುಂದರ ಚೋಳನ ಅನ್‌ಬಿಲ್ ಶಾಸನ ಮುಂತಾದವು ಈ ಗುಂಪಿಗೆ ಸೇರಿದವು. ಆದರೆ ಮುಂದೆ ಇವರು ಶಾಸನಗಳನ್ನು ಪೂರ್ಣವಾಗಿ ತಮಿಳಿನಲ್ಲೇ ಹಾಕಿಸಿದರು. ರಾಜೇಂದ್ರನ ತಿರುಕ್ಕಲರ್ ಶಾಸನ ತಮಿಳಿನಲ್ಲೇ ಇದೆ. ಅದೇ ತಿರುಕ್ಕಲರಿನ 1ನೆಯ ರಾಜಾಧಿರಾಜ, 1ನೆಯ ಕುಲೋತ್ತುಂಗ, ಇಮ್ಮಡಿ ರಾಜರಾಜ, ಮುಮ್ಮಡಿ ಕುಲೋತ್ತುಂಗ ಮುಂತಾದವರ ತಾಮ್ರಶಾಸನಗಳೂ ಪೂರ್ಣವಾಗಿ ತಮಿಳಿನಲ್ಲೇ ಇವೆ. ಬಳೆಯ ತುದಿಗಳನ್ನು ಬಂಧಿಸಿರುವ ಗುಂಡು ಮುದ್ರೆಗಳ ಮೇಲೆ ಛತ್ರ, ಚಾಮರ, ದೀಪಸ್ತಂಭಗಳು, ಹುಲಿ ಮುಂತಾದ ಚಿಹ್ನೆಗಳಿವೆ.

ಶಿವ, ಅಗಸ್ತ್ಯೇಶ್ವರ ದೇವಾಲಯ, ಕಿಳೈಯೂರು

ಶಿಲಾಶಾಸನಗಳು ವೈವಿಧ್ಯಮಯವಾದವು. ಮೂರ್ತಿಗಳ ಹೆಸರನ್ನು ಸೂಚಿಸುವ ಒಂದೇ ಪದವುಳ್ಳ ಶಾಸನಗಳಿಂದ ಹಿಡಿದು, ಬೃಹದೀಶ್ವರ ದೇವಾಲಯದಲ್ಲಿರುವ 16.76 ಮೀ. ಎತ್ತರದ, 55ಕ್ಕಿಂತ ಹೆಚ್ಚು ಸಾಲುಗಳಿರುವ, 1ನೆಯ ರಾಜರಾಜನ ಶಾಸನದಂತೆ ದೀರ್ಘವಾದವೂ ಇವೆ. ದಾರಾಸುರಂನಲ್ಲಿ ಐರಾವತೇಶ್ವರ ದೇವಾಲಯದ ಗೋಡೆಗಳ ಗೂಡುಗಳಲ್ಲಿರುವ ಮೂರ್ತಿಗಳ ಪೀಠಗಳ ಮೇಲೆ ಮೂರ್ತಿಗಳ ಹೆಸರುಗಳನ್ನು ತಿಳಿಸುವ ಸಣ್ಣಸಣ್ಣ ಶಾಸನಗಳಿವೆ. ಶಿಲಾಶಾಸನಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯವು ರಾಜನೋ, ಅಧಿಕಾರಿಗಳೋ, ಗ್ರಾಮಸಭೆಗಳೋ, ಸೈನ್ಯಗಳ ತುಕಡಿಗಳೋ ಸಾಮಾನ್ಯ ಜನತೆಯೋ ದೇವಾಲಯಗಳಿಗೆ, ಮಠಗಳಿಗೆ, ಬ್ರಾಹ್ಮಣರಿಗೆ ಕೊಟ್ಟ ದತ್ತಿಯನ್ನು ಅಥವಾ ನಂದಾದೀಪಕ್ಕಾಗಿ, ದೇವರಪೂಜೆಗಾಗಿ ಇಟ್ಟ ಪುದುವಟ್ಟು ಅಥವಾ ಬಿಟ್ಟ ಹಸು ಕುರಿಗಳ ವಿಷಯವನ್ನು ತಿಳಿಸುತ್ತವೆ. ಗ್ರಾಮಸಭೆಗಳು ನಡೆಸುತ್ತಿದ್ದ ವ್ಯವಹಾರ, ಕೊಡುತ್ತಿದ್ದ ತೀರ್ಪು, ಹಾಕುತ್ತಿದ್ದ ದಂಡ, ಸ್ವತ್ತುಗಳ ಮಾರಾಟ, ಈಡುಮಾಡುವುದು ಮುಂತಾದುವುಗಳ ವಿವರಗಳನ್ನು ದೇವಾಲಯಗಳ ಗೋಡೆಗಳ ಮೇಲೆ ದಾಖಲು ಮಾಡಿರುವುದೂ ಉಂಟು. ಚಾರಾಲ ತಾಮ್ರಶಾಸನದಲ್ಲಿರುವ ಸಂಸ್ಕೃತ ಪ್ರಶಸ್ತಿ ಕನ್ಯಾಕುಮಾರಿ ಶಿಲಾಶಾಸನದ ಪ್ರತಿ. ತಿರುವಿಡೈವಾಯಿಲ್‌ನಲ್ಲಿರುವ ಅಪರೂಪದ ಶಾಸನವೊಂದು ಜ್ಞಾನಸಂಬಂಧರು ಅಲ್ಲಿಯ ದೇವಾಲಯವೊಂದರ ವಿಷಯದಲ್ಲಿ ಹಾಡಿರುವ ತೇವಾರವನ್ನು ಒಳಗೊಂಡಿದೆ.

ನಂದಿ ಮಂಟಪ, ಬೃಹದೀಶ್ವರ ದೇವಾಲಯ, ತಂಜಾವೂರು

ಚೋಳರ ಶಾಸನಗಳು ತಮಿಳುಗ್ರಂಥ ಅಥವಾ ವಟ್ಟೆಳುತ್ತು ಲಿಪಿಯಲ್ಲಿವೆ. ವಟ್ಟೆಳುತ್ತನ್ನು ತಮಿಳುನಾಡಿನಲ್ಲಿ 10ನೆಯ ಶತಮಾನದಿಂದೀಚೆಗೆ ಬಳಸುವುದು ನಿಂತುಹೋಯಿತು. ಚೋಳರು ಗೆದ್ದ ಇತರ ಪ್ರಾಂತ್ಯಗಳಲ್ಲಿ ಆಯಾ ಪ್ರಾಂತ್ಯದ ಭಾಷೆ ಮತ್ತು ಲಿಪಿಯನ್ನು ಬಳಸಿರುವುದುಂಟು. ಒಂದನೆಯ ರಾಜರಾಜನ ಸೇನಾಧಿಪತಿ ಅಪ್ರಮೇಯ ಕಲಿಯೂರಿನಲ್ಲಿ ಹಾಕಿಸಿರುವ ಜಯಸ್ತಂಭ ಶಾಸನವೂ ಒಂದನೆಯ ರಾಜೇಂದ್ರನ ಬಲಮುರಿ ಶಾಸನವೇ ಮುಂತಾದವೂ ಸುಂದರವಾದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿವೆ. ಕೆಲವು ಶಾಸನಗಳು ತಮಿಳು ಭಾಷೆ ಮತ್ತು ಕನ್ನಡಲಿಪಿ ಮತ್ತು ಭಾಷೆಯಲ್ಲಿವೆ. ಕೆಲವು ಶಾಸನಗಳು ತಮಿಳು ಭಾಷೆ ಮತ್ತು ಕನ್ನಡ ಲಿಪಿಯಲ್ಲಿರುವುದೂ ಉಂಟು. ಅನಂತಪುರ ಜಿಲ್ಲೆಯ ಕೊತ್ತ ಶಿವರದಲ್ಲಿರುವ, 1ನೆಯ ರಾಜೇಂದ್ರನ ಕಾಲದ, ತಮಿಳು ಶಾಸನವೊಂದು ಕನ್ನಡ ಲಿಪಿಯಲ್ಲಿದೆ. ವೆಂಗಿನಾಡಿನಲ್ಲೂ ಚೋಳರ ಹಲವು ಶಾಸನಗಳುಂಟು. ಆದರೆ ಅಲ್ಲಿ ಹಾಕಿಸಿದ ಹೆಚ್ಚು ಶಾಸನಗಳು ತಮಿಳಿನವು. ಕೋಲಾರದ ಕೋಲಾರಮ್ಮನ ದೇವಾಲಯದ ಗೋಡೆಯ ಮೇಲೆ ತಮಿಳು ಶಾಸನಗಳು ತುಂಬಿವೆ.

ಒಂದನೆಯ ರಾಜರಾಜನ 20ನೆಯ ವರ್ಷದ ಶಾಸನ, ಮೇಲ್ಪಾಡಿ

ರಾಜರ ವಂಶಾವಳಿಯನ್ನು ಕೊಟ್ಟು ಆಯಾ ರಾಜರ ಕಾಲದಲ್ಲಿ ನಡೆದ ಕೆಲವು ಘಟನೆಗಳನ್ನು ತಿಳಿಸುವುದು ರಾಜರಾಜನ ಕಾಲದವರೆಗಿನ ಪದ್ಧತಿಯಾಗಿತ್ತು. ಆದರೆ ರಾಜರಾಜ ತನ್ನ ಶಿಲಾಶಾಸನಗಳಲ್ಲಿ ತನ್ನ ಆಡಳಿತ ಕಾಲದಲ್ಲಿ ಆಯಾ ವರ್ಷ ನಡೆದ ಮುಖ್ಯ ಘಟನೆಗಳನ್ನು ಒಂದು ಗೊತ್ತಾದ ರೀತಿಯಲ್ಲಿ ವರ್ಣಿಸುವ ಪದ್ಧತಿಯನ್ನು ಅನುಷ್ಠಾನಕ್ಕೆ ತಂದ. ಕಾಲ ಕಳೆದಂತೆ ಆ ವರ್ಣನೆಯ ಜೊತೆಗೆ ಹೊಸ ಹೊಸ ಘಟನೆಗಳನ್ನೂ ವರ್ಣನೆಯನ್ನೂ



ಒಂದನೆಯ ಪರಾಂತಕನ 20ನೆಯ ವರ್ಷದ ಶಾಸನ, ಎರುಬೂರ್

ಸೇರಿಸುತ್ತ ಹೋಗುವ ಪದ್ಧತಿ ಬೆಳೆಯಿತು. ಇದರಿಂದ ಅವನ ಕಾಲದಲ್ಲಿ ನಡೆದ ಮುಖ್ಯ ಘಟನೆಗಳ ಅನುಕ್ರಮಣಿಕೆಯನ್ನು ತಿಳಿಯಲು ಅನುಕೂಲವಾಗಿದೆ. ಇದೇ ಪದ್ಧತಿಯನ್ನೇ ರಾಜರಾಜನ ಅನಂತರ ಬಂದ ರಾಜರೂ ಅನುಸರಿಸಿದರು. ಹೀಗೆ ಒಬ್ಬೊಬ್ಬ ರಾಜನೂ ತನ್ನ ಮೈ, ಕೀರ್ತಿ ಅಥವಾ ಪ್ರಶಸ್ತಿಯನ್ನು ಒಂದು ಗೊತ್ತಾದ ರೀತಿಯಲ್ಲಿ ಆರಂಭಿಸಿರುವುದನ್ನು ಕಾಣಬಹುದು. ರಾಜರಾಜನ ಪ್ರಶಸ್ತಿ ತಿರುಮಗಳ್ ಪೋಲ ಎಂದು ಆರಂಭವಾದರೆ, ರಾಜೇಂದ್ರನ ಪ್ರಶಸ್ತಿ ಆರಂಭವಾಗುವುದು ತಿರುಮಣ್ಣಿವಳರ ಎಂದು. ರಾಜೇಂದ್ರನ ಚಿಕ್ಕ ಶಾಸನಗಳಲ್ಲಿ ಪೂರ್ವ ದೇಶಮುಂ ಗಂಗೆಯುಂ ಕಡಾರಮುಂ ಕೊಣ್ಣಕೋಪರ ಕೇಸರಿ, ಪನ್ಮರಾನ–ಎಂದು ಮಾತ್ರ ಇರುತ್ತದೆ. ಇದೇ ರೀತಿ ಒಂದನೆಯ ರಾಜಾಧಿರಾಜನ ಶಾಸನಗಳು ತಿಙ್ಗಳೇರ್ತರು ಎಂದೂ ಇಮ್ಮಡಿ ರಾಜೇಂದ್ರನ ಶಾಸನಗಳು ತಿರುಮಾಡು ಪುವಿಯೆನುಂ ಎಂದೂ ವೀರರಾಜೇಂದ್ರನವು ತಿರುವಳರ್ ತಿರುಳ್ ಪುಯತ್ತು ಎಂದೂ ಆರಂಭವಾಗಿ ಅವರವರ ಸಾಧನೆಗಳನ್ನು ವರ್ಣಿಸುತ್ತವೆ.

ಚೋಳರ ಶಾಸನಗಳ ವಿಷಯಗಳು ಹೆಚ್ಚು ವೈವಿಧ್ಯಮಯ. ದತ್ತಿಶಾಸನಗಳೇ ಸಾಮಾನ್ಯ ಆದರೆ ಚಾರಿತ್ರಿಕ ವಿಷಯಗಳನ್ನು ಮಾತ್ರ ತಿಳಿಸುವ ಶಾಸನಗಳೂ ಇಲ್ಲದಿಲ್ಲ. ರಾಜರಾಜ ಪಾಂಡ್ಯರಿಂದ ಸೋತು ಓಡಿಹೋದದ್ದನ್ನೂ ಅನಂತರ ಹೊಯ್ಸಳ ವೀರ ಬಲ್ಲಾಳನ ನೆರವಿನಿಂದ ರಾಜ್ಯಕ್ಕೆ ಹಿಂದಿರುಗಿದ್ದನ್ನೂ ತಿರುವೇಂಡಿಪುರದಲ್ಲಿರುವ ಮುಮ್ಮಡಿ ರಾಜರಾಜನ ಕಾಲದ ಇಂಥ ಒಂದು ಶಾಸನ ನೇರವಾಗಿ ತಿಳಿಸುತ್ತದೆ. ಕಲಿಯೂರಿನಲ್ಲಿರುವ ಅಪ್ರಮೇಯನ ಶಾಸನ, ಅವನು ಕನ್ನಡನಾಡಿನ ಹಲವು ರಾಜಮನೆತನಗಳನ್ನು ಒಟ್ಟಾಗಿ ಎದುರಿಸಿ ಸೋಲಿಸಿದುದನ್ನು ವರ್ಣಿಸುವ ಒಂದು ಜಯಸ್ತಂಭ. ತಿರುವಾಲೀಶ್ವರದ ಅಪರೂಪ ಶಾಸನವೊಂದು, ಮೂನ್ರುಕೈ ಮಹಾ ಸೇನೈ ಎಂಬ ಒಂದು ಸೈನ್ಯದ ತುಕಡಿಯ ಸಾಹಸ; ಅದು ನಡೆಸಿದ ಯುದ್ಧಗಳು, ಗೆದ್ದ ಗೆಲುವುಗಳು–ಇವನ್ನು ಇದು ವಿವರಿಸುತ್ತದೆ. ಒಂದನೆಯ ಪರಾಂತಕನ ಕಾಲದ ಉತ್ತರ ಮೇರೂರಿನ ಎರಡು ಶಾಸನಗಳು ಗ್ರಾಮಸಭೆಗೆ, ವಾರಿಯಂಗಳಿಗೆ ಕುಡುವೋಲೈ ಮೂಲಕ ನಡೆಸುವ ಚುನಾವಣೆಯ ಬಗ್ಗೆ ವಿವರವಾದ ತಿಳುವಳಿಕೆಯನ್ನು ಕೊಡುವುವಲ್ಲದೆ, ಚುನಾವಣೆಗೆ ನಿಲ್ಲಬೇಕಾದವರ ಅರ್ಹತೆಗಳೇನಿರ ಬೇಕೆಂಬುದನ್ನೂ ನಿಗದಿಪಡಿಸುತ್ತವೆ. ಮಧುರಾಂತಕ ಉತ್ತಮ ಚೋಳನ 14ನೆಯ ವರ್ಷಕ್ಕೆ ಸೇರಿದ ತಿರುಮಲಾಪುರದ ಒಂದು ಶಾಸನ ಮೂರು ವರ್ಷಗಳಷ್ಟು ಕಾಲ ನಡೆದ ವ್ಯವಹಾರವೊಂದನ್ನು ವಿವರಿಸುತ್ತದೆ. ಒಂದನೆಯ ಆದಿತ್ಯನ ಕಾಲದಲ್ಲಿ ಶೆಟ್ರಿಯೂರನ್ನು ದೇವದಾನವಾಗಿ ಪುದುಪ್ಪಾಕ್ಕಂ ಸಭೆಯ ವಶಕ್ಕೆ ಬಿಟ್ಟಿತು. ಆದರೆ ಶಾಸನ ಹಾಕಿಸಿದ್ದರೂ ಅದು ಕಡತಗಳಲ್ಲಿ ಸೇರಿದ್ದುದರಿಂದ ದೇವಾಲಯಕ್ಕೆ ಅದರ ಉತ್ಪತ್ತಿ ತಲುಪುತ್ತಿರಲಿಲ್ಲ. ಒಂದನೆಯ ಪರಾಂತಕನ ಕಾಲದಲ್ಲಿ 4ನೆಯ ವರ್ಷದಲ್ಲಿ ಈ ತಪ್ಪನ್ನು ಸರಿಪಡಿಸಿದ ಮೇಲೆ ಪುದುಪ್ಪಾಕ್ಕಂ ಸಭೆ ದೇವಾಲಯಕ್ಕೆ ಅಲ್ಲಿಯ ಉತ್ಪತ್ತಿಯನ್ನು ಕೊಡಲಾರಂಭಿಸಿತು. ಪರಾಂತಕನ ಆಳ್ವಿಕೆಯ ಮೂವತ್ತಾರನೆಯ ವರ್ಷದಲ್ಲಿ ಮತ್ತೊಂದು ದತ್ತಿ ಬಿಟ್ಟುದರಿಂದ ಅದೂ ಸೇರಿದಂತೆ ಹೆಚ್ಚಿನ ವರಮಾನವನ್ನು ಆ ಸಭೆ ದೇವಸ್ಥಾನಕ್ಕೆ ಕೊಡಬೇಕಾಗಿತ್ತು. ಹಾಗೆ ಕೊಡದೆ ಹೆಚ್ಚಿನ ಬಾಕಿಯನ್ನು ಸಭೆ ಉಳಿಸಿಕೊಂಡಿತು. ಉತ್ತಮ ಚೋಳನ ಕಾಲದಲ್ಲಿ ದೇವಸ್ಥಾನದ ಅಧಿಕಾರಿಗಳು ರಾಜನಲ್ಲಿ ದೂರಿತ್ತಾಗ ರಾಜ ಅದನ್ನು ಸರಿಪಡಿಸಿ ಆಜ್ಞೆ ಹೊರಡಿಸಿದ. ಕಿಲಿಯ್ಯೂರಿನ ಮತ್ತೊಂದು ಶಾಸನ, ಮುಮ್ಮಡಿ ಕುಲೋತ್ತುಂಗನ ಕಾಲಕ್ಕೆ ಸೇರಿದ್ದು. ಅದರಲ್ಲಿ ನ್ಯಾಯನಿರ್ವಹಣೆಯ ವಿಷಯವಿದೆ. ಆ ಊರಿನ ಇಬ್ಬರು ಜಗಳವಾಡಿ ಊರಿಗೆ ತೊಂದರೆ ಕೊಟ್ಟದ್ದರಿಂದ ಅವರನ್ನು ವಿಚಾರಣೆಗೆ ಗುರಿಪಡಿಸಿ ರಾಜಾಜ್ಞೆಯ ಮೇರೆಗೆ ಸಾವಿರ ಕಾಶು ದಂಡ ಹಾಕಲಾಯಿತು. ಅವರ ನೆರವಿಗೆ ಯಾರೂ ಬಾರದಿರಲು ಅವರ ಆಸ್ತಿಯನ್ನು ಸಾವಿರದರುವತ್ತು ಕಾಶುಗಳಿಗೆ ಮಾರಿ ದಂಡವನ್ನು ಉತ್ತಾರ ಹಾಕಿಕೊಂಡದ್ದಲ್ಲದೆ ಅದನ್ನು ಕೊಡಲು ತಡಮಾಡಿದ್ದಕ್ಕಾಗಿ ಹೆಚ್ಚಿಗೆ ಬಂದ ಅರುವತ್ತು ಕಾಶುಗಳನ್ನೂ ದಂಡವನ್ನಾಗಿ ಪರಿಗಣಿಸಲಾಯಿತು. ಗ್ರಾಮಾಡಳಿತಕ್ಕೆ, ನ್ಯಾಯನಿರ್ವಹಣೆಗೆ, ಸಂಘ ಸಮುದಾಯಗಳಿಗೆ ಸಂಬಂಧಿಸಿದ ವಿವರಗಳನ್ನು ಕೊಡುವ ಶಾಸನಗಳಿರುವಂತೆ, ದೇವಾಲಯಗಳ ಆಡಳಿತಕ್ಕೆ ಸಂಬಂಧಿಸಿದ ಪರಿಚಯ ನೀಡುವ ಹಲವು ಶಾಸನಗಳಿವೆ. ತಂಜಾವೂರಿನ ಬೃಹದೀಶ್ವರ ದೇವಾಲಯದ ಮೇಲಿರುವ ಶಾಸನದಲ್ಲಿ ರಾಜರಾಜ ಆ ದೇವಾಲಯವನ್ನು ನಿರ್ಮಿಸಿದ್ದನ್ನೂ, ರಾಜರಾಜೇಶ್ವರ ದೇವರ ಪ್ರತಿಷ್ಠೆ ಮಾಡಿದ್ದನ್ನೂ ಅವನೂ ಅವನ ಸೋದರಿ ಕುಂದವ್ವೆಯೂ ಅಧಿಕಾರಿಗಳೂ ದಂಡನಾಯಕರೂ

ಅಗಸ್ತ್ಯೇಶ್ವರ ದೇವಾಲಯದ ಗೋಡೆಯ ಮೇಲಿನ ರಾಜಕೇಸರಿವರ್ಮನ 22ನೆಯ ವರ್ಷದ ಶಾಸನ

ದೇವರಿಗೆ ಮಾಡಿದ ದಾನಗಳನ್ನೂ ಸಂಪೂರ್ಣವಾದ ವಿವರಗಳೊಡನೆ ನೀಡಲಾಗಿದೆ. ನೂರಾರು ಆಭರಣಗಳ ಹೆಸರು, ತೂಕ, ಬೆಲೆ–ಎಲ್ಲವೂ ಅದರಲ್ಲಿವೆ. ರಾಜರಾಜ ಯುದ್ಧದಲ್ಲಿ ದೋಚಿ ತಂದ ಐಶ್ವರ್ಯದ ಬಹುಭಾಗ ಇದರಲ್ಲಿ ಸೇರಿತ್ತು. ಚಿನ್ನವೇ 41,500 ಕಟಂಜುಗಳಷ್ಟಿತ್ತು. 10,200 ಕಾಶುಗಳ ಬೆಲೆಯ ಒಡವೆಗಳಿದ್ದುವು. ಅವನು 50,650 ಕಟಂಜುಗಳ ತೂಕದ ಬೆಳ್ಳಿಯನ್ನು ದೇವಾಲಯಕ್ಕೆ ಕೊಟ್ಟ; ಸಾಮ್ರಾಜ್ಯದ ನಾನಾ ಭಾಗಗಳಲ್ಲಿ ಅನೇಕ ಹಳ್ಳಿಗಳನ್ನೂ ಭೂಮಿಗಳನ್ನೂ ದತ್ತಿ ಬಿಟ್ಟಿದ್ದ. ಇದರಿಂದ 1,16,000 ಕಲಂ ಬತ್ತದ ಆದಾಯವಿತ್ತು; ದೇವಸ್ಥಾನದ ಆಡಳಿತವರ್ಗದಲ್ಲಿ 400 ಜನರಿದ್ದರು. ಆಸ್ಪತ್ರೆಗಳನ್ನೂ ವಿದ್ಯಾಶಾಲೆಗಳನ್ನೂ ನಡೆಸಲು ಬಿಟ್ಟಿದ್ದ ದತ್ತಿಗಳ ವಿವರಗಳೂ ಇವೆ. ಒಂದನೆಯ ರಾಜೇಂದ್ರನ ಎಣ್ಣಾಯಿರಂ ಶಾಸನದಲ್ಲಿ ಶಾಲೆಗಳ, ಶಾಲಾಭೋಗಗಳ ವಿವರಗಳನ್ನಿತ್ತಿದೆ. 270

ಬ್ರಹ್ಮಚಾರಿಗಳು, 70 ಶಾತ್ತಿರಾರ್‌ಗಳು ಮತ್ತು 14 ಪ್ರಾಧ್ಯಾಪಕರಿಗೆ ಅಲ್ಲಿ ಊಟ, ವಾಸ ಮತ್ತು ವಿದ್ಯಾಭ್ಯಾಸಕ್ಕೆ ಅವಕಾಶಮಾಡಿಕೊಡಲಾಗಿತ್ತು. ಹೀಗೆ ಚೋಳರ ಶಾಸನಗಳು ಇತರ ರಾಜವಂಶಗಳ ಶಾಸನಗಳಿಗಿಂತ ವಿಶಿಷ್ಟವಾಗಿದ್ದು, ಆ ಕಾಲದ ಆಡಳಿತ, ವಿದ್ಯಾಭ್ಯಾಸ, ಮತ, ಧರ್ಮ, ನ್ಯಾಯನಿರ್ವಹಣೆ, ಸಂಸ್ಕೃತಿ ಮುಂತಾದ ಹಲವು ವಿಷಯಗಳ ಮೇಲೆ ಅಮೂಲ್ಯವಾದ ಬೆಳಕನ್ನು ಚೆಲ್ಲುತ್ತವೆ.

**ನಾಣ್ಯಗಳು :** ಈಗ ದೊರೆತಿರುವ ಚೋಳರ ನಾಣ್ಯಗಳ ಸಂಖ್ಯೆ ಹೆಚ್ಚಿಲ್ಲ. ಅವರ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳು ದೊರೆತಿದ್ದರೂ ಮೊದಲಿನ ಚಕ್ರವರ್ತಿಗಳು ಹಾಕಿಸಿದ್ದ ಶುದ್ಧ ಚಿನ್ನದ ನಾಣ್ಯಗಳು ದೊರೆತಿರುವುದು ವಿರಳ. ಮುಂದಿನ ಚೋಳರಾಜರು ಬೇರೆ ಲೋಹಗಳನ್ನು ಬೆರೆಸಿ ಅಚ್ಚು ಹಾಕಿಸಿದ್ದ ಅಶುದ್ಧ ಚಿನ್ನದ ನಾಣ್ಯಗಳಲ್ಲಿ ಅವು ಸೇರಿಹೋಗಿರಬೇಕು, ಇಲ್ಲವೇ, ಈಚೆಗೆ ದೊರೆತ ಈ ನಾಣ್ಯಗಳ ಬಹುಭಾಗ ಕರಗಿ ಚಿನ್ನವಾಗಿ ಮಾರ್ಪಟ್ಟಿರಬೇಕು.

ಉತ್ತಮ ಚೋಳ ಪರಾಕೇಸರಿಯ ನಾಣ್ಯಗಳೇ ಈಗ ದೊರೆತಿರುವ ನಾಣ್ಯಗಳಲ್ಲಿ ಪ್ರಾಚೀನವಾದವು. ಇವನ ಬೆಳ್ಳಿಯ ನಾಣ್ಯ 62 ಗುಂಜಿ ತೂಕವಿದೆ. ಮುಂಬದಿಯಲ್ಲಿ ಮೇಲೆ ಛತ್ರ. ಅದರ ಇಕ್ಕೆಲಗಳಲ್ಲಿ ಚಾಮರಗಳು, ಕೆಳಗೆ ಅತ್ತ ಇತ್ತ ದೀಪದ ಕಂಬಗಳು, ನಡುವೆ ಅನುಕ್ರಮವಾಗಿ ಬಿಲ್ಲು, ಮುಂಗಾಲುಗಳನ್ನೂರಿ ಕುಳಿತ ಹುಲಿ ಮತ್ತು ಜೋಡಿ ಮೀನುಗಳು; ಹಿಂಬದಿಯಲ್ಲಿ ಸುತ್ತಲೂ ಚುಕ್ಕೆಗಳು, ನಡುವೆ ನಾಗರಿಯಲ್ಲಿ, ಉತ್ತಮ ಚೋಳಃ ಎಂಬ ಅಂಕನ. ಬಿಲ್ಲು ಮತ್ತು ಜೋಡಿ ಮೀನುಗಳು ಚೇರ ಮತ್ತು ಪಾಂಡ್ಯರನ್ನು ಇವನು ಗೆದ್ದುದರ ಕುರುಹು. ಹುಲಿ ಚೋಳರ ಲಾಂಛನ. ಈ ಉಪಲಬ್ಧವಿಲ್ಲದ ಚಿನ್ನದ ನಾಣ್ಯವೊಂದನ್ನು ಇಲಿಯಟ್ ಪ್ರಕಟಿಸಿದ್ದಾರೆ. ಅದರ ತೂಕ 50–60 ಗುಂಜಿ. ಅದರ ಎರಡು ಬದಿಗಳಲ್ಲೂ ಮೀನು ಮತ್ತು ಹುಲಿ, ಅವುಗಳ ಸುತ್ತಲೂ ಉತ್ತಮ ಶೋವಿನ್ ಎಂಬ ಅಂಕನ ಇವೆ. ಇದರಿಂದ ಚೋಳರು ದಕ್ಷಿಣ ಭಾರತದಲ್ಲಿ ಆಗ ಪ್ರಚಾರದಲ್ಲಿದ್ದ, ಸರಾಸರಿ 58 ಗುಂಜಿ ತೂಕದ ಗದ್ಯಾಣ ಅಥವಾ ಕಟಂಜನ್ನು ಮೊದಲು ತಮ್ಮ ನಾಣ್ಯವಾಗಿ ಬಳಸಿದಂತೆ ಕಂಡುಬರುತ್ತದೆ. ಮುಂದೆ ಅವರು 20 ಮಂಜಾಳಿಗಳ ಕಟಂಜನ್ನು–72ರಿಂದ 80 ಗುಂಜಿ ವರೆಗಿನ ತೂಕದ ನಾಣ್ಯಗಳನ್ನು ಬಳಕೆಗೆ ತಂದರು. ಆದರೆ ಅದು ಬಳಕೆಗೆ ಬಂದುದು ಯಾವಾಗ ಎನ್ನುವುದು ತಿಳಿಯದು. ಒಂದನೆಯ ಪರಾಂತಕನ 30ನೆಯ ವರ್ಷದ ಶಾಸನವೊಂದರಲ್ಲಿ ಈ ತೂಕವನ್ನು ಸೂಚಿಸುವ ನಿಷ್ಕದ ಹೆಸರಿಸಿದೆ. ಮಧುರಾಂತಕದೇವನ್ ಮಾಡೈ ಎಂಬ ನಾಣ್ಯದ ಹೆಸರು ಒಂದನೆಯ ರಾಜರಾಜನ ಶಾಸನವೊಂದರಲ್ಲಿದೆ. ಇದು ಬಹುಶಃ ಮಧುರಾಂತಕ ಉತ್ತಮ ಚೋಳನ ನಾಣ್ಯವಾಗಿದ್ದಿರಬೇಕು. ರಾಜರಾಜನ ಕಾಲದ ರಾಜರಾಜನ್ ಕಾಶು ಈ ಮಾಡೈನ ಅರ್ಧದಷ್ಟಿದೆ.

ರಾಜರಾಜನ ಬೆಳ್ಳಿ ನಾಣ್ಯದ ಮುಂಬದಿ ಉತ್ತಮ ಚೋಳನ ನಾಣ್ಯದ್ದರಂತೆಯೇ ಇದೆ; ಅದರ ಮೇಲೆ ನಾಗರೀಲಿಪಿಯಲ್ಲಿ ರಾಜರಾಜ ಎಂಬ ಅಂಕನವಿದೆ. ಅದರ ಹಿಂಬದಿಯಲ್ಲಿ ಸುಖಾಸೀನನಾಗಿ ಕುಳಿತ ರಾಜನ ಅಂಕನ. ರಾಜರಾಜನ ಚಿನ್ನದ ನಾಣ್ಯವೊಂದರ ಮುಂಬದಿಯಲ್ಲಿ ರಾಜನನ್ನು ನಿಂತಿರುವಂತೆ ತೋರಿಸಲಾಗಿದೆ. ಅವನ ಕಾಲಿನ ಬಳಿ ಎಡಕ್ಕೆ ಕಮಲದ ಬಳ್ಳಿ ಮತ್ತು ಶಂಖ, ಬಲಕ್ಕೆ ಸೂರ್ಯನ ಚಿಹ್ನೆ ಇವೆ. ಹಿಂಬದಿಯಲ್ಲಿ ರಾಜನನ್ನು ಕುಳಿತಂತೆ ತೋರಿಸಿದೆ. ಬಲಕ್ಕೆ ಶ್ರೀ ರಾಜರಾಜ ಎಂಬ ಹೆಸರಿದೆ. ಈ ಬಗೆಯ ನಾಣ್ಯಗಳನ್ನು ಸಿಂಹಳದ ನಾಣ್ಯಗಳ ಮಾದರಿಯನ್ನನುಸರಿಸಿ ಅಚ್ಚು ಹಾಕಿಸಿದಂತೆ ತೋರುತ್ತದೆ. ಪಾಂಡ್ಯನಾಡನ್ನು ಗೆದ್ದ ಮೇಲೆ ಅಲ್ಲಿ ಪ್ರಚಾರದಲ್ಲಿದ್ದ ಸಿಂಹಳ ರೀತಿಯ ನಾಣ್ಯಗಳನ್ನನುಸರಿಸಿ ಈ ರಾಜರು ತಮ್ಮ ನಾಣ್ಯಗಳನ್ನು ಹಾಕಿಸಿ ಆ ಪ್ರಾಂತ್ಯದಲ್ಲಿ ಚಲಾವಣೆಗೆ ತಂದಿರಬೇಕು. ರಾಜರಾಜನ ಸಿಂಹಳದ ರೀತಿಯ ನಾಣ್ಯಗಳು ಶುದ್ಧ ಚಿನ್ನದವಾಗಿದ್ದರೂ ಅನಂತರ ಬಂದ ರಾಜರು ಇಂಥ ನಾಣ್ಯಗಳಲ್ಲಿ ಬೆರಕೆಯ ಲೋಹ ಉಪಯೋಗಿಸಿರುವುದು ಕಂಡುಬರುತ್ತದೆ. ಲಂಕವೀರ ಎಂಬ ಅಂಕನವುಳ್ಳ ಕೆಲವು ನಾಣ್ಯಗಳು ರಾಜರಾಜನು ಸಿಂಹಳವನ್ನು ಗೆದ್ದ ಮೇಲೆ ಹಾಕಿಸಿರುವ ನಾಣ್ಯಗಳಾಗಿರಬೇಕು. ಒಂದನೆಯ ರಾಜೇಂದ್ರನ ನಾಣ್ಯಗಳಲ್ಲಿರುವಂತೆ ಛತ್ರಚಾಮರಾದಿ ಚಿಹ್ನೆಗಳೂ ನಾಗರೀಲಿಪಿಯಲ್ಲಿ ಶ್ರೀ ರಾಜೇಂದ್ರಃ ಅಥವಾ ಗಂಗೈಕೊಂಡ ಚೋಳಃ ಎಂಬ ಬರಹವೂ ಇರುತ್ತವೆ. ಧವಳೇಶ್ವರ ಎಂಬಲ್ಲಿ ದೊರೆತ, ಇವನ ನಾಣ್ಯಗಳಲ್ಲಿ ತಮಿಳು ಗ್ರಂಥಾಕ್ಷರಗಳಲ್ಲಿ ಗಂಗೈಕೊಂಡ ಚೋಳನ್ ಎಂದಿದೆ; ಇವನ ಆಳ್ವಿಕೆಯ ವರ್ಷವನ್ನೂ ಸೂಚಿಸಿದೆ. ಅದೇ ಗುಂಪಿನ ನಾಣ್ಯಗಳ ಪೈಕಿ ದೊರೆತ ಮಲನಾಡು ಕೊಂಡಚೋಳನ್ ಎಂಬ ಅಂಕನವುಳ್ಳ ನಾಣ್ಯಗಳು ಒಂದನೆಯ ರಾಜಾಧಿರಾಜನ ಕಾಲಕ್ಕೆ ಸೇರಿದವು. ವಿಕ್ರಮಚೋಳನ ಕಾಲದಿಂದೀಚೆಗೆ ಚೋಳರ ನಾಣ್ಯಗಳಲ್ಲಿ ಗೂಳಿಯ ಚಿಹ್ನೆಯನ್ನು ಕಾಣಬಹುದು. ಗೂಳಿಯ ಜೊತೆಗೆ ಕತ್ತಿಯೋ ಶಂಖವೋ ತ್ರಿಶೂಲವೋ ಇರುತ್ತದೆ. ಮುಮ್ಮಡಿ ಕುಲೋತ್ತುಂಗನ ನಾಣ್ಯಗಳಲ್ಲಿಯ ಅಂಕನ ಕೋನೇರಿರಾಯನ್ ಎಂಬುದು. ಜೋಡಿ ಕುದುರೆ ಸವಾರರದೋ ಕುದುರೆಯನ್ನೇರಿದ ರಾಜನದೋ ಚಿಹ್ನೆಯಿದ್ದು ರಾಜರಾಜ ಎಂಬ ಅಂಕನವಿರುವ ನಾಣ್ಯಗಳು ಬಹುಶಃ ಮುಮ್ಮಡಿ ರಾಜನದಿರಬೇಕು. ಮುಮ್ಮಡಿ ಕುಲೋತ್ತುಂಗನ ಕಾಲದಿಂದ ಕಡಿಮೆ ಬೆಲೆಯ ತಾಮ್ರದ ನಾಣ್ಯಗಳಿಗೂ ಕಾಶು ಎಂಬ ಹೆಸರು ಬಂತು. ಇವಲ್ಲದೆ ಒಂದನೆಯ ಕುಲೋತ್ತುಂಗನ ಅನಂತರ ಹಲವು ಚೋಳ ಸಾಮಂತರು ನಾಣ್ಯಗಳನ್ನು ಅಚ್ಚು ಹಾಕಿಸಿದ್ದಾರೆ. ಶಾಸನಗಳಲ್ಲಿ ಬರುವ ಜಯಮಾಡ, ಉತ್ತಮಗಂಡಮಾಡ, ಬಿರುದಮಾಡ, ನಕ್ಕಿಮಾಡ, ಗಂಡಗೋಪಾಲಮಾಡ ಮೊದಲಾದವು ಈ ಗುಂಪಿಗೆ ಸೇರಿದವು. (ಎಂ.ಎಚ್.)

**ಚೌಂಡರಸ :** ಸು. 1250. ಕನ್ನಡದಲ್ಲಿ ಅಭಿನವ ದಶಕುಮಾರಚರಿತೆ ಹಾಗೂ ನಳಚಂಪೂ ಎಂಬ ಗ್ರಂಥಗಳನ್ನು ಬರೆದ ಕವಿ. ಪಂಪರನ್ನಾದಿ ಜೈನ ಕವಿಗಳು ಹಾಕಿದ ಚಂಪೂ ಕಾವ್ಯದ ಹೆದ್ದಾರಿಯಲ್ಲಿ ನಡೆದ ಪ್ರಮುಖ ಬ್ರಾಹ್ಮಣ ಕವಿಗಳಲ್ಲಿ ಒಬ್ಬ. ಈತನು ತನ್ನ ಕಾವ್ಯದಲ್ಲಿ ಪಂಪ, ಪೊನ್ನ, ರುದ್ರಭಟ್ಟರನ್ನು ಹೊಗಳಿರುವನಾದರೂ ಕಾವ್ಯವಸ್ತುವಿನ ದೃಷ್ಟಿಯಿಂದ, ಈ ಕವಿ ಕಾದಂಬರಿಯ ನಾಗವರ್ಮ, ಲೀಲಾವತಿಯ ನೇಮಿಚಂದ್ರ, ಕುಸುಮಾವಳಿಯ ದೇವಕವಿ ಇವರ ಸಾಲಿನಲ್ಲಿ ನಿಲ್ಲುತ್ತಾನೆ. ನಾಗವರ್ಮ ಬಾಣನ ಸಂಸ್ಕೃತ ಗದ್ಯಕಾವ್ಯವನ್ನು ಚಂಪೂ ರೂಪಕ್ಕೆ ತಿರುಗಿಸಿದ್ದರೆ ಈತ ದಂಡಿಯ ಸಂಸ್ಕೃತ ಗದ್ಯಕಾವ್ಯವಾದ ದಶಕುಮಾರಚರಿತಕ್ಕೆ ಚಂಪೂ ರೂಪವನ್ನು ಕೊಟ್ಟಿದ್ದಾನೆ. ರುದ್ರಭಟ್ಟನಿಗಿಂತ ಈಚಿನವನಾದ ಈತನ ಕಾಲವನ್ನು 13ನೆಯ ಶತಮಾನದ ಉತ್ತರಾರ್ಧ ಎಂದು ಇಟ್ಟುಕೊಳ್ಳಬಹುದು. ಸುಮಾರು ಇದೇ ಕಾಲದಲ್ಲಿ ತೆಲುಗಿನಲ್ಲಿಯೂ ಒಂದು ದಶಕುಮಾರಚರಿತ ರಚಿತವಾಗಿರುವುದು ಗಮನಾರ್ಹ. ಬಾಣಾಸುರ ವಿಜಯಂ ಕಲ್ಯಾಣ ನಳಖ್ಯಾತಿ ದಶಕುಮಾರ ಚರಿತ್ರಂ....ಇವು ಚೌಂಡರಾಜ ಕೃತಿಗಳ್ ಎಂದು ನಳಚಂಪುವಿನಲ್ಲಿ ಹೇಳಿಕೊಂಡಿರುವ ಪ್ರಕಾರ ಬಾಣಾಸುರ ವಿಜಯವೆಂಬ ಕೃತಿಯೂ ಈತನದಿರಬಹುದೆಂದು ಊಹಿಸಲಾಗಿದೆ. ಆದರೆ ಈ ಕೃತಿ ಈಗ ಉಪಲಬ್ಧವಿಲ್ಲ.

ಚೌಂಡರಸ ಭರದ್ವಾಜ ಗೋತ್ರದವನೆಂದು, ತಂದೆ ವರ ಮಧುಸೂದನ, ತಾಯಿ ಮಲ್ಲವ್ವೆ, ಅಣ್ಣ ಸರಸ ಕವೀಶ್ವರ, ಹೆಂಡತಿ ಲಕ್ಷ್ಮಿ ಎಂದು ಈತನ ಕಾವ್ಯಗಳ ಪೀಠಿಕೆಗಳಿಂದ ತಿಳಿದುಬರುತ್ತದೆ. ಕಾವ್ಯಾರಂಭದಲ್ಲಿ 'ಪಂಡರೀರಾಯನಭಂಗ ವಿಟ್ಠಲ'ನನ್ನು ಈತ ಸ್ತುತಿಸಿರುವುದರಿಂದ, ಪಂಡರಾಪುರದ ವಿಟ್ಠಲ ಈತನ ಇಷ್ಟದೈವ ಹಾಗೂ ಪಂಡರಾಪುರ ಈತನ ಜನ್ಮಸ್ಥಳವೋ ವಾಸಸ್ಥಳವೋ ಆಗಿದ್ದಿರಬಹುದು. ಕವಿತಾ ವಿಲಾಸ, ಕವಿರಾಜಶೇಖರ ಎಂಬವು ಈತನ ಬಿರುದುಗಳು.

ದಶಕುಮಾರಚರಿತೆ ಶೃಂಗಾರ ವೀರ ಅದ್ಭುತ ರಸಗಳಿಂದ ಕೂಡಿದ, ಕೌತುಕಕಾರಿಗಳಾದ ಸಣ್ಣ ಕಥೆಗಳನ್ನು ಒಳಗೊಂಡ ಒಂದು ಅದ್ಭುತರಮ್ಯ ಕಾಲ್ಪನಿಕ ಕಥೆ. ಹೆಸರೇ ತಿಳಿಸುವಂತೆ, ಹತ್ತು ಮಂದಿ ರಾಜಕುಮಾರರ ಕಥೆ ಇದು. ರಾಜಹಂಸ ಮಗಧ ದೇಶದ ಅರಸು. ವಸುಮತಿ ಅವನ ಹೆಂಡತಿ. ಅವನಿಗೆ ಏಳು ಮಂದಿ ಸಚಿವರು, ರಾಜನ ಮಗ ಒಬ್ಬ. ಸಚಿವರ ಮಕ್ಕಳು ಏಳು ಮಂದಿ. ಮಿಥಿಲಾಪುರದ ಮಿತ್ರ ರಾಜನೊಬ್ಬನ ಇಬ್ಬರು ಮಕ್ಕಳು– ಹೀಗೆ ಒಟ್ಟು ದಶಕುಮಾರರು. ಇವರೆಲ್ಲರೂ ರಾಜಹಂಸ ವಸುಮತಿಯರ ಲಾಲನೆ ಪಾಲನೆಯ ಮಡಿಲಿಗೆ ಬಂದು ಬೀಳುವ ಪ್ರಸಂಗಗಳು ವಿಸ್ಮಯವಾಗಿವೆ. ಪ್ರತಿ ಪ್ರಸಂಗವೂ ಒಂದು ಚಿಕ್ಕ ಕಥೆ. ಇದಿಷ್ಟು ಕಾವ್ಯದ ಪೀಠಿಕಾಭಾಗ; ಕಾವ್ಯದ ಮುಖ್ಯ ಭಾಗದಲ್ಲಿ ದಶಕುಮಾರರ ಸಾಹಸಕಥಾ ವೃತ್ತಾಂತಗಳ ನಿರೂಪಣೆ ಹರಡಿಕೊಂಡಿದೆ; ಪ್ರತಿ ಕುಮಾರನೂ ತನ್ನ ವೃತ್ತಾಂತವನ್ನು ಇತರರಿಗೆ ಹೇಳಿಕೊಳ್ಳುವಂತೆ ಕಥಾಸಂವಿಧಾನದ ವಿನ್ಯಾಸವಾಗಿದೆ. ಪ್ರತಿಯೊಬ್ಬನೂ ರೋಮಾಂಚನಕಾರಿಯೂ ಅದ್ಭುತವೂ ಆದ ಸಾಹಸಕಾರ್ಯವೆಸಗಿ ಕಡೆಯಲ್ಲಿ ಒಬ್ಬ ಸುಂದರ ಕನ್ಯೆಯನ್ನು ವರಿಸುತ್ತಾನೆ. ಒಟ್ಟಿನಲ್ಲಿ ಚೌಂಡರಸ ಸಂಸ್ಕೃತಮೂಲದ ಜಾಡನ್ನು ಎಷ್ಟರಮಟ್ಟಿಗೆ ಯಥಾವತ್ತಾಗಿ ಅನುಸರಿಸಿರುವ ನೆಂದರೆ, ಮಂತ್ರಗುಪ್ತನೆಂಬ ಕುಮಾರನ ನಿರೋಷ್ಠ ಕಥಾವೃತ್ತಾಂತವನ್ನು ಕನ್ನಡದಲ್ಲಿಯೂ (ಬಹುಮಟ್ಟಿಗೆ) ನಿರೋಷ್ಠವಾಗಿಯೇ (ಎಂದರೆ 'ಪ' ವರ್ಗದ ಅಕ್ಷರಗಳನ್ನು ಬಿಟ್ಟು) ನಿರೂಪಿಸಿದ್ದಾನೆ. ಆದರೂ ಚೌಂಡರಸ ತನ್ನ ಅನುವಾದದಲ್ಲಿ ಅಲ್ಲಲ್ಲಿ ಸ್ವತಂತ್ರ ಕಲ್ಪನೆಗಳನ್ನೂ ವರ್ಣನೆಗಳನ್ನೂ ತಂದಿದ್ದಾನೆ. ಎಲ್ಲಕ್ಕಿಂತ ಮುಖ್ಯವಾಗಿ ಜಾರಚೋರರ ಕಥೆ ಎಂಬ ಆಕ್ಷೇಪಕ್ಕೆ ಗುರಿಯಾಗಬಹುದಾದ ಮೂಲಕೃತಿಗೆ ಧಾರ್ಮಿಕತೆಯ ಮೆರಗನ್ನು ಕೊಡಲು ಪ್ರಯತ್ನಿಸಿದ್ದಾನೆ. ವಿಷ್ಣು ಜಗದ್ವ್ಯಾಪಕನಾದ್ದರಿಂದ 'ಆವುದಂ ಬಣ್ಣಿಸಿದೊಡದು ಹರಿಸ್ತೋತ್ರಂ' ಎಂಬ ಘೋಷಣೆಯಿಂದ ಮಾತ್ರ ತೃಪ್ತನಾಗದೆ ವಿಶ್ರುತನೆಂಬ ಕುಮಾರನಿಂದ ಪಂಡರಾಪುರದ ಯಾತ್ರೆಯನ್ನೂ ವಿಟ್ಠಲಸ್ತುತಿಯನ್ನೂ ಮಾಡಿಸಿದ್ದಾನೆ. ಅಲ್ಲದೆ, ಮೂಲ ಗದ್ಯದ ಸರಳ ಕಥನಕ್ಕೆ ಅಲ್ಲಲ್ಲಿ ನಾಟಕೀಯತೆಯ ಕಳೆ ಕೊಟ್ಟಿದ್ದಾನೆ. ಈ ಕಾರಣಗಳಿಂದ, ಕನ್ನಡದ ಅನುವಾದಕ್ಕೆ ಅಭಿನವ ದಶಕುಮಾರ ಚರಿತೆ ಎಂಬ ಹೆಸರು ಉಚಿತವಾಗಿದೆ.

**ನಳಚಂಪೂ :** ಸಂಸ್ಕೃತ ಮಹಾಭಾರತದಲ್ಲಿರುವ ನಳೋಪಾಖ್ಯಾನ ಲೋಕಪ್ರಸಿದ್ಧವಾದ ಕಥೆ. ಚೌಂಡರಸ ಈ ಕಥೆಯನ್ನೇ ಬಹುಮಟ್ಟಿಗೆ ಅನುಸರಿಸಿ ಅಲ್ಲಲ್ಲಿ ಸಣ್ಣಪುಟ್ಟ ಮಾರ್ಪಾಟುಗಳನ್ನು ಮಾಡಿಕೊಂಡು, ತನ್ನ ಕಾವ್ಯವನ್ನು ರಚಿಸಿರುವಂತೆ ತೋರುತ್ತದೆ.

ಶ್ರೀಹರ್ಷನ ಸಂಸ್ಕೃತ ಕಾವ್ಯ ಪ್ರಭಾವವನ್ನೂ ಈ ಕೃತಿಯಲ್ಲಿ ಅಲ್ಲಲ್ಲಿ ಕಾಣಬಹುದು. ಇದು ಹೆಸರಿಗೆ ಚಂಪೂ ಕಾವ್ಯ; ಗದ್ಯಭಾಗ ಬಹು ಕಡಿಮೆ; ದಮಯಂತಿ ನಳನನ್ನು ವರಿಸಿ ಮದುವೆಯಾದುದರಲ್ಲಿಯೂ ಕಾಡಿನಲ್ಲಿ ಅಗಲಿದ ಅವರಿಬ್ಬರು ಪುನಃ ಸೇರಿ ಸುಖದಿಂದಿರುವುದರಲ್ಲಿಯೂ ಕವಿಗೆ ಹೆಚ್ಚು ಆಸಕ್ತಿ. ಇದೊಂದು ಕಲ್ಯಾಣ ನಳಖ್ಯಾತ ಪುಣ್ಯಚರಿತ್ರೆ. ಇಷ್ಟಾದರೂ, ಈ ಕೃತಿಯಲ್ಲಿ ಕಥಾಭಾಗಕ್ಕಿಂತ ವರ್ಣನಾಭಾಗಗಳ ಕಡೆಗೇ ಕವಿಯ ಒಲವು. ಇದರ ಪರಿಣಾಮವಾಗಿ ಕಥೆಯ ಸ್ವಾರಸ್ಯ ಕುಗ್ಗಿದೆ; ಪಾತ್ರಪೋಷಣೆಗೂ ರಸಪೋಷಣೆಗೂ ಇದ್ದ ಅವಕಾಶವನ್ನು ಕವಿ ಪೂರ್ತಿಯಾಗಿ ಉಪಯೋಗಿಸಿಕೊಂಡಿಲ್ಲ.

(ಎಂ.ವಿ.ಎಸ್.)

**ಚೌ ಎನ್‌–ಲೈ :** 1808–1976. ಚೀನ ಜನತಾ ಗಣರಾಜ್ಯದ ಪ್ರಧಾನಿ. ಚೀನೀ ಕಮ್ಯೂನಿಸ್ಟ್ ನಾಯಕರಲ್ಲೊಬ್ಬರು. ಜನನ 1898, ಜಿಯಾಂಗ್‌ಸೂ ಪ್ರಾಂತ್ಯದ ಹ್ವೆ–ಯಾನ್‌ನಲ್ಲಿ. ಟಿನ್‌ಟ್ಸಿನ್‌ನ ಅಮೆರಿಕನ್ ಮಿಷನರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಇವರು ಚಿಕ್ಕಂದಿನಲ್ಲೇ ಪಾಶ್ಚಾತ್ಯ ಸಾಮಾಜಿಕ ಸಿದ್ಧಾಂತಗಳ ಪ್ರಭಾವಕ್ಕೆ ಒಳಗಾದರು. 1919ರಲ್ಲಿ ಪೀಕಿಂಗಿನಲ್ಲಿ ಸರ್ಕಾರದ ವಿರುದ್ಧ ನಡೆದ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆಯಲ್ಲಿದ್ದರು. ಮುಂದಿನ ನಾಲ್ಕು ವರ್ಷ ಫ್ರಾನ್ಸ್, ಜರ್ಮನಿಗಳಲ್ಲಿ ಚೀನೀ ವಿದ್ಯಾರ್ಥಿಗಳ ಜೊತೆಗೆ ರಾಜಕೀಯ ಕಲಾಪಗಳಲ್ಲಿ ನಿರತರಾಗಿದ್ದರು. ಪ್ಯಾರಿಸಿನಲ್ಲಿ ಪ್ರಥಮ ಕಮ್ಯೂನಿಸ್ಟ್ ಯುವಜನ ಪಡೆಯ ಸ್ಥಾಪಕರಿವರು. ಬಹುಶಃ ಸ್ವಲ್ಪ ಕಾಲ ಮಾಸ್ಕೋದಲ್ಲೂ ಇದ್ದು, ಕ್ರಾಂತಿಯ ತರಬೇತು ಪಡೆದು ಚೀನಕ್ಕೆ ಹಿಂದಿರುಗಿದರು.

ಯೂರೋಪಿನಿಂದ ಹಿಂದಿರುಗಿದ ಅನಂತರ ಕ್ವೊಮಿನ್‌ಟಾಂಗ್ ಪಕ್ಷದ ಪ್ರಧಾನ ಕಚೇರಿ ಇದ್ದ ಕ್ಯಾಂಟನಿನ ಹ್ವಾಮ್‌ಪೋಪ ಸೈನಿಕ ಅಕಾಡೆಮಿಯಲ್ಲಿ ಸೋವಿಯೆತ್ ಸೈನಿಕ ಸಲಹೆಗಾರರಿಗೆ ಸಹಾಯಕರಾಗಿ ಚೀನೀ ಕಮ್ಯೂನಿಸ್ಟ್ ಪಕ್ಷ, ಕ್ವೊಮಿನ್‌ಟಾಂಗ್ ಪಕ್ಷ, ಎರಡರಲ್ಲೂ ಇದ್ದರು. ಸನ್‌ಯಾತ್ ಸೆನ್‌ರೊಂದಿಗೆ ಕೆಲಸ ಮಾಡಿದರು. 1926ರಲ್ಲಿ ಚಿಯಾಂಗ್ ಕೈ–ಷೇಕರ ಪ್ರಥಮ ಸೇನೆಯಲ್ಲಿ ರಾಜಕೀಯ ಕಾಮಿಸಾರ್ ಆದರು. ಚೀನೀ ಕಮ್ಯೂನಿಸ್ಟ್ ಪಕ್ಷದ ಸೈನಿಕ–ರಾಜಕೀಯ ಅಧಿಕಾರಿಯಾಗಿಯೂ ಕಮ್ಯೂನಿಸ್ಟ್ ಪಕ್ಷಕ್ಕೂ ಕ್ವೊಮೀನ್‌ಟಾಂಗಿಗೂ ನಡುವಣ ಸಂಪರ್ಕ ಸಾಧಕರಾಗಿಯೂ ಇವರು ಆಗ ವಹಿಸಿದ ಪಾತ್ರ ಪ್ರಮುಖವಾದ್ದು. 1927ರಲ್ಲಿ ಷಾಂಗ್‌ಹೈ ಮತ್ತು ನ್ಯಾನ್‌ಚಂಗ್‌ಗಳಲ್ಲಿ ನಡೆದ ದಂಗೆಗಳಲ್ಲಿ ಚೌ ಭಾಗವಹಿಸಿದ್ದರೂ. ಕಮ್ಯೂನಿಸ್ಟ್ ಮತ್ತು ಕೋಮಿನ್‌ಟಾಂಗ್ ಪಕ್ಷಗಳ ವಿರಸ ಬೆಳೆಯಿತು. ಕಮ್ಯುನಿಸ್ಟ್ ಪಕ್ಷ ಬಹಿಷ್ಕೃತವಾಯಿತು. ಮರಣದಂಡನೆಯಿಂದ ಚೌ ಎನ್–ಲೈ ಹೇಗೋ ತಪ್ಪಿಸಿಕೊಂಡರು.

1927–30 ರಲ್ಲಿ ಕ್ವೊಮಿನ್‌ಟಾಂಗ್ ವಿರುದ್ಧ ನಡೆದ ಅನೇಕ ದಂಗೆಗಳಲ್ಲಿ ಚೌ ಕೈವಾಡವಿತ್ತು. ಆದರೆ ಅವು ಸಫಲವಾಗಲಿಲ್ಲ. ಬಂಡಾಯ ಯಶಸ್ವಿಯಾಗದ್ದಕ್ಕಾಗಿ ಪಕ್ಷದಲ್ಲಿ ತೀವ್ರ ಟೀಕೆಗಳಾದವು. ನಾಯಕತ್ವದಲ್ಲಿ ಬದಲಾವಣೆಗಳಾದುವು. ಆದರೆ ಚೌ ಸ್ಥಾನಕ್ಕೆ ಚ್ಯುತಿ ಬರಲಿಲ್ಲ. 1931ರಲ್ಲಿ ಅವರು ದಕ್ಷಿಣದಲ್ಲಿ ಜಿಂಗ್‌ಸಾಂಗ್‌ಸೀ ಪ್ರಾಂತ್ಯದಲ್ಲಿ ಮಾವೋತ್ಸೇ–ತುಂಗರನ್ನು ಕೂಡಿಕೊಂಡರು. ಒಂದು ಜೀವಮಾನದ ಸಖ್ಯ ಆರಂಭವಾಯಿತು. ಮಾವೋ ಪಕ್ಷದ ನಾಯಕತ್ವ ಗಳಿಸಲು ಬೆಂಬಲವಾಗಿ ನಿಂತವರಲ್ಲಿ ಚೌ ಪ್ರಮುಖರು. ಕ್ವೊಮಿನ್‌ಟಾಂಗ್ ಪ್ರಹಾರಗಳಿಂದ ತಮ್ಮ ನೆಲೆಯನ್ನು ರಕ್ಷಿಸುವ ಕಾರ್ಯದಲ್ಲಿ ಮಾವೋ ಒಂದಿಗೆ ನಿಂತರು. ಕೊನೆಗೆ ಕ್ವೊಮಿನ್‌ಟಾಂಗ್ ವಿರುದ್ಧ ಕಾರ್ಯಾಚರಣೆಯಲ್ಲಿ ಇವರ ಪಕ್ಷ ಸೋಲು ಅನುಭವಿಸಿ ಜಿಯಾಂಗ್‌ಸೀ ಪ್ರಾಂತ್ಯದಿಂದ ಓಡಿಹೋಗಬೇಕಾಯಿತು. ವಾಯವ್ಯ ಚೀನದ ಯೆನ್ನಾನ್ ಪ್ರಾಂತ್ಯಕ್ಕೆ ನಡೆಸಿದ ಚರಿತ್ರಾರ್ಹ ದೀರ್ಘಯಾತ್ರೆಯನ್ನು ಇವರು ಮಾವೋ ಒಂದಿಗೆ ಕೂಡಿ ನಿರ್ದೇಶಿಸಿದರು. ಅಲ್ಲಿ ಸ್ಥಾಪಿತವಾದ ಚೀನೀ ಸರ್ಕಾರದ ಪ್ರಮುಖ ವಕ್ತಾರರು ಚೌ ಎನ್–ಲೈ ಎಂಬುದು ಸ್ಥಿರವಾಯಿತು. 1936ರಿಂದ ಕ್ವೊಮಿನ್‌ಟಾಂಗ್ ಪಕ್ಷದೊಂದಿಗೆ ನಡೆದ ಸಂಧಾನದಲ್ಲಿ ಚೌ ಅವರದು ಪ್ರಮುಖ ಪಾತ್ರ. ಮುಂದೆ ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನೀ ಆಕ್ರಮಣಕಾರರನ್ನು ಒಗ್ಗಟ್ಟಿನಿಂದ ಎದುರಿಸಲು ಚಿಯಾಂಗರ ಮನಸ್ಸನ್ನು ಪರಿವರ್ತನೆಗೊಳಿಸುವ ಕಾರ್ಯದಲ್ಲೂ ಯಶಸ್ವಿಯಾದರು. 1949ರಲ್ಲಿ ಪೀಕಿಂಗಿನಲ್ಲಿ ಕಮ್ಯೂನಿಸ್ಟ್ ವಿಜಯ ಸಂಪೂರ್ಣವಾದಾಗ ಸ್ವಾಭಾವಿಕ ವಾಗಿಯೇ ಚೌ–ಎನ್–ಲೈ ಗೆ ನೂತನ ಗಣರಾಜ್ಯದ ಪ್ರಧಾನಿ ಮತ್ತು ವಿದೇಶಾಂಗ ಮಂತ್ರಿ ಪದವಿ ಪ್ರಾಪ್ತ ವಾಯಿತು. 1954ರಲ್ಲಿ ಇಂಡೊ ಚೀನ ಸಮಸ್ಯೆಯನ್ನು ಪರಿಶೀಲಿಸಲು ನಡೆದ ಜಿನೀವ ಸಮ್ಮೇಳನ, 1955ರಲ್ಲಿ ಇಂಡೊನೇಷ್ಯದ ಬಾಂಡುಂಗ್‌ನಲ್ಲಿ ನಡೆದ ಪ್ರಥಮ ಆಫ್ರೊ–ಏಷ್ಯನ್ ಸಮ್ಮೇಳನಗಳಲ್ಲಿ ಚೀನೀ ತಂಡದ ನಾಯಕರಾಗಿ ಭಾಗವಹಿಸಿದ ಚೌ ಈ ಸಮ್ಮೇಳನಗಳಲ್ಲಿ ಅನೇಕರ ಗಮನ ಸೆಳೆದರು.

ಮುಂದೆ 1950ರ ದಶಕದ ಉತ್ತರ ಭಾಗದಲ್ಲಿ ಮತ್ತು 1960ರ ಆದಿಭಾಗದಲ್ಲಿ ಚೌ ಸ್ಥಾನಕ್ಕೆ ಧಕ್ಕೆ ಒದಗುವ ಅಪಾಯವಿತ್ತು. ಮಾವೋರ ಉತ್ತರಾಧಿಕಾರಿಯಾಗಬಯಸಿದ ಲಿನ್ ಪಿಯಾವೋ ರೆಡ್‌ಗಾರ್ಡ್ ಚಳವಳಿ ಮತ್ತು ಸಾಂಸ್ಕೃತಿಕ ಕ್ರಾಂತಿಗಳನ್ನು ಪ್ರಚೋದಿಸಿದರು. ಲಿಯೋಶಾವೋ ಚಿ ಮುಂತಾದ ಹಳೆಯ ನಾಯಕರ ಸ್ಥಾನಪಲ್ಲಟವಾಯಿತು. ಚೌ ಭವಿಷ್ಯದ ಬಗ್ಗೆ ಕಳವಳವಿತ್ತು. ಆದರೆ ಚೌ ರಾಜಕೀಯ ನಿಪುಣತೆಯಿಂದಾಗಿ ಅವರ ಸ್ಥಾನ ಭದ್ರವಾಗಿ ಉಳಿಯಿತು. ಸಿದ್ಧಾಂತದ ಬಗ್ಗೆ ಅಭಿಪ್ರಾಯ ನೀಡುವ ಹೊಣೆಯನ್ನು ಇತರರಿಗೆ ಬಿಟ್ಟು ಅದರ ಸಮರ್ಥನೆಗಾಗಿ ಶ್ರಮಿಸುವುದು ಚೌ ನೀತಿಯೆಂದೂ ಆದ್ದರಿಂದಲೇ ಅವರು ಮಾವೋಗೆ ಎರಡನೆಯವರಾಗಿ ಉಳಿದಿದ್ದಾರೆಂದೂ ವೈಯಕ್ತಿಕ ಆಕಾಂಕ್ಷೆಗಳಿಲ್ಲದೆ ಪಕ್ಷಕ್ಕಾಗಿ ದುಡಿಯುತ್ತ, ಬುದ್ಧಿಜೀವಿಗಳು ಮತ್ತು ಕ್ರಾಂತಿವಾದಿಗಳಿಬ್ಬರನ್ನೂ ಓಲೈಸುತ್ತ, ಚೌ ಸಾಗಿರುವ ಮಾರ್ಗ ಅವರ ಕೌಶಲವನ್ನು ತೋರಿಸುತ್ತದೆಯೆಂದೂ ಹೇಳಲಾಗಿದೆ. ಹೀಗೆಯೇ ವಿದೇಶಾಂಗ ವ್ಯವಹಾರದಲ್ಲಿ ಇವರ ನಾಯಕತ್ವದಲ್ಲಿ ಆದ ಇನ್ನೊಂದು ಸಾಧನೆ ಗಮನಾರ್ಹ. ಅದು ಚೀನ–ಅಮೆರಿಕ ಸಂಬಂಧದ ಸುಧಾರಣೆ. ವಿಯಟ್ನಾಂ ಯುದ್ಧ ಮತ್ತು ನಿಲುಗಡೆ, ವಿಶ್ವಸಂಸ್ಥೆಗೆ ಚೀನದ ಪ್ರವೇಶ, ಅದರ ಭದ್ರತಾ ಸಮಿತಿಯಲ್ಲಿ ಅದಕ್ಕೆ ಸದಸ್ಯತ್ವ ಇವು ಇವರ ಅಧಿಕಾರ ಕಾಲದಲ್ಲಿ ನಡೆದ ಮುಖ್ಯ ಘಟನೆಗಳು. ಚೀನ–ಭಾರತ ಸಂಬಂಧ ಹದಗೆಟ್ಟು, ಗಡಿಯ ವಿಚಾರವಾಗಿ ಈ ಎರಡು ದೇಶಗಳ ನಡುವೆ ಘರ್ಷಣೆ ನಡೆದದ್ದೂ (1962) ಇವರ ಕಾಲದಲ್ಲೇ. ಅಕ್ಟೋಬರ್ 1, 1949ರಿಂದ ಅಸುನೀಗುವವರೆಗೆ ಸು. 26ವರ್ಷ ಅಧಿಕಾರದಲ್ಲಿದ್ದು ಇವರು 8ನೇ ಜನವರಿ 1976ರಲ್ಲಿ ನಿಧನರಾದರು.

(ಎಂ.ಯು.ಎಂ.)

**ಚೌಡಪ್ಪನಾಯಕ :** ಆ. 1498–1514. ಚೌಡಗೌಡ, ಚೌಡಪ್ಪಗೌಡ ಎಂದೂ ಕರೆಯಲ್ಪಡುವ ಈತ ಕೆಳದಿಯ ನಾಯಕ ಮನೆತನದ ಸ್ಥಾಪಕ. ಬಸವರಾಜ ಕವಿಯ ಶಿವತತ್ತ್ವರತ್ನಾಕರ ಮತ್ತು ಲಿಂಗಣ್ಣ ಕವಿಯ ಕೆಳದಿನೃಪವಿಜಯ ಎಂಬ ಗ್ರಂಥಗಳಲ್ಲಿ ಕೆಳದಿ ರಾಜ್ಯಸ್ಥಾಪನೆಗೆ ಸಂಬಂಧಿಸಿದ ವರ್ಣನೆಗಳಿವೆ. ಚೌಡಪ್ಪಗೌಡನೂ ಅವನ ಸಹೋದರನಾದ ಭದ್ರಗೌಡನೂ ಕೆಳದಿಯಿಂದ ಒಂದು ಕಿ.ಮೀ. ದೂರದ ಪಳ್ಳಿಬಯಲು ಗ್ರಾಮದ ನಿವಾಸಿಯಾಗಿದ್ದ ಬಸವಪ್ಪಗೌಡನ ಮಕ್ಕಳು. ಅವರು ವ್ಯವಸಾಯ ಮಾಡಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದರು. ಸೂಕ್ತ ಸಮಯ ಒದಗಿಬಂದು ಚೌಡಪ್ಪಗೌಡ ಗ್ರಾಮಾಧಿಪತಿಯಾಗಿ, ಕೊನೆಗೆ ಕೆಳದಿ ಸಂಸ್ಥಾನವನ್ನಾಳುವ ನಾಯಕ ಮನೆತನವನ್ನು ಸ್ಥಾಪಿಸಿದ.

ಚೌಡಪ್ಪಗೌಡ ಕೆಳದಿಯ ನಾಯಕನಾದ ಬಗ್ಗೆ ಅನೇಕ ಕತೆಗಳಿವೆ. ಒಂದು ದಿನ ಚೌಡಪ್ಪಗೌಡ ತನ್ನ ಜಮೀನಿನಲ್ಲಿ ಕೆಲಸ ಮಾಡಿದ ಮೇಲೆ ವಿಶ್ರಾಂತಿ ಪಡೆಯುತ್ತಿದ್ದಾಗ ಇವನ ಮೇಲೆ ಬಿಸಿಲು ಬೀಳದಂತೆ ನೆರಳು ಮಾಡಲು ಸರ್ಪವೊಂದು ಹೆಡೆಯಾಡಿಸುತ್ತಿತ್ತೆಂದೂ ಇದನ್ನು ನೋಡಿದ ವೆಂಕಟಾದ್ರಿ ಜೋಯಿಸನೆಂಬವನು ಚೌಡಪ್ಪನಿಗೆ ಹೊನ್ನಿನ ರಾಶಿಯೂ ರಾಜ್ಯವೂ ಪ್ರಾಪ್ತಿಯಾಗುವುದೆಂದು ಭವಿಷ್ಯ ನುಡಿದನೆಂದೂ ಅವನ ನಿರ್ದೇಶನದಂತೆ ಇವನು ನಡೆದುಕೊಂಡನೆಂದೂ ಹೇಳಲಾಗಿದೆ. ಚೌಡಪ್ಪಗೌಡ ನೆಲವನ್ನು ಹದಮಾಡುತ್ತಿದ್ದಾಗ ಅವನ ಸೇವಕರಿಗೆ ಒಂದು ಅಪೂರ್ವ ಖಡ್ಗ ಸಿಕ್ಕಿತೆಂದೂ ಅವನು ಅವರಿಂದ ಖಡ್ಗವನ್ನು ಸ್ವೀಕರಿಸಿ ಅದಕ್ಕೆ ನಾಗರಮುರಿ ಎಂದು ಹೆಸರು ಕೊಟ್ಟನೆಂದೂ ಆ ಖಡ್ಗ ಮುಂದೆ ಚೌಡಪ್ಪ ತನ್ನ ಶತ್ರುಗಳನ್ನು ನಿಗ್ರಹಿಸಲು ಸಹಕಾರಿಯಾಯಿತೆಂದೂ ಕತೆ ಇದೆ. ಚೌಡಪ್ಪನ ಆಕಳೊಂದು ಹುತ್ತವೊಂದರ ಬಳಿಗೆ ಹೋಗಿ ಅದರ ಮೇಲೆ ಹಾಲನ್ನು ಸುರಿಸುತ್ತಿತ್ತು. ಆಶ್ಚರ್ಯದಿಂದ ಚೌಡಪ್ಪ ಹುತ್ತವನ್ನು ಅಗೆಯಲಾಗಿ ಅಲ್ಲಿ ಒಂದು ಲಿಂಗ ದೊರೆಯಿತು. ಅದು ರಾಮೇಶ್ವರ ಲಿಂಗವೆಂದೂ ಆ ಸ್ಥಳದಲ್ಲಿ ಒಂದು ದೇವಾಲಯವನ್ನು ಕಟ್ಟಿಸಬೇಕೆಂದೂ ತತ್‌ಕ್ಷಣವೇ ಅವನಿಗೆ ರಾಜ್ಯಪ್ರಾಪ್ತಿಯಾಗುವುದೆಂದೂ ಅಂದಿನ ರಾತ್ರಿ ಅವನಿಗೆ ಕನಸಿನಲ್ಲಿ ವಿಪ್ರನೊಬ್ಬ ಹೇಳಿದ. ಚೌಡಪ್ಪ ಅಲ್ಲಿ ದೇವಾಲಯವನ್ನು ಕಟ್ಟಿಸಿ ಅದನ್ನು ತನ್ನ ಮನೆದೇವತೆಯೆಂದು ಪರಿಗಣಿಸಿ ನಿಷ್ಠೆಯಿಂದ ಪೂಜಿಸುತ್ತಿದ್ದ. ಇದು ಮತ್ತೊಂದು ಕತೆ. ತನ್ನ ಜಮೀನಿನಲ್ಲಿ ದೊರೆತ ನಿಧಿಯನ್ನು ಉಪಯೋಗಿಸಿಕೊಂಡು ಚೌಡಪ್ಪಗೌಡ ಸೈನ್ಯವನ್ನು ಕಟ್ಟಿ ಸುತ್ತಮುತ್ತಿನ ಪಾಳೆಯಗಾರರನ್ನು ಸೋಲಿಸಿ ರಾಜ್ಯವನ್ನು ಸ್ಥಾಪಿಸಿ ಕೆಳದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡನೆಂದೂ ಹೇಳಲಾಗಿದೆ. ಸಾಮಾನ್ಯವಾಗಿ ಎಲ್ಲ ರಾಜ

ಮನೆತನಗಳು ಮತ್ತು ನಾಯಕ ಮನೆತನಗಳಿಗೆ ಸಂಬಂಧಿಸಿದಂತೆ ಇಂಥ ಕತೆಗಳು ಇರುತ್ತವೆ. ಚೌಡಪ್ಪಗೌಡನೂ ಅವನ ಸಹೋದರನೂ ಕಷ್ಟಸಹಿಷ್ಣುಗಳಾಗಿ ಶ್ರದ್ಧೆಯಿಂದ ದುಡಿದು ಶ್ರೀಮಂತರಾದರು. ಧರ್ಮನಿಷ್ಠರಾದ ಅವರಲ್ಲಿ ಸುತ್ತಣ ಜನರಿಗೆ ಅಭಿಮಾನ ಬೆಳೆಯಿತು. ಚೌಡಪ್ಪಗೌಡ ಗ್ರಾಮದ ಮುಖಂಡನಾಗಿ ಜನರ ನೆಮ್ಮದಿಗೆ ಕಾರಣನಾದ. ಅವನು ಕಳ್ಳಕಾರರ ಕಿರುಕುಳವನ್ನು ಅಡಗಿಸಿದ. ಅವನ ಹೆಸರು ವಿಜಯನಗರದ ಸಾಮ್ರಾಟನ ಕಿವಿಯನ್ನೂ ಮುಟ್ಟಿತು. ಚೌಡಪ್ಪನ ಕೀರ್ತಿಯನ್ನು ಸಹಿಸದ ಅನೇಕ ಅಸೂಯಾಪರರು ವಿಜಯನಗರದ ಅರಸನಿಗೆ ದೂರು ಹೇಳಿದರು. ಸಾಮ್ರಾಟನ ನಿರೂಪದ ಮೇರೆಗೆ ಚೌಡಪ್ಪಗೌಡ ವಿಜಯನಗರಕ್ಕೆ ಹೋದ. ವಿಜಯನಗರದ ಸೈನ್ಯವೇ ಕೆಳದಿಗೆ ಬಂದು ಚೌಡಪ್ಪನನ್ನು ಸೆರೆಹಿಡಿದು ವಿಜಯನಗರಕ್ಕೆ ಕರೆದುಕೊಂಡು ಹೋಯಿತೆಂದೂ ಹೇಳಲಾಗಿದೆ. ಅಂತೂ ಚೌಡಪ್ಪಗೌಡ ತನ್ನ ಸೋದರ ಭದ್ರಪ್ಪನೊಂದಿಗೆ ವಿಜಯನಗರಕ್ಕೆ ಹೋದ. ಈ ಸಹೋದರರ ನಿಷ್ಕಪಟ ಮತ್ತು ನಿಃಸ್ಪೃಹತೆಯ ಮನೋಭಾವವನ್ನು ಮೆಚ್ಚಿ ಅರಸ ಅವರಿಗೆ ಛತ್ರಚಾಮರಗಳನ್ನು ನೀಡಿ ಗೌರವಿಸಿದ. ಹಾಗೂ ಆ ಸಮಯದಲ್ಲಿ ಬಂಡೆದ್ದಿದ್ದ ಬಲಿಹಾಳು ಪ್ರಾಂತ್ಯದ ಮುಖಂಡರನ್ನು ಶಿಕ್ಷಿಸಲು ಈ ಸಹೋದರರು ನಿಯೋಜಿತರಾಗಿ, ಯಶಸ್ವಿಯಾಗಿ ಆ ಕಾರ್ಯವನ್ನು ನಿರ್ವಹಿಸಿದರೆಂದು ತಿಳಿದುಬರುತ್ತದೆ. ವಿಜಯನಗರದ ಅರಸ ಚೌಡಗೌಡನಿಗೆ ಕೆಳದಿ, ಇಕ್ಕೇರಿ, ಚಂದ್ರಗುತ್ತಿ, ಪರ್ಬೆಯಲು, ಎಲಗಳಲೆ, ಮೋದೂರು, ಕಲಿಸೆ ಮತ್ತು ಲಾತವಾಡಿ ಎಂಬ ಎಂಟು ಗ್ರಾಮಗಳನ್ನು ಕೊಟ್ಟುದಲ್ಲದೆ ಚೌಡಪ್ಪನಾಯಕನೆಂದು ವಿಜಯನಗರದ ಸಾಮಂತರಾಗಿ ರಾಜ್ಯವಾಳುವಂತೆ ನಿಯಮಿಸಿದನೆಂದು ತಿಳಿದುಬರುತ್ತದೆ.

ಚೌಡಪ್ಪನಾಯಕ ಇಕ್ಕೇರಿಯಲ್ಲಿ ಒಂದು ಅರಮನೆಯನ್ನೂ ಕೋಟೆಯನ್ನೂ ಕಟ್ಟಿಸಿ ತನ್ನ ರಾಜಧಾನಿಯಾಗಿ ಮಾಡಿಕೊಂಡ. ಚೌಡಪ್ಪನಾಯಕನಿಗೆ ಸದಾಶಿವ ಮತ್ತು ಭದ್ರಪ್ಪ ಎಂಬ ಇಬ್ಬರು ಗಂಡುಮಕ್ಕಳಿದ್ದರು. ಚೌಡಪ್ಪಗೌಡ ಪ್ರ.ಶ. 1514ರಲ್ಲಿ ಮರಣಹೊಂದಿದ. ಅನಂತರ ಅವನ ಹಿರಿಯ ಮಗನಾದ ಸದಾಶಿವ ನಾಯಕ ಕೆಳದಿಯ ನಾಯಕನಾದ.

(ಜಿ.ಆರ್.ಆರ್.)

**ಚೌಡಯ್ಯ, ಟಿ :** 1895–1967. ಏಳು ತಂತಿಗಳ ಪಿಟೀಲು ವಾದನದಲ್ಲಿ ಅದ್ವಿತೀಯರೆನಿಸಿಕೊಂಡ ಸಂಗೀತ ವಿದ್ವಾಂಸರು. ಇವರು ಹುಟ್ಟಿದ್ದು ಮೈಸೂರಿಗೆ ಹದಿನೆಂಟು ಮೈಲಿ ದೂರದಲ್ಲಿರುವ ತಿರುಮಕೂಡಲು ನರಸೀಪುರದಲ್ಲಿ. ತಂದೆ ಅಗಸ್ತ್ಯಗೌಡರು ಸ್ವತಃ ಪಿಟೀಲು ವಿದ್ವಾಂಸರು. ತಾಯಿ ಸುಂದರಮ್ಮ ಸಂಗೀತ ಮತ್ತು ಭರತನಾಟ್ಯಗಳಲ್ಲಿ ಪ್ರವೀಣೆ; ಅಲ್ಲದೆ ಸಂಸ್ಕೃತವನ್ನು ಚೆನ್ನಾಗಿ ಬಲ್ಲವರು. ಹೀಗಾಗಿ ಚೌಡಯ್ಯನವರಿಗೆ ಬಾಲ್ಯದಲ್ಲಿ ತಾಯಿಯವರಿಂದಲೇ ಸಂಗೀತ ಶಿಕ್ಷಣ ದೊರಕಿತು. ಶಾಲಾಶಿಕ್ಷಣ ಸಮೀಪದ ನರಸೀಪುರದಲ್ಲಿ ನಡೆಯುತ್ತಿತ್ತು. ಒಮ್ಮೆ ಶಾಲೆಗೆ ಹೋಗುತ್ತಿದ್ದ ಚೌಡಯ್ಯನವರನ್ನು ಅಹೋಬಲಾಚಾರ್ಯರೆಂಬ ಜ್ಯೋತಿಷಿ ಯೊಬ್ಬರು ಕಂಡು ನಿನ್ನ ಭವಿಷ್ಯ ಸಂಗೀತದಲ್ಲಿಯೇ ಹೊರತು ಪುಸ್ತಕ ದಲ್ಲಿಲ್ಲ ಎಂದು ಹೇಳಿ ಹುಡುಗನ ಕೈಯಲ್ಲಿದ್ದ ಪುಸ್ತಕಗಳನ್ನು ಕಾವೇರಿಗೆ ಬಿಸಾಡಿದರಂತೆ. ಈ ಘಟನೆಯೇ ಚೌಡಯ್ಯನವರನ್ನು ಮೊಟ್ಟಮೊದಲಿಗೆ ಸಂಗೀತದತ್ತ ಪ್ರೇರೇಪಿಸಿದ್ದು. ಇದರೊಂದಿಗೆ ತಾಯಿಯ ಪ್ರೋತ್ಸಾಹವೂ ಸೇರಿ ಸಂಗೀತಾಭ್ಯಾಸಕ್ಕೆ ಮೈಸೂರು ಸೇರಿದರು.

ಮೈಸೂರಿನಲ್ಲಿ ಆಗ ಸಂಗೀತದಲ್ಲಿ ವಿಶೇಷ ಖ್ಯಾತಿಯನ್ನು ಗಳಿಸಿದ್ದ ಬಿಡಾರಂ ಕೃಷ್ಣಪ್ಪನವರಲ್ಲಿ ಚೌಡಯ್ಯನವರು ಸಂಗೀತ ಶಿಕ್ಷಣವನ್ನು ಆರಂಭಿಸಿ (1910) 18 ವರ್ಷಗಳ ಕಾಲ ಶಿಷ್ಯವೃತ್ತಿ ಮಾಡಿ, ಪಿಟೀಲುವಾದನದಲ್ಲಿ ಪ್ರವೀಣರಾದರು.

ಬಿಡಾರಂ ಕೃಷ್ಣಪ್ಪನವರು ತಮ್ಮ ಶಿಷ್ಯ ಚೌಡಯ್ಯನವರನ್ನು ಜೊತೆಯಲ್ಲಿ ಕರೆದೊಯ್ಯುತ್ತಿದ್ದರು. ಅನೇಕ ಬಾರಿ ತಮ್ಮ ಗುರುಗಳಿಗೆ ಪಕ್ಕವಾದ್ಯವನ್ನು ನುಡಿಸುವ ಸುಯೋಗವೂ ಇವರದಾಗುತ್ತಿತ್ತು. ಕೃಷ್ಣಪ್ಪನವರು ಆಗ ದಕ್ಷಿಣ ಭಾರತದ ಪ್ರತಿಭಾನ್ವಿತ ಸಂಗೀತ ವಿದ್ವಾಂಸರೆಂಬ ಕೀರ್ತಿಗೆ ಪಾತ್ರರಾಗಿದ್ದರು. ಹೆಸರಾಂತ ಪಿಟೀಲು ವಿದ್ವಾಂಸರಾದ ಅಳಗ ನಂಬಿಪಿಳ್ಳೆ, ದಕ್ಷಿಣಾಮೂರ್ತಿ ಪಿಳ್ಳೆ ಮೊದಲಾದ ಘನವಿದ್ವಾಂಸರು ಕೃಷ್ಣಪ್ಪನವರಿಗೆ ಪಕ್ಕವಾದ್ಯ ನುಡಿಸು ತ್ತಿದ್ದರು. ಅಂಥವರಿಗೆ ಪಕ್ಕವಾದ್ಯ ನುಡಿಸುವುದು ಸಾಮಾನ್ಯದ ಮಾತಾ ಗಿರಲಿಲ್ಲ. 1924ರಲ್ಲಿ ಮೈಸೂರಿನಲ್ಲಿ ನಡೆದ ಕೃಷ್ಣಪ್ಪನವರ ಕಚೇರಿಯ ಒಂದು ಘಟನೆ ಇದಕ್ಕೆ ನಿದರ್ಶನ ವಾಗುತ್ತದೆ. ಅಂದು ಚೌಡಯ್ಯನವರು ತಮ್ಮ ಗುರುಗಳಿಗೆ ಮೊದಲ ಬಾರಿಗೆ ಪಕ್ಕವಾದ್ಯ ನುಡಿಸಬೇಕಾಗಿ ಬಂತು. ಅಂದು ಕೃಷ್ಣಪ್ಪನವರ ಕಚೇರಿಯೂ ಕಳೆಯೇರುತ್ತ ಸಾಗಿತ್ತು. ಪ್ರಧಾನ ರಾಗಾಲಾಪನೆಯನ್ನು ಕೃಷ್ಣಪ್ಪನವರು ಮುಂದುವರಿಸಿದಾಗ ಚೌಡಯ್ಯನವರ ಕೈ ಸ್ವಲ್ಪಮಟ್ಟಿಗೆ ತಪ್ಪಿತು. ಕೃಷ್ಣಪ್ಪನವರಿಗೆ ಇದರಿಂದ ಎಷ್ಟು ಆಗ್ರಹವುಂಟಾಯಿತೆಂದರೆ, ಅವರು ಅಷ್ಟು ಜನರ ಸಮ್ಮುಖದಲ್ಲಿ ಶಿಷ್ಯನನ್ನು ದಂಡಿಸುವುದಕ್ಕೂ ಹಿಂಜರಿಯಲಿಲ್ಲ. ಚೌಡಯ್ಯನವರು ಗುರು ತೋರಿದ ಆಗ್ರಹವನ್ನು ಅನುಗ್ರಹವೆಂದೇ ಭಾವಿಸಿ ಬಹು ಜಾಗರೂಕತೆಯಿಂದ ಅವರ ದಾರಿಯನ್ನೇ ಅನುಸರಿಸಿ ಅಂದಿನ ಕಚೇರಿ ಯಶಸ್ವಿಯಾಗುವಂತೆ ಪಿಟೀಲು ನುಡಿಸಿ ಕೊನೆಯಲ್ಲಿ ಗುರುಗಳ ಮೆಚ್ಚಿಕೆಗೆ ಪಾತ್ರರಾದರು. ಚೌಡಯ್ಯನವರು ತಮ್ಮ ಗುರುಗಳಿಗೆ ಪಕ್ಕವಾದ್ಯ ನುಡಿಸುತ್ತಿದ್ದ ತಿರುಚಿ ಗೋವಿಂದಸ್ವಾಮಿ ಪಿಳ್ಳೆಯವರ ಶೈಲಿಗೆ ಮಾರುಹೋಗಿ ಅವರ ಶೈಲಿಯನ್ನೇ ಅನುಸರಿಸಿದರು. ಪಿಳ್ಳೆಯವರ ರಾಗನಿರೂಪಣೆ, ತಾಳವನ್ನು ನುಡಿಸುವಾಗ ಪಿಟೀಲಿನ ಕಮಾನು ಹಾಕುತ್ತಿದ್ದ ರೀತಿ ಮತ್ತು ಬೆರಳುಗಳನ್ನು ಉಪಯೋಗಿಸುತ್ತಿದ್ದ ವಿಧಾನಗಳನ್ನು ಗ್ರಹಿಸುವುದೇ ತಮ್ಮ ಮುಖ್ಯ ಗುರಿಯಾಗಿರುತ್ತಿತ್ತೆಂದು ಚೌಡಯ್ಯನವರೇ ಅನೇಕ ಬಾರಿ ಹೇಳಿಕೊಂಡಿದ್ದಾರೆ.

ಪಿಟೀಲಿನಾಕಾರದ ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರಂ, ಬೆಂಗಳೂರು

ಪಿಟೀಲುವಾದನದಲ್ಲಿ ವಿಶೇಷ ನೈಪುಣ್ಯವನ್ನು ಪಡೆದುದರ ಜೊತೆಗೆ ಅದುವರೆವಿಗೂ ಸಾಮಾನ್ಯವಾಗಿ ನಾಲ್ಕು ತಂತಿ ಇರುತ್ತಿದ್ದ ಪಿಟೀಲಿಗೆ ಏಳುತಂತಿಗಳನ್ನು ಅಳವಡಿಸಿ, ಅದನ್ನು ಜನ ಮೆಚ್ಚುಗೆಗೆ ಪಾತ್ರವಾಗುವಂತೆ ಮಾಡಿದ ಕೀರ್ತಿ ಚೌಡಯ್ಯನವರಿಗೆ ಸಲ್ಲುತ್ತದೆ. ಆದರೆ ಏಳು ತಂತಿ ಪಿಟೀಲಿನಲ್ಲಿ ಶುದ್ಧ ಸ್ವರಗಳ ಮತ್ತು ಗಮಕಗಳ ನಿರೂಪಣೆ ಬಹಳ ಕಷ್ಟವಾದುದಾಗಿತ್ತು. ಚೌಡಯ್ಯನವರು ಅತೀವ ಸಾಧನೆಯಿಂದ ಅದನ್ನು ಯಶಸ್ವಿಯಾಗಿಸಿದರು. ಅನೇಕ ಪ್ರಸಿದ್ಧ ವಿದ್ವಾಂಸರ ಗಾಯನ ಕಚೇರಿಗಳಲ್ಲಿ ಇವರು ಏಳು ತಂತಿ ಪಿಟೀಲನ್ನೇ ಯಶಸ್ವಿಯಾಗಿ ಬಳಸಿದರು.

ಕೃಷ್ಣಪ್ಪನವರ ಕಚೇರಿಗಳಿಗೆ ಅನೇಕ ವರ್ಷಗಳ ಕಾಲ ನುಡಿಸಿ ಅನುಭವ ಪಡೆದ ಅನಂತರ ಚೌಡಯ್ಯನವರು ಹೊರಗಿನ ವಿದ್ವಾಂಸರಿಗೆ ಪಕ್ಕವಾದ್ಯ ನುಡಿಸಲು ಪ್ರಾರಂಭಿಸಿದರು. ಹೀಗೇ ಅವರು ಮೊದಲು ಪಕ್ಕವಾದ್ಯ ನುಡಿಸಿದ್ದು ಪದ್ಮಭೂಷಣ ಅರಿಯಾಕುಡಿ ರಾಮಾನುಜ ಅಯ್ಯಂಗಾರ್ಯರ ಕಚೇರಿಯಲ್ಲಿ, ಅದೂ ಮದರಾಸಿನ ರಸಿಕವೃಂದದ ಮುಂದೆ. ಅಂದೇ ಚೌಡಯ್ಯನವರು ತಮ್ಮ ಅಮೋಘ ಪಾಂಡಿತ್ಯದಿಂದ ಗಾನರಸಿಕರ ಮೆಚ್ಚುಗೆಗೆ ಪಾತ್ರರಾದರು.

ಅಂದಿನಿಂದ ಅವರು ಕೊನೆಯ ಉಸಿರು ಎಳೆಯುವವರೆಗೂ ಸುಮಾರು ಐದು ದಶಕಗಳ ಕಾಲ ಆಂಧ್ರ, ತಮಿಳುನಾಡು, ಉತ್ತರ ಭಾರತದ ಮುಖ್ಯ ಪಟ್ಟಣಗಳಲ್ಲಿ ತನಿ ಕಚೇರಿಗಳನ್ನು ಮಾಡಿದ್ದಲ್ಲದೆ ಪಕ್ಕವಾದ್ಯ ನುಡಿಸಿ ಮೈಸೂರಿನ ಕೀರ್ತಿಯನ್ನು ಎತ್ತಿ ಹಿಡಿದರು.

ಚೌಡಯ್ಯನವರು ತಮ್ಮ ಕಲಾಪ್ರೌಢಿಮೆಯಿಂದ ಅನೇಕ ಬಿರುದು ಮತ್ತು ಗೌರವಗಳಿಗೆ ಪಾತ್ರರಾಗಿದ್ದರು. ಅರಮನೆ ವಿದ್ವಾಂಸರಾಗಿದ್ದುದಲ್ಲದೆ 1941ರಲ್ಲಿ ಆಳಿದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಸಂಗೀತರತ್ನ ಎಂಬ ಬಿರುದನ್ನು ಪಡೆದರು. 1957ರಲ್ಲಿ ರಾಷ್ಟ್ರಪತಿಗಳ ಪ್ರಶಸ್ತಿಯನ್ನೂ, ಅದೇ ವರ್ಷದಲ್ಲಿ ಮದ್ರಾಸು ಮ್ಯೂಸಿಕ್ ಅಕಾಡೆಮಿ ಸಂಗೀತ ಕಲಾನಿಧಿಪ್ರಶಸ್ತಿಯನ್ನೂ ಪಡೆದರು. ಅದಲ್ಲದೆ ಸತ್ಯ ಸಾಯಿಬಾಬಾ ಮತ್ತು ಕಂಚಿ ಕಾಮಕೋಟಿ ಪೀಠದ ಜಗದ್ಗುರುಗಳು ಇವರಿಗೆ ಪೊನ್ನಾಡೈಯನ್ನು ಕೊಟ್ಟು ಪ್ರಶಂಸಿಸಿದರು. ತಮಿಳುನಾಡಿನಲ್ಲಿ ಇವರು ಮೈಸೂರು ಚೌಡಯ್ಯ ಎಂದೇ ಪ್ರಸಿದ್ಧರಾಗಿದ್ದರು. ಚೌಡಯ್ಯನವರು 1952–58 ರವರೆಗೆ ರಾಜ್ಯ ವಿಧಾನಪರಿಷತ್ತಿನ ನಾಮಕರಣ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆಂಬುದನ್ನು ಇಲ್ಲಿ ನೆನೆಯಬಹುದು.

ಚೌಡಯ್ಯನವರು ಮಣಿ ಎಂಬ ಚಲನಚಿತ್ರದಲ್ಲಿ ಪ್ರಧಾನ ಭೂಮಿಕೆಯಲ್ಲಿದ್ದು ಹೆಸರು ಗಳಿಸಿದರು. ಸಂಗೀತದಲ್ಲಿನ ತಮ್ಮ ಅನುಭವಗಳನ್ನು ವರ್ಣ, ಕೃತಿ ಮತ್ತು ತಿಲ್ಲಾನಗಳ ರೂಪದಲ್ಲಿ ತ್ರಿಮಕುಟ ಎಂಬ ಅಂಕಿತದಲ್ಲಿ ಕೂಡಿಸಿಟ್ಟಿದ್ದಾರೆ. ಚೌಡಯ್ಯನವರ ಶಿಷ್ಯವೃಂದ ಅಪಾರವಾದುದು. ಮೈಸೂರು ಮತ್ತು ಬೆಂಗಳೂರಿನಲ್ಲಿ ಇವರು ಅಯ್ಯನಾರ್ ಕಲಾಶಾಲೆಗಳನ್ನು 1945ರಲ್ಲಿ ಸ್ಥಾಪಿಸಿ, ಅನೇಕ ವಿದ್ಯಾರ್ಥಿಗಳಿಗೆ ಸಂಗೀತವನ್ನು ಕಲಿಯಲು ಅವಕಾಶ ಕಲ್ಪಿಸಿದರು. ಇವರ ಶಿಷ್ಯವೃಂದದಲ್ಲಿ ಆರ್. ಕೆ. ವೆಂಕಟರಮಣಶಾಸ್ತ್ರಿ (ಮದರಾಸು), ವಿ. ಸೇತುರಾಮಯ್ಯ (ಮದರಾಸು), ಸಿ.ಆರ್. ಮಣಿ (ಪಾಲಘಾಟ್), ಅಳಗಿರಿಸ್ವಾಮಿ (ರಾಮನಾಡ್), ವಿ. ರಾಮರತ್ನಂ (ಮೈಸೂರು), ಎಚ್.ಆರ್. ಸೀತಾರಾಮಶಾಸ್ತ್ರಿ, ಕುಮಾರಿ ಎಚ್.ಎಸ್. ಅನಸೂಯ (ಬೆಂಗಳೂರು) ಮೊದಲಾದವರು ಇದ್ದಾರೆ. ಚೌಡಯ್ಯನವರು ಜನವರಿ 19, 1977ರಂದು, ತಮಗೆ 72 ವರ್ಷವಾಗಿದ್ದಾಗ ತೀರಿಕೊಂಡರು. ಪಿಟೀಲು ಚೌಡಯ್ಯನವರ ಸ್ಮಾರಕಾರ್ಥ, ಬೆಂಗಳೂರಿನ ಮಲ್ಲೇಶ್ವರಂನ 16ನೇ ಕ್ರಾಸ್‌ನಲ್ಲಿ ಪಿಟೀಲಿನಾಕಾರದ ಒಂದು ಭವ್ಯವಾದ ಕಟ್ಟಡವನ್ನು 1980ರಲ್ಲಿ ನಿರ್ಮಿಸಲಾಗಿದೆ. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಕೆ.ಕೆ. ಮೂರ್ತಿ ಅವರ ಸಲಹೆಯ ಮೇರೆಗೆ ನಿರ್ಮಿಸಲಾಯಿತು. ಒಂದು ಸಾವಿರ ಜನ ಪ್ರೇಕ್ಷಕರು ಕುಳಿತುಕೊಳ್ಳಲು ಸ್ಥಳಾವಕಾಶ ಇರುವ ಈ ಭವನದ ವಿನ್ಯಾಸಕರು ಎಸ್.ಎನ್.ಮೂರ್ತಿ. (ವಿ.ಆರ್.ಆರ್.)

**ಚೌಡಿಕೆ ಮೇಳ :** ಸವದತ್ತಿ ಎಲ್ಲಮ್ಮ, ತುಳಜಾಪುರದ ಅಂಬಾ ಭವಾನಿ, ಕೊಲ್ಲಾಪುರದ ಅಂಬಾಬಾಯಿ ಈ ದೇವತೆಗಳ ಭಕ್ತರು ಚೌಡಿಕೆಯೆಂಬ ವಾದ್ಯವನ್ನು ನುಡಿಸುತ್ತ ಕಟ್ಟುವ ಮೇಳವೇ ಚೌಡಿಕೆ ಮೇಳ. ಹೀಗೆ ಸ್ತ್ರೀದೇವತೆಗಳಿಗೆ ಸಂಬಂಧಿಸಿದ ವೃತ್ತಿಗಾಯಕ ಸಂಪ್ರದಾಯ ಕರ್ನಾಟಕದ ಉತ್ತರ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇಬ್ಬರು ಅಥವಾ ಮೂವರು ಕಲೆತು ಮುಮ್ಮೇಳ ಹಿಮ್ಮೇಳಗಳೊಡನೆ ಕತೆ ಮಾಡುತ್ತಾರೆ. ಉತ್ತರ ಕರ್ನಾಟಕದಲ್ಲಿ ಇದನ್ನು ಗೊಂದಲಿಗರ ಮೇಳ ಎನ್ನಲಾಗುತ್ತದೆ (ನೋಡಿ– ಗೊಂದಲಿಗರು). ಅಲ್ಲಿ ಗೊಂದಲಿಗ ಪಂಗಡದವರು ಮಾತ್ರ ಗೊಂದಲ ಹಾಕುತ್ತಾರೆ. ಆದರೆ ದಕ್ಷಿಣ ಕರ್ನಾಟಕದ ಚಿತ್ರದುರ್ಗ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಇತರ ಜನಾಂಗದವರೂ ಚೌಡಿಕೆ ಹಿಡಿದು ಮೇಳಗಳನ್ನು ನಡೆಸುತ್ತಾರೆ.

ಚೌಡಿಕೆ ಎನ್ನುವುದು ಒಂದು ಅಪೂರ್ವ ರೀತಿಯ ವಾದ್ಯವಿಶೇಷ. ತಂತೀವಾದ್ಯದ ರೀತಿಯಲ್ಲೇ ಇದನ್ನು ಮಾಡಿಕೊಳ್ಳುತ್ತಾರೆ. ಆದರೆ ತಂತಿಯ ಬದಲು ಇದರಲ್ಲಿ ಕುರಿಯ ಕರುಳದಾರವನ್ನು ಬಳಸಲಾಗುತ್ತದೆ. ಕಂಚಿನ ಅಥವಾ ಮರದ ಕೊಳಗದಾಕಾರದ ಸಾಧನವೊಂದಕ್ಕೆ ಈ ದಾರವನ್ನು ಕಟ್ಟಿ ಸಣ್ಣ ಬಿದಿರು ಕೋಲಿನಿಂದ ಅಥವಾ ಕೈಯಿಂದ ಬಿಗಿಯಾಗಿ ಎಳೆದು ಹಿಡಿಯಲಾಗುತ್ತದೆ. ಮರದ ಬೆಣೆಯೊಂದರಿಂದ ಈ ಬಿಗಿಯಾದ ದಾರವನ್ನು ಮೀಟಿದರೆ ಒಳ್ಳೆಯ ನಾದ ಬರುತ್ತದೆ. ಈ ನಾದ ಬರಲು ಮುಖ್ಯ ಕಾರಣ ಕೊಳಗದ ತಳಕ್ಕೆ ಅಳವಡಿಸಿದ ಒಂದು ಬಗೆಯ ಚರ್ಮ. ಕಲಾವಿದರ ಪ್ರಕಾರ ಬಾತುಕೋಳಿಯ, ಮೇಕೆಯ ಚರ್ಮವನ್ನು ಬಳಸಲಾಗುತ್ತದೆ. ಬಿದಿರಿನ ಸಹಾಯದಿಂದ ದಾರವನ್ನು ಎಳೆದು ಬಿಗಿಪಡಿಸಿಕೊಳ್ಳುವ ವಾದ್ಯ ಶ್ರುತಿ. ಕೈಯಲ್ಲೇ ಎಳೆದು ಬಿಗಿಪಡಿಸಿಕೊಳ್ಳುವುದು ಮುಖ್ಯವಾದ್ಯ. ಈ ಎರಡು ಚೌಡಿಕೆಗಳನ್ನೂ ಮೇಳದಲ್ಲಿ ಗೊಂದಲಗಳಲ್ಲಿ ಬಳಸುತ್ತಾರೆ. ದೇವಿಯ ಪೂಜಾ ಸಂದರ್ಭದಲ್ಲಿ ಇದನ್ನು ನುಡಿಸುತ್ತಾ ಹಾಡುತ್ತಾರೆ. ಉಳಿದ ಸಂದರ್ಭದಲ್ಲಿ ಗದ್ದಿಗೆಯ ಮೇಲೆ ಇಟ್ಟು ಪೂಜಿಸುತ್ತಾರೆ. ಇದು ದೇವಿಯ ಸಂಕೇತವಾದುದರಿಂದ ಪೂಜಾವಸ್ತುವೆನಿಸುತ್ತದೆ.

ಚೌಡಿಕೆ ಪರಶುರಾಮನ ವಾದ್ಯ ಎನ್ನಲಾಗಿದೆ. ಎಲ್ಲಮ್ಮ ರೇಣುಕೆಯ ಅವತಾರವೆಂಬ ನಂಬಿಕೆ ಇದಕ್ಕೆ ಮುಖ್ಯ ಕಾರಣ. ತನ್ನ ತಾಯಿಯನ್ನು ಪ್ರಸನ್ನಗೊಳಿಸಲು ಕಾರ್ತವೀರ್ಯಾರ್ಜುನನನ್ನು ಕೊಂದು ಅವನ ಶರೀರದಿಂದ ಒಂದು ವಾದ್ಯವನ್ನು ಮಾಡಿಕೊಂಡು ಪರಶುರಾಮ ನುಡಿಸುತ್ತ ಬಂದ. ರೇಣುಕೆಯ ಎದುರು ಅದನ್ನು ನುಡಿಸುತ್ತ ಹಾಡಿ, ಕುಣಿದು ಅವಳನ್ನು ಸಂತುಷ್ಟಳನ್ನಾಗಿ ಮಾಡಿದ. ಪರಶುರಾಮನ ಪರಂಪರೆಗೆ ಸೇರಿದವರೆನ್ನಲಾದ ಈ ಭಕ್ತರೂ ಚೌಡಿಕೆಯಿಂದ ಎಲ್ಲಮ್ಮನನ್ನು ಸಂತುಷ್ಟಿಗೊಳಿಸುತ್ತಾರೆ.

ಚೌಡಿಕೆ ಮೇಳದಲ್ಲಿ ಗೊಂದಲಿಗರ ಮೇಳದಂತೆ ಸಮೇಳ ಬಳಸುವ ಪದ್ಧತಿಯಿಲ್ಲ. ಭಾಗವಹಿಸುವ ಇಬ್ಬರು ಕಲಾವಿದರೂ ಒಂದೊಂದು ಚೌಡಿಕೆಯನ್ನು ಹಿಡಿದಿರುತ್ತಾರೆ. ಮೇಳಕ್ಕೆ ಒಂದು ಸಣ್ಣ ಚಪ್ಪರವಾದರೆ ಸಾಕು. ಒಬ್ಬ ಕಲಾವಿದ ಮುಖ್ಯ ಕಥೆಯನ್ನು ಚೌಡಿಕೆಯ ಗತ್ತಿಗೆ ಹಾಡುತ್ತ ಕುಣಿಯುತ್ತಾನೆ. ಮತ್ತೊಬ್ಬ ಅದಕ್ಕೆ ಶ್ರುತಿ ಹಿಡಿದು ತಾನೂ ಭಾಗವಹಿಸುತ್ತಾನೆ, ಹಿಮ್ಮೇಳ ಹಾಡುತ್ತಾನೆ. ನಡುನಡುವೆ ಗದ್ಯನಿರೂಪಣೆಯೂ ಬರುತ್ತದೆ.

ಚೌಡಿಕೆ ಮೇಳದ ಮುಖ್ಯ ಕಥೆ ಎಲ್ಲಮ್ಮನಿಗೆ ಸಂಬಂಧಪಡುತ್ತದೆ. ಇದು ಚೌಡಿಕೆಯವರ ಧಾರ್ಮಿಕ ಕಥೆ. ಇದರ ಜೊತೆಗೆ ಅನೇಕ ಲೌಕಿಕ ಕಥೆಗಳನ್ನೂ ಅವರು ಬಳಸಿಕೊಳ್ಳುವುದುಂಟು. ಸರ್ಜಪ್ಪನಾಯಕನ ಕಥೆ ಇಲ್ಲಿ ಮುಖ್ಯವಾದುದು. ತರೀಕೆರೆ ಪಾಳೆಯಗಾರರ ಪರಂಪರೆಯಲ್ಲಿ ಅತ್ಯಂತ ಪ್ರಬಲನಾದ ಸರ್ಜಪ್ಪನಾಯಕನ ಸಾಹಸವನ್ನು ಬಣ್ಣಿಸುವ ಕಥೆ ಚೌಡಿಕೆಯವರಲ್ಲಿ ಮಾತ್ರ ಉಳಿದಿದೆ. ಇದಕ್ಕೆ ಕಾರಣ ಸರ್ಜಪ್ಪನಾಯಕನೂ ಎಲ್ಲಮ್ಮನ ಭಕ್ತ. ಬಸವಕುಮಾರ–ಲೋಹಿತಕುಮಾರರ ಕಥೆಯೂ ಚೌಡಿಕೆಯವರಲ್ಲಿ ಜನಪ್ರಿಯವಾಗಿದೆ. ಕರಪಾಲಮೇಳದಂತೆ ಚೌಡಿಕೆಮೇಳವೂ ಸಾಹಿತ್ಯ, ನೃತ್ಯ ಹಾಗೂ ಸಂಗೀತಗಳಿಂದ ಮುಪ್ಪುರಿಗೊಂಡ ಕಲೆ. ಕರಿಯ ನಿಲುವಂಗಿ, ಬಿಳಿಯ ರುಮಾಲು, ಕಚ್ಚೆ ಪಂಚೆ, ನಡುಪಟ್ಟಿ–ಇವುಗಳಿಂದ ಅಲಂಕೃತರಾಗಿ ಚೌಡಿಕೆಯವರು ರಂಗಕ್ಕೆ ಸಜ್ಜಾಗುತ್ತಾರೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನೃತ್ಯಕ್ಕೆ ಅನುವಾಗುತ್ತಾರೆ. ಚೌಡಿಕೆಯ ಜೊತೆಗೆ ಮತ್ತೆ ಯಾವ ಪೋಷಕ ವಾದ್ಯಗಳನ್ನೂ ಇವರು ಬಳಸುವುದು ವಿರಳ. ತುರುವೇಕೆರೆ ತಾಲ್ಲೂಕಿನ ಚಿಕ್ಕತುರುವೇಕೆರೆಯ ಚೌಡಿಕೆ ಎಲ್ಲಯ್ಯನವರ ಮೇಳ ಅತ್ಯಂತ ಜನಪ್ರಿಯವಾದುದು.

(ಜೆ.ಎಸ್.ಪಿ.)

**ಚೌಥಾಯಿ :** ಒಟ್ಟು ಉತ್ಪನ್ನದ ನಾಲ್ಕನೆಯ ಒಂದು ಭಾಗವಾಗಿ ಕೊಡಬೇಕಾಗಿದ್ದ ಕಂದಾಯ. ಪ್ರಥಮತಃ ಶಿವಾಜಿ ಇದನ್ನು ಜಾರಿಗೆ ತಂದ. ಶಿವಾಜಿಯ ಆಡಳಿತಕ್ಕೊಳಪಟ್ಟಿದ್ದ ಭಾಗ ವಿಶೇಷವಾಗಿ ಗುಡ್ಡಗಾಡಿನಿಂದ ಕೂಡಿದ್ದರಿಂದ ಅಲ್ಲಿ ಹೆಚ್ಚು ವರಮಾನ ಗಳಿಸುವುದು ಅವನಿಗೆ ಸಾಧ್ಯವಿರಲಿಲ್ಲ. ಆದ್ದರಿಂದ ರಾಜ್ಯ ವಿಸ್ತರಣೆಗೆ ಅಗತ್ಯವಾದ ಹಣಕ್ಕಾಗಿ ಶಿವಾಜಿ ಈ ಉಪಾಯವನ್ನು ಕೈಗೊಂಡು ತನ್ನ ಅಧೀನಕ್ಕೆ ಒಳಪಡದಿದ್ದ ರಾಜ್ಯಗಳ ಮೇಲೆ ಇದನ್ನು ವಿಧಿಸುತ್ತಿದ್ದ. ಮುಸಲ್ಮಾನ ರಾಜರಿಂದ ಹಣ ವಸೂಲು ಮಾಡಲೂ ಈ ವಿಧಾನವನ್ನನುಸರಿಸುತ್ತಿದ್ದ. ಸ್ವ–ಇಚ್ಛೆಯಿಂದ ಚೌಥಾಯಿ ಕೊಡಲೊಪ್ಪಿದರೆ ಮರಾಠರು ಅವರಿಗೆ ಯಾವ ವಿಧವಾದ ತೊಂದರೆಯನ್ನೂ ಕೊಡುತ್ತಿರಲಿಲ್ಲ. ಆದಿಲ್‌ಷಾಹಿಯಿಂದ ಮೂರು ಲಕ್ಷ, ಕುತುಬ್‌ಷಾಹಿಯಿಂದ ಐದು ಲಕ್ಷ ಹೊನ್ನನ್ನು ಪ್ರತಿವರ್ಷ ಶಿವಾಜಿ ಈ ರೀತಿ ಪಡೆಯತೊಡಗಿದ (1668). ಅಲ್ಲದೆ ದಿಲ್ಲಿಯ ಮೊಗಲರಿಂದಲೂ 1671ರಿಂದ ಚೌಥಾಯಿ ವಸೂಲಿ ಹಕ್ಕನ್ನು ಪಡೆದ. ಅನಂತರ ಗೋವದ ಪೋರ್ಚುಗೀಸರು, ಬೆದನೂರಕರ–ಸೊಂಧೇಕರರು, ಕರ್ನಾಟಕದ ಪಾಳೆಯಗಾರರು ಮುಂತಾದವರಿಂದಲೂ ಅವನು ಚೌಥಾಯಿ ವಸೂಲು ಮಾಡತೊಡಗಿದ. ಚೌಥಾಯಿ ಕೊಟ್ಟ ಸಂಸ್ಥಾನದ ರಕ್ಷಣೆಯ ಹೊಣೆ ಶಿವಾಜಿಯ ಸೈನ್ಯದ್ದಾಗಿತ್ತು. ಅವನ ಅನಂತರವೂ ಚೌಥಾಯಿ ಒಂದು ಕಾಯಂ ಹಕ್ಕಾಗಿ ಪರಿಣಮಿಸಿತು. ದಿಲ್ಲಿಯ ಬಾದಷಹರ ಪರವಾನಗಿಯ ಆಧಾರದ ಮೇಲೆ ಭಾರತದ ಬೇರೆಬೇರೆ ಸಂಸ್ಥಾನಿಕರಿಂದ ಸಾಮೋಪಚಾರ ಇಲ್ಲವೆ ಒತ್ತಾಯದಿಂದ ಮರಾಠರು ಚೌಥಾಯಿ ವಸೂಲು ಮಾಡುತ್ತಿದ್ದರು. 1719ರಲ್ಲಿ ಕೊಟ್ಟ ಸನದಿನಲ್ಲಿ ದಕ್ಷಿಣ ಭಾರತದ ಆರೂವರೆ ಸಭೆಗಳ ಚೌಥಾಯಿ ವಸೂಲು ಮಾಡುವ ಹಕ್ಕು ಇದ್ದುದರಿಂದ ಶಾಹೂ ಸೈನ್ಯವನ್ನಿಟ್ಟುಕೊಂಡು ಆ ಸಭೆಗಳನ್ನು ಕಾಪಾಡಬೇಕಿತ್ತು. ದಕ್ಷಿಣ ಸುಭೆಗಳ ಒಟ್ಟು ಉತ್ಪನ್ನ ಹದಿನೆಂಟು ಕೋಟಿ ಇದ್ದುದರಿಂದ ಮರಾಠರಿಗೆ ಚೌಥಾಯಿಂದಲೇ ಸುಮಾರು ನಾಲ್ಕೂವರೆ ಕೋಟಿ ಹೊನ್ನು ಬರುತ್ತಿತ್ತು. ಹಣದ, ಸೈನ್ಯದ ಮತ್ತು ಒಗ್ಗಟ್ಟಿನ ಕೊರತೆಯಿಂದಾಗಿ ಕೊನೆಯವರೆಗೂ ಚೌಥಾಯಿ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ಮರಾಠರಿಗೆ ಸಾಧ್ಯವಾಗಲಿಲ್ಲ. (ಬಿ.ಎಂ.)

**ಚೌಧುರಿ, ಆಶುತೋಷ :** 1860–1924. ಭಾರತದ ಒಬ್ಬ ಶಿಕ್ಷಣತಜ್ಞ. ಉತ್ತರ ಬಂಗಾಳದ ಪಾಬ್ನಾ ಜಿಲ್ಲೆಯ ಜಮೀನ್ದಾರ ದುರ್ಗಾದಾಸರ ಪ್ರಥಮ ಪುತ್ರ. ಪಾಶ್ಚಾತ್ಯ ಶಿಕ್ಷಣವನ್ನು ಪಡೆದು ವಕೀಲವೃತ್ತಿಯನ್ನು ಅವಲಂಬಿಸಿದ್ದ ಈತ ಆಂಗ್ಲ ವಿದ್ಯಾಭ್ಯಾಸಕ್ರಮದ ಉತ್ತಮ ಅಂಶಗಳನ್ನು ತನ್ನ ವಿಚಾರಧಾರೆಯಲ್ಲಿ ಅಳವಡಿಸಿಕೊಂಡಿದ್ದ. ಆಂಗ್ಲ ಶಿಕ್ಷಣಪದ್ಧತಿಯ

ಅಂಧಾನುಕರಣವನ್ನು ಖಂಡಿಸುತ್ತಿದ್ದರೂ ಪಾಶ್ಚಾತ್ಯ ಮತ್ತು ಭಾರತೀಯ ಸಂಸ್ಕೃತಿಗಳ ಅತ್ಯುತ್ತಮ ಸಮನ್ವಯದಲ್ಲಿ ನಂಬಿಕೆಯಿಟ್ಟಿದ್ದ. ಈತ ವೈಜ್ಞಾನಿಕ ಮತ್ತು ಕೈಗಾರಿಕಾ ಶಿಕ್ಷಣದ ಅಭಿವೃದ್ಧಿಯ ಬೆಂಬಲಿಗನಾಗಿದ್ದ. ತನ್ನ ಈ ಧ್ಯೇಯಸಾಧನೆಗಾಗಿ ಈತ ಪ್ರತಿ ಜಿಲ್ಲೆಯಲ್ಲಿಯೂ ಒಂದು ಸಂಘವನ್ನು ಸ್ಥಾಪಿಸಲು ಪ್ರಯತ್ನಿಸಿದ. ಪಾಶ್ಚಾತ್ಯ ದೇಶಗಳಲ್ಲಿ ವಿಜ್ಞಾನ ಮತ್ತು ಕೈಗಾರಿಕೆ ಜ್ಞಾನಗಳನ್ನು ಪಡೆದ ವಿದ್ಯಾರ್ಥಿಗಳು ದೇಶದ ಮೂಲ ಆವಶ್ಯಕತೆಯಾದ ಕೈಗಾರಿಕಾ ಅಭಿವೃದ್ಧಿಯನ್ನು ದೇಶೀಯ ಸಂಪತ್ತಿನ ಉಪಯೋಗದಿಂದ ಮಾಡಬೇಕೆಂದು ಒತ್ತಿ ಹೇಳುತ್ತಿದ್ದ. ಭಾರತೀಯ ಶಿಕ್ಷಣ ಕೈಗಾರಿಕೆಯ ಕ್ಷೇತ್ರದಲ್ಲಿ ಮುಂದುವರಿಯಬೇಕೆಂದೂ ಆ ಮೂಲಕ ರಾಷ್ಟ್ರ ಆಧುನಿಕವಾಗಿ ಪ್ರಗತಿ ಸಾಧಿಸಬಲ್ಲದೆಂದೂ ದೃಢವಾಗಿ ನಂಬಿದ್ದು, ಅದಕ್ಕಾಗಿ ಈತ ಆಜೀವ ಶ್ರಮಿಸಿದ. (ಎ.ಎಸ್.ಎಸ್.)

**ಚೌಧುರಿ, ಗೋಪಬಂಧು :** 1895–1958. ಒರಿಸ್ಸದ ಒಬ್ಬ ಸ್ವಾತಂತ್ರ್ಯಯೋಧ. ಮಹಾತ್ಮ ಗಾಂಧಿಯವರ ಅನುಯಾಯಿ. ಸರ್ವೋದಯ ಕಾರ್ಯಕರ್ತ. 1895ರ ಮೇ 8ರಂದು ಕಟಕ್‌ನಲ್ಲಿ ಜನಿಸಿದರು. ತಂದೆ ಗೋಕುಲಾನಂದ ಚೌಧುರಿ, ತಾಯಿ ಪದ್ಮಾವತಿ ದೇವಿ. ಇವರದು ಒರಿಯದ ಕವಿ ಸರಳದಾಸನ ವಂಶವೆಂದು ಹೇಳಲಾಗಿದೆ. ಗೋಪಬಂಧು ಚೌಧುರಿ 1914ರಲ್ಲಿ ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಿಂದ ಗಣಿತಶಾಸ್ತ್ರದಲ್ಲಿ ಎಂ.ಎ. ಪದವಿ ಗಳಿಸಿದರು. ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಂದುವರಿಯಬೇಕೆಂಬುದು ಅವರ ಅಭಿಲಾಷೆಯಾಗಿತ್ತು. ಇದಕ್ಕೆ ಒಂದನೆಯ ಮಹಾಯುದ್ಧವೂ 1915ರಲ್ಲಿ ತಂದೆಯ ಮರಣವೂ ಅಡ್ಡಿಯಾದುವು. 1917ರಲ್ಲಿ ನ್ಯಾಯಶಾಸ್ತ್ರದ ಪೂರ್ವ ಪರೀಕ್ಷೆಯಲ್ಲಿ ಅವರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ವರ್ಷ ಅವರಿಗೆ ಸರ್ಕಾರದಲ್ಲಿ ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಹುದ್ದೆ ದೊರಕಿತು.

1919ರಲ್ಲಿ ಅವರು ಜಾಜ್‌ಪುರ ಉಪವಿಭಾಗದಲ್ಲಿ ದ್ವಿತೀಯಾಧಿಕಾರಿಯಾಗಿದ್ದಾಗ ಅಲ್ಲಿ ಪ್ರವಾಹವೂ, ಅದರ ಹಿಂದೆಯೇ ಕ್ಷಾಮವೂ ಸಂಭವಿಸಿದುವು. ಅವರು ಸರ್ಕಾರದ ಪರಿಹಾರಾಧಿಕಾರಿಯಾಗಿ ಕೆಲಸ ಮಾಡಿದರು. ಸುಲಭವಾಗಿ ತಲುಪಲಾಗದ ದೂರದೂರದ ಹಳ್ಳಿಗಳಿಗೆಲ್ಲ ಸ್ವಯಂಸೇವಕರೊಡನೆ ಹೋಗಿ ಪೀಡಿತರಿಗೆ ಪರಿಹಾರ ಒದಗಿಸಿದರು. ಇದಕ್ಕಾಗಿ ತಮ್ಮ ಹಣ ಖರ್ಚು ಮಾಡಲು ಕೂಡ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಈ ಕಾರ್ಯದಲ್ಲಿ ಸರ್ಕಾರದ ವಿಳಂಬನೀತಿಯನ್ನು ಬಹಿರಂಗವಾಗಿ ಟೀಕಿಸಿದ್ದರಿಂದ ಮೇಲಿನ ಅಧಿಕಾರಿಗಳ ಅವಕೃಪೆಗೆ ಅವರು ಒಳಗಾದರು. 1921ರಲ್ಲಿ ಅವರಿಗೆ ಸಂಬಲ್‌ಪುರ್ ಜಿಲ್ಲೆಯ ಬಾರ್‌ಗರ್‌ಗೆ ವರ್ಗವಾಯಿತು.

ಗೋಪಬಂಧು ಚೌಧುರಿಯವರು ಸರ್ಕಾರದ ನೌಕರಿಗೆ ರಾಜೀನಾಮೆ ಇತ್ತು ಮಹಾತ್ಮ ಗಾಂಧಿಯವರ ಅಸಹಕಾರ ಆಂದೋಳನ ಸೇರಿದರು. ಕಟಕ್ ಜಿಲ್ಲೆಯ ಜಗತ್‌ಸಿಂಗ್‌ಪುರದ ಬಳಿ ಸತ್ಯಾಗ್ರಹಿಗಳಿಗೆ ತರಬೇತು ನೀಡಲು ಅಲಕಾ ಆಶ್ರಮ ಸ್ಥಾಪಿಸಿದರು. ಅಲ್ಲಿ 6 ವರ್ಷ ಇದ್ದು ಅದನ್ನು ಮಹಾತ್ಮ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮದ ಚಟುವಟಿಕೆಯ ಕೇಂದ್ರವನ್ನಾಗಿ ಬೆಳೆಸಿದರು.

ಗೋಪಬಂಧು 1924ರಲ್ಲಿ ಕಟಕ್ ಪ್ರಾಂತ್ಯ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ 1927ರವರೆಗೂ ಕಟಕ್ ಜಿಲ್ಲಾ ಮಂಡಳಿಯ ಅಧ್ಯಕ್ಷರಾಗಿ, 1928ರಲ್ಲಿ ವಿಶ್ವೇಶ್ವರಯ್ಯ ಪ್ರವಾಹ ಸಮಿತಿಯ ಸದಸ್ಯರಾಗಿ ಪ್ರವಾಹಪೀಡಿತ ಪ್ರದೇಶಗಳಲ್ಲಿ ಪರಿಹಾರಕಾರ್ಯದಲ್ಲಿ ಕೆಲಸಮಾಡಿದರು. 1930ರ ಉಪ್ಪಿನ ಸತ್ಯಾಗ್ರಹದಲ್ಲಿ ಅವರು ಬಲಸೋರ್ ಜಿಲ್ಲೆಯ ಇನ್‌ಚುಡಿ ಉಪ್ಪಿನ ಕ್ಷೇತ್ರಕ್ಕೆ ಸಾವಿರಾರು ಸತ್ಯಾಗ್ರಹಿಗಳೊಡನೆ ನಡೆದರು. 1930ರ ಏಪ್ರಿಲ್ 8ರಂದು ಕಟಕ್ ಜಿಲ್ಲೆಯ ಚಂದೋಲ್ ಹತ್ತಿರ ಪೋಲಿಸರು ಅವರನ್ನು ಬಂಧಿಸಿದರು. ಎರಡು ವಾರಗಳ ಅನಂತರ ಅವರು ಬಿಡುಗಡೆಯಾದರೂ ಜೂನ್ 24ರಂದು ಮತ್ತೆ ಬಂಧನಕ್ಕೊಳಗಾಗಿ 10 ತಿಂಗಳ ಕಾರಾಗೃಹ ಶಿಕ್ಷೆ ಅನುಭವಿಸಿದರು. ಗಾಂಧಿ–ಅರ್ವಿನ್ ಒಪ್ಪಂದವಾದ ಮೇಲೆ 1931ರಲ್ಲಿ ಇವರನ್ನು ಬಂಧನದಿಂದ ಬಿಡಲಾಯಿತು. ಮತ್ತೆ 1932ರಲ್ಲೂ 1933ರಲ್ಲೂ ಸರ್ಕಾರ ಇವರನ್ನು ಬಂಧಿಸಿತು. ಗೋಪಬಂಧುವಿನ ವಯಸ್ಸಾದ ತಾಯಿಯನ್ನುಳಿದು ಅವರ ಕುಟುಂಬದ ಮಿಕ್ಕೆಲ್ಲರೂ ಉಪ್ಪಿನ ಸತ್ಯಾಗ್ರಹ ಸಮಯದಲ್ಲಿ ಬಂಧಿತರಾಗಿದ್ದರು.

1932ರಲ್ಲಿ ಗೋಪಬಂಧು ಚೌಧುರಿಯವರು ಗಾಂಧಿ ಸೇವಾಸಂಘದ ಸದಸ್ಯರಾದರು. ಮುಂಬಯಿಯಲ್ಲಿ ಸಮಾವೇಶಗೊಂಡ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅವರು ಭಾಗವಹಿಸಿದರು. 1934ರಲ್ಲಿ ಬಿಹಾರದ ಭೂಕಂಪದಿಂದ ನೊಂದವರಿಗೆ ಪರಿಹಾರ ಒದಗಿಸುವ ಕಾರ್ಯದಲ್ಲಿ ನಿರತರಾಗಿದ್ದರು.

1934ರ ಮೇ 9ರಿಂದ ಜೂನ್ 8ರವರೆಗೆ ಒರಿಸ್ಸದಲ್ಲಿ ಮಹಾತ್ಮ ಗಾಂಧಿಯವರ ಪಾದಯಾತ್ರೆಯಲ್ಲಿ ಅವರ ಜೊತೆಯಲ್ಲಿದ್ದರು. ಆಗಸ್ಟ್ ತಿಂಗಳಲ್ಲಿ ಅವರು ತಮ್ಮ ಕುಟುಂಬದವರೊಡನೆ ಮತ್ತು ಕೆಲವು ಸ್ವಯಂಸೇವಕರೊಂದಿಗೆ ಕಟಕ್ಕಿನ ಬರಿ ಗ್ರಾಮಕ್ಕೆ ಬಂದು ಗ್ರಾಮ ಪುನಾರಚನಾಕಾರ್ಯದಲ್ಲಿ ನಿರತರಾದರು.

1938ರಲ್ಲಿ ಪುರಿ ಜಿಲ್ಲೆಯ ದೆಲಾಂಗಿನಲ್ಲಿ ಗಾಂಧಿ ಸೇವಾಸಂಘದ ನಾಲ್ಕನೆಯ ಸಮ್ಮೇಳನದ ಯಶಸ್ಸಿಗೆ ಇವರ ದುಡಿಮೆ ಕಾರಣ. ಆ ವರ್ಷ ಇವರು ಉತ್ತರ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾದರು. 1940ರಲ್ಲಿ ಇವರನ್ನು ನವಜೀವನ್ ಮಂಡಲದ ಅಧ್ಯಕ್ಷರಾಗಿ ಆರಿಸಲಾಯಿತು.

1942ರ ಆಗಸ್ಟ್‌ನಲ್ಲಿ ಭಾರತದಲ್ಲಿ ನಡೆದ ಚಳವಳಿಯಲ್ಲಿ ಬ್ರಿಟಿಷ್ ಸರ್ಕಾರ ಬರಿ ಗ್ರಾಮಸ್ಥರನ್ನು ದಮನಮಾಡಲು ನಿರ್ಧರಿಸಿ, ಗೋಪಬಂಧು ಅಲ್ಲಿ ನಿರ್ಮಿಸಿದ್ದ ಆಶ್ರಮವನ್ನು ಕೆಡವಿಸಿ, ಗೋಪಬಂಧು ಕುಟುಂಬದವರನ್ನೂ ಆಶ್ರಮದ ಕಾರ್ಯಕರ್ತರನ್ನೂ ಬಂಧಿಸಿತು. ಗೋಪಬಂಧು ಮೂರೂವರೆ ವರ್ಷಕಾಲ ಜೈಲಿನಲ್ಲಿದ್ದರು. ಅವರು ಬಿಡುಗಡೆಯಾದಾಗ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸು ಸರ್ಕಾರ ರಚಿಸುವ ತೀರ್ಮಾನ ಕೈಗೊಂಡಿತ್ತು. ಗೋಪಬಂಧು ಚೌಧುರಿಯವರು ರಾಜಕೀಯ ಅಧಿಕಾರಕ್ಕೆ ಆಸೆಪಡದೆ ಗಾಂಧಿಯವರ ರಚನಾತ್ಮಕ ಕಾರ್ಯವನ್ನೇ ಮುಂದುವರಿಸಿದರು.

ಭಾರತ ಸ್ವಾತಂತ್ರ್ಯಾನಂತರ ಮಹಾತ್ಮ ಗಾಂಧಿಯವರ ಕೊಲೆಯಾದಾಗ ಗೋಪಬಂಧುವಿನ ಮನಸ್ಸಿಗೆ ದೊಡ್ಡ ಆಘಾತವಾಯಿತು. ಇವರು ಸರ್ವೋದಯ ಪ್ರಚಾರಕ್ಕಾಗಿ ತಮ್ಮ ಜೀವನವನ್ನು ಮುಡುಪಿಟ್ಟರು. 1950ರಲ್ಲಿ ಎರಡನೆಯ ಸರ್ವೋದಯ ಸಮ್ಮೇಳನ ಆಂಗುಲ್‌ನಲ್ಲಿ ನಡೆಯಿತು. ತಮ್ಮ ಪತ್ನಿಯೊಡನೆ ಒರಿಸ್ಸದಲ್ಲಿ ಪಾದಯಾತ್ರೆ ಮಾಡಿ ವಿನೋಬಾ ಭಾವೆಯವರ ಭೂದಾನ, ಗ್ರಾಮದಾನ ಚಳವಳಿಯ ಪ್ರಚಾರ ಮಾಡಿದರು. 1955ರಲ್ಲಿ ವಿನೋಬಾ ಭಾವೆಯವರು ಒರಿಸ್ಸದಲ್ಲಿ ಪಾದಯಾತ್ರೆ ಕೈಗೊಂಡರು. ಆ ಸಮಯದಲ್ಲಿ ವಿನೋಬಾ ಭಾವೆಯವರ ನೇತೃತ್ವದಲ್ಲಿ ಪುರಿಯಲ್ಲಿ ಅಖಿಲ ಭಾರತ ಸರ್ವೋದಯ ಸಮ್ಮೇಳನ ನಡೆಯಿತು. ಈ ಎಲ್ಲ ಚಳವಳಿಗಳಲ್ಲೂ ಶ್ರದ್ಧೆಯಿಂದ ದುಡಿದ ಗೋಪಬಂಧು ಚೌಧುರಿಯವರು ಮೆದುಳಿನ ರಕ್ತಸ್ರಾವದಿಂದ 1958ರ ಏಪ್ರಿಲ್ 29ರಂದು ತೀರಿಕೊಂಡರು. *

**ಚೌಧುರಿ, ಜೋಯಂತೋನಾಥ್ :** 1908–1983 ಭಾರತ ಸೈನ್ಯದಳದ ಒಬ್ಬ ನಿವೃತ್ತ ದಂಡನಾಯಕ. 1965ರಲ್ಲಿ ಪಾಕಿಸ್ತಾನದ ಭಾರತದ ವಿರುದ್ಧ ಹಠಾತ್ ಯುದ್ಧ ಸಾರಿದಾಗ ತನ್ನ ಅದ್ವಿತೀಯ ಟ್ಯಾಂಕ್ ಸಮರ ಕೌಶಲದಿಂದ ಭಾರತಕ್ಕೆ ವಿಜಯವನ್ನು ತಂದುಕೊಟ್ಟ ಮಹಾಸೇನಾನಿ. ಕಲ್ಕತ್ತದ ಸುಪ್ರಸಿದ್ಧ ಬ್ಯಾರಿಸ್ಟರ್ ಅಮಿಯಾನಾಥ್ ಚೌಧುರಿಯವರ ಹಿರಿಯ ಮಗನಾಗಿ ಜೋಯಂತೋನಾಥರು ಜನಿಸಿದರು (10–06–1908). ಕಲ್ಕತ್ತ ಹಾಗೂ ಲಂಡನ್ನಿನಲ್ಲಿ ಪ್ರಾರಂಭದ ಶಿಕ್ಷಣ. ಒಲವು ಸೈನ್ಯದ ಕಡೆಗೆ. ಇಂಗ್ಲೆಂಡಿನ ಸುಪ್ರಸಿದ್ಧ ಸ್ಯಾಂಡ್ ಹರ್ಸ್ಟ್ ರಾಯಲ್ ಮಿಲಿಟರಿ ಕಾಲೇಜಿನಲ್ಲಿ ಉನ್ನತ ಶಿಕ್ಷಣ. 1928ರ ಫೆಬ್ರುವರಿ 1ರಂದು ಭಾರತದ ಸೈನ್ಯದಲ್ಲಿ ಸನ್ನದು ಪಡೆದು ಅಧಿಕಾರಿಯಾಗಿ ನೇಮಕ. ಇವರಿಗೆ ಯುದ್ಧಾನುಭವ ಲಭಿಸಿದ್ದು ಮೊದಲನೆಯ ಮಹಾಯುದ್ಧದಲ್ಲಿ (1939–45). ದೂರಪ್ರಾಚ್ಯ ಹಾಗೂ ಬರ್ಮಾ (ಈಗಿನ ಮಾಯನ್ಮಾರ್) ಕ್ಷೇತ್ರಗಳಲ್ಲಿ ಮಿಂಚಿನ ವೇಗದಿಂದ ಮುಂಚೂಣಿಯಲ್ಲಿ ಸೇವೆ ಸಲ್ಲಿಸಿದ ಚೌಧುರಿಯವರಿಗೆ ಸಮರದ ಕೊನೆಯಲ್ಲಿ ಓ.ಬಿ.ಇ. ಪ್ರಶಸ್ತಿ ಲಭಿಸಿದ್ದು ತೀರ ಸಹಜವಾಗಿತ್ತು. ಆ ವೇಳೆಗೆ ಅವರು ಬ್ರಿಗೇಡಿಯರ್ ಪದವಿ ಪಡೆದು ಮಲಯಾದಲ್ಲಿ ಆಡಳಿತದ ಹೊಣೆಯನ್ನು ವಹಿಸಿಕೊಂಡಿದ್ದರು. ಇವರು ಭಾರತದ ಸಮಸ್ತ ಭೂಸೈನ್ಯದ ಅಧಿಪತಿಯಾದದ್ದು 1948ರಲ್ಲಿ. ಹೈದರಾಬಾದ್ ಸಂಸ್ಥಾನದ ವಿರುದ್ಧ ಸ್ವತಂತ್ರ ಭಾರತದ ಸರ್ಕಾರ ಪೋಲಿಸ್ ಕಾರ್ಯಾಚರಣೆಯನ್ನು ಘೋಷಿಸಿದಾಗ ಅದರ ನಾಯಕತ್ವವನ್ನು ವಹಿಸಿದ್ದ ಚೌಧುರಿಯವರು ಬಲು ಕ್ಷಿಪ್ರವಾಗಿಯೂ ಅತಿ ಕಡಿಮೆ ಸಾವು ನೋವುಗಳಿಂದಲೂ ಶಾಂತಿಯನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾದರು. ಮುಂದೆ 1948–49 ರಲ್ಲಿ ಇವರು ಹೈದರಾಬಾದಿನಲ್ಲಿ ಮಿಲಿಟರಿ ಗವರ್ನರರಾಗಿಯೂ ಇದ್ದರು. 1952ರಲ್ಲಿ ಒಂದನೆಯ ಆರ್ಮ್‌ಡ್ ಡಿವಿಷನ್ನಿನ ದಳಪತಿ, 1952–55 ರಲ್ಲಿ ಅಡ್ಜುಟೆಂಟ್–ಜನರಲ್ ಮತ್ತು 1955–56ರಲ್ಲಿ ಚೀಫ್–ಆಫ್–ಜನರಲ್–ಸ್ಟಾಫ್ ಹುದ್ದೆಗಳಲ್ಲಿದ್ದರು. 1961ರಲ್ಲಿ ನಡೆದ ಗೋವಾ ಕಾರ್ಯಾಚರಣೆಯ ನಾಯಕತ್ವ ಚೌಧುರಿಯವರದೇ. ಕೇವಲ 30 ಗಂಟೆಗಳ ಒಳಗೆ ಗೋವಾ ಆಡಳಿತೆಯನ್ನು ಹದ್ದುಬಸ್ತಿಗೆ ತಂದು ಶಾಂತಿಸ್ಥಾಪಿಸಿದ ಚೌಧುರಿಯವರ ಚಾಕಚಕ್ಯ ಸರ್ವರ ಮೆಚ್ಚುಗೆ ಗಳಿಸಿತು.

1962ರಿಂದ 66ರವರೆಗೆ ಚೌಧುರಿಯವರು ಭಾರತ ಭೂಸೈನ್ಯಗಳ ಪ್ರಧಾನ ನಾಯಕರಾಗಿದ್ದರು. ಜನರಲ್ ಪದವಿಯ ಸಮೇತ ಈ ಹುದ್ದೆ ಅವರಿಗೆ ಲಭಿಸಿತು. 1965ರ ಸೆಪ್ಟೆಂಬರ್ 1ರಂದು ಪಾಕಿಸ್ತಾನ ಆಪರೇಷನ್ ಗ್ರಾಂಡ್‌ಸ್ಲಾಮ್ ಎಂಬ ಮಹಾಯುದ್ಧ ಯೋಜನೆಯನ್ನು ಭಾರತದ ವಿರುದ್ಧ ಹಠಾತ್ತಾಗಿ ಸಾರಿತು. ಸುಮಾರು 90 ಅತ್ಯಾಧುನಿಕ ಹಾಗೂ ಬಹೂಪಯೋಗಿ ಅಮೆರಿಕನ್ ಟ್ಯಾಂಕುಗಳಿಂದ ಸಜ್ಜಿತವಾದ ಬಲ ಕಾಶ್ಮೀರ ಕಣಿವೆಗೆ ನುಗ್ಗಿತು. ಭಾರತದ ಸ್ಥಳೀಯ ಸೇನಾಬಲಗಳ ನಾಲ್ಕು ಮಡಿ ಪಾಕಿಸ್ತಾನೀ ಸೈನಿಕರು ಅಲ್ಲಿ ಭಾಗಿಗಳಾಗಿದ್ದರು. ಆಗ ಜನರಲ್, ಜೆ.ಎನ್. ಚೌಧುರಿಯವರು ಅದ್ವಿತೀಯ ರಣಕೌಶಲವನ್ನು, ಅಸಾಂಪ್ರದಾಯಿಕ ವಿಧಾನಗಳಿಂದ, ಪ್ರದರ್ಶಿಸಿ ಯುದ್ಧದಲ್ಲಿ ಹೇಗೋ ಯುದ್ಧವಿಧಾನದಲ್ಲೂ ಹಾಗೆ ಹೊಸ ವಿಕ್ರಮವನ್ನು ಸಾಧಿಸಿದರು. ಲಾಹೋರ್ ಹಾಗೂ

ಸಯಾಲ್‌ಕೋಟೆಗಳ ಕಡೆ ಪಾಕಿಸ್ತಾನದ ಎದುರು ಯುದ್ಧವನ್ನು ಚೌಧುರಿಯವರು ಹೂಡಿದುದರಿಂದ ಶತ್ರುಸೈನ್ಯದ ಲಕ್ಷ್ಯ ಹಲವಾರು ಕಡೆ ಏಕಕಾಲದಲ್ಲಿ ಹರಿಯಬೇಕಾದಂಥ ಅನನುಕೂಲ ಸನ್ನಿವೇಶ ಒದಗಿ ಬಂತು. ಇದರಿಂದ ಭಾರತೀಯ ಸೈನ್ಯಗಳಿಗೆ ನೆಲವನ್ನು ಹಿಡಿದಿಟ್ಟುಕೊಳ್ಳುವುದು ಹಾಗೂ ತಮ್ಮ ಬಲಗಳನ್ನು ವೃದ್ಧಿಪಡಿಸಿಕೊಳ್ಳುವುದು ಎರಡೂ ಸುಲಭಸಾಧ್ಯವಾಯಿತು. ಈ ಯುದ್ಧದಲ್ಲಿ ನಮಗೆ ವಿಜಯ ಕೇವಲ 22 ದಿವಸಗಳಲ್ಲಿ ದೊರೆಯಿತು. ಚೌಧುರಿಯವರ ಈ ಪರಮ ಧುರೀಣತ್ವವನ್ನು ಗಮನಿಸಿದ ಸರ್ಕಾರ ಅವರಿಗೆ 1965ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ತಮ್ಮ ನಿವೃತ್ತಿಯ (1966) ತರುವಾಯ ಚೌಧುರಿಯವರು ಕೆನಡದಲ್ಲಿ ಭಾರತದ ಹೈಕಮಿಷನರ್ ಆಗಿ ಸ್ವಲ್ಪ ಕಾಲ ಇದ್ದರು (1966–69). ಅವರು ಉತ್ತಮ ಲೇಖಕರು ಹಾಗೂ ವಾಗ್ಮಿಗಳು. ಸಂಗೀತ, ಫೋಟೋಗ್ರಫಿ, ಪ್ರವಾಸಗಳಲ್ಲಿ ಅವರಿಗೆ ಅಪಾರ ಆಸಕ್ತಿ. ಚೌಧುರಿಯವರು ಏಷ್ಯದ ಅತ್ಯಂತ ಅನುಭವಸ್ಥ ಜನರಲುಗಳಲ್ಲಿ ಒಬ್ಬರು. ಸ್ವಾತಂತ್ರ್ಯಪೂರ್ವದ ಬ್ರಿಟಿಷ್ ಇಂಡಿಯನ್ ಸೇನಾ ಇಲಾಖೆಯಲ್ಲಿ ಅತ್ಯಂತ ಸಮರ್ಥರಾಗಿದ್ದ ಮೂವರು ಬ್ರಿಗೇಡಿಯರುಗಳಲ್ಲಿ ಒಬ್ಬರೆಂದು ಮನ್ನಣೆ ಪಡೆದಿದ್ದರು. ಆರ್ಮರ್ ಯುದ್ಧ ತಂತ್ರದಲ್ಲಿ ಅಗ್ರಗಣ್ಯರು, ಅವರು 1962ರಲ್ಲೇ ನಿವೃತ್ತರಾಗಿರಬೇಕಾಗಿತ್ತು. ಆದರೆ ಚೀನೀಯರು ಅದೇ ವರ್ಷ ನೇಫಾದ ಮೇಲೆ ದಾಳಿಮಾಡಿದಾಗ ಆ ಯುದ್ಧದಲ್ಲಿ ಆರ್ಮರ್ ಕಲೆ ಬಹು ಅಗತ್ಯವೆಂದು ವೇದ್ಯವಾಯಿತು. ಚೌಧುರಿಯವರು ಆ ವಿದ್ಯೆಯಲ್ಲಿ ಪ್ರವೀಣರಾಗಿದ್ದುದರಿಂದ ಅವರನ್ನು ಭಾರತದ ಇಡೀ ಭೂಸೇನಾ ಮಂಡಲಿಯ ಸರ್ವಾಧಿಪತಿಯನ್ನಾಗಿ 1966ರ ವರೆಗೂ ಇಡಲಾಗಿತ್ತು. ಅಮೆರಿಕದ ಆರ್ಮರ್ ಎಂಬ ಮಿಲಿಟರಿ ಜರ್ನಲ್ ಆರ್ಮರ್ ಕ್ಷೇತ್ರದಲ್ಲಿ ಜಗತ್ತಿನ ಅತಿ ಶ್ರೇಷ್ಠ ನಾಲ್ವರು ಅಧಿಕಾರಿಗಳ ಪೈಕಿ ಚೌಧುರಿಯವರು ಒಬ್ಬರೆಂದು ಪ್ರಕಟಿಸಿದೆ. ಅವರು ಏಪ್ರಿಲ್ 6, 1983ರಂದು ನಿಧನರಾದರು. (ಎಂ.ಜಿ.ಕೆ.ಎಂ.)

**ಚೌಪದಿ:** ಇದೊಂದು ಅಚ್ಚಗನ್ನಡ ಛಂದಸ್ಸು. ಇದರಲ್ಲಿ ಅಂಶಗಣಾತ್ಮಕ ಮತ್ತು ಮಾತ್ರಾಗಣಾತ್ಮಕ ಎಂದು ಎರಡು ವಿಧ. ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಹೇಳಿರುವ ಲಕ್ಷಣದಂತೆ ಇದರಲ್ಲಿ ಪ್ರತಿ ಪಾದದಲ್ಲಿಯೂ ಒಂದು ವಿಷ್ಣುಗಣ ಮತ್ತು ಒಂದು ರುದ್ರಗಣ ಬರುತ್ತವೆ. ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ ಇದನ್ನು ಚತುಷ್ಪದಿಕಾ ಎಂದು ಹೆಸರಿಸಿದ್ದಾನೆ. ಚೂಡಾಮಣಿ ಎಂಬ ಗ್ರಂಥದಲ್ಲಿ ಇದು ಬಳಕೆಯಾಗಿರುವುದೆಂದು ಆತ ಹೇಳಿರುವನಾದರೂ ಆ ಗ್ರಂಥ ಅಲಭ್ಯ.

ಚಂದ್ರರಾಜನ ಮದನತಿಲಕದಲ್ಲಿ ಇದು ಬಳಕೆಯಾಗಿರುವುದು ಕಂಡುಬರುತ್ತದೆ.

ವಿ ರು

ರತಿಹೀನಂ। ಪೆಳವಂ ಕುಬ್ಜ।

ಅಂಶಗಣಾನ್ವಿತವಾಗಿದ್ದ ಮೂಲ ಚೌಪದಿ ಅಮಳ ಎಂಬ ಬಂಧದ ಸಂಪರ್ಕದಿಂದ ಮಾತ್ರಾಗಣಕ್ಕೆ ತಿರುಗಿರಬಹುದೆಂಬ ಸಂದೇಹ ಮೂಡುತ್ತದೆ. ಅಮಳದ ಲಯವೂ ಅದರ ಸಾಮಾನ್ಯ ಲಕ್ಷಣವೂ ಚೌಪದಿಯನ್ನೇ ಹೋಲುವುದನ್ನು ಗಮನಿಸಬಹುದು.

ನಾಗವರ್ಮನ ಸೂತ್ರದ ಅಮಳದಲ್ಲಿ ನಾಲ್ಕು ಮಾತ್ರಾಗಣದ ಮುಂದೆ ಆರು ಮಾತ್ರಾಗಣದ ವಿನ್ಯಾಸ ಬಂದಿದೆ. ಚೌಪದಿ ಅಂಶಗಣದಿಂದ ಮಾತ್ರಾಗಣಕ್ಕೆ ತಿರುಗಿರಬಹುದು. ಯಾವ ಹಳಗನ್ನಡ ಕಾವ್ಯಗಳಲ್ಲಿಯೂ ಇದು ಬಳಕೆಯಾಗಿರುವುದು ಕಾಣಬರುವುದಿಲ್ಲ. ನಡುಗನ್ನಡದಲ್ಲಿ ಮಾತ್ರಾಗಣದಿಂದ ಕೂಡಿದ ನಾಲ್ಕು ಪಾದಗಳುಳ್ಳ ಚೌಪದಿ ಬಳಕೆಯಾಗಿದೆ. ಇದರ ಪ್ರತಿ ಪಾದದಲ್ಲಿಯೂ ಐದು ಮಾತ್ರೆಯ ಗಣಗಳು ಮೂರು ಮತ್ತು ಒಂದು ಮೂರು ಮಾತ್ರೆಯ ಗಣ ಇವೆ. ಕೆಲವು ಕಡೆ 3,4,3,4 ಮಾತ್ರೆಯ ಗಣಗಳು ಬಂದಿರುವುದೂ ಉಂಟು.

ಮಹಾನವಮಿ ಪದಗಳು ನಾಲ್ಕು ಪಾದಗಳಲ್ಲಿ ರಚನೆಯಾಗಿದ್ದು ಅವನ್ನೂ ಚೌಪದಿಗಳೆಂದೇ ಕರೆಯಲಾಗಿದೆ. ಇಲ್ಲಿ ಪ್ರತಿಪಾದದಲ್ಲಿ ಐದು ಮಾತ್ರೆಯ ಗಣಗಳು ಮೂರು ಮತ್ತು ಮೂರು ಮಾತ್ರೆಯ ಗಣ ಒಂದು ಕಂಡುಬರುತ್ತದೆ.

ಆಶ್ವಯುಜ । ಶುದ್ಧ ಮಾ । ನವಮಿ ಬರ । ಲೆಂದು ।
ಶಾಶ್ವತದಿ । ಹರಸಿದೆವು । ಬಾಲಕರು । ಬಂದು ।
ಈಶ ನಿಮ । ಗತ್ಯಧಿಕ । ಸುಖವ ಕೊಡ । ಲೆಂದು ।
ಲೇಸಾಗಿ । ಹರಸಿದೆವು । ಬಾಲಕರು । ಬಂದು

ಇವನ್ನು ಪರಿಶೀಲಿಸಿದರೆ ಕೇವಲ ಪಾದಗಳಲ್ಲಿ ಮಾತ್ರ ಪರಸ್ಪರ ಸಾಮ್ಯ ಕಂಡುಬರುತ್ತದೆಯೇ ಹೊರತು ಲಕ್ಷಣದಲ್ಲಿ ಯಾವ ಸಾಮ್ಯವೂ ಕಂಡುಬರುವುದಿಲ್ಲ.

**(ನೋಡಿ: ಕನ್ನಡ-ಛಂದಸ್ಸು)** (ಎಚ್.ಎಸ್.ಜಿ.)

**ಚೌರಾಸಿ:** ಉತ್ತರ ಪ್ರದೇಶದ ಮಥುರಾ ನಗರದ ಬಳಿ ಇರುವ ಜೈನ ಕ್ಷೇತ್ರ. ಕೊನೆಯ ಕೇವಲಿ ಜಂಬುಸ್ವಾಮಿ ಇಲ್ಲಿ ಮುಕ್ತನಾದನೆಂದು ಹೇಳಲಾಗಿದೆ. ಇಲ್ಲಿ ಈಗ ಋಷಭ ಬ್ರಹ್ಮಚರ್ಯಾಶ್ರಮವಿದೆ. (ಬಿ.ಜಿ.)

**ಚೌರಿ ಚೌರಾ:** ಇದು ಉತ್ತರ ಪ್ರದೇಶದಲ್ಲಿ ಗೋರಖಪುರದ ಬಳಿ ಇರುವ ಒಂದು ಸಣ್ಣ ಹಳ್ಳಿ. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಈ ಹಳ್ಳಿಯ ಹೆಸರು ಶಾಶ್ವತವಾಗಿದೆ. 1922ರ ಫೆಬ್ರುವರಿ 4ರಂದು ಇಲ್ಲಿ ಒಂದು ಅತ್ಯಂತ ವಿಷಾದಕರ ಘಟನೆ ಸಂಭವಿಸಿತು. ಆ ಸಮಯದಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿಯನ್ನು ನಿರ್ದೇಶಿಸಲು ಗಾಂಧಿಯವರನ್ನು ಏಕೈಕ ನಾಯಕರಾಗಿ ಕಾಂಗ್ರೆಸ್ ಆರಿಸಿತ್ತು. ಬೃಹತ್‌ಪ್ರಮಾಣದಲ್ಲಿ ಜನತಾಚಳವಳಿ ನಡೆಸಲು ತಕ್ಕ ಉತ್ಸಾಹ ರಾಷ್ಟ್ರದಲ್ಲಿ ಮೂಡಿತ್ತು. ತಮ್ಮ ಅಹಿಂಸಾತ್ಮಕ ಸತ್ಯಾಗ್ರಹ ಚಳವಳಿಯನ್ನು ಮೊದಲು ಬಾರ್ಡೋಲಿ ಜಿಲ್ಲೆಯಲ್ಲಿ ಆರಂಭಿಸಬೇಕೆಂದು ಗಾಂಧಿಯವರು ಆಲೋಚಿಸಿದ್ದರು. ಆ ಸಮಯದಲ್ಲಿ ಚೌರಿ ಚೌರಾದಲ್ಲಿ ದುರ್ಘಟನೆ ಸಂಭವಿಸಿದ್ದು. ಆ ಊರಿನ ಜನರು ಕಾಂಗ್ರೆಸ್ ಧ್ವಜದೊಂದಿಗೆ ಅಲ್ಲಿ ಒಂದು ಮೆರವಣಿಗೆ ಏರ್ಪಡಿಸಿದ್ದರು. ಅಲ್ಲಿಯ ಪೊಲೀಸ್ ಠಾಣೆಯ ಮುಂದೆಯೇ ಮೆರವಣಿಗೆ ಹಾದುಹೋಗಬೇಕಾಗಿತ್ತು. ಮೆರವಣಿಗೆ ಠಾಣೆಯಿಂದ ಮುಂದುವರಿದಾಗ ಅದರ ಹಿಂಭಾಗದಲ್ಲಿದ್ದ ಕೆಲವರನ್ನು ಪೊಲೀಸರು ಮೂದಲಿಸಿ, ರೇಗಿಸಿ ಹೊಡೆಯಲಾರಂಭಿಸಿದರು. ಕೂಗಾಟ ಆರಂಭವಾಯಿತು. ಮೆರವಣಿಗೆಯ ಜನ ಹಿಂದಿರುಗಿ ಪೊಲೀಸರ ಮೇಲೆ ಬಿದ್ದರು. ಪೊಲೀಸರು ಗುಂಡು ಹಾರಿಸಿದರು. ಅಷ್ಟರಲ್ಲಿ ಅವರಲ್ಲಿದ್ದ ಮದ್ದು ಮುಗಿದುಹೋಯಿತು. ಆದ್ದರಿಂದ ಅವರು ಠಾಣೆಯೊಳಗೆ ಅವಿತುಕೊಂಡರು. ಜನರು ಠಾಣೆಗೆ ಬೆಂಕಿ ಇಟ್ಟರು. ತಪ್ಪಿಸಿಕೊಳ್ಳಲು ಹೊರಬಂದ ಪೊಲೀಸರನ್ನು ತುಂಡರಿಸಿ ಬೆಂಕಿಗೆ ಹಾಕಿದರು. ಇಪ್ಪತ್ತೆರಡು ಮಂದಿ ಪೊಲೀಸರು ಆಹುತಿಯಾದರು.

ಬಾರ್ಡೋಲಿ ಜಿಲ್ಲೆಯಲ್ಲಿ ಕರನಿರಾಕರಣೆಯ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಈ ವಿಚಾರವಾಗಿ ವೈಸ್‌ರಾಯರಿಗೆ ಒಂದು ಪತ್ರವನ್ನು ಬರೆದಿದ್ದ ಮಹಾತ್ಮ ಗಾಂಧಿಯವರು ಚೌರಿ ಚೌರಾದ ದುರ್ಘಟನೆಯ ಸುದ್ದಿ ಕೇಳಿ ಪರಿತಪಿಸಿದರು. ಕೂಡಲೆ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದರು (ಫೆಬ್ರುವರಿ 11). ಸತ್ಯಾಗ್ರಹವನ್ನು ಆರಂಭಿಸುವ ತೀರ್ಮಾನವನ್ನು ಸದ್ಯಕ್ಕೆ ಕೈಬಿಡಬೇಕೆಂದು ನಿಶ್ಚಯಿಸಿದರು. ತಮ್ಮ ಯಂಗ್ ಇಂಡಿಯ ಪತ್ರಿಕೆಯಲ್ಲಿ (ಫೆಬ್ರುವರಿ 16) ಇದನ್ನು ಕುರಿತು ಗಾಂಧಿಯವರು ಒಂದು ದೀರ್ಘ ಲೇಖನ ಬರೆದು ತಾವು ಸತ್ಯಾಗ್ರಹ ನಿಲ್ಲಿಸಿದ್ದನ್ನು ಸಮರ್ಥಿಸಿದರು. ಅಹಿಂಸಾತ್ಮಕ ಸಮರಕ್ಕೆ ಜನತೆಯಿನ್ನೂ ಸಿದ್ಧವಾಗಿಲ್ಲವೆಂಬುದು ಅವರ ಮನವರಿಕೆಯಾಗಿತ್ತು. ತಮ್ಮ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ 5 ದಿನಗಳ ಉಪವಾಸ ಕೈಗೊಂಡರು. ಫೆಬ್ರುವರಿ 25ರಂದು ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯಸಮಿತಿಯ ನಿರ್ಣಯವನ್ನು ಸ್ಥಿರೀಕರಿಸಿತು.

ಸಾಮೂಹಿಕ ಅಸಹಕಾರ ಚಳವಳಿಯನ್ನು ನಿಲ್ಲಿಸಬೇಕೆಂಬ ತೀರ್ಮಾನದಿಂದ ದೇಶದಲ್ಲಿ ತುಂಬ ನಿರಾಶೆ ಹಬ್ಬಿತು. ಗಾಂಧಿಯವರ ತೀರ್ಮಾನವನ್ನು ಅನೇಕ ಕಾಂಗ್ರೆಸ್ಸಿಗರೇ ಟೀಕಿಸಿದರು. ಹಿಂಸಾಕೃತ್ಯಗಳನ್ನು ಪ್ರಚೋದಿಸಲು ಗಾಂಧಿಯವರೇ ಕಾರಣರೆಂದು ವೈಸ್‌ರಾಯ್ ಲಾರ್ಡ್ ರೀಡಿಂಗ್ ವಾದಿಸಿದ. ಗಾಂಧಿಯವರ ದಸ್ತಗಿರಿಯಾಯಿತು. ಅವರಿಗೆ ಆರು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಚೌರಿ ಚೌರಾ ಘಟನೆಯಿಂದಾಗಿ ಅಸಹಕಾರ ಚಳವಳಿಗೆ ಭಾರಿ ಪೆಟ್ಟು ಬಿದ್ದಂತೆ ತೋರಿತು. (ಕೆ.ಎಸ್.ಜಿ.ಆರ್.)

**ಚೌಲ್‌ಮೂಗ್ರ:** ಫ್ಲಕುರ್ಷಿಯೇಸೀ ಕುಟುಂಬಕ್ಕೆ ಸೇರಿದ ಒಂದು ಔಷಧಿ ಸಸ್ಯ. ಹಿಡ್ನೋ ಕಾರ್ಪಸ್ ಕುರ್ಝಿಯೈ ಇದರ ಶಾಸ್ತ್ರೀಯ ಹೆಸರು. ಈ ಮರ ಆಗ್ನೇಯ ಏಷ್ಯದಲ್ಲಿ, ಅದರಲ್ಲೂ ಮುಖ್ಯವಾಗಿ ಇಂಡೋಮಲಯದಲ್ಲಿ, ಹೆಚ್ಚಾಗಿ ಹರಡಿದೆ. ಭಾರತದಲ್ಲಿ ಅಸ್ಸಾಮ್, ತ್ರಿಪುರಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಸುಮಾರು 15 ಮೀ. ಎತ್ತರಕ್ಕೆ ಬೆಳೆಯುವ ಮರ ಇದು. ರೆಂಬೆಗಳೆಲ್ಲ ಕೆಳಮುಖವಾಗಿ ತೂಗುಬಿದ್ದಿರುತ್ತವೆ. ಎಲೆಗಳು ಉದ್ದುದ್ದ ಇಲ್ಲವೆ ಅಂಡಾಕೃತಿಯವು. ಹೂಗಳು, ಏಕಲಿಂಗಿಗಳು, ಅವುಗಳ ಬಣ್ಣ ಹಳದಿ. ಎಲೆಗಳ ಕಂಕುಳಲ್ಲಿರುವ ಸೈಮೋಸ್ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಫಲಗಳು ಗುಂಡಗಿವೆ. ವ್ಯಾಸ 76 ಮಿ.ಮೀ.ಬಣ್ಣ ಚಾಕಲೇಟ್ ಕಂದು. ಒಳಗೆ ಅನೇಕ ಬೀಜಗಳಿವೆ. ಅವು ಕಂದುಬಣ್ಣದ ಗೋಲಿಗಳಂತಿವೆ. ಅವುಗಳಿಂದ ಚೌಲಮೂಗ್ರ ಎಣ್ಣೆಯನ್ನು ಪಡೆಯಲಾಗುತ್ತದೆ. ಈ ಎಣ್ಣೆ ಕುಷ್ಠ ಹಾಗೂ ಕೆಲವು ಬಗೆಯ ಚರ್ಮರೋಗ ಚಿಕಿತ್ಸೆಗೆ ಉಪಯುಕ್ತವೆನಿಸಿದೆ. ಶಕ್ತಿವರ್ಧಕವಾಗಿ ಮತ್ತು ಸ್ಥಳೀಯ ಪ್ರಚೋದಕವಾಗಿ ಬಳಸುವುದುಂಟು. ಸಂಧಿವಾತ, ಚರ್ಮದ ಮೇಲೆ ಹುರುಪೆಗಳೇಳುವುದು ಮುಂತಾದವುಗಳಲ್ಲೂ ಇದರ ಬಳಕೆ ಇದೆ. ಇದರ ಬಣ್ಣ ಹಳದಿ ಇಲ್ಲವೆ ಕಂದು. ಇದಕ್ಕೆ ಹಳಸಿದ ಬೆಣ್ಣೆಯ ವಾಸನೆಯೂ ಕಹಿ ಮತ್ತು ಕಾರಮಿಶ್ರಿತ ರುಚಿಯೂ ಇದೆ. $25^{0}$ F.ಗಿಂತ ಕಡಿಮೆ ಉಷ್ಣತೆಯಲ್ಲಿ ಗಟ್ಟಿಯಾಗುತ್ತದೆ. ಆಲ್ಕೋಹಾಲಿನಲ್ಲಿ ಲಘು ಪ್ರಮಾಣದಲ್ಲೂ ಬೆಂಝೀನ್, ಕ್ಲೋರೋಫಾರಮ್ ಮತ್ತು ಈಥರುಗಳಲ್ಲಿ ಹೆಚ್ಚು ಪ್ರಮಾಣದಲ್ಲೂ ಕರಗುತ್ತದೆ. ಎಣ್ಣೆಯನ್ನು ತೆಗೆದ ಮೇಲೆ ಉಳಿಯುವ ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸುವುದಿದೆ. ಕಾಡುಹಂದಿಗಳು,

ಮೀನುಗಳು ಹಣ್ಣನ್ನು ತಿನ್ನುವುದುಂಟು. ಹಣ್ಣು ತಿಂದ ಹಂದಿಯನ್ನಾಗಲಿ, ಮೀನುಗಳನ್ನಾಗಲಿ ತಿನ್ನಬಾರದು. ಏಕೆಂದರೆ ಹಣ್ಣಿನಲ್ಲಿ ವಿಶೇಷವಾಗಿರುವ ಸಯನೋಜನ್‌ಯುಕ್ತ ಗ್ಲೈಕೊಸೈಡ್ ಎಂಬ ವಿಷವಸ್ತು ಇವುಗಳಲ್ಲಿ ಮಾಂಸದಲ್ಲಿ ಸೇರಿರುತ್ತದೆ. (ಕೆ.ಜಿ.ಎ.)

**ಚೌಸಿಂಗಿ :** ಆರ್ಟಿಯೊಡ್ಯಾಕ್ಟಿಲ ಗಣದ ಬೋವಿಡೀ ಕುಟುಂಬಕ್ಕೆ ಸೇರಿದ ಒಂದು ಜಿಂಕೆ. ಇದರ ತವರು ಭಾರತ. ಟೆಟ್ರಸೆರಸ್ ಕ್ವಾಡುಕಾರ್ನಿಸ್ ಶಾಸ್ತ್ರೀಯ ಹೆಸರು. ಭಾರತದಲ್ಲಿ ಗಂಗಾನದಿಯ ಬಯಲು ಮತ್ತು ಕೇರಳದ ಕರಾವಳಿ ಪ್ರದೇಶಗಳನ್ನು ಬಿಟ್ಟರೆ, ಉಳಿದ ಭಾಗಗಳಲ್ಲಿ ಇದು ಕಂಡುಬರುತ್ತದೆ. ದಟ್ಟ ಕಾಡುಗಳಿಗಿಂತ ಕುರುಚಲು ಕಾಡೇ ಇದಕ್ಕೆ ಬಲು ಇಷ್ಟ. ಚಿಕ್ಕಗಾತ್ರದ ಜಿಂಕೆಯಿದು. ತಲೆಯೂ ಸೇರಿ ದೇಹದ ಉದ್ದ ಸು. 1 ಮೀ. ಎತ್ತರ (ಭುಜದ ಬಳಿ) ಸು. 0.6 ಮೀ. ತೂಕ ಸು. 17–20 ಕಿ.ಗ್ರಾಂ. ಬಣ್ಣ ಕಂದು, ಕಾಲುಗಳ ಒಳಭಾಗ ಮತ್ತು ಹೊಟ್ಟೆ ಬಿಳಿ ಬಣ್ಣಕ್ಕಿವೆ. ಗಂಡುಜಿಂಕೆಯ ನೆತ್ತಿಯ ಮೇಲೆ ಒಂದು ಜೊತೆ ಮತ್ತು ಹಣೆಯ ಮೇಲೆ ಒಂದು ಜೊತೆ–ಹೀಗೆ ಒಟ್ಟು 2 ಜೊತೆ ಕೊಂಬುಗಳಿವೆ. ಹೀಗೆ ನಾಲ್ಕು ಕೊಂಬಿರುವುದರಿಂದಲೇ ಇದಕ್ಕೆ ಚೌಸಿಂಗ್ ಎಂದು ಹೆಸರು. ನೆತ್ತಿಯ ಮೇಲಿನ ಕೊಂಬುಗಳು ದೊಡ್ಡವು; ಇವುಗಳ ಉದ್ದ 80–100ಮಿ.ಮೀ. ಹಣೆಯ ಮೇಲಿನವು ಚಿಕ್ಕವು; ಇವುಗಳ ಉದ್ದ 25–38ಮೀ.ಮೀ. ಇವಕ್ಕೆ ನಾಲ್ಕು ಕೊಂಬುಗಳಿವೆಯಾಗಿ ಇವು ಇತರ ಬಗೆಯ ಜಿಂಕೆಗಳಿಂದ ಭಿನ್ನವಾಗಿವೆ. ಹೆಣ್ಣುಗಳಿಗೆ ಕೊಂಬುಗಳೇ ಇಲ್ಲ.

ಚೌಸಿಂಗ್ ಸಂಘಜೀವಿಯಲ್ಲ. ಸಾಮಾನ್ಯವಾಗಿ ಜೋಡಿಗಳಲ್ಲಿ ಮಾತ್ರ ಕಾಣಸಿಗುತ್ತದೆ. ಅಲ್ಲದೆ ಇದು ತುಂಬ ನಾಚಿಕೆ ಸ್ವಭಾವದ ಪ್ರಾಣಿಯೂ ಹೌದು. ಅಪಾಯದ ಸುಳಿವು ಸ್ವಲ್ಪ ಸಿಕ್ಕರೂ ಸಾಕು ಕ್ಷಣಾರ್ಧದಲ್ಲಿ ಹತ್ತಿರದ ಪೊದೆಯೊಳಗೆ ನೆಗೆದು ಮರೆಯಾಗುತ್ತದೆ. ಹೀಗಾಗಿ ಕಾಡಿನಲ್ಲಿ ಇದು ಕಾಣಸಿಗುವುದೇ ದುರ್ಲಭ. ಇದು ಒಂದು ವಿಚಿತ್ರ ರೀತಿಯ ಕುಲುಕು ಕ್ರಮದಲ್ಲಿ ನಡೆಯುತ್ತದೆ. ಹುಲ್ಲು ಇದರ ಮುಖ್ಯ ಆಹಾರ.

ಹೆಣ್ಣು ಗಂಡುಗಳು ಕೂಡುವ ಕಾಲ ಜೂನ್–ಜುಲೈ. ಸು. 183 ದಿವಸಗಳ ಗರ್ಭಾವಧಿಯ ಅನಂತರ ಸೂಲಿಗೆ 1–3 ಮರಿಗಳು ಹುಟ್ಟುತ್ತವೆ. ಚೌಸಿಂಗಿಯನ್ನು ಸಾಕುವುದುಂಟು. (ಎಸ್.ಪಿ.ಎಂ)

**ಚೌಹಾಣರು :** ಪ್ರಶ. 10–13ನೆಯ ಶತಮಾನಗಳಲ್ಲಿ ರಜಪುಟಾಣದ ಶಾಕಂಬರಿ, ರಣತಂಬೂರು, ನಾಡೋಲ್ ಮತ್ತು ಜಾಲೋಹರ್ (ಜಾಬಾಲಿಪುರ) ಪ್ರದೇಶಗಳಲ್ಲಿ ಆಳಿದ ಒಂದು ಮನೆತನದ ಮತ್ತು ಅದರ ಶಾಖೆಗಳ ರಾಜರು. ಚಾಹಮಾನರು ಎಂದೂ ಇವರನ್ನು ಕರೆಯಲಾಗಿದೆ. ಚಾರಣಕವಿಗಳ ಸಾಂಪ್ರದಾಯಿಕ ಹಾಡುಗಳಲ್ಲಿ ಚಾಹಮಾನರು ಮೂಲತಃ ನರ್ಮದಾ ನದೀತೀರದ ಮಾಹಿಷ್ಮತೀ ನಗರದಲ್ಲಿ ಆಳುತ್ತಿದ್ದರೆಂದು ಹೇಳಿದೆ. ಆದರೆ ಇದನ್ನು ನಂಬಲು ಹೆಚ್ಚಿನ ಆಧಾರಗಳಿಲ್ಲ. ಇವು ಶಾಕಂಬರೀ ಸರೋವರದ ಪ್ರದೇಶದಲ್ಲಿ (ಈಗಿನ ಜೈಪುರ) ಆಳುತ್ತಿದ್ದರೆಂಬ ನಂಬುಗೆ ವಿಚಾರಣೀಯ. ನಾಗಾವಲೋಕ ನೆಂಬ ಅರಸನ ಮಾಂಡಲಿಕನಾಗಿದ್ದ ಇಮ್ಮಡಿ ಭರ್ತೃವೃದ್ಧ ಹಾಗೂ ಅವನಿಗೂ ಹಿಂದಿನ ಐದು ತಲೆಮಾರಿನವರು ಭಡೋಚ ಜಿಲ್ಲೆಯ ಪ್ರದೇಶದಲ್ಲಿ ಆಳುತ್ತಿದ್ದಿರಬಹುದೆಂದು ಆ ಮಾಂಡಲಿಕನ ಶಾಸನದ ಆಧಾರದ ಮೇಲೆ ಊಹಿಸಲಾಗಿದೆ. ಅಲ್ಲಿ ಕೇವಲ ಮಾಂಡಲಿಕ ಪದವಿಯಲ್ಲಿದ್ದ ಅವರು ಅನಂತರ ಇತರ ಕಡೆಗಳಿಗೆ ವಲಸೆ ಹೋಗಿರಬಹುದು. ಸುಮಾರು 7ನೆಯ ಶತಮಾನದಲ್ಲಿ ಇವರು ಚಿತ್ತೋಡಿನಲ್ಲಿ ನೆಲಸಿದ್ದರೆಂದೂ ಮೂಲತಃ ತ್ವಷ್ಟ್ರಿ ಕುಲಕ್ಕೆ ಸೇರಿದ್ದ ಇವರು ಅನಂತರ ತಮ್ಮನ್ನು ಚಾಹಮಾನರೆಂದು ಕರೆದುಕೊಂಡರೆಂದೂ ಊಹಿಸಲಾಗಿದೆ. ಈ ಸಂತತಿಯ ಮೂಲಕ್ಕೆ ಸಂಬಂಧಿಸಿದಂತೆ ಅನೇಕ ದಂತಕಥೆಗಳಿವೆ. ಒಂದು ಐತಿಹ್ಯದ ಪ್ರಕಾರ ಸೂರ್ಯದೇವನ ಪುತ್ರನಾದ ಚಾಹಮಾನ ಮನೆತನ ಅಗ್ನಿಕುಲಕ್ಕೆ ಸಂಬಂಧಿಸಿದ ನಾಲ್ಕು ಮುಖ್ಯ ಸಂತತಿಗಳಲ್ಲೊಂದೆಂದೂ ಪ್ರತೀತಿ ಇತ್ತು. (ಜಿ.ಆರ್.ಆರ್.)

**ಶಾಕಂಬರೀ ಶಾಖೆ :** ಶಾಕಂಬರೀ ಶಾಖೆಯ ಚಾಹಮಾನರು ಈ ಮನೆತನದವರಲ್ಲಿ ಪ್ರಸಿದ್ಧರು. ಇವರು ಆಳಿದ ಪ್ರದೇಶವನ್ನು ಸಪಾದಲಕ್ಷ ಎಂದೂ ಕರೆಯಲಾಗಿದೆ. ಅದರಿಂದ ಇವರು ಸಪಾದಲಕ್ಷ ಚಾಹಮಾನರೆಂದೂ ಕರೆಯಲ್ಪಟ್ಟರು. ವಸುದೇವ ಈ ಅರಸರಲ್ಲಿ ಮೊದಲನೆಯವನು. ಇವನ ವಂಶದಲ್ಲಿ ಸಾಮಂತ, ಪೂರ್ಣತಲ್ಲ, ಜಯರಾಜ ಮತ್ತು 1ನೆಯ ವಿಗ್ರಹರಾಜರು ಅನುಕ್ರಮವಾಗಿ ಆಳಿದರು. ಪ್ರತೀಹಾರ ವತ್ಸರಾಜ ಬಂಗಾಲದ ಧರ್ಮಪಾಲನೊಡನೆ ಹೂಡಿದ್ದ ಕದನಗಳಲ್ಲಿ ಪ್ರತೀಹಾರನ ಪರವಾಗಿ ಚಾಹಮಾನ 1ನೆಯ ದುರ್ಲಭರಾಜ ಕಾದಿದ. ಅನಂತರ ಅವನ ಮಗ 1ನೆಯ ಗೋವಿಂದರಾಜ ಇಮ್ಮಡಿ ನಾಗಭಟನಿಗೆ ನೆರವಾಗಿ ಸಿಂಧ್‌ನಲ್ಲಿ ಅರಬರ ದಾಳಿಯನ್ನೆದುರಿಸಿ ಹಿಮ್ಮೆಟ್ಟಿಸಿದ. ಈ ಚಾಹಮಾನರು ಪ್ರತೀಹಾರರ ಸಾಮಂತರಾಗಿದ್ದು, ಅವರೊಡನೆ ರಕ್ತಸಂಬಂಧವನ್ನು ಸಹ ಬೆಳೆಸಿ, ಕ್ರಮೇಣ ಅವರ ಶಕ್ತಿ ಕುಗ್ಗಿದಾಗ ಪ್ರಬಲರಾದರು. ಇಮ್ಮಡಿ ಗೂವಕನ ಸೋದರಿಯಾದ ಕಲಾವತಿಯನ್ನು ಪ್ರತೀಹಾರ 1ನೆಯ ಭೋಜನಿಗೆ ಲಗ್ನ ಮಾಡಿ ಕೊಡಲಾಗಿತ್ತು. ಪ್ರತೀಹಾರ 1ನೆಯ ಮಹೀಪಾಲನ ಸಾಮಂತ 1ನೆಯ ವಾಕ್ಪತಿರಾಜ. ಈತ ಪುಷ್ಕರ ಕ್ಷೇತ್ರದಲ್ಲಿ ಶಿವಾಲಯವೊಂದನ್ನು ಕಟ್ಟಿಸಿದ. ಈ ವೇಳೆಗಾಗಲೇ ಇವನ ಪೂರ್ವಜರು ಪುಷ್ಕರಕ್ಷೇತ್ರದಲ್ಲಿ ಕೆಲವು ವಲಯಗಳನ್ನೂ ಧಾರ್ಮಿಕ ಸಂಬಂಧವಾದ ಕಟ್ಟಡಗಳನ್ನೂ ಕಟ್ಟಿಸಿದ್ದರು. ವಾಕ್ಪತಿರಾಜನ ಮೂವರು ಮಕ್ಕಳಲ್ಲಿ ಕಿರಿಯನಾದ ಲಕ್ಷ್ಮಣ ದಕ್ಷಿಣ ಮಾರವಾಡದ ನಡ್ಡುಲದಲ್ಲಿ ಚಾಹಮಾನ ಶಾಖೆಯೊಂದರ ಮೂಲಪುರುಷನಾದ. ಇವನ ವಂಶಸ್ಥರು ಆ ಪ್ರದೇಶದಲ್ಲಿ ಕೆಲವು ಶತಮಾನಗಳ ಕಾಲ ಆಳಿದರು.

ವಾಕ್ಪತಿರಾಜನ ಹಿರಿಯ ಮಗನಾದ ಸಿಂಹರಾಜ ಮಹಾರಾಜಾಧಿರಾಜನೆನಿಸಿಕೊಂಡ. ಪ್ರತೀಹಾರರು ಈ ವೇಳೆಗೆ ಅವನತಿಯ ಹಾದಿಯಲ್ಲಿದ್ದರು. ಅವರ ಅನೇಕ ಸಾಮಂತರನ್ನು ಈತ ಸೋಲಿಸಿದ. ಈತನ ಮಗ ಇಮ್ಮಡಿ ವಿಗ್ರಹರಾಜ ಗುಜರಾತಿನ ಚೌಳುಕ್ಯ ಮೂಲರಾಜನನ್ನು ಸೋಲಿಸಿ ತನ್ನ ಸೈನ್ಯವನ್ನು ನರ್ಮದಾ ತೀರದವರೆಗೂ ಒಯ್ದ. ಈತನ ಸೋದರ ದುರ್ಲಭರಾಜ ನಡ್ಡುಲದಲ್ಲಿ ಆಳುತ್ತಿದ್ದ ಚಾಹಮಾನ ಮಹೇಂದ್ರನನ್ನು ಸೋಲಿಸಿದ. ಹತ್ತನೆಯ ಶತಮಾನದ ಅಂತಿಮ ವರ್ಷಗಳಲ್ಲಿ ಶಾಕಂಬರೀ ಚಾಹಮಾನರ ರಾಜ್ಯ ಉತ್ತರದಲ್ಲಿ ಸಕರ್, ಪೂರ್ವಕ್ಕೆ ಜೈಪುರ, ದಕ್ಷಿಣದಲ್ಲಿ ಅಜ್ಮೀರದ ಸಮೀಪದ ಪುಷ್ಕರ ಹಾಗೂ ಪಶ್ಚಿಮದಲ್ಲಿ ಜೋಧಪುರ ಇವುಗಳ ನಡುವಣ ಪ್ರದೇಶವನ್ನು ಒಳಗೊಂಡಿತ್ತು.

ದುರ್ಲಭರಾಜನ ಮಗ ಇಮ್ಮಡಿ ಗೋವಿಂದರಾಜ ಘಜ್ನಿ ಮಹಮೂದನ ದಾಳಿಯನ್ನೆದುರಿಸಬೇಕಾಯಿತಾದರೂ ಇದರಿಂದ ಅವನಿಗೆ ಹಾನಿಯೇನೂ ಆಗಲಿಲ್ಲ. ನಾಡೋಲದ ಚಾಹಮಾನ ಅಣಹಿಲ್ಲ ಶಾಕಂಬರಿಯ ವೀರ್ಯರಾಜನನ್ನು ಸೋಲಿಸಿದ. ಪರಮಾರ ಭೋಜನೊಡನೆ ನಡೆದ ಕದನದಲ್ಲಿ ವೀರ್ಯರಾಜ ತೀರಿಕೊಂಡ. ಹನ್ನೆರಡನೆಯ ಶತಮಾನದ ಮೊದಲ ದಶಕದಲ್ಲಿ ಆಳುತ್ತಿದ್ದ ಪೃಥ್ವೀರಾಜ ಪುಷ್ಕರ ಕ್ಷೇತ್ರದಲ್ಲಿಯ ಬ್ರಾಹ್ಮಣರನ್ನು ಸುಲಿಗೆ ಮಾಡಲು ಬಂದ 700 ಜನ ಚೌಳುಕ್ಯರನ್ನು ಕೊಂದನಂತೆ. ಈತ ಹಾಗೂ ಈತನ ಮಗ ಅಜಯರಾಜ ಇವರು ರಾಜ್ಯ ವಿಸ್ತರಣೆ ಮತ್ತು ಸಾಮ್ರಾಜ್ಯ ಸ್ಥಾಪನೆಗಾಗಿ ಶ್ರಮಿಸಿದರು. ಅಜಯರಾಜ ಉಜ್ಜಯಿನಿಯನ್ನು ಮುತ್ತಿ ಬಾಚಿಗ, ಸಿಂಧುಲ ಮತ್ತು ಯಶೋರಾಜರೆಂಬ ಅರಸರನ್ನು ಕೊಂದ. ಈತನೇ ಅಜ್ಮೀರ್ ನಗರದ ಸ್ಥಾಪಕ. ಅದರ ಮೂಲ ಹೆಸರು ಅಜಯಮೇಡು.

ಅನಂತರ ಬಂದ ಅರ್ಣೋರಾಜ ಚೌಳುಕ್ಯ ಜಯಸಿಂಹ ಹಾಗೂ ಕುಮಾರಪಾಲರಿಂದ ಸೋಲಿಸಲ್ಪಟ್ಟು, ಜಯಸಿಂಹನ ಮಗಳಾದ ಕಾಂಚನದೇವಿಯನ್ನು ಮದುವೆಯಾಗಿ ತನ್ನ ಮಗಳಾದ ಜಲ್ಹಣಾಳನ್ನು ಕುಮಾರಪಾಲನಿಗೆ ಮದುವೆಮಾಡಿಕೊಟ್ಟ. 1153ರ ಸುಮಾರಿಗೆ ಆಳಲು ಬಂದ 4ನೆಯ ವಿಗ್ರಹರಾಜ ಅಥವಾ ವೀಸಲದೇವ ದೆಹಲಿಯ (ಢಿಲ್ಲಿಕಾ)ವರೆಗೂ ಸೈನ್ಯವನ್ನೊಯ್ದು ಪಂಜಾಬಿನ ಹಿಸ್ಸಾರ್ ಜಿಲ್ಲೆಯ ಆಶಿಕೌ (ಹಾನ್ಸಿ) ನಗರವನ್ನು ವಶಪಡಿಸಿಕೊಂಡ. ಚೌಳುಕ್ಯರಿಗೆ ಸೇರಿದ್ದ ಪಲ್ಲಿಕಾ (ಜೋಧಪುರದ ಪಾಲ), ಜಾಬಾಲಿಪುರ (ಜಾಲೋರ್) ಮತ್ತು ನಾಡೋಲ್ ನಗರಗಳನ್ನು ಸೂರೆಗೊಂಡ. ಈತ ಸಾಹಿತಿಯೂ ಆಗಿದ್ದ. ಈತನ ಹರಕೇಲೀ ನಾಟಕದ ಕೆಲವು ಭಾಗಗಳು ಅಜ್ಮೀರದಲ್ಲಿ ಹಲವು ಶಿಲೆಗಳ ಮೇಲೂ ಮಹಾಕವಿ ಎನಿಸಿದ ಸೋಮದೇವನ ಲಲಿತವಿಗ್ರಹರಾಜ ನಾಟಕದ ಭಾಗಗಳು ಅಜ್ಮೀರದ ಮಸೀದಿಯೊಂದರ ಕಲ್ಲುಗಳ ಮೇಲೂ ಕೊರೆಯಲ್ಪಟ್ಟಿವೆ. ಇವೆರಡೂ ಭಾಗಶಃ ದೊರೆತಿವೆ. ಹಲವಾರು ಬಾರಿ ಮ್ಲೇಚ್ಛರನ್ನು ಸೋಲಿಸಿ ಆರ್ಯಾವರ್ತವನ್ನು ಕಾಪಾಡಿದನೆಂಬ ಈತನನ್ನು ಕುರಿತ ವರ್ಣನೆ ಉತ್ಪ್ರೇಕ್ಷೆಯಲ್ಲ.

ಇಮ್ಮಡಿ ಪೃಥ್ವೀರಾಜ ಆಳುತ್ತಿದ್ದಾಗ ಆತನ ಸೋದರಮಾವನ ಅರ್ಣೋರಾಜನ ಮಗ ಸೋಮೇಶ್ವರ, ಮಾತಾಮಹರಾದ ಚೌಳುಕ್ಯರ ಆಶ್ರಯದಲ್ಲಿ ಗುಜರಾತಿನಲ್ಲಿ ನೆಲಸಿದ್ದರು. ಚೌಳುಕ್ಯ ಕುಮಾರಪಾಲ ಕೊಂಕಣದ ಶಿಲಾಹಾರ ಮಲ್ಲಿಕಾರ್ಜುನನ ವಿರುದ್ಧ ದಂಡೆತ್ತಿದಾಗ ಆತನಿಗೆ ನೆರವಾಗಿದ್ದ. ಕಳಚುರಿ ರಾಜಕುಮಾರಿ ಕರ್ಪೂರದೇವಿಯನ್ನು ಮದುವೆಯಾದ. ಆಕೆಯಲ್ಲಿ ಜನಿಸಿದವನೇ ಖ್ಯಾತಿವೆತ್ತ ಮುಮ್ಮಡಿ ಪೃಥ್ವೀರಾಜ. ಇಮ್ಮಡಿ ಪೃಥ್ವೀರಾಜನ ಮರಣಾನಂತರ ಆತನ ಮಂತ್ರಿಗಳಿತ್ತ ಆಹ್ವಾನವನ್ನು ಮನ್ನಿಸಿ ಸೋಮೇಶ್ವರನೂ ಸಪಾದಲಕ್ಷಕ್ಕೆ ಬಂದು ಸ್ವಲ್ಪ ಕಾಲ ರಾಜ್ಯವಾಳಿದ. 1177ರಲ್ಲಿ ಮುಮ್ಮಡಿ ಪೃಥ್ವೀರಾಜನ ಆಳ್ವಿಕೆ ಆರಂಭವಾಯಿತು. (ಜಿ.ಬಿ.ಆರ್.)

ಮೂರನೆಯ ಪೃಥ್ವೀರಾಜ ಚಾಹಮಾನ ಸಂತತಿಯ ಅರಸರಲ್ಲಿ ಅತ್ಯಂತ ಪ್ರಸಿದ್ಧ ನಾದವನು. ಇವನ ವ್ಯಕ್ತಿತ್ವ ಮತ್ತು ಸಾಧನೆಯ ವರ್ಣನೆಗಳು ಚಾಂದ್‌ಬರ್ದಾಯಿಯ ಪೃಥ್ವೀರಾಜ ರಾಸೋ, ಜಯಾನಕನ ಪೃಥ್ವೀರಾಜ, ಜಿನಪಾಲನ ಖರತರ ಗಚ್ಛ ಪಟ್ಟಾವಳೀ ಹಮ್ಮೀರ ಮಹಾಕಾವ್ಯ ಮುಂತಾದ ಗ್ರಂಥಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಮುಸ್ಲಿಮರ ಆಡಳಿತ ಸ್ಥಾಪನೆಯನ್ನು ಕುರಿತು ಬರೆದಿರುವ ಫೆರಿಸ್ತನ ಗ್ರಂಥದಲ್ಲೂ ಪೃಥ್ವೀರಾಜನಿಗೆ ಸಂಬಂಧಿಸಿದ ವರ್ಣನೆಗಳಿವೆ. ಪೃಥ್ವೀರಾಜನ ಅನೇಕ ಶಾಸನಗಳೂ ಅವನು ಅಚ್ಚು ಹಾಕಿಸಿದ ಬೆಳ್ಳಿಯ ನಾಣ್ಯಗಳೂ ದೊರೆತಿವೆ.

ಕಾವ್ಯಗಳಿಂದ ಜನಪ್ರಿಯವಾಗಿರುವ, ಪೃಥ್ವೀರಾಜನಿಗೆ ಸಂಬಂಧಿಸಿದ ಒಂದು ಘಟನೆ ಸಂಯೋಗಿತಾ (ಸಂಯುಕ್ತಾ) ಸ್ವಯಂವರ. ಕನೌಜಿನ ರಾಜ ಜಯಚಂದ್ರನಿಗೂ ಪೃಥ್ವೀರಾಜನಿಗೂ ವೈಮನಸ್ಯವಿತ್ತು. ಜಯಚಂದ್ರ ತನ್ನ ಕುಮಾರಿ ಸಂಯೋಗಿತಾಳ

ಸ್ವಯಂವರನ್ನೇರ್ಪಡಿಸಿದ. ಸಂಯೋಗಿತೆ ಪೃಥ್ವೀರಾಜನ ಧೈರ್ಯ ಸಾಹಸಗಳನ್ನು ಕೇಳಿ ಅವನನ್ನು ವರಿಸಲು ನಿರ್ಧರಿಸಿದ್ದಳು. ಗೂಢಚಾರರ ಮೂಲಕ ತನ್ನ ನಿರ್ಧಾರವನ್ನು ಪೃಥ್ವೀರಾಜನಿಗೆ ಮುಟ್ಟಿಸಿದ್ದಳು. ಆದರೆ ಜಯಚಂದ್ರ ಪೃಥ್ವೀರಾಜನಿಗೆ ಆಹ್ವಾನವನ್ನು ಕಳಿಸಲಿಲ್ಲ. ಪ್ರತಿಯಾಗಿ, ನೆರೆದ ರಾಜಕುಮಾರರ ಮುಂದೆ ಅವನನ್ನು ಅಪಮಾನಕ್ಕೀಡು ಮಾಡಲು ಪೃಥ್ವೀರಾಜನ ಲೋಹದ ವಿಗ್ರಹವನ್ನು ಮಾಡಿಸಿ ಅದನ್ನು ಅರಮನೆಯ ದ್ವಾರದ ಬಳಿ ಇಡಿಸಿದ್ದ. ಸಂಯೋಗಿತೆ ಅಲ್ಲಿ ನೆರೆದಿದ್ದ ರಾಜರನ್ನೆಲ್ಲ ಕಡೆಗಣಿಸಿ ದ್ವಾರದ ಬಳಿಗೆ ನಡೆದುಬಂದು ಪೃಥ್ವೀರಾಜನ ಪ್ರತಿಮೆಗೆ ಹೂಮಾಲೆ ಹಾಕಿದಳು. ಮೊದಲೇ ಗೊತ್ತುಪಡಿಸಿಕೊಂಡಿದ್ದಂತೆ ಆ ವೇಳೆಗೆ ಅಲ್ಲಿಗೆ ಬಂದು ಅಡಗಿಕೊಂಡಿದ್ದ ಪೃಥ್ವೀರಾಜ ಸಂಯುಕ್ತೆಯನ್ನು ಸ್ವೀಕರಿಸಿ ಕುದುರೆಯ ಮೇಲೆ ಕೂರಿಸಿಕೊಂಡು ಹೊರಟ. ಜಯಚಂದ್ರನ ಸೈನಿಕರು ಪೃಥ್ವೀರಾಜನನ್ನು ಅಟ್ಟಿಸಿಕೊಂಡು ಹೋದರು. ಆದರೆ ವೇಷಮರೆಸಿಕೊಂಡು ಅಲ್ಲಿಗೆ ಬಂದಿದ್ದ ಪೃಥ್ವೀರಾಜನ ಬೆಂಗಾವಲು ಪಡೆ ಜಯಚಂದ್ರನ ಸೈನಿಕರನ್ನು ತಡೆದು ಪರಾಭವಗೊಳಿಸಿತು. ಪೃಥ್ವೀರಾಜ ರಾಸೋ ಗ್ರಂಥದಲ್ಲಿ ವರ್ಣಿತವಾಗಿರುವ ಈ ಘಟನೆ ಐತಿಹಾಸಿಕ ಸಂಗತಿಯಾಗಿರಲಾರದೆಂದು ಹಲವು ವಿದ್ವಾಂಸರು ಸಂದೇಹ ವ್ಯಕ್ತಪಡಿಸಿದ್ದಾರೆ.

ಆದರೆ ಪೃಥ್ವೀರಾಜ ಸಾಹಸಿಯಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಒಳ್ಳೆಯ ಯೋಧರೂ ಯುದ್ಧತಂತ್ರಜ್ಞರೂ ಆದ ಕದಂಬವಾಸಿ, ಭುವನೈಕಮಲ್ಲ, ಸ್ಕಂದ ವಾಮನ, ಉದಯರಾಜ, ಸೋಮೇಶ್ವರ ಎಂಬುವರನ್ನು ಮಂತ್ರಿ ಮತ್ತು ದಂಡ ನಾಯಕರುಗಳಾಗಿ ಪೃಥ್ವೀರಾಜ ನೇಮಿಸಿಕೊಂಡಿದ್ದ. ಅವನು ಅನೇಕ ಯುದ್ಧಗಳಲ್ಲಿ ತನ್ನ ನೆರೆರಾಜ್ಯಗಳ ರಾಜರನ್ನು ಸೋಲಿಸಿದ. ಚಂದೇಲ ರಾಜನನ್ನು ಸೋಲಿಸಿ, ಬುಂದೇಲಖಂಡದ ಹಲವು ಭಾಗಗಳನ್ನು ಆಕ್ರಮಿಸಿದ. ಗುಜರಾತಿನ ಚೌಳುಕ್ಯ 2ನೆಯ ಭೀಮನನ್ನು ಪರಾಭವಗೊಳಿಸಿದ. ಸಗೋತ್ರನೂ ಗೂಡಪುರದ ರಾಜನೂ ಆದ ನಾಗಾರ್ಜುನ ಎಂಬುವನು ದಂಗೆಯೆದ್ದಾಗ ಪೃಥ್ವೀರಾಜ ಅವನನ್ನು ನಿರ್ನಾಮ ಮಾಡಿ, ಅವನು ಆಳುತ್ತಿದ್ದ ಪ್ರದೇಶವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಪೃಥ್ವೀರಾಜನ ರಾಜ್ಯ ಪಾಟಿಯಾಲದ ಸಿರ್ಹಿಂದ್ ಮತ್ತು ದೆಹಲಿ ಪ್ರದೇಶದಿಂದ ದಕ್ಷಿಣದಲ್ಲಿ ಮೇವಾರದವರೆಗೂ ವಿಸ್ತರಿಸಿತು.

1186ರ ವೇಳೆಗೆ ಘಜ್ನಿಯ ಯಾಮನಿ ಸಂತತಿಯನ್ನು ಕೊನೆಗಾಣಿಸಿ ಷಿಹಾಬುದ್ದೀನ್ ಮಹಮ್ಮದ ತನ್ನ ಆಳ್ವಿಕೆಯನ್ನು ಸ್ಥಾಪಿಸಿದ. ಅವನು ಪಶ್ಚಿಮ ಪಂಜಾಬನ್ನು ಆಕ್ರಮಿಸಿ ಚಾಹಮಾನ ರಾಜ್ಯದ ಸಿರ್ಹಿಂದನ್ನು ವಶಪಡಿಸಿಕೊಂಡು, ತನ್ನ ಸೈನ್ಯಾಧಿಕಾರಿಗಳಲ್ಲೊಬ್ಬನಾದ ಮಲ್ಲಿಕ್ ಜಿಯಾವುದ್ದೀನ್ ಎಂಬುವವನನ್ನು ಪ್ರಾಂತ್ಯಾಧಿಕಾರಿಯಾಗಿ ಮುಲ್ತಾನಿನಲ್ಲಿ ನೆಲೆಗೊಳಿಸಿದ. ಕೂಡಲೇ ಮಹಮದೀಯರ ಅಧಿಕಾರವನ್ನು ಪಂಜಾಬಿನಿಂದ ಕಿತ್ತೊಗೆಯಲು ಪೃಥ್ವೀರಾಜ ನಿರ್ಧರಿಸಿ ಸೈನ್ಯಸಮೇತನಾಗಿ ಹೊರಟ. ಈ ವಿಷಯವನ್ನು ತಿಳಿದ ಘೋರಿ ಮಹಮ್ಮದ ಸೈನ್ಯಸಮೇತನಾಗಿ ಮುನ್ನಡೆದ. ಎರಡೂ ಸೈನ್ಯಗಳು ಕನೌಜಿನಿಂದ 22.5ಕಿ.ಮೀ. ದೂರದಲ್ಲಿರುವ ತರೈನ್ ಮೈದಾನದಲ್ಲಿ 1190–1191ರಲ್ಲಿ ಪರಸ್ಪರ ಎದುರಾದುವು. ಯುದ್ಧದಲ್ಲಿ ಘೋರಿ ಮಹಮ್ಮದ ಸೋಲನ್ನನುಭವಿಸಿದ, ಪೃಥ್ವೀರಾಜನ ದಂಡನಾಯಕರಲ್ಲೊಬ್ಬನಾದ ಗೋವಿಂದರಾಜನಿಂದ ಪೆಟ್ಟು ತಿಂದು ಮಹಮ್ಮದ ತನ್ನ ಅಂಗರಕ್ಷಕರ ಸಹಾಯದಿಂದ ರಣಾಂಗಣದಿಂದ ಪಾರಾದ. ಪೃಥ್ವೀರಾಜನ ಮತ್ತೊಬ್ಬ ದಳಪತಿಯಾದ ಸ್ಕಂದ ವೀರಾವೇಶದಿಂದ ಹೋರಾಡಿ ಮಹಮ್ಮದನ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿದ. ಚಾಹಮಾನರ ಅಧಿಕಾರ ಪಂಜಾಬಿನ ಮೇಲೆ ಪುನಃ ಸ್ಥಾಪಿಸಲ್ಪಟ್ಟಿತು. ಮಲ್ಲಿಕ್ ಜಿಯಾವುದ್ದೀನ ತಬರ್‌ಹಿಂದ್‌ನಲ್ಲಿ ಸೋತು ಓಡಿ ಹೋದ.

ಘೋರಿ ಮಹಮ್ಮದ ಸೋಲಿಗೆ ಸೇಡನ್ನು ತೀರಿಸಿಕೊಳ್ಳಲು ಹಿರಿದಾದ ಸೈನ್ಯವನ್ನು ಸಜ್ಜುಗೊಳಿಸಿ ಮಾರನೆಯ ವರ್ಷ (1192) ಪಂಜಾಬನ್ನು ಆಕ್ರಮಿಸಿ ಸಿರ್ಹಿಂದ್ ಪ್ರದೇಶವನ್ನು ವಶಪಡಿಸಿಕೊಂಡು ಪೃಥ್ವೀರಾಜ ಇಸ್ಲಾಂ ಧರ್ಮವನ್ನು ಸ್ವೀಕರಿಸುವಂತೆ ದೂತನ ಮುಖಾಂತರ ಹೇಳಿ ಕಳುಹಿಸಿದ. ಕುಪಿತನಾದ ಪೃಥ್ವೀರಾಜ ದೊಡ್ಡ ಸೈನ್ಯದೊಡನೆ ಶತ್ರುವನ್ನು ಎದುರಿಸಲು ಹೊರಟ. ಅನೇಕ ಸಣ್ಣ ಪುಟ್ಟ ರಾಜರು ಪೃಥ್ವೀರಾಜನಿಗೆ ನೆರವಾಗಿ ಯುದ್ಧಕ್ಕೆ ಮುಂದಾದರು. ಪುನಃ ತರೈನ್ ಮೈದಾನದಲ್ಲಿ ಯುದ್ಧ ಸಂಭವಿಸಿತು. ಸಂಧಾನಕ್ಕೆ ಒಡಂಬಟ್ಟವನಂತೆ ನಟಿಸಿ ಮಹಮ್ಮದ ಪೃಥ್ವೀರಾಜನನ್ನು ವಂಚಿಸಲು ಪ್ರಯತ್ನಿಸಿ ವಿಫಲನಾದ. ಕೊನೆಗೆ ತನ್ನ ಅಸಂಖ್ಯಾತ ಸೈನ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ನಾಲ್ಕು ಕಡೆಗಳಿಂದಲೂ ಪೃಥ್ವೀರಾಜನ ಸೈನ್ಯವನ್ನು ಸುತ್ತುವರಿದ. ಚಾಹಮಾನ ರಾಜನ ಸೈನಿಕರು ಇಡೀ ದಿನ ನಿರಂತರ ಹೋರಾಟದಿಂದ ಬಳಲಿದ್ದರು. ಗೊಂದಲಮಯ ಪರಿಸ್ಥಿತಿಯುಂಟಾಯಿತು. ಸಾವಿರಾರು ಸೈನಿಕರು ಹತರಾದರು. ರಣವೀರನಾದ ಗೋವಿಂದರಾಜ ವೀರಾವೇಶದಿಂದ ಹೋರಾಡಿ ರಣರಂಗದಲ್ಲಿ ಮಡಿದು ಬಿದ್ದ. ಪೃಥ್ವೀರಾಜ ಸೆರೆಸಿಕ್ಕಿದ. ಮಹಮ್ಮದ್ ಪೃಥ್ವೀರಾಜನಿಗೆ ಪ್ರಾಣದಾನ ಮಾಡಿ ಅಜ್ಮೀರ್ ನಗರವನ್ನು ಹೊಕ್ಕು ಅಲ್ಲಿಯ ದೇವಾಲಯಗಳನ್ನು ನಾಶಮಾಡಿದ. ಪೃಥ್ವೀರಾಜ ಮಹಮ್ಮದನನ್ನು ಸೋಲಿಸಲು ಸಂಚು ನಡೆಸಿದನೆಂಬ ಕಾರಣದಿಂದ ವಧಿಸಲ್ಪಟ್ಟ. ತರೈನ್ ಯುದ್ಧದ ಪರಿಣಾಮದಿಂದಾಗಿ ಚಾಹಮಾನರ ಯಶಸ್ವೀ ಪ್ರಭುತ್ವ ಕೊನೆಗೊಂಡಿತು. ಪೃಥ್ವೀರಾಜನ ಉತ್ತರಾಧಿಕಾರಿಯಾಗಿ ಅಜ್ಮೀರಿನಲ್ಲಿ ಅವನ ಮಗನಿಗೆ ಸಿಂಹಾಸನ ವಹಿಸಿದ್ದಾಗ್ಯೂ ಕೆಲವೇ ವರ್ಷಗಳಲ್ಲಿ ಅಲ್ಲಿ ಚಾಹಮಾನರ ಆಳ್ವಿಕೆ ಕೊನೆಗೊಂಡಿತು. ಅಜ್ಮೀರ್ ದೆಹಲಿಯಲ್ಲಿ ಮಹಮ್ಮದನ ಪ್ರಾಂತ್ಯಾಧಿಕಾರಿಯಾಗಿದ್ದ ಕುತ್ಬ್ ಉದ್ ದೀನನ ವಶವಾಯಿತು. ಪೃಥ್ವೀರಾಜನ ವಂಶಸ್ಥರು ರಣತಂಬೂರಿನಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ಆಳ್ವಿಕೆಯವರೆಗೂ ಆಡಳಿತ ನಡೆಸಿದರು.

**ರಣತಂಬೂರು ಶಾಖೆ :** ಮೂರನೆಯ ಪೃಥ್ವೀರಾಜನ ಮಗನಾದ ಗೋವಿಂದ ರಣತಂಬೂರು ಚೌಹಾಣ ಶಾಖೆಯ ಸ್ಥಾಪಕ. ಅವನು ಕುತ್ಬ್–ಉದ್–ದೀನನಿಗೆ ಹೇರಳವಾದ ಧನಕನಕಗಳನ್ನು ಕೊಟ್ಟು ರಣತಂಬೂರಿನಲ್ಲಿ ತನ್ನ ಅಧಿಕಾರ ಸ್ಥಾಪಿಸಿದ. ಪರಾಕ್ರಮಿಯಾದರೂ ಹೇಡಿಯಂತೆ ಮುಸ್ಲಿಮರ ಪ್ರಭುತ್ವದ ಆಶ್ರಯದಲ್ಲಿ ಗೋವಿಂದ ಬದುಕಬಯಸಿದ್ದರಿಂದ ಅವನನ್ನು ಕೊನೆಗಾಣಿಸಲು ಪೃಥ್ವೀರಾಜನ ತಮ್ಮನಾದ ಹರಿರಾಜ ಪ್ರಯತ್ನಪಟ್ಟು ವಿಫಲನಾದ. ಗೋವಿಂದನ ಅನಂತರ ವಾಲ್ಹಣದೇವ, ಪ್ರಹ್ಲಾದನ ಮತ್ತು ವೀರನಾರಾಯಣ ಎಂಬುವರು ಕ್ರಮವಾಗಿ ಆಳಿದರು. ದೆಹಲಿ ಸುಲ್ತಾನ ಅಲ್ತಮಷ್ ರಣತಂಬೂರನ್ನು ಆಕ್ರಮಿಸಲು ಪ್ರಯತ್ನಪಟ್ಟ. ಆದರೆ ಪರಾಕ್ರಮಿಯಾದ ವೀರನಾರಾಯಣ ಮಹಮ್ಮದೀಯರ ದಾಳಿಗಳನ್ನು ಶೌರ್ಯದಿಂದ ಎದುರಿಸಿ ಹಿಮ್ಮೆಟ್ಟಿಸಿದ. ಅನಂತರ ಅಲ್ತಮಷ್ ಗೌರವದಿಂದ ವೀರನಾರಾಯಣನನ್ನು ದೆಹಲಿಗೆ ಬರಮಾಡಿಕೊಂಡು ಮೋಸದಿಂದ ಕೊಲ್ಲಿಸಿ ರಣತಂಬೂರನ್ನು ಆಕ್ರಮಿಸಿದ. ಅಲ್ತಮಷನ ಮರಣಾನಂತರ 1236ರಲ್ಲಿ ವೀರನಾರಾಯಣನ ಸೋದರಸಂಬಂಧಿಯಾದ ವಾಗ್ಭಟನ ಮರಣಾನಂತರ ಅವನ ಮಗನಾದ ಜೈತ್ರಸಿಂಹ ರಾಜನಾದ. ಜೈತ್ರಸಿಂಹ ಮುಸ್ಲಿಂ ದಾಳಿಗಳಿಂದ ರಣತಂಬೂರು ರಾಜ್ಯವನ್ನು ಸಂರಕ್ಷಿಸಿದ. ಜೈತ್ರಸಿಂಹನ ಮರಣಾನಂತರ ಅವನ ಮಗನಾದ ಹಮ್ಮೀರ ರಾಜನಾದ.

ಹಮ್ಮೀರ ರಣತಂಬೂರಿನ ರಾಜರಲ್ಲೆಲ್ಲ ಅತ್ಯಂತ ಪರಾಕ್ರಮಿ ಎಂದು ಪ್ರಸಿದ್ಧನಾಗಿದ್ದಾನೆ. ಅಮೀರ್ ಖುಸ್ರು, ಜಿಯಾವುದ್ದೀನ್, ಬರನಿ ಮೊದಲಾದ ಮುಸ್ಲಿಂ ಲೇಖಕರು ಹಮ್ಮೀರ ಮತ್ತು ಅಲ್ಲಾವುದ್ದೀನ್ ಖಿಲ್ಜಿಯ ನಡುವೆ ನಡೆದ ಯುದ್ಧಗಳನ್ನು ವರ್ಣಿಸಿದ್ದಾರೆ. ಜೋಧರಾಜನ ಹಮ್ಮೀರ ರಾಸೋ ಮತ್ತು ಚಂದ್ರಶೇಖರನ ಹಮ್ಮೀರ ಹಾಥ ಹಿಂದೀ ಗ್ರಂಥಗಳಲ್ಲೂ ಹಮ್ಮೀರನಿಗೆ ಸಂಬಂಧಿಸಿದ ವರ್ಣನೆಗಳಿವೆ. ಹಮ್ಮೀರ ಉಜ್ಜಯಿನಿ, ಧಾರ, ಚಿತ್ತೂರು, ಆಬು, ತ್ರಿಭುವನಗಿರಿ ಮೊದಲಾದ ಪ್ರದೇಶಗಳ ರಾಜರನ್ನು 1288ರ ವೇಳೆಗೆ ಸೋಲಿಸಿ ತನ್ನ ಪುರೋಹಿತನಾದ ವಿಶ್ವರೂಪ ಎಂಬುವನ ಸಲಹೆಯ ಮೇರೆಗೆ ಕೋಟಿ ಯಜ್ಞವನ್ನು ಆಚರಿಸಿದ. 1292ರ ವೇಳೆಗೆ ದೆಹಲಿ ಸುಲ್ತಾನನಾಗಿದ್ದ ಜಲಾಲುದ್ದೀನ ಹಮ್ಮೀರನ ಪ್ರತಾಪವನ್ನಡಗಿಸಲು ಎರಡು ಸಾರಿ ರಣತಂಬೂರನ್ನು ಮುತ್ತಲು ಸೈನ್ಯ ಕಳುಹಿಸಿದ. ಆದರೆ ಅವನ ಪ್ರಯತ್ನ ಫಲಪ್ರದವಾಗಲಿಲ್ಲ. 1296ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ದೆಹಲಿಯ ಸುಲ್ತಾನನಾಗಿ ರಾಜ್ಯವಿಸ್ತರಣೆಗೆ ತೊಡಗಿದ. ರಣತಂಬೂರನ್ನು ವಶಪಡಿಸಿಕೊಳ್ಳಲು ಅಲ್ಲಾವದ್ದೀನ್ ಉಲ್ಘುಖಾನನ ನಾಯಕತ್ವದಲ್ಲಿ ದೊಡ್ಡ ಸೈನ್ಯವನ್ನು 1300ರ ಸುಮಾರಿನಲ್ಲಿ ಕಳುಹಿಸಿದ. ಮುಸ್ಲಿಮರ ಸೈನ್ಯ ರಣತಂಬೂರನ್ನು ತಲುಪುವ ಮೊದಲೇ ಹಮ್ಮೀರನ ದಂಡನಾಯಕನಾದ ಭೀಮಸಿಂಹ ಶತ್ರುಗಳನ್ನು ಸೋಲಿಸಿ ವೀರಾವೇಶದಿಂದ ಹೋರಾಡಿ ರಣರಂಗದಲ್ಲಿ ಪ್ರಾಣ ಬಿಟ್ಟ. ಹಮ್ಮೀರ ತನ್ನ ಶಕ್ತಿಯನ್ನು ಶೇಖರಿಸಿದ. ಮನಸ್ತಾಪದಿಂದ ರಣತಂಬೂರನ್ನು ತ್ಯಜಿಸಿದ್ದ ಹಮ್ಮೀರನ ಬಂಧುವಾದ ಭೋಜ ಆ ವೇಳೆಗೆ ಅಲ್ಲಾವುದ್ದೀನನ ಆಶ್ರಯವನ್ನು ಪಡೆದು ರಣತಂಬೂರನ್ನು ಆಕ್ರಮಿಸಲು ಅವನಿಗೆ ಸೂಕ್ತ ಸಲಹೆ ನೀಡಿದ.

ಅಲ್ಲಾವುದ್ದೀನ್ ಖಿಲ್ಜಿ ಉಲ್ಘುಖಾನ್ ಮತ್ತು ನಸರತ್‌ಖಾನ್ ಎಂಬ ತನ್ನ ಪ್ರಸಿದ್ಧ ದಳಪತಿಗಳೊಂದಿಗೆ ತಾನೇ ದೊಡ್ಡ ಸೈನ್ಯದೊಡನೆ ರಣತಂಬೂರನ್ನು ಮುತ್ತಲು ಬಂದ. ಮುಸ್ಲಿಮರ ಸೈನ್ಯ 1301ರ ಪ್ರಾರಂಭದಲ್ಲಿ ರಣತಂಬೂರಿನ ಕೋಟೆಯನ್ನು ಸಮೀಪಿಸಿ ಒಳನುಗ್ಗುಲು ಮಾಡಿದ ಪ್ರಯತ್ನ ವಿಫಲವಾಯಿತು. ಅನಂತರ ಅಲ್ಲಾವುದ್ದೀನ ಸಂಧಾನಕ್ಕೆ ಒಪ್ಪುವಂತೆ ನಟಿಸಿ, ಹಮ್ಮೀರನ ಮೆಚ್ಚಿಗೆಯ ದಳಪತಿಗಳಾದ ರತಿಪಾಲ ಮತ್ತು ರಣಮಲ್ಲ ಎಂಬುವರನ್ನು ವಿದ್ರೋಹದಿಂದ ತನ್ನ ಕಡೆಗೆ ಸೆಳೆದುಕೊಂಡ. ಹಮ್ಮೀರ ತನ್ನ ಕುಮಾರಿ ದೇವಲದೇವಿಯನ್ನು ತನಗೆ ಕೊಟ್ಟು ವಿವಾಹಮಾಡುವುದಾದರೆ ತಾನು ರಣತಂಬೂರಿನಿಂದ ಹಿಂದಿರುಗುವುದಾಗಿ ಅಲ್ಲಾವುದ್ದೀನ ಹೇಳಿ ಕಳುಹಿಸಿದ. ಇದರಿಂದ ಕುಪಿತನಾದ ಹಮ್ಮೀರ ಜೌಹರ್ ಪದ್ಧತಿಯನ್ನು ಅನುಸರಿಸುವಂತೆ ತನ್ನವರಿಗೆ ತಿಳಿಸಿದ. ಹಮ್ಮೀರನ ರಾಣಿ, ಅವನ ಕುಮಾರಿ ಮೊದಲಾಗಿ ಅನೇಕ ಮಂದಿ ಸ್ತ್ರೀಯರು ಅಗ್ನಿಕುಂಡಕ್ಕೆ ಜಿಗಿದು ಪ್ರಾಣಾರ್ಪಣ ಮಾಡಿಕೊಂಡರು. ಹಮ್ಮೀರ ಜಾಜನಿಗೆ ಪಟ್ಟ ಕಟ್ಟಿ ವೀರಾವೇಶದಿಂದ ವೈರಿಗಳ ಮೇಲೆ ಬಿದ್ದು ಹೋರಾಡುತ್ತ ಮಡಿದ. ಇವನ ಪರಾಕ್ರಮವನ್ನೂ ಧೈರ್ಯಸ್ಥೈರ್ಯಗಳನ್ನೂ ಕಣ್ಣಾರೆ ಕಂಡ ಶತ್ರುಗಳು ಅಪ್ರತಿಭರಾದರು. ವಿದ್ರೋಹಿಗಳಾದ ರತಿಪಾಲ, ರಣಮಲ್ಲರನ್ನು ಅಲ್ಲಾವುದ್ದೀನ ಕೊಲ್ಲಿಸಿದ. ರಣತಂಬೂರು ಮಹಮ್ಮದೀಯರ ವಶವಾಯಿತು. ಹಮ್ಮೀರನ ವೀರಮರಣದೊಡನೆ ರಣತಂಬೂರಿನ ಚೌಹಾಣ ಮನೆತನದ ಆಳ್ವಿಕೆ ಕೊನೆಗೊಂಡಿತು.

**ನಾಡೋಲ್ ಶಾಖೆ :** ಈ ಶಾಖೆ ಶಾಕಂಬರಿಯ ಲಾಕ್ಷಣ ಅಥವಾ ಲಕ್ಷ್ಮಣ ಎಂಬವನಿಂದ ಸ್ಥಾಪಿಸಲ್ಪಟ್ಟಿತೆಂದು ತಿಳಿದುಬರುತ್ತದೆ. ಇವನು ತನ್ನ ಪತ್ನಿ ಮತ್ತು ಒಬ್ಬ ಹರಿಜನ ಅನುಚರನೊಡನೆ ನಾಡೋಲ್‌ಗೆ ಬಂದು ತನ್ನ ಶೌರ್ಯದಿಂದಲೂ ದೈವಾನುಗ್ರಹದಿಂದಲೂ ರಾಜ್ಯ ಸ್ಥಾಪಿಸಿದನೆಂದು ಪ್ರತೀತಿ. ಇವನ ಅನಂತರ ಶೋಭಿತ, ಬಲಿರಾಜ, ವಿಗ್ರಹಪಾಲ, ಮಹೇಂದ್ರ ಇವರು ಅನುಕ್ರಮವಾಗಿ ಆಳ್ವಿಕೆ ನಡೆಸಿದರು. ಮಹೇಂದ್ರನ ಮಗನಾದ ಅಶ್ವಪಾಲ ಸು. 11ನೆಯ ಶತಮಾನದ ಪ್ರಾರಂಭದಲ್ಲಿ ಆಳುತ್ತಿದ್ದ ಅಶ್ವಪಾಲನ ಕಾಲದಲ್ಲಿ ಗುಜರಾತಿನ ಚೌಳುಕ್ಯರಿಗೂ ಚೌಹಾಣರಿಗೂ ಯುದ್ಧಗಳು ನಡೆದುವು. ಅಶ್ವಪಾಲನ ಮಗನೂ ಉತ್ತರಾಧಿಕಾರಿಯೂ ಆದ ಅಣಹಿಲ ನಾಡೋಲ್ ಚೌಹಾಣ ರಾಜರಲ್ಲಿ ಅತ್ಯಂತ ಪ್ರಸಿದ್ಧನಾದವ. ಇವನು ಗುಜರಾತಿನ 2ನೆಯ ಭೀಮನನ್ನೂ ಪರಮಾರ ಭೋಜನನ್ನೂ ಮುಸ್ಲಿಂ ಸೈನ್ಯಗಳನ್ನೂ ಸೋಲಿಸಿದ. ಇವನ ಆಳ್ವಿಕೆಯಲ್ಲಿ ನಾಡೋಲ್ ರಾಜ್ಯ ಪ್ರಬಲರಾಜ್ಯಗಳಲ್ಲೊಂದೆಂದು ಪ್ರಸಿದ್ಧವಾಗಿತ್ತು. ಅಣಹಿಲನ ಮರಣಾನಂತರ ಇವನ ಪುತ್ರ ಬಾಲಪ್ರಸಾದ ರಾಜನಾದ. ಇನ್ನೂ ಬಾಲಕನಾಗಿದ್ದ ಇವನು ಗುಜರಾತಿನ ಭೀಮದೇವನಿಂದ ಪರಾಜಿತನಾದ. ಇವನ ಸಹೋದರನಾದ ಜೆಂದುರಾಜ ಸಿಂಹಾಸನಕ್ಕೆ ಬಂದ. ಜೆಂದುರಾಜ ತನ್ನ ಶತ್ರುಗಳನ್ನು ಸೋಲಿಸಿ, ಜೆಂದ್ರರಾಜೇಶ್ವರ ಎಂಬ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಜೆಂದು ರಾಜನ ಅನಂತರ ಇವನ ಮಗನಾದ ಪೃಥ್ವೀರಾಜ ಅನೇಕ ವರ್ಷಗಳ ಕಾಲ ಆಳಿ ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತಂದ. ಅವನ ಅನಂತರ ಆಳಿದ ಅವನ ಸಹೋದರ ಜಾಜಲದೇವ 1090ರ ಸುಮಾರಿನಲ್ಲಿ ಅಣಹಿಲಪಾಟಕವನ್ನು ಆಕ್ರಮಿಸಿದ. ಜಾಜಲನ ಮರಣಾನಂತರ ಅವನ ಸಹೋದರನಾದ ಆಶರಾಜ ಸ್ವಲ್ಪ ಕಾಲ ಆಳಿದ. ಆದರೆ ಪೃಥ್ವೀಪಾಲನ ಮಗನಾದ ರತ್ನಪಾಲ 1115ರಲ್ಲಿ ತನ್ನ ಹಕ್ಕನ್ನು ಪ್ರತಿಪಾದಿಸಿ ಸಿಂಹಾಸನ ಪಡೆದ. ಅನಂತರ ರಾಯಪಾಲ, ಸಹಜಪಾಲ, ಅಹಣ, ಕೆಲ್ಹಣ, ಜಯತಸಿಂಹ-ಇವರು ಕ್ರಮವಾಗಿ ಆಳಿದರು. ಜಯತಸಿಂಹನ ಆಳ್ವಿಕೆಯಲ್ಲಿ ಕುತ್ಬ್-ಉದ್-ದೀನ್ ಐಬಕ್ ನಾಡೋಲ್ ಮೇಲೆ ಆಕ್ರಮಣ ನಡೆಸಿದ ಸಾಮಂತಸಿಂಹ ನಾಡೋಲ್ ಚೌಹಾಣ ಮನೆತನದ ಕೊನೆಯ ರಾಜ. ಅನಂತರ ಆ ರಾಜ್ಯ ಜಾಲೋರ್ ಚೌಹಾಣ ಮನೆತನದ ಉದಯಸಿಂಹನ ಆಡಳಿತಕ್ಕೆ ಒಳಪಟ್ಟಿತು.

**ಜಾಲೋರ್ ಶಾಖೆ :** ನಾಡೋಲ್ ರಾಜನಾದ ಅಲ್ಹಣದೇವ ಮತ್ತು ಅನ್ನಲ್ಲದೇವಿಯ ಕುಮಾರರಲ್ಲೊಬ್ಬನಾದ ಕೀರ್ತಿಪಾಲ ಜಾಲೋರ್ (ಜಾಬಾಲಿಪುರ) ಚೌಹಾಣ ಶಾಖೆಯ ಸ್ಥಾಪಕ. ಜಾಲೋರ್ ಅಥವಾ ಜಾಬಾಲಿಪುರ ಬೆಟ್ಟ ಗುಡ್ಡಗಳಿಂದಾವೃತವಾದ ದುರ್ಗಮ ಪ್ರದೇಶವಾಗಿತ್ತು. ಸುವರ್ಣಗಿರಿ ಜಾಲೋರ್ ರಾಜ್ಯದ ಮುಖ್ಯಪಟ್ಟಣಗಳಲ್ಲೊಂದಾಗಿತ್ತು. ತನ್ನ ದಕ್ಷತೆ ಮತ್ತು ಶೌರ್ಯದಿಂದ ಚಿಕ್ಕ ರಾಜ್ಯವೊಂದನ್ನು ಸ್ಥಾಪಿಸಿದ ಕೀರ್ತಿಪಾಲನನ್ನು ಅನೇಕ ಕವಿಗಳು ತಮ್ಮ ಗ್ರಂಥಗಳಲ್ಲಿ ಸ್ಮರಿಸಿದ್ದಾರೆ. ಕೀರ್ತಿಪಾಲ ಸಂಪ್ರದಾಯವಾದಿ ಹಿಂದು; ಸೂರ್ಯ ಮತ್ತು ಮಹೇಶ್ವರನ ಆರಾಧಕ. ಇವನು ಮಹಾವೀರ ಜಿನಾಲಯಕ್ಕೂ ಉದಾರ ದಾನ ದತ್ತಿಗಳನ್ನು ನೀಡಿದ. ಕೀರ್ತಿಪಾಲನ ಅನಂತರ ಇವನ ಮಗನಾದ ಸಮರಸಿಂಹ ರಾಜನಾದ. ಇವನ ಸು. 1182ರ ಹಲವು ದಾನಶಾಸನಗಳು ದೊರೆತಿವೆ. ಇವನ ಸೂಂಧಾ ಶಾಸನದ ಪ್ರಕಾರ ಸಮರಸಿಂಹ ದೇವಾಲಯಗಳ ನಿರ್ಮಾಣ, ಧರ್ಮಶ್ರದ್ಧೆ, ವಿದ್ವಾಂಸ ಮತ್ತು ವಿದ್ವತ್‌ಪಕ್ಷಪಾತ ಇವುಗಳಿಗೆ ಪ್ರಸಿದ್ಧನಾಗಿದ್ದ. ಇವನು ತುಲಾಪುರುಷ ಮಹಾದಾನವನ್ನು ಆಚರಿಸಿದ. ಜಾಲೋರ್‌ನ ಕನಕಾಚಲ ಅಥವಾ ಸುವರ್ಣಗಿರಿಗೆ ಭದ್ರವಾದ ಕೋಟೆ ನಿರ್ಮಿಸಿ ಅದನ್ನು ಅಭೇದ್ಯ ಸ್ಥಳವನ್ನಾಗಿ ಮಾಡಿದ. ಇವನು ಒಂದು ಹೊಸ ಪಟ್ಟಣವನ್ನು ಕಟ್ಟಿಸಿ ಅದಕ್ಕೆ ಸಮರಪುರ ಎಂದು ಹೆಸರಿಟ್ಟ. ಇವನ ಸಹೋದರಿಯಾದ ರೂದಲದೇವಿ ರಾಜಧಾನಿಯಲ್ಲಿ ಎರಡು ಶಿವಾಲಯಗಳನ್ನು ಕಟ್ಟಿಸಿದಳು. ಅಲ್ಲಿಯ ಕುನ್ವರ ವಿಹಾರ ರಾಜನ ಇಷ್ಟದಂತೆ ಪುನರ್‌ನಿರ್ಮಾಣವಾಯಿತು. ಇವನು ತನ್ನ ಕುಮಾರಿಯಾದ ಲೀಲಾದೇವಿಯನ್ನು ಗುಜರಾತಿನ ಇಮ್ಮಡಿ ಭೀಮದೇವನಿಗೆ ಕೊಟ್ಟು ವಿವಾಹ ಮಾಡಿದ್ದ. ಇವನ ಆಳ್ವಿಕೆಯಲ್ಲಿ ರಾಜ್ಯ ಶಾಂತಿ ಸುಭಿಕ್ಷೆಗಳಿಂದ ಕೂಡಿತ್ತು.

ಸಮರಸಿಂಹನ ಅನಂತರ ಇವನ ಮಗ ಉದಯಸಿಂಹ ಜಾಲೋರ್ ಸಂಸ್ಥಾನದ ರಾಜನಾದ. 1205ರಿಂದ 1249ರವರೆಗೆ ಇವನು ಕೊಟ್ಟ ದಾನಗಳಿಗೆ ಸಂಬಂಧಿಸಿದ ಶಾಸನಗಳು ದೊರೆತಿವೆ. ಪರಾಕ್ರಮಿಯಾದ ಉದಯಸಿಂಹ ನಾಡ್ಡುಲ, ಜಾಬಾಲಿಪುರ, ಮಾಂಡವ್ಯಪುರ ವಾಲ್ಭಟಮೇರು, ಶ್ರೀಮಲ, ರತ್ನಪುರ ಮೊದಲಾದ ಪ್ರದೇಶಗಳ ಮೇಲೆ ತನ್ನ ಆಳ್ವಿಕೆ ಸ್ಥಾಪಿಸಿ ರಾಜ್ಯವನ್ನು ವಿಸ್ತರಿಸಿದ. ಇವನ ರಾಜ್ಯ ಮಂದರ್‌ನಿಂದ ಸಾಂಚರ್‌ರವರೆಗೂ ಮಲ್ಲನಿಯಿಂದ ಗದ್ವಾರ್‌ವರೆಗೂ ವಿಸ್ತರಿಸಿತ್ತು. 1226ರ ವೇಳೆಗೆ ಇವನು ನಾಡೋಲ್ ರಾಜ್ಯವನ್ನು ವಶಪಡಿಸಿಕೊಂಡ. ಉದಯಸಿಂಹನ ಪ್ರಭಾವವನ್ನು ಮುರಿಯಲು 1216ರಲ್ಲಿ ಅಲ್ತಮಿಷ್ ದೊಡ್ಡ ಸೈನ್ಯವೊಂದನ್ನು ಕಳುಹಿಸಿದ. ಉದಯಸಿಂಹ ಶತ್ರುಸೈನ್ಯವನ್ನು ಎದುರಿಸಿ ಶೌರ್ಯದಿಂದ ಹೋರಾಡಿ ಪರಾಭವ ಹೊಂದಿದ. ಅಲ್ತಮಿಷ್ ಇವನ ಶೌರ್ಯಕ್ಕೆ ಮಾರುಹೋಗಿ ಸ್ನೇಹವನ್ನು ಬಯಸಿ ಇವನ ರಾಜ್ಯವನ್ನು ಬಿಟ್ಟುಕೊಟ್ಟ. ಅನಂತರ ಅಲ್ತಮಿಷ್ ಗುಜರಾತನ್ನು ಮುತ್ತಿದ. ಉದಯಸಿಂಹ ಗುಜರಾತಿನ ವಾಘೇಲ ವೀರಧವಳನ ಸಹಾಯಕ್ಕೆ ಧಾವಿಸಿ ಮುಸ್ಲಿಮರ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದ. ಉದಯಸಿಂಹ ತನ್ನ ಕುಮಾರಿಯನ್ನು ವಾಘೇಲ ರಾಜನಿಗೆ ಕೊಟ್ಟು ವಿವಾಹ ಮಾಡಿದ. ಇವನು ವೀರನಾಗಿದ್ದಂತೆ ವಿದ್ವತ್‌ಪಕ್ಷಪಾತಿಯಾಗಿದ್ದ; ಸಂಗೀತ ನೃತ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ. ಉದಯಸಿಂಹನ ಮರಣಾನಂತರ ಇವನ ಮಗನಾದ ಚಾಚಿಲ ರಾಜನಾದ. ಚಾಚಿಲನೂ ತಂದೆಯಂತೆ ಪರಾಕ್ರಮಿಯಾಗಿದ್ದ. ಇವನು ಗುಜರಾತಿನ ವೀರಮದೇವನನ್ನೂ ಇತರ ರಾಜರನ್ನೂ ಸೋಲಿಸಿದ. ಚಾಚಿಲನ ಅನಂತರ 1277ರಲ್ಲಿ ಇವನ ಮಗ ಸಾಮಂತಸಿಂಹ ರಾಜನಾದ. ಸಾಮಂತಸಿಂಹನ ಮಗನಾದ ಕಾನ್ಹಡ ಜಾಲೋರ್ ರಾಜ್ಯದ ಕೊನೆಯ ರಾಜ. 1311ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ಜಾಲೋರ್ ರಾಜ್ಯವನ್ನು ಮುತ್ತಿ ಕಾನ್ಹಡ ಮತ್ತು ಅವನ ಮಗ ವೀರಮನನ್ನು ಕೊಂದು ಜಾಲೋರ್ ರಾಜ್ಯವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. (ಜಿ.ಆರ್.ಆರ್.)

**ಇತರ ಶಾಖೆಗಳು:** 9ನೆಯ ಶತಮಾನದಲ್ಲಿ ಧೋಲ್‌ಪುರದ ಸುತ್ತಲೂ ಪ್ರತೀಹಾರರ ಮಾಂಡಲಿಕರಾಗಿ ಚಾಹಮಾನರ ಒಂದು ಶಾಖೆಯವರು ಆಳುತ್ತಿದ್ದರು. ಈ ಮನೆತನದ ಮೂವರ ಹೆಸರುಗಳು ತಿಳಿದಿವೆ; ಈಸುಕ್, ಆತನ ಮಗ ಮಹಿಷರಾಮ, ಮೊಮ್ಮಗ ಚಂಡಮಹಾಸೇನ. ಚಂಡಮಹಾಸೇನ ಧವಳಪುರಿಯಲ್ಲಿ (ಧೋಲ್‌ಪುರ) 842ರಲ್ಲಿ ಆಳುತ್ತಿದ್ದ. ಚರ್ಮಣ್ವತೀ-ಚಂಬಲ್-ನದೀತೀರದಲ್ಲಿ ನೆಲಸಿದ್ದ. ಮ್ಲೇಚ್ಛರು ಇವನ ಅಧೀನರಾಗಿದ್ದರೆಂದು ಈತ ಹೇಳಿಕೊಂಡಿದ್ದಾನೆ. ಧವಳಪುರಿಯ ದೇವಾಲಯವನ್ನು ಈತ ಕಟ್ಟಿಸಿದ. ಇವನ ಅನಂತರ ಆಳಿದ ಇತರರ ಬಗ್ಗೆ ಏನೂ ತಿಳಿಯದು.

ಪರ್ತಾಬ್‌ಗಢದಲ್ಲಿ ಚಾಹಮಾನರ ಇನ್ನೊಂದು ಮಾಂಡಲಿಕ ಮನೆತನ ಅಧಿಕಾರದಲ್ಲಿತ್ತು. ಗೋವಿಂದರಾಜ, ದುರ್ಲಭರಾಜ ಮತ್ತು ಮಹಾಸಾಮಂತ ಇಂದ್ರರಾಜರು ಈ ಶಾಖೆಗೆ ಸೇರಿದವರು. 942ರ ಸುಮಾರಿಗೆ ಇಂದ್ರರಾಜ ಗೊಣ್ವ ವರ್ಷಕಾ (ಪರ್ತಾಬ್‌ಗಢ ಸಮೀಪದ ಘೊಟರ್ಸಿ) ಗ್ರಾಮದಲ್ಲಿ ಸೂರ್ಯದೇವಾಲಯವೊಂದನ್ನು ಕಟ್ಟಿಸಿದ.

ಸತ್ಯಪುರ (ಜೋಧಪುರದ ಸಮೀಪದ ಸಾಂಚೋರ್) ಮತ್ತು ದೇವಡಾಗಳಲ್ಲಿ 13ನೆಯ ಶತಮಾನದಲ್ಲಿ ಮತ್ತು ಅನಂತರ ಚಾಹಮಾನ ಮನೆತನದ ಭಿನ್ನ ಶಾಖೆಗಳವರು ಅಧಿಕಾರದಲ್ಲಿದ್ದರು. ನಾಡೋಲ್ ಚಾಹಮಾನನಾದ ಅಲ್ಹಣನ ಮಗ ವಿಜಯಸಿಂಹ ಸತ್ಯಪುರವನ್ನು ಸ್ಥಾಪಿಸಿದ. ಈತನೂ ತದನಂತರ ಬಂದ ಪದ್ಮಸಿಂಹ, ಶೋಭಿತ ಮತ್ತು ಸಾಲ್ಹ ಇವರೂ ಜಾಲೋರ್ ಚಾಹಮಾನರ ಸಾಮಂತರಾಗಿದ್ದರು. ಸಾಲ್ಹ ಭಾನ್‌ಮಲ್ ನಗರವನ್ನು ಮುಸ್ಲಿಮರಿಂದ ಕಸಿದುಕೊಂಡನೆಂದು ಹೇಳಿದೆ. ಈತನ ಅನಂತರ ವಿಕ್ರಮಸಿಂಹ, ಸಂಗ್ರಾಮಸಿಂಹ ಮತ್ತು ಪ್ರತಾಪಸಿಂಹರು ಅನುಕ್ರಮವಾಗಿ ಆಳಿದರು.

ದೇವಡಾ ಶಾಖೆಯ ಮೂಲಪುರುಷ ವಿಜಡ ಅಥವಾ ದೇವರಾಜ; ಜಾಲೋರದ ಚಾಹಮಾನ ಸಮರಸಿಂಹನ ಮರಿಮಗ; ಮಾನಸಿಂಹನ ಮೊಮ್ಮಗ; ಪ್ರತಾಪನ ಮಗ. ಈತನಿಂದಲೇ ಈ ಶಾಖೆಗೆ ದೇವಡಾ (ದೇವರಾಜ) ಎಂಬ ಹೆಸರು ಬಂತು. ಮರುಸ್ಥಳೀ ಮಂಡಲದ ಅಧಿಪನೆಂದು ಈತನನ್ನು ವರ್ಣಿಸಲಾಗಿದೆ. ಈತನ ಮಗ ವಾಣಿಗ (ಲಾವಣ್ಯಕರ್ಣ) ಆಬು ಪರ್ವತವನ್ನೂ ವಾಘೇಲರಿಂದ ಕಸಿದುಕೊಂಡ. ವಾಣಿಗನ ಅನಂತರ ಇವನ ತಮ್ಮ ಉಣ್ಣಿಗ (ಉಣ್ಣ) 1315ರಿಂದ 1320ರ ವರೆಗೂ, ಅನಂತರ ವಾಣಿಗನ ಮಗ ತೇಜಸಿಂಹ ಸು. 1337ರವರೆಗೂ ಆಳಿದರು. 1337ರಲ್ಲಿ ತೇಜಸಿಂಹನ ಮಗ ಕಾನ್ಹಡದೇವ ಅಧಿಕಾರಕ್ಕೆ ಬಂದ. ಈತನೇ ಈ ಮನೆತನದ ಕೊನೆಯ ಅರಸ. (ಜಿ.ಬಿ.ಆರ್.)

**ಚೌಹಾಣ ಸುಭದ್ರಾ ಕುಮಾರಿ :** 1904-1948. ಭಾರತೀಯ ಕವಯಿತ್ರಿ, ಕತೆ ಹಾಗೂ ಪ್ರಬಂಧಗಳನ್ನೂ ಬರೆದಿದ್ದಾಳೆ. ಹಿಂದೀ ಸಾಹಿತ್ಯ ಕ್ಷೇತ್ರದಲ್ಲಿ ದ್ವಿವೇದೀ ಯುಗವೆಂದು ಹೆಸರಾಗಿರುವ ಅವಧಿಯಲ್ಲಿ ಬೆಳಕಿಗೆ ಬಂದ ಲೇಖಕಿಯರಲ್ಲಿ ಈಕೆ ಅತ್ಯಂತ ಜನಪ್ರಿಯಳಾದವಳು.

ಈಗ ಅಲಹಾಬಾದ್ ನಗರದ ಒಂದು ಭಾಗವಾಗಿರುವ ನಿಹಾಲ್‌ಪುರ ಎಂಬ ಹಳ್ಳಿಯಲ್ಲಿ ಸಂಪ್ರದಾಯಸ್ಥ ರಾಜಪೂತ ಕುಟುಂಬವೊಂದರಲ್ಲಿ ಈಕೆ ಜನಿಸಿದಳು. ತಂದೆ ಠಾಕೂರ್ ರಾಮನಾಥಸಿಂಹ ಶಿಸ್ತಿನ ಸಿಪಾಯಿಯಾಗಿದ್ದು ಅದೇ ರೀತಿಯಲ್ಲಿ ತಮ್ಮ ಮಕ್ಕಳನ್ನು ಬೆಳೆಸಿದರು. ಈಕೆಯ ಪ್ರಾರಂಭಿಕ ಶಿಕ್ಷಣ ಅಲಹಾಬಾದಿನಲ್ಲಿ ನಡೆಯಿತು. 15ನೆಯ ವರ್ಷದ ಹೊತ್ತಿಗೆ ಖಾಂಡ್ವಾದ ಠಾಕೂರ್ ಲಕ್ಷ್ಮಣಸಿಂಹ ಚೌಹಾಣನೊಡನೆ ಈಕೆಯ ವಿವಾಹವಾಯಿತು. ಸೋದರರ ಒತ್ತಾಸೆಯಿಂದ ವಿವಾಹಾನಂತರವೂ ವಾರಣಾಸಿಯ ಅಧ್ಯಾತ್ಮ ವಿದ್ಯಾಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸಿದಳಾದರೂ ಆ ಹೊತ್ತಿಗೆ ಪ್ರಾರಂಭವಾದ ಗಾಂಧೀಜಿಯವರ ಅಸಹಕಾರ ಆಂದೋಳನದಲ್ಲಿ ಭಾಗಿಯಾಗಿದ್ದ ತನ್ನ ಪತಿಗೆ ಆಸರೆಯಾಗಿ ನಿಲ್ಲುವ ಉದ್ದೇಶದಿಂದ ಈಕೆ ಜಬ್ಬಲ್‌ಪುರಕ್ಕೆ ಹಿಂದಿರುಗಿದಳು. ರಾಷ್ಟ್ರಧ್ವಜವನ್ನು ಅಗೌರವಿಸಿದ ಅರಸರನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಿದ ಈಕೆಗೆ ಪ್ರಥಮ ಮಹಿಳಾ ಸತ್ಯಾಗ್ರಹಿ ಎನಿಸಿಕೊಳ್ಳುವ ಗೌರವ ಲಭ್ಯವಾಯಿತು. ಅಂದಿನಿಂದಲೂ

ನಾಡಿನ ಸ್ವಾತಂತ್ರ್ಯಸಂಗ್ರಾಮದ ಮಂಚೂಣಿಯಲ್ಲಿಯೇ ಪತಿಪತ್ನಿಯರ ಈ ಜೋಡಿ ಕಾರ್ಯನಿರತವಾಗಿತ್ತು. ಇದರ ಪರಿಣಾಮವಾಗಿ 1940 ಮತ್ತು 1942ರಲ್ಲಿ ಈಕೆ ಸೆರೆಮನೆಯ ಶಿಕ್ಷೆಯನ್ನು ಅನುಭವಿಸಬೇಕಾಯಿತು. 1942ರಲ್ಲಂತೂ ಕೈಗೂಸಿನೊಂದಿಗೆ ಕಾರಾಗೃಹದಲ್ಲಿರಬೇಕಾಗಿ ಬಂತು. ಜೈಲುವಾಸದ ಪರಿಣಾಮವಾಗಿ ಒಮ್ಮೆ ಪ್ರಾಣಾಪಾಯವಾಗುವಷ್ಟರಮಟ್ಟಿಗೆ ಆರೋಗ್ಯ ಕೆಟ್ಟುಹೋಯಿತು. ಅತ್ಯಂತ ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬಂದಿದ್ದರೂ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳತ್ತ, ಸಮಾಜಧೋರಣೆಯ ಧ್ಯೇಯೋದ್ದೇಶಗಳತ್ತ ಆಕರ್ಷಿತಳಾದ ಈಕೆ ಅಸ್ಪೃಶ್ಯತಾನಿವಾರಣೆ, ಮಹಿಳೆಯರ ಉದ್ಧಾರ, ಹಿಂದೂ–ಮುಸ್ಲಿಂ ಐಕ್ಯ, ಜಾತ್ಯತೀತತೆ ಇವೇ ಮೊದಲಾದ ಆದರ್ಶಗಳಿಗಾಗಿ ತನ್ನ ಬಾಳನ್ನು ಮೀಸಲಾಗಿಟ್ಟಳು. ಈ ಆದರ್ಶಗಳು ಕೇವಲ ಉಪದೇಶವಾಗಿರಲಿಲ್ಲ ಎಂಬುದಕ್ಕೆ ಸಾಕ್ಷಿಯೆಂದರೆ ಹರಿಜನೋದ್ಧಾರ ಕಾರ್ಯಕ್ರಮದ ಅಂಗವಾಗಿ ಈಕೆ ಅವರ ಕೇರಿಗಳಲ್ಲಿಯೇ ಅವರೊಡನೆಯೇ ವಾಸವಾಗಿದ್ದುದು, ವರದಕ್ಷಿಣೆ ಕೊಡುವ ಅಥವಾ ತೆಗೆದುಕೊಳ್ಳುವ ಸಂಬಂಧಗಳಿದ್ದಂಥ ವಿವಾಹ ಸಮಾರಂಭಗಳನ್ನು ಬಹಿಷ್ಕರಿಸುತ್ತಿದ್ದುದು ಹಾಗೂ ತನ್ನ ಮಕ್ಕಳನ್ನೇ ಹೊರಜಾತಿಯವರಿಗೆ ಕೊಟ್ಟು ಅಂತರ್ಜಾತೀಯ ವಿವಾಹಗಳನ್ನು ನಡೆಸಿದ್ದು.

ಈಕೆ ಹುಟ್ಟಿನಿಂದಲೇ ಸಾಹಿತಿಯಾಗಿದ್ದಳು. ಈಕೆಯ ಮೊದಲ ಕವನ 'ಮರ್ಯಾದಾ'ದಲ್ಲಿ ಪ್ರಕಟವಾದಾಗ (1913) ಈಕೆಗೆ ಒಂಬತ್ತು ವರ್ಷ ವಯಸ್ಸಾಗಿತ್ತು. ದಿನಗಳೆದಂತೆ ರಾಷ್ಟ್ರೀಯ ಚೇತನವನ್ನು ಮೈದುಂಬಿಕೊಂಡ ಈಕೆಯ ರಚನೆಗಳು ತುಂಬ ಜನಪ್ರಿಯವಾಗತೊಡಗಿದವು. ಮಾಖಲ್‌ಲಾಲ್ ಚತುರ್ವೇದೀ, ಬಾಲಕೃಷ್ಣಶರ್ಮಾ ನವೀನ್, ಸುಂದರಲಾಲ್ ತ್ರಿಪಾಠೀ, ಪ್ರೇಮಚಂದ್ ಮೊದಲಾದ ರಾಷ್ಟ್ರೀಯವಾದೀ ಲೇಖಕರ ಪ್ರಭಾವಕ್ಕೆ ಒಳಗಾದ ಈಕೆ, ಅಜ್ಞಾತ ಪ್ರಿಯತಮನ ವಿರಹದಲ್ಲಿ ಕಣ್ಣೀರು ಹರಿಸುವುದಕ್ಕೆ ಬದಲಾಗಿ ನಾಡಿಗಾಗಿ ತಮ್ಮ ಸರ್ವಸ್ವವನ್ನೂ ಪಣವಾಗಿ ಒಡ್ಡಿದ ದೇಶಪ್ರೇಮಿಗಳ, ಮಹನೀಯರ ನೆನಪಿಗಾಗಿ ಕಣ್ಣೀರು ಸುರಿಸಿ ಆ ಬಗೆಯ ರಚನೆಗಳಲ್ಲೇ ಹೆಚ್ಚಾಗಿ ತೊಡಗಿದಳು. ಈ ದೃಷ್ಟಿಯಿಂದ ಈಕೆ ರಚಿಸಿದ ಕೆಲವು ದೇಶಭಕ್ತಿಗೀತೆಗಳು ಪರಿಣಾಮಕಾರಿಯೂ ಸ್ಫೂರ್ತಿದಾಯಕವೂ ಆಗಿವೆ. ಇಂಥ ರಚನೆಗಳಲ್ಲೊಂದಾದ ಝಾಂಸಿ ಕೀ ರಾನೀ ಎಂಬ ಕವನ ಈಕೆಯನ್ನು ಅತ್ಯಂತ ಜನಪ್ರಿಯವಾಗಿಸಿದ್ದು ಮಾತ್ರವಲ್ಲ, ಅಮರಳನ್ನಾಗಿ ಮಾಡಿತು. ಈ ಕವಿತೆಯ ಪಲ್ಲವಿ ನಾಡಿನ ಜನರ ನಾಲಗೆಯ ಮೇಲೆ ನಲಿಯಿತು. ಅಲ್ಲದೆ ನಾರೀ ಜೀವನದ ಸ್ವಾಭಾವಿಕ ಅಭಿವ್ಯಕ್ತಿಯನ್ನೂ ಕೌಟುಂಬಿಕ ಜೀವನದ ಅನನ್ಯ ಅನುಭೂತಿಯನ್ನೂ ಪ್ರಬಲ ಆಶಾವಾದಿತ್ವವನ್ನೂ ಈಕೆಯ ರಚನೆಗಳಲ್ಲಿ ಗುರುತಿಸಬಹುದಾಗಿದೆ. ಶೃಂಗಾರರಸದ ಪ್ರತೀಕವಾಗಿರುವ ಕೆಲವೊಂದು ಗೀತೆಗಳನ್ನೂ ಈಕೆ ರಚಿಸಿದ್ದಾಳೆ. ಆದರೆ ಇವುಗಳಲ್ಲಿ ಅತಿಭಾವುಕತೆಯ ಪ್ರೇಮಸ್ಪಂದನಕ್ಕೆ ಬದಲಾಗಿ ಸರಸತೆ, ಮಾಧುರ್ಯ ಮತ್ತು ಸಂಯಮ ಕಾಣದೊರೆಯುತ್ತವೆ. 'ಠುಕಾರಾ ದೋ ಯಾ ಪ್ಯಾರ್ ಕರೋ', 'ಪ್ರಿಯತಮ್ ಸೇ'– ಇವು ಈಕೆಯ ಇಂಥ ಪ್ರಸಿದ್ಧ ರಚನೆಗಳಲ್ಲಿ ಕೆಲವು. ಭಾವ ಮತ್ತು ಭಾಷೆಗಳ ಮಧುರ ಸಂಗಮಕ್ಕೂ ಈಕೆಯ ರಚನೆಗಳು ಹೆಸರಾಗಿವೆ.

ಗೌರವ ಪರಂಪರೆಯೂ ಈಕೆಯನ್ನು ಹಿಂಬಾಲಿಸಿತು. ಪ್ರಸಿದ್ಧ ಕವಿಗಳ ಕವನಗಳಿಗೆ ಮೀಸಲಾಗಿದ್ದ ಕವಿತಾಕೌಮುದಿಯಂಥ ಸಂಕಲನದಲ್ಲೂ ಈಕೆಯ ಕವನಗಳಿಗೆ ಎಡೆ ದೊರೆಯಿತು. ಅಖಿಲಭಾರತ ಹಿಂದೀ ಸಾಹಿತ್ಯ ಸಮ್ಮೇಳನ ಈಕೆಯ ಅತ್ಯಂತ ಪ್ರಸಿದ್ಧ ಕವನಸಂಗ್ರಹವಾದ ಮುಕುಲ್ (1930) ಮತ್ತು ಸಣ್ಣ ಕಥೆಗಳ ಸಂಕಲನವಾದ ಬಿಖರೇ ಮೋತೀ (1932)ಗಳಿಗೆ ಎರಡು ಬಾರಿ ಸೆಕ್ಸಾರಿಯಾ ಬಹುಮಾನವನ್ನಿತ್ತು ಪುರಸ್ಕರಿಸಿತು. ಮುಂದೆ ಉನ್ಮಾದಿನೀ (1934) ಮತ್ತು ಸೀದೇ ಸಾದೇ ಚಿತ್ರ (1946) ಎಂಬ ಎರಡು ಕಥಾಸಂಕಲನಗಳು ಹೊರಬಂದುವು. 1932ರಿಂದ 1942ರವರೆಗಿನ ದಶಕದಲ್ಲಿ ಮಕ್ಕಳಿಗಾಗಿ ಈಕೆ ರಚಿಸಿದ್ದ ಅನೇಕ ಸುಂದರ ಶಿಶುಗೀತೆಗಳನ್ನು ಸಭಾ ಕೀ ಖೇಲ್ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ವಿವೇಚನಾತ್ಮಕ ಗಲ್ಪವಿಹಾರ ಮತ್ತು ತ್ರಿಧಾರಾ ಈಕೆಯ ಸಂಪಾದಕತ್ವದಲ್ಲಿ ಹೊರಬಂದ ಎರಡು ಪ್ರಾತಿನಿಧಿಕ ಸಂಕಲನಗಳು.

ಈಕೆ ಮಧ್ಯಪ್ರದೇಶದ ವಿಧಾನಸಭೆಗೆ ಎರಡು ಬಾರಿ ಆಯ್ಕೆಯಾದರು. ಎರಡನೆಯ ಬಾರಿಯ ಆಯ್ಕೆಯಂತೂ ಅವಿರೋಧವಾಗಿತ್ತು. ತನ್ನ 44ನೆಯ ವಯಸ್ಸಿನಲ್ಲಿ ಈಕೆ ಕಾರು ಅಪಘಾತವೊಂದರಲ್ಲಿ ಅಸುನೀಗಿದಳು. (ಪಿ.ಜಿ.ಡಿ.)

**ಚೌಳಿನ ಪುಡಿ :** ಬಟ್ಟೆ, ಕಾಗದ ಮುಂತಾದವನ್ನು ಚಲುವೆ ಮಾಡಲು, ರೋಗಾಣುಗಳನ್ನು ನಾಶಮಾಡಿ ಸ್ಥಳಗಳನ್ನು ಶುಚಿ ಮಾಡಲು ನೀರನ್ನು ಶುದ್ಧೀಕರಿಸಲು, ಮೊದಲಾದವುಗಳಿಗಾಗಿ ಬಳಸುವ ರಾಸಾಯನಿಕ (ಬ್ಲೀಚಿಂಗ್ ಪೌಡರ್). ಇದರ ರಾಸಾಯನಿಕ ಸಂಕೇತ $CaOCl_2$ ಇದರಲ್ಲಿರುವ ಕ್ಲೋರೀನ್ ಅನಿಲವೇ ಚಲುವೆಕಾರಿ. ಚೌಳಿನ ಪುಡಿಯಲ್ಲಿ ಸುಣ್ಣ ಮತ್ತು ಕ್ಲೋರೀನ್ ಅನಿಲ ಮಿಳಿತವಾಗಿರುತ್ತವೆ. ಇದನ್ನು ತಯಾರಿಸಲು ಸುಣ್ಣದ ಪುಡಿಯನ್ನು ಗೂಡುಗಳಲ್ಲಿ ತೆಳ್ಳಗೆ ನೆಲದಮೇಲೆ ಹರಡಿ ಕ್ಲೋರೀನ್ ಅನಿಲವನ್ನು ಬಿಡುತ್ತಾರೆ. ಅಥವಾ ಸುತ್ತುತ್ತಿರುವ ಲೋಹದ ಕೊಳವೆಗಳಲ್ಲಿ ಒಂದು ಕಡೆಯಿಂದ ಸುಣ್ಣದ ಪುಡಿಯನ್ನೂ ಎದುರುದಿಕ್ಕಿನಿಂದ ಕ್ಲೋರೀನ್ ಅನಿಲವನ್ನೂ ಹಾಯಿಸುತ್ತಾರೆ. ಸುಣ್ಣ ಕ್ಲೋರೀನನ್ನು ಹೀರಿಕೊಳ್ಳುತ್ತದೆ. ಚೌಳಿನ ಪುಡಿ ಸಿದ್ಧವಾಗುತ್ತದೆ.

$$Ca(OH)_2 + CL_2 \rightarrow CaOCL_2 + H_2O$$

ಸುಣ್ಣ ಕ್ಲೋರಿನ್ ಚೌಳು

ಚೌಳಿನ ಪುಡಿ ನಿಧಾನವಾಗಿ ಕ್ಲೋರೀನನ್ನು ಬಿಟ್ಟುಕೊಡುತ್ತದೆ. ಆಮ್ಲಗಳಿಂದ ಈ ಕ್ರಿಯೆ ತ್ವರಿತಗೊಳ್ಳುತ್ತದೆ. ಪುಡಿಯ ಚಲುವೆ (ಬ್ಲೀಚಿಂಗ್) ಗುಣವೂ ರೋಗಾಣುನಾಶಕ ಗುಣವೂ ಇದರಲ್ಲಿರುವ ಕ್ಲೋರೀನ್ ಸತ್ತ್ವದ ಪ್ರಮಾಣವನ್ನು ಅವಲಂಬಿಸಿವೆ. ಆದ್ದರಿಂದ ಪುಡಿಯಲ್ಲಿರುವ ಅನಿಲದ ಪ್ರಮಾಣ ಮುಖ್ಯ. ಪುಡಿಯಲ್ಲಿ ಇರುವ ಶೇಕಡ ಭಾಗ ಕ್ಲೋರೀನಿಗೆ ಲಭಿಸಬಲ್ಲ ಕ್ಲೋರೀನ್ ಎಂದು ಹೆಸರು. ಉತ್ತಮ ಪುಡಿಯಲ್ಲಿ ಇದು 40% ಇರುವುದು.

ಚಲುವೆ ಮಾಡಬೇಕಾದ ಬಟ್ಟೆಯನ್ನು ಮೊದಲು ಚೌಳಿನ ಪುಡಿಯಿರುವ ನೀರಿನಲ್ಲಿ ಅದ್ದಿ ಬಳಿಕ ಅದನ್ನು ಸಾರರಿಕ್ತ ಹೈಡ್ರೋಕ್ಲೋರಿಕ್ ದ್ರಾವಣದಲ್ಲಿ ಇಡುತ್ತಾರೆ. ಆಗ ಉತ್ಪತ್ತಿಯಾಗುವ ಹೈಪೊಕ್ಲೋರಸ್ ಆಮ್ಲದಿಂದ (Hclo) ಬರುವ ಆಕ್ಸಿಜನಿನಿಂದ ಬಟ್ಟೆ ಬಿಳಿಚಿಕೊಳ್ಳುತ್ತದೆಂದು ನಂಬಿಕೆ. ಬಟ್ಟೆಯನ್ನು ಆಮೇಲೆ ಸೋಡಿಯಮ್ ಥಯೋಸಲ್ಫೇಟ್ ರಾಸಾಯನಿಕವಿರುವ ನೀರಿನಲ್ಲಿ ಅದ್ದುವುದರಿಂದ ಹೆಚ್ಚಿಗೆ ಇರುವ ಕ್ಲೋರೀನ್ ತೆಗೆಯಲ್ಪಡುತ್ತದೆ. ಪುನಃ ತೊಳೆದು ಬಟ್ಟೆಯನ್ನು ಒಣಗಿಸುತ್ತಾರೆ. ಕುಡಿಯುವ ನೀರನ್ನು ಸಂಸ್ಕರಿಸಲು ಕೂಡ ಚೌಳಿನ ಪುಡಿಯ ಉಪಯೋಗ ಉಂಟು. ನೀರಿನಲ್ಲಿರುವ ರೋಗಾಣುಗಳನ್ನು ನಾಶಪಡಿಸಲು ಪುಡಿಯನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸುತ್ತಾರೆ. ತಿಳಿಯಾಗಿ ನಿಲ್ಲುವ ನೀರಿನಲ್ಲಿ ಕ್ಲೋರೀನ್ ಅನಿಲ ವಿಲೀನವಾಗುತ್ತದೆ. ಇದು ಜೀವಾಣುಗಳನ್ನು ಕೊಲ್ಲುತ್ತದೆ. ಸಾರ್ವಜನಿಕ ಸ್ಥಳಗಳು, ಮೂತ್ರಿಗಳು, ಚರಂಡಿಗಳು ಮುಂತಾದವನ್ನು ಶುಚಿ ಮಾಡಲೂ ಚೌಳಿನಪುಡಿ ಉಪಯೋಗವಾಗುತ್ತದೆ. (ವೈ.ಎಸ್.ಎಲ್.)

**ಚೌಳುಕ್ಯ :** ಗುಜರಾತ್ ಮತ್ತು ಅದರ ನೆರೆಯ ಪ್ರದೇಶಗಳಲ್ಲಿ ಸ್ಥೂಲವಾಗಿ 9–12ನೆಯ ಶತಮಾನಗಳಲ್ಲಿ ಆಳುತ್ತಿದ್ದ ರಾಜಮನೆತನ. ಚಾಳುಕ್ಯ ಮತ್ತು ಚೌಳುಕ್ಯ ಎರಡೂ ಸಮಾನಾರ್ಥಕ ಪದಗಳೆಂದು ಹಲವರು ಭಾವಿಸಿದ್ದರಾದರೂ ಇವೆರಡೂ ವಿಭಿನ್ನ ಮನೆತನಗಳೆಂದು ಈಗ ಒಪ್ಪಿಕೊಳ್ಳಲಾಗಿದೆ. ಚಾಳುಕ್ಯರು ದಖನ್ ಮತ್ತು ದಕ್ಷಿಣ ಭಾರತಗಳಲ್ಲಿ ಆಳುತ್ತಿದ್ದ ದೊರೆಗಳು.

ಚೌಳುಕ್ಯರು ಇತಿಹಾಸದಲ್ಲಿ ಗೂರ್ಜರರೆಂದೂ ಶೋಲಂಕಿಗಳೆಂದೂ ಪ್ರಸಿದ್ಧರಾಗಿದ್ದಾರೆ. ಗೂರ್ಜರ ಎಂಬ ಹೆಸರನ್ನು ಮೊದಲು ಇತರ ಕೆಲವು ಅರಸು ಮನೆತನಗಳಿಗೆ ಅನ್ವಯಿಸಲಾಗುತ್ತಿತ್ತು. ಅನಂತರ ಗುಜರಾತಿನ ಚೌಳುಕ್ಯರು ಗೂರ್ಜರರೆನಿಸಿಕೊಂಡರು. ಚೌಳುಕ್ಯರ ಮೂಲದ ಬಗ್ಗೆ ಅನೇಕ ಕಥೆಗಳುಂಟು. ಇವರು ಅಗ್ನಿಕುಲಕ್ಕೆ ಸೇರಿದವರೆಂದು ಒಂದು ಕಥೆ ಹೇಳುತ್ತದೆ. ದಕ್ಷಿಣದ ಚಾಳುಕ್ಯರ ಮೂಲಪುರುಷನಂತೆ ಚೌಳುಕ್ಯರ ಮೂಲಪುರುಷನೂ ಚುಲುಕನ ಮಗನೆಂದು, ಚೌಳುಕ್ಯನೆಂದು ಕೆಲವು ಸಾಂಪ್ರದಾಯಿಕ ಕಥೆಗಳು ಹೇಳುತ್ತವೆ. ಪೃಥ್ವೀರಾಜ ರಾಸೋವನ್ನು ಬರೆದ ಚಂದಬರದಾಈ ಇಂಥ ಕಥೆಗಳನ್ನು ಹೆಣೆದ. ಇವುಗಳ ಐತಿಹಾಸಿಕತೆ ಸಂದೇಹಾಸ್ಪದ.

ಚೌಳುಕ್ಯ ಮನೆತನದ ಮೂರು ಭಿನ್ನ ಶಾಖೆಗಳು 9–12ನೆಯ ಶತಮಾನಗಳಲ್ಲಿ ರಾಜ್ಯವಾಳುತ್ತಿದ್ದುವು. ಅತ್ಯಂತ ಪ್ರಾಚೀನ ಶಾಖೆಗೆ ಸೇರಿದವರು ಮಧ್ಯಭಾರತದಲ್ಲಿ ಮಾಲವ ಮತ್ತು ಚೇದಿ ರಾಜ್ಯಗಳ ನೆರೆಯಲ್ಲಿದ್ದ ಮತ್ತಮಯೂರವೆಂಬ ನಗರದಲ್ಲಿ 9ನೆಯ ಶತಮಾನದಲ್ಲಿ ಆಳುತ್ತಿದ್ದರು. ಈ ಶಾಖೆಯ ಮೂರು ತಲೆಮಾರುಗಳವರ ಹೆಸರುಗಳು ತಿಳಿದಿವೆ. ಸಿಂಹವರ್ಮ, ಆತನ ಮಗ ಸಧನ್ವ ಮತ್ತು ಮೊಮ್ಮಗ ಅವನಿವರ್ಮ. ಅವನಿವರ್ಮ ತನ್ನ ಮಗಳಾದ ನೊಹಲಾಳನ್ನು ಕಲಚುರಿ ಮನೆತನದ 1ನೆಯ ಯುವರಾಜನಿಗೆ ಮದುವೆ ಮಾಡಿಕೊಟ್ಟಿದ್ದ. ಅವನಿವರ್ಮ ಶಿವಭಕ್ತ. ಮತ್ತಮಯೂರ ನಗರದಲ್ಲಿ ಖ್ಯಾತಿವೆತ್ತ ಶೈವಮಠವೊಂದಿತ್ತು. ಅದರ ಅಂದಿನ ಗುರು ಪ್ರಭಾವಶಿವನನ್ನು ಯುವರಾಜ ತನ್ನ ರಾಜ್ಯಕ್ಕೆ ಬರಮಾಡಿಕೊಂಡು ರೇವಾ ಸಮೀಪದಲ್ಲಿ ಚಂದ್ರೇಹಿ ಎಂಬಲ್ಲಿ ಒಂದು ಶಿವಾಲಯವನ್ನೂ ಮಠವನ್ನೂ ಕಟ್ಟಿಸಿ ಅಲ್ಲಿ ಆ ಗುರುವನ್ನು ನೆಲೆಗೊಳಿಸಿದ. ರಾಣಿಯಾದ ನೊಹಲಾ ಕೂಡ ಶಿವಭಕ್ತೆ. ಜಬ್ಬಲ್ಪುರ ಜಿಲ್ಲೆಯ ಬಿಲ್ಹರಿ ಗ್ರಾಮದಲ್ಲಿ ಆಕೆ ಒಂದು ಶಿವಾಲಯವನ್ನು ಕಟ್ಟಿಸಿ ಅದರ ವ್ಯವಸ್ಥೆಗಾಗಿ ಏಳು ಗ್ರಾಮಗಳನ್ನು ದತ್ತಿಯಾಗಿ ಬಿಟ್ಟಳೆಂದು ಶಾಸನದಿಂದ ತಿಳಿದಿದೆ.

ಚೌಳುಕ್ಯರ ಮತ್ತೊಂದು ಶಾಖೆಯ ಸ್ಥಾಪಕ ಒಂದನೆಯ ಮೂಲರಾಜ (961–996). ಅಣಹಿಲಪಾಟಕ ಅವನ ರಾಜಧಾನಿಯಾಗಿತ್ತು. ಆ ಪಟ್ಟಣಕ್ಕೆ ಅಣಹಿಲಪುರ, ಅಣಹಿಲನಗರ, ಅಣಹಿಲಪಟ್ಟಣ ಮತ್ತು ಅಣಹಿಲವಾಡ ಎಂಬ ಹೆಸರುಗಳೂ ಇದ್ದುವು. ಮೂಲರಾಜನ ತಂದೆಯ ಹೆಸರು ರಾಜಿ; ತಾಯಿ ಲೀಲಾದೇವಿ. ಈಕೆ ಚಾಪೋತ್ಕಟ

ಅರಸ ಸಾಮಂತಸಿಂಹನ ಸೋದರಿ. ಸೋಮನಾಥಕ್ಕೆ ಯಾತ್ರೆಗಾಗಿ ಬಂದ ರಾಜಿ ಅಣಹಿಲಪಾಟಕದ ಸಾಮಂತಸಿಂಹನಿಂದ ಆಕರ್ಷಿಸಲ್ಪಟ್ಟು ಅಲ್ಲಿ ನೆಲಸಿದ. ಮೂಲರಾಜ ಸೋದರಮಾವನ ಮನೆಯಲ್ಲೇ ಬೆಳೆದ. ಆದರೆ ಅನಂತರ ಸಾಮಂತ ಸಿಂಹನನ್ನೇ ಸೋಲಿಸಿ ಕೊಂದು ಅರಸನಾದ.

ರಾಜ್ಯವಿಸ್ತರಣೆಯಲ್ಲಿ ತೊಡಗಿದ ಮೂಲರಾಜ ಕಚ್ಛದೇಶದ ಅರಸನಾದ ಲಾಖಾನನ್ನು ಸೋಲಿಸಿ ಕೊಂದು ಆ ದೇಶವನ್ನು ವಶಪಡಿಸಿಕೊಂಡ. ಆದರೆ ಚಾಹಮಾನ ವಂಶದ ಶಾಕಂಬರೀ ಅರಸನಾದ ವಿಗ್ರಹರಾಜನೂ ಚೌಳುಕ್ಯರ ಇನ್ನೊಂದು ಶಾಖೆಗೆ ಸೇರಿದ, ಕರ್ನಾಟಕದ ಚೌಳುಕ್ಯ ತೈಲಪನ ಸಾಮಂತನಾಗಿದ್ದ ಬಾರಪನೂ ಕೂಡಿಕೊಂಡು ಇವನ ವಿರುದ್ಧ ಸೈನ್ಯಾಚರಣೆಯಲ್ಲಿ ತೊಡಗಿದಾಗ, ವಿಗ್ರಹರಾಜನೊಡನೆ ಕದನವಿರಾಮದ ಒಪ್ಪಂದ ಮಾಡಿಕೊಂಡ ಮೂಲರಾಜ ಅನಂತರ ತನ್ನ ಮಗ ಚಾಮುಂಡರಾಜನನ್ನು ಬಾರಪ್ಪನ ವಿರುದ್ಧ ಕಳಿಸಿದ. ಬಾರಪ್ಪ ಕದನಲ್ಲಿ ಮಡಿದ. ಪರಮಾರ ಮುಂಜನೂ ಮೂಲರಾಜನಿಗೆ ಕಿರುಕುಳ ಕೊಟ್ಟ. ಅವನು ತನಗೆ ತಲೆಬಾಗುವಂತೆ ಮಾಡಿದನಾದರೂ ಮೂಲರಾಜ ಅತ್ಯಂತ ಪ್ರಯಾಸದಿಂದ ತನ್ನ ರಾಜ್ಯವನ್ನು ಉಳಿಸಿಕೊಂಡ.

ಮೂಲರಾಜ ಶಿವಾರಾಧಕನಾಗಿದ್ದ. ಅವನು ಮಂಡಲಿಯಲ್ಲಿ (ಈಗಿನ ಮಾಂಡರ್) ಒಂದು ದೇವಾಲಯವನ್ನೂ ತನ್ನ ರಾಜಧಾನಿಯಲ್ಲಿ ಎರಡು ದೇವಾಲಯಗಳನ್ನೂ ಕಟ್ಟಿಸಿದ.

ಮೂಲರಾಜ ಸಿಂಹಾಸನವನ್ನು ತ್ಯಜಿಸಿದ ಮೇಲೆ ಚಾಮುಂಡರಾಜ (996–1010) ಪಟ್ಟಕ್ಕೆ ಬಂದ. ಪರಮಾರ ಮುಂಜನ ಸೋದರನಾದ ಸಿಂಧುರಾಜನ ದಾಳಿಯಿಂದ ತನ್ನ ರಾಜ್ಯವನ್ನು ರಕ್ಷಿಸಿದರೂ ಇವನ ಕಳಚುರಿ ಇಮ್ಮಡಿ ಕೊಕ್ಕಲನಿಗೆ ಮಣಿಯಬೇಕಾಯಿತು. ತಾನು ಮಾಡಿದ ಪಾಪಕೃತ್ಯವೊಂದರ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಉದ್ದೇಶದಿಂದ ತನ್ನ ಮಗ ವಲ್ಲಭರಾಜನಿಗೆ ರಾಜ್ಯಾಡಳಿತವನ್ನು ವಹಿಸಿಕೊಟ್ಟು ತೀರ್ಥಯಾತ್ರೆಗಾಗಿ ಕಾಶಿಗೆ ಹೋದ. ಮಾರ್ಗದಲ್ಲಿ ಪರಮಾರಭೋಜನಿಂದ ಅವಮಾನಿತನಾಗಿ ಸೇಡು ತೀರಿಸಿಕೊಳ್ಳಬೇಕೆಂದು ಮಗನಿಗೆ ಆದೇಶ ನೀಡಿದ. ಸೈನ್ಯಸಮೇತ ಮಾಳವಕ್ಕೆ ದಂಡೆತ್ತಿ ಹೋದ ವಲ್ಲಭರಾಜ ಸಿಡುಬು ರೋಗಕ್ಕೆ ತುತ್ತಾಗಿ ಹಾದಿಯಲ್ಲೇ ಮಡಿದ. ಅವನ ತಮ್ಮ ದುರ್ಲಭರಾಜ ಸಿಂಹಾಸನವನ್ನೇರಿದ (1010–1022).

ಚಾಹಮಾನ ಮಹೇಂದ್ರನ ಸೋದರಿಯನ್ನು ಸ್ವಯಂವರದಲ್ಲಿ ದುರ್ಲಭರಾಜ ವರಿಸಿದ್ದಕ್ಕಾಗಿ ಕುಪಿತರಾಗಿ ಸೈನ್ಯದೊಡನೆ ಧಾವಿಸಿ ಬಂದ ಮಾಳವ, ಮಥುರ, ಹೂಣ ದೇಶಗಳ ಒಡೆಯರನ್ನು ಅವನು ಸೋಲಿಸಿದ. ಅನಂತರ ಲಾಟದೇಶ ಅವನ ಕೊಳ್ಳೆಗೆ ತುತ್ತಾಯಿತು. ದುರ್ಲಭರಾಜ ಇಳಿವಯಸ್ಸಿನಲ್ಲಿ ಸಿಂಹಾಸನವನ್ನು ತನ್ನ ಭ್ರಾತ್ರೀಯ 1ನೆಯ ಭೀಮದೇವನ ಸಲುವಾಗಿ ತ್ಯಜಿಸಿದ.

ಭೀಮದೇವನ ಆಳ್ವಿಕೆಯ (1022–1064) ಪ್ರಾರಂಭದಲ್ಲಿ ಘಜ್ನಿ ಮಹಮೂದ ಸೋಮನಾಥ ದೇವಾಲಯವನ್ನು ಲೂಟಿಮಾಡಿದ, ಮುಸಲ್ಮಾನ ಸೇನೆ ಗುಜರಾತನ್ನು ಪ್ರವೇಶಿಸುತ್ತಿದ್ದಂತೆ ಭೀಮದೇವ ಕಚ್ಛದಲ್ಲಿದ್ದ ಕಂಠ ಕೋಟೆಗೆ ಪಲಾಯನ ಮಾಡಿದ. ದಾಳಿಕೋರರು ಹೊರಟುಹೋದ ಮೇಲೆ ತನ್ನ ರಾಜಧಾನಿಗೆ ಹಿಂದಿರುಗಿದ. ಅನಂತರ ಪರಮಾರ ಧಂಡುಕನಾದ ಅಬುವನ್ನು ವಶಪಡಿಸಿಕೊಂಡು ವಿಮಲನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿದ. ಪುನಃ ಮಾಳವವನ್ನು ಮುತ್ತಿ ಕೃಷ್ಣರಾಜನನ್ನು ಬಂಧಿಸಿ ಬಿನಮಲ್ ಅನ್ನು ವಶಪಡಿಸಿಕೊಂಡ. ಇವನು ಪರಮಾರ 1ನೆಯ ಭೋಜ, ಕಳಚುರಿ ಕರ್ಣ ಇವರ ಅಳಿವಿಗೆ ಬಹುಮಟ್ಟಿಗೆ ಕಾರಣನಾದ.

ಭೀಮದೇವನಿಗೆ ಬೇರೆಬೇರೆ ಹೆಂಡತಿಯರಲ್ಲಿ ಮೂಲರಾಜ, ಕ್ಷೇಮರಾಜ ಮತ್ತು ಕರ್ಣ ಎಂಬ ಮೂವರು ಮಕ್ಕಳಿದ್ದರು. ಮೂಲರಾಜ ಕಿರಿ ವಯಸ್ಸಿನಲ್ಲೇ ಸತ್ತ. ಕ್ಷೇಮರಾಜನ ತಾಯಿ ಹೀನಕುಲದವಳೆಂಬ ಕಾರಣವನ್ನು ಮುಂದೊಡ್ಡಿ ಮೂರನೆಯ ಮಗನಾದ ಕರ್ಣನಿಗೆ ಭೀಮ ಪಟ್ಟಕಟ್ಟಿದ.

ತ್ರೈಲೋಕ್ಯಮಲ್ಲನೆಂಬ ಬಿರುದಿನೊಡನೆ ಆಡಳಿತವನ್ನು ಆರಂಭಿಸಿದ ಕರ್ಣ (1064–1094) ಚಾಳುಕ್ಯರೊಡಗೂಡಿ ಪರಮಾರ ಜಯಸಿಂಹನನ್ನು ಸೋಲಿಸಿ ಕೊಂದು ತನ್ನ ರಾಜ್ಯದ ದಕ್ಷಿಣದ ಮೇರೆಯನ್ನು ನವಸಾರಿಯ ವರೆಗೆ ವಿಸ್ತರಿಸಿದನಾದರೂ ಉದಯಾದಿತ್ಯ ಅವನನ್ನು ಓಡಿಸಿ ಮಾಳವವನ್ನು ಪುನಃ ಪಡೆದುಕೊಂಡ. ಕದಂಬ ಜಯಕೇಶಿಯ ಮಗಳಾದ ಮಯಣಲ್ಲದೇವಿ ಈತನ ಪತ್ನಿ. 1094ರಲ್ಲಿ ಇನ್ನೂ ಅಲ್ಪವಯಸ್ಕನೂ ಇವನ ಮಗನೂ ಆಗಿದ್ದ ಜಯಸಿಂಹನ ಪ್ರತಿನಿಧಿಯಾಗಿ ಮಯಣಲ್ಲದೇವಿ ಕೆಲವು ವರ್ಷಗಳ ಕಾಲ ಅಧಿಕಾರಸೂತ್ರವನ್ನು ವಹಿಸಿದಳು.

ಸಿದ್ಧರಾಜನೆಂದು ಬಿರುದಾಂಕಿತನಾದ ಜಯಸಿಂಹ (1094–1144) ಈ ವಂಶದ ಸುಪ್ರಸಿದ್ಧ ರಾಜ. ಇವನು ಸುಮಾರು 12 ವರ್ಷಗಳ ಕಾಲ ಪರಮಾರರೊಡನೆ ಯುದ್ಧ ಮಾಡಿ ನರವರ್ಮ ಮತ್ತು ಯಶೋವರ್ಮರನ್ನು ಸ್ಥಾನಭ್ರಷ್ಟರನ್ನಾಗಿ ಮಾಡಿ ಮಾಳವವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಚಾಹಮಾನ ಅರ್ಣೋರಾಜನನ್ನು ಸೋಲಿಸಿ ಅವನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ, ಅವನು ತನ್ನ ಸಾಮಂತನಾಗಿರುವಂತೆ ಮಾಡಿದ. ದಕ್ಷಿಣದಲ್ಲಿ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಮೇಲೆ ಜಯ ಗಳಿಸಿದ. ಕಳಚುರಿ ಯಶಃಕರ್ಣ ಹಾಗೂ ಗಾಹಡವಾಲದ ಗೋವಿಂದಚಂದ್ರನೊಡನೆ ಸ್ನೇಹಸಂಬಂಧ ಹೊಂದಿದ್ದ. ಇವನು ಸಿಂಧ್ ಅರಬ್ಬರ ಮೇಲಣ ಯುದ್ಧದಲ್ಲಿ ಜಯಗಳಿಸಿದನೆಂದು ಹೇಳಲಾಗಿದೆ. ಇವನು ಗುಜರಾತ್, ಕಾಠಿಯಾವಾಡ್, ಕಚ್ಛ, ಮಾಳವ, ದಕ್ಷಿಣ ರಾಜಪುಟಾಣ ಪ್ರದೇಶಗಳ ಆಧಿಪತ್ಯ ಹೊಂದಿದ್ದನೆಂದು ಅಲ್ಲಿ ದೊರಕಿರುವ ಅವನ ಶಾನಗಳಿಂದ ತಿಳಿದುಬರುತ್ತದೆ. ಇವನು 1113–14 ರಲ್ಲಿ ಸಿಂಹಶಕೆಯನ್ನು ಪ್ರಾರಂಭಿಸಿದ. ಅನೇಕ ದೇವಾಲಯಗಳು ಮತ್ತು ಒಂದು ದೊಡ್ಡ ಸರೋವರ ಇವನ ಕಾಲದಲ್ಲಿ ಕಟ್ಟಲ್ಪಟ್ಟವು. ಇವನು ಜೈನ ಕವಿ ಹೇಮಚಂದ್ರನ ಪೋಷಕನಾಗಿದ್ದನಲ್ಲದೆ ನ್ಯಾಯಶಾಸ್ತ್ರ, ಜ್ಯೋತಿಷ ಮತ್ತು ಪುರಾಣಗಳ ಅಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟ.

ಜಯಸಿಂಹ ಮಕ್ಕಳಿಲ್ಲದೆ ಸತ್ತದ್ದರಿಂದ, ಇವನ ಸಂಬಂಧಿ ಕುಮಾರಪಾಲನು ರಾಜನಾದ (1144–1173). ಇವನು ಶಾಕಂಬರಿಯ ಚಾಹಮಾನರು, ಪರಮಾರರು, ಕಳಚುರಿಗಳು ಮತ್ತು ಇತರರ ಮೇಲೆ ಯುದ್ಧ ಮಾಡಿದ. ಜೈನಮುನಿ ಹೇಮಚಂದ್ರನ ಪ್ರಭಾವಕ್ಕೊಳಗಾಗಿ ಜೈನಧರ್ಮ ಸ್ವೀಕರಿಸಿದ. ತಾನು ಮದ್ಯಮಾಂಸಗಳನ್ನು ತ್ಯಜಿಸಿದ್ದೇ ಅಲ್ಲದೆ ಪ್ರಾಣಿವಧೆ, ಮಾಂಸ ತಿನ್ನುವುದು, ಜೂಜಾಟ ಮತ್ತು ವೇಶ್ಯಾವೃತ್ತಿಯನ್ನು ರಾಜ್ಯದಾದ್ಯಂತ ನಿಷೇಧಿಸಿದ. ಮಕ್ಕಳಿಲ್ಲದೆ ಸತ್ತವರ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವ ಶಾಸನವನ್ನು ರದ್ದುಗೊಳಿಸಿದ. ಜೈನಧರ್ಮವನ್ನು ಅವಲಂಬಿಸಿದ್ದರೂ ಇವನ ಶಾಸನಗಳಲ್ಲಿ ಶಿವಸ್ತುತಿಗಳಿವೆ. ಇವನ ಆಳ್ವಿಕೆಯಲ್ಲಿ ಚೌಳುಕ್ಯ ರಾಜ್ಯ ಬಹು ವ್ಯಾಪಕವಾಗಿತ್ತು.

ಇವನ ಅನಂತರ ಸಿಂಹಾಸನಕ್ಕಾಗಿ ದಾಯಾದಿಗಳಲ್ಲಿ ಕಲಹಗಳೇರ್ಪಟ್ಟು ರಾಜ್ಯಾಡಳಿತ ಸಡಿಲಗೊಂಡಿತು. ಅಜಯಪಾಲ (1173–76), ಇಮ್ಮಡಿ ಮೂಲರಾಜ (1176–78), ಇಮ್ಮಡಿ ಭೀಮದೇವ (1178–1239) ಇವರು ಅನುಕ್ರಮವಾಗಿ ಆಳಿದರು. 1178ರಲ್ಲಿ ಭೀಮದೇವ ಮಹಮ್ಮದ್ ಘೋರಿಯನ್ನು ಸೋಲಿಸಿದ. 1197ನಲ್ಲಿ ಕುತ್ಬ್–ಉದ್–ದೀನ ಅಣಹಿಲವಾಡವನ್ನು ಲೂಟಿ ಹೊಡೆದ. ಅಲ್ಲಾವುದ್ದೀನ್ ಖಿಲ್ಜಿ 1299ರಲ್ಲಿ ಕರ್ಣನಿಂದ ಚೌಳುಕ್ಯ ರಾಜ್ಯವನ್ನು ವಶಪಡಿಸಕೊಂಡ. ಕರ್ಣ ಈ ವಂಶದ ಕೊನೆಯ ರಾಜ.

ಚೌಳುಕ್ಯ ಮನೆತನದ ಮೂರನೆಯ ಶಾಖೆಯವರು ಲಾಟದಲ್ಲಿ ಆಳುತ್ತಿದ್ದರು. ಇವರಲ್ಲಿ ಮೊದಲಿಗ ಬಾರಪ. ಈತ ಕಾನ್ಯಕುಬ್ಜದ ಅರಸನ ಸೇನಾನಿಯೆಂದು ಸುಕೃತ ಸಂಕೀರ್ತನದ ಅರಿಸಿಂಹನ ಹೇಳಿಕೆ. ಬಾರಪ್ಪನ ತಾಯಿ ಕಾನ್ಯಕುಬ್ಜದ ರಾಷ್ಟ್ರಕೂಟ ಮನೆತನದ ರಾಜಕುಮಾರಿಯಾಗಿದ್ದಳೆಂದು ಶಾಸನಗಳಿಂದ ತಿಳಿದಿದೆ. ಆದರೆ ಈತ ಚಾಳುಕ್ಯ ಇಮ್ಮಡಿ ತೈಲಪನ ಸಾಮಂತನೆಂದೂ ಸೇನಾಪತಿಯಾಗಿದ್ದನೆಂದೂ ಪ್ರಬಂಧ ಚಿಂತಾಮಣಿಯ ಮೇರುತುಂಗ ಹೇಳಿದ್ದಾನೆ. ಇದನ್ನು ಈಗ ಒಪ್ಪಲಾಗಿದೆಯಲ್ಲದೆ, ಬಾರಪ್ಪ ಚೌಳುಕ್ಯ ವಂಶಕ್ಕೆ ಸೇರಿದವನೆಂಬುದನ್ನೂ ಅಂಗೀಕರಿಸಲಾಗಿದೆ. ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ಅಧಿಕಾರದಲ್ಲಿದ್ದ ಈತನ ಮನೆತನದ ಇನ್ನೂ ಐವರು ಪರಿಚಿತರಾಗಿದ್ದಾರೆ. ಬಾರಪ, ಗೊಗ್ಗಿರಾಜ, ಕೀರ್ತಿರಾಜ, ವತ್ಸರಾಜ ತ್ರಿಲೋಚನಪಾಲ. ಬಾರಪನಿಗೂ ಮೊದಲು ನಿಂಬಾರ್ಕನೆಂಬುವನು ಈ ಸಂತತಿಯಲ್ಲಿ ಆಳಿದನೆಂದು ಇತ್ತೀಚೆಗೆ ಲಭಿಸಿದ ಶಾಸನದಿಂದ ತಿಳಿದಿದೆ. ರಾಷ್ಟ್ರಕೂಟ ಕೊಕ್ಕಿಲನನ್ನು ಸೋಲಿಸಿದ ಅನಂತರ ತೈಲಪ ಲಾಟ ದೇಶದಲ್ಲಿ ಬಾರಪನನ್ನು ತನ್ನ ಸಾಮಂತನಾಗಿ ನೆಲೆಗೊಳಿಸಿದನೆಂದು ತೋರುತ್ತದೆ.

ಚೌಳುಕ್ಯ ಚಾಮುಂಡರಾಜ ಬಾರಪ್ಪನ ವಿರುದ್ಧ ದಂಡೆತ್ತಿ ಇವನನ್ನು ಕೊಂದನೆಂದು ಹೇಳಿದೆ. ಸ್ವಲ್ಪ ಕಾಲದ ಅನಂತರ ಚೌಳುಕ್ಯರ ಸಹಾಯದಿಂದ ಗೊಗ್ಗಿರಾಜ ಲಾಟಮಂಡಲವನ್ನು ಹಿಂದಕ್ಕೆ ಪಡೆದುಕೊಂಡನೆಂದು ತೋರುತ್ತದೆ. ಗೊಗ್ಗಿರಾಜನ ಮಗ ಕೀರ್ತಿಪಾಲ ತನ್ನ ಶಾಸನದಲ್ಲಿ ಮಹಾಮಂಡಲೇಶ್ವರನೆಂದು ತನ್ನನ್ನು ಕರೆದುಕೊಂಡಿದ್ದಾನೆ. ಆದರೆ ಸುಮಾರು 1018ರ ಅನಂತರ ಕೀರ್ತಿಪಾಲ ದುರ್ಲಭ ರಾಜನಿಗೆ ಸೋತ. ಲಾಟ ಗುಜರಾತಿನ ಚೌಳುಕ್ಯರ 1053ರ, ಸುಮಾರು ಮೂರು ದಶಕಗಳ ಅನಂತರದ, ಶಾಸನ ದೊರೆತಿದೆ. ಆಗ ಸ್ವಲ್ಪ ಕಾಲ ಪುನಃ ಲಾಟದಲ್ಲಿ ಇವರು ಆಳಿದರೆಂದೂ ಕರ್ಣ ಇದನ್ನು ಪುನಃ ಸ್ವಾಧೀನಪಡಿಸಿಕೊಳ್ಳಬೇಕಾಯಿತೆಂದೂ ಅದರಿಂದ ಊಹಿಸಲಾಗಿದೆ.

**ವಾಸ್ತು, ಶಿಲ್ಪ :** ಗುಜರಾತಿನ ಚೌಳುಕ್ಯರ ಆಡಳಿತದಲ್ಲಿ ನಾಗರ ಶೈಲಿ ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ಚೌಳುಕ್ಯ ಅಥವಾ ಶೋಲಂಕಿ ಶೈಲಿಗೆ ಅನುವುಮಾಡಿಕೊಟ್ಟಿತು. ರಾಜರು, ಮಂತ್ರಿಗಳು, ರಾಜಪ್ರತಿನಿಧಿಗಳು ಹಾಗೂ ಜನಸಾಮಾನ್ಯರ ಉತ್ತೇಜನದಿಂದಾಗಿ ಸಮೃದ್ಧ ಮತ್ತು ವೈಭವಯುತ ವಾಸ್ತು, ಶಿಲ್ಪ ಬೆಳೆದುವು. ಗುಜರಾತ್ ಅಂತಾರಾಷ್ಟ್ರೀಯ ವ್ಯಾಪಾರದ ಕೇಂದ್ರವಾಗಿತ್ತು. ಕಲೆ ಹುಲುಸಾಗಿ ಬೆಳೆಯಲು ಅಲ್ಲಿಯ ವರ್ತಕರು ಕಾರಣರಾದರು. ಈ ಎಲ್ಲ ಕಾರಣಗಳಿಂದ ಗುಜರಾತ್ ಶೋಭಾಯಮಾನವಾದ ಕಟ್ಟಡಗಳಿಂದ ತುಂಬಿತು. ಆದರೆ ಈ ಕಾಲದ ಅನೇಕ ದೇವಾಲಯಗಳು ನಾಶವಾಗಿವೆ.

ಈ ದೇವಾಲಯಗಳಲ್ಲಿ ಪೂರ್ಣವಾಗಿರುವುದೆಂದರೆ ಸುನಕ್‌ನಲ್ಲಿರುವ ನೀಲಕಂಠ ಮಹಾದೇವ. ಇದರಲ್ಲಿ ಗರ್ಭಗುಡಿ, ಮಂಟಪ ಮತ್ತು ಮುಖಮಂಟಪಗಳಿವೆ. ಮಂಟಪದ ಚಾವಣಿ ಹಲವು ಅಂತಸ್ತುಗಳಿಂದ ಕೂಡಿದೆ. ಪ್ರತಿ ಚಾವಣಿಯಲ್ಲೂ ಆಮಲಕ ಮತ್ತು ಕಲಶಗಳನ್ನು ಜೋಡಿಸಲಾಗಿದೆ. ಗರ್ಭಗುಡಿಯ ಮೇಲಣ ಶಿಖರವೂ ಅಂಗ ಶಿಖರಗಳ ಶ್ರೇಣಿಗಳಿಂದ ಕೂಡಿದೆ. ಮಂಟಪದ ಬದಿಯಲ್ಲಿ ಕಕ್ಷಾಸನಗಳಿವೆ. ಗೋಡೆಗಳ ಹಾಗೂ ಸ್ತಂಭಗಳ ಮೇಲೆ ನಾಜೂಕಾದ ಕೆತ್ತನೆಯನ್ನು ಕಾಣಬಹುದು.

ಇದಕ್ಕೆ ಸಾಮ್ಯವುಳ್ಳ ದೇವಾಲಯಗಳಲ್ಲಿ ಕುಂಭಾರಿಯದ ಜೈನದೇವಾಲಯ, ಮೋಧೇರರ ಸೂರ್ಯ ದೇವಾಲಯ, ದೆಲ್‌ಮಾಲ್‌ನ ಲಿಂಬೋಜಿ ಮಾತಾ, ಮಿಯಾನಿಯ ನೀಲಕಂಠ ದೇವಾಲಯ ಮುಖ್ಯವಾದವು. ಗುಮ್ಮಟಕ್ಕೆ ಆಧಾರವಾಗಿರುವ ಅಷ್ಟಮಾನ ಕಂಬಗಳ ಗುಂಪಿನಲ್ಲಿ ಜೈನ ದೇವಾಲಯದ ಒಳಗಡೆಯ ವಿನ್ಯಾಸದ ಪ್ರಗತಿಯನ್ನು ಕಾಣಬಹುದು. ಈಗಿನ ಲಂಬೋಜಿ ಮಾತಾವನ್ನು ಪುರಾತನ ನಿವೇಶನದಲ್ಲಿ ಕಟ್ಟಲಾಗಿದೆ. ಆದರೆ ಅಂಗಳದ ನೈಋತ್ಯ ಹಾಗೂ ಆಗ್ನೇಯ ಭಾಗಗಳಲ್ಲಿರುವ ಲಕ್ಷ್ಮೀನಾರಾಯಣ ಮತ್ತು ಸೂರ್ಯದೇವರ ಉಪದೇವಾಲಯಗಳು ಪುರಾತನವಾದವು. ಅವುಗಳ ವಿನ್ಯಾಸ ಹಾಗೂ ಅಲಂಕಾರ ಸರಳವಾಗಿವೆ.

ಚೌಳುಕ್ಯ ದೇವಾಲಯದ ರಚನೆ 11ನೆಯ ಶತಮಾನದಲ್ಲಿ ಶ್ರೇಷ್ಠ ರೂಪ ತಾಳಿತು. ಈ ಕಾಲದ ಹೆಚ್ಚು ಪ್ರಭಾವಯುತವಾದ ದೇವಾಲಯವೆಂದರೆ ಮೋಧೇರದ ಸೂರ್ಯ ದೇವಾಲಯ. ವಿಶಾಲವಾದ ವ್ಯವಸ್ಥೆ, ವಿವಿಧ ಭಾಗಗಳ ಸಂಯೋಜನೆ–ಇವು ಈ ದೇವಾಲಯದ ವೈಶಿಷ್ಟ್ಯಗಳು. ನೆಲಗಟ್ಟು ಮಾಡಿದ ಜಗತಿಯ ಮೇಲೆ ನಿಂತಿರುವ ಈ ದೇವಾಲಯದಲ್ಲಿ ಮೂರು ಮುಖ್ಯ ಅಂಗಗಳಿವೆ. ದೇವಾಲಯದ ಮುಂಭಾಗದಲ್ಲಿ ಪೂರ್ವಕ್ಕೆ ಪವಿತ್ರ ಕುಂಡವುಂಟು. ಇದರ ಸೋಪಾನದ ಮಧ್ಯಭಾಗಗಳಲ್ಲಿ ಉಪದೇವಾಲಯಗಳಿವೆ. ಪಶ್ಚಿಮ ಭಾಗದ ಸೋಪಾನದ ಮೇಲೆ ಶೋಭಾಯಮಾನವಾಗಿ ಕೆತ್ತಿದ ಕೀರ್ತಿ ತೋರಣವಿದೆ. ಇದರ ಹಿಂದೆಯೇ ಸಭಾಮಂಟಪ. ಇದನ್ನು ಅತ್ಯುತ್ಕೃಷ್ಟವಾದ ಕಂಬಗಳುಳ್ಳ ವೈಭವದ ರಾಶಿ ಎಂದು ವರ್ಣಿಸಲಾಗಿದೆ. ಈ ವಿವಿಧ ಅಂಗಗಳನ್ನು ಚಾಕಚಕ್ಯದಿಂದ ಜೋಡಿಸಿ ಅಖಂಡತೆ ಸಾಧಿಸಲಾಗಿದೆ. ಸಭಾಮಂಟಪದ ಕಂಬಗಳು ಮನೋಹರವಾದ ಕೆತ್ತನೆಯಿಂದ ಕೂಡಿದವು.

ಗರ್ಭಗುಡಿಯ ಸುತ್ತ ಮುಚ್ಚಿದ ಪ್ರದಕ್ಷಿಣಪಥವುಂಟು. ಮಂಟಪದ ಮಧ್ಯದ ಕಂಬಗಳನ್ನು ಅಷ್ಟಕೋನಾಕಾರದಲ್ಲಿ ಜೋಡಿಸಲಾಗಿದೆ. ಅವುಗಳ ಮೇಲೆ ಗುಮ್ಮಟ ಹಾಗೂ ಅಲಂಕಾರಯುತವಾದ ಚಾವಣಿ ಇವೆ. ಗರ್ಭಗುಡಿಯ ಮುಂಭಾಗದಲ್ಲಿ ನಾಲ್ಕು ಕಂಬಗಳುಳ್ಳ ಅಂತರಾಳ ಮಂಟಪವಿದೆ. ಮಂಟಪ ಹಾಗೂ ಪ್ರದಕ್ಷಿಣ ಪಥದಲ್ಲಿ ಗಾಳಿ ಬೆಳಕುಗಳಿಗಾಗಿ ಕಿಟಕಿಗಳಿವೆ. ಈ ದೇವಾಲಯ ಹಾಳು ಬಿದ್ದಿದ್ದಾಗ್ಯೂ ಭಾರತೀಯ ಶಿಲ್ಪಿಗಳು ವೈಭಯುತವಾದ ಕಟ್ಟಡಗಳನ್ನು ಕಟ್ಟಲು ಸಮರ್ಥರಾಗಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ.

ಚೌಳುಕ್ಯ ರಾಜರು ವಾಸ್ತುಶಿಲ್ಪ ಕಲೆಗೆ ತಮ್ಮ ಪ್ರೋತ್ಸಾಹವನ್ನು 12ನೆಯ ಶತಮಾನದಲ್ಲೂ ಮುಂದುವರಿಸಿದರು. ಜಯಸಿಂಹ ಸಿದ್ಧಾಪುರದಲ್ಲಿ ರುದ್ರಮಾಲ ಅಥವಾ ರುದ್ರ ಮಹಾಲಯವನ್ನು ಕಟ್ಟಿಸಿದ. ಮುಸಲ್ಮಾನರ ದಾಳಿಗೆ ತುತ್ತಾದ ಸೋಮನಾಥ ದೇವಾಲಯವನ್ನು ಅನೇಕ ಸಾರಿ ಕಟ್ಟಲಾಗಿದೆ. ಈ ದೇವಾಲಯದಲ್ಲಿ ಪ್ರಾಚೀನ ವೈಭವವನ್ನು ಈಗಲೂ ಕಾಣಬಹುದು.

13ನೆಯ ಶತಮಾನದ ಕಟ್ಟಡಗಳಲ್ಲಿ ಈ ಘನತೆ ಇಲ್ಲ. ಆ ಕಾಲದ ಅನೇಕ ಕಟ್ಟಡಗಳು ಜೈನಧರ್ಮಕ್ಕೆ ಸೇರಿದವು. ಇವು ಶತ್ರುಜ್ಞ ಮತ್ತು ಗಿರ್‌ನಾರ್ ಬೆಟ್ಟಗಳಲ್ಲಿವೆ. ಮೌಂಟ್ ಅಬುದಲ್ಲಿರುವ ದಿಲ್‌ವಾರದ ತೇಜಪಾಲನ ಸಭಾಂಗಣ ಕೆಲವು ವಿಧದಲ್ಲಿ ಪ್ರಸಿದ್ಧವಾದ ನಿರ್ಮಾಣವಾಗಿದ್ದರೂ ವಾಸ್ತುಶಿಲ್ಪ ದೃಷ್ಟಿಯಿಂದ ಪರಿಣಾಮಕಾರಿಯಲ್ಲ.

(ಜಿ.ಬಿ.ಆರ್.; ಎಚ್.ವಿ.ಎಸ್.ಎಂ.)

**ಚೌಳುಪ್ಪು :** ಸೋಡಿಯಮ್, ಕ್ಯಾಲ್ಸಿಯಮ್ ಮತ್ತು ಮೆಗ್ನೀಸಿಯಮ್ ಲವಣಗಳ ಮಿಶ್ರಣ. ಇದು ಇರುವ ಪ್ರದೇಶಗಳಲ್ಲಿ ನೆಲ ಬಂಜರಾಗಿರುವುದು. ನದಿಗಳು ಹುಟ್ಟಿ ಹರಿಯುವ ಸ್ಥಳಗಳಲ್ಲಿರುವ ಶಿಲೆಗಳ ರಾಸಾಯನಿಕ ವಿಘಟನೆಯಿಂದ ಈ ಲವಣಗಳು ಉತ್ಪನ್ನವಾಗುತ್ತವೆ. ಅವು ಹೊಳೆಯ ನೀರಿನಲ್ಲಿ ಕರಗಿ, ಹರಿಯುವ ಪ್ರದೇಶಗಳ ಮೇಲ್ಮಣ್ಣಿನ ಮೂಲಕ ಕೆಳಕ್ಕೆ (9ಮೀ.ಆಳದವರೆಗೆ) ಇಳಿದು ಅಂತರ್ಜಲದಲ್ಲಿ ಸೇರಿಕೊಳ್ಳುತ್ತವೆ. ಬಿಸಿಲುಕಾಲದಲ್ಲಿ (ಏಪ್ರಿಲ್–ನವೆಂಬರ್) ಭೂತಲಕ್ಕೆ ಏರಿಬಂದು ಬೆಳ್ಳಿಯ ಪದರದಂತೆ ಹರಳುಗಟ್ಟುತ್ತವೆ. ತಕ್ಕಷ್ಟು ಮಳೆಯಿಲ್ಲದೆ ನೀರು ಹೊರಕ್ಕೆ ಹರಿದುಹೋಗದೆ ತಂಗುವ ಪ್ರದೇಶಗಳಲ್ಲಿ ನೀರು ಸಿಹಿಯಾಗಿರುವುದಿಲ್ಲ ; ಯಾವ ಬೆಳೆಯೂ ಆಗುವುದಿಲ್ಲ. ಹಿಂದೆ ಫಲವತ್ತಾಗಿ ಜನನಿಬಿಡವಾಗಿದ್ದ ಉತ್ತರಪ್ರದೇಶ, ಪಂಜಾಬ್, ರಾಜಸ್ಥಾನದ ವಿಶಾಲವಾದ ಭಾಗಗಳು ಈಗ ಚೌಳುಪ್ಪಿನಿಂದ ಊಷರಕ್ಷೇತ್ರವಾಗಿಯೂ ಬಂಜರುಭೂಮಿಯಾಗಿಯೂ ಪರಿಣಮಿಸಿವೆ. ಈ ಉಪ್ಪನ್ನು ತೆಗೆದು ಮೇಲ್ಮಣ್ಣನ್ನು ಫಲವತ್ತಾಗಿ ಮಾಡಿದರೆ, ಭಾರತ ರಾಷ್ಟ್ರದ ವ್ಯವಸಾಯ ಕ್ಷೇತ್ರಕ್ಕೆ ಅನೇಕ ದಶಲಕ್ಷ ಎಕರೆಗಳ ಪ್ರದೇಶವನ್ನು ಸೇರಿಸಿದಂತಾಗುವುದು. ಸಿಂಧ್ ಮತ್ತು ಕಚ್ ಪ್ರಾಂತ್ಯಗಳ ಬಯಲಿನಲ್ಲಿ ಮರಳುರಾಶಿಯ ನಡುವೆ ಅನೇಕ ದಶಲಕ್ಷ ಟನ್ನುಗಳ ಪರಿಮಾಣದಲ್ಲಿ ಕಲ್ಲುಪ್ಪಿನ ನಿಕ್ಷೇಪಗಳು ಸಿಕ್ಕುತ್ತವೆ. ಕರ್ನಾಟಕದ ನಾನಾ ಭಾಗಗಳಲ್ಲಿ ಚೌಳುಪ್ಪು ಸಿಕ್ಕುತ್ತದೆ. ಬಹಳ ಹಿಂದಿನಿಂದಲೂ ಅದನ್ನು ಕೆರೆದು ಮೂಟೆಗಳಲ್ಲಿ ಕರಗಿಸಿ, ನೀರು ಇಂಗಿದ ಮೇಲೆ ತಂಗುವ ಉಪ್ಪನ್ನು ಸಂಗ್ರಹಿಸುತ್ತಾರೆ. ಇದೊಂದು ಗೃಹ ಕೈಗಾರಿಕೆ.

(ಎ.ಎಸ್.ಎಸ್‌ಐ.)

**ಚ್ಯವನ :** ಒಬ್ಬ ಮಹರ್ಷಿ. ವರುಣಪುತ್ರನಾದ ಭೃಗು ಈತನ ತಂದೆ. ಪುಲೋಮೆ, ತಾಯಿ. ಗರ್ಭವತಿಯಾಗಿದ್ದಾಗ ಪುಲೋಮೆಯನ್ನು ಒಬ್ಬ ರಾಕ್ಷಸ ಅಪಹರಿಸುತ್ತಾನೆ. ಭಯಗ್ರಸ್ತೆಯಾದ ಪುಲೋಮೆಯ ಗರ್ಭದಿಂದ ಶಿಶು ಚ್ಯುತವಾಗುತ್ತದೆ. ಹೀಗೆ ಗರ್ಭಚ್ಯುತನಾಗಿ ಜನಿಸಿದ ಆ ಮಗುವಿಗೆ ಚ್ಯವನನೆಂದೇ ಹೆಸರಾಯಿತು. ಹುಟ್ಟಿದ ಕೂಡಲೇ ಶಿಶು ರಾಕ್ಷಸನನ್ನು ಕ್ರೂರದೃಷ್ಟಿಯಿಂದ ನೋಡಿ ಬೂದಿಮಾಡುತ್ತದೆ. ಶುಕ್ರಾಚಾರ್ಯ ಚ್ಯವನನ ಸಹೋದರ. ಮನುವಿನ ಮಗಳಾದ ಆರುಷಿ ಈತನ ಪತ್ನಿ. ಔರ್ವ ಆರುಷಿಯಲ್ಲಿ ಹುಟ್ಟಿದ ಮಗ. ಚ್ಯವನ ದೀರ್ಘಕಾಲ ತಪಸ್ಸನ್ನು ಮಾಡುತ್ತಿದ್ದಾಗ ಆತನ ಶರೀರದ ಸುತ್ತಲೂ ಹುತ್ತ ಬೆಳೆದು ಅದರ ರಂಧ್ರಗಳಿಂದ ಕಣ್ಣುಗಳು ಮಾತ್ರ ಹೊಳೆಯುತ್ತಿದ್ದವು. ಒಮ್ಮೆ ಶರ್ಯಾತಿರಾಜ ತನ್ನ ಸೇನೆಯೊಂದಿಗೆ ಬಂದು ಚ್ಯವನನ ಆಶ್ರಮದ ಹತ್ತಿರ ಬಿಡಾರಮಾಡಿದ್ದ. ರಾಜನೊಂದಿಗೆ ಆತನ ಮಗಳಾದ ಸುಕನ್ಯೆಯೂ ಬಂದಿದ್ದಳು. ಆಕೆ ಅತ್ತಿತ್ತ ಸುತ್ತಾಡುತ್ತ ಚ್ಯವನ ಇರುವ ಸ್ಥಳಕ್ಕೆ ಬಂದು ಹುತ್ತದಿಂದ ಬರುವ ಬೆಳಕನ್ನು ನೋಡಿ ಆಶ್ಚರ್ಯಚಕಿತಳಾಗಿ ಒಂದು ಮುಳ್ಳಿನ ಮೊನೆಯಿಂದ, ಚ್ಯವನನ ಹೊಳೆಯುತ್ತಿದ್ದ ಕಣ್ಣನ್ನು ಚುಚ್ಚುತ್ತಾಳೆ. ಇದರಿಂದ ಚ್ಯವನನ ಕಣ್ಣುಗಳು ಹೋದದ್ದು ಮಾತ್ರವಲ್ಲದೆ, ಶರ್ಯಾತಿರಾಜನ ಪರಿವಾರಕ್ಕೆ ಮಲಮೂತ್ರಗಳು ಕಟ್ಟುತ್ತವೆ. ಇದರ ಕಾರಣವನ್ನು ತಿಳಿಯದೆ ಯೋಚಿಸುತ್ತಿದ್ದ ಶರ್ಯಾತಿ ತನ್ನ ಮಗಳಿಂದ ನಡೆದುಹೋದ ಅಪಚಾರವನ್ನು ತಿಳಿದು ಕೂಡಲೇ ಚ್ಯವನ ಋಷಿಯ ಸಮೀಪಕ್ಕೆ ಹೋಗಿ ಕ್ಷಮೆ ಬೇಡುತ್ತಾನೆ. ಆಗ ಆ ಋಷಿ ಕುರುಡನಾದ ತನ್ನ ಸೇವೆಗಾಗಿ ಸುಕನ್ಯೆಯನ್ನು ಕೊಡುವಂತೆ ಕೇಳುತ್ತಾನೆ. ವಿಧಿಯಿಲ್ಲದೆ ಶರ್ಯಾತಿ ತನ್ನ ಮಗಳನ್ನು ಆತನಿಗೆ ಒಪ್ಪಿಸುತ್ತಾನೆ. ಸುಕನ್ಯೆ ಚ್ಯವನನ ಮದುವೆಯಾಗಿ ಆತನ ಶುಶ್ರೂಷೆ ಮಾಡಿಕೊಂಡು ಇರುತ್ತಾಳೆ. ಕೂಡಲೇ ಶರ್ಯಾತಿಯ ಪರಿವಾರ ಆರೋಗ್ಯವನ್ನು ಪಡೆಯುತ್ತದೆ. ಒಮ್ಮೆ ಸುಕನ್ಯೆ ಕೊಳದಲ್ಲಿ ಸ್ನಾನಮಾಡಿ ಒದ್ದೆಬಟ್ಟೆಯೊಡನೆ ಆಶ್ರಮಕ್ಕೆ ಬರುತ್ತಿದ್ದಾಗ ಅಶ್ವಿನೀದೇವತೆಗಳು ಆಕೆಯನ್ನು ನೋಡಿ ಮೋಹಿಸಿ ತಮ್ಮ ಅಭಿಪ್ರಾಯವನ್ನು ಆಕೆಗೆ ಸೂಚಿಸುತ್ತಾರೆ. ಇದರಿಂದ ಕ್ರುದ್ಧಳಾದ ಸುಕನ್ಯೆ ಅವರಿಗೆ ಶಾಪಕೊಡಲು ಸಿದ್ಧಳಾಗುತ್ತಾಳೆ. ಆಗ ಅಶ್ವಿನೀದೇವತೆಗಳು ಆಕೆಗೆ ತಮ್ಮ ನಿಜರೂಪವನ್ನು ತೋರಿಸಿ ವರವನ್ನು ಬೇಡುವಂತೆ ಹೇಳುತ್ತಾರೆ. ಅದಕ್ಕೆ ಸುಕನ್ಯೆ ತನ್ನ ಪತಿಗೆ ಯೌವನಬರುವಂತೆ ಬೇಡುತ್ತಾಳೆ. ಆಗ ಆ ದೇವತೆಗಳು ಚ್ಯವನನನ್ನು ಕರೆಸಿ ಅವನೊಡನೆ ತಾವೂ ಆ ಕೊಳದಲ್ಲಿ ಸ್ನಾನ ಮಾಡುತ್ತಾರೆ. ಮೇಲಕ್ಕೇಳುವಾಗ ಮೂರು ಮಂದಿಯೂ ಒಂದೇ ರೂಪದಿಂದ ಇರುತ್ತಾರೆ. ತನ್ನ ಪಾತಿವ್ರತ್ಯದ ಮಹಿಮೆಯಿಂದ ಸುಕನ್ಯೆ ತನ್ನ ಪತಿಯನ್ನೇ ಗುರುತಿಸಿ ಆತನ ಕೈಯನ್ನು ಹಿಡಿಯುತ್ತಾಳೆ. ಚ್ಯವನನು ಅಶ್ವಿನೀ ದೇವತೆಗಳಿಂದ ತಾರುಣ್ಯವನ್ನು ಪಡೆದುದಕ್ಕಾಗಿ ತನ್ನ ಮಾವನಾದ ಶರ್ಯಾತಿರಾಜನಿಂದ ಯಾಗವನ್ನು ಮಾಡಿಸಿ ಅದರಲ್ಲಿ ಅಶ್ವಿನೀದೇವತೆಗಳಿಗೆ ಹವಿರ್ಭಾಗವನ್ನು ಕೊಡಿಸುತ್ತಾನೆ. ಇದನ್ನು ಕಂಡ ಇಂದ್ರ ಕುಪಿತನಾಗಿ ಚ್ಯವನನನ್ನು ಕೊಲ್ಲಲು ಅನೇಕ ತಂತ್ರಗಳನ್ನು ಮಾಡುತ್ತಾನೆ. ತನ್ನ ತಪಶ್ಶಕ್ತಿಯಿಂದ ಆ ಋಷಿ ಎಲ್ಲವನ್ನೂ ತಪ್ಪಿಸಿಕೊಂಡು ಪಾರಾಗುತ್ತಾನೆ.

ಒಮ್ಮೆ ಚ್ಯವನ ನೀರಿನಲ್ಲಿ ಮುಳುಗಿ ತಪಸ್ಸು ಮಾಡುತ್ತಿದ್ದಾಗ ಬೆಸ್ತರ ಬಲೆಗೆ ಸಿಕ್ಕಿಬೀಳುತ್ತಾನೆ. ನಹುಷರಾಜ ಈತನನ್ನು ಬಿಡಿಸುತ್ತಾನೆ. ಚ್ಯವನನು ಕ್ಷತ್ರಿಯನಾದ ಕುಶಿಕನ ಮನೆಯಲ್ಲಿದ್ದು, ಕುಶಿಕದಂಪತಿಗಳ ಶುಶ್ರೂಷೆ ಮತ್ತು ಸಹನೆಗೆ ಮೆಚ್ಚಿ ತನ್ನ ಯೋಗ ಮಹಿಮೆಯಿಂದ ಒಂದು ಸ್ವರ್ಗವನ್ನೇ ಸೃಷ್ಟಿ ಮಾಡಿ ಅವರಿಗೆ ತೋರಿಸಿ, ಕುಶಿಕವಂಶದಲ್ಲಿ ಬ್ರಾಹ್ಮಣ ಹುಟ್ಟುವಂತೆ ವರವನ್ನು ಕೊಡುತ್ತಾನೆ.

ಗೋತ್ರ ಪ್ರವರಕಾರರಲ್ಲಿ ಚ್ಯವನ ಋಷಿಯೂ ಒಬ್ಬನಾಗಿದ್ದಾನೆ. ಅಶ್ವಿನೀ ದೇವತೆಗಳಿಂದ ನವತಾರುಣ್ಯವನ್ನು ಪಡೆದ ಚ್ಯವನನ ಹೆಸರಿನಿಂದ ಕೂಡಿದ ಒಂದು ಲೇಹ್ಯ ವೈದ್ಯಶಾಸ್ತ್ರದಲ್ಲಿ ಉಕ್ತವಾಗಿದೆ. ಈ ಚ್ಯವನಪ್ರಾಶವೆಂಬ ಲೇಹ್ಯವನ್ನು ಉಪಯೋಗಿಸುವವರು ಚ್ಯವನ ಮಹರ್ಷಿಯಂತೆ ನವತಾರುಣ್ಯವನ್ನು ಪಡೆಯುತ್ತಾರೆಂಬ ನಂಬಿಕೆ ಇಂದಿಗೂ ಇದೆ.

(ಎಸ್.ಎನ್.ಕೆ.)

**ಚ್ಯಾನಿಂಗ್, ವಿಲಿಯಂ ಎಲೆರಿ :** 1780–1842. ಅಮೆರಿಕದ ಪಾದ್ರಿ ಮತ್ತು ಏಕಮೂರ್ತಿವಾದದ ಪ್ರವರ್ತಕ. ನ್ಯೂ ಪೋರ್ಟ್‌ನಲ್ಲಿ ಹುಟ್ಟಿದ ಈತ ತನ್ನ ಚಿಕ್ಕಪ್ಪ ರೆವರೆಂಡ್ ಹೆನ್ರಿ ಚ್ಯಾನಿಂಗನ ಮೇಲ್ವಿಚಾರಣೆಯಲ್ಲಿ ಕಾಲೇಜು ವಿದ್ಯಾಭ್ಯಾಸ ಪಡೆದ.

ವಿದ್ಯಾರ್ಥಿದೆಸೆಯಲ್ಲೇ ಈತನಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳು ಬೇರೂರಿದ್ದವು. 1794ರಲ್ಲಿ ಹಾರ್ವರ್ಡ್ ಕಾಲೇಜು ಸೇರಿ ತನ್ನ 18ನೆಯ ವಯಸ್ಸಿಗೆ ಪದವೀಧರನಾದ (1798). ಅನಂತರ ಲಿಚ್‌ಮಂಡ್‌ನಲ್ಲಿ ಖಾಸಗಿ ಕುಟುಂಬವೊಂದರ ಶಿಕ್ಷಕನಾದ.

ಫೆಡರಲ್ ಸ್ಟ್ರೀಟ್ ಕಾನ್ಗ್ರೆಷನಲ್ ಚರ್ಚ್‌ನ ಧರ್ಮೋಪದೇಶಕನಾಗಿ ಈತ ದೀಕ್ಷೆ ಪಡೆದದ್ದು 1803ರಲ್ಲಿ. ಬಾಸ್ಟನ್ನಿನ ಚರ್ಚಿನಲ್ಲಿ ಕಾರ್ಯನಿರತನಾಗಿದ್ದಾಗ ಈತನ ಜೀವನದಲ್ಲಿ ತುಂಬ ಬದಲಾವಣೆಗಳಾದವು. ರೆವರೆಂಡ್ ಜೇರೆಡ್ ಸ್ಪಾರ್ಕ್ಸ್‌ನ ದೀಕ್ಷಾಸಮಯದಲ್ಲಿ (1819) ಮಾಡಿದ ಧರ್ಮೋಪದೇಶದಲ್ಲಿ ಈತನ ಏಕಮೂರ್ತಿವಾದದ ಗಟ್ಟಿ ನಡಿಗೆಯನ್ನು ಕಾಣಬಹುದು. ಅಂದು ನವ ಇಂಗ್ಲೆಂಡಿನ ಚರ್ಚುಗಳು ನಂಬಿದ್ದ ಕ್ಯಾಲ್ವನಿಸಂ (ನೋಡಿ-ಕ್ಯಾಲ್ವಿನ್,-ಜಾನ್) ವಿರುದ್ಧ ಈತ ತನ್ನ ವಾದವನ್ನು ಮಂಡಿಸಿದ. 1820ರಲ್ಲಿ ಈತ ಪ್ರಗತಿಪರ ಕಾನ್ಗ್ರೆಷನಲ್ ಪಾದ್ರಿಗಳ ಸಮ್ಮೇಳನವೊಂದನ್ನು ಕರೆದ; ಐದು ವರ್ಷಗಳ ಅನಂತರ ಅಮೆರಿಕದ ಏಕಮೂರ್ತಿ ವಾದಿಗಳ ಸಂಘವೊಂದನ್ನು ಸ್ಥಾಪಿಸಿದ.

ಚ್ಯಾನಿಂಗ್ ಎಲ್ಲ ಹಂತದಲ್ಲೂ ಕಂದಾಚಾರ ಮತ್ತು ಮಡಿವಂತಿಕೆಯನ್ನು ವಿರೋಧಿಸಿದ. ಈತ ಮಂಡಿಸಿದ ತತ್ತ್ವಗಳನ್ನು ನವ ಇಂಗ್ಲೆಂಡಿನ 120 ಚರ್ಚುಗಳು ಅನುಸರಿಸಿದವು. ಈತನ ಪ್ರಗತಿಪರ ತತ್ತ್ವಗಳು ಹೊಸ ಹೊಸ ಸಿದ್ಧಾಂತಗಳನ್ನು ಮಂಡಿಸುವುದಕ್ಕಿಂತ ಹೆಚ್ಚಾಗಿ ಮಾನವೀಯತೆ ಹಾಗೂ ಸಹಿಷ್ಣುತೆಯನ್ನು ಬೋಧಿಸುವಂಥವಾಗಿದ್ದವು. ಈತನ ಬರೆಹ ಹಾಗೂ ಧರ್ಮೋಪದೇಶಗಳು ಅಮೆರಿಕದ ಪ್ರಸಿದ್ಧ ಲೇಖಕರಾದ ಆರ್.ಡಬ್ಲ್ಯು ಎಮರ್‌ಸನ್, ಡಬ್ಲ್ಯು.ಸಿ. ಬ್ರೈಯಾಂಟ್, ಎಚ್.ಡಬ್ಲ್ಯು ಲಾಂಗ್ ಫೆಲೋ, ಜೆ.ಆರ್. ಲೊಯೆಲ್ ಮತ್ತು ಓ.ಡಬ್ಲ್ಯು. ಹೋಮ್ಸ್ ಮುಂತಾದವರ ಮೇಲೆ ತುಂಬ ಪ್ರಭಾವ ಬೀರಿದುವು. ಯುದ್ಧವನ್ನು ತಪ್ಪಿಸಲು ಈತ ಮ್ಯಾಸಚುಸೆಟ್ಸ್ ಪೀಸ್ ಸೊಸೈಟಿಯೊಂದನ್ನು ಸ್ಥಾಪಿಸಿದ.

1821ರಲ್ಲಿ ಚ್ಯಾನಿಂಗ್ ವಿದೇಶಪ್ರವಾಸವನ್ನು ಕೈಗೊಂಡು ವರ್ಡ್ಸ್‌ವರ್ತ್, ಕೋಲ್‌ರಿಜ್ ಮುಂತಾದ ಹೆಸರಾಂತ ಕವಿಗಳನ್ನು ಸಂಧಿಸಿದ. ವೆಸ್ಟ್ ಇಂಡೀಸಿನ ಪ್ರವಾಸದ ಪರಿಣಾಮವಾಗಿ ನೀಗ್ರೋ ಸ್ಲೇವರಿ (1835) ಎಂಬ ಗ್ರಂಥವನ್ನು ಬರೆದ. ಗುಲಾಮರ ವಿಮೋಚನೆಯಾಗಲೇಬೇಕೆಂದು ತನ್ನ ಪುಸ್ತಕದಲ್ಲಿ ಸಾರಿದ. ಗುಲಾಮರ ವಿಮೋಚನೆ ಕೇವಲ ಸರ್ಕಾರದ ಆದೇಶದಿಂದ ಸಾಧ್ಯವಾಗದು; ಅದು ಜನರ ತಿಳುವಳಿಕೆಯಿಂದ ಸುಲಭಸಾಧ್ಯವಾಗುತ್ತದೆ ಎಂದು ತನ್ನ ಸೆಲ್ಫ್ ಕಲ್ಚರ್‌ನಲ್ಲಿ (1838) ಪ್ರತಿಪಾದಿಸಿದ. 1842ರಲ್ಲಿ ಈತ ಬೆನ್ನಿಂಗ್‌ಟನ್‌ನಲ್ಲಿ ಕಾಲವಾದ.

ಚ್ಯಾನಿಂಗ್ ತನ್ನ ಸಮಕಾಲೀನ ಪಾರಮಾರ್ಥಿಕ ಜ್ಞಾನಿಗಳಲ್ಲೆಲ್ಲ ಮುಖ್ಯನೆನಿಸಿದ್ದ. ಈತನಿಗೆ ಎಲ್ಲ ಪ್ರಶ್ನೆಗಳೂ ನೈತಿಕ ಪ್ರಶ್ನೆಗಳೇ. ಅವುಗಳಿಗೆ ಪರಿಹಾರವನ್ನು ಕಂಡುಹಿಡಿಯುವುದೇ ಆತನ ಕೆಲಸವಾಯಿತು. (ಎ.ಎಂ.ಪಿ.)

**ಚ್ಯಾನಲ್ ದ್ವೀಪಗಳು :** ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಫ್ರಾನ್ಸಿನ ಕೋಟಾಂಟನ್ ಪರ್ಯಾಯ ದ್ವೀಪದ ವಾಯವ್ಯಕ್ಕೆ ಉ.ಅ. 48° 5'–49° 45' ಮತ್ತು ಪ.ರೇ. 1° 50'–2° 45' ನಡುವೆ ಹಬ್ಬಿರುವ, ಇಂಗ್ಲೆಂಡಿನ ರಾಜತ್ವಕ್ಕೆ ಒಳಪಟ್ಟ ದ್ವೀಪಸ್ತೋಮ. ಜರ್ಸಿ, ಗರ್ನ್ಸಿ, ಆಲ್ಡರ್ನಿ ಮತ್ತು ಸಾರ್ಕ್ ಎಂಬ ನಾಲ್ಕು ಮುಖ್ಯದ್ವೀಪಗಳೂ ಅನೇಕ ಚಿಕ್ಕಪುಟ್ಟ ದ್ವೀಪಗಳೂ ಬಂಡೆ ಮತ್ತು ದಿಬ್ಬಗಳೂ ಪ್ರದೇಶಗಳೂ ಇವೆ. ಚ್ಯಾನಲ್ ದ್ವೀಪಗಳ ಒಟ್ಟು ವಿಸ್ತೀರ್ಣ 194 ಚ.ಕಿಮೀ. ಜನಸಂಖ್ಯೆ 1,58,000.



ಚ್ಯಾನೆಲ್ ದ್ವೀಪಗಳು

**ಭೌತಲಕ್ಷಣ :** ದ್ವೀಪಗಳು ಸಮುದ್ರಮಟ್ಟದಿಂದ ಬಹಳ ಎತ್ತರದಲ್ಲಿಲ್ಲ. ಉತ್ತರ ಜರ್ಸಿ 122 ಮೀ ದಕ್ಷಿಣ ಗರ್ನ್ಸಿ 106 ಮೀ ದಕ್ಷಿಣ ಆಲ್ಡರ್ನಿ 86 ಮೀ ಈ ದ್ವೀಪದ ಉನ್ನತ ಭಾಗಗಳು. ಇವು ಕಡಿದಾದ ಬಂಡೆಗಳಿಂದಲೂ ಸಣ್ಣ ಕಣಿವೆಗಳಿಂದಲೂ ಸುಂದರವಾದ ಸಣ್ಣ ಕೊಲ್ಲಿಗಳಿಂದಲೂ ಕೂಡಿವೆ. ಉತ್ತರ ಗರ್ನ್ಸಿ ಮತ್ತು ದಕ್ಷಿಣ ಜರ್ಸಿ ತಗ್ಗಾಗಿ, ವಿರಳವಾದ ಗಿರಿಗಳಿಂದ ಕೂಡಿವೆ. ಜರ್ಸಿಯ ಪಶ್ಚಿಮ ಮತ್ತು ಆಗ್ನೇಯ ಭಾಗಗಳಲ್ಲೂ ಗರ್ನ್ಸಿಯ ಉತ್ತರದಲ್ಲೂ ಆಲ್ಡರ್ನಿಯ ಪೂರ್ವದಲ್ಲೂ ಮರಳ ದಿಣ್ಣೆಗಳುಂಟು. ಈ ದ್ವೀಪಗಳ ಬಂಡೆಗಳು ಮೆದು. ಆದ್ದರಿಂದ ಅಲ್ಲಲ್ಲಿ ಸವೆದು ಉದ್ದನೆಯ ಕಿರಿದಾದ ಗುಹೆಗಳಾಗಿವೆ. ದ್ವೀಪಗಳಲ್ಲಿ ಮುಖ್ಯವಾದ ಹೊಳೆಗಳು ಯಾವುವೂ ಇಲ್ಲ.

**ವಾಯುಗುಣ :** ಇಲ್ಲಿಯದು ಸಾಗರಿಕ ವಾಯುಗುಣ. ಅಟ್ಲಾಂಟಿಕ್ ಸಾಗರದ ಮೇಲಿಂದ ಬೀಸುವ ಪಶ್ಚಿಮ ಮಾರುತಗಳ ಪ್ರಭಾವಕ್ಕೆ ಇದು ಒಳಗಾಗಿದೆ. ಆಗಸ್ಟ್ ಅತ್ಯಂತ ಉಷ್ಣದ ಹಾಗೂ ಫೆಬ್ರುವರಿ ಅತ್ಯಂತ ಚಳಿಯ ತಿಂಗಳುಗಳು. ಈ ತಿಂಗಳುಗಳ ಸರಾಸರಿ ಉಷ್ಣತೆ ಅನುಕ್ರಮವಾಗಿ 43° ಫ್ಯಾ. ಮತ್ತು 61° ಫ್ಯಾ. ಹಿಮ ಬೀಳುವುದು ವಿರಳ. ಜುಲೈ ತಿಂಗಳಲ್ಲಿ ಕನಿಷ್ಠ ಮಳೆ (ಸರಾಸರಿ 2" ಗಿಂತ ಕಡಿಮೆ); ಅಕ್ಟೋಬರಿನಲ್ಲಿ ಗರಿಷ್ಠ (ಸರಾಸರಿ) ಒಟ್ಟಿನಲ್ಲಿ ವರ್ಷಕ್ಕೆ ಸ್ಥೂಲವಾಗಿ 30"–10" ಮಳೆಯಾಗುತ್ತದೆ.

**ಸಸ್ಯ, ಪ್ರಾಣಿಜೀವನ :** ಬಿಸಿಲಿನಿಂದ ಕೂಡಿದ, ಕೊರೆಯುವ ಚಳಿ ಇಲ್ಲದ, ತಕ್ಕಮಟ್ಟಿಗೆ ಮಳೆ ಬೀಳುವ ಈ ದ್ವೀಪಗಳಲ್ಲಿ ಮೆಡಿಟರೇನಿಯನ್ ಜಾತಿಯ ಮತ್ತು ದಕ್ಷಿಣದ ಇತರ ಬಗೆಯ ಸಸ್ಯಗಳು ಹಲವು ಬೆಳೆಯುತ್ತವೆ. ಕಾಡುಗಳಲ್ಲೂ ಹಾದಿಯ ಇಕ್ಕೆಲಗಳಲ್ಲೂ ಫ್ಯೂಷ, ಜಪಾನಿಕ, ಕಮೆಲಿಯ, ಅಕೇಷಿಯ, ಮಿಮೋಸ, ಹೈಡ್ರಾಂಜಿಯ, ಕ್ಲೆಮಟಿಸ್, ಟ್ಯಾಮರಿಸ್ಕ್, ಗನರ ಮತ್ತು ಕೊಲಂಬೈನ್ ಬೆಳೆಯುತ್ತವೆ, ಹೂ ಬಿಡುವ ಸುಮಾರು 700 ಬಗೆಯ ಸಸ್ಯಗಳನ್ನು ಇಲ್ಲಿ ಗುರುತಿಸಲಾಗಿದೆ. ಬ್ರಿಟನ್ನಿನ ಉಳಿದೆಡೆಗಳಲ್ಲಿ ಇಲ್ಲದ, ಇದ್ದರೂ ವಿರಳವಾಗಿರುವ, ಅನೇಕ ಸಸ್ಯಗಳು–ರೊಮ್ಯುಲಿ, ಅಗಲ ಎಲೆಯ ತ್ರಿಫ್ಟ್, ಆರ್ಕಿಸ್, ವಾಲ್ ಡೇಸಿ, ಕ್ವಿಲ್ ವಾರ್ಟ್, ಕಚ್ಚೂರಿ ಮುಂತಾದವು–ಇಲ್ಲಿವೆ. ಸಾಂದ್ರಬೇಸಾಯಕ್ಕಾಗಿ ಮರಗಳನ್ನು ಬಹುತೇಕ ಕಡಿಯಲಾಗಿದ್ದರೂ ಓಕ್, ಆ್ಯಷ್, ವಿಚ್–ಎಲ್ಮ್, ಬೀಚ್, ಲೈಮ್, ಬರ್ಚ್, ಪೈನ್, ಆಲ್ಡರ್ ಸೀಡರ್, ಹ್ಯಾಜೆಲ್ ಮರಗಳಿವೆ. ನೆರಳಿರುವ ಓಣಿಗಳಲ್ಲೂ ಬೆಟ್ಟಗಳ ಬದಿಯಲ್ಲೂ ಫರ್ನ್, ಪಾಚಿ ಕಲ್ಲುಹೂವು ಬೆಳೆಯುತ್ತವೆ. ಕಾಡು ಡ್ಯಾಫೊಡಿಲ್, ಫಾಕ್ಸ್ ಗ್ಲೋವ್, ಗಾರ್ಸ್ ಮುಂತಾದವೂ ಉಂಟು. ಇಲ್ಲಿ ಬೆಳೆಯುವ ಸಮುದ್ರದ ಜೊಂಡನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ.

ಈ ದ್ವೀಪಗಳು ಕಿರಿದಾಗಿರುವುದರಿಂದಲೂ ಪ್ರಾಗಿತಿಹಾಸ ಕಾಲದಿಂದಲೂ ಬೇರ್ಪಟ್ಟಿರುವುದರಿಂದಲೂ ಜನಸಾಂದ್ರತೆಯಿಂದ ಕೂಡಿರುವುದರಿಂದಲೂ ಇಲ್ಲಿ ನೆಲದ ಪ್ರಾಣಿಗಳು ಪರಿಮಿತ. ಮೊಲಗಳು ವಿಶೇಷವಾಗಿವೆ. ಮುಳ್ಳುಹಂದಿ, ಕಾಡಿಲಿ, ಮನೆ ಇಲಿ, ಕಪ್ಪು ಕಂದು ಇಲಿಗಳೂ ಇವೆ. ಜರ್ಸಿ, ಆಲ್ಡರ್ನಿಗಳಲ್ಲಿ ಮುಖಮಲ್ ಹೆಗ್ಗಣ (ಮೋಲ್) ಉಂಟು. ಗರ್ನ್ಸಿಯಲ್ಲಿ ಫೀಲ್ಡ್ ವೋಲ್, ಜರ್ಸಿಯಲ್ಲಿ ಬ್ಯಾಂಕ್ ವೋಲ್ ಇವೆ. ಕೆಂಪು ಅಳಿಲು, ಸ್ಟೋಟ್, ನರಿ–ಇವು ಇತರ ಪ್ರಾಣಿಗಳು. ಬಾವಲಿಗಳು ವಿರಳ, ತೀರಸಮುದ್ರದಲ್ಲಿ ಅಟ್ಲಾಂಟಿಕ್ ಸೀಲ್‌ಗಳು ಅಪರೂಪವಾಗಿ ಕಾಣಿಸಿಕೊಳ್ಳುತ್ತವೆ. ಕಡಲಹಂದಿ, ಹಂದಿಮೀನು, ಕಡಲಾಮೆ ಉಂಟು. ಜರ್ಸಿಯಲ್ಲಿ ಹಸುರು ಹಾವುಗಳು ಇವೆ. ಜರ್ಸಿ ಮತ್ತು ಗರ್ನ್ಸಿಯಲ್ಲಿ ದೊಡ್ಡ ಹಸುರು ಹಲ್ಲಿಗಳುಂಟು.

**ಜನಜೀವನ :** ನಾರ್ಮನ್ ಬುಡಕಟ್ಟಿನವರೇ ಅಧಿಕ ಸಂಖ್ಯಾತರು. ಇತರ ಮಿಶ್ರ ಬುಡಕಟ್ಟಿನವರೂ ಈ ದ್ವೀಪಗಳಲ್ಲಿದ್ದಾರೆ. ಹೆಚ್ಚು ಜನ ಇರುವುದು ಜರ್ಸಿ ಮತ್ತು ಗರ್ನ್ಸಿ ದ್ವೀಪಗಳಲ್ಲಿ. ಕೆಲವು ದ್ವೀಪಗಳಲ್ಲಿ ಜನವಸತಿಯೇ ಇಲ್ಲ. 19ನೆಯ ಶತಮಾನದಿಂದೀಚೆಗೆ ಜನಸಂಖ್ಯೆ ಹೆಚ್ಚತೊಡಗಿದೆ. ಜನರ ಮುಖ್ಯ ವೃತ್ತಿ ಮೀನುಗಾರಿಕೆ, ಕುರಿಸಾಕಣೆ, ತೋಟಗಾರಿಕೆ ಮತ್ತು ಕೃಷಿ. ಇತ್ತೀಚೆಗೆ ಕೃಷಿಯಲ್ಲಿ ಹೊಸ ಪ್ರಯೋಗಗಳು ನಡೆದಿವೆ. ತಂಬಾಕು, ಧಾನ್ಯಗಳನ್ನು ಬೆಳೆಸುತ್ತಾರೆ. ಸಾಮಾಜಿಕ ಭದ್ರತಾ ಯೋಜನೆಯ ಅಡಿಯಲ್ಲಿ ಈ ದ್ವೀಪಸ್ತೋಮದ ಜನರಿಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯ ಉಚಿತ.

**ಆಡಳಿತ ವ್ಯವಸ್ಥೆ :** ಈ ದ್ವೀಪಸ್ತೋಮ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯಕ್ಕೆ ಸೇರಿದೆ. ಆದರೆ ಬ್ರಿಟಿಷ್ ಪಾರ್ಲಿಮೆಂಟಿನ ಕಾನೂನುಗಳೆಲ್ಲ ಇದಕ್ಕೆ ನೇರವಾಗಿ ಅನ್ವಯವಾಗುವುದಿಲ್ಲ. ದ್ವೀಪದಿಂದ ದ್ವೀಪಕ್ಕೆ ಆಡಳಿತ ಮತ್ತು ಕಾನೂನು ವ್ಯತ್ಯಾಸವಾಗುತ್ತದೆ. ಜರ್ಸಿಯ ಲೆಫ್ಟಿನೆಂಟ್ ಗವರ್ನರ್ ಮತ್ತು ಮಹಾ ದಂಡನಾಯಕ ದೊರೆಯ ಪ್ರತಿನಿಧಿ. ಅವನ ನೇಮಕವಾಗುವುದು ಬ್ರಿಟನ್ನಿನ ದೊರೆ (ಅಥವಾ ರಾಣಿ) ಯಿಂದ. ಸ್ಟೇಟ್ಸ್ ಸಭೆಯ ಅಧ್ಯಕ್ಷ ಬೇಯ್ಲಿಫ್, ಸ್ಟೇಟ್ಸ್ ಸಭೆಯಿಂದ ನೇಮಕಗೊಂಡ ಸಮಿತಿಗಳು ಸರ್ಕಾರ ನಡೆಸುತ್ತವೆ. ಅಧಿಕೃತ ಭಾಷೆ ಫ್ರೆಂಚ್. ದಿನಬಳಕೆಯ ಭಾಷೆ ಇಂಗ್ಲಿಷ್. ಜರ್ಸಿಯಂತೆ ಗರ್ನ್ಸಿಗೂ ಒಬ್ಬ ಲೆಫ್ಟಿನೆಂಟ್ ಗವರ್ನರರೂ ಬೇಯ್ಲಿಫನೂ ಇದ್ದಾರೆ. ಇದರ ಆಡಳಿತವನ್ನೂ ಸಮಿತಿಗಳು ನಡೆಸುತ್ತವೆ. ಆಲ್ಡರ್ನಿ, ಸಾರ್ಕ್ ಮತ್ತು ಹರ್ಮ್ ದ್ವೀಪಗಳಿಗೆ ಅನುಕ್ರಮವಾಗಿ ಅಧ್ಯಕ್ಷ, ಡೇಮ್ ಮತ್ತು ಟೆನೆಂಟರು ಮುಖ್ಯರು. ಸಾರ್ಕಿನ ಡೇಮ್ ಹುದ್ದೆ ವಂಶಪಾರಂಪರ್ಯವಾದ್ದು. ಗೋರೆ, ಸೇಂಟ್ ಆಬಿನ್, ಸೇಂಟ್ ಪೀಟರ್ ಪೋರ್ಟ್, ಸೇಂಟ್ ಸ್ಯಾಂಪ್ಸನ್ ಮತ್ತು ಸೇಂಟ್ ಹೀಲಿಯರ್ ಪ್ರಮುಖ ಪಟ್ಟಣಗಳು. ಜರ್ಸಿ, ಗರ್ನ್ಸಿ ಮತ್ತು ಆಲ್ಡರ್ನಿಯಲ್ಲಿ ವಿಮಾನನಿಲ್ದಾಣಗಳಿವೆ. ಸೇಂಟ್ ಪೀಟರ್ ಪೋರ್ಟ್ ಮತ್ತು ಸೇಂಟ್ ಸ್ಯಾಂಪ್ಸನ್ ಪ್ರಮುಖ ರೇವುಗಳು. ರಫ್ತು: ಆಲೂಗೆಡ್ಡೆ, ಟೊಮ್ಯಾಟೊ, ತರಕಾರಿ, ಕಬ್ಬಿಣದ ಹಳೆ ಚೂರು, ತಾರೆಣ್ಣೆ. ಆಮದು: ಆಹಾರ ಧಾನ್ಯಗಳು, ಇಂಧನ, ಪೆಟ್ರೋಲಿಯಂ, ಗೊಬ್ಬರ, ರಾಸಾಯನಿಕ ವಸ್ತುಗಳು.

ಹಿತಕರ ವಾಯುಗುಣ ಮತ್ತು ಸಂಚಾರ ವ್ಯವಸ್ಥೆಗಳಿಂದ ಕೂಡಿರುವ ನಿಸರ್ಗ ಸೌಂದರ್ಯವುಳ್ಳ ಈ ದ್ವೀಪಗಳಿಗೆ ಪ್ರವಾಸಿಗಳು ಅಧಿಕ ಸಂಖ್ಯೆಯಲ್ಲಿ ಬರುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಹೊಂದಿದೆ. (ಎಚ್.ಜಿ.ಐ.)

**ಚ್ಯಾಫಿಂಚ್ ಹಕ್ಕಿ :** ಫ್ರಿಂಜಿಲಿಡೀ ಕುಟುಂಬಕ್ಕೆ ಸೇರಿದ ಒಂದು ಕಾಡು ಹಕ್ಕಿ. ಫಿಂಚ್ ಹಕ್ಕಿಗಳಿಗೆ ಬಹಳ ಹತ್ತಿರದ ಸಂಬಂಧಿ. ಯುರೋಪ್, ಪಶ್ಚಿಮ ಏಷ್ಯ ಹಾಗೂ ಉತ್ತರ ಆಫ್ರಿಕಗಳಲ್ಲಿ ಕಾಣಬರುತ್ತದೆ. ಯುರೋಪಿನ ಹಾಡುಹಕ್ಕಿಗಳಲ್ಲಿ ಮುಖ್ಯವಾದ್ದೆನಿಸಿದೆ. ಇದರ ಶಾಸ್ತ್ರೀಯ ಹೆಸರು ಫ್ರಿಂಜಿಲ ಸೀಲೆಬ್ಸ್. ಗುಬ್ಬಚ್ಚಿ ಗಾತ್ರದ ಪುಟ್ಟ ಹಕ್ಕಿಯಿದು. ಗಂಡುಹಕ್ಕಿ ವರ್ಣಮಯವಾಗಿದೆ; ಇದರ ತಲೆಯ ಬಣ್ಣ ಬೂದುಮಿಶ್ರಿತ ನೀಲಿ, ಕತ್ತು ಕೆಂಪು ಬಣ್ಣದ್ದು. ಎದೆ ನಸುಗೆಂಪು. ಪಾರ್ಶ್ವಗಳು ಕಂಗಂದು, ಬಾಲದ ಬುಡ ಹಳದಿಮಿಶ್ರಿತ ಹಸಿರು. ರೆಕ್ಕೆಗಳ ಮೇಲೆ ಹಾಗೂ ಬಾಲದ ಹೊರಪುಕ್ಕಗಳ ಮೇಲೆ ಬಿಳಿ ಬಣ್ಣದ ಪಟ್ಟೆಗಳಿವೆ. ಹೆಣ್ಣು ಮಾಸಲು ಆಲಿವ್ ಕಂದುಬಣ್ಣದ್ದು. ಚ್ಯಾಫಿಂಚ್ ಸರ್ವಭಕ್ಷಿ, ಕೀಟ ಹಾಗೂ ಅವುಗಳ ಡಿಂಬಗಳನ್ನೂ ಕಾಳುಗಳನ್ನೂ ತಿಂದು ಜೀವಿಸುತ್ತದೆ. ಮರಗಳಲ್ಲೋ ಪೊದೆಗಳಲ್ಲೋ ಕಡ್ಡಿ, ಹುಲ್ಲು, ಗರಿ, ಹಾವಸೆ, ಉಣ್ಣೆಯ ಎಳೆಗಳು– ಮುಂತಾದವನ್ನು ಬಳಸಿಕೊಂಡು ಗೂಡು ಕಟ್ಟಿ ಒಂದು ಸಲಕ್ಕೆ 4–5 ಮೊಟ್ಟೆಗಳನ್ನಿಡುತ್ತದೆ.

ಚ್ಯಾಫಿಂಚ್ ಹಕ್ಕಿ ತನ್ನ ಉಲ್ಲಾಸಮಯ ಹಾಡುವಿಕೆಗೆ ಹೆಸರಾಗಿರುವುದರಿಂದ ಯುರೋಪಿನಲ್ಲಿ ಇದನ್ನು ಪಂಜರದಲ್ಲಿಟ್ಟು ಸಾಕುವುದುಂಟು. (ವಿ.ಕೆ.ವಿ.)

## ಛ

ಇದು ಚವರ್ಗದ ಎರಡನೆಯ ಅಕ್ಷರ. ಅಘೋಷ ತಾಲವ್ಯ ಸ್ಪರ್ಶ ಮಹಾಪ್ರಾಣ ಧ್ವನಿಯನ್ನುಳ್ಳದ್ದು. ಒಂದು ವೃತ್ತವನ್ನು ಒಂದು ಲಂಬರೇಖೆಯಿಂದ ಅರ್ಧ ಮಾಡಿದಂತೆ ಕಾಣುವ ರೂಪವೇ ಅಶೋಕನ ಬ್ರಾಹ್ಮೀ ಲಿಪಿಯ ಶಾಸನಗಳಲ್ಲಿ ಕಾಣಸಿಗುತ್ತದೆ. ಶಾತವಾಹನರ ಕಾಲದಲ್ಲಿ ಈ ಎರಡು ಅರ್ಧ ವೃತ್ತಗಳು ಸಣ್ಣ ಎರಡು ವೃತ್ತಗಳಾಗಿ ಪರಿವರ್ತನೆ ಹೊಂದುತ್ತವೆ. ವಿಶೇಷ ಬದಲಾವಣೆ ಗಳಿಲ್ಲದೆ ಇದೇ ರೂಪವೇ ಸುಮಾರು ಪ್ರ.ಶ. ಎಂಟನೆಯ ಶತಮಾನದವರೆಗೆ ಮುಂದು ವರಿಯುತ್ತದೆ. ಆದರೆ ಒಂಬತ್ತ ನೆಯ ಶತಮಾನದ ಸಮಯಕ್ಕೆ ಅಕ್ಷರದ ಉದ್ದ ಕಡಿಮೆಯಾಗಿ, ಅಗಲ ಹೆಚ್ಚಾಗುತ್ತದೆ. ಹನ್ನೊಂದ ನೆಯ ಶತಮಾನದ ಕಲ್ಯಾಣದ ಚಾಳುಕ್ಯರ ಶಾಸನಗಳಲ್ಲಿ ವಿಶೇಷ ಬದಲಾವಣೆಗಳನ್ನು ಕಾಣ ಬಹುದು. ವೃತ್ತಗಳು ಮಾಯ ವಾಗಿ ಅಕ್ಷರ ಸ್ಫುಟಗೊಂಡು ಈಗಿರುವ ರೂಪಕ್ಕೆ ಅತಿ ಸಮೀಪ ವಾಗಿ ತೋರುತ್ತದೆ. ಇದೇ ರೂಪವೇ ಹದಿನೆಂಟನೆಯ ಶತಮಾನದ ವರೆಗೆ ಮುಂದುವರಿಯುತ್ತದೆ. ಪಕಾರಕ್ಕೂ ಈ ಅಕ್ಷರಕ್ಕೂ ವ್ಯತ್ಯಾಸ ಕಾಣಿಸಲು ಇದರ ಹೊಕ್ಕಳು ಸೀಳಿರಬೇಕು. ಅಂತೂ ಇದು ಇತ್ತೀಚಿನ ಬದಲಾವಣೆ. (ಎ.ವಿ.ಎನ್.)

**ಛಂದಸ್ಸು :** ಛಂದಸ್ಸು ಎಂಬ ಪದಕ್ಕೆ ಪದ್ಯಪಂಕ್ತಿಯ ರಚನಾರೀತಿಯ ವಿವರಣೆ ಯೆಂದು ಸಾಮಾನ್ಯ ಅರ್ಥ (ಪ್ರಾಸಡಿ). ಅಲ್ಲದೆ ನುಡಿ ಅಥವಾ ಭಾಷೆಯ ಚಲನಾತ್ಮಕ ರೂಪಕ್ಕೆ ಅನ್ವಯಿಸುವ ಘಟಕಾಂಶಗಳ ಮತ್ತು ರಚನಾವಿನ್ಯಾಸಗಳ ಅಧ್ಯಯನಕ್ಕೂ ಛಂದಸ್ಸು ಎಂದೇ ಹೇಳುವುದು ವಾಡಿಕೆ. ಇದರಲ್ಲಿ ಎರಡು ವಿಧ: ಭಾಷಾ ಸಂಬಂಧಿ ಮತ್ತು ಸಾಹಿತ್ಯ ಸಂಬಂಧಿ. ಅಂಥ ಅಧ್ಯಯನ ಯಾವುದೋ ಒಂದು ಭಾಷೆಗೋ ಸಾಹಿತ್ಯಕ್ಕೋ ಸೀಮಿತವಾಗದೆ ಎಲ್ಲ ಭಾಷೆ ಎಲ್ಲ ಸಾಹಿತ್ಯದ ಕೇವಲ ತಾತ್ತ್ವಿಕ ಪರಿಶೀಲನೆಯಾಗಬಹುದು; ಅಥವಾ ನಿರ್ದಿಷ್ಟ ಭಾಷಾಸಾಹಿತ್ಯದ ಚಾರಿತ್ರಿಕ ವರ್ಣನೆಯಾಗಬಹುದು. ವರ್ಣನೆ ಒಂದಕ್ಕೇ ಮೀಸಲಾಗಿರಬಹುದು ಅಥವಾ ಹಲವನ್ನು ಪರಸ್ಪರ ಹೋಲಿಸಬಹುದು. ಬೆಲೆ ಕಟ್ಟುವ ಕೆಲಸವನ್ನೂ ಛಂದೋವಿಮರ್ಶೆ ವಹಿಸಿಕೊಂಡು ವ್ಯಾಕರಣಶುದ್ಧಿ, ಭಾಷಣದ ಪರಿಣಾಮ ಪ್ರಾಬಲ್ಯ, ಕಾವ್ಯಪ್ರಕಾರದ ಅಂದಚಂದ–ಇವುಗಳ ಮೇಲೆ ಟೀಕೆ ಮಾಡುವುದೂ ಸಾಧ್ಯ. ಪ್ರಾಚೀನ ಗ್ರೀಕರ ಮತ್ತು ರೋಮನರ ಯುಗಗಳಲ್ಲಿ ಪದಗಳೂ ಮತ್ತು ಉಚ್ಚಾರಾಂಶಗಳೂ ಪದ್ಯಪಂಕ್ತಿಗೆ ಯುಕ್ತವಾಗಿ ಹೊಂದಿಕೊಂಡಿವೆಯೊ ಇಲ್ಲವೊ ಎಂಬ ಪರೀಕ್ಷೆ ಸಾಂಪ್ರದಾಯಿಕ ವ್ಯಾಕರಣದ ಒಂದು ಭಾಗವಾಗಿತ್ತು. ರೋಮನರ ಕಾಲದಲ್ಲೂ ಮಧ್ಯಯುಗದಲ್ಲೂ ಪದ್ಯಪಂಕ್ತಿಯ ಜೊತೆಗೆ ಗದ್ಯಗತಿಯ ಲಕ್ಷಣವನ್ನೂ ವಿವರಿಸುವುದು ಛಂದಸ್ಸಿನ ಜವಾಬ್ದಾರಿಯಾಯಿತು. ಈಚಿನ ಭಾಷಾವಿಜ್ಞಾನ ಮುಖ್ಯವಾಗಿ ಶಬ್ದಶಾಸ್ತ್ರವಾದರೂ ಆವಶ್ಯಕವೆಂದು ತೋರಿದಾಗ ಪದ್ಯಗದ್ಯ ರಚನಾವಿಲಾಸವನ್ನೂ ಚರ್ಚಿಸುತ್ತದೆ. ಸ್ಥೂಲವಾಗಿ ಹೇಳುವುದಾದರೆ, ಸಾಹಿತ್ಯಕ ಛಂದೋವಿಮರ್ಶೆಗೆ ಉಚ್ಚಾರಾಂಶ, ಪದ, ಮಾತ್ರೆ, ಅವಧಾರಣೆ ಮೊದಲಾದ ವಿಷಯಗಳೇ ಸಾಮಗ್ರಿ; ಪದದ ನಾದರೂಪವನ್ನು ಪರಾಮರ್ಶೆ ಮಾಡಬೇಕಾದಾಗ ಅದು ಸಾಧಾರಣವಾಗಿ ಬಿಡಿ ಧ್ವನಿಯಿಂದ ಆಚೆ ವಿವೇಚಿಸುವುದಿಲ್ಲ. ಧ್ವನಿಮಾ ಎಂಬ ದ್ರವ್ಯದ ಕಡೆಗೆ ಅದು ಸುಳಿಯುವುದಿಲ್ಲ; ಆ ದ್ರವ್ಯ ಭಾಷಾವಿಜ್ಞಾನಕ್ಕೆ ಒಂದು ಪ್ರಧಾನಾಂಶ. ಹಾಗೆಯೇ ಸಾಹಿತ್ಯದ ಒಂದು ಭಾಗವಾದ ಭಾವಗೀತೆ ವಾಚನಕ್ಕೆ ಬರುವುದರಿಂದ ಹಾಡುವುದಕ್ಕೆ ಬರುವ ಸಂಗೀತಕೃತಿಯ ಹತ್ತಿರದಲ್ಲಿ ನಿಂತುಕೊಳ್ಳಬಹುದು; ಆದರೆ ಭಾವಗೀತೆಯ ಪಂಕ್ತಿಗಳ ಪ್ರಸ್ತಾರ ಬೇರೆ, ಗಾನಕೀರ್ತನೆಗಳ ವಿನ್ಯಾಸ ಬೇರೆ. ವಾಚನ ಕಾವ್ಯಕ್ಕೆ ಅನುರೂಪ, ಗಾಯನ ಸಂಗೀತಕ್ಕೆ ಅನುರೂಪ.

ವಾಗಿಂದ್ರಿಯಗಳ ಕರ್ಮದಿಂದ ಉದ್ಭವಿಸಿ ಕರ್ಣೇಂದ್ರಿಯವನ್ನು ತಟ್ಟುವ ಶಬ್ದವೇ ವಾಕ್ಕಿನ ಮೂಲಾಂಶ. ಆ ಶಬ್ದದ ಗುಣಸಂಬಂಧಿ ಮತ್ತು ಕಾಲಸಂಬಂಧಿ ಲಕ್ಷಣಗಳಿಂದ ಶಬ್ದಗತಿ ಅಥವಾ ಲಯ ಉಂಟಾಗುತ್ತದೆಯಾದರೂ ಮೃದೂಚ್ಚಾರ, ಮೃದೂಚ್ಚಾರವಿಲ್ಲದಿಕೆ, ಆದಿವ್ಯಂಜನಪ್ರಾಸ, ಆದಿಸ್ವರಪ್ರಾಸ, ಪ್ರಾಸ ಮೊದಲಾದ ಗುಣಗಳ ನೇರ ಪ್ರಭಾವ ಲಯದ ಮೇಲೆ ಅಷ್ಟೊಂದಿಲ್ಲ. ಧ್ವನಿಯ ತೀವ್ರತೆ (ಇಂಟೆನ್ಸಿಟಿ) ಧ್ವನಿಯ ಅವಧಿ (ಡ್ಯೂರೇಷನ್) ಮತ್ತು ಧ್ವನಿಯ ಶ್ರುತಿ (ಪಿಚ್) ಇವು ಅಳತೆಕ್ಕೆ ಸಿಕ್ಕುವುದರಿಂದ ಯಾವುದೋ ಒಂದು ಬಗೆಯಲ್ಲಿ ಅಳೆದು ನಿಷ್ಕರ್ಷಿಸಬೇಕಾದ ಶಬ್ದಗತಿಗೆ ಮುಖ್ಯವಾಗುತ್ತವೆ. ಅದರಲ್ಲೂ ಬಲು ಮುಖ್ಯವಾದದ್ದು ಧ್ವನಿ ತೆಗೆದುಕೊಳ್ಳುವ ಕಾಲ ಅಥವಾ ಮಾತ್ರೆ. ಇಲ್ಲಿ ಒಂದು ಟಿಪ್ಪಣಿ ಅಗತ್ಯ. ಧ್ವನಿಯ ತೀವ್ರತೆ, ಅವಧಿ, ಶ್ರುತಿ ಯಾವುದೇ ಆಗಲಿ ಅದರ ಅಂತರ್ಗತವೂ ಸಹಜವೂ ಆದ ಸ್ವರೂಪ ಸ್ವಾರಸ್ಯ ಛಂದಸ್ಸಿನ ಗಣನೆಗೆ ಅನಾವಶ್ಯಕ; ಅದು ತನ್ನಂಥ ಮತ್ತು ತನ್ನಿಂದ ಭಿನ್ನವಾದ ಇತರ ಧ್ವನಿಯ ತೀವ್ರತೆ, ಅವಧಿ, ಶ್ರುತಿಗಳೊಂದಿಗೆ ಹೊಂದಿರುವ ಅನ್ಯೋನ್ಯ ಸಂಬಂಧ ಅತ್ಯಾವಶ್ಯಕ; ಶಬ್ದಗತಿ ಬಹು ಸೂಕ್ಷ್ಮವೂ ಸಂಕೀರ್ಣವೂ ಆದ ವಿಷಯ. ಎದ್ದು ಕಾಣುವ ಸ್ಪಷ್ಟ ವಿಚಾರಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗುತ್ತದೆ. ಬಿಡಿ ಶಬ್ದ ತನ್ನಷ್ಟಕ್ಕೆ ತಾನೆ ಒಂಟಿಯಾಗಿ ಏನೂ ಕೆಲಸ ಮಾಡಲಾರದು; ಇತರ ಬಿಡಿ ಶಬ್ದಗಳೊಂದಿಗೆ ಕೂಡಿಕೊಂಡು ಉಚ್ಚಾರಾಂಶವೂ ಪದವೂ ಆದಾಗ ಅದಕ್ಕೆ ಧ್ಯೇಯಸಾಧನೆ. ಉಚ್ಚಾರಾಂಶಗಳು ಜೊತೆಗೂಡುವಾಗ ಸಬಲವಾದವೂ ದುರ್ಬಲವಾದವೂ ಸರದಿಯಲ್ಲಿ ಬಂದು ಶಬ್ದಗತಿಯಲ್ಲಿ ಏರಿಳಿತ ತೋರಿಬರುತ್ತದೆ; ಅಲ್ಲದೆ ದುರ್ಬಲವಾದವು ಸುಬಲವಾದವುಗಳ ಬಳಿ ಕೂಡಿ ಗುಂಪಾಗಲು ತವಕಿಸುತ್ತವೆ. ಗುಂಪಾಗುವಿಕೆಯೂ ಒಂದು ಮುಖ್ಯ ಸಂಗತಿ. ಏರಿಳಿತ ಗುಂಪುಗಳು ಪುನಃ ಪುನಃ ಒದಗಿ ಶಬ್ದಗತಿಗೆ ಉದ್ದ ಅಥವಾ ಅಳತೆಯ ಪಂಕ್ತಿ ಅಥವಾ ಸಾಲು ವ್ಯವಸ್ಥಿತವಾಗುವಂತೆ ಮಾಡುತ್ತವೆ. ಉಚ್ಚಾರಾಂಶಕ್ಕೆ ಅಂಟಿರುವ ಭಾರ, ಅವಧಿ ಮುಂತಾದವುಗಳನ್ನು ಗೌಣವಾಗಿ ಭಾವಿಸಿ, ಎಷ್ಟು ಉಚ್ಚಾರಾಂಶಗಳಿಂದ ಪಂಕ್ತಿ ಆಗಿದೆ ಎಂಬ ಸಂಖ್ಯಾಸೂತ್ರ ಒಂದರಿಂದಲೇ ಛಂದೋಪ್ರಕಾರವನ್ನು ಗೊತ್ತುಮಾಡುವುದು ಜಪಾನೀ ಫ್ರೆಂಚ್ ಭಾಷೆಗಳಿಗೆ ಒಗ್ಗಿಬಂದಿದೆ. ಆದರೆ ಆ ಪದ್ಧತಿ ಬರಿ ಅಂಕಗಣಿತದ ಲೆಕ್ಕದಂತಲ್ಲ; ಹೆಚ್ಚು ಕಡಿಮೆ ಉಚ್ಚಾರಾಂಶಗಳಿಂದಾದ ಸಾಲುಗಳನ್ನು ಜೋಡಿಸುವುದಷ್ಟೇ ಅಲ್ಲ. ತೀವ್ರತೆ ಶ್ರುತಿ ಅವಧಿ ವಿರಾಮಗಳೂ ಹಿಂದಿದ್ದು ಕೊಂಡು ಪಂಕ್ತಿಗಳ ರಸವಂತಿಕೆಗೆ ಕಾರಣವಾಗುತ್ತವೆ. ಆದರೂ ಸ್ಥೂಲವಾಗಿ ಆ ಭಾಷೆಗಳ ಛಂದಸ್ಸು ಉಚ್ಚಾರಾಂಶಗಳ ಎಣಿಕೆಯ ಮೇಲೆ ನಿಂತಿದೆ ಎಂದರೆ ತಪ್ಪಲ್ಲ. ಚೀನೀ ಭಾಷೆಯಲ್ಲಿ ಶ್ರುತಿಯೇ ಛಂದಸ್ಸಿಗೆ ಆಧಾರವಾಗುವ ಮೂಲಾಂಶ; ಶ್ರುತಿವ್ಯತ್ಯಾಸಗಳಿಂದ ಪದಪುಂಜವೂ ಪಂಕ್ತಿಯೂ ರೂಪುಗೊಳ್ಳುತ್ತವೆ. ಪ್ರಾಚೀನ ಗ್ರೀಕರು ಧ್ವನಿಯ ಅವಧಿಗೆ ಪ್ರಾಧಾನ್ಯ ಕೊಟ್ಟರು. ಪ್ರಾಚೀನ ರೋಮನರಲ್ಲಿ ಅವರದ್ದೇ ಆದ ಛಂದಸ್ಸಿತ್ತು; ಅದರ ಮೂಲಾಂಶ ಅವಧಾರಣೆ (ಆಕ್ಸೆಂಟ್) ಹಾಗಿದ್ದರೂ ಗ್ರೀಕ್ ಮಾದರಿಗಳಿಂದ ವಿಪರೀತ

ಮೋಹಿತರಾದ ರೋಮನರಿಗೆ ಧ್ವನಿಯ ಅವಧಿ ಅಥವಾ ಮಾತ್ರೆ ಸಮಂಜಸವೆಂದು ತೋರಿಬಂತು. ಅದನ್ನು ಉಚ್ಚಾರಾಂಶಗಳ ಮೇಲೆ ಬಲವಂತದಿಂದ ಹೇರಿ, ಮೋರಾ ಎಂಬ ಏಕಮಾನವನ್ನು ನಿರ್ಮಿಸಿ, ಲಯ ಗುಚ್ಛಗಳನ್ನು ಏರ್ಪಡಿಸಿಕೊಂಡರು. ಮೋರಾ ಹ್ರಸ್ವಕಾಲಕ್ಕೆ ಸಮಾನ, ಎರಡು ಮೋರಾ ದೀರ್ಘ ಕಾಲಕ್ಕೆ. ಅಂಥ ಹ್ರಸ್ವ ದೀರ್ಘಗಳ ವರಿಸೆಯೇ ಏರಿಳಿತ-ಪುಂಜಗಳಿಗೂ ಪದ್ಯಪಂಕ್ತಿಗೂ ಆಕರ. ಪದ್ಯಪಂಕ್ತಿಯಲ್ಲಿ ಏರಿಳಿತ-ಪುಂಜ ಒಂದೇ ಬಗೆಯದಾಗಿದ್ದರೆ ಆ ಪದ್ಯ ವಾಚನಕ್ಕೂ ಬೇರೆ ಬೇರೆ ಬಗೆಯದಾಗಿದ್ದರೆ ಗಾಯನಕ್ಕೂ ಬಳಸಬೇಕೆಂಬ ವಿಧಿ ಏರ್ಪಟ್ಟಿತು. ಮೊದಲನೆಯದಕ್ಕೆ ಮೆಟ್ರಮ್ ಎಂದೂ ಎರಡನೆಯದಕ್ಕೆ ನ್ಯೂಮರಸ್ ಎಂದೂ ಹೆಸರು. ಮೆಟ್ರಮ್ಮಿನ ಕ್ರಮ ಬದಲಾವಣೆಯನ್ನೇ ಸಹಿಸದ ಬದ್ಧವೂ ಬಿಗಿಯೂ ಆದ ಕ್ರಮ; ನ್ಯೂಮರಸ್ಸಿನದು ವೈವಿಧ್ಯವುಳ್ಳ ಸಡಿಲ ಕ್ರಮ. ಬರಬರುತ್ತ ಲ್ಯಾಟಿನ್, ಗ್ರೀಕ್ ಎರಡೂ ಛಂದೋಪದ್ಧತಿಗಳು ಅವಧಾರಣೆಗೂ ಕೊನೆಗೆ ಸ್ವರಭಾರಕ್ಕೂ ಆಸ್ಪದವನ್ನಿತ್ತು ಧ್ವನಿಯ ಅವಧಿಯನ್ನು ಹಿಂದಕ್ಕೆ ಒತ್ತರಿಸಿಬಿಟ್ಟವು. ಹೊಸಹುಟ್ಟಿನ ಅವಧಿಯಲ್ಲಿ ಹಳೆಯ ಗ್ರೀಕ್, ಲ್ಯಾಟಿನ್ ಮಾತ್ರಾಛಂದಸ್ಸನ್ನು ಯೂರೋಪಿನ ಅರ್ವಾಚೀನ ಭಾಷೆಗಳ ಮೇಲೆ ಹೊರಿಸುವ ಪ್ರಯತ್ನ ನಡೆಯಿತು; ಆದರೆ ಅದು ಪೂರ್ತಿ ನಿರರ್ಥಕವಾಯಿತು. ಗ್ರೀಕ್-ಲ್ಯಾಟಿನ್ ಅಥವಾ ಕ್ಲ್ಯಾಸಿಕಲ್ ಛಂದಸ್ಸಿನ ಅವಶೇಷವಾಗಿ ಉಳಿದಿರುವುದು. ಛಂದೋವಿಶ್ಲೇಷಣ ಮತ್ತು ಛಂದಸ್ಸಿನ ಪ್ರಕಾರಗಳ ಅಂಕಿತ ಮಾತ್ರ. ಇಂದು ಆ ಅಂಕಿತಗಳ ಉಪಯೋಗಕ್ಕೂ ಹಲವು ವಿದ್ವಾಂಸರ ವಿರೋಧವಿದೆ.

ಯುರೋಪಿನ ಮುಖ್ಯ ಭಾಷೆಗಳನ್ನು ಟ್ಯೂಟಾನಿಕ್ ಅಥವಾ ಜರ್ಮ್ಯಾನಿಕ್ ನುಡಿಗಳು, ರೊಮಾನ್ಸ್ ನುಡಿಗಳು ಎಂದು ವಿಂಗಡಿಸುವುದು ರೂಢಿ. ಇಂಗ್ಲಿಷ್, ಜರ್ಮನ್, ನಾರ್ವಿಜಿಯನ್ ಮೊದಲಾದ ಟ್ಯೂಟಾನಿಕ್ ಭಾಷೆಗಳಿಗೆ ಸ್ವರಭಾರ ಅಥವಾ ಒತ್ತು ಮುಖ್ಯ ಲಕ್ಷಣ. ಪದ್ಯ ಛಂದಸ್ಸಿಗೂ ಗದ್ಯ ಛಂದಸ್ಸಿಗೂ ಭಾರವುಳ್ಳ ಉಚ್ಚಾರಾಂಶ ಭಾರವಿಲ್ಲದ ಉಚ್ಚಾರಾಂಶಗಳ ಯಾವುದೋ ರೀತಿಯ ಪರ್ಯಾಯವೇ ಆಧಾರ. ಅವಧಿ ಶ್ರುತಿ ಮೊದಲಾದ ಅಂಶಗಳ ಪ್ರಭಾವ ಸ್ವಲ್ಪ ಇದ್ದರೂ ಅವು ಗೌಣಾಂಶ. ಇಟ್ಯಾಲಿಯನ್, ಸ್ಪ್ಯಾನಿಷ್, ಫ್ರೆಂಚ್, ಮುಂತಾದ ರೊಮಾನ್ಸ್ ಭಾಷೆಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಉಚ್ಚಾರಾಂಶಗಳನ್ನಿಟ್ಟು ಅವನ್ನು ಆದ್ಯಕ್ಷರ ಪ್ರಾಸದಿಂದಲೋ ಸಾಮಾನ್ಯ ಪ್ರಾಸದಿಂದಲೋ ಕೂಡಿಸುವುದರಿಂದ ಲಯವಿನ್ಯಾಸ ಉತ್ಪತ್ತಿಯಾಗುತ್ತದೆ. ಅಲ್ಲದೆ ವಿರಾಮದ ಸೂಕ್ತ ಸ್ಥಾನದ ನಿರ್ಣಯವೂ ಶಬ್ದಗತಿಯ ಸೊಬಗನ್ನು ಹೆಚ್ಚಿಸಲು ಸಹಕರಿಸುತ್ತದೆ. ಉಚ್ಚಾರಾಂಶದ ಸಬಲತೆ ದುರ್ಬಲತೆಯೂ ಅದೇ ಕಾರ್ಯದಲ್ಲಿ ನೆರವಾಗುತ್ತದೆ.

ಮನುಷ್ಯ ಭಾಷೆಯನ್ನು ನಾಲ್ಕು ಕೆಲಸಗಳಿಗೆ ಬಳಸಿಕೊಳ್ಳುತ್ತಾನೆ. ಆಡುಮಾತಿಗೆ, ವೈಜ್ಞಾನಿಕ ಗದ್ಯಕ್ಕೆ, ಸಾಹಿತ್ಯಿಕ ಗದ್ಯಕ್ಕೆ ಅಥವಾ ಗದ್ಯಕಾವ್ಯಕ್ಕೆ ಮತ್ತು ಪದ್ಯಕಾವ್ಯಕ್ಕೆ. ವಿಜ್ಞಾನ ಅಪೇಕ್ಷಿಸುವ ಭಾಷೆಗೆ ಭಾವಾವೇಶ, ಅಲಂಕಾರ, ವ್ಯಂಗ್ಯಾರ್ಥ ಮುಂತಾದವು ಒಂದೂ ಇರಕೂಡದು; ಖಚಿತವೂ ಅಸಂದಿಗ್ಧವೂ ಹೆಚ್ಚು ಕಡಿಮೆ ಇಲ್ಲದ್ದೂ ಆದ ಅಭಿಪ್ರಾಯದ ಅಭಿವ್ಯಕ್ತಿ ಅದರ ಗುರಿ. ಲಯ, ಪ್ರಾಸ ಮೊದಲಾದುವು ಎಲ್ಲೂ ಸುಳಿಯಕೂಡದು. ಆದರೇನು? ಶಬ್ದಧಾರೆಗೆ ಲಯ ಎಷ್ಟರ ಮಟ್ಟಿಗೆ ಸಹಜವಾಗಿ ಬಿಡದೆ ಅಂಟಿಕೊಂಡಿದೆ ಎಂದರೆ, ಹಲವು ವೈಜ್ಞಾನಿಕ ಹೇಳಿಕೆಗಳೂ ಅನಿರೀಕ್ಷಿತವಾಗಿ ಛಂದೋಬದ್ಧವಾಗಿಬಿಟ್ಟಿವೆ; ಒಂದೊಂದು ಪದ್ಯಪಂಕ್ತಿಜಾಲವೂ ಆಗಿಬಿಟ್ಟಿವೆ. ಈ ಅಪೂರ್ವ ನಿದರ್ಶನವನ್ನು ನೋಡಿ:

And so no force, however great, can stretch a chord,
however fine, into a horizontal line that shall remain
perfectly straight.

ಇದನ್ನು ವೈಜ್ಞಾನಿಕವಾಗಿಯೇ ಎಲ್ಲರೂ ತೆಗೆದುಕೊಳ್ಳುತ್ತಾರೆ; ಸಾಹಿತ್ಯದ ಯೋಚನೆಗೆ ಅವಕಾಶವನ್ನೇ ಕೊಡದೆ ಗ್ರಹಿಸುತ್ತಾರೆ. ಅದರಲ್ಲೊಂದು ಅಚ್ಚರಿ ಮರೆಸಿಕೊಂಡು ಕುಳಿತಿದೆ. ವಾಕ್ಯವನ್ನು ಹೀಗೆ ಬರೆಯೋಣ :

And so no force, however great,
Can stretch a chord,however fine,
Into a horizontal line
That shall remain perfectly straight.

ಈಗ ಇದು ನಾಲ್ಕು ಪಂಕ್ತಿಯ ಚೌಪದಿಯೆಂದೂ ಅದಕ್ಕೆ ಒಂದು, ನಾಲ್ಕು ಮತ್ತು ಎರಡು ಮೂರನೆಯ ಪಂಕ್ತಿಗಳ ಅಂತ್ಯಪ್ರಾಸ ಇರುವುದೂ ಅರಿವಾಗುತ್ತದೆ. ಅಷ್ಟೇ ಅಲ್ಲ ಪ್ರಸ್ತಾರ ಹಾಕಿ ನೋಡೋಣ.

And so | no force | how ev | er great, |
Can stretch | a chord | how ev | er fine |
Into | a hor | how ev | al line |
That shall | rem ain | per fect | ly straight |

ಇದು ಸಂಪೂರ್ಣವಾಗಿ ನಿರ್ದುಷ್ಟವಾದ ಚೌಪದಿ. ಟೆನಿಸನ್ ಕವಿ ತನ್ನ ಮೆಮೋರಿಯಮ್ ಕಾವ್ಯಕ್ಕೆ ಈ ಪದ್ಯಪ್ರಕಾರವನ್ನೇ ರೂಢಿಸಿಕೊಂಡ; ಇನ್ ಮೆಮೋರಿಯಮ್ ಚೌಪದಿಯೆಂದೇ ಅದಕ್ಕೆ ಅಂಕಿತ. ಆದರೆ ಛಂದಸ್ಸನ್ನು ಇಲ್ಲಿ ನಾವು ಬಗೆಯುವುದೇ ಇಲ್ಲ; ಅಥವಾ ನಿರಾಕರಿಸುತ್ತೇವೆ. ಆಡುಮಾತಿನ ಸರಣಿಯಲ್ಲೂ ಛಂದೋಬದ್ಧ ತುಣುಕುಗಳೂ ಪ್ರಾಸ ಮುಂತಾದ ಲಕ್ಷಣಗಳೂ ಬಂದೇ ಬರುತ್ತವೆ. ಏತಕ್ಕೆಂದರೆ ಆಡುಮಾತು ಕೇವಲ ವ್ಯಾವಹಾರಿಕವಾದರೂ ಆಲೋಚನೆಯ ಜೊತೆಗೆ ಭಾವವನ್ನು ಅಷ್ಟಿಷ್ಟು ಗರ್ಭೀಕರಿಸಿ ಕೊಳ್ಳುತ್ತದೆ. ಆಡುಮಾತಿನ ಲಯಧಾಟಿಯನ್ನು ಗದ್ಯವಾಗಲಿ ಪದ್ಯವಾಗಲಿ ಅಲಕ್ಷಿಸುವಂತಿಲ್ಲ; ಅದನ್ನು ಹಿನ್ನೆಲೆಯಾಗಿ ಇರಿಸಿಕೊಂಡೇ ಪದ್ಯದ ಲಯಧಾಟಿಯನ್ನು ಮುಂದೆ ನಡೆಸಿಕೊಳ್ಳಬೇಕು. ಎರಡು ಧಾಟಿಗಳ ಚೆಂದುಳ್ಳ ಮಿಶ್ರಣವೇ ಕಾವ್ಯದ ವಿಶಿಷ್ಟ ಲಾವಣ್ಯ.

ಲಯ ಅಥವಾ ಶಬ್ದಗತಿಗೆ ಬೇಕಾದದ್ದು ಭಿನ್ನ ಮೌಲ್ಯದ ಎರಡು ಉಚ್ಚಾರಾಂಶಗಳ ಗುಂಪು ಮತ್ತು ಅವುಗಳ ಪುನರಾವರ್ತನ. ಹ್ರಸ್ವ ದೀರ್ಘ ಉಚ್ಚಾರಾಂಶಗಳೋ ಒತ್ತುಳ್ಳ ಒತ್ತಿಲ್ಲದ ಉಚ್ಚಾರಾಂಶಗಳೋ ಆಗಬಹುದು. ಪದ್ಯದಲ್ಲಿ ಸಾಮಾನ್ಯವಾಗಿ ಎರಡರ ಮತ್ತು ಮೂರರ ಗುಂಪು ಬರುತ್ತವೆ; ನಾಲ್ಕರ ಗುಂಪು ಅಪರೂಪ; ಐದರದ್ದು ಇಲ್ಲವೇ ಇಲ್ಲ. ಗದ್ಯದಲ್ಲಿ ನಾಲ್ಕರ ಗುಂಪೂ ಐದರ ಗುಂಪೂ ಧಾರಾಳವಾಗಿ ಬರಬಹುದು. ಗುಂಪಿನಲ್ಲಿ ದುರ್ಬಲ ಉಚ್ಚಾರಾಂಶಗಳು ಸಬಲ ಉಚ್ಚಾರಾಂಶವನ್ನು ನೆಮ್ಮಿ ನಿಲ್ಲುತ್ತವೆ. ಗುಂಪಿಗೆ ಒಂದಕ್ಕೂ ಹೆಚ್ಚು ಸಬಲ ಉಚ್ಚಾರಾಂಶವಿದ್ದರೆ ಅವುಗಳಲ್ಲಿ ಒಂದು ಕೇಂದ್ರವಾಗುತ್ತದೆ. ಪದ್ಯ ಛಂದಸ್ಸು ಕ್ಲುಪ್ತ, ಬಿಗಿ, ಪುನರುಕ್ತಿ ಪೂರ್ಣ; ಗದ್ಯ ಛಂದಸ್ಸು ಅನಿಯತ, ಸಡಿಲ; ಅದರಲ್ಲಿಯೂ ಪುನರಾವರ್ತಕ ಬರಲೇಬೇಕು. ಆದರೆ ನಿಯತವಾದ ನಿರೀಕ್ಷಿತ ಸ್ಥಾನದಲ್ಲಲ್ಲ. ಗದ್ಯದಲ್ಲಿ ಪದ್ಯಗುಚ್ಛವಾಗಲಿ ಪದ್ಯಪಂಕ್ತಿಯಾಗಲಿ ಬರಕೂಡದು; ಅವು ಬಂದರೆ ಕೇಳುವ ಕಿವಿಗೆ ಅಹಿತ, ಆಶಾಭಂಗ, ಪದ್ಯ ಗದ್ಯ ಎರಡಕ್ಕೂ ಇರುವ ವ್ಯತ್ಯಾಸಗಳಲ್ಲಿ ಒಂದು, ಉದ್ದ ಪದದ ಉಚ್ಚಾರಾಂಶಗಳನ್ನು ಬೇರ್ಪಡಿಸುವ ವಿಚಾರ; ಗದ್ಯದಲ್ಲಿ ಪದವನ್ನು ಪೂರ್ತಿಯಾಗಿಯೇ ಪರಿಗಣಿಸಬೇಕು. ಪದ್ಯದಲ್ಲಿ ಅದನ್ನು ಬೇರೆ ಬೇರೆ ಉಚ್ಚಾರಾಂಶಗಳಾಗಿ ಒಡೆಯಬಹುದು. "My lonely anguish melts no heart but mine " ಇದು ಗದ್ಯವಾದರೆ ಹೀಗೆ ಮೂರೇ ಗುಂಪಾಗುತ್ತದೆ.

My lonely anguish | melts no heart but mine
My lone | ly ang | uish melts | no heart | but mine |

ಉಸಿರ್ದಾಣ ಮತ್ತು ವಿರಾಮ ಶಬ್ದಗತಿಯ ಒಂದು ಮನನೀಯ ಅಂಗ, ವಾಗ್ಧಾರೆ ಅವಿಚ್ಛಿನ್ನವಾಗಿಯೂ ಅಖಂಡವಾಗಿಯೂ ನಡೆಯಲಾರದು; ನಡೆದರೆ ಅದು ಸರಿಯಾದ ತಾತ್ಪರ್ಯವನ್ನು ಈಯಲಾರದು. ಭಾಗ ಭಾಗವಾಗಿ ಪುಂಜ ಪುಂಜವಾಗಿ ವಾಕ್ಯಗಳನ್ನು ವಿಭಜಿಸದೆ ಗತ್ಯಂತರವಿಲ್ಲ. ವಿರಾಮದ ಪಾತ್ರ ಹೀಗೆ ಬಲಿಷ್ಠವಾದದ್ದು. ಎಷ್ಟೋ ಕಡೆ ಹ್ರಸ್ವ ಅಥವಾ ಒತ್ತಿಲ್ಲದ ಉಚ್ಚಾರಾಂಶದ ಬದಲು ವಿರಾಮ ಬರಬಹುದು. ದೊಡ್ಡ ಕಂಬ ಸಣ್ಣ ಕಂಬಗಳನ್ನು ಒಂದಾದ ಮೇಲೊಂದರಂತೆ ನೆಟ್ಟರೆ ಸಾಲು ಲಯಾತ್ಮಕವಾಗುತ್ತದೆ; ಒಂದೇ ಎತ್ತರದ ಕಂಬಗಳನ್ನು ಸಾಲಾಗಿಸಿದರೆ ಹೇಗೆ? ಅದೂ ಲಯಾತ್ಮಕ, ಏತಕ್ಕೆಂದರೆ ಕಂಬ-ಕಂಬವಿಲ್ಲದಿಕೆ ಅಥವಾ ಭರ್ತಿ-ಬಿಡುವು ಎಂಬ ಎರಡು ಅಂಶ ಸಾಕು ಲಯದ ಪರಿಣಾಮ ಉಂಟುಮಾಡುವುದಕ್ಕೆ. ಲಯ ಪ್ರಪಂಚವನ್ನು ತುಂಬಿಕೊಂಡಿದೆ; ಮನುಜನ ಬಾಳಿಗೆ ಅದರಿಂದಲೇ ಸ್ವಾರಸ್ಯ, ಸಂತೃಪ್ತಿ. (ಎಸ್.ವಿ.ಆರ್.)

**ಛತ್ತೀಸ್ ಗಡೀ :** ಪೂರ್ವೀ ಹಿಂದಿಯ ಒಂದು ಉಪಭಾಷೆ. ಇದನ್ನು ಲರಿಯಾ ಮತ್ತು ಖಲ್ಟಾಹೀ ಎಂದೂ ಕರೆಯುತ್ತಾರೆ. ಈ ಉಪಭಾಷೆಯನ್ನು ಉದಯಪುರ, ಕೊರ್‍ವ, ಸರ್ಗುಜ, ಜಶ್‌ಪುರ್, ಛೋಟಾ ನಾಗಪುರ್ ಮತ್ತು ಛತ್ತೀಸ್‌ಗಡ್ ಹಾಗೂ ಅವುಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಮಾತನಾಡುತ್ತಾರೆ. ಈ ಭಾಷೆಯನ್ನು ಬಳಸುವವರ

ಒಟ್ಟು ಸಂಖ್ಯೆ 17.5 ಮಿಲಿಯನ್. ಈ ಸಂಖ್ಯೆ ಒರಿಸ್ಸ ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳಿಗೆ ವಲಸೆ ಹೋಗಿರುವ ಜನರ ಸಂಖ್ಯೆಯನ್ನೂ ಒಳಗೊಂಡಿದೆ. ಛತ್ತೀಸ್‌ಗಡೀಯಲ್ಲದೆ, ಪೂರ್ವೀ ಹಿಂದಿ ಅವಧಿ ಮತ್ತು ಬಘೇಲೀ ಎಂಬ ಮತ್ತೆರಡು ಉಪಭಾಷೆಗಳನ್ನು ಹೊಂದಿದೆ. ಈ ಮೂರು ಉಪಭಾಷೆಗಳಿಗೆ ನಿಕಟ ಸಂಪರ್ಕವಿದ್ದರೆ, ಛತ್ತೀಸ್‌ಗಡೀ ತನ್ನದೇ ಆದ ಲಕ್ಷಣಗಳನ್ನು ಹೊಂದಿದೆ. ಗ್ರಿಯರ್ಸನ್ನನ ಅಭಿಪ್ರಾಯದಲ್ಲಿ ಛತ್ತೀಸ್‌ಗಡೀ ನೆರೆಯ ಮರಾಠಿ ಮತ್ತು ಒರಿಯ ಭಾಷೆಗಳ ಪ್ರಭಾವಕ್ಕೊಳಗಾಗಿ ಅನೇಕ ವ್ಯತ್ಯಾಸಗಳನ್ನು ಹೊಂದಿದ್ದರೂ ಅವಧಿ ಉಪಭಾಷೆಯೊಂದಿಗೆ ಅದಕ್ಕಿರುವ ನಿಕಟ ಸಂಪರ್ಕ ಸ್ಪಷ್ಟವಾಗಿದೆ.

ಛತ್ತೀಸ್ ಗಡೀಯಲ್ಲಿ ಈ ಉಪಭಾಷೆಗಳಿವೆ: ಸರ್ದೀ ಕೋರ್ವಾ, ಬೈಗಾನೀ, ಬಿನ್‌ಝ್ವಾರೀ, ಕಲರಿಗಾ, ಭುಲಿಯಾ. ಕೊನೆಯ ಎರಡು ಉಪಭಾಷೆಗಳನ್ನು ಮಾತ್ರ ಗ್ರಿಯರ್ಸನ್ನನ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯ ಪ್ರಕಟಗೊಳ್ಳುವವರೆಗೂ ಛತ್ತೀಸ್‌ಗಡೀಯ ಅಡಿಯಲ್ಲಿ ಸೇರಿಸಿರಲಿಲ್ಲ. ಅಲ್ಲದೆ ಹಲಬೀ, ಬಸ್ತರೀ, ಭುಂಜೆಯ ಮತ್ತು ಸದ್ರೀ ಕೊಲ್ ಎಂಬ ಛತ್ತೀಸ್‌ಗಡೀಗೆ ಸಂಬಂಧಿಸಿದವೆಂದು ನಂಬಲಾಗಿದ್ದ ನಾಲ್ಕು ಉಪಭಾಷೆಗಳು ಸಂಶೋಧನಾನಂತರ ಒರಿಯ ಮತ್ತು ಮರಾಠೀ ಭಾಷೆಗಳಿಗೆ ಸೇರಿದವುಗಳೆಂದು ತಿಳಿದುಬಂತು. ಛತ್ತೀಸ್‌ಗಡೀ ಪೂರ್ವೀ ಹಿಂದಿ ಭಾಷೆಯ ಧ್ವನಿ ನಿಯಮಗಳನ್ನು ಅನುಸರಿಸುತ್ತದೆ. ಆದರೂ ಮುಂದೆ ಹೇಳಿರುವ ಕೆಲವು ವೈಶಿಷ್ಟ್ಯಗಳನ್ನು ಕಾಣಬಹುದು. ಹರ್ ಎಂಬ ಪ್ರತ್ಯಯವನ್ನು ನಾಮಪದಕ್ಕೆ ಸೇರಿಸಿದಾಗ ಅದಕ್ಕೆ ಒಂದು ನಿರ್ದಿಷ್ಟವಾದ ಅರ್ಥ ಉಂಟಾಗುತ್ತದೆ. ಕೆಲವು ವೇಳೆ ಗುಣವಾಚಕ ಲಿಂಗಕ್ಕೆ ಅನುಗುಣವಾಗಿ ಬದಲಾಗುವುದಿಲ್ಲ. ಮನ್ ಎಂಬ ಪ್ರತ್ಯಯವನ್ನು ನಾಮಪ್ರಕೃತಿಗೆ ಸೇರಿಸಿದಾಗ ಅದು ಬಹುವಚನವಾಗುತ್ತದೆ. ಉದಾ : ಮನುಖ್ (ಮನುಷ್ಯ), ಮನುಖ್–ಮನ್ ಮನುಷ್ಯರು

ಛತ್ತೀಸ್‌ಗಡಿಯಲ್ಲಿ ಸಾಹಿತ್ಯರಚನೆಯಾಗಿಲ್ಲ. ಹಿಂದಿಯಲ್ಲಿರುವಂತೆ ಈ ಭಾಷೆಯಲ್ಲೂ ಆಡುಮಾತಿನಲ್ಲೇ ಉಳಿದುಕೊಂಡಿರುವ ಸತ್ಸಂಪ್ರದಾಯಗಳನ್ನು ಹೀರಾಲಾಲ್ ಮಹೋಪಾಧ್ಯಾಯ ಎಂಬುವರು ಈ ಭಾಷೆಗೆ ವ್ಯಾಕರಣವನ್ನು ಬರೆಯುವ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ. (ಜಿ.ಎಚ್.)

**ಛತ್ತೀಸ್ ಗಢ :** ಭಾರತದ ಒಂದು ರಾಜ್ಯ. ಭಾರತದ ಮಧ್ಯ ಭಾಗದಲ್ಲಿ ಪೂರ್ವಕ್ಕಿರುವ ಈ ರಾಜ್ಯವನ್ನು ಉತ್ತರಪ್ರದೇಶ, ಪಶ್ಚಿಮದಲ್ಲಿ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ, ದಕ್ಷಿಣದಲ್ಲಿ ಆಂಧ್ರಪ್ರದೇಶ ಪೂರ್ವದಲ್ಲಿ ಜಾರ್ಖಂಡ ಮತ್ತು ಒರಿಸ್ಸ ರಾಜ್ಯಗಳು ಸುತ್ತುವರೆದಿವೆ. 20,308 ಗ್ರಾಮಗಳು, 97 ಪಟ್ಟಣಗಳಿಂದ ಕೂಡಿದ್ದು 16 ಜಿಲ್ಲೆಗಳನ್ನೊಳಗೊಂಡಿರುವ ಈ ರಾಜ್ಯದ ವಿಸ್ತೀರ್ಣ 1,35,194.ಚ.ಕಿಮೀ ; ಜನಸಂಖ್ಯೆ 25,540,196.(2011)




**ಕೃಷಿ :** ಛತ್ತೀಸ್‌ಗಢ ರಾಜ್ಯದ ಒಟ್ಟು ಭೂಪ್ರದೇಶದಲ್ಲಿ ಶೇ 45 ಭಾಗ ಅರಣ್ಯ ಪ್ರದೇಶ ಅಂದರೆ 6,247.ಸಾವಿರ ಹೆಕ್ಟೇರು ಪ್ರದೇಶ ಸಮೃದ್ಧವಾದ ಹಸಿರು ಅರಣ್ಯವನ್ನೊಳಗೊಂಡಿದೆ. ಕಾಡುಪ್ರಾಣಿಗಳ ಸಂರಕ್ಷಣೆಗಾಗಿ 10 ವನ್ಯಮೃಗ ಧಾಮಗಳನ್ನೂ 3 ರಾಷ್ಟ್ರೀಯ ಉದ್ಯಾನವನಗಳನ್ನೂ ಹೊಂದಿದೆ. ರಾಜ್ಯದ ಶೇ.80 ಭಾಗ ಜನರು ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. 4799 ಸಾವಿರ ಹೆಕ್ಟೇರುಗಳಲ್ಲಿ ವಿವಿಧ ಬೆಳೆ ಬೆಳೆಯಲಾಗುತ್ತಿದೆ. ಬತ್ತ ಹೆಚ್ಚು ಬೆಳೆಯುವರು. ಗೋಧಿ, ನೆಲಗಡಲೆ, ಮುಸುಕಿನ ಜೋಳ ಮುಂತಾದವನ್ನು ಬೆಳೆಯುತ್ತಾರೆ. ಈ ರಾಜ್ಯದ ವೈಶಿಷ್ಟ್ಯವೆಂದರೆ ಸುಮಾರು 21,000 ಬತ್ತದ ವಿವಿಧ ತಳಿಗಳನ್ನು ಸಂರಕ್ಷಿಸಿಟ್ಟಿರುವುದು 123 ಸಾವಿರ ಹೆಕ್ಟೇರುಗಳಲ್ಲಿ ತೋಟದ ಬೆಳೆಗಳನ್ನೂ, ವಿವಿಧ ಫಲ, ತರಕಾರಿಗಳನ್ನೂ ಬೆಳೆಯುತ್ತಾರೆ.

**ನೀರಾವರಿ ಮತ್ತು ವಿದ್ಯುತ್ :** ನವಂಬರ್ 2000ದಲ್ಲಿ ಈ ರಾಜ್ಯದ 13.28 ಲಕ್ಷ ಹೆಕ್ಟೇರ್ ಭೂಪ್ರದೇಶ ನೀರಾವರಿಗೆ ಒಳಪಟ್ಟಿತ್ತು. ಇದಾದ ನಂತರ 2 ವರ್ಷ 9 ತಿಂಗಳ ಅವಧಿಯಲ್ಲಿ 1.25 ಲಕ್ಷ ಹೆಕ್ಟೇರ್ ಹೆಚ್ಚುವರಿ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಯಿತು. ಪೈರಿ, ತಂದುಲ ಮತ್ತು ಕೊದರ್ ಈ ಹಿರಿಯ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಮಹಾನದಿ ಜಲಾಶಯ ಯೋಜನೆ, ಹಾಸ್‌ದೇವ್, ಸೊನ್‌ದುರ್ ಮತ್ತು ಜಾಂಕ್ ಈ ಹಿರಿಯ ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. 30 ಮಧ್ಯಮ, 2017 ಕಿರಿಯ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. 6 ಮಧ್ಯಮ 416 ಕಿರಿಯ ಯೋಜನೆಗಳು ನಿರ್ಮಾಣದ ಹಂತದಲ್ಲಿವೆ.

ರಾಜ್ಯದ ವಿದ್ಯುತ್ ಉತ್ಪಾದನೆ 1,381.05 ಮೆ.ವಾ. ಇದ್ದು ಈಗ ವಿವಿಧ ಯೋಜನೆಯ ಮೂಲಕ ಶಕ್ತಿಮೂಲವನ್ನು ಹೆಚ್ಚುಗೊಳಿಸಲು ಪ್ರಯತ್ನ ನಡೆಯುತ್ತಿದೆ. ರಾಜ್ಯೋದಯಕ್ಕೆ ಮೊದಲು ಈ ಭಾಗದ ವಿದ್ಯುತ್ ವೆಚ್ಚ ಕೇವಲ 15 ಕೋಟಿಯಿತ್ತು. ಈಗ ವಾರ್ಷಿಕ ಈ ವೆಚ್ಚ 397 ಕೋಟಿಯಾಗಿದೆ. ರಾಜ್ಯದ ಶೇ. 93ರಷ್ಟು (19,720) ಗ್ರಾಮಗಳಿಗೆ ವಿದ್ಯುತ್ ಪೂರೈಸಲಾಗಿದೆ.

**ಕೈಗಾರಿಕೆ :** ಪ್ರಾಕೃತಿಕ ಸಂಪತ್ತು ಈ ರಾಜ್ಯದಲ್ಲಿ ಅರಣ್ಯ ರೂಪದಲ್ಲಿ, ವಿವಿಧ ಅಮೂಲ್ಯ ಖನಿಜಗಳ ರೂಪದಲ್ಲಿ ಹೇರಳವಾಗಿದೆ. ಜಲಸಂಪತ್ತೂ ಸಾಕಾದಷ್ಟಿದೆ. ಭಾರತ ಸರ್ಕಾರದ ಅನೇಕ ಕೈಗಾರಿಕಾ ಘಟಕಗಳು ಇಲ್ಲಿವೆ. ಅವುಗಳಲ್ಲಿ ಭಿಲಾಯ್ ಉಕ್ಕು ಕಾರ್ಖಾನೆ, ರಾಷ್ಟ್ರೀಯ ಖನಿಜಾಭಿವೃದ್ಧಿ ನಿಗಮ ಸೌತ್ ಈಸ್ಟರನ್ ಕೋಲ್ ಫೀಲ್ಡ್ ಲಿಮಿಟೆಡ್, ಎ.ಸಿ.ಸಿ. ಸಿಮೆಂಟ್, ಗುಜರಾತ್ ಅಂಬುಜ, ಗ್ರಾಸಿಂ, ಎಲ್ ಆ್ಯಂಡ್ ಟಿ, ಸಿಸಿಐ ಮತ್ತು ಫ್ರಾನ್ಸಿನ ಲಫಾರ್ಜ್ ಇತ್ಯಾದಿ ಕಬ್ಬಿಣ, ಉಕ್ಕು, ಸಿಮೆಂಟ್ ಕಾರ್ಖಾನೆಗಳಿವೆ. ಇವುಗಳ ಜೊತೆಗೆ ಆಹಾರ ಸಂಸ್ಕರಣೆ, ಉಡುಪು, ರಾಸಾಯನಿಕ, ಪ್ಲಾಸ್ಟಿಕ್, ಕಟ್ಟಡ ಕಟ್ಟುವ ವಸ್ತುಗಳು, ಅರಣ್ಯೋತ್ಪಾದಕ ವಸ್ತುಗಳು ಇತ್ಯಾದಿಗಳ ತಯಾರಿಕೆಯೂ ಬರುಬರುತ್ತಾ ಪ್ರತಿವರ್ಷವೂ ಹೆಚ್ಚುತ್ತ ಬಂದಿವೆ. ರಾಯ್‌ಪುರ ಜಿಲ್ಲೆಯಲ್ಲಿ 3,112 ಹೆಕ್ಟೇರುಗಳ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದ್ದು ಇಲ್ಲಿ 16,510 ಕೋಟಿ ರೂಪಾಯಿಗಳ ಬಂಡವಾಳ ಹೂಡಿರುವ 830 ವಿವಿಧ ಕೈಗಾರಿಕೆಗಳಿದ್ದು ಸುಮಾರು 25,000 ಮಂದಿಗೆ ಉದ್ಯೋಗ ದೊರಕಿಸಿಕೊಟ್ಟಿದೆ.

ಛತ್ತೀಸ್‌ಗಢ ರಾಜ್ಯ ಆಧುನಿಕ ಜಗತ್ತಿನ ಕಂಪ್ಯೂಟರ್ ಬಳಕೆಯನ್ನೂ ಅದರ ವೈಜ್ಞಾನಿಕ ಉಪಯೋಗವನ್ನೂ ಮಾಡಿಕೊಂಡಿದೆ. ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲೇ ಚಿಪ್ಸ್, (ಛತ್ತೀಸ್‌ಗಢ ಇನ್‌ಫೊಟೆಕ್ ಮತ್ತು ಬಯೊಟೆಕ್ ಪ್ರೊಮೋಷನ್ ಸೊಸೈಟಿ) ಸಂಸ್ಥಾಪಿಸಿದೆ. ಇದಕ್ಕೆ ಸಂಬಂಧಿಸಿದಂತೆ ರೂ. 50 ಕೋಟಿಯ ಯೋಜನೆಯನ್ನು ಜಾರಿಗೆ ತಂದಿದೆ.

**ಖನಿಜಗಳು:** ಕಲ್ಲಿದ್ದಿಲಿನ ಅಪಾರವಾದ ಶೇಖರಣೆ ಈ ರಾಜ್ಯದಲ್ಲಿದೆ. ಸುಣ್ಣಕಲ್ಲು, ಬಾಕ್ಸೈಟ್, ಡಾಲೊಮೈಟ್ ಮತ್ತು ಟಿನ್ ರಾಜ್ಯದ ಅನೇಕ ಕಡೆ ಸಿಗುತ್ತವೆ. ರಾಯಪುರದ ವಜ್ರದ ನಿಕ್ಷೇಪದಿಂದ ಉತ್ತಮವಾದ ಹೆಚ್ಚು ಬೆಲೆಬಾಳುವ ವಜ್ರಗಳು ದೊರಕುತ್ತವೆಂದು ತಿಳಿದುಬಂದಿದೆ.

ಚಿನ್ನ, ಕ್ವಾರ್ಟ್ಜ್, ಮೃದುಗಲ್ಲು, ಸ್ಟೇಟೈಟ್, ಫ್ಲೋರೈಟ್, ಕಾರಿಂಡಮ್, ಸೀಸ, ಲಿಪಿಡೊಲೈಟ್ ಮುಂತಾದ ಖನಿಜಗಳು ಸಿಗುತ್ತವೆ. ಈ ರಾಜ್ಯ ಒಂದರಲ್ಲೇ ಇಡೀ ದೇಶಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಟಿನ್ ಖನಿಜ ಇಲ್ಲಿ ದೊರೆಯುತ್ತದೆ. ಇಡೀ ಭಾರತದ ಸೇ. 20 ಭಾಗ ಉಕ್ಕು ಮತ್ತು ಸಿಮೆಂಟ್ ಇಲ್ಲಿ ತಯಾರಾಗುವುದು. 2002–2003 ನೇ ಸಾಲಿನಲ್ಲಿ ರೂ. 41. ಬಿಲಿಯನ್ ಬೆಲೆಯ ಖನಿಜಗಳನ್ನು ಉತ್ಪಾದಿಸಲಾಗಿತ್ತು.

**ಸಂಪರ್ಕ ಸಾಧನಗಳು:** ರಾಜ್ಯದಲ್ಲಿ ಇರುವ ಒಟ್ಟು 35,388. 54 ಕಿ.ಮೀ ರಸ್ತೆ ಸಂಪರ್ಕದಲ್ಲಿ 1,827.30 ಕಿ.ಮೀ ರಾಷ್ಟ್ರೀಯ ಹೆದ್ದಾರಿ, 3611 ಕಿ.ಮೀ ರಾಜ್ಯ ಹೆದ್ದಾರಿ, 2118 ಕಿಮೀ. ಜಿಲ್ಲಾ ರಸ್ತೆಗಳೂ 27,566 ಕಿ.ಮೀ ಗ್ರಾಮೀಣ ರಸ್ತೆಗಳೂ ಸೇರಿವೆ. ಉತ್ತರ ದಕ್ಷಿಣವಾಗಿ ಎರಡು ಮಾರ್ಗಗಳು, ಪೂರ್ವಪಶ್ಚಿಮವಾಗಿ ನಾಲ್ಕು ನೇರ ಮಾರ್ಗಗಳ ಸಂಪರ್ಕಸುಗಮಕ್ಕೆ 2976. ಕಿ.ಮೀ ರಸ್ತೆಯನ್ನು ನಿರ್ಮಿಸಲಾಗಿದೆ. ರಾಜ್ಯದಲ್ಲಿ 1053. ಕಿ.ಮೀ ರೈಲು ಮಾರ್ಗವಿದೆ. ಭಿಲಾಸ್‌ಪುರ ರೈಲು ವೃತ್ತ 2003 ಏಪ್ರಿಲ್ ಒಂದರಿಂದ ಕಾರ್ಯಗತವಾಗಿದೆ. ರಾಯ್‌ಪುರ, ಭಿಲಾಸ್‌ಪುರ, ದುರ್ಗ, ರಾಗನಂದಗಾಂವ್, ರಾಯ್‌ಗರ್ ಮತ್ತು ಕೆಲಾರ್ಬ ಮುಖ್ಯ ರೈಲು ನಿಲ್ದಾಣಗಳು. ರಾಜಧಾನಿ ರಾಯ್‌ಪುರನಿಂದ

ದೆಹಲಿ, ನಾಗಪುರ, ಮುಂಬಯಿ, ಭುವನೇಶ್ವರ ಇಲ್ಲಿಗೆ ದಿನನಿತ್ಯ ವಿಮಾನ ಸಂಪರ್ಕವಿದೆ. ಬಿಲಾಸ್‌ಪುರ, ಭಿಲಾಯ್, ರಾಯ್‌ಗರ್, ಜಗದಲಪುರ, ಅಂಬಿಕಾಪುರ, ಕೊರ್ಬ, ಜಸ್‌ಪುರ್‌ನಗರ್ ಮತ್ತು ರಾಜನಂದಗಾಂವ್ ಇಲ್ಲೆಲ್ಲಾ ವಿಮಾನ ನಿಲ್ದಾಣಗಳಿವೆ.

**ಪ್ರವಾಸಿ ತಾಣಗಳು:** ಛತ್ತೀಸ್‌ಗಢ್ ರಾಜ್ಯದಲ್ಲಿ ಆಚರಿಸುವ ಸಂಭ್ರಮದ ಹಬ್ಬಗಳೆಂದರೆ ಪೊಲ, ನವಕ್ಕೆತ, ದಸರ, ದೀಪಾವಳಿ, ಹೋಳಿ ಮತ್ತು ಗೋವರ್ಧನ್ ಪೂಜಾ ಬಹು ಪ್ರಸಿದ್ಧವಾದವು. ಇವುಗಳ ಜೊತೆಗೆ ವಿದೇಶೀಯರನ್ನು ಆಕರ್ಷಿಸುವಂತಹ ಸುಂದರ ಪ್ರಾಕೃತಿಕ ತಾಣಗಳಿವೆ. ರಾಜ್ಯದಲ್ಲಿ ಅನೇಕ ಸ್ಥಳಗಳಲ್ಲಿ ಬಹು ಹಿಂದಿನ ಸುಂದರ ಸೌಧಗಳು, ಕೋಟೆ ಕಿಲ್ಲೆಗಳು ಇವೆ. ಆಕರ್ಷಕ ಕೆತ್ತನೆ ಕುಸುರಿಯ ಕೆಲಸವುಳ್ಳ ದೇವಾಲಯಗಳು, ಬೌದ್ಧಧರ್ಮದ ಕ್ಷೇತ್ರಗಳು, ಅರಮನೆಗಳು, ಜಲಪಾತಗಳು, ಗುಹೆಗಳು, ಕಲ್ಲಿನ ಮೇಲಿನ ಪುರಾತನ ಚಿತ್ರಗಳು, ವಿವಿಧ ಅರಣ್ಯ ಮೃಗಗಳು, ಬೆಟ್ಟ ಕಣಿವೆಗಳು ಇಲ್ಲಿವೆ. ಬಸ್ತಾರ್ ಜಿಲ್ಲೆ ಪ್ರವಾಸಿಗರ ಆಕರ್ಷಕ ಕೇಂದ್ರ.

ಚಿತ್ರಕೋಟೆ ಜಲಪಾತ–ಇಲ್ಲಿ ಇಂದ್ರಾವತಿ ನದಿ 30 ಮೀ ಧುಮುಕುವುದು. ಕುದುರೆಲಾಳದ ಆಕಾರವಾಗಿರುವ ಈ ಜಲಪಾತವನ್ನು ನಯಾಗರ ಜಲಪಾತಕ್ಕೆ ಹೋಲಿಸುವುದುಂಟು. ಕಾಂಗರ್‌ನದಿ 30ಮೀ. ಧುಮುಕಿ, ತೀರ್ಥಗರ್ ಜಲಪಾತವನ್ನುಂಟು ಮಾಡಿದೆ. ಕಾಂಗರ್‌ಘಾಟ್ ರಾಷ್ಟ್ರೀಯ ಉದ್ಯಾನವನ ಕೈಲಾಸ್ ಮತ್ತು ಕುಟುಂಬಸರ್ ಗುಹೆಗಳು ಬಹು ಆಕರ್ಷಕ. ಬಿಲಾಸ್‌ಪುರ ಜಿಲ್ಲೆಯ ರತ್ನಪುರದಲ್ಲಿರುವ ಮಹಾಮಾಯ ದೇವಾಲಯ, ಕುತ್‌ಘಾಟ್ ಜಲಪಾತ, ಮಲ್ಲಾಹಾರ್‌ನ ದಿಂಡನೇಶ್ವರಿದೇವಿ ದೇವಾಲಯ, ಅಚ್ನಕ್ ಮಾರ್‌ನ ಮೃಗಧಾಮ, ರಾಯ್‌ಪುರದ ಬಳಿ ಇರುವ ಉದಂತಿ ಮೃಗಧಾಮ, ಕೊರ್ಬ ಜಿಲ್ಲೆಯ ಪಾಲಿ ಮತ್ತು ಕೆಂಡೈ ಜಲಪಾತಗಳು, ಜಾನಿಗಿರ್ ಚಂಪಾದ ಶಬರಿ ದೇವಾಲಯ, ವಿಷ್ಣು ದೇವಾಲಯ, ಶಿವರಿನಾರಾಯಣದ ನರನಾರಾಯಣ ದೇವಾಲಯ ಮುಂತಾದವು ಪ್ರಸಿದ್ಧವಾದವು.

**ಈ ರಾಜ್ಯದ ಜಿಲ್ಲೆಗಳ ವಿವರ ಇಂತಿದೆ:**

| ಕ್ರಂ ಸಂ | ಜಿಲ್ಲೆ (ಚ.ಕಿ.ಮೀ) | ವಿಸ್ತಾರ (2001) | ಜನಸಂಖ್ಯೆ | ಆಡಳಿತಕೇಂದ್ರ ನಗರ |
|---|---|---|---|---|
| 1. | ಬಸ್ತಾರ | 17,016 | 13,02,253 | ಜಗದಲಪುರ |
| 2. | ಭಿಲಾಸ್‌ಪುರ | 8,569 | 19,93,042 | ಭಿಲಾಸ್‌ಪುರ |
| 3. | ದುರ್ಗ | 8,702 | 28,01,757 | ದುರ್ಗ |
| 4. | ರಾಯ್‌ಗರ್ | 6528 | 12,65,084 | ರಾಯ್‌ಗರ್ |
| 5. | ರಾಯ್‌ಪುರ | 13445 | 30,09,042 | ರಾಯ್‌ಪುರ |
| 6. | ರಾಜ್‌ನಂದ ಗಾಂವ್ | 8023 | 12,81,811 | ರಾಜ್‌ನಂದಗಾಂವ್ |
| 7. | ಸುರ್ಗುಜ | 16034 | 19,70,661 | ಅಂಬಿಕಾಪುರ |
| 8. | ಕಾರಿಯ | 59785,8 | 5,455 | ಬೈಕುಂಟಪುರ |
| 9. | ಜಷಪುರ | 64577,3 | 9,780 | ಜಷಪುರ |
| 10. | ಜಾನಗಿರ್ ಚಂಪಾ | 4467 | 13,16,140 | ಜಾನಗಿರ್ |
| 11. | ಕೊರ್ಬ | 5769 | 10,12,121 | ಕೊರ್ಬ |
| 12. | ಕಂಕರ್ | 6434 | 6,51,333 | ಕಂಕರ್ |
| 13. | ದಂತೆವರ | 15610 | 7,19,065 | ದಂತೆವರ |
| 14. | ಮಹ ಸಮುಂದ್ | 4963 | 8,60,176 | ಮಹಸಮುಂದ್ |
| 15. | ಧಾಮತರಿ | 408 | 17,03,569 | ಧಾಮತರಿ |
| 16. | ಕಬೀರ್‌ಧಾಮ್ (ಕವರ್ಧ) | 3958 | 5,84,667 | ಕಬೀರ್‌ಧಾಮ್ (ಕವರ್ಧ) |

ಛತ್ತೀಸ್‌ಗಢ ರಾಜ್ಯದ ರಾಯ್‌ಪುರದಲ್ಲಿರುವ ಪಂಡಿತ್ ರವಿಶಂಕರ್ ಶುಕ್ಲಾ (ಸುಕ್ಲ) ವಿಶ್ವವಿದ್ಯಾನಿಲಯ, ಭಿಲಾಸ್‌ಪುರದ ಗುರುಘಾಸಿದಾಸ್ ವಿಶ್ವವಿದ್ಯಾನಿಲಯ, ಮತ್ತು ರಾಯ್‌ಪುರದಲ್ಲಿರುವ ಇಂದಿರಾಗಾಂಧಿ ಕೃಷಿ ವಿಶ್ವವಿದ್ಯಾನಿಲಯ ಪ್ರಸಿದ್ಧವಾದವು.

ಛತ್ತೀಸ್‌ಗಢ ರಾಜ್ಯ ಪ್ರದೇಶ 1956ರಲ್ಲಿ ರೂಪುಗೊಂಡು ಮಧ್ಯಪ್ರದೇಶದಲ್ಲಿ ಸೇರಿತ್ತು. ಹಿಂದೆ ಈ ಪ್ರದೇಶವನ್ನು ದಕ್ಷಿಣ ಕೋಸಲ ರಾಜ್ಯವೆಂದು ಗುರುತಿಸಲಾಗುತಿತ್ತು. ಇದರ ಪ್ರಸ್ತಾಪ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಉಲ್ಲೇಖಿತವಾಗಿದೆ. ಸುಮಾರು 6 ರಿಂದ 12ನೆಯ ಶತಮಾನದ ಮಧ್ಯದಲ್ಲಿ ಶರಭಪುರಿಯವರು, ಪಾಂಡುವಸಿ, ಸೊಮವಂಸಿ, ಕಲಚುರಿ, ಮತ್ತು ನಾಗವಂಸಿ ಈ ಪ್ರದೇಶವನ್ನು ಆಳಿದರು. ಕಳಚುರಿ ಮನೆತನದವರು ಛತ್ತೀಸ್‌ಗಢ್‌ನ್ನು 980 ರಿಂದ 1791 ರವರೆಗೆ ಆಳಿದರು. ರತ್ನಪುರ ಹಿಂದೆ ರಾಜಧಾನಿಯಾಗಿತ್ತು. 1854ರಿಂದ ಬ್ರಿಟಿಷರ ಪ್ರವೇಶದಿಂದಾಗಿ ರಾಯ್‌ಪುರ ಪ್ರಾಮುಖ್ಯ ಪಡೆಯಿತು. ರಾಯಪುರ ಇದರ ರಾಜಧಾನಿ. 1904ರಲ್ಲಿ ಬಂಗಾಳದ ಸರ್ಗುಜದ ಪ್ರದೇಶವನ್ನು ಛತ್ತೀಸ್‌ಗಢಕ್ಕೆ ಸೇರಿಸಲಾಯಿತು. 1946 ರಲ್ಲಿ 'ಛತ್ತೀಸ್‌ಗಢ ಶೋಷಣಾವಿರೋಧಿ ಸಂಘ'ವು, ಠಾಕೂರ್ ಪ್ಯಾರೇಲಾಲ್ ಸಿಂಗ್ ನೇತೃತ್ವದಲ್ಲಿ ಸ್ಥಾಪನೆಯಾಯಿತು. ಜೊತೆಗೆ ಈ ಪ್ರದೇಶದ ರಾಜರು ತಮ್ಮ ಹಿತರಕ್ಷಣೆಗಾಗಿ "ರಿಯಾಸತಿ ಆಂದೋಲನ" ಪ್ರಾರಂಭಿಸಿದರು. 1992ರಲ್ಲಿ ಹರಿಠಾಕೂರ್ "ಛತ್ತೀಸ್‌ಗಢ ರಾಜ್ಯ ನಿರ್ಮಾಣ ಸರ್ವದಳೀಯ ಮಂಚ್" ಸ್ಥಾಪಿಸಿ ಸಂಘಟನೆಯನ್ನು ತಂದರು. ಶಂಕರ್ ಗುಹಾ ನಿಯೋಗಿ 'ಛತ್ತೀಸ್‌ಗಢ ಮುಕ್ತಿ ಮೋರ್ಚ' ಸ್ಥಾಪಿಸಿ ಪ್ರತ್ಯೇಕ ರಾಜ್ಯದ ಹೋರಾಟ ಬಲಪಡಿಸಿದರು. ಆದರೆ 1991ರಲ್ಲಿ ಅವರನ್ನು ಕೊಲ್ಲಲಾಯಿತು. ಮುಂದೆ 2000, ನವೆಂಬರ್ 1 ರಂದು ಇಂದಿನ ಛತ್ತೀಸ್‌ಗಢ ರಾಜ್ಯದ ಉದಯವಾಯಿತು. ಇದು ಭಾರತದ 26ನೇ ರಾಜ್ಯವಾಗಿ ಪ್ರಗತಿಯತ್ತ ಸಾಗುತ್ತಿದೆ.

(ಬಿ.ಎಸ್ ಎಚ್.; ಪಿ.ಜಿ.ಡಿ.)

**ಛತ್ರಿ :** ಮಳೆಯ ಹೊಡೆತದಿಂದ ರಕ್ಷಿಸಿಕೊಳ್ಳಲು ಇರುವಂಥ ಒಂದು ಕೈಸಾಧನ (ಅಂಬ್ರೆಲ). ಬಿಸಿಲಿನ ಬವಣೆಯಿಂದಲೂ ರಕ್ಷಿಸಿಕೊಳ್ಳಲು ಇದು ನೆರವಾಗುತ್ತದೆ. ಈ ಕಾರಣಕ್ಕೆಂದೇ ಛತ್ರಿಯನ್ನು ಉಪಯೋಗಿಸುತ್ತಿದ್ದುದರ ಬಗ್ಗೆ ಉಲ್ಲೇಖಗಳು ಪ್ರಾಚೀನ ಈಜಿಪ್ಟ್ ಮತ್ತು ಅಸ್ಸೀರಿಯದ ಪ್ರಾಚೀನ ರಾಜಧಾನಿ ನಿನವ–ಇವುಗಳ ಇತಿಹಾಸದಲ್ಲಿ ಕಾಣಬರುತ್ತವೆ. ಈಜಿಪ್ಪಿನ ಪ್ರಾಚೀನ ದೊರೆಗಳು ಛತ್ರಿಯಡಿಯಲ್ಲಿ ಸಿಂಹಾಸನಾ ರೂಢರಾಗಿರುವ ಅಂಶ ಪ್ರಾಚೀನ ಈಜಿಪ್ಷಿಯನ್ ಕಲೆಯಲ್ಲಿ ನಿರೂಪಿತವಾಗಿದೆ. ದೂರಪ್ರಾಚ್ಯ ಮುಂತಾದ ದೇಶಗಳಿಂದ ಛತ್ರಿಯನ್ನು ಕುರಿತಂತೆ ಸ್ವಾರಸ್ಯಕರ ವಿಚಾರಗಳು ತಿಳಿದುಬಂದಿವೆ. ರಾಜಮನೆತನದವರು ಮತ್ತು ಉನ್ನತ ಅಧಿಕಾರದಲ್ಲಿರುವವರು ಮಾತ್ರ ಛತ್ರಿಯನ್ನು ಬಳಸಬಹುದಾಗಿತ್ತು.

ಯುರೋಪಿನಲ್ಲಿ ಛತ್ರಿಯನ್ನು ಬಳಕೆಗೆ ತಂದ ಖ್ಯಾತಿ ಗ್ರೀಕರಿಗೆ ಸಲ್ಲುತ್ತದೆ. ಉತ್ಸವದ ದಿವಸಗಳಲ್ಲಿ ದೊಡ್ಡ ದೊಡ್ಡ ಛತ್ರಿಗಳನ್ನು ಉಪಯೋಗಿಸುತ್ತಿದ್ದ ಬಗ್ಗೆಯೂ ತಿಳಿದುಬಂದಿದೆ. ಬಿಸಿಲಿನ ಬೇಗೆಯಿಂದ ರಕ್ಷಣೆ ಪಡೆಯಲು, ಅಂದರೆ ನೆರಳನ್ನೀಯುವ ಒಂದು ಸಾಧನವಾಗಿ ಇದರ ಬಳಕೆ ಮೊದಲಿಗೆ ಇತ್ತು. ರೋಮನ್ನರು ಬಳಸುತ್ತಿದ್ದ ಛತ್ರಿಗೂ ಗ್ರೀಕರ ಛತ್ರಿಗೂ ಅಂಥ ವ್ಯತ್ಯಾಸವೇನೂ ಇರಲಿಲ್ಲ. ಮಳೆಯ ಹೊಡೆತದಿಂದ ರಕ್ಷಿಸಿಕೊಳ್ಳಲು ಛತ್ರಿಯನ್ನು ಬಳಸಿದವರಲ್ಲಿ ರೋಮನ್ನರೇ ಮೊಟ್ಟಮೊದಲಿಗರೆನ್ನಲಾಗಿದೆ. 12ನೆಯ ಶತಮಾನದ ಪ್ರಾರಂಭದಲ್ಲಿ ಚೀನೀಯರು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಛತ್ರಿಗಳನ್ನು ಬಳಸುತ್ತಿದ್ದುದು ತಿಳಿದುಬಂದಿದೆ. ಚೀನೀ ಸ್ತ್ರೀಯರು ಉಪಯೋಗಿಸುತ್ತಿದ್ದ ಛತ್ರಿಗೆ ಪ್ಯಾರಸಾಲ್ ಎಂದು ಕರೆಯುತ್ತಿದ್ದರು. ಇಂಥ ಛತ್ರಿಗಳು ಚಿಕ್ಕವಾಗಿಯೂ ಹಗುರವಾಗಿಯೂ ಇರುತ್ತಿದ್ದವು. ಉಡುಪಿಗೆ ಸರಿಹೊಂದುವಂಥ ವಿವಿಧ ವರ್ಣದ ಛತ್ರಿಗಳನ್ನು ರೋಮನ್ನರು ಮತ್ತು ಜಪಾನೀಯರು ಬಳಸುತ್ತಿದ್ದುದುಂಟು. ಇಂಥ ಛತ್ರಿಗಳನ್ನು ಪ್ರಪಂಚದ ಹಲವಾರು ಕಡೆ ಇಂದೂ ಬಳಸುವುದಿದೆ. ಉಡುಪಿನಲ್ಲಿ ವೈವಿಧ್ಯ ಕಂಡುಬಂದಂತೆಲ್ಲ ಛತ್ರಿಯ ವಿನ್ಯಾಸದಲ್ಲೂ ವೈವಿಧ್ಯ ಕಂಡುಬರುತ್ತಿದೆ.

ಮಧ್ಯಯುಗದಲ್ಲಿ ಛತ್ರಿಯ ಬಳಕೆ ಹೆಚ್ಚಾಗಿರಲಿಲ್ಲ. 16ನೆಯ ಶತಮಾನದ ಉತ್ತರಾರ್ಧದಲ್ಲಿ ಅದು ಮತ್ತೆ ಬಳಕೆಗೆ ಬಂದದ್ದು ಇಟಲಿಯಲ್ಲಿ. ಪೋಪ್‌ನಂಥ ಧರ್ಮಾಧಿಪತಿಗಳ ಸ್ಥಾನಮಾನ ಮತ್ತು ಅಧಿಕಾರದ ಸಂಕೇತವಾಗಿಯೂ ಛತ್ರಿಯನ್ನು ಬಳಸುವುದಿತ್ತು. 17ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ಛತ್ರಿಗಳು ಬಹಳ ಭಾರವಾಗಿದ್ದುವಲ್ಲದೆ ನೋಡಲೂ ಅಷ್ಟೇನೂ ಅಂದವಾಗಿರುತ್ತಿರಲಿಲ್ಲ. ಛತ್ರಿಯ ಮೇಲ್ಭಾಗದ ಹೊದಿಕೆ ಚರ್ಮದ್ದಾಗಿರುತ್ತಿತ್ತು. ಇಂಥ ಛತ್ರಿಯನ್ನು ಇಬ್ಬರು ಹೊತ್ತುಕೊಂಡು ಹೋಗಬೇಕಾಗುತ್ತಿತ್ತು. ಆದ್ದರಿಂದ ಛತ್ರಿಗೆ ಅಷ್ಟಾಗಿ ಬೇಡಿಕೆ ಇರಲಿಲ್ಲ. ಕಾಲಕ್ರಮೇಣ ಬಟ್ಟೆಯನ್ನು ಹೊದಿಕೆಯನ್ನಾಗಿ ಮಾಡಿ ಕೀಲುಕಡ್ಡಿಗಳಿಗೆ ತಂತಿಯನ್ನು ಬಳಸಲು ಪ್ರಾರಂಭಿಸಿದ ಮೇಲೆ ಹಗುರ ಛತ್ರಿಗಳಿಗೆ ಬೇಡಿಕೆ ಹೆಚ್ಚಾಯಿತು. ಉಕ್ಕಿನ ಕಡ್ಡಿಗಳನ್ನು ಮೊಟ್ಟಮೊದಲಿಗೆ 1850ರಲ್ಲಿ ಉಪಯೋಗಿಸುತ್ತಿದ್ದು ತಿಳಿದುಬಂದಿದೆ. 18ನೆಯ ಶತಮಾನದಲ್ಲಿ ಇಟಲಿ, ಫ್ರಾನ್ಸ್, ಬ್ರಿಟನ್, ಜರ್ಮನಿ ಮತ್ತು ನೆದರ್‌ಲೆಂಡ್ಸ್‌ಗಳಲ್ಲಿ ಛತ್ರಿಯ ಬಳಕೆ ಸಾಕಷ್ಟಿತ್ತು.

ಜಪಾನಿನಲ್ಲಿ ಅಲ್ಲಿನ ಗೇಷಾ ಯುವತಿಯರು ವೈವಿಧ್ಯಮಯ ಛತ್ರಿಗಳನ್ನು ಬಳಸುತ್ತಾರೆ.

ಭಾರತದಲ್ಲಿ ಛತ್ರಿಯ ಬಳಕೆಯನ್ನು ಕುರಿತಂತೆ ಅನೇಕ ಸಾಕ್ಷ್ಯಾಧಾರಗಳು ಸಿಕ್ಕುತ್ತವೆ. ಪುರಾಣಗಳ ಕಾಲದಲ್ಲಿ ಚಕ್ರವರ್ತಿಗಳು, ರಾಜಮಹಾರಾಜರುಗಳು ಶ್ವೇತಛತ್ರಸಹಿತವಾಗಿ ಸಿಂಹಾಸನಾರೂಢರಾಗಿರುತ್ತಿದ್ದುದರ ಬಗ್ಗೆ ಉಲ್ಲೇಖಗಳು ಹೇರಳವಾಗಿವೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಉತ್ಸವಗಳಲ್ಲಂತೂ ಅಲಂಕೃತ ಛತ್ರಿಗಳನ್ನು ಉಪಯೋಗಿಸುವುದು ಇಂದಿಗೂ ವಾಡಿಕೆ. ಕಂಚಿ, ಶ್ರೀರಂಗ, ಮಧುರೆ ಮುಂತಾದ ಯಾತ್ರಾಸ್ಥಳಗಳಲ್ಲಿ ದೇವರ

ವಿವಿಧ ಬಗೆಯ ಛತ್ರಿಗಳು

ಉತ್ಸವಗಳ ಸಮಯದಲ್ಲಿ ಪಟ್ಟೆಪಟ್ಟೆಯ ಬಣ್ಣದ ಬಟ್ಟೆಯನ್ನು ಹೊದಿಸಿರುವ ದೊಡ್ಡ ದೊಡ್ಡ ವರ್ತುಳಾಕಾರದ ಛತ್ರಿಯನ್ನು ಉತ್ಸವದ ಮುಂಭಾಗದಲ್ಲಿ ಹಿಡಿದು ಹೋಗುವುದಿದೆ. ಕೆಲವೊಂದು ಉತ್ಸವ ಸಂದರ್ಭಗಳಲ್ಲಿ ಸಾಮಾನ್ಯ ಕೊಡೆಯನ್ನೇ ಹೋಲುವ, ಆದರೆ ಕಿಂಕಾಪು ಬಟ್ಟೆಯನ್ನು ಹೊದಿಸಿ, ದಿವ್ಯರತ್ನಗಳನ್ನೂ ರೇಷ್ಮೆಯ ಕುಚ್ಚನ್ನೂ ಕಟ್ಟಿರುವ ಛತ್ರಿಗಳ ಉಪಯೋಗ ಉಂಟು. ವಾರಾಣಸಿ ಮುಂತಾದ ಸ್ಥಳಗಳಲ್ಲಿ ಕೆಲವು ಆಸ್ತಿಕ ಜನ ಗರಿ, ಅಡಕೆಪಟ್ಟೆಗಳಿಂದ ಮಾಡಿದ ದುಂಡನೆಯ ಛತ್ರಿಗಳನ್ನು ಬಳಸುವುದು ರೂಢಿಯಲ್ಲಿದೆ. ಇಂಥವನ್ನು ವಾರಾಣಸಿ ಕೊಡೆ, ಬನಾರಸ್ ಕೊಡೆ, ಕಾಶಿ ಕೊಡೆ ಎನ್ನುತ್ತಾರೆ. ಮಳೆ ಹೆಚ್ಚಾಗಿರುವ ಮಲೆನಾಡು ಪ್ರದೇಶಗಳಲ್ಲಿ ಓಲೆಗರಿಯ ಛತ್ರಿಗಳು ಇಂದಿಗೂ ಬಳಕೆಯಲ್ಲಿವೆ. ಅಜಂತದ ಗುಹಾ ದೇವಾಲಯಗಳಲ್ಲಿ ಕಂಡುಬರುವ ರಾಜಕುಮಾರ ರಾಜಕುಮಾರಿಯರ ಚಿತ್ರಗಳಲ್ಲಿ ಛತ್ರಿಯನ್ನು ಚಿತ್ರಿಸಿದ್ದಾರೆ. ಹಳೇಬೀಡಿನ ಹೊಯ್ಸಳ ಶಿಲ್ಪವೊಂದರಲ್ಲಿ (ನೃತ್ಯಸರಸ್ವತಿ) ಛತ್ರಿಯನ್ನು ಬಿಡಿಸಲಾಗಿದೆ.

ಇತ್ತೀಚೀಗೆ ನಾಗರಿಕತೆ, ಸಂಸ್ಕೃತಿ, ಆಚಾರ, ವ್ಯವಹಾರಗಳಲ್ಲಿ ಬದಲಾವಣೆ ಕಂಡುಬಂದು ಪರಿಸರಕ್ಕೆ ಹೊಂದುವಂಥ ಛತ್ರಿಗಳ ನಿರ್ಮಾಣ ಆಗಿದೆ. ಉಪಾಹಾರಗೃಹಗಳು, ಸಮುದ್ರತೀರದ ವಿಹಾರಸ್ಥಳಗಳು-ಇವೇ ಮುಂತಾದ ಸ್ಥಳಗಳಲ್ಲಿ ಬಳಸುವ ಛತ್ರಿಗಳು ದೊಡ್ಡವಾಗಿ ನಯನಮನೋಹರವಾಗಿರುತ್ತವೆ. ಮಕ್ಕಳಿಗೆಂದೇ ಮಾಡಿರುವ ಬಣ್ಣಬಣ್ಣದ ಹಾಗೂ ಬೇರೆಬೇರೆ ಕೈಪಿಡಿಗಳಿರುವ ಛತ್ರಿಗಳು ಬಳಕೆಯಲ್ಲಿವೆ. ತೀರ ಹಗುರವಾದ ಮತ್ತು ಮಡಿಸಿ ಕಿಸೆಯಲ್ಲಿಡಬಹುದಾದಂಥ ಛತ್ರಿಗಳೂ ಉಂಟು. ಅಭಿರುಚಿಗೆ ತಕ್ಕಂತೆ ಛತ್ರಿಗಳ ನಿರ್ಮಾಣವೂ ನಡೆಯುತ್ತಲಿದೆ. ಜನಸಾಮಾನ್ಯರು ಉಪಯೋಗಿಸುವ ಛತ್ರಿಗಳಲ್ಲಿ ಕಪ್ಪುಬಟ್ಟೆಯ ಹೊದಿಕೆ ಹಾಕಿರುವ ಛತ್ರಿಗಳೇ ಹೆಚ್ಚು. ಲಂಡನ್, ಗ್ಲಾಸ್ಗೋ, ಮ್ಯಾಂಚೆಸ್ಟರ್, ಪ್ಯಾರಿಸ್ ಮತ್ತು ಲಯನ್ಸ್‌ಗಳಲ್ಲಿ ಛತ್ರಿಯನ್ನು ಹೆಚ್ಚಾಗಿ ತಯಾರಿಸುವುದಿದೆ. ಈಚೆಗೆ ಭಾರತ ತನ್ನ ಛತ್ರಿಗಳ ತನ್ನ ಅಗತ್ಯಗಳನ್ನು ತಾನೇ ಪೂರೈಸಿಕೊಳ್ಳುತ್ತಿದೆ. (ಡಿ.ಜಿ.)

**ಛತ್ರಿಮರ :** ಏರಾಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಒಂದೇ ಒಂದು ಉದ್ದನೆಯ ಕಾವಿನ ತುದಿಯಲ್ಲಿ 8-15 ಎಲೆಗಳು ಸುತ್ತಲೂ ಹರಡುವುದರಿಂದ ಇಡೀ ಗುಂಪು ಕೊಡೆಯಂತೆ ಕಾಣುತ್ತದೆ. ಇದರಿಂದಲೇ ಬಹುಶಃ ಇದಕ್ಕೆ ಛತ್ರಿಮರ ಎಂದು ಹೆಸರು ಬಂದಿರಬೇಕು. ಇದರ ಶಾಸ್ತ್ರೀಯ ಹೆಸರು ಶೆಫ್ಲೆರ ಆಕ್ಟಿನೋಫಿಲ. ಇದು ಸುಮಾರು 10ಮೀ. ಎತ್ತರಕ್ಕೆ ಬೆಳೆಯುವ ನಿತ್ಯಹಸಿರು ಮರ. ಹೂಗಳು ಕೆಂಪು ಬಣ್ಣದವು. ಕಾಯಿಗಳು ಕಪ್ಪು. ಛತ್ರಿಮರವನ್ನು ಬೀಜಗಳಿಂದ ಇಲ್ಲವೆ ಕಾಂಡತುಂಡುಗಳಿಂದ ಬೆಳೆಸಬಹುದು. (ಎಂ.ಎಚ್.ಎಂ.)

**ಛಾಂದೋಗ್ಯೋಪನಿಷತ್ತು :** ಪ್ರಧಾನ ಉಪನಿಷತ್ತುಗಳಲ್ಲಿ ಒಂದು. ಇದು ಅತ್ಯಂತ ಪ್ರಾಚೀನವಾದುದೆಂದು ಪರಿಗಣಿತವಾಗಿದೆ. ಸಾಮವೇದದ ಗೌತಮ ಶಾಖೆಗೆ ಸೇರಿದೆ. ಅರ್ಥಗಾಂಭೀರ್ಯ, ಪ್ರಾಚೀನತೆ, ಬ್ರಹ್ಮಜ್ಞಾನ ಪ್ರತಿಪಾದನೆ-ಈ ದೃಷ್ಟಿಗಳಿಂದ ಬಹಳ ಪ್ರೌಢವೂ ಪ್ರಮೇಯಬಹುಲವೂ ಆಗಿದೆ. ಇದರಲ್ಲಿ ಎಂಟು ಅಧ್ಯಾಯಗಳು. ಒಂದೊಂದು ಅಧ್ಯಾಯದಲ್ಲಿ ಅನೇಕ ಖಂಡಗಳು ಇವೆ. ಒಂದೊಂದು ಖಂಡದಲ್ಲೂ ಹಲವಾರು ಗದ್ಯಮಂತ್ರಗಳಿವೆ. ಈ ಖಂಡಗಳು ಬೇರೆಬೇರೆ ವಿಷಯಗಳನ್ನು ವಿವೇಚಿಸುವುದರಿಂದ ಇವು ಬೇರೆ ಬೇರೆ ಕಾಲಕ್ಕೆ ಸೇರಿರಬಹುದೆಂದು ವಿಮರ್ಶಕರ ಅಭಿಪ್ರಾಯ. ಗೃಹಸ್ಥ ಜೀವನವು ಬ್ರಹ್ಮಲೋಕಪ್ರಾಪ್ತಿಗೆ ವಿಹಿತಮಾರ್ಗವೆಂದು ಕೊನೆಯ ಖಂಡದಲ್ಲಿ ಹೇಳಿರುವುದರಿಂದ ಯುಗಾದಿಗಳ ಪ್ರಾಧಾನ್ಯ ತಪ್ಪುವುದಕ್ಕೆ ಮುಂಚೆಯೇ ಇದು ಸಂಕಲಿತವಾಗಿರಬೇಕು. ಪಶುಹಿಂಸೆಯೂ ಅನುಮೋದಿತವಾಗಿದೆ. ಆಚಾರ್ಯಪರಂಪರೆಯನ್ನೂ ಸಂಗ್ರಹವಾಗಿ ಕೊಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಹದಿಮೂರು ಖಂಡಗಳಿವೆ. ಪ್ರಣವ ಸ್ವರೂಪವನ್ನೂ ಸಾಮಗಾನದ ಗೂಢ ಸ್ವರೂಪವನ್ನೂ ತಿಳಿಸುವ ಈ ಅಧ್ಯಾಯದ ಮೊದಲನೆಯ ಖಂಡದಲ್ಲಿ ಉದ್ಗೀಥದ ಅವಯವವಾದ ಓಂಕಾರದ ಉಪಾಸನೆಯನ್ನು ನಿರೂಪಿಸಲಾಗಿದೆ. ಬ್ರಹ್ಮದ ಪ್ರತೀಕವಾದ ಓಂಕಾರ, ವರ್ಣಾತ್ಮಕವೂ ಉದ್ಗೀಥ ಶಬ್ದವಾಚ್ಯವೂ ಆಗಿದ್ದು ಪರಮಾತ್ಮೋಪಾಸನೆಗೆ ಶ್ರೇಷ್ಠ ಸಾಧನವಾಗಿದೆ. ಉದ್ಗಾತೃ ಹಾಡುವ ಓಂಕಾರವೇ ಉದ್ಗೀಥ. 2ನೆಯ ಖಂಡದಲ್ಲಿ ಉದ್ಗೀಥವನ್ನು ಮುಖ್ಯ ಪ್ರಾಣವೆಂದು ಉಪಾಸಿಸಬೇಕೆಂದು ತಿಳಿಸಲಾಗಿದೆ. ಪ್ರಾಣೋಪಾಸಕನನ್ನು ಭೇದಿಸಲು ಯಾರಿಗೂ ಸಾಧ್ಯವಿಲ್ಲ. ಅವನಿಗೆ ಪ್ರಾಣಾತ್ಮಭಾವವೆಂಬ ಅದೃಷ್ಟ ಫಲಪ್ರಾಪ್ತಿಯೆಂದು ಹೇಳಲಾಗಿದೆ. 3ನೆಯ ಖಂಡದಲ್ಲಿ ಆದಿತ್ಯ ದೃಷ್ಟಿಯಿಂದ ಉದ್ಗೀಥೋಪಾಸನೆಯನ್ನು ಹೇಳಲಾಗಿದೆ. 4ನೆಯ ಖಂಡದಲ್ಲಿ ಅಮೃತವೂ ಅಭಯವೂ ಆಗಿರುವ ಓಂಕಾರೋಪಾಸನೆಯನ್ನು ಮಾಡುವವನು ಅಮೃತನೂ ಅಭಯನೂ ಆಗುವನೆಂದು ತಿಳಿಸಿ ವಾಗಾದಿ ಪ್ರಾಣಗಳನ್ನು ರಶ್ಮಿಗಳನ್ನು ವಿಂಗಡಿಸಿಕೊಂಡು ಉಪಾಸಿಸಿದರೆ ಬಹುಪುತ್ರಲಾಭವಾಗುವುದೆಂದು 5ನೆಯ ಖಂಡದಲ್ಲಿ ತಿಳಿಸಲಾಗಿದೆ. 6ನೆಯ ಖಂಡದಲ್ಲಿ ಸರ್ವಫಲ ಸಂಪತ್ತಿಗಾಗಿ ಉದ್ಗೀಥದ ಉಪಾಸನೆಯನ್ನು, 7ನೆಯ ಖಂಡದಲ್ಲಿ ಆದಿತ್ಯಚಕ್ಷು ಎಂದರೆ ಪುರುಷನ ದೃಷ್ಟಿಯಿಂದ ಓಂಕಾರದ ಉಪಾಸನೆಯನ್ನು ಹೇಳಿ, ಮತ್ತೊಂದು ಉಪಾಸನೆಯನ್ನು ಆಖ್ಯಾಯಿಕಾ ರೂಪದಿಂದ 8-9 ಖಂಡಗಳಲ್ಲಿ ಹೇಳಿದೆ. 10 ಮತ್ತು 11ನೆಯ ಖಂಡಗಳು ಪ್ರಸಾವ, ಪ್ರತಿಹಾರ ಎಂಬ ನಾಮಭಕ್ತಿಗಳ ಉಪಾಸನೆಯನ್ನೂ ಪ್ರಾಣ, ಆದಿತ್ಯ, ಅನ್ನ ಎಂಬ ದೃಷ್ಟಿಗಳಿಂದ ಇದನ್ನು ಹೇಗೆ ಮಾಡಬೇಕೆಂಬುದನ್ನೂ ಹೇಳಿದೆ. ದೇವತೆಗಳ ರೂಪದಲ್ಲಿರುವ ನಾಯಿಗಳಿಗೆ ಗೋಚರವಾದ ಶಾವ-ಉದ್ಗೀಥಗಳು ಅನ್ನಲಾಭಕ್ಕೋಸ್ಕರ ಉಪಾಸಿಸುವುದನ್ನು 12ನೆಯ ಖಂಡದಲ್ಲಿಯೂ 13ನೆಯ ಖಂಡದಲ್ಲಿ ಸ್ತೋಭಾಕ್ಷರ ವಿಷಯಕವಾದ ಬೇರೆಬೇರೆ ಉಪಾಸನೆಗಳನ್ನೂ ಒಟ್ಟುಗೂಡಿಸಿ ಹೇಳಿದೆ.

2ನೆಯ ಅಧ್ಯಾಯದಲ್ಲಿ ಸಮಸ್ತ ಸಾಮವನ್ನೂ ಅದರ ವಿಷಯವಾದ ಉಪಾಸನೆಗಳನ್ನೂ ಉಪದೇಶಿಸಲಾಗಿದೆ. ವಿಶ್ವವೇ ಸಾಮವೆಂದು ಸಾರಿ ಪಂಚವಿಧ ಸಪ್ತವಿಧ ಸಾಮೋಪಾಸನೆಯನ್ನು ಬೋಧಿಸಲಾಗಿದೆ. ಇದರಲ್ಲಿ 24 ಖಂಡಗಳಿವೆ. ಸಮಸ್ತ ಅವಯವಗಳಿಂದ ಕೂಡಿದ ಸಾಮದಲ್ಲಿ ಸಾಧುದೃಷ್ಟಿಯನ್ನು ವಿಧಿಸಿರುವುದು ಮೊದಲ ಖಂಡದ ತಾತ್ಪರ್ಯ. 2ನೆಯ ಖಂಡದಿಂದ 7ನೆಯ ಖಂಡದವರೆಗೂ ಸಾಮದ ಪಂಚಾವಯವಗಳಾದ ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ, ನಿಧನ-ಇವುಗಳನ್ನು ಪೃಥಿವ್ಯಾದಿ ಲೋಕದೃಷ್ಟಿಯಿಂದಲೂ ಪುರೋವಾಕಾದಿ ವೃಷ್ಟಿಯಿಂದಲೂ ಮೇಘವೇ ಮೊದಲಾದ ನೀರಿನ ದೃಷ್ಟಿಯಿಂದಲೂ ವಸಂತಾದಿ ಋತು ದೃಷ್ಟಿಯಿಂದಲೂ ಆಡು ಕುರಿ ಮೊದಲಾದ ಪಶುದೃಷ್ಟಿಯಿಂದಲೂ ಪ್ರಾಣದೃಷ್ಟಿಯಿಂದಲೂ ಉಪಾಸಿಸಬೇಕೆಂದು ವಿಧಿಸಲಾಗಿದೆ. ಸಾಮದ ಪಂಚವಿಧಕ್ಕೆ ಆದಿ ಉಪದ್ರವಗಳನ್ನು ಸೇರಿಸಿ ಸಪ್ತವಿಧ ಸಾಮವನ್ನು ವಾಕ್ ದೃಷ್ಟಿಯಿಂದ ಉಪಾಸಿಸಬೇಕೆಂದು 8ನೆಯ ಖಂಡದಲ್ಲಿ ತಿಳಿಸಲಾಗಿದೆ. ಆದಿತ್ಯವನ್ನೇ ಸಮಸ್ತ ಸಾಮದಲ್ಲಿ ಅಭ್ಯಾಸ ಮಾಡಿಕೊಂಡು ಉಪಾಸಿಸಬೇಕೆಂದು 9ನೆಯ ಖಂಡದಲ್ಲಿ ಹೇಳಿ 21 ಅಕ್ಷರಗಳ ಉಪಾಸನೆಯ ಮೂಲಕ ಮೃತ್ಯುವನ್ನು ಪಡೆದು ಅವುಗಳಿಗಿಂತ ಅತಿರಿಕ್ತವಾದ ಅಕ್ಷರದ ಮೂಲಕ ಆದಿತ್ಯರೂಪಿಯಾದ ಮೃತ್ಯುವನ್ನು ಅತಿಕ್ರಮಿಸಬೇಕೆಂದು ತಿಳಿಸಲಾಗಿದೆ. ಇದು 10ನೆಯ ಖಂಡದ ವಿಷಯ. ಮನಸ್ಸು, ವಾಕ್, ಚಕ್ಷು, ಶ್ರೋತ್ರ, ಪ್ರಾಣ-ಇವುಗಳ ದೃಷ್ಟಿಯಿಂದ ಗಾಯತ್ರ ಸಾಮವನ್ನು ಉಪಾಸಿಸಬೇಕೆಂದು 11ನೆಯ ಖಂಡದಲ್ಲಿಯೂ ಮಂಡನಧೂಮ, ಜ್ವಾಲೆ, ಅಂಗಾರ, ಉಪಶಾಂತಿ, ಸಂಶಾಂತಿ ಇವುಗಳ ದೃಷ್ಟಿಯಿಂದ ರಥಂತರ ಸಾಮವನ್ನು ಉಪಾಸಿಸಬೇಕೆಂದು 12ನೆಯ ಖಂಡದಲ್ಲಿಯೂ ಹೇಳಿದೆ. 13ರಲ್ಲಿ ಉಪಮಂತ್ರಣಾದಿಗಳ ದೃಷ್ಟಿಯಿಂದ ವಾಮದೇವ್ಯಸಾಮವನ್ನು ಉಪಾಸಿಸಬೇಕೆಂದು ಹೇಳಿದೆ. ಆದಿತ್ಯಾದಿ ದೃಷ್ಟಿಯಿಂದ, ಅಭ್ರಾದಿ ದೃಷ್ಟಿಯಿಂದ, ವಸಂತಾದಿ ದೃಷ್ಟಿಯಿಂದ, ಪೃಥಿವ್ಯಾದಿ ದೃಷ್ಟಿಯಿಂದ, ಆಡು ಮೊದಲಾದ ದೃಷ್ಟಿಯಿಂದ ಲೋಮ, ಅಗ್ನಿ, ತ್ರಯೀವಿದ್ಯಾ- ಈ ದೃಷ್ಟಿಗಳಿಂದ, ಕ್ರಮವಾಗಿ ಬೃಹತ್ತು, ವೈರೂಪ, ವೈರಾಜ, ಶಕ್ವರೀ, ರೇವತೀ, ಯಜ್ಞಾಯಜ್ಞ, ರಾಜ, ಸಾಮಸಮುದಾಯ. ಈ ಸಾಮಗಳ, ಸರ್ವಾತ್ಮಕ ಸಾಮೋಪಾಸನೆಯನ್ನು 14 ರಿಂದ 21 ಖಂಡಗಳವರೆಗೂ ವಿಧಿಸಲಾಗಿದೆ. ಗಾನ ವಿಶೇಷಾದಿ ಸಂಪತ್ತಿಯನ್ನು ಉಪದೇಶಿಸಿರುವುದು 22ನೆಯ ಖಂಡದಲ್ಲಿ. 23ರಲ್ಲಿ ಓಂಕಾರೋಪಾಸನೆಯನ್ನು ವಿಧಿಸಿದೆ. ಈ ಅಧ್ಯಾಯದ ಕೊನೆಯ ಖಂಡದಲ್ಲಿ ಪುನಃ ಯಜ್ಞಾಂಗವಾದ ಸಾಮ, ಹೋಮ, ಮಂತ್ರ, ಉತ್ಥಾನ-ಇವುಗಳನ್ನು ಉಪದೇಶಿಸಲಾಗಿದೆ. ಇವೆಲ್ಲ ವಿಶಿಷ್ಟ ಫಲಪ್ರಾಪ್ತಿಗಾಗಿ.

3ನೆಯ ಅಧ್ಯಾಯದಲ್ಲಿ 19 ಖಂಡಗಳಿವೆ. ಮೊದಲನೆಯ 11 ಖಂಡಗಳಲ್ಲಿ ಮಧುವಿದ್ಯೆಯನ್ನು ನಿರೂಪಿಸಲಾಗಿದೆ. ಆದಿತ್ಯನೇ ದೇವಮಧು, ಅವನೇ ಆತ್ಮವೆಂದು ಸಾರಿ, ಸರ್ವಪ್ರಾಣಿಗಳ ಕರ್ಮಫಲಸ್ವರೂಪನಾದ ಅವನ ಉಪಾಸನೆ ಸರ್ವಪುರುಷಾರ್ಥಗಳಿಗಿಂತಲೂ ಶ್ರೇಷ್ಠತಮ ಫಲವುಳ್ಳದ್ದೆಂದು ಹೇಳಿ ಅದನ್ನು ವಿಧಿಸಲಾಗಿದೆ. ಆದಿತ್ಯ ಪ್ರಾಣಿಸಮೂಹಗಳಿಗೆ ಕರ್ಮಫಲಗಳನ್ನು ಅನುಗ್ರಹಿಸಿ ಅವು ಕ್ಷಯಿಸಿದ ಅನಂತರ, ತನ್ನಲ್ಲಿಯೇ ಉಪಹರಿಸಿಕೊಂಡು ತನ್ನ ಸ್ವರೂಪವಾದ ಬ್ರಹ್ಮದಲ್ಲಿ ನಿಲ್ಲುತ್ತಾನೆ. 12-13ನೆಯ ಖಂಡಗಳು ಗಾಯತ್ರೀ, ಬ್ರಹ್ಮೋಪಾಸನೆಯನ್ನು ಒಳಗೊಂಡಿವೆ. ಇದಕ್ಕೆ ಅನೇಕ ಕಾರಣಗಳನ್ನು ಕೊಡಲಾಗಿದೆ. ಪೂರ್ಣವೂ ಅವಿನಾಶಿಯೂ ಆದ ಬ್ರಹ್ಮವನ್ನು ಹೃದಯಾಕಾಶದಲ್ಲಿ ಧ್ಯಾನಿಸಿ ಉಪಾಸಿಸಬೇಕು. 14ನೆಯ ಖಂಡದಲ್ಲಿ ಶಾಂಡಿಲ್ಯವಿದ್ಯೆ ಉಪವರ್ಣಿತವಾಗಿದೆ. ಅತ್ಯಂತ ಅಣು ಪರಿಮಾಣದವನೂ ವಿಭುವೂ ಆಗಿ, ಹೃದಯ ಪುಂಡಲೀಕದಲ್ಲಿರುವ ತನ್ನ ಆತ್ಮನೇ ಬ್ರಹ್ಮ, ಇವನನ್ನೇ ನಾನು ಸೇರುತ್ತೇನೆ-ಎಂದು ಈಶ್ವರಭಾವವನ್ನು ಹೊಂದುವುದೇ ಶಾಂಡಿಲ್ಯನ ಉಪದೇಶ. 15ನೆಯ ಖಂಡದಲ್ಲಿ ವೀರಪುತ್ರನ ದೀರ್ಘಾಯುಷ್ಯಕ್ಕೋಸ್ಕರ ಕೋಶವಿದ್ಯೆಯನ್ನು ಉಪದೇಶಿಸಿ ಪುತ್ರಪೌತ್ರರಿಂದ ಕೂಡಿರುವ ದೀರ್ಘಜೀವನಕ್ಕಾಗಿ ಪುರುಷವಿದ್ಯೆಯನ್ನು 16-17ನೆಯ ಖಂಡಗಳಲ್ಲಿ ನಿರೂಪಿಸಲಾಗಿದೆ. 18, 19ನೆಯ ಖಂಡಗಳಲ್ಲಿ ಸಮಸ್ತ ಬ್ರಹ್ಮದೃಷ್ಟಿಯನ್ನು ಉಪಾಸಿಸುವುದನ್ನು ಮತ್ತು ಬ್ರಹ್ಮದ ಸ್ವರೂಪವನ್ನು ತಿಳಿಸಿದೆ.

4ನೆಯ ಅಧ್ಯಾಯದಲ್ಲಿ 17 ಖಂಡಗಳಿವೆ. ಮೊದಲು ಜಾನುಶ್ರುತಿ ಪೌತ್ರಾರ್ಯ ರಾಜನು ರೈಕ್ವನೆಂಬ ಗಾಡಿಯವನು ಬ್ರಹ್ಮಯಜ್ಞನೆಂದು ಕೇಳಿ, ಅವನಲ್ಲಿಗೆ ಹೋಗಿ, ಶ್ರದ್ಧೆ, ಅನ್ನದಾನ, ವಿನಯ–ಇವೇ ಜ್ಞಾನಕ್ಕೆ ಸಾಧನಗಳೆಂದು ಅವನಿಂದ ಅರಿತು, ಸಂವರ್ಗ ವಿದ್ಯೆಯ ಉಪದೇಶವನ್ನು ಪಡೆದ ಪ್ರಸಂಗವಿದೆ. 4ನೆಯ ಖಂಡದಲ್ಲಿ ಜಗತ್ತನ್ನು ಕಾರಣರೂಪದಿಂದ ಏಕವೆಂದು ಭಾವಿಸಿ, ಬ್ರಹ್ಮದೃಷ್ಟಿಯನ್ನು ಪಡೆಯುವ ಷೋಡಶ ವಿದ್ಯೆಯ ನಿರೂಪಣೆ ಇದೆ. ಸತ್ಯಕಾಮ ಜಾಬಾಲನು ಈ ವಿದ್ಯೆಯನ್ನು ಹಾರಿದ್ರುಮತನೆಂಬ ಆಚಾರ್ಯನಿಂದ ಪಡೆದನೆಂದು 9ನೆಯ ಖಂಡವು ತಿಳಿಸುತ್ತದೆ. 10ನೆಯ ಖಂಡದಿಂದ ಉಪಕೋಸಲ ಕಾಮಲಾಯನು ಸತ್ಯಕಾಮ ಜಾಬಾಲನಲ್ಲಿ ಬ್ರಹ್ಮಚರ್ಯದಿಂದ ಇದ್ದು ಅವನಿಂದ ಉಪದೇಶ ಪಡೆದ ವಿಷಯವಿದೆ. ಕೊನೆಯ ಎರಡು ಖಂಡಗಳಲ್ಲಿ ಕೆಲವು ಯಜ್ಞಧರ್ಮಗಳನ್ನು ಯಜ್ಞಫಲಪ್ರಾಪ್ತಿಯ ಮಾರ್ಗಗಳನ್ನು ನಿರ್ದೇಶಿಸಲಾಗಿದೆ.

5ನೆಯ ಅಧ್ಯಾಯದಲ್ಲಿ 1–2 ಖಂಡಗಳಲ್ಲಿ ಪ್ರಾಣೋಪಾಸನೆಯನ್ನೂ ಶ್ರೀಮಂತ ಕರ್ಮಗಳನ್ನೂ ವಿಧಿಸಲಾಗಿದೆ. 3ನೆಯ ಖಂಡದಿಂದ ಪಂಚಾಗ್ನಿ ವಿದ್ಯೆಯ ನಿರೂಪಣೆ ಇದೆ. ಶ್ವೇತಕೇತುವಿನ ತಂದೆಯಾದ ಗೌತಮನಿಗೆ ಪ್ರವಾಹಣ ರಾಜನು ಈ ವಿದ್ಯೆಯನ್ನು ಉಪದೇಶಿಸುತ್ತಾನೆ. 11ನೆಯ ಖಂಡದಿಂದ ವೈಶ್ವಾನರ ವಿದ್ಯೆಯ ನಿರೂಪಣೆ ಪ್ರಾರಂಭವಾಗಿದೆ. ಐದು ಜನ ಶ್ರೋತ್ರಿಯರು ಉದ್ದಾಲಕ ಆರುಣಿಯೊಂದಿಗೆ, ವೈಶ್ವಾನರಾತ್ಮವನ್ನು ಅರಿತುಕೊಳ್ಳಲು ಅಶ್ವಪತಿ ಕೈಕಯನ ಬಳಿಗೆ ಬಂದು ಪೂರ್ಣಾತ್ಮನ ಜ್ಞಾನವನ್ನು ಪಡೆದ ವೃತ್ತಾಂತದೊಂದಿಗೆ ಈ ಅಧ್ಯಾಯ ಮುಗಿದಿದೆ.

ತತ್ತ್ವೋಪದೇಶವೇ ಪ್ರಧಾನವಾಗಿರುವ 6ನೆಯ ಅಧ್ಯಾಯ ಈ ಉಪನಿಷತ್ತಿನಲ್ಲಿ ಅತಿ ಮುಖ್ಯವಾದುದು. ಇದರಲ್ಲಿ 16 ಖಂಡಗಳಿವೆ. ಉದ್ದಾಲಕ ಆರುಣಿಯು ತನ್ನ ಮಗನಾದ ಶ್ವೇತಕೇತುವಿಗೆ ಆತ್ಮವಿದ್ಯೆಯನ್ನು ಬೋಧಿಸುತ್ತಾನೆ. ದೃಷ್ಟಾಂತಗಳಿಂದ ಕಾರ್ಯಕಾರಣಗಳ ಅಭೇದವನ್ನು ತಿಳಿಸುತ್ತಾನೆ. ಒಂದನ್ನು ಅರಿತರೆ ಮತ್ತೊಂದನ್ನು ಅರಿತಂತೆಯೇ. ಸದ್ವಸ್ತುವೇ ಭೂತಗಳಲ್ಲಿ (ತೇಜಸ್ಸು, ನೀರು, ಪೃಥ್ವಿ) ಜೀವರೂಪದಿಂದ ಪ್ರವೇಶಿಸಿ ನಾಮರೂಪಗಳನ್ನು ವಿಂಗಡಿಸಿರುವುದರಿಂದ ಅವು ಭಿನ್ನವಾದ ಅಸ್ತಿತ್ವವನ್ನು ಹೊಂದಿಲ್ಲ. ತೇಜ, ಅಪ್ಪು, ಅನ್ನಾದಿಗಳು ಶರೀರೇಂದ್ರಿಯ ಸಂಘಾತವನ್ನು ಸೇರಿ ಹೇಗೆ ಆಧ್ಯಾತ್ಮಿಕ ತ್ರಿವೃತ್ಕರವಾಗುವುವೆಂದು ತಂದೆ ಮಗನಿಗೆ ಉಪದೇಶಿಸುತ್ತಾನೆ. ಮನಸ್ಸು ಸುಷುಪ್ತಿಯಲ್ಲಿ ಉಪರತಿಯನ್ನು ಹೊಂದಿದಾಗ ಜೀವನು ಪರಮಾತ್ಮ ಸ್ವರೂಪವನ್ನು ಪಡೆದುಕೊಳ್ಳುತ್ತಾನೆ. ಜಗತ್ತೆಲ್ಲವೂ ಆತ್ಮವಂತವಾಗಿದೆ. ಅದೇ ಸತ್ಯ. ಅದೇ ಆತ್ಮ. ಅದೇ ನೀನಾಗಿರುವೆ ಓ ಶ್ವೇತುಕೇತು! ಎಂದು ಉಪದೇಶಿಸುತ್ತಾನೆ. ಇದೇ ವಿಶ್ವವಿಖ್ಯಾತವಾದ 'ತತ್ತ್ವಮಸಿ' ಮಂತ್ರದ ಉಪದೇಶ. ಶ್ವೇತಕೇತುವಿನ ಒಂದೊಂದು ಸಂದೇಹವನ್ನೂ ದೃಷ್ಟಾಂತಗಳಿಂದ ಪರಿಹರಿಸುತ್ತಾನೆ. 15ನೆಯ ಖಂಡದಲ್ಲಿ ಮುಮುಕ್ಷುವು ಸದ್ವಸ್ತುವಿನಲ್ಲಿ ಸೇರುವ ಕ್ರಮವನ್ನು ತಿಳಿಸುತ್ತಾನೆ. ಅಜ್ಞಾನಿ ಸದ್ವಸ್ತುವನ್ನರಿತುಕೊಳ್ಳದೆ ಪುನಃ ಹಿಂತಿರುಗುತ್ತಾನೆ. ಇದನ್ನು ದೃಷ್ಟಾಂತದಿಂದ ತಿಳಿಸಿ, ಕರ್ತೃತ್ವ ಭೋಕ್ತೃತ್ವಗಳಲ್ಲಿ ಅಧಿಕಾರಿ ತಾನು ಎಂಬ ಜೀವಾತ್ಮ ವಿಜ್ಞಾನವನ್ನು ಹೋಗಲಾಡಿಸುವ ತತ್–ತ್ವಮ್–ಅಸಿ ಎಂಬ ವಾಕ್ಯದ ತಾತ್ಪರ್ಯವನ್ನು ಅರಿತು ಶ್ವೇತಕೇತು ಕೃತಾರ್ಥನಾಗುವಂತೆ ಮಾಡುತ್ತಾನೆ. ಶ್ರೀ ರಾಮಾನುಜರು ವ್ಯಾಖ್ಯಾನ ಮಾಡುತ್ತ, ಛಾಂದೋಗ್ಯ ಉಪನಿಷತ್ತು ಪ್ರಾರಂಭದಲ್ಲಿ ಸತ್ಯ ಏಕಮೇವಾ ದ್ವಿತೀಯವಾಗಿತ್ತು ಎಂದು ಹೇಳಿ ಅಗ್ನಿಯನ್ನು ಹೊರಡಿಸಿತು ಎಂದು ಮುಕ್ತಾಯ ಮಾಡಿರುವುದು ಸತ್ಯ ಎಂಬ ಏಕತತ್ತ್ವ ಜಗತ್ತಿನ ಉಪಾದಾನ ಮತ್ತು ನಿಮಿತ್ತ ಕಾರಣ ಎಂದು ಸಾರುತ್ತದೆ ಎಂದು ಸಿದ್ಧಾಂತ ಮಾಡುತ್ತಾರೆ. ಅದು ಯೋಚಿಸಿತು ಎಂಬ ಮಾತುಗಳು ಅಸತ್ಯವೇ ಪ್ರಪಂಚದ ಸಮಸ್ತ ದ್ರವ್ಯ ಮತ್ತು ಕಾರಣ ಎಂದು ಸಿದ್ಧಾಂತಪಡಿಸುತ್ತದೆ ಎಂದು ಹೇಳಿದ್ದಾರೆ. ದ್ವೈತಸಿದ್ಧಾಂತದಲ್ಲಿ ತತ್ತ್ವಮಸಿ ವಾಕ್ಯದ ಜೀವಾತ್ಮ ಪರಮಾತ್ಮಗಳ ಅಭಿನ್ನತೆಯನ್ನು ಖಂಡಿಸಲಾಗಿದೆ. ಉಪನಿಷದ್ವಾಕ್ಯವನ್ನು ಅತತ್ತ್ವಮಸಿ ಎಂದು ಬಿಡಿಸಿಕೊಂಡು ದ್ವೈತತತ್ತ್ವ ವ್ಯಾಖ್ಯಾನ ಮಾಡುತ್ತದೆ.

ಶಾಖೆಯನ್ನು ನೆಪ ಮಾಡಿಕೊಂಡು ಚಂದ್ರನನ್ನು ನಿರ್ದೇಶಿಸುವಂತೆ ನಾಮಾದಿ ತತ್ತ್ವಗಳನ್ನು ನೆಪ ಮಾಡಿಕೊಂಡು ಭೂಮ ಎಂಬ ಹೆಸರಿನ ನಿರತಿಶಯ ತತ್ತ್ವವನ್ನು ಉಪದೇಶಿಸಲು 7ನೆಯ ಅಧ್ಯಾಯ ಪ್ರಾರಂಭಿಸುತ್ತದೆ. ಏಕೆಂದರೆ ಸದ್ವಸ್ತುವಿಗಿಂತ ಈಚೆಯಿರುವ ತತ್ತ್ವಗಳನ್ನು ನಿರ್ದೇಶಿಸದೆ ಇದ್ದರೆ ಇನ್ನೂ ಯಾವುದೋ ಒಂದು ತತ್ತ್ವ ಅವಿಜ್ಞಾತ ವಾಗಿರಬಹುದೆಂಬ ಸಂದೇಹಕ್ಕೆ ಎಡೆ ಇದೆ. ನಾರದ ಸನತ್ಕುಮಾರರ ಆಖ್ಯಾಯಿಕೆ ಪರವಿದ್ಯೆಯ ಸ್ತುತಿಗಾಗಿ ಬಂದಿದೆ. ನಾರದ ಕಲಿತಿದ್ದೆಲ್ಲ ಕೇವಲ ನಾಮವೆಂದೂ ನಾಮವನ್ನೇ ಬ್ರಹ್ಮನೆಂದು ಉಪಾಸಿಸಬೇಕೆಂದೂ ಸನತ್ಕುಮಾರ ಹೇಳುತ್ತಾನೆ. ನಾಮಕ್ಕಿಂತ ವಾಕ್ಕು ಅಧಿಕವಾದುದು. ಹೀಗೆಯೇ ಮನಸ್ಸು, ಸಂಕಲ್ಪ, ಚಿತ್ತ, ಧ್ಯಾನ, ವಿಜ್ಞಾನ, ಅನ್ನ, ನೀರು, ತೇಜಸ್ಸು, ಆಕಾಶ, ಸ್ಮೃತಿ, ಆಸೆ, ಪ್ರಾಣ–ಇವು ಒಂದಕ್ಕಿಂತ ಒಂದು ಅಧಿಕವಾದುವೆಂದೂ ಪ್ರತಿಯೊಂದನ್ನೂ ಬ್ರಹ್ಮವೆಂದು ಉಪಾಸಿಸಬೇಕೆಂದೂ ಉಪದೇಶಿಸುತ್ತಾನೆ. ಎಲ್ಲಿ ಬೇರೊಂದನ್ನು ನೋಡುವುದಿಲ್ಲವೋ ಬೇರೊಂದನ್ನು ಕೇಳುವುದಿಲ್ಲವೋ ಬೇರೆ ಒಂದನ್ನು ಅರಿಯುವು ದಿಲ್ಲವೋ ಅದೇ ಭೂಮ ಎಂದು ಹೇಳಿ, ಅದು ಮೇಲೆ ಕೆಳಗೆ ಎಲ್ಲೆಲ್ಲಿಯೂ ಇದ್ದು, ಎಲ್ಲದರಲ್ಲಿಯೂ ನಾಮ ಎಂದು ಕರೆಯಿಸಿಕೊಳ್ಳತಕ್ಕದ್ದು, ಇದಕ್ಕಿಂತ ಬೇರೆಯಾಗಿ ಅರಿತುಕೊಳ್ಳುವವರು ಕ್ಷರವಾದ ಲೋಕಗಳಲ್ಲಿ ವಾಸಿಸುತ್ತಾರೆ ಎಂದು 25ನೆಯ ಖಂಡದಲ್ಲಿ ಹೇಳಿ ಮುಗಿಸುತ್ತಾನೆ. ಪ್ರಾಣದಿಂದ ಪ್ರಾರಂಭಿಸಿ ನಾಮದವರೆಗೆ ಇರುವ ವಸ್ತುಗಳ ಉತ್ಪತ್ತಿ ಪ್ರಳಯಗಳು ಆತ್ಮನಿಂದಲೇ ಉಂಟಾಗುತ್ತವೆ ಎಂದು ಅರಿತ ಜ್ಞಾನಿಗೆ ಸಮಸ್ತ ವ್ಯವಹಾರವೂ ತನ್ನ ಆತ್ಮನಿಂದಲೇ ಉಂಟಾಗುತ್ತಿರುವುದು. ಅವನಿಗೆ ಮೃತ್ಯು, ರೋಗ, ದುಃಖ ಇತ್ಯಾದಿ ಅನರ್ಥಗಳಿಲ್ಲ. ಅವನು ಎಲ್ಲವೂ ಆಗಿ ಎಲ್ಲವನ್ನೂ ಪಡೆದುಕೊಳ್ಳುತ್ತಾನೆ. ಆಹಾರಶುದ್ಧಿಯಿಂದ ರಾಗದ್ವೇಷಮೋಹಗಳೆಂಬ ದೋಷವಿಲ್ಲದೆ ವಿಷಯವಿಜ್ಞಾನದಿಂದ ಅಂತಃಕರಣಶುದ್ಧಿಯನ್ನು ಪಡೆದಾಗ ಭೂಮಾತ್ಮನಲ್ಲಿ ಧ್ರುವವಾದ ಸ್ಮೃತಿಯುಂಟಾಗುತ್ತದೆ. ಪಾರಮಾರ್ಥಿಕ ಅದ್ವಯಭಾವವನ್ನು ಪಡೆದು ವಿಮುಕ್ತನಾಗುತ್ತಾನೆ ಎಂದು ನಾರದನಿಗೆ ಉಪದೇಶಿಸಲಾಗಿದೆ.

8ನೆಯ ಅಧ್ಯಾಯದಲ್ಲಿ ಒಟ್ಟು 15 ಖಂಡಗಳಿವೆ. ಮೊದಲನೆಯ ಖಂಡದಲ್ಲಿ ದಹರ ವಿದ್ಯೆಯನ್ನು ಉಪದೇಶಿಲಾಗಿದೆ. ಬ್ರಹ್ಮಪುರವಾದ ನಮ್ಮ ಶರೀರದಲ್ಲಿ ದಹರ ಎಂದರೆ ಸಣ್ಣದಾದ ಹೃದಯಪದ್ಮವೆಂಬ ಒಂದು ಮನೆಯಿದೆ. ಇದರ ಸೂಕ್ಷ್ಮ ಆಕಾಶದಲ್ಲಿ ಅಶರೀರವೂ ಸೂಕ್ಷ್ಮವೂ ಸರ್ವಗತವೂ ಆಗಿರುವ ಬ್ರಹ್ಮ ಇದೆ. ಇಲ್ಲಿ ದ್ಯುಲೋಕ ಪೃಥ್ವಿಗಳು ಅಗ್ನಿವಾಯುಗಳು ಸೂರ್ಯಚಂದ್ರರು ಮತ್ತು ಏನೇನಿರುವುದೋ ಏನೇನಿಲ್ಲವೋ ಅವೆಲ್ಲವೂ ಅಂತರ್ಗತವಾಗಿವೆ. ಈ ಬ್ರಹ್ಮಕ್ಕೆ ಹುಟ್ಟಿಲ್ಲ, ಸಾವಿಲ್ಲ. ಸತ್ಯಕಾಮನೂ ಸತ್ಯಸಂಕಲ್ಪನೂ ಆದ ಆತ್ಮನನ್ನು ಯಾರು ಇಲ್ಲಿ ಉಪಾಸಿಸಿ ದೇಹತ್ಯಾಗ ಮಾಡುವರೋ ಅವರು ಸರ್ವಲೋಕಗಳಲ್ಲಿಯೂ ಸ್ವತಂತ್ರಗತಿಯನ್ನು ಪಡೆಯುತ್ತಾರೆ. ಎರಡನೆಯ ಖಂಡದಲ್ಲಿ ಇಂಥ ಉಪಾಸಕನು ಪಿತೃಲೋಕವೇ ಮೊದಲಾದ ಸಮಸ್ತ ಲೋಕಗಳಲ್ಲಿಯೂ ಆಯಾ ಲೋಕಗಳ ಭೋಗದಿಂದ ಸಂಪನ್ನನಾಗಿ ಮಹಿಮೆಯನ್ನು ಅನುಭವಿಸುತ್ತಾನೆ. ಪ್ರತಿ ರಾತ್ರಿಯೂ ಸುಷುಪ್ತಿ ಕಾಲದಲ್ಲಿ ದಹರಾಕಾಶವೆಂಬ ಸ್ವರ್ಗಲೋಕಕ್ಕೆ ತೆರಳಿ ಸದ್ವಸ್ತುವಿನೊಂದಿಗೆ ಪರಮಾತ್ಮ ಲಕ್ಷಣವಾದ ಜ್ಯೋತಿಯನ್ನು ಸೇರಿ ಸ್ವಸ್ವರೂಪದಲ್ಲಿ ಅಮೃತ, ಅಭಯ, ಬ್ರಹ್ಮವಾಗಿ ನಿಲ್ಲುತ್ತಾನೆಂದು ಮೂರನೆಯ ಖಂಡ ತಿಳಿಸುತ್ತದೆ. ಬ್ರಹ್ಮಲೋಕಕ್ಕೆ ಆತ್ಮನು ಸೇತುವಾಗಿದ್ದಾನೆ. ಅದನ್ನು ದಾಟಿದರೆ ತಮೋರೂಪವಾದ ರಾತ್ರಿಯೂ ಚೈತನ್ಯ ಜ್ಯೋತಿಯಾಗುತ್ತದೆ. ಬ್ರಹ್ಮಲೋಕವನ್ನು ಬ್ರಹ್ಮಚರ್ಯದಿಂದಲೇ ಪಡೆಯಬೇಕು. ಇದು ನಾಲ್ಕನೆಯ ಖಂಡದ ವಿಷಯ. ಬ್ರಹ್ಮಚರ್ಯ ಕರ್ತವ್ಯವನ್ನು ಯಜ್ಞಾದಿಗಳ ಮೂಲಕ ಹೊಗಳಿ ಇಷ್ಟ, ಸತ್‌ಪಾರಾಯಣ, ಮೌನ, ಉಪವಾಸ, ಅರಣ್ಯವಾಸ–ಇವೆಲ್ಲವೂ ಬ್ರಹ್ಮಚರ್ಯವೆನ್ನಿಸಿಕೊಂಡು ಆತ್ಮಲಾಭಕ್ಕೆ ಸಾಧನಗಳೆಂದು 5ನೆಯ ಖಂಡದಲ್ಲಿ ಹೇಳಲಾಗಿದೆ. 6ನೆಯದಾದ ನಾಡೀಖಂಡದಲ್ಲಿ ಜೀವನು ಸುಷುಪ್ತಿ ಕಾಲದಲ್ಲಿ ನಾಡಿಗಳಲ್ಲಿ ಪ್ರವೇಶಿಸಿ ಹೃದಯಾಕಾಶವನ್ನು ಪ್ರವೇಶಿಸುವನೆಂದೂ ಮರಣಕಾಲದಲ್ಲಿ ಸದ್ವಸ್ತುವಿನಿಂದ ಸಂಪನ್ನವಾದ ಉಪಾಸಕ ಓಂಕಾರದಿಂದ ಆತ್ಮವನ್ನು ಧ್ಯಾನಿಸುತ್ತ ಸುಷುಮ್ನಾ ನಾಡಿಯ ಮೂಲಕ ನೆತ್ತಿಯನ್ನು ಭೇದಿಸಿಕೊಂಡು ಆದಿತ್ಯನ ಮೂಲಕ ಬ್ರಹ್ಮಲೋಕವನ್ನು ಸೇರುತ್ತಾನೆಂದು ಹೇಳಲಾಗಿದೆ.

ಪ್ರಜಾಪತಿಯಿಂದ ಇಂದ್ರ ಆತ್ಮಜ್ಞಾನವನ್ನು ಪಡೆದ ವಿಷಯವನ್ನು 12ನೆಯ ಖಂಡದವರೆಗೂ ಹೇಳಿದೆ. ಅವನೊಂದಿಗೆ ಬಂದ ವಿರೋಚನ ಬಿಂಬದಿಂದ ಶರೀರವನ್ನೇ ಆತ್ಮನೆಂದು ತಿಳಿದು, ಉಪದೇಶವನ್ನು ಅರ್ಥಮಾಡಿಕೊಳ್ಳದೆ ಶರೀರಾತ್ಮ ವಾದವನ್ನು ಪ್ರಚಾರಮಾಡಿ ಅಸುರರನ್ನು ಸೇರಿದ. ಇಂದ್ರ ಆಚಾರ್ಯವಚನವನ್ನೇ ಧ್ಯಾನಿಸುತ್ತ ಸಂದೇಹದಿಂದ ಪುನಃ ಪುನಃ ಬಂದು ಒಟ್ಟು ನೂರೊಂದು ವರ್ಷಗಳ ಕಾಲ ಬ್ರಹ್ಮಚರ್ಯದಿಂದ ಪ್ರಜಾಪತಿಯಲ್ಲಿದ್ದು ಅವಸ್ಥಾತ್ರಯ ದೋಷದ ಸಂಬಂಧವಿಲ್ಲದ ಮತ್ತು ಅಪಹತ ಪಾಪ್ಮತ್ಯಾದಿ ಲಕ್ಷಣವುಳ್ಳ ಆತ್ಮನ ಸ್ವರೂಪದ ಉಪದೇಶವನ್ನು ಪಡೆದ. ದೇಹಾಭಿಮಾನದಿಂದ ಬಿಡುಗಡೆ ಹೊಂದಿದವ ಅಶರೀರ. ಉತ್ತಮ ಪುರುಷ. ವಿಶೇಷ ಜ್ಞಾನಚಕ್ಷುಸ್ಸೇ ಮೊದಲಾದ ಇಂದ್ರಿಯಗಳಿಂದ ಉಂಟಾಗುತ್ತಿದ್ದರೂ ಚೈತನ್ಯಸ್ವರೂಪವೂ ಆತ್ಮನದೇ ಎಂದು ತಿಳಿದ ಮುಕ್ತನು ಸರ್ವಾತ್ಮಭಾವವನ್ನು ಹೊಂದಿ ಸರ್ವಕಾಮಗಳನ್ನೂ ಪಡೆಯುತ್ತಾನೆ ಎಂದು ಉಪದೇಶಿಸಲಾಗಿದೆ. ಮುಂದಿನ ಖಂಡದಲ್ಲಿ ಶ್ಯಾಮಾಚ್ಛಬಲಂ ಪ್ರಪದ್ಯೇ ಎಂಬ ಪವಿತ್ರ ಮಂತ್ರವನ್ನು ಧ್ಯಾನಕ್ಕಾಗಿ ಹೇಳಿದೆ. ನಾಮರೂಪಗಳು ಯಾವುದರಲ್ಲಿ ಇವೆಯೋ ಅದು ಬ್ರಹ್ಮ, ಅಮೃತ, ಆತ್ಮ ಎಂದು 14ನೆಯ ಖಂಡದಲ್ಲಿ ಹೇಳಿದೆ. ಈ ಆತ್ಮಜ್ಞಾನವನ್ನು ಬ್ರಹ್ಮ ಪ್ರಜಾಪತಿಗೆ ಹೇಳಿದನೆಂದೂ ಅವನು ಮನುವಿಗೂ ಮನು ಮಾನವರಿಗೂ ಉಪದೇಶಿಸಿದನೆಂದು ಕೊನೆಯ ಖಂಡದಲ್ಲಿ ಹೇಳಿದೆ. ಯಜ್ಞಾದಿ ಕರ್ಮಗಳಿಗೂ ಫಲವಿದೆಯೆಂದೂ ಜ್ಞಾನಿಗಳು ಮಾಡುವ ಕರ್ಮಕ್ಕೂ ವಿಶಿಷ್ಟ ಫಲವಿದೆ ಯೆಂದೂ ಈ ಉಪನಿಷತ್ತು ಒಪ್ಪುತ್ತದೆ. (ಎಸ್.ಎಸ್.ಆರ್.)

**ಛಾಯಾ :** ಸೂರ್ಯನ ಪತ್ನಿ; ಸಂಜ್ಞೆಯ ಪ್ರತಿಬಿಂಬ. ರೈವತನ ಮಗಳು ರಾಜ್ಞಿಯನ್ನೂ ತ್ವಷ್ಟೃವಿನ ಮಗಳು ಸಂಜ್ಞೆಯನ್ನೂ ಪ್ರಭೆಯೆಂಬ ಮತ್ತೊಬ್ಬ ತರುಣಿಯನ್ನೂ ಸೂರ್ಯ ಮದುವೆಯಾಗಿದ್ದ. ರಾಜ್ಞಿ ರೇವತನನ್ನೂ ಪ್ರಭೆ ಪ್ರಭಾತನನ್ನೂ ಸಂಜ್ಞೆ ಮನು ಮತ್ತು ಯಮ, ಯಮುನೆಯೆಂಬ ತ್ರಿವಳಿ ಮಕ್ಕಳನ್ನೂ ಹೆತ್ತರು. ಸೂರ್ಯನ ದೇಹತಾಪವನ್ನು ತಾಳಲಾರದೆ ಸಂಜ್ಞೆ ತನ್ನ ಶರೀರದಿಂದ ತನ್ನಂತೆ ಇರುವ ಒಬ್ಬ ತರುಣಿಯನ್ನು ಸೃಜಿಸಿ, ಆಕೆಗೆ ಛಾಯೆಯೆಂದು ಹೆಸರಿಟ್ಟು ತನ್ನ ಪತಿಯೊಂದಿಗೆ ಸಂಸಾರ ಮಾಡಿಕೊಂಡಿರು ವಂತೆಯೂ ತನ್ನ ಮಕ್ಕಳನ್ನು ಮಾತೃವಾತ್ಸಲ್ಯದಿಂದ ಕಾಣುವಂತೆಯೂ ಗುಟ್ಟನ್ನು ರಟ್ಟು ಮಾಡದಂತೆಯೂ ಹೇಳಿ ತಪಸ್ಸಿಗೆ ಹೋದಳು. ಇತ್ತ ಸೂರ್ಯ ಛಾಯೆಯನ್ನು ಸಂಜ್ಞೆಯೆಂದೇ ತಿಳಿದ. ಛಾಯೆ ಸೂರ್ಯನಿಂದ ಮನುವಿನಂತೆಯೇ ಇರುವ ಸಾವರ್ಣಿ ಮನುವನ್ನೂ ಶನಿ ಮತ್ತು ತಪತಿಯರನ್ನೂ ಹೆತ್ತಳು. ಕ್ರಮೇಣ ಛಾಯೆ ಸಂಜ್ಞೆಯ ಮಕ್ಕಳನ್ನು ಅಸಡ್ಡೆ ಮಾಡತೊಡಗಿದಳು. ಇದನ್ನು ಸಹಿಸದ ಯಮ ತನ್ನ ಬಲಗಾಲನ್ನು ಎತ್ತಿ ತೋರಿಸಿ ಛಾಯೆಯನ್ನು ಹೆದರಿಸಿದ. ಆಗ ಛಾಯೆ 'ನಿನ್ನ ಕಾಲಲ್ಲಿ ಹುಳುಬಿದ್ದು ವಾಸನೆ ಹಿಡಿಯಲಿ' ಎಂದು ಶಾಪವಿತ್ತಳು. ಅನಂತರ ಯಮ ಸೂರ್ಯನಿಗೆ ಈ ವಿಚಾರ ತಿಳಿಸಿ ಛಾಯೆ ತನ್ನ ತಾಯಿಯಾಗಿರಲಾರಳೆಂದು ಹೇಳಿದ. ಸೂರ್ಯ ಹುಳುಬಿದ್ದ ಯಮನ ಕಾಲಿಗೆ ಪರಿಹಾರ ಹೇಳಿ, ಸಂಜ್ಞೆಯ ತಂದೆ ತ್ವಷ್ಟೃವನ್ನು ಕಂಡು ನಡೆದ ವೃತ್ತಾಂತವನ್ನು ತಿಳುಸಿದ. ತ್ವಷ್ಟೃ ವಾಸ್ತವಾಂಶವನ್ನು ಸೂರ್ಯನಿಗೆ ಹೇಳಿ ಸಂಜ್ಞೆ ಬೇಕಿದ್ದರೆ ತನ್ನ ಪ್ರಖರತೆಯನ್ನು ಕಡಿಮೆ ಮಾಡಿಕೊಳ್ಳಲು ಸೂಚಿಸಿದ. ಆಗ ಸೂರ್ಯ ತನ್ನ ಪ್ರಖರತೆಯನ್ನು ಕಡಿಮೆ ಮಾಡಿಕೊಳ್ಳಲು ಒಪ್ಪಿದ. ಸೂರ್ಯನ ದೇಹವನ್ನು ತ್ವಷ್ಟೃ ಕೊರೆದು ವಿಷ್ಣುವಿನ ಚಕ್ರ, ಶಿವನ ಶೂಲ ಹಾಗೂ ಇಂದ್ರನ ವಜ್ರಾಯುಧಗಳನ್ನು ನಿರ್ಮಿಸಿದ. ತನ್ನ ತೇಜಸ್ಸು ಕಡಿಮೆಯಾಗಲು ಸೂರ್ಯ ಉತ್ತರ ಕುರುಭೂಮಿಯಲ್ಲಿ ಅಶ್ವರೂಪದಲ್ಲಿ ಮೇಯುತ್ತಿದ್ದ ಸಂಜ್ಞೆಯನ್ನು ಕಂಡು ತಾನೂ ಅಶ್ವರೂಪ ತಾಳಿ ಆಕೆಯನ್ನು ಸೇರಿದ. ಆಗ ಸಂಜ್ಞೆ ಸೂರ್ಯನನ್ನು ಗುರುತಿಸಲಾಗದೆ ಪರಪುರುಷನೆಂದು ಭಾವಿಸಿ ಸೂರ್ಯನ ತೇಜಸ್ಸನ್ನು ಮೂಗಿನಿಂದ ಹೊರಬಿಟ್ಟಳು. ಆ ತೇಜಸ್ಸಿನಿಂದ ಹುಟ್ಟಿದವರೇ ಅಶ್ವಿನೀ ದೇವತೆಗಳು. ಅನಂತರ ಸಂಜ್ಞೆ ಸೂರ್ಯನನ್ನು ಗುರುತಿಸಿ ಪತಿಯ ಸಂಗಡ ತೆರಳಿದಳು. ಈ ವೃತ್ತಾಂತ ಮತ್ಸ್ಯಪುರಾಣದಲ್ಲಿ ಬಂದಿದೆ.

ಛಾಯಾಭಗವತಿ ಎಂಬುದು ಸೂರ್ಯನ ಪತ್ನಿ ಛಾಯಾದೇವಿಯ ದೇವಸ್ಥಾನವಿರುವ ಒಂದು ಕ್ಷೇತ್ರ. ಇದು ಕರ್ನಾಟಕದ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ನಾರಾಯಣಪುರದ ಹತ್ತಿರ ಕೃಷ್ಣಾನದಿಯ ದಂಡೆಯ ಮೇಲಿದೆ. ಕೃಷ್ಣಾನದಿ ಇಲ್ಲಿ ಅನೇಕ ಕವಲುಗಳಾಗಿ ಹರಿದಿದೆ. ಈ ನದಿಯ ಒಂದು ಸರಳು ದಡದಲ್ಲಿರುವ ಗುಡ್ಡವನ್ನು ಕೊರೆದು ಅಲ್ಲಿನ ಗುಹೆಯಲ್ಲಿ ಹೊಕ್ಕು ಹೊರಬರುತ್ತದೆ. ನದಿಯ ಪಾತ್ರ ಮೇಲ್ನೋಟಕ್ಕೆ ಚಿಕ್ಕದಾಗಿ ಸೌಮ್ಯವಾಗಿ ಕಂಡರೂ ಒಳಗೆ ಪ್ರವಾಹದ ಸೆಳೆತವಿದೆ. ಛಾಯಾಭಗವತಿಯ ಕೆಳಮಗ್ಗುಲಲ್ಲಿ ಎದುರಿನ ದಂಡೆಯ ಮೇಲೆ ಜಲದುರ್ಗವೆಂಬ ಪ್ರಾಚೀನ ಕೋಟೆಯಿದೆ. ಇದರ ಹತ್ತಿರ ಒಂದು ಜಲಪಾತವೂ ಇದೆ. ಒಟ್ಟಿನಲ್ಲಿ ಛಾಯಾಭಗವತಿ ನಿಸರ್ಗರಮಣೀಯ.

ಛಾಯಾಭಗವತಿಯ ದೇವಸ್ಥಾನ ಕಡಿದಾದ ನದೀತಟದಲ್ಲಿ ಗುಡ್ಡದ ಆಸರೆಯಲ್ಲಿದೆ. ಪ್ರಾತಃಸೂರ್ಯನ ಮೊದಲ ಕಿರಣಗಳು ಮೂರ್ತಿಯನ್ನು ಸ್ಪರ್ಶಿಸುವಂತೆ ಇದನ್ನು ಕಟ್ಟಲಾಗಿದೆ. ಛಾಯಾದೇವಿಗೆ ತನ್ನಿಂದಾದ ಅಪಚಾರವನ್ನು ಸರಿಪಡಿಸಲು ಸೂರ್ಯದೇವ ಆಕೆಯನ್ನು ಪ್ರತಿ ಪ್ರಾತಃಕಾಲ ಎಲ್ಲರಿಗಿಂತ ಮೊದಲು ಭೇಟಿಮಾಡುವುದಾಗಿ ಹೇಳಿದನಂತೆ. ಅದು ಈ ದೇಗುಲದಲ್ಲಿ ಸಿದ್ಧಿಸಿರುವುದನ್ನು ಕಾಣಬಹುದು.

ವೈಶಾಖಶುದ್ಧ ತದಿಗೆಯ ದಿನ ಇಲ್ಲಿ ಜಾತ್ರೆ ಸೇರುತ್ತದೆ. ಇದು ದುರ್ಗಮವಾದ ಕ್ಷೇತ್ರವಾದರೂ ಸಾವಿರಾರು ಜನ ಭಕ್ತರನ್ನು ತನ್ನೆಡೆಗೆ ಆಕರ್ಷಿಸುತ್ತದೆ. (ಜೆ.ಆರ್.ಪಿ.)

**ಛಾಯಾ ಗಡಿಯಾರ :** ಬಿಸಿಲು ವಸ್ತುವಿನ ಮೇಲೆ ಬಿದ್ದಾಗ ಉಂಟಾಗುವ ನೆರಳಿನ ವಿನ್ಯಾಸದ ಪರಿಶೀಲನೆಯಿಂದ ಹಗಲಿನ ವೇಳೆಯನ್ನು ಸ್ಥೂಲವಾಗಿ ಸೂಚಿಸಲು ಬಳಸುವ ಸಾಧನ (ಷ್ಯಾಡೋ ಕ್ಲಾಕ್). ಮಟ್ಟಸ ಬಯಲಿನಲ್ಲಿ ನೆಲಕ್ಕೆ ಲಂಬವಾಗಿ ಒಂದು ನೇರ ಕೋಲನ್ನು ಕುತ್ತಬೇಕು. ಸೂರ್ಯೋದಯದಿಂದ ಸೂರ್ಯಾಸ್ತಮಾನದವರೆಗೆ, ಪ್ರತಿ ದಿವಸವೂ, ಕೋಲಿನ ನೆರಳಿನ ವಿನ್ಯಾಸಗಳನ್ನು ಗುರುತಿಸಬೇಕು. ಆಗ, ಸೂರ್ಯನ ದೈನಂದಿನ ತೋರ್ಕೆ ಚಲನೆಗೂ ನೆರಳಿನ ವಿನ್ಯಾಸಗಳಿಗೂ ನೇರ ಸಂಬಂಧವಿರುವುದು ಗೊತ್ತಾಗುತ್ತದೆ. ಆದಿ ಮಾನವನ ಪ್ರಥಮ ನೈಸರ್ಗಿಕ ಗಡಿಯಾರ ಸೂರ್ಯನಾದ್ದರಿಂದ, ಸೂರ್ಯನನ್ನು ನೋಡಿ ಹೊತ್ತನ್ನು ಅಂದಾಜು ಮಾಡುವುದು (ಪ್ರಖರತೆಯ ಕಾರಣವಾಗಿ) ಬಲು ಕಷ್ಟವಾದ ವಿಧಾನವಾದ್ದರಿಂದ ನೆರಳಿನ ವಿನ್ಯಾಸವೇ ಕಾಲಮಾಪನೆಯ ಸೂಚಕವಾಯಿತು. ಛಾಯಾ ಗಡಿಯಾರ ಬಿಸಿಲಿನಲ್ಲಿದ್ದಾಗ ಮಾತ್ರ ಉಪಯುಕ್ತ. ಅಷ್ಟೇ. ಅದೂ ಸ್ಥೂಲ ಗಣನೆಯನ್ನು ಮಾತ್ರ ನೀಡಬಲ್ಲುದು.

**ಭಿನ್ನ ಛಾಯಾಗಡಿಯಾರಗಳು :** ಪ್ರಶ. ಪೂ. ಸುಮಾರು 1470ರಲ್ಲಿ ಈಜಿಪ್ಟಿನಲ್ಲಿ ಬಳಕೆಯಲ್ಲಿದ್ದ ಒಂದು ಛಾಯಾಗಡಿಯಾರದ ತತ್ತ್ವವನ್ನು **ಚಿತ್ರ (1)** ರಲ್ಲಿ ತೋರಿಸಿದೆ. ಅದರಲ್ಲಿ OA ಪಿರಮಿಡ್ ಆಕಾರದ 29.5 ಮೀ ಎತ್ತರದ ಒಂದು ಕಂಬ. ಅದನ್ನು ಮಟ್ಟಸ ನೆಲದ ಮೇಲೆ ನೆಲಕ್ಕೆ ಲಂಬವಾಗಿ ಹುಗಿದಿದೆ. ಸೂರ್ಯ ತನ್ನ ದೈನಂದಿನ



**ಚಿತ್ರ 1**

ಚಲನೆಯಲ್ಲಿ ಪೂರ್ವದಿಂದ (E) ಪಶ್ಚಿಮದೆಡೆಗೆ (W) ಸಾಗಿದಂತೆ (ಸೂರ್ಯಪಥವನ್ನು ಚಿತ್ರದಲ್ಲಿ ತುಂಡುಗೆರೆಗಳಿಂದ ಗುರುತಿಸಿದೆ) ಕಂಬದ ನೆರಳು ಎದುರು ದಿಶೆಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಚಲಿಸುವುದು. ಈ ನೆರಳು ರೇಖಿಸುವ ನೆಲೆಯನ್ನು ಗಾಢ ಬಣ್ಣದಿಂದ ಚಿತ್ರಿಸಿದೆ. ಇದರಲ್ಲಿನ ಮೂರು ಪ್ರರೂಪೀ ನೆರಳುಗಳು ಅನುಕ್ರಮವಾಗಿ ಸೂರ್ಯೋದಯ (OW), ಮಧ್ಯಾಹ್ನ (AB) ಹಾಗೂ ಸೂರ್ಯಾಸ್ತಮಾನ (OE) ವೇಳೆಗಳಲ್ಲಿ ಕೆಡೆದಂಥವು. ಇವುಗಳ ನೆರವಿನಿಂದ ಯಾವುದೇ ಮಧ್ಯಂತರ ನೆರಳಿಗೆ ಸಂವಾದಿಯಾದ ಕಾಲವೆಷ್ಟು ಎನ್ನುವುದನ್ನು ಸ್ಥೂಲವಾಗಿ ಗಣನೆ ಮಾಡಬಹುದು.

ಚಿತ್ರ (2)ರಲ್ಲಿನ T ಆಕಾರದ ಛಾಯಾ ಗಡಿಯಾರ ಪ್ರಶ.ಪೂ. ಸು. 8ನೆಯ ಶತಮಾನದಲ್ಲಿ ಬಳಕೆಯಲ್ಲಿತ್ತು. ಇದನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಬಹು ದಾಗಿತ್ತು. ಈ ಉಪಕರಣವನ್ನು ಮಟ್ಟಸ ನೆಲದ ಮೇಲೆ ಸೂರ್ಯನಿಗೆ ಮುಖಮಾಡಿ


**ಚಿತ್ರ 2. ಈಜಿಪ್ಷಿಯನ್ನರ ಛಾಯಾ ಗಡಿಯಾರ**

ಇರಿಸಬೇಕು. ಆಗ ಅಡ್ಡ ಸರಳಿನ ನೆರಳು ಹಿಡಿಯ ಮೇಲೆ ಕೆಡೆಯುತ್ತದೆ. ಅದರಲ್ಲಿನ ಗುರುತುಗಳು ಮಧ್ಯಾಹ್ನವಲ್ಲದೆ ಇತರ ಐದು ವೇಳೆಗಳನ್ನು ಕೂಡ ಸೂಚಿಸುವಂತೆ ಇವೆ. ಪೂರ್ವಾಹ್ನದಲ್ಲಿ ಅಡ್ಡಸರಳು ಪೂರ್ವಕ್ಕಿರುವಂತೆಯೂ ಅಪರಾಹ್ನದಲ್ಲಿ ಅದು ಪಶ್ಚಿಮಕ್ಕಿರುವಂತೆಯೂ ಹಿಡಿಯನ್ನು ಪೂರ್ವ–ಪಶ್ಚಿಮ ದಿಶೆಯಲ್ಲಿ ಇರಿಸಬೇಕು.

ಛಾಯಾ ಗಡಿಯಾರಕ್ಕೆ (ನೆರಳು ಗಡಿಯಾರ) ಇಂದು ಕೇವಲ ಐತಿಹಾಸಿಕ ಮಹತ್ತ್ವ ಮಾತ್ರ ಉಂಟಷ್ಟೆ. ಕಾಲಗಣನೆ ಮಾಡಲು ಇಂದು ಬಳಸುವ ಅತಿಸೂಕ್ಷ್ಮ ಮತ್ತು ನಾಜೂಕು ಗಡಿಯಾರಗಳ ಉಪಜ್ಞೆಯ ದಿಶೆಯಲ್ಲಿ ಪ್ರಾಯಶಃ ಮೊದಲ ಹಂತ ಛಾಯಾ ಗಡಿಯಾರಗಳು.

ಒಂದೇ ಸ್ಥಳದಲ್ಲಿ ಸೂರ್ಯನ ಸ್ಥಾನ ದಿನ ದಿನ ಬದಲಾಗುವುದರಿಂದಲೂ ಯಾವ ಮನುಷ್ಯನೂ ಒಂದೇ ಸ್ಥಳಕ್ಕೆ ಬಂಧಿತನಾಗಿ ಇಲ್ಲದಿರುವುದರಿಂದಲೂ ಛಾಯಾ ಗಡಿಯಾರಗಳ ಉಪಯುಕ್ತತೆ ತೀರ ಸೀಮಿತ. (ಎಂಯು.)

**ಛಾಯಾನಾಟಕ :** ಈ ಶಬ್ದ ಇಲ್ಲಿ ಮುಖ್ಯವಾಗಿ, ಇಂಗ್ಲಿಷಿನ ಷ್ಯಾಡೋ ಪ್ಲೇ (ಗೊಂಬೆ ನೆರಳಿನ ಆಟ) ಎಂಬರ್ಥದಲ್ಲಿ ಬಳಕೆಯಾಗಿದೆ. ಅತಿ ಪ್ರಾಚೀನ ಕಾಲದಿಂದ ವಿಶಿಷ್ಟ ಜನಪದ ಕಲೆಯಾಗಿ ಭಾರತದಲ್ಲಿದ್ದ ತೊಗಲುಗೊಂಬೆ ಆಟವೇ ಕಾಲಕ್ರಮೇಣ ಜಗತ್ತಿನ ಹಲವು ಕಡೆಗಳಲ್ಲಿ ಹರಡಿ ಬೇರೆಬೇರೆ ರೂಪ ತಾಳಿತಷ್ಟೆ. ಈ ಪ್ರಕಾರವನ್ನು ಕುರಿತ ಸಂಕ್ಷಿಪ್ತ ಇತಿಹಾಸದ ಜೊತೆಗೆ, ಈ ಜನಪದ ಕಲೆಯ ಆಧಾರದ ಮೇಲೆ ಭಾರತದಲ್ಲಿ ನಡೆದ ಪ್ರಯೋಗವನ್ನು ಕುರಿತ ಪ್ರಸ್ತಾಪವೂ ಇಲ್ಲಿದೆ.

ಛಾಯಾನಾಟಕದಲ್ಲಿ ಬಳಸುವ ಗೊಂಬೆಗಳು ಹದಗೊಳಿಸಿದ ತೊಗಲಿನಿಂದ ತಯಾರಾಗುತ್ತವೆ. ಅಗಲವೂ ತೆಳುವೂ ಆದ ಚರ್ಮದ ಮೇಲೆ ರೇಖೆಗಳಿಂದ ಚಿತ್ರ ಬರೆದು ಕತ್ತರಿಸಿ ಬಿಡಿಸಿ ವಿವಿಧ ಬಣ್ಣಗಳನ್ನು ಹಚ್ಚಿ ಅಲಂಕರಿಸಿ ಇವನ್ನು ತಯಾರಿಸುತ್ತಾರೆ. ಕೆಲವು ಅಖಂಡವಾದ ಒಂದೇ ತೊಗಲಿನ ತುಂಡಿನಲ್ಲಿ ತಯಾರಾಗಿರುತ್ತವೆ. ಇನ್ನು ಕೆಲವಲ್ಲಿ ದೇಹಭಾಗ ಅಖಂಡವಾಗಿದ್ದು ಅದಕ್ಕೆ ಕೈಕಾಲುಗಳನ್ನು ಸೂತ್ರಗಳಿಂದ ಸೇರಿಸುತ್ತಾರೆ. ಅರೆಪಾರದರ್ಶಕ ಕಾಗದದ ಅಥವಾ ವಸ್ತ್ರದ ಪರದೆಯ ಹಿಂದೆ ಪ್ರಕಾಶಮಾನ ಬೆಳಕನ್ನು ಇಟ್ಟು ಬಿದಿರುಕಡ್ಡಿಗಳು, ಸೂತ್ರಗಳು ಮೊದಲಾದವುಗಳಿಂದ ಆಡಿಸಲಾದ ಬಣ್ಣಬಣ್ಣದ ತೊಗಲುಗೊಂಬೆಗಳ ನೆರಳು ಪರದೆಯ ಮೇಲೆ ಪ್ರಕ್ಷೇಪಿತವಾಗುವಂತೆ ಮಾಡುತ್ತಾರೆ. **(ವಿವರಗಳಿಗೆ ನೋಡಿ– ಕರ್ನಾಟಕ–ಜಾನಪದ–ನೃತ್ಯ); ಗೊಂಬೆಗಳು)**

ಮೂಲತಃ ಭಾರತದಲ್ಲಿ ರೂಪುಗೊಂಡ ಛಾಯಾನಾಟಕಕ್ಕೆ ಮುಖ್ಯವಾಗಿ ರಾಮಾಯಣ ಮಹಾಭಾರತದ ಕಥೆಗಳನ್ನೇ ಆರಿಸಿಕೊಳ್ಳುತ್ತಿದ್ದರು. ಈ ಜನಪದ ಪ್ರಕಾರ ತನ್ನ ಪರಂಪರೆಯನ್ನು ಭಾರತದ ನೆರೆಯ ದೇಶಗಳಲ್ಲಿಯೂ ಬಿತ್ತಿತ್ತು. ಜಾವಾ ದ್ವೀಪದಲ್ಲಿ ವಿಶೇಷವಾಗಿ ಹರಡಿ ಅಲ್ಲಿಯೂ ಪುರಾಣೇತಿಹಾಸಗಳ ವಸ್ತುವನ್ನೇ ಜೋಡಿಸಿಕೊಂಡು ಅದು ಒಂದು ಮುಖ್ಯ ಜನಪದ ಕಲೆಯಾಗಿ ಬೆಳೆಯಿತು. 15ನೆಯ ಶತಮಾನದಲ್ಲಿ ಅಲ್ಲಿ ಇಸ್ಲಾಂ ಧರ್ಮ ಹರಡಿದಾಗ ನಾಟಕದ ವಸ್ತುವಿನಲ್ಲಿ ಬೇರೆ ಬೇರೆ ಕಥೆಗಳು ಸೇರಿಕೊಂಡವು. ಹದಗೊಳಿಸದ ಎಮ್ಮೆಚರ್ಮದಲ್ಲಿ ಮಾಡಿದ ಜಾವಾ ಗೊಂಬೆಗಳು ಬರುಬರುತ್ತ ಖ್ಯಾತವಾದವು. ಸೂತ್ರಧಾರ (ಡಲಾಂಗ್) ಪರದೆಯ ಹಿಂದೆ ಪಾತ್ರಗಳ ನೆರಳುಗಳನ್ನು ಆಡಿಸಿ ತೋರಿಸುತ್ತ ಅವುಗಳ ಮಾತುಗಳನ್ನು ತಾನೇ ಅನ್ನುತ್ತಾ, ವಾದ್ಯಮೇಳವನ್ನು ನಿರ್ದೇಶಿಸುತ್ತಾ ಹೋಗುವುದು ಆಟದ ರೀತಿ.

ಛಾಯಾನಾಟಕದ ಪರಂಪರೆ ಜಾವಾದಿಂದ ಬಾಲಿ ಮೊದಲಾದ ಬೇರೆ ದ್ವೀಪಗಳಿಗೆ ಹರಡಿದಾಗ ಅಲ್ಲಿನವರು ಅದರಲ್ಲಿ ಬಳಸಲಾಗುತ್ತಿದ್ದ ಭಾರತೀಯ ಕಥಾವಸ್ತುವನ್ನೂ ಶೈಲಿಯನ್ನೂ ಉಳಿಸಿಕೊಂಡರು. ಅಲ್ಲಿಂದ ಮುಂದೆ ಅದು ಸಯಾಂ, ಮಲಯ, ಮಾಯನ್ಮಾರ್, ಕಾಂಬೋಡಿಯ ಮುಂತಾದ ಕಡೆಗಳಲ್ಲೂ ವ್ಯಾಪಕವಾಗಿ ಪಸರಿಸಿತು. ವಿಶೇಷವಾಗಿ ಚೀನದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಛಾಯಾನಾಟಕ ಹನ್ ವಂಶದ ಅರಸರ ಕಾಲದಲ್ಲಿದ್ದ ಆಸ್ಥಾನದ ಸ್ತ್ರೀಯರ ಮನೋರಂಜನೆಯ ಸಲುವಾಗಿಯೇ ಹುಟ್ಟಿತೆಂಬ ಐತಿಹ್ಯಗಳು ಚೀನದಲ್ಲಿವೆ. ಅಲ್ಲಿ ನಾಟಕಕ್ಕೆ ಬೇಕಾದ ಗೊಂಬೆಗಳನ್ನು ಕತ್ತೆಯ ಚರ್ಮದಿಂದ ತಯಾರಿಸಿ ಉಜ್ವಲ ವರ್ಣಗಳಿಂದ ಸಿಂಗರಿಸುತ್ತಿದ್ದರೆನ್ನಲಾಗಿದೆ.

ಛಾಯಾನಾಟಕದ ಸಂಪ್ರದಾಯ ಪಶ್ಚಿಮ ದೇಶಗಳಿಗೆ ಹರಡಿದುದು ಪರ್ಷಿಯ, ತುರ್ಕಿಗಳ ಮೂಲಕ. ತುರ್ಕಿಯಲ್ಲಿ ವಿಶಿಷ್ಟವಾಗಿ ರೂಪುಗೊಂಡ ಈ ಜನಪದ ಪ್ರಭೇದದಲ್ಲಿ ಬರುವ ಕರಗಜ಼್ ಮತ್ತು ಅವನ ಗೆಳೆಯ ಹಾಜಿವಾದ್ ಎಂಬ ವಿನೋದ ಪಾತ್ರಗಳು ವಿಶೇಷ ಜನಮನ್ನಣೆಗೆ ಪಾತ್ರವಾದವು. ಗೊಂಬೆಗಳನ್ನು ಒಂಟೆಯ ಚರ್ಮದಲ್ಲಿ ಮಾಡಿ ಬಣ್ಣ ಹಾಕುತ್ತಿದ್ದರು. ವಿಶೇಷವಾಗಿ ತುರ್ಕಿಯ ಛಾಯಾನಾಟಕದಲ್ಲಿ ಅಫೀಮಿನ ಗೀಲು ಹಿಡಿದವ, ಪೆದ್ದ ಮೊದಲಾದ ಸ್ಥಾಯೀ ಪಾತ್ರಗಳೂ ಪರ್ಷಿಯದವ, ಆಲ್ಬೇನಿಯದವ, ಯೆಹೂದ್ಯ ಮೊದಲಾದ ಪ್ರಾತಿನಿಧಿಕ ಪಾತ್ರಗಳೂ ಇರುತ್ತಿದ್ದುವು. ಕ್ರಮೇಣ ಈ ನಾಟಕಪ್ರಕಾರ ಗ್ರೀಸಿನಲ್ಲೂ ಹರಡಿ ಜನಪ್ರಿಯವಾಯಿತು. ಅಲ್ಲಿ ಆಂಟೊನಿಯೊ ಮಾಲ್ಲಾಸ್ ಮುಂತಾದ ಖ್ಯಾತ ತೊಗಲುಗೊಂಬೆ ಆಟಗಾರರು ತಾವು ನೀಡುತ್ತಿದ್ದ ಪ್ರದರ್ಶನಗಳಿಗೆ ವಿಶೇಷ ಪ್ರಾದೇಶಿಕ ಲಕ್ಷಣಗಳು ಬರುವಂತೆ ಮಾಡಿದರು. ಅಲ್ಲಿಂದ ಮುಂದೆ ಛಾಯಾನಾಟಕ ಉತ್ತರ ಆಫ್ರಿಕದ ಇಸ್ಲಾಮಿ ದೇಶಗಳಿಗೂ ಹರಡಿತು.

ಇಟಲಿಯಲ್ಲಿ ಛಾಯಾರಂಗಭೂಮಿಯ ಪರಂಪರೆ 17ನೆಯ ಶತಮಾನದಷ್ಟು ಹಿಂದೆಯೇ ಬೆಳೆದಿದ್ದು, ಅದು ಅಲ್ಲಿಂದ ಪಶ್ಚಿಮ, ಯುರೋಪಿನ ದೇಶಗಳಿಗೂ ಹಬ್ಬಿತ್ತು. ಫ್ರಾನ್ಸಿನ ತೊಗಲುಬೊಂಬೆ ಆಟದಲ್ಲಿ ಬಣ್ಣವಿಲ್ಲದ ಗೊಂಬೆಗಳನ್ನು ಮಾತ್ರ ಬಳಸುತ್ತಿದ್ದು ಅವು ಕೇವಲ ಕಪ್ಪು ನೆರಳಿನ ಚಿತ್ರಗಳಾಗಿ ಮೂಡುತ್ತಿದ್ದವು. ಡೋಮಿನಿಕ್ ಸಿರಾಫಿನಾ ಎಂಬಾತ 1774ರಲ್ಲಿ ವರ್ಸಾಯ್ ನಗರದಲ್ಲಿ ಒಂದು ಛಾಯಾನಾಟಕ ಪ್ರದರ್ಶನ ಏರ್ಪಡಿಸಿದ. ಅದು ಜನರ ಮನವನ್ನು ಪ್ರಬಲವಾಗಿ ಸೆಳೆದಿದ್ದರಿಂದ ಪುನಃ ಅದನ್ನು ಪ್ಯಾರಿಸ್‌ನ ಪ್ಯಾಲೆ ರಾಯಲ್ ಮಂದಿರದಲ್ಲಿ ಪ್ರದರ್ಶಿಸಲಾಯಿತು. 1859ರವರೆಗೂ ಈ ಪ್ರದರ್ಶನಗಳು ಜನಪ್ರಿಯತೆಯನ್ನು ಉಳಿಸಿಕೊಂಡವು. ಅಲ್ಲಿಂದ ಮುಂದೆ ಡೊಮಿನಿಕ್ ಸಿರಾಫಿನಾನ ವಂಶಸ್ಥರು ಬ್ರೋಕನ್ ಬ್ರಿಜ್ ಮುಂತಾದ ವಿಶೇಷ ನಾಟಕಗಳನ್ನು ರಚಿಸಿ ಅವನ್ನು ಛಾಯಾನಾಟಕದ ತಂತ್ರಕ್ಕೆ ಅಳವಡಿಸಿ ತೋರಿಸಿದರು. ಅತ್ಯಂತ ನೂತನವೂ ವಿಶಿಷ್ಟವೂ ಆದ ನಾಟಕಗಳನ್ನು ಛಾಯಾರಂಗಭೂಮಿಯಲ್ಲಿ ಪ್ರದರ್ಶಿಸುವಾಗ ಶ್ರೇಷ್ಠ ಕಲಾವಿದರು, ಸಂಗೀತಗಾರರು, ವಾದ್ಯಮೇಳದವರು, ಸಾಹಿತಿಗಳು ಮುಂತಾದವರ ನೆರವನ್ನು ಪಡೆಯಲಾಗುತ್ತಿತ್ತು. ಫ್ರಾನ್ಸಿನ ಹಲವು ನಗರಗಳಲ್ಲಿ ಪ್ರದರ್ಶಿತವಾದ ಛಾಯಾನಾಟಕ ಕ್ಯಾಬರೆಗಳು 1923ರವರೆಗೂ ಪ್ರಸಿದ್ಧವಾಗಿದ್ದವು.

ಛಾಯಾನಾಟಕ 18ನೆಯ ಶತಮಾನದ ಅಮೆರಿಕದಲ್ಲಿ ವ್ಯಾಪಕವಾಗಿ ಹರಡಿತಾದರೂ ಆ ಶತಮಾನದ ಕೊನೆಯ ಹೊತ್ತಿಗೆ ಖಿಲವಾಯಿತು. 1880ರ ಅನಂತರ ಅದನ್ನು ಮತ್ತೆ ಪುನರುಜ್ಜೀವನಗೊಳಿಸಲಾಯಿತು. 1893ರಲ್ಲಿ ಷಿಕಾಗೋ ವರ್ಲ್ಡ್‌ಫೇರ್ ಉತ್ಸವದಲ್ಲಿ ಲಿಯಾನ್ ಚಾರ್ಲಸ್ ಮ್ಯಾರೋ ಎಂಬ ಫ್ರೆಂಚ್ ಕಲಾವಿದ ನೀಡಿದ ಛಾಯಾನಾಟಕ ಪ್ರದರ್ಶನ ವಿಶೇಷವಾಗಿ ಜನರ ಮನಸೆಳೆಯಿತು. ಗ್ರೀಸಿನಿಂದ ಅಮೆರಿಕಕ್ಕೆ ವಲಸೆ ಹೋದವರು ತುರ್ಕಿಯ ಕರಗಜ಼್ ನಾಟಕದ ರೂಪಾಂತರಗಳನ್ನು ಅಲ್ಲಿ ಬಿತ್ತಿ ಬೆಳೆಸಿದರು. ಷಿಕಾಗೊ, ಡೆಟ್ರಾಯ್ಟ್ ನಗರಗಳಲ್ಲಿನ ಕಾಫೀ ಹೌಸುಗಳಲ್ಲಿ ನಡೆಯುತ್ತಿದ್ದ ಗ್ರೀಕ್ ಛಾಯಾನಾಟಕ ಪ್ರದರ್ಶನಗಳು ಮೆಚ್ಚುಗೆ ಪಡೆದವು.

ಆಧುನಿಕ ಯುಗದಲ್ಲಿ ಪಾಲಿನ್ ಬೆಂಟನ್ ಮೊದಲಾದವರು ಅಪ್ಪಟ ಚೀನೀ ಸ್ವರೂಪದ್ದೆಂದು ಹೇಳಲಾದ ಛಾಯಾನಾಟಕಗಳನ್ನು ಆಡಿಸಿ ತೋರಿಸಿದರು. ಮೊದಲನೆಯ ಮಹಾಯುದ್ಧದ ಅನಂತರ ಜರ್ಮನಿಯಲ್ಲಿ ಕಪ್ಪು ನೆರಳಿನ ಸ್ತಬ್ಧ ಛಾಯಾಚಿತ್ರಗಳ ಫಿಲ್ಮುಗಳನ್ನು ಪರದೆಯ ಮೇಲೆ ಆಡಿಸಿ ತೋರಿಸಲಾಯಿತು. ಚಲನಚಿತ್ರಗಳಿಗೆ ಇದೇ ನಾಂದಿಯಾಯಿತೆಂದು ಹೇಳುವುದುಂಟು.

ಕರ್ಣಾಟಕದಲ್ಲಿ 1945ರ ಸುಮಾರಿನಲ್ಲಿ ಛಾಯಾನಾಟಕದ ಪ್ರಕಾರವನ್ನು ಡಾ.ಶಿವರಾಮ ಕಾರಂತರು ಅಪೂರ್ವವಾಗಿ ಪ್ರಯೋಗಿಸಿದರು. ತೊಗಲುಗೊಂಬೆ ಆಟದಿಂದ ಸ್ಫೂರ್ತಿ ಪಡೆದು ಅವರು ತಮ್ಮ ಕೆಲವು ಗೀತನಾಟಕಗಳನ್ನು ಛಾಯಾನಾಟಕದ ಮಾಧ್ಯಮದಲ್ಲಿ ಆಡಿಸಿದರು. ವಿಶೇಷ ವಸ್ತ್ರಾಲಂಕಾರಭೂಷಿತರಾದ ನಟ–ನಟಿಯರೇ ತೆಳು ಪರದೆಯ ಹಿಂದೆ ಚಲಿಸುತ್ತ ಹಾಡು, ನೃತ್ಯಗಳ ಮೂಲಕ ನಾಟಕದ ಕಥೆಯನ್ನು ಅರ್ಥೈಸುವಂತೆ ಅನುಗೊಳಿಸಿದರು. ಮುಖ್ಯವಾಗಿ ಕಾರಂತರ ಲವಕುಶ ಎಂಬ ಗೀತನಾಟಕ 1945–46ರ ಸುಮಾರಿನಲ್ಲಿ ಬೆಂಗಳೂರಿನಲ್ಲಿ ಪ್ರದರ್ಶಿತವಾದಾಗ ಅದೊಂದು ಅಪೂರ್ವ ಪ್ರಯೋಗವೆನಿಸಿತು. ಶಿಲ್ಪಕಲೆಗೂ ನಾಟ್ಯಾಭಿನಯಕ್ಕೂ ನಡುವಣ ಸಾದೃಶ್ಯ ಸೂಚಿಸಲೆಂಬ ಪ್ರಾಯೋಗಿಕ ದೃಷ್ಟಿಯಿಂದ, ಬರೆದು ಅಭಿನಯಿಸಿದ ಕಾರಂತರ ಗೀತನಾಟಕಗಳು ವಿಶಿಷ್ಟ ಸಾಹಿತ್ಯ ಕೃತಿಗಳಾಗಿವೆ (ಎಚ್.ಕೆ.ಆರ್.)

**ಛಾಯಾಶಂಕು :** ಬೆಳಕಿನ ಆಕರದ ಕಾರಣವಾಗಿ ಗ್ರಾಹಕ ವಸ್ತುವಿನಿಂದ ಹೊರಚಾಚುವ ನೆರಳಿನ ಪ್ರದೇಶ (ಷ್ಯಾಡೊ ಕೋನ್). ಖಗೋಳವಿಜ್ಞಾನದಲ್ಲಿ ಬಳಕೆಯಲ್ಲಿರುವ ಪದ. ಸೂರ್ಯನಿಂದ ಭೂಮಿಯ ಮೇಲೆ ಇಲ್ಲವೇ ಚಂದ್ರನ ಮೇಲೆ ಬೆಳಕು ಬಿದ್ದಾಗ ಭೂಮಿಯ ಮೇಲೆ ಇಲ್ಲವೇ ಚಂದ್ರನ ನೆರಳು ಹಿಂಬದಿಗೆ ಚಾಚುವುದು ಸರಿಯಷ್ಟೆ ಇವು ಮೂರು ಕಾಯಗಳೂ ಗೋಳಾಕಾರವಾಗಿರುವುದರಿಂದ ಈ ನೆರಳುಗಳಲ್ಲಿ ಎರಡು ವರ್ಗದವು ಇವೆ; ದಟ್ಟ ನೆರಳಿನ ಪ್ರದೇಶ–ಇದು ಶಂಕುವಿನಾಕಾರವಾಗಿರುವುದು; ಅರೆ ನೆರಳಿನ ಪ್ರದೇಶ. ದಟ್ಟ ನೆರಳಿನ ಪ್ರದೇಶಕ್ಕೆ ಛಾಯಾ ಶಂಕುವೆಂಬ ಹೆಸರು ಕೂಡ ಬಳಕೆಯಲ್ಲಿದೆ. **(ನೋಡಿ– ಗ್ರಹಣ–ಖಗೋಳೀಯ)** *

**ಛೋಟಾ ನಾಗಪುರ :** ಭಾರತದಲ್ಲಿರುವ ಝಾರ್ಖಂಡ್ ರಾಜ್ಯದ ಒಂದು ವಿಭಾಗ. ಇದಕ್ಕೆ ಸ್ಥೂಲವಾಗಿ ಸಮಾನ ವ್ಯಾಪಿಯಾಗಿರುವ ಪ್ರಸ್ಥಭೂಮಿಗೂ ಇದೇ ಹೆಸರಿದೆ. ರಾಂಚಿ, ಹಜ಼ಾರಿಬಾಗ್, ಪಲಮಾವ್, ಸಿಂಘ್‌ಭೂಮ್ ಮತ್ತು ಧನ್‌ಬಾದ್ ಜಿಲ್ಲೆಗಳನ್ನೊಳಗೊಂಡಿರುವ ಛೋಟಾ ನಾಗಪುರ ವಿಭಾಗದ ವಿಸ್ತೀರ್ಣ ಸು. 65,000 ಚ.ಕಿಮೀ. ಜನಸಂಖ್ಯೆ ಸು. 4,900,429.

ಗಂಗಾ, ಸೋನ್ ಮತ್ತು ಮಹಾನದಿ ಬಯಲುಗಳ ನಡುವೆ ಹಬ್ಬಿರುವ ಛೋಟಾ ನಾಗಪುರ ಪ್ರಸ್ಥಭೂಮಿಯ ಸರಾಸರಿ ಎತ್ತರ 1067 ಮೀ. ಸ್ಫಟಿಕ ಶಿಲೆಯಿಂದ ಕೂಡಿದ ಈ ಪ್ರದೇಶದ ನಡುವೆ ದಾಮೋದರ್ ಕಣಿವೆಯ ಅವಸಾದೀ ಶಿಲಾಭಾಗವುಂಟು. ಇಡೀ ಪ್ರದೇಶ ತಂಪಾದ ವಾಯುಗುಣದಿಂದ ಕೂಡಿದ್ದು, ಈ ಪ್ರದೇಶದ ಮಧ್ಯ ಮತ್ತು ಪಶ್ಚಿಮ ಭಾಗಗಳು ಅರಣ್ಯಾವೃತವಾಗಿವೆ. ಈ ಅರಣ್ಯಕ್ಷೇತ್ರದಲ್ಲಿ ಒಂದು ಕಡೆ ಕುರುಚಲುಗಿಡಗಳ ಕಾಡುಗಳೂ (ಉದಾ: ಗಿರಿಡೀಹ್ ಮತ್ತು ಧನ್‌ಬಾದ್‌ಗಳಲ್ಲಿ) ಮತ್ತೊಂದು ಕಡೆ ಸಾಲುವೃಕ್ಷಗಳ

ವಿಶಾಲ ಅರಣ್ಯಗಳೂ (ಉದಾ; ಸಿಂಘ್‌ಭೂಮ್‌ನಲ್ಲಿದೆ) ಇವೆ. ಒಟ್ಟಿನಲ್ಲಿ ಈ ಪ್ರದೇಶ ಅರಣ್ಯಗಳಿಂದಲೂ, ಬೆಟ್ಟಗುಡ್ಡಗಳಿಂದಲೂ ಕಣಿವೆಗಳಿಂದಲೂ ಕೂಡಿದ್ದು, ಇಲ್ಲಿ ಹರಿಯುವ ಕೋಯೆಲ್, ಸುವರ್ಣರೇಖಾ, ಸಂಜಯಿ ಮುಂತಾದ ನದಿಗಳು ಇದನ್ನು ಸಂಪದ್ಯುಕ್ತವಾಗಿ

ದಸ್ಸಂ ಜಲಪಾತ

ಮಾಡಿವೆ. ಈ ನದೀ ಪಾತ್ರಗಳಲ್ಲಿ ತಿಲೈಯ, ಕೋನಾರ್, ಮೈತಾನ್, ಪಂಚೇತ್ ಕಟ್ಟೆಗಳನ್ನೂ ಬೊಕಾರೊದಲ್ಲಿ ಒಂದು ಬೃಹತ್ ಉಷ್ಣವಿದ್ಯುತ್ ಕೇಂದ್ರವನ್ನೂ ನಿರ್ಮಿಸಲಾಗಿದೆ.

ಸೌದೆ ಮತ್ತು ಗಟ್ಟಿಯಾದ ಮರದ ದಿಮ್ಮಿಗಳಿಗೆ ಇಲ್ಲಿಯ ಅರಣ್ಯಗಳು ಹೆಸರುವಾಸಿಯಾಗಿವೆ. ಕಾಗದದ ಉತ್ಪಾದನೆಗೆ ಅಗತ್ಯವಾದ ಬೊಂಬು ಮತ್ತು ಹುಲ್ಲನ್ನು ಅರಣ್ಯಗಳು ಒದಗಿಸುತ್ತವೆ. ಅರಗು ಮತ್ತು ಟುಸಾ ರೇಷ್ಮೆ ಇಲ್ಲಿಯ ಮುಖ್ಯ ಅರಣ್ಯೋತ್ಪನ್ನಗಳು. ಭಾರತದಲ್ಲಿ ಉತ್ಪಾದನೆಯಾಗುವ ಅರಗಿನಲ್ಲಿ ಸುಮಾರು ಅರ್ಧಭಾಗ ಇಲ್ಲಿ ದೊರೆಯುತ್ತದೆ. ಆದರೆ ಈಚೆಗೆ ರಾಸಾಯನಿಕ ಉತ್ಪನ್ನಗಳು ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವುದರಿಂದಲೂ ಥೈಲ್ಯಾಂಡ್ ಮುಂತಾದ ರಾಷ್ಟ್ರಗಳು ನೈಸರ್ಗಿಕ ಅರಗು ಉತ್ಪಾದಿಸುತ್ತಿರುವುದರಿಂದಲೂ ಈ ಉದ್ಯಮ ಇಳಿಮುಖವಾಗಿದೆ. ಈ ವಲಯದಲ್ಲಿಯ ಭೂಮಿ ಅಷ್ಟೇನೂ ಫಲವತ್ತಾಗಿಲ್ಲ. ಮರಳು ತುಂಬಿದ ಅಥವಾ ಜೇಡಿಯ ಕೆಂಪು ಮಣ್ಣಿನ ಭೂಮಿಯೇ ಹೆಚ್ಚಾಗಿ ಕಾಣದೊರೆಯುತ್ತದೆ. ಇದು ಅಷ್ಟೇನೂ ಫಲವತ್ತಾದ್ದಲ್ಲ. ಬತ್ತ, ಮೆಕ್ಕೆಜೋಳ, ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು, ಸಾಸಿವೆ–ಇವು ಇಲ್ಲಿಯ ಮುಖ್ಯ ಬೆಳೆಗಳು. ಇಲ್ಲಿ 50"–60" ಮಳೆಯಾಗುತ್ತದೆ.

ಈ ಪ್ರದೇಶದಲ್ಲಿ ಅನೇಕ ಖನಿಜನಿಕ್ಷೇಪಗಳಿವೆ. ಹಜಾರಿಬಾಗ್‌ನಲ್ಲಿನ ಅಭ್ರಕದ ಗಣಿಗಳು ಹಾಗೂ ದಾಮೋದರ ಕಣಿವೆಯ ಕಲ್ಲಿದ್ದಲಿನ ಗಣಿಗಳು ಮುಖ್ಯವಾದವು. ವಿಶ್ವದ ಅಭ್ರಕದ ಉತ್ಪಾದನೆಯಲ್ಲಿ ಭಾರತಕ್ಕೆ ಪ್ರಥಮ ಸ್ಥಾನ ಗಳಿಸಿಕೊಟ್ಟಿರುವ ಅಭ್ರಕ ಗಣಿಗಳು ಭಾರತದ ಒಟ್ಟು ಉತ್ಪಾದನೆಯ ಶೇ. 40–50ರಷ್ಟು ಅಭ್ರಕ ಉತ್ಪಾದಿಸುತ್ತವೆ. ಗಣಿಗಾರರ ಸಂಖ್ಯೆ 20,000 ಕ್ಕೂ ಹೆಚ್ಚು. ಇದರ ಸಂಸ್ಕರಣ ಪ್ರಕ್ರಿಯೆಗಳಲ್ಲಿ ಇದರ ಮೂರು ಪಟ್ಟು ಹೆಚ್ಚು ಜನ ನಿರತರಾಗಿದ್ದಾರೆ. ಇದರಲ್ಲಿ ತೊಡಗಿರುವ ಮಹಿಳಾ ಕಾರ್ಮಿಕರು ಮತ್ತು ಮಕ್ಕಳು ಈ ಕಾರ್ಯದಲ್ಲಿ ಎಷ್ಟು ಕುಶಲರಾಗಿದ್ದಾರೆಂದರೆ 1"/1000ರಷ್ಟು ತೆಳುವಾದ ಅಭ್ರಕದ ಪದರಗಳನ್ನು ಅವರು ಬಿಡಿಸಬಲ್ಲರು. ಇದುವರೆಗೆ ಕಂಡುಹಿಡಿಯಲಾಗಿರುವ ಯಾವ ಯಂತ್ರವೂ ಇಷ್ಟು ಸೂಕ್ಷ್ಮವಾದ ಕಾರ್ಯ ಮಾಡಲಾರದೆಂದು ಹೇಳಲಾಗಿದೆ. ಈ ವಲಯದಲ್ಲಿ ದೊರೆಯುವ ಕಲ್ಲಿದ್ದಲು ಉತ್ಕೃಷ್ಟವಾದ್ದು. ಭಾರತದ ಕಲ್ಲಿದ್ದಲ ಉತ್ಪತ್ತಿಯಲ್ಲಿ ಅರ್ಧ ಇಲ್ಲಿಯದು. ಕಬ್ಬಿಣ, ಕ್ರೋಮಿಯಮ್, ಮ್ಯಾಂಗನೀಸ್, ತಾಮ್ರ, ಸತು, ಸುಣ್ಣಕಲ್ಲು, ಕಲ್ನಾರು, ಕೆವೊಲಿನ್ ಮಣ್ಣು ಮೊದಲಾದ ಅನೇಕ ಖನಿಜ ನಿಕ್ಷೇಪಗಳು ಇವೆ.

ರಾಂಚಿಯೇ ಇಲ್ಲಿಯ ಶೈಕ್ಷಣಿಕ ಮತ್ತು ಆಡಳಿತ ಕೇಂದ್ರ. ಇಲ್ಲಿಯೇ ಅರಗು ಸಂಶೋಧನಾಲಯ, ಬೊಂಬೆಗಳ ಕಾರ್ಖಾನೆಗಳು, ಬೃಹತ್ ಔದ್ಯಮಿಕ ಉಪಕರಣಗಳ ಕಾರ್ಖಾನೆ, ಪಿಂಗಾಣಿ ಕಾರ್ಖಾನೆ ಮೊದಲಾದವು ನೆಲೆಗೊಂಡಿವೆ. ಡಾಲ್ಮಿಯ ನಗರದಲ್ಲಿನ ಸಿಮೆಂಟ್ ಮತ್ತು ಕಾಗದದ ಕಾರ್ಖಾನೆಗಳು, ಜಮ್ಷೆಡ್‌ಪುರದ ಉಕ್ಕಿನ ಸ್ಥಾವರಗಳು, ತಾಮ್ರ ಮತ್ತು ಅಲ್ಯೂಮಿನಿಯಮ್ ಕಾರ್ಖಾನೆಗಳು, ಸಿಂಧ್ರಿಯ ರಾಸಾಯನಿಕ ಗೊಬ್ಬರ ಕಾರ್ಖಾನೆ, ಗೊಮಿಯದಲ್ಲಿಯ ಸ್ಫೋಟಕ ವಸ್ತುಗಳ ಕಾರ್ಖಾನೆ, ಬೊಕಾರೊ ಉಕ್ಕಿನ ಕಾರ್ಖಾನೆ ಹಾಗೂ ವಿದ್ಯುತ್ ಸ್ಥಾವರಗಳು ಮುಖ್ಯವಾದವು. (ಎ.ಜಿ.ಡಿ.)

ಜ ಚ ವರ್ಗದ ಮೂರನೆಯ ಅಕ್ಷರ. ಪ್ರಶ.ಪೂ. ಮೂರನೆಯ ಶತಮಾನದ ಬ್ರಾಹ್ಮೀಲಿಪಿಯ ಈ ಅಕ್ಷರರೂಪ ಸುಮಾರು ಆರನೆಯ ಶತಮಾನದವರೆಗೆ ಹಾಗೆಯೇ ಮುಂದುವರಿಯುತ್ತದೆ, ಸಾತವಾಹನರ ಕಾಲದಲ್ಲಿ ಮೂರು ಅಡ್ಡರೇಖೆಗಳನ್ನು ಒಂದು ಲಂಬರೇಖೆಯೊಂದಿಗೆ ಸೇರಿಸಿರುವಂತೆ ಕಾಣುತ್ತದೆ. ಸುಮಾರು ಒಂಬತ್ತನೆಯ ಶತಮಾನದ ಸಮಯಕ್ಕೆ ಮೇಲಿನ ಅಡ್ಡರೇಖೆ ಸಣ್ಣದಾಗಿ ಕೆಳಗಿನ ಎರಡು ರೇಖೆಗಳು ಉದ್ದವಾಗುತ್ತವೆ ಮತ್ತು ಅಕ್ಷರದ ಅಗಲ ಹೆಚ್ಚಾಗುತ್ತದೆ. ಪ್ರಶ. ಹನ್ನೊಂದನೆಯ ಶತಮಾನದಲ್ಲಿ ಈ ಅಕ್ಷರಕ್ಕೆ ಈಗಿರುವ ರೂಪ ಬರುತ್ತದೆ.

ಅಶೋಕ ಪ್ರ.ಶ.ಪೂ.3ನೆಯ ಶತಮಾನ
ಶಾತವಾಹನ ಪ್ರ.ಶ.2ನೆಯ ಶತಮಾನ
ಕದಂಬ ಪ್ರ.ಶ.5ನೆಯ ಶತಮಾನ
ಗಂಗ ಪ್ರ.ಶ.6ನೆಯ ಶತಮಾನ
ಬಾದಾಮಿ ಚಳುಕ್ಯ ಪ್ರ.ಶ. 6ನೆಯ ಶತಮಾನ
ರಾಷ್ಟ್ರಕೂಟ ಪ್ರ.ಶ.9ನೆಯ ಶತಮಾನ
ಕಲ್ಯಾಣಿಚಾಳುಕ್ಯ ಪ್ರ.ಶ.11ನೆಯ ಶತಮಾನ
ಕಳಚೂರಿ, ಹೊಯ್ಸಳ ಮತ್ತು ಸೇವುಣ. ಪ್ರಶ.13ನೆಯ ಶತಮಾನ
ವಿಜಯನಗರ ಪ್ರ.ಶ.15ನೆಯ ಶತಮಾನ
ಮೈಸೂರು ಅರಸರು ಪ್ರ.ಶ. 18ನೆಯ ಶತಮಾನ

ಈ ಅಕ್ಷರ ತಾಲವ್ಯ ಘೋಷ ಸ್ಪರ್ಶ ಧ್ವನಿಯನ್ನು ಸೂಚಿಸುತ್ತದೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಇದರ ಉಚ್ಚಾರಣೆ ಸ್ಪರ್ಶಕ್ಕೆ ಬದಲಾಗಿ ಅನುಘರ್ಷವಾಗಿಯೂ ಇದೆ. (ಎ.ವಿ.ಎನ್.)

**ಜಂಗಮ:** ಸ್ಥಾವರ ಮತ್ತು ಜಂಗಮ ಪದಗಳು ಸಾಮಾನ್ಯವಾಗಿ ಅಚರ ಮತ್ತು ಚರ ಎಂಬ ಶಬ್ದಗಳ ಪರ್ಯಾಯ ಪದಗಳು. ಆದರೆ ವೀರಶೈವಧರ್ಮದಲ್ಲಿ ಬಳಕೆಯಲ್ಲಿರುವ ಜಂಗಮ ಪದ ಪಾರಿಭಾಷಿಕ.

ಅಂತರ್ಧಾಯ ಲಲಾಟಾಕ್ಷಿಂ ಶಶಾಂಕಂ ಸಂವಿಧಾಯ ಚ।
ಅವಾಮಭಾಗಲಲನೋ ಜಂಗಮಃ ಪರಮೇಶ್ವರಃ ॥ (ಸಿದ್ಧಾಂತ ಶಿಖಾಮಣಿ)

ಮಂಡೆಯ ಚಂದ್ರಕಲೆ, ಹಣೆಗಣ್ಣು ಮತ್ತು ಎಡಗಡೆಯ ಅಗಜೆಯರನ್ನು ಮರೆಮಾಚಿದ ಸಾಕ್ಷಾತ್ ಪರಮೇಶ್ವರನೇ ಜಂಗಮ ದೇಹಧರಿಸಿ–

ಅಹಮೇವ ಮಹೇಶಾನಿ ಧೃತ್ವಾ ಜಂಗಮವಿಗ್ರಹಮ್॥
ಮದ್ಭಕ್ತಾನುಗ್ರಹಾರ್ಥಾಯ ಪರ್ಯಟಾಮಿ ಮಹೀತಲೇ ॥ (ವೀರಾಗಮ)

ಭಕ್ತರನ್ನು ಅನುಗ್ರಹಿಸಲು ಭೂಲೋಕದಲ್ಲಿ ಸಂಚರಿಸುವನೆಂಬುದು ಆಗಮಗಳ ಹೇಳಿಕೆ. ಅಯ್ಯಾ, ನೀನೆನ್ನ ಭವವ ಕೊಂದೆಹೆನೆಂದು ಜಂಗಮಲಾಂಛನನಾಗಿ ಬಂದಲ್ಲಿ ನಾ ಭಕ್ತನೆಂಬ ವಾಹನವಾಗಿರ್ದೆ ಎಂಬ ಬಸವಣ್ಣನವರ ಮಾತು ಇದನ್ನು ಸಮರ್ಥಿಸುತ್ತದೆ.

ಐತಿಹಾಸಿಕವಾಗಿ ಕ್ರಿಸ್ತಶಕಾರಂಭದ ಸಮಯದಿಂದಲೂ ಜಂಗಮ ಮಠಗಳು ಭರತಖಂಡದಲ್ಲಿದ್ದಂತೆ ತಿಳಿದುಬರುತ್ತದೆ. ಪ್ರ.ಶ. ಒಂದನೆಯ ಶತಮಾನದ ಹೊತ್ತಿಗೆ ಶ್ರೀಶೈಲದಲ್ಲಿ ಶೈವಮಠವೊಂದು ಅಸ್ತಿತ್ವದಲ್ಲಿದ್ದ ಬಗೆಗೆ ಪರಿಶೋಧನೆಗಳು ನಡೆದಿವೆ (ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ). ಶ್ರೀಶೈಲದ ಜಂಗಮ ಮಲ್ಲಿಕಾರ್ಜುನ ಶಿವಯೋಗಿಗಳ ಪ್ರಭಾವವನ್ನು ತನ್ನ ಚೋಡಕವಿ (ಪ್ರ.ಶ. 940) ತನ್ನ ತೆಲುಗು ಕಾವ್ಯ ಕುಮಾರಸಂಭವದ ಪ್ರಾರಂಭದಲ್ಲಿ ಮಾಡಿದ್ದಾನೆ. ಪ್ರ.ಶ. ಸುಮಾರು 800ರಲ್ಲಿದ್ದ ಆನಂದಗಿರಿ ತನ್ನ ಶಂಕರವಿಜಯದಲ್ಲಿ ಶಿರಸಿ ಪಾಷಾಣಲಿಂಗಂ ಚ ಧಾರಿಣಃ ಜಂಗಮಾಃ–ಎಂದು ಶಿರೋಲಿಂಗಧಾರಿ ಜಂಗಮರನ್ನು ಉಲ್ಲೇಖಿಸಿದ್ದಾನೆ. ವೀರಾಗಮದಲ್ಲಿ ಜಂಗಮನ ಸ್ವರೂಪವನ್ನು ಕುರಿತು–

ಧಾರಯೇತ್ಸಮತಾಕಂಥಾಂ ಕ್ಷಮಾಖ್ಯಾಂ ಭಸ್ಮಘಂಟಿಕಾಮ್॥
ದಯಾಕಮಂಡಲುಂ ವತ್ಸ ಜ್ಞಾನದಂಡಂ ಮನೋಹರಮ್॥
ವೈರಾಗ್ಯಭಿಕ್ಷಾಪಾತ್ರಂ ಚ ಭಕ್ತಿಭಿಕ್ಷಾಂ ಚ ಯಾಚತೇ॥
ಕಂಥಾಕಮಂಡಲುರ್ದಂಡಃ ಖರ್ಪರೋ ಭಸ್ಮಭಸ್ತ್ರಿಕಾ ॥

ಎಂದು ಹೇಳಿರುವ ವರ್ಣನೆ ಪ್ರಭುದೇವರ–ಸಮತೆ ಎಂಬ ಕಂಥೆಯ (ಜೋಳಿಗೆ) ತೊಟ್ಟು, ಸುಬುದ್ಧಿ ಎಂಬ ಟೊಪ್ಪರವನಿಕ್ಕಿ, ವಿಷಯವೆಂಬ ಹಾವುಗೆಯ ಮೆಟ್ಟಿ, ಕಮಲಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮರವೆ ಎಂಬ ಚಳಮೆಟ್ಟದೆ ಗುಹೇಶ್ವರನ ಶರಣ ಬಂದನೆನು ಭಕ್ತಿಭಿಕ್ಷೆಯನಿಕ್ಕು ಸಂಗನ ಬಸವಣ್ಣ ಎಂಬ ವಚನದಲ್ಲಿ ಪಡಿಮೂಡಿದೆ.

ವೀರಶೈವ ಸಿದ್ಧಾಂತದ ಅಷ್ಟಾವರಣಗಳಲ್ಲಿ ಉಕ್ತವಾದ ಜಂಗಮ ಉಪಾಸ್ಯತ್ರಯದಲ್ಲಿ ಒಂದು. ಗುರು ಲಿಂಗ ಜಂಗಮರು ಶಿವನ ಮೂರು ಅಂಶಗಳು (ಏಕಮೂರ್ತಿಸ್ತ್ರಿಧಾ ಭಕ್ತಃ ಗುರುರ್ಲಿಂಗಂ ತು ಜಂಗಮಃ). ವೀರ, ನಂದಿ, ಭೃಂಗಿ, ವೃಷಭ ಮತ್ತು ಸ್ಕಂದ ಎಂಬ ಐದು ಪ್ರಮಥ ಗೋತ್ರಗಳಿಗೆ ಸೇರಿದ ರೇಣುಕ ದಾರುಕ ಮುಂತಾದ ಐವರು ಆಚಾರ್ಯರಿಂದ ವೀರಮಾಹೇಶ್ವರ ದೀಕ್ಷೆ ಹೊಂದಿದ ಐದು ಆರಾಧ್ಯ ಸಂಪ್ರದಾಯಗಳಿಗೂ ಜಂಗಮ ಎಂಬ ಹೆಸರಿದೆ. ಇವರನ್ನು ವೀರಶೈವಗುರು ಮತ್ತು ಜಂಗಮರು (ವಿರಕ್ತ) ಪೀಠಗಳಿಗೆ ಕ್ರಮವಾಗಿ ಅಧಿಪತಿಗಳನ್ನಾಗಿ ಆರಿಸುವ ಸಂಪ್ರದಾಯ ಉಂಟು. ಇವರಲ್ಲಿ ಗುರು ಭಕ್ತನ ಶಕ್ತಿಪಾತವನ್ನು ಗುರ್ತಿಸಿ ಶಿವದೀಕ್ಷೆ ಎಸಗಿ ತತ್ತ್ವಗಳನ್ನು ಬೋಧಿಸುತ್ತಾನೆ. ಈ ದೃಷ್ಟಿಯಿಂದ ಗುರು, ಜಂಗಮರು ಕ್ರಮವಾಗಿ ಭಕ್ತರ ಬೋಧಕ ಮತ್ತು ಪರೀಕ್ಷಕರೆನಿಸುತ್ತಾರೆ. ಇವರಲ್ಲಿ ಕೆಲವರು ಗೃಹಸ್ಥರು, ಕೆಲವರು ದೇಶಿಕರು (ಬ್ರಹ್ಮಚಾರಿಗಳು). ಈ ಇಬ್ಬರೂ ಸಮಾಜಕ್ಕೆ ಪೂಜ್ಯರೇ.

ಯೋಗಿನೀಸಹಿತಾಃ ಕೇಚಿತ್ ಕೇಚಿತ್ ದೇಶಿಕಸಂಜ್ಞಿಕಾಃ ।
ಸ್ವೇಚ್ಛಾಶ್ರಮವಿಹಾರಾಸ್ತೇ ಲಿಂಗಭೋಗೋಪಭೋಗಿನಃ ॥

ಶಿವಶರಣರು ಜಂಗಮರಲ್ಲಿ ಜಾತಿ ಕುಲ ಅಂತಸ್ತುಗಳನ್ನು ಎಣಿಸಬಾರದು ಎನ್ನುತ್ತಾರೆ. ಅರಿವು ಆಚಾರವುಳ್ಳವರೇ ಜಂಗಮ (ಚನ್ನಬಸವಣ್ಣ) ಎಂಬುದು ಸರಿಯಾದ ನಿಲುವು. (ಎಂ.ಜಿ.ಎನ್.)

ವೀರಶೈವ ಸಾಹಿತ್ಯದಲ್ಲಿ ಅಷ್ಟಾವರಣಾಂತರ್ಗತ ಜಂಗಮ, ವಂಶಾನುಗತ ಜಂಗಮ, ಅತಿಥಿರೂಪಿ ಜಂಗಮ ಎಂಬ ಮೂರು ರೂಪಗಳಲ್ಲಿ ಜಂಗಮ ಶಬ್ದವು ವ್ಯವಹರಿಸಲ್ಪಟ್ಟಿದೆ. ಶಿವಾಗಮಗಳಲ್ಲಿಯೂ ವೀರಶೈವ ಪುರಾಣಗಳಲ್ಲಿಯೂ ಅತಿಥಿಗಳನ್ನು ಜಂಗಮರೆಂದು ಕರೆಯಲಾಗಿದೆ. ವೃಷಭೇಂದ್ರ ವಿಜಯದಲ್ಲಿ ಶ್ರೀ ರೇಣುಕಾಚಾರ್ಯನನ್ನು ಜಂಗಮ ಕೋಟಿಗೆ ಮುಖ್ಯವಾದ ಭಾಸ್ವತ್ ಗುರು ಎಂದು ವರ್ಣಿತವಾಗಿದೆ. ಒಟ್ಟಿನಲ್ಲಿ ಜಂಗಮರು ಪೂಜ್ಯರು, ಪೂಜಾರ್ಹರು ಎಂದು ವ್ಯವಹರಿಸಲ್ಪಟ್ಟಿದೆ. ಭಕ್ತಿಭಂಡಾರಿ ಬಸವಣ್ಣನನ್ನು ಜಂಗಮ ಪ್ರಾಣಿ ಎಂದು ಕರೆದಿದ್ದಾರೆ. ಈಗಲೂ ವೀರಶೈವರಲ್ಲಿ ಜಂಗಮ ದಾಸೋಹಕ್ಕೆ ಬಹಳ ಪ್ರಾಮುಖ್ಯ ಇದೆ. (ಬಿ.ಎಸ್.)

**ಜಂಜಡ ಮತ್ತು ಝುಂಝಾವಾತ :** ಪ್ರ. ಶ. 1770ರ ಅನಂತರದ ದಶಕದಲ್ಲಿ ಜರ್ಮನಿಯ ಕೆಲವು ತರುಣ ಕವಿಗಳು ಹೂಡಿದ ಸಾಹಿತ್ಯ ಚಳವಳಿಗೆ ಈ ಹೆಸರಿದೆ. ಇದಕ್ಕೆ ಮೂಲವಾದ ಜರ್ಮನ್ ಪದ ಷ್ಟುರ್ಮ್ ಉನ್ಟ್ ಡ್ರಾಂಗ್ ಎಂದು. ಈ ಚಳವಳಿಗೆ ಬೆಂಬಲ ಕೊಟ್ಟ ಜರ್ಮನಿಯ ಕವಿಶ್ರೇಷ್ಠ ಗಯಟೆಯ ಗಾಟ್ಸ್ ಫಾನ್ ಬರ್ಲಿಕಿಂಗನ್ ಎಂಬ ಕೃತಿ 1773ರಲ್ಲಿ ಪ್ರಕಟವಾಯಿತಾದರೂ ಚಳವಳಿಗೆ ಹೆಸರು ಬಂದದ್ದು ಎಫ್. ಎಮ್. ಕ್ಲಿಂಗರ್ ರಚಿಸಿದ ರೂಪಕದ ಉಪನಾಮದಿಂದ. ಅದರ ಪೂರ್ತಿ ಹೆಸರು ವಿರ್‌ವಾರ್ ಓಡರ್ ಷ್ಟುರ್ಮ್ ಉನ್ಟ್ ಡ್ರಾಂಗ್ (1776). 1781ರಲ್ಲಿ ಪ್ರಕಟವಾದ ಷಿಲ್ಲರನ ಡಿ ರಾಬರ್ ಕೂಡ ಇದೇ ಮನೋಧರ್ಮವನ್ನು ಪ್ರದರ್ಶಿಸುವ ನಾಟಕ.

ಷ್ಟುರ್ಮ್ ಉನ್ಟ್ ಡ್ರಾಂಗ್ ಚಳವಳಿ ಬೋಧಿಸಿದ ಮುಖ್ಯಾಭಿಪ್ರಾಯಗಳು ಇವು: ಎದೆಯ ರಾಗಗಳಿಗೂ ರಾಗಾವೇಶಕ್ಕೂ ಪ್ರಥಮ ಸ್ಥಾನ ಕೊಡಬೇಕು; ಚೈತನ್ಯಮಯವಾದ ಸ್ವಂತ, ಸ್ವತಂತ್ರ ಬಾಳನ್ನು ಬಾಳಬೇಕು. ಪುರುಷ ತನ್ನತನವನ್ನು ಅರಿತು ರೂಡಿಸಿಕೊಂಡು ತೇಜಸ್ಸಿನಿಂದ ಮೆರೆಯದಿದ್ದರೆ ವ್ಯರ್ಥ. ತರ್ಕ ವಿವೇಚನೆಯನ್ನು ಬದಿಗಿಟ್ಟು ಸಮಯಸ್ಫೂರ್ತಿ ಅಂತರ್ಬೋಧೆಗಳು ಸೂಚಿಸುವುದನ್ನು ಹಿಡಿಯತಕ್ಕದ್ದು; ಅದರಂತೆ ನಡೆಯತಕ್ಕದ್ದು. ಅನಧೀನತೆ ಮನುಷ್ಯನಿಗೆ ಆಜನ್ಮಸಿದ್ಧವಾದ ಹಕ್ಕು. ಈ ಪಾತಕ್ಕೆ ಸಿಕ್ಕಿದ ಸಾಹಿತಿಗಳ ಕೃತಿಯ ಹಣೆಯ ಮೇಲೆ ಒಂದೊ ಅಥವಾ ಇನ್ನೊಂದೊ ಲಾಂಛನ ಇದ್ದೇ ಇರುತ್ತಿತ್ತು. ಮಿತಿಮೀರಿ ಕುದಿದೆದ್ದ ರಾಗಸಮುಚ್ಚಯದ ಗರ್ವಿತ ರಭಸ; ಅಥವಾ ಮರುಕ ಭಿಕ್ಷೆಯನ್ನು ಬೇಡುವ ಹೀನ ದೈನ್ಯದ ದೌರ್ಬಲ್ಯ. ಅದು ಆತ್ಮಶಕ್ತಿಯ ವೈಪರೀತ್ಯ. ಇದು ಅದರ ಅಭಾವ. ಎರಡನೆಯ ಜಾಯಮಾನವನ್ನು ಅತಿ ಸ್ಪಷ್ಟವಾಗಿ ಅತಿ ಚೆಲುವಾಗಿ ಪ್ರಭಾವ ಯುತವಾಗುವಂತೆ ಗಯಟೆ ತನ್ನ ಕಾದಂಬರಿ ಸಾರೋಸ್ ಆಫ್ ವರ್ದರ್‌ನಲ್ಲಿ ನಿರೂಪಿಸಿದ. ಗಯಟೆಗೇ ಆ ಪ್ರವೃತ್ತಿ ಒಂದು ಮನೋವ್ಯಾಧಿಯಂತೆ ತೋರಿ ಬಂತು. ಅದನ್ನು ಕಳೆದುಕೊಳ್ಳುವುದಾಗಿ ಅವನು ಆ ಕಾದಂಬರಿಯನ್ನು ಹೊರಗೆಡಹಿದನಂತೆ. ಇರಬಹುದು. ಆದರೂ ವರ್ದರನ ನೆಳಲು ಹಲವು ದೇಶಗಳ ಕವಿಗಳ ಮೇಲೆ ಹಲವು ಸಂವತ್ಸರ ದಟ್ಟವಾಗಿಯೇ ಬಿದ್ದಿತ್ತು. ವರ್ದರಿಸಮ್ ಎಂಬುದು ಈಗಲೂ ಒಂದು ಪಡೆಮಾತಾಗಿದೆ.

ಈ ಚಳವಳಿಗೆ ಹಿಂದೆ 1770ರ ವರೆಗೂ ಜರ್ಮನಿಯ ವಿದ್ವಾಂಸರು ವಿವೇಕ ವಿವೇಚನೆಗಳೇ ಪ್ರಧಾನ ಲಕ್ಷಣವಾದ ಡಿ ಔಫ್‌ಕ್ಲೇರುಂಗ್ ಎಂಬ ತತ್ತ್ವದರ್ಶನದ ಹಿಂಬಾಲಕರಾಗಿದ್ದರು. ಅದರ ಉಪದೇಶದಂತೆ ವಿಶ್ವಕ್ಕೊಂದು ಕ್ರಮವರಿತ ವಿನ್ಯಾಸವಿದೆ. ಬುದ್ಧಿಯಿಂದ ತರ್ಕದ ಮೂಲಕ ಅದರ ನಕ್ಷೆಯನ್ನು ಗೊತ್ತುಮಾಡಬಹುದು. ಜೀವನದಲ್ಲೂ ಸಾಹಿತ್ಯನಿರ್ಮಾಣದಲ್ಲೂ ನಿಯತಸೂತ್ರಗಳನ್ನು ಅನುಸರಿಸಬೇಕು. ರಾಗಗಳನ್ನೂ ಕಲ್ಪನೆಗಳನ್ನೂ ಹತೋಟಿಯಲ್ಲಿಡಬೇಕು. ಆಗಿನ ಕಾಲಕ್ಕೆ ಈ ವಿಷಯದಲ್ಲಿ ಫ್ರಾನ್ಸ್ ಜರ್ಮನಿಗೆ ಮಾರ್ಗದರ್ಶಿಯಾಗಿತ್ತು. 1770ರ ತರುವಾಯ ಈ ತತ್ತ್ವಕ್ಕೆ ಬಲವಾದ ಪ್ರತಿಭಟನೆ ಪ್ರಾರಂಭವಾಯಿತು. ತತ್ತ್ವಶಾಸ್ತ್ರ, ಮತ ಧರ್ಮಗಳ ವಿಚಾರ ನಮಗೆ ಬೇಡ ಎಂದು ಕೆಲವರು ಹೇಳತೊಡಗಿದರು. ಅಂದು ಸಾಹಿತ್ಯಕ್ಷೇತ್ರದಲ್ಲಿ ಜೆ.ಜಿ.ಫಾನ್ ಹರ್ಡರ್ ಎಂಬ ವಿಮರ್ಶಕ ನಾನಾ ದೇಶಗಳ ಜನಪದ ಲಾವಣಿಗಳನ್ನು ಸಂಗ್ರಹಿಸಿ, ಜರ್ಮನ್ ಭಾಷೆಗೆ ತರ್ಜುಮೆ ಮಾಡಿದ್ದನಷ್ಟೆ. ಕವಿಗಳಿಗೆ ಅವು ಹೊಸದಾದ ಒಂದು ಕಣ್ಣನ್ನು ತಂದುಕೊಟ್ಟುವು. ಹಾಗೂ ಫ್ರಾನ್ಸಿನ ಸಾಂಸ್ಕೃತಿಕ ಮುಂದಾಳಾದ ರೂಸೊ ಹೃದಯದ ಭಾವಗಳೂ ಪ್ರಕೃತಿಸಹಜವಾದ ಬದುಕೂ ಬರಿ ಬುದ್ಧಿವಿವೇಕಕ್ಕಿಂತ, ಅದರ ಕಟ್ಟುಪಾಡುಗಳಿಗಿಂತ ಎಷ್ಟೋ ಮೇಲು ಎಂದು ಸಾರಿ ಯುವಕರ ಆಳ್ತನವನ್ನು ಕೆರಳಿಸಿ ಕುದುರಿಸಿದ.

ಇಬ್ಬರು ವಿನಾ ಈ ಹೊಸ ಚಳವಳಿಯಲ್ಲಿ ಭಾಗವಹಿಸಿದ ಜರ್ಮನ್ ಕವಿಗಳಾರೂ ಪ್ರಖ್ಯಾತರಾಗಲಿಲ್ಲ. ಲೆನ್ಸ್ ಎಂಬಾತ ಹುಚ್ಚರ ಆಸ್ಪತ್ರೆಯಲ್ಲಿ ಮೃತನಾದ. ಬರ್ಗರ್ ಕೂಡ ಒಂದೇ ಒಂದು ಕವನದಿಂದ (ಲುನೋರೆ) ಉಳಿದುಬಂದಿದ್ದಾನೆ. ನಿಜವಾಗಿ ಕ್ರಾಂತಿ ಎಲ್ಲರ ಗಮನವನ್ನೂ ಸೆಳೆದು, ಇತರ ಯೂರೋಪಿನ ಪ್ರಾಂತಗಳಲ್ಲೂ ಅನುಕರಣೆಯನ್ನು ಪ್ರೇರಿಸಿದ್ದಕ್ಕೆ ಕಾರಣಭೂತರಾದವರು ಗಯಟೆ ಮತ್ತು ಷಿಲರ್. ಅವರಿಬ್ಬರೂ ಮಹಾಮೇಧಾವಿಗಳು, ಪ್ರಚಂಡ ಪ್ರತಿಭಾವಂತರು. ಆದರೆ ಆ ಬಿರುಗಾಳಿಯ ಗಲಿಬಿಲಿಯಿಂದ ಅವರಿಬ್ಬರೂ ಹತ್ತೆಂಟು ಸಂವತ್ಸರಗಳಲ್ಲೇ ಪಾರಾಗಿ ಚಿತ್ತಸ್ವಾಸ್ಥ್ಯದ ಕಡೆಗೆ ತಿರುಗಿದರು. ಹೀಗಾದರೂ ಚಳವಳಿಯ ಅವಾಂತರ ಅನೇಕ ದಿಕ್ಕಿಗೆ ಹಬ್ಬಿ ಹಲವು ದಶಕಗಳ ಕಾಲ ಸಾಹಿತಿಗಳಿಗೆ ತನ್ನದೇ ಆದ ಸ್ಫೂರ್ತಿಯನ್ನೂ ಉತ್ತೇಜನವನ್ನೂ ಒದಗಿಸುತ್ತ ಹೋಯಿತು. ರೊಮ್ಯಾಂಟಿಕ್ ಪದ್ಧತಿಯೆಂಬುದು ಸಾಹಿತ್ಯದಲ್ಲಿ ಹುಟ್ಟುವುದಕ್ಕೆ ಪೂರ್ವಸಿದ್ಧತೆಗಳನ್ನು ಈ ಚಳವಳಿ ಮಾಡಿತು ಎಂಬುದು ಮುಖ್ಯ. (ಎಸ್.ವಿ.ಆರ್.)

**ಜಂತರ್ ಮಂತರ್ :** ದೆಹಲಿಯಲ್ಲಿರುವ ಪ್ರಸಿದ್ಧ ಖಗೋಳ ವೀಕ್ಷಣಾಲಯ. ಇದನ್ನು ಸುಪ್ರಸಿದ್ಧ ವಿಜ್ಞಾನಿ ಮತ್ತು ರಾಜನೀತಿಜ್ಞ ಜಯಪುರದ ಮಹಾರಾಜ ಎರಡನೆಯ ಸವಾಯಿ ಜಯಸಿಂಹ (1699–1743) 1724ರಲ್ಲಿ ನಿರ್ಮಿಸಿದ. ಬಾಲ್ಯದಿಂದಲೂ ಈತನಿಗೆ ಖಗೋಳವಿಜ್ಞಾನದಲ್ಲಿ ಅಪಾರಾಸಕ್ತಿ. ಅದಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಅಧ್ಯಯನ ಮಾಡಿ ಪಾಂಡಿತ್ಯ ಗಳಿಸಿದ. ಆ ಕಾಲದಲ್ಲಿ ಬಳಕೆಯಲ್ಲಿದ್ದ ಖಗೋಳವಿಜ್ಞಾನದ ಕೋಷ್ಟಕಗಳಲ್ಲಿನ ಅನೇಕ ನ್ಯೂನತೆಗಳನ್ನು ಗಮನಿಸಿ ಅವನ್ನು ಸರಿಪಡಿಸಬೇಕೆಂಬ ಆಸೆ ಮೊಳೆಯಿತು. ಇದಕ್ಕಾಗಿ ಹಿಂದೂ, ಮುಸ್ಲಿಮ್ ಮತ್ತು ಯುರೋಪಿಯನ್ ಪದ್ಧತಿಗಳ ಖಗೋಳವಿಜ್ಞಾನ ಗ್ರಂಥಗಳನ್ನು ಅಭ್ಯಸಿಸಿದ. ಈ ಗ್ರಂಥಗಳಲ್ಲಿ ಮುಖ್ಯವಾದವನ್ನು ಸಂಸ್ಕೃತ ಭಾಷೆಗೆ ಅನುವಾದಿಸಿದ. ಇದಕ್ಕಾಗಿ ಜಗನ್ನಾಥ ಮೊದಲಾದ ಪಂಡಿತರನ್ನು ನೇಮಿಸಿಕೊಂಡು, ಅವರಲ್ಲಿ ಕೆಲವರನ್ನು ಪಾಶ್ಚಾತ್ಯ ದೇಶಗಳಿಗೆ ಖಗೋಳವಿಜ್ಞಾನದ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಲು ಕಳುಹಿಸಿದ. ದೇಶವಿದೇಶಗಳಿಂದ ಖಗೋಳವಿಜ್ಞಾನಿಗಳನ್ನು ಜಯಪುರಕ್ಕೆ ಆಹ್ವಾನಿಸಿ ವಿಜ್ಞಾನಗೋಷ್ಠಿಗಳನ್ನೇರ್ಪಡಿಸಿದ. ಖಗೋಳವಿಜ್ಞಾನದಲ್ಲಿ ನಿಷ್ಕೃಷ್ಟವಾದ ಪಾಂಡಿತ್ಯವನ್ನು ಸಂಪಾದಿಸಿ ಭಾರತದ ಮುಖ್ಯ ಸ್ಥಳಗಳಾದ ದೆಹಲಿ, ಜಯಪುರ, ಉಜ್ಜಯಿನಿ, ವಾರಾಣಸಿ (ಕಾಶಿ) ಮತ್ತು ಮಥುರ ನಗರಗಳಲ್ಲಿ ಖಗೋಳ ದೃಶ್ಯಗಳ ಸಮೀಕ್ಷಾ ಮಂದಿರಗಳ ನಿರ್ಮಾಣಕಾರ್ಯವನ್ನು ಪ್ರಾರಂಭಿಸಿದ. ಹೀಗೆ ನಿರ್ಮಿತವಾದ ಐದು ಖಗೋಳವೀಕ್ಷಣಾಲಯಗಳಲ್ಲಿ ದೆಹಲಿಯ ಜಂತರ್–ಮಂತರ್ ಮೊದಲನೆಯದು. ಇದು ಅಲ್ಲಿನ ಪಾರ್ಲಿಮೆಂಟ್ ಸ್ಟ್ರೀಟ್ ಎಂಬ ರಸ್ತೆಯಲ್ಲಿ ಕನಾಟ್ ಸರ್ಕಸಿಗೆ ದಕ್ಷಿಣ ದಿಕ್ಕಿನಲ್ಲಿದೆ. ಇದರ ಮುಖ್ಯಾಂಶಗಳು ಈ ರೀತಿ ಇವೆ :

ಅಕ್ಷಾಂಶ $28^0$ 37' 35" ಉತ್ತರ
ರೇಖಾಂಶ $77^0$ 13' 5" ಪೂರ್ವ
ಸಮುದ್ರಮಟ್ಟದಿಂದ ಎತ್ತರ 212 ಮೀ.

ಇದರಲ್ಲಿ ಖಗೋಳದೃಶ್ಯಗಳನ್ನು ಪರೀಕ್ಷಿಸಲು ನಿರ್ಮಿಸಲಾಗಿರುವ ಕಟ್ಟಡಗಳಿವು;

1. ಸಮ್ರಾಟ್ ಯಂತ್ರ (ಈಕ್ವಿನಾಕ್ಷಿಯಲ್ ಡಯಲ್)
2. ಜೈಪ್ರಕಾಶ್ : ಸಮ್ರಾಟ್ ಯಂತ್ರದ ದಕ್ಷಿಣ ದಿಕ್ಕಿನಲ್ಲಿರುವ ಅರ್ಧಗೋಳಾಕಾರದ ಎರಡು ಕಟ್ಟಡಗಳು.
3. ರಾಮಯಂತ್ರ : ಜೈಪ್ರಕಾಶ್ ಯಂತ್ರದ ದಕ್ಷಿಣಕ್ಕಿರುವ ವೃತ್ತಾಕಾರದ ಎರಡು ದೊಡ್ಡ ಕಟ್ಟಡಗಳು.

4. ಮಿಶ್ರಯಂತ್ರ : ಸಮ್ರಾಟ್ ಯಂತ್ರದ ವಾಯವ್ಯ ದಿಕ್ಕಿನಲ್ಲಿ ನಿರ್ಮಿತವಾಗಿರುವ ಕಟ್ಟಡ.

5. ಮಿಶ್ರಯಂತ್ರಕ್ಕೆ ನೈರುತ್ಯ ದಿಕ್ಕಿನಲ್ಲಿರವ ಎರಡು ಕಂಬಗಳು

6. ಮಿಶ್ರಯಂತ್ರದ ದಕ್ಷಿಣಕ್ಕಿರುವ ಅಳತೆ ಮಾಡಲು ಅನುಕೂಲವಾದ ಒಂದು ದೊಡ್ಡ ಜಗಲಿ.

1. ಸಮ್ರಾಟ್ ಯಂತ್ರ : ಇದು ದೃಕ್ಸಿದ್ಧಿ ಕಾಲವನ್ನು ಸೂಚಿಸುವ ಯಂತ್ರ. ಇದು ಈ ವೀಕ್ಷಣಾಲಯದ ಪ್ರಧಾನವಾದ ಮತ್ತು ಬೃಹದಾಕಾರದ ಕಲ್ಲು ಕಟ್ಟಡದಲ್ಲಿ ಉಂಟು. ಕಟ್ಟಡದ ಬಹುಭಾಗ ನೆಲದಡಿಯಲ್ಲಿದೆ. ಇದು 4.5 ಮೀ ಆಳ, ಪೂರ್ವ–ಪಶ್ಚಿಮ 221



ಸಮ್ರಾಟ್ ಯಂತ್ರ

ಮೀ ಅಡಿ, ಉತ್ತರ–ದಕ್ಷಿಣ 36.5 ಮೀ ಇರುವ ಚತುರ್ಭುಜಾಕೃತಿಯಲ್ಲಿ ನಿರ್ಮಿತವಾಗಿದೆ. ಈ ಕಟ್ಟಡದ ಒಟ್ಟು ಎತ್ತರ 21 ಮೀ. ಇದು ನೆಲಮಟ್ಟದಿಂದ 21 ಮೀ. ಎತ್ತರವಾಗಿಯೂ ಉತ್ತರ–ದಕ್ಷಿಣ 34.5 ಮೀ ಪೂರ್ವ–ಪಶ್ಚಿಮ 38 ಮೀ. ವಿಸ್ತಾರವಾಗಿಯೂ ಇದೆ. ಎರಡು ತುದಿಗಳಲ್ಲೂ ಬಾಗಿರುವ ಬೃಹದಾಕಾರದ ಶಂಕು (ನೋಮನ್) ಮತ್ತು ಅದರ ಎರಡು ಪಕ್ಕಗಳಿಗೂ ಸೇರಿಕೊಂಡಿರುವ ವೃತ್ತಪಾದಾಕಾರದ (ಕ್ವಾಡ್ರಂಟ್) ಕಟ್ಟಡ ಈ ಯಂತ್ರದ ಮುಖ್ಯವಾದ ಭಾಗಗಳು. ಶಂಕುವಿನ ತುದಿಗಳು ಉತ್ತರಧ್ರುವದ ಕಡೆಗಿದ್ದು, ಭೂಮಿಯ ಅಕ್ಷರೇಖೆಗೆ ಸಮಾಂತರವಾಗಿವೆ. ಇದರ ಇಬ್ಬದಿಯಲ್ಲಿ ವೃತ್ತಪಾದಾಕಾರದ ಕಟ್ಟಡಗಳಿವೆ. ಇವುಗಳ ತ್ರಿಜ್ಯ 15 ಮೀ. ವೃತ್ತಗಳ ಅಂಚುಗಳಲ್ಲಿ ಗಂಟೆ, ಡಿಗ್ರಿ ಮತ್ತು ಮಿನಿಟುಗಳನ್ನು ಗುರುತಿಸಲಾಗಿದೆ. ಉತ್ತರಕ್ಕಿರುವ ಅಂಚುಗಳಲ್ಲಿ ಇಂಗ್ಲಿಷ್ ಚಿಹ್ನೆಗಳೂ ದಕ್ಷಿಣದ ಅಂಚುಗಳಲ್ಲಿ ಹಿಂದೂ ಚಿಹ್ನೆಗಳೂ ಇವೆ. ಶಂಕುವಿನ ಕೊನೆಗಳನ್ನು ಟ್ಯಾಂಜೆಂಟುಗಳ ಮಾನಕಗಳಲ್ಲಿ ಗುರುತಿಸಿದೆ. ವೃತ್ತಪಾದಾಕಾರಗಳ ಮೇಲೆ ಬಿದ್ದ ಶಂಕುವಿನ ತುದಿಯ ನೆರಳು ಸ್ಥಳೀಯ ಕಾಲವನ್ನು ಸೂಚಿಸುತ್ತದೆ ಮತ್ತು ಇದರ ಸಹಾಯದಿಂದ ಸೂರ್ಯನ ಘಂಟಾವೃತ್ತಾಂಶವನ್ನು (ಡೆಕ್ಲಿನೇಷನ್) ತಿಳಿಯಬಹುದು.

ಈ ಕಟ್ಟಡದ ಪೂರ್ವಭಾಗದಲ್ಲಿನ ವೃತ್ತ ಪಾದಾಕೃತಿಯ ಕೆಳಭಾಗದಲ್ಲಿರುವ ಕೋಣೆಯಲ್ಲಿ ಷಷ್ಠಾಂಶವೆಂಬ ಒಂದು ಯಂತ್ರವಿದೆ. ಇದು ಮಧ್ಯಾಹ್ನರೇಖೆಗೆ ಸಮತಲವಾಗಿರುವ ಅಳತೆಗೆರೆಗಳಿಂದ ಕೂಡಿದ 20 ಮೀ. ಒಂದು ವೃತ್ತ ಖಂಡಾಕೃತಿ. ಸೂರ್ಯ ಮಧ್ಯಾಹ್ನರೇಖೆಯನ್ನು ದಾಟುವಾಗ ಬೆಳಕು ವೃತ್ತಖಂಡಾಕೃತಿಯ ಮೇಲೆ ಬಿದ್ದು ಮಧ್ಯಾಹ್ನರೇಖೆಯ ಔನ್ನತ್ಯವನ್ನು ಸೂಚಿಸುತ್ತದೆ.

ಇದರಿಂದ ಸೂರ್ಯನ ಘಂಟಾವೃತ್ತಾಂಶವನ್ನು ಸುಲಭವಾಗಿ ಅಳತೆಮಾಡಬಹುದು. 1910ರಲ್ಲಿ ಸಮೀಕ್ಷಾಮಂದಿರವನ್ನು ಜೀರ್ಣೋದ್ಧಾರ ಮಾಡಿದಾಗ ಈ ಕೋಣೆ ಮುಚ್ಚಿ ಹೋಯಿತು.

ಸಮ್ರಾಟ್ ಯಂತ್ರದ ಶಂಕುವಿನ ತುದಿಯಲ್ಲಿ ವೃತ್ತಾಕಾರದ ಒಂದು ಕಂಬ ಉಂಟು. ಹಿಂದೆ ಇದನ್ನು ಕ್ಷಿತಿಜಾಂಶವನ್ನು (ಅಜಿಮತ್) ತಿಳಿಯಲು ಉಪಯೋಗಿಸುತ್ತಿದ್ದಂತೆ ತೋರುತ್ತದೆ. ಆದರೆ ಈಗ ಈ ಕಂಬದ ಮೇಲೆ ಪಾಶ್ಚಾತ್ಯ ಮಾದರಿಯ ಒಂದು ಛಾಯಾಯಂತ್ರವನ್ನು (ಸನ್ ಡಯಲ್) ಇರಿಸಲಾಗಿದೆ. ಈ ಕಟ್ಟಡದ ಕೆಳಭಾಗ ಈಗ ಸಾಮಾನ್ಯವಾಗಿ ನೀರಿನಿಂದ ತುಂಬಿರುವುದು. ಕೆಲವು ವೇಳೆ ಶಂಕುವಿನ ಇಬ್ಬದಿಯಲ್ಲಿರುವ ವೃತ್ತ ಪಾದಾಕೃತಿಗಳೂ ನೀರಿನಿಂದ ಮುಚ್ಚಲ್ಪಟ್ಟಿರುತ್ತವೆ.

2. ಜೈಪ್ರಕಾಶ್: ಸ್ಥಾನಿಕ ಕಾಲ, ಸಂಕ್ರಾಂತಿ ವೃತ್ತ ಮತ್ತು ಮಧ್ಯಾಹ್ನರೇಖೆಯ ಮೇಲಿನ ರಾಶಿಯನ್ನು ಸೂಚಿಸುವ ಯಂತ್ರ. ಇದು ಪರಸ್ಪರ ಪೂರಕವಾಗಿರುವ ನಿಮ್ನಗೋಳಾರ್ಧಗಳಿಂದ (ಕಾನ್‌ಕೇವ್ ಹೆಮಿಸ್ಫಿಯರ್ಸ್) ಕೂಡಿದ್ದು ಸಮ್ರಾಟ್ ಯಂತ್ರದ ದಕ್ಷಿಣ ದಿಕ್ಕಿನಲ್ಲಿ ಸ್ಥಾಪಿತವಾಗಿದೆ. ಈ ಎರಡು ಗೋಳಾರ್ಧಗಳಿಗೂ ಅಡ್ಡವಾಗಿ, ಉತ್ತರ–ದಕ್ಷಿಣಾಭಿಮುಖವಾಗಿಯೂ ಪೂರ್ವ– ಪಶ್ಚಿಮಾಭಿಮುಖವಾಗಿಯೂ ಇರುವಂತೆ, ತಂತಿಗಳು ಕಟ್ಟಲ್ಪಟ್ಟಿವೆ. ಇವು ಪರಸ್ಪರ ಛೇದಿಸುವ ಸ್ಥಳದ ನೆರಳು ಗೋಳಾರ್ಧಗಳ ಒಳಭಾಗಿನ ಮೇಲೆ ಬಿದ್ದಾಗ ಅದು ಆ ವೇಳೆಯಲ್ಲಿ ಸೂರ್ಯನ ಸ್ಥಾನವನ್ನು ಸೂಚಿಸುತ್ತದೆ. ಗೋಳಾರ್ಧಗಳ ಮೇಲ್ಮೈ ಮೇಲೆ ಔನ್ನತ್ಯ ಮತ್ತು ಕ್ಷಿತಿಜಾಂಶವೃತ್ತಗಳನ್ನು ಗುರುತಿಸಿದೆ. ಇವುಗಳ ನೆರವಿನಿಂದ ಸೂರ್ಯನ ಸ್ಥಾನವನ್ನು ನೇರವಾಗಿ ತಿಳಿಯಬಹುದು. ರಾಶಿಚಕ್ರವು (ಜೋಡಿಯಕ್) ಇದರ ಮೇಲೆ ಗುರುತು ಮಾಡಲ್ಪಟ್ಟು ಮಧ್ಯಾಹ್ನರೇಖೆಯ ಮೇಲಿನ ರಾಶಿ ಸೂರ್ಯನ ಬೆಳಕಿನಿಂದ ಸೂಚಿತವಾಗುತ್ತದೆ. ಈ ಯಂತ್ರಕ್ಕೆ ಕಟ್ಟಿದ ತಂತಿಗಳನ್ನು ಈಗ ತೆಗೆದುಬಿಟ್ಟಿದ್ದಾರೆ. ಆದರೆ ಅವನ್ನು ಕಟ್ಟುತ್ತಿದ್ದ 2 ಅಂಗುಲ ಉದ್ದದ ಕಬ್ಬಿಣದ ಕೊಳವೆಗಳು ಹಾಗೆಯೇ ಉಳಿದಿವೆ.

3. ರಾಮಯಂತ್ರ ; ಔನ್ನತ್ಯವನ್ನೂ ಕ್ಷಿತಿಜಾಂಶವನ್ನೂ ಸೂಚಿಸುವ ಯಂತ್ರ. ಇದು ಬೃಹದ್ವೃತ್ತಾಕಾರದ ಪರಸ್ಪರ ಪೂರಕವಾದ ಎರಡು ಕಟ್ಟಡಗಳಿಂದ ಕೂಡಿದ್ದು ಜೈಪ್ರಕಾಶ್



ರಾಮಯಂತ್ರ–ಉತ್ತರದ ಕಟ್ಟಡ

ಯಂತ್ರದ ದಕ್ಷಿಣ ದಿಕ್ಕಿನಲ್ಲಿ ಸ್ಥಾಪಿತವಾಗಿದೆ. ಈ ಕಟ್ಟಡದ ಮಧ್ಯೆ 1.7.ಮೀ. ವ್ಯಾಸವುಳ್ಳ ಒಂದು ಕಂಬ ಉಂಟು. ಕಟ್ಟಡದ ಒಳಗಿನ ನೆಲಮಟ್ಟದಿಂದ ಗೋಡೆಯ ಎತ್ತರ 7.5.ಮೀ. ಇದರ ಗೋಡೆ ಮತ್ತು ನೆಲದ ಮೇಲೆ ಕ್ಷಿತಿಜಾಂಶವೃತ್ತ ಮತ್ತು ಔನ್ನತ್ಯಗಳನ್ನು ತಿಳಿಯಲು ಸಹಾಯವಾಗುವಂತೆ ಅಳತೆಗೆರೆಗಳಿಂದ ಗುರುತು ಮಾಡಿದೆ. ಖಗೋಳದ ದೃಶ್ಯಗಳನ್ನು ಪರೀಕ್ಷಿಸಲು ಸುಗಮವಾಗಿರುವಂತೆ ಈ ಕಟ್ಟಡದ ನೆಲವನ್ನು 30 ಸಮಭಾಗಗಳಾಗಿ ವಿಂಗಡಿಸಿ ಪ್ರತಿ ವಿಭಾಗದ ನಡುವಣ ಅಂತರ ವಿಭಾಗದ ಕೋನದಷ್ಟೇ, ಅಂದರೆ 60° ಗಳಷ್ಟು, ಇರುವಂತೆ ಮಾಡಲಾಗಿದೆ. ಅಳತೆಗೆರೆಗಳಿಂದ ಕೂಡಿರುವ ಗೋಡೆ ಸಹ ನೆಲದಂತೆಯೇ ಕಂಡಿಗಳಿಂದ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ಕಂಡಿಯ ಪಕ್ಕದಲ್ಲೂ ಇರುವ ಗಿ ಆಕಾರದ ಕಚ್ಚಿನಲ್ಲಿ ಖಗೋಳದ ದೃಶ್ಯಗಳನ್ನು ಗುರಿಯಿಟ್ಟು ನೋಡಲು ಸರಿಹೊಂದಿಸುವ ಸಲಾಕೆಗಳನ್ನು ಅಳವಡಿಸಲಾಗಿದೆ. ಆದರೆ ಸಲಾಕೆಗಳು ಈಗ ಕಾಣುತ್ತಿಲ್ಲ.

4. ಮಿಶ್ರಯಂತ್ರ : ಸಮ್ರಾಟ್ ಯಂತ್ರಕ್ಕೆ ವಾಯವ್ಯ ದಿಕ್ಕಿನಲ್ಲಿ ಸುಮಾರು 42.5 ಮೀ ದೂರದಲ್ಲಿ ನಿರ್ಮಿತವಾಗಿದೆ. ಇದು ನಿಯತಚಕ್ರ, ಚಿಕ್ಕ ಸಮ್ರಾಟ್ ಯಂತ್ರದಕ್ಷಿಣ ವೃತ್ತಯಂತ್ರ ಮತ್ತು ಕರ್ಕಾಟಕ ರಾಶಿವಲಯ ಎಂಬ ನಾಲ್ಕು ಯಂತ್ರಗಳಿಂದ ಕೂಡಿರುವುದರಿಂದ ಇದನ್ನು ಮಿಶ್ರಯಂತ್ರವೆಂದು ಕರೆಯಲಾಗಿದೆ.

ಮಿಶ್ರಯಂತ್ರ–ದಕ್ಷಿಣದ ಕಡೆಯಿಂದ

ನಿಯತಚಕ್ರ ಕಟ್ಟಡದ ಮಧ್ಯಭಾಗದಲ್ಲಿದೆ. ಒಂದು ಶಂಕು ಮತ್ತು ಅದರ ಎರಡು ಕಡೆಗಳಲ್ಲಿಯೂ ಸೇರಿಕೊಂಡಿರುವ ಅರ್ಧವೃತ್ತಾಕೃತಿಗಳು ಈ ಯಂತ್ರದ ಭಾಗಗಳು. ನಿಯತಚಕ್ರಕ್ಕೆ ಇಬ್ಬದಿಯಲ್ಲೂ ಅದಕ್ಕೆ ಕೂಡಿರುವಂತೆ ಒಂದು ಚಿಕ್ಕ ಸಮ್ರಾಟ್ ಯಂತ್ರವಿದೆ.

ಈ ಕಟ್ಟಡದ ಪೂರ್ವ ದಿಕ್ಕಿಗೆ ಗೋಡೆಯ ಮೇಲೆ ಅಳತೆಗೆರೆಗಳಿಂದ ಗುರುತು ಮಾಡಲ್ಪಟ್ಟಿರುವ ಅರ್ಧವೃತ್ತಾಕಾರದ ದಕ್ಷಿಣ ವೃತ್ತಯಂತ್ರವಿದೆ. ಔನ್ನತ್ಯವನ್ನು ತಿಳಿಯಲು ಮಿಶ್ರಯಂತ್ರದ ಉತ್ತರ ದಿಕ್ಕಿನ ಗೋಡೆಯ ಮೇಲೆ ಅಳತೆಗೆರೆಗಳಿಂದ ಗುರುತಿಸಿರುವ ಒಂದು ದೊಡ್ಡ ವೃತ್ತ ಉಂಟು. ಇದನ್ನು ಕರ್ಕಾಟಕ ರಾಶಿವಲಯವೆನ್ನುತ್ತಾರೆ. ಮಿಶ್ರ ಯಂತ್ರದ ಮುಂದೆ 14.3 ಮೀ. ಉದ್ದ ಮತ್ತು 13.1 ಮೀ. ಅಗಲವಿರುವ ಒಂದು ದೊಡ್ಡ ಜಗಲಿಯಿದೆ. ಪ್ರಾಯಶಃ ಇದನ್ನು ಪ್ರಧಾನ ಕಟ್ಟಡಗಳು ನಿರ್ಮಾಣವಾಗುತ್ತಿದ್ದ ಕಾಲದಲ್ಲೋ ಅಥವಾ ಅವನ್ನು ಸರಿಪಡಿಸಿದ ಸಂದರ್ಭದಲ್ಲೋ ಅಳತೆ ಮಾಡಲು ಉಪಯೋಗಿಸುತ್ತಿದ್ದಂತೆ ಕಾಣುತ್ತದೆ. ಇದರ ಮೇಲೆ 6 ಮೀ. ತ್ರಿಜ್ಯವುಳ್ಳ ಕಾಲು ವೃತ್ತಾಕಾರದ ಗುರುತಿದೆ. ಮಿಶ್ರಯಂತ್ರದಿಂದ ನೈಋತ್ಯ ದಿಕ್ಕಿನಲ್ಲಿ 5.1 ಮೀ. ಅಂತರವಿರುವ ಎರಡು ಕಂಬಗಳಿವೆ.

(ಕೆ.ವಿ.ಎಸ್.ಎ.)

**ಜಂತುಹುಳು :** ಮಾನವರ ಕರುಳಿನಲ್ಲಿರುವ ಒಂದು ಪರೋಪಜೀವಿ (ರೌಂಡ್ ವರ್ಮ್). ಇದು ನೆಮಟೋಡ ವಂಶದ ಆಸ್ಕಾರಿಸ್ ಜಾತಿಯ ದುಂಡು ಹುಳು. ಮನುಷ್ಯ ಮತ್ತು ಇತರ ಸ್ತನಿಗಳಿರುವಲ್ಲೆಲ್ಲ ಜಂತುಹುಳುವಿನ ವ್ಯಾಪ್ತಿ ಉಂಟು. ಆದರೆ ಒಂದೊಂದು ಪ್ರಾಣಿಯಲ್ಲಿ ಒಂದೊಂದು ಪ್ರಭೇದ ಇರುವುದು ಸಾಮಾನ್ಯ. ಉದಾಹರಣೆಗೆ, ಮಾನವನಲ್ಲಿ ಆ. ಲುಂಬ್ರಿಕಾಯ್ಡಿಸ್ ಪ್ರಭೇದವೂ ಕುದುರೆಯಲ್ಲಿ ಆ.ಮೆಗಾಲೊಕೆಫಾಲ ಪ್ರಭೇದವೂ ಹಂದಿಯಲ್ಲಿ ಆ.ಸುಯಿಲ ಪ್ರಭೇದವೂ ಇವೆ. ಆ. ಲುಂಬ್ರಿಕಾಯ್ಡಿಸ್ ಪ್ರಭೇದದಲ್ಲಿ ಆ.ಲುಂ.ಯೂನಿವೇಲೆನ್ಸ್ ಮತ್ತು ಆ.ಲುಂ ಬೈವೇಲೆನ್ಸ್ ಎಂಬ ಎರಡು ಬಗೆಗಳಿವೆ. ಈ ಬಗೆಗಳಲ್ಲಿ ಅನುಕ್ರಮವಾಗಿ 2 ಮತ್ತು 4 ಕ್ರೋಮಸೋಮುಗಳು ಮಾತ್ರ ಇರುವುದರಿಂದ ಕ್ರೋಮೋಸೋಮುಗಳ ವಿನ್ಯಾಸ, ಆನುವಂಶಿಕತೆಯಲ್ಲಿ ಅವುಗಳ ಪಾತ್ರ ಇವೇ ಮುಂತಾದವನ್ನು ಅಧ್ಯಯಿಸಲು ಇವನ್ನು ಪ್ರಯೋಗಗಳಲ್ಲಿ ಬಳಸುತ್ತಾರೆ.

ಆ.ಲುಂಬ್ರಿಕಾಯ್ಡಿಸ್ ಜಂತು ಹುಳುವಿನಲ್ಲಿ ಹೆಣ್ಣಿನ ದಪ್ಪ 3–4 ಮಿ.ಮೀ. ; ಉದ್ದ 10 ಸೆಂ.ಮೀ. ನಿಂದ 35–40 ಸೆಂ.ಮೀ. ನವರೆಗೂ ಇದೆ. ದಪ್ಪ ಹಾಗೂ ಉದ್ದ ಎರಡರಲ್ಲೂ ಗಂಡು ಹೆಣ್ಣಿನ ಅರ್ಧದಷ್ಟು ಮಾತ್ರ ಉಂಟಷ್ಟೆ ಆ.ಲುಂಬ್ರಿಕಾಯ್ಡಿಸ್ ಹುಳುವಿನ ಮೈಮೇಲೆ ಉಂಗುರ ಗುರುತುಗಳಿವೆ. ಹುಳುವಿಗೆ ಪಳಪಳನೆ ಹೊಳೆಯುವ ಮಾಸಲು ಬಿಳುಪು ಬಣ್ಣ ಉಂಟು. ಅದರ ಎರಡು ಕೊನೆಗಳೂ ಚೂಪಾಗಿವೆ. ಬಾಲದ ತುದಿ ಕೊಕ್ಕೆಯಂತೆ ಬಗ್ಗಿದೆ. ತಲೆಕೊನೆಯ ತುದಿಯಲ್ಲಿ ಬಲು ಸಣ್ಣ ಹಲ್ಲುಗಳಿರುವ ಮತ್ತು ಮೂರು ಅಂಡಾಕಾರದ ಉಬ್ಬುಗಳಿಂದಾದ ಬಾಯಿ ಉಂಟು. ಬಾಯಿಯಿಂದ ಮುಂದಕ್ಕೆ ಚಿಕ್ಕ ಅನ್ನನಾಳವಿದೆ. ಇದರಲ್ಲಿ ಪ್ರಬಲ ಸ್ನಾಯುಗಳಿವೆ. ಇದಕ್ಕೆ ಆಹಾರ ಪದಾರ್ಥಗಳನ್ನು ಹೀರಿಕೊಳ್ಳಬಲ್ಲ ಸಾಮರ್ಥ್ಯ ಉಂಟು. ಅನ್ನನಾಳದಿಂದ ಮುಂದಕ್ಕೆ ಸ್ನಾಯುರಹಿತ ಉದ್ದ ಕರುಳಿದೆ. ಕೊನೆಯಲ್ಲಿ ಗುದದ್ವಾರ. ದೇಹದ ಎರಡು ಪಕ್ಕಗಳಲ್ಲಿ ವಿಸರ್ಜನ ನಾಳಗಳೂ (ಎಕ್ಸ್‌ಕ್ರೀಟರಿ ಡಕ್ಟ್ಸ್) ಮೇಲು ಮತ್ತು ಕೆಳ ಭಾಗಗಳಲ್ಲಿ ನರತಂತುಗಳೂ ಇವೆ. ಮೇಲ್ಮೈಯ ಹೊರ ತ್ವಚೆಯನ್ನು ಕ್ಯೂಟಿಕಲ್ ಎನ್ನುವ ಗಡಸು ಪೊರೆ ಆವರಿಸಿದೆ. ದೇಹಭಿತ್ತಿಯ ಗಾತ್ರ ಪ್ರಧಾನವಾಗಿ ಸ್ನಾಯುಕೋಶಗಳಿಂದಲೇ ಆಗಿದೆ. ಭಿತ್ತಿಯ ಒಳಗೆ ಕರುಳು ಮತ್ತು ಪ್ರಜನನೇಂದ್ರಿಯಗಳು ಭರ್ತಿಯಾಗಿವೆ. ಕರುಳು ನಡುತ್ವಕ್ಕಿನಿಂದ (ಮೀಸೋಡರ್ಮ್) ಆವೃತವಾಗಿಲ್ಲದ್ದರಿಂದ ಅದಕ್ಕೂ ದೇಹಭಿತ್ತಿಗೂ ನಡುವೆ ಇರುವ ಸ್ಥಳ ನಿಜವಾದ ಸೀಲೋಮ್ ಅಲ್ಲ.

ಹೊರತ್ವಕ್ಕು, ನಡುತ್ವಕ್ಕು, ಒಳತ್ವಕ್ಕುಗಳೆಂಬ (ಎಕ್ಟೋಡರ್ಮ್, ಮೀಸೋಡರ್ಮ್, ಎಂಡೋಡರ್ಮ್) ಮೂರು ಭ್ರೂಣಾವಸ್ಥೆಯ ಪದರಗಳು ವಿಕಾಸದಲ್ಲಿ ಮೊದಲಿಗೆ ಕಂಡುಬರುವ ಅಲ್ಪವಿಕಾಸಿ ಜೀವಿಗಳ ಗುಂಪಿಗೆ ಸೇರಿರುವುದರಿಂದ ಮತ್ತು ಅದರ ಅಂಗರಚನೆ ಸುಲಭವಾಗಿರುವುದರಿಂದ ತರಗತಿಗಳಲ್ಲಿ ಜಂತುಹುಳುವಿನ ಅಡ್ಡಕೊಯ್ತ ವನ್ನು ಮಾಮೂಲಾಗಿ ಅಭ್ಯಸಿಸಲಾಗುತ್ತದೆ. ಅಲ್ಲದೆ ಪೂರ್ಣಪರತಂತ್ರ ಜೀವಿಯಾದ್ದರಿಂದ ದೇಹದಲ್ಲಾಗುವ ಅಂಗರಚನಾ ವ್ಯತ್ಯಾಸಗಳನ್ನು ಅಭ್ಯಸಿಸಲೂ ಜಂತುಹುಳುವನ್ನು ಉದಾಹರಣೆಯಾಗಿ ಉಪಯೋಗಿಸಲಾಗುತ್ತದೆ. ಜಂತುಹುಳುವಿನ ದೇಹದಲ್ಲಿ ಪ್ರಜನನೇಂದ್ರಿಯಗಳು ಅದರ ಮುಂದಿನ 1/3 ಭಾಗದಿಂದ ಪ್ರಾರಂಭವಾಗಿ ಕೊನೆಯ ತನಕ ಆಕ್ರಮಿಸಿಕೊಂಡಿರುತ್ತವೆ. ಗಂಡಿನಲ್ಲಿ ಸಣ್ಣ ಗಂಟಿನಂತಿರುವ ವೃಷಣ ಸ್ವಲ್ಪ ದೊಡ್ಡದಾಗಿ ನಾಳಾಕಾರವಾಗಿರುವ ವೀರ್ಯಾಣು ನಾಳಕ್ಕೆ ತೆರೆದುಕೊಳ್ಳುತ್ತದೆ. ಇದು ಇನ್ನೂ ಮುಂದೆ ವೀರ್ಯಾಣುಗಳು ಶೇಖರವಾಗುವ ದೊಡ್ಡ ನಾಳಾಕಾರದ ವೀರ್ಯಾಣುಕೋಶವಾಗಿ (ಸೆಮಿನಲ್ ವೆಸಿಕಲ್) ಜನನರಂಧ್ರದಲ್ಲಿ ಕೊನೆಗೊಳ್ಳುತ್ತದೆ. ಜನನರಂಧ್ರ ಕರುಳಿನ ತುದಿಯಲ್ಲಿರುವ ಗುದದ್ವಾರದ ಹತ್ತಿರವೇ ಹೊರಕ್ಕೆ ತೆರೆದುಕೊಳ್ಳುವುವು. ಹೆಣ್ಣಿನೊಡನೆ ಸಂಗಮದ ಸಲುವಾಗಿ ಆ ಸ್ಥಳದಲ್ಲಿ ಎರಡು ಉಪಗುಚ್ಛಗಳು ಚಾಚಿಕೊಂಡಿವೆ. ಎಡಬಲಗಳಿಂದ ಎರಡು ಗರ್ಭಕೋಶಗಳು ಯೋನಿಯೊಳಕ್ಕೆ ತೆರೆದುಕೊಳ್ಳುವುವು. ಅಂಡಾಶಯಗಳು ಎರಡೂ ಉದ್ದವಾಗಿ ಸುರುಳಿ ಸುತ್ತಿಕೊಂಡಿವೆ. ಇವುಗಳಲ್ಲಿ ಉತ್ಪತ್ತಿಯಾದ ಅಂಡಾಣುಗಳು ಆಯಾ ಅಂಡನಾಳಗಳ ಮೂಲಕ ಅದೇ ಕಡೆಯ ಗರ್ಭಕೋಶಕ್ಕೆ ಸೇರಿ ಅಲ್ಲಿ ಸಂಗ್ರಹವಾಗುವುವು. ಗರ್ಭಧಾರಣೆ ಆದ ಮೇಲೆ ಹೆಣ್ಣು ಪ್ರತಿದಿವಸವೂ ಸುಮಾರು 2 ಲಕ್ಷ ತತ್ತಿಗಳನ್ನಿಡುತ್ತದೆ. ಇವು ಮಲದ ಮೂಲಕ ದೇಹದಿಂದ ಹೊರಲೋಕಕ್ಕೆ ವಿಸರ್ಜಿತವಾಗುತ್ತವೆ. ತತ್ತಿಗಳಿಗೆ ಚಿನ್ನದ ಬಣ್ಣದ ದೃಢವಾದ ಪಾರದೀಪಕ ಕವಚ ಉಂಟು. ಅವು ಒಣ ಧೂಳಿನಲ್ಲಿಯೂ ಬಹುಕಾಲಜೀವದಿಂದಿರಬಲ್ಲವು.

ಮಾನವನಿಂದ ಮಾನವನಿಗೆ ಸೋಂಕು ಹರಡುವುದು. ಮಧ್ಯವರ್ತಿ ಆತಿಥೇಯ ಜೀವಿ (ಇಂಟರ್‌ಮೀಡಿಯೇಟ್ ಹೋಸ್ಟ್) ಜಂತುಹುಳುವಿನ ಪ್ರಸಾರಕ್ಕೆ ಬೇಕಾಗಿಲ್ಲವೆಂದು ಕಂಡುಬಂದಿದೆ. ಆಹಾರ ಪಾನೀಯಗಳ ಮತ್ತು ಧೂಳಿನ ಮೂಲಕ ತತ್ತಿಗಳು ಆತಿಥೇಯ ದೇಹವನ್ನು ಸೇರುತ್ತವೆ. ವಿಸರ್ಜಿತವಾದ ತತ್ತಿಗಳಲ್ಲಿ ಭ್ರೂಣ ನೆರಳಿರುವ ಕಡೆ, ಹಸಿಯಾದ ಆದರೆ ಬೆಚ್ಚಗಿರುವ ಮಣ್ಣಿನಲ್ಲಿ 2–3 ವಾರ ಬೆಳೆಯುತ್ತದೆ. ಆದರೂ ತತ್ತಿ ಒಡೆಯುವುದಿಲ್ಲ. ಅಪರೂಪವಾಗಿ ತತ್ತಿಗಳು ಒಡೆದು ಮರಿಗಳು ಹೊರಬಿದ್ದು ಇವು ಆತಿಥೇಯ ಜೀವಿಯ ಚರ್ಮವನ್ನು ಕೊರೆದುಕೊಂಡು ರಕ್ತಗತವಾಗುವುದೂ ಕಂಡುಬಂದಿದೆ. ಹುಳುವಿರುವ ವ್ಯಕ್ತಿ ವಾಸಿಸುತ್ತಿರುವ ಕಡೆ ಸ್ವಾಭಾವಿಕವಾಗಿಯೇ ಮಲವಿಸರ್ಜನಾ ಸ್ಥಳದ ಮಣ್ಣಿನಲ್ಲಿ ಲಕ್ಷಾಂತರ ತತ್ತಿಗಳು ಇರುತ್ತವೆ. ಇಂಥ ಮಣ್ಣು ಬೆರೆತ ನೀರು ತರಕಾರಿಗಳ ಸೇವನೆಯಿಂದ ಇತರ ವ್ಯಕ್ತಿಯೊಳಗೆ ಹುಳುವಿನ ಪ್ರವೇಶವಾಗುತ್ತದೆ. ಆದರೆ ತತ್ತಿಯಿಂದ ಜಂತುಹುಳು ನೇರವಾಗಿ ಬೆಳೆದುಬರದೆ ತತ್ತಿಯ ಕರುಳಿನಲ್ಲಿ ಒಡೆದು ಮರಿಯಾಗಿ, ಈ ಮರಿಗಳು ಕರುಳಿನ ರಕ್ತನಾಳ ದುಗ್ಧರಸನಾಳಗಳ ಮೂಲಕ ಪುಪ್ಪುಸಗಳನ್ನು ಸೇರಿ ಅಲ್ಲಿ ಕೆಲದಿವಸಗಳ ಕಾಲ ಬೆಳೆಯುತ್ತವೆ. ಅನಂತರ ಶ್ವಾಸನಾಳಗಳ ಮೂಲಕ ಗಂಟಲಿಗೆ ಬಂದು ಉಗುಳಿನೊಡನೆ ನುಂಗಲ್ಪಟ್ಟು ಪುನಃ ಜಠರ ಕರುಳುಗಳನ್ನು ಸೇರುತ್ತವೆ. ಶ್ವಾಸಕೋಶವನ್ನು ತಲುಪಿ ಅಲ್ಲಿ ಕೆಲದಿವಸಗಳ ಕಾಲ ಬೆಳೆಯಬೇಕಾದ್ದು ಅಗತ್ಯ. ತತ್ತಿಯ ಸೇವನೆಯಿಂದ ಪೂರ್ಣವಾಗಿ ಬೆಳೆದ ಹುಳುವಾಗುವುದಕ್ಕೆ ಮಾನವರಲ್ಲಿ ಸುಮಾರು ಹತ್ತು ದಿವಸಗಳು ಬೇಕು. ಕರುಳನ್ನು ಸೇರಿದ ಮೇಲೆ ಅಲ್ಲಿ ನೆಲೆನಿಲ್ಲುವುದು ಮಾನವರಲ್ಲಿರುವ ಜಂತುಹುಳುವಿನ ಪ್ರಭೇದ ಮಾತ್ರ. ಬೇರೆ ಪ್ರಾಣಿಗಳಲ್ಲಿರುವ ಪ್ರಭೇದಗಳು ಅಕಸ್ಮಾತ್ ಮಾನವದೇಹದೊಳಹೊಕ್ಕರೆ ಅವು ಹೀಗೆ ನೆಲೆನಿಲ್ಲಲಾರದೆ ಮಲದೊಂದಿಗೆ ವಿಸರ್ಜಿತವಾಗುತ್ತವೆ. ಜಂತುಹುಳುವಿನ ಸಾಮಾನ್ಯ ವಾಸ ಕರುಳಿನಲ್ಲೇ. 3ರಿಂದ 5 ವರ್ಷದ ಮಕ್ಕಳಲ್ಲಿ ಇದರ ಹಾವಳಿ ಬಹಳ. ಹುಳು ಕರುಳುಭಿತ್ತಿಯನ್ನು ಕಚ್ಚಿಕೊಂಡಿರುವುದಿಲ್ಲ ; ಅಲ್ಲದೆ ಅದಕ್ಕೆ ಚಲನಶೀಲತೆ ಉಂಟು. ಹೀಗಾಗಿ ಅದು ಜೀರ್ಣನಾಳದಲ್ಲಿ ಅಲ್ಲಿಂದಿಲ್ಲಿಗೆ ಚಲಿಸುತ್ತ ಗುದದ್ವಾರದಿಂದಲೋ ಅಥವಾ ಕೆಲವು ಸಮಯ ಬಾಯಿಯಿಂದಲೋ ಹೊರಬಂದು ಬಿಡಬಹುದು. ಮಲವಿಸರ್ಜನೆ ಮಾಡುವಾಗ ಮತ್ತು ವಾಂತಿಯಾದಾಗ ಹೀಗೆ ಹೊರಬರುವುದು ಸಾಮಾನ್ಯ. ಅನೇಕ ವೇಳೆ ವ್ಯಕ್ತಿಯಲ್ಲಿ ಹುಳುಗಳಿರುವ ವಿಷಯ ಗೊತ್ತಾಗುವುದು ಒಂದು ಹುಳು ಹೀಗೆ ಹೊರಬಂದಮೇಲೆಯೇ. ಆದರೆ ಮಲಪರೀಕ್ಷೆಯಿಂದ ಮಲದಲ್ಲಿ ಅಸಂಖ್ಯಾತ ತತ್ತಿಗಳ ಇರುವು ತಿಳಿದು ವ್ಯಕ್ತಿಯಲ್ಲಿ ಹುಳು ಇರುವ ವಿಷಯ ನಿಖರವಾಗಿ ಗೊತ್ತಾಗುತ್ತದೆ. ಒಬ್ಬ ವ್ಯಕ್ತಿಯಲ್ಲಿ ಕೇವಲ ನಾಲ್ಕಾರು ಹುಳುಗಳು ಇರಬಹುದು. ಇನ್ನೂ ಹೆಚ್ಚಾಗಿದ್ದರೂ ಇವು ಯಾವ ಗಣನೀಯವಾದ ತೊಂದರೆಯನ್ನೂ ಮಾಡದೆ ಪತ್ತೆಯಾಗದೇ ಹೋಗಬಹುದು. ಅಪರೂಪವಾಗಿ ಇವು ನೂರಾರು ಇದ್ದು ಗಂಟು ಕಟ್ಟಿಕೊಂಡು ಕರುಳಿನಲ್ಲಿ ಆಹಾರ ಸಾಗಾಣಿಕೆಗೆ ಅಡಚಣೆಯನ್ನು ಉಂಟುಮಾಡಿ ಹೊಟ್ಟೆನೋವು, ಉಬ್ಬರ, ವಮನಗಳನ್ನು ಉಂಟು ಮಾಡಬಹುದು. ಕೆಲವು ಸಲ ಸ್ವಲ್ಪವೇ ಹುಳುಗಳಿದ್ದರೂ ನಾನಾ ತೊಂದರೆಗಳ ಅನುಭವವಾಗಬಹುದು. ಹುಳುಗಳು ಒಸರಿಸುವ ಆಸ್ಕರಾನ್ ಅಥವಾ ಆಸ್ಕರೇಸ್ ಎಂಬ ವಿಶಿಷ್ಟವಾದ ವಿಷಪದಾರ್ಥದಿಂದ ನರೋದ್ರೇಕ, ಅಲರ್ಜಿ ಮುಂತಾದ ತೊಂದರೆಗಳು ಸಂಭವಿಸಬಹುದು ಎಂಬ ಅಭಿಪ್ರಾಯ ಉಂಟು. ಅಲ್ಲದೆ ಆಲಸ್ಯ, ನಿಶ್ಶಕ್ತಿ, ತಲೆಸುತ್ತು, ಮಾನಸಿಕ ಉದ್ರೇಕ, ನಿದ್ರಾನಾಶ ಮುಂತಾದವು ಕಂಡುಬರುತ್ತವೆ. ಜ್ವರ, ಕೆಮ್ಮು, ಉಬ್ಬಸ, ಮೈಕಡಿತ ಇವೂ ಉಂಟಾಗಬಹುದು. ಮಕ್ಕಳು ನಿದ್ರೆಯ ವೇಳೆಯಲ್ಲಿ ಕಟಕಟನೆ ಹಲ್ಲು ಕಡಿಯುತ್ತಿದ್ದರೆ ಉದರದಲ್ಲಿ ಜಂತುಹುಳು ಇರುವುದೆಂದು ಜನರ ನಂಬಿಕೆ. ಹೀಗಿರಬಹುದಾದರೂ ಇದಕ್ಕೆ ವೈಜ್ಞಾನಿಕ ಆಧಾರವಿಲ್ಲ. ಹುಳುವಿಗೆ ಚಲನಸಾಮರ್ಥ್ಯ ಇರುವುದರಿಂದ ಅದು ಪಿತ್ತಕೋಶ, ಪಿತ್ತನಾಳಗಳನ್ನೂ ಆಕ್ರಮಿಸಿ ಪಿತ್ತರಸದ ಹರಿಯುವಿಕೆಗೆ ಅಡಚಣೆ ಮಾಡಿ ಕಾಮಾಲೆಯನ್ನು ಉಂಟು ಮಾಡಬಹುದು. ಸೋಂಕು ಅಂಟಿದಾಗ ಅಸಂಖ್ಯಾತ ಮರಿಗಳು ಏಕಕಾಲಿಕವಾಗಿ ಪುಪ್ಪುಸವನ್ನು ತಲುಪಿದರೆ ನ್ಯೂಮೋನಿಯಾವನ್ನು ಹೋಲುವ ರೋಗಸ್ಥಿತಿ ಉಂಟಾಗಬಹುದು. ಮರಿಗಳು ರಕ್ತನಾಳಗಳ ಮೂಲಕ ಪುಪ್ಪುಸವನ್ನು ಸೇರುವುದಲ್ಲದೆ ಅಕಸ್ಮಾತ್ ಮಿದುಳನ್ನು ತಲುಪಿದರೆ ಅಲ್ಲಿ ನೇರಕೇಂದ್ರಗಳು ಉದ್ರೇಕಗೊಂಡು ಅನೇಕ ಮಕ್ಕಳಲ್ಲಿ ನರಸಂಬಂಧ ಅವ್ಯವಸ್ಥೆಗಳು ಕೂಡ ಕಂಡುಬರುವುದು.

**ಚಿಕಿತ್ಸೆ :** ಹುಳು ಇರುವ ವ್ಯಕ್ತಿಗೆ ಕೆಲವು ವರ್ಷಗಳ ಹಿಂದೆ ಸ್ಯಾನ್ ಟೋನಿನ್ ಎಂಬ ಮದ್ದನ್ನು ಕೊಡಲಾಗುತ್ತಿತ್ತು. ಈಚೆಗೆ ಪೈಪರಿಸಿನ್ ಸಂಯುಕ್ತಗಳನ್ನು ಕೊಡಲಾಗುತ್ತದೆ. ಬೆಫೀನಿಯಮ್ ಹೈಡ್ರಾಕ್ಸಿನ್ಯಾಫ್ತೊಯೇಟ್, ಡೈಈಥೈಲ್ ಕಾರ್ಬಮಸೀನ್, ಥೈಯಬೆಂಡಸೋಲ್

ಗಳನ್ನೂ ವ್ಯಕ್ತಿಯಲ್ಲಿ ಜಂತುಹುಳು ನಿರ್ಮೂಲನಕ್ಕಾಗಿ ಉಪಯೋಗಿಸಲಾಗುತ್ತದೆ. ಮೇಲಿಂದ ಮೇಲೆ ಸೋಂಕು ಉಂಟಾಗಿ ಜನತೆಯಲ್ಲಿ ಜಂತುಹುಳುವಿನ ಇರುವಿಕೆ ಸ್ಥಳೀಯ ಪಿಡುಗಾಗಬಹುದಾದ್ದರಿಂದ ಇದನ್ನು ನಿವಾರಿಸಲು ವ್ಯಕ್ತಿ ಚಿಕಿತ್ಸೆ ಮಾತ್ರವಲ್ಲದೆ ಸಾರ್ವಜನಿಕ ಕ್ರಮಗಳನ್ನೂ ಕೈಗೊಳ್ಳಬೇಕು. ವಿಸರ್ಜಿತ ಮಲವನ್ನು ಸರಿಯಾದ ರೀತಿಯಲ್ಲಿ ನಿರುಪಾಧಿಕವಾಗಿ ವಿತರಣೆ ಮಾಡಬೇಕು. (ಎಸ್.ಕೆ.ಎಚ್.;ಎಸ್.ಆರ್.ಆರ್.)

**ಜಂಬಿಟ್ಟಿಗೆ :** ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಮುಖ್ಯವಾಗಿ ಕೇರಳ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ, ಘಟ್ಟದ ಮೇಲೆ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಟ್ಟಡ ಕಟ್ಟುವುದಕ್ಕೆ ಉಪಯೋಗವಾಗುವ ಮಣ್ಣಿಟ್ಟಿಗೆಯಂತಿರುವ ಕೆಂಪು ಬಣ್ಣದ ಇಟ್ಟಿಗೆ ಕಲ್ಲು (ಲ್ಯಾಟರೈಟ್). ಮುರಕಲ್ಲು ಪರ್ಯಾಯನಾಮ. ಲ್ಯಾಟಿನ್ ಭಾಷೆಯಲ್ಲಿ ಇಟ್ಟಿಗೆಗೆ ಲ್ಯಾಟರ್ ಎಂಬ ಪದ ಉಂಟು. ಇದನ್ನು ಮಲಬಾರಿನಲ್ಲಿ ಮೊದಲಿಗೆ ಗುರುತಿಸಿದ ಬ್ಯೂಕ್ಯಾನನ್ ಎಂಬ ಶಿಲಾವಿಜ್ಞಾನಿ ಇಟ್ಟಿಗೆಯಂತೆ ಉಪಯೋಗವಾಗುವ ಈ ಕಲ್ಲಿಗೆ ಲ್ಯಾಟರೈಟ್ ಎಂದು ನಾಮಕರಣ ಮಾಡಿದ. ಈ ಬಗೆಯ ಕಲ್ಲನ್ನು ಶ್ರೀಲಂಕ, ಮಾಯನ್ಮಾರ್, ಇಂಡೋನೇಷಿಯ ದೇಶಗಳಲ್ಲಿ ವಿಶೇಷವಾಗಿ ಗುರುತಿಸಲಾಗಿದೆ. ಇದು ಹಾಸುಕಲ್ಲಾಗಿ ಅನೇಕ ಕಡೆ ಕರಾವಳಿಯ ಅಂಚಿನಲ್ಲಿ ಕಾಣುತ್ತದೆ. ಇದನ್ನು ತೆಗೆಯುವಾಗ ಮೆದುವಾಗಿರುತ್ತದೆ. ಆದ್ದರಿಂದ ಇದಕ್ಕೆ ಉಳಿಯ ಸಹಾಯದಿಂದ ಯಾವ ಆಕಾರವನ್ನು ಬೇಕಾದರೂ ಕೊಡಬಹುದು. ಬಿಸಿಲಿನಲ್ಲಿ ಆರಿದ ತರುವಾಯ ಇದು ಕಲ್ಲಿನಂತೆ ಗಡುಸಾಗುತ್ತದೆ. ಮಳೆಗಾಳಿಗಳ ಹೊಡೆತಕ್ಕೆ ಸಿಕ್ಕಿದರೂ ಕ್ಷಯಿಸುವುದಿಲ್ಲ. ಜಂಬಿಟ್ಟಿಗೆಯಿಂದ ಕಟ್ಟಿದ ಮನೆಗಳು, ನೂರಾರು ವರ್ಷಗಳು ಕಳೆದರೂ ಶಿಥಿಲವಾಗದೆ ಇನ್ನೂ ನಿಂತಿವೆ.

ಜಂಬಿಟ್ಟಿಗೆ ಮುಖ್ಯವಾಗಿ ಆಫ್ರಿಕ, ಆಸ್ಟ್ರೇಲಿಯ, ಭಾರತ, ಇಂಡೋನೇಷಿಯ ಮತ್ತು ದಕ್ಷಿಣ ಅಮೆರಿಕ ದೇಶಗಳಲ್ಲಿ ವಿಶೇಷವಾಗಿ ಕಾಣುತ್ತದೆ. ಭಾರತದಲ್ಲಿ ಇದು ಹರಡಿರುವುದು ದಕ್ಷಿಣದಲ್ಲಿ ಮಾತ್ರ. ಇಲ್ಲಿಯೂ ಎರಡೂ ಮುಖ್ಯ ವರ್ಗಗಳು ಉಂಟು ; ಒಂದು ಕರಾವಳಿಯ ಅಂಚಿನಲ್ಲಿರುವ ಕೆಳಮಟ್ಟದ ಜಂಬಿಟ್ಟಿಗೆ, ಇನ್ನೊಂದು ಬೆಟ್ಟಗಳ ಮೇಲಿರುವ ಮೇಲುಮಟ್ಟದ ಜಂಬಿಟ್ಟಿಗೆ. ಪೂರ್ವ ಕರಾವಳಿಯಲ್ಲಿ ಕನ್ಯಾಕುಮಾರಿಯಿಂದ ಹಿಡಿದು ವಿಶಾಖಪಟ್ಟಣ, ಒರಿಸ್ಸ, ಮಿಡ್ನಾಪುರ, ವೀರಭೂಮಿ, ಬರ್ದವಾನ್ ಜಿಲ್ಲೆಯವರೆಗೂ ಜಂಬಿಟ್ಟಿಗೆಯ ಹರವನ್ನು ಕಾಣಬಹುದು. ಪಶ್ಚಿಮ ಕರಾವಳಿಯಲ್ಲಿ ಕನ್ಯಾಕುಮಾರಿಯಿಂದ ಹಿಡಿದು ಮುಂಬಯಿಯವರೆಗೂ ಜಂಬಿಟ್ಟಿಗೆಯನ್ನು ಕಾಣಬಹುದು. ಈ ಸ್ಥಳಗಳಲ್ಲಿನ ಕಟ್ಟಡಗಳೆಲ್ಲಕ್ಕೂ ಜಂಬಿಟ್ಟಿಗೆಯನ್ನೇ ಉಪಯೋಗಿಸುತ್ತಾರೆ.

ಜಂಬಿಟ್ಟಿಗೆ ಕಲ್ಲು ಅದರ ಕೆಳಗಿರುವ ಗಡಸು ಕಲ್ಲುಗಳ ಮೇಲೆ ಒಂದು ವಿಧವಾದ ಮೇಲು ಹೊದಿಕೆಯಂತೆ ಹಬ್ಬಿರುತ್ತದೆ. ಇದು ಹೇಗೆ ಉಂಟಾಗುತ್ತದೆ ಎನ್ನುವ ವಿಷಯವಾಗಿ ನಾನಾ ತರದ ಕಾರಣಗಳು ಕೊಡಲ್ಪಟ್ಟಿವೆ. ಮುಖ್ಯವಾಗಿ ಮಳೆಯ ಶ್ರಾಯ ದೀರ್ಘವಾಗಿರುವ ಸ್ಥಳಗಳಲ್ಲಿ ಮಳೆಗಾಲದಲ್ಲಿ ಹೆಚ್ಚು ನೆಂದು ಮತ್ತೆ ಮುಂದಿನ ಬಿಸಿಲುಗಾಲದಲ್ಲಿ ಆರಿ ಒಣಗುತ್ತ ಬರುವಂಥ ವಿರುದ್ಧ ವಾತಾವರಣದಲ್ಲಿ ಎಂಥ ಗಡಸು ಕಲ್ಲೂ ಕೂಡ ಬೀಳು ಬಿದ್ದು ಮಣ್ಣಾಗುವ ಸಂಭವವುಂಟು. ಹಾಗೆ ಮಣ್ಣಾದರೂ ಕೆಲವು ರಾಸಾಯನಿಕ ಗುಣಗಳ ದೆಸೆಯಿಂದ ಗಡಸುತನವನ್ನು ಪಡೆದು ಕೊಚ್ಚಿಹೋಗದೆ ಇದ್ದಲ್ಲಿಯೇ ಶೇಖರವಾಗುವ, ಮಣ್ಣಾದರೂ ಕಲ್ಲಿನಂಥ ಗುಣವನ್ನು ಪಡೆದಿರುವ, ಇಟ್ಟಿಗೆಕಲ್ಲೇ ಜಂಬಿಟ್ಟಿಗೆ. ಇದರಲ್ಲಿ ಅಲ್ಯೂಮಿನಿಯಮ್ ಆಕ್ಸೈಡ್ ಅಂಶ ಹೆಚ್ಚಿರುತ್ತದೆ. ಇದು ಶೇಕಡ 40 ಮೀರಿದಾಗ ಅಂಥ ಜಂಬಿಟ್ಟಿಗೆ ಅಲ್ಯೂಮಿನಿಯಂ ಅದಿರಾಗುತ್ತದೆ. ಆಗ ಅದಕ್ಕೆ ಬಾಕ್ಸೈಟ್ ಎಂಬ ಹೆಸರು ಬರುವುದು.

ಜಂಬಿಟ್ಟಿಗೆಗೆ ಬಣ್ಣದಲ್ಲಿ ನಾನಾ ಛಾಯೆಗಳು ಉಂಟು. ಮಣ್ಣು ಕೆಂಪು ಅಥವಾ ಕಂದು ಬಣ್ಣವೇ ಸಾಮಾನ್ಯ. ಅಲ್ಲಲ್ಲಿ ಹಳದಿ ಬಣ್ಣದ ಮಚ್ಚೆಗಳು ಕಾಣುವುದೂ ಉಂಟು. ಒಂದೇ ಕಲ್ಲಿನಲ್ಲಿ ಬಗೆಬಗೆಯ ಬಣ್ಣಗಳನ್ನೂ ಕಾಣಬಹುದು. ಕಬ್ಬಿಣಾಂಶ ಹೆಚ್ಚಿದ್ದರೆ ಕೆಂಪು ಅಥವಾ ಕಂದು ಬಣ್ಣವನ್ನು ಪ್ರದರ್ಶಿಸುವುದು. ಅಲೂಮಿನ ಮತ್ತು ಸಿಲಿಕಾಂಶ ಹೆಚ್ಚಿದಂತೆ ತಿಳಿ ಹಳದಿ ಅಥವಾ ಬಿಳುಪು ಛಾಯೆಯನ್ನು ತೋರಿಸುತ್ತದೆ. ಕಬ್ಬಿಣಾಂಶ ಹೆಚ್ಚಿದಾಗ ಲ್ಯಾಟರೈಟ್ ಕಬ್ಬಿಣದ ಅದುರಾಗಿ ಮಾರ್ಪಡುತ್ತದೆ. ಉತ್ತರ ಕನ್ನಡ ಮತ್ತು ಗೋವೆಗಳಲ್ಲಿ ಲ್ಯಾಟರೈಟ್ ಸಂಬಂಧದ ಕಬ್ಬಿಣದ ಅದಿರನ್ನು ಗಣಿ ತೋಡಿ ವಿದೇಶಗಳಿಗೆ ರಫ್ತು ಮಾಡುತ್ತಾರೆ. (ಬಿ.ವಿ.ಆರ್.)

**ಜಂಬಿಟ್ಟಿಗೆ ಮಣ್ಣು :** ಉಷ್ಣವಲಯಗಳಲ್ಲಿರುವ ಒಂದು ಬಗೆಯ ಪ್ರತ್ಯಾಮ್ಲೀಯ ಶಿಲೆಗಳ ಮೇಲೆ ಹೆಚ್ಚು ಮಳೆ ಬಿದ್ದ ಪ್ರತಿಕ್ರಿಯೆಯಿಂದ ಉಂಟಾಗುವ ಮಣ್ಣು. ಲ್ಯಾಟರೈಟ್ ಕಲ್ಲುಗಳಿಂದ ವಿಘಟನೆಯಾದ ವಸ್ತುವಿನಿಂದ ಕೂಡಿರುವ ಮಣ್ಣಿಗೆ ಲ್ಯಾಟರಿಟಿಕ್ ಅಥವಾ ಜಂಬಿಟ್ಟಿಗೆ ಮಣ್ಣು ಎಂಬ ಹೆಸರಿದೆ. ಹೆಚ್ಚು ಬಸಿಯುವಿಕೆಯ ಕಾರಣದಿಂದ ಪ್ರತ್ಯಾಮ್ಲಗಳು ಕಳೆದುಹೋಗುತ್ತವೆ. ಹೀಗೆ ಬಸಿಯುವ ನೀರು ಕ್ಷಾರ ಗತಿಯುಳ್ಳದ್ದಾದ್ದರಿಂದ ಸಿಲಿಕ ಕರಗಿ ಕೆಳಮುಖವಾಗಿ ಚಲಿಸಿ, ಮೇಲ್ಮೈಯಲ್ಲಿ ಕಬ್ಬಿಣ ಮತ್ತು ಅಲ್ಯೂಮಿನಿಯಮ್ ಆಕ್ಸೈಡ್ ಶೇಖರಣೆಯಾಗುವುದು. ಈ ಮಣ್ಣುಗಳ ಬಣ್ಣ ಸಾಮಾನ್ಯವಾಗಿ ಕೆಂಪು ಇಲ್ಲವೇ ಹಳದಿ. ಇವು ರಚನೆಯಲ್ಲಿ ಜೇನುಗೂಡನ್ನು ಹೋಲುತ್ತವೆ. ದಟ್ಟವಾಗಿ ಗಟ್ಟಿಯಾಗಿರಬಹುದು ಅಥವಾ ಕಬ್ಬಿಣ ವಸ್ತುವಿನ ಸಣ್ಣ ಸಣ್ಣ ಗಂಟುಗಳ ಸಡಿಲ ಮೊತ್ತವಾಗಿರಬಹುದು. ದಟ್ಟವಾಗಿ ಗಟ್ಟಿಯಾಗಿರುವ ಮಣ್ಣನ್ನು ಹದವಾದ ತೇವವಿದ್ದಾಗ ಕಿತ್ತು ತೆಗೆದು ಬೇಕಾದ ಅಳತೆಗೆ ಕತ್ತರಿಸಿ ಒಣಗಿಸಿ ಇಟ್ಟಿಗೆಗಳಾಗಿ ಬಳಸುತ್ತಾರೆ. ಒಣಗಿದಾಗ ಇವು ಕಲ್ಲಿನ ಹಾಗೆ ಗಟ್ಟಿಯಾಗುತ್ತವೆ.

ಈ ಮಣ್ಣುಗಳಲ್ಲಿ ಮೂಲ ಜೇಡಿ ಖನಿಜಗಳಿಲ್ಲದಿರುವುದರಿಂದ ನಮ್ಯತೆ, ಜಿಗುಟು, ಕುಗ್ಗುವುದು, ಪ್ರತ್ಯಾಮ್ಲ ವಿನಿಮಯ–ಮುಂತಾದ ಜೇಡಿಯ ಗುಣಗಳು ಅಷ್ಟಾಗಿ ಕಂಡುಬರುವುದಿಲ್ಲ. ಲ್ಯಾಟರೈಟಿನ ಪ್ರತ್ಯಾಮ್ಲ ವಿನಿಮಯ ಸಾಮರ್ಥ್ಯ 100 ಗ್ರಾಮ್. 2–4 ಮಿ.ಲೀ. ಈಕ್ವಿವಲೆಂಟ್ ಇರುತ್ತದೆ. ಲ್ಯಾಟರೈಟ್ ಮಣ್ಣುಗುಗಳಿಗೆ ಪ್ರತ್ಯಾಮ್ಲ ವಿನಿಮಯ ಸಾಮರ್ಥ್ಯ 4–6 ಇರಬಹುದು. ಸಿಲಿಕ ಸೆಸ್ಕ್ವಿ ಆಕ್ಸೈಡ್ ಅನುಪಾತ 1 : 35 ಕ್ಕಿಂತ ಕಡಿಮೆ ಇರುತ್ತದೆ. ಎಲ್ಲೋ ಕೆಲವೆಡೆ ಬಿಟ್ಟು ಉಳಿದೆಡೆ ಈ ಮಣ್ಣುಗಳ ಆಳ ಕಡಿಮೆ.

ಕರ್ನಾಟಕದಲ್ಲಿ ಮಲೆನಾಡು ಪ್ರದೇಶಗಳಾದ ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಘಟ್ಟದ ಕೆಳಗಿನ ತೀರಪ್ರದೇಶಗಳು ಮತ್ತು ಬೆಂಗಳೂರಿನ ಉತ್ತರಕ್ಕೆ ಕೆಲವೆಡೆ, ಅಲ್ಲದೆ ಬೀದರ್ ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಜಂಬಿಟ್ಟಿಗೆ ಮಣ್ಣು ದೊರೆಯುತ್ತದೆ. ಮಳೆಗೆ ಹೊಂದಿಕೊಂಡಿರುವ ತೋಟದ ಬೆಳೆಗಳಾದ ಕಾಫಿ, ಟೀ, ಏಲಕ್ಕಿ, ಅಡಿಕೆ, ಕಿತ್ತಳೆ–ಮೊದಲಾದವು ಈ ಪ್ರದೇಶದ ಮುಖ್ಯ ಬೆಳೆಗಳು. ಮಳೆಯ ಆಸರೆಯಿಂದ ಕಣಿವೆಗಳಲ್ಲೂ ಬೆಟ್ಟದ ಇಳಿಜಾರುಗಳಲ್ಲೂ ಬತ್ತವನ್ನು ಸಾಮಾನ್ಯವಾಗಿ ಬೆಳೆಸುತ್ತಾರೆ. ಮೈದಾನದಲ್ಲಿ ಗೋಚರವಾಗುವ ಸಣ್ಣ ಹಿಡುವಳಿಗಳು ಇಲ್ಲಿ ಬಹುಮಟ್ಟಿಗೆ ಕಡಿಮೆ. ಸಮುದ್ರತೀರಪ್ರದೇಶದಲ್ಲಿ ತೆಂಗು ಒಂದು ಮುಖ್ಯ ಬೆಳೆ.

ಈ ಮಣ್ಣಿನಲ್ಲಿ ಸುಣ್ಣದ ಅಂಶ ಕಡಿಮೆಯಿರುವುದರಿಂದ pH ಹೆಚ್ಚು ಹುಳಿ ಮುಖವಾಗಿರುತ್ತದೆ. ಎಲೆಗಳು ಉದುರಿ, ಕೊಳೆಯುವುದರಿಂದ ಹ್ಯೂಮಸ್ ಹೆಚ್ಚಾಗಿರುತ್ತದೆ. ಇದರಿಂದ ಸಾರಜನಕ ಅಂಶವೂ ಹೆಚ್ಚಿದ್ದು, ರಂಜಕ ಮತ್ತು ಪೊಟ್ಯಾಷುಗಳ ಕೊರತೆ ಹೆಚ್ಚು. ಸಾರಜನಕ, ರಂಜಕ ಮತ್ತು ಪೊಟ್ಯಾಷುಗಳನ್ನು ಗೊಬ್ಬರದ ಮೂಲಕ ಒದಗಿಸುವುದು ಆವಶ್ಯಕ. ಸುಣ್ಣವನ್ನು ತಕ್ಕ ಪರಿಮಾಣದಲ್ಲಿ ಆಗಾಗ ಕೊಡುವುದರಿಂದ ಮಣ್ಣಿನ ಹುಳಿಯನ್ನು ನಿವಾರಿಸಿ, ಹದವಾದ ಪರಿಸ್ಥಿತಿಯನ್ನು ಉಂಟು ಮಾಡಬಹುದು.

(ಜಿ.ವಿ.ವಿ. ; ಕೆ.ಆರ್. ಜಿ.ವಿ.)

**ಜಂಬೀರ ಫಲಗಳು :** ಕಿತ್ತಳೆ, ದ್ರಾಕ್ಷಿ, ಚಕ್ಕೋತ, ನಿಂಬೆ, ಮಾದಳ, ಮೋಸಂಬಿ ಮುಂತಾದ ಹಣ್ಣುಗಳಿಗಿರುವ ಸಾಮಾನ್ಯ ಹೆಸರು (ಸಿಟ್ರಸ್ ಫ್ರೂಟ್ಸ್). ಮಾನವನಿಗೆ ಅತ್ಯುಪಯುಕ್ತವೆನಿಸಿರುವ ಇವು ಪ್ರಪಂಚದ ಉಷ್ಣ ಹಾಗೂ ಸಮಶೀತೋಷ್ಣವಲಯಗಳಲ್ಲೆಲ್ಲ ಬೇಸಾಯದಲ್ಲಿವೆ. ಇವುಗಳಲ್ಲಿ ಸುಮಾರು 16 ಪ್ರಭೇದಗಳುಂಟು. ಸಿಟ್ರಸ್ ಇಂಡಿಕ, ಸಿ. ಲ್ಯಾಟಿಪಸ್ ಮತ್ತು ಸಿ.ಹಿಸ್ಟ್ರಿಕ್ಸ್ ಎಂಬ ಮೂರು ಬಗೆಗಳನ್ನು ಬಿಟ್ಟರೆ ಉಳಿದವೆಲ್ಲ ಬೇಸಾಯದ ಬೆಳೆಗಳು. ಜಂಬೀರ ಜಾತಿಯ ಗಿಡಗಳಲ್ಲಿ ಅನೇಕ ವ್ಯತ್ಯಾಸಗಳನ್ನು ಗುರುತಿಸಬಹುದಾದರೂ ಎಲ್ಲಕ್ಕೂ ಸಮಾನವೆನಿಸುವ ಕೆಲವು ಲಕ್ಷಣಗಳಿವೆ; ಎಲ್ಲವೂ ಮುಳ್ಳುಗಳುಳ್ಳ ನಿತ್ಯಹಸಿರಿನ ಪೊದೆ ಸಸ್ಯಗಳು ಇಲ್ಲವೆ ಮರಗಳು. ಎಲೆಗಳು ಒಂದೇ ಕಿರುಪತ್ರವನ್ನುಳ್ಳ ಸಂಯುಕ್ತ ಮಾದರಿಯವು; ಎಲೆಯ ತೊಟ್ಟಿನ ಅಕ್ಕಪಕ್ಕಗಳಲ್ಲಿ ಸಾಮಾನ್ಯವಾಗಿ ರೆಕ್ಕೆಗಳಿವೆ. ಆದರೆ ಮಾದಳ ಮತ್ತು ದ್ರಾಕ್ಷಿ ಹಣ್ಣುಗಳ ಎಲೆತೊಟ್ಟಿನಲ್ಲಿ ಮಾತ್ರ ರೆಕ್ಕೆಗಳಿಲ್ಲ. ಎಲೆಗಳ ಅಲಗಿನಲ್ಲಿ ಎಲ್ಲೆಡೆಯೂ ಹರಡಿರುವ ತೈಲಗ್ರಂಥಿಗಳಿವೆ. ಈ ಗ್ರಂಥಿಗಳಲ್ಲಿ ಉತ್ಪತ್ತಿಯಾಗುವ ತೈಲದಿಂದಾಗಿ ಜಂಬೀರ ಸಸ್ಯಗಳಿಗೆ ವಿಶಿಷ್ಟ ವಾಸನೆಯಿರುತ್ತದೆ. ಹೂಗಳು ಬಿಳಿ ಅಥವಾ ಕೆನೆಬಣ್ಣದವು; ಮಧ್ಯಾರಂಬಿ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಫಲಗಳು ವಿಶಿಷ್ಟ ರೀತಿಯವು; ಇವಕ್ಕೆ ಹೆಸ್ಪರಿಡಿಯಮ್ ಎಂಬ ಶಾಸ್ತ್ರೀಯ ಹೆಸರಿದೆ. ದಪ್ಪವಾದ ಹಾಗೂ ಚರ್ಮಿಲವಾದ ಹೊರಸಿಪ್ಪೆ (ಎಕ್ಸೋಕಾರ್ಪ್), ತೆಳುವಾದ ಮತು ಬಿಳಿಯ ಬಣ್ಣದ ನಡುಸಿಪ್ಪೆ (ಮೀಸೋಕಾರ್ಪ್) ಮತ್ತು ಹಣ್ಣಿನ ತಿರುಳಿನೊಳಕ್ಕೆ ಚಾಚಿ ಅದನ್ನು ಹಲವಾರು ತೊಳೆಗಳಾಗಿ ವಿಂಗಡಿಸುವ ತೆಳುವಾದ ಒಳಸಿಪ್ಪೆ (ಎಂಡೋಕಾರ್ಪ್)–ಇವು ಫಲಗಳಲ್ಲಿ ಕಾಣಬರುವ ಮುಖ್ಯ ಭಾಗಗಳು. ಅಲ್ಲದೆ ಹಣ್ಣಿನ ತಿರುಳಿನಲ್ಲಿ ಅಸಂಖ್ಯಾತವಾದ ರಸಭರಿತ ಏಕಕೋಶಗಳಿವೆ. ಇವಕ್ಕೆ ಸಾಮಾನ್ಯವಾಗಿ ಕುಸುಮಗಳು ಎಂದು ಹೆಸರು.

ಜಂಬೀರ ಫಲಗಳಲ್ಲಿ ಅನೇಕ ಬಗೆಯ ಪೌಷ್ಟಿಕಾಂಶಗಳು–ಮುಖ್ಯವಾಗಿ 'ಸಿ' ವಿಟಮಿನ್–ಅಧಿಕ ಮೊತ್ತದಲ್ಲಿರುವುದರಿಂದ ಇವು ಬಹಳ ಉಪಯುಕ್ತವೆನಿಸಿವೆ. ಇವನ್ನು ಉಪ್ಪಿನಕಾಯಿ, ಜಾಮ್, ಜೆಲಿ, ಪಾನೀಯಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ಇವುಗಳ ಸಿಪ್ಪೆಯಿಂದ ಪಡೆಯಲಾಗುವ ತೈಲವನ್ನು ವಿವಿಧ ರೀತಿಯ ಆಹಾರವಸ್ತುಗಳಿಗೆ ರುಚಿ ಹಾಗೂ ವಾಸನೆ ಕೊಡಲು ಬಳಸುವುದುಂಟು. ಜಂಬೀರ ಫಲಗಳಿಗೆ ತಂಪುಕಾರಕ,

ಪಿತ್ತಹರ ಮುಂತಾದ ಗುಣಗಳೂ ಇವೆ. ಜಂಬೀರ ಜಾತಿಯ ಗಿಡಗಳ ಕೃಷಿವಿಧಾನ, ಇಳುವರಿ ಮತ್ತು ಉಪಯೋಗಗಳ ವಿವರಗಳಿಗೆ ಆಯಾ ಪ್ರಭೇದಗಳ ಶೀರ್ಷಿಕೆಗಳನ್ನು ನೋಡಿ.

*

**ಜಂಬುಕೇಶ್ವರ :** ತಮಿಳುನಾಡಿನ ತಿರುಚಿರಾಪಳ್ಳಿ ಜಿಲ್ಲೆಯಲ್ಲಿ ತಿರುಚಿರಾಪಳ್ಳಿ ನಗರದಿಂದ 5 ಕಿಮೀ ಉತ್ತರಕ್ಕೆ, ಹೆಸರಾಂತ ವೈಷ್ಣವ ಕ್ಷೇತ್ರವಾದ ಶ್ರೀರಂಗದಿಂದ 2 ಕಿಮೀ ಪೂರ್ವಕ್ಕೆ ಇರುವ ಪ್ರಸಿದ್ಧ ಶೈವಕ್ಷೇತ್ರ ಇಲ್ಲಿರುವ ಜಂಬುಕೇಶ್ವರ ಎಂಬ ಶಿವಾಲಯದಲ್ಲಿ ಅಪ್‌ಲಿಂಗ ಪ್ರತಿಷ್ಠಿತವಾಗಿದೆ. ಈ ದೇಗುಲದ ಗರ್ಭಗೃಹ ಕಾವೇರಿ ಹಾಗೂ ಕೊಳ್ಳಿಡಂ ನದಿಗಳ ನಡುವೆ, ತಗ್ಗುಭೂಮಿಯ ಮೇಲೆ, ನಿರ್ಮಿತವಾಗಿರುವುದರಿಂದ ಅದರ ಮೂಲಸ್ಥಾನದ ಶಿವಲಿಂಗ ಯಾವಾಗಲೂ ನೀರಿನಿಂದ ಸುತ್ತುವರಿಯಲ್ಪಟ್ಟಿರುತ್ತದೆ.

ಜಂಬುಕೇಶ್ವರವನ್ನು ತಿರುವಾನೈಕ್ಕಾ, ತಿರುವಾನೈಕ್ಕಾವಲ್, ತಿರುವೆಣ್ಣಾಯಿಲ್, ತಿರುವೆಣ್ಣಾವಲ್ ಎಂದೂ ಕರೆಯುವುದುಂಟು. ಇಲ್ಲಿಯ ದೇವರನ್ನು ತಿರುವೆಣ್ಣಾಯಿ, ಉಡೈಯಾರ್, ಜಂಬುನಾಥರ್, ಜಂಬುಲಿಂಗಂ ಎಂದೂ ಹೇಳುತ್ತಾರೆ.

ಒಂದಾನೊಂದು ಕಾಲದಲ್ಲಿ ಈ ಪುಣ್ಯಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದ ಋಷಿಯೊಬ್ಬ ತನ್ನ ಬಳಿ ಇದ್ದ ನಾವಲ್ (ಜಂಬೂ) ಹಣ್ಣೊಂದನ್ನು ಶಿವನಿಗೆ ಅರ್ಪಿಸಿ, ಅದನ್ನು ಬೀಜಸಹಿತ ತಿಂದನೆಂದೂ ಆ ಬೀಜ ಅವನೊಳಗೇ ಬೆಳೆದು ಮರವಾಯಿತೆಂದೂ ಅದರಡಿಯಲ್ಲಿ ಲಿಂಗರೂಪದಲ್ಲಿ ನೆಲೆಸಿದ ಶಿವನಲ್ಲಿ ಆ ಋಷಿ ಐಕ್ಯಹೊಂದಿದನೆಂದೂ ಅಲ್ಲಿಯ ಸ್ಥಳಪುರಾಣ ಹೇಳುತ್ತದೆ. ಪುಷ್ಪದಂತ, ಮಾಲ್ಯವಾನ್ ಎಂಬ ಶಿವನ ಗಣನಾಥರಿಬ್ಬರು ಶಾಪವಶಾತ್ ಅನುಕ್ರಮವಾಗಿ ಆನೆಯಾಗಿಯೂ ಜೇಡವಾಗಿಯೂ ಹುಟ್ಟಿ ಆ ಸ್ಥಳದಲ್ಲಿ ಜಂಬುಲಿಂಗವನ್ನು ಆರಾಧಿಸುತ್ತಿದ್ದರೆಂದೂ ಮರದಿಂದ ಎಲೆಗಳು ಉದುರಿ ಲಿಂಗದ ಮೇಲೆ ಬೀಳದಂತೆ ಜೇಡ ಭಕ್ತಿಪೂರ್ವಕವಾಗಿ ನೇದಿದ್ದ ಬಲೆಯನ್ನು ಆಶುದ್ಧವೆಂದು ಬಗೆದು ಆನೆ ಅಳಿಸಿದಾಗ ಕೋಪಗೊಂಡ ಜೇಡ ಆನೆಯ ನಾಶಿ ದ್ವಾರವನ್ನು ಹೊಕ್ಕಿತೆಂದೂ ಅದರ ಪರಿಣಾಮವಾಗಿ ಆನೆ ಮತ್ತು ಜೇಡ ಎರಡೂ ಜೀವ ತೊರೆದು ತಮ್ಮ ಪೂರ್ವಸ್ವರೂಪ ಪಡೆದುವೆಂದೂ ಅದೇ ಸ್ಥಳಪುರಾಣದಲ್ಲಿ ಹೇಳಲಾಗಿದೆ. ಜೇಡರ ಹುಳುವಾಗಿದ್ದ ಮಾಲ್ಯವಾನ್ ಅನಂತರ ಕೋಚ್ಚೆಂಗಣಾನ್ ಎಂಬ ಚೋಳರಾಜನಾಗಿ ಜನ್ಮವೆತ್ತಿ, ಜಂಬುಕೇಶ್ವರವೂ ಸೇರಿದಂತೆ ಎಪ್ಪತ್ತು ಶಿವಾಲಯಗಳನ್ನು ನಿರ್ಮಿಸಿದನೆಂದು ತಮಿಳು ಸಾಹಿತ್ಯದಿಂದ ತಿಳಿದುಬರುತ್ತದೆ. ಈ ಪೌರಾಣಿಕ ಪ್ರಸಂಗವನ್ನು 7ನೆಯ ಶತಮಾನದ ಶಿವಭಕ್ತರುಗಳಾದ ಅಪ್ಪರ್ ಮತ್ತು ಜ್ಞಾನಸಂಬಂಧರ್ ಪ್ರಸ್ತಾಪಿಸುತ್ತಾರೆ. ಅಲ್ಲದೆ 11ನೇ ಶತಮಾನದ 1ನೆಯ ರಾಜೇಂದ್ರಚೋಳನ ತಿರುವಾಲಂಗಾಡು ತಾಮ್ರಶಾಸನದಲ್ಲೂ ಕಲಿಂಗತ್ತುಪ್ಪರಣಿ, ಪೆರಿಯಪುರಾಣಂ, ಕುಲೋತ್ತುಂಗ ಚೋಳನ್ ಉಲಾ ಎಂಬ ತಮಿಳು ಕೃತಿಗಳಲ್ಲೂ ಜಂಬುಕೇಶ್ವರ ದೇವಾಲಯದಲ್ಲಿ ಕೊರೆಯಲಾಗಿರುವ ಅನಂತರ ಕಾಲದ ಎರಡು ಶಾಸನಗಳಲ್ಲೂ ಈ ಕಥೆಯ ಪ್ರಸ್ತಾಪವುಂಟು.

ಈ ದೇವಾಲಯವನ್ನು ಮೊದಲು ನಿರ್ಮಿಸಿದವನು ಕೋಚ್ಚೆಂಗಣಾನ್. ಬಹುಶಃ ತಂಜಾವೂರಿನ ಚೋಳರು ಕಲ್ಲಿನಿಂದ ಇದನ್ನು ಪುನರ್ನಿರ್ಮಿಸಿದರು. ಐದು ಪ್ರಾಕಾರಗಳಿಂದ ಕೂಡಿದ ಈ ದೇಗುಲದ ಚಿಕ್ಕ ಗರ್ಭಗೃಹದ ವಿಮಾನ ಹಾಗೂ ಪರಾಂತಕ ಚೋಳನ (907–955) ಶಾಸನಗಳು ಇದರ ಪ್ರಾಚೀನತೆಗೆ ಸಾಕ್ಷಿಗಳಾಗಿವೆ. ಪರಾಂತಕನ ಅನಂತರದ ಚೋಳ ಅರಸರೂ, ಅವರ ಅನಂತರ ರಾಜ್ಯವಾಳಿದ ಪಾಂಡ್ಯ, ಹೊಯ್ಸಳ, ವಿಜಯನಗರ, ನಾಯಕ ಅರಸರೂ ಈ ದೇವಸ್ಥಾನದ ಆಕೃತಿ ಮತ್ತು ಆಸ್ತಿಪಾಸ್ತಿಗಳು ಬೆಳೆಯಲು ಮುಖ್ಯವಾಗಿ ಕಾರಣರಾದರು. ಈಚೆಗೆ ಸುಮಾರು 80 ವರ್ಷಗಳ ಹಿಂದೆ ನಡೆಸಲಾದ ಜೀರ್ಣೋದ್ಧಾರ ಕಾರ್ಯದ ಪರಿಣಾಮವಾಗಿ ಈ ದೇವಾಲಯ ತನ್ನ ಪ್ರಾಚೀನ ಸ್ವರೂಪವನ್ನು ಪೂರ್ಣವಾಗಿ ಕಳೆದುಕೊಂಡಿದೆ.

13ನೆಯ ಶತಮಾನದಲ್ಲಿ ತಮಿಳುನಾಡಿನ ಈ ಪ್ರಾಂತ್ಯವನ್ನು ಕರ್ನಾಟಕದ ಹೊಯ್ಸಳರು ಸ್ವಾಧೀನಪಡಿಸಿಕೊಂಡರು. ಆ ಮನೆತನದ ವೀರಸೋಮೇಶ್ವರ 1335ರಲ್ಲಿ ತನ್ನ ಅಜ್ಜ, ಅಜ್ಜಿ, ತಂದೆ ಹಾಗೂ ಅತ್ತೆಯ ಸ್ಮರಣಾರ್ಥವಾಗಿ ಜಂಬುಕೇಶ್ವರ ದೇವಾಲಯದೊಳಗೆ ಬಲ್ಲಾಳೇಶ್ವರ, ಪದ್ಮಾಲೀಶ್ವರ, ನರಸಿಂಹೇಶ್ವರ ಮತ್ತು ಸೋಮಳೀಶ್ವರವೆಂಬ ನಾಲ್ಕು ಸಣ್ಣ ಗುಡಿಗಳನ್ನು ಕಟ್ಟಿಸಿದ. ಹೊಯ್ಸಳರ ಪ್ರಧಾನಿಗಳು ಅಂದಿನ ಕೆಲವು ವ್ಯಾಪಾರಿಗಳೂ ಈ ದೇವಾಲಯದೊಳಗೆ ಕೆಲವು ಸಣ್ಣ ಗುಡಿಗಳನ್ನು ನಿರ್ಮಿಸಿದ್ದಾರೆ. ದೇವಾಲಯದ ಪಶ್ಚಿಮ ಗೋಪುರ 3ನೆಯ ಕುಲೋತ್ತುಂಗ ಚೋಳನ ಕಾಲಕ್ಕೂ, ಎಂದರೆ 1178ಕ್ಕೂ ಹಿಂದಿನದು. ಸುಂದರವಾದ ಮೂಡಣ ಗೋಪುರಕ್ಕೆ ಸುಂದರಪಾಂಡ್ಯನ್ ಗೋಪುರವೆಂದು ಹೆಸರಿದೆ. 1216ರಲ್ಲಿ ಮಾಜವರ್ಮನ್ ಸುಂದರಪಾಂಡ್ಯನಿಂದ ಪ್ರಾರಂಭಿಸಲಾದ ಅದರ ನಿರ್ಮಾಣ ಹೊಯ್ಸಳ ವೀರಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಪೂರ್ಣಗೊಂಡಿತು. ಈ ಗೋಪುರದ ಶಿಲ್ಪಗಳು 13ನೆಯ ಶತಮಾನದ ಚೋಳ–ಪಾಂಡ್ಯರ ಕಾಲದ ಶಿಲ್ಪಕೌಶಲದ ಶ್ರೇಷ್ಠ ಉದಾಹರಣೆಗಳಾಗಿವೆ.

ದೇವಾಲಯದ ಅಖಿಲಾಂಡ ನಾಯಕಿಯ ಗುಡಿಯನ್ನು ತಂಜಾವೂರಿನ ಚೋಳರ ಆಳ್ವಿಕೆಯ ಉತ್ತರಾರ್ಧದಲ್ಲೂ ಎರಡನೆಯ ಪ್ರಾಕಾರದಲ್ಲಿರುವ ಉತ್ಸವಮಂಟಪವನ್ನು 17–18ನೆಯ ಶತಮಾನಗಳಲ್ಲೂ ಕಟ್ಟಲಾಯಿತೆಂದೂ ನಾಲ್ಕನೆಯ ಪ್ರಾಕಾರದ ಶಂಕರಾಲಯವನ್ನು ಪಾಶುಪತ ಶಿವಾಚಾರ್ಯರುಗಳು ಕಟ್ಟಿಸಿದರೆಂದೂ ಅಲ್ಲಿಯ ಶಾಸನಗಳು ತಿಳಿಸುತ್ತವೆ.

ದೇವಾಲಯದ ಪಕ್ಕಕ್ಕಿರುವ ರಾಜರಾಜೇಶ್ವರ ದೇವಸ್ಥಾನ 3ನೆಯ ರಾಜರಾಜ ಚೋಳನ ಕಾಲದಲ್ಲಿ ನಿರ್ಮಾಣಗೊಂಡದ್ದು. ದೇವಸ್ಥಾನದ ಪ್ರಾಕಾರದೊಳಗಿರುವ ಪಶುಪತೀಶ್ವರ ಗುಡಿಯನ್ನು ಹೊಯ್ಸಳ ವೀರರಾಮನಾಥನ (1255–95) ಆಳ್ವಿಕೆಯಲ್ಲಿ ನೀಲಕಂಠನಾಯಕನೆಂಬಾತ ನಿರ್ಮಿಸಿದ. ಇಲ್ಲಿ ಮುಖಲಿಂಗ ಪ್ರತಿಷ್ಠಿತವಾಗಿದೆ.

13ನೆಯ ಶತಮಾನದಿಂದೀಚೆಗೆ ಜಂಬುಕೇಶ್ವರದಲ್ಲಿ ಅನೇಕ ಶೈವಮಠಗಳು ಅಸ್ತಿತ್ವಕ್ಕೆ ಬಂದುವು. 1258–59ರಲ್ಲಿ ಹೊಯ್ಸಳ ವೀರರಾಮನಾಥನು ಇಲ್ಲಿ ಶೈವ ಮಠವೊಂದನ್ನು ಸ್ಥಾಪಿಸಿ ಅದಕ್ಕೆ ಭೂಮಿದಾನಗಳನ್ನು ಮಾಡಿದನೆಂದು ಒಂದು ಶಾಸನದಲ್ಲಿ ತಿಳಿಸಲಾಗಿದೆ.

15–16ನೆಯ ಶತಮಾನದಲ್ಲಿ ಕಾಳಮೇಘಪ್ಪುಲವರ್ ಎಂಬ ಕವಿ ಹಾಡಿದ ತಿರುವಾನೈಕ್ಕಾಉಲಾ ಎಂಬ ಭಕ್ತಿಗೀತೆಯೂ ಕಚ್ಚಿಯಪ್ಪ ಮುನಿವರ್ ರಚಿಸಿದ ತಿರುವಾನೈಕ್ಕಾ ಪುರಾಣಂ ಎಂಬ ಕೃತಿಯೂ ಈ ಶೈವಸ್ಥಲದ ಮಹಾತ್ಮ್ಯವನ್ನು ಒತ್ತಿ ಹೇಳುತ್ತವೆ.

(ಕೆ.ವಿ.ಆರ್.)

**ಜಂಬೂದ್ವೀಪ :** ಪುರಾಣದಲ್ಲಿ ಹೇಳಿರುವಂತೆ ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ಸಪ್ತದ್ವೀಪಗಳಲ್ಲಿ ಮೊದಲನೆಯದು. ಒಂದು ಲಕ್ಷ ಯೋಜನ ವಿಸ್ತೀರ್ಣವುಳ್ಳ ತಾವರೆ ಎಲೆಯಂತೆ ದುಂಡಗೆ ಇರುವ ಈ ದ್ವೀಪವನ್ನು ಒಂದು ಲಕ್ಷ ಯೋಜನ ವಿಸ್ತಾರವುಳ್ಳ ಉಪ್ಪುಸಮುದ್ರ ಸುತ್ತುವರಿದಿದೆ. ಸೃಷ್ಟಿಯ ಆದಿಯಲ್ಲಿ ಪ್ರಿಯವ್ರತರಾಜನ ಮಗ ಆಗ್ನೀಧ್ರ ಈ ದ್ವೀಪವನ್ನು ಆಳುತ್ತಿದ್ದ. ಆತ ತನ್ನ ಒಂಬತ್ತು ಜನ ಮಕ್ಕಳಿಗೆ ಈ ದ್ವೀಪವನ್ನು ಒಂಬತ್ತು ಖಂಡಗಳಾಗಿ ಭಾಗ ಮಾಡಿ ಹಂಚಿದ. ಆ ಪ್ರದೇಶಗಳು ಆಯಾ ಕುಮಾರರ ಹೆಸರುಗಳಿಂದಲೇ ಅಂದರೆ–ಅಜನಾಭವರ್ಷ (ಇದನ್ನು ಭಾರತವರ್ಷವೆಂದೂ ಕೆಲವೆಡೆ ಹೇಳಿದೆ), ಕಿಂಪುರುಷವರ್ಷ, ಹರಿವರ್ಷ, ಭದ್ರಾಶ್ವವರ್ಷ, ರಮ್ಯಕವರ್ಷ, ಹಿರಣ್ಮಯವರ್ಷ, ಕುರುವರ್ಷ, ಕೇತುಮಾಲವರ್ಷ, ಇಲಾವೃತವರ್ಷಗಳೆಂದು ಪ್ರಸಿದ್ಧಿ ಪಡೆದಿವೆ. ಈ ಒಂದೊಂದು ವರ್ಷವೂ ಒಂಬತ್ತು ಸಾವಿರ ಯೋಜನ ಅಗಲವಾಗಿದೆ. ಇವುಗಳ ಮಧ್ಯೆ ಎಂಟು ಸೀಮಾ (ಎಲ್ಲೆ ಗುರುತಿಸುವ) ಪರ್ವತಗಳಿವೆ.

ಈ ದ್ವೀಪದ ಮಧ್ಯಭಾಗದಲ್ಲಿ ಇಲಾವೃತವರ್ಷವಿದೆ. ಇದರ ಮಧ್ಯೆ ಮೇರು ಪರ್ವತವಿದೆ. ಇದರ ಎತ್ತರ ಒಂದು ಲಕ್ಷ ಯೋಜನ. ಇದನ್ನು ಲವಣಸಮುದ್ರ ಸುತ್ತುವರಿದಿದೆ.

ಮೇರುಪರ್ವತದ ಸುತ್ತಲೂ ಮಂದರ, ಮೇರುಮಂದರ, ಸುಪಾರ್ಶ್ವ, ಕುಮುದ ಪರ್ವತಗಳಿವೆ. ಈ ನಾಲ್ಕು ಪರ್ವತಗಳಲ್ಲಿ ಚೂತ (ಮಾವು), ಜಂಬೂ (ನೇರಳೆ), ಕದಂಬ (ತಾಳೆ) ಮತ್ತು ನ್ಯಗ್ರೋಧ (ಆಲ) ವೃಕ್ಷಗಳಿವೆ ; ಅಲ್ಲದೆ ಕ್ಷೀರ (ಹಾಲು), ಮಧು (ಜೇನು), ಇಕ್ಷುರಸ (ಕಬ್ಬಿನ ರಸ) ಮತ್ತು ಮೃಷ್ಟಜಲಗಳ ನಾಲ್ಕು ಮಡುಗಳಿವೆ ; ನಂದನ, ಚೈತ್ರರಥ, ವೈಭ್ರಾಜಕ, ಸರ್ವತೋಭದ್ರ ಎಂಬ ದೇವೋದ್ಯಾನಗಳಿವೆ.

ಮಾವು ಮೊದಲಾದ ಮರಗಳು 1,100 ಯೋಜನ ದೀರ್ಘವಾಗಿವೆ. ನೂರು ಯೋಜನ ವಿಸ್ತಾರವಾಗಿವೆ ಮತ್ತು ಅವುಗಳ ಶಾಖಾವಿಸ್ತಾರ 1,100 ಯೋಜನ. ಮಾವಿನ ಮರದಲ್ಲಿ ದೊಡ್ಡ ದೊಡ್ಡ ಹಣ್ಣುಗಳಿದ್ದು ಅಮೃತದಂತೆ ರುಚಿಯಾಗಿವೆ. ಈ ಹಣ್ಣುಗಳು ಕೆಳಕ್ಕೆ ಬಿದ್ದು ಸೂಸುವ ರಸವೇ ಅರುಣೋದಾ ಎಂಬ ನದಿಯಾಗಿ ಇಲಾವೃತವರ್ಷದ ಪೂರ್ವಭಾಗವನ್ನೆಲ್ಲ ತಣಿಸುತ್ತದೆ. ಅಂತೆಯೇ ನೇರಳೆ ಹಣ್ಣುಗಳ ರಸ ಜಂಬೂನದಿಯಾಗಿ ಹರಿಯುತ್ತದೆ. ಈ ನದಿಯ ದಡಗಳ ಮಣ್ಣು ಜಂಬೂರಸದಲ್ಲಿ ನೆನೆದು ವಾಯುಸೂರ್ಯರ ಸಂಯೋಗದಿಂದ ರೂಪಾಂತರ ಹೊಂದಿ ಜಾಂಬೂನದ ಎಂಬ ಚಿನ್ನವಾಗುತ್ತದೆ. ಕದಂಬವೃಕ್ಷದ ಐದು ಪೊಟರೆಗಳಿಂದ ಐದು ಜೇನಿನ ಪ್ರವಾಹಗಳು ಹೊರಡುತ್ತವೆ. ಆಲದ ಮರದ ರೆಂಬೆಗಳಿಂದ ಹೊರಡುವ ಪ್ರವಾಹಗಳು ಹಾಲು, ಮೊಸರು, ತುಪ್ಪ, ಜೇನು, ಬೆಲ್ಲ, ಅನ್ನವೇ ಮೊದಲಾಗಿ ಬಟ್ಟೆ, ಹಾಸಿಗೆ, ಆಸನ, ಆಭರಣ ಮೊದಲಾದ ವಸ್ತುಗಳಿಂದ ಕೂಡಿದ ಸರ್ವೇಷ್ಟಗಳನ್ನೂ ಈಡೇರಿಸುತ್ತ ಹರಿಯುತ್ತವೆ. ಇಲ್ಲಿ ವಾಸ ಮಾಡುವವರು ಜೀವಾವಧಿ ನಿರತಿಶಯವಾದ ಸುಖದಲ್ಲಿರುತ್ತಾರೆ.

ಕುರುಂಗ, ಕುರರ, ಕುಸುಂಭ, ವೈಕಂಕ, ತ್ರಿಕೂಟಶಿಖರ, ಶಿಶಿರಪತಂಗ, ರುಚಕ, ನಿಷೇಧ, ಶಿತಿವಾಸ, ಕಪಿಲ, ಶಂಖ, ವೈಡೂರ್ಯ, ಜಾರುಧಿಹಂಸ, ಋಷಭ, ನಾಗಕಾಲಂಜರ, ನೀರದ ಮೊದಲಾದ ಪರ್ವತಗಳು ಮೇರುವಿನ ಬುಡದಲ್ಲಿ ಸುತ್ತಲೂ ಇವೆ.

ಮೇರುವಿಗೆ ಪೂರ್ವದಿಕ್ಕಿನಲ್ಲಿ ಜಠರ–ದೇವಕೂಟ ಪರ್ವತಗಳಿವೆ. ಪಶ್ಚಿಮದಲ್ಲಿ ಪವನ, ಪಾರಿಪಾತ್ರ ಪರ್ವತಗಳು, ದಕ್ಷಿಣದಲ್ಲಿ ಕೈಲಾಸ, ಕರವೀರ ಪರ್ವತಗಳು, ಉತ್ತರದಲ್ಲಿ ತ್ರಿಶೃಂಗ, ಮಕರ ಪರ್ವತಗಳು ಇವೆ. ಈ ಪರ್ವತಗಳು ಹದಿನೆಂಟು ಯೋಜನ ದೀರ್ಘವಾಗಿವೆ; ಎತ್ತರ ಎರಡುಸಾವಿರ ಯೋಜನಗಳು ; ವಿಸ್ತಾರ ಎರಡು ಸಾವಿರ ಯೋಜನಗಳು.

ಭಾರತವರ್ಷ ಕರ್ಮದೇಶ. ಇತರ ವರ್ಷಗಳು ಪುಣ್ಯವಿಶೇಷಗಳನ್ನು ಅನುಭವಿಸುವ ಪ್ರದೇಶಗಳು, ಭೂಸ್ವರ್ಗ. ಆ ವರ್ಷಗಳ ನಿವಾಸಿಗಳಿಗೆ ಆಯುಸ್ಸು ಅಯುತ ವರ್ಷಗಳು. ಅವರು ದೇವತೆಗಳಿಗೆ ಸಮಾನರು, ಅಯುತ ಆನೆಗಳ ಬಲವುಳ್ಳವರು, ವಜ್ರದಂತೆ ದೃಢಕಾಯರು, ಯಾವಾಗಲೂ ಆನಂದಯುಕ್ತರು, ತಮ್ಮ ಇಚ್ಛಾನುಸಾರ ವಿಹರಿಸುವವರಾಗಿರುತ್ತಾರೆ.

ಒಂಬತ್ತು ವರ್ಷಗಳಲ್ಲಿಯೂ ಭಗವನ್ ನಾರಾಯಣ ಭಕ್ತರ ಅನುಗ್ರಹಕ್ಕೆ ತನ್ನ ಮೂರ್ತಿಭೇದದಿಂದ ಇಲಾವೃತದಲ್ಲಿ ಸಂಕರ್ಷಣಮೂರ್ತಿಯಾಗಿಯೂ ಭದ್ರಾಶ್ವ ವರ್ಷದಲ್ಲಿ ಹಯಶೀರ್ಷನಾಗಿಯೂ ಹರಿವರ್ಷದಲ್ಲಿ ನರಹರಿಯಾಗಿಯೂ ಕೇತುಮಾಲ ವರ್ಷದಲ್ಲಿ ಕಾಮದೇವನಾಗಿಯೂ ಹಿರಣ್ಮಯ ವರ್ಷದಲ್ಲಿ ಕೂರ್ಮರೂಪವುಳ್ಳವನಾಗಿಯೂ ಉತ್ತರಕುರುವರ್ಷದಲ್ಲಿ ವರಾಹರೂಪವುಳ್ಳವನಾಗಿಯೂ ಕಿಂಪುರುಷ ವರ್ಷದಲ್ಲಿ ದಶರಥರಾಮನಾಗಿಯೂ ಭಾರತದಲ್ಲಿ ಅವ್ಯಕ್ತನಾಗಿ ನರನಾರಾಯಣನಾಗಿಯೂ ಇಂದಿಗೂ ಇದ್ದಾನೆಂದು ನಂಬಿಕೆ.

ಜಂಬೂದ್ವೀಪಕ್ಕೆ ಎಂಟು ಉಪದ್ವೀಪಗಳಿವೆ. ಅವು ಸ್ವರ್ಣಪ್ರಸ್ಥ, ಚಂದ್ರಶುಕ್ಲ, ಆವರ್ತನ, ರಮಣಕ, ಮಂದಹರಿಣ, ಪಾಂಚಜನ್ಯ, ಸಿಂಹಲ, ಲಂಕಾ. ಸಗರನ ಮಕ್ಕಳು ಅಶ್ವಮೇಧದ ಕುದುರೆಯನ್ನು ಅನ್ವೇಷಿಸುತ್ತ ಈ ಭೂಮಿಯನ್ನು ಸುತ್ತಲೂ ಅಗೆದುದರಿಂದ ಇವು ಉಂಟಾದವು. (ಆರ್.ಎಸ್.ಎಸ್.)

ಜೈನ ಸಿದ್ಧಾಂತದ ಪ್ರಕಾರ ದ್ವೀಪಗಳಲ್ಲಿ ನಟ್ಟನಡುವಿನದು ಜಂಬೂದ್ವೀಪ. ಪೂರ್ವ ಪಶ್ಚಿಮವಾಗಿ ಹಬ್ಬಿರುವ ಆರು ಕುಲಪರ್ವತಗಳು ಈ ದ್ವೀಪವನ್ನು ಏಳು ಕ್ಷೇತ್ರ ಅಥವಾ ವರ್ಷಗಳಾಗಿ ಭಾಗಿಸುತ್ತವೆ. ಆ ಪರ್ವತಗಳು ದಕ್ಷಿಣದಿಂದ ಉತ್ತರಕ್ಕೆ ಕ್ರಮವಾಗಿ ಹಿಮವಾನ್, ಮಹಾ ಹಿಮವಾನ್, ನಿಷಧ, ನೀಲ, ರುಕ್ಮಿ ಮತ್ತು ಶಿಖರಿ. ಇವುಗಳಿಂದಾದ ಕ್ಷೇತ್ರಗಳು ಕ್ರಮವಾಗಿ–ಭರತ, ಹೈಮವತ, ಹರಿ, ವಿದೇಹ, ರಮ್ಯಕ, ಹೈರಣ್ಯವತ ಮತ್ತು ಐರಾವತ. ಮಂದರ ಪರ್ವತವಿರುವುದು ವಿದೇಹ ಕ್ಷೇತ್ರದ ನಡುವೆ. **(ಚಿತ್ರ–1)**




**ಚಿತ್ರ 1. ಜಂಬೂದ್ವೀಪ**

ಹೈಮವತ ಕ್ಷೇತ್ರ ಜಘನ್ಯ (ಕೀಳ್ತರದ) ಭೋಗಭೂಮಿ. ಹರಿಕ್ಷೇತ್ರ ಮಧ್ಯಮ ಭೋಗಭೂಮಿ. ಮಂದರ ನಿಷಧಗಳ ನಡುವೆ ಇರುವ ದೇವಕುರು, ಮಂದರಕ್ಕೆ ಉತ್ತರದಲ್ಲಿರುವ ಉತ್ತರಕುರು – ಈ ಎರಡೂ ಉತ್ತಮ ಭೋಗಭೂಮಿಗಳು.

ಭರತಕ್ಷೇತ್ರ : ಹಿಮವತ್ಪರ್ವತದ ದಕ್ಷಿಣದಲ್ಲಿ ಲವಣಸಮುದ್ರದವರೆಗೂ ವ್ಯಾಪಿಸಿರುವುದು ಭರತಕ್ಷೇತ್ರ. ಇದರ ನಡುವೆ ವಿಜಯಾರ್ಧ ಪರ್ವತ ಪೂರ್ವ ಪಶ್ಚಿಮವಾಗಿ ಹಬ್ಬಿ ಈ ಕ್ಷೇತ್ರವನ್ನು ಉತ್ತರ ಭರತ, ದಕ್ಷಿಣ ಭರತ ಎಂದು ಎರಡಾಗಿ ಒಡೆಯುತ್ತದೆ. ಹಿಮವತ್ಪರ್ವತದಲ್ಲಿ ಹುಟ್ಟಿದ ಮಹಾಸಿಂಧು ಮಹಾಗಂಗಾ ಎಂಬೆರಡು ನದಿಗಳು ಉತ್ತರದಿಂದ ದಕ್ಷಿಣಕ್ಕೆ ಹರಿದು ಲವಣಸಮುದ್ರಕ್ಕೆ ಸೇರುತ್ತವೆ. ವಿಜಯಾರ್ಧ ಪರ್ವತ ಮತ್ತು ಗಂಗಾ ಸಿಂಧೂ ನದಿಗಳಿಂದ ಭರತ ಕ್ಷೇತ್ರ ಆರು ಖಂಡಗಳಾಗಿ ಭಾಗವಾಗಿವೆ. ದಕ್ಷಿಣ ಭರತದ ನಡುವಣ ಖಂಡವೇ ಆರ್ಯಖಂಡ. ಇಲ್ಲೇ ಜಗತ್ತು ಇರುವುದು. ಉಳಿದ ಐದು ಖಂಡಗಳೂ ಮ್ಲೇಚ್ಛ ಖಂಡಗಳು ; ಮ್ಲೇಚ್ಛ ನಿವಾಸಗಳು. **(ಚಿತ್ರ–2)**

ಉತ್ತರ ಭರತದಲ್ಲಿ ಹಿಮವತ್ಪರ್ವತದ ಮಧ್ಯಮ ಕೂಟಕ್ಕೆ ನೇರವಾಗಿ ದಕ್ಷಿಣದಲ್ಲಿ ವೃಷಭಾದ್ರಿಯಿದೆ. ಇಲ್ಲಿನ ಶಿಲೆಗಳ ಮೇಲೆ ಚಕ್ರವರ್ತಿಗಳು ತಮ್ಮ ಶಾಸನಗಳನ್ನು ಕೆತ್ತಿಸುತ್ತಾರೆ. ದಕ್ಷಿಣ ಭರತದಲ್ಲಿ ಗಂಗಾತೀರದ ಹತ್ತಿರ ಕೈಲಾಸ ಪರ್ವತವಿದೆ. ಇದು ಆದಿತೀರ್ಥಂಕರನ ಸಮವಸರಣ ಭೂಮಿ ಮತ್ತು ಪರಿನಿರ್ವಾಣ ಕ್ಷೇತ್ರ.

ಜಂಬೂದ್ವೀಪದ ಉಳಿದ ಕ್ಷೇತ್ರಗಳಲ್ಲೂ ವಿಜಯಾರ್ಧ ಪರ್ವತಗಳಿವೆ. ಉಳಿದ ದ್ವೀಪಗಳಲ್ಲೂ ಮಂದರ ವಿಜಯಾರ್ಧ ಪರ್ವತಗಳಿವೆ. *




**ಚಿತ್ರ 2. ಭರತಕ್ಷೇತ್ರ**

ಜ್ಯೋತಿಶ್ಶಾಸ್ತ್ರ ಪ್ರಕಾರ ಲವಣಸಮುದ್ರಕ್ಕೆ ಉತ್ತರದಲ್ಲಿ ಜಂಬೂದ್ವೀಪ. ಅದು ಭೂಮಿಯ ಅರ್ಧ ಭಾಗ. ಅದರ ದಕ್ಷಿಣದಲ್ಲಿನ ಭೂಮಿಯ ಇನ್ನರ್ಧ ಭಾಗದಲ್ಲಿ ಇತರ ಆರು ದ್ವೀಪಗಳೂ ಏಳು ಸಮುದ್ರಗಳೂ ಇವೆ. (ಆರ್.ಎಸ್.ಎಸ್.)

**ಜಂಬೂರು ಮಹಾಕಾಳಯ್ಯ :** ಸು. 1160, ಒಬ್ಬ ಶಿವಶರಣ. ಕಾಳಯ್ಯ ನಿಜನಾಮ. ಜಂಬೂರು ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪಕ್ಕೆ ಸುಮಾರು ಆರೂವರೆ ಕಿಮೀ ದೂರದಲ್ಲಿದೆ. ಇದಕ್ಕೆ ಹಿರಿಯ ಜಂಬೂರು ಎಂಬ ಹೆಸರೂ ಕಂಡುಬರುತ್ತದೆ. ಈ ಊರಿನಲ್ಲಿ ಕಾಳಯ್ಯ ಶ್ರೇಷ್ಠ ಶಿವಾನುಭವಿಯಾಗಿದ್ದ. ಲಿಂಗಾನುಸಂಧಾನಿಯಾದ ಕಾಳಯ್ಯ ತನ್ನ ಆಚರಣೆಯಿಂದ ತನ್ನ ಪ್ರಾಣವನ್ನು ತನ್ನ ಅಧೀನದಲ್ಲೇ ಇಟ್ಟುಕೊಂಡಿದ್ದುದಲ್ಲದೆ ತನ್ನ ಶಿರವನ್ನು ಲಿಂಗಕ್ಕೆ ಅರ್ಪಿಸಿ ಮತ್ತೆ ಅದನ್ನು ಪಡೆದುಕೊಳ್ಳುವ ಸಾಮರ್ಥ್ಯ ಪಡೆದಿದ್ದನೆಂದು ಹೇಳಲಾಗಿದೆ.

ಒಮ್ಮೆ ಕಾಳಯ್ಯ ತಮ್ಮ ಅಗ್ರಹಾರದ ಕಡೆ ಬರುತ್ತಿದ್ದುದನ್ನು ಕಂಡ ವಿಪ್ರರು ಆತನನ್ನು ದಾರಿಯಲ್ಲೇ ತಡೆದು ವೇದಪಠನ ಮಾಡುವಲ್ಲಿಗೆ ಶಿವಭಕ್ತರು ಬರಬಾರದೆಂದು ತಿಳಿಸಿದರು. ಅದನ್ನು ಕೇಳಿದ ಕಾಳಯ್ಯ ಶಿವಭಕ್ತಿಯಿಲ್ಲದ ವಿಪ್ರ ಶ್ವಪಚನಿಗಿಂತಲೂ ಕಡೆ ಎಂದ. ಆಗ ಆ ದ್ವಿಜರು ವೇದವನ್ನು ಬಿಟ್ಟು ದೈವವಿಲ್ಲ. ವೇದವೇ ಶಿವ, ಹರಿ. ಆದುದರಿಂದ ವೇದವನ್ನು ಬಲ್ಲಾತನೇ ಕುಲದಲ್ಲಿ ಅಧಿಕನಾದವ. ಅದಿಲ್ಲದವ ಶಿವಭಕ್ತನಾದರೂ ಕುಲಹೀನ ಎಂದರು. ವೇದ ಅಧಿಕವಾದರೆ ಅದು ಶಿವನ ಪಾದದಲ್ಲಿ ಶುನಿಯಾಗಿ ಇರಬಲ್ಲುದೆ ಎಂದು ಕಾಳಯ್ಯ ಅವರನ್ನು ಪ್ರಶ್ನಿಸಲು ಅವರು ಶಿವಭಕ್ತರು ವೇದಗಳಿಗಿಂತಲೂ ಅಧಿಕರು ಎಂಬ ವೇದಭಾಗವನ್ನು ಶ್ವಾನನಿಂದ ಓದಿಸಿ ಸಿದ್ಧಪಡಿಸಿ ತೋರಿಸು ಎಂದು ಹೇಳಿದರು. ಆ ಕೂಡಲೇ ಕಾಳಯ್ಯ ಹೊಲಗೇರಿಯಿಂದ ಒಂದು ನಾಯಿಯನ್ನು ತರಿಸಿ ಅದರ ಬಾಯಿಂದ ಆ ವಾಕ್ಯವನ್ನು ಹೇಳಿಸಲಾಗಿ ಅಲ್ಲಿ ನೆರೆದಿದ್ದ ವಿಪ್ರರೆಲ್ಲರೂ ನಾಚಿ ಕಾಳಯ್ಯನಿಗೆ ನಮಸ್ಕರಿಸಿ ಹೊರಟು ಹೋದರು.

ಜಂಬೂರಿನಲ್ಲಿ ಈಗಲೂ ಮಹಾಕಾಳಯ್ಯನ ವಿಗ್ರಹವೂ, ವೇದವನ್ನು ಓದುತ್ತಿರುವ ನಾಯಿಯ ವಿಗ್ರಹವೂ ಇವೆಯಂತೆ.

ಈತನ ವಿಷಯ ಬಸವೇಶ್ವರ ಪುರಾಣದ ಕಥಾಸಾಗರ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಬಸವಪುರಾಣ, ಭೈರೇಶ್ವರ ಕಾವ್ಯದ ಕಥಾಸೂತ್ರರತ್ನಾಕರ, ಶಿವತತ್ತ್ವಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ಪ್ರೌಢರಾಯನ ಕಾವ್ಯ, ಗುರು ರಾಜಚಾರಿತ್ರ, ಸಾನಂದ ಚರಿತೆ ಮೊದಲಾದ ಗ್ರಂಥಗಳಲ್ಲಿ ಕಂಡುಬರುತ್ತದೆ. (ಎನ್.ಬಿ.)

**ಜಂಬೆ :** ಲೆಗ್ಯೂಮಿನೋಸೀ ಕುಟುಂಬಕ್ಕೆ ಸೇರಿದ ಒಂದು ಕಾಡುಮರ. ಕರ್ನಾಟಕದ ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಹಾಸನ, ಕೊಡಗು, ದ.ಕನ್ನಡ ಜಿಲ್ಲೆಗಳ ತೇವಪೂರಿತ ಪರ್ಣಪಾತಿ ಮರಗಳ ಕಾಡುಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ಆಂಧ್ರಪ್ರದೇಶ, ಕೇರಳಗಳ ಕೆಲವು ಪ್ರದೇಶಗಳಲ್ಲೂ ಉಂಟು. ಸೈಲಿಯ ಸೈಲೋಕಾರ್ಪ ಇದರ ಶಾಸ್ತ್ರೀಯ ಹೆಸರು. ಸುಮಾರು 10–30 ಮೀ. ಎತ್ತರಕ್ಕೆ ಬೆಳೆಯುವ ಪರ್ಣಪಾತಿ ಮರ ಇದು. ಇದರ ತೊಗಟೆಯ ಬಣ್ಣ ಕೆಂಪು ಮಿಶ್ರಿತ ಬೂದು. ಚೌಬೀನೆ ಬಲು ಭಾರವೂ ಗಟ್ಟಿಯೂ ಆಗಿದೆ. ಇದರ ಬಣ್ಣ ಕೆಂಪುಮಿಶ್ರಿತ ಕಂದು, ಎಲೆಗಳು ದ್ವಿಪಿಚ್ಛಕ ಸಂಯುಕ್ತ ಮಾದರಿಯವು. ಎಲೆಗಳ ಬುಡದಲ್ಲಿ ಸಣ್ಣ ಗಾತ್ರದ ವೃಂತಪರ್ಣಗಳಿವೆ. ಹೂಗಳು ಬಿಳಿ, ಸಣ್ಣ ಗಾತ್ರದವು ; ಎಲೆಗಳ ಕಂಕುಳಲ್ಲಿ ಮೂಡುವ ಗುಂಡನೆಯ ಚಂಡುಮಂಜರಿಗಳಲ್ಲಿ ಸಮಾವೇಶಗೊಂಡಿವೆ. ಪುಷ್ಪಪತ್ರಗಳು, ದಳಗಳು ಐದೈದು. ಕೇಸರುಗಳು 10; ಬಿಡಿಬಿಡಿಯಾಗಿವೆ. ಅಂಡಾಶಯ ಉಚ್ಚಸ್ಥಾನದ್ದು ; ಒಂದೇ ಕಾರ್ಪೆಲಿನಿಂದ ಉಂಟಾಗಿದೆ. ಫಲ ಪಾಡ್ ಮಾದರಿಯದು. ಇದರ ಉದ್ದ 10–15 ಸೆಂ.ಮೀ.; ಅಗಲ 5–6 ಸೆಂ.ಮೀ. ಇದು ದಾರುಮಯ ಹಾಗೂ ಚಪ್ಪಟೆ ಆಗಿದೆ.

ಜಂಬೆ ಬಹಳ ದೃಢಕಾಯದ ಮರ. ಕಾಳ್ಗಿಚ್ಚಿಗೆ ಸುಲಭವಾಗಿ ಬಲಿಯಾಗದು. ಇದನ್ನು ಹದಗೊಳಿಸುವುದು ಮತ್ತು ಕೊಯ್ಯುವುದು ಬಹಳ ಕಷ್ಟ. ಸರಿಯಾಗಿ ಹದ ಮಾಡದಿದ್ದರೆ ಇದರ ಮೇಲ್ಮೈಯಲ್ಲಿ ಬಿರುಕುಗಳುಂಟಾಗುತ್ತವೆ. ಅಲ್ಲದೆ ಚೌಬೀನೆ ಡೊಂಕಾಗುವುದೂ ಉಂಟು. ಆದ್ದರಿಂದ ಇದನ್ನು ಮಳೆಗಾಲದಲ್ಲೇ ಬೀಳಿಸಿ, ಹಸಿ ಆರುವ ಮುನ್ನ ಕೊಯ್ದು, ನೆರಳಿನಲ್ಲಿ ನಿಧಾನವಾಗಿ ಆರಲು ಬಿಡಬೇಕು. ಹೀಗೆ ಮಾಡಿದರೆ ಹೆಚ್ಚು ಕಾಲ ಬಾಳಿಕೆಬರುತ್ತದೆ. ಇದನ್ನು ಗಣಿಗಳಲ್ಲಿನ ಆಸರೆಗಂಬ, ರೈಲ್ವೆ ಸ್ಲೀಪರುಗಳು, ತೊಲೆ, ರೈಲ್ವೆ ವ್ಯಾಗನುಗಳ ನೆಲಕ್ಕೆ ಹಾಸುವ ಹಲಗೆಗಳು ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಜಂಬೆಗೆ ಔಷಧೀಯ ಗುಣ ಉಂಟು. ಇದರ ತೊಗಟೆಯಿಂದ ತಯಾರಿಸಲಾಗುವ ಕಷಾಯವನ್ನು ಜಂತುನಾಶಕವಾಗಿಯೂ, ಕುಷ್ಠ, ಅತಿಸಾರ, ಗಾನರೀಯ ಮುಂತಾದ ರೋಗನಿವಾರಣೆಗೂ ಬಳಸುತ್ತಾರೆ. ಇದರ ಬೀಜದಿಂದ ಪಡೆಯುವ ಎಣ್ಣೆಗೆ ಸಂಧಿವಾತ, ಮೂಲವ್ಯಾಧಿಗಳನ್ನು ವಾಸಿ ಮಾಡುವ ಗುಣ ಇದೆ. (ಎ.ಕೆ.ಎಸ್.)

**ಜಕಣಾಚಾರಿ :** ಕರ್ನಾಟಕದ ದಕ್ಷಿಣ ಭಾಗದ ಅನೇಕ ಸುಂದರ ದೇವಾಲಯಗಳನ್ನು ಕಟ್ಟಿದ ರೂವಾರಿಯೆಂದು ನಂಬಲಾಗಿರುವ ವ್ಯಕ್ತಿ. ಆದರೆ ಇವನ ಬಗ್ಗೆ ಖಚಿತವಾಗಿ ಏನೂ ತಿಳಿದುಬಂದಿಲ್ಲ. ಯಾವೊಂದು ಸುಂದರವಾದ ಹೊಯ್ಸಳ ದೇವಾಲಯವಿದ್ದರೂ ಅದನ್ನು ಆ ಊರಿನವರು ಜಕಣಾಚಾರಿಯ ಕಟ್ಟಡ ಎನ್ನುತ್ತಾರೆ. ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿರುವ ದ್ರಾವಿಡ ಶೈಲಿಯ ಕಟ್ಟಡಗಳನ್ನೂ ಜಕಣಾಚಾರಿಯೇ ಕಟ್ಟಿದನೆಂಬ ನಂಬಿಕೆ ಅಲ್ಲಿನವರಿಗಿದೆ. ಕುರುಡುಮಲೆಯ ಸೋಮೇಶ್ವರ ದೇವಾಲಯದ ಹಿಂದಿನ ಭಾಗವನ್ನು ಜಕಣಾಚಾರಿಯೂ ಮುಂದಿನ ನವರಂಗವನ್ನು ಅವನ ಮಗನೂ ಕಟ್ಟಿದರೆಂದೂ ಅಲ್ಲಿನ ಜಾಲಂಧ್ರವೊಂದರ ಮೇಲಿನ ಮೂರ್ತಿಗಳೆರಡನ್ನು ಜಕಣಾಚಾರಿ ಮತ್ತು ಅವನ ಮಗ ಕಡೆದರೆಂದೂ ಹೇಳುತ್ತಾರೆ. ಇವರ ವಿಷಯದಲ್ಲಿ ಹುಟ್ಟಿಕೊಂಡಿರುವ ಕಥೆಗಳು ಹಲವಾರು.

ತುಮಕೂರು ಜಿಲ್ಲೆಯ ಕೈದಾಳ ಇವನ ಹುಟ್ಟೂರು–ಎಂದು ಹೇಳಲಾಗಿದೆ. ಇವನು ಚಿಕ್ಕ ವಯಸ್ಸಿನಲ್ಲಿಯೇ ತನ್ನ ಹೆಂಡತಿ ಮತ್ತು ಮಗುವನ್ನು ಬಿಟ್ಟು ಊರೂರು ಅಲೆಯುತ್ತ ಅಲ್ಲಲ್ಲಿ ದೇವಾಲಯಗಳನ್ನು ನಿರ್ಮಿಸುತ್ತ ಹತ್ತಾರು ವರ್ಷಗಳನ್ನು ಕಳೆದ. ಇವನ ಶಿಲ್ಪವೈಖರಿಯ ಖ್ಯಾತಿ ಹೊಯ್ಸಳ ಬಲ್ಲಾಳ ರಾಯನ ಕಿವಿ ಮುಟ್ಟಿತು. ತನ್ನ ರಾಜಧಾನಿಯಲ್ಲಿ ಸುಂದರವಾದ ದೇವಾಲಯಗಳನ್ನು ನಿರ್ಮಿಸುವಂತೆ ಜಕಣಾಚಾರಿಯನ್ನು ಆತ ಕೇಳಿಕೊಂಡ. ಅದರಂತೆ ಸರ್ವಾಂಗಸುಂದರವಾದ ದೇವಾಲಯವೊಂದನ್ನು ಜಕಣಾಚಾರಿ ಪೂರೈಸಿದ. ಅಷ್ಟು ಹೊತ್ತಿಗೆ ಅವನ ಮಗ ಡಂಕಣಾಚಾರಿ ಹುಡುಗನಾಗಿದ್ದರೂ ಶಿಲ್ಪವಿದ್ಯೆಯಲ್ಲಿ ಪ್ರವೀಣನಾಗಿದ್ದ. ತಂದೆ ದೇಶ ಅಲೆಯಲು ಹೋದುದನ್ನು ಅವನು ತಾಯಿಯಿಂದ ತಿಳಿದು, ತಂದೆಯನ್ನು ಹುಡುಕುತ್ತ ಅಲೆದಾಡಿ, ದೇವಾಲಯ ನಿರ್ಮಾಣವಾಗುತ್ತಿದ್ದ ಹೊಯ್ಸಳ ರಾಜಧಾನಿಗೆ ಬಂದ. ಅಲ್ಲಿ ಪ್ರತಿಷ್ಠೆ ಮಾಡಲು ಜಕಣಾಚಾರಿ ಸಿದ್ಧಪಡಿಸಿಟ್ಟಿದ್ದ ಮೂರ್ತಿಯನ್ನು ಕಂಡ. ಅದರಲ್ಲಿ ದೋಷವಿರುವುದೆಂದು ಡಂಕಣಾಚಾರಿ ಹೇಳಿದಾಗ, ಹಾಗೆಂದು ತೋರಿಸಿಕೊಟ್ಟರೆ ತನ್ನ ಕೈಯನ್ನು ಕತ್ತರಿಸಿಕೊಳ್ಳುವುದಾಗಿ ಜಕಣಾಚಾರಿ ಪಣ ತೊಟ್ಟ. ಚಂದನವನ್ನು ತೇದು ಮೂರ್ತಿಯ ಹೊಟ್ಟೆಯ ಭಾಗಕ್ಕೆ ಬಳಿದಾಗ ಹೊಕ್ಕಳಿನ ಭಾಗದಲ್ಲಿ ಮಾತ್ರ ಅದು ಹಸಿಯಾಗಿ ಉಳಿಯಿತು. ಆ ಸ್ಥಳದಲ್ಲಿ ವಿಗ್ರಹವನ್ನು ಒಡೆದಾಗ ಆ ಭಾಗ ಟೊಳ್ಳಾಗಿದ್ದುದನ್ನೂ ಅದರಲ್ಲಿ ಸ್ವಲ್ಪ ನೀರು, ಮರಳು ಮತ್ತು ಕಪ್ಪೆ ಇದ್ದುದನ್ನೂ ಕಂಡ ಜಕಣಾಚಾರಿ ತನ್ನ ಕೈಯನ್ನು ತತ್‍ಕ್ಷಣ ಕತ್ತರಿಸಿಕೊಂಡ. ಜಕಣಾಚಾರಿ ತನ್ನ ತಂದೆಯೆಂದು ಡಂಕಣಾಚಾರಿಗೂ ಆ ಹುಡುಗ ತನ್ನ ಮಗನೇ ಎಂದು ಜಕಣಾಚಾರಿಗೂ ತಿಳಿದದ್ದು ಆಮೇಲೆಯೇ. ಮುಂದೆ ದೈವಪ್ರೇರಣೆಯಂತೆ ಜಕಣಾಚಾರಿ ತನ್ನ ಹುಟ್ಟೂರಿನಲ್ಲಿ ಒಂದೇ ಕೈಯಲ್ಲಿಯೇ ಕೇಶವ ದೇವಾಲಯವನ್ನು ಕಟ್ಟಿದ. ಅದು ಪೂರೈಸುತ್ತ ಬಂದ ಹಾಗೆ ಇವನ ಕೈ ಮೊದಲಿನಂತೆ ಬೆಳೆಯಿತಂತೆ. ಇದು ಜಕಣಾಚಾರಿಯ ಬಗ್ಗೆ ಪ್ರಚಲಿತವಾಗಿರುವ ಒಂದು ಪ್ರಸಿದ್ಧ ಕಥೆ.

ಬೇಲೂರಿನಲ್ಲಿ ಚೆನ್ನಕೇಶವ ದೇವಾಲಯದ ಪಕ್ಕದಲ್ಲಿರುವ ದೇವಾಲಯವನ್ನು ಕಪ್ಪೆಚೆನ್ನಿಗರಾಯನ ದೇವಾಲಯವೆಂದು ಕರೆಯುತ್ತಾರೆ. ದೋಷಯುಕ್ತವಾದ ಮೂರ್ತಿಯನ್ನು ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಯಿತೆಂದು ಪ್ರತೀತಿ. ಈಗ ಅಲ್ಲಿ ದೇವರಿಗೆ ಪೂಜೆಯಿಲ್ಲ. ಆದರೆ ನಿಜಸಂಗತಿಯೆಂದರೆ ವಿಷ್ಣುವರ್ಧನ ವಿಜಯ ನಾರಾಯಣ ದೇವಾಲಯವನ್ನು ನಿರ್ಮಿಸುವಾಗ ಅವನ ರಾಣಿ ಶಾಂತಲೆಯೂ ಅದರ ಪಕ್ಕದಲ್ಲಿಯೇ ಒಂದು ಕೇಶವ ದೇವಾಲಯವನ್ನು ನಿರ್ಮಿಸಿದಳು. ಈ ಮೂರ್ತಿಯ ಕೈ ಭಿನ್ನವಾದುದರಿಂದ ಬಹುಶಃ ಅಲ್ಲಿ ಪೂಜೆ ನಿಂತುಹೋಗಿರಬೇಕು. ಈ ದೇವಾಲಯಗಳ ನಿರ್ಮಾಣದಲ್ಲಿ ಹತ್ತಾರು ರೂವಾರಿಗಳ ಕೈವಾಡವಿರುವುದು ಅಲ್ಲಿಯ ಶಾಸನಗಳಿಂದ ವ್ಯಕ್ತವಾಗುತ್ತದೆ. ಬಳ್ಳಿಗಾಮೆಯ ದಾಸೋಜ, ಅವನ ಮಗ ಚಾವಣ, ಗದುಗಿನ ನಾಗೋಜ, ಲೊಕ್ಕಿಗುಂಡಿಯ ಚೌಂಡೋಜ ಮುಂತಾದ ಕನ್ನಡನಾಡಿನ ಬೇರೆ ಬೇರೆ ಭಾಗಗಳ ಶಿಲ್ಪಿಗಳು ನಿರ್ಮಾಣಕಾರ್ಯದಲ್ಲಿ ಪಾಲ್ಗೊಂಡಿದ್ದರು. ಈ ದೇವಾಲಯಗಳಲ್ಲಿ ಜಕಣಾಚಾರಿಯ ಹೆಸರು ಮಾತ್ರ ಅಲ್ಲಿ ಕಂಡುಬರದು. ಅಷ್ಟೇ ಅಲ್ಲ, ನೂರಾರು ಜನ ಹೊಯ್ಸಳ ರೂವಾರಿಗಳ ಹೆಸರುಗಳು ಅನೇಕ ದೇವಾಲಯಗಳಲ್ಲಿ ಕಂಡುಬಂದರೂ ಜಕಣಾಚಾರಿಯ ಹೆಸರು ಮಾತ್ರ ಎಲ್ಲಿಯೂ ಇಲ್ಲ. ತುರುವೇಕೆರೆಯಲ್ಲಿರುವ ಮೂಲೆ ಸಿಂಗೇಶ್ವರ ದೇವಾಲಯದ ಮೇಲಿರುವ ಜಕಣ್ಣ ಎಂಬ ರೂವಾರಿಯ ಹೆಸರು 13ನೆಯ ಶತಮಾನಕ್ಕೆ ಸೇರಿದ್ದು. ಆದ್ದರಿಂದ ಪ್ರಸಿದ್ಧ ಜಕಣಾಚಾರಿಯೊಡನೆ ಅವನ ಸಂಬಂಧ ಕಲ್ಪಿಸಲು ಸಾಧ್ಯವಿಲ್ಲ.

ಸೋಮನಾಥಪುರದ ಕೇಶವ ದೇವಾಲಯವನ್ನೂ ಜಕಣಾಚಾರಿಯೇ ನಿರ್ಮಿಸಿದನೆಂಬ ಪ್ರತೀತಿ ಇದೆ. ಸುಂದರವಾದ ಈ ದೇವಾಲಯ ಇಂದ್ರನ ಅಮರಾವತಿ ಯಲ್ಲಿರಲು ಯೋಗ್ಯವೆಂದು ದೇವತೆಗಳು ಅದನ್ನು ಮೇಲಕ್ಕೆ ಒಯ್ಯಲಾರಂಭಿಸಿದರೆಂದೂ ಅದು ಮೇಲೇರುತ್ತಿದ್ದುದನ್ನು ಕಂಡ ಜಕಣಾಚಾರಿ ತನ್ನ ಕೈಯಲ್ಲಿದ್ದ ಉಳಿಯನ್ನು ಅದರ ಕಡೆಗೆ ಎಸೆದುದರಿಂದ ಮುಕ್ಕಾಗಿ ಅದು ಭೂಮಿಗಿಳಿಯಿತೆಂದೂ, ಹಾಗೆ ಬೀಳುವಾಗ ಸ್ವಲ್ಪ ಓರೆಯಾದುದರಿಂದಲೇ ಅದರ ಮುಂದಿರುವ ಗರುಡಗಂಬ ಈಗ ವಾಲಿರುವಂತೆ ಕಾಣುವುದೆಂದೂ ಮತ್ತೊಂದು ಕಥೆ. ಬೇಲೂರಿನ ದೇವಾಲಯಕ್ಕೂ ಸೋಮನಾಥಪುರದ ದೇವಾಲಯಕ್ಕೂ 250 ವರ್ಷಗಳ ಅಂತರವಿರುವುದು ವಿದಿತ. ಕೈದಾಳದಲ್ಲಿ ಜಕಣಾಚಾರಿ ನಿರ್ಮಿಸಿದನೆಂದು ಹೇಳುವ ಕೇಶವ ದೇವಾಲಯ ಸಾಮಾನ್ಯ ಕಟ್ಟಡ. ಇದು ಬಹುಶಃ ವಿಜಯನಗರದ ಕಾಲದಲ್ಲಿ ನಿರ್ಮಿತವಾದ್ದು. ಅಲ್ಲಿಯೂ ಕಂಬವೊಂದರ ಮೇಲಿರುವ ಭಕ್ತ ವಿಗ್ರಹವನ್ನು ಜಕಣಾ ಚಾರಿಯೆಂದು ತೋರಿಸುತ್ತಾರೆ. ಆ ದೇವಾಲಯದಲ್ಲಿರುವ ಮೂರ್ತಿ ಹೊಯ್ಸಳ ಶಿಲ್ಪವೇ ಆದರೂ ಅದನ್ನು ಬೇರೆಡೆಯಿಂದ ತಂದು ಅಲ್ಲಿ ಪ್ರತಿಷ್ಠೆ ಮಾಡಿದುದಕ್ಕೆ ದಾಖಲೆಯಿದೆ.

ಈ ಎಲ್ಲ ಕಾರಣಗಳಿಂದ ಜಕಣಾಚಾರಿ ಎಂಬ ವ್ಯಕ್ತಿ ಇದ್ದಾನೆ ಎಂಬ ಸಂಶಯ ಮೂಡುವುದು ಸಹಜ. ದಕ್ಷಿಣಾಚಾರ್ಯ ಎಂಬ ಒಂದು ಶಿಲ್ಪಸಂಪ್ರದಾಯವನ್ನು ಪ್ರತಿಬಿಂಬಿಸುವ ಒಬ್ಬ ಕಾಲ್ಪನಿಕ ವ್ಯಕ್ತಿ ಜನಮನದಲ್ಲಿ ಮೂಡಿ ಬಂದಿರಬೇಕು. ಹೊಯ್ಸಳರೂ ಅವರ ಅಧಿಕಾರಿಗಳೂ ಹೇರಳವಾಗಿ ನಿರ್ಮಿಸಿರುವ ಸುಂದರ ದೇವಾಲಯಗಳ ನಿರ್ಮಾಣ ಆ ವಂಶದ ನಾಶದೊಂದಿಗೇ ನಿಂತುಹೋಗಿ, ವಿಜಯನಗರದ ಅರಸರು ದ್ರಾವಿಡ ಶೈಲಿಯನ್ನೇ ಬಳಸಿದಾಗ ಈ ಹೊಯ್ಸಳ ಶೈಲಿಯ ವಿಷಯವಾಗಿ ಇಂಥ ಕಥೆಗಳು ಹುಟ್ಟಿದ್ದರೆ ಆಶ್ಚರ್ಯವಿಲ್ಲ. ಪವಾಡಸದೃಶವಾದ ಹೊಯ್ಸಳ ಶಿಲ್ಪದ ದಿವ್ಯಸಂಕೇತವಾಗಿ ಜನಮನದಲ್ಲಿ ಜಕಣಾಚಾರಿ ಮನೆಮಾಡಿಕೊಂಡಿದ್ದಾನೆ. (ಎಂ.ಎಚ್)

**ಜಕರಂಡ :** ಬಿಗ್ನೋನಿಯೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ವೃಕ್ಷ. ಇದರಲ್ಲಿ ಸುಮಾರು 50 ಪ್ರಭೇದಗಳಿವೆ. ಮುಖ್ಯವಾದವು ಮಿಮೋಸೀಫೋಲಿಯ (ಒವ್ಯಾಲಿಫೋಲಿಯ), ಕಸ್ಪಿಡಿಫೋಲಿಯ, ಕೀಲೋನಿಯ ಮತ್ತು ಅಕ್ಯೂಟಿಫೋಲಿಯಗಳು. ನೀಲಾಪಾದರಿ, ನೀಲಿ ಗುಲ್‍ಮೊಹರ್ ಮುಂತಾದ ಹೆಸರುಗಳೂ ಇದಕ್ಕೆ ಉಂಟು. ಬ್ರಜಿ಼ಲ್ ಇದರ ತವರು. ಧೂಮ್ರವರ್ಣಮಿಶ್ರಿತ ನೀಲಿ ಬಣ್ಣದ ಹೂಗಳು ಮತ್ತು ಜರೀಗಿಡಗಳ ಎಲೆಗಳಂತೆ ಛಿದ್ರವಾಗಿರುವ ದ್ವಿಪಿಚ್ಛಕ ಎಲೆಗಳಿಂದ ಕೂಡಿದ್ದು ಬಲುಸೊಗಸಾಗಿ ಕಾಣುತ್ತದೆ. ಜಕರಂಡವನ್ನು ದಕ್ಷಿಣ ಅಮೆರಿಕ, ಅಮೆರಿಕ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯ, ಫ್ಲಾರಿಡ ಪ್ರಾಂತ್ಯಗಳು ಮತ್ತು ಭಾರತದ ಹಲವಾರು ರಾಜ್ಯಗಳ ಉದ್ಯಾನಗಳಲ್ಲಿ ರಸ್ತೆಗಳ ಅಕ್ಕಪಕ್ಕಗಳಲ್ಲಿ ಅಲಂಕಾರವಾಗಿ ಬೆಳೆಸುತ್ತಾರೆ. ಜಕರಂಡ ಸುಮಾರು 15 ಮೀ. ಎತ್ತರಕ್ಕೆ ಬೆಳೆಯುವ ಮರ. ಇದರ ರೆಂಬೆಗಳು ಒತ್ತಾಗಿರುವುದಿಲ್ಲ. ಹೂಗಳು ಅರಳುವ ಮುನ್ನ ಎಲೆಗಳೆಲ್ಲ ಉದುರಿಹೋಗುತ್ತವೆ. ಹೂ ಅರಳುವ ಕಾಲ ಮಾರ್ಚಿಯಿಂದ ಮೇ ಕೊನೆಯವರೆಗೆ. ಹೂಗಳು ರೆಂಬೆಗಳ ತುದಿಗಳಲ್ಲಿನ ಪ್ಯಾನಿಕಲ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಒಂದೊಂದರಲ್ಲೂ 5 ಪುಷ್ಪಪತ್ರಗಳು, 5 ದಳಗಳು, 4 ಕೇಸರಗಳು, ಉಚ್ಚಸ್ಥಾನದ 2 ಕಾರ್ಪೆಲುಗಳಿಂದ ಕೂಡಿದ ಒಂದು ಅಂಡಾಶಯ ಇವೆ. ದಳಗಳು ಸಂಯುಕ್ತ ಬಗೆಯವು. ದಳಸಮೂಹ ಕೊಳವೆಯಾಕಾರದಲ್ಲಿದೆ. ಇದರ ಮುಂತುದಿ 2 ತುಟಿಗಳಾಗಿ ವಿಭಾಗವಾಗಿದೆ. ಫಲ ಸಂಪುಟ ಮಾದರಿಯದು; ಚಪ್ಪಟೆಯಾಗಿಯೂ ಚಕ್ರಾಕಾರವಾಗಿಯೂ ಇದೆ. ಬೀಜಗಳು ಅಸಂಖ್ಯ. ಇವಕ್ಕೆ ತೆಳುವಾದ ಪೊರೆಯಂಥ ರೆಕ್ಕೆ ಉಂಟು.

ಜಕರಂಡವನ್ನು ಬೀಜ ಇಲ್ಲವೆ ಅರೆಬಲಿತ ಕಾಂಡತುಂಡುಗಳಿಂದ ವೃದ್ಧಿಸಲಾಗುತ್ತದೆ. ಇತ್ತೀಚೆಗೆ ಅಮೆರಿಕದ ಫ್ಲಾರಿಡ ರಾಜ್ಯದಲ್ಲಿ ಕಣ್ಣು ಕಸಿವಿಧಾನದಿಂದ ಸಣ್ಣ ಸಸಿಗಳನ್ನು ಪಡೆದು ಬೆಳೆಸುವ ಕ್ರಮ ಜಾರಿಗೆ ಬರುತ್ತಿದೆ. ಜಕರಂಡದ ಬೆಳೆವಣಿಗೆ ಬಹಳ ಶೀಘ್ರ. ಸುಮಾರು 5 ವರ್ಷ ವಯಸ್ಸಾದ ಮೇಲೆ ಹೂಬಿಡಲು ಆರಂಭಿಸುತ್ತದೆ. ಆದರೆ 15 ವರ್ಷಗಳ ಅನಂತರ ಹೂಗಳು ಕಡಿಮೆಯಾಗುತ್ತ ಬರುತ್ತವೆ. ಆಗ ಮರಗಳನ್ನು ಬದಲಿಸುವುದು ಒಳ್ಳೆಯದು. ಜಕರಂಡದ ಎಲೆಗಳನ್ನು ಎದೆಸಂಬಂಧ ರೋಗಗಳಿಗೂ ಗಾಯಗಳಿಗೆ ಹಚ್ಚಲೂ ಬಳಸುತ್ತಾರೆ. ಇದರ ಚೌಬೀನೆ ಗಟ್ಟಿಯಾದುದೂ ಭಾರವಾದುದೂ ನಯರಚನೆಯುಳ್ಳದ್ದೂ ಆಗಿರುವುದರಿಂದ ಇದನ್ನು ಉಪಕರಣಗಳ ಹಿಡಿಗೆ ಉಪಯೋಗಿಸುವುದುಂಟು. (ಎಸ್‍ಐ.ಎಚ್.)

**ಜಕಾರ್ತ :** ಇಂಡೊನೇಷ್ಯ ಗಣರಾಜ್ಯದ ರಾಜಧಾನಿ. ಇಂಡೋನೇಷ್ಯದ ಅತ್ಯಂತ ದೊಡ್ಡ ನಗರ, ಪ್ರಮುಖ ಬಂದರು. ಜಾವದ ವಾಯವ್ಯ ಕರಾವಳಿಯಲ್ಲಿ ಚಿಲೀವಾಂಗ್ ನದೀಮುಖದ ಮೇಲಿದೆ. ನಗರ ಜಿಲ್ಲೆಯ ವಿಸ್ತೀರ್ಣ740.28 ಚ.ಕಿಮೀ. ಜನಸಂಖ್ಯೆ 10,187,595 (2011).

17ನೆಯ ಶತಮಾನದಿಂದ 1945ರವರೆಗೆ ಬಹುತೇಕ ಡಚ್ಚರ ಒಡೆತನದಲ್ಲಿದ್ದ ಈ ನಗರದಲ್ಲಿ ಅವರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾದ ಅನೇಕ ಸುಂದರ ಕಟ್ಟಡಗಳು ಉಳಿದುಕೊಂಡು ಬಂದಿವೆ. ಗವರ್ನರ್–ಜನರಲ್ ರಿಬೇಕನ ಹಳೆಯ ನಿವಾಸವೂ (1708) 1695ರಲ್ಲಿ ನಿರ್ಮಿತವಾದ ಪೋರ್ಚುಗೀಸ್ ಚರ್ಚೂ ಮುಖ್ಯವಾದುವು. ಪಾಶ್ಚಾತ್ಯ ಮತ್ತು ಪೌರಸ್ತ್ಯ ಶೈಲಿಗಳ ಮಿಶ್ರಣವನ್ನು ಎಲ್ಲೆಲ್ಲೂ ಕಾಣಬಹುದು. ನಗರದ ಬೀದಿಗಳಲ್ಲಿ ಮೋಟಾರುವಾಹನಗಳ ಜೊತೆಗೆ ಕುದುರೆ ಬಂಡಿಗಳೂ ತಳ್ಳುಗಾಡಿಗಳೂ ಸಂಚರಿಸುತ್ತವೆ. ಆಧುನಿಕವಾದ ಬೃಹತ್ ಮಳಿಗೆಗಳ ಮಗ್ಗುಲಲ್ಲಿ ಹಳೆಯ ಕಾಲದ ವರ್ಣರಂಜಿತ ಪೇಟೆಗಳಿವೆ. ಕಾಲುದಾರಿಗಳ ಉದ್ದಕ್ಕೂ ನೆಲದ ಮೇಲೆ ಹರಡಿದ ಅಂಗಡಿಗಳಿವೆ. 17ನೆಯ ಶತಮಾನದ ಮನೆಗಳ ನಡುವೆ ಚಿಲೀವಾಂಗ್ ನದೀ ನಾಲೆಗಳು ಪ್ರಶಾಂತವಾಗಿ ಪ್ರವಹಿಸುತ್ತವೆ. ಎಲ್ಲೆಲ್ಲೂ ಉದ್ಯಾನಗಳು, ಬೀದಿಗಳ ಎರಡೂ ಬದಿಗಳಲ್ಲಿ ಮರಗಳು, ನದಿಯ ಮುಖ್ಯ ನಾಲೆಯ ಮೇಲೆ ಗಂಭೀರವಾಗಿ ಚಲಿಸುವ ದೋಣಿಗಳು ಇವು ನಗರದ ವೈಶಿಷ್ಟ್ಯಗಳು.

ಜಕಾರ್ತದ ಒಂದು ಜನನಿಬಿಡ ರಸ್ತೆ

ಶೀಘ್ರವಾಗಿ ಬೆಳೆಯುತ್ತಿರುವ ಜಕಾರ್ತ ನಗರದ ಸುತ್ತ ಅನೇಕ ಉಪನಗರಗಳುಂಟು. ಹಳೆಯ ನಗರ ಭಾಗದಲ್ಲಿ ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟಂಟ್ ಚರ್ಚ್‌ಗಳೂ ಮಸೀದಿಗಳೂ ಇವೆ. 1950ರಲ್ಲಿ ಸ್ಥಾಪಿತವಾದ ಇಂಡೋನೇಷ್ಯ ವಿಶ್ವವಿದ್ಯಾಲಯದ ಮುಖ್ಯ ಭಾಗ ಇರುವುದು ಜಕಾರ್ತದಲ್ಲಿ. ವಸ್ತುಸಂಗ್ರಹಾಲಯ, ಗ್ರಂಥಾಲಯ, ಪವನಶಾಸ್ತ್ರಮಂದಿರ, ಇಂಡೋನೇಷ್ಯ ಗಣರಾಜ್ಯ ರೇಡಿಯೋ ಮುಖ್ಯ ನಿಲಯ–ಇವು ಕೆಲವು ಮುಖ್ಯ ಸಂಸ್ಥೆಗಳು. ಕಬ್ಬಿಣ ಎರಕದ ಕಾರ್ಖಾನೆಗಳು, ಮಾರ್ಜರಿನ್ ಮತ್ತು ಸಾಬೂನು ತಯಾರಿಕೆ, ಸಾರಾಯಿ ತಯಾರಿಕೆ, ಮುದ್ರಣ, ಚರ್ಮದ ಹದಗಾರಿಕೆ, ಮರಕೊಯ್ತ, ಜವಳಿ–ಇವು ಇಲ್ಲಿಯ ಕೆಲವು ಕೈಗಾರಿಕೆಗಳು.

ರಾಷ್ಟ್ರಾಧ್ಯಕ್ಷನ ನಿವಾಸ, ಜಕಾರ್ತ

ಆಧುನಿಕ ಜಕಾರ್ತ ನಗರವಿರುವುದು ಹಳೆಯ ನಗರದ ದಕ್ಷಿಣದಲ್ಲಿ, ಸ್ವಲ್ಪ ಎತ್ತರ ಪ್ರದೇಶದಲ್ಲಿ. ನಗರದ ಕೇಂದ್ರದಲ್ಲಿರುವ ಸ್ವಾತಂತ್ರ್ಯ ಚೌಕ ಸು. 10.35 ಚ.ಕಿಮೀ ವಿಸ್ತಾರವಾಗಿದೆ. ರೈಲ್ವೆ ನಿಲ್ದಾಣ, ಟೆಲಿಫೋನ್ ಕಚೇರಿ, ಸರ್ಕಾರಿ ಹೋಟೆಲು ಮತ್ತು ಪ್ರಮುಖ ಸರ್ಕಾರಿ ಕಟ್ಟಡಗಳು ಇಲ್ಲಿವೆ.

ಜಕಾರ್ತದ ಆಧುನಿಕ ಬಂದರು ಇರುವುದು ನಗರದ ಪೂರ್ವ ಕರಾವಳಿಯಲ್ಲಿ. ಇದು 1877–83ರಲ್ಲಿ ನಿರ್ಮಾಣವಾಯಿತು. ಇದರ ಹೊರಬಂದರು ಪ್ರವೇಶದ್ವಾರದ ಬಳಿ 160 ಮೀ. ಅಗಲವಾಗಿದೆ. ಇದಲ್ಲದೆ ಮೂರು ಒಳಬಂದರುಗಳಿವೆ. ಬಂದರಿಗೆ ನಗರದಿಂದ ರಸ್ತೆ ರೈಲು ಹಾಗೂ ಕಾಲುವೆ ಮಾರ್ಗಗಳುಂಟು. ಇಂಡೋನೇಷ್ಯದ ವಾಣಿಜ್ಯದಲ್ಲಿ ಮಹತ್ತ್ವದ ಪಾತ್ರ ವಹಿಸಿರುವ ಈ ಬಂದರಿನಿಂದ ರಫ್ತಾಗುವ ಸರಕುಗಳು ಚಹ, ರಬ್ಬರ್, ಕ್ವಿನೈನ್, ಉಪ್ಪು, ಎಣ್ಣೆ, ಸಕ್ಕರೆ, ಮೆಣಸು, ತಂಬಾಕು, ಚಿನ್ನ, ವಜ್ರ ಮತ್ತು ಕಲ್ಲಿದ್ದಲು. ಆಮದಾಗುವ ಮುಖ್ಯ ಸರಕುಗಳು ಕಾಗದ, ಸಿಮೆಂಟು, ವಾಹನೋಪಕರಣಗಳು ಹಾಗೂ ಸಿದ್ಧ ಸರಕುಗಳು. ಜಕಾರ್ತದ ಸಂಚಾರ ವ್ಯವಸ್ಥೆ ಉತ್ತಮವಾದ್ದು. ಜಾವದ ಪ್ರತಿಯೊಂದು ಮುಖ್ಯ ನಗರಕ್ಕೂ ರೈಲ್ವೆ ಮತ್ತು ರಸ್ತೆ ಸಂಪರ್ಕವಿದೆ. ಬಂದರಿಗೂ ನಗರಕ್ಕೂ ನಡುವೆ ಇರುವ ಕೆಮಜೊರಾನ್ ವಿಮಾನ ನಿಲ್ದಾಣ ಯುರೋಪ್ ಮತ್ತು ಪ್ರಾಚ್ಯರಾಷ್ಟ್ರಗಳ ನಡುವಣ ಪ್ರಮುಖ ಕೊಂಡಿ. ಇಂಗ್ಲೆಂಡ್–ಆಸ್ಟ್ರೇಲಿಯಗಳ ನಡುವೆ ಹಾರುವ ವಿಮಾನಗಳಿಗೆ ಇದು ತಂಗುದಾಣ. ಆಗ್ನೇಯ ಏಷ್ಯದ ಎಲ್ಲ ಪ್ರಮುಖ ರಾಷ್ಟ್ರಗಳಿಗೆ ಜಕಾರ್ತದೊಂದಿಗೆ ವಿಮಾನ ಸಂಪರ್ಕವುಂಟು. ಚಿಲೀವಾಂಗ್ ಒಂದು ಮುಖ್ಯ ಜಲಮಾರ್ಗ. ಇಂಡೋನೇಷ್ಯದ ಅಂಚೆ ತಂತಿ ಟೆಲಿಫೋನ್ ವ್ಯವಸ್ಥೆಗೆ ಜಕಾರ್ತ ಮುಖ್ಯ ಕೇಂದ್ರ.

ಹೋಟೆಲ್ ಇಂಡೋನೇಷಿಯ

16ನೆಯ ಶತಮಾನದ ಆದಿಯಲ್ಲಿ ಜಕಾರ್ತಕ್ಕೆ ಸುಂದ ಕೆಲಪ ಎಂಬ ಹೆಸರಿತ್ತು. ಆಗ ಅದು ಪದ್ಜದ್ಜರನ ಸುಂದ ರಾಜ್ಯದ ಮುಖ್ಯ ರೇವುಪಟ್ಟಣವಾಗಿತ್ತು. 1527ರಲ್ಲಿ ಬಂಟಂ ಸುಲ್ತಾನ ಇದಕ್ಕೆ ಜಜಕರ್ತ ಎಂದು ನಾಮಕರಣ ಮಾಡಿದ. ಆ ಶತಮಾನದ ಅಂತ್ಯದ ವೇಳೆಗೆ ಡಚ್ಚರು ಅಲ್ಲಿಗೆ ಬಂದರು. ಸುಲ್ತಾನನೊಂದಿಗೆ ನಡೆಸಿದ ಕದನದಲ್ಲಿ ಜಕಾರ್ತವನ್ನು ನೆಲಸಮ ಮಾಡಿದರು. ಅಲ್ಲೊಂದು ವ್ಯಾಪಾರ ನೆಲೆ ಏರ್ಪಟ್ಟಿತು. 1614ರಲ್ಲಿ ಡಚ್ ಈಸ್ಟ್ ಇಂಡಿಯ ಕಂಪನಿಯವರು ಚಿಲೀವಾಂಗ್ ನದಿಯ ಪೂರ್ವದಂಡೆಯ ಮೇಲೆ ಕಟ್ಟಡಗಳನ್ನು ಕಟ್ಟಿದರು. ಡಚ್ ಈಸ್ಟ್ ಇಂಡೀಸಿನ ಗವರ್ನರ್ ಜನರಲ್ ಆಗಿದ್ದ ಜಾನ್ ಪೀಟರ್‌ಜೂನ್ ಕೂನ್ ಅಲ್ಲಿ ಕೋಟೆಯೊಂದನ್ನು ನಿರ್ಮಿಸಿ ಅದರ ನಡುವೆ ಆಧುನಿಕ ನಗರವನ್ನು ಬೆಳೆಸಿದ. ನಗರಕ್ಕೆ ಬಟೇವಿಯ ಎಂದು ನಾಮಕರಣವಾಯಿತು. ಡಚ್ಚರು ನಿರ್ಮಿಸಿದ ನಗರ ಭಾಗ ಇಂದು ಜಕಾರ್ತ ಕೋಟೆ ಎನಿಸಿಕೊಂಡಿದೆ. ಚೀನೀಯರು 1740ರ ವರೆಗೂ ನಗರದ ಕೋಟೆಯ ಭಾಗದಲ್ಲಿ ವಾಸಿಸುತ್ತಿದ್ದರು. ಆಗ ಅವರನ್ನು ಪ್ರತ್ಯೇಕಿಸಲಾಯಿತು. 18ನೆಯ ಶತಮಾನದಲ್ಲಿ ಮಲೇರಿಯ ವ್ಯಾಧಿಯಿಂದಲೂ ಡಚ್ಚರ ದುರಾಡಳಿತದಿಂದಲೂ ನಗರ ಕ್ಷೀಣಿಸಿತು. ನೆಪೋಲಿಯನ್ ಯುದ್ಧಗಳ ಸಮಯದಲ್ಲಿ ಸ್ವಲ್ಪ ಕಾಲ ಬ್ರಿಟಿಷರ ವಶದಲ್ಲಿತ್ತು. 1814ರಲ್ಲಿ ಡಚ್ಚರಿಗೆ ವಾಪಸು ಬಂತು. 19ನೆಯ ಶತಮಾನದಲ್ಲಿ ತೋಟಗಾರಿಕೆ ಉದ್ಯಮದಿಂದಾಗಿ ಅದರ ಪ್ರಾಮುಖ್ಯ ಹೆಚ್ಚಿ ನಗರ ಶೀಘ್ರವಾಗಿ ಬೆಳೆಯತೊಡಗಿತು. ಇಂಡೋನೇಷ್ಯ ಗಣರಾಜ್ಯ ಸ್ಥಾಪನೆಯಾದ ಮೇಲೆ ಅದು ಮತ್ತೆ ಜಕಾರ್ತ ಎಂಬ ಹೆಸರು ತಳೆದು ಹೊಸರಾಜ್ಯದ ರಾಜಧಾನಿಯಾಯಿತು. ಜಕಾರ್ತ ನಗರವು ಪ್ರಪಂಚದಲ್ಲಿ 17ನೆಯ ಬೃಹತ್ ನಗರ, ಜಕಾರ್ತದಲ್ಲಿ ಹಲವಾರು ವಸ್ತುಸಂಗ್ರಹಾಲಯಗಳಿವೆ; ಜಕಾರ್ತ ಹಿಸ್ಟರಿ ಮ್ಯೂಸಿಯಂ, ವೇಯಾಂಗ್ ಮ್ಯೂಸಿಯಂ, ಫೈನ್ ಆರ್ಟ್ಸ್ ಆ್ಯಂಡ್ ಸೆರಾಮಿಕ್ ಮ್ಯೂಸಿಯಂ, ಮ್ಯಾಂಟೈಮ್ ಮ್ಯೂಸಿಯಂ, ಮೊದಲಾದವು. (ಎಚ್.ಜಿ.ಎ.)

**ಜಕ್ಕಣಾರ್ಯ :** ಸು. 1430. ಕನ್ನಡದಲ್ಲಿ ಏಕೋತ್ತರ ಶತಸ್ಥಲವನ್ನು ಬರೆದ ವೀರಶೈವಕವಿ. ಈತನಿಗೆ ಜಕ್ಕಣ್ಣ, ಜಕ್ಕಪ್ಪ ಎಂಬ ಹೆಸರೂ ಭಕ್ತಿಭಂಡಾರಿ ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ. ಈತ ವಿಜಯನಗರದ ಪ್ರೌಢದೇವರಾಯನ (1419–1446) ಮಂತ್ರಿ, ದಂಡನಾಯಕ, ಭಂಡಾರಿ ಆಗಿದ್ದ. ಈತನ ಗುರು ಮಹಾಲಿಂಗದೇವನ ಶಿಷ್ಯನಾದ ಕುಮಾರ ಬಂಕನಾಥ. ಮಹಾಲಿಂಗದೇವ ಈತನ ಉಪದೇಶಾರ್ಥವಾಗಿ ಪ್ರಭುದೇವರ ಷಟ್ಸ್ಥಲ ಜ್ಞಾನಚಾರಿತ್ರ ವಚನದ ಟೀಕೆ ಮತ್ತು ಏಕೋತ್ತರ ಶತಸ್ಥಲ ಎಂಬ ಎರಡು ಗ್ರಂಥಗಳನ್ನು ಬರೆದುದಾಗಿ ಮಹಲಿಂಗದೇವನ ಗ್ರಂಥಗಳಿಂದ ತಿಳಿದುಬರುತ್ತದೆ.

ಗುಬ್ಬಿಮಲ್ಲಣಾಚಾರ್ಯ (ಸು. 1530) ವೀರಶೈವ ಮಹಾಮೃತ ಪುರಾಣದಲ್ಲಿ ಭಂಡಾರಿ ಜಕ್ಕಪ್ಪ ಇತರ ಕೆಲವರಂತೆ ತಾನೂ ಲಕ್ಷ ಸಂಖ್ಯೆಯಲ್ಲಿ ಹಣ ಖರ್ಚು ಮಾಡಿ ವೀರಶೈವ ಸಾಹಿತ್ಯವನ್ನು ಪ್ರೋತ್ಸಾಹಿಸಿದನೆಂದು ತಿಳಿಸಿದ್ದಾನೆ. ಅದೃಶ್ಯ ಕವಿಯ (ಸು. 1580) ಪ್ರೌಢರಾಯನ ಕಾವ್ಯ, ಸಿದ್ಧನಂಜೇಶನ (ಸು. 1600) ರಾಘವಾಂಕ ಚಾರಿತ್ರ ಮತ್ತು ಶಾಂತಲಿಂಗದೇಶಿಕನ (ಸು. 1672) ಭೈರವೇಶ್ವರ ಕಾವ್ಯಕಥಾಮಣಿ ಸೂತ್ರ ರತ್ನಾಕರಗಳಲ್ಲಿ ಜಕ್ಕಣಾರ್ಯನ ಪ್ರಸಕ್ತಿಯಿದೆ.

ಜಕ್ಕಣಾರ್ಯನಿಗೆ ಸಂಬಂಧಿಸಿದ ಒಂದು ಐತಿಹ್ಯವನ್ನು ಅದೃಶ್ಯಕವಿಯ ಪ್ರೌಢರಾಯನ ಕಾವ್ಯ ಮತ್ತು ಅದನ್ನೇ ಅನುಸರಿಸಿದ ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯಕಥಾಮಣಿ ಸೂತ್ರ ರತ್ನಾಕರದಲ್ಲಿ ಕಾಣಬಹುದು.

ಕುಂತಲದೇಶದ ಪ್ರೌಢದೇವರಾಯನ ಆಳ್ವಿಕೆಯಲ್ಲಿ ಜಕ್ಕಣಾರ್ಯ ಮಂತ್ರಿ. ಮುಕುಂದಪೆದ್ದಿ ಮತ್ತು ವೃಂದಾಚಾರ್ಯರು ಗುರುಗಳು. ಈ ಗುರುಗಳು ಪ್ರೌಢದೇವರಾಯನಿಗೆ ಒಂಬತ್ತು ತಿಂಗಳು ಭಾರತವನ್ನು ಓದಿ ಹೇಳಿ ಅದರ ಮೆರವಣಿಗೆ ಮಾಡಿದರು. ಇದನ್ನು ಕಂಡ ಜಕ್ಕಣಾರ್ಯ 'ಪ್ರಭುಸ್ವಾಮಿ ಪೇಳ್ದ ವಚನಂಗಳಿಗೆ ಕ್ರಮದಿಯೇಕೋತ್ತರಶತಸ್ಥಲ ಸೂತ್ರಗಳನ್ನಿಟ್ಟು ರಮಣೀಯವಾಗಿ ವರ್ಣಕವಸ್ತುಗಳಿಂದ ವ್ಯಾಖ್ಯಾನ ಮಾಡಿದ'. ನೂರೊಂದು ವಿರಕ್ತರು, ಕರಸ್ಥಲದ ನಾಗಿದೇವ, ಕಲ್ಲುಮಠದ ಪ್ರಭುದೇವ (ಈತನ ಕಾಲವಿಚಾರದಲ್ಲಿ ಅಭಿಪ್ರಾಯಭೇದವಿದೆ.) ವೀರಣ್ಣೊಡೆಯ, ಚಾಮರಸ ಮೊದಲಾದ ಶರಣರು ಆ ಕೃತಿಯನ್ನು ಮೆರವಣಿಗೆ ಮಾಡಿದರು.

ಮರುದಿನ ಬೆಳಗಿನ ಆಸ್ಥಾನದಲ್ಲಿ ಮುಕುಂದಪೆದ್ದಿ ಜಕ್ಕಣಾರ್ಯನನ್ನು ಕುರಿತು ರಾತ್ರಿ ನಡೆದುದು ಸತ್ತವರ ಒಸಗೆಯೋ, ಹೆತ್ತ ಸೌರಂಭವೋ ಎಂದು ಪ್ರಶ್ನಿಸಿದ. ಆಗ ಜಕ್ಕಣ್ಣ ಉತ್ಸವದ ವೇಳೆಯೊಳು ಮುಕ್ತಿಯೆಂದೆಂಬ ಶಿಶುವಂ ಭಕ್ತಿ ಸತಿಪೆತ್ತಳು–ಎಂದ.

ಮುಕುಂದಪೆದ್ದಿ ಅಲ್ಲಮನ ಒಂದು ವಚನಕ್ಕೆ ಅಸಂಬದ್ಧ ವ್ಯಾಖ್ಯಾನ ಮಾಡಿದ. ಅದನ್ನು ಪ್ರತಿಭಟಿಸಿ ಹದಿನೆಂಟು ಮತದವರು ಮೆಚ್ಚುವಂತೆ ಜಕ್ಕಣ್ಣ ವ್ಯಾಖ್ಯಾನ ಮಾಡಿದ. ಪ್ರೌಢದೇವರಾಯ ಮೆಚ್ಚಿ ಜಕ್ಕಣ್ಣನಿಗೆ ತ್ರಿಸರದಪದಕ ಮತ್ತು ರುದ್ರಕಂಕಣವನ್ನು ಕೊಡಲು ಹೋದಾಗ ಮುಕುಂದಪೆದ್ದಿ ಶರಣರು ಮಾಯೆಯ ಮೋಹಕ್ಕೆ ಬೆರಸಿರುವರೊ ಇಲ್ಲವೊ ಎನ್ನುವುದನ್ನು ಪರೀಕ್ಷೆ ಮಾಡಿದ ಅನಂತರ ಮನ್ನಿಸುವುದು ಎಂದ. ಈ ಪ್ರಶ್ನೆಗೆ ಹದಿನೈದು ದಿವಸದಲ್ಲಿ ಉತ್ತರ ಕೊಡುವುದಾಗಿ ಚಾಮರಸ ಹೇಳಿದ. ಮುಕುಂದಪೆದ್ದಿ ಮನೆಗೆ ಹೋದ.

ದಿವಸ ಒಂದಕ್ಕೆ ನೂರಹನ್ನೊಂದು ಪದ್ಯಗಳಂತೆ ಹನ್ನೊಂದು ದಿನದಲ್ಲಿ ಚಾಮರಸ ಪ್ರಭುಲಿಂಗಲೀಲೆಯನ್ನು ಮುಗಿಸಿ ಪ್ರೌಢರಾಯನಿಗೆ ಒಪ್ಪಿಸಿದ. ದೊರೆ ಆಸ್ಥಾನ ಕವಿಗಳಿಗೆ ಪ್ರಭುಲಿಂಗಲೀಲೆಯ ಅರ್ಥ ಹೇಳಲು ಕೇಳಿದ. ಯಾರೂ ಮುಂದೆ ಬರಲಿಲ್ಲ. ಜಕ್ಕಣಾರ್ಯ 'ಪ್ರಭುಲಿಂಗಲೀಲಾಮೃತದಭಿಪ್ರಾಯವೊಂದುಳಿಯದೆ' ಹೇಳಿದ. ಅರಸ ಮೆಚ್ಚಿ ವಾದಿಗಳನ್ನು ಹೊರಹಾಕಿ ಜಕ್ಕಣಾರ್ಯನಿಗೆ ರನ್ನದೊಡಿಗೆ, ತ್ರಿಸರ, ರುದ್ರಕಂಕಣ, ದಿವ್ಯವಸನ, ವಾಹನ ಮತ್ತು ಐದು ಗ್ರಾಮಗಳನ್ನು ಉಂಬಳಿ ಕೊಟ್ಟ. ಜಕ್ಕಣಾರ್ಯ ತನ್ನಂತೆಯೇ ಚಾಮರಸನಿಗೂ ಸತ್ಕಾರ ಮಾಡಿಸಿದ. ಪ್ರಭುಲಿಂಗಲೀಲೆಯನ್ನು ಆನೆಯ ಮೇಲೆ ಮೆರವಣಿಗೆ ಮಾಡಿ ಲಕ್ಕಣಚಾರ್ಯರಿಗೆ ಮಂತ್ರಿಪದವಿಯನ್ನು ಕೊಟ್ಟು ಬಯಲಾದ.

ಜಕ್ಕಣಾರ್ಯನ ಏಕೋತ್ತರ ಶತಸ್ಥಲಕ್ಕೆ ಕನ್ನಡದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಗೀತ ಸಾಹಿತ್ಯ ಕನ್ನಡ ಭಾಷೆಯಲ್ಲಿ ಹರಿದಾಸರಿಂದ ಈಚೆಗೆ ಬಂದದ್ದು ಎನ್ನುವ ಅಭಿಪ್ರಾಯವಿತ್ತು, ಆದರೆ 12ನೆಯ ಶತಮಾನದಲ್ಲಿಯೇ ಶಿವಶರಣರಿಂದ ಗೀತಸಾಹಿತ್ಯದ ನಿರ್ಮಾಣವಾಗಿದೆ ಎನ್ನುವ ಅಮೂಲ್ಯ ಅಂಶವನ್ನು ಈ ಏಕೋತ್ತರ ಶತಸ್ಥಲ ಸೂಚಿಸುತ್ತದೆ.

ಮಹಾಲಿಂಗದೇವನ ಏಕೋತ್ತರ ಶತಸ್ಥಲ ಜಕ್ಕಣಾರ್ಯನ ಏಕೋತ್ತರ ಶತಸ್ಥಲಕ್ಕೆ ಮೂಲ. ಜಕ್ಕಣ್ಣನ ಏಕೋತ್ತರ ಶತಸ್ಥಲದಲ್ಲಿ ಶಿವಶರಣರ ಕೆಲವು ವಚನಗಳು ಇಲ್ಲ. ಉಳಿದಂತೆ ಮಹಾಲಿಂಗದೇವನ ಮತ್ತು ಜಕ್ಕಣಾರ್ಯನ ಕೃತಿಗಳು ಸ್ವರೂಪದಲ್ಲಿ ಒಂದೇ. ಜಕ್ಕಣನ ಏಕೋತ್ತರ ಶತಸ್ಥಲದ ಆರಂಭದಲ್ಲಿ ಹೀಗಿದೆ:

"ಏಕೋತ್ತರ ಶತಸ್ಥಲ : ಜ್ಞಾನಶೂನ್ಯಸ್ಥಲ ಒಂದೇ ಉತ್ತರವಾಗಿ, ನೂರು ಸ್ಥಲವೆ ಕಡೆಯಾಗಿ, ನೂರೊಂದು ಸ್ಥಲವು. ಶಿವನಂ ನಿರೂಪಿಸಲು ತಕ್ಕ ಕಾಮಿಕನೆಂಬ ಮಹಾಗಮ ದಲ್ಲಿಯ ಮೇಲುಭಾಗೆಯಲ್ಲಿ ಶ್ರೇಷ್ಠವಾದ ವೀರಶೈವ ಮತವು ಹೇಳಲ್ಪಟ್ಟಿತು. ಅದನ್ನೇ ರೇವಣಸಿದ್ಧೇಶ್ವರನು ಅಗಸ್ತ್ಯಂಗೆ ಬೋಧಿಸಿದರು. ಅದೇ ವೀರಶೈವರುಗಳಿಗೆ ಸ್ಥಲಭೇದದಿಂದ ಆ ಶಾಸ್ತ್ರವು ಆರು ಪ್ರಕಾರವನ್ನುಳ್ಳದಹುದು. ಮೊದಲಲ್ಲಿ ಭಕ್ತಸ್ಥಲ 15, ಮಹೇಶ್ವರ ಸ್ಥಲ 9, ಪ್ರಸಾದಿಸ್ಥಲ 7, ಪ್ರಾಣಲಿಂಗಿಸ್ಥಲ 5, ಶರಣಸ್ಥಲ 4, ಐಕ್ಯಸ್ಥಲ 4, ಅನಂತರಂ ಅಂಗಸ್ಥಲಂಗಳನಾಶ್ರೈಸಿದ್ದಲ್ಲಿ ಲಿಂಗಸ್ಥಲಂಗಳೊಳಗೆ ಆಚಾರಲಿಂಗಸ್ಥಲ 9, ಗುರುಲಿಂಗಸ್ಥಲ 9, ಶಿವಲಿಂಗಸ್ಥಲ 44, ಜಂಗಮಲಿಂಗಸ್ಥಲ 12, ಪ್ರಸಾದ ಲಿಂಗಸ್ಥಲ 9, ಮಹಾಲಿಂಗಸ್ಥಲ9, ಅಂಗಸ್ಥಲ 44, ಲಿಂಗಸ್ಥಲ 57, ಉಭಯ ಪಿಂಡಾದಿ ಜ್ಞಾನಶೂನ್ಯಾಂತಮಾದ ನೂರೊಂದು ಸ್ಥಲಂಗಳು. ಅವನೇ ನಿರೂಪಿಸಿದ ಪುರಾತನ ಮಹಾವಚನಂಗಳೊಳಗೆ ಜಕ್ಕಣಾರ್ಯರು ಅವಜೊಳಗೆ ಸಾರವಾದ ನೂರೊಂದು ಸ್ಥಲ ವಚನಂಗಳ ತೆಗೆದುಕೊಂಡು ಸೂತ್ರವಿಟ್ಟು ಸಂಗ್ರಹಿಸಿದರು..." ಈ ಗ್ರಂಥಕ್ಕೆ ಶ್ರೀ ಗಿರೀಂದ್ರ ಎಂಬುವನ ವ್ಯಾಖ್ಯಾನವಿದೆ. (ಜಿ.ಜಿ.ಎಂ.)

**ಜಗತ್ತು :** ಜಗತ್ತಿನ ಕಲ್ಪನೆ ಮತ್ತು ಅದರ ಸೃಷ್ಟಿಯ ವಿಷಯದಲ್ಲಿ ಪ್ರಪಂಚದ ನಾನಾ ಪ್ರದೇಶಗಳಲ್ಲಿ ನೆಲೆಸಿದ್ದ ಪ್ರಾಚೀನ ಜನ ತಮ್ಮತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿರುವುದು ಕಂಡುಬರುತ್ತದೆ. ಭರತವರ್ಷಕ್ಕೆ ಸಂಬಂಧಿಸಿದಂತೆ ವೇದದಲ್ಲಿಯೂ ಜಗತ್ತಿನ ಬಗ್ಗೆ ವಿಚಾರ, ಚರ್ಚೆ ನಡೆದಿವೆ. ಅಲ್ಲಿ ಮೊದಮೊದಲು ಅಸ್ಪಷ್ಟವಾಗಿದ್ದ ನಾನಾ ಅಭಿಪ್ರಾಯಗಳು ಕ್ರಮೇಣ ಪರಿಷ್ಕೃತವಾಗಿವೆಯಾದರೂ ಸೃಷ್ಟಿಯ ಬಗೆಗಿನ ವಿಚಾರಗಳು ಮಾತ್ರ ಖಚಿತವಾಗಿ ರೂಢವಾಗಲಿಲ್ಲ. ಉಪನಿಷತ್ತುಗಳಲ್ಲಿ ವಿವಿಧ ಅಭಿಪ್ರಾಯಗಳನ್ನು ಸಾಮರಸ್ಯಕ್ಕೆ ತರುವ ಪ್ರಯತ್ನ ನಡೆದಿದೆ. ಪುರಾಣಗಳಲ್ಲಿ ಹೆಚ್ಚು ಕಡಿಮೆ ಏಕವಾಕ್ಯತೆಯಿದೆ. ಆದರೂ ಜಗತ್ತಿನ ಕಲ್ಪನೆ ಮಾತ್ರ ಬಹುಶಃ ಕಾಲ್ಪನಿಕವಾಗಿದೆಯೇ ಹೊರತು ಸಮ್ಯಕ್ ಸಂಗ್ರಹೀತ ವಿಷಯಗಳ ಮೇಲೆ ಆಧಾರಿತವಾಗಿಲ್ಲ.

ಜಗತ್ ಸ್ವರೂಪ : ವೇದಸಂಹಿತೆಗಳಲ್ಲಿ ಹೇಳಿರುವಂತೆ ಜಗತ್ತು ಮೂರು ಭಾಗವಾಗಿದೆ: ಪೃಥ್ವೀ, ಅಂತರಿಕ್ಷ ಮತ್ತು ದ್ಯೌ : ಅನೇಕಶಃ ಇನ್ನೂ ಸಂಕ್ಷೇಪವಾಗಿ ದ್ಯಾವಾಪೃಥಿವೀ (ದ್ಯೌ ಮತ್ತು ಪೃಥ್ವಿ) ಎಂದೂ ಹೇಳಲಾಗಿದೆ. ಬೃಹದಾರಣ್ಯಕೋಪನಿಷತ್ತಿನ ಪ್ರಕಾರ ಪೃಥ್ವೀ, ಅಪ್, ವಾಯು, ಅಂತರಿಕ್ಷ, ಗಂಧರ್ವ, ಸೂರ್ಯ, ಚಂದ್ರ, ನಕ್ಷತ್ರ, ಇಂದ್ರ, ಪ್ರಜಾಪತಿ, ಬ್ರಹ್ಮಲೋಕಗಳು ಕ್ರಮವಾಗಿ ಒಂದರ ಮೇಲೊಂದು ಇವೆ. ಒಂದಕ್ಕೊಂದು ಹೆಣೆದುಕೊಂಡಿವೆ. ತೈತ್ತಿರೀಯ ಆರಣ್ಯಕ ಏಳು ಲೋಕಗಳನ್ನು ಹೇಳುತ್ತದೆ : ಭೂಃ, ಭುವಃ, ಸುವಃ, ಮಹಃ, ಜನಃ, ತಪಃ, ಸತ್ಯಂ. ಆರುಣೇಯ ಉಪನಿಷತ್ತು ಏಳು ಪಾತಾಳಗಳನ್ನು ಹೇಳುತ್ತದೆ. ಅತಲ, ಪಾತಾಲ, ವಿತಲ, ಸುತಲ, ರಸಾತಲ, ಮಹಾತಲ, ತಲಾತಲ. ಪುರಾಣಗಳಲ್ಲಿ ತ್ರಿಭುವನ ಅಥವಾ ತ್ರೈಲೋಕ್ಯಗಳಲ್ಲಿ ಮಧ್ಯಲೋಕ ಅನೇಕಶಃ ಕೆಳಭಾಗಕ್ಕೆ ಹತ್ತಿರವಾಗಿದೆ. ಇದೇ ಪೃಥಿವೀ. ಇದು ಬೃಹತ್ ಆದ ತಟ್ಟೆಯ ಆಕಾರದಲ್ಲಿ ಐವತ್ತು ಕೋಟಿ ಯೋಜನ ವಿಸ್ತಾರವಾಗಿದೆ. ಸುತ್ತಲೂ ಲೋಕಾಲೋಕ ಪರ್ವತಗಳಿವೆ. ಅನೇಕ ಖಂಡಗಳು ಮತ್ತು ಸಾಗರಗಳಿಂದ ಕೂಡಿದ ಪೃಥಿವಿಯ ಮೇಲುಭಾಗಕ್ಕೆ ಸ್ವರ್ಗ, ಕೆಳಕ್ಕೆ ಪಾತಾಳ, ವಸ್ತುತಃ ಹದಿನಾಲ್ಕು ಲೋಕಗಳಿಂದ ಕೂಡಿದ ಜಗತ್ತು ಎರಡು ಭಾಗ: ಏಳು ಊರ್ಧ್ವಲೋಕಗಳು–ಭೂರ್ಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನಲೋಕ, ತಪೋಲೋಕ, ಸತ್ಯಲೋಕ. ಏಳು ಅಧೋಲೋಕಗಳು–ಅತಲ, ವಿತಲ, ನಿತಲ, ಗಭಸ್ತಿಮತ್, ಮಹಾತಲ, ಸುತಲ, ಪಾತಾಲ. ಇವುಗಳ ಜೊತೆಗೆ ನರಕ–ಎಲ್ಲಿಯೋ ಜಗತ್ತಿನ ಅತ್ಯಂತ ಕೆಳಭಾಗದಲ್ಲಿ; ಅವುಗಳ ಸಂಖ್ಯೆ ನಿರ್ದಿಷ್ಟವಾಗಿಲ್ಲ.

ಪಾತಾಳ ಲೋಕಗಳಲ್ಲಿ ಒಂದೊಂದೂ 10,000 ಯೋಜನ ದೀರ್ಘವಾಗಿದೆ. ಅಲ್ಲಿ ನಾಗರು ದೈತ್ಯರು ದಾನವರು ವಾಸಮಾಡುವರು. ಸೌಂದರ್ಯ ಮತ್ತು ಆಢ್ಯತೆಯಲ್ಲಿ ಇವು ಸ್ವರ್ಗಕ್ಕೆ ಸರಿಸಮನಾಗಿವೆ. ಪಾತಾಳದ ಕೆಳಗೆ ಆದಿಶೇಷ ತನ್ನ ಹೆಡೆಗಳ ಮೇಲೆ ಬ್ರಹ್ಮಾಂಡವನ್ನೆಲ್ಲ ಹೊತ್ತಿದ್ದಾನೆ.

ಭೂಲೋಕದ ಮೇಲೆ ಸೂರ್ಯನವರೆಗೆ ಭುವರ್ಲೋಕ. ಸೂರ್ಯನಿಂದ ಧ್ರುವನಕ್ಷತ್ರದವರೆಗೆ ಸ್ವರ್ಲೋಕ. ಈ ಮೂರೂ ಕಲ್ಪದ ಕೊನೆಯಲ್ಲಿ ನಾಶವಾಗುತ್ತವೆ. ಧ್ರುವನಕ್ಷತ್ರದಿಂದ 10 ಕೋಟಿ ಯೋಜನವಿದೆ, ಮಹರ್ಲೋಕ. ಜನ ತಪ ಸತ್ಯಲೋಕಗಳು ತಮ್ಮ ಹಿಂದಿನ ಲೋಕದಿಂದ ಕ್ರಮವಾಗಿ 20,80,120 ಕೋಟಿ ಯೋಜನಗಳಿವೆ. ಮಹದಾದಿ ಲೋಕಗಳಿಗೆ ಕಲ್ಪದ ಕೊನೆಯಲ್ಲಿ ನಾಶವಿಲ್ಲ; ಅಲ್ಲಿ ವಾಸಮಾಡುವವರು ಮುಂದಿನದಕ್ಕೆ ಹೋಗುತ್ತಾರೆ.

ನರಕ : ನರಕಗಳು ಇರುವುದು ಪಾತಾಳದ ಕೆಳಗೆ. ಆದರೆ ಅವುಗಳ ಸ್ಥಳ ನಿರ್ದಿಷ್ಟವಾಗಿಲ್ಲ. ಬಹುಶಃ ಮೊದಲಿಗೆ ನರಕಕ್ಕೂ ಪಾತಾಳಲೋಕಕ್ಕೂ ವ್ಯತ್ಯಾಸವಿದ್ದಿಲ್ಲ. ಜೈನರಲ್ಲಿ ಏಳು ಪಾತಾಳಗಳ ಬದಲು ಏಳು ನರಕಗಳನ್ನು ಹೇಳುವುದನ್ನು ಇಲ್ಲಿ ನೆನೆಯಬಹುದು.

ವ್ಯಾಸ ತನ್ನ ಯೋಗಭಾಷ್ಯದಲ್ಲಿ ಬೇರೊಂದು ವರ್ಣನೆ ನೀಡುತ್ತಾನೆ. ಬ್ರಹ್ಮಾಂಡ ಪ್ರಧಾನದ ಒಂದು ತುಣುಕು. ಒಂದರ ಮೇಲೊಂದರಂತೆ ಏಳು ಭೂಮಿಗಳಿವೆ. 1 ಕೆಳಗಿನದು ಭೂಃ–ಕೆಳಗಿನ ನರಕದಿಂದ ಮೇರುವಿನ ತುದಿಯವರೆಗೆ. 2 ಅಂತರಿಕ್ಷ–ಧ್ರುವನಕ್ಷತ್ರದವರೆಗೆ, 3 ಸ್ವರ್ ಅಥವಾ ಮಹೇಂದ್ರಲೋಕ, 4 ಮಹರ್ ಅಥವಾ ಪ್ರಾಜಾಪತ್ಯಲೋಕ, 5–7 ಜನ, ತಪ, ಸತ್ಯ–ಇವು ಮೂರು ವಿಧವಾದ ಬ್ರಹ್ಮಲೋಕಗಳು. ಭೂಮಿಯ ಕೆಳಗೆ ಏಳು ನರಕಗಳು ಒಂದರ ಮೇಲೊಂದಾಗಿವೆ. ಅವೀಚಿ, ಘನ, ಸಲಿಲ, ನಲ, ಅನಿಲ, ಆಕಾಶ, ತಮಃಪ್ರತಿಷ್ಠಾ. ನರಕದ ಪ್ರಸಿದ್ಧ ಹೆಸರಾದ ಅವೀಚಿಯನ್ನು ಬಿಟ್ಟರೆ ಇತರವು ಪುರಾಣಗಳಲ್ಲಿ ಹೇಳಲಾದ ಬ್ರಹ್ಮಾಂಡದ ಹೊದಿಕೆಗಳೇ ಎನಿಸುತ್ತವೆ. ಬಹುಶಃ ಈ ಕಾರಣದಿಂದಲೇ ವ್ಯಾಸ ಇವುಗಳಿಗೆ ಬೇರೆ ಹೆಸರುಗಳನ್ನು ಕೊಡುತ್ತಾನೆ : ಮಹಾಕಾಲ, ಅಂಬರೀಷ, ರೌರವ, ಮಹಾರೌರವ, ಕಾಲಸೂತ್ರ, ಅಂಧತಮಿಸ್ರ, ನರಕಗಳ ಮೇಲೆ ಏಳು ಪಾತಾಳಗಳು : ಮಹಾತಲ, ರಸಾತಲ, ಅತಲ, ಸುತಲ, ನಿತಲ, ತಲಾತಲ, ಪಾತಾಲ. ಏಳು ಪಾತಾಳಲೋಕಗಳ ಮೇಲೆ ವಸುಮತೀ–ಭೂಮಿ. ಒಂದರ ಸುತ್ತ ಒಂದರಂತೆ ಅದರಲ್ಲಿ ಏಳು ಖಂಡಗಳಿವೆ.

ಜಗತ್ ಸ್ವರೂಪದ ಈ ವಿಸ್ತಾರವಾದ ತಿಳಿವಳಿಕೆ ಧ್ಯಾನಗೋಚರವಾಯಿತೆಂದು ಪತಂಜಲಿ ತನ್ನ ಯೋಗಸೂತ್ರದಲ್ಲಿ ಹೇಳಿದ್ದಾನೆ. ಉಮಾಸ್ವಾತಿಯೂ ತತ್ತ್ವಾಧಿಗಮ ಸೂತ್ರದಲ್ಲಿ ಹಾಗೆಯೇ ನುಡಿದಿದ್ದಾನೆ. ಪೌರಾಣಿಕ ವರ್ಣನೆ ನಂಬುಗೆಯ ವಿಷಯ. ಖಗೋಳವಿಜ್ಞಾನ ಜಗತ್ತಿನ ವೈಜ್ಞಾನಿಕ ಚಿತ್ರವನ್ನು ಕೊಟ್ಟರೂ ಹಳೆಯ ಅಭಿಪ್ರಾಯ ಬದಲಾಗಲಿಲ್ಲ. ಖಗೋಳ ವಿಜ್ಞಾನಿಗಳು ತಮ್ಮ ವಿಜ್ಞಾನದ ಆಧಾರದ ಮೇಲೆ ಸಂಪ್ರದಾಯವನ್ನು ತಿದ್ದುವ ಯತ್ನ ಮಾಡಿದರು. ಸೂರ್ಯಸಿದ್ಧಾಂತದ ಪ್ರಕಾರ ಬ್ರಹ್ಮಾಂಡ ಟೊಳ್ಳಾಗಿದೆ.

ಇದರೊಳಗೆ ಒಂದು ವೃತ್ತ ವ್ಯೋಮಪಥ ಎನಿಸುತ್ತದೆ. ಇದರೊಳಗೆ ನಕ್ಷತ್ರಗಳು ಚಲಿಸುತ್ತವೆ. ಅಂತೆಯೇ ಕ್ರಮವಾಗಿ ಒಂದರ ಕೆಳಗೊಂದು ಶನಿ, ಗುರು, ಮಂಗಳ, ಸೂರ್ಯ, ಶುಕ್ರ, ಬುಧ, ಚಂದ್ರರು ಚಲಿಸುತ್ತಾರೆ. ಕೆಳಗೆ ಕ್ರಮವಾಗಿ ಸಿದ್ಧರು, ವಿದ್ಯಾಧರರು, ಮೋಡಗಳು. ಭೂಮಿ ಗೋಳಾಕಾರದಲ್ಲಿದೆ. ಈ ಗೋಳದ ಮಧ್ಯದಿಂದ ಎರಡೂ ಕಡೆ ಚಾಚಿಕೊಂಡಂತೆ ಚಿನ್ನದ ಬೆಟ್ಟವಾದ ಮೇರು ಇದೆ.

**ಜಗತ್ ಸೃಷ್ಟಿ :** ವಿಶ್ವಸೃಷ್ಟಿಯನ್ನು (ಮನೆಯಂತೆ) ಕಟ್ಟುವಿಕೆ, ಯಾನಮಾಡುವುದು ಅಥವಾ ನೇಯುವುದು ಎಂದು ಬಣ್ಣಿಸಲಾಗಿದೆ. ದ್ಯೌಃ ಮತ್ತು ಪೃಥಿವಿಗಳು ದೇವತೆಗಳ ತಂದೆ ತಾಯಿಗಳು; ಆದರೂ ದೇವತೆಗಳಿಂದಲೇ ನಿಷ್ಪನ್ನವಾದುವು. ಇಂದ್ರ, ಅಗ್ನಿ, ರುದ್ರ, ಸೋಮ, ವಿಶ್ವಕರ್ಮ ಇವರಲ್ಲಿ ಒಬ್ಬರೋ ಅಥವಾ ಎಲ್ಲ ದೇವತೆಗಳೂ ಒಟ್ಟಾಗಿಯೋ (ವಿಶ್ವೇದೇವಾಃ) ದ್ಯೌಃ ಮತ್ತು ಪೃಥಿವಿಗಳನ್ನು ಸೃಷ್ಟಿಸಿದರು. ಅದಿತಿ–ದಕ್ಷರು ವಿಶ್ವಕ್ಕೆ ಮೂಲವೆಂದು ಹೇಳಿ ಅವರು ಪರಸ್ಪರ ಉತ್ಪಾದಕರೆಂದು ಋಗ್ವೇದದಲ್ಲಿ ತಿಳಿಸಲಾಗಿದೆ. ಅವರಿಬ್ಬರೂ ಒಂದೇ ಮೂಲದಿಂದ ಬಂದಿರುವವರು ಎಂದು ಇದರಿಂದ ತಿಳಿಯಬಹುದು. ಇದರಲ್ಲಿ ಸ್ತ್ರೀಪುರುಷ ತತ್ತ್ವಗಳು ಸೂಚಿತವಾಗಿವೆ. ವಿರಾಟ್‌ರೂಪವಾದ ಪುರುಷನಿಂದ ದೇವತೆಗಳೂ ಜಗತ್ತೂ ಸೃಷ್ಟಿತವಾದುವೆಂದು ಪುರುಷಸೂಕ್ತ ಸಾರುತ್ತದೆ. ಆ ಪುರುಷನನ್ನು ಒಂದೆಡೆ ಅಜ, ಏಕಪಾದ, ವಿಶ್ವಕರ್ಮ ಎಂದು ಕರೆದಿದ್ದಾರೆ. ಇನ್ನೊಂದೆಡೆ ಆ ಪ್ರಥಮಜನು (ಮೊದಲು ಕಾಣಿಸಿಕೊಂಡವನು) ಯಾರು ಎಂದು ಪ್ರಶ್ನಿಸಲಾಗಿದೆ. ಇದರಿಂದ ಜಗತ್ಕಾರಣನಾದ ದೇವತೆ ಪುರುಷ–ಪ್ರಜಾಪತಿಗೆ ಕಃ (ಯಾರು) ಎಂದೇ ಹೆಸರಾಯಿತು. ಅಂದರೆ ಅ ತತ್ತ್ವ ಅವ್ಯಕ್ತ ಅನಂತ ಎಂದು ಅರ್ಥ. ಋಗ್ವೇದದ ಹಲವು ಸೂಕ್ತಗಳು ಸೃಷ್ಟಿಯನ್ನು ಪ್ರಸ್ತಾಪಿಸುತ್ತವೆ. ಹಿರಣ್ಯಗರ್ಭ ಎಲ್ಲ ಭೂತಜಾತಗಳಿಗೂ ಒಡೆಯ; ದ್ಯಾವಾಪೃಥಿವಿಗಳಿಗೆ ಆಧಾರಭೂತನಾದವ. ಇವನೊಬ್ಬನೇ ಸೃಷ್ಟಿಗೆ ಪೂರ್ವದಲ್ಲಿದ್ದ. ಇವನಿಂದ ಸೃಷ್ಟಿ ಮೊದಲಾಯಿತು. ನಾಸದೀಯ ಸೂಕ್ತ ಹೀಗೆ ಹೇಳುತ್ತದೆ : ಆಗ (ಸೃಷ್ಟಿಗೆ ಪೂರ್ವದಲ್ಲಿ) ಅಸತ್ತೂ ಇರಲಿಲ್ಲ, ಸತ್ತೂ ಇರಲಿಲ್ಲ. ಲೋಕಗಳು ಇರಲಿಲ್ಲ. ಹಗಲು ರಾತ್ರಿಗಳಿರಲಿಲ್ಲ. ಇದನ್ನೆಲ್ಲ ಆವರಿಸಿದ ಯಾವುದಾದರೂ ವಸ್ತುವಿತ್ತೆ? ಗಹನವಾದ, ಗಂಭೀರವಾದ ಉದಕ ಆವರಿಸಿತ್ತೆ? ಯಾವುದೂ ಇಲ್ಲ. ಶ್ವಾಸೋಚ್ಛ್ವಾಸರಹಿತವಾದ ಜಡವಸ್ತುವನ್ನು ಸಚೇತನವಾಗಿ ಮಾಡಬಲ್ಲ ಬ್ರಹ್ಮವಸ್ತುವಿಗಿಂತ ಬೇರಾವುದೂ ಇರಲಿಲ್ಲ. ದಟ್ಟವಾದ ಕತ್ತಲೆ ಎಲ್ಲೆಲ್ಲಿಯೂ ಕವಿದಿತ್ತು. ಎಲ್ಲ ಉದಕಮಯವಾಗಿತ್ತು. ಆಗ ಆ ಅವ್ಯಕ್ತಸ್ವರೂಪ ಸೃಷ್ಟಿಮಾಡಬೇಕೆಂಬ ಧ್ಯಾನರೂಪವಾದ (ಸಂಕಲ್ಪ) ಮಹಿಮೆಯಿಂದ ಕಾರ್ಯರೂಪವಾದ ಜಗತ್ತಾಗಿ ಪರಿಣಮಿಸಿತು. ಈ ಸೃಷ್ಟಿ ಯಾವ ವಸ್ತುವಿನಿಂದ, ಯಾರಿಂದ ಉಂಟಾಯಿತು ಎಂದು ಯಾರು ಹೇಳಬಲ್ಲರು? ದೇವತೆಗಳೂ ಸೃಷ್ಟಿಗೆ ಈಚಿನವರು. ಆದ್ದರಿಂದ ಅವರಿಗೂ ತಿಳಿದಿಲ್ಲ. ಸೃಷ್ಟ್ಯಾತ್ಮಕವಾದ ಯಜ್ಞವನ್ನು ದಾರಗಳಿಂದ ನೇಯಲಾಯಿತು. ಈ ಯಜ್ಞದಿಂದ ಜಗತ್ ಸೃಷ್ಟಿಯಾಯಿತು. ಇದನ್ನು ಋಷಿಗಳು ಧ್ಯಾನಯೋಗದಿಂದ ತಿಳಿದರು. ಪ್ರಜಾಪತಿ ಜಗತ್ತನ್ನು ಸೃಷ್ಟಿಸಿದ ಎಂದು ಬ್ರಾಹ್ಮಣಗಳು ಹೇಳುತ್ತವೆ. ಪ್ರಜಾಪತಿಗೆ ಸೃಷ್ಟಿಸಬೇಕೆಂಬ ಇಚ್ಛೆಯುಂಟಾಯಿತು; ಅದಕ್ಕಾಗಿ ತಪಸ್ಸುಮಾಡಿದ. ಅನಂತರ ಪ್ರಜಾಸೃಷ್ಟಿಮಾಡಿದ. ಇಂಥ ಮಾತುಗಳು ಹಲವೆಡೆ ಬರುತ್ತವೆ. ಮೊದಲು ನೀರು ಇತ್ತು. ಅದರ ಮೂಲಕ ಪ್ರಜಾಪತಿ ಸೃಷ್ಟಿಮಾಡಿದ ಎಂದೂ ಹೇಳಿದೆ. ಪ್ರಜಾಪತಿ ಸೃಷ್ಟಿಸಿದನೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಪ್ರಸಂಗಕ್ಕೆ ತಕ್ಕಂತೆ ಕ್ರಮದಲ್ಲಿ ವ್ಯತ್ಯಾಸ ಇದೆ; ಆದ್ದರಿಂದ ಬೇರೆ ಬೇರೆಯಾಗಿ ಕಾಣುತ್ತದೆ.

ಉಪನಿಷತ್ತುಗಳಲ್ಲೂ ನಾನಾ ಬಗೆಯ ನಿರೂಪಣೆ ಇದೆ. ಜಗತ್ತಿನ ಮೂಲಕಾರಣವನ್ನು ಪ್ರಜಾಪತಿ ಎನ್ನುವುದರ ಜೊತೆಗೆ ಬ್ರಹ್ಮ, ಆತ್ಮ, ಸತ್, ಅಸತ್ ಮುಂತಾಗಿ ಕರೆಯಲಾಗಿದೆ. ಸೃಷ್ಟಿಗೆ ಮೊದಲು ಏನಾದರೂ ಇತ್ತೇ (ಸತ್) ಅಥವಾ ಏನೂ ಇರಲಿಲ್ಲವೆ (ಅಸತ್) ಎಂಬುದನ್ನು ವಿಚಾರಮಾಡಲಾಗಿದೆ. ಶೂನ್ಯದಿಂದ ಜಗತ್ತಿನಲ್ಲಿ ಏನೊಂದೂ ಆವಿರ್ಭವಿಸದು ಎಂದು ಋಷಿಗಳು ನಂಬಿದ್ದರು. ಸೃಷ್ಟಿ ಎಂಬುದನ್ನು ಜೀವತತ್ತ್ವದ ಅಥವಾ ಆತ್ಮಶಕ್ತಿಯುಳ್ಳ ಪದಾರ್ಥದ ಆವಶ್ಯಕತೆ ಎಷ್ಟು ಎಂಬುದನ್ನು ಕಂಡುಕೊಂಡರು. ಅನಂತರ ಆ ತತ್ತ್ವಕ್ಕೆ ಪುರುಷನ ಆಕಾರ ಕೊಟ್ಟರು (ಬೃಹದಾರಣ್ಯಕೋಪನಿಷತ್). ಅದನ್ನು ವಿರಾಟ್ ಸ್ವರೂಪವೆಂದು ಐತರೇಯ ಹೇಳುತ್ತದೆ. ಎಲ್ಲಕ್ಕೂ ಮೂಲವಾಗಿ ಆಪಃ (ನೀರು) ಇತ್ತು. ಅದರಿಂದ ಸತ್ಯ, ಅದರಿಂದ ಬ್ರಹ್ಮ, ಅದರಿಂದ ಪ್ರಜಾಪತಿ–ಹೀಗೆ ಕ್ರಮವಾಗಿ ಜನಿಸಿದರು (ಬೃಹದಾರಣ್ಯಕ). ವಾಯುವೇ ಆದಿಯಲ್ಲಿತ್ತು; ಕೊನೆಗೆ ಅದರಲ್ಲೇ ಎಲ್ಲವೂ ಲಯವಾಗುತ್ತದೆ ಲಯವಾಗುತ್ತದೆ ಎಂದು ಛಾಂದೋಗ್ಯ ಹೇಳುತ್ತದೆ. ಹೀಗೆಯೇ ಅಗ್ನಿ (ಕಠ), ಆಕಾಶ (ಛಾಂದೋಗ್ಯ) ತತ್ತ್ವಗಳು ಮೂಲಭೂತವಾದುವು ಎಂದು ಹೇಳಲಾಗಿದೆ. ಅಸತ್ತಿನಿಂದಲೇ ಜಗತ್ತು ಹೊರಟಿತೆಂದೂ ಉಕ್ತವಾಗಿದೆ (ತೈತ್ತಿರೀಯ). ಇದಕ್ಕೆ ಮೃತ್ಯು ಅಥವಾ ಕ್ಷುತ್ ಎಂದೂ ಹೆಸರು (ಬೃಹದಾರಣ್ಯಕ). ಇಲ್ಲಿ ಅಸತ್ ಎಂದಾಗ ಸಂಪೂರ್ಣ ಶೂನ್ಯ ಎಂದು ತಿಳಿಯಬಾರದು. ಅದು ಸಾಪೇಕ್ಷ. ಅನಂತರದ ಭೌತಿಕ ಇರುವಿಕೆಗೆ ಹೋಲಿಸಿದಾಗ ಆದಿಯಲ್ಲಿ ನಾಮರೂಪಗಳಿಲ್ಲದೆ ಇದ್ದುದಕ್ಕೆ ಅಸತ್ ಎನ್ನಲಾಗುವುದು. ಅಸತ್ ತಾನೇ ಸತ್ ಆಗಿ ಬದಲಾವಣೆ ಹೊಂದಿ ಬೆಳೆಯಿತು. ಬೆಳೆದು ಒಂದು ದೊಡ್ಡ ಮೊಟ್ಟೆಯಾಯಿತು (ಬ್ರಹ್ಮಾಂಡ–ಹಿರಣ್ಯಗರ್ಭ). ಅಂಡವನ್ನು ಸೃಷ್ಟಿಸಿದ ಬ್ರಹ್ಮ ಅದನ್ನೇ ಪ್ರವೇಶಿಸಿತು ಎಂದು ಒಂದೆಡೆ ಹೇಳಿದೆ. ಕೆಲವು ಕಾಲಾನಂತರ ಅದು ಚಿನ್ನದ ಮತ್ತು ಬೆಳ್ಳಿಯದಾಗಿ ಇಬ್ಭಾಗವಾಯಿತು. ಬೆಳ್ಳಿಯ ಭಾಗ ಭೂಮಿ ಮತ್ತು ಚಿನ್ನದ ಭಾಗ ಸ್ವರ್ಗಗಳಾದವು. ಗಟ್ಟಿಯಾದ ಹೊದಿಕೆಯೇ ಪರ್ವತಗಳು; ತೆಳುವಾದುವು ಮೋಡಗಳು. ಅದರ ನಾಳಗಳೇ ನದಿಗಳು. ಅದರಲ್ಲಿದ್ದ ಜಲಾಂಶವೇ ಸಾಗರಗಳು. ಅದರಿಂದ ಹೊರಬಂದಿದ್ದು ಸೂರ್ಯ (ಛಾಂದೋಗ್ಯ). ಸತ್ ಒಂದೇ ಮೊದಲಿತ್ತು. ಅದಕ್ಕೆ ವರ್ಧಿಸಬೇಕೆನಿಸಿತು. ಅಗ್ನಿ ಉತ್ಪತ್ತಿಯಾಯಿತು. ಅಗ್ನಿಯಿಂದ ಅಪ್ ಮತ್ತು ಅದರಿಂದ ಪೃಥ್ವಿಯೂ ಹುಟ್ಟಿದವು (ಛಾಂದೋಗ್ಯ). ಮೊದಲು ಹುಟ್ಟಿದ ಈ ಮೂರು ಭೂತಗಳೂ ಸ್ವತಂತ್ರವಾಗಿದ್ದಾಗ ಸೃಷ್ಟಿ ಸಾಧ್ಯವಾಗಲಿಲ್ಲ. ತ್ರಿವೃತ್ಕರಣದಲ್ಲಿ ಪರಸ್ಪರ ಮಿಳಿತವಾದಾಗ ವಿಶ್ವ ರೂಪಿತವಾಯಿತು. ಪ್ರತಿಯೊಂದು ಭೂತದ ¼ ಭಾಗ ಇತರ ಭೂತಗಳ ½ ಭಾಗದೊಡನೆ ಸೇರುತ್ತದೆ. ಇದೇ ತ್ರಿವೃತ್ಕರಣ (ವಾಯು, ಆಕಾಶ ಸೇರಿ ಐದು ಭೂತಗಳಾದರೆ (ತೈತ್ತಿರೀಯ) ಒಂದೊಂದರ ? ಭಾಗ ಸೇರುತ್ತದೆ. ಇದೇ ವೇದಾಂತದಲ್ಲಿ ಹೇಳಿರುವ ಪಂಚೀಕರಣ). ಸೃಷ್ಟಿಕರ್ತ ಸೃಷ್ಟಿಸಬೇಕೆಂದು ಇಚ್ಛಿಸಿದ ಅನಂತರ ತಾನೇ ಸತ್ (ಪ್ರಕಟವಾಗಿರುವುದು) ಮತ್ತು ಅಸತ್ (ಅಪ್ರಕಟಿತವಾಗಿರುವುದು) ಆಗಿ ಮಾರ್ಪಟ್ಟ.

ಪುರಾಣಗಳಲ್ಲಿ ಸೃಷ್ಟಿ ಇನ್ನೂ ಹೆಚ್ಚು ವಿಸ್ತಾರವಾಗಿ ಪ್ರಸ್ತಾಪಿತವಾಗಿದೆ. ಒಂದೊಂದರಲ್ಲಿ ಒಂದೊಂದು ತೆರನಾಗಿ ನಿರೂಪಿತವಾಗಿದ್ದರೂ ಕೆಲವಾರು ಅಂಶಗಳು ಎಲ್ಲ ಪುರಾಣಗಳಿಗೂ ಸಮಾನವಾಗಿವೆ : 1 ಬ್ರಹ್ಮ ಅಥವಾ ಆತ್ಮವೇ ನಾರಾಯಣ, ವಿಷ್ಣು ಅಥವಾ ಆಯಾ ಪುರಾಣದ ದೇವತೆ. 2 ಆದಿಯಲ್ಲಿ ನೀರು ಅಥವಾ ಕತ್ತಲು ಇತ್ತು. 3 ಅದರಲ್ಲಿ ಪುರುಷ ಅಥವಾ ಹಿರಣ್ಯಗರ್ಭ ಕಾಣಿಸಿಕೊಂಡ. 4 ಬ್ರಹ್ಮಾಂಡದಿಂದ ಬ್ರಹ್ಮ, ಪ್ರಜಾಪತಿ ಅಥವಾ ಪಿತಾಮಹ ಜನ್ಮತಾಳಿದ. 5 ಕಮಲ ಬ್ರಹ್ಮನ ಹುಟ್ಟುಸ್ಥಳ. 6 ಮರೀಚಿ ಮೊದಲಾದ ಏಳು ಅಥವಾ ಎಂಟು ಮಾನಸಪುತ್ರರು ಅವಾಂತರ ಸೃಷ್ಟಿಕರ್ತರು.

ಪುರುಷ ಮತ್ತು ಪ್ರಕೃತಿ–ಎರಡು ಮೂಲತತ್ತ್ವಗಳು. ಪ್ರಕೃತಿ ಮೂರು ಗುಣಗಳಿಂದ ಕೂಡಿದೆ. ಪುರುಷನ ಸಾಮೀಪ್ಯ ಹೊಂದಿದ ಪ್ರಕೃತಿಯಿಂದ ಇಪ್ಪತ್ತಮೂರು ತತ್ತ್ವಗಳು ಕ್ರಮವಾಗಿ ಹೊಮ್ಮುತ್ತವೆ–ಎಂಬ ಸಾಂಖ್ಯ ಪ್ರಕ್ರಿಯೆಯನ್ನು ಪುರಾಣಗಳಲ್ಲಿ ಅನುಸರಿಸಿದೆ. ಇವನ್ನು ವೇದದ ಅಭಿಪ್ರಾಯಗಳೊಡನೆ ಸರಿಹೊಂದಿಸುವ ಯತ್ನ ನಡೆದಿದೆ. ಪುರುಷಪ್ರಧಾನ ಹಿರಣ್ಯಗರ್ಭ–ಬ್ರಹ್ಮ–ಬ್ರಹ್ಮ–ಅಹಂಕಾರ ಇವು ಪರಸ್ಪರ ಭಿನ್ನವಲ್ಲ ಎಂದು ಬೇರೆ ಬೇರೆ ಕಡೆ ಹೇಳಲಾಗಿದೆ. ಇನ್ನೊಮ್ಮೆ ಪುರುಷ ಪ್ರಕೃತಿಗಳೆರಡೂ ಒಂದೇ ಮೂಲದಿಂದ (ಪುರುಷೋತ್ತಮದಿಂದ) ಹುಟ್ಟಿವೆ ಎಂದು ಹೇಳಿದೆ.

ಮಹಾಭಾರತದಲ್ಲಿಯೂ ಸೃಷ್ಟಿವರ್ಣನೆ ಸೇರಿದೆ. ಇದು ಬೌದ್ಧಿಕ ಇತಿಹಾಸದಲ್ಲಿ ಮಧ್ಯಕಾಲವನ್ನು ಸೂಚಿಸುತ್ತದೆ. ಮನುಸ್ಮೃತಿಯಲ್ಲಿಯೂ ಸೃಷ್ಟಿಕ್ರಮ ನಿರೂಪಣೆಯಿದೆ. ಮುಂದಿನ ಸಾಹಿತ್ಯದಲ್ಲಿ ಬಹುತೇಕ ಇದೇ ಉದಾಹೃತವಾಗಿದೆ. ಆದಿಯಲ್ಲಿ ಕತ್ತಲು ಕವಿದಿತ್ತು. ಕತ್ತಲನ್ನು ಹೋಗಲಾಡಿಸುತ್ತ ಸ್ವಯಂಭೂ ಕಾಣಿಸಿಕೊಳ್ಳುತ್ತಾನೆ. ಸೃಷ್ಟಿಸಬೇಕೆಂಬ ತನ್ನ ಸಂಕಲ್ಪದಿಂದ ಪ್ರಕಾಶಿಸಿದ; ಮೊದಲು ನೀರನ್ನು ಸೃಜಿಸಿ ಅದರಲ್ಲಿ ಬೀಜವನ್ನಿಟ್ಟ. ಅದು ಚಿನ್ನದ ಅಂಡವಾಯಿತು; ಅದರಲ್ಲಿ ಪುರುಷೋತ್ತಮ ತಾನೇ ಬ್ರಹ್ಮನಾಗಿ ಹುಟ್ಟಿದ; ನೀರು (ನಾರಾ) ಯಾರಿಗೆ ವಾಸಸ್ಥಾನ (ಆಯನ) ಆಗಿದ್ದಿತೋ ಅವನು (ಪುರುಷ) ನಾರಾಯಣ ಎನಿಸಿದ.

ಪುರಾಣಗಳಲ್ಲಿ ಇದೇ ಅಭಿಪ್ರಾಯಗಳು ವಿಸ್ತಾರವಾಗಿ, ಸಾಂಖ್ಯತತ್ತ್ವ ವೇದಗಳಿಗೆ ಅನುಕೂಲವಾಗುವಂತೆ ಬರುತ್ತವೆ. ಪುರುಷ ಪ್ರಕೃತಿಗಳು ಪರಮಾತ್ಮನ ಎರಡು ರೂಪಗಳೆಂದು ಹೇಳಿರುವುದನ್ನು ಗಮನಿಸಬಹುದು.

ಉದಾಹರಣೆಗೆ ವಿಷ್ಣುಪುರಾಣದ ಸೃಷ್ಟಿಕ್ರಮ ನಿರೂಪಣೆಯನ್ನು ನೋಡಬಹುದು. ಹಿಂದಕ್ಕೆ ಏನೂ ಇರಲಿಲ್ಲ ಹಗಲಿಲ್ಲ, ರಾತ್ರಿಯಿಲ್ಲ, ಆಕಾಶವಿಲ್ಲ, ಭೂಮಿಯಿಲ್ಲ, ಕತ್ತಲೆ ಬೆಳಕು ಯಾವುದೂ ಇರಲಿಲ್ಲ. ಅನಂತರ ವಿಷ್ಣುವಿನಿಂದ ಪುರುಷ, ಪ್ರಧಾನ ಎಂಬ ಎರಡು ರೂಪಗಳು ಹೊರಬಂದವು. ಮುಂದೆ ವಿಷ್ಣು ತನ್ನಿಚ್ಛೆಯಿಂದಲೇ ಪುರುಷ ಪ್ರಧಾನರನ್ನು ಪ್ರವೇಶಿಸಿ ಅವುಗಳ ಸಮತ್ವವನ್ನು ಕಲಕಿದ. ಇದರಿಂದ ಮಹತ್ ತತ್ತ್ವ ಹುಟ್ಟಿತು. ಅದರಿಂದ ಅಹಂಕಾರ ತತ್ತ್ವ ಮೂಡಿತು. ಇದು ಆಕಾಶಾದಿಭೂತಗಳಿಗೂ ಇಂದ್ರಿಯಗಳಿಗೂ ಕಾರಣ. ಆಕಾಶಾದಿ ಭೂತಗಳು ಸ್ವತಂತ್ರವಾಗಿದ್ದಾಗ ಸೃಷ್ಟಿ ಸಾಧ್ಯವಾಗಲಿಲ್ಲ. ಅವೆಲ್ಲವೂ ಪಂಚೀಕರಣ ಕ್ರಮದಲ್ಲಿ ಸೇರಿದಾಗ ಸೃಷ್ಟಿಗೆ ಅನುಕೂಲವಾಯಿತು. ಭೂತಗಳ ಸಂಯೋಗದಿಂದ ಪಿಂಡವೊಂದು ಬೆಳೆಯಿತು. ಅದರಲ್ಲಿ ವಿಷ್ಣುವೇ ಸೇರಿಕೊಂಡು ಬ್ರಹ್ಮನಾಗಿ ಹೊರಗೆ ಬಂದ. ಅನಂತರ ಜಗತ್ ಸೃಷ್ಟಿಯಾಯಿತು. ಇದು ಮೊದಲ ಸೃಷ್ಟಿ. ಪ್ರಕೃತ ಕಲ್ಪದ ಸೃಷ್ಟಿ : ಕಳೆದ ಕಲ್ಪದ ರಾತ್ರಿಯಿಂದ ಎಚ್ಚೆತ್ತ ಪ್ರಭು ಸತ್ತ್ವಗುಣದಿಂದ ಕೂಡಿದವನಾಗಿ ಶೂನ್ಯವಾದ ಜಗತ್ತನ್ನು ಕಂಡ. ಭೂಮಿ ನೀರಿನಲ್ಲಿರುವುದನ್ನು ತಿಳಿದು ಅದನ್ನು ಮೇಲಕ್ಕೆತ್ತಲು ವರಾಹರೂಪ ಧರಿಸಿದ. ಭೂಮಿಯನ್ನು ಮೇಲಕ್ಕೆತ್ತಿ ಸಮುದ್ರದಲ್ಲಿ ತೇಲಿ ಬಿಟ್ಟು ಅದನ್ನು ಸಮಮಾಡಿದ. ಹಿಂದಿನ ಕಲ್ಪದ ಕೊನೆಯಲ್ಲಿ ದಗ್ಧವಾದ ಪರ್ವತವೇ ಮೊದಲಾದುವನ್ನೂ ಲೋಕಗಳನ್ನೂ ದ್ವೀಪಗಳನ್ನೂ ಹಿಂದಿನಂತೆ ಸೃಷ್ಟಿಸಿದ.

ಜಗತ್ತಿನ ನಿವಾಸಿಗಳು : ನಾನಾಲೋಕಗಳ ನಿವಾಸಿಗಳ ವಿಷಯದಲ್ಲಿ ಒಮ್ಮತವಿಲ್ಲ. ಪಾತಾಳಲೋಕಗಳಲ್ಲಿ ಸಮುದ್ರಗಳಲ್ಲಿ ಭೂಮಿಯ ಪರ್ವತಗಳ ಮೇಲೆ ಈ ದೇವನಿಕಾಯಗಳು ವಾಸಮಾಡುತ್ತವೆ : ಅಸುರ, ಗಂಧರ್ವ, ಕಿನ್ನರ, ಕಿಂಪುರುಷ, ಯಕ್ಷ, ರಾಕ್ಷಸ, ಭೂತ, ಪ್ರೇತ, ಅಪಸ್ಮಾರಕ, ಅಪ್ಸರಸ್, ಬ್ರಹ್ಮರಾಕ್ಷಸ, ಕೂಷ್ಮಾಂಡ, ವಿನಾಯಕ ಖಂಡಗಳಲ್ಲಿ ದೇವತೆಗಳು ಮತ್ತು ಮಾನವರು ವಾಸಿಸುತ್ತಾರೆ. ಮೇರು ಪರ್ವತದ ಮೇಲೆ ದೇವತೆಗಳ ಉದ್ಯಾನವನ ಮತ್ತು ಅರಮನೆಗಳಿವೆ. ಮಾಹೇಂದ್ರಲೋಕದಲ್ಲಿ ಆರು ಬಗೆಯ ದೇವತಾ ಸಮೂಹಗಳಿವೆ : ತ್ರಿದಶರು, ಅಗ್ನಿಷ್ವಾತ್ತರು, ಯಾಮ್ಯರು, ತುಷಿತರು, ಅಪರಿನಿರ್ಮಿತ ವಶವರ್ತಿಗಳು, ಪರಿನಿರ್ಮಿತ ವಶವರ್ತಿಗಳು. ಪ್ರಾಜಾಪತ್ಯ ಲೋಕದಲ್ಲಿ ಕುಮುದರು, ಋಭುಗಳು, ಪ್ರತರ್ದನರು, ಅಂಜನಾಭರು, ಪ್ರಚಿತಾಭರು ಎಂಬ ಐದು ದೇವತಾಸಮೂಹಗಳಿವೆ. ಜನಲೋಕದಲ್ಲಿ ಬ್ರಹ್ಮ, ಪುರೋಹಿತರು, ಬ್ರಹ್ಮಕಾಯಿಕರು, ಅಮರರು ಎಂಬ ನಾಲ್ಕು ದೇವತಾಸಮೂಹ ಅಥವಾ ಸನಂದನಾದಿ ಬ್ರಹ್ಮಪುತ್ರರು ಇದ್ದಾರೆ. ತಪೋಲೋಕದಲ್ಲಿ ವೈರಾಜ ದೇವತೆಗಳು ಇದ್ದಾರೆ. ಸತ್ಯಲೋಕದಲ್ಲಿ ನಾಲ್ಕು ವರ್ಗಗಳು : ಅಂಜನರು, ಶುದ್ಧ ನಿವಾಸರು, ಸತ್ಯಾಭರು, ಸಂಜ್ಞಾಸಂಜ್ಞಿಗಳು, ಪ್ರಾಜಾಪತ್ಯ ಮತ್ತು ಮೇಲಿನ ಲೋಕಗಳ ನಿವಾಸಿಗಳಿಗೆ ಧ್ಯಾನವೇ ಆಹಾರ. ಅವರ ಶಕ್ತಿ ಅನುಕ್ರಮವಾಗಿ ಹೆಚ್ಚು. ತಪೋಲೋಕದ ನಿವಾಸಿಗಳಿಗೆ ಕೆಳಗಿನ ಲೋಕಗಳಲ್ಲಿ ಪುನರ್ಜನ್ಮವಿಲ್ಲ. ಸತ್ಯಲೋಕದ ನಾಲ್ಕು ಸಮೂಹಗಳು ನಾಲ್ಕು ಹಂತಗಳಲ್ಲಿ ಕ್ರಮವಾಗಿ ಆನಂದವನ್ನು ಅನುಭವಿಸುತ್ತಾರೆ: ಸವಿತರ್ಕ, ಸವಿಚಾರ ಆನಂದ ಮಾತ್ರ, ಅಸ್ಮಿತಾ ಮಾತ್ರ ಧ್ಯಾನ.

ಜೈನರಲ್ಲಿ ಜಗತ್ ಕಲ್ಪನೆ : ಜಗತ್ತು ಶಾಶ್ವತ, ಅನಾದಿ, ಅನಂತ. ಆದ್ದರಿಂದ ಸೃಷ್ಟಿ ವಿಚಾರವೇ ಇದರಲ್ಲಿ ಬರದು. ಪ್ರಕೃತಿಯ ಗುಣಕ್ಕೆ ಅನುಗುಣವಾಗಿ ರೂಪುಗೊಂಡಿರುವುದೇ ಜಗತ್ತು. ಜೀವ, ಅಜೀವ, ಕಾಲ, ಆಕಾಶ, ಧರ್ಮ, ಅಧರ್ಮಗಳೆಂಬ ಆರು ದ್ರವ್ಯಗಳು ಅವಿನಾಶಿ. ಇವು ರೂಪಾಂತರ ಹೊಂದುತ್ತವೆ. ಇದು ಇವುಗಳ ಸ್ವಭಾವ; ಅಂತೆಯೇ ಉತ್ಪತ್ತಿ, ಸ್ಥಿತಿ, ವಿನಾಶ ಎಂಬ ಅವಸ್ಥೆಗಳು ಒದಗುತ್ತವೆ. ವಿಶ್ವದಲ್ಲಿ ಲೋಕಾಕಾಶ, ಅಲೋಕಾಕಾಶ ಎಂದು ಎರಡು ಭಾಗವಿದೆ. ಜೀವ ಲೋಕಾಕಾಶವನ್ನು ಬಿಟ್ಟು ಹೋಗಲಾರದು. ಪ್ರಪಂಚದ ಇರುವಿಕೆಗೆ ಅಗತ್ಯವಾದ ಆರು ದ್ರವ್ಯಗಳು ಇರುವುದು ಲೋಕಾಕಾಶದಲ್ಲಿಯೇ. ಅದಕ್ಕೆ ಮುಂದೆ ಅಲೋಕಾಕಾಶ; ಅದು ಶುದ್ಧ ಶೂನ್ಯ. ಲೋಕಗಳು ಒಂದರ ಮೇಲೊಂದು ಇವೆ. ಲೋಕಗಳ ಕೆಳಭಾಗ ಬೆತ್ತದ ಕುರ್ಚಿಯಂತಿದೆ. ಮಧ್ಯಭಾಗ ಚಪ್ಪಟೆಯಾಗಿದೆ. ಇದರ ಮೇಲೆ ಮೃದಂಗವನ್ನು ನೆಟ್ಟಗೆ ಇರಿಸಿದಂತಿದೆ. ಇದು ಹೆಂಗಸೊಬ್ಬಳು ನಡುವಿನ ಮೇಲೆ ಕೈಯಿಟ್ಟುಕೊಂಡಂತೆ ಕಾಣುತ್ತದೆ. ಆಕಾಶದ ಮಧ್ಯೆ ಘನೋದಧಿ, ಘನವಾತ ಮತ್ತು ತನುವಾತಗಳಿವೆ. ಲೋಕಗಳ ಮಧ್ಯೆ ಕೆಳಗಿನಿಂದ ಮೇಲಕ್ಕೆ ತ್ರಸನಾಳ; ಇಲ್ಲಿ ಓಡಾಡುವ ಜೀವಿಗಳಿವೆ. ಉಳಿದ ಭಾಗದಲ್ಲಿ ಸ್ಥಾವಿರ.

ಮಧ್ಯಭಾಗದಲ್ಲಿ ಪೃಥ್ವಿ. ಇದರ ಮೇಲಿನ ಮಹಾಮೇರುವಿನ ತುದಿಯಿಂದ ಮೇಲಕ್ಕೆ ಮೋಕ್ಷದವರೆಗೆ ಮೇಲಿನ (ಊರ್ಧ್ವ) ಲೋಕಗಳು. ಏಳು ಕೆಳಗಿನ (ಅಧೋ)ಲೋಕಗಳು ಅಥವಾ ನರಕಗಳು. ಕೆಳಗಿನಿಂದ ಮೇಲಕ್ಕೆ ನರಕಗಳು : ಮಹಾತಮಃಪ್ರಭಾ, ತಮಃಪ್ರಭಾ, ಧೂಮಪ್ರಭಾ, ಪಂಕಪ್ರಭಾ, ವಾಲುಕಾಪ್ರಭಾ, ಶರ್ಕರಾಪ್ರಭಾ ಮತ್ತು ರತ್ನಪ್ರಭಾ. ಉಮಾಸ್ವಾತಿ ಇನ್ನೊಂದು ಗುಂಪನ್ನು ಹೆಸರಿಸುತ್ತಾನೆ : ಮಾಧವೀ, ಮಾಧವ್ಯಾ, ಅರಿಷ್ಟಾ, ಅಂಜನಾ, ಶೈಲಾ, ವಂಶಾ, ಧಮಾ. ಕೆಳಗಿನದರಲ್ಲಿ ಐದು, ಮೇಲಿನದರಲ್ಲಿ ಮೂರು ದಶಲಕ್ಷ ನರಕಗಳಿವೆ. ಇಲ್ಲಿನ ನಿವಾಸಿ-ನಾರಕಿಗಳಿಗೆ ಅವಧಿಯಿದೆ; ಹತ್ತುಸಾವಿರದಿಂದ ಮೂವತ್ತೂರು ಸಮುದ್ರವರ್ಷಗಳು; ಅನಂತರ ಇತರ ಜೀವಲೋಕಗಳಲ್ಲಿ ಹುಟ್ಟು. ನರಕಕ್ಕೂ ನರಲೋಕಕ್ಕೂ ಮಧ್ಯೆ ನಾಗಲೋಕ ಅಥವಾ ಭವನಲೋಕ; ಇದು ಭವನಾವಾಸಿ ದೇವತೆಗಳ ಆವಾಸಸ್ಥಾನ. ಇವುಗಳ ಮೇಲೆ ಪೃಥಿವೀ. ಅನೇಕ ಖಂಡಗಳಿವೆ. ಅಸಂಖ್ಯಾತ ದ್ವೀಪಗಳಿವೆ. ಇವುಗಳು ಸಮಾನಕೇಂದ್ರ ವೃತ್ತಗಳಂತೆ ಒಂದರ ಸುತ್ತ ಒಂದು ಇವೆ. ಸಾಗರಗಳು ಖಂಡಗಳನ್ನು ಬೇರ್ಪಡಿಸುತ್ತವೆ. ಪೃಥಿವಿಯ ಮಧ್ಯೆ ಲಕ್ಷಯೋಜನ ಎತ್ತರವಾದ ಮಹಾಮೇರುಪರ್ವತ ನಿಂತಿದೆ. ಮೇರುವಿನಿಂದ 790 ಮಹಾಯೋಜನದಲ್ಲಿ ತಾರಾಮಂಡಲ; ಜ್ಯೋತಿರ್ಲೋಕ 110 ಯೋಜನ ದಪ್ಪವಾಗಿದೆ. ಮೇರುವಿನ ಸುತ್ತ ಸೂರ್ಯಚಂದ್ರರು, ನಕ್ಷತ್ರಗಳು ಜ್ಯೋತಿಷ್ಯ ದೇವತೆಗಳು ಸುತ್ತುತ್ತಾರೆ. ಅದರ ಮೇಲೆ ಸ್ವರ್ಗಲೋಕಗಳು. ಒಂದರ ಮೇಲೊಂದು ಮೂರು ಗುಂಪುಗಳಲ್ಲಿವೆ. ಇವನ್ನು ವಿಮಾನ ಎನ್ನುವರು. 1 ಹನ್ನೆರೆಡು ಕಲ್ಪಗಳು : ಸೌಧರ್ಮ, ಐಶಾನ, ಸನತ್‌ಕುಮಾರ, ಮಾಹೇಂದ್ರ, ಬ್ರಹ್ಮಲೋಕ, ಲಾಂತಕ, ಮಹಾಶುಕ್ರ, ಸಹಸ್ರಾರ, ಆನತ, ಪ್ರಾನತ, ಆರಣ, ಅಚ್ಯುತ (ದಿಗಂಬರರು-ಲಾಂತಕಕ್ಕೆ ಮೊದಲು ಬ್ರಹ್ಮೋತ್ತರವನ್ನೂ ಅದರ ಅನಂತರ ಕಪಿಷ್ಠ ಮತ್ತು ಶುಕ್ರವನ್ನೂ ಮಹಾಶುಕ್ರದ ಅನಂತರ ಶತಾರವನ್ನೂ ಸೇರಿಸುತ್ತಾರೆ). 2 ಒಂಬತ್ತು ಗ್ರೈವೇಯಕಗಳು-ಜಗತ್ತನ್ನು ಪುರುಷನನ್ನಾಗಿ ಭಾವಿಸಿದಾಗ ಕುತ್ತಿಗೆಯ ಸ್ಥಾನಕ್ಕೆ ಬರುವಂಥವು. ಆದ್ದರಿಂದ ಈ ಹೆಸರು. 3 ಐದು ಅನುತ್ತರ ವಿಮಾನಗಳು : ವಿಜಯ, ವೈಜಯಂತ, ಜಯಂತ, ಅಪರಾಜಿತ, ಸರ್ವಾರ್ಥಸಿದ್ಧಿ. ಈ ವಿಮಾನಗಳ ದೇವತೆಗಳಿಗೆ ಎರಡು ಬಾರಿಗಿಂತ ಹೆಚ್ಚಾಗಿ ಪುನರ್ಜನ್ಮವಿಲ್ಲ. ಸರ್ವಾರ್ಥ ಸಿದ್ಧಿಯ ಮೇಲೆ ಜಗತ್ತಿನ ತುದಿಯಲ್ಲಿ ಈಷತ್ ಪ್ರಾಗ್ಭಾರ ಎಂಬ ಪ್ರದೇಶವಿದೆ. ಅಲ್ಲಿ ಸಿದ್ಧಶಿಲೆಯಿದೆ. ಈ ಪ್ರದೇಶದಲ್ಲಿ ಜೀವಗಳು ನಿರ್ವಾಣಸ್ಥಿತಿಯಲ್ಲಿರುತ್ತಾರೆ. (ಆರ್.ಎಸ್.ಎಸ್.)

**ಜಗದ್ದಳ ಸೋಮನಾಥ :** ಸು. 1175. ಕರ್ಣಾಟಕ ಕಲ್ಯಾಣಕಾರಕ ಎಂಬ ವೈದ್ಯಗ್ರಂಥವನ್ನು ಬರೆದ ಜೈನಕವಿ. ಈತನಿಗೆ ವಿಚಿತ್ರಕವಿಯೆಂಬ ಬಿರುದು ಇದ್ದಂತೆ ತಿಳಿಯುತ್ತದೆ. ತನ್ನ ಗ್ರಂಥವನ್ನು ಸುಮನೋಬಾಣಕವಿಯೂ ಅಭಯಚಂದ್ರ ಸಿದ್ಧಾಂತಿಯೂ ತಿದ್ದಿದಂತೆ ಹೇಳಿರುವುದರಿಂದ ಈತ ಸುಮನೋಬಾಣನ ಕಾಲದವನೆಂದು ತಿಳಿಯುತ್ತದೆ; ಕೀರ್ತಿವರ್ಮನ (ಸು. 1100) ಗೋವೈದ್ಯವನ್ನು ಬಿಟ್ಟರೆ ಇದೇ ಕನ್ನಡ ವೈದ್ಯಗ್ರಂಥಗಳಲ್ಲಿ ಪುರಾತನವಾದುದು.

ಸೋಮನಾಥ ತನ್ನ ಗ್ರಂಥದ ಪ್ರಾರಂಭದಲ್ಲಿ ಚಂದ್ರನಾಥನನ್ನು ಸ್ತುತಿಸಿದ್ದಾನೆ. ತರುವಾಯ ಸಿದ್ಧರು, ಸರಸ್ವತಿ, ಮಾಧವೇಂದು, ಸೈದ್ಧಾಂತಿಕಚಕ್ರವರ್ತಿ ಅಭಯಚಂದ್ರ, ಕನಕಚಂದ್ರ, ಪಂಡಿತದೇವ ಮೊದಲಾದವರನ್ನು ಸ್ಮರಿಸಿದ್ದಾನೆ. ಈ ಗ್ರಂಥ ಕಂದ ಮತ್ತು ವೃತ್ತಗಳಲ್ಲಿ ರಚಿತವಾಗಿದೆ. ಇದರಲ್ಲಿ ಒಟ್ಟು ಹದಿಮೂರು ಪ್ರಕರಣಗಳಿರುವಂತೆ ತೋರುತ್ತದೆ. ಸಂಸ್ಕೃತದಲ್ಲಿ ಪೂಜ್ಯವಾದ ಮುನಿಗಳು ಬರೆದಿರುವ ಕಲ್ಯಾಣಕಾರಕವನ್ನು ಆಧರಿಸಿ ತನ್ನ ಗ್ರಂಥವನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ; ಜೊತೆಗೆ ಚರಕ, ವಾಗ್ಭಟ, ಸಿದ್ಧಸಾರ ಮುಂತಾದವರ ಗ್ರಂಥಗಳಿಂದಲೂ ವಿಷಯಗಳನ್ನು ಆರಿಸಿ ಮದ್ಯಮಾಂಸವರ್ಜಿತವಾಗಿ, ತನ್ನ ಕಲ್ಯಾಣಕಾರಕವನ್ನು ಬರೆದಿರುವುದಾಗಿ ತಿಳಿಸಿದ್ದಾನೆ.

ಎಲ್ಲ ಕಲೆಗಳಲ್ಲಿಯೂ ಲೋಕೋಪಕಾರಿಯಾದ ವೈದ್ಯಕಲೆಯೇ ಮುಖ್ಯವಾದುದು ಎಂದು ಕವಿಯ ಅಭಿಮತ.

ಆವಾವ ಕಲಾವಿದ್ಯೆಗ
ಳೆಳೆವುವೊ ಲೋಕೋಪಕಾರಿ ವೈದ್ಯಮೆ ಸಾಲ್ಗುಂ
ಭಾವಿಸೆ ಷಡ್ದ್ರವ್ಯದೊಳಂ
ಜೀವದ್ರವ್ಯಮೆ ಜಗಕ್ಕೆ ದೈವಮೆಂಬರ್॥

ಎಂದು ಹೇಳಿ, ವೈದ್ಯನನ್ನು ಎಂಥವರಿಗೆ ಮಾಡಬಾರದು ಎಂಬುದನ್ನು ಈ ಮುಂದಿನ ಪದ್ಯದಲ್ಲಿ ವಿವರಿಸಿದ್ದಾನೆ :

ಕ್ರೂರಾಳಾಪಂಗೆ ದುರಾ
ಚಾರಿಗೆ ಮಾತ್ಸರ್ಯಸಂಯುತಂಗಮಹಂ।
ಕಾರಿಗೆ ಮಿಥ್ಯಾದೃಷ್ಟಿಗೆ
ಪಾರಕೆಯ್ವವಂಗೆ ಮಾಡಲಾಗದು ಮರ್ದಂ॥

ಕಲ್ಯಾಣಕಾರಕದ ಪ್ರತಿಪ್ರಕರಣದಲ್ಲೂ ವ್ಯಾಧಿಗಳ ವಿವರಗಳನ್ನು ನೀಡಲಾಗಿದೆ. ಪೀಠಿಕಾಪ್ರಕರಣವಾದ ಮೇಲೆ ದ್ವಿತೀಯ ಪರಿಭಾಷಾಪ್ರಕರಣದಲ್ಲಿ-ಅಸಾಧ್ಯ ಲಕ್ಷಣಂ, ದೇಶವಿಭಾಗಂ, ಋತುಗಳ್, ವಯಸ್ಸು ಗಿಡಮೂಲಿಕೆ ಸಂಗ್ರಹ ಕಾಲಂ, ಧಾತುಗಳ್, ಆಹಾರಬಲಂ, ವರ್ಜಕ್ರಿಯೆಯವರ್, ದಶವಾಯುಗಳ್, ದೂತಲಕ್ಷಣಂ, ಶುಭಧೂತಲಕ್ಷಣಂ, ಸ್ವಪ್ನಂ, ಪ್ರಕೃತಿಗಳ್, ನಿಮಿತ್ತಂ, ಸೂರ್ಯಚಂದ್ರನಾಡಿ, ಅರಿಷ್ಟ, ಜ್ಯೋತಿಷಂ – ಈ ವಿಷಯಗಳಿವೆ. ಮೂರನೆಯ ಷೋಡಶಜ್ವರನಿದಾನ ಚಿಕಿತ್ಸಾನಿರೂಪಣ ಪ್ರಕರಣದಲ್ಲಿ-ಭೂತಜ್ವರಲಕ್ಷಣ, ಕಾಮಜ್ವರಂ, ವಾತಜ್ವರಲಕ್ಷಣ, ವಾತಪಿತ್ತಶ್ಲೇಷ್ಮ ಜ್ವರಕ್ಕೆ ಲಕ್ಷಣಂ, ವಾತಶ್ಲೇಷ್ಮಜ್ವರಕ್ಕೆ, ತ್ರಿದೋಷಜ್ವರಂ, ಸನ್ನಿಪಾತಜ್ವರಂ, ಅಭಿಚಾರ ಕೃತ್ರಿಮ ಆಮಜ್ವರಲಕ್ಷಣಂ, ಶೀತಜ್ವರಂ, ಆಹಿಕಜ್ವರಂ, ವ್ಯಾಧಿ ಭೇದ, ಜ್ವರ ಪರಿಪಾಕಂ, ಜ್ವರಾದಿ ಪಥ್ಯಕ್ರಮ, ಗಂಜಿಯ ಗುಣಂ, ಕಷಾಯ, ಪಿತ್ತಜ್ವರಕ್ಕೆ ಕಷಾಯ, ಶ್ಲೇಷ್ಮಜ್ವರ ಕಷಾಯಂ, ಪಿತ್ತಜ್ವರಕ್ಕೆ ಕಲ್ಕಂ, ಸನ್ನಿಪಾತಜ್ವರಕ್ಕೆ, ಮದನಜ್ವರಕ್ಕೆ, ಎದೆನೋವಿಗೆ, ಪಿತ್ತವಾತಾಜೀರ್ಣಜ್ವರಕ್ಕೆ, ಶೀತಜ್ವರಕ್ಕೆ, ಎಲ್ಲಾ ಜ್ವರಂಗಳ್ಗೆ, ಭೂತಜ್ವರಕ್ಕೆ, ಧೂಪಂ, ಸಾಮಾನ್ಯಮಲಹರಣಕ್ಕೆ-ಎಂಬ ಸಂಗತಿಗಳಿವೆ. ನಾಲ್ಕನೆಯ ಅತಿಸಾರ ಗ್ರಹಣೀ ನಿದಾನ ಚಿಕಿತ್ಸನಿರೂಪಣ ಪ್ರಕರಣದಲ್ಲಿ ವಾತಾತಿಸಾರ ಲಕ್ಷಣಂ, ಪಿತ್ತಾತಿಸಾರಲಕ್ಷಣಂ, ಶ್ಲೇಷ್ಮಾತಿಸಾರಲಕ್ಷಣಂ, ವಾಮಾತಿಸಾರಲಕ್ಷಣಂ, ಅಸಾಧ್ಯಾತಿಸಾರಂ, ಅಪಕ್ವಾತಿಸಾರಂ, ಪಿತ್ತಾತಿಸಾರವೂ ಐದನೆಯ ರಕ್ತಪಿತ್ತ ನಿದಾನ ಚಿಕಿತ್ಸಾ ನಿರೂಪಣ ಪ್ರಕರಣದಲ್ಲಿ ರಕ್ತಪಿತ್ತನಿದಾನ ರಕ್ತಪಿತ್ತದಲ್ಲಿ ವಿರೇಚನಂ, ಕಿಜುವಿಲಾದಿ, ಪಿರಿಯೇಲಾದಿಗಳೂ ಆರನೆಯ ಪ್ರಕರಣದಲ್ಲಿ ಕ್ಷಯನಿದಾನ ಚಿಕಿತ್ಸಾ ನಿರೂಪಣವೂ, ಏಳನೆಯ ಉದರರೋಗ ನಿದಾನ ಚಿಕಿತ್ಸಾನಿರೂಪಣ ಪ್ರಕರಣದಲ್ಲಿ ವಾತೋದರಂ, ಪಿತ್ತೋದರಂ, ಕಫೋದರಂ, ಸನ್ನಿಪಾತೋದರಂ, ಜಲೋದರಂ, ನಾರಾಚಘೃತಂ ಸೆರೆಯ ಲಕ್ಷಣಂ, ಉದರಕುಷ್ಠಗುಲ್ಮಕ್ಕೆ, ಶ್ವಾಸಕ್ಕೆ-ಎಂಬ ವಿಷಯಗಳೂ ಎಂಟನೆಯ ಗುಲ್ಮ ನಿದಾನ ಚಿಕಿತ್ಸಾನಿರೂಪಣ ಪ್ರಕರಣದಲ್ಲಿ ವಾತಗುಲ್ಮಂ, ಪಿತ್ತಗುಲ್ಮಂ, ಶ್ಲೇಷ್ಮಗುಲ್ಮಂ, ರಕ್ತಗುಲ್ಮಂಗಳೂ ಒಂಬತ್ತನೆಯದರಲ್ಲಿ ಅಶ್ಮರೀಪ್ರಕರಣವೂ, ಹತ್ತನೆಯದರಲ್ಲಿ ಕಾಮಾಲೆಯ ನಿದಾನ ಚಿಕಿತ್ಸಾಪ್ರಯೋಗವೂ, ಹನ್ನೊಂದನೆಯದರಲ್ಲಿ ಮೂಲವ್ಯಾಧಿನಿದಾನ ಚಿಕಿತ್ಸಾ ಪ್ರಕರಣವೂ ಇನ್ನುಳಿದ ಪ್ರಕರಣಗಳಲ್ಲಿ ಶ್ವಾಸ ಖಾಸ ಪ್ರಯೋಗಂ, ಸರ್ವವಿಷಕ್ಕೆ, ನಯನರೋಗ ನಿದಾನ ಚಿಕಿತ್ಸಾಪ್ರಕರಣಂ, ಭಗಂದರ ಪ್ರಯೋಗಂ, ವಿಷಪ್ರಯೋಗಂ ಮೊದಲಾದ ವಿಷಯಗಳೂ ನಿರೂಪಿಸಲ್ಪಟ್ಟಿವೆ.

ಕಲ್ಯಾಣಕಾರಕದಲ್ಲಿ ವ್ಯಾಧಿಗಳಿಗೆ ನಿರೂಪಿಸಿರುವ ನಿದಾನಕ್ರಮ ಸುಲಭವೂ ಪರಿಣಾಮ ಕಾರಿಯೂ ಆಗಿರುವಂತೆ ತೋರುತ್ತದೆ. ಉದಾಹರಣೆಗೆ ಜ್ವರೋತ್ಪತ್ತಿ ಮತ್ತು ಅದರ ಚಿಕಿತ್ಸಾವಿಧಾನಗಳನ್ನು ನೋಡಬಹುದು.

ಜ್ವರೋತ್ಪತ್ತಿಗೆ : ಮಲಸಂಗ್ರಹದಿಂದಾ
ನಲನಟಿವಿಂದಾಮಚಲನೆಯಿಂ ಜ್ವರಮೊಗೆಗುಂ।
ಕೆಲರಾ ತ್ರಿಪುರಧ್ವಂಸಿಯ
ಲಲಾಟಲೋಚನದಿಮೊಗೆದುದೆಂಬರ್
ಜ್ವರಮಂ॥

ಚಿಕಿತ್ಸೆ : ಜ್ವರದಾದಿಯೊಳುಪವಾಸಂ
ಜ್ವರಮಧ್ಯದಲ್ಲಿ ಗಂಜಿ ಪೇಟ್ವಿ ಕಷಾಯಂ।
ಜ್ವರಪಾಕದೊಳಸ್ತಮಿತ
ಜ್ವರದೊಳ್ ಮಲಹರಣಮಿವಿನಿತಿವಾರೋಗ್ಯಕರಂ॥
ಪೊಸಚಿಕ್ಕಣಿಕೆಯ ಪುಲ್ಲಂ
ಪೊಸಬೆಳ್ಳುಳ್ಳಿಯ ರಸಂಗಳಂ ತಳದಿಂದಂ।
ಪೊಸದಾಗಳೆ ನಸ್ಯಂಗೆಯೆ
ಬಸವಲ್ಲೆನಿಪಾ ಜ್ವರಂಗಳಂ ಮುಸುಳಿಸುಗುಂ॥

ಕಲ್ಯಾಣಕಾರಕ ಗ್ರಂಥ ಇನ್ನೂ ಪ್ರಕಟವಾಗಿಲ್ಲ. ಉಪಲಬ್ಧವಿರುವ ಕೆಲವು ಹಸ್ತಪ್ರತಿಗಳಲ್ಲಿ ಏಕರೂಪತೆಯಿದ್ದಂತೆ ಕಂಡುಬರುವುದಿಲ್ಲ. ಒಟ್ಟಿನಲ್ಲಿ ಇದು ಒಂದು ಅತ್ಯಂತ ಉಪಯುಕ್ತ ವೈದ್ಯಗ್ರಂಥ. (ಎನ್.ಬಿ.)

**ಜಗನ್ನಾಥ :** ಭಾರತದ ಪುಣ್ಯಕ್ಷೇತ್ರಗಳಲ್ಲಿ ಒಂದು. ಕಾಶಿ, ರಾಮೇಶ್ವರಗಳಂತೆ ಹಿಂದೂಗಳಿಗೆ ಪವಿತ್ರ ಯಾತ್ರಾಸ್ಥಳ. ಇದು ಒರಿಸ್ಸದ ಹಿಂದಿನ ರಾಜಧಾನಿಯಾಗಿದ್ದ ಪುರಿಯಲ್ಲಿದೆ. ಇದರ ಸುತ್ತಮುತ್ತ ಸುಮಾರು 32 ಕಿಮೀ ಪ್ರದೇಶವೆಲ್ಲ ಪವಿತ್ರವಾದುದೆಂಬ ನಂಬುಗೆ ಇದೆ. ಇದು ಮದ್ರಾಸ್, ಕಲ್ಕತ್ತ ರೈಲುದಾರಿಯಲ್ಲಿ ಮದ್ರಾಸಿನಿಂದ ಈಶಾನ್ಯಕ್ಕೆ ಬಂಗಾಲ ಕೊಲ್ಲಿಯ ತೀರದಲ್ಲಿ ಸುಮಾರು 1,235 ಕಿಮೀ ದೂರದಲ್ಲಿದೆ.

ಊರಿಗೆ ತನ್ನ ಹೆಸರನ್ನಿತ್ತ ಜಗನ್ನಾಥ ದೇವಾಲಯವನ್ನು ಪ್ರಶ. 12ನೆಯ ಶತಮಾನದಲ್ಲಿ ಆ ಪ್ರದೇಶವನ್ನಾಳುತ್ತಿದ್ದ ಪೂರ್ವ ಗಂಗವಂಶದ ಅನಂತವರ್ಮ (1078–1150) ಚೋಡಗಂಗರಾಜ ಕಟ್ಟಿಸಿದ. ಪ್ರಾಚೀನ ಕರ್ನಾಟಕದಿಂದ ಅಲ್ಲಿ ರಾಜ್ಯ ಕಟ್ಟಿದ ಕನ್ನಡ ರಾಜವಂಶವಿದೆಂದು ಇತಿಹಾಸಕಾರರ ಅಭಿಪ್ರಾಯ. 60.385 ಚ. ಮೀ ವಿಸ್ತಾರವುಳ್ಳ ಈ ದೇಗುಲದಲ್ಲಿ ಗರ್ಭಗುಡಿ, ನವರಂಗ ಮತ್ತು ಮೊಗಸಾಲೆ ಹೀಗೆ ಮೂರು ಭಾಗಗಳಿವೆ. ಗರ್ಭಗುಡಿಯ ಮೇಲಿನ ಶಿಖರದ ಎತ್ತರ 58.5 ಮೀ. ಈ ಮಂದಿರದಲ್ಲಿ ಶ್ರೀಕೃಷ್ಣನ ವಿಗ್ರಹವಲ್ಲದೆ ಬಲಭದ್ರ ಮತ್ತು ಸುಭದ್ರೆಯರ ವಿಗ್ರಹಗಳೂ ಅಕ್ಕಪಕ್ಕಗಳಲ್ಲಿ ಒಂದು ನೂರ ಇಪ್ಪತ್ತು ಇತರ ದೇವಾಲಯಗಳೂ ಇವೆ.

ಗಿರಿಜನರಿಂದ ಪೂಜೆಗೊಳ್ಳುತ್ತಿದ್ದ ಜಗನ್ನಾಥ ಇಂದ್ರದ್ಯುಮ್ನನೆಂಬ ರಾಜನಿಗೆ ಕನಸಿನಲ್ಲಿ ಕಾಣಿಸಿಕೊಂಡು ಈಗಿರುವ ಸ್ಥಳದಲ್ಲಿ ತನ್ನನ್ನು ಪ್ರತಿಷ್ಠಾಪಿಸಬೇಕೆಂದು ಅನುಗ್ರಹಿಸಿದನೆಂದು ಒಂದು ಐತಿಹ್ಯವಿದ್ದರೆ, ಮತ್ತೊಂದು ಈ ರಾಜ ದೇವತೆಗಳ ಬಡಗಿ ವಿಶ್ವಕರ್ಮನಿಂದಲೇ ಈ ಮೂರ್ತಿಯನ್ನು ಮಾಡಿಸಿ ಪ್ರತಿಷ್ಠಾಪಿಸಿದನೆಂದೂ ಬ್ರಹ್ಮನೇ ಜಗನ್ನಾಥನಿಗೆ ಪ್ರಪ್ರಥಮವಾಗಿ ಅರ್ಚನಾಕೈಂಕರ್ಯವನ್ನೆಸಗಿದನೆಂದೂ ಸೂಚಿಸುತ್ತದೆ. ವಿಗ್ರಹ ಮಾತ್ರ ಬುಡದಲ್ಲಿ ದಪ್ಪನಾಗಿದ್ದು ಮೇಲಕ್ಕೆ ಹೋದಂತೆ ಚೂಪಾಗಿರುವ ಮರದ ಮೂರ್ತಿಯಾಗಿದೆ. ಒರಟು ಒರಟಾಗಿ ಕೆತ್ತಿರುವುದನ್ನು ನೋಡಿದರೆ ಪ್ರಾಯಶಃ ಇದು ಪೂರ್ವದಲ್ಲಿ ಗಿರಿಜನ ಬುಡಕಟ್ಟೊಂದರ ಆರಾಧ್ಯದೈವವಾಗಿದ್ದಂತೆ ತೋರುತ್ತದೆ. ಅಭಿಷೇಕ ಅಭ್ಯಂಜನಾದಿಗಳಿಂದ ಕಪ್ಪಾಗಿರುವ ಈ ಮೂರ್ತಿಯನ್ನು ದೂರದಿಂದ ನೋಡಿದಾಗ ಕರಿಯ ಕಲ್ಲಿನಿಂದ ಮಾಡಿದುದೆಂದೂ ಭ್ರಮಿಸುವ ಸಾಧ್ಯತೆಯಿದೆ. ನಿತ್ಯಚಂಚಲೆಯಾದ ಹೆಂಡತಿ ಲಕ್ಷ್ಮಿ, ಮೂರು ಲೋಕವನ್ನೂ ಸೂರೆಗೊಳ್ಳುವ ಮತ್ತು ಹಿಡಿತಕ್ಕೆ ದಕ್ಕದ (ದುರ್ನಿವಾರ) ಮಗ ಪ್ರದ್ಯುಮ್ನ, ಹಾವಿನ ಹಾಸಿಗೆ, ಅದರ ವೈರಿ ಗರುಡ ವಾಹನ, ಅಲ್ಲೋಲಕಲ್ಲೋಲವಾದ ಕಡಲು ವಸತಿ ಹೀಗೆ ತನ್ನ ಮನೆವಾರ್ತೆಯನ್ನು ಪ್ರತಿನಿತ್ಯವೂ ನೆನೆದು ನೆನೆದು ಪೀಕಲಾಟಕ್ಕೆ ಸಿಕ್ಕಿ ಮರವಾಗಿ ಬಿಟ್ಟ ಮುರಾರಿ ಎಂದು ಹೇಳುವ ಸಂಸ್ಕೃತ ಶ್ಲೋಕವೊಂದುಂಟು (ಸ್ಮಾರಂ ಸ್ಮಾರಂ ಸ್ವಗೃಹಚರಿತಂ ದಾರುಭೂತೋ ಮುರಾರಿಃ).

ಜಗನ್ನಾಥನ ವಿಗ್ರಹದೊಳಗಡೆ ಮೂಳೆಯ ಕಿರುಪೆಟ್ಟಿಗೆಯೊಂದನ್ನು ಇಟ್ಟಿರುತ್ತಾರೆ. ಇದು ಶ್ರೀಕೃಷ್ಣನ ಅಸ್ಥಿ ಎಂಬ ಐತಿಹ್ಯವಿದೆ. ಈಗ ಪೆಟ್ಟಿಗೆಯನ್ನು ಹನ್ನೆರಡು ವರ್ಷಕ್ಕೊಮ್ಮೆ ವಿಗ್ರಹದ ಒಳಗಡೆ ಇಡುವ ಪರಿಪಾಠವಿದೆ. ಈ ಆಧಾರದ ಮೇಲೆ ಇದು ಹಿಂದೆ ಬೌದ್ಧಸ್ತೂಪವೊಂದಿದ್ದ ಸ್ಥಳವಿರಬಹುದೆಂದೂ, ಇಲ್ಲಿರುವ ತ್ರಿಮೂರ್ತಿಗಳು (ಕೃಷ್ಣ ಬಲಭದ್ರ, ಸುಭದ್ರೆ) ಬೌದ್ಧ ತ್ರಿರತ್ನಗಳ (ಬುದ್ಧ, ಧಮ್ಮ, ಸಂಘ) ಪ್ರತೀಕವೆಂದೂ ಹೇಳುವುದುಂಟು. ಭಾರತದ ಮತ್ತಾವ ಹಿಂದೂ ದೇವಾಲಯದಲ್ಲೂ ಈ ಸಂಪ್ರದಾಯವಿಲ್ಲ. ಸ್ಪೃಶ್ಯಾಸ್ಪೃಶ್ಯ ಭಾವನೆಗೆ ಇಂತಿಷ್ಟೂ ಈ ಕ್ಷೇತ್ರದಲ್ಲಿ ಎಡೆಯಿಲ್ಲದಿರುವುದು ಈ ವಾದಕ್ಕೆ ಪುಷ್ಟಿ ಕೊಡುತ್ತದೆ.

ಪುರಿಯಲ್ಲಿ ಆಷಾಢ ಶುಕ್ಲ ಬಿದಿಗೆಯ ದಿನ ಮಹಾಮೇಳವೊಂದು ಸೇರುತ್ತದೆ. ಭಾರತದ ನಾನಾ ಕಡೆಗಳಿಂದ ಲಕ್ಷಾಂತರ ಯಾತ್ರಿಕರು ಬರುತ್ತಾರೆ. ಮೂರು ನಾಲ್ಕು ಸಾವಿರ ಬ್ರಾಹ್ಮಣರು ಪೂಜಾಕಾರ್ಯದಲ್ಲಿ ನಿರತರಾಗಿರುತ್ತಾರೆ. ಸ್ನಾನ ಯಾತ್ರೆ, ಮರಳದಂಡೆಯ ಮೇಲೆ 3 ಕಿಮೀಗಳ ದೂರ ಜಗನ್ನಾಥರಥ, ಬಲಭದ್ರರಥ ಮತ್ತು ಸುಭದ್ರಾರಥಗಳನ್ನು ಮೆರವಣಿಗೆಯಲ್ಲಿ ಎಳೆದೊಯ್ಯುವುದು–ಮಹಾಸಾಹಸದ ಅಂತೆಯೇ ವಿಜೃಂಭಣೆಯ ದೃಶ್ಯ. ಪುರಿಯ ಸಮೀಪದಲ್ಲಿರುವ ಖುರ್ದಾಪಟ್ಟಣದ ರಾಜರು ಪರಂಪರೆಯಿಂದ (1590) ಇಲ್ಲಿಯ ಪೂಜೆಗೆ ಹಕ್ಕುದಾರರು. ಪುರಿಯಲ್ಲಿ ಸ್ನಾನ ಮಾಡಿ ಕಡಲತೀರದ ಮಳಲ ಪ್ರಶಾಂತ ವಾತಾವರಣದಲ್ಲಿ ಕುಳಿತು ಜಗನ್ನಾಥನ ಧ್ಯಾನ ಮಾಡಿದರೆ ಸರ್ವಪಾಪವೂ ಕ್ಷಯಿಸಿ ಪುಣ್ಯಪ್ರಾಪ್ತಿಯಾಗುವುದೆಂದು ಭಕ್ತರ ನಂಬಿಕೆ. (ಪಿ.ಜಿ.ಪಿ.)

**ಜಗನ್ನಾಥದಾಸ :** 1728–1809. ಕನ್ನಡನಾಡಿನ ಹರಿದಾಸರಲ್ಲಿ ಪ್ರಮುಖ. ಆಧ್ಯಾತ್ಮಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದವ ಪುರಂದರದಾಸ, ವಿಜಯದಾಸ, ಗೋಪಾಲದಾಸ ಮತ್ತು ಜಗನ್ನಾಥದಾಸರನ್ನು ಒಟ್ಟಿಗೆ ದಾಸಚತುಷ್ಟಯರೆಂದು ನಿರ್ದೇಶಿಸುವ ಸಂಪ್ರದಾಯ ಉಂಟು. ಜಗನ್ನಾಥದಾಸರನ್ನು ತನ್ನ ಅಪರೋಕ್ಷ ಜ್ಞಾನದಿಂದ ರಂಗನೊಲಿದ ದಾಸ ಎಂದೂ, ರಂಗೋಲೆ ಹಾಕುವ ಕಲಾಪರಿಣತಿಯಿದ್ದುದರಿಂದ ರಂಗೋಲಿದಾಸ ಎಂದೂ ಕರೆಯಲಾಗುತ್ತಿತ್ತು.

ಈತ ಹುಟ್ಟಿದೂರು ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿಯಿಂದ ಹದಿನೈದು ಕಿಮೀ ದೂರದಲ್ಲಿರುವ ಬ್ಯಾಗವಟ್ಟಿ. ಈತ ಬಹುಕಾಲ ವಾಸವಾಗಿದ್ದುದು ಮಾನ್ವಿಯಲ್ಲಿ. ಈತನ ಮನೆಯೇ ಈಗ ಈತನ ಗುಡಿಯಾಗಿದೆ. ಮಾನ್ವಿ ತಾಲ್ಲೂಕಿನಲ್ಲೂ ಧಾರವಾಡ ಜಿಲ್ಲೆಯ ಹಾವೇರಿಯಲ್ಲೂ ಈತನಿಗೆ ಸೇರಿದ ಇನ್ನೊಂದು ಮನೆ ಮತ್ತು ಜಮೀನು ಇದೆ. ಈತ ಆ ಭಾಗಗಳಲ್ಲಿ ಸವಣೂರಿನ ಸತ್ಯಬೋಧ, ಮಾದನೂರಿನ ವಿಷ್ಣುತೀರ್ಥ ಮತ್ತು ರಿತ್ತಿಯ ಧೀರೇಂದ್ರತೀರ್ಥ ಇವರೊಂದಿಗೆ ಇರುತ್ತಿದ್ದ.

ಜಗನ್ನಾಥನ ಜೀವನಕಥೆಯೇ ಒಂದು ಪವಾಡದಂತಿದೆ. ಈತನ ಪೂರ್ವಾಶ್ರಮದ ಹೆಸರು ಶ್ರೀನಿವಾಸಾಚಾರ್ಯ. ಆಶುಕವಿತ್ವ ಶಕ್ತಿಯುಳ್ಳ ಈತ ಮಂತ್ರಾಲಯದ ಶ್ರೀವರದೇಂದ್ರ ತೀರ್ಥಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಮಾಡಿ ಶಾಸ್ತ್ರಪಾರಂಗತನಾದ. ಅನಂತರ ಆಚಾರ್ಯಪಟ್ಟವನ್ನೂ ಏರಿದ.

ಆ ಕಾಲದಲ್ಲಿ ಚೀಕಲಪರವಿ (ನೋಡಿ) ವಿಜಯದಾಸ ಹರಿದಾಸರಲ್ಲಿ ಹಿರಿಯನೆಂದೂ ಅಪರೋಕ್ಷ ಜ್ಞಾನಿಯೆಂದೂ ಪ್ರಸಿದ್ಧನಾಗಿದ್ದರೂ ಅವನ ವಿಚಾರದಲ್ಲಿ ಜಗನ್ನಾಥನಿಗೆ ತಾತ್ಸಾರ ಮತ್ತು ತಿರಸ್ಕಾರ. ವಿಜಯದಾಸನನ್ನು ಹಳಿದುದರ ಪರಿಣಾಮವಾಗಿ ಜಗನ್ನಾಥ ಬಹುಕಾಲ ಉದರವ್ಯಾಧಿಯಿಂದ ನರಳಿದ. ಅನಂತರ ಸ್ವಪ್ನದಲ್ಲಿ ಆದ ಶ್ರೀಹರಿಯ ಸೂಚನೆಯಂತೆ ವಿಜಯದಾಸನನ್ನು ಮೊರೆಹೊಕ್ಕ. ವಿಜಯದಾಸ ತನ್ನ ಶಿಷ್ಯ ಗೋಪಾಲದಾಸನಿಂದ ಜಗನ್ನಾಥದಾಸನ ಉದರ ರೋಗನಿವಾರಣೆ ಮಾಡಿಸಿದ. ಅಷ್ಟೇ ಅಲ್ಲದೆ ನಲವತ್ತು ವರ್ಷಗಳಷ್ಟು ಆಯಸ್ಸನ್ನು ಆತನಿಗೆ ಧಾರೆಯೆರೆಸಿದ. ಗೋಪಾಲದಾಸನ ಸೂಚನೆಯ ಮೇರೆಗೆ ಜಗನ್ನಾಥದಾಸ ಪಂಢರಪುರಕ್ಕೆ ಹೋಗಿ ಚಂದ್ರಭಾಗಾ ನದಿಯಲ್ಲಿ ಮಿಂದಾಗ ವಿಟ್ಠಲ ಎಂಬ ಅಂಕಿತವಿದ್ದ ಶಿಲೆ ದೈವದತ್ತವಾಗಿ ದೊರೆತು ಅಂದಿನಿಂದ ತನ್ನ ಪೂರ್ವಾಶ್ರಮದ ಹೆಸರನ್ನು ಕಿತ್ತುಹಾಕಿ ಜಗನ್ನಾಥದಾಸ ಎಂದು ಪ್ರಸಿದ್ಧನಾದ.

ಈ ಅಂಕಿತದಿಂದ ಜಗನ್ನಾಥದಾಸ ಅನೇಕ ಅಮೂಲ್ಯ ಕೃತಿಗಳನ್ನು ರಚಿಸಿದ್ದಾನೆ. ಈತನ ಕೃತಿಗಳಲ್ಲಿ ಅತ್ಯಂತ ಪ್ರಮುಖವೂ ಜನಪ್ರಿಯವೂ ಆದುದು ಶ್ರೀಹರಿಕಥಾಮೃತಸಾರ. ಇದು ಭಾಮಿನೀ ಷಟ್ಪದಿಯಲ್ಲಿದ್ದು, ಸಾವಿರಪದ್ಯಗಳ ಪ್ರಮೇಯ ಪುಂಜವಾದ ಮಹಾಗ್ರಂಥವೆನಿಸಿದೆ. ಅಲ್ಲದೆ ಈತ ಸಹಸ್ರಾರು ಸುವ್ವಾಲಿ, ಕೀರ್ತನೆ ಸುಳಾದಿಗಳನ್ನೂ ರಚಿಸಿದ್ದಾನೆ. ಈಗ ಸುಮಾರು 500 ಸುವ್ವಾಲಿಗಳೂ 200 ಸುಳಾದಿಗಳು ಉಪಲಬ್ಧವಿವೆ. ಈ ಕೃತಿಗಳಲ್ಲಿ ಈತನ ಪಾಂಡಿತ್ಯ ಚೆನ್ನಾಗಿ ವ್ಯಕ್ತವಾಗುತ್ತದೆ. ಒಂದು ಕಡೆ ಸಂಸ್ಕೃತಭೂಯಿಷ್ಠ ಶೈಲಿ, ಮತ್ತೊಂದು ಕಡೆ ಸರಳ ಸುಂದರ ಶೈಲಿ ಈ ಎರಡೂ ಈತನ ಕೃತಿಗಳಲ್ಲಿವೆ. ಅಪೂರ್ವ ಪದಬಂಧ, ನಿರರ್ಗಳ ಶೈಲಿಯ ಓಟ, ಅಸಾಧಾರಣ ಶಾಸ್ತ್ರಜ್ಞಾನ, ವಿಷಯವೈವಿಧ್ಯ, ಆಳವಾದ ಭಕ್ತಿ, ಅರ್ಥಗಾಂಭೀರ್ಯ, ಸಿದ್ಧಾಂತದ ಸಮರ್ಥ ಪ್ರತಿಪಾದನೆಗಳಿಂದ ಈತನ ಕೃತಿಗಳು ತುಂಬಿವೆ. ಕವಿಯ ಪ್ರತಿಭೆ ಅಭ್ಯಾಸ ಜ್ಞಾನ ಮೇಧಾಶಕ್ತಿಗಳನ್ನು ಇಲ್ಲಿ ಚೆನ್ನಾಗಿ ಗುರುತಿಸಬಹುದು.

ಹರಿಕಥಾಮೃತಸಾರ ಕನ್ನಡ ನಾಡಿನಲ್ಲಿ ಅಲ್ಲದೆ ನೆರೆಯ ಪ್ರಾಂತ್ಯಗಳಲ್ಲೂ ತುಂಬ ಜನಪ್ರಿಯವಾಗಿದೆ. ಇದರ ಹತ್ತೊಂಬತ್ತು ವಿವಿಧ ಮುದ್ರಣಗಳಿವೆ. ಹಲವು ಅನುವಾದಗಳೂ ವ್ಯಾಖ್ಯಾನಗಳೂ ಇವೆ. ಸಂಸ್ಕೃತ ಭಾಷೆಯಲ್ಲಿ ಈ ಗ್ರಂಥಕ್ಕೆ ಟೀಕೆಯನ್ನು ರಚಿಸಲಾಗಿದೆ. ಇದು ಇಂಗ್ಲಿಷ್‌ಗೂ ಭಾಷಾಂತರವಾಗಿದೆ.

ಜಗನ್ನಾಥದಾಸನ ರಂಗ ನಿನ್ನ ಕೊಂಡಾಡುವ, ದಾಸೋಹಂ ತವ ದಾಸೋಹಂ, ಶ್ರೀವೆಂಕಟಶೈಲಾಧಿಪ ನಮೋ, ಶ್ರೀನಿಕೇತನ, ಏಕೆ ಮೂಕನಾದ್ಯೊ, ನೀಲೋಹಿತ, ಅಶನವಸನಗಳೀವ, ದುರಿತವನಕುಠಾರಿ ಮೊದಲಾದ ಕೀರ್ತನೆಗಳು ಸುವ್ವಾಲಿಗಳು, ಸುಳಾದಿಗಳು, ಭಕ್ತಿಜ್ಞಾನಭರಿತವಾದ ನೂರಾರು ಷಟ್ಪದಿಗಳೂ ಜನಮನದಲ್ಲಿ ಹಚ್ಚಹಸಿರಾಗಿ ಈಗಲೂ ನಿಂತಿವೆ. (ಕೆ.ಎಂ.ಕೆ.ಆರ್.)

**ಜಗನ್ನಾಥ ಪಂಡಿತ :** ಸು. 1590–1670. ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಅಪಾರ ಮನ್ನಣೆಪಡೆದಿರುವ ರಸಗಂಗಾಧರವೆಂಬ ಸಂಸ್ಕೃತ ಕೃತಿಯ ಕರ್ತೃ. ಈತ ಆಂಧ್ರ ದೇಶದವನೆಂದೂ ಪೆರುಭಟ್ಟ, ಲಕ್ಷ್ಮೀ–ಇವರುಗಳ ಮಗನೆಂದೂ ಈತನ ಗ್ರಂಥದಿಂದಲೇ ತಿಳಿದು ಬರುತ್ತದೆ. ವ್ಯಾಕರಣವೊಂದನ್ನು ಹೊರತು ಮಿಕ್ಕೆಲ್ಲ ಶಾಸ್ತ್ರಗಳನ್ನೂ ತನ್ನ ತಂದೆಯ ಬಳಿಯಲ್ಲಿಯೇ ಈತ ಕಲಿತನಲ್ಲದೆ, ತನ್ನ ತಂದೆಗೆ ವ್ಯಾಕರಣವನ್ನು ಹೇಳಿಕೊಟ್ಟ ಶೇಷ ವೀರೇಶ್ವರನ ಬಳಿ ವ್ಯಾಕರಣಾಧ್ಯಯನ ಮಾಡಿದ.

ಜಗನ್ನಾಥನ ಯೌವನ ಮೊಗಲ ಬಾದಶಹನ ಆಸ್ಥಾನದಲ್ಲಿ ಕಳೆಯಿತು. (ದಿಲ್ಲೀವಲ್ಲಭಪಾಣಿಪಲ್ಲವತಲೇ ನೀತಂ ನವೀನಂ ವಯಃ). ಆದರೆ ಈತ ರಾಜಾಸ್ಥಾನವನ್ನು ಯಾವಾಗ ಸೇರಿದನೆಂಬುದು ಸ್ಪಷ್ಟವಾಗಿಲ್ಲ. ಈತ ಜಹಾಂಗೀರನ ಕಾಲದಲ್ಲಿ ಅವನ ಆಸ್ಥಾನವನ್ನು ಸೇರಿ, ಅನಂತರ ಉದಯಪುರದ ಜಗತ್‌ಸಿಂಹನ ಆಶ್ರಯದಲ್ಲಿ ಕೆಲವು ದಿನಗಳಿದ್ದು ಮತ್ತೆ ಷಹಾಜಹಾನನ ಆಸ್ಥಾನದಲ್ಲಿ ಅನೇಕ ವರ್ಷಗಳನ್ನು ಕಳೆದು, ಅನಂತರ ಕೂಚ್ ಬಿಹಾರಿನ ಪ್ರಾಣನಾರಾಯಣನ ಆಶ್ರಯದಲ್ಲಿ ಹಲವು ದಿನಗಳಿದ್ದು, ತನ್ನ ಕಡೆಯ ದಿನಗಳನ್ನು ಯಮುನಾತಟದಲ್ಲಿ ಶಾಂತರೀತಿಯಲ್ಲಿ ಕಳೆದನೆಂದು ಈತನ ಕೃತಿಗಳಿಂದ ಊಹಿಸಬಹುದು. ಇದು ಬಹುಶಃ ಕಾಲಾನುಕ್ರಮವಾಗಿರಬಹುದು. ಈತ ಯಾರ್‍ಯಾರ ಆಶ್ರಯದಲ್ಲಿ ಎಷ್ಟೆಷ್ಟು ಕಾಲ ಇದ್ದನೆಂದು ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ. ಆದರೂ ಈತನ ಜೀವನದಲ್ಲಿನ ಮುಖ್ಯ ಘಟ್ಟಗಳನ್ನು ಹೀಗೆ ವಿಂಗಡಿಸಬಹುದು–ಬಾಲ್ಯ, ವಿದ್ಯಾಭ್ಯಾಸ ಸು. 1590–1620. ಜಹಾಂಗೀರನ ಆಸ್ಥಾನ ಸು. 1020–27; ಉದಯಪುರದರಸ ಜಗತ್‌ಸಿಂಹನ ಆಶ್ರಯ ಸು. 1627–30; ಷಹಾಜಹಾನನ ಆಸ್ಥಾನ ಸು. 1630–58; ಕೂಚ್ ಬಿಹಾರಿನ ದೊರೆ ಪ್ರಾಣನಾರಾಯಣನ ಆಸ್ಥಾನ ಸು. 1661–1664; ಆಮೇಲೆ ಯಮುನಾತಟದಲ್ಲಿ ಕೆಲವು ವರ್ಷಗಳ ಶಾಂತಜೀವನ, ಸು. 1664–70.

ದಾಕ್ಷಿಣಾತ್ಯನಾದ ಈತ ತನ್ನ ಬಹುಪಾಲು ಜೀವನವನ್ನು ಉತ್ತರ ಭಾರತದಲ್ಲಿಯೇ ಕಳೆದನೆಂಬುದು ಸ್ವಾರಸ್ಯವಾದ ವಿಷಯ. ತನ್ನ ಪ್ರತಿಭೆಯಿಂದ ಮೊಘಲ ಆಸ್ಥಾನದಲ್ಲಿ ಅತ್ಯಂತ ಶ್ರೇಷ್ಠಪದವಿಯನ್ನು ಈತ ಗಳಿಸಿದ. ಮುಸಲ್ಮಾನರ ಆವರಣದಲ್ಲಿ ಈ ಪಂಡಿತನಿಗೆ ದೊರೆತ ಪ್ರಾಶಸ್ತ್ಯಕ್ಕೆ ಅಸಫ್‌ಖಾನನು ಇತ್ತ ಆಶ್ರಯ ಸಹಕಾರಿಯಾಯಿತು. ಆ ಕಾಲದಲ್ಲಿ ಮೊಘಲ ಆಸ್ಥಾನದಲ್ಲಿ ರಾಜಕೀಯ ಮುಂದಾಳಾಗಿದ್ದು ವಿದ್ಯಾವಂತನೂ ಗುಣಗ್ರಾಹಿಯೂ ಷಹಜಹಾನನ ಮಾವನೂ ಆದ ಅಸಫ್‌ಖಾನ್ ಜಗನ್ನಾಥ ಪಂಡಿತನಿಗೆ ಇತ್ತ ಪಂಡಿತರಾಜನೆಂಬ ಬಿರುದೇ ಆಸ್ಥಾನದಲ್ಲಿ ಈತನಿಗಿದ್ದ ಸ್ಥಾನಮಾನಗಳನ್ನು ಸೂಚಿಸುತ್ತದೆ. ಖಾನನಿಗೂ ಪಂಡಿತನಿಗೂ ಪರಸ್ಪರ ಗೌರವಾದರಗಳು ಬಹಳವಾಗಿದ್ದುವು. 1641ರಲ್ಲಿ ಅಸಫ್‌ಖಾನ್ ಮರಣದಿಂದ ಅತಿಯಾಗಿ ನೊಂದವರಲ್ಲಿ ಜಗನ್ನಾಥನೂ ಒಬ್ಬ. ತನ್ನ ಶೋಕವನ್ನು ಶ್ಲೋಕವೊಂದರಲ್ಲಿ ಬಣ್ಣಿಸಿ, ರಸಗಂಗಾಧರದಲ್ಲಿ ಉದಾಹರಿಸಿದ್ದಾನೆ.

ಕಾವ್ಯಕ್ಷೇತ್ರದಲ್ಲಿ ಜಗನ್ನಾಥನ ಕೃತಿಗಳೆಲ್ಲವೂ ಸಣ್ಣ ಪ್ರಮಾಣದವು. ಆದರೂ ಸರಳ ಹಾಗೂ ಭವ್ಯವಾದ ಶೈಲಿಯಿಂದಲೂ ಸ್ಫುಟವಾದ ಶಬ್ದಜಾಲದಿಂದಲೂ ಶಾಸ್ತ್ರಪ್ರಕ್ರಿಯೆಯನ್ನು ಕಾವ್ಯದಲ್ಲಿ ಜೋಡಿಸುವ ಜಾಣ್ಮೆಯಿಂದಲೂ ವಿಶಾಲವಾದ ಹಾಗೂ ಆಳವಾದ ಪಾಂಡಿತ್ಯದೊಡನೆ ಸೇರಿದ ಪ್ರತಿಭೆಯಿಂದಲೂ ಜಗನ್ನಾಥ ಪಂಡಿತ ಸಂಸ್ಕೃತ ಸಾಹಿತ್ಯದ ಶ್ರೇಷ್ಠ ಕವಿಗಳಲ್ಲಿ ಒಬ್ಬನಾಗಿದ್ದಾನೆ.

ದೇವತಾಸ್ತುತಿರೂಪವಾಗಿ ಐದು ಲಹರಿಗಳನ್ನು ಈತ ಬರೆದಿದ್ದಾನೆ. ಇವು ಭಕ್ತಿರಸದಿಂದ ತುಂಬಿ ತುಳುಕುತ್ತಿವೆ. ಇವುಗಳಲ್ಲಿ (1) ಭಗವದ್ವಿಷ್ಣುವಿನ ಕರುಣೆಯಲ್ಲಿರುವ ಕವಿಯ ಅಚಲವಾದ ನಂಬಿಕೆಯನ್ನು ಹೊರಗೆಡಹುವ ಕರುಣಾಲಹರೀ ಅಥವಾ ವಿಷ್ಣುಲಹರೀ (43 ಶ್ಲೋಕಗಳು) ಮತ್ತು (2) ಕವಿಯ ಭಕ್ತಿಗಂಗೆಯೇ ಆಗಿರುವ ಗಂಗಾಲಹರೀ (52 ಶ್ಲೋಕಗಳು)–ಇವು ಅತ್ಯುತ್ತಮವಾಗಿವೆ. ಇಂದಿಗೂ ಗಂಗಾಸ್ನಾನ ಸಮಯದಲ್ಲಿ ಉತ್ತರ ಭಾರತದ ಜನ ಗಂಗಾಲಹರಿಯನ್ನು ಪಠಿಸುತ್ತಾರೆ. (3) ಭಗವಾನ್ ಸೂರ್ಯನ ವಿಷಯದಲ್ಲಿ ರಚಿಸಲ್ಪಟ್ಟ 30 ಸ್ರಗ್ಧರಾ ಶ್ಲೋಕಗಳ ಮುಕ್ತಕ ಕಾವ್ಯವೇ ಸುಧಾಲಹರೀ. ಅರ್ಥಕ್ಕೂ ಶಬ್ದಕ್ಕೂ ಇರುವ ಹೊಂದಾಣಿಕೆಯ ಚಮತ್ಕೃತಿಯಿಂದ ಈ ಕಾವ್ಯ ಉಜ್ಜ್ವಲವಾಗಿದೆ. (4) ಅಮೃತಲಹರಿಯಲ್ಲಿ ಯಮುನಾ ನದಿಯ ಬಗ್ಗೆ ತನಗಿರುವ ಭಕ್ತಿಯನ್ನು ಕವಿ ತೋರ್ಪಡಿಸಿದ್ದಾನೆ. (5) ಲಕ್ಷ್ಮೀಲಹರಿ 41 ಶ್ಲೋಕಗಳ ಕಾವ್ಯ. ಇದರಲ್ಲಿ ಕವಿ ಲಕ್ಷ್ಮಿಯನ್ನು ಉತ್ತಮ ಆಲಂಕಾರಿಕ ಶೈಲಿಯಲ್ಲಿ ವರ್ಣಿಸಿದ್ದಾನೆ. ಪ್ರತಿಯೊಂದು ಶ್ಲೋಕವೂ ಕವಿಯ ಭಕ್ತಿಯನ್ನು ಹೊರಸೂಸುತ್ತದೆ. ಲಕ್ಷ್ಮಿಯ ದಿವ್ಯಮಂಗಳ ರೂಪವೇ ಓದುಗರ ಕಣ್ಣುಮುಂದೆ ನಿಲ್ಲುತ್ತದೆ.

ಜಗನ್ನಾಥ ಪಂಡಿತ ತನಗೆ ಆಶ್ರಯ ಕೊಟ್ಟವರ ಗುಣಾತಿಶಯಗಳನ್ನು ಹೊಗಳಿ ಕಾವ್ಯರಚನೆ ಮಾಡಿದ್ದಾನೆ. ಉದಯಪುರದ ಜಗತ್‌ಸಿಂಹನ ವಿಷಯಕವಾದ ಜಗದಾಭರಣ, ಕಾಮರೂಪೇಶ್ವರ ಪ್ರಾಣನಾರಾಯಣನ ವಿಷಯಕವಾದ ಪ್ರಾಣಾಭರಣಗಳನ್ನು ಇಲ್ಲಿ ಉದಾಹರಿಸಬಹುದು. ಅಲ್ಲಲ್ಲಿ ಕೆಲವು ಬದಲಾವಣೆಗಳ ಹೊರತು ಇವೆರಡೂ ಒಂದೇ ಕಾವ್ಯದಂತಿವೆ. ಈ ಕಾವ್ಯದ ಹಲವು ಶ್ಲೋಕಗಳನ್ನು ದಿಲ್ಲೀಶ್ವರ ಷಹಜಹಾನನಿಗೆ ಹೊಂದಿಕೊಳ್ಳುವಂತೆ ಬದಲಾಯಿಸಿ ತನ್ನ ರಸಗಂಗಾಧರದಲ್ಲಿ ಉದಾಹರಿಸಿದ್ದಾನೆ. ಅಸಫ್‌ವಿಲಾಸ ಆಖ್ಯಾಯಿಕಾ ಎಂಬುದು ಅಸಫ್‌ಖಾನನ ವಿಷಯದಲ್ಲಿ ಬರೆದ ಗದ್ಯಕಾವ್ಯ. ಆದರೆ ಇದರ ಪ್ರಸ್ತಾವನೆ ಮಾತ್ರ ಇಂದು ಉಪಲಬ್ಧವಾಗಿದೆ.

ತನ್ನ ಪದ್ಯರತ್ನಗಳನ್ನು ದುಷ್ಟರು ಅಪಹರಿಸಿಯಾರೆಂಬ ಸಂಶಯದಿಂದ ಜಗನ್ನಾಥ ಅವೆಲ್ಲವನ್ನೂ ಭಾಮಿನಿ ವಿಲಾಸವೆಂಬ ಹೆಸರಿನಲ್ಲಿ ಒಂದೆಡೆ ಸೇರಿಸಿರುವುದಾಗಿ ಹೇಳಿಕೊಂಡಿದ್ದಾನೆ. ಈ ಕೃತಿಯನ್ನು ನಾಲ್ಕು ವಿಭಾಗ ಮಾಡಲಾಗಿದೆ: 1 ಅನ್ಯೋಕ್ತಿ ಅಥವಾ ಪ್ರಾಸ್ತಾವಿಕ ವಿಲಾಸ–ಅನೇಕ ಅನ್ಯಾಪದೇಶಗಳೂ ಉತ್ತಮ ನೀತಿಬೋಧಕಗಳೂ ಆದ ಮುಕ್ತಕಗಳಿಂದ ಕೂಡಿದುದು. 2 ಶೃಂಗಾರವಿಲಾಸ–ಶೃಂಗಾರರಸಪ್ರಧಾನವಾದ ಶ್ಲೋಕಗಳ ಸಂಪುಟ. 3 ಕರುಣಾವಿಲಾಸ–ನಾಯಿಕೆ ಮೃತಳಾದುದರಿಂದ ಉಂಟಾದ ನಾಯಕನ ದುಃಖವನ್ನು ವರ್ಣಿಸುವ ಶ್ಲೋಕಗಳಿಂದ ಕೂಡಿದುದು. 4 ಶಾಂತವಿಲಾಸ–ರಭಸವಾಗಿ ಮಳೆ ಬಂದು ನಿಂತ ಮೇಲೆ ಉಂಟಾಗುವ ವಾತಾವರಣದಂತೆ ಜೀವನದ ಏರಿಳಿತವೆಲ್ಲ ಮುಗಿದು ಶಾಂತವಾದ ಕವಿಯ ಮನಸ್ಸನ್ನು ಸ್ಫುಟವಾಗಿ ತೋರಿಸುವ ಶ್ಲೋಕಗಳ ಸಂಗ್ರಹ.

ಯಮುನಾ ವರ್ಣ ವ್ಯಾಖ್ಯಾಯಿಕೆಯೆಂಬ ಗದ್ಯ ಗ್ರಂಥವೊಂದನ್ನು ರಚಿಸಿದ್ದನೆಂದು ಕವಿಯ ಮಾತುಗಳಿಂದ ವ್ಯಕ್ತವಾಗುತ್ತದೆಯಾದರೂ ಆ ಗ್ರಂಥವಿನ್ನೂ ದೊರೆತಿಲ್ಲ.

ಜಗನ್ನಾಥನಿಂದ ರಚಿತವಾದ ಗ್ರಂಥಗಳಲ್ಲಿ ಅದ್ವಿತೀಯವಾದುದು ರಸಗಂಗಾಧರ. ಸಂಸ್ಕೃತ ವಾಙ್ಮಯದಲ್ಲಿ ಅಲಂಕಾರಶಾಸ್ತ್ರ ಗ್ರಂಥಗಳ ಶ್ರೇಣಿಯಲ್ಲಿ ಬಹುಶಃ ಕಡೆಯ ಸ್ವತಂತ್ರ ಉದ್ಗ್ರಂಥವಿದು. ಕಾವ್ಯಮೀಮಾಂಸಾ ಶಾಸ್ತ್ರವಿಚಾರದಲ್ಲಿ ನ್ಯಾಯ ಹಾಗೂ ವ್ಯಾಕರಣಶಾಸ್ತ್ರಗಳ ತನ್ನ ಪಾಂಡಿತ್ಯವನ್ನು ಉಪಯೋಗಿಸಿಕೊಂಡಿರುವುದೇ ಈ ಗ್ರಂಥರತ್ನದ ಪ್ರೌಢಿಮೆಗೆ ಮುಖ್ಯ ಕಾರಣವಾಗಿದೆ. ಜಗನ್ನಾಥ ಅಲಂಕಾರಶಾಸ್ತ್ರ ಗ್ರಂಥಗಳನ್ನೆಲ್ಲ ಜಾಲಾಡಿ ರಸಗಂಗೆಯನ್ನು ಈ ಗ್ರಂಥದಲ್ಲಿ ಹಿಡಿದಿಟ್ಟಿದ್ದಾನೆ. ಇದರಲ್ಲಿ ಅನೇಕ ವಿಚಾರಗಳನ್ನು ವಿಮರ್ಶಿಸಿ ತನ್ನ ಮತವನ್ನು ಪ್ರಕಟಿಸಿದ್ದಾನೆ. ಉದಾಹರಣೆಗೆ–ತನ್ನ ಹಿಂದಿನ ಶಾಸ್ತ್ರಕಾರರು ಕೊಟ್ಟ ಕಾವ್ಯಲಕ್ಷಣ ಈತನಿಗೆ ಹಿಡಿಸಲಿಲ್ಲ. ಅವರ ಅಭಿಪ್ರಾಯಗಳನ್ನು ಚೆನ್ನಾಗಿ ಪರೀಕ್ಷಿಸಿ ಕಡೆಗೆ ರಮಣೀಯಾರ್ಥಪ್ರತಿಪಾದಕಃ ಶಬ್ದಃ ಕಾವ್ಯಂ ಎಂದು ತಾನೇ ಒಂದು ಲಕ್ಷಣವನ್ನು ಕೊಟ್ಟಿದ್ದಾನೆ. ಆಮೇಲೆ ಶಾಸ್ತ್ರದ ಮುಖ್ಯ ವಿಷಯವಾದ ಧ್ವನಿ ಹಾಗೂ ರಸಸೂತ್ರಗಳ ವಿಮರ್ಶೆಯಲ್ಲಿ ತೊಡಗುತ್ತಾನೆ. ಅನಂತರ ರೀತಿ ಗುಣಗಳನ್ನು ವಿಚಾರ ಮಾಡುತ್ತಾನೆ. ಈ ವಿಷಯದಲ್ಲಿ ಈತ ಆನಂದವರ್ಧನ, ಅಭಿನವಗುಪ್ತರನ್ನೇ ಬಹುವಾಗಿ ಅನುಸರಿಸುತ್ತಾನೆ. ಧ್ವನಿಯ ಅನೇಕ ವಿಧಗಳನ್ನು ವಿಚಾರ ಮಾಡುತ್ತಾನೆ. ಅನಂತರ ಅಲಂಕಾರಗಳನ್ನು ವಿಮರ್ಶಿಸುತ್ತಾನೆ. ರಸಗಂಗಾಧರ ಅಪೂರ್ಣವಾಗಿದೆ. ಗ್ರಂಥದಲ್ಲಿ ಅಪ್ಪಯ್ಯ ದೀಕ್ಷಿತರ ಚಿತ್ರಮೀಮಾಂಸಾ ಗ್ರಂಥವನ್ನು ಬಹುವಾಗಿ ಖಂಡಿಸಿದ್ದಾನೆ. ಈ ಖಂಡನೆಗಳನ್ನೆಲ್ಲ ಒಟ್ಟಿಗೆ ಸೇರಿಸಿದಾಗ ಚಿತ್ರಮೀಮಾಂಸಾಖಂಡನವೆಂಬ ಸ್ವತಂತ್ರ ಗ್ರಂಥವೊಂದು ಲಭ್ಯವಾಗಿದೆ.

ವ್ಯಾಕರಣಶಾಸ್ತ್ರದಲ್ಲಿಯೂ ಈತ ಗ್ರಂಥವೊಂದನ್ನು ರಚಿಸಿದ್ದಾನೆ. ಜಗನ್ನಾಥನ ಗುರುವಿನ ತಂದೆ ಶೇಷ ಕೃಷ್ಣ ಎಂಬಾತ ಭಟ್ಟೋಜಿ ದೀಕ್ಷಿತನಿಗೆ ಗುರುವಾಗಿದ್ದ. ಈ ದೀಕ್ಷಿತ ತನ್ನ ಗುರುವಿನ ಪ್ರಕ್ರಿಯಾಪ್ರಕಾಶವೆಂಬ ಗ್ರಂಥವನ್ನು ಪ್ರೌಢಮನೋರಮಾ ಎಂಬ ತನ್ನ ವ್ಯಾಖ್ಯಾನದಲ್ಲಿ ಟೀಕಿಸಿದ್ದ. ಭಟ್ಟೋಜಿ ಗುರುದ್ರೋಹಿಯೆಂದು ಬಗೆದ ಜಗನ್ನಾಥ ಪ್ರೌಢ ಮನೋರಮಾ ಕುಚಮರ್ದನವೆಂಬ ಖಂಡನಗ್ರಂಥವನ್ನು ಬರೆದು ಭಟ್ಟೋಜಿಯನ್ನು ಸರಿಯಾಗಿ ಪ್ರತಿಭಟಿಸಿದ. ಆದರೆ ಇದರ ಪ್ರಾರಂಭದ ಸ್ವಲ್ಪ ಭಾಗ ಮಾತ್ರ ಈಗ ಉಪಲಬ್ಧವಾಗಿದೆ. ಶಬ್ದಕೌಸ್ತುಭ ಶಾಣೋತ್ತೇಜನವೆಂಬ ಹೆಸರಿನಲ್ಲಿ ಭಟ್ಟೋಜಿಯ ಶಬ್ದಕೌಸ್ತುಭವನ್ನೂ ಈತ ಟೀಕಿಸಿದನೆಂದು ತೋರುತ್ತದೆ. ಈ ಗ್ರಂಥವೂ ದೊರೆತಿಲ್ಲ.

ಜಗನ್ನಾಥ ತಂದೆಯಂತೆಯೇ ಚತುಃಶಾಸ್ತ್ರಗಳನ್ನು ಹೃದ್ಗತ ಮಾಡಿಕೊಳ್ಳುವುದರ ಜೊತೆಗೆ, ಅಲಂಕಾರಶಾಸ್ತ್ರವನ್ನೂ ಕರತಲಾಮಲಕ ಮಾಡಿಕೊಂಡಿದ್ದ. ಪಂಡಿತರಾಜ ನೆನಿಸಿಕೊಂಡಿದ್ದಲ್ಲದೆ, ಪದವಾಕ್ಯಪ್ರಮಾಣಪಾರಾವಾರಪಾರೀಣ ಎಂಬ ಬಿರುದನ್ನು ಗಳಿಸಿದ್ದ. ಶಾಸ್ತ್ರವೇತ್ತನೂ ಸುಕವಿತಾ ಸಾಮರ್ಥ್ಯವುಳ್ಳವನೂ ಆದ ಜಗನ್ನಾಥನಷ್ಟು ಖ್ಯಾತಿ ಸಂಸ್ಕೃತ ಅಲಂಕಾರಶಾಸ್ತ್ರೇತಿಹಾಸದಲ್ಲಿ ಬೇರೊಬ್ಬರಿಗಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

(ಎಸ್.ಆರ್.ವಿ.)

**ಜಗಳಗಂಟಿ :** ಎಬಿನೇಸೀ ಕುಟುಂಬಕ್ಕೆ ಸೇರಿದ ಒಂದು ಕಾಡುಮರ. ಕಲ್ಗಂದಿ, ಬಿಲ್ಕುನಿಕ, ಪರ್ಯಾಯ ನಾಮಗಳು. ಡೈಯೋಸ್ಪೈರಾಸ್ ಮಾಂಟಾನ ಇದರ ಶಾಸ್ತ್ರೀಯ ಹೆಸರು. ಇಂಗ್ಲಿಷಿನಲ್ಲಿ ಮೌಂಟನ್ ಪರ್ಸಿಮನ್ ಎಂದು ಕರೆಯಲಾಗುತ್ತದೆ. ಭಾರತದಲ್ಲೆಲ್ಲ ಇದು ಬೆಳೆಯುವುದುಂಟು. ಇದರ ಕೊಂಬೆಯನ್ನು ಮನೆಯಲ್ಲಿಟ್ಟರೆ ಅಲ್ಲಿ ಪ್ರತಿದಿನ ಜಗಳ ಇರುತ್ತದೆ ಎಂಬ ಮೂಢನಂಬಿಕೆಯಿದೆ. ಬಹುಶಃ ಇದರಿಂದಲೇ ಮರಕ್ಕೆ ಜಗಳಗಂಟಿ ಎಂಬ ಹೆಸರು ಬಂದಿರಬೇಕು. ಇದರ ಎಲೆಗಳನ್ನು ಜಾನುವಾರುಗಳ ಮೇವಾಗಿ ಉಪಯೋಗಿಸುವುದಿದೆ. ಚೌಬೀನೆಯನ್ನು ಕೃಷಿ ಉಪಕರಣ, ಬಾಗಿಲು, ಕಿಟಕಿ ಮತ್ತು ಇತರ ಮರದ ಸಾಮಾನು ತಯಾರಿಕೆಗೆ ಬಳಸುತ್ತಾರೆ. ಇದು ಒಳ್ಳೆಯ ಉರುವಲೂ ಹೌದು. ಜಗಳಗಂಟಿಗೆ ಔಷಧೀಯ ಪ್ರಾಮುಖ್ಯ ಉಂಟು. ಜಗಳಗಂಟಿ ದೊಡ್ಡ ಪೊದೆ ಇಲ್ಲವೆ ಸಣ್ಣ ಮರವಾಗಿ ಬೆಳೆಯುತ್ತದೆ. ಇದೊಂದು ಪರ್ಣಪಾತಿ ಸಸ್ಯ. ರೆಂಬೆಗಳ ಮೇಲೆ ಕೆಲವೊಮ್ಮೆ ಮುಳ್ಳುಗಳಿರುವುದುಂಟು. ಕಾಂಡ ಹಳದಿ ಅಥವಾ ಕಂದು ಮಿಶ್ರಿತ ಬೂದು ಬಣ್ಣದ್ದು. ಗಟ್ಟಿ ಹಾಗೂ ಭಾರವಾಗಿದೆ. ಎಲೆಗಳು ಕರನೆಯಾಕಾರ ಅಥವಾ ಆಯತಾಕಾರದವು;

ಇವು ನಯವಾಗಿರಬಹುದು ಇಲ್ಲವೆ, ಸೂಕ್ಷ್ಮರೋಮಗಳಿಂದ ಆವೃತವಾಗಿರಬಹುದು. ಹೂಗಳು ಏಕಲಿಂಗಿಗಳು. ಹೆಣ್ಣುಹೂಗಳಿಗೆ ತೊಟ್ಟಿಲ್ಲ. ಜಗಳಗಂಟಿಯನ್ನು ಬೀಜಗಳಿಂದ ಬೆಳೆಸಲಾಗುತ್ತದೆ. ಸಾಮಾನ್ಯವಾಗಿ ಬೀಜಗಳು ಮಳೆಗಾಲದಲ್ಲಿ ಮೊಳೆಯುತ್ತವೆ. ಸಸಿಗಳಿಗೆ ನೆರಳು ಆವಶ್ಯಕ. ಅವು ಚೆನ್ನಾಗಿ ಬೇರೂರುವವರೆಗೂ ನೆರಳನ್ನು ಒದಗಿಸಲಾಗುತ್ತದೆ. ಸಸಿಗಳು 1/3 ಮೀ. ಎತ್ತರ ಬೆಳೆದ ಮೇಲೆ ಅವನ್ನು ಕಿತ್ತು ಬೇಕಾದ ಸ್ಥಳಗಳಲ್ಲಿ ನಾಟಿ ಮಾಡುವುದುಂಟು. (ಎಸ್‌ಐ.ಎಚ್.)

**ಜಗಳೂರು :** ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು; ಅದರ ಕೇಂದ್ರ. ದಾವಣಗೆರೆ ಉಪವಿಭಾಗಕ್ಕೆ ಸೇರಿದೆ. ಉತ್ತರದಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು, ದಕ್ಷಿಣದಲ್ಲಿ ಚಿತ್ರದುರ್ಗ ತಾಲ್ಲೂಕು, ಪಶ್ಚಿಮದಲ್ಲಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕುಗಳು ಇದರ ಮೇರೆಗಳು. 1882ರ ವರೆಗೂ ಇದಕ್ಕೆ ಕನಕುಪ್ಪ ಎಂಬ ಹೆಸರಿತ್ತು. ಜಗಳೂರು, ಸೊಕ್ಕೆ, ಬಿಳಿಚೋಡು ಹೋಬಳಿಗಳೂ 128 ಹಳ್ಳಿಗಳೂ ಒಂದು ಪಟ್ಟಣವೂ ಇರುವ ಜಗಳೂರು ತಾಲ್ಲೂಕಿನ ವಿಸ್ತೀರ್ಣ 371.4 ಚ.ಮೈ. (961.9 ಚ.ಕಿಮೀ.) ಜನಸಂಖ್ಯೆ 1,58,829 (2001).

ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಅನೇಕ ಸಣ್ಣ ಬೆಟ್ಟಗುಡ್ಡಗಳಿವೆ. ಈ ಭಾಗ ಕುರುಚಲು ಮತ್ತು ಪರ್ಣಪಾತಿ ಮರಗಳಿಂದ ಆವೃತ. ಉಳಿದ ಭಾಗದಲ್ಲಿ ಅಲೆಯಲೆಯಾಗಿ ಏರಿಳಿಯುವ ನೆಲವಿದೆ. ಒಟ್ಟಿನಲ್ಲಿ ಇದು ಮೈದಾನ. ತಾಲ್ಲೂಕಿನ ಕೃಷಿಯೋಗ್ಯ ನೆಲದ ಕಾಲುಭಾಗದಲ್ಲಿ ಕಪ್ಪು ಅಥವಾ ಕಂದು ಬಣ್ಣದ ಮಣ್ಣಿದೆ. ಉಳಿದ ಭಾಗ ಕೆಂಪು ಅಥವಾ ಮರಳು ನೆಲ. ಇದು ಅಷ್ಟೇನೂ ಫಲವತ್ತಾದ್ದಲ್ಲ.

ಚಿತ್ರದುರ್ಗ ತಾಲ್ಲೂಕಿನ ಭೀಮಸಮುದ್ರ ಕೆರೆಯಿಂದ ಹೊರಡುವ ಜನಗುಹಳ್ಳ ಈ ತಾಲ್ಲೂಕಿನ ಪೂರ್ವದ ಕೆಲವು ಗ್ರಾಮಗಳ ಮೂಲಕ ಹರಿಯುತ್ತದೆ. ಇದು ವ್ಯವಸಾಯಕ್ಕೆ ಅನುಕೂಲಕರ. ತಾಲ್ಲೂಕಿನ ಉಳಿದ ಭಾಗಗಳಲ್ಲಿ ನೀರಿನ ಆಸರೆ ಹೆಚ್ಚಾಗಿಲ್ಲ. ಮಳೆ ಕಡಿಮೆ. 7–8 ದೊಡ್ಡ ಕೆರೆಗಳೂ ಹಲವು ಸಣ್ಣ ಕೆರೆಗಳೂ ಇವೆ. ತಾಲ್ಲೂಕಿನ ನಡುವೆ ನೈಋತ್ಯದಿಂದ ಈಶಾನ್ಯಕ್ಕೆ ಸಾಗಿರುವ ಉಬ್ಬು ನೆಲದ ನೆತ್ತಿರೇಖೆಯಿಂದ ಆಚೀಚೆ ವಾಯವ್ಯ ಮತ್ತು ಆಗ್ನೇಯಾಭಿಮುಖವಾಗಿ ಹರಿಯುವ ಸಣ್ಣ ಪುಟ್ಟ ಹಳ್ಳಗಳು ಬಾವಿಗಳಿಗೆ ನೀರು ಪೂರೈಸುತ್ತವೆ; ಆಗ್ನೇಯದ ಹಳ್ಳಗಳು ಜನಗುಹಳ್ಳಕ್ಕೆ ನೀರು ಊಡುತ್ತವೆ. ಜನಗುಹಳ್ಳದ ಆಚೀಚೆ ದಡಗಳ ಮೇಲೆ ತೋಡಿರುವ ಕಪಿಲೆ ಬಾವಿಗಳು ನೀರಾವರಿಗೆ ಸಹಾಯಕ.

ಹತ್ತಿ, ಬತ್ತ, ಕಬ್ಬು, ನವಣೆ, ಜೋಳ, ರಾಗಿ, ತೆಂಗು, ಅಡಕೆ ಇಲ್ಲಿಯ ಮುಖ್ಯ ಬೆಳೆಗಳು. ಕೆಲವು ಕಡೆ ವರ್ಷದಲ್ಲಿ ಎರಡು ಫಸಲನ್ನು ತೆಗೆಯುತ್ತಾರೆ.

ಜಗಳೂರು ಪಟ್ಟಣ ಈ ತಾಲ್ಲೂಕಿನ ಕಸಬೆ. ಉ.ಅ. $14^0$ 31' ಮತ್ತು ಪೂ.ರೇ. $76^0$ 24' ಮೇಲೆ ಚಿತ್ರದುರ್ಗದ ವಾಯವ್ಯಕ್ಕೆ 40 ಕಿಮೀ ದೂರದಲ್ಲಿದೆ. ಇದೊಂದು ಪುರಸಭಾ ಪಟ್ಟಣ. ಕನಕುಪ್ಪದಿಂದ ಇಲ್ಲಿಗೆ ತಾಲ್ಲೂಕು ಆಡಳಿತ 1868ರಲ್ಲಿ ವರ್ಗವಾಯಿತು. ಜೋಗಪ್ಪ ಎಂಬ ಋಷಿಯಿಂದ ಇದಕ್ಕೆ ಜಗಳೂರು ಎಂದು ಹೆಸರು ಬಂದಿದೆಯೆಂದು ಹೇಳಲಾಗಿದೆ. ಇಲ್ಲಿ ಜೋಗಪ್ಪನ ದೇವಸ್ಥಾನವೊಂದಿದೆ. ಅಲ್ಲಿರುವ ಜೋಗಪ್ಪನ ವಿಗ್ರಹದ ಎತ್ತರ 1 ಮೀ. ಇದು ಬಲಗೈಯಲ್ಲಿ ತ್ರಿಶೂಲವನ್ನೂ ಎಡಗೈಯಲ್ಲಿ ಕಮಂಡಲವನ್ನೂ ಹಿಡಿದಿದೆ. ಇಲ್ಲಿರುವ ಇನ್ನೊಂದು ಗುಡಿ ತಮ್ಮಪ್ಪನದು. ಜಗಳೂರಿನಲ್ಲಿ ವೀರಶೈವರ ಒಂದು ಕಲ್ಲುಮಠವುಂಟು. ಅದರಲ್ಲಿ ತೋಟದ ಸ್ವಾಮಿಗಳ ಗದ್ದುಗೆ ಇದೆ. ಪಟ್ಟಣಕ್ಕೆ ಎರಡು ಸುರಂಗ ಬಾವಿಗಳಿಂದ ನೀರು ಒದಗಿಸಲಾಗುತ್ತಿದೆ. ವಿದ್ಯುತ್‌ಸೌಕರ್ಯವಿದೆ. ಪುರಸಭೆ ಇಲ್ಲಿ ಒಂದು ಪ್ರೌಢಶಾಲೆ ನಡೆಸುತ್ತಿದೆ. ಆಸ್ಪತ್ರೆಯಿದೆ. ಪಟ್ಟಣದ ಜನಸಂಖ್ಯೆ 14,741 (2001). (ಎಂ.ಎ.ಎಚ್.)

**ಜಗ್ಗಯ್ಯಪೇಟ :** ಆಂಧ್ರ ಪ್ರದೇಶದ ಪ್ರಮುಖ ಬೌದ್ಧವಾಸ್ತುಶಿಲ್ಪ ನೆಲೆಗಳಲ್ಲೊಂದು. ಅಮರಾವತಿಗೆ 48 ಕಿಮೀ ದೂರದಲ್ಲಿದೆ. ಕೃಷ್ಣಾದ ಉಪನದಿಯಾದ ಪಾಲೇರ್‌ನ ದಂಡೆಯ ಮೇಲಿದೆ. ಇಂದು ಇದು ಸಣ್ಣ ಗ್ರಾಮವಾಗಿದ್ದರೂ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಒಂದು ಪ್ರಮುಖ ಸ್ಥಳವಾಗಿತ್ತು. ಜಗ್ಗಯ್ಯಪೇಟದ ಬೌದ್ಧ ಅವಶೇಷಗಳನ್ನು 1882ರಲ್ಲಿ ಜೇಮ್ಸ್ ಬರ್ಗೆಸ್ ಬೆಳಕಿಗೆ ತಂದ. ಅಷ್ಟು ಹೊತ್ತಿಗಾಗಲೇ ಜನಗಳು ಅಲ್ಲಿದ್ದ ಪ್ರಾಚೀನ ಇಟ್ಟಿಗೆಗಳನ್ನು ಮನೆ ಕಟ್ಟುವುದಕ್ಕಾಗಿ ಉಪಯೋಗಿಸಿಕೊಂಡು ಸ್ತೂಪ ಮತ್ತು ಚೈತ್ಯಗೃಹಗಳನ್ನು ಹಾಳುಮಾಡಿದ್ದರು. ಬರ್ಗೆಸ್ ಮತ್ತು ಅಲೆಗ್ಸಾಂಡರ್ ರೀ ಉಳಿದ ಅವಶೇಷಗಳನ್ನು ರಕ್ಷಿಸಿ, ಮಿಕ್ಕೆಡೆಗಳಲ್ಲಿ ಉತ್ಖನನಗಳನ್ನು ನಡೆಸಿದರು. ಇವರ ಪ್ರಯತ್ನಗಳ ಫಲವಾಗಿ ಜಗ್ಗಯ್ಯಪೇಟದ ಬೌದ್ಧ ಕಲಾವಿಶೇಷಗಳ ಬಗ್ಗೆ ವಿಶೇಷ ಮಾಹಿತಿ ದೊರಕಿದೆ.

ವೆಲ್ಲಗಿರಿ ಎಂಬುದು ಜಗ್ಗಯ್ಯಪೇಟದ ಪ್ರಾಚೀನ ಹೆಸರು. ಇಲ್ಲಿ ದೊರಕಿರುವ ಬೌದ್ಧ ಅವಶೇಷಗಳು ವಿಶೇಷವಾಗಿ ಹೀನಯಾನಧರ್ಮಕ್ಕೆ ಸಂಬಂಧಪಟ್ಟವು. ಪ್ರಶ. 1ನೆಯ ಶತಮಾನದಿಂದ ಪ್ರಶ. 6ನೆಯ ಶತಮಾನದವರೆಗೆ ಈ ಸ್ಥಳ ಮುಖ್ಯ ಬೌದ್ಧ ಕೇಂದ್ರವಾಗಿತ್ತು.

ಇಲ್ಲಿಯ ಸ್ತೂಪವೊಂದು 9.5 ಮೀ ವ್ಯಾಸವುಳ್ಳದ್ದಾಗಿತ್ತು. ಅದು ಇಟ್ಟಿಗೆ ಮತ್ತು ಮಣ್ಣಿನಿಂದ ನಿರ್ಮಾಣವಾಗಿತ್ತು. ಅಮರಾವತಿಯ ಸ್ತೂಪದಂತೆಯೇ ಅದರ ಹೊರಮೈಯನ್ನು ಮುಚ್ಚಲು ಸುಣ್ಣಕಲ್ಲಿನ ಶಿಲ್ಪಿತ ಫಲಕಗಳನ್ನು ಬಳಸಲಾಗಿತ್ತು. ಸ್ತೂಪದ ಸುತ್ತಲೂ ಇದ್ದ ಕಟಕಟೆ ಈಗ ಉಳಿದುಬಂದಿಲ್ಲ. ಸುಮಾರು 1 ಮೀ ಅಗಲದ, ಹೀನಯಾನಧರ್ಮಕ್ಕೆ ಸಂಬಂಧಿಸಿದ ಈ ಶಿಲ್ಪಗಳು ಅತ್ಯಂತ ಪ್ರಾಚೀನವಾದವು. ಬಾರ್ಹುತ್‌ನ ಶಿಲ್ಪದ ಅನೇಕ ಲಕ್ಷಣಗಳೂ ಇಲ್ಲೂ ಕಾಣಬರುತ್ತವೆ. ಇಲ್ಲಿಯ ಕೆಲವು ಶಿಲ್ಪಗಳಲ್ಲಿ ಆ ಕಾಲದ ಬ್ರಾಹ್ಮೀ ಲಿಪಿಯ ಬರೆಹಗಳಿವೆ.

ಜಗ್ಗಯ್ಯಪೇಟದ ಸ್ತೂಪವನ್ನು ಅಲಂಕರಿಸಿದ್ದ ಶಿಲ್ಪಿತ ಚಪ್ಪಡಿ

ಈ ಸ್ತೂಪಕ್ಕೆ ಸಮೀಪದಲ್ಲಿ 49 ಮೀ. ಉದ್ದ 36.5 ಮೀ ಅಗಲದ ಒಂದು ವಿಹಾರವಿತ್ತೆಂಬುದು ಅಲ್ಲಿ ಈಗ ಉಳಿದಿರುವ ಕಂಬಗಳಿಂದ ತಿಳಿದುಬರುತ್ತದೆ. ಈ ಕಂಬಗಳ ಮೇಲೆ ಆಲಂಕಾರಿಕ ಚಿಹ್ನೆಗಳು ಮತ್ತು ಯಕ್ಷ, ಯಕ್ಷಿಣಿಯರ ಶಿಲ್ಪಗಳುಂಟು. ಸ್ವಲ್ಪ ಕಾಲಾನಂತರ ಮಹಾಯಾನ ಬೌದ್ಧಧರ್ಮ ಇಲ್ಲಿಗೂ ಹಬ್ಬಿತು. ಇಕ್ಷ್ವಾಕು ವಂಶದ ರಾಜರು ಇಲ್ಲೂ ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಇಲ್ಲಿಯ ಆಯಕ ಕಂಬಗಳ ಮೇಲೆ ದೊರೆತಿರುವ, ಪುರುಷದತ್ತನೇ ಮೊದಲಾದ ರಾಜರ ಶಾಸನಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ಬುದ್ಧನ ವಿಗ್ರಹವನ್ನೊಳಗೊಂಡ, ಅನೇಕ ಬೌದ್ಧ ಜಾತಕಕಥೆಗಳ ಶಿಲ್ಪಫಲಕಗಳು ನಾಗಾರ್ಜುನಕೊಂಡದ ಶಿಲ್ಪಗಳನ್ನು ಹೋಲುತ್ತವೆ. ಅಮರಾವತಿ ಮತ್ತು ನಾಗಾರ್ಜುನಕೊಂಡದ ಶಿಲ್ಪಗಳಂತೆ ಜಗ್ಗಯ್ಯಪೇಟದ ಶಿಲ್ಪದಲ್ಲೂ ಕಮಲದ ಹೂವು, ಸ್ತ್ರೀ, ವೃಕ್ಷಗಳು ಮುಂತಾದವು ಬಹು ಚೆನ್ನಾಗಿ ರೂಪಿತವಾಗಿವೆ. ಸಮಕಾಲೀನ ಸಾಮಾಜಿಕ ದೃಶ್ಯಗಳ ಸುಂದರ ನಿರೂಪಣೆಯನ್ನಿಲ್ಲಿ ಕಾಣಬಹುದು. (ಎ.ವಿ.ಎನ್)

**ಜಟಾಮಾಂಸಿ :** ವ್ಯಾಲೆರಿಯನೇಸೀ ಕುಟುಂಬಕ್ಕೆ ಸೇರಿದ ಒಂದು ಗಿಡ ಮೂಲಿಕೆ. ಸುಗಂಧ ಮಸ್ತೆ ಪರ್ಯಾಯ ನಾಮ. ಇಂಗ್ಲಿಷಿನಲ್ಲಿ ಸ್ಪೈಕ್‌ನಾರ್ಡ್, ಇಂಡಿಯನ್ ನಾರ್ಡ್ ಎಂಬ ಹೆಸರುಗಳಿವೆ. ನಾರ್ಡೊಸ್ಟ್ಯಾಕಿಸ್ ಜಟಾಮ್ಯಾನ್ಸಿ ಇದರ ಶಾಸ್ತ್ರೀಯ ಹೆಸರು. ಇದರ ತವರು ಭಾರತ. ಪಂಜಾಬಿನಿಂದ ಭೂತಾನದವರೆಗೂ ಹಿಮಾಲಯದ ಉನ್ನತ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. 10–60 ಸೆಂ.ಮೀ. ಎತ್ತರಕ್ಕೆ ಬೆಳೆಯುವ

ಬಹುವಾರ್ಷಿಕ ಮೂಲಿಕೆ ಇದು. ಇದಕ್ಕೆ ಉದ್ದವಾದ, ಬಲಿಷ್ಠವಾದ ಹಾಗೂ ದಾರುಮಯವಾದ ಬೇರಿನಂಥ ಪ್ರಕಂದ ಇದೆ. ಬೇರಿನ ಮೇಲ್ತುದಿಯಿಂದ ಹೊರಡುವ ಎಲೆಗಳೂ ಕಾಂಡದ ಮೇಲೆ ಹುಟ್ಟುವ ಎಲೆಗಳೂ ಇವೆ. ಹೂಗಳು ಗುಲಾಬಿ, ತಿಳಿಗೆಂಪು ನೀಲಿ ಬಣ್ಣದವು ; ಮಧ್ಯಾರಂಭಿ ಮಂಜರಿಗಳಲ್ಲಿ ಸಮಾವೇಶಗೊಂಡಿವೆ.

ಜಟಾಮಾಂಸಿಯ ಪ್ರಕಂದಗಳಲ್ಲಿ ಒಂದು ಬಗೆಯ ತಿಳಿಹಳದಿ ಬಣ್ಣ ಹಾಗೂ ಸುವಾಸನೆಯುಳ್ಳ ಎಣ್ಣೆ ಉಂಟು. ಇದರ ಪರಿಮಳ ಪಚ್ಚೆತೆನೆಯ ವಾಸನೆಯನ್ನು ಹೋಲುತ್ತದೆ. ಇದರಲ್ಲಿ ಜಟಾಮ್ಯಾನ್ಸಿಕ್ ಆಮ್ಲವೂ ಜಟಾಮ್ಯಾನ್ಸೋನ್ ಎಂಬ ಕೀಟೋನ್ ಸಂಯುಕ್ತವೂ ಇವೆ. ಜಟಾಮಾಂಸಿ ಎಣ್ಣೆಯನ್ನು ಕ್ವಿನಿಡೀನಿನಂತೆ ಹೃದಯ ಬಡಿತದ ಲಯದೋಷ ನಿವಾರಣೆಗೆ ಬಳಸುತ್ತಾರೆ. ಇದಕ್ಕೆ ರಕ್ತದ ಒತ್ತಡವನ್ನು ಇಳಿಸುವ ಹಾಗೂ ಕೇಂದ್ರ ನರಮಂಡಲವನ್ನು ಮಂದಗೊಳಿಸುವ ಗುಣಗಳೂ ಉಂಟು. ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ ತೀವ್ರ ತೆರನ ವೇದನಾಜಡತೆಯನ್ನು ಉಂಟುಮಾಡುವುದಲ್ಲದೆ ಕೆಲವೇ ಗಂಟೆಗಳಲ್ಲಿ ಸಾವನ್ನು ತರಬಲ್ಲದು. ಬೇರಿಗೆ ಉಪಶಾಮಕ ಪ್ರಭಾವ ಉಂಟು. ಪ್ರಕಂದವನ್ನು ಶಕ್ತಿವರ್ಧಕ, ಮೂತ್ರಸ್ರಾವ ಉತ್ತೇಜಕ, ಉದ್ದೀಪಕ, ಸೆಳವು ರೋಧಕ, ಋತುಸ್ರಾವ ಪ್ರಚೋದಕ, ವಿರೇಚಕ–ಹೀಗೆ ಹಲವಾರು ಬಗೆಯಲ್ಲಿ ಉಪಯೋಗಿಸಲಾಗುತ್ತದೆ. ಅಲ್ಲದೆ ಪ್ರಕಂದದ ಕಷಾಯ ಗರ್ಭೋನ್ಮಾದ, ಕಂಪವಾತ, ಅಪಸ್ಮಾರ ಮುಂತಾದ ಬೆಳೆವಣಿಗೆಯನ್ನು ಪ್ರಚೋದಿಸುತ್ತದೆ. (ವಿ.ಎಸ್.ವೈ.)

**ಜಟಾಯು :** ರಾಮಾಯಣ, ಮಹಾಭಾರತ ಮತ್ತು ಪುರಾಣಗಳಲ್ಲಿ ಪ್ರಸಿದ್ಧನಾಗಿರುವ ಒಬ್ಬ ಪಕ್ಷಿರಾಜ. ವಿನತೆಯ ಪುತ್ರನಾದ ಅರುಣನಿಂದ ಶ್ಯೇನಿ ಎಂಬುವಳಲ್ಲಿ ಜನಿಸಿದವ. ಸಂಪಾತಿ ಇವನ ಅಣ್ಣ. ಇವರಿಬ್ಬರೂ ಪರಸ್ಪರ ವೇಗವನ್ನು ಪರೀಕ್ಷಿಸಿ ತಿಳಿದುಕೊಳ್ಳುವ ಇಚ್ಛೆಯಿಂದ ಆಕಾಶದಲ್ಲಿ ಬಹುಮೇಲೆ ಹೋದಾಗ, ಜಟಾಯು ಸೂರ್ಯತಾಪದಿಂದ ಮೋಹಗೊಳ್ಳುತ್ತಾನೆ. ಅದನ್ನು ಕಂಡ ಸಂಪಾತಿ ಇವನ ಮೇಲೆ ತನ್ನ ರೆಕ್ಕೆಗಳನ್ನು ಅಗಲಿಸಿಕೊಂಡು ಬಂದರೂ ಇವನು ಸೊರಗಿ ದಂಡಕಾರಣ್ಯದಲ್ಲಿ ಬೀಳುತ್ತಾನೆ; ಸಂಪಾತಿ ದಕ್ಷಿಣ ಸಮುದ್ರತೀರದಲ್ಲಿ ಬಿದ್ದು ಒಬ್ಬ ಮುನಿಯಿಂದ ರಕ್ಷಿತನಾಗುತ್ತಾನೆ. ಚೇತರಿಸಿಕೊಂಡ ಜಟಾಯು ದಂಡಕಾರಣ್ಯದ ಒಂದು ಗುಹೆಯಲ್ಲಿ ವಾಸಿಸುತ್ತಿದ್ದು ವನವಾಸಕ್ಕೆಂದು ಆ ಪ್ರದೇಶದಲ್ಲಿ ಸಂಚರಿಸುತ್ತಿದ್ದ ರಾಮ, ಲಕ್ಷ್ಮಣ ಸೀತೆಯರನ್ನು ಸಂಧಿಸುತ್ತಾನೆ. ತಾನೂ ದಶರಥನೂ ಬಾಲ್ಯಸ್ನೇಹಿತರೆಂದು ತಿಳಿಸಿ ಅವರಿಗೆ ಎಲ್ಲ ಸಹಾಯದ ಭರವಸೆ ನೀಡುತ್ತಾನೆ. ಸ್ವಲ್ಪ ಕಾಲಾನಂತರ ಸೀತೆಯನ್ನು ಅಪಹರಿಸಿಕೊಂಡು ಹೋಗುತ್ತಿದ್ದ ರಾವಣನೊಡನೆ ಹೋರಾಡುತ್ತಾನೆ. ಆಗ ರಾವಣ ಇವನ ರೆಕ್ಕೆಗಳನ್ನು ಕತ್ತರಿಸಿದ್ದರಿಂದ ಕೆಳಗೆ ಬೀಳುತ್ತಾನೆ. ತರುವಾಯ ಸೀತೆಯನ್ನು ಹುಡುಕುತ್ತ ಬಂದ ರಾಮಲಕ್ಷ್ಮಣರನ್ನು ಕಂಡು ಅವರಿಗೆ ಸೀತಾವೃತ್ತಾಂತವನ್ನು ತಿಳಿಸಿ ಪ್ರಾಣತ್ಯಾಗ ಮಾಡುತ್ತಾನೆ. ಇವನ ಉತ್ತರಕ್ರಿಯಾದಿಗಳನ್ನು ರಾಮ ಮಾಡುತ್ತಾನೆ. ಮಹಾಭಾರತದ ಪ್ರಕಾರ ಜಟಾಯುವಿಗೆ ಕರ್ಣಿಕಾರ, ಶತಗಾಮಿ, ಸಾರಸ, ರಜ್ಜುಬಾಲ, ಭೇರುಂಡ ಎಂಬುದಾಗಿ ಐವರು ಮಕ್ಕಳು. (ಬಿ.ಕೆ.ಎಸ್.)

**ಜಟಾವರ್ಮ ಕುಲಶೇಖರ ಪಾಂಡ್ಯ :** 1190–1216. ಮಧುರೆಯ ಪಾಂಡ್ಯವಂಶದ ದೊರೆ. ಬಹುಶಃ ವಿಕ್ರಮ ಪಾಂಡ್ಯನ (1182–90) ಮಗ. ಚೋಳರಾಜ 3ನೆಯ ಕುಲೋತ್ತುಂಗನ ನೆರವಿನಿಂದ ವಿಕ್ರಮ ಪಾಂಡ್ಯ ಪಟ್ಟಕ್ಕೆ ಬಂದಿದ್ದ. ಆದರೆ ಜಟಾವರ್ಮ ಚೋಳರ ಅಧಿರಾಜತ್ವವನ್ನು ಧಿಕ್ಕರಿಸಿ ಬಂಡೆದ್ದು ಬಹುಪಾಲು ಯಶಸ್ವಿಯಾದ. ಈತನ ಕಾಲದಿಂದ ಪಾಂಡ್ಯರು ಸ್ವತಂತ್ರರಾಗತೊಡಗಿದರೆಂಬುದು ಇತಿಹಾಸಕಾರರ ಹೇಳಿಕೆ. ರಾಜಗಂಭೀರ ಎಂಬ ಬಿರುದು ಪಡೆದ ಈತ ಮಧುರೆ, ರಾಮನಾಡು, ತಿನ್ನವೆಲ್ಲಿ ಪ್ರದೇಶಗಳ ಮೇಲೆ ಸ್ವಾಮ್ಯ ಪಡೆದಿದ್ದ. ತಿರುವಾಂಕೂರು ಪ್ರದೇಶವೂ ಇವನಿಗೆ ಅಧೀನವಾಗಿತ್ತು. ಇವನ ಅನಂತರ ಇವನ ಸೋದರ ಮಾರವರ್ಮ 1ನೆಯ ಸುಂದರ ಪಾಂಡ್ಯ (1216–38) ಪಟ್ಟವೇರಿದ. (ಎಸ್.ಎನ್.ಕೆ.ಎ.)

**ಜಟ್ಟಿ ತಾಯಮ್ಮ :** 1862–1947. ಪ್ರಸಿದ್ಧ ಭರತನಾಟ್ಯ ಪ್ರವೀಣೆ, ಸಂಗೀತ ವಿದುಷಿ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಖಾಸಾ ಊಳಿಗದವರಾಗಿದ್ದ ಜಟ್ಟಿ ದಾಸಪ್ಪನವರ ಪುತ್ರಿ. ಚಿಕ್ಕ ವಯಸ್ಸಿನಿಂದಲೂ ಈಕೆಗೆ ಸಂಗೀತದಲ್ಲಿ ಅಭಿರುಚಿ. ತಂದೆ ಆಂಧ್ರದ ತೆಲುಗು ಜಾವಡಿ, ಮೂವ–ಗೋಪಾಲ, ಕ್ಷೇತ್ರಜ್ಞ ಪದದಲ್ಲಿ ಹೆಸರುವಾಸಿಯಾಗಿದ್ದರು. ತಂದೆ ಕಲಿಸಿದ ಪಾಠವಲ್ಲದೆ ಈಕೆಗೆ ಸುಬ್ಬರಾಯಪ್ಪನವರಿಂದ ಭರತನಾಟ್ಯ ಶಿಕ್ಷಣವೂ ಲಭಿಸಿತು.

ಕ್ರಮೇಣ ತಾಯಮ್ಮ ಕವೀಶ್ವರ ಗಿರಿಯಪ್ಪನವರಿಂದ ಅಭಿನಯ, ಚಂದ್ರಶೇಖರ ಶಾಸ್ತ್ರಿಗಳಿಂದ ತೆಲುಗು ಜಾವಡಿ ಮತ್ತು ಪದಗಳು, ಅಭಿನವ ಕಾಳಿದಾಸ ಆಸ್ಥಾನ ವಿದ್ವಾನ್ ಬಸವಪ್ಪಶಾಸ್ತ್ರಿಗಳಿಂದ ಕನ್ನಡ ಜಾವಡಿ ಮತ್ತು ಪದಗಳನ್ನು ಕಲಿತರು. ಅನಂತರ ತಮ್ಮ ಹದಿನೈದನೆಯ ವರ್ಷದಲ್ಲಿ ಅರಮನೆಗಳಲ್ಲಿ ಭರತನಾಟ್ಯ ಪ್ರದರ್ಶನವೊಂದನ್ನು ನೀಡಿ ವಿದ್ವಾಂಸರ ಮೆಚ್ಚುಗೆ ಪಡೆದು ರಾಜನರ್ತಕಿಯಾಗಿ ನೇಮಿಸಲ್ಪಟ್ಟರು. ಆದರೆ ಕಾರಣಾಂತರಗಳಿಂದ ಕೆಲವು ದಿನಗಳಲ್ಲಿಯೇ ಅರಮನೆಯ ವೃತ್ತಿಯಿಂದ ದೂರ ಉಳಿದರು. ಆಮೇಲೆ ಚಾಮರಾಜ ಒಡೆಯರ ಆಹ್ವಾನದ ಮೇಲೆ ವಿಶೇಷ ದಿನಗಳಲ್ಲಿ ರಾಜಸಭೆಗಳಲ್ಲಿ ನೃತ್ಯ ಮಾಡುತ್ತಿದ್ದರು.

ನವವ್ಯಾಕರಣಪಂಡಿತ ಶೃಂಗೇರಿ ಮಠದ ಸರ್ವಾಧಿಕಾರಿಯಾಗಿದ್ದ ಸುಬ್ರಹ್ಮಣ್ಯ ಶಾಸ್ತ್ರಿಯವರಿಂದ ತಾಯಮ್ಮ ಬಹುಕಾಲ ಸಂಸ್ಕೃತ ಶಿಕ್ಷಣ ಪಡೆದಿದ್ದುದರಿಂದ ಅಭಿನಯಕ್ಕಾಗಿ ಅವರು ಹೆಚ್ಚಾಗಿ ಗೀತಗೋವಿಂದ, ಅಮರುಕ, ಕೃಷ್ಣಕರ್ಣಾಮೃತ ಮತ್ತು ಕಾಳಿದಾಸಾದಿಗಳ ಕೃತಿಗಳನ್ನು ಬಳಸುತ್ತಿದ್ದರು. ಅವರಲ್ಲಿ ಕನ್ನಡ, ತೆಲುಗು ಜಾವಡಿ ಮತ್ತು ಪದಗಳ ಭಂಡಾರವೇ ಇತ್ತು. ಸಂಗೀತಶಾಸ್ತ್ರ ವಿಶಾರದ ಆಸ್ಥಾನ ವಿದ್ವಾನ್ ವಾಸುದೇವಾಚಾರ್ಯರು ತಾಯಮ್ಮನವರಿಗೆ ರಾಗಮಾಲಿಕೆಯ ಒಂದು ವಾಮನಸ್ತೋತ್ರವನ್ನು ಅನುಗ್ರಹಿಸಿದ್ದರು. ತಾಯಮ್ಮನವರ ಕಲಾದೃಷ್ಟಿ ಪ್ರಾಂತ್ಯಭಾವನೆಗಳಿಂದ ದೂರವಾಗಿ ಬಹು ವಿಶಾಲವಾಗಿತ್ತು. ಉತ್ತರಾದಿ ಸಂಗೀತವನ್ನೂ ಶ್ರೇಷ್ಠ ಕಲಾವಿದರಿಂದ ಅಭ್ಯಾಸಮಾಡಿ ಠುಮರಿ, ಗಜ಼ಲ್ ಇತ್ಯಾದಿಗಳಿಗೆ ಮನಮೋಹಕವಾಗಿ ಅಭಿನಯ ನೀಡುತ್ತಿದ್ದುದು ಇದಕ್ಕೆ ಸಾಕ್ಷಿಯಾಗಿದೆ.

ಸುಮಾರು 1935ರಲ್ಲಿ ರಾಗಿಣಿದೇವಿ, ಮಿಸಿ ಮೇಯೊ ಮತ್ತು ಐರ್ಲೆಂಡಿನ ಕೆಲವು ಮಹಿಳೆಯರು ಮೈಸೂರಿಗೆ ಬಂದು ಇವರಿಂದ ಭರತನಾಟ್ಯ ಶಿಕ್ಷಣ ಪಡೆದರೆನ್ನಲಾಗಿದೆ. 1945ನೆಯ ಇಸವಿಯಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಒಂದು ಮಹೋತ್ಸವದಲ್ಲಿ ಇವರ ಅಭಿನಯವನ್ನು ವೀಕ್ಷಿಸಿ ಮೆಚ್ಚಿದ ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ಇವರಿಗೆ ನಾಟ್ಯಸರಸ್ವತಿ ಎಂಬ ಬಿರುದನ್ನಿತ್ತು ಗೌರವಿಸಿದರು.

ಜಟ್ಟಿತಾಯಮ್ಮ ರೂಢಿಸಿದ ಶಾಸ್ತ್ರೀಯ ಭರತನಾಟ್ಯ ಸಂಪ್ರದಾಯ ಹಳೆಯ ಮೈಸೂರು ಪ್ರದೇಶದಲ್ಲಿ ಇಂದಿಗೂ ಸ್ಥಿರವಾಗಿ ಉಳಿದಿದೆ. (ಕೆ.ವಿ.)

**ಜಟ್ಲೆಂಡ್ :** ಯುರೋಪಿನಲ್ಲಿ ಪಶ್ಚಿಮ ಜರ್ಮನಿಯಿಂದ ಉತ್ತರಕ್ಕೆ ಚಾಚಿ, ಉತ್ತರ ಸಮುದ್ರ ಮತ್ತು ಕ್ಯಾಟಿಗ್ಯಾಟ್ ಕಡಲತೋಳಿನ ನಡುವೆ ವಿಸ್ತರಿಸಿರುವ ಪರ್ಯಾಯ ದ್ವೀಪ. ಡೆನ್ಮಾರ್ಕ್ ದೇಶದ ಭೂಪ್ರದೇಶ, ಶ್ಲೆಸ್‌ವಿಗ್–ಹೋಲ್ಸ್ಟೈನ್ ರಾಜ್ಯ, ಪಶ್ಚಿಮ ಜರ್ಮನಿಗಳನ್ನೊಳಗೊಂಡಿದೆ. ರಾಜಕೀಯವಾಗಿ ಡೇನಿಷ್ ಭೂಪ್ರದೇಶಕ್ಕೆ ಮಾತ್ರ ಈ ಹೆಸರು ಅನ್ವಯಿಸುತ್ತದೆ. ಇದು ಲಿಮ್ ಫೋರ್ಡ್ ಉತ್ತರ ದ್ವೀಪಗಳನ್ನು ಒಳಗೊಳ್ಳುತ್ತದೆ. ಒಂದನೆಯ ಮಹಾಯುದ್ಧದ ಸಮಯದಲ್ಲಿ ಈ ಪ್ರದೇಶದ ಪಶ್ಚಿಮ ಕರಾವಳಿಯ ಬಳಿ ನಡೆದ ನೌಕಾಕದನ ಜಟ್ಲೆಂಡ್ ಕದನ (**ನೋಡಿ**) ಎಂದು ಪ್ರಸಿದ್ಧವಾಗಿದೆ.

(ಎಸ್.ಎನ್.ಎಆರ್.ಇ.)

**ಜಟ್ಲೆಂಡ್ ಕದನ :** ಒಂದನೆಯ ಮಹಾಯುದ್ಧದಲ್ಲಿ ನಡೆದ ದೊಡ್ಡ ಸಮುದ್ರಕದನ. 1916ರ ಮೇ 31ರಂದು ನಡೆಯಿತು. ಆ ಕಾಲದ ಪ್ರಸಿದ್ಧ ಬ್ರಿಟಿಷ್ ಮತ್ತು ಜರ್ಮನ್ ನೌಕಾದಳಗಳು ಡೆನ್ಮಾರ್ಕಿನ ಪಶ್ಚಿಮಕ್ಕೆ ಉತ್ತರ ಸಮುದ್ರದಲ್ಲಿ ಒಂದನ್ನೊಂದು ಎದುರಿಸಿದುವು.

28 ಸಮರನೌಕೆಗಳು, 9 ಸಮರ ಕ್ರೂಸರ್‌ಗಳು, 33 ಕ್ರೂಸರ್‌ಗಳು ಮತ್ತು ಡಿಸ್ಟ್ರಾಯರ್‌ಗಳು–ಇದು ಬ್ರಿಟಿಷ್ ದಳದ ಬಲ. ಜರ್ಮನ್ ದಳದಲ್ಲಿ 22 ಸಮರ ನೌಕೆಗಳು, 5 ಸಮರ ಕ್ರೂಸರ್‌ಗಳು, 11 ಲಘು ಕ್ರೂಸರ್‌ಗಳು ಮತ್ತು 72 ಡಿಸ್ಟ್ರಾಯರ್‌ಗಳಿದ್ದವು. ಬ್ರಿಟಿಷ್ ದಳಗಳಿಗೆ ಜೆಲಿಕೋ, ಜರ್ಮನ್ ದಳಗಳಿಗೆ ಷೀರ್ ನಾಯಕರಾಗಿದ್ದರು.

ಅಂದಿನ ಯುದ್ಧದಲ್ಲಿ ಎರಡು ಪಡೆಗಳಿಗೂ ಸಾಕಷ್ಟು ನಷ್ಟ ಉಂಟಾಯಿತು. ಜರ್ಮನರು ತಮಗೆ ಗೊತ್ತಿಲ್ಲದೆಯೇ ತಮ್ಮದಕ್ಕಿಂತಲೂ (45,000 ಸೈನಿಕರು) ದೊಡ್ಡದಾಗಿದ್ದ ಬ್ರಿಟಿಷ್ ಬಲವನ್ನು (60,000 ಸೈನಿಕರು) ಆಕಸ್ಮಿಕವಾಗಿ ಎದುರಿಸಬೇಕಾಯಿತು. ಜರ್ಮನ್ ದಳವನ್ನು ಸುತ್ತುವರಿಯುವುದರಲ್ಲಿ ಜೆಲಿಕೋ ಸಫಲನಾದ. ಅಗಾಧ ಬ್ರಿಟಿಷ್ ದಳವನ್ನು ಕಂಡ ಜರ್ಮನ್ ನೌಕೆಗಳು ತಮ್ಮ ನೆಲೆಗೆ ಹಿಂದಿರುಗಿದುವು. ಅಂತೆಯೇ ಬ್ರಿಟಿಷ್ ದಳಗಳೂ ಹಿಂದಿರುಗಬೇಕಾಯಿತು. ಸೋಲು ಗೆಲುವಿನ ಇತ್ಯರ್ಥವಾಗದೆ ಎರಡೂ ಪಡೆಗಳೂ ಹಿಂದೆಗೆದರೂ ಇದರ ಪರಿಣಾಮ ಜರ್ಮನರ ಮೇಲೆ ವಿಶೇಷವಾಗಿ ಆಯಿತು. ಅಂದಿನಿಂದ ಜರ್ಮನರ ಸಾಗರಪ್ರಭುತ್ವ ಕುಂದಿತು.

ಹೋರಾಟದಲ್ಲಿ ತೊಡಗಿದ್ದ ತಂಡಗಳ ಸಾಮರ್ಥ್ಯ ಮತ್ತು ತೀಕ್ಷ್ಣತೆ ಇವುಗಳನ್ನು ಗಮನದಲ್ಲಿಟ್ಟುಕೊಂಡರೆ, ಟ್ರಫಾಲ್ಗರ್ ಕದನದ ಅನಂತರ ನಡೆದ ಕಡಲ ಕದನಗಳಲ್ಲಿ, ಇದು ಇತಿಹಾಸದಲ್ಲಿ ಒಂದು ದೊಡ್ಡ ಕದನವೆಂದು ಹೇಳಬಹುದು. ಇದರಲ್ಲಿ ಜರ್ಮನರಿಗಿಂತ ಬ್ರಿಟಿಷರೇ ಹೆಚ್ಚು ಕಷ್ಟನಷ್ಟಗಳನ್ನು ಅನುಭವಿಸಿದರು. ಈ ಕದನದಲ್ಲಿ ಬ್ರಿಟಿಷರು 3 ಯುದ್ಧನೌಕೆಗಳ, 3 ಇತರ ನೌಕೆಗಳು, 8 ಟಾರ್‌ಪೆಡೊ ದೋಣಿಗಳನ್ನು ಕಳೆದುಕೊಂಡರು. ಇದಕ್ಕೆ ಪ್ರತಿಯಾಗಿ ಜರ್ಮನರ ಒಂದು ಯುದ್ಧ ನೌಕೆ, ಒಂದು ಕದನನೌಕೆ, 4 ಹಗುರ ನೌಕೆಗಳು ಮತ್ತು 5 ಟಾರ್‌ಪೆಡೊ ದೋಣಿಗಳು ನಾಶವಾದವು. ಬ್ರಿಟಿಷ್ ಪಡೆಯ 6,274 ಅಧಿಕಾರಿಗಳು ಮತ್ತು ಸೈನಿಕರು ಸತ್ತರು ಅಥವಾ ಕೈಸೆರೆಯಾದರು. ಜರ್ಮನಿಯ ಕಡೆ ಅಧಿಕಾರಿಗಳು ಮತ್ತು ಸೈನಿಕರು ಸೇರಿದಂತೆ 2,545 ಮಂದಿ ಸತ್ತರು. ಹೆಚ್ಚು ಸಾವುನೋವು ಅನುಭವಿಸಿದರೂ ಉತ್ತರ ಸಾಗರದಲ್ಲಿ ಬ್ರಿಟಿಷ್ ದಳ ಮೇಲುಗೈ ಪಡೆಯಿತು. ಯುದ್ಧದ ಉಳಿದ ಕಾಲದಲ್ಲಿ ಜರ್ಮನ್ ದಳ ಮೂರು ಸಾರಿ ಮಾತ್ರ ತನ್ನ ರೇವು ಬಿಟ್ಟು ಹೊರಬರಲು ಪ್ರಯತ್ನಿಸಿತು. ಆದರೆ ಎರಡು ಸಂದರ್ಭಗಳಲ್ಲಿ ಶೀಘ್ರವಾಗಿ ತನ್ನ ನೆಲೆಗಳಿಗೆ ಹಿಂದಿರುಗಬೇಕಾಯಿತು. 1918ರ ನವೆಂಬರಿನಲ್ಲಿ ಸಮುದ್ರಕ್ಕೆ ಇಳಿಯುವಂತೆ ಮತ್ತೆ ಅದಕ್ಕೆ ಆಜ್ಞಾಪಿಸಿದಾಗ ಜರ್ಮನ್ ನೌಕಾದಳದಲ್ಲಿ ದಂಗೆ ಎದ್ದಿತು. ಇದು ಜರ್ಮನ್ ಪ್ರಭುತ್ವ ಅಳಿಯುವುದರ ಸೂಚನೆಯೂ ಆಗಿತ್ತು. ಜಟ್‌ಲಂಡ್ ಕದನದಲ್ಲಿ ತಾವು ಗೆದ್ದೆವೆಂದು ಜರ್ಮನರು ಹೇಳಿಕೊಂಡರೂ ಬ್ರಿಟಿಷ್ ನೌಕಾದಳದ ಶಕ್ತಿಯನ್ನು ಕುಂದಿಸುವುದು ಅವರಿಂದಾಗಲಿಲ್ಲ; ಅವರು ಅದಕ್ಕೆ ಪ್ರಯತ್ನಿಸಲೂ ಇಲ್ಲ. ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿನ ಪ್ರಜಾಪ್ರಭುತ್ವ ಹಾಗೂ ಮಿಕ್ಕೆಡೆಗಳಲ್ಲಿಯ ಸ್ವಾತಂತ್ರ್ಯವನ್ನು ರಕ್ಷಿಸುವುದು ಈ ಕದನದಿಂದ ಬ್ರಿಟಿಷರಿಗೆ ಸಾಧ್ಯವಾಯಿತು. (ಎಚ್.ವಿ.ಎಸ್.ಎಂ.)

**ಜಠರ :** ಉದರದ ಮೇಲುಭಾಗದಲ್ಲಿ ದೇಹಮಧ್ಯಗೆರೆಯ ಎಡ ಬಲಗಳಲ್ಲಿ ಪ್ರಸರಿಸಿರುವ ಚೀಲರೂಪದ ಒಂದು ಅಂಗ (ಸ್ಟಮಕ್). ಅನ್ನಾಶಯ ಪರ್ಯಾಯ ನಾಮ. ಇದು ಜೀರ್ಣನಾಳದ (**ನೋಡಿ**) ಅತ್ಯಂತ ಹಿಗ್ಗಿದ ಭಾಗ. ಮುಂದುವರಿದ ಅನ್ನನಾಳವು (ಈಸೋಫೇಗಸ್) ಜಠರವೂ, ಮುಂದುವರಿದ ಜಠರವು ಸಣ್ಣ ಕರುಳೂ ಆಗುತ್ತವೆ. ಜಠರವೂ ಉದರದ (ನೋಡಿ) ಹೊಟ್ಟೆ ಕುಳಿ, ಹೊಕ್ಕಳು ಮತ್ತು ಎಡಮೆಲ್ಲೆಲುವಡಿ ಪ್ರದೇಶಗಳಲ್ಲಿ ಪಸರಿಸಿದೆ. ಇದು ಯಕೃತ್ತಿನ ಎಡ ಹಿಂಭಾಗದಲ್ಲಿ ಉಂಟು. ಜಠರದ ಲಂಬಾಕ್ಷ ಕೋಚಾಗಿ ಎಡಭಾಗದಲ್ಲಿ ಬೆನ್ನಕಡೆ ಪ್ರಾರಂಭವಾಗಿ ಕೆಳಮುಖವಾಗಿ ಬಲಕ್ಕೂ ಮುಂದಕ್ಕೂ ಮುಂದುವರಿದು ಅನಂತರ ತಟ್ಟನೆ ಹಿಂದಕ್ಕೆ ತಿರುಗಿ ಅಂತ್ಯಗೊಳ್ಳುವುದು. ಈ ಅಕ್ಷದ ಪ್ರಾರಂಭದ ಭಾಗ ಎಡಮೆಲ್ಲೆಲುವಡಿ ಪ್ರದೇಶದಲ್ಲಿರುವ ಜಠರದ ಗೋಳಾಕೃತಿಯ, ಎಡ ಹಾಗೂ ಊರ್ಧ್ವತುದಿಯಾದ ಫಂಡಸ್ ಅಂತ್ಯಭಾಗ ಪೈಲೋರಿಕ್ ನಾಲೆ. ಇದು ಡುಯೋಡಿನಮ್ (ಮುಂಗರುಳು) ಎಂಬ ಚಿಕ್ಕ ಕರುಳಿನ ಪ್ರಥಮ ಭಾಗವಾಗಿ ಮುಂದುವರಿಯುತ್ತದೆ. ಜಠರದ ಮೇಲ್ಮೈಯಲ್ಲಿ ಈ ಸಂಧಿಸ್ಥಳ ಒಂದು ಸಣ್ಣ, ಆದರೆ ನಿಖರವಾಗಿ ಗುರುತಿಸಬಹುದಾದ ಇಳಿಗೆರೆಯಾಗಿ ಕಂಡುಬರುತ್ತದೆ. ಜಠರ ಕೊಂಕಾಗಿ ತನ್ನ ಮೇಲೇ ಮಡಚಿಕೊಂಡಿರುವುದರಿಂದ ಅಕ್ಷದ ಪ್ರಾರಂಭ ಅಂತ್ಯಗಳೆರಡೂ ಹಿಮ್ಮುಖವಾಗಿವೆ. ಮೇಲಂಚಿನ ಬಲತುದಿಯ ಹತ್ತಿರ ಈ ಮಡಿಕೆ ಒಂದು ಕಚ್ಚನ್ನು ಉಂಟು ಮಾಡುತ್ತದೆ. ಇದಕ್ಕೆ ಕೋನಕಚ್ಚು ಎಂದು ಹೆಸರು. ಇದರಿಂದ ಒಂದು ಲಂಬವನ್ನು ಎಳೆದು ಈ ಗೆರೆಗೆ ಎಡಬಲಭಾಗಗಳಲ್ಲಿರುವ ಜಠರದ ಭಾಗಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗಿದೆ. ಎಡಭಾಗಕ್ಕೆ ಕಾರ್ಡಿಆ್ಯಕ್ ಭಾಗವೆಂದೂ ಬಲಭಾಗಕ್ಕೆ ಪೈಲೋರಸ್ ಭಾಗವೆಂದೂ ಹೆಸರು. ಅಪರೂಪವಾಗಿ ಇವೆರಡು ಭಾಗಗಳನ್ನೂ ಜಠರದಲ್ಲಿ ಒಂದು ಕಂಠದಿಂದ ಬೇರೆ ಮಾಡಲ್ಪಟ್ಟ ಎರಡು ಚೀಲಗಳಂತೆ, ಗುರುತಿಸಬಹುದು. ಕಾರ್ಡಿಆ್ಯಕ್ ಭಾಗಕ್ಕೆ ಮೇಲೆ ಹೇಳಿದ ಫಂಡಸ್ ಸೇರಿದೆ. ಅನ್ನನಾಳ ಜಠರಕ್ಕೆ ತೆರೆದುಕೊಳ್ಳುವ ದ್ವಾರದ ಎಡಕ್ಕೂ ಆ ನೇರದಿಂದ ಸುಮಾರು 2" ಮೇಲಕ್ಕೂ ಉಬ್ಬಿದಂತೆ ಇರುವುದೇ ಫಂಡಸ್. ಕಾರ್ಡಿಆ್ಯಕ್ ಭಾಗದ ಉಳಿದ ಭಾಗವೇ ಜಠರದ ಕಾಯ(ಬಾಡಿ). ಜಠರದ ಕೆಳ ಅಂಚಿನಲ್ಲಿ ಅದರ ಬಲತುದಿಯ ಹತ್ತಿರ ಒಂದು ಗೆರೆ ಇದೆ. ಆದರೆ ಎಡಕ್ಕೆ ಇರುವುದು ತೆಳುಭಿತ್ತಿಯ ಪೈಲೋರಿಕ್ ನಡುವೆ (ಆಂಟ್ರಮ್), ಬಲಕ್ಕೆ ಇರುವುದು ಸುಮಾರು 1"–1¼ ಉದ್ದದ ದಪ್ಪಭಿತ್ತಿಯ ಪೈಲೋರಿಕ್ ನಾಲೆ. ಇವು ಪೈಲೋರಿಕ್ ಭಾಗದ ಎರಡು ವಿಭಾಗಗಳು. ಜೀರ್ಣವಾಗುವ ಕಾಲದಲ್ಲಿ ಜಠರದ ನೀಚಭಾಗ ಸಂಕುಚಿಸಿ ನಾಳದ ಆಕಾರವನ್ನು ತಳೆದು ಸರ್ಪಗತಿ ಚಲನವನ್ನು ಪ್ರದರ್ಶಿಸುತ್ತದೆ. ಆಗ ಒಳಗಿರುವ ಆಹಾರ ಚೆನ್ನಾಗಿ ಮರ್ದನಗೊಂಡು ಜಠರರಸದೊಡನೆ ಮಿಶ್ರವಾಗಿ ದ್ರವೀಕರಿಸಲ್ಪಡುತ್ತದೆ.

ಅನ್ನನಾಳವು ಜಠರಕ್ಕೆ ತೆರೆದುಕೊಳ್ಳುವ ದ್ವಾರಕ್ಕೆ ಕಾರ್ಡಿಆ್ಯಕ್ ದ್ವಾರವೆಂದು ಹೆಸರು. ದೇಹಮಧ್ಯಗೆರೆಗೆ ಸುಮಾರು 1" ಎಡಕ್ಕೆ, ಎದೆಮೂಳೆಯ ಕೆಳತುದಿಯ ಕೆಳಗೆ ಉದರದ ಮುಂದಿನ ಭಿತ್ತಿಗೆ ಸುಮಾರು 4" ಹಿಂಭಾಗದಲ್ಲಿ ಬಾಚಿಹಲ್ಲುಗಳಿಂದ ಸುಮಾರು 16" ಅಂತರದಲ್ಲಿ ಯಕೃತ್ತಿನ ಹಿಂದೆ ಇದೆ. ಈ ಸಂಧಿಸ್ಥಳದ ಎಡಬಲ ಭಾಗಗಳಿಂದ ಮುಂದಕ್ಕೆ ಪೈಲೋರಿಕ್ ತುದಿಯ ಪರ್ಯಂತ ಗಮನಿಸುವ ಜಠರದ ಎರಡು ಅಂಚುಗಳನ್ನು ಗುರುತಿಸಬಹುದು. ಕಾರ್ಡಿಆ್ಯಕ್ ದ್ವಾರದ ಬಲಗಡೆಯಿಂದ ಮುಂದುವರಿಯುವ ಜಠರದ ಮೇಲಂಚು ಅದರ ಸಣ್ಣ ಅಂಚೂ ಬಲ ಅಂಚೂ ಆಗಿದೆ. ಕೆಲವು ಸಮಯ ಇದು ಜಠರದ ಹಿಂದಿನ ಅಂಚಿನಂತೆ ಕಾಣಿಸುತ್ತದೆ. ಇದು ಬಲಕ್ಕೆ ನಿಮ್ನ ಮಧ್ಯವಾಗಿ ನೆರೆಯ ಯಕೃತ್ತು ಮೇದೋಜೀರಕಾಂಗಗಳ ಭಾಗಗಳನ್ನು ಬಳಸಿ ಸಾಘಾಗಿ ಸಾಗುವ ಡೊಂಕುರೇಖೆಯಂತೆ ಇರುವುದರಿಂದ ಇದಕ್ಕೆ ಜಠರದ ಕಿರಿಡೊಂಕು (ಲೆಸ್ಸರ್ ಕರ್ವೇಚರ್) ಎಂಬ ಹೆಸರುಂಟು. ಇದರ ಅತ್ಯಂತ ಕೆಳಭಾಗದಲ್ಲಿ ಕೋನಕಚ್ಚು ಇದೆ. ಜಠರದ ಕಿರಿಡೊಂಕು ಯಕೃತ್ತಿಗೆ ಕಿರಿ ಒಮೆನ್‌ಟಮ್ ಎಂಬ ಎರಡು ಪದರಗಳ ಒಂದು ಹಾಳೆಯಿಂದ ಸೇರಿಸಲ್ಪಟ್ಟಿದೆ. ಈ ಹಾಳೆಯ ಪದರಗಳ ನಡುವೆ ಕಿರಿಡೊಂಕಿನ ಎಡಬಲತುದಿಗಳಿಂದ ರಕ್ತನಾಳಗಳು ಹಾಯ್ದು ಜಠರವನ್ನು ತಲುಪುತ್ತವೆ. ಜಠರದ ಎಡ ಅಂಚು ದೊಡ್ಡ ಅಂಚು ಸಣ್ಣ ಅಂಚಿಗಿಂತ 4–5 ಪಟ್ಟು ದೊಡ್ಡದು. ಇದು ಕಾರ್ಡಿಆ್ಯಕ್ ದ್ವಾರದ ಎಡಗಡೆಗಳಿಂದ ಮುಂದುವರಿದು ಪ್ರಾರಂಭದಲ್ಲಿ ಎಡಕ್ಕೂ ಊರ್ಧ್ವಮುಖವಾಗಿಯೂ ಕಮಾನಿನಂತೆ ಬಾಗಿ ಫಂಡಸ್ಸಿನ ಅಂಚಾಗುತ್ತದೆ. ಅಲ್ಲಿಂದ ಮುಂದೆ ಕೆಳಮುಖವಾಗಿಯೂ ಮುಮ್ಮುಖವಾಗಿಯೂ ಗಮಿಸುವ ಹಾಗೂ ಎಡಕ್ಕೆ ಉಬ್ಬಿಕೊಂಡು ಇರುವ ಬಾಗಿದ ರೇಖೆಯಾಗುವುದು. ಇನ್ನೂ ಮುಂದಕ್ಕೆ ಅದು ಬಲಕ್ಕೂ ಹಿಂಬಾಗಕ್ಕೂ ತಿರುಗುವ ಕೆಳಉಬ್ಬಿನ ರೇಖೆಯಾಗುತ್ತದೆ. ಈ ಸ್ಥಳದಲ್ಲಿ ಕಿರಿಡೊಂಕಿನಲ್ಲಿರುವ ಕೋನಕಚ್ಚಿನ ನೇರದಲ್ಲಿ ಒಂದು ಸಣ್ಣ ಉಬ್ಬು ಸಾಮಾನ್ಯವಾಗಿ ಇದ್ದು, ಅದರ ಸಹಾಯದಿಂದ ಜಠರದ ಎಡಬಲ ಭಾಗಗಳನ್ನು ವಿಂಗಡಿಸಬಹುದು. ಜಠರದ ದೊಡ್ಡ ಅಂಚು ಅದರ ಎಡ ಅಂಚು ಮಾತ್ರವೇ ಅಲ್ಲದೆ ಕೆಳಅಂಚೂ ಹೌದು. ಕೆಲವು ಸಮಯ ಅದು ಜಠರದ ಮುಂದಿನ ಅಂಚಿನಂತೆ ಕಾಣಿಸುತ್ತದೆ. ಉದ್ದಕ್ಕೂ ಈ ಅಂಚು ಕೂಡ ಡೊಂಕಾಗಿರುವುದರಿಂದ ಇದಕ್ಕೆ ಜಠರದ ಹಿರಿಡೊಂಕು (ಗ್ರೇಟರ್ ಕರ್ವೇಚರ್) ಎಂಬ ಹೆಸರುಂಟು. ಪ್ರಾರಂಭದಲ್ಲಿ ಈ ಅಂಚು ಫಂಡಸ್ಸಿಗೂ ಅನ್ನನಾಳಕ್ಕೂ ನಡುವೆ ಇರುವ ಕಾರ್ಡಿಆ್ಯಕ್ ಕಚ್ಚನ್ನು ಉಂಟುಮಾಡಿದೆ. ಫಂಡಸ್ಸಿನಲ್ಲಿ ಅತ್ಯಂತ ಉನ್ನತಭಾಗದಲ್ಲಿ ಈ ಅಂಚು ಎಡಸ್ತನಾಗ್ರದ ಕೆಳಗಿನ ನೇರದಲ್ಲಿದೆ. ಜಠರದ ಅತ್ಯಂತ ಕೆಳಭಾಗದಲ್ಲಿ ಈ ಅಂಚು ವ್ಯಕ್ತಿ ಶಯನಭಂಗಿಯಲ್ಲಿದ್ದಾಗ 10ನೆಯ ಪಕ್ಕೆಲುಬಿನ ಮೃದ್ವಸ್ಥಿಗಳ ನೇರದಲ್ಲಿ ಉಂಟು. ಆದರೆ ವ್ಯಕ್ತಿಯ ಊರ್ಧ್ವಭಂಗಿಯಲ್ಲಿ ಇದು ಜಠರದ ಅತ್ಯಂತ ಕೆಳಭಾಗವಾಗಿರುವುದು. ಆಹಾರದಿಂದ ತುಂಬಿದ್ದಾಗಲಂತೂ ಅದು ಹೊಕ್ಕುಳಿನ ನೇರದಲ್ಲಿ ಅಥವಾ ಇನ್ನೂ ಕೆಳಗೆ ಇರಬಹುದು. ಜಠರದ ಹಿರಿಡೊಂಕು ವಪೆಗೆ ಜಠರ ವಪೆಬಂಧನದಿಂದಲೂ ಗುಲ್ಮಕ್ಕೆ ಜಠರಗುಲ್ಮಬಂಧನದಿಂದಲೂ ಅಡ್ಡ ದೊಡ್ಡಕರುಳಿಗೆ ಹಿರಿ ಒಮೆನ್‌ಟಮ್ಮಿನಿಂದಲೂ ಸೇರಿಸಲ್ಪಟ್ಟಿದೆ. ಹಿರಿ ಒಮೆನ್‌ಟಮ್ಮಿನ ಎರಡು ಪದರಗಳ ನಡುವೆ ಹಿರಿ ಡೊಂಕಿನ ಎಡ ಬಲ ಭಾಗಗಳಿಂದ ರಕ್ತನಾಳಗಳು ಹಾಯ್ದು ಜಠರವನ್ನು ತಲುಪುತ್ತವೆ.

ಜಠರದ ಇನ್ನೊಂದು ದ್ವಾರ ಪೈಲೋರಿಕ್ ದ್ವಾರ. ಜಠರದ ಮೇಲ್ಮೈಯಲ್ಲಿ ಸುತ್ತಲೂ ಇರುವ ಒಂದು ಸಂದುಗೆರೆಯೂ ಪ್ರಿಪೈಲೋರಿಕ್ ಅಭಿಧಮನಿಯೂ ಇದರ ಸ್ಥಾನವನ್ನು ತೋರಿಸುತ್ತವೆ. ಪೈಲೋರಿಕ್ ದ್ವಾರ ದೇಹಮಧ್ಯಗೆರೆಯಿಂದ ಸುಮಾರು 1/2" ಬಲಕ್ಕೂ, ಸೊಂಟದ ಮೊದಲ ಕಶೇರುಮಣಿಯ ತಳಭಾಗದ ನೇರದಲ್ಲೂ ಇದೆ. ಈ ನೇರ ಎದೆಮೂಳೆಯ ಮೇಲಂಚಿಗೂ ಕಿಬ್ಬೊಟ್ಟೆ ಮೂಳೆಯ ಮೇಲಂಚಿಗೂ ಸಮಾಂತರದಲ್ಲಿದೆ. ಜಠರ ಖಾಲಿಯಾಗಿದ್ದಾಗ ಅಲ್ಲದೆ ವ್ಯಕ್ತಿ ಶಯನಭಂಗಿಯಲ್ಲಿದ್ದಾಗ ಪೈಲೋರಿಕ್ ದ್ವಾರ ಈ ನೇರದಲ್ಲಿ ಇರುವುದೆಂದು ವಿವರಿಸಿದರೂ ಜಠರದ ತುಂಬಿದ ಸ್ಥಿತಿ, ವ್ಯಕ್ತಿಯ ಭಂಗಿ–ಇವು ಅಷ್ಟಾಗಿ ಪೈಲೋರಿಕ್ ದ್ವಾರದ ಸ್ಥಳಪಲ್ಲಟಮಾಡುವುದಿಲ್ಲವೆಂಬುದು ತಿಳಿದಿದೆ.

ಜಠರದ ಎರಡು ಅಂಚುಗಳೂ ಜಠರದ ಊರ್ಧ್ವತಲ ನೀಚತಲಗಳು ಸಂಧಿಸುವ ಸ್ಥಳಗಳು. ಊರ್ಧ್ವತಲ ಊರ್ಧ್ವಮುಖವಾಗಿಯೂ ಮುಮ್ಮುಖವಾಗಿಯೂ ಉಂಟು. ಜಠರ ತುಂಬಿದ್ದಾಗ ಹೆಚ್ಚು ಮುಮ್ಮುಖವಾಗಿಯೂ ಖಾಲಿ ಇದ್ದಾಗ ಹೆಚ್ಚು ಊರ್ಧ್ವಮುಖವಾಗಿಯೂ ಇರುವುದು ಸಾಮಾನ್ಯ. ಜಠರದ ಈ ಮೈ ಇನ್ನೊಂದು ಮೈಗಿಂತ ಹೆಚ್ಚು

ಉಬ್ಬಿದ್ದು ಪೂರ್ಣವಾಗಿ ಕಿರಿಹಿರಿ ಒಮೆಂಟಮ್‌ಗಳನ್ನು ಸೇರಿಸುವ ಪೆರಿಟೋನಿಯಮ್ ಪದರದಿಂದ ಹೊದಿಸಲ್ಪಟ್ಟಿದೆ. ಇದರ ಎಡ ಮತ್ತು ಮೇಲುಭಾಗ ವಪೆಗೂ ಬಲ ಮತ್ತು ಮೇಲುಭಾಗ ಯಕೃತ್ತಿಗೂ ಕೆಳಭಾಗ ಉದರಭಿತ್ತಿಗೂ ತಾಕಿದೆ. ಜಠರದ ನೀಚತಲ ಜಠರತಲ್ಪದ ಮೇಲಿರುವ ಮೈ. ಇದು ಊರ್ಧ್ವತಲಕ್ಕಿಂತ ಚಪ್ಪಟೆಯಾಗಿದೆ. ಜಠರತಲ್ಪ ಬೆನ್ನಿನಿಂದ ಉದರದ ಮುಂಭಾಗದ ತನಕ ಕೆಳಮುಖವಾಗಿ ಇಳಿಜಾರಾಗಿ ಹರಡಿರುವ ಅನೇಕ ಅಂಗಗಳ ಸಂಪರ್ಕದಿಂದಾದ ಫಲಕ ಅಥವಾ ನಾಗೊಂದಿಗೆ. ವಪೆ, ಗುಲ್ಮ, ಎಡ ಅಡ್ರಿನಲ್ ಗ್ರಂಥಿ, ಎಡಮೂತ್ರಪಿಂಡದ ಊರ್ಧ್ವಭಾಗ, ಮೇದೋಜೀರಕಾಂಗ, ಅಡ್ಡ ದೊಡ್ಡ ಕರುಳಿನ ಹಾಳೆ ಮತ್ತು ಸ್ವಯಂ ಅಡ್ಡಕರುಳು–ಇವೆಲ್ಲವೂ ಜಠರತಲವೇರ್ಪಡಲು ಪಾಲ್ಗೊಳ್ಳುತ್ತವೆ.

ಜಠರದ ಈ ಮೇಲಿನ ವಿವರಣೆ ಕರಾರುವಾಕ್ಕೆಂದು ತಿಳಿಯಲಾಗದು. ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಜಠರದ ಆಕಾರ, ವಿಸ್ತಾರ, ಸ್ಥಾನಗಳು ಬೇರೆ ಬೇರೆಯಾಗಿರುತ್ತವೆ. ಗಮನಿಸಬೇಕಾದ ವಿಷಯವೆಂದರೆ ಕಾರ್ಡಿಆ್ಯಕ್ ದ್ವಾರವೂ ಫಂಡಸ್ಸಿನ ಸ್ಥಾನವೂ ಪಲ್ಲಟವಾಗದಿರುವಿಕೆ ಮತ್ತು ಪೈಲೋರಿಕ್ ತುದಿಯ ಸ್ಥಾನ ಹೆಚ್ಚು ಪಲ್ಲಟವಾಗದೇ ಇರುವುದು. ಜಠರದ ಲಂಬಾಕ್ಷದ ಎರಡು ತುದಿಗಳೂ ಹೀಗೆ ನಿರ್ದಿಷ್ಟ ಸ್ಥಾನದಲ್ಲಿದ್ದರೂ ಅವುಗಳ ನಡುವೆ ಇರುವ ಜಠರದ ಕಾಯ ಬಿಗಿತುಕೊಂಡು ಇಲ್ಲವೆ ಸಡಿಲವಾಗಿ ಇರಬಹುದು. ಕಾಯದ ಎರಡು ತಲಗಳು ಹಿಮ್ಮುಖ ಮುಮ್ಮುಖವಾಗಿ ಇಲ್ಲವೆ ಊರ್ಧ್ವನೀಚಮುಖವಾಗಿ ಇರಬಹುದು. ಅಂಚುಗಳು ಮೇಲಿನ ಕೆಳಗಿನ ಅಂಚುಗಳಾಗಿರದೆ ಮುಂದಿನ ಹಿಂದಿನ ಅಂಚುಗಳಾಗಿ ಕಾಣಬಹುದು. ಒಟ್ಟು ಜಠರದ ಆಕಾರ ಕುಡುಗೋಲಿನಂತಿರುವುದು ಸಾಮಾನ್ಯ. ಶವದ ಅಂಗಛೇದನಾ ವ್ಯಾಸಂಗದಲ್ಲಿ ಕಾಣಬರುವ ಜಠರದ ಆಕಾರ ವಿಸ್ತಾರ ಸ್ಥಾನಗಳೇ ಜೀವಂತಸ್ಥಿತಿಯಲ್ಲೂ ಇರುತ್ತವೆಯೆಂದು ತಿಳಿಯುವುದು ತಪ್ಪು. ಜೀವಂತಸ್ಥಿತಿಯಲ್ಲಿ ಖಾಲಿಜಠರ ಹೇಗಿರುತ್ತದೆಂದು ಹೇಳುವುದು ಕಷ್ಟ. ಬೇರಿಯಮ್ ದ್ರಾವಣವನ್ನು ಕುಡಿಸಿ ಅದನ್ನು ತುಂಬಿಸಿ ಎಕ್ಸ್‌ಕಿರಣ ಪರೀಕ್ಷೆಗೆ ಈಡುಮಾಡಿ ಬೇರೆ ಬೇರೆಯವರಲ್ಲಿ ಊರ್ಧ್ವಭಂಗಿಯಲ್ಲಿ ತುಂಬಿದ ಜಠರ ಹೇಗಿರುತ್ತದೆಂಬುದನ್ನೂ ರೋಗಸ್ಥಿತಿಯಲ್ಲಿ ಹೇಗಿರುತ್ತದೆಂಬುದನ್ನೂ ನೋಡಲಾಗಿದೆ. ಇಂಥ ಎಕ್ಸ್‌ಕಿರಣ ಪರೀಕ್ಷೆಯಿಂದ ತುಂಬಿದ ಜಠರ ವಿಲಾಯತಿ ಗೂಳಿಯ ಕೊಂಬಿನಂತೆ ಇಲ್ಲವೇ 'I' ಅಕ್ಷರದ ಕನ್ನಡಿ ಬಿಂಬದಂತೆ ಇಲ್ಲವೆ 'J' ಅಕ್ಷರದಂತೆ ಸಾಮಾನ್ಯವಾಗಿ ಇರುವುದು. J ಮಾದರಿ ಜಠರದಲ್ಲಿ ಜಠರದ ಅತ್ಯಂತ ತಳಭಾಗ ಕೆಲವರಲ್ಲಿ ಹೊಕ್ಕುಳಿನ ಇಲ್ಲವೆ ಅದಕ್ಕಿಂತ ಕೆಳಗಿನ ನೇರದಲ್ಲಿ ಇರುತ್ತದೆ. ಇನ್ನೂ ಬೇರೆ ರೂಪಗಳೂ ಇರಬಹುದು. ಅಲ್ಲದೆ ಪ್ರತಿ ಜಠರದಲ್ಲೂ ದೊಡ್ಡ ಹಿಗ್ಗಲ್ಪಟ್ಟ ಎಡಭಾಗವೂ ಕಿರಿದಾಗಿ ಸಂಕುಚಿತವಾದ ನಾಳಾಕಾರದ ಬಲಭಾಗವೂ ಇದ್ದು ಕ್ರಮೇಣ ಎಡಭಾಗದ ಸ್ಥಿತಿ ಬಲಭಾಗಕ್ಕೂ ಹಬ್ಬುವುದು ಕಾಣಬರುತ್ತದೆ; ಮತ್ತು ಫಂಡಸ್ ಭಾಗ ಯಾವಾಗಲೂ ಅನಿಲದಿಂದ ತುಂಬಿ ಉಬ್ಬಿರುವುದು ಕಾಣಿಸುತ್ತದೆ. ಖಾಲಿ ಜಠರ ತುದಿಯಿಂದ ತುದಿಯವರೆಗೆ ಆಯಾ ರೂಪದಲ್ಲೇ ಬಿಗಿತಗೊಂಡು ಕಿರಿದಾಗಿ ಕೊಳವೆ ಆಕಾರದಲ್ಲಿ ಇರುತ್ತದೆ ಎಂದುಕೊಳ್ಳಬಹುದು. ತುಂಬಿದ ಜಠರದ ಶಯನಭಂಗಿಯಲ್ಲಿ ಎಡದಿಂದ ಬಲಕ್ಕೆ ಒಂದೇ ಸಮವಾಗಿ ಇಳಿಜಾರಾಗಿ ಅಡ್ಡಡ್ಡವಾಗಿ ಪಸರಿಸಿರುತ್ತದೆ. ಊರ್ಧ್ವಭಂಗಿಯಲ್ಲಿ ಜಠರ ಹೆಚ್ಚು ಹೆಚ್ಚು ತುಂಬಿದಂತೆ ಕೆಳಮುಖವಾಗಿ ಹಾಗೂ ಮುಮ್ಮುಖವಾಗಿ ಹಿಗ್ಗುತ್ತದೆ. ಹೀಗೆ ಹಿಗ್ಗುವುದು ನೆರೆ ಅಂಗಗಳ ಪರಿಸ್ಥಿತಿಯಿಂದ ಸಾಧ್ಯವಾಗದೇ ಹೋದರೆ ಜಠರ ಮೇಲ್ಮುಖವಾಗಿಯೇ ಹಿಗ್ಗುವಂತಾಗಿ ವಪೆ ಮತ್ತು ಯಕೃತ್ತುಗಳ ಮೇಲೆ ಒತ್ತಡ ಉಂಟಾಗಿ ಉಬ್ಬರದಿಂದ ಹಿಂಸೆಯಾಗಿ ಕೆಲವು ಸಂದರ್ಭಗಳಲ್ಲಿ ಗುಂಡಿಗೆ ಡವಡವ ಎಂದು ಹೊಡೆದುಕೊಳ್ಳುವುದೂ ಉಂಟು. ಹಿಗ್ಗಿದಾಗ ಜಠರದ ಒಳಗಿನ ಸ್ಥಳದ ಘನಗಾತ್ರ ಸ್ವಾಭಾವಿಕವಾಗಿಯೇ ಅನಿರ್ದಿಷ್ಟವಾದರೂ ಸರಾಸರಿ ಪ್ರಮಾಣ ಜನನಕಾಲದಿಂದ ವಯಸ್ಕರಾಗುವವರೆಗೂ ಹೆಚ್ಚುತ್ತ ಹೋಗುತ್ತದೆ. ಹುಟ್ಟಿದ ಮಕ್ಕಳಲ್ಲಿ ಸುಮಾರು 30–35 ಮಿಲಿಲೀಟರುಗಳಷ್ಟು ಎರಡು, ವಾರಗಳ ಕೂಸಿನಲ್ಲಿ 75 ಮಿ.ಲೀಗಳಷ್ಟು 3 ತಿಂಗಳ ಶಿಶುವಿನಲ್ಲಿ 200 ಮಿ.ಲೀಗಳಷ್ಟು, 2 ವರ್ಷದ ಮಗುವಿನಲ್ಲಿ 1/2 ಲೀಟರಿನಷ್ಟು, ಬಾಲ್ಯಾಂತ್ಯದಲ್ಲಿ ಒಂದು ಲೀಟರಿನಷ್ಟು ಮತ್ತು ವಯಸ್ಕರಲ್ಲಿ ಸುಮಾರು 1 ½ ಲೀಟರುಗಳಷ್ಟು ಇರುತ್ತದೆಂದು ಪ್ರಯೋಗಗಳಿಂದ ಗೊತ್ತಾಗಿದೆ.

ಜಠರದ ಒಳನೋಟ : ಜಠರವನ್ನು ಅದರ ಲಂಬಾಕ್ಷದಲ್ಲಿ ಅಂಚುಗಳ ನೇರದಲ್ಲಿ ಕೊಯ್ದು ನೋಡಿದರೆ ಜಠರದ ಒಳಗೂ ಎರಡು ಭಾಗಗಳನ್ನು ಬೇರೆಯಾಗಿ ಗುರುತಿಸಬಹುದಾಗಿದೆ. ಕಿರಿಡೊಂಕಿನಲ್ಲಿರುವ ಕೋನಕಚ್ಚಿಗೆ ಅನುರೂಪವಾಗಿ ಒಳಗೆ ಒಂದು ಉಬ್ಬು ಇದ್ದು, ಅದರ ಎಡಬಲಭಾಗಗಳು ಕ್ರಮವಾಗಿ ಹಿರಿದಾದ ಗೋಳಾಕಾರದ ಕಾರ್ಡಿಆ್ಯಕ್ ಮತ್ತು ಕಿರಿದಾದ ನಾಳಾಕಾರದ ಪೈಲೋರಿಕ್ ಭಾಗಗಳೆಂದು ವ್ಯವಹರಿಸಲ್ಪಟ್ಟಿವೆ. ಅನ್ನನಾಳಕ್ಕೂ ಜಠರದ ಫಂಡಸ್ಸಿಗೂ ನಡುವೆ ಇರುವ ಕಾರ್ಡಿಆ್ಯಕ್ ಕಚ್ಚಿಗೆ ಅನುರೂಪವಾಗಿ ಒಳಗಿರುವ ಚಾಚು ಕವಾಟದಂತೆ ವರ್ತಿಸುತ್ತ ಜಠರ ಸಂಕೋಚವಾದಾಗ ವಸ್ತು ಅನ್ನನಾಳಕ್ಕೆ ವಾಪಸಾಗುವುದನ್ನು ತಪ್ಪಿಸುತ್ತದೆ ಎಂದು ನಂಬಲಾಗಿದೆ. ಭ್ರೂಣಾವಸ್ಥೆಯಲ್ಲಿ ಜಠರದ ಒಳಗಡೆ ಕಿರಿಡೊಂಕಿನುದ್ದಕ್ಕೂ ಒಂದು ತೋಡು ಇರುತ್ತದೆ. ಇದಕ್ಕೆ ಜಠರಾಂತರಪಥ (ಗ್ಯಾಸ್ಟ್ರಿಕ್ ಪಾತ್‌ವೇ) ಎಂದು ಹೆಸರು. ಬೇರಿಯಮ್ ದ್ರಾವಣ ಕುಡಿಸಿ ಎಕ್ಸ್‌ಕಿರಣ ಪರೀಕ್ಷೆ ಮಾಡಿದಾಗ ಹುಟ್ಟಿದ ಮೇಲೂ ವಯಸ್ಕರಲ್ಲೂ ಈ ತೋಡು ಇರಬಹುದೆಂದೂ ನುಂಗಿದಾಗ ಜಠರದಲ್ಲಿ ಅನ್ನ ಸಾಗುವುದು ಈ ಮಾರ್ಗವಾಗಿಯೇ ಎಂದೂ ವ್ಯಕ್ತವಾಗಿದೆ. ಜಠರದ ಒಳಮೈ ಶೈಶವದಲ್ಲಿ ಕೆಂಪುಗುಲಾಬಿ ಬಣ್ಣದ್ದಾಗಿಯೂ ವಯಸ್ಸಾದಂತೆ ಬಣ್ಣಗುಂದಿ ವಾರ್ಧಕ್ಯದಲ್ಲಿ ಕಪಿಲವರ್ಣದ್ದಾಗಿಯೂ ಇರುವುದು. ಜಠರ ಖಾಲಿ ಆಗಿದ್ದಾಗ ಅದರ ಒಳಮೈ ಅಲ್ಲಲ್ಲಿ ಮಡಚಿಕೊಂಡಿರುವುದು. ಈ ಮಡಿಕೆಗಳು ಸಾಮಾನ್ಯವಾಗಿ ಜಠರದ ಲಂಬಾಕ್ಷದಲ್ಲೇ ಇರುವುವು. ಜಠರದ ಒಳಮೈಯನ್ನು ವೀಕ್ಷಿಸುವಾಗ ಪೈಲೋರಿಕ್ ನಾಳೆ ಮುಂಗರುಳಿನೊಳಕ್ಕೆ (ಡುಯೋಡಿನಮ್) ಟೆಲಿಸ್ಕೋಪಿನಂತೆ ಚಾಚಿಕೊಂಡಿರುವ ಬುಗುಟೂ ಅದರ ತುದಿಯಲ್ಲಿ ಇರುವ ಪೈಲೋರಿಕ್ ದ್ವಾರವೂ ಚೆನ್ನಾಗಿ ವ್ಯಕ್ತವಾಗುತ್ತವೆ. ಅಲ್ಲದೆ ಪೈಲೋರಿಕ್ ನಾಳಾಪ್ರದೇಶದಲ್ಲಿ ಜಠರಭಿತ್ತಿಯ ಸ್ನಾಯುಗಳು ದಪ್ಪವಾಗಿರುವುದೂ ಪೈಲೋರಿಕ್ ದ್ವಾರಪ್ರದೇಶದಲ್ಲಿ ಸುತ್ತುವರಿದ ಸ್ನಾಯು ಇನ್ನೂ ದಪ್ಪವಾಗಿ ಪೈಲೋರಿಕ್ ಸ್ಫಿಂಕ್ಟರ್ (ಗತಿನಿರೋಧಕ) ಆಗುವುದೂ ವ್ಯಕ್ತವಾಗುವುದು. ಈ ಪ್ರದೇಶದಲ್ಲಿರುವ ಲಂಬಗತಿಸ್ನಾಯು ಪೈಲೋರಿಕ್ ದ್ವಾರವನ್ನು ಹಿಗ್ಗಿಸುವುದಕ್ಕೆ ಸಹಾಯಕವಾಗಿದೆ. ಜಠರದ ಒಳಮೈ ಮೇಲೆಲ್ಲ ಸಣ್ಣ ಕುಳಿಗಳಿರುವುದೂ ಅವುಗಳ ನಡುವಿನ ಉಬ್ಬಿನಿಂದ ಒಳಮೈ ಜೇನುಗೂಡಿನಂತೆ ಇರುವುದೂ, ಜಠರದ ಒಳಮೈಯನ್ನು ಭೂತಗನ್ನಡಿಯಿಂದ ನೋಡಿದರೆ ತಿಳಿಯುವುದು. ಈ ನೋಟ ಜಠರದ ಪೈಲೋರಿಕ್ ಭಾಗದಲ್ಲಿ ಹೆಚ್ಚು ಸ್ಫುಟವಾಗಿದೆ. ವ್ಯಕ್ತಿ ಜೀವಂತವಾಗಿರುವಾಗ ಜಠರದ ಒಳಮೈ ಪರೀಕ್ಷೆ ಜಠರದರ್ಶಿ (ಗ್ಯಾಸ್ಟ್ರೊಸ್ಕೋಪ್) ಎಂಬ ಉಪಕರಣದಿಂದ ಸಾಧ್ಯ. ಇದು ಡೊಂಕಿಸಬಲ್ಲ ಮತ್ತು ತುದಿಯಲ್ಲಿ ವಿದ್ಯುದ್ದೀಪವೂ ಸಣ್ಣಳತೆಯ ದೂರದರ್ಶಕವೂ ಇರುವ ಒಂದು ಉಪಕರಣ. ಇದನ್ನು ಗಂಟಲಿನ ಮೂಲಕ ಜಠರದೊಳಗೆ ಹುಗಿಸಿ ಒಳಮೈ ಪರೀಕ್ಷೆ ಮಾಡಲಾಗುತ್ತದೆ. ಹೀಗೆ ಪರೀಕ್ಷಿಸಿದಾಗ ಜೀವಂತ ಆರೋಗ್ಯಸ್ಥಿತಿಯಲ್ಲಿ ಜಠರ ಫಳಫಳನೆ ಹೊಳೆಯುತ್ತ ಕಿತ್ತಳೆ ಹಣ್ಣಿನ ಬಣ್ಣಕ್ಕಿರುವುದೂ ಮೃತವಾದ ಮೇಲೆ ಬಣ್ಣ ಕುಂದುವುದೂ ವ್ಯಕ್ತವಾಗುತ್ತದೆ.

ಜಠರಭಿತ್ತಿಯ ಸೂಕ್ಷ್ಮರಚನೆ : ಜೀರ್ಣನಾಳದ ಎಲ್ಲ ಕಡೆಯಲ್ಲಿಯಂತೆಯೇ ಜಠರಭಿತ್ತಿಯೂ ನಾಲ್ಕು ವರಸೆಗಳಾಗಿ ಏರ್ಪಟ್ಟಿರುವ ಅಂಗಾಂಶಗಳಿಂದಾಗಿದೆ. ಅತ್ಯಂತ ಹೊರವರಸೆ ಪೆರಿಟೋನಿಯಮ್ಮಿನಿಂದಾದುದು. ಇದು ಬಹು ತೆಳುವಾದ ಪೊರೆ. ಅಲ್ಲದೆ ಅಳ್ಳಕವಾಗಿ ಹೊದಿಸಲ್ಪಟ್ಟೂ ಇದೆ. ಹೀಗಾಗಿ ಇದನ್ನು ಮೇಲ್ಮೈಯಿಂದ ಬೆರಳುಗಳಿಂದಲೇ ಸುಲಿದುಬಿಡಬಹುದು. ಇದರ ಅಡಿಯಲ್ಲಿ ಅನೈಚ್ಛಿಕ ಸ್ನಾಯುಗಳಿಂದಾದ ಒಂದು ವರಸೆ ಉಂಟು. ಇಲ್ಲಿ ಸ್ನಾಯುಗಳು ಮೂರು ಪದರಗಳಾಗಿ ಏರ್ಪಟ್ಟಿವೆ. ಹೊರಪದರ ಲಂಬಗತಿ ಸ್ನಾಯುತಂತುಗಳಿಂದಾದುದು. ಜಠರದ ತುದಿಯಲ್ಲಿ ಇದು ಅನ್ನನಾಳದ ಮತ್ತು ಮುಂಗರುಳಿನ ಸಮಾನಸ್ನಾಯುವಿನೊಡನೆ ಮಿಳಿತವಾಗುತ್ತದೆ. ಕಿರಿಡೊಂಕಿನಲ್ಲಿ ಮತ್ತು ಪೈಲೋರಸ್ ವಿಭಾಗದಲ್ಲಿ ದಪ್ಪವಾಗಿಯೂ ಬೇರೆಕಡೆ ತೆಳ್ಳಗೂ ಉಂಟು. ತೆಳ್ಳಗಿದ್ದರೂ ಜಠರಭಿತ್ತಿಯಲ್ಲಿ ಪೂರ್ಣ ವ್ಯಾಪಕವಾಗಿರುವುದು ಲಂಬಗತಿಸ್ನಾಯುವೇ. ಚಕ್ರಗತಿಯ ಸ್ನಾಯುತಂತುಗಳು ಇದರ ಒಳಗಿನದು. ಇವು ಅಪೂರ್ಣ ಚಕ್ರಗಳಂತೆ U ಆಕಾರವಾಗಿ ಕಿರಿಡೊಂಕಿನ ಇಕ್ಕೆಲಗಳಲ್ಲೂ ವ್ಯಾಪಿಸಿರುತ್ತವೆ. ಫಂಡಸ್ ಭಾಗದಲ್ಲಿ ಈ ಸ್ನಾಯುವಿಲ್ಲ. ಪೈಲೋರಿಕ್ ಭಾಗದಲ್ಲಿ ದಪ್ಪವಾಗಿಯೂ ಪೂರ್ಣ ಚಕ್ರಾಕಾರವಾಗಿಯೂ ಪೈಲೋರಿಕ್ ದ್ವಾರಪ್ರಾಂತ್ಯದಲ್ಲಿ ಪೈಲೋರಿಕ್ ಗತಿನಿರೋಧಕವಾಗಿಯೂ ಏರ್ಪಟ್ಟಿದೆ. ಮುಂಗರುಳಿನ ಸಮಾನ ಚಕ್ರಗತಿಸ್ನಾಯುವಿನಿಂದ ಇದು ಒಂದು ಬಂಧನಾಂಗಾಂಶಪಟ್ಟಿಯಿಂದ ಬೇರ್ಪಟ್ಟಿದೆ. ಕಾರ್ಡಿಆ್ಯಕ್ ದ್ವಾರದಲ್ಲಿ ಈ ಸ್ನಾಯು ಅನ್ನನಾಳದ ಚಕ್ರಗತಿಸ್ನಾಯುವಿನೊಡನೆ ಮಿಲನವಾಗುತ್ತದೆ. ಅತ್ಯಂತ ಒಳಗಿನ ಸ್ನಾಯುಪದರ ಓರೆಗತಿಯ ತಂತುಗಳಿಂದಾದುದು. ಇದೂ ಅನ್ನನಾಳದ ಚಕ್ರಗತಿ ಸ್ನಾಯುವಿನೊಡನೆ ಮಿಲನವಾಗುತ್ತದೆ. ಕಿರಿಡೊಂಕುಪ್ರದೇಶದಲ್ಲೂ ಪೈಲೋರಿಕ್ ವಿಭಾಗದಲ್ಲೂ ಈ ಸ್ನಾಯುಪದರ ಇಲ್ಲ. ಆದರೆ ಫಂಡಸ್ ಭಾಗ ಇದರಿಂದ ಪೂರ್ಣವಾಗಿ ಆವರಿಸಲ್ಪಟ್ಟು ಇಲ್ಲಿ ಅದರ ತಂತುಗಳು ಚಕ್ರಗತಿಯಾಗಿರುತ್ತವೆ. ಜಠರದ ಕಾಯದಲ್ಲಿ ಈ ಸ್ನಾಯು ಅಲ್ಲಲ್ಲಿ ಪಟ್ಟಿಗಳಂತೆ ಇರುವುದು ಕಾಣಬರುವುದು. ಸ್ನಾಯುವರಸೆಯ ಒಳಗಿರುವುದು ಲೋಳೆಪೊರೆ ಅಡಿಯ ಊತಕ. ಇದು ಬಂಧನಾಂಗಾಂಶದಿಂದಲೇ ಆದುದು. ಇಲ್ಲಿ ರಕ್ತನಾಳಗಳೂ ನರಗಳೂ ಕವಲೊಡೆದು ಸೇರಿ ಬಲೆಯಂತಾಗಿ ಆ ಬಲೆಗಳಿಂದ ಲೋಳೆಪೊರೆಗೆ ರಕ್ತಪೂರೈಕೆಯೂ ನರ ಪೂರೈಕೆಯೂ ಆಗುತ್ತವೆ. ಸ್ನಾಯುಗಳಿಗೂ ಲೋಳೆಪೊರೆಗೂ ನಡುವೆ ಈ ಊತಕ ಇರುವುದರಿಂದ ಸ್ನಾಯುಗಳ ಸಂಕೋಚನ ಆಕುಂಚನಗಳು ಲೋಳೆಪೊರೆಯನ್ನು ಕಿತ್ತಾಡಲಾರವು.

ಜಠರಭಿತ್ತಿಯ ಅತ್ಯಂತ ಒಳಗಿನ ವರಸೆ ಲೋಳೆಪೊರೆಯಿಂದಾದುದು. ಇದು ಮೃದುವಾಗಿಯೂ ದಪ್ಪವಾಗಿಯೂ ಸ್ಪಂಜಿನಂತಿರುವ ಪದರ. ಹಿಗ್ಗಿ ಕುಗ್ಗಬಲ್ಲ ಪುಟಿತ ಬಂಧನಾಂಗಾಂಶತಂತುಗಳು ಇದರಲ್ಲಿ ಲೋಪವಾಗಿರುವುದರಿಂದ ಖಾಲಿ ಜಠರದಲ್ಲಿ ಈ ಪದರ ಮಡಿಕೆ ಮಡಿಕೆಯಾಗಿರುತ್ತದೆ. ಮಡಿಕೆಗಳು ಹಿರಿಡೊಂಕಿನಲ್ಲಿ ಮತ್ತು ಪೈಲೋರಸ್ ಭಾಗದಲ್ಲಿ ಹೆಚ್ಚಾಗಿವೆ. ಕಿರಿಡೊಂಕಿನಲ್ಲಿ ಕೇವಲ 3–4 ಮಡಿಕೆಗಳು ಇರಬಹುದು. ಮಡಿಕೆಗಳು

ಪೂರ್ಣವಾಗಿ ಲೋಳೆಪೊರೆಯವೇ. ಜಠರಭಿತ್ತಿಯ ಬೇರೆ ವರಸೆಗಳು ಮಡಿಕೆಗಳಲ್ಲಿ ಭಾಗವಹಿಸುವುದಿಲ್ಲ. ವಸ್ತುಶೇಖರಣೆಯಿಂದ ಜಠರ ಹಿಗ್ಗಿಸಲ್ಪಟ್ಟಾಗ ಲೋಳೆಪೊರೆಯ ಮಡಿಕೆಗಳು ಬಿಚ್ಚಿಕೊಂಡು ಜಠರ ವಿಸ್ತಾರಗೊಳ್ಳುವ ಸೌಲಭ್ಯ ಉಂಟು. ಕಾರ್ಡಿಆ್ಯಕ್ ದ್ವಾರದ ನೆರೆಯಲ್ಲಿ ಲೋಳೆಪೊರೆ ಅತ್ಯಂತ ತೆಳುವಾಗಿಯೂ ಪೈಲೋರಿಸ್ಸಿನಲ್ಲಿ ಅತ್ಯಂತ ದಪ್ಪವಾಗಿಯೂ ಇದೆ. ಜಠರದ ಒಳಮೈಯಲ್ಲಿ ಎಲ್ಲೆಲ್ಲೂ ಕಾಣಬರುವ ಜಠರ ಕುಳಿಗಳೂ ಲೋಳೆಪೊರೆಗೆ ಸೀಮಿತವಾದವೇ. ಸುಮಾರು 1/8ರಿಂದ ¼ ಮಿ.ಮೀ. ವ್ಯಾಸವುಳ್ಳ ಈ ಕುಳಿಗಳು ವಾಸ್ತವವಾಗಿ ಜಠರಗ್ರಂಥಿಗಳ ನಾಳಭಾಗಗಳೇ ಆಗಿವೆ. ಒಂದೊಂದು ಕುಳಿಗೂ 2–4 ಸ್ರವಿಸುವ ಭಾಗಗಳು ಸೇರಿಕೊಂಡು ಜಠರಕುಳಿಯ ಮೂಲಕ ತಮ್ಮ ಸ್ರಾವವನ್ನು ಜಠರ ಕುಹರಕ್ಕೆ ಸುರಿಯುತ್ತವೆ.

ಜಠರ ಗ್ರಂಥಿಗಳು ಸೂಕ್ಷ್ಮದರ್ಶಕದಲ್ಲಿ ಮಾತ್ರ ಗೋಚರವಾಗುವ ಪ್ರಯೋಗ ನಳಿಕೆಯಂತಿರುತ್ತವೆ. ಇವು ಲೋಳೆಪೊರೆಯ ದಪ್ಪದಲ್ಲಿ ಅಡಕವಾಗಿವೆ. ಇವುಗಳಲ್ಲಿ ಮೂರು ವಿಧ. ಕಾರ್ಡಿಆ್ಯಕ್ ದ್ವಾರದ ನೆರೆಗೆ ಸೀಮಿತವಾದವು ಕಾರ್ಡಿಆ್ಯಕ್ ಗ್ರಂಥಿಗಳು. ಇವು ಲೋಳೆಯನ್ನು ಸ್ರವಿಸುತ್ತವೆ. ಪೈಲೋರಿಕ್ ವಿಭಾಗದಲ್ಲಿರುವವು ಪೈಲೋರಿಕ್ ಗ್ರಂಥಿಗಳು. ಇವುಗಳ ಸ್ರವಿಸುವ ಭಾಗ ಸುರುಳಿ ಸುತ್ತಿಕೊಂಡು ಲೋಳೆಪೊರೆಯ ಆಳಕ್ಕೆ ಸೀಮಿತವಾಗಿ ಬಹು ಆಳವಾಗಿರುವ ಜಠರ ಕುಳಿಗಳನ್ನು ಸೇರುತ್ತವೆ. ಸ್ರಾವಭಾಗದಿಂದ, ಬಹುಶಃ ನಾಳಭಾಗದಿಂದಲೂ ಲೋಳೆ ಸ್ರವಿಸಲ್ಪಡುತ್ತದೆ. ಜಠರದ ಫಂಡಸ್ಸಿನಲ್ಲಿ ಹಾಗೂ ಕಾಯದಲ್ಲಿ ಇರುವ ಗ್ರಂಥಿಗಳು ಫಂಡಲ್ ಗ್ರಂಥಿಗಳು. ಸಹಜವಾಗಿ ಬಹುಸಂಖ್ಯೆಯಲ್ಲಿರುವ ಇವೇ ಜಠರದ ಪ್ರಧಾನ ಗ್ರಂಥಿಗಳು. ಇವುಗಳ ಸ್ರಾವಭಾಗ ಉದ್ದವಾದ ಪ್ರಯೋಗ ನಳಿಕೆಯಂತಿದೆ. ಇದು ಆಳವಿಲ್ಲದ ಜಠರಕುಳಿ, ಅರ್ಥಾತ್ ನಾಳಭಾಗಕ್ಕೆ ತೆರೆದುಕೊಳ್ಳುತ್ತದೆ. ಸ್ರಾವಭಾಗದಲ್ಲಿ ಮೂರು ಬಗೆಯ ಜೀವಕೋಶಗಳನ್ನು ಗುರುತಿಸಬಹುದು. ಅವು ಹೈಡ್ರೊಕ್ಲೋರಿಕ್ ಆಮ್ಲ, ಪೆಪ್ಸಿನ್ ಎಂಬ ಕಿಣ್ವ ಮತ್ತು ಲೋಳೆಯನ್ನು ಸ್ರವಿಸುತ್ತವೆ. ಜಠರರಸ ಈ ಎಲ್ಲ ಗ್ರಂಥಿ ಜೀವಕೋಶಗಳ ಸ್ರಾವದ ಮಿಶ್ರಣವಾದ್ದರಿಂದ ಜಠರರಸದಲ್ಲಿ ಪೆಪ್ಸಿನ್, ಹೈಡ್ರೊಕ್ಲೋರಿಕ್ ಆಮ್ಲ, ಲೋಳೆ–ಇವು ಪ್ರಧಾನವಾಗಿ ಇರುವ ವಸ್ತುಗಳು. ಇವಲ್ಲದೆ ಜಠರರಸದಲ್ಲಿ ಇತರ ವಸ್ತುಗಳು ಅಲ್ಪ ಪ್ರಮಾಣದಲ್ಲಿರುತ್ತವೆ. ಅವು ಜಠರದ ಲೋಳೆಪೊರೆಯಲ್ಲಿರುವ ಅನಿರ್ದಿಷ್ಟ ಜೀವಕೋಶಗಳ ಸ್ರಾವಗಳು.

ಜಠರಕ್ಕೆ ರಕ್ತಪೂರೈಕೆ ಪ್ರಧಾನವಾಗಿ ನಾಲ್ಕು ಅಪಧಮನಿಗಳಿಂದ ಆಗುತ್ತದೆ. ಕಿರಿ ಮತ್ತು ಹಿರಿಡೊಂಕಿನ ಎಡಬಲ ಭಾಗಗಳಿಂದ ಬರುವ ಇವಕ್ಕೆ ಗ್ಯಾಸ್ಟ್ರಿಕ್ ಮತ್ತು ಗ್ಯಾಸ್ಟ್ರೊ ಎಪಿಪ್ಲೋಯಿಕ್ ಧಮನಿಗಳೆಂದು ಹೆಸರು. ಮೇಲೆ ಹೇಳಿರುವಂತೆ ಇವು ಅನುಕ್ರಮವಾಗಿ ಕಿರಿ ಮತ್ತು ಹಿರಿ ಒಮೆಂಟಮುಗಳ ಎರಡು ಪದರಗಳ ನಡುವೆ ಹಾಯುತ್ತವೆ. ಇವುಗಳಿಂದಲ್ಲದೆ ಜಠರಕ್ಕೆ ರಕ್ತ ಚಿಕ್ಕ ಗ್ಯಾಸ್ಟ್ರಿಕ್ ಅಪಧಮನಿಗಳಿಂದಲೂ ಪೂರೈಕೆ ಆಗುತ್ತದೆ. ಅನುರೂಪವಾದ ಅಭಿಧಮನಿಗಳ ಮೂಲಕ ಜಠರದಿಂದ ವಾಪಸಾದ ರಕ್ತ ಅಂತಿಮವಾಗಿ ಪೋರ್ಟಲ್ ಅಭಿಧಮನಿಯನ್ನು ಸೇರಿ ಯಕೃತ್ತಿಗೆ ಪೂರೈಕೆಯಾಗುತ್ತದೆ.

ಜಠರಕ್ಕೆ ನರಪೂರೈಕೆ ಅನುವೇದಕ (ಸಿಂಪಥೆಟಿಕ್) ಮತ್ತು ಪ್ಯಾರಾನುವೇದಕ (ಪ್ಯಾರ ಸಿಂಪಥೆಟಿಕ್) ಎಂಬ ಎರಡು ರೀತಿಯ ನಿರಂಕುಶ ಕಾರ್ಯನಿಯಂತ್ರಣ ನರಗಳಿಂದಲೂ ಆಗುತ್ತದೆ. ಅನುವೇದಕ ನರಗಳು ಅಪಧಮನಿಗಳ ಜೊತೆಯೇ ಆಗಮಿಸುತ್ತವೆ. ಪ್ಯಾರಾನುವೇದಕ ನರಗಳು ಎಡಬಲ ವೇಗಸ್ ನರಗಳೇ ಆಗಿವೆ. ಎರಡು ಬಗೆಯ ನರಗಳೂ ಜಠರಭಿತ್ತಿಯನ್ನು ಹೊಕ್ಕು ಅದರ ಸ್ನಾಯು ವರಸೆಯ ಪದರಗಳ ನಡುವೆ ಕವಲೊಡೆದು ಸೇರಿ ಬಲೆಯಂತೆ ಆಗಿ ಲೋಳೆಪೊರೆಯ ಅಡಿಯಲ್ಲಿ ಊತಕವನ್ನು ಹೊಕ್ಕು ಅಲ್ಲೂ ಒಂದು ಬಲೆಯಾಗಿ ಅನಂತರ ಲೋಳೆಪೊರೆಗೆ ಪೂರೈಕೆಯಾಗುತ್ತವೆ. ಈ ನರಗಳು ಜೀರ್ಣಕಾಲದಲ್ಲಿ ಜಠರದ ಚಲನವನ್ನೂ ಜಠರಗ್ರಂಥಿಗಳ ಸ್ರಾವವನ್ನೂ ನಿಯಂತ್ರಿಸುತ್ತವೆ.

ಭ್ರೂಣದಲ್ಲಿ ಜಠರದ ಬೆಳವಣಿಗೆ : ಭ್ರೂಣದ ಪ್ರಾರಂಭಿಕ ಜೀರ್ಣನಾಳದ ಒಂದು ಭಾಗವಾಗಿ ಜಠರವು ಬೆಳೆದು ಬರುತ್ತದೆ. ಭ್ರೂಣಕ್ಕೆ ನಾಲ್ಕರಿಂದ ಐದು ವಾರವಾಗುವ ವೇಳೆಗೆ ಪ್ರಾರಂಭಿಕ ಜೀರ್ಣನಾಳದಲ್ಲಿ ಅದು ಭ್ರೂಣದ ಲೋಳೆಕೋಶದೊಡನೆ ಸಂಪರ್ಕಗೊಳ್ಳುವ ಸ್ಥಳಕ್ಕೆ ಸ್ವಲ್ಪ ಮೇಲಿನ ಭಾಗ ಹಿಗ್ಗಿ ಉಬ್ಬಿದಂತಾಗುತ್ತದೆ. ಇದೇ ಜಠರದ ಅಂಕುರ. ಇದು ಭ್ರೂಣದ ಬೆನ್ನುಭಾಗಕ್ಕೆ ಒಂದು ಪೊರೆಯಿಂದ ನೇತುಹಾಕಲ್ಪಟ್ಟು ಈ ಕಾಲದಲ್ಲಿ ಭ್ರೂಣ ದೇಹದ ಮಧ್ಯ ಗೆರೆಯಲ್ಲಿಯೇ ಇರುತ್ತದೆ. ಭ್ರೂಣ ಬೆಳೆದು 10.ಮಿಮೀ. ಉದ್ದವಾದಾಗ ಜಠರದ ಎರಡು ಅಂಚುಗಳನ್ನೂ ಗುರುತಿಸಬಹುದು. ಬೆನ್ನುದಿಕ್ಕಿನ ಅಂಚು ಹೊರ ಉಬ್ಬಾಗಿ ತೀವ್ರವಾಗಿ ಬೆಳೆಯುತ್ತದೆ. ಇದರ ಪ್ರಾರಂಭ ಸ್ಥಳದಲ್ಲಿ ಫಂಡಸ್ಸಿನ ಉಬ್ಬು ಉಂಟಾಗುವುದಲ್ಲದೆ ಜಠರದ ಅಂತ್ಯ ಸ್ಥಳವಾದ ಪೈಲೋರಿಕ್ ಭಾಗ ಮುಮ್ಮುಖವಾಗುತ್ತದೆ. ಈ ಕಾರಣದಿಂದ ಚಿಕ್ಕ ಅಂಚು ನಿಮ್ನ ಮಧ್ಯಮ ಅಂಚಾಗಿ ಮಾರ್ಪಡುವುದು ಅನಿವಾರ್ಯವಾಗುವುದು. ಜಠರವನ್ನು ಬೆನ್ನಿಗೆ ನೇತಾಡಿಸುವಂತೆ ಸೇರಿಸುವ ಪೊರೆ (ಡಾರ್ಸಲ್ ಮೀಸೋಗ್ಯಾಸ್ಟ್ರಿಯಮ್) ಬೆಳೆಯುವುದರಿಂದಲೂ, ಯಕೃತ್ತು ಬೆಳೆದು ಜಠರವನ್ನು ಎಡಕ್ಕೆ ತಳ್ಳುವುದರಿಂದಲೂ ಜಠರ ತಿರುಚಿಕೊಳ್ಳುತ್ತದೆ. ಈ ತಿರುಚಿನಿಂದ ಬಲಮುಖವಾಗಿದ್ದ ಜಠರದ ಮೈ ಬೆನ್ನುಕಡೆಗೂ, ಎಡಮುಖವಾಗಿದ್ದ ಮೈ ಮುಮ್ಮುಖವಾಗಿಯೂ ಬದಲುಗೊಳ್ಳುತ್ತವೆ. ಅಂತೆಯೇ ಬಲ ವೇಗಸ್ ನರ ಎಡ ವೇಗಸ್ ನರಗಳೂ ಆಯಾ ಜಠರಮೈಗಳಿಗೆ ಪೂರೈಕೆಯಾಗುತ್ತವೆ. ಜಠರದ ತಿರುಚುವಿಕೆಯಿಂದ ಮುಂಗರುಳು ಬಲಕ್ಕೂ ಬೆನ್ನುಕಡೆಗೂ ಸ್ಥಳಾಂತರಗೊಳ್ಳುತ್ತದೆ.

ಜಠರದ ಕ್ರಿಯೆ : ಆಹಾರ ಸೇವನೆಯ ಕಾಲದಲ್ಲಿ ನುಂಗಿದ ಆಹಾರದ ಜಮಾವಣೆ, ಅನಂತರ ಅದರ ದ್ರವೀಕರಣ ಇವು ಜಠರದ ಪ್ರಧಾನ ಕ್ರಿಯೆಗಳು. ಸ್ನಾಯುಗಳ ಅನುರೂಪವಾದ ಹಿಗ್ಗುವಿಕೆಯಿಂದ ಮತ್ತು ಲೋಳೆಪೊರೆಯ ಮಡಿಕೆಗಳು ಬಿಚ್ಚಿಕೊಳ್ಳುವುದರಿಂದ ಜಠರದ ಒಳಾವಕಾಶ ಎಷ್ಟು ಬೇಕೋ ಅಷ್ಟು ದೊಡ್ಡದಾಗಿ ನುಂಗಿದ ಆಹಾರದ ಶೇಖರಣೆ ಆಗುತ್ತದೆ. ಆಹಾರಸೇವನೆ ಮುಗಿದ ಸ್ವಲ್ಪ ಹೊತ್ತಿನಲ್ಲೇ ದ್ರವೀಕರಣ ಪ್ರಾರಂಭವಾಗುತ್ತದೆ. ಈ ದ್ರವೀಕರಣ ಯಾಂತ್ರಿಕವಾದ ಮಂಥನ ಕ್ರಿಯೆಯಿಂದಲೂ ಜಠರರಸದ ರಾಸಾಯನಿಕ ಕ್ರಿಯೆಯಿಂದಲೂ ಆಗುವುದು. ಘನಪದಾರ್ಥಗಳ ಪ್ರಮಾಣಕ್ಕೆ ಅನುಗುಣವಾಗಿ ಸೇವಿಸಿದ ಆಹಾರ ಸುಮಾರು 5–6 ಗಂಟೆಗಳ ಕಾಲ ಜಠರದಲ್ಲಿ ತಂಗುತ್ತದೆ. ಈ ಕಾಲದಲ್ಲಿ ಜಠರರಸದ ರಾಸಾಯನಿಕ ಕ್ರಿಯೆಯಿಂದಲೂ ಜಠರದ ಚಲನದಿಂದಲೂ ಆಹಾರ ಭಾಗಶಃ ಪಚನಗೊಂಡು ದ್ರವವಾಗಿ ಆದಂತೆಲ್ಲ ಸ್ವಲ್ಪ ಸ್ವಲ್ಪವಾಗಿ ಕರುಳಿಗೆ ದೂಡಲ್ಪಡುತ್ತದೆ. ಜಠರದಂಥ ಸಂಗ್ರಹಣಸಾಧ್ಯ ಅವಯವವಿರುವುದರಿಂದ ಆಹಾರಸೇವನೆ ಅವಿರತವಾಗಿರಬೇಕಾಗಿಲ್ಲ; ಕೆಲವು ಗಂಟೆಗಳಿಗೊಮ್ಮೆ ಆದರೂ ತಡೆಯುತ್ತದೆ ಮತ್ತು ಈ ಬಿಡುವಿನ ಅಂತರದಲ್ಲಿ ಬೇರೆ ಜೀವನ ಕಾರ್ಯಗಳಿಗೆ ವ್ಯಕ್ತಿ ಗಮನ ಕೊಡಲು ಸಾಧ್ಯವಾಗುವ ಸೌಲಭ್ಯ ಒದಗಿದೆ.

ಜಠರದ ಸಕಾಲಿಕ ಸ್ರಾವಚಲನಗಳು ಸಾಧ್ಯವಾಗುವುದು ನರಗಳ ಮತ್ತು ಹಾರ್ಮೋನುಗಳ ಪ್ರಭಾವದಿಂದ ಎಂಬುದು ಸ್ಥಿರಪಟ್ಟಿದೆ. ಆಹಾರಸೇವನೆ ತೀರಿದ ಕೆಲವು ನಿಮಿಷಗಳ ಬಳಿಕ ಜಠರದ ಚಲನೆ ಪ್ರಾರಂಭವಾಗುತ್ತದೆ. ಬಹುಶಃ ಜಠರ ಇನ್ನೂ ಹೆಚ್ಚು ಹಿಗ್ಗಿಸಲ್ಪಡದೆ ಒಂದೇ ಸಮನಾದ ಹಿಗ್ಗಿರುವ ಸ್ಥಿತಿ ಜಠರದ ಚಲನವನ್ನು ಪ್ರಚೋದಿಸುತ್ತದೆ. ಈ ಸಕಾಲಿಕ ಚಲನೆ ನರಗಳ ಚಟುವಟಿಕೆಯಿಂದ ಏರ್ಪಡುವುದು. ತುಂಬಿದ ಜಠರದ ಚಲನೆ ವಿಶೇಷವಾಗಿ ಸರ್ಪಗತಿ ಚಲನೆ (ಪೆರಿಸ್ಟಾಲ್‌ಸಿಸ್). ಇಂಥ ಚಲನೆಯಲ್ಲಿ ಅಂಗದ ಒಂದು ಭಾಗ ಹಿಗ್ಗಿಸಲ್ಪಟ್ಟರೆ ಅದರ ಹಿಂದಿನ ಭಾಗ ಸಂಕುಚಿಸಿ, ಅದರ ಮುಂದಿನಭಾಗ ಸಡಿಲವಾಗುವುದು. ಇದರಿಂದ ಹಿಗ್ಗಿಸಲ್ಪಟ್ಟು ಸ್ಥಳದಲ್ಲಿದ್ದ ವಸ್ತು ಸಡಿಲವಾದ ಸ್ಥಳಕ್ಕೆ ಮುನ್ನೂಕಲ್ಪಡುತ್ತದೆ. ಆ ಸ್ಥಳ ಈಗ ಹಿಗ್ಗಿ ಅದರ ಹಿಂದಿನ ಸ್ಥಳ ಸಂಕುಚಿಸಿ ಮುಂದಿನ ಸ್ಥಳ ಸಡಿಲಾಗಿ ವಸ್ತು ಇನ್ನೂ ಮುಂದಕ್ಕೆ ನೂಕಲ್ಪಡುತ್ತದೆ. ಇದೇ ಸರ್ಪಗತಿ ಚಲನೆ. ಇದರಲ್ಲಿ ಸಂಕೋಚವು ಅಂಗದ ಮೇಲಿನಿಂದ ಕೆಳದಿಕ್ಕಿನಲ್ಲಿ ಸ್ಥಳದಿಂದ ಸ್ಥಳಕ್ಕೆ ಚಲಿಸುವ ರೀತಿಯದಾಗಿದ್ದು ಅನುರೂಪವಾದ ಚಲಿಸುವ ಸ್ಥಳೀಯ ಸಡಿಲತೆಯನ್ನು ಹಿಂಬಾಲಿಸುವುದು. ಇಂಥ ಸರ್ಪಗತಿ ಚಲನೆಯಿಂದ ಆಹಾರ ಜಠರದಲ್ಲಿ ಪೈಲೋರಿಕ್ ದ್ವಾರದೆಡೆಗೆ ನೂಕಲ್ಪಡುತ್ತದೆ. ಸಾಮಾನ್ಯವಾಗಿ ಈ ಸಮಯದಲ್ಲಿ ಪೈಲೋರಿಕ್ ದ್ವಾರ ಅಲ್ಲಿಯ ಗತಿನಿರೋಧಕ ಸಂಕೋಚನೆಯಿಂದ ಮುಚ್ಚಲ್ಪಟ್ಟಿರುವುದರಿಂದ ನೂಕಲ್ಪಟ್ಟ ಆಹಾರ ಮುಂದುವರಿಯಲಾಗದೆ ಮಂತಿನಿಂದ ಕಡೆದಂತೆ ಚಿಮ್ಮಿದಂತೆ ವಾಪಸ್ಸು ಜಠರದ ಕಾಯಕ್ಕೆ ಬರುತ್ತದೆ. ಪದೇಪದೇ ಹೀಗಾಗುವುದರಿಂದ ಆಹಾರ ಅರೆದಂತಾಗಿ ಜಠರರಸದೊಡನೆ ಮಿಶ್ರಿತವಾಗಿ ಕೊನೆಗೆ ಹಾಲಿನಂಥ ದ್ರವವಾಗುತ್ತದೆ. ಪೈಲೋರಿಕ್ ಗತಿನಿರೋಧಕ ಆಗಾಗ್ಗೆ ಸ್ವಲ್ಪ ಸಡಿಲವಾಗುವುದರಿಂದ ಹೀಗೆ ಪೂರ್ಣವಾಗಿ ದ್ರವವಾದ ಆಹಾರಭಾಗ ಪೈಲೋರಿಕ್ ದ್ವಾರದ ಮೂಲಕ ಮುಂಗರುಳಿಗೆ ತಲುಪುತ್ತದೆ. ಸ್ವಲ್ಪಸ್ವಲ್ಪವಾಗಿ ಜಠರ ಹೀಗೆ ಖಾಲಿ ಮಾಡಲ್ಪಟ್ಟು ಸೇವಿಸಿದ ಆಹಾರವೆಲ್ಲ ಮುಂಗರುಳನ್ನು ತಲುಪಲು ವಯಸ್ಕರಲ್ಲಿ ಸುಮಾರು 5–5½ ಗಂಟೆ ಕಾಲ ಬೇಕಾಗುತ್ತದೆ. ಆಹಾರ ಪ್ರಧಾನವಾಗಿ ದ್ರವವಾಗಿದ್ದರೆ ಸ್ವಲ್ಪಹೊತ್ತಿನಲ್ಲಿ ಜಠರ ಖಾಲಿ ಆಗುತ್ತದೆ. ಆದರೆ ಹಾಲು ಜಠರದಲ್ಲಿರುವ ಆಮ್ಲ ಕಿಣ್ವಗಳಿಂದಾಗಿ ಗರಣೆಗೊಳ್ಳುವುದರಿಂದ ಸಾವಕಾಶವಾಗಿಯೇ ಜಠರದಿಂದ ಮುಂದಕ್ಕೆ ಸಾಗುತ್ತದೆ. ಖಾಲಿಯಾದ ಮೇಲೆ ಸ್ವಲ್ಪಕಾಲ ಅದು ಯಾವ ವಿಶೇಷ ಚಲನೆಯನ್ನೂ ತೋರುವುದಿಲ್ಲ. ಅಂಗ ಸಂಕುಚಿತವಾಗಿ ಅದರ ಎದುರುಬದರು ಭಿತ್ತಿಗಳು ಒಂದಕ್ಕೊಂದು ತಾಕಿಕೊಂಡು ಒಳಗೆ ಅವಕಾಶ ಗಣನೀಯವಾಗಿ ಇರುವುದಿಲ್ಲ. ಖಾಲಿ ಜಠರದಲ್ಲಿ ಜಠರ ಸ್ರಾವವಾಗುವುದೂ ಈ ಸ್ರಾವ ಗಣನೀಯ ಪ್ರಮಾಣದಲ್ಲಿ ಸಂಗ್ರಹವಾಗುವುದೂ ಅಪರೂಪ. ಕೆಲಗಂಟೆಗಳಾದ ಬಳಿಕ ಖಾಲಿ ಜಠರ ಆಗಾಗ್ಗೆ ಸರ್ಪಗತಿ ಚಲನೆಯನ್ನು ತೋರಿಸಬಹುದು. ಇದು ತಕ್ಕಷ್ಟು ಶಕ್ತಿಯುತವಾಗಿದ್ದರೆ ಹೊಟ್ಟೆಹಸಿವಿನ ಅನುಭವ ಉಂಟಾಗುತ್ತದೆ. ಬಹುಶಃ ಎದುರು ಬದುರು ಭಿತ್ತಿಗಳು ಒಂದಕ್ಕೊಂದು ಉಜ್ಜಿ ಹೊಟ್ಟೆ ತಾಳ ಹಾಕುವುದರಿಂದ ಹಸಿವಿನ ಅನುಭವವಾಗಬಹುದು.

ಜಠರದಲ್ಲಿ ಆಹಾರ ಭಾಗಶಃ ಅರೆಯಲ್ಪಟ್ಟು ಜಠರರಸದೊಡನೆ ಮಿಶ್ರವಾದಾಗ ರಸದಲ್ಲಿರುವ ಪೆಪ್ಸಿನ್ ಹೈಡ್ರೊಕ್ಲೋರಿಕ್ ಆಮ್ಲದ ಜೊತೆಯಲ್ಲಿ ಆಹಾರದ ಪ್ರೋಟೀನ್ ಅಂಶವನ್ನು ಭಾಗಶಃ ಪಚನಗೊಳಿಸಿ, ಅದು ನೀರಿನಲ್ಲಿ ಕರಗುವಂತೆ ಮಾಡುತ್ತದೆ.

ಆಹಾರ ಜಠರವನ್ನು ಸೇರುವ ಮೊದಲೇ ಆಹಾರಸೇವನೆಯ ಸುಖದ ಕಲ್ಪನೆಯಿಂದ ಜಠರರಸ ಉತ್ಪತ್ತಿಯಾಗುವುದಕ್ಕೆ ಪ್ರಾರಂಭಿಸುತ್ತದೆ. ಆಹಾರ ಕಲ್ಪನೆಯಿಂದ ಜಠರರಸ ಉತ್ಪತ್ತಿಯಾಗುವುದಕ್ಕೆ ಪ್ರಾರಂಭಿಸುತ್ತದೆ. ಆಹಾರ ಚರ್ವಣವಾಗುವಾಗ ಅದರ ರುಚಿವಾಸನೆಗಳು ಈ ಉತ್ಪತ್ತಿಯನ್ನು ಮುಂದುವರಿಸುತ್ತವೆ. ಜಠರವನ್ನು ಆಹಾರ ಸೇರಿ ಅದನ್ನು ಹಿಗ್ಗಿಸುವುದರಿಂದಲೂ ಜಠರರಸ ಉತ್ಪತ್ತಿಯಾಗುತ್ತದೆ. ಇವು ಮೂರೂ ನರಪ್ರೇರಣೆಯಿಂದ ಪ್ರಚೋದಿತವಾದವು. ಆಹಾರ (ಹಾಲು ಮಾಂಸಾದಿಗಳು) ಮತ್ತು ಜಠರದಲ್ಲಿ ಭಾಗಶಃ ಪಚನವಾದ ಇತರ ಆಹಾರಸಾಮಗ್ರಿಗಳು ಜಠರದ ಲೋಳೆಪೊರೆಯ ಸಂಪರ್ಕಮಾತ್ರದಿಂದಲೇ ಅದರಿಂದ ಗ್ಯಾಸ್ಟ್ರಿನ್ ಎಂಬ ಹಾರ್ಮೋನು ಉತ್ಪತ್ತಿಯಾಗುವಂತೆ ಮಾಡುತ್ತವೆ. ಇದು ಬಹು ಅಲ್ಪ ಪ್ರಮಾಣದಲ್ಲಿ ಉತ್ಪತ್ತಿಯಾಗಿ ಜಠರರಸಕ್ಕೆ ಸೇರಿಸಲ್ಪಡದೆ ನೇರವಾಗಿ ಜಠರದಲ್ಲೇ ರಕ್ತಗತವಾಗುತ್ತದೆ. ರಕ್ತಪರಿಚಲನೆಯಿಂದ ಇದು ದೇಹದ ಎಲ್ಲೆಡೆಗೂ ಒಯ್ಯಲ್ಪಡುವಂತೆ ಜಠರದ ಧಮನಿಗಳ ಮೂಲಕ ಪುನಃ ಜಠರಕ್ಕೂ ತಲುಪುತ್ತದೆ. ಹೀಗೆ ತಲುಪಿದಾಗ ಜಠರ ಗ್ರಂಥಿಗಳು ಉದ್ರೇಕಗೊಂಡು ಬಹಳವಾಗಿ ಜಠರರಸವನ್ನು ಸ್ರವಿಸುತ್ತವೆ. ಜಠರದಲ್ಲಿ ಆಹಾರ ಇದ್ದು ಪಚನವಾಗುವ ಪರ್ಯಂತ ಈ ಕ್ರಮದಿಂದ ಜಠರರಸ ಉತ್ಪತ್ತಿ ಆಗುತ್ತಲೇ ಇರುತ್ತದೆ.

ಪೆಪ್ಸಿನ್ನಿನ ಕಾರ್ಯಾನಂತರ ಪ್ರೋಟೀನುಗಳಿಂದ ಲಭಿಸುವ ವಸ್ತುಗಳ ಮಿಶ್ರಣಕ್ಕೆ ಪೆಪ್ಟೋನ್ ಎಂದು ಹೆಸರು. ಜಠರರಸ ಪ್ರೋಟೀನನ್ನು ಪೆಪ್ಟೋನಾಗಿ ಪರಿವರ್ತಿಸಿ ಅದು ದ್ರವೀಕರಣವಾಗಲು ಸಹಾಯಮಾಡುವುದು ಹೀಗೆ. ಜಠರದಲ್ಲಿ ಇಷ್ಟು ಮಾತ್ರ ಪಚನಕ್ರಿಯೆ ಆಗುತ್ತದೆ. ಆಹಾರದ ಇತರ ಅಂಶಗಳು ಜಠರರಸದಿಂದ ಜೀರ್ಣವಾಗುವುದಿಲ್ಲ. ಪೆಪ್ಸಿನ್ ಪ್ರೋಟೀನ್ ಪಚನಕಾರ್ಯ ಮಾತ್ರವಲ್ಲದೆ ಹಾಲನ್ನು ಗರಣೀಕರಿಸುವ ಸಾಮರ್ಥ್ಯವುಳ್ಳದ್ದಾಗಿಯೂ ಇದೆ. ಶೈಶವದಲ್ಲಿ ಬಹುಶಃ ಹಾಲೇ ಪ್ರಧಾನ ಆಹಾರವಾಗಿರುವ ವಯಸ್ಕರಲ್ಲಿ ಹಾಲನ್ನು ಗರಣೀಕರಿಸುವ ಸಲುವಾಗಿಯೇ ಜಠರರಸದಲ್ಲಿ ರೆನ್ನಿನ್ ಎಂಬ ಇನ್ನೊಂದು ಕಿಣ್ವ ಇರುವುದೆಂದು ಹೇಳಲಾಗಿದೆ. ಹೈಡ್ರೊಕ್ಲೋರಿಕ್ ಆಮ್ಲ ಪೆಪ್ಸಿನ್ನಿನ ಕಾರ್ಯಕ್ಕೆ ಅಗತ್ಯವಾದುದೇ ಅಲ್ಲದೆ ಆಹಾರದಲ್ಲಿರುವ ಕಬ್ಬಿನ ಸಕ್ಕರೆಯನ್ನು (ಸುಕ್ರೋಸ್) ಭಾಗಶಃ ಸರಳಸಕ್ಕರೆಗಳಾದ ಗ್ಲೂಕೋಸ್ ಮತ್ತು ಫ್ರಕ್ಟೋಸ್ ಆಗಿ ಪರಿವರ್ತಿಸುವುದು; ಮತ್ತು ವ್ಯಕ್ತಿ ಸೇವಿಸಿದ ಪದಾರ್ಥಗಳಲ್ಲಿರುವ ವಿಷಾಣುಗಳನ್ನು ನಾಶಮಾಡುತ್ತದೆ. ಜಠರರಸದಲ್ಲಿ ನೈಜಘಟಕ (ಇನ್‌ಟ್ರಿನ್‌ಸಿಕ್ ಫ್ಯಾಕ್ಟರ್) ಎಂಬ ರಕ್ತಕಣಗಳ ಉತ್ಪತ್ತಿಗೆ ಅಗತ್ಯವಾದ ವಸ್ತು ಉಂಟು. ಇದು ಆಹಾರದಲ್ಲಿರುವ ಜೀವಸತ್ತ್ವ B 12 ಕರುಳಿನಲ್ಲಿ ರಕ್ತಗತವಾಗಲು ಆವಶ್ಯಕ. ನೈಜಘಟಕ ಲೋಪವಾದಾಗ ಜೀವಸತ್ತ್ವ B 12 ರಕ್ತಗತವಾಗಲಾರದೆ ದೇಹದಲ್ಲಿ ಅದರ ಕೊರತೆಯುಂಟಾಗಿ ತತ್ಫಲವಾಗಿ ರಕ್ತಕಣಗಳ ಉತ್ಪತ್ತಿಗೆ ತಡೆಯಾಗಿ ರಕ್ತಹೀನತೆ ರೋಗ ಉಂಟಾಗುತ್ತದೆ. ಜಠರದಲ್ಲಿ ನೈಜ ಘಟಕವನ್ನು ಉತ್ಪಾದಿಸುವ ಕ್ರಿಯೆ ಜಠರದ ಆಹಾರ ಸಂಗ್ರಹಣೆ ಪಚನ ಕಾರ್ಯಗಳಿಗಿಂತ ಮುಖ್ಯವಾದ್ದರಿಂದ ಕಾರಣಾಂತರದಿಂದ ಜಠರವನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಬೇಕಾದಾಗ ಅದನ್ನು ಪೂರ್ಣವಾಗಿ ತೆಗೆದುಹಾಕದೆ ಸ್ವಲ್ಪಭಾಗವನ್ನು ದೇಹದಲ್ಲಿ ಬಿಟ್ಟಿದ್ದು ಅದರ ಸ್ರಾವ ಕರುಳಿಗೆ ಸೇರುವಂತೆ ಏರ್ಪಡಿಸಿರುತ್ತದೆ.

ಜಠರ ಪರೀಕ್ಷೆಗಳು : ಜಠರ ಕ್ರಿಯೆ ಜಠರ ರೋಗಗಳಲ್ಲಿ ಸ್ವಾಭಾವಿಕವಾಗಿಯೇ ವ್ಯತ್ಯಾಸಗೊಂಡಿರುತ್ತದೆ. ಅದರ ಆಕಾರ ಚಲನಗಳು, ಅದರ ಕೆಲವು ಬದಲಾವಣೆಗಳು ಕೆಲವು ಜಠರ ರೋಗಗಳ ವೈಶಿಷ್ಟ್ಯವಾದ್ದರಿಂದ ಜಠರ ರೋಗದಲ್ಲಿ ಜಠರದ ಪರೀಕ್ಷೆ ಅಗತ್ಯ. ಬೇರಿಯಮ್ ಕದಡನ್ನು ಕುಡಿಸಿ ಜಠರವನ್ನು ತುಂಬಿ ತತ್‌ಕ್ಷಣ ಎಕ್ಸ್‌ಕಿರಣ ಪರೀಕ್ಷೆ ಮಾಡುವುದಲ್ಲದೆ 5 ½ ಗಂಟೆಗಳು ಕಳೆದ ಬಳಿಕ ಪುನಃ ಪರೀಕ್ಷೆ ಮಾಡಲಾಗುತ್ತದೆ. ಇದರಿಂದ ಜಠರ ವ್ರಣ, ಏಡಿಗಂತಿ ರೋಗ, ಜಠರದ ಅಳತೆ, ಆಕಾರ ಮುಂತಾದವುಗಳ ಪತ್ತೆ ಆಗುವುದು. ಜಠರವನ್ನು ಜಠರದರ್ಶಕದಲ್ಲಿ ಪರೀಕ್ಷಿಸಿಯೂ ಈ ವಿಷಯಗಳ ಮಾಹಿತಿ ಪಡೆಯಬಹುದು. ಜಠರದ ಸ್ರಾವಸಾಮರ್ಥ್ಯವನ್ನೂ ಅದರಲ್ಲಿರುವ ರಾಸಾಯನಿಕಗಳ ಪ್ರಮಾಣವನ್ನೂ ಅಂದಾಜು ಮಾಡಲು ಜಠರದೊಳಕ್ಕೆ ರೀಫಸ್ಸನ ನಳಿಕೆ ಎಂಬ ಸುಮಾರು 1 ಮೀ. ಉದ್ದ 3 ಮಿ.ಮೀ. ದಪ್ಪವಾದ ರಬ್ಬರ್ ನಳಿಕೆಯನ್ನು ಗಂಟಲಿನ ಮೂಲಕ ಹುಗಿಸಿ ಪಿಚಕಾರಿಯಿಂದ ಸ್ವಲ್ಪ ಜಠರರಸವನ್ನು ಹೀರಿ ಎಳೆದು ಅದನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಜಠರ ಸ್ರವಿಸುವಂತೆ ಅದನ್ನು ಪ್ರಚೋದಿಸಲು ನಿರ್ದಿಷ್ಟವಸ್ತುಗಳನ್ನು ಬಳಸಲಾಗುತ್ತದೆ. ಇವನ್ನು ನಳಿಕೆಯ ಮೂಲಕ ಜಠರಕ್ಕೆ ಹೊಗಿಸಬೇಕಾಗುತ್ತದೆ. ಇಲ್ಲವೆ ಸೂಜಿಮದ್ದಿನ ರೀತಿ ಕೊಡಬೇಕಾಗುತ್ತದೆ. ನಳಿಕೆಯ ಮೂಲಕ ಓಟ್ ಹಿಟ್ಟಿನ ಗಂಜಿ, ಮದ್ಯಸಾರ ಅಥವಾ ಸಕ್ಕರೆಯಲ್ಲಿ ಟೀಯನ್ನೂ ಸೂಜಿಮದ್ದಿನ ಮೂಲಕ ಇನ್ಸುಲಿನ್, ಹಿಸ್ಟಮಿನ್ ಇವನ್ನೂ ಸಾಮಾನ್ಯವಾಗಿ ಉಪಯೋಗಿಸುತ್ತದೆ.

(ಎಸ್.ಆರ್.ಆರ್.)

## ಜಠರ ಕರುಳಿನ ನಾಳ : ನೋಡಿ–ಜೀರ್ಣನಾಳ

**ಜಠರಗಲ್ಲು :** ಜಠರದಲ್ಲಿ ಕಲ್ಲಿನಂತೆ ಗಡುಸಾಗಿ ಮೈದಳೆಯುವ ಬಲು ಅಪರೂಪದ ಅನೈಸರ್ಗಿಕ ವಸ್ತು (ಗ್ಯಾಸ್ಟ್ರೊಲಿತ್). ಸಾಮಾನ್ಯವಾಗಿ ಕ್ಯಾಲ್ಸಿಯಮ್ ಲವಣಗಳ ಒಗ್ಗೂಡಿಕೆಯಿಂದ ಈ ಕಲ್ಲು ಉತ್ಪನ್ನವಾಗುವುದು. ಆದರೆ ವ್ಯಕ್ತಿ ಆರೋಗ್ಯವಂತನಾಗಿರುವಾಗ ಆತನ ಜಠರರಸದಲ್ಲಿರುವ ಹೈಡ್ರೊಕ್ಲೋರಿಕ್ ಆಮ್ಲ ಈ ಲವಣಗಳ ರೂಪಣವನ್ನು ತಟಸ್ಥೀಕರಿಸುತ್ತದೆ. ಆದ್ದರಿಂದ ಜಠರಗಲ್ಲು ಉಂಟಾಗಬೇಕಾದರೆ ಜಠರರಸದಲ್ಲಿ ಆಮ್ಲ ಪೂರ್ಣವಾಗಿ ಲೋಪಗೊಂಡಿರಬೇಕು ಮತ್ತು ಅನಾರೋಗ್ಯ ಪರಿಸ್ಥಿತಿ ತಲೆದೋರಿರಬೇಕು. ಜಠರಗಲ್ಲುಗಳು ಜಠರದಲ್ಲಿದ್ದರೆ ಅವುಗಳ ಇರುವಿಕೆಯಿಂದಲೇ ನೋವು, ಹೊಟ್ಟೆ ಭಾರ, ರಕ್ತಸ್ರಾವ ಮುಂತಾದ ಅನೇಕ ಬಾಧೆಗಳುಂಟಾಗಬಹುದು. ಅಪರೂಪಕ್ಕೆ ಅಕಸ್ಮಾತ್ ಆಹಾರ ಪದಾರ್ಥಗಳೊಡನೆ ನುಂಗಿದ ಕಲ್ಲುಗಳೂ ಜಠರದಲ್ಲಿ ಕಂಡುಬರಬಹುದು. ಅಂತೆಯೇ ಪಿತ್ತಕೋಶ ನಾಳಗಳ ಕಲ್ಲುಗಳು ಡುಯೋಡಿನಮ್ ಎಂಬ ಸಣ್ಣ ಕರುಳಿನ ಪ್ರಾರಂಭ ಭಾಗಕ್ಕೆ ಬಂದು ಅಲ್ಲಿಂದ ಜಠರದೊಳಕ್ಕೆ ಹಿನ್ನಡೆಯಾಗಿರಬಹುದು.

(ಆರ್.ಎಸ್.ವಿ.)

**ಜಠರದ ರೋಗಗಳು :** ಜಠರದ ಉರಿಯೂತ (ಗ್ಯಾಸ್ಟ್ರೈಟಿಸ್), ಜಠರ ಮತ್ತು ಮುಂಗರುಳಿನ (ಡುಯೋಡಿನಮ್) ವ್ರಣಗಳು–ಈ ರೋಗಗಳನ್ನು ಇಲ್ಲಿ ಚರ್ಚಿಸಿದೆ.

ಜಠರದ ಉರಿಯೂತ : ಜಠರದ ಲೋಳೆಪೊರೆಯ ಪ್ರಕೋಪದಿಂದಾದ ರೋಗಸ್ಥಿತಿ ಇದು. ಉರಿಯೂತದ ತೀವ್ರತೆಯ ಕಾಲಾವಧಿಗಳನ್ನು ಅವಲಂಬಿಸಿ ಇದನ್ನು ಕೂರಾದ (ಅಕ್ಯೂಟ್) ಮತ್ತು ದೀರ್ಘಕಾಲಿಕ ಉರಿಯೂತವೆಂದು ವಿಂಗಡಿಸಿದೆ. ಕೂರಾದ ಉರಿಯೂತ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ರೋಗಸ್ಥಿತಿ. ಅಪಕ್ವ ಆಹಾರ, ಅತಿಯಾದ ಮದ್ಯಪಾನ, ಕೀಲುನೋವಿಗೆ ಬಳಸುವ ಸ್ಯಾಲಿಸಿಲೇಟ್ ಮತ್ತು ಇತರ ಕೆಲವು ಔಷಧಿಗಳು, ಪದೇ ಪದೇ ತಂಬಾಕು ಜಗಿಯುವುದು, ಆಕಸ್ಮಿಕವಾಗಿ ಆತ್ಮಹತ್ಯೆಯ ಪ್ರಯತ್ನವಾಗಿ ಆಮ್ಲಕ್ಷಾರಗಳ ಸೇವನೆ, ಹೆಚ್ಚು ಖಾರದಿಂದ ಕೂಡಿದ ಖಾದ್ಯಸೇವನೆ, ಬಲು ಬಿಸಿಯಾದ ಆಹಾರ ಪಾನೀಯಗಳನ್ನು ಸೇವಿಸುವುದು–ಇವೇ ಮುಂತಾದವುಗಳ ಪ್ರಭಾವ ಜಠರದ ಲೋಳೆಪೊರೆಯ ಮೇಲೆ ಆಘಾತವಾಗಿ ಪರಿಣಮಿಸಿ, ಜಠರದ ಉರಿತ ಏಕಾಏಕಿ ಪ್ರಕಟವಾಗಬಹುದು. ನ್ಯುಮೋನಿಯಾ, ಇನ್‌ಫ್ಲೂಯೆನ್‌ಜಾ, ದಡಾರ, ವಿಷಮಶೀತಜ್ವರ ಮುಂತಾದ ರೋಗಗಳು, ತೀವ್ರತರನಾಗಿ ಮೂತ್ರದ ಪ್ರಮಾಣ ಇಳಿಯುವಿಕೆಯಿಂದಾದ ಯುರೀಮಿಯಾ, ಮಾನಸಿಕ ಒತ್ತಡ ಇವು ಆಂತರಿಕ ಕಾರಣಗಳಾಗಿ ಜಠರದ ತೀವ್ರ ಉರಿಯೂತವನ್ನು ಉಂಟುಮಾಡಬಹುದು. ಸಾಲ್ಮೊನೆಲ್ಲ, ಸ್ಟೆಫೈಲೊಕಾಕೈ ವಿಷಾಣುಗಳು ಆಹಾರದಲ್ಲಿ ಸೇರ್ಪಡೆಯಾಗಿದ್ದಾಗ ಆ ವಿಷಾಹಾರ ಸೇವನೆಯಿಂದ ಅನೇಕರು ಏಕಕಾಲದಲ್ಲಿ ಜಠರದ ತೀವ್ರ ಉರಿಯೂತದ ಲಕ್ಷಣಗಳನ್ನು ಪ್ರಕಟಪಡಿಸುವರು.

ಮೇಲುಹೊಟ್ಟೆಯಲ್ಲಿ ತೀವ್ರವಾದ ಹೊಟ್ಟೆನೋವು, ಅರೋಚಕತೆ, ಅಗ್ನಿಮಾಂದ್ಯ, ಓಕರಿಕೆ, ವಮನ, ಹೊಟ್ಟೆ ಉಬ್ಬರ ಇವು ಸಾಮಾನ್ಯ ರೋಗಲಕ್ಷಣಗಳು. ಬಾಯಾರಿಕೆ ಭೇದಿಗಳೂ ಕಂಡುಬರಬಹುದು. ವಮನವಾದಾಗ ಪ್ರಾರಂಭದಲ್ಲಿ ಮೊದಲು ಸೇವಿಸಿದ ಆಹಾರ ಲೋಳೆ ಮತ್ತು ಜೊಲ್ಲಿನ ಸಮೇತ ಹೊರಬರುತ್ತದೆ. ಕೆಲವು ಸಲ ಪಿತ್ತರಸ ಸೇರ್ಪಡೆಯಿಂದ ಹಳದಿ ಇಲ್ಲವೆ ಹಸಿರು ಬಣ್ಣದ ವಮನವಾಗಬಹುದು. ಅನಂತರ ಆಗುವ ವಮನ ನೀರುನೀರಾಗಿರುತ್ತದೆ. ರೋಗಿ ಬಿಳಿಚಿಕೊಂಡು ಬಲು ನಿತ್ರಾಣನಾಗುತ್ತಾನೆ. ತಲೆನೋವು, ಮಂಪರು, ಸಾಧಾರಣ ಜ್ವರ, ತೀವ್ರ ನಾಡಿಬಡಿತ ಇವೂ ಕಂಡುಬರಬಹುದು. ಕೆಲವು ಗಂಟೆಗಳು ಇಲ್ಲವೆ ದಿನಗಳಾದ ಬಳಿಕ ರೋಗ ತಾನಾಗಿಯೇ ಇಲ್ಲವೇ ಔಷಧೋಪಚಾರದಿಂದ ಗುಣವಾದಾಗ ಎಲ್ಲ ತೀವ್ರ ಲಕ್ಷಣಗಳೂ ಇದ್ದಕ್ಕಿದ್ದಂತೆ ಅದೃಶ್ಯವಾಗುತ್ತವೆ. ರೋಗಸ್ಥಿತಿಯಲ್ಲಿ ಜಠರದ ಲೋಳೆಪೊರೆ ತನ್ನ ಸ್ವಾಭಾವಿಕ ನುಣುಪು ಹೊಳಪನ್ನೂ ಮಾಸಲು ಕೆಂಪು ಬಣ್ಣವನ್ನೂ ಕಳೆದುಕೊಂಡು ಕೆಂಪಾಗಿ ಉಬ್ಬಿಕೊಂಡಿರುವುದು. ಅಲ್ಲಲ್ಲಿ ಲೋಳೆಪೊರೆ ಅಂಟಿಕೊಂಡು ರಕ್ತದ ಒಸರಿಕೆಯೂ ಕಂಡುಬರುತ್ತದೆ. ಕೆಲವು ಕಡೆ ಲೋಳೆಪೊರೆ ನಶಿಸಿ ಗಾಯಗೊಂಡ ಸ್ಥಳ ಕೀವುಮಿಶ್ರಿತ ಲೋಳೆಯಿಂದ ಮುಚ್ಚಿರುವುದುಂಟು. ಕೀವನ್ನು ಉತ್ಪತ್ತಿಮಾಡುವ ರೋಗಾಣುಗಳೇ ನೇರವಾಗಿ ರಕ್ತದುಗ್ಧರಸಗಳಿಂದ ಜಠರದ ಲೋಳೆಪೊರೆಯೊಳಕ್ಕೆ ಹರಡಿ ಕೀವಿನಿಂದ ಮುಚ್ಚಿದ ಉರಿಯೂತವನ್ನು ಉಂಟುಮಾಡಬಹುದು. ಉರಿಯೂತ ಲೋಳೆಪೊರೆಯ ಮೇಲು ಪದರಿಗೆ ಮಾತ್ರ ಸೀಮಿತವಾಗಿದ್ದಾಗ ಅದು ಸಂಪೂರ್ಣವಾಗಿ ಗುಣ ಹೊಂದುವುದು. ಇನ್ನೂ ಆಳವಾಗಿದ್ದರೆ ಗುಣಹೊಂದಿದಾಗ ಆ ಸ್ಥಳ ನಾರೆಳೆಯಿಂದ ಮುಚ್ಚಲ್ಪಡುತ್ತದೆ.

ರೋಗಿಗೆ ವಿಶ್ರಾಂತಿ ಅಗತ್ಯ. ಉರಿಯೂತ ವಿಷಾಹಾರವಸ್ತುಗಳ ಸೇವನೆಯಿಂದ ಉಂಟಾಗಿದ್ದು ಇನ್ನೂ ವಮನವಾಗದಿದ್ದರೆ ಸೋಡಾ ಬೈಕಾರ್ಬ್ ಬೆರೆಸಿದ ನೀರನ್ನು ಕುಡಿಸಿ ವಾಂತಿ ಮಾಡಿಸಬೇಕು, ಇಲ್ಲವೆ ಸಂದರ್ಭವನ್ನು ಅರಿತು ನಳಿಕೆ, ಪಿಚಕಾರಿಗಳನ್ನು ಉಪಯೋಗಿಸಿ

ನೀರಿನಿಂದ ಹೊಟ್ಟೆಯನ್ನು ತೊಳೆಯಬೇಕು. ಸೂಕ್ತ ವಿಷಹಾರಿಯನ್ನು ಕೊಡಬೇಕು. ತಾತ್ಕಾಲಿಕವಾಗಿ ಇನ್ನೇನನ್ನೂ ಸೇವಿಸಬಾರದು. ಆಗಲೇ ಬಲು ಹೆಚ್ಚಾಗಿ ವಾಂತಿ ಆಗಿದ್ದರೆ ದೇಹದಲ್ಲಿ ನೀರು ಮತ್ತು ಲವಣಗಳ ಅಂಶಗಳ ಸಮತೋಲನೆಯನ್ನು ಕಾಯ್ದುಕೊಳ್ಳಬೇಕು. ಇದಕ್ಕೆ ಅವಶ್ಯವಾದ ಲವಣ ಮತ್ತು ಗ್ಲೂಕೋಸುಗಳನ್ನು ಸೂಕ್ತಪ್ರಮಾಣದಲ್ಲಿ ಬೆರೆಸಿದ ನೀರನ್ನು ರಕ್ತನಾಳಗಳ ಮೂಲಕ ಕೊಡಬೇಕು. ವಾಂತಿ ಕಡಿಮೆ ಆದಂತೆ ಬರಿಯ ಇಲ್ಲವೆ ಗ್ಲೂಕೋಸ್ ಸೇರಿಸಿದ ನೀರನ್ನು ಕುಡಿಸಬೇಕು. ಅನಂತರ ಹಸಿವು ತೋರಿದಂತೆ ಕೆಲವು ದಿವಸಗಳ ತನಕ ಹಾಲು, ಗಂಜಿ ಮೊಟ್ಟೆಗಳಂಥ ಗೊಡ್ಡು ಆಹಾರಗಳನ್ನು ಕೊಡಬೇಕು. ಮದ್ಯಪಾನ, ಕೆಫೀನ್ ಇರುವ ಪಾನೀಯಗಳ ಸೇವನೆ, ಸ್ಯಾಲಿಸಿಲೇಟುಗಳು ಮತ್ತು ಅದೇ ಜಾತಿಯ ಔಷಧಿಗಳು ಆಗ ನಿಷಿದ್ಧ. ಶಾಮಕ ಔಷಧಿಗಳು ಮತ್ತು ಸೆಡೆತವನ್ನು ನಿವಾರಿಸುವ ಔಷಧಿಗಳನ್ನು ಕ್ರಮವರಿತು ಉಪಯೋಗಿಸಬೇಕಾಗುತ್ತದೆ. ಸಾಮಾನ್ಯವಾಗಿ ರೋಗ ಒಂದೆರಡು ದಿನಗಳಲ್ಲೇ ಗುಣವಾಗುತ್ತದೆ.

ದೀರ್ಘಕಾಲಿಕ ಜಠರದ ಉರಿಯೂತ : ಇದು ನಿಧಾನವಾಗಿ ಕ್ರಮೇಣ ಉಂಟಾಗುವ ರೋಗಸ್ಥಿತಿ. ಜಠರದ ದೀರ್ಘಕಾಲಿಕ ಉರಿಯೂತದಿಂದ ನರಳುವವರ ಸಂಖ್ಯೆ ಜನಸಾಮಾನ್ಯರಲ್ಲಿ ಸುಮಾರು ಶೇ.15–60 ಮಂದಿಗಳಷ್ಟಿರಬಹುದು ಎಂದು ಅಂದಾಜು. ಮಧ್ಯವಯಸ್ಕರು ಮತ್ತು ಮಧ್ಯವಯಸ್ಸನ್ನು ದಾಟಿದವರು ಈ ರೋಗದಿಂದ ಪೀಡಿತರಾಗುತ್ತಾರೆ. ದೀರ್ಘಾವಧಿ ಉರಿಯೂತಕ್ಕೆ ಕಾರಣ ಸರಿಯಾಗಿ ತಿಳಿಯದು. ಕೂರಾದ ಜಠರದ ಉರಿಯೂತಕ್ಕೆ ಕಾರಣವಾದ ಅಂಶಗಳೇ ಪದೇ ಪದೇ ಪ್ರಭಾವ ಬೀರಿ ರೋಗವನ್ನು ದೀರ್ಘಾವಧಿಯದನ್ನಾಗಿ ಮಾರ್ಪಡಿಸಬಹುದು. ಹೀಗಾಗಿ ಬಹುಬಿಸಿಯಾದ ಇಲ್ಲವೆ ಅತಿ ತಣ್ಣಗಿರುವ ಆಹಾರದ ಸೇವನೆ, ತಂಬಾಕು, ಮದ್ಯಸಾರಗಳು, ಸೋಂಕು, ಭಾವೋದ್ರೇಕ, ಕೆಲವು ಔಷಧಗಳು ಒಗ್ಗದಿರುವಿಕೆ ಮುಂತಾದವೆಲ್ಲವೂ ದೀರ್ಘಕಾಲಿಕ ಉರಿಯೂತಕ್ಕೆ ಕಾರಣವಾಗಬಹುದು. ಪೈಲೋರಸ್ ಮತ್ತು ಮುಂಗರುಳ ಸಂಧಿಸ್ಥಾನದಲ್ಲಿ ಜಠರವ್ರಣವಾದರೆ ಆಹಾರ ಸಾಗುವ ಮಾರ್ಗ ಕಿರಿದಾಗಿ, ಆಹಾರ ಜಠರದಲ್ಲಿ ನಿಂತು ಕೊಳೆತು, ಅದರಿಂದ ಜಠರದ ಉರಿಯೂತ ಉಂಟಾಗಬಹುದು.

ದೀರ್ಘಕಾಲದ ಉರಿಯೂತದಲ್ಲಿ ನಾಲ್ಕು ಬಗೆಯನ್ನು ಗುರುತಿಸಬಹುದು. ಏಕಕಾಲಿಕವಾಗಿ ಒಂದಕ್ಕಿಂತ ಹೆಚ್ಚು ಬಗೆಯ ಉರಿಯೂತಗಳು ಕಂಡುಬರಬಹುದು. ಮೊದಲ ಬಗೆ ಮೇಲ್ಪದರದ ಉರಿಯೂತದಲ್ಲಿ ಲೋಳೆಪೊರೆ ಕೆಂಪಾಗಿದ್ದು ಅಲ್ಲಲ್ಲಿ ಲೋಳೆ ಅಂಟಿಕೊಂಡಿರುವುದು ಕಾಣಿಸುತ್ತದೆ. ಎರಡನೆಯದು ಲೋಳೆಪೊರೆ ಕ್ಷೀಣಿಸಿ ಉರಿಯೂತಗೊಂಡಿರುವುದು. ಈ ಸ್ಥಿತಿಯಲ್ಲಿ ಲೋಳೆಪೊರೆಯ ಗ್ರಂಥಿಗಳು ನಿರ್ನಾಮ ವಾಗಿರುವುವು. ಪೊರೆ ತೆಳ್ಳಗಾಗಿ ಅಡಿಯಲ್ಲಿರುವ ರಕ್ತನಾಳಗಳೆಲ್ಲ ಮೇಲೆದ್ದು ಕಾಣುತ್ತವೆ. ಅವು ಅಲ್ಲಲ್ಲಿ ಹರಿದು ಬೂದು ಹಸಿರುಮಿಶ್ರಬಣ್ಣದ ಸಣ್ಣ ಗಾಯಗಳಿದ್ದಂತೆ ತೋರುವುದು. ಕ್ಷೀಣಿಸಿದ ಲೋಳೆಪೊರೆ ವಾಸಿಯಾಗಿ ತನ್ನ ಮೊದಲಿನ ಸ್ಥಿತಿಯನ್ನು ಎಂದೂ ಪಡೆಯಲಾರದು. ಮೂರನೆಯ ಬಗೆಯ ಲೋಳೆಪೊರೆ ವೃದ್ಧಿಸಿ ಉರಿಯೂತ ಗೊಂಡಿರುವುದು. ಇಲ್ಲಿ ಜಠರದ ಭಿತ್ತಿ ದಪ್ಪವಾಗಿ ಪದರಗಳು ಉಬ್ಬಿ ಸ್ಪಂಜಿನಂತಿರುತ್ತವೆ. ನಾಲ್ಕನೆಯ ಬಗೆ ಜಠರದ ಮೇಲೆ ಶಸ್ತ್ರಕ್ರಿಯೆಮಾಡಿದ ಬಳಿಕ ಕಂಡುಬರುವ ಉರಿಯೂತ. ಇದರಲ್ಲಿ ಮೇಲೆ ಹೇಳಿದ ಮೂರು ರೀತಿಯ ಉರಿಯೂತಗಳ ಲಕ್ಷಣಗಳೂ ಕಂಡುಬರುತ್ತವೆ.

ದೀರ್ಘಕಾಲಿಕ ಉರಿಯೂತದ ಲಕ್ಷಣಗಳು ಅನಿರ್ದಿಷ್ಟ ಮೇಲುಹೊಟ್ಟೆಯ ಭಾಗದಲ್ಲಿ ನೋವು, ಹೊಟ್ಟೆ ಉಬ್ಬರ, ಗುಡುಗುಡು ಶಬ್ದ, ಹಸಿವಿಲ್ಲದಿರುವಿಕೆ, ತೇಗು, ಕಾಲಪ್ರವೃತ್ತಿ ಬದಲಾವಣೆ, ಅವ್ಯಕ್ತಹಿಂಸೆ ಇತ್ಯಾದಿಗಳು ಸಾಮಾನ್ಯ. ಓಕರಿಕೆ, ವಾಂತಿ, ಹೊಟ್ಟೆತೊಳಸುಗಳೂ ಇರಬಹುದು. ಮದ್ಯಪಾನದಿಂದ ಪದೇ ಪದೇ ಉರಿಯೂತ ಉಂಟಾಗಿದ್ದರೆ ಅಂಥ ವ್ಯಕ್ತಿ ಬೆಳಗ್ಗೆ ಎದ್ದಾಗಲೇ ಓಕರಿಸುತ್ತ ಆಹಾರವನ್ನು ಸೇವಿಸಲಾಗದವನಾಗಿರುವನು. ಆದರೆ ಸಂಜೆ ರಾತ್ರಿಗಳಲ್ಲಿ ಆತ ಆಹಾರವನ್ನು ತೆಗೆದುಕೊಳ್ಳಬಲ್ಲ. ಕೆಲವು ವೇಳೆ ಜಠರವ್ರಣದ ಲಕ್ಷಣಗಳೂ ವ್ಯಕ್ತವಾಗಬಹುದು. ಅಪರೂಪವಾಗಿ ಜಠರದಲ್ಲಿ ರಕ್ತಸ್ರಾವವೂ ಆಗಬಹುದು. ದೀರ್ಘಕಾಲಿಕ ಉರಿಯೂತದ ನಿದಾನವನ್ನು ಎಕ್ಸ್‌ಕಿರಣ ಪರೀಕ್ಷೆಯಿಂದ ಮಾಡಲು ಸಾಧ್ಯವಿಲ್ಲ. ಕೆಲವು ಬಾರಿ ಜಠರದರ್ಶಕ (ಗ್ಯಾಸ್ಟ್ರಾಸ್ಕೋಪ್) ಪರೀಕ್ಷೆಯಿಂದ ಮತ್ತು ಅದರ ಮೂಲಕ ಕತ್ತರಿಸಿ ತೆಗೆದ ಲೋಳೆಪೊರೆಯ ಭಾಗವನ್ನು (ಜೀವುಂಡಿಗೆ ವಿಧಾನ) ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸುವುದರಿಂದ ರೋಗವನ್ನು ಪತ್ತೆಹಚ್ಚಬಹುದು. ಇದರ ಚಿಕಿತ್ಸೆ ಸಹಜವಾಗಿಯೇ ಉರಿಯೂತಕ್ಕೆ ಕಾರಣವಾದ ಅಂಶವನ್ನು ನಿರ್ಮೂಲ ಮಾಡುವುದಾಗಿದೆ. ರೋಗಿಗೆ ಯಾವ ಕೆಟ್ಟ ರೋಗವೂ ಅಂಟಿಲ್ಲವೆಂದು ಧೈರ್ಯ ಹೇಳುವುದು, ಆಹಾರ ಪಥ್ಯ, ಮದ್ಯಪಾನ ತಂಬಾಕು ಕೆಫೀನ್ ಪಾನೀಯಗಳ ವರ್ಜನ ಇವು ಆವಶ್ಯಕ. ಜಠರದ ವ್ರಣದಲ್ಲಿ ಅನುಸರಿಸುವಂತೆ ಪದೇ ಪದೇ ಹಾಲುಸೇವನೆ, ಸಪ್ಪೆ ಆಹಾರಸೇವನೆ ಅಗತ್ಯವಾಗಬಹುದು. ಆಹಾರಾಂಶಗಳ ಕೊರತೆ ಇದ್ದರೆ, ಅದನ್ನು ಸರಿಪಡಿಸುವುದು, ಮನಃಶಾಂತಿಗೋಸ್ಕರ ಶಾಮಕ ಔಷಧಿಗಳನ್ನು ವೈದ್ಯರ ಸಲಹೆಯಂತೆ ಸೇವಿಸುವುದು – ಇವೂ ಚಿಕಿತ್ಸೆಯ ಮೂಲಾಧಾರ ಎನ್ನಬಹುದು. ಆಹಾರವನ್ನು ಚೆನ್ನಾಗಿ ಅಗಿದು ತಿನ್ನಲು ಹಲ್ಲುಗಳಿಲ್ಲದಿದ್ದರೆ ಕೃತಕ ಹಲ್ಲನ್ನು ಕಟ್ಟಿಸಿಕೊಳ್ಳಬೇಕು. ಉರಿಯೂತಗಳನ್ನು ಉಂಟು ಮಾಡುವ ಔಷಧಿಗಳನ್ನು ಸೇವಿಸಬಾರದೆನ್ನುವುದು ಕಂಡಂತೆಯೇ ಇದೆ. ಬೆಳಗ್ಗೆ ಒಂದು ಲೋಟ ನೀರಿನಲ್ಲಿ ಒಂದು ಚಮಚ ಸೋಡಾ ಬೈಕಾರ್ಬ್ ಬೆರೆಸಿ, ಬರಿ ಹೊಟ್ಟೆಯಲ್ಲಿ ಕುಡಿದರೆ ಅದು ಜಠರದಲ್ಲಿನ ಲೋಳೆಯನ್ನು ಹೋಗಲಾಡಿಸುವುದು. ಜಠರದಲ್ಲಿ ಆಮ್ಲದ ಪ್ರಮಾಣ ಕಡಿಮೆ ಇದ್ದರೆ ತೆಳುಮಾಡಿದ ಹೈಡ್ರೊಕ್ಲೋರಿಕ್ ಆಮ್ಲವನ್ನು ಇನ್ನಷ್ಟು ನೀರಿನಲ್ಲಿ ಬೆರೆಸಿ ಕುಡಿಯಬೇಕು. ಅಪರೂಪ ಸಂದರ್ಭಗಳಲ್ಲಿ ರಕ್ತಸ್ರಾವವಾದರೆ ಅದನ್ನು ನಿಲ್ಲಿಸಲು ಶಸ್ತ್ರಕ್ರಿಯೆ ಅನಿವಾರ್ಯವಾಗಬಹುದು. ರೋಗಿ ಸಾಮಾನ್ಯವಾಗಿ ಪೂರ್ಣ ಗುಣ ಹೊಂದುತ್ತಾನೆ. (ಆರ್.ಎಸ್.ವಿ.; ಪಿ.ಎಸ್.ಎಸ್.)

**ಜಠರ ಮತ್ತು ಮುಂಗರುಳಿನ ವ್ರಣಗಳು :** ಜಠರ ಮತ್ತು ಮುಂಗರುಳಿನ ಲೋಳೆಪೊರೆ ಯಲ್ಲಿ ಉಂಟಾಗುವ ಹುಣ್ಣು ವ್ರಣಗಳಿವು. ಇವು ತಾತ್ಕ್ಷಣಿಕವಾಗಿ ಉಂಟಾಗಬಹುದು. ಇಲ್ಲವೇ ಬಹುಕಾಲಿಕವಾಗಿ ಕಂಡುಬರಬಹುದು.

ತಾತ್ಕ್ಷಣಿಕ ವ್ರಣಗಳು : ಒರಟಾದ, ಸಿದ್ಧಪಡಿಸದ ಮತ್ತು ಚುರುಗುಟ್ಟಿಸುವ ಆಹಾರವನ್ನು ಅಗಿಯದೆ ಆತುರವಾಗಿ ತಿಂದಾಗ, ಅಥವಾ ಆತ್ಮಹತ್ಯೆಯಲ್ಲಿನಂತೆ ತೀಕ್ಷ್ಣವಾದ ಕ್ಷಾರ ಅಥವಾ ಆಮ್ಲಪಾನೀಯಗಳನ್ನು ಕುಡಿದಾಗ ಜಠರ ಮತ್ತು ಮುಂಗರುಳಿನ ಒಳಪೊರೆಗೆ ಅಸಾಮಾನ್ಯ ಆಘಾತ ಉಂಟಾಗಿ ಅಲ್ಲಲ್ಲಿ ಹುಣ್ಣಾಗುತ್ತದೆ. ವಿಷಮಶೀತಜ್ವರ, ನ್ಯುಮೋನಿಯ ಮುಂತಾದ ವಿಷಾಣು ಸೋಂಕು, ವಿಷಾಹಾರಸೇವನೆ, ಯುರೀಮಿಯ, ತೀವ್ರ ದೈಹಿಕ ಮಾನಸಿಕ ಆಘಾತಗಳು, ಆ್ಯಸ್ಪಿರಿನ್ ಕಾರ್ಟಿಸೋನುಗಳಂಥ ಕೆಲವು ಔಷಧಗಳ ಸೇವನೆ– ಇವು ಎಲ್ಲವೂ ಲೋಳೆಪೊರೆಯನ್ನು ಅಲ್ಲಲ್ಲಿ ಕೊರೆದು ಸಣ್ಣ ಹುಣ್ಣುಗಳನ್ನು ಉಂಟು ಮಾಡುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಜಠರ ಮುಂಗರುಳಿನ ತಾತ್ಕ್ಷಣಿಕ ಹುಣ್ಣುಗಳು ಅಪರೂಪ. ವ್ಯಾಪಕವಾಗಿ ಸುಟ್ಟಗಾಯದಿಂದ ವಿಷಪದಾರ್ಥಗಳು ರಕ್ತಗತವಾಗಿ ಪಿತ್ತರಸದಲ್ಲಿ ವಿಸರ್ಜಿತವಾಗಿ ಪಿತ್ತರಸ ಕರುಳಿಗೆ ಹರಿಯುವ ಕಡೆ ಕರುಳಿನಲ್ಲಿ ಹುಣ್ಣನ್ನು ಉಂಟು ಮಾಡಬಹುದು. ತಾತ್ಕ್ಷಣಿಕ ಹುಣ್ಣುಗಳು ಸಣ್ಣವಾಗಿಯೂ ಅಲ್ಪ ಆಳದವಾಗಿಯೂ ಜಠರ ಮತ್ತು ಮುಂಗರುಳಿನಲ್ಲಿ ಪೂರ್ಣವಾಗಿ ಇಲ್ಲವೆ ವ್ಯಾಪಕವಾದ ಕ್ಷೇತ್ರದಲ್ಲಿ ಕಂಡುಬರುತ್ತವೆ. ಇವು ಸಾಧಾರಣವಾದ ಅಗ್ನಿಮಾಂದ್ಯವನ್ನು ಉಂಟುಮಾಡುವುವು. ಅನೇಕ ವೇಳೆ ಇವು ಗಮನಕ್ಕೆ ಬಾರದೇ ಹೋಗುವುದುಂಟು. ಕೆಲವು ಸಂದರ್ಭಗಳಲ್ಲಿ ಇವುಗಳಿಂದ ಸ್ವಲ್ಪವಾಗಿಯೋ ಬಹುವಾಗಿಯೋ ರಕ್ತಸ್ರಾವವಾಗಬಹುದು. ಅಪೂರ್ವವಾಗಿ ಹುಣ್ಣುಗಳು ಭಿತ್ತಿಯಲ್ಲಿ ರಂಧ್ರವನ್ನುಂಟುಮಾಡುವುವು. ಬಾಯಿ ಮತ್ತು ಅನ್ನನಾಳದ ಮೂಲಕ ಜಠರದೊಳಕ್ಕೆ ಹೊಗಿಸುವ ಜಠರದರ್ಶಕ ಎಂಬ ಸಲಕರಣೆಯಿಂದ ಪರೀಕ್ಷಿಸಿ ತಾತ್ಕ್ಷಣಿಕ ವ್ರಣಗಳನ್ನು ಪತ್ತೆಮಾಡಬಹುದು. ವಿಶ್ರಾಂತಿ ಮತ್ತು ಕಾರಣಕರ್ತೃವಿನ ನಿರ್ಮೂಲನವೇ ಚಿಕಿತ್ಸೆ. ಒಂದು ವಾರ ಹಾಲುಗಂಜಿಯಂಥ ಇಲ್ಲವೆ ಅಂಗಡಿಯಲ್ಲಿ ಮಾರಾಟಕ್ಕಿರುವ ಸಿದ್ಧ ಆಹಾರದಂಥ ಸುಲಭವಾಗಿ ಜೀರ್ಣಿಸಬಹುದಾದ ದ್ರವರೂಪದ ಆಹಾರದ ಜೊತೆಗೆ ಜಠರದಲ್ಲಿ ಆಮ್ಲವನ್ನು ನಿಸ್ಸತ್ತ್ವಗೊಳಿಸುವ ಔಷಧಿಗಳು (ಅಲ್ಯೂಮಿನಿಯಮ್ ಹೈಡ್ರಾಕ್ಸೈಡ್, ಮೆಗ್ನೀಸಿಯಮ್ ಸಿಲಿಕೇಟುಗಳಂಥ ಪ್ರತ್ಯಾಮ್ಲಗಳು) ಸಾಮಾನ್ಯವಾಗಿ ಸಾಕಾಗುತ್ತವೆ. ಇವು ತಾತ್ಕಾಲಿಕ ವ್ರಣಗಳಾದ್ದರಿಂದ ಬೇಗ ಗುಣವಾಗುತ್ತವೆ. ಅಗಾಧ ರಕ್ತಸ್ರಾವ, ರಂಧ್ರೀಕರಣದಂಥ ಅಪರೂಪ ಸಂದರ್ಭಗಳಲ್ಲಿ ರಕ್ತಪೂರೈಕೆಯೂ ತತ್‌ಕ್ಷಣದ ಶಸ್ತ್ರಚಿಕಿತ್ಸೆಯೂ ಆವಶ್ಯಕವಾಗುತ್ತವೆ.

ಬಹುಕಾಲಿಕ ವ್ರಣ : ಜಠರ ಸ್ರವಿಸುವ ರಸವು ಪೆಪ್ಸಿನ್ ಎಂಬ ಕಿಣ್ವವನ್ನೂ ಹೈಡ್ರೊಕ್ಲೋರಿಕ್ ಆಮ್ಲವನ್ನೂ ಒಳಗೊಂಡಿರುವ ಪ್ರಬಲ ಜೀರ್ಣಕಾರಿ. ಜಠರದ ಒಳಪೊರೆಯ ಸ್ವಾಭಾವಿಕ ಸತ್ತ್ವ, ಲೋಳೆ ಮತ್ತು ಇತರ ಅವ್ಯಕ್ತ ಕಾರಣಗಳು ಅದನ್ನು ಈ ಜೀರ್ಣಕಾರಿಗಳಿಂದ ರಕ್ಷಿಸುತ್ತವೆ. ಆದರೆ ದೈಹಿಕ, ಮಾನಸಿಕ ಕಾರಣಗಳಿಂದ ಲೋಳೆಪೊರೆಗೆ ಆಘಾತವಾಗಿ ಅದು ಸ್ಥಳೀಯವಾಗಿ ನಿಸ್ಸತ್ತ್ವಗೊಂಡರೆ ಇಲ್ಲವೆ ಲೋಳೆಯಿಂದ ತಕ್ಕಷ್ಟು ರಕ್ಷಣೆ ಒದಗದಿದ್ದರೆ ಕ್ರಮೇಣ ಅಂಗದ ಭಿತ್ತಿ ಭಾಗಶಃ ಜೀರ್ಣಗೊಂಡು ದೀರ್ಘಕಾಲಿಕ ವ್ರಣ ತಲೆದೋರುವುದು. ಮುಂಗರುಳಿನಲ್ಲಿ ಜಠರಕ್ಕಿಂತ ಮೂರುಪಟ್ಟು ಹೆಚ್ಚು ವ್ರಣವಾಗುತ್ತದೆ. ಮುಂಗರುಳಿನಲ್ಲಿ ಅಲ್ಲದೆ ಪೆಪ್ಸಿನ್ ಕಾರ್ಯವೆಸಗುವ ಸ್ಥಳದಲ್ಲಿ ಎಲ್ಲಿಯಾದರೂ ವ್ರಣ ಉಂಟಾಗಬಹುದಾದ್ದರಿಂದ ಈ ವ್ರಣಕ್ಕೆ ಪೆಪ್ಟಿಕ್ ವ್ರಣವೆಂದು 1882ರಲ್ಲಿ ಕ್ವಿನ್ಕೆ ಎಂಬ ವಿಜ್ಞಾನಿ ಹೆಸರಿಟ್ಟ. ಎಲ್ಲ ನಾಗರಿಕ ಸಮಾಜಗಳಲ್ಲೂ ಈ ರೋಗದಿಂದ ನರಳುವವರಿದ್ದಾರೆ. ದಕ್ಷಿಣ ಆಫ್ರಿಕದ ಬಂಟು ಜನಾಂಗದಲ್ಲಿ ಈ ರೋಗವಿಲ್ಲ ವೆಂದು ವರದಿಯಾಗಿದೆ. ಆದರೆ ರೋಗ ಕರಿಯರಲ್ಲಿ ಇಲ್ಲವೆಂದು ಹೇಳಲಾಗುವುದಿಲ್ಲ. ಏಕೆಂದರೆ ನೈಜೀರಿಯ ಪ್ರದೇಶದ ನೀಗ್ರೋಗಳಲ್ಲಿ ಈ ರೋಗ ಇತರರಲ್ಲಿ ಕಂಡುಬರು

ವಂತೆಯೇ ಕಾಣಿಸಿಕೊಳ್ಳುವುದು ತಿಳಿದಿದೆ. ಇದರಿಂದ ಸಾಯುವವರು ವಿರಳ. ಈ ವ್ರಣ 20 ವರ್ಷ ವಯಸ್ಸಿಗಿಂತ ಕೆಳಗಿರುವವರಲ್ಲಿ ಅಪರೂಪ. ನರಳುವವರ ಸಂಖ್ಯೆ ವಯಸ್ಸಾದಂತೆ ಏರಿ 50 ತುಂಬಿದ ವಯಸ್ಕರಲ್ಲಿ ಪರಮಾವಧಿಯನ್ನು ಮುಟ್ಟುತ್ತದೆ. ಅನಂತರ ರೋಗ ಇಳಿಮುಖವಾಗಿ 65 ಮೀರಿದ ಮೇಲೆ ಅಷ್ಟಾಗಿ ಕಂಡುಬರುವುದಿಲ್ಲ. ನೂರಕ್ಕೆ 10 ಜನ ಒಂದಲ್ಲ ಒಂದು ಕಾಲದಲ್ಲಿ ಈ ರೋಗದಿಂದ ನರಳುತ್ತಾರೆಂದು ಅಂದಾಜು ಮಾಡಲಾಗಿದೆ. ಜಠರದ ಹುಣ್ಣು ಗಂಡಸರು ಹೆಂಗಸರಲ್ಲಿ ಸಮವಾಗಿದ್ದರೂ ಕರುಳಿನ ಹುಣ್ಣು ಗಂಡಸರಲ್ಲಿ ಹೆಂಗಸರಿಗಿಂತ ಮೂರರಷ್ಟು ಅಧಿಕ. ಹೆಂಗಸರಲ್ಲಿ ಮುಟ್ಟುನಿಲ್ಲುವ 5 ವರ್ಷಗಳ ಅವಧಿಯಲ್ಲಿ–ಅಂದರೆ ಸುಮಾರು 45–50 ವರ್ಷ ವಯಸ್ಕರಲ್ಲಿ–ಇದ್ದಕ್ಕಿದ್ದಂತೆ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ರೋಗದಿಂದ ನರಳುವ ಸ್ತ್ರೀಯರಲ್ಲಿ ಮೂರರಲ್ಲಿ ಒಂದು ಭಾಗ ಈ ವಯಸ್ಸಿನವರು. ಮಕ್ಕಳನ್ನು ಹಡೆಯುವ ಹೆಂಗಸರಿಗೆ ಗರ್ಭಕಾಲದಲ್ಲೂ ಹಾಲೂಡಿಸುವ ಕಾಲದಲ್ಲೂ ಈ ರೋಗದಿಂದ ಮುಕ್ತಿ ಉಂಟೆಂದು ಹೇಳಲಾಗಿದೆ. ಉದ್ಯೋಗಕ್ಕೂ ಪೆಪ್ಟಿಕ್ ವ್ರಣಕ್ಕೂ ಸಂಬಂಧವಿದೆ ಎಂಬ ನಂಬಿಕೆ ಇದ್ದರೂ ಇದಕ್ಕೆ ಆಧಾರ ಸಾಲದು. ಪೆಪ್ಟಿಕ್ ವ್ರಣಗಳಿಗೆ ಕಾರಣಗಳು ನಿರ್ದಿಷ್ಟವಾಗಿ ಗೊತ್ತಿಲ್ಲ. ಪ್ರಾರಂಭದಿಂದಲೂ ಹೈಡ್ರೊಕ್ಲೋರಿಕ್ ಆಮ್ಲರಹಿತವಾದ ಜಠರರಸವನ್ನು ಉತ್ಪಾದಿಸುವವರಲ್ಲಿ ಪೆಪ್ಟಿಕ್ ಹುಣ್ಣು ಇದುವರೆಗೂ ವರದಿಯಾಗಿಲ್ಲ. ಜಠರದ ಲೋಳೆಪೊರೆಯ ಮೇಲೆ ಆಮ್ಲ ಪ್ರಭಾವಿಸಿ ಅದನ್ನು ಜೀರ್ಣಿಸುವುದರಿಂದಲೇ ಹುಣ್ಣು ಉಂಟಾಗುತ್ತದೆಂದು ಸಾಮಾನ್ಯವಾಗಿ ವಿವರಿಸುವುದಾದರೂ ಆಮ್ಲಾಂಶ ಅಧಿಕವಾಗಿರುವವರಲ್ಲಿ ಅನೇಕರಿಗೆ ಹುಣ್ಣು ಇರುವುದಿಲ್ಲ. ಕರುಳಿನ ವ್ರಣ ಇರುವವರಲ್ಲಿ ಆಮ್ಲಾಧಿಕ್ಯ ಸಾಮಾನ್ಯವಾಗಿದ್ದರೂ, ಜಠರವ್ರಣ ಇರುವವರಲ್ಲಿ ಆಮ್ಲದ ಅಂಶ ಸಾಮಾನ್ಯ ಮಟ್ಟದಲ್ಲಿ ಅಥವಾ ಅದಕ್ಕಿಂತ ಕಡಿಮೆಯಾಗಿಯೇ ಇರುತ್ತದೆ. ದೀರ್ಘಕಾಲಿಕ ದೈಹಿಕ ಮಾನಸಿಕ ಒತ್ತಡ ಪರಿಸ್ಥಿತಿಗಳಲ್ಲಿ ಅಡ್ರಿನಲ್ ಗ್ರಂಥಿಯ ಸ್ರಾವ ಅಧಿಕವಾಗಿ ಅದರ ಪ್ರಚೋದನೆಯಿಂದ ಹಾಗೂ ನರಗಳ ಪ್ರಚೋದನೆಯಿಂದ ಹೀಗೆ ಆಮ್ಲ ಮತ್ತು ಪೆಪ್ಸಿನ್ ಎರಡೂ ಅಧಿಕವಾಗಿ ಉತ್ಪತ್ತಿಯಾಗುವುದು ಕಂಡುಬಂದಿದೆ. ಆದರೆ ಇಂಥ ಎಲ್ಲರಲ್ಲೂ ಪೆಪ್ಟಿಕ್ ವ್ರಣ ಉಂಟಾಗುವುದಿಲ್ಲ. ಅಧಿಕ ಆಮ್ಲಾಂಶವಿದ್ದರೂ ಜಠರದ ಲೋಳೆಪೊರೆಗೆ ಆತಂಕವಾಗದಂತೆ ಸ್ವಾಭಾವಿಕ ರಕ್ಷಣೆ ಇರುವುದು ವ್ಯಕ್ತವಾಗಿದೆ. ಲೋಳೆಪೊರೆಯಿಂದ ಒಸರುವ ಲೋಳೆ ಅದಕ್ಕೆ ರಕ್ಷಣೆ ನೀಡುತ್ತದೆಂದು ನಂಬಲಾಗಿದೆ. ಆದರೆ ರೋಗದಿಂದ ನರಳುವವರ ಜಠರದಲ್ಲಿ ಅನೇಕವೇಳೆ ಈ ಲೋಳೆಪದಾರ್ಥದ ಕೊರತೆ ಇರುವುದಿಲ್ಲವೆಂಬುದು ತಿಳಿದಿದೆ. ಆದ್ದರಿಂದ ರಕ್ಷಣೆ ಲೋಳೆಯಿಂದ ಮಾತ್ರ ಒದಗುತ್ತದೆ ಎಂದು ಹೇಳುವಂತಿಲ್ಲ.

ಹೆಲಿಕಾಬ್ಯಾಕ್ಟರ್ ಪೈಲೋರಿ ಎಂಬ ಸೂಕ್ಷ್ಮಜೀವಾಣು ಸೋಂಕು ಅಭಿವೃದ್ಧಿಶೀಲ ದೇಶಗಳಲ್ಲಿ ವಿಶೇಷ. ಅವುಗಳ ಸಂಖ್ಯೆ ವ್ಯಕ್ತಿಯ ವಯೋಮಾನ ಹೆಚ್ಚಿದಂತೆ ಮೇಲೇರುತ್ತದೆ. ಈ ಸೋಂಕಿನ ಪ್ರಭಾವಕ್ಕೀಡಾದ ಬಹುತೇಕ ಮಂದಿ ಯಾವುದೇ ಗುಣಲಕ್ಷಣಗಳನ್ನು ಪ್ರಕಟಪಡಿಸದಿದ್ದರೂ, ಕೆಲವರು ಮಾತ್ರ ರೋಗದ ಚಿಹ್ನೆಗಳನ್ನು ಪ್ರಕಟಪಡಿಸುತ್ತಾರೆ. ಚಲನಶಕ್ತಿಯನ್ನು ಪಡೆದಿರುವ ಈ ಸೂಕ್ಷ್ಮಜೀವಾಣು ಲೋಳೆಪೊರೆಯೊಳಕ್ಕೆ ಸಾಗಿ ಅಲ್ಲಿ ತನ್ನ ನೆಲೆಯನ್ನು ಕಂಡುಕೊಳುವುದು.

ಈ ಸೂಕ್ಷ್ಮಜೀವಾಣು ಯುರಿಯೇಸ್ ಎಂಬ ಕಿಣ್ವವನ್ನು ತಯಾರಿಸುತ್ತಿದ್ದು ಅದು ಜಠರ–ಮುಂಗರುಳಿನ ಅಮ್ಲವನ್ನು ತಟಸ್ಥಗೊಳಿಸುವುದು ಮತ್ತು ಅಮೋನಿಯ ಉತ್ಪಾದಿಸುವುದು. ಈ ಬಾಕ್ಟೀರಿಯ ಸ್ಥಳೀಕ ಉರಿಯೂತ ಪ್ರಕ್ರಿಯೆಯನ್ನು ಉತ್ತೇಜಿಸಿ ನಿಡುಗಾಲ ಜಠರದ ಉರಿತಕ್ಕೆಡೆಮಾಡಿಕೊಡುವುದು. ಅ ಉರಿಯೂತಕ್ಕೆ ಹೆಚ್‌ಪೈಲೋರಿ ಬಿಡುಗಡೆಮಾಡುವ ಅನೇಕ ಬಗೆಯ ಸೈಟೋಕಿನ್‌ಗಳು ಕಾರಣ. ಅದು ಜಠರಕೋಶದಲ್ಲಿ ಭದ್ರವಾಗಿ ನೆಲೆಯೂರುತ್ತದೆ. ಅದರ ಪರಿಣಾಮವಾಗಿ ಜಠರದ ಅನ್ನಾಗಸೆಯ (ಪೈಲೋರಸ್) ಕುಳಿ (ಆಂಟ್ರಮ್)ಯಲ್ಲಿ ಉರಿತ, ವಿಪುಲಪ್ರಮಾಣದಲ್ಲಿ ಗ್ಯಾಸ್ಟ್ರಿನ್ ರಸಸ್ರವಿಕೆ ಮತ್ತು ಅಮ್ಲದ ತಯಾರಿಕೆಯುಂಟಾಗುತ್ತದೆ. ಇಷ್ಟೆಲ್ಲ ಇದ್ದರೂ ಕೆಲವರಲ್ಲಿ ಮಾತ್ರ ಮುಂಗರುಳಿನಲ್ಲಿ ಹುಣ್ಣಿನ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತದೆ. ಆದರೆ ಜಠರಹುಣ್ಣುಗಳ ಬೆಳವಣಿಗೆಯೂ ಹೆಚ್‌ಪೈಲೋರಿ ಪಾತ್ರ ನಿರ್ದಿಷ್ಟವಾಗಿ ತಿಳಿಯದು. ಬಹುಶಃ ಅಲ್ಲಿ ಅದು ಆಮ್ಲ ಮತ್ತು ಪೆಪ್ಸಿನ್ ಪ್ರಭಾವಕ್ಕೆ ಅಲ್ಲಿನ ಲೋಳೆಪೊರೆ ತೋರ್ಪಡಿಸುವ ಪ್ರತಿರೋಧವನ್ನು ಕುಗ್ಗಿಸುವಂತೆ ತೋರುತ್ತದೆ.

ಜಠರಹುಣ್ಣು ಉಂಟಾಗುವ ಸಂಭಾವ್ಯತೆಯನ್ನು ಸ್ಟೀರಾಯಿಡ್ ಅಲ್ಲದ ಉರಿಯೂತ ವಿರೋಧ ಔಷಧಿಗಳು ಮತ್ತು ಧೂಮಪಾನ ಹೆಚ್ಚಿಸುತ್ತವೆ. ಹುಣ್ಣು ತಲೆದೋರಲು ಆಮ್ಲ ಮತ್ತು ಪೆಪ್ಸಿನ್‌ಗಳ ಪಾಚಕ (ಡೈಜಸ್ಟಿವ್) ಪ್ರಭಾವ ಮತ್ತು ಪ್ರತಿರೋಧ ಅಂಶಗಳ ಮಧ್ಯದಲ್ಲಿನ ಸಮತೋಲನೆಯ ಏರುಪೇರು ಕಾರಣ. ಅಲ್ಲದೆ ಲೋಳ್ಪರೆ ತೋರ್ಪಡಿಸುವ ಪ್ರತಿರೋಧ ಹುಣ್ಣಿನ ಬೆಳವಣಿಗೆಯ ವಿರುದ್ಧ ರಕ್ಷಣೆಯನ್ನೊದಗಿಸುತ್ತದೆ. ಆಮ್ಲ ಮತ್ತು ಪೆಪ್ಸಿನ್‌ಗಳು ತಮ್ಮ ಪ್ರಭಾವ ಬೀರಿದಾಗ ಪ್ರತಿರೋಧ ಭಗ್ನಗೊಂಡು ಹುಣ್ಣಿನ ಬೆಳೆವಣಿಗೆಗೆ ಅವಕಾಶ ಉಂಟಾಗುತ್ತದೆ. ತುಂಬ ಹೆಚ್ಚು ಪ್ರಮಾಣದಲ್ಲಿ ಆಮ್ಲ ಸ್ರವಿಕೆ ಉಂಟಾಗುವ ಜೋಲಿಂಗರ್–ಎಲಿಸನ್ ಲಕ್ಷಣ ಕೂಟದಲ್ಲಿ ಜಠರ ಹುಣ್ಣುಗಳು ಪದೇ ಪದೇ ಗೋಚರಿಸುತ್ತವೆ. ಮುಂಗರುಳ ಹುಣ್ಣುಗಳು ಉಂಟಾಗಲು ಗ್ಯಾಸ್ಟ್ರಿನ್ ಉತ್ತೇಜಿಸುವ ಆಮ್ಲದ ಹೆಚ್ಚಿನ ಸ್ರವಿಕೆ ಕಾರಣ.

ವ್ಯಕ್ತಿಯ ರಕ್ತವರ್ಗಕ್ಕೂ ಜಠರದ ವ್ರಣಕ್ಕೂ ಸಂಬಂಧವಿದೆ ಎಂಬ ಶಂಕೆ ಉಂಟು. O ಗುಂಪಿನ ರಕ್ತವರ್ಗಕ್ಕೆ ಸೇರಿದ ವ್ಯಕ್ತಿಗಳಲ್ಲಿ ಜಠರವ್ರಣವಿಲ್ಲದಿದ್ದರೂ ಮುಂಗರುಳಿನ ವ್ರಣ ಅಧಿಕವಾಗಿರುತ್ತದೆಂದು ಪತ್ತೆಹಚ್ಚಲಾಗಿದೆ. ಸಮುದ್ರಮಟ್ಟದಿಂದ 10,000 ಅಡಿ ಮೇಲ್ಮಟ್ಟದ ಪ್ರದೇಶಗಳಲ್ಲಿ ವಾಸಿಸುವ ಜನರು ಈ ರೋಗದಿಂದ ಹೆಚ್ಚು ನರಳುತ್ತಾರೆ. ದೀರ್ಘಾವಧಿ ಶ್ವಾಸಾಂಗರೋಗಗಳಿಂದ ನರಳುವವರಲ್ಲೂ ಪೆಪ್ಟಿಕ್ ವ್ರಣ ಹೇರಳವೆಂಬ ನಂಬಿಕೆ ಉಂಟು. ಹೊಗೆಸೊಪ್ಪು, ಮದ್ಯಸಾರ, ಕಾಫಿ ಪಾನೀಯಗಳ ದುರುಪಯೋಗ ಪೆಪ್ಟಿಕ್ ವ್ರಾಕ್ಕೆ ಸುಗಮವೆಂದು ನಂಬಲಾಗಿದೆ. ಬಹುಕಾಲಿಕ ವ್ರಣ ಸುಮಾರು 1 ಸೆಂ.ಮೀ. ವ್ಯಾಸದ ಆಳವಾದ ದೊಡ್ಡ ಹುಣ್ಣು. ಒಂದೋ ತಪ್ಪಿದರೆ ಎರಡೋ ಹುಣ್ಣು ಇರುತ್ತದೆ. ಜಠರದ ಸಣ್ಣ ಡೊಂಕಿನ ಕೆಳಭಾಗ ಮತ್ತು ಮುಂಗರುಳಿನ ಮೊದಲಭಾಗ ಹುಣ್ಣನ್ನು ಭರಿಸುವ ನಿರ್ದಿಷ್ಟ ಕ್ಷೇತ್ರ. ಅಪರೂಪಕ್ಕೆ ಅನ್ನನಾಳದ ಅಂತ್ಯಭಾಗದಲ್ಲಿ ಮತ್ತು ಇತರ ಕಡೆ (ಮೆಕ್ಕೆಲನ ಹೊರಕೋಶ ಇತ್ಯಾದಿ) ಇಂಥ ವ್ರಣ ಕಂಡುಬರಬಹುದು. ಒಂದೊಂದು ವೇಳೆ ಜೋಡಿಹುಣ್ಣುಗಳು – ಒಂದು ಜಠರದಲ್ಲಿ ಇನ್ನೊಂದು ಮುಂಗರುಳಿನಲ್ಲಿ – ಇರುವುದುಂಟು.

ರೋಗದ ಅನುಭವಿಕ ಮತ್ತು ಇತರ ಲಕ್ಷಣಗಳು ಪ್ರತಿ ವ್ಯಕ್ತಿಯಲ್ಲಿ ರೋಗದ ಕಾಲಾವಧಿಯನ್ನು ಅನುಸರಿಸಿ ಪ್ರಕಟವಾಗುತ್ತವೆ. ಅಗ್ನಿಮಾಂದ್ಯ, ಉದರದ ಮೇಲುಭಾಗದಲ್ಲಿ ನೋವು, ನೋವಿಗೂ ಆಹಾರಸೇವನೆಗೂ ವಮನವಾಗುವುದಕ್ಕೂ ಸಂಬಂಧವಿರುವಿಕೆ–ಇವು ರೋಗದ ವಿಶಿಷ್ಟ ಲಕ್ಷಣಗಳೆಂದು ಹೇಳಬಹುದು. ಜಠರದ ಹುಣ್ಣಿನಲ್ಲಿ ಆಹಾರ ತೆಗೆದುಕೊಂಡು ½-1½ ಗಂಟೆ ಮೇಲೆ ಮತ್ತು ಮುಂಗರುಳ ಹುಣ್ಣಿನಲ್ಲಿ ಇನ್ನೂ ತಡವಾಗಿ ಅಲ್ಪವಾಗಿಯೊ ತಡೆಯಲಾರದಷ್ಟೊ ನೋವು ಉಂಟಾಗುತ್ತದೆ. ನೋವಿನ ಆಧಿಕ್ಯದಿಂದ ಹೊಟ್ಟೆತೊಳಸು ಉಂಟಾಗಿ ವಮನವಾಗಬಹುದು. ಆ ಬಳಿಕ ನೋವು ಕಡಿಮೆ ಆಗುವುದು ಶೀಘ್ರವಾಗಿ ರೋಗಿಗೆ ಮನದಟ್ಟಾಗುತ್ತದೆ. ಆದ್ದರಿಂದ ನೋವು ಉಂಟಾದ ವೇಳೆಯಲ್ಲಿ ರೋಗಿ ಗಂಟಲಿಗೆ ಬೆರಳುಹಾಕಿಕೊಂಡು ವಮನವಾಗುವುದನ್ನು ಪ್ರಚೋದಿಸುತ್ತಾನೆ. ರೋಗ ಉಲ್ಬಣವಾದಂತೆ ನೋವು ಹೆಚ್ಚಾಗುತ್ತದೆ; ಮತ್ತು ನೋವಿನ ಕಾಲಾವಧಿ ಹೆಚ್ಚುತ್ತ ಕೊನೆಗೆ ನೋವು ನಿರಂತರವಾಗುತ್ತದೆ. ಕರುಳಿನಲ್ಲಿ ವ್ರಣವಿದ್ದರೆ ನೋವು ರಾತ್ರಿ ಅಥವಾ ಬೆಳಗಿನ ಜಾವ, ಜಠರ ಖಾಲಿ ಇದ್ದಾಗ, ಉಂಟಾಗುತ್ತದೆ (ಹಸಿವಿನ ನೋವು). ಆಹಾರ ತೆಗೆದುಕೊಳ್ಳುವುದರಿಂದ ಅಥವಾ ಒಂದು ಲೋಟ ನೀರಿನಿಂದ ಕೂಡ ಇದು ಶಮನವಾಗುವುದು. ವ್ರಣದಿಂದ ಅಧಿಕ ರಕ್ತಸ್ರಾವವಾಗುವುದು ಒಂದು ಜಟಿಲತೆ. ವಮನದ ಮೂಲಕ ಇಲ್ಲವೆ ಕಪ್ಪು ಮಲದ ರೂಪದಲ್ಲಿ ಈ ರಕ್ತ ವಿಸರ್ಜಿತವಾಗುತ್ತದೆ. ರಕ್ತಪೂರೈಕೆ ಅಗತ್ಯವಾಗುವಷ್ಟು ರಕ್ತನಷ್ಟ ಆಗಬಹುದು. ವ್ರಣ ಆಳವಾಗುತ್ತ ಅಂಗಭಿತ್ತಿ ತೂತಾಗಬಹುದು. ಇದು ತತ್‌ಕ್ಷಣದ ಶಸ್ತ್ರಚಿಕಿತ್ಸೆ ಅಗತ್ಯವಾದ ಜಟಿಲತೆ. ವ್ರಣ ಅದರ ಸುತ್ತ ಇರುವ ಮೇದೋಜೀರಕಾಂಗ, ಯಕೃತ್ತು ಮತ್ತು ದೊಡ್ಡಕರುಳಿಗೆ ವ್ಯಾಪಿಸಬಹುದು. ವಮನ ಎಡೆಬಿಡದೆ ಇರುವುದು, ಪೈಲೋರಿಕ್ ತುದಿ ಕುಗ್ಗಿ ಅನ್ನಮಾರ್ಗಕ್ಕೆ ಅಡಚಣೆ ಆಗಿ ದೇಹ ಕ್ಷೀಣಿಸುವುದು – ಇವು ಇತರ ಜಟಿಲತೆಗಳು. ನೂರಕ್ಕೆ ಸುಮಾರು 8 ವ್ರಣಗಳು ಏಡಿಗಂತಿರೋಗಕ್ಕೆ ತಿರುಗಬಹುದು.

ರೋಗಿಗೆ ಬೇರಿಯಮ್ ಕದಡನ್ನು ಕುಡಿಸಿ ಅನಂತರ ಎಕ್ಸ್‌ಕಿರಣ ಪರೀಕ್ಷೆಯಿಂದ ವೀಕ್ಷಿಸಿ ರೋಗನಿದಾನವನ್ನು ಸ್ಥಿರೀಕರಿಸಲಾಗುತ್ತದೆ. ಜಠರದರ್ಶಕದಿಂದ ರೋಗವನ್ನು ದೃಢಪಡಿಸಬಹುದು. ಮುಂದಿನ ದಾಖಲಾತಿ ಮತ್ತು ತುಲನೆಗೋಸ್ಕರ ಹುಣ್ಣಿನ ಎಕ್ಸ್‌ಕಿರಣ ಚಿತ್ರಗಳನ್ನು ತೆಗೆಯುವುದೂ ವಾಡಿಕೆ. ಜಠರದ ಆಮ್ಲ ಸ್ರವನ ಸಾಮರ್ಥ್ಯದ ಅಂದಾಜು, ಹುಣ್ಣಿನ ಸುಳಿವು ಕೊಡುವ ಭಾಗದಿಂದ ಸ್ವಲ್ಪ ಭಾಗವನ್ನು ಕತ್ತರಿಸಿ ತೆಗೆದು ಹೆಚ್. ಪೈಲೋರಿ ಅಲ್ಲಿ ನೆಲೆಯೂರಿರುವುದನ್ನು ಖಚಿತಪಡಿಸಿಕೊಳ್ಳಬಹುದು.

ಚಿಕಿತ್ಸೆಯ ಮುಖ್ಯ ಗುಣ ರೋಗಿ ತೋರ್ಪಡಿಸುವ ಗುಣಲಕ್ಷಣಗಳನ್ನು ದೂರಮಾಡುವುದು, ಅಲ್ಪ ಕಾಲದಲ್ಲಿ ಹುಣ್ಣು ಮಾಯಲು ಅವಕಾಶ ಮಾಡಿಕೊಡುವುದು ಮತ್ತು ದೀರ್ಘಾವಧಿ ಕಾಲದಲ್ಲಿ ಹುಣ್ಣು ಸಂಪೂರ್ಣವಾಗಿ ದೂರವಾಗುವಂತೆ ಮಾಡುವುದಾಗಿದೆ. ಪೆಪ್ಟಿಕ್ ಹುಣ್ಣುಗಳಲ್ಲಿ ಹೆಚ್ ಪೈಲೋರಿ ಸೋಂಕನ್ನು ಆಮೂಲಾಗ್ರವಾಗಿ ತೆಗೆದುಹಾಕುವುದಕ್ಕೆ ಮಹತ್ವವಿದೆ. ಅದರಿಂದ ರೋಗ ಮರುಕಳಿಸುವುದನ್ನು ತಪ್ಪಿಸಬಹುದು.

ಈ ಸೋಂಕು ಇದ್ದ ಹುಣ್ಣಿನ ಲಕ್ಷಣ ತೋರಿಸುತ್ತಿರುವವರು ಪ್ರೋಟಾನ್ ಪಂಪ್‌ತಡೆ ಔಷಧಗಳನ್ನು ಅಮೊಕ್ಸಿಸಲಿನ್ ಇಲ್ಲವೆ ಕ್ಲಾರಿತ್ರೊಮೈಸಿನ್ ಮತ್ತು ಮೆಟ್ರನೈಡ್ ಜೆಲ್‌ಗಳನ್ನು ಒಂದು ವಾರ ಸೇವಿಸಬೇಕು.

ನೋವು ಕಡಿಮೆಮಾಡಲು ಆಮ್ಲರೋಧಗಳು, ಹಿಸ್ಟಮಿನ್ – 1 ಗ್ರಾಹಕ ವಿರೋಧಗಳು ಪ್ರೋಟಾನ್ ಪಂಪ್ ತಡೆ ಔಷಧಿಗಳು, ಬಿಸ್ಮತ್, ಸುಕ್ರಾಲ್ಫೇಟ್, ಮಿಸೊಪ್ರೊಸ್ಟಾಲ್‌ಗಳನ್ನು ಕೊಡಲಾಗುವುದು. ಉಪ್ಪು, ಹುಳಿ, ಖಾರ, ಸಂಬಾರಗಳಿಲ್ಲದ ಗೊಡ್ಡು ಮತ್ತು ಮೆದುವಾದ ಆಹಾರವನ್ನು ಮಿತವಾಗಿ ಅಡಿಗಡಿಗೆ ತೆಗೆದುಕೊಳ್ಳಬೇಕಾಗುತ್ತದೆ. ಗಂಟೆಗೊಂದು ವೇಳೆ ಹಾಲು, ಹಾಲಿನ ಕೆನೆ, ಅನ್ನ, ಕೋಳಿ ಮೊಟ್ಟೆ, ತರಕಾರಿ ಮುಂತಾದವನ್ನು ಸೂಕ್ತವಾಗಿ ಅಳವಡಿಸಿಕೊಂಡು ದೇಹಕ್ಕೆ ಬೇಕಾಗುವಷ್ಟನ್ನು ಮಾತ್ರ ಸೇವಿಸತಕ್ಕದ್ದು. ಕಾಫಿ, ಚಹ, ಧೂಮ ಮತ್ತು ಮದ್ಯಪಾನ ನಿಷಿದ್ಧ. ಈ ರೀತಿ ವ್ಯವಸ್ಥಿತ ಆಹಾರದಲ್ಲಿ ಜೀವಸತ್ತ್ವ C ಕೊರತೆ ಆಗಿರುವ ಸಂಭವವಿರುವುದರಿಂದ ಈ ಜೀವಸತ್ತ್ವವನ್ನು ಪ್ರತ್ಯೇಕವಾಗಿ ದಿನವಹಿ ತೆಗೆದುಕೊಳ್ಳಬೇಕು. ಆಹಾರಸೇವನೆಯಾದ ಬಳಿಕ ಸ್ರಾವವಾಗುವ ಆಮ್ಲವನ್ನು ಕಡಿಮೆಮಾಡಲೂ ನಿಸ್ಸತ್ತ್ವಗೊಳಿಸಲೂ ನಿಯಮಾನುಸಾರ ಔಷಧಿಗಳನ್ನು ತೆಗೆದುಕೊಳ್ಳಬೇಕು. ಆಲಿವ್ ಎಣ್ಣೆ, ಅಲ್ಯೂಮಿನಿಯಮ್ ಹೈಡ್ರಾಕ್ಸೈಡಿನಂಥ ಪ್ರತ್ಯಾಮ್ಲಗಳು ಮುಖ್ಯ.

ಶೇ. 15 ಮಂದಿ ರೋಗಿಗಳಲ್ಲಿ ಶಸ್ತ್ರಚಿಕಿತ್ಸೆ ಅನಿವಾರ್ಯ. ಅಂಗಭಿತ್ತಿ ತೂತಾದಾಗ, ತಡೆಗಟ್ಟಲಾಗದ ರಕ್ತಸ್ರಾವವಾಗುತ್ತಿದ್ದಾಗ, ತತ್‌ಕ್ಷಣ ಶಸ್ತ್ರಚಿಕಿತ್ಸೆ ಮಾಡಿದರೆ ರೋಗಿ ಬದುಕಬಹುದು. ಔಷಧಸೇವನೆಯಿಂದ ಗುಣವಾಗದ ವ್ರಣವನ್ನು ಶಸ್ತ್ರಚಿಕಿತ್ಸೆಯಿಂದ ಗುಣಪಡಿಸಬೇಕು. ಹೈಡ್ರೊಕ್ಲೋರಿಕ್ ಆಮ್ಲ ಹಾಗೂ ಪೆಪ್ಸಿನ್ ಸ್ರಾವವನ್ನು ಕಡಿಮೆಮಾಡಲು ಜಠರಕ್ಕೆ ಒದಗುವ ನರವನ್ನು (ವೇಗಸ್ ನರಗಳು)ಕತ್ತರಿಸಿ ಹಾಕುವುದು (ವೇಗಾಟಮಿ) ಇಲ್ಲವೆ ಜಠರದ ಭಾಗವನ್ನು ಸೂಕ್ತಪ್ರಮಾಣದಲ್ಲಿ ತೆಗೆದುಹಾಕುವುದು (ಪಾರ್ಷಿಯಲ್ ಗ್ಯಾಸ್ಟ್ರೆಕ್ಟಮಿ ಅಂಡ್ ಆಂಟ್ರೆಕ್ಟಮಿ) ಮತ್ತು ಹಾಗೆ ತೆಗೆದು ಹಾಕಿದ ಬಳಿಕ ಜಠರಕ್ಕೂ ಕರುಳಿಗೂ ಇರುವ ಸಂಪರ್ಕವನ್ನು ಹಿಗ್ಗಿಸುವುದು (ಪೈಲೊರೊಪ್ಲಾಸ್ಟಿ) ಇಲ್ಲವೆ ಜಠರಕ್ಕೂ ಕರುಳಿನ ಇನ್ನೊಂದು ಭಾಗಕ್ಕೂ ನಡುವೆ ಕೃತಕ ಸಂಪರ್ಕವೇರ್ಪಡಿಸುವುದು (ಗ್ಯಾಸ್ಟ್ರೊ ಎಂಟೆರಾಸ್ಟೊಮಿ) ಇವು ಸಾಮಾನ್ಯವಾಗಿ ಅನುಸರಿಸಲಾಗುವ ಶಸ್ತ್ರಚಿಕಿತ್ಸಾಕ್ರಮಗಳು. ಹುಣ್ಣು ಏಡಿಗಂತಿಯಾಗಿ ಪರಿವರ್ತನೆ ಆದಂತಿದ್ದರೆ ಜಠರವನ್ನೂ ಅದರ ಸೇರ್ಪಡೆಗಳನ್ನೂ ವ್ಯಾಪಕವಾಗಿ ತೆಗೆದುಹಾಕಬೇಕಾದದ್ದು (ರ್‍ಯಾಡಿಕಲ್ ಗ್ಯಾಸ್ಟ್ರೆಕ್ಟೊಮಿ) ಆವಶ್ಯಕವಾಗುತ್ತದೆ. ಶಸ್ತ್ರಚಿಕಿತ್ಸೆಯಿಂದ ಬಹುಸಂಖ್ಯಾತ ರೋಗಿಗಳು ಗುಣವಾಗುತ್ತಾರೆ. ಸುಮಾರು 4–6 ರೋಗಿಗಳಲ್ಲಿ ಹುಣ್ಣು ಮರುಕಳಿಸುವುದುಂಟು.

ಬಿಗಿಯಾದ ಮೇಲ್ವಿಚಾರಣೆಯಲ್ಲಿ ಹೆಚ್‌ಪೈಲೋರಿ ಸೋಂಕು ದೂರಮಾಡಿದಲ್ಲಿ ರೋಗ ಗುಣವಾಗುತ್ತದೆ. (ಎಲ್.ಎಸ್.ಆರ್.; ಆರ್.ಎಸ್.ವಿ.)

**ಜಡತೆ :** ವ್ಯಕ್ತಿ ಹಾಗೂ ಸಮಾಜಗಳ ಕಾರ್ಯಗತಿಗಳಲ್ಲಿ ಉಂಟಾಗಬಹುದಾದ ಸ್ಥಗಿತಸ್ಥಿತಿ (ಲೆತರ್ಜಿ). ಸಾಮಾನ್ಯವಾಗಿ ಇದನ್ನು ಸಾಂಸ್ಕೃತಿಕ ಜಡತೆ, ಔದ್ಯೋಗಿಕ ಜಡತೆ, ಶೈಕ್ಷಣಿಕ ಜಡತೆ ಎಂದು ಮುಂತಾಗಿ ವಿಂಗಡಿಸುವುದು ವಾಡಿಕೆ. ಮಾನಸಿಕ ಸ್ಥಿತಿಯೊಂದನ್ನು ಕುರಿತು ಚರ್ಚಿಸುವ ಸಂಬಂಧದಲ್ಲಿ ಇದನ್ನು ಮಾನಸಿಕ ಜಡತೆ ಎಂದು ಕರೆಯಬಹುದು. ಆಲಸ್ಯಭಾವವೇ ಮೂಲ ಲಕ್ಷಣವಾಗಿರುವ ಮಾನಸಿಕ ಜಡತೆಯ ಅನುಭವ ಸರ್ವೇಸಾಮಾನ್ಯ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಂದಲ್ಲ ಒಂದು ಸಲ ದೈಹಿಕ ಅಥವಾ ಮಾನಸಿಕ ಕಾರಣಗಳಿಗಾಗಿ ಈ ಜಡತೆ ಪ್ರಕಟವಾಗುವುದುಂಟು. ತತ್ಪರಿಣಾಮವಾಗಿ ಪ್ರಜ್ಞಾಮಾಂದ್ಯದಿಂದ ವ್ಯಕ್ತಿ ಕಾರ್ಯವಿಮುಖನಾಗುತ್ತಾನಲ್ಲದೆ ತನ್ನ ದಿವಸದ ಬಹುಪಾಲಿನ ಸಮಯವನ್ನು ವಿಪರೀತ ನಿದ್ರೆಯಲ್ಲಿ ಕಳೆಯುವುದುಂಟು. ಇಂಥ ನಿಷ್ಕ್ರಿಯತೆ ತಾತ್ಕಾಲಿಕವಾದರೂ ಅದು ಸಂಬಂಧಪಟ್ಟ ವ್ಯಕ್ತಿಯ ಮೈಮನಗಳ ಸ್ವಾಸ್ಥ್ಯದ ಮೇಲೆ ಕೆಟ್ಟ ಪರಿಣಾಮ ಬೀರಲೂ ಬಲ್ಲುದು.

ಮಾನಸಿಕ ಜಡತೆ ಉಲ್ಬಣಸ್ಥಿತಿಗೇರಿದಾಗ ಅಥವಾ ಪದೇ ಪದೇ ಮರುಕಳಿಸಿದಾಗ ಅದು ಅಪಸಾಮಾನ್ಯವೆನಿಸಿ, ಮನೋವಿಕಾರವಾಗಿ ಪರಿಣಮಿಸುತ್ತದೆ. ಈ ವಿಕಾರಕ್ಕೆ ತುತ್ತಾದ ವ್ಯಕ್ತಿಯಲ್ಲಿ ಮುಖ್ಯವಾಗಿ ಕಂಡುಬರುವ ರೋಗಲಕ್ಷಣವೆಂದರೆ ಪ್ರಜ್ಞಾಮಾಂದ್ಯ. ಹೀಗಾದಾಗ ವ್ಯಕ್ತಿ ಸದಾಕಾಲವೂ ನಿದ್ರೆ ಮಾಡುತ್ತಲೋ ಇಲ್ಲವೇ ತೂಕಡಿಸುತ್ತಲೋ ಇದ್ದು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಲಾರದೆ ಕಾರ್ಯವಿಮುಖನಾಗುತ್ತಾನೆ. ಹೀಗೆ ನಿದ್ರಾವಿಕಾರವನ್ನೇ ಪ್ರಮುಖವಾಗಿ ಹೊಂದಿರುವ ಮಾನಸಿಕ ಜಡತೆಯನ್ನು, ಮನೋತಂತುರೋಗಗಳು (ಸೈಕೊನ್ಯೂರೋಸಿಸ್) ಮತ್ತು ಮನೋವಿಕ್ಷಿಪ್ತಿಗಳಂತೆಯೇ (ಸೈಕೊಸಿಸ್) ಪ್ರಜ್ಞಾವಿಕಾರಗಳ ಸಾಮಾನ್ಯ ಗುಂಪಿಗೆ ಸೇರಿಸಿದರೂ ಅದನ್ನು ಒಂದು ಸ್ಪಷ್ಟ ಹಾಗೂ ನಿರ್ದಿಷ್ಟವಾದ ಮನೋವಿಕಾರ ವರ್ಗಕ್ಕೆ ಸೇರಿಸಲು ಇನ್ನೂ ಸಾಧ್ಯವಾಗಿಲ್ಲ. ಏಕೆಂದರೆ ಈ ಸ್ಥಿತಿಯಲ್ಲಿ ಉಂಟಾಗುವ ಪರ್ಯಾಯಗಳು ಕ್ಷಣಭಂಗುರವಾಗಿರುವುದಲ್ಲದೆ, ಉನ್ಮಾದರೋಗ (ಹಿಸ್ಟೀರಿಯ) ಮತ್ತು ಅಪಸ್ಮಾರ ರೋಗಗಳಲ್ಲಿ (ಎಪಿಲೆಪ್ಸಿ) ಕಂಡುಬರುವಂಥ ಕೆಲವು ರೋಗಲಕ್ಷಣಗಳೊಂದಿಗೆ ನಿಕಟ ಹೋಲಿಕೆಯನ್ನು ಹೊಂದಿವೆ. ಆದರೂ ಮನೋವಿಶ್ಲೇಷಣೆಯ ಜನಕನೆನಿಸಿದ ಆಸ್ಟ್ರಿಯದ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್‌ನ (1856–1939) ಆಶಯ ಪೂರಣ (ವಿಷ್ ಫುಲ್‌ಫಿಲ್‌ಮೆಂಟ್) ಪ್ರಾಕ್ಕಲ್ಪನೆ ಮತ್ತು ಮಸ್ತಿಷ್ಕ ಸ್ವರೂಪ ಮತ್ತು ವ್ಯಾಪಾರಗಳ ಮೇಲಿನ ಸಂಶೋಧನೆಗಳು ಈ ಮನೋವಿಕಾರವನ್ನು ಅರ್ಥ ಮಾಡಿಕೊಳ್ಳುವಲ್ಲಿ ಸ್ವಲ್ಪ ಬೆಳಕನ್ನು ಚೆಲ್ಲಿವೆ.

ಮಾನಸಿಕ ಜಡತೆ ಸುಪ್ತಚೇತನ ಪ್ರಚೋದಿತ ಘಟನೆಯಾಗಿರಬಲ್ಲುದು ಎಂಬುದಕ್ಕೆ ಸೂಕ್ತ ಪುರಾವೆ ಎಂದರೆ ಸಂಮೋಹನಾ ನಿದ್ರೆ (ಹಿಪ್ನೋಟಿಕ್ ಸ್ಲೀಪ್) ಎಂದೆನ್ನಬಹುದು. ಸಂಮೋಹಕನೊಬ್ಬ (ಹಿಪ್ನಟಿಸ್ಟ್) ಭಾವಪ್ರೇರಣೆಯ (ಸಜೆಷನ್) ಮೂಲಕ ಸಂಮೋಹಿಯಲ್ಲಿ (ಹಿಪ್ನೊಟೈಜೀ) ಕೃತಕವಾಗಿ ಮಾನಸಿಕ ಜಡತೆಯನ್ನು ಉಂಟುಮಾಡಬಲ್ಲ. ಇಂಥ ಮನಸ್ಥಿತಿಯಲ್ಲಿ ವ್ಯಕ್ತಿ ಉನ್ಮಾದರೋಗದಲ್ಲಿ ಕಂಡುಬರುವಂಥ ಕೆಲವು ವರ್ತನಾವಿಕಾರಗಳನ್ನು ಪ್ರಕಟಿಸುವುದುಂಟು.

ಮಸ್ತಿಷ್ಕ ವಿಕೃತಿಯಿಂದಲೂ ಮಾನಸಿಕ ಜಡತೆಯುಂಟಾಗುತ್ತದೆ ಎಂಬುದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಮಸ್ತಿಷ್ಕಶೋಧ (ಎನ್‌ಸಿಫ್ಯಾಲಿಟಿಸ್). ಇದರಿಂದ ಉಂಟಾಗುವ ರೋಗಕ್ಕೆ ಮಸ್ತಿಷ್ಕ ಜಡತೆ ಎನ್ನುವುದಿದೆ. ನಿದ್ರಿಸುವ ರೋಗವೆಂದೂ ಇದನ್ನು ಕರೆಯುವುದುಂಟು. ಇದರಲ್ಲಿ ಪ್ರಧಾನವಾಗಿ ಕಂಡುಬರುವ ತೀವ್ರಸ್ಥಿತಿಯೆಂದರೆ ಆಳವಾದ ಹಾಗೂ ಹೆಚ್ಚು ಸಮಯದವರೆಗೆ ವ್ಯಾಪಿಸುವ ಅರೆನಿದ್ರೆ (ಜೋಂಪು). ಇಂಥ ಜೋಂಪುಳ್ಳ ವ್ಯಕ್ತಿಗೆ ಆಹಾರ ನೀಡಬೇಕಾದರೂ ಇಲ್ಲವೇ ಚಿಕಿತ್ಸೆ ಮಾಡಬೇಕಾದರೂ ಆತನನ್ನು ಎಚ್ಚರಗೊಳಿಸಲು ಹೆಚ್ಚು ಶ್ರಮಪಡಬೇಕಾಗುತ್ತದೆ. ಈ ರೋಗದಲ್ಲಿ ಕಂಡುಬರುವ ಇತರ ಲಕ್ಷಣಗಳೆಂದರೆ ಜ್ವರ, ಮಂಕುತನ ಮತ್ತು ದೃಷ್ಟಿ ಸಂಕ್ಷೋಭೆಗಳು. ಕೆಲವು ರೋಗಿಗಳಲ್ಲಿ ಮೇಲೆ ಹೇಳಲಾದ ಲಕ್ಷಣಗಳಿಗೆ ವಿಪರೀತವೆನಿಸುವ ರೋಗಲಕ್ಷಣಗಳೂ ಕಂಡುಬರುವುದುಂಟು. ಅವುಗಳಲ್ಲಿ ಮುಖ್ಯವಾದವುವೆಂದರೆ ಅನಿದ್ರೆ (ಇನ್‌ಸೋಮ್ನಿಯ), ಅವಿಶ್ರಾಂತಿ, ಕಿರಿಕಿರಿಭಾವ (ಇರಿಟಬಿಲಿಟಿ), ಉತ್ತೇಜಕತೆ (ಎಕ್ಸೈಟಬಿಲಿಟಿ). ಕೆಲವರಲ್ಲಿ ಜ್ವರಪ್ರಲಾಪ (ಡೆಲಿರಿಯಮ್), ದಿಕ್ಕಾಲ ಪರಿಜ್ಞಾನಶೂನ್ಯತೆ (ಡಿಸ್‌ಓರಿಯೆಂಟೇಷನ್) ಮತ್ತು ವಿಭ್ರಮೆಗಳೂ (ಹಲ್ಯೂಸಿನೇಷನ್) ಕಂಡುಬರುವುದುಂಟು.

ಈ ರೋಗಕ್ಕೆ ವಯಸ್ಸಿನ ಭೇದವಿಲ್ಲದಿದ್ದರೂ ಮಕ್ಕಳು ಮತ್ತು ಕಿರಿವಯಸ್ಕರಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಈ ರೋಗದ ಚಿಕಿತ್ಸೆ ಮತ್ತು ನಿವಾರಣೆಗಳಿಗೆ ವೈದ್ಯಕೀಯ ಮನೋವೈಜ್ಞಾನಿಕ ಮತ್ತು ಶೈಕ್ಷಣಿಕ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. (ಡಿ.)

**ಜಡತ್ವ :** ವಸ್ತುವಿನ ಚಲನೆಯ ಯಾವುದೇ ಬದಲಾವಣೆಗೆ ಪ್ರತಿರೋಧವಾಗಿ ವ್ಯಕ್ತವಾಗುವ ದ್ರವ್ಯದ ಗುಣ (ಇನರ್ಷಿಯ). ಆದ್ದರಿಂದ ಬಾಹ್ಯಬಲ ಯಾವುದೂ ವರ್ತಿಸದಿರುವಾಗ ವಿರಾಮಸ್ಥಿತಿಯಲ್ಲಿರುವ ಒಂದು ವಸ್ತು ಅದೇ ಸ್ಥಿತಿಯಲ್ಲಿ ಮುಂದುವರಿಯುವುದು ಮತ್ತು ಚಲನಸ್ಥಿತಿಯಲ್ಲಿರುವ ಒಂದು ವಸ್ತು ಸರಳರೇಖೆಯ ಮೇಲೆ ಏಕರೀತಿಯ ಜವದಿಂದ ಚಲಿಸುತ್ತಲೇ ಇರುವುದು. ವಸ್ತುವಿನ ರಾಶಿ (ಮಾಸ್) ಈ ಜಡತ್ವದ ಮಾಪಕ. ವಿರಾಮಸ್ಥಿತಿಯಲ್ಲಿರುವ ವಸ್ತುವನ್ನು ಚಲಿಸುವಂತೆ ಮಾಡಬೇಕಾದರೆ ಬಲ ಪ್ರಯೋಗವಾಗಬೇಕಾಗುತ್ತದೆ. ಇದೇ ರೀತಿ ಚಲಿಸುತ್ತಿರುವ ವಸ್ತುವನ್ನು ವಿರಾಮಸ್ಥಿತಿಗೆ ತರಬೇಕಾದರೆ ಚಲನೆಯ ವಿರುದ್ಧದಿಶೆಯಲ್ಲಿ ಬಲಪ್ರಯೋಗವಾಗಬೇಕು. ಬಾಹ್ಯಬಲ ಪ್ರಯೋಗವಾಗದಿದ್ದಾಗ ವಿರಾಮ ಸ್ಥಿತಿಯಲ್ಲಿರುವ ವಸ್ತು ಅದೇ ಸ್ಥಿತಿಯಲ್ಲೂ, ಏಕರೀತಿ ಜವದಿಂದ ಸರಳರೇಖೆಯ ಮೇಲೆ ಚಲಿಸುತ್ತಿರುವ ವಸ್ತು ಅದೇ ಸ್ಥಿತಿಯಲ್ಲೂ ಇರುತ್ತದೆ. ಚಲಿಸುವ ವಸ್ತುವಿನ ವೇಗ ಮತ್ತು ದಿಶೆಗಳ ಪೈಕಿ ಯಾವುದೇ ಒಂದು ಅಥವಾ ಎರಡೂ ಬದಲಾವಣೆ ಆಗಬೇಕಾದರೆ ಆಗ ಬಲಪ್ರಯೋಗ ಆಗಲೇಬೇಕೆಂಬ ಅಂಶ ವ್ಯಕ್ತವಾಗುತ್ತದೆ. ಅರ್ಥಾತ್ ವಸ್ತುಗಳು ಯಾವ ಸ್ಥಿತಿಯಲ್ಲಿ ಇರುತ್ತವೆಯೋ ಅದೇ ಸ್ಥಿತಿಯಲ್ಲಿರಲು ಪ್ರಯತ್ನಿಸುತ್ತವೆ ; ಮತ್ತು ಆ ಸ್ಥಿತಿಯಲ್ಲಿ ಬದಲಾವಣೆ ಹೊಂದುವಂತೆ ಮಾಡಲು ಯಾವ ಕ್ರಿಯೆಗೂ ಪ್ರತಿರೋಧವನ್ನು ಸೂಚಿಸುತ್ತವೆ. ವಸ್ತುಗಳ ಈ ಪ್ರತಿರೋಧೀ ಗುಣವೇ ಜಡತ್ವ ಸರಳ ಸ್ಥಳಾಂತರ (ಟ್ರಾನ್ಸ್‌ಲೇಷನ್) ಚಲನೆಯಲ್ಲಾಗಲಿ ಆವರ್ತನ ಚಲನೆಯಲ್ಲಾಗಲಿ ವಸ್ತುಗಳು ತಮ್ಮ ಜಡತ್ವದ ಪ್ರಭಾವದಿಂದ ವಿರೋಧಿಸುವ ಗುಣವನ್ನು ಪ್ರದರ್ಶಿಸುತ್ತವೆ. ಮೊದಲಿನ ಚಲನೆಯಲ್ಲಿ ವಸ್ತುವಿನ ಜಡತ್ವ ಅದರ ಜಡಾಂಶವನ್ನು (ರಾಶಿ) ಅವಲಂಬಿಸುತ್ತದೆ. ಆವರ್ತನ ಚಲನೆಯಲ್ಲಾದರೋ ವಸ್ತುವಿನ ಜಡತ್ವ ಅದರ ಜಡಾಂಶದ ಜೊತೆಗೆ ಆವರ್ತನಾಕ್ಷದಿಂದ ವಸ್ತುವಿನಲ್ಲಿ ಅಡಕವಾಗಿರುವ ಕಣಗಳ ಸರಾಸರಿ ಅಂತರವನ್ನೂ ಅವಲಂಬಿಸಿದೆ. (ಬಿ.ಆರ್.ಜಿ.)

**ಜಡತ್ವದ ಭ್ರಮಣಾಂಕ :** ವಸ್ತುವಿನ ರಾಶಿ ಮತ್ತು ಒಂದು ಸರಳರೇಖೆಯ ಸ್ಥಾನ ಇವುಗಳ ನಡುವಿನ ಸಂಬಂಧ; ನಿರ್ದಿಷ್ಟವಾಗಿ, $m$ ರಾಶಿಯ ಒಂದು ಕಣ $l$ ಸರಳರೇಖೆಯಿಂದ $r$ ದೂರದಲ್ಲಿದ್ದರೆ $mr2$ ಉತ್ಪನ್ನ (ಮೊಮೆಂಟ್ ಆಫ್ ಇನರ್ಷಿಯ).

$l$ ರೇಖೆಗೆ ಅಕ್ಷವೆಂದು ಹೆಸರು. $m_1, m_2, m_3$ ………, $m_n$ ಎಂಬ $n$ ವಿರತ ಕಣಗಳು $l$ ಅಕ್ಷದಿಂದ ಅನುಕ್ರಮವಾಗಿ $r_1, r_2, r_3$ ……., $r_n$ ದೂರಗಳಲ್ಲಿದ್ದರೆ ಆಗ $l$ನ ಸುತ್ತ ಈ n–ಕಣ ವ್ಯವಸ್ಥೆಯ ಜಡತ್ವದ ಭ್ರಮಣಾಂಕ $\sum_{k=1}^{n} m_k r_k^2$. ಒಂದು ಘನವಸ್ತುವಿನಲ್ಲಿ ರಾಶಿ ವಿತರಣೆ ಅವಿಚ್ಛಿನ್ನವಾಗಿರುವುದೆಂದು ಭಾವಿಸುತ್ತೇವೆ. ಅಂದರೆ ಅದು ಅವಿಚ್ಛಿನ್ನವಾಗಿ ವ್ಯಾಪಿಸಿಕೊಂಡಿರುವ ಕಣಗಳ ಒಂದು ಒಕ್ಕೂಟ. ಆಗ ಗಣಿತ ನಿಯಮರೀತ್ಯಾ, $\ell$ನ ಸುತ್ತ ಈ ವಸ್ತುವಿನ ಜಡತ್ವದ ಭ್ರಮಣಾಂಕ

$$I = \int_A r^2\, dm$$

ಆಗುತ್ತದೆ. ಇಲ್ಲಿ ವಸ್ತುವಿನ ಸಮಸ್ತ ಕಣಗಳ ಮೂಲಕ ಅನುಕಲನ ಕ್ರಿಯೆಯನ್ನು ಮಾಡಬೇಕು ಎಂಬುದನ್ನು $A$ ಸೂಚಿಸುತ್ತದೆ; d$m$ ಒಂದು ಪ್ರರೂಪೀ ರಾಶಿ ತುಣುಕು; ಮತ್ತು $r$ ಎನ್ನುವುದು $l$ ಅಕ್ಷದಿಂದ ಈ ತುಣುಕಿನ ಲಂಬ ದೂರ. ಉದಾಹರಣೆಗೆ $a$ ಉದ್ದದ




**ಚಿತ್ರ 1**

ಒಂದು ಸಲಾಕಿ $AB$ಯನ್ನು ಪರಿಶೀಲಿಸೋಣ. ನಡುಬಿಂದು $O$ನಲ್ಲಿ $AB$ಗೆ $l$ನ್ನು ಲಂಬವಾಗಿ ಎಳೆದಿರಲಿ. ಆಗ $l$ ನ ಸುತ್ತ $AB$ ಸಲಾಕಿಯ ಜಡತ್ವದ ಭ್ರಮಣಾಂಕ

$$I=\int_{-a/2}^{a/2} r^2\ \rho(r^3/3)_{-a/2}^{a/2}$$

$$=\frac{\rho a^3}{12}=\frac{Ma^2}{12}$$

ಇಲ್ಲಿ $OP=r$ ; $PQ=\rho$ dr = ತುಣುಕಿನ ರಾಶಿ; $\rho$= ಸಲಾಕಿಯ ಸಾಂದ್ರತೆ ; ಇದು ಏಕರೀತಿ ಇದೆಯೆಂದು ಭಾವಿಸಿದ್ದೇವೆ; $2a\rho=M=$ ಸಲಾಕಿಯ ರಾಶಿ. ಸಲಾಕಿಯ ಸಾಂದ್ರತೆ ಏಕರೀತಿ ಇಲ್ಲದಾಗ $\rho$ ಒಂದು ಸ್ಥಿರಾಂಕವಾಗಿರುವುದಿಲ್ಲ. ಅದು ಯಾವ ನಿಯಮಾನುಸಾರ ಬದಲಾಗುವುದು ಎಂಬುದನ್ನು ಅರಿತು ಅನುರೂಪ ಬೆಲೆಯನ್ನು ಅನುಕಲನಾಂಕದೊಳಗೆ ಆದೇಶಿಸಲಾಗುತ್ತದೆ. ಉದಾಹರಣೆಗೆ $\rho=f(r)$ ಆಗಿದ್ದರೆ ಆಗ

$$I=\int_{-a/2}^{a/2} r^2 f(r)dr$$

$f$ನ ಸ್ವರೂಪ ತಿಳಿದರೆ ಈ ಅನುಕಲನವನ್ನು ಮೌಲ್ಯೀಕರಿಸಬಹುದು.

ಕೆಲವು ಶಿಷ್ಟ ಆಕೃತಿಗಳ ಜಡತ್ವದ ಭ್ರಮಣಾಂಕಗಳನ್ನು ಇಲ್ಲಿ ಬರೆದಿದೆ. ಇವುಗಳಲ್ಲೆಲ್ಲ ಸಾಂದ್ರತೆ ಏಕರೀತಿ ಇದೆಯೆಂದು ಭಾವಿಸಿದ್ದೇವೆ.

| ವಸ್ತುವಿನ ಹೆಸರು | ಅಕ್ಷ | ಜಡತ್ವದ ಭ್ರಮಣಾಂಕ |
|---|---|---|
| | | M= ವಸ್ತುವಿನ ರಾಶಿ |
| ಏಕರೀತಿಯ ಸಪುರ ಸಲಾಕಿ ( ಉದ್ದ=$\ell$) | ಕೊನೆ ಬಿಂದುವಿನಲ್ಲಿ ಸಲಾಕಿಗೆ ಲಂಬವಾಗಿ ಎಳೆದ ರೇಖೆ | $Ml^2/3$ |
| " " | ನಡುಬಿಂದುವಿನಲ್ಲಿ ಸಲಾಕಿಗೆ ಲಂಬವಾಗಿ ಎಳೆದ ರೇಖೆ | $Ml^2/12$ |
| ಆಯಾಕಾರದ ಫಲಕ (ಬದಿಗಳು = $a, b$) | $b$ ಬದಿಗೆ ಸಮಾಂತರವಾಗಿ ಗುರುತ್ವಕೇಂದ್ರ ಮೂಲಕ ಎಳೆದ ರೇಖೆ | $Ma^2/12$ |
| " " | ಸಮತಲಕ್ಕೆ ಲಂಬವಾಗಿರುವಂತೆ ಗುರುತ್ವ ಕೇಂದ್ರದ ಮೂಲಕ ಎಳೆದ ರೇಖೆ | $M(a^2+b^2)/12$ |
| ಆಯಾಕಾರದ ಘನ (ಬದಿಗಳು = $a, b, c$) | a b ಫಲಕಕ್ಕೆ ಲಂಬವಾಗಿರುವಂತೆ ಗುರುತ್ವಕೇಂದ್ರದ ಮೂಲಕ ಎಳೆದ ರೇಖೆ | $M(a^2+b^2)/12$ |
| ವೃತ್ತಾಕಾರದ ಫಲಕ (ತ್ರಿಜ್ಯ = $r$) | ಯಾವುದೇ ವ್ಯಾಸ | $M r^2/4$ |
| " " | ಸಮತಲಕ್ಕೆ ಲಂಬವಾಗಿರುವಂತೆ ಕೇಂದ್ರದ ಮೂಲಕ ಎಳೆದ ರೇಖೆ | $M r^2/2$ |
| ಲಂಬವೃತ್ತೀಯ ಸಿಲಿಂಡರ್ (ತ್ರಿಜ್ಯ = $r$) | ಆಕೃತಿಯ ಅಕ್ಷ | $M r^2/2$ |
| ಟೊಳ್ಳು ಸಿಲಿಂಡರ್ (ಬಾಹ್ಯ ತ್ರಿಜ್ಯ= R, ಆಂತರಿಕ ತ್ರಿಜ್ಯ = r ) | " " | $M(R^2+r^2)/2$ |
| ಲಂಬವೃತ್ತೀಯ ಸಿಲಿಂಡರ್ (ಉದ್ದ = $l$, ತ್ರಿಜ್ಯ = $r$ ) | ಆಕೃತಿಯ ಅಕ್ಷಕ್ಕೆ ಲಂಬವಾಗಿರುವಂತೆ ಕೇಂದ್ರದ ಮೂಲಕ ಎಳೆದ ರೇಖೆ | $M\left(\frac{l^2}{12}+\frac{r^2}{4}\right)$ |
| ಗೋಳ (ತ್ರಿಜ್ಯ = $r$) | ಯಾವುದೇ ವ್ಯಾಸ | $2Mr^2/5$ |
| ಟೊಳ್ಳುಗೋಳ (ಬಾಹ್ಯ ತ್ರಿಜ್ಯ =$R$, ಆಂತರಿಕ ತ್ರಿಜ್ಯ = $r$) | " " | $\frac{2M}{5}\left(\frac{R^5-r^5}{R^3-r^3}\right)$ |

$\ell$ ಅಕ್ಷದ ಸುತ್ತ $M$ ರಾಶಿಯ ಜಡತ್ವದ ಭ್ರಮಣಾಂಕ $I$ಯನ್ನು $I=Mk^2$ ಎಂಬುದಾಗಿ ಬರೆಯುವುದುಂಟು. ಇಲ್ಲಿ $k$ಗೆ $\ell$ ನ್ನು ಕುರಿತು $M$ನ ಭ್ರಮಣತ್ರಿಜ್ಯ (ರೇಡಿಯಸ್ ಆಫ್ ಜೈರೇಷನ್) ಎಂದು ಹೆಸರು. ಉದಾಹರಣೆಗೆ, $a$ ತ್ರಿಜ್ಯ ಮತ್ತು $M$ ರಾಶಿ ಇರುವ ಘನಗೋಳದಲ್ಲಿ ಅದರ ಯಾವುದೇ ವ್ಯಾಸದ ಸುತ್ತ ಜಡತ್ವದ ಭ್ರಮಣಾಂಕ $I$ ಆಗಿದ್ದರೆ $I=2Ma^2/5 \equiv Mk^2$.

ಇಲ್ಲಿ ಭ್ರಮಣತ್ರಿಜ್ಯ $k=\sqrt{2/5.a}$

$A$ ಒಂದು ಸಮತಲಾಕೃತಿ ಆಗಿರಲಿ. $Ox, Oy$ ಇದರ ಮೇಲಿರುವ ಒಂದು ಜೊತೆ ಲಂಬಾಕ್ಷಗಳಾಗಿರಲಿ. ಇವುಗಳ ಸುತ್ತ $A$ಯ ಜಡತ್ವದ ಭ್ರಮಣಾಂಕಗಳು ಅನುಕ್ರಮವಾಗಿ $I_x . I_y$ ಆಗಿದ್ದರೆ ಆಗ

$$I_x=\int_A y^2\, dm, \quad I_y=\int_A x^2\, dm$$

ಈಗ $Oz$ನ್ನು $O$ ಮೂಲಕ ಸಮತಲಕ್ಕೆ ಲಂಬವಾಗಿ ಎಳೆದಿದೆ ಎಂದು ಭಾವಿಸೋಣ. ಇದರ ಸುತ್ತ ಜಡತ್ವದ ಭ್ರಮಣಾಂಕ $I_Z$ ಆಗಿದ್ದರೆ ಆಗ




ಚಿತ್ರ 2

$$I_z = \int_A r^2 \ dm = \int_A (x^2 + y^2) \ dm = I_y + I_z$$

ಆದ್ದರಿಂದ ಒಂದು ಸಮತಲಾಕೃತಿಗೆ ಲಂಬವಾಗಿ ಎಳೆದ ಯಾವುದೇ ಅಕ್ಷದ ಸುತ್ತ ಆ ಆಕೃತಿಯ ಜಡತ್ವದ ಭ್ರಮಣಾಂಕ ಲಂಬಪಾದದ ಮೂಲಕ ಸಮತಲದಲ್ಲಿ ಎಳೆದ ಒಂದು ಜೊತೆ ಲಂಬಾಕ್ಷಗಳ ಸುತ್ತ ಅದರ ಜಡತ್ವದ ಭ್ರಮಣಾಂಕಗಳ ಮೊತ್ತಕ್ಕೆ ಸಮವಾಗಿದೆ. ಈ ನಿರೂಪಣೆಗೆ ಲಂಬಾಕ್ಷಗಳ ಪ್ರಮೇಯವೆಂದು ಹೆಸರು.

ಜಡತ್ವದ ಗುಣಲಬ್ಧ : $Ox, Oy, Oz$ ಇವು ಪರಸ್ಪರ ಲಂಬವಾಗಿರುವ ಮೂರು ಅಕ್ಷಗಳಾಗಿರಲಿ. ಇವನ್ನು ಕುರಿತು ಯಾವುದೇ ರಾಶಿ ತುಣುಕು dmನ ನಿರ್ದೇಶಕಗಳು $(x, y, z)$ ಆಗಿದ್ದರೆ ಆಗ

$$P_{yz} = \Sigma yz\, dm, \quad P_{zx} = \Sigma zx\, dm, \quad P_{xy} = \Sigma xy\, dm$$

ಇವುಗಳಿಗೆ ಅನುಕ್ರಮವಾಗಿ, yz—ಅಕ್ಷಗಳನ್ನು ಕುರಿತು, zx—ಅಕ್ಷಗಳನ್ನು ಕುರಿತು, xy—ಅಕ್ಷಗಳನ್ನು ಕುರಿತು ವಸ್ತುವಿನ ಜಡತ್ವದ ಗುಣಲಬ್ಧಗಳೆಂದು ಹೆಸರು.

ಈಗ ಒಂದು ವಸ್ತುವಿನ ಗುರುತ್ವಕೇಂದ್ರ $G$ ಯ ಮೂಲಕ ಸಾಗುವ ಯಾವುದೇ ª ÄÆgÃCRPÀ $Gx, Gy', Gz'$ ಗಳನ್ನು ಪರಿಶೀಲಿಸೋಣ. ಬೇರೆ ಯಾವುದೇ ಬಿಂದು $O$ ಮೂಲಕ ಸಾಗುವ ಸಮಾಂತರಾಕ್ಷಗಳು $Ox', Oy', Oz'$ ಆಗಿರಲಿ. $m$ ಆ ವಸ್ತುವಿನ ಒಂದು ತುಣುಕಿನರಾಶಿ ಆಗಿರಲಿ. $Gxyz$ ಮತ್ತು $O\,x'\,y'\,z'$ ಗಳನ್ನು ಕುರಿತು ಅದರ ನಿರ್ದೇಶಕಗಳು ಅನುಕ್ರಮವಾಗಿ $(x, y, z)$ ಮತ್ತು $(x', y', z')$ ಆಗಿರಲಿ. ಅಲ್ಲದೆ $O'\,x'\,y'\,z'$ ಗಳನ್ನು ಕುರಿತು $G$ ಯ ನಿರ್ದೇಶಕಗಳು $(f, g, h)$ ಆಗಿರಲಿ.

$$\therefore \ x' = x + f, \quad y' = y + g, \quad z' = z + h$$

$Ox^1$ನ ಸುತ್ತ ವಸ್ತುವಿನ ಜಡತ್ವದ ಭ್ರಮಣಾಂಕ

$$I_x{}' = \Sigma m(y'^2 + z'^2)$$

$$= \Sigma m(y^2 + z^2) + \Sigma m(g^2 + h^2) + 2\Sigma m(gy + hz)$$

$$= I_x + M(g^2 + h^2) = 2g\,\Sigma my + 2h\,\Sigma mz$$

ಆದರೆ $\sum my = M\bar{y}$, $\sum mz = M\bar{z}$. ಇಲ್ಲಿ $y, z$ಗಳು $Gxyz$ಗಳನ್ನು ಕುರಿತು ಗುರುತ್ವಕೇಂದ್ರದ (ಅಂದರೆ $G$ಯ) $y$ ಹಾಗೂ $z$ ನಿರ್ದೇಶಕಗಳು. ಆದ್ದರಿಂದ $\bar{y} = \bar{z} = 0.$

$$\therefore I_{x'} = I_x + M\ (g^2 + h^2)$$

ಇದೇ ರೀತಿ $I_{y'} = I_y + M\ (h^2 + f^2)$

$$I_{z'} = I_z + M\ (f^2 + g^2)$$

ಇವುಗಳ ಪ್ರಕಾರ ಯಾವುದೇ ಫಲಿತಾಂಶದ ಅರ್ಥವಿಷ್ಟು : ಯಾವುದೇ ಅಕ್ಷದ ಸುತ್ತ ಒಂದು ವಸ್ತುವಿನ ಜಡತ್ವದ ಭ್ರಮಣಾಂಕ ಆ ವಸ್ತುವಿನ ಗುರುತ್ವ ಕೇಂದ್ರದ ಮೂಲಕ ಎಳೆದ ಸಮಾಂತರಾಕ್ಷವನ್ನು ಕುರಿತು ಅದರ ಜಡತ್ವದ ಭ್ರಮಣಾಂಕ ಮತ್ತು ಗುರುತ್ವಕೇಂದ್ರದಲ್ಲಿ ವಸ್ತುವಿನ ರಾಶಿಗೆ ಸಮರಾಶಿಯ ಒಂದು ಕಣವನ್ನು ಇರಿಸಿದಾಗ ದತ್ತ ಅಕ್ಷವನ್ನು ಕುರಿತು ಅದರ ಜಡತ್ವದ ಭ್ರಮಣಾಂಕ ಇವುಗಳ ಮೊತ್ತಕ್ಕೆ ಸಮವಾಗಿದೆ. ಈ ನಿರೂಪಣೆಗೆ ಸಮಾಂತರಾಕ್ಷಗಳ ಪ್ರಮೇಯವೆಂದು ಹೆಸರು. ಪುನಃ, $Ox'y'$ ಅಕ್ಷಗಳನ್ನು ಕುರಿತು ಜಡತ್ವದ ಗುಣಲಬ್ಧ

$$P_{x'y'} = \Sigma mx'\,y' = \Sigma m(x + f)(y + g)$$

$$= P_{xy} + Mfg$$

ಇದೇ ಪ್ರಕಾರ $P_{y'z'} = P_{yz} + Mgh$

$$P_{z'x'} = P_{zx} + Mhf$$

ಇವುಗಳ ಪೈಕಿ ಯಾವುದೇ ಫಲಿತಾಂಶದ ಅರ್ಥವಿಷ್ಟು : ಯಾವುದೇ ಒಂದು ಜೊತೆ ಅಕ್ಷಗಳನ್ನು ಕುರಿತು ಒಂದು ವಸ್ತುವಿನ ಜಡತ್ವದ ಗುಣಲಬ್ಧ ಆ ವಸ್ತುವಿನ ಗುರುತ್ವಕೇಂದ್ರದ ಮೂಲಕ ಎಳೆದ ಸಮಾಂತರಾಕ್ಷಗಳನ್ನು ಕುರಿತು ಅದರ ಜಡತ್ವದ ಗುಣಲಬ್ಧ ಮತ್ತು ಗುರುತ್ವಕೇಂದ್ರದಲ್ಲಿ ವಸ್ತುವಿನ ರಾಶಿಗೆ ಸಮರಾಶಿಯ ಒಂದು ಕಣವನ್ನು ಇರಿಸಿದಾಗ ದತ್ತ ಅಕ್ಷಗಳನ್ನು ಕುರಿತು ಅದರ ಜಡತ್ವದ ಗುಣಲಬ್ಧ ಇವುಗಳ ಮೊತ್ತಕ್ಕೆ ಸಮವಾಗಿದೆ. ಈ ನಿರೂಪಣೆಗೆ ಕೂಡ ಸಮಾಂತರಾಕ್ಷಗಳ ಪ್ರಮೇಯವೆಂದು ಹೆಸರು.

ಸರಳ ಸ್ಥಾನಾಂತರಣ ಚಲನೆಯಲ್ಲಿ (ಟ್ರಾನ್ಸ್‌ಲೇಟರಿ ಮೋಷನ್) ವಸ್ತುವಿನ ಜಡತ್ವ (ಇನರ್ಷಿಯ) ಅದರ ರಾಶಿಯನ್ನು ಅವಲಂಬಿಸಿರುತ್ತದೆ. ಆವರ್ತನ ಚಲನೆಯಲ್ಲಾದರೋ ಅದು ಒಂದು ರೀತಿಯ ಜಡತ್ವವನ್ನು ಪಡೆದಿರುವುದು. ಈ ಆವರ್ತನ ಚಲನೆಯನ್ನು (ರೊಟೇಟರಿ ಮೋಷನ್) ಉಂಟುಮಾಡುವ ಭ್ರಾಮಕತೆ (ಟಾರ್ಕ್) ಹೆಚ್ಚಿದಂತೆಲ್ಲ ಈ ಚಲನೆಗೆ ವಿರೋಧವನ್ನು ಉಂಟುಮಾಡುವ ವಸ್ತುವಿನ ಜಡತ್ವದ ಮೌಲ್ಯವೂ ಹೆಚ್ಚಾಗುವುದು. ಹೀಗೆ, ಆವರ್ತನ ಚಲನೆಗೆ ವಿರೋಧವನ್ನು ಉಂಟುಮಾಡುವ ವಸ್ತುವಿನ ಜಡತ್ವವೇ ಜಡತ್ವದ ಭ್ರಮಣಾಂಕ. ಇದು ಸಹಜವಾಗಿಯೇ ವಸ್ತುವಿನ ಜಡತ್ವವನ್ನೂ ಆವರ್ತನಾಕ್ಷದಿಂದ ವಸ್ತುವಿನ ವಿವಿಧ ಕಣಗಳ ದೂರವನ್ನೂ ಅವಲಂಬಿಸಿದೆ. ಇದರ ಮಾಪನ, ಈ ಹಿಂದೆ ವಿವರಿಸಿದಂತೆ,

$$I = \int_A r^2 \ \mathrm{d}m$$

(ಬಿ.ಆರ್.ಜಿ.)

**ಜಡಭರತ :** ಮಹಾಮುನಿ; ಜಡತೆಗೂ ಸಹನೆಗೂ ಪ್ರಸಿದ್ಧನಾಗಿದ್ದಾನೆ. ಸ್ಕಾಂದ ಪುರಾಣದಲ್ಲಿ ಈತನ ಪ್ರಸ್ತಾಪ ಬರುತ್ತದೆ. ಈತ ಪ್ರಿಯವ್ರತವಂಶದ ಋಷಭದೇವನೆಂಬ ರಾಜರ್ಷಿಯ ಪುತ್ರ; ತಾಯಿ ಜಯಂತಿ; ಸುಮತಿ, ಸುದರ್ಶನ, ರಾಷ್ಟ್ರಭುಜ, ಧೂಮ್ರಕೇತು, ಆದರ್ಶ–ಇವರು ಮಕ್ಕಳು. ಭರತವರ್ಷದ ರಾಜನಾಗಿ ಸ್ವಲ್ಪಕಾಲ ಆಳಿ, ಅನಂತರ ರಾಜ್ಯವನ್ನು ಮಕ್ಕಳಿಗೆ ಹಂಚಿ, ತಾನು ಅರಣ್ಯಕ್ಕೆ ಹೋಗಿ ತಪಸ್ಸನ್ನು ಆಚರಿಸಿದ. ಒಂದು ದಿನ ಈತ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಗರ್ಭಧರಿಸಿದ್ದ ಒಂದು ಹೆಣ್ಣು ಜಿಂಕೆ ಅಲ್ಲಿಗೆ ನೀರು ಕುಡಿಯಲು ಬಂತು; ಅದೇ ಸಮಯದಲ್ಲಿ ಕೇಳಿಬಂದ ಗುಡುಗಿನ ಶಬ್ದದಿಂದ ಭಯಗೊಂಡು ಮರಿಯೊಂದಕ್ಕೆ ಜನ್ಮ ಕೊಟ್ಟು ಸತ್ತುಹೋಯಿತು. ಇದನ್ನು ಕಂಡ ಜಡಭರತ ಕನಿಕರದಿಂದ ಆ ಜಿಂಕೆಮರಿಯನ್ನು ಆಶ್ರಮಕ್ಕೆ ತಂದು ಪೋಷಿಸಿ ಬೆಳೆಸಿದ. ಅದರ ಬಗ್ಗೆ ಈತನಿಗೆ ಮಮತೆಯೂ ಬೆಳೆದು, ತನ್ನ ಕೊನೆಯ ದಿನಗಳಲ್ಲಿ ಅದನ್ನೇ ಸ್ಮರಿಸುತ್ತ ಪ್ರಾಣತ್ಯಾಗ ಮಾಡಿದ್ದರಿಂದ, ಮುಂದಿನ ಜನ್ಮದಲ್ಲಿ ಈತ ಜಿಂಕೆಯಾಗಿ ಹುಟ್ಟಿದ. ಪೂರ್ವಜನ್ಮದ ತಪೋಮಹಿಮೆಯಿಂದ ಆಗಿನ ಎಲ್ಲ ವೃತ್ತಾಂತಗಳೂ ನೆನಪಿನಲ್ಲಿದ್ದುದರಿಂದ ಜಿಂಕೆಯ ಜನ್ಮವನ್ನು ನೀಗಿಕೊಂಡು ಅಂಗಿರಸನೆಂಬ ಬ್ರಾಹ್ಮಣನ ಮಗನಾಗಿ ಹುಟ್ಟಿ ಕ್ರಮೇಣ ಹುಚ್ಚನಂತೆ ಅಲೆದ. ವೃಷಲನೆಂಬ ರಾಜ ಕಾಳಿಕಾದೇವಿಗೆ ಕೊಡಬೇಕೆಂದಿದ್ದ ನರಬಲಿಗೆ ಪಶುವಾಗಿ ಸಿಕ್ಕಿಕೊಂಡನಾದರೂ ದೇವಿಯ ವರಪ್ರಸಾದದಿಂದ ತಪ್ಪಿಸಿಕೊಂಡು ಹೋಗಿ ಪುನಃ ಹುಚ್ಚನಂತೆ ಅಲೆದ. ಕಪಿಲ ಮುನಿಗಳ ದರ್ಶನಕ್ಕೆಂದು ಪಲ್ಲಕ್ಕಿಯಲ್ಲಿ ಹೋಗುತ್ತಿದ್ದ ಸಿಂಧೂರಾಜ ರಹೂಗಣ ಈತನನ್ನು ತನ್ನ ಪಲ್ಲಕ್ಕಿ ಹೊರುವವರಲ್ಲಿ ಒಬ್ಬನನ್ನಾಗಿ ಮಾಡಿಕೊಂಡ. ಈತ ಅದರಿಂದಲೂ ಅಸಮಾಧಾನಗೊಳ್ಳಲಿಲ್ಲ. ಈತನ ತಾಮಸ ನಡಿಗೆಯಿಂದ ಪಲ್ಲಕ್ಕಿಗೆ ಏರುಪೇರುಗಳುಂಟಾಗಿ ಒಳಗಿದ್ದ ರಾಜ ಆಯಾಸಗೊಂಡು ಈತನನ್ನು ಬಗೆಬಗೆಯಾಗಿ ಮೂದಲಿಸಿದ. ಎಷ್ಟು ಮೂದಲಿಸಿದರೂ ಈತ ಅತಿ ಸಹನೆಯಿಂದ ವರ್ತಿಸಿದ. ಅದನ್ನು ಕಂಡು ರಾಜ ಪಲ್ಲಕ್ಕಿಯಿಂದ ಕೆಳಗಿಳಿದು ಈತನನ್ನು ದೊಡ್ಡ ವೇದಾಂತಿಯೆಂದು ಪ್ರಶಂಸಿಸಿ, ಕ್ಷಮಾಪಣೆ ಕೇಳಿದ. (ಬಿ.ಕೆ.ಎಸ್.)

**ಜಡಿಗೇನಹಳ್ಳಿ :** ಬೆಂಗಳೂರಿಗೆ 40 ಕಿಮೀ ದೂರದಲ್ಲಿ ಹೊಸಕೋಟೆ ಮಾಲೂರು ರಸ್ತೆಯಲ್ಲಿರುವ ಒಂದು ಹಳ್ಳಿ. ಹೊಸಕೋಟೆಯಿಂದ ಈ ಹಳ್ಳಿಗೆ ಹೋಗುವಾಗ ಒಂದು ಕಿಮೀಗೆ ಹಿಂದೆಯೇ ಉರುಟುಕಲ್ಲುಗಳಿಂದ ಕೂಡಿರುವ ಒಂದು ದಿಣ್ಣೆ ಅಡ್ಡಲಾಗುತ್ತದೆ. ಅದನ್ನು ದಾಟುತ್ತಿದ್ದಂತೆಯೇ ರಸ್ತೆಯ ಎರಡು ಬದಿಯಲ್ಲೂ ಹಲವು ಬೃಹತ್‌ಶಿಲಾಸಮಾಧಿಗಳು ಕಣ್ಣಿಗೆ ಬೀಳುತ್ತವೆ. ರಸ್ತೆಯ ಪಕ್ಕದಲ್ಲೇ ಇರುವ ಒಂದು ಹಳ್ಳ ಇಂಥ ಕೆಲವು ಸಮಾಧಿಗಳನ್ನು ಕೊರೆದಿರುವುದನ್ನೂ ನೋಡಬಹುದು. ಗುಂಡಾದ ಕಲ್ಲುಗಳನ್ನಿಟ್ಟು ರಚಿಸಿರುವ 1.8 ಮೀ.ನಿಂದ 6ಮೀ.ವರೆಗಿನ ವ್ಯಾಸವುಳ್ಳ, ಬೇರೆ ಬೇರೆಯಾಗಿ ಅಥವಾ ಒಂದರೊಳಗೊಂದರಂತೆ ಇರುವ ವೃತ್ತಗಳು ಈ ಸಮಾಧಿಗಳ ಮೇಲ್ನೋಟಕ್ಕೆ ತೋರುವ ಹೆಗ್ಗುರುತುಗಳು. ಇವುಗಳಲ್ಲಿ ನಾಲ್ಕರ ಉತ್ಖನನ 1957ರಲ್ಲಿ ನಡೆಯಿತು. ಬೇರೆ ಕೆಲವು ಬೃಹತ್‌ಶಿಲಾಸಮಾಧಿಗಳಲ್ಲಿರುವಂತೆ ಇವುಗಳಲ್ಲಿ ಚಪ್ಪಡಿ ಕಲ್ಲಿನ ಪೆಟ್ಟಿಗೆಯಾಗಲಿ, ದೊಡ್ಡ ಗಾತ್ರದ ಮುಚ್ಚುಗಲ್ಲಾಗಲಿ, ಕಲ್ಲುತುಂಡುಗಳ ರಾಶಿಯಾಗಲಿ ಇಲ್ಲದೆ, ಇವು ಕುಳಿಸಮಾಧಿಯ ಗುಂಪಿಗೆ ಸೇರಿವೆ. ಆಳವಾದ ಕುಳಿಯಲ್ಲಿ ಮಣ್ಣಿನಿಂದ ತಯಾರಿಸಿದ ಶವಸಂಪುಟವನ್ನಿಟ್ಟಿರುವುದು ಇಲ್ಲಿಯ ಬೃಹತ್‌ಶಿಲಾಸಮಾಧಿಗಳ ಒಂದು ವೈಶಿಷ್ಟ್ಯ. ಕುನ್ನತ್ತೂರಿನಲ್ಲೂ (ನೋಡಿ) ಇಂಥ ಮಣ್ಣಿನ ಶವಸಂಪುಟಗಳು ದೊರೆತಿವೆ. ಆದರೆ ರಚನೆಯಲ್ಲಿ ಇವೆರಡಕ್ಕೂ ವ್ಯತ್ಯಾಸವುಂಟು.

ಸಣ್ಣ ವೃತ್ತಗಳಿರುವ ಸಮಾಧಿಗಳಲ್ಲಿ 1.5–1.8 ಮೀ. ಆಳದ ಗುಂಡಿಗಳಲ್ಲಿ ಚಿಕ್ಕದಾದ, 1.2 ಮೀ.ಮೀರದ ಶವಸಂಪುಟಗಳಿವೆ. ಅವುಗಳ ಸುತ್ತಲೂ ಬಗೆಬಗೆಯ ಮಣ್ಣಿನ ಪಾತ್ರೆಗಳು, ಕಬ್ಬಿಣದ ಸಾಮಾನುಗಳು ಇವೆ. ದೊಡ್ಡ ಸಮಾಧಿಗಳಲ್ಲಿ 3.6ಮೀ. ಗಿಂತ ಹೆಚ್ಚು ಆಳವಾದ ಒಂದು ದೊಡ್ಡ ಗುಂಡಿ, ಅದರ ತಳದಲ್ಲಿ ಪುನಃ ಒಂದರ ಪಕ್ಕದಲ್ಲೊಂದರಂತೆ ಎರಡು ಕಿರುಗುಂಡಿಗಳು. ಅವುಗಳಲ್ಲೊಂದರಲ್ಲಿ ಶವಸಂಪುಟ, ಕೆಲವು ಮಣ್ಣಿನ ಪಾತ್ರೆಗಳು ಮತ್ತು ಕಬ್ಬಿಣದ ಪದಾರ್ಥಗಳು, ಇನ್ನೊಂದರಲ್ಲಿ ವಿವಿಧ ಆಕೃತಿಗಳ ಮತ್ತು ಗಾತ್ರಗಳ ಹಲವಾರು ಮಣ್ಣಿನ ಪಾತ್ರೆಗಳು ತುಂಬಿವೆ. ತೊಟ್ಟಿಲಿನ ಮಾದರಿಯಲ್ಲಿರುವ 7 ಉದ್ದವಾದ ಶವಸಂಪುಟಕ್ಕೆ ಎಂಟು ಕಾಲುಗಳು, ಉಬ್ಬಿರುವ ಮುಚ್ಚಳ, ಕೆಂಪು ಬಣ್ಣ. ಗುಂಡಿಯಲ್ಲಿ ಮೊದಲು ಬತ್ತವನ್ನು ಹರಡಿ ಅದರ ಮೇಲೆ ಶವಸಂಪುಟವನ್ನಿಟ್ಟಿದ್ದಕ್ಕೆ ಕುರುಹುಗಳಿವೆ. ಇಲ್ಲಿ ದೊರೆತಿರುವ ಯಾವ ಶವಸಂಪುಟದಲ್ಲೂ ಅಸ್ಥಿಪಂಜರವಾಗಲಿ ಶವದ ಇತರ ಕುರುಹುಗಳಾಗಲಿ ಕಂಡುಬಂದಿಲ್ಲದಿರುವುದು ಒಂದು ವಿಚಿತ್ರ. ಕಬ್ಬಿಣದ ಪದಾರ್ಥಗಳಲ್ಲಿ ಕತ್ತಿ, ಚೂರಿ, ಕುಡುಗೋಲು, ಗುದ್ದಲಿ, ಮುಕ್ಕಾಲುಪೀಠ, ಬಾಣಲೆ, ತ್ರಿಶೂಲ ಮುಂತಾದವೂ ಮಣ್ಣಿನ ಪಾತ್ರೆಗಳಲ್ಲಿ ಮಡಕೆಗಳು, ತಟ್ಟೆಗಳು, ಬಟ್ಟಲುಗಳು, ಮುಚ್ಚಳವಿರುವ ಉದ್ದಕತ್ತಿನ ಹೂಜಿಗಳು, ಪಾನಪಾತ್ರೆಗಳು ಮತ್ತು ಆಟಿಕೆಯಂತಿರುವ ಕಿರುಪಾತ್ರೆಗಳೂ ಸೇರಿವೆ. ಇವುಗಳಲ್ಲಿ ಕೆಂಪು ಬಣ್ಣದ ಪಾತ್ರೆಗಳೇ ಹೆಚ್ಚು. ಕಪ್ಪು ಹೊಳಪಿನ ಪಾತ್ರೆಗಳೂ ಉಂಟು. ಬೃಹತ್‌ಶಿಲಾಸಮಾಧಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಂಪು ಕಪ್ಪು ಮಿಶ್ರಿತ ಮಡಕೆಗಳೂ ಇವೆ.

ಶವಸಂಪುಟವನ್ನೂ ಇತರ ಪದಾರ್ಥಗಳನ್ನೂ ಕಿರುಗುಂಡಿಗಳಲ್ಲಿ ಜೋಡಿಸಿಟ್ಟ ಮೇಲೆ ಜಿಗುಟಾದ ಜೇಡಿಯ ಮಣ್ಣನ್ನು ಗಿಡಿದು ದೊಡ್ಡ ಗುಣಿಯನ್ನು ತುಂಬಿರುವುದರಿಂದ ಅದನ್ನು ಅಗೆದು ತೆಗೆಯುವುದು ಶ್ರಮಸಾಧ್ಯ. ಅಲ್ಲಿಯ ಸಮಾಧಿಗಳನ್ನು ಬೃಹತ್‌ಶಿಲಾಸಮಾಧಿಗಳ ಕಾಲದ ಕಡೆಯ ಭಾಗಕ್ಕೆ–ಎಂದರೆ ಪ್ರಶ. 1–3ನೆಯ ಶತಮಾನಗಳ ಕಾಲಕ್ಕೆ ಸೇರಿಸಬಹುದೆಂದು ಸ್ಥೂಲವಾಗಿ ಅಭಿಪ್ರಾಯ ಪಡಲಾಗಿದೆ. (ಎಂ.ಎಚ್.)

**ಜಡ್ಡು :** ಸಸ್ಯಕಾಂಡದ ಮೇಲೆ ಉಂಟಾಗುವ ಗಾಯದ ಮೇಲೆ ಇಲ್ಲವೆ ಕತ್ತರಿಸಿದ ಜಾಗದ ಮೇಲೆ ಬೆಳೆಯುವ ಮೃದುವಾದ ಪರೆಂಕಿಮ ಕೋಶಗಳಿಂದ ಕೂಡಿದ ಊತಕ (ಕ್ಯಾಲಸ್). ಚರ್ಮದ ಎಪಿಡರ್ಮಿಸಿನ ಕೊಂಬು ಪದರ ಮಂದವಾಗುವುದರಿಂದ ಉಂಟಾಗುವ ದಪ್ಪವಾದ ಮತ್ತು ಗಡುಸಾದ ಭಾಗ ; ಮೂಳೆ ಮುರಿದಾಗ ಅವುಗಳ ತುದಿಗಳ ಸುತ್ತ ರೂಪುಗೊಂಡು ಕೊನೆಗೆ ಮೂಳೆಯಾಗಿ ಪರಿವರ್ತಿತವಾಗುವ ಒಂದು ವಿಧದ ವಸ್ತು ; ಸಸ್ಯಗಳ ಫ್ಲೋಯೆಮ್ ಊತಕದ ಜರಡಿ ತಟ್ಟೆಗಳ ರಂಧ್ರಗಳಲ್ಲಿ ಸಂಚಯವಾಗಿ ಅವು ಮುಚ್ಚಿಹೋಗುವಂತೆ ಮಾಡುವ ಕ್ಯಾಲೋಸ್ ಎಂಬ ರಾಸಾಯನಿಕದ ಪದರ ; ಮತ್ತು ಗ್ಯಾಸ್ಟ್ರಾಪೊಡ ಪ್ರಾಣಿಗಳ ಚಿಪ್ಪಿನ ನಾಭಿಯ ಸುತ್ತ ಇಲ್ಲವೆ ಒಳಗೆ ರೂಪುಗೊಳ್ಳುವ ಚಿಪ್ಪಿನ ವಸ್ತು–ಇವೆಲ್ಲಕ್ಕೂ ಜಡ್ಡು ಎಂಬ ಹೆಸರು ಅನ್ವಯವಾಗುತ್ತದೆ. ಸಸ್ಯಕಾಂಡಗಳಲ್ಲಿ ಗಾಯವಾದಾಗ ಗಾಯದ ಸುತ್ತ ಇರುವ ಪರೆಂಕಿಮ ಕೋಶಗಳು ಚುರುಕಾಗಿ ವಿಭಾಗವಾಗಲು ಪ್ರಾರಂಭಿಸುತ್ತವೆ. ಪರಿಣಾಮವಾಗಿ ಜಡ್ಡು ರೂಪುಗೊಳ್ಳುತ್ತದೆ. ಗಾಯವಾದ ಭಾಗದ ಸುತ್ತ ಇದು ಒಂದು ಕವಚವನ್ನು ಸೃಷ್ಟಿಸಿ ಬ್ಯಾಕ್ಟೀರಿಯ, ವೈರಸ್ ಮುಂತಾದ ರೋಗಕಾರಕ ಸೂಕ್ಷ್ಮಜೀವಿಗಳು ಒಳಹೊಗದಂತೆ ತಡೆದು ರಕ್ಷಿಸುತ್ತದೆ.

ಗಿಡಗಳನ್ನು ಕಸಿ ಮಾಡುವಾಗ ಕಸಿತಾಳು ಮತ್ತು ಕಸಿಕೊಂಬೆಗಳನ್ನು ಸೇರಿಸಿ ಕಟ್ಟಿದಾಗ ಅಲ್ಲಿ ಜಡ್ಡು ಉತ್ಪತ್ತಿಯಾಗುವುದುಂಟು. ಇದೇ ರೀತಿ ಅಂಗಾಂಶ ವ್ಯವಸಾಯದಲ್ಲಿ ಕಾಂಡ, ಬೇರು ಅಥವಾ ಬೇರಾವುದೇ ಅಂಗದ ತುಂಡುಗಳನ್ನು ಕೃತಕ ವರ್ಧನ ಮಾಧ್ಯಮಗಳಲ್ಲಿ ಬೆಳೆಸುವಾಗಲೂ ಅವು ಅನೇಕ ಸಲ ಅವಿಭೇದೀಕೃತ ಅಂಗಾಂಶ ರಾಶಿಗಳಾಗಿ ಬೆಳೆಯುವುವು. ಇವಕ್ಕೂ ಜಡ್ಡು ಎಂಬ ಹೆಸರೇ ಇದೆ. ಪೂತಿರಹಿತ ಪರಿಸ್ಥಿತಿಗಳಲ್ಲಿ ಇವನ್ನು ವಿಭಾಗಿಸಿ ಸಕ್ಕರೆ, ಖನಿಜಗಳು ಮತ್ತು ಆಕ್ಸಿನುಗಳನ್ನು ಒಳಗೊಂಡ ಮಾಧ್ಯಮಗಳಲ್ಲಿ ಬೆಳೆಸಿದಾಗ, ಒಂದೊಂದು ವಿಭಾಗವೂ ಒಂದು ಜಡ್ಡು ಅಂಗಾಂಶವಾಗಿ ಬೆಳೆಯುತ್ತ ಹೋಗುತ್ತದೆ. ಜಡ್ಡಿನ ಬೆಳವಣಿಗೆಗೆ ಸಾಮಾನ್ಯವಾಗಿ ಆಕ್ಸಿನ್ ಕೂಡ ಆವಶ್ಯಕವಾದರೂ ಕೆಲವೊಮ್ಮೆ ಕೇವಲ ಖನಿಜ ಮತ್ತು ಸಕ್ಕರೆಯನ್ನುಳ್ಳ ಮಾಧ್ಯಮದಲ್ಲಿ ಅನಿರ್ದಿಷ್ಟ ಕಾಲ ಬೆಳೆಯುತ್ತ ಹೋಗಬಲ್ಲದು. ಈ ಪ್ರಕ್ರಿಯೆಗೆ ಒಗ್ಗುವಿಕೆ (ಹ್ಯಾಬಿಟುಯೇಷನ್) ಎಂದು ಹೆಸರು. ಇದರಿಂದಾಗಿ ಜಡ್ಡು ಅಂಗಾಂಶ ತನ್ನ ಬೆಳವಣಿಗೆಗೆ ಪರಿಸರದ ಮೇಲೆ ಹೆಚ್ಚಾಗಿ ಅವಲಂಬಿಸಬೇಕಾಗಿಲ್ಲ. ಅನೇಕ ರಾಸಾಯನಿಕಗಳು ಜಡ್ಡು ಅಂಗಾಂಶದ ಬೆಳವಣಿಗೆಯನ್ನು ವೃದ್ಧಿಸಬಲ್ಲವು ಎಂದು ತಿಳಿದಿದೆ. ಇವುಗಳಲ್ಲಿ ಎಳನೀರಿನಲ್ಲಿರುವ ಕೆಲವು ರಾಸಾಯನಿಕಗಳು ಮುಖ್ಯವಾಗಿವೆ. ಉದಾಹರಣೆಗೆ : 6–ಫರ್‌ಫ್ಯೂರೈಲ್–ಆಮೈನೋ–ಪ್ಯೂರೀನ್.

ಒಂದು ಜಡ್ಡು ಅಂಗಾಂಶದಿಂದ ಕೇವಲ ಒಂದೇ ಒಂದು ಜೀವಕೋಶವನ್ನು ಬೇರ್ಪಡಿಸಿ, ಕೃತಕ ಮಾಧ್ಯಮದಲ್ಲಿ ಬೆಳೆಸಿ, ಅದು ಮತ್ತೆ ಜಡ್ಡು ಅಂಗಾಂಶ ಬೆಳೆಯುವಂತೆ, ಈ ಅಂಗಾಂಶ ಪ್ರಕಾಂಡ, ಬೇರು ವ್ಯವಸ್ಥೆಗಳಾಗಿಯೂ ಕೊನೆಗೆ ಒಂದು ಸಂಪೂರ್ಣ ಸಸ್ಯವಾಗಿಯೂ ಬೆಳೆಯುವಂತೆ ಮಾಡುವ ಕುತೂಹಲಕಾರಿ ಪ್ರಯೋಗಗಳು ಇತ್ತೀಚೆಗೆ ನಡೆಯುತ್ತಿವೆ. ಸಾಮಾನ್ಯವಾಗಿ ಜಡ್ಡು ಅಂಗ ಇಲ್ಲವೆ ಬೇರೆ ಅಂಗಾಂಶಗಳಾಗಿ ವಿಭೇದೀಕರಣವಾಗದಾದರೂ ಬೇರೊಂದು ಅಂಗಾಂಶವನ್ನು ಇದರಲ್ಲಿ ನಾಟಿ ಮಾಡಿದಾಗ ಜಡ್ಡು ಕೂಡ ವಿವಿಧ ರೀತಿಯ ಅಂಗಗಳಾಗಿ ವರ್ಧಿಸುತ್ತದೆ. (ಎಂ.ಸಿ.ಆರ್.)

**ಜತಿಸ್ವರ :** ಪಲ್ಲವಿ, ಅನುಪಲ್ಲವಿ, ಚರಣಗಳಿಂದ ಕೂಡಿ, ರಾಗದ ಪೂರ್ಣ ಸಂಚಾರಗಳನ್ನು ಭಾವಯುಕ್ತವಾಗಿ, ಗಮಕಯುಕ್ತವಾಗಿ ಹೊರಗೆಡಹುವ, ತಾಳಬದ್ಧವಾದ, ಸಾಹಿತ್ಯರಹಿತ ರಚನೆ. ರಚನೆಯಲ್ಲಿದು ಸ್ವರಜತಿಯನ್ನು ಹೋಲುತ್ತದೆ. ಆದರೆ ಸಾಹಿತ್ಯವಿರುವುದಿಲ್ಲ, ಅಷ್ಟೇ ವ್ಯತ್ಯಾಸ. ಜತಿಸ್ವರ ಸಂಗೀತಾಭ್ಯಾಸದಲ್ಲಿ ಒಂದು ಪ್ರಮುಖ ಹಂತ. ಗೀತೆಗಳ ಅನಂತರ ಇವನ್ನು ಅಭ್ಯಸಿಸುತ್ತಾರೆ. ರಾಗದ ವಿವಿಧ ಸಂಚಾರಗಳು, ತಾಳವೈವಿಧ್ಯ, ಧಾತುವೈವಿಧ್ಯಗಳನ್ನು ಜತಿಸ್ವರ ತಿಳಿಸಿಕೊಡುತ್ತದೆ. ರಾಗದ ವಿವಿಧ ಸಂಚಾರಗಳನ್ನು ಶಕ್ತಿಯುತವಾಗಿ ಹಿಡಿದಿಡುವುದೇ ಜತಿಸ್ವರರಚಕರ ಉದ್ದೇಶ. ತಾಳಬದ್ಧವಾಗಿರುವುದರಿಂದ ಜತಿಸ್ವರ ಕೇಳಲು ಹಿತವಾಗಿರುತ್ತದೆ. ಚರಣಗಳು ಬೇರೆ ಬೇರೆ ಧಾತುಗಳಲ್ಲಿ ರಚಿತವಾಗಿರುತ್ತವೆ.ಉದಾ: ಸಾರಿಗಾಪಾದಾಸಾನೀದಾ (ಬಿಲಹರಿ).

ಮೃದಂಗನಾದದ, ಲಯದ, ಅನುಕರಣಶಬ್ದಗಳು ಜತಿಗಳು. ಸ್ವರಗಳೊಂದಿಗೆ ಜತಿಗಳನ್ನೂ ಸೇರಿಸಿ ಹಾಡುವುದರಿಂದ ಜತಿಸ್ವರದ ರಚನೆಯಲ್ಲಿ ವೈವಿಧ್ಯವನ್ನು ಸಾಧಿಸಿದ್ದಾರೆ. ಉದಾಹರಣೆಗೆ ಸ್ವರಪಲ್ಲವಿ, ಶಬ್ದಪಲ್ಲವಿ, ರಾಗಮಾಲಿಕೆಯ ಜತಿಸ್ವರ.

ಮುಕ್ತಾಯಸ್ವರಗಳು ಅರ್ಧ ಆವರ್ತಸ್ವರ ಮತ್ತು ಉಳಿದರ್ಧ ಆವರ್ತ ಜತಿಗಳಿಂದ ಕೂಡಿದ್ದರೆ ಅವನ್ನು ಸ್ವರಪಲ್ಲವಿಗಳೆಂದು ಕರೆಯುತ್ತಾರೆ. ಪೊನ್ನಯ್ಯ ವಡಿವೇಲು ಮತ್ತು ಶಿವಾನಂದಂ–ಇವರು ರಚಿಸಿರುವ ಜತಿಸ್ವರಗಳು ಇವಕ್ಕೆ ಒಳ್ಳೆಯ ಉದಾಹರಣೆಗಳು.

ಪಲ್ಲವಿ, ಅನುಪಲ್ಲವಿಗಳು ಜತಿಗಳಿಂದಲೂ ಚರಣ ಜತಿಸ್ವರಗಳಿಂದಲೂ ಕೂಡಿರುವ ಜತಿಸ್ವರಗಳನ್ನು ಶಬ್ದಪಲ್ಲವಿಗಳೆಂದು ಕರೆಯುತ್ತಾರೆ. ಉದಾ : ತಾರಿಜೆಂತಕ (ಅಠಾಣ ರಾಗ–ಆದಿತಾಳ). ಅಂತೆಯೇ ಸ್ವಾತಿತಿರುನಾಳರ ಹಲವು ಜತಿಸ್ವರಗಳು ರಾಗಮಾಲಿಕೆಯಲ್ಲಿವೆ.

ಜತಿಸ್ವರಗಳು ಚೌಕಕಾಲ ಅಥವಾ ಮಧ್ಯಮಕಾಲದಲ್ಲಿ ರಚಿತವಾಗಿರುತ್ತವೆ. ಸ್ವರಜತಿಗಳು ಜತಿಗಳಿಂದ ಕೂಡಿ ಜತಿಸ್ವರಗಳೆಂಬ ನೃತ್ಯರಚನೆಗಳಾಗಿ ರೂಪುಗೊಂಡುವು. (ಬರುಬರುತ್ತ ಜತಿಗಳ ಸೇರ್ಪಡೆ ನಿಂತುಹೋಯಿತು.) ಭರತನಾಟ್ಯ ನಿರೂಪಣೆಯಲ್ಲಿ ಜತಿಸ್ವರಗಳು ಪ್ರಮುಖ ಪಾತ್ರವಹಿಸಿವೆ. ಜತಿಸ್ವರದ ಸ್ವರವಿನ್ಯಾಸಗಳಿಗೆ ಅಲ್ಲಿ ತಕ್ಕ ಚಾಕ್ಷುಷ ಅಭಿನಯವನ್ನು ನೀಡಿ, ಸ್ವರಶ್ರೇಣಿಗಳನ್ನು ವಾದ್ಯಗಳ ಪೋಷಣೆಯೊಂದಿಗೆ ಹಾಡಲಾಗುತ್ತದೆ.

(ಟಿ.ಎಸ್.ಎಸ್.ಆರ್.; ವಿ.ಆರ್.ಆರ್.)

**ಜತ್ತಿ, ಬಸಪ್ಪ ದಾನಪ್ಪ :** 1912–2002. ಈಗಿನ ಕರ್ನಾಟಕದ ಭಾರತ ಗಣರಾಜ್ಯದ ಐದನೆಯ ಉಪಾಧ್ಯಕ್ಷರು (1974). ಮೊದಲು ಒರಿಸ್ಸದ ರಾಜ್ಯಪಾಲರೂ ಪುದುಚೇರಿಯ ಉಪರಾಜ್ಯಪಾಲರೂ ಮೈಸೂರು ರಾಜ್ಯದ (ಈಗಿನ ಕರ್ನಾಟಕ) ಮಂತ್ರಿಯೂ ಮುಖ್ಯಮಂತ್ರಿಯೂ ಜಮಖಂಡಿ ಸಂಸ್ಥಾನದ ಮುಖ್ಯಮಂತ್ರಿಯೂ ಆಗಿದ್ದರು. ಇವರು ವಿಜಯಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ (ಆಗ ಸಂಸ್ಥಾನ) ಸಾವಳಗಿ ಗ್ರಾಮದಲ್ಲಿ, 1912 ಸೆಪ್ಟೆಂಬರ್ 10ರಂದು ಜನಿಸಿದರು. ತಂದೆ ದಾನಪ್ಪ ಜತ್ತಿ, ತಾಯಿ ಭಾಗವ್ವ. ದಾನಪ್ಪ ಜತ್ತಿಯವರು ಒಬ್ಬ ವ್ಯಾಪಾರಿ. ಅವರ ಮೂವರು ಗಂಡುಮಕ್ಕಳಲ್ಲಿ ಬಸಪ್ಪನವರು ಒಬ್ಬರು. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಭ್ಯಾಸದ ಅನಂತರ ಕೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ವ್ಯಾಸಂಗಮಾಡಿ ಆರ್ಟ್ಸ್ ಪದವಿಯನ್ನೂ ಸೈಕ್ಸ್ ಲಾ ಕಾಲೇಜಿನಲ್ಲಿ ಎಲ್‌ಎಲ್.ಬಿ. ಪದವಿಯನ್ನೂ ಗಳಿಸಿ (1940) ಜಮಖಂಡಿಯಲ್ಲಿ ವಕೀಲರಾಗಿ ಜೀವನ

ಆರಂಭಿಸಿದರು (1940–45). ಬಹು ಬೇಗನೆ ಸಾರ್ವಜನಿಕ ಕ್ಷೇತ್ರಕ್ಕೆ ಪ್ರವೇಶಮಾಡಿದರು. ಜಮಖಂಡಿಯ ಪೌರಸಭೆಯ ಸದಸ್ಯರಾಗಿ ಎರಡುಬಾರಿ ಆಯ್ಕೆ ಹೊಂದಿದರಲ್ಲದೆ ಅದರ ಅಧ್ಯಕ್ಷರಾಗಿಯೂ ಇದ್ದರು (1940–45). ಜಮಖಂಡಿ ಸಂಸ್ಥಾನದ ಪ್ರಜಾ ಪರಿಷತ್ತಿನ ಪ್ರಮುಖ ಕಾರ್ಯಕರ್ತರಲ್ಲಿ ಇವರೂ ಒಬ್ಬರಾಗಿದ್ದರು. ಜಮಖಂಡಿಯಲ್ಲಿ ಪ್ರಜಾಪ್ರತಿನಿಧಿ ಸರ್ಕಾರ ಸ್ಥಾಪನೆಯಾದಾಗ ಮಂತ್ರಿಮಂಡಲ ರಚಿಸುವ ಹೊಣೆ ಇವರದಾಯಿತು. 1947ರಲ್ಲಿ ಭಾರತ ಸ್ವತಂತ್ರವಾದಾಗ ಸಂಸ್ಥಾನಗಳ ಭವಿಷ್ಯದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ದಕ್ಷಿಣ ಸಂಸ್ಥಾನಗಳ ಒಕ್ಕೂಟರಚನೆಯ ಪ್ರಯತ್ನಗಳು ನಡೆದಿದ್ದುವು. ಜತ್ತಿಯವರು ಜಮಖಂಡಿ ಸಂಸ್ಥಾನಿಕರ ಮನವೊಲಿಸಿ ಭಾರತ ಒಕ್ಕೂಟದಲ್ಲಿ ಆ ಸಂಸ್ಥಾನ ವಿಲೀನಗೊಳ್ಳುವಂತೆ ಮಾಡಲು ಶ್ರಮಿಸಿದರು. ವಿಲೀನಗೊಂಡ ಪ್ರದೇಶಗಳ ಪ್ರನಿನಿಧಿಯಾಗಿ ಜತ್ತಿಯವರು ಮುಂಬಯಿ ವಿಧಾನಸಭೆಗೆ ನಾಮಕರಣ ಹೊಂದಿದರು ಮತ್ತು ಅಲ್ಲಿಯ ಮುಖ್ಯಮಂತ್ರಿ ಬಿ.ಜಿ ಖೇರರ ಸಂಸದೀಯ ಕಾರ್ಯದರ್ಶಿಯಾಗಿ ನೇಮಕಗೊಂಡರು (1948). 1952ರ ಚುನಾವಣೆಯಲ್ಲಿ ಮುಂಬಯಿ ವಿಧಾನಸಭೆಗೆ ಚುನಾಯಿತರಾಗಿ ಆ ರಾಜ್ಯದ ಆರೋಗ್ಯ ಮತ್ತು ಕಾರ್ಮಿಕ ಉಪಮಂತ್ರಿಯಾದರು.



1956ರಲ್ಲಿ ರಾಜ್ಯ ಪುನಾರಚನೆಯಾದ ಅನಂತರ ಜತ್ತಿಯವರು ನೂತನ ಮೈಸೂರು ರಾಜ್ಯದ (ಈಗಿನ ಕರ್ನಾಟಕ) ಭೂಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡರು. ರಾಜ್ಯದ ಭೂಸುಧಾರಣಾ ಕಾಯಿದೆಗಳಿಗೆ ಜತ್ತಿ ಸಮಿತಿಯ ವರದಿ ತಳಹದಿಯಾಯಿತು. 1957 ಮತ್ತು 1967ರ ಚುನಾವಣೆಗಳಲ್ಲಿ ಅವರು ರಾಜ್ಯವಿಧಾನಸಭೆಗೆ ಆಯ್ಕೆಯಾದರು.

1958ರಲ್ಲಿ ಜತ್ತಿಯವರು ಮೈಸೂರಿನ ವಿಧಾನ ಮಂಡಲ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆಯ್ಕೆಯಾಗಿ ರಾಜ್ಯದ ಮುಖ್ಯಮಂತ್ರಿಯಾದರು. ಅನಿರೀಕ್ಷಿತವಾಗಿ ಬಂದ ಹೊಣೆಯನ್ನು ಜತ್ತಿಯವರು ದಕ್ಷತೆಯಿಂದ ನಿರ್ವಹಿಸಿದರು. 1962ರ ಚುನಾವಣೆಗಳ ಅನಂತರ ರಚಿತವಾದ ನಿಜಲಿಂಗಪ್ಪ ಮಂತ್ರಿಮಂಡಲದಲ್ಲಿ ಜತ್ತಿಯವರು ಹಣಕಾಸಿನ ಮಂತ್ರಿಯಾದರು–1965ರ ವರೆಗೆ ಆ ಹುದ್ದೆಯಲ್ಲಿದ್ದರು. ಅನಂತರ 1968ರ ವರೆಗೆ ಅವರು ಆಹಾರ ಮಂತ್ರಿಯಾಗಿದ್ದರು. ಅವರು ಪುದುಚೇರಿಯ ಉಪರಾಜ್ಯಪಾಲರಾಗಿ ನೇಮಕವಾದದ್ದು 1968ರಲ್ಲಿ. 1973ರಲ್ಲಿ ಅವರು ಒರಿಸ್ಸದ ರಾಜ್ಯಪಾಲರಾದರು. 1973–74ರಲ್ಲಿ ಆ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ಬಂದಾಗ ಜತ್ತಿಯವರು ಅದರ ಆಡಳಿತವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಬಸವೇಶ್ವರರ ಉಪದೇಶ ಮತ್ತು ವಿಚಾರಗಳ ಪ್ರಚಾರದ ಉದ್ದೇಶದಿಂದ ರಚಿತವಾಗಿರುವ ಬಸವ ಸಮಿತಿಗೆ ಜತ್ತಿಯವರು ಪ್ರಾರಂಭದಿಂದಲೂ ಅಧ್ಯಕ್ಷರಾಗಿದ್ದರು. ಸಣ್ಣ ವಯಸ್ಸಿನಿಂದಲೂ ಅವರು ಅಧ್ಯಾತ್ಮದಲ್ಲಿ ಒಲವು ಬೆಳೆಸಿಕೊಂಡಿದ್ದರು. ಸಂಗವ್ವನವರು ಜತ್ತಿಯವರ ಪತ್ನಿ. ಅವರಿಗೆ ಒಬ್ಬ ಪುತ್ರಿ, ಮೂವರು ಪುತ್ರರಿದ್ದಾರೆ. ಅವರು 2002 ಮೇ 7ರಂದು ನಿಧನರಾದರು. (ಎಸ್.ಡಿ.ಎ)

**ಜನಕ :** ಒಬ್ಬ ಪ್ರಸಿದ್ಧ ರಾಜಋಷಿ. ರಾಮಾಯಣ, ಮಹಾಭಾರತ ಮತ್ತು ಉಪನಿಷತ್ತುಗಳಲ್ಲಿ ಈತನ ವಿಷಯ ಬರುತ್ತದೆ. ಬೃಹದಾರಣ್ಯಕ ಉಪನಿಷತ್ತಿನ ಪ್ರಕಾರ ಜನಕನ ಸಭೆಗೆ ಅನೇಕ ತಾತ್ತ್ವಿಕರು ಬಂದು ತತ್ತ್ವವಿಚಾರದಲ್ಲಿ ಭಾಗವಹಿಸುತ್ತಿದ್ದರು. ಅವರಲ್ಲಿ ಯಾಜ್ಞವಲ್ಕ್ಯ ಒಬ್ಬ. ಜನಕ ಈತನಿಂದ ಅಧ್ಯಾತ್ಮ ತತ್ತ್ವದ ಉಪದೇಶ ಪಡೆದ.

ಜನಕನ ವಿಚಾರ ರಾಮಾಯಣದಲ್ಲಿ ವಿಸ್ತಾರವಾಗಿ ಬಂದಿದೆ. ಇಕ್ಷ್ವಾಕು ರಾಜನ ಮಗ ನಿಮಿ ವಸಿಷ್ಠನ ಶಾಪದಿಂದ ಅಸುನೀಗಲು ದೇಶ ಅರಾಜಕವಾಯಿತು. ಆಗ ಪ್ರಜೆಗಳು ನಿಮಿಯ ಬಲತೋಳನ್ನು ಮಥನ ಮಾಡಲು ಅದರಿಂದ ಒಬ್ಬ ಪುರುಷ ಜನಿಸಿದ. ಪ್ರಜೆಗಳು ಈತನಿಗೆ ವಿದೇಹ, ಮಿಥಿ, ಜನಕ ಎಂಬ ಹೆಸರು ಕೊಟ್ಟು ತಮ್ಮ ರಾಜನನ್ನಾಗಿ ಮಾಡಿಕೊಂಡರು. ಅಂದಿನಿಂದ ಆ ವಂಶದಲ್ಲಿ ಹುಟ್ಟಿದವರನ್ನು ಮೈಥಿಲ, ವೈದೇಹ, ಜನಕ ಎಂದು ಕರೆಯುವ ಪರಿಪಾಠ ಬೆಳೆಯಿತು. ಈ ವಂಶದಲ್ಲಿ ಹುಟ್ಟಿದ ಸೀರಧ್ವಜನೇ ರಾಮಾಯಣದಲ್ಲಿ ವಿಶೇಷ ಪಾತ್ರವಹಿಸಿದ ಜನಕ ಮಹಾರಾಜ. ಜನಕನಿಗೆ ಬಹುಕಾಲದವರೆಗೆ ಮಕ್ಕಳಾಗಲಿಲ್ಲ. ಆದ್ದರಿಂದ ಅವನು ಪುತ್ರಕಾಮೇಷ್ಟಿಯಾಗಕ್ಕಾಗಿ ಗೊತ್ತಾದ ಸ್ಥಳವನ್ನು ಶೋಧಿಸಲು ನೇಗಿಲಿನಿಂದ ಉತ್ತಾಗ ಅದರ ತುದಿಗೆ ಒಂದು ಚಿನ್ನದ ಪೆಟ್ಟಿಗೆ ಸಿಕ್ಕಿತು. ಅದರಲ್ಲಿ ದೊರೆತ ಮಗುವೇ ಸೀತೆ. ಅನಂತರ ಜನಕನಿಗೆ ಹುಟ್ಟಿದ ಮಗುವೇ ಊರ್ಮಿಳೆ.

ಅನಂತರ ಏರ್ಪಟ್ಟ ಸ್ವಯಂವರದಲ್ಲಿ ಶಿವಧನುರ್ಭಂಗ ಮಾಡಿದ ಶ್ರೀರಾಮನಿಗೆ ಸೀತೆಯನ್ನೂ, ಲಕ್ಷ್ಮಣನಿಗೆ ಊರ್ಮಿಳೆಯನ್ನೂ, ತನ್ನ ತಮ್ಮ ಕುಶಧ್ವಜನ ಪುತ್ರಿಯರಾದ ಮಾಂಡವಿ ಮತ್ತು ಶ್ರುತಕೀರ್ತಿಯರನ್ನು ಭರತ ಶತ್ರುಘ್ನರಿಗೂ ಕೊಟ್ಟು ಜನಕ ಮದುವೆ ಮಾಡಿದ.

ಜನಕ ಮಹಾಜ್ಞಾನಿ, ಮೇಧಾವಿ, ತತ್ತ್ವಜಿಜ್ಞಾಸು. ಮಹಾಭಾರತದ ಶಾಂತಿಪರ್ವದಲ್ಲೂ ಬೃಹದಾರಣ್ಯಕ ಉಪನಿಷತ್ತಿನಲ್ಲೂ ಜನಕನ ತಾತ್ತ್ವಿಕ ಶ್ರದ್ಧೆಯನ್ನೂ ಆತ ನಡೆಸಿದ ಸಂವಾದಗಳನ್ನೂ ವರ್ಣಿಸಿದೆ. ಮಾಂಡವ್ಯ ಮಹರ್ಷಿಯೊಂದಿಗೂ ಪರಾಶರ ಮಹರ್ಷಿಯೊಂದಿಗೂ ಜನಕ ನಡೆಸಿದ ಸಂವಾದಗಳು ಮುಖ್ಯವಾದುವು. ಪರಾಶರರೊಂದಿಗೆ ಮಾಡಿದ ಸಂವಾದ ಪರಾಶರ ನೀತಿಯೆಂದೇ ಪ್ರಸಿದ್ಧವಾಗಿದೆ. ಮಿಥಿಲೆ ಸುಡುತ್ತಿದ್ದರೂ ಜನಕ ಖಿನ್ನನಾಗದೆ ಮನಃಸ್ಥೈರ್ಯವನ್ನು ಹೊಂದಿದ್ದನೆಂದು ಶಾಂತಿಪರ್ವದಲ್ಲಿ ಹೇಳಿದೆ. ವನಪರ್ವದಲ್ಲಿ ಜನಕ ಕಪೋತ ಮುನಿಯೊಡನೆ ನಡೆಸಿದ ವಾದ ವರ್ಣಿತವಾಗಿದೆ. ಅಶ್ವಮೇಧ ಪರ್ವದಲ್ಲಿ ಜನಕ ಮೋಕ್ಷಕ್ಕೆ ಮಮಕಾರತ್ಯಾಗವೇ ಸಾಧನವೆಂದು ಒಬ್ಬ ಬ್ರಾಹ್ಮಣನಿಗೆ ಬೋಧಿಸಿದನೆಂದು ಹೇಳಿದೆ. (ಜಿ.ಎಚ್.)

**ಜನಗಣತಿ :** ನಿರ್ದಿಷ್ಟ ಕಾಲದಲ್ಲಿ ರಾಷ್ಟ್ರವೊಂದರ ಜನಸಂಖ್ಯೆಯನ್ನೂ ಪ್ರಾಸಂಗಿಕವಾಗಿ ಆ ಜನಕ್ಕೆ ಸಂಬಂಧಿಸಿದ ಇತರ ಉಪಯುಕ್ತ ಮಾಹಿತಿಗಳನ್ನೂ ಸಂಗ್ರಹಿಸಿ ಪ್ರಕ್ರಮಿಸಿ ಪ್ರಕಟಿಸುವ ಕ್ರಿಯೆ. ಇದನ್ನು ಖಾನೇಶುಮಾರಿ (ಸೆನ್ಸಸ್) ಎಂದೂ ಕರೆಯುವರು. ಇಲ್ಲಿ ಉಪಯುಕ್ತ ಮಾಹಿತಿಗಳೆಂದರೆ ಲಿಂಗ ಮತ್ತು ವಯಸ್ಸಿಗೆ ಅನುಗುಣವಾಗಿ ಜನರ ಹಂಚಿಕೆ, ಮನೆ, ಜಮೀನು, ಜಾನುವಾರು, ವೃತ್ತಿ, ವರಮಾನ, ಖರ್ಚು ಇತ್ಯಾದಿ.

**ಇತಿಹಾಸ :** 5,000 ವರ್ಷಗಳಷ್ಟು ಹಿಂದೆಯೇ ಬ್ಯಾಬಿಲಾನ್‌ನಲ್ಲಿ ಜನಸಂಖ್ಯೆ ಮತ್ತು ಕೆಲಸಗಾರರ ಅಂಕಿ–ಅಂಶಗಳನ್ನು ಶೇಖರಿಸಲು ಒಂದು ಬಗೆಯ ಖಾನೇಶುಮಾರಿಯನ್ನು ನಡೆಸುತ್ತಿದ್ದರು. ಪ್ರಾಚೀನ ಗ್ರೀಸ್ ಮತ್ತು ರೋಮ್, ಇಸ್ರೇಲ್, ಪರ್ಷಿಯ, ಭಾರತ, ಚೀನ ಮುಂತಾದ ದೇಶಗಳಲ್ಲೂ ಜನಗಣತಿ ನಡೆಯುತ್ತಿತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಒಬ್ಬ ರಾಜನ ಆಧಿಪತ್ಯಕ್ಕೆ ಒಳಪಟ್ಟ ದೇಶದಲ್ಲಿ ವಾಸಿಸುವ ಜನರ ಸಂಖ್ಯೆ ಎಷ್ಟು, ಅವರ ಪೈಕಿ ಎಷ್ಟು ಜನಗಳ ಮೇಲೆ ತೆರಿಗೆ ವಿಧಿಸಬಹುದು, ಸೈನ್ಯಕ್ಕೆ ಸೇರಿಸಿಕೊಳ್ಳಬಹುದಾದ ಕಟ್ಟಾಳುಗಳು ಎಷ್ಟು ಮಂದಿ ಸಿಕ್ಕುವರು– ಇವೇ ಮುಂತಾದ ವಿವರಗಳನ್ನು ನಿಖರವಾಗಿ ತಿಳಿದುಕೊಳ್ಳುವುದೇ ಹಿಂದಿನ ಕಾಲದ ಖಾನೇಶುಮಾರಿಯ ಮುಖ್ಯ ಉದ್ದೇಶಗಳಾಗಿದ್ದುವು. ಪುರಾತನ ಗ್ರೀಕ್ ಮತ್ತು ರೋಮ್ ರಾಜ್ಯಗಳ ನಾಗರಿಕರಿಗೆ ಕೆಲವು ಹಕ್ಕುಗಳು ಇದ್ದುವು. ಆದರೆ ಗುಲಾಮರಿಗೆ ಅವು ಇರಲಿಲ್ಲ. ಆದ್ದರಿಂದ ಹಕ್ಕುದಾರ ನಾಗರಿಕರ ಪಟ್ಟಿಯನ್ನು ತಯಾರು ಮಾಡಬೇಕಾಗಿತ್ತು. ಇದಕ್ಕಾಗಿ ಜನಗಣತಿಯ ಪದ್ಧತಿ ಹುಟ್ಟಿತು. ಅದರ ಜೊತೆಗೆ ಪ್ರತಿ ಕುಟುಂಬಕ್ಕೂ ಸೇರಿದ ಭೂಮಿಕಾಣಿ, ವರಮಾನ ಮುಂತಾದವನ್ನು ಕೂಡ ಎಣಿಸಿ ಬರೆದಿಡುತ್ತಿದ್ದರು.

ಜನಗಣತಿಯ ಪದ್ಧತಿ ಭಾರತದಲ್ಲಿ ರೂಢಿಯಲ್ಲಿದ್ದುದಕ್ಕೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖ ಉಂಟು. ವ್ಯವಸಾಯ ಮತ್ತು ಜನರ ಆರ್ಥಿಕ ಸ್ಥಿತಿಗೆ ಸಂಬಂಧಪಟ್ಟ ಗಣತಿಯನ್ನೂ ಜನ ಮತ್ತು ಜಾನುವಾರುಗಳ ಲೆಕ್ಕವನ್ನೂ ಹಳ್ಳಿಪಟ್ಟಣಗಳಲ್ಲಿ ತೆಗೆದುಕೊಳ್ಳುತ್ತಿದ್ದರೆಂದು ಆ ಗ್ರಂಥದಲ್ಲಿ ವಿವರಿಸಲಾಗಿದೆ. ಅದರಂತೆ ಹಳ್ಳಿಯ ಗೋಪ ಅಥವಾ ಶಾನುಭೋಗನ ಕರ್ತವ್ಯಗಳು ಇವು : ಹಳ್ಳಿಗಳಿಗೆ ಎಲ್ಲೆಗಳನ್ನು ಕಟ್ಟಿ ಒಟ್ಟು ಭೂಮಿಯನ್ನು ಅಳೆದು, ಅದರಲ್ಲಿ ಸಾಗುವಳಿಯ ಜಮೀನು, ಪಡಬಿದ್ದ ಜಮೀನು, ಬಂಜರು, ಬಯಲು, ತರಿ, ಖುಷ್ಕಿ, ಬಾಗಾಯಿತು, ತರಕಾರಿ ತೋಟಗಳು, ಬದುಗಳು, ಅಡುಗಳು, ಕಾಡುಗಳು, ಬಲಿವೇದಿಕೆಗಳು, ದೇಗುಲಗಳು, ನೀರಾವರಿ ಜಲಾಶಯಗಳು, ಶ್ಮಶಾನಗಳು, ಛತ್ರಗಳು, ಅರವಟ್ಟಿಗೆಗಳು, ಯಾತ್ರಾಸ್ಥಳಗಳು, ಹುಲ್ಲುಮಾಳಗಳು, ರಸ್ತೆಗಳು ಎಂದು ವಿಂಗಡಿಸತಕ್ಕದ್ದು. ಕಾಡು, ರಸ್ತೆ ಮೊದಲಾದವುಗಳ ಎಲ್ಲೆಯನ್ನು ನಿಗದಿ ಮಾಡಿ ಜಮೀನುಗಳ ವಿಷಯದಲ್ಲಿ ದಾನಧರ್ಮ, ಕ್ರಯವಿಕ್ರಯ, ತೆರಿಗೆಯ ಸೋಡಿ ಮುಂತಾದವನ್ನು ಬರೆದಿಡತಕ್ಕದ್ದು. ಮನೆಗಳನ್ನು ತೆರಿಗೆ ಕೊಡತಕ್ಕವು ಮತ್ತು ತೆರಿಗೆ ಇಲ್ಲದವು ಎಂದು ವರ್ಗೀಕರಿಸಿ, ಗ್ರಾಮದಲ್ಲಿ ವಾಸವಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ಒಟ್ಟು ಜನಸಂಖ್ಯೆಯನ್ನು ಗಣನೆಮಾಡಿ ಬರೆದಿಡತಕ್ಕದ್ದು. ವ್ಯವಸಾಯಗಾರರು, ಗೋವಳರು, ವರ್ತಕರು, ಕಸಬುದಾರರು, ಕೂಲಿಗಾರರು, ಗುಲಾಮರು ಮತ್ತು ಪಶುಗಳು–ಇವುಗಳ

ಕರಾರುವಾಕ್ಕಾದ ಸಂಖ್ಯೆ ಎಷ್ಟು ಎಂಬುದರ ಲೆಕ್ಕವನ್ನಿಟ್ಟಿರತಕ್ಕದ್ದು. ಪ್ರತಿ ಮನೆಯಿಂದಲೂ ಎಷ್ಟು ಚಿನ್ನ, ಬೇಗಾರಿ ಕೆಲಸ, ಸುಂಕ ಮತ್ತು ದಂಡ ವಸೂಲಾಗಬಹುದೆಂಬುದನ್ನು ಸಹ ನಿಗದಿ ಮಾಡತಕ್ಕದ್ದು. ಇಷ್ಟು ತಪಶೀಲಾಗಿ ಅಂಕಿ-ಅಂಶಗಳನ್ನು ಸಂಗ್ರಹ ಮಾಡುತ್ತಿದ್ದುದನ್ನು ನೋಡಿದರೆ ಆಗಿನ ಕಾಲದಲ್ಲಿ ಕೂಡ ಒಂದು ಬಗೆಯ ಗಣತಿ ನಡೆಯುತ್ತಿತ್ತು ಎಂದು ವೇದ್ಯವಾಗುತ್ತದೆ. ಆದರೆ ಅಂದಿನ ಗಣತಿಗೂ ಇಂದಿನ ಗಣತಿಗೂ ಬಹಳ ವ್ಯತ್ಯಾಸಗಳುಂಟು.

ಆಧುನಿಕ ರೀತಿಯ ಮೊಟ್ಟಮೊದಲಿನ ಜನಗಣತಿ ಕೆನಡದ ಕ್ವಿಬೆಕ್ ಪ್ರಾಂತ್ಯದಲ್ಲಿ 1666ರಲ್ಲಿ ನಡೆಯಿತು. 1749ರಲ್ಲಿ ಸ್ವೀಡನ್‍ನಲ್ಲಿ ಜನಗಣತಿ ನಡೆಸಿದ ದಾಖಲೆ ಇದೆ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ 1790ರಲ್ಲಿ ಜನಗಣತಿ ನಡೆಸಲಾಯಿತು. ಅಲ್ಲಿಯ ಕಾಂಗ್ರೆಸ್ಸಿಗೆ ಜನಸಂಖ್ಯೆಯ ಆಧಾರದ ಮೇಲೆ ಪ್ರಾತಿನಿಧ್ಯವನ್ನು ನಿಷ್ಕರ್ಷಿಸುವುದೂ ಜನಗಣತಿ ಏರ್ಪಡಿಸುವುದರ ಒಂದು ಉದ್ದೇಶವಾಗಿದ್ದುದರಿಂದ ಅದಕ್ಕೆ ಬಹಳ ಪ್ರಾಮುಖ್ಯ ಲಭಿಸಿತು. ಆ ವರ್ಷದಿಂದ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ಏರ್ಪಡಿಸುವ ಪದ್ಧತಿ ನಡೆದುಕೊಂಡು ಬಂದಿದೆ. ಇಂಗ್ಲೆಂಡ್, ಫ್ರಾನ್ಸ್‍ಗಳಲ್ಲಿ 1801ರಲ್ಲಿ ಈ ಪದ್ಧತಿ ಜಾರಿಗೆ ಬಂತು. 16-17ನೆಯ ಶತಮಾನಗಳಷ್ಟು ಹಿಂದೆ ಭಾರತದಲ್ಲಿ ಜನಗಣತಿ ಕ್ರಮಬದ್ಧವಾಗಿ ನಡೆಯುತ್ತಿತ್ತೆಂದು ಅಕ್ಬರನ ಮಂತ್ರಿಯೂ ಇತಿಹಾಸಕಾರನೂ ಆದ ಅಬುಲ್ ಫಸಲ್ ಬರೆದಿರುವ ಐನ್-ಎ-ಅಕ್ಬರಿ ಎಂಬ ಗ್ರಂಥದಿಂದ ತಿಳಿದುಬರುತ್ತದೆ. ಭಾರತದಲ್ಲಿ ಆಧುನಿಕ ರೀತಿಯ ಮೊಟ್ಟಮೊದಲನೆಯ ಕ್ರಮಬದ್ಧ ಜನಗಣತಿ ನಡೆದದ್ದು 1872ರಲ್ಲಿ. ಆದರೆ ಇದರಲ್ಲಿ ಎಷ್ಟೋ ಕುಂದುಕೊರತೆಗಳಿದ್ದುವು. ದೇಶದ ಎಲ್ಲ ಭಾಗಗಳಲ್ಲೂ ಇದನ್ನು ನಡೆಸಲಿಲ್ಲ. ಮುಂದೆ 1881ರಲ್ಲಿ ನಡೆದ ಜನಗಣತಿ ಶಾಸ್ತ್ರೀಯವಾದ್ದು. ಅಲ್ಲದೆ ಅದು ಅಖಿಲ ಭಾರತೀಯ ವ್ಯಾಪ್ತಿಯನ್ನೂ ಪಡೆದಿತ್ತು. ಭಾರತದಲ್ಲಿ ಅಲ್ಲಿಂದೀಚೆಗೆ ಹತ್ತು ವರ್ಷಗಳಿಗೊಮ್ಮೆ ಜನಗಣತಿ ನಡೆಯುತ್ತಿದೆ. ಈ ದಶವಾರ್ಷಿಕ ಜನಗಣತಿಯ ಪರಂಪರೆಯಲ್ಲಿ ಈಗ 1971ನೆಯ ಇಸವಿಯಲ್ಲಿ ನಡೆದದ್ದು ಹನ್ನೊಂದನೆಯದು. 1971ಕ್ಕೆ ಹಿಂದೆ ನಡೆಯುತ್ತಿದ್ದ ಪ್ರತಿಯೊಂದು ಜನಗಣತಿಯೂ ಏಕಕಾಲಿಕವಾಗಿತ್ತು. ಅಂದರೆ ಒಂದು ವೇಳೆಯಲ್ಲಿ ದೇಶದಾದ್ಯಂತ ಜನರ ಎಣಿಕೆ ಮಾಡಲಾಗುತ್ತಿತ್ತು. 1941ರಲ್ಲಿ ಭಿನ್ನಕಾಲಿಕ ಜನಗಣತಿಯನ್ನು ಜಾರಿಗೆ ತಂದರು. ಜನರು ಸಾಧಾರಣವಾಗಿ ಎಲ್ಲಿ ವಾಸವಿರುವರೋ ಅಲ್ಲಿ ಅವರ ಎಣಿಕೆಯನ್ನು ಮಾಡಲಾಯಿತು. ಈ ವಿಧವಾಗಿ ಎಣಿಕೆ ಮಾಡಿ ಪಡೆದ ಜನಸಂಖ್ಯೆಗೆ ವಸ್ತುತಃ ಜನಸಂಖ್ಯೆ ಎಂದು ಹೆಸರು. ವ್ಯಾಪಕವಾಗಿ ಹಾಗೂ ವ್ಯವಸ್ಥಿತವಾಗಿ ಜನಗಣತಿ ನಡೆಸುವ ಪ್ರಪಂಚದ ಅತ್ಯಂತ ದೊಡ್ಡ ರಾಷ್ಟ್ರ ಭಾರತ. ಜನಗಣತಿಯನ್ನು ವ್ಯವಸ್ಥಿತವಾಗಿ ನಡೆಸುವ ಬಗ್ಗೆ ಈಚಿನ ವರ್ಷಗಳಲ್ಲಿ ವಿಶ್ವಸಂಸ್ಥೆ ಸದಸ್ಯರಾಷ್ಟ್ರಗಳಿಗೆ ವೈಜ್ಞಾನಿಕ ಮತ್ತು ಇತರ ನೆರವುಗಳನ್ನು ನೀಡುತ್ತಿದೆ. 1950ರಲ್ಲಿ ವಿಶ್ವಸಂಸ್ಥೆ ಜಾಗತಿಕ ಜನಗಣತಿಯ ಕಾರ್ಯವನ್ನು ಉಪಕ್ರಮಿಸಿ, ಪ್ರಪಂಚದ ಜನಸಂಖ್ಯೆ ಹಾಗೂ ಜನಜೀವನದ ಬಗ್ಗೆ ಹೆಚ್ಚು ಅಂಕಿ-ಅಂಶ ಒದಗಿಸಲು ಕ್ರಮ ಕೈಗೊಂಡಿತು.

***ಜನಗಣತಿಯ ಸಂಘಟನೆ :*** ಭಾರತ ಸ್ವತಂತ್ರವಾದ ಮೇಲೆ ಸಮಸ್ತ ರಾಜ್ಯಗಳಲ್ಲೂ ಏಕರೂಪದ ಜನಗಣತಿಯ ಕ್ರಮವನ್ನು ಬಳಕೆಗೆ ತರಲಾಗಿದೆ. ಇದನ್ನು ನಡೆಸುವ ಆರ್ಥಿಕ ಮತ್ತು ಇತರ ಹೊಣೆ ಕೇಂದ್ರ ಸರ್ಕಾರಕ್ಕೆ ಸೇರಿದ್ದು. ಶಾಶ್ವತವಾದ ಜನಗಣತಿಯ ಅಧಿನಿಯಮವೊಂದು ಸಂಸತ್ತಿನಲ್ಲಿ ಅಂಗೀಕೃತವಾಗಿದೆ. ರಾಷ್ಟ್ರಾದ್ಯಂತ ಜನನ-ಮರಣ ಮತ್ತು ಜನಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳ ನಿರ್ವಹಣೆಗಾಗಿ ಭಾರತ ಸರ್ಕಾರ ಒಂದು ಇಲಾಖೆಯನ್ನು ಸ್ಥಾಪಿಸಿದೆ. ಇದರ ಪ್ರಧಾನಾಧಿಕಾರಿಗೆ ರಿಜಿಸ್ಟ್ರಾರ್-ಜನರಲ್ ಎಂದು ಹೆಸರು. ಈತ ಭಾರತದ ಜನಗಣತಿಯ ಕಮಿಷನರ್‍ಆಗಿ ಕೆಲಸ ಮಾಡುವನು. ಪ್ರತಿಯೊಂದು ರಾಜ್ಯಕ್ಕೂ ಒಬ್ಬ ಸೂಪರಿಂಟೆಂಡೆಂಟನನ್ನು ಕೇಂದ್ರ ಸರ್ಕಾರ ನೇಮಿಸುತ್ತದೆ. ಈತನ ಅಧಿಕಾರ ಕಕ್ಷೆಯಲ್ಲಿ ಇತರ ಅಧೀನ ಅಧಿಕಾರಿಗಳು ಕೆಲಸಮಾಡಿ ಜನಗಣತಿಯ ಕಾರ್ಯ ನಿರ್ವಹಿಸುತ್ತಾರೆ. ಜನಗಣತಿಯ ದಿನಕ್ಕೆ ಸುಮಾರು ಎರಡು ವರ್ಷಗಳ ಮುಂಚೆಯೇ ಜನಗಣತಿಗೆ ಅಗತ್ಯವಾದ ಏರ್ಪಾಡುಗಳನ್ನು ಪ್ರಾರಂಭಿಸಲಾಗುವುದು. ಪ್ರತಿಯೊಂದು ಹಳ್ಳಿ ಅಥವಾ ಪಟ್ಟಣದಲ್ಲಿ ಇರುವ ಮನೆಗಳನ್ನೂ ಇತರ ಕಟ್ಟಡಗಳನ್ನೂ ಎಣಿಕೆಮಾಡಿ ಅವಕ್ಕೆ ಕ್ರಮಸಂಖ್ಯೆಗಳನ್ನು (ಜಂಜರು ನಂಬರು) ಕೊಟ್ಟು ಈ ಸಂಖ್ಯೆಗಳನ್ನು ಮನೆಗಳ ಬಾಗಿಲ ಕದಗಳ ಮೇಲೆ ಅಥವಾ ಗೋಡೆಯ ಮೇಲೆ ಗಣತಿ ಅಧಿಕಾರಿಗಳಿಂದ ಬರೆಯಿಸಲಾಗುವುದು. ಮನೆ ಕಟ್ಟಲು ಯೋಗ್ಯವಾದ ಖಾಲಿ ನಿವೇಶನಗಳಿಗೂ ಕ್ರಮಸಂಖ್ಯೆಗಳನ್ನು ಕೊಡಲಾಗುವುದು. 1971ರ ಜನಗಣತಿಯಲ್ಲಿ 120-150 ಮನೆಗಳಲ್ಲಿ ವಾಸವಿರುವ ಜನರ, ಅಂದರೆ 600-750 ಜನರ, ಎಣಿಕೆಗೆ ಒಬ್ಬರಂತೆ ಸುಮಾರು 10 ಲಕ್ಷ ಎಣಿಕೆದಾರರು ಈ ಕಾರ್ಯದಲ್ಲಿ ನೇಮಕಗೊಂಡಿದ್ದರು. ಇವರು ಸುಮಾರು ಇಪ್ಪತ್ತು ದಿನಗಳಲ್ಲಿ ಮನೆಮನೆಗೆ ಹೋಗಿ ಜನಗಣತಿಯ ನಮೂನೆಗಳಲ್ಲಿ ಕೇಳಲಾಗಿದ್ದ ಎಲ್ಲ ವಿವರಗಳನ್ನೂ ಪಡೆದುಕೊಂಡರು. ಮನೆಗಳಿಲ್ಲದವರ ಎಣಿಕೆಯ ಕಾರ್ಯ ಜನಗಣತಿಯ ಅಧಿಕೃತ ದಿನಾಂಕಕ್ಕೆ ಮುಂಚೆ ಒಂದು ರಾತ್ರಿ ನಡೆಯಿತು. ಅಂಥವರು ಮಲಗುವ ಛತ್ರ, ಚಾವಡಿ, ಫುಟ್‍ಪಾತ್ ಮುಂತಾದ ಕಡೆಗಳಲ್ಲಿ ಹೋಗಿ ಎಣಿಕೆ ಮಾಡಲಾಯಿತು.

ಭಾರತೀಯ ಜನಗಣತಿಯ ಅಧಿನಿಯಮದ ಮೇರೆಗೆ ಪ್ರತಿಯೊಬ್ಬ ವ್ಯಕ್ತಿಯೂ ಜನಗಣತಿಯ ಪ್ರಶ್ನಾವಳಿಗಳಿಗೆ ಸರಿಯಾದ ಮತ್ತು ವಾಸ್ತವಿಕವಾದ ಉತ್ತರಗಳನ್ನು ನೀಡಲು ಬದ್ಧನಾಗಿದ್ದಾನೆ. ಆತ ನೀಡುವ ಉತ್ತರಗಳೆಲ್ಲ ರಹಸ್ಯವಾದವು. ಯಾವ ನ್ಯಾಯಾಲಯದಲ್ಲೂ ಇವನ್ನು ಸಾಕ್ಷ್ಯವಾಗಿ ಅಂಗೀಕರಿಸುವುದಿಲ್ಲ. ಎಣಿಕೆದಾರನೇ ಆಗಲಿ ಗಣತಿಯ ಯಾವ ಅಧಿಕಾರಿಯೇ ಆಗಲಿ ತಾನು ಸಂಗ್ರಹಿಸಿದ ಯಾವುದೇ ಸಂಗತಿಯನ್ನೂ ಬಹಿರಂಗಪಡಿಸ ಕೂಡದು. ಈ ನಿಯಮವನ್ನು ಉಲ್ಲಂಘಿಸಿದರೆ ಆತನಿಗೆ ಆರು ತಿಂಗಳುಗಳ ಕಾರಾಗೃಹ ಶಿಕ್ಷೆ ವಿಧಿಸಲಾಗುವುದು. ಗಣತಿಯ ಕಾಲದಲ್ಲಿ ಎಣಿಕೆದಾರ ಅಧಿಕೃತ ಪ್ರಶ್ನೆಗಳನ್ನು ಮಾತ್ರ ವಿಹಿತ ರೀತಿಯಲ್ಲಿ ಕೇಳತಕ್ಕದ್ದು. ಉದ್ದೇಶಪೂರ್ವಕವಾಗಿ ಅನುಚಿತ ಪ್ರಶ್ನೆಗಳನ್ನು ಅಥವಾ ಮನ ನೋಯಿಸುವ ಪ್ರಶ್ನೆಗಳನ್ನು ಕೇಳಿದರೆ ಎಣಿಕೆದಾರ ಶಿಕ್ಷೆಗೆ ಗುರಿಯಾಗುವನು.

(ಎಂ.ವಿ.ಜೆ.; ಬಿ.ಆರ್.ವಿ.)

***ಜನಗಣತಿಯ ಲಕ್ಷಣಗಳು :*** ಆಧುನಿಕ ಜನಗಣತಿಯಲ್ಲಿ ಈ ಕೆಳಗಿನ ಆರು ಮುಖ್ಯವಾದ ಲಕ್ಷಣಗಳಿರಬೇಕೆಂದು ವಿಶ್ವಸಂಸ್ಥೆ ನಿಗದಿಮಾಡಿದೆ : 1 ಜನಗಣತಿಯನ್ನು ರಾಷ್ಟ್ರದ ಮಟ್ಟದಲ್ಲಿ ರೂಪಿಸಿ ನಡೆಸಬೇಕು. ಜನಗಣತಿಗೆ ಬೇಕಾದ ಕಾನೂನು ಕಟ್ಟಲೆಗಳನ್ನು ಮಂಜೂರು ಮಾಡಿ ರೂಢಿಗೆ ತರುವ ಸಾಮರ್ಥ್ಯ ರಾಷ್ಟ್ರೀಯ ಸರ್ಕಾರಕ್ಕೆ ಮಾತ್ರ ಇರುವುದು. 2 ಜನಗಣತಿ ಒಳಗೊಳ್ಳುವ ಪ್ರದೇಶದ ಸರಹದ್ದು ನಿಖರವಾಗಿ ವ್ಯಾಖ್ಯಿಸಲ್ಪಟ್ಟಿರಬೇಕು. ಉತ್ತರೋತ್ತರ ಜನಗಣತಿಯನ್ನು ತುಲನೆ ಮಾಡುವ ಸಂದರ್ಭದಲ್ಲಿ ಇಂಥ ತುಲನೆಗಳ ಮೇಲೆ ಪ್ರಭಾವ ಬೀರಬಹುದಾದ ಗಡಿವ್ಯತ್ಯಾಸಗಳನ್ನು ಸ್ಪಷ್ಟವಾಗಿ ವಿವರಿಸಿರಬೇಕು. 3 ಜನಗಣತಿಯ ಪರಿಧಿಯ ಒಳಗೆ ಬರುವ ಎಲ್ಲ ವ್ಯಕ್ತಿಗಳನ್ನೂ, ಯಾರನ್ನೂ ಬಿಡದಂತೆ ಮತ್ತು ಯಾರನ್ನೂ ಎರಡು ಸಲ ಎಣಿಸದಂತೆ, ಸೇರಿಸಲೇಬೇಕು. 4 ಒಂದು ನಿರ್ದಿಷ್ಟ ವೇಳೆಯಲ್ಲಿ ಬದುಕಿರುವ ಜನರ ಎಣಿಕೆಯನ್ನು ಮಾಡಬೇಕು. ಆದ್ದರಿಂದ ಆ ವೇಳೆಯ ಅನಂತರ ಹುಟ್ಟುವವರು ಈ ಎಣಿಕೆಗೆ ಬರತಕ್ಕದ್ದಲ್ಲ. ಆದರೆ ಅನಂತರ ಸಾಯುವವರು ಈ ಎಣಿಕೆಗೆ ಬರತಕ್ಕದ್ದು. 5 ಪ್ರತಿ ವ್ಯಕ್ತಿಯನ್ನೂ ಕುರಿತಂತೆ ಜನಗಣತಿಯ ದತ್ತಾಂಶಗಳನ್ನು ಪ್ರತ್ಯೇಕವಾಗಿಯೇ ಪಡೆಯತಕ್ಕದ್ದು. 6 ಜನಗಣತಿಯಿಂದ ಸಂಗ್ರಹಿಸಿದ ದತ್ತಾಂಶಗಳನ್ನು ಪ್ರಕ್ರಮಿಸಿ ಪ್ರಕಟಿಸಲೇಬೇಕು. ಈ ಕ್ರಿಯೆ ಮುಗಿಯುವವರೆಗೂ ಜನಗಣತಿ ಕೊನೆಗೊಳ್ಳುವುದಿಲ್ಲ.

ಜನಗಣತಿಯಲ್ಲಿ ಯಾವ ಬಗೆಯ ಮಾಹಿತಿಗಳಿರಬೇಕು ಎನ್ನುವ ಪ್ರಶ್ನೆಗೆ ಒಂದು ಉತ್ತರ ದೊರೆಯಲಾರದು-ಕಾಲ ಹಾಗೂ ದೇಶಗಳನ್ನು ಅನುಸರಿಸಿ ಇವುಗಳಲ್ಲಿ ಬದಲಾವಣೆಗಳು ತಲೆದೋರುವುದು ಅನಿವಾರ್ಯ. ಆದರೂ, ಕೆಲವು ಪ್ರಶ್ನೆಗಳು ಇರಲೇಬೇಕು. ಅವನ್ನು ವಿಶ್ವಸಂಸ್ಥೆ ಈ ಕೆಳಗಿನಂತೆ ಪಟ್ಟಿಮಾಡಿದೆ: 1 ಜನಗಣತಿಯ ವೇಳೆಯಲ್ಲಿ ವ್ಯಕ್ತಿ ಇದ್ದ ಸ್ಥಳ ಮತ್ತು ಅಥವಾ ವ್ಯಕ್ತಿಯ ಸಾಮಾನ್ಯ ವಾಸಸ್ಥಳ, 2 ಮನೆಯ ಅಥವಾ ಕುಟುಂಬದ ಯಜಮಾನನೊಂದಿಗೆ ವ್ಯಕ್ತಿಯ ಸಂಬಂಧ, 2 ಲಿಂಗ, 4 ವಯಸ್ಸು, 5 ವೈವಾಹಿಕ ಸ್ಥಿತಿ, 6 ಜನ್ಮಸ್ಥಳ, 7 ಪೌರತ್ವ, 8 ಆರ್ಥಿಕವಾಗಿ ಕಾರ್ಯಪ್ರವರ್ತನೇ/ಳೇ ಅಲ್ಲವೇ, 9 ಉದ್ಯೋಗ, 10 ಕಾರ್ಖಾನೆ, 11 ಸ್ಥಾನ (ನೇಮಕದಾರ, ನೌಕರ, ಇತ್ಯಾದಿ), 12 ಭಾಷೆ, 13 ಜನಾಂಗಸಂಬಂಧಿ ಇಲ್ಲವೇ ರಾಷ್ಟ್ರೀಯ ಲಕ್ಷಣಗಳು, 14 ಸಾಕ್ಷರತೆ, 15 ವಿದ್ಯಾಮಟ್ಟ, 16 ಶಾಲೆಯಲ್ಲಿ ಹಾಜರಿ, 17 ವ್ಯಕ್ತಿ ಹೆಂಗಸಾದರೆ ಆಕೆಗೆ ಹುಟ್ಟಿದ ಮಕ್ಕಳ ಸಂಖ್ಯೆ.

ಜನಗಣತಿಯ ಫಲಿತಾಂಶಗಳ ಅಂತಾರಾಷ್ಟ್ರೀಯ ಹೋಲಿಕೆ ಸಾಧ್ಯವಾಗುವಂತೆ ಮಾಡಲು ವಿಶ್ವಸಂಸ್ಥೆ ಅಂತಾರಾಷ್ಟ್ರೀಯ ಸಮ್ಮತ ಮೊತ್ತದ ಪರಿಕಲ್ಪನೆಯನ್ನು ಸೂಚಿಸಿ, ರಾಷ್ಟ್ರಗಳು ಅದನ್ನು ಸ್ವೀಕರಿಸಬೇಕೆಂದು ಸಲಹೆ ನೀಡಿದೆ. ಜನಗಣತಿಯ ದಿನಾಂಕದಂದು ದೇಶದಲ್ಲಿರುವ ವಿದೇಶೀ ಸೇನಾ, ನೌಕಾ ಮತ್ತು ರಾಯಭಾರ ವರ್ಗವನ್ನುಳಿದು ಎಲ್ಲ ಜನರೂ ಆ ಮೊತ್ತದಲ್ಲಿ ಸೇರಿರಬೇಕು. ಆ ದೇಶದವರಾಗಿದ್ದೂ ಹೊರದೇಶಗಳಲ್ಲಿರುವ ಸೇನಾ, ನೌಕಾ ಮತ್ತು ರಾಯಭಾರ ಸಿಬ್ಬಂದಿ ಜನರನ್ನೂ ಅವರ ಕುಟುಂಬದವರನ್ನೂ, ಸಾಮಾನ್ಯವಾಗಿ ಆ ದೇಶದಲ್ಲಿ ವಾಸಿಸುವ, ಆದರೆ ಜನಗಣತಿಯ ದಿನದಂದು ಸಮುದ್ರಯಾನದಲ್ಲಿರುವ ವ್ಯಾಪಾರೀ ನಾವಿಕರನ್ನೂ ಆ ಮೊತ್ತ ಒಳಗೊಂಡಿರಬೇಕು. ಮೂಲನಿವಾಸಿಗಳು, ಅಲೆಮಾರಿ ಬುಡಕಟ್ಟುಗಳು, ಜನಗಣತಿಯ ದಿನದಂದು ತಾತ್ಕಾಲಿಕವಾಗಿ ಹೊರದೇಶಗಳಲ್ಲಿರುವ ಪೌರ ರಾಷ್ಟ್ರೀಯ ನಿವಾಸಿಗಳು-ಇವರನ್ನೂ ಈ ಮೊತ್ತದಲ್ಲಿ ಸೇರಿಸಬೇಕೆಂದು ವಿಶ್ವಸಂಸ್ಥೆ ಸಲಹೆ ನೀಡಿದೆ. ಈ ವಿಧಾನ ಅನುಸರಿಸುವುದರಿಂದ, ಜನಸಂಖ್ಯೆಯ ನಿಷ್ಕರ್ಷೆಯಲ್ಲಿ ಎಲ್ಲ ದೇಶಗಳಲ್ಲೂ ಏಕರೂಪತೆ ಉಂಟಾಗಿ, ಅಂತಾರಾಷ್ಟ್ರೀಯ ಹೋಲಿಕೆ ಸುಲಭವಾಗುತ್ತದೆ.

ಜನಗಣತಿಯ ದತ್ತಾಂಶಗಳನ್ನು ಸಂಗ್ರಹಿಸಲು ಸಾಮಾನ್ಯವಾಗಿ ಎರಡು ವಿಧಾನಗಳನ್ನು ಅನುಸರಿಸಲಾಗುತ್ತದೆ: 1 ನೇರ ಎಣಿಕೆ ಮತ್ತು 2 ಸ್ವಯಂ ಎಣಿಕೆ. ನೇರ ಎಣಿಕೆ ವಿಧಾನದಲ್ಲಿ ಎಣಿಕೆದಾರನು ಸಂಬಂಧಿಸಿದ ವ್ಯಕ್ತಿಯಿಂದ, ಕುಟುಂಬದ ಯಜಮಾನನಿಂದ

ಅಥವಾ ಎಣಿಕೆದಾರನಿಗೆ ವರದಿ ಮಾಡಲು ಅಧಿಕಾರ ಪಡೆದ ಬೇರಾವನಾದರೂ ಕುಟುಂಬಸದಸ್ಯನಿಂದ ನೇರವಾಗಿ ವಿಷಯ ಸಂಗ್ರಹಿಸುತ್ತಾನೆ. ಸ್ವಯಂ ಎಣಿಕೆ ವಿಧಾನದಲ್ಲಿ ಪ್ರಶ್ನಾವಳಿಯನ್ನು ವ್ಯಕ್ತಿಗೆ ಅಥವಾ ಕುಟುಂಬದ ಯಜಮಾನನಿಗೆ ಕೊಡಲಾಗುವುದು. ಅವನು ಅದರಲ್ಲಿ ಅಗತ್ಯವಾದ ವಿವರಗಳನ್ನೆಲ್ಲ ತುಂಬಿ ಅದನ್ನು ಜನಗಣತಿ ಕಚೇರಿಗೆ ತಲುಪಿಸಬೇಕು. ಈ ವಿಧಾನದಲ್ಲಿ ಸಾಮಾನ್ಯವಾಗಿ ಎಣಿಕೆದಾರನೇ ಪ್ರಶ್ನಾವಳಿಯನ್ನು ಒದಗಿಸಿ, ಅದನ್ನು ಭರ್ತಿಮಾಡಿದ ಮೇಲೆ ಪಡೆದುಕೊಳ್ಳುತ್ತಾನೆ. ಪ್ರಶ್ನಾವಳಿಯನ್ನು ಉತ್ತರಿಸಲು ಅವನು ಸಹಾಯಮಾಡಬಹುದು. ಪ್ರಶ್ನಾವಳಿಯ ಉತ್ತರಗಳು ನಿಷ್ಪಕ್ಷವಾಗಿಯೂ ಸಮಗ್ರವಾಗಿಯೂ ಇವೆಯೆಂಬುದನ್ನು ಅವನು ಖಾತರಿ ಮಾಡಿಕೊಳ್ಳಬೇಕು.

ಕೆಲವು ದೇಶಗಳು ಹತ್ತು ವರ್ಷಗಳಿಗೆ ಒಮ್ಮೆ ಜನಗಣತಿ ಮಾಡುವ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿವೆ. ಇನ್ನು ಕೆಲವು ದೇಶಗಳಲ್ಲಿ ಐದು ವರ್ಷಗಳಿಗೊಮ್ಮೆ ಜನಗಣತಿ ನಡೆಯಬೇಕು. ಮತ್ತೆ ಕೆಲವು ದೇಶಗಳು ಈ ವಿಚಾರದಲ್ಲಿ ನಿಯತಕಾಲಿಕತೆಯನ್ನನುಸರಿಸುತ್ತಿಲ್ಲ; ಆವಶ್ಯವೆನಿಸಿದಾಗ ಜನಗಣತಿ ನಡೆಸುತ್ತವೆ. ಹತ್ತು ವರ್ಷಗಳಿಗೊಮ್ಮೆ ಜನಗಣತಿ ನಡೆಸುವುದು ಸಾಮಾನ್ಯ. ಹಲವು ದೇಶಗಳಲ್ಲಿ ಸಮಗ್ರ ಜನಗಣತಿ ಮಾಡಲು ಮೊದಲು ಪ್ರಥಮದರ್ಶಿ ಗಣತಿ (ಪೈಲಟ್ ಸೆನ್ಸಸ್) ನಡೆಸುವುದುಂಟು. ವಿಚಾರಣೆ, ವಿಧಾನ, ಕ್ಷೇತ್ರ ಸಂಘಟನೆ, ಸಾರೀಕರಣ ಕಾರ್ಯಕ್ರಮ–ಇವನ್ನು ಪರೀಕ್ಷಿಸುವುದು ಇದರ ಉದ್ದೇಶವಾಗಿರುತ್ತದೆ.

ಜನಗಣತಿಯ ಮೊದಲ ಹಂತದಲ್ಲಿ–ಅಂದರೆ ಎಣಿಕೆ ಹಾಗೂ ಪ್ರಶ್ನಾವಳಿಗಳಿಗೆ ಉತ್ತರ ಪಡೆದ ಮೇಲೆ–ಪಡೆದ ಸಮಸ್ತ ವೈಯಕ್ತಿಕ ಮಾಹಿತಿಗಳನ್ನೂ ಸಮರ್ಪಕವಾಗಿ ಪಟ್ಟಿಮಾಡಿ ಸಂಖ್ಯಾಕಲನೀಯ ಸಾರಾಂಶಗಳಾಗಿ ಪರಿವರ್ತಿಸಬೇಕು. ಆಗ ಮಾತ್ರವೇ ಸಮಗ್ರವಾದ ಒಂದು ಚಿತ್ರವನ್ನು ರಚಿಸುವುದು ಸಾಧ್ಯ. ಇದನ್ನು ಆಧರಿಸಿ ರಾಷ್ಟ್ರದ ಹಲವಾರು ಯೋಜನೆಗಳನ್ನು ರೂಪಿಸುವುದರಿಂದ ಜನಗಣತಿಯ ಒಂದೊಂದು ಬಿಡಿ ಹಂತದಲ್ಲೂ ಸಂಪೂರ್ಣತೆಯೂ ನಿಖರತ್ವವೂ ತೀರ ಅಗತ್ಯ. ಉದಾಹರಣೆಗೆ, ವ್ಯಕ್ತಿಗಳಿಗೆ ಅಳುಕು ಮೂಡಿಸುವಂಥ ಪ್ರಶ್ನೆಗಳೆಂದರೆ ವಯಸ್ಸು, ವೈವಾಹಿಕ ಸ್ಥಿತಿ, ನೌಕರಿ ಇವೇ ಮುಂತಾದುವು. ಇಲ್ಲೆಲ್ಲ ಸರಿಯಾದ ಇಲ್ಲವೇ ಪೂರ್ಣವಾದ ಉತ್ತರಗಳು ದೊರೆಯದೆ ಜನಗಣತಿಯ ದಾಖಲೆಗಳು ಮಸುಕಾಗುವುದುಂಟು. ಇಂಥವುಗಳ ಮೇಲೆ ಆಧಾರಿತವಾದ ಸಂಖ್ಯಾಕಲನೀಯ ಸಾರಾಂಶ ನೀಡುವುದು ರಾಷ್ಟ್ರದ ಒಂದು ವಿಕೃತರೂಪವನ್ನು, ಅದನ್ನು ಅವಲಂಬಿಸಿದ ಯೋಜನೆ ಅವೈಜ್ಞಾನಿಕವಾಗುವುದು ಸಹಜ. ಆದರೆ ಮಾಹಿತಿಗಳನ್ನು ಪ್ರಕ್ರಮಿಸುವ ಒಂದೊಂದು ಹಂತದಲ್ಲೂ ಅಡ್ಡ ತಾಳೆ ನೋಡಿ ಅವುಗಳ ಶುದ್ಧತೆಯನ್ನು ರುಜುವಾತು ಮಾಡಿಕೊಳ್ಳಲು ಸಾಕಷ್ಟು ವೈಜ್ಞಾನಿಕ ವಿಧಾನಗಳಿವೆ.

**ಜನಗಣತಿಯ ಉಪಯೋಗಗಳು :** ಜನಗಣತಿಯನ್ನು ನಡೆಸಲು ಕಾರಣಗಳೇನೆಂಬುದು ಆಯಾ ದೇಶಗಳ ಅಗತ್ಯಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಇರುವ ಆಸಕ್ತಿ ಒಂದು ಮುಖ್ಯ ಕಾರಣ. ಆರೋಗ್ಯ, ಸಾಕ್ಷರತೆ, ಶಿಕ್ಷಣ, ವರಮಾನ, ಜೀವನಮಟ್ಟಗಳು, ಆಹಾರ ಮತ್ತು ಇತರ ಅನುಭೋಗ ಸರಕುಗಳ ಸರಬರಾಜು, ಕೃಷಿ ಉತ್ಪಾದನೆ, ಕೈಗಾರಿಕಾ ಉತ್ಪತ್ತಿ ಮುಂತಾದವನ್ನು ಅಭಿವೃದ್ಧಿಪಡಿಸಲು ಬೇಕಾದಷ್ಟು ಮಾಹಿತಿ ಅವಶ್ಯವಾಗುತ್ತದೆ. ವಿಧಾನಸಭೆಗಳ ಪ್ರಾತಿನಿಧ್ಯವನ್ನು ನೀಡಲು ಅರ್ಹರಾದವರ ಸಂಖ್ಯೆಯನ್ನೂ ರಾಷ್ಟ್ರದಿಂದ ಅನುಕೂಲಗಳನ್ನು ಪಡೆಯಲು ಹಕ್ಕುಳ್ಳ ಪ್ರದೇಶಗಳು ಅಥವಾ ಗುಂಪುಗಳನ್ನೂ ನಿರ್ಧರಿಸಲು ಜನಗಣತಿಯ ದತ್ತಾಂಶಗಳು ಅಗತ್ಯವಾಗುತ್ತವೆ. ಜನಸಂಖ್ಯಾತ್ಮಕ, ಆರ್ಥಿಕ ಹಾಗೂ ಸಾಮಾಜಿಕ ಸಂಶೋಧನೆಗಳನ್ನು ನಡೆಸಲು ಜನಗಣತಿಯೇ ಆಧಾರ. ಕಾರ್ಮಿಕ ಬಲ, ಆರ್ಥಿಕವಾಗಿ ಅವಲಂಬಿ ಜನ, ನಗರಕ್ಕೆ ವಲಸೆ ಬಂದವರು, ಗ್ರಾಮೀಣ ಹಾಗೂ ನಗರಗಳ ಜನತೆ, ಜನಾಂಗೀಯ ಅಥವಾ ಮತೀಯ ಅಲ್ಪಸಂಖ್ಯಾತರು, ನಿರಾಶ್ರಿತರು, ವೈಜ್ಞಾನಿಕ ಹಾಗೂ ತಾಂತ್ರಿಕ ಕೆಲಸಗಾರರು ಮುಂತಾದವರನ್ನು ಗುರುತಿಸಿ ವಿವರಿಸಲು ಜನಗಣತಿ ಸಹಾಯಕವಾಗುತ್ತದೆ. ಅನುಕ್ರಮಿಕ ಜನಗಣತಿಗಳ ತೌಲನಿಕ ಅಧ್ಯಯನದಿಂದ ಜನಸಂಖ್ಯೆ, ಗುಣಲಕ್ಷಣಗಳು, ಸ್ಥಾನೀಕರಣ ಮುಂತಾದವುಗಳಲ್ಲಿ ಆಗಿರುವ ಬದಲಾವಣೆಗಳನ್ನು ಅರಿಯಬಹುದು. ನಾನಾ ಬಗೆಯ ಪರಿಶೀಲನೆ ವಿಚಾರಣೆಗಳಿಗೆ ವಿಪುಲ ಆಧಾರ ಸಾಮಗ್ರಿಯನ್ನು ಜನಗಣತಿಯ ವರದಿಗಳು ಒದಗಿಸುತ್ತವೆ. **(ನೋಡಿ– ಜನಸಂಖ್ಯೆ)** *

**ಜನನ ಕರ್ಮಗಳು :** ಇವುಗಳಲ್ಲಿ ಶಿಶುಜನನಕ್ಕೆ ಪೂರ್ವದ ಕೆಲವು ಕರ್ಮಗಳೂ ಜನನಾನಂತರದ ಕೆಲವು ಕರ್ಮಗಳೂ ಸೇರುತ್ತವೆ. ಇವುಗಳ ವಿಚಾರ ಮೊದಲಿಗೆ ಗೃಹ್ಯಸೂತ್ರಗಳಲ್ಲೂ ಅನಂತರ ಕಾಲಾನುಸಾರಿ ಮಾರ್ಪಾಟುಗಳೊಡನೆ ಧರ್ಮಶಾಸ್ತ್ರಗಳಲ್ಲೂ ಬರುತ್ತದೆ.

**ಚತುರ್ಥೀ ಕರ್ಮ ಅಥವಾ ಚತುರ್ಥೀ ಹೋಮ :** ವೇದಯುಗದಲ್ಲಿ, ವಿವಾಹವಾದ ನಾಲ್ಕನೆಯ ದಿನ ಈ ಕ್ರಿಯೆಯನ್ನು ನಡೆಸಲಾಗುತ್ತಿತ್ತು. ಅಗ್ನಿ ಇತ್ಯಾದಿ ದೇವತೆಗಳಿಗೆ ಚರು ಹೋಮ ಮಾಡಿ ಅಧ್ಯಂಡಾ ಗಿಡದ ಬೇರನ್ನು ತೇದು ಅದರ ಗಂಧದ ಕೆಲವು ತೊಟ್ಟುಗಳನ್ನು ಹೆಂಡತಿಯ ಮೂಗಿನ ಹೊಳ್ಳೆಯೊಳಗೆ ಮಂತ್ರಪೂರ್ವಕವಾಗಿ ಹಾಕಬೇಕು. ಅಂದೇ ನಡೆಸುವ ಸಂಭೋಗಕ್ರಿಯೆಯ ಕಾಲದಲ್ಲಿ ಜಪಿಸಬೇಕಾದ ಮಂತ್ರಗಳೂ ಇವೆ. ಹೀಗೆ ಇದು ವಿವಾಹದ ಭಾಗವೇ ಆದ ಕರ್ಮ. ಮದುವೆ ಎಳೆಯ ವಯಸ್ಸಿನಲ್ಲಾಗಿ ನಾಲ್ಕಾರು ವರ್ಷಗಳ ಅನಂತರ ಪ್ರಸ್ತವಾಗುವ ಪ್ರಸಂಗಗಳಲ್ಲಿ ಈ ಕರ್ಮವನ್ನು ಗರ್ಭಾಧಾನವೆನ್ನುತ್ತಾರೆ. ಹೆಂಡತಿ ಮೈನೆರೆದ ನಾಲ್ಕನೆಯ ರಾತ್ರಿಯಿಂದ 16ನೆಯ ರಾತ್ರಿಯವರೆಗೆ ಎಂದಾದರೂ ಈ ಕರ್ಮ ನಡೆಸಬಹುದು. ಸಮರಾತ್ರಿಗಳೂ ಅದರಲ್ಲೂ ಕೊನೆಕೊನೆಯವು ಗಂಡು ಸಂತಾನಕ್ಕೆ ಹೆಚ್ಚು ಯೋಗ್ಯವಾದುವು. ಅಧ್ಯಂಡಾ ಬೇರಿನ ಕರ್ಮವನ್ನು ಬಿಟ್ಟರೆ ಇದು ಚತುರ್ಥೀ ಕರ್ಮವೇ.

**ಪುಂಸವನ :** 3ನೆಯ ತಿಂಗಳು ಅಥವಾ ಕೆಲವರ ಮತದಂತೆ 5, 7 ಅಥವಾ 8ನೆಯ ತಿಂಗಳು ನಡೆಸಬೇಕಾದ್ದು. ಸೀಮಂತವಾದ ಅನಂತರ ಹಾಗೂ ಗರ್ಭ ಸ್ಪಷ್ಟವಾದ ಮೇಲೆ ನಡೆಸುವುದೆಂದೂ ಹೇಳಲಾಗುತ್ತದೆ. ಋತುಮತಿಯಾಗದ ಹುಡುಗಿ ಆಲದ ಬಿಳಲು ಮತ್ತು ಅದರ ಎರಡು ಹಣ್ಣುಗಳನ್ನು ನೀರಿನೊಡನೆ ಎರಡು ಗುಂಡುಕಲ್ಲುಗಳನ್ನು ಉಪಯೋಗಿಸಿ ಕುಟ್ಟಬೇಕು. ಆ ರಸದ ಕೆಲವು ಹನಿಗಳನ್ನು ಗಂಡ ತನ್ನ ಹೆಂಡತಿಯ ಮೂಗಿನ ಬಲ ಹೊಳ್ಳೆಯಲ್ಲಿ ಹೆಬ್ಬೆಟ್ಟಿನ ಮೂಲಕ ಹಾಕಬೇಕು. ಒಂದು ಬೊಗಸೆ ಮೊಸರಿಗೆ ಎರಡು ಸಾಸಿವೆ ಮತ್ತು ಒಂದು ಅಕ್ಕಿ ಕಾಳನ್ನು ಹಾಕಿ ಕುಡಿಯಲು ಕೊಡುವುದು. ಹೀಗೆ ಮೂರು ಸಲ ಮಾಡಬೇಕು.

**ಅನವಲೋಭನ ಅಥವಾ ಗರ್ಭರಕ್ಷಣ :** ಇದು ವೈದಿಕ ಯುಗದಲ್ಲಿ ಪುಂಸವನದ ಭಾಗವಾಗಿತ್ತು. ಅನಂತರದ ಕಾಲದಲ್ಲಿ ಪುಂಸವನದ ಜೊತೆಯಲ್ಲಿ ಇಲ್ಲವೆ ಎರಡನೆಯ ಅಥವಾ ಮೂರನೆಯ ತಿಂಗಳು ನಡೆಸಲಾಗುತ್ತಿತ್ತು. ಈ ಕ್ರಿಯೆಯನ್ನು ನಡೆಸುವುದರಿಂದ ಗರ್ಭಪತನವಾಗಲೀ ಗರ್ಭನಾಶವಾಗಲೀ ಆಗುವುದಿಲ್ಲವಾದುದರಿಂದ ಈ ಹೆಸರು. ದೂರ್ವಾರಸ ಹನಿಗಳನ್ನು ಹೆಂಡತಿಯ ಮೂಗಿನೊಳಗೆ ಬಿಡುವುದೂ, ರಕ್ಷಣೆಗಾಗಿ ಪ್ರಾರ್ಥನಾಪೂರ್ವಕ ಆಕೆಯ ಹೃದಯವನ್ನು ಮುಟ್ಟುವುದೂ ಇದರ ಮುಖ್ಯ ಅಂಶಗಳು.

ಸೀಮಂತೋನ್ನಯನ, ಸೀಮಂತಕರಣ ಅಥವಾ ಸೀಮಂತ: ನಾಲ್ಕನೆಯ ತಿಂಗಳಿನಲ್ಲಿ ಇಲ್ಲವೆ ಪುಂಸವನದ ಅನಂತರ ನಡೆಯುವ ಕ್ರಿಯೆ. ಹೋಮಾಗ್ನಿಯ ಪಶ್ಚಿಮದಲ್ಲಿ ಹೆಂಡತಿ ಕುಳಿತುಕೊಳ್ಳಬೇಕು. ಯಜಮಾನ ಕೆಲವು ಹೋಮಗಳನ್ನು ಮಾಡಿ, ಸಮಸಂಖ್ಯೆಯಲ್ಲಿ ದೋರಹಣ್ಣುಗಳು, ಮುಳ್ಳುಹಂದಿಯ ಗರಿ (ಇದಕ್ಕೆ ಮೂರು ಬಿಳಿ ಚುಕ್ಕೆ ಅಥವಾ ಉಂಗುರಗಳು ಇರಬೇಕು), ಮತ್ತು ಮೂರು ಕಟ್ಟು ದರ್ಭೆ – ಇವುಗಳಿಂದ ಮೂರು ಸಲ ಆಕೆಯ ತಲೆಗೂದಲನ್ನು ಮುಂದುಗಡೆ ಕೆಳಗಿನಿಂದ ಮೇಲಕ್ಕೆ ಬಾಚುತ್ತಾನೆ. ಅನಂತರ ವೈಣಿಕರು ವೀಣೆಯೊಡನೆ ಹಾಡುತ್ತಾರೆ. ಇದು ಮುಖ್ಯವಾಗಿ ಸಾಮಾಜಿಕವಾಗಿ ಹಬ್ಬದಂತೆ ಆಚರಿಸುವ ದಿನ. ಗರ್ಭಿಣಿಯ ಮನಸ್ಸನ್ನು ಸಂತೋಷವಾಗಿಡುವುದೇ ಇದರ ಉದ್ದೇಶವೆನ್ನಬಹುದು. ಇದು ಈಚೆಗೆ ಸಂಸ್ಕಾರಗಳ ಪಟ್ಟಿಯಲ್ಲಿ ಸೇರಿದೆ. ಮನು ಇದರ ಹೆಸರು ಕೂಡ ಎತ್ತುವುದಿಲ್ಲ.

**ವಿಷ್ಣುಬಲಿ :** ಗರ್ಭಕ್ಕೆ ಉಂಟಾಗಬಹುದಾದ ತೊಂದರೆಯನ್ನು ನಿವಾರಿಸಿ ಸುಖಪ್ರಸವವಾಗುವುದಕ್ಕೆ 8ನೆಯ ತಿಂಗಳಲ್ಲಿ ನಡೆಸುವ ಕರ್ಮ.

**ಸೋಷ್ಯಂತೀ ಕರ್ಮ :** ಇದು ಬಹಳ ಪ್ರಾಚೀನವಾದುದು. ಪ್ರಸವಕಾಲದಲ್ಲಿ ನಡೆಸುವಂಥದು. ತಾಯಿಯ ಕಾಲಿನ ಬಳಿ ತುರ್ಯಂತೀ ಸಸ್ಯವನ್ನು ಇಡಲಾಗುವುದು. ಎರಡೂ ಕೈಗಳಿಂದ ಆಕೆಯ ತಲೆಯನ್ನು ಮುಟ್ಟುವುದು ಮತ್ತು ಮಂತ್ರಪೂರ್ವಕವಾಗಿ ನದಿ ಅಥವಾ ಬುಗ್ಗೆಯ ನೀರನ್ನು ಪ್ರೋಕ್ಷಿಸುವುದು. ಜರಾಯು ಹೊರಬರದಿದ್ದರೆ, ಇನ್ನೆರಡು ಮಂತ್ರಗಳಿಂದ ನೀರನ್ನು ಪ್ರೋಕ್ಷಿಸುವುದು.

**ಜಾತಕರ್ಮ :** ಇದೂ ಅತ್ಯಂತ ಪ್ರಾಚೀನವಾದುದು. ಮಗು ಹುಟ್ಟಿದರೆ, ವೈಶ್ವಾನರೇಷ್ಟಿ ಮಾಡುತ್ತಿದ್ದರೆಂದು ಯಜುರ್ವೇದ ಸಂಹಿತೆಯಿಂದ ತಿಳಿದುಬರುತ್ತದೆ. ಮಗುವೊಂದು ಜನಿಸಿದಾಗ, ದಧಿ ಮತ್ತು ಘೃತ ಹೋಮವನ್ನು ನಡೆಸಿ, ಶಿಶುವಿನ ಬಲ ಕಿವಿಯಲ್ಲಿ ವಾಕ್ ಎಂಬ ಪದವನ್ನು ಮೂರು ಬಾರಿ ಪಠಿಸುವುದು. ಅನಂತರ ಚಿನ್ನದ ಸೌಟು, ಬಳೆ ಅಥವಾ ಉಂಗುರದಿಂದ ಮೊಸರು, ತುಪ್ಪ, ಜೇನುಗಳ ಮಿಶ್ರಣಮಾಡಿ ಶಿಶುವಿಗೆ ನೆಕ್ಕಿಸುವುದು. ಮಗುವಿಗೆ ಎರಡು ಹೆಸರಿಡುವುದು–ಒಂದು ವ್ಯಾವಹಾರಿಕ ಹೆಸರು, ಇನ್ನೊಂದು ರಹಸ್ಯ ಹೆಸರು. ಇದಾದ ಮೇಲೆ ಸ್ತನ್ಯದಾನ–ಮಗುವಿಗೆ ಹಾಲುಣಿಸುವುದು. ಆಗ ಮಾತ್ರ ಅಭಿಮಂತ್ರಣ; ತಾಯಿಯನ್ನು ಮಂತ್ರಗಳಿಂದ ಅಭಿಮಂತ್ರಿಸುವುದು. ಪಂಚಬ್ರಾಹ್ಮಣ ಸ್ಥಾಪನ. ಮಗುವಿನ ಸುತ್ತ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಜನ ಬ್ರಾಹ್ಮಣರೂ ಮತ್ತು ಮೇಲುಗಡೆಯಿಂದ ಯಜಮಾನನೂ ಶಿಶುವಿನ ಮೇಲೆ ಉಸಿರು ಬಿಡಬೇಕು. ಇದು ಜಾತಕರ್ಮ. ಇದನ್ನು ಜನನವಾದ ಕೂಡಲೇ ಮಾಡಬೇಕೆಂದು ಕೆಲವರು ಹೇಳಿದರೆ, ಮತ್ತೆ ಕೆಲವರು ತಾಯಿ, ದಾದಿ ಹೊರತು ಇತರರು ಮಗುವನ್ನು ಮುಟ್ಟುವ ಮೊದಲು ಮಾಡಬೇಕೆಂದೂ, ನಾಭಿಛೇದನಕ್ಕೆ ಮೊದಲು ಮಾಡಬೇಕೆಂದೂ ಹೇಳುತ್ತಾರೆ.

ಈಚೆಗೆ ಜಾತಕರ್ಮ ಈ ಅಂಶಗಳಿಂದ ಕೂಡಿದೆ: ಮೇಧಾಜನನ–ತುಪ್ಪ ಮತ್ತು ಜೇನು ನೆಕ್ಕಿಸುವುದು. ಇದೇ ಮುಖ್ಯವಾದ ಕರ್ಮ. ಆಯುಷ್ಯ–ಶಿಶುವಿನ ಹೊಕ್ಕಳ ಬಳಿ ಅಥವಾ ಬಲಕಿವಿಯಲ್ಲಿ ಕೆಲವು ಮಂತ್ರಗಳನ್ನು ಪಠಿಸುವುದು. ಅಂಸಾಭಿಮರ್ಷಣ – ಮಂತ್ರಪೂರ್ವಕ ಶಿಶುವಿನ ತೋಳು ಮುಟ್ಟುವುದು. ಮಾತ್ರಭಿಮಂತ್ರಣ – ಪಂಚ ಬ್ರಾಹ್ಮಣ ಸ್ಥಾಪನ, ಸ್ತನ್ಯಪಾನ ಮತ್ತು ದೇಶಾಭಿಮಂತ್ರಣ ಅಥವಾ ದೇಶಾಭಿಮರ್ಷನ–ಜನನ ಸ್ಥಳವನ್ನು ಮಂತ್ರಪೂರ್ವಕ ಮುಟ್ಟುವುದು) ಇವುಗಳ ಜೊತೆಗೆ ರಾಕ್ಷಸಬಾಧೆಯನ್ನು ದೂರ ಮಾಡಲು ಸಾಸಿವೆ ಹಾಗೂ ಬತ್ತದ ಹೊಟ್ಟಿನ ಹೋಮವನ್ನೂ ಜಾತಕರ್ಮದಲ್ಲಿ ವಿಧಿಸಲಾಗಿದೆ. ಶಿಶುವಿಗೆ ಸ್ನಾನ ಮಾಡಿಸಬೇಕೆಂದು ಕೆಲವು ಆಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.

ಐದು, ಆರನೆಯ ದಿನಗಳಲ್ಲಿ ನಡೆಸುವ ಶಾಂತಿಕ್ರಿಯೆಗಳು ಪುರಾಣಯುಗದಲ್ಲಿ ಪ್ರಾರಂಭವಾದುವು. ಸಂಜೆ, ತಂದೆ ಅಥವಾ ಯಾರಾದರೂ ಗಂಡಸರು ಸ್ನಾನ ಮಾಡಿ ಗಣಪತಿ, ಜನ್ಮದಾ, ಷಷ್ಠೀದೇವೀ ಮತ್ತು ಭಗವತೀ (ದುರ್ಗಾ)–ಈ ದೇವತೆಗಳನ್ನು ಪೂಜಿಸಬೇಕು. ಬಂದ ಅತಿಥಿಗಳನ್ನು ಸತ್ಕರಿಸಿ ಆ ರಾತ್ರಿ ಎಲ್ಲರೂ ಜಾಗರಣೆ ಮಾಡಬೇಕು. ನಾನಾ ವಿಧವಾದ ಆಯುಧಗಳನ್ನು ಸಜ್ಜಾಗಿ ಇಟ್ಟುಕೊಂಡಿರಬೇಕು.

**ಉತ್ಥಾನ** : 10 ಅಥವಾ 12ನೆಯ ದಿನ ತಂದೆ ಕ್ಷೌರ ಮಾಡಿಸಿಕೊಂಡು ಸ್ನಾನ ಮಾಡುತ್ತಾನೆ, ಹಾಗು ಮನೆಯನ್ನು ಶುದ್ಧಿಗೊಳಿಸುತ್ತಾನೆ. ನಾಭಿ ಛೇದನದವರೆಗೆ ಯಾವ ಅಶುದ್ಧಿಯೂ ಇರದು. ಅನಂತರ 12 ದಿನಗಳವರೆಗೆ ಜ್ಞಾತಿಗಳಿಗೆಲ್ಲ ಜಾತಾಶೌಚವಿರುತ್ತದೆ. ಅನಂತರ ಎಲ್ಲರಿಗೂ ಆಶೌಚ ನಿವೃತ್ತಿಯಾದರೂ ತಾಯಿಗೆ ಮಾತ್ರ ಗಂಡುಮಗುವಾದರೆ 30 ದಿನಗಳವರೆಗೂ, ಹೆಣ್ಣಾದರೆ 40 ದಿನಗಳವರೆಗೂ ಮೈಲಿಗೆ ಇರುತ್ತದೆ.

**ನಾಮಕರಣ** : ಇದನ್ನು ಸೋಷ್ಯಂತೀಕರ್ಮದೊಂದಿಗೆ ಅಥವಾ ಜಾತಕರ್ಮದೊಂದಿಗೆ ನಡೆಸುವ ವಾಡಿಕೆಯಿತ್ತೆಂದು ಹಿಂದೆ ಹೇಳಿದೆ. ಈಚೆಗೆ, 10, 11 ಅಥವಾ 12ನೆಯ ದಿನ ಅಥವಾ 10ನೆಯ ದಿನ ಕಳೆದ ಮೇಲೆ ಎಂದಾದರೂ ನಡೆಸಬಹುದೆಂಬ ಸಂಪ್ರದಾಯ ಬೆಳೆದಿದೆ. ಪ್ರಕೃತ ಆಚರಣೆಯ ಪ್ರಕಾರ 12 ಅಥವಾ 16ನೆಯ ದಿನ ಈ ಕರ್ಮವನ್ನು ನೆರವೇರಿಸಲಾಗುವುದು.

ಇದಿಷ್ಟು ಶಾಸ್ತ್ರದಲ್ಲಿ ಉಕ್ತವಾಗಿರುವುದು. ಪ್ರಕೃತ ಆಚರಣೆಯಲ್ಲಿ ಈ ಕರ್ಮಗಳು ಇನ್ನೂ ಹ್ರಸ್ವವಾಗಿವೆ. ಮತ್ತು ಹೆಚ್ಚು ಹೆಚ್ಚು ಸಾಮಾಜಿಕವಾದ ಸಂತೋಷ ಸಮಾರಂಭಗಳಾಗಿವೆ. ಗರ್ಭಾಧಾನದ ಅನಂತರ ಗರ್ಭದ ಮೂರನೆಯ ತಿಂಗಳು ಹೂ ಮುಡಿಸುವುದನ್ನು, 5ನೆಯ ತಿಂಗಳು ಬಳೆ ತೊಡಿಸುವುದನ್ನು ಈಗ ವ್ಯವಹಾರದಲ್ಲಿಟ್ಟು ಕೊಂಡಿದ್ದಾರೆ. ಇವುಗಳ ಉದ್ದೇಶ ಗರ್ಭಿಣಿಯ ಮನಸ್ಸನ್ನು ರಂಜಿಸುವುದೇ ಆಗಿದೆ. 8ನೆಯ ತಿಂಗಳು ಸೀಮಂತ. ಪ್ರಸವಾನಂತರ 11ನೆಯ ದಿನ ಒಳಕ್ಕೆ ಬರುತ್ತಾರೆ–ಮಗು, ತಾಯಿ. 16ನೆಯ ದಿನ ನಾಮಕರಣ ಹಾಗೂ ತೊಟ್ಟಿಲು ತೂಗುವುದು. ಅಲ್ಲಿಯ ವರೆಗೆ ಮಗುವನ್ನು ತೊಟ್ಟಿಲಿಗೆ ಹಾಕುವುದಿಲ್ಲ. ಅಂದು ಸಂಜೆ ಗಣಪತಿ ಪೂಜೆ ಮಾಡಿ, ಗುಂಡುಕಲ್ಲಿನಂತೆ ಮಗು ದೀರ್ಘಾಯುಷ್ಯ ಹೊಂದಲೆಂದು ಗುಂಡುಕಲ್ಲನ್ನು ಅಲಂಕರಿಸಿ ಆ ಗುಂಡಪ್ಪನನ್ನು ತೊಟ್ಟಿಲಿಗೆ ಮೊದಲು ಹಾಕಿ ಅನಂತರ ಮಗುವನ್ನು ತೊಟ್ಟಿಲಲ್ಲಿ ಮಲಗಿಸುತ್ತಾರೆ ಮತ್ತು ಮಗುವಿಗೆ ಹೆಸರಿಡುತ್ತಾರೆ. ಮಗುವನ್ನು ತೊಟ್ಟಿಲಲ್ಲಿ ಮಲಗಿಸುವ ಮುನ್ನ ಬಜೆಯನ್ನು ತೇಯ್ದು ಅದರ ಗಂಧವನ್ನು ಬೆಣ್ಣೆಯೊಡನೆ ಮಗುವಿಗೆ ನೆಕ್ಕಿಸುತ್ತಾರೆ. ಬಜೆ ಬೆಣ್ಣೆ ಇಡುವೆನು ಬಾರೋ ಎಂಬ ಜನಪದ ಗೀತೆಯೂ ಈ ಸಂದರ್ಭದಲ್ಲಿ ಹುಟ್ಟಿದೆ. ಜಾತಕರ್ಮ ಹಾಗು ನಾಮಕರಣಕ್ಕೆ ಸಂಬಂಧಪಟ್ಟ ಕರ್ಮಗಳನ್ನು ಉಪನಯನ ಅಥವಾ ವಿವಾಹಕ್ಕೆ ಪೂರ್ವಾಂಗವಾಗಿ ಆಚರಿಸುತ್ತಾರೆ. (ಆರ್.ಎಸ್.ಎಸ್.; ಎಸ್.ಎಸ್.ಆರ್.)

**ಜನನ ನಿಯಂತ್ರಣ: ನೋಡಿ–ಕುಟುಂಬಯೋಜನೆ**

**ಜನಪದ ಆಶಯಗಳು** : ವಾಸ್ತವ ಪ್ರಪಂಚಕ್ಕಿಂತ ಭಿನ್ನವಾದ ವಿಶೇಷ ನಂಬಿಕೆಗಳನ್ನು ಆಶಯಗಳೆನ್ನುತ್ತಾರೆ. ಜನಪದ ಕಥೆಗಳು, ಐತಿಹ್ಯಗಳು, ಕಥಾಲಾವಣಿಗಳು ಮತ್ತು ಪುರಾಣಗಳನ್ನು ಕುರಿತಂತೆ ಆಶಯಗಳನ್ನು ವಿಶ್ಲೇಷಿಸಿ ಅಧ್ಯಯನ ಮಾಡಿದ್ದಾರೆ. ಜನಪದಕ್ಕೆ ಸಂಬಂಧಿಸಿದ ಆಶಯಗಳನ್ನು ವಿಶ್ಲೇಷಿಸಿ ಅಧ್ಯಯನ ಮಾಡಿದ್ದಾರೆ. ಜನಪದಕ್ಕೆ ಸಂಬಂಧಿಸಿದ ಆಶಯಗಳು (ಫೋಕ್ ಮೋಟಿಫ್ಸ್) ಕೆಲವು ಸಾರಿ ತೀರ ಸರಳ ನಂಬಿಕೆಗಳಾಗಿದ್ದು, ಸಾಂಪ್ರದಾಯಿಕ ಕಥೆಗಳಲ್ಲಿ ಉದ್ದಕ್ಕೂ ಕಂಡುಬರುವುದುಂಟು. ಸಾಮಾನ್ಯವಾಗಿ ಇಂಥ ಆಶಯಗಳು ಅಸಾಮಾನ್ಯಜೀವಿಗಳಾದ ಕಿನ್ನರಿಯರು, ಮಾಟಗಾತಿಯರು, ಮನುಷ್ಯರನ್ನು ತಿನ್ನುವ ರಾಕ್ಷಸರು, ಕ್ರೂರ ಮಲತಾಯಂದಿರು, ಮಾತಾಡುವ ಪ್ರಾಣಿಗಳು–ಮುಂತಾದುವುಗಳಿಂದ ನೆರವೇರುತ್ತವೆ. ಅಸಾಮಾನ್ಯ ಭೌತಿಕ ಪರಿಸರದಿಂದ ಕೂಡಿದ ಅದ್ಭುತ ಪ್ರಪಂಚ, ಮಾಟಗಾರರ ಪ್ರಪಂಚ ಮೊದಲಾದವು ಈ ಆಶಯಗಳ ಕೇಂದ್ರಬಿಂದುಗಳಾಗಿರುತ್ತವೆ.

ಜನತೆಯನ್ನು ರಂಜಿಸಬಲ್ಲ ಸರಳವಾದ ಯಾವುದೇ ಒಂದು ಚಿಕ್ಕ ಕಥೆ ಕೂಡ ಆಶಯವಾಗಬಹುದು. ಹಾಗೆ ನೋಡಿದರೆ ಜನಪದಸಾಹಿತ್ಯದ ಒಂದು ಅಂಶದ ಕನಿಷ್ಠ ಘಟಕವೇ ಆಶಯ. ಇಂಥ ಆಶಯ ಓದುಗರ ಮೇಲೆ ನೇರ ಪರಿಣಾಮ ಬೀರಿ ಆಕರ್ಷಿಸುವಂತಿರಬೇಕು. ಸಾಂಪ್ರದಾಯಿಕ ಕಥೆಗಳಲ್ಲಿ ಬರುವ ಆಶಯಗಳು ನೆನಪಿನಲ್ಲಿಡಲು ಮತ್ತು ಪುನರಾವೃತ್ತಿಗೊಳ್ಳಲು ಸಾಧ್ಯವಾಗಿರುವಂಥ ವಿಶೇಷ ರೀತಿಯ ಬೇರೇನಾದರೂ ಅಂಶಗಳನ್ನು ಹೊಂದಿರಬೇಕು.

ಒಂದು ಕಥೆಯ ಮೂಲಕ ಆಶಯದ ಸಾಮಾನ್ಯ ಸ್ವರೂಪವನ್ನು ಗುರುತಿಸಬಹುದು. ಒಬ್ಬ ರಾಜ ಯುದ್ಧಕ್ಕೆ ಹೋಗಿ ಹನ್ನೆರಡು ವರ್ಷಗಳ ಅನಂತರ ಹಿಂತಿರುಗಿ ಬಂದಾಗ ತನ್ನ ಮಗಳನ್ನೇ ಮೋಹಿಸುತ್ತಾನೆ. ಇದನ್ನು ಕಂಡು ಹೆದರಿದ ಆತನ ರಾಣಿ ತನ್ನ ಮಗಳನ್ನು ಒಂದು ಕಂಚಿನ ತೇರಿನಲ್ಲಿ ಕೂರಿಸಿ, ಶಾಪಹಾಕಿ ಕಾಡಿಗೆ ಕಳಿಸುತ್ತಾಳೆ. ಕಾಡಿನಲ್ಲಿ ಆ ರಾಜಕುಮಾರಿ ಒಬ್ಬ ಅಗಸನನ್ನು ಬಟ್ಟೆ ಒಗೆಯಲು ನೇಮಿಸಿಕೊಳ್ಳುತ್ತಾಳೆ. ಒಗೆದು ಹರವಿದ್ದ ರಾಜಕುಮಾರಿಯ ಸೀರೆಯನ್ನು ನೋಡಿ ಇನ್ನೊಬ್ಬ ರಾಜಕುಮಾರ ಅವಳನ್ನು ಮೋಹಿಸುತ್ತಾನೆ. ಆತ ಗಜನಿಂಬೆಯ ಹಣ್ಣಾಗಿ ಮಾರ್ಪಟ್ಟು ಆಕೆಯ ಸೀರೆಯಲ್ಲಿ ಸೇರಿ, ಮತ್ತೆ ರಾಜಕುಮಾರ ನಿಜರೂಪ ತಾಳಿ ಅವಳನ್ನು ಮದುವೆಯಾಗುತ್ತಾನೆ. ಆಮೇಲೆ ರಾಜಕುಮಾರ ಒಬ್ಬ ಸೂಳೆಯ ಜೊತೆ ಹೋಗುತ್ತಾನೆ. ಆಗ ರಾಜಕುಮಾರಿಗೆ ಕಷ್ಟ ಕೊಡಲು ಇಬ್ಬರು ರಾಕ್ಷಸಿಯರು ಬರುತ್ತಾರೆ. ರಾಜಕುಮಾರಿ ಉಪಾಯದಿಂದ ಅವರನ್ನು ಗೆಲ್ಲುತ್ತಾಳೆ. ಅನಂತರ ಒಂದು ಕೋತಿ ಆ ರಾಜಕುಮಾರಿಯ ನೆರವಿಗೆ ಬರುತ್ತದೆ. ಕೋತಿ ರಾಜಕುಮಾರನನ್ನು ಹುಡುಕಲು ಹೊರಡುತ್ತದೆ. ರಾಜ ಸೂಳೆಯ ಮನೆಯಲ್ಲಿ ಪಗಡೆ ಆಡುವುದನ್ನು ಕೋತಿ ನೋಡುತ್ತದೆ. ಆ ಹೊತ್ತಿನಲ್ಲಿ ರಾಜ–ಸೂಳೆಯರ ನಡುವೆ ಮಾತು ಬಂದು ಇಬ್ಬರೂ ಕಂಚಿನ ತೇರಿನ ಕಡೆ ಹೊರಡುತ್ತಾರೆ. ರಾಜಕುಮಾರಿ ರಾಜಕುಮಾರ ಒಂದಾಗುತ್ತಾರೆ. ಕಾರಣಾಂತರದಿಂದ, ರಾಜಕುಮಾರಿಯಿಂದ ತಿರಸ್ಕೃತವಾದ ಕೋತಿ ದುಃಖದಿಂದ ಹೊರಟುಹೋಗುತ್ತದೆ.

ಈ ಕಥೆಯಲ್ಲಿ ರಾಜ ಮಗಳನ್ನು ಮೋಹಿಸುವುದು, ಕಂಚಿನ ತೇರು, ತಾಯಿ ಹಾಕುವ ಶಾಪ, ರಾಜಕುಮಾರ ಗಜನಿಂಬೆಯ ಹಣ್ಣಾಗಿ ಪರಿವರ್ತನೆಯಾಗುವುದು, ರಾಕ್ಷಸಿಯರು ಮತ್ತು ರಾಜಕುಮಾರಿಯ ನೆರವಿಗೆ ಬರುವ ಕೋತಿ–ಹೀಗೆ ಸುಮಾರು ಆರು ಆಶಯಗಳು ಕಂಡುಬರುತ್ತವೆ. ಇವೆಲ್ಲ ವಾಸ್ತವ ಪ್ರಪಂಚಕ್ಕಿಂತ ಭಿನ್ನವಾದ ಸಂದರ್ಭಗಳು. ಕಥೆಯಲ್ಲಿ ಬರುವ ವಾತಾವರಣ ವಿಶೇಷ ಬಗೆಯದು. ಮಾಯವಾಗುವುದು, ಶಾಪ, ನಿಜರೂಪ ತಾಳುವುದು, ಮಾತಾಡುವ ಕೋತಿ, ರಾಕ್ಷಸರು, ಕಂಚಿನ ತೇರು ಇವು ನಿತ್ಯಜೀವನದಲ್ಲಿ ಸಾಮಾನ್ಯವಾಗಿ ಕಾಣಲಾರದಂಥವು. ಹೀಗೆ ಸಹಜತೆಗಿಂತ ಭಿನ್ನವಾದ ಸಂದರ್ಭಗಳೂ, ವಿಶೇಷವಾದ ನಂಬಿಕೆಗಳೂ ಆಶಯಗಳೆನಿಸಿಕೊಳ್ಳುತ್ತವೆ.

ಜನಪದ ಕಥೆಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ, ಮಾನವ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಅಂತಾರಾಷ್ಟ್ರೀಯ ಸಂಬಂಧವನ್ನು ಕಂಡುಕೊಳ್ಳಲು ಆಶಯಗಳು ಸಹಾಯಕವಾಗುತ್ತವೆ. ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿ ತರ್ಕಬದ್ಧವಾಗಿ ಆಶಯಗಳು ಹುಟ್ಟಿಕೊಂಡಿರುವುದೂ ಉಂಟು. ಇನ್ನು ಕೆಲವು ಸಾರಿ ಒಂದೇ ಸಾಮಾನ್ಯ ಮೂಲದಿಂದ ಆಶಯಗಳು ಹುಟ್ಟಿಕೊಂಡು ಒಬ್ಬರಿಂದ ಒಬ್ಬರಿಗೆ, ದೇಶದಿಂದ ದೇಶಕ್ಕೆ ಕೊಡುಗೆಯಾಗಿ ಬಂದಿರುವ ಸಂದರ್ಭಗಳೂ ಇವೆ. ಜನಪದ ಕಥೆಗಳನ್ನು ಕುರಿತು ಅಭ್ಯಾಸ ಮಾಡುವವರು ಅವನ್ನು ಕಥಾವರ್ಗಗಳಾಗಿ ವಿಭಾಗಿಸಿ ನೋಡುವುದಕ್ಕಿಂತ ಆಶಯಗಳಿಗೆ ಅನುಗುಣವಾಗಿ ವಿಂಗಡಿಸಿ ಅಭ್ಯಾಸಮಾಡುವುದು ಹೆಚ್ಚು ಉಪಯುಕ್ತ. ಇಂಥ ಆಶಯಗಳ ಆಳವಾದ ಅಭ್ಯಾಸ ಮಾನವನ ಪ್ರಾಗಿತಿಹಾಸವನ್ನು ಕುರಿತು ಹೆಚ್ಚು ವಿವರ ಒದಗಿಸಬಲ್ಲುದಾಗಿದೆ. ಜನತೆಗೆ ಮತಧರ್ಮಗಳಲ್ಲಿರುವ ನಂಬಿಕೆಗಳು, ಆಚರಣೆಗಳ ಮರ್ಮ, ಮಾನವನ ಆಶೋತ್ತರಗಳು, ಜೀವನ ಸಾವುಗಳ ಬಗ್ಗೆ, ಪುನರ್ಜನ್ಮಾದಿಗಳ ಬಗ್ಗೆ ಅವರಿಗಿರುವ ನಂಬಿಕೆಗಳು, ದೇವರು, ಸ್ವರ್ಗ ನರಕಗಳ ಬಗೆಗಿನ ಅವನ ಅಭಿಪ್ರಾಯಗಳು, ಹೆದರಿಕೆ, ವಿಶ್ವಾಸಗಳು, ದುಷ್ಟಶಿಕ್ಷಣ, ಶಿಷ್ಟರಕ್ಷಣಗಳ ವಿಚಾರದಲ್ಲಿ ಅವನ ಧೋರಣೆಗಳು ಹೀಗೆ ಅನೇಕ ವಿಷಯಗಳ ಬಗ್ಗೆ ಜನಪದ ಆಶಯಗಳು ಬೆಳಕು ಬೀರಬಲ್ಲವು. (ಎಚ್.ಆರ್.ಡಿ.ಬಿ.)

**ಜನಪದ ಕಥೆ** : ತಲೆಮಾರಿನಿಂದ ತಲೆಮಾರಿಗೆ ರೂಪಾಂತರಗೊಂಡೋ ಹಾಗೇಯೋ ಬರೆವಣಿಗೆಯ ಮೂಲಕವೋ ಬಾಯ ಮೂಲಕವೋ ನಿರಂತರವಾಗಿ ಸಾಗಿ ಬಂದಿರುವ ಕಥೆ. ಈ ಮಾತು ವ್ಯಾಪಕವಾದ ಅರ್ಥದಲ್ಲಿ ಎಲ್ಲ ಸಾಂಪ್ರದಾಯಿಕ ಕಥನರೂಪಗಳನ್ನೂ ಒಳಗೊಳ್ಳುತ್ತದೆ. ಜನಪದ ಕಥೆಗಳು ಕನ್ನಡದಲ್ಲಿ ಅಜ್ಜಿಯ ಕಥೆಗಳು (ನೋಡಿ– ಅಜ್ಜಿಕಥೆ) ಎಂಬುದಾಗಿ ಪ್ರಸಿದ್ಧಿ ಪಡೆದಿವೆ. ಅಸ್ಸಾಮೀ ಮತ್ತು ಬಂಗಾಳೀ ಭಾಷೆಗಳಲ್ಲಿ ಇವನ್ನು ಸಾಧುಕಥಾ ಎಂದು ಕರೆಯುತ್ತಾರೆ. ಇದಕ್ಕೆ ಅಲ್ಲಿ ವರ್ತಕ ಪ್ರಧಾನ ಪಾತ್ರ ವಹಿಸುವುದೇ ಕಾರಣವಾಗಿದೆ.

ಕಥೆಗಳನ್ನು ಹೇಳುವುದಾಗಲಿ ಕೇಳುವುದಾಗಲಿ ನಿನ್ನೆಮೊನ್ನೆಯದಾಗಿರದೆ, ಮಾನವಸಮಾಜದಷ್ಟೇ ಪುರಾತನವಾದುದಾಗಿದೆ. ಸ್ವಾಭಾವಿಕವಾಗಿಯೇ ಮನುಷ್ಯ ಕಥೆ ಹೇಳುವುದನ್ನು ಕಲೆಯಾಗಿ ಬೆಳೆಸಿಕೊಂಡ. ಶ್ರಮದ ಉಪಶಮನಕ್ಕಾಗಿ ಕಲೆ ಜನ್ಮತಾಳಿತು ಎಂಬುದನ್ನು ಒಪ್ಪಿಕೊಳ್ಳುವುದಾದರೆ, ಕಥೆ ಹುಟ್ಟಿದ್ದೂ ಈ ಅನಿವಾರ್ಯದ ಫಲವಾಗಿ,

ಉಳಿದದ್ದೂ ಈ ಆವಶ್ಯದ ಕಾರಣಕ್ಕಾಗಿ. ಆದಿವಾಸಿಗಳಲ್ಲಿ ಕೆಲವು ವಿಶೇಷ ಸಂದರ್ಭಗಳಲ್ಲಿ ಕೆಲವು ರೀತಿಯ ಕಥೆಗಳನ್ನು ಹೇಳುತ್ತಿದ್ದುದು ಗೋಚರಿಸುತ್ತದೆ. ಕೆಲವನ್ನು ಚಳಿಗಾಲದಲ್ಲೂ ಕೆಲವನ್ನು ಬೇಸಗೆಯಲ್ಲೂ ಹೇಳುತ್ತಿದ್ದರು. ಕೆಲಸದ ಸಮಯದಲ್ಲಿ ಕೆಲಸದ ಶ್ರಮವನ್ನು ಮರೆಯಲು ಕಥೆಗಳನ್ನು ಹೇಳುತ್ತಿದ್ದರು, ಕೇಳುತ್ತಿದ್ದರು. ಸಂಜೆ ಕೆಲಸ ಮುಗಿದ ಮೇಲೆ ಬೆಂಕಿ ಕಾಯಿಸುತ್ತ, ರಾತ್ರಿ ಊಟ ಮುಗಿದ ಮೇಲೆ ಬೆಳದಿಂಗಳಿನಲ್ಲಿ ಕುಳಿತು ಕಥೆ ಹೇಳುವುದು, ಕೇಳುವುದು ವಾಡಿಕೆ. ಮಕ್ಕಳನ್ನು ಮಲಗಿಸಲು ಕಥೆ ದೊಡ್ಡ ಸಾಧನವಾಗಿ ಬಳಕೆಯಾಗುತ್ತದೆ. ರಾಜನಂಥವ ಕಥೆ ಕೇಳಲು ಕಥೆಗಾರರನ್ನೇ ನೇಮಿಸಿಕೊಂಡಿದ್ದ. ಕಥೆ ಹೇಳುವುದನ್ನು ವಿಶೇಷ ಉದ್ಯೋಗವನ್ನಾಗಿ ಮಾಡಿಕೊಂಡವರೂ ಇದ್ದರು. ಆದರೆ ಇಂಥವರು ವಿರಳವೆಂದೇ ಹೇಳಬೇಕು. ಕಥೆಗಳನ್ನು ಹೇಳಲು ಹಾಗೂ ಕೇಳಲು ಪುರುಷರು, ಸ್ತ್ರೀಯರು ಮತ್ತು ಬಾಲಕರು-ಯಾರಾದರೂ ಆಗಬಹುದು. ಜನಪದ ಕಥೆಗಳಲ್ಲಿ ಹೆಚ್ಚು ಆಸಕ್ತಿಯನ್ನು ತಾಳುವವರಲ್ಲಿ ಬಾಲಕರು ಪ್ರಧಾನರು.

***ಜನಪದ ಕಥೆಯ ಸ್ವರೂಪ*** : ಸಾಮಾನ್ಯವಾಗಿ ಕಥೆ ಹೇಳುವ ಹಾಗೂ ಕೇಳುವ ಕ್ರಿಯೆ ಜಗತ್ತಿನ ಯಾವುದೇ ಭಾಗಕ್ಕೆ ಸೀಮಿತವಾದುದಲ್ಲ. ಮಾನವ ಇರುವ ಕಡೆಯಲ್ಲೆಲ್ಲ ಇದು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಆದ್ದರಿಂದ ಪ್ರಪಂಚದ ಎಲ್ಲ ಕಥೆಗಳಲ್ಲಿಯೂ ಕಾಣಬರುವ ಒಂದು ಸರ್ವೇಸಾಮಾನ್ಯ ಗುಣವೆಂದರೆ ಏಕರೂಪತೆ. ಇದಕ್ಕೆ ಕಥೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಬೆಳೆಸಿರುವುದು ಕಾರಣವಿರಬಹುದು ಅಥವಾ ಕಥೆ ಹೇಳುವ ಮಾನವನ ಮೂಲ ಪ್ರವೃತ್ತಿ ಕಾರಣವಿರಬಹುದು. ಈ ಏಕರೂಪತೆಯ ಜೊತೆಯಲ್ಲಿಯೇ ವ್ಯತ್ಯಾಸವೂ ಕಂಡುಬರುತ್ತದೆ. ಆದ್ದರಿಂದ ಏಕರೂಪತೆಯಲ್ಲಿ ಭಿನ್ನತೆ ಜನಪದ ಕಥೆಯ ವಿಶಿಷ್ಟ ಲಕ್ಷಣವಾಯಿತು. ಜನಪದ ಕಥೆಯ ಸ್ವರೂಪವನ್ನು ಕುರಿತು ಹೇಳುವಾಗ ಈ ಹಿನ್ನೆಲೆಯನ್ನು ಅವಶ್ಯವಾಗಿ ಪರಿಭಾವಿಸಬೇಕಾಗುತ್ತದೆ.

ಜನಪದ ಕಥೆಗೆಳೆಲ್ಲಕ್ಕೂ ಸಾರ್ವತ್ರಿಕವಾಗಿ ಅನ್ವಯಿಸಬಹುದಾದ ಕೆಲವು ಲಕ್ಷಣಗಳಿವೆ. ಇವುಗಳನ್ನು ಆಕ್ಸೆಲ್ ಓಲ್ರಿಕ್ ಎಂಬ ವಿದ್ವಾಂಸ ಒಂಬತ್ತು ವಿಭಾಗಗಳಲ್ಲಿ ಗುರುತಿಸಿದ್ದಾನೆ:

1 ಬಹುಮುಖ್ಯವಾದ ಕ್ರಿಯೆಯೊಂದರಿಂದ ಪ್ರಾರಂಭವಾಗುವುದಿಲ್ಲ ಮತ್ತು ಇದ್ದಕ್ಕಿದ್ದಂತೆ ಮುಕ್ತಾಯವಾಗುವುದಿಲ್ಲ. ಸಾವಕಾಶವಾದ ಪ್ರವೇಶವಿದ್ದು, ಶಿಖರವನ್ನು ತಲಪಿದ ಮೇಲೂ ನಿಲುಗಡೆಯ ಸ್ಥಾನದ ತನಕ ಮುಂದುವರಿಯುತ್ತದೆ.

2 ಪುನರಾವರ್ತನೆ ಸಾಮಾನ್ಯವಾಗಿ ಎಲ್ಲ ಕಡೆಯಲ್ಲೂ ಕಂಡುಬರುತ್ತದೆ. ಇದು ಕಥೆಯನ್ನು ನಿರೀಕ್ಷೆಯಲ್ಲಿಡುವುದಲ್ಲದೆ, ಅದರ ಶರೀರವನ್ನು ಪುಷ್ಟಗೊಳಿಸಿ ಸಮರ್ಥಿಸುತ್ತದೆ. ಈ ಪುನರಾವರ್ತನೆ ಬಹುಮಟ್ಟಿಗೆ ಮೂರುಮಡಿಯಿದ್ದು, ಕೆಲವು ದೇಶಗಳಲ್ಲಿನ ಧಾರ್ಮಿಕ ಸಂಕೇತದ ಕಾರಣದಿಂದಾಗಿ ನಾಲ್ಕುಮಡಿಯೂ ಆಗಬಹುದು.

3 ಸಾಮಾನ್ಯವಾಗಿ ಏಕಕಾಲದಲ್ಲಿ ಇಬ್ಬರು ವ್ಯಕ್ತಿಗಳು ಮಾತ್ರ ಒಂದು ದೃಶ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ. ಇನ್ನೂ ಹೆಚ್ಚಿಗೆ ಇದ್ದರೂ ಇಬ್ಬರು ಮಾತ್ರ ಏಕಕಾಲದಲ್ಲಿ ಕ್ರಿಯಾಶೀಲರಾಗಿರಬೇಕು.

4 ವೈದೃಶ್ಯ ಪಾತ್ರಗಳ ಪರಸ್ಪರ ಸಮಾಗಮ-ನಾಯಕ ಮತ್ತು ಪ್ರತಿನಾಯಕ ಶಿಷ್ಟ ಮತ್ತು ದುಷ್ಟ.

5 ಒಂದೇ ಪಾತ್ರದಲ್ಲಿ ಇಬ್ಬರೇನಾದರೂ ಕಾಣಿಸಿಕೊಂಡರೆ, ಅವರು ಚಿಕ್ಕವರಾಗಿ ಅಥವಾ ಅಶಕ್ತರಾಗಿ ಚಿತ್ರಿತವಾಗಿರುತ್ತಾರೆ. ಅವರು ಅನೇಕವೇಳೆ ಅವಳಿಗಳಾಗಿದ್ದು, ಶಕ್ತರಾಗಿ ಪರಿಣಮಿಸಿದರೆ, ವೈರಿಗಳಾಗುವ ಸಾಧ್ಯತೆಯುಂಟು.

6 ದುರ್ಬಲ ಮತ್ತು ಕೀಳು ಆಗಿರುವವರು ಉತ್ತಮರಾಗುವ ಸಾಧ್ಯತೆ ಇದೆ. ಕಿರಿಯ ಸೋದರ ಅಥವಾ ಸೋದರಿ ಸಾಮಾನ್ಯವಾಗಿ ಜಯ ಗಳಿಸುವವರು.

7 ಪಾತ್ರಚಿತ್ರಣ ಸರಳ. ಕಥೆಗೆ ನೇರವಾಗಿ ಸಂಬಂಧಪಟ್ಟ ಗುಣಗಳು ಮಾತ್ರ ನಿರೂಪಿತವಾಗಿರುತ್ತವೆ. ಪಾತ್ರದ ಕಥೆಗೆ ಹೊರತಾದ ಯಾವುದೇ ಜೀವನದ ಸುಳಿವು ಕೂಡ ಇರುವುದಿಲ್ಲ.

8 ಕಥಾವಸ್ತು ಸರಳ, ಸಂಕೀರ್ಣವಲ್ಲ. ಒಂದು ಕಾಲದಲ್ಲಿ ಒಂದು ಕಥೆಯನ್ನು ಮಾತ್ರ ಹೇಳಬೇಕು. ಎರಡು ಅಥವಾ ಹೆಚ್ಚು ಕಥೆಗಳು ಒಂದೇ ಕಾಲದಲ್ಲಿ ಬಂದರೆ ಆಗ ಅದು ಜನಪದ ಕಥೆಯ ಜಾಯಮಾನವಾಗಿರದೆ, ಸಾಹಿತ್ಯದ ಆಭಾಸವಾಗಿರುತ್ತದೆ.

9 ಪ್ರತಿಯೊಂದೂ ಸಾಧ್ಯವಾದಷ್ಟು ಸರಳವಾಗಿ ನಡೆಯುತ್ತದೆ. ಸಮಾನ ವಿಷಯಗಳೆಲ್ಲವೂ ಪೂರಕವಾಗಿರುತ್ತವೆ. ವೈವಿಧ್ಯವನ್ನು ತರುವ ಯಾವುದೇ ಪ್ರಯತ್ನ ಇಲ್ಲಿಲ್ಲ.

ಮೇಲಿನ ಸಾಮಾನ್ಯ ಲಕ್ಷಣಗಳ ಜೊತೆಗೆ ಕೆಲವು ವಿಶೇಷ ಲಕ್ಷಣಗಳೂ ಇವೆ. ಇವುಗಳಲ್ಲಿ ಮೊದಲನೆಯದು ಪಾತ್ರಗಳು. ಮನುಷ್ಯ ಪಾತ್ರವಹಿಸುವುದಲ್ಲದೆ, ದೇವತೆ, ಪ್ರಾಣಿ, ದೆವ್ವ, ಬೇತಾಳ, ರಾಕ್ಷಸ ಮೊದಲಾದ ಮನುಷ್ಯೇತರರೂ ಭಾಗವಹಿಸುತ್ತಾರೆ. ಸ್ವರ್ಗ, ಮರ್ತ್ಯ, ನರಕ – ಈ ಮೂರೂ ಲೋಕಗಳಿಗೂ ಇವರ ಸಂಬಂಧವುಂಟು. ನಾಯಕ, ಪ್ರತಿನಾಯಕ ಹಾಗೂ ನಾಯಿಕೆ ಇವರು ಸಾಮಾನ್ಯವಾಗಿ ಇದ್ದೇ ಇರುತ್ತಾರೆ. ಇವರೆಲ್ಲರಿಗೂ ಸಾಹಸವೇ ಮೂಲವಾಗಿರುವುದರಿಂದ ಸಮಸ್ಯೆ ತಾನಾಗಿ ಗೋಚರಿಸುತ್ತದೆ. ಕಥಾನಾಯಕನಿಗೆ ಸಂಬಂಧಪಟ್ಟ ಒಂದು ವಿಶೇಷ ಅಂಶವೆಂದರೆ ಕಿರಿಯ ಮಗನ ವಿಚಾರ. ಸಾಮಾನ್ಯವಾಗಿ ಕಿರಿಯ ಮಗನೇ ಕಥಾನಾಯಕನೂ ಸಾಹಸಿಯೂ ಆಗಿರುತ್ತಾನೆ. ಪ್ರಾಯಶಃ ಹಿರಿಯ ಮಗ ಮನೆಯವರೆಲ್ಲರನ್ನೂ ನೋಡಿಕೊಳ್ಳುವ ಹೊಣೆಯನ್ನು ಹೊತ್ತುಕೊಳ್ಳಬೇಕಾಗಿರುವುದರಿಂದ ಸಂಸಾರದಲ್ಲಿ ಅವನ ಪ್ರಾಧಾನ್ಯ ಹೆಚ್ಚಾಗಿರುತ್ತದೆ. ಆಗ ಕೆಲಮಟ್ಟಿಗೆ ವಂಚಿತನಾದ ಕಿರಿಯವನು ಬದುಕಲು ಸಾಹಸಿಯಾಗಿರಬೇಕಾಗುತ್ತದೆ. ಆಗ ಅವನು ಅನಿವಾರ್ಯವಾಗಿ ಸ್ವತಂತ್ರನಾಗಿರುತ್ತಾನೆ. ಪ್ರತಿನಾಯಕ ಖಚಿತವಾಗಿ ಗೊತ್ತಾಗುವುದಿಲ್ಲ. ತನ್ನವರೇ ಆದವರು ನಾಯಕನಿಗೆ ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಮಾಡಬಹುದು. ಸಂಸಾರದಲ್ಲಿನ ಹೆಂಗಸು ಬಹುಮಟ್ಟಿಗೆ ಖಳನಾಯಕಿಯ ಪಾತ್ರವನ್ನು ವಹಿಸುವುದು ಸಾಮಾನ್ಯ. ಮಲತಾಯಿಯ ಪಾತ್ರ ಇದರಲ್ಲಿ ಪ್ರಮುಖವಾದುದು. ಎಷ್ಟೋ ಸಮಯದಲ್ಲಿ ಕಥೆಯಲ್ಲಿ ಪ್ರಧಾನವಲ್ಲದ ಪಾತ್ರಗಳೇ ಪ್ರಮುಖವೆನಿಸುವುದುಂಟು. ಕಥೆಯಲ್ಲಿ ಕರುಣಾಳು ಸಹಾಯಕರ ಪಾತ್ರವೂ ಗಮನಾರ್ಹವಾದುದು. ನಾಯಕನಿಗೆ ಮಾನುಷ ಅಥವಾ ಅತಿಮಾನುಷ ಸಹಾಯಕರಿಗಿಂತ ಎಷ್ಟೋ ಸಾರಿ ಪ್ರಾಣಿಯಿಂದ ಹೆಚ್ಚು ಅನುಕೂಲ ದೊರೆಯುವುದು.

ಜನಪದ ಕಥೆಗಳಲ್ಲಿ ಕಾಣಬರುವ ಕೆಲವು ಸಾಮಾನ್ಯ ನಮೂನೆಗಳೆಂದರೆ ಮಾಂತ್ರಿಕ ವಸ್ತುಗಳೆಂದರೆ ಮಂತ್ರದಂಡ, ಉಂಗುರ, ಕಪ್ಪು, ಭೂತಗನ್ನಡಿ ಇತ್ಯಾದಿ, ಇಲ್ಲೆಲ್ಲ ಮಂತ್ರವಾದಿಯ ಕೈವಾಡ ಇದ್ದೇ ಇರುತ್ತದೆ. ಅದೃಷ್ಟದ ಪಾತ್ರ ಮತ್ತೊಂದು ಮಹತ್ತ್ವಪೂರ್ಣ ಸಂಗತಿ. ರಾಜಕುಮಾರಿಯನ್ನು ತಮ್ಮಂತೆ ಮಾಡಿಕೊಳ್ಳಲು ಹೂಡುವ ಸ್ಪರ್ಧೆಗಳು ಎಲ್ಲ ಜನಪದ ಕಥೆಗಳಲ್ಲೂ ಕಂಡುಬರುವ ಸಾಮಾನ್ಯ ವಿಷಯಗಳು. ಇಂಥ ಸಂದರ್ಭಗಳಲ್ಲಿ ಪ್ರತಿಸ್ಪರ್ಧಿ ಕಾಣಿಸಿಕೊಳ್ಳಬಹುದು, ಕಾಣಿಸಿಕೊಳ್ಳದಿರಬಹುದು. ಉದ್ದಕ್ಕೂ ಅದ್ಭುತ ಹಾಗೂ ಅಲೌಕಿಕ ಕಥೆಗಳು ವಾತಾವರಣವನ್ನು ತುಂಬಿಕೊಳ್ಳುತ್ತವೆ. ಕಥೆಗಳೆಲ್ಲ ನಿರಾಡಂಬರವಾಗಿ ನಡೆಯುವುವಲ್ಲದೆ, ಉದ್ದೇಶಿತ ಗುರಿಯನ್ನು ಚೆನ್ನಾಗಿ ಕಾಯ್ದುಕೊಳ್ಳುತ್ತವೆ. ನಿಜವಾದ ಜನಪದ ಕಥೆಗಾರನ ಉದ್ದೇಶಗಳಲ್ಲಿ ಒಂದೆಂದರೆ, ದುಷ್ಟತನ ಸರಿಯಾದ ರೀತಿಯಲ್ಲಿ ಶಿಕ್ಷೆಗೆ ಗುರಿಯಾಗಬೇಕೆಂಬುದೇ ಆಗಿದೆ.

ಜನತೆಯ ಸಾಮಾಜಿಕ ಜೀವನದ ಮೂಲಾಂಶವಾಗಿರುವ ಜನಪದ ಕಥೆ ಅವರ ಸೃಷ್ಟ್ಯಾತ್ಮಕ ಶಕ್ತಿಯನ್ನೂ ಸಂಸ್ಕೃತಿ ಸಂಪನ್ನತೆಯನ್ನೂ ತೆರೆದು ತೋರಿಸುತ್ತದೆ. ಸಾಮಾಜಿಕ ಇತಿಹಾಸದಲ್ಲಿ ಅದು ಸವಾಲಿನ ಸಮಸ್ಯೆಯನ್ನು ಎಸೆದಿದೆ; ಅದೇ ಸಂದರ್ಭದಲ್ಲಿ ಅದರ ಪರಿಹಾರಕ್ಕಾಗಿ ನೆರವಾಗಿದೆ. ಪ್ರತಿ ಕಥೆಯೂ ಮನೋರಂಜನೆಯ ಅಥವಾ ಸೌಂದರ್ಯಾನುಭವದ ಸಾಧನವಾಗಿದೆ. ಸಹೃದಯನಿಗಾಗುವ ಕಲಾನುಭವದ ಪರಿಣಾಮವನ್ನು ಕುರಿತು ಆಲೋಚಿಸಿದಾಗ, ಕಥೆ ಸಾಹಸಕಾರ್ಯಗಳ ಪ್ರಚೋದಕವೂ ಜ್ಞಾನಸಾಧನೆಯ ಸಂಕೇತವೂ ಆಗಿರುವುದನ್ನು ಕಾಣುತ್ತೇವೆ. ಇದರಿಂದ ದೊರಕುವ ಮತ್ತೊಂದು ಪ್ರಯೋಜನವೆಂದರೆ, ಬೇಸರ ತರುವಂಥ ಏಕತಾನತೆಯಿಂದ ಬಿಡುಗಡೆ, ಒಂದು ರೀತಿಯ ದೈಹಿಕ ಹಾಗೂ ಮಾನಸಿಕ ಸುಖ, ವಿಶ್ರಾಂತಿ. ಪ್ರಾಚೀನ ಮಾನವನ ಅಪೂರ್ವ ಪ್ರತಿಭೆಯ ಕಲಾತ್ಮಕ ಅಭಿವ್ಯಕ್ತಿಯಾದ ಇದಕ್ಕೆ ಆನಂದವೇ ಪರಮೋಚ್ಚ ಗುರಿ. ಇದಲ್ಲದೆ ಅನಕ್ಷರಸ್ಥ ಸ್ತ್ರೀಪುರುಷರಿಗೆ ದುಃಖೋಪಶಮನದ ಮತ್ತು ಶಿಕ್ಷಣ ಕೊಡುವ ಪ್ರಮುಖ ಸಾಧನವಾಗಿ ಅವು ಬಹುಕಾಲ ಮುಂದುವರಿಯುತ್ತವೆ ಎಂಬ ಸ್ಟಿತ್ ಥಾಮ್ಸನ್ನನ ಮಾತು ಜನಪದ ಕಥೆಯ ಅನಿವಾರ್ಯತೆಯನ್ನೂ ಆವಶ್ಯಕತೆಯನ್ನೂ ಚೆನ್ನಾಗಿ ನಿವೇದಿಸುತ್ತದೆ.

ಜನಪದ ಕಥೆಯ ವರ್ಗೀಕರಣ : ಸಾಂಪ್ರದಾಯಿಕ ಕಥನಗಳಲ್ಲಿ ವಾಕ್‌ಸಂಪ್ರದಾಯದ ಕಥೆಗಳು ಮತ್ತು ಸಾಹಿತ್ಯಿಕ ಕಥೆಗಳು ಎಂದು ಎರಡು ವಿಧಗಳಿವೆ. ಇವನ್ನು ಶುದ್ಧವಾಗಿ ಪ್ರತ್ಯೇಕಿಸಲು ಸಾಧ್ಯವಿಲ್ಲ. ಸಾಹಿತ್ಯಿಕ ಕಥೆಗಳೇ ಕ್ರಮೇಣ ಸಾಹಿತ್ಯಿಕ ಕಥೆಗಳಾಗಿ ಚಲಾವಣೆಯಾಗಬಹುದು. ಜನಪದ ಕಥೆಗಳಲ್ಲಿ ಕೆಲವು ಒಂದು ಖಂಡಕ್ಕೆ, ದೇಶಕ್ಕೆ, ಜನಾಂಗಕ್ಕೆ ಸೀಮಿತವಾಗಿರುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಜನಪದ ಕಥೆಯ ವರ್ಗೀಕರಣ ಕಷ್ಟತರವೂ ತುಂಬ ಜವಾಬ್ದಾರಿಯುತವೂ ಆದುದಾಗಿದೆ. ಆದರೆ ಕಥೆಗಳ ಅಧ್ಯಯನದ ದೃಷ್ಟಿಯಿಂದ ಕೆಲವು ಪ್ರಕಾರಗಳನ್ನು ನಿರ್ದೇಶಿಸುವುದು ಉಚಿತವೆಂದು ತೋರುತ್ತದೆ. ಹೀಗೆ ಗುರುತಿಸಬಹುದಾದ ಭಿನ್ನ ಭಾಗಗಳು ಸಂಪೂರ್ಣ ನಿಷ್ಕೃಷ್ಟ ಎಂದು ಹೇಳಲು ಸಾಧ್ಯವಿಲ್ಲ. ಯಾವ ಜನಪದ ಕಥೆಗಾರನೂ ಇವನ್ನು ಉಲ್ಲೇಖಿಸಿಲ್ಲ. ಈ ಬಗ್ಗೆ ಹಲವಾರು ವಿದ್ವಾಂಸರು ತಮ್ಮದೇ ರೀತಿಯಲ್ಲಿ ವಿಭಾಗಮಾಡಿ ವಿಶ್ಲೇಷಿಸಿದ್ದಾರೆ. ಇಲ್ಲಿ ಅಂಥ ಪ್ರಮುಖರನ್ನು ಮಾತ್ರ ತೆಗೆದುಕೊಳ್ಳಬಹುದು.

ಮೊದಲಿಗೆ, ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್ ಮತ್ತು ವಾನ್‌ದೇರ್ ಲೇಯನ್ ಎಂಬ ಇಬ್ಬರು ವಿದ್ವಾಂಸರು ಜನಪದ ಕಥೆಗಳನ್ನೆಲ್ಲ ಸಾಗ ಮತ್ತು ಮೆರ್ಖನ್ ಎಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ಸಾಗ ಗೊತ್ತಾದ ಸ್ಥಳವೊಂದಕ್ಕೆ ಸಂಬಂಧಿಸಿದುದು. ಆವರಣ ಅತಿಮಾನುಷ, ಪಾತ್ರ ಅರ್ಧಚಾರಿತ್ರಿಕ, ರಚನೆ ಬಹುತೇಕವಾಗಿ ಸರಳ. ಕಲ್ಪನೆಯನ್ನೇ

ಪ್ರಧಾನವಾಗುಳ್ಳ ಮೆರ್ಖಿನ್‌ಗೆ ಗೊತ್ತಾದ ಕಾಲವಿಲ್ಲ ಮತ್ತು ಗೊತ್ತಾದ ಸ್ಥಳವಿಲ್ಲ. ಇದು ನಡೆಯುವುದೆಲ್ಲ ಅವಾಸ್ತವ ಪ್ರಪಂಚದಲ್ಲಿ. ಇಡೀ ಕಥೆ ಸಾಹಸಮಯವಾದ ಘಟನೆಗಳಿಂದ ತುಂಬಿಕೊಂಡಿರುತ್ತದೆ. ರಚನೆಯ ದೃಷ್ಟಿಯಿಂದ ನೋಡಿದರೆ ಇವು ಸಾಕಷ್ಟು ಉದ್ದವಾಗಿರುತ್ತವೆ ಮತ್ತು ಸಂಕೀರ್ಣವಾಗಿರುತ್ತವೆ (ನೋಡಿ– ಕಟ್ಟುಕಥೆ). ಮಿಲ್ಲರ್ ಎಂಬ ವಿದ್ವಾಂಸ ಕಿನ್ನರ ಕಥೆಗಳು, ದೈನಂದಿನ ಕಥೆಗಳು ಮತ್ತು ಪ್ರಾಣಿಕಥೆಗಳು ಎಂಬುದಾಗಿ ಮೂರು ರೀತಿಯಲ್ಲಿ ವರ್ಗೀಕರಿಸಿಕೊಳ್ಳುತ್ತಾನೆ. ಈ ವರ್ಗೀಕರಣದಲ್ಲಿ ಮೊದಲ ಮತ್ತು ಕಡೆಯ ಪ್ರಕಾರಗಳನ್ನು ಪರಿಗಣಿಸಬಹುದಾದರೂ ಮಧ್ಯದ ವಿಭಾಗವನ್ನು ನಿರ್ದಿಷ್ಟ ರೀತಿಯಲ್ಲಿ ವಿವರಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ ಇದು ಪೂರ್ಣ ವರ್ಗೀಕರಣವಲ್ಲದ್ದರಿಂದ, ಸಮರ್ಪಕ ವೆನಿಸುವುದಿಲ್ಲ. ವುಂಟ್ ಎಂಬ ಜರ್ಮನ್ ವಿದ್ವಾಂಸ ಜನಪದ ಕಥೆಗಳಲ್ಲಿ ಪೌರಾಣಿಕ ನೀತಿಕಥೆಗಳು, ಶುದ್ಧ ಕಿನ್ನರ ಕಥೆಗಳು, ಜೈವಿಕ ಕಥೆಗಳು ಮತ್ತು ನೀತಿಕಥೆಗಳು, ಶುದ್ಧ ಪ್ರಾಣಿಕಥೆಗಳು, ವಾಂಶಿಕ ಕಥೆಗಳು, ತಮಾಷೆ ಕಥೆಗಳು ಮತ್ತು ನೀತಿಕಥೆಗಳು ಎಂಬುದಾಗಿ ಏಳು ವಿಭಾಗಗಳನ್ನು ಹೆಸರಿಸುತ್ತಾನೆ. ಆದರೆ ಇದು ವಿವರವಾದ ವರ್ಗೀಕರಣವಾಗಿದ್ದು ಪುನರುಕ್ತಿ ದೋಷದಿಂದ ಕೂಡಿರುವುದನ್ನು ಕಾಣಬಹುದು. ಬ್ರಿಟಾನಿಕ ವಿಶ್ವಕೋಶದಲ್ಲಿ ಪುರಾಣ, ಐತಿಹ್ಯ, ಮತ್ತು ಜನಪ್ರಿಯ ಕಥೆಗಳು ಎಂದು ಮೂರು ಭಾಗಗಳಾಗಿ ವರ್ಗೀಕರಿಸಲಾಗಿದೆ. ಜನಪ್ರಿಯ ಕಥೆಗಳಲ್ಲಿಯೇ ವಿಶೇಷ ಲಕ್ಷಣಗಳಿಂದ ಕೂಡಿದ ಬೇರೆ ಬೇರೆ ಕಥನ ಪ್ರಕಾರಗಳಿರುವ ಸಾಧ್ಯತೆಯನ್ನು ಇದು ತಿಳಿಸುವುದಿಲ್ಲ. ಅಲ್ಲದೆ ಜನಪ್ರಿಯ ಕಥೆಗಳು ಎಂಬ ಮಾತನ್ನು ಎಷ್ಟೇ ಎಚ್ಚರದಿಂದ ಬಳಸಿದರೂ ಪುರಾಣ ಮತ್ತು ಐತಿಹ್ಯಗಳ ಸೋಂಕಿನಿಂದ ಸಂಪೂರ್ಣವಾಗಿ ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಈ ಸಮಯದಲ್ಲಿ ಸ್ಟಿತ್ ಥಾಂಸನ್ನನ ವರ್ಗೀಕರಣ ಅತ್ಯಂತ ಗಮನಾರ್ಹವಾದುದು. ಆತ ತನ್ನ 'ಜನಪದ ಕಥೆ' ಎಂಬ ಗ್ರಂಥದಲ್ಲಿ ಕಥೆಗಳನ್ನು ಸಂಕೀರ್ಣ ಕಥೆಗಳು ಮತ್ತು ಸರಳ ಕಥೆಗಳು ಎಂಬುದಾಗಿ ಎರಡು ರೀತಿಯಲ್ಲಿ ವಿಭಜಿಸಿಕೊಂಡಿದ್ದಾನೆ. ಅನೇಕ ಆಶಯಗಳು, ವಿಸ್ತಾರವಾದ ಕಥೆ, ಮೇಲಿಂದಮೇಲೆ ಬರುವ ಘಟನಾವಳಿ, ಅತಿಮಾನುಷ ಅದ್ಭುತ ವಾತಾವರಣ ಇವು ಸಂಕೀರ್ಣ ಕಥೆಗಳ ಲಕ್ಷಣಗಳಾಗುತ್ತವೆ. ಸರಳ ಕಥೆಗಳು ಅಪಾರ ಸಂಖ್ಯೆಯಲ್ಲಿ ಸಿಗುತ್ತಿದ್ದು, ಕಡಿಮೆ ಆಶಯಗಳಿಂದ ನಡೆಯುವ ಚಿಕ್ಕ ಕಥೆಗಳಾಗಿರುತ್ತವೆ. ಪ್ರಾಣಿ, ವಿನೋದ, ಬುದ್ಧಿವಂತಿಕೆ, ನೀತಿ ಮೊದಲಾದುವುಗಳಿಗೆ ಸಂಬಂಧಿಸಿದ ಕಥೆಗಳು ಇಲ್ಲಿ ಬರುತ್ತವೆ. ಸಂಕೀರ್ಣ ಕಥೆಗಳನ್ನು ಮತ್ತೆ ಎರಡು ವಿಭಾಗಗಳಾಗಿ ಮಾಡಿಕೊಳ್ಳುತ್ತಾರೆ: 1 ಕಟ್ಟುಕಥೆ ಮತ್ತು ಅದಕ್ಕೆ ಸಂಬಂಧಿಸಿದ ಕಥಾರೂಪಗಳು, 2 ವಾಸ್ತವಿಕ ಕಥೆಗಳು. ಮೊದಲನೆಯದು ಅತಿಮಾನುಷ ವಿರೋಧಿಗಳು, ಅತಿಮಾನುಷ ಸಹಾಯಕರು, ಮಾಂತ್ರಿಕತೆ ಮತ್ತು ಅದ್ಭುತಗಳು, ಪ್ರೇಮಿಗಳು ಮತ್ತು ದಂಪತಿಗಳು, ಪರೀಕ್ಷೆಗಳು ಮತ್ತು ಸಾಹಸಗಳು, ವಿಧೇಯತೆ, ಒಳ್ಳೆಯ ಹಾಗೂ ಕೆಟ್ಟ ಬಂಧುಗಳು, ಅತೀತ ಶಕ್ತಿಗಳು, ಮೂರು ಲೋಕಗಳು ಎಂಬುದಾಗಿ ಒಡೆದುಕೊಳ್ಳುತ್ತದೆ. ಎರಡನೆಯದರಲ್ಲಿ ಜಾಣತನ, ಮೋಸ, ವಂಚನೆ, ಕಳ್ಳತನ ಮೊದಲಾದವುಗಳಿಗೆ ಸಂಬಂಧಿಸಿದ ಕಥೆಗಳು ಬರುತ್ತವೆ. ಸರಳ ಕಥೆಗಳನ್ನು ವಿನೋದ ಕಥೆಗಳು, ಪ್ರಾಣಿಕಥೆಗಳು, ಸೂತ್ರಕಥೆಗಳು, ಐತಿಹ್ಯಗಳು ಮತ್ತು ಸಂಪ್ರದಾಯಗಳು ಎಂಬುದಾಗಿ ಮತ್ತೆ ಒಳವಿಭಾಗಗಳಾಗಿ ವಿಭಜಿಸಿಕೊಳ್ಳುತ್ತಾರೆ. ಈಗ ವಿದ್ವಾಂಸರೆಲ್ಲರ ಚರ್ಚೆಗೆ ಗುರಿಯಾಗಿ ಸ್ವೀಕೃತವಾಗಿರುವ ಪ್ರಮುಖ ಪ್ರಕಾರಗಳನ್ನು ಪ್ರಸ್ತಾಪಿಸಬಹುದು.

ಜನಪದ ಕಥೆಗಳ ವಿಭಾಗಗಳಲ್ಲಿಯೇ ಅತಿ ಅಸ್ಪಷ್ಟತೆಯನ್ನೂ ಸಂದಿಗ್ಧತೆಯನ್ನೂ ತಂದಿರುವ ಪ್ರಕಾರವೆಂದರೆ ಪುರಾಣ ಕಥೆ. ಇಲ್ಲಿನ ಕಥೆಗಳು ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳನ್ನು ಕುರಿತಿರುತ್ತವೆ. ಇದರಿಂದಾಗಿ ಇವು ಎಷ್ಟೋ ವೇಳೆ ಐತಿಹ್ಯಗಳನ್ನು ಹೋಲುತ್ತವೆ. ಗೊತ್ತಾದ ಉದ್ದೇಶದ ಕಡೆಗೆ ಸಾಗುವ ಪವಿತ್ರ ಕಥನಗಳಿವು. ಇಲ್ಲಿ ಬರುವ ಪಾತ್ರಗಳು ದೇವತೆಗಳು, ಆವರಣ ದೈವಿಕ. ಸ್ವಲ್ಪ ಬದಲಾವಣೆ ಮಾಡಿದರೆ ಕಿನ್ನರ ಕಥೆಗಳನ್ನು ಹೋಲುವ ಸಾಧ್ಯತೆಯುಂಟು. ಪುರಾಣಕಥೆಗಳು ಧಾರ್ಮಿಕ ನಂಬಿಕೆಗಳಿಗೆ ಮತ್ತು ನಡಾವಳಿಗಳಿಗೆ ಹೆಚ್ಚಾಗಿ ಸಂಬಂಧಿಸಿರುತ್ತವೆ. ಆರ್. ಆರ್. ಮಾರೆಟ್ ಹೇಳುವ ಹಾಗೆ, ಇವುಗಳ ಕೆಲಸ ಕುತೂಹಲವನ್ನು ತೃಪ್ತಿಪಡಿಸುವುದಿಲ್ಲ, ನಂಬಿಕೆಯನ್ನು ಸ್ಥಿರಪಡಿಸುವುದು.

ಮೇಲಿನದಷ್ಟೇ ಹೆಚ್ಚು ಕಡಿಮೆ ಗೊಂದಲಕ್ಕೆ ಅವಕಾಶ ಕೊಟ್ಟಿರುವ ಮತ್ತೊಂದು ಪ್ರಕಾರ ಐತಿಹ್ಯದ ಕಥೆ. ಕೆಲವು ಭಾಷೆಗಳಲ್ಲಿ ಇದು ಸಾಧು ಜೀವನಕ್ಕೆ ಸಂಬಂಧಿಸಿದ್ದು. ಕೆಲವರು ಐತಿಹ್ಯ ಮತ್ತು ಸಂಪ್ರದಾಯಗಳನ್ನು ಜೊತೆಯಲ್ಲಿಯೇ ನೋಡಲು ಯತ್ನಿಸಿದ್ದಾರೆ. ಐತಿಹ್ಯಗಳಲ್ಲಿ ಸೃಷ್ಟಿಗೆ ಸಂಬಂಧಿಸಿದ ವಿವರಣಾತ್ಮಕ ಐತಿಹ್ಯಗಳು, ಅತಿಮಾನುಷ ವ್ಯಕ್ತಿಗಳನ್ನು ಕುರಿತ ಐತಿಹ್ಯಗಳು ಮತ್ತು ಚಾರಿತ್ರಿಕ ಆಭಾಸದ ಐತಿಹ್ಯಗಳು ಎಂದು ಮೂರು ವಿಭಾಗಗಳಿರುತ್ತವೆ. ಇವು ನಡೆದ ಘಟನೆಗಳ ಪಳೆಯುಳಿಕೆಗಳು. ಕಥೆಗಾರನಿಂದ ನಂಬಿ ಬಂದವುಗಳು. ಗೊತ್ತಾದ ಸ್ಥಳ ಕಾಲಗಳಿಗೆ ಸಂಬಂಧಿಸಿದವುಗಳು. **ನೋಡಿ– ಐತಿಹ್ಯ.**

ಜನಪದ ಕಥೆಗಳಲ್ಲೆಲ್ಲ ಸುಲಭವಾಗಿ ಪ್ರಯಾಣ ಮಾಡಬಹುದಾದ, ಹೆಚ್ಚು ಪ್ರಮಾಣದಲ್ಲಿ ದೊರೆಯಬಹುದಾದ ಕಥೆಗಳೆಂದರೆ ಕಿನ್ನರ ಕಥೆಗಳು. ಇದರಷ್ಟು ಓದುಗರನ್ನು ಸೂರೆಗೊಳ್ಳಬಲ್ಲ ಪ್ರಕಾರ ಮತ್ತೊಂದಿಲ್ಲ. ಇದರಲ್ಲಿರುವ ಅದ್ಭುತ ರಂಜಕತೆ ಹಾಗೂ ಸಾಹಸಪ್ರಿಯತೆಗಳೇ ಇದಕ್ಕೆ ಕಾರಣ. ಇಲ್ಲಿ ಬರುವ ಪಾತ್ರಗಳೆಲ್ಲ ಬಹುತೇಕವಾಗಿ ರಾಜರಾಣಿಯರು, ಮಂತ್ರಿಮುಖ್ಯರು. ನಡೆಯುವುದು ಒಂದಾನೊಂದು ಊರಿನಲ್ಲಿ, ಒಂದಾನೊಂದು ಕಾಲದಲ್ಲಿ. ಸಾಕಷ್ಟು ದೀರ್ಘವಿರುವ ಈ ಕಥೆಗಳಲ್ಲಿ ಒಬ್ಬ ನಾಯಕ ಅಥವಾ ನಾಯಿಕೆ ಇರುತ್ತಾರೆ. ಹಾಸ್ಯ ಅಲ್ಲಲ್ಲಿ ಕಂಡುಬಂದರೂ ಒಟ್ಟಾರೆ ಇವು ಗಂಭೀರ ಕೃತಿಗಳು. ನಿರ್ಗತಿಕನೂ ದೀನನೂ ಆಗಿ ಮೊದಮೊದಲು ಕಾಣಿಸಿಕೊಂಡ ನಾಯಕ ಹಲವಾರು ಸಾಹಸಕೃತ್ಯಗಳನ್ನು ಎಸಗಿದಮೇಲೆ ನಿರೀಕ್ಷಿಸಿದ ಗುರಿಗೆ ತಲಪುತ್ತಾನೆ. ಕಥೆ ನಾಯಕ ನಾಯಕಿಯರ ವಿವಾಹದಲ್ಲಿ ಮುಕ್ತಾಯಗೊಳ್ಳುತ್ತದೆ. ಇಲ್ಲಿ ಅತಿಮಾನುಷ ವಸ್ತುಗಳದು ಮಹತ್ತ್ವದ ಪಾತ್ರ. ಕಿನ್ನರ ಕಥೆಯ ಪ್ರತಿ ವರ್ಗದಲ್ಲೂ ಹಲವಾರು ಆಶಯಗಳು ಸಂಘಟಿತವಾಗಿರುತ್ತವೆ. ಮಾತ್ರವಲ್ಲ, ಆಶಯಗಳಿಂದಲೇ ಕಥೆ ಬೆಳೆಯುತ್ತ ಹೋಗುತ್ತದೆ. ವಿವರಗಳಿಗೆ **ನೋಡಿ– ಕಿನ್ನರ ಕಥೆ.**

ಜನಪದ ಕಥೆಗಳಲ್ಲೇ ಅತ್ಯಂತ ಪ್ರಾಚೀನವಾದುದು ಪ್ರಾಣಿಕಥೆ. ಮಾನವನ ನಾಗರಿಕತೆಯ ಪೂರ್ವಸ್ಥಿತಿಯ ಸೃಷ್ಟಿ ಇದೆಂಬುದು ಕೆಲವರ ಮತ. ಮನುಷ್ಯ ತನ್ನ ಶೈಶವಾಸ್ಥೆಯಿಂದ ತಾಳಿದ ಕುತೂಹಲ, ಆಸಕ್ತಿಗಳೇ ಇಂಥ ಕಥನಕಲೆಗೆ ಕಾರಣವಾಗಿರಬೇಕು. ಆದಿವಾಸಿಯ ಜೀವನದ ಮೇಲೆ ಪ್ರಭಾವ ಬೀರಿದ ಅತ್ಯಂತ ದೊಡ್ಡ ಶಕ್ತಿಗಳಲ್ಲಿ ಪ್ರಕೃತಿ ಪ್ರಧಾನವಾದುದರಿಂದ ಸಹಜವಾಗಿಯೇ ಆತ ಇದರ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿರಬೇಕು. ವಾಸ್ತವವಾಗಿ ಪ್ರಾಣಿಕಥೆಗಳು ಮೊದಮೊದಲು ಪ್ರಾಕೃತಿಕ ವಿಷಯಗಳ ವಿವರಣೆಗಳಾಗಿದ್ದು, ಉತ್ತರ ಸ್ಥಿತಿಯಲ್ಲಿ ನೀತಿಕಥೆಗಳಾಗಿ ಮಾರ್ಪಾಡಾಗಿರಬೇಕೆಂದು ತೋರುತ್ತದೆ. ಪ್ರಾಣಿಕಥೆಗಳು ರಚನೆಯಲ್ಲಿ ಅತ್ಯಂತ ಚಿಕ್ಕವು. ಸರಳತೆ ಇಲ್ಲಿ ಎದ್ದು ಕಾಣುವ ಗುಣ. ಪ್ರಾಣಿಗಳ ರೂಪ ಸ್ವರೂಪಗಳನ್ನು ಕುರಿತ ವಿವರಣೆಯೇ ಇವುಗಳ ಉದ್ದೇಶ. ಪ್ರಾಣಿಕಥೆಗಳಲ್ಲಿ ಶುದ್ಧ ಪ್ರಾಣಿಕಥೆಗಳು ಮತ್ತು ಮಾನವ ಪಾತ್ರವಹಿಸುವ ಪ್ರಾಣಿಕಥೆಗಳು ಎಂದು ಎರಡು ವಿಧ. ಇವನ್ನು ಕಾರ್ಯಕಾರಣಕಥೆಗಳು, ನೀತಿಕಥೆಗಳು ಮತ್ತು ಪ್ರಾಣಿ ಪುರಾಣ ಕಾವ್ಯ ಎಂದು ಮೂರು ವಿಭಾಗಗಳಲ್ಲಿ ಗುರುತಿಸಬಹುದು. ಈ ಎಲ್ಲ ಪ್ರಾಣಿಕಥೆಗಳೂ ನಾಲ್ಕು ಮುಖ್ಯ ಮೂಲಗಳಲ್ಲಿ ದೊರಕುತ್ತವೆ ಭಾರತದ ಸಾಹಿತ್ಯಿಕ ನೀತಿಕಥೆಗಳು, ಈಸೋಪನ ನೀತಿಕಥೆಗಳು, ಮಧ್ಯಯುಗದ ಸಾಹಿತ್ಯಿಕ ಪ್ರಾಣಿಕಥೆಗಳು ಮತ್ತು ವಾಕ್ಸಂಪ್ರದಾಯದ ಪ್ರಾಣಿಕಥೆಗಳು. ಈ ಎಲ್ಲ ಸಂಪ್ರದಾಯ ಪ್ರವಾಹಗಳ ಪರಸ್ಪರ ಪ್ರಭಾವ ಸಂಬಂಧದಿಂದಾಗಿ ಇವುಗಳಲ್ಲಿ ಬಹಳ ಸಂದಿಗ್ಧತೆ ಮೂಡಿದೆ.

ಪ್ರಾಣಿಕಥೆಯ ಮುಂದಿನ ರೂಪವೇ ನೀತಿಕಥೆ. ನೀತಿಯೇ ಇಲ್ಲಿಯ ಪ್ರಧಾನ ಉದ್ದೇಶ. ಪ್ರಾಣಿಗಳೇ ಇಲ್ಲಿನ ಪಾತ್ರಗಳು. ಪ್ರಾಣಿ ಪಾತ್ರವಹಿಸದ ನೀತಿಕಥೆಗಳೂ ದೊರೆಯುತ್ತವೆ. ಎಷ್ಟೋ ಸಾರಿ ಪ್ರಾಣಿಕಥೆಗಳಿಗೂ ನೀತಿಕಥೆಗಳಿಗೂ ಇರುವ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗುತ್ತದೆ. ಪ್ರಾಣಿಗಳ ಗುಣಾವಗುಣಗಳ ವಿವರಣೆ ಇವುಗಳ ಗುರಿಯಲ್ಲ. ಮಾನವನಿಗೆ ನೀತಿ ಬೋಧಿಸುವುದೇ ಇವುಗಳ ಉದ್ದೇಶ. ನಿರೂಪಣೆಯಿಂದ ಪ್ರಾರಂಭವಾದ ಕಥೆ ನೀತಿವಾಕ್ಯವೊಂದರಿಂದ ಮುಕ್ತಾಯವಾಗುತ್ತದೆ. ರಚನೆಯಲ್ಲಿ ಇವು ಬಹಳ ಚಿಕ್ಕವು. ಇಂಥ ನೀತಿಕಥೆಗಳು ಪ್ರಾಣಿಕಥೆಗಳಿಗಿಂತ ಪ್ರಾಚೀನ ಎಂದು ದುರ್ಗಾ ಭಾಗವತ್ ಅಭಿಪ್ರಾಯಪಡುತ್ತಾರೆ. ಆದರೆ ಇದು ನಾಗರಿಕತೆಯ ಪೂರ್ವಸ್ಥಿತಿಯ ಸೃಷ್ಟಿಯಾಗಿರದೆ ನಾಗರಿಕತೆ ಸಂಸ್ಕೃತಿಗಳು ಸಾಕಷ್ಟು ಬೆಳೆವಣಿಗೆ ಹೊಂದಿದ ಅನಂತರಕಾಲದ ಸೃಷ್ಟಿಯೆಂದೇ ಭಾವಿಸಬೇಕಾಗುತ್ತದೆ. ಅಲ್ಲದೆ, ನೀತಿಕಥೆ ಮೂಲತಃ ಸಾಹಿತ್ಯಿಕ ಸೃಷ್ಟಿಯಾಗಿದ್ದು, ಅನಂತರ ಜಾನಪದ ಸಂಪ್ರದಾಯಕ್ಕೆ ಬಂದಿರಬೇಕೆಂದು ವಿದ್ವಾಂಸರ ಮತ.

ಜನಪದ ಕಥೆಗಳಲ್ಲಿ ಹೆಸರಿಸಬೇಕಾದ ಮತ್ತೊಂದು ಪ್ರಕಾರವೆಂದರೆ ವಿನೋದ ಕಥೆ. ಇದು ಸ್ವಭಾವತಃ ಚಿಕ್ಕದಾಗಿದ್ದು, ಹಾಸ್ಯಪ್ರಧಾನವಾಗಿರುತ್ತದೆ. ಪ್ರಾಣಿಗಳು ಪಾತ್ರವಹಿಸಬಹುದಾದರೂ ಮಾನವ ಪಾತ್ರಗಳೇ ಹೆಚ್ಚು. ದೈನಂದಿನ ಜೀವನವೇ ಇದರ ವಸ್ತು. ಮನೋರಂಜನೆಯೇ ಇದರ ಉದ್ದೇಶ. ಇದರಲ್ಲಿ ಒಂದೇ ಆಶಯವಿರಬಹುದು; ಇಲ್ಲವೆ, ಅನೇಕ ಆಶಯಗಳೂ ಬರಬಹುದು. ಇಲ್ಲಿ ವಾಸ್ತವಿಕತೆ ಮುಖ್ಯವೇ ಹೊರತು, ಅತಿಮಾನುಷತೆಯಲ್ಲ. ಇಲ್ಲಿ ಬರುವ ಪಾತ್ರಗಳೆಲ್ಲ ದಡ್ಡರು, ಹೆಡ್ಡರು–ಸಾಮಾನ್ಯ ತಿಳಿವಳಿಕೆಯೂ ಇಲ್ಲದ ಮೂರ್ಖರು. ವಿನೋದಕಥೆ ಕೆಲವು ಸಾರಿ ನೀತಿಯನ್ನೂ ಹೇಳಬಹುದು. ಸೀಮಿತ ಉದ್ದೇಶವೊಂದನ್ನು ಪ್ರತಿಪಾದಿಸುವುದಕ್ಕಾಗಿ ಹೊರಟ ಈ ಕಥನಪ್ರಕಾರ ಕಲಾತ್ಮಕ ಸೃಷ್ಟಿಯೆಂದೇ ಹೇಳಬೇಕು.

ಜನಪದ ಸಾಹಿತ್ಯದಲ್ಲಿ ಕಥೆಯಂತೆಯೇ ಒಗಟೂ ಒಂದು ಪ್ರಕಾರ. ಆದರೆ ಕೆಲವು ಸಾರಿ ಇವೆರಡಕ್ಕೂ ಸಂಬಂಧವಿರುವುದು ಒಂದೇ ವಿಶೇಷ. ಇವು ಒಗಟಿನ ಕಥೆಗಳೆಂದು ಹೆಸರಾಗಿವೆ. ಇಂಥ ಒಗಟುಗಳಲ್ಲಿ ವರ ಅಥವಾ ವಧುವಿನ ಪರೀಕ್ಷೆಗೆ ಒಡ್ಡಲಾಗುತ್ತಿದ್ದುದು ಒಂದು ಗುಂಪು. ಅಕ್ರಮ ಪ್ರಣಯಕ್ಕೆ ಸಂಬಂಧಪಟ್ಟವು ಮತ್ತೊಂದು ಗುಂಪು. ಈ

ಎರಡು ವಿಧಾನಗಳಲ್ಲೂ ಹೆಣ್ಣೇ ಪ್ರಮುಖ ಪಾತ್ರ ವಹಿಸುವುದು ಗಮನಾರ್ಹ. ಒಗಟು ಕಥೆಗಳ ಬಗ್ಗೆ ಮಾತನಾಡುತ್ತ ದುರ್ಗಾ ಭಾಗವತರು 'ಕೂಟಕಥಾ' ಮತ್ತು 'ಕಥಾಪ್ರಹೇಲಿಕಾ' ಎಂಬೆರಡು ಕಥನ ಮಾದರಿಗಳ ಕಡೆಗೆ ಗಮನ ಸೆಳೆಯುತ್ತಾರೆ. ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಈ ಕಥನ ಪ್ರಕಾರಗಳ ಹೆಸರುಗಳು ಕ್ರಮವಾಗಿ ಹೇಮಚಂದ್ರನ ತ್ರಿಷಷ್ಟಿಶಲಾಕಾಪುರುಷಚರಿತ ಮತ್ತು ಜಂಭಾಲದತ್ತನ ಬೇತಾಳ ಪಂಚವಿಂಶತಿ ಗ್ರಂಥಗಳಲ್ಲಿ ಕಾಣಿಸಿಕೊಳ್ಳುವುದನ್ನು ಅವರೇ ಉಲ್ಲೇಖಿಸಿದ್ದಾರೆ. ಆದ್ದರಿಂದ ಮಧ್ಯಯುಗದ ಭಾರತದಲ್ಲಿ ಇಂಥ ಪ್ರಕಾರ ಪ್ರಚಲಿತವಾಗಿತ್ತು ಎಂಬುದು ಅವರ ವಾದ. ಸ್ಟಿತ್ ಥಾಂಸನ್ ಕೂಡ ಈ ಕಥೆಗಳ ಮೂಲವನ್ನು ಮಧ್ಯಕಾಲೀನ ಕೃತಿಗಳಲ್ಲಿ ಹುಡುಕಿರುವುದು ಗಮನಾರ್ಹ. ಇವು ಮೂಲದಲ್ಲಿ ಸಾಹಿತ್ಯಿಕವಾಗಿರಬೇಕೆಂದೂ ಅನಂತರ ಜನಪದ ಕಥೆಗಾರರಿಂದ ಸ್ವೀಕೃತವಾಗಿರಬೇಕೆಂದೂ ಆತ ಅಭಿಪ್ರಾಯಪಡುತ್ತಾನೆ.

ಮೇಲಿನ ವಿಭಾಗಕ್ರಮದಲ್ಲಿ ಎಷ್ಟೇ ಎಚ್ಚರ ವಹಿಸಿದರೂ ಒಂದರಲ್ಲಿ ಮತ್ತೊಂದು ಕಾಣಿಸಿಕೊಳ್ಳುವುದನ್ನು ಪೂರ್ಣವಾಗಿ ತಪ್ಪಿಸಲು ಸಾಧ್ಯವಾಗಿಲ್ಲ. ಇವುಗಳಲ್ಲದೆ ಅತಿಮಾನಷ ಕಥೆಗಳು, ಮಾಂತ್ರಿಕ ಕಥೆಗಳು, ರಮ್ಯಕಥೆಗಳು, ಅದ್ಭುತ ಕಥೆಗಳು, ಸಾಹಸಕಥೆಗಳು, ಕಾಲ್ಪನಿಕ ಕಥೆಗಳು ಮುಂತಾಗಿ ವಿಭಾಗಿಸಲು ಸಾಧ್ಯವಿದೆ. ಈ ಎಲ್ಲದರಿಂದ ಗೊತ್ತಾಗುವುದು ಇಷ್ಟೆ: ಇಂಥ ಯಾವುದೇ ವಿಭಾಗಕ್ರಮ ಸಮರ್ಪಕವಾಗಿರುವುದು ಕಷ್ಟ. ಆದರೆ ಇತ್ತೀಚೆಗೆ ಜನಪದ ಕಥೆಗಳನ್ನು ವರ್ಗ ಮತ್ತು ಆಶಯಗಳ ಮೇಲೆ ವರ್ಗೀಕರಿಸುವ ವಿಧಾನ ಪ್ರಸಿದ್ಧಿಗೆ ಬರುತ್ತಿದೆ (**ನೋಡಿ– ಕಥಾವರ್ಗ ; ಜನಪದ ಆಶಯಗಳು**).

**ಜನಪದ ಕಥೆಯ ಸಿದ್ಧಾಂತಗಳು :** ಜನಪದ ಕಥೆಯನ್ನು ಕುರಿತ ಅತ್ಯಂತ ಚರ್ಚಾಸ್ಪದ ವಿಷಯವೆಂದರೆ ಅದರ ಮೂಲ ಮತ್ತು ಪ್ರಸಾರವನ್ನು ಕುರಿತದ್ದು. ಇದರ ಬಗೆಗಿನ ನಮ್ಮ ತಿಳಿವಳಿಕೆ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಕಳೆದ ಶತಮಾನದ ಕಡೆಯ ವರ್ಷಗಳಲ್ಲಿ ಇದರ ಬಗ್ಗೆ ಹೆಚ್ಚು ಆಸಕ್ತಿ ಕಂಡುಬಂದದ್ದಲ್ಲದೆ, ಹಲವಾರು ಸಂಶೋಧನೆಯ ಹೊಸಬಾಗಿಲುಗಳೇ ತೆರೆದವು. ಹೀಗೆ ನೂತನ ಮಾರ್ಗಗಳನ್ನು ತೆರೆದವರಲ್ಲಿ ಗ್ರಿಮ್, ಬೆನ್ಫೆ, ಮ್ಯಾಕ್ಸ್‌ಮುಲ್ಲರ್, ಆ್ಯಂಡ್ರೂ ಲ್ಯಾಂಗ್, ಟೇಲರ್ ಮತ್ತು ಫ್ರಾಂಜ್ ಬೊಯಸ್ ಅತ್ಯಂತ ಪ್ರಮುಖರಾದವರು. ಜನಪದ ಕಥೆಯ ಪ್ರಾರಂಭಾವಸ್ಥೆ, ಅರ್ಥವ್ಯಾಪ್ತಿ, ಪ್ರಸಾರಸಾಮಾನ್ಯತೆ, ಭಿನ್ನತೆ ಹಾಗೂ ಸಂಬಂಧ ಸ್ವಾರಸ್ಯಗಳು ಇವರ ವಿಷಯಗಳಾದುವು. ಫಲವಾಗಿ ವಾದ ಪ್ರತಿವಾದಗಳು ಕಾಣಿಸಿಕೊಂಡವು. ತಮ್ಮದೇ ಸಿದ್ಧಾಂತಗಳನ್ನು ಇವರು ಹರಿಯಬಿಟ್ಟರು. ಆ ಎಲ್ಲ ಸಿದ್ಧಾಂತಗಳ ಸವಿವರ ಚರ್ಚೆಗೆ ಹೋಗದೆ ಪ್ರಮುಖವಾದವನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದು.

ಮೊದಲಿಗೆ ಗಮನಿಸಬಹುದಾದ ಎರಡು ಪ್ರಸಿದ್ಧ ಸಿದ್ಧಾಂತಗಳೆಂದರೆ ಇಂಡೋ–ಯೂರೋಪಿಯನ್ ಸಿದ್ಧಾಂತ ಮತ್ತು ಪುರಾಣಮೂಲ ಸಿದ್ಧಾಂತ. ಗ್ರಿಮ್ ಸೋದರರೇ ಈ ಎರಡೂ ತತ್ತ್ವಗಳ ಪ್ರವರ್ತಕರು. ಜನಪದ ಕಥೆಗಳ ಮೂಲ ಸಾದೃಶ್ಯಗಳನ್ನು ಕಂಡುಕೊಂಡ ಇವರು, ಅದರ ಅಂತಾರಾಷ್ಟ್ರೀಯತೆಯನ್ನು ಒಪ್ಪಿಕೊಂಡರು. ಹಾಗೆ ಒಪ್ಪಿಕೊಂಡಮೇಲೆ ಈ ಕಥನವೃತ್ತಗಳ ಮೂಲವನ್ನು ಹುಡುಕಲು ಹೊರಟು ಕಡೆಗೆ ಎರಡು ಪ್ರಮುಖ ನಿರ್ಣಯಕ್ಕೆ ಬಂದರು: ಕಥೆಗಳು ಇಂಡೊ–ಯುರೋಪಿಯನ್ ವಂಶ ಮೂಲದಿಂದ ಬಂದಿರಬೇಕು ಮತ್ತು ಪುರಾಣಗಳೇ ಒಡೆದು ಅನಂತರ ಜನಪದ ಕಥೆಗಳಾಗಿರಬೇಕು. ಇವುಗಳಲ್ಲದೆ ಅವರು ಇನ್ನೂ ಎರಡು ವಿಷಯಗಳನ್ನು ಹೇಳಿದ್ದುಂಟು. ಸಂದರ್ಭಗಳು ತೀರ ಸರಳ ಮತ್ತು ಸಹಜವಾಗಿದ್ದು ಎಲ್ಲ ಕಡೆಗೂ ಪುನರಾವರ್ತಿಸುವುದು; ಜನತೆಯಿಂದ ಜನತೆಗೆ ಕಥೆಗಳು ಸ್ವೀಕೃತವಾಗುವುದು. ಅರ್ಧ ಶತಮಾನದ ತರುವಾಯ ಬಹುತೇಕವಾಗಿ ಪ್ರತಿಪಾದಿತವಾದ ಈ ತತ್ತ್ವಗಳನ್ನು ಗ್ರಿಮ್ ಸೋದರರೇ ಕಂಡುಕೊಂಡಿದ್ದು ಕಾಲದ ದೃಷ್ಟಿಯಿಂದ ಮಹತ್ತ್ವದಾಗಿದೆ. ಆದರೆ ಮೊದಲು ಎರಡು ಸಿದ್ಧಾಂತಗಳು ಮಾತ್ರ ಕ್ರಮೇಣ ಮನ್ನಣೆಯನ್ನು ಕಳೆದುಕೊಂಡುವು.

ಯುರೋಪಿಯನ್ ಭಾಷೆಗಳ ಸಾದೃಶ್ಯದಿಂದ ಜನಪದ ಕಥೆಗಳ ಸಾದೃಶ್ಯವನ್ನು ಗಮನಿಸಿ, ಒಂದೇ ಭಾಷೆಯನ್ನಾಡುವ ಜನಾಂಗವೊಂದರಿಂದ ಈ ಎಲ್ಲ ಜನಪದ ಕಥೆಗಳೂ ಬಂದಿರಬಹುದೆಂಬ ಗ್ರಿಮ್ ಸೋದರರ ಸಿದ್ಧಾಂತ ಹತ್ತೊಂಬತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡ ತೌಲನಿಕ ಭಾಷಾವಿಜ್ಞಾನದ ಫಲ ಎಂಬುದು ನಿರ್ವಿವಾದ. ಜನಾಂಗದ ಮೂಲವನ್ನೂ ಭಾಷೆಗಳ ಮೂಲವನ್ನೂ ಪತ್ತೆಹಚ್ಚಿದರೆ ಜನಪದ ಕಥೆಗಳ ಮೂಲವನ್ನೂ ಪತ್ತೆಹಚ್ಚಿದಂತಾಗುತ್ತದೆ. ಜನಾಂಗ ಹಾಗೂ ಭಾಷೆಗಳ ವಿತರಣೆ ಪ್ರಸಾರಗಳಿಗೆ ತಕ್ಕಂತೆ ಕಥೆಗಳ ವಿತರಣೆ ಪ್ರಸಾರಗಳು ಇರುತ್ತವೆ. ಭಾಷೆಯಾಗಲಿ ಜನಾಂಗವಾಗಲಿ ಮೂಲತಃ ಎಷ್ಟು ಎಂಬುದರ ಮೇಲೆ ಕಥನ ಸಂಪ್ರದಾಯಗಳು ನಿಂತಿವೆ. ಇದು ಗ್ರಿಮ್ ಸಿದ್ಧಾಂತದ ವಿವರ. ಈ ರೀತಿಯ ಸಂಶೋಧನೆ ಜನಪದ ಕಥೆಯ ಮೂಲವನ್ನು ತಿಳಿಸುವುದಕ್ಕಿಂತ ಹೆಚ್ಚಾಗಿ ಜನಾಂಗದ ಮೂಲವನ್ನೂ ಭಾಷೆಯ ಮೂಲವನ್ನೂ ತಿಳಿಸುತ್ತದೆ. ಇದಲ್ಲದೆ ಹೀಗೆ ವಾದಿಸುವವರು ಋಗ್ವೇದದ ಮೂಲಕ ಇಂಡೊ–ಯುರೋಪಿಯನ್ನರ ಜೀವನವಿಧಾನಗಳನ್ನು ರೂಪಿಸುತ್ತಾರೆ. ಋಗ್ವೇದದಲ್ಲಿರುವಂತೆ ಇಂಡೋ–ಯುರೋಪಿಯನ್ನರು ತಮ್ಮ ದೈನಂದಿನ ಜೀವನದಲ್ಲಿ ರಹಸ್ಯಾರ್ಥದಲ್ಲಿ ವ್ಯವಹರಿಸುತ್ತಿದ್ದರಂತೆ. ಈ ದೃಷ್ಟಿಯಿಂದಲೇ ಇಂಡೋ–ಯುರೋಪಿಯನ್ ಪುರಾಣ ಮತ್ತು ಕಥೆಗಳು ಬಂದಿರಬೇಕೆಂದು ಇವರ ವಾದ. ಜನಪದ ಕಥೆಗಳು ಆರ್ಯ ಮೂಲದಿಂದ ಬಂದಿರ ಬಹುದೆಂದು ಒಪ್ಪಿಕೊಂಡು ರೂಪಿತವಾದ ಇಂಡೋ–ಯುರೋಪಿಯನ್ ಸಿದ್ಧಾಂತ ಆರ್ಯೇತರ ಉದಾಹರಣೆಗಳು ಸಿಕ್ಕಿದಾಗ ಸೋಲನ್ನು ಅನುಭವಿಸಬೇಕಾಯಿತು. ಜನಪದ ಕಥೆಗಳು ಪುರಾಣದಿಂದ ನಿಷ್ಪನ್ನವಾದವು ಎಂದು ತೋರಿಸಲು ಹೊರಟ ಎರಡನೆಯ ವಾದ ಸಂದಿಗ್ಧತೆಯನ್ನು ತಂದುದಲ್ಲದೆ, ನಿರ್ದಿಷ್ಟ ಕಾರಣಗಳನ್ನು ಹೇಳದೆ ಬಿದ್ದುಹೋಯಿತು.

ಐರೋಪ್ಯ ವಿದ್ವಾಂಸರು ವೇದಗಳೇ ಮುಂತಾದ ಗ್ರಂಥಗಳ ಅಧ್ಯಯನ ಹಾಗೂ ಕಥನ ಸಾಹಿತ್ಯದ ಅಭ್ಯಾಸದಿಂದ, ಹಲವಾರು ಜನಪದ ಕಥೆಗಳು ಭಾರತೀಯ ಕಥನ ಸಾಹಿತ್ಯದಲ್ಲಿರುವುದನ್ನು ಕಂಡರು. ಆಗ ಸಹಜವಾಗಿಯೇ ಕೆಲವರು ಭಾರತೀಯ ಕಥೆಗಳಿಗೆ ಯೂರೋಪನ್ನು ಮೂಲವನ್ನಾಗಿ ಸೂಚಿಸಿದರು. ಇನ್ನು ಕೆಲವರು ಯುರೋಪಿನ ಎಲ್ಲ ಕಥೆಗಳಿಗೂ ಭಾರತೀಯ ಮೂಲವನ್ನು ಉಲ್ಲೇಖಿಸಿದರು. ಹೀಗೆ ಯುರೋಪಿನ ಸಮಸ್ತ ಕಥೆಗಳಿಗೆ ಭಾರತ ಮೂಲವನ್ನು ಸೂಚಿಸಿ ಹೊರಟ ಸಿದ್ಧಾಂತವೇ ಭಾರತೀಯ ಮೂಲಸಿದ್ಧಾಂತ ಎನ್ನಿಸಿಕೊಂಡಿತು. ಇದಕ್ಕೆ ಕಾರಣನಾದವ ಬೆನ್ಫೆ. ಈತ 1859ರಲ್ಲಿ ತನ್ನ ಪಂಚತಂತ್ರದ ಪ್ರಸ್ತಾವನೆಯಲ್ಲಿ ಇದರ ವಿವರವಾದ ಚರ್ಚೆ ನಡೆಸಿದ್ದಾನೆ.

ಪಂಚತಂತ್ರದ ಕಥೆಗಳ ಉಗಮ ವಿಕಾಸಗಳನ್ನು ಕುರಿತ ಅಧ್ಯಯನದ ಫಲವಾಗಿ, ಬೆನ್ಫೆ ಜಗತ್ತಿನ ಎಲ್ಲ ಜನಪದ ಕಥೆಗಳೂ ವಲಸೆ ಹೋಗಿರಬೇಕೆಂಬ ನೂತನ ಸಿದ್ಧಾಂತಕ್ಕೆ ಬಂದ. ಈ ಕಥಾಪ್ರಸಾರ ಒಂದು ಕಡೆ ಇಸ್ಲಾಮಿಗಳಿಂದ ಮತ್ತೊಂದು ಕಡೆ ಬೌದ್ಧರಿಂದ ಆಗಿರಬೇಕೆಂದು ಅವನ ನಂಬಿಕೆ. ಹೀಗೆ ಯುರೋಪಿನ ಎಲ್ಲ ಕಥೆಗಳಿಗೆ ಭಾರತೀಯ ಮೂಲವನ್ನು ಹೇಳುವಾಗ ಈಸೋಪನ ನೀತಿಕಥೆಗಳನ್ನು ಹೊರತುಪಡಿಸಿದುದು ಗಮನಿಸಬೇಕಾದ ಸಂಗತಿ. ಬೆನ್ಫೆಯ ಈ ಸಿದ್ಧಾಂತ ಕ್ರಮೇಣ ಲೋಕಪ್ರಸಿದ್ಧಿಯನ್ನು ಪಡೆದುಕೊಂಡಿತು. ಆದರೆ ತನ್ನಲ್ಲಿರುವ ಅಸಮರ್ಪಕತೆಯಿಂದ ನಿಲ್ಲಬಲ್ಲ ಸಿದ್ಧಾಂತವಾಗಿ ಉಳಿಯಲಿಲ್ಲ. ಅವನ ಸಿದ್ಧಾಂತವನ್ನು ಒಪ್ಪಲಿ ಬಿಡಲಿ, ಜನಪದ ಕಥೆಗಳ ತೌಲನಿಕ ಅಧ್ಯಯನದ ಪಿತಾಮಹನಾಗಿ ಅವನ ಹೆಸರು ಚಿರಸ್ಥಾಯಿಯಾಯಿತು.

ಪ್ರಾಯಶಃ ಈ ಸಿದ್ಧಾಂತದ ಬಲವಾದ ವಿರೋಧಿಯೆಂದರೆ ಆ್ಯಂಡ್ರೂ ಲ್ಯಾಂಗ್‌ನೆಂದೇ ಹೇಳಬೇಕು. ಈತ ಭಾರತೀಯ ಮೂಲವಾದವನ್ನು ಅಲ್ಲಗಳೆದ. ಪ್ರತ್ಯೇಕ ಮೂಲಗಳ ಕಡೆಗೆ ಬೆರಳು ಚಾಚಿದ. ಈಜಿಪ್ಷಿಯನ್ ಕಥೆಗಳು ಮತ್ತು ಹೀರಡಟಸ್ ಮತ್ತು ಹೋಮರರಲ್ಲಿ ಉಕ್ತವಾಗಿರವ ಕಥೆಗಳನ್ನು ಇದಕ್ಕೆ ಬಲವಾದ ಕಾರಣಗಳಾಗಿ ಒಡ್ಡಿದ. ಹೀಗೆ ಭರತಖಂಡವೇ ಕಥೆಗಳ ಏಕಮಾತ್ರ ಉಗಮಸ್ಥಾನವೆಂಬುದನ್ನು ವಿರೋಧಿಸಿ, ಇಲ್ಲಿಯ ಕಥೆಗಳಂತೆಯೇ ಬೇರೆ ಕಡೆಯಲ್ಲೂ ಕಥೆಗಳಿದ್ದವು ಎಂಬುದನ್ನು ಕಂಡುಕೊಂಡ. ಆದರೆ ಇದಕ್ಕೆ ಲ್ಯಾಂಗ್ ತನ್ನದೇ ಆದ ವಿವರಣೆಯನ್ನು ನೀಡಿದ.

ಜನಪದ ಕಥೆಗಳಲ್ಲಿ ಪುರಾತನ ಭಾವನೆಗಳು ಕಂಡುಬರುವುದರಿಂದ ಅವು ಪುರಾತನ ಕಾಲದ ಉಳಿಕೆಗಳು ಎಂಬುದಾಗಿ ಲ್ಯಾಂಗ್ ಅಭಿಪ್ರಾಯಪಡುತ್ತಾನೆ. ಕಥೆಗಳಲ್ಲಿನ ಸಾದೃಶ್ಯಗಳು ವಾಸ್ತವವಾಗಿ ಭಿನ್ನ ಪ್ರದೇಶಗಳ ಸ್ವತಂತ್ರ ಸೃಷ್ಟಿಯ ಫಲಗಳೆಂದು ಬಹುಬೇಗ ಪತ್ತೆಹಚ್ಚಿಕೊಂಡ ಲ್ಯಾಂಗ್, ಕಥೆಗಳು ಪ್ರಾಚೀನ ಮಾನವನ ಸಂಪ್ರದಾಯ ಮತ್ತು ಪದ್ಧತಿಗಳಿಗನುಗುಣವಾಗಿ ರಚಿತವಾಗಿರುತ್ತವೆ ಎಂಬುದನ್ನು ಸಾರಿದ. ಸಮಾನ ಕಥೆಗಳಿಗೆ ಸಮಾನ ಸಂಸ್ಕೃತಿಗಳೇ ಕಾರಣ ಎಂಬುದು ಇದರ ಒಟ್ಟು ಅಭಿಪ್ರಾಯ. ಮಾನವರೆಲ್ಲ ಸಮಾನವಾಗಿ ಯೋಚಿಸುತ್ತಾರೆ ಎಂಬುದು ಕಥೆಗಳ ಉಗಮ, ಪ್ರಸಾರಗಳಲ್ಲಿ ಸ್ಫೋಟಕ ಸತ್ಯವಾಯಿತು. ಪುರಾತನ ಮಾನವಭಾವನೆಗಳ ಮತ್ತು ಸಂಸ್ಕೃತಿಸಮಾನತೆಗಳ ಮೇಲೆ ರಚಿತವಾದ ಈ ಸಿದ್ಧಾಂತ ಪಳೆಯುಳಿಕೆ ಸಿದ್ಧಾಂತವೆಂದು ಪ್ರಸಿದ್ಧವಾಗಿದೆ. 19ನೆಯ ಶತಕದ ಕಡೆಕಡೆಗೆ ಪ್ರಬಲವಾಗಿ ಕಾಣಿಸಿಕೊಂಡ ಇವನ ವಾದ ಜಾನಪದ ವಿದ್ವಾಂಸರಲ್ಲಿ ಬಹಳ ಮುಖ್ಯವಾದುದೆಂದು ಪರಿಗಣಿತವಾಯಿತು. ಇವನ ಮೇಲೆ ಇಂಗ್ಲಿಷ್ ಮಾನವಶಾಸ್ತ್ರಜ್ಞರ ಪ್ರಭಾವ ಬಿದ್ದಿರಬೇಕು. 19ನೆಯ ಶತಕದ ಮಧ್ಯಭಾಗದ ಹೊತ್ತಿಗೆ ಕಾಣಿಸಿಕೊಂಡ ಮಾನವಶಾಸ್ತ್ರೀಯ ಪಂಥ ಪುರಾತನ ಮಾನವನ ಅಧ್ಯಯನದಲ್ಲಿ ತೊಡಗಿತ್ತು. ಈ ಪಂಥದಲ್ಲಿ ಪ್ರಮುಖನೆಂದರೆ ಇ.ಬಿ. ಟೆಕೇಂಯ್‌ಲರ್. ಈತನ ಸಂಶೋಧನೆಗಳು ಲಾಂಗನ ಮೇಲೆ ಪರಿಣಾಮವನ್ನುಂಟುಮಾಡಿರಬೇಕು. ಅಲ್ಲದೆ ಲ್ಯಾಂಗ್ ಕೂಡ ಮಾನವಶಾಸ್ತ್ರೀಯ ಪಂಥದ ಅನುಯಾಯಿ. ಪಳೆಯುಳಿಕೆ ಸಿದ್ಧಾಂತ ಮೂಲತಃ ಮಾನವಶಾಸ್ತ್ರದಲ್ಲಿ ಟೇಲರನಿಂದ ಪ್ರಖ್ಯಾತಿಗೆ ಬಂದದ್ದು. ಇದನ್ನು ಪರಿಷ್ಕರಿಸಿ ಜಾನಪದಕ್ಕೆ ಅನ್ವಯಿಸಿದ್ದು ಲ್ಯಾಂಗ್. ಈ ಸಿದ್ಧಾಂತವೂ ಮುಂದಿನವರಿಂದ ವಿಮರ್ಶಿತವಾಗಿ ಮಾರ್ಪಾಡು ಹೊಂದಿತು.

ಜನಪದ ಕಥೆಗಳಲ್ಲಿ ಕಾಣಬರುವ ಆಶಯಗಳು ಪುರಾತನ ಜೀವನದ ಉಳಿಕೆಗಳು ಮತ್ತು ಅನುಭವಗಳು ಎಂಬುದರ ಕಡೆಗೆ ಮಾನವಶಾಸ್ತ್ರಜ್ಞರು ಕೊಟ್ಟ ಲಕ್ಷ್ಯದ ಫಲವಾಗಿ ಜನಪದ ಕಥೆಯ ಉಗಮ ವಿಕಾಸದಲ್ಲಿ ಹೊಸ ಅಧ್ಯಾಯವೊಂದು ತೆರೆಯಿತು. ಈ

ಸಂದರ್ಭದಲ್ಲಿ ಇಂಗ್ಲೆಂಡಿನಲ್ಲಿ ಹೊರಟ ಮಾನವಶಾಸ್ತ್ರೀಯ ಪಂಥ ಗಮನಾರ್ಹವಾದುದು. ಈ ಪಂಥದ ವಿದ್ವಾಂಸರು ಆಶಯಗಳ ಮೂಲಕ ಜನಪದ ಕಥೆಯ ಉಗಮ, ವಿಕಾಸಗಳನ್ನು ಅಧ್ಯಯನ ಮಾಡಿದರು. ಯೂರೋಪಿನ ಪುರಾತನ ಕಥೆಗಳಲ್ಲಿನ ಆಶಯಗಳ ಅಧ್ಯಯನದಿಂದ, ಹಲವಾರು ಕಥೆಗಳು ಗೊತ್ತಾದ ಪ್ರದೇಶಗಳಿಗೆ ಸೇರಿದ್ದು, ಸೀಮಿತ ವಿತರಣೆಯನ್ನು ಪಡೆದುಕೊಂಡಿರುತ್ತವೆ ಎಂಬುದನ್ನು ತಿಳಿಸಿದರು. ಆದರೆ ವರ್ಗವಾಗಲಿ, ಆಶಯಗಳಾಗಲಿ ತಮಗೆ ತಾವೇ ಪುರಾತನ ಸ್ವಭಾವವನ್ನು ವ್ಯಕ್ತಪಡಿಸುತ್ತವೆ ಎಂಬುದರಲ್ಲಿ ಇವರಿಗೆ ನಂಬಿಕೆಯಿರಲಿಲ್ಲ. ಅವುಗಳ ಶೋಧನೆಯಿಂದ ನಿಜವಾದ ಮೂಲವನ್ನು ಕಂಡುಹಿಡಿಯಬೇಕಾಗಿದೆ ಎಂಬುದು ಅವರ ತಿಳಿವಳಿಕೆ.

ಜನಪದ ಕಥೆಯ ಉಗಮ, ವಿಕಾಸಗಳಲ್ಲಿ ಜಾನಪದ ಮತ್ತು ಮಾನವಶಾಸ್ತ್ರಗಳ ಪೂರಕ ಅಧ್ಯಯನ ಹೊಸ ಆಯಾಮವನ್ನು ಕಲ್ಪಿಸಿತು. ಪುರಾತನ ಕಥನದ ಈ ರೀತಿಯ ಅಧ್ಯಯನದಲ್ಲಿ ಪ್ರಖ್ಯಾತ ಹೆಸರೆಂದರೆ ಬೊಯಸ್‌ನದು. ಅಮೆರಿಕದ ಮಾನವ ಶಾಸ್ತ್ರೀಯ ಪಂಥದ ಮುಖ್ಯ ನೇತಾರನಾದ ಇವನ ಸಿದ್ಧಾಂತ ಕಥೆಗಳ ಬಹು ಮೂಲ ಸಿದ್ಧಾಂತ ಎಂದು ಪ್ರಸಿದ್ಧವಾಗಿದೆ. ಹಲವು ಪ್ರತ್ಯೇಕ ಮೂಲಗಳಿಂದ ಜನಪದ ಕಥೆಗಳನ್ನು ಹುಡುಕುವುದೇ ಈ ಸಿದ್ಧಾಂತದ ಉದ್ದೇಶ. ಜನಪದ ಕಥೆಯನ್ನು ಕುರಿತಂತೆ ಬೊಯಸ್‌ನ ವಿಚಾರಗಳು ಅಧ್ಯಯನಯೋಗ್ಯವಾದವು. ಆತ ಮೊಟ್ಟಮೊದಲು ಜನಪದ ಕಥೆ ಮತ್ತು ಪುರಾಣಕ್ಕಿರುವ ಅಂತರವನ್ನು ಕಡಿಮೆಗೊಳಿಸಿದ. ಇವೆರಡರಲ್ಲಿಯೂ ಇರುವ ವಿಷಯ ಒಂದೇ ಎಂದು ಸಾರಿದ. ಪುರಾಣದ ವಸ್ತು ಜನಪದ ಕಥೆಗೆ ಹರಿದಿರಬಹುದು ಅಥವಾ ಕಥೆಯ ವಸ್ತು ಪುರಾಣಕ್ಕೆ ಹರಿದಿರಬಹುದು; ಪುರಾಣ ಮತ್ತು ಜನಪದ ಕಥೆಗಳಲ್ಲಿ ನಿರೂಪಿತವಾಗಿರುವ ಸಂಗತಿಗಳು ಅವು ಪುರಾತನ ಕಲೆಗಳೆಂಬುದನ್ನು ನಿರ್ಧರಿಸುತ್ತವೆ. ಈಗ ಗೊತ್ತಾದ ಬುಡಕಟ್ಟಿನಲ್ಲಿ ಅಥವಾ ವರ್ಗದಲ್ಲಿ ಏನು ನಡೆಯುತ್ತಿದೆ ಎಂಬುದರ ಮೂಲಕ ಪ್ರಾಚೀನ ಕಾಲದಲ್ಲಿ ಏನು ನಡೆದಿತ್ತು ಎಂಬುದನ್ನು ಪತ್ತೆಹಚ್ಚಬಹುದೆಂದು ಬೊಯಸ್‌ನ ವಾದ. ಇವೆರಡರಲ್ಲಿಯೂ ಕಥನದ ಉಗಮಕ್ಕೆ ಮಾನವಜೀವನದ ಸಂಗತಿಗಳ ಕಲ್ಪನೆಗಳ ಕಾರ್ಯವೇ ಕಾರಣ. ಆದರೆ ಈ ಕಲ್ಪನೆಯ ಕಾರ್ಯ ಪರಿಮಿತವಾದುದು. ಆದ್ದರಿಂದ ಪ್ರತಿಯೊಂದು ಪ್ರವೃತ್ತಿಯೂ ನೂತನವಾದುದೊಂದನ್ನು ಕಂಡುಹಿಡಿಯುವುದಕ್ಕಿಂತ ಸಂಗ್ರಹಿತವಾದ ಹಳೆಯ ಕಲ್ಪನಾ ಘಟನೆಗಳನ್ನೇ ಇಟ್ಟುಕೊಂಡು ಕಾರ್ಯ ನಡೆಸುತ್ತದೆ ಎಂದು ಬೊಯಸ್ ಹೇಳಿದ. ಹೀಗೆ ಜನಪದ ಕಥೆಯ ಉಗಮ, ವಿಕಾಸಗಳ ಅಧ್ಯಯನದಲ್ಲಿ ಬೊಯಸ್‌ನದು ದೊಡ್ಡ ಹೆಸರಾಗಿದೆ.

ಕಥೆಗಳ ಉಗಮವನ್ನು ಕುರಿತ ಇಂಡೊ–ಯುರೋಪಿಯನ್ ಮತ್ತು ಪುರಾಣ ಮೂಲಸಿದ್ಧಾಂತಗಳು 19ನೆಯ ಶತಮಾನದ ಕೊನೆಯ ಭಾಗದ ಹೊತ್ತಿಗೆ ಹೇಗೆ ತಮ್ಮ ಮೌಲ್ಯವನ್ನು ಕಳೆದುಕೊಂಡುವು ಎಂಬುದನ್ನು ಹಿಂದೆ ನೋಡಿದ್ದೇವೆ. ಆದರೆ ಪ್ರಪಂಚದ ಕಥೆಗಳಿಗೆ ಸಂಬಂಧಪಟ್ಟಂತೆ ಇವನ್ನು ಅನ್ವಯಿಸಿದ ಕೆಲವು ಮಾನವಶಾಸ್ತ್ರಜ್ಞರಿಗೆ ಇದು ಪೂರ್ಣವಾಗಿ ಮುಕ್ತಾಯವಾಗಿರಲಿಲ್ಲವೆಂದೇ ಹೇಳಬೇಕು. ಇವರು ಪುರಾಣದ ತೌಲನಿಕ ಅಧ್ಯಯನದ ಕಡೆಗೆ ಗಮನ ಕೊಟ್ಟರು. ಪ್ರಪಂಚದ ಎಲ್ಲ ಪುರಾಣಕಥೆಗಳೂ ಬೇರೆ ಬೇರೆ ರೀತಿಯಲ್ಲಿ ಕಂಡರೂ ಅವುಗಳಿಂದ ಬೋಧೆಯಾಗುವ ವಸ್ತು ಒಂದೇ ಎಂಬುದನ್ನು ಇವರು ಗಮನಕ್ಕೆ ತಂದುಕೊಂಡರು. ಇಲ್ಲಿಯ ಎಲ್ಲ ಕಥೆಗಳೂ ಕೆಲವು ಕೇಂದ್ರಗಳಿಂದ ಪ್ರಸಾರವಾಗಿರಬೇಕೆಂದು ಹೇಳಿ, ಅವುಗಳ ಆಂತರಿಕ ಸಂಬಂಧದ ಕಡೆಗೆ ಗಮನ ಸೆಳೆದರು. ಪ್ರತಿ ಪುರಾಣಕಥೆಯ ಅರ್ಥವನ್ನು ವಿಶ್ಲೇಷಿಸಿ, ಅದು ಪ್ರಾಕೃತಿಕ ವಿಷಯಗಳಿಂದ ಘಟಿತವಾಗಿರುವುದನ್ನು ಪ್ರತಿಪಾದಿಸಿದರು. ಇವರ ಈ ಸಿದ್ಧಾಂತಕ್ಕೆ ಪ್ರಕೃತಿಸಂಕೇತಸಿದ್ಧಾಂತ ಎಂದು ಹೆಸರಾಯಿತು. ಇದರ ಮುಖ್ಯ ಪ್ರತಿಪಾದಕನೆಂದರೆ ರೈಕ್. ಪ್ರಕೃತಿಸಂಪರ್ಕದಿಂದ ಮಾನವ, ಪುರಾಣದ ಅರ್ಥಾತ್ ಜನಪದ ಕಥೆಯ ಸೃಷ್ಟಿಗೆ ಕಾರಣನಾಗಿರಬೇಕು ಎಂಬುದು ಇವನ ವಾದ. ಜಗತ್ತಿನ ಎಲ್ಲ ಕಡೆಯಲ್ಲೂ ಕಾಣಬರುವ ಇಂಥ ಪ್ರಕೃತಿ ವಿಷಯಗಳೆಂದರೆ ಸೂರ್ಯ, ಚಂದ್ರ, ನಕ್ಷತ್ರಗಳೆಂದು ಇವನ ಅಭಿಪ್ರಾಯ. ಆದರೆ ಆದಿವಾಸಿಗಳು ಸೂರ್ಯ, ಚಂದ್ರ ಮುಂತಾದ ದೇವತೆಗಳ ಸಂಪರ್ಕವನ್ನು ಪಡೆದಿದ್ದರೆಂಬುದಕ್ಕೆ ಆಧಾರಗಳು ಸಿಗುವುದಿಲ್ಲ. ಆದ್ದರಿಂದ ರೈಕ್‌ನ ವಾದ ವಾಸ್ತವಕ್ಕೆ ದೂರವಾಗಿಯೇ ನಿಲ್ಲುತ್ತದೆ. ಇವನ ಸಿದ್ಧಾಂತವನ್ನು ಲೂವಿ ಎಂಬ ಅಮೆರಿಕದ ಮಾನವಶಾಸ್ತ್ರಜ್ಞ ತೀವ್ರವಾಗಿ ವಿರೋಧಿಸುತ್ತಾನೆ. ಅನೇಕ ಸ್ಥಳೀಯ ಪುರಾಣಗಳು ಸ್ಥಳೀಯ ಸಂಕೇತಗಳನ್ನು ಬಳಸುವುದು ಹೆಚ್ಚು ಸಾಧ್ಯ. ಆದ್ದರಿಂದ ಸ್ಥಳೀಯ ಸಂಕೇತಗಳನ್ನು ತೆಗೆದುಕೊಳ್ಳುವುದರಿಂದ ಮಾತ್ರ ಪುರಾಣಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ ಎಂಬುದು ಇವನ ತರ್ಕ. **ನೋಡಿ– ಇಂಡೋ–ಯುರೋಪಿಯನ್ ಅಥವಾ ಮೈಥಲಾಜಿಕಲ್–ಸಿದ್ಧಾಂತ**.

ಪುರಾತನ ಜೀವನದ ಮತ್ತೊಂದು ಮುಖ್ಯವಾದ ಲಕ್ಷಣವೆಂದರೆ ಧರ್ಮಸಂಬಂಧವಾದ ಕ್ರಿಯೆಗಳು. ಇದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕೆಲವರು ಜನಪದ ಕಥೆಗಳ ಉಗಮಕ್ಕೆ ಮತಧರ್ಮದ ಪ್ರಕ್ರಿಯೆಗಳನ್ನು ಕಾರಣವಾಗಿ ಒಡ್ಡಿದರು. ಪುರಾತನ ಧಾರ್ಮಿಕ ಮತಧರ್ಮದ ಪ್ರಕ್ರಿಯೆಗಳನ್ನು ಕಾರಣವಾಗಿ ಒಡ್ಡಿದರು. ಪುರಾತನ ಧಾರ್ಮಿಕ ಕ್ರಿಯೆಗಳು ಸಾಮಾನ್ಯವಾಗಿ ನಡೆಯುತ್ತಿದ್ದುದು ಸತ್ತವನು ಮತ್ತೆ ಎದ್ದು ಬರದಿರಲೆಂದು. ಈ ಸತ್ತಮನುಷ್ಯನಿಂದ (ದೆವ್ವ) ಹೆಚ್ಚು ತೊಂದರೆಯಾಗುತ್ತದೆಂದು ಅವರು ನಂಬಿಕೊಂಡಿದ್ದಿರಬೇಕು; ಇಲ್ಲವೆ, ಹಾಗೆ ಆಗುತ್ತಿದ್ದಿರಬೇಕು. ಆದ್ದರಿಂದ ಈ ಮತಾಚರಣೆಗಳನ್ನು ತಂದಿರಬೇಕೆಂದು ತೋರುತ್ತದೆ. ಎಲ್ಲ ಜನಪದ ಕಥೆಗಳಲ್ಲೂ ಇದನ್ನು ಕಾಣಬಹುದು. ಈ ಮತಾಚರಣೆ ಸಾರ್ವತ್ರಿಕ ವಾಗಿರುವುದರಿಂದಲೇ ಆಶಯ ಕೂಡ ಸಾರ್ವತ್ರಿಕವಾಗಿರುತ್ತದೆ. ಸಾವಿನ ಬಗ್ಗೆ ಇದ್ದ ಭಯವೇ ಪ್ರಾಚೀನ ಮಾನವನಿಗೆ ದೆವ್ವದ ಅಥವಾ ರಾಕ್ಷಸನ ಕಥೆಗಳನ್ನು ಕಟ್ಟಿಕೊಳ್ಳಲು ಕಾರಣವಾಗಿದ್ದಿರಬೇಕು. ಹೀಗೆ ಪುರಾತನ ಮಾನವನ ನಂಬಿಕೆ, ನಡಾವಳಿ, ಸಂಪ್ರದಾಯ, ಮತಾಚರಣೆಗಳ ಮೂಲಕ ವಿಶ್ವದ ಕಥೆಗಳೆಲ್ಲದರ ಮೂಲ ಮತ್ತು ಸಾಮ್ಯವನ್ನು ಗುರುತಿಸಲು ಹೊರಟವರೆಂದರೆ ನ್ಯೂಯಮನ್ ಮತ್ತು ಜೆನ್ನೇಪರು. ವಾಸ್ತವವಾಗಿ ಏನು ನಡೆದಿತ್ತು ಎಂಬುದಕ್ಕಿಂತ ಕಲ್ಪಿತ ವಿಷಯವೇ ಇಲ್ಲಿ ಹೆಚ್ಚಾಗಿರುವುದರಿಂದ ಈ ವಾದ ದೋಷದಿಂದ ತುಂಬಿಕೊಂಡಿದೆ.

ಇವಲ್ಲದೆ ಕಾರ್ಯಕಾರಣ ಪಂಥ, ಮನಶ್ಶಾಸ್ತ್ರೀಯ ಪಂಥ, ಚಾರಿತ್ರಿಕ ಭ್ರಾಮಕ ಪಂಥ, ಪ್ರಸಾರಪಂಥ ಇತ್ಯಾದಿ ಹಲವಾರು ಸಿದ್ಧಾಂತಗಳು ಪ್ರಚಲಿತವಾಗಿವೆ. ಆದರೆ ಈ ಯಾವುದೇ ಸಿದ್ಧಾಂತ ತನಗೆ ತಾನೇ ಸ್ವಯಂಪೂರ್ಣವಾಗಿಲ್ಲ. ಕಥಾಮೂಲದ ವಿಷಯವಂತೂ ಸಂಪೂರ್ಣ ವಿಶ್ವಸನೀಯವಲ್ಲ.

ಹೀಗೆ ಪಶ್ಚಿಮ ಮತ್ತು ಮಧ್ಯ ಯುರೋಪಿನಲ್ಲಿ ಭಿನ್ನ ಸಿದ್ಧಾಂತಗಳ ಮಧ್ಯೆ ವಾದವಿವಾದಗಳಿದ್ದಾಗ, ಫಿನ್ಲೆಂಡಿನ ನೂತನ ಸಿದ್ಧಾಂತವೊಂದು ಕಾಲೇವಾಲದ ಅಧ್ಯಯನ ದಿಂದ ಸಿದ್ಧವಾಯಿತು. ಇದರ ಸ್ಥಾಪಕರು ಜೂಲಿಯಸ್ ಕ್ರೋಹ್ನ ಮತ್ತು ಅವನ ಮಗ ಕಾರ್ಲೆ ಕ್ರೋಹ್ನರು. ಇವರು ಪ್ರತಿಪಾದಿಸಿದ ಸಿದ್ಧಾಂತವೇ ಇಂದು ಜಗದ್ವಿಖ್ಯಾತಿಯನ್ನು ಪಡೆದಿರುವ ಚಾರಿತ್ರಿಕ–ಭೌಗೋಳಿಕ ವಿಧಾನ (**ನೋಡಿ– ಚಾರಿತ್ರಿಕ–ಭೌಗೋಳಿಕ–ವಿಧಾನ**). ಜಗತ್ತಿನ ಎಲ್ಲ ಕಡೆಯಲ್ಲಿಯೂ ವಿತರಣೆಯಾಗಿರುವ ಕಥೆಗಳಿಗೆ ಪ್ರೇರಕವಾಗಿರುವ ಮೂಲಪ್ರತಿಯನ್ನು ಕಂಡುಹಿಡಿಯುವುದೇ ಇದರ ಉದ್ದೇಶ.

ಹೀಗೆ ಹಲವಾರು ವಿಖ್ಯಾತ ವಿದ್ವಾಂಸರು ಜನಪದ ಕಥೆಯ ಮೂಲರೂಪವನ್ನು ಪುನಾರಚಿಸುವುದರಲ್ಲಿ ತುಂಬ ಶ್ರಮಿಸಿದ್ದಾರೆ. ಅವರ ಎಲ್ಲ ಅಧ್ಯಯನ ಗಮನಾರ್ಹ ಬೆಳವಣಿಗೆಯನ್ನು ತೋರಿದೆ. ಪ್ರಾಯಶಃ ಜನಪದ ಕಥೆಯ ಭಾಗದಲ್ಲಿ ನಡೆದಿರುವಷ್ಟು ಕೆಲಸ ಜನಪದ ಸಾಹಿತ್ಯದ ಮತ್ತಾವ ಭಾಗದಲ್ಲೂ ನಡೆದಿಲ್ಲವೆಂದೇ ಹೇಳಬೇಕು. ಇದಕ್ಕೆ ಮೇಲೆ ವಿವರಿಸಲಾಗಿರುವ ಭಿನ್ನಸಿದ್ಧಾಂತಗಳೇ ಸಾಕ್ಷಿ. ಹೀಗೆ ಕೈಗೊಂಡ ಅಧ್ಯಯನದಲ್ಲಿ ಜಾನಪದ ವಿದ್ವಾಂಸರೊಡನೆ ಮಾನವಶಾಸ್ತ್ರಜ್ಞರೂ ಮನಶ್ಶಾಸ್ತ್ರಜ್ಞರೂ ಕೆಲಸ ಮಾಡಿದ್ದಾರೆ. ಜನಪದ ಕಥೆಯ ಮೂಲರೂಪದ ಬಗ್ಗೆ ವಿಶೇಷವಾದ ಬೆಳಕನ್ನು ಚೆಲ್ಲಿದ್ದಾರೆ. ಆದರೆ ನಿರ್ಣಾಯಕ ವಿಷಯ ಮಾತ್ರ ಇನ್ನೂ ಸಿದ್ಧವಾಗಿಲ್ಲ. ಜಗತ್ತಿನ ಕಥೆಗಳ ಸಮಗ್ರ ಸಂಗ್ರಹ, ಸುವ್ಯವಸ್ಥಿತ ವ್ಯವಸ್ಥೆ ಹಾಗೂ ಸಮರ್ಥ ವಿಶ್ಲೇಷಣೆಗಳಿಂದ ಪುರಾತನ ಮಾನವನ ಬೌದ್ಧಿಕ ಹಾಗೂ ಸಾಂಸ್ಕೃತಿಕ ಜ್ಞಾನವನ್ನು ಸಮರ್ಪಕವಾಗಿ ನಿವೇದಿಸಬೇಕಾಗಿದೆ. (ಆರ್.ಜಿ.)

ಈಗ ಜನಪದಕಥೆಯ ಮೂಲವನ್ನು ಹುಡುಕುವ ಅಥವಾ ಅವುಗಳ ಸಾಂಸ್ಕೃತಿಕ ಸಂಬಂಧಗಳನ್ನು ಹುಡುಕುವ ಸಿದ್ಧಾಂತಗಳು ಪ್ರಸ್ತುತ ಎನಿಸುತ್ತಿಲ್ಲ. ಪ್ರಯೋಜನ ಉದ್ದೇಶಿತ ಜಗತ್ತು ಹೆಚ್ಚು ಮುಂದೆ ಕಾಣಿಸಿಕೊಳ್ಳತೊಡಗಿದ್ದು ಜನಪದ ಕಥೆಯ ಅಧ್ಯಯನದಲ್ಲಿ ಇದು ಕಾಣಿಸಿಕೊಂಡಿದೆ. ಜನಪದದ ಒಂದು ಅಂಶ ಕ್ರಿಯಾಶೀಲವಾಗಿರುವ ಸಂದರ್ಭದಲ್ಲಿ ಏನೇನು ಹೇಳುತ್ತಿರಬಹುದು ಎಂಬುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಈ ಹೊತ್ತಿನ ಜನಪದ ವಿದ್ವಾಂಸರು ಜಗತ್ತಿನಾದ್ಯಂತ ಕೆಲಸಮಾಡುತ್ತಿದ್ದಾರೆ.

**ಜನಪದ ಕೈಗಾರಿಕೆಗಳು :** ಜನಪದ ಕೈಗಾರಿಕೆಗಳು ಮುಖ್ಯವಾಗಿ ಎಲ್ಲ ಬಗೆಯ ಜನಪದ ವೃತ್ತಿಗಳಿಗೂ ಅನ್ವಯವಾಗುತ್ತವೆ. ಜನಪದರು ತಮ್ಮ ನಿತ್ಯ ಬದುಕಿಗೆ ಎಲ್ಲ ಬಗೆಯ ವಸ್ತುಗಳನ್ನೂ ಆಯಾ ಕಸಬಿನಲ್ಲಿ ಪರಿಣತರಾದವರಿಂದ ಪಡೆದುಕೊಳ್ಳುತ್ತಿದ್ದರು. ಇಂಥ ಪರಿಣತರು ವಂಶಪಾರಂಪರ್ಯವಾಗಿ ತಮ್ಮ ಕಸಬನ್ನು ರೂಢಿಸಿಕೊಂಡು ಬರುತ್ತಿದ್ದರು. ಸಾಮಾನ್ಯವಾಗಿ ಒಂದೊಂದು ಹಳ್ಳಿಯಲ್ಲೂ ಎಲ್ಲ ಕಸಬುಗಳನ್ನೂ ಬಲ್ಲ ಕುಟುಂಬಗಳಿರುತ್ತಿದ್ದುವು. ಒಂದೇ ಎಡೆಯಲ್ಲಿ ಅಂಥ ಜನ ಸಿಕ್ಕದಿದ್ದಾಗ ಅಕ್ಕಪಕ್ಕದ ಹಳ್ಳಿಗಳಿಂದ ಅಂಥವರ ಸಹಾಯವನ್ನು ಪಡೆಯುತ್ತಿದ್ದರು. ಮೊದಲಿನ ಸ್ಥಾನಮಾನ ಇಂಥ ವೃತ್ತಿಗಳಿಗೆ ಈಗ ಇಲ್ಲವಾದರೂ ಅವುಗಳ ಮಹತ್ತ್ವ ಸಂಪೂರ್ಣವಾಗಿ ಕಳೆಗುಂದಿಲ್ಲ. ಸಮಾಜದಲ್ಲಿ ಮೈತಳೆದ ಹಲವಾರು ಬಗೆಯ ಜಾತಿಗಳಿಗೂ ಈ ಬಗೆಯ ವೃತ್ತಿಗಳೇ ಕಾರಣವೆನ್ನಬಹುದು. ಪ್ರತಿಯೊಂದು ಸಮಾಜದಲ್ಲಿಯೂ ಇಂಥ ಕೈಗಾರಿಕೆಗಳು ಇದ್ದೇ ಇರುತ್ತವೆ.

ಜನಪದ ಕೈಗಾರಿಕೆ ಅಪಾರವಾಗಿದ್ದು, ವೈವಿಧ್ಯಮಯವಾಗಿದೆ. ಈ ನಿಟ್ಟಿನಲ್ಲಿ ಅನೇಕ ಜನಪದ ಕೈಗಾರಿಕೆಯ ಕಸಬಿನವರನ್ನು ಹೆಸರಿಸಬಹುದು. ಈ ಹೆಸರುಗಳೆಲ್ಲ ಆ ವೃತ್ತಿಯವರ ಜಾತಿಯ ಹೆಸರಿನಂತೆ ಭಾಸವಾದರೂ ಅವು ಅವರವರ ವೃತ್ತಿ ಎಂಥದೆಂಬುದನ್ನು

ಸೂಚಿಸುತ್ತವೆ. ಅವರು ಮಾಡುವ ಕಸಬಿನಿಂದಾಗಿಯೇ ಅವರಿಗೆ ಆ ಹೆಸರು ಬಂದಿದೆ. ಬಡಗಿ, ಕುಂಬಾರ, ಕಮ್ಮಾರ, ಕೊರಮ, ಬೇಡ, ಬೆಸ್ತ, ಮಗ್ಗದವ, ಕಂಬಳಿ ನೇಯ್ಗೆಯವ, ಅಕ್ಕಸಾಲಿಗ, ಚಮ್ಮಾರ, ಗಾಣಿಗ, ಒಡ್ಡ, ಈಡಿಗ, ಮೇದರವ, ಹಗ್ಗ ಹೊಸೆಯುವವ–ಹೀಗೆ ಹಲವಾರು ಬಗೆಯ ಜನಪದ ವೃತ್ತಿಗಾರರನ್ನು ಇಂದಿಗೂ ಕಾಣಬಹುದಾಗಿದೆ.

1 ಬಡಗಿಗಳು : ವ್ಯವಸಾಯಕ್ಕೆ ಅಗತ್ಯವಾಗಿ ಬೇಕಾದ ಹಲವು ಬಗೆಯ ಉಪಕರಣಗಳನ್ನು ಮಾಡಿಕೊಡುವುದರ ಜೊತೆಗೆ, ಮನೆ ಕಟ್ಟಲು ಬೇಕಾದ ಮರದ ಸಾಮಾನುಗಳು, ಗಾಡಿ, ಅದಕ್ಕೆ ಅಗತ್ಯವಾದ ನೊಗ ಮುಂತಾದುವನ್ನೂ ಮಾಡುತ್ತಾರೆ. ಅಲ್ಲದೆ, ಇತರ ಕುಶಲ ಕೆತ್ತನೆಯ ಕೆಲಸದಲ್ಲಿಯೂ ಇವರು ಹೆಸರಾದವರು. ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ ಬಳಸುವ ಹಸೆಮಣೆ, ತೇವಟಿಗೆ, ಮರದ ದೀಪದ ಕಂಬ, ಮೊಸರು ಕಡೆಯುವ ಮಂತು, ಮತ್ತು ಮರದ ಗೊಂಬೆ ಮುಂತಾದುವನ್ನೂ ಇವರು ಅಂದವಾಗಿ ಕೆತ್ತಿ ಮಾರಾಟ ಮಾಡುತ್ತಾರೆ. ಯಕ್ಷಗಾನ ಕಲೆಗೆ ಬೇಕಾದ ಹಲವು ಬಗೆಯ ಮರದ ಆಭರಣವಿಶೇಷಗಳನ್ನು ಮಾಡಿಕೊಡುವವರೂ ಇವರೇ. ಈ ದೃಷ್ಟಿಯಿಂದ ಮರಗೆಲಸ ಲಾಭದಾಯಕವಾದ ಸಣ್ಣ ಪ್ರಮಾಣದ ಕೈಗಾರಿಕೆಯೇ ಆಗಿದೆ.

2 ಕುಂಬಾರರು : ಹಳ್ಳಿಯಲ್ಲಿ ದಿನನಿತ್ಯದ ಮನೆಬಳಕೆಗೆ ಬೇಕಾಗುವ ನಾನಾ ಬಗೆಯ ಮಡಕೆ ಕುಡಿಕೆಗಳನ್ನು, ಹೆಂಚುಗಳನ್ನು, ಮಣ್ಣಿನ ದೀಪಗಳನ್ನು ದೊಡ್ಡ ಪ್ರಮಾಣದ ಗುಡಾಣಗಳನ್ನು ಇವರು ಅಂದವಾಗಿ ತಯಾರಿಸುತ್ತಾರೆ. ಇವುಗಳಿಗೆ ಪರ್ಯಾಯವಾಗಿ ಬೇರಾವುದನ್ನೂ ಬಳಸುವ ಸಾಧ್ಯತೆಯಿಲ್ಲದೆ ಇದ್ದ ಒಂದು ಕಾಲದಲ್ಲಿ ಈ ಉದ್ಯಮಗಳು ಅತ್ಯಂತ ಲಾಭದಾಯಕವಾದುವೇ ಆಗಿತ್ತು.

3 ಕಮ್ಮಾರರು : ಉಳುವ ನೇಗಿಲಿಗೆ ಬೇಕಾದ ಕುಳ, ಜಿಗಣಿ, ಗಾಡಿಗೆ ಬೇಕಾದ ಕಬ್ಬಿಣದ ಸಾಮಾನುಗಳು, ಇತರ ವ್ಯವಸಾಯೋಪಕರಣಗಳಾದ ಕಳೆಕುಡ್ಲು, ಕುಂಟೆತಾಳು, ಹೊಲ ಕುಯ್ಯುವ ಕುಡ್ಲು, ಗುದ್ದಲಿ, ಕೊಡಲಿ, ಕೈಬಾಚಿ, ಕೈ ಕೊಡಲಿ ಹಾಗೂ ಮನೆಯ ಬಾಗಿಲಿಗೆ ಬೇಕಾಗುವ ಕಬ್ಬಿಣದ ಸಾಮಾನು ಇವೆಲ್ಲವನ್ನೂ ಇವರು ಮಾಡುತ್ತಾರೆ. ಈ ಯಂತ್ರಯುಗದಲ್ಲಿಯೂ ಕುಲುಮೆಯ ಕೆಲಸ ಕಣ್ಮರೆಯಾಗಿಲ್ಲ.

4 ಕೊರಮರು : ವಿವಿಧೋಪಯೋಗಗಳಿಗೆ ಬೇಕಾಗುವ ಬುಟ್ಟಿ, ಕುಕ್ಕೆ, ಕುಂದಲಿಗೆ, ಮೊರ, ತೊಟ್ಟಿಲು, ಬೀಸಣಿಗೆ, ಬತ್ತ ರಾಗಿ ತುಂಬುವ ಪೆಟ್ಟೆ, ರೇಷ್ಮೆಹುಳುಗಳನ್ನು ಸಾಕಲು ಬಳಸುವ ತಟ್ಟೆ (ಚಂದ್ರಿಕೆ) ಇವನ್ನು ಈಚಲ ಕಡ್ಡಿಗಳಿಂದ ಹೆಣೆಯುವ ವೃತ್ತಿಯವರು. ಇವರು ತಯಾರಿಸುವ ಎಲ್ಲ ಬಗೆಯ ವಸ್ತುಗಳಿಗೂ ಹೆಚ್ಚಿನ ಬೇಡಿಕೆ ಇದೆ. ಕಾಡಿನಲ್ಲಿ ಬೆಳೆಯುವ ಒಂದು ಬಗೆಯ ಹುಲ್ಲಿನಿಂದ ಇವರು ಗುಡಿಸುವ ಹಿಡಿ, ಪಾತ್ರೆಗಳನ್ನಿಡುವ ಸಿಂಬಿ ಮೊದಲಾದುವನ್ನೂ ಮಾಡುತ್ತಾರೆ.

ಮೇದರವರಿಂದ ಬುಟ್ಟಿ ಹೆಣಿಗೆ

ಈ ಜನಪದ ಕೈಗಾರಿಕೆ ಹೆಚ್ಚು ಲಾಭದಾಯಕವಾಗಿದೆ. ಹೆಚ್ಚಾಗಿ ಹಣಕ್ಕೇ ಇವುಗಳನ್ನು ಮಾರುತ್ತಾರೆಯಾದರೂ ಮೊರ, ಕುಕ್ಕೆ–ಮುಂತಾದ ಸಣ್ಣಪುಟ್ಟ ವಸ್ತುಗಳನ್ನು ದವಸಧಾನ್ಯಗಳಿಗೆ ಪ್ರತಿಯಾಗಿ ಕೊಡುವುದೂ ಉಂಟು. ಸಣ್ಣಸಣ್ಣ ವಸ್ತುಗಳನ್ನು ಮನೆಮನೆಗೆ ಹೊತ್ತು ಮಾರುವುದರ ಜೊತೆಗೆ, ಸಂತೆ, ಜಾತ್ರೆಗಳಲ್ಲಿ ಈ ವಸ್ತುಗಳ ಮಾರಾಟವನ್ನು ಕಾಣಬಹುದು. ಈ ಕೈಗಾರಿಕೆ ಇಂದಿಗೂ ಜೀವಂತವಾಗಿ ಉಳಿದಿದೆ.

5 ಮಗ್ಗ : ಜನಪದ ಕೈಗಾರಿಕೆಗಳಲ್ಲಿ ಮಗ್ಗದ ಕಸಬು ಹೆಚ್ಚು ಲಾಭದಾಯಕವಾದ ಉದ್ದಿಮೆಯಾಗಿತ್ತು. ಯಂತ್ರಯುಗದ ಆರಂಭಕ್ಕೆ ಮುನ್ನ ಬಟ್ಟೆಯ ಬೇಡಿಕೆಯನ್ನು ಪೂರೈಸುವ ಪೂರ್ಣ ಜವಾಬ್ದಾರಿ ಇವರದ್ದಾಗಿತ್ತು. ಈ ವೃತ್ತಿಯನ್ನು ಮಾಡುವವರು ಮಗ್ಗದ ಶೆಟ್ಟರು. ಇವರನ್ನು ನೇಯ್ಗೆಯವರು, ಕೈಮಗ್ಗದವರು ಎಂದೂ ಕರೆಯುತ್ತಾರೆ. ಮಗ್ಗವನ್ನು ಸಾಮಾನ್ಯವಾಗಿ ಮನೆಯ ಒಳಗೇ ಹಾಕಿಕೊಂಡಿರುತ್ತಾರೆ. ನೇಯುವುದಕ್ಕೆ ಪೂರ್ವಭಾವಿಯಾಗಿ ದಾರಕ್ಕೆ ಬಣ್ಣ ಕಟ್ಟುವ, ಅದನ್ನು ಒಣಗಿಸಲು ಅನುಕೂಲವಾಗುವ ರೀತಿಯಲ್ಲಿ ಮನೆಯ ಮುಂದೆ ವ್ಯವಸ್ಥೆಗೊಳಿಸಿಕೊಂಡಿರುತ್ತಾರೆ. ಇವರು ನೇಯುವ ಸೀರೆಗಳು ಇಂದಿಗೂ ಜನಪದರಲ್ಲಿ ಹೆಚ್ಚು ಬಳಕೆಯಲ್ಲಿವೆ. ಅವರು ಅವುಗಳಲ್ಲದೆ ಬೇರೆ ಸೀರೆಗಳನ್ನು ಉಡುವುದಿಲ್ಲ. ಆದ್ದರಿಂದ ಇಂದಿಗೂ ಈ ಕೈಗಾರಿಕೆ ಲಾಭದಾಯಕವಾದ ಉದ್ದಿಮೆ ಎನಿಸಿಕೊಂಡಿದೆ.

6 ಕಂಬಳಿ ಮಗ್ಗ : ಮಗ್ಗದವರಂತೆಯೇ ಕಂಬಳಿ ನೇಯ್ಗೆಯವರದ್ದು ಮತ್ತೊಂದು ಬಗೆಯ ಲಾಭದಾಯಕ ಉದ್ಯಮ. ಈ ಜನಪದ ಕೈಗಾರಿಕೆಗೆ ಈಗಂತೂ ಸರ್ಕಾರದ ನೆರವಿದೆಯಾಗಿ ಹಲವು ಸಹಕಾರಿ ಸಂಘಗಳು ಸ್ಥಾಪನೆಯಾಗಿ ಸಾಕಷ್ಟು ಮುಂದುವರಿದಿವೆ. ಕಂಬಳಿಯ ನೇಯ್ಗೆಗೆ ಬೇಕಾದ ಕುರಿಯ ತುಪ್ಪಟವನ್ನು ಊರೂರಿನ ಮೇಲೆ ಹೋಗಿ ಕೊಂಡು ತರುತ್ತಾರೆ. ಹೆಚ್ಚಾಗಿ ಕುರಿಗಳನ್ನು ಸಾಕಿರುವವರಿಂದ ತುಪ್ಪಟವನ್ನು ತಂದು ಅವರಿಗೆ ವರ್ಷಕ್ಕೆ ಇಷ್ಟು ಕಂಬಳಿಯನ್ನು ಕೊಡುವಂತೆ ನಿಗದಿ ಮಾಡಿಕೊಳ್ಳುವುದೂ ಉಂಟು. ಈಚೆಗೆ ತಯಾರಾದ ಕಂಬಳಿಗಳ ಮಾರಾಟ ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಿದೆ. ಇವರು ಕಂಬಳಿಯನ್ನು ಮಾಡುವ ವಿಧಾನ ವಿಶಿಷ್ಟವಾದುದು. ಬಾಳಿಕೆಯ ದೃಷ್ಟಿಯಿಂದ ಹಾಗೂ ಉಪಯುಕ್ತತೆಯ ದೃಷ್ಟಿಯಿಂದ ಈ ಕೈಗಾರಿಕೆ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ.

7 ಅಕ್ಕಸಾಲಿಗರು : ಅಕ್ಕಸಾಲಿಗರು ಅತ್ಯಂತ ಆಕರ್ಷಕವಾಗಿ ಚಿನ್ನ–ಬೆಳ್ಳಿಯ ಒಡವೆಗಳನ್ನು ಮಾಡುವುದರಲ್ಲಿ, ಹಿತ್ತಾಳೆ, ತಾಮ್ರ, ಕಂಚು ಮುಂತಾದ ಲೋಹಗಳಿಂದ ಚಲುವಾದ ವಿಗ್ರಹಗಳನ್ನು ಮಾಡುವುದರಲ್ಲಿ, ಹಾಗೂ ಮಣ್ಣು ಮತ್ತು ಮರದಿಂದಲೂ ಅಂದವಾದ ಮೂರ್ತಿಗಳನ್ನು ಮಾಡುವುದರಲ್ಲಿ ನಿಪುಣರು. ಕಿವಿ, ಮೂಗುಗಳಿಗೆ ಭೂಷಣವಾದ ಆಭರಣವಿಶೇಷಗಳನ್ನು ಇವರು ಮಾಡುವವರಷ್ಟೇ ಅಲ್ಲದೆ, ಕಿವಿ, ಮೂಗನ್ನು ಚುಚ್ಚುವುದರಲ್ಲಿಯೂ ಹೆಸರಾದವರು. ಅಕ್ಕಸಾಲಿಗ ಚುಚ್ಚಿದರೆ ನೊಚ್ಚಗಾಗುತ್ತದೆ ಎಂಬ ಒಂದು ಗಾದೆಯೂ ಇದೆ.

8 ಗಾಣಿಗರು : ಜನಪದ ಕೈಗಾರಿಕೆಯಲ್ಲಿ ಮತ್ತೊಂದು ಪ್ರಮುಖವಾದ ವೃತ್ತಿ ಇವರದು. ಮರದ ಗಾಣ ಬಹು ಕಾಲದಿಂದ ಬಳಕೆಯಲ್ಲಿದೆ. ಈಗ ಕಬ್ಬಿಣದ ಗಾಣಗಳು ಬಂದಿವೆ. ಬೀಜಗಳನ್ನು ಅರೆದು ಎಣ್ಣೆ ತೆಗೆಯುವ ಎಲ್ಲ ಸಂದರ್ಭಗಳಲ್ಲೂ ಈ ಗಾಣಗಳನ್ನು ಉಪಯೋಗಿಸಬಹುದು. ಕೆಲವರು ಎಣ್ಣೆಬೀಜವನ್ನು ತಂದು ಕೂಲಿ ಕೊಟ್ಟು ಎಣ್ಣೆಯನ್ನು ತೆಗೆಸಿಕೊಂಡು ಹೋಗುತ್ತಾರೆ. ಮತ್ತೆ ಕೆಲವರು ಇಷ್ಟು ಸೇರು ಎಣ್ಣೆಬೀಜಕ್ಕೆ ಇಷ್ಟು ಸೇರು ಎಣ್ಣೆ ಎಂದು ಪಡೆದುಕೊಂಡು ಹೋಗುತ್ತಾರೆ. ಅಲ್ಲದೆ ಗಾಣಿಗರೇ ಎಣ್ಣೆಬೀಜವನ್ನು ಕೊಂಡು ತಂದು, ಗಾಣವನ್ನು ಆಡಿಸುವುದುಂಟು. ಎಣ್ಣೆಯನ್ನು ತೆಗೆದುಕೊಂಡು ಆದಮೇಲೆ ಬರುವ ಹಿಂಡಿಯಿಂದಲೂ ಸಾಕಷ್ಟು ಹಣ ಬರುತ್ತದೆ. ತೀರ ಹಳ್ಳಿಗಾಡಿನಲ್ಲಿ ಮಾತ್ರ ಈ ಕೈಗಾರಿಕೆ ಇನ್ನೂ ಜೀವ ಹಿಡಿದು ನಿಂತಿದೆ.

9 ಆಲೆ : ಎಣ್ಣೆ ತೆಗೆಯುವ ಗಾಣದಂತೆಯೇ ಕಬ್ಬಿನ ಗಾಣವೂ ಒಂದು ಉತ್ತಮ ಕೈಗಾರಿಕೆಯಾಗಿದೆ. ಈ ಉದ್ಯಮಕ್ಕೆ ಹೆಚ್ಚು ಜನ ಬೇಕಾಗುತ್ತದೆ. ಹೆಚ್ಚು ಕಬ್ಬು ಬೆಳೆಯುವ ಪ್ರದೇಶ ಒಂದೇ ಕಡೆ ಇದ್ದಾಗ ಅವರೆಲ್ಲ ಒಟ್ಟುಗೂಡಿ ಹೋಗಿ ಆಲೆ ಇಟ್ಟಿರುವ ಮಾಲೀಕರಿಂದ, ಆಲೆಯ ಎಲ್ಲ ಉಪಕರಣಗಳನ್ನೂ ತಂದು ಆಲೆ ಕಟ್ಟುತ್ತಾರೆ. ಕಬ್ಬು ಮುಗಿಯುವವರೆಗೂ ಹಗಲು ರಾತ್ರಿ ನಡೆಯುವ ಈ ಕೆಲಸಕ್ಕೆ ಕೂಲಿ ಆಳುಗಳನ್ನು ಸದಾ ಇವರು ಆಶ್ರಯಿಸಲೇಬೇಕಾಗುತ್ತದೆ. ಅಂತೂ ಈ ಉದ್ಯಮಕ್ಕೆ ಸಾಕಷ್ಟು ಜನ ಬೇಕಾಗಿರುವುದರಿಂದ, ಕೆಲಸಗಾರನ ದೃಷ್ಟಿಯಿಂದಲೂ ಇದು ಹೆಚ್ಚು ಲಾಭದಾಯಕವಾದ ಕೈಗಾರಿಕೆಯಾಗಿದೆ.

ಮೊದಲು ಮರದ ಆಲೆ ಬಳಕೆಯಲ್ಲಿತ್ತು. ಅನಂತರ ಲೋಹದ ಆಲೆ ರೂಢಿಗೆ ಬಂತು. ಈಗ ವಿದ್ಯುತ್ ಚಾಲಿತ ಆಲೆಗಳು ಬಳಕೆಗೆ ಬರುತ್ತಿವೆ. ಸಕ್ಕರೆ ಎಷ್ಟೇ ಬಳಕೆಗೆ ಬಂದಿದ್ದರೂ ಆಲೆಮನೆಯಲ್ಲಿ ತಯಾರಿಸಿದ ಬೆಲ್ಲಕ್ಕೆ ಸಾಕಷ್ಟು ಮಾರುಕಟ್ಟೆ ಇದ್ದೇ ಇದೆ.

10 ಹಗ್ಗ ಹೊಸೆಯುವುದು : ಹಗ್ಗ ಹೊಸೆಯುವುದು ಮೊದಮೊದಲು ಗೃಹಕೈಗಾರಿಕೆಯಾಗಿ, ಜನಪದ ಕೈಗಾರಿಕೆಯೆನಿಸಿಕೊಂಡು, ಈಗ ಇವುಗಳೆಲ್ಲದರ ವ್ಯಾಪ್ತಿಗೂ ಮೀರಿ ಬೆಳೆದಿದೆ. ವ್ಯವಸಾಯವನ್ನು ಕಸಬಾಗಿ ಉಳ್ಳ ಪ್ರತಿಯೊಬ್ಬನ ಮನೆಯಲ್ಲಿಯೂ ಹಿಂದೆ ಈ ಒಂದು ಕಸಬೂ ಮೂಲವೃತ್ತಿ ಎಂಬಂತೆ ಕಂಡುಬರುತ್ತಿತ್ತು. ಈಗಲೂ ಇಲ್ಲವೆಂದಲ್ಲ. ಇದನ್ನೇ ವೃತ್ತಿಯಾಗಿ ಕೈಗೊಂಡು ಜೀವಿಸುವವರೂ ಇದ್ದಾರೆ. ದನಗಳನ್ನು ಕಟ್ಟುವ ಹಗ್ಗ, ನೇಗಿಲ ಹಗ್ಗ, ನೊಗದ ಹಗ್ಗ, ಗಾಡಿ ಬಿಗಿಯುವ ಹಗ್ಗ, ಗಾಡಿ ಜೊತ್ತಿಗೆ, ನೀರು ಸೇದುವ ಹಗ್ಗ–ಹೀಗೆ ನಾನಾ ಬಗೆಯ ಹಗ್ಗಗಳನ್ನು ಹಾಗೂ ದನಗಳಿಗೆ ಬೇಕಾಗುವ ಮೂಗುದಾರ, ಮುಖವಾಡ, ಕೊರಳ ಹಗ್ಗ, ಬಾಯಿಕುಕ್ಕೆ ಮೊದಲಾದುವನ್ನು ಕೈಯಿಂದಲೇ ತಯಾರಿಸಿ ಸಂತೆ, ಜಾತ್ರೆಗಳಲ್ಲಿ ತಂದು ಮಾರುವ ಈ ಉದ್ಯಮ ಒಂದು ಕೈಗಾರಿಕೆಯೇ ಆಗಿದೆ. ಯಂತ್ರಗಳ ಸಹಾಯದಿಂದಲೂ ಹಗ್ಗವನ್ನು ತಯಾರಿಸುವ ವಿಧಾನ ಬೆಳಕಿಗೆ ಬಂದ ಮೇಲೆ ಇವರ ವೃತ್ತಿಗೆ ಸ್ವಲ್ಪ ಧಕ್ಕೆ ತಗುಲಿದಂತಾಗಿದೆ.

11 ಚಮ್ಮಾರರು : ಚರ್ಮದ ಕೆಲಸ ಮಾಡುವ ಇವರು ಸಾಮಾನ್ಯವಾಗಿ ಹರಿಜನ ಗುಂಪಿಗೆ ಸೇರಿದವರು. ತಾವೇ ಚರ್ಮವನ್ನು ಹದಗೊಳಿಸಿಕೊಂಡು, ಚಪ್ಪಲಿಗಳ ಜೊತೆಗೆ ಕೆಲವು ಬಗೆಯ ವಾದ್ಯವಿಶೇಷಗಳನ್ನೂ ತಯಾರಿಸುತ್ತಾರೆ. ನಾನಾ ಕಾರಣಗಳಿಂದಾಗಿ ಈ ಕಸಬು ಇಂದಿಗೂ ಜನಪ್ರಿಯವಾಗಿದೆ. ಯಂತ್ರಗಳಿಂದ ತಯಾರಾದ ವಸ್ತುಗಳ ಬೆಲೆ ಮಿತಿಮೀರಿ ಏರುತ್ತಿರುವುದೂ ಇದರ ಅಭಿವೃದ್ಧಿಗೆ ಮುಖ್ಯ ಕಾರಣ.

12 ಬೆಸ್ತರು : ಮೀನು ಹಿಡಿಯುವ ಈ ಜನ ಮೀನುಬಲೆಗಳನ್ನೂ ಹೆಣೆಯುತ್ತಾರೆ. ಅದಕ್ಕೆ ಬೇಕಾದ ನೂಲನ್ನೂ ಹೆಚ್ಚು ಕಡಿಮೆ ಇವರೇ ತಯಾರಿಸಿಕೊಳ್ಳುತ್ತಾರೆ. ಇವರಲ್ಲಿ ಬುರುಡೆ ಬೆಸ್ತರು ಎಂಬ ಒಂದು ಗುಂಪು ಉಂಟು.

13 ಒಡ್ಡರು : ಮನೆ ಕಟ್ಟಲು ತಳಪಾಯಕ್ಕೆ ಬೇಕಾದ ಕಲ್ಲು, ನೆಲಕ್ಕೆ ಹಾಸಲು ಬೇಕಾದ ಕಲ್ಲುಚಪ್ಪಡಿ, ದೊಡ್ಡ ದೊಡ್ಡ ಕಲ್ಲುಕಂಬ, ಮನೆಯಲ್ಲಿ ಆಡಿಸಲು ಬೇಕಾಗುವ ಒರಳುಕಲ್ಲು–ಇವನ್ನೆಲ್ಲ ಇವರು ಕಡೆದು ಕೊಡುತ್ತಾರೆ.

ಇಷ್ಟೇ ಅಲ್ಲದೆ ಬಳಪದ ಕಲ್ಲಿನಲ್ಲಿ ಇವರು ಮಾಡುವ ವಿವಿಧ ಬಗೆಯ ನಿತ್ಯೋಪಯೋಗಿ ವಸ್ತುಗಳು ಆಕರ್ಷಕವಾಗಿರುತ್ತವೆ. ಅವುಗಳಿಗೆ ಹೆಚ್ಚು ಬೇಡಿಕೆಯೂ ಇದೆ. ಅವರು ಮಾಡುವ ಮರಿಗೆ, ದೀಪ, ಹಾಗೂ ದೀಪದ ಕಂಬ, ಇಡ್ಲಿ ಮಾಡುವ ತಟ್ಟೆ ಮತ್ತು ಹೆಂಚು–ಇವೆಲ್ಲ ಸಾಕಷ್ಟು ಬಳಕೆಯಲ್ಲಿದ್ದು ಇದೊಂದು ಲಾಭದಾಯಕ ಕೈಗಾರಿಕೆಯೇ ಆಗಿದೆ. ಇಷ್ಟೆಲ್ಲ ಯಂತ್ರಯುಗದ ಪ್ರಭಾವ ಇದ್ದರೂ ಈ ಕೈಗಾರಿಕೆ ಇಂದಿಗೂ ಉಳಿದು ಬಂದಿದೆ.

14 ಈಡಿಗರು : ಮರದಿಂದ ಹೆಂಡವನ್ನು ಇಳಿಸಿ, ಅದನ್ನು ಸುವ್ಯವಸ್ಥಿತ ರೀತಿಯಲ್ಲಿ ಬೇಕಾದ ಕಡೆಗೆ ಹಂಚುವ ವ್ಯವಸ್ಥೆ ಮಾಡುವುದು ಇವರ ಕೆಲಸ. ಇದಕ್ಕೂ ಸಾಕಷ್ಟು ಜನ ಕೆಲಸಗಾರರು ಬೇಕಾಗುತ್ತದೆ. ಪಾನನಿರೋಧ ಜಾರಿಗೆ ಬಂದಾಗ ಇವರಿಗೆ ಕೆಲವು ಕಾಲ ಕೆಲಸವಿಲ್ಲದಂತಾಗುತ್ತದೆ.

15 ಮೇದರು : ಜನಬಳಕೆಯ ನಿತ್ಯೋಪಯೋಗಿ ವಸ್ತುಗಳಾದ ಬುಟ್ಟಿ, ತೊಟ್ಟಿಲು, ಮೊರ, ಮುತ್ತಲು, ಗೆರಸಿ, ಜರಡಿ, ಹೂಬುಟ್ಟಿಗಳು, ಬೀಸಣಿಗೆ, ತಡಿಕೆಗಳು ಮುಂತಾದವನ್ನು ತಯಾರಿಸುವ ಜನ. ಬಿದಿರು ಮತ್ತು ದಪ್ಪಚೊಂಡುಗಳನ್ನು ಈ ಕೆಲಸಕ್ಕೆ ಉಪಯೋಗಿಸುತ್ತಾರೆ. ಕರ್ನಾಟಕದ ಎಲ್ಲ ಊರುಗಳಲ್ಲೂ ಕಂಡುಬರುವ ಈ ಜನ ಈ ವೃತ್ತಿಯನ್ನು ಇಂದಿಗೂ ಲಾಭದಾಯಕವಾಗಿ ನಡೆಸುತ್ತ ಬದಲಾಗುತ್ತಿರುವ ಸನ್ನಿವೇಶದೊಂದಿಗೆ ಹೊಂದಿ ಬಾಳುತ್ತಿದ್ದಾರೆ.

ಇವುಗಳೇ ಅಲ್ಲದೆ, ಇಂಥ ಅನೇಕ ಸಣ್ಣಪುಟ್ಟ ಜನಪದ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ವಿಶೇಷವಾಗಿ ಉಳಿದುಕೊಂಡಿವೆ. ನಾರಿನಿಂದ ಹಗ್ಗ, ಕಣ್ಣಿ ಮೊದಲಾದವನ್ನು ಮಾಡುವುದು, ಊಟದ ಎಲೆಗಳನ್ನು ಹಚ್ಚುವುದು, ತೆಂಗಿನ ಗರಿಗಳಿಂದ ಕಡ್ಡಿಯನ್ನು ಬಿಡಿಸಿ ಬರಲು ಮಾಡುವುದು, ಹಂಚಿಕಡ್ಡಿಯಿಂದ ಪೊರಕೆ ಮಾಡುವುದು ಇಂಥ ಅನೇಕ ಕೈಕಸಬುಗಳು ಕಾಣಬರುತ್ತವೆ. ಈ ಎಲ್ಲ ಜನಪದ ಕೈಗಾರಿಕೆಗಳೂ ಜನಪದ ಜೀವನದ ಉಸಿರಾಗಿದ್ದ ಕಾಲವೊಂದಿತ್ತು ; ಆದರೆ ಈಗ ಕಾಲದ ಸ್ಥಿತ್ಯಂತರದಿಂದಾಗಿ ಅವುಗಳ ಮಹತ್ತ್ವ ಸ್ವಲ್ಪಮಟ್ಟಿಗೆ ಮಸುಕಾಗಿದೆ, ಅಷ್ಟೆ. **ನೋಡಿ– ಗುಡಿಗಾರಿಕೆ; ಗುಡಿಸಲು ಕೈಗಾರಿಕೆಗಳು; ಗ್ರಾಮಕೈಗಾರಿಕೆಗಳು.** (ಡಿ.ಕೆ.ಆರ್.)

**ಜನಪದ ಗಣಿತ :** ಬೆಳೆದು ಬಂದಿರುವ ಇಂದಿನ ಗಣಿತಶಾಸ್ತ್ರಕ್ಕೆ ಜನಪದ ಗಣಿತವನ್ನು ಹೋಲಿಸಿದಾಗ ಜನಪದ ಗಣಿತಕ್ಕೆ ತನ್ನದೇ ಆದ ಪರಿಮಿತಿಗಳಿದ್ದರೂ ವಿಜ್ಞಾನಪೂರ್ವಯುಗದಲ್ಲಿನ ಜನತೆಯ ಸಮಸ್ಯೆಗಳಿಗೆ ಅದು ತಕ್ಕ ಉತ್ತರವನ್ನು ಒದಗಿಸಿಕೊಟ್ಟಿದ್ದಿತೆಂದೇ ಹೇಳಬಹುದು. ಅಲ್ಲದೆ ಇಂದಿನ ಗಣಿತಶಾಸ್ತ್ರ ಜನಪದ ಗಣಿತದ ಪರಿಷ್ಕೃತ ರೂಪವೇ ಆಗಿದೆ. ಆದ್ದರಿಂದ ಅಂದಿನ ಅಂದಾಜಿನ ಲೆಕ್ಕಾಚಾರ ಇಂದು ಕರಾರುವಾಕ್ಕೆನಿಸದಿರಬಹುದು. ಈ ಮಾತು ಜನಪದ ಗಣಿತಕ್ಕೆ ಎಲ್ಲ ಸಂದರ್ಭಗಳಲ್ಲೂ ಅನ್ವಯವಾಗುವಂಥದಲ್ಲ ಎಂಬುದನ್ನೂ ಮರೆಯಕೂಡದು.

ಜನಪದದಲ್ಲಿ ಉದ್ದ, ಅಗಲ, ತೂಕ, ಎತ್ತರ ಮತ್ತು ಕಾಲಪರಿಮಾಣಗಳ ಲೆಕ್ಕಾಚಾರಗಳಲ್ಲಿ ಹಿಂದಿನ ಕ್ರಮ ಈಗಲೂ ಉಸಿರಾಡುತ್ತಿರುವಂತೆ ಕಂಡರೂ ರಾಜಕೀಯ ಸಾಮಾಜಿಕ ಬದಲಾವಣೆಗಳಿಂದಾಗಿ, ಪರಕೀಯ ದಾಳಿಗಳಿಂದಾಗಿ ಜನಪದದ ಬಹುತೇಕ ವ್ಯವಹಾರ ಕ್ರಮಗಳೆಲ್ಲ ಕ್ರಮೇಣ ಮೂಲೆಗುಂಪಾದವು. ರೈತ, ಕಮ್ಮಾರ, ಚಮ್ಮಾರ, ಕುಂಬಾರ, ದರ್ಜಿ, ಕೆಲಸಿ, ದೇವಾಂಗಸೆಟ್ಟಿ, ಉಪ್ಪಲಿಗಸೆಟ್ಟಿ ಮುಂತಾದ ಎಲ್ಲ ಕಸಬಿನ ಜನ ತಮ್ಮ ಕಸಬಿನ ಉತ್ಪನ್ನಗಳನ್ನು ಪರಸ್ಪರ ಚಾಟಿ ಮಾಡಿಕೊಳ್ಳುವ ವ್ಯವಹಾರ ಪದ್ಧತಿಯಿಂದ ಜನಪದ ಗಣಿತ ಪ್ರಾರಂಭವಾಯಿತೆಂದು ಹೇಳಬಹುದು. ಆದರೆ ಚಾಟಿ ಪದ್ಧತಿ ಬಹಳಷ್ಟು ಸಲ ನಿಖರವಾದ ಬೆಲೆಯನ್ನು ನಿರ್ಧಾರ ಮಾಡದೆ ಹೋದ ಕಾರಣದಿಂದ ಹಣದ ಕಲ್ಪನೆ ಅನಂತರ ಮೂಡಿತೆಂದು ಕಾಣುತ್ತದೆ. ಒಟ್ಟಿನಲ್ಲಿ ವ್ಯವಹಾರ ಗೊಂದಲವಾಗದಂತೆ ನೋಡಿಕೊಂಡ ವ್ಯಾಪಾರ ಗಣಿತಶಾಸ್ತ್ರದ ತಳಹದಿಯೆಂದರೂ ಆದೀತು. ಚಾಟಿ ಪದ್ಧತಿಯಾಗಲಿ ಅಥವಾ ಹಣದಿಂದ ವಸ್ತುವಿನ ಮೌಲ್ಯ ನಿರ್ಧಾರ ಮಾಡುವುದಾಗಲಿ ಅದು ಸಾರ್ವತ್ರಿಕ ರಾಜಿ ಮನೋಭಾವದ ಫಲಿತಾಂಶವೆಂದು ಹೇಳಬಹುದು. ಹೀಗೆ ಗಣಿತಪ್ರಕಾರ ನಿರ್ದಿಷ್ಟ ರೂಪವನ್ನು ತಾಳಿ ಸಾರ್ವತ್ರಿಕ ಸ್ವೀಕಾರ ಮುದ್ರೆ ಪಡೆಯಬೇಕಾದರೆ ಬಹಳಷ್ಟು ಕಾಲ ಹಿಡಿದಿರಬೇಕೆಂದು ಕಾಣುತ್ತದೆ. ಆದ್ದರಿಂದಲೇ ದಿನ, ವಾರ, ಪಕ್ಷ, ತಿಂಗಳು, ವರ್ಷ, ತೂಕ, ಗಾತ್ರ, ಉದ್ದ, ಅಗಲ, ಎತ್ತರ ಮುಂತಾದವುಗಳ ಅಳತೆ ಬಿಡಿಸಲಾಗದ ಕಗ್ಗಂಟಾಗದೆ ವ್ಯವಹಾರದ ಸುಲಭೋಪಾಯವಾಗಿದೆ.

ಜನಪದ ಗಣಿತವನ್ನು ಪ್ರಧಾನವಾಗಿ ವ್ಯವಹಾರ ಗಣಿತ ಮತ್ತು ವಿನೋದಗಣಿತ ಎಂದು ಎರಡಾಗಿ ವಿಂಗಡಿಸಿಕೊಳ್ಳಬಹುದು. ವ್ಯವಹಾರ ಗಣಿತ ಜೀವನದ ಸರ್ವ ವ್ಯಾಪಾರಗಳಲ್ಲೂ ವ್ಯಾಪಿಸಿಕೊಂಡಿರುವಂಥದು. ವಿನೋದಗಣಿತ ಆಟ ಮುಂತಾದ ಸಂದರ್ಭಗಳಲ್ಲಿ ಒಡ್ಡುವ ಚಮತ್ಕಾರಗಳಿಂದ ಕೂಡಿರುವಂಥದು.

ವ್ಯವಹಾರ ಗಣಿತದಲ್ಲಿ ನಾಣ್ಯಗಳು ಅಗ್ರಸ್ಥಾನದಲ್ಲಿವೆ. ಹಿಂದೆ ಬಳಕೆಯಲ್ಲಿದ್ದ ನಾಣ್ಯಗಳು ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಯ ಕಾರಣದಿಂದ ಆಗಾಗ ಮಾರ್ಪಟ್ಟಿವೆ. ಮೊದಲು ನಾಣ್ಯಗಳಿಗೆ ಚರ್ಮ, ತಾಡಪತ್ರ ಹಾಗೂ ಲೋಹಗಳನ್ನು ಬಳಸುತ್ತಿದ್ದಂತೆ ತಿಳಿದುಬರುತ್ತದೆ. ಹಿಂದಿದ್ದ ನಾಣ್ಯಗಳಿಗೆ ಈಗಿನ ನಾಣ್ಯಗಳ ಬೆಲೆ ಎಷ್ಟೆಂದು ಹೇಳುವುದು ಅಸಾಧ್ಯವಾಗಿದೆ. ವರಹ, ದುರ್ಗೀವರಹ, ಪಗೋಡ, ರಾಮಟಂಕಿ ವರಹ, ಗದ್ಯಾಣ, ಹೊನ್ನು, ಮೊಹರು, ಕಂಠೀರವ, ಅಡಕೆ, ಅಷರಫಿ, ಕಾಸು, ಅಡ್ಡ, ಪಾವಲಿ, ಚವುರಿ, ಪ್ರಿಯಕಾವೇರಿ, ಗಬುರು, ಪುತಲಿ, ಕಲುಕುಂಟಿ ಮುಂತಾದವು ಹಿಂದೆ ಪ್ರಚಲಿತವಿದ್ದ ನಾಣ್ಯಗಳು. ಹಿಂದಿದ್ದ ಕೆಲವು ನಾಣ್ಯಗಳ ಕೋಷ್ಟಕ ಇದು :

4 ಕಾಣಿ 1 ವೀಸ
5 ವೀಸ 1 ಹಾಗ
4 ಹಾಗ 1 ಹಣ
10 ಹಣ 1 ಗದ್ಯಾಣ ಇತ್ಯಾದಿ.

ಧಾನ್ಯಗಳ ಆಳತೆಯಲ್ಲಿ ಸ್ಯಾರೆ, ಹಿಡಿ, ಬೊಗಸೆ, ಸೊಲ್ಲಿಗೆ, ಸೇರು, ಪಾವು, ಚಟಾಕು, ಪಲ್ಲ, ಖಂಡುಗ, ಮಾನ, ಬಳ್ಳ, ಕೊಳಗ, ಪಂಚಕ ಮುಂತಾದ ಬಗೆಗಳಿದ್ದಂತೆ ತಿಳಿದು ಬರುತ್ತದೆ. ಇವುಗಳ ಅಳತೆಯೂ ಇಂದಿನ ಅಳತೆಗೆ ಎಷ್ಟೆಷ್ಟು ಸಮವೆಂದು ಖಚಿತವಾಗಿ ಹೇಳಬರುವುದಿಲ್ಲ. ಅಲ್ಲದೆ ಒಂದೇ ಹೆಸರಿನ ಅಳತೆ ಸಾಧನ ಬೇರೆ ಬೇರೆ ಕಡೆ ಬೇರೆ ಬೇರೆ ಗಾತ್ರದಲ್ಲಿದ್ದುದು ಇದಕ್ಕೆ ಕಾರಣ. ಇಂಥ ಸಾಧನಗಳಿಲ್ಲದೆಯೂ ಅವರ ವ್ಯವಹಾರ ನಡೆದುಹೋಗಿದೆ. ಉದಾ : ಹಾಲು, ಜೇನು, ಎಣ್ಣೆ ಮುಂತಾದವುಗಳನ್ನು ಅಳೆಯಲು ಈಗಲೂ ಕೆಲವು ಹಳ್ಳಿಗಳಲ್ಲಿ ಬಿದಿರಿನ ಹಂಡೆಗಳನ್ನು ಬಳಸುತ್ತಾರೆ. ಅನ್ನ, ಸಾರು, ಹಿಟ್ಟು ಮುಂತಾದವನ್ನು ಅಡುವಾಗಲೂ ಅವರ ಅಂದಾಜಿನ ಅಳತೆ ಸರಿಹೋಗುತ್ತದೆ. ಒಂದು ಬೊಗಸೆ ಅಕ್ಕಿ ಅನ್ನವಾಗಿ ಇಂಗಲು ಅವರಲ್ಲಿ ಅವರದೇ ಅಳತೆ ಚೊಂಬುಗಳಿವೆ. ಧಾನ್ಯಗಳ ಅಳತೆಯೂ ಬಿದಿರು ಹೆಡಗೆ, ಕುಕ್ಕೆ, ಬುಟ್ಟಿ, ಕುಂಕುಲು ಮುಂತಾದವುಗಳಿಂದ ಸುಗಮವಾಗುತ್ತದೆ. ಉಪ್ಪು ಸಾಲ ಪಡೆಯುವಾಗ ಒಂದು ಹಿಡಿ ಅಥವಾ ಒಂದು ಮರಗೈ ಲೆಕ್ಕ, ಸಾಸುವೆ ಸಾಲ ಪಡೆಯುವಾಗ ಒಂದು ಸ್ಯಾರೆ ಲೆಕ್ಕ ಬಳಕೆಯಲ್ಲಿದೆ. ಹಾಲು, ಮೊಸರು ಮಜ್ಜಿಗೆಗಳ ಅಳತೆಗೆ ಒಂದು ತೊಟ್ಟು ಹಾಲು, ಒಂದು ಹನಿ ಮೊಸರು, ಒಂದು ಹನಿ ಮಜ್ಜಿಗೆ ಮುಂತಾಗಿ ಹೇಳುವುದರಿಂದ ಆ ಹೇಳಿಕೆಗೆ ತಗುವಷ್ಟು ಹಾಲು ಮೊಸರು ಮಜ್ಜಿಗೆಯನ್ನು ಕೊಡಲಾಗುತ್ತದೆ.

ಧಾನ್ಯಗಳ ಅಳತೆಗೆ ಒಂದು ಕೋಷ್ಟಕ :–

| | |
|---|---|
| 1 ಖಂಡುಗ | 4 ಪಂಚಕ |
| 1 ಪಂಚಕ | 5 ಕೊಳಗ |
| 1 ಕೊಳಗ | 4 ಬಳ್ಳ |
| 1 ಬಳ್ಳ | 4 ಮಾನ |
| 1 ಮಾನ | 4 ಸೊಲ್ಲಿಗೆ |
| 1 ಸೊಲ್ಲಿಗೆ | 4 ಗಿದ್ದಿಗೆ ಇತ್ಯಾದಿ. |

ಜನಪದರಲ್ಲಿ ಗಾತ್ರನಿರ್ಧಾರ ಅವರು ಕಂಡಿರುವ ವಸ್ತುಗಳಿಗೆ ಆರೋಪಿಸಿದಂತೆ ಏರ್ಪಡುತ್ತದೆ. ಉದಾ : ಅವರೆಕಾಳು ಗಾತ್ರ, ನಿಂಬೇಕಾಯಿ ಗಾತ್ರ, ಹಿಟ್ಟಿನಮುದ್ದೆ ಗಾತ್ರ, ಕುಂಬಳಕಾಯಿ ಗಾತ್ರ, ಎರಡು ಬೆರಳು ಗಾತ್ರ, ಮೀನಿನ ತತ್ತಿ ಗಾತ್ರ, ಹಿಟ್ಟಿನ ದೊಣ್ಣೆಗಾತ್ರ, ಅರುಕಡ್ಡಿ ಗಾತ್ರ, ಮುಂಗೈಗಾತ್ರ, ತೊಡೆ ಗಾತ್ರ, ಹೆಬ್ಬೆರಳು ಗಾತ್ರ, ಕಿರುಬೆರಳು ಗಾತ್ರ, ಗೆಜ್ಜಗದ ಗಾತ್ರ, ದೆಯ್ಯದ ಗಾತ್ರ ಮುಂತಾಗಿ ಹೇಳಿ ಅವರು ವಸ್ತುಗಳ ಗಾತ್ರ ಕಲ್ಪನೆ ಕಣ್ಣಿಗೆ ಕಟ್ಟುವಂತೆ ಮಾಡುತ್ತಾರೆ. ಅಗಲವನ್ನು ನಿರ್ದೇಶಿಸುವಾಗ, ಕಾಸಿನಗಲ, ರೂಪಾಯಗಲ, ಅಂಗೈ ಅಗಲ, ಆಕಾಶದಗಲ, ಬಾವಾಡಿನಗಲ, ಗಂಗಾಳದಗಲ, ರೊಟ್ಟಿಯಗಲ ಮುಂತಾಗಿ ಹೇಳುತ್ತಾರೆ.

ತೂಕದ ಅಳತೆಗಾಗಿ ತೂಗುವ ಕೋಲನ್ನು ಬಳಸುತ್ತಾರೆ. ಹಳ್ಳಿಗಳಲ್ಲಿ ಈಗಲೂ ಬೆಣ್ಣೆ ತೂಗಲು ಎರಡು ತಟ್ಟೆಗಳಿರುವ ತಕ್ಕಡಿಗೆ ಬದಲಾಗಿ ತೂಗುವ ಕೋಲನ್ನೇ ಬಳಸುತ್ತಾರೆ. ದವಸಧಾನ್ಯಗಳನ್ನು ತೂಗುವ ಪದ್ಧತಿ ಹಿಂದೆ ಇದ್ದಂತೆ ಕಾಣುವುದಿಲ್ಲ.




**ತೂಗುವ ಕೋಲು : 1. ಮರದ್ದು, 2. ಕಬ್ಬಿಣದ್ದು**

ಆದರೆ ಲೋಹಗಳನ್ನು ತೂಗುವ ಪದ್ಧತಿ ಇತ್ತು. ಲೋಹದ ತೂಕವನ್ನು ತಕ್ಕಡಿಯ ಸಹಾಯದಿಂದ ನಿರ್ಧರಿಸುತ್ತಿದ್ದರು. ತೂಕಕ್ಕೆ ಸಂಬಂಧಿಸಿದ ಒಂದು ಕೋಷ್ಟಕ :

| | | |
|---|---|---|
| 1 ಭಾರ | = | 20 ತೊಲ |
| 1 ತೊಲ | = | 5 ಬೀಸಗೆ |
| 1 ಬೀಸಗೆ | = | 20 ಪಲ |
| 1 ಪಲ | = | 4 ಕರ್ಷ |
| 1 ಕರ್ಷ | = | 4 ಸುವರ್ಣ |

ಚಿನ್ನ ಬೆಳ್ಳಿಗಳ ತೂಕದಲ್ಲಿ ಗುಲಗಂಜಿಯನ್ನು ಬಳಸುವುದು ಈಗಲೂ ಅಕ್ಕಸಾಲಿಗರಲ್ಲಿ ಬಳಕೆಯಲ್ಲಿದೆ. ಹೊರಲಾರದ ಭಾರವನ್ನು ಹೆಣಭಾರವೆನ್ನುತ್ತಾರೆ.

ದೂರದ ಅಳತೆಗೆ ಗಾವುದ, ಹರದಾರಿ, ಯೋಜನ, ಒಂದು ಕೂಗುದೂರ, ಕೋಳಿ ಕೂಗುದೂರ, ಒಂದು ಸಿಳ್ಳುದೂರ ಮುಂತಾದ ಮಾನಗಳಿವೆ. ಉದ್ದದ ಅಳತೆಗೆ ಗೇಣು, ಚೋಟು, ಮೊಳ, ಮಾರು, ಒತ್ತೋಳು, ಬೆರಳುದ್ದ ಮುಂತಾದವಿವೆ. ಎತ್ತರವನ್ನು ಹೇಳುವಾಗ ಆಳೆತ್ತರ, ಎರಡಾಳೆತ್ತರವೆಂದು ಹೇಳುವ ರೂಢಿ ಇದೆ. ಆಳವನ್ನು ಹೇಳುವಾಗ ಹಣೆಮಟ್ಟ, ಎದೆಮಟ್ಟ, ಕೊರಳುಮಟ್ಟ, ಸೊಂಟಮಟ್ಟ, ಮೊಣಕಾಲಮಟ್ಟ ಇತ್ಯಾದಿ ಹೇಳುವುದುಂಟು. ದೂರದ ಅಳತೆಯನ್ನು ಹೇಳುವ ಒಂದು ಕೋಷ್ಟಕ ಹೀಗಿದೆ:

| | | |
|---|---|---|
| 1 ಯೋಜನ | = | 4000 ಕ್ರೋಶ |
| 1 ಕ್ರೋಶ | = | 2000 ದಂಡ |
| 1 ದಂಡ | = | 4 ಮೊಳ |
| 1 ಮೊಳ | = | 2 ಗೇಣು |
| 1 ಗೇಣು | = | 12 ಬೆರಳು |

ಕಾಲಪರಿಮಾಣ ಜನಪದರಲ್ಲಿ ವಿಶಿಷ್ಟ ರೀತಿಯಲ್ಲಿ ಪ್ರಚಲಿತವಿದೆ. ಸೂರ್ಯೋದಯ ಸೂರ್ಯಾಸ್ತಗಳ ಅಂತರ ಹಾಗೂ ಸೂರ್ಯಾಸ್ತದಿಂದ ಸೂರ್ಯೋದಯದ ಅಂತರವನ್ನು ಬೇರೆ ಬೇರೆ ಕಾಲಗಳೆಂದು ಸೂಚಿಸಲು ಅವರು ಬಳಸುವ ಪರಿಭಾಷೆ ಆಶ್ಚರ್ಯಕರವಾಗಿದೆ. ಬೆಳ್ಳಿ ಮೂಡೋ ಹೊತ್ತು, ಬೆಳಕರಿಯೊ ಹೊತ್ತು, ಕೋಳಿ ಕೂಗೋ ಹೊತ್ತು, ಆರು ಕಟ್ಟೋಹೊತ್ತು, ರೊಟ್ಟಿಹೊತ್ತು, ಕರ ಬಿಟ್ಟಕೋಹೊತ್ತು, ದನಬಿಡೋ ಹೊತ್ತು, ದೀಪಹಚ್ಚೋ ಹೊತ್ತು, ಕಲ್ಲು ನೀರು ಕರಗೋ ಹೊತ್ತು, ಸೂರ್ಯ ನೆತ್ತೀಗೆ ಬಂದೊತ್ತು, ಸೂರ್ಯ ನಾಕ್ಮಾರಿದ್ದೊತ್ತು, ನಿಸ್ರಾತ್ರೆಜಾಮ, ಸಪ್ಪಟ್ಟು ಸರೋತ್ತು–ಇತ್ಯಾದಿ ಪದಗಳಿವೆ. ಇವಲ್ಲದೆ ಖಚಿತವಾದ ಕಾಲನಿರ್ಧಾರಕ್ಕಾಗಿ ಹಿಂದೆ ಘಟಿಕಾಪಾತ್ರೆಯೆಂಬ ಸಾಧನವನ್ನು ಬಳಸುತ್ತಿದ್ದರು. ಘಳಿಗೆ ಜಾವ ಮುಂತಾದ ಪದಗಳು ಆಗಾಗ ಕಿವಿಯ ಮೇಲೆ ಬಿದ್ದರೂ ಅವು ಇಂದಿನ ಕಾಲಪರಿಮಾಣದ ಎಷ್ಟಕ್ಕೆ ಸಮ ಎಂಬುದು ಬಹಳಷ್ಟು ಜನರಿಗೆ ತಿಳಿದೇ ಇಲ್ಲ. ಒಂದು ಘಳಿಗೆ 24 ನಿಮಿಷಗಳಿಗೆ ಸಮವಾಗಿದೆ.

| | | |
|---|---|---|
| 60 ಘಳಿಗೆ | = | 30 ಮಹೂರ್ತ |
| 30 ಮಹೂರ್ತ | = | 1 ದಿವಸ |
| 7 ಘಳಿಗೆ | = | 1 ಜಾವ |
| 8 ಜಾವ | = | 1 ದಿವ |
| 30 ದಿವಸ | = | 1 ಮಾಸ |
| 12 ಮಾಸ | = | 1 ವರ್ಷ |
| 100 ವರ್ಷ | = | 1 ಶತಮಾನ |

ಮಳೆಬೆಳೆ ಕಾಲಗಳನ್ನು ಜನಪದರು ಸರಾಗವಾಗಿ ಗುರುತಿಸುತ್ತಾರೆ. ಅಶ್ವಿನಿಯಿಂದ ಹಿಡಿದು ರೇವತಿಯವರೆಗೆ 27 ಮಳೆಗಳಿವೆ. ಒಂದೊಂದು ಮಳೆಗೂ ಒಂದೊಂದು ನಕ್ಷತ್ರದ ಹೆಸರಿದೆ. ಪ್ರತಿಯೊಂದು ನಕ್ಷತ್ರಕ್ಕೂ ನಾಲ್ಕು ಪಾದಗಳು. ಇಂತಿಂಥ ಮಾಸದಲ್ಲಿ ಇಂತಿಂಥ ದಿನದಲ್ಲಿ ಇಂತಿಂಥ ಮಳೆ ಪ್ರಾರಂಭವಾಗುವುದನ್ನು ಅವರು ಯಾವ ಗ್ರಂಥಗಳ ಆಧಾರವೂ ಇಲ್ಲದೆ ನಿರ್ಧರಿಸಿ ಹೇಳುತ್ತಾರೆ. ಯಾವುದಾದರೂ ಮಳೆ ಹುಟ್ಟಿದ ದಿನಗಳಲ್ಲಿ ಸರಿಯಾಗಿ ಬೀಳದೆ ಕೊನೆಯ ದಿನಗಳಲ್ಲಿ ಜಡಿ ಹಿಡಿದರೆ ಕೊನೇ ಪಾದದಲ್ಲಿ ಚೆನ್ನಾಗಿ ಮಳೆಯಾಯ್ತು ಎಂದು ಪಾದಗಳ ಲೆಕ್ಕವನ್ನು ಹೇಳುತ್ತಾರೆ. ಒಂದು ಪಾದಕ್ಕೆ 3 ದಿನದ ಲೆಕ್ಕವಿದೆ.

ವೀಳೆದೆಲೆ ಲೆಕ್ಕದಲ್ಲಿ :

| | | |
|---|---|---|
| 20 ಎಲೆ | = | 1 ಕವಳಿಗೆ |
| 10 ಕವಳಿಗೆ | = | 1 ಕಟ್ಟು |
| 100 ಕಟ್ಟು | = | 1 ಪಿಂಡಿ |

ಕೆಲವು ಕಡೆ ಒಂದು ಪಿಂಡಿಗೆ 25, 50, 75 ಕಟ್ಟುಗಳನ್ನೂ ಹೇಳುತ್ತಾರೆ. ಅಡಕೆ ಕಾಯನ್ನು ಎಣಿಸುವಾಗ ಒಂದು ಕೈಗೆ 10 ಅಡಕೆಕಾಯಿ ಹಾಕುತ್ತಾರೆ. ಕವಡೆ ಆಟದಲ್ಲಿ ನಾಲ್ಕು ಬಿದ್ದರೆ ಚೌಕ, ಒಂದಕ್ಕೆ ಕೊಷ್ಕಿ, ಮೂರಕ್ಕೆ ಮುಷ್ಕ, ನಾಲ್ಕಕ್ಕೆ ಚೌಕ, ಐದಕ್ಕೆ ಪಂಜ, ಹನ್ನೆರಡಕ್ಕೆ ಬಾರಾ ಮುಂತಾಗಿ ಹೇಳುತ್ತಾರೆ.

ವಿನೋದ ಗಣಿತ ಅಥವಾ ಚಮತ್ಕಾರ ಗಣಿತ ವಿನೋದದ ಸಮಯಗಳಲ್ಲಿ ಜೂಜುಗಳಲ್ಲಿ ಬಳಕೆಯಾಗುತ್ತಿದ್ದಂತೆ ತಿಳಿಯುತ್ತದೆ. ಇಂಥ ಲೆಕ್ಕಗಳು ಬುದ್ಧಿಯ ಕಸರತ್ತಿಗೆ ಸಾಧನಗಳಾಗಿರುತ್ತಿದ್ದವು. ಈ ಬಗೆಯ ಲೆಕ್ಕಗಳನ್ನು ಸಾಮಾನ್ಯವಾಗಿ ಒಬ್ಬರು ಒಡ್ಡುವುದು ಮತ್ತೊಬ್ಬರು ಒಡಚುವುದು ರೂಢಿಯಲ್ಲಿದೆ. ಆದ್ದರಿಂದ ಇವನ್ನು ಒಗಟುಗಳ ಗುಂಪಿನಲ್ಲಿ ಸಂಖ್ಯಾತ್ಮಕ ಒಗಟು ಎಂದು ಕರೆಯಲಾಗಿದೆ. ಗಣಿತಗಂಧಿ ಒಗಟುಗಳು ಅಥವಾ ಒಗಟು ಲೆಕ್ಕಗಳು ಜನಪದ ಜೀವನದ ಬೇರೆ ಬೇರೆ ಸಂದರ್ಭಗಳಲ್ಲಿ ಮಹತ್ತ್ವದ ಪಾತ್ರವನ್ನು ವಹಿಸುತ್ತವೆ. ವಿರಾಮದ ವೇಳೆಯಲ್ಲಿ ವಿನೋದಕ್ಕಾಗಿ ಇಂಥ ಒಗಟುಗಳನ್ನು ಒಡ್ಡುವುದು ಒಡಚುವುದು ಒಂದು ವಿಧವಾದರೆ ಜನಪದರು ತಮ್ಮ ನಿತ್ಯಕಾಯಕವನ್ನು ಹಗುರಗೊಳಿಸಿಕೊಳ್ಳುವುದಕ್ಕೆ ಇವನ್ನು ಬಳಸಿಕೊಳ್ಳುವುದು ಇನ್ನೊಂದು ಬಗೆ. ಪಂಡಿತ ಮಂಡಳಿಗಳಲ್ಲಿ ಪಂಥಕ್ಕಾಗಿಯೂ ಇಂಥ ಲೆಕ್ಕಗಳನ್ನು ಒಡ್ಡಿ ಬುದ್ಧಿಪರೀಕ್ಷೆಗಾಗಿ ಬಳಸಿ ಕೊಳ್ಳುತ್ತಿದ್ದುದೂ ಉಂಟು. ಇಂಥ ಸಂಖ್ಯಾತ್ಮಕ ಒಗಟುಗಳು ಅಕ್ಷರಸ್ಥ, ಅನಕ್ಷರಸ್ಥರಿಬ್ಬರಲ್ಲೂ ಸಮಾನ ಪಾತ್ರವನ್ನು ವಹಿಸಿವೆ. ಆಶ್ಚರ್ಯವೆಂದರೆ ಅನಕ್ಷರಸ್ಥರು ಇಂಥ ಲೆಕ್ಕಗಳನ್ನು ನಿರಾಯಾಸವಾಗಿ ಒಡಚುವ ಬಗೆ. ಅಂಕಿಗಳ ಮೂಲಕ ರೂಪಿತವಾಗುವ ಇಂಥ ಲೆಕ್ಕಗಳಿಗೆ ಉತ್ತರವನ್ನು ಕಂಡುಹಿಡಿಯುವುದು ಅತ್ಯಂತ ತ್ರಾಸವೇ ಸರಿ. ಆದರೆ ಇವು ಬುದ್ಧಿಗೆ ಬಹಳಷ್ಟು ವ್ಯಾಯಾಮ ಕೊಡುತ್ತವೆ. ಇವುಗಳಲ್ಲಿ ಜನಪದರ ಬುದ್ಧಿಚತುರತೆ, ತಂತ್ರಗಳು ಎದ್ದು ತೋರುತ್ತವೆ. ಅಷ್ಟು ಮಾತ್ರವಲ್ಲ, ಅವರ ಜ್ಞಾನಕೋಶದ ಅತ್ಯಮೂಲ್ಯ ಭಾಗ ಇಂಥ ಲೆಕ್ಕಗಳು ಎಂದೆನ್ನಬಹುದು. ಇಂಥ ಲೆಕ್ಕಗಳನ್ನು ಒಡ್ಡಿದಾಗ ಅವುಗಳ ಉತ್ತರ ಹತ್ತಿರದಲ್ಲೇ ಇರುವಂತೆ ಭಾಸವಾದರೂ ಕೂಡದೆ, ಕಳೆಯದೆ, ಗುಣಿಸದೆ, ಭಾಗಿಸದೆ ಹಳ್ಳಿಯವರಂತೆ ಸರಾಗವಾಗಿ ಉತ್ತರಿಸುವುದು ಅಷ್ಟೇನೂ ಸುಲಭವಲ್ಲ. ಇಂಥ ವಿನೋದಗಣಿತ ಅಥವಾ ಚಮತ್ಕಾರಗಣಿತದಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು:

ಸಂಕಲನಕ್ಕೆ :

ದೋಸೆಕಲ್ಲುನ ಮೇಲೆ ಏಳು ದೋಸೆ
ಹಸೆ ಕಲ್ಲುನ ಮೇಲೆ ಆರು ದೋಸೆ
ನೆಲೀನ ಮೇಲೆ ಹತ್ತು ದೋಸೆ
ಅವು ಇವೆಲ್ಲ ಎಷ್ಟು ದೋಸೆ?

ಹೀಗೆ ಲೆಕ್ಕವನ್ನು ಒಡ್ಡಿದಾಗ 7+6+10=23 ಎಂದು ಕೂಡಿ ಉತ್ತರವನ್ನು ಕೊಟ್ಟರೆ ಸೋಲಬೇಕಾಗುತ್ತದೆ. ಇಲ್ಲಿರುವ ಚಮತ್ಕಾರವನ್ನು ಎಚ್ಚರದಿಂದ ಗಮನಿಸಬೇಕಾಗುತ್ತದೆ. ದೋಸೆಕಲ್ಲಿನ ಮೇಲೆ ಎದ್ದ ದೋಸೆ ಹಸೆಕಲ್ಲಿನ ಮೇಲೆ ಆರಿತು. ಆರಿದ ದೋಸೆಯನ್ನು ನೆಲೀನ ಮೇಲೆ ಸುರಕ್ಷಿತವಾಗಿ ಇಡಲಾಯಿತು. ಅಂದರೆ ಒಂದೇ ಒಂದು ದೋಸೆ ದೋಸೆಕಲ್ಲಿನ ಮೇಲಿಂದ ಹಸೆಕಲ್ಲಿಗೆ, ಹಸೆಕಲ್ಲಿನ ಮೇಲಿಂದ ನೆಲುವಿನ ಮೇಲಕ್ಕೆ ಹೋಯಿತು. ಹೀಗೆ ಏಳು ಆರು ಹತ್ತು ಎಂಬ ಪದಗಳ ಮೇಲೆ ಆಟವಾಡಿರುವ ಚಮತ್ಕಾರವನ್ನು ಗಮನಿಸಬಹುದು.

ವ್ಯವಕಲನ : 30ರಲ್ಲಿ ಹನ್ನೆರಡು ಕಳೆದರೆ 12 ಉಳಿಯುತ್ತದೆ. ಹಾಗಾದರೆ 12ರಲ್ಲಿ 30 ಕಳೆದರೆ ಎಷ್ಟುಳಿಯುತ್ತದೆ ?

ಈ ಸಮಸ್ಯೆ ವಿಚಿತ್ರವೆನಿಸಿದರೂ ಅಕ್ಷರಸ್ಥ ಇದಕ್ಕೆ 30–18=12; 12–30=18 ಎಂದು ಉತ್ತರಿಸಬಲ್ಲ. ಆದರೆ–18 ಎಂಬ ಉತ್ತರ ಜನಪದರಿಗೆ ಅರ್ಥವಾಗುವುದೂ ಇಲ್ಲ. ಈ ಉತ್ತರದಿಂದ ಅವರನ್ನೊಪ್ಪಿಸುವುದೂ ಸುಲಭವಲ್ಲ. ಏಕೆಂದರೆ ಈ ಸಮಸ್ಯೆಗೆ ಅವರಲ್ಲೇ ಬೇರೆ ಉತ್ತರವಿದೆ. ಆ ಉತ್ತರಕ್ಕೆ ಅಕ್ಷರಸ್ಥನ ಉತ್ತರ ತಾಳೆಯಾಗದಿರುವಾಗ ಒಪ್ಪುವುದಾದರೂ ಹೇಗೆ ? ಆದ್ದರಿಂದ ಅವರೇ ಅದಕ್ಕೆ ಪರಿಹಾರ ಒದಗಿಸುತ್ತಾರೆ. ಅದೇನೆಂದರೆ 12ರಲ್ಲಿ 30ನ್ನು ಕಳೆದರೆ 11 ಉಳಿಯಿತಂತೆ. ಅಂದರೆ 1 ವರ್ಷದ 12 ತಿಂಗಳುಗಳಲ್ಲಿ 30

ದಿನಗಳನ್ನು ಅರ್ಥಾತ್ 1 ತಿಂಗಳನ್ನು ಕಳೆದರೆ 11 ತಿಂಗಳು ತಾನೆ ಉಳಿಯುವುದು ? ಆದ್ದರಿಂದ ಉತ್ತರ 30 ದಿನದಲ್ಲಿ 18ನ್ನು ಕಳೆದರೆ ಉಳಿದದ್ದು 12 ದಿನ. 12 ತಿಂಗಳಲ್ಲಿ 30 ದಿನ ಕಳೆದರೆ ಉಳಿದದ್ದು 11 ತಿಂಗಳು.

ಭಾಗಾಕಾರಕ್ಕೆ : ಒಂದೆರಡು ಮೂರ್ನಾಕು ಸಂಧೀಲೈದಾರೇಳು ಇದನ್ನು ಇಪ್ಪತ್ತೊಂದರಿಂದ ನಿಶ್ಶೇಷವಾಗಿ ಭಾಗಿಸಿ ಎಂದು ಹೇಳುವ ಈ ಲೆಕ್ಕಕ್ಕೆ ಅವರ ಉತ್ತರವೂ ತುದಿಬಾಯಿಯಲ್ಲೇ ಸಿದ್ಧವಾಗಿರುತ್ತದೆ. ಉತ್ತರ: ಏಳು ನಾಕಾರು ಮುಂದೊಂಬತ್ತೇಳು. ಪ್ರಶ್ನೆ ಉತ್ತರಗಳೆರಡೂ ಅತ್ಯಂತ ಚಮತ್ಕಾರದಿಂದ ಕೂಡಿವೆ. ಪ್ರಶ್ನೆಯನ್ನು ವಿಭಜಿಸಿ ಬರೆದುಕೊಳ್ಳುವುದರಲ್ಲೇ ಈ ಗಣಿತ ರಹಸ್ಯವೆಲ್ಲ ಅಡಗಿದೆ.

ಒಂದೆರಡು ಅಂದರೆ 1 ಮತ್ತು 1

ಮೂರ್ನಾಕು ಅಂದರೆ 3 3 3 3

ಸಂಧೀಲೈದಾರೇಳು ಅಂದರೆ 6 6 6 6 6 7

ಸಂಧಿಯಲ್ಲಿ ಎಂದಿರುವುದರಿಂದ ಒಂದೆರಡು ಮೂರ್ನಾಕುಗಳ ಮಧ್ಯೆ ಈ 6 6 6 6 6 7ನ್ನು ಬರೆದುಕೊಂಡು 21ರಿಂದ ಭಾಗಿಸಬೇಕು. ಅಂದರೆ 161636563637 ÷ 21=769,69,69,69,7 ಉತ್ತರ ಹೀಗೆ: 7, ನಾಲ್ಕು 6 ಅವುಗಳ ಮುಂದೆಲ್ಲ 9,7.

ಗುಣಾಕಾರಕ್ಕೆ : ಒಂದು ಹೊಲದಲ್ಲಿ ನೂರು ಸಾಲುಗಳಿವೆ. ಒಂದೊಂದು ಸಾಲಿನಲ್ಲೂ ನೂರು ಹುತ್ತಗಳಿವೆ. ಒಂದೊಂದು ಹುತ್ತಕ್ಕೂ ನೂರು ಕೋವೆಗಳಿವೆ. ಪ್ರತಿಯೊಂದು ಕೋವೆಯಲ್ಲೂ ನೂರು ಇಲಿಗಳಿವೆ. ಪ್ರತಿಯೊಂದು ಇಲಿಗೂ ನೂರು ಮರಿಗಳಿವೆ. ಒಂದೊಂದು ಮರಿಗೂ ಒಂದೊಂದು ಪಾವು ರಾಗಿ ಇದೆ. ಹಾಗಾದರೆ ಇರುವ ಹುತ್ತಗಳೆಷ್ಟು? ಕೋವೆಗಳೆಷ್ಟು ? ಇಲಿಗಳೆಷ್ಟು ? ಮತ್ತು ಒಟ್ಟು ಎಷ್ಟು ಸೇರು ರಾಗಿ ಇದೆ? ಇದನ್ನು ಒಡಚಿದವನಿಗೆ ಬಹುಮಾನ ಹೆಣ್ಣಿನ ಸನ್ಮಾನ.

ದೊಡ್ಡ ಸಂಖ್ಯೆಗಳಲ್ಲಿ ಗುಣಿಸಿ ಹೇಳಬೇಕಾದ ಈ ಬಗೆಯ ಲೆಕ್ಕಗಳನ್ನು ಹೇಳಿ ಇವನ್ನು ಒಡೆಚಲು ಪ್ರಯತ್ನಿಸಿದರೆ ಹುಚ್ಚರಾಗಿ ಹೋಗುತ್ತಾರೆಂದೂ ಅದಕ್ಕೆ ಉತ್ತರ ಹೇಳಿದವರೇ ಇಲ್ಲವೆಂದು ಜನಪದರು ಹೇಳುತ್ತಾರೆ. ಕಾರಣ ಇಷ್ಟೆಲ್ಲವನ್ನೂ ಬರೆವಣಿಗೆ ಯನ್ನರಿಯದ ಅವರು ಮನಸ್ಸಿನಲ್ಲೇ ಗುಣಿಸಿ ಹೇಳುವುದು ಕಷ್ಟ ತಾನೆ ! ಆದ್ದರಿಂದ ಅವರು ಬೇರೆ ಬೇರೆ ರೀತಿಯಲ್ಲಿ ಭಾವಿಸುವುದು ಸಹಜವೇ ಆಗಿದೆ. ಹೀಗೆ ಅವರಿಗಾರಿಗೂ ಬಿಡಿಸಲು ಬರದ ಲೆಕ್ಕಗಳಿದ್ದಾಗ ಮಾತ್ರ ಒಗಟಿನ ಮುಂದೆ ಒಡಳಿದವರಿಗೆ ಬಹುಮಾನ ಹೆಣ್ಣಿನ ಸನ್ಮಾನ ಎಂದು ಹೇಳುತ್ತಾರೆ. ಅಕ್ಷರಸ್ಥರಿಗೆ ಈ ಬಗೆಯ ಲೆಕ್ಕಗಳು ನೀರು ಕುಡಿದಷ್ಟು ಸುಲಭ.

ಬಹಳಷ್ಟು ಸಮಯ ತಲೆಕೆರೆದುಕೊಂಡರೂ ಸುಲಭವಾಗಿ ಉತ್ತರ ಹೇಳಲಾರದಂಥ ಅನೇಕ ಲೆಕ್ಕಗಳು ಜನಪದರಲ್ಲಿವೆ. ಅಂಥ ಕೆಲವು ಉದಾಹರಣೆಗಳನ್ನು ಈಗ ನೋಡಬಹುದು.

ಆನೆಗೆ ಐದು ರೂಪಾಯಿ, ಕುದುರೆಗೆ ಮುಕ್ಕಾಲು ರೂಪಾಯಿ, ಕತ್ತೆಗೆ ಕಾಲು ರೂಪಾಯಿಯಂತೆ ನೂರು ರೂಪಾಯಿಗೆ ನೂರು ರಾಸುಗಳನ್ನು ತಂದರೆ ಎಷ್ಟು ಆನೆಗಳಿವೆ ಎಷ್ಟು ಕುದುರೆಗಳಿವೆ ಎಷ್ಟು ಕತ್ತೆಗಳಿವೆ ?

ಈ ಬಗೆಯ ಲೆಕ್ಕಗಳಿಗೆ ವಿದ್ಯಾವಂತ ಪ್ರಯತ್ನಪಟ್ಟು ಹೇಳುವುದು ಅಸಾಧ್ಯ ವೇನಲ್ಲದಿದ್ದರೂ ಅನಕ್ಷರಸ್ಥರು ನಿರಾಯಾಸವಾಗಿ ಉತ್ತರಿಸಿದಾಗ ಆಶ್ಚರ್ಯವಾಗುತ್ತದೆ:

ಭಾಷಾ ಚಮತ್ಕಾರದಿಂದ ಲೆಕ್ಕಗಳನ್ನು ಒಡ್ಡುವ ರೀತಿ ನೋಡಿ :

ನಾನೂರು ರೂಪಾಯಿ ಕೊಟ್ಟು ಒಂದು ಕುದುರೆ ತಂದು 300 ರೂಪಾಯಿಗೆ ಮಾರಿದರೆ ಎಷ್ಟು ಲಾಭ ಬಂತು ?

ಈ ಲೆಕ್ಕಕ್ಕೆ 100 ರೂ. ನಷ್ಟವೆಂದು ಹೇಳಿದರೆ ತಪ್ಪಾಗಿಬಿಡುತ್ತದೆ. ನಾನೂರು ಎಂದರೆ ನಾನು ನೂರು ಎಂದು ಅರ್ಥೈಸಬೇಕಾಗುತ್ತದೆ. ನಾನು ನೂರು ರೂಪಾಯಿಗೆ ತಂದ ಕುದುರೆಯನ್ನು ಮುನ್ನೂರು ರೂ. ಗಳಿಗೆ ಮಾರಿದರೆ 200 ರೂ. ಲಾಭ ಎಂದು ಹೇಳಬೇಕು.

ಅತ್ಯಂತ ಸುಲಭವಾಗಿದ್ದರೂ ಕ್ಲಿಷ್ಟವಾಗಿ ಕಾಣುವ ಈ ಲೆಕ್ಕವನ್ನು ನೋಡಿ: ಮೂರು ಸಂಖ್ಯೆಗಳನ್ನು ಕೂಡಿದರೆ ಹಾಗೂ ಗುಣಿಸಿದರೆ ಒಂದೇ ಉತ್ತರ ಬರಬೇಕು. ಹಾಗಾದರೆ ಮೂರು ಸಂಖ್ಯೆಗಳಾವುವು ?

ಉತ್ತರ 1,2, ಮತ್ತು 3

ಕೂಡಿದಾಗ : 1+2+3=6

ಗುಣಿಸಿದಾಗ : 1×2×3 =6

ಉತ್ತರವೇ ಇಲ್ಲದಂಥ ಕೆಲವು ಲೆಕ್ಕಗಳನ್ನು ಒಡ್ಡಿ ಉತ್ತರಿಸಲು ಪ್ರಯತ್ನಿಸಿದವನನ್ನು ನೋಡಿ ನಗುವುದೂ ಉಂಟು. ಅಂಥದೊಂದು ಈ ಲೆಕ್ಕ :

55 ಕುದುರೆಗಳನ್ನು, 11 ಗೂಟಗಳಿಗೆ–ಒಂದು ಗೂಟಕ್ಕೆ ಕಟ್ಟಿದ ಸಂಖ್ಯೆ ಮತ್ತೊಂದು ಗೂಟಕ್ಕೆ ಬರದಂತೆ–ಬೆಸಸಂಖ್ಯೆಯಲ್ಲಿ ಕಟ್ಟಿರಿ ಎಂದು ಲೆಕ್ಕವನ್ನು ಒಡ್ಡಿ ಉತ್ತರಿಸಲು ಪ್ರಯತ್ನಿಸಿದವನನ್ನು ಮುಖಭಂಗ ಮಾಡುವುದು ಅಥವಾ ಹಾಸ್ಯಕ್ಕೀಡುಮಾಡುವುದು ಅಥವಾ ಪಂಥ ಕಟ್ಟಿ ಸೋಲಿಸುವುದು ಜನಪದರಲ್ಲಿ ಸರ್ವೇಸಾಮಾನ್ಯ. ಇಂಥ ನೂರಾರು ಲೆಕ್ಕಗಳು ಜನಪದ ಗಣಿತ ಭಂಡಾರದಲ್ಲಿವೆ. ಕನ್ನಡದಲ್ಲಿ ಜಾನಪದದ ಈ ಪ್ರಕಾರವನ್ನು ಸಂಗ್ರಹಿಸಿ 'ಜನಪದ ಚಮತ್ಕಾರ ಗಣಿತ' ಎಂಬ ಹೆಸರಿನ ಹೊತ್ತಗೆಯನ್ನು ಪಿ.ಕೆ. ರಾಜಶೇಖರ ಮತ್ತು ವಿಘ್ನಸಂತೆ ಸಣ್ಣನಂಜೇಗೌಡರು ಸೇರಿ ಪ್ರಕಟಿಸಿದ್ದಾರೆ. (ಪಿ.ಕೆ.ಆರ್.ಎ.)

**ಜನಪದಗಳು, ಪ್ರಾಚೀನ ಭಾರತದ :** ಪ್ರಾಚೀನ ಭಾರತದ ಶಾಸ್ತ್ರಜ್ಞರ ಪ್ರಕಾರ ರಾಜ್ಯದ ಏಳು ಅಂಗಗಳಲ್ಲಿ ಒಂದು ಪ್ರಮುಖ ಅಂಗ. ಜನತೆಯನ್ನೊಳಗೊಂಡ ಸ್ವತಂತ್ರ ಅಧಿಕಾರವುಳ್ಳ ಪ್ರದೇಶ. ಜನಪದ ಜನತೆಗಿಂತ ಭೂಭಾಗಕ್ಕೆ ಅನ್ವಯಿಸುತ್ತದೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರಾದರೂ ಅದು ಸರಿ ಎನ್ನಿಸುವುದಿಲ್ಲ. ಏಕೆಂದರೆ, ಕೌಟಿಲ್ಯ ಹೇಳುವಂತೆ ಜನವಸತಿ ಇಲ್ಲದ ಕೇವಲ ಭೂಭಾಗ ರಾಜ್ಯವಾಗಲಾರದು. ಮನುಸ್ಮೃತಿಯಲ್ಲಿ ಜನಪದವನ್ನು ದೇಶವೆಂದು ಕರೆಯಲಾಗಿದೆ. ಅದು ಒಣ ಹವೆಯುಳ್ಳದ್ದು, ಸಸ್ಯಭರಿತವಾದ್ದು, ರೋಗರುಜಿನಗಳಿಲ್ಲದ್ದು; ಅದು ಎಲ್ಲ ದೃಷ್ಟಿಗಳಿಂದಲೂ ಪರಿಪೂರ್ಣವಾಗಿರಬೇಕು ಎಂದು ಹೇಳಿದೆ. ಕೌಟಿಲ್ಯ ಇದನ್ನು ಜನಪದ ಸಂಪತ್ತು ಎಂದು ಕರೆದು ಈ ರೀತಿ ಬಣ್ಣಿಸುತ್ತಾನೆ. ಜನಪದ ಸ್ವಯಂಪೂರ್ಣವಾದ್ದು, ವಿನೀತರಾದ ಮಾಂಡಲಿಕರುಳ್ಳದ್ದು, ಫಲವತ್ತಾದ ಭೂಮಿಯಿಂದಲೂ ಗಣಿ, ಅಡವಿ, ಪುಷ್ಪವೃಕ್ಷಗಳಿಂದಲೂ ಸಂಪದ್ಭರಿತವಾದ್ದು, ಸ್ವಾಮಿಭಕ್ತಿಯುಳ್ಳ ಜನರಿಂದ ಕೂಡಿದ್ದು. ಇದೇ ಮಾತನ್ನು ಕಾಮಂದಕ (ನೀತಿಸಾರ) ವಿವರಿಸುತ್ತ, ಮಳೆಯನ್ನು ಅವಲಂಬಿಸದೆ ನೀರಿನ ಸಮೃದ್ಧಿಯುಳ್ಳದ್ದು, ಜಲಮಾರ್ಗ ಮತ್ತು ರಸ್ತೆಗಳಿಂದ ಕೂಡಿ ಸಾರಿಗೆ ಸೌಕರ್ಯವುಳ್ಳದ್ದು ಎಂದು ಮುಂತಾಗಿ ಹೇಳುತ್ತಾನೆ.

ಜನಪದ ಶಬ್ದವನ್ನು ಶಾಸನ ಮತ್ತು ಸಾಹಿತ್ಯಗಳಲ್ಲಿ ವಿಧವಿಧವಾಗಿ ಬಳಸಲಾಗಿದೆ. ಜನ ಮತ್ತು ಜನಪದವನ್ನು ಅಂದರೆ ನಾಡನ್ನೂ ನೋಡುತ್ತೇನೆ ಎಂದು ಅಶೋಕ ತನ್ನ ಶಾಸನಗಳಲ್ಲಿ ಹೇಳಿದ್ದಾನೆ. ಮಹಾಭಾರತ, ರಾಮಾಯಣ, ಮತ್ತು ಇತರ ಅನೇಕ ಗ್ರಂಥಗಳಲ್ಲಿ ಜನಪದ, ಜಾನಪದ ಎಂಬ ಪದಗಳು ಬಳಕೆಯಾಗಿವೆ. ಇವುಗಳ ಜೊತೆಗೆ ಅನೇಕ ಸಲ ಪೌರ ಎಂಬ ಪದವನ್ನು ಬಳಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಪೌರ ಎಂದರೆ ಪುರ ಅಥವಾ ನಗರದ ಜನರು ಎಂದೂ, ಜಾನಪದ ಎಂದರೆ ಗ್ರಾಮಾಂತರದ ಅಥವಾ ದೇಶದ ಜನರು ಎಂದೂ ಅರ್ಥವಾಗುತ್ತದೆ. ಆದರೆ ಕೆಲವು ವಿದ್ವಾಂಸರು ಈ ಪದಗಳು ನಗರಗಳ ಮತ್ತು ದೇಶದ ಪ್ರಾತಿನಿಧಿಕ ಸಭೆಗಳನ್ನು ಸೂಚಿಸುತ್ತವೆ ಎಂದೂ ಅಭಿಪ್ರಾಯಪಡುತ್ತಾರೆ. ಜನಪದ ಎಂದರೆ ದೇಶದ ಪ್ರಾತಿನಿಧಿಕ ಸಭೆ ಎಂದು ಹೇಳಿ, ಇಂಥ ಸಭೆಗಳು ರಾಜ್ಯದ ಆಡಳಿತದಲ್ಲಿ ಬಹು ಪ್ರಮುಖವಾದ ಪಾತ್ರ ವಹಿಸುತ್ತಿದ್ದುವು ಎಂದು ಕೆ.ಪಿ. ಜಯಸ್ವಾಲ್ ಹೇಳುತ್ತಾರೆ. ಇದಕ್ಕೆ ಆಧಾರವಾಗಿ ಅನೇಕ ನಿದರ್ಶನಗಳನ್ನು ನೀಡುತ್ತಾರೆ. ಪ್ರಶ.ಪೂ. ಸು. 1ನೆಯ ಶತಮಾನದಲ್ಲಿ ಖಾರವೇಲನ ಹಾತಿಗುಂಫಾ ಶಾಸನದಲ್ಲಿ ಅರಸ ಜನಪದಕ್ಕೆ ಸಾವಿರಾರು ಅನುಗ್ರಹಗಳನ್ನು ನೀಡಿದನೆಂದು ಹೇಳಿದೆ. ಇಲ್ಲಿ ಅನುಗ್ರಹ ಎಂದರೆ ಅಧಿಕಾರ ಎಂದು ಅರ್ಥವಾಗುತ್ತದೆ. ರಾಮಾಯಣದಲ್ಲಿ ದಶರಥನು ರಾಮನನ್ನು ಯುವರಾಜನೆಂದು ನಿಯಮಿಸುವಾಗ ಜನಪದದ ಒಪ್ಪಿಗೆ ಪಡೆದನೆಂದು ಹೇಳಲಾಗಿದೆ. ಜನಪದಗಳನ್ನು ಹೆಸರಿಸುವ ಮುದ್ರೆಗಳು ಸಿಕ್ಕಿವೆ. ಅರಸ ತನ್ನ ಪ್ರತಿನಿತ್ಯದ ಕಾರ್ಯಕ್ರಮಗಳಲ್ಲಿ ಪೌರಜನಪದಗಳನ್ನು ಸಂದರ್ಶಿಸಬೇಕೆಂದು ಅರ್ಥಶಾಸ್ತ್ರದಲ್ಲಿ ಹೇಳಲಾಗಿದೆ. ಜನಪದಗಳು ನಾಣ್ಯಗಳನ್ನು ಹೊರಡಿಸುತ್ತಿದ್ದುವೆಂದು ಹೇಳಲು ಆಧಾರಗಳಿವೆ. ಅರಸ ಹೆಚ್ಚಿನ ಹಣಕ್ಕಾಗಿ ಜನಪದಗಳನ್ನು ಕೇಳಬೇಕು ಎಂದು ಅರ್ಥಶಾಸ್ತ್ರದಲ್ಲಿ ಹೇಳಿದೆ. ಉಚ್ಚ ಅಧಿಕಾರಿಗಳು ಪೌರ ಜನಪದಗಳ ವಿಶ್ವಾಸ ಗಳಿಸಬೇಕು ಎಂದೂ ಹೇಳಲಾಗಿದೆ. ಹೀಗೆ, ಜನಪದಗಳು ಜನತೆಯ ಪ್ರಾತಿನಿಧಿಕ ಸಭೆಗಳಾಗಿದ್ದು, ಅರಸನ ಮೇಲೂ ರಾಜ್ಯದ ಆಡಳಿತದ ಮೇಲೂ ಬಹಳಷ್ಟು ನಿಯಂತ್ರಣ ಹೊಂದಿದ್ದುವು ಎಂಬುದು ಜಯಸ್ವಾಲರ ವಾದ.

ಆದರೆ ಮೇಲಿನ ನಿದರ್ಶನಗಳಲ್ಲಿ ಜನಪದವನ್ನು ಪ್ರಾತಿನಿಧಿಕ ಸಭೆ ಎಂಬ ಅರ್ಥದಲ್ಲಿ ಬಳಸಲಾಗಿದೆ ಎಂದು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಹಾತಿಗುಂಫಾ ಶಾಸನದಲ್ಲಿ ಅರಸ ಜನಪದಕ್ಕೆ ಅನುಗ್ರಹಗಳನ್ನು ನೀಡಿದನೆಂದಾಗ ಜನತೆಗೆ ಬಹು ವಿಧವಾದ ಸೌಕರ್ಯಗಳನ್ನು ಒದಗಿಸಿದ ಎಂಬ ಸಾಮಾನ್ಯ ಅರ್ಥ ಸರಿಯಾಗುತ್ತದೆ. ಅನುಗ್ರಹ ಎಂದರೆ ಅಧಿಕಾರ ಎಂದು ಅರ್ಥಮಾಡುವ ಅಗತ್ಯವಿಲ್ಲ. ಅಲ್ಲದೆ, ಸಾವಿರಾರು ಅಧಿಕಾರಗಳನ್ನು ಕೊಡುವ ಬಗೆಯಾದರೂ ಎಂತು ? ಅರಸ ಪ್ರತಿನಿತ್ಯದ ಕರ್ಮಗಳಲ್ಲಿ ಪೌರ ಜನಪದವನ್ನು ಸಂದರ್ಶಿಸಬೇಕೆಂದಾಗ, ಜನತೆಗೆ ದರ್ಶನವಿತ್ತು ಅವರ ಕಷ್ಟಸುಖಗಳನ್ನು ವಿಚಾರಿಸಬೇಕು ಎಂದು ಅರ್ಥ ಮಾಡಬಹುದಲ್ಲದೆ, ಅರಸ ದಿನವೂ ಈ ಪ್ರಾತಿನಿಧಿಕ ಸಭೆಗಳನ್ನು ಸಂದರ್ಶಿಸಬೇಕು ಎಂದು ಅರ್ಥವಾಗದು. ಜನಪದಗಳು ನಾಣ್ಯಗಳನ್ನು ಹೊರಡಿಸುತ್ತಿದ್ದು ವೆಂದು ಎಲ್ಲಿಯೂ ಹೇಳಿಲ್ಲ. ಜಯಸ್ವಾಲರು ಉದಾಹರಿಸುವ ವಾಕ್ಯ, ಜನರು ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಮಾಡಿಸುವುದಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದಾಗಿದೆ. ದಶರಥ ರಾಮನನ್ನು ಯುವರಾಜನನ್ನಾಗಿ ಮಾಡುವ ಸಂದರ್ಭದಲ್ಲಿ ಉಕ್ತವಾದ ಜನಪದ ಸಾಮಾನ್ಯ ಜನತೆಗೆ ಸಂಬಂಧಿಸಿದೆಯಲ್ಲದೆ, ಅದೊಂದು ಪ್ರಾತಿನಿಧಿಕ ಸಭೆ ಎಂದು

ಅರ್ಥವಾಗಲಾರದು. ಅಧಿಕಾರಿಗಳು ಪೌರ ಜನಪದಗಳ ವಿಶ್ವಾಸ ಗಳಿಸಬೇಕೆಂದು ಅರ್ಥವಾಗುತ್ತದೆಯೇ ಹೊರತು ತಮ್ಮ ಅಧಿಕಾರಕ್ಕಾಗಿ ಇಂಥ ಪ್ರಾತಿನಿಧಿಕ ಸಭೆಗಳನ್ನು ಸಂತುಷ್ಟಗೊಳಿಸಬೇಕು ಎಂದು ಅರ್ಥವಾಗುವುದಿಲ್ಲ. ಅರಸ ಹೆಚ್ಚಿನ ಹಣಕ್ಕಾಗಿ ಜನಪದಗಳನ್ನು ಯಾಚಿಸಬೇಕು ಎಂದಾಗ, ಜನತೆಯನ್ನು ಕೇಳಬೇಕು ಎಂದಷ್ಟೇ ಅರ್ಥವಾಗುತ್ತದೆ. ಹೀಗೆ ಜನಪದ ಎಂಬ ಶಬ್ದಕ್ಕೆ, ದೇಶ, ಜನತೆ ಎಂಬ ಅರ್ಥ ಆಗುತ್ತದೆ. ಇದೇ ಅರ್ಥದಲ್ಲಿ ಈ ಶಬ್ದವನ್ನು ಅಶೋಕನ ಶಾಸನಗಳಲ್ಲೂ ಬಳಸಲಾಗಿದೆ.

ಪ್ರಶ.ಪೂ. 7–6ನೆಯ ಶತಮಾನದ ಹೊತ್ತಿಗೆ, ಎಂದರೆ ಗೌತಮಬುದ್ಧನ ಜನನಕ್ಕಿಂತ ಸ್ವಲ್ಪ ಮುಂಚೆ, ಕಾಬೂಲಿನಿಂದ ಗೋದಾವರಿಯ ವರೆಗೆ ಚಿಕ್ಕ ಹಾಗೂ ದೊಡ್ಡ ರಾಜ್ಯಗಳು ಜನಪದ ಎಂಬ ಹೆಸರಿನಿಂದ ತಲೆ ಎತ್ತಿದುವು. ಅವುಗಳಲ್ಲಿ ಹಲವು ಅರಸೊತ್ತಿಗೆಗಳಾಗಿದ್ದುವು. ಮತ್ತೆ ಕೆಲವು ಗಣರಾಜ್ಯಗಳೆನ್ನಿಸಿಕೊಂಡುವು. ಇವುಗಳಲ್ಲಿ 16 ರಾಜ್ಯಗಳು ಸೋಳಸ ಮಹಾಜನಪದ ಅಥವಾ 16 ಮಹಾಜನಪದಗಳೆಂದು ಪ್ರಸಿದ್ಧಿ ಪಡೆದಿದ್ದುವು. ಬೌದ್ಧ ಗ್ರಂಥಗಳಾದ ಅಂಗುತ್ತರನಿಕಾಯ, ಮಹಾವಸ್ತು, ವಿನಯಪಿಟಕ ಮುಂತಾದವುಗಳಲ್ಲೂ ಜೈನರ ಭಗವತೀ ಸೂತ್ರದಲ್ಲೂ ಹಲವು ಪುರಾಣಗಳಲ್ಲೂ ಸೋಳಸ ಮಹಾಜನಪದಗಳನ್ನು ಕುರಿತ ಉಲ್ಲೇಖಗಳಿವೆ. ಈ ಗ್ರಂಥಗಳಲ್ಲಿ ಉಕ್ತವಾದ 16 ಮಹಾಜನಪದಗಳ ಹೆಸರಿನ ಪಟ್ಟಿಯಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಂಡುಬರುತ್ತದೆ. ಉದಾಹರಣೆಗೆ ವ್ರಿಜಿ ಹಾಗೂ ಮಲ್ಲ, ಇವು ಬೌದ್ಧ ಹಾಗೂ ಜೈನರ ಬರೆಹಗಳಲ್ಲಿ ಕಂಡುಬಂದರೂ ಪುರಾಣಗಳಲ್ಲಿ ಇವುಗಳ ಹೆಸರುಗಳು ಕಂಡುಬರುವುದಿಲ್ಲ. ಈ ವ್ಯತ್ಯಾಸಕ್ಕೆ ಜನಪದಗಳ ಬಗ್ಗೆ ಗ್ರಂಥಕರ್ತರ ಜ್ಞಾನ, ಅವುಗಳೊಂದಿಗೆ ಅವರಿಗೆ ಇದ್ದ ಸಂಪರ್ಕ ಮುಂತಾದವು ಕಾರಣಗಳೆಂದು ಹೇಳಲಾಗಿದೆ. ಮೇಲೆ ಹೇಳಿರುವ ಗ್ರಂಥಗಳಲ್ಲಿ ಬರುವ ಹೆಸರುಗಳ ಪಟ್ಟಿ ಸ್ವಲ್ಪ ವ್ಯತ್ಯಾಸ ವಾಗಿದ್ದರೂ ಸಾಮಾನ್ಯವಾಗಿ ಇವು ಸೋಳಸ ಮಹಾಜನಪದಗಳೆಂದು ಪರಿಗಣಿತವಾಗಿವೆ: 1 ಕಾಶಿ, 2 ಕೋಸಲ, 3 ಅಂಗ, 4 ಮಗಧ, 5 ವ್ರಿಜಿ (ವಜ್ಜಿ), 6 ಮಲ್ಲ, 7 ಚೇದಿ (ಚೇಟಿ), 8 ವತ್ಸ (ವತ್ಸ, ವಂಸ), 9 ಕುರು, 10 ಪಾಂಚಾಲ, 11 ಮತ್ಸ್ಯ (ಮಚ್ಚ), 12 ಶೂರಸೇನ, 13 ಅಸ್ಸಕ (ಅಶ್ಮಕ), 14 ಅವಂತಿ, 15 ಗಾಂಧಾರ, 16 ಕಾಂಭೋಜ.

ಕಾಶಿ : ಈಗಿನ ವಾರಾಣಸಿಯ ಸುತ್ತಮುತ್ತಲಿನ ಪ್ರದೇಶ. ಸಂಪತ್ತಿನಿಂದ ಕೂಡಿದ ಈ ಪ್ರದೇಶ ಉತ್ತರ ಹಾಗೂ ದಕ್ಷಿಣಗಳಲ್ಲಿ ವಾರಣಾ ಮತ್ತು ಅಸಿ ನದಿಗಳಿಂದ ಸುತ್ತುವರಿಯಲ್ಪಟ್ಟಿದ್ದುದರಿಂದ ಇದಕ್ಕೆ ವಾರಾಣಸಿ ಎಂದು ಹೆಸರಾಯಿತೆಂದು ತಿಳಿದುಬಂದಿದೆ. ಇದು ಗಂಗಾ ನದಿಯ ದಂಡೆಯ ಮೇಲಿದೆ. ಕಾಶಿಗೂ ಕೋಸಲಕ್ಕೂ ಸಾರ್ವಭೌಮತ್ವಕ್ಕಾಗಿ ಹೋರಾಟ ಇದ್ದೇ ಇರುತ್ತಿತ್ತು. ಕಾಶಿ ಮತ್ತು ಅಂಗ, ಕಾಶಿ ಮತ್ತು ಮಗಧ–ಇವುಗಳ ನಡುವೆಯೂ ಆಗಾಗ ತಿಕ್ಕಾಟ ನಡೆದೇ ಇತ್ತು. ಗೌತಮ ಬುದ್ಧನ ಕಾಲಕ್ಕಿಂತ ಸ್ವಲ್ಪ ಮುಂಚೆ ಇದು ಕೋಸಲ ರಾಜ್ಯಕ್ಕೆ ಸೇರಿಹೋಯಿತು.

ಕೋಸಲ : ಈಗಿನ ಅಯೋಧ್ಯೆಯ (ಔಧ್) ಭಾಗ. ಸರಯೂ ನದಿಯಿಂದ ಇದು ದಕ್ಷಿಣ ಹಾಗೂ ಉತ್ತರ ಕೋಸಲ ಎಂದು ವಿಭಾಗವಾಗಿತ್ತು. ಮಗಧ, ಸಾವತ್ತಿ ಅಥವಾ ಶ್ರಾವಸ್ತಿ, ಸಾಕೇತ ಇವು ಇದರ ರಾಜಧಾನಿಗಳಾಗಿದ್ದುವು. ಕಾಶಿ ಕೋಸಲಗಳ ನಡುವೆ ಸ್ನೇಹ ಸಂಬಂಧವಿದ್ದರೂ ಆಗಾಗ ಇವೆರಡರ ನಡುವೆ ಯುದ್ಧಗಳು ನಡೆಯುತ್ತಿದ್ದುವು. ಮೊದಲು ಕಾಶಿ ಜಯ ಗಳಿಸಿದರೂ ಅಂತಿಮವಾಗಿ ಕೋಸಲ ವಿಜಯ ಹೊಂದಿತು. ಇದರಿಂದ ಕೋಸಲದ ಪ್ರತಿಷ್ಠೆ ಹೆಚ್ಚಿತಲ್ಲದೆ ಅದು ಶಾಕ್ಯ, ಕಾಲಾಮ ಮುಂತಾದ ನೆರೆಯ ರಾಜ್ಯಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಲು ಅನುಕೂಲವಾಯಿತು. ಗೌತಮ ಬುದ್ಧನ ಸಮಕಾಲೀನನಾದ ಪೆಸನದಿ ಅಥವಾ ಪ್ರಸೇನಜಿತ್ ಈ ರಾಜ್ಯದ ಒಬ್ಬ ಪ್ರಮುಖ ದೊರೆ. ಮಗಧದ ಅರಸನಾದ ಅಜಾತಶತ್ರುವಿನೊಂದಿಗೆ ಇವನ ಹಗೆತನವಿತ್ತು. ಇವನ ಅನಂತರ ಬಂದ ವಿಡೂಡಭ ಶಾಕ್ಯರನ್ನು ಮುತ್ತಿಗೆ ಹಾಕಿ ಅವರನ್ನು ಕೊನೆಗೊಳಿಸಿದನೆಂದು ತಿಳಿದು ಬಂದಿದೆ. ತರುವಾಯ ವಿಡೂಡಭನ ಅಥವಾ ಕೋಸಲದ ಬಗ್ಗೆ ಏನೂ ತಿಳಿದುಬಂದಿಲ್ಲ.

ಅಂಗ : ಇದು ಈಗಿನ ಪೂರ್ವ ಬಿಹಾರ ಪ್ರದೇಶದಲ್ಲಿತ್ತು. ಇದರ ರಾಜಧಾನಿ ಚಂಪಾ. ಮಗಧದೊಡನೆ ಇದಕ್ಕೆ ಸ್ನೇಹಸಂಬಂಧ ಇರಲಿಲ್ಲ.

ಮಗಧ : ಈಗಿನ ದಕ್ಷಿಣ ಬಿಹಾರ. ಗಿರಿವ್ರಜ ಇದರ ರಾಜಧಾನಿ. ಜರಾಸಂಧ, ಬೃಹದ್ರಥ, ಸಹದೇವ, ಸೋಮಾಧಿ, ರಿಪುಂಜರ ಮುಂತಾದವರು ಇಲ್ಲಿದ್ದ ಅರಸರೆಂದು ಹೇಳಲಾಗಿದೆ. ಅರಸರ ಪಟ್ಟಿಯಲ್ಲಿ ಸ್ವಲ್ಪ ವ್ಯತ್ಯಾಸವಿದೆ.

ವಜ್ಜಿ : ಈಗಿನ ಉತ್ತರ ಬಿಹಾರ. ಇದನ್ನು ವ್ರಿಜಿ, ವಜ್ಜಿಯನ್ ಎಂದೂ ಕರೆಯುತ್ತಾರೆ. ವಜ್ಜಿ ಗಣರಾಜ್ಯವಾಗಿತ್ತು, ವಿದೇಹ, ಲಿಚ್ಛವಿ, ಜ್ಞಾತ್ರಿಕ ಮುಂತಾದ 8–9 ಪಂಗಡಗಳು ಇದರಲ್ಲಿ ಸಮಾವೇಶಗೊಂಡಿದ್ದುವು. ವ್ರಿಜಿಗ್ರಾಮ ವೈಶಾಲಿಯಲ್ಲಿತ್ತು. ವೈಶಾಲಿ ಲಿಚ್ಛವಿಯ ರಾಜಧಾನಿಯಾಗಿದ್ದುದಲ್ಲದೆ ಅದು ವ್ರಿಜಿ ಕೂಟದ ಮುಖ್ಯ ಸ್ಥಾನವಾಗಿತ್ತೆಂದು ಹೇಳಲಾಗಿದೆ. ಇದು ಉತ್ತಮಪುರಿ ಎಂದು ಕರೆಯಲ್ಪಡುತ್ತಿತ್ತು ಮತ್ತು ಸಂಪದ್ಭರಿತವಾದ ಇದು ಜನಭರಿತವಾಗಿತ್ತೆಂದೂ ವಿವರಿಸಲ್ಪಟ್ಟಿದೆ. ವಿದೇಹ (ಈಗಿನ ತಿರಹುರ್) ಮುಖ್ಯವಾದ ಅರಸೊತ್ತಿಗೆಯಾಗಿದ್ದು ಅದಕ್ಕೆ ಮಿಥಿಲಾ ರಾಜಧಾನಿಯಾಗಿತ್ತು. ಕನ್ನಿಂಗ್‌ಹ್ಯಾಮ್ ಇದನ್ನು ನೇಪಾಳದ ಹತ್ತಿರ ಇರುವ ಜನಕಪುರದೊಂದಿಗೆ ಹೋಲಿಸಿದ್ದಾರೆ. ಜ್ಞಾತ್ರಿಕರು ವೈಶಾಲಿಯ ಉಪನಗರವಾದ ಕುಂಡಪುರ ಅಥವಾ ಕುಂಡಗ್ರಾಮ, ಕೊಲ್ಲಾಗವನ್ನು ಆಕ್ರಮಿಸಿಕೊಂಡಿದ್ದರು. ಪಾಣಿನಿಯಲ್ಲಿ ವ್ರಿಜಿಗಳ ಬಗ್ಗೆ ಉಲ್ಲೇಖವಿದೆ.

ಲಿಚ್ಛವಿ ಕ್ಷತ್ರಿಯ ಪಂಗಡ. ಮಹಾವೀರ ಹಾಗೂ ಗೌತಮ ಬುದ್ಧನ ಕಾಲದಲ್ಲಿ ಇದು ಸ್ಥಿರವಾಗಿ ಸ್ಥಾಪಿತವಾಗಿ ತನ್ನ ಅನ್ಯೋನ್ಯತೆ ಮತ್ತು ಬಲಗಳಿಂದಾಗಿ ಬುದ್ಧನ ಮೆಚ್ಚುಗೆಗೆ ಪಾತ್ರವಾಗಿತ್ತು. ನೆರೆಯ ಮಲ್ಲರಾಜ್ಯದೊಂದಿಗೆ ಇದು ಸ್ನೇಹವಾಗಿತ್ತು. ಮಗಧದೊಂದಿಗೆ ಇದರ ವೈರತ್ವ ಬಿಂಬಸಾರನ ಕಾಲದಲ್ಲಿ ಈ ಎರಡೂ ರಾಜ್ಯಗಳ ನಡುವೆ ಕದನವಾಯಿತು.

ಮಲ್ಲ : ಈಗಿನ ಗೋರಖಪುರ ಜಿಲ್ಲೆ. ಜೈನ ಹಾಗೂ ಬೌದ್ಧಗ್ರಂಥಗಳಲ್ಲಿ ಇದರ ಉಲ್ಲೇಖ ಇದೆ. ಅಂಗ, ವಂಗ, ಕಳಿಂಗಗಳೊಂದಿಗೆ ಇದರ ಹೆಸರೂ ಮಹಾಭಾರತದಲ್ಲಿ ಉಕ್ತವಾಗಿದೆ. ಇದು ಪ್ರಬಲವಾಗಿತ್ತು. ಇದರಲ್ಲಿ 9 ಪ್ರಾಂತ್ಯಗಳಿದ್ದುವು. ಮಲ್ಲರನ್ನು ವ್ರಾತ್ಯಕ್ಷತ್ರಿಯರೆಂದು ಮನು ಕರೆದಿದ್ದಾನೆ. ಮಹಾ ಪರಿನಿಬ್ಬಾಣ ಸೂತ್ರ ಇವರನ್ನು ವಾಶಿಷ್ಟ (ವಾಸಿಟ್ಟಿ) ಎಂದು ಕರೆದಿದೆ. ವಿದೇಹದಂತೆ ಇವರದೂ ಅರಸೊತ್ತಿಗೆ. ಇವರದು ಒಂದು ಸಂಘವಾಗಿತ್ತು. ಇದರ ಸದಸ್ಯರು ತಮ್ಮನ್ನು ರಾಜರೆಂದು ಕರೆದುಕೊಳ್ಳುತ್ತಿದ್ದರು. ಬುದ್ಧಘೋಷ ಅವರನ್ನು ರಾಜರೆಂದು ಕರೆಯುತ್ತಾನೆ. ಮಲ್ಲ ಹಾಗೂ ಲಿಚ್ಛವಿಗಳ ನಡುವೆ ಸ್ವಂತ ರಕ್ಷಣೆಗಾಗಿ ಸ್ನೇಹವಿದ್ದರೂ ಅವರ ನಡುವೆ ವೈರವಿತ್ತೆಂದು ಬೌದ್ಧಗ್ರಂಥಗಳಿಂದ ತಿಳಿದುಬರುತ್ತದೆ. ಮಲ್ಲರಲ್ಲಿ ಅನೇಕರು ಬೌದ್ಧ ಹಾಗೂ ಜೈನಧರ್ಮದ ಅನುಯಾಯಿ ಗಳಾಗಿದ್ದರು. ಬುದ್ಧನ ಕಾಲದವರೆಗೆ ಸ್ವತಂತ್ರವಾಗಿದ್ದ ಮಲ್ಲ, ಬುದ್ಧನ ತರುವಾಯ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಮಗಧ ರಾಜ್ಯದಲ್ಲಿ ವಿಲೀನಗೊಂಡಿತು.

ಚೇದಿ : ಈಗಿನ ಬುಂದೇಲ್‌ಖಂಡ. ಚೇತ, ಚೇಟಿ, ಚೇತಯ ಎಂದೂ ಹೆಸರಿದ್ದ ಇದಕ್ಕೆ ಎರಡು ಪ್ರತ್ಯೇಕ ಅಸ್ತಿತ್ವಗಳಿದ್ದುವು. ಶುಕ್ತಿ, ಶುಕ್ತಿಮತಿ ಅಥವಾ ಸೊತ್ತಿವತೀ ನಗರ ಇದರ ರಾಜಧಾನಿ, ಇದರ ಒಂದು ಶಾಖೆ ಕಲಿಂಗದಲ್ಲಿ ಸ್ಥಾಪಿಸಲ್ಪಟ್ಟಿತ್ತೆಂದು ಹೇಳಲಾಗಿದೆ.

ವತ್ಸ : ಈಗಿನ ಅಲಹಾಬಾದಿನ ಸುತ್ತಮುತ್ತಲ ಪ್ರದೇಶ. ಇದು ಸಮೃದ್ಧವಾದ ನಾಡಾಗಿತ್ತು. ಉತ್ತಮವಾದ ಹತ್ತಿಯ ಬಟ್ಟೆಗಳಿಗೆ ಹೆಸರಾಗಿತ್ತು. ಕೌಶಾಂಬಿ ಇದರ ರಾಜಧಾನಿ. ಉದೇನ ಅಥವಾ ಉದಯನ ಇಲ್ಲಿಯ ಪ್ರಸಿದ್ಧ ದೊರೆ. ಇವನ ಮಗ ಬೋಧಿ. ಬೌದ್ಧಗ್ರಂಥಗಳಲ್ಲಿ ಇವನ ಉಲ್ಲೇಖ ಇದ್ದರೂ ಉದಯನನ ತರುವಾಯ ವತ್ಸದ ವಿಚಾರವಾಗಿ ಆಗಲಿ, ಉದಯನನ ಮಗ ಬೋಧಿಯ ವಿಚಾರವಾಗಿ ಆಗಲಿ ಏನೂ ತಿಳಿದುಬರುವುದಿಲ್ಲ.

ಕುರು : ಈಗಿನ ಥಾನೇಶ್ವರ, ದೆಹಲಿ ಮತ್ತು ಮೀರತ್ ಜಿಲ್ಲೆಗಳ ಪ್ರದೇಶ. ಇದರ ರಾಜಧಾನಿ ಇಂದ್ರಪಟ್ಟ (ಇಂದ್ರಪ್ರಸ್ಥ). ಯಾದವ, ಭೋಜ, ಪಾಂಚಾಲಗಳೊಂದಿಗೆ ಇದರ ಸಂಬಂಧವಿತ್ತು. ಇದು ಮೊದಲು ಅರಸೊತ್ತಿಗೆಯಾಗಿತ್ತು; ಕ್ರಮೇಣ ಗಣರಾಜ್ಯವಾಯಿತು.

ಪಾಂಚಾಲ : ಈಗಿನ ಬರೈಲಿ, ಬುಡ್ವಾನ್ ಮತ್ತು ಫರೂಕಾಬಾದ್ ಜಿಲ್ಲೆ. ಗಂಗಾನದಿ ಇದನ್ನು ಉತ್ತರ ಮತ್ತು ದಕ್ಷಿಣ ಪಾಂಚಾಲಗಳೆಂದು ವಿಭಾಗಿಸಿತ್ತು. ಇದು ಮೊದಲಿಗೆ ಅರಸೊತ್ತಿಗೆಯಾಗಿದ್ದು, ಅನಂತರ ಸಂಘ ಅಥವಾ ಗಣರಾಜ್ಯವಾಗಿ ಮಾರ್ಪಟ್ಟಿತು.

ಶೂರಸೇನ : ಈಗಿನ ಮಥುರಾ. ಗ್ರೀಕ್ ಬರೆಹಗಾರರು ಇದನ್ನು ಸೌರಸೆ ನಾಯ್ ಎಂದೂ ಇದರ ರಾಜಧಾನಿಯನ್ನು ಮೆಥೊರ ಎಂದೂ ಕರೆದಿದ್ದಾರೆ. ಅವಂತಿಪುತ್ರ ಇದರ ದೊರೆ. ಬುದ್ಧನ ಅನುಯಾಯಿಗಳಲ್ಲಿ ಮುಖ್ಯನಾದ ಇವನು ಮಥುರಾ ಪ್ರದೇಶದಲ್ಲಿ ಬೌದ್ಧಧರ್ಮ ಹರಡಲು ಕಾರಣನಾದ. ಅವಂತಿಯೊಂದಿಗೆ ಇದರ ಸಂಪರ್ಕವಿತ್ತು. ಇದು ಶ್ರೀಕೃಷ್ಣನ ಪೂಜಾಸ್ಥಳವಾಗಿತ್ತೆಂದು ಮೆಗಾಸ್ತನೀಸ್ ತಿಳಿಸುತ್ತಾನೆ.

ಅಸ್ಸಕ : ಇದು ಈಗಿನ ಗೋದಾವರಿಯ ಪ್ರದೇಶದಲ್ಲಿತ್ತು. ಅಶ್ಮಕವೆಂದೂ ಇದಕ್ಕೆ ಹೆಸರು. ಸ್ವಾಲ್ ಕಣಿವೆಯಲ್ಲಿದ್ದ ಅಸ್ಸಕೆನಾಯ್ ಎಂದು ಗ್ರೀಕರ ಬರೆಹದಿಂದ ತಿಳಿದುಬರುತ್ತದೆ. ಇದನ್ನು ಮಹಾಜನಪದವೆಂದು ಬೌದ್ಧಗ್ರಂಥಗಳು ಕರೆಯುತ್ತವೆ. ಸೋತಲ, ಪೋತನ, ಅಥವಾ ಪೌದನ ಇದರ ರಾಜಧಾನಿ. ಅಸ್ಸಕ ದಕ್ಷಿಣಭಾರತಕ್ಕೆ ಸೇರದ ಒಂದು ಪ್ರದೇಶವೆಂದು ಬೌದ್ಧಗ್ರಂಥಗಳಿಂದ ತಿಳಿದುಬರುತ್ತದೆ. ಅಸ್ಸಕ ಮತ್ತು ಮೂಲಕ ಅಥವಾ ಅಂಗಗಳ ನಡುವೆ ಗೋದಾವರಿ ಹರಿಯುತ್ತಿತ್ತು. ಈ ಎರಡೂ ಪ್ರದೇಶಗಳು ಅಂಧಕ ಅಥವಾ ಆಂಧ್ರ ಪ್ರದೇಶವೆಂದು ಹಲವರ ಅಭಿಪ್ರಾಯ. ಅರ್ಥಶಾಸ್ತ್ರದ ವಿಮರ್ಶಕನಾದ ಭಟ್ಟಸ್ವಾಮಿ ಅಶ್ಮಕವನ್ನು ಮಹಾರಾಷ್ಟ್ರ ಪ್ರದೇಶಕ್ಕೆ ಹೊಂದಿಸುತ್ತಾನೆ. ಹೇಗಿದ್ದರೂ ಇದು ಗೋದಾವರಿಯ ಮೇಲೆ, ಮಧ್ಯ ದೇಶದಿಂದ ಹೊರಗೆ ಇದ್ದ ದೇಶವೆಂದು ತಿಳಿದುಬಂದಿದೆ. ಬ್ರಹ್ಮದತ್ತ, ಅರುಣ, ಸುಜಾತ ಮುಂತಾದವರು ಇದರ ಪ್ರಮುಖ ಅರಸರು.

ಅವಂತಿ : ಈಗಿನ ಮಾಳವ ನಿಮಾರ್ ಮತ್ತು ಮಧ್ಯಪ್ರದೇಶದ ಸುತ್ತ ಮುತ್ತಲಿನ ಪ್ರದೇಶ. ಬೌದ್ಧಧರ್ಮದ ಸ್ಥಾಪನೆಯ ಹೊತ್ತಿಗೆ ಇದ್ದ ನಾಲ್ಕು ಮುಖ್ಯ ರಾಜ್ಯಗಳಲ್ಲಿ ಇದು ಒಂದಾಗಿತ್ತು (ಉಳಿದ ಮೂರು ಕೋಸಲ, ವತ್ಸ, ಮಗಧ). ಇದು ವೇತ್ರಾವತಿಯಿಂದ

ಎರಡು ಭಾಗಗಳಾಗಿ ವಿಭಾಗವಾಗಿತ್ತು. ಮಾಹಿಷ್ಮತಿ ಮತ್ತು ಉಜ್ಜಯಿನಿ ಇವುಗಳ ರಾಜಧಾನಿಗಳು. ಅವಂತಿ ಮತ್ತು ಮಾಹಿಷ್ಮತಿಗಳು ಮಹಾಭಾರತದಲ್ಲಿ ಉಕ್ತವಾಗಿವೆ. ಅವಂತಿ ಬೌದ್ಧಧರ್ಮದ ಕೇಂದ್ರವಾಗಿತ್ತು. ಮುಖ್ಯರಾದ ಅನೇಕ ಥೇರ ಹಾಗೂ ಥೇರಿಗಳು ಇಲ್ಲಿದ್ದರು. ಚಂಡ ಪ್ರದ್ಯೋತ ಮಹಾಸೇನ ಇದರ ಪ್ರಮುಖ ದೊರೆಯಾಗಿದ್ದನೆಂಬುದು ಪುರಾಣಗಳಿಂದ ತಿಳಿದುಬರುತ್ತದೆ. ಅವನ 23 ವರ್ಷಗಳ ಆಳ್ವಿಕೆಯ ತರುವಾಯ ಪಾಲಕ, ವಿಶಾಖಯೂಪ, ಅಸಕ ಮತ್ತು ನಂದಿವರ್ಧನರು ಇಲ್ಲಿ ಆಳಿದರು. ನಂದಿವರ್ಧನ ಶಿಶುನಾಗರಿಂದ ಸೋಲಿಸಲ್ಪಟ್ಟ, ಬೆಳೆಯುತ್ತಿದ್ದ ಮಗಧ ಸಾಮ್ರಾಜ್ಯದಲ್ಲಿ ಅವಂತಿ ಲೀನವಾಯಿತು.

ಗಾಂಧಾರ : ಈಗಿನ ಪೆಷಾವರ್ ಮತ್ತು ರಾವಲ್ಪಿಂಡಿ ಜಿಲ್ಲೆ. ತಕ್ಕಸಿಲಾ ಅಥವಾ ತಕ್ಷಶಿಲಾ ಇದರ ರಾಜಧಾನಿ. ಇದು ವ್ಯಾಪಾರಸ್ಥಳವಾಗಿದ್ದುದಲ್ಲದೆ ಇದೊಂದು ಹೆಸರಾಂತ ವಿದ್ಯಾಕೇಂದ್ರವಾಗಿತ್ತು.

ಕಾಂಭೋಜ : ಕಾಶ್ಮೀರ ಹಾಗೂ ಕಾಫಿರೀಸ್ಥಾನದ ಸುತ್ತಮುತ್ತಲ ಪ್ರದೇಶ. ಮೊದಲು ಅರಸೊತ್ತಿಗೆಯಾಗಿತ್ತು. ಕೌಟಿಲ್ಯನ ಕಾಲದ ಹೊತ್ತಿಗೆ ಸಂಘವಾಗಿ ಮಾರ್ಪಟ್ಟಿತು.

ಈ 16 ಜನಪದಗಳಲ್ಲದೆ ಇನ್ನೂ ಅನೇಕ ಸ್ವತಂತ್ರ ಗಣರಾಜ್ಯಗಳಿದ್ದುವು. ಪ್ರಶ.ಪೂ.7–6ನೆಯ ಶತಮಾನದಲ್ಲಿ ಪ್ರಾಮುಖ್ಯ ಪಡೆದ ಮಹಾಜನಪದಗಳು ಪ್ರಶ. 1–2ನೆಯ ಶತಮಾನದ ವರೆಗೆ ಮುಂದುವರಿದುಕೊಂಡು ಬಂದುವು ಎಂದು ಹೇಳಬಹುದು. ಕಾಲಕ್ರಮದಲ್ಲಿ ಈ ರಾಜ್ಯಗಳು ವೃದ್ಧಿಗೊಳ್ಳುತ್ತಿದ್ದ ಮಗಧ ರಾಜ್ಯದಲ್ಲಿ ಸೇರಿಹೋದುವು.

(ಎಸ್.ಎಲ್.ಎಸ್.)

**ಜನಪದ ಗೀತೆ :** ಅನಕ್ಷರಸ್ಥ ಜನಸಮೂಹದ ನಡುವೆ ವಾಕ್‌ಸಂಪ್ರದಾಯದ ಮೂಲಕ ಹರಿದುಬಂದಿರುವ ಒಂದು ಗುಂಪಿನ ಕಾವ್ಯ ಮತ್ತು ಸಂಗೀತಗಳ ಸಮಾವೇಶದಿಂದಾದುದು ಜನಪದ ಗೀತೆ. ಈ ಗುಂಪು ಪ್ರಧಾನವಾಗಿ ಗ್ರಾಮೀಣ ಸಮುದಾಯವಾಗಿದ್ದು, ಪ್ರಾಚೀನ ಸಂಸ್ಕೃತಿಯೊಂದನ್ನು ಉಳಿಸಿಕೊಂಡು ಬಂದುದಾಗಿರುತ್ತದೆ. ಆದ್ದರಿಂದ ಜನಪದ ಗೀತೆ ನಾಗರಿಕ ಮನಸ್ಸಿನ ಅಭಿವ್ಯಕ್ತಿಯಲ್ಲ. ಗ್ರಾಮೀಣರ ಸುಖದುಃಖಗಳನ್ನು, ಸಮಸ್ಯೆ ಕ್ಲೇಶಗಳನ್ನು ಹೇಳುವಂಥದು. ಇಲ್ಲಿನ ಮನೋಭಾವ ತೀವ್ರ ಮಾನವೀಯ. ರಾಗ ಮತ್ತು ಪದರಚನೆಯ ಸುಮಧರ ಬಂಧವೇ ಇದರ ಲಕ್ಷಣ. ಸರಳತೆ ಮತ್ತು ಸ್ಪಷ್ಟತೆ ಇದರ ಮತ್ತೆರಡು ಲಕ್ಷಣಗಳು. ಜನಪದ ಗೀತೆಯಲ್ಲಿ ಅಭಿಜಾತ ಕಲೆಯ ತಾಂತ್ರಿಕ ಸೂಕ್ಷ್ಮತೆ ಇರದಿದ್ದರೂ ಅದರಂತೆಯೇ ಇದೂ ಉನ್ನತ ಸ್ಥಾನವನ್ನು ಗಳಿಸಿಕೊಳ್ಳಬಲ್ಲುದು.

ಜನಪದ ಗೀತೆ ಯಾವುದನ್ನೇ ವಿವರಿಸಲಿ ಅದನ್ನು ನೇರವಾಗಿ ಹೇಳುತ್ತದೆ. ಅದನ್ನು ಪ್ರಯತ್ನಪೂರ್ವಕವಾಗಿ ಕಲಾತ್ಮಕಗೊಳಿಸುವುದಾಗಲಿ ಅಥವಾ ಕಾವ್ಯದ ಪರಿಣಾಮಗಳನ್ನು ತರಬೇಕೆಂಬುದಾಗಲಿ ಅದರ ಉದ್ದೇಶವಲ್ಲ. ಆದ್ದರಿಂದ ಜನಪದಗೀತೆಯ ಶುದ್ಧ ಸಾಹಿತ್ಯಿಕ ಪರಿಶೀಲನೆ ಲಾಭದಾಯಕವಾಗುವುದಿಲ್ಲ. ಇಲ್ಲಿ ಸಾಹಿತ್ಯಿಕ ಮೌಲ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ, ಚಾರಿತ್ರಿಕ ಹಾಗೂ ಮನಶ್ಶಾಸ್ತ್ರೀಯ ಮೌಲ್ಯಗಳೇ ನಮ್ಮ ಗಮನವನ್ನು ಸೆಳೆಯುವಂಥವು. ಇದರಿಂದ ಜನಪದ ಮನೋಭಾವಗಳನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

ಜನಪದ ಗೀತಸಾಹಿತ್ಯ ಪ್ರಮುಖವಾಗಿ ಗೀತೆ ಮತ್ತು ಲಾವಣಿಗಳೆಂದು ಎರಡು ಬಗೆಯಾಗುತ್ತದೆ. ಮೊದಲನೆಯದು ಭಾವಗೀತಾತ್ಮಕವಾದರೆ, ಎರಡನೆಯದು ಕಥಾತ್ಮಕವಾಗುತ್ತದೆ. ಒಂದು ಭಾವನಿಷ್ಠವಾದರೆ, ಮತ್ತೊಂದು ವಸ್ತುನಿಷ್ಠ. ಎರಡೂ ಹಾಡಲ್ಪಡುವಂಥವು. ಎರಡರ ರಚನಕಾರರೂ ಇಂದು ಅನಾಮಧೇಯರಾದರೂ ಎರಡನೆಯದರ ರಚನಕಾರ ಹೆಚ್ಚು ಸುಶಿಕ್ಷಿತ ಕಲಾವಿದನೆಂದು ಅಭಿಪ್ರಾಯ. ಮೊದಲನೆಯ ರಚನೆ ಎರಡನೆಯದಕ್ಕಿಂತ ಪುರಾತನವಾದುದೆಂದು ಹೇಳುತ್ತಾರೆ. ಮೊದಲ ಗುಂಪಿನ ಗೀತೆಗಳ ಬದುಕಿನ ಚಟುವಟಿಕೆಗಳೊಡನೆ ಹೆಚ್ಚು ಸಂಬಂಧಪಡುವುದರಿಂದ ಇವನ್ನು ಕ್ರಿಯಾತ್ಮಕ ಗೀತೆಗಳೆಂದು ಕರೆಯಬಹುದಾಗಿದೆ. ಆದರೆ ಎರಡನೆಯ ಗುಂಪಿನ ಗೀತೆಗಳು ಈ ಬಗೆಯ ಯಾವುದೇ ಸಾಂಪ್ರದಾಯಿಕ ಸಂದರ್ಭಗಳನ್ನು ಹೆಚ್ಚಾಗಿ ಅಪೇಕ್ಷಿಸುವುದಿಲ್ಲ. ಇಷ್ಟಾದರೂ ಕ್ರಿಯಾತ್ಮಕಗೀತೆಯೊಂದು ಅದೇ ಕಾಲದಲ್ಲಿ ಸೌಂದರ್ಯ ಬೋಧೆಯನ್ನುಂಟು ಮಾಡಬಾರದೆಂದೇನೂ ನಿಯಮವಿಲ್ಲ.

ಸಾಮಾನ್ಯವಾಗಿ ಜನಪದಗೀತೆಗಳನ್ನು ರಚಿಸುವುದಕ್ಕೆ ಮತ್ತು ಹಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಔಪಚಾರಿಕ ಬೋಧನತಂತ್ರವೊಂದು ಇರುವುದಿಲ್ಲ. ಅವು ಕಿವಿಯ ಮೂಲಕ ಕಲಿತುಕೊಂಡವು ಮತ್ತು ಹಾಗೆಯೇ ತಲೆಮಾರಿನಿಂದ ತಲೆಮಾರಿಗೆ ಸಾಗಿದವು. ಇವುಗಳ ರೂಪ ಅಥವಾ ರಚನೆಯನ್ನು ಕುರಿತಾದ ಯಾವುದೇ ಬುದ್ಧಿಪೂರ್ವಕ ಅರಿವು ಜನಪದ ಗಾಯಕರಿಗೆ ಇರುವುದಿಲ್ಲ. ಅವರ ಮನಸ್ಸಿನಲ್ಲಿ ಯಾವುದೇ ಸೌಂದರ್ಯಾತ್ಮಕ ಅಥವಾ ವಿಶ್ಲೇಷಕ ಸಿದ್ಧಾಂತವೂ ಇರುವುದಿಲ್ಲ. ತಾಂತ್ರಿಕವಾಗಿ ಶಿಷ್ಟವಾಗಿ ಹೋಗಿರುವ ನಮ್ಮ ಸಂಗೀತದ ಅನುಷ್ಠಾನದ ಕಲಿಕೆ ಹಾಗೂ ಪೂರ್ವಾಭ್ಯಾಸಗಳ ಲಕ್ಷಣಗಳಾವುವೂ ಇಲ್ಲಿ ಕಂಡುಬರುವುದಿಲ್ಲ.

ಜನಪದ ಗೀತೆ ಗುಂಪೊಂದರ ಸಾಮಾನ್ಯ ಸದಸ್ಯರೂ ಭಾಗವಹಿಸಬಹುದಾದ ಒಂದು ಕಲೆ. ಆದರೆ ಇದು ಶಿಷ್ಟಸಂಗೀತ ಅಥವಾ ಸಾಹಿತ್ಯದಲ್ಲಿ ಅಷ್ಟಾಗಿ ಸಾಧ್ಯವಿರುವುದಿಲ್ಲ. ಹತ್ತಿರ ಹತ್ತಿರ ಹೇಳುವುದಾದರೆ, ಜನಪದ ಸಮೂಹದ ಪ್ರತಿಯೊಬ್ಬನೂ ಗೀತೆಗಳನ್ನು ಬಲ್ಲವನಾಗಿರುತ್ತಾನೆ ಮತ್ತು ಅವನ್ನು ಹಾಡುವವನಾಗಿರುತ್ತಾನೆ. ಅಥವಾ ಕಡೆಯಪಕ್ಷ ಅವನ್ನು ಆಲಿಸಿರುತ್ತಾನೆ ಮತ್ತು ಅವನ್ನು ಕುರಿತು ಬಹಳವಾಗಿ ತಿಳಿದಿರುತ್ತಾನೆ. ಅನೇಕ ಸಂದರ್ಭಗಳಲ್ಲಿ ಹಾಡುವ ಒಂದು ಗುಂಪೇ ಇದ್ದು, ಅಷ್ಟು ಪ್ರಮುಖರಲ್ಲದ ಹಾಡುಗಾರರೂ ಭಾಗವಹಿಸಲು ಅವಕಾಶಗಳಿರುತ್ತವೆ. ಆದರೆ ಒಬ್ಬ ಹಾಡುಗಾರನನ್ನು ಅವನ ಗುಂಪಿನ ಅತ್ಯಂತ ಪ್ರಮುಖ ಹಾಡುಗಾರನನ್ನಾಗಿ ಮಾಡುವುದಾದರೂ ಯಾವುದು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಅದಕ್ಕೆ ಉತ್ತರವಿಷ್ಟೆ : ಉತ್ತಮ ಕಂಠಶ್ರೀ ಅನೇಕವೇಳೆ ಗ್ರಾಹ್ಯ ವಿಷಯವಾದರೂ ಅವಶ್ಯವಾದುದೇನಲ್ಲ, ಉತ್ತಮ ಜ್ಞಾಪಕಶಕ್ತಿ ಇದ್ದರೆ ಸಾಕು. ಆದ್ದರಿಂದ ಗಾಯಕರ ಅಸಾಧ್ಯ ನೆನಪಿನ ಶಕ್ತಿಯನ್ನು ಕಂಡು ಸೂತ್ರವೊಂದನ್ನು ರೂಪಿಸಬಹುದು: 'ಅವನು ಇರುಳೆಲ್ಲ ಹಾಡುತ್ತಾನೆ, ಆದರೆ ಪುನರಾವರ್ತಿಸುವುದಿಲ್ಲ.' ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಹಾಡುಗಾರನೊಬ್ಬನನ್ನು ಹೀಗೆ ಸ್ತುತಿಸಿದ್ದಾರೆ. ಈ ಮಾತನ್ನು ಜಗತ್ತಿನ ಎಲ್ಲ ಗಾಯಕರಿಗೂ ಕಲಾವಿದರಿಗೂ ಅನ್ವಯಿಸಬಹುದು.

ಶಿಷ್ಟಕಲೆಯಲ್ಲಿ ಕಲಾವಿದ, ವಿಮರ್ಶಕ ಹಾಗೂ ಸಾಮಾನ್ಯರ ನಡುವೆ ಭಿನ್ನತೆ ಇರುತ್ತದೆ. ಕಾವ್ಯದಲ್ಲಿ ಕವಿ, ಗಮಕಿ (ಕೆಲವೊಮ್ಮೆ) ಮತ್ತು ಸಹೃದಯ ಇರುತ್ತಾರೆ. ಸಂಗೀತದಲ್ಲಿ ರಚನಕಾರ, ಸಂಗೀತಗಾರ ಮತ್ತು ಶ್ರಾವಕ ಇರುತ್ತಾರೆ. ಆದರೆ ಜನಪದಗೀತೆಗಳಲ್ಲಿ ಈ ಮಟ್ಟಗಳಲ್ಲಿ ಹೆಚ್ಚು ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಇವುಗಳಲ್ಲಿ ಹಾಡುಗಾರನಿಗೂ ಶ್ರೋತೃವಿಗೂ ಇರುವ ಅಂತರ ಸೂಕ್ಷ್ಮವಾದುದು. ಹಾಡುಗಾರ ಒಬ್ಬನೇ ಆಗಿರಬಹುದು ಅಥವಾ ಒಂದು ಗುಂಪು ಆಗಿರಬಹುದು. ಹಾಗೆಯೇ ಸೃಷ್ಟಿಕರ್ತ ಮತ್ತು ಹಾಡುಗಾರನಿಗಿರುವ ವ್ಯತ್ಯಾಸವೂ ತುಂಬ ಸೂಕ್ಷ್ಮವಾದುದು. ಸಾಮಾನ್ಯವಾಗಿ, ಜನಪದಗೀತೆಯೊಂದರ ಮೂಲ ರಚನಕಾರ ನಮಗಿಂದು ಗೊತ್ತಿಲ್ಲ. ಈ ಕಲೆ ಪ್ರತಿ ತಲೆಮಾರಿನಲ್ಲಿಯೂ ಹೊಸ ಸೃಷ್ಟಿಗಳನ್ನು ಅವಲಂಬಿಸಿರುವುದು ಅಪರೂಪ. ಹೊಸದಾಗಿ ಸೃಷ್ಟಿಯಾಗುವ ಗೀತೆಗಳ ಸಂಖ್ಯೆ ಯಾವಾಗಲೂ ಕಡಿಮೆಯೇ. ಜನಪದಗೀತೆ ಶಿಷ್ಟಕಾವ್ಯದ ಹಾಗೆ ಸೃಷ್ಟಿಯಾಗುವುದಿಲ್ಲ. ಶಿಷ್ಟಕಾವ್ಯದಲ್ಲಿ ಒಂದು ಸ್ವೋಪಜ್ಞತೆ ಇರುತ್ತದೆ. ಆದರೆ ಜನಪದಗೀತೆ ಈಗಾಗಲೇ ಅಸ್ತಿತ್ವದಲ್ಲಿರುವ ಮೂಲವಸ್ತುವಿನ ಪುನರ್ ಸೃಷ್ಟಿಕ್ರಿಯೆಯ ಮೂಲಕ ಬೆಳೆಯುತ್ತದೆ. ಇದನ್ನೇ ವಿದ್ವಾಂಸರು ಸಾಮುದಾಯಿಕ ಪುನರ್‌ಸೃಷ್ಟಿ ಎಂದು ಕರೆಯುವುದು. ಇದರಲ್ಲಿಯೂ ಇಡೀ ಸಮಾಜವೇ ಭಾಗವಹಿಸುತ್ತದೆ ಎಂದಲ್ಲ, ಆ ಸಮಾಜದ ಒಳಗೆಯೇ ಇರುವ ಮತ್ತು ಈ ಕ್ರಿಯೆಯಲ್ಲಿ ಕ್ರಿಯಾಶೀಲರಾಗಿರುವ ವ್ಯಕ್ತಿಗಳಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಗಾಯಕರು ತಮ್ಮ ಎಷ್ಟೋ ಮಾರ್ಪಾಡುಗಳನ್ನು ಗೊತ್ತಿದ್ದೋ ಗೊತ್ತಿಲ್ಲದೆಯೋ ಸೇರಿಸುವರು. ಈ ವ್ಯತ್ಯಾಸಗಳೇ ಕ್ರಮೇಣ ಭಿನ್ನ ಪಾಠಾಂತರ, ರೂಪಾಂತರಗಳಾಗಿ, ಪ್ರಾದೇಶಿಕ ವ್ಯತ್ಯಯಗಳಾಗಿ ಗೀತಸಂಪ್ರದಾಯಗಳಾಗಿ ಬೆಳೆಯುವುದಕ್ಕೆ ಮತ್ತು ಹೊಸಪಠ್ಯ ಮಟ್ಟುಗಳಾಗಿ ಬೇರ್ಪಡುವುದಕ್ಕೆ ಕಾರಣವಾಗುತ್ತವೆ. ಈ ಸೃಷ್ಟಿಕ್ರಿಯೆ ಒಬ್ಬನಿಂದ ಪ್ರಾರಂಭವಾದುದಲ್ಲ. ಒಬ್ಬನಿಂದ ಮುಕ್ತಾಯವಾಗುವುದೂ ಅಲ್ಲ. ಇದು ಅನೇಕ ವ್ಯಕ್ತಿಗಳ ನಡುವೆ ಹಾಗೂ ತಲೆಮಾರುಗಳಲ್ಲಿ ಹರಡಿಕೊಳ್ಳುವಂಥದು. ಸಂಪ್ರದಾಯವೊಂದು ಜೀವಂತವಾಗಿರುವ ತನಕ ಇದಕ್ಕೆ ನಾಶವಿಲ್ಲ. ಜನಪದ ಗೀತೆ ಏಕಾಗಿ ಅನಾಮಧೇಯ ಮತ್ತು ಅದಕ್ಕೆ ನಿಜವಾದ ಜನ್ಮದಾತ ಏಕೆ ಇಲ್ಲ ಎಂಬುದಕ್ಕೆ ಇದು ಕಾರಣವನ್ನು ತಿಳಿಸುತ್ತದೆ.

ಜನಪದಗೀತೆಗಳನ್ನು ಅವುಗಳಲ್ಲಿನ ವಸ್ತು ಮತ್ತು ಭಾವಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಕಾರಗಳಾಗಿ ಗುರುತಿಸಬಹುದು. ಸಮಯ, ಸಂದರ್ಭ ಕಟ್ಟುಕಟ್ಟಳೆ ಮುಂತಾದವುಗಳಿಗೆ ಸೀಮಿತವಾದ ವಿಶೇಷ ಜನಪದಗೀತೆಗಳು ಇರುತ್ತವೆ. ಕೆಲವು ವರ್ಗಗಳು ವಯಸ್ಸನ್ನು ಅನುಸರಿಸಬಹುದು, ಉದಾಹರಣೆಗೆ, ಮಕ್ಕಳ ಗೀತೆಗಳನ್ನು ವಯಸ್ಕರು ಹಾಡುವುದು ಅಪರೂಪ. ಹೊಸವರ್ಷದ ಆಗಮನವನ್ನು ಸೂಚಿಸಲು ಹಾಡುವ ಕ್ರಿಸ್‌ಮಸ್ ಕೆರೋಲಿನ ಗೀತೆಗಳನ್ನು ಪ್ರಧಾನವಾಗಿ ಮಕ್ಕಳು ಅಥವಾ ತರುಣರು ಹಾಡುತ್ತಾರೆ. ಇದೊಂದು ಸಂಪ್ರದಾಯ ಅಲ್ಲಿ. ಪ್ರೇಮಗೀತಗಳನ್ನು ಮುದುಕರು ಹಾಡುವುದು ಉಚಿತವಾಗಲಾರದು. ಸೋಬಾನೆಯಂಥ ಸಾಮಾಜಿಕ ಪದ್ಧತಿಯ ಹಾಡುಗಳು ಹೆಂಗಸರಿಗಷ್ಟೇ ಮೀಸಲು. ಈ ರೀತಿ ಹೆಂಗಸರಿಗೆ ಮಾತ್ರ ಮೀಸಲಾದ ಹಾಡುಗಳು ಎಲ್ಲ ಸಮಾಜಗಳಲ್ಲಿಯೂ ಕಾಣಬರುತ್ತವೆ. ಇದು ನಮ್ಮಲ್ಲಿರುವಂತೆ ಬಾಲ್ಟಿಕ್ ರಾಜ್ಯಗಳಲ್ಲಿಯೂ ಇದೆ. ಆಫ್ರಿಕ ಮತ್ತು ಆಸ್ಟ್ರೇಲಿಯ ಮೂಲನಿವಾಸಿಗಳಲ್ಲಿಯೂ ಇದೆ. ಒಟ್ಟಿನಲ್ಲಿ ಹೆಂಗಸರು ಹಾಡುವ ಗೀತೆಗಳನ್ನು ಹೆಂಗಸರ ಹಾಡುಗಳೆಂದೂ ಗಂಡಸರು ಹಾಡುವ ಗೀತೆಗಳನ್ನು ಗಂಡಸರ ಹಾಡುಗಳೆಂದೂ ಕರೆಯಬಹುದೆಂದು ತೋರುತ್ತದೆ.

ಜನಪದಗೀತೆಯನ್ನು ವ್ಯಕ್ತಿಜೀವನದ ಬಾಲ್ಯ, ಯೌವನ, ಮದುವೆ, ಮುಪ್ಪು, ಸಾವು ಮೊದಲಾದ ಪ್ರಮುಖ ಕಾಲಗಳಲ್ಲಿ ಮತ್ತು ಗುಂಪಿನ ಅನೇಕ ಪ್ರಮುಖ ಚಟುವಟಿಕೆಗಳ ಭಾಗವಾಗಿ ಹಾಡಲಾಗುತ್ತದೆ. ಹೀಗೆ ಜೀವನದ ವಿವಿಧ ಘಟ್ಟಗಳಿಗೆ ಸಂಬಂಧಿಸಿದ ಹಾಡುಗಳು ಅನೇಕವಾಗಿ ದೊರೆಯುತ್ತವೆ. ಜನಪದ ಗೀತೆ ಕಾಣುವಲ್ಲೆಲ್ಲ ಕಾಣುವುದು ಮಕ್ಕಳಿಗೆ ಸಂಬಂಧಿಸಿದ ಹಾಡುಗಳು. ತಾಯಿ ತೊಟ್ಟಿಲು ತೂಗುವಾಗ ಇವನ್ನು ಹಾಡುವುದರಿಂದ, ಇವನ್ನು ಜೋಗುಳಗಳು ಅಥವಾ ತೊಟ್ಟಿಲಹಾಡುಗಳೆಂದು ಕರೆಯಲಾಗುತ್ತದೆ. ಇಂಥ ಗೀತೆಗಳು ಸ್ವಾಭಾವಿಕವಾಗಿಯೇ ಕೋಮಲಭಾವಗಳನ್ನು ಹೊಂದಿರುತ್ತವೆ. ಇವು ಮಕ್ಕಳ ಹಾಗೆಯೇ ಮುಗ್ಧವಾದವು, ನಿರ್ಮಲವಾದವು. ಅನೇಕ ವೇಳೆ ಇವು ಮಗುವಿನ ಮನೋಭಾವಗಳನ್ನು ತೆರೆಯುವುದಲ್ಲದೆ, ಮಗುವಿನ ಕಲ್ಪನೆಗೆ ಹತ್ತಿರವಾದ ಸರಳ ಕಥಾನಕಗಳನ್ನೂ ಚಿತ್ರಿಸುತ್ತವೆ. ಇವು ಬಹುಮಟ್ಟಿಗೆ ಸಂತೋಷಕರವಾದ ತರ್ಕಬದ್ಧವಲ್ಲದ ಘಟನೆಗಳಾಗಿರುತ್ತವೆ. ಹೀಗೆ ಮಗುವನ್ನು ಕನಸಿನ ಮತ್ತು ಭ್ರಾಮಕ ಮಾಂತ್ರಿಕ ಜಗತ್ತೊಂದಕ್ಕೆ ಕೊಂಡೊಯ್ಯುತ್ತವೆ. ತೊಟ್ಟಿಲ ಹಾಡುಗಳು ಬಹುತೇಕವಾಗಿ ಭಾವಗೀತಾತ್ಮಕವೂ ಉತ್ಸಾಹಪೂರ್ಣವೂ ಉತ್ಪ್ರೇಕ್ಷಿತವೂ ಆದ ಕವಿತೆಗಳು.

ಜನಪದ ಗೀತೆಗಳಲ್ಲಿ ಪ್ರಕೃತಿಗೀತೆಗಳದೂ ಒಂದು ಭಾಗ. ಜನಪದರು ಬಡತನದಲ್ಲಿ ಅದ್ದಿಹೋದವರು. ಆದರೆ ಅವರ ಗೀತೆಗಳಲ್ಲಿ ಈ ಯಾವುದೇ ಕಹಿ ಕಂಡುಬರುವುದಿಲ್ಲ. ಭೂಮಿತಾಯಿಯ ಮಕ್ಕಳಾದ ಇವರ ಜೀವನ ಆಕೆಯ ಅನುಗ್ರಹದ ಮೇಲೆ ನಿಂತಿರುವಂಥದು. ಇದು ಹಲವು ಗೀತೆಗಳ ಹುಟ್ಟಿಗೆ ಕಾರಣವಾಗಿದೆ. ಇಲ್ಲಿಯ ಗೀತೆಗಳು ಪ್ರಕೃತಿಯನ್ನು ನಿಕಟವಾಗಿ ಪರಿಚಯಿಸುತ್ತಿದ್ದು, ಇವುಗಳಲ್ಲಿನ ಭಾವನೆಗಳಿಗೆ ಪ್ರಕೃತಿಯೇ ಕಾರಣವಾಗಿದೆ. ಪ್ರಣಯಗೀತೆಗಳಲ್ಲಿ ಭಾವಾತ್ಮಕಸ್ಫೂರ್ತಿಯನ್ನು ಒದಗಿಸುವುದಕ್ಕೆ ಕೂಡ ಪ್ರಕೃತಿ ಸಹಾಯ ಮಾಡುತ್ತದೆ.

ರೈತರು ಋತುಮಾನಗಳ ವ್ಯತ್ಯಾಸಗಳನ್ನು ಭಯಚಕಿತರಾಗಿ ಕಾಯುತ್ತಿದ್ದು ಅವನ್ನು ನೃತ್ಯ ಮತ್ತು ಗೀತೆಗಳಿಂದ ಆಚರಿಸುತ್ತಾರೆ. ಈ ಎಲ್ಲ ಪ್ರಕೃತಿ ಹಬ್ಬಗಳೂ ಭೂಮಿಯ ಫಲಶಕ್ತಿ ಆಶಯವನ್ನು ಹೊಂದಿರುತ್ತವೆ. ಮಳೆಗಳ ಫಲಶಕ್ತಿ ಆಶಯ ಮಾನವಾನುಭವದಲ್ಲಿ ಸಂಕೇತವಾಗಿ ಉಪಯೋಗವಾಗಿರುವುದನ್ನು ಹಲವಾರು ಗೀತೆಗಳಲ್ಲಿ ನೋಡುತ್ತೇವೆ. ಕೆಲವಲ್ಲಿ ಸುಗ್ಗಿದೇವತೆಯ ಕಲ್ಪನೆಯಿದ್ದು, ಸಮೃದ್ಧ ಬೆಳೆಗೆ ಅವನ ಅನುಗ್ರಹ ಅಗತ್ಯವಿರುತ್ತದೆ.

ಋತುಗಳನ್ನು ಅನೇಕ ರೀತಿಗಳಲ್ಲಿ ಆಚರಿಸಲಾಗುತ್ತದೆ. ಪ್ರತಿಯೊಂದು ಋತುವೂ ಜನಪದದ ಮನಸ್ಸಿನ ಮೇಲೆ ತನ್ನದೇ ಆದ ಪ್ರಭಾವವನ್ನು ಒತ್ತುವುದಲ್ಲದೆ, ಪ್ರಕೃತಿಯ ಋತುಗೀತೆಗಳ ಉಗಮಕ್ಕೆ ಕಾರಣವಾಗುತ್ತದೆ. ಇಂಥ ಕೆಲವು ಗೀತೆಗಳಲ್ಲಿ ಪ್ರಣಯ ವಸ್ತುವಾಗಿರುತ್ತದೆ. ಕೆಲವೆಡೆ ಎರಡು ಬಗೆಯ ಋತುಗೀತೆಗಳನ್ನು ಕಾಣುತ್ತೇವೆ : ಚೈತ್ರದಲ್ಲಿ ಹಾಡುವಂಥವು ಮತ್ತು ಮಳೆಗಾಲದಲ್ಲಿ ಹಾಡುವಂಥವು. ಮಳೆಗೀತೆಗಳು ಅನೇಕವೇಳೆ ಪ್ರಣಯ ಮತ್ತು ಲೈಂಗಿಕ ವಿಷಯವನ್ನು ವಸ್ತುವಾಗಿ ಹೊಂದಿರುತ್ತವೆ. ಜನಪದರು ಮೋಡ ಮತ್ತು ಮಳೆಗಳನ್ನು ಪ್ರಣಯ ಕ್ರಿಯೆಯ ಸಾಂಪ್ರದಾಯಿಕ ಸಂಕೇತಗಳಾಗಿ ಸಾಮಾನ್ಯವಾಗಿ ನಂಬಿರುತ್ತಾರೆ. ಮಳೆ ಮತ್ತು ಬಿರುಗಾಳಿಯ ಸಂಕೇತ ಲೈಂಗಿಕ ಹಂಬಲವನ್ನು ಉದ್ದೀಪಿಸುವುದಾಗಿರುತ್ತದೆ. ನದಿ ತನ್ನೆಲ್ಲ ದೃಶ್ಯಪರಂಪರೆಯಿಂದ ರಮಣೀಯ ಹಾಗೂ ರಂಜನೀಯ ಗೀತೆಗಳ ಸಮೃದ್ಧ ನಿಧಿಗೆ ಸ್ಫೂರ್ತಿಶಕ್ತಿಯಾಗಿದೆ. ಹಾಗೆಯೇ ಹಕ್ಕಿಗಳು, ಹೂಗಳು, ಹಿಮ, ಬೆಟ್ಟ, ಹುಲಿ ಮೊದಲಾದವು ಗೀತೆಗಳಿಗೆ ವಸ್ತುವನ್ನು ನೀಡಿವೆ.

ಪ್ರಣಯಕ್ಕೆ ಸಂಬಂಧಿಸಿದ ಮತ್ತು ಮದುವೆ ಮುಂತಾದ ಸಾಮಾಜಿಕ ಪದ್ಧತಿಗಳಿಗೆ ಸಂಬಂಧಿಸಿದ ಹಾಡುಗಳು ಅನೇಕವಿವೆ. ಜನಪದ ಗೀತೆಗಳಲ್ಲಿ ಪ್ರಣಯವಂತೂ ಪ್ರಧಾನ ವಸ್ತುವಾಗಿ ಸಂಯೋಜಿತವಾಗಿದೆ. ಜನಪದ ಮನಸ್ಸು ಪ್ರಕೃತಿಯ ಶಾಂತ ಸಂಪರ್ಕದಿಂದ ಪೋಷಿತವಾಗಿರುತ್ತದೆ ಮತ್ತು ಅನುಭವ ಅದರಿಂದ ಬೆಳೆದಿರುತ್ತದೆ. ಕ್ರಿಯೆಯನ್ನು ಪ್ರಕೃತಿಯ ವಸ್ತುಗಳೊಡನೆ ಹೋಲಿಸಲಾಗುತ್ತದೆ. ಅನೇಕವೇಳೆ ಮನಶ್ಶಾಸ್ತ್ರೀಯ ಅನುರೂಪತೆ ಇದಾಗಿರುತ್ತದೆ.

ಭಾರತೀಯ ಜನಪದಕಾವ್ಯದಲ್ಲಿ ಬಾಲೆಯೊಬ್ಬಳನ್ನು ಹಲವುಸಾರಿ ಎಳೆಯ ಬಿದಿರಿಗೆ ಹೋಲಿಸಲಾಗುತ್ತದೆ. ಬಾಳೆಯ ಗಿಡ ಎರಡನೆಯದಾಗುತ್ತದೆ. ಪಕ್ಷಿಗಳು ಪ್ರತಿಮೆಗಳಾಗಿ ಕಾಣಿಸಿಕೊಳ್ಳುವುದಲ್ಲದೆ, ನಂಬಿಕೆಯ ಸಾಕಾರರೂಪಗಳಾಗಿ ಪರಿಗಣಿತವಾಗುತ್ತವೆ. ಅನೇಕಸಾರಿ ಇವು ಪ್ರಣಯ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸುತ್ತವೆ. ಸಂಸ್ಕೃತದ ಪುರಾಣ–ಪ್ರಣಯ ಕಾವ್ಯಗಳಲ್ಲಿ ಹಂಸ ಗೌರವಸ್ಥಾನ ಗಳಿಸಿದರೆ, ಜನಪದ ಕಾವ್ಯದಲ್ಲಿ ಗಿಳಿ ಅಂಥ ಸ್ಥಾನವನ್ನು ಪಡೆದುಕೊಳ್ಳುತ್ತದೆ. ವ್ಯಾಪಕವಾಗಿ ಬಳಸಲಾಗಿರುವ ಇನ್ನೊಂದು ಪ್ರತಿಮೆಯೆಂದರೆ ದುಂಬಿಯದು. ಜನಪದ ಕಾವ್ಯದಲ್ಲಿ ದುಂಬಿ ಪ್ರಿಯತಮನಾದರೆ, ಮಧು ಪ್ರಿಯತಮೆಯಾಗಿ ಕಾಣಿಸಿಕೊಳ್ಳುತ್ತದೆ. ಪ್ರಣಯದಲ್ಲಿ ಸಂಗೀತ ಪ್ರಧಾನ ಪಾತ್ರವಹಿಸುತ್ತದೆ. ಡೋಲು, ನಗಾರಿ, ಕಹಳೆ, ಕೊಳಲು ಮುಂತಾದ ವಾದ್ಯಗಳಿಂದ ಕೂಡಿದ ಸಂಗೀತವನ್ನಿಲ್ಲಿ ಕಾಣಬಹುದು. ಪ್ರಣಯವೆಂದರೆ ಸಮಾಗಮದ ಇಚ್ಛೆಯೇ ಆಗಿದೆ. ಗ್ರಾಮೀಣರು ಸಾಮಾನ್ಯವಾಗಿ ಕೆಲವು ಸಂದರ್ಶನ ಸ್ಥಳಗಳನ್ನು ಸೂಚಿಸುತ್ತಾರೆ: ಬತ್ತದ ಗದ್ದೆಗಳು, ಕಾಡುಪ್ರದೇಶಗಳು, ಹುಲ್ಲುಮಾಳಗಳು, ನದೀದಡಗಳು, ಬಾವಿ ಅಥವಾ ಕೊಳಗಳ ಪಕ್ಕಗಳು.

ಜನಪದ ಗೀತೆಗಳು ಭಗ್ನಪ್ರಣಯಕ್ಕೆ ಉಜ್ಜ್ವಲವಾದ ಮತ್ತು ವರ್ಣರಂಜಿತವಾದ ಅಭಿವ್ಯಕ್ತಿಯನ್ನು ನೀಡಿವೆ. ಕಾವ್ಯ ಎನ್ನುವುದು ಹೃದಯದ ತುಂಬು ಅಭಿವ್ಯಕ್ತಿ ಎಂದು ಹೇಳುವುದಾರೆ, ಅದನ್ನು ಇಂಥ ಗೀತೆಗಳಲ್ಲಿ ನಿಶ್ಚಯವಾಗಿಯೂ ಕಾಣುತ್ತೇವೆ. ಪ್ರಣಯಿಗಳ ರಹಸ್ಯಭೇಟಿ ಮತ್ತು ಪಲಾಯನಕ್ಕೆ ಸಂಬಂಧಿಸಿದ ಗೀತೆಗಳು ಕೂಡ ಸಮೃದ್ಧವಾಗಿ ದೊರೆಯುತ್ತವೆ. ಪ್ರಣಯ ಕೆಲವು ವೇಳೆ ಸಾಮಾಜಿಕ ಆದೇಶಗಳನ್ನು ನಿರಾಕರಿಸುವುದುಂಟು. ಜನಪದ ಗೀತೆಗಳು ಭಾರತದ ಭಿನ್ನ ಸಾಮಾಜಿಕ ರಚನೆಯ ಮೇಲೆ ಬೆಳಕು ಚೆಲ್ಲುವುದು ಅಪರೂಪ. ಈ ಸಾಮಾಜಿಕ ರಚನೆಯಲ್ಲಿ ಕೆಲವು ಮುಕ್ತವಾದವುಗಳು, ಸ್ವಚ್ಛಂದವಾದವುಗಳು; ಉಳಿದವು ನಿಷಿದ್ಧಗಳಿಂದ ಕೂಡಿದವು.

ಮದುವೆಯ ಹಾಡುಗಳು ಹೆಂಗಸರು ಹಾಡಬಲ್ಲ ವಿಶೇಷ ಬಗೆಯ ಭಾವಗೀತೆಗಳಾಗಿವೆ. ವಿವಾಹದ ವಿವಿಧ ಆಚರಣೆಗಳಿಗೆ ಸಂಬಂಧಿಸಿದಂತೆ ಈ ಹಾಡುಗಳಿರುತ್ತವೆ. ದಾಂಪತ್ಯಜೀವನದ ಹಾಡುಗಳೂ ಇಲ್ಲೇ ಬರುತ್ತವೆ. ವಿವಾಹದ ತರುವಾಯ ಹೊಸ ಜೀವನ ಆರಂಭವಾಗುತ್ತದೆ. ಈ ಸಂತೋಷವನ್ನು ಅಭಿವ್ಯಕ್ತಿಸುವ ಮತ್ತು ಎರಡು ಯುವಚೇತನಗಳು ಒಂದಾಗುವಲ್ಲಿನ ಸಂವೇದನೆಯನ್ನು ಪ್ರಕಟಿಸುವ ಗೀತೆಗಳು ವಿಶೇಷವಾಗಿ ರಂಜಿಸುತ್ತವೆ. ಇದು ಹೀಗೆಯೇ ಇರದೆ, ಅನೇಕ ಸಮಸ್ಯೆಗಳು ಅವರ ಬದುಕನ್ನು ಆವರಿಸುತ್ತವೆ. ಇದು ಬಹಳ ಸಾರಿ ಆರ್ಥಿಕ ಸ್ಥಿತಿಗೆ ಸಂಬಂಧಿಸಿದುದಾಗಿರುತ್ತದೆ. ಜನಪದಗೀತೆಗಳಲ್ಲಿ ಇದರ ಸಮರ್ಥ ಅಭಿವ್ಯಕ್ತಿಯನ್ನು ಕಾಣುತ್ತೇವೆ.

ಈ ಹಾಡುಗಳು ಸಾಮಾನ್ಯವಾಗಿ ಹೆಂಗಸರ ಹಾಡುಗಳೆಂದೇ ಪ್ರಸಿದ್ಧವಾಗಿವೆ. ಏಕೆಂದರೆ, ಇವು ಸ್ತ್ರೀಹೃದಯವನ್ನು ಕುರಿತವಾಗಿವೆ. ಇವುಗಳಲ್ಲಿ ಕೆಲವು ಅಪರಿಚಿತ ಮನೆಯ ವಾತಾವರಣದಲ್ಲಿ ಇರುವ ಹೆಣ್ಣಿನ ಭಾವಾತ್ಮಕ ಪ್ರತಿಕ್ರಿಯೆಯನ್ನು ಕುರಿತಿರುತ್ತವೆ; ಇನ್ನು ಕೆಲವು ಅವಳ ದಿವ್ಯಯಾತನೆಗಳಿಗೆ ಮೂಕಸಾಕ್ಷಿಗಳಾಗುತ್ತವೆ. ಇವುಗಳ ಜೊತೆಗೆ, ಸಹಾನುಭೂತಿಪರರಲ್ಲದ ಅತ್ತೆಮಾವಂದಿರು, ಮೂದಲಿಸುವ ನಾದಿನಿಯರು, ಅವಿಭಕ್ತ ಕುಟುಂಬದ ರಚನೆ, ವ್ಯಾವಹಾರಿಕ ಆರ್ಥಿಕವ್ಯವಸ್ಥೆ ಮೊದಲಾದವು ಅವಳ ಬಾಳನ್ನು ಮತ್ತಷ್ಟು ತೊಡಕುಗೊಳಿಸುತ್ತವೆ. ಹೆಣ್ಣು ತನಗೆ ಸಮೀಪದ ನೆಂಟರಿಷ್ಟರನ್ನು ಅಪೇಕ್ಷಿಸುವ ಮತ್ತು ಅದರಲ್ಲಿಯೂ ತಾನು ಅಗಲಿ ಬಂದ ತೌರಿನ ಕಲ್ಪನೆಯನ್ನು ಕುರಿತಾಗಿ ಚಿಂತಿಸುವ ಗೀತೆಗಳೂ ಗೋಚರಿಸುತ್ತವೆ. ವೈಯಕ್ತಿಕ ಭಾವನೆಗಳ ರಚನೆಗಳಿವು. ಇವು ತಮ್ಮ ನಾದ ಮತ್ತು ಲಯಗಳಲ್ಲಿ ವ್ಯಥೆಯೊಂದನ್ನು ಹೊತ್ತಿರುತ್ತವೆ. ಇಂಥ ಕೆಲವು ಗೀತೆಗಳು ಕೆಲವೊಂದು ಮಟ್ಟದ ಕ್ರೋಧ ಮತ್ತು ಪ್ರತಿಭಟನೆಯನ್ನೂ ವ್ಯಕ್ತಪಡಿಸುವಂತೆ ತೋರುತ್ತವೆ.

ಕೆಲವು ಮದುವೆ ಹಾಡುಗಳು ಪೌರಾಣಿಕ ಹಿನ್ನೆಲೆಯನ್ನು ಹೇಳುತ್ತವೆ. ಇವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪುರಾಣ ಮಹಾಕಾವ್ಯಗಳ ಐತಿಹ್ಯಗಳನ್ನು ನಿರ್ದೇಶಿಸುತ್ತವೆ; ಉದಾಹರಣೆಗೆ: ಹರ–ಗೌರಿ, ರಾಮ–ಸೀತಾ, ಕೃಷ್ಣ–ರುಕ್ಮಿಣಿ ಇತ್ಯಾದಿ. ಗಂಡನ್ನೂ ಗಂಡಿನ ಕಡೆಯವರನ್ನೂ ಹೆಣ್ಣಿನ ಕಡೆಯವರು ಜರಿಯುವ ಹಾಗೆಯೇ ಹೆಣ್ಣನ್ನೂ ಹೆಣ್ಣಿನ ಕಡೆಯವರನ್ನೂ ಗಂಡಿನ ಕಡೆಯವರು ಜರಿಯುವ ಗೀತೆಗಳು ಎಲ್ಲ ಕಡೆಯಲ್ಲೂ ಸಿಗುತ್ತವೆ. ಈ ಮುಯ್ಯಿ ಪದ್ಧತಿ ನಮ್ಮಲ್ಲಿ ಹೇಗೋ ಹಾಗೆಯೇ ಯೂರೋಪಿನಲ್ಲಿಯೂ ಜೀವಂತವಾಗಿದೆ.

ಜನಪದ ಗೀತೆಗಳಲ್ಲಿ ಜೀವನದ ಸಾಮಾಜಿಕ, ಆರ್ಥಿಕ ವಿಷಯಗಳು ಕೂಡ ತಮ್ಮದೇ ಆದ ಅಭಿವ್ಯಕ್ತಿಯನ್ನು ಪಡೆದಿವೆ. ಇವುಗಳಲ್ಲಿ ಕೆಲವು ಸಮಾಜದಲ್ಲಿನ ಉತ್ಪನ್ನಕಾರಕ ಸಂಬಂಧಗಳು ಮತ್ತು ಉತ್ಪನ್ನೋಪಕರಣಗಳನ್ನು ಕುರಿತು ಹಾಡುತ್ತವೆ. ಬಹುತೇಕ ಜನಪದ ಕಥೆಗಳು ದುಡಿಮೆಯೊಡನೆ ಹುಟ್ಟಿ ಬೆಳೆದವು. ಸ್ವಾಭಾವಿಕವಾಗಿಯೇ ಈ ಗೀತೆಗಳು ಜನತೆಯ ಸಾಮಾಜಿಕ, ಆರ್ಥಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ.

ಜನಪದರ ಮುಖ್ಯ ಕಸಬು ಬೇಸಾಯ. ಇದನ್ನು ಬಿಟ್ಟು ಉಳಿದ ಕಸಬುಗಳು ಸಹಾಯಕ ಪ್ರವೃತ್ತಿಯವು. ವಿಶಾಲವಾಗಿ ಹೇಳುವುದಾದರೆ, ಈ ಹಾಡುಗಳು ವ್ಯವಸಾಯ ಮಾದರಿಯ ಆರ್ಥಿಕ ವ್ಯವಸ್ಥೆಗೆ ಹೊಂದಿಕೆಯಾದವುಗಳಾಗಿವೆ. ಇದರ ಸುತ್ತ ವೈವಿಧ್ಯಮಯ, ಸಮೃದ್ಧ ಗೀತಸಾಹಿತ್ಯ ಹುಟ್ಟಿಕೊಂಡಿದೆ–ಬತ್ತದ ಗದ್ದೆಯ ಹಾಡುಗಳು, ದನಕಾಯುವವರ ಹಾಡುಗಳು, ಮೀನುಗಾರರ ಹಾಡುಗಳು, ಅಂಬಿಗರ ಹಾಡುಗಳು, ಮೇದರ ಹಾಡುಗಳು, ಕಮ್ಮಾರರ ಹಾಡುಗಳು, ಇತ್ಯಾದಿ. ಈ ಎಲ್ಲ ಹಾಡುಗಳ ಪ್ರಧಾನ ತಂತು ಹಳ್ಳಿಯ ವ್ಯವಸಾಯ ಮೂಲ ಆರ್ಥಿಕ ವ್ಯವಸ್ಥೆಯೇ ಆಗಿದೆ.

ಸುಗ್ಗಿ ಚೆನ್ನಾಗಿ ಬರಬೇಕಾದರೆ ಪ್ರಕೃತಿಯ ಅನುಗ್ರಹ ಬೇಕಾಗುತ್ತದೆ. ಆದರೆ ಪ್ರಕೃತಿ ಎಲ್ಲ ಕಾಲದಲ್ಲೂ ಹೀಗೆಯೇ ಇರುತ್ತದೆಂದು ಹೇಳಲಾಗುವುದಿಲ್ಲ. ಕೆಲವೊಮ್ಮೆ ಬೇಸಾಯವನ್ನು ಹಾಳುಮಾಡುವಂಥ ಪರಿಸ್ಥಿತಿ ಒದಗಬಹುದು. ಇದನ್ನು ಜನ ತಮ್ಮ ಹಾಡುಗಳಲ್ಲಿ ತೋಡಿಕೊಂಡಿದ್ದಾರೆ. ಹಾಗೆ ಹಾಡುವಾಗ ತಮ್ಮ ಹೃದಯ ಮನಸ್ಸುಗಳೆರಡನ್ನೂ ಅದರಲ್ಲಿ ವ್ಯಕ್ತಪಡಿಸಿದ್ದಾರೆ. ವಾಸ್ತವವಾಗಿ, ಹಾಡುಗಳು ಅವರಿಗೆ ಆಸರೆಯಾಗಿ ಶ್ರಮದ ಉಪಶಮನಕ್ಕೆ ಕಾರಣಗಳಾಗಿ ಅವರನ್ನು ಉಳಿಸಿವೆ.

ಸಾಮಾನ್ಯವಾಗಿ ಕೆಲಸದ ಹಾಡುಗಳನ್ನು ಮೇಳಗೀತೆಗಳೆಂದು ಕರೆಯಬಹುದು. ಮೇಳದಲ್ಲಿ ಮುಮ್ಮೇಳ ಮತ್ತು ಹಿಮ್ಮೇಳ ಎರಡೂ ಉಂಟು. ಸಮೂಹದಲ್ಲಿ ಯಾರಾದರೊಬ್ಬರು ಹಾಡಿನ ಪ್ರಧಾನಭಾಗವನ್ನು ಹಾಡಿದರೆ, ಉಳಿದವರು ಅದಕ್ಕೆ ಸೊಲ್ಲು ಕೊಡುತ್ತಾರೆ. ಈ ಕ್ರಮದಲ್ಲಿ ಇಡೀ ಗೀತೆಯೊಂದು ಸಾಗುತ್ತದೆ. ಕೆಲಸದ ಹಾಡುಗಳು ಅವುಗಳ ಕೆಲಸದ ಸಂದರ್ಭದಿಂದ ಇಂದು ಮಾಯವಾಗುತ್ತಿವೆ. ಕೇವಲ ಹಾಡು ಮಾತ್ರವಾಗಿ ಉಳಿದುಕೊಳ್ಳುತ್ತಿವೆ. ನಾಗರಿಕತೆಯಿಂದಾಗಿ, ಅದರಲ್ಲಿಯೂ ಕೈಗಾರಿಕೀಕರಣದಿಂದಾಗಿ, ಈ ಬಗೆಯ ಗೀತೆಗಳು ಬಹು ಬೇಗ ಅಳಿಯುತ್ತಿವೆ.

ಇಂಥ ಹಾಡುಗಳನ್ನು ಕೆಲಸದ ಸಂದರ್ಭದಲ್ಲಿ ಹಾಡುವುದು, ಹಾಡಿಸುವುದು ಸಂಪ್ರದಾಯವಾಗಿ ಬಂದಿದೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ: ಗೀತೆಗಳನ್ನು ಹಾಡುತ್ತಿದ್ದರೆ ಶ್ರಮ ಗೊತ್ತಾಗದೆ ಕೆಲಸ ಸುಗಮವಾಗಿ ಸಾಗುತ್ತದೆ ಎಂಬುದು ಒಂದು, ಬೆಳೆ ಚೆನ್ನಾಗಿ ಬೆಳೆಯುತ್ತದೆ ಎಂಬ ನಂಬಿಕೆ ಮತ್ತೊಂದು. ಬೇಸಾಯದ ಸಮಯದಲ್ಲಿ ಇವನ್ನು ಹಾಡಿದರೆ ದುಷ್ಟಶಕ್ತಿಗಳಿಂದ ಬೆಳೆ ರಕ್ಷಿತವಾಗುತ್ತದೆ ಎಂಬ ಉತ್ಪನ್ನಕಾರಕ ಮಾಂತ್ರಿಕತೆಯೂ ಇದೆ. ಈ ಬಗೆಯ ಬಹುತೇಕ ಗೀತೆಗಳು ಕ್ರಿಯಾತ್ಮಕಗಳೆಂದು ಹೆಸರಾಗಿವೆ.

ನೃತ್ಯಗೀತೆಗಳೂ ಒಂದು ದೃಷ್ಟಿಯಲ್ಲಿ ಕ್ರಿಯಾತ್ಮಕ ಗೀತೆಗಳ ವ್ಯಾಪ್ತಿಯಲ್ಲಿ ಬರುತ್ತವೆ. ಇವು ಎರಡೂ ಸಾಮಾನ್ಯಮೂಲಗಳಿಂದ ಬಂದವು : 1 ಸರಳ ನೃತ್ಯಗಳು–ವೃತ್ತಾಕಾರದ ನೃತ್ಯಗಳು. ಇವು ಹೆಚ್ಚು ಹಳೆಯವು. ಇವುಗಳಲ್ಲಿ ಹಲವು ಮತಾಚರಣೆಯ ಅರ್ಥಗಳನ್ನು ಸೂಚಿಸುತ್ತವೆ; ಈಗ ಇವು ಸಾಮಾನ್ಯವಾಗಿ ಮರೆತುಹೋಗಿವೆ. 2 ಇತರ ನೃತ್ಯಗಳು; ಹಲವುವೇಳೆ ಜಟಿಲವಾದವು. ನಗರ ಪ್ರಭಾವಗಳ ಮೂಲಕ ಬಂದವು. ಇವುಗಳಲ್ಲಿ ಬಹುಪಾಲು ಹಾಡಲ್ಪಡುವುದು ಮನೋರಂಜನೆಗಾಗಿ.

ಈ ಮೇಲಿನ ವಿಶೇಷವಾದ ಕ್ರಿಯಾತ್ಮಕ ಗೀತೆಗಳಿಗೆ ಪ್ರತಿಯಾಗಿ ಎಲ್ಲ ಪ್ರದೇಶಗಳಲ್ಲಿಯೂ ಶುದ್ಧವಾಗಿ ಮನೋರಂಜನೆಗೆ, ಆನಂದಕ್ಕೆ ಅಥವಾ ಭಾವೋಪಶಮನಕ್ಕೆ ಹಾಡುವ ಗೀತೆಗಳಿರುತ್ತವೆ. ಇವು ಯಾವುವೂ ಸಾಮಾಜಿಕ ಅಥವಾ ಸಾಮೂಹಿಕ ಉದ್ದೇಶಗಳನ್ನು ನಿರ್ವಹಿಸುವುದಿಲ್ಲ. ಸಮೃದ್ಧವೂ ವೈವಿಧ್ಯಪೂರ್ಣವೂ ಆದ ಈ ವಿವಿಧ ಪ್ರಕಾರಗಳನ್ನು ನೋಡಿದಾಗ, ಮನೋರಂಜನೆಗೆ ಉಪಯೋಗವಾಗುವುದಕ್ಕಿಂತ ಹೆಚ್ಚಾಗಿ ಇಂದು ಜನಪದಗೀತೆ ಪ್ರಧಾನವಾಗಿ ಕ್ರಿಯಾತ್ಮಕ ಎಂದು ಹೇಳುವುದು ಕಠಿಣವಾಗುತ್ತದೆ.

ಒಂದಾನೊಂದು ಕಾಲದಲ್ಲಿ ಜನಪದಗೀತೆ ಹೆಚ್ಚು ಕ್ರಿಯಾತ್ಮಕ ಲಕ್ಷಣದಿಂದ ಕೂಡಿತ್ತು. ಈ ಊಹೆಗೆ ಹಲವಾರು ಕಾರಣಗಳಿವೆ. ಕ್ರಿಯಾತ್ಮಕ ಗೀತೆಗಳು ಇತರ ಸಮೂಹಗಳಿಗಿಂತ ಬಹಳ ಸಾರಿ ಸರಳ, ಕಡಿಮೆ ಕಲಾತ್ಮಕ ಹಾಗೂ ವಿಷಯದಲ್ಲಿ ಕಡಿಮೆ ವೈವಿಧ್ಯ ಇರುವಂಥವು. ಪಾಠ ಮತ್ತು ಮಟ್ಟುಗಳಲ್ಲಿಯೂ ಇದೇ ರೀತಿ. ಇವು ನಗರದಿಂದ ಪ್ರಭಾವಿತವಾಗಿರುವುದು ಕಡಿಮೆ. ಜನಪದ ಗೀತೆಯಲ್ಲಿ ಆರ್ಷೇಯ ಬೆಳವಣಿಗೆಗಳನ್ನು ಇವು ಪ್ರತಿನಿಧಿಸಬಹುದು. ಇಷ್ಟಾದರೂ ಕ್ರಿಯಾತ್ಮಕ ಮತ್ತು ಕ್ರಿಯಾತ್ಮಕವಲ್ಲದ ಗೀತೆಗಳ ನಡುವಿನ ಪ್ರತ್ಯೇಕತೆಯ ವಿಷಯ ಇನ್ನೂ ಸಂದಿಗ್ಧವಾಗಿಯೇ ಉಳಿದಿದೆ.

ಅನೇಕ ಗೀತಪ್ರಕಾರಗಳು ಮತ್ತು ಅವುಗಳ ವಿವಿಧ ಉಪಯೋಗಗಳು ಜನಪದ ಸಮುದಾಯವೊಂದರ ಜೀವನ ಮತ್ತು ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತವೆಂದು ಹೇಳಬಹುದಾಗಿದೆ. ಜನಪದ ಗೀತೆಯ ವಿಷಯ ಹಾಗೂ ಶೈಲಿ ಇಂದಿನ, ಹಿಂದಿನ ಸಮಾಜದ ಸಾಮಾಜಿಕ ಹಿನ್ನೆಲೆಯನ್ನು ಅಭಿವ್ಯಕ್ತಿಸುತ್ತದೆ ಎಂದು ಹೇಗೆ ಹೇಳಲು ಸಾಧ್ಯ? ಇದಕ್ಕೆ ಪ್ರಾಚೀನ ಸಿದ್ಧಾಂತಕಾರರು ಮತ್ತು ಸಂಗ್ರಹಕಾರರು ಕೆಲವೊಂದು ಕಲ್ಪನಾತ್ಮಕ ಉತ್ತರಕ್ಕೆ ಅವಕಾಶ ಕೊಟ್ಟಿದ್ದಾರೆ. ಮನುಷ್ಯ ಪ್ರಾಕೃತಿಕ ವಾತಾವರಣಕ್ಕೆ ತೀರ ಹತ್ತಿರವಾಗಿ ಜೀವಿಸುವುದರಿಂದ ಅವನನ್ನು ಹೆಚ್ಚು ಪ್ರಾಕೃತಿಕ ಮನುಷ್ಯ ಎಂದು ಯೋಚಿಸಲಾಗಿದೆ. ಅವನು ಭೂಮಿಗೆ ಅಥವಾ ಮಣ್ಣಿಗೆ ಹತ್ತಿರದವನಾದಂತೆ, ಅವನು ತನ್ನ ಜೀವನವನ್ನು ಗ್ರಹಿಸುವುದರಲ್ಲೂ ಅಂಥದೇ ಸಾಮೀಪ್ಯವನ್ನು ಹೊಂದಿದ್ದನೆಂದು ಹೇಳಲಾಯಿತು. ಇಷ್ಟಾದರೂ ಗೀತೆಗಳಲ್ಲಿ ವ್ಯಕ್ತವಾಗಿರುವ ಸಮೂಹದ ಜೀವನಸಂಬಂಧ ಜಟಿಲವಾಗಿಯೇ ಉಳಿದುಕೊಳ್ಳುತ್ತದೆ.

ಜನಪದಗೀತೆ ಸಂಗೀತ ಕಲೆಯಾಗಿಯೂ ಸಮಾನ ಲಕ್ಷಣವೊಂದನ್ನು ಹೊಂದಿದೆ. ಶಿಷ್ಟ ಸಂಗೀತದಲ್ಲಿ ಇರುವ ಹಾಗೆ, ಇದರ ರೂಪ ಮತ್ತು ವಿಷಯಗಳನ್ನು ನಿಗದಿಗೊಳಿಸಿಲ್ಲ. ಒಂದು ಪ್ರದೇಶದ ತುಂಬ ಹರಡಿದ ಮಟ್ಟುಗಳು ಭಿನ್ನ ಭಿನ್ನ ಸ್ಥಳಗಳಲ್ಲಿನ ಅವುಗಳ ಪಾಠಾಂತರಗಳಲ್ಲಿ ಸಾಕಷ್ಟು ವ್ಯತ್ಯಾಸವನ್ನು ತೋರಿವೆ. ಅನೇಕ ಸಾರಿ ಒಂದೇ ಜನಸಮುದಾಯದ ಹಾಡುಗಾರರ ಮಟ್ಟಿಗೆ ಭಿನ್ನರೂಪವೊಂದನ್ನು ಕೊಡುವುದನ್ನು ಕಾಣಬಹುದು. ಇದಲ್ಲದೆ ಮಟ್ಟು ಬೇರೆ ಬೇರೆ ಪದ್ಯಗಳಿಗೆ ಪುನರಾವರ್ತನೆಗೊಂಡಾಗ, ಉಂಟಾದ ವ್ಯತ್ಯಾಸಗಳು ಗೀತೆಯ ಪಾಠಗಳಲ್ಲಿ ನಿರೀಕ್ಷಿಸಬಹುದಾದ ಭಿನ್ನತೆಗಳಿಗಿಂತ ಹೆಚ್ಚಿನವಾಗಿರುತ್ತವೆ. ಜನಪದ ಗಾಯಕರು ಮಟ್ಟೊಂದನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ರೀತಿಯಾಗಿಯೇ ಹಾಡಿದರೂ ಆಶ್ಚರ್ಯಪಡಬೇಕಾದುದಿಲ್ಲ. ಮಟ್ಟಿನ ಹೊಸರೂಪಗಳು ಅಥವಾ ಹೊಸ ಮಟ್ಟುಗಳು ಹಳೆಯ ಮಟ್ಟುಗಳಿಂದ ಕವಲೊಡೆಯಬಹುದು. ಇವು ಮಟ್ಟಿನ ಮೂಲವಸ್ತುವಿನ ಆಧಾರದ ಮೇಲೆ ಆದ ವ್ಯತ್ಯಯಗಳೇ ವಿನಾ ಅನಿರೀಕ್ಷಿತ ಹೊಸ ಬದಲಾವಣೆಗಳಲ್ಲ.

ಜನಪದ ಹಾಡುಗಾರ ಪದ್ಯದಿಂದ ಪದ್ಯಕ್ಕೆ ಪುನರಾವರ್ತನೆಯಾಗುವ ಮಟ್ಟಿನ ವ್ಯತ್ಯಾಸಗಳ ಬಗ್ಗೆ ಅಷ್ಟೇನೂ ಎಚ್ಚರಿಕೆ ವಹಿಸಿದಂತೆ ಕಾಣುವುದಿಲ್ಲ. ಇದು ಲಯ, ಧಾಟಿ ಮತ್ತು ಅದರ ಸ್ವರಭಾರ, ರಚನೆಗಳ ಮೇಲೆ ಕೂಡ ಪ್ರಭಾವ ಬೀರುತ್ತದೆ. ಆದರೆ ಮಟ್ಟಿನ ಮೂಲಮಾದರಿ ಮಾತ್ರ ಅಖಂಡವಾಗಿ ಉಳಿಯುತ್ತದೆ. ಆದ್ದರಿಂದ ಪ್ರಸಿದ್ಧ ಮಟ್ಟುಗಳ ಪ್ರಾದೇಶಿಕ ವ್ಯತ್ಯಯಗಳಲ್ಲಿನ ಬೆಳವಣಿಗೆಯಲ್ಲಿ ನಮ್ಯತೆ ಬಹುಮುಖ್ಯ ವಿಷಯವಾಗುತ್ತದೆ.

ನೆರೆಹೊರೆಯ ಜನರಿಗೆ ಎಲ್ಲಿ ಆತ್ಮೀಯ ಸಂಪರ್ಕ ಏರ್ಪಟ್ಟಿರುತ್ತದೆಯೊ ಅದರಲ್ಲಿಯೂ ವಿಶೇಷವಾಗಿ ಎಲ್ಲಿ ಅವರು ಪರಸ್ಪರ ಸೇರಿಹೋಗಿರುತ್ತಾರೊ ಅಂಥ ಕಡೆಗಳಲ್ಲಿ ಮಟ್ಟುಗಳ ಪರಸ್ಪರ ವಿನಿಮಯ ಹೆಚ್ಚಾಗಿ ನಡೆದಿರುತ್ತದೆ. ಅಷ್ಟು ಮಾತ್ರವಲ್ಲದೆ, ಮಟ್ಟುಗಳ ಮೂಲಾಧಾರಗಳನ್ನು ಹುಡುಕುವುದು ಕೆಲ ಕಾಲಾನಂತರ ಕಷ್ಟವಾಗುತ್ತದೆ. ಒಂದು ಸಮೂಹದ ಧಾಟಿಯ ಲಕ್ಷಣಗಳು ಇನ್ನೊಂದು ಸಮೂಹದ ಧಾಟಿಯ ಮೇಲೆ ದಾಳಿಮಾಡುವುದರಿಂದ, ಕೆಲವು ಸಮಯಗಳಲ್ಲಿ, ರಾಷ್ಟ್ರೀಯ ಸಮೂಹವೊಂದರ ಜನಪದಗೀತೆಯ ಧಾಟಿಯ ಸಂಗೀತಾತ್ಮಕ ವಿವರಣೆ ಕಷ್ಟವೆನಿಸಿಬಿಡುತ್ತದೆ.

ಜನಪದ ಗೀತೆ ಸಾಮಾನ್ಯವಾಗಿ ಚಿಕ್ಕರೂಪಗಳಲ್ಲಿ ಬಳಕೆಯಲ್ಲಿದೆ. ಪದ್ಯದಲ್ಲಿ ನಿಯಮಿತ ಸಂಖ್ಯೆಯ ಸಾಲುಗಳು ಒಂದು ಘಟಕವಾಗಿ ಕಾಣಿಸುತ್ತಿದ್ದು ಗೀತೆಯ ಉದ್ದಕ್ಕೂ ಅವು ಪುನರಾವರ್ತನೆಗೊಳ್ಳುತ್ತವೆ. ಭಿನ್ನರೂಪಗಳನ್ನು ಗುರುತಿಸುವುದು ಪದ್ಯದಲ್ಲಿನ ಸಾಲುಗಳ ಸಂಖ್ಯೆಯಿಂದ ಮತ್ತು ಪದ್ಯರಚನೆಯ ಮಾದರಿಯನ್ನು ರೂಪಿಸುವ ವಿವಿಧ ಲಕ್ಷಣಗಳಿಂದಉಎಂದು ಹೇಳಬಹುದು. ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಸಾಲಿನ ಪದ್ಯಗಳು ಎಲ್ಲ ಕಡೆಯೂ ಪ್ರಚುರವಾಗಿರುವಂತೆ ಕಂಡುಬರುತ್ತದೆ. ಪದ್ಯದ ಮಾದರಿಯೊಂದು ಸಾಲಿನ ರಚನೆಗೆ ಸಂಬಂಧಿಸಿದ ಲಕ್ಷಣಗಳನ್ನು ಹೇಳುವುದಾಗಿರಬಹುದು ಅಥವಾ ಸಾಲಿನ ಎಲ್ಲೆಯನ್ನು ದಾಟಿ ಭಿನ್ನ ಸಾಲುಗಳ ನಡುವೆ ಸಾದೃಶ್ಯ ಮತ್ತು ವೈದೃಶ್ಯವನ್ನು ಸ್ಥಾಪಿಸುವುದಾಗಿರಬಹುದು. ಪದ್ಯದ ಸಾಲಿನ ವ್ಯವಸ್ಥೆ ಎರಡು ಸಾಮಾನ್ಯ ತತ್ತ್ವಗಳನ್ನು ಅನುಸರಿಸುತ್ತದೆ: ಶಿಷ್ಟಕಾವ್ಯದಲ್ಲಿ ಬಹುತೇಕ ನಮಗೆ ಪರಿಚಿತವಿರುವ, ಛಂದೋಬದ್ಧ ನಿಯತಪಾದಗಳಿಂದಾದುದು ಒಂದು, ಪಾದವೊಂದನ್ನು ರೂಪಿಸುವ ಸ್ವರಭಾರ ಅಥವಾ ಮಾತ್ರೆಯ ವೈದೃಶ್ಯಗಳು ಪಾತ್ರ ವಹಿಸುವುದರ ಬದಲು ಅಕ್ಷರಗಳ ನಿರ್ದಿಷ್ಟ ಸಂಖ್ಯೆಯಿಂದಾದುದು ಮತ್ತೊಂದು. ಜನಪದ ಗೀತೆಯಲ್ಲಿ ಪಾದವೊಂದು ಬಹಳಷ್ಟು ಅಸ್ಥಿರವಾದದ್ದು; ಅಕ್ಷರಸಂಖ್ಯೆ ಬೇಕಾದ ಹಾಗೆ ಬದಲಾಗಬಹುದಾದದ್ದು. ಕೆಲವು ಭಾಷೆಗಳಲ್ಲಿ ಪಾದವೇ ಮುಖ್ಯವಾಗಿರಬಹುದು, ಇನ್ನು ಕೆಲವು ಭಾಷೆಗಳಲ್ಲಿ ಅಕ್ಷರಗಳೇ ಪ್ರಧಾನವಾಗಿರಬಹುದು. ಇಲ್ಲವೆ, ಇವೆರಡೂ ಒಟ್ಟಿಗೆ ಮುಖ್ಯವೆನಿಸಬಹುದು. ಒಟ್ಟಿನಲ್ಲಿ ಪದ್ಯಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು : ಒಂದು ಪ್ರತಿ ಸಾಲಿನಲ್ಲಿಯೂ ಒಂದೇ ರೀತಿಯ ಛಂದೋಬದ್ಧ ರಚನೆ ಇರುವಂಥದು. ಎರಡು ಅದು ಇಲ್ಲದಿರುವಂಥದು.

ಪದ್ಯಗಳಲ್ಲಿ ಸಾಧಿತವಾಗುವ ಸಾದೃಶ್ಯ ಮತ್ತು ವೈದೃಶ್ಯ ಕಾರ್ಯಗಳು ಪುನರಾವರ್ತನ ಧ್ವನಿಮೌಲ್ಯಗಳಾದ ಪ್ರಾಸ, ಅನುಪ್ರಾಸ, ಧ್ವನಿಸಾಮ್ಯ ಮತ್ತಿತರ ರಚನೆಗಳಿಂದ ಹೆಚ್ಚು ಬಣ್ಣಗಟ್ಟುತ್ತವೆ, ವೈವಿಧ್ಯಪೂರ್ಣವಾಗುತ್ತವೆ. ಈ ಧ್ವನಿಮೌಲ್ಯದ ತತ್ತ್ವ ಸಾಲೊಂದನ್ನು ಅಥವಾ ಪ್ರತಿಪದ್ಯದ ಸಾಲಿನ ಭಾಗವೊಂದನ್ನು ಪುನರಾವರ್ತಿಸುವುದರಲ್ಲಿ ಮತ್ತು ಪಲ್ಲವಿಗಳಲ್ಲಿ ಕೂಡ ಕೆಲಸಮಾಡುತ್ತದೆ. ಪಲ್ಲವಿಗಳು ಸಾಮಾನ್ಯವಾಗಿ ಅರ್ಥರಹಿತ, ಆಲಂಕಾರಿಕ ಅಕ್ಷರಗಳಾಗಿರುತ್ತವೆ ಎಂದು ಗುರುತಿಸಲಾಗಿದೆ. ಪಲ್ಲವಿ ಸಾಲುಗಳು ಅರ್ಥರಹಿತವಾಗಿರುವಾಗ, ಅವು ಗೀತೆಯೊಡನೆ ಕೆಲಮಟ್ಟಿಗೆ ಕೆಲಸಮಾಡುತ್ತವೆಯೆಂದು ಹೇಳಬೇಕಾಗುತ್ತದೆ ಮತ್ತು ಅವನ್ನು ಇತರ ಗೀತೆಗಳಿಗೂ ವರ್ಗಾಯಿಸಬಹುದಾಗಿರುತ್ತದೆ.

ಸಂಗ್ರಹಕಾರರಿಗೆ ಮೇಲಿಂದ ಮೇಲೆ ಗಮನಕ್ಕೆ ಬಂದಿರುವ ಅಂಶವೆಂದರೆ, ಗೀತೆಯ ಭಾಗಗಳನ್ನು ಹಾಡುಗಾರರು ಹಾಡದೆಯೇ ಹೇಳಿಕೊಡುವುದು ಕಷ್ಟವಾದುದು ಮತ್ತು ಹಾಡಲೇಬೇಕಾದುದು. ಸ್ಕಾಟ್ಲೆಂಡಿನ ಉತ್ತರಭಾಗದ ವೃದ್ಧಮಹಿಳೆಯೊಬ್ಬಳ ಲಾವಣಿಗಳನ್ನು ಸಂಗ್ರಹಿಸುವುದಕ್ಕಾಗಿ ಸರ್ ವಾಲ್ಟರ್ ಸ್ಕಾಟ್ ಹೋದಾಗ ಅವನಿಗೆ ಹೇಳಿದಂತೆ: ಅವು ಇರುವುದು ಹಾಡುವುದಕ್ಕಾಗಿಯೇ ಹೊರತು, ಓದುವುದಕ್ಕಲ್ಲ. ಜನಪದ ಗಾಯಕನಿಗೆ ಕಾವ್ಯ ಮತ್ತು ಮಟ್ಟಿನ ರೂಪ ಒಂದು ಅಖಂಡ ಘಟಕ. ಆದರೆ ನಿರ್ದಿಷ್ಟ ಕಾವ್ಯ ಮತ್ತು ಮಟ್ಟಿನ ಕಟ್ಟು ಒಡೆಯಲಾಗದುದೇನೂ ಅಲ್ಲ. ಒಂದೇ ಕಾವ್ಯವನ್ನು ದೇಶದ ವಿವಿಧ ಭಾಗಗಳಲ್ಲಿ ಅಥವಾ ಒಂದೇ ಪ್ರದೇಶದಲ್ಲಿ ಕೂಡ ಅನೇಕ ವೇಳೆ ಬೇರೆ ಬೇರೆ ಮಟ್ಟುಗಳಿಂದ ಹಾಡುವುದನ್ನು ನೋಡಿದಾಗ, ಗ್ರಂಥಭಾಗವನ್ನು ಅದರ ಮಟ್ಟಿನಿಂದ ಪ್ರತ್ಯೇಕಿಸಿ, ಅದರ ಜಾಗದಲ್ಲಿ ಬೇರೊಂದನ್ನು ಸೇರಿಸಬಹುದೆನಿಸುತ್ತದೆ. ಜನಪದ ಗಾಯಕರು ಗ್ರಂಥ

ಭಾಗವೊಂದನ್ನು ಸೇರಿಸಬಹುದೆನಿಸುತ್ತದೆ. ಜನಪದ ಗಾಯಕರು ಗ್ರಂಥಭಾಗವೊಂದನ್ನು ಸಾಮಾನ್ಯವಾಗಿ ಹಾಡುವ ಮಟ್ಟು ಸ್ಮರಣೆಗೆ ಬಾರದೆ ಹೋದಾಗ ತಮಗೆ ಪ್ರಿಯವಾದ ಮಟ್ಟುಗಳನ್ನು ಸೇರಿಸಿ ಹಾಡಿಬಿಡುವುದುಂಟು. ಗಾಯಕರ ಪ್ರಜ್ಞೆ ಮಟ್ಟಿಗಿಂತ ಹೆಚ್ಚಾಗಿ ಗ್ರಂಥದಲ್ಲಿ ನೆಟ್ಟಿರುತ್ತದೆ. ಮಟ್ಟು ಅಮೂರ್ತವಾದುದೆಂಬುದನ್ನು ಕಲ್ಪಿಸಿಕೊಂಡಾಗ ನಮಗಿದು ಆಶ್ಚರ್ಯವೆನಿಸುವುದಿಲ್ಲ.

ಜನಪದ ಸಂಗೀತದಲ್ಲಿ ಸಂಗೀತವಾದ್ಯಗಳ ಪಾತ್ರ ಅಪ್ರಧಾನವಾದರೂ ಕುತೂಹಲ ಕಾರಿಯಾದದು. ಇಷ್ಟಾದರೂ ಈ ವಿಷಯ ಗಮನ ಸೆಳೆಯುವುದು ಸ್ವಲ್ಪವೇ. ಬಹುತೇಕ ಜನಪದ ಸಮೂಹಗಳಲ್ಲಿ ಸ್ವತಂತ್ರವಾದ ವಾದ್ಯಸಂಗೀತ ರೂಪಗೊಂಡಿರುವುದು ತೀರ ಕಡಿಮೆ. ಜನಪದ ಗೀತೆಯ ಜೊತೆಯಲ್ಲಿ ವಾದ್ಯಸಂಗೀತವನ್ನು ಉಪಯೋಗಿಸುವುದು ಸಾರ್ವತ್ರಿಕವಾದುದೇನೂ ಅಲ್ಲ. ಹಂಗರಿಯಂಥ ಕೆಲವು ದೇಶಗಳಲ್ಲಿ ಇದು ಗೊತ್ತೇ ಇಲ್ಲ. ಇತರ ಕಡೆಗಳಲ್ಲಿ ಗೀತೆಗಳ ನಿರ್ದಿಷ್ಟ ವರ್ಗಗಳಿಗೆ ಮಾತ್ರ ಬಳಸಲಾಗುತ್ತದೆ. ಒಟ್ಟಾರೆ, ಬಹುತೇಕ ಜನಪದ ಗೀತೆಗಳನ್ನು ಯಾವುದೇ ಪಕ್ಕವಾದ್ಯವಿಲ್ಲದೆ ಹಾಡಲಾಗುತ್ತದೆ.

ಜನಪದ ಗೀತಸಾಹಿತ್ಯದಲ್ಲಿ ಕಥಾತ್ಮಕ ಭಾಗವನ್ನು ಲಾವಣಿ, ಖಂಡಕಾವ್ಯ ಮತ್ತು ಮಹಾಕಾವ್ಯಗಳೆಂದು ವಿಭಜಿಸಿಕೊಳ್ಳಬಹುದು. ಇವು ತಮ್ಮ ರೂಪರಚನೆಯಲ್ಲಿ ಹಲವಾರು ಸಮಾನ ಗುಣಗಳನ್ನು ಹೊಂದಿರುತ್ತವೆ. ಇವುಗಳೆಲ್ಲದರಲ್ಲಿಯೂ ಕ್ರಿಯೆ, ಪಾತ್ರ, ಸಂವಿಧಾನ ಮತ್ತು ವಸ್ತುಗಳೆಂಬ ನಾಲ್ಕು ಸಾಮಾನ್ಯ ಅಂಶಗಳಿರುತ್ತವೆ. ಹಾಡಿನ ಮಧ್ಯೆ ವಚನ ಕಾಣಿಸಿಕೊಳ್ಳುವಿಕೆ, ಪಲ್ಲವಿಗಳ ಪುನರಾವರ್ತನೆ, ಕೆಲವೊಮ್ಮೆ ವಾದ್ಯನರ್ತನಗಳ ಬಳಕೆ ಇತ್ಯಾದಿಗಳಲ್ಲಿಯೂ ವ್ಯತ್ಯಾಸ ಕಾಣಿಸಿಕೊಳ್ಳುವುದಿಲ್ಲ. ಇವು ವಿಂಗಡಿಸಿಕೊಳ್ಳುವುದು ಗಾತ್ರ ಪ್ರಮಾಣದಲ್ಲಿ, ಅದಕ್ಕನುಸಾರಿಯಾದ ಒಳರಚನೆಯಲ್ಲಿ. ಲಾವಣಿ ಏಕಘಟನೆಯ ಮೇಲೆ ಆಧಾರಿತವಾದುದು: ಅನೇಕ ಘಟನಾವಳಿಗಳಿಂದ ಕಥೆ ಸಾಗುವುದಿಲ್ಲ. ಕ್ರಿಯೆ ಶೀಘ್ರಗತಿಯಲ್ಲಿ ಅಂತ್ಯದ ಕಡೆಗೆ ನುಗ್ಗುವುದನ್ನು ಕಾಣಬಹುದು. ಕಥಾವಸ್ತು ಶಿಖರಸ್ಥಿತಿಗೆ ಹೋದಂತೆ ಹ್ರಸ್ವಗೊಳ್ಳುವುದೂ ಇದರ ಒಂದು ಲಕ್ಷಣವಾಗುತ್ತದೆ. ಇದು ಒಬ್ಬನಿಂದ ರಚಿತವಾದುದೆಂದೂ ಮಧ್ಯಯುಗದ ಬೆಳೆವಣಿಗೆಯೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಸಾಂಸ್ಕೃತಿಕವಾಗಿ ಲಾವಣಿ **(ನೋಡಿ)** ಎಲ್ಲ ಕಡೆಯಲ್ಲಿಯೂ ಮಹಾಕಾವ್ಯದ ತರುವಾಯದ್ದೆಂಬ ಅಭಿಪ್ರಾಯವೂ ಇದೆ. **(ಆರ್.ಜಿ.)**

**ಜನಪದ ಚಿತ್ರಕಲೆ :** ಮಾನವನ ಬರೆವಣಿಗೆಯಲ್ಲಿ ಮೊದಲು ಕಂಡುಬಂದದ್ದು ಚಿತ್ರಗಳೇ. ಅವನು ವಾಸಿಸುತ್ತಿದ್ದ ಗುಹೆಗಳ ಹೊರ ಮತ್ತು ಒಳ ಮೈಗಳಲ್ಲಿ ಅಂಥ ಚಿತ್ರಗಳನ್ನು ಇಂದಿಗೂ ನೋಡಬಹುದು. ಮುಂದೆ ಆತ ಮಾತಿಗೆ ಬರೆವಣಿಗೆಯ ರೂಪ ಕೊಡಲು ಪ್ರಯತ್ನಿಸಿದಾಗಲೂ ಚಿತ್ರಗಳನ್ನೇ ಬಳಸಿದ. ಇದೇ ಮುಂದೆ ಚಿತ್ರಲಿಪಿಯಾಯಿತು. ಚೀನ, ಜಪಾನ್ ಮುಂತಾದ ದೇಶಗಳ ಲಿಪಿಗಳಲ್ಲಿ ಚಿತ್ರಲಿಪಿಯ ಸುಳುಹನ್ನು ಸ್ಪಷ್ಟವಾಗಿ ಗುರುತಿಸಬಹುದು. ಜನಪದ ಚಿತ್ರಕಲೆ ಜನಪದ ಸಂಗೀತದಷ್ಟೇ ಪ್ರಾಚೀನವಾದುದು. ಜನಪದ ಚಿತ್ರಕಲೆ ಆಯಾ ಜನದ ಜೀವನ ರೀತಿಗಳನ್ನು, ನಂಬಿಕೆಗಳನ್ನು, ಧಾರ್ಮಿಕ ವಿಚಾರಗಳನ್ನು ಪ್ರತಿನಿಧಿಸುತ್ತದೆ. ಜಿಂಕೆ, ಆನೆ, ಹುಲಿಗಳ ಬೇಟೆ ಹಾಗೂ ಕೃಷಿಗೆ ಸಂಬಂಧಿಸಿದ ಚಿತ್ರಗಳು ಹೇರಳವಾಗಿ ದೊರೆಯುತ್ತವೆ. ಜನ ತಾವು ಆಚರಿಸುವ ಹಬ್ಬಹುಣ್ಣಿಮೆಗಳಲ್ಲಿ ಹಾಕುವ ಬಗೆಬಗೆಯ ರಂಗವಲ್ಲಿಗಳಲ್ಲಿ, ಕಟ್ಟುವ ಮಂಟಪಗಳಲ್ಲಿ ಬಳಸುವ ಮಡಕೆ ಕುಡಿಕೆಗಳ ಮೇಲಿನ ಅಲಂಕರಣಗಳಲ್ಲಿ, ನೇಯುವ ಬಟ್ಟೆಗಳಲ್ಲಿ, ಧರಿಸುವ ಉಡಿಗೆ ತೊಡಿಗೆಗಳಲ್ಲಿ ಚಿತ್ರಕಲಾಭಿರುಚಿಯ ವಿವಿಧ ನಿದರ್ಶನಗಳನ್ನು ಕಾಣಬಹುದು. ಅನೇಕ ವಸ್ತುಸಂಗ್ರಹಾಲಯಗಳು ಜನಪದ ಚಿತ್ರಕಲೆಗೆ ಸಂಬಂಧಿಸಿದ ವಸ್ತುವಿಶೇಷಗಳನ್ನು ಸಂಗ್ರಹಿಸಿಟ್ಟಿವೆ. **(ಪಿ.ಆರ್.ಟಿ.)**

ಮಡಕೆಗಳು, ಆಟಿಕೆಗಳು, ಮತೀಯ ಪ್ರತಿಮೆಗಳು, ಮಾತೃದೇವತೆಯ ಶಿಲಾವಿಗ್ರಹಗಳು ಭಾರತದಲ್ಲಿ ಸಿಂಧೂ ಕಣಿವೆಯ ನಾಗರಿಕತೆಯ ನಿವೇಶನಗಳಲ್ಲಿ ಹೇರಳವಾಗಿ ದೊರೆತಿವೆ. ಇವು ಒಂದು ಜನಪ್ರಿಯ ಕಲಾರೂಪದ ಸಂಪ್ರದಾಯಕ್ಕೆ, ಅಂದರೆ ಜನಪದ ಕಲಾಸಂಪ್ರದಾಯಕ್ಕೆ ಸೇರಿದುವು. ಏಕೆಂದರೆ ಅದರ ಸಮಕಾಲೀನವೂ ಹೆಚ್ಚು ಕೃತಕವೂ ಆದ ಸಂಸ್ಕೃತಿಗಳು ಉತ್ಪಾದಿಸಿದ ಕಲಾವಸ್ತುಗಳಿಗಿಂತ ಅವು ಬೇರೆಯಾಗಿವೆ. ಈ ಜನಪದ ಸಂಪ್ರದಾಯದ ಅವಿಚ್ಛಿನ್ನ ವಹನವಾದರೋ ಬಹಳ ಆಶ್ಚರ್ಯಕರವಾದ ಸತ್ತ್ವದಿಂದ ಕೂಡಿದೆ. ಏಕೆಂದರೆ ಇಂದಿಗೂ ಭಾರತದ ಕೆಲವು ಭಾಗಗಳಲ್ಲಿ ಸಣ್ಣ ಮಣ್ಣಿನ ಬೊಂಬೆಗಳ ತಯಾರಿಕೆ ಕಂಡುಬರುತ್ತದೆ. ಇದು ಕಲ್ಪನೆ ಮತ್ತು ತಯಾರಿಕೆಗಳಲ್ಲಿ ಮಾತೃದೇವತೆ ಹಾಗೂ ಫರ್ಟಿಲಿಟಿ ಪಂಥಗಳನ್ನು ಪ್ರತಿನಿಧಿಸುವ ಚರಿತ್ರಪೂರ್ವ ವಿಗ್ರಹಗಳಿಗೆ ಸಮಾನವಾಗಿದೆ. ಮಕ್ಕಳ ಆಟದ ಸಾಮಾನುಗಳೂ ಕಂಡುಬರುತ್ತವೆ. ಅವಿಚ್ಛಿನ್ನ ಪರಂಪರೆಯ ಕೆಲವು ಅಲಂಕಾರಗಳು, ವಿನ್ಯಾಸಗಳು ಮತ್ತೆ ಮತ್ತೆ ಪುನರುಕ್ತವಾಗುತ್ತವೆ. ಹಾಗೆ ಅನೇಕ ಶತಮಾನಗಳಿಂದ, ಯುಗಗಳಿಂದ ಪುನರುಕ್ತವಾಗುತ್ತಿದ್ದರೂ ಅವು ಪ್ರತಿಯೊಂದು ಸಾರಿಯೂ ಹೊಸದಾಗಿಯೇ ಕಾಣುತ್ತವೆ. ಇದು ಜನಪದ ಚಿತ್ರಕಲೆಯ ಮುಖ್ಯ ಲಕ್ಷಣಗಳಲ್ಲಿ ಒಂದು. ಹಳ್ಳಿಗರ ಕಲೆಯ ಒಂದು ಲಕ್ಷಣ ಅದರ ಸಂಪ್ರದಾಯ ಪಾಲನೆ. ಕಲೆಗಳಲ್ಲೆಲ್ಲ ಅದರ ಕಾಲವನ್ನು ಕುರಿತು ಖಚಿತವಾಗಿ ನಿರ್ದೇಶಿಸುವುದು ಇದಕ್ಕೆ ಮಾತ್ರ ಸಾಧ್ಯವಿಲ್ಲ. ಸರಳ ಸುಂದರ ಅಲಂಕಾರ ನಮೂನೆಗಳು ರೂಪುಗೊಂಡು ಶತಮಾನಗಳ ಕಾಲ ಉಳಿಯುತ್ತವೆ. ಹಳ್ಳಿಗರ ಮನಸ್ಸಿನಲ್ಲಿ ವಿನೂತನತೆಗಾಗಿ ಅವಿರತ ಹಂಬಲಿಕೆ ಇರುವುದಿಲ್ಲ. ಅವರು ಕೇಳುವುದು ಒಂದು ವಸ್ತು ತನ್ನದೇ ಆದ ಬೆಡಗಿನಿಂದ ಕೂಡಿರಬೇಕು ಎಂದಷ್ಟೇ. ಕೆಲವೇ ಅಲಂಕಾರಗಳು ಮತ್ತು ಬಣ್ಣಗಳ ಮಿಶ್ರಣದಿಂದ ಅಸಂಖ್ಯಾತ ವೈವಿಧ್ಯ ಮತ್ತು ಪರಿಣಾಮಗಳನ್ನು ಪಡೆಯುವುದು ಸಾಧ್ಯ ಎಂಬುದನ್ನು ಅವರು ಅರಿತಂತೆ ತೋರುತ್ತದೆ.

ಅತ್ಯಂತ ಹೆಚ್ಚು ಕಾಲ ಉಳಿಯುವ ಲೋಹ ಅಥವಾ ಶಿಲೆಯಲ್ಲದೆ ಬೇರೆ ಯಾವುದೇ ವಸ್ತುವಿನಲ್ಲಿಯೂ ಕಲೆ ಕಾಲದ ದಾಳಿಗಳನ್ನು ಎದುರಿಸಿ ಉಳಿಯದಿರಬಹುದು. ಆದ್ದರಿಂದ ಚರಿತ್ರಪೂರ್ವ ಕಾಲದ ಅಥವಾ ಅನಂತರದ ಚಾರಿತ್ರಿಕ ಯುಗಗಳ ಜನಪದ ಚಿತ್ರಕಲೆಯ ನಿರೂಪಣೆಯನ್ನುಳ್ಳ ಒಂದು ಸುಸಂಬದ್ಧವಾದ ಕಾಲಾನುಕ್ರಮ ರೂಪರೇಷೆಯನ್ನು ಕೊಡುವುದು ಹೆಚ್ಚು ಕಡಿಮೆ ಅಸಾಧ್ಯವಾಗುತ್ತದೆ. ಮೌರ್ಯಪೂರ್ವಕಾಲದ ಆರ್ಷೇಯ ಮಣ್ಣಿನ ವಿಗ್ರಹಗಳು ಮತ್ತು ಸಂಗವಂಶದ ಕಾಲಕ್ಕೆ ಸೇರಿದವು ಜನಪದ ಪರಂಪರೆಯ ಮುಂದುವರಿಕೆಯನ್ನು ಸಮರ್ಥಿಸುತ್ತವೆ.

ಅದೆಷ್ಟೇ ಸ್ವಲ್ಪವಾಗಿರಲಿ, ಚಾರಿತ್ರಿಕ ಆಧಾರ ತೋರಿಸುವಂತೆ ಅಜಂತದ ಅಭಿಜಾತ ಚಿತ್ರಕಲಾಸೃಷ್ಟಿಯ ಅನಂತರ ಚಿತ್ರಕಲೆಯ ದೇಶೀಯ ಸಂಪ್ರದಾಯ ಹೆಚ್ಚಾಗಿ ಜನಪದ ಪರಂಪರೆಯ ಆರ್ಷೇಯ ಕುರುಹುಗಳನ್ನು ಹೊಂದಿದ್ದ ಕೃತಿಗಳಲ್ಲಿ ಉಳಿದುಕೊಂಡು ಬಂತು ಎಂಬುದು ತೀರ ಸ್ಪಷ್ಟ. ನಿದರ್ಶನವೆಂದರೆ ಗುಜರಾತಿನ (ಪಶ್ಚಿಮ ಭಾರತೀಯ ಪದ್ಧತಿ) ಜೈನ ಕಲ್ಪಸೂತ್ರಗಳ ಪ್ರಾಚೀನ ತಾಳೆವೋಲೆಯ ಹಸ್ತಪ್ರತಿಗಳು, ಬಂಗಾಳದ ಪಾಲ ಸಾಮ್ರಾಜ್ಯದ (ಪೂರ್ವ ಭಾರತೀಯ ಪದ್ಧತಿ) ಕೃತಿಗಳು. ಜನಪದ ಚಿತ್ರಕಲೆಯ (ಗುಜರಾತ್) ಒಂದು ಜನಪ್ರಿಯ ಶೈಲಿಯ ಕೆಲವು ಮೊದಲಿನ ಮಾದರಿಗಳು ಪ್ರ.ಶ. 11ನೆಯ ಶತಮಾನದವೆಂದು ಹೇಳಲಾಗಿದೆ. ಪ್ರ.ಶ. 14ನೆಯ ಶತಮಾನದಲ್ಲಿ ರಮಾನಂದರು ಭಕ್ತಿಪಂಥವನ್ನು ಆರಂಭಗೊಳಿಸಿದ ಮೇಲೆ ಒಂದು ದೊಡ್ಡ ಪ್ರಚೋದಕ ಶಕ್ತಿ ಮತ್ತು ಆವೇಶ ಭಾರತೀಯ ಜೀವನವನ್ನು, ಕಲೆ ಮತ್ತು ಸಾಹಿತ್ಯಗಳನ್ನು ಒಳಗೊಂಡಂತೆ, ಜಾಗೃತಗೊಳಿಸಿದುವು. ಪೌರಾಣಿಕ ಪುನರುಜ್ಜೀವನದ ಈ ಕಾಲದಲ್ಲಿ ಜನಪದ ಗೀತೆಗಳು ಮತ್ತು ಭಕ್ತಿಗೀತೆಗಳು ಉಚ್ಚ್ರಾಯಸ್ಥಿತಿಗೇರಿದುವು. ಗ್ರಾಮಚಿತ್ರಕಲಾವಿಧಾನದ ಮೇಲೆ ಭಕ್ತಿಪಂಥ ತನ್ನದೇ ಪ್ರಭಾವಗಳನ್ನು ಬೀರಿತು. ಭಾಗವತ ಮತ್ತು ಇತರ ಮೂಲಗಳಿಂದ ಶ್ರೀಕೃಷ್ಣನ ಜೀವನವನ್ನು ಚಿತ್ರಿಸುವ ಚಿತ್ರಗಳನ್ನು ಅಪಾರವಾದ ಸಂಖ್ಯೆಯಲ್ಲಿ ರಚಿಸಲಾಯಿತು. ವಿಶೇಷತಃ ಹಸ್ತಪ್ರತಿ ಚಿತ್ರಗಳ ರೂಪದಲ್ಲಿ ಮೊದಮೊದಲಿನ ರಾಜಸ್ಥಾನೀ ಚಿತ್ರಕಲೆ (ಪ್ರ.ಶ. 16ನೆಯ ಶತಮಾನ) ಜನಪದ ಕಲೆಯ ಹೆಜ್ಜೆ ಗುರುತುಗಳನ್ನು ತೋರಿಸುತ್ತದೆ. ಮೇವಾಡ ಪದ್ಧತಿಯ (ಪ್ರಶ. 17ನೆಯ ಶತಮಾನ) ಪ್ರಾರಂಭವಂತೂ ಇನ್ನೂ ಪ್ರಾಚೀನವಾದ ಆರ್ಷೇಯ ಅಥವಾ ಜನಪದ ಸಂಪ್ರದಾಯಗಳ ಬೇರುಗಳಿಗೆ ಹರಡಿಕೊಂಡಿತ್ತು. ತೀರ ಇತ್ತೀಚಿಗೆ ಪ್ರಶ. 19ನೆಯ ಶತಮಾನದಲ್ಲಿ ಕಾಲಿಘಾಟ್ (ಬಂಗಾಳ) ಜನಪದ ಚಿತ್ರಕಲಾವಿದರು ಒಂದು ಓಜಸ್ಸಿನಿಂದ ಕೂಡಿದ ಸತ್ತ್ವಯುಕ್ತವಾದ, ಶೈಲಿಯನ್ನು ರೂಢಿಗೆ ತಂದರು.

ಮಾತೃದೇವತಾ ಪಂಥಗಳ ಜೇಡಿಮಣ್ಣಿನ ವಿಗ್ರಹಗಳು ಪ್ರಾಚೀನ ಜನಪದ ಸಂಸ್ಕೃತಿಗಳಿಂದ ಮೂಡಿದುವು–ಎಂಬುದನ್ನು ಆಗಲೇ ನೋಡಿದ್ದೇವೆ. ಮುಂದೆ, ಜನಪದ ಚಿತ್ರಕಾರ ವೈಷ್ಣವ ಧರ್ಮದ ಪುನರುತ್ಥಾನವನ್ನು ಅನುಸರಿಸಿ, ದೊಡ್ಡ ಪ್ರಮಾಣದಲ್ಲಿ ದೇವತಾ ವಿಗ್ರಹಗಳನ್ನು ರಚಿಸಿದ. ನಾಥದ್ವಾರ (ಗುಜರಾತ್) ಮತ್ತು ಒರಿಸ್ಸಗಳಲ್ಲಿ ಕ್ರಮವಾಗಿ ನಾಥಜಿ ಮತ್ತು ಜಗನ್ನಾಥರ ವಿಗ್ರಹಗಳನ್ನು ತಯಾರಿಸಲಾಯಿತು. ಅಲ್ಲಿಗೆ ಬಂದ ಯಾತ್ರಿಕರು ತಮ್ಮ ಯಾತ್ರೆಯ ಗುರುತಾಗಿ ಅವನ್ನು ಒಯ್ಯುತ್ತಿದ್ದರು. ಈ ಪದ್ಧತಿ ಇಂದಿಗೂ ಉಳಿದುಬಂದಿದೆ. **(ಬಿ.ಎ.ಎಸ್.)**

ಕರ್ನಾಟಕದಲ್ಲಿ ಅಂದಂದಿನ ರಾಜಮನೆತನಗಳ ಪ್ರೋತ್ಸಾಹದಿಂದ ದೇಶೀಯ ಸಂಪ್ರದಾಯದ ಚಿತ್ರಕಲೆ ಬೆಳೆದುಬಂದಿದೆ. ಒಂದು ಸಾವಿರದ ನೂರಅರವತ್ತು ಪುಟಗಳ ಹೆಬ್ಬೊತ್ತಿಗೆಯಾದ ಶ್ರೀತತ್ತ್ವನಿಧಿಯಲ್ಲಿ ಅಪೂರ್ವವಾದ 1888 ವರ್ಣರಂಜಿತ ಚಿತ್ರಗಳೂ 458 ರೇಖಾಚಿತ್ರಗಳೂ ಇವೆ. ರಾಜರುಗಳ ವಂಶವೃಕ್ಷಗಳ ಭಿತ್ತಿಚಿತ್ರಗಳನ್ನು ಇದರಲ್ಲಿ ಕಾಣಬಹುದು. ಮುಮ್ಮಡಿಯವರ ಧ್ಯಾನಶ್ಲೋಕಗಳಿಗೆ ಅನುಸಾರವಾಗಿ ಬರೆಯಲಾದ ಸುಂದರವಾದ ಚಿತ್ರಗಳನ್ನೂ ಇದರಲ್ಲಿ ನೋಡಬಹುದು. ಶ್ರೀರಂಗಪಟ್ಟಣದಲ್ಲಿರುವ ಹೈದರನ ಕಾಲದ ಕುಡ್ಯ ಚಿತ್ರಗಳು ದೇಶೀಯ ಶೈಲಿಯಲ್ಲಿವೆ. ರಾಜರ ಪ್ರೋತ್ಸಾಹದಿಂದ ರೂಪುಗೊಂಡ ಚಿತ್ರಗಳನ್ನು ಮನೆಮನೆಗಳಲ್ಲೂ ಮಠಮಂದಿರಗಳಲ್ಲೂ ಅರಮನೆ ಗುರು ಮನೆಗಳಲ್ಲೂ ನೋಡಬಹುದಾಗಿದೆ. ಕಾಗದದ ಮೇಲೆ ಬಟ್ಟೆಯ ಮೇಲೆ ಇಲ್ಲವೆ ಗಾಜಿನ ಮೇಲೆ ಜಲವರ್ಣ ಅಥವಾ ತೈಲವರ್ಣಗಳಲ್ಲಿ ರಾಜರುಗಳ ರೂಪ ಚಿತ್ರಗಳನ್ನು, ದೇವದೇವತೆಗಳ ಹಾಗೂ ಪೌರಾಣಿಕ ಸನ್ನಿವೇಶಗಳ ಸಂಯೋಜನ ಚಿತ್ರಗಳನ್ನು ವಿಶೇಷವಾಗಿ ರಚಿಸಲಾಗಿದೆ.

ಸುವರ್ಣಲೇಪನದ, ವರ್ಣರಂಜಿತ ಕುಸುರಿ ಕೆಲಸದ ಈ ಜನಪದ ಚಿತ್ರರಚನೆಯಲ್ಲಿ ಕಂಡುಬರುವ ಶ್ರದ್ಧೆ, ತಾಳ್ಮೆ, ಭಕ್ತಿ, ಪ್ರತಿಭೆ, ಸಾಧನೆ, ಕಲ್ಪನೆ ಮುಂತಾದುವು ಮೆಚ್ಚುವಂಥವು. ಇಲ್ಲಿ ನಾವು ಕಾಣುವ ಇನ್ನೊಂದು ವಿಶೇಷವೆಂದರೆ ದೇಶೀಯ ಮೂಲವರ್ಣಗಳು. ಮೊದಲು ಸೀಸದ ಕಡ್ಡಿಯಲ್ಲಿ ಆಕೃತಿಯನ್ನು ರೂಪಿಸಿಕೊಂಡು ಅನಂತರ ವರ್ಣಗಳನ್ನು ಹಾಕಿ, ಅಲಂಕಾರ ವೈಖರಿಗಳನ್ನು ತರುವೆಡೆಗಳಲ್ಲೆಲ್ಲ ಬಿಳಿಯ ಸೀಸದಲ್ಲಿ ರೇಖೆಗಳನ್ನು ಎಳೆದು ಅದರ ಮೇಲೆ ವಜ್ರದ ಅಂಟನ್ನು ಸವರುತ್ತಾರೆ. ಅನಂತರ ಅದರ ಮೇಲೆ ಚಿನ್ನದ ರೇಖನ್ನು ಲೇಪಿಸುತ್ತಾರೆ. ರೇಖಿನ ಮೇಲೆ ವರ್ಣಗಳು ಜಾರದೆ ಭದ್ರವಾಗಿ ಕೂರುವಂತೆ ಒಂದು ಬಗೆಯ ಅಂಟನ್ನು ಬಳಸುತ್ತಾರೆ. ಬುಟ್ಟ ಕುಸುರಿ ಕೆಲಸ ಮಾಡುವಾಗ ವಿವಿಧ ವರ್ಣಗಳನ್ನು ಬಳಸಿ ಆಯಾ ಭಾಗಗಳಿಗೆ ಸ್ವರ್ಣರೇಕಿನ ಲೇಪನ ಮಾಡುತ್ತಾರೆ. ಹೀಗೆ ರಚಿತವಾದ ಕೃತಿ ಅನೇಕ ವರ್ಷಗಳ ಕಾಲ ತನ್ನ ಪ್ರಕಾಶವನ್ನು ಕಳೆದುಕೊಳ್ಳದೆ ಚಿರನೂತನ ಎಂಬಂತೆ ಕಾಣುತ್ತಿರುತ್ತದೆ. ಹೆಚ್ಚಾಗಿ ಇವು ಪೂಜಾಚಿತ್ರಗಳಾದುದರಿಂದ ಅವುಗಳ ಮೇಲೆ ಚಿತ್ರಕಾರರ ಹೆಸರು ಕಂಡುಬರುವುದಿಲ್ಲ.

ಈಚೆಗೆ ಪಾಶ್ಚಾತ್ಯ ಸಂಪ್ರದಾಯಗಳ ಸಂಪರ್ಕದಿಂದ ನೂತನ ಪ್ರಯೋಗಗಳು ನಡೆಯುತ್ತಿವೆಯಾದರೂ ಜನಪದ ಶೈಲಿಯ ಪ್ರಗತಿ ಮಾತ್ರ ನಿಂತುಹೋದಂತೆ ಭಾಸವಾಗುತ್ತಿದೆ. ಆದರೆ ಕಲಂಕಾರಿ ಶೈಲಿಯ ಜನಪದ ಚಿತ್ರಕಲೆ ಮಾತ್ರ ಉಳಿಯಲು ಅನೇಕ ರೀತಿಯ ಸಹಕಾರ ದೊರೆಯುವಂತಾಗಿರುವುದು ಸಂತೋಷದ ವಿಷಯ.

ಕಲಂಕಾರಿ ಸಂಪ್ರದಾಯದ ಚಿತ್ರಕಲೆ ಜನಪದ ಚಿತ್ರಕಲೆಯಲ್ಲಿ ಪ್ರಮುಖವಾದುದು. ಆಂಧ್ರಪ್ರದೇಶದಲ್ಲಿ ಇದರ ಪ್ರಾಚೀನ ರೂಪಗಳನ್ನು ಕಾಣಬಹುದು. ಲೇಖಣಿಯ ಬಳಕೆ ಇದರ ವೈಶಿಷ್ಟ್ಯ. ಕಲಂ ಎಂದರೆ ಲೇಖಣಿ, ಕಾರಿ ಎಂದರೆ ಕೆಲಸ. ಇಂಥ ತಂತ್ರದಿಂದ ಮೂಡಿಬಂದ ವಿಶಿಷ್ಟ ಕಲಾಕೃತಿಗಳನ್ನು ಈಗ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಕಾಣಬಹುದಾಗಿದೆ. ಆದರೆ ಅವು ಬಹುಮಟ್ಟಿಗೆ ಜೀರ್ಣವಾಗುತ್ತಿವೆ.

ಇಲ್ಲಿ ದೇಶೀಯ ವರ್ಣಗಳನ್ನೇ ಬಳಸಲಾಗುತ್ತದೆ. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪೌರಾಣಿಕ ಹಾಗೂ ಚಾರಿತ್ರಿಕ ಸನ್ನಿವೇಶಗಳ ದೃಶ್ಯವನ್ನು ದೇಶೀಯ ಬಟ್ಟೆಯ ಮೇಲೆ ಬಿಡಿಸಲು ಬಣ್ಣಗಳನ್ನು ಬಳಸಿರುವುದನ್ನು ಗಮನಿಸಬೇಕು. ಅನೇಕ ದೇಗುಲಗಳಲ್ಲಿ ಈ ಬಗೆಯ ಚಿತ್ರಫಲಕಗಳನ್ನು ದೇವರುಗಳ ಹಿಂಬದಿಯಲ್ಲಿ ಇಲ್ಲವೆ ರಥಗಳ ಮಂಟಪಗಳಲ್ಲಿ ತೂಗುಹಾಕುವುದು ವಾಡಿಕೆಯಾಗಿತ್ತು.

ಕಲಂಕಾರಿ ಚಿತ್ರಕಲೆಯ ಮುಖ್ಯ ರಹಸ್ಯವಿರುವುದು ಚಿತ್ರಕ್ಕೆ ಬೇಕಾಗುವ ಬಟ್ಟೆ, ಬಣ್ಣ, ಲೇಖಣಿಗಳ ಸಿದ್ಧತೆಯಲ್ಲಿ. ಮೂಲಿಕೆಗಳಿಂದ ನೇರವಾಗಿ ಚೆಲುವೆಮಾಡಿದ ಹತ್ತಿ ಇಲ್ಲವೆ ರೇಷ್ಮೆ ಕೋರಾಬಟ್ಟೆಯ ಮೇಲೆ ಸಸ್ಯಗಳಿಂದ ತಯಾರಾದ ದೇಶೀಮೂಲವರ್ಣಗಳನ್ನು ಆತ ಜಾಣ್ಮೆಯಿಂದ ಬಳಸುತ್ತಾನೆ. ಚಿತ್ರ ಬರೆಯಲು ಉಪಯೋಗಿಸುವ ಬಟ್ಟೆಯನ್ನು ಮೈರಾಬಲಂ ಎಂಬ ದ್ರವ್ಯದಲ್ಲಿ ಮತ್ತೆ ಮತ್ತೆ ನೆನೆಹಾಕಿ, ಹಿಂಡಿ, ಮರಳ ಮೇಲೆ, ಬಿಸಿಲಿನಲ್ಲಿ ಒಣಗಿಸಿ ತಯಾರಿಸುತ್ತಾರೆ. ಮೈರಾಬಲಂ ಎಂದರೆ ನೀರಿನಲ್ಲಿ ನೆನೆದ ಅಳಲೆಕಾಯಿ ಚೂರ್ಣವನ್ನು ಎಮ್ಮೆಯ ಹಾಲಿನೊಂದಿಗೆ ಬೆರಸಿ ಮಾಡಿದ ದ್ರವ.

ಕಲಾವಿದರು ಬಳಸುವ ವರ್ಣಗಳು ಕೇವಲ ಮೂರು ನಾಲ್ಕು. ಆಯಾ ಬಣ್ಣಗಳು ಬಟ್ಟೆಯ ಮೇಲೆ ಸ್ಥಿರವಾಗಿ ನಿಲ್ಲಲು ಸಹಾಯಕವಾಗುವಂತೆ ಪಟಿಕದ ರಸವನ್ನೂ ಉಪಯೋಗಿಸಲಾಗುತ್ತದೆ. ಉಪಯೋಗಿಸುವ ಜಲವರ್ಣಗಳೆಲ್ಲ ಗಿಡ ಮೂಲಿಕೆಗಳಿಂದ ಆದವು. ಕೆಂಪು, ಕಪ್ಪು, ಹಳದಿ ಮತ್ತು ನೀಲಿ–ಈ ನಾಲ್ಕು ಬಹುಮುಖ್ಯವಾದ ಮೂಲವರ್ಣಗಳು. ತಾಟಿಬೆಲ್ಲ, ಕಬ್ಬಿನಬೆಲ್ಲ ಮತ್ತು ಕಬ್ಬಿಣದ ಚೂರುಗಳ ಜೊತೆಯಲ್ಲಿ ನೀರು ಬೆರಸಿ ಮೂಲರೇಖೆಗಾಗಿ ಬಳಸುವ ಕಪ್ಪುಬಣ್ಣವನ್ನು ತಯಾರಿಸುತ್ತಾರೆ. ಮಂಜಿಷ್ಠ (ಬೇರು), ಸುರುಳು ಪಟ್ಟೆ (ಮರದ ತೊಗಟೆ), ತಾಮ್ರತೇಗ, ಏಟಿಜಲಗ ಮತ್ತು ನೀರು–ಇವುಗಳ ಸಮ್ಮಿಶ್ರಣದಿಂದ ರಕ್ತವರ್ಣವನ್ನು ಸಿದ್ಧಮಾಡುತ್ತಾರೆ. ಕರಕಹೂಗಳಿಂದ ವರ್ಣ ಮತ್ತು ದೇಶೀಯ ನೀಲಿಯನ್ನು ಪಡೆಯುತ್ತಾರೆ.



ಕಲಂ

ಲೇಖಣಿಗೆ ಇಲ್ಲಿ ಕುಂಚದ ಸ್ಥಾನ. ನೋಡಲು ಸಾಮಾನ್ಯವಾಗಿ ಕಂಡರೂ ಅದರ ಉಪಯೋಗ ಚಮತ್ಕಾರವಾದುದು. ಒಂದು ತುದಿ ಚೂಪಾಗಿರುವ ಆರು ಅಂಗುಲದ ಬಿದಿರಿನ ಕಡ್ಡಿಯನ್ನು ತಯಾರಿಸಿ ಅದರ ಚೂಪು ತುದಿಯ ಕೊಂಚ ಮೇಲುಭಾಗದಲ್ಲಿ ಸ್ವಲ್ಪ ಉಣ್ಣೆಯನ್ನು ಇಟ್ಟು ಅದರ ಸುತ್ತಲೂ ತೆಳು ನೂಲಿನಿಂದ ಬಿಗಿಯಲಾಗುತ್ತದೆ. ಆ ಭಾಗವನ್ನು ಬಣ್ಣಗಳಲ್ಲಿ ಅದ್ದಿ ತೆಗೆದು ಲೇಖಣಿಯಲ್ಲಿರುವ ಉಣ್ಣೆಯ ಭಾಗವನ್ನು ಬೆರಳುಗಳಿಂದ ಒತ್ತುತ್ತ ಹೋದರೆ ಅದರಲ್ಲಿ ಸಂಗ್ರಹವಾದ ಬಣ್ಣ ಕಡ್ಡಿಯ ತುದಿಯ ಮೂಲಕ ಇಳಿದು ಬಟ್ಟೆಯ ಮೇಲೆ ಚಿತ್ರ ಮೂಡುತ್ತದೆ. ಬೇರೆ ಬೇರೆ ವರ್ಣಗಳಿಗೆ ಬೇರೆ ಬೇರೆ ಕಲಂಗಳನ್ನು ಉಪಯೋಗಿಸಲಾಗುತ್ತದೆ.

ಕಲಂಕಾರಿ ಕಲೆಯಲ್ಲಿ ನಾವು ಕಾಣುವ ಮುಖ್ಯ ಲಕ್ಷಣಗಳೆಂದರೆ ಪ್ರಾದೇಶಿಕ ಸಂಪ್ರದಾಯ, ನಿಷ್ಠೆ, ಮೌಲಿಕ ಪ್ರತಿಭೆ ಹಾಗೂ ಅಸಾಧಾರಣ ವೇಗ. ಈ ಕಲಾವಿದರ ಕಲ್ಪನಾಚಾತುರ್ಯ ನಿಜವಾಗಿ ದೊಡ್ಡದು. ಜಲವರ್ಣವಾದರೂ ಈ ಚಿತ್ರಗಳು ತೈಲವರ್ಣದ ಮೆರಗನ್ನು ತೋರುತ್ತವೆ.

ಆಂಧ್ರದ ಗುಡ್ಡಗಾಡಿನ ಜನರಲ್ಲಿ ಈ ಕಲೆ ಮೊದಲು ಉಗಮವಾಯಿತು. ಚಿತ್ತೂರು ಜಿಲ್ಲೆಯ ಕಾಳಹಸ್ತಿಯಲ್ಲಿರುವ ವ್ರಾತಪತಿಯಲ್ಲಿ ಇಂದಿಗೂ ಕೆಲವು ಕಲಾವಿದರು ಇದ್ದಾರೆ. ಈ ಕಲೆಯ ಬೆಳವಣಿಗೆಗೆ ಕೇಂದ್ರ ಗೃಹ ಕೈಗಾರಿಕಾ ಸಂಸ್ಥೆ ಹೆಚ್ಚಿನ ಆಸಕ್ತಿಯನ್ನು ತೋರುತ್ತ ಬಂದಿದೆ. ಇವರಿಗಾಗಿ ತರಬೇತಿ ಕೇಂದ್ರ ಒಂದನ್ನು ಮದ್ರಾಸಿನಲ್ಲಿ ತೆರೆಯಲಾಗಿದೆ. ಅಲ್ಲಿ ಖ್ಯಾತ ಕಲಾವಿದರೂ ಕಲಾವಸ್ತುಗಳ ಸಂಗ್ರಾಹಕರೂ ಆದ ಕೋಡೂರು ರಾಮಮೂರ್ತಿಯವರ ಮುಂದಾಳುತನದಲ್ಲಿ ಒಳ್ಳೆಯ ಕೆಲಸ ನಡೆಯುತ್ತಿತ್ತು. ಹೊಸ ಹೊಸ ಪ್ರಯೋಗಗಳಿಗೂ ಅಲ್ಲಿ ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಸಿದ್ಧವಾದ ಕೃತಿಗಳು ದೆಹಲಿ, ಮುಂಬಯಿ, ಮದ್ರಾಸು, ಹೈದರಾಬಾದು, ಬೆಂಗಳೂರು ಮುಂತಾದ ಕಡೆ ಅನೇಕ ಸಾರಿ ಪ್ರದರ್ಶನ ಕಂಡಿವೆ. (ಪಿ.ಆರ್.ಟಿ.)

**ಜನಪದ ಛಂದಸ್ಸು :** ಜನಪದ ಹಾಡುಗಳ ರಚನೆ ಅಥವಾ ಅದರ ಛಂದಸ್ಸು ಆ ಒಂದು ವರ್ಗದ ವಿಶಿಷ್ಟವೂ ಸ್ವಕೀಯವೂ ಆದ ಲಕ್ಷಣಗಳನ್ನೊಳಗೊಂಡಿರುತ್ತದೆ. ಇತರ ಶಾಖೆಗಳಂತೆ ಇದೂ ಪ್ರಭಾವಿತವಾಗುವುದಕ್ಕಿಂತ ಪ್ರಭಾವ ನೀಡುವುದು ಹೆಚ್ಚು. ವಿಶೇಷವೆಂದರೆ ಜನಪದ ಛಂದಸ್ಸು ಭಾಷೆ ಇತ್ಯಾದಿಗಳಂತೆ ಬೇಗ ವಿಕಾರಗೊಳ್ಳದೆ ತನ್ನತನವನ್ನು ಗರಿಷ್ಠ ಪ್ರಮಾಣದಲ್ಲಿ ಉಳಿಸಿಕೊಂಡಿರುತ್ತದೆ. ಆದುದರಿಂದ ಛಂದಸ್ಸು ಜನಪದೀಯತೆಯ ಮುಖ್ಯ ಲಕ್ಷಣಗಳಲ್ಲೊಂದಾಗಿರುತ್ತದೆ. ವಿಕಾಸ ಜೀವಂತಿಕೆಯ ಕುರುಹು. ಜನಪದದ್ದು ಸಹಜವಾದ ವಿಕಾಸ. ಇಲ್ಲಿ ಪಲ್ಲವಿಯ ಪುನರುಕ್ತಿಯಿಂದಲೂ ಏಕತಾನ ಸಹಜವಾದರೂ ವಿಕಾಸಶೀಲವೂ ಆದ ಜನಪದರ ಸಮಾಜದ ಕೈಯಲ್ಲಿ ವೈವಿಧ್ಯಸಾಧನೆಯೂ ಆಗುತ್ತದೆ. ಈ ವೈವಿಧ್ಯ ಮತ್ತು ಅದರ ಚರಿತ್ರೆ ಆ ಒಂದು ಸಮಾಜದ ವಿಶಿಷ್ಟವಾದ ಸಾಂಸ್ಕೃತಿಕ ಕೊಡುಗೆಯನ್ನು ನಿರ್ಧರಿಸುತ್ತದೆ.

ದ್ರಾವಿಡ ಛಂದಸ್ಸಿನಲ್ಲಿ ಮುಖ್ಯವಾದ ಪಾತ್ರ ಕನ್ನಡ ಛಂದಸ್ಸಿನದು. ಕನ್ನಡ ಛಂದಸ್ಸಿನ ಚರಿತ್ರೆಯನ್ನು ಆಮೂಲಾಗ್ರವಾಗಿ ಪುನಾರಚಿಸಬೇಕಾಗಿದೆ. ಆದರೆ ಕನ್ನಡ ಛಂದಸ್ಸಿನ ಸಮಗ್ರ ವಿವೇಚನೆಗೆ ಅನುಕೂಲವಾಗುವಂಥ ಪ್ರತ್ಯಕ್ಷಪ್ರಮಾಣಗಳು ಸಾಕಷ್ಟು ನಿದರ್ಶನಗಳು ದೊರೆಯುವಂತಿಲ್ಲ. ಬಹುಶಃ ಕನ್ನಡ ಸಾಹಿತ್ಯದ ಸುವರ್ಣಯುಗ ಆರಂಭವಾಗುವ ಹೊತ್ತಿಗೆ ಸಂಸ್ಕೃತ ಪ್ರಾಕೃತಗಳ ಪ್ರಭಾವ ಅದರ ಮೇಲೆ ಸಾಕಷ್ಟು ಉಂಟಾದುದರಿಂದ ಕನ್ನಡ ಛಂದಸ್ಸು ಶ್ರೀಮಂತರ ಮನೆಯ ದಾಸಿಯಂತೆ ಮೂಲೆಗುಂಪಾಯಿತು. ಆದಾಗ್ಯೂ ಬೇರೊಂದು ರೂಪದಲ್ಲಿ ಗುಪ್ತಗಾಮಿನಿಯಾಗಿ ನಿರಂತರವಾಗಿ ಪ್ರವಹಿಸುತ್ತಲೇ ಇತ್ತು. ಬೆದಂಡೆಯಂಥ ದೇಸೀ ರೂಪಗಳನ್ನು ಹಾಡುವುದೂ ಕೇಳುವುದೂ ಗೌರವಕ್ಕೆ ಯೋಗ್ಯವೆನಿಸಿರಲಿಲ್ಲ. ಹೀಗೆ ಕನ್ನಡ ಸಾಹಿತ್ಯ ಪಂಡಿತರ ಸೊತ್ತಾಯಿತು. ಜನಪದ ಸಾಹಿತ್ಯ ಅದಕ್ಕೆ ತೊತ್ತಾಯಿತು. ಆದುದರಿಂದಲೇ ಅಕ್ಕರ ತ್ರಿಪದಿ ಷಟ್ಪದಿಗಳನ್ನು ಬಿಟ್ಟರೆ ಉಳಿದುವು ಛಂದೋಗ್ರಂಥಗಳಲ್ಲಿ ಮಾತ್ರ ದೊರೆಯುತ್ತವೆ. ಜನಪದ ಛಂದಸ್ಸನ್ನು ಪರಿಶೀಲಿಸಿದರೆ ದೇಸಿಯನ್ನು ಅಲಕ್ಷ್ಯದಿಂದ ನೋಡುತ್ತ ಉಪಚಾರಕ್ಕಾಗಿ ವಿವರಿಸುತ್ತಿದ್ದ ಶಾಸ್ತ್ರಕಾರಮಾರ್ಗಿಗಳು ದೇಸೀರೂಪಗಳ ಪರಿಚಯವನ್ನು ಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇಲ್ಲದಿದ್ದರೆ ಜಯಕೀರ್ತಿಯಂಥವನಿಗಾದರೂ ಗೀತಿಕೆಯ ಲಕ್ಷಣವನ್ನು ಕಂಡುಕೊಳ್ಳುವುದು ಕಷ್ಟವಾಗುತ್ತಿರಲಿಲ್ಲ. ಶಾಸ್ತ್ರದ ಲಕ್ಷಣಗಳು ಜನಪದ ಛಂದಸ್ಸಿನ ವಿಷಯದಲ್ಲಿ ಹೆಚ್ಚು ಬೆಳಕು ಬೀರುವುದಿಲ್ಲ. ಬ್ರಹ್ಮ ವಿಷ್ಣು ರುದ್ರಗಳ ಕಲ್ಪನೆಯಾದರೂ ಬಹುಮಟ್ಟಿಗೆ ಸಾಂಪ್ರದಾಯಿಕ. ಜನಪದ ಛಂದಸ್ಸಿನ ಚರಿತ್ರೆಯ ಪುನಾರಚನೆ ಎಂದರೆ ಬೇರೊಂದು ರೂಪದಲ್ಲಿ ಹರಿಯುತ್ತಿರುವ ಗುಪ್ತಗಾಮಿನಿಯನ್ನು ಗೊತ್ತುಹಚ್ಚುವುದೇ ಆಗಿದೆ. ಅದಕ್ಕೆ ಇಂದಿನ ಜನಪದ ಛಂದಸ್ಸಿನ ಅರಿವೇ ತಳಹದಿಯಾಗಿರುತ್ತದೆ. ಈ ಅರಿವೇ ಅನ್ಯಪ್ರಭಾವಗಳಿಂದ ರೂಪುಗೊಳ್ಳುತ್ತಿರುವ ಆಧುನಿಕ ಸಾಹಿತ್ಯಗೀತರೂಪವನ್ನು ಸ್ವದೇಶೀ ಪೋಷಣೆಯಿಂದ ತೇಜಸ್ವಿಗೊಳಿಸತಕ್ಕದ್ದಾಗಿದೆ.

ಜನಪದ ಛಂದಸ್ಸನ್ನು ಅಂಶಲಯವೆಂದು ವ್ಯವಹರಿಸುತ್ತಿದ್ದೇವೆ. ಈ ಅಂಶಲಯ ಸಂಸ್ಕೃತದ ವರ್ಣಸಂಗೀತಕ್ಕೂ ಪ್ರಾಕೃತದ ತಾಳಸಂಗೀತಕ್ಕೂ ಹೊಂದದೆ ವೈದಿಕ ಛಂದಸ್ಸಿನ ಸ್ವರಸಂಗೀತಕ್ಕೆ ಹೊಂದುತ್ತದೆ ಎಂದು ಎಚ್. ಡಿ. ವೇಲಣಕರರು ಹೇಳುತ್ತಾರೆ. ಇದನ್ನು ಡಿ.ಎಸ್. ಕರ್ಕಿ ಅವರು ಒಪ್ಪುತ್ತಾರೆ. ಆದರೆ ವೇಲಣಕರರು ವೈದಿಕ ಛಂದಸ್ಸಿನಲ್ಲಿ ಕಾಲತತ್ತ್ವ ಮುಖ್ಯಪಾತ್ರವೇನೂ ವಹಿಸಿಲ್ಲ (ಜಯದಾಮನ್) ಎಂದಿದ್ದಾರೆ. ಆದರೆ, ದ್ರಾವಿಡಛಂದಸ್ಸಿನಲ್ಲಿ, ಕನ್ನಡ ಜನಪದ ಛಂದಸ್ಸಿನಲ್ಲಿ ಕಾಲತತ್ತ್ವ ಅನಿವಾರ್ಯ ಪಾತ್ರದ್ದಾಗಿದೆ.

ಲಯದಲ್ಲಿ ಎರಡು ವಿಧ. ಮಾತ್ರಾಗಣಗದ್ದು ಸ್ವಯಂ ವ್ಯಕ್ತ ಲಯ, ಓದಿದಾಗ ತಾನಾಗಿ ಒಂದು ಮಾತ್ರಾಲಯವನ್ನು ವ್ಯಕ್ತಪಡಿಸುತ್ತದೆ. ಅಂಶಗಣಗಳ ವಿಷಯದಲ್ಲಾದರೆ ನಮ್ಮ ಶ್ರಮ ಅಗತ್ಯ. ನಮ್ಮ ಇಷ್ಟದ ಒಂದು ಮಾತ್ರಾಲಯವನ್ನು ಆರೋಪಿಸುತ್ತೇವೆ; ಆದುದರಿಂದ ಆರೋಪಿತಲಯ ಅನ್ವಯಿಸುತ್ತೇವೆ – ಅನ್ವಿತಲಯ, ಸಾಧಿಸುತ್ತೇವೆ– ಸಾಧಿತಲಯ. ಮಾತ್ರಾಗಣ ತನ್ನಲ್ಲೇ ಒಂದು ಕ್ರಮವನ್ನುಳ್ಳದ್ದು; ಇರುವ ಕ್ರಮವನ್ನು ಅನುಸರಿಸುತ್ತೇವೆ. ಇಲ್ಲಿ ಕ್ರಮವಿಲ್ಲದ್ದು; ಅದನ್ನು ಕ್ರಮಗೊಳಿಸುತ್ತೇವೆ. ನಮ್ಮ ಇಷ್ಟದ ಮಾತ್ರಾಲಯದ ಕ್ರಮವನ್ನು ಬಂಧ ಅನುಸರಿಸುತ್ತದೆ. ಆದುದರಿಂದ ವಾಸ್ತವವಾಗಿ ಅಂಶಲಯ ಎಂಬುದಿಲ್ಲ; ಕಾಲತತ್ತ್ವಕ್ಕೆ ಒಳಪಡಿಸಿ ಹಾಡಿದಾಗ ಎಲ್ಲವೂ ಮಾತ್ರಾಲಯದ್ದೇ.

ಒಂದು ಆಘಾತದಿಂದ ಇನ್ನೊಂದು ಆಘಾತದವರೆಗಿನ ಕಾಲಾವಕಾಶಕ್ಕೆ ಗಣ ಎಂದು ಹೆಸರು, ಸ್ಥೂಲವಾಗಿ. ತಮಿಳಿನಲ್ಲಿ ಗಣ ಒಂದೇ ಅಕ್ಷರವುಳ್ಳದ್ದೂ ಆಗಿರಬಹುದು. ಆದರೆ ಕನ್ನಡದಲ್ಲಿ (ತಮಿಳಿನಲ್ಲೂ) ಆ ಒಂದಕ್ಷರವೂ ಇರಬೇಕಿಲ್ಲ. ಆಘಾತದಿಂದ ಆಘಾತದವರೆಗೆ ಮೌನವೋ ಹಿಂದಿನ ಗಣದ ಅಂತ್ಯಾಕ್ಷರದ ಸ್ವರದ ಮುಂದುವರಿದ ಆಲಾಪನೆಯೋ ವ್ಯಾಪಿಸಬಹುದು. ಆದುದರಿಂದ ಗಣ ಮೂಲ ಘಟಕವಾಗದು. ಕೊನೆಯ ಪಕ್ಷ ಎರಡು ಗಣಗಳಾದರೂ ಎಡೆಬಿಡದೆ ಬಂದಾಗ ಲಯಕ್ಕೆ ಗತಿ ಒದಗುತ್ತದೆ. ತಮಿಳಿನಲ್ಲಿ ಗಣವನ್ನು ಬಿಟ್ಟರೆ ತೋಲ್ ಕಾಪ್ಪಿಯರ್ ಪ್ರಕಾರ ಪಾದವೂ ತಿರುಗಾಕೈ ಪಾಡಿಯಾರ್ ಪ್ರಕಾರ ತಾಳವೂ ಛಂದಸ್ಸಿನ ಮೂಲ ಘಟಕವಾಗಿದೆ. ತಾಳಕ್ಕೆ ಆವೃತ್ತಿಯನ್ನು ನೀಡತಕ್ಕದ್ದು ಪಾದವಾದುದರಿಂದ ಕನ್ನಡ ಜನಪದ ಛಂದಸ್ಸಿಗೆ ಪಾದವನ್ನೇ ಮೂಲ ಘಟಕವನ್ನಾಗಿಟ್ಟುಕೊಳ್ಳಬಹುದು.

ಉಚ್ಚಾರಣೆಯ ಸಾಧ್ಯತೆಯ ಪರಿಮಿತಿಯೊಂದನ್ನು ಬಿಟ್ಟರೆ ಅಂಶಗಣದಲ್ಲಿ ಇಂತಿಷ್ಟೇ ಅಕ್ಷರಗಳು ಹೀಗೇ ಬರಬೇಕೆಂಬ ನಿಯಮವೇನೂ ಇಲ್ಲ. ಸಾಮಾನ್ಯವಾಗಿ ಮೊದಲ ಅಂಶ ಒಂದು ಗುರು ಅಥವಾ ಎರಡು ಲಘುಗಳು. ಅನಂತರದ ಅಂಶಗಳಲ್ಲಿ ಎರಡು ಲಘುಗಳು ತ್ವರಿತಗೊಳ್ಳುವುದೂ ಉಂಟು; ಒಂದು ಗುರುವಿನ ಸ್ಥಾನದಲ್ಲಿ ಎರಡು ಲಘುಗಳು ಬಂದಂತೆ, ಷಟ್ಪದಿಯ ಮೂರು ಆರನೆಯ ಪಾದಾಂತ್ಯದ ರುದ್ರ ವಿಚ್ಛೇದ್ಯರುದ್ರಏಎಂದರೆ ವಿಷ್ಣು+ಗುರು. ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬರಬಹುದಾದ್ದರಿಂದ ಇದು ಬ್ರಹ್ಮ+ಗುರು ಕೂಡ ಆಗಬಹುದು. ಆದುದರಿಂದ ವಿಷ್ಣು ರುದ್ರಗಳಲ್ಲಿ ಎರಡು ಬಗೆಗಳಿವೆ. ಒಂದು ಗಣಾವಕಾಶದೊಳಗೆ ಉಚ್ಚರಿಸಲ್ಪಡುವ ವಿಷ್ಣು ಮತ್ತು ರುದ್ರ; ಮತ್ತು ಇವು ವಿಚ್ಛೇದಗೊಂಡು ಕ್ರಮವಾಗಿ ಬ್ರ+ಗ ಮತ್ತು ವಿ+ಗ ಆಗತಕ್ಕವು. ಇಲ್ಲಿನ ಬ್ರಹ್ಮ ವಿಷ್ಣುಗಳ ಸ್ಥಾನದಲ್ಲಿ ಒಂದೇ ಅಕ್ಷರವೂ ಬರಬಹುದು. ಆಗ ಗ+ಗ ಆಗುತ್ತದೆ. ಒಂದು ಗಣದಲ್ಲಿ ಅಕ್ಷರವೇ ಇಲ್ಲದಿರಬಹುದಾಗಿರುವುದರ ಜೊತೆಗೆ, ಗಣದ ಆರಂಭದಲ್ಲಿ ಒಂದು ಅಕ್ಷರ ಬರುವುದರ ಜೊತೆಗೆ, ಗಣದ ಆರಂಭ ಮತ್ತು ಅಂತ್ಯಗಳಲ್ಲಿ ಮಾತ್ರ ಅಕ್ಷರ ಬಂದು ಮಧ್ಯೆ ಎಡೆ, ಎಳೆತ ಮೌನ ಇರಬಹುದು. ಅಥವಾ ಗಣಾಂತದಲ್ಲಿ ಮಾತ್ರ ಅಕ್ಷರ ಅಥವಾ ಅಕ್ಷರಗಳು ಬರಬಹುದು. ರುದ್ರ ವಿ+ಗ ಆಗುವುದೆಂದು ಹೇಳಿದೆವು. ಇಲ್ಲಿಯ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬರಬಹುದಾದುದರ ಜೊತೆಗೆ ರುದ್ರವೇ ಬರಬಹುದು. ಆಗ ಗಣಾವಕಾಶದ ರು+ಗ ಆಗುತ್ತದೆ. ಈ ರುದ್ರ ಅತಿರುದ್ರವೂ ಆಗಬಹುದು. ಒಂದು ಲಕ್ಷಣಕ್ಕೆ ಉದಾಹರಿಸಿರುವ ಲಕ್ಷ್ಯಗಳಲ್ಲಿ ಇತರ ಪರಿಶೀಲನಾಂಶಗಳೂ ಇರುವುದನ್ನು ಗಮನಿಸಬಹುದು. ಒಟ್ಟಿನಲ್ಲಿ ಗಣಸ್ವರೂಪ ಎಷ್ಟೇ ಸ್ವಚ್ಛಂದವಿರಲಿ ಆಘಾತ (ತಾಳ) ನಿಯಮವನ್ನು ಪಾದ (ಆವರ್ತ) ನಿಯಮವನ್ನು ಜನಪದ ಛಂದಸ್ಸು ಮೀರುವುದಿಲ್ಲ.

ಮುಂದಿನ ಬರೆವಣಿಗೆಯಲ್ಲಿ ಈ ಕೆಲವು ಸಂಕೇತಗಳನ್ನು ಬಳಸಲಾಗಿದೆ. ಅವುಗಳ ಅರ್ಥ ಹೀಗಿದೆ. । = ಗಣ ; ॥ =ಪಾದ; *=ಯತಿ; –॥ =ವಿಲಂಬ ಮತ್ತು ಪಾದಾಂತ್ಯ; ಊ=ವಿಲಂಬ; ]=ಇಲ್ಲಿನವರೆಗೆ ಹುಸಿ.

1 ಒಂದು ಗಣದ ಸ್ಥಾನದಲ್ಲಿ ಒಂದೇ ಗುರ್ವಕ್ಷರ ಬರಬಹುದು. ಲಘು ಬಂದಾಗ ಅವನ್ನೆಳೆದು ವಿಲಂಬಿಸುತ್ತೇವೆ.

2 ಒಂದು ಅಕ್ಷರ ಎರಡು ಗಣಗಳ ಕಾಲವನ್ನು ತೆಗೆದುಕೊಳ್ಳಬಹುದು. ಈ ವಿಲಂಬದಲ್ಲಿ ಹಿಂದಿನ ಸ್ವರವನ್ನು ಆಲಾಪಿಸಬಹುದು; ಇಲ್ಲವೆ ಮೌನತುಂಬಬಹುದು ; ಉಸಿರ್ದಾಣ ಮಾಡಿಕೊಳ್ಳಬಹುದು.

3 ಒಂದು ಗಣಾವಕಾಶದೊಳಗೆ ರುದ್ರ ಬರಬಹುದು.

4 ಅತಿರುದ್ರಗಳೂ ಬರಬಹುದು.

5 ಅತಿರುದ್ರಕ್ಕೂ ಹೆಚ್ಚಿನ ಅಕ್ಷರಗಳು ಬರಬಹುದು. ಇದನ್ನು ಮಹಾಗಣ ಎನ್ನಬಹುದು.

6 ಗಣದ ಮೊದಲಂಶ ಹ್ರಸ್ವವಾಗಿದ್ದು ಹಾಡುವಾಗ ದೀರ್ಘವಾಗಬಹುದು.

7 ಗಣದ ಮೊದಲಂಶ ಹ್ರಸ್ವವಾಗಿದ್ದು ಅದರ ಬೆಲೆ ಹ್ರಸ್ವವಾಗೇ ಇರಬಹುದು.

8 ಹುಸಿ ಅಥವಾ ಸಾಮಾನ್ಯವಾಗಿ ವಿಲಂಬದ ಮುಂದೆ ಬರುವ, ಗಣಾಘಾತದ ಹಿಂದೆ ಬರುವ ಅಕ್ಷರ ಅಥವಾ ಅಕ್ಷರಗಳನ್ನು ಎರಡು ರೀತಿಗಳಲ್ಲಿ ಅಚ್ಚಿಸುವ ರೂಢಿಯಿದೆ. ಮೊದಲ ಪಾದದ ಮೊದಲ ಗಣದ ಹಿಂದಿನ ಹುಸಿಯನ್ನು ಆರಂಭದಲ್ಲಿ ತೋರುವುದು ಒಳ್ಳೆಯದು. ಹುಸಿ ಎರಡು ರೀತಿಗಳಲ್ಲಿ ಬರಬಹುದು.

(ಅ) ಅಕ್ಷರ ಅಥವಾ ಅಕ್ಷರಗಳು + ವಿಚ್ಛೇದಯತಿ + ಹುಸಿ ಅಕ್ಷರ ಅಥವಾ ಅಕ್ಷರಗಳು.

(ಆ) ಅಕ್ಷರ ಅಥವಾ ಅಕ್ಷರಗಳು + ವಿಲಂಬಯತಿ + ಹುಸಿ ಅಕ್ಷರ ಅಥವಾ ಅಕ್ಷರಗಳು.

9 ಗಣಪರಿವೃತ್ತಿ. ಎರಡು ಅಂಶಗಣಗಳು ಮೂರು ಉಪಗಣಗಳಾಗಿ ಒಡೆದುಕೊಳ್ಳುತ್ತವೆ.

ಜಾನಪದ ಬಂಧಗಳು : ಜನಪದ ಗೀತಗಳಲ್ಲಿ ಅಗ್ರಸ್ಥಾನ ತ್ರಿಪದಿಗಿದ್ದರೂ ಇನ್ನುಳಿದ ಬಗೆಗಳೂ ಅಷ್ಟೇ ಆಕರ್ಷಕವಾಗಿವೆ ; ಹಲವು ಮಾತ್ರಾಛಂದೋಬಂಧಗಳ ಮೂಲದ ಬಗೆಗೆ ಬೆಳಕು ಬೀರತಕ್ಕವಾಗಿವೆ. ಅವನ್ನು ಕ್ರಮವಾಗಿ ಪರಿಶೀಲಿಸಬಹುದು.

I ವಿ ವಿ :

ಕಟಕಟಿ । ಕಲ್ಲೂರು ॥ ಅರಗಿನ । ಆಲೂರು ॥ ಬೆಡಗಿನ । ಬೇಲೂರು ॥ ಹಿಂದೆ ತಾ । ವರೆಗೇರೆ

II ವಿ ವಿ ಗ :

ಅವ್ರು]ಬೆನ್ನಿಗೆಬಿಗಿದಾ|ರೆ ಊ । ಊ ಅವ್] ರೇಳುಜನ । ಅಣ್ಣದೀ । ರು ಊ । ಊ॥ ಎದ್ದಾರು । ಎದ್ದಂ । ಗೆ ಊ । ಊ ಅವ್ರು ॥ ಏಳು ಚೋಜಿ । ಏರ್‍ಯಾ । ರೆ ಊ । ಊ

III ವಿ ವಿ ವಿ ಗ :

ಇಂದಿನ । ದಿನದಲ್ಲಿ । ಓಲಗ । ವಾ ಊ ॥

ಅಥವಾ

ಎಲ್ಲೋರುಂ । ಪೋರಪಕ್ಕಂ । ಕಲ್ಲುಕರ । ಡುಂ

IV ವಿ ವಿ ವಿ ಬ್ರ :

ಕೋಲೇಕೋ । ಲೇಕೋಲು । ಕೋಲಣ್ಣ । ಕೋಲೆ

V ವಿ ವಿ ವಿ ವಿ (ಎರಡನೆಯ ನಾಲ್ಕನೆಯ ಗಣಗಳು ಬ್ರಹ್ಮವಾಗುವ ಪ್ರವೃತ್ತಿ ಇದೆ)

ಹೇಳಿದ । ನಾಗಣ್ಣ । ಕೇಳಿದ । ನಿಂಗಣ್ಣ

VI ವಿ ವಿ ವಿ ವಿ

ವಿ ಬ್ರ ವಿ ಬ್ರ

ಜಾಣೆಯ । ಮನೆಸುತ್ತ । ಜಾಲದ । ವನಗಳು ॥ ಜಾಣೆಯ ಅರ । ಮನೆಗೆ । ಜಾಣಾತಾ । ಬಂದ ॥

VII ವಿ ವಿ ವಿ ವಿ

ವಿ ವಿ ವಿಗ

ಅರಮನೆಗೆ । ಬಂದಾನ । ಬಾಬಾಸಾ । ಹೇಬ ॥ ರಾಣಿನ್ನ । ನುಡಿಸ್ಯಾನ । ಕೌತುಕ। ದಿ ಊ ॥

ಚಿಂತೆಯ । ಕಂತ್ಯಾಕ । ಜೀವದ । ಚಿಂತ್ಯಾಕ ॥ ಈಶಸಂ । ಕೇತಕ್ಕೆ । ತಲೆಬಾಗಿ। ರಿ ಊ ॥

ಇದೇ ಷಟ್ಪದಿಗೆ ಕಾರಣವಾಗಿರುವುದು. ಆವರ್ತ ದೃಷ್ಟಿಯಿಂದ ಷಟ್ಪದಿ ಚೌಪದಿಯೇ. ಈ ರಚನೆಯ ದ್ವಿಪದಿಯಲ್ಲಿ ಮಾಡಿಕೊಂಡಿರುವ ವೈವಿಧ್ಯ :

ಸುವ್ವಿ ಸು । ವ್ವಮ್ಮಲಾಲೆ । ಸುವ್ವಲಾ । ಲೆ* ನಮ್ಮ ॥ ಜಾಣೆ ಜಾ ॥ ಗರುದ್ವಣ್ಣೆ । ಸುವ್ವಿಲಾ । ಲೆ

VIII ವಿ ವಿ ವಿ ವಿ

ವಿ ವಿ ಗ

ಬಾರದಪ । ನಾಡಕೆಲ್ಲ । ಬಂದು ಒದಗೊ । ಘನನೀಲಿ ॥ ಸಿದ್ದಯ್ಯ । ನೀವೆಬ। ನ್ನಿ ಊ । ಊ ॥ ; ನಾಲ್ಕು ಪಾದಗಳೂ ಆಗಬಹುದು. ಈ ರಚನೆಯಲ್ಲಿ ಸಾಧಿಸಿರುವ ವೈವಿಧ್ಯ :

ಕೊಡಗುಮಲೆ । ಯಾಳರಾಜ್ಯ । ಕೆಲೂಗಡಿ । ಯಾವುದೆಂದ್ರೆ ॥ ಬೆಡಗಿನಂಥ । ಪೆರಿಯ ಪಟ್ಟ । ಣ ಊ । ಊ ॥

IX ವಿ ವಿ ವಿ ವಿ

ವಿ ಬ್ರ ವಿ

ಏಳೆ ದ್ವಿಪದಿ : ಏಳನೇ ಗಣ ವಿಚ್ಛೇದ್ಯವಿಷ್ಣು ಅಥವಾ ವಿಚ್ಛೇದ್ಯರುದ್ರ ಆಗಬಹುದು.

ಮೂಡಲ । ಸೀಮಿಂದ । ನಾಡ ದೊಂ । ಬರು ಬಂದು ॥ ಊರಾಗಳ । ಮತಕೆ। ನಿಲುತಾರೆ ; ನಿಲುತಾ । ರೆ;

X ವಿ ವಿ ವಿ ವಿ

ವಿಬ್ರವಿ

ವಿ ವಿ ವಿ ವಿ

ವಿ ಬ್ರ ವಿ

ಏಳೆ ಚತುಷ್ಪದಿ : ದಬ್ಬಣಸಾಲೆ । ಬತ್ತ । ಒಬ್ಬ ಕು। ಟ್ಟs ಲಾರೆ ॥

ಯೆಬ್ಬಿಸೊ । ನಿನ್ನ । ಮಡದೀಯ ॥ ಮಡದಿಯೆ । ಬ್ಬಿಸಿದರೆ । ಅರೆನಿದ್ದೆ । ಯಾದಾವೆ॥

ಒಬ್ಬೊಬ್ಬೆ । ಮಾಡಿ। ತೆಗಿ ತಂಗಿ ಮಹದೀಯೆ; ತೆಗಿ ತಂ। ಗಿ;

XI ವಿ ವಿ ವಿ ವಿ

ವಿ ಬ್ರ ವಿ ವಿ

ವಿ ಬ್ರ ವಿ

ತ್ರಿಪದಿ ಅಥವಾ ಏಳೆ ತ್ರಿಪದಿ. ಏಳು ಮತ್ತು ಹನ್ನೊಂದನೆಯ ಗಣ ವಿಚ್ಛೇದ್ಯ ವಿಷ್ಣು ಅಥವಾ ವಿಚ್ಛೇದ್ಯ ರುದ್ರವಾಗಬಹುದು. ಉಳಿದ ಸ್ಥಾನಗಳಲ್ಲಿ ಬ್ರಹ್ಮರುದ್ರ (ಸಂಕೋಚ) ಬರುವುದು.

(1) ತ್ರಿಪದಿಯ ಬ್ರಹ್ಮದ ಸ್ಥಾನದಲ್ಲಿ - U ರೂಪ ಬರಬಹುದು. ಇಂಥ ಕಡೆಗಳಲ್ಲಿ ಮೊದಲ ಹ್ರಸ್ವವನ್ನು ಎಳೆದು ವಿಲಂಬಿಸಬೇಕು.

(2) ತ್ರಿಪದಿಯ ಬ್ರಹ್ಮದ ಸ್ಥಾನದಲ್ಲಿ ವಿಷ್ಣುವೂ ಕ್ವಚಿತ್ತಾಗಿ ರುದ್ರ ಅತಿರುದ್ರಗಳೂ ಬರಬಹುದು.

(3) ಈ ಬ್ರಹ್ಮದ ಸ್ಥಾನದಲ್ಲಿ ಒಂದೇ ಅಕ್ಷರವೂ ಬರಬಹುದು.

(4) ತ್ರಿಪದಿಯ ಎರಡನೆಯ ಪಾದದ ಮೂರನೆಯ ಗಣ ವಿಷ್ಣುವಿನ ಸ್ಥಾನದಲ್ಲಿ:

(ಅ) ಮಾರ್ಗಿಗಳಿಂದ ಹೇಳಲ್ಪಟ್ಟ ರೂಪ: ಮನೆಗೆ ಬಂ । ದಳಿಯ ।ಮಗನಲ್ಲ ತೌರೀಗೆ।

(ಆ) ಮೊದಲು ಹಾಡುವಾಗ ಇದು ವಿಚ್ಛೇದ್ಯವಿಷ್ಣುವಾಗಬಹುದು : ಮನೆಗೆ ಬಂ। ದಳಿಯ । ಮಗನ । ಲ್ಲ

(ಇ) ಈ ಸ್ಥಾನದಲ್ಲಿ ವಿಚ್ಛೇದ್ಯ ರುದ್ರ ಬರಬಹುದು. ಪುನರಾವೃತ್ತಿಯಲ್ಲಿ ಅದು ಸಂಕುಚಿತ ರುದ್ರವಾಗುತ್ತದೆ:

ನೀರಿದ್ರೆ । ಬಾಳೆ । ಗೊನೆಗೆ ಭೋ । ಗ ; ಪುನರಾವೃತ್ತಿಯಲ್ಲಿ : ನೀರಿದ್ರೆ ।

ಬಾಳೆ । ಗೊನೆಗೆ ಭೋಗ । ತಾಯವ್ವ ;

(5) ತ್ರಿಪದಿಯ ಮೂರನೆಯ ಪಾದದ ಮೂರನೆಯ ಗಣವೂ ವಿಚ್ಛೇದ್ಯ ವಿಷ್ಣು (ಬ್ರ+ಗ): ವಿಚ್ಛೇದ್ಯ ರುದ್ರ (ವಿ+ಗ) ಆಗಿರಬಹುದು:

ರಂಗನೇ । ರ್‍ಯಾನೆ । ಹೊಸತೇ । ಜಿ

(6) ತ್ರಿಪದಿಯ ಎರಡನೆಯ ಪಾದವನ್ನು ಮೂರನೆಯ ಗಣದವರೆಗೆ ಹಾಡಿ ಅನಂತರ ನಾಲ್ಕನೆಯ ಗಣದೊಡನೆ ಅದನ್ನೇ ಮತ್ತೆ ಹಾಡುತ್ತೇವೆ ಎಂದುಕೊಂಡಿದ್ದೇವೆ. ಆದರೆ ಇಲ್ಲಿ ಹಲವು ಪ್ರಕ್ರಿಯೆಗಳಿವೆ :

(ಅ) ಸಾಮಾನ್ಯ ರೂಪ : ಸೂಳೆಯ । ಹೆಣ್ಣು । ನಾನಲ್ಲ । ಊ ॥

ಸೂಳೆಯ । ಹೆಣ್ಣು । ನಾನಲ್ಲ । ದೇವರೆ ॥

(ಆ) ಮೂರನೆಯ ಗಣಾನಂತರದ ಅಕ್ಷರ ಎರಡನೆಯ ಬಾರಿ ಹಾಡುವಾಗ ಮೂರನೆಯ ಗಣದೊಳಗೆ ಸೇರಬಹುದು. ಎಂದರೆ ವಿಚ್ಛೇದ್ಯವಿಷ್ಣು >ಸಾಮಾನ್ಯ ವಿಷ್ಣು; ವಿಚ್ಛೇದ್ಯರುದ್ರ>ಸಂಕುಚಿತರುದ್ರ :

ಬಸುರಿಲ್ಲ । ವಂತೆ । ಅಳುತಾ । ಳೆಊ ॥ ಬಸುರಿಲ್ಲ । ವಂತೆ । ಅಳುತಾಳೆ ।

ನಮ ಕೊಮರ ;

(ಇ) ಮೂರನೆಯ ಗಣಾನಂತರದ ಅಕ್ಷರ ಎರಡನೆಯ ಬಾರಿ ಹಾಡುವಾಗ ಲುಪ್ತವಾಗಬಹುದು :

ಕನ್ಯೆ ಎಡ । ಗಡೆಗೆ । ಕರೆತನ್ನಿ । ರಿ ಊ ॥ ಕನ್ಯೆ ಎಡ । ಗಡೆಗೆ ।

ಕರೆತನ್ನಿ । ನಮ್ಮನೆಯ

(ಈ) ಮೂರನೆಯ ಗಣದ ಆದ್ಯಂತ ಹಿಂಜರಿದು ಎರಡನೆಯ ಗಣವಾದ ಬ್ರಹ್ಮವನ್ನು ವಿಷ್ಣುವನ್ನಾಗಿ ಮಾಡಬಹುದು :

ನಾರಿಗೌ । ರಮ್ಮ । ತೌರಿಂದ । ಊ ॥ ನಾರಿಗೌ । ರಮ್ಮ ತೌ । ರೂರಿಂದ ।

ಬರುವಾಗ

(ಉ) ಮೂರನೆಯ ಗಣಕ್ಕೆ ಇನ್ನಷ್ಟು ಅಕ್ಷರಗಳು ಸೇರಿಕೊಳ್ಳಬಹುದು :

ಕರುವಲ್ಲೆ । ಚಂದ । ಗೌಡರು । ಊ ॥ ಕರುವಲ್ಲೆ । ಚಂದ । ಗೌಡರು ಶಿವ ।

ರುದ್ರಪ್ಪನ

(ಊ) ಮೂರನೆಯ ಗಣದ ಅಂತ್ಯಾಕ್ಷರಗಳು ವ್ಯತ್ಯಸ್ತವಾಗಬಹುದು :

ಒಂಬತ್ತು । ವರ್ಷ । ಸಲಹಿದೆ-॥ ಒಂಬತ್ತು । ವರ್ಷ । ಸಲಹಿಸಾ । ಕಿದ ಮಗಳ

(ಎ) ಎಡೀ ಪಾದದ ಗಣ ವ್ಯವಸ್ಥೆಯೇ ವ್ಯತ್ಯಸ್ತವಾಗಬಹುದು:

ಹಾವಡ್ಡ । ಲಾಗಿ-ಸುಳಿದಾಳೆ-॥ ಹಾವಡ್ಡ । ಲಾಗಿ ಸುಳಿ । ದಾಳೆ ಆ । ಮಾರಿಯ

(7) ಊನಗಣತ್ರಿಪದಿ : ಎರಡನೆಯ ಪಾದದಲ್ಲಿ ನಾಲ್ಕನೆಯ ಗಣವಿರದು.

ಆ ಸ್ಥಾನದಲ್ಲಿ ಒಂದೇ ಮೀಸಲಕ್ಷರ ಬರಬಹುದು : ಕೆಲಮಾ । ಳಿಗೆ ಮನೆ । ಯವ್ವ ತಾಯ । ವ್ವ-॥ ; ಗುತ್ತಿನ ಮಳೆ । ನಾಡ । ಹೊಳೆಕಟ್ಟೆ-॥

(8) ತ್ರಿಪದಿಯಲ್ಲಿ ಸಾಮಾನ್ಯವಾಗಿ ಪಾದಾಂತಯತಿ ಖಚಿತ. ಪಾದಾರ್ಧಯತಿ (ಮೂರನೆಯ ಪಾದದಲ್ಲಿ ಎರಡು ಗಣಗಳ ಅನಂತರ) ಸಾಮಾನ್ಯ. ಎರಡನೆಯ ಪಾದಾಂತ್ಯದಲ್ಲಿ ಯತಿ ಇಲ್ಲದಿದ್ದರೂ ನಡೆಯುತ್ತದೆಂದು ತೋರುತ್ತದೆ:

ನಾಚಿಕೆ। ಬರಿದೆ । ಮನದೊಳು । ನಿನಗೆ ಮ ॥ ತ್ತಾ ಚದು । ರೆಯರು ।

ನುಡಿದಾರು.

ಆದರೆ ಇಂಥ ಪ್ರಯೋಗಗಳು ಅಪೂರ್ವ. ಎರಡನೆಯ ಪಾದದ ಮೂರನೆಯ ಗಣಾನಂತರ ಯತಿ ಇದ್ದರೂ ಪುನರಾವೃತ್ತಿಯಲ್ಲಿ ಅದು ಲೆಕ್ಕಕ್ಕೆ ಬರುವುದಿಲ್ಲ. ಬ್ರಹ್ಮದ ವಿಲಂಬ ಯತಿಯನ್ನುಪೇಕ್ಷಿಸುತ್ತದೆ.

(9) ಇತರ ಬಂಧಗಳಲ್ಲಿನಂತೆಯೇ ತ್ರಿಪದಿಯಲ್ಲಿ ಪ್ರಾಸ ಐಚ್ಛಿಕ : ಪಡಿಯ ಪ್ರವೃತ್ತಿ ಇದೆ :

ಬಲ್ಲಾಳ ಹಿತ್ತಿಲಬಳ್ಳಿಯ ಹೆಸರೇನು ॥ ಬೆಳ್ಳಿಯ ದಂಡೆ-ಬಿಡುಗೀರ ॥ ಬಲ್ಲಾಳು ತಿಂಬ-ಬಿಳಿಯೆಲೆ.

XII ವಿ ವಿ ವಿ ವಿ

ವಿ ಬ್ರ ವಿ ವಿ

ವಿ ಬ್ರ ವಿ ವಿ

ವಿ ಬ್ರ ವಿ ಇತ್ಯಾದಿ.

ತ್ರಿಪದಿಯಲ್ಲಿ ಬೆಳೆದು ಏಳೆ ಮೂರು ಪಾದವಾದಂತೆ ಇನ್ನೂ ಬೆಳೆದು ಬಹುಪದಿಯಾಗಬಹುದು. ಆರು ಪಾದಗಳನ್ನಾಗಿ ಹಾಡಬೇಕಾಗುವ ಏಳೆ ಚತುಷ್ಪದಿ:

ರಾಯ ಹರ್ತೀಯ ರುವಾರ್ದ ಬೀದ್ಯಾಗೆ ॥ ಸೂರ್ಯ ಉರಿದಂಗೆ ಉರಿದಾಳೆ* ಆ ಮಾರಿ ॥

ಹಾವಡ್ಡಲಾಗಿ ಸುಳಿದಾಳೆ । ಆ* ಮಾರಿಯ॥ ನಾಲ್ಕೆ ಮೇಲೆ ಬಿಟ್ಟಾಳೆ ಉರಿಬಾಣ;

ಏಳೆ ಪಂಚಪದಿ, ಏಳೆ ಷಟ್ಪದಿ, ಏಳೆ ಸಪ್ತಪದಿ, ಏಳೆ ಅಷ್ಟಪದಿಗಳಿಗೂ ಉದಾಹರಣೆಗಳಿವೆ.

XIII ಬ್ರಹ್ಮದೀರ್ಘಿಕಾ : ಬ್ರಹ್ಮಗಣದ ನಡೆಯನ್ನು ಪ್ರಧಾನವಾಗಿ ಉಳ್ಳ ಪಾದಕ್ಕೆ ನಾಲ್ಕು ಗಣಗಳ ಮಿತಿಯಲ್ಲಿ ಬರುವ ಬಂಧಗಳನ್ನು ಹಿಂದೆ ಉದಾಹರಿಸಲಾಗಿದೆ. ಪಾದಕ್ಕೆ ನಾಲ್ಕಕ್ಕಿಂತ ಹೆಚ್ಚು ಗಣಗಳು ಬ್ರಹ್ಮಪ್ರಧಾನವಾಗಿ ಬರುವ ಬಂಧಗಳನ್ನು ಬ್ರಹ್ಮದೀರ್ಘಿಕಾ ಎನ್ನಲಾಗಿದೆ.

1. 4ಬ್ರ+ಗ

ಅವ್ರು] ಮಡದಿ । ಹೆಸರು । ಹರಿಯಲ । ದೇವ । ಮ್ಮ-॥ ಮಗನ । ಹೆಸರು ।

ಸೀತಾಳ । ರಾಮ । ಯ್ಯ-॥

2. 6ಬ್ರ+ಗ

ನಾಗರು । ಕೊಡತಿ । ನಂತ । ಹೇಳಿ । ಸಾರಿ । ಹೇಳ್ಯಾ । ರೊ-॥;

ಸುತ್ತ । ಮುತ್ತ । ಕೋಲು । ಕೊಡಿ । ಸೂಳೆ । ರಾಯ । ಗೆ (4 ಪಾದ, ಇಲ್ಲಿ 3ನೆಯ ಪಾದದಲ್ಲಿ 8 ಬ್ರ ಇದೆ).

3. 7ಬ್ರ+ಗ (3 ಪಾದ)+ (6ಬ್ರ+ಗ)

ಊರು। ಊರಿಗೆ । ಯಾವ್ವು । ಮೇಲು । ಕೊಲ್ಲಂ । ಪುರವೆ । ಮೇಲ । ಲ್ಲೊ

ಕ್ಯಾತಾ । ರೀಫ್‌ಹೋ । ಇನ್‌ಕೊವಿ । ಲಾಕರ್ । ಕಪ್ಪಡಿ । ಸಂಗಮ । ಬಿಸ್ಮಿ । ಲ್ಲಾ.

4. (8 ಬ್ರ) + (6ಬ್ರ + ಗ) ಅಥವಾ 4ಬ್ರ + 4ಬ್ರ + 6ಬ್ರ + ಗ ಪಾದಕ್ಕೆ ನಾಲ್ಕು ಗಣಗಳ ಷಟ್ಪದಿಗೆ ಇದು ಹೋಲುತ್ತದೆ;

ಬೆಡಗಿ । ನ ಮಾ । ತಿದು । ಸಲ್ಲ । ಭೀಮ । ಸೇನನ । ಗದೆಯು । ನಿನ್ನ ॥ ತೊಡೆಯ । ಮೇಲೆ । ಬಿದ್ದಿ । ತಂತೆ । ಬೇಡ । ಎಂದ । ಖು : ಕಡುಕಡು । ಗತ್ತಿ । ಕೈಯಾಗ್ । ಹಿಡಿದು. . .

XIV ಮಿಶ್ರಬಂಧಗಳು :

ಐದು ತಿಂ । ಗಳ ಬಸು । ರೀಊ।ಊ ॥ ಕೆನ್ನೆಮೇ । ಗಾಲುಹಸು । ರುಊ । ಊ॥

ಭೂಮಿತಾಯಿ । ನೀ ಮಿಂದ । ದಿನ ಹೇ । ಳೆ-ಸುವ್ವಿ ॥ ನಾನು ಮಿಂ । ದಂತ ದಿನವ । ನೀವೇನು । ಕೇಳೀರಿ ॥

ಏಲಕ್ಕಿ । ಮಾವಿನ । ಫಲಬಂ । ದುಊ । ಊ ॥

ನಾಮಿಂದೇ । ನನ್ನ । ತವರ । ಲಿಊಸುವ್ವಿ ಇತ್ಯಾದಿ. ಮದುವೆ ಹಾಡುಗಳಲ್ಲಿ ಕೆಲವು ಖಚಿತವಾದ ಪಂಚಪದಿಗಳು ರೂಢವಾಗಿವೆ. ವಿವಿವಿಬ್ರ ಎಂಬಂತೆ ಮೂರು ಪಾದಗಳು, ನಾಲ್ಕು ವಿಷ್ಣು ಒಂದು ಪಾದ, ಕೊನೆಗೆ ವಿಬ್ರವಿ ಎಂದು ಒಂದು ಪಾದ.

ದ್ರಾವಿಡ ಛಂದಸ್ಸಿನ ವೈಶಿಷ್ಟ್ಯ, ಕನ್ನಡ ಜನಪದ ಛಂದಸ್ಸಿನ ವೈಶಿಷ್ಟ್ಯ, ಕನ್ನಡ ಜನಪದ ಛಂದಸ್ಸಿನ ಕೊಡುಗೆ, ಇದರ ಚರಿತ್ರೆಯ ರಚನೆ -ಇವನ್ನು ಕುರಿತು ಎರಡು ಮಾತುಗಳು ಅಗತ್ಯ.

ತಾಳ (ಗಣಾಘಾತ ) ಮತ್ತು ಆವರ್ತವನ್ನು (ಪಾದ) ಆಧಾರವಾಗಿಟ್ಟುಕೊಂಡು ಅದರೊಳಗೆ ಎಲ್ಲ ವೈವಿಧ್ಯದ ನಡೆಗಳನ್ನು ಸಾಧಿಸುವ ಪದ್ಧತಿ ಏಕಮೇವವಾಗಿ ದ್ರಾವಿಡ ಛಂದಸ್ಸಿನದು. ಅಕ್ಷರವೃತ್ತಗಳ ಮಾತ್ರಾಲಯಕ್ಕಿಂತ, ಮಾತ್ರಾಗಣಗಳ ಮಾತ್ರಾಲಯಕ್ಕಿಂತ ಅಂಶಗಣಗಳ ಮಾತ್ರಾಲಯ ಅತ್ಯಂತ ಕಡಿಮೆ ಪರಿಣತಿಯನ್ನು ಅಪೇಕ್ಷಿಸತಕ್ಕದ್ದಾದುದರಿಂದ ಇದೇ ಅತ್ಯಂತ ಪ್ರಾಚೀನವಿರಬೇಕು. ಜೊತೆಗೆ ಗಣದ ವ್ಯಾಪ್ತಿಯೊಳಗೆ ಅಕ್ಷರಗಳ ಮೊತ್ತ ಹೇಗೂ ಬರಬಹುದಾದುದರಿಂದ ಲಯದ ನಡೆಯಲ್ಲಿ ಸಾಧಿತವಾಗುವ ವೈವಿಧ್ಯವೂ ಇಲ್ಲಿ ಹೆಚ್ಚು ; ಮಲಯಾಳಂ ಜನಪದಗೀತೆಯೊಂದರಲ್ಲಿ,

ಚೆತ್ತಿ । ಮಂದಾ । ರಂತು । ಳಸಿ । ಪಿಚ್ಚ । ಕಮಾ । ಲೆಯುಂ । ಚೂಡಿ. . . .

ಎಂದು ಅಕ್ಷರಗಳ ಲೆಕ್ಕವೇ ಮುಖ್ಯವಾದ, ಅಕ್ಷರ ಮೌಲ್ಯ ಅಗಣ್ಯವಾದ, ಎಲ್ಲ ಅಕ್ಷರಗಳನ್ನೂ ಎಳೆದು ಹೇಳುವಂಥ ರೀತಿ ಇದೆ. ಬೆಡಗಿ । ನ ಮಾ । ತಿದು । ಸಲ್ಲ. .. ಎಂದು ಮೊದಲಾಗುವ ಕನ್ನಡ ಉದಾಹರಣೆ ಇದನ್ನೇ ಹೋಲುತ್ತದೆ. ಪ್ರಾಯಃ ಮನುಷ್ಯ ಮೊದಲು ಅಕ್ಷರಗಳ ಹ್ರಸ್ವತೆ ದೀರ್ಘತೆಗಳನ್ನು ಗಮನಿಸಿ ಹಾಡಿರಲು ಸಾಧ್ಯವಿಲ್ಲ. ಕಾಲದ ಒಂದು ಖಚಿತವಾದ ಅಂತರದ ತಾಳವನ್ನು (ಗಣಾಘಾತ) ಮುಖ್ಯ ವಾಗಿಟ್ಟುಕೊಂಡು, ಆ ತಾಳಕ್ಕೆ ತಪ್ಪದೆ, ಒಲಿದು ಬಂದಂತೆ ಹಾಡಿರುವುದೇ ಸಹಜ.

ತಮಿಳು ಸಂಸ್ಕೃತದ ಪ್ರಭಾವದಿಂದ ದೂರವಿರಲು ಪ್ರಯತ್ನಿಸುತ್ತ ಅದಕ್ಕಾಗಿ ತನ್ನ ಸಂಪ್ರದಾಯವನ್ನು ಉಳಿಸಿಕೊಂಡುಬರಲು ಹೆಣಗಿತು. ಈ ಪರಿಸ್ಥಿತಿಯಲ್ಲಿ ತನ್ನಲ್ಲೇ ವೈವಿಧ್ಯವನ್ನು ಸಾಧಿಸುವುದರೆಡೆಗೆ ಹೆಚ್ಚು ಗಮನ ಕೊಡಲಾಗಿದೆ. ಹಳೆಯದನ್ನು ಉಳಿಸಿಕೊಂಡು ಬರುವುದರಲ್ಲೇ ಹೆಚ್ಚಿನ ಶಕ್ತಿ ವ್ಯಯಮಾಡಬೇಕಾಗಿ ಬಂದಿರಬೇಕು. ಆದುದರಿಂದ ತಮಿಳು ಜನಪದ ಛಂದಸ್ಸಿನಲ್ಲಿ ಹಳಮೆಯ ಕೆಲವು ವಿಶಿಷ್ಟತೆಗಳು ಉಳಿದಿವೆ. ಕನ್ನಡದಂತೆ ತೆಲುಗು ಸಂಸ್ಕೃತದಿಂದ ಪ್ರಭಾವಗೊಂಡಿತು. ಮೇಲಾಗಿ ಶಿಷ್ಟರ ಕೈಯಲ್ಲಿ ಜನಪದ ಛಂದಸ್ಸೂ ಶಿಷ್ಟವಾಗಿ, ನಿಯಮಗಳಿಂದ ಅಲಂಕೃತವಾಗಿ ವೈವಿಧ್ಯಸಾಧನೆಯಲ್ಲಿ ಹಿಂದಾಯಿತು. ಜನಪದದ ಕೋಗಿಲೆಗೆ ಶಿಷ್ಟತೆಯ ಚಿನ್ನದ ಮನೆ ದೊರಕಿತು. ಕನ್ನಡದ ರೀತಿ ವಿಶಿಷ್ಟ. ಕನ್ನಡ ಇಲ್ಲಿ ಸಂಸ್ಕೃತ ಪ್ರಾಕೃತಗಳಿಂದ ಪ್ರಭಾವಿತವಾದುದೇನೋ ನಿಜ. ಆದರೆ ಈ ಪ್ರಭಾವ ಜನಪದರ ಮೇಲೆ ಏನೂ ಪರಿಣಾಮ ಬೀರಲಿಲ್ಲ. ವೃತ್ತರತ್ನಾಕರವನ್ನು ಶಿಷ್ಟರು ಬಿಡಲಿಲ್ಲ ; ಜನಪದರು ಹಿಡಿಯಲಿಲ್ಲ. ಎಲ್ಲೋ ಶತಮಾನ, ಮುಕ್ಕಾಲು ಶತಮಾನಗಳಿಗೊಮ್ಮೆ ಶಿಷ್ಟರು ಕೆಳಗಿಳಿದು ಬಂದು ಕರೆದಾಗ ಜನಪದರು ಹೋಗಿ ಸೇರಿ, ತಮ್ಮ ರೂಪ ಅವರಿಗೆ ತೊಡಿಸಿ, ಮತ್ತೆ ತಮ್ಮ ಪಾಡಿಗೆ ಜನಪದರಾಗಿಯೇ ಉಳಿಯುತ್ತಾರೆ. ಸಂಸ್ಕೃತ ಪ್ರಭಾವ ಪಡೆದ ಜನ ಜನಪದವನ್ನು ಅಲಕ್ಷಿಸಿದ್ದು, ದೂರವಿರಿಸಿದ್ದು ಅಥವಾ ತಾವೇ ದೂರ ಉಳಿದದ್ದು ಒಳ್ಳೆಯದೇ ಆಯಿತು. ಜನಪದರ ಸ್ವಕೀಯವಾದ ಬೆಳೆವಣಿಗೆಗೆ ಅವಕಾಶವಾಯಿತು. ಈ ಸುಸಂಸ್ಕೃತರು ಶಿಷ್ಟರೇ ಬಳಸಿಕೊಂಡು ಬಂದ ಕೆಲವು ಜನಪದ ಬಂಧಗಳನ್ನು ಉಪಚಾರಕ್ಕೆಂಬಂತೆ ಅವರ ನಿಯಮಕ್ಕನುಸಾರ ಅನುಸರಿಸಿ ತಾವೂ ಗ್ರಂಥಗಳಲ್ಲಿ ಬಳಸಿದರು. ಜನಪದರ ಪರಿಚಯಕ್ಕೆ ಹೋಗದೆ, ಜನಪದ ಛಂದಸ್ಸಿನ ವೈವಿಧ್ಯ ಕಾಣಲಾರದೆ, ಬಳಸಲಾರದೆ ಹೋದರು. ಓದುವ ಧಾಟಿಯೇ ಮರೆತು ಹೋದಾಗ ಜನಪದ ಬಂಧದ ಹೆಸರಿನಲ್ಲಿ ತೋಚಿದಂತೆ ಬರೆದರು, ಅಥವಾ ಗೀತಿಕೆಯನ್ನು ಹೇಗೋ ಹಾಗೆ ಕೈಬಿಟ್ಟರು. ಹೀಗಾಗಿ ತೆಲುಗಿನಲ್ಲಾದಂತೆ ಜನಪದರ ಛಂದಸ್ಸು ಶಿಷ್ಟಗೊಂಡು ನಿಯಮಗಳ ಸಂಕೋಲೆಗಳಿಗೆ ಒಪ್ಪಿಸಿಕೊಳ್ಳುವ ಬಗೆ ಕನ್ನಡಕ್ಕೆ ಬರಲಿಲ್ಲ. ತನ್ನ ಮೇಲೆ ಯಾವ ದಾಳಿಯೂ ಇಲ್ಲದ್ದರಿಂದ ಆತ್ಮರಕ್ಷಣೆಯತ್ತ ಗಮನ ಕೇಂದ್ರೀಕರಿಸಿ ವೈವಿಧ್ಯ ಸಾಧಿಸಲಾಗದ ಸ್ಥಿತಿಯೂ ಬರಲಿಲ್ಲ. ಯಾರ ಹಂಗು ಅಂಕೆ ಮುಸಲಾವಣೆಗಳಿಲ್ಲದೆ ತನ್ನ ಪಾಡಿಗೆ ಕಾಡಿನ ಮಲ್ಲಿಗೆಯಂತೆ ಅದು ಅರಳಿತು. ಆದುದರಿಂದಲೇ ಸುಸಂಸ್ಕೃತರ ಗಾಳಿ ಇಲ್ಲದೆಡೆಗಳಲ್ಲಿ ಕನ್ನಡ ಜನಪದ ಸಂಸ್ಕೃತಿ, ಛಂದಸ್ಸು ಇಂದಿಗೂ ತನ್ನ ವೈವಿಧ್ಯಗಳಿಂದ ಜೀವ ತುಂಬಿ ನಿಂತಿದೆ. ಯಾವುದೇ ಒಂದು ಛಂದೋಪದ್ಧತಿ ಎರಡು ಅನುಕೂಲಗಳನ್ನು ಎಷ್ಟರಮಟ್ಟಿಗೆ ನಡೆಸಿಕೊಡುತ್ತದೆ ಎಂಬುದನ್ನು ಅವಲಂಬಿಸಿದೆ. ಒಂದು : ಸಹಜವಾದ ಅಭಿವ್ಯಕ್ತಿಯನ್ನು ವಿಕಾರಗೊಳಿಸುವ ಅಗತ್ಯ ಬೀಳದಂತೆ ಗರಿಷ್ಠ ಪ್ರಮಾಣದಲ್ಲಿ ಹೊಂದಿಸಿಕೊಳ್ಳುವ ಗುಣ ಆ ಛಂದಸ್ಸಿಗೆ ಇರಬೇಕು. ಈ ಗುಣ ದ್ರಾವಿಡ ಛಂದಸ್ಸಿಗೆ, ವಿಶೇಷವಾಗಿ ಕನ್ನಡ ಜನಪದ ಛಂದಸ್ಸಿಗಿದೆ. ಎರಡು : ಗಣ ಹಾಗೂ ಆವರ್ತದ ಪರಿಮಿತಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ನಡೆವೈವಿಧ್ಯ ಸಾಧ್ಯವೆ–ಎಂಬುದು. ಈ ಸಾಧ್ಯತೆಯ ಪ್ರಮಾಣವೂ ದ್ರಾವಿಡಛಂದಸ್ಸಿನಲ್ಲಿ, ವಿಶೇಷವಾಗಿ ಕನ್ನಡ ಜನಪದ ಛಂದಸ್ಸಿನಲ್ಲಿ ಹೆಚ್ಚು.

ಕಾಲಂದೀ । ಗೆ–ತೋಳು । ಬಂದೀ । ಗೆ, ಎಂಬಂತೆ ಗಣಾವಕಾಶದೊಳಗೆ ಹಾಗೂ ಪಾದದೊಳಗೆ ನಡೆಭೇದ ಕಲ್ಪಿಸಿರುವುದನ್ನು ಕನ್ನಡ ಜನಪದ ಛಂದಸ್ಸಿನಲ್ಲಿ ಬಹುವಾಗಿ ಕಾಣುತ್ತೇವೆ. ಸಿರಿಗಿರಿ । ಮಂಚಾ[3]ದ ಮುಂದೆ[4] (ಅಂಕೆಗಳು ಆ ಅಕ್ಷರಗಳ ಮಾತ್ರಾಕಾಲವನ್ನು ಸೂಚಿಸುತ್ತವೆ.) ಎಂಬಂಥ ಕಾಲ ವಿತರಣೆ ಶಿಷ್ಟರಲ್ಲೂ ಸಂಗೀತದ ಸಾಧನೆ ಮಾಡಿದವರಿಗೆ ಮಾತ್ರ ಸಾಧ್ಯ. ಇಲ್ಲಿ ಸಹಜವಾಗಿ ಅದು ಅಭಿವ್ಯಕ್ತಿ. ಇದು ಕನ್ನಡ ಜನಪದ ಛಂದಸ್ಸಿನ ಕೋಡು. ಇಲ್ಲಿನ ಮಹಾಗಣಗಳು ತಮಿಳಿನ ಮೂರಶೈಗಳ ಸರಣಿಯಲ್ಲಿ ಕಾಣಬಹುದಾದರೂ ಇವು ತಮಿಳಿನಲ್ಲಿ ಇಲ್ಲಿನಂತೆ ಒಂದು ಗಣಾವಕಾಶದೊಳಗೆ ಬಂದಿವೆಯೋ ಎಂಬುದು ಪರಿಶೀಲನಾರ್ಹ. ಪ್ರಾಯಃ ತೋಲ್‌ಕಾಪ್ಪಿಯರ್ ಸೂತ್ರಗಳ, ಅತ್ತ ಗದ್ಯವೂ ಅಲ್ಲ ಇತ್ತ ಪದ್ಯವೂ ಅಲ್ಲ ಎನ್ನಲಾದ ವಿಶಿಷ್ಟ ರೂಪದ ನೂಱ್‌ಚೆಯ್ಯುಳ್‌ನ ಸಮಸ್ಯೆಯನ್ನು ಬಿಡಿಸುವಲ್ಲಿ ಕನ್ನಡ ಜನಪದ ಛಂದಸ್ಸಿನ ವೈವಿಧ್ಯಗಳು ಬೆಳಕು ಬೀರಬಲ್ಲವು. ಕೊಡವ, ತುಳು ಮೊದಲಾದ ಆಡುಭಾಷೆಗಳ ಜನಪದ ಛಂದಸ್ಸಿನ ಅಧ್ಯಯನದಿಂದಲೂ ಮಿಗಿಲಾದ ಪ್ರಯೋಜನವಿದೆ.

ಕಾಲಕಾಲಕ್ಕೆ ಕನ್ನಡ ಸಾಹಿತ್ಯದ ರೂಪಗಳು ಬದಲಾಗಲು ಕನ್ನಡ ಜನಪದ ಛಂದಸ್ಸು ಹೇಗೆ ಸಹಾಯವಾಗಿದೆ ಎಂಬುದು ಈ ಲೇಖನದ ವ್ಯಾಪ್ತಿಗೆ ಮೀರಿದ್ದು. ಕರ್ಣಾಟಕ ಸಂಗೀತದ ತಾಳಾಂಗದ ಮೇಲೆ ದ್ರಾವಿಡ ಛಂದಸ್ಸು, ಅದರಲ್ಲೂ ಕನ್ನಡ ಜನಪದ ಛಂದಸ್ಸು ಬೀರಿದ ಪ್ರಭಾವ ಹೆಚ್ಚಿನದು. ಔತ್ತರೇಯರು ಶ್ರುತಿಯಲ್ಲಿಯೂ ದಾಕ್ಷಿಣಾತ್ಯರು ತಾಳದಲ್ಲಿಯೂ ಹೆಚ್ಚು ಗಮನವಿಟ್ಟರು ಎಂಬ ರಾ. ಅನಂತಕೃಷ್ಣಶರ್ಮರ ಮಾತು ಗಮನೀಯ. ಉತ್ತರಾದಿ ಸಂಗೀತದ ಖಯಾಲ್‌ಗೂ ದ್ರಾವಿಡ ಛಂದಸ್ಸು ಹತ್ತಿರದ್ದು. ಸಂಗೀತದಲ್ಲಿ ವಿಲಂಬ ಮಧ್ಯ ದ್ರುತ ಲಯಗಳ ಗತಿಗಳಿವೆಯಷ್ಟೆ. ಈ ಒಂದೊಂದನ್ನೂ ಒಂದು ಆವರ್ತಕ್ಕೆ ಅನ್ವಯಿಸಿದಾಗ ಆ ಒಂದೊಂದಕ್ಕೆ ತಕ್ಕಂತೆ ಗಣವೂ ಗಣದ ಅಕ್ಷರಗಳೂ ಪ್ರಮಾಣತಃ ಪ್ರವರ್ತಿಸುತ್ತವೆ. ಗಣದ ಕಾಲಾವಕಾಶವನ್ನು ಬದಲಿಸದೆ ಗಣಾಂಶಗಳಿಗೆ ವಿಲಂಬ ಮಧ್ಯ ದ್ರುತ ಈ ಮೂರನ್ನೂ ಬೇಕಾದರೆ ಅನ್ವಯಿಸಿ ನಡೆಯ ವೈಚಿತ್ರ್ಯವನ್ನು ತೋರತಕ್ಕದ್ದು ಕನ್ನಡ ಜನಪದ ಛಂದಸ್ಸು. ಕರ್ಣಾಟಕ ಸಂಗೀತದ ಸ್ಥಾಯಿ (ಠಾಯಿ) ಪದ್ಧತಿಯನ್ನು ಕರ್ಣಾಟಕದ ಗೋಪಾಲನಾಯಕ ಪ್ರ.ಶ. ಸು. 1300ರಲ್ಲಿ ಉತ್ತರ ದೇಶದಲ್ಲಿ ಪ್ರಚಾರ ಮಾಡಿದ. ಈ ಪದ್ಧತಿಯಲ್ಲಿ ಸಂಗೀತಗಾರನಿಗೆ ತನ್ನ ಇಚ್ಛೆಯಂತೆ ತಾಳವನ್ನು ಆಧಾರವಾಗಿಟ್ಟುಕೊಂಡು ತನ್ನ ರಾಗವಿಸ್ತರಣ ಪ್ರಾವೀಣ್ಯವನ್ನು ತೋರಿಸುವುದಕ್ಕೆ ಅಧಿಕಾರವುಂಟು ; ಹಾಗೂ ಅವಕಾಶ ಉಂಟು ಎಂದು ಹುಲಗೂರು ಕೃಷ್ಣಾಚಾರ್ಯರು ಹೇಳಿದ್ದಾರೆ. ಒಂದು ತಾಳವನ್ನು ಆಧಾರವಾಗಿಟ್ಟುಕೊಳ್ಳುವುದು ಜನಪದ ಛಂದಸ್ಸಿನಲ್ಲೂ ಮೊದಲ ಅಗತ್ಯ. ರಾಗ–ವ್ಯಂಜನಾ ವ್ಯಾಪಾರದಿಂದ ರಸಪ್ರತೀತಿ ಉಂಟುಮಾಡುವ ವಾಚ್ಯಾರ್ಥವಿಲ್ಲದ ನಾದ, ನಾದಪರಂಪರೆ, ಇಲ್ಲಿ ಅರ್ಥವುಳ್ಳ ಅಕ್ಷರಗಳ ಸಮೂಹ; ತಾಳಕ್ಕೆ ಸಂಬಂಧಿಸಿದಂತೆ ಪಾಟಾಕ್ಷರಗಳಿಗೆ (ಬೋಲ್) ಸಮಾನ; ಕಾಲಘಟಕದ (ಗಣದ) ಮಿತಿಯಲ್ಲಿ ಅಕ್ಷರಗಳ ವಿವಿಧ ರೀತಿಯ ಕಲ್ಪನೆ ಇಲ್ಲಿಗೆ ಅನ್ವಯಕ. ಹೀಗೆ ಕೀರ್ತನ ಸಂಪ್ರದಾಯಕ್ಕೆ ಕರ್ಣಾಟಕ ಸಂಗೀತವೂ ಕರ್ಣಾಟಕ ಸಂಗೀತಕ್ಕೆ ವಿಶೇಷವಾಗಿ ಕನ್ನಡ ಜನಪದ ಛಂದಸ್ಸೂ ಮೂಲಸ್ರೋತವಾಗಿದೆ. ಆದಿಪ್ರಾಸ ಕನ್ನಡ ಜನಪದ ಛಂದಸ್ಸಿನ ಕೊಡುಗೆ. ಗೀತಗೋವಿಂದದಲ್ಲಿ ಕೆಲವೆಡೆ ಕಾಣತಕ್ಕ ಆದಿಪ್ರಾಸ ಕೇವಲ ಆಕಸ್ಮಿಕವಿರಲಾರದು. ರಗಳೆಗಳಿಗೆ ಪ್ರಾಕೃತಮೂಲವನ್ನು ತೀನಂಶ್ರೀ ಅವರು ಕಂಡುಹಿಡಿದಿದ್ದಾರೆ. ಆದರೆ ಪ್ರಾಕೃತಕ್ಕೆ ಅದು ಎಲ್ಲಿಂದ ಬಂತು ? ಜನಪದ ರಗಳೆಗಳನ್ನು ಬಗೆಬಗೆಯ ರಗಳೆಗಳನ್ನು ನೋಡುವುದಗತ್ಯ. ತಮಿಳಿನಲ್ಲಿ ಒಂದು ಅಥವಾ ಮೂರು ಪಾದಗಳ ಕನಿಷ್ಠ ಮಿತಿಯಿಂದ ಆರಂಭಿಸಿ ತೋಲ್ಕಾಪ್ಪಿಯರ್ ಪ್ರಕಾರ ಸಾವಿರ ಪಾದ ಪರಮಾವಧಿಯಿರುವ, ಆದರೆ ಪ್ರಯೋಗದಲ್ಲಿ 782 ಪಾದಗಳು ಸಿಕ್ಕಿರುವ ಆಸ್ಸರಿಯವಿರುತ್ತು ಇದೆ. ಅಂಶಷಟ್ಪದಿ ವಿವಿಧ ಮಾತ್ರಾಷಟ್ಪದಿಗಳಾಗಬಹುದಾದರೆ ಅಂಶರಗಳೆ, ಜನಪದ ರಗಳೆಗಳು ಮಾತ್ರಾರಗಳೆಗಳೇಕೆ ಆಗಬಾರದು ? ಪ್ರಾಕೃತಕ್ಕೂ ದ್ರಾವಿಡರ ಕಾಣಿಕೆ ಏಕಿರಬಾರದು ? ಇವೆಲ್ಲ ಪರಿಶೀಲನಯೋಗ್ಯ. ರಗಳೆಗಳಿಗೆ ಅಂಶಮೂಲವನ್ನು ಬಿಎಂಶ್ರೀ ಅವರು ಕಲ್ಪಿಸಿರುವುದು ಹೆಚ್ಚು ಆಧಾರವುಳ್ಳದ್ದೆನ್ನಿಸುತ್ತದೆ.

ಮೊದಲಿನಿಂದಲೂ ತನ್ನ ಪಾಡಿಗೆ ವೈವಿಧ್ಯಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಕನ್ನಡ ಜನಪದ ಛಂದಸ್ಸಿನ ಅರಿವನ್ನು ಆಧಾರವಾಗಿಟ್ಟುಕೊಂಡು ಕನ್ನಡ ಜನಪದ ಛಂದಸ್ಸಿನ ಚರಿತ್ರೆಯನ್ನು ಪುನಾರಚಿಸಬೇಕಾಗಿದೆ. ಇಂದಿನಿಂದ ಹಿಂದಕ್ಕೆ ಹೀಗೆ ಹೋಗಬೇಕಾಗಿದೆ. ಹರಿದಾಸ ಕೀರ್ತನ ಸಂಪ್ರದಾಯದ ಛಂದಸ್ಸು ; ಶಿವದಾಸರ ಗೀತಗಳು; ವಚನಗಳ ಮಧ್ಯೆ ಸೇರಿರುವ ವಚನಕಾರರ ವಚನಗಳೆನ್ನಿಸಿಕೊಂಡಿರುವ ಹಾಡುಗಳು; ಅಂಶಗಣ ಘಟಿತವಾಗಿರುವ ಸೋಮೇಶ್ವರ ಹೇಳಿರುವ (ಅಭಿಲಾಷಿತಾರ್ಥ ಚಿಂತಾಮಣಿ) ಮಾತ್ರೈಲಾ ಎಂಬ ಹೆಸರಿನ ಅಂಶಬಂಧಗಳು ; ಅಚಲಾನಂದನ ಕೀರ್ತನೆಗಳು; ಪೂರ್ವದ ಹಳಗನ್ನಡ ಶಾಸನಗಳಲ್ಲಿ ಸಿಗುವ ಅಂಶಬಂಧಗಳು. (ಒಂದು ಉದಾ : ಉದಿತಶ್ರೀ ಕಟ್ವಪ್ಪಿ। ನು(ಳೆ)ರಿಸಿ। ಗಿರಿಶಿಲೆ ॥ ಮೇಲ್ ನೋನ್ತು । ತನ್ ದೇಹ। ಮಿಕ್ಕಿ–॥

ನಿರವದ್ಯ। ನೇರಿ ಸ್ವ । ರ್ಗ೦ । ಶಿವ । ನಿಲೆ ಪಡೆದಾನ್ ॥ ಸಾಧುಗಳ್ । ಪೂಜ್ಯ । ಮಾನನ್–॥ ಇತ್ಯಾದಿ ಸಾಂಗತ್ಯ. ಕಾಲ ಸು. 700) ನಾಲ್ಕು ಮಾತ್ರೆಗಳ ನಡೆಯಿರುವ, ಆ ನಡೆಯಲ್ಲಿ ಸ್ವಾತಂತ್ರ್ಯವಹಿಸಿರುವ ಚಂಪಕಮಾಲೆಯಲ್ಲಿ ಇದು ಸು. 700ರದ್ದು – ಎಡೆಪ್ಪ1 ಗೀನೆಡೆ ಕೆಯ್ದುತಪಂ' . . . . . “ ಎಂಬಲ್ಲಿ ನಾಲ್ಕು ಮಾತ್ರೆಗಳ ಸ್ಥಳದಲ್ಲಿ ಆರು

ಮಾತ್ರೆಗಳನ್ನು ಅಡಕಿಸಿರುವುದು; ಮುಂದೆ ಕೆಲವು ವೈದಿಕ ಛಂದೋಬಂಧಗಳು ಇವುಗಳ ಸೂಕ್ಷ್ಮಪರಿಶೀಲನೆ ನಡೆಯಬೇಕಾಗಿದೆ. ವೈದಿಕ ಛಂದಸ್ಸು ದ್ರಾವಿಡ ಛಂದಸ್ಸಿನ ಒಂದು ಪರಿಣತ ರೂಪವೋ ಪ್ರಭಾವಿತ ರೂಪವೋ ಆಗಿರುವುದು ಸಾಧ್ಯವಿದೆ ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಸಂಶೋಧನೆ ನಡೆಯಬೇಕಾಗಿದೆ. (ಕೆ.ಎಸ್.ಎ.ಐ.)

**ಜನಪದ ಜ್ಯೋತಿಷ್ಯ :** ಹಳ್ಳಿಯ ಜನ ಬಿತ್ತುವಾಗ, ಒಕ್ಕುವಾಗ ಮದುವೆ ಮುಂಜಿ ಮಾಡುವಾಗ, ದೊಡ್ಡ ವ್ಯಾಪಾರ ವಹಿವಾಟು ಮಾಡುವಾಗ ಆಕಸ್ಮಿಕಗಳೊದಗಿ ತೀರ ತೊಂದರೆಗಳುಂಟಾದಾಗ ವ್ಯಾಕುಲರಾಗಿ ಭವಿಷ್ಯ ತಿಳಿಯಲು ಜೋಯಿಸರನ್ನೋ ಪೂಜಾರಿಯನ್ನೋ ನೋಡುತ್ತಾರೆ. ಆತ ಪಂಚಾಂಗ ನೋಡಿ ಅವರ ಗ್ರಹಗತಿಗಳು ಹೇಗಿವೆ ಎಂಬುದನ್ನು ಹೇಳುತ್ತಾನೆ. ಇಂಥ ಜ್ಯೋತಿಷ್ಯವನ್ನು ಸಂಪೂರ್ಣವಾಗಿ ಜನಪದ ಜ್ಯೋತಿಷ್ಯ ಎನ್ನಲಾಗುವುದಿಲ್ಲ. ಶುದ್ಧ ಜನಪದ ಎಂದು ಕರೆಯಬಹುದಾದಂಥವು ಎಂದರೆ ಕವಡೆಶಾಸ್ತ್ರ, ಓಲೆಗರಿ ಶಾಸ್ತ್ರ, ಗಿಣಿಶಾಸ್ತ್ರ, ಕೊರವಂಜಿ, ಕುರುಮಾಮ ಮುಂತಾದವು.

ಕವಡೆಶಾಸ್ತ್ರ : ಈ ಶಾಸ್ತ್ರ ಹೇಳುವವರು ಜ್ಯೋತಿಷ್ಯ ಕೇಳಲು ಬಂದವರ ಕೈಯಲ್ಲಿ ಹತ್ತಿಪ್ಪತ್ತು ಕವಡೆಗಳನ್ನು ಕೊಟ್ಟು ಅವನ್ನು ಬಿಡಲು ಹೇಳುತ್ತಾರೆ. ಬಿಟ್ಟ ಕವಡೆಗಳನ್ನು ಎಣಿಸಿ ಸರಿಯೊ ಬೆಸವೊ ಎಂಬುದನ್ನು ಲೆಕ್ಕಾಚಾರಹಾಕಿ ಅದಕ್ಕನುಗುಣವಾಗಿ ಒಳ್ಳೆಯದು ಕೆಟ್ಟದ್ದರ ಬಗ್ಗೆ ಸೂಚನೆ ಕೊಡುತ್ತಾರೆ.

ಓಲೆಗರಿಶಾಸ್ತ್ರ : ಜ್ಯೋತಿಷಿಯ ಬಳಿ ಓಲೆಗರಿಗಳ ಕಟ್ಟೊಂದು ಇರುತ್ತದೆ. ಒಂದೊಂದು ಗರಿಯಲ್ಲೂ ಬೇರೆ ಬೇರೆ ವಿಷಯಗಳನ್ನು ಕುರಿತು ಬರೆದಿರಲಾಗುತ್ತದೆ. ಜ್ಯೋತಿಷ್ಯ ಕೇಳಲು ಬಂದಾತನ ಮುಂದುಗಡೆ ಈ ಗರಿಗಳ ಕಟ್ಟನ್ನು ಇಟ್ಟು ಆತನ ಕೈಯಲ್ಲಿ ಒಂದು ಕಡ್ಡಿಯನ್ನು ಕೊಟ್ಟು ತನ್ನ ಮನಸ್ಸಿಗೆ ಬಂದ ಕಡೆ ಕಟ್ಟಿನ ಮಧ್ಯೆ ಕಡ್ಡಿಯನ್ನು ತೂರಿಸಲು ಹೇಳಲಾಗುತ್ತದೆ. ಆ ಕಡ್ಡಿ ಎಲ್ಲಿ ತೂರಿರುತ್ತದೋ ಅಲ್ಲಿನ ಗರಿಯನ್ನು ಜೋಯಿಸ ಕೈಗೆತ್ತಿಕೊಂಡು ಅದರಲ್ಲಿ ಬರೆದಿರಬಹುದಾದ ವಿಚಾರವನ್ನು ಓದಿ ಹೇಳಿ ವ್ಯಾಖ್ಯಾನಮಾಡಿ ಶುಭ ಅಶುಭಗಳ ಬಗ್ಗೆ ತಿಳುವಳಿಕೆ ಕೊಡುತ್ತಾನೆ.

ಗಿಣಿಶಾಸ್ತ್ರ : ಸಾಮಾನ್ಯವಾಗಿ ಇದೂ ಹೆಚ್ಚು ಕಡಿಮೆ ಮೇಲಿನ ವಿಧಾನದಂತೆಯೇ. ಇದರಲ್ಲಿ ಗಿಣಿ ಪ್ರಮುಖ ಪಾತ್ರವಹಿಸುತ್ತದೆ. ಬಂದವರ ಹಣೆಬರಹವನ್ನು ನಿರ್ಧರಿಸುವುದು ಈ ಗಿಣಿಯೇ. ಜ್ಯೋತಿಷಿಯ ಬಳಿ ಇಪ್ಪತ್ತು ಮೂವತ್ತು ದಪ್ಪ ಕಾಗದದ ಲಕೋಟೆಗಳಿರುತ್ತವೆ. ಒಂದೊಂದರಲ್ಲೂ ಒಂದೊಂದು ದೇವರ ಭಾವಚಿತ್ರವಿದ್ದು ಕೆಲವು ವಾಕ್ಯಗಳನ್ನು ಬರೆದಿರುತ್ತಾರೆ. ಒಳಗೆ ಏನು ಬರೆದಿದೆ ಎನ್ನುವುದು ಹೊರಗಿನಿಂದ ಕಾಣುವುದಿಲ್ಲ. ಜ್ಯೋತಿಷ್ಯ ಹೇಳುವ ಕಾಲಕ್ಕೆ ಪಂಜರದಿಂದ ಹೊರಬಂದ ಗಿಣಿ ಹರಡಿರುವ ಲಕೋಟೆಗಳಲ್ಲಿ ಒಂದನ್ನು ತನ್ನ ಕೊಕ್ಕಿನಿಂದ ಎಳೆದು ಪ್ರತ್ಯೇಕಿಸಿಡುತ್ತದೆ. ಅದನ್ನೆತ್ತಿಕೊಂಡು ಅದರಲ್ಲಿನ ಬರೆಹದಂತೆ ಜೋಯಿಸ ಗಿರಾಕಿಗೆ ಭವಿಷ್ಯ ಏನು ಎಂಬುದನ್ನು ಹೇಳುತ್ತಾನೆ. ಈ ಶಾಸ್ತ್ರದಲ್ಲಿ ಲಕೋಟೆಗಳ ಬದಲಾಗಿ ಒಮ್ಮೊಮ್ಮೆ ಓಲೆಗರಿಗಳನ್ನು ಕಾಣಬಹುದು. ವಿಧಾನ ಮಾತ್ರ ಮೊದಲಿನಂತೆಯೇ. ಓಲೆಗರಿಗಳಾದಲ್ಲಿ ದೇವರ ಪಟವಿರುವುದಿಲ್ಲ.

ಮೇಲೆ ಕಾಣಿಸಿದ ಮೂರು ಬಗೆಯ ಜ್ಯೋತಿಷಿಗಳು ಸಾಮಾನ್ಯವಾಗಿ ಜಾತ್ರೆ, ಸಂತೆ, ಮಾರುಕಟ್ಟೆ ಚೌಕ ಮುಂತಾಗಿ ಜನಸಂದಣಿ ಇರುವ ಕಡೆ ಕಾಣಸಿಗುತ್ತಾರೆ.

ಕೊರವಂಜಿ : ಸಾಮಾನ್ಯವಾಗಿ ಇವರು ಹಳ್ಳಿಗಳಲ್ಲಿ ಹೆಚ್ಚಾಗಿ ಓಡಿಯಾಡುತ್ತಾರೆ. ಕಣಿ ಕೇಳ್ತೀರೇನಮ್ಮ ಕಣಿ ಎಂದು ಸಾರಿಕೊಂಡು ಬೀದಿ ಬೀದಿಗಳಲ್ಲಿ ಸುತ್ತುತ್ತಿರುತ್ತಾರೆ. ಕೇಳಲು ಇಚ್ಛಿಸುವ ಜನಗಳ ಹಸ್ತರೇಖೆಗಳನ್ನು ಗಮನಿಸಿ ಅದಕ್ಕನುಗುಣವಾಗಿ ಆ ವ್ಯಕ್ತಿಯ ಹಿಂದಿನ ಮತ್ತು ಮುಂದಿನ ವಿಚಾರಗಳನ್ನು ವಿವರಿಸುತ್ತಾರೆ. (ನೋಡಿ– ಕೊರವಂಜಿ).

ಕುರುಮಾಮ : ಕೊರವಂಜಿಯ ರೀತಿ ಇದರೂ ಅಲೆಮಾರಿ ಜನ. ಕೈಯಲ್ಲಿ ಏಕನಾದ ಹಿಡಿದುಕೊಂಡು 'ರಾಮಾನಂದಂ, ರಾಮಾನಂದಂ, ಮಸ್ತಾನನ್ನ ಗುರುನಾದನ್ನ, ಕೊಂಡದೇವತೆ' ಮುಂತಾಗಿ ಹಾಡಿಕೊಂಡು ಬೀದಿ ಬೀದಿ ಸುತ್ತುತ್ತಾರೆ. ಹಸ್ತರೇಖೆಯನ್ನು ಪರೀಕ್ಷಿಸಿ ಜ್ಯೋತಿಷ್ಯ ನುಡಿಯುತ್ತಾರೆ. ನಾವು ಮನಸ್ಸಿನಲ್ಲಿ ಕುರಿತುಕೊಂಡ ವಿಚಾರ ಇಂಥದೇ ಎಂದು ಹೇಳುವ ಚಾಣಾಕ್ಷತನ. ಬುದ್ಧಿವಂತಿಕೆ ಇವರದು. ನೋಡಿ– ಕುರುಮಾಮ.

ಇವಿಷ್ಟು ಮುಖ್ಯವಾಗಿ ಜನಪದ ಜ್ಯೋತಿಷ್ಯದ ಮುಖ್ಯ ಅಂಗಗಳು. ಇವಲ್ಲದೆ ಕಾಡುಸಿದ್ಧ, ಗೊರವ ಮುಂತಾದವರು ಕೂಡ ಭಿಕ್ಷಾಟನೆಯ ವೇಳೆಯಲ್ಲಿ ಆ ಊರಿಗೆ ಅಥವಾ ಯಾವುದೋ ಮನೆಗೆ ಮುಂದೊದಗಬಹುದಾದ ಗಂಡಾಂತರಗಳನ್ನೋ ಶುಭವನ್ನೋ ಸೂಚಿಸುತ್ತ ತಿರುಗುತ್ತಾರೆ. ಕಾಡುಗೊಲ್ಲರು ಕೂಡಗಣೆ ಊದಿ ಕಣಿ ಹೇಳುತ್ತಾರೆ. ಇಷ್ಟಲ್ಲದೆ ದೇವರು ಕೆಲವರ ಮೇಲೆ ಬಂದು ಇಷ್ಟಾನಿಷ್ಟಗಳನ್ನು, ಶುಭಾಶುಭ ಫಲಗಳನ್ನು ಹೇಳುವುದೂ ಉಂಟು. ಇದಂತೂ ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿದೆ. (ಎಸ್.ಇ.)

**ಜನಪದ ದೇವತೆಗಳು :** ಯಾವ ಬಗೆಯ ಲಿಖಿತಾಧಾರಗಳಿಲ್ಲದಿದ್ದರೂ ಅನಾಗರಿಕ ಅಥವಾ ಗ್ರಾಮ್ಯ ಜನಾಂಗಗಳಲ್ಲಿ ಆದಿಕಾಲದಿಂದಲೂ ಉಳಿದು ಬಂದಿರುವ ದೇವತೆಗಳನ್ನು ಜನಪದ ದೇವತೆಗಳೆಂದು ಹೇಳಬಹುದು. ಶಿಷ್ಟ ಪುರಾಣಗಳಲ್ಲಿ, ಶಾಸ್ತ್ರಗ್ರಂಥಗಳಲ್ಲಿ, ಕಾವ್ಯಸಮುದಾಯಗಳಲ್ಲಿ ವೈಭವದಿಂದ ಮೆರೆದಿರುವ ಹಾಗೂ ಶಿಷ್ಟಜನಾಂಗದಿಂದ ಆರಾಧನೆಗೊಳ್ಳುವ ದೇವತೆಗಳನ್ನು ಶಿಷ್ಟದೇವತೆಗಳು ಎಂದು ಕರೆಯಬಹುದು. ಶಿಷ್ಟದೇವತೆಗಳ ಆರಾಧನೆ ಬಳಕೆಗೆ ಬರುವ ಮುನ್ನವೇ ಜನಪದ ದೇವತೆಗಳು ಇದ್ದುದಲ್ಲದೆ ಅವುಗಳಲ್ಲಿ ಅನೇಕವಕ್ಕೆ ಆಧಾರವೂ ಆಗಿದ್ದವು.

ಯಾವುದೇ ದೇವತೆಯ ಹುಟ್ಟಿಗೂ ಯಾವುದಾದರೊಂದು ಕಾರಣ ಇದ್ದೇ ಇರುತ್ತದೆ. ಆದಿಮಾನವ ಅಜ್ಞಾನ ಯುಗದಲ್ಲಿ ಎದುರಿಸಬೇಕಾಗಿ ಬಂದ ಅಸಂಖ್ಯಾತ ಸಮಸ್ಯೆಗಳಿಗೆ ಕಂಡುಕೊಂಡ ಉತ್ತರಗಳಲ್ಲಿ ಈ ದೇವತೆಗಳ ಆರಾಧನೆಯೂ ಒಂದು. ಅವನ ವೈಚಾರಿಕ ದೃಷ್ಟಿ ವಿಸ್ತೃತಗೊಂಡಿಲ್ಲದಿದ್ದಾಗ, ಬುದ್ಧಿಶಕ್ತಿ ಬೆಳವಣಿಗೆ ಆಗದಿದ್ದಾಗ, ಚಿಂತನಶೀಲತೆ ವಿಕಾಸಗೊಂಡಿಲ್ಲದೆ ಇದ್ದಾಗ ಅವನ ಹಠಾತ್ತಾದ ಎಲ್ಲ ಪ್ರವೃತ್ತಿಗಳಿಗೂ ಬಿಗಿಯಿಲ್ಲದಂತಾಗಿದ್ದು ಅಂಥ ಸಂದರ್ಭಗಳಲ್ಲಿ ಅವನ ಕಲ್ಪನೆ ಗರಿಬಿಚ್ಚಿಕೊಂಡು ಇಚ್ಛಾನುಸಾರವಾಗಿ ನರ್ತಿಸಿತೆಂದು ಹೇಳಬಹುದು. ಗಾಢಾಂಧಕಾರದಲ್ಲಿ ಅವನು ಬಂದಿಯಾದಾಗ, ಬರಗಾಲ ಬಂದು ಗರಬಡಿದಂತಾದಾಗ, ಹುಚ್ಚು ಮಳೆ ಸುರಿದು ಅವನ ಸ್ವತ್ತೆಲ್ಲ ಕೊಚ್ಚಿಕೊಂಡು ಹೋಗುತ್ತಿರುವಾಗ, ಕೊರೆಯುವ ಚಳಿಗಾಳಿಯಲ್ಲಿ ಚಡಪಡಿಸಿದಾಗ, ಗುಡುಗು ಸಿಡಿಲಿಗೆ ತಡಬಡಿಸಿದಾಗ, ಅಗ್ನಿಪರ್ವತಗಳು ಸ್ಫೋಟಗೊಂಡು ಅವನ ಹೃದಯವೇ ಒಡೆದಂತಾದಾಗ, ಭೂಕಂಪನದಿಂದಾಗಿ ಅವನು ತಲ್ಲಣಿಸಿ ಹೋದಾಗ, ಬಿರುಗಾಳಿಯೆದುರು ಅವನು ತರಗೆಲೆಯಂತಾದಾಗ, ಕ್ರೂರವಿಷಜಂತುಗಳೆದುರು ಸ್ವಾಧೀನತಪ್ಪಿದಾಗ, ತನ್ನೆಲ್ಲ ಶಕ್ತಿಯನ್ನೂ ಮೀರಿದ ಮತ್ತು ತನ್ನ ಮೇಲೆ ವಿಕೋಪ ತಾಳಿರುವ ಯಾವುದೋ ಅಗೋಚರ ಶಕ್ತಿಯೊಂದು ಈ ವಿಶ್ವವನ್ನೆಲ್ಲ ಆಳುತ್ತಿರಬೇಕು ಎಂಬ ಭಾವನೆ ಅವನಲ್ಲಿ ಮೂಡಿಬಂತು. ಈ ಉಗ್ರಶಕ್ತಿಯನ್ನು ಶಾಂತಗೊಳಿಸಿ ತನ್ನ ಪರವಾಗಿರುವಂತೆ ಮಾಡಿಕೊಳ್ಳುವ ಹಂಬಲದಿಂದ ಪ್ರಾರ್ಥನೆ, ಆರಾಧನೆಗಳನ್ನು ಆತ ರೂಢಿಸಿಕೊಂಡು ಬಂದ. ಹೀಗೆ ಭಯದಿಂದ ದೇವತೆಗಳ ಸೃಷ್ಟಿ ಹಾಗೂ ಆರಾಧನೆ ಪ್ರಾರಂಭವಾದುದು ಜನಪದ ದೇವತೆಗಳ ಸೃಷ್ಟಿಯ ಒಂದು ಮುಖ. ಇದನ್ನು ಭಯವಾದ ಎಂದು ಹೇಳಬಹುದು.

ಎರಡನೆಯದು ಕೃತಜ್ಞತಾವಾದ. ಫಲ ಕೊಡುವ ವೃಕ್ಷ, ಬೆಳೆ ಕೊಡುವ ಭೂಮಿ, ಮಳೆಗರೆಯುವ ಮುಗಿಲು, ಬೆಳಕೀಯುವ ಸೂರ್ಯ, ತಂಪೀಯುವ ಚಂದ್ರ, ಕಂಪೆಸೆಯುವ ಪುಷ್ಪ, ಹಾಲೀಯುವ ಪಶು, ತನಗಾಗಿ ದುಡಿಯುವ ಮೂಕಪ್ರಾಣಿಗಳು ಮುಂತಾದ ಸುಮಧುರ ಪ್ರಕೃತಿವಿಶೇಷಗಳನ್ನು ಕೃತಜ್ಞತೆಯಿಂದ ಸ್ಮರಿಸುವುದು ಹಾಗೂ ಆರಾಧಿಸುವುದು ಅವನ ಹೃದಯವಂತಿಕೆಯ ಪ್ರತೀಕವೆನಿಸಿತು. ಅಲ್ಲದೆ ಒಂದು ಬಣಕ್ಕೂ ಮತ್ತೊಂದು ಬಣಕ್ಕೂ ನಡೆಯುತ್ತಿದ್ದಿರಬಹುದಾದ ಕಲಹಗಳಲ್ಲಿ ತನ್ನ ಜನಾಂಗದ, ತನ್ನ ರಾಷ್ಟ್ರದ, ತನ್ನ ಸಂಸ್ಕೃತಿಯ ಉಳಿವು ಉದ್ಧಾರಗಳಿಗಾಗಿ ಶ್ರಮಿಸಿ, ವಿನಾಶಕಾರೀ ಶಕ್ತಿಗಳನ್ನು ದಮನ ಮಾಡಿ ಸಮಷ್ಟಿ ಕಲ್ಯಾಣವನ್ನು ಸಾಧಿಸಿದ ವೀರರನ್ನು ಭಕ್ತಿಯಿಂದ ಆರಾಧಿಸುವುದು ಆಯಾ ಜನಾಂಗದ ಕೃತಜ್ಞತೆಯ ಕುರುಹಾಯಿತು.

ಮೂರನೆಯದು ವಿಸ್ಮಯವಾದ. ಆದಿಮಾನವ ಪ್ರಕೃತಿಯ ಅನೇಕ ಅದ್ಭುತ ಸನ್ನಿವೇಶಗಳನ್ನು ಎದುರುಗೊಳ್ಳಬೇಕಾಗಿ ಬಂದಾಗ ಅವನು ವಿಸ್ಮಿತನಾದ. ಪ್ರಕೃತಿಯ ಎಲ್ಲ ಘಟನೆಗಳೂ ಅವನಿಗೆ ಆಶ್ಚರ್ಯವನ್ನುಂಟುಮಾಡುತ್ತಿದ್ದವು. ಸೂರ್ಯೋದಯ, ಚಂದ್ರೋದಯ, ನದಿಗಳ ಉದ್ಭವ, ಬಿಸಿನೀರಿನ ಚಿಲುಮೆಗಳು, ಕಾಲಕಾಲಕ್ಕೆ ತಕ್ಕಂತೆ ಮಳೆ, ಚಳಿ, ಬೇಸಗೆ ಮುಂತಾದ ಋತುಪರಿವರ್ತನೆಗಳು ಇವೆಲ್ಲವನ್ನೂ ಕಂಡು ವಿಸ್ಮಿತನಾಗಿ ಅವುಗಳಿಗೂ ದೈವೀಕಲ್ಪನೆಯನ್ನು ಆತ ಆರೋಪಿಸಿದ.

ಸ್ವಪ್ನವಾದವನ್ನೂ ದೇವತೆಗಳ ಕಲ್ಪನೆಗೆ ಮೂಲವೆಂದು ಹೇಳಬಹುದಾದರೂ ಭಯ ಮತ್ತು ಕೃತಜ್ಞತಾವಾದಗಳಷ್ಟು ಅದು ಪ್ರಬಲವಾದುದಲ್ಲ.

ಆದಿಜನಾಂಗವೊಂದು ಸುಸಂಸ್ಕೃತವಾಗಿ ನಾಗರಿಕತೆಯ ಸೋಂಕಿಗೊಳಗಾದಾಗ ತಾನು ಪರಂಪರೆಯಿಂದ ಉಳಿಸಿಕೊಂಡು ಬಂದಿರುವ ದೈವೀಕಲ್ಪನೆಗೆ ಸರಿಯಾದ ವ್ಯಾಖ್ಯಾನವನ್ನು ಮಾಡಬೇಕಾಗಿ ಬಂತು. ಹಾಗೆ ಮಾಡದೆ ಇದ್ದಲ್ಲಿ ದೈವೀಕಲ್ಪನೆಗೆ ಹುರುಳಿಲ್ಲದಂತಾಗುತ್ತಿತ್ತು. ಆದ್ದರಿಂದ ಪರಂಪರಾನುಗತ ಸಂಸ್ಕೃತಿಯನ್ನು ಶ್ರಮವಹಿಸಿ ಉಳಿಸಿಕೊಳ್ಳಲು ಪ್ರಯತ್ನಿಸಿದವರು ಆ ದೇವತೆಗಳಿಗೆಲ್ಲ ಬೌದ್ಧಿಕ ವ್ಯಾಖ್ಯಾನವನ್ನು ಕೊಟ್ಟು ರಕ್ಷಿಸಿಕೊಂಡರು. ಇವುಗಳ ಜೊತೆಗೆ ಸಾಧು ಸಂತ ಋಷಿವರೇಣ್ಯರು ತಮ್ಮ ತಪಸ್ಸಿನಿಂದ ಪಡೆದ ದರ್ಶನವನ್ನು ಮೂರ್ತ ಸ್ವರೂಪಗಳಲ್ಲಿ ಸಾಮಾನ್ಯರಿಗೆ ತಿಳಿಸಲು ಪ್ರಯತ್ನಿಸಿದ ಫಲವಾಗಿ ಸೃಷ್ಟಿಯಾದ ದೇವತೆಗಳು ಶಿಷ್ಟದೇವತೆಗಳಾದವು. ಇವುಗಳಿಗಿರುವ ಸಂಕೇತ ತತ್ತ್ವ, ದರ್ಶನ ಮುಂತಾದವುಗಳಿಂದ ಇವು ವಿಶ್ವದೇವತೆಗಳೆಂಬ ಗೌರವಕ್ಕೆ ಭಾಜನವಾದವು. ಹೀಗೆ ಮೂಲದಲ್ಲಿ ಜನಪದ ದೇವತೆಗಳಾಗಿದ್ದರೂ ಅನಂತರದ ಬೆಳೆವಣಿಗೆಯಲ್ಲಿ ಶಿಷ್ಟತೆಯನ್ನು ಪಡೆದ ಈ ದೇವತೆಗಳ ಸೃಷ್ಟಿಯನ್ನು ದರ್ಶನವಾದವೆಂದು ಕರೆಯಬಹುದು. ಶಿಷ್ಟದೇವತೆಗಳು ಗ್ರಂಥಪದದಲ್ಲಿ ವಿಜೃಂಭಿಸಿದಂತೆ ನಾಗರಿಕರ ದೃಷ್ಟಿಯಲ್ಲಿ ಜನಪದ ದೇವತೆಗಳು ಕ್ಷುದ್ರ ದೇವತೆಗಳು ಎನಿಸಿಕೊಂಡವು.

# ಜನಪದ ದೇವತೆಗಳು

ಭಾರತದಲ್ಲಿ ಜನಪದ ದೇವತೆಗಳಿಲ್ಲದ ಗ್ರಾಮವೇ ಇಲ್ಲವೆಂದು ಹೇಳಬಹುದು. ಈ ಎಲ್ಲ ದೇವತೆಗಳಿಗೂ ಪರಂಪರಾನುಗತ ಪದ್ಧತಿ, ನಂಬಿಕೆ, ಆಚರಣೆ, ಹಬ್ಬ, ಹರಿದಿನ, ತೆಪ್ಪ, ತಿರುನಾಳುಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಆದರೂ ಈ ದೇವತೆಗಳಲ್ಲಿ ಕೆಲವು ನಿತ್ಯವೂ ಪೂಜೆಯನ್ನು ಮಾಡಿಸಿಕೊಳ್ಳುವ ಪುಣ್ಯವನ್ನು ಪಡೆದಿವೆ ಎಂದು ಹೇಳಲಾಗುವುದಿಲ್ಲ. ವರ್ಷದ ಯಾವುದೋ ಕೆಲವು ಸಂದರ್ಭಗಳಲ್ಲಿ ಇವುಗಳಿಗೆ ಹಬ್ಬ, ಜಾತ್ರೆ, ಪೂಜೆ ಇತ್ಯಾದಿಗಳು ನಡೆಯುತ್ತವೆ. ಶಿಷ್ಟ ದೇವತೆಗಳಿಗಿರುವಂತೆ ಈ ದೇವತೆಗಳಿಗೆ ಸುಂದರವಾದ ದೊಡ್ಡ ಆಲಯಗಳೂ ಇರುವುದಿಲ್ಲ. ಊರಿನ ಹೊರಗೂ ಮರದ ಕೆಳಗೂ ಕಣಿವೆಯಲ್ಲೊ ಕೆರೆ ಏರಿಯ ಮೇಲೊ ಗುಡ್ಡದ ಮೋಲೊ ನಾಲ್ಕು ಒರಟು ಕಲ್ಲಿನ ಚಪ್ಪಡಿಗಳನ್ನು ನಿಲ್ಲಿಸಿ ಕಟ್ಟಿದ ಗುಡಿಗಳೇ ಈ ದೇವತೆಗಳಿಗೆ ಆಲಯಗಳು. ಶಿಷ್ಟದೇವತೆಗಳಂತೆ ಇವು ಎಷ್ಟೋ ವೇಳೆ ಕೆತ್ತನೆಯ ಸುಂದರವಾದ ವಿಗ್ರಹಗಳಾಗಿರದೆ ಬರೀ ಕಲ್ಲುಗಳಾಗಿರುತ್ತವೆ. ಹೀಗೆ ಶಿಷ್ಟದೇವತೆಗಳಿಗಿರುವ ಸವಲತ್ತುಗಳು ಈ ದೇವತೆಗಳಿಗಿಲ್ಲದಿದ್ದರೂ ಇವು ಗ್ರಾಮದ ಅಧಿಷ್ಠಾತೃ ದೇವತೆಗಳಾಗಿದ್ದು ಗ್ರಾಮದ ಆಗುಹೋಗುಗಳ ಸರ್ವಾಧಿಕಾರಿಗಳಾಗಿ ಗ್ರಾಮದ ಸಂರಕ್ಷಕರಾಗಿ ಗ್ರಾಮದ ಜನತೆಯ ಭಯಭಕ್ತಿಗಳನ್ನು ಗಳಿಸಿಕೊಂಡಿವೆ.

ಜನಪದ ದೇವತೆಗಳನ್ನು ಪೂಜಿಸುವ ಅರ್ಚಕರು ಸಾಮಾನ್ಯವಾಗಿ ಶೂದ್ರರೇ ಆಗಿದ್ದರೂ ಅಪರೂಪವಾಗಿ ಬ್ರಾಹ್ಮಣರೂ ಅರ್ಚಕರಾಗಿರುವ ಉದಾಹರಣೆಗಳೂ ಇವೆ. ಶಿಷ್ಟದೇವತೆಗಳ ಆರಾಧನೆಗೂ ಜನಪದ ದೇವತೆಗಳ ಆರಾಧನೆಗೂ ಬಹಳಷ್ಟು ವ್ಯತ್ಯಾಸಗಳಿವೆ. ಅವುಗಳಲ್ಲಿ ಮುಖ್ಯವಾದುದು ಬಲಿ. ಜನಪದ ದೇವತೆಗಳು ಬಲಿಯಿಂದ ಸುಪ್ರೀತವಾಗುತ್ತವೆ ಎಂಬ ನಂಬಿಕೆ ಇದೆ. ಈ ದೇವತೆಗಳ ಅಲಂಕಾರ ಇತ್ಯಾದಿಗಳೂ ತೀರ ವಿಲಕ್ಷಣವಾಗಿರುತ್ತವೆ. ಅರಿಸಿನ, ಕುಂಕುಮ, ಕೋಳಿ, ಕುರಿ, ಆಡು, ಕೋಣ, ಹಂದಿ, ತಂಬಿಟ್ಟು, ಎಳನೀರು ಮಡೆಯನ್ನ, ರಕ್ತದನ್ನ, ಅರಿಸಿನದ ಅನ್ನ, ಕುಂಕುಮದನ್ನ, ಮೊಸರನ್ನ, ಎಳ್ಳುಂಡೆ, ಬೇವಿನ ಸೊಪ್ಪು ಮುಂತಾದವುಗಳಿಂದ ಈ ದೇವತೆಗಳನ್ನು ಆರಾಧಿಸುತ್ತಾರೆ.

ಜನತೆ ಈ ದೇವತೆಗಳಿಗೆ ಒಪ್ಪಿಸುವ ಹರಕೆಗಳೂ ತೀರ ವಿಚಿತ್ರವಾದವು. ಅವರು ಹೊರುವ ಹರಕೆಗಳು ಎಷ್ಟೇ ಕಠಿಣವೆನಿಸಿದ್ದರೂ ಅವರು ಆ ದೇವತೆಗಳ ಬಗೆಗೆ ಇಟ್ಟಿರುವ ಭಯ, ಭಕ್ತಿ, ನಂಬಿಕೆಗಳು ಅಚಲವಾದವುಗಳು. ಮಿಂದು ಒದ್ದೆ ಬಟ್ಟೆಯಲ್ಲಿ ಗುಡಿಯ ಸುತ್ತ ಉರುಳುವ ಉರುಳುಸೇವೆ. ಒಂದೇ ಮಗ್ಗುಲಲ್ಲಿ ಗುಡಿಸುತ್ತ ತೆವಳುವ ಒಚ್ಚ ಮಗ್ಗಲು ಸೇವೆ, ಹೆಜ್ಜೆಗೊಂದು ಸಲ ಅಡ್ಡ ಬಿದ್ದು ನಮಸ್ಕರಿಸುವ ಹೆಜ್ಜೆ ನಮಸ್ಕಾರದ ಸೇವೆ, ಮೈಗೆಲ್ಲ ದಬ್ಬಳದ ಗಾತ್ರ ಸರಳುಗಳನ್ನು ಚುಚ್ಚಿಕೊಂಡು ತಮ್ಮಟೆ ಹೊಡೆಸುತ್ತ ಅದರ ಗತ್ತಿಗೆ ತಕ್ಕಂತೆ ಕುಣಿದಾಡುತ್ತ ಹರಕೆ ಒಪ್ಪಿಸುವ ಸರಳು ಪವಾಡದ ಸೇವೆ, ತನ್ನ ತೂಕದ ಬೆಲ್ಲವನ್ನು ತೂಗಿಸುವ ತುಲಾಭಾರಸೇವೆ, ಮಂಡೆ ಚವುರ ಮಾಡಿಸಿಕೊಳ್ಳುವ ಮುಡಿಕೊಡುವ ಸೇವೆ, ಬಾಯಿ ಬೀಗದ ಸೇವೆ, ತಾನು ಅತ್ಯಂತ ಮೆಚ್ಚಿ ತಿನ್ನುತ್ತಿದ್ದ ಫಲವನ್ನು ದೇವರ ಹೆಸರಿನಲ್ಲಿ ತಿನ್ನದೆ ವರ್ಜಿಸುವ ಫಲ ಬಿಡುವ ಸೇವೆ, ಧೂಪದ ಸೇವೆ, ಕೊಂಡಕ್ಕೆ ಹರಳು ಬೀಜ ಹಾಕುವ ಸೇವೆ–ಇತ್ಯಾದಿಗಳಲ್ಲದೆ ಇನ್ನೂ ಕೆಲವು ಭಯಂಕರ ಸೇವೆಗಳೂ ಜನಪದ ದೇವತೆಗಳಿಗೆ ಸಲ್ಲುತ್ತವೆ. ಅವುಗಳೆಂದರೆ ಗಂಡಸು ಹೆಂಗಸಾಗುವ, ಹೆಂಗಸು ಗಂಡಸಾಗುವ ಜೋಗ್ತಿ ಸಂಪ್ರದಾಯವನ್ನು ಎಲ್ಲಮ್ಮನಿಗೆ ಹರಕೆ ಹೊತ್ತವರು ನಡೆಸಿಕೊಂಡು ಬಂದಿದ್ದಾರೆ. ಜನಪದ ಧಾರ್ಮಿಕ ವೃತ್ತಿಗಾಯಕರೆಲ್ಲರೂ ತಮ್ಮ ತಮ್ಮ ದೇವರುಗಳಿಗೆ ಗುಡ್ಡರೋ ನೀಲಗಾರರೋ ಆಗಿ ಆ ದೇವತೆಯನ್ನು ಭಕ್ತಿಯಿಂದ ಪೂಜಿಸಿಕೊಂಡು ಬರುತ್ತಾರೆ. ಇವಲ್ಲದೆ ಅನೈತಿಕವೆನಿಸಿದರೂ ದೇವರ ಹೆಸರಿನಲ್ಲಿ ಕೆಲವು ಹೆಂಗಸರು ಸಂತಾನಾಪೇಕ್ಷೆಯಿಂದ ಜಾತ್ರೆಗಳಲ್ಲಿ ಪರಪುರುಷನನ್ನು ಕೂಡುವ ತೇರಿನ ಪಟ್ಟಡಿಸೇವೆ, ತಾಳೆಮೆಳೆ ಸೇವೆ, ಹೊಳೆಕರೆ ಸೇವೆಗಳೂ ಉಂಟು.

ಶಿಷ್ಟಪುರಾಣಗಳ ತ್ರಿಮೂರ್ತಿಗಳು ಸೃಷ್ಟಿಸ್ಥಿತಿಲಯಗಳ ಪ್ರತೀಕವೆನಿಸಿರುವಂತೆ ಜನಪದ ದೇವತೆಗಳು ಈ ಬಗೆಯ ವಿಶ್ವದೇವತೆಗಳಾಗಿರದೆ ವಿಶ್ವದ ವ್ಯಾಪಕತೆಗೆ ಸಂಬಂಧಿಸಿದ ಸಂಕೇತಗಳೂ ಆಗಿರದೆ, ಅವು ಗ್ರಾಮಜೀವನದ ಪ್ರತೀಕಗಳಾಗಿ ಮಾತ್ರ ಕಾಣಿಸಿಕೊಳ್ಳುತ್ತವೆ. ಪ್ರಪಂಚದ ಸೃಷ್ಟಿಸ್ಥಿತಿಲಯ ಮುಂತಾದ ಮಹಾಶಕ್ತಿಗಳನ್ನು ಪ್ರತಿನಿಧಿಸದೆ ಅವು ಕಾಲರ, ಸಿಡುಬು, ದಡಾರ, ಪ್ಲೇಗು ಹಾಗೂ ದನಕರುಗಳಿಗೆ ಬರುವ ರೋಗಗಳ ಅಧಿದೇವತೆಗಳಾಗಿ ಕಾಣಿಸಿಕೊಳ್ಳುತ್ತವೆ.

ತಮ್ಮ ಶಕ್ತಿಯ ಪರಿಮಿತಿಯೊಳಗೇ ತಮ್ಮ ಪ್ರಭಾವವನ್ನು ಬೀರುವ ಜನಪದ ದೇವತೆಗಳಲ್ಲಿ ಹೆಚ್ಚಿನವು ಹೆಣ್ಣುದೇವತೆಗಳಾಗಿವೆ. ಆರ್ಯ ದೇವತೆಗಳಲ್ಲಿ ಈಶ್ವರ ವಿಷ್ಣು ಬ್ರಹ್ಮರಾದಿಯಾಗಿ ಪುರುಷದೇವತೆಗಳ ಪ್ರಾಬಲ್ಯವನ್ನು ಹೆಚ್ಚಾಗಿ ಕಾಣುತ್ತೇವೆ. ಆದರೆ ಜನಪದ ದೇವತೆಗಳಲ್ಲಿ ಶಿಷ್ಟದೇವರಾಗಿ ಪರಿವರ್ತನೆ ಹೊಂದಿರುವ ಈಶ್ವರನ ಮಡದಿ ಪಾರ್ವತಿಯೇ ಕಾಳಿ ಮುಂತಾದ ಹೆಸರುಗಳಲ್ಲಿ ಜನಪದ ದೇವತೆಯಾಗಿದ್ದಾಳೆ ಅಥವಾ ಎಲ್ಲ ಹೆಣ್ಣು ದೇವತೆಗಳಿಗೂ ಆಧಾರಭೂತಳಾಗಿದ್ದಾಳೆ. ಆರ್ಯ ಜನಾಂಗದ ದೇವತೆಗಳು ಹೆಚ್ಚು ಸಂಖ್ಯೆಯಲ್ಲಿ ಪುರುಷದೇವತೆಗಳಾಗಿದ್ದರೆ ದ್ರಾವಿಡ ದೇವತೆಗಳು ಅದರಲ್ಲೂ ಜನಪದ ದೇವತೆಗಳು ಹೆಚ್ಚು ಸ್ತ್ರೀದೇವತೆಗಳಾಗಿರುವುದು ಒಂದು ಸೋಜಿಗದ ಸಂಗತಿ. ಇದಕ್ಕೆ ವಿದ್ವಾಂಸರನೇಕರು ಬೇರೆ ಬೇರೆ ಕಾರಣಗಳನ್ನು ಕೊಡಲು ಪ್ರಯತ್ನಿಸಿದ್ದರೂ ಅವು ಅಷ್ಟು ತರ್ಕಸಮ್ಮತ ವಾಗಿಲ್ಲವೆಂದೇ ಹೇಳಬಹುದು. ಆದರೂ ಅವರ ಅಭಿಪ್ರಾಯದಲ್ಲಿ ಪ್ರಪಂಚದ ಆದ್ಯಂತ ಯುದ್ಧ ದೇವತೆಗಳೆಲ್ಲ ಪುರುಷರೇ ಆಗಿದ್ದು, ಬೇಸಾಯ ದೇವತೆಗಳು ಸ್ತ್ರೀಯ ರಾಗಿರುವುದರಿಂದ ಬೇಸಾಯಾವಲಂಬಿಗಳಾದ ದ್ರಾವಿಡರ ದೇವತೆಗಳು ಸ್ತ್ರೀದೇವತೆಗಳೆಂದು ಅಭಿಪ್ರಾಯಪಡುತ್ತಾರೆ. ಮತ್ತೊಬ್ಬ ವಿದ್ವಾಂಸರು ದ್ರಾವಿಡ ಹೆಂಗಸರು ರಜಾಜಿಯರೆಂದೂ ಅದಕ್ಕಾಗಿ ಭಯದಿಂದ ಅವರನ್ನು ತೃಪ್ತಿಪಡಿಸಲೋಸುಗ ಸ್ತ್ರೀದೇವತಾರಾಧನೆ ಆಚರಣೆಗೆ ಬಂದಿರಬೇಕೆಂದೂ ಹೇಳುತ್ತಾರೆ. ಇದಕ್ಕೆ ಕಾರಣ ಏನೇ ಇರಲಿ, ದ್ರಾವಿಡ ಜನಪದ ದೇವತೆಗಳಲ್ಲಿ ಹೆಚ್ಚು ಸಂಖ್ಯೆಯವು ಸ್ತ್ರೀದೇವತೆಗಳು. ಪುರುಷದೇವತೆಗಳು ಬಂದರೂ ಅವರು ಸ್ತ್ರೀದೇವತೆಗಳ ಸಹೋದರರಾಗಿಯೋ ಗಂಡಂದಿರಾಗಿಯೋ ಕಾಣಿಸಿಕೊಳ್ಳುತ್ತವೆ. ಹೀಗಲ್ಲದೆ ದ್ರಾವಿಡ ಪುರುಷ ದೇವತೆಗಳಲ್ಲಿ ಮಾದೇಶ್ವರ, ಮಂಟೆಸ್ವಾಮಿ, ಜೋಕುಮಾರ, ಅಯ್ಯನಾರ್, ಪೋಟುರಾಜು, ಮುಡುಕತೊರೆ ಮಲ್ಲಪ್ಪ, ಹನುಮಪ್ಪ ಮುಂತಾದ ದೇವತೆಗಳು ಸ್ವಂತಂತ್ರ ಅಸ್ತಿತ್ವವನ್ನು ಗಳಿಸಿಕೊಂಡಿವೆ.

ಜನಪದ ದೇವತೆಗಳಿಗೆ ಕೋಣ, ಕುರಿ, ಕೋಳಿ, ಆಡು, ಹಂದಿ ಮುಂತಾದ ಪ್ರಾಣಿಬಲಿ ಕೊಡುತ್ತಿದ್ದಂತೆ ನರಬಲಿಯನ್ನೂ ಕೊಟ್ಟ ಉದಾಹರಣೆಗಳು ಇವೆ. ನರಬಲಿಯನ್ನು ಕೇಳಿದ ಕೆಲವು ದೇವತೆಗಳ ಗುಡಿಯನ್ನೇ ಕಲ್ಲುಮಣ್ಣುಗಳಿಂದ ಮುಚ್ಚಿರುವ ಉದಾಹರಣೆಯನ್ನೂ ನೋಡಬಹುದಾಗಿದೆ. ಇತ್ತೀಚೆಗೆ ನರಬಲಿ ಕೊಡುವ ಸಂಪ್ರದಾಯ ಕಣ್ಮರೆಯಾಗುತ್ತಿದೆಯಾದರೂ ಆಗಾಗ ಕೆಲವು ಮಾಂತ್ರಿಕರು ದೇವಿಯನ್ನು ವಶಪಡಿಸಿಕೊಳ್ಳಲು ಬಲಿಗಾಗಿ ಚಿಕ್ಕ ಮಕ್ಕಳನ್ನು ಅಪಹರಿಸುವ ಸುದ್ದಿಗಳನ್ನು ದಿನಪತ್ರಿಕೆಗಳು ಆಗಾಗ ಪ್ರಕಟಿಸುತ್ತಿರುತ್ತವೆ. ನರಬಲಿ ಇಲ್ಲದೆ ಇದ್ದರೂ ಹೆಂಡ, ಭಂಗಿ, ಮತ್ತು ಪ್ರಾಣಿಗಳ ಬಲಿಕೊಡುವ ಸಂಪ್ರದಾಯಗಳು ಇನ್ನೂ ಜೀವಂತವಾಗಿರುವುದನ್ನು ನೋಡಬಹುದಾಗಿದೆ.

ಜನಪದ ದೇವತೆಗಳ ಕಲ್ಪನೆ, ಆರಾಧನೆ, ಆಚರಣೆ ಮುಂತಾದವುಗಳಿಗೆಲ್ಲ ಖಚಿತವಾದ ಹಿನ್ನೆಲೆಯನ್ನು ಒದಗಿಸುವುದು ಕಷ್ಟಸಾಧ್ಯವಾದ ಕಾರ್ಯ. ಏಕೆಂದರೆ ಇವನ್ನು ಕುರಿತ ಯಾವ ಐತಿಹಾಸಿಕ ದಾಖಲೆಗಳೂ ಲಿಖಿತರೂಪದಲ್ಲಿ ದೊರೆಯುವುದಿಲ್ಲ. ಆದ್ದರಿಂದ ಇವುಗಳ ಇತಿವೃತ್ತಗಳಿಗೆಲ್ಲ ಪರಂಪರೆಯಿಂದ ಕಂಠಸ್ಥರೂಪದಲ್ಲಿ ಬೆಳೆದುಳಿದು ಬಂದಿರುವ ಜಾನಪದವನ್ನೇ ಮೊರೆಹೋಗಬೇಕಾಗುತ್ತದೆ. ಈ ದೇವತೆಗಳ ಆರಾಧನೆಯ ಸಂದರ್ಭಗಳಲ್ಲಿ ಹಾಡುವ ಸ್ತುತಿಗೀತೆಗಳು, ಪುರಾಣಕತೆಗಳು, ಐತಿಹ್ಯಗಳು, ಲಾವಣಿಗಳು ಮುಂತಾದವುಗಳಿಂದ ಅವುಗಳಲ್ಲಿ ಅಡಗಿರಬಹುದಾದ ಐತಿಹಾಸಿಕತೆಯನ್ನು ಅಗೆದು ತೆಗೆಯಬಹುದಾಗಿದೆ. ಏಕೆಂದರೆ ಜಾನಪದ ಪರಂಪರಾನುಗತವಾಗಿ ಬಂದ ಐತಿಹಾಸಿಕ ವಿಷಯಗಳಿಗೆ ಜೀವಂತ ಸಾಕ್ಷಿಯಾಗಿರುತ್ತದೆ ಎಂಬ ಮಾತನ್ನು ಅಲಕ್ಷ್ಯಮಾಡುವಂತಿಲ್ಲ. ಈ ಬಗೆಯ ಆಧಾರಗಳನ್ನು ಗಮನಿಸಿದಾಗ ವೀರರು, ಪತಿವ್ರತೆಯರು, ಸಾಧುಸಂತರು, ಪಿತೃಗಳು, ಪ್ರಾಣಿಗಳು, ಬಲಿಯಾದವರು, ಆತ್ಮಹತ್ಯೆ ಮಾಡಿಕೊಂಡವರು, ಭೂತಪ್ರೇತಗಳು ಮರಗಿಡಗಳು, ಗ್ರಹನಕ್ಷತ್ರಗಳು, ನದೀನದಗಳು–ಎಲ್ಲವೂ ಜನಪದ ದೇವತೆಗಳಾಗಿರುವುದು ಕಂಡುಬರುತ್ತದೆ.

ಜನಪದ ದೇವತೆಗಳನ್ನು ಪ್ರಧಾನವಾಗಿ ಗ್ರಾಮದೇವತೆ, ಸ್ಥಾನದೇವತೆ, ಕುಲದೇವತೆ, ಇಷ್ಟದೇವತೆ ಮತ್ತು ಗೃಹದೇವತೆ ಎಂಬುದಾಗಿ ಐದು ಗುಂಪುಗಳಾಗಿ ವಿಂಗಡಿಸಬಹುದು. ಈ ಸಂಖ್ಯೆಯನ್ನು ವಿಸ್ತರಿಸಲೂಬಹುದು. ಆದರೂ ಈ ಬಗೆಯ ವಿಭಜನೆಯಿಂದ ಕೆಲಮಟ್ಟಿನ ತೊಡಕುಗಳು ಉಳಿದೇ ಉಳಿಯುವುದರಿಂದ ಈ ಕ್ರಮವೇ ಸರಿಯೆಂದು ಹೇಳುವಂತಿಲ್ಲ. ಆದರೆ ಅಧ್ಯಯನ ದೃಷ್ಟಿಯಿಂದ ಈ ಬಗೆಯ ವಿಭಜನೆ ಸಾಧು ಹಾಗೂ ಶಾಸ್ತ್ರೀಯವೆಂದು ಕಾಣುತ್ತದೆ. ಕೆಲವೊಮ್ಮೆ ಒಂದು ಸ್ಥಾನದೇವತೆಯಾಗಿರಬಹುದು ; ಒಂದು ಸ್ಥಾನದೇವತೆ ಕೆಲವರ ಕುಲದೇವತೆಯೂ ಆಗಿರಬಹುದಾದ್ದರಿಂದ ಈ ವಿಭಜನಾಕ್ರಮ ಸ್ವಲ್ಪಮಟ್ಟಿಗೆ ಅತೃಪ್ತಿಕರವಾಗಿಯೇ ಉಳಿಯುತ್ತದೆ.

ಪ್ರತಿಯೊಂದು ಗ್ರಾಮಕ್ಕೂ ಒಂದು ಗ್ರಾಮದೇವತೆ ಇರುತ್ತದೆ. ಗ್ರಾಮದೇವತೆಗಳೆಲ್ಲ ಸ್ತ್ರೀದೇವತೆಗಳೇ ಆಗಿದ್ದರೂ ಕೆಲವು ಕಡೆ ಬಸವ, ಹನುಮ, ಭೈರವ, ಬೀರಪ್ಪ, ಶಿವ ಮುಂತಾದ ಪುರುಷದೇವತೆಗಳೂ ಗ್ರಾಮದೇವತೆಗಳಾಗಿರುವುದು ಕಂಡುಬಂದಿದೆ.

ಕರ್ನಾಟಕದ ಹೆಚ್ಚು ಕಡೆಗಳಲ್ಲಿ ಮಾರಮ್ಮ ಗ್ರಾಮದೇವತೆಯಾಗಿದ್ದಾಳೆ. ಮಾರಿಗೆ ಕಬ್ಬಾಳದ ದುರುಗಮ್ಮ, ಹಟ್ಟಿ ಲಕ್ಷ್ಮಮ್ಮ, ಬೆಟ್ಟದ ಚಿಕ್ಕಮ್ಮ, ಕರುಳೆಕೆಲ್ಲ ದೇವಮ್ಮ, ಬೆಟ್ಟಳ್ಳಿ ಮಾರಮ್ಮ, ಕಲ್ಲೂರ ಮಲ್ಲುಗದೇವಿ, ಮುಡುಗುಂಡ್ದ ಮುಳ್ಳಾಚಿ, ಬನ್ನೂರು ಹ್ಯಾಮಾದ್ರಿ, ಪಿರಿಯಾಪಟ್ಟದ ಬರಿಮಸ್ತಿ, ಎಲ್ಲಮ್ಮ ಏಕನಾತಿ, ಅಗರ ದಿಂಡಿನ ಮಾರಿ, ಕುಂಡ್ಮಾರಿ, ಕಿವುಡ್ಮಾರಿ ಕುಂಟ್ಮಾರಿ, ಬೆಟ್ಟದ ಚಾಮುಂಡಿ, ಬೆಂಕಿಮಾರಿ, ದೂರದ ದುಬ್ಲಮ್ಮ, ಕೊಡಗಿನ ಮಮ್ಮಾಯಿ, ಮೂಕಳ್ಳಿ ಮಾಮಾರಿ, ಬಲಮಂಕಾಳಿ, ಉತ್ತನಳ್ಳಿ ಮಾರಿ, ಸೀಗುಮಾರಿ, ದಂಡಿನಮಾರಿ, ಚಿಕುದೇವಿ, ಮೊಗೆಯಮ್ಮ, ಮಾಸ್ತಮ್ಮ, ಬಾಣಂತಮ್ಮ, ಬಿಸಲಾಳಿಯಮ್ಮ,

ಹಾಸನಮ್ಮ, ಅಂಕಾಲಮ್ಮ ಮುಂತಾದ ಬೇರೆ ಬೇರೆ ಹೆಸರುಗಳಿವೆ. ಮಂಟೇಸ್ವಾಮಿ ಮತ್ತು ಮಾದೇಶ್ವರರು ಈ ಮಾರಿಯರನ್ನು ಕಟ್ಟಿ ಆಳುತ್ತಿದ್ದರಂತೆ. ಅವರ ಅಪ್ಪಣೆಯ ಮೇರೆಗೆ ಇವರೆಲ್ಲ ಬೇರೆ ಬೇರೆ ಊರುಗಳನ್ನು ಸೇರಿ ಗ್ರಾಮದೇವತೆಗಳಾದರಂತೆ. ಈ ಮಾರಿಯರೆಲ್ಲ ಉತ್ತರದಿಂದ ಬಂದರೆಂಬುದು ಪ್ರಚಲಿತವಾಗಿದೆ. ಅಲ್ಲದೆ ಇವರ ಸಂಖ್ಯೆ ಪ್ರಾರಂಭದಲ್ಲಿ ಏಳು ಇದ್ದು ಅನಂತರದಲ್ಲಿ ಏಳುನೂರು, ಏಳುಸಾವಿರ ಆಗಿದೆ. ಗ್ರಾಮದೇವತೆಗಳು ಗ್ರಾಮದ ಸಂರಕ್ಷಕರು. ಅವರು ರೋಗರುಜಿನ ಮೊದಲಾದ ಅನಿಷ್ಟಗಳು ಗ್ರಾಮವನ್ನು ಪ್ರವೇಶಿಸದಂತೆ ಕಾಯ್ದುಕೊಂಡಿರುತ್ತಾರೆ. ಅದಕ್ಕಾಗಿಯೇ ಗ್ರಾಮದೇವತೆಗಳ ಗುಡಿ ಊರಿನ ಹೆಬ್ಬಾಗಿಲ ಬಳಿಯಲ್ಲೇ ಇರುತ್ತದೆ. ಪರಸ್ಥಳದಿಂದ ವಲಸೆ ಬಂದ ಕ್ರೂರ ದೇವತೆಗಳು ಗ್ರಾಮವನ್ನು ಹೊಗಲು ಪ್ರಯತ್ನಿಸಿದಾಗ ಗ್ರಾಮದೇವತೆಗಳು ಅವನ್ನು ಹೊಡೆದೋಡಿಸುತ್ತವೆ. ಊರಿನ ಜನ ಗ್ರಾಮ ದೇವತೆಯ ಹಬ್ಬಮಾಡದೆ ಅಲಕ್ಷ್ಯ ಮಾಡಿದಾಗ ಕೂಗುಮಾರಿ ಊರನ್ನು ನಟ್ಟಿರುಳಿನಲ್ಲಿ ಪ್ರವೇಶಿಸಿ ಕಾಕು ಹಾಕುತ್ತ ಬೀದಿ ಬೀದಿಗಳಲ್ಲೆಲ್ಲ ಓಡಾಡುತ್ತಿರುತ್ತಾಳೆ. ಇವಳ ದನಿಯನ್ನು ಕೇಳಿದವರು ಓಗೊಟ್ಟರೆ ಸತ್ತುಹೋಗುತ್ತಾರಂತೆ. ಅದಕ್ಕಾಗಿ ಹಳ್ಳಿಯ ಜನ ಈ ಮಾರಿ ತಮ್ಮ ಮನೆಯೊಳಕ್ಕೆ ಬರದಿರಲೆಂದು ಬಾಗಿಲ ಮೇಲೆ ನಾಳೆ ಬಾ ಎಂದು ಬರೆದಿರುತ್ತಾರೆ. ಈ ಕೂಗುಮಾರಿ ಗ್ರಾಮದೇವತೆಯ ತಂಗಿಯೇ ಇನ್ನಾವುದಾದರೂ ಸಂಬಂಧದವಳೊ ಆಗಿರುತ್ತಾಳೆ. ಗ್ರಾಮದೇವತೆಯ ಪರವಾಗಿ ಇವಳು ಊರಿನ ಜನರನ್ನು ಎಚ್ಚರಿಸಿ ಹಬ್ಬ ಮಾಡಲು ಸೂಚನೆ ಕೊಡುತ್ತಾಳೆಂದು ನಂಬುತ್ತಾರೆ. ಗ್ರಾಮದೇವತೆ ರೋಗದೇವತೆಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿರುತ್ತಾಳೆ. **ನೋಡಿ– ಗ್ರಾಮದೇವತೆಗಳು.**

ಸ್ಥಾನದೇವತೆಗಳು ಒಂದು ಸುತ್ತಿನ ಹತ್ತಾರು ಊರುಗಳ ಮೇಲೆ ಪ್ರಭಾವ ಬೀರುತ್ತವೆ. ಇವನ್ನು ಸ್ಥಳದೇವತೆಗಳೆಂದೂ ಕರೆಯುತ್ತಾರೆ. ಸ್ಥಾನದೇವತೆಗಳು ಹತ್ತಾರು ಹಳ್ಳಿಗಳ ದೇವತೆಗಳನ್ನು ಆಳುವಂಥವು. ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಭೈರವ, ಸಿದ್ದಪ್ಪಾಜಿ, ರಾಚಪ್ಪಾಜಿ, ಕೊಂಗಳ್ಳಿಮಲ್ಲಮ್ಮ, ಮುಡುಕ್ತೊರೆ ಮಲ್ಲಮ್ಮ, ಬೆಟ್ಟದ ಚಾಮುಂಡಿ, ಸವದತ್ತಿ ಎಲ್ಲಮ್ಮ, ತುಳಜಾಪುರದ ಭವಾನಿ, ಧರ್ಮಸ್ಥಳದ ಮಂಜುನಾಥ, ಬಿಳಿಗಿರಿರಂಗ–ಮುಂತಾದ ದೇವತೆಗಳು ಈ ಗುಂಪಿನಲ್ಲಿ ಸೇರುತ್ತವೆ. ಇವುಗಳ ಸ್ಥಾನಮಾನಗಳು ಇನ್ನಿತರ ದೇವತೆಗಳಿಗಿಂತ ಹೆಚ್ಚಿನವಾಗಿರುತ್ತವೆ.

ಪ್ರಾಚೀನ ಬುಡಕಟ್ಟಿನ ಜನಗಳಲ್ಲಿ ರಕ್ತಸಂಬಂಧಕ್ಕನುಗುಣವಾಗಿ ಹಲವಾರು ಗುಂಪುಗಳು ಕಂಡುಬರುತ್ತವೆ. ಈ ಪ್ರತಿಯೊಂದು ಗುಂಪೂ ಪ್ರಾಣಿಗಳನ್ನಾಗಲಿ, ಸಸ್ಯಗಳನ್ನಾಗಲಿ, ಗ್ರಹನಕ್ಷತ್ರಗಳನ್ನಾಗಲಿ ತಮ್ಮ ಕುಲದೈವವೆಂದು ಪರಿಗಣಿಸಿ ತಮ್ಮ ವಂಶದ ಮೂಲವನ್ನು ಅವುಗಳಿಗೆ ಆರೋಪಿಸುವ ಪದ್ಧತಿ ಪ್ರಪಂಚದ ಆದ್ಯಂತ ಕಂಡುಬಂದಿದೆ. ಮುಂದುವರಿದ ಜನಾಂಗಗಳಲ್ಲೂ ಇದು ಇದೆ ಎಂಬುದು ನಮ್ಮಲ್ಲಿ ಕಂಡುಬರುವ ಆನೆಗುಲ, ಬೆಳ್ಳಿಗುಲ ಎನ್ನುವ ಮಾತುಗಳಿಂದ ವ್ಯಕ್ತವಾಗುತ್ತದೆ. ತಾವು ಆರಾಧಿಸುವ ವಸ್ತುವನ್ನು ಗೋತ್ರ ಎಂದು ಕರೆಯಲಾಗಿದೆ. ಗೋತ್ರವೆಂದರೆ ತಮ್ಮ ಬುಡಕಟ್ಟಿನ ಮೂಲಪುರಷನೆಂದೂ ತಮ್ಮ ಕುಲದೇವತೆಯೆಂದೂ ತಿಳಿಯುವವರಿದ್ದಾರೆ. ತೋಡರು ತಮ್ಮ ಕುಲದೇವರು ಎಮ್ಮೆ ಎಂದೂ, ಅಮೆರಿಕದ ಪೂರ್ಜರು ಕಾಗೆ ಮತ್ತು ಮೊಸಳೆ ತಮ್ಮ ಕುಲದೇವರೆಂದೂ, ಭಾರತದ ಕಾಡುಜನ ಸರ್ಪವನ್ನು ತಮ್ಮ ಕುಲದೇವರೆಂದೂ ಹೇಳಿಕೊಳ್ಳುತ್ತಾರೆ. ಕುಲದೇವತೆಯ ಅತೃಪ್ತಿ ಮತ್ತು ಕೋಪಕ್ಕೆ ತುತ್ತಾಗಬಾರದೆಂದು ಅವುಗಳ ಬಗೆಗಿನ ಭಯಭಕ್ತಿಯಿಂದ ಹಲವಾರು ಬಹಿಷ್ಕಾರಾಜ್ಞೆಗಳನ್ನು ರೂಢಿಗೆ ತಂದಿರುವುದನ್ನು ತೋಡರು ಎಮ್ಮೆಯ ಬಗೆಗೆ ತಳೆದಿರುವ ವಿಚಿತ್ರ ನಿಲುವುಗಳು ಸಮರ್ಥಿಸುತ್ತವೆ. ಹೀಗಾಗಿ ಆದಿಜನಾಂಗದವರು ಯಾವುದಾದರೂ ಒಂದು ಪ್ರಾಣಿಯನ್ನೋ ವಸ್ತುವನ್ನೋ ತಮ್ಮ ಕುಲದ ಸಂಕೇತವೆಂದು ಭಾವಿಸಿ ಅದನ್ನು ಪವಿತ್ರ ಹಾಗೂ ಪೂಜ್ಯವೆಂದು ಪರಿಗಣಿಸುತ್ತಿದ್ದರು. ಜೆ. ಲ್ಯಾಂಗ್ ಎಂಬ ಮಾನವಶಾಸ್ತ್ರಜ್ಞ ಈ ಅಭಿಪ್ರಾಯವನ್ನು ಮೊದಲಿಗೆ ಬೆಳಕಿಗೆ ತಂದ. ಒಂದು ವರ್ಗದ ಕುಲಚಿಹ್ನೆಯನ್ನು ಈತ ಆ ವರ್ಗವನ್ನು ರಕ್ಷಿಸುವ ಪ್ರಿಯಪಿಶಾಚಿ ಎಂದು ಕರೆದ. ಈ ಪ್ರಿಯಪಿಶಾಚಿ ಪ್ರಾಣಿಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದು ಇವನ ಮತ. ಈ ಒಂದು ಪದ್ಧತಿ ಅಥವಾ ನಂಬಿಕೆ ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನ ಪದ್ಧತಿಯಲ್ಲಿ ಕಂಡುಬರುತ್ತದೆ. ಹಿಂದಿನ ಕಾಲದಲ್ಲಿ ಆಹಾರ ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವ ಸಾಧನವಾಗಿ ಪ್ರಾಣಿಗಳನ್ನು ಬಳಸುತ್ತಿದ್ದುದರಿಂದ ಅವನ್ನು ಈ ಮೂಲಕ ಸಂರಕ್ಷಿಸಿಕೊಂಡು ಬಂದಿರಬೇಕೆಂದು ಕೆಲವು ಮಾನವಶಾಸ್ತ್ರಜ್ಞರ ಊಹೆ. ಮತ್ತೆ ಕೆಲವು ವಿದ್ವಾಂಸರು ಮರಣಾನಂತರ ಜೀವಿ ಅಥವಾ ಆತ್ಮ ಪ್ರಾಣಿಗಳಲ್ಲಿ ಅಥವಾ ಕೆಲವು ಸಸ್ಯಗಳಲ್ಲಿ ಉಳಿಯುತ್ತದಾದ್ದರಿಂದ ಇಂಥ ಪ್ರಾಣಿ ಮತ್ತು ಸಸ್ಯಗಳನ್ನು ಉಳಿಸಿಕೊಂಡು ಬರಬೇಕು ಎಂಬ ಹಿಂದಿನವರ ನಂಬಿಕೆಯೇ ಈ ಕುಲದೇವತಾಪದ್ಧತಿಯ ಉಗಮಕ್ಕೆ ಕಾರಣವಿರಬೇಕೆಂದು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ ಪ್ರಾಣಿಗಳು ಸಸ್ಯಗಳು ಗ್ರಹ ತಾರಿಕೆಗಳು ಕುಲದೇವತೆಗಳಾಗಿ ಇಂದಿಗೂ ಕೆಲವು ಕುಟುಂಬಗಳಲ್ಲಿ ಉಳಿದು ಬಂದಿವೆ. ನೋಡಿ– ಕುಲದೇವತಾ–ಪದ್ಧತಿ.

ಇಷ್ಟದೇವತೆಗಳನ್ನು ಜನಪದದಲ್ಲಿ ಮೊರೆಬಿದ್ದ ದೇವರು ಎಂದು ಕರೆಯುತ್ತಾರೆ. ಯಾವುದಾದರೂ ಕಷ್ಟಸಂಕಷ್ಟಗಳು ಒದಗಿಬಂದು ಗೃಹದೇವತೆಯಾಗಲಿ ಕುಲದೇವತೆಯಾಗಲಿ ಸ್ಥಾನದೇವತೆಯಾಗಲಿ ಗ್ರಾಮದೇವತೆಯಾಗಲು, ರಕ್ಷಿಸಲು, ಸಮರ್ಥವೆನಿಸದೆ ಹೋದಾಗ ಇವುಗಳಿಗಿಂತಲೂ ಬೇರೆ ಯಾವುದಾದರೂ ದೊಡ್ಡ ದೇವರನ್ನು ಹುಡುಕಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ತಮಗೆ ಬಂದಿರುವ ಕಷ್ಟವನ್ನು ಪರಿಹರಿಸಿದರೆ ಪ್ರತಿವರ್ಷವೂ ಹರಕೆ ಸಲ್ಲಿಸುವುದಾಗಿ ಬೇರೆ ಯಾವುದಾದರೂ ಪ್ರಸಿದ್ಧ ದೇವತೆಗೆ ಮೊರೆಹೋಗುತ್ತಾರೆ. ಕಷ್ಟ ಪರಿಹಾರವಾಗಿ ಬಿಟ್ಟರೆ ಆ ಹೊಸ ದೇವತೆ ಅವರ ಇಷ್ಟದೇವತೆಯಾಗುತ್ತದೆ.

ಗೃಹದೇವತೆಗಳನ್ನು ಮಂದೇವ್ರು (ಮನೆದೇವರು) ಎಂದು ಕರೆಯುತ್ತಾರೆ. ಪ್ರತಿಯೊಂದು ಮನೆಯೂ ಪವಿತ್ರದೇವಾಲಯ ಎಂದು ಪರಿಗಣಿಸಲಾಗುತ್ತದೆ. ಮನೆಯಲ್ಲಿ ತೆಂಗಿನಕಾಯಿ ಇಟ್ಟಿರುವ ಕಳಶವನ್ನು ಪೂಜಿಸಿ ಗೃಹಲಕ್ಷ್ಮೀ ಪೂಜೆಯನ್ನು ಮಾಡುತ್ತಾರೆ. ಗೃಹಪ್ರವೇಶದ ಸಂದರ್ಭದಲ್ಲೂ ಈ ಪೂಜೆ ಅತ್ಯಂತ ಶಾಸ್ತ್ರೀಯವಾಗಿ ನಡೆಯುತ್ತದೆ. ಜನಪದರಿಗೆ ಲಕ್ಷ್ಮಿ ಮಾತ್ರವಲ್ಲದೆ ಬೇರೆ ಬೇರೆ ಮನೆದೇವರುಗಳು ಇರುತ್ತಾರೆ.

ಜನಪದ ದೇವತೆಗಳಲ್ಲಿ ರೋಗದೇವತೆಗಳು ಅತ್ಯಂತ ಪ್ರಭಾವಶಾಲಿಗಳು. ರೋಗದೇವತೆಗಳಲ್ಲಿ ಐತ್ಗಮ್ಮ, ಪ್ಲೇಗಮ್ಮ, ಕಾಲರಮ್ಮ, ದಡಾರಮ್ಮ, ಸಿಡುಬಮ್ಮ ಮುಂತಾದವರು ಸುಪ್ರಸಿದ್ಧರು. ಗ್ರಾಮದೇವತೆ ದುರ್ಬಲಳಾದಾಗ ಇವರು ಊರನ್ನು ಪ್ರವೇಶಿಸುತ್ತಾರೆ. ಇವರು ಒಂದು ಕಿವಿಯನ್ನು ಹಾಸಿಕೊಂಡು ಒಂದು ಕಿವಿಯನ್ನು ಹೊದ್ದುಕೊಂಡು ಕಗ್ಗತ್ತಲಗವಿಗಳಲ್ಲಿ ಮಲಗಿರುತ್ತಾರಂತೆ. ಹಸಿವಿನಿಂದ ತತ್ತರಿಸಿದಾಗ ಕಾಕುಹಾಕುತ್ತ ಗುಡ್ಡದ ಗಾತ್ರ ಕಣ್ಣುಗಳಲ್ಲಿ ಕಿಡಿಕಾರುತ್ತ, ಕೊಳಗದಗಲ ಬಾಯಿ ಬಿಟ್ಟುಕೊಂಡು ಎಡಗೈಯಲ್ಲಿ ಮೊರ ಹಿಡಿದುಕೊಂಡು ಮಾನವರನ್ನೆಲ್ಲ ತೊಡೆದು ತಿಪ್ಪೆಗೆಸೆಯಲು ಬರುತ್ತಾರಂತೆ. ಕಾಯಿಲೆಗಳ ರೂಪದಲ್ಲಿ ಮಾನವರನ್ನು ಇವರು ಕೊಲ್ಲುತ್ತಾರೆ. ಇವರಿಗೆ ಕೋಳಿ, ಕುರಿ, ಆಡು, ಕೋಣ, ಹಂದಿಗಳನ್ನು ಬಲಿಕೊಟ್ಟು ಜನ ತಮ್ಮ ಗ್ರಾಮವನ್ನು ಉಳಿಸಿಕೊಳ್ಳುತ್ತಾರೆ.

ಸಣ್ಣಪುಟ್ಟ ಚಳಿಜ್ವರಗಳಿಗೆಲ್ಲ ಚೌಡಿ ಎಂಬ ದೇವತೆಯ ಸೋಕೇ ಕಾರಣವಂತೆ. ಇವಳ ಸ್ಪರ್ಶದಿಂದ ಕಾಯಿಲೆಗಳು ಬರುತ್ತವೆ. ಆದರೆ ಹರಕೆ ಹೊತ್ತು ಕೋಳಿ ಬಲಿ ಕೊಟ್ಟರೆ ಈ ದೇವತೆ ತೃಪ್ತಳಾಗುತ್ತಾಳೆ. ಇವಳ ಗಂಡ ಮುನೇಶ್ವರ. ಈತ ಭೂತ ಪ್ರೇತಗಳ ಒಡೆಯ. ನಟ್ಟನಡುರಾತ್ರಿ ಕಲ್ಲು ನೀರು ಕರಗುವ ವೇಳೆಯಲ್ಲಿ ಈ ಮುನೇಶ್ವರನ ಸಂಚಾರವಂತೆ. ದೆಯ್ಯಗಳು ಇವನನ್ನು ಹೊತ್ತುಕೊಂಡಿರುತ್ತವೆ. ಕೊಳ್ಳಿದೆಯ್ಯಗಳು ಉರಿಯುವ ಪಂಜನ್ನು ಹಿಡಿದು ಇವನ ಸುತ್ತಲೂ ಕುಣಿಯುತ್ತಿರುತ್ತವೆಯಂತೆ. ಈ ಉತ್ಸವವನ್ನು ಕಂಡವರು ಬೇರೆ ಯಾರೊಡನೆಯೂ ಈ ಸಂಗತಿಯನ್ನು ಹೇಳಬಾರದಂತೆ. ಹೇಳಿದರೆ ತಲೆ ಸಹಸ್ರ ಹೋಳಾಗುತ್ತದೆಯಂತೆ. ಇಂಥ ಬಗೆಬಗೆಯ ಬಣ್ಣಬಣ್ಣದ ಕಲ್ಪನೆಯ ದೇವತೆಗಳು ಆದಿವಾಸಿಗಳಲ್ಲಿ ಜೀವಂತವಾಗಿವೆ. ಅವರ ಜೀವನದ ಸರ್ವಸ್ವವೂ ಈ ದೇವತೆಗಳ ಅವಲಂಬನೆಯಿಂದಲೇ ರೂಪಿತವಾಗುತ್ತದೆ ಎಂದು ಅವರು ದೃಢವಾಗಿ ನಂಬುತ್ತಾರೆ.

**(ಪಿ.ಕೆ.ಆರ್ಎ.)**

**ಜನಪದ ಧರ್ಮ :** ಅತಿಮಾನುಷ ಶಕ್ತಿಗಳ ಬಗೆಗೆ ಮಾನವ ಹೊಂದಿರುವ ಮನೋಭಾವವನ್ನೇ ಧರ್ಮ ಎಂದು ಕರೆಯುವುದು. ಜನಪದ ಎನ್ನುವುದನ್ನು ಗ್ರಾಮೀಣ, ಪುರಾತನ, ಆದಿವಾಸಿ, ಅನಾಗರಿಕ ಎಂದು ಇಟ್ಟುಕೊಂಡಾಗ ಅಂಥ ಜನರ ನಡುವೆ ಪ್ರಚಲಿತವಿರುವ ಧಾರ್ಮಿಕ ನೀತಿ–ರೀತಿಗಳನ್ನು ಜನಪದ ಧರ್ಮ ಎಂದು ಕರೆಯಬಹುದು. ಯಾವಾಗ ಮನುಷ್ಯ ತನಗಿಂತಲೂ ಅತೀತವಾದ ನಿಗೂಢವಾದ ಬಾಹ್ಯಶಕ್ತಿಗಳ ಮೇಲೆ ಅವಲಂಬನ ಭಾವನೆಯನ್ನು ತಾಳಿದನೊ ಅಂದಿನಿಂದ ಧಾರ್ಮಿಕ ಭಾವನೆ, ಪೂಜೆ ಮತ್ತು ಪ್ರಾರ್ಥನೆಗಳು ಜನ್ಮತಾಳಿದುವು. ಪವಿತ್ರ ಶಕ್ತಿಗಳಿಗೆ ಸಂಬಂಧಿಸಿದಂತೆ ನಂಬಿಕೆ ಮತ್ತು ಅನುಷ್ಠಾನಗಳ ಸಂಘಟಿತ ಪದ್ಧತಿಯೊಂದು ಪ್ರಚಲಿತವಾಯಿತು. ಮಾನವ ತನ್ನ ದೈನಂದಿನ ಜೀವನವನ್ನು ನಡೆಸಲು ಆರ್ಥಿಕ, ವೈವಾಹಿಕ, ಕೌಟುಂಬಿಕ, ಸಾಮಾಜಿಕ ವ್ಯವಸ್ಥೆಗಳನ್ನು ಮಾಡಿಕೊಂಡಂತೆ ಧಾರ್ಮಿಕ ವ್ಯವಸ್ಥೆಯೊಂದು ಬೇಕಾಯಿತು. ಅತಿಮಾನುಷ ಕಲ್ಪನೆಯ ಜೊತೆಯಲ್ಲಿ ಮಾನವ ಮಾಡಿಕೊಂಡ ವ್ಯವಸ್ಥೆಯ ರೀತಿ ಮತ್ತು ಮಾದರಿಯೇ ಇದು. ಬಹಳ ಕಾಲದವರೆಗೆ ಧರ್ಮ ನಾಗರಿಕತೆಯ ಉತ್ಪನ್ನ ಮಾತ್ರ ಎಂಬ ಅಭಿಪ್ರಾಯವೇ ರೂಢವಾಗಿತ್ತು. ಆದರೆ ಅನಾಗರಿಕ ಸಮಾಜಗಳು ಧಾರ್ಮಿಕ ಚಟುವಟಿಕೆಗಳನ್ನು ಹೊಂದಿವೆ ಎಂಬುದನ್ನು ಇತ್ತೀಚೆಗೆ ವಿವರಿಸಿದ ಮೇಲೆ, ಜನಪದ ಧರ್ಮದ ಅಧ್ಯಯನ ಸ್ಪಷ್ಟರೂಪವನ್ನು ತಾಳಿಕೊಂಡಿತು.

ಜನಪದ ಧರ್ಮದ ಎರಡು ಪ್ರಧಾನ ಅಂಶಗಳೆಂದರೆ ನಂಬಿಕೆ ಮತ್ತು ಆಚರಣೆಗಳು. ಮೊದಲನೆಯದು ಧರ್ಮದ ಸ್ಥಾಯಿ ಭಾಗವಾದರೆ, ಎರಡನೆಯದು ಕ್ರಿಯಾಶೀಲ ಭಾಗವಾಗುತ್ತದೆ. ಅತಿಮಾನುಷದ ಕಡೆಗಿನ ಜನಪದದ ಮಾನಸಿಕ ಭಾವನೆ ವ್ಯಾಪಕವಾಗಿ ಪ್ರಕಟಗೊಂಡಿರುವುದು ಇವುಗಳ ಮೂಲಕವಾಗಿಯೇ. ಎಲ್ಲ ಧರ್ಮಗಳೂ ನಂಬಿಕೆ

ಮತ್ತು ಆಚರಣೆಯ ತಳಹದಿಯನ್ನು ಹೊಂದೇ ಇರುತ್ತವೆ. ಆಚರಣೆ ಧರ್ಮಕ್ಕೆ ಸಂಬಂಧಿಸಿದಂತೆ ನಡೆಯುವ ಒಂದು ಸಾಮೂಹಿಕ ಅನುಷ್ಠಾನ. ಪ್ರಾರ್ಥನೆ, ಸಂತರ್ಪಣೆ, ನೃತ್ಯ, ಗೀತ ಮುಂತಾದುವು ಇದಕ್ಕೆ ಉದಾಹರಣೆಗಳಾಗುತ್ತವೆ. ಧಾರ್ಮಿಕ ಭಾವನೆಗಳನ್ನು ಸಲಹುವುದರಲ್ಲಿ ಧಾರ್ಮಿಕ ನಂಬಿಕೆಗಿಂತ ಆಚರಣೆ ಅತ್ಯಂತ ಪ್ರಮುಖವೆಂದು ಕೆಲವರ ಅಭಿಪ್ರಾಯ. ಇದು ವ್ಯಕ್ತಿ ಮತ್ತು ಅತಿಮಾನುಷ ಶಕ್ತಿಗಳ ನಡುವೆ ಸಂಪರ್ಕ ಸ್ಥಾಪಿಸುವ ಕೆಲವೊಂದು ಕ್ರಿಯಾವಿಧಿಯ ರೂಪದಲ್ಲಿರುತ್ತದೆ. ನಂಬಿಕೆಗಳು ಆಚರಣೆಗಳಿಗೆ ಶಾಸನಗಳಾಗುತ್ತವಲ್ಲವೆ ಅವು ಸುರಕ್ಷಿತವಾಗಿ ನಡೆದುಕೊಂಡು ಬರುವಂತೆ ನೋಡಿಕೊಳ್ಳುತ್ತವೆ.

ಪುರಾತನವಾದ ಜನಪದ ಧರ್ಮದಲ್ಲಿ ನಾಗರಿಕ ಧರ್ಮದಲ್ಲಿರುವಂತೆ ತಾತ್ತ್ವಿಕ ಚಿಂತನೆಯಾಗಲಿ, ತರ್ಕಬದ್ಧತೆಯಾಗಲಿ ಇರುವುದಿಲ್ಲ. ಜನಪದ ಧರ್ಮದಲ್ಲಿನ ಅತಿಮಾನುಷ ಸ್ವರೂಪ ಸಮಾಜದಿಂದ ಸಮಾಜಕ್ಕೆ, ಜನತೆಯಿಂದ ಜನತೆಗೆ ವ್ಯತ್ಯಾಸವಾಗುತ್ತದೆ. ಕೆಲವು ಕಡೆ ಈ ಅತಿಮಾನುಷ ಅಂಶ ಭೂತಪ್ರೇತಗಳಿಂದ ಸಂಯೋಜಿತವಾಗಿರಬಹುದು; ಇನ್ನು ಕೆಲವೆಡೆ ಇದು ಜಗತ್ತಿನ ಪ್ರತಿಯೊಂದರಲ್ಲಿಯೂ ವ್ಯಾಪಿಸಿಕೊಂಡಿರುವ, ವ್ಯಕ್ತಿರೂಪ ವಲ್ಲದ ಶಕ್ತಿಯಾಗಿರಬಹುದು; ಮತ್ತೆ ಕೆಲವೆಡೆ ಮನುಷ್ಯತ್ವವನ್ನು ಆರೋಪಿಸಬಹುದಾದ ದೇವದೇವತೆಗಳಾಗಿರಬಹುದು. ಪುರಾತನರಲ್ಲಿ ಈ ಅತಿಮಾನುಷತೆ ಪವಿತ್ರ ಮತ್ತು ಪ್ರಾಪಂಚಿಕ ಭಾಗಗಳೆಂದು ಒಡೆದುಕೊಳ್ಳುತ್ತದೆ. ಪವಿತ್ರ ಭಾಗ ಧರ್ಮವೆಂದು ಕರೆಸಿಕೊಂಡರೆ, ಪ್ರಾಪಂಚಿಕ ಭಾಗ ಮಂತ್ರವಿದ್ಯೆ ಎಂದು ಕರೆಸಿಕೊಳ್ಳುತ್ತದೆ.

ಧರ್ಮವನ್ನು ಕುರಿತು ಅನೇಕ ವಿವರಣೆಗಳು ಪ್ರಸಿದ್ಧವಾಗಿವೆ. ಇವೆಲ್ಲ ವಿವಿಧ ಕಾಲಗಳಲ್ಲಿ ಇದ್ದ ಭಿನ್ನ ಸಮಾಜಗಳಲ್ಲಿನ ಅತಿಮಾನುಷ ಕಲ್ಪನೆಗಳನ್ನು ವಿವರಿಸುವವೇ ಆಗಿವೆ. ಇವುಗಳಲ್ಲಿ ಕೆಲವು ಪ್ರಾಕೃತ ಸ್ಥಿತಿಯಿಂದ ಮುಂದುವರಿದ ರೂಪಗಳಿಗೆ ಧರ್ಮ ವಿಕಾಸವಾದುದನ್ನು ಹೇಳಿದರೆ, ಇನ್ನು ಕೆಲವು ಧರ್ಮದ ಕಾರ್ಯಗಳ ಮೇಲೆ ಕೇಂದ್ರೀಕೃತವಾಗುತ್ತವೆ.

ಮೊದಲ ಗುಂಪಿನಲ್ಲಿ ಸರ್ವಚೇತನವಾದ, ಶಕ್ತಿವಾದ ಮತ್ತು ಪ್ರಕೃತಿವಾದಗಳು ಪ್ರಮುಖವಾಗಿವೆ. ಮನುಷ್ಯ, ಪ್ರಾಣಿ, ಪಕ್ಷಿಗಳೆನ್ನದೆ ಎಲ್ಲದರಲ್ಲಿಯೂ ಆತ್ಮವಿದೆ ಎಂಬ ಕಲ್ಪನೆಯಿಂದಾದುದು ಸರ್ವಚೇತನವಾದ. ಇದರ ಪ್ರಕಾರ ಆತ್ಮದ ಕಲ್ಪನೆ ಎಂಬ ಕಲ್ಪನೆಯಿಂದಾದುದು ಸರ್ವಚೇತನವಾದ. ಇದರ ಪ್ರಕಾರ ಆತ್ಮದ ಕಲ್ಪನೆ ಧರ್ಮದ ಕೇಂದ್ರವಾಗಿದೆ. ಪುರಾತನ ಮಾನವನಿಗಾದ ಕೆಲವು ಅನುಭವಗಳನ್ನು ಇಟ್ಟುಕೊಂಡು ಇದನ್ನು ವಿವರಿಸಬಹುದು. ಆತ ತನ್ನ ಕನಸುಗಳಲ್ಲಿ ಕೂಡ ವಿವಿಧ ಚಟುವಟಿಕೆಗಳಲ್ಲಿ ನಿರತನಾಗಿರುತ್ತಿದ್ದ. ಸತ್ತ ಪೂರ್ವಜರನ್ನು ಕಾಣುತ್ತಿದ್ದ. ಎಚ್ಚೆತ್ತಿದ್ದಾಗ ತನ್ನ ಧ್ವನಿಯನ್ನೇ ಮರುಧ್ವನಿಯನ್ನಾಗಿ ಕೇಳುವುದು, ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ಕಾಣುವುದು, ನೆರಳು ತನ್ನಿಂದ ಬೇರೆಯಾಗದೆ ಇರುವುದನ್ನು ಗಮನಿಸುವುದು–ಮುಂತಾದವು ಅವನನ್ನು ಯೋಚಿಸುವಂತೆ ಮಾಡಿದುವು. ಸಾವಿಗೂ ನಿದ್ರೆಗೂ ವ್ಯತ್ಯಾಸ ತಿಳಿಯುತ್ತಿರಲಿಲ್ಲ. ಅಗೋಚರ ಶಕ್ತಿಯೊಂದು ಅವನಲ್ಲಿದ್ದಾಗ ಜೀವಂತವಿರುತ್ತಾನೆ ; ಅದು ಅವನನ್ನು ತ್ಯಜಿಸಿದಾಗ ಅವನು ಸಾಯುತ್ತಾನೆ. ಇದನ್ನೇ ಆತ್ಮ ಎಂದು ಕರೆಯುವುದು. ಆದರೆ ನಿದ್ರೆ ಸಾವಲ್ಲದಿರುವುದು, ಕನಸುಗಳಲ್ಲಿ ವಿವಿಧ ಅನುಭವಗಳನ್ನು ಪಡೆಯುವುದು ಮೊದಲಾದವುಗಳಿಂದ ಪುರಾತನ ಮನುಷ್ಯ ತನ್ನಲ್ಲಿ ಎರಡು ಆತ್ಮಗಳಿರಬೇಕೆಂದು ನಂಬಿದ: ಒಂದು, ಮನುಷ್ಯನಿಂದ ಹೊರಗೆ ಹೋಗಿ ಅನುಭವಗಳನ್ನು ಆರ್ಜಿಸುವ ಸ್ವತಂತ್ರ ಆತ್ಮ; ಇನ್ನೊಂದು ದೇಹಾಂತರ್ಗತವಾಗಿರುವ ಆತ್ಮ. ಈ ಅಂತರಾತ್ಮ ಶಾಶ್ವತವಾಗಿ ದೇಹವನ್ನು ತ್ಯಜಿಸಿದಾಗ ವ್ಯಕ್ತಿ ಸತ್ತು, ಅವನ ಆತ್ಮ ಪ್ರೇತವಾಗುತ್ತದೆ. ಮೃತಾತ್ಮರನ್ನು ಕನಸಿನಲ್ಲಿ ಕಾಣುವುದರಿಂದ ಆತ್ಮ ಅಮರವೆಂದು ಭಾವಿಸಲಾಯಿತು. ಈ ಆತ್ಮ ದೇಹವನ್ನು ತಾತ್ಕಾಲಿಕವಾಗಿ ಬಿಟ್ಟಿದೆಯೇ ಇಲ್ಲವೇ ಶಾಶ್ವತವಾಗಿ ತ್ಯಜಿಸಿದೆಯೇ ಎಂಬ ಅನಿಶ್ಚಯದ ಕಾರಣದಿಂದ, ಆದಿವಾಸಿಗಳು ಎರಡು ಸಾರಿ ಶವಸಂಸ್ಕಾರ ಮಾಡುತ್ತಾರೆ : ಮೊದಲನೆಯದು ಸಾವು ಸಂಭವಿಸಿದ ಕೂಡಲೇ ನಡೆಯುವಂಥದು, ಎರಡನೆಯದು ಆತ್ಮ ಹಿಂದಿರುಗುವ ಎಲ್ಲ ಆಶೆಯನ್ನೂ ಕಳೆದುಕೊಂಡ ಮೇಲೆ, ಕೆಲವು ದಿವಸಗಳ ಅನಂತರ ಆಚರಿಸುವಂಥದು. ಎರಡನೆಯದನ್ನೇ ನಾವು ಶ್ರಾದ್ಧ ಎಂದು ಕರೆಯುವುದು.

ಈ ಅಲೌಕಿಕ ಜೀವಿಗಳ ಬಗೆಗಿನ ಭಯ–ಗೌರವ ಭಾವನೆಗಳೇ ಜನಪದ ಧರ್ಮದ ಆದಿಮ ರೂಪವೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ಅಲೌಕಿಕ ಜೀವಿಗಳು ನಮ್ಮ ಹಿಡಿತದಲ್ಲಿಲ್ಲ. ಆದ್ದರಿಂದ ಅವರು ನಮಗೆ ತೊಂದರೆ ಉಂಟು ಮಾಡುವುದಕ್ಕೆ ಬದಲಾಗಿ ಸಹಾಯ ಮಾಡುವಂತೆ ಒಲಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಆರಾಧನೆಯ ಪ್ರಾಚೀನ ರೂಪವಾದ ಪೂರ್ವಜರ ಪೂಜೆ ರೂಢಿಗೆ ಬಂತು. ಸಮಾಧಿಗಳೇ ಪುರಾತನ ದೇವಾಲಯಗಳಾದುವು. ಮಾನವಜೀವನದಲ್ಲಿ ಅಲೌಕಿಕ ಜೀವಿಗಳು ವಹಿಸಿದ ಪಾತ್ರವನ್ನು ಕುರಿತಂತೆ ಬೆಳೆದ ನಂಬಿಕೆಯೇ ಸರ್ವಚೇತನವಾದವೆನಿಸಿತು. ಇದು ಒಂದು ಬಗೆಯ ಬಹುದೇವತಾರಾಧನೆ ಎಂದು ಹೇಳಬಹುದು. ಇದೇ ಕ್ರಮೇಣ ಏಕದೇವತಾರಾಧನೆಯಾಗಿ ವಿಕಾಸ ಪಡೆಯಿತೆಂದು ಕೆಲವರು ಹೇಳುತ್ತಾರೆ.

ಆದರೆ ಪುರಾತನ ಮಾನವನನ್ನು ತಾತ್ತ್ವಿಕನನ್ನಾಗಿ ಮತ್ತು ತಾರ್ಕಿಕನನ್ನಾಗಿ ಮಾಡುವ ಈ ವಾದ ಉತ್ಪ್ರೇಕ್ಷೆಯಿಂದ ಕೂಡಿದುದೆಂದು ಹೇಳಬೇಕಾಗುತ್ತದೆ. ಏಕೆಂದರೆ, ಪುರಾತನ ಮನುಷ್ಯ ವಾಸ್ತವ ಜೀವನದಲ್ಲಿ ತೊಡಗಿರುತ್ತಾನೆಯೇ ಹೊರತು, ಈ ಸಿದ್ಧಾಂತ ಹೇಳುವ ಹಾಗೆ ಚಿಂತಿಸುವುದಿಲ್ಲ. ಅವನು ಬದುಕು ಮತ್ತು ಪ್ರಕೃತಿಯಲ್ಲಿ ಭಾಗಿಯಾಗುತ್ತಾನೆ. ಆದರೆ ಅದಕ್ಕೆ ಬೌದ್ಧಿಕ ವಾತಾವರಣವನ್ನು ಕಲ್ಪಿಸುವುದಿಲ್ಲ. ಹಾಗೆಯೇ, ಧಾರ್ಮಿಕ ವಿಕಾಸ ಬಹುದೇವತಾರಾಧನೆಯಿಂದ ಏಕದೇವತಾರಾಧನೆಗೆ ಬಂದಿತೆಂಬುದಕ್ಕೆ ಆಧಾರಗಳಿಲ್ಲ.

ಸರ್ವಚೇತನವಾದ ಧರ್ಮದ ಇತಿಹಾಸದಲ್ಲಿ ಆಮೇಲೆ ಬಂದುದು. ಇದಕ್ಕಿಂತ ಮೊದಲು ಧಾರ್ಮಿಕ ನಂಬಿಕೆ ಪ್ರತಿಯೊಂದು ವಸ್ತುವಿಗೂ ಜೀವವಿದೆ ಎಂಬುದನ್ನು ಮಾತ್ರ ಹೇಳುವುದಾಗಿತ್ತು. ವಸ್ತುಪೂಜೆ ಪ್ರಾಯಶಃ ಧರ್ಮದ ಪ್ರಾಥಮಿಕ ರೂಪವೆಂದು ತೋರುತ್ತದೆ. ಭೌತಿಕ ವಸ್ತುಗಳನ್ನು ಕುರಿತಂತೆ, ಅವುಗಳಲ್ಲಿನ ರಹಸ್ಯಶಕ್ತಿಯ ಕಾರಣದಿಂದಾಗಿ ಬಂದ ಆರಾಧನೆಯೇ ಇದು. ಆರಾಧಕರ ಅಭೀಪ್ಸೆಗಳನ್ನು ಈಡೇರಿಸುವ ಅಥವಾ ಈಡೇರಿಸದಿರುವ ಕಾರಣಗಳಿಗೆ ಅನುಗುಣವಾಗಿ ವಸ್ತುವೊಂದರ ಆರಾಧನೆ ಅಥವಾ ನಿಂದನೆ ಇರುತ್ತಿತ್ತು. ಒಳ್ಳೆಯದು ಅಥವಾ ಕೆಟ್ಟದ್ದನ್ನು ಮಾಡಬಲ್ಲುದೆಂದು ಭಾವಿಸಲಾಗಿದ್ದು, ಅತೀತ ಶಕ್ತಿಗೆ ಆರೋಪಿಸಲಾಗಿದ್ದ ಇದನ್ನು ಅಕ್ಷರಪೂರ್ವ ಜನ ಮಾನಾ ಎಂದು ಕರೆಯುತ್ತಿದ್ದರು. ಇದರಿಂದ ಹುಟ್ಟಿಕೊಂಡ ಸಿದ್ಧಾಂತಕ್ಕೆ ಮಾನಾಯಿಸಂ ಎಂದು ಕರೆದರು. ಅವ್ಯಕ್ತ ಶಕ್ತಿಯಲ್ಲಿನ ನಂಬಿಕೆಯೇ ಈ ವಾದದ ತಿರುಳು. ಸಜೀವ ನಿರ್ಜೀವ ವಸ್ತುಗಳಲ್ಲೆಲ್ಲ ಇದು ನೆಲೆಸಿದೆ ಎಂಬುದಾಗಿ ವಿವರಿಸಲಾಯಿತು. ಈ ಅಸಾಧಾರಣ ಶಕ್ತಿಗೆ ಮಾಂತ್ರಿಕ ಸಾಮರ್ಥ್ಯವೂ ಇರುತ್ತದೆ. ಇದು ಭೌತಿಕ ಶಕ್ತಿಯ ಮೂಲಕ ಅಥವಾ ಇಂಥದೇ ವಿಶಿಷ್ಟ ಗುಣಗಳ ಮೂಲಕ ಮೈದೋರಬಹುದು.

ಪ್ರಕೃತಿವಾದ ಮತ್ತೊಂದು ಬಗೆಯದು. ಪ್ರಕೃತಿಯ ವಸ್ತುಗಳನ್ನು ಕುರಿತಂತೆ ಬಂದ ಆರಾಧನಾ ಪದ್ಧತಿಯೇ ಇದು. ಇದನ್ನು ಧರ್ಮದ ಅತ್ಯಂತ ಪ್ರಾಚೀನ ರೂಪವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಪ್ರಕೃತಿಯ ವಸ್ತುಗಳ ಬಗೆಗಿನ ಮಾನವನ ಭಯ ಅಥವಾ ಗೌರವಭಾವನೆ, ನಿರ್ಜೀವ ವಸ್ತುಗಳಿಗೆ ಸಜೀವತೆಯನ್ನು ಆರೋಪಿಸುವ ಮತ್ತು ಅದರಲ್ಲಿ ಎಲ್ಲ ಶಕ್ತಿಯನ್ನೂ ತುಂಬುವ ಅವನ ಮನೋವಿಕಾರದ ಫಲವೆಂದೇ ಹೇಳಬೇಕಾಗುತ್ತದೆ. ಈ ಮನೋವಿಭ್ರಾಂತಿಯಿಂದ ಸೂರ್ಯ ಉದಯಿಸುತ್ತಾನೆ ಮತ್ತು ಮುಳುಗುತ್ತಾನೆ. ಗುಡುಗು ಮಳೆಯನ್ನು ಕಳುಹಿಸುತ್ತದೆ, ಮರ ಹೂವು ಹಣ್ಣುಗಳನ್ನು ಕೊಡುತ್ತದೆ ಎಂಬ ಕಲ್ಪನೆ ಬಂದು, ಇವುಗಳ ಹಿಂದೆ ಶಕ್ತಿಯೊಂದು ಅಡಗಿದೆ ಎಂಬ ನಂಬಿಕೆ ಸೃಷ್ಟಿಯಾಗಲು ಕಾರಣವಾಯಿತು. ಈ ರೀತಿಯ ನಂಬಿಕೆಗಳಿಗೆ ವಿಕಾಸ ಹೊಂದದ ಮಾನವಮನಸ್ಸೇ ಕಾರಣವಾಗಿ, ಅವನಲ್ಲಿನ ವಿಚಾರಶಕ್ತಿಯ ಅಭಾವದಿಂದಾಗಿ ಪ್ರಕೃತಿಪೂಜೆ ಬಂದಿರಬೇಕೆಂದು ಕೆಲವರ ಅಭಿಪ್ರಾಯ. ಪ್ರಕೃತಿಯ ವಸ್ತುಗಳನ್ನು ಆರಾಧಿಸುವ ವಿಷಯದಲ್ಲಿ ತೊಡಕೇನೂ ಕಂಡುಬರುವುದಿಲ್ಲ. ಇದನ್ನು ಸಮರ್ಥಿಸುವ ಸಾಕಷ್ಟು ಆಧಾರಗಳು ದೊರೆಯುತ್ತವೆ. ಆದರೆ ಈ ಬಗೆಯ ಆರಾಧನೆಯೇ ಧರ್ಮದ ಪ್ರಾಚೀನ ರೂಪ ಎನ್ನುವುದರಲ್ಲಿ ಮಾತ್ರ ಸಂದೇಹ ಬರುತ್ತದೆ.

ಜನಪದ ಧರ್ಮವನ್ನು ಅದರ ಕಾರ್ಯಗಳ ಮೂಲಕ ವಿವರಿಸುವುದು ಮುಖ್ಯವಾಗಿದೆ. ಧರ್ಮಕ್ಕೂ ಮಾನವನ ವಿವಿಧ ಭಾವಾವೇಶಗಳಿಗೂ ನಿಕಟ ಸಂಬಂಧವಿರುವುದನ್ನು ನೋಡುತ್ತೇವೆ. ಸಮಾಜಗಳಲ್ಲಿ ಬೀಜ ಬಿತ್ತುವಾಗ, ಕೊಯ್ಲುಕುಯ್ಯುವಾಗ, ಮೀನು ಹಿಡಿಯುವಾಗ, ಬೇಟೆಯಾಡುವಾಗ ಧಾರ್ಮಿಕ ಹಾಗೂ ಮಾಂತ್ರಿಕ ಆಚರಣೆಗಳು ಪ್ರಚಲಿತವಿರುವುದನ್ನು ಗುರುತಿಸಬಹುದು. ಪೂರ್ವೋಕ್ತ ಸಂದರ್ಭಗಳಲ್ಲಿ ಒದಗಬಹುದಾದ ಅಡಚಣೆಗಳ ಬಗೆಗಿನ ಭಯವೇ ಆ ಕುರಿತ ಆಚರಣೆಗಳಿಗೆ ಕಾರಣವಾಗಿವೆ. ಇದೇ ರೀತಿಯಲ್ಲಿ ಮಾನವಜೀವನದಲ್ಲಿ ಬರುವ ವಿವಿಧ ಪರಿಸ್ಥಿತಿಗಳು ದ್ವೇಷ, ದುರಾಸೆ, ಕ್ರೋಧ, ಪ್ರೀತಿ ಮುಂತಾದ ಭಾವಗಳ ಹುಟ್ಟಿಗೆ ಕಾರಣವಾಗುತ್ತವೆ. ಈ ಪರಿಸ್ಥಿತಿಗಳು ಮನುಷ್ಯನ ಎಲ್ಲ ಚಟುವಟಿಕೆಗಳನ್ನೂ ಕಲಕುತ್ತವೆ. ಇಂಥ ಭಾವೋದ್ರೇಕದ ಪರಿಸ್ಥಿತಿಯಲ್ಲಿ ಮನುಷ್ಯ ತನ್ನ ದೈನಂದಿನ ಕೆಲಸಗಳನ್ನು ಕೈಗೊಳ್ಳಲು ಕಷ್ಟವಾಗುತ್ತದೆ. ಇಂಥ ಸ್ಥಿತಿಯಲ್ಲಿ ಧರ್ಮ ವಿರೇಚಕ ಸಾಧನವಾಗಿ ಬಂದು, ಮನುಷ್ಯನ ಈ ಭಾವೋದ್ರೇಕ ಮನಸ್ಸನ್ನು ತೊಳೆಯುತ್ತದೆ. ಅಂದರೆ ಮನುಷ್ಯ ಮತ್ತು ಅತಿಮಾನುಷ ಶಕ್ತಿಯ ನಡುವೆ ಧಾರ್ಮಿಕ ವ್ಯವಸ್ಥೆಯೊಂದನ್ನು ಇದು ಮಾಡುತ್ತದೆ. ಹೀಗೆ ಧರ್ಮ ವ್ಯಕ್ತಿಜೀವನದಲ್ಲಿ ಶಾರೀರಿಕ ಹಾಗೂ ಮಾನಸಿಕ ಸ್ಥಿರತೆಯೊಂದನ್ನು ತರುವ ವಿಧಾನವಾಗಿ ಕೆಲಸ ಮಾಡುತ್ತದೆ.

ಆದರೆ ಕೆಲವರ ದೃಷ್ಟಿಯಲ್ಲಿ ಧರ್ಮದ ಕಾರ್ಯವೆಂದರೆ, ಮಾನವನ ಮನಸ್ಸಿನಿಂದ ಭಯ ಮತ್ತಿತರ ಭಾವೋದ್ರೇಕಗಳನ್ನು ವಿರೇಚನ ಮಾಡುವುದಲ್ಲ, ಅವಲಂಬನಾ ಭಾವನೆಯನ್ನು ತುಂಬುವುದಾಗಿರುತ್ತದೆ. ವ್ಯಕ್ತಿಗಿಂತ ಗುಂಪಿನ ಉಳಿವೇ ಇಲ್ಲಿ ಮುಖ್ಯ. ವ್ಯಕ್ತಿ ಏನಾದರೂ ತ್ಯಾಗಗಳನ್ನು ಮಾಡಿದರೆ, ಅದು ಅವನ ವೈಯಕ್ತಿಕ ಆಸಕ್ತಿಯಿಂದ ಮಾಡಿದುದಾಗಿರುತ್ತದೆ; ಏಕೆಂದರೆ, ಸಾಮಾಜಿಕ ಉಳಿವಿಲ್ಲದೆ ವ್ಯಕ್ತಿಯ ಉಳಿವು ಅಸಾಧ್ಯವಾಗುತ್ತದೆ.

ಇದನ್ನು ತಿಳಿಯದೆ ವ್ಯಕ್ತಿ ಇದಕ್ಕೆ ವಿರುದ್ಧವಾಗಿ ವರ್ತಿಸುವುದಾದರೆ, ಅದು ಸಾಮಾಜಿಕ ವ್ಯವಸ್ಥೆಯ ಏರುಪೇರಿಗೆ ಕಾರಣವಾಗುತ್ತದೆ. ಸಾಮಾಜಿಕ ಉಳಿವಿಗೆ ಕಟ್ಟಳೆಗಳ ಪಾಲನೆ ಅಗತ್ಯವಾಗಿರುತ್ತದೆ. ಆದ್ದರಿಂದ ಅತಿಮಾನುಷ ಶಕ್ತಿಯಲ್ಲಿನ ಹೆದರಿಕೆ ಮತ್ತು ಅದರಿಂದಾಗುವ ಶಿಕ್ಷೆಯ ಭೀತಿ, ಸ್ವರ್ಗ ನರಕಗಳ ಕಲ್ಪನೆ–ಇವು ಸಾಮಾಜಿಕವಾಗಿ ಸಮ್ಮತಿಸಿದ ವರ್ತನೆಗೆ ಬಹಳವಾಗಿ ನೆರವಾಗುತ್ತವೆ ; ಸಾಮಾಜಿಕ ವ್ಯವಸ್ಥೆ ಸುರಕ್ಷಿತವಾಗಿ ಉಳಿಯುತ್ತದೆ. ಇದರ ಕಾರಣ ಧರ್ಮದ ಕಾರ್ಯ ಎರಡು ರೀತಿಯಲ್ಲಿ ವರ್ತಿಸಿದಂತಾಯಿತು. ಸಮಾಜದ ಮೇಲಿನ ಅವಲಂಬನಾ ಭಾವನೆ ಮತ್ತು ಅದರಿಂದಾಗುವ ಸಾಮಾಜಿಕ ಕಟ್ಟಳೆಗಳೊಡನೆ ವ್ಯಕ್ತಿಯ ಒಪ್ಪಿಗೆ, ಅಂತಿಮವಾಗಿ ಸಾಮಾಜಿಕ ಉಳಿವು. ಒಟ್ಟಿನಲ್ಲಿ ವ್ಯಕ್ತಿಗೆ ಸಮಾಜ ಎಷ್ಟು ಮುಖ್ಯವೋ ಸಮಾಜಕ್ಕೆ ವ್ಯಕ್ತಿಯೂ ಅಷ್ಟೇ ಮುಖ್ಯನಾಗುತ್ತಾನೆಂದು ಹೇಳಬಹುದು.

ಧಾರ್ಮಿಕ ವಿಚಾರಗಳು, ಸಾಮಾಜಿಕ ಕೂಟಗಳು ಹಬ್ಬ ಮತ್ತಿತರ ಸಾಮಾಜಿಕ ಕೂಟಗಳು ಸೇರಿದಾಗ ಹುಟ್ಟಿದವುಗಳು. ಇಂಥ ಸಂದರ್ಭಗಳಲ್ಲಿ ಸಾಮಾಜಿಕ ಜೀವನ ಆಸಕ್ತಿ ವಹಿಸುವುದಲ್ಲದೆ, ಮಾನವ ಮನಸ್ಸಿನ ಮೇಲೆ ಗುಂಪಿನ ಸರ್ವಶಕ್ತ ಭಾವನೆಯನ್ನು ಅಚ್ಚೊತ್ತುತ್ತದೆ. ಮನುಷ್ಯ ಏನಾಗಿದ್ದಾನೊ ಮತ್ತು ಏನೆಲ್ಲ ಹೊಂದಿದ್ದಾನೊ ಅದಕ್ಕೆಲ್ಲ ಇದು ಮೂಲ ಆಕರವಾಗಿ ಪರಿಣಮಿಸುತ್ತದೆ.

ಧರ್ಮ ಬೆಳೆಯುವುದಕ್ಕೆ ಕುಲದೇವತಾ ಪದ್ಧತಿಯೊಂದು (ನೋಡಿ) ಮುಖ್ಯ ಕಾರಣ. ಪುರಾತನರು ಕೆಲವು, ಭೌತವಸ್ತುಗಳನ್ನು ತಮ್ಮ ಕುಲಪುರುಷರೆಂದು ಭಾವಿಸಿ ಪೂಜ್ಯಭಾವದಿಂದ ನಡೆದುಕೊಳ್ಳುತ್ತಿದ್ದುದನ್ನು ಇವೊತ್ತಿಗೂ ಕಾಣಬಹುದು. ಪ್ರಾಣಿ, ಸಸ್ಯ ಅಥವಾ ವಸ್ತುವೊಂದನ್ನು ಕುಲದೇವತೆಯೆಂದು ನಂಬಿ ಆರಾಧಿಸುತ್ತಿದ್ದ ಪದ್ಧತಿಯೇ ಇದು. ಇಂಥ ಕುಲದೇವತಾಪ್ರಾಣಿ, ಸಸ್ಯಗಳನ್ನು ಕೊಲ್ಲದ, ನಾಶಮಾಡದ, ತಿನ್ನದ ಕೆಲವು ನಿಷಿದ್ಧಗಳು ಪ್ರಚಲಿತವಾಗಿವೆ. ಹೀಗೆ ಕುಲದೇವತೆಯಲ್ಲಿನ ನಂಬಿಕೆ ಮತ್ತು ಆ ಬಗೆಗಿನ ನಿಷಿದ್ಧಗಳು ಪ್ರಚಲಿತವಾಗಿವೆ. ಈ ರೀತಿ ಕುಲದೇವತೆಯಲ್ಲಿನ ನಂಬಿಕೆ ಮತ್ತು ಆ ಬಗೆಗಿನ ನಿಷಿದ್ಧಗಳು ಜನಪದ ಧರ್ಮವನ್ನು ಪೋಷಿಸಿವೆ, ಬೆಳೆಸಿವೆ.

ಮಾನವನಿಗೆ ಕಷ್ಟಪರಿಸ್ಥಿತಿಗಳು ಒದಗಿದಾಗ ಧರ್ಮ ಮತ್ತು ಮಂತ್ರವಿದ್ಯೆಯ ಮರೆಹೊಗುವುದು ಆದಿಯಿಂದಲೂ ರೂಢಿಯಲ್ಲಿದೆ. ಅಗೋಚರ ಶಕ್ತಿಗಳನ್ನು ಪ್ರಾರ್ಥನೆ ಪೂಜೆಗಳ ಮೂಲಕ ಒಲಿಸಿಕೊಂಡು ಇದನ್ನು ಈಡೇರಿಸಿಕೊಳ್ಳುತ್ತಿದ್ದ. ಮಾನವ ಭೂತಪ್ರೇತಗಳಲ್ಲಿ ಅಗಾಧ ನಂಬಿಕೆಯನ್ನು ಇಟ್ಟವನಾದ್ದರಿಂದ ಅವನ್ನು ಕೆಲವು ಮಾಟಮಂತ್ರಗಳ ಮೂಲಕ ತನ್ನ ಕಾರ್ಯಕ್ಕೆ ಒಗ್ಗಿಸಿಕೊಳ್ಳುತ್ತಿದ್ದುದನ್ನು ಕಾಣಬಹುದು.

ಧರ್ಮ ಭಾವೋದ್ರೇಕಗಳನ್ನೂ ಮಾನಸಿಕ ದೋಷಗಳನ್ನೂ ಪರಿಹರಿಸಿಕೊಳ್ಳುವುದಕ್ಕೆ ಸಾಧನವಾಗಿದೆ. ಅದು ಇಹ–ಪರದ ಸೇತುವಾಗಿರುವುದು ಮಾತ್ರವಲ್ಲದೆ, ಪ್ರಕೃತಿಯ ವಸ್ತುವಿಶೇಷಗಳೊಂದಿಗೆ ಸಂಬಂಧ ಏರ್ಪಡಿಸುತ್ತದೆ. ಜನಿಸಿದ ಮಕ್ಕಳು ಪೂರ್ವಜರ ಅವತಾರಗಳೆಂಬ ಆದಿವಾಸಿಯ ಶ್ರದ್ಧೆ ಪುನರ್ಜನ್ಮದಲ್ಲಿ ನಂಬಿಕೆ ಹುಟ್ಟಿಸಿತು, ಸತ್ತವರ ಬಗ್ಗೆ ಗೌರವಾದರಗಳನ್ನು ಕಲ್ಪಿಸಿತು. ಸತ್ತವರ ಆತ್ಮಗಳು ಮಳೆ ಕರೆಯುತ್ತವೆ, ವ್ಯವಸಾಯಕ್ಕೆ ಸಹಾಯ ಮಾಡುತ್ತವೆ, ಕಷ್ಟ ಪರಿಹರಿಸುತ್ತವೆ ಎಂಬೀ ಭಾವನೆಗಳೂ ಇದೇ ಪರಿಣಾಮವನ್ನು ತಂದುವು. ಹೀಗಾಗಿ ಸತ್ತವರಿಗೂ ಜೀವಂತ ಇರುವವರಿಗೂ ನಿಕಟ ಸಂಬಂಧವೊಂದನ್ನು ಧರ್ಮ ಮಾಡಿಕೊಟ್ಟಿತು. ಸಾಮೂಹಿಕ ಚಟುವಟಿಕೆಯಾದ ಜನಪದ ಧರ್ಮ ಸಮೂಹ ಭಾವನೆ ಬೆಳೆಯುವುದಕ್ಕೆ, ಬುಡಕಟ್ಟುಗಳಲ್ಲಿ ಏಕತೆಯೊಂದು ರೂಢಗೊಳ್ಳುವುದಕ್ಕೆ ತಳಹದಿಯನ್ನು ರೂಪಿಸಿತಲ್ಲದೆ, ಆಯಾ ಸಮೂಹದ ಸಾಂಸ್ಕೃತಿಕ ಮೌಲ್ಯಗಳನ್ನು ರಕ್ಷಿಸಿದೆ. (ಆರ್.ಜಿ.)

**ಜನಪದ ನಂಬಿಕೆಗಳು :** ಜನಪದ ನಂಬಿಕೆಗಳು ಜಾನಪದದ ಒಂದು ಪ್ರಕಾರ, ಅಧ್ಯಯನ ದೃಷ್ಟಿಯಿಂದ ಜಾನಪದವನ್ನು ಸಾಹಿತ್ಯಿಕ, ಭಾಷಿಕ, ಕ್ರಿಯಾತ್ಮಕ ಮತ್ತು ವೈಜ್ಞಾನಿಕ ಎಂದು ವಿಭಾಗಿಸಿದಲ್ಲಿ, ಜನಪದ ನಂಬಿಕೆಗಳನ್ನು ವೈಜ್ಞಾನಿಕ ಬಗೆಯಲ್ಲಿ ಸೇರಿಸಲಾಗುತ್ತದೆ. ನಂಬಿಕೆ ಎಂದರೆ ಒಂದು ಹೇಳಿಕೆ ಅಥವಾ ವಸ್ತುಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ. ಇಂಥ ನಂಬಿಕೆಗಳು ಆದಿವಾಸಿಗಳಲ್ಲಿ ಮಾತ್ರವಲ್ಲ, ನಾಗರಿಕತೆಯ ಆವರಣದಲ್ಲಿ ವಾಸಿಸುವವರಲ್ಲೂ ಬಹಳವಾಗಿ ಕಂಡುಬರುತ್ತವೆ. ನಂಬಿಕೆಗಳಿಗೂ ಸಂಪ್ರದಾಯಗಳಿಗೂ ನಿಕಟ ಸಂಬಂಧವಿದೆ. ಒಂದು ಮತ್ತೊಂದರ ಪೂರಕ. ಅವುಗಳ ಬೇರು ಜನಾಂಗದ ಸಂಸ್ಕೃತಿಯಲ್ಲಿ ಆಳವಾಗಿದ್ದು ಜನಜೀವನವನ್ನು ನಿರ್ದೇಶಿಸುವ ಪ್ರಮುಖ ಶಕ್ತಿಗಳಾಗಿ ಬೆಳೆದಿದೆ. ಜನರ ಬದುಕು ಮತ್ತು ನಂಬಿಕೆಗಳಿಗೆ ಇರುವ ಸಂಬಂಧ ತೀರ ಹತ್ತಿರವಾದದ್ದು. ಈ ದೃಷ್ಟಿಯಿಂದ ಜನಪದ ನಂಬಿಕೆಗಳು ಜನತೆಯ ಆಂತರಿಕ ಮನೋಭಾವ ಹಾಗೂ ಮೂಲ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪರಿಚಯಿಸುವ ಪ್ರಮುಖ ಸಾಧನಗಳಾಗುತ್ತವೆ. ಇವುಗಳ ಅಧ್ಯಯನ ಅರ್ಥಪೂರ್ಣವಾಗಲು ಮನಶ್ಶಾಸ್ತ್ರ, ತತ್ತ್ವಶಾಸ್ತ್ರ ಹಾಗೂ ಮಾನವಶಾಸ್ತ್ರಗಳ ನೆರವು ಅತ್ಯಗತ್ಯ.

ಪರಂಪರಾನುಗತವಾದ ಹಾಗೂ ಎಲ್ಲ ಕಾಲಗಳಲ್ಲೂ ಪುನರಾವರ್ತಿತವಾದ, ಸಾಮೂಹಿಕ ಮನ್ನಣೆಯನ್ನು ದೊರಕಿಸಿಕೊಂಡ ಕಾರ್ಯಕಾರಣ ಹಾಗೂ ಭಾವಪ್ರಧಾನವಾದ ಜೀವಂತ ಪಳೆಯುಳಿಕೆಗಳೇ ಜನಪದ ನಂಬಿಕೆಗಳು. ಇವು ಒಂದಾನೊಂದು ಕಾಲದಲ್ಲಿ ಹೆಚ್ಚು ಪ್ರಭುತ್ವದಲ್ಲಿದ್ದ ಸಾಮುದಾಯಕ ಅಭಿಪ್ರಾಯೋಕ್ತಿಗಳು ; ತಲತಲಾಂತರದಿಂದ ಮಾನಸಿಕ ಒಪ್ಪಂದದ ಮುದ್ರೆ ಧರಿಸಿ ಸಮಾಜದಲ್ಲಿ ಪುನರಾವರ್ತಿತವಾಗುತ್ತವೆ; ಕ್ರಮೇಣ ಸಂಸ್ಕೃತಿಯಲ್ಲಿ ಮಿಲನಹೊಂದಿ ಸಂಪ್ರದಾಯಗಳಾಗುವುದುಂಟು.

ಜನಪದ ನಂಬಿಕೆಗಳಲ್ಲಿ ಅನೇಕವು ಮೂಢ ನಂಬಿಕೆಗಳು. ಇವು ಸಾಮೂಹಿಕ ಅಭ್ಯಾಸಗಳಾಗಿದ್ದು ಇದಕ್ಕೆ ವಿವೇಚನೆಯ ಆಧಾರವಾಗಲೀ ಋಣಭಾರಭಾವವಾಗಲೀ ಇರುವುದಿಲ್ಲ. ವರ್ಜಿಲ್ ಹೇಳುವಂತೆ ಮೂಢನಂಬಿಕೆ ಒಂದು ಆಧಾರರಹಿತ ಪದ್ಧತಿ ಅಥವಾ ನಂಬಿಕೆ. ಸಮಾಜದಲ್ಲಿನ ವ್ಯಕ್ತಿಯನ್ನು ಅದು ಒಪ್ಪುವಂತೆ ಮಾಡುತ್ತದೆ. ಮಾಂತ್ರಿಕ ವಿಷಯ ಹಾಗೂ ಅಗೋಚರ ಶಕ್ತಿಗಳಲ್ಲಿ ನಂಬಿಕೆ ಇಡುವಂತೆ ಮಾಡುವುದಲ್ಲದೆ ಜನರನ್ನು ಸತತ ಭಯಭೀತರನ್ನಾಗಿ ಮಾಡುವ ಶಕ್ತಿ ಮೂಢನಂಬಿಕೆಗಳಿಗಿದೆ. ಕೆಲವು ನಂಬಿಕೆಗಳಲ್ಲಿ ವೈಜ್ಞಾನಿಕ ಸತ್ಯ, ಸಾಮಾನ್ಯಜ್ಞಾನ, ಪೌರಾಣಿಕ, ಐತಿಹ್ಯಾಂಶಗಳು ಹಾಗೂ ಕಥಾಂಶಗಳು ಅಡಕವಾಗಿವೆ. ಇಂಥ ನಂಬಿಕೆಗಳು ಮಾನವನ ಬದುಕಿನ ಹಿನ್ನೆಲೆಯಲ್ಲಿ ರೂಪುಗೊಂಡು ಅವನ ಎಲ್ಲ ಕಾರ್ಯಕ್ಷೇತ್ರವನ್ನೂ ವ್ಯಾಪಿಸಿಕೊಂಡಿರುತ್ತವೆ.

ನಂಬಿಕೆಗಳಲ್ಲಿ ಸಾಮಾನ್ಯವಾಗಿ ಎರಡು ಆದೇಶಗಳಿರುತ್ತವೆ. ಒಂದು ಕ್ರಿಯೆಗೆ ಸಂಬಂಧಪಟ್ಟದ್ದು, ಮತ್ತೊಂದು ಭಾವನೆಗೆ. ಪ್ರಯಾಣಕ್ಕೆ ಹೊರಟಾಗ ಖಾಲಿ ಕೊಡ ಸಿಕ್ಕಿದರೆ ಅದು ಅಶುಭ ಎಂದು ಎಣಿಸುವುದು ಭಾವನೆಯಾದರೆ, ಪ್ರಯಾಣವನ್ನು ರದ್ದುಮಾಡಿ ಮನೆಗೆ ಹಿಂದಿರುಗುವುದು ಕ್ರಿಯೆಯಾಗುತ್ತದೆ.

ಪ್ರತಿಯೊಂದು ಜನಾಂಗದಲ್ಲೂ ತನ್ನದೇ ಆದ ನಂಬಿಕೆಗಳು ನೆಲೆಗೊಂಡಿವೆ. ಕೆಲವು ನಂಬಿಕೆಗಳು ಜಗತ್ತಿನಾದ್ಯಂತ ಒಂದೇ ಆಗಿರುತ್ತವೆ. ಉದಾಹರಣೆಗೆ ಮೂರು ಜನರು ಒಂದೇ ಬೆಂಕಿಕಡ್ಡಿಯಿಂದ ಬೀಡಿ ಅಥವಾ ಸಿಗರೇಟನ್ನು ಹಚ್ಚಿಕೊಳ್ಳಬಾರದು ಎಂಬುದು ಪ್ರಪಂಚದ ಎಲ್ಲ ಕಡೆಯಲ್ಲೂ ಉಳಿದುಬಂದಿರುವ ನಂಬಿಕೆ. ಮತ್ತೆ ಕೆಲವು ನಂಬಿಕೆಗಳಲ್ಲಿ ಭಾವನೆ ಒಂದೇ ಆಗಿದ್ದರೂ ರೂಪ ಬೇರೆಯದಾಗಿರುತ್ತದೆ. ಕ್ರೈಸ್ತರು ಕಷ್ಟಬಂದಾಗ ನಿವಾರಣೆಗೆಂದು ಬೈಬಲ್ಲನ್ನು ಓದಿದರೆ ನಮ್ಮ ಜನಪದರು ಶನಿಮಹಾತ್ಮೆಯನ್ನೋ ಕುಮಾರವ್ಯಾಸಭಾರತವನ್ನೋ ಓದುತ್ತಾರೆ, ಕೇಳುತ್ತಾರೆ. ಮನೆ ಭದ್ರವಾಗಿ ನಿಲ್ಲಬೇಕಾದರೆ ತಳಹದಿಗೆ ಮಕ್ಕಳನ್ನು ಬಲಿಕೊಡಬೇಕು, ಕೆರೆಗೆ ಹಾರ ಕೊಟ್ಟರೆ ಕೆರೆಯ ಏರಿ ಒಡೆಯುವುದಿಲ್ಲ ಎಂಬ ಮೂಢ ನಂಬಿಕೆಗಳು ವಿಶ್ವದ ಆದ್ಯಂತ ನೆಲೆಸಿರುವುದರಿಂದ ಮೂಲತಃ ಮಾನವನ ಸಂಸ್ಕೃತಿ, ಆಲೋಚನಾಶಕ್ತಿ ಒಂದೇ ರೀತಿಯದು ಆಗಿದ್ದಿರಬೇಕು ಎನಿಸದಿರಲಾರದು.

ನಂಬಿಕೆಗಳಿಗೆ ಸಾರ್ವತ್ರಿಕತೆ ಮತ್ತು ಪ್ರಾದೇಶಿಕತೆಯಿದೆ. ಅವು ಎಲ್ಲೆಡೆ ಇದ್ದರೂ ಒಂದೇ ರೀತಿಯವುಗಳಲ್ಲ. ಪರಸ್ಪರ ಸಾಮರಸ್ಯವಿದ್ದರೂ ಅಲ್ಪಸ್ವಲ್ಪ ವ್ಯತ್ಯಾಸವಿರುತ್ತದೆ. ಇದಕ್ಕೆ ಆಯಾ ದೇಶಗಳ ಆಚಾರ–ವಿಚಾರಗಳೇ ಕಾರಣ. ಗೂಬೆ ಭಾರತದಲ್ಲಿ ಅಪಶಕುನದ ಸಂಕೇತವಾದರೆ ಪಾಶ್ಚಾತ್ಯರಿಗೆ ಅದು ವಿವೇಕದ ಪ್ರತೀಕ.

ನಂಬಿಕೆಗಳ ಹುಟ್ಟು ಮಾನವನ ಹುಟ್ಟಿನೊಡನೆ ಆಯಿತೆನ್ನಬಹುದು. ಪ್ರಕೃತಿ ಶಕ್ತಿಗಳೇ ನಂಬಿಕೆಗಳ ಹುಟ್ಟಿಗೆ ಮೂಲಕಾರಣವಾದುವು. ನೈಸರ್ಗಿಕ ರೋಷಶಕ್ತಿಗಳಾದ ಗುಡುಗು–ಸಿಡಿಲು, ಮಿಂಚು–ಮಳೆ, ಅಗ್ನಿ–ಬಿರುಗಾಳಿ ಆದಿಮಾನವನ ಮನಸ್ಸನ್ನು ಅಲ್ಲೋಲ ಕಲ್ಲೋಲ ಮಾಡಿದವು. ಒಮ್ಮೆ ಅವನ್ನು ಕಂಡು ಸೋಜಿಗ, ಮತ್ತೊಮ್ಮೆ ಭಯ. ಹೀಗಾಗಿ ಅವನಲ್ಲಿ ಒಂದು ರೀತಿಯ ಮಾನಸಿಕ ತುಮುಲವೇರ್ಪಟ್ಟು ಕೊನೆಗೊಮ್ಮೆ ಅಂಥ ಶಕ್ತಿಗಳ ಸಹಜತೆಯನ್ನು ಅರಿಯಲು ಅಶಕ್ತನಾದಾಗ ಶರಣಾಗತಿಯೊಂದೇ ಅವನಿಗೆ ಉಳಿದ ಮಾರ್ಗ. ಕ್ರಮೇಣ ಎಲ್ಲ ಶಕ್ತಿಗಳಿಗೂ ಒಂದು ರೂಪವನ್ನು ಆತ ಕೊಟ್ಟು ಪೂಜಿಸ ಲಾರಂಭಿಸಿದ. ಅವನ್ನು ಸಂಪ್ರೀತಗೊಳಿಸಲು ಪ್ರಾಣಿಗಳನ್ನು ಬಲಿಕೊಟ್ಟ, ಯಜ್ಞಯಾಗಾದಿಗಳಲ್ಲಿ ನಂಬಿಕೆ ಇಟ್ಟ. ಹೀಗಾಗಿ ಅವನ ಪ್ರತಿ ಹೆಜ್ಜೆಯಲ್ಲೂ ನಂಬಿಕೆಗಳು ತಲೆದೋರಿದವು. ಇಂಥ ನಂಬಿಕೆಗಳ ಸಂಕಲನವೇ ಮೂಲಧರ್ಮವಾಯಿತು. ಧಾರ್ಮಿಕ ನಂಬಿಕೆಗಳೇ ಜಾನಪದ ಅಧ್ಯಾಯಾರಂಭಕ್ಕೆ ಮೊದಲಾಗಿರಬೇಕು. ಕಾಲಕಳೆದಂತೆ ಮಾನವನ ಮನೋಭಾವನೆಗಳು ವಿಕಾಸಗೊಂಡು ಅದಕ್ಕೆ ತಕ್ಕಂತೆ ನಂಬಿಕೆಗಳು ಹುಟ್ಟಿದವು. ಕ್ಲಿಷ್ಟವಾದ ಮತ್ತು ಹೆಚ್ಚು ಕರ್ಮಯುಕ್ತವಾದ ಆಚಾರಗಳು ಬದಲಾಗಿ ಹೊಸ ಹೊಸ ನಂಬಿಕೆಗಳು ತಲೆದೋರಿದವು.

ಜನಪದ ನಂಬಿಕೆಗಳ ಉಗಮ ಮುಖ್ಯವಾಗಿ ಮೂರು ರೀತಿಯಲ್ಲಿ ಆಯಿತೆನ್ನಬಹುದು– ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೈಯಕ್ತಿಕ. ಧಾರ್ಮಿಕ ನಂಬಿಕೆಗಳು ಭಯದಿಂದ ಹುಟ್ಟಿದವು. ಮನಸ್ಸಿನ ಅಸ್ಥಿರತೆ ಮತ್ತು ಅತಿಮಾನುಷಭಯ ಈ ವರ್ಗದ ನಂಬಿಕೆಗಳ ಹುಟ್ಟಿಗೆ ಮುಖ್ಯ ಕಾರಣ.

ಧಾರ್ಮಿಕ ನಂಬಿಕೆಗಳ ಮುಂದಿನ ಹಂತದಲ್ಲಿ ಸಾಂಸ್ಕೃತಿಕ ನಂಬಿಕೆಗಳು ಹುಟ್ಟಿದವು. ಜನ ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಳ್ಳುವಾಗ ಅವರ ಚಟುವಟಿಕೆಗಳಿಗೆ ತಕ್ಕಂತೆ ಈ ರೀತಿಯ ನಂಬಿಕೆಗಳು ರೂಪತಾಳಿದವು. ಈ ಬಗೆಯ ನಂಬಿಕೆಗಳು ವಿಶೇಷವಾಗಿ ನಿತ್ಯ ಬದುಕಿನಲ್ಲಿ ಕಂಡುಬರುವ ನಡಾವಳಿಗಳ ಕಟ್ಟುಕಟ್ಟಳೆಗಳನ್ನು ಕುರಿತದ್ದಾಗಿವೆ; ಬದುಕನ್ನು ನಿಯಂತ್ರಿಸುವ ಸೂತ್ರಗಳಾಗಿ ಸಾರ್ವತ್ರಿಕವಾಗಿ ಹಬ್ಬಿಕೊಂಡಿವೆ. ವಿಧವೆ ಶುಭಕಾರ್ಯಗಳಲ್ಲಿ

ಭಾಗವಹಿಸಬಾರದು ಎಂಬುದನ್ನು ಸಮಾಜ ಒಪ್ಪಿರುವುದರಿಂದ ಅದು ಆಚರಣೆಯಲ್ಲಿದ್ದು ನಮ್ಮ ಸಂಸ್ಕೃತಿಯಲ್ಲಿ ಸೇರಿದ ಒಂದು ನಂಬಿಕೆಯಾಗಿ ಉಳಿದುಬಂದಿದೆ. ವೈಯಕ್ತಿಕ ನಂಬಿಕೆಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ನಂಬಿಕೆಗಳ ಸಂಸ್ಕಾರದಿಂದ ಒಬ್ಬ ವ್ಯಕ್ತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಸಾರ್ವತ್ರಿಕವಾದರೂ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಬಹುದು. ಒಬ್ಬನಿಗೆ ಮಂಗಳವಾರ ಅಶುಭವಾದರೆ ಮತ್ತೊಬ್ಬನಿಗೆ ಶುಭವಾಗಬಹುದು. ಒಬ್ಬನಿಗೆ ಒಂದು ಅಂಕಿ ಅದೃಷ್ಟಸಂಖ್ಯೆಯಾದರೆ ಮತ್ತೊಬ್ಬನಿಗೆ ದುರದೃಷ್ಟದ ಸಂಕೇತವಾಗಬಹುದು. ಈ ಬಗೆಯ ನಂಬಿಕೆಗಳಲ್ಲಿ ಬಾಳಿನ ಅನುಭವ ಹಾಗೂ ಮಾನಸಿಕ ಅನುಭವಗಳ ಮಿಳಿತವನ್ನು ಕಾಣಬಹುದು. ಯಾವ ಗಳಿಗೆಯಲ್ಲಿ ಅವಳು ನನ್ನ ಮನೆಗೆ ಹೆಜ್ಜೆ ಇಟ್ಟು ಬಂದಳೊ ನನ್ನ ಮನೆ ಬಂಗಾರವಾಯಿತು ಎಂದು ಸೊಸೆ ಮನೆಗೆ ಬಂದ ಅನಂತರ ಮನೆಯ ಪರಿಸ್ಥಿತಿ ಸುಧಾರಿಸಿದ್ದನ್ನು ಕಂಡು ಅವಳ ಮಾವ ಹೇಳಿಕೊಳ್ಳಬಹುದು. ವೈಯಕ್ತಿಕ ನಂಬಿಕೆಗಳು ಕೆಲವೊಮ್ಮೆ ಮಾರಕವಾಗುವುದುಂಟು. ಮಹತ್ಕಾರ್ಯಕ್ಕೆಂದು ಹೊರಟವನು ಅಪಶಕುನವಾಯಿತೆಂದು ಹಿಂದಿರುಗುವುದರಿಂದ ನಷ್ಟವನ್ನು ಅನುಭವಿಸಬಹುದು. ದೇವರೇ ತನ್ನ ರೋಗವನ್ನು ವಾಸಿಮಾಡುತ್ತಾನೆಂದು ನಂಬಿ ವೈದ್ಯನನ್ನು ಕಾಣದವ ಪ್ರಯತ್ನಮಾಡದೆ ಪ್ರಾಣವನ್ನೇ ಕಳೆದುಕೊಳ್ಳಬಹುದು.

ಜನಪದ ನಂಬಿಕೆಗಳು ತಪ್ಪುಗ್ರಹಿಕೆಯಿಂದಲೂ ಹುಟ್ಟುತ್ತವೆ. ವಿಚಾರಶಕ್ತಿ ಕಡಿಮೆ ಇರುವವರು, ಮನೋದೌರ್ಬಲ್ಯವುಳ್ಳವರು, ಸಮಾಜದಲ್ಲಿ ಪ್ರಭಾವೀವ್ಯಕ್ತಿಗಳಾಗಿದ್ದರೆ, ಅಂಥವರು ನಂಬಿಕೆಗಳ ಹುಟ್ಟಿಗೆ ಕಾರಣರಾಗುತ್ತಾರೆ. ಪೋಪರು ತಾವು ದೇವದೂತರೆಂದು ಹೇಳಿಕೊಳ್ಳುತ್ತಿದ್ದರು. ಅವರು ಹೇಳಿದ್ದನ್ನೆಲ್ಲ ಮುಗ್ಧ ಜನಗಳು ನಂಬಿ ಪಾಲಿಸುತ್ತಿದ್ದರು. ಸಮಾಜದ ಒತ್ತಡಕ್ಕೆ ಮಣಿದು ಅಪ್ರಯತ್ನಪೂರ್ವಕವಾಗಿ ಕೆಲವು ನಂಬಿಕೆಗಳು ಜೀವನದಲ್ಲಿ ಅಡಕವಾಗುತ್ತವೆ.

ನಂಬಿಕೆಗಳನ್ನು ವೈಜ್ಞಾನಿಕ, ಅವೈಜ್ಞಾನಿಕ ಎಂದು ವಿಭಜಿಸಬಹುದು. ಈ ರೀತಿಯ ವಿಭಜನೆಯಡಿಯಲ್ಲಿ ಎಲ್ಲ ತರಹದ ನಂಬಿಕೆಗಳನ್ನೂ ಸೇರಿಸಲು ಅಸಾಧ್ಯವಾದ್ದರಿಂದ ವಿಭಜನೆ ಅಸಮರ್ಪಕವಾಗುತ್ತದೆ. ಎಲ್ಲ ನಂಬಿಕೆಗಳಲ್ಲೂ ವೈಜ್ಞಾನಿಕ ಅಂಶ ದೊರೆಯುವುದಿಲ್ಲ. ಕೆಲವು ಅವೈಜ್ಞಾನಿಕ ನಂಬಿಕೆಗಳಲ್ಲಿ ನಂಬಿಕೆ ಇಡುವುದರಿಂದ ಮಾನಸಿಕ ತೃಪ್ತಿಯಾದರೂ ದೊರೆಯಬಹುದು. ಉದಾಹರಣೆಗೆ ಪಿತೃಪಕ್ಷವನ್ನು ಆಚರಿಸುವುದರಿಂದ ಸತ್ತವರ ಆತ್ಮಕ್ಕೆ ಶಾಂತಿ ದೊರೆಯುತ್ತದೆ; ಅವರು ಪದೇ ಪದೇ ಬಂದು ಪೀಡಿಸುವುದಿಲ್ಲ–ಎಂದು ನಂಬುವುದರಲ್ಲಿ ವೈಜ್ಞಾನಿಕ ಸತ್ಯವಿಲ್ಲದಿದ್ದರೂ ಅಂಥ ಆಚರಣೆಗಳಿಂದ ಮಾನಸಿಕ ಸಂತೃಪ್ತಿ ದೊರೆಯುತ್ತದೆ.

ವೈಜ್ಞಾನಿಕ ಸತ್ಯವನ್ನೊಳಗೊಂಡ ನಂಬಿಕೆಗಳಂತೂ ಬಹಳಷ್ಟಿವೆ. ಊಟಕ್ಕೆ ಕುಳಿತಾಗ ತಟ್ಟೆ ಅಥವಾ ಎಲೆಯ ಸುತ್ತಲೂ ನೀರನ್ನು ಚುಮುಕಿಸಬೇಕು ಎಂಬ ನಂಬಿಕೆಯಿಂದ ಸಣ್ಣ ಕ್ರಿಮಿಕೀಟಗಳು ತಟ್ಟೆಯ ಒಳಗೆ ಹರಿದುಬರುವುದನ್ನು ತಡೆಗಟ್ಟಬಹುದು. ಉಗುರು ನೀರನ್ನು ಹಾರಿಸಬಾರದು, ಹಾರಿಸಿದರೆ ಉಗುರುಸುತ್ತಾಗುತ್ತದೆ ಎಂಬಲ್ಲಿ ಇರುವ ಸತ್ಯವಿಷ್ಟು: ಉಗುರು ಒಂದು ವಿಷವಸ್ತು; ಸಂದುಗಳಲ್ಲಿ ಕೊಳೆ ಸೇರಿರುತ್ತದೆ. ಇದನ್ನು ಬೇರೆಯವರಿಗೆ ಹಾರಿಸುವುದರಿಂದ ಅವರಿಗೆ ಹಾನಿಯಾಗಬಹುದು. ಅಂತೆಯೇ ಬೇರೆಯವರ ಚಪ್ಪಲಿಗಳನ್ನು ಮೆಟ್ಟಬಾರದು ; ಬೇರೆಯವರ ಬಟ್ಟೆಯನ್ನು ಬಳಸಬಾರದು ಎಂಬಲ್ಲಿ ಚರ್ಮರೋಗವನ್ನು ತಡೆಗಟ್ಟಬಹುದು ಎಂಬ ಸತ್ಯವನ್ನು ಕಾಣಬಹುದು.

ಕೆಲವು ನಂಬಿಕೆಗಳಲ್ಲಿ ವೈದ್ಯಕೀಯ ಸಂಗತಿಗಳು ಅಡಕವಾಗಿವೆ. ಅಜೀರ್ಣದಿಂದ ಹೊಟ್ಟೆ ಉಬ್ಬರಿಸಿಕೊಂಡು ನೋವು ಕಾಣಿಸಿಕೊಂಡರೆ ಬೆಂಬೂದಿ (ಬೆಚ್ಚನೆಯ ಬೂದಿ) ತಿಕ್ಕಿದರೆ ಸರಿಯಾಗುತ್ತದೆ ಎಂಬಲ್ಲಿ ಆ ರೀತಿ ಮಾಡುವುದರಿಂದ ಪಚನಕ್ರಿಯೆ ಚೇತನಗೊಂಡು ನೋವು ಕಡಿಮೆಯಾಗಬಹುದು. ತಲೆನೋವು ಬಂದರೆ ಚಿಟಿಕೆ (ಗಾಜಿನ ಬಳೆಚೂರಿನಿಂದ ಗಂಡಸ್ಥಲದ ನರಗಳನ್ನು ಸುಡುವುದು) ಹಾಕಿದರೆ ವಾಸಿಯಾಗುತ್ತದೆ ಎಂಬ ನಂಬಿಕೆ ಚೀನದಲ್ಲಿರುವ ಅಕೂಪಂಕ್ಚರ್ ವೈದ್ಯಪದ್ಧತಿಯನ್ನು ನೆನಪಿಗೆ ತರುತ್ತದೆ. ನಿಗದಿಯಾದ ಜಾಗದಲ್ಲಿ ಚಿಟಿಕೆ ಹಾಕುವುದರಿಂದ ನರದ ಮೇಲೆ ಒಂದೆಡೆ ಸಂಗ್ರಹವಾಗಿದ್ದ ವಿಷವಸ್ತುಗಳು ಕ್ರಿಯೆಯ ವರ್ಧನೆಯಿಂದ ಬೇರೆಡೆಗೆ ಸಾಗಿಸಲ್ಪಟ್ಟು ನೋವು ಕಡಿಮೆಯಾಗಬಹುದು.

ಪ್ರಕೃತಿಯೊಡನಿರುವ ಸತತ ಸಂಪರ್ಕದಿಂದಾಗಿ ರೈತ ಅದರಲ್ಲಾಗುವ ಬದಲಾವಣೆಗಳನ್ನು ಗಮನಿಸಿ ಕೆಲವು ನಂಬಿಕೆಗಳನ್ನು ಹೇಳುತ್ತಾನೆ. ಇವು ಕೆಲವೊಮ್ಮೆ ಸತ್ಯವಾಗುವುದುಂಟು. ಕೋಟೆ ಮುಗಿಲೆದ್ದರೆ ಮಳೆಯಾಗುತ್ತದೆ. ಸೂರ್ಯ ಗುಡಿಕಟ್ಟಿದರೆ (ಪ್ರಭಾವಳಿ ಸುತ್ತುಗಟ್ಟಿದರೆ) ಸೂರೆಲ್ಲ ಮಳೆ. ಕೊಡತಿ ಹುಳು ಕಾಣಿಸಿಕೊಂಡರೆ ಮಳೆಯಾಗುತ್ತದೆ. ತಿಂಗಳು (ಚಂದ್ರ) ಗುಡಿಕಟ್ಟಿದರೆ ತಿಂಗಳು ಮಳೆಯಿಲ್ಲ. ಈ ನಂಬಿಕೆಗಳಿಗೂ ವಾತಾವರಣದಲ್ಲಾಗುವ ಬದಲಾವಣೆಗಳಿಗೂ ಏನೋ ಸಂಬಂಧವಿರಬೇಕು. ಅದರ ಆಂತರಿಕ ಸತ್ಯಾಸತ್ಯಗಳ ವಿವೇಚನೆ ರೈತರಿಗೆ ಇಲ್ಲವಾದರೂ ಅವು ಪರಂಪರಾನುಗತವಾಗಿ ಅನುಭವದಿಂದ ಬಂದುವುಗಳಾದ್ದರಿಂದ ಅಂಥ ನಂಬಿಕೆಗಳಲ್ಲಿ ಪೂರ್ಣವಿಶ್ವಾಸ ಇಟ್ಟಿದ್ದಾರೆ.

ನಂಬಿಕೆಗಳ ಮತ್ತೊಂದು ರೀತಿಯ ವಿಭಜನಕ್ರಮವೆಂದರೆ ಅತಿಮಾನುಷ, ಮಾನುಷ, ಪ್ರಾಣಿ, ಪ್ರಕೃತಿ, ಕೌಟುಂಬಿಕ ಹಾಗೂ ಸಂಕೀರ್ಣ ಸಂಬಂಧದವು ಎಂದೊಡೆಯುವುದು. ಈ ಪ್ರಕಾರಗಳ ನಡುವಿನ ಎಲ್ಲೆಯನ್ನು ಗುರುತಿಸುವಾಗ ಅಸ್ಪಷ್ಟತೆ ಕಾಣಬಂದರೂ ಎಲ್ಲ ರೀತಿಯ ನಂಬಿಕೆಗಳನ್ನೂ ವಿಷಯಪ್ರಧಾನತೆಯ ಆಧಾರದ ಮೇಲೆ ಸಮರ್ಪಕವಾಗಿ ವಿಂಗಡಿಸಬಹುದೆಂದು ತೋರುತ್ತದೆ.

ದೆವ್ವ, ಪೀಡೆ, ದೇವರುಗಳ ಬಗ್ಗೆ ಇರುವ ನಂಬಿಕೆಗಳು ಅತಿಮಾನುಷ ಗುಂಪಿನಲ್ಲಿ ಸೇರುತ್ತವೆ. ಪೂರ್ಣಿಮೆ ಅಮಾವಾಸ್ಯೆಯಲ್ಲಿ ದೆವ್ವಗಳ ಸಂಚಾರ ಹೆಚ್ಚು. ಜುಟ್ಟಿಲ್ಲದ ತೆಂಗಿನಕಾಯನ್ನು ದೇವರಿಗೆ ಒಡೆಯಬಾರದು. ಹುಣಿಸೆಮರದಲ್ಲಿ ದೆವ್ವಗಳು ವಿಪರೀತ. ದೇವರ ದೀಪವನ್ನು ಒಂದೇ ಬಾರಿಗೆ ಆರಿಸಬಾರದು, ಮೂರನೆಯ ಬಾರಿಗೆ ಆರಿಸಬೇಕು. ಇಂಥ ನಂಬಿಕೆಗಳು ಸಾಮಾನ್ಯವಾಗಿ ಅತಿಮಾನುಷ ಭಯದಿಂದ ಹುಟ್ಟಿದ ಮನಸ್ಸಿನ ಅಸ್ಥಿರಭಾವನೆಗಳು; ಮನಸ್ಸಿನ ಅಂಗೀಕಾರ ಮುದ್ರೆ ಧರಿಸಿ ಸಮಾಜದಲ್ಲಿ ಬಳಕೆಯಲ್ಲಿವೆ.

ಹಬ್ಬಹರಿದಿನಗಳು, ಹುಟ್ಟು–ಸಾವು, ಕಾಲ, ಕನಸು–ನಿದ್ರೆ, ವಾರಗಳು, ಒಡಹುಟ್ಟಿದವರು, ವಿವಾಹ, ಪುರುಷ ಹಾಗೂ ಸ್ತ್ರೀದೇಹಗಳಿಗೆ ಸಂಬಂಧಿಸಿದ ವಿಷಯಗಳನ್ನೊಳಗೊಂಡ ನಂಬಿಕೆಗಳನ್ನು ಮಾನುಷಗುಂಪಿನಲ್ಲಿ ಸೇರಿಸಬಹುದು. ಈ ಗುಂಪಿನಲ್ಲಿ ವೈಯಕ್ತಿಕ ಹಾಗೂ ಸಾಂಪ್ರದಾಯಿಕ ನಂಬಿಕೆಗಳು ಸೇರುತ್ತವೆ. ವರ್ಷಕ್ಕೊಮ್ಮೆ ಬರುವ ಹಬ್ಬದ ದಿನ ಮಕ್ಕಳನ್ನು ಹೊಡೆಯಬಾರದು. ತೊಲೆಗಳ ಕೆಳಗೆ ಮಲಗಿದರೆ ಕನಸುಗಳು ಜಾಸ್ತಿ. ಸಂಜೆಯಾದ ಮೇಲೆ ಅಂಗಡಿಯಿಂದ ಅಥವಾ ಮನೆಯಿಂದ ಹೊರಗಡೆಗೆ ಸೀಗೆಕಾಯಿಪುಡಿ, ಅರಿಶಿನ ಕೊಡಬಾರದು, ಹೊತ್ತುಮುಳುಗಿದ ಮೇಲೆ ಅಕ್ಕಿ ತಿನ್ನಬಾರದು ಇತ್ಯಾದಿಗಳು ಈ ವಿಭಾಗಕ್ಕೆ ಸೇರುತ್ತವೆ. ವಾರಗಳನ್ನು ಕುರಿತ ನಂಬಿಕೆಗಳಿವೆ. ಸಾಮಾನ್ಯವಾಗಿ ಮಂಗಳವಾರ ಅಶುಭ. ಶನಿವಾರ ಹೊಸ ಬಟ್ಟೆ ಹಾಕಬಾರದು. ಶುಕ್ರವಾರ ಸೊಸೆ ಕಳುಹಿಸಬಾರದು. ಮಂಗಳವಾರ ಮಗಳನ್ನು ಕಳುಹಿಸಬಾರದು. ಹುಟ್ಟಿದ ವಾರದಲ್ಲಿ ತಲೆಕೂದಲು ತೆಗೆಸಬಾರದು, ಇತ್ಯಾದಿ. ಮಾನವನ ಅಂಗಾಂಗಗಳಲ್ಲಿನ ಕುರುಹು ಅಥವಾ ಕೆಲವು ನ್ಯೂನತೆಗಳನ್ನು ಕುರಿತು ಅವನ ಅದೃಷ್ಟವನ್ನು ನುಡಿಯುತ್ತಾರೆ. ಆರು ಬೆರಳಿದ್ದವರು, ಮಾಲುಗಣ್ಣಿನವರು ಅದೃಷ್ಟವಂತರಂತೆ. ಮೂಗು ಉದ್ದವಿದ್ದರೆ ಪುಣ್ಯವಂತ. ಕಣ್ಣು ಸಣ್ಣಗಿದ್ದರೆ ಬುದ್ಧಿವಂತ. ಹಸ್ತದಲ್ಲಿ ಗರುಡಮಚ್ಚೆ ಇದ್ದವರನ್ನು ಹಾವು ಕಚ್ಚುವುದಿಲ್ಲವಂತೆ. ದೇಹದಲ್ಲಿ ಆಗುವ ಕೆಲವು ಆಕಸ್ಮಿಕ ಚಲನೆಗಳನ್ನು ಕುರಿತ ಕೆಲವು ನಂಬಿಕೆಗಳಿವೆ. ಉದಾಹರಣೆಗೆ ಹಣೆ ಅದುರಿದರೆ ಶುಭ. ಬಲಭುಜ ಅದುರಿದರೆ ಸಂಭೋಗ ಸುಖ. ಎಡಭುಜ ಅದುರಿದರೆ ಕೇಡು. ಬೆನ್ನು ಅದುರಿದರೆ ಧನ ಸಿಗುತ್ತದೆ, ಇತ್ಯಾದಿ.

ಮಾನವನ ಜೀವನದಲ್ಲಿ ಮದುವೆ ಒಂದು ಪ್ರಮುಖ ಘಟನೆ. ಇದಕ್ಕೆ ಸಂಬಂಧಿಸಿದ ನೂರಾರು ನಂಬಿಕೆಗಳು ಪ್ರಚಲಿತವಿವೆ. ಅನೇಕ ಮದುವೆಗಳು ನಡೆಯುವುದೇ ನಂಬಿಕೆಗಳಿಂದ. ವಿವಾಹದ ದಿನ ಮಳೆಬಂದರೆ ಗಂಡು ಅಥವಾ ಹೆಣ್ಣು ಅಕ್ಕಿ ತಿಂದಿದ್ದಾರೆಂದು ಹೇಳುತ್ತಾರೆ. ಲಗ್ನ ಕಟ್ಟಿಸಿದ ದಿನದಿಂದ ಮದುವೆ ಮುಗಿಯುವವರೆಗೆ ಮನೆಯಲ್ಲಿ ಮಾಂಸ ಮಾಡಬಾರದು, ಮದುವೆಯಾದ ವರ್ಷ ಮನೆ ಕಟ್ಟಬಾರದು, ಇತ್ಯಾದಿ.

ಪ್ರಾಣಿಸಂಬಂಧ ನಂಬಿಕೆಗಳಲ್ಲಿ ಅವುಗಳ ಚತುರತೆ, ಮಾನವನ ಅನುಕಂಪೆ, ಅವುಗಳಿಂದ ಬರುವ ಅನಿಷ್ಟವನ್ನು ಕಾಣಬಹುದು. ಇರುವೆಗೂಡಿಗೆ ಅಕ್ಕಿ ಬೆಲ್ಲ ಹಾಕಿದರೆ ಪುಣ್ಯಬರುತ್ತದೆ, ಕೋತಿ ಸಾಯಿಸಿದರೆ ಕಾಶಿಗೆ ಹೋದರೂ ಪಾಪ ಕಳೆಯುವುದಿಲ್ಲ– ಇವು ಅವುಗಳ ಮೇಲಿನ ಮಮತೆ, ಅನುಕಂಪೆಯನ್ನು ತೋರುತ್ತವೆ. ನಡುರಾತ್ರಿಯಲ್ಲಿ ನಾಯಿಗಳು ಒಟ್ಟಿಗೆ ಬೊಗಳಲಾರಂಭಿಸಿದರೆ ಯಾರಾದರೂ ಸಾಯುತ್ತಾರೆ ಎಂಬ ನಂಬಿಕೆ ಅನಿಷ್ಟವನ್ನು ಸೂಚಿಸುತ್ತದೆ. ಪ್ರಾಣಿನಂಬಿಕೆಗಳಲ್ಲಿ ಭವಿಷ್ಯವಾಚನಗಳು ಬಹಳಷ್ಟಿವೆ. ಇದರಲ್ಲಿ ಶಕುನಗಳು ಸಾಮಾನ್ಯವಾಗಿ ಪ್ರಯಾಣಕ್ಕೆ ಸಂಬಂಧಿಸಿದವುಗಳು. ಪ್ರಯಾಣದಲ್ಲಿ ಹಾವು ಎಡದಿಂದ ಬಲಕ್ಕೆ ಬಂದರೆ ಒಳ್ಳೆಯದು. ಹಲ್ಲಿ ಬಲದಿಂದ ತಲೆಯ ಮೇಲೆ ನುಡಿದರೆ ಶುಭ. ನರಿ ಆಗ್ನೇಯ ದಿಕ್ಕಿನಲ್ಲಿ ಕೂಗಿದರೆ ಅಶುಭ. ಗೂಬೆ ಊರೊಳಗೆ ಬಂದು ಕೂಗಿದರೆ ಯಾರಾದರೂ ಸಾಯುತ್ತಾರೆ. ಬೆಕ್ಕು ಅಡ್ಡಲಾಗಿ ಎಡದಿಂದ ಬಲಕ್ಕೆ ಹೋದರೆ ಶುಭ, ಬಲದಿಂದ ಎಡಕ್ಕೆ ಹೋದರೆ ಅಶುಭ. ಹೀಗೆಂದು ಹೇಳುವುದುಂಟು.

ಪ್ರಕೃತಿಯನ್ನು ಕುರಿತ ನಂಬಿಕೆಗಳಲ್ಲಿ ಗಿಡ ಮರ, ಫಲ ಪುಷ್ಪಗಳಿಗೆ ಸಂಬಂಧಿಸಿದ ವಿಷಯಗಳು ಬರುತ್ತವೆ. ಫಲಬಿಡುವ ಮರ ಕಡಿಯಬಾರದು, ಅರಳಿಮರ ಕಡಿಯಬಾರದು, ಮುಂತಾದುವು. ಇಂಥ ನಂಬಿಕೆಗಳಿಗೆ ಬಹುಶಃ ಅರಳಿಮರ ದೊಡ್ಡದಾಗಿದ್ದು ದಾರಿಹೋಕರಿಗೆ ನೆರಳನ್ನು ನೀಡುತ್ತದೆ. ಹಾಗೆಯೇ ಫಲಬಿಡುವ ಮರ ಮನುಷ್ಯನಿಗೆ ಉತ್ಕೃಷ್ಟ ಹಣ್ಣುಗಳನ್ನು ಕೊಡುತ್ತದೆ ಎಂಬುದು ಕಾರಣವಿಬೇಕು. ಅದೇ ರೀತಿ ಎಳ್ಳನ್ನು ಹಣಕೊಟ್ಟು ಕೊಳ್ಳಬೇಕು ಎಂಬ ನಂಬಿಕೆಯಲ್ಲಿ ಅಡಗಿರುವ ಸತ್ಯಾಂಶ ಎಳ್ಳು ಅಪರೂಪದ ಬೆಳೆಯಾಗಿದ್ದು ಹೆಚ್ಚಿಗೆ ಬೆಳೆಯುವುದೇ ದುರ್ಲಭ. ಇದನ್ನು ಸರಿಯಾದ ಬೆಲೆಯಿಲ್ಲದೆ ಕೊಡಲು ಸಾಧ್ಯವಾಗುವುದಿಲ್ಲ ಎಂಬ ಉದ್ದೇಶ ಇರಬಹುದು.

ಕೌಟುಂಬಿಕ ನಂಬಿಕೆಗಳೆಲ್ಲ ಅಡಿಗೆ, ಊಟ ಮತ್ತು ಕುಟುಂಬದ ವಿಷಯಗಳಿಗೆ ಸಮಬಂಧಿಸಿದವುಗಳು. ಊಟದ ತಟ್ಟೆಯನ್ನು ಕಾಲಿನಿಂದ ಒದೆಯಬಾರದು. ಎಂಜಲುತಟ್ಟೆಯನ್ನು ದಾಟಬಾರದು. ದಾಟಿದರೆ ಊಟಮಾಡಿದವನಿಗೆ ಹೊಟ್ಟೆ ನೋವು ಬರುತ್ತದೆ, ತುತ್ತು ತೂಕಮಾಡಬಾರದು. ಇತ್ಯಾದಿಗಳಲ್ಲದೆ, ಕುಟುಂಬದಲ್ಲಿ ಅನುಸರಿಸಬೇಕಾದ ನಿಯಮಗಳ ಬಗ್ಗೆ, ಅದರ ಐಕ್ಯತೆಗೆ ಹಿರಿಯರು ಅನುಸರಿಸಬೇಕಾದ ನಡತೆಯ ಬಗ್ಗೆ, ಬಳಕೆಯ ವಸ್ತುಗಳ ಬಗ್ಗೆ ಇರುವ ನಂಬಿಕೆಗಳು ಕಿರಿಯರಿಗೆ ಮಾರ್ಗಸೂಚಿ.

ಕೆಲವು ನಂಬಿಕೆಗಳು ಒಳ್ಳೆಯ ಐತಿಹ್ಯಗಳಾಗುತ್ತವೆ. ತುರುವೇಕೆರೆ ಸಮೀಪದ ಮಲ್ಲಾಘಟ್ಟದ ಬಳಿ ಇರುವ ಅಣ್ಣ–ತಮ್ಮಂದಿರ ಗುಡ್ಡಕ್ಕಿರುವ ಕಥೆಯನ್ನು ಉದಾಹರಣೆಯಾಗಿ ಹೇಳಬಹುದು. ಅಣ್ಣತಮ್ಮಂದಿರಲ್ಲಿ ಪರಸ್ಪರ ಆಸೆ ಹೆಚ್ಚಾದಾಗ ಅಣ್ಣನನ್ನು ಊಟಕ್ಕೆ ಕಳುಹಿಸಿ ತಮ್ಮ ರಾಶಿಯನ್ನು ದೋಚುತ್ತಾನೆ. ತಮ್ಮ ಮನೆಗೆ ಹೋದಾಗ ಅಣ್ಣ ತಮ್ಮನ ರಾಶಿಯಲ್ಲಿ ಕದಿಯುತ್ತಾನೆ. ಅವರ ಆಸೆಬುರುಕತನಕ್ಕೆ ಪ್ರಾಯಶ್ಚಿತ್ತವೆಂಬಂತೆ ಇಬ್ಬರ ರಾಶಿಗಳು ಬೆಳಕು ಹರಿಯುವುದರೊಳಗೆ ಮಣ್ಣಿನ ಗುಡ್ಡೆಗಳಾಗಿರುತ್ತವೆ. ಇಂಥ ಒಂದು ನಂಬಿಕೆ ಈಗಲೂ ಸುತ್ತಮುತ್ತಲ ಜನರ ಮೇಲೆ ನೈತಿಕಪ್ರಭಾವವನ್ನು ಬೀರುತ್ತಿವೆ. ತುಂಬಿದ ರಾಶಿಯಲ್ಲಿ ಧಾನ್ಯ ಕದಿಯಬಾರದು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಒಂದು ಐತಿಹ್ಯ ಪ್ರಚಲಿತವಾಗಿದೆ. ಹೀಗೆ ಎಷ್ಟೋ ನಂಬಿಕೆಗಳಿಗೆ ಕಾರಣವಾಗಿರುವ ದಂತಕಥೆಗಳಿವೆ.

ಕೆಲವು ನಂಬಿಕೆಗಳಂತೂ ನೀತಿಪ್ರಧಾನವಾಗಿವೆ. ಉಂಡಮನೆಗೆ ಎರಡು ಬಗೆಯಬಾರದು, ತುಂಬಿದ ಕೆರೆಗೆ ಕಲ್ಲುಹೊಡೆಯಬಾರದು ಅಂದರೆ ನೆಮ್ಮದಿಯಿಂದಿರುವವರ ಜೀವನದ ಮಧ್ಯೆ ಪ್ರವೇಶಿಸಿ ಅಶಾಂತಿಯನ್ನು ತರುವ ಯತ್ನ ಬೇಡ ಎಂಬ ಅರ್ಥವನ್ನು ಧ್ವನಿಸುತ್ತದೆ. ಹಸಿದವನಿಗೆ ಅನ್ನಹಾಕಿದರೆ ಪುಣ್ಯ ಬರುತ್ತದೆ ಎಂಬ ನಂಬಿಕೆ ಮಾನವೀಯತೆಯನ್ನು ಪ್ರತಿನಿಧಿಸುತ್ತದೆ.

ನಂಬಿಕೆಗಳಿಂದ ಮಾನವನಿಗೆ ಉಪಕಾರವಾಗುವ ಸಂದರ್ಭಗಳಿದ್ದಾಗ್ಯೂ ಮುಗ್ಧಜನತೆಗೆ ಬಹಳಷ್ಟು ಸಲ ಈ ಬಗೆಯ ಕೆಲವು ಮೂಢನಂಬಿಕೆಗಳಿಂದ ತಮ್ಮ ಸರ್ವಸ್ವವನ್ನೂ ನಾಶಮಾಡಿಕೊಳ್ಳುವ ಸಂದರ್ಭಗಳು ಒದಗಿಬರುವುದುಂಟು. ಆದ್ದರಿಂದ ಜನಪದ ನಂಬಿಕೆಗಳ ಸಂಗ್ರಹ, ವ್ಯಾಖ್ಯಾನ, ವಿವರಣೆ ಅಧ್ಯಯನಗಳಿಂದ ಅವುಗಳ ವೈಜ್ಞಾನಿಕ ಹಿನ್ನೆಲೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಈ ಹಿಡಿತಕ್ಕೆ ಸಿಕ್ಕದೆ ಹೋದ ನಂಬಿಕೆಗಳಿಂದ ಎಚ್ಚರವಿರಬೇಕಾದ ಅಗತ್ಯವನ್ನೂ ಅಲಕ್ಷಿಸಕೂಡದು.

ಕನ್ನಡದಲ್ಲಿ ಈ ಬಗೆಯ ನಂಬಿಕೆಗಳ ಸಂಗ್ರಹ, ಸಂಪಾದನೆ, ಸಂರಕ್ಷಣೆ, ಪ್ರಕಟಣೆಯ ಕಾರ್ಯ ತಕ್ಕಮಟ್ಟಿಗೆ ನಡೆದಿರುವುದರ ಜೊತೆಗೆ ಅವನ್ನು ವೈಜ್ಞಾನಿಕ ಒರೆಗಲ್ಲಿನಿಂದ ಪರೀಕ್ಷಿಸಿ ಪೃಥಕ್ಕರಿಸುವ ಕಾರ್ಯವೂ ನಡೆದಿದೆ. ಅಂಥ ಪ್ರಯತ್ನಗಳಲ್ಲಿ ಮೊಟ್ಟ ಮೊದಲನೆಯದು ರಾಗೌ ಮತ್ತು ಎಂ. ಸಿ. ವಸಂತಕುಮಾರ್ ಅವರು ಜೊತೆಯಾಗಿ ಪ್ರಕಟಿಸಿರುವ 'ಜನಪದ ನಂಬಿಕೆಗಳು' ಎಂಬ ಸಂಕಲನ (1972). ಇದರಲ್ಲಿ ವಿಸ್ತಾರವಾದ, ಬಹು ಉಪಯುಕ್ತವಾದ ಪ್ರಸ್ತಾವನೆಯಿದೆ. ಅನಂತರ ಜಿ. ವಿ. ದಾಸೇಗೌಡರ 'ನಮ್ಮ ಜನಪದ ನಂಬಿಕೆಗಳು' ಎಂಬ ಹೊತ್ತಿಗೆ ಪ್ರಕಟವಾಯಿತು (1972). ಈ ಕೃತಿಯ ವಿಶೇಷವೆಂದರೆ ಉಪಯುಕ್ತ ಪ್ರಸ್ತಾವನೆಯ ಜೊತೆಗೆ ನಂಬಿಕೆಗಳ ವಿಭಜನೆ, ವ್ಯಾಖ್ಯಾನ ಇತ್ಯಾದಿಗಳು ಇರುವುದು. ಮತ್ತೊಂದು ಉತ್ತಮ ಸಂಕಲನ ಡಿ. ಕೆ. ರಾಜೇಂದ್ರ ಅವರ 'ನಮ್ಮ ಸುತ್ತಿನ ನಂಬಿಕೆಗಳು' (1973). ಈ ದಿಶೆಯಲ್ಲಿ ನಡೆಯಬೇಕಾಗಿರುವ ಅಪಾರ ಕೆಲಸಕ್ಕೆ ಈ ಮೂರು ಸಂಕಲನಗಳೂ ದಿಕ್ಸೂಚಿಗಳಾಗಿವೆ. (ಎಸ್.ಎನ್.ಜಿ.)

**ಜನಪದ ನಿರುಕ್ತಿ :** ಊರು ಕೇರಿ, ನದಿ ಬೆಟ್ಟ ಗುಡ್ಡ, ಕೆರೆ ಕಾಲುವೆ ಮುಂತಾದವುಗಳ ಹೆಸರುಗಳ ಬಗ್ಗೆ ಸಾಮಾನ್ಯ ಜನ ಕೊಡುವ ವಿವರಗಳಿಗೆ ಜನಪದ ನಿರುಕ್ತಿ (ಫೋಕ್ ಎಟಿಮಾಲಜಿ) ಎಂಬ ಹೆಸರಿದೆ. ತಾವು ಕೊಡುವ ಪ್ರತಿಯೊಂದು ವಿವರಕ್ಕೂ ಪುರಾಣ, ಇತಿಹಾಸ ಇಲ್ಲವೆ ಐತಿಹ್ಯದ ಆಧಾರವನ್ನು ಕಲ್ಪಿಸುವುದು ಇಲ್ಲಿನ ವಾಡಿಕೆ. ಪದಗಳಿಗೆ ನಿಜವಾದ ನಿಷ್ಪತ್ತಿ ತಿಳಿಯದಿದ್ದಾಗ, ಅವುಗಳ ನಿಷ್ಪತ್ತಿಯನ್ನು ತಪ್ಪು ಗ್ರಹಿಸುವುದು, ಇಲ್ಲವೆ ಸಂಬಂಧವಿರಬಹುದಾದ ಇತರ ಪದಗಳ ಜೊತೆ ತಪ್ಪು ಸಾದೃಶ್ಯ ಕಲ್ಪಿಸುವುದು ಇಲ್ಲಿ ಸಾಮಾನ್ಯ. ಎಷ್ಟೋ ವೇಳೆ ತಮ್ಮ ವಿವರಣೆಗೆ ತಕ್ಕಂತೆ ಜನ ಮೂಲಪದದ ರೂಪವನ್ನೇ ಬದಲಾಯಿಸಿರುವುದುಂಟು. ಪದಗಳ ಈ ಬಗೆಯ ರೂಪಾಂತರಕ್ಕೆ ಕೆಲವು ಕಾರಣಗಳಿವೆ. ಹಳೆಯ ಪದಗಳು ರೂಢಿ ತಪ್ಪಿದಾಗ ಅವುಗಳ ಅರ್ಥ ಬದಲಾವಣೆ ಹೊಂದಬಹುದು ಅಥವಾ ಪದಗಳು ತಾವಾಗಿಯೇ ಬದಲಾವಣೆಗೆ ಒಳಗಾಗಬಹುದು. ಜೊತೆಗೆ ಪರಕೀಯರ ಭಾಷೆ, ಉಡುಪು, ಸಂಪ್ರದಾಯ, ನಡೆವಳಿಗಳ ಬಗ್ಗೆ ಸ್ವಾಭಾವಿಕವಾಗಿಯೇ ಒಂದು ರೀತಿಯ ಹೇವರಿಕೆಯಿರುವುರಿಂದ ಪರಕೀಯ ಭಾಷೆಯನ್ನು ತಪ್ಪು ಉಚ್ಚರಿಸುವುದು ಅಥವಾ ಪದಗಳನ್ನು ಉದ್ದೇಶಪೂರ್ವಕವಾಗಿ ತಿರುಚುವುದು ಸಾಮಾನ್ಯವಾಗಿ ನಡೆಯುತ್ತದೆ. ಎಷ್ಟೋ ವೇಳೆ ತಪ್ಪು ನಿರುಕ್ತಿಗಳು ಸ್ಥಿರವಾಗಲು ಪ್ರಾಚೀನ ಪದಗಳನ್ನು ಕುರಿತಾದ ವಿದ್ವಾಂಸರ ತಪ್ಪು ವ್ಯಾಖ್ಯಾನಗಳೂ ಕಾರಣವಾಗುತ್ತವೆ. ಕೆಲವೊಂದು ತಪ್ಪು ಸಮೀಕರಣದಿಂದ ಪದಗಳ ರೂಪ ಹೀಗೆ ರೂಪಾಂತರಗೊಳ್ಳುವಾಗ ತಪ್ಪು ಸಂಬಂಧ ಮತ್ತು ಸಾದೃಶ್ಯದಿಂದಾಗಿ ಅವುಗಳ ಭಾವ ಕೂಡ ಭ್ರಷ್ಟಗೊಳ್ಳುವುದು ಸಹಜ. ಜನಪದ ನಿರುಕ್ತಿಯ ಪ್ರಕ್ರಿಯೆಯನ್ನು ವೈದಿಕ ಸಾಹಿತ್ಯದಲ್ಲಿಯೇ ಕಾಣುತ್ತೇವೆ. ಬ್ರಾಹ್ಮಣಗಳಲ್ಲಿ ಹಲವು ಪದಗಳಿಗೆ ಇಂಥ ವ್ಯುತ್ಪತ್ತಿ, ವಿವರಣೆಗಳು ದೊರೆಯುತ್ತವೆ. ಬ್ರಾಹ್ಮಣಗಳ ಸಂಕಲನಕಾರರು ಸಂಪ್ರದಾಯದಲ್ಲಿನ ಪೂರ್ಣ ನಂಬಿಕೆಯಿಂದಾಗಿ, ಜನಪದ ನಿರುಕ್ತಿಯನ್ನೇ ಎತ್ತಿ ಹಿಡಿದರು. ವೈದಿಕ ಪರಂಪರೆಯ ಈ ನಿಷ್ಠೆಯನ್ನು ಯಾಸ್ಕರ ನಿರುಕ್ತದಲ್ಲಿ ಸಾಕಷ್ಟು ಕಾಣಬಹುದು. ಉದಾಹರಣೆಗೆ ಅಗ್ನಿ ಎಂಬ ಪದ. ದೇವತೆಗಳಲ್ಲಿ ಮೊದಲು ಹುಟ್ಟಿದವನಾದ್ದರಿಂದ ಅವನಿಗೆ ಅಗ್ರಿ ಎಂದು ಹೆಸರಾಯಿತು. ಆದರೆ ದೇವತೆಗಳ ರಹಸ್ಯ ಕಾಪಾಡಿದ್ದರಿಂದ ಅವನಿಗೆ ಅಗ್ನಿ ಎಂಬುದಾಗಿ ಹೆಸರು ಬಂತಂತೆ.

ಹಾಗೆಯೇ ಪೌರಾಣಿಕ ಜನಪದ ನಿರುಕ್ತಿಗಳನ್ನೂ ಗುರುತಿಸಬಹುದು. ಜನಪದ ನಿರುಕ್ತಿ ಅನೇಕ ಪದಗಳ ಸುತ್ತ ಅಸಂಖ್ಯಾತ ನಂಬಿಕೆಗಳು ಮತ್ತು ಪುರಾಣಗಳನ್ನು ಸೃಷ್ಟಿಸಿದೆ. ಉದಾಹರಣೆಗೆ ಶಶ ಎಂಬ ಪದ. ಇದರ ಅರ್ಥ ಮೊಲ ಎಂದಿದ್ದರೂ ಇದನ್ನು ಚಂದ್ರನಿಗೂ ಅನ್ವಯಿಸಲಾಯಿತು. ಅನೇಕ ಚಂದ್ರಪುರಾಣಗಳು ಮೊಲದ ಸುತ್ತ ಕಟ್ಟಿದವುಗಳಾಗಿವೆ.

ಪಾಂಡವರ ತಾಯಿಯಾದ ಕುಂತಿಗೆ ಜಾನಪದದಲ್ಲಿ ಕನ್ಯಾಮಾತಾ ಎಂಬ ಅರ್ಥ ವಿದೆಯಂತೆ.

ಐತಿಹ್ಯಗಳಿಗೂ ಜನಪದ ನಿರುಕ್ತಿಗೂ ನಿಕಟ ಸಂಬಂಧವಿದೆ. ಐತಿಹ್ಯಗಳಲ್ಲೆಲ್ಲ ಸ್ಥಳೀಯ ಐತಿಹ್ಯಗಳು ಜನಪದ ನಿರುಕ್ತಿಗಳಿಂದ ಹೆಚ್ಚು ಪ್ರಭಾವಿತವಾಗಿವೆ. ಇಂಥದಕ್ಕೆ ಪಿರಿಯಾಪಟ್ಟಣದ ಸಮೀಪದಲ್ಲಿರುವ ಮಾಕಲ್ಲಯ್ಯನ ಗುಡ್ಡ ಒಂದು ನಿದರ್ಶನ. ಇದರ ಹಿನ್ನೆಲೆಯಲ್ಲಿ ಸೊಗಸಾದ ಪುರಾಣ ಕಥೆಯೊಂದಿದೆ. ಸೀತಾ ರಾಮಲಕ್ಷ್ಮಣರು ಅರಣ್ಯವಾಸ ಕಾಲದಲ್ಲಿ ದಶರಥನ ಹೆಸರಿನ ಲಿಂಗವೊಂದನ್ನು ಸ್ಥಾಪಿಸಿ, ಪೂಜಿಸುತ್ತಿದ್ದರು. ಇದನ್ನು ಈಗ ದಶರಥೇಶ್ವರ ಎಂದು ಕರೆಯಲಾಗುತ್ತಿದೆ. ಇದು ಅವರಿಗೆ ಕಷ್ಟಕಾಲದಲ್ಲಿ ಎಚ್ಚರಿಕೆ ನೀಡುತ್ತ ಮಾರ್ಗದರ್ಶಿಯಾಗಿತ್ತು. ಹೀಗಿರುವಾಗ ಸಂನ್ಯಾಸಿ ರೂಪದಲ್ಲಿ ಬಂದ ರಾವಣ ಸೀತೆಗೆ ಭಿಕ್ಷೆ ನೀಡಲು ಹೇಳಿದ. ಲಿಂಗದ ಎಚ್ಚರಿಕೆಯನ್ನೂ ಗಮನಿಸದೆ ಸೀತೆ, ಋಷಿಯೆಂದು ತಿಳಿದು ರಾವಣನಿಗೆ ಭಿಕ್ಷೆ ನೀಡಲು ಮುಂದಾದಳು. ಫಲವಾಗಿ ದಶರಥೇಶ್ವರ ಕಲ್ಲಾದನಂತೆ. ರಾವಣನಿಂದ ಸೀತಾಪಹರಣವಾಗುವಾಗ ಸೀತೆ, ಮಾವ ಕಲ್ಲಾದೆಯಾ–ಎಂದು ಕೂಗಿಕೊಂಡಳಂತೆ. ಈಗ 'ಮಾವ ಕಲ್ಲಾದೆಯಾ' ರೂಪವೇ ಮಾಕಲ್ಲಯ್ಯ ಆಗಿ. ಆ ಪ್ರದೇಶ ಮಾಕಲ್ಲಯ್ಯ ಗುಡ್ಡ ಎಂದೇ ಪ್ರಸಿದ್ಧವಾಯಿತೆಂದು ಹೇಳುತ್ತಾರೆ.

ಅನೇಕ ಸ್ಥಳ ಮತ್ತು ನದಿಗಳ ಹೆಸರುಗಳ ಮೂಲ ಕೂಡ ಜನಪದ ನಿರುಕ್ತಿಯಂತಿರುವುದು ಗಮನಾರ್ಹ. ಸ್ಥಳದ ಹೆಸರಿಗೆ ಬೆಂಗಳೂರು ಒಳ್ಳೆಯ ಉದಾಹರಣೆ. ಇದು ಬೆಂಗಾಳು ಎಂಬುದರಿಂದ ಬಂದಿದ್ದು, ಇದರ ಹಿಂದೆ ಮಾಗಡಿ ಕೆಂಪೇಗೌಡನಿಗೆ ಸಂಬಂಧಿಸಿದ ಐತಿಹ್ಯವೊಂದಿದೆ. ಈಗ ಬೆಂಗಳೂರು ಇರುವ ಪ್ರದೇಶದಲ್ಲಿ ಒಮ್ಮೆ ಸಂಚಾರ ಹೊರಟ ಕೆಂಪೇಗೌಡನಿಗೆ ತುಂಬ ಹಸಿವಾಯಿತಂತೆ. ಅದೇ ಸಮಯದಲ್ಲಿ ಅವನ ಮನೆದೇವತೆ ಕೆಂಪಮ್ಮ ಬೇಯಿಸಿದ ಕಾಳನ್ನು ಇರಿಸಿಕೊಂಡು ಕುಳಿತಿದ್ದಳು. ಹಸಿದು ಬಂದ ಕೆಂಪೇಗೌಡನಿಗೆ ಆಕೆ ಕಾಳು ಕೊಟ್ಟು, ಆ ಜಾಗದಲ್ಲಿ ಕೋಟೆ ಕಟ್ಟಿಸುವಂತೆ ಸೂಚಿಸಿ ಅದೃಶ್ಯವಾದಳು. ಹಾಗೆ ಕಟ್ಟಿಸಿದ ಊರಿಗೆ ಗೌಡ ಬೆಂದ ಕಾಳಿನ ನೆನಪಿಗಾಗಿ ಬೆಂಗಾಳು ಎಂದು ಹೆಸರಿಟ್ಟನಂತೆ. ಇದಕ್ಕೆ ಊರು ಪದ ಸೇರಿಸಿಕೊಂಡು ಬೆಂಗಾಳೂರು ಆಗಿ ಕ್ರಮೇಣ ಈಗ ಬೆಂಗಳೂರು ಆಗಿ ಈ ಪದ ಮಾರ್ಪಾಡಾಗಿದೆ–ಎಂಬುದಾಗಿ ಜನಜನಿತ ಕಥೆಯೊಂದಿದೆ. ನದಿಯ ಹೆಸರಿಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ನೇತ್ರಾವತಿಯನ್ನು ನೋಡಬಹುದು. ಹಿರಣ್ಯಾಕ್ಷ ಭೂಮಿಯನ್ನು ಅಪಹರಿಸಿ ಪಾತಾಳಲೋಕಕ್ಕೆ ತೆಗೆದುಕೊಂಡು ಹೋದನಷ್ಟೆ ಆ ಭೂಮಿಯನ್ನು ಹಿಂದಕ್ಕೆ ತರಲು ವಿಷ್ಣು ವರಾಹಾವತಾರವೆತ್ತಿ ಹಿರಣ್ಯಾಕ್ಷನನ್ನು ಕೊಲ್ಲಬೇಕಾಯಿತು. ಭೂಮಿಯನ್ನು ಸ್ವಸ್ಥಾನದಲ್ಲಿರಿಸಿದ ಮೇಲೆ ವಿಷ್ಣು ವಿಶ್ರಾಂತಿಗಾಗಿ ಒಂದು ಬೆಟ್ಟದ ಮೇಲೆ ಕುಳಿತುಕೊಂಡಾಗ ವರಾಹದ ಎರಡು ಕೋರೆದಾಡೆಗಳೂ ಎರಡು ಬೆಟ್ಟಗಳಿಗೆ ತಾಕಿ ಎರಡು ನದಿಗಳು ಉದ್ಭವವಾದವು. ಅವೇ ತುಂಗ ಮತ್ತು ಭದ್ರ ನದಿಗಳು. ಕೋರೆ ತಾಕಿ ಸಿಡಿದ ಮಣ್ಣು ವರಾಹಮೂರ್ತಿಯ ಕಣ್ಣಿಗೆ ಬಿತ್ತು. ಕೂಡಲೆ ಕಣ್ಣಿನಿಂದ ನೀರು ಚಿಮ್ಮಿತು. ಹೀಗೆ ವಿಷ್ಣುವಿನ ನೇತ್ರದಿಂದ ಚಿಮ್ಮಿದ ನದಿಯೇ ನೇತ್ರಾವತಿ ಎಂದು ಹೆಸರಾಂತಿದೆ.

ಹಾಗೆಯೇ ಸಾಮ್ರಾಜ್ಯಗಳ ಹೆಸರುಗಳಾದ ಕದಂಬ, ಚಾಳುಕ್ಯ, ಹೊಯ್ಸಳ ಮೊದಲಾದವು ಕೂಡ ಐತಿಹ್ಯ ಮೂಲದವಾಗಿದ್ದು ಅವುಗಳ ವಿವರಗಳು ಜನಪದ ನಿರುಕ್ತಿಯಂತೆಯೇ ಇವೆ. (ಆರ್.ಜಿ.)

**ಜನಪದ ನೃತ್ಯಗಳು :** ಮನುಷ್ಯನ ಬದುಕನ್ನು ತೀವ್ರ ಸಂವೇದನೆಗೊಳಗಾಗಿಸುವ ಹುಟ್ಟು, ಸಾವು ಮತ್ತು ಇವುಗಳ ನಡುವೆ ಅವನಿಗೆ ಉಂಟಾಗುವ ನಾನಾ ತರಹದ ಅನುಭವಗಳಿಗೆ ಒಂದು ಜನಾಂಗ ಚಲನೆಯ ಮೂಲಕ ವ್ಯಕ್ತಪಡಿಸುವ ಒಂದು

ಪ್ರತಿಕ್ರಿಯೆಯಾಗಿ ನೃತ್ಯ ಹುಟ್ಟಿತೆನ್ನಬಹುದು. ಮೂಲಭೂತವಾಗಿ ಅದು ಅವನ ಅತೀವ ಆನಂದದ, ತೃಪ್ತಿಯ ಸರಳ ಅಭಿವ್ಯಕ್ತಿ. ಜನಾಂಗದ ಆಚರಣೆ, ಸಂಪ್ರದಾಯ, ನಂಬಿಕೆ, ಮೂಢನಂಬಿಕೆ, ವೃತ್ತಿ ಮುಂತಾದವನ್ನೂ ಅದು ಪ್ರತಿಬಿಂಬಿಸುತ್ತದೆ. ಜನಪದ ನೃತ್ಯ ಆದಿಮಾನವನ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸುವ ಮೊದಲ, ಮತ್ತು ಏಕಮಾತ್ರ ಮಾಧ್ಯಮ ಆಗಿತ್ತೆಂಬ ಅಭಿಪ್ರಾಯವಿದೆ. ಅವನು ತನಗೂ ತನ್ನ ದೇವರಿಗೂ ಇರುವ ಸಂಬಂಧವನ್ನು ವ್ಯಕ್ತಪಡಿಸುವುದಕ್ಕಾಗಿ, ಬದುಕಿನಲ್ಲಿ ಬರುವ ಕೆಡಕುಗಳನ್ನು ನಿವಾರಿಸಿಕೊಳ್ಳುವುದಕ್ಕಾಗಿ, ಋತುಮಾನಗಳಲ್ಲಾಗುವ ಬದಲಾವಣೆಗಳನ್ನು ಗಮನಿಸುವುದಕ್ಕಾಗಿ, ಸೂರ್ಯನ ಉದಯ ಮತ್ತು ಅಸ್ತಗಳನ್ನು ಸೂಚಿಸುವುದಕ್ಕಾಗಿ, ಚಂದ್ರನ ಆಕಾರದಲ್ಲಾಗುವ ವ್ಯತ್ಯಾಸಗಳನ್ನು ಗುರುತಿಸುವುದಕ್ಕಾಗಿ, ಬದುಕಿನಲ್ಲಿ ಬೇರೆ ಬೇರೆ ಕೆಲಸಗಳನ್ನು ಅರಸುವುದರ ಪ್ರತೀಕವಾಗಿ, ಪ್ರಕೃತಿ, ಪ್ರಾಣಿಪಕ್ಷಿ ಇವುಗಳ ಚಲನವಲನಗಳನ್ನು ಅಭಿನಯನದ ಮೂಲಕ ಹಿಡಿದಿಡುವುದಕ್ಕಾಗಿ ನೃತ್ಯವನ್ನು ಅಭಿನಯಿಸಲಾರಂಭಿಸಿದ. ಪ್ರತಿಯೊಂದು ದೇಶವೂ ತನ್ನದೇ ಆದ ಜನಪದ ನೃತ್ಯ ಸಂಪ್ರದಾಯಗಳನ್ನು ಹೊಂದಿದ್ದರೂ ಬಹುಪಾಲು ನೃತ್ಯಗಳ ಮೂಲ ಉದ್ದೇಶ ಮರೆತುಹೋಗಿದೆ. ಆದರೂ ನೃತ್ಯಗಳ ಮೂಲ ಉದ್ದೇಶಗಳನ್ನು ಪ್ರಯತ್ನದಿಂದ ಸ್ವಲ್ಪಮಟ್ಟಿಗೆ ಸಂಶೋಧಿಸಲಾಗಿದೆ.

ಸಾಮಾನ್ಯವಾಗಿ ಪ್ರತಿಯೊಂದು ಜನಪದ ನೃತ್ಯವೂ ಆಯಾ ಪ್ರದೇಶದ ಭೌಗೋಳಿಕ ಹಿನ್ನೆಲೆಯ ಮೇಲೆ ಬೆಳೆದಿರುತ್ತದೆ. ಚುರುಕಾದ, ಶ್ರಮಸಾಧ್ಯವಾದ ಮತ್ತು ಕಟ್ಟುನಿಟ್ಟಾದ ಚಲನೆಯ ನೃತ್ಯಗಳು ಉತ್ತರ ರಷ್ಯ, ಸ್ಕ್ಯಾಂಡಿನೇವಿಯ ಮತ್ತು ಸ್ಕಾಟ್ಲೆಂಡಿನಂಥ ಚಳಿ ಪ್ರದೇಶಗಳ ನೃತ್ಯಗಳಾದರೆ, ಆವೇಶಪೂರಿತವಾದ ಮತ್ತು ಭಾವೋದ್ರೇಕದ ನೃತ್ಯಗಳು ಅಧಿಕ ಉಷ್ಣಾಂಶಗಳಿರುವ ಸ್ಪೇನ್, ಮೆಕ್ಸಿಕೋ, ಆಫ್ರಿಕ, ದಕ್ಷಿಣ ಇಟಲಿಯಂಥ ಪ್ರದೇಶಗಳಲ್ಲಿ ಕಂಡುಬರುತ್ತವೆ.

ಜನಪದ ನೃತ್ಯಗಳ ಅಸಂಖ್ಯ ಶೈಲಿಗೆ ಆಯಾ ಜನಾಂಗ ವಾಸಮಾಡುವ ಭೂಮಿಯ ವ್ಯವಸ್ಥೆಯೂ ಕಾರಣವಾಗಿರುತ್ತದೆ. ಮರಳುಗಾಡಿನಲ್ಲಿ ಬದುಕುವ ಜನ ನೃತ್ಯಮಾಡುವಾಗ ಒಂದೇ ಸಮನೆ ತಮ್ಮ ದೇಹದ ಭಾರವನ್ನು ಕಾಲಿನಿಂದ ಕಾಲಿಗೆ ಬದಲಾಯಿಸುತ್ತಿರುತ್ತಾರೆ. ಇದಕ್ಕೆ ಕಾರಣ–ಮರಳುಗಾಡಿನಲ್ಲಿ ನೆಲ ವಿಪರೀತವಾಗಿ ಕಾಯುವುದರಿಂದ ಒಂದೇ ಸ್ಥಳದಲ್ಲಿ ಒಂದು ಕಾಲನ್ನು ಹೆಚ್ಚು ಹೊತ್ತು ಇಡಲಾಗುವುದಿಲ್ಲ. ಏಷ್ಯದ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಬೇಟೆಗಾರರು ಮತ್ತು ಕುದುರೆ ಸಾಕುವವರು ವಿಭಿನ್ನ ರೀತಿಯ ನೃತ್ಯ ಸಂಪ್ರದಾಯಗಳನ್ನು ಹೊಂದಿದ್ದಾರೆ. ಇಲ್ಲಿನ ನೃತ್ಯಗಳಲ್ಲಿ ಲಯಬದ್ಧವಾದ ಚಲನೆಗಳು ಕಂಡುಬರುವುದಿಲ್ಲ. ಅವರು ಕೆಲವು ಸಾರಿ ಬೇಟೆಯ ಯಾವುದಾದರೊಂದು ಅನಿರೀಕ್ಷಿತವಾದ ಅಂಶವನ್ನು ಪ್ರದರ್ಶಿಸಬಹುದು; ಕುದುರೆಯ ಚಲನವಲನಗಳನ್ನು ಅನುಕರಿಸಬಹುದು; ಅಥವಾ ಕುಣಿಯುವಾಗ ಹೆಚ್ಚು ಉದ್ದಕ್ಕೆ ಹಾರುವುದರಿಂದ ತಾವು ಎಷ್ಟು ಮೈಲಿ ಪ್ರಯಾಣ ನಡೆಸಿದೆವು ಎಂಬುದನ್ನು ತೋರಿಸಬಹುದು. ಫಲವತ್ತಾದ ಬಯಲು ಪ್ರದೇಶಗಳಲ್ಲಿ ವಾಸಿಸುವ ಅಥವಾ ನದೀತಟಾಕಗಳಲ್ಲಿ ವಾಸಿಸುವ ಜನ ದೊಡ್ಡ ದೊಡ್ಡ ಗುಂಪುಗಳಾಗಿ ಸೇರಿ, ಮದುವೆ, ಹಬ್ಬ, ಸಾವು, ಚೈತ್ರ, ವಸಂತ, ಚಳಿಗಾಲ ಇಂಥ ಸಂದರ್ಭಗಳಲ್ಲಿ ನೃತ್ಯಮಾಡುತ್ತಾರೆ. ಆದರೆ ಈಗ ಯೂರೋಪ್ ಖಂಡದಲ್ಲಿ ಈ ಬಗೆಯ ನೃತ್ಯಗಳೆಲ್ಲ ಕ್ರೈಸ್ತರ ಹಬ್ಬಗಳೊಂದಿಗೆ ಸಂಬಂಧವನ್ನು ಹೊಂದಿವೆ. ಇಲ್ಲಿನ ನೃತ್ಯಗಳಲ್ಲಿ ನೆಗೆತಗಳು ಕಡಿಮೆ. ಹೆಜ್ಜೆಗಳನ್ನು ಕರಾರುವಾಕ್ಕಾಗಿ ಇಡುವುದಿಲ್ಲ. ನೃತ್ಯಗಳು ಮಂದಗತಿಯಿಂದ ಪ್ರಾರಂಭವಾಗಿ ಉದ್ವೇಗ ಹೆಚ್ಚಿದಂತೆಲ್ಲ ವೇಗವಾಗಿ ಸಾಗುತ್ತವೆ. ಅಭಿನಯಕಾರರು ಆವೇಶಪೂರಿತರಾದಾಗ ಬೆಂಕಿ, ಕತ್ತಿ ಮೊದಲಾದವನ್ನು ಹಿಡಿದು ಬಳುಕಿಸಿ ನೃತ್ಯಮಾಡುತ್ತಾರೆ. ಚೆಕೊಸ್ಲೊವಾಕಿಯ ಮತ್ತು ಭಾರತಗಳಲ್ಲಿ ಈ ಬಗೆಯ ನೃತ್ಯಗಳನ್ನು ಕಾಣಬಹುದು. ಪರ್ವತಗಳ ಮೇಲೆ ವಾಸಮಾಡುವ ಜನರ ನೃತ್ಯಗಳನ್ನು ಸುಲಭವಾಗಿ ಗುರುತಿಸಬಹುದು. ಅಲ್ಲಿನ ನೃತ್ಯಕಾರರು, ಪರ್ವತಗಳ ಮೇಲಿನ ನೆಲ ಸಮತಟ್ಟಾಗಿರುವುದಿಲ್ಲವಾದ ಕಾರಣ, ಸಮತಟ್ಟಾಗಿ ಸಿಗುವ ಕಡಿಮೆ ಪ್ರದೇಶಗಳಲ್ಲೇ ನೃತ್ಯ ಮಾಡಬೇಕಾಗುತ್ತದೆ. ಆದುದರಿಂದ ಅಭಿನಯಕಾರರು ಚಿಕ್ಕಚಿಕ್ಕ ಹೆಜ್ಜೆಗಳನ್ನು ಇಡುತ್ತ ಸಿಗುವ ಚೂರು ಜಾಗವನ್ನೂ ಬಳಸಿಕೊಳ್ಳುತ್ತ ಆವೇಶಪೂರಿತವಾಗಿ ಕುಣಿಯುತ್ತಾರೆ. ನೃತ್ಯಕ್ರಿಯೆ ಬಹುಪಾಲು ಮೇಲ್ಮುಖವಾದದ್ದಾಗಿರುತ್ತದೆ. ಹೆಜ್ಜೆಗಳನ್ನಿಡುವುದು ತೊಡಕಿನ ಕೆಲಸವಾದರೂ ಅಲ್ಲಿನ ನೃತ್ಯಕ್ರಿಯೆ ಸರಳವಾಗಿದ್ದು, ಪರ್ವತಗಳ ತಣ್ಣನೆಯ ಗಾಳಿಯಂತೆ ಚೇತೋಹಾರಿಯಾಗಿರುತ್ತದೆ. ಬಹುಪಾಲು ಜನಪದ ನೃತ್ಯಗಳು ವಾದ್ಯಗಳ ಸಂಗೀತದ ಹಿನ್ನೆಲೆಯಲ್ಲೇ ಜರುಗುತ್ತವೆ.

ಜನಪದ ನೃತ್ಯಗಳು ಸುಲಭದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಪ್ರಸಾರವಾಗುವುದಿಲ್ಲ. ಆದರೆ ವಸಾಹತುಗಳು ನಿರ್ಮಾಣವಾದಾಗಲೋ ಇಲ್ಲವೆ ಯುದ್ಧಗಳು ನಡೆದಾಗಲೋ ಇವು ದೇಶದಿಂದ ದೇಶಕ್ಕೆ ಪ್ರಯಾಣ ಮಾಡುತ್ತವೆ.

ಜನಪದ ನೃತ್ಯಗಳ ಮೂಲಸಾಮಗ್ರಿ ಮನುಷ್ಯನ ಬದುಕು ಮತ್ತು ಅವನ ಸುತ್ತಮುತ್ತಲಿನಲ್ಲಿರುವ ಪ್ರಕೃತಿಯೇ ಆಗಿರುವುದರಿಂದ ಅವುಗಳಲ್ಲಿ ವೈವಿಧ್ಯ ಹೆಚ್ಚು. ಒಟ್ಟು ಜನಪದ ನೃತ್ಯಗಳನ್ನು ನಾವು ಎರಡು ರೀತಿಯಲ್ಲಿ ಅವುಗಳ ವಸ್ತುಗಳಿಗನುಗುಣವಾಗಿ ವಿಭಾಗಿಸಬಹುದು : ಧಾರ್ಮಿಕ ಆಚರಣೆಗಳೊಂದಿಗೆ ಹುಟ್ಟಿಕೊಂಡ ನೃತ್ಯಗಳು ಧಾರ್ಮಿಕ ನೃತ್ಯಗಳು. ಸ್ವಸಂತೋಷಕ್ಕಾಗಿ ಇಲ್ಲವೆ ಲೌಕಿಕವಾದ ಕಾರಣಗಳಿಂದ ಹುಟ್ಟಿಕೊಂಡ ನೃತ್ಯಗಳು ಲೌಕಿಕ ನೃತ್ಯಗಳು. ಪ್ರಪಂಚಾದ್ಯಂತವಿರುವ ಬೇರೆ ಬೇರೆಯ ಜನಪದ ನೃತ್ಯ ಪ್ರಕಾರಗಳನ್ನು ಈ ಕೆಳಗೆ ಅವಲೋಕಿಸಲಾಗಿದೆ.

ಧಾರ್ಮಿಕ ನೃತ್ಯಗಳು : ಮನುಷ್ಯನ ತೀವ್ರವಾದ ಅನಿಸಿಕೆಗಳಿಗೆ ತಾತ್ತ್ವಿಕ ಹಿನ್ನೆಲೆ ಸಿಕ್ಕಾಗ ಹುಟ್ಟುವ ನೃತ್ಯಗಳು ಇವು. ದೇವರು, ಭಯ, ಭಕ್ತಿ ಇಂಥವು ಈ ಬಗೆಯ ನೃತ್ಯಗಳ ಮೂಲವಸ್ತು. ಪ್ರಪಂಚಾದ್ಯಂತ ಕಂಡುಬರುವ ರೈತರ ನೃತ್ಯಗಳು ಅವರ ಬದುಕಿನ ಪ್ರತೀಕವಾಗಿ ಉಳಿದಿವೆ. ಸೈಬೀರಿಯ ಮತ್ತು ಲ್ಯಾಟಿನ್ ಅಮೆರಿಕಗಳಲ್ಲಿ ದೇವರ ಉತ್ಸವಗಳನ್ನು ಅಲ್ಲಿನ ನೃತ್ಯಗಳು ಪ್ರತಿನಿಧಿಸುತ್ತವೆ. ಅಮೆರಿಕದ ರೆಡ್ ಇಂಡಿಯನರು ಅನೇಕ ಬಗೆಯ ಧಾರ್ಮಿಕ ನೃತ್ಯಗಳನ್ನು ಪ್ರದರ್ಶಿಸುತ್ತಾರೆ. ಪ್ರಪಂಚದಾದ್ಯಂತವಿರುವ ಆದಿವಾಸಿ ಜನ ಮನುಷ್ಯನ ಹುಟ್ಟು, ಸಾವು, ಋತುಮಾನ ಇವುಗಳಿಗೆ ಸಂಬಂಧಿಸಿದ ಹಾಗೆ ನೃತ್ಯ ಮಾಡುತ್ತಾರೆ. ಯೂರೋಪಿನ ಹಬ್ಬದ ದಿನಗಳಲ್ಲಿ ಆಚರಿಸುವ ನೃತ್ಯಗಳಲ್ಲಿಯೂ ಬಹುಪಾಲು ಈ ಬಗೆಯವೇ ಆಗಿವೆ. ಬಾಲ್ಕನ್ ಪ್ರದೇಶಗಳಲ್ಲಿ ಈ ಬಗೆಯ ನೃತ್ಯಗಳನ್ನು ಕುಲೂಸ್ ಎಂದು ಕರೆಯುತ್ತಾರೆ. ಅಭಿನಯಕಾರರು ಒಬ್ಬರಿಗೊಬ್ಬರು ಕೈ ಮಿಲಾಯಿಸಿಕೊಂಡು ವೃತ್ತಾಕಾರವಾಗಿ ನಿಂತು ಪ್ರದಕ್ಷಿಣವಾಗಿ ಇಲ್ಲವೆ ಅಪ್ರದಕ್ಷಿಣವಾಗಿ ಚಲಿಸುತ್ತಾರೆ. ಪ್ರದಕ್ಷಿಣವಾಗಿ ಚಲಿಸುವುದು ಮದುವೆ, ಹಬ್ಬ ಮತ್ತು ಸುಗ್ಗಿ ಇಂಥ ಸಂತೋಷ ಸಂದರ್ಭಗಳಲ್ಲಿ ಮಾತ್ರ. ದುಃಖಸೂಚಕವಾದ ಅಂತ್ಯಕ್ರಿಯೆಯಂಥ ಸಂದರ್ಭಗಳಲ್ಲಿ ಅಪ್ರದಕ್ಷಿಣವಾಗಿ ಸುತ್ತುತ್ತಾರೆ. ಸ್ಕಾಟ್‌ಲೆಂಡಿನ ತೀರ ಹಳೆಯ ದುಃಖಸೂಚಕವಾದ ನೃತ್ಯಗಳಲ್ಲಿ ನೃತ್ಯಕಾರರು ಸೂರ್ಯನಿಗೆ ವಿರುದ್ಧ ದಿಕ್ಕಿನಲ್ಲಿ ಸುತ್ತುತ್ತಾರೆ.

ಕುಲೂಸ್ ನೃತ್ಯದಲ್ಲಿ ಪದಗಳು ತುಂಬ ಸರಳವಾದುವು. ಮುಸ್ಲಿಂ ರಾಷ್ಟ್ರಗಳಲ್ಲಿ ಆಚರಿಸುವ ಕುಲುವಿಗೆ ನಿರ್ದಿಷ್ಟವಾದ ಸಂಗೀತದ ಹಿನ್ನೆಲೆ ಇರುವುದಿಲ್ಲ. ರುಮೇನಿಯದ ಕುಲೂಸ್ ನೃತ್ಯ ತುಂಬ ಮೋಹಕವಾದದ್ದಾದರೆ, ಚೆಕೊಸ್ಲೊವಾಕಿಯದ ನೃತ್ಯ ಗಂಭೀರ ವಾದದ್ದು. ಕೆಲವು ಸಾರಿ ಬರೀ ಗಂಡಸರೇ ಇನ್ನು ಕೆಲವು ಬಾರಿ ಹೆಂಗಸರು ಮಾತ್ರವೇ ಈ ನೃತ್ಯವನ್ನು ಅಭಿನಯಿಸಿದರೆ, ಇನ್ನು ಕೆಲವೊಮ್ಮೆ ಕೆಲವು ಗೊತ್ತಾದ ಗುಂಪುಗಳು ನೃತ್ಯಮಾಡುತ್ತವೆ. ಯೂರೋಪಿನ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಮೇ ಡೇ (ಮೇ ದಿನಾಚರಣೆ) ನೃತ್ಯಗಳು ಪುರಾತನ ಕಾಲದ ಆಚರಣೆಗಳಿಂದ ಹುಟ್ಟಿದವುಗಳಾಗಿವೆ. ಇಂಗ್ಲೆಂಡಿನ ಖಡ್ಗನೃತ್ಯ ಕ್ರೈಸ್ತೇತರ ಆಚರಣೆಗಳೊಂದಿಗೆ ಸಂಬಂಧಿಸಿದ ಒಂದು ಪುರಾತನ ನೃತ್ಯ. ಆದರೆ ಇಂದು ಇದು ಧಾರ್ಮಿಕ ಹಿನ್ನೆಲೆಯನ್ನುಳ್ಳ ಒಂದು ನೃತ್ಯವಾಗಿದೆ.

ಧಾರ್ಮಿಕ ನೃತ್ಯಗಳಿಗೆ ಭಾರತ ಸಾಕಷ್ಟು ಪ್ರಸಿದ್ಧಿ ಹೊಂದಿದೆ. ಬಂಗಾಳದ ಕಾಠೀ, ಹಿಮಾಚಲದ ಸಾಂಗಲ, ಕರ್ನಾಟಕದ ವೀರಗಾಸೆ ಕುಣಿತ, ಗೊರವರ (ಕಡಬಡ್ಡರ) ಕುಣಿತ, ಬೀಸುಕಂಸಾಳೆ ನೃತ್ಯ ಮುಂತಾದವನ್ನು ಹೆಸರಿಸಬಹುದು. ಗೊರವರ ನೃತ್ಯ ಶೈವಸಂಬಂಧಿಯಾದದ್ದು. ಮೈಲಾರಲಿಂಗನ ಗುಡ್ಡರಾದ ಗೊರವರು ತಲೆಯ ಮೇಲೆ ಕರಡಿಯ ಕೂದಲ ಟೊಪ್ಪಿಗೆ, ಮೈಮೇಲೆ ಕಪ್ಪು ನಿಲುವಂಗಿ, ಕವಡೆಯ ಸರಗಳು, ಕೈಯಲ್ಲಿ ಡಮರುಗ, ತ್ರಿಶೂಲಗಳನ್ನು ಹಿಡಿದು ವೃತ್ತಾಕಾರವಾಗಿ ನರ್ತಿಸುತ್ತಾರೆ.

ಪ್ರಕೃತಿಗೆ ಸಂಬಂಧಿಸಿದ ನೃತ್ಯಗಳು : ಪ್ರಕೃತಿ ಮತ್ತು ಮನುಷ್ಯನ ಸಂಬಂಧಗಳು ಹತ್ತಿರವಾದವು ಮತ್ತು ಪ್ರಕೃತಿ ಮನುಷ್ಯನ ಮೇಲೆ ತೀವ್ರವಾದ ಪರಿಣಾಮ ಗಳನ್ನುಂಟುಮಾಡುತ್ತದೆ. ಮನುಷ್ಯ ತನ್ನ ದೈನಂದಿನ ಬಹುಪಾಲು ಆವಶ್ಯಕತೆಗಳನ್ನು ಪ್ರಕೃತಿಯಿಂದಲೇ ಪೂರೈಸಿಕೊಳ್ಳುವುದಲ್ಲದೆ. ಪ್ರಕೃತಿಯನ್ನು ತಾನೂ ಅನುಕರಿಸಲು ಪ್ರಯತ್ನಿಸುತ್ತಾನೆ. ಆಫ್ರಿಕದ ಗಂಟೆ ನೃತ್ಯ (ಬೆಲ್ ಡಾನ್ಸ್) ಮಳೆಗಾಗಿ ಆಚರಿಸುವಂಥದು. ಮಂಜು, ಗಾಳಿ, ನೀರು ಮತ್ತು ಸೂರ್ಯನ ಮೇಲೆ ಪ್ರಭಾವ ಬೀರುವುದರ ಉದ್ದೇಶವಾಗಿ ಎಕ್ವಡಾರಿನಲ್ಲಿ ವೇಯಾರ ಎಂಬ ನೃತ್ಯವನ್ನು ಮಾಡುತ್ತಾರೆ. ಭಾರತದಲ್ಲಿ ಪ್ರಕೃತಿಗೆ ಸಂಬಂಧಿಸಿದ ನೃತ್ಯಗಳು ಅಷ್ಟಾಗಿ ಕಂಡುಬರುವುದಿಲ್ಲ.

ಖಗೋಳಶಾಸ್ತ್ರಕ್ಕೆ ಸಂಬಂಧಿಸಿದ ನೃತ್ಯಗಳು : ಸೂರ್ಯ, ಚಂದ್ರ, ನಕ್ಷತ್ರಗಳನ್ನು ಜಗತ್ತಿನ ರೈತ ಜನಾಂಗ ಮತ್ತು ಅಲೆಮಾರಿ ಜನಾಂಗಗಳು ಮೊದಲಿನಿಂದಲೂ ಪೂಜಿಸುತ್ತ ಬಂದಿದ್ದಾರೆ. ಇಂಥ ಜನಾಂಗದವರು ಬೊಲೀವಿಯ ಸೂರ್ಯನೃತ್ಯವನ್ನು ಇಂದಿಗೂ ಮಾಡುತ್ತಾರೆ. ರಾಮಧನ್ ಎಂಬ, ಚಂದ್ರನಿಗೆ ಸಂಬಂಧಿಸಿದ ನೃತ್ಯವನ್ನು ಉತ್ತರ ಆಫ್ರಿಕ ಮುಂತಾದ ಕಡೆ ಅಭಿನಯಿಸುತ್ತಾರೆ. ಸೂರ್ಯ ಮುಂತಾದ ಖಗೋಳ ಕಾಯಗಳ ಬಗ್ಗೆ ಇರುವ ಗೌರವ, ಕೃತಜ್ಞತೆಗಳೇ ಈ ನೃತ್ಯಕ್ಕೆ ಪ್ರೇರಕವಾಗಿದೆ.

ವೃತ್ತಿನೃತ್ಯಗಳು : ಫಲವತ್ತಾದ ಬಯಲುಪ್ರದೇಶಗಳಲ್ಲಿ ಮತ್ತು ನದೀತೀರದ ಪ್ರದೇಶಗಳಲ್ಲಿ ವಾಸಿಸಲು ಪ್ರಾರಂಭಿಸಿದಾಗಿನಿಂದಲೂ ಮನುಷ್ಯ ವ್ಯವಸಾಯವನ್ನು ಮಾಡಿ ಬದುಕಲು ಪ್ರಾರಂಭಿಸಿದ, ಪ್ರಾಣಿಗಳನ್ನು ಸಾಕಿದ. ಆ ತರಹದ ಬದುಕಿನ ಬಗ್ಗೆ ಇದ್ದ ಕುತೂಹಲ ಆತನ ನೃತ್ಯಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು. ಮಾಂತ್ರಿಕತೆಯನ್ನು ನಂಬಿದ ಆತ

ನೃತ್ಯಮಾಡುವುದರಿಂದ ತನ್ನ ವ್ಯವಸಾಯ ಹುಲುಸಾಗುವುದೆಂದು ನಂಬಿದ. ಯಾವುದೇ ಒಂದು ದೇಶದಲ್ಲಿ ಕಾಣಬರುವ ಸುಗ್ಗಿ ಕುಣಿತ ತನ್ನ ಕ್ರಿಯೆಯಲ್ಲಿ ಉಳಿದ ದೇಶಗಳ ಸುಗ್ಗಿಕುಣಿತದೊಂದಿಗೆ ತಾದಾತ್ಮ್ಯ ಹೊಂದಿರುತ್ತದೆ. ಮರ ಕಡಿಯುವ ನೃತ್ಯ ಫ್ರಾನ್ಸ್, ಕರೇಲ್ಯ ಮತ್ತು ಸೈಬೀರಿಯದ ಕೆಲವು ಭಾಗಗಳಲ್ಲಿ ಕಾಣಬರುತ್ತದೆ. ಚಮ್ಮಾರರ ನೃತ್ಯಗಳು ಸ್ಕ್ಯಾಂಡಿನೇವಿಯ, ಪೋಲೆಂಡ್ ಮತ್ತು ಭಾರತದ ಉತ್ತರ ಪ್ರದೇಶಗಳಲ್ಲಿ ಕಂಡುಬರುತ್ತವೆ. ಪಶುಸಂಗೋಪನ ನೃತ್ಯ ಫಿನ್ಲೆಂಡ್ ಮತ್ತು ಯೂಕ್ರೇನ್‌ಗಳಲ್ಲಿ ಕಂಡುಬಂದರೆ, ಬತ್ತ ತುಂಬುವ ನೃತ್ಯಗಳು ಮಲಯ, ಚೀನ ಮುಂತಾದ ಕಡೆ ಇವೆ.

ಭಾರತದ ಸೌರಾಷ್ಟ್ರದಲ್ಲಿ ಟಿಪ್ಪಣೀ ಎಂಬುದು ವೃತ್ತಿ ನೃತ್ಯಸಂಪ್ರದಾಯಕ್ಕೆ ಸೇರಿದುದಾಗಿದೆ. ಬಿಡುವಿನ ವೇಳೆಯಲ್ಲಿ ಕೆಲವು ಜಾತಿಯ ಹೆಣ್ಣು ಕೂಲಿ ಆಳುಗಳು ಕಟ್ಟಡಗಳಿಗೆ ಗಾರೆಗಚ್ಚನ್ನು ಹಾಕುವ ಮತ್ತು ಮುಗಿಸುವ ಸಂದರ್ಭದಲ್ಲಿ ಈ ನೃತ್ಯವನ್ನು ಮಾಡುತ್ತಾರೆ. ಪ್ರತಿ ಹೆಂಗಸೂ ಉದ್ದವಾದ ಹಿಡಿಯುಳ್ಳ ಮರದ ತುಂಡೊಂದನ್ನು (ದಂಸವನ್ನು) ಹಿಡಿದು ನೆಲವನ್ನು ಬಡಿಯುತ್ತಿರುವಾಗಲೇ ಹಾಡುಹಾಡುತ್ತ ಒಂದು ಬಗೆಯ ನೃತ್ಯ ಮಾಡುತ್ತಾಳೆ.

ದಿನ ಕಳೆದಂತೆ, ಬದುಕು ಹೆಚ್ಚು ಹೆಚ್ಚು ನಾಗರಿಕವಾದಂತೆ ಈ ಬಗೆಯ ನೃತ್ಯಗಳು ಕ್ಷೀಣಿಸುತ್ತಿವೆ. ಯೂರೋಪಿನ ಬಹುಪಾಲು ವೃತ್ತಿನೃತ್ಯಗಳು ಮಕ್ಕಳ ಆಟಗಳಾಗಿ ಪರಿವರ್ತನೆಗೊಂಡಿವೆ.

ಪ್ರಾಣಿನೃತ್ಯಗಳು : ಆದಿಮಾನವ ಪ್ರಾಣಿಗಳನ್ನು, ಪಕ್ಷಿಗಳನ್ನು ಮತ್ತು ಮೀನುಗಳನ್ನು ಪೂಜಿಸಿದ. ಅವುಗಳ ಚಲನೆಗಳನ್ನು ಅನುಕರಿಸುವುದರ ಮೂಲಕ ಅವುಗಳ ಶಕ್ತಿ, ಹಾರುವ ವೇಗ ಮತ್ತು ಕುತಂತ್ರಗಳನ್ನು ಅರಿತುಕೊಂಡು, ಅವನ್ನು ಸುಲಭವಾಗಿ ಹಿಡಿಯಲು ಸಾಧ್ಯವಾಗುತ್ತದೆ ಎಂದು ನಂಬಿದ. ಈ ಕಾರಣದಿಂದ ಅನೇಕ ಬಗೆಯ ಪ್ರಾಣಿನೃತ್ಯಗಳು ಅಸ್ತಿತ್ವಕ್ಕೆ ಬಂದವು. ಆಸ್ಟ್ರೇಲಿಯ, ಆಫ್ರಿಕ ಮತ್ತು ಅಮೆರಿಕಗಳ ಬುಡಕಟ್ಟುಗಳಲ್ಲಿ ಮೊಸಳೆ ನೃತ್ಯ, ಆಮೆ ನೃತ್ಯ ಮತ್ತು ಲೈರ್ ಹಕ್ಕಿಯ ನೃತ್ಯಗಳಿವೆ. ಉತ್ತರ ಅಮೆರಿಕದ ರೆಡ್ ಇಂಡಿಯನ್ನರು ಕರಡಿಗಳ, ಕತ್ತೆಕಿರುಬಗಳ ಮತ್ತು ನರಿಗಳ ಚಲನೆಗಳನ್ನು ಅನುಕರಿಸುತ್ತಾರೆ. ಭಾರತದಲ್ಲಿ ಮಯೂರ ನೃತ್ಯ, ಸರ್ಪ ನೃತ್ಯ ಮುಂತಾದ ಪ್ರಕಾರಗಳಿವೆ.



ಮಧ್ಯಪ್ರದೇಶದ ನೃತ್ಯಗಾರ್ತಿಯರು ಜನಪದ ಉಡಿಗೆ ತೊಡಿಗೆಯಲ್ಲಿ ನೆಹರೂ ಒಂದಿಗೆ

ಜಾರ್ಜಿಯದ ಕೋಸ್ಯಾಕ್ ಜನಾಂಗದ ರಣಹದ್ದಿನ ನೃತ್ಯ ತುಂಬ ಕುತೂಹಲಕಾರಿ ಯಾಗಿದೆ. ಕೋಸ್ಯಾಕ್ ನರ್ತಕ ತನ್ನ ಹೆಬ್ಬೆರಳಿನ ತುದಿಯ ಮೇಲೆ ನಿಂತು ಅಭಿನಯಿಸುವ ನೃತ್ಯ ನೋಡುವವರಿಗೆ ರೋಮಾಂಚಕವಾಗಿರುತ್ತದೆ. ಬಹಳ ಹಿಂದೆ ಈ ಜನ ರಣಹದ್ದನ್ನು ಪೂಜಿಸುತ್ತಿದ್ದರು. ರಣಹದ್ದೊಂದು ತನಗೆ ಬಲಿಯಾಗುವ ಪ್ರಾಣಿಯನ್ನು ಸದೆಬಡಿಯುವ ಎಲ್ಲ ಬಗೆಯನ್ನೂ ಈ ನರ್ತಕ ಅಭಿನಯಿಸುತ್ತಾನೆ. ಅವನು ತನ್ನ ಹೆಬ್ಬೆರಳ ಮೇಲೆಯೇ ನಿಂತು, ಗಿರಗಿರನೆ ಸುತ್ತಿ, ತನ್ನ ಮುಂದಿರುವ ಖಡ್ಗವನ್ನೇ ತನಗೆ ಬಲಿಯಾಗುವ ಪ್ರಾಣಿಯೆಂದು ಭಾವಿಸಿ, ಅದರ ಮೇಲೆ ಎರಗುತ್ತಾನೆ. ಅನಂತರ ಮಂಡಿಗಳ ಮೇಲೆ ಕುಳಿತು ಹಲ್ಲಿನಿಂದ ಖಡ್ಗವನ್ನು ಕಚ್ಚಿ, ರಣಹದ್ದು ತನಗೆ ಬಲಿಯಾದ ಪ್ರಾಣಿಯನ್ನು ಹಿಡಿದು ಮೇಲಕ್ಕೆ ಹಾರುವಂತೆ, ಮೇಲಕ್ಕೆ ಚಂಗನೆ ನೆಗೆಯುತ್ತಾನೆ. ಹಂಗೇರಿಯನ್ನರಂತೆಯೇ ಕುದುರೆ ಸಾಕುವುದರಲ್ಲಿ ಪ್ರಸಿದ್ಧಿ ಹೊಂದಿದ ಕೋಸ್ಯಾಕ್ ಜನಾಂಗ ನೃತ್ಯಗಳಲ್ಲಿ ಕುದುರೆಯಂತೆ ನೆಗೆಯುವುದೂ, ದೌಡಾಯಿಸುವುದೂ ಉಂಟು.

ಸೌರಾಷ್ಟ್ರದಲ್ಲಿರುವ ಸಿದ್ದಿ ಎಂಬ ಜನಾಂಗ ಧಮಾಲ್ ಎಂಬ ಪಕ್ಷಿಪ್ರಾಣಿಗಳಿಗೆ ಸಂಬಂಧಿಸಿದ ನೃತ್ಯವನ್ನು ಅಭಿನಯಿಸುತ್ತಾರೆ. ಧಮಾಲ್‌ನಲ್ಲಿ ವಕ್ರವಕ್ರವಾದ ಚಲನೆಯೇ ಹೆಚ್ಚು. ಅವರು ಕೆಲವು ಪ್ರಾಣಿಗಳ ಮತ್ತು ಪಕ್ಷಿಗಳ ಚಲನೆ, ಭಂಗಿ ಮತ್ತು ಧ್ವನಿಯನ್ನು ಅನುಕರಿಸುತ್ತಾರೆ. ಭಾರತದಲ್ಲಿ ಪೊರೋಜ ಎಂಬ ಆದಿವಾಸಿಗಳು ಒಂದು ದೊಡ್ಡ ಸಾಲಿನಲ್ಲಿ ನಿಂತು ಒಂದು ದೊಡ್ಡ ಹಾವಿನಂತೆ ಚಲಿಸುತ್ತಾರೆ.

ಬೇಟೆಗಾರರ ಮತ್ತು ಬೆಸ್ತರ ನೃತ್ಯಗಳು : ಪ್ರಾಣಿಗಳು ನಡೆಯುವುದು, ಬೇಟೆಗಾಗಿ ನಿರೀಕ್ಷಿಸುವುದು, ವೇಗವಾಗಿ ಬಂದು ಹಾರಿ ಪ್ರಾಣಿಗಳನ್ನು ಕೊಲ್ಲುವುದು ಈ ಕ್ರಿಯೆಗಳನ್ನು ಈ ನೃತ್ಯಗಳು ಒಳಗೊಳ್ಳುತ್ತವೆ. ಆಫ್ರಿಕದ ಮೂಲನಿವಾಸಿಗಳಲ್ಲಿ, ಮತ್ತು ಪ್ರಪಂಚದ ಅನೇಕ ಬುಡಕಟ್ಟುಗಳಲ್ಲಿ ಈ ಬಗೆಯ ನೃತ್ಯಗಳನ್ನು ಕಾಣಬಹುದು. ಯೂರೋಪಿನಲ್ಲಿ ಒಂದು ಹೆಣ್ಣನ್ನು ಒಂದು ಗಂಡು ಅಟ್ಟಿಸಿಕೊಂಡು ಹೋಗುವುದರ ಮೂಲಕ ಇದನ್ನು ಅಭಿನಯಿಸುತ್ತಾರೆ. ಅಮೆರಿಕದ ಇಂಡಿಯನ್ನರಲ್ಲಿ ಜಿಂಕೆನೃತ್ಯ, ಬಿಲ್ಲುಬಾಣಗಳ ನೃತ್ಯ ಕಂಡುಬರುತ್ತವೆ. ಭಾರತದಲ್ಲಿ ಸಂತಾಲ ಆದಿವಾಸಿಗಳು ಷಿಕಾರ್ ಎಂಬ ನೃತ್ಯವನ್ನು ಅಭಿನಯಿಸುತ್ತಾರೆ. ಇದರಲ್ಲಿ ಅವರು ಕಾಡುಪ್ರಾಣಿಗಳ ಬೇಟೆಗೆ ಹೋಗುವುದನ್ನು ಮತ್ತು ಬೇಟೆಯೊಂದಿಗೆ ಹಿಂತಿರುಗುವುದನ್ನು ಅಭಿನಯಿಸುತ್ತಾರೆ.

ಬೆಸ್ತರ ನೃತ್ಯಗಳಲ್ಲಿ ಕೈ ಮತ್ತು ತೋಳುಗಳು ಪ್ರಮುಖ ಪಾತ್ರವಹಿಸುತ್ತವೆ. ಹಗ್ಗದಿಂದ ಗಂಟುಗಳನ್ನು ಮಾಡುವುದು, ಬಲೆ ಹೆಣೆಯುವುದು ಮತ್ತು ಮೀನಿನ ಚಲನೆ ಇವನ್ನು ಇದರಲ್ಲಿ ಅಭಿನಯಿಸಲಾಗುತ್ತದೆ. ಭಾರತ, ಫಿನ್ಲೆಂಡ್, ಕಪ್ಪು ಸಮುದ್ರ ಹಾಗೂ ಮೆಡಿಟರೇನಿಯನ್ ತೀರಪ್ರದೇಶ ಮುಂತಾದ ಭಾಗಗಳಲ್ಲಿ ಈ ಬಗೆಯ ನೃತ್ಯ ಕಂಡುಬರುತ್ತದೆ. ದೋಣಿ ನೃತ್ಯ, ನಾವಿಕರ ನೃತ್ಯ ನ್ಯೂಜೀಲೆಂಡ್ ಮತ್ತು ಇತರ ಕೆಲವು ದೇಶದಲ್ಲಿ ಪ್ರಚಾರದಲ್ಲಿವೆ.

ಪಢಾರ ಎಂಬ ನೃತ್ಯವನ್ನು ಸೌರಾಷ್ಟ್ರದ ಬೆಸ್ತರು ಅಭಿನಯಿಸುತ್ತಾರೆ. ಅವರು ದೋಣಿಯೊಂದರ ನಡೆಯನ್ನು ಅನುಕರಿಸುತ್ತ ಚಿಕ್ಕ ಕೋಲುಗಳನ್ನು ಬಡಿಯುತ್ತ ನೃತ್ಯ ಮಾಡುತ್ತಾರೆ.

ಯುದ್ಧ ಮತ್ತು ಆಯುಧಗಳ ನೃತ್ಯಗಳು : ಯುದ್ಧನೃತ್ಯಗಳು ಬಹುಪಾಲು ಯುದ್ಧಗಳನ್ನು ಅನುಕರಿಸುವುದರಿಂದ ಆವಿರ್ಭವಿಸಿದಂಥವು. ಇಂದಿಗೂ ಅನೇಕ ಆದಿವಾಸಿಗಳಲ್ಲಿ ಈ ನೃತ್ಯದ ಪ್ರಖರತೆಯನ್ನು ಕಾಣಬಹುದು. ನರ್ತಕರು ವೃತ್ತಾಕಾರವಾಗಿ ಒಂದೆಡೆ ಸೇರುವುದು, ಅನಂತರ ಗುಂಪು ಒಡೆದು ಬೇರೆ ಬೇರೆಯಾಗಿ ಹೊಡೆದಾಡುವುದು ಇಲ್ಲಿ ಕಂಡುಬರುತ್ತದೆ. ಗ್ರೀಸಿನ ಸೈನಿಕರ ನೃತ್ಯಗಳಲ್ಲಿ ಇಂದಿಗೂ ಯುದ್ಧದ ಕೆಚ್ಚನ್ನು ಕಾಣಬಹುದು.

ಕಚ್ಚಿಘೋಡಿ ಎಂಬುದು ರಾಜಸ್ಥಾನದ ಗಂಡಸರು ಅಭಿನಯಿಸುವ ಒಂದು ನೃತ್ಯ. ಅಭಿನಯಕಾರರು ಬೊಂಬು ಮತ್ತು ಬಟ್ಟೆಗಳಿಂದ ಮಾಡಿದ ವೇಷದ ಕುದುರೆಗಳ ಮೇಲೆ ಕುಳಿತುಕೊಂಡು ಅಣಕು ಹೊಡೆದಾಟ ನಡೆಸುತ್ತಾರೆ. ಒರಿಸ್ಸದ ಅತಿ ಹಳೆಯ ಮತ್ತು ಜನಪ್ರಿಯ ನೃತ್ಯ ಪಯಕ. ಪಯಕ ಸೈನಿಕರು ಅಂಗಸಾಧನೆಗಾಗಿ ಪಡೆಯುತ್ತಿದ್ದ ಶಿಕ್ಷಣದಿಂದ ಇದು ಹುಟ್ಟಿದೆ. ಈ ನೃತ್ಯದಲ್ಲಿ ನರ್ತಕರು ಕತ್ತಿ ಮತ್ತು ಗುರಾಣಿಗಳನ್ನು ಹಿಡಿದು, ಅಣಕು ಹೋರಾಟದಲ್ಲಿ ತೊಡಗುತ್ತಾರೆ. ನೀಫದ ಆದಿವಾಸಿಗಳ ಆದಿಗಲೋಂಗ್ ಒಂದು ಯುದ್ಧನೃತ್ಯ. ಇದರಲ್ಲಿ ನೃತ್ಯಕಾರರು ಭರ್ಜಿಗಳನ್ನೂ ಗುರಾಣಿಗಳನ್ನೂ ಹಿಡಿದುಕೊಂಡು ಮಲ್ಲಯುದ್ಧದ ಗತಿಯನ್ನು ಮುಂದುವರಿಸುತ್ತಾರೆ.

ಆಯುಧಗಳ ನೃತ್ಯಗಳಲ್ಲಿ ಖಡ್ಗ ವಿಶೇಷವಾಗಿ ಬಳಕೆಯಾಗುತ್ತದೆ. ಬ್ರಿಟನ್ನಿನ ಮೋರಿಸ್ ನೃತ್ಯ ಮೂಲದಲ್ಲಿ ಅಲ್ಲಿನ ಖಡ್ಗನೃತ್ಯಗಳಿಂದಲೇ ಹುಟ್ಟಿದುದು ಎಂಬ ಮತವಿದೆ. ಪೂರ್ವ ಯೂರೋಪಿನ ಪಿರಿನೀಸ್ ಪರ್ವತಗಳ ನರ್ತಕರು ಮೋಹಕವಾದ ನೃತ್ಯವನ್ನು ಮಂಜಿನ ಕೊಡಲಿಗಳ ಮೇಲೆ ಅಭಿನಯಿಸುತ್ತಾರೆ. ಬಾಸ್ಕ್ ಮತ್ತು ಸ್ಲೋವಕ್ ಪ್ರದೇಶಗಳ ನೃತ್ಯಗಳಲ್ಲಿ ನರ್ತಕರು ತಮ್ಮ ಗುಂಪಿನ ಯಜಮಾನನನ್ನು ಕತ್ತಿಯಿಂದ ಕೊಲ್ಲುವುದನ್ನು ಅಭಿನಯಿಸುವುದರ ಮೂಲಕ ನೃತ್ಯ ಮುಗಿಯುತ್ತದೆ.

ಭಾರತದಲ್ಲೂ ಕೆಲವು ಬಗೆಯ ಆಯುಧನೃತ್ಯಗಳಿವೆ. ಕೇರಳದ ನಾಯರ್ ಜನಾಂಗ ಅಭಿನಯಿಸುವ ವೆಳಕ್ಕಳಿ ಎಂಬ ನೃತ್ಯದಲ್ಲಿ ನರ್ತಕರು ಕತ್ತಿ ಮತ್ತು ಗುರಾಣಿಗಳನ್ನು ಬಳಸುತ್ತಾರೆ. ರಾಜಸ್ಥಾನದಲ್ಲಿ ತೇರತಾಲಿ ಎಂಬ ಹೆಂಗಸರ ನೃತ್ಯದಲ್ಲಿ ಕತ್ತಿಯ ಬಳಕೆ ಇದೆ. ಅವರು ಚಿಕ್ಕದಾದ ಒಂದು ಕತ್ತಿಯನ್ನು ಹಲ್ಲಿನಿಂದ ಕಚ್ಚಿಕೊಂಡು ಕುಣಿಯುತ್ತಾರೆ.

ಮದುವೆಯ ನೃತ್ಯಗಳು : ಸಾಮಾಜಿಕ ನೃತ್ಯಗಳು ಮದುವೆಯ ಕಾಲಗಳಲ್ಲಿ ನಡೆಯುವುದು ಸರ್ವೇಸಾಮಾನ್ಯ. ಹಂಗರಿಯಲ್ಲಿ ವಧುನೃತ್ಯ ಮತ್ತು ಅಡಿಗೆಯವನ ನೃತ್ಯ ಎಂಬ ಬೇರೆ ಬೇರೆ ಪ್ರಕಾರಗಳಿವೆ.

ಗೆಳೆತನದ ನೃತ್ಯಗಳು : ಗೆಳೆತನವನ್ನು ಕುರಿತಂಥ ನೃತ್ಯಗಳು ಅಷ್ಟಾಗಿ ಕಂಡುಬರುವುದಿಲ್ಲ. ಅಮೆರಿಕದ ರೆಡ್ ಇಂಡಿಯನ್ನರ ನರಿಯ ಗೆಳೆತನ ಒಂದು ಪ್ರಸಿದ್ಧವಾದ ನೃತ್ಯ.

ಪ್ರಣಯನೃತ್ಯಗಳು : ಗಂಡು ಹೆಣ್ಣಿಗೆ ಸಂಬಂಧಿಸಿದ ಬಗಬಗೆಯ ನೃತ್ಯಗಳು ಅನೇಕ ದೇಶಗಳಲ್ಲಿ ಅನೇಕ ತರಹದಲ್ಲಿವೆ. ಈ ಬಗೆಯ ನೃತ್ಯಗಳಲ್ಲಿ ಅರಸುವುದು, ಪಡೆಯುವುದು ಮತ್ತು ವಿರಹ ಸಾಮಾನ್ಯವಾಗಿರುತ್ತದೆ. ಇದರಲ್ಲಿ ಗಂಡು ಹೆಣ್ಣು ಕೂಡಿಯೇ ನೃತ್ಯವಾಡುತ್ತಾರೆ. ಪ್ರೇಮಿಗಳು ಒಟ್ಟಿಗೆ ಸೇರುವುದು, ಅಪ್ಪಿಕೊಳ್ಳುವುದು ಮತ್ತು ಸಂಕೀರ್ಣ ಚಲನೆಗಳಿಂದ ನೃತ್ಯಮಾಡುವುದು–ಇದರ ಲಕ್ಷಣಗಳು. ಕೇವಲ ಗಂಡಸೇ ನೃತ್ಯಮಾಡುವಾಗ ಹೆಣ್ಣಿನ ಮುಂದೆ ನಿಂತು ಅತ್ಯಾಕರ್ಷಕವಾಗಿ ಕುಣಿಯುತ್ತಾನೆ. ಸ್ಪೇನಿನಲ್ಲಿ ಹೆಂಗಸು ತನ್ನ ಸೌಂದರ್ಯವನ್ನು ಪ್ರದರ್ಶಿಸುವುದರ ಮೂಲಕ ಈ ನೃತ್ಯಮಾಡುತ್ತಾಳೆ. ಲಿಥುಯೇನೀಯದ ನೃತ್ಯದಲ್ಲಿ ಪ್ರಣಯಿಗಳು ತಮ್ಮ ಟೋಪಿಗಳನ್ನು ಅದಲು ಬದಲು ಮಾಡಿಕೊಳ್ಳುತ್ತಾರೆ.

ಯಾವುದೇ ಒಂದು ಬಗೆಯ ಜನಪದ ನೃತ್ಯವನ್ನು ಜಗತ್ತಿನಾದ್ಯಂತ ಕಾಣಲು ಸಾಧ್ಯವಾಗುವುದಿಲ್ಲ. ಅದಕ್ಕೆ ಆಯಾ ಪ್ರದೇಶಗಳ ಮಿತಿ ಇರುತ್ತದೆ. ಜನಪದ ನೃತ್ಯಗಳಿಂದ –ಆಯಾ ಜನಾಂಗದ ಮೂಲಜನತೆ ಹೇಗೆ ಬದುಕಿತು, ಹೇಗೆ ಕಾರ್ಯನಿರತವಾಯಿತು, ಹೇಗೆ ಯುದ್ಧ ಮಾಡಿತು–ಮುಂತಾದ ವಿಷಯಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಭಾರತದಂಥ ಪ್ರಗತಿ ಹೊಂದುತ್ತಿರುವ ಹಾಗೂ ಪ್ರಗತಿ ಹೊಂದದೇ ಇರುವ ಇತರ ದೇಶಗಳಲ್ಲಿ ಜನಪದ ನೃತ್ಯಗಳು ತಮ್ಮ ಮೂಲ ಉದ್ದೇಶವನ್ನು ಇನ್ನೂ ಉಳಿಸಿಕೊಂಡಿರುವ ಸಾಧ್ಯತೆ ಹೆಚ್ಚು ಇದೆ. ಬದುಕು ಹೆಚ್ಚು ನಾಗರಿಕವಾದಂತೆಲ್ಲ ಜನಪದ ನೃತ್ಯಗಳ ಅಸ್ತಿತ್ವ ಕಡಿಮೆಯಾಗಬಹುದೆಂಬ ಶಂಕೆಯುಂಟಾಗುತ್ತದೆ. ಆದರೆ, ಜನತೆ ಇಚ್ಛೆಪಡುವಲ್ಲಿ, ತಮ್ಮ ಹಿಂದಿನ ಸಂಪ್ರದಾಯಗಳಲ್ಲಿ ಆಸಕ್ತಿಯನ್ನು ಉಳಿಸಿಕೊಂಡಲ್ಲಿ ಜನಪದ ನೃತ್ಯವನ್ನು ಮೂಲದಲ್ಲಿ ಇದ್ದಹಾಗೆಯೇ ಉಳಿಸಿಕೊಳ್ಳುವ ಎಲ್ಲ ಸಾಧ್ಯತೆಯೂ ಇದೆ. (ಎಚ್.ಆರ್.ಡಿ.ಟಿ.)

ಕರ್ನಾಟಕದ ಜನಪದ ನೃತ್ಯಗಳನ್ನು ಪ್ರಾದೇಶಿಕವಾಗಿ ಹೀಗೆ ವರ್ಗೀಕರಿಸಬಹುದು: ಉತ್ತರ ಕರ್ನಾಟಕ; ಕರಡಿ ಮಜಲು, ಡೊಳ್ಳು ಕುಣಿತ, ಗೊಂದಲಿಗರ ಮೇಳ, ಕೋಲಾಟ. ಜೊಗಿತೀರ ಕುಣಿತ, ವಾಘೇ ಮುರುಳಿ, ಭೂತೇರು ಕುಣಿತ, ದಟ್ಟಿ ಕುಣಿತ, ಕೀಲು ಕುದುರೆ ನೃತ್ಯ.

ಕರಡಿ ಮಜಲು ನೃತ್ಯ (ಬಿಜಾಪುರ ಜಿಲ್ಲೆ)

ದಕ್ಷಿಣ ಕರ್ನಾಟಕ : ವೀರಗಾಸೆ ಕುಣಿತ, ಸೋಮನ ಕುಣಿತ, ಲಿಂಗದ ಬೀರರ ಕುಣಿತ, ಗುಡ್ಡರ ಕುಣಿತ, ರಂಗದ ಕುಣಿತ, ಗಾರುಡಿ ಕುಣಿತ, ಬೀಸು ಕಂಸಾಳೆ ಕುಣಿತ, ಭಾಗವಂತಿಗೆ ಮೇಳ, ಕರಪಾಲ ಮೇಳ, ಚೌಡಿಕೆ ಮೇಳ, ಪಟಕುಣಿತ, ಪೂಜಾಕುಣಿತ, ಚಿಟ್‌ಮೇಳ, ಗೊರವರ ಕುಣಿತ, ನಂದಿಕೋಲು ಕುಣಿತ, ಕೋಲಾಟ, ಈರಮಕ್ಕಳ ಕುಣಿತ, ಫಲಕದ ಕುಣಿತ, ಕಾಡೆಮ್ಮೆ ದೊಡ್ಡಿ ಕುಣಿತ, ಸೋಲಿಗ ಕುಣಿತ.

ಕೊಡಗು : ಹುತ್ತರಿ ಕುಣಿತ, ಬಳುಕಾಟ, ಉಮ್ಮತ್ತಾಟ, ಕೋಲಾಟ.

ದಕ್ಷಿಣ ಕನ್ನಡ ಜಿಲ್ಲೆ : ದುಡಿ ಕುಣಿತ, ಡೋಲಿನ ಕುಣಿತ, ವೈದ್ಯನೃತ್ಯ, ಭೂತನೃತ್ಯ, ಹೋಲಿನೃತ್ಯ, ಆಟಿಕೊಡೆಂಜ, ಕೋರತನಿಯ, ಕೋಲಾಟ.

ಉತ್ತರ ಕನ್ನಡ ಜಿಲ್ಲೆ : ಹಾಲಕ್ಕಿ ಗೌಡರ ಸುಗ್ಗಿ ಕುಣಿತ, ಕೋಲಾಟ, ಕರಡಿ ಕುಣಿತ, ಸಿಂಹ ನೃತ್ಯ, ಹೂವಿನ ಮಕ್ಕಳ ಕುಣಿತ, ಗುಮ್ಮಟೆ ವಾದ್ಯದೊಡನೆ ಕುಡುಬಿಗಳ ನೃತ್ಯ, ಸಿದ್ಧಿಯರ ನೃತ್ಯ.

ಸಾಹಿತ್ಯಪ್ರಧಾನವಾದ ಯಕ್ಷಗಾನ ಬಯಲಾಟಗಳಲ್ಲೂ ಕರಪಾಲಮೇಳ, ಚೌಡಿಕೆ ಮೇಳ, ಜೋಗಿಗಳ ಮೇಳ ಮುಂತಾದುವುಗಳಲ್ಲೂ ನೃತ್ಯ ಪ್ರಮುಖವಾಗಿಯೇ ಬರುತ್ತದೆ. ಉತ್ತರ ಕರ್ನಾಟಕದ ಗೊಂದಲಿಗರ ಮೇಳ ಕಥಾಪ್ರಧಾನವಾದುದು. ಕರಪಾಲ ಚೌಡಿಕೆಮೇಳಗಳಂತೆ ಸಾಹಿತ್ಯ, ಸಂಗೀತ, ಕುಣಿತಗಳು ಇಲ್ಲಿ ಮುಪ್ಪುರಿಗೊಂಡಿರುತ್ತವೆ. ಕಥಾನಿರೂಪಣೆ, ನಡುವೆ ಹಾಡು, ಕುಣಿತ, ಇಡೀರಾತ್ರಿ ಜನರ ಆಸಕ್ತಿಯನ್ನು ಹಿಡಿದಿಡಬೇಕಾದ ಹೊಣೆಗಾರಿಕೆ ಈ ಕಲೆಗಳದು. ಆದುದರಿಂದಲೇ ಕಥಾಮಾಧ್ಯಮ ಇಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಯಕ್ಷಗಾನ ಬಯಲಾಟಗಳು, ತೊಗಲುಬೊಂಬೆಯಾಟ, ಸೂತ್ರದ ಗೊಂಬೆಯಾಟ, ಶ್ರೀಕೃಷ್ಣಪಾರಿಜಾತ, ರಾಧಾನಾಟಕ, ಸಂಗ್ಯಾ ಬಾಳ್ಯ ಮುಂತಾದ ಮೇಳಗಳಲ್ಲೂ ನೃತ್ಯ ಮತ್ತು ಸಂಗೀತ ಕಥೆಗೆ ಅಧೀನ. ಚಿತ್ರ, ಶಿಲ್ಪ, ಸಂಗೀತ, ಸಾಹಿತ್ಯ, ನೃತ್ಯ ಹೀಗೆ ಲಲಿತಕಲೆಗಳೆಲ್ಲ ಕೂಡಿಬರುವ ಜನಪದ ನಾಟಕಗಳು ತಮ್ಮದೇ ಆದ ಪ್ರತ್ಯೇಕ ವಿಭಜನೆಗೆ ಒಳಪಡಬೇಕು. ಇಲ್ಲಿನ ಬಣ್ಣಗಾರಿಕೆಯಲ್ಲಿ ಜನಪದ ಚಿತ್ರಕಲೆಯ ಶ್ರೇಷ್ಠತೆಯನ್ನು ಗುರುತಿಸಬಹುದು. ವೇಷಧಾರಿಗಳು ವಿವಿಧ ವರ್ಣಗಳಲ್ಲಿ ತಮ್ಮ ಮುಖವನ್ನು ಅಲಂಕರಿಸಿಕೊಳ್ಳುತ್ತಾರೆ. ದೈತ್ಯ ಪಾತ್ರಗಳು, ರಾಜಪಾತ್ರಗಳು, ಸ್ತ್ರೀಪಾತ್ರಗಳು, ಬೇರೆ ಬೇರೆ ರೀತಿಯ ಅಲಂಕರಣವನ್ನೇ ಅನುಸರಿಸುವುದು ಕಾಣಬರುತ್ತದೆ. ಘೋರಪಾತ್ರಗಳಲ್ಲಿ ಕೆಂಪುಬಣ್ಣವನ್ನು ಹೆಚ್ಚಾಗಿ ಬಳಸಲಾಗುತ್ತದೆ. ರಾಜಪಾತ್ರಗಳಲ್ಲಿ ಹಳದಿ ಪ್ರಮುಖ ವರ್ಣ. ಈ ಪ್ರಧಾನ ವರ್ಣಗಳ ಜೊತೆಗೆ ಘೋರಪಾತ್ರಗಳ ಮುಖ ಹೆಚ್ಚು ಭಯಂಕರವಾಗುವಂತೆ ಮೂಡಲಪಾಯದಲ್ಲಿ ಕಣ್ಣು, ಮೂಗು, ಬಾಯಿ ಮುಂತಾದ ಕಡೆಗಳಲ್ಲಿ ಕಪ್ಪು ಮತ್ತು ಬಿಳಿಯ ಬಣ್ಣಗಳನ್ನು ಬಳಸಿ ಚುಕ್ಕೆಗಳನ್ನಿಡಲಾಗುತ್ತದೆ. ಅತ್ಯಂತ ಕಲಾತ್ಮಕವಾದ ಈ ಬಣ್ಣಗಾರಿಕೆ ತನ್ನ ಉನ್ನತಿಯನ್ನು ಸಾಧಿಸಿರುವುದು ತೊಗಲುಗೊಂಬೆ ಮತ್ತು ಸೂತ್ರದ ಗೊಂಬೆಗಳಲ್ಲಿ. ತೊಗಲುಗೊಂಬೆಗಳಂತೂ ಜನಪದ ಚಿತ್ರಕಲೆಯ ಅತ್ಯುತ್ತಮ ಮಾದರಿಗಳು. ಅವುಗಳ ಪ್ರದರ್ಶನದಲ್ಲಿ ಮುಖ್ಯ ವರ್ಣಗಳೇ ಎದ್ದು ತೋರಬೇಕಾದುದರಿಂದ ಸಮಗ್ರ ಶರೀರದಲ್ಲಿ ಚಿತ್ರದ ಕುಸುರಿ ಕೆಲಸ ನಡೆದಿರುತ್ತದೆ. ಗೊಂಬೆಗಳನ್ನು ಮಾಡುವುದರಲ್ಲಿ ಕಿರೀಟ, ಭುಜಕೀರ್ತಿ, ಎದೆಹಾರ, ವೀರಗಾಸೆ, ನಡುಪಟ್ಟಿ–ಮುಂತಾದವುಗಳ ರಚನೆಯಲ್ಲಿ ಜನಪದ ಶಿಲ್ಪಕಲೆಯ ಅಪೂರ್ವಸಿದ್ಧಿಯನ್ನು ಕಾಣಬಹುದು.

ಜನಪದ ನಾಟಕಗಳ ಸಂಗೀತ, ಸಾಹಿತ್ಯ, ಹಾಗೂ ಇತರ ಅಂಶಗಳಂತೆಯೇ ನೃತ್ಯವೂ ಗಣ್ಯವಾದುದೇ. ದೈತ್ಯಪಾತ್ರಗಳ ರೌದ್ರನೃತ್ಯ, ಸ್ತ್ರೀಪಾತ್ರಗಳ ಲಲಿತ ನೃತ್ಯ, ರಾಜಪಾತ್ರಗಳ ಗಂಭೀರನೃತ್ಯ ಇವು ಮೂಡಲಪಾಯದಲ್ಲಿ ಅಪಾರ ವೈವಿಧ್ಯವನ್ನು ಸಾಧಿಸಿಕೊಂಡಿದೆ. ದಕ್ಷಿಣ ಕನ್ನಡದ ತೆಂಕತಿಟ್ಟು ಬಡಗತಿಟ್ಟು, ಉತ್ತರ ಕರ್ನಾಟಕದ ದೊಡ್ಡಾಟ, ದಕ್ಷಿಣ ಕರ್ನಾಟಕದ ಮೂಡಲಪಾಯ, ಘಟ್ಟದ ಕೋರೆ ಯಕ್ಷಗಾನ ಸಂಪ್ರದಾಯಗಳ ಮೂಲಭೂತ ಗುಣ ಒಂದೇ ಆದರೂ ನೃತ್ಯದಲ್ಲಿ ಸಾಕಷ್ಟು ವೈವಿಧ್ಯ ಕಂಡುಬರುತ್ತದೆ. ತೆಂಕತಿಟ್ಟಿನ ತೀವ್ರವೇಗದ ಸುತ್ತು ಹಾಕುವ ವೈಖರಿ, ಬಡಗತಿಟ್ಟಿನ ಮಂಡಿಯಸುತ್ತು, ಮೂಡಲಪಾಯದ ಉಡಂಗ್ ಆಯಾ ಕಲೆಗಳಿಗೆ ಮಾತ್ರ ಮೀಸಲಾದುವು. ಮೂಡಲಪಾಯದ ಸ್ತ್ರೀಪಾತ್ರ ಕುಳಿತ ಭಂಗಿಯಲ್ಲಿ ನೃತ್ಯವನ್ನು ಆರಂಭಿಸಿ ಕ್ರಮೇಣ ಮೇಲೆದ್ದು ನರ್ತಿಸತೊಡಗಿದರೆ, ಪಡುವಲಪಾಯದ ಸ್ತ್ರೀಪಾತ್ರಗಳು ನೇರವಾಗಿಯೇ ನೃತ್ಯವನ್ನು ಆರಂಭಿಸುತ್ತವೆ.

ಇಂಥ ಕಥಾಪ್ರಧಾನ ನೃತ್ಯಗಳನ್ನು ಬಿಟ್ಟರೆ ಉಳಿದ ಕಲೆಗಳ ಸಾಲಿನಲ್ಲಿ ಉತ್ತರ ಕರ್ನಾಟಕದ ಕರಡಿಮಜಲು ಜಗ್ಗಲಿಗೆ ಮೇಳ, ತಮಟೆ ಮೇಳ ಕೂಡ ಪ್ರತ್ಯೇಕ ವರ್ಗೀಕರಣಕ್ಕೆ ಒಳಪಡುತ್ತದೆ. ಅಲ್ಲಿ ಕುಣಿತ ಗೌಣ ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಕರಡೆ, ಸಮ್ಮೇಳಗಳ ಜಗ್ಗಲಿಗೆ ಮೇಳ, ತಮಟೆ ಮೇಳ ವಾದ್ಯವೈಖರಿಯನ್ನು ಮೆರೆಯುವುದೇ ಇಲ್ಲಿನ ವೈಶಿಷ್ಟ್ಯ. ಇಷ್ಟು ಹೊರತು, ಇನ್ನುಳಿದ ಕಲೆಗಳೆಲ್ಲ ಪ್ರಧಾನವಾಗಿ ಕುಣಿತಗಳು; ಇಲ್ಲಿ ಕೆಲವು ಕಡೆ ಸಾಹಿತ್ಯದ ಹಿನ್ನೆಲೆ ಬಂದರೂ ಅದು ಪ್ರಮುಖವಲ್ಲ.

ಕಾಂಗ್ಡಾ ನೃತ್ಯ

ಕರ್ನಾಟಕದ ಜನಪದ ನೃತ್ಯಗಳಲ್ಲಿ ಕೋಲಾಟ ಅತ್ಯಂತ ಜನಪ್ರಿಯವಾದುದು. ನಾಡಿನ ಎಲ್ಲ ಕಡೆಗಳಲ್ಲೂ ಕಾಣಬರುವ ಏಕಮಾತ್ರ ಕಲೆಯಿದು. ಉಳಿದುವು ಪ್ರಾದೇಶಿಕ ಹಿನ್ನೆಲೆಯಲ್ಲಿ ಬರುತ್ತವೆ. ಕೋಲಾಟಕ್ಕೆ ಹೆಸರಾದ ಜನಾಂಗ ಕಾಡುಗೊಲ್ಲರದು. ಇವರ ಗೆಜ್ಜೆಯ ಕೋಲಾಟ ಅತ್ಯಂತ ಪ್ರಾಚೀನವಾದುದು. ಕೋಲಾಟಗಳಲ್ಲಿ ಹತ್ತಾರು ಬಗೆಗಳಿರುವಂತೆಯೇ ಸಾಕಷ್ಟು ಪ್ರಾದೇಶಿಕ ವೈವಿಧ್ಯವೂ ಕಾಣಬರುತ್ತದೆ. ದಕ್ಷಿಣ ಕರ್ನಾಟಕದ ಕೋಲಾಟದ ತಂಡಗಳಲ್ಲಿ ಯಾವ ವಿಶಿಷ್ಟ ರೀತಿಯ ವೇಷಭೂಷಣವೂ ಕಾಣಬರುವುದಿಲ್ಲ.

ಉತ್ತರ ಕರ್ನಾಟಕಕ್ಕೂ ಈ ಮಾತು ಅನ್ವಯಿಸುತ್ತದೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಗೌಡರ ಸುಗ್ಗಿಯ ಕುಣಿತ ದಕ್ಷಿಣ ಕನ್ನಡ ಜಿಲ್ಲೆಯ ಮರಾಟಿ ನೃತ್ಯಗಳಲ್ಲಿ ಕೋಲಾಟದ ವೈವಿಧ್ಯದಂತೆಯೇ ಆಕರ್ಷಕ ವೇಷಗಾರಿಕೆಯೂ ತೋರಿಬರುತ್ತದೆ.

ವಾಘೇ ಮುರುಳಿ ನೃತ್ಯ

ಹಾಲಕ್ಕಿಗೌಡರು ತಮ್ಮ ಕುಣಿತದಲ್ಲಿ ತಲೆಗೆ ಕಟ್ಟುವ ಬಣ್ಣಬಣ್ಣದ ತುರಾಯಿ ಮೋಹಕವಾದುದು. ಮರಾಟಿ ನೃತ್ಯದಲ್ಲಿ ತಲೆಗೆ ರುಮಾಲು, ನಿಲುವಂಗಿ, ಕಚ್ಚೆಯ ಪಂಚೆ, ನಡುವಿಗೆ ಹಳದಿಯ ವಸ್ತ್ರ–ಇವು ಗಮನಾರ್ಹ. ಕೊಡಗಿನ ಹುತ್ತರಿ ಕುಣಿತದಲ್ಲಿ ಕೋಲಾಟದ ಪಾತ್ರವೂ ಪ್ರಧಾನವಾದುದೇ. ಕೊಡವರ ಸಾಂಪ್ರದಾಯಿಕ ರೀತಿಯ ವೇಷಭೂಷಣ ಇಲ್ಲಿನ ಒಂದು ವೈವಿಧ್ಯ ಎನ್ನಬಹುದು. ಬಿಳಿಯ ಪಾಯಿಜಾಮ, ಕರಿಯ ನಿಲುವಂಗಿ, ನಡುವಿಗೆ ಕೆಂಪು ಅಥವಾ ಬಿಳಿಯ ನಡುಪಟ್ಟಿ, ಸೊಂಟಕ್ಕೆ ಪೀಚುಕತ್ತಿ, ತಲೆಯ ಮೇಲೆ ರುಮಾಲು ಇವುಗಳಿಂದ ಅಲಂಕೃತರಾಗಿರುವವರು ರಂಗಕ್ಕೆ ಇಳಿಯುತ್ತಾರೆ. ಕೊಡವರು ಬಳಸುವ ಕೋಲುಗಳು ಉದ್ದವಾಗಿರುತ್ತವೆ. ಎರಡು ಮೂರು ಅಡಿ ಉದ್ದದ ಬೆರಳುಗಾತ್ರದ ಜೋಡಿ ಬೆತ್ತವನ್ನು ಇಲ್ಲಿ ಬಳಸಲಾಗುತ್ತದೆ. ಹಾಲಕ್ಕಿಗೌಡರ ಕುಣಿತ, ಹುತ್ತರಿ ಕುಣಿತಗಳಲ್ಲಿ ಕೆಲವು ವಾದ್ಯಗಳನ್ನು ಹಿನ್ನೆಲೆಗೆ ಬಳಸಲಾಗುವುದು. ಇವು ಪ್ರಧಾನವಾಗಿ ಕೋಲಾಟಗಳಲ್ಲ. ಕೋಲಾಟಗಳಲ್ಲಿ ಕೋಲಿನ ಕಣಿಕಣಿನಾದವೇ ಕಾಲಗೆಜ್ಜೆಯ ಜಣತ್ಕಾರವೇ ವಾದ್ಯದ ಪರಿಣಾಮವನ್ನು ತರುತ್ತವೆ. ಕುಣಿತದ ವೈಖರಿ, ತಾಳದ ಗತ್ತು, ಕೋಲಾಟದ ಪದಗಳ ವೈವಿಧ್ಯ ಅತ್ಯಂತ ಗಮನಾರ್ಹವಾದುವು.



ಕರಗ ನೃತ್ಯ

ಕೋಲಾಟದಂತೆಯೇ ಲೌಕಿಕ ಕಲೆಯಾಗಿ ಉಳಿದುಬಂದಿರುವ ಚಿಟ್ ಮೇಳ ಹಾಸನ ಹಾಗೂ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ. ಕರಡೆ ಮೇಳದಂತೆ ವಾದ್ಯಗಳ ವೈಭವ ಇಲ್ಲಿಯೂ ಪ್ರಮುಖವಾದುದೇ. ಕರಡೆ, ಸಮೇಳ, ಘುಮ್ಮಿ, ಮೌರಿ ಮೊದಲಾದ ವಾದ್ಯಗಳನ್ನು ಇಲ್ಲಿಯೂ ಬಳಸಲಾಗುತ್ತದೆ. ಆದರೆ ಇಲ್ಲಿ ನೃತ್ಯದ ಪಾತ್ರ ದೊಡ್ಡದು. ಯಕ್ಷಗಾನದ ವಿವಿಧ ಮಟ್ಟುಗಳನ್ನು ಮೌರಿಯಲ್ಲಿ ನುಡಿಸುವ ತಂಡದ ನಾಯಕ, ವಿವಿಧ ವಾದ್ಯಗಳ ಗತ್ತಿನಲ್ಲಿ ಕರಡೆ, ಸಮ್ಮೇಳ, ಡುಮ್ಮಿಗಳ ವಾದ್ಯಪಟುಗಳನ್ನು ಕುಣಿಸುತ್ತಾನೆ. ಈ ವಾದ್ಯಗಳನ್ನು ಬಡಿಯುತ್ತ ಬಯಲಾಟದ ನೃತ್ಯಗಳನ್ನೇ ಈ ಕಲಾವಿದರು ಪ್ರದರ್ಶಿಸುತ್ತಾರೆ. ಜಲ್ಲರಿಯನ್ನು ಬಡಿಯುವ ಮತ್ತೊಬ್ಬ ಕಲಾವಿದ ಮೃದು ನೃತ್ಯವನ್ನು ಪ್ರದರ್ಶಿಸುತ್ತ ಇವರ ನಡುವೆ ಅತ್ತಿಂದಿತ್ತ ಚಲಿಸುತ್ತ ಆ ಕಲೆಗೆ ಇನ್ನಷ್ಟು ಆಕರ್ಷಣೆಯನ್ನು ತರುತ್ತಾನೆ. ಬಯಲಾಟ ದೊಡ್ಡ ಮೇಳ. ಅದೇ ಮಟ್ಟುಗಳಿಗೆ ಇಲ್ಲಿ ಕುಣಿತಗಳು ನಡೆಯುವುದರಿಂದ ಇದು ಚಿಟ್ ಮೇಳ ಆಗಿರಬಹುದು. ಚಿಟ್ ಎಂದರೆ ಕಿರಿದು. ಚಿಕ್ಕದು ಎಂಬ ಅರ್ಥದಲ್ಲಿ ಈ ಮೇಳದ ಹೆಸರು ಉಳಿದು ಬಂದಿರಬೇಕು. ಈ ಲೌಕಿಕ ಕಲೆಗಳನ್ನು ಬಿಟ್ಟರೆ ಉಳಿದೆಲ್ಲ ಜನಪದ ನೃತ್ಯಗಳೂ ಒಂದಲ್ಲ ಒಂದು ವಿಧದಲ್ಲಿ ಧಾರ್ಮಿಕ ಸಂಬಂಧವನ್ನು ಉಳಿಸಿಕೊಂಡೇ ಬಂದಿವೆ.

ವೀರಗಾಸೆ ಕುಣಿತ, ಶೈವ ಸಂಪ್ರದಾಯದ ಕುಣಿತ : ವೀರಭದ್ರನ ಖಡ್ಗವನ್ನು ಹೇಳುತ್ತ ನಾಲ್ಕಾರು ಮಂದಿ ಕರಡೆಯ ಹಾಗೂ ಇತರ ವಾದ್ಯಗಳ ಗತ್ತಿಗೆ ನರ್ತಿಸುತ್ತಾರೆ. ಕುಣಿತ, ಅನಂತರ ಕರಡೆಯನ್ನು ಬಡಿಯುವ ಮುಂದಾಳು ವೀರಭದ್ರನ ಅವತಾರದ ಹಿನ್ನೆಲೆಯನ್ನು ಬಣ್ಣಿಸುವುದು, ಮತ್ತೆ ಕುಣಿತ ಬಹೀಗೆ ಸಾಗುವ ವೀರಗಾಸೆ ಕುಣಿತ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜನಪ್ರಿಯವಾಗಿದೆ. ಇದೇ ಹಿನ್ನೆಲೆಯಲ್ಲಿ ಬರುವ ಲಿಂಗದ ಬೀರರ ಕುಣಿತ ಸಾಮೂಹಿಕ ನೃತ್ಯವಲ್ಲ. ಇಲ್ಲಿ ಒಬ್ಬ ಅಥವಾ ಇಬ್ಬರು ವೀರಭದ್ರನ ಬಿರುದುಗಳನ್ನು ಧರಿಸಿ ಕುಣಿಯುತ್ತಾರೆ. ಒಬ್ಬರು ಖಡ್ಗ ಹೇಳುವುದು ಮತ್ತೊಬ್ಬರು ಲಾಂಛನಗಳನ್ನು ಧರಿಸಿ ಭಲರೇ ವೀರ ಎಂದು ಸುತ್ತಲೂ ಕುಣಿಯುವುದು ಇಲ್ಲಿನ ವೈಶಿಷ್ಟ್ಯ. ತಲೆಗೆ ಚಾಮರ, ನೂರೊಂದು ಲಿಂಗಗಳು, ಕೊರಳಿಗೆ ರುದ್ರಾಕ್ಷಿ, ಮೈಮೇಲೆ ಕಾವಿಯ ನಿಲುವಂಗಿ, ಕಾವಿಯ ಇಜಾರ, ದಕ್ಷಬ್ರಹ್ಮನ ಶಿರಸ್ಸು, ಸಿಂಹಲಲಾಟ ಮುಂತಾದ ಹಿತ್ತಾಳೆಯ ಬಿರುದುಗಳನ್ನು ಧರಿಸಲಾಗುತ್ತದೆ. ಕಾಲಿಗೆ ಗಗ್ಗರ ಮತ್ತು ಜಂಗುಗಳನ್ನು, ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಎದೆಗೆ ಅಂಟಿದಂತೆ ವೀರಭದ್ರನ ಹಲಗೆ ಮುಂತಾದುವನ್ನು ಧರಿಸಿ ಕುಣಿಯಲಾಗುತ್ತದೆ. ನಡುವಿಗೆ ಧರಿಸುವ ಹಿತ್ತಾಳೆ, ಶಿರಸ್ಸುಗಳನ್ನು ರುಂಡಮಾಲೆ ಎನ್ನಲಾಗುತ್ತದೆ. ನಮ್ಮ ರುದ್ರ ನೃತ್ಯಗಳಲ್ಲಿ ಲಿಂಗದ ಬೀರರ ಕುಣಿತವೂ ಒಂದು. ದೇವರ ಉತ್ಸವಗಳಲ್ಲಿ, ಮೆರವಣಿಗೆಗಳಲ್ಲಿ, ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಈ ನೃತ್ಯವನ್ನು ಏರ್ಪಡಿಸಲಾಗುತ್ತದೆ. ಬಯಲುಸೀಮೆಯ ಎಲ್ಲ ಕಡೆಗಳಲ್ಲೂ ಈ ನೃತ್ಯ ಕಾಣಬರುತ್ತದೆ.

ವೀರಗಾಸೆ ಕುಣಿತ

ಶೈವಮೂಲದ ನೃತ್ಯಗಳಲ್ಲಿ ನಂದಿಕೋಲು ಕುಣಿತವೂ ಪ್ರಸಿದ್ಧವಾದುದು. ನಂದಿಯ ಮೂರ್ತಿಯನ್ನೂ ಹಿತ್ತಾಳೆಯ ಬಿರುದಾವಳಿಗಳನ್ನೂ ಗಗ್ಗರ ಬಳೆಗಳನ್ನೂ ಬಣ್ಣದ ವಸ್ತ್ರಗಳನ್ನೂ ಬಳಸಿ ಅಲಂಕರಿಸಿದ ಹತ್ತು ಹದಿನೈದು ಮಾರು ಉದ್ದದ ಭಾರವಾದ ಬಿದಿರುಗಳುಗಳನ್ನು ನಂದಿಕೋಲು ಎಂದು ಕರೆಯಲಾಗುತ್ತದೆ. ನಡುವಿಗೆ ಕಟ್ಟಿದ ಒಂದು ಸಣ್ಣ ಚೀಲದಲ್ಲಿ ಈ ಕೋಲಿನ ತಳವನ್ನು ಕೂರಿಸಿ ತಮ್ಮಟೆಯ ಗತ್ತಿಗೆ ಕುಣಿಯುವ ಸಾಹಸ ಮೆಚ್ಚುವಂಥದ್ದು. ಅತ್ಯಂತ ಕಷ್ಟಸಾಧ್ಯವಾದ ಈ ನೃತ್ಯ ದೇವರ ಉತ್ಸವಗಳಲ್ಲಿ ಮೆರವಣಿಗೆಯ ಮುಂದೆ ಸಾಗುತ್ತದೆ. ಭಾರವಾದ ಈ ನಂದಿಕೋಲನ್ನು ಹಿಡಿತಕ್ಕೆ ತೆಗೆದುಕೊಂಡು ಕುಣಿಯುವುದರ ಜೊತೆಗೆ ಹೆಗಲ ಮೇಲೆ ಒಬ್ಬೊಬ್ಬರನ್ನು ನಿಲ್ಲಿಸಿಕೊಂಡು ತಮ್ಮ ಸಾಹಸವನ್ನು ಪ್ರದರ್ಶಿಸುವ ಕಲಿಗಳೂ ಉಂಟು.

ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜನಪ್ರಿಯವಾಗಿರುವ ಬೀಸು ಕಂಸಾಳೆ ನೃತ್ಯವೂ ಶೈವಮೂಲಕ್ಕೆ ಸಂಬಂಧಪಡುತ್ತದೆ. ಮಲೆಯ ಮಾದೇಶ್ವರರ ಆರಾಧಕರಾದ ದೇವರ ಗುಡ್ಡರು, ಕಂಸಾಳೆ ವಾದ್ಯವನ್ನು ಬಡಿದುಕೊಂಡು ವಿವಿಧ ಭಂಗಿಯಲ್ಲಿ ಬಾಗಿ, ಬಳುಕಿ, ಕುಣಿದು ಕುಪ್ಪಳಿಸಿ ಕೌಶಲವನ್ನು ಪ್ರದರ್ಶಿಸುವ ವೈಖರಿ ಆಶ್ಚರ್ಯಕರವಾಗಿರುತ್ತದೆ. ಮಾದೇಶ್ವರರ ಪದಗಳೂ ಕಂಸಾಳೆಯ ನಾದವೂ ಈ ಕುಣಿತಕ್ಕೆ ಮೆರುಗನ್ನು ತರುತ್ತವೆ.

ಗೊರವ ಸಂಪ್ರದಾಯದ ಕುಣಿತವೂ ಶೈವಸಂಬಂಧಿಯಾದುದೇ. ಮೈಲಾರ ಲಿಂಗನ ಮತ್ತು ಮುಡುಕುತೊರೆ ಮಲ್ಲಿಕಾರ್ಜುನ ಗುಡ್ಡರಾದ ಗೊರವರು ತಲೆಯ ಮೇಲೆ ಕರಡಿಯ ಕೂದಲ ಟೊಪ್ಪಿಗೆ, ಮೈಮೇಲೆ ಕಪ್ಪು ನಿಲುವಂಗಿ, ಕವಡೆಯ ಸರಗಳು, ಕೈಯಲ್ಲಿ ಡಮರುಗ, ತ್ರಿಶೂಲಗಳನ್ನು ಹಿಡಿದು ವೃತ್ತಾಕಾರವಾಗಿ ನರ್ತಿಸುತ್ತಾರೆ. ಚಿತ್ರದುರ್ಗ, ಶಿವಮೊಗ್ಗ, ಕೋಲಾರ, ತುಮಕೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ಕುಣಿತವನ್ನು ಹೆಚ್ಚಾಗಿ ಕಾಣಬಹುದು.

ಪಟ ಕುಣಿತ

ಗಾರುಡಿ ಕುಣಿತ ಎಂಬುದು ಗಾರುಡಿಗೆ ಶಬ್ದದಿಂದ ಬಂದದ್ದು, ಗಾಡಿಗ ಕುಣಿತ ಎಂದೂ ಇದನ್ನು ಕರೆಯಲಾಗುತ್ತದೆ. ವೈಷ್ಣವ ಸಂಪ್ರದಾಯದ ಈ ಕುಣಿತ ಅಪೂರ್ವ ರೀತಿಯದು. ಎರಡು ಮೂರು ಆಳೆತ್ತರದ ಬಿದಿರ ತಡಿಕೆಯ ಆಕೃತಿಯನ್ನು ಮಾಡಿ, ಮೇಲೆ ಮರದ ತಲೆಯನ್ನು ಕೂರಿಸಿ ಮರದ ಕೈ ಮತ್ತು ಮುಂಗಿಯನ್ನು ಅಳವಡಿಸಿ, ಮೈಮೇಲೆ ವಸ್ತ್ರಗಳನ್ನು ಜೋಡಿಸಿ ಗಾರುಡಿಗನ ಆಕೃತಿಯನ್ನು ಸಿದ್ಧಗೊಳಿಸಿಕೊಳ್ಳಲಾಗುತ್ತದೆ. ಕುಣಿಯುವ ವ್ಯಕ್ತಿ ಆ ಆಕೃತಿಯ ಒಳಗೆ ಸೇರಿಕೊಳ್ಳುತ್ತಾನೆ. ತುಂಬ ಹಗುರವಾದ ಆ ದೊಡ್ಡ ಆಕೃತಿಯನ್ನು ಧರಿಸಿ ಒಳಗೆ ಅವನು ನೃತ್ಯ ಮಾಡುತ್ತಾನೆ, ಬಾಗುತ್ತಾನೆ ದೊಡ್ಡ ಆಕೃತಿಯ ಈ ನೃತ್ಯವಿನ್ಯಾಸ ನೋಡುವವರಿಗೆ ಬೆರಗನ್ನು ತರುತ್ತದೆ. ಪುರುಷ ಮತ್ತು ಸ್ತ್ರೀ ಆಕೃತಿಗಳಿರುತ್ತವೆ.

ವೈಷ್ಣವ ಸಂಪ್ರದಾಯದ ನೃತ್ಯಗಳಲ್ಲಿ ಪಟಕುಣಿತ, ಭಾಗವಂತಿಕೆ ಮೇಳಗಳೂ ಮುಖ್ಯವಾದುವೇ. ಭಾಗವಂತಿಕೆ ಪದಗಳನ್ನು ಎರಡು ಸಾಲಿನಲ್ಲಿ ನಿಂತು ಕೆಲವರು ಹಾಡುತ್ತಾ ಸಾಗುತ್ತಾರೆ. ಅವರ ನಡುವೆ ಕೋಡಂಗಿಯ ವೇಷವನ್ನು ಧರಿಸಿದ ವ್ಯಕ್ತಿಯೊಬ್ಬ ಮೃದುವಾಗಿ ನರ್ತಿಸುತ್ತಾನೆ. ಪಟಕುಣಿತ ನಂದಿಕೋಲಿನ ನೃತ್ಯವನ್ನೇ ಸ್ವಲ್ಪ ಮಟ್ಟಿಗೆ ಹೋಲುತ್ತದೆ. ಆದರೆ ಇಲ್ಲಿನ ಕೋಲುಗಳು ಅಷ್ಟು ಎತ್ತರವಾದುವಲ್ಲ, ಭಾರವಾದುವಲ್ಲ. ಆದರೂ ಸಾಕಷ್ಟು ಉದ್ದವಾಗಿರುತ್ತವೆ. ನಂದಿಯ ಕೋಲಿನ ಕುಣಿತದಲ್ಲಿ ಇಬ್ಬರು ಅಥವಾ ಒಬ್ಬರೇ ಭಾಗವಹಿಸುವುದು ಹೆಚ್ಚು. ಆದರೆ ಪಟ ಕುಣಿತದಲ್ಲಿ ಹತ್ತಾರು ಮಂದಿ ಭಾಗವಹಿಸುತ್ತಾರೆ. ಬಣ್ಣದ ಬಟ್ಟೆಗಳನ್ನು ಸುತ್ತಿ ಅಲಂಕರಿಸಿದ, ತುದಿಯಲ್ಲಿ ಲೋಹದ ಛತ್ರಿಯನ್ನು ಕಟ್ಟಿದ ಈ ಉದ್ದವಾದ ಕೋಲುಗಳನ್ನು ಪಟ ಎಂದು ಕರೆಯಲಾಗುತ್ತದೆ. ಬಹುಶಃ ಇವು ವೈಷ್ಣವ ಸಂಪ್ರದಾಯದ ಈ ಭಕ್ತರ ನಿಶಾನೆಗಳು, ಬಾವುಟಗಳು, ಅವನ್ನು ಹಿಡಿದು ಸಾಲುಸಾಲಾಗಿ ವಿವಿಧ ವೈಖರಿಯಲ್ಲಿ ತಮ್ಮಟೆ, ಹೆಬ್ಬರೆಗಳ ಗತ್ತಿಗೆ ನರ್ತಿಸುವ ಸೊಗಸು ಅಪೂರ್ವವಾದುದು.

ಶಕ್ತಿದೇವತೆಗಳಿಗೆ ಸಂಬಂಧಿಸಿದ ನೃತ್ಯಗಳಲ್ಲಿ ಸೋಮನ ಕುಣಿತ, ಗುಡ್ಡರ ಕುಣಿತ, ಪೂಜಾಕುಣಿತ, ಕರಗಕುಣಿತ ಮುಂತಾದುವು ಬರುತ್ತವೆ. ಸೋಮನ ಕುಣಿತ ಕರ್ನಾಟಕದ ಮುಖವಾಡ ನೃತ್ಯಗಳಲ್ಲಿ ಮುಖ್ಯವಾದುದು. ಮುಖವಾಡ ಉಳ್ಳ ಇತರ ನೃತ್ಯಗಳು ಹೆಚ್ಚು ಬೆಳಕಿಗೆ ಬಂದಿಲ್ಲ. ಸೋಮಗಳನ್ನು ಕೆಂಚರಾಯ, ಕರಿರಾಯ ಮುಂತಾದ ಹೆಸರುಗಳಲ್ಲಿ ಕರೆಯಲಾಗುತ್ತದೆ. ದೊಡ್ಡ ಆಕಾರದ ಮುಖವಾಡ, ಕಮಾನಿನ ಆಕಾರದಲ್ಲಿ ವಿವಿಧ ಅಲಂಕಾರಗಳಿಂದ ಅದನ್ನು ಸಿದ್ಧಗೊಳಿಸುವ ಬಗೆ, ಬಣ್ಣಬಣ್ಣದ ದೇವರ ಸೀರೆಗಳನ್ನು ಮುಡಿಯಿಂದ ಹಿಮ್ಮಡಿಯವರೆಗೆ ಬೆನ್ನ ಮೇಲೆ ಇಳಿಬಿಟ್ಟುಕೊಳ್ಳುವ ವೈಖರಿ ಮನಸೆಳೆಯುವಂತಿರುತ್ತದೆ. ಬಣ್ಣದ ವಸ್ತ್ರದಲ್ಲಿ ಕಚ್ಚೆಯನ್ನು ಹಾಕಿ ಕೈಯಲ್ಲಿ ಬೆಳ್ಳಿಬೆತ್ತ ಹಿಡಿದು, ಸಾಮಾನ್ಯವಾಗಿ ಬರಿಮೈಯಲ್ಲಿ ಮುಖವಾಡ ಧರಿಸಿ ಕುಣಿಯಲಾಗುತ್ತದೆ. ಕೊರಳಲ್ಲಿ ದೇವರ ತಾಲಿಯನ್ನೂ ಧರಿಸಲಾಗುತ್ತದೆ. ಗ್ರಾಮದೇವತೆಯ ಉತ್ಸವಮೂರ್ತಿಯ ಮುಂದೆ ಎರಡು ಅಥವಾ ಮೂರು ಸೋಮಗಳು, ತಮ್ಮಟೆ, ಹರೆ, ಡೋಲು, ಮೌರಿಗಳ ಹಿನ್ನೆಲೆಗೆ ನರ್ತಿಸುತ್ತವೆ. ಪೂಜಾರಿ ಕೈಯಲ್ಲಿ ಚಾಟಿಯನ್ನು ಹಿಡಿದು ನಡುವೆ ಸೇರಿಸಿಕೊಳ್ಳುತ್ತಾನೆ. ತಮ್ಮಟೆಯನ್ನು ಬಡಿಯುವ ಕಲಾವಿದ ನಡುವಡುವೆ ದೇವರನ್ನು ಕರೆಯುವ ಅಪೂರ್ವ ತ್ರಿಪದಿಗಳನ್ನು ಹಾಡುತ್ತಾನೆ. ಹೆಜ್ಜೆಹೆಜ್ಜೆಗೆ ಹಾಡು, ಕುಣಿತ, ಜಯಕಾರಗಳು ಸೋಮನ ಕುಣಿತವನ್ನು ವಿಶೇಷವಾಗಿ ಕಳೆಗಟ್ಟಿಸುತ್ತವೆ.

ರಂಗದ ಕುಣಿತ ಕರ್ನಾಟಕದ ಅನೇಕ ಕಡೆಗಳಲ್ಲಿ ಕಾಣಬರುತ್ತದೆ. ಊರ ದೇವತೆಯ ಹಬ್ಬಕ್ಕೆ ಸಂಬಂಧಿಸಿದ ಈ ನೃತ್ಯ ಹಬ್ಬಕ್ಕೆ ಹದಿನೈದು ದಿನಗಳ ಮುಂಚೆಯೇ ಆರಂಭವಾಗುತ್ತದೆ. ಊರ ರಂಗದಲ್ಲಿ ಬೆಂಕಿಯನ್ನು ಹಾಕಿ, ಕೈಯಲ್ಲಿ ವಸ್ತ್ರವೊಂದನ್ನು ಹಿಡಿದು, ಜನಪದ ಗೀತೆಗಳನ್ನು ನಡುನಡುವೆ ಹಾಡುತ್ತ, ತಮ್ಮಟೆ ಗತ್ತಿಗೆ ಊರಿನ ಕಲಿಗಳೆಲ್ಲ ವಿವಿಧ ಭಂಗಿಗಳಲ್ಲಿ ನರ್ತಿಸುತ್ತಾರೆ.

ಗುಡ್ಡರ ಕುಣಿತ ಬಹುಮಟ್ಟಿಗೆ ರಂಗದ ಕುಣಿತವನ್ನೇ ಹೋಲುತ್ತದೆ. ಇಲ್ಲಿ ತಮ್ಮಟೆಗೆ ಬದಲಾಗಿ ಚಕ್ರವಾದ್ಯ ಎಂಬ ವಿಶಿಷ್ಟ ರೀತಿಯ ತಾಸೆಯನ್ನು ಬಳಸಲಾಗುತ್ತದೆ. ಕುಣಿರೋ ಗುಡ್ಡರು ಎಂದು ಇವರನ್ನೇ ಕರೆಯುವುದು. ಮಾರಿಕುಣಿತ ಎಂದು ಈ ನೃತ್ಯವನ್ನು ಕರೆಯಲಾಗುತ್ತದೆ. ದೇವರನ್ನು ಕರೆಯುವ ಹಿನ್ನೆಲೆಯಲ್ಲಿ ಭಕ್ತರು ವಿವಿಧ ಭಂಗಿಗಳಲ್ಲಿ ಮಾಡುವ ನೃತ್ಯವೇ ಗುಡ್ಡರ ಕುಣಿತ. ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಈ ಕುಣಿತ ಹೆಚ್ಚಾಗಿ ಉಳಿದು ಬಂದಿದೆ.

ಪೂಜಾ ಕುಣಿತ

ಪೂಜಾಕುಣಿತ ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಯ ವಿಶಿಷ್ಟ ಕಾಣಿಕೆ. ಏಳು ಅಥವಾ ಒಂಬತ್ತು ಕಳಸಗಳಿಂದ ಅಲಂಕರಿಸಿ ದೇವಿಯ ಪೂಜೆಯನ್ನು ನೆತ್ತಿಯ ಮೇಲಿನ ಕಳಸದ ಮೇಲಿರಿಸಿ ಕೈಬಿಟ್ಟು ತಮ್ಮಟೆಯ ಗತ್ತಿಗೆ ನರ್ತಿಸುವ ವೈಖರಿ ಅದ್ಭುತವಾದುದು. ಪೂಜೆಯ ಜೊತೆಯಲ್ಲಿ ಒನಕೆಯ ಕುಣಿತವೂ ಕೆಲವು ಕಡೆ ಸೇರಿಕೊಂಡಿದೆ. ತಲೆಯ ಮೇಲೆ ಒನಕೆಯೊಂದನ್ನು ಹೊತ್ತು ಕೈಬಿಟ್ಟು ಕುಣಿಯುವುದು ಇಲ್ಲಿನ ಆಕರ್ಷಣೆ. ಕರಗಕುಣಿತ ಬೆಂಗಳೂರು ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕರಗ ಒಂದು ರೀತಿಯ ಮಣ್ಣಿನ ಕಲಶವೇ. ಅದನ್ನು ವಿವಿಧ ರೀತಿಯಲ್ಲಿ ಅಲಂಕರಿಸಿ ನೆತ್ತಿಯಲ್ಲಿ ಧರಿಸಿ ಕೈಬಿಟ್ಟು ಕುಣಿಯುವ ಕುಶಲಿಗಳಾದ ಕಲಾವಿದರು ನೋಡುವವರನ್ನು ಬೆರಗುಗೊಳಿಸುತ್ತಾರೆ.

ಡೊಳ್ಳುಕುಣಿತ, ಬೀರೇಶ್ವರ ಸಂಪ್ರದಾಯಕ್ಕೆ ಸೇರಿದುದು; ಶಿವಮೊಗ್ಗ, ಚಿತ್ರದುರ್ಗ, ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕುರುಬ ಜನಾಂಗದ ಈ ನೃತ್ಯ ಒಂದು ಗಂಡು ಕಲೆ. ದೊಡ್ಡ ಆಕಾರದ ಡೊಳ್ಳುಗಳನ್ನು ನಡುವಿಗೆ ಕಟ್ಟಿ ಅದನ್ನು ಶಕ್ತಿಮೀರಿ ಬಡಿಯುತ್ತ ವಿವಿಧ ಭಂಗಿಗಳಲ್ಲಿ ಬೀರರು ಕುಣಿಯುತ್ತಾರೆ. ನಡುವೆ ಒಬ್ಬ ಜಲ್ಲರಿಯವನೂ ಸೇರಿಕೊಳ್ಳುತ್ತಾನೆ. ಬಡಿಯುವ ಕೋಲು ಮುರಿಯುವಂತೆ, ಕೇಳುವವರ ಕಿವಿ ಬಿರಿಯುವಂತೆ ಡೊಳ್ಳನ್ನು ಬಡಿಯುವ ಮೋಜು, ಕುಣಿಯುವ ಗತ್ತು ಆ ಕಲಿಗಳಿಗೆ ಮಾತ್ರ ಸಾಧ್ಯವಾದುದು.

ದಕ್ಷಿಣ ಕನ್ನಡ ಜಿಲ್ಲೆಯ ಭೂತನೃತ್ಯಗಳಾದ ಆಟಿ ಕೊಡೆಂಜ, ಕೋರತನಯ ಅಲ್ಲಿನ ವಿಶಿಷ್ಟ ಸಂಸ್ಕೃತಿಯನ್ನು ಸಾರುತ್ತವೆ. ಭೂತಾರಾಧನೆಯ ಸಂದರ್ಭದಲ್ಲಿ ಮನುಷ್ಯನ ಮೇಲೆ ಆವೇಶ ಬರಿಸಿಕೊಂಡು ಮಾಡುವ ನೃತ್ಯವೈಖರಿ ಅಪೂರ್ವವಾದುದು. ಪ್ರಭಾವಳಿಯಂತೆ ತೆಂಗಿನ ಹಾಳೆಯಲ್ಲಿ ಕಟ್ಟಿಕೊಳ್ಳುವ ಅಣಿ ವೈವಿಧ್ಯಮಯ ಆಭರಣ ವಿಶೇಷಗಳು, ಮುಖದಲ್ಲಿ ಬಣ್ಣಗಾರಿಕೆ, ಕಾಲಗಗ್ಗರ ಮೊದಲಾದುವು ಭೂತವೇಷದ ಆಕರ್ಷಣೆಗಳು. ಚಂಡೆ ಮೊದಲಾದ ವಾದ್ಯಗಳ ಗತ್ತಿಗೆ ಭೂತದ ಪಾತ್ರ ನರ್ತಿಸುವುದರ ಜೊತೆಗೆ, ಇಲ್ಲಿನ ಪಾಡ್ದನ ಸಾಹಿತ್ಯವೂ ಗಮನಾರ್ಹವಾದುದೇ.

ನಲ್ಕೆಯವರಲ್ಲಿ ಪ್ರಚಲಿತವಾಗಿರುವ ಆಟಿಕೊಡೆಂಜ ತುಳು ಆಟಿ ತಿಂಗಳಲ್ಲಿ ಬರುತ್ತದೆ. ತೆಂಬರೆಯ ಗತ್ತಿಗೆ ಈ ನೃತ್ಯ ಕೂಡಿಬರುತ್ತದೆ. ಕೋರತನಿಯ ಕೂಡ ನಲ್ಕೆಯವರಲ್ಲಿ ಇರುವ ನೃತ್ಯವಿಶೇಷ. ಕೋರತನಿಯ ವೇಷ ಹಾಕಿಕೊಂಡು ರೈತರ ಮನೆಯ ಬಾಗಿಲಲ್ಲಿ ನರ್ತಿಸಿ, ದವಸಧಾನ್ಯಗಳನ್ನು ಸಂಗ್ರಹಿಸಲಾಗುತ್ತದೆ. ಮಾದಿರ, ದುಡಿನೃತ್ಯ, ಡೋಲಿನ ಕುಣಿತ ಮುಂತಾದ ವೈವಿಧ್ಯಮಯ ನೃತ್ಯಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಬರುತ್ತವೆ.

(ಜೆ.ಎಸ್.ಪಿ.)

**ಜನಪದ ಮೋಡಿಕಾರರು :** ಮಂತ್ರತಂತ್ರಗಳಿಂದ ಎದುರಾಳಿಯ ಕೈ ಕಟ್ಟುವುದು, ಗೆಲ್ಲುವುದು ಮೋಡಿವಿದ್ಯೆ. ಮಾಟ ಮಂತ್ರ ಎಂದೂ ಇದನ್ನು ಕರೆಯುವುದುಂಟು. ಕೆಲವು ಹಳ್ಳಿಗಳಲ್ಲಿ ಈ ಮೋಡಿಕಾರರ ಮನೆತನಗಳನ್ನು ಇಂದಿಗೂ ನೋಡಬಹುದಾಗಿದೆ. ಹಿಂದಿನ ಕಾಲದಲ್ಲಿ ಮೋಡಿಕಾರರನ್ನು ಬೇರೆ ಊರಿನವರು ಆಮಂತ್ರಣ ಕೊಟ್ಟು ಕರೆಸಿ ಪ್ರದರ್ಶನ ಏರ್ಪಡಿಸಿ, ಪುರಸ್ಕಾರವಿತ್ತು ಪ್ರೋತ್ಸಾಹಿಸುತ್ತಿದ್ದರು.

ಮೋಡಿಗಳಲ್ಲಿ ರಾಜಮೋಡಿ, ರಣಮೋಡಿ ಎಂದು ಎರಡು ವಿಧ. ಸಂತೋಷದಿಂದ ವಿನೋದಕ್ಕಾಗಿ ಮಾಡುವುದು ರಾಜಮೋಡಿ; ಜಿದ್ದಾಜಿದ್ದಿನಿಂದ ಪಣ ಇಟ್ಟು ಆಡುವುದು ರಣಮೋಡಿ.

ಮೋಡಿಕಾರರ ಗುಂಪುಗಳಲ್ಲಿ ಕರ್ನಾಟಕದಲ್ಲಾದರೆ ಗಾಡುಗರು, ವಿಶ್ವಕರ್ಮದವರು, ಕಂಚಿಗೊಲ್ಲರು, ದೇವಾಂಗಶೆಟ್ಟರು; ಆಂಧ್ರಪ್ರದೇಶದಲ್ಲಾದರೆ ಪೆದ್ದಟ್ಟಿಗೊಲ್ಲರು ಮುಂತಾದ ಮತಸ್ಥರು ಇರುತ್ತಾರೆ. ಇವರಲ್ಲಿ ಕೆಲವರು ತಂತಮ್ಮ ಊರುಗಳಲ್ಲಿ ಸ್ಥಿರವಾಗಿ ವಾಸವಾಗಿರುತ್ತಾರೆ; ಕೆಲವರು ಮಾತ್ರ ಯಾವಾಗಲೂ ದೇಶಸಂಚಾರದಲ್ಲೇ ಇರುತ್ತಾರೆ.

ಮೋಡಿ ಆಟಕ್ಕೆ ಮುನ್ನ, ಅದಕ್ಕೆಂದು ಗೊತ್ತುಮಾಡಿದ ಸ್ಥಳದಲ್ಲಿ ಮಂಡಲಗಳನ್ನು ಬರೆಯುತ್ತಾರೆ. ಇಂಥ ಮಂಡಲಗಳು ಮೂರರಿಂದ ಇಪ್ಪತ್ತೆರಡರವರೆಗೆ ಇರುವುದು ವಾಡಿಕೆ. ಒಂದೊಂದು ಮಂಡಲದಲ್ಲೂ ಕೋಳಿಮೊಟ್ಟೆ, ನಿಂಬೆಹಣ್ಣು, ಪೊರಕೆ, ದೊಣ್ಣೆ ಇಂಥ ಒಂದೊಂದು ವಸ್ತುವನ್ನು ಇರಿಸುತ್ತಾರೆ. ಕೊನೆಯ ಮಂಡಲದ ನಡುವೆ ಒಂದು ಗುಂಡಿಯಲ್ಲಿ ಹಣದ ಗಂಟನ್ನು ಇಟ್ಟು ಅದರ ಎರಡೂ ಪಕ್ಕದಲ್ಲಿ ಎರಡು ಚಪ್ಪಡಿಕಲ್ಲುಗಳನ್ನು ಇರಿಸುತ್ತಾರೆ.

ಇಷ್ಟೆಲ್ಲ ಸಿದ್ಧತೆಗಳನ್ನು ಮಾಡಿದ ಮೇಲೆ, ಮೋಡಿಹಾಕುವವ ಅಕ್ಷತೆಕಾಳನ್ನು ಮಂತ್ರಿಸಿ ಎದುರು ಗುಂಪಿನವರ ಮೇಲೆ ಎಸೆಯುತ್ತಾನೆ. ಆ ಕ್ಷಣ ಅವರು ತಲೆಕೆಳಗಾಗಿ ಅಲ್ಲಿದ್ದ ಮರದಲ್ಲಿ ನೇತಾಡುವಂತಾಗುತ್ತಾರೆ. ಆಗ ಆ ಗುಂಪಿನ ಒಬ್ಬ ಹೆಂಗಸು ಅದೇ ಅಕ್ಷತೆ ಕಾಳನ್ನು ಎದುರು ಪಕ್ಷದ ಮೋಡಿಕಾರನ ಮೇಲೆ ಎಸೆದು ತನ್ನ ಕಡೆಯವರನ್ನು ಮರದಿಂದ ಬಿಡಿಸುತ್ತಾಳೆ. ಅನಂತರ ಅವರೆಲ್ಲ ಮಂಡಲದಾಟಲು ಪ್ರಯತ್ನಿಸುತ್ತಾರೆ. ಮೋಡಿಕಾರ ಮತ್ತೆ ಮಂತ್ರದ ಅಕ್ಷತೆಯನ್ನು ಅವರೆಲ್ಲರ ಮೇಲೆ ಎಸೆಯುತ್ತಾನೆ. ಆಗ ಅವರು ರಕ್ತ ಕಾರಿ ಒದ್ದಾಡುತ್ತಾರೆ. ಆಗ ಅವರ ಕಡೆಯ ಹೆಂಗಸು ನಿಂಬೆಹಣ್ಣು ಮಂತ್ರಿಸಿ ಅವರ ಮೇಲೆ ಎಸೆದು ಅವರ ಕಟ್ಟು ಬಿಡಿಸುತ್ತಾಳೆ. ಮತ್ತೆ ಅವರು ಮುನ್ನುಗ್ಗುತ್ತಾರೆ. ಕೂಡಲೇ ಮುಂದಲ ಮಂಡಲದಲ್ಲಿ ಇರಿಸಿರುವ ಪೊರಕೆ ಎದ್ದುನಿಂತು ತನ್ನನ್ನು ಮುಟ್ಟಲು ಬಂದವರನ್ನು ಬಡಿಯಲು ಪ್ರಾರಂಭಿಸುತ್ತದೆ. ಹೀಗೆ ಮಂತ್ರ ಪ್ರತಿಮಂತ್ರಗಳು ನಡೆಯುತ್ತವೆ. ಎದುರಾಳಿಗಳು ಎಲ್ಲವನ್ನೂ ಗೆದ್ದು ಕೊನೆಯ ಮಂಡಲಕ್ಕೆ ಬಂದು ಹಣದ ಗಂಟಿಗೆ ಕೈಹಾಕಬೇಕು. ಆಗಲೂ ಅಕ್ಕಪಕ್ಕದಲ್ಲಿರುವ ಚಪ್ಪಡಿಕಲ್ಲುಗಳು ಅವರ ಕೈಗಳನ್ನು ಜಜ್ಜುತ್ತವೆ. ಅಲ್ಲಿ ಯಾರ ಕೈಗೆಲ್ಲುತ್ತದೋ ಅವರು ನಿಜವಾಗಿ ಗೆದ್ದಂತೆ. ಹಣದ ಗಂಟಿಗೆ ಬದಲಾಗಿ ಕುರಿಯನ್ನೋ ಇಲ್ಲವೆ ಕೋಳಿಯನ್ನೋ ಪಣವಾಗಿ ಇರಿಸುವುದುಂಟು. ರಣಮೋಡಿ ಇದಕ್ಕಿಂತ ಭೀಕರವಾಗಿರುತ್ತದೆ. ಈ ಆಟದವರು ಕ್ಷುದ್ರದೇವಿಯ ಆರಾಧಕರಾಗಿರುತ್ತಾರೆ. ಬಲಿಕೊಡುವುದೇ ಮೊದಲಾದ ವಾಮಾಚಾರಗಳಿಂದ ಇವರಿಗೆ ಮಾರಕಶಕ್ತಿ ಬಂದಿರುತ್ತದೆ.

ಗಾಡುಗರು ಎಂಬ ಒಂದು ಮೋಡಿಕಾರ ಪಂಗಡದವರು ವಿಶ್ವಕರ್ಮ ಜನಾಂಗದ ಮೋಡಿಕಾರರನ್ನು ಕಂಡರೆ ಕೊಂಚ ದಿಗಿಲುಪಡುತ್ತಾರಂತೆ. ಏಕೆಂದರೆ ಇವರು ಕೂತವರನ್ನು ಕೂತಸ್ಥಳದಿಂದ ಮೇಲಕ್ಕೆ ಏಳದಂತೆ ಮಾಡುವ ಮೋಡಿವಿದ್ಯೆಯಲ್ಲಿ ಪ್ರಸಿದ್ಧರಂತೆ. ಈ ರೀತಿ ಮಾಡಿದಾಗ ಎದುರು ಗುಂಪಿನವರು ಒಂದು ಕಡ್ಡಿಯನ್ನು ಮಂತ್ರಿಸಿ ಬಿಟ್ಟಾಗ ಅದು ದುಂಬಿಯಂತೆ ಹಾರಿಕೊಂಡು ಹೋಗಿ ಎದುರಾಳಿಯನ್ನು ಪತ್ತೆಹಚ್ಚಿ ಕರೆತರುವುದಲ್ಲದೆ ನೆಲಕ್ಕೆ ಅಂಟಿಕೊಂಡವನನ್ನು ಬಿಡಿಸುತ್ತಿತ್ತಂತೆ. ರಣಮೋಡಿಯಲ್ಲಿ ಉಭಯ ಪಕ್ಷದವರಲ್ಲಿ ಕೆಲವರು ರಕ್ತ ಕಾರಿ ಸತ್ತುಹೋದ ನಿದರ್ಶನಗಳೂ ಉಂಟು.

ಈಗಲೂ ದಕ್ಷಿಣ ಕನ್ನಡದ ಕೆಲವು ಪ್ರದೇಶಗಳಲ್ಲಿ ಉತ್ತರ ಕನ್ನಡದ ಪ್ರದೇಶಗಳಲ್ಲಿ ಮಂತ್ರ ಕಟ್ಟಿಸುವ, ಮಾಟಮಾಡಿಸುವ ಆಚರಣೆಗಳು ರೂಢಿಯಲ್ಲಿವೆ. ವ್ಯಾಜ್ಯಗಳಲ್ಲಿ ಎದುರು ಪಕ್ಷದವರನ್ನು ತೀರಿಸಿಬಿಡುವ ಉದ್ದೇಶದಿಂದ ಇಂಥ ಕೆಲಸಕ್ಕೆ ಮನುಷ್ಯ ಕೈಹಾಕುತ್ತಾನೆ. ಒಂದು ಕಾಲಕ್ಕೆ ಮನೋರಂಜನೆಯ ಆಟವಾಗಿದ್ದ ಮೋಡಿವಿದ್ಯೆ ಕ್ರಮೇಣ ಮಾರಕ ಹೂಟವಾಗಿರುವುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಈಗಲೂ ರಸ್ತೆ ಬದಿಯ ಜಾದುಗಾರರು ನಿರ್ಜೀವ ವಸ್ತುಗಳಾದ ಪೊರಕೆ, ಒನಕೆ, ಬೀಡಿಗಳು ಮುಂತಾದವು ಎದ್ದು ಕುಣಿಯುವಂತೆ ಮಾಡುತ್ತಾರೆ. ಬಗೆಬಗೆಯ ಕಣ್ಣುಕಟ್ಟು ವಿದ್ಯೆಗಳನ್ನು ಮಾಡುತ್ತಾರೆ. ಪ್ರೋತ್ಸಾಹವಿಲ್ಲದೆ ಅಳಿದುಹೋಗುತ್ತಿರುವ ಮೋಡಿವಿದ್ಯೆಯನ್ನು, ಮೋಡಿಕಾರರ ಜೀವನವನ್ನು ಆದಷ್ಟು ಬೇಗ ಶಾಸ್ತ್ರೀಯವಾಗಿ ಅಭ್ಯಾಸಮಾಡುವುದು ಒಳ್ಳೆಯದು. (ಪಿ.ಆರ್.ಟಿ.)

**ಜನಪದ ರಂಗಭೂಮಿ :** ಜನಪದ ರಂಗಭೂಮಿಯ ಬೀಜರೂಪ, ಜನಪದ ನೃತ್ಯಗಳಲ್ಲಿ ಅಡಗಿದೆ ಎಂದು ವಿದ್ವಾಂಸರ ಅಭಿಪ್ರಾಯ. ಹಲವು ಬಗೆಯ ಧಾರ್ಮಿಕ ಹಾಗೂ ಲೌಕಿಕ ನೃತ್ಯಗಳನ್ನು ಸ್ವಲ್ಪಮಟ್ಟಿಗೆ ಮೈಗೂಡಿಸಿಕೊಂಡು ಮೊಳೆತ ನಾಟಕ ಅನಂತರ ವಿಶಿಷ್ಟ ಪ್ರಕಾರವಾಗಿ ಬೇರುಬಿಟ್ಟ ಹೆಮ್ಮರವಾಗಿ ಬೆಳೆಯಿತೆಂದು ತೋರುತ್ತದೆ.

ಕುಣಿತ ಬಹುಶಃ ಮಾನವ ಮೊದಲು ಕಂಡಕೊಂಡ ವಿದ್ಯೆ ಎನ್ನಬಹುದು. ಆದಿಮಾನವನಲ್ಲಿ ಇದು ಪ್ರತಿಯೊಂದು ಸಂದರ್ಭದಲ್ಲಿಯೂ ಆಚರಿಸಲ್ಪಡುತ್ತಿತ್ತು. ಇಬ್ಬರು ಕೂಡಿದಾಗ ಕುಣಿತ ವಿಶಿಷ್ಟರೂಪವನ್ನು ತಾಳಿತು. ತಮ್ಮ ಅನಿಸಿಕೆಯನ್ನು ಹಾವಭಾವಗಳ ಮೂಲಕ ವ್ಯಕ್ತಪಡಿಸಲು ಅವರು ಪ್ರಯತ್ನಿಸಿದರು. ಅವರ ಬದುಕು ಒಂದು ವ್ಯವಸ್ಥೆಗೆ ಒಳಗಾದ ಮೇಲೆ, ಕುಣಿತ ಅದರ ಅಂಗವಾಗಿ ಉಳಿದು ಕಲೆಯ ವರ್ಗವನ್ನು ಸೇರಿತು. ಅದರಲ್ಲಿ ವೈವಿಧ್ಯ ಏರ್ಪಟ್ಟಂತೆ, ಒಂದು ಬಗೆಯ ಸಂಭಾಷಣೆಯೂ ಸೇರಿದಂತೆ ನಾಟಕ ರೂಪತಾಳಿತು. ಕ್ರಿಯೆ–ಪ್ರತಿಕ್ರಿಯೆ, ಇವುಗಳ ಸಂಘರ್ಷದಲ್ಲಿ, ನೃತ್ಯರೂಪದಲ್ಲಿಯೇ ನಾಟಕದ ಛಾಯೆಯೂ ಕಾಣಿಸಿಕೊಂಡಿತು. ಕರ್ನಾಟಕದ ಅಥವಾ ಇನ್ನಿತರ ಕಡೆಯ ಜನಪದ ನೃತ್ಯಬಗೆಗಳನ್ನು ಗಮನವಿಟ್ಟು ಪರಿಶೀಲಿಸಿದಾಗ ಈ ಅಂಶ ವ್ಯಕ್ತವಾಗುತ್ತದೆ. ದಕ್ಷಿಣ ಕರ್ನಾಟಕದ ಸುತ್ತಮುತ್ತಲ ಪ್ರದೇಶದಲ್ಲಿ ರೂಢಿಯಲ್ಲಿರುವ ಗೊರವರ ಕುಣಿತ, ಕುರುಬರ ಕುಣಿತ, ಕೀಲು ಕುದುರೆ ಕುಣಿತ, ವೀರಭದ್ರನ ಕುಣಿತ, ಮಾರಿಕುಣಿತ, ಕರಡಿಮಜಲು ಕುಣಿತ, ಲಿಂಗದ ಬೀರನ ಕುಣಿತ, ಸೋಮನ ಕುಣಿತ, ರಂಗದ ಕುಣಿತ, ಕರಪಾಲ ಮೇಳ, ಕಂಸಾಳೆಯವರ ಕುಣಿತ, ಕೋಲೇ ಬಸವನ ಆಟ, ಕೋಲಾಟ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಾಗಿರುವ ಭೂತದ ಕುಣಿತ, ನಾಗನೃತ್ಯ ಅಥವಾ ನಾಗಮಂಡಲ ನೃತ್ಯ ; ಹಾಗೇ ಉತ್ತರ ಕರ್ನಾಟಕದ ಕಡೆಯಲ್ಲಿ ಪ್ರಸಿದ್ಧವಾಗಿರುವ ಎಲ್ಲಮ್ಮನ ಕುಣಿತ, ಪರವಂತರ ಕುಣಿತ, ಗೊಂದಲಿಗರ ಕುಣಿತ ಈ ಮೊದಲಾದವುಗಳಲ್ಲಿ ನಾಟಕದ ಬೀಜರೂಪವನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಅಲ್ಲಿಯ ಸಂಭಾಷಣೆಯ ರೀತಿ, ಕುಣಿತದ ಕ್ರಮ, ವೇಷಭೂಷಣಗಳ ಹಾಗೂ ವಾದ್ಯವಿಶೇಷಗಳ ಬಳಕೆ ಇವುಗಳಲ್ಲೆಲ್ಲ ಜನಪದ ನೃತ್ಯಗಳ ಪ್ರಭಾವವನ್ನು ಕಾಣುತ್ತೇವೆ.

ಮಹಾರಾಷ್ಟ್ರದ ತಮಾಷಾ

ಇದು ಕರ್ನಾಟಕದ ಅಥವಾ ಭಾರತದ ಜನಪದ ರಂಗಭೂಮಿಯನ್ನು ಕುರಿತು ವಿವೇಚಿಸುವಾಗ ಮಾತ್ರ ಗಣನೆಗೆ ಬರುವ ಮಾತಲ್ಲ. ಪ್ರಪಂಚದ ಬಹುತೇಕ ರಾಷ್ಟ್ರಗಳ ರಂಗಭೂಮಿ ಒಂದಲ್ಲ ಒಂದು ರೀತಿಯಲ್ಲಿ ಅಸ್ತಿತ್ವವನ್ನು ಪಡೆದುಕೊಂಡದ್ದು ಇದೇ ರೀತಿಯಲ್ಲಿಯೇ ಎನ್ನಬಹುದು. ಗ್ರೀಕ್ ರಂಗಭೂಮಿ ಉಗಮಗೊಂಡದ್ದು ಡಯೋನಿಸಿಸ್ ದೇವತೆಯ ಪೂಜೆಯ ನೆಪದಲ್ಲಿ. ವಸಂತಮಾಸದಲ್ಲಿ ದ್ರಾಕ್ಷಾಪ್ರಿಯನಾದ ಆ ದೇವತೆಗೆ ಸಲ್ಲಿಸುತ್ತಿದ್ದ ಪೂಜಾವಿಧಾನದಲ್ಲಿಯೇ ಈ ಅಂಶ ಅಂತರ್ಗತವಾಗಿತ್ತು. ಮೇಳದವರು ಹಾಡುತ್ತಿದ್ದ ಪುರಾತನ ಮಹಾಪುರುಷರ ಲಾವಣಿಗಳು, ಪ್ರತ್ಯೇಕ ಪಾತ್ರಗಳನ್ನು ಸೃಷ್ಟಿಸಿಕೊಳ್ಳಲು ನೆರವಾದುವು. ಹೀಗೆ ಪಾತ್ರಸೃಷ್ಟಿ ಹಾಗೂ ಗೀತಸಂಭಾಷಣೆಯಿಂದಾಗಿ ನಾಟಕರೂಪ ತಲೆದೋರಿತು. ಪ್ರಕೃತಿ ಆರಾಧನೆ, ದುಷ್ಟಶಕ್ತಿಗಳ ವಶೀಕರಣ ಮುಂತಾದ ಸಂದರ್ಭಗಳಲ್ಲಿ ಹುಟ್ಟಿಕೊಂಡ ಹಲವು ಬಗೆಯ ಧಾರ್ಮಿಕ ನೃತ್ಯಗಳು ಜನಪದ ರಂಗಭೂಮಿಯ ಉಗಮಕ್ಕೆ ಬಹಳಮಟ್ಟಿಗೆ ಪ್ರೇರಣೆ ನೀಡಿದುವೆನ್ನಬಹುದು. ಈ ಎಲ್ಲದರ ಪ್ರೇರಣೆಯಿಂದ ಹುಟ್ಟಿದ ಜನಪದ ರಂಗಭೂಮಿ ಕಾಲಾನುಕಾಲಕ್ಕೆ ಸ್ಪಷ್ಟವಾಗಿ ರೂಪುಗೊಂಡು ಸ್ವತಂತ್ರ ಕಲೆಯಾಗಿ ಬೆಳೆಯಿತು.

ಆದರೆ ಜನಪದ ರಂಗಭೂಮಿ ಎಂದು ತನ್ನ ಸ್ಪಷ್ಟರೂಪವನ್ನು ಪಡೆದುಕೊಂಡಿತು, ಅದರ ಮೂಲರೂಪ ಯಾವುದು, ರೂಪಾಂತರ ಹೊಂದಿದ ಕಲೆಯಾದರೆ, ಯಾವುದರಿಂದ ರೂಪಾಂತರ ಹೊಂದಿತು ಈ ಎಲ್ಲ ಪ್ರಶ್ನೆಗಳಿಗೂ ಖಚಿತವಾಗಿ ಉತ್ತರಿಸಲು ಸಾಕಷ್ಟು ಆಧಾರಗಳು ದೊರೆಯುವುದಿಲ್ಲವಾದರೂ ದೊರೆಯುವಷ್ಟೇ ಆಧಾರಗಳ ಬೆನ್ನುಹತ್ತಿ ಅದರ ಸೆಲೆಯನ್ನಷ್ಟೇ ಪತ್ತೆಹಚ್ಚಬಹುದಾಗಿದೆ.

ರಾಜಸ್ಥಾನದ ಖಯಾಲ್

ಜನಪದ ನೃತ್ಯಗಳ ಪ್ರಭಾವದಿಂದ ಅಸ್ತಿತ್ವ ಪಡೆದ ಜನಪದ ರಂಗಭೂಮಿ ಕ್ರಮೇಣ ಹಲವಾರು ಸ್ಥಿತ್ಯಂತರಗಳಿಗೆ ಒಳಗಾಗಿ ಒಂದು ಸ್ಪಷ್ಟ ರೂಪವನ್ನು ಪಡೆದುಕೊಂಡಿತಷ್ಟೆ. ಹಾಗೆ ಅದು ಹಾದು ಬಂದ ಹಲವು ಸ್ತರಗಳಲ್ಲಿ ಸೂತ್ರದ ಗೊಂಬೆ ಆಟವೂ ಒಂದು ಎಂಬುದು ವಿದ್ವಾಂಸರ ಅಭಿಪ್ರಾಯ. ಸೂತ್ರದ ಗೊಂಬೆ ಆಟ ಕೂಡ, ಜನಪದ ರಂಗಭೂಮಿಯ ಅತ್ಯಂತ ಆಕರ್ಷಕವಾದ ಮತ್ತು ಪ್ರಾಚೀನವಾದ ಒಂದು ರೂಪ. ಇಂಥ ಒಂದು ಹೇಳಿಕೆಗೆ ಜನಪದ ನಂಬಿಕೆಯೊಂದು ಪ್ರಬಲ ಕಾರಣವಾಗಿದೆ. ದೇವತೆಗಳ ಪಾತ್ರವನ್ನು ಮಾನವರು ವಹಿಸಬಾರದು ಎಂಬ ನಂಬಿಕೆ ಜನತೆಯಲ್ಲಿ ಬಹು ಪ್ರಬಲವಾಗಿ ಇತ್ತಾಗಿ ನಾಟಕದ ಬಳಕೆಗೆ ಬಂದಮೇಲೂ ಆ ಒಂದು ನಂಬಿಕೆಗೆ ಕಟ್ಟುಬಿದ್ದು ಗೊಂಬೆಗಳ

ಉತ್ತರ ಪ್ರದೇಶದ ನೌತಾನ್‌ಕೀ

ಮೂಲಕ ತಮ್ಮ ಆಶೆಯನ್ನು ಈಡೇರಿಸಿಕೊಂಡರು. ಧಾರ್ಮಿಕ ನೃತ್ಯಗಳಲ್ಲಿ ಭಾಗವಹಿಸುತ್ತಿದ್ದ ಮಾನವರಿಗೆ, ನಾಟಕದಲ್ಲಿ ತೊಡಗುವಾಗ ಈ ಪ್ರಶ್ನೆ ಉದ್ಭವಿಸಿದುದೇಕೆ ಎಂಬ ಪ್ರಶ್ನೆ ಸಹಜವಾದುದೇ ಆದರೂ ಅದಕ್ಕೆ ಉತ್ತರ ಸುಲಭವಾಗಿದೆ. ನೃತ್ಯದಲ್ಲಿ ತೊಡಗಿದಾಗ ಸಂಪೂರ್ಣವಾಗಿ ಅವರಿಗಿದ್ದುದು ಧಾರ್ಮಿಕ ಭಾವನೆ, ಭಕ್ತಿಯ ಆವೇಶ. ಮನೋರಂಜನೆಯ ದೃಷ್ಟಿ ಅಲ್ಲಿ ಸ್ವಲ್ಪವೂ ಇರಲಿಲ್ಲ. ಅದು ಏನಿದ್ದರೂ ಇತ್ತೀಚಿನದು. ಆದರೆ ನಾಟಕದ್ದು ಹಾಗಲ್ಲ. ಅಲ್ಲಿ ಇವೆಲ್ಲಕ್ಕಿಂತ ಮನೋರಂಜನೆಯ ದೃಷ್ಟಿಯೇ ಪ್ರಧಾನವೆನಿಸಿತು. ಹೀಗೆನಿಸಿದಾಗ, ಪ್ರಾರಂಭದಲ್ಲಿ ಮಾನವ ಅಂಥ ವೇಷವನ್ನು ಧರಿಸಿ ಕುಣಿಯಲು ಹಿಂಜರಿದಿರಬೇಕು. ಹೀಗಾಗಿ ಗೊಂಬೆಗಳ ಮೂಲಕ ತನ್ನ ಆಶೆಯನ್ನು ಈಡೇರಿಸಿ ಕೊಂಡಿರಲೂ ಸಾಧ್ಯ. ಅನಂತರ ಆ ನಂಬಿಕೆಯ ಪ್ರಾಬಲ್ಯ ಸಡಿಲಗೊಂಡಂತೆ, ಮಾನವನೇ ನೇರವಾಗಿ ದೇವದೇವತೆಗಳ ಪಾತ್ರವಹಿಸತೊಡಗಿದ. ಹೀಗಾಗಿ ಜನಪದಮಾನವರಂಗಭೂಮಿ ಅಸ್ತಿತ್ವಕ್ಕೆ ಬಂತು. ಅದರ ಜೊತೆಯಲ್ಲಿಯೇ ಸೂತ್ರದ ಗೊಂಬೆ ಆಟವೂ ಉಳಿದು ಬಂತು. ಜನಪದ ರಂಗಭೂಮಿಗೆ ಸಂಬಂಧಿಸಿದ ತೊಗಲುಗೊಂಬೆ ಆಟ ಕೂಡ ಪ್ರಾಚೀನವಾದದ್ದೇ.

ಆದ್ದರಿಂದ ಜನಪದ ರಂಗಭೂಮಿಯನ್ನು ಕುರಿತು ಪರಿಶೀಲಿಸುವಾಗ ಬಯಲಾಟ, ಸೂತ್ರದ ಗೊಂಬೆ ಆಟ ಹಾಗೂ ತೊಗಲು ಗೊಂಬೆ ಆಟ, ಈ ಮೂರನ್ನೂ ಕುರಿತು ಆಲೋಚಿಸಬೇಕಾಗುತ್ತದೆ. ಈ ಮೂಲದ ಮೊತ್ತವೇ ಜನಪದ ರಂಗಭೂಮಿ.

ಜನಪದ ರಂಗಭೂಮಿ ವೈವಿಧ್ಯಕ್ಕೆ ಹೆಸರಾದ್ದು. ಜನಪದ ಕಲೆಗಳಲ್ಲಿ ಒಂದೇ ಮೂಲದಿಂದ ಬಂದಿರಬಹುದಾದರೂ ಪ್ರೇರಣೆ ಪಡೆದಿರಬಹುದಾದರೂ ಪ್ರಾದೇಶಿಕವಾಗಿ ಜನ ಜನಕ್ಕೆ ನಡುವಿನ ಅಂತರ ಹೆಚ್ಚಾದಂತೆಲ್ಲ ಪರಿಸರಕ್ಕೆ ತಕ್ಕಂತೆ ವ್ಯತ್ಯಾಸಗೊಂಡು ಹೊಸ ಹೊಸ ರೂಪು ತಳೆದಿರುವುದನ್ನು ಗುರುತಿಸಲಾಗದಷ್ಟು ಹಿರಿದಾಯಿತು. ಆದರೆ, ಈ ವ್ಯತ್ಯಾಸವೇನಿದ್ದರೂ ಬಾಹ್ಯವೇ ಹೊರತು ಆಂತರಿಕವಲ್ಲ. ಯಾವುದೊ ಒಂದು ಕಲೆ ಯಾವುದೊ ಒಂದು ಪ್ರಾಂತದಲ್ಲಿ ತನ್ನ ಹುಟ್ಟನ್ನು ಪಡೆದುಕೊಂಡಿರಲಿ, ಅದು ಬೇರೊಂದು ಪ್ರಾಂತದಲ್ಲಿ ಅಡಿಯಿಟ್ಟು ಹರಡುವಾಗ ಅಲ್ಲಿಯ ಪರಿಸರದ ಪ್ರಭಾವಕ್ಕೆ ಒಳಗಾಗಿ ವ್ಯತ್ಯಾಸಗಳನ್ನು ಪಡೆದುಕೊಂಡಿರುತ್ತದೆ. ಜನಪದ ರಂಗಭೂಮಿಯ ಬಗ್ಗೆಯಾದರೂ ಇದೇ ಮಾತನ್ನು ಹೇಳಬೇಕಾಗುತ್ತದೆ.

ಪಶ್ಚಿಮ ಬಂಗಾಳದ ಯಾತ್ರಾ

ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಯಕ್ಷಗಾನ ಬಯಲಾಟ, ತಮಿಳುನಾಡಿನಲ್ಲಿ ತೆರಕ್ಕೂತ್ತು, ಆಂಧ್ರದ ವೀಧಿನಾಟಕ ಹಾಗೂ ಕೇರಳದ ಕಥಕಳಿ–ಇವೆಲ್ಲ ಜನಪದ ರಂಗಭೂಮಿಯ ವಿಶಿಷ್ಟರೂಪಗಳಾಗಿವೆ. ಸೂತ್ರದ ಗೊಂಬೆ ಆಟ ಮತ್ತು ತೊಗಲು ಗೊಂಬೆ ಆಟ ಕೂಡ ಅದರ ವಿಶೇಷ ಪ್ರಕಾರಗಳಾಗಿವೆ.

ಜನಪದ ರಂಗಭೂಮಿಯನ್ನು ಪ್ರಾದೇಶಿಕವಾಗಿ ಮೇಲಿನಂತೆ ವಿಭಜಿಸಬಹುದಾದರೂ ಅದರ ಅಂತಃಸತ್ವ ಮಾತ್ರ ಒಂದೇ ಮೂಲದಿಂದ ಪ್ರೇರಣೆಗೊಂಡು ಬಂದದ್ದು ಎಂಬುದು ಸೂಕ್ಷ್ಮದೃಷ್ಟಿಗೆ ವೇದ್ಯವಾಗುವ ಅಂಶವಾಗಿದೆ. ಕರ್ನಾಟಕ ಒಂದನ್ನೇ ತೆಗೆದುಕೊಂಡರೂ ಅದರಲ್ಲಿನ ಪ್ರಾದೇಶಿಕ ವೈವಿಧ್ಯ ಹೀಗಿದೆ :

1 ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ (ಮೂಡಲಪಾಯ)
2 ಪಶ್ಚಿಮ ಕರ್ನಾಟಕದ ಜನಪದ ರಂಗಭೂಮಿ (ಪಡುವಲಪಾಯ)
(ಅ) ತೆಂಕುತಿಟ್ಟು (ಆ) ಬಡಗುತಿಟ್ಟು
3 ಉತ್ತರಕರ್ನಾಟಕದ ಜನಪದ ರಂಗಭೂಮಿ
ಅ) ದೊಡ್ಡಾಟ
ಆ) ಸಣ್ಣಾಟ
ಇ) ಕೃಷ್ಣಪಾರಿಜಾತ

ಕರ್ನಾಟಕದಲ್ಲಿ ಯಕ್ಷಗಾನ–ಬಯಲಾಟ ಎಂಬ ಹೆಸರು ಪ್ರಚಲಿತವಾಗಿದ್ದರೂ ಇದನ್ನು ಆಟ, ಮೇಳ, ಅಟ್ಟದಾಟ, ಬೈಲ್ಕತೆ, ಬಯಲಾಟ, ಪ್ರಸಂಗ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಇದೊಂದು ಸಂಮಿಶ್ರಕಲೆ. ಕುಣಿತದ ವಿಶಿಷ್ಟ ಬಗೆಯಿಂದಾಗಿ ಗಂಡುಕಲೆ ಎಂದೂ ಪ್ರಖ್ಯಾತಿಗೊಂಡಿದೆ. ಇದರ ಒಂದು ಮುಖ್ಯ ಅಂಗ ಗೀತ ಎಂಬಂತೆ ಕಂಡುಬಂದರೂ ಉಳಿದವುಗಳೂ ಅದಕ್ಕೆ ಬೆಂಬಲವಾಗಿದ್ದು ಅಷ್ಟೇ ಮುಖ್ಯವೆನಿಸಿವೆ. ಸಂಗೀತ, ಸಾಹಿತ್ಯ, ನೃತ್ಯ, ನಾಟಕ ಇವುಗಳಿಂದ ಕೂಡಿ ಇದು ವಿಶಿಷ್ಟ ಶೋಭೆಯನ್ನು ಹೊಂದಿದೆ. ಬಯಲಾಟ ಇಡೀ ರಾತ್ರಿ ನಡೆಯುವ ಸಂಪ್ರದಾಯವುಳ್ಳ ಕಲೆಯಾದುದರಿಂದ ನೋಟಕರಿಗೆ ಬೇಸರ ಬಾರದಂತೆ ವಿವಿಧ ಬಗೆಯ ಕಲಾಪ್ರಕಾರಗಳನ್ನು ಅದರಲ್ಲಿ ಅಳವಡಿಸಲಾಗಿದೆ.

ಬಯಲಿನಲ್ಲಿ ಸಿದ್ಧಗೊಳಿಸುವ ರಂಗಸ್ಥಳವನ್ನು ಬಯಲು ರಂಗಸ್ಥಳ ಎಂದು ಕರೆದರು. ಬಯಲಾಟ ಎಂದು ಹೆಸರು ಬಂದದ್ದು ಈ ಕಾರಣದಿಂದಲೇ. ಬಯಲಾಟದ ರಂಗಸ್ಥಳ ಹೆಚ್ಚು ಆಡಂಬರವಿಲ್ಲದೆ ಅಲ್ಪವೆಚ್ಚದಲ್ಲಿ ರೂಪುಗೊಳ್ಳುವಂಥದು. ಪ್ರಮುಖವಾಗಿ ದೇವಸ್ಥಾನಗಳು, ಧರ್ಮಕ್ಷೇತ್ರಗಳು, ಜಾತ್ರೆಗಳು ಹಾಗೂ ಊರಿನ ಮುಖ್ಯ ಭಾಗಗಳು ಈ ರಂಗಸ್ಥಳವನ್ನು ನಿರ್ಮಿಸಲು ಯೋಗ್ಯವಾದ ಸ್ಥಳಗಳೆನಿಸಿದ್ದುವು. ಈಗ ಹೀಗೇ ಇರಬೇಕೆಂಬ ನಿಯಮವೇನೂ ಅಷ್ಟಾಗಿ ಇಲ್ಲ. ನಾಲ್ಕು ಕಂಬಗಳ ಮಧ್ಯೆ ಕಾದಿರಿಸಿದ ಜಾಗವೇ ಬಯಲು

ರಂಗಸ್ಥಳ. ಅದಕ್ಕೆ ಯಾವ ಮುಚ್ಚುಮರೆಯೂ ಇರುವುದಿಲ್ಲ. ಪಾತ್ರಗಳು ರಂಗಪ್ರವೇಶಿಸುವ ಸಂದರ್ಭದಲ್ಲಿ ಮಾತ್ರ ತೆರೆಯನ್ನು ಹಿಡಿದುಕೊಳ್ಳುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿಯೂ ಪ್ರಾದೇಶಿಕ ವ್ಯತ್ಯಾಸಗಳಿರುವುದು ಗಮನಾರ್ಹ. ರಂಗಸ್ಥಳದ ಸಂಪ್ರದಾಯಗಳು ಎಲ್ಲೆಡೆಯೂ ಒಂದೇ ಆಗಿದೆ. ಪ್ರಾರಂಭದಲ್ಲಿ ಗಣೇಶನ ಪೂಜೆಯಾಗುತ್ತದೆ. ಅನಂತರ ಶಾರದಾದೇವಿ ರಂಗಪ್ರವೇಶ ಮಾಡುತ್ತಾಳೆ. ಇದಾದ ಮೇಲೆ ಬಾಲಗೋಪಾಲರು ಬರುತ್ತಾರೆ. ಮುಂದೆ ನಡೆಯುವ ಆಟಕ್ಕೆ ಯಾವ ವಿಘ್ನವೂ ಬಾರದಂತೆ, ನಿರ್ವಿಘ್ನವಾಗಿ ನಡೆಯುವಂತೆ ಹರಸಲು ಭಾಗವತರು ಕೇಳಿಕೊಳ್ಳುತ್ತಾರೆ. ಇದು ಕರ್ನಾಟಕದ ಬಹುಭಾಗದಲ್ಲಿ ರೂಢಿಯಲ್ಲಿರುವಂಥದು. ಆದರೆ, ಪಡುವಲಪಾಯ ಯಕ್ಷಗಾನ ಬಯಲಾಟದಲ್ಲಿ ಮಾತ್ರ ಈ ಮೂವರು ದೇವತೆಗಳು ಬಂದು ಹೋದ ಮೇಲೆ ಎರಡು ಹೆಣ್ಣು ಪಾತ್ರಗಳು ಬಂದು ನರ್ತಿಸುತ್ತವೆ. ಇದು ಇನ್ನುಳಿದ ಕಡೆಗಳಲ್ಲಿ ಇಲ್ಲ. ಈ ಎಲ್ಲ ಸಂಪ್ರದಾಯಗಳೂ ಮುಗಿದ ಮೇಲೆ, ಭಾಗವತರು ಸಭಾವಂದನೆ ಮಾಡುತ್ತಾರೆ. ಇವೆಲ್ಲವೂ ನಾಂದಿ ಭಾಗಕ್ಕೆ ಸೇರಿದ್ದು.

ಸುಧನಾರ್ಜುನದ ಒಂದು ಪ್ರಸಂಗ

ಪಾತ್ರಗಳು ರಂಗಪ್ರವೇಶಿಸುವ ಕ್ರಮದಲ್ಲಿಯೂ ಒಂದು ವರ್ಗದ ಪಾತ್ರಗಳಿಗೂ ಮತ್ತೊಂದು ವರ್ಗದ ಪಾತ್ರಗಳಿಗೂ ಅಂತರವಿದೆ. ಈ ದೃಷ್ಟಿಯಿಂದ ಘೋರ ಪಾತ್ರಗಳ ಪ್ರವೇಶಕ್ರಮ ಅದ್ಭುತವಾದುದಾಗಿದೆ. ಇಂಥ ಪಾತ್ರಗಳ ಪ್ರವೇಶ ಮುಂಚಿತವಾಗಿಯೇ ಪ್ರೇಕ್ಷಕರಲ್ಲಿ ವಿಶೇಷ ಬಗೆಯ ಆಸಕ್ತಿಯನ್ನು ಕೆರಳಿಸುತ್ತದೆ. ಸಾಮಾನ್ಯವಾಗಿ ಈ ಬಗೆಯ ಪಾತ್ರಗಳು ರಂಗದ ಮುಂಭಾಗದಿಂದ ರಂಗಪ್ರವೇಶ ಮಾಡುತ್ತವೆ. ಇದಕ್ಕೆ ವಿಶೇಷವಾಗಿ ತಮಟೆಯವರಿರುತ್ತಾರೆ. ಜೊತೆಗೆ ಪಂಜನ್ನು ಹಿಡಿದವರೂ ಇರುತ್ತಾರೆ.

ಯಕ್ಷಗಾನ ಬಯಲಾಟಕ್ಕೆ ಬಳಸಲಾಗುವ ಕಥಾವಸ್ತು-ರಾಮಾಯಣ, ಮಹಾಭಾರತ, ಭಾಗವತ ಹಾಗೂ ಪುರಾಣಗಳಿಂದ ಆಯ್ದವುಗಳಾಗಿವೆ. ಕೆಲವು ಜನಪದ ಕಥೆಗಳೂ ಐತಿಹಾಸಿಕ ಕಥಾಭಾಗಗಳೂ ಸೇರಿರುವುದುಂಟು. ಆದರೆ ಹೆಚ್ಚಿಲ್ಲ. ಪ್ರಸಂಗ ಸಾಹಿತ್ಯದ ಆಯ್ಕೆಯ ಮೂಲ ಒಂದೇ ಆಗಿದ್ದರೂ ರಚನಾವಿಧಾನದಲ್ಲಿ ಮೂಡಲಪಾಯ ಹಾಗೂ ಪಡುವಲಪಾಯಗಳಿಗೆ ವ್ಯತ್ಯಾಸವಿದೆ. ಮೂಡಲಪಾಯದ ಪ್ರಸಂಗ ಸಾಹಿತ್ಯವೆಲ್ಲ ಸಂಪೂರ್ಣವಾಗಿ ಪದ್ಯ-ಗದ್ಯಗಳೆರಡೂ ಕವಿನಿರ್ಮಿತವಾದರೆ, ಪಡುವಲಪಾಯದಲ್ಲಿ ಪದ್ಯ ಮಾತ್ರ ಕವಿನಿರ್ಮಿತವಾಗಿದ್ದು, ಗದ್ಯ ಆ ಪದ್ಯವನ್ನನುಸರಿಸಿ ರಂಗದ ಮೇಲೆಯೇ ಪಾತ್ರಧಾರಿಯಿಂದ ರೂಪುಗೊಳ್ಳುತ್ತದೆ.

ಬಯಲಾಟದಲ್ಲಿ ಬಳಸುವ ವಾದ್ಯವಿಶೇಷಗಳ ಸಂಖ್ಯೆ ಅಷ್ಟೇನೂ ಹೆಚ್ಚಲ್ಲದಿದ್ದರೂ ಅವು ಪರಿಣಾಮಕಾರಿಯಾದುವು. ಈ ವಾದ್ಯವಿಶೇಷಗಳ ಬಳಕೆಯಲ್ಲಿ ಪ್ರಾಂತೀಯವಾಗಿ ಭಿನ್ನತೆ ಕಂಡುಬರುತ್ತದೆ. ಮೂಡಲಪಾಯದಲ್ಲಿ ಮೃದಂಗ, ತಾಳ, ಮುಖವೀಣೆ ಮತ್ತು ಶ್ರುತಿಗಾಗಿ ಮೊದಲು ಬಳಸುತ್ತಿದ್ದ ಪುಂಗಿಗೆ ಬದಲಾಗಿ ಈಗ ಬಳಸಲಾಗುತ್ತಿರುವ ಹಾರ್ಮೋನಿಯಂ. ಆದರೆ ಪಡುವಲಪಾಯದ ಬಡಗುತಿಟ್ಟಿನವರು ತಾಳ, ಮೃದಂಗ, ಹಾರ್ಮೋನಿಯಂ ಜೊತೆಗೆ ಚಂಡೆಯನ್ನು ವಿಶೇಷವಾಗಿ ಬಳಸುತ್ತಾರೆ. ತೆಂಕುತಿಟ್ಟಿನವರು ತಾಳಕ್ಕೆ ಬದಲಾಗಿ ಜಾಗಟೆಯನ್ನು ಬಳಸುತ್ತಾರೆ. ಇನ್ನುಳಿದುವುಗಳೆಲ್ಲ ಒಂದೇ. ಇವುಗಳ ಬಳಕೆಯ ಬಗ್ಗೆ ವಿದ್ವಾಂಸರುಗಳಲ್ಲಿ ಭಿನ್ನಾಭಿಪ್ರಾಯಗಳಿದ್ದು ಪರಿಹಾರವನ್ನಂತೂ ಕಂಡುಕೊಳ್ಳಲು ಇದುವರೆವಿಗೂ ಸಾಧ್ಯವಾಗಿಲ್ಲ. ಬಡಗುತಿಟ್ಟಿನವರು ಇವುಗಳ ಜೊತೆಗೆ ಆಧುನಿಕ ವಾದ್ಯವಿಶೇಷಗಳನ್ನು ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು, ಬಯಲಾಟ ಜನಪದ ಕಲೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ ಯಾವ ರೀತಿಯಲ್ಲಿ ಸಮಂಜಸವೆನಿಸುವುದೋ ತಿಳಿಯದು. ಉತ್ತರ ಕರ್ನಾಟಕದ ದೊಡ್ಡಾಟಕ್ಕೂ ದಕ್ಷಿಣ ಕರ್ನಾಟಕದ ಬಯಲಾಟಕ್ಕೂ ಅಂಥ ಗಮನಾರ್ಹವಾದ ವ್ಯತ್ಯಾಸಗಳೇನೂ ಕಾಣಬರುವುದಿಲ್ಲ.

ಯಕ್ಷಗಾನ ಕಲೆಗೆ ಹೆಚ್ಚಿನ ಮೆರಗನ್ನೂ ಬೆಡಗನ್ನೂ ತುಂಬುವ ಸೌಂದರ್ಯವರ್ಧಕ ಸಾಧನವೆಂದರೆ ವೇಷಭೂಷಣಗಳು. ಕನ್ನಡದ ಜನಪದದ ಅಪ್ರತಿಮ ಕಲ್ಪನಾಶಕ್ತಿ, ಕಲಾಶಕ್ತಿ, ಪ್ರತಿಭಾಶಕ್ತಿ ಈ ಮೂರೂ ಅಸಾಧಾರಣ ರೀತಿಯಲ್ಲಿ ಅಲ್ಲಿ ಸಮಾವೇಶಗೊಂಡಿವೆ.

ರಾವಣ ಪಾತ್ರಧಾರಿ

ದೇವದಾನವರನ್ನಾಗಲೀ ಗಂಧರ್ವ ಕಿನ್ನರರನ್ನಾಗಲೀ ಯಾರೂ ಕಂಡಿಲ್ಲವಾದರೂ ಅವರ ಶಕ್ತಿಸಾಮರ್ಥ್ಯಗಳನ್ನು, ಆಕಾರವಿಕಾರಗಳನ್ನು ಪ್ರತಿಬಿಂಬಿಸುವಂಥ ಆಭರಣಗಳನ್ನು, ವೇಷಭೂಷಣಗಳನ್ನು ನಮ್ಮವರು ಕೇವಲ ಕಲ್ಪನಾಶಕ್ತಿಯಿಂದ ಅದ್ಭುತ ರೀತಿಯಲ್ಲಿ ಸೃಷ್ಟಿಸಿದ್ದಾರೆ. ವಾಸ್ತವಿಕ ಜಗತ್ತಿನಿಂದ ದೂರವಾದ ಇಂಥ ವ್ಯಕ್ತಿಗಳನ್ನು ಚಿತ್ರಿಸುವಲ್ಲಿ, ಅವರ ಉಡಿಗೆತೊಡಿಗೆ ಅಂದಚಂದಗಳನ್ನು ಸೆರೆಹಿಡಿಯುವಲ್ಲಿ ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಇಂಥ ವೇಷಭೂಷಣಗಳನ್ನು ನಿರ್ಮಿಸುವಲ್ಲಿ ಆಯಾ ಪ್ರಾಂತಗಳಲ್ಲಿ ಪ್ರಚಲಿತವಾಗಿದ್ದ ಜನಪದ ನೃತ್ಯಗಳ ಪ್ರಭಾವವೂ ಅವುಗಳ ಮೇಲೆ ಸಾಕಷ್ಟು ಆಗಿದೆ ಎಂಬುದು ಸ್ಪಷ್ಟ. ಒಂದೊಂದು ಪಾತ್ರದ ವೇಷಭೂಷಣವನ್ನು ನಿರ್ಮಿಸುವಲ್ಲಿಯೂ ಅವರು ತೋರಿರುವ ಜಾಣ್ಮೆ ಹಿರಿದಾದದ್ದು. ಅವರ ಕುಶಲ ಕಲೆಗಾರಿಕೆಯನ್ನು ಅಲ್ಲಿ ಗುರುತಿಸಬಹುದಾಗಿದೆ. ಒಂದು ಪಾತ್ರವನ್ನು ನೋಡುತ್ತಿದ್ದಂತೆಯೇ ಇಂಥದೇ ಪಾತ್ರ ಎಂದು ಗುರುತಿಸಬಹುದಾದಷ್ಟು ನಿರ್ದಿಷ್ಟವಾಗಿ ಅದನ್ನು ರೂಪಿಸಿದ್ದಾರೆ. ಪಾತ್ರಗಳ ಘನತೆ ಗೌರವಗಳಿಗೆ, ಸ್ಥಾನಮಾನಗಳಿಗೆ ಸರಿಬೀಳುವಂತೆ ಅವುಗಳನ್ನು ಸೃಷ್ಟಿಸಲಾಗಿದೆ.

ಪ್ರಾದೇಶಿಕವಾಗಿ ಮೂಡಲಪಾಯ ಹಾಗೂ ಪಡುವಲಪಾಯ ಸಂಪ್ರದಾಯಗಳ ವೇಷಭೂಷಣಗಳ ಕೆಲವು ಪ್ರಮುಖ ಭೇದಗಳಿರುವುದು ಕಾಣಬರುತ್ತದೆ : 1 ಪಗಡಿಸುತ್ತುವ ಕ್ರಮ ಮೂಡಲಪಾಯದಲ್ಲಿಲ್ಲ. 2 ರಾಕ್ಷಸ ಕಿರೀಟದಲ್ಲಿಯೂ ಸಂಪೂರ್ಣ ವ್ಯತ್ಯಾಸವಿದೆ. ಪಡುವಲಪಾಯದ ಬಡಗುತಿಟ್ಟಿನ ರಾಕ್ಷಸವೇಷದ ಕಿರೀಟಕ್ಕೂ ಕಥಕಳಿಯ ರಾಕ್ಷಸವೇಷದ ಕಿರೀಟಕ್ಕೂ ಹೆಚ್ಚು ಸಾಮ್ಯ ಕಂಡುಬರುತ್ತದೆ. 3 ವಕ್ಷಕ್ಕೆ ಹಾಕಿಕೊಳ್ಳುವ ಆಭರಣ ಹಾಗೂ ಭುಜಕೀರ್ತಿಗಳಲ್ಲಿಯೂ ವ್ಯತ್ಯಾಸಗಳಿವೆ. 4 ರಾಕ್ಷಸವೇಷದ ಮುಖವರ್ಣಿಕೆಯ ಕ್ರಮದಲ್ಲಿ ಸಾಕಷ್ಟು ಭಿನ್ನತೆಯಿದೆ. ಇಷ್ಟಾದರೂ ಕರ್ನಾಟಕದ ಯಕ್ಷಗಾನ ಬಯಲಾಟದ ವೇಷಭೂಷಣಗಳ ರಮ್ಯತೆ ವೈವಿಧ್ಯಮಯವಾದದ್ದು. ಸ್ತ್ರೀಪಾತ್ರಗಳ ವೇಷಭೂಷಣಗಳ ನಿರ್ಮಾಣದಲ್ಲಿ ಅವರು ತೋರಿರುವ ಕೌಶಲ ಅಷ್ಟೇನೂ ಹೆಚ್ಚಿನದೆಂಬಂತೆ ತೋರದಿದ್ದರೂ ಹೆಚ್ಚು ಸಹಜವಾಗಿದೆ.

ಆಭರಣವಿಶೇಷಗಳಿಗೆ ಅವರು ಬಳಸಿರುವ ವಸ್ತು ಸಾಮಾನ್ಯವಾದದ್ದು. ಆದರೆ ಅದನ್ನು ಅಂದಗೊಳಿಸುವಲ್ಲಿ ಅವರು ತೋರಿರುವ ಜಾಣ್ಮೆ ಅನುಪಮವಾದದ್ದು, ಪ್ರತಿಭಾಪೂರ್ಣವಾದ್ದು. ತೀರ ಸಾಮಾನ್ಯವಾದ ವಸ್ತುವನ್ನೇ ಬಳಸಿ, ಅದರಲ್ಲಿ ಅಸಾಧಾರಣವಾದ ಕೌಶಲವನ್ನು ತೋರಿದ್ದಾರೆ. ಇಂಥ ಸತ್ತ್ವಪೂರ್ಣವಾದ, ಶಕ್ತಿಪೂರ್ಣವಾದ ಹಾಗೂ ಅರ್ಥಪೂರ್ಣವಾದ ಆಭರಣವಿಶೇಷಗಳನ್ನು ಸಾಕಷ್ಟು ಪ್ರಬಲ ಕಾರಣಗಳಿಲ್ಲದೆ ಬದಲಾಯಿಸುವುದು ಸರಿಯಾಗಲಾರದು.

ಉತ್ತರ ಕರ್ನಾಟಕದಲ್ಲಿ ದೊಡ್ಡಾಟ ಎಂಬ ಹೆಸರಿನಲ್ಲಿ ಇದು ಪ್ರಚಲಿತವಾಗಿದೆ. ವಾಸ್ತವವಾಗಿ, ದಕ್ಷಿಣ ಕರ್ನಾಟಕದ ಮೂಡಲಪಾಯಕ್ಕೂ ಇದಕ್ಕೂ ಹೆಚ್ಚಿನ ಅಂತರವೇನೂ ಇಲ್ಲ. ಇವೆರಡೂ ಒಂದೇ ಎನ್ನುವಷ್ಟು ಹತ್ತಿರವಾಗಿದೆ. ಆದರೆ, ಒಂದು ಗಮನಿಸಬಹುದಾದ ಅಂಶವೆಂದರೆ, ದೊಡ್ಡಾಟ ಅದರ ಹೆಸರೇ ಸೂಚಿಸುವಂತೆ ಆಕಾರದಲ್ಲಿ ದೊಡ್ಡದು. ಇದೊಂದನ್ನು ಬಿಟ್ಟರೆ ಉಳಿದೆಲ್ಲ ರೀತಿಯಲ್ಲೂ ಅವೆರಡೂ ಒಂದೇ.

ಜನಪದ ರಂಗಭೂಮಿಗೆ ಸಂಬಂಧಿಸಿದಂತೆ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಮತ್ತೊಂದು ನಾಟಕ ಪ್ರಕಾರ ಸಣ್ಣಾಟ. ಹೆಸರಿಗೆ ಅನ್ವರ್ಥವಾಗಿ ಇದು ಎಲ್ಲ ರೀತಿಯಿಂದಲೂ ದೊಡ್ಡಾಟಕ್ಕಿಂತ ಚಿಕ್ಕದು. ಅದರ ಗಂಭೀರತೆಯಾಗಲಿ, ಮಹತ್ತ್ವವಾಗಲಿ ಇದರಲ್ಲಿ ಕಂಡುಬರುವುದಿಲ್ಲ. ಜನಪದ ರಂಗಭೂಮಿಯಿಂದ ಪ್ರೇರಿತವಾಗಿರುವಂತೆಯೇ ಕಂಪನಿ ನಾಟಕಗಳ ಪ್ರಭಾವಕ್ಕೂ ಒಳಗಾಗಿ ಇದು ಈಗ ಬೇರೊಂದು ರೂಪವನ್ನು ಪಡೆದುಕೊಂಡಿದೆ. ಇದರಲ್ಲಿ ಶೈವ ಸಣ್ಣಾಟಗಳು, ವೈಷ್ಣವ ಸಣ್ಣಾಟಗಳು ಎಂದು ಎರಡು ವಿಧಗಳಿವೆ.

ಶ್ರೀಕೃಷ್ಣಪಾರಿಜಾತ ಉತ್ತರ ಕರ್ನಾಟಕದ ಜನಪ್ರಿಯ ನಾಟಕ ಪ್ರಕಾರ. ಇದು ಜನಪದ ರಂಗಭೂಮಿಯ ಇನ್ನಿತರ ಪ್ರಕಾರಗಳ ಪ್ರಭಾವಕ್ಕೆ ಒಳಗಾಗಿ ಸಾಕಷ್ಟು ಮಾರ್ಪಾಟು ಹೊಂದಿದೆ. ಇದಕ್ಕೆ ಹೆಚ್ಚಿನ ಇತಿಹಾಸ ಇಲ್ಲವಾದರೂ ಇಂದು ಉತ್ತರ ಕರ್ನಾಟಕದಲ್ಲಿ ಇದನ್ನು ಆಡದ ಹಳ್ಳಿಗಳಿಲ್ಲ. ಇದನ್ನು ಸಾಕಷ್ಟು ಜನಪ್ರಿಯಗೊಳಿಸಿದವರು ಗೋಕಾಕ ತಾಲ್ಲೂಕಿನ ಕುಲಗೋಡ ತಿಮ್ಮಣ್ಣ. ಈ ಒಂದು ಪ್ರಕಾರದ ಸೃಷ್ಟಿಯಲ್ಲಿ ಯಕ್ಷಗಾನದ ಹಾಗೂ ಆಂಧ್ರದ ಕೂಚಿಪುಡಿಯ ಪ್ರಭಾವ ಹೆಚ್ಚಾಗಿದೆ.

ಮತ್ತೊಂದು ಬಗೆಯಾದ ಸಾಮಗಾನ ಸಂಪೂರ್ಣ ಜನಪದ ನಾಟಕ ಪ್ರಕಾರವಲ್ಲವಾದರೂ ಜನಪದ ರಂಗಭೂಮಿಯಿಂದಲೇ ಪ್ರೇರಿತವಾಗಿ ಅನಂತರ ಕಂಪನಿ ನಾಟಕಗಳ ಪ್ರಭಾವಕ್ಕೆ ಒಳಗಾಗಿ ಬೆಳೆದ ಒಂದು ರೂಪ. ಜನಪದ ನಾಟಕಗಳಿಗೂ ಇದಕ್ಕೂ ಎದ್ದುಕಾಣುವ ವ್ಯತ್ಯಾಸಗಳಿವೆ. ಜನಪದ ಮಾನವ ರಂಗಭೂಮಿಗೆ ಸಂಬಂಧಿಸಿದಂತೆ ಇಷ್ಟೆಲ್ಲ ಪ್ರಕಾರಗಳು ಕಂಡುಬರುತ್ತವೆ.

ಜನಪದ ರಂಗಭೂಮಿಗೇ ಸಂಬಂಧಿಸಿದ ಇನ್ನೆರಡು ಪ್ರಮುಖ ಪ್ರಕಾರಗಳೆಂದರೆ ಸೂತ್ರದ ಗೊಂಬೆಯಾಟ ಮತ್ತು ತೊಗಲುಗೊಂಬೆಯಾಟ. ಇವೆರಡೂ ಜನಪದ ರಂಗಭೂಮಿಗೆ ಇತ್ತಿರುವ ಕಾಣಿಕೆ ಅಪೂರ್ವವಾದುದು.

ಗೊಂಬೆಯಾಟ ಪ್ರಪಂಚದಾದ್ಯಂತವೂ ಕಂಡುಬರುವ ಒಂದು ಕಲೆ; ಅತ್ಯಂತ ಪ್ರಾಚೀನವಾದುದೂ ಕೂಡ. ಅದರ ಪ್ರಾಚೀನತೆ ಇಷ್ಟೆಂಬುದನ್ನು ಹೇಳಲಾರದಷ್ಟು ಅದು ಹಿಂದಕ್ಕೆ ಸರಿಯುತ್ತದೆ. ಪ್ರಾಚೀನ ಕಾವ್ಯಗಳಲ್ಲಿ ಇದರ ಪ್ರಸ್ತಾಪ ಮೇಲಿಂದ ಮೇಲೆ ಬರುತ್ತದೆ. ಮಾನವರಂಗಭೂಮಿಗೆ ಸೂತ್ರದ ಗೊಂಬೆ ಆಟವೇ ಮೂಲ ಎಂಬುದನ್ನು ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಚೀನೀಯರು ಎರಡು ಸಾವಿರ ವರ್ಷಗಳ ಹಿಂದೆಯೇ ಈ ಕಲೆಯನ್ನು ಜನಪ್ರಿಯಗೊಳಿಸಿದುದಾಗಿ ತಿಳಿಯುತ್ತದೆ. ಜೂಲಿಯಸ್ ಸೀಜ಼ರನ ಕಾಲಕ್ಕೆ ಇದು ಬಹಳ ಹಳೆಯದೇ ಆಗಿತ್ತೆಂಬುದೂ ಗಮನಾರ್ಹ. ಜಾವ, ಜಪಾನುಗಳಲ್ಲಿಯೂ ಹಿಂದಿನಿಂದಲೂ ಇವು ಜನಪ್ರಿಯವಾಗಿವೆ. ಇಂಗ್ಲೆಂಡಿನಲ್ಲಿ ಇದರ ಅಪಭ್ರಂಶವೇ ಪಂಚ್ ಅಂಡ್ ಜೂಡಿ ಷೋ ಎಂಬುದಾಗಿ ಪ್ರಚಲಿತವಾಗಿತ್ತು. ಜಪಾನಿನ ರಂಗಭೂಮಿ ಉಚ್ಛ್ರಾಯ ಸ್ಥಿತಿಗೆ ಏರಿದ್ದು ಗೊಂಬೆಯಾಟದಿಂದ ಎಂಬುದನ್ನು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಇಟಲಿಯಿಂದ ಬಂದ ವಲಸೆಗಾರರಲ್ಲನೇಕರು ಅಮೆರಿಕ ಮತ್ತು ಲ್ಯಾಟಿನ್ ರಾಜ್ಯಗಳಲ್ಲಿ ಮುಖ್ಯವಾಗಿ ಸೂತ್ರದ ಗೊಂಬೆಯಾಟವನ್ನು ಆಡಿಸುತ್ತಾರೆ. ಜರ್ಮನಿ, ಫ್ರಾನ್ಸ್, ಇಟಲಿಗಳಲ್ಲಿಯೂ ಈ ಆಟ ಹೆಚ್ಚು ಜನಪ್ರಿಯವಾದ ಕಲೆಯಾಗಿದೆ. ಭಾರತೀಯ ರಂಗಭೂಮಿಯಾದರೂ ಇದರಿಂದ ಹೊರತಾದುದೇನೂ ಅಲ್ಲ. ಜನಪದ ಮಾನವ ರಂಗಭೂಮಿಗಿಂತಲೂ ಸೂತ್ರದ ಗೊಂಬೆಯಾಟವೇ ಪ್ರಾಚೀನವಾದ್ದು. ನಾಟಕದ ಸೂತ್ರಧಾರ ಎಂಬ ಮಾತು ಹಗ್ಗ ಹಿಡಿದು ಗೊಂಬೆ ಆಡಿಸುವುದರಿಂದ ಬಂದುದು ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ದಶಾವತಾರ ರೂಪಕ, ಗೋವ

ಸೂತ್ರದ ಗೊಂಬೆ ಆಟವನ್ನು ಆಡಿಸುವ ಕೆಲವು ಮನೆತನಗಳೇ ಇವೆ. ತೊಗಲು ಗೊಂಬೆ ಆಟದಂತೆ, ಒಂದು ನಿರ್ದಿಷ್ಟ ವರ್ಗದವರೇ ಆಡಿಸಬೇಕೆಂಬ ನಿಯಮವೇನೂ ಇದಕ್ಕಿಲ್ಲ. ಆದರೂ ರೂಢಿಯಿಂದ ಆಡಿಸಿಕೊಂಡು ಬಂದ ಕೆಲವು ಮನೆತನಗಳು ಇಂದಿಗೂ ಉಳಿದು ಬಂದಿವೆ.

ಗೊಂಬೆ ಆಟದಲ್ಲಿ ಮಾನವರಿಗೆ ಬದಲಾಗಿ ಗೊಂಬೆಗಳು ಭಾಗವಹಿಸುತ್ತವೆ ಎಂಬುದನ್ನು ಬಿಟ್ಟರೆ, ಬಯಲಾಟಕ್ಕೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಬಳಸುವ ಕಥಾವಸ್ತು, ವಾದ್ಯವಿಶೇಷ. ಸಂಭಾಷಣಾ ರೀತಿ, ರಂಗಸಂಪ್ರದಾಯಗಳು ಇವೆಲ್ಲ ಒಂದೇ ಆಗಿವೆ. ರಂಗಸಜ್ಜಿಕೆಯಲ್ಲಿ ಮಾತ್ರ ಆಟಕ್ಕೆ ಸರಿಹೊಂದುವಂತೆ ತನ್ನದೇ ಆದ ರೀತಿನೀತಿಗಳಿವೆ. ಕರ್ನಾಟಕದ ಸೂತ್ರದ ಗೊಂಬೆಯಾಟವನ್ನು ಗಮನಿಸಿದಾಗ, ಬಯಲಾಟದಂತೆಯೇ ಅದರಲ್ಲಿಯೂ ಪ್ರಾದೇಶಿಕ ಭಿನ್ನತೆಗಳು ಕಂಡುಬರುತ್ತವೆ. ಗೊಂಬೆಗಳು ಸಾಮಾನ್ಯವಾಗಿ 0.75 ರಿಂದ. 1 ಮೀ. ಎತ್ತರವಿರುತ್ತವೆ. ಸಂಪೂರ್ಣವಾಗಿ ಅವನ್ನು ಮರದಿಂದ ಮಾಡಿರುತ್ತಾರೆ. ಆಭರಣವಿಶೇಷಗಳಲ್ಲಿಯೂ ಬಹುಪಾಲು ಮರದಿಂದ ಆದವು. ಇದಕ್ಕೆ ಹಗುರವಾದ ಮರವನ್ನು ಬಳಸಲಾಗುತ್ತದೆ. ಕಪ್ಪನೆಯ ದಾರವನ್ನು ಸೂತ್ರವಾಗಿ ಬಳಸುತ್ತಾರೆ. ರಂಗದ ಎರಡು ಕಡೆಗಳಲ್ಲಿಯೂ ದೀವಣಿಗೆಗಳನ್ನು ಬಿಟ್ಟಿರುತ್ತಾರೆ. ಸೂತ್ರದ ಗೊಂಬೆಯಾಟದ ಯಶಸ್ಸು ಸಂಪೂರ್ಣವಾಗಿ, ಅದನ್ನು ಹಿಡಿದು ಆಡಿಸುವ ಸೂತ್ರಧಾರನ ಪ್ರತಿಭೆಯನ್ನು ಅವಲಂಬಿಸಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಅವನು ಚುರುಕಾಗಿದ್ದಷ್ಟೂ ಅದರ ಸೊಗಸು ಹೆಚ್ಚುತ್ತದೆ.

ಸೂತ್ರದ ಗೊಂಬೆ ಆಟದಂತೆಯೇ ತೊಗಲುಗೊಂಬೆ ಆಟ ಕೂಡ ಪ್ರಸಿದ್ಧವಾದದ್ದು. ಇಲ್ಲಿನ ಗೊಂಬೆಗಳು ಹೆಸರೇ ಸೂಚಿಸುವಂತೆ ತೊಗಲಿನಿಂದ ಆದವು. ತೊಗಲುಗೊಂಬೆ ಆಟವನ್ನು ಒಂದು ಗೊತ್ತಾದ ವರ್ಗ ಮಾತ್ರ ಆಡಿಸುತ್ತದೆ. ಇವರನ್ನು ಕಿಳ್ಳೇಕೇತರು ಎನ್ನುತ್ತಾರೆ. ಗೊಂಬೆರಾಮರು ಎನ್ನುವುದೂ ಉಂಟು. ಗೊಂಬೆ ಆಡಿಸುವುದೇ ಇವರ ಪ್ರಮುಖ ವೃತ್ತಿ. ಸಾಮಾನ್ಯವಾಗಿ ಒಂದೊಂದು ಸಂಸಾರದವರೂ ಒಂದೊಂದು ಗುಂಪಾಗಿ ಸಂಚರಿಸುತ್ತಿರುತ್ತಾರೆ. ಒಂದು ಕಡೆ ಇವರು ನೆಲಸುವುದಿಲ್ಲ. ಒಂದು ಊರಿನಲ್ಲಿ ತಂಗಿ, ಒಂದೆರಡು ಆಟಗಳನ್ನು ಆಡಿ ಮುಂದಿನ ಊರಿಗೆ ಹೋಗುತ್ತಾರೆ. ಆಟಕ್ಕೆ ಬೇಕಾದ ಎಲ್ಲ ಸಲಕರಣೆಗಳನ್ನೂ ಇವರೇ ಹೊಂದಿಸಿಕೊಳ್ಳುತ್ತಾರೆ. ಯಾವುದಕ್ಕೂ ಯಾರನ್ನೂ ಅವಲಂಬಿಸುವುದಿಲ್ಲ. ಬೇಟೆಯಾಡಿ ಪ್ರಾಣಿಗಳ ತೊಗಲನ್ನು ಸಂಗ್ರಹಿಸುವುದರಿಂದ ಹಿಡಿದು, ಅದನ್ನು ಹದಗೊಳಿಸಿ, ಅದಕ್ಕೆ ಆಕಾರ ಕೊಟ್ಟು ಬಣ್ಣ ಬಳಿದು ಆಟಕ್ಕೆ ಸಿದ್ಧಗೊಳಿಸುವವರೆಗಿನ ಎಲ್ಲ ಕಾರ್ಯವನ್ನೂ ಇವರೇ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಜಿಂಕೆ ಚರ್ಮವನ್ನು ಬಳಸುತ್ತಾರೆ. ಮೇಕೆಯ ಚರ್ಮವನ್ನೂ ದೊಡ್ಡ ದೊಡ್ಡ ಚಿತ್ರಗಳನ್ನು ಮಾಡುವಲ್ಲಿ ಎಮ್ಮೆಯ ಚರ್ಮವನ್ನೂ ಬಳಸಲಾಗುತ್ತದೆ. ಇದಕ್ಕೆ ಬಳಸುವ ಸಾಹಿತ್ಯ ಸೂತ್ರದ ಗೊಂಬೆ ಆಟದಷ್ಟು ಶುದ್ಧವಾದುದಲ್ಲವಾದರೂ ಅದೇ ಮೂಲದಿಂದ ಬಂದದ್ದು. ಸಂಭಾಷಣೆಯಲ್ಲಿ ಆಶ್ಲೀಲದ ಅಂಶ ಸ್ವಲ್ಪ ಹೆಚ್ಚು ಇರುತ್ತದೆ.

ತೊಗಲುಗೊಂಬೆ ಆಟಕ್ಕೆ ಬೇಕಾದ ರಂಗನಿರ್ಮಾಣದ ರೀತಿಯೇ ವಿಶಿಷ್ಟವಾದುದು. ಬಿಳಿಯ ತೆರೆಯ ಹಿಂಬದಿಯಲ್ಲಿ ಗೊಂಬೆಗಳನ್ನು ಕುಣಿಸುತ್ತಾರೆ. ಅದರ ಹಿಂದುಗಡೆ ದೀಪವನ್ನು ಹಚ್ಚಿಟ್ಟಿರುತ್ತಾರೆ. ಆದರೆ, ದೀಪವಾಗಲಿ, ಕುಣಿಸುವ ವ್ಯಕ್ತಿಯಾಗಲಿ ಮುಂದೆ ಕೂತು ನೋಡುವ ಪ್ರೇಕ್ಷಕನಿಗೆ ಕಾಣಿಸುವುದಿಲ್ಲ. ದೀಪದ ಬೆಳಕು ಗೊಂಬೆಯ ಮೇಲೆ ಬಿದ್ದು, ಗೊಂಬೆಯ ನೆರಳು ತೆರೆಯ ಮೇಲೆ ಅದ್ಭುತವಾಗಿ ಕಾಣುತ್ತದೆ. ವಿಶೇಷವೆಂದರೆ ಕುಣಿಯುವ ಬೊಂಬೆಗಳ ಕರಿಯ ಛಾಯೆಗಳು ಮಾತ್ರ ಕಾಣುವುದಿಲ್ಲ. ಅವುಗಳ ದೇಹವನ್ನು ಆವರಿಸಿರುವ ವಿವಿಧ ರಂಗುಗಳೆಲ್ಲ ಪ್ರೇಕ್ಷಕರಿಗೆ ಕಾಣುತ್ತವೆ. ಹಿಡಿದು ಕುಣಿಸಲು ಅನುಕೂಲವಾಗುವಂತೆ ಗೊಂಬೆಗಳಿಗೆ ಸಣ್ಣ ಸಣ್ಣ ಕಡ್ಡಿಗಳನ್ನು ಜೋಡಿಸಿರುತ್ತಾರೆ. ಕುಣಿಸುವವನು ತನ್ನ ಕೈಚಳಕದಿಂದ ವಿಶಿಷ್ಟ ಲೋಕವನ್ನೇ ಸೃಷ್ಟಿಸುತ್ತಾನೆ.

ತೊಗಲುಗೊಂಬೆ ಆಟಕ್ಕೆ ಬಳಸುವ ವಾದ್ಯವಿಶೇಷಗಳು ಕೂಡ ಸರಳವಾದುವು. ಮೃದಂಗ, ಮುಖವೀಣೆಗಳ ಜೊತೆಗೆ ಬಳಸುವ ಒಂದೇ ವಿಶೇಷ ಬಗೆಯ ವಾದ್ಯ ಹೆಚ್ಚು ಗಮನ ಸೆಳೆಯುತ್ತದೆ. ನೆಲದ ಮೇಲೆ ಬೋರಲಾಗಿ ಹಾಕಿದ ಗಂಗಾಳವೊಂದರ ಮೇಲೆ ಮೇಣ ಮೆತ್ತಿ, ಅದರ ಮೇಲೆ ಒಂದು ಹೆಂಚಿನ ಕಡ್ಡಿಯನ್ನು ನಿಲ್ಲಿಸಿ, ಉಜ್ಜುವುದರಿಂದ ಒಂದು ವಿಶೇಷ ಬಗೆಯ ನಾದ ಹೊರಹೊಮ್ಮುತ್ತದೆ. ಇದು ಮೂಡಲಪಾಯದಲ್ಲಿ ಬಳಕೆಯಾಗುವಂಥದು. ಹಾಗೆಯೇ ಬಡಗಲಪಾಯದಲ್ಲಿ ನಾನಾ ಬಗೆಯ ವಾದ್ಯವನ್ನು ಹೊರಹೊಮ್ಮಿಸುವುದಕ್ಕಾಗಿ ಜೋಳದ ಕಡ್ಡಿಯಿಂದ ಮಾಡಿಕೊಂಡ ಬುರಿಬುರಿ ಅಥವಾ ಪಾವರೆ ಎಂಬ ವಾದ್ಯವನ್ನು ಬಳಸುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ಹೆಂಗಸರೂ ಗಂಡಸರೂ ಕೂಡಿಯೇ ಹಿಮ್ಮೇಳವನ್ನು ಹಾಡುವುದರಿಂದ ತೊಗಲುಗೊಂಬೆ ಆಟಕ್ಕೆ ಇನ್ನೂ ಹೆಚ್ಚಿನ ಕಳೆ ಕಟ್ಟುತ್ತದೆ.

ಒಟ್ಟಿನಲ್ಲಿ ಜನಪದ ರಂಗಭೂಮಿ ಪ್ರಾಚೀನ ಇತಿಹಾಸವನ್ನು ಹೊಂದಿದ್ದು, ವೈವಿಧ್ಯಕ್ಕೆ ಹಾಗೂ ವೈಶಿಷ್ಟ್ಯಕ್ಕೆ ಹೆಸರಾಗಿ, ಅಪೂರ್ವ ಮನೋರಂಜನಸಾಧನವಾಗಿ ಜೊತೆಯಲ್ಲಿಯೇ ನಮ್ಮ ಪ್ರಾಚೀನ ಸಂಸ್ಕೃತಿಯ ಹಲವು ಅಂಶಗಳನ್ನು ಮೈಗೂಡಿಸಿಕೊಂಡು ಬಂದಿದೆ. ಇಂದಿನ ಬಹುತೇಕ ಶಿಷ್ಟಕಲೆಗಳಿಗೆ ಪೂರಕವಾಗಿ, ಪ್ರೇರಕವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. (ಡಿ.ಕೆ.ಆರ್.)

**ಜನಪದ ವಾದ್ಯಗಳು :** ಮಾನವನ ಸ್ವಭಾವ, ಮಾತು, ಬುದ್ಧಿಶಕ್ತಿ, ಗಾಯನ ಇವುಗಳೆಲ್ಲ ಯಾವ ಕ್ರಮದಲ್ಲಿ ಬೆಳವಣಿಗೆಯಾದುವೆಂದು ಹೇಳುವುದು ಕಷ್ಟ. ಆದರೆ ಮಾತಿನ ಜೊತೆಯಲ್ಲಿ ಅಥವಾ ಮಾತುಗಳಿಗಿಂತಲೂ ಮುಂಚಿತವಾಗಿಯೇ, ರಾಗ ಹಾಡು ಗಾಯನಗಳಲ್ಲಿ ಅವನಿಗೆ ಅಭಿರುಚಿಯುಂಟಾಗಿರಬಹುದೆಂದು ಊಹಿಸಲು ಅವಕಾಶವಿದೆ. ಜನಪದ ವಾಙ್ಮಯ, ಸಂಸ್ಕೃತಿ ಮತ್ತು ಪರಂಪರೆಯಲ್ಲಿ ನಾದ ಗಾನ ತಾಳ ಲಯಗಳಿಗೆ ಪ್ರಧಾನಸ್ಥಾನ. ಗ್ರಾಮೀಣ ಜನತೆ, ಗುಡ್ಡಗಾಡಿನವರು, ಆದಿವಾಸಿಗಳು ತಮ್ಮ ಭಾವನೆಗಳನ್ನು ಹಾಡುಗಬ್ಬಗಳು ತ್ರಿಪದಿಗಳು ಲಾವಣಿಗಳು ಕೋಲಾಟದ ಪದಗಳು ಮುಂತಾದ ಕಲಾವಿಧಾನದಿಂದಲೇ ಪ್ರಕಟಿಸುತ್ತಾರೆ. ಮಾತಿಗಿಂತ ಗಾಯನ ಯಾವಾಗಲೂ ಹೆಚ್ಚು ಮನೋಹರ ಮತ್ತು ಹೃದಯಂಗಮ. ಹಳ್ಳಿಗಾಡಿನ ಜನಕ್ಕೆ ಗಾಯನ ಸಂತೋಷವನ್ನು ಕೊಡುವ ವಸ್ತು ಮಾತ್ರವೇ ಅಲ್ಲ; ಅವರ ಕೆಲಸಗಳಲ್ಲಿ ಸಹಾಯಕವಾಗಿ ಅವರ ಕಾರ್ಯವನ್ನು ಸುಲಭ ಮಾಡುವ ಕಲೆಯೂ ಆಗಿದೆ. ರೈತರಂತೆ ಬಯಲಿನಲ್ಲಿ, ನದಿಯ ತೀರದಲ್ಲಿ, ಸದಾ ನೀರು ಹರಿಯುವ ನಾಲೆ ದಡದಲ್ಲಿ, ಹಸಿರು ಹೊಲಗದ್ದೆ ತೋಟಗಳಲ್ಲಿ ಕೆಲಸ ಮಾಡುವವರಿಗೆ, ಪ್ರಕೃತಿಯ ಚೈತನ್ಯ ಮತ್ತು ಉತ್ಸಾಹದಿಂದ, ಹಾಡು ಬಾಯಿಂದ ತಾನೇ

ತಾನಾಗಿ ಹೊರಡುತ್ತದೆ (**ನೋಡಿ– ಕೆಲಸದ ಹಾಡುಗಳು**). ಏತದಿಂದ ನೀರೆತ್ತುವಾಗ, ಭಾರವೆಳೆವಾಗ, ದೊಡ್ಡ ದೊಡ್ಡ ದಿಮ್ಮಿಗಳನ್ನೂ ಕಲ್ಲುಚಪ್ಪಡಿಗಳನ್ನೂ ಸಾಗಿಸುವಾಗ, ಗಾಡಿ ಹೊಡೆಯುವಾಗ ಹೆಂಗೆಳೆಯರು ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ, ರಾಗಿ ಬೀಸುವಾಗ ಜೊತೆಗೆ ಗಾಯನವಿದ್ದರೆ ಕೆಲಸದ ಆಯಾಸ ತೋರುವುದೇ ಇಲ್ಲ. ನಮ್ಮ ಜನಪದಕ್ಕಂತೂ ಸಂಗೀತ ಜೀವನದ ಸಂತತಸಖಿ. ಮದುವೆ, ಸಾವು, ಹಬ್ಬ ಹರಿದಿನ, ಜಾತ್ರೆ, ದೇವರ ಉತ್ಸವ ಯಾವುದಕ್ಕೂ ಸಂಗೀತ ಬೇಕೇ ಬೇಕು. ಯಕ್ಷಗಾನ, ಬಯಲಾಟ, ಬೊಂಬೆಯಾಟ ಇನ್ನೂ ಉಳಿದ ನಾನಾ ವಿಧದ ಜನಪದ ಆಟಗಳು ಮನೋರಂಜನೆ ಮುಂತಾದ ವಿನೋದಗಳು ಸಂಗೀತಮಯವಾಗಿಯೇ ಇರುತ್ತವೆ.

ಯಾವ ಸಂಗೀತಕ್ಕೂ ಶ್ರುತಿ ಮತ್ತು ಲಯ ಮುಖ್ಯವಾದುವು. ಜನಪದ ಸಂಗೀತಗಾರರಿಗೆ ಶ್ರುತಿ ಲಯ ತಾಳ ಇವು ಮೂರೂ ಮುಖ್ಯ. ಅವರಿಗೆ ಶ್ರುತಿಯ ಜ್ಞಾನ ಬಹಳ ಚೆನ್ನಾಗಿರುತ್ತದೆ. ಶ್ರುತಿಗೆ ತಮ್ಮ ಧ್ವನಿಯನ್ನು ಹೊಂದಿಸಿಕೊಳ್ಳುವುದರಲ್ಲಿ ಅವರು ಬಹಳ ನಿಪುಣರು. ಲಯ ತಾಳ ಸರಿಯಾಗಿ ಇಲ್ಲದಿದ್ದಲ್ಲಿ ನಾನಾವಿಧದ ಸಂಕೀರ್ಣ ಚಲನೆಗಳುಳ್ಳ ಕೋಲಾಟದಂಥ ಆಟವನ್ನು ಆಡುವುದೇ ಕಷ್ಟ. ಲಯಜ್ಞಾನವಿಲ್ಲದವನಿಗೆ ಕೋಲಾಟದಲ್ಲಿ ಕೋಲಿಗೆ ಕೋಲು ತಾಕುವ ಬದಲು, ಅವನ ತಲೆ ಸೊಂಟ ತೊಡೆಗಳಿಗೆ ತಗಲಬಹುದು. ಹೆಣ್ಣುಮಕ್ಕಳು ಬೀಸುವ ಕಲ್ಲಿನ ಶ್ರುತಿಗೆ ಧ್ವನಿಯನ್ನು ಅಳವಡಿಸುತ್ತಾರೆ. ಬೊಂಬೆಯಾಟ ಮುಂತಾದುವುಗಳಲ್ಲಿ ಸಾಧಾರಣವಾಗಿ ಒಂದು ಕಂಚಿನ ತಟ್ಟೆಯ ಮೇಲೆ ಲೋಹದ ಕಡ್ಡಿ ಅಥವಾ ಲಾಳದ ಕಡ್ಡಿಯನ್ನು ಇಟ್ಟು ಕೆಳ ಮುಂದಾಗಿ ನೀವುತ್ತಿದ್ದರೆ, ಒಂದು ಬಗೆಯ ಶ್ರುತಿ ಹೊರಡುತ್ತದೆ.

ಹೀಗೆ ಸಂಗೀತ, ಗಾನ, ನಾದಗಳನ್ನು ಪ್ರೀತಿಸುವ ಹಳ್ಳಿಗರು ನಾನಾ ಬಗೆಯ ವಿನೋದಗಳನ್ನೂ ಕುಣಿತಗಳನ್ನೂ ಆಟಗಳನ್ನೂ ಸೃಷ್ಟಿಸಿ ಆಡಿ ಅನುಭವಿಸಿ ಆನಂದಗೊಳ್ಳುತ್ತಾರೆ. ಅವರ ಸಂಗೀತಕ್ಕೆ ಪೋಷಕಗಳಾಗಿ ಅವರು ಬಗೆಬಗೆಯ ಮಿಡಿಯುವ, ಊದುವ, ಬಡಿಯುವ ವಾದ್ಯಗಳನ್ನು ಸೃಷ್ಟಿಮಾಡಿಕೊಂಡಿದ್ದಾರೆ. ಸಂಗೀತವಿಲ್ಲದೆ ಯಾವ ಕುಣಿತವೂ ಇಲ್ಲವಷ್ಟೆ. ಒಂದೊಂದು ಬಗೆಯ ಆಟ ಕುಣಿತ ಮೇಳಗಳಲ್ಲಿ ಒಂದೊಂದು, ನಾಲ್ಕು ಹತ್ತು ಹೀಗೆ ಸಂಗೀತವಾದ್ಯಗಳಿರುತ್ತವೆ. ಹಾಡುವ ಕುಣಿಯುವ ಜನಪದ ಮೇಳಗಳ ಸಂಖ್ಯೆ ಈಗಲೇ ಕಡೆಯ ಪಕ್ಷ ಅರವತ್ತಕ್ಕೂ ಮಿಕ್ಕಿವೆ. ಅವುಗಳಲ್ಲೆಲ್ಲ ವಾದ್ಯಗಳನ್ನು ಉಪಯೋಗಿಸುತ್ತಾರೆ. ಇಂಥ ಆಟಗಳಿಗೆ ಇಂಥ ವಾದ್ಯಗಳನ್ನೇ ಉಪಯೋಗಿಸಬೇಕೆಂಬ ವಾಡಿಕೆ ಇದೆ.

ಈಗ ದೊರೆಯುವ ಜನಪದ ವಾದ್ಯಗಳಲ್ಲಿ ಸಾಕಷ್ಟು ವೈವಿಧ್ಯವಿದೆ. ತಂಬೂರಿ, ಕಿನ್ನರಿ, ಏಕನಾದ ಇವು ತಂತಿವಾದ್ಯಗಳು. ಶ್ರುತಿಗೆ ಸಹಾಯಕವಾಗುವುದರಿಂದ, ಇವನ್ನು ಎಲ್ಲ ಸಂದರ್ಭದಲ್ಲಿಯೂ ಉಪಯೋಗಿಸಬಹುದು. ಆದರೆ ಸಾಧಾರಣವಾಗಿ, ಸೋಬಾನೆ ಪದ ಹಾಡುವಾಗ, ಗದ್ದೆ ನಾಟಿ ಹಾಕುವಾಗ, ಪದಗಳಿಗೆ ಯಾವ ಶ್ರುತಿಯೂ ಇರುವುದಿಲ್ಲ. ಒಬ್ಬರಿಗೊಬ್ಬರು ಅಥವಾ ಒಂದು ಗುಂಪಿಗೆ ಎದುರು ಗುಂಪಿನವರು ಧ್ವನಿಕೊಟ್ಟುಕೊಂಡು ಹಾಡುತ್ತಾರೆ. ಓಲಗ, ತುತ್ತೂರಿ, ಕೊಂಬು, ಕಹಳೆ, ಮುಖವೀಣೆ, ಕೊಳಲು, ಪಿಳ್ಳಂಗೋವಿ, ಶಂಖ ಮುಂತಾದುವು ಊದುವ ವಾದ್ಯಗಳು. ತಮ್ಮಟೆ, ಹರೆ, ದುಡಿ, ಡೊಳ್ಳು, ಚಾಡಿಕೆ, ನಗಾರಿ, ಕಣಿ, ಕುಣಿಮಿಣಿ, ಥಾಲಿ, ಕೋಲು, ಹುಯಿಲು, ತಮಟೆ, ಚಂಡೆ, ಹೆಬ್ಬರೆ, ಮದ್ದಳೆ, ಡವಣೆ, ಡಂಕ, ಡೋಲು, ಕರಡಿಮಜಲು ಮುಂತಾದುವು ಬಡಿಯುವ ವಾದ್ಯಗಳು. ಕರಡಿಮಜಲು ಈಶ್ವರಪೂಜೆಗೆ ಮುಖ್ಯ. ವೀರಗೀತಕ್ಕೂ ಬೇಕು. ಬಳೆ, ಗೆಜ್ಜೆ, ತಾಳ, ಗಂಟೆ, ಕೋಲು, ಜಾಗಟೆ ಇವು ಕಂಚಿನ ವಾದ್ಯಗಳು. ಚೌಡಿಕೆ ಹಾಡಿಕೆಯಲ್ಲಿ ನಾಲ್ಕು ಜನರಿರುತ್ತಾರೆ. ಸಣ್ಣನಗಾರಿ ಉಪಯೋಗಿಸುತ್ತಾರೆ. ಕೊಡವರು ಶ್ರುತಿಗೆ ಚೀಣಿ ಎಂಬ ವಾದ್ಯವನ್ನೂ, ಲಂಬಾಣಿಗರು ಉಪ್ಪಂಗವನ್ನೂ (ಕಂಚಿನ ತಟ್ಟೆ, ಕಡ್ಡಿ) ಬಳಸುತ್ತಾರೆ. ಈ ವಾದ್ಯಗಳನ್ನೆಲ್ಲ ಬಡಿಯಲು, ಊದಲು, ನುಡಿಸಲು ಅನೂಚಾನವಾಗಿ ಬಂದ ಪದ್ಧತಿ ಇದೆ. ಇವುಗಳ ಜೊತೆಗೆ ಕೊಡವರು ಸುಗ್ಗಿ ಕುಣಿತ ಮತ್ತು ಹುತ್ತರಿ ಕುಣಿತಗಳಲ್ಲಿ ಉಪಯೋಗಿಸುವ ಓಲಗ, ತಮಟೆ ಮುಂತಾದ ವಾದ್ಯಗಳೂ ಇವೆ. ಗಂಟೆಯನ್ನು ಗಂಟೆ ಹೆಳವರು ಪದ ಹೇಳುವಾಗ ಉಪಯೋಗಿಸುತ್ತಾರೆ. ಡೊಳ್ಳಿನ ವಾದ್ಯದಲ್ಲಿ ನಾಲ್ಕು ಐದು ದಪ್ಪ ಡೊಳ್ಳುಗಳನ್ನು ಒಟ್ಟಿಗೆ ಹೊಡೆಯುವುದರಿಂದ ಭಯಂಕರವಾದ ಅತ್ಯುತ್ಸಾಹಯುತವಾದ ಸದ್ದು ಉಂಟಾಗುತ್ತದೆ. ಈ ಎಲ್ಲ ವಾದ್ಯಗಳನ್ನೂ ಸಾಧಾರಣವಾಗಿ ಜಾತ್ರೆಗಳಲ್ಲಿ, ದೇವತಾ ಮೆರವಣಿಗೆ, ರಥೋತ್ಸವಗಳಲ್ಲಿ ಕೇಳಬಹುದು. ಆಗ, ಅವೆಲ್ಲವೂ ಏಕಕಾಲದಲ್ಲಿ ಬಾರಿಸಲ್ಪಟ್ಟಾಗ ಅಲ್ಲಿನ ಒಟ್ಟು ಶಬ್ದ, ಅಂತರಿಕ್ಷವನ್ನೇ ಭೇದಿಸುವುದು. ಒಂದೆಡೆ ಹರಿಜನರ ಓಲಗ ತಮಟೆ, ಹರೆ, ತಾಳ, ಹೆಬ್ಬರೆ, ಕುಣಿಮಿಣಿ ಮುಂತಾದವು ಮತ್ತೊಂದೆಡೆ ಡೊಳ್ಳು. ಅವನ್ನು ಭೇದಿಸಿಕೊಂಡು ದಾಸಯ್ಯಗಳ ತುತ್ತೂರಿ ಭಾಂಕಿ ಶಂಖ ಜಾಗಟೆಗಳ ಶಬ್ದ. ಅವೆಲ್ಲವನ್ನೂ ಮೀರಿ ಕೊಂಬಿನ ಶಬ್ದ. ಕೊಂಬು ಅತ್ಯಂತ ಮನೋಹರವಾದ ವಾದ್ಯ. ಅದರ ಆಕಾರವೇ ಸೊಗಸಾಗಿದೆ. ಪ್ರಾರಂಭದಲ್ಲಿ ಚಿಕ್ಕದಾಗಿ ಮುಂದೆ ದಪ್ಪವಾಗಿ ಬಾಗಿ ಅಲ್ಲಿಂದ ಮುಂದೆ ಇನ್ನೂ ದಪ್ಪವಾಗಿ ಕೊನೆಯಲ್ಲಿ ಬಾಯನ್ನು ಗಾಳಿಗೆ ತೆಗೆದಿರುತ್ತದೆ. ಸಾಮಾನ್ಯವಾಗಿ ಇಡಿಯ ಕೊಂಬನ್ನು ಮೂರು ಭಾಗ ಮಾಡಿ ಮೂರನ್ನೂ ಬೇರ್ಪಡಿಸಿ ಇಟ್ಟಿರುತ್ತಾರೆ. ಊದುವಾಗ ಮಾತ್ರ ಮೂರನ್ನೂ ಕಮಾನಿನಂತೆ ಸೇರಿಸಿ, ಸಣ್ಣ ತುದಿಯನ್ನು ಬಾಯಲ್ಲಿಟ್ಟುಕೊಂಡು ಊದುತ್ತಾರೆ. ಆಗ ಅದರಿಂದ ನಾದ ಹೊರಟು, ಬಾಗಿ ಬಾಗಿ ನಾಲ್ಕನೆಯ ಸ್ವರವನ್ನು ಮುಟ್ಟಿ, ಪೂರ್ಣಕಂಠದಲ್ಲಿ ಮೊರೆದು ಮೊಳಗಿ, ಧ್ವನಿ ಅಂತರಿಕ್ಷಕ್ಕೆ ಮುಟ್ಟುತ್ತದೆ. ಅದೊಂದು ವಿಚಿತ್ರವಾದ ಅನುಭವ. ಅದನ್ನು ಕೇಳಿದರೆ ರೋಮಾಂಚನವಾಗುವುದು. ಅದರಲ್ಲಿ ಇಂಥ ಧ್ವನಿ ಹೊರಡಿಸಲು ಅನುಭವವುಳ್ಳ ನಿಪುಣ ಊದುಗಾರ ಬೇಕು. ಶಂಖ ಮತ್ತು ಜಾಗಟೆಗಳ ಶಬ್ದವೂ ಹಾಗೆಯೇ ಮನೋಹರ. ಜನಪದ ವಾದ್ಯಗಳಲ್ಲಿ, ಶಂಖದಲ್ಲಿಯಂಥ ಘನಸ್ವರ ಮತ್ತಾವುದರಿಂದಲೂ ಹೊರಡುವುದಿಲ್ಲ. ಜಾಗಟೆ ಸಹ ಹುರುಪುಗೊಳಿಸುವ ವಾದ್ಯ. ಶಂಖವನ್ನೂ ಜಾಗಟೆಯನ್ನೂ ದೇವಸ್ಥಾನಗಳಲ್ಲಿ ಉಪಯೋಗಿಸುತ್ತಿರುವುದು ಜನಪದಕ್ಕೆ ವೈದಿಕರು ಸಲ್ಲಿಸುತ್ತಿರುವ ಕೃತಜ್ಞತೆಯೆನ್ನಬಹುದು.

ಕೆಲವು ವಿಶಿಷ್ಟ ಪಂಗಡದವರು ತಮತಮಗೆ ವಿಶಿಷ್ಟವಾದ ವಾದ್ಯಗಳನ್ನು ಮಾತ್ರ ಉಪಯೋಗಿಸುತ್ತಿರುವುದನ್ನು ಗಮನಿಸಬೇಕು. ಕೊಡವರು ಬೆಳಕಾಟದಲ್ಲಿ (ಬೆಳದಿಂಗಳಿನಲ್ಲಿ ಆಡುವ ಆಟವಿರಬೇಕು) ದುಡಿ ಎಂಬ ಚರ್ಮವಾದ್ಯವನ್ನು ಉಪಯೋಗಿಸುತ್ತಾರೆ. ಚೌಗಟದಲ್ಲಿ ಶ್ರುತಿ, ಸಣ್ಣ ನಗಾರಿ, ತಾಳಗಳು ಬಳಕೆಯಲ್ಲಿವೆ. ಚೌಡಿಕೆ ಎಂಬ ವಾದ್ಯವನ್ನು ಚೌಡಿಕೆಯವರು ಮಾತ್ರ ಉಪಯೋಗಿಸುತ್ತಾರೆ. ಅದರಿಂದಲೇ ಆ ವಾದ್ಯಕ್ಕೆ ಆ ಹೆಸರು. ಚೋಮನ ಕುಣಿತ ಅಥವಾ ಚಾಮನ ಕುಣಿತವನ್ನು ಕುಣಿಯುವಾಗ ತಮಟೆ, ಹರೆ, ಗೆಜ್ಜೆ, ಕೈಯಲ್ಲಿ ಚಾವಟಿ ಇರಬೇಕು. ಕಾರವಾರದ ಕಡೆ ಜಾಗಟೆ ಸಹ ಇರುತ್ತದೆ. ಡೊಳ್ಳುಮೇಳದವರು ಐದು ಆರು ಡೊಳ್ಳುಗಳನ್ನೂ ಜೊತೆಗೆ ತಾಳವನ್ನೂ ಉಪಯೋಗಿಸುತ್ತಾರೆ. ಎಲ್ಲಮ್ಮನ ಜಾತ್ರೆಯಲ್ಲಿ ಜೋಗಿತಿಯರು ಕಾಲಿಗೆ ಗೆಜ್ಜೆ ಕಟ್ಟಿ ಚಾಡಿಕೆ ವಾದ್ಯವನ್ನು ಬಳಸುತ್ತಾರೆ. ಗುಮಟೆ ವಾದ್ಯವನ್ನು ಗುಮಟೆ ಪಂಥದವರು ತಂಬೂರಿ ಶ್ರುತಿಯೊಂದಿಗೆ ಉಪಯೋಗಿಸುತ್ತಾರೆ.

ಡೊಳ್ಳು ಕುಣಿತದವರು ಡೊಳ್ಳು ವಾದ್ಯವನ್ನು ಹೊಟ್ಟೆಗೆ ಕಟ್ಟಿಕೊಂಡು, ತುದಿಗೆ ಬಟ್ಟೆ ಕಟ್ಟಿದ ಕೋಲಿನಿಂದ ಎರಡು ಕಡೆಯೂ ಹೊಡೆಯುತ್ತಾರೆ. ಹರೆಯನ್ನು ಬರಿ ಮರದ ತುಂಡಿನಿಂದ ತಿಕ್ಕಿದರೆ ಭರ್ ಭರ್ ಎಂದು ಸದ್ದಾಗುತ್ತದೆ. ಕುಣಿಮಿಣಿಯನ್ನು ಹೊಟ್ಟೆಗೆ ಕಟ್ಟಿಕೊಂಡು ಎರಡು ಕೈಗಳಿಂದಲೂ ಎರಡು ಸಣ್ಣ ಕಡ್ಡಿಗಳಿಂದ ಹೊಡೆಯುತ್ತಾರೆ. ಅದು ಸಣ್ಣ ಧ್ವನಿಯಲ್ಲಿ ಶಬ್ದ ಮಾಡುತ್ತದೆ. ಡಂಕದಲ್ಲಿ ಎರಡು ತಮಟೆಗಳಿರುತ್ತವೆ. ಸೊಂಟಕ್ಕೆ ಕಟ್ಟಿಕೊಂಡು ಎರಡೂ ಕೈಗಳಿಂದಲೂ ಸಣ್ಣಕೋಲಿನಲ್ಲಿ ಹೊಡೆಯುತ್ತಾರೆ. ತುತ್ತೂರಿ, ಭಾಂಕಿ, ಕೊಂಬು ಇವು ಹಿತ್ತಾಳೆ ವಾದ್ಯಗಳು. ತಾಳಗಳು ಕಂಚಿನವು. ಮೇಲೆ ಹೇಳಿದ ಎಲ್ಲ ವಾದ್ಯಗಳೂ ಈಗಲೂ ನಮ್ಮ ಜನತೆಯಲ್ಲಿ ಬಳಕೆಯಲ್ಲಿವೆಯಾದರೂ ಕೆಲವು ಕಾಣದಾಗುತ್ತಿವೆ.

ಜನಪದ ಸಂಗೀತ ಮತ್ತು ವಾದ್ಯಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿ ಬಯಸುವವರು ಕಂಸಾಳೆ; ಕೋಲಾಟ, ಕರ್ಣಾಟಕ ಜಾನಪದ ನೃತ್ಯ; ಕರ್ನಾಟಕ ಜಾನಪದ ಸಂಗೀತ; ಗುಮಟೆ ಪದಗಳು; ಗೊಂದಲಿಗರು; ಚೌಡಿಕೆ; ಜುಂಜಪ್ಪ; ಜೋಗಿಗಳು – ಈ ಮೊದಲಾದ ಲೇಖನಗಳನ್ನು ನೋಡಬಹುದು. (ಜಿ.ಆರ್.ಎ.)

**ಜನಪದ ವಾಸ್ತು :** ನಾಗರಿಕ ಸಮಾಜಗಳಲ್ಲಿ ವಿಶಿಷ್ಟವಾಗಿ ಕಂಡುಬರುವ ಸಾಮಾಜಿಕ, ರಾಜಕೀಯ, ಔದ್ಯಮಿಕ ಸಂಸ್ಥೆಗಳು, ಸಂಪತ್ತು ಕೇಂದ್ರೀಕೃತವಾಗಿರುವ ಕೆಲವು ವರ್ಗಗಳು ವ್ಯವಹಾರಕ್ಲಿಷ್ಟತೆ, ವಿವಿಧ ಆವಶ್ಯಕತೆಗಳು ಮುಂತಾದ ಕಾರಣಗಳಿಂದಾಗಿ ರೂಪಿಸಿಕೊಂಡಿರುವ ವಾಸ್ತುನಿರ್ಮಾಣಗಳು ದೊಡ್ಡವಾಗಿಯೂ ವೈವಿಧ್ಯಮಯವಾಗಿಯೂ ಕಲಾತ್ಮಕವಾಗಿಯೂ ಇರುತ್ತವೆಯಾಗಿ, ಇವುಗಳ ಪರಿಚಯವಿರುವ ಆಧುನಿಕ ಯುಗದಲ್ಲಿ ವಾಸ್ತು ಎಂಬ ಪದವನ್ನು ಇಂಥ ವಿಶಿಷ್ಟ ರೀತಿಯ ಕೃತಿಗಳೇ ಬಳಸುವುದು ರೂಢಿಯಾಗಿದೆ. ನಾಗರಿಕ ಸಮಾಜದಿಂದ ಭಿನ್ನವಾಗಿರುವ ಸರಳವಾದ ಜನಪದ ಸಮಾಜಗಳಲ್ಲಿ ವಿಶಿಷ್ಟ ವಾಸ್ತುರಚನೆಗಳಿಗೆ ಆವಶ್ಯಕವಾದ ಸಂಪನ್ಮೂಲಗಳಾಗಲೀ ಅಗತ್ಯಗಳಾಗಲೀ ಇಲ್ಲದಿರುವುದರಿಂದ, ಇಲ್ಲಿಯ ಸಾಮಾನ್ಯ ರಚನೆಗಳನ್ನು ಮೇಲಿನ ಅರ್ಥದಲ್ಲಿ ವಾಸ್ತುಕೃತಿಗಳು ಎಂದು ಹೆಸರಿಸುವುದು ಅಷ್ಟು ಸಾಧುವಾಗಿ ಕಾಣುವುದಿಲ್ಲ. ಜನಪದ ನಿರ್ಮಾಣಗಳು ಬಹುಮಟ್ಟಿಗೆ ಬಿಸಿಲು ಮಳೆಯಿಂದ ರಕ್ಷಣೆಯೊದಗಿಸುವ ಆವರಣಗಳು, ಅಷ್ಟೆ. ಜೋಪಡಿ, ಗುಡಿಸಲು ಮುಂತಾದವನ್ನು ಕಟ್ಟಡಗಳೆಂದು ಹೆಸರಿಸುವುದೂ ಇಂದು ಆ ಪದಕ್ಕೆ ರೂಢಿಯಲ್ಲಿರುವ ಅರ್ಥದ ದೃಷ್ಟಿಯಿಂದ ತಪ್ಪಾದೀತೇನೋ. ಹೀಗಿದ್ದರೂ ಜನಪದ ಆವರಣ ನಿರ್ಮಾಣಗಳನ್ನೆಲ್ಲ ಒಟ್ಟಾಗಿ ಹೇಳುವ ಯಾವುದೇ ಪದದ ಅಭಾವದಿಂದಾಗಿ ಇವನ್ನು ನಿರ್ದೇಶಿಸಲು ವಾಸ್ತು ಎಂಬ ಪದವನ್ನೇ ಬಳಸಲಾಗಿದೆ.

ಮೊದಲನೆಯದಾಗಿ ಜನಪದ ವಾಸ್ತುರಚನೆಗಳಲ್ಲಿ ಮುಖ್ಯವಾಗಿ ಕಂಡುಬರುವ ಒಂದು ಅಂಶ ಅವುಗಳ ಸರಳತೆ. ಆರ್ಥಿಕ ಬಲದ ಅಭಾವ ಮತ್ತು ಸೀಮಿತ ಆವಶ್ಯಕತೆಗಳು ಆ ಸರಳತೆಗೆ ಕಾರಣಗಳು. ಹೆಚ್ಚು ಕಡಿಮೆ ಎಲ್ಲ ಜನಪದ ವಾಸ್ತು ನಿರ್ಮಾಣಗಳನ್ನೂ ಲೌಕಿಕ ಮತ್ತು ಧಾರ್ಮಿಕ ಎಂಬ ಎರಡು ಗುಂಪುಗಳಲ್ಲಿ ವಿಂಗಡಿಸಬಹುದು. ಲೌಕಿಕ ವಾಸ್ತು ಬಹುಮಟ್ಟಿಗೆ ಕುಟುಂಬಗಳ ವಾಸಗೃಹಗಳಿಗಷ್ಟೇ ಸೀಮಿತವಾಗಿರುತ್ತದೆ. ಅಪರೂಪವಾಗಿ

ವಿನೋದಗೃಹಗಳು, ಗರಡಿಗಳು, ಹಲವು ಜನ ಕೂಡುವ ಚಾವಡಿಗಳು ಕಂಡುಬರುವುದುಂಟು. ದೇವಾಲಯಗಳು ಧಾರ್ಮಿಕ ರೀತಿಯ ವಾಸ್ತುಗಳು. ಇವುಗಳ ಸಂಖ್ಯೆ ಬಹು ಕಡಿಮೆ. ನಾಗರಿಕ ಸಮಾಜದ ಪ್ರಭಾವ ಕಡಿಮೆ ಇರುವ ಜನಪದ ಗ್ರಾಮಗಳಲ್ಲಿ ಒಂದೋ ಎರಡೋ ಇದ್ದರೆ ಹೆಚ್ಚು. ಹೆಚ್ಚು ಬಾರಿ ಮರ, ನದೀ ದಡ, ಬಯಲುಗಳೇ ಪೂಜಾಸ್ಥಾನಗಳಾಗಿದ್ದು ಕೆಲವು ಗ್ರಾಮಗಳಲ್ಲಿ ದೇವಾಲಯಗಳು ಇಲ್ಲದಿರುವುದೂ ಉಂಟು. ಎಷ್ಟೋ ವೇಳೆ ಮೂರು ಪಕ್ಕಗಳಲ್ಲಿ ಮೂರು ಕಲ್ಲು ನೆಟ್ಟು ಅದರ ತಲೆಯ ಮೇಲೆ ಒಂದು ಚಪ್ಪಡಿ ಎಳೆದು ಅದನ್ನೇ ಗುಡಿ ಎಂದು ಬಳಸುವುದೂ ಉಂಟು. ಕಲ್ಲುಗುಂಡು ಮಾರಿ ಆಗಬಹುದಾದರೆ ಇದು ಅದರ ದೇಗುಲವಾಗುವುದರಲ್ಲಿ ಯಾವ ಅಚ್ಚರಿಯೂ ಕಾಣದು. ಒಂದೇ ದೇವಾಲಯ ಹಲವು ಗ್ರಾಮಗಳ ಧಾರ್ಮಿಕ ಆವಶ್ಯಕತೆಯನ್ನು ಪೂರೈಸುವುದೂ ಅಪರೂಪವಲ್ಲ. ಕೆಲವು ಸಂದರ್ಭಗಳಲ್ಲಿ ಈ ದೇವಾಲಯಗಳೇ ನ್ಯಾಯ ತೀರ್ಮಾನ, ಮನರಂಜನೆ ಮುಂತಾದ ಲೌಕಿಕ ವ್ಯವಹಾರಗಳಿಗೂ ಉಪಯೋಗವಾಗುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಜನಪದ ವಾಸ್ತು ನಿರ್ಮಾಣಗಳು ಜನರ ನಿತ್ಯಜೀವನದ ಕನಿಷ್ಠ ಆವಶ್ಯಕತೆಗಳಿಗಷ್ಟೇ ಸೀಮಿತವಾಗಿರುತ್ತವೆ. ಶ್ರೀಮಂತಿಕೆ ಇಲ್ಲಿಲ್ಲ. ಆದ್ದರಿಂದ ಸಹಜವಾಗಿ ಈ ನಿರ್ಮಾಣಗಳು ಚಿಕ್ಕವಾಗಿಯೂ ವೈವಿಧ್ಯರಹಿತವಾಗಿಯೂ ಇರುತ್ತವೆ. ಮಹಡಿಮನೆ, ವಾಡೆ, ಗುತ್ತಿನ ಮನೆ ಇದಕ್ಕೆ ಅಪವಾದ.

ಪರಿಸರದ ಗಾಢಪ್ರಭಾವ, ಜನಪದ ವಾಸ್ತುರಚನೆಗಳಲ್ಲಿ ಎದ್ದುಕಾಣುವ ಎರಡನೆಯ ಮುಖ್ಯ ಅಂಶ. ಇದನ್ನು ರಚನೆಗೆ ಉಪಯೋಗಿಸುವ ವಸ್ತುಗಳಲ್ಲೂ ಮತ್ತು ರಚನೆಯ ಆಕಾರದಲ್ಲೂ ಕಾಣಬಹುದು. ನಿರ್ಮಾಪಕರು ಆ ಸ್ಥಳದಲ್ಲಿ ಸುಲಭವಾಗಿ ಸಿಕ್ಕುವ ತುಟ್ಟಿಯಲ್ಲದ ವಸ್ತುಗಳನ್ನಷ್ಟೇ ಆರಿಸಿಕೊಂಡಿರುತ್ತಾರೆ. ಉದಾಹರಣೆಗೆ ಮಣ್ಣು ವಿಶೇಷವಾಗಿ ಉಪಯೋಗವಾಗಿರುವ ವಸ್ತು. ಜೊತೆಗೆ ಕಲ್ಲಿನ ಸೀಮೆಯಲ್ಲಿ ಕಲ್ಲು, ಕಾಡುಪ್ರದೇಶಗಳಲ್ಲಿ ಮರ, ಬಿದಿರು, ಸೊಪ್ಪು, ಗರಿ, ಬಯಲುನಾಡಿನಲ್ಲಿ ಹುಲ್ಲು, ಶೀತಪ್ರದೇಶದಲ್ಲಿ ಮಂಜುಗಡ್ಡೆ ಮುಂತಾದವುಗಳಲ್ಲಿ ಕಟ್ಟಿದ ಕಟ್ಟಡಗಳು ಕಂಡಬರುತ್ತವೆ. ಚೂಪುಚಾವಣಿ, ಇಪ್ಪಾರು, ಒಪ್ಪಾರು, ಅರ್ಧಗೋಲ, ಪೀಪಾಯಿ ಇತ್ಯಾದಿ ಇಳಿಜಾರಿರುವ ನಿರ್ಮಾಣಗಳು, ಮಂಜು, ಮಳೆ ಇರುವ ಪ್ರದೇಶಗಳಲ್ಲಿದ್ದರೆ, ಮಳೆ ಬಹು ಕಡಿಮೆ ಇರುವ ಪ್ರದೇಶಗಳಲ್ಲಿ ಮಟ್ಟವಾದ ಮಣ್ಣಿನ ಮಾಳಿಗೆ ಮನೆಗಳಿರುತ್ತವೆ. **ನೋಡಿ– ಗೃಹ ಎಂಬ ಲೇಖನದ ಒಂದು ಭಾಗ.**

ತೀರ ಕನಿಷ್ಠ ಅಲಂಕರಣ ಜನಪದ ವಾಸ್ತುಕೃತಿಗಳಲ್ಲಿ ಕಾಣುವ ಮೂರನೆಯ ಅಂಶ. ಹೆಚ್ಚಿನವುಗಳಲ್ಲಿ ಅಲಂಕರಣದ ದೃಷ್ಟಿಯೇ ಇರುವುದಿಲ್ಲ. ನಾಲ್ಕನೆಯದಾಗಿ ಈ ಕಟ್ಟಡಗಳು ಚಿರಕಾಲ ಸ್ಥಿರವಾಗಿ ಉಳಿಯಲೆಂದು ಕಟ್ಟಿದವುಗಳಲ್ಲ. ಇವನ್ನು ಆಗಿಂದಾಗ್ಗೆ ನವೀಕರಿಸುವುದು ಅಥವಾ ಹೊಸವನ್ನೇ ನಿರ್ಮಿಸುವುದೇ ಬಹುಸಾಮಾನ್ಯ.

ಈ ಅಂಶಗಳನ್ನು ವಿಶ್ವದ ನಾನಾ ಕಡೆಗಳಲ್ಲಿ ಕಂಡುಬರುವ ಕೃತಿಗಳಲ್ಲಿ ಗಮನಿಸಬಹುದು. ಉತ್ತರ ಅಮೆರಿಕ ಖಂಡದ ಅಲಾಸ್ಕ, ಕೆನಡದ ಉತ್ತರಭಾಗ ಮುಂತಾದ ಶೀತಪ್ರದೇಶಗಳಲ್ಲಿ ವಾಸಿಸುವ ಎಸ್ಕಿಮೋ ಜನ ತಮ್ಮ ನಿವಾಸಗಳಿಗೆ ಗಟ್ಟಿಯಾದ ದಪ್ಪ ಮಂಜಿನಗಡ್ಡೆಗಳನ್ನೇ ಉಪಯೋಗಿಸುತ್ತಾರೆ. ಅಂಥ ಗಡ್ಡೆಗಳನ್ನು ಸೈಜು ಕಲ್ಲಿನ ರೀತಿಯಲ್ಲಿ ಹೆರೆದು ಒಂದರ ಮೇಲೊಂದು ಪೇರಿಸಿ, ಅರ್ಧಗೋಲಾಕಾರದಲ್ಲಿ ನಿರ್ಮಿಸಿದ ಮನೆಗಳು (ಇಗ್ಲೂ) ಇಲ್ಲಿಯ ವೈಶಿಷ್ಟ್ಯ. ಮಳೆ ಕಡಿಮೆ ಇರುವ ನ್ಯೂ ಮೆಕ್ಸಿಕೋ ಪ್ರದೇಶದಲ್ಲಿ ಮಣ್ಣಿನಲ್ಲಿ ಕಟ್ಟಿದ ಆಯಾಕಾರದ ಗೋಡೆಗಳು, ಮತ್ತು ತೊಲೆಗಳ ಮೇಲೆ ಕಡ್ಡಿ, ಗರಿಗಳನ್ನು ಇಟ್ಟು ಮಣ್ಣು ಹರವಿದ ಮಟ್ಟ ಚಾವಣಿಯ ಮಾಳಿಗೆಯ ಮನೆಗಳನ್ನು ಗುಂಪುಗುಂಪಾಗಿ ಹಲವು ಅಂತಸ್ತುಗಳಲ್ಲಿರುವಂತೆ ಕಟ್ಟಲಾಗಿರುತ್ತದೆ. ನೈರುತ್ಯ ಅಮೆರಿಕದಲ್ಲಿ ದಪ್ಪ ಮರದ ದಿಮ್ಮಿಗಳನ್ನು ಒಂದರ ಮೇಲೊಂದು ಜೋಡಿಸಿ, ಮೇಲೂ ಅಡ್ಡಡ್ಡವಾಗಿ ಹಾಸಿ, ಮಣ್ಣನ್ನು ಹರವಿ ಮಾಡಿದ ಮನೆಗಳೂ ಮೆಕ್ಸಿಕೋದ ಎತ್ತರದ ಬಯಲುನಾಡಿನಲ್ಲಿ, ವೃತ್ತಾಕಾರದ ಕಲ್ಲಿನ ಗೋಡೆ, ಮೇಲೆ ಛತ್ರಿಯಾಕಾರದ ಹುಲ್ಲು ಮುಚ್ಚಿದ ಚಾವಣಿ ಇರುವ ಮನೆಗಳು ಕಂಡುಬರುತ್ತವೆ. ಇರಾಕಾಯಿಸ್ ಜನಾಂಗದವರ ಮನೆಗಳು ವಿಶಿಷ್ಟ ರೀತಿಯವು. ಇವು ಹಲವು ಕುಟುಂಬಗಳು ಒಟ್ಟಿಗೆ ವಾಸಿಸಲು ಆಗುವಂಥ ಗೃಹಗಳು. ತಳವಿನ್ಯಾಸ ಚೌಕವಾಗಿದ್ದು ಮೇಲೆ ಅರೆಪೀಪಾಯಿಯಾಕೃತಿಯ (ಕಮಾನು) ಮುಚ್ಚಿಕೆ ಇರುತ್ತದೆ. ನಿರ್ಮಾಣದಲ್ಲಿ ಅಗಲವಾದ ತೊಗಟೆಯ ತುಂಡುಗಳನ್ನು ಹಂದರದ ಮೇಲೆ ಹರವಿ ಗಣೆಗಳಿಂದ ಭದ್ರಪಡಿಸಿರುತ್ತಾರೆ.

ದಕ್ಷಿಣ ಅಮೆರಿಕದ ಪೆರುವಿನಲ್ಲಿ ದಬ್ಬೆಗಳ ಹಂದರದ ಮೇಲೆ ಗರಿಗಳನ್ನು ಹೊದಿಸಿ ಮಾಡಿದ ಶಂಕು ತಲೆಯಾಕಾರದ ಗುಡಿಸಲುಗಳು, ಫ್ರೆಂಚ್ ಗಯಾನದ ಬಯಪೂಕ್ ನದೀಪ್ರದೇಶದಲ್ಲಿ ಆಯಾಕಾರದ ವಿನ್ಯಾಸದ ಮೇಲೆ, ಇಪ್ಪಾರುಚಾವಣಿ ಇರುವ, ದಬ್ಬೆ ಗರಿಗಳಿಂದ ಮಾಡಿದ ಗುಡಿಸಲುಗಳೂ ಕಂಡುಬರುತ್ತವೆ. ಈ ಎರಡನೆಯವು ಅನೇಕ ಗೂಟಗಳ ಮೇಲೆ ಎತ್ತಿದ ಅಟ್ಟಣೆಯ ಮೇಲೆ ಕಟ್ಟಿದವುಗಳಾಗಿರುತ್ತವೆ. ಬ್ರೆಜಿಲ್‌ನ ಅಮೆಜಾನ್ ನದೀಪ್ರದೇಶದಲ್ಲೂ ಅಟ್ಟದ ಮೇಲೆ ಕಟ್ಟಿದ ಮನೆಗಳೇ ಹೆಚ್ಚಾಗಿ ಕಾಣುತ್ತವೆ. ಅನೇಕ ಬಾರಿ ನೀರಿನ ಮೇಲೆ ಇಂಥ ಅಟ್ಟಣೆಗುಡಿಸಲುಗಳನ್ನು ನಿರ್ಮಿಸುವುದುಂಟು. ಕೆಲವೆಡೆ ಅಟ್ಟಣೆಯ ಮೇಲೆ ಅರೆಪೀಪಾಯಿಯಾಕೃತಿಯ ಚಾವಣಿ ಇರುತ್ತದೆ.

ಮಳೆ ಕಡಿಮೆ ಇರುವ ಆಫ್ರಿಕದ ಸಹಾರ ಮರುಭೂಮಿಯಲ್ಲಿ ಮಣ್ಣಿನ ಮನೆಗಳು ಸಾಮಾನ್ಯ. ಅವು ಚೌಕ ಅಥವಾ ಆಯಾಕಾರವಾಗಿದ್ದು, ಮೇಲೆ ಮಟ್ಟವಾದ ಮಣ್ಣಿನ ಮಾಳಿಗೆ ಇರುತ್ತದೆ. ಮರಳುಗಾಡಿನಲ್ಲಿ ದೂಳು ಮರಳಿನಿಂದ ಕೂಡಿದ ಬಿರುಗಾಳಿ ಆಗಾಗ ಬೀಸುವುದರಿಂದ, ಮನೆಗಳಿಗೆ ಕಿಟಕಿಗಳು ಇರುವುದಿಲ್ಲ. ಬಾಗಿಲೂ ಬಹುಚಿಕ್ಕದಾಗಿರುತ್ತದೆ. ಹಲವು ಮನೆಗಳು ದೊಡ್ಡ ಮಣ್ಣುಗೋಡೆಯಿಂದ ಆವೃತವಾಗಿರುವುದೂ ಉಂಟು. ಕ್ಯಾಮರೂನ್ ಪ್ರಾಂತ್ಯ ಮುಂತಾದೆಡೆಗಳಲ್ಲಿ ಬರಿಯ ಮಣ್ಣಿನಿಂದಲೇ ಶಂಕು ತಲೆ ಅಥವಾ ಚೂಪುತಲೆಯ ಅರ್ಧಗೋಳದಾಕಾರದಲ್ಲಿ ಮನೆಗಳನ್ನು ನಿರ್ಮಿಸಿ ಚಿಕ್ಕಬಾಗಿಲನ್ನು ಕೊರೆಯುವ ರೂಢಿ ಇದೆ. ಸಹಾರದಿಂದ ದಕ್ಷಿಣಕ್ಕೆ ತೆರಳಿದಂತೆ ಮಳೆ ಹೆಚ್ಚಾಗುವುದರಿಂದ ಅಲ್ಲೆಲ್ಲ ಇಳಿಜಾರು ಚಾವಣಿಯ ಮನೆಗಳೇ ಕಂಡುಬರುತ್ತವೆ. ಇವುಗಳಲ್ಲಿ ಎರಡು ಮುಖ್ಯ ವಿಧಗಳಿವೆ. ಮೊದಲನೆಯದರ ತಳವಿನ್ಯಾಸ ವೃತ್ತ. ಎರಡನೆಯದರದು ಆಯ. ವೃತ್ತಾಕಾರದ ಮನೆಗಳ ಗೋಡೆ ಸಾಮಾನ್ಯವಾಗಿ ಮಣ್ಣಿನವು. ಚಾವಣಿ ಛತ್ರಿಯಾಕಾರದ್ದು. ಮರದ ರೆಂಬೆ ಅಥವಾ ಬಿದಿರುಕಡ್ಡಿಗಳನ್ನು ಗೋಡೆಗಳ ಮೇಲೆ ಇಳಿಜಾರಾಗಿ ಜೋಡಿಸಿ, ತಲೆಭಾಗದಲ್ಲಿ ಒಟ್ಟಿಗೆ ಸೇರಿಸಿ ಕಟ್ಟಿ, ಮೇಲೆ ಹುಲ್ಲು ಅಥವಾ ಜೋಡನ್ನು ಮುಚ್ಚಿರುತ್ತಾರೆ. ಕೆಲವು ಕಡೆ ಜೊಂಡು, ಬಿದಿರು ಅಥವಾ ಲಾಳದಕಡ್ಡಿಯನ್ನು ಹೆಣೆದು ಮಾಡಿದ ತಡಿಕೆಗಳನ್ನು ಮಣ್ಣಿನ ಗೋಡೆಗಳಿಗೆ ಬದಲಾಗಿ ಉಪಯೋಗಿಸುವ ಪದ್ಧತಿ ಇದೆ. ಐವರಿ ಕೋಸ್ಟಿನ ಮತ್ತು ದಕ್ಷಿಣ ಆಫ್ರಿಕದ ಕೇಪ್ ಪ್ರಾಂತ್ಯದ ಮನೆಗಳು ಇವಕ್ಕೆ ಒಳ್ಳೆಯ ಉದಾಹರಣೆಗಳು. ಆಯಾಕಾರದ ಮನೆಗಳಿಗೆ ಮಣ್ಣಿನ ಗೋಡೆಗಳೂ ಹಲವು ಸಲ ಬಿದಿರು ಅಥವಾ ಕಡ್ಡಿಗಳ ಹಂದರದ ಮೇಲೆ ಜೊಂಡು, ಹುಲ್ಲು ಕಟ್ಟಿ ಮಾಡಿದ ಗೋಡೆಗಳೂ ಇರುತ್ತವೆ. ಚಾವಣಿ ಸಾಮಾನ್ಯವಾಗಿ ಕಡ್ಡಿ ಅಥವಾ ಬಿದಿರಿನ ಹಂದರದ ಮೇಲೆ ಹುಲ್ಲು ಇಲ್ಲವೆ ಗರಿಗಳನ್ನು ಕಟ್ಟಿ ಮಾಡಿದವು. ಇವು ಇಪ್ಪಾರಾಗಿರುತ್ತವೆ. ಜೌಗು ಪ್ರದೇಶವಿರುವ ಹೋಮೀ ರಾಜ್ಯದ ಹಲವು ಭಾಗಗಳಲ್ಲಿ, ಅನೇಕ ಕಂಬಗಳನ್ನು ನೆಟ್ಟು, ಅಟ್ಟಣೆ ಕಟ್ಟಿ, ಅದರ ಮೇಲೇ ಕಟ್ಟಡ ರಚಿಸುವ ರೂಢಿ ಇದೆ. ಇವುಗಳಿಗೆ ಮರ, ಬಿದಿರು, ಜೊಂಡು, ಹುಲ್ಲುಗಳನ್ನು ಮಾತ್ರ ಬಳಸಲಾಗುತ್ತದೆ.

ಉತ್ತರ ಯುರೋಪಿನ ಸ್ಕ್ಯಾಂಡಿನೇವಿಯ ಮುಂತಾದ ಚಳಿ ಪ್ರದೇಶಗಳಲ್ಲಿ ಗಣೆಗಳ ಮೇಲೆ ಚರ್ಮ ಹೊದಿಸಿದ ಶಂಕುತಲೆಯಾಕೃತಿಯ ಗುಡಾರಗಳು ಅಲ್ಲಿಯ ಜನಸಾಮಾನ್ಯರ ರಚನೆಗಳಾಗಿರುತ್ತವೆ. ಯುರೋಪಿನ ಶೀತವಲಯದಲ್ಲೂ ಎಸ್ಕಿಮೋ ಜನ ಅಲಾಸ್ಕ ಮುಂತಾದೆಡೆಗಳಿಂದ ಇಗ್ಲೂಗಳನ್ನು ನಿರ್ಮಿಸುತ್ತಾರೆ.

ಉಷ್ಣಾಂಶ ಅಧಿಕವಾಗಿದ್ದು ಹೆಚ್ಚು ಮಳೆ ಇಲ್ಲದ ಮೆಡಿಟರೇನಿಯನ್ ಕರಾವಳಿ ಮತ್ತು ಸುತ್ತಲಿನ ಪ್ರದೇಶದಲ್ಲಿ ಮಣ್ಣು ಅಥವಾ ಕಲ್ಲನ್ನು ಉಪಯೋಗಿಸಿ ಕಟ್ಟಿದ ಆಯಾಕಾರದ ಮಟ್ಟ ಚಾವಣಿಯ ಮಾಳಿಗೆ ಮನೆಗಳೂ, ಇಟಲಿಯ ಕೆಲವು ಭಾಗಗಳಲ್ಲಿ ಭಾರತದ ರೀತಿಯ ನಾಡುಹಂಚಿನ ಚಾವಣಿಯ ಮನೆಗಳೂ ಇವೆ.

ಏಷ್ಯದ ಉತ್ತರದ ಸೈಬೀರಿಯ ತೀರಪ್ರದೇಶಗಳಲ್ಲೂ ಯುರೋಪಿನ ಶೀತ ಪ್ರದೇಶಗಳಲ್ಲಿರುವಂಥ ಶಂಕುತಲೆಯಾಕೃತಿಯ ಚರ್ಮ ಹೊದಿಸಿದ ಗುಡಾರಗಳು ಕಂಡುಬರುತ್ತವೆ. ದಕ್ಷಿಣಕ್ಕೆ ಬರುತ್ತ ಉತ್ತರ ಮಂಗೋಲಿಯದಲ್ಲಿ ಚರ್ಮಕ್ಕೆ ಬದಲು ಫೆಲ್ಟ್ ಅನ್ನು, ಬೈಕಾಲ್ ಪ್ರದೇಶದಲ್ಲಿ ಚಳಿಗಾಲದಲ್ಲಿ ಚರ್ಮವನ್ನು, ಬೇಸಗೆಯಲ್ಲಿ ತೊಗಟೆಗಳನ್ನು ಮೇಲಿನ ರೀತಿಯ ಗುಡಾರಗಳಿಗೆ ಹೊದಿಸುವ ಪದ್ಧತಿ ಇದೆ. ಸಿರಿಯದ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಶಂಕುತಲೆ ಅಥವಾ ಅರ್ಧಗೋಳಾಕೃತಿಯ, ಪೂರ್ಣವಾಗಿ ಮಣ್ಣಿನಲ್ಲೇ ರೂಪಿಸಿದ ಮನೆಗಳಿವೆ. ಆಗ್ನೇಯ ಏಷ್ಯದಲ್ಲಿ ಬೊಂಬು ಹಂದರದ ಮೇಲೆ ಗರಿಗಳನ್ನು ಮುಚ್ಚಿದ, ಅಥವಾ ಬಿದಿರು ತಟ್ಟಿಗೆ ಗೋಡೆಗಳುಳ್ಳ ಆಯಾಕಾರದ ರಚನೆಗಳು ವಿಶೇಷವಾಗಿ ಕಾಣಬರುತ್ತವೆ. ಇವುಗಳ ಚಾವಣಿ ಇಪ್ಪಾರು ರೀತಿಯದು. ಇವಕ್ಕೂ ಗಳುವಿನ ಹಂದರದ ಮೇಲೆ ಗರಿಗಳನ್ನು ಹೊದಿಸಲಾಗಿರುತ್ತದೆ. ಫಿಲಿಪೀನ್ಸ್ ಮತ್ತು ಉತ್ತರ ವಿಯಟ್ನಾಂ ಜೌಗು ಪ್ರದೇಶಗಳಲ್ಲಿ ಹಲವು ಕಂಬಗಳಿಂದ ಎತ್ತಿದ ಅಟ್ಟಣೆಯ ಮೇಲೆ ಮನೆಗಳಿರುತ್ತವೆ. ಇವುಗಳ ರಚನೆ ಮೇಲಿನಂತೆಯೇ. ಆದರೆ ನಾಲ್ಕು ಪಾರಿನ ಚಾವಣಿಗಳೂ ಇರುವುದುಂಟು. ಬೋರ್ನಿಯೋ ದ್ವೀಪದಲ್ಲೂ ಇದೇ ರೀತಿಯ ರಚನೆಗಳಿವೆ. ಆದರೆ ಇಲ್ಲಿಯವು ಮೇಲಿನವಂತೆ ಏಕಕುಟುಂಬ ಗೃಹಗಳಾಗಿರದೆ, ಹಲವು ಕುಟುಂಬಗಳು (ಒಂದು ಗ್ರಾಮವೇ) ಒಟ್ಟಿಗೆ ವಾಸಿಸುವಂಥ ವ್ಯವಸ್ಥೆ ಆಗಿರುತ್ತದೆ. ಹಲವು ಗೂಟಗಳ ಮೇಲೆ ಎತ್ತಿದ ಆಯಾಕಾರದ ಅಟ್ಟಣೆಯ ಮೇಲೆ ಕಟ್ಟಿದ ಇಂಥ ಸಮೂಹ ವಾಸಗೃಹಗಳಲ್ಲಿ ಮುಂದುಗಡೆ ತೆರೆದ ಒಂದು ದೊಡ್ಡ ಮೊಗಸಾಲೆಯಿದ್ದು, ಹಿಂದಿನ ಭಾಗದಲ್ಲಿ ಅನೇಕ ಕೋಣೆಗಳ ಸಾಲು ಇರುತ್ತದೆ. ಒಂದೊಂದು ಕೋಣೆಯೂ ಒಂದೊಂದು ಕುಟುಂಬಕ್ಕೆ ಮೀಸಲಾಗಿರುತ್ತದೆ. ನ್ಯೂ ಗಿನಿ ದ್ವೀಪದ ಕರಾವಳಿಯಲ್ಲೂ ಸುಮಾರು ಇದೇ ರೀತಿಯ ಅಟ್ಟಣೆ ಗೃಹಗಳನ್ನು ಕಟ್ಟುವ ರೂಢಿ ಇದೆ. ಇಂಥ ಒಂದೆರಡು ರಚನೆಗಳು ಕೆಲವು ವೇಳೆ ಗಂಡಸರ ವಿನೋದಕ್ಕೆ ಅಥವಾ ಧಾರ್ಮಿಕ ಆಚರಣೆಗಳಿಗೆ ಉಪಯೋಗವಾಗುತ್ತವೆ.

ನ್ಯೂ ಗಿನಿಯ ಒಳನಾಡಿನಲ್ಲಿ ಅದೇ ಗೋಳಾಕಾರದ ಹುಲ್ಲುಚಾವಣಿಯ ವೃತ್ತಾಕಾರದ ಕುಳ್ಳು ಗುಡಿಸಲುಗಳು ಕಂಡುಬರುತ್ತವೆ. ಮೆಲನೇಷಿಯದಲ್ಲಿ ಬಂಬುಗಳನ್ನು ಒಂದರ ಮೇಲೊಂದರಂತೆ ಉದ್ದುದ್ದವಾಗಿ ಜೋಡಿಸಿ ಮಾಡಿದ ಕುಳ್ಳುಗೋಡೆಗಳ ಮೇಲೆ, ಗರಿಗಳಿಂದ ಮುಚ್ಚಿದ ಇಪ್ಪಾರು ಚಾವಣಿಯ ಆಯಾಕಾರದ ಗುಡಿಸಲುಗಳಿದ್ದರೆ, ಪಾಲಿನೇಷಿಯದ ಸಮೋಅ ಮುಂತಾದೆಡೆ ವೃತ್ತಾಕಾರದ ಕಲ್ಲಿನ ಅಡಿಪಾಯದಲ್ಲಿ ಕಂಬಗಳನ್ನು ನೆಟ್ಟು ಮೇಲೆ ಶಂಕುತಲೆ ಆಕಾರದ ಹುಲ್ಲಿನ ಚಾವಣಿಯ ಗುಡಿಸಲುಗಳು ಕಂಡುಬರುತ್ತವೆ. ಪಾಲಿನೇಷಿಯದ ಹೂರ್ನ್ ದ್ವೀಪದ ಮನೆಗಳು ಮರದ ದಿಮ್ಮಿಗಳಿಂದ ಮಾಡಿದವು. ದಿಮ್ಮಿಗಳನ್ನು ಒಂದರ ಮೇಲೊಂದು ಪೇರಿಸಿ ಸುಮಾರು ಅರ್ಧವೃತ್ತಾಕಾರದ ಗೋಡೆಗಳಾಗಿ ಮಾಡಿ, ಮೇಲೆ ಇಪ್ಪಾರು ಅಥವಾ ಮುಪ್ಪಾರಿನ ಗರಿಗಳಿಂದ ಮುಚ್ಚುವುದು ಇಲ್ಲಿಯ ಪದ್ಧತಿ. ಪಾಲಿನೇಷಿಯದ ಸೊಸೈಟಿ ದ್ವೀಪಗಳಲ್ಲಿ ನೀರಿನ ಮೇಲೆ ಅಟ್ಟಣೆಗಳನ್ನು ಕಟ್ಟಿ, ಅದರ ಮೇಲೆ ತೆಂಗಿನ ಹುರಿಯನ್ನು ಹೆಣೆದು ಮಾಡಿದ ತೆರೆಗೋಡೆಗಳು ಮತ್ತು ಮೇಲೆ ನಾಲ್ಕು ಹಾರಿನ ಗರಿಚಾವಣಿ ಇರುವ ಆಯಾಕಾರದ ಸುಂದರ ಗುಡಿಸಲುಗಳನ್ನು ಕಾಣಬಹುದು.

ಭಾರತದ ಜನಪದ ವಾಸ್ತುರಚನೆಗಳಲ್ಲೂ ಹಲವಾರು ಪರಿಸರ ನಿರ್ಧರಿತವಾದ ವೈಶಿಷ್ಟ್ಯ, ವೈವಿಧ್ಯಗಳನ್ನು ಗಮನಿಸಬಹುದು. ಕಾಶ್ಮೀರ, ಹಿಮಾಚಲ ಪ್ರದೇಶ ಮುಂತಾದ ಹಿಮಾಲಯದ ತಪ್ಪಲು ಪ್ರದೇಶದಲ್ಲಿನ ಹಳೆಯ ರೀತಿಯ ಗ್ರಾಮೀಣ ಕಟ್ಟಡಗಳು ವಿಶೇಷವಾಗಿ ಕಲ್ಲು ಮತ್ತು ಮರದಿಂದ ಆದವು. ಇಲ್ಲಿ ಆಯಾಕಾರದ ಗೃಹಗಳು ಸಾಮಾನ್ಯ. ಮರ ಹೆಚ್ಚಾಗಿ ದೊರೆಯುವ ಕಾಶ್ಮೀರ ಮುಂತಾದೆಡೆಗಳಲ್ಲಿ ಮೊದಲು ಮರದ ತೊಲೆಗಳನ್ನು ಉಪಯೋಗಿಸಿ, ಗೃಹದ ಚೌಕಟ್ಟನ್ನು ನಿರ್ಮಿಸುತ್ತಾರೆ. ಗೋಡೆಗಳಿಗೆ ನೆಟ್ಟಗೆ ಕಂಬಗಳನ್ನು ಕೂಡಿಸುವ ಅಡ್ಡ ತೊಲೆಗಳನ್ನು 1 ಮೀ. ಅಂತರದಲ್ಲಿ ಜೋಡಿಸಿ ಮಧ್ಯದ ಖಾಲಿಜಾಗಗಳನ್ನು ಮಣ್ಣು ಅಥವಾ ಇಟ್ಟಿಗೆಯಿಂದ ತುಂಬುತ್ತಾರೆ. ಚಾವಣಿ ಸಾಮಾನ್ಯವಾಗಿ ಮರದ ಹಲಗೆಯದು. ಕೆಲವು ಕಡೆ ತೆಳು ಚಪ್ಪಡಿಗಳನ್ನು ಒಂದರ ಮೇಲೆ ಒಂದರಂತೆ ಇಳಿಜಾರು ಮರದ ಹಂದರದ ಮೇಲೆ ಕೂಡಿಸಿ ಮಾಡಿದ ಚಾವಣಿಗಳೂ ಉಂಟು. ಹಿಮಾಚಲ ಪ್ರದೇಶದ ಗ್ರಾಮಗಳಲ್ಲಿ ಎರಡಂತಸ್ತಿನ ಮನೆಗಳು ಸಾಮಾನ್ಯ. ಇವುಗಳ ರಚನಾತಂತ್ರ ಮೇಲಿನ ರೀತಿಯದೇ. ಕೆಳಗಿನ, ಅಂದರೆ ನೆಲಮಟ್ಟದ ಅಂತಸ್ತನ್ನು ದನ, ಮೇಕೆಗಳಿಗೂ ಮೇಲಿನ ಅಂತಸ್ತನ್ನು ಜನವಾಸಕ್ಕೂ ಉಪಯೋಗಿಸುತ್ತಾರೆ. ರಾಜಸ್ಥಾನದ ಮರಳುಗಾಡು ಪ್ರದೇಶ ಮತ್ತು ಮಳೆ ಕಡಿಮೆ ಬೀಳುವ ಪಂಜಾಬ್, ಉತ್ತರಪ್ರದೇಶ ಮತ್ತು ಗುಜರಾತಿನ ಭಾಗಗಳಲ್ಲಿ ಮಣ್ಣಿನ ಮಾಳಿಗೆಯ ಮನೆಗಳು ಕಂಡುಬರುತ್ತವೆ. ಇವುಗಳು ತಳವಿನ್ಯಾಸದಲ್ಲಿ ಆಯಾಕಾರದವು. ಮನೆಯ ಮುಂದೆ ಬಾಗಿಲಿನ ಇಕ್ಕೆಲಗಳಲ್ಲೂ ಕೂಡುವ ಜಗುಲಿ ಇರುತ್ತದೆ. ಮೇಲಿನ ಚಾವಣಿ ಮಟ್ಟವಾಗಿದ್ದು, ಜಂತಿಗಳ ಮೇಲೆ, ಕಡ್ಡಿ ಸೊಪ್ಪುಗಳನ್ನು ಇಟ್ಟು, ಅದರ ಮೇಲೆ ಮಣ್ಣು ಹರಡಿ ಮಾಡಿದವುಗಳಾಗಿರುತ್ತವೆ. ಕಿಟಕಿಗಳು ಅಪರೂಪ. ರಾಜಸ್ಥಾನದ ಮರಳುಗಾಡಿನಲ್ಲಿ ಬಿಸಿ ಹಾಗೂ ದೂಳುಮಯ ಗಾಳಿಯ ಹೊಡೆತವಿರುವುದರಿಂದ, ಅವನ್ನು ತಡೆಯಲು ಕಿಟಕಿಗಳನ್ನು ಇಡುವುದೇ ಇಲ್ಲ. ಮನೆಗಳು ಬೆಲ್ಲದಚ್ಚಿನಂತೆ ಬೋಳುಬೋಳಾಗಿರುತ್ತವೆ. ದ್ವಾರಗಳೂ ಬಹು ಚಿಕ್ಕವು. ಇಂಥ ಮನೆಗಳನ್ನು ಒತ್ತಾಗಿ ಕಟ್ಟಿ, ದ್ವಾರಗಳನ್ನು ಕಿರು ಓಣಿಯತ್ತ ತೆರೆದಿರುವುದು ರೂಢಿ. ಮಧ್ಯಪ್ರದೇಶದ ವಿಂಧ್ಯ ಶ್ರೇಣಿಯ ಭಾಗದಲ್ಲಿ ಮೇಲಿನ ರೀತಿಯ, ಆದರೆ ಕಲ್ಲಿನಲ್ಲಿ ಕಟ್ಟಿದ ಮನೆಗಳು ಅಲ್ಲಲ್ಲಿ ಕಾಣಸಿಗುತ್ತವೆ. ಇಲ್ಲಿ ಆಯಾಕಾರದ ಮಣ್ಣುಗೋಡೆಗಳ ಮೇಲೆ ಹುಲ್ಲು, ಸೊಪ್ಪಿನ ಇಪ್ಪಾರು ಚಾವಣಿಯ ಮನೆಗಳು ಸಾಮಾನ್ಯ. ಚಾವಣಿಗೆ ನಾಡಹೆಂಚಿನ ಉಪಯೋಗವೂ ಉಂಟು. ವಿದರ್ಭ ಪ್ರದೇಶದಲ್ಲೂ ಇದೇ ರೀತಿಯ ಗೃಹನಿರ್ಮಾಣ ಕಂಡುಬರುತ್ತದೆ. ಆದರೆ ಮಳೆ ಕಡಿಮೆ ಇರುವ ಮಹಾರಾಷ್ಟ್ರದ ಪ್ರಸ್ಥಭೂಮಿಯಲ್ಲಿ ಮಟ್ಟಚಾವಣಿಯ ಮಣ್ಣಿನ ಮಾಳಿಗೆ ಮನೆಗಳು ರೂಢಿಯಲ್ಲಿವೆ. ಆಂಧ್ರಪ್ರದೇಶದ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲೂ ಇದೇ ರೀತಿಯ ಮನೆಗಳಿರುತ್ತವೆ. ಕೆಲವೆಡೆ ಚಾವಣಿಯನ್ನು ಕಡಪಕಲ್ಲು ಮುಂತಾದ ತೆಳುಚಪ್ಪಡಿಗಳಿಂದ ಮುಚ್ಚುವುದೂ, ಗೋಡೆಗಳಿಗೆ ಇಂಥದೇ ಕಲ್ಲುಚೂರುಗಳನ್ನು ಬಳಸುವುದೂ ಉಂಟು. ಆಂಧ್ರಪ್ರದೇಶದ ಕರಾವಳಿ ಪ್ರದೇಶದಲ್ಲಾದರೋ ಮಣ್ಣುಗೋಡೆಯ ಮೇಲೆ, ಮರದ ತುಂಡು ಅಥವಾ ಬಿದಿರಿನ ಹಂದರವನ್ನು ಎಬ್ಬಿಸಿ ಸೋಗೆ ಅಥವಾ ತಾಳೆ ಗರಿಯಿಂದ ಮುಚ್ಚಿದ ಇಪ್ಪಾರು ಚಾವಣಿಯ ಆಯಾಕಾರದ ತಳವಿನ್ಯಾಸದ ಮನೆಗಳನ್ನು ಕಟ್ಟುವ ಸಂಪ್ರದಾಯವಿದೆ. ಇದೇ ರೀತಿಯ ವಾಸಗೃಹಗಳು ತಮಿಳುನಾಡಿನಲ್ಲೂ ಸಾಮಾನ್ಯ. ಚಾವಣಿಗೆ ನಾಡಹೆಂಚನ್ನು ಬಳಸುವುದೂ ವಿಶೇಷವಾಗಿ ಕಾಣುತ್ತದೆ. ತಮಿಳುನಾಡಿನ ನೀಲಗಿರಿ ಜಿಲ್ಲೆಯಲ್ಲಿರುವ ಆದಿವಾಸಿ ತೋಡರ ಮನೆಗಳು ವಿಚಿತ್ರರೀತಿಯವು. ಇವು ತಳವಿನ್ಯಾಸದಲ್ಲಿ ಆಯಾಕಾರವಾಗಿರುತ್ತವೆ. ಆದರೆ ಮೇಲುಭಾಗ ಅರೆಪೀಪಾಯಿ (ಕಮಾನು) ಆಕೃತಿಯದು. ಒಳಭಾಗದಲ್ಲಿ ಒಂದೆರಡು ಕೋಣೆಗಳಂತೆ ವಿಭಾಗವಿರುತ್ತದೆ. ಬಿದಿರು ಮತ್ತು ಹುಲ್ಲು ಕಟ್ಟಡ ಕಟ್ಟಲು ಉಪಯೋಗಿಸುವ ಸಾಮಾನ್ಯವಸ್ತುಗಳು. ಕೇರಳದ ಬೆಟ್ಟ ಮತ್ತು ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಮಳೆ ಬೀಳುವುದರಿಂದ ಅಲ್ಲಿಯ ಜನಪದ ನಿವಾಸಗಳಲ್ಲಿ ಕುಳ್ಳುಗೋಡೆ, ಆದರೆ ಎತ್ತರದ ಬಹು ಇಳಿಜಾರಾಗಿರುವ ಚಾವಣಿ ಕಂಡುಬರುತ್ತದೆ. ಈ ಚಾವಣಿಯ ಸೂರು ಗೋಡೆಗಳಿಗಿಂತ ಹೆಚ್ಚು ಮುಂಚಾಚಿರುವಂತೆ ಇರುತ್ತದೆ. ಗೋಡೆಗೆ ಮಣ್ಣು, ಮರ ಅಥವಾ ಬಿದಿರಿನ ತಡಿಕೆ ಉಪಯೋಗಿಸಿದರೆ ಚಾವಣಿ ಬಿದಿರಿನ ಹಂದರದ ಮೇಲೆ, ಹುಲ್ಲು, ಜೊಂಡು ಅಥವಾ ತೆಂಗಿನ ಗರಿಗಳಿಂದ ಮುಚ್ಚಿ ಮಾಡಿದ್ದಾಗಿರುತ್ತದೆ. ಈ ಪ್ರದೇಶದ ಗೃಹಗಳ ತಳವಿನ್ಯಾಸ ಆಯವಾಗಿದ್ದರೂ ನಾಲ್ಕು ಪಾರಿನ ಚಾವಣಿ ಇಲ್ಲಿಯ ವೈಶಿಷ್ಟ್ಯ. ಇವುಗಳಲ್ಲಿ ಎರಡು ಪಾರುಗಳು ಆಯಾಕಾರವಾಗಿದ್ದು ಉದ್ದನೆಯ ಬೆಮ್ಮರದಲ್ಲಿ ಕೂಡಿರುತ್ತವೆ. ಇನ್ನೆರಡು ಪಾರುಗಳು ಬೆಮ್ಮರದಿಂದ ಪಕ್ಕಕ್ಕೆ ಇಳಿಯುತ್ತ ತ್ರಿಕೋಣಾಕಾರವಾಗಿರುತ್ತವೆ.

ಕರ್ನಾಟಕದ ಹೆಚ್ಚು ಮಳೆ ಬೀಳುವ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲೂ ಕೇರಳದ ರೀತಿಯ ಕುಳ್ಳುಗೋಡೆಗಳು ಮತ್ತು ಬಹು ಇಳಿಜಾರಿನ ಎರಡು ಅಥವಾ ನಾಲ್ಕು ಹಾರಿನ ಚಾವಣಿಗಳ ಮನೆಗಳು ಕಂಡುಬರುತ್ತವೆ. ಗೋಡೆಗಳು ಸಾಮಾನ್ಯವಾಗಿ ಮಣ್ಣು ಅಥವಾ ಜಂಬಿಟ್ಟಿಗೆಯವು. ಚಾವಣಿಗಳು (ಇತ್ತೀಚಿನ ಮಂಗಳೂರು ಹೆಂಚಿನವನ್ನು ಗಮನಿಸದೇ ಹೋದಲ್ಲಿ) ವಿಶೇಷತಃ ಬಿದಿರು ಅಥವಾ ಮರದ ಜಂತಿ ಹಂದರದ ಮೇಲೆ ಮುಚ್ಚಿದ ಹುಲ್ಲು, ಗರಿ ಮುಂತಾದವುಗಳಿಂದ ಮಾಡಿದವು. ಇಲ್ಲಿಯ ಮನೆಗಳಲ್ಲಿ ಇದ್ದಿಲು ಮುಂತಾದ ಸಾಮಗ್ರಿಗಳನ್ನು ಬೆರೆಸಿ ಅರೆದು ಮಾಡಿದ ನಯಗಾರೆಯನ್ನು ನೆಲ ಮತ್ತು ಗೋಡೆಯ ಕೆಳಮಟ್ಟಗಳಿಗೆ ಹಚ್ಚುವ ರೂಢಿ ಇದೆ. ಕೆಂಪು ಕಾರಣೆಯ ಸರಳ ಅಲಂಕರಣವೂ ಉಂಟು. ಮನೆಗಳ ಮುಂದೆ ಹೆಬ್ಬಾಗಿಲ ಇಕ್ಕೆಲದಲ್ಲಿ ಜಗಲಿ, ಒಳಗೆ ಹಜಾರ ಮತ್ತು ವಿವಿಧ ಗೃಹ ಉದ್ದೇಶಗಳಿಗಾಗಿ ಬಳಸಲು ಬೇರೆ ಬೇರೆ ಕೋಣೆಗಳಿರುತ್ತವೆ. ಬಹು ಸರಳವಾದ ಗುಡಿಸಲುಗಳು ಆಕಾರದಲ್ಲಿ ಸುಮಾರು ಇದೇ ರೀತಿಯಿದ್ದರೂ ಒಳ ಆವರಣದಲ್ಲಿ ಹೆಚ್ಚು ವಿಂಗಡಣೆಗಳಿರುವುದಿಲ್ಲ.

ಉತ್ತರ ಕರ್ನಾಟಕದ ಬಯಲುಪ್ರದೇಶ, ಹಾಗೂ ದಕ್ಷಿಣ ಕರ್ನಾಟಕದ ಮಳೆ ಕಡಿಮೆ ಇರುವ ಚಿತ್ರದುರ್ಗ, ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳು ಮತ್ತು ಸುತ್ತಲ ಪ್ರದೇಶಗಳಲ್ಲಿ ಆಯಾಕಾರದ ಮಾಳಿಗೆ ಮನೆಗಳು ವಿಶೇಷ. ಇವುಗಳ ಗೋಡೆಗಳು ಬಹುಮಟ್ಟಿಗೆ ಮಣ್ಣಿನವು. ಕಲ್ಲು ವಿಶೇಷವಾಗಿ ದೊರಕುವ ಕೆಲವೆಡೆಗಳಲ್ಲಿ ಕಲ್ಲುಚೂರುಗಳನ್ನು ಜೋಡಿಸಿ ಮಾಡಿದ ಗೋಡೆಗಳೂ ಇರುತ್ತವೆ. ಹೆಬ್ಬಾಗಿಲು ಕಿರಿದು ಮತ್ತು ಕುಳ್ಳು. ಒಳಭಾಗದಲ್ಲಿ ಆವಶ್ಯಕತೆಗೆ ತಕ್ಕಂತೆ ಕೋಣೆಗಳೂ ಹಜಾರವೂ ಇರುತ್ತವೆ. ಗೋಡೆಗಳ ಮೇಲೆ ತೊಲೆ ಮತ್ತು ಅಡ್ಡಜಂತಿಗಳನ್ನು ಇಟ್ಟು ಹಂದರ ಮಾಡಿ, ಮೇಲೆ ಕಡ್ಡಿ, ಸೊಪ್ಪುಗಳನ್ನು ಜೋಡಿಸಿ, ಅದರ ಮೇಲೆ ಮಣ್ಣನ್ನು ದಪ್ಪಗೆ ಹರವಿ ಮಾಡಿದ ಚಾವಣಿ ಇರುತ್ತದೆ. ಗೋಡೆಗಳು ಇರಚಲಿನಿಂದ ನೆನೆಯದಂತೆ, ಅವುಗಳ ಮೇಲಂಚಿನಲ್ಲಿ ಮುಂಚಾಚುವ ಲೋವೆ ಕಲ್ಲುಗಳನ್ನೋ ಭೂತಾಳೆ ಪಟ್ಟೆಗಳನ್ನೋ ಜೋಡಿಸಿರುತ್ತಾರೆ. ಮೇಲೆ ಹರವಿದ ಮಣ್ಣು ಮಳೆಯಿಂದ ಕೊಚ್ಚಿಹೋಗದಂತಿರಲೂ, ಬಿದ್ದ ನೀರು ಕಟ್ಟಡಕ್ಕೆ ಅಪಾಯವಾಗದಂತೆ ಒಂದೆಡೆಯಿಂದ ಹರಿದುಹೋಗಲೂ ಸುತ್ತಂಚಿನಲ್ಲಿ ಮಣ್ಣು ದಿಂಡನ್ನೂ, ಅಲ್ಲಲ್ಲಿ ಸುಟ್ಟ ಮಣ್ಣಿನ ದೋಣಿಗಳನ್ನೂ ಒದಗಿಸಿರುತ್ತಾರೆ. ಈ ಕಟ್ಟಡಗಳಿಗೆ ಕಿಟಕಿಗಳಿರುವುದಿಲ್ಲವಾದರೂ ಇದಕ್ಕೆ ಅಪವಾದಗಳು ಇಲ್ಲದಿಲ್ಲ. ಮನೆಗಳಿಗೆ ಮಣ್ಣುಗಾರೆ, ಸುಣ್ಣ, ಕಾರಣೆಯ ಪರಿಷ್ಕರಣವಿರುತ್ತದೆ. ಕೋಲಾರ, ಬೆಂಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಗ್ರಾನೈಟ್ ಚಪ್ಪಡಿಗಳು ಬಹುವಾಗಿ ದೊರಕುವುದರಿಂದ ಇಲ್ಲಿಯ ಮಾಳಿಗೆ ಮನೆಗಳಲ್ಲಿ ಮಣ್ಣಿನ ಬದಲು ಈ ಕಲ್ಲಿನ ಉಪಯೋಗವೇ ಹೆಚ್ಚು. ಮೊದಲು ಕಲ್ಲಿನ ಕಂಬಗಳನ್ನು ನೆಟ್ಟು ಅದೇ ಕಲ್ಲಿನ ತೊಲೆಗಳನ್ನು ಜೋಡಿಸಿ, ಮೇಲೆ ಚಪ್ಪಡಿಗಳನ್ನು ಹಾಸುವ ಪದ್ಧತಿ ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಮಳೆ ಕಡಿಮೆ ಬೀಳುವ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾಳಿಗೆ ಮನೆಗಳಲ್ಲದೆ ವೃತ್ತಾಕಾರದ ತಳವಿನ್ಯಾಸವಿರುವ ಮನೆಗಳೂ ಇವೆ. ಇವು ವಿಶೇಷವಾಗಿ ಒಂದೇ ಕೋಣೆಯ ಮನೆಗಳು. ಗೋಡೆ ಮಣ್ಣಿನದು, ಮೇಲೆ ಬಿದಿರಿನ ಅಥವಾ ಕಡ್ಡಿಗಳ ಹಂದರದ ಮೇಲೆ ಹುಲ್ಲು ಮುಚ್ಚಿದ ಶಂಕುತಲೆಯಾಕಾರದ ಚಾವಣಿ ಇರುತ್ತದೆ.

ದಕ್ಷಿಣ ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲಿರುವ ಜನಪದ ನಿವಾಸಗಳು ಸಾಮಾನ್ಯವಾಗಿ ಆಯಾಕಾರದ ಮಣ್ಣುಗೋಡೆಯ ಮನೆಗಳು. ಇವುಗಳಲ್ಲೂ ಮುಂದೆ ಬಾಗಿಲಿನ ಇಕ್ಕೆಲಗಳಲ್ಲಿ ಜಗಲಿ, ಒಳಗೆ ಹಜಾರ ಮತ್ತು ಅನೇಕ ಕೋಣೆಗಳಿರುತ್ತವೆ. ದೊಡ್ಡ ಮನೆಗಳಲ್ಲಿ ಪುಟದ ಗೋಡೆ (ಅಂದರೆ ಕಲಸಿದ ಮಣ್ಣಿನ ದಪ್ಪ ಉಂಡೆಗಳನ್ನು ಒಂದರ ಮೇಲೊಂದು ಪೇರಿಸಿ ಎತ್ತಿದ ಗೋಡೆ) ಸಾಮಾನ್ಯ. ಬಹು ಎತ್ತರವಾದ ಗೋಡೆಗಳ ಆವಶ್ಯಕತೆ ಇದ್ದಾಗ, ಅಥವಾ ಚಿಕ್ಕ ಮನೆಗಳನ್ನು ಕಟ್ಟುವಾಗ ತಡಿಕೆ ಗೋಡೆಯನ್ನು ಅಂದರೆ ಬಿದಿರಿನ ಕಂಬಗಳಿಗೆ ಬಿಗಿದ ಬಿದಿರು ದಬ್ಬೆಗಳ ಹಂದರದ ಮೇಲೆ ಕಲಸಿದ ಮಣ್ಣನ್ನು ಮೆತ್ತಿ ಮಾಡಿದ ತೆಳುಗೋಡೆಯನ್ನು ಅಳವಡಿಸುವುದುಂಟು. ಮನೆಗಳ ಚಾವಣಿ ಸಾಮಾನ್ಯವಾಗಿ

ಇಪ್ಪಾರು. ಪಕ್ಕದ ಗೋಡೆಗಳ ಎತ್ತರದ ಭಾಗದಲ್ಲಿ ಒಂದು ಬೆಮ್ಮರವನ್ನು ಇಟ್ಟು, ಹಾರು ಎರಡೂ ಕಡೆ ಇಳಿಜಾರಾಗಿರುವಂತೆ ಮಾಡಲಾಗಿರುತ್ತದೆ. ಈ ಹಾರುಗಳು ಬೊಂಬು, ಗಳುಗಳಿಂದ ಆದ ಹಂದರಗಳು. ಮೇಲೆ ತೆಂಗಿನ ಗರಿಯಿಂದ ಹೆಣೆದ ಮಟ್ಟಾಳೆಯನ್ನು ಅಥವಾ ಮಣ್ಣಿನ ಅರೆಕೊಳವೆ ಆಕೃತಿಯ ನಾಡ ಹೆಂಚುಗಳನ್ನು ಮುಚ್ಚಲು ಉಪಯೋಗಿಸ ಲಾಗುತ್ತದೆ. ಕೆಲವೆಡೆ ಸೋಗೆ ಮತ್ತು ಹುಲ್ಲನ್ನೂ ಬಳಸುವುದುಂಟು. ಮಣ್ಣಿನ ತಡಿಕೆ ಅಥವಾ ಮಟದ ಗೋಡೆಗಳನ್ನು ಆಯಾಕಾರದಲ್ಲಿ ಕಟ್ಟಿ ಒಂದು ಗೋಡೆಯನ್ನು ಎತ್ತರಕ್ಕೆ ಮಾಡಿ, ಅದಕ್ಕೆ ಸಮಕೋನದಲ್ಲಿರುವ ಗೋಡೆಗಳನ್ನು ಇಳಿಜಾರಾಗಿರುವಂತೆ ರೂಪಿಸಿ ಇದರ ಮೇಲಿನ ಚಾವಣಿ ಒಂದೇ ಕಡೆಗೆ ಇಳಿಜಾರಾಗಿರುವಂತೆ ಮಾಡಿದ ಒಪ್ಪಾರು ಕಟ್ಟಡಗಳೂ ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಇಂಥ ಕಟ್ಟಡಗಳನ್ನು ದನ, ಎಮ್ಮೆಗಳನ್ನು ಕಟ್ಟಲು ಉಪಯೋಗಿಸುವುದೇ ಹೆಚ್ಚು. ಒಂದು ವಿಶಿಷ್ಟ ರೀತಿಯ, ವಿಶೇಷವಾಗಿ ಸ್ವಲ್ಪ ಸ್ಥಿತಿವಂತರಿಗೇ ಸೇರಿದ, ತೊಟ್ಟಿಮನೆಗಳು ಕರ್ನಾಟಕದ ಹಲವೆಡೆಗಳಲ್ಲಿವೆ. ಇವು ರಚನಾವಿಧಾನದಲ್ಲಿ ಇತರವಂತೆಯೇ ಇದ್ದರೂ ವಿನ್ಯಾಸ ಮಾತ್ರ ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ಇವುಗಳಲ್ಲಿ ಆಯ ಅಥವಾ ಚೌಕ ತಳವಿನ್ಯಾಸವಿದ್ದು ಮಧ್ಯೆ ಒಂದು ತೆರೆದ (ಮುಚ್ಚು ಇಲ್ಲದ) ತೊಟ್ಟಿ ಇರುತ್ತದೆ. ತೊಟ್ಟಿಯ ಸುತ್ತಲೂ ಪಡಸಾಲೆ, ಅದರ ಸುತ್ತಲೂ ಕೋಣೆಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ. ಮುಂದೆ ಮುಂಬಾಗಿಲಿನ ಇಕ್ಕೆಲಗಳಲ್ಲಿ ಜಗಲಿಗಳಿರುತ್ತವೆ. ಈ ತೊಟ್ಟಿಮನೆಗಳು ವಿಶಾಲವಾಗಿದ್ದು, ಒಂದು, ಎರಡು ಅಥವಾ ಮೂರು ಅಂಕಣಗಳ ತೊಟ್ಟಿಮನೆಗಳು ಇತ್ಯಾದಿಯಾಗಿ ವಿವಿಧ ಪರಿಮಾಣಗಳಲ್ಲಿರುತ್ತವೆ.

ಕರ್ನಾಟಕದ ಜನಪದ ವಾಸ್ತು ರಚನೆಗಳಲ್ಲಿ ವಾಸಗೃಹಗಳ ಜೊತೆಗೆ ದೇವಾಲಯಗಳೂ ಕಂಡುಬರುತ್ತವೆ. ಇವು ಶ್ರೀಮಂತ ಸಮಾಜಗಳಿಂದ ಪ್ರೋತ್ಸಾಹಿತವಾದ ರಚನೆಗಳಂತೆ ವಿಶಿಷ್ಟ ರೀತಿಯವುಗಳಲ್ಲ. ಸಾಮಾನ್ಯವಾಗಿ ಬಹು ಚಿಕ್ಕ ಏಕಕೋಣೆಯ ಕಟ್ಟಡಗಳು. ರಚನಾತಂತ್ರ ವಾಸಗೃಹಗಳಂತೆಯೇ. ಕೆಲವು ಗ್ರಾಮಗಳಲ್ಲಿ ಅತಿ ಕುಳ್ಳಾದ, ಕೇವಲ 1–1.3 ಮೀ.ಅಡಿ ಎತ್ತರದ, ಮೂರು ಕಡೆ ಮಾತ್ರ ಗೋಡೆಗಳಿದ್ದು ಮಟ್ಟ ಚಾವಣಿಯಿಂದ ಮುಚ್ಚಿದ ಆಯಾಕಾರದ ಕಿರು ಗುಡಿಗಳು ಕಂಡುಬರುತ್ತವೆ.

ಊರಿನ ಜನ ಕೆಲವೊಂದು ಸಾಮಾಜಿಕ ವ್ಯವಹಾರಗಳಿಗಾಗಿ ಸಭೆ ಸೇರಲು, ಕೆಲವು ಬಾರಿ ಹೊರಗಿನಿಂದ ಬಂದವರಿಗೆ ತಂಗುದಾಣವಾಗಿರಲು, ಮತ್ತಿತರ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗವಾಗಲು ಹಳ್ಳಿಗೊಂದು ಚಾವಡಿ ಇರುತ್ತದೆ. ಇವು ಸಾಮಾನ್ಯವಾಗಿ ಮೂರು ಕಡೆ ಗೋಡೆ ಇದ್ದು, ಮುಂಭಾಗ ತೆರೆದಂತಿರುವ ಕಟ್ಟಡಗಳು. ಗ್ರಾಮದ ಆವಶ್ಯಕತೆ, ಆರ್ಥಿಕ ಸ್ಥಿತಿ ಇತ್ಯಾದಿಗಳಿಗೆ ಅನುಗುಣವಾಗಿ ಇವು ಹಲವು ಅಂಕಣಗಳಷ್ಟು ಅಗಲವಾಗಿರುತ್ತವೆ.

ಗ್ರಾಮಗಳಲ್ಲಿ ಕಂಡುಬರುವ ಇನ್ನೊಂದು ರೀತಿಯ ಕಟ್ಟಡ, ಗರಡಿ (**ನೋಡಿ**). ಗ್ರಾಮೀಣರ ಕಸರತ್ತಿಗಾಗಿ ನಿರ್ಮಿತವಾಗಿರುವ ಈ ಗರಡಿಮನೆಗಳಲ್ಲಿ ಒಂದು ಹಜಾರ ಮಾತ್ರ ಇರುತ್ತದೆ. ಆಯಾ ಪ್ರದೇಶದ ರೂಢಿಯಂತೆ ಮಾಳಿಗೆ ಚಾವಣಿಯೋ, ಒಪ್ಪಾರು, ಇಪ್ಪಾರು ಚಾವಣಿಯೋ ಇರುತ್ತದೆ. ಕಿಟಕಿಗಳು ಇಲ್ಲದಿರುವುದು, ಅತಿ ಕುಳ್ಳಾದ ಬಾಗಿಲು ಇವುಗಳ ವೈಶಿಷ್ಟ್ಯ

(ಎಸ್.ಎನ್)

**ಜನಪದ ವೈದ್ಯ :** ಯಾವುದನ್ನು ಜನಸಾಮಾನ್ಯರು ಸಾಮಾನ್ಯವಾಗಿ ಹಳ್ಳಿವೈದ್ಯ, ನಾಟಿವೈದ್ಯ ಎಂದು ಕರೆಯುವರೋ ಅದನ್ನೇ ಶಾಸ್ತ್ರೀಯವಾಗಿ ಜನಪದ ವೈದ್ಯ ಎಂದು ಕರೆಯಬಹುದು. ಜಾನಪದದಲ್ಲಿ ಸಾಹಿತ್ಯಕ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆ ಎಂಬ ನಾಲ್ಕು ಬಗೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಜನಪದ ವೈದ್ಯ ವೈಜ್ಞಾನಿಕ ಬಗೆಗೆ ಸೇರುತ್ತದೆ. ಜನಪದರು ಕೆಲಸದ ಆಯಾಸ ನೀಗಿಕೊಳ್ಳಲು ಮತ್ತು ಸಂತೋಷಪಡಲು ಜನಪದ ಸಾಹಿತ್ಯ ಹಾಗೂ ಜನಪದ ಕಲೆಗಳನ್ನು ಸೃಷ್ಟಿಸಿದರು. ದೇವರಿಗೆ ಹೆದರಿ ಸಂಪ್ರದಾಯಗಳನ್ನು ಮತ್ತು ಹಬ್ಬಗಳನ್ನು ಆಚರಿಸಿದರು; ಹಾಗೆಯೇ ತಮಗೆ ಬಂದ ರೋಗಗಳನ್ನು ಪರಿಹಾರ ಮಾಡಿಕೊಳ್ಳಲು ಜನಪದ ವೈದ್ಯವನ್ನು ಕಂಡುಕೊಂಡರು. ದಿನನಿತ್ಯದ ಜೀವನದಲ್ಲಿ ಜನಪದರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಎತ್ತಿಗೆ ಕಾಲು ಮುರಿದಿದೆ, ಮನೆಯಲ್ಲಿ ಯಾರಿಗೋ ಹಾವು ಕಚ್ಚಿದೆ, ಕುಡುಗೋಲಿನಿಂದ ಯಾವನೋ ಕೈ ಕುಯ್ದುಕೊಂಡಿದ್ದಾನೆ–ಇತ್ಯಾದಿ. ಇಂಥ ಸಂದರ್ಭಗಳಲ್ಲಿ ಏನು ಮಾಡಬೇಕು? ಈಗಿನ ಆಧುನಿಕ ಯುಗದಲ್ಲಿರುವಂತೆ ಆಸ್ಪತ್ರೆಗಳ ಸೌಕರ್ಯ ಅಂದು ಅವರಿಗೆ ಇರಲಿಲ್ಲ. ಆದರೆ ಸಮೃದ್ಧವಾದ ಪ್ರಕೃತಿ ಕಣ್ಣೆದುರಿಗೆ ಸುತ್ತಮುತ್ತ ಇತ್ತು. ಆವಶ್ಯಕತೆಯೇ ಸಂಶೋಧನೆಯ ಮೂಲ. ಮೇಲ್ಕಂಡ ಪರಿಸ್ಥಿತಿಗಳನ್ನು ಎದುರಿಸಬೇಕಾಗಿ ಬಂದಾಗ ಅವಕ್ಕೆ ಪರಿಹಾರಗಳನ್ನೂ ಜನಪದರೇ ಕಂಡುಕೊಳ್ಳಬೇಕಾಯಿತು. ಪ್ರಕೃತಿಯಲ್ಲಿ ದೊರೆಯುವ ಬಗೆಬಗೆಯ ಬೇರುಗಳು, ಎಲೆಗಳು, ಕಾಯಿಗಳು, ಹಣ್ಣುಗಳು, ಪ್ರಾಣಿಜನ್ಯವಾದ ವಸ್ತುಗಳು, ದಿನಬಳಕೆಯ ಸಾಮಾನ್ಯ ವಸ್ತುಗಳು ಎಲ್ಲವನ್ನೂ ಬುದ್ಧಿವಂತಿಕೆಯಿಂದ ಬಳಸಿಕೊಂಡು ರೋಗಗಳನ್ನು ಅವರೂ ಪರಿಹರಿಸಿಕೊಳ್ಳಲು ಯತ್ನಿಸಿದರು. ಒಂದೊಂದು ಖಾಯಿಲೆಯನ್ನೂ ಗುಣಪಡಿಸಲು ಒಂದೊಂದು ಔಷಧಿ ಬಳಸಬೇಕೆಂಬುದನ್ನು ಅನುಭವದಿಂದ ಅರಿತರು. ಇದರಿಂದಾಗಿ ಹೊಸ ವಿದ್ಯೆಯೊಂದು ತಿಳಿದಂತಾಯಿತು. ಹಸ್ತಗುಣ ಚೆನ್ನಾಗಿದ್ದ ಕೆಲವರು ಈ ಕ್ರಮಗಳನ್ನು ರೂಢಿಸಿಕೊಂಡರು. ತಲೆಮಾರಿನಿಂದ ತಲೆಮಾರಿಗೆ ಈ ವಿದ್ಯೆ ವರ್ಗಾವಣೆಯಾಯಿತು. ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ ಪ್ರಸಾರವಾಯಿತು. ಈ ವಿದ್ಯೆಯಲ್ಲಿ ಪಾರಂಗತರಾದವರು ಆಯಾ ಪರಿಸರದಲ್ಲಿ ಹೆಚ್ಚು ಗೌರವ ಹಾಗೂ ಪ್ರಯೋಜನ ಪಡೆದರು. ಜನಪದ ವೈದ್ಯ ಹುಟ್ಟಿದ, ಬೆಳೆದು ಬಂದ ಹಾಗೂ ಈವರೆಗೆ ಉಳಿದು ಬಂದಿರುವ ಕ್ರಮ ಹೀಗೆ ಎಂದು ಹೇಳಬಹುದು. ಇದೇ ಎಲ್ಲ ವೈದ್ಯದ, ಮುಖ್ಯವಾಗಿ ಆಯುರ್ವೇದದ ಮೂಲವೆನ್ನಬಹುದು.

ಶಿಷ್ಟವೈದ್ಯ ಜನಪದ ವೈದ್ಯದಿಂದ ಇಂದಿಗೂ ಕಲಿಯಬೇಕಾದ ವಿಷಯ ಅಗಾಧವಾಗಿದೆ. ಹೀಗಾಗಬೇಕಾದರೆ ಜನಪದ ವೈದ್ಯದ ಸಂಗ್ರಹ ಮತ್ತು ಸಂಶೋಧನೆ ಅನಿವಾರ್ಯವಾಗುತ್ತದೆ. ಜಾನಪದದ ಪ್ರತಿಯೊಂದು ಪ್ರಕಾರದ ಸಂಗ್ರಹಕಾರ್ಯವೂ ಕಠಿಣವಾದುದು. ಅದರಲ್ಲಿಯೂ ಜನಪದ ವೈದ್ಯದ ಸಂಗ್ರಹವಂತೂ ಇನ್ನೂ ಹೆಚ್ಚು ಕಠಿಣವಾದುದು, ಜನಪದ ವೈದ್ಯ ಕೆಲವು ಜನರ ಕಸಬಾಗಿರುವುದರಿಂದ ಅವರ ಜೀವನ, ಸಾಮಾಜಿಕ ಮರ್ಯಾದೆ ಮೊದಲಾದ ಅಂಶಗಳು ಅವರ ಆ ವೈದ್ಯದ ಮೇಲೆ ಅವಲಂಬಿತವಾಗಿರುವುದರಿಂದ ಸಂಗ್ರಾಹಕರಿಗೆ ಅವರು ತಮಗೆ ತಿಳಿದಿರುವ ವೈದ್ಯಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸುವುದಿಲ್ಲ. ಸಂಗ್ರಾಹಕರನ್ನು ಸಂಶಯ ದೃಷ್ಟಿಯಿಂದ ನೋಡುತ್ತಾರೆ. ತಮ್ಮ ವೈದ್ಯದ ಗುಟ್ಟನ್ನು ಬೇರೆಯವರಿಗೆ ತಿಳಿಸಿದರೆ ಅವರಿಂದ ತಮ್ಮ ಅಸ್ತಿತ್ವಕ್ಕೆ ಭಂಗ ಬರುವುದೆಂದು ಹೆದರುತ್ತಾರೆ; ಬಗೆಬಗೆಯ ನೆಪಗಳನ್ನು ಒಡ್ಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ವೈದ್ಯವಿವೇಕ ಅನರ್ಹರ ಕೈಸೇರಿ ಹಾಳಾಗಬಹುದು. ಎಂಬ ಹೆದರಿಕೆಯೂ ಅವರಿಗುಂಟು. ಹೀಗಾಗಿ ಜನಪದ ವೈದ್ಯದ ಸಂಗ್ರಹ ಅತ್ಯಂತ ಕಠಿಣವಾದ ಕೆಲಸವಾಗಿ ಪರಿಣಮಿಸಿದೆ. ಇಷ್ಟು ಕಠಿಣವಾದ ಪರಿಸ್ಥಿತಿ ಇದ್ದರೂ ಇಂದು ನಾಗರಿಕತೆಯ ಪ್ರಭಾವಕ್ಕೆ ಸಿಕ್ಕಿ ನಶಿಸಿ ಹೋಗುತ್ತಿರುವ ಜನಪದ ವೈದ್ಯವನ್ನು ಸಂಗ್ರಹಮಾಡಿ ಉಳಿಸಿಕೊಳ್ಳಬೇಕಾಗಿರುವುದು ಪ್ರತಿಯೊಬ್ಬ ಜಾನಪದ ಸಂಗ್ರಾಹಕನ ಆದ್ಯ ಕರ್ತವ್ಯವಾಗಿದೆ. ಈ ರೀತಿ ಹೇಳಿದಾಕ್ಷಣ ಜನಪದ ವೈದ್ಯದಲ್ಲಿ ದೊರೆಯುವ ಪ್ರತಿಯೊಂದು ಔಷಧಿಯೂ ಸರ್ವೋತ್ಕೃಷ್ಟ ಎಂದಲ್ಲ. ಹಾಗೆಯೇ ಜನಪದ ವೈದ್ಯವನ್ನು ಒಬ್ಬ ಜಾನಪದ ಸಂಗ್ರಹಕಾರ ಸಂಗ್ರಹಿಸಿ ಪ್ರಕಟಿಸಿದಾಗ ಅದನ್ನು ಜನ ತಕ್ಷಣವೇ ಅನುಸರಿಸಬೇಕು ಎಂದೂ ಅಲ್ಲ. ಜಾನಪದ ಸಂಗ್ರಾಹಕನ ಕೆಲಸ ಜನಪದ ವೈದ್ಯವನ್ನು ಸಂಗ್ರಹಮಾಡಿ ಪ್ರಕಟಿಸುವುದೇ ಹೊರತು, ಅದರ ಬಗ್ಗೆ ನಿರ್ಣಾಯಕವಾದ ಮಾತನ್ನಾಡಿ, ಜನರಿಗೆ ಆ ಔಷಧಿಗಳನ್ನೇ ಉಪಯೋಗಿಸಿ ಎಂದು ಸಲಹೆ ಮಾಡುವುದಿಲ್ಲ. ಈ ಬಗೆಯ ಸಂಶೋಧನಕಾರ್ಯ ವೈದ್ಯರಿಗೆ ಸೇರಿದ್ದು. ಸಂಗ್ರಹವಾಗಿ ಪ್ರಕಟಿತವಾಗಿರುವ ಜನಪದ ವೈದ್ಯದಲ್ಲಿ ಮೂಢನಂಬಿಕೆಯಿಂದ ಕೂಡಿದ ಅರ್ಥಹೀನವಾದ ಹಾಗೂ ಹಾನಿಕಾರಕವಾದ ಅಂಶಗಳು ಯಾವುವು, ನಿಜವಾದ ವೈಜ್ಞಾನಿಕ ಮೌಲ್ಯವುಳ್ಳವು ಯಾವುವು ಎಂಬುದನ್ನು ನಿಷ್ಕರ್ಷೆ ಮಾಡಿ ಅನಂತರ ಅವುಗಳಲ್ಲಿ ಜನ ಬಳಸಬಹುದಾಗಿರುವ ಔಷಧಿಗಳಾವುವು ಎಂಬುದನ್ನು ಸಲಹೆಮಾಡುವ ಜವಾಬ್ದಾರಿ ವೈದ್ಯರಿಗೆ ಸೇರಿದ್ದು. ಜನಪದ ವೈದ್ಯದ ಅಧ್ಯಯನದಿಂದ ವೈದ್ಯರು ಬೇರೆ ಬೇರೆ ಹೊಸ ಹೊಸ ಔಷಧಿಗಳನ್ನು ಕಂಡುಹಿಡಿಯಬಹುದು. ಹೀಗಾಗಿ ನೂತನ ಸಂಶೋಧನೆಗಳಿಗೆ ಜನಪದ ವೈದ್ಯ ಸಹಾಯಕವಾಗಿ ಪರಿಣಮಿಸಬಹುದು.

ಮನೋವೈದ್ಯ, ಪಶುವೈದ್ಯ, ಮಕ್ಕಳ ವೈದ್ಯ, ಬಸುರಿ–ಬಾಣಂತಿ ವೈದ್ಯ, ಸಾಮಾನ್ಯ ವೈದ್ಯ ಎಂಬ ವಿಭಾಗಗಳಲ್ಲಿ ಜನಪದ ವೈದ್ಯದ ಸ್ವರೂಪವನ್ನು ವಿವರಿಸಬಹುದು. ಇವು ಮಾತ್ರವಲ್ಲದೆ ಚಿಕ್ಕಪುಟ್ಟ ಶಸ್ತ್ರಚಿಕಿತ್ಸೆಗಳನ್ನೂ ಜನಪದ ವೈದ್ಯದಲ್ಲಿ ಗುರುತಿಸಲು ಸಾಧ್ಯ. ಮನೋವೈದ್ಯ ಜನಪದ ವೈದ್ಯದಲ್ಲಿ ಪ್ರಧಾನವಾದ ಸ್ಥಾನ ಪಡೆದಿದೆ. ಮನಸ್ಸಿನ ಮೇಲೆ ಪ್ರೇರಣೆ ಉಂಟುಮಾಡುವ ಪರಿಣಾಮ ಎಷ್ಟೆಂಬುದು ಮನೋವಿಜ್ಞಾನವನ್ನು ಓದಿದ ಎಲ್ಲರಿಗೂ ತಿಳಿದಿರುವ ವಿಷಯ. ಜನಪದ ವೈದ್ಯದ ವಿವರಗಳನ್ನು ಪರಿಶೀಲಿಸಿದಾಗ ಅಲ್ಲಿನ ರೋಗಗಳಿಗೆ ಪ್ರೇರಣೆಯೇ ಮೂಲವಾಗಿದ್ದು, ಮನಸ್ಸಿನ ಪರಿಣಾಮ ದೇಹದ ಮೇಲೆ ಆಗಿರುವುದರಿಂದ ಉಂಟಾಗಿರುವ ಮನೋದೈಹಿಕ ರೋಗಗಳು ಸಾಕಷ್ಟಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ರೀತಿಯ ರೋಗಗಳ ಲಕ್ಷಣಗಳ ವಿವರಗಳು, ಚಿಕಿತ್ಸಾಕ್ರಮಗಳು –ಇವುಗಳ ಸಂಗ್ರಹ ಹಾಗೂ ಅಧ್ಯಯನ ಜನಪದ ವೈದ್ಯದಲ್ಲಿ ಪ್ರಮುಖವಾದ ಶಾಖೆಯಾಗುತ್ತದೆ. ಮಂತ್ರ, ಮಾಟ, ದೃಷ್ಟಿ ತೆಗೆಯುವುದು, ದೆವ್ವ ಬಿಡಿಸುವುದು, ದೇವರ ಪೂಜೆ ಮಾಡಿ ತೀರ್ಥ ಕೊಡುವುದು ಮೊದಲಾದ ಸಂದರ್ಭಗಳಲ್ಲೆಲ್ಲ ಜನಪದ ವೈದ್ಯರು ರೋಗಿಗಳಿಗೆ ಕೊಡುವುದು ಮನಶ್ಚಿಕಿತ್ಸೆ ಎಂದೇ ಹೇಳಬಹುದು. ಉದಾಹರಣೆಗೆ ಕೆಟ್ಟ ಕಣ್ಣಿನಿಂದ ಉಂಟಾದ ದೃಷ್ಟಿದೋಷವನ್ನು ಪರಿಹರಿಸಲು ಜನಪದರು ಮಾಡುವ ಚಿಕಿತ್ಸೆಗಳನ್ನು ಗಮನಿಸಬಹುದು. ಕೆಲವು ಜನರಲ್ಲಿ ಕೆಟ್ಟಕಣ್ಣು ಉಂಟೆಂದೂ ಅಂಥ ಜನ ಮಕ್ಕಳನ್ನು ದೃಷ್ಟಿಸಿ ನೋಡಿದಾಗ ಅವಕ್ಕೆ ಹೊಟ್ಟೆನೋವು ಬರುವುದೆಂದೂ ನಂಬುತ್ತಾರೆ. ಈ ನಂಬಿಕೆಯೇ

ಒಂದು ಪ್ರೇರಣೆಯಾಗಿ ಪರಿಣಮಿಸಿ ದೇಹದ ಮೇಲೆ ಪರಿಣಾಮ ಬೀರುತ್ತದೆ. ಇಂಥ ಸಂದರ್ಭದಲ್ಲಿ ಕೆಟ್ಟಕಣ್ಣಿನ ದೃಷ್ಟಿದೋಷವನ್ನು ಹೋಗಲಾಡಿಸಲು ನೆಟಿಗೆ ಮುರಿಯುವುದು, ಕೆಂಡದ ರಾಜು ಹಾಕುವುದು, ಉರಿಯುತ್ತಿರುವ ಹಂಚಿಕಡ್ಡಿಗಳನ್ನು ನಿವಾಳಿಸುವುದು, ನಾಲ್ಕು ದಾರಿಗಳು ಕೂಡುವೆಡೆ ದಾಟು ಹಾಕುವುದು–ಈ ಬಗೆಯ ಕೆಲಸಗಳನ್ನು ಮಾಡುತ್ತಾರೆ. ಈ ಕ್ರಮಗಳೂ ಪ್ರೇರಣೆಗಳೇ. ಈ ಕ್ರಮಗಳಿಂದ ತಮಗೆ ಹೊಟ್ಟೆನೋವು ಹೋಗುವುದೆಂದು ನಂಬಿಕೆ ಜನರಿಗಿರುವುದರಿಂದ, ಮನಸ್ಸಿನ ಪ್ರೇರಣೆಯ ಕಾರಣದಿಂದಲೇ ಹೊಟ್ಟೆನೋವು ವಾಸಿಯಾಗುವುದುಂಟು. ಮಾಟಕ್ಕೆ ಪ್ರತಿಮಾಟ ಮಾಡುವುದು, ದೆವ್ವ ಹಿಡಿದಿರುವವರಿಗೆ ದೆವ್ವ ಬಿಡಿಸುವುದು–ಇವುಗಳಲ್ಲಿಯೂ ನಾವು ಕಾಣುವುದು ಪ್ರೇರಣೆ ಮತ್ತು ಪ್ರತಿಪ್ರೇರಣೆಗಳ ಪರಿಣಾಮವನ್ನು. ಆದಿವಾಸಿ ಸಮಾಜಗಳಲ್ಲಿರುವ ಮಾಟವೈದ್ಯ, ಪಾದ್ರಿ, ಶಾಮನ್ ಮೊದಲಾದವರು ಈ ರೀತಿಯ ಮನೋವೈದ್ಯವನ್ನೇ ಮಾಡುತ್ತಿದ್ದರು. ಜನಪದ ವೈದ್ಯವನ್ನು ಸಂಗ್ರಹಮಾಡುವವರು ಈ ಬಗೆಯ ವಿವರಗಳನ್ನೂ ಸಂಗ್ರಹಿಸಬೇಕು.

ಪಶುಗಳಿಗೆ ಸಾಮಾನ್ಯವಾಗಿ ಲರಡು (ಲಲ್ಡು) ಸೆಲೆ, ಕುಂದು, ಹರುಪತಿ, ದೊಡ್ಡರೋಗ, ಚಪ್ಪೇರೋಗ, ಅಳ್ಳೇರೋಗ, ಕಾಲುಜ್ವರ, ಬಾಯಿಜ್ವರ, ಪಿನಾಸಿ ಮೊದಲಾದ ರೋಗಗಳು ಬರುತ್ತವೆ. ಇವು ಮಾತ್ರವಲ್ಲದೆ ಕಾಲು, ಕೋಡು ಮುರಿದುಹೋಗುವುದುಂಟು; ಹೆಗಲು ಬಾತುಕೊಳ್ಳುತ್ತದೆ, ಉಣ್ಣೆ ಹತ್ತುತ್ತದೆ, ಕಣ್ಣು ಬಿಳುಪಾಗುತ್ತದೆ, ಶರೀರದಲ್ಲಿ ಗಾಯಗಳಾಗಿ ಹುಳುಬೀಳುತ್ತದೆ, ಕರುಗಳಲ್ಲಿ ಜಂತುಹುಳು ಆಗುತ್ತದೆ, ದನಗಳು ಮುಂಗಾರು ಜೋಳ ತಿಂದು ಸೊಕ್ಕುತ್ತವೆ, ಇದ್ದಕ್ಕಿದ್ದಂತೆ ಹಸುಗಳ ಹಾಲು ಕಡಿಮೆಯಾಗುತ್ತದೆ, ಹಸುಗಳು ಎಮ್ಮೆಗಳು ಕರು ಹಾಕಿದಾಗ ಸತ್ತೆ ಬೀಳುವುದು ಕಷ್ಟವಾಗುತ್ತದೆ–ಹೀಗೆ ಬಗೆಬಗೆಯಾದ ತೊಂದರೆಗಳುಂಟಾಗುತ್ತವೆ. ಪಶುವೈದ್ಯದಲ್ಲಿ ಪರಿಣತನಾದ ವ್ಯಕ್ತಿ, ಈ ರೋಗಗಳ ಲಕ್ಷಣಗಳನ್ನು ಚೆನ್ನಾಗಿ ತಿಳಿದಿರುವುದರಿಂದ ರೋಗ ಯಾವುವೆಂಬುದನ್ನು ತಿಳಿದು, ಅದಕ್ಕೆ ಬೇಕಾದ ಔಷಧಿ ಹಾಕಿ ರೋಗವನ್ನು ವಾಸಿಮಾಡುತ್ತಾನೆ. ಉದಾ : ಕಾಲುಜ್ವರ. ದನಗಳ ಗೊರಸಿನ ಸಂದಿನಲ್ಲಿ ಊದಿಕೊಂಡು ಕೀವು ಬರುತ್ತದೆ. ನೀರಿನಲ್ಲಿ ಓಡಾಡಿದಾಗ ಗಾಯ ಹೆಚ್ಚಾಗಿ ಕೀವು ಸುರಿಯುವುದು ಮಾತ್ರವಲ್ಲದೆ ಹುಳುಬೀಳಲು ಆರಂಭವಾಗುತ್ತದೆ. ಕಾಲನ್ನು ಮುಟ್ಟಿದರೆ ಹೆಚ್ಚಾಗಿ ಬಿಸಿಯಾಗಿರುತ್ತದೆ. ಈ ಲಕ್ಷಣಗಳು ಕಂಡುಬಂದಾಗ ಅದನ್ನು ಕಾಲುಜ್ವರ ಎಂದು ಗುರುತಿಸುತ್ತಾರೆ. ಆಗ ಮೀನನ್ನು ತಂದು ಅದನ್ನು ನೀರಿನೊಡನೆ ಒಂದು ಕಲ್ಲಿನ ಮೇಲೆ ತಿಕ್ಕಿ, ಮೀನುತಿಕ್ಕಿದ ನೀರನ್ನು ಕಾಲಿನ ಗೊರಸಿನ ಮೇಲೆ ಪ್ರತಿನಿತ್ಯ ಹಾಕುತ್ತ ಬಂದರೆ ಕಾಲುಜ್ವರ ಕಡಿಮೆಯಾಗುತ್ತ ಬಂದು ಕ್ರಮೇಣ ಹೊರಟುಹೋಗುತ್ತದೆ. ದನಕರುಗಳಿಗೆ ಮಾತ್ರವಲ್ಲದೆ, ಎಮ್ಮೆ ಕೋಣಗಳು, ಆಡು, ಹಂದಿ, ಕುರಿ, ಕೋಳಿ ಮೊದಲಾದ ಪ್ರಾಣಿಗಳಿಗೂ ಬರುವ ಬಗೆಬಗೆಯ ಕಾಯಿಲೆಗಳಿಗೆ ಜನಪದ ವೈದ್ಯದಲ್ಲಿ ಪರಿಹಾರಗಳನ್ನು ಕಾಣಬಹುದು. ಸರಳವಾದ ಔಷಧಗಳಿರುವಂತೆಯೇ ಸಂಕೀರ್ಣ ಸ್ವರೂಪದ ಔಷಧಿಗಳೂ ಉಂಟು.

ಮಕ್ಕಳಿಗೆ ಬರುವ ರೋಗಗಳಲ್ಲಿ ಕೆಲವು ಹುಟ್ಟಿನಿಂದ ಬರುತ್ತವೆ; ಮತ್ತೆ ಕೆಲವು ಹುಟ್ಟಿದ ಅನಂತರ ಬರುತ್ತವೆ. ರೋಗಗಳು ಬಂದಮೇಲೆ ಅವನ್ನು ಹೋಗಲಾಡಿಸುವುದಕ್ಕೆ ಬದಲಾಗಿ ರೋಗಗಳು ಬಂದಂತೆಯೇ ಮುಂಜಾಗರೂಕತೆ ವಹಿಸಬೇಕಾಗುತ್ತದೆ. ಈ ಕಾರಣದಿಂದಾಗಿ ಬಸುರಿಗೆ ಕೆಲವು ವಿಶೇಷವಾದ ಔಷಧಿಗಳನ್ನು ಕೊಡುವುದರ ಮೂಲಕ ಮಗು ಆರೋಗ್ಯಕರವಾಗುವಂತೆ ಮಾಡುತ್ತಾರೆ. ತಾಯಿ ತಿನ್ನುವ ಆಹಾರದ ಕಾರಣದಿಂದಾಗಿ ಮಗುವಿಗೆ ರೋಗಬರುವುದುಂಟು. ಈ ಕಾರಣದಿಂದ ಮಗು ಆರೋಗ್ಯವಾಗಿರಬೇಕಾದರೆ ಬಾಣಂತಿ ಹೆಚ್ಚು ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಮಕ್ಕಳಿಗೆ ಬರುವ ಇತರ ರೋಗಗಳಲ್ಲಿ ಹಕ್ಕಿ ಕಡುಕನ ರೋಗ, ವಾಯು, ಹೊಟ್ಟೆನೋವು, ಹೊಟ್ಟೆ ಉಬ್ಬರ, ಲಾಳ ಸಂಕಾಲೆ, ಬಾಲಗ್ರಹ, ವಿಷಬು, ಕೆಮ್ಮು ಮೊದಲಾದ ಶೀತಸಂಬಂಧವಾದ ಕಾಯಿಲಿಗಳಿವೆ. ಬಸುರಿಯರಿಗೆ ಬಾಣಂತಿಯರಿಗೆ ಅವರಿಗೇ ಸೀಮಿತವಾದ, ವಿಶಿಷ್ಟವಾದ ಕಾಯಿಲೆಗಳು ಬರುತ್ತವೆ. ಈ ಕಾಯಿಲೆಗಳ ಸ್ವರೂಪವನ್ನು ಮನೆಯಲ್ಲಿನ ಹಿರಿಯ ಹೆಂಗಸರು ತಿಳಿದಿರುತ್ತಾರೆ; ಅವರೇ ಸೂಲಗಿತ್ತಿಯ ಕೆಲಸವನ್ನೂ ಮಾಡುವುದುಂಟು. ಇಂದಿಗೂ ಅನೇಕ ಸಂಸಾರಗಳಲ್ಲಿ ಬಸುರಿ ಬಾಣಂತಿಯರಿಗೆ ಆಸ್ಪತ್ರೆ ಔಷಧಿ ಕೊಡುವುದಿಲ್ಲ. ಮನೆವೈದ್ಯವನ್ನೇ ಮಾಡುತ್ತಾರೆ. ನಾರು ಬೇರುಗಳ ಕಷಾಯ, ಲೇಹ್ಯ, ಅವಲೇಪ, ಊಟೋಪಚಾರಗಳ ಎಚ್ಚರಿಕೆ, ಶುಶ್ರೂಷೆ–ಇತ್ಯಾದಿಗಳಿಂದ ಆಗಬಹುದಾದ ಅನೇಕ ತೊಂದರೆಗಳನ್ನು ಸುಲಭವಾಗಿ ನಿವಾರಿಸುವ ವೈದ್ಯ ಮನೆಯ ಹಿರಿಯರಿಗೆ ಗೊತ್ತಿರುತ್ತದೆ.

ಈವರೆಗೆ ವಿಚಾರಮಾಡಿದ ವೈದ್ಯವಿಧಾನಗಳು ಜನಪದ ವೈದ್ಯದಲ್ಲಿ ವಿಶಿಷ್ಟ ಬಗೆಯವು. ಈಗ ವಿಚಾರಮಾಡಬೇಕಾಗಿರುವುದು ಸಾಮಾನ್ಯವಾಗಿ ಎಲ್ಲರಿಗೂ ಅನ್ವಯವಾಗುವ ಸಾಮಾನ್ಯ ವೈದ್ಯ. ಇಲ್ಲಿ ಸಾಮಾನ್ಯ ಎಂಬ ಪದ ಸಾಧಾರಣವಾದದು ಎಂಬ ಅರ್ಥದಲ್ಲಿ ಪ್ರಯೋಗವಾಗಿಲ್ಲ. ಸಾಮಾನ್ಯವಾಗಿ ಎಲ್ಲರಿಗೂ ಬರುವ ನೆಗಡಿ, ಕೆಮ್ಮು, ವಾಂತಿ, ಭೇದಿ ಮೊದಲಾದ ದಿನನಿತ್ಯದ ಕಾಯಿಲೆಗಳಿಗೆ ಮಾಡುವ ಚಿಕಿತ್ಸೆಗಳು–ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಈ ವೈದ್ಯದಲ್ಲಿ ಪ್ರಥಮ ಚಿಕಿತ್ಸೆಗಳೂ ಸೇರುತ್ತವೆ. ಇಲ್ಲಿ ಬಳಸುವ ಔಷಧಿಗಳು ಸರಳ ಸ್ವರೂಪದವಾಗಿರುತ್ತವೆ ; ಸಂಕೀರ್ಣವಾದ ಔಷಧಿಗಳೂ ಕೆಲವು ಸಲ ಬಳಕೆಯಾಗುತ್ತವೆ. ಸರಳವಾದ ಔಷಧಿಗಳು ಹೆಚ್ಚು ಖರ್ಚಿಲ್ಲದೆ ದೊರೆಯುತ್ತವೆ. ಉದಾ: ಉಗುರುಸುತ್ತು ಆದಾಗ ಒಂದು ಕೋಳಿ ಮೊಟ್ಟೆಯನ್ನು ಒಡೆದು, ಅದನ್ನು ಬೆರಳಿನೊಳಕ್ಕೆ ತೂರಿಸಿ ಇಟ್ಟು ಬಟ್ಟೆ ಕಟ್ಟಿದರೆ ಕೋಳಿಮೊಟ್ಟೆ ಉಗುರುಸುತ್ತಿನಲ್ಲಿ ಇರುವ ಕೀವನ್ನು ಹೀರುತ್ತದೆ. ಕೆಲವು ದಿನಗಳಲ್ಲಿ ಉಗುರುಸುತ್ತು ವಾಸಿಯಾಗುತ್ತದೆ. ಮೊಟ್ಟೆಯ ಬದಲಿಗೆ ನಿಂಬೆ ಹಣ್ಣನ್ನು ಬಳಸುವುದೂ ರೂಢಿಯಲ್ಲಿದೆ. ಎಳೆಗೂಸಿಗೆ ಕೊಡುವ ಬಜೆ, ಅತಿಮಧುರ ಮೊದಲಾದ ಸುತ್ತುಕಾರ ಇನ್ನೊಂದು ಒಳ್ಳೆಯ ಔಷಧ. ಇಂಥ ಸರಳವಾದ ಔಷಧಿಗಳು ಜನಪದ ವೈದ್ಯದಲ್ಲಿ ಹಲವಾರು ದೊರೆಯುತ್ತವೆ. ಸಂಕೀರ್ಣ ಔಷಧಿಗಳಿಗೆ ಕಷಾಯಗಳು ಉತ್ತಮ ಉದಾಹರಣೆ. ಬಗೆಬಗೆಯ ಸೊಪ್ಪುಗಳನ್ನು, ನಾರುಬೇರುಗಳನ್ನು ಹಾಕಿ ಕಷಾಯಗಳನ್ನು ತಯಾರಿಸುತ್ತಾರೆ. ಇದರಲ್ಲಿ ಬೇವಿನ ಚಕ್ಕೆ ಬಹು ಮುಖ್ಯವಾದುದು. ಈ ಕಷಾಯಗಳು ಹಲವಾರು ಕಾಯಿಲೆಗಳಿಗೆ ಪರಿಹಾರ ನೀಡುತ್ತವೆ. ಕೆಲವಾರು ಪ್ರಾಣಿಗಳಿಂದ ತೆಗೆದ ಕೊಬ್ಬುಗಳೂ ತಪ್ಪುಗಳೂ ಕೂಡ ಜನಪದ ವೈದ್ಯದಲ್ಲಿ ಸೇರುತ್ತವೆ. ಉದಾ: ಮೊಸಳೆ ಕೊಬ್ಬು, ಕೇರೆ ಹಾವಿನ ತುಪ್ಪ ಇತ್ಯಾದಿ.

ಜನಪದ ವೈದ್ಯದಲ್ಲಿ ಬಳಕೆಯಾಗಿರುವ ವಸ್ತುಗಳು ಸುಲಭವಾಗಿ ದೊರಕುವಂಥವು. ವಿಪರೀತವಾಗಿ ಹಣ ಸುರಿದು ತರಬೇಕಾದ ವಸ್ತುಗಳಲ್ಲ. ಅವುಗಳಲ್ಲಿ ಬಹುಪಾಲಿನವು ಆ ಸುತ್ತುಮುತ್ತಲೇ ಸಿಬುವಂಥವೂ ಆಗಿವೆ. ಜೇನುತುಪ್ಪ, ನಿಂಬೆಹಣ್ಣು, ಬಗೆಬಗೆಯ ಸೊಪ್ಪುಗಳು, ತುಳಸಿ, ತಾಮ್ರದ ತಗಡು, ಸಗಣಿ, ವೀಳೆಯದೆಲೆ, ಬಾಳೆಯ ಕರೆ, ಶುಂಠಿ, ಹೊಗೆಸೊಪ್ಪು, ಹಾಲು, ಕೋಳಿಮೊಟ್ಟೆ, ಹರಳೆಣ್ಣೆ, ಉಪ್ಪು, ಮೆಣಸಿನಕಾಯಿ, ಲೋಳಿಸರ, ಅರಿಸಿನದ ಕೊನೆ, ಬಜೆ ಕೊನೆ, ಮಜ್ಜಿಗೆ, ದೊಡ್ಡಪತ್ರೆ, ತುಂಬೆಸೊಪ್ಪು, ಎಕ್ಕದಎಲೆ, ಜೇಡನಬಲೆ, ನಂದಿಬಟ್ಟಲ ಹೂ–ಮೊದಲಾದ ಹಲವಾರು ಪದಾರ್ಥಗಳು ಜನಪದ ವೈದ್ಯದಲ್ಲಿ ಬಳಕೆಯಾಗುತ್ತವೆ. ಜನಪದ ವೈದ್ಯದ ಸಂಗ್ರಹ ಅಚ್ಚುಕಟ್ಟಾಗಿ ನಡೆದು ಸಂಗ್ರಹವಾದ ವಿಷಯ ಸಾಮಗ್ರಿಯ ಬಗ್ಗೆ ಸೂಕ್ತ ಅಧ್ಯಯನ, ಸಂಶೋಧನೆಗಳು ನಡೆದು ಅಧಿಕೃತವಾದ ಕೆಲವು ಔಷಧಿಗಳನ್ನು ವೈದ್ಯರು ಪತ್ತೆ ಮಾಡಬೇಕು. ಹಳ್ಳಿಗಳಲ್ಲಿ ಕೆಲಸ ಮಾಡುತ್ತಿರುವ ವೈದ್ಯರು ಈ ವಿಷಯದಲ್ಲಿ ಆಸಕ್ತಿ ತೋರಿಸಬೇಕು. (ಟಿ.ಎನ್.ಎಸ್.ಎನ್)

**ಜನಪದ ಶಿಲ್ಪ :** ಜನಪದ ಶಿಲ್ಪವೆಂದರೆ ಯಾವುದು ಎಂಬುದನ್ನು ಸ್ಪಷ್ಟವಾಗಿ ನಿರ್ಧರಿಸುವುದು ಕಷ್ಟಸಾಧ್ಯ. ಅದರ ಹರಹಿನ ಸೀಮೆ, ಲಕ್ಷಣ ಇತ್ಯಾದಿಗಳನ್ನು ನಿರೂಪಿಸುವ ಪ್ರಯತ್ನವನ್ನು ಹಲವು ವಿದ್ವಾಂಸರು ಮಾಡಿರುವರಾದರೂ ಈ ವಿಷಯದಲ್ಲಿ ಒಮ್ಮತ ಇನ್ನೂ ಮೂಡಿಲ್ಲ. ಘನವಸ್ತುಗಳಿಂದ ಆಕೃತಿಗಳನ್ನು ಮೂಡಿಸುವ ಶಿಲ್ಪಕಲೆ ನಿತ್ಯಜೀವನ ನಿರ್ವಹಣೆಯ ಅತ್ಯಾವಶ್ಯಕತೆಗಳಿಂದ ಹೊರಗಿರುವ ಒಂದು ವ್ಯಾಪಾರ. ಇದರ ನೆಲೆ ಇರುವುದು ಮಾನವನ ಸೃಷ್ಟ್ಯಾತ್ಮಕ ಮನೋವಾಂಛೆಯಲ್ಲಿ. ಹೊಸದನ್ನು ಸೃಷ್ಟಿಸಬೇಕೆಂಬ ಆಸಕ್ತಿ ನಾನಾಸ್ತರಗಳಲ್ಲಿ ಅಂದರೆ ಕೆಲವು ಬಾರಿ ಸೌಂದರ್ಯಾನುಭವಕ್ಕೆ ಪ್ರೋತ್ಸಾಹಕವಾಗಿ, ಹಲವು ಬಾರಿ ಧರ್ಮ, ಅಂತಸ್ತಿನ ಪ್ರಜ್ಞೆ, ವಿನೋದ ಮುಂತಾದ ಮನೋರಂಗದ ಇತರ ವ್ಯಾಪಾರಗಳಿಗಾಗಿ ಉಪಯೋಗವಾಗುತ್ತದೆ. ಈ ಧೋರಣೆಗಳು ಮಾನವನ ಎಲ್ಲ ವರ್ಗ–ಸ್ತರಗಳಲ್ಲೂ ಕಲಾನಿರ್ಮಾಣದ ನೆಲಗಟ್ಟಾಗಿ ಕಾಣಿಸುವುದರಿಂದ, ಧೋರಣೆಯ ಆಧಾರದ ಮೇಲೆ ಜನಪದ ಶಿಲ್ಪ ಯಾವುದು, ಅದು ಅಲ್ಲದ್ದು ಯಾವುದು ಎಂಬುದನ್ನು ನಿರ್ಧರಿಸಲಾಗುವುದಿಲ್ಲ.

ಪರಂಪರಾನುಗಣತೆ, ಅಲಿಖಿತತೆ, ಇತ್ಯಾದಿ ಜನಪದದ ಇತರ ರಂಗಗಳಲ್ಲಿ ಉಪಯೋಗಿಸುವ ಮಾನದಂಡಗಳು, ಕಲಾರಂಗದಲ್ಲಿ (ಅದರಲ್ಲೂ ಶಿಲ್ಪದಲ್ಲಿ) ಅರ್ಥಹೀನ ವಾಗುತ್ತವೆ. ಎಲ್ಲ ಕಲೆಗಳೂ ಅವು ಆದಿವಾಸಿಗಳದ್ದಾಗಿರಲಿ ಬಹುಜನವರ್ಗದ್ದಾಗಿರಲಿ, ನಾಗರಿಕ ವರ್ಗಗಳದ್ದಾಗಿರಲಿ, ಪರಂಪರಾಗತವೇ. ಬಹುಮಟ್ಟಿಗೆ ಪೂರ್ವಾನುಭವ ಮತ್ತು ವಾಸನೆಗಳು ಇವುಗಳ ರೂಪನಿರ್ದೇಶ ಮಾಡುತ್ತವೆ. ಶಿಲ್ಪ ಮೂಲತಃ ವೃತ್ತಿಜನ್ಯವಾದುದರಿಂದ, ಇದರ ಸೃಷ್ಟಿಗೆ ಲಿಖಿತಶಾಸ್ತ್ರಗಳ ಉಪಯೋಗ ಅಲ್ಪ; ಇದು ಬಹುಮಟ್ಟಿಗೆ ಗುರು–ಶಿಷ್ಯ ಪರಂಪರೆಯಲ್ಲಿ ಕಲಿಕೆ ಅನುಭವದ ಸೂತ್ರದ ಮೇಲೆ ಮುಂದುವರಿಯುತ್ತದೆ.

ಜನಪದ ಸಮಾಜಗಳಲ್ಲಿ ಪ್ರಚಲಿತವಾಗಿರುವ ಶಿಲ್ಪ ಜನಪದ ಶಿಲ್ಪ ಎಂಬ ವಿವರಣೆ ಸಾಧುವಾಗಿ ಕಂಡರೂ ಶಿಲ್ಪಗಳ ಆಳ ಅಧ್ಯಯನಕ್ಕೆ ತೊಡಗಿದಾಗ ಈ ವಿವರಣೆ ಅನಿರ್ದಿಷ್ಟವಾಗುತ್ತದೆ. ಜನಪದದಂಥ ತೆರೆದ ಸಮಾಜದಲ್ಲಿ ಹಲವಾರೆಡೆಗಳಿಂದ ಬಂದ ಅನುಭವ, ಜ್ಞಾನ ಮತ್ತು ವಿಧಾನಗಳು ತಮ್ಮದೇ ಆದ ಮಾರ್ಗದಲ್ಲಿ ರೂಪುಗೊಂಡು ಜನಪದದ ಸ್ವತ್ತಾಗಿ ಹೋಗುತ್ತವೆ. ಹೊರಪ್ರಪಂಚದ ಸಾಂಸ್ಕೃತಿಕ ಪ್ರಭಾವಗಳ ಸೋಂಕಿಲ್ಲದೆಯೇ ಕೆಲವು ವೇಳೆ ಅವನ್ನು ಪ್ರತಿಭಟಿಸಿಯೋ ನಿಂತ ಸಂಕುಚಿತ ಪ್ರದೇಶದಲ್ಲಿ ಚಿಕ್ಕ ಸಮೂಹಗಳಲ್ಲಿ ವಾಸಿಸುವ ಆದಿವಾಸಿ ಜನಾಂಗಗಳಲ್ಲಿ ಗಾಢವಾಗಿ ಕಾಣುವ ವೃತ್ತಿ, ವಿಧಾನ, ಕಲ್ಪನೆ, ಇತ್ಯಾದಿಗಳೂ ಮೂಲತಃ ಈ ವರ್ಗಗಳನ್ನೇ ಹಿನ್ನೆಲೆಯಾಗಿ ಹೊಂದಿರುವ

ಜನಪದ ವರ್ಗಗಳಲ್ಲೂ ಕಂಡುಬರುವುದರಿಂದ, ಆದಿವಾಸಿ ಶಿಲ್ಪಗಳ ಮತ್ತು ಜನಪದ ಶಿಲ್ಪಗಳ ನಡುವಿನ ವಿಭಜನರೇಖೆಯನ್ನು ಸ್ಪಷ್ಟವಾಗಿ ಗುರುತಿಸಲಾಗುವುದಿಲ್ಲ. ಭಾರತದ ಭಿಲ್ಲರೇ ಮೊದಲಾದ ಆದಿವಾಸಿ ಜನಾಂಗಗಳು ತಮಗೆ ಅವಶ್ಯವಾದ ಶಿಲ್ಪನಿರ್ಮಾಣಕ್ಕೆ ಪಕ್ಕದ ಗ್ರಾಮೀಣ ಕಲೆಗಾರರನ್ನೇ ಅವಲಂಬಿಸಿರುತ್ತಾರಾಗಿ ಇಂಥ ಸಂದರ್ಭಗಳಲ್ಲಿ ಆದ ನಿರ್ಮಾಣಗಳು ಜನಪದದ್ದೋ ಆದಿವಾಸಿಗಳದ್ದೋ ಎಂದು ಹೇಳುವುದು ಅಸಾಧ್ಯವಾಗುತ್ತದೆ. ನಾಗರಿಕ ಸಮಾಜಗಳ ಕೆಲವೊಂದು ಭಾವನೆಗಳು ಸ್ವಲ್ಪಸ್ವಲ್ಪವಾಗಿ ಜನಪದ ವರ್ಗಗಳಿಗೆ ಹರಿಯುವ ಸತತಕ್ರಿಯೆಯಿಂದಾಗಿ ಹಲವಾರು ನಾಗರಿಕ ಮೂಲದ ಶಿಲ್ಪಗಳು ಅಥವಾ ಅವುಗಳ ಬಡ ಅನುಕರಣೆಗಳು ಜನಪದ ಶಿಲ್ಪಗಳಾಗಿಯೇ ಕಾಣಿಸಿಕೊಳ್ಳುತ್ತವೆ. ಇವೆಲ್ಲ ಜನಪದ ಶಿಲ್ಪದ ಸ್ಪಷ್ಟ ಸೀಮೆಯನ್ನು ನಿರ್ಧರಿಸುವಲ್ಲಿ ಹಲವು ತೊಂದರೆಗಳನ್ನು ಒಡ್ಡುತ್ತವೆ.

ಮೂಲ ಮತ್ತು ರೂಪ ಯಾವುದೇ ಆದರೂ ಜನಪದದ ಸಮಾಜಗಳಲ್ಲಿ ಪ್ರಚಲಿತವಾಗಿರುವ ಕೆಲವು ಸಾಮಾನ್ಯಾಂಶಗಳನ್ನು ಗಮನಿಸಬಹುದು. ಮೊದಲನೆಯದಾಗಿ, ಜನಪದದ ಸರಳ ಮನೋಭೂಮಿಕೆಗೆ, ಆರ್ಥಿಕಸ್ಥಿತಿಗೆ ಒಗ್ಗುವ ಸರಳತೆ ಜನಪದ ಶಿಲ್ಪಗಳ ಮುಖ್ಯ ಅಂಶ. ಸಾಮಗ್ರಿ, ತಂತ್ರ ಮತ್ತು ನಿರೂಪಣೆಯ ರಂಗಗಳಲ್ಲಿ ಈ ಸರಳತೆ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಮಣ್ಣು, ಕಲ್ಲು, ಮರ, ಮರದ ಹೊಟ್ಟು, ಹಿತ್ತಾಳೆ ಮುಂತಾಗಿ ಆಯಾ ಪ್ರದೇಶಗಳಲ್ಲಿ ಸುಲಭವಾಗಿ ದೊರಕುವ ಸಾಮಗ್ರಿಗಳನ್ನಷ್ಟೇ ಶಿಲ್ಪಗಳ ತಯಾರಿಕೆಯಲ್ಲಿ ಬಳಸಲಾಗಿರುತ್ತದೆ. ಅತ್ಯಲಂಕರಣ ವಿಧಾನ, ಕ್ಲಿಷ್ಟ ತಂತ್ರಗಳು ಮುಂತಾದ ನಾಗರಿಕ ಶಿಲ್ಪವಿಧಾನಗಳು ಇಲ್ಲಿಲ್ಲ. ನಿರೂಪಣೆಯಲ್ಲಿ ಆಯಾ ಶಿಲ್ಪಗಳಿಗೆ ಸಂಬಂಧಿಸಿದ ಮುಖ್ಯ ಭಾವನೆಗಳ ಅಭಿವ್ಯಕ್ತಿ ಶಿಲ್ಪದ ಗುರಿಯಾಗಿರುತ್ತದೆಯೇ ಹೊರತು, ಯಥಾಸ್ಥಿತಿಯ ಸಮಗ್ರ ಪ್ರತಿರೂಪೀಕರಣ ಅಥವಾ ಅತಿಚತುರ ನಿರೂಪಣಾವಿಧಾನಗಳು ಇವುಗಳಲ್ಲಿ ಇರುವುದಿಲ್ಲ. ಎರಡನೆಯದಾಗಿ, ಕಲೆಗಾಗಿ ಕಲೆ ಸೃಷ್ಟಿ ಮಾಡಬೇಕೆಂಬ ಕಲೆಗಾರನ ಮನಸ್ಸಿನ ಒತ್ತಡದಿಂದ ಹುಟ್ಟಿದ ಕಲೆ ಮುಂತಾಗಿ ನಾಗರಿಕ ಕಲಾಸೃಷ್ಟಿಗಳಲ್ಲಿ ಕಂಡುಬರುವ, ಶಿಲ್ಪಿಯೇ ಕೇಂದ್ರವಾಗುಳ್ಳ ಹಿನ್ನೆಲೆ ಜನಪದ ಶಿಲ್ಪಸೃಷ್ಟಿಯಲ್ಲಿ ಇರುವುದಿಲ್ಲ. ಇಲ್ಲಿ ಶಿಲ್ಪಿಗಿಂತಲೂ ಶಿಲ್ಪಗಳನ್ನು ಉಪಯೋಗಿಸುವವರ ದೃಷ್ಟಿ, ಆವಶ್ಯಕತೆಗಳೇ ಶಿಲ್ಪಸೃಷ್ಟಿಯ ಚೇತನ. ಯಾರಿಗಾಗಿ ಕಲೆ ನಿರ್ಮಾಣವಾಗುತ್ತದೆಯೋ ಆ ಜನಪದವೇ ಜನಪದ ಶಿಲ್ಪದ ಜೀವಾಳ (ಅಂದರೆ ಮಾಲ್ರೋ). ಶಿಲ್ಪಿ ಹೆಚ್ಚು ಕಡಿಮೆ ಕಸಬುದಾರ. ಮೇಲಿನದಕ್ಕೆ ಹೊಂದಿಕೊಂಡಂತೆ ಬರುವ ಮೂರನೆಯ ಅಂಶವೆಂದರೆ ಈ ಜನಪದ ಶಿಲ್ಪಗಳು ಕೇವಲ ಕಲಾಕೃತಿಗಳಾಗಿರದೆ, ಅವು ಹೆಚ್ಚುಮಟ್ಟಿಗೆ ಯಾವುದೋ ಸಾಮಾಜಿಕ ಉದ್ದೇಶಗಳಿಗಾಗಿ (ಉದಾ. ಧರ್ಮ, ಮಾಟ, ವಿನೋದ) ರೂಪಿಸಲಾಗಿರುತ್ತದೆ. ಇಲ್ಲಿ ಕಲೆ ಉಪಯೋಗಾತ್ಮಕ. ನಾಲ್ಕನೆಯದಾಗಿ, ಜನಪದ ಶಿಲ್ಪಗಳಲ್ಲದಿದ್ದರೂ ಶಿಲ್ಪಸ್ವರೂಪಗಳು ಬಹುಕಾಲ ಮುಂದುವರಿಯುತ್ತಿರುತ್ತವೆ. ಸಂಪ್ರದಾಯಾತ್ಮಕ ಸಮೂಹ ಪ್ರಜ್ಞೆ ಇವುಗಳ ರಕ್ಷೆ, ನವಸೃಷ್ಟ್ಯಾತ್ಮಕ ವ್ಯಕ್ತಿಪ್ರಜ್ಞೆಗೆ ಇಲ್ಲಿ ಸಾಕಷ್ಟು ಸ್ಥಳವಿಲ್ಲ.

ಜನಪದ ಕಲೆಯ ಅಧ್ಯಯನದಲ್ಲಿ ಸಾಕಷ್ಟು ಕೆಲಸ ಮಾಡಿರುವ ಜೋಸೆಫ್ ವ್ಯದ್ರ ಎಂಬ ವಿದ್ವಾಂಸ ಸಹ ಶಿಲ್ಪಿಗಿಂತಲೂ ಶಿಲ್ಪಗಳನ್ನು ಉಪಯೋಗಿಸುವ ಮಂದಿಯ ಮನೋಭಾವ, ದೃಷ್ಟಿ ಮತ್ತು ಉದ್ದೇಶದ ಗಾಢ ಪ್ರಭಾವ ಜನಪದ ಶಿಲ್ಪಸೃಷ್ಟಿಯಲ್ಲಿರುವುದನ್ನು ಒತ್ತಿ ಹೇಳುತ್ತಾನೆ. ಅವನ ಪ್ರಕಾರ ಆ ಪ್ರಭಾವದಿಂದಾಗಿ ಶಿಲ್ಪಗಳು ಯಾವ ವರ್ಗದ ಜನರಿಗಾಗಿ ಸೃಷ್ಟಿಸಲಾದುವೋ ಆ ಜನಗಳ ಸುಲಭಗ್ರಹಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿರೂಪಿತವಾಗಿರುತ್ತವೆ. ಜನರಿಗೆ ಪರಿಚಯವಿರುವ ನೈಸರ್ಗಿಕ ವಿನ್ಯಾಸಗಳು, ವಿಷಯ ಒಮ್ಮೆಯೇ ಮನನಾಟುವ ನೇರವೂ ಹರಿತವೂ ನಾಟಕೀಯವೂ ಆದ ರೂಪಣಾ ವಿಧಾನಗಳು ಇವುಗಳಲ್ಲಿ ಬಳಕೆಯಾಗಿರುತ್ತವೆ. ಈ ಸಮಾಜದಿಂದ ಹೊರಗಿರುವವರಿಗೆ ಸುಲಭವಾಗಿ ಅರ್ಥವಾಗದ, ಹಲವು ಚಿಹ್ನಾತ್ಮಕ ವಿನ್ಯಾಸಗಳು ಒಮ್ಮೊಮ್ಮೆ ಕಂಡುಬಂದರೂ ಅವು ಕಾಲಾನುಕಾಲದಿಂದ ಪರಂಪರೆಯಲ್ಲಿ ಬೆಳೆದು ಬಂದವಾಗಿದ್ದು, ಜನಪದ ಮಂದಿಗೆ ಅವು ಸುಲಭವಾಗಿ ಅರ್ಥವಾಗುತ್ತವೆ. ವ್ಯದ್ರನ ಪ್ರಕಾರ ಆಕಾಶತತ್ತ್ವ ಅಥವಾ ತಾವಿನ ಭಾವನೆ ಅಂದರೆ ಶಿಲ್ಪನಿರೂಪಣೆಯಲ್ಲಿ ವಸ್ತುಗಳನ್ನು ಹಿಂದೆಮುಂದೆ, ಅಡ್ಡ ಉದ್ದವಾಗಿ, ಚಿಕ್ಕ ದೊಡ್ಡದಾಗಿ ನಿರೂಪಿಸಿ ಯಥಾದೃಷ್ಟಿಯನ್ನು ತರುವ ತಂತ್ರಜನಪದ ಶಿಲ್ಪಗಳಲ್ಲಿ ಇರುವುದಿಲ್ಲ. ಅಲ್ಲದೆ ಅಲಂಕರಣಾದಿ ವಿವರಗಳ ಅಳವಡಿಕೆಯಿಂದ ವಸ್ತುವಿನ ಮೂಲಸ್ವರೂಪದ ಭಾವನೆಯನ್ನು ನಿರೂಪಿಸುವ ತಂತ್ರ ಇಲ್ಲಿರುತ್ತದೆಯೇ ಹೊರತು, ಮೂಲವಸ್ತುವನ್ನು ಕೇಂದ್ರೀಕರಿಸಿ ಅಲಂಕರಣಗಳಿಂದ ಪ್ರಭಾವಯುತವಾಗಿ ಮಾಡುವ ನಾಗರಿಕ ಶಿಲ್ಪಗಳ ತಂತ್ರ ಕಾಣುವುದಿಲ್ಲ. ಇವುಗಳಲ್ಲಿ ಹಲವು ಅಭಿಪ್ರಾಯಗಳು ವಿವಾದಾಸ್ಪದವಾಗಿವೆ. ಮೂಲವಸ್ತುವಿನ ಹೊರಪ್ರಾಕಾರದ ಉಪಾಂಶಗಳು ಶಿಲ್ಪನಿರೂಪಣೆಯಲ್ಲಿ ಅಷ್ಟೇನೂ ಮುಖ್ಯವಲ್ಲ. ಜನಪದ ಶಿಲ್ಪಗಳಲ್ಲಿ ನಿಸರ್ಗ ಸಹಜರೂಪಗಳ ಸತ್ತ್ವವಷ್ಟೇ ನಿರೂಪಿತವಾಗುವುದರಿಂದ ಇತರ ಅಂಶಗಳು ನೋಡುಗನ ಚಿತ್ತದಲ್ಲಿ ತಾವಾಗಿಯೇ ಕೂಡಿಕೊಳ್ಳುತ್ತವೆ. ತಾವಿನ ಭಾವನೆ ಒಂದಲ್ಲ ಒಂದು ರೀತಿ ಸ್ವಪ್ರಕಟನಾ ಶಕ್ತಿಯುಳ್ಳದ್ದು ; ಅಲ್ಲದೆ ಜನಪದ ಶಿಲ್ಪ ಹಲವು ಬಾರಿ ಕಲ್ಪನಾರಂಗದ ವಸ್ತುಕಥೆಗಳನ್ನು ನಿರೂಪಿಸುವುದರಿಂದ ಯಥಾದೃಷ್ಟಿ ನಿರೂಪಣೆಗಿಂತ ಕಲ್ಪನಾರಂಗದ ಕೆಲಸವೇ ಇಲ್ಲಿ ಹೆಚ್ಚು–ಇತ್ಯಾದಿ ಕಾರಣಗಳಿಂದ ವ್ಯದ್ರನ ಕೆಲವೊಂದು ಊಹೆಗಳನ್ನು ವಿದ್ವಾಂಸರು ಒಪ್ಪುವುದಿಲ್ಲ.

ಮತ್ತಷ್ಟು ವ್ಯವಸ್ಥಿತ ಅಧ್ಯಯನ ನಡೆಸಿರುವ ಕಾನ್ರಾಡ್ ಹ್ಯಾಮ್‌ನ ಪ್ರಕಾರ ಜನಪದ ಶಿಲ್ಪಗಳಲ್ಲಿ ನೈಸರ್ಗಿಕ ಚಿತ್ರಣ ಅಂದರೆ ಯಥಾಸ್ಥಿತಿ ನಿರೂಪಣೆ ಇರುವುದಲ್ಲ. ಇಲ್ಲಿ ಇರುವುದು ಅವುಗಳ ತತ್ತ್ವವ್ಯಾಖ್ಯೆ ಮಾತ್ರ; ತತ್ತ್ವದ ಹೊರಗಿನ ಎಲ್ಲ ಅಂಶಗಳೂ ಇಲ್ಲಿ ಗೌಣವಾಗುತ್ತವೆ. ಉದಾಹರಣೆಗೆ ಒಬ್ಬ ಸಂತನನ್ನು ನಿರೂಪಿಸುವಲ್ಲಿ ಸಂತತ್ವವನ್ನು ತೋರಿಸುವ ಅವನ ಪರಿಕರಗಳು ಮುಖ್ಯವಾಗುತ್ತವೆಯೇ ಹೊರತು ಸಂತನ ಅಂಗಾಂಗ ವಿವರಗಳನ್ನೊಳಗೊಂಡ ಪ್ರತಿರೂಪವಲ್ಲ. ಹ್ಯಾಮ್‌ನ ಅಧ್ಯಯನವನ್ನು ಮುಂದುವರಿಸಿ ತೋಷಿ ಎಂಬ ವಿದ್ವಾಂಸ ಜನಪದ ಕಲೆಯ (ಶಿಲ್ಪಗಳೂ ಸೇರಿದಂತೆ) ಲಕ್ಷಣಗಳನ್ನು ಈ ರೀತಿ ಪಟ್ಟಿ ಮಾಡಿದ್ದಾನೆ: 1 ಎಲ್ಲ ರೀತಿಯ ಹೆಚ್ಚಿನ ವಿವರಗಳನ್ನೂ ಕೈಬಿಟ್ಟು ಕೆಲವೇ ನಿರ್ದಿಷ್ಟ ಗೆರೆ, ಆಕಾರಗಳಿಂದ ಶಿಲ್ಪಭಾವವನ್ನಷ್ಟೇ ಒಗ್ಗೂಡಿಸುವುದು. 2. ವರ್ಣಚ್ಛೇದ, ವರ್ಣಸಾಂದ್ರ ವ್ಯತ್ಯಾಸ ಮುಂತಾದ ಕ್ಲಿಷ್ಟ ತಂತ್ರಗಳನ್ನು ಬಳಸದೆ, ಗೆರೆ, ಬಣ್ಣ, ಗಾತ್ರಗಳ ಸಂಯೋಜನೆಯಿಂದ ಸುಲಭವಾಗಿ ನಿರೂಪಿಸುವುದು. 3. ಕೆಲವೊಂದು ಸಂದರ್ಭಗಳಲ್ಲಿ ನೋಡುಗನ ದೃಷ್ಟಿ ಒಂದು ವಸ್ತುವಿನ ಮೇಲೆ ಕೇಂದ್ರೀಕೃತವಾಗುವಂತೆ ಮಾಡಲು ಅವನ್ನು ಅಸ್ವಾಭಾವಿಕವಾಗಿ ವಿಪರೀತ ದೊಡ್ಡದಾಗಿ ನಿರೂಪಿಸುವುದು (ಉದಾಹರಣೆಗೆ ರಾಜನನ್ನು ಬಹಳ ದೊಡ್ಡದಾಗಿ ನಿರೂಪಿಸಿ, ಪರಿವಾರದವರನ್ನು (ಗಿಡ್ಡಾಗಿ ತೋರಿಸುವುದು). 4. ಚಲನೆ, ಧ್ವನಿ, ಮನೋವ್ಯಾಪಾರ ಮತ್ತು ಭಾವನೆಗಳಿಗೆ ಆಕಾರವನ್ನು ಕೊಡುವುದು. 5. ಅನೇಕ ಸಾಮಾನ್ಯ ರೂಪಗಳನ್ನು, ಕಾಲ್ಪನಿಕ ರೀತಿಯಲ್ಲಿ ಪರಿವರ್ತಿಸಿ, ಅವುಗಳ ಒಗ್ಗೂಡಣೆ ಅಲಂಕರಣವನ್ನು ಸಾಧಿಸುವುದು. 6. ಗೆರೆಗಳು, ರೂಪಗಳು ಅಥವಾ ವರ್ಣತಾವುಗಳನ್ನು ನಿರ್ದಿಷ್ಟವಾಗಿ ಹಲವು ಬಾರಿ ನಿರೂಪಿಸುವುದು.

ಜನಪದ ಶಿಲ್ಪದ ಅಧ್ಯಯನ ಹಲವು ದೇಶಗಳಲ್ಲಿ ಇನ್ನೂ ಶೈಶವಾಸ್ಥೆಯಲ್ಲಿದೆಯಾಗಿ, ಯುರೋಪಿನ ಮಾಹಿತಿಯ ಆಧಾರದ ಮೇಲೆ ಮಾಡಿರುವ ತೋಷಿಯ ವಿಶ್ಲೇಷಣೆ ಇತರೆಡೆಗಳಿಗೂ ಅನ್ವಯಿಸಬಹುದೆ ಎಂಬುದು ತಿಳಿಯಲಾಗುವುದಿಲ್ಲ. ಜನಾಂಗಶಾಸ್ತ್ರಜ್ಞರು, ಜಾನಪದ ವಿದ್ವಾಂಸರು ಮತ್ತು ಕಲಾ ಇತಿಹಾಸ ಕಾರರ ಸಂಯುಕ್ತ ಅಧ್ಯಯನ ಈ ದಿಕ್ಕಿನಲ್ಲಿ ಇನ್ನೂ ಹೆಚ್ಚು ಬೆಳಕನ್ನು ಚೆಲ್ಲಬಹುದು.



ರಾಣಿ ಹೆಲೆನಳ ರೂಪದ ಗಾಜಿನ ಸೀಸೆ, ಇಟಲಿ

ಯುರೋಪಿನಲ್ಲಿ ಇಂದು ಮುಖ್ಯವಾಗಿ ಜನಪದ ಮತ್ತು ನಾಗರಿಕ ಕಲಾ ಸಂಪ್ರದಾಯಗಳಷ್ಟೇ ಕಂಡು ಬರುವುದರಿಂದ, ಇಲ್ಲಿ ಆದಿವಾಸೀ ಕಲೆಯ ಪ್ರಭಾವವನ್ನು ಗುರುತಿಸ ಲಾಗುವುದಿಲ್ಲ. ಹೆಚ್ಚು ಮಟ್ಟಿಗೆ ಹಲವಾರು ಚಾರಿತ್ರಿಕ ಘಟ್ಟಗಳಲ್ಲಿ ಬೆಳೆದ ನಾಗರಿಕಶಿಲ್ಪರೀತಿಗಳೇ ಜನಪದದಲ್ಲಿ ಉಳಿದುಕೊಂಡಿವೆ ಎಂದು ವಿದ್ವಾಂಸರ ಊಹೆ. ಆಫ್ರಿಕ, ಅಮೆರಿಕ ಸ್ವಲ್ಪಮಟ್ಟಿಗೆ ಭಾರತದ ಜನಪದ ಕಲೆಯ ಹಿನ್ನೆಲೆಯಲ್ಲಿ ನೋಡುವುದಾದರೆ ಯುರೋಪಿನವು ನಾಗರಿಕ ವರ್ಗಕ್ಕೆ ಸೇರುವಂತೆ ಕಂಡರೂ ಅಲ್ಲಿಯ ವಿದ್ವಾಂಸರ ಪ್ರಕಾರ ಆ ಪ್ರದೇಶದ ಜನಪದದಲ್ಲಿ ರೂಢವಾಗಿರುವ ಶಿಲ್ಪಗಳೆಲ್ಲ ಜನಪದ ಶಿಲ್ಪಗಳೇ. ಅಲ್ಲಿ ಕಲ್ಲು, ಮಣ್ಣು, ಮರ, ದಂತವಲ್ಲದೆ ಕಬ್ಬಿಣ, ಪೋರ್ಸಲೀನ್, ಗಾಜು ಇತ್ಯಾದಿ ಪರಿಷ್ಕೃತ ಪದಾರ್ಥಗಳಿಂದ ಮಾಡಿದ ಕಲಾಕೃತಿಗಳೂ ಜನಪದಶಿಲ್ಪದಲ್ಲಿ ಸೇರುತ್ತವೆ. ಈ ಅಂಶವನ್ನೂ ಹಿಂದಿನ ವಿಶ್ಲೇಷಣೆಯಲ್ಲಿ ಹೇಳಿರುವ ಹಲವು ಅಂಶಗಳನ್ನೂ ಯುರೋಪಿನ ಜನಪದಶಿಲ್ಪದ

ಎರಡು ಉದಾಹರಣೆಗಳಿಂದ ನೋಡಬಹುದು. ಮುಂದಿನ ಚಿತ್ರದಲ್ಲಿರುವುದು ಸ್ಪೇನಿನ ಒಂದು ವಸ್ತುಸಂಗ್ರಹಾಲದಯಲ್ಲಿರುವ ಕ್ರಿಸ್ತನನ್ನು ಶಿಲುಬೆಗೇರಿಸಿರುವ ಶಿಲ್ಪ ; ನಾಡುಕಬ್ಬಿಣದಿಂದಾದದ್ದು. ಇಲ್ಲಿನ ಕಲಾವಸ್ತು ಕ್ರೈಸ್ತಪುರಾಣಗಳದ್ದು. ನಿರೂಪಣೆ ಸರಳವಾದರೂ ಪರಿಣಾಮಕಾರಿಯಾಗಿದೆ. ಶಿಲುಬೆಯಲ್ಲಿ ಅನೇಕ ಭರ್ಜಿಮೊನೆಗಳನ್ನು ಮೂಡಿಸಿ, ಭಯದ ಆವರಣವನ್ನು ಸೃಷ್ಟಿಸಲಾಗಿದೆ. ಯೇಸು ನಿಸ್ಸಹಾಯಕನಾಗಿದ್ದರೆ, ಪಕ್ಕದವರು ಅದನ್ನು ಗಮನಿಸದೆ ಮೊಳೆ ಹೊಡೆಯುವ ತಮ್ಮ ಕಾರ್ಯದಲ್ಲಿ ಮಗ್ನರಾಗಿರುವ



**ಶಿಲುಬೆಗೇರಿಸಿರುವ ಯೇಸು, ನಾಡುಕಬ್ಬಿಣದ ಕೃತಿ, ಸ್ಪೇನ್**

ರೀತಿ, ನೋಡುಗನ ಮೇಲೆ ಅಸಾಧಾರಣ ಪ್ರಭಾವವನ್ನು ಬೀರುತ್ತದೆ; ಕರುಣೆಯನ್ನು ಉಕ್ಕಿಸುತ್ತದೆ. ಶಿಲ್ಪದ ಉದ್ದಿಷ್ಟಭಾವವನ್ನು ನಿರೂಪಿಸುವುದೇ ಇದರ ಮುಖ್ಯ ಕಾರ್ಯವಾಗಿದ್ದು, ಕ್ರಿಸ್ತನ ಅಥವಾ ಮೊಳೆ ಹೊಡೆಯುವವರ ದೈಹಿಕ ವಿವರಗಳನ್ನು ಇಲ್ಲಿ ತೋರಿಸದಿರುವುದನ್ನು ಗಮನಿಸಬೇಕು. ಕ್ರೈಸ್ತರಲ್ಲಿ ಶಿಲುಬೆಗೆ ಬಹುಪ್ರಾಶಸ್ತ್ಯವಿದೆ. ಶಿಲುಬೆ ಕೇವಲ ಒಂದು ವಸ್ತುವಾದರೂ ಅದು ಕ್ರೈಸ್ತ ಪರಂಪರೆಯಲ್ಲಿ ಬೆಳೆದವರ ಮನೋರಂಗದಲ್ಲಿ ಹಲವಾರು ಸೂಕ್ಷ್ಮಭಾವನೆಗಳನ್ನು ಎಬ್ಬಿಸುವ ಶಕ್ತಿಯಾಗಿದೆ. ಅದ್ದರಿಂದಲೇ ಈ ಶಿಲ್ಪದಲ್ಲಿ ಯೇಸುವಿಗಿಂತಲೂ ಶಿಲುಬೆಯನ್ನು ಉತ್ಪ್ರೇಕ್ಷಿತ ಗಾತ್ರದಲ್ಲಿ ತೋರಿಸಿರುವುದು. ಯೇಸುವಿಗಿಂತಲೂ ಮೊಳೆ ಹೊಡೆಯುವವರನ್ನು ಚಿಕ್ಕ ಪ್ರಮಾಣದಲ್ಲಿ ರೂಪಿಸಿರುವುದು ಇವುಗಳ ಹಿನ್ನೆಲೆಯಲ್ಲಿನ ತಂತ್ರ. ತೋಷಿಯ ವಿಶ್ಲೇಷಣೆಯಲ್ಲಿ ಹೇಳಿರುವ ಹಲವಂಶಗಳನ್ನಿದು ಸ್ಪಷ್ಟಪಡಿಸುತ್ತದೆ. ರಾಣಿ ಹೆಲೆನ್ನಳ ಪ್ರತಿಕೃತಿಯಂತಿರುವ ಗಾಜಿನ ಸೀಸೆ ಜನಪದಶಿಲ್ಪಕ್ಕೆ ಇನ್ನೊಂದು ಉದಾಹರಣೆ. ಇದು ಪೂರ್ಣವಾಗಿ ಉಪಯೋಗಾತ್ಮಕ ವಸ್ತು. ನಿರೂಪಣೆಯಲ್ಲಿ ಅವಳ ರಾಜ್ಞಿತ್ವವನ್ನು ಮೂಡಿಸುವಂತೆ ಹಲವು ಆಭರಣಗಳನ್ನು ತೋರಿಸುವುದಾದರೂ ಅವುಗಳ ವಿವರ ರೂಪಣೆ ಇಲ್ಲ. ಭಾವವಷ್ಟೇ ಇಲ್ಲಿ ಮುಖ್ಯವಾಗಿದೆ.

ಅಮೇರಿಕ, ಆಫ್ರಿಕ ಮತ್ತು ಏಷ್ಯದ ಹಲವು ಭಾಗಗಳಲ್ಲಿ ಆದಿವಾಸಿ ಜನಗಳ ಮನೋಧೋರಣೆ, ಸಂಪ್ರದಾಯ ಮತ್ತು ಕ್ರಿಯೆಗಳು ಬಹುಮಟ್ಟಿಗೆ ಮೂಲಸ್ಥಿತಿಯಲ್ಲಿ ಮುಂದುವರಿಯುತ್ತಿರುವುದರಿಂದಲೂ ಹಲವು ಪ್ರದೇಶಗಳಲ್ಲಿ ನಾಗರಿಕರಿಂದ ಪ್ರತ್ಯೇಕಿಸಬಹುದಾದ ಜನವರ್ಗಗಳಲ್ಲಿ ಇವರ ಸಂಖ್ಯೆಯು ಹೆಚ್ಚಾಗಿರುವುದರಿಂದಲೂ ಇಲ್ಲಿನ ಜನಪದ ಶಿಲ್ಪಗಳೆಂದರೆ ಹೆಚ್ಚು ಕಡಿಮೆ ಆದಿವಾಸಿ ಕಲೆಗಳೇ ಆಗುತ್ತವೆ. ಈ ಪ್ರದೇಶಗಳ ಶಿಲ್ಪಗಳಲ್ಲಿ ಸರಳತೆ, ನಿರ್ದಿಷ್ಟ ಭಾವ ನಿರೂಪಣೆಗಳ ಬಗ್ಗೆ ಹೆಚ್ಚಿನ ಗಮನ ಮತ್ತು ಪರಂಪರಾನುಗತ ಶಿಲ್ಪನಮೂನೆಗಳು ಬಹುಸಾಮಾನ್ಯ. ಹೆಚ್ಚಿನವು ಉಪಯೋಗಾತ್ಮಕವಾದುವು. ಉಪಕರಣಗಳನ್ನು ಕಲಾತ್ಮಕವಾಗಿ ಅಲಂಕರಿಸುವುದು, ಧರ್ಮ, ಮಾಟ ಇತ್ಯಾದಿ ಕ್ರಿಯೆಗಳಿಗೆ ಶಿಲ್ಪಗಳನ್ನು ಬಳಸುವುದು ರೂಢಿ. ಆಫ್ರಿಕದ ಕಾಂಗೋ ದೇಶದ ಮರದ ವಿಗ್ರಹಗಳು ಇಂಥವಕ್ಕೆ ಒಳ್ಳೆಯ ಉದಾಹರಣೆ. ಸೃಜನಾತ್ಮಕ ಫಲಶಕ್ತಿಯನ್ನು ನಿರೂಪಿಸುವುದು ಈ ಸ್ತ್ರೀ ವಿಗ್ರಹದ ಉದ್ದೇಶ. ಇದು ಒಬ್ಬ ಸ್ತ್ರೀಯ ಪ್ರತಿಕೃತಿಯಂತಿದ್ದರೂ ಸ್ತ್ರೀತ್ವದ ನಿರೂಪಣೆಗೆ ಇಲ್ಲಿ ಹೆಚ್ಚು ಗಮನವಿತ್ತಿರುವುದನ್ನು ಕಾಣಬಹುದು. ಇಲ್ಲಿ ವಿವರಗಳು ಸ್ವಲ್ಪಮಟ್ಟಿಗೆ ಅಸಹಜವಾಗಿ, ಭಾವ ಮುಖ್ಯವಾಗಿದೆ. ಇದೇ ನಿರೂಪಣಾವಿಧಾನವನ್ನು (ಬಣ್ಣಹಾಕಿದ ಮರ, ಬಟ್ಟೆ ಮತ್ತು ನಾರಿನಿಂದ ಮಾಡಿದ) ರೌದ್ರತ್ವವನ್ನು ನಿರೂಪಿಸುವ ಲೈಬೀರಿಯದ ಮುಖವಾಡ ಮತ್ತು ಹವಾಯಿ ದ್ವೀಪದ ಒಂದು ವಿಗ್ರಹದಲ್ಲೂ ಸೃಷ್ಟಿಕ್ರಿಯೆಯನ್ನು ನಿರೂಪಿಸುವ ರುರುಟುವಿನ ಒಂದು ಮರದ ದೇವವಿಗ್ರಹದಲ್ಲೂ ಕಾಣಬಹುದು.

ಭಾರತದಲ್ಲಿ ಜನಪದ ಶಿಲ್ಪದ ಅನೂಚಾನ ಸಂಪ್ರದಾಯವಿದೆ. ಮಣ್ಣು, ಮರ ಮರದ ಹೊಟ್ಟು, ಬಟ್ಟೆ ಕೆಲವು ಬಾರಿ ಹಿತ್ತಾಳೆ ಇಂಥ ಸುಲಭವಾಗಿ ದೊರೆಯುವ ವಸ್ತುಗಳು ಶಿಲ್ಪರಚನೆಗೆ ಇಲ್ಲಿ ಉಪಯೋಗದಲ್ಲಿವೆ. ಹೆಚ್ಚಿನ ಶಿಲ್ಪಗಳು ಧಾರ್ಮಿಕ ಅಥವಾ ಮಾಟ–ಮಂತ್ರಗಳಿಗೆ ಸಂಬಂಧಿಸಿದವು. ಕೆಲವು ಅಲಂಕರಣ, ಹಾಗೂ ವಿನೋದಕ್ಕಾಗಿ ಮಾಡಿದವೂ ಆಗಿ ಕಂಡುಬರುತ್ತವೆ. ಇವುಗಳ ನಿರೂಪಣೆಯಲ್ಲೂ ಸರಳತೆ ಮತ್ತು ವಿವರಕ್ಕಿಂತ ಭಾವಕ್ಕೆ ಹೆಚ್ಚಿನ ಗಮನ ಕೊಡಲಾಗಿದೆ. ನಾಗಾಲ್ಯಾಂಡಿನ ಕೋನ್ಯಾಕ್ ಆದಿವಾಸಿಗಳ ಒಂದು ಸ್ತ್ರೀವಿಗ್ರಹ ಮತ್ತು ದಂಪತಿ ವಿಗ್ರಹಗಳು ಇದಕ್ಕೆ ಒಳ್ಳೆಯ ಉದಾಹರಣೆಗಳು. ದಕ್ಷಿಣ ಭಾರತದ ಹಿತ್ತಾಳೆಯ ಒಂದು ದೈತ್ಯ ವಿಗ್ರಹ ಭಯಂಕರತೆಯನ್ನು ಶಿಲ್ಪೀಕರಿಸಿರುವ ಉತ್ತಮ ಕೃತಿ. ಹಿಮಾಚಲ ಪ್ರದೇಶ, ಮತ್ತು ಇತರ ಹಿಮಾಲಯದ ತಪ್ಪಲು ಭಾಗಗಳಲ್ಲಿ, ಈ ವೈಶಿಷ್ಟ್ಯಗಳನ್ನು ಹೊಂದಿರುವ, ನೃತ್ಯಗಳಲ್ಲಿ ಉಪಯೋಗಿಸುವ ಮುಖವಾಡಗಳು ಹಾಗೂ ಗ್ರಾಮೀಣ ದೇವ ವಿಗ್ರಹಗಳು ಬಹುಸಂಖ್ಯೆಯಲ್ಲಿ ಕಂಡುಬರುತ್ತವೆ. ಭಾರತದ ಹಲವೆಡೆಗಳಲ್ಲಿ, ಅದರಲ್ಲೂ ಹೆಚ್ಚಾಗಿ ಗುಜರಾತ್, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ ಈ ಸುತ್ತಿನಲ್ಲಿ ಹಿತ್ತಾಳೆಯಲ್ಲಿ ಮಾಡಿದ ಕುದುರೆಯ ಮೇಲೆ ಕುಳಿತ ಗಂಡುವಿಗ್ರಹಗಳನ್ನು ವಿಶೇಷವಾಗಿ ಕಾಣಬಹುದು. ಕುಲದವರ ಮೂಲಪುರಷರನ್ನು ಪ್ರತೀಕರಿಸುವ ಈ ವಿಗ್ರಹಗಳು ಶ್ರಾದ್ಧಕ್ರಿಯೆಯಲ್ಲಿ ಉಪಯೋಗಿಸುವಂಥವು. ತಮಿಳುನಾಡು ಮತ್ತು ಕೇರಳದಲ್ಲಿ ಸುಮಾರು ಇದೇ ರೀತಿಯ, ಆದರೆ ಎತ್ತರದ ವಿಗ್ರಹಗಳನ್ನು ಗ್ರಾಮಗಳ ಸಮೀಪದಲ್ಲಿ ನಿಲ್ಲಿಸಿರುತ್ತಾರೆ. ಈ ವಿಗ್ರಹಗಳು ಅಯ್ಯಪ್ಪನ್ ಮತ್ತು ಅವನ ಅನುಚರ ಕರುಪ್ಪನ್ ದೇವರುಗಳವು. ಇವು ಸಾಮಾನ್ಯವಾಗಿ ಮಣ್ಣಿನಲ್ಲಿ ಮಾಡಿ ಉತ್ತಮವಾಗಿ ಬಣ್ಣ ಹಾಕಿದ ಬೃಹತ್ ವಿಗ್ರಹಗಳು. ದನಗಳಿಗೆ ಅಥವಾ ಜನಗಳಿಗೆ ಕಾಯಿಲೆ ಬಂದಾಗ, ಮಣ್ಣಿನಲ್ಲಿ ಆಯಾ ಪ್ರತಿಕೃತಿಗಳನ್ನು ಮಾಡಿ ಈ ದೇವರ ಬಳಿ ಇಡುವ ರೂಢಿ ಇದೆ. ಇಂಥ ನೂರಾರು ಬೊಂಬೆಗಳನ್ನು ಅಯ್ಯಪ್ಪನ್ ವಿಗ್ರಹಗಳ ಬಳಿ ಕಾಣಬಹುದು. ಇವುಗಳ ನಿರೂಪಣಾತಂತ್ರ ಗಮನಾರ್ಹ. ಇವು ನೋಡುಗರ ಮೇಲೆ ಬೀರುವ ಪ್ರಭಾವ ಅಸಾಧಾರಣವಾದುದು. ಅಯ್ಯಪ್ಪನ್ ಗ್ರಾಮರಕ್ಷಕ. ಇವನ ಮಹತ್ತ್ವ ಮತ್ತು ಶಕ್ತಿ ಈ ಸಮೂಹಗಳಲ್ಲಿ ಕ್ರೋಡೀಕೃತ ರೂಪದಲ್ಲಿ ಎದ್ದು ಕಾಣುತ್ತದೆ.

**ಹಿತ್ತಾಳೆಯ ರಾಕ್ಷಸ ವಿಗ್ರಹ. ದಕ್ಷಿಣ ಭಾರತ. ಎತ್ತರ 1' $1\frac{1}{2}$"**

ಕರ್ನಾಟಕದಲ್ಲಿ ಜನಪದ ಶಿಲ್ಪಗಳ ಅಧ್ಯಯನ, ಜಾನಪದ ದೃಷ್ಟಿಯಿಂದಾಗಲಿ ಕಲಾ ಇತಿಹಾಸದ ದೃಷ್ಟಿಯಿಂದಾಗಲಿ ಹೊಸದಾಗಿ ಪ್ರಾರಂಭವಾಗಬೇಕಾಗಿದೆ. ಸದ್ಯಕ್ಕೆ ಕೆಲವು ಉದಾಹರಣೆಗಳನ್ನು ಮಾತ್ರ ಪಟ್ಟಿ ಮಾಡಬಹುದು. ತಮಿಳುನಾಡು ಮತ್ತು ಕೇರಳದ ರೀತಿಯ ಮಣ್ಣಿನ ಅಯ್ಯಪ್ಪನ್ ವಿಗ್ರಹಗಳು ಮತ್ತು ಅವಕ್ಕೆ ಅರ್ಪಿಸಿದ, ದನ, ನಾಯಿ ಮುಂತಾದ ಬೊಂಬೆಗಳು ಕೊಡಗು ಪ್ರದೇಶದಲ್ಲಿ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತಾರಾಧನೆಗೆ ಸಂಬಂಧಿಸಿದ ಹಿತ್ತಾಳೆಯ ಮುಖವಾಡಗಳು, ಆಯಾ ಭೂತದ ದೇವತೆಗಳ ಸ್ವರೂಪ ಕಲ್ಪನೆಗೆ ತಕ್ಕಂಥ ಭಾವಗಳನ್ನು ಬಹುಮಟ್ಟಿಗೆ ನಿರೂಪಿಸುತ್ತವೆ. ಇದೇ ಜಿಲ್ಲೆಯ ಮೆಕ್ಕೆಕಟ್ಟೆ ಎಂಬಲ್ಲಿನ ಮರದ ಬೃಹತ್ ವಿಗ್ರಹಗಳು ಅಸಾಧಾರಣ

ಕುದುರೆಯ ಮೇಲೆ ಕುಳಿತಿರುವ ಕುಲದ ಮೂಲಪುರುಷನ ಹಿತ್ತಾಳೆ ವಿಗ್ರಹ. ರಾಜಸ್ಥಾನ. ಎತ್ತರ $4\frac{3}{4}$"

ಕಲಾಕೃತಿಗಳು. ಮನುಷ್ಯ ಸ್ವಭಾವದಲ್ಲಿನ ಅನೇಕ ಮುಖಗಳು, ಅನೇಕ ಬಗೆಯ ಗುಣಸ್ವಭಾವಗಳು, ಪರಿಣಾಮಕಾರಿಯಾಗಿ ಶಿಲ್ಪರೂಪವನ್ನು ಧರಿಸಿ ನಿಂತಿವೆ. ಕರ್ನಾಟಕದ ಹಲವೆಡೆ ಮಾರಮ್ಮ ಇತ್ಯಾದಿ ಜನಪದ ದೇವತೆಗಳನ್ನು ಹಿತ್ತಾಳೆಯಲ್ಲಿ ಮಾಡುವ ರೂಢಿ ಇದೆ. ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿರುವಂಥ ಕುದುರೆಯ ಮೇಲೆ ಕುಳಿತ ಗಂಡುವಿಗ್ರಹಗಳನ್ನು ದಕ್ಷಿಣ ಕರ್ನಾಟಕದಲ್ಲೂ ಕಾಣಬಹುದು. ಇವನ್ನು ಬೀರೇದೇವರು ಎಂದು ಕರೆಯುತ್ತಾರೆ. ಇವು ಸಾಮಾನ್ಯವಾಗಿ ಹಿತ್ತಾಳೆಯಲ್ಲಿ ಮಾಡಿದವು. ಉತ್ತರ ಕರ್ನಾಟಕದ ಹಲವೆಡೆ ಮಾರಿಯಮ್ಮ, ಮರಗಮ್ಮ ಮುಂತಾದ ಮರದ ವಿಗ್ರಹಗಳು ಸಿಗುತ್ತವೆ. ಮಲೆನಾಡಿನಲ್ಲಿ ಬಳಕೆಯಲ್ಲಿರುವ ಮಾರಿಕಾಂಬಾ ವಿಗ್ರಹಗಳು ಹಾಗೂ ಗಡಿ ಮಾರಿ, ಉಡುಗೋಲಜ್ಜಿ, ಹಲ್ಲುಬೀರಿ, ಮುಂತಾದ ಶಿಲ್ಪಗಳನ್ನೂ, ವೀರಗಲ್ಲು ಮಾಸ್ತಿಕಲ್ಲು ಮುಂತಾದ ಶಿಲ್ಪಗಳನ್ನೂ, ಇಲ್ಲಿ ಸ್ಮರಿಸಬಹುದು. ಶಿಲ್ಪಕಲೆಯ ಯಾವ ನಿಯಮಗಳಿಗೂ ಯಾವ ಕಟ್ಟುಪಾಡುಗಳಿಗೂ ಯಾವ ವಿಧಿನಿಷೇಧಗಳಿಗೂ ಸ್ಪಂದಿಸದ ಅಪ್ಪಟ ಜನಪದ ಸೃಜನಶೀಲ ಶಕ್ತಿ ಕರ್ನಾಟಕದಾದ್ಯಂತ ವಿವಿಧ ರೂಪಗಳಲ್ಲಿ ಕಂಡುಬರುತ್ತದೆ. ಇವಲ್ಲದೆ ನಾಗರಿಕ ಸಂಪ್ರದಾಯಗಳಿಂದ ಬಂದ ಗಣೇಶ, ಗೌರಿ ಇತ್ಯಾದಿಗಳನ್ನು ಗ್ರಾಮೀಣರೇ ಮಾಡಿ ಉಪಯೋಗಿಸುವುದು ಕರ್ನಾಟಕದ ಹಲವೆಡೆಯಲ್ಲಿ ಕಂಡುಬರುತ್ತದೆ. ಇವೆಲ್ಲ ಧರ್ಮ, ಸಂಪ್ರದಾಯಗಳಿಗೆ ಸಂಬಂಧಿಸಿದ್ದಾದರೆ, ಮಕ್ಕಳ ವಿನೋದಕ್ಕಾಗಿ ಮಾಡಿದ, ಮರ ಅಥವಾ ಮಣ್ಣಿನ ಆಟಿಕೆಗಳು, ಅದರಲ್ಲೂ ಬಸವ ಇತ್ಯಾದಿ ಪ್ರಾಣಿಗಳ ಬೊಂಬೆಗಳು,

ಕೋನ್ಯೂನ್ ಆದಿವಾಸಿಗಳ ಮರದ ದಂಪತಿ ವಿಗ್ರಹ. ನಾಗಾಲ್ಯಾಂಡ್. ಎತ್ತರ 1'

ಕಿಸುಕಾಲು ಬೊಂಬೆಗಳು, ಇವೂ ಬಹುಸಾಮಾನ್ಯವಾಗಿ ಕಂಡುಬರುವ ಜನಪದ ಶಿಲ್ಪಗಳು. ನವರಾತ್ರಿಯ ಕಾಲದಲ್ಲಿ ಈ ರೀತಿಯ ಅನೇಕ ಬೊಂಬೆಗಳನ್ನು ಇಟ್ಟು ಅಲಂಕರಿಸುವ ಸಂಪ್ರದಾಯ ಈ ನಾಡಿನಲ್ಲಿದೆ. ಇವಲ್ಲದೆ ಸೂತ್ರದ ಬೊಂಬೆ ಆಟದಲ್ಲಿ ಉಪಯೋಗಿಸುವ ಮರದ ಬೊಂಬೆಗಳು ಆಯಾ ಪ್ರದೇಶಗಳ ಉಡಿಗೆ-ತೊಡಿಗೆಗಳಿಂದ ಅಲಂಕೃತವಾಗಿದ್ದು, ಕೆಲವು ಉಚ್ಚತರ ಕಲಾಕೃತಿಗಳ ಮಟ್ಟಕ್ಕೆ ಏರಬಲ್ಲವಾಗಿವೆ. (ಎಸ್.ಎನ್.)

**ಜನಪದ ಸಂಗೀತ** : ಜನತೆಯ ನಾಲಗೆಯ ಮೇಲೆ ಉಳಿದುಬಂದಿರುವ ಜನತಾ ಸಂಗೀತ. ಯಾವ ಒಬ್ಬನೂ ಕರ್ತೃವಲ್ಲದಿರುವುದು ಇದರ ಒಂದು ವೈಶಿಷ್ಟ್ಯ. ಇದರಲ್ಲಿ ಸಾಕಷ್ಟು ವೈವಿಧ್ಯವಿದ್ದು ಕೇಳಲು ಇಂಪಾಗಿದ್ದರೂ ಇದರ ರೂಪು ನಡೆ ಎಲ್ಲ ತುಂಬ ಸರಳವೇ. ಶಾಸ್ತ್ರೀಯ ಸಂಗೀತಕ್ಕೆ ಅಂತಾರಾಷ್ಟ್ರೀಯವೆನ್ನಬಹುದಾದ ಒಂದು ಪದ್ಧತಿ ಇರುತ್ತದೆ. ಇದರಲ್ಲಾದರೋ ಪ್ರಾದೇಶಿಕವೆನ್ನಬಹುದಾದ ಹಲವು ಪದ್ಧತಿಗಳಿರುತ್ತವೆ. ಜನಪದ ಸಂಗೀತವನ್ನು ಮೂರು ಭಾಗಗಳಾಗಿ ನೋಡಬಹುದು. ಒಂದು ವಾದ್ಯಸಂಗೀತ, ಇನ್ನೊಂದು ಹಾಡುಗಾರಿಕೆ, ಮತ್ತೊಂದು ಅದರ ಸಾಹಿತ್ಯ. ಜನಪದದಲ್ಲಿ ಮೊದಲು ಹುಟ್ಟಿದ್ದು ಸಂಗೀತ ಹಾಗೂ ನೃತ್ಯ. ಇವೆರಡಕ್ಕೂ ಬಹು ಹತ್ತಿರದ ನಂಟು ಉಂಟು. ಅನಂತರ ಹುಟ್ಟಿದ್ದು ಸಾಹಿತ್ಯ. ಕುಣಿತ ಜನತೆಯ ಜೀವನದ ಮುಖ್ಯ ಅಂಗ. ಸಂತೋಷ ಉಕ್ಕಿದಾಗ, ಮಳೆ ಬೆಳೆ ಚೆನ್ನಾಗಿ ಆದಾಗ, ಮದುವೆ ಮೊದಲಾದ ಶುಭಕಾರ್ಯಗಳು ನಡೆದಾಗ ಕುಣಿಯುವುದು ವಾಡಿಕೆಯಾಗಿತ್ತು. ಧಾರ್ಮಿಕ ಆಚರಣೆಗಳು, ಗ್ರಾಮದೇವತೆಯ ಹಬ್ಬಗಳು, ಮುಂತಾದ ಸಂದರ್ಭಗಳಲ್ಲಿ ಸಂಗೀತಕ್ಕೆ ತಕ್ಕ ನೃತ್ಯಗಳೂ ಇರುತ್ತಿದ್ದುವು. ಜನಪದ ಭಾಷೆಯಲ್ಲಿ ಅವನ್ನು ಕುಣಿತಗಳು ಎನ್ನುತ್ತಿದ್ದರು. ಒಬ್ಬ ಹಾಡುವುದು, ಉಳಿದವರು

ಅನುಸರಿಸುವುದು–ಇದು ನೃತ್ಯಪ್ರಧಾನವಾದ ಜನಪದ ಸಂಗೀತದ ಮಾದರಿ. ಹಾಡು ಹಾಡುತ್ತ ಸಂಗೀತದ ಗತ್ತು, ಸಾಹಿತ್ಯದ ನಡೆ ಬದಲಾಗಲಾರಂಭಿಸಿದವು. ವಿವಿಧ ವರಸೆಗಳು ಬಳಕೆಗೆ ಬಂದವು. ವಾದ್ಯಗಳಲ್ಲಿ ವೈಶಿಷ್ಟ್ಯಗಳೇರ್ಪಟ್ಟವು. ಸುಖ, ದುಃಖ, ಭಕ್ತಿ ಭಯ ಗೌರವಗಳನ್ನು ಪ್ರೀತಿ ವಿಶ್ವಾಸ ಪ್ರಣಯಗಳನ್ನು ಸೂಚಿಸುವ ಕೃತಿಗಳು ಹೊಮ್ಮಿದುವು. ಶ್ರಮನಿವಾರಣೆಗಾಗಿ ಮೋಜಿನ ಪದಗಳು ಹುಟ್ಟಿದುವು. ಕೆಲಸದ ಹಾಡುಗಳು ತಲೆದೋರಿದವು. ಹೀಗೆ ರಾಗಭಾವಮಿಶ್ರಿತವಾದ ವೈವಿಧ್ಯಮಯ ಸಾಹಿತ್ಯ ಬೆಳೆಯಿತು. ದೇವರನ್ನು ಕುರಿತಂತೆ ವೀರರನ್ನು ಕುರಿತಂತೆ ಕಥಾಸ್ವರೂಪದ ಲಾವಣಿಗಳು ತಲೆದೋರಿದವು. ಒಂದು ಕಾಲಕ್ಕೆ ಸಾಮಾನ್ಯವಾಗಿ ಸಂಗೀತ ಎನ್ನಿಸಿಕೊಂಡಿದ್ದು ವಿಕಾಸಗೊಂಡು ನಾಟಕ ಮೇಲೆದ್ದಿತು. ಇದು ಸ್ಥೂಲವಾಗಿ ಜನಪದ ಸಂಗೀತದ ಚರಿತ್ರೆ.

ಜನಪದ ಸಂಗೀತ ಬಹಳ ಸುಲಭ ಮಾದರಿಯದು. ಹೆಚ್ಚು ವಾದ್ಯಗಳ ಬಳಕೆಯೂ ಇಲ್ಲಿ ಅನಗತ್ಯ. ಒಂದು ತಂತೀವಾದ್ಯ, ಒಂದು ಚರ್ಮವಾದ್ಯ ಇದ್ದರಾಯಿತು. ಯಾವುದೋ ಒಂದು ರಾಗದ ಒಂದು ಸ್ಥಾಯಿಯಲ್ಲಿ ಗಾಯನ ನಡೆಯುತ್ತದೆ. ಕೇವಲ ಮೂರು ನಾಲ್ಕು ಸ್ವರದಲ್ಲೇ ಇಡೀ ಸಂಚಾರ. ತಾಳದ ಲಯವೂ ಸುಲಭ. ಮೂರು ನಾಲ್ಕು ಮಾತ್ರೆಯ ಏಕತಾಳದ ಗತಿ ನೃತ್ಯಕ್ಕೆ ಚೆನ್ನಾಗಿ ಒಗ್ಗುತ್ತದೆ.

ಲಾವಣಿಕಾರ

ಊದುವ ವಾದ್ಯಗಳಲ್ಲಿ ಪಿಳ್ಳಂಗೋವಿ, ಓಲಗ, ಮುಖವೀಣೆ ಮೊದಲಾದವು ಇರುತ್ತವೆ. ತಂತೀವಾದ್ಯಗಳಲ್ಲಿ ಏಕನಾದ, ಚೌಡಿಕೆ, ಇರುತ್ತವೆ. ತಾಳವಾದ್ಯಗಳಲ್ಲಿ ಕಂಚಿನ ತಾಳ, ಮದ್ದಳೆ, ಡೋಲು, ಡಮರು, ಢಕ್ಕೆ, ಕಂಜಿರ, ತಮಟೆ, ಚಂಡೆ, ಚಂದ್ರವಾದ್ಯ, ತಬಲ ಮೊದಲಾದುವಲ್ಲಿ ಒಂದೆರಡು ಇರುತ್ತವೆ. ಇವೆಲ್ಲ ಅಲ್ಲಲ್ಲಿನ ಜನ ಕೈಯಿಂದ ಮಾಡಿ ಬಳಸುವ ವಾದ್ಯಗಳು. ಯಂತ್ರದಲ್ಲಿ ಮಾಡಿದವಲ್ಲ. ಆಫ್ರಿಕದ ಜನ ತಮ್ಮ ನೃತ್ಯಸಂಗೀತಗಳಲ್ಲಿ ಬಹುಹೆಚ್ಚಿನ ವಾದ್ಯಗಳನ್ನು ಬಳಸುತ್ತಾರೆ. ಅವರ ಸಂಗೀತದಿಂದ ಹುಟ್ಟಿ ಬಂದ ಜಾಜ್ (**ನೋಡಿ**) ಸಂಗೀತದಲ್ಲಿ ಇದನ್ನು ನಾವು ಕಾಣಬಹುದು. ಮರದ ತುಂಡು, ಲೋಹದ ದಪ್ಪ ಸರಳು ಮೊದಲಾದುವನ್ನು ಕೋಲಿನಿಂದ ಬಡಿದು ತಾಳ ಹಾಕುವ ಪದ್ಧತಿಯೂ ಉಂಟು. ತಾಳಕ್ಕೆ ಗೆಜ್ಜೆ ಕುಚ್ಚನ್ನು ಬಳಸುವವರೂ ಇದ್ದಾರೆ.

ಪ್ರಪಂಚದ ಬೇರೆಬೇರೆ ದೇಶಗಳಲ್ಲಿ ಜನಪದ ಸಂಗೀತ ತನ್ನದೇ ಆದ ವೈಶಿಷ್ಟ್ಯದಿಂದ ಬೆಳೆದು ಬಂದಿದೆ. ರೂಮೇನಿಯ ಕ್ರಿಸ್‌ಮಸ್ ಕೆರೋಲಿಗೆ ಪ್ರಸಿದ್ಧ. ಅಮೆರಿಕದಲ್ಲಿ ಜಾಜ್, ಕೌಬಾಯ್ ಸಾಂಗ್ಸ್ ಪ್ರಖ್ಯಾತ. ಬ್ರಿಟನ್ ಮತ್ತು ಫ್ರಾನ್ಸ್ ಭಾವಗೀತಾತ್ಮಕ ಲಾವಣಿಗಳ ತವರು. ಸ್ಕಾಟ್‌ಲೆಂಡ್ ಮತ್ತು ವೇಲ್ಸ್ ದೇಶದ ಹಳ್ಳಿಯ ಪದ ಅಲ್ಲಿನ ಹಿರಿಯ ಕವಿಯಾದ ರಾಬರ್ಟ್ ಬರ್ನ್ಸ್‌ಗೂ ಮಾರ್ಗದರ್ಶನ ನೀಡಿತು ಎಂಬುದನ್ನು ಮರೆಯಲಾಗದು. ಕನ್ನಡ ನಾಡಲ್ಲಿ ಕವಿ ಬೇಂದ್ರೆಯವರಿಗೂ ಜನಪದ ಗೀತೆಗಳಿಂದಲೇ ಸ್ಫೂರ್ತಿ ಬಂತು. ಯುರೋಪಿನ ಆದಿವಾಸಿಗಳಾದ ಬಾಸ್ಕೊ ಜನಾಂಗ ಹೇರಳವಾಗಿ ಭಾವಗೀತೆ, ಶೃಂಗಾರಗೀತೆಗಳನ್ನು ಹಾಡುತ್ತಾರೆ. ರೋಮನ್ ಚರ್ಚಿನ ಪ್ರಾರ್ಥನಾ ಗೀತೆಗಳು ಹಳೆಯ ಸಂಪ್ರದಾಯದ ಮಾದರಿಯಾಗಿವೆ. ಐರ್ಲೆಂಡಿನ ಜನ ತಮ್ಮ ಹಳ್ಳಿಹಾಡನ್ನು ನಾಜೂಕಾಗಿ ಕಾಪಾಡಿದ್ದಾರೆ. ಅನೇಕ ಕಡೆ ಸಂಚಾರ ಮಾಡುವ ಜಿಪ್ಸಿಗಳಿಂದ ಜನಪದ ಸಂಗೀತ ಪ್ರಸರಣಕ್ಕೆ ತುಂಬ ಸಹಾಯವಾಗಿದೆ. ಇಟಲಿ, ಜಪಾನ್, ಚೀನಗಳಲ್ಲಿ ಹಾಗೆಯೇ ಇರಾನ್, ಅರೇಬಿಯಗಳಲ್ಲಿ ಗ್ರೀಸ್ ಮತ್ತು ರೋಮ್‌ಗಳಲ್ಲಿ ಜನಪದಗೀತೆಗಳ ಗಾಯನ ಅಭಿವೃದ್ಧಿ ಪಡೆದಿದೆ. ಸೋವಿಯೆತ್ ದೇಶದ ಜನಪದ ಸಂಗೀತ 19ನೆಯ ಶತಮಾನದ ಮೇಲೆ ರಾಷ್ಟ್ರೀಯತಾ ಭಾವನೆಗೆ ಹೆಚ್ಚು ಬೆಲೆ ಕೊಟ್ಟಿದೆ. ಅಲ್ಲಿ ಗೀತೆಗಳ ಏರಿಳಿತ, ಲಯ, ವಾದ್ಯಮೇಳಗಳಲ್ಲಿ ಹೊಸ ರೂಪ ಬಂದಿದೆ. ಸ್ಪೇನ್ ಮತ್ತು ಪೋರ್ಚುಗಲ್ಲಿನ ಜನ ವೀರಗೀತೆಗೆ ಹೆಸರುವಾಸಿಯಾಗಿದ್ದಾರೆ. ಇಂಗ್ಲೆಂಡ್ ಐರ್ಲೆಂಡ್‌ಗಳಲ್ಲಿ ಭಾರಿ ಜನಪದಗೀತೆಗಳ ಸಂಘಗಳೇ ಸ್ಥಾಪನೆಯಾಗಿವೆ. ಅಮೆರಿಕದಲ್ಲೂ ಅಂತೆಯೇ. ಚೆನ್ನಾಗಿ ಪ್ರಕಟಿಸಿ, ಪ್ರಚಾರ ಮಾಡಿ, ಬಾನುಲಿಗಳಲ್ಲಿ, ಟೆಲಿವಿಷನ್‌ಗಳಲ್ಲಿ ಜನಪದಗೀತೆಗಳನ್ನು ಪ್ರಸಾರ ಮಾಡುತ್ತಿದ್ದಾರೆ. ಗೀತಗಳ ಧ್ವನಿಮುದ್ರಣ ಹಾಗೂ ಪ್ರಕಟಣೆಯ ಕೆಲಸ ಭರದಿಂದ ಸಾಗಿದೆ.

ಭಾರತದಲ್ಲೂ ಇತರ ದೇಶಗಳಲ್ಲಿನಂತೆ ಸಾಕಷ್ಟು ವೈವಿಧ್ಯ ಉಳ್ಳ ಜನಪದ ಸಂಗೀತ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಈ ಸಂಗೀತದ ರುಚಿ ಕಂಡ ವೆರಿಯರ್ ಎಲ್ವಿನ್, ಆರ್ಚರ್, ದೇವೇಂದ್ರ ಸತ್ಯಾರ್ಥಿ, ಡುಬೆ, ಹಟನ್, ಫಾನ್ ಫ್ಯೂರರ್ ಹಿಮೆಂಡ್ರಾಫ್ ಮೊದಲಾದ ಮಹನೀಯರು ಗೀತಗಳನ್ನು ಹಾಡಿಸಿ, ಶೇಖರಿಸಿ, ಧ್ವನಿಮುದ್ರಿಸಿಕೊಂಡು ತುಂಬ ಉಪಕಾರ ಮಾಡಿದ್ದಾರೆ. ದಕ್ಷಿಣ ಭಾರತದಲ್ಲೂ ಇಂಥ ಮಹನೀಯರು ಹಲವರು ಇದ್ದಾರೆ. ಕನ್ನಡಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತುಸಂಗ್ರಹಾಲಯದವರು, ಜನಪದ ಸಾಹಿತ್ಯ ಬಳಗದವರು ಮಾಡಿರುವ ಕೆಲಸ ಸ್ತುತ್ಯರ್ಹವಾದುದು.

ಈ ಭಾಗದಲ್ಲಿನ ವೈವಿಧ್ಯಕ್ಕೂ ರಂಜನೆಗೂ ಉದಾಹರಣೆಯಾಗಿ ಇವನ್ನು ನೋಡಬಹುದು. ಬಂಗಾಳದ ಭಟಿಯಾಲಿ, ಬಾವುಲ್ ಹಾಡು, ದೋಣಿಗರ ಹಾಡು ಇವು ಅದ್ಭುತ. ರಾಜಪುಟಾಣದ ಮದುವೆ ಹಾಡು, ಯುದ್ಧವರ್ಣನೆಯ ವೀರಗತೆಗಳೂ ಪ್ರಸಿದ್ಧ. ಆಂಧ್ರದೇಶದ ಬುರ‍್ರ ಕಥೆ, ಕೇರಳದ ಕುಮ್ಮಿ ಹಾಡು, ದೋಣಿ ಹಾಡು, ಗುಜರಾತಿನ ಗರ್ಭಹಾಡು, ತಮಿಳುನಾಡಿನ ಕಾವಟಿ ಹಾಡು, ಕನ್ನಡನಾಡಿನ ಗರತಿಹಾಡು, ಬಂಡಿ ಹಾಡು, ಹೆಚ್ಚು ಮನೋರಂಜಕ. ಮೈಮರೆತು ಒರಟಾಗಿ ಹಾಡಿದರೂ ಗಂಟೆಗಳ ಕಾಲ ಹಾಡಿದರೂ ಬೇಸರ ಬಾರದು.

ಮಧ್ಯ ಪ್ರದೇಶದ ಛತ್ತೀಸ್‌ಗಢದ ಬಾನ್ ಭಜನೆಗಳು, ಅಸ್ಸಾಮಿನ ಬ್ರಹ್ಮಪುತ್ರಾ ಕಣಿವೆಯ ಬಾನ್ ಗೀತೆಗಳು, ನೀಲಗಿರಿಯ ತೋಡರ ಹಾಡುಗಳು, ಕೊಡಗಿನ ಕೊಡವರ ಹಾಡು, ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಹಾಡುಗಳು ಪ್ರಕೃತಿಯ ವರ್ಣನೆಗಳಿಂದ ತುಂಬಿ ಸುಂದರವಾಗಿವೆ. (ಆರ್.ಬಿ.ಎಸ್.)

ಕನ್ನಡ ಜನಪದ ಹಾಡಿಕೆಯಲ್ಲಿ ಕನ್ನಡನಾಡಿಗೇ ವಿಶಿಷ್ಟವಾದ ಗುಣಗಳನ್ನೂ ವಿಶ್ವಮಾನ್ಯವಾದ ಸಂಗೀತದ ಅಂಶಗಳನ್ನೂ ಗುರುತಿಸಬಹುದು.

ಭಾರತದ ಜನಪದಗೀತೆಗಳ ಸಂಗೀತಾಂಶವನ್ನು ಎಂದರೆ ಅವುಗಳ ದನಿ, ಲಯಗಳನ್ನು ಪರಿಶೀಲಿಸಿದಾಗ ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಜನಪದ ಸಂಗೀತ ಅಡಿಪಾಯವಾಗಿದೆ ಎಂಬುದು ಕಂಡುಬರುತ್ತದೆ. ನಾಗರಿಕರ ಸಂಪರ್ಕವೇ ಇಲ್ಲದೆ ಗುಡ್ಡಗಾಡುಗಳಲ್ಲಿ ಇಂದಿಗೂ ವಾಸಿಸುವ ಅನೇಕ ಬುಡಕಟ್ಟುಗಳವರು ಹಾಡಿಕೊಳ್ಳುವ ಹಾಡುಗಳಲ್ಲಿ ಇಂದಿನ ಕರ್ನಾಟಕ ಹಾಗೂ ಹಿಂದೂಸ್ಥಾನಿ ಗಾನಶೈಲಿಯ ರಾಗಪದ್ಧತಿಯ ರಾಗಗಳಿಗೆ ಅಡಿಪಾಯವಾಗಬಲ್ಲ ಧ್ವನಿಮಾಧುರ್ಯಗಳು ಕೇಳಿಬರುತ್ತವೆ. ಉದಾಹರಣೆಗೆ ಕರ್ನಾಟಕದ ನಾಗರಹೊಳೆಯ ಬೆಟ್ಟಕುರುಬರ ಹಾಡುಗಳಲ್ಲಿ ಖರಹರಪ್ರಿಯ ರಾಗದ ಅನೇಕ ಸ್ವರಸಂಚಾರಗಳನ್ನು ಕಾಣಬಹುದು.

ಪ್ರಪಂಚದಲ್ಲಿ ಬಳಕೆಯಲ್ಲಿರುವ ಎಲ್ಲ ಜನಪದ ಗೀತೆಗಳಲ್ಲಿಯೂ ಐದು ಸ್ವರಗಳ ಸ್ವರಶ್ರೇಣಿಗಳೇ (ಪೆಂಟಟೋನಿಕ್ ಸ್ಕೇಲ್) ಅಧಿಕವಾಗಿ ಉಪಯೋಗಿಸಲ್ಪಡುತ್ತವೆ. ಐದಕ್ಕಿಂತ ಕಡಿಮೆಯೂ ಇರಬಹುದು. ಐದು ಅತ್ಯಧಿಕ ಸ್ವರಸಂಖ್ಯೆ. ಈ ಅಂಶವನ್ನು ಭಾರತೀಯ

ಜನಪದ ಹಾಡುಗಳಲ್ಲೂ ಕಾಣಬಹುದು. ಭಾರತದ ಶಾಸ್ತ್ರೀಯ ಸಂಗೀತದಲ್ಲಿ ಉಪಯೋಗಿಸಲ್ಪಡುವ ರಾಗಗಳಲ್ಲಿ ಸಂಪೂರ್ಣ ರಾಗಗಳಿಗೆ ಆರೋಹಣಾವರೋಹಣಗಳಲ್ಲಿ ಏಳು ಸ್ವರಗಳೂ ಷಾಡವ ರಾಗಗಳಿಗೆ ಆರು ಸ್ವರಗಳೂ ಔಡವ ರಾಗಗಳಿಗೆ ಐದು ಸ್ವರಗಳೂ ಇರುವುದನ್ನು ಇಲ್ಲಿ ನೆನೆಯಬಹುದು. ಎಂದ ಮೇಲೆ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಬಳಕೆಯಲ್ಲಿರುವ ರಾಗಗಳಿಗೆ ಆರೋಹಣದಲ್ಲಿಯಾಗಲಿ ಅವರೋಹಣದಲ್ಲಿಯಾಗಲಿ ಉಪಯೋಗಿಸಲ್ಪಡುವ ಅತ್ಯಂತ ಕಡಿಮೆಯ ಸ್ವರಸಂಖ್ಯೆ ಐದೆಂಬುದು ಇದರಿಂದ ವಿದಿತವಾಗುತ್ತದೆ. ಈ ನಿಯಮಕ್ಕೆ ಅಪವಾದಗಳು ಅಪರೂಪ. ಆದರೆ ಅದಕ್ಕಿಂತ ಹೆಚ್ಚು ಸ್ವರಗಳು ಒಂದು ಶ್ರೇಣಿಯಲ್ಲಿ ಬಳಕೆಯಾಗಿರುವ ಜನಪದ ದನಿಗಳು ಅಪರೂಪ.

ತತ್ತ್ವಗಾಯಕರು

ಪ್ರಪಂಚದ ಹಾಗೂ ಭಾರತದ ಎಲ್ಲ ಕಡೆಯ ಜನಪದ ಹಾಡುಗಾರರೂ ಹೋ, ಹಾ, ಭಲೆ, ಐಸಾ ಇತ್ಯಾದಿಯಾಗಿ ತಮ್ಮ ತಮ್ಮ ಭಾಷೆಗೆ ಸಹಜವಾಗಿ ಹೊಂದಿಕೊಂಡು ಬರುವ ಉದ್ಗಾರಗಳನ್ನು ಹಾಡಿಗೆ ಸೇರಿಸಿ ಹಾಡಿಬಿಡುತ್ತಾರೆ. ಸಂಗೀತದ ನಡುವೆ ಗದ್ಯವಾಗಿಯೇ ಮೂಡುವ ಈ ಉದ್ಗಾರಗಳು ಲಯಕ್ಕೆ ಒಂದು ನಿಲುಗಡೆಯನ್ನೋ ಬಿರುಸನ್ನೋ ಮುಕ್ತಿಯನ್ನೋ ಒದಗಿಸಿಕೊಡುವುದರಲ್ಲಿ ಯಶಸ್ವಿಯಾಗಿವೆ.

ಭಾರತದ ಅತ್ಯಂತ ಉತ್ತರದ ನಾಗಾ ಜನಪದಗಳು ತಮ್ಮ ಜನಪದ ಹಾಡುಗಳಲ್ಲಿ ಒಂದು ಸಾಧಾರಣ ಮಟ್ಟದ ಪದ್ಧತಿಯನ್ನು (ಹಾರ್ಮಾನಿಕ್ ಮ್ಯೂಸಿಕ್) ಒಡಗೂಡಿಸಿಕೊಂಡಿರುವುದು ಕಂಡುಬಂದಿದೆ. ಭಾರತದ ಸಂಗೀತವೆಲ್ಲಜಿಜನಪದ ಸಂಗೀತ ಕೂಡ–ರಾಗಪ್ರಧಾನವಾದ (ಮೆಲೊಡಿಕ್) ಸಂಗೀತ. ಪ್ರಾಯಶಃ ನಾಗಾಜನ ವಾಸಿಸುವ ಸ್ಥಳಗಳಲ್ಲಿ ಪಾಶ್ಚಾತ್ಯರ ಪ್ರಭಾವ ಹೆಚ್ಚಾಗಿದ್ದುದೇ ಕಾರಣವಾಗಿ ಅವರ ಸಂಗೀತದಲ್ಲೂ ಪಾಶ್ಚಾತ್ಯ ಸಂಗೀತದ ಮುಖ್ಯ ಗುಣವಾದ ಸಾಂಗತ್ಯ ಪದ್ಧತಿ ಕಾಣಿಸುತ್ತಿರಬೇಕು.

ಇನ್ನು ಭಾರತದ ಜನಪದ ಗಾಯನ ಪದ್ಧತಿಯಲ್ಲಿನ ಸಾಮ್ಯವನ್ನು ಕುರಿತು ಒಂದು ಮಾತು. ಗುಜರಾತಿನ ದುಹಾ ಛಂದಗಳು, ಮಹಾರಾಷ್ಟ್ರದ ಲಾವಣಿಗಳು, ಒರಿಸ್ಸದ ಹಾಡುಗಬ್ಬಗಳು, ಉತ್ತರ ಕರ್ನಾಟಕದ ಗೀಗೀ ಪದಗಳು, ಹಳೆಯ ಮೈಸೂರು ಲಾವಣಿಗಳು–ಇವಕ್ಕೆಲ್ಲ ನಾದರೂಪದಲ್ಲಿರುವ ಹೋಲಿಕೆ ಅದ್ಭುತವಾದದ್ದು. ಇದು ಒಂದು ಉದಾಹರಣೆ ಮಾತ್ರ. ಮದುವೆ ಸಂಪ್ರದಾಯದಲ್ಲಿ ಹಾಡುಗಳೇ ದೇವರು ದಿಂಡರುಗಳ ಮುಂದೆ ಕುಣಿಯುವಾಗ ನುಡಿಸುವ ವಾದ್ಯಗಳೇ–ಹೀಗೆ ವಿಮರ್ಶೆ ಮಾಡುತ್ತ ಹೊರಟರೆ ಭಾರತದ ವಿವಿಧ ಪ್ರಾಂತ್ಯಗಳ ಜನಪದಗೀತೆಗಳಲ್ಲಿ ನಾದರೀತಿಯಾಗಿ ದನಿ (ಟ್ಯೂನ್) ಲಯ (ರಿದಮ್) ಗಳಲ್ಲಿ ಅದ್ಭುತವಾದ ಸಾಮ್ಯ ಕಾಣುತ್ತದೆ. ಉದಾಹರಣೆಗೆ, ಒರಿಸ್ಸದ ಕೆಲವು ಜನಪದಗೀತೆಗಳ ದನಿಗಳನ್ನುಳಿಸಿಕೊಂಡು ಅವಕ್ಕೆ ಕನ್ನಡ ಮಾತನ್ನೊದಗಿಸಿದರೆ ಇದು ಕನ್ನಡ ನಾಡಿನ ಹಾಡಲ್ಲ ಎಂದು ಹೇಳುವುದು ಕಷ್ಟವಾಗುತ್ತದೆ. ಅಷ್ಟು ಮಟ್ಟಿನ ನಾದಸಾಮ್ಯ ಇಲ್ಲಿ ಕಾಣುತ್ತದೆ. ಆದರೆ ಭಾರತದ ಇಂದಿನ ಶಾಸ್ತ್ರೀಯ ಸಂಗೀತವನ್ನು ಗಮನಿಸಿದರೆ ಉತ್ತರದ ಹಿಂದೂಸ್ತಾನಿ ಪದ್ಧತಿಗೂ ದಕ್ಷಿಣದ ಕರ್ನಾಟಕ ಸಂಗೀತ ಪದ್ಧತಿಗೂ ಇಂಥ ನಾದಸಾಮ್ಯ ಉಳಿದುಬಂದಿಲ್ಲ. ಏಕೆಂದರೆ, ಭರತನ ಕಾಲದಲ್ಲಿ ಇಡೀ ಭಾರತದಲ್ಲಿ ಒಂದೇ ಸಂಗೀತ ಪದ್ಧತಿ ರೂಢಿಯಲ್ಲಿತ್ತು. ಆದರೆ 14ನೆಯ ಶತಮಾನದ ಹೊತ್ತಿಗೆ ದಕ್ಷಿಣೋತ್ತರ ಭೇದಗಳನ್ನು ಹರಪಾಲದೇವ ಎತ್ತಿ ಹೇಳಿದ್ದಾನೆ. ಇಂದಿಗೂ ಇಡೀ ಭಾರತದಲ್ಲಿ ಒಂದೇ ಪದ್ಧತಿಯನ್ನು ಉಳಿಸಿಕೊಂಡು ಬಂದಿರುವ ಜನಪದ ಗೀತಪದ್ಧತಿಯ ತುಲನಾತ್ಮಕ ಅಭ್ಯಾಸದಿಂದ ಶಾಸ್ತ್ರೀಯ ಸಂಗೀತ ಉತ್ತರದಕ್ಷಿಣಗಳಲ್ಲಿ ಭಿನ್ನರೂಪ ತಳೆದದ್ದೇಕೆ ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕೀತು.

ಕಂಸಾಳೆ ಗಾಯಕ

ಕನ್ನಡದ ಮೂಲ ಛಂದಸ್ಸು ತ್ರಿಪದಿ. ತ್ರಿಪದಿ ಹಾಡಾಗಿಯೇ ಮೂಡಿಬಂದದ್ದು. ನಾಡಹಾಡುಗಳಲ್ಲಿ ಬಹು ಹೆಚ್ಚು ಭಾಗ ತ್ರಿಪದಿಗಳೇ. ಸಣ್ಣ ಸರಳ ಭಾವನೆಗಳ ಅಭಿವ್ಯಕ್ತಿಗಾಗಲಿ ದೊಡ್ಡ ಕತೆಗಳನ್ನು ಹೇಳಲು ಆಗಲಿ ತ್ರಿಪದಿಗಳ ಬಳಕೆಯಾಗಿದೆ. ಈ ಎಲ್ಲ ಸಂದರ್ಭಗಳಲ್ಲೂ ತ್ರಿಪದಿ ಸಹಜವಾಗಿ, ಸುಂದರವಾಗಿ ಹಾಡಿಕೆಗೆ ಒಗ್ಗಿಕೊಂಡು ಬಂದಿರುವುದು ಸ್ವಾರಸ್ಯಕರ ಅಂಶ. ತ್ರಿಪದಿಯನ್ನು ವಿವಿಧ ಲಯಗಳಿಗೆ ಯಶಸ್ವಿಯಾಗಿ ಹೊಂದಿಸಿಕೊಂಡಿರುವುದು ಲಯಬದ್ಧ ಹಾಡುಗಳಲ್ಲಿ ಕಂಡುಬಂದಿದೆ. ಲಯವಿರಹಿತ ಧ್ವನಿಮಾಧುರ್ಯಗಳಲ್ಲಿ ತ್ರಿಪದಿಯನ್ನು ಎಳೆದೆಳೆದು ಹಾಡುವಲ್ಲಿ ವಿಧವಿಧವಾದ ದನಿಗಳನ್ನು ಬಳಕೆ ಮಾಡಿರುವುದು

ಕಾಣುತ್ತದೆ. ಹಲವಾರು ಮಟ್ಟುಗಳಿಗೆ ಅರ್ಥಪೂರ್ಣವಾಗಿ ಹೊಂದಿಕೊಳ್ಳುವ ಗುಣವು ಕನ್ನಡ ತ್ರಿಪದಿಗಳಿವೆ. ತ್ರಿಪದಿಗಳೇ ಅಲ್ಲದೆ ದ್ವಿಪದಿಗಳು, ಚೌಪದಿಗಳು, ರಗಳೆಯ ಧಾಟಿಯ ಚಂಪೂ ರೀತಿಯ ಕಥನಕವನಗಳೆಲ್ಲ ಕನ್ನಡ ಜನಪದದ ಬಾಯಲ್ಲಿ ಹಾಡಾಗಿಯೇ ಮೂಡಿಬಂದಿದೆ. ನಾಡಹಾಡುಗಾರರು ಈ ಎಲ್ಲ ಛಂದಸುಗಳನ್ನೂ ನಾದಕ್ಕೆ ಒಗ್ಗಿಸಿಕೊಂಡಿರುವ ರೀತಿ ಅಪೂರ್ವವಾದದ್ದು. ಸಂಗೀತ ಸಾಹಿತ್ಯದ ಅರ್ಥವನ್ನು ಮುಚ್ಚದೆ ಒಂದಕ್ಕೊಂದು ಪೂರಕವಾಗಿ ಕೂಡಿಕೊಂಡು ಬರುವಂತೆ ಹಾಡಿರುವುದು ಇವರ ಮುಖ್ಯ ಸಾಧನೆ. ಈ ಸಿದ್ಧಿಯ ದೆಸೆಯಿಂದಲೇ ನಮ್ಮ ಜನಪದ ಸಂಗೀತ ಲಘು ಸಂಗೀತಕ್ಕೆ ಜನ್ಮದಾತೆಯಾಯಿತು. ಈ ಕ್ರಿಯೆ ಭಾರತದ ಆದ್ಯಂತ ನಡೆದಿದೆ.

ನೃತ್ಯದ ಗತಿಭೇದಗಳಿಗೆ ಸರಳ ರಾಗಗಳನ್ನು ಹೊಂದಿಸಿಕೊಳ್ಳುವಲ್ಲೂ ಜನಪದ ಸಂಗೀತದ ಸಾಧನೆ ಗಮನಾರ್ಹವಾದದ್ದು. ಈ ಅಂಶವನ್ನು ಕೋಲಾಟ, ಗಂಗೆ ಕುಣಿತ, ಕಂಸಾಳೆ ನೃತ್ಯಗಳು, ವೀರಗಾಸೆ ಕುಣಿತ, ಮುಂತಾದವುಗಳಲ್ಲಿ ಕಾಣಬಹುದು. ಈ ಸಂದರ್ಭದಲ್ಲೇ ಲಯವಾದ್ಯಗಳನ್ನು ಜನಪದ ಸಂಗೀತ ವಿಸ್ತಾರವಾಗಿ ಬಳಸಿಕೊಂಡಿದೆ ಎಂಬುದನ್ನು ಕಾಣುತ್ತೇವೆ.

ದುಡಿ, ತಮಟೆ, ಡೋಲು, ಗುಮ್ಮಟೆ, ಢಡ, ಚಂಡೆ ಇತ್ಯಾದಿ ಲಯವಾದ್ಯಗಳು ಕರ್ನಾಟಕದ ಮೂಲೆಮೂಲೆಯಲ್ಲೂ ಒಂದಲ್ಲ ಒಂದು ಹೆಸರಿನಲ್ಲಿ, ರೂಪದಲ್ಲಿ ಸಿಕ್ಕುತ್ತವೆ. ಅನೇಕ ಸಣ್ಣಪುಟ್ಟ ವ್ಯತ್ಯಾಸಗಳನ್ನು ಮಾಡಿಕೊಂಡು ವಿವಿಧ ರೂಪಗಳಲ್ಲಿ ಈ ವಾದ್ಯಗಳನ್ನು ರಚಿಸಿದ್ದಾರೆ ಕನ್ನಡ ಜನಪದ ವಾದ್ಯಗಾರರು.

ತಂತೀವಾದ್ಯದಲ್ಲಿ ಇಷ್ಟೊಂದು ವೈವಿಧ್ಯ ಕಾಣಬರುವುದಿಲ್ಲವಾದರೂ ಹಲವಾರು ತಂತೀವಾದ್ಯಗಳನ್ನು ಬಳಸುತ್ತಾರೆ, ಕನ್ನಡನಾಡಿನ ಹಾಡುಗಾರರು. ಖಾಲಿಬುರುಡೆಯನ್ನು ವಾದ್ಯರಚನೆಯಲ್ಲಿ ಉಪಯೋಗಿಸಿ ಆ ಬುರಡೆಯೊಳಗಿನ ಗಾಳಿಯ ಒತ್ತಡವನ್ನು ಸರಳ ನಿಯಂತ್ರಣಕ್ಕೊಳಗಾಗಿಸಿ ಹೆಚ್ಚು ಕಡಿಮೆ ಮಾಡುತ್ತ ಬುರುಡೆಯ ಒಂದು ಅಥವಾ ಎರಡು ಮುಖಗಳಿಗೆ ಹೊದಿಸಿದ ಚರ್ಮದ ಹೊದಿಕೆಯನ್ನು ಬಡಿಯುವುದರಿಂದ ಕೆಲವಾರು ಸ್ವರಗಳನ್ನು ಹೊರಡಿಸುವ ತಂತ್ರವನ್ನೂ ಜನಪದ ವಾದ್ಯಗಾರರು ಬಹಳವಾಗಿ ಬಳಸಿರುವುದು ಕಾಣುತ್ತದೆ.

ಉತ್ತರ ಕರ್ನಾಟಕದ ಕರಡಿಮಜಲು, ಕಂಸಾಳೆಯ ಗರಿ ಮತ್ತು ಬಟ್ಟಲು, ತಾಳ, ಗುಮ್ಮಟೆ, ಚಕ್ರಾಜಿ ಬಳೆ ಮುಂತಾದುವೆಲ್ಲ ಅಪ್ಪಟ ಜನಪದ ವಾದ್ಯಗಳು.

ರಾಗಿ ಬೀಸುವ ಹಾಡುಗಳು, ಕೋಲಾಟದ ಹಾಡುಗಳು, ಗೀಗೀ ಪದಗಳು, ಎಲ್ಲಮ್ಮನ ಪದಗಳು, ಕೊಂತ್ಯಮ್ಮನ ಪದಗಳು, ಮುಂತಾದವುಗಳಲ್ಲಿ ಕಾಣಬರುವ ಧ್ವನಿವೈವಿಧ್ಯ ಸಂಗೀತ ಪ್ರಪಂಚದ ಬೆರಗುಗಳಲ್ಲಿ ಒಂದು ಎಂದರೆ ಅತಿಶಯೋಕ್ತಿಯಲ್ಲ. ಮೂರುನಾಲ್ಕು ಸ್ವರಗಳ ಪರಿಧಿಯಲ್ಲೇ ಇದು ವಿಸ್ತಾರ ಮಾಡುವ ಪರಿಪಾಠವಿಲ್ಲದೆಯೇ ಬಗೆಬಗೆಯ ದನಿಗಳ ಸೃಷ್ಟಿ ಮಾಡುವ ಸಂಗೀತಪ್ರತಿಭೆಯನ್ನು ಇಲ್ಲಿ ಕಾಣುತ್ತೇವೆ. ಕಷ್ಟವಿಲ್ಲದೆ ಸಹಜವಾಗಿ, ಸರಳವಾಗಿ, ಆದರೆ ಸಾರ್ಥಕವಾಗಿ ಇಂಪಾಗಿ ಮೂಡಿಬಂದಿವೆ ಈ ನಾದರೂಪಗಳು. ಹಾಗೆಯೇ ಇಲ್ಲಿನ ಲಯದ ಓಟ, ಗತಿಯ ಬೆಡಗುಗಳೂ ಮನಮೋಹಕವಾದವು.

ಸಂಪ್ರದಾಯದ ಹಾಡುಗಳು, ನಾಟಕದ ಹಾಡುಗಳು ಇವೆಲ್ಲವುಗಳ ರಾಗಗಳು ಜನಪದ ದನಿಗಳಿಂದ ಬಹಳವಾಗಿ ಪ್ರಭಾವಿತವಾದವು. (ಎಲ್.ಜಿ.ಎಸ್.)

**ಜನಪದ ಸಾಹಿತ್ಯ :** ಜನಪದ ಸಾಹಿತ್ಯ ಎಂದರೆ ಜನತೆಯ ಜೀವನದಲ್ಲಿ ಸಹಜವಾಗಿ ಉದಿಸುವ ಸಾಹಿತ್ಯ; ವಿದ್ಯೆ ಕಲಿತ ಜನ ಕವಿತೆ ಬರೆಯಬೇಕೆಂದು ಉದ್ದೇಶಪೂರ್ವಕ ನಿರ್ಮಿಸಿದ ಸಾಹಿತ್ಯ ಅಲ್ಲ. ಒಂದು ಅನುಭವವನ್ನು ಪಡೆದ ಚೇತನ ಆ ಅನುಭವವನ್ನು ಹೇಳಿಕೊಳ್ಳಲು ಬಯಸಿ, ಅದಕ್ಕೆ ಮಾತಿನಲ್ಲಿ ರೂಪಕೊಟ್ಟಾಗ ಕಾವ್ಯ ಉದಿಸುತ್ತದೆ. ಅನುಭವ ಮಾನವಸಾಮಾನ್ಯವಾದ ಭಾಗ್ಯ, ವಿಧಿ; ಹೇಳಿಕೊಳ್ಳುವ ಪ್ರವೃತ್ತಿಯೂ ಮನುಜಕುಲಕ್ಕೆ ಸಾಮಾನ್ಯ. ಅದಕ್ಕೆ ಬೇಕಾದ ಮಾತೂ ಎಂಥವರಿಗೂ ಅಲ್ಪವೋ ಸ್ವಲ್ಪವೋ ಇದ್ದೇ ಇರುತ್ತದೆ. ಆದ್ದರಿಂದ ಎಂಥ ಅಲ್ಪಸಂಸ್ಕೃತಿಯ ಜನತೆಗಳಲ್ಲಿಯೂ ಒಂದು ಮಟ್ಟದ ಸಾಹಿತ್ಯ ಅನಿವಾರ್ಯವಾಗಿ ಉದಿಸುತ್ತದೆ. ಎಂದಮೇಲೆ ಸಂಸ್ಕೃತಿ ಬೆಳೆದಿರುವ ಜನತೆಯಲ್ಲಿ ಅದು ವಿಪುಲವಾಗಿಯೇ ಬೆಳೆಯಬೇಕು. ಕನ್ನಡ ಜನತೆ ಸಾವಿರ ವರ್ಷಕ್ಕೆ ಹೆಚ್ಚಿನ ಕಾಲಮಾನ ಸುಸಂಸ್ಕೃತವಾದ ಜೀವನವನ್ನು ನಡೆಸಿದೆ. ವಿದ್ಯಾವಂತರು ಸುಸಂಸ್ಕೃತರಾಗಿದ್ದಂತೆ ವಿದ್ಯೆಯ ಫಲದ ಪ್ರಸಾರದಿಂದ ಈ ನಾಡಿನ ಸಾಮಾನ್ಯ ಜನರೂ ಸಾಹಿತ್ಯದಲ್ಲಿ ಜಾಣರಾಗಿದ್ದರು. ತಮ್ಮ ಸಾಹಿತ್ಯದಲ್ಲಿ ದೊರೆತಿರುವ ಮೊಟ್ಟ ಮೊದಲ ಗ್ರಂಥವಾದ ಕವಿರಾಜಮಾರ್ಗದಲ್ಲಿ ಅದರ ಕರ್ತೃ ಜನದ ಈ ಜಾಣತನವನ್ನು ಹೊಗಳಿದ್ದಾನೆ. ಕನ್ನಡ ನಾಡ ಜನ ಹದವರಿತು ನುಡಿಯಲೂ, ನುಡಿದುದನ್ನು ಆರಯಲೂ ಬಲ್ಲರು. ಇವರು ಸಹಜವಾಗಿಯೇ ಚದುರರು. ಕುರಿತು ಓದದೆಯೇ ಕಾವ್ಯಪ್ರಯೋಗಪರಿಣತಮತಿಗಳು. ಕುರಿತವರಲ್ಲದೆ ಇತರರೂ ತಮ್ಮ ತಮ್ಮ ನುಡಿಗಳಲ್ಲಿ ಜಾಣರು. ಈ ಹೊಗಳಿಕೆಯ ಮಾತಿನಲ್ಲಿ ಅತ್ಯುಕ್ತಿ ಸ್ವಲ್ಪ ಇರಬಹುದು. ಆದರೆ ಉಳಿದದ್ದು ವಾಸ್ತವಸ್ಥಿತಿಯನ್ನು ಸೂಚಿಸುವ ಮಾತು ಎನ್ನುವುದರಲ್ಲಿ ಸಂಶಯವಿಲ್ಲ. ಇಂಥ ಜನದಲ್ಲಿ ಜಾನಪದ ಎಂಬ ಸಹಜ ಸಾಹಿತ್ಯ ಹೇರಳವಾಗಿ ಬೆಳೆದಿರಬೇಕು. ರಾಷ್ಟ್ರದಗಲ ಹರಡಿರಬೇಕು. ಆದರೆ ಪೂರ್ವದ ಇಂಥ ಸಾಹಿತ್ಯ ಈಗ ನಮಗೆ ದೊರೆಯುತ್ತಿಲ್ಲ. ನಮ್ಮ ಪೂರ್ವಜರು ಬರೆಹಕ್ಕೆ ಇಳಿಸಿದ ಪಂಡಿತ ಸಾಹಿತ್ಯವೇ ಅದೆಷ್ಟೋ ಪಾಲು ಕೈಗೆ ಸಿಕ್ಕದೆ ನಷ್ಟವಾಗಿದೆ ಎನ್ನುವಲ್ಲಿ ಬರೆಹಕ್ಕೆ ಇಳಿಯದೆ ಜನರ ನಾಲಗೆಯಲ್ಲಿ ನಡೆಯುವಷ್ಟೇ ಭಾಗ್ಯ ಪಡೆದ ಜನತಾ ಸಾಹಿತ್ಯ ದೊರೆಯುವುದು ಹೇಗೆ ಸಾಧ್ಯ? ಆದರೂ ಇಲ್ಲಿ ಒಂದು ತುಣುಕು, ಅಲ್ಲಿ ಒಂದು ಚೂರು, ಅದೆಂದಿನಿಂದಲೋ ಉಳಿದುಕೊಂಡು ಬಂದಿವೆ, ಅಲ್ಲಲ್ಲಿ ಕೇಳಿ ಬರುತ್ತಿವೆ. ನಮ್ಮ ನಾಡಿನ ಪಡುವಣ ಕಡಲ ಕರೆಯ ಅಗೇರು ಎಂಬ ಹೆಸರಿನ ಜನರಲ್ಲಿ ಮಂತ್ರಗಾತಿಯಾದವಳು ದೆವ್ವವನ್ನು ಬಿಡಿಸಲು ಕರ್ಕಶಧ್ವನಿಯಲ್ಲಿ ಒಂದು ರೀತಿಯ ಏಕತಾನದ ಗೀತವೊಂದನ್ನು ಉದ್ಗರಿಸುವುದುಂಟು. ಮಳೆ ಬರುವುದು ತಡವಾದರೆ ನಮ್ಮ ಗ್ರಾಮಗಳಲ್ಲಿ ಜೋಗಿತಿಯರು, ಹುಯ್ಯೊ ಹುಯ್ಯೊ ಮಳೆರಾಯ ಮಳೆರಾಯನ ಹೆಂಡಿರು ಮಕ್ಕಳತಾಯಿ, ಹುಯ್ಯೋ ಹುಯ್ಯೋ ಮಳೆರಾಯ ಎಂದು ಮಳೆಯ ದೇವರನ್ನು ಮಳೆ ಕೊಡೆಂದು ಬೇಡಿ ಹಾಡುತ್ತ ಬರುವುದುಂಟು. ಇದು ಸಂಸ್ಕೃತ ಬಲ್ಲವರ ಪರ್ಜನ್ಯಜಪದ ಪ್ರಾಕೃತ ಮೂಲರೂಪ. ಬಹು ಪೂರ್ವದ ಕೃತಿ ಮರೆತುಹೋಗಿದೆಯಾದರೂ ಸುಮಾರು ಐದುನೂರು ವರ್ಷಗಳ ಈಚೆಗೆ ಆದದ್ದೆಂದು ಊಹಿಸಬಹುದಾದ ಜನಪದ ಸಾಹಿತ್ಯ ನಮ್ಮ ಜನರಲ್ಲಿ ಈಗಲೂ ಬಳಕೆಯಲ್ಲಿದೆ. ಆಂಗ್ಲಸಾಹಿತ್ಯವನ್ನು ಅಭ್ಯಾಸ ಮಾಡಿದ ಜಾಣರು ಆ ಸಾಹಿತ್ಯದಲ್ಲಿ ಜನಪದ ಗೀತಕ್ಕೆ ದೊರೆತಿರುವ ಗೌರವವನ್ನು ತಿಳಿದು ನಮ್ಮಲ್ಲಿ ಇಂಥ ಸಾಹಿತ್ಯ ಏನಿದೆ ಎಂದು ಈ ಶತಮಾನದಲ್ಲಿ ನೋಡತೊಡಗಿದರು. ಸದಾ ಎದುರಿಗಿರುವ ಈ ಸಾಹಿತ್ಯ, ಅಲಕ್ಷ್ಯ ಮಾಡಿದ್ದರಿಂದ ಕಾಣದೆ ಇದ್ದದ್ದು, ನೋಡತೊಡಗಿದ್ದೇ ತಡ ನಾಡ ತುಂಬ ಹೇರಳವಾಗಿ ಕಂಡಿತು. ಎಂಬತ್ತು ವರ್ಷದ ಹಿಂದೆ ಇದನ್ನು ಶೇಖರಿಸುವ ಕೆಲಸ ಆರಂಭವಾಯಿತು. ದಕ್ಷರಾದ ಸಾಹಿತ್ಯಪ್ರೇಮಿಗಳು ಶೇಖರಿಸಿ ಪ್ರಕಟಿಸಿರುವ ಹತ್ತಾರು ಸಂಗ್ರಹ ಗ್ರಂಥಗಳು ಈಗ ದೊರೆಯುತ್ತಿವೆ. ಇವು ಬಹುಶಃ ಪದ್ಯಗಳೇ ಆಗಿವೆ. ಜನಪದ ಕಥೆ, ಜನಪದ ನಾಟಕ ಉಂಟು. ಇವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಿ ಪ್ರಕಟವಾಗಿಲ್ಲ. ಪ್ರಕಟವಾಗಿರುವ ಪದ್ಯಸಂಗ್ರಹಗಳಲ್ಲಿ ಕಾಣುವ ಕೃತಿಯ ವೈವಿಧ್ಯವೇ ಒಂದು ಸೋಜಿಗ. ಗ್ರಾಮಗಳಲ್ಲಿ ಹೆಣ್ಣು ಮಕ್ಕಳು ಮುಂಜಾನೆ ಎದ್ದು ಕಾಳನ್ನು ಬೀಸುವ ವೇಳೆ ಹಾಡುವ ಪದಗಳು ಒಂದು ಗುಂಪು ; ಹೊಲದಲ್ಲಿ ದುಡಿಯುತ್ತ ಹಾಡುವ ಪದಗಳದು ಒಂದು; ಮಗುವನ್ನು ತೊಟ್ಟಿಲಲ್ಲಿಟ್ಟು ಹಾಡುವ ಜೋಗುಳಗಳದು ಒಂದು ; ಮದುವೆ ಮಂಗಳ, ಹಬ್ಬ ಹುಣ್ಣಿಮೆಯಲ್ಲಿ ದೇವರೆದುರಲ್ಲಿ, ನೆಂಟರಿಷ್ಟರ ನೆರವಿಯಲ್ಲಿ ಹಾಡುವ ಹಾಡುಗಳು, ಚೌಪದಿಗಳು ಇತ್ಯಾದಿ ಒಂದು ಗುಂಪು; ಕೊರವಿತಿ ಹಚ್ಚೆ ಚುಚ್ಚುತ್ತ ತನ್ನ ಸೂಜಿಯಿಂದ ಆಗುವ ಬೇನೆ ಮರೆಸಲೆಂದು ಹಾಡುವ ಹಾಡುಗಳದು ಒಂದು ; ಗ್ರಾಮದ ತರುಣರು ಗಾಡಿ ಹೊಡೆಯುತ್ತ, ನೀರೆತ್ತುತ್ತ ಹೇಳುವ ಹಾಡು, ಕೂಲಿಕಾರ ಜನ ಮರ ಕೊಯ್ಯುತ್ತ, ಬಂಡೆ ಸೀಳುತ್ತ ಹೇಳಿಕೊಳ್ಳುವುದು, ಹಬ್ಬ ಹುಣ್ಣಿಮೆಯ ಸಂತೋಷಕ್ಕೆಂದು ಗ್ರಾಮದ ಗಂಡುಮಕ್ಕಳು ಕಲಿಯುವ ನೃತ್ಯಗೀತ; ಜೀತದ ಜನ ಒಡೆಯನ ಎದುರು ಕುಣಿವಾಗ ಹೇಳುವ ಹಾಡು, ಗರಡಿಗಳ ತರುಣರ ಸ್ವಪ್ರತಿಷ್ಠೆಯ ಗೀತಗಳು, ಶಾಲೆಯ ಮಕ್ಕಳ ಕೋಲಾಟದ ಮಾನವಮಿ ಪದಗಳು; ಗ್ರಾಮದ ಜನರ ಸಂತೋಷಕ್ಕೆ ಹಾಡುತ್ತ ಬರುವ ಜೋಗಿ, ಜೋಗಿತಿ ಇಂಥ ಜನರ ಕಥೆಯ ಹಾಡುಗಳು; ಮನೆತನದ ಚರಿತ್ರೆಯನ್ನು ಹೊಗಳುವ ಹೆಳವರ ಕಥೆಗಳು – ಇವೆಲ್ಲ ಈ ಸಾಹಿತ್ಯದ ಬೇರೆಬೇರೆ ತೆರ. ಇವಲ್ಲದೆ ನಗರಗಳಲ್ಲಿ ಸ್ಪರ್ಧೆಗಳಲ್ಲಿ ಬೆಳೆದಿರುವ ಒಂದು ತೆರನ ಗೀತಲಾವಣಿ ಇದೆ. ಇದು ಪ್ರಾಯಶಃ ವಿಸ್ತಾರವಾಗಿ ಬೆಳೆಸಿರುವ ಒಂದು ಕಥೆ. ಇದರಲ್ಲಿ ಎರಡು ಕ್ರಮ; ಕಲ್ಗಿ ಮತ್ತು ತುರಾಯಿ **(ನೋಡಿ)**. ಇವು ಮೂಲತಃ ಕಲಿಕೆ ತ್ವರಾ ಇರಬೇಕು. ಕಲಿಕೆ ಲಾವಣಿಕಾರ ತಾನು ಕಲಿತಿರುವ ಕೃತಿಗಳನ್ನು ಇನ್ನೂ ನನ್ನಲ್ಲಿ ಸರಕು ಉಂಟು ಎಂದು ರಾತ್ರಿಯೆಲ್ಲ ಹೇಳುತ್ತ ಹೋಗಬೇಕು. ತುರಾ ಲಾವಣಿಕಾರ ಸಭೆಯ ಹಿರಿಯರು ಆಗ ಏನನ್ನು ಬಯಸಿದರೆ ಆ ಸಂಗತಿಯನ್ನು ಕುರಿತು ಅಲ್ಲೇ ಹಾಡನ್ನು ಆರಂಭಿಸಬೇಕು. ಕೇಳಿದ ಸಂಗತಿಯನ್ನು ಆ ಕ್ಷಣ ಹೇಳಬೇಕೆಂದರೆ ಅಲ್ಲೇ ಸಂಪೂರ್ಣ ಆಶುಕವಿತ್ವ ಮಾಡಬೇಕು ಎಂದು ಅರ್ಥವಲ್ಲ. ತನ್ನ ವಿದ್ಯೆಯಲ್ಲಿ ಬರುವ ಎಲ್ಲ ಸಂಗತಿಗಳಲ್ಲೂ ಒಂದೆರಡು ಕೃತಿಯನ್ನು ಕಲಿತು ಅವನ್ನು ಒಪ್ಪಿಸಲು, ಒಪ್ಪಿಸುವಲ್ಲಿ ಅಲ್ಲಲ್ಲಿ ತನ್ನ ಮಾತನ್ನೇ ಎರಡನ್ನು ಸೇರಿಸಲು, ಅವನಿಗೆ ಯೋಗ್ಯತೆ ಇರಬೇಕು. ಕೊನೆಯದಾಗಿ ಈ ಸಾಹಿತ್ಯದಲ್ಲಿ ಬಹಳವೇನೂ ಕಲಿತಿರದಿದ್ದರೂ ಕಲಿತವರ ರೀತಿಯಲ್ಲಿ ಕಾವ್ಯವನ್ನು ರಚಿಸಿರುವ ಕವಿಗಳ ಕೈವಾಡವೂ ಉಂಟು. ಇದು ಕೆಲವು ವೇಳೆ ಬಹು ಚೆನ್ನಾಗಿಯೂ ಇರುತ್ತದೆ. ಯಕ್ಷಗಾನ ನಳಚರಿತ್ರೆ, ಭಾಗಾನಗರದ ಬಾಲೆಯ ಹರಕೆಯ ಹಾಡು, ಗೋವಿನ ಕಥೆ ಇಂಥ ಕೃತಿಗಳು. ಕಾವ್ಯವೆಂದೇ ಬರೆದಿರುವ ಒಂದೆರಡು ಕೃತಿಗಳಲ್ಲಿ ಬಿಟ್ಟರೆ ಉಳಿದಂತೆ ಜನಪದ ಸಾಹಿತ್ಯದಲ್ಲಿ ಅದರ ಕರ್ತೃ ಯಾರು ಎಂಬ ಬಗ್ಗೆ ಯಾವ ಸೂಚನೆಯೂ ಇರುವುದಿಲ್ಲ. ನಿಜವಾದ ಯಾವ ಕವಿತೆಯೂ ಒಟ್ಟು ಜನತೆಯ

ಸಂಸ್ಕೃತಿಯ ಫಲ; ಒಬ್ಬ ಕವಿಯ ಕೈಯಲ್ಲಿ ರೂಪಗೊಳ್ಳತಕ್ಕದ್ದು. ಅದು ಅವನದು ಎಷ್ಟೋ ಅದಕ್ಕೂ ಹೆಚ್ಚಾಗಿ ಅವನ ಜನತೆಯ ಕೃತಿ. ಯಾರೋ ಒಬ್ಬರು ರಚಿಸಿ, ಹತ್ತುಜನ ಹಾಡಿ, ನೂರು ಜನ ಕೇಳಿ, ಹಾಡಿದ ನೂರು ಜನರ ಬಾಯಲ್ಲಿ ಅಷ್ಟಷ್ಟು ಮಾರ್ಪಟ್ಟು, ಈ ಸಾಹಿತ್ಯ ಕೊನೆಗೆ ಬಳಕೆಗೆ ಬಂದಿರುವ ರೂಪದಲ್ಲಿ, ಒಬ್ಬ ಇಬ್ಬರ ಕೃತಿ ಅಲ್ಲವೇ ಅಲ್ಲ, ಎಲ್ಲ ಜನತೆಯ ಕೃತಿ, ಎಂಬ ಸ್ಥಿತಿಯನ್ನು ಮುಟ್ಟುತ್ತದೆ. ಇದರ ಪರಿಣಾಮ, ಇದರಲ್ಲಿ ನಮಗೆ ಕೇಳುವುದು ಯಾವನೇ ಒಬ್ಬ ಕವಿಯ ಕಂಠ ಅಲ್ಲ. ಜನತೆಯದೇ ಕಂಠ ; ಒಬ್ಬ ಕವಿಯ ಬುದ್ಧಿಯ, ಹೃದಯದ ನುಡಿಯಲ್ಲ ; ಜನತೆಯದೇ ಬುದ್ಧಿ, ಹೃದಯದ ನುಡಿ. ಒಂದನೆಯ ಮಹಾಯುದ್ಧದಲ್ಲಿ ಗೆಲವು ತರಲು ಸತ್ತ ಸಾಮಾನ್ಯ ಸೈನಿಕರು ಸಾವಿರಾರು ಜನ ಹೆಸರಿಲ್ಲದವರ ಸೇವೆಯ ಸ್ಮಾರಕವಾಗಿ ಅಜ್ಞಾತಯೋಧನಿಗೆ ಎಂದು ಒಂದು ಸ್ಮೃತಿಸ್ತಂಭವನ್ನು ಜನಾಂಗಗಳು ನಿರ್ಮಿಸಿದುವು. ಈ ರೀತಿಯಲ್ಲಿ ಹೇಳುವುದಾದರೆ ಜನಪದ ಸಾಹಿತ್ಯದ ಕವಿ ಅಜ್ಞಾತಕವಿ. ವಾಸ್ತವದಲ್ಲಿಯೇ ಹಲವರ ಕೃತಿ ಆದ್ದರಿಂದ ಈ ಕವಿತೆಯ ಭಾವನೆ, ಭಾಷೆ, ಉಕ್ತಿಗಳು, ಜನತೆಯ ಭಾವನೆ, ಭಾಷೆ, ಉಕ್ತಿ ಆಗಿವೆ. ಜನತೆಯ ಭಾಷೆ, ಉಕ್ತಿ ಎಂದದ್ದರಿಂದ ಇದರ ಯೋಗ್ಯತೆ ಕಡಿಮೆಯಾಯಿತೋ ಎಂಬ ಶಂಕೆ ಅನಾವಶ್ಯಕ. ಇವನ್ನು ರಚಿಸಿದ ಜನ ಬರೆಹ ಬಾರದವರಿರಬಹುದು. ಅರಿವಿಲ್ಲದವರಲ್ಲ. ನೃಪತುಂಗ ಭೂಪಾಲನ ದಿನದ ಜನತೆ ಆಮೇಲೂ ಚದುರಾಗಿಯೇ ಬೆಳೆಯಿತು. ವೀರಶೈವ ವಚನಕಾರರು, ಹರಿದಾಸ ಕೀರ್ತನಕಾರರು, ಕುಮಾರವ್ಯಾಸ, ರತ್ನಾಕರ ವರ್ಣಿಯಂಥ ಷಟ್ಪದಿ ಸಾಂಗತ್ಯಕಾರರು, ಜನತೆಯ ಜೀವನದಲ್ಲಿ ಉದಿಸಿ ಜನತೆಗಾಗಿ ಹಾಡಿ ನುಡಿದು ಜನದ ಬುದ್ಧಿಯನ್ನು ಒಂದು ಹದಕ್ಕೆ ಮುಟ್ಟಿಸಿದರು. ಸರ್ವಜ್ಞನಂಥ ಮಹಾಪ್ರಾಜ್ಞ ಸಹವಾಸಿ ರಂಗನಾಥನಂತ ಒಬ್ಬ ವೇದಾಂತಿ, ವಿಶಾಲವಾದ ತಿಳಿವನ್ನೂ ಗೂಢವಾದ ರಹಸ್ಯಗಳನ್ನೂ ದಿನದ ಬಳಕೆಯ ಮಾತಿನಲ್ಲಿ ಎಲ್ಲರ ಸ್ವತ್ತಾಗಿ ಮಾಡಿದರು. ತನ್ನಲ್ಲಿ ತನ್ನನ್ನು ತಿಳಿದು ಮೋಕ್ಷಗೊಳಿಸುವುದು ಹೇಗೆ ಎಂದಲ್ಲವೆ ವೇದಾಂತ ಕಲಿಸುವುದು? ಇದನ್ನು ಕನ್ನಡದಲ್ಲಿ ಕಲಿತರೆ ಹೇಗೆ? ಸಂಸ್ಕೃತದಲ್ಲಿ ಕಲಿಯಬೇಕಾದದ್ದೇನು? ಹೀಗೆಂದು ಸಹವಾಸಿ ರಂಗನಾಥ ಅನುಭವಾಮೃತವನ್ನು ರಚಿಸಿದ. ಸಂಸ್ಕೃತದಲ್ಲೇನು ಎಂಬ ಅವನ ಮಾತು ಹೆಮ್ಮೆಯ ಸೆಡೆನುಡಿಯಲ್ಲ. ಸರಿಯಾಗಿ ಗ್ರಹಿಸಿದೆವಾದರೆ ಇದು ಜನದ ಕರ್ತವ್ಯವನ್ನು ನಿರ್ದೇಶಿಸುತ್ತದೆ, ಕನ್ನಡನುಡಿಯ ಆತ್ಮಗೌರವ ಆತ್ಮವಿಶ್ವಾಸದ ಮಾತಾಗಿ ಕಾಣುತ್ತದೆ. ಇಂಥ ವತ್ಸಲ ಗುರುಪರಂಪರೆಯಿಂದ ಅರಿವನ್ನು ಪಡೆದ ಜನತೆ ಅದನ್ನು ಪಡೆಯುವ ಹೊತ್ತಿನಲ್ಲೇ ನುಡಿಯುವ ಪರಿಯನ್ನೂ ಕಲಿತಿತು. ದಿಟದಲ್ಲಿ ನೋಡಿದರೆ ವಿದ್ಯಾವಂತ ಸಾಹಿತಿಯಲ್ಲಿ ಕೂಡ ಓದಿ ಕಲಿತ ಭಾಷೆಗಿಂತ ಕೇಳಿ ಕಲಿತ ಭಾಷೆಯ ಬಲ ಹೆಚ್ಚು. ನೂರು ಹೃದಯದಿಂದೊಗೆದರೂ ಈ ಸಾಹಿತ್ಯ ನೂರು ನಾಲಗೆ ನುಡಿಯುವಲ್ಲಿ ಒಂದು ಹೃದಯದ ನುಡಿ ಎಂಬ ಹದಕ್ಕೆ ಬರುತ್ತದೆ. ಆ ಹೃದಯ ಜನತೆಯ ಹೃದಯ. ನೂರು ಬುದ್ಧಿ ತಿದ್ದಿ ಇದರ ಅತ್ಯುತ್ತಮ ಕೃತಗಳಲ್ಲಿ ಕಾವ್ಯಲಕ್ಷಣ ಉದ್ಯಾನಲತೆಗಳನ್ನು ಸೋಲಿಸುವ ವನಲತೆಗಳಂತೆ ಪಾಂಡಿತ್ಯದ ಕೃತಿಗಳಲ್ಲಿ ಕಾಣದೊ ಎಂಬ ಎತ್ತರಕ್ಕೆ ಏರುತ್ತದೆ. ಇದರಲ್ಲಿ ಛಂದೋರೂಪ ಅನೇಕ ಇರುತ್ತವೆ. ಇವುಗಳಲ್ಲಿ ಕೆಲವು ಹೆಸರನ್ನು ಸಾಹಿತ್ಯಶಾಸ್ತ್ರ ಕಾಣದು. ಈ ಮಾತಿಗೆ ಉದಾಹರಣೆ ಸೊಬಗಿನ ಸೋನೆ. ಹೆಸರು ಹಾಗಿರಲಿ, ಈ ಕೃತಿಗಳಲ್ಲಿ ಕಾಣುವ ಪ್ರಾಸದ, ಯತಿಯ, ಸ್ವರಸಾಮರಸ್ಯದ, ಹ್ರಸ್ವದೀರ್ಘವಿನ್ಯಾಸದ, ಮಿತ ಉಚಿತ ಉಕ್ತಿ ಭಂಗಿಯ ಚದುರು ಪಾಂಡಿತ್ಯದ ಕೃತಿಯ ಚದುರಿಗಿಂತ ಕಡಿಮೆಯದಲ್ಲ. ಈ ಕೃತಿಮಿತಿಯಲ್ಲಿ ಸಾಧಿಸುವ ಪರ್ಯಾಪ್ತಿ ಆಶ್ಚರ್ಯಕರವಾದದ್ದು. ಈ ಮಿತ ಶಬ್ದದರಿದ್ರನಾದ ಪಂಡಿತ ಕವಿಯ ಮಿತ ಅಲ್ಲ; ಚಿಕ್ಕದಾಗಿ ಮಿನುಗುವ ಚುಕ್ಕಿಯ ಮಿತ. ಜನಪದ ಸಾಹಿತ್ಯದ ಸಾಮಗ್ರಿ ಜನಪದ ಜೀವನದ ಸಾವಿರ ವಿವರ. ದೇವರಲ್ಲಿ ಭಕ್ತಿ, ಭರನ್ಯಾಸ; ಊರನ್ನು ಕುರಿತ ಪ್ರೇಮ; ತನ್ನ ಮನೆಯನ್ನು ಕುರಿತ ಹೆಮ್ಮೆ; ನೆರೆಯವರನ್ನು ಕುರಿತ ಸನ್ಮಾನ; ತಂದೆತಾಯಿ, ಅಣ್ಣತಮ್ಮ, ಅಕ್ಕತಂಗಿ, ಮಾವ ಅಳಿಯ ಎಂಬ ಗೌರವ, ಅಕ್ಕರೆ; ಬಂಜೆಯ ಬೇಸರ, ತಾಯಾದವಳ ತೃಪ್ತಿ; ಹೊಕ್ಕ ಮನೆಯ ಹೆಕ್ಕಳ, ತೌರುಮನೆಯ ಹಂಬಲ; ಮದುವೆಯಾದ ಮಗಳು, ತಂಗಿ, ಹೋಗುವಾಗಣ ನೋವು; ದಿನ ಎರಡು ದಿನ ಜೊತೆಗಿರಲು ಒಡಹುಟ್ಟು ಬರುತ್ತದೆಂಬ ಸಂತಸ; ಬಡತನದ ಬೇನೆ, ಸಮೃದ್ಧಿಯ ಸಮಾಧಾನ; ಗಂಡಹೆಂಡಿರು, ನಲ್ಲನಲ್ಲೆಯರ ಒಲವು; ತಾರುಣ್ಯದ ಸಾಹಸ, ಕಾಳಗದ ಕುತೂಹಲ; ಎಂದೋ ಎಲ್ಲೋ ಕಂಡ ಚರಿತ್ರೆ; ತಂತ್ರದ ಸಿಕ್ಕು; ದುಷ್ಟರ ಕುಟಿಲ, ಆಡಳಿತದ ಅನ್ಯಾಯ; ಮೆಚ್ಚಿನ ಹೆಣ್ಣಿನ, ಉದಾರಿ ಒಡೆಯನ, ಧೀರ ಬಂಟನ ವರ್ಣನೆ; ಅಪರೂಪವಾಗಿ ತಪ್ಪು ಒಲವಿನ, ದಿಕ್ಕುಗೆಟ್ಟ ಬದುಕಿನ ಚಿತ್ರ ಹೀಗೆ ನೂರೆಂಟು ಬಗೆ. ಈ ಕವಿತೆಯ ವಿಸ್ತಾರ ಲೋಕದ ವಿಸ್ತಾರ. ಇದರಲ್ಲಿ ಸಹಜವಾದ ಎಲ್ಲ ಅಲಂಕಾರ ಉಂಟು. ಜನದ ಬಾಳಿನಿಂದ ನೇರವಾಗಿ ಬಂದ ಉಪಮೆ ರೂಪಕ ಉಂಟು. ಮಾತು ಕಡಿಮೆ, ಅರ್ಥ ಹೆಚ್ಚು ಇರುವುದು ಉನ್ನತ ಸಾಹಿತ್ಯದ ಲಕ್ಷಣ. ಈ ಲಕ್ಷಣ ಜನಪದ ಸಾಹಿತ್ಯದಲ್ಲಿ ಕಾಣುತ್ತಲೇ ಇರುತ್ತದೆ. ಮುಖ್ಯವಾಗಿ ಇದರ ಪದ್ಧತಿ ಸೂಚನೆಯ ಪದ್ಧತಿ. ಕನ್ನಡದ ಗಾದೆಗಳಲ್ಲಿ ಹೇಗೋ ಹಾಗೆ ಅದರ ಜನಪದ ಸಾಹಿತ್ಯದಲ್ಲಿಯೂ ನಾಲ್ಕೇ ಮಾತಿನಲ್ಲಿ ಒಂದು ಕಥೆ ಅಡಗಿರುತ್ತದೆ. ಅದನ್ನು ಪೂರ್ಣವಾಗಿ ಕಲ್ಪಿಸಿಕೊಳ್ಳುವುದಕ್ಕೆ ಜಾಣು ಬೇಕು. ಹಾಗೆ ಕಲ್ಪಿಸಿಕೊಂಡರೇಯೆ ಅದರ ರಸ ದೊರೆಯುವುದು. ಈ ರಸವೋ ಇಲ್ಲಿ ಇಲ್ಲದ್ದು ಒಂದಿಲ್ಲ ಎಂದರೂ ಶೃಂಗಾರ, ವೀರ, ಭಕ್ತಿ, ಹಾಸ್ಯ ಹೇರಳ. ಈ ಸಾಹಿತ್ಯದ ನಿರ್ಮಾಣ ಒಂದು ನಿರಂತರ ವ್ಯಾಪಾರ. ಯಾವುದೇ ಕಾರಣದಿಂದ ಪಾಂಡಿತ್ಯಕಾವ್ಯ ನಿಲ್ಲಬಹುದು, ಜನಪದ ಸಾಹಿತ್ಯ ಹೀಗೆ ನಿಲ್ಲುವುದಿಲ್ಲ. ಅದರ ಸಾಹಿತ್ಯನಿರ್ಮಾಣ ಕಾರ್ಯ ಜನತೆಯ ಉಸಿರಾಟದಂತೆ ಅವಿಚ್ಛಿನ್ನವಾಗಿ ನಡೆಯುತ್ತಿರುತ್ತದೆ. ಮೇಲೆ ಬತ್ತಿತೆಂದರೂ ಮರಳ ಅಡಿಯಲ್ಲಿ ಹರಿಯುತ್ತಿರುವ ಹೊಳೆಯಂತೆ ಇದರ ಅವ್ಯಕ್ತ ಆದರೂ ಅನವರತವಾದ ಅಸ್ತಿತ್ವ ಪ್ರಕೃತಿಯ ಕವಿತೆಗೆ ಸಾವಿಲ್ಲ– ಎಂದ ಆಂಗ್ಲ ಕವಿಯ ಮಾತು ಇಲ್ಲಿ ಪೂರ್ಣವಾಗಿ ಹೊಂದುತ್ತದೆ. ಇದನ್ನು ಹಾಡುವುದರಲ್ಲಿ ರಾಗ ಬಹಳ ಇಲ್ಲ. ಆದರೆ ತಾನ ಅನೇಕ ಉಂಟು. ಜೊತೆಗೆ ಬಳಸುವ ಕೋಲು, ತಮ್ಮಟೆ, ಏಕತಾರು, ತಾಳ, ಡೋಲು, ಗುಮ್ಮಟೆ ಮುಂತಾದ ಹಲವಾರು ವಾದ್ಯ ಉಂಟು. ಜನಪದ ಸಾಹಿತ್ಯದ ಈ ಎಲ್ಲ ಪ್ರಶಂಸನವನ್ನೂ ಸಾಧಿಸಲು ನಿದರ್ಶನ ಕೊಡುವುದು ಕಷ್ಟ. ಆದರೂ ಕೆಲವು ಅಂಶವನ್ನಾದರೂ ತೋರುವ ಕೆಲವು ಉದಾಹರಣೆಗಳನ್ನು ಕೊಡಬಹುದು. ದೈವಭಕ್ತಿ, ಸತ್ಯನಿಷ್ಠೆ, ತಾಯ್ತನದ ವಾತ್ಸಲ್ಯ, ಮಗುವಿನ ದೈನ್ಯ, ನಾಡ ಚೆಲುವು, ಬಾಳಿನ ಸಮೃದ್ಧಿ, ಧರ್ಮದಲ್ಲಿ ನಂಬಿಕೆ, ಆ ನಂಬಿಕೆ ತರುವ ಸ್ಥೈರ್ಯ, ಇವಕ್ಕೆ ನಮ್ಮ ಗೋವಿನ ಕಥೆಯಂಥ ಕಿರಿಯ ಗಾತ್ರದ ಚೆನ್ನನುಡಿಯ ಇನ್ನೊಂದು ಉದಾಹರಣೆ ಇರಲಾರದು. ಮಹಾಭಾರತ ಮೂರು ಶ್ಲೋಕಗಳಲ್ಲಿ ಹೇಳಿರುವ ಒಂದು ಕಥೆಯನ್ನು ಜನಪದ ಕವಿ ಹೇಗೆ ಬೆಳೆಸಿದ್ದಾನೆ, ಹೇಗೆ ತನ್ನದಾಗಿ ಮಾಡಿಕೊಂಡಿದ್ದಾನೆ. ಮಹಾಭಾರತದ ಶಕುಂತಲೋಪಾಖ್ಯಾನದಿಂದ ಅಭಿಜ್ಞಾನಶಾಕುಂತಲವನ್ನು ಕಟ್ಟಿದ ಕವಿಯ ಚದುರು ಇದರ ಕವಿಯ ಚದುರಿಗಿಂತ ಹಿರಿದಲ್ಲ. ಕಾಳನ್ನು ಬೀಸಲು ಕಲ್ಲಿನೆದರು ಕುಳಿತ ಹೆಣ್ಣುಮಗಳು ಅದನ್ನು ಮುಟ್ಟಿ ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕೈ ಮುಗಿದು, ದೇವರೇ ಕಾಳು ಬೀಸಲು ಕುಳಿತಿದ್ದೇನೆ, ಈ ಕೆಲಸವನ್ನು ಸುಮುಖವಾಗಿ ನೀನು ನಡೆಸಿಕೊಡಬೇಕು, ಇದನ್ನು ಮಾಡುವುದು ನಾನು ಎಂದು ನಾನು ತಿಳಿದಿಲ್ಲ, ಎನ್ನುತ್ತಾಳೆ. ಲೋಕದ ವ್ಯವಹಾರದಲ್ಲಿ ಇದಕ್ಕಿಂತ ಬಹುಮುಖ್ಯವಾದದ್ದನ್ನು ನಡೆಸಹೊರಡುವ ಹಿರಿಯ ಜನ ಇಂಥ ಮಾತನ್ನು ಆಡಿಕೊಂಡು ಕೆಲಸದಲ್ಲಿ ತೊಡಗಿದರೇ ಅದೆಷ್ಟು ಶುಭ ಆದೀತೋ! ಕಷ್ಟಕ್ಕೆ ಸಿಕ್ಕಿದ ಮನೆಯ ಅಥವಾ ಕಷ್ಟಕ್ಕೆ ಸಿಕ್ಕಿದ ಇಷ್ಟರನ್ನು ನೋಡಿದ, ತಾಯಿ ಹಿರಿಯರ ಚರಿತ್ರೆಯನ್ನೂ ನೆನೆಯುತ್ತಾಳೆ. ತನ್ನ ಕಷ್ಟವನ್ನು ಸಹಿಸುವ ಮನಸ್ಸನ್ನು ಗಳಿಸುತ್ತಾಳೆ. ಇಲ್ಲ ತರಿಸುತ್ತಾಳೆ. ಜನಕರಾಯನ ಮಗಳು ವನಕೆ ತೊಟ್ಟಿಲ ಕಟ್ಟಿ ಕುಶಲವರನಿಟ್ಟು ತೂಗ್ಯಾಳೋ ಸೀತಾದೇವಿ ನಗುತ ವನವಾಸ ಮಾಡ್ಯಾಳೊ. ಈ ಮಾತುಗಳಲ್ಲಿ ಎಷ್ಟು ಅರ್ಥ. ರಾಜನ ಮಗಳು; ಮಕ್ಕಳನ್ನು ಪಡೆದು ವನಕ್ಕೆ ತೊಟ್ಟಿಲ ಕಟ್ಟಿದಳು ಅರಮನೆಯಲ್ಲಲ್ಲ, ಗುಡಿಸಲಲ್ಲಿ. ಒಂದು ಗೊತ್ತಾದ ಮರಕ್ಕೂ ಅಲ್ಲ. ಹೀಗಿದ್ದೂ ರಾಜಕುಮಾರಿ ವನವಾಸದ ದಿನದಲ್ಲಿ ನಗುತ ಇದ್ದಳು. ಮಕ್ಕಳನ್ನು ಹಡೆದವ್ವ ಕೆಟ್ಟೆನೆಂದೆನಬೇಡ, ಬಡತನ ನನಗಿರಲಿ, ಬಹಳ ಮಕ್ಕಳಿರಲಿ, ಮೇಲೆ ಗುರುವಿನ ದಯ ಇರಲಿ, ನನ ಗುರುವೇ ಬಡತನದ ಚಿಂತೆ ನಿನಗಿರಲಿ, ಮಕ್ಕಳು ಬೇಕು ಎಂಬಷ್ಟೇ ತೀವ್ರವಾಗಿ ಬಂಜೆತನ ಬೇಡ ಎಂಬ ಉದ್ಗಾರ ಕೇಳಿಬರುತ್ತದೆ. ಬಂಜೆಂಬ ಶಬ್ದ ಹೊರಲಾರೆ, ಬಂಜೆಯ ಮನೆ ಮುಂದೆ ಬಂಗಾರದ ಒರಳ ಕಲ್ಲು. ಪ್ರಯೋಜನವೇನು? ಇದ್ದೂ ಮಕ್ಕಳನ್ನು ಹೆತ್ತವಳ ನೋವೂ ದಿಟವೇ. ಹೆಣ್ಣನ್ನು ಹೆತ್ತಳು. ಬೆಳೆದ ದಿನ ಅದನ್ನು ಬೇರೆಯವರ ಪಾಲು ಮಾಡಬೇಕು. ಇದು ತಾಯಿಗೂ ಇಷ್ಟವಿಲ್ಲ. ಮಗ, ಆ ಹುಡುಗಿಯ ಅಣ್ಣನಿಗೂ ಇಷ್ಟ ಇಲ್ಲ. ಅವನು ತಂಗಿಗೆ ಗಂಡಾಗಿದ್ದರೆ ಚೆನ್ನ ಇತ್ತು. ಸಮಾಧಾನವಾಗಿ ಆಸ್ತಿಪಾಲು ಕೊಡುತ್ತಿದ್ದೆ, ಎನ್ನುತ್ತಾನೆ. ಅವಳಿಗೂ ಈ ಹೋಗುವುದೆನ್ನುವುದು ಆಗ ಇಷ್ಟವಿಲ್ಲ. ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾಯ್ತು ನಾ ಹುಟ್ಟಿ ಮನೆಗೆ ಎರವಾದೆ. ಆದರೆ ಗಂಡನ ಮನೆಗೆ ಹೋದ ಮೇಲೆ ಅಲ್ಲೇ ಹೊಂದಿಕೊಳ್ಳುತ್ತಾಳೆ. ಆದರೂ ತಾಯ ಹಂಬಲು ಉಂಟು. ಅವರು ಪುಣ್ಯವಂತರು. ತನ್ನನ್ನು ನೆನೆಯುತ್ತಿದ್ದಾರೆ ಎನ್ನುತ್ತಾಳೆ. ತನ್ನ ಊರಿನಲ್ಲಿ ಒಳ್ಳೆಯ ಬೋರೇಹಣ್ಣು ದೊರೆಯುತ್ತವೆ. ಅವಳು ತೌರಲ್ಲಿರುವ ಬಸಿರಾಗಿರುವ ತನ್ನ ಗೆಳತಿಗೆಂದು ಅದನ್ನು ಕೊಂಡು ಕಳುಹಿಸುತ್ತಾಳೆ. ದಿನ ಕಳೆದು ಅವಳನ್ನು ತೌರಿಗೆ ಕರೆದುಕೊಂಡು ಹೋಗಲು ಅಮ್ಮ ಬರುತ್ತಾಳೆ. ಗಂಡ ಒಳ್ಳೆಯವನು. ಬಿಟ್ಟು ಹೋಗಲು ಇಷ್ಟವಿಲ್ಲ. ಹಚ್ಚಡದ ಪದರಾಗೆ ಅಚ್ಚ ಮಲ್ಲಿಗೆ ಹೂವು ಬಿಚ್ಚಿ ನನ ಮೇಲೆ ಚೆಲ್ಲುವಂತ ಪುರುಷನ ಬಿಟ್ಹೆಂಗೆ ಬರಲಿ ಹಡೆದವ್ವ? ಎಂಥ ಅರ್ಥಕ್ಕೆ ಎಂಥ ಶಬ್ದ. ಹೊಸ ಸಾಹಿತ್ಯ ಹೇಳುವವರು ಅಳುಕುವ ರೀತಿ ಬಿಚ್ಚಿ ಹೇಳುವ ಸಂಗತಿಯನ್ನು ಇದು ಎಷ್ಟು ಗಂಭೀರವಾಗಿ, ಆದರೂ ಸ್ಪಷ್ಟವಾಗಿ ವಿವರಿಸುತ್ತದೆ. ಇದು ಹುಡುಗಿಯೇ ಹೇಳುವ ಮಾತು ಎಂದರೆ ಅವಳ ಒಲವಿನ ಆಳವನ್ನು ತಿಳಿಸುತ್ತದೆ.; ಅವಳ ಗೆಳತಿ ಅವಳಿಗೆ ಆರೋಪಿಸಿದ್ದೆಂದರೆ ಹಾಸ್ಯವಾಗುತ್ತದೆ. ಕರೆಯಬಂದಿರುವ ಅವ್ವನೊಂದಿಗೆ ಹೊರಡಲು ತಡೆಯುತ್ತಿರುವ ಗೆಳತಿ ತಡೆಯುತ್ತಿದ್ದಾಳೆ

ಏಕೆ? ಇವಳು ಕಾರಣ ಹೇಳುತ್ತಾಳೆ. ತರುಣಿ ತಾಯಾಗುತ್ತಾಳೆ. ಯಾಕಳುವೆ ಎಲೆ ರಂಗ ಬೇಕಾದ್ದು ನಿನಗಿದೆ ನಾಕೆಮ್ಮೆ ಕರೆದ ನೊರೆಹಾಲು ಸಕ್ಕರೆ ನೀ ಕೇಳಿದಾಗ ಕೊಡುವೆನು. ಹುಡುಗ ಬೆಳೆಯುತ್ತಾನೆ. ಆಟಕ್ಕೆ ಹೊರಡುತ್ತಾನೆ. ಆಡಿ ಬಾ ನನ ಕಂದ ಅಂಗಾಲು ತೊಳೆದೇನು; ತೆಂಗಿನಕಾಯಿ ತಿಳಿನೀರ ತಕ್ಕೊಂಡು ಬಂಗಾರ ಮೋರೆ (ಪಾದ) ತೊಳೆದೇನು. ಏನು ಅಕ್ಕರೆ, ಏನು ಹೆಕ್ಕಳ. ಮಗು ಕೋಪದಿಂದ ಅಳುತ್ತದೆ. ಅಳುವ ಕಂದನ ತುಟಿಯು ಹವಳದ ಕುಡಿಹಂಗೆ ಕುಡಿಹುಬ್ಬು ಬೇವಿನೆಸಳಂಗೆ ಕಣ್ನೋಟ ಶಿವನ ಕೈ ಅಲಗು ಹೊಳೆದಂಗೆ, ಗಂಡು ಮಗುವನ್ನು ಹಡೆದ ತಾಯಿಗೆ ಮಡಿಲ ತುಂಬುವಂತೆ ಅರಿವೇ ಸೊಪ್ಪು ದೊರೆತಷ್ಟು ಸಂತೋಷ. ಈ ಮಾತಿನ ಸಮೃದ್ಧಿಯ ಕಲ್ಪನೆ ಧನವಂತರ ಕರುಳನ್ನು ಹಿಂಡಬೇಕು. ಈ ಉಪಮಾನಗಳ ಸೊಗಸು ಜನಪದ ಸಾಹಿತ್ಯಕ್ಕೆ ಮೀಸಲಷ್ಟೇ ಅಲ್ಲ. ಮುರಿಯದ ಮೀಸಲು. ನಿಷ್ಕಲ್ಮಷವಾದ ಇಂಥ ಸಮಾಜ ವಿಜ್ಞಾನ, ಸೌಂದರ್ಯಜ್ಞಾನಕ್ಕೆ ಸುಂದರ ಶಬ್ದಗಳನ್ನು ಅಳವಡಿಸುವ ಈ ಚದುರು ಜನಪದ ಸಾಹಿತ್ಯದಲ್ಲಿ ಹೆಜ್ಜೆಹೆಜ್ಜೆಗೂ ಕಾಣುತ್ತದೆ. ಆ ಸೌಂದರ್ಯಜ್ಞಾನವೋ ಸರ್ವತೋಮುಖವಾದದ್ದು. ಒಂದು ಮುಖದ ಉದಾಹರಣೆಯಾಗಿ ಒಂದು ಪದ್ಯವನ್ನು ಹೇಳಬಹುದು. ಬೆಳ್ಳಾನೆ ಬೆಳಗಾಗಿ ಬೆಳ್ಳಿ ಮೂಡಲ ಆಗಿ ಒಳ್ಳೊಳ್ಳೆ ಮೀನ ಗರಿಕೆದರಿ ಆಡ್ಯಾವೆ ಗರತಿ ಗಂಗವ್ವನ ಉಡಿಯಾಗೆ. ಒಂದು ಹಳ್ಳಿಯಲ್ಲಿ ವಾಸ ಮಾಡುತ್ತ ಮುಂಜಾನೆ ಎದ್ದು ತಿಳಿನೀರ ಊರ ಕೊಳದೆಡೆ ಹೋದವರಿಗೆ ಮಾತ್ರ ಈ ವರ್ಣನೆ ಎಷ್ಟು ಚೆನ್ನ ಎಂದು ತಿಳಿಯಲು ಸಾಧ್ಯ. ಆ ಬೆಟ್ಟ ಈ ಬೆಟ್ಟವೋ ನಂಜುಂಡ ನಂದ್ಯಾಲಗಿರಿ ಬೆಟ್ಟವೋ ನಂದ್ಯಾಲಗಿರಿ ಬೆಟ್ಟವೋ ನಂಜುಂಡದಾಸಾಳಗಿಡ ಹುಟ್ಟಿತೋ–ಎಂಬ ಸಾಲುಗಳ ಸ್ವರಸೌಂದರ್ಯಜ್ಞಾನ ಅಬ್ಬರಿಸಿ ಗಂಗೆ ಹರಿದ್ಯಾಳ, ಹೆಸರೊಂದು ಮೊಸರ ಬಾನ ನಮ್ಮವ್ವ ರಸತಾಳೆ ರಸತಾಳೆ ಹಾಲು ಜೇನ ಎಂಬ ಮಾತುಗಳಲ್ಲಿಯ ಶಬ್ದೌಚಿತ್ಯಜ್ಞಾನ ಈ ಕವಿತೆ ಮುಟ್ಟುವ ಮಟ್ಟಕ್ಕೆ ನಿದರ್ಶನ. ಜನಪದ ಸಾಹಿತ್ಯ ಈಗಲೂ ಸೃಷ್ಟಿ ಆಗುತ್ತಿದೆ. ಹೊಸ ತೆರನ ಬಾಳುವೆ ಅದರ ಭಾವನೆಗಳನ್ನು ಹೊಸತು ಮಾಡಿದೆ. ಇದಕ್ಕೆ ಹಾಗೆಯೇ ಈ ಸಾಹಿತ್ಯದ ಹಾಸ್ಯಕ್ಕೆ, ಉದಾಹರಣೆಯಾಗಿ ಇತ್ತೀಚಿನ ಷಟ್ಪದೀ ಆಭಾಸ ಪಂಕ್ತಿತ್ರಯವನ್ನು ಕೊಡಬಹುದು. ದಾರವಿಲ್ಲದ ಹಾರವಯ್ಯನ, ಲಿಂಗವಿಲ್ಲದ ಜಂಗಮಯ್ಯನ, ದಾಡಿಯಿಲ್ಲದ ಸಾಬರಯ್ಯನ ನಂಬಬೇಡೆಂದ, ಇಂಥ ಇನ್ನೊಂದು ಉದಾಹರಣೆ ಉರುಟಣೆಯಲ್ಲಿ ಹೆಣ್ಣು ಗಂಡಿಗೆ ಹೇಳುವ ಈ ಮಾತು ; ಕೊರಳ ಮೇಲೆ ಓಲಾಡುವ ಟೈ ಕೈಯಲ್ಲೊಡಿದ್ರೆ ಪೈಸಾ ನೈ. ಜನಕರಾಯನ ಮಗಳಿಂದ ಈ ಟೈ ಮಾತು ಬಹು ದೂರ ಬಂದಿದೆ ಎನ್ನಿಸಬಹುದು. ಬಂದಿದೆ ದಿಟ ; ಆದರೆ ಅದರ ಕಾರಣ ಜೀವನ ಹಾಗೆ ಬಂದಿದೆ ಎನ್ನುವುದು. ಇದೇ ಈ ಸಾಹಿತ್ಯದ ಜೀವತಂತು. ಜನ ಎಂತು ಇದು ಅಂತು; ಬಾಳೆಂತು ಇದು ಅಂತು. ಇದರಿಂದಲೇ ಸ್ಪಷ್ಟವಾಗುವ ಇನ್ನೊಂದು ವಿವರ ಇದನ್ನು ಬರೆಯುವವರೆಲ್ಲ ಅವಿದ್ಯಾವಂತರಲ್ಲ ಎನ್ನುವುದು. ಬೆಳ್ಗಾವಿ ಸೋಮಪ್ಪನ ಜಾತ್ರೆಯನ್ನು ವರ್ಣಿಸಿ ಹೊಸ ಒಂದು ಲಾವಣಿ ಈ ಇಪ್ಪತ್ತು ವರ್ಷಗಳಲ್ಲಿ ಪ್ರಸಾರಕ್ಕೆ ಬಂತು. ಇದನ್ನು ಬರೆದವರು ಒಳ್ಳೆಯ ಪಂಡಿತರಾಗಿದ್ದ ಹೊಸಕಾಲದ ನಮ್ಮ ನಾಟಕಕಾರರೊಬ್ಬರು. ಜನಜೀವನದ ವಿವರಗಳನ್ನು ತಿಳಿಸಬೇಕೆನ್ನುವವರಷ್ಟೇ ಅಲ್ಲ, ಜೀವಂತ ಸಾಹಿತ್ಯವನ್ನು ನಿರ್ಮಿಸಬಯಸುವವರು ಕೂಡ ಪಂಪ ರನ್ನ ಹರಿಹರ ಕುಮಾರವ್ಯಾಸರ ಕೃತಿಗಳನ್ನು ಅಭ್ಯಾಸ ಮಾಡುವಂತೆ ಈ ಸಾಹಿತ್ಯವನ್ನೂ ಸಾವಧಾನವಾಗಿ ಅಭ್ಯಾಸ ಮಾಡಬೇಕು. ಇದರ ಶಬ್ದಭಂಡಾರ, ಉಕ್ತಿಚಾತುರ್ಯ, ವರ್ಣನಾಕ್ರಮ, ವಾಕ್ಸಂಯಮ ಮುಂದೆ ಬರುವ ಸಾಹಿತ್ಯಕೃತಿಗಳಿಗೆ ಪ್ರೇರಕ ಆಗಬಹುದು, ಮೇಲ್ಪಂಕ್ತಿ ಆಗಬಹುದು. (ಎಂ.ವಿ.ಐ)

ಪರಂಪರಾಗತವಾಗಿ ಬಾಯಿಂದ ಬಾಯಿಗೆ ಬಂದ ಶಾಬ್ದಿಕ ಅಭಿವ್ಯಕ್ತಿಯನ್ನೇ ಜನಪದ ಸಾಹಿತ್ಯ ಎಂದು ಕರೆಯುವುದು ಸರಳವೂ ಸುಂದರವೂ ಆದ ಈ ಸಾಹಿತ್ಯ ಶಿಷ್ಟಸಾಹಿತ್ಯಕ್ಕಿಂತ ಬೇರೆಯಾದುದು. ಶಿಷ್ಟಸಾಹಿತ್ಯ ವ್ಯಕ್ತಿಯೊಬ್ಬನಿಂದ ರಚಿತವಾಗಿ ಬರವಣಿಗೆಯ ಮೂಲಕ ಉಳಿಯುವಂಥದು. ಕಾಲದ ಮೂಲಕ ಯಾವುದೇ ವ್ಯತ್ಯಾಸಕ್ಕೆ ಗುರಿಯಾಗದಿರುವಂಥದು. ಆಯಾ ಕಾಲದ ಸಾಮಾಜಿಕ ಪ್ರವೃತ್ತಿಗಳಿಗೆ ಮತ್ತು ಪರಿವರ್ತನೆಗಳಿಗೆ ಶಿಷ್ಟಸಾಹಿತ್ಯ ನಾಲಗೆಯಾಗುತ್ತದೆ. ಆದ್ದರಿಂದ ಇದಕ್ಕೆ ಇತಿಹಾಸವೊಂದನ್ನು ರೂಪಿಸಲು ಸಾಧ್ಯವಾಗುತ್ತದೆ. ಆದರೆ ಜನಪದ ಸಾಹಿತ್ಯ ಮೂಲತಃ ವ್ಯಕ್ತಿಯೊಬ್ಬರ ಸೃಷ್ಟಿಯಾದರೂ ಬೆಳೆವಣಿಗೆಯಲ್ಲಿ ಸಾಮೂಹಿಕವಾದುದು. ಆದ್ದರಿಂದ ಯಾರೊಬ್ಬರ ಕರ್ತೃತ್ವದ ಅಧಿಕಾರವನ್ನೂ ಇದರ ಮೇಲೆ ಸ್ಥಾಪಿಸಲಾಗುವುದಿಲ್ಲ. ಇದು ಕಂಠಸ್ಥ ಸಂಪ್ರದಾಯದ್ದಾದ್ದರಿಂದ ತಲೆಮಾರುಗಳ ಮೂಲಕ ಹರಿಯುವಾಗ ಅನೇಕ ರೂಪಾಂತರಗಳಿಗೆ ಗುರಿಯಾಗುವುದು ಸಹಜವಾಗುತ್ತದೆ. ಇದರಲ್ಲಿ ಸಾಮಾಜಿಕ ಸ್ಥಿತ್ಯಂತರಗಳು ಪ್ರತಿಫಲಿಸದಿರುವುದರಿಂದ, ಇತಿಹಾಸವನ್ನು ಹೇಳಲು ಕಷ್ಟವಾಗುತ್ತದೆ. ಜನಪದ ಮತ್ತು ಶಿಷ್ಟಸಾಹಿತ್ಯಗಳಿಗೆ ವ್ಯತ್ಯಾಸವಿರುವಂತೆ, ಸಂಬಂಧವೂ ಇದೆ. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ, ಪ್ರೇರಕ ಶಕ್ತಿ. ಜನವಾಣಿ ಬೇರು, ಕವಿವಾಣಿ ಹೂವು ಎಂದು ಬಿಎಂಶ್ರೀ ಹೇಳಿದ್ದು ಈ ಅರ್ಥದಲ್ಲಿಯೇ. ಜನಪದ ಮತ್ತು ಶಿಷ್ಟ ಸಾಹಿತ್ಯಗಳೆರಡೂ ಅಕ್ಕಪಕ್ಕದಲ್ಲಿ ಗಂಗೆಯಮುನೆಯಂತೆ ಹರಿದಿದೆ. ಪ್ರವಾಹ ಬಂದಾಗ ಒಂದರ ನೀರು ಮತ್ತೊಂದಕ್ಕೆ ತುಳುಕುವಂತೆ, ಜನಪದ ಮತ್ತು ಶಿಷ್ಟಸಾಹಿತ್ಯಗಳೆರಡೂ ಪರಸ್ಪರ ತುಳುಕಿವೆ, ಬೆರೆತಿವೆ.

ಜನಪದ ಸಾಹಿತ್ಯದ ಮೂಲಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಏನನ್ನೂ ಹೇಳಲಾಗುವುದಿಲ್ಲ. ಇದರ ರಚನಕಾರರೆಲ್ಲ ಇಂದು ಅನಾಮಧೇಯರಾಗಿದ್ದಾರೆ. ಇದರಲ್ಲಿ ವ್ಯಕ್ತಿ ಪಾತ್ರವಹಿಸಿದರೂ ಸಮೂಹದ ಒತ್ತೇ ಹೆಚ್ಚಿನದು. ಇದು ಯಾವುದೋ ಒಂದು ಹಂತದ ಸೃಷ್ಟಿಯಾಗಿದ್ದು, ಅದು ನಾಗರಿಕತೆಯ ಪೂರ್ವದ್ದಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ. ಇತ್ತೀಚಿನ ರಚನೆಗಳು ಇರುವುವಾದರೂ ಇವು ಆಗಲೇ ಇದ್ದ ಮೂಲಕಲ್ಪನೆಗಳ ಮೇಲೆ ಪುನಃ ಸೃಷ್ಟಿಗೊಂಡವುಗಳೆಂದು ಹೇಳುತ್ತಾರೆ. ಇಂದು ಜನಪದ ಸಾಹಿತ್ಯ ಎಲ್ಲರಲ್ಲಿಯೂ ಹರಡಿಕೊಂಡಿದ್ದರೂ ಈಗ ಅದನ್ನು ಹೇಳಿಕೊಡುವವರೆಲ್ಲ ಕೇವಲ ನಿರೂಪಕರೆಂಬುದನ್ನು ಮರೆಯಬಾರದು. ವಾಸ್ತವವಾಗಿ ಇದರ ಸೃಷ್ಟಿಕ್ರಿಯೆ ಕೆಲವು ಪ್ರತಿಭಾವಂತರಿಂದ ಆದುದು. ಅದು ಸಮೂಹದ ಮಡಿಲಿಗೆ ಬಂದಕೂಡಲೇ ಆ ಕರ್ತಾರರು ಮರೆತುಹೋದರು ; ಸಾಹಿತ್ಯ ಸಮೂಹದ್ದಾಯಿತು. ಕೆಲವು ವೇಳೆ ಹಳೆಯ ರಚನಾ ಮಾದರಿಗಳ ಮೇಲೆ ಸಾದೃಶ್ಯ ರಚನೆಗಳು ಕಂಡುಬರುವ ಸಾಧ್ಯತೆ ಇರುತ್ತದೆ. ಇಂಥ ಸಂದರ್ಭಗಳಲ್ಲಿ ಪ್ರಾಚೀನ ರಚನೆಗಳಿಗೆ ನಾವು ಕೊಡುವ ಸಾಮಾಜಿಕ ಹಿನ್ನೆಲೆಯನ್ನು, ಆಮೇಲಿನ ಈ ಸದೃಶ ರಚನೆಗಳಿಗೆ ಕೊಡಲಾಗುವುದಿಲ್ಲ.

ಜನಪದ ಸಾಹಿತ್ಯದ ರೂಪ ಕೂಡ ಸಾಂಪ್ರದಾಯಿಕವಾದುದು. ಶಿಷ್ಟ ಸಾಹಿತ್ಯದ ಸೂಕ್ಷ್ಮತಂತ್ರಗಳು ಇದರಲ್ಲಿ ಕಂಡುಬರದಿದ್ದರೂ ತನ್ನದೇ ಆದ ಕೆಲವು ಸರಳ ನಿಯಮಗಳನ್ನಿದು ಹೊಂದಿರುತ್ತದೆ. ಪದ್ಯಗಳ ಸಾಲು, ಪಲ್ಲವಿ, ಅನು ಪಲ್ಲವಿ, ಮಟ್ಟುಗಳು, ಸೂತ್ರಬದ್ಧಕಥನ ವಿತರಣೆ, ಗಾದೆಯ ಸಮತೋಲನ ಒಗಟಿನ ಬಗೆಯದಾಗಿ ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ ಮೂಲತಃ ಒರಟುತನವಿರುವಂತೆ ಭಾಸವಾದರೂ ಪರಿಷ್ಕಾರಗೊಂಡವುಗಳಂತೆ ತೋರುತ್ತವೆ. ಹೀಗಾಗಿ ನಿಯಮಗಳನ್ನು ಹಾಕಿಯೂ ಅದನ್ನು ಮೀರುವ ಪ್ರವೃತ್ತಿಯೊಂದು ಈ ಎಲ್ಲದರ ಒಡಲನ್ನೂ ನೆಯ್ದಾಳಿದೆ.

ವಾಹಕತ್ವ ಜನಪದ ಸಾಹಿತ್ಯದ ಮತ್ತೊಂದು ಲಕ್ಷಣ. ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ಸಾಹಿತ್ಯ ಸಾಗಿಬರುವುದೇ ಇದು. ಜನಪದ ಸಾಹಿತ್ಯದ ಪ್ರತಿಯೊಂದು ಭಾಗವೂ ಮತ್ತೆ ಮತ್ತೆ ಹೇಳಿಸಿಕೊಳ್ಳುತ್ತ, ಅನುಷ್ಠಾನಕ್ಕೆ ಬರುತ್ತ ತಲೆಮಾರುಗಳ ಮೂಲಕ ಹರಿಯುವುದರಿಂದ ಪ್ರತಿ ಸಾರಿಯೂ ವ್ಯತ್ಯಾಸ ಅಥವಾ ಪರಿವರ್ತನೆ ಇರುತ್ತದೆ. ಹೊಸ ಅನ್ವೇಷಣೆ ಅಥವಾ ಉತ್ಪನ್ನಗಳು ಬರಬಹುದು. ಹಳೆಯದು ಬಿಡುತ್ತ ಅಥವಾ ಹೊಸದರಲ್ಲಿ ಸೇರುತ್ತ ಸಾಗಬಹುದು. ಶಿಷ್ಟ ಸಾಹಿತ್ಯದಲ್ಲಿ ಇಂಥದು ನಡೆದರೆ ಉತ್ತರ ಹೇಳಬಹುದಾದರೂ ಜನಪದ ಸಾಹಿತ್ಯದಲ್ಲಿ ಇದಕ್ಕೆ ಉತ್ತರ ಹೇಳುವುದು ಕಷ್ಟವಾಗುತ್ತದೆ.

ಹೀಗೆ ಬಾಯಿಮಾತಿನ ಮೂಲಕ ನಿರಂತರವಾಗಿ ಸಾಹಿತ್ಯ ಉಳಿದುಬಂದಾಗ, ಅದೇ ಒಂದು ಸಂಪ್ರದಾಯವಾಗಿ ಪರಿಣಮಿಸುತ್ತದೆ. ಇದನ್ನೇ ನಾವು ವಾಕ್ ಸಂಪ್ರದಾಯ ಎಂದು ಕರೆಯುವುದು. ಈ ವಾಚಿಕ ವಿಷಯ ಹಲವು ಸೈದ್ಧಾಂತಿಕ ಕಷ್ಟಗಳಿಗೆ ಎಡೆ ಕೊಡುತ್ತದೆ. ಬರವಣಿಗೆ ಇಲ್ಲದ ಸಂಸ್ಕೃತಿಗಳಲ್ಲಿ ಎಲ್ಲವೂ ವಹನಗೊಳ್ಳುವುದು ವಾಚಿಕವಾಗಿ. ಭಾಷೆ, ಬೇಟೆಯ ತಂತ್ರಗಳು, ವಿವಾಹನಿಯಮಗಳು ಇವೂ ಕೂಡ ತಲೆಮಾರಿನಿಂದ ತಲೆಮಾರಿಗೆ ಹರಿಯುವುದು ವಾಕ್ ಪರಂಪರೆಯ ಮೂಲಕವಾಗಿಯೇ. ಇದಲ್ಲದೆ, ಬರವಣಿಗೆ ಇರುವ ಸಂಸ್ಕೃತಿಯಲ್ಲಿ ಕೂಡ ಕೆಲವು ವಿಚಾರಗಳು ವಾಚಿಕವಾಗಿಯೇ ವಹನಗೊಳ್ಳುತ್ತವೆ. ಇವೆಲ್ಲವೂ ಜನಪದ ಸಾಹಿತ್ಯದ ವಲಯಕ್ಕೆ ಬರಲಾರವು, ಅಂದರೆ ಜನಪದ ಸಾಹಿತ್ಯೇತರ ವಿಷಯಗಳು ಕೂಡ ವಾಚಿಕವಾಗಿಯೇ ವಹನಗೊಳ್ಳುತ್ತವೆ ಎಂದಂತಾಯಿತು. ಆದ್ದರಿಂದ ವಾಕ್ ಸಂಪ್ರದಾಯ ಜನಪದ ಸಾಹಿತ್ಯಕ್ಕೂ ಇತರ ವಿಷಯಗಳಿಗೂ ಇರುವ ವ್ಯತ್ಯಾಸವನ್ನು ಸೂಚಿಸುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ವಾಚಿಕ ಸಂಪ್ರದಾಯಕ್ಕೆ ವಿರುದ್ಧವಾಗಿ ಬರವಣಿಗೆಯ ರೂಪದಲ್ಲಿ ಬಂದಿರುವ ಜನಪದ ಸಾಹಿತ್ಯದ ಕೆಲವು ರೂಪಗಳಿವೆ. ಜನಪದ ಕಥೆ ಅಥವಾ ಲಾವಣಿಯೊಂದು ಶತಮಾನಗಳ ಹಿಂದೆ ಬರವಣಿಗೆಯ ರೂಪದಲ್ಲಿ ಬಂದಿರಲು ಸಾಧ್ಯವಿದೆ. ಉದಾಹರಣೆಗೆ, ಜಾತಕ, ಪಂಚತಂತ್ರ, ಬೇತಾಲ ಪಂಚವಿಂಶತಿ ಕಥೆಗಳು ಜನಪದ ಕಥೆಗಳೇ ಆಗಿದ್ದು, ಜನಪದ ಕಥೆಯೊಂದರ ಜೀವನಚರಿತ್ರೆಯನ್ನು ರೂಪಿಸುವಲ್ಲಿ ಚಾರಿತ್ರಿಕ ಪಾಠಗಳಾಗಿ ಕಾಣಿಸಿಕೊಳ್ಳುತ್ತವೆ. ಹೀಗಾಗಿ ವಾಕ್‌ಸಂಪ್ರದಾಯ ಜನಪದ ಸಾಹಿತ್ಯದ ವಿಶಿಷ್ಟ ಲಕ್ಷಣವಾದರೂ ಅದಕ್ಕೆ ತನ್ನದೇ ಪರಿಮಿತಿಗಳಿವೆ ಎಂಬುದನ್ನು ನೆನೆಯಬೇಕು. ಎಲ್ಲ ಜಾನಪದವೂ ವಾಚಿಕವಾಗಿ ವಹನಗೊಳ್ಳುತ್ತದೆ. ಆದರೆ ವಾಚಿಕವಾಗಿ ವಹನಗೊಳ್ಳುವುದೆಲ್ಲ ಜಾನಪದವಲ್ಲ ಎಂಬ ವಿದ್ವಾಂಸರೊಬ್ಬರ ಮಾತನ್ನೇ ಜನಪದ ಸಾಹಿತ್ಯಕ್ಕೂ ಅನ್ವಯಿಸಬಹುದು.

ಜನಪದ ಸಾಹಿತ್ಯದ ಮತ್ತೊಂದು ಲಕ್ಷಣವೆಂದರೆ, ಅದು ನಾಗರಿಕತೆಯ ಪೂರ್ವಸ್ತರಗಳ ಉಳಿಕೆಯಾಗಿದೆ ಎಂಬುದು. ಅನಕ್ಷರಸ್ಥರ ಮತ್ತು ಗ್ರಾಮೀಣರ ಬದುಕಿನಲ್ಲಿ ಇನ್ನೂ ಸೇರಿಕೊಂಡಿರುವ ಪ್ರಾಚೀನ ಧಾರ್ಮಿಕ ವಿಧಿಗಳು ಮತ್ತು ಸಾಮಾಜಿಕ ಆಚರಣೆಗಳು ಇವಾಗಿವೆ. ಇವು ನಡೆದ ಸಂಗತಿಗಳ ವಿಚಾರಣೆಗಳಾಗಿರುವುದಕ್ಕಿಂತ ಹೆಚ್ಚಾಗಿ, ಸಾರಮಾತ್ರವಾಗಿವೆ. ದೈನಂದಿನ ಜೀವನದಲ್ಲಿ ಜನಪದ ಸಾಹಿತ್ಯದ ಪಾತ್ರವನ್ನು ಇದು ವಿವರಿಸುತ್ತದೆಂದು ತೋರುತ್ತದೆ.

ಜನಪದ ಸಾಹಿತ್ಯ ಸಾಂಪ್ರದಾಯಿಕವಾಗಿ ಬಂದ ಜನಪದ ಸಂಸ್ಕೃತಿಯನ್ನು ಅಭಿವ್ಯಕ್ತಿಸುತ್ತದೆ. ಪರಂಪರಾಗತವಾಗಿ ಅರ್ಜಿಸುವ ಯಾವುದೇ ರೂಪದ ವರ್ತನೆಯನ್ನು ನಾವು ಸಂಸ್ಕೃತಿ ಎಂದು ಕರೆಯುತ್ತೇವೆ. ಜನಪದ ಸಾಹಿತ್ಯ ಇಂಥ ಸಾಂಸ್ಕೃತಿಕ ವರ್ತನೆಗಳನ್ನು ಹೇಳುವ ಪದ್ಧತಿ, ಸಂಪ್ರದಾಯ, ನಂಬಿಕೆ, ಆಚರಣೆ, ಸೃಷ್ಟಿತಂತ್ರಗಳನ್ನು ಒಳಗೊಳ್ಳುತ್ತದೆ. ಇದರಿಂದ ಒಂದು ಜನಪದ ಕಥೆ ಅಥವಾ ಒಂದು ಗಾದೆ ಸಂಸ್ಕೃತಿಯ ಭಾಗವೆನಿಸುತ್ತದೆ.

ಜನಪದ ಸಾಹಿತ್ಯದ ಕಾರ್ಯಗಳನ್ನು ಕುರಿತು ಎರಡು ಮಾತು. ಜನಪದ ಸಾಹಿತ್ಯ ಬದುಕಿನೊಡನೆ ಬೆಸೆದು ಬದುಕಿದುದು. ಆದ್ದರಿಂದ ಜನಪದ ಜೀನವದಿಂದ ಜನಪದ ಸಾಹಿತ್ಯವನ್ನು ಬೇರ್ಪಡಿಸಿ ಇಡುವುದು ಅಸಾಧ್ಯ. ಗ್ರಾಮೀಣರ ಎಲ್ಲ ಚಟುವಟಿಕೆಯೊಡನೆ ಇದು ಬೆರೆತುಹೋಗಿದೆ. ಅವರ ಮದುವೆ ಮುಂಜಿಗಳಲ್ಲಿ ಹಬ್ಬಹರಿದಿನಗಳಲ್ಲಿ, ಧಾರ್ಮಿಕ ಸಾಮಾಜಿಕ ಕಾರ್ಯಗಳಲ್ಲಿ ಬೆಳೆಯನ್ನು ಒಡ್ಡುವ ಕುಯ್ಯುವ ಒಕ್ಕುವ ವಿಶಿಷ್ಟ ಸಂದರ್ಭಗಳಲ್ಲಿ ಈ ಕ್ರಿಯೆಯನ್ನು ಕಾಣಬಹುದು. ಇಂಥ ವಿಷಯಗಳಲ್ಲಿ ಗೀತೆಗಳನ್ನು ಹಾಡಿಸುವ, ಕಥೆಗಳನ್ನು ಹೇಳಿಸುವ ವಿಶೇಷ ಸಂಪ್ರದಾಯಗಳೇ ಪ್ರಚಲಿತವಾಗಿವೆ. ಜನಪದ ಸಾಹಿತ್ಯ ಜೀವನದೊಡನೆ ಕ್ರಿಯಾಶೀಲವಾಗುತ್ತದೆಂಬುದನ್ನು ಇವು ವ್ಯಕ್ತಗೊಳಿಸುತ್ತವೆ. ಜನಪದ ಸಾಹಿತ್ಯ ಮನೋರಂಜನೆಯ ಕ್ರಿಯೆಯಾಗಿ ಕೆಲಸ ಮಾಡುವುದಾದರೂ ಶುದ್ಧ ಮನೋರಂಜನೆಗಾಗಿಯೇ ರಚಿತವಾಗಿದೆ ಎಂದು ಹೇಳಲಾಗುವುದಿಲ್ಲ. ವ್ಯಕ್ತಿಯ ಶ್ರಮವನ್ನು ಹೋಗಲಾಡಿಸುವ ಮತ್ತು ಜೀವನದ ಏಕತಾನತೆಯನ್ನು ಮುರಿಯುವ ಸಾಧನವಾಗಿ ಇದು ಬಳಕೆಯಾಗಿದೆ. ಜನಪದ ಸಾಹಿತ್ಯಕ್ಕೆ ಮಾಂತ್ರಿಕ ನಿಯೋಗವೊಂದಿದ್ದು, ಬೆಳೆಯನ್ನು ಬೆಳೆಸುತ್ತದೆ ಮತ್ತು ರಕ್ಷಿಸುತ್ತದೆ ಎಂಬ ನಂಬಿಕೆಯಲ್ಲಿ ಇದನ್ನು ಕಾಣಬಹುದು.

ಜನಪದ ಸಾಹಿತ್ಯ ಜನಪದ ಸಮಾಜದ ನಡುವೆ ಸಾಂಪ್ರದಾಯಿಕ ಶಿಕ್ಷಣ ಸಾಧನವಾಗಿಯೂ ಪಾತ್ರವಹಿಸುತ್ತದೆ. ಪುರಾಣ, ಐತಿಹ್ಯ ಮೊದಲಾದವನ್ನು ಅರಿಯಲು ಇದು ಮುಖ್ಯವಾಗುತ್ತದೆ. ಏಕೆಂದರೆ ಅವು ಸತ್ಯವಿರಬಹುದಾದ ತಿಳಿವಳಿಕೆಯನ್ನು ಹೊಂದಿರುತ್ತವೆ. ಗಾದೆಗಳು ಗತ ತಲೆಮಾರುಗಳ ಸಾರಭೂತ ಜ್ಞಾನವನ್ನು ಹೊಂದಿರುವ ಭಾಗವಾಗಿ ಆಗಾಗ್ಗೆ ಕಾಣಿಸಿಕೊಳ್ಳುತ್ತವೆ. ಗಾದೆಗಳಲ್ಲಿ ವ್ಯಕ್ತವಾಗಿರುವ ಸಂಸ್ಕೃತಿಯೊಂದರ ಮೌಲ್ಯಗಳನ್ನು ಅರಿಯಲು ಕೂಡ ಅಷ್ಟೇ ಮುಖ್ಯವಾಗುತ್ತದೆ. ಗಾದೆಗಳ ಮೇಲೆ ಪ್ರಭುತ್ವವನ್ನು ಹೊಂದಿರದ ಅನೇಕ ಆಫ್ರಿಕನ್ ಸಮಾಜಗಳ ವ್ಯಕ್ತಿಗಳು ವಯಸ್ಕರಾಗಿ ಸಫಲ ಜೀವನ ನಡೆಸುವುದು ಕಷ್ಟ. ಈ ಸಮಾಜಗಳಲ್ಲಿ ಗಾದೆಗಳು ವಯಸ್ಕರ ಕ್ಷೇತ್ರವಾಗಿರುವಂತೆ, ಒಗಟುಗಳು ಮಕ್ಕಳ ಕ್ಷೇತ್ರವಾಗಿರುತ್ತವೆ. ಒಗಟುಗಳು ಪ್ರಕೃತಿಯಲ್ಲಿನ ಸಸ್ಯಗಳು, ಪ್ರಾಣಿಗಳು ಮತ್ತಿತರ ವಸ್ತುಗಳ ಲಕ್ಷಣಗಳನ್ನು ಬೋಧಿಸುವುದು ಮಾತ್ರವಲ್ಲದೆ, ಭೌತಿಕ ಸಂಸ್ಕೃತಿ ಮತ್ತು ಸಾಮಾಜಿಕ ಸಂಸ್ಕೃತಿಗಳ ಕೆಲವು ಲಕ್ಷಣಗಳನ್ನು ಹೇಳುತ್ತವೆ. ಕಾಲ್ಪನಿಕವೆಂದು ಹೇಳಲಾಗಿರುವ ಕಥೆಗಳು ಕೂಡ ಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಆಫ್ರಿಕನ್ನರು ನಂಬುತ್ತಾರೆ; ಏಕೆಂದರೆ, ಇವುಗಳಲ್ಲಿ ಅನೇಕ ಕಥೆಗಳು ನೀತಿ ಕಥೆಗಳಾಗಿರುವುದು ಜಗತ್ತಿನಾದ್ಯಂತ ಅನಕ್ಷರಸ್ಥ ಸಮಾಜಗಳಲ್ಲಿ ಜನಪದ ಸಾಹಿತ್ಯ ಇಂಥ ಶಿಕ್ಷಣದ ಪಾತ್ರವಹಿಸುವುದನ್ನು ಕಾಣಿಸುತ್ತದೆ. ಕೇಳುವುದು, ನೆನಪಿರಿಸಿಕೊಳ್ಳುವುದು, ನೋಡುವುದು ಮತ್ತು ಅನುಸರಿಸುವುದರ ಮೂಲಕ ಈ ಶಿಕ್ಷಣ ಆದುದು. ಜನಪದ ಸಾಹಿತ್ಯ ತಲೆಮಾರಿನಿಂದ ತಲೆಮಾರಿಗೆ ಜ್ಞಾನ, ಮೌಲ್ಯ ಹಾಗೂ ಮನಃಪ್ರವೃತ್ತಿಗಳನ್ನು ವಹನಿಸುವ ಮಾಧ್ಯಮವೊಂದನ್ನು ಒದಗಿಸುತ್ತದೆ; ಹೀಗೆ ಸಂಸ್ಕೃತಿಯ ನಿರಂತರತೆಯನ್ನು ಕಾಪಾಡಿಕೊಳ್ಳುತ್ತದೆ.

ಜನಪದ ಸಾಹಿತ್ಯ ಸಾಮಾಜಿಕ ನಿಯಂತ್ರಣ ಶಕ್ತಿಯಾಗಿ ಮತ್ತು ಸಾಮಾಜಿಕ ವಿಧಾಯಕ ಶಕ್ತಿಯಾಗಿ ಕೂಡ ಕೆಲಸ ಮಾಡುತ್ತದೆ. ಸಾಂಸ್ಕೃತಿಕ ಮೌಲ್ಯಗಳನ್ನು ಮತ್ತು ಸಾಮಾಜಿಕ ವರ್ತನೆಗಳನ್ನು, ಅವುಗಳಿಂದ ಜನತೆ ತಪ್ಪಿಹೋಗದ ಹಾಗೆ ನೋಡಿಕೊಳ್ಳುತ್ತದೆ. ಈ ಸಾಮಾಜಿಕ ಕಟ್ಟುಪಾಡುಗಳಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದಾಗ ಗಾದೆಗಳು, ಗೀತೆಗಳು, ಒಗಟುಗಳು ಮತ್ತು ಕಥೆಗಳು ಕೂಡ ಅದನ್ನು ವಿಮರ್ಶಿಸಲು ತೊಡಗುತ್ತವೆ. ಸಮಾಜ ವ್ಯಕ್ತಿಯ ಮೇಲೆ ಹೇರಲಾದ ನಿರ್ಬಂಧಗಳಿಂದ ಮಾನಸಿಕವಾಗಿ ವ್ಯಕ್ತಿ ಬಿಡುಗಡೆ ಪಡೆಯಲು ಜನಪದ ಸಾಹಿತ್ಯ ಸಹಾಯ ಮಾಡುತ್ತದೆ. ಇವುಗಳ ಜೊತೆಯಲ್ಲಿಯೇ ಸಾಂಸ್ಕೃತಿಕ ನಿರಂತರತೆ ಮತ್ತು ಸ್ಥಿರತೆಯನ್ನು ನಿರ್ವಹಿಸುವ ಕಾರ್ಯವನ್ನು ಕೂಡ ಇದು ಮಾಡುತ್ತದೆ. ವ್ಯಕ್ತಿಗಳಲ್ಲಿ ನೈತಿಕಮಟ್ಟವನ್ನು ಕಾಪಾಡಿಕೊಂಡು ಬರಲು ನೆರವಾಗಿದೆ.

ಇದಲ್ಲದೆ, ಜನಪದ ಸಾಹಿತ್ಯ ರಾಜಕೀಯ ಪ್ರಚಾರಕಾರ್ಯಕ್ಕೆ ಮತ್ತು ಸಾಮಾಜಿಕ ವ್ಯತ್ಯಾಸಕ್ಕೆ ದುಡಿದಿದೆ. ಆಫ್ರಿಕದ ಸ್ವತಂತ್ರ ದೇಶಗಳ ತುರ್ತು ಪರಿಸ್ಥಿತಿಗಳಲ್ಲಿ, ಅಲ್ಲಿನ ಪುರಾಣ, ಐತಿಹ್ಯ, ಗೀತೆಗಳು ಜನಾಂಗದ ಐಕ್ಯ, ಪ್ರಾಂತೀಯತೆ, ರಾಷ್ಟ್ರೀಯತೆ, ವಸಾಹತುಷಾಹಿವಿರೋಧಿ ಭಾವನೆಗಳನ್ನು ಉದ್ದೀಪಿಸಲು ಉಪಯೋಗವಾಗಿವೆ. ಆಫ್ರಿಕದ ಸಂಕೀರ್ತನ ಗೀತೆಗಳನ್ನು ಅಲ್ಲಿನ ನೂತನ ರಾಜಕೀಯ ಮುಖಂಡರನ್ನು ಸನ್ಮಾನಿಸಲು ಹೊಂದಿಸಿಕೊಳ್ಳಲಾಯಿತು; ಹಾಗೆಯೇ ಪರೋಕ್ಷ ಸೂಚನಾಗೀತೆಗಳನ್ನು ವಿರೋಧಿ ರಾಜಕಾರಣಿಗಳು ಹಾಗೂ ವಸಾಹತುಷಾಹಿ ಅಧಿಕಾರಿಗಳನ್ನು ಟೀಕಿಸಲು ಬಳಸಲಾಯಿತು. ರಷ್ಯದಲ್ಲಿ ಜನಪದ ಸಾಹಿತ್ಯವನ್ನು ಪರಿಣಾಮಕಾರಿ ರಾಜಕೀಯ ಆಯುಧವಾಗಿ ಮಾಡಿಕೊಂಡುದು ತಿಳಿದ ವಿಷಯವೇ ಆಗಿದೆ. ಜನಪದ ಕಥೆ ಮತ್ತು ಗೀತೆಗಳನ್ನು ರಷ್ಯ, ಚೀನ, ಕ್ಯೂಬಗಳಲ್ಲಿನ ವರ್ಗಕಲಹದ ವಿಷಯವನ್ನು ಮುಂದಿಡಲು ಉತ್ತಮ ಸಾಧನವಾಗಿ ಉಪಯೋಗಿಸಲಾಯಿತು. ಅನಕ್ಷರಸ್ಥ ಸಮಾಜಗಳಲ್ಲಿನ ಕಾನೂನು, ಮೌಲ್ಯಗಳು, ಮನಶ್ಶಾಸ್ತ್ರ ಮತ್ತು ಇತಿಹಾಸವನ್ನು ಅರಿಯಲು ಜನಪದ ಸಾಹಿತ್ಯ ಉಪಯುಕ್ತವಾದ ವಿಷಯಗಳನ್ನು ಒದಗಿಸುತ್ತದೆ.

ಜನಪದ ಸಾಹಿತ್ಯದ ಸಾಹಿತ್ಯಿಕ ಮೌಲ್ಯದ ವಿಚಾರ: ಮೊದಲನೆಯದಾಗಿ ಜನಪದ ಸಾಹಿತ್ಯ ಸಾಂಪ್ರದಾಯಿಕ ಕಲೆ ವ್ಯಕ್ತಿನಿಷ್ಠವಾದುದಕ್ಕಿಂತ ಸಮೂಹನಿಷ್ಠವಾದುದು. ಆದ್ದರಿಂದ ವಮೌಲ್ಯಮಾಪನ ಸಾಧನಗಳು ಶಿಷ್ಟಸಾಹಿತ್ಯಕ್ಕಿಂತ ಜನಪದ ಸಾಹಿತ್ಯಕ್ಕೆ ಬೇರೆಯಾಗಿರಬೇಕಾದುದು ಅನಿವಾರ್ಯವಾಗುತ್ತದೆ. ಆದ್ದರಿಂದ ಜನಪದ ಸಾಹಿತ್ಯದ ವಿಮರ್ಶಾಸೂತ್ರಗಳನ್ನು ಜನಪದ ಸಾಹಿತ್ಯದಿಂದಲೇ ಸಿದ್ಧಿಸಿಕೊಳ್ಳಬೇಕಾಗಿದೆಯೇ ಹೊರತು, ಆಧುನಿಕ ಸಾಹಿತ್ಯದಿಂದಲ್ಲ ಎಂಬುದನ್ನು ಮರೆಯಬಾರದು. ಜನಪದ ಸಾಹಿತ್ಯವನ್ನು ವಿವೇಚಿಸುವಾಗಲೆಲ್ಲ ಅದರ ಉಗಮ, ವಿಕಾಸ, ಪರಿಸರಗಳ ಪರಿವೆ ನಮಗಿರಬೇಕಾಗುತ್ತದೆ. ಅಂದರೆ ಶುದ್ಧ ಸಾಹಿತ್ಯಿಕ ದೃಷ್ಟಿಯೇ ಇದರಲ್ಲಿ ಸಾಧ್ಯವಿಲ್ಲ ಎಂದು ಇದರ ಅರ್ಥವಲ್ಲ. ಹಾಗೆ ನೋಡುವಾಗ ಅದರ ಇತಿಮಿತಿಗಳ, ಜಾಯಮಾನಗಳ ಹಿನ್ನೆಲೆಯಲ್ಲಿಟ್ಟೇ ಪರಿಶೀಲಿಸಬೇಕಾಗುತ್ತದೆ ಎಂಬುದು ಇದರ ಅರ್ಥ. ಸಾಹಿತ್ಯಿಕ ದೃಷ್ಟಿಯಿಂದ ಗಮನಾರ್ಹವಲ್ಲದ ಪದ್ಯವೊಂದು ಜನಪದ ದೃಷ್ಟಿಯಿಂದ ಗಮನಾರ್ಹವೆನಿಸಬಹುದು. ಆದ್ದರಿಂದ ಜನಪದ ಸಾಹಿತ್ಯದಲ್ಲಿ ಆಯ್ಕೆಯ ವಿಷಯ ಬಿದ್ದುಹೋಗುತ್ತದೆ. ಜನಪದ ಸಂಸ್ಕೃತಿಯಲ್ಲಿ ನಿಚೋಚ್ಚವೆಂಬುದು ಇರುವುದಿಲ್ಲ. ಮಾನವಶಾಸ್ತ್ರದಲ್ಲಿ ತೀರ ಮುಂದುವರಿದ ಸಂಸ್ಕೃತಿಗಳನ್ನು ಗಮನಿಸುವಂತೆಯೇ ತೀರ ಹಿಂದುಳಿದ ಸಂಸ್ಕೃತಿಗಳನ್ನೂ ಸಮಾನವಾಗಿ ಪರಿಗಣಿಸಲಾಗುತ್ತದೆ. ಹಾಗೆಯೇ ಜನಪದ ಸಾಹಿತ್ಯದಲ್ಲಿ ಕೂಡ. ಆದರೆ ಜನಪದ ಸಾಹಿತ್ಯವನ್ನು ಸಾಹಿತ್ಯದೃಷ್ಟಿಯಿಂದ ಪರಿಶೀಲಿಸಿ ಬೆಲೆ ಕಟ್ಟಬಾರದೆಂದೇನೂ ನಿಯಮವಿಲ್ಲ. ಹೀಗೆ ಮಾಡುವಾಗ ಬಹುಮುಖ್ಯ ಸಂಗತಿಯೊಂದನ್ನು ನೆನಪಿಡಬೇಕಾಗುತ್ತದೆ. ವ್ಯಕ್ತಿ ಅಧೀನನಾಗಿ ಸಮಾಜ ಪ್ರಧಾನವಾಗಿದ್ದ ಸಾಮಾಜಿಕ ಸ್ತರದಲ್ಲಿ ಇದು ಉಗಮಗೊಂಡಿದ್ದರಿಂದ, ಒಂದು ಗುಂಪಿನ ಆದೇಶ ಮುಖ್ಯವಾಗುತ್ತದೆಯೇ ಹೊರತು, ವ್ಯಕ್ತಿವಿಶಿಷ್ಟತೆಯಲ್ಲ. ಆದುದರಿಂದ ಇಂಥ ಸಾಹಿತ್ಯದಲ್ಲಿ ಪ್ರತಿಭಟನೆ, ಕ್ರಾಂತಿ, ಸಂಕೀರ್ಣತೆ ಮುಂತಾದುವು ಇಲ್ಲವೆಂದು ಪಟ್ಟಿ ಮಾಡುವುದು ಅಸಂಗತವಾಗುತ್ತದೆ. ಅಲ್ಲದೆ ಪ್ರತಿಭಟನೆ, ಕ್ರಾಂತಿ , ಸಂಕೀರ್ಣತೆ ಇರುವುದು ಮಾತ್ರ ಶ್ರೇಷ್ಠ ಸಾಹಿತ್ಯವಾಗುತ್ತದೆ, ಉಳಿದುದು ಆಗಲಾರದು ಎಂದು ಹೇಳುವುದೂ ತಪ್ಪಾಗುತ್ತದೆ. ಹಾಗೆ ನೋಡಿದಾಗ, ಜನಪದ ಸಾಹಿತ್ಯವೂ ಉತ್ತಮತೆಯನ್ನು ನಿಸ್ಸಂದೇಹವಾಗಿಯೂ ಉಳಿಸಿಕೊಳ್ಳುತ್ತದೆಂದು ಹೇಳಬಹುದು.

ಜನಪದ ಸಾಹಿತ್ಯವನ್ನು ಕಲೆಯ ದೃಷ್ಟಿಯಿಂದ ಮಾತ್ರವಲ್ಲದೆ, ಸಾಮಾಜವಿಜ್ಞಾನಗಳ ದೃಷ್ಟಿಯಿಂದಲೂ ಪರಿಶೀಲಿಸಬೇಕಾಗುತ್ತದೆ. ಸಾಹಿತ್ಯಕ ಮತ್ತು ಮಾನವಶಾಸ್ತ್ರೀಯ ವಿವರಣೆಗಳೆರಡೂ ಇದರಲ್ಲಿ ಅವಶ್ಯವಾಗಿ ಇರುವಂಥವು. ಭಾಷಾವಿಜ್ಞಾನ ಕೂಡ ಜನಪದಸಾಹಿತ್ಯದೊಡನೆ ನಿಕಟ ಸಂಬಂಧವನ್ನು ಹೊಂದಿದೆ. ಶಾಬ್ದಿಕ ಅಭಿವ್ಯಕ್ತಿಯ ಶೈಲಿಯನ್ನು ಗಮನಿಸುವಾಗ ಇದು ಅಗತ್ಯವೆನಿಸಿದೆ. ಕಥೆ, ಗಾದೆ ಮೊದಲಾದವನ್ನು ಸಂಗ್ರಹಿಸುವಾಗ ಇದರ ತಿಳಿವಳಿಕೆ ಬೇಕಾಗುತ್ತದೆ.

ಜನಪದ ಸಾಹಿತ್ಯದಲ್ಲಿ ಕಥೆ, ಗೀತೆ, ಗಾದೆ ಮತ್ತು ಒಗಟುಗಳೆಂದು ನಾಲ್ಕು ಪ್ರಕಾರಗಳು ಬರುತ್ತವೆ. ಮೊದಲ ಎರಡರಲ್ಲಿ ಭಾವಾಂಶವೇ ಪ್ರಧಾನವಾದರೆ ಕಡೆಯ ಎರಡರಲ್ಲಿ ಚಿಂತನಾಂಶವೇ ಎದ್ದು ಕಾಣುತ್ತದೆ. ಕಥೆಯೊಂದನ್ನು ಬಿಟ್ಟು ಉಳಿದವುಗಳಲ್ಲಿ ರೂಪಾಂಶವೂ ಗಮನಾರ್ಹವೇ. ಇವು ಆದಿಮಾನವನ ಭಾವುಕತೆ, ಬೌದ್ಧಿಕತೆ ಹಾಗೂ ಸಂಸ್ಕೃತಿ ನಾಗರಿಕತೆಗಳಿಗೆ ಬಹು ಚೆನ್ನಾಗಿ ಕನ್ನಡಿ ಹಿಡಿಯುತ್ತವೆ. ಮಾನವ ಮನಸ್ಸಿನ ವಿಕಾಸದ ಸ್ತರಗಳನ್ನು ಭಾವ, ಭಾವ-ಬುದ್ಧಿ ಮತ್ತು ಬುದ್ಧಿ ಎಂಬುದಾಗಿ ಗುರುತಿಸಬಹುದು. ಕಥೆ ಮತ್ತು ಗೀತೆ ಮೊದಲ ಸ್ತರದಲ್ಲೂ ಗಾದೆ ಎರಡನೆಯ ಹಂತದಲ್ಲೂ ಒಗಟು ಮೂರನೆಯ ಮೆಟ್ಟಿಲಿನಲ್ಲೂ ಸೃಷ್ಟಿಯಾಗಿರಬೇಕೆಂದು ತೋರುತ್ತದೆ. ಇವುಗಳಲ್ಲಿ ಗಾದೆ ಮತ್ತು ಒಗಟಿಗೆ ಪರಸ್ಪರ ಸಂಬಂಧವಿದೆ. ಗಾದೆ ಬುದ್ಧಿ ಭಾವಗಳ ವಿದ್ಯುದಾಲಿಂಗನವಾಗಿದ್ದು ಸಾಕಷ್ಟು ಬೆಳವಣಿಗೆಗೊಂಡ ಮನುಷ್ಯನ ಆಲೋಚನಾವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ವಿಕಾಸದ ಇತ್ತೀಚಿನ ಸೃಷ್ಟಿಯೆಂದರೆ ಒಗಟೆಂದು ಹೇಳಬಹುದು. ಇದು ಬುದ್ಧಿಪೂರ್ವದ್ದಾಗಿರದೆ ಬುದ್ಧಿಪೂರ್ವಕವಾದುದಾಗಿರಬೇಕೆನಿಸುತ್ತದೆ.

ಪುರಾತನ ಜೀವಿಗಳ ಅತ್ಯುನ್ನತ ಕಲ್ಪನಾಸ್ಥಿತಿಗೆ ಮತ್ತು ವಿಲಕ್ಷಣ ಮನೋಭಾವಗಳಿಗೆ ಪ್ರತಿನಿಧಿಯಾಗುವ ಕಲಾತ್ಮಕ ಸೃಷ್ಟಿಗಳಾಗುತ್ತವೆ, ಜನಪದ ಕಥೆಗಳು. ಇವುಗಳಲ್ಲಿನ ಅದ್ಭುತ ಹಾಗೂ ಅತಿಮಾನುಷ ಅಂಶಗಳು ನಮ್ಮ ಕುತೂಹಲವನ್ನು ಕೆರಳಿಸಿ ತಣಿಸುವುದಲ್ಲದೆ,

ನಮ್ಮ ಬೌದ್ಧಿಕತೆಗೆ ಸವಾಲಾಗಿಯೂ ಪರಿಣಮಿಸುತ್ತವೆ. ಇವುಗಳ ಹಿಂದೆ ಯಾವುದೇ ರೀತಿಯ ಧಾರ್ಮಿಕ ಮಾಂತ್ರಿಕ ಪದ್ಧತಿಗಳು ಕೆಲಸ ಮಾಡಿರಲಿ, ಆದಿವಾಸಿಯ ಸೃಷ್ಟಿಶಕ್ತಿಯ ವಿಲಾಸವೈಭವಗಳಿಗೆ ಇವು ಇನ್ನಿಲ್ಲದ ಉದಾಹರಣೆಗಳಂತೂ ಖಂಡಿತ ಆಗುತ್ತವೆ. ಇವು ಮಾನವನಲ್ಲಿ ಸಾಹಸ ಭಾವಾನುಭವವನ್ನು ಪ್ರಚೋದಿಸುತ್ತವೆ ಮತ್ತು ಸುಪ್ತ ಮನಸ್ಸಿಗೆ ನಾಲಗೆಯಾಗುತ್ತವೆ. ಜನಪದ ಕಥೆಗಳಲ್ಲಿ ಚಿತ್ರಿತವಾಗಿರುವ ಸಾಹಸ ಪರಂಪರೆಗಳು ಮತ್ತು ಆದರ್ಶೀಕೃತ ಜಗತ್ತು ಇದನ್ನು ಬಿಂಬಿಸುತ್ತವೆ.

ಜನಪದ ಕಥೆಗಳನ್ನು ವಸ್ತುವಿನ ದೃಷ್ಟಿಯಿಂದ ಪೌರಾಣಿಕ ಕಥೆಗಳು, ಐತಿಹ್ಯದ ಕಥೆಗಳು, ಕಾಲ್ಪನಿಕ ಕಥೆಗಳು, ಸಾಮಾಜಿಕ ಕಥೆಗಳು ಮತ್ತು ರಹಸ್ಯಾತ್ಮಕ ಕಥೆಗಳೆಂದು ಐದು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ಪೌರಾಣಿಕ ಆವರಣ ಹಾಗೂ ಪಾತ್ರ ಸನ್ನಿವೇಶಗಳಿಂದ ಕೂಡಿ ರಚಿತವಾಗಿರುವ ಕಥೆಗಳನ್ನು ಪೌರಾಣಿಕ ಕಥೆಗಳೆಂದು ಭಾವಿಸಬಹುದು. ಇದು ಪುರಾಣಕ್ಕೂ ಜನಪದ ಕಥೆಗೂ ಇರುವ ಸಂಬಂಧವನ್ನು ಕೆಲ ಮಟ್ಟಿಗೆ ಹೇಳುತ್ತದೆ. ವಾಸ್ತವತೆ ಮತ್ತು ದೈವಿಕತೆಗಳ ಸಂಗಮದಂತಿರುವ ಐತಿಹ್ಯ ಕಥೆಗಳ ಉಗಮಸ್ಥಾನದಲ್ಲಿ ಚಾರಿತ್ರಿಕ ಸಂಗತಿ ಅಥವಾ ಘಟನೆಯೊಂದು ಇರುವಂತೆ ಭಾಸವಾಗುತ್ತದೆ. ಇಂಥ ಕತೆಗಳನ್ನು ನಡೆದಿವೆ ಎಂದು ಜನಪದ ನಂಬಿಕೊಂಡು ಬಂದಿದೆ. ಕಲ್ಪನೆಯನ್ನೇ ಆಧಾರವಾಗಿ ಉಳ್ಳವು ಕಾಲ್ಪನಿಕ ಕಥೆಗಳು. ಇಂಥ ಕಥೆಗಳಲ್ಲಿ ಕಥೆಯೇ ಮುಖ್ಯವಾಗಿದ್ದು, ಉಳಿದೆಲ್ಲ ವಿಷಯಗಳು ಅದಕ್ಕೆ ದುಡಿಯುವುದನ್ನು ನೋಡುತ್ತೇವೆ. ಇವುಗಳಲ್ಲಿ ಇಂದು ಯಾವುದೇ ಐತಿಹಾಸಿಕ ಮೌಲ್ಯವನ್ನು ಗುರುತಿಸುವುದಕ್ಕೆ ಸಾಧ್ಯವಿಲ್ಲದ್ದರಿಂದ ಕಲಾಮೌಲ್ಯವೇ ಪ್ರಧಾನವಾಗುತ್ತದೆ. ಸಾಮಾಜಿಕ ಕಥೆಗಳು ಸಾಮಾಜಿಕ ರೀತಿನೀತಿಗೆ ಕಿಂಡಿಗಳಾಗುತ್ತವೆ. ಅತಿಮಾನುಷ ಅಂಶ ಕಡಿಮೆಯಾಗಿ ವಾಸ್ತವಿಕತೆ ಆಳುತ್ತದೆ. ಸಮಾಜದ ದೋಷ ದೌರ್ಬಲ್ಯಗಳನ್ನು ಕೆಲವೊಂದು ಅಸಂಗತ ಪಾತ್ರಗಳ ಮೂಲಕ ಅಭಿವ್ಯಕ್ತಿಸುತ್ತವೆ. ಇಂಥ ಕಥೆಗಳಲ್ಲಿ ಹಾಸ್ಯವಿದ್ದರೂ ವಿಡಂಬನ ಪ್ರವೃತ್ತಿಯೊಂದು ತಪ್ಪದೆ ಕೆಲಸ ಮಾಡುತ್ತದೆ. ರಹಸ್ಯಾತ್ಮಕ ಕಥೆಗಳು ದೊರೆಯುವುದು ವಿರಳವೆಂದೇ ಹೇಳಬೇಕು. ಈ ಎಲ್ಲ ಕಥೆಗಳಲ್ಲಿ ವಸ್ತುವೈವಿಧ್ಯ ಮತ್ತು ಪಾತ್ರವೈವಿಧ್ಯಗಳ ಜೊತೆಗೆ ಕಲ್ಪನಾರಮ್ಯತೆಯೊಂದು ಕಥನದೇಹವನ್ನು ತುಂಬುತ್ತದೆ. ಎಲ್ಲ ವಯೋಮಾನದವರನ್ನೂ ಸೆಳೆಯುವ ಗುಣವೇ ಇದು.

ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ದಟ್ಟ ನಿರೂಪಣೆ ಬರುವುದಿಲ್ಲ; ದ್ರುತ ಗತಿಯೇ ಇದರ ಜೀವಾಳವಾಗಿದೆ. ಸಂವಾದ ರಮಣೀಯತೆ, ಭಾಷೆಯ ಲವಲವಿಕೆ, ಕಥನಸರಳತೆ, ಪುನರಾವರ್ತನೆ–ಇವು ಕಥೆಯನ್ನು ಅತಿಶಯವಾಗಿ ಶೃಂಗರಿಸಿವೆ. ನಮ್ಮ ಊಹೆಗೆ ಏನನ್ನೂ ಬಿಡದೆ ಎಲ್ಲವನ್ನೂ ಬಿಚ್ಚಿಡುವುದು ಇದರ ಒಂದು ವಿಶೇಷಗುಣ. ಘಟನೆಗಳೆಲ್ಲ ಕ್ರಿಯಾಶೀಲತೆಯ ಕಡೆಗೆ ತಿರುಗಿ, ನಿರೀಕ್ಷಿತ ಗುರಿಯ ಕಡೆಗೆ ತೀವ್ರವಾಗಿ ಧಾವಿಸುವುದನ್ನು ಕಾಣುತ್ತೇವೆ. ಪಾತ್ರಗಳಲ್ಲಿ ಬಾಹುಳ್ಯವಿದ್ದರೂ ವಿನ್ಯಾಸದಲ್ಲಿ ಜಟಿಲತೆ ಮೂಡದಿರುವುದು ಗಮನಾರ್ಹ ಸಂಗತಿ. ಪುನರಾವರ್ತನ ಕ್ರಿಯೆಯಲ್ಲಿ ನಮ್ಮನ್ನು ಹಿಂದಕ್ಕೆ ದೂಡಿ, ಮುಂದಕ್ಕೆ ಎಳೆದುಕೊಳ್ಳುವ ಕ್ರಮದಲ್ಲಿ ಕಥೆಗಾರಿಕೆಯ ಕುಶಲ ಕಲೆಗಾರಿಕೆಯನ್ನು ಗುರುತಿಸುತ್ತೇವೆ.

ಜನಪದ ಸಾಹಿತ್ಯದಲ್ಲಿ ಸಾಹಿತ್ಯಾಂಶ ಅತಿಶಯವಾಗಿ ಅರಳಿಕೊಂಡಿರುವುದು ಅದರ ಗೀತಭಾಗದಲ್ಲಿಯೇ. ಅನುಭವ ಮತ್ತು ಅಭಿವ್ಯಕ್ತಿ ಕ್ರಿಯೆಗಳೆರಡೂ ಒಟ್ಟಿಗೆ ದುಡಿಯುವ ಇದರಲ್ಲಿ ಜನಪದದ ಆಶೋತ್ತರಗಳೂ ಸಾಮಾಜಿಕ ಅನಿಸಿಕೆಗಳೂ ಸಾಂಪ್ರದಾಯಿಕ ಹಿನ್ನೆಲೆಯೊಡನೆ ಬಹುಮಟ್ಟಿಗೆ ನೇರವಾಗಿ ಪ್ರಕಟಗೊಂಡಿವೆ. ಜನಪದ ಗೀತೆಗಳಂಥ ಭಾವನಿಷ್ಠ ಭಾಗಗಳಲ್ಲಿ ಮಾತ್ರವಲ್ಲದೆ, ಲಾವಣಿಗಳಂಥ ಶುದ್ಧ ವಸ್ತುನಿಷ್ಠ ಪ್ರಕಾರಗಳಲ್ಲಿಯೂ ಇದು ಕೆಲಸಮಾಡುವುದನ್ನು ಕಾಣುತ್ತೇವೆ. ಆದರೆ ಇಲ್ಲಿ ಕಥನಮಾಧ್ಯಮದ ಮೂಲಕ ವ್ಯಕ್ತಗೊಳ್ಳುತ್ತದೆ. ವಿವಿಧ ಲಯವಿನ್ಯಾಸಗಳುಳ್ಳ ಪದ್ಯದ ಮತ್ತು ಪದ್ಯಗಂಧಿಯಾದ ವಚನದ ಈ ಎಲ್ಲ ಗೀತೆಗಳನ್ನು ಅವುಗಳ ಸಂದರ್ಭದೊಡನೆ ಹಾಡಿದಾಗ ವಿಶೇಷವಾಗಿ ನಮ್ಮನ್ನು ಅವು ಆಕರ್ಷಿಸುತ್ತವೆ. ಕನ್ನಡಕ್ಕೆ ಸಂಬಂಧಿಸಿದಂತೆ ಜನಪದಗೀತೆ ಗೀತಸಂಪ್ರದಾಯಗಳು ಮತ್ತು ಕಾವ್ಯ ಸಂಪ್ರದಾಯಗಳೆಂದು ಒಡೆದುಕೊಳ್ಳುತ್ತದೆ.

ಕರ್ನಾಟಕಾದ್ಯಂತ ಹಲವಾರು ಗೀತಸಂಪ್ರದಾಯಗಳು ಪ್ರಚಲಿತವಿವೆ. ಕೋಲಾಟದ ಪದಗಳು, ಅಂಟಿಕೆಪಂಟಿಕೆ ಪದಗಳು, ಹಂತಿಯ ಹಾಡುಗಳು, ಹುತ್ತರಿ ಹಾಡುಗಳು, ಶಾಸ್ತ್ರದ ಹಾಡುಗಳು, ಬೀಸುವ ಪದಗಳು, ಕುಟ್ಟುವ ಪದಗಳು, ಮಾರ್ನವಮಿಯ ಪದಗಳು, ದೇವರ ಹಾಡುಗಳು, ಲಾಲಿಪದಗಳು ಇತ್ಯಾದಿಗಳನ್ನು ಉದಾಹರಿಸಬಹುದು. ಆಟ, ಸಂಗೀತ ಮತ್ತು ನೃತ್ಯಗಳ ಮಿಶ್ರಕಲೆಯಾಗಿರುವ ಕೋಲಾಟಕ್ಕೆ ಸಂಬಂಧಿಸಿದ ಗೀತೆಗಳೇ ಕೋಲಾಟದ ಪದಗಳು. ಕೋಲಾಟಕ್ಕೆ ಸಂಗೀತದ ಆವರಣವನ್ನು ಸೃಷ್ಟಿಸುವುದೇ ಇವುಗಳ ಉದ್ದೇಶ. ಮಲೆನಾಡಿನ ದೀಪ ನೀಡುವ ಸಂಪ್ರದಾಯಕ್ಕೆ ಸೇರಿದವು ಅಂಟಿಕೆಪಂಟಿಕೆ ಪದಗಳು. ಹಂತಿಯ ಹಾಡುಗಳು ಸುಗ್ಗಿಯ ಹಾಡುಗಳೆಂದೇ ಪ್ರಸಿದ್ಧವಾಗಿವೆ. ಕೊಡಗಿನ ಹುತ್ತರಿಹಬ್ಬದಲ್ಲಿ ಹಾಡುವ ಹಾಡುಗಳು ಹುತ್ತರಿ ಹಾಡುಗಳು; ಇವು ಅಲ್ಲಿನ ಸುಗ್ಗಿಯ ಹಾಡುಗಳಾಗಿವೆ. ಮದುವೆಯ ವಿವಿಧ ಶಾಸ್ತ್ರಗಳಲ್ಲಿ ಹಾಡಲಾಗುವ ಗೀತೆಗಳನ್ನೇ ಶಾಸ್ತ್ರದ ಹಾಡುಗಳೆಂದು ಕರೆಯುವುದು. ಬೀಸುವ ಮತ್ತು ಕುಟ್ಟುವ ಕ್ರಿಯೆಯೊಂದಿಗೆ ಹಾಡುವ ಗೀತೆಗಳು ಬೀಸುವ ಪದಗಳು ಮತ್ತು ಕುಟ್ಟುವ ಪದಗಳೆನಿಸಿವೆ. ಇವನ್ನು ಕ್ರಮವಾಗಿ ರಾಗಿಯ ಕಲ್ಲಿನ ಪದಗಳು ಮತ್ತು ಒನಕೆವಾಡುಗಳೆಂದು ಕರೆಯಲಾಗುತ್ತದೆ. ಮಾರ್ನವಮಿಯ ಪದಗಳನ್ನು ಹರಕೆಯ ಪದಗಳೆಂದು ಕರೆಯಲಾಗುತ್ತದೆ. ಬಯಲುಸೀಮೆಯ ಸಂಪ್ರದಾಯದ ಇವನ್ನು ನವರಾತ್ರಿಯ ಸಮಯದಲ್ಲಿ ಹಾಡಲಾಗುತ್ತದೆ. ದೇವರ ಹಾಡುಗಳು ಸ್ತುತಿಪದ್ಯಗಳೆಂದೇ ಖ್ಯಾತಿವೆತ್ತಿವೆ. ಗ್ರಾಮದೇವತೆ, ಗೃಹದೇವತೆ, ಕುಲದೇವತೆ, ಪ್ರಾದೇಶಿಕ ದೇವತೆ ಹಾಗೂ ಪುರಾಣದೇವತೆಗಳನ್ನು ಕುರಿತು ಮಾಡಿದ ಪ್ರಾರ್ಥನಾಗೀತೆಗಳೇ ಇವು. ಲಾಲಿಪದಗಳು ಮಕ್ಕಳನ್ನು ಕುರಿತ ಗೀತೆಗಳಾಗಿವೆ. ಹೀಗೆಯೇ ಕೊಂತಿಪದಗಳು, ತಿಂಗಳಮಾಮನ ಪದಗಳು, ದೋಣಿಯ ಹಾಡುಗಳು, ದುಂದುಭಿ ಹಾಡುಗಳು, ಗೌರಿಶೀಗೆಯ ಹಾಡುಗಳು, ಹೊಗಳುವ ಪದಗಳು, ರಂಗದ ಪದಗಳು, ಬಂಡಿಪದಗಳು, ಕಂಬಿಯ ಹಾಡುಗಳು ಮುಂತಾದವನ್ನು ಹೆಸರಿಸಬಹುದು. ಈ ಎಲ್ಲ ಹಾಡುಗಳಲ್ಲಿಯೂ ನಿರ್ದಿಷ್ಟ ಹಿನ್ನೆಲೆ, ಸಂದರ್ಭ ಹಾಗೂ ಸಂಪ್ರದಾಯಗಳಿರುತ್ತವೆ ಎಂಬುದನ್ನು ಕಾಣಬಹುದು. ಸಂದರ್ಭದ ಹಿನ್ನೆಲೆಯನ್ನು ಬಿಟ್ಟು, ವಸ್ತು ಅಥವಾ ಭಾವವನ್ನು ತೆಗೆದುಕೊಂಡರೆ, ಪ್ರಣಯ, ಭಕ್ತಿ, ದಾಂಪತ್ಯ, ವೀರ, ಕರುಣ, ಕೌಟುಂಬಿಕ, ತೌರು, ವಿಡಂಬನೆ, ಹಾಸ್ಯ, ವಾತ್ಸಲ್ಯ ಮುಂತಾಗಿ ಗೀತೆಗಳನ್ನು ವಿಭಾಗಿಸಿಕೊಳ್ಳಬೇಕಾಗುತ್ತದೆ.

ಕನ್ನಡನಾಡಿನಲ್ಲಿ ವೃತ್ತಿಗಾಯಕರ ಪರಂಪರೆಗೆ ಸೇರಿದ ಹಲವಾರು ಕಾವ್ಯ ಸಂಪ್ರದಾಯಗಳು ಕಂಡುಬರುತ್ತವೆ. ವೃತ್ತಿಗಾಯಕರಲ್ಲಿ ಧಾರ್ಮಿಕ ಮತ್ತು ಲೌಕಿಕ ವೃತ್ತಿ ಗಾಯಕರೆಂದು ಎರಡು ಬಗೆ. ಆರಾಧ್ಯದೈವವೊಂದರ ಸುತ್ತ ಹೆಣೆದುಕೊಂಡ ಸಂಪ್ರದಾಯ ಮೊದಲನೆಯದಾದರೆ, ಎರಡನೆಯದರಲ್ಲಿ ಇಂಥ ಯಾವುದೇ ಧಾರ್ಮಿಕ ವೃತ್ತವೊಂದು ಇರುವುದಿಲ್ಲ. ಕಂಸಾಳೆಯವರು, ನೀಲಗಾರರು, ಚೌಡಿಕೆಯವರು, ಗೊಂದಲಿಗರು, ಜುಂಜಪ್ಪನವರು, ಗೊರವರು, ಜೋಗಿಗಳು ಮೊದಲನೆಯ ಗುಂಪಿಗೆ ಬಂದರೆ, ಕರ ಪಾಲದವರು, ಹೆಳವರು , ತಂಬೂರಿಯವರು, ಜೋಳಿಗೇರು ಎರಡನೆಯ ಸಂಪ್ರದಾಯಕ್ಕೆ ಬರುತ್ತಾರೆ. ಇಲ್ಲಿನ ಬಹುತೇಕ ಸಂಪ್ರದಾಯದ ಕಾವ್ಯಗಳು ಹಾಡು ಮತ್ತು ವಚನಮಿಶ್ರಿತವಾಗಿ ಹರಿಯುವಂಥವು. ಎಲ್ಲದರಲ್ಲಿಯೂ ವಾದ್ಯವೊಂದು ತಪ್ಪದೆ ಇರುತ್ತದೆ.

ಕಂಸಾಳೆ ಮತ್ತು ನೀಲಗಾರರವು ಮೈಸೂರಿನ ಕಡೆ ಪ್ರಚಲಿತವಿರುವ ಎರಡು ಅವಳಿ ಸಂಪ್ರದಾಯಗಳಾಗಿದ್ದು, ಕನ್ನಡಕ್ಕೆ ಎರಡು ಜನಪದ ಮಹಾಕಾವ್ಯಗಳನ್ನು ಕೊಟ್ಟ ಕೀರ್ತಿಗೆ ಪಾತ್ರವಾಗಿವೆ. ಮೊದಲನೆಯದರಲ್ಲಿ ಮಾದೇಶ್ವರನೂ ಎರಡನೆಯದರಲ್ಲಿ ಮಂಟೇ ಸ್ವಾಮಿಯೂ ಆರಾಧ್ಯದೇವತೆಗಳಾಗಿದ್ದು, ಒಂದು ಕಾಲದಲ್ಲಿ ಅವರು ಐತಿಹಾಸಿಕ ವ್ಯಕ್ತಿಗಳಾಗಿದ್ದಂತೆ ಕಂಡುಬರುತ್ತದೆ. ಚೌಡಿಕೆಯವರು ಮತ್ತು ಗೊಂದಲಿಗರು ಒಂದೇ ಮೂಲದ ಭಿನ್ನ ಕವಲುಗಳಂತೆ ತೋರುತ್ತಾರೆ. ಇಬ್ಬರಲ್ಲೂ ಚೌಡಿಕೆವಾದ್ಯ ಕಾಣಿಸಿಕೊಳ್ಳುವುದು, ಜಮದಗ್ನಿ–ರೇಣುಕೆಯರ ಕಥೆ ಸಾಮಾನ್ಯವಾಗಿ ಬರುವುದು ಇದಕ್ಕೆ ಕಾರಣವಾಗಿದೆ. ಈ ಎರಡು ಸಂಪ್ರದಾಯಗಳೂ ಉತ್ತರ ಕರ್ನಾಟಕದಲ್ಲಿ ಮೊದಲು ಪ್ರಚುರವಿದ್ದು, ಆಮೇಲೆ ದಕ್ಷಿಣ ಕರ್ನಾಟಕದ ಕಡೆಗೆ ಬಂದಿರಬೇಕೆಂದು ಊಹಿಸಬಹುದಾಗಿದೆ. ಜುಂಜಪ್ಪನ ಕಥೆ ಸಮಗ್ರವಾಗಿ ತ್ರಿಪದಿಯಲ್ಲಿ ಸಾಗುವುದು ಒಂದು ವೈಶಿಷ್ಟ್ಯ. ಗಣೆಯ ನಾದ ಇದನ್ನು ಮತ್ತಷ್ಟು ಸುಂದರವನ್ನಾಗಿ ಮಾಡುತ್ತದೆ. ಜನಪದ ಕಥೆಯನ್ನು ಕಥೆ ಮಾಡುವ ತಮ್ಮ ಸಂಪ್ರದಾಯಕ್ಕೆ ಅಳವಡಿಸಿಕೊಳ್ಳುವ ರೀತಿ ಜೋಳಿಗೇರು, ಗೊಂದಲಿಗರು ಮತ್ತು ಕರಪಾಲದವರಲ್ಲಿ ಏಕಪ್ರಕಾರವಾಗಿ ಕಾಣಿಸಿಕೊಳ್ಳುವುದು ಒಂದು ಗಮನಾರ್ಹ ಸಂಗತಿ. ತಂಬೂರಿಯ ಶ್ರುತಿಯ ಹಿನ್ನೆಲೆಯಲ್ಲಿ ಕಥೆಯನ್ನು ಹಾಡುವುದರಿಂದ ತಂಬೂರಿಯವರೆಂದು ಹೆಸರಿದೆ. ಕಿನ್ನರಿಯನ್ನು ನುಡಿಸಿ ಜೋಗಿಗಳು, ಗಂಟೆಯನ್ನು ಬಾರಿಸಿ ಹೆಳವರು ಹಾಡುವ ಕಾವ್ಯಗಳು ಅಷ್ಟೇ ಸ್ವಾರಸ್ಯವಾಗಿವೆ. ಈ ಎಲ್ಲ ಸಂಪ್ರದಾಯಗಳ ಸಾಹಿತ್ಯವೂ ಸಮಗ್ರವಾಗಿ ಸಂಗ್ರಹಗೊಂಡಾಗ ಕನ್ನಡ ಜನಪದ ಸಾಹಿತ್ಯದ ವಿಸ್ತಾರ, ವೈಭವ, ಸಮೃದ್ಧಿಗಳು ಗೋಚಾರವಾಗುತ್ತವೆ.

ಜನಪದ ಸಾಹಿತ್ಯದಲ್ಲಿ ಹೆಚ್ಚು ವ್ಯಾಪಕವಾಗಿ ಕಾಣಿಸಿಕೊಳ್ಳುವ ಗಾದೆ ಜನಪದದ ಜೀವನಾಡಿಯಾಗಿದೆ. ಜನಸಾಮಾನ್ಯರು ಜೀವನದ ನಾನಾ ಭಾಗಗಳಲ್ಲಿ ತಮಗಿರುವ ಜ್ಞಾನಾನುಭವದ ಜೊತೆಗೆ, ಅದನ್ನು ತಮ್ಮ ವಿವೇಕದ ಒರೆಗಲ್ಲಿಗೆ ಹಚ್ಚಿನೋಡುವ ತೀಕ್ಷ್ಣತೆಯ ಅನುಭವ ನಮಗಿಲ್ಲಿ ಆಗುತ್ತದೆ. ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯ, ಅಧರ್ಮ, ವಂಚನೆ, ಮೋಸ, ಡಾಂಭಿಕತೆ, ಕೀಳುಮೇಲುಗಳು ಮುಂತಾದವನ್ನು ಕಂಡು ಜನಪದ ಕಣ್ಮುಚ್ಚಿ ಕುಳಿತಿರಲಿಲ್ಲ. ಅದನ್ನು ಅಷ್ಟೇ ಧೈರ್ಯವಾಗಿ ಎದುರಿಸಿದ್ದರು; ಪ್ರಬಲವಾಗಿ ವಿರೋಧಿಸಿದ್ದರು. ಸಾಧ್ಯವಿಲ್ಲವೆಂದಾಗ ಮಾರ್ಮಿಕವಾದ ಮಾತಿನ ಮೂಲಕ ಪ್ರತಿಭಟಿಸಿದ್ದರು. ಈ ತರಹದ ಗಾದೆಗಳಲ್ಲಿ ಕೆಚ್ಚಿದೆಯಾದರೂ ಕಿಚ್ಚಿಲ್ಲ. ಬೆಳಕಿದೆಯಾದರೂ ಬೆಂಕಿಯಿಲ್ಲ. ಈ ಪ್ರತಿಯೊಂದು ಮಾತಿನ ಹಿಂದೆಯೂ ಜೀವವೊಂದು ಅನುಭವಿಸಿದ ಅಪಾರ ದುಃಖವಿದೆ. ಹೃದಯವನ್ನು ತಿದ್ದುವ ಕೈಂಕರ್ಯವಿದೆ. ಇಂಥ ಗಾದೆಗಳಲ್ಲಿ ಸಾಮಾಜಿಕ ಪ್ರಜ್ಞೆ ವ್ಯಕ್ತವಾಗಿದೆ. ಸಮಾಜದ ಕುಂದುಕೊರತೆಗಳನ್ನು ಪರಿಚಯಿಸುವ ಈ ಗಾದೆಗಳಲ್ಲಿ ನೀತಿ ಇದೆ, ಸಾಹಿತ್ಯವಿದೆ.

ಮಾನವಕುಲದ ಹಲವಾರು ಸಮಸ್ಯೆಗೆ ದ್ಯೋತಕಗಳಾಗಿ ಗಾದೆಗಳು ಕಾಣಿಸಿಕೊಳ್ಳುತ್ತವೆ. ಸರಳವೂ ಸಾಕ್ಷೀಭೂತವೂ ಆದ ಹೋಲಿಕೆಗಳಿಂದ ಚಿತ್ರಿಸಿರುವುದು ಇವುಗಳಲ್ಲಿನ ಸಾಹಿತ್ಯಿಕ ಮೌಲ್ಯವನ್ನು ದೃಢಪಡಿಸುತ್ತದೆ. ಗಾದೆಗಳ ಮಾಸದ ಹೆಸರಿಗೆ ಅವುಗಳಲ್ಲಿರುವ ಸರಳಸಾಮಾನ್ಯ ಕೌಟುಂಬಿಕ ರೂಪಕಗಳೂ ಕಾರಣವಾಗಿವೆ. ಗಾದೆಗಳ ಸಾಹಿತ್ಯಿಕ ಬೆಲೆ ಇವುಗಳಿಂದ ಹೆಚ್ಚಿದೆ ಎನ್ನಬೇಕು. ಪ್ರತಿಯೊಂದು ಗಾದೆಯೂ ಒಂದಲ್ಲ ಒಂದು ರೀತಿಯಿಂದ ಇಂಥ ಸಂಸಾರ ಶಿಲ್ಪವಾಗಿದೆ. ಗಾದೆಯ ಸೃಷ್ಟಿಕರ್ತನಿಗೆ ಸಣ್ಣ ಸಣ್ಣ ಪ್ರಕ್ರಿಯೆಗಳೂ ಹೊರತಾಗುವುದಿಲ್ಲ. ಪ್ರಾಣಿಪ್ರಪಂಚದ ಕಿರುಘಟನೆಯೊಂದನ್ನು ಮನುಷ್ಯಪ್ರಪಂಚಕ್ಕೆ ಸಾಂಕೇತಿಕವಾಗಿ ಬಳಸಿಕೊಂಡಿರುವುದನ್ನು 'ಸಗಣೀಲಿ ಸಾವಿರ ಹುಳ ಇದ್ದರೂ ಸಂಜೆ ಹೊತ್ತಿಗೆ ಮರಣ' ಎಂಬುದರಲ್ಲಿ ನೋಡಬಹುದು.

ನಿಲುಕದ ವಸ್ತುವಿಗೆ ಕೈಚಾಚದೆ, ಸುತ್ತುಮುತ್ತಲ ಸಾಮಗ್ರಿಯನ್ನೇ ದೃಷ್ಟಾಂತ ರೂಪಕಗಳನ್ನಾಗಿ ಅಳವಡಿಸಿಕೊಂಡಿರುವುದು ಅನುಭವದ ಪ್ರಾಮಾಣಿಕತೆಗೆ, ಕಾವ್ಯಕಲೆಯ ಸೂಕ್ಷ್ಮದೃಷ್ಟಿಗೆ ನಿಚ್ಚಳವಾದ ಸಾಕ್ಷಿಯಾಗಿದೆ. ಈ ಒಂದೊಂದು ಗಾದೆಯಲ್ಲೂ ವಾಸ್ತವತೆ ಇದೆ, ಮಣ್ಣಿನ ವಾಸನೆ ಘಂ ಎನ್ನುತ್ತದೆ. ಸಾಹಿತ್ಯದ ಮೌಲ್ಯವಿವೇಚನೆಗೆ ರೂಪಾಕಾದಿ ಪರಿಕರಗಳು ಮೂಲಮಾನವಾಗುವುದಾದರೆ, ಇಂಥ ಹಲವಾರು ಗಾದೆಗಳು ಉತ್ತಮ ಸಾಹಿತ್ಯಿಕ ಲಕ್ಷಣಗಳಿಂದ ಕೂಡಿರುವುದನ್ನು ಕಾಣುತ್ತೇವೆ.

ವಿಡಂಬನೆ ಮತ್ತು ಹಾಸ್ಯ ಗಾದೆಯ ಮತ್ತೆರಡು ವಿಷಯಗಳು. ಇವು ಹಾಸುಹೊಕ್ಕಾಗಿ ಸೇರಿರಬಹುದು ಅಥವಾ ಪ್ರತ್ಯೇಕವಾಗಿ ವ್ಯಕ್ತವಾಗಬಹುದು. ಭಾಷೆಯ ಮೊನಚು ಮತ್ತು ಭಾವದ ಬನಿ ಇವುಗಳಲ್ಲಿ ಗೋಚರಿಸುವ ಎರಡು ಅಂಶಗಳು ; ದುಡುವಂತೆ ಧೂಪ ಹಾಕಿದ್ರೆ, ಗುಡಿ ಕಲ್ಲೆಲ್ಲ ದಡಾರ್ ಅಂದೊ. ಚಿತ್ರಸೃಷ್ಟಿಯನ್ನು ಒಂದು ಕಡೆ ಕಂಡರೆ, ಭಾವ ಭಾಷೆಗಳ ಮಿಲನವನ್ನು ಮತ್ತೊಂದು ಕಡೆ ಕಾಣುತ್ತೇವೆ. ಗಾದೆಯ ಆಕರ್ಷಕ ಮಾಟಕ್ಕೆ ಸರಳತೆ ಸೆರೆ ಹಿಡಿಯಬಲ್ಲ ಗುಣವಾದಂತೆ, ಅದರ ಹಾಸ್ಯಪ್ರವೃತ್ತಿ ನಕ್ಕು ನಗಿಸಬಲ್ಲ ವೈಶಿಷ್ಟ್ಯವಾಗುತ್ತದೆ. ಆದರೆ ಹಾಸ್ಯ ಕೊನೆಗೆ ಹಾಸ್ಯವಾಗಿಯೇ ಉಳಿಯದೆ, ಗಂಭೀರ ಜ್ಞಾನದ ಪಾದರಸವಾಗಿ ಪರಿಣಮಿಸುತ್ತದೆ.

ಗಾದೆಯ ಭಾಷೆ ದೈನಂದಿನ ವ್ಯವಹಾರಗಳಲ್ಲಿ ಉಪಯೋಗಿಸುವ ಇತರ ಸಾಧಾರಣ ಮಾತಿನಂತಿರದೆ, ಅದರ ಸರ್ವಲಕ್ಷಣಗಳನ್ನೂ ಸ್ವೀಕರಿಸಿ ಅದಕ್ಕಿಂತ ಎತ್ತರದ ಸ್ಥಾನದಲ್ಲಿ ನಿಂತ ಸಾಮಾನ್ಯನ ಕಾವ್ಯಭಾಷೆಯಾಗುತ್ತದೆ. ನಾಗರಿಕ ಭಾಷಾ ಜಗತ್ತಿನಲ್ಲಿ ಕಾಣದ, ಬಳಸದ ಎಷ್ಟೋ ಅಪೂರ್ವ ಪದಗಳು ಇನ್ನೂ ಜೀವಂತವಿವೆ ಎಂಬುದಕ್ಕೆ ಗಾದೆಗಳು ಸಾಕ್ಷಿಯಾಗಿವೆ. ಗಾದೆಯ ಭಾಷೆಯ ಎರಡು ಪ್ರಧಾನ ಗುಣಗಳು: ಧ್ವನಿಯ ಮೂಲಕ ಶಕ್ತಿಯನ್ನು ಹೊರಡಿಸುವುದು ; ಸಂಭಾಷಣೆಯ ಮೂಲಕ ವೈವಿಧ್ಯವನ್ನು ಸಾಧಿಸುವುದು. ಪೌರಾಣಿಕ ಪ್ರತಿಮೆಗಳನ್ನು ಕೊಡುವುದರ ಮುಖಾಂತರ ಗಾದೆಯ ಭಾಷಾಶೈಲಿಗೆ ನಿತಾಂತ ಶಕ್ತಿಯೊಂದು ಲಭಿಸುತ್ತದೆ ಎನ್ನುವುದಕ್ಕೆ ಹೊಟ್ಟೆಕಿಚ್ಚಿಗೆ ಎದೆ ಹಿಡಕೊಂಡ್ಲು, ಗಾಂಧಾರಿ ಗರ್ಭ ಗುದ್ದಿದ್ದಂಗೆ–ಎಂಬ ಗಾದೆ ಉತ್ತಮ ನಿದರ್ಶನವಾಗುತ್ತದೆ.

ಯಾವುದೇ ಉತ್ತಮ ಕಾವ್ಯದ ಹಿರಿಮೆಗೆ ರೂಪಕ ಕಾರಣವಾಗುತ್ತದೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡಿರುವ ಒಗಟು ಕೂಡ ಕಾವ್ಯಕಲೆಗಳಲ್ಲಿ ಒಂದಾಗಿದೆ. ಅದು ಕೇವಲ ಚಮತ್ಕಾರಯುತವಾದ ವಾಗಾಡಂಬರವಾಗಿರದೆ, ಹೇಳಬೇಕಾಗಿರುವ ವಸ್ತುವೊಂದನ್ನು ಹೋಲಿಕೆಯ ಮೂಲಕ ಅರ್ಥಪೂರ್ಣವಾಗಿ ಧ್ವನಿಸುವಂಥದ್ದಾಗಿರುತ್ತದೆ. ಆದ್ದರಿಂದ ರೂಪಕವನ್ನಷ್ಟೇ ಪರಿಭಾವಿಸಿದರೂ ರಸಾನುಭವವಾಗದಿರದು. ಇನ್ನು ಅದರ ಅಂತರಾರ್ಥ ತೆರೆದ ಮೇಲೆ ಅನಾಮಧೇಯವಾದ ಜನಪದ ಬೆಡಗಿನ ಕವಿಯ ಕೌಶಲಕ್ಕೆ ಬೆರಗಾಗುತ್ತೇವೆ.

ಅಕ್ಕ ತೌರಿಗೆ ಹೋಗುವಾಗ ಸರ್ರನೆ ಹೋಗ್ತಾಳೆ ; ಗಂಡನ ಮನೆಗೆ ಬರುವಾಗ ಹೆಜ್ಜೆಹೆಜ್ಜೆಗೂ ಕಣ್ಣೀರು ಸುರಿಸುತ್ತಾ ನಿಧಾನವಾಗಿ ಬರ್‍ತಾಳೆ.

ಇದೊಂದು ಹೃದಯಂಗಮವಾದ ಒಗಟು. ಜನಪದ ಸಾಹಿತ್ಯವೆಲ್ಲ ಸಂಸಾರ ಸಂಹಿತೆಯೆಂಬ ಮಾತಿಗೆ ಇದೊಂದು ಉದಾಹರಣೆ. ತೌರಿಗೂ ಹೆಣ್ಣಿಗೂ ಇರುವ ಅವಿಭಾಜ್ಯ ಸಂಬಂಧವನ್ನು ಜನಪದ ಕವಿ ಎಂದಿಗೂ ಮರೆಯಲಾರ. ಹುಟ್ಟಿದ ತೌರಿಗೂ ಕೊಟ್ಟ ಗಂಡನ ಮನೆಗೂ ಹುಲ್ಲು ತಾರದೆ ಹೂವು ತರುವಂತೆ ಬಾಳಬೇಕಾಗುತ್ತದೆ ಹೆಣ್ಣು. ತೌರನ್ನು ಅಗಲಿ ಗಂಡನ ಮನೆಯಲ್ಲಿರಬೇಕಾದ ಹೆಣ್ಣಿಗೆ ತೌರು ಒಂದು ಅಚ್ಚಳಿಯದ ನೆನಪು. ಹೀಗೆ ಬಹಳ ಕಾಲ ಅಗಲಿಕೆಯಿಂದ ಪರಿತಪಿಸಿದ್ದ ಹೆಣ್ಣಿಗೆ ತೌರಿಗೆ ಹೋಗುವ ಅವಕಾಶ ಒದಗಿಬಂದಾಗ ಅವಳಿಗಾಗುವ ಸಂತೋಷ ಆತುರಕಾತರಗಳು ಅಷ್ಟಿಷ್ಟಲ್ಲ. ಆದರೆ ತೌರಿನಲ್ಲಿ ಉಳಿಯಲು ಸಾಧ್ಯವೇ? ಮತ್ತೆ ಗಂಡನ ಮನೆಗೆ ಬರುವಾಗ ಮೈ ಭಾರ ಮನ ಭಾರವಾಗಿ ಮೊದಲಿನ ಆತುರಕಾತರಗಳು ಕಾಣಬರುವುದಿಲ್ಲ. ಹೆಣ್ಣಿನ ಬಾಳನ್ನು ಸಹಾನುಭೂತಿಯಿಂದ ನೋಡಬಲ್ಲ ಯಾರಿಗೂ ಇದು ವೇದ್ಯವಾದ ಸಂಗತಿ. ಈ ವಿಷಯ ಮೇಲಿನ ಒಗಟಿನಲ್ಲಿ ರೂಪಕರೂಪವನ್ನು ತಾಳಿದೆ. ಆದರೆ ಒಗಟು ಇಲ್ಲಿಗೆ ನಿಲ್ಲುವುದಿಲ್ಲ. ಅದು ಅರ್ಥಾಪೇಕ್ಷಿಯಾದುದು. ಈ ಒಗಟಿನ ನಿಜವಾದ ಅರ್ಥ ಬಾವಿಯಿಂದ ನೀರು ಸೇದುವ ಕ್ರಿಯೆ. ಖಾಲಿ ಬಿಂದಿಗೆಯನ್ನು ಬಾವಿಗೆ ಬಿಟ್ಟಾಗ ಅನಿವಾರ್ಯವಾಗಿಯೇ ವೇಗವಾಗಿ ಹೋಗುತ್ತದೆ. ಆದರೆ ನೀರು ತುಂಬಿಕೊಂಡ ಬಿಂದಿಗೆ ಸೇದಿದ ಹಾಗೆಲ್ಲ ನೀರನ್ನು ಚೆಲ್ಲುತ್ತ ನಿಧಾನವಾಗಿ ಬರುತ್ತದೆ. ಖಾಲಿ ಬಿಂದಿಗೆಗೆ ತೌರಿಗೆ ಹೋಗುವ ಹೆಣ್ಣಿನ ಚಿತ್ರವೂ ನೀರು ತುಂಬಿಕೊಂಡು ಮೇಲೇರುತ್ತ ಬಂದ ಬಿಂದಿಗೆಗೆ ತೌರಿನ ಭಾವನೆಗಳನ್ನು ಹೊತ್ತ ಭಾರಹೃದಯದ ಹೆಣ್ಣಿನ ಚಿತ್ರವೂ ಹೋಲಿಕೆಯಾಗಿದೆ. ತೌರಿಗೆ ಹೋಗುವಾಗಿನ ಶೂನ್ಯಹೃದಯದ ಹೆಣ್ಣು ಬರುವಾಗ ಚೈತನ್ಯವನ್ನು ತುಂಬಿಕೊಂಡು ಬಂದಳು ಎಂಬುದನ್ನೂ ಇದು ಧ್ವನಿಸುತ್ತದೆ. ಜನಪದ ಪ್ರತಿಭೆಗೆ ಇದೊಂದು ಜ್ವಲಂತ ನಿದರ್ಶನ. ಹೋಲಿಕೆಗಾಗಿ ಈ ಕವಿ ವಸ್ತುವನ್ನು ಹುಡುಕಬೇಕಾಗಿಲ್ಲ. ಪರಿಚಿತವಿರುವ ವಸ್ತುವನ್ನು ಎಷ್ಟು ಸಮರ್ಪಕವಾಗಿ ಹಾಗೂ ಸಮರ್ಥವಾಗಿ ಬಳಸಿಕೊಳ್ಳಬಲ್ಲನೆಂಬುದಕ್ಕೂ ಇದು ಸಾಕ್ಷಿಯಾಗಿದೆ. ಹೀಗೆ ಇಲ್ಲಿ ರೂಪಕ ಒಗಟಿನ ಕಲಾಮಾಧ್ಯಮವಾಗಿದೆ. ರೂಪವೇ ಇಲ್ಲಿನ ಭಾಷೆ, ಧ್ವನಿ ಎಲ್ಲವೂ. ಒಗಟಿಗೆ ಹೆಚ್ಚು ಶಕ್ತಿಯನ್ನೂ ಆಕರ್ಷಣೆಯನ್ನೂ ತಂದಿರುವುದೆಂದರೆ ಈ ರೂಪಕವೇ ಆಗಿದೆ.

ಸಮೂಹವೊಂದು ಎಷ್ಟೇ ಪುರಾತನವಾದುದಾಗಿರಲಿ ಮತ್ತು ಸರಳವಾದುದಾಗಿರಲಿ, ಅದು ಕೆಲಮಟ್ಟಿನ ಜನಪದ ಸಾಹಿತ್ಯವನ್ನು ಹೊಂದೇ ಇರುತ್ತದೆ. ಈ ದೃಷ್ಟಿಯಿಂದ ಒಂದೇ ವಿಧದ ಕಥೆ, ಗೀತೆ, ಗಾದೆ, ಒಗಟುಗಳು ಎಲ್ಲೆಡೆಯಲ್ಲಿಯೂ ದೊರೆಯುತ್ತಿದ್ದು, ಜನಪದ ಸಾಹಿತ್ಯ ಅನಕ್ಷರಸ್ಥ ಮತ್ತು ಅಕ್ಷರಸ್ಥ ಸಮಾಜಗಳ ನಡುವೆ ಸೇತುಗಟ್ಟುತ್ತದೆಂದು ಹೇಳಬಹುದಾಗಿದೆ. (ಆರ್.ಜಿ)

**ಜನಪ್ರಗತಿ :** ಕನ್ನಡದ ಒಂದು ವಾರಪತ್ರಿಕೆ. 1951ರ ಜುಲೈ 15ರಂದು ಬೆಂಗಳೂರಿನಲ್ಲಿ ಆರಂಭವಾಯಿತು. ಆ ಹೊತ್ತಿಗೆ ಮೈಸಿಂಡಿಯ ಇಂಗ್ಲಿಷ್ ವಾರಪತ್ರಿಕೆಯನ್ನು 12 ವರ್ಷಗಳಿಂದಲೂ ನಡೆಸಿಕೊಂಡು ಬಂದಿದ್ದ. ಡಿ. ಎನ್. ಹೊಸಾಳಿ ಇದನ್ನು ಆರಂಭಿಸಿದ್ದರು.




ಪ್ರಾರಂಭದಲ್ಲಿ ಎನ್. ಎಸ್. ಸೀತಾರಾಮಶಾಸ್ತ್ರಿ ಇದರ ಸಂಪಾದಕರು. ಕೆಲವು ವರ್ಷಗಳ ಬಳಿಕ ಹೊಸಾಳಿ ಅವರೇ ಸಂಪಾದಕರಾದರು. ಪತ್ರಿಕೆಯ ಧ್ಯೇಯಧೋರಣೆಗಳ ಬಗ್ಗೆ ಪ್ರಥಮ ಸಂಚಿಕೆಯಲ್ಲಿ ಹೀಗೆ ಬರೆಯಲಾಗಿದೆ: ಜನಪ್ರಗತಿಯು ಯಾವ ಪೂರ್ವ ಸಿದ್ಧಾಂತಕ್ಕೂ ಕಟ್ಟುಬೀಳುವುದಿಲ್ಲ. ಪ್ರಗತಿದಾಯಕವಾದ ಎಲ್ಲ ಉತ್ಕೃಷ್ಟ ವಿಚಾರಗಳಲ್ಲೂ ಕಾಲಧರ್ಮದ ನವ್ಯತೆಯನ್ನು ಅರಸುತ್ತದೆ.

ಜನಪ್ರಗತಿಯನ್ನು ಬಿ.ಎನ್. ಗುಪ್ತ ಅವರು 1959ರ ಮಾರ್ಚ್ 1ರಂದು ತೆಗೆದುಕೊಂಡು ಅವರೇ ಅದರ ಸಂಪಾದಕರು ಪ್ರಕಾಶಕರೂ ಆದರು. ಸ್ವಲ್ಪ ಕಾಲ ಹೊಸಾಳಿ ಮುದ್ರಣಾಲಯದಲ್ಲೇ ಪತ್ರಿಕೆ ಅಚ್ಚಾಗುತ್ತಿತ್ತು. ಅನಂತರ ಗುಪ್ತ ಅವರು ಪ್ರಗತಿ ಪ್ರಿಂಟರ್ಸ್ ಎಂಬ ಮುದ್ರಣಾಲಯವನ್ನು ಸ್ಥಾಪಿಸಿದರು. ಗುಪ್ತರ ಕೈಗೆ ಜನಪ್ರಗತಿ ಬಂದಮೇಲೆ ಅದು ವಿಶಿಷ್ಟ ರೀತಿಯಲ್ಲಿ ಏಳಿಗೆ ಕಂಡಿತು. ನಾಲ್ಕೇ ವರ್ಷಗಳಲ್ಲಿ ಪ್ರಸಾರ 1,400 ರಿಂದ 21,000 ಕ್ಕೆ ಏರಿತು. ಉನ್ನತ ಮಟ್ಟದ ಲೇಖನಗಳು, ನವೀನ ಆಕರ್ಷಕ ಶೀರ್ಷಿಕೆಗಳ ಪ್ರಕಟಣೆ, ದಕ್ಷಆಡಳಿತ ನಿರ್ವಹಣೆ ಪ್ರಸಾರ ವಿಸ್ತಾರ–ಈ ಅಂಶಗಳಿಗೂ ವಿಶೇಷ ಗಮನ ಕೊಡುವುದೇ ಗುಪ್ತರ ಯಶಸ್ಸಿನ ಗುಟ್ಟು. 'ನನ್ನ ಪ್ರಜಾಮತ ಜೀವನ ಮುಗಿದುಹೋಗಿ ರಾಜಕೀಯದಿಂದ ದೂರವಾಗಿ ಬಹಳ ಕಾಲವಾಯಿತು. ಹಿಂದಿನ ವಾಂಛೆಯಿಂದ ಮತ್ತೆ ಪತ್ರಿಕೋದ್ಯಮ ಆರಂಭಿಸಿದ್ದೇನೆ. ಮಹಾಜನರು ಪ್ರೋತ್ಸಾಹಿಸಬೇಕು.' ಎಂದು ಗುಪ್ತರು ಸಂಪಾದಕೀಯದಲ್ಲಿ ಬರೆದಿದ್ದರು. ಮಹಾಜನರ ಪ್ರೋತ್ಸಾಹ ಲಭಿಸಿತು.

ಬಿ.ಎನ್. ಗುಪ್ತರು ಜನಪ್ರಗತಿಯಲ್ಲಿ ಬರೆಯತೊಡಗಿದ ಅಯ್ಯಪ್ಪನ ಚಾವಡಿ ಅಂಕಣ ವಿಶೇಷವಾಗಿ ಜನಪ್ರಿಯವಾಯಿತು. ಬ್ರಿಟಿಷರ ಕಾಲದ ರಾಜಕೀಯ ಪರಿಸ್ಥಿತಿ ಆಗ ಇರಲಿಲ್ಲ. ಜನಸಾಮಾನ್ಯನ ಭಾಷೆಯಲ್ಲೇ, ತಿಳಿಯಾದ ಹಾಸ್ಯದಿಂದ ಕೂಡಿದ ಮಾರ್ಮಿಕ ಮಾತುಗಳಿಂದ ಮೂಡಿಸಿದ ಚುಚ್ಚು ವಿಶ್ಲೇಷಣೆ ಅದರ ಮುಖ್ಯ ಗುಣ. ರಾಜಕೀಯದ ಒಳಹೊರಗನ್ನು ಅರಿತ ಅಯ್ಯಪ್ಪನವರು ಗಮಾರನಾದ, ಆದರೆ ರಾಜಕೀಯ ಪ್ರಜ್ಞೆಯುಳ್ಳ ಬೋರನ ಜೊತೆ ಸಂವಾದ ನಡೆಸುವ ವೈಖರಿಯೇ ಅಂಕಣದ ಸ್ವಾರಸ್ಯಕ್ಕೆ ಕಾರಣ. ರಾಷ್ಟ್ರದ ವಿವಿಧ ವಿದ್ಯಮಾನಗಳ ಹಿಂದಿನ ವ್ಯಕ್ತಿಶಕ್ತಿಗಳ ಪ್ರವರ್ತನೆಯ ಹಿನ್ನಲೆ ಹಾಗೂ ವಿಶ್ಲೇಷಣೆಗಳನ್ನೊದಗಿಸುವ ಲೇಖನಮಾಲೆಯಾದ ಭಾರತ ದರ್ಶನ ಜನಪ್ರಗತಿಯ ಇನ್ನೊಂದು ಸ್ಥಿರ ಶೀರ್ಷಿಕೆ. ಭಾರತ ರಾಜಕೀಯದ ಹಾಗೆಯೇ ವಿಶ್ವದ ವಾರ್ತೆ ಹಾಗೂ ವಿದ್ಯಮಾನಗಳ ವಿಶ್ಲೇಷಣೆ ಲೋಕಸಪ್ತಾಹದಲ್ಲಿ ಇರುತ್ತಿತ್ತು. ಈ ಮೂರೂ ಸ್ಥಿರ ಶೀರ್ಷಿಕೆಗಳು ಕಥೆ, ಕವನ ಮುಂತಾದ ಸಾಮಗ್ರಿಯ ಜೊತೆಗೂಡಿ ವಾಚಕರ ಗಮನ ಸೆಳೆದವು.

ಜನಮನದಲ್ಲಿ ಎಲ್ಲ ವಿಷಯಗಳ ಬಗ್ಗೆ ಒಂದು ಅಭಿಪ್ರಾಯ ಅಸ್ಪಷ್ಟವಾಗಿ ಮೂಡಿರುತ್ತದೆ. ಪತ್ರಿಕೆಯ ಬರೆಹ ಆ ಜನಾಭಿಪ್ರಾಯಕ್ಕೆ ಮಾತುಕೊಡುವಂತಿರಬೇಕು ಎಂಬ ಧ್ಯೇಯ ಜನಪ್ರಗತಿಯ ಸಂಪಾದಕರದಾಗಿತ್ತು. ಜನಪ್ರಗತಿ ವಾಚಕರ ಅಭಿರುಚಿಯನ್ನು ಕುದುರಿಸಿತು. ಗುಪ್ತರ ಜನಪ್ರಗತಿಯ ಪ್ರಸಾರದ ಬಹುಭಾಗ ಗ್ರಾಮೀಣ ಪ್ರದೇಶಗಳಲ್ಲಿದ್ದುದು ಅರ್ಥಪೂರ್ಣ. ಗುಪ್ತರ ಸಂಪಾದಕತ್ವದ ವೈಶಿಷ್ಟ್ಯವೇ ಎನ್ನುವಂತೆ ಅವರ ಬರೆಹಗಳು ಪ್ರಜಾಪ್ರಭುತ್ವದಲ್ಲಿ ಅಧಿಕಾರೂಢರಾದವರಿಗೂ ಚುರುಕು ಮುಟ್ಟಿಸುತ್ತಿತ್ತು.

ವೃದ್ಧಾಪ್ಯ ಆವರಿಸಿ ಆರೋಗ್ಯ ಕೆಟ್ಟಿದ್ದರಿಂದ ಗುಪ್ತರು ವ್ಯಾಪಾರ ವ್ಯವಹಾರಗಳನ್ನೂ ಪತ್ರಿಕೋದ್ಯಮವನ್ನೂ ಬಿಟ್ಟುಕೊಟ್ಟರು. ಪ್ರಥಮ ಬಾರಿಗೆ ಮೂರು ತಿಂಗಳು ಪತ್ರಿಕೆ ನಡೆಸಲಾಗದೆ ಹೋದ ಪ್ರಸಂಗ ಬಂದಾಗ 1971ರ ಜನವರಿ 1ರಂದು ಕಲ್ಲೆ ಎನ್. ಶಿವೋತ್ತಮರಾವ್ ಅವರಿಗೆ ಅದನ್ನು ವಹಿಸಿಕೊಟ್ಟರು.

ಕಲ್ಲೆಯವರ ಸಂಪಾದಕತ್ವದಲ್ಲಿ ಜನಪ್ರಗತಿಯ ಓಘಕ್ಕೆ ಒಂದು ತಿರುವು ಬಂತು. ಜೀವನದ ನಾನಾ ಕ್ಷೇತ್ರಗಳಲ್ಲಿ ಪಟ್ಟಭದ್ರವಾಗಿರುವ, ಏಕಸ್ವಾಮ್ಯ ಸಾಧಿಸಿಕೊಂಡಿರುವ ಶಕ್ತಿ–ವ್ಯಕ್ತಿಗಳನ್ನು ಚುಚ್ಚು ಲೇಖನಿಗೆ, ದಿಟ್ಟೆದೆಯ ಮೊನಚು ಮಾತಿಗೆ ತುತ್ತಾಗಿಸುವುದು ಗುಪ್ತರ ಅನಂತರ ಕಾಲದ ಜನಪ್ರಗತಿಯ ವೈಶಿಷ್ಟ್ಯ. (ಎಸ್.ಸಿ.ಜಿ.)

**ಜನಮತ :** ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. ಸಹಕಾರಿ ಒಡೆತನದಲ್ಲಿ ಒಂದು ವಾರಪತ್ರಿಕೆ ಹಾಗೂ ಒಂದು ದಿನಪತ್ರಿಕೆ ನಡೆಸಬೇಕೆಂಬ ಉದ್ದೇಶದಿಂದ ಗುದ್ಲೆಪ್ಪ ಹಳ್ಳಿಕೇರಿ ಮತ್ತು ಗೆಳೆಯರು 1967ರ ಆಗಸ್ಟ್ 25ರಂದು ಸ್ಥಾಪಿಸಿದ ಗಾಂಧಿ ಸ್ಮಾರಕ ಸಹಕಾರಿ ವೃತ್ತಪತ್ರಿಕಾ ಸಂಘ ಜನಮತ ವಾರಪತ್ರಿಕೆಯನ್ನು 1969ರ ನವೆಂಬರ್ 1ರಂದು ಆರಂಭಿಸಿತು. ಗುದ್ಲೆಪ್ಪ ಹಳ್ಳಿಕೇರಿಯವರ ಪ್ರಯತ್ನದಿಂದ ಇದಕ್ಕೆ 35,000 ರೂ. ಷೇರು ಬಂಡವಾಳ ಸಂಗ್ರಹ ಆಯಿತು. ಸರ್ಕಾರ 30,000 ರೂ.ಗಳ ಬಂಡವಾಳ ತೊಡಗಿಸಿತು. ಪತ್ರಿಕೆಯನ್ನು ಮೊದಲು ಸಂಯುಕ್ತ ಕರ್ನಾಟಕ ಮುದ್ರ ಣಾಲಯದಲ್ಲಿ ಮುದ್ರಿಸಲಾಗುತ್ತಿತ್ತು. 1970ರ ನವೆಂಬರ್‌ನಿಂದ ಜನಮತ ತನ್ನ ಸ್ವಂತ ಮುದ್ರಣಾಲಯದಲ್ಲೇ ಅಚ್ಚಾಗತೊಡಗಿತು.

ಸಂಘದ ಅಧ್ಯಕ್ಷರಾದ ಗುದ್ಲೆಪ್ಪ ಹಳ್ಳಿಕೇರಿಯವರು ಅದರ ಪ್ರಥಮ ಕಾರ್ಯ ನಿರ್ವಾಹಕ ಸಂಪಾದಕರು. 1971ರ ಮೇ 14ರಂದು ಹಳ್ಳಿಕೇರಿಯವರು ನಿಧನರಾದ ಅನಂತರ ಬಿ.ವಿ.ಪೂರ್ಣೇಂದ್ರ ಹಾಗೂ ಎಸ್.ಎಂ. ಸಾಗರ್ ಅವರು ಅನುಕ್ರಮವಾಗಿ ಕಾರ್ಯನಿರ್ವಾಹಕ ಸಂಪಾದಕರಾದರು. ಪತ್ರಿಕೆಯ ಪ್ರಥಮ ಕಾರ್ಯನಿರತ ಸಂಪಾದಕರು ಕಲ್ಲೆ ಎನ್. ಶಿವೋತ್ತಮರಾವ್. ಅನಂತರ ಅನುಕ್ರಮವಾಗಿ ಪಿ.ಸಿದ್ದಪ್ಪ ಹಾಗೂ ವಿ.ಕೆ. ಜಾಗೀರದಾರ ಈ ಕೆಲಸ ನಿರ್ವಹಿಸಿದರು. ಉದ್ದಕ್ಕೂ ಎಸ್. ಎಂ. ಸಾಗರ್ ಅವರು ಪತ್ರಿಕೆಯ ಮುದ್ರಕರೂ ಪ್ರಕಾಶಕರೂ ಆಗಿದ್ದರು. ಪತ್ರಿಕೆಯ ಪುಟಗಳ ಸಂಖ್ಯೆ 12.

ಎಲ್ಲ ಪ್ರಾಥಮಿಕ ಸಹಕಾರ ಸಂಘಗಳೂ ಜನಮತವನ್ನು ತರಿಸಿಕೊಂಡು ಪ್ರೋತ್ಸಾಹ ನೀಡಿದ್ದರಿಂದ ಆರಂಭದಲ್ಲಿ ಹುರುಪಿನಿಂದ ಪ್ರಕಟವಾಗತೊಡಗಿದ ಜನಮತದ ಪ್ರಸಾರ 2,000 ವನ್ನು ಮುಟ್ಟಿತ್ತು. ಆದರೆ ಅನಂತರ ಹಣದ ಮುಗ್ಗಟ್ಟಿನಿಂದಾಗಿ ಪತ್ರಿಕೆಯ ಪ್ರಕಟಣೆ 1972ರ ಜನವರಿಯಲ್ಲಿ ನಿಂತುಹೋಯಿತು. (ಎಸ್.ಸಿ.ಜಿ.)

**ಜನಮತಗಣನೆ :** ಯಾವುದಾದರೂ ಒಂದು ನಿರ್ದಿಷ್ಟ ಪ್ರಶ್ನೆಯ ಮೇಲೆ (ಉದಾ: ಸಾರ್ವಭೌಮಾಧಿಕಾರದ ಅಥವಾ ಒಂದು ಪ್ರದೇಶದ ವರ್ಗಾವಣೆ) ಒಂದು ದೇಶ ಅಥವಾ ಪ್ರದೇಶದಲ್ಲಿಯ ಎಲ್ಲ ಮತದಾರರ ಮತಗಣನೆ (ಪ್ಲೆಬಿಸೈಟ್). ಬ್ರಿಟಿಷರು ಅಖಂಡ ಭಾರತವನ್ನು ವಿಭಜಿಸಿ ಅದಕ್ಕೆ ಸ್ವಾತಂತ್ರ್ಯ ನೀಡಿ ಅಲ್ಲಿಂದ ಕಾಲ್ತೆಗೆದದ್ದರಿಂದ ಸ್ವತಂತ್ರವಾದ ದೇಶೀಯ ಸಂಸ್ಥಾನಗಳಲ್ಲೊಂದಾದ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನ ಪಾಕಿಸ್ತಾನದ ಆಕ್ರಮಣಕ್ಕೆ ಒಳಗಾದಾಗ ಅಲ್ಲಿಯ ದೊರೆ ತನ್ನ ಸಂಸ್ಥಾನವನ್ನು ಭಾರತದಲ್ಲಿ ವಿಲೀನಗೊಳಿಸಿ, ಆಕ್ರಮಣವನ್ನು ತೆರವು ಮಾಡಲು ಭಾರತದ ನೆರವನ್ನು ಪ್ರಾರ್ಥಿಸಿದಾಗ, ಸಂಸ್ಥಾನದಲ್ಲಿ ನೆಮ್ಮದಿಯ ವಾತಾವರಣ ನೆಲೆಸಿದ ಮೇಲೆ ಅದರ ಭವಿಷ್ಯವನ್ನು ಜನಮತ ಗಣನೆಯಿಂದ ನಿರ್ಧರಿಸುವುದಾಗಿ ಭಾರತ ಸರ್ಕಾರ ಹೇಳಿತ್ತು. ಆಕ್ರಮಿತ ಪ್ರದೇಶದಿಂದ ಪಾಕಿಸ್ತಾನ ಆಕ್ರಮಣವನ್ನು ತೆರವು ಮಾಡಲಿಲ್ಲವಾದ್ದರಿಂದ ಇದು ಆಗಲಿಲ್ಲ. ಆದರೆ ಅನಂತರ ನಡೆದ ಚುನಾವಣೆಗಳಲ್ಲಿ ಅಲ್ಲಿಯ ಜನಮತ ಸುವ್ಯಕ್ತವಾಗಿದೆ. ಭಾರತಕ್ಕೆ ಕಾಶ್ಮೀರದ ಸೇರ್ಪಡೆ ವಿಧಿಬದ್ಧವಾಗಿ ಆಗಿದೆ. ಅದು ಭಾರತದ ಅವಿಭಾಜ್ಯ ಅಂಗ.

ಜನಮತಗಣನೆಯ ಅನೇಕ ನಿದರ್ಶನಗಳು ವಿಶ್ವದ ಇತಿಹಾಸದಲ್ಲಿ ದೊರಕುತ್ತವೆ. 1851ರಲ್ಲಿ ಕ್ಷಿಪ್ರಕ್ರಾಂತಿಯಿಂದ ಫ್ರಾನ್ಸಿನ ಸರ್ವಾಧಿಕಾರಿಯಾದ 3ನೆಯ ನೆಪೋಲಿಯನ್ ಮರುವರ್ಷ ಜನಮತಗಣನೆ ಏರ್ಪಡಿಸಿ ತನ್ನ ಅಧಿಕಾರ ಗ್ರಹಣವನ್ನು ಸ್ಥಿರಪಡಿಸಿಕೊಂಡು ಚಕ್ರವರ್ತಿ ಪದವಿ ಪಡೆದ. ಒಂದು ಜನಾಂಗದ ಪ್ರದೇಶದ ಭವಿಷ್ಯವನ್ನು ನಿರ್ಧರಿಸುವ ಸಾಧನವಾಗಿ ಇದನ್ನು ಪ್ರಪ್ರಥಮವಾಗಿ ಅನುಸರಿಸಲಾದದ್ದು ಫ್ರಾನ್ಸಿನ ಕ್ರಾಂತಿಯ ಕಾಲದಲ್ಲಿ. ಈ ಕ್ರಾಂತಿಯಲ್ಲಿ ಫ್ರೆಂಚ್ ಗಣರಾಜ್ಯ ಗೆದ್ದ ಪ್ರದೇಶಗಳನ್ನು ಕಾನೂನುಬದ್ಧಗೊಳಿಸಲು ಜನಮತಗಣನೆ ಏರ್ಪಡಿಸಲಾಯಿತು. ಅನಂತರ 1ನೆಯ ನೆಪೋಲಿಯನನೂ ಈ ವಿಧಾನ ಅನುಸರಿಸಿದ. ಮೂರನೆಯ ನೆಪೋಲಿಯನ್ ಕೂಡ ಈ ಉದ್ದೇಶದಿಂದ ಜನಮತಗಣನೆ ಏರ್ಪಡಿಸಿದ್ದ (1859–60). ನೀಸ್ ಮತ್ತು ಸವಾಯಿ ಪ್ರದೇಶಗಳಲ್ಲಿ ನಡೆಸಿದ ಜನಮತಗಣನೆಯಲ್ಲಿ ನೆಪೋಲಿಯನನಿಗೆ ಅನುಕೂಲವಾದ ಫಲಿತಾಂಶ ಪ್ರಾಪ್ತವಾಯಿತು. ಉತ್ತರ ಇಟಲಿಯ ಡಚಿ ಪ್ರದೇಶಗಳ ಭವಿಷ್ಯದ ಬಗ್ಗೆ ನಡೆಸಿದ ಜನಮತಗಣನೆ ವಿಕ್ಟರ್ ಇಮ್ಯಾನ್ಯುಯೆಲ್ ಪರವಾಗಿ ಪರಿಣಮಿಸಿತು. ಈ ಜನಮತಗಣನೆ ಆದದ್ದು 1859–60ರಲ್ಲಿ. ಒಂದನೆಯ ಮಹಾಯುದ್ಧಾನಂತರ ಸೇರಿದ ಶಾಂತಿಸಮ್ಮೇಳನ, ಕ್ಲಿಷ್ಟವಾದ ಸಮಸ್ಯೆಗಳ ಪರಿಹಾರಕ್ಕಾಗಿ 17 ಜನಮತಗಣನೆಗಳನ್ನು ಸಲಹೆ ಮಾಡಿತು. ಅವುಗಳಲ್ಲಿ 8 ಮಾತ್ರ ನಡೆದವು. ಜರ್ಮನಿ, ಫ್ರಾನ್ಸ್‌ಗಳ ನಡುವಣ ಕಲಹಕ್ಕೆ ಒಂದು ಕಾರಣವಾದ ಸಾರ್ ಪ್ರದೇಶವೂ ಹಲವು ಬಾರಿ ಜನಮತಗಣನೆಗಳಿಗೆ ಒಳಪಟ್ಟಿದೆ. 1920ರಲ್ಲಿ ನಡೆಸಿದ ರಾಷ್ಟ್ರಗಳ ಕೂಟದ ಆಡಳಿತದಲ್ಲಿದ್ದ ಸಾರ್ ಪ್ರದೇಶವನ್ನು 1935ರಲ್ಲಿ ನಡೆಸಿದ ಜನಮತಗಣನೆಯ ಫಲವಾಗಿ ಜರ್ಮನಿಗೆ ಹಿಂದಿರುಗಿಸಲಾಯಿತು. 1947ರಲ್ಲಿ ಏರ್ಪಡಿಸಿದ್ದ ಗಣನೆ ಫ್ರಾನ್ಸಿಗೆ ಅನುಕೂಲವಾಗಿತ್ತು. ಆ ಪ್ರದೇಶವನ್ನು ಐರೋಪ್ಯೀಕರಿಸಬೇಕೆಂಬ ಸಲಹೆಯನ್ನು 1955ರಲ್ಲಿ ನಡೆದ ಜನಮತಗಣನೆ ತಳ್ಳಿಹಾಕಿತು. 1956ರಲ್ಲಿ ಆದ ಫ್ರೆಂಚ್–ಜರ್ಮನ್ ಒಪ್ಪಂದದ ಪ್ರಕಾರ ಅದು 1957ರಲ್ಲಿ ಜರ್ಮನಿಗೆ ಸೇರಿತು. (ಜಿ.ಆರ್.ಪಿ.)

**ಜನಮೇಜಯ :** ಮಹಾಭಾರತದಲ್ಲಿ ಈ ಹೆಸರಿನ ಐವರು ರಾಜರುಗಳು ಬರುತ್ತಾರೆ. ಇವರಲ್ಲಿ ಮೂವರು ಚಂದ್ರವಂಶಕ್ಕೆ ಸೇರಿದವರು. ಉಳಿದಿಬ್ಬರಲ್ಲಿ ಒಬ್ಬ ಸೂರ್ಯವಂಶಕ್ಕೂ ಮತ್ತೊಬ್ಬ ಪರ್ವತವಂಶಕ್ಕೂ ಸೇರುತ್ತಾರೆ. ಸೂರ್ಯ ವಂಶದ ದಿಷ್ಟರಾಜ ಕುಲದಲ್ಲಿ ಬರುವ ಜನಮೇಜಯ ಸುಮತಿ ರಾಜನ ಪುತ್ರ. ಈತ ಮೂರು ದಿನಗಳಲ್ಲೇ ಜಗತ್ತನ್ನೆಲ್ಲ ಗೆದ್ದು ಅಜೇಯನೆನಿಸಿಕೊಂಡ ಅಸಾಮಾನ್ಯ ಚಕ್ರವರ್ತಿ. ಪರ್ವತ ವಂಶಕ್ಕೆ ಸೇರಿದ ಜನಮೇಜಯ ಕುರುಕ್ಷೇತ್ರದ ಯುದ್ಧದಲ್ಲಿ ಪಾಂಡವರ ಪರವಾಗಿ ಹೋರಾಡಿ ದುರ್ಯೋಧನನ ತಮ್ಮನಾದ ದುರ್ಮುಖನಿಂದ ಹತನಾಗುತ್ತಾನೆ. ಉಳಿದ ಮೂವರು ಚಂದ್ರವಂಶದ ಅರಸುಗಳಲ್ಲಿ ದುಷ್ಯಂತನ ಮಗನಾದ ಜನಮೇಜಯನೊಬ್ಬ. ಈತನ ತಾಯಿ ಲಾಕ್ಷಿ. ಇನ್ನೊಬ್ಬ ಪುರುರಾಜನಿಗೂ ಕೌಸಲ್ಯೆಗೂ ಜನಿಸಿದವ. ಈತ ಮಗಧ ರಾಜ್ಯದ ರಾಜಪುತ್ರಿ ಸುನಂದೆಯ ಗಂಡ. ಪ್ರಾಚೀನ್ವಂತನ ತಂದೆ. ಈತ ಗರ್ಗನ ಮಗನನ್ನು ಹಿಂಸಿಸಿ ಬ್ರಹ್ಮಹತ್ಯೆಯ ಪಾಪಕ್ಕೆ ಗುರಿಯಾದ. ಅದರ ಪರಿಹಾರಕ್ಕಾಗಿ ಇಂದ್ರೋತಮ ಮುನಿಯಿಂದ ಅಶ್ವಮೇಧಯಾಗವನ್ನು ಮಾಡಿಸಿದ.

ಜನಮೇಜಯ ಎಂಬ ಹೆಸರುಳ್ಳ ರಾಜರುಗಳಲ್ಲೆಲ್ಲ ಅತ್ಯಂತ ಖ್ಯಾತಿಯನ್ನೂ ಮಹತ್ತ್ವವನ್ನೂ ಪಡೆದವನೆಂದರೆ ಚಂದ್ರವಂಶದ ಪರೀಕ್ಷಿದ್ರಾಜನ ಮಗ. ಅಭಿಮನ್ಯುವಿನ ಮೊಮ್ಮಗ ; ಅರ್ಜುನನ ಮರಿಮಗ. ಶ್ರುತಸೇನ, ಉಗ್ರಸೇನ ಮತ್ತು ಭೀಮಸೇನ ಎಂಬುವರು

ಈತನ ಸೋದರರು. ಈ ಜನಮೇಜಯನ ತಾಯಿ ಪರೀಕ್ಷಿದ್ರಾಜನ ಪಟ್ಟದ ರಾಣಿ ಭದ್ರವತಿ. ತಾನು ಕೈಗೊಂಡ ಅನೇಕ ಕಾರ್ಯಗಳ ನಿಮಿತ್ತ ಈತ ತುಂಬ ಗಮನಾರ್ಹನಾದವ. ಮಹಾಭಾರತ ಕಥಾವಸ್ತುಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಉಲ್ಲೇಖಗೊಂಡವ. ವೈಶಂಪಾಯನ ಮಹರ್ಷಿಯಿಂದ ಈತ ಭಾರತ ಕಥೆಯನ್ನು ಕೇಳಿದ್ದು ಇದಕ್ಕೆ ಮುಖ್ಯ ಕಾರಣಗಳಲ್ಲೊಂದು.

ಈತ ಪರೀಕ್ಷಿತ್ ರಾಜನ ತರುವಾಯ ಪಟ್ಟಕ್ಕೆ ಬಂದು, ಕಾಶಿ ರಾಜನಾದ ಸುವರ್ಮನ ಮಗಳಾದ ವಪುಷ್ಟಮೆಯನ್ನು ಮದುವೆಯಾಗುತ್ತಾನೆ. ಇವರಿಗೆ ಶತಾನೀಕ, ಶಂಕುಕರ್ಣರೆಂಬ ಇಬ್ಬರು ಪುತ್ರರಾಗುತ್ತಾರೆ. ವೈಶಂಪಾಯನ ಮಹರ್ಷಿಯ ಮೂಲಕ ಈತ ಸಮಗ್ರ ಭಾರತ ಕಥೆಯನ್ನು ಕೇಳುತ್ತಾನೆ. ತನ್ನ ತಾತಂದಿರಾದ ಪಾಂಡವರ ಪರಾಕ್ರಮವನ್ನು ಕೇಳಿ ಹಿಗ್ಗುತ್ತಾನೆ. ಆದರೆ ತನ್ನ ತಂದೆಯಾದ ಪರೀಕ್ಷಿತರಾಜ ತಕ್ಷಕ ಎಂಬ ಸರ್ಪ ಕಡಿದು ಸತ್ತುದನ್ನು ಕೇಳಿ, ವ್ಯಥೆಗೊಂಡು ಮಹಾರೋಷಾವಿಷ್ಟನಾಗಿ ಸರ್ಪವಂಶವನ್ನೇ ನಿರ್ಮೂಲ ಮಾಡುವ ಪಣತೊಟ್ಟು ಸರ್ಪಯಜ್ಞಮಾಡಲು ಆರಂಭಿಸುತ್ತಾನೆ. ಶ್ರುತಶ್ರವಸನೆಂಬ ಋಷಿಯ ಮಗನಾದ ಸೋಮಶ್ರವನೆಂಬಾತ ಪುರೋಹಿತನಾಗುತ್ತಾನೆ. ಯಾಗ ಪ್ರಾರಂಭವಾಗುವಾಗ ಸಾರಮೇಯ ಎಂಬ ಒಂದು ನಾಯಿ ಆ ಸ್ಥಳಕ್ಕೆ ಬರುತ್ತದೆ. ಅದನ್ನು ಜನಮೇಜಯನ ಸೋದರನಾದ ಶ್ರುತಸೇನ, ಉಗ್ರಸೇನ ಮತ್ತು ಭೀಮಸೇನರು ಹೊಡೆದೋಡಿಸುತ್ತಾರೆ. ಆ ನಾಯಿ ತನ್ನ ತಾಯಿಯಾದ ಸರಮೆಯಲ್ಲಿ ತನ್ನ ಸಂಕಟವನ್ನು ಹೇಳಿಕೊಳ್ಳುತ್ತದೆ. ತಾಯಿ ಕೂಡಲೇ ಯಜ್ಞ ನಡೆಯುವಲ್ಲಿಗೆ ಬಂದು ತನ್ನ ಮಗನನ್ನು ಹೊಡೆದದ್ದು ಜನಮೇಜಯನ ಸಂಪತ್ತು ಹಾಳಾಗುವುದಕ್ಕೆ ದುಶ್ಯಕುನ ಎಂಬುದಾಗಿ ಹೇಳುತ್ತದೆ. ಅಪಶಕುನದ ನಿವಾರಣೆಗಾಗಿ ರಾಜ ಶಾಂತಿಕರ್ಮ ಮಾಡಿಸುತ್ತಾನೆ. ಜನಮೇಜಯ ಕೈಗೊಂಡ ಭೀಕರವಾದ ಸರ್ಪಯಾಗದಲ್ಲಿ ಚಂಡಭಾರ್ಗವನೆಂಬ ಮುನಿ ಋಗ್ವೇದ ಮಂತ್ರಗಳನ್ನು ಹೇಳುವ ಅಧ್ವರ್ಯುವಾಗಿಯೂ, ಜೈಮಿನಿ ಮಹರ್ಷಿ ಸಾಮಮಂತ್ರಗಳನ್ನು ಹೇಳುವ ಉದ್ಗಾತೃವಾಗಿಯೂ, ಅಂಗಿರಸಮುನಿ ಬ್ರಹ್ಮನಾಗಿಯೂ ಇದ್ದು ಬಹು ಪ್ರಮುಖವಾದ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅಸಿತ, ದೇವಲ, ವ್ಯಾಸ, ಉದ್ದಾಲಕ, ಶ್ವೇತಕೇತು, ಪರ್ವತ, ನಾರದ, ಕಹೋಳ ಮುಂತಾದವರು ಸದಸ್ಯರಾಗಿ ಯಜ್ಞದಲ್ಲಿ ಪಾಲ್ಗೊಳ್ಳುತ್ತಾರೆ. ಸರ್ಪಯಜ್ಞ ಪ್ರಾರಂಭವಾಗಿ ಋತ್ವಿಜರು ಹೋಮ ಮಾಡುವಾಗ ಸರ್ಪಗಳು ಒಂದಾದ ಮೇಲೊಂದು ಬಂದು ಅಗ್ನಿಕುಂಡದಲ್ಲಿ ಬಿದ್ದು ಬೆಂದುಹೋಗುತ್ತವೆ. ಉಳಿದ ಸರ್ಪಗಳು ಭಯಗೊಂಡು ಕಾಪಾಡುವಂತೆ ಜರತ್ಕಾರುವನ್ನು ಪ್ರಾರ್ಥಿಸಲಾಗಿ ಆಕೆ ತನ್ನ ಮಗನಾದ ಆಸ್ತೀಕನನ್ನು ಜನಮೇಜಯನಲ್ಲಿಗೆ ಕಳುಹಿಸುತ್ತಾಳೆ. ಆಸ್ತೀಕ ಜನಮೇಜಯನಿಗೆ ಪ್ರಾಣಿಹಿಂಸೆ ತಕ್ಕುದಲ್ಲವೆಂದು ಬೋಧಿಸಿ, ಸರ್ಪಯಾಗವನ್ನು ನಿಲ್ಲಿಸುತ್ತಾನೆ.

ಪಾಂಡವ ಪರಂಪರೆಯನ್ನು ಮುಂದುವರಿಸಿದ ಜನಮೇಜಯನ ಪಿತೃಭಕ್ತಿಯೂ ಛಲವೂ ಈ ಪ್ರಸಂಗಗಳಲ್ಲಿ ಎದ್ದು ಕಾಣುತ್ತವೆ. (ಎಂ.ಸಿ.ವಿ.)

**ಜನವರಿ :** ಆಧುನಿಕ ತಾರೀಖು ಪಟ್ಟಿಯ (ಕ್ರೈಸ್ತವರ್ಷದ) ಮೊದಲನೆಯ ತಿಂಗಳು. 31 ದಿವಸಗಳಿವೆ. ಜನವರಿಯ ಮೊದಲನೆಯ ದಿವಸ ನೂತನ ವರ್ಷಾರಂಭ ವಾಗುತ್ತದೆ. ಪ್ರ.ಶ ಪೂ. ಸು. 153ರ ಜನವರಿ ವರ್ಷದ ಹನ್ನೊಂದನೆಯ ತಿಂಗಳೆಂದು ಪರಿಗಣಿತವಾಗಿತ್ತು. ಗ್ರೇಗೋರಿಯನ್ ತಾರೀಖುಪಟ್ಟಿಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಾರ್ವತ್ರಿಕ ಮನ್ನಣೆ ದೊರೆತ ಬಳಿಕ (1752) ಜನವರಿಯೇ ವರ್ಷದ ಪ್ರಾರಂಭ ತಿಂಗಳು ಎಂಬುದು ರೂಢಿಗೆ ಬಂತು. ಭಾರತೀಯ ಪಂಚಾಂಗದ ರೀತ್ಯಾ ಮಾರ್ಗಶಿರ–ಪುಷ್ಯಮಾಸಗಳು ಜನವರಿಯಲ್ಲಿ ಕಾಣಬರುತ್ತವೆ. *

**ಜನವಾಣಿ :** ಬೆಂಗಳೂರು ನಗರದಿಂದ ಪ್ರಕಟವಾಗುತ್ತಿದ್ದ ದಿನಪತ್ರಿಕೆ. 1934ರಲ್ಲಿ ಬಿ.ಎನ್.ಗುಪ್ತ ಅವರಿಂದ ಮದ್ರಾಸಿನಲ್ಲಿ ಪ್ರಾರಂಭಿಸಲ್ಪಟ್ಟಿತು. ಆರಂಭದಲ್ಲಿ ಈ ಪತ್ರಿಕೆಯ ಹಾದಿ ಸುಗಮವಾಗಿರಲಿಲ್ಲ ಅದು ವಹಿಸಿದ ಧೀಮಂತ ಪಾತ್ರದಿಂದ ಅನೇಕ ಎಡರುತೊಡರುಗಳನ್ನು ಎದುರಿಸಬೇಕಾಯಿತು. ಮದ್ರಾಸ್ (ಈಗಿನ ತಮಿಳುನಾಡು) ಸರ್ಕಾರದ ಆಗ್ರಹಕ್ಕೆ ಗುರಿಯಾಗಿ ಬಿ.ಎನ್.ಗುಪ್ತ ಅವರು ಬೆಂಗಳೂರು ನಗರಕ್ಕೆ ಬಂದು ಅಲ್ಲಿಂದ ಪತ್ರಿಕೆಯ ಪ್ರಕಟಣೆಯನ್ನು ಮುಂದುವರಿಸಿದರು. 1935ರ ವೇಳೆಗೆ ಜನವಾಣಿ ಉದ್ಯಮ ಒಂದು ಸೀಮಿತ ಹೊಣೆ (ಲಿಮಿಟೆಡ್) ಸಂಸ್ಥೆಯಾಗಿ ಪರಿವರ್ತನೆಗೊಂಡಿತು. ಅದರ ಸಂಪಾದಕರಾಗಿದ್ದವರಲ್ಲಿ ಕೆ.ಸಿ.ರೆಡ್ಡಿ ಮತ್ತು ಬಿ.ಪುಟ್ಟಸ್ವಾಮಯ್ಯ ಪ್ರಮುಖರು. 1939ರಲ್ಲಿ ಪತ್ರಿಕೆಯ ಮಾಲಿಕತ್ವವನ್ನು ಅದರ ಸ್ಥಾಪಕ ಬಿ.ಎನ್. ಗುಪ್ತ ಅವರೇ ವಹಿಸಿಕೊಂಡು 1946ರ ವರೆಗೂ ಅದನ್ನು ದಕ್ಷತೆಯಿಂದ ನಡೆಸಿಕೊಂಡು ಬಂದು ಅದನ್ನು ಸ್ವಾತಂತ್ರ್ಯ ಹೋರಾಟದ ಪ್ರಬಲ ಅಸ್ತ್ರವನ್ನಾಗಿ ಮಾಡಿದರು.

ಸ್ವಾತಂತ್ರ್ಯ ಸಮರ ಬಿರುಸಿನಿಂದ ನಡೆಯುತ್ತಿದ್ದ ಆ ಸಮಯದಲ್ಲಿ ಜನವಾಣಿ ಮಹಾತ್ಮ ಗಾಂಧಿಯವರ ಬಳಿಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸಿತು. ಮಹಾತ್ಮಾಜಿಯವರ ಚಟುವಟಿಕೆಗಳ ಬಗ್ಗೆ ಆ ಪ್ರತಿನಿಧಿ ಕಳುಹಿಸುತ್ತಿದ್ದ ವರದಿಗಳು ಕನ್ನಡ ಪತ್ರಿಕೋದ್ಯಮದಲ್ಲೇ ಉಲ್ಲೇಖಾರ್ಹವಾದವು. ಹರಿತವಾದ ಅಗ್ರಲೇಖನ, ನಿರ್ಭಯವಾದ ಟೀಕೆ ಟಿಪ್ಪಣಿಗಳಿಂದ ಕೂಡಿದ ಜನವಾಣಿ ಅತ್ಯಂತ ಜನಪ್ರಿಯವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡುತ್ತಿತ್ತು. 1945ರಲ್ಲಿ ಬಿ.ಎನ್. ಗುಪ್ತ ಅವರು ಜನವಾಣಿಯನ್ನೂ, ಅವರೇ ನಡೆಸುತ್ತಿದ್ದ ವಾರಪತ್ರಿಕೆಯಾದ ಪ್ರಜಾಮತವನ್ನೂ ಬಿ.ಎಂ. ಶ್ರೀನಿವಾಸಯ್ಯನವರಿಗೆ ಮಾರಿದಾಗ ಜನವಾಣಿಯ ಚರಿತ್ರೆಯಲ್ಲಿ ಇನ್ನೊಂದು ಅಧ್ಯಾಯ ಆರಂಭವಾಯಿತು. ರೋಟರಿ ಮುದ್ರಣ ಯಂತ್ರ, ಟೆಲಿಪ್ರಿಂಟರ್ ಮುಂತಾದವುಗಳಿಂದ ಅದು ಸಜ್ಜಿತವಾಯಿತು. ಜಿ.ಎಸ್. ನರಸಿಂಹ ಸೋಮಯಾಜಿ ಅವರು ಈ ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡರು.

1959ರಲ್ಲಿ ಬಿ.ಎಂ.ಶ್ರೀನಿವಾಸಯ್ಯನವರು ವಿಧಿವಶರಾದ ಮೇಲೆ ಅವರ ಪುತ್ರ ಬಿ.ಎಸ್. ನಾರಾಯಣ್ ಅವರು ಜನವಾಣಿ, ಪ್ರಜಾಮತ ಪತ್ರಿಕೆಗಳ ಆಡಳಿತ ವಹಿಸಿಕೊಂಡರು. ಅವರ ಪ್ರಗತಿಪರ ಧೋರಣೆ, ಆಸಕ್ತಿ ಮತ್ತು ಪ್ರಯತ್ನಗಳ ಫಲವಾಗಿ ಜನವಾಣಿ ಬಹಳ ಪ್ರಗತಿ ಹೊಂದಿತು. ಅದರಲ್ಲಿ ಹಲವು ಸುಧಾರಣೆಗಳಾದವು.

1964ರಲ್ಲಿ ಜನವಾಣಿ ಮತ್ತೊಂದು ಸಾಹಸದ ಕೆಲಸಕ್ಕೆ ಕೈ ಹಾಕಿತು. ಕನ್ನಡ ಪತ್ರಿಕೋದ್ಯಮದಲ್ಲೇ ಒಂದು ಮೈಲಿಗಲ್ಲು ಎಂದು ಪರಿಗಣಿಸಲ್ಪಟ್ಟ ನವೀನ ರೀತಿಯ ಹೊಸ ಶೈಲಿಯ, ಹೊಸ ವಿಚಾರಧಾರೆಯ ಸಾಪ್ತಾಹಿಕವೊಂದನ್ನು ಆರಂಭಿಸಿತು. ಜನವಾಣಿ ವಾರ್ತಾ ಸಾಪ್ತಾಹಿಕ ಎಂಬ ಹೆಸರಿನಿಂದ ಪ್ರಾರಂಭವಾದ ಈ ಸಾಪ್ತಾಹಿಕ ಅಮೆರಿಕದ ನ್ಯೂಸ್ ವೀಕ್‍ನೊಡನೆ ಸುದ್ದಿ ಸಂಪಾದನೆಯ ವಿಷಯದಲ್ಲಿ ಒಡಂಬಡಿಕೆ ಮಾಡಿಕೊಂಡು, ಕನ್ನಡ ಜನತೆಗೆ ವಿಚಾರಪೂರ್ಣ ಹಾಗೂ ವೈಜ್ಞಾನಿಕ ಲೇಖನಗಳನ್ನು ಜಾಗತಿಕ, ರಾಜಕೀಯ ಹಾಗೂ ಆರ್ಥಿಕ ವ್ಯವಹಾರಗಳ ವಿಶ್ಲೇಷಣೆಯನ್ನು ಸರಳ ಸುಂದರ ಕನ್ನಡ ಶೈಲಿಯಲ್ಲಿ, ಮನೋಜ್ಞವಾದ ರೀತಿಯಲ್ಲಿ ಒದಗಿಸುತ್ತಿತ್ತು. ಜಿ.ಎಸ್. ನರಸಿಂಹ ಸೋಮಯಾಜಿಯವರೇ ಈ ಸಾಪ್ತಾಹಿಕದ ಸಂಪಾದಕರೂ ಆಗಿದ್ದರು. ಬಹುಬೇಗ ಜನಮನವನ್ನು ಆಕರ್ಷಿಸಿ ಅಧಿಕ ಪ್ರಸಾರ ಗಳಿಸಿಕೊಂಡ ಈ ಸಾಪ್ತಾಹಿಕ ಕೆಲವು ತೊಂದರೆಗಳಿಂದಾಗಿ ಸ್ವಲ್ಪ ಕಾಲದಲ್ಲೇ ನಿಂತುಹೋಯಿತು.

ಜನವಾಣಿ ಪತ್ರಿಕೆಯ ಪ್ರಸಾರ ಹಳೆಯ ಮೈಸೂರು ರಾಜ್ಯಕ್ಕೆ ಸೀಮಿತವಾಗಿದ್ದು, ಆರಂಭದಿಂದಲೂ ಸಂಜೆ ಪತ್ರಿಕೆಯಾಗಿಯೇ ಜನವಾಣಿ ಪ್ರಕಟವಾಗುತ್ತಿತ್ತು.

ಹಲವಾರು ಏರಿಳಿತಗಳನ್ನು ಕಂಡ ಜನವಾಣಿ ಇನ್ನೊಂದು ಹಸ್ತಾಂತರದ ನಂತರ ಅವನತಿಯತ್ತ ಸಾಗಿತು. ಕರ್ನಾಟಕದ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸರ ಅಳಿಯ ಎಂ.ಡಿ.ನಟರಾಜ್‍ರ ಮಾಲಿಕತ್ವದಲ್ಲಿ 9 ವರ್ಷಗಳ ಕಾಲ ಈ ಪತ್ರಿಕೆ ನಡೆಯಿತು. ಎಂ.ಡಿ.ನಟರಾಜರ ಅವಸಾನದೊಂದಿಗೆ ಜನವಾಣಿಯ ಪ್ರಕಟಣೆ ನಿಂತು ಹೋಯಿತು (1987ರಲ್ಲಿ). (ಜಿ.ಎಸ್.ಎನ್.ಎಸ್.)

**ಜನಶಕ್ತಿ :** ಕಾರ್ಮಿಕರ, ರೈತರ ಮತ್ತು ದಲಿತವರ್ಗದವರ ಸಂಘಟನೆ ಮತ್ತು ಪುರೋಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಕಮ್ಯೂನಿಸ್ಟ್ ಪಕ್ಷದಿಂದ 1946ರಲ್ಲಿ ಹುಬ್ಬಳ್ಳಿಯಲ್ಲಿ ಆರಂಭವಾದ ವಾರಪತ್ರಿಕೆ. ಡೆಮ್ಮಿ ಫೋಲಿಯೋ ಆಕಾರದ ಎಂಟು ಪುಟಗಳ ಪತ್ರಿಕೆಯಾಗಿ ಕರ್ನಾಟಕದ ರೈತರು ಮತ್ತು ಕಾರ್ಮಿಕರಲ್ಲಿ ಪ್ರಚಾರದಲ್ಲಿತ್ತು. ಇದರ ಮೊದಲ ಸಂಪಾದಕರು ಕುಳಕುಂದ ಶಿವರಾಯರು (ನಿರಂಜನ). ಸುಮಾರು ಒಂದು ವರ್ಷದ ಅನಂತರ ಸದಾಶಿವ ಇದರ ಸಂಪಾದಕತ್ವವನ್ನು ವಹಿಸಿಕೊಂಡರು. 1948ರಲ್ಲಿ ದೇಶದಾದ್ಯಂತ ಕಮ್ಯೂನಿಸ್ಟರು ದಸ್ತಗಿರಿಯಾದಾಗ ಇದರ ಪ್ರಕಟಣೆ ನಿಂತುಹೋಯಿತು.

ಇದು ಮತ್ತೆ 1952ರಲ್ಲಿ ಎಂ.ಸಿ. ನರಸಿಂಹನ್‍ರವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಪ್ರಕಟಣೆ ಆಗಲಾರಂಭಿಸಿತು. ಎರಡು ವರ್ಷಗಳ ಕಾಲ ನಡೆದು 1954ರಲ್ಲಿ ಮತ್ತೆ ನಿಂತುಹೋಯಿತು,. 1956ರ ನವೆಂಬರ್ ತಿಂಗಳಲ್ಲಿ ಸಿ.ಆರ್. ಕೃಷ್ಣರಾಯರು ಸಂಪಾದಕರಾಗಿ ಜನಶಕ್ತಿಯನ್ನು 9 ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿಕೊಂಡು ಬಂದರು. 1964ರಲ್ಲಿ ಮತ್ತೆ ಇದು ನಿಂತುಹೋಯಿತು. (ಜಿ.ಎಚ್.ಆರ್.)

**ಜನಸಂಖ್ಯೆ :** ಒಂದು ದೇಶದಲ್ಲೋ ಅದರ ಒಂದು ಭಾಗದಲ್ಲೋ ಒಂದು ಪ್ರದೇಶದಲ್ಲೋ ಇರುವ ಜನರ ಅಥವಾ ನಿವಾಸಿಗಳ ಒಟ್ಟು ಸಂಖ್ಯೆ (ಪಾಪ್ಯುಲೇಷನ್). ಉದಾಹರಣೆ. 2011ರಲ್ಲಿ ಭಾರತದ ಜನಸಂಖ್ಯೆ 1,241,491,960

ಜನಸಂಖ್ಯೆಯನ್ನು ಕುರಿತ ಈ ಲೇಖನದಲ್ಲಿ ಕೆಳಗೆ ಕಾಣಿಸಿರುವ ವಿಭಾಗಗಳಿವೆ:

(I) ಜನಸಂಖ್ಯಾಶಾಸ್ತ್ರ

(II) ಜನಸಂಖ್ಯಾ ಸಿದ್ಧಾಂತಗಳು

(III) ಜನಸಂಖ್ಯಾ ವಿತರಣೆ

(IV) ಜನಸಂಖ್ಯಾ ಸಂಯೋಜನೆ

(V) ಜನಸಂಖ್ಯಾ ಬೆಳವಣಿಗೆ

(VI) ಜನಸಂಖ್ಯಾ ಅನುಗಣನೆ ಮತ್ತು ಮುನ್ಸೂಚನೆ

(VII) ಜನಸಂಖ್ಯಾ ನೀತಿ

**ಜನಗಣತಿ ಎಂಬ ಪ್ರತ್ಯೇಕ ಲೇಖವನ್ನೂ ನೋಡಿ** *

## I ಜನಸಂಖ್ಯಾ ಶಾಸ್ತ್ರ

ಹುಟ್ಟು, ಮದುವೆ, ಆರೋಗ್ಯ, ಸಾವು ಇವೇ ಮೊದಲಾದ ಜೀವಾಳಾಂಕಗಳನ್ನು ಕುರಿತಂತೆ (ವೈಟಲ್ ಸ್ಟಾಟಿಸ್ಟಿಕ್ಸ್) ಜನಸಂಖ್ಯೆಗಳ ಸಂಖ್ಯಾಕಲನೀಯ ಅಧ್ಯಯನ (ಡಿಮಾಗ್ರಫಿ). ಇದು ಸಾಮಾನ್ಯವಾಗಿ ಭೌತಪರಿಸ್ಥಿತಿಗಳಿಗೆ, ಇಲ್ಲವೇ ಮೇಲೆ ಹೇಳಿದ ಜೀವನಾಂಕಗಳಿಗೆ ಮಾತ್ರ ಸೀಮಿತವಾಗಿದ್ದರೂ ನೈತಿಕ ಮತ್ತು ಬೌದ್ಧಿಕ ಪರಿಸ್ಥಿತಿಗಳಿಗೆ ಕೂಡ ಇದನ್ನು ಅನ್ವಯಿಸಲಾಗುತ್ತದೆ. ಜನಗಣತಿಯಲ್ಲಿ ಸಂಗ್ರಹಿಸಲಾದ ದತ್ತಾಂಶಗಳೂ ಜೀವಾಳಾಂಕಗಳೂ ಮಾದರಿ ಸರ್ವೇಕ್ಷಣಗಳಿಂದ (ಸ್ಯಾಂಪಲ್ ಸರ್ವೇ) ಲಭ್ಯವಾದ ಸಾಮಗ್ರಿಯೂ ಈ ಅಧ್ಯಯನಕ್ಕೆ ಆಧಾರ. ಮಾನವ ಜನನ, ಮರಣ, ಜನಸಂಖ್ಯಾ ಚಲನೆ, ಜನಸಂಖ್ಯೆಯ ಬೆಳವಣಿಗೆ ಮುಂತಾದ ಮೂಲಪ್ರಕ್ರಿಯೆಗಳಲ್ಲಿ ಕಂಡುಬರುವ ಸಾಮಾನ್ಯ ಪ್ರವೃತ್ತಿಗಳನ್ನೂ ಸೂತ್ರಗಳನ್ನೂ ಆವಿಷ್ಕರಿಸುವುದು, ಅವನ್ನು ಅಳೆಯುವುದು ಇದರ ಮುಖ್ಯ ಉದ್ದೇಶ. ಈ ವಿದ್ಯಮಾನಗಳನ್ನು ಅವುಗಳ ಸಾಮಾಜಿಕ, ಆರ್ಥಿಕ ಹಾಗೂ ಜೈವಿಕ ಹಿನ್ನೆಲೆಗಳಲ್ಲಿ ಅಧ್ಯಯನ ಮಾಡಲಾಗುತ್ತದೆ. ಅನುಭವಜನ್ಯಸೂತ್ರಗಳನ್ನೂ ಸಂಖ್ಯಾಕಲನೀಯ ವಿಧಾನಗಳನ್ನೂ ಇಲ್ಲಿ ಬಳಸಲಾಗುತ್ತದೆ. ಸಮಾಜವಿಜ್ಞಾನದ ಇತರ ಶಾಖೆಗಳಂತೆ ಇಲ್ಲೂ ಗಣಿತವಿಜ್ಞಾನದ ನೆರವನ್ನು ವಿಶೇಷವಾಗಿ ಪಡೆದುಕೊಳ್ಳಲಾಗುತ್ತದೆ. ಮಾನವಶಾಸ್ತ್ರ, ಮನಶ್ಶಾಸ್ತ್ರಗಳಂತೆ ಜನಸಂಖ್ಯಾಶಾಸ್ತ್ರ ಕೂಡ ಸಮಾಜವಿಜ್ಞಾನಗಳಿಗೂ ಜೀವವಿಜ್ಞಾನಗಳಿಗೂ ನಡುವಣ ಸೇತುವೆಯಂತಿದೆ.

ಜನಸಂಖ್ಯಾಶಾಸ್ತ್ರದ ಶುದ್ಧ ಅಥವಾ ಸಂಪ್ರದಾಯಬದ್ಧ ವ್ಯಾಖ್ಯೆಯ ಪ್ರಕಾರ ಅದೊಂದು ನಿಷ್ಕೃಷ್ಟವಾದ ಅಧ್ಯಯನಾಂಗ ; ಅದಕ್ಕೆ ಗಣಿತೀಯ ವಿಧಾನವೊಂದುಂಟು. ಜನಸಂಖ್ಯಾ ವ್ಯತ್ಯಾಸದ–ವಿಶೇಷವಾಗಿ ಜನನ, ಮರಣ, ಮತ್ತು ಸ್ವಲ್ಪಮಟ್ಟಿಗೆ ಜನವಲಸೆಯ–ವಿವಿಧಾಂಗಗಳ ವಿಶ್ಲೇಷಣೆ ಹಾಗೂ ಮಾಪನ ಮಾಡುವುದು ಮುಖ್ಯವಾಗಿ ಇದರ ಉದ್ದೇಶ. ಜನಸಂಖ್ಯೆಯ ಬದಲಾವಣೆಯನ್ನರಿತುಕೊಳ್ಳಲು ಈ ಅಧ್ಯಯನ ಸಾಧಕವಾಗುತ್ತದೆ.

ಸಮಾಜವಿಜ್ಞಾನಗಳಲ್ಲಿ ಗಣಿತೀಯ ಮಾದರಿಗಳನ್ನು (ಮಾಡೆಲ್ಸ್) ಅತ್ಯಂತ ಉಪಯುಕ್ತವಾದ ರೀತಿಯಲ್ಲಿ ಬಳಸುವುದು ಶುದ್ಧ ಜನಸಂಖ್ಯಾಶಾಸ್ತ್ರದಿಂದಾಗಿ ಸಾಧ್ಯವಾಗಿದೆ. ಜೀವವಿಮಾ ಮತ್ತು ಸಾಮಾಜಿಕ ಭದ್ರತಾ ವಿಮಾ ವ್ಯವಸ್ಥೆಗಳ ಜಾರಿಗೆ ಆಧಾರವಾದ ಜೀವಮಾನ ಸಾರಣೆಗಳು ಅಥವಾ ಜೀವಮಾನ ಕೋಷ್ಟಕಗಳು (ಲೈಫ್ ಟೇಬಲ್ಸ್) ಇಂಥ ನಮೂನೆಗಳಿಗೆ ಒಂದು ಉದಾಹರಣೆ. ದೀರ್ಘಕಾಲದಲ್ಲಿ ಜನನ ದರಗಳಲ್ಲಾಗಿರುವ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಪ್ರಜನನ, ನೈಜ ದರಗಳು (ಇಂಟ್ರಿನ್ಸಿಕ್ ರೇಟ್ಸ್ ಆಫ್ ರಿಪ್ರೊಡಕ್ಷನ್), ನಂಬಲರ್ಹವಾದ ಜೀವಾಳಾಂಕಗಳಾಗಲಿ ನಿಷ್ಕೃಷ್ಟವಾದ ಜನಗಣತಿಯ ದತ್ತಾಂಶಗಳಾಗಲಿ ಇಲ್ಲದಾಗ ಜನನ ದರಗಳನ್ನು ಮತ್ತು ಜನಸಂಖ್ಯಾ ಬೆಳವಣಿಗೆಯ ದರಗಳನ್ನು ಅಂದಾಜು ಮಾಡಲು ನೆರವಾಗುವ ಸ್ಥಿರ ಜನಸಂಖ್ಯಾ ವಿಶ್ಲೇಷಣೆ (ಸ್ಟೇಬಲ್ ಪಾಪ್ಯುಲೇಷನ್ ಅನ್ಯಾಲಿಸಿಸ್), ಜನಸಂಖ್ಯಾ ವ್ಯತ್ಯಾಸಕ್ಕೆ ಕಾರಣವಾದ ವಿವಿಧಾಂಗಗಳ ಪ್ರವೃತ್ತಿಗಳ ವಿಶ್ಲೇಷಣೆಗೆ ಆಧಾರವಾದ ಜನಸಂಖ್ಯಾ ಮುನ್ನಂದಾಜುಗಳು (ಪಾಪ್ಯುಲೇಷನ್ ಪ್ರೊಜೆಕ್ಷನ್ಸ್) ಇವು ಇಂಥ ಇನ್ನು ಕೆಲವು ಮಾದರಿಗಳು. ಆರ್ಥಿಕಾಭಿವೃದ್ಧಿ, ಮಾರುಕಟ್ಟೆಯ ಸಂಶೋಧನೆ, ನಗರ ಯೋಜನೆ, ಶಿಕ್ಷಣಯೋಜನೆ, ಭವಿಷ್ಯದಲ್ಲಿ ಒದಗುವ ಕಾರ್ಮಿಕ ಸರಬರಾಯಿಯನ್ನು ಕುರಿತ ಅಂದಾಜು, ಉತ್ಪಾದಕರಾಗಿ ಮತ್ತು ಅನುಭೋಗಿಗಳಾಗಿ ಜನರು ಕೈಗೊಳ್ಳುವ ಚಟುವಟಿಕೆಗಳನ್ನು ಕುರಿತ ವಿವಿಧ ಅಧ್ಯಯನಗಳು–ಇವುಗಳಿಗೆಲ್ಲ ಜನಸಂಖ್ಯಾ ಮುನ್ನಂದಾಜುಗಳು ಅಗತ್ಯವೆನಿಸಿವೆ.

ಸ್ಥೂಲವಾದ ಹಾಗೂ ಜನಪ್ರಿಯವಾದ ಅರ್ಥದಲ್ಲಿ ಜನಸಂಖ್ಯಾಶಾಸ್ತ್ರದ ಸೀಮೆ ತುಂಬಾ ವಿಸ್ತೃತವಾದದ್ದು. ಸಾಮಾಜಿಕ ಹಾಗೂ ಜೈವಿಕ ಹಿನ್ನೆಲೆಗಳಲ್ಲಿ ಜನಸಂಖ್ಯಾ ಚರಗಳ (ವೇರಿಯಬಲ್ಸ್) ಅಧ್ಯಯನ ಕೂಡ ವ್ಯಾಪಕಾರ್ಥದಲ್ಲಿ ಜನಸಂಖ್ಯಾಶಾಸ್ತ್ರದ ಅಡಿಯಲ್ಲಿ ಬರುತ್ತದೆ. ಈ ದೃಷ್ಟಿಯಿಂದ ಜನಸಂಖ್ಯಾತ್ಮಕ ಬದಲಾವಣೆಗಳೂ ಅವುಗಳ ಸಾಮಾಜಿಕ ಪರಿಸರದ ಅಂಗವೆಂದು, ಅದಕ್ಕೆ ಕಾರಣೀಭೂತವೆಂದು ಮತ್ತು ಅದರ ಪರಿಣಾಮವೆಂದು ಪರಿಗಣಿಸಲಾಗಿದೆ. ಜನಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯೆಂದರೆ ಜನಸಂಖ್ಯಾ ದತ್ತಾಂಶಗಳ ಸಂಖ್ಯಾಕಲನಾತ್ಮಕ ಪ್ರಯೋಗ ಅಥವಾ ನಿರ್ವಹಣೆ ಮಾತ್ರವೇ ಅಲ್ಲ. ಅದಕ್ಕಿಂತ ಮುಖ್ಯವಾಗಿ ಅನುಭವಜನ್ಯ ಸಮಸ್ಯೆಗಳನ್ನು ಬಿಡಿಸುವ ಒಂದು ವಿಧಾನವಾಗಿ ಅಂಥ ದತ್ತಾಂಶಗಳ ಅಧ್ಯಯನವೂ ಇಂದು ಜನಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯೆನಿಸಿದೆ.

ಜನಸಂಖ್ಯೆಯ ಗಾತ್ರ ಮತ್ತು ಹಂಚಿಕೆ, ವಯೋಲಿಂಗಾನುಗುಣವಾಗಿ ಅದರ ವಿಂಗಡಣೆ, ಅಳೆಯಬಹುದಾದ ಅದರ ಕೆಲವು ಸಾಮಾಜಿಕ ಆರ್ಥಿಕ ಗುಣಲಕ್ಷಣಗಳು ಮುಂತಾದ ಜನಗಣತಿಯಲ್ಲಿ ಸಾಮಾನ್ಯವಾಗಿ ಸಂಗ್ರಹಿಸಲಾಗುವ, ಸಾಮೂಹಿಕ ಮಾಪನಗಳನ್ನೂ ಯಾದೃಚ್ಛಿಕವಾಗಿ ಜನಸಂಖ್ಯಾಶಾಸ್ತ್ರದ ಚರಗಳೆಂದು ಭಾವಿಸಲಾಗುತ್ತದೆ. ಜನಸಂಖ್ಯೆಯ ಗಾತ್ರ, ಅದರ ಭೌಗೋಳಿಕ ವಿತರಣೆ, ವಯೋಲಿಂಗಾನುಗುಣ ವಿಂಗಡಣೆ, ವೈವಾಹಿಕ ಸ್ಥಾನಮಾನ–ಈ ಚರಗಳು ಸಾಮಾನ್ಯವಾಗಿ ಜನಸಂಖ್ಯಾಶಾಸ್ತ್ರದ ಸಾಮಗ್ರಿಯೆಂದು ಪರಿಗಣಿತವಾಗಿವೆ. ಇತರ ಸಾಮಾಜಿಕ ಆರ್ಥಿಕ ಗುಣಲಕ್ಷಣಗಳಾದ ಜನಾಂಗ, ಭಾಷೆ, ಧರ್ಮ, ವಿದ್ಯೆ, ಕಸುಬು, ವರಮಾನ ಮುಂತಾದವನ್ನು ಸ್ವತಂತ್ರವಾಗಿ–ಹಲವು ವೇಳೆ ಜನನ ದರ, ಮರಣ ದರ, ವಲಸೆ ಮುಂತಾದವುಗಳಿಗೆ ಸಂಬಂಧಿಸಿದಂತೆ–ವಿವಿಧ ಗುಂಪುಗಳ ನಡುವೆ ಇರುವ ವ್ಯತ್ಯಾಸಗಳ ದೃಷ್ಟಿಯಲ್ಲಿ ಅಧ್ಯಯನಮಾಡುವುದುಂಟು.

ಈ ರೀತಿಯಾಗಿ ಜನಸಂಖ್ಯಾಶಾಸ್ತ್ರಜ್ಞರೂ ಇತರ ಸಮಾಜವಿಜ್ಞಾನಿಗಳೂ ಜನಸಂಖ್ಯೆಗಳನ್ನು ಇತರ ಚರಗಳಿಗೆ ಸಂಬಂಧಿಸಿದಂತೆ ಅಧ್ಯಯನಮಾಡುವುದರಿಂದ ಜನಸಂಖ್ಯಾಶಾಸ್ತ್ರ ಹಲವು ಶಾಸ್ತ್ರಗಳನ್ನೊಳಗೊಳ್ಳುವುದು ಅನಿವಾರ್ಯವಾಗುತ್ತದೆ. ಗ್ರಾಮೀಣ–ನಗರೀಯ ಜನವಲಸೆಯನ್ನು ಕುರಿತ ಅಧ್ಯಯನ ಇದಕ್ಕೆ ಒಂದು ಉದಾಹರಣೆ. ಅದನ್ನು ಕುರಿತ ಸಂಖ್ಯೆಗಳ ವಿವೇಚನೆ ಮಾತ್ರವೇ ಉದ್ದೇಶವಾದರೆ ಅಂಥ ಅಧ್ಯಯನ ಜನಸಂಖ್ಯಾಶಾಸ್ತ್ರಕವಾಗುತ್ತದೆ; ವಲಸೆಯ ಆರ್ಥಿಕ ಕಾರಣ ಹಾಗೂ ಪರಿಣಾಮಗಳ ಅಧ್ಯಯನವಾದರೆ ಅದು ಆರ್ಥಿಕವೆನಿಸುತ್ತದೆ; ಸಾಮಾಜಿಕ ಕಾರಣ –ಪರಿಣಾಮಗಳನ್ನು ಕುರಿತ ಅಧ್ಯಯನವಾದರೆ ಅದು ಸಾಮಾಜಿಕವೆನಿಸುತ್ತದೆ. ಆದ್ದರಿಂದ ಈ ವಿವಿಧ ಬಗೆಯ ಚಿಂತನಗಳ ನಡುವೆ ಖಚಿತವಾದ ವಿಭಜನರೇಖೆಯೇನೂ ಇಲ್ಲ, ಇರಬೇಕೆಂದು ನಿರೀಕ್ಷಿಸುವುದೂ ಸರಿಯಲ್ಲ. ಒಟ್ಟಿನಲ್ಲಿ ಜನಸಂಖ್ಯಾಶಾಸ್ತ್ರದ ವ್ಯಾಪ್ತಿ ಹಾಗೂ ಉದ್ದೇಶವನ್ನು ಕುರಿತು ಇಷ್ಟು ಹೇಳಬಹುದು: ಪರಿಮಾಣಾತ್ಮಕ ಅವಲೋಕನ ಮತ್ತು ಸಾರ್ವತ್ರೀಕರಣವನ್ನು ಆಧರಿಸಿದ ಜನಸಂಖ್ಯಾ ಸಿದ್ಧಾಂತಗಳು ಜನಸಂಖ್ಯಾ ಶಾಸ್ತ್ರದ ವ್ಯಾಪ್ತಿಯೊಳಗೆ ಬರುತ್ತವೆ. ಆದರೆ ಹೆಚ್ಚು ಅಮೂರ್ತವಾದ ಮತ್ತು ಚರ್ಚೆಯ ನೆಲೆಯಲ್ಲಿ ನಿಂತು, ಕಾರಣವನ್ನು ಹಿಡಿದು ಕಾರ್ಯವನ್ನು ತರ್ಕಿಸುವ–ಬುದ್ಧಿರೂಢವಾದ–ಸಿದ್ಧಾಂತಗಳು ಇದರ ಸೀಮೆಯವಲ್ಲ.

*

ಜನಸಂಖ್ಯೆಯ ಬೆಳವಣಿಗೆ ಹಾಗೂ ವಿತರಣೆಗಳಲ್ಲಿ ಕಂಡುಬರುವ ನಿಯಮಬದ್ಧವಾದ ವರ್ತನೆಯನ್ನು ಗುರುತಿಸಿ ನಿಯಮಗಳನ್ನು ಸೃಷ್ಟಿಸುವುದೇ ಜನಸಂಖ್ಯಾಶಾಸ್ತ್ರದ ಧ್ಯೇಯವಾದ್ದರಿಂದ, ಈ ಧ್ಯೇಯವನ್ನು ಸಾಧಿಸಲು ಜನಸಂಖ್ಯೆಯ ಬಗ್ಗೆ ಅಂಕಿ–ಅಂಶಗಳನ್ನು ಸಂಗ್ರಹಿಸಬೇಕು. ಹೀಗೆ ಸಂಗ್ರಹಿಸಿದ ಅಂಕಿ–ಅಂಶಗಳನ್ನು ಸಂಖ್ಯಾಕಲನಶಾಸ್ತ್ರ ಹಾಗೂ ಗಣಿತಶಾಸ್ತ್ರದ ಸಲಕರಣೆಗಳ ಸಹಾಯದಿಂದ ವಿಶ್ಲೇಷಿಸಿ ಜನಸಂಖ್ಯೆಯ ಮುಖ್ಯಾಂಶಗಳ ನಿಯಮಬದ್ಧವಾದ ವರ್ತನೆಯನ್ನು ಗುರುತಿಸಲಾಗುವುದು. ಈ ಕಾರಣದಿಂದ ಜನಸಂಖ್ಯಾಶಾಸ್ತ್ರವನ್ನು ಒಂದು ಸಮೀಕ್ಷಾಶಾಸ್ತ್ರವೆಂದು ಕರೆಯಬಹುದು. ಇಲ್ಲಿ ಶೋಧನೆಗಾಗಿ ಬಳಸುವ ವಿಧಾನ ಪ್ರಯೋಗರೂಪದ್ದಲ್ಲ, ಅದು ಅನುಭವೈಕ ವಿಧಾನ.

ಜನಸಂಖ್ಯಾಶಾಸ್ತ್ರ ಹೊಸದೇನೂ ಅಲ್ಲ ; ಇದು ಮೂರು ಶತಮಾನಗಳಿಗೂ ಹೆಚ್ಚು ಹಳೆಯದು. ಜಾನ್ ಗ್ರಾಂಟ್ ಎಂಬ ಆಂಗ್ಲ ವಿದ್ವಾಂಸ ಜನಸಂಖ್ಯಾಶಾಸ್ತ್ರದ ಜನಕನೆಂದು ಪರಿಗಣಿಸಲಾಗಿದೆ. ಇವನು 1662ರಲ್ಲಿ ಪ್ರಕಟಿಸಿದ ಒಂದು ಗ್ರಂಥದಲ್ಲಿ ಜನನ ಮತ್ತು ಮರಣಗಳ ನಿಯಮಬದ್ಧ ವರ್ತನೆಯನ್ನು ಗುರುತಿಸಿದ. ಗ್ರಾಂಟನ ಸ್ನೇಹಿತ ವಿಲಿಯಮ್ ಪೆಟಿ ಜನಸಂಖ್ಯೆಯ ಅಂಶಗಳನ್ನು ಆರ್ಥಿಕ ಸಮಸ್ಯೆಗಳಿಗೂ ರಾಜ್ಯದ ಧೋರಣೆಗಳಿಗೂ ಸಂಬಂಧಿಸಿದಂತೆ ಅಧ್ಯಯನ ಮಾಡಿದ. ಇವರಿಬ್ಬರ ಮಾದರಿಯನ್ನನುಸರಿಸಿ ಯುರೋಪ್, ಅಮೆರಿಕ ಮತ್ತು ಇತರ ರಾಷ್ಟ್ರಗಳಲ್ಲಿ ಜನಸಂಖ್ಯೆಯ ಅಂಶಗಳನ್ನು ಕುರಿತ ಅಧ್ಯಯನಗಳನ್ನು ಕೈಗೊಳ್ಳಲಾಗಿ ಜನಸಂಖ್ಯಾಶಾಸ್ತ್ರ ಒಂದು ಸಾಮಾಜಿಕ ಶಾಸ್ತ್ರವಾಗಿ ಬೆಳೆಯಿತು.

ಜನಸಂಖ್ಯೆ ಕುರಿತ ಅಂಶಗಳನ್ನು ಮೊಟ್ಟಮೊದಲು ಆರ್ಥಿಕ ದೃಷ್ಟಿಯಿಂದ ವಿವೇಚಿಸಿದವ ಥಾಮಸ್ ರಾಬರ್ಟ್ ಮಾಲ್ಥಸ್. ಈತ 1798ರಲ್ಲಿ ಪ್ರಕಟಿಸಿದ ಪುಸ್ತಕದಲ್ಲಿ ಜನಸಂಖ್ಯೆಯ ಸಿದ್ಧಾಂತವೊಂದನ್ನು ಪ್ರತಿಪಾದಿಸುತ್ತ ಆದಾಯಕ್ಕೂ ಜನಸಂಖ್ಯೆಯ ವೃದ್ಧಿಗೂ ನೇರವಾದ ಸಂಬಂಧವಿದೆಯೆಂದೂ ಹೇಳಿದ. ಅಲ್ಲದೆ ಜನಸಂಖ್ಯೆಗೆ ಆಹಾರವಸ್ತುಗಳಿಗಿಂತ ಅಧಿಕ ದರದಲ್ಲಿ ಬೆಳೆಯುವ ಪ್ರವೃತ್ತಿ ಇರುವುದರಿಂದ, ನಿರಂತರವಾಗಿ ಬೆಳೆಯುವ ಜನಸಂಖ್ಯೆಯೇ ಆರ್ಥಿಕ ಅಭಿವೃದ್ಧಿಯ ಪ್ರಯೋಜನವೆಲ್ಲವನ್ನೂ ಹೀರಿಕೊಳ್ಳುತ್ತದೆ; ಆದಕಾರಣ ಆರ್ಥಿಕತೆಯಲ್ಲಿ ದಾರಿದ್ರ್ಯ ಉದ್ಭವಿಸುತ್ತದೆ–ಎಂಬ ಅಭಿಪ್ರಾಯವನ್ನು ಮಂಡಿಸಿದ. ಮಾಲ್ಥಸನ ಈ ಮೀಮಾಂಸೆ ಅಭಿಜಾತ ಅರ್ಥಶಾಸ್ತ್ರಜ್ಞರ ಮೇಲೆ ಪ್ರಭಾವ ಬೀರಿತು. ಆದರೆ 19ನೆಯ ಶತಮಾನದಲ್ಲಿ ಯುರೋಪಿನಲ್ಲಿ ಜನಸಂಖ್ಯೆಗಿಂತ ಹೆಚ್ಚಿನ ದರದಲ್ಲಿ ಆರ್ಥಿಕ ಅಭಿವೃದ್ಧಿ ಉಂಟಾದದ್ದರಿಂದ ಜೀವನಮಟ್ಟ ಏರಿಕೆಗೊಂಡರೂ ಜನನ ದರ ಏರುವುದಕ್ಕೆ ಬದಲು ಇಳಿದದ್ದರಿಂದ ಮಾಲ್ಥಸನ ಮೀಮಾಂಸೆಯ ತಳಹದಿಯನ್ನು ಉರುಳಿಸಿದಂತಾಯಿತು. ಆರ್ಥಿಕ ಅಭಿವೃದ್ಧಿಯ ಮೇಲೆ ಜನಸಂಖ್ಯೆಯ ಬೆಳವಣಿಗೆಯ ಪ್ರಭಾವ ಮಾಲ್ಥಸ್ ತಿಳಿದಷ್ಟು ಇಲ್ಲ ಎಂಬ ಅಭಿಪ್ರಾಯ ಈ ವೇಳೆಗಾಗಲೇ ಬೆಳೆದುಬಂದಿತ್ತು.

ಆದರೆ ಒಂದನೆಯ ಮಹಾಯುದ್ಧದ ಅನಂತರ ಜನಸಂಖ್ಯೆಯ ವೃದ್ಧಿಯ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ ಶೋಧನೆ ಪ್ರಾರಂಭವಾಯಿತು. ಜನನ ದರ ಸಾಮಾಜಿಕ ಪರಸರದಿಂದ ಪ್ರಭಾವಿತವಾಗುತ್ತದೆ–ಎಂಬ ಅಂಶ ಈ ಶೋಧನೆಗಳಿಂದ ಬೆಳಕಿಗೆ ಬಂದಿತು. ಮುಂದುವರಿದ ಸಮಾಜಗಳಲ್ಲಿ ಕುಟುಂಬ ಯೋಜನೆಯ ಕ್ರಮಗಳನ್ನು ಸ್ವಇಚ್ಛೆಯಿಂದ ಅನುಸರಿಸುವರೆಂಬುದೂ ಜನನ ನಿಯಂತ್ರಣ ಕ್ರಮಗಳನ್ನು ಅನುಸರಿಸುವುದರಲ್ಲಿ ಮೊದಲಿಗರು ನಗರ ಮತ್ತು ಪಟ್ಟಣವಾಸಿಗಳು ಹಾಗೂ ವಿದ್ಯಾವಂತರು ಮತ್ತು ಹೆಚ್ಚು ಆದಾಯವುಳ್ಳವರು ಎಂಬುದೂ ತಿಳಿಯಿತು. ಈ ಶೋಧನೆಗಳನ್ನು ಮುಂದುವರಿಸಿ ಜನನ ಮತ್ತು ಮರಣ ದರಗಳನ್ನು ಕಾಲಾನುಗುಣವಾಗಿ ಹಾಗೂ ಕ್ಷೇತ್ರಾನುಗಣವಾಗಿ ಪರೀಕ್ಷಿಸಿ ನೋಡಿದಾಗ, ಅವುಗಳ ಬಗ್ಗೆ ಕೆಲವು ನಿಯಮ ಬದ್ಧವಾದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಜನಸಂಖ್ಯೆಯ ಬೆಳವಣಿಗೆಯ ಬಗ್ಗೆ ಮತ್ತೊಂದು ಸಿದ್ಧಾಂತವನ್ನು ಮಂಡಿಸಲಾಯಿತು. ಇದೇ ಜನಸಂಖ್ಯಾವಸ್ಥಾ ಪರಿವರ್ತನ ಸಿದ್ಧಾಂತ. ಜನಸಂಖ್ಯೆಯ ಬೆಳವಣಿಗೆಯ ಮೇಲೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಬೀರುವ ಪ್ರಭಾವವನ್ನು ಈ ಸಿದ್ಧಾಂತ ತೋರಿಸಿಕೊಡುತ್ತದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ರಾಷ್ಟ್ರದಲ್ಲಿ ಮೂಲಭೂತವಾಗಿ ವ್ಯಾವಸಾಯಿಕ ಆರ್ಥಿಕತೆ ಇರುತ್ತದೆ. ಅಲ್ಲಿ ಜನನ ದರ, ಮರಣ ದರ ಎರಡೂ ಅಧಿಕ. ಜನನ ದರ ಅಧಿಕವಾಗಿರಲು ಕಾರಣವಾಗುವ ಅಂಶಗಳು ಶೀಘ್ರ ಮದುವೆ ಹಾಗೂ ಜನರ ಸಾಮಾಜಿಕ ಮತ್ತು ಧಾರ್ಮಿಕ ಮನೋಭಾವ. ಅಸಮರ್ಪಕ ಆಹಾರ, ನೈರ್ಮಲ್ಯವಿಲ್ಲದ ವಾತಾವರಣ ಮತ್ತು ಸಾಕಷ್ಟು ಆರೋಗ್ಯ ಸೌಲಭ್ಯದ ಅಭಾವ–ಈ ಕಾರಣಗಳಿಂದಾಗಿ ಇಲ್ಲಿ ಮರಣ ದರವೂ ಹೆಚ್ಚಾಗಿರುತ್ತದೆ. ಆದ್ದರಿಂದ ಜನಸಂಖ್ಯೆಯ ಬೆಳವಣಿಗೆಯ ದರ ಅಷ್ಟು ಅಧಿಕವಾಗಿರುವುದಿಲ್ಲ. ಆದರೆ ಆರ್ಥಿಕ ಅಭಿವೃದ್ಧಿ ಆದಂತೆಲ್ಲ ರಾಷ್ಟ್ರದ ಆದಾಯ ಹೆಚ್ಚುವ ಕಾರಣ ಆಹಾರ, ನೈರ್ಮಲ್ಯ ಮತ್ತು ಆರೋಗ್ಯ ಸೌಲಭ್ಯಗಳು ಉತ್ತಮಗೊಳ್ಳುತ್ತವೆ. ಆದಕಾರಣ ಮರಣದರ ಕಡಿಮೆಯಾಗುತ್ತದೆ. ಆದರೆ ಜನರ ಸಾಮಾಜಿಕ ಮತ್ತು ಧಾರ್ಮಿಕ ಮನೋಭಾವಗಳು ಹಾಗೆಯೇ ಉಳಿಯುವುದರಿಂದ ಜನನ ದರದಲ್ಲಿ ಇಳಿಕೆ ಕಂಡುಬರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ಜನಸಂಖ್ಯೆ ಹೆಚ್ಚಿನ ದರದಲ್ಲಿ ಬೆಳೆಯಲು ಪ್ರಾರಂಭವಾಗುತ್ತದೆ. ಆದರೆ ಮುಂದಿನ ಹಂತದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಪಾಶ್ಚಾತ್ಯ ರಾಷ್ಟ್ರಗಳ ಮಟ್ಟವನ್ನು ಮುಟ್ಟಿದರೆ ಜನರ ಮನೋಭಾವನೆಗಳಲ್ಲಿ ಬದಲಾವಣೆಗಳು ತೋರಿಬಂದು ಕುಟುಂಬ ಯೋಜನಾಕ್ರಮಗಳನ್ನು ಅನುಸರಿಸಲಾಗುವುದು. ಆಗ ಜನನ ದರವೂ ಇಳಿಕೆಗೊಳ್ಳುವುದು. ಜನನ ಮತ್ತು ಮರಣ ದರಗಳು ಒಂದು ಮಟ್ಟದಲ್ಲಿ ಸ್ಥಿರಗೊಂಡು ಜನಸಂಖ್ಯೆ ಕಡಿಮೆ ದರದಲ್ಲಿ ಬೆಳೆಯಲು ಪ್ರಾರಂಭಿಸುವುದು.

ಈ ಸಿದ್ಧಾಂತ ಜನಸಂಖ್ಯಾಶಾಸ್ತ್ರದ ಬೆಳವಣಿಗೆಯನ್ನು ಅನೇಕ ರೀತಿಯಲ್ಲಿ ಪುಷ್ಟೀಕರಿಸಿತು. ಜನನ ಮತ್ತು ಮರಣದರಗಳ ಪ್ರವೃತ್ತಿಯನ್ನು ಸಮೀಕ್ಷಿಸಿ ಜನಸಂಖ್ಯೆಯ ಬೆಳವಣಿಗೆಯನ್ನು ಕಾಲ ಮತ್ತು ಕ್ಷೇತ್ರಗಳಿಗನುಸಾರವಾಗಿ ಪ್ರಕ್ಷೇಪಿಸುವ (ಪ್ರೊಜೆಕ್ಟ್) ಕ್ರಮಗಳನ್ನು ಕಲ್ಪಿಸುವುದರಲ್ಲಿ ಸಹಾಯ ಮಾಡಿತು. ಹಾಗೂ ಈ ಕ್ರಮಗಳನ್ನು ಅನುಸರಿಸಿ ಜನನ ದರವನ್ನು ನಿರ್ಧರಿಸುವ ಅಂಶಗಳು ಯಾವುವೆಂಬುದನ್ನು ತೋರಿಸಿಕೊಡುವಂಥ ಅವಲೋಕನಗಳನ್ನು ಕೈಗೊಳ್ಳುವ ಸಾಧ್ಯತೆಯೂ ಉಂಟಾಯಿತು. ಈಚೆಗೆ ಜನಸಂಖ್ಯಾಶಾಸ್ತ್ರದಲ್ಲಿ ಆಗಿರುವ ಎರಡು ಗಮನಾರ್ಹ ವಿಕಾಸಗಳಿವು: 1. ಭವಿಷ್ಯದಲ್ಲಿ ಜನಸಂಖ್ಯೆಯಲ್ಲಿ ಆಗುವ ಬೆಳವಣಿಗೆಯನ್ನು ಮುನ್ನಂದಾಜು ಮಾಡುವ ಕ್ರಮಗಳ ವೃದ್ಧಿ. 2. ಜನಸಂಖ್ಯೆಯ ಬೆಳವಣಿಗೆಯನ್ನುಂಟುಮಾಡುವ ಅಂಶಗಳಾವುವು ಎಂಬುದನ್ನು ನಿರ್ಧರಿಸಲು ಸಹಾಯಕವಾದ ಅವಲೋಕನಗಳು. ಈ ಎರಡು ಅಂಶಗಳು ಜನಸಂಖ್ಯಾಶಾಸ್ತ್ರದ ಎರಡು ಮುಖಗಳನ್ನು ಪ್ರತಿನಿಧಿಸುತ್ತವೆ. ಮೊದಲನೆಯದು ಜನಸಂಖ್ಯಾಶಾಸ್ತ್ರಾಧ್ಯಯನಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸಿದರೆ, ಎರಡನೆಯದು ಜನಸಂಖ್ಯಾಶಾಸ್ತ್ರದ ಆನ್ವಯಿಕ ಮುಖವನ್ನು ಸೂಚಿಸುತ್ತದೆ. ಈಚೆಗೆ ಆನ್ವಯಿಕ ಜನಸಂಖ್ಯಾಶಾಸ್ತ್ರವೆಂಬ ಒಂದು ಪ್ರತ್ಯೇಕ ಶಾಖೆಯೇ ವೃದ್ಧಿಗೊಂಡು, ರಾಷ್ಟ್ರದ ಜನಸಂಖ್ಯಾ ನೀತಿ ಹಾಗೂ ಕುಟುಂಬ ಯೋಜನೆಗೆ ಅಗತ್ಯವಾದ ಅಂಕಿ–ಅಂಶಗಳನ್ನು ಒದಗಿಸುವುದರಲ್ಲಿ ಸಮರ್ಥವಾಗಿದೆ. ಈ ಶಾಖೆ ಕುಟುಂಬ ಯೋಜನೆಗೆ ಆವಶ್ಯಕವಾದ ಭಾವನೆಯ ಅಧ್ಯಯನಗಳನ್ನೂ ಪ್ರಾಯೋಗಿಕ ಕಾರ್ಯಕ್ರಮಗಳನ್ನೂ ಕೈಗೊಳ್ಳುವುದರಲ್ಲಿ ಮಗ್ನವಾಗಿದೆ.

ಹಿಂದೆ ಹೇಳಿದಂತೆ ಜನಸಂಖ್ಯಾಶಾಸ್ತ್ರ ಹಲವಾರು ಶಾಸ್ತ್ರಗಳ ಸಂಗಮಕ್ಷೇತ್ರ. ಅದಕ್ಕೆ ಸಮಾಜಶಾಸ್ತ್ರದಲ್ಲಿ ಆಳವಾದ ಬೇರು. ಅರ್ಥಶಾಸ್ತ್ರ, ಸಂಖ್ಯಾಕಲನಶಾಸ್ತ್ರ, ಭೂಗೋಳವಿಜ್ಞಾನ, ಮಾನವಪರಿಸರವಿಜ್ಞಾನ, ಜೀವವಿಜ್ಞಾನ, ವೈದ್ಯವಿಜ್ಞಾನ, ಮಾನವತಳಿವಿಜ್ಞಾನ ಮುಂತಾದವುಗಳೊಂದಿಗೆ ಇದು ನಿಕಟ ಸಂಬಂಧ ಹೊಂದಿದೆ. ಇದನ್ನು ಸಂಪೂರ್ಣವಾಗಿ ಪ್ರತ್ಯೇಕ ಶಾಸ್ತ್ರವೆಂದು ಪರಿಗಣಿಸುವುದು ವಿರಳ. ಈ ವಿವಿಧ ವಿಜ್ಞಾನಗಳಿಗೆ ಶಾಖೆಯಾಗಿ ಅಥವಾ ಆನುಷಂಗಿಕವಾಗಿ, ಅವುಗಳ ಅಂತರವನ್ನು ತುಂಬುವ ವಿಷಯವಾಗಿ ಇದು ಬೆಳೆಯುತ್ತಿದೆ. ಜನಸಂಖ್ಯೆಯ ಸಮಸ್ಯೆಯ ಬಗ್ಗೆ ಸಾರ್ವಜನಿಕರಲ್ಲೂ ಸರ್ಕಾರಗಳಲ್ಲೂ ಉಂಟಾಗಿರುವ ಆಸಕ್ತಿಯ ಕಾರಣದಿಂದ ಜನಸಂಖ್ಯಾಶಾಸ್ತ್ರ ಇತ್ತೀಚೆಗೆ ಹೆಚ್ಚು ಪ್ರಾಮುಖ್ಯ ಪಡೆಯುತ್ತಿದೆ ಹಾಗೂ ಜನಪ್ರಿಯವಾಗುತ್ತಿದೆ. ಹಿಂದುಳಿದ ರಾಷ್ಟ್ರಗಳಲ್ಲಿ ಸಂಭವಿಸಿರುವ ಜನಸಂಖ್ಯಾ ಸ್ಫೋಟವೂ ಕುಟುಂಬಯೋಜನಾ ಕಾರ್ಯಕ್ರಮಗಳನ್ನು ಸರ್ಕಾರಗಳು ತೀವ್ರವಾಗಿ ಕೈಗೊಳ್ಳುತ್ತಿರುವುದೂ ಜನಸಂಖ್ಯಾಶಾಸ್ತ್ರಾಧ್ಯಯನಕ್ಕೆ ಹೊಸ ಪ್ರೇರಣೆ ನೀಡಿವೆ. ಅಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಯೋಜನೆಗಳನ್ನು ಕೈಗೊಳ್ಳುತ್ತಿರುವ ರಾಷ್ಟ್ರಗಳು ಜನಸಂಖ್ಯಾಂಶಗಳ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸುವುದರ ಆವಶ್ಯಕತೆಯನ್ನು ಮನಗಂಡು ಈ ಬಗ್ಗೆ ಸಂಶೋಧನೆಯನ್ನು ಉತ್ತೇಜಿಸಿವೆ. ಇನ್ನು ಮುಂದೆ ಜನಸಂಖ್ಯೆಯನ್ನು ಕುರಿತ ಅಂಕಿ–ಅಂಶಗಳಿಗೆ ಬೇಡಿಕೆ ನಿರಂತರವಾಗಿ ಹೆಚ್ಚುವುದರಿಂದ ಜನಸಂಖ್ಯಾಶಾಸ್ತ್ರ ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಪ್ರಾಮುಖ್ಯ ಪಡೆಯಬಹುದು. (ಎಬಿ.ಎ.)

## II ಜನಸಂಖ್ಯಾ ಸಿದ್ಧಾಂತಗಳು

ಅರ್ಥಶಾಸ್ತ್ರದ ಅಧ್ಯಯನದಲ್ಲಿ ಜನಸಂಖ್ಯೆ ಮತ್ತು ಆರ್ಥಿಕ ಪರಿಸ್ಥಿತಿ ಇವುಗಳ ನಡುವೆ ಇರುವ ಪರಸ್ಪರ ಸಂಬಂಧದ ಪರಿಶೀಲನೆ ಒಂದು ಮುಖ್ಯ ಭಾಗವಾಗಿದೆ. ಕಾರ್ಮಿಕ ಬಲ, ಕಾರ್ಮಿಕರ ಉತ್ಪಾದನ ಸಾಮರ್ಥ್ಯ, ಉದ್ಯಮಶೀಲತೆ ಇತ್ಯಾದಿ ಅಂಶಗಳು ಜನರ ಸಂಖ್ಯೆ ಹಾಗೂ ಗುಣಗಳನ್ನು ಅವಲಂಬಿಸಿವೆ. ಈ ಅಂಶಗಳು ಆರ್ಥಿಕ ಬೆಳವಣಿಗೆಯಲ್ಲಿ ಮುಖ್ಯವಾಗಿವೆ. ಸರಕು ಮತ್ತು ಸೇವೆಗಳ ಬೇಡಿಕೆಯ ಪರಿಮಾಣ ಹಾಗೂ ಸ್ವರೂಪವನ್ನು ನಿರ್ಣಯಿಸುವುದರಲ್ಲೂ ಜನಸಂಖ್ಯೆ ಹಾಗೂ ಇದಕ್ಕೆ ಸಂಬಂಧಪಟ್ಟ ವಿವರಗಳು ಮುಖ್ಯಾಂಶಗಳಾಗಿವೆ. ಹೀಗೆ ಜನಸಂಖ್ಯೆಗೆ ಸಬಂಧಪಟ್ಟ ಜನನ ಮರಣದರಗಳು, ಜನಸಂಖ್ಯಾ ಏರಿಕೆದರ, ವಯಸ್ಸು ಲಿಂಗ ವೃತ್ತಿಗಳಿಗೆ ಅನುಗುಣವಾಗಿ ಜನಸಂಖ್ಯೆಯ ಸಂಯೋಜನೆ, ಜನಸಂಖ್ಯೆಯ ವಿತರಣೆ ಮತ್ತು ಚಲನೆ–ಇವಕ್ಕೂ ಸರಕುಸೇವೆಗಳ ಉತ್ಪಾದನೆ ಮತ್ತು ಬೇಡಿಕೆಗಳಿಗೂ ನಿಕಟ ಸಂಬಂಧ ಇದೆ. ಈ ಸಂಬಂಧದ ಸ್ವರೂಪವನ್ನು ವಿಶ್ಲೇಷಿಸುವುದೇ ಜನಸಂಖ್ಯಾ ಸಿದ್ಧಾಂತಗಳ ಉದ್ದೇಶ. ಅರ್ಥಶಾಸ್ತ್ರ ಹುಟ್ಟಿದ ಕಾಲದಿಂದ ಇಂದಿನವರೆಗೆ ಅರ್ಥಶಾಸ್ತ್ರಜ್ಞರೂ ಜನಸಂಖ್ಯಾಶಾಸ್ತ್ರಜ್ಞರೂ ವಿವಿಧ ಜನಸಂಖ್ಯಾ ಸಿದ್ಧಾಂತಗಳನ್ನು ನಿರೂಪಿಸಿದ್ದಾರೆ. ಇವುಗಳಲ್ಲಿ ಮಾಲ್ಥಸನ ಸಿದ್ಧಾಂತ (ಮಾಲ್ಥೂಸಿಯನ್ ತಿಯರಿ), ಅನುಕೂಲತಮ ಜನಸಂಖ್ಯಾ ಸಿದ್ಧಾಂತ (ತಿಯರಿ ಆಫ್ ಆಪ್ಟಿಮಮ್ ಪಾಪ್ಯುಲೇಷನ್), ಜನಸಂಖ್ಯಾ ಪರಿವರ್ತನ ಸಿದ್ಧಾಂತ (ತಿಯರಿ ಆಫ್ ಡಿಮೋಗ್ರಾಫಿಕ್ ಟ್ರಾನ್ಸಿಷನ್)–ಇವು ಹೆಚ್ಚು ಪ್ರಚುರವಾದ ಸಿದ್ಧಾಂತಗಳಾಗಿವೆ.

**ಮಾಲ್ಥಸನ ಸಿದ್ಧಾಂತ :** ಥಾಮಸ್ ರಾಬರ್ಟ್ ಮಾಲ್ಥಸ್ (1766–1834) ಎಂಬ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಜನಸಂಖ್ಯಾ ತತ್ತ್ವ ಕುರಿತು 1798ರಲ್ಲಿ ಪ್ರಕಟಿಸಿದ ಒಂದು ಲೇಖನದಲ್ಲಿ ಜನಸಂಖ್ಯೆಯ ಬಗ್ಗೆ ತನ್ನ ವಿಚಾರಗಳನ್ನು ಮಂಡಿಸಿದ್ದಾನೆ. ಇವೇ ಮಾಲ್ಥಸನ ಜನಸಂಖ್ಯಾ ಸಿದ್ಧಾಂತ ಎಂದು ಅಂದಿನಿಂದಲೂ ಪ್ರಚುರವಾಗಿವೆ. ಆತನ ಸಿದ್ಧಾಂತದ ಮುಖ್ಯಾಂಶಗಳು ಇವು :

ಜನರ ಪೋಷಣೆಗೆ ಅಗತ್ಯವಾದ ಸರಕುಗಳನ್ನು ಉತ್ಪಾದಿಸಲು ಭೂಮಿಗೆ ಇರುವ ಶಕ್ತಿಗಿಂತಲೂ ಜನಸಂಖ್ಯೆ ವೃದ್ಧಿಯಾಗುವ ಪ್ರವೃತ್ತಿ ಹೆಚ್ಚು ಪ್ರಬಲವಾಗಿದೆ. ನಿಸರ್ಗ ಧಾರಾಳಿಯಲ್ಲ. ಭೂಮಿಯಿಂದ ಫಸಲು ಪಡೆಯಲು ಶ್ರಮ ಮತ್ತು ಬಂಡವಾಳಗಳನ್ನು ಹೆಚ್ಚಿಸುತ್ತ ಬಂದರೆ ಒಟ್ಟು ಫಸಲು ಹೆಚ್ಚುವುದಾದರೂ ಈ ಹೆಚ್ಚುವರಿಯ ದರ ಕಡಿಮೆಯಾಗುತ್ತ ಬರುತ್ತದೆ. ಆಹಾರಧಾನ್ಯಗಳ ಉತ್ಪಾದನೆ ಹೀಗೆ ಇಳಿಮುಖ ಪ್ರತಿಫಲ ನಿಯಮಕ್ಕೆ ಒಳಪಟ್ಟಿದೆ. ಆಹಾರ ಉತ್ಪಾದನೆ 1, 2, 3, 4, 5, 6, 7, 8, 9–ಹೀಗೆ ಸಮಾಂತರ ಶ್ರೇಢಿಯಲ್ಲಿ ಹೆಚ್ಚಬಲ್ಲುದು. ಆದರೆ ಜನಸಂಖ್ಯೆ 1, 2, 4, 8, 16, 32, 64–ಹೀಗೆ ಗುಣೋತ್ತರ ಶ್ರೇಢಿಯಲ್ಲಿ ಹೆಚ್ಚುವ ಪ್ರವೃತ್ತಿ ಬಲವಾಗಿರುವುದು. ಏಕೆಂದರೆ ಜನೋತ್ಪತ್ತಿ ಸಾಮರ್ಥ್ಯದ ರೀತಿಯೇ ಹೀಗಿದೆ. ಮಾನವನ ಲೈಂಗಿಕ ಇಚ್ಛೆಯ ಒತ್ತಡ, ಪ್ರಜನನ ದರ–ಇವೆರಡೂ ಈ ಪ್ರವೃತ್ತಿಗೆ ಕಾರಣವಾಗಿವೆ.

ಆಹಾರೋತ್ಪತ್ತಿ, ಜನೋತ್ಪತ್ತಿ ಇವೆರಡೂ ಹೀಗೆ ಭಿನ್ನ ದರಗಳಲ್ಲಿ ಉಂಟಾಗುವುದರಿಂದ ಆಹಾರ ಸರಬರಾಜು ಮತ್ತು ಜನಸಂಖ್ಯೆಗಳ ನಡುವೆ ಇರಬೇಕಾದ ಸಮತೋಲ ತಪ್ಪುತ್ತದೆ. ಆಹಾರೋತ್ಪಾದನೆಯನ್ನು ಜನಸಂಖ್ಯೆ ಮೀರುವ ಪ್ರವೃತ್ತಿ ಇರುತ್ತದೆ. ಈ ಅಸಮತೋಲ ಪರಿಸ್ಥಿತಿ ಸಂಭವಿಸದಂತೆ ನೋಡಿಕೊಳ್ಳಬೇಕಾದರೆ ಜನರು ಜನಸಂಖ್ಯಾ ಏರಿಕೆಯ ವಿರುದ್ಧವಾಗಿ ನಿವಾರಕ ತಡೆಗಳನ್ನು ಅನುಸರಿಸಬೇಕೆಂಬುದು ಮಾಲ್ಥಸನ ಅಭಿಪ್ರಾಯವಾಗಿತ್ತು.

ಬ್ರಹ್ಮಚರ್ಯೆ, ತಡವಾಗಿ ಮದುವೆಯಾಗುವುದು, ಮದುವೆಯಾದವರು ಆತ್ಮಸಂಯಮದಿಂದ ನಡೆದುಕೊಂಡು ಹೆಚ್ಚು ಮಕ್ಕಳಾಗದಂತೆ ನೋಡಿಕೊಳ್ಳುವುದು–ಇವು ಮಾಲ್ಥಸ್ ಯೋಚಿಸಿದ್ದ ಇಂಥ ನಿವಾರಕ ತಡೆಗಳು.

ಜನರು ವಿವೇಕದಿಂದ ನಿವಾರಕ ತಡೆಗಳ ಮೂಲಕ ಜನವೃದ್ಧಿಯನ್ನು ಹತೋಟಿಯಲ್ಲಿ ಇಡದಿದ್ದರೆ ಪ್ರಕೃತಿ ತನ್ನದೇ ಆದ ಕ್ರೂರ ಪರಿಹಾರವನ್ನು ಮಾನವ ಜನಾಂಗದ ಮೇಲೆ ಹೇರುವುದೆಂದು ಮಾಲ್ಥಸ್ ಸಾರಿದ. ರೋಗರುಜಿನಗಳು, ಕ್ಷಾಮ ಹಾಗೂ ದುರ್ಭಿಕ್ಷ, ಪ್ರವಾಹ, ಭೂಕಂಪ, ಯುದ್ಧ ಮುಂತಾದವು ಪ್ರಾಕೃತಿಕ ತಡೆಗಳು. ಈ ತಡೆಗಳು ಮರಣದರವನ್ನು ಹೆಚ್ಚಿಸಿ ಜನಸಂಖ್ಯೆಯನ್ನು ಇಳಿಸುತ್ತವೆ. ಮೇಲೆ ಹೇಳಿದ ನಿವಾರಕ ತಡೆಗಳು ಜನನ ದರವನ್ನು ಕಡಿಮೆ ಮಾಡಿ, ಜನಸಂಖ್ಯೆ ಮಿತಿಮೀರುವುದನ್ನು ತಪ್ಪಿಸುವುವು. ಸಕಾಲದಲ್ಲಿ ನಿವಾರಕ ಉಪಾಯಗಳನ್ನು ಕೈಗೊಳ್ಳದಿದ್ದರೆ ಪ್ರಾಕೃತಿಕ ತಡೆಗಳು ತಾವಾಗಿಯೇ ಆಚರಣೆಗೆ ಬರುವುವೆಂಬುದು ಮಾಲ್ಥಸನ ವಾದ. ಪ್ರಾಕೃತಿಕ ತಡೆಗಳು ಆಚರಣೆಗೆ ಬರುವ ಪರಿಸ್ಥಿತಿಯನ್ನು ತಪ್ಪಿಸುವುದು ಉತ್ತಮ ಎಂಬುದು ಸುಸ್ಪಷ್ಟ. ಬರ, ರೋಗ, ಉಪವಾಸ ಇತ್ಯಾದಿ ಕಷ್ಟಗಳನ್ನು ತಪ್ಪಿಸುವ ದೃಷ್ಟಿಯಿಂದ ನಿವಾರಕ ತಡೆಗಳನ್ನು ಜನರು ಅಭ್ಯಸಿಸಬೇಕೆಂಬುದು ಮಾಲ್ಥಸನ ಉಪದೇಶ. ಜೀವನಾಧಾರವಾದ ಆಹಾರ ಪದಾರ್ಥಗಳ ಮಿತಿಯಿಂದಾಗಿ ಜನಸಂಖ್ಯೆಯ ಏರಿಕೆಗೆ ತಡೆಯುಂಟಾಗುವುದೆಂಬುದೂ, ಆಹಾರ ಸರಬರಾಜನ್ನು ಹೆಚ್ಚಿಸುವ ಸಾಮರ್ಥ್ಯ ಮತ್ತು ಆರ್ಥಿಕ ಜೀವನಮಟ್ಟದ ಏರಿಕೆಯಿಂದ ಜನಸಂಖ್ಯೆಯ ಬೆಳವಣಿಗೆಯಾಗುವುದೆಂಬುದೂ ಮಾಲ್ಥಸನ ಭಾವನೆ. ಮಾಲ್ಥಸನ ಸಿದ್ಧಾಂತ ಸಾಮಾನ್ಯವಾಗಿ ಅಭಿಜಾತ ಆರ್ಥಿಕ ಪಂಥದ ಭಾವನೆಗಳನ್ನು ಪ್ರತಿಬಿಂಬಿಸುವುದೆಂದು ಹೇಳಬಹುದು.

ಸಿದ್ಧಾಂತದ ದೋಷಗಳು : ಮಾಲ್ಥಸನ ಸಿದ್ಧಾಂತ ಅನೇಕ ಟೀಕೆಗಳಿಗೆ ಒಳಗಾಗಿದೆ. ಮಾಲ್ಥಸನ ಕಾಲದಲ್ಲಿ ಬೆಳೆಯುತ್ತಿದ್ದ ಬಂಡವಾಳಶಾಹಿ ಪದ್ಧತಿಯಲ್ಲಿ ಬಂಡವಾಳಗಾರರು ಕಾರ್ಮಿಕರಿಗೆ ಜೀವನ ನಿರ್ವಹಣ ಕೂಲಿ ಸಿದ್ಧಾಂತಕ್ಕೆ ಅನುಸಾರವಾಗಿ ಕಡಿಮೆ ಕೂಲಿ ಕೊಟ್ಟು ಅವರಿಂದ ಹೆಚ್ಚು ದುಡಿಸಿಕೊಳ್ಳುತ್ತಿದ್ದರು. ಕೂಲಿದರ ಜೀವನ ನಿರ್ವಹಣ ಮಟ್ಟಕ್ಕೆ ಹೆಚ್ಚಿದರೆ ಜನಸಂಖ್ಯೆ ವೇಗವಾಗಿ ಬೆಳೆಯಲು ಕಾರಣವಾಗುವುದೆಂದೂ, ಹಾಗೆ ಬೆಳೆದರೆ ಕೂಲಿ ದರ ತಗ್ಗುವುದೆಂದೂ ವಾದಿಸಲು ಅಂದಿನ ಬಂಡವಾಳಗಾರರಿಗೆ ಮಾಲ್ಥಸನ ಸಿದ್ಧಾಂತ ಮಾರ್ಗ ಮಾಡಿಕೊಟ್ಟಿತೆಂದು ಆಕ್ಷೇಪಿಸಿಲಾಗಿದೆ.

ಆಹಾರೋತ್ಪಾದನೆ ಸಮಾಂತರ ಶ್ರೇಢಿಯಲ್ಲೂ, ಜನಸಂಖ್ಯೆ ಗುಣೋತ್ತರ ಶ್ರೇಢಿಯಲ್ಲೂ ಅಧಿಕವಾಗುವುದೆಂದು ಎಂದರೆ ಜನಸಂಖ್ಯೆ 25 ವರ್ಷಗಳಲ್ಲಿ ದ್ವಿಗುಣಿಸುವುದೆಂದೂ–ಮಾಲ್ಥಸ್ ಹೇಳಿರುವುದಕ್ಕೆ ವಾಸ್ತವ ಐತಿಹಾಸಿಕ ಆಧಾರವಿಲ್ಲದಿರುವುದು ಆತನ ಸಿದ್ಧಾಂತದ ಒಂದು ದೋಷವೆಂದು ಹೇಳಲಾಗಿದೆ.

ಆಹಾರೋತ್ಪಾದನೆ ಇಳಿಮುಖ ಪ್ರತಿಫಲ ನಿಯಮಕ್ಕೆ ಅನುಗುಣವಾಗಿ ಇರುವುದೆಂದು ಆತ ವಾದಿಸಿದಾಗ, ವೈಜ್ಞಾನಿಕ ಕ್ರಮಗಳಿಂದ ಕೃಷಿ ಉತ್ಪನ್ನವನ್ನು ಗಮನಾರ್ಹವಾಗಿ ಹೆಚ್ಚಿಸುವುದರ ಸಾಧ್ಯತೆಯನ್ನು ಮಾಲ್ಥಸ್ ಸಾಕಷ್ಟು ಗಣನೆಗೆ ತಂದುಕೊಳ್ಳಲಿಲ್ಲ ಎಂದು ಹೇಳಬಹುದು. ಇದರಿಂದಾಗಿ. ಆತ ಊಹಿಸಿದ ಆಹಾರ ಮತ್ತು ಜನಸಂಖ್ಯೆ ಏರಿಕೆಗಳ ಸಂಬಂಧದ ಕಲ್ಪನೆ ಪೂರ್ತಿಯಾಗಿ ಸಮಂಜಸವಾಗಿಲ್ಲ ಎಂದು ತೋರಿಸಲಾಗಿದೆ.

ಮಾಲ್ಥಸ್ ಆಹಾರೋತ್ಪಾದನೆಗೆ ಮಾತ್ರವೇ ಜನಸಂಖ್ಯಾ ಏರಿಕೆಯೊಂದಿಗೆ ಸಂಬಂಧ ಕಲ್ಪಿಸಿರುವುದು ತರ್ಕಬದ್ಧವಾಗಲಾರದೆಂಬುದು ಆತನ ಸಿದ್ಧಾಂತವನ್ನು ಕುರಿತ ಇನ್ನೊಂದು ಟೀಕೆ. ದೇಶ ಉತ್ಪಾದಿಸುವ ಎಲ್ಲ ಸರಕು ಸೇವೆಗಳ ಮೊತ್ತಕ್ಕೂ–ಅಂದರೆ ರಾಷ್ಟ್ರೀಯ ಉತ್ಪನ್ನಕ್ಕೂ–ಜನಸಂಖ್ಯೆಗೂ ಸಂಬಂಧ ಕಲ್ಪಿಸಿ ಇವುಗಳ ಪರಸ್ಪರ ಪರಿಣಾಮಗಳನ್ನು ಅಧ್ಯಯನ ಮಾಡುವುದು ಜನಸಂಖ್ಯಾ ಸಿದ್ಧಾಂತದ ಸಹಜವಾದ ಉದ್ದೇಶವಾಗಿರಬೇಕು. ಏಕೆಂದರೆ ಆಹಾರ ಸಾಮಗ್ರಿಯನ್ನು ಸಾಕಷ್ಟು ಉತ್ಪಾದಿಸದೆ ಉನ್ನತ ಜೀವನಮಟ್ಟವನ್ನು ಸಾಧಿಸುವುದು ಕೈಗಾರಿಕಾಭಿವೃದ್ಧಿ ಹೊಂದಿದ ದೇಶಗಳಿಗೆ ಸಾಧ್ಯ. ಈ ದೃಷ್ಟಿಯಿಂದ, ಮಾಲ್ಥಸನ ಸಿದ್ಧಾಂತ ವ್ಯಾಪಕವಾದದ್ದು ಪರಿಪೂರ್ಣವಾದದ್ದು ಎಂದು ಹೇಳಲಾಗುವುದಿಲ್ಲ.

ಜನಸಂಖ್ಯೆ ತೀವ್ರವಾಗಿ ಏರಿದಾಗ ಕ್ಷಾಮ, ರೋಗರುಜಿನ ಮುಂತಾದುವುಗಳಿಂದ ಮಾನವ ಜನಸಂಖ್ಯೆಗೆ ಹಾನಿಯುಂಟಾಗುವುದೆಂಬುದು ಮಾಲ್ಥಸನ ನುಡಿ. ಆದರೆ ಆತನ ಕಾಲದಿಂದ ಈಚೆಗೆ ಜನಸಂಖ್ಯೆ ತೀವ್ರವಾಗಿ ಬೆಳೆದಿರುವ ಶ್ರೀಮಂತ ರಾಷ್ಟ್ರಗಳಲ್ಲಿ ಜನರ ಜೀವನ ಮಟ್ಟ ಏರಿದೆ ಮತ್ತು ಸುಧಾರಿಸಿದೆ. ಅಂದಮೇಲೆ ಮಾಲ್ಥಸನ ಊಹೆ ಸುಳ್ಳಾಗಿದೆ ಎಂದು ಹೇಳಬಹುದು. ಆತನ ಸಿದ್ಧಾಂತ ಈ ದೃಷ್ಟಿಯಿಂದ ನಿರಾಶಾವಾದದ ಅಪವಾದಕ್ಕೆ ಗುರಿಯಾಗಿದೆ.

ಬ್ರಹ್ಮಚರ್ಯೆ, ದಂಪತಿಗಳ ಆತ್ಮಸಂಯಮ ಇತ್ಯಾದಿ ನೈತಿಕ ನಿರ್ಬಂಧಗಳು ಜನಸಂಖ್ಯೆಯನ್ನು ನಿಯಂತ್ರಿಸುವ ಉಪಾಯವೆಂಬ ಆತನ ಬೋಧನೆ ಸಾಮಾನ್ಯ ಜನಕ್ಕೆ ಹಿಡಿಸುವುದು ಕಷ್ಟ. ಆದ್ದರಿಂದ ಆತನದು ಅವಾಸ್ತವಿಕ ಹಾಗೂ ವ್ಯಾವಹಾರಿಕವಲ್ಲದ ದೃಷ್ಟಿ ಎಂದು ಹೇಳಲಾಗಿದೆ. ಸಂತಾನ ನಿಯಂತ್ರಣ ಸಾಧನಗಳು ಆತನ ಕಾಲದಲ್ಲಿ ಸೃಷ್ಟಿಯಾಗಿರಲಿಲ್ಲವಾದ್ದರಿಂದ ಮಾಲ್ಥಸನಿಗೆ ನೈತಿಕ ನಿರ್ಬಂಧಗಳನ್ನು ಒತ್ತಿ ಹೇಳುವುದೇ ಬಹುಶಃ ಏಕೈಕ ಮಾರ್ಗವಾಗಿತ್ತೆಂದು ಈ ಆಕ್ಷೇಪಣೆಗೆ ಸಮಾಧಾನ ಹೇಳಬಹುದು. ಅಲ್ಲದೆ ಅವನು ಕ್ರೈಸ್ತಪಾದ್ರಿಯಾಗಿದ್ದುದರಿಂದ ಸಂತಾನನಿರೋಧ ಸಾಧನಗಳು ಅವನ ಧಾರ್ಮಿಕ ದೃಷ್ಟಿಗೆ ವಿರೋಧವೆನಿಸಿದ್ದುವು.

ಜನರ ಜೀವನಮಟ್ಟ ಏರಿಕೆಯಾದಂತೆ, ಸಾಂಸ್ಕೃತಿಕ ಮುನ್ನಡೆಯಾದಂತೆ ಒಂದು ದೇಶದ ಜನನ ದರ ಇಳಿಯುವ ಪ್ರವೃತ್ತಿ 19–20 ನೆಯ ಶತಮಾನದ ಇತಿಹಾಸದಲ್ಲಿ ವ್ಯಕ್ತವಾಗಿದೆ. ಆದ್ದರಿಂದ ಮಾಲ್ಥಸನ ಜನಸಂಖ್ಯಾ ಸ್ಫೋಟದ ಭಾವನೆಗೆ ಐತಿಹಾಸಿಕ ಸಾಕ್ಷ್ಯ ದೊರೆತಿಲ್ಲವೆಂದು ಹೇಳಬಹುದು.

ಮಾಲ್ಥಸನ ಸಿದ್ಧಾಂತದ ಪ್ರಾಮುಖ್ಯ: ಮಾಲ್ಥಸನ ಸಿದ್ಧಾಂತ ಅನೇಕ ಟೀಕೆಗಳಿಗೆ ಒಳಗಾಗಿದೆಯಾದರೂ ಅದರ ಕೆಲವು ಮೂಲಭಾವನೆಗಳು ಇಂದಿಗೂ ಮನ್ನಣೆಗೆ ಅರ್ಹ. ಜನರ ನಿವಾರಕ ಕ್ರಮಗಳ ಮೂಲಕ ಜನಸಂಖ್ಯೆಯ ಏರಿಕೆಯನ್ನು ತಡೆಗಟ್ಟಬೇಕಾದ್ದರ ಪ್ರಾಮುಖ್ಯವನ್ನು ಆತನ ಸಿದ್ಧಾಂತದಲ್ಲಿ ಒತ್ತಿ ಹೇಳಲಾಗಿದೆ. ಇಂದು ಎಲ್ಲ ರಾಷ್ಟ್ರಗಳಲ್ಲೂ ಪ್ರಚುರವಾಗಿರುವ ಮಿತಕುಟುಂಬ ಯೋಜನೆಯ ಭಾವನೆ ಇಲ್ಲಿ ಅಡಗಿದೆ. ಕೃಷಿ ಉದ್ಯಮದಲ್ಲಿ ಎಷ್ಟೇ ವೈಜ್ಞಾನಿಕ ಪ್ರಗತಿ ಆದಾಗ್ಯೂ ಈ ಉದ್ಯಮ ಇಳಿಮುಖ ಪ್ರತಿಫಲ ನಿಯಮಕ್ಕೆ ಒಳಪಡುವ ಹಂತ ಇಂದಲ್ಲ ನಾಳೆ ಬಂದೀತು. ಆದ್ದರಿಂದ, ಆಹಾರ ಉತ್ಪಾದನೆ ಒಟ್ಟಿನಲ್ಲಿ ಜನಸಂಖ್ಯೆಯ ಏರಿಕೆಗಿಂತ ಮಂದಗತಿಯುಳ್ಳದ್ದು–ಎಂದು ಮಾಲ್ಥಸ್ ನೀಡಿದ ಎಚ್ಚರಿಕೆ ವಿವೇಕಯುತವಾದದ್ದು. ಭಾರತ, ಚೀನ, ಇತ್ಯಾದಿ ರಾಷ್ಟ್ರಗಳಲ್ಲಿ ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಿಂತ ಜನಸಂಖ್ಯೆ ಹೆಚ್ಚು ವೇಗವಾಗಿ ಬೆಳೆದಿರುವುದರ ಪರಿಣಾಮವಾಗಿ ರೋಗ, ಕ್ಷಾಮ, ಹಸಿವು ಮುಂತಾದವು ಸಂಭವಿಸಿರುವುದು ಮಾಲ್ಥಸನ ವಾದವನ್ನು ಸಮರ್ಥಿಸುವಂತಿದೆ. ಹೀಗೆ ಮಾಲ್ಥಸನ ಸಿದ್ಧಾಂತದಲ್ಲಿ ಕೆಲವು ಸತ್ಯಾಂಶಗಳಿವೆ ಎಂಬುದನ್ನು ಅಲಕ್ಷಿಸುವಂತಿಲ್ಲ. ಆದರೂ ಜನಸಂಖ್ಯೆ, ಆರ್ಥಿಕ ಪರಿಸ್ಥಿತಿ ಮತ್ತು ಅಭಿವೃದ್ಧಿ ಇವುಗಳ ಪರಸ್ಪರ ಸಂಬಂಧ ವಿವರಣೆಗೆ ಮಾಲ್ಥಸನ ವಿಶ್ಲೇಷಣೆಯೊಂದೇ ಸಹಕಾರಿಯಾಗಲಾರದು. ಆದ್ದರಿಂದಲೇ ಇತರ ಜನಸಂಖ್ಯಾ ಸಿದ್ಧಾಂತಗಳ ವಿಕಾಸವಾಗಿದೆ.

**ಅನುಕೂಲತಮ ಜನಸಂಖ್ಯಾ ಸಿದ್ಧಾಂತ :** ಇದನ್ನು ಪ್ರತಿಪಾದಿಸಿದವನು ಎಡ್ವಿನ್ ಕ್ಯಾನನ್ ಎಂಬ ಇಂಗ್ಲಿಷ್ ಅರ್ಥಶಾಸ್ತ್ರಜ್ಞ. ಯಾವುದೇ ಕಾಲದಲ್ಲಿ ಒಂದು ದೇಶದಲ್ಲಿರುವ ಪ್ರಾಕೃತಿಕ ಸಾಧನಗಳು, ಬಂಡವಾಳ, ಅಲ್ಲಿ ಅನುಸರಿಸುತ್ತಿರುವ ಉತ್ಪಾದನ ಪದ್ಧತಿ–ಇವುಗಳಿಗೆ ಅನುಗುಣವಾದ ಯಾವುದೋ ಒಂದು ನಿರ್ದಿಷ್ಟ ಗಾತ್ರದ ಜನಸಂಖ್ಯೆ ಇದ್ದರೆ ಆ ದೇಶದ ತಲಾ ವರಮಾನ ಗರಿಷ್ಠವಾಗಿರುತ್ತದೆ. ಈ ಗಾತ್ರಕ್ಕೆ ಕಡಿಮೆಯಾಗಿ ಆಗಲಿ, ಹೆಚ್ಚಾಗಿ ಆಗಲಿ ಜನಸಂಖ್ಯೆ ಇದ್ದರೆ ಆ ದೇಶದ ತಲಾ ವರಮಾನ ಈ ಗರಿಷ್ಠ ಮಟ್ಟಕ್ಕಿಂತ ಕಡಿಮೆಯಾಗುತ್ತದೆ. ತಲಾ ವರಮಾನ ಗರಿಷ್ಠವಾಗಿರಲು ಅವಶ್ಯವಾಗುವ ಜನಸಂಖ್ಯೆಯೇ ಅನುಕೂಲತಮ ಜನಸಂಖ್ಯೆ (ಆಪ್ಟಿಮಮ್ ಪಾಪ್ಯುಲೇಷನ್). ದೇಶದ ಸಂಪನ್ಮೂಲಗಳನ್ನು ಉತ್ಪಾದನೆಗೆ ರೂಢಿಸಲು ಇರುವ ಜನಬಲ ಅನುಕೂಲತಮ ಜನಸಂಖ್ಯೆಗಿಂತ ಕಡಿಮೆಯಾಗಿದ್ದರೆ, ಈ ಅನುಕೂಲತಮ ಮಟ್ಟ ತಲುಪುವವರೆಗೆ, ಏರುವ ಜನಸಂಖ್ಯೆಯ ದರಕ್ಕಿಂತ ಉತ್ಪಾದನೆಯ ಏರಿಕೆಯ ದರ ಅಧಿಕವಾಗಿರುತ್ತದೆ. ಜನಸಂಖ್ಯೆ ಈ ಮಟ್ಟವನ್ನೂ ಮೀರಿದರೆ ತಲಾ ವರಮಾನ ಅನುಕೂಲತಮ ಮಟ್ಟದ ತಲಾ ವರಮಾನಕ್ಕಿಂತ ಕಡಿಮೆಯಾಗುವುದು. ಅನುಕೂಲತಮ ಮಟ್ಟದ ತಲಾ ವರಮಾನಕ್ಕೆ ಅಗತ್ಯವಾದದ್ದಕ್ಕಿಂತ ಕಡಿಮೆ ಜನಸಂಖ್ಯೆ ಇದ್ದರೆ ಅದು ಜನಸಂಖ್ಯೆಯ ಕೊರತೆ ಎನಿಸುತ್ತದೆ; ಮೀರಿದರೆ ಜನಸಂಖ್ಯೆಯ ಹೆಚ್ಚಳ ಎನಿಸುತ್ತದೆ. ಆರ್ಥಿಕ ದೃಷ್ಟಿಯಿಂದ ಅನುಕೂಲತಮ ಜನಸಂಖ್ಯೆ ಆದರ್ಶಪ್ರಾಯವಾದ್ದು. ಇರತಕ್ಕ ಪರಿಸ್ಥಿತಿಗೆ ಅನುಗುಣವಾಗಿ ಗರಿಷ್ಠ ತಲಾ ವರಮಾನ ಸಾಧಿಸಬಲ್ಲ ಜನಸಂಖ್ಯೆ ಹೊಂದಿರುವುದೇ ಜನಸಂಖ್ಯಾ ನೀತಿಯ ಉದ್ದೇಶವಾಗಿರಬೇಕೆಂದು ಈ ಸಿದ್ಧಾಂತ ಸೂಚಿಸುತ್ತದೆ.

ಅನುಕೂಲತಮ ಜನಸಂಖ್ಯೆಯ ಸಿದ್ಧಾಂತ ಮಾಲ್ಥಸನ ಸಿದ್ಧಾಂತಕ್ಕಿಂತ ಆರ್ಥಿಕ ದೃಷ್ಟಿಯಿಂದ ಹೆಚ್ಚು ವ್ಯಾಪಕವೂ ಸಮಂಜಸವೂ ಆಗಿದೆ ಎಂದು ಹೇಳಬಹುದು. ತಲಾ ವರಮಾನದ ಏರಿಕೆಯನ್ನು ಜನಸಂಖ್ಯಾ ಪರಿಸ್ಥಿತಿಗೆ ಸಂಬಂಧಿಸಿ ವಿವೇಚಿಸುವುದು ಸೂಕ್ತ ವಿಧಾನ. ಆದರೂ ಈ ಸಿದ್ಧಾಂತ ಕೆಲವು ಟೀಕೆಗಳಿಗೆ ಗುರಿಯಾಗಿದೆ. ಚಲನಾತ್ಮಕವಾದ ವಾಸ್ತವ ಪ್ರಪಂಚದಲ್ಲಿ ಅನುಕೂಲತಮ ಜನಸಂಖ್ಯೆ ಎಷ್ಟೆಂಬುದನ್ನು ಲೆಕ್ಕಹಾಕುವುದು ಸಾಧ್ಯವಾಗಲಾರದು. ಆದ್ದರಿಂದ ಇದು ಕೇವಲ ಕಾಲ್ಪನಿಕವೇ ಹೊರತು ವಾಸ್ತವವಾಗಿ ಉಪಯುಕ್ತವಲ್ಲ ಎಂಬುದು ಮುಖ್ಯ ಟೀಕೆ. ಪತ್ತೆ ಆಗಿರುವ ಸಾಧನ ಸಂಪತ್ತು , ಉತ್ಪಾದನ ತಂತ್ರ, ಉತ್ಪಾದನ ವ್ಯವಸ್ಥೆ, ಕಾರ್ಮಿಕರ ದಕ್ಷತೆ, ಉದ್ಯಮಶೀಲತೆ ಬಂಡವಾಳ ಲಭ್ಯತೆ ಮುಂತಾದವು ಬದಲಾವಣೆಯಾದಂತೆ ಅನುಕೂಲತಮ ಜನಸಂಖ್ಯೆಯೂ ಬದಲಾಯಿಸುವುದು. ಎಂದಮೇಲೆ ಅನಕೂಲತಮ ಮಟ್ಟ ಯಾವುದು ಎಂಬುದು ಗತಿಶೀಲ ಅಥವಾ ಚಲನಾತ್ಮಕ ಭಾವನೆ. ಅನುಕೂಲತಮ ಜನಸಂಖ್ಯೆಯ ಗಾತ್ರವನ್ನು

ನಿಶ್ಚಿತವಾಗಿ ಇಷ್ಟೇ ಎಂದು ಹೇಳುವುದು ಕಷ್ಟವಾದ್ದರಿಂದ ಈ ಸಿದ್ಧಾಂತದ ವ್ಯಾವಹಾರಿಕ ಪ್ರಯೋಜನ ಕಡಿಮೆ ಎಂದು ಹೇಳಬೇಕಾಗುತ್ತದೆ.ಆದರೂ ಜನಸಂಖ್ಯೆ, ಆರ್ಥಿಕ ಪರಿಸ್ಥಿತಿ ಇವುಗಳ ಪರಸ್ಪರ ಸಂಬಂಧದ ಅಧ್ಯಯನದಲ್ಲಿ ಈ ಸಿದ್ಧಾಂತಕ್ಕೆ ಮಹತ್ತ್ವವಿದೆ. ಯಾವುದೇ ದೇಶದಲ್ಲಿ ಕಾರ್ಮಿಕ ಬಲಕ್ಕೆಲ್ಲ ಉದ್ಯೋಗವಿದ್ದು, ಜನರ ತಲಾ ವರಮಾನ ಹೆಚ್ಚುತ್ತಿದ್ದರೆ ಅಲ್ಲಿ ಅನುಕೂಲತಮ ಜನಸಂಖ್ಯೆಯ ಮಟ್ಟ ಇನ್ನೂ ತಲುಪಿಲ್ಲವೆಂದು ಹೇಳಬಹುದು. ತಲಾ ವರಮಾನ ಇಳಿಯುವ ಪ್ರವೃತ್ತಿ ಕಂಡುಬಂದಾಗ ಕೇವಲ ಆರ್ಥಿಕ ದೃಷ್ಟಿಯಿಂದ ಅನುಕೂಲತಮ ಜನಸಂಖ್ಯೆಯ ಮಟ್ಟ ತಲುಪಿತೆಂದು ಊಹಿಸಬಹುದು. ಜನಸಂಖ್ಯೆ ಕೇವಲ ಆರ್ಥಿಕ ಪ್ರಶ್ನೆ ಮಾತ್ರವಾಗಿಲ್ಲ ದಿರುವುದರಿಂದ ಆರ್ಥಿಕೇತರ ದೃಷ್ಟಿಗಳಿಂದಲೂ ಯಾವ ಗಾತ್ರದ ಜನಸಂಖ್ಯೆ ದೇಶಕ್ಕೆ ಅನುಕೂಲತಮವೆಂಬುದನ್ನು ಗಮನಿಸಬೇಕಾಗುತ್ತದೆ. ಅನುಕೂಲತಮ ಜನಸಂಖ್ಯೆಯ ಸಿದ್ಧಾಂತ ಆರ್ಥಿಕೇತರ ಅಂಶಗಳನ್ನು ಪರಿಗಣಿಸದಿರುವುದು ಅದರ ಒಂದು ಮಿತಿ ಎಂದು ಹೇಳಲಾಗಿದೆ.

**ಜನಸಂಖ್ಯಾ ಪರಿವರ್ತನ ಸಿದ್ಧಾಂತ :** ಮಾಲ್ಥಸ್ ಮತ್ತು ಕ್ಯಾನನ್ ಸಿದ್ಧಾಂತಗಳು ಪ್ರಚುರವಾದ ತರುವಾಯ, ಜನಸಂಖ್ಯೆಗೂ ಆರ್ಥಿಕಾಭಿವೃದ್ಧಿಗೂ ಇರುವ ಪರಸ್ಪರ ಸಂಬಂಧಗಳನ್ನು ಕುರಿತ ಅನೇಕ ಅಧ್ಯಯನಗಳು ನಡೆದಿವೆ. ಆರ್ಥಿಕಾಭಿವೃದ್ಧಿಯ ಮೇಲೆ ಜನಸಂಖ್ಯೆಯೂ ಜನಸಂಖ್ಯೆಯ ಪ್ರವೃತ್ತಿಗಳ ಮೇಲೆ ಆರ್ಥಿಕಾಭಿವೃದ್ಧಿಯೂ ಪರಿಣಾಮ ಬೀರುತ್ತವೆ ಎಂಬುದು ನಿರ್ವಿವಾದ. ಆರ್ಥಿಕಾಭಿವೃದ್ಧಿಯ ವಿವಿಧ ಹಂತಗಳಲ್ಲಿ ಜನಸಂಖ್ಯೆಗೆ ಸಂಬಂಧಿಸಿದ ಪ್ರವೃತ್ತಿಗಳು ಹೇಗೆ ಸಾಗುವುವು ಎಂಬ ಬಗ್ಗೆ ಐತಿಹಾಸಿಕ ಪ್ರಮಾಣಗಳು ಮತ್ತು ತಾರ್ಕಿಕ ವಿಶ್ಲೇಷಣೆಗಳ ಆಧಾರದ ಮೇಲೆ ಅರ್ಥಶಾಸ್ತ್ರಜ್ಞರೂ ಜನಸಂಖ್ಯಾತಜ್ಞರೂ ಅನೇಕ ನಿರ್ಣಯಗಳನ್ನು ಸ್ಥಾಪಿಸಿದ್ದಾರೆ.

ಆರ್ಥಿಕಾಭಿವೃದ್ಧಿಯ ವಿವಿಧ ಹಂತಗಳಲ್ಲಿ ಜನಸಂಖ್ಯೆಯ ಬಗ್ಗೆ ನಿರ್ದಿಷ್ಟ ಲಕ್ಷಣಗಳನ್ನು ಗುರುತಿಸಿ ಬ್ಲಾಕರ್, ಥಾಂಪ್ಸನ್, ಕಾಗ್ವಿಲ್, ಲಾಂಡ್ರಿ ಮುಂತಾದ ಜನಸಂಖ್ಯಾತಜ್ಞರು ಜನಸಂಖ್ಯಾಪ್ರವೃತ್ತಿಗಳ ಕೆಲವು ಹಂತಗಳನ್ನು ಗುರುತಿಸಿದ್ದಾರೆ. ತತ್ಫಲವಾಗಿ ರೂಪಿತವಾದದ್ದೇ ಜನಸಂಖ್ಯಾ ಪರಿವರ್ತನ ಸಿದ್ಧಾಂತ.

ಯಂತ್ರ ಹಾಗೂ ಶಕ್ತಿ ಇವುಗಳ ಆಧಾರದ ಮೇಲೆ ರಚಿತವಾದ ಆಧುನಿಕ ಆರ್ಥಿಕಾಭಿವೃದ್ಧಿ ಆರಂಭವಾಗುವುದಕ್ಕೆ ಮುಂಚೆ ಇದ್ದ ಪ್ರಾಚೀನ ಮಾದರಿಯ ಕೃಷಿಯ ಪ್ರಧಾನ ಆರ್ಥಿಕತೆಯ ಪ್ರಥಮ ಹಂತದಲ್ಲಿ ಜನನ ದರ-ಮರಣ ದರಗಳೆರಡೂ ಹೆಚ್ಚಾಗಿರುವುವು. ಅಪೌಷ್ಟಿಕ ಆಹಾರ, ಸಾಂಕ್ರಾಮಿಕ ರೋಗಗಳ ಹಾವಳಿ, ವೈದ್ಯಕೀಯ ಹಾಗೂ ಆರೋಗ್ಯ ಸೇವೆಗಳ ಅಭಾವ ಇತ್ಯಾದಿ ಕಾರಣಗಳಿಂದ ಮರಣದರ ಹೆಚ್ಚಾಗಿರುತ್ತದೆ. ಬಾಲ್ಯವಿವಾಹ, ದೊಡ್ಡ ಕುಟುಂಬ ಬೆಳೆಸಲು ಪ್ರೋತ್ಸಾಹದಾಯಕವಾದ ಸಾಮಾಜಿಕ ಮತ್ತು ಮತೀಯ ಸಂಪ್ರದಾಯಗಳು, ಹೆಚ್ಚು ಜನರಿರುವ ಕುಟುಂಬಗಳಿರಬೇಕೆಂದು ಕೃಷಿಕ ಜನಾಂಗಗಳ ಅಪೇಕ್ಷೆ, ವೃದ್ಧಾಪ್ಯದಲ್ಲಿ ತಮ್ಮನ್ನು ನೋಡಿಕೊಳ್ಳಲು ಹೆಚ್ಚು ಮಕ್ಕಳಿರಬೇಕೆಂದು ಮಾತಾಪಿತೃಗಳ ಬಯಕೆ, ಮಕ್ಕಳ ಪೋಷಣೆ ಭಾರವೆನಿಸದಿರುವ ಪರಿಸ್ಥಿತಿ-ಇತ್ಯಾದಿ ಅಂಶಗಳಿಂದಾಗಿ ಜನನದರ ಹೆಚ್ಚಾಗಿರುತ್ತದೆ. ಈ ಪರಿಸ್ಥಿತಿಗಳಿದ್ದ, ಕ್ರಿಸ್ತಶಕೆಯ ಮೊದಲ 15 ಶತಮಾನಗಳಲ್ಲಿ ಮರಣದರ 1000 ಕ್ಕೆ 30-40ರಷ್ಟೂ ಜನನದರವೂ ಸುಮಾರು ಇದೇ ಮಟ್ಟದಲ್ಲೂ ಇದ್ದುವು. ಪ್ರಪಂಚದ ಜನಸಂಖ್ಯೆಯ ವಾರ್ಷಿಕ ಏರಿಕೆಯ ದರ 100ಕ್ಕೆ 1 ಕ್ಕಿಂತ ಮೀರಿರಲಿಲ್ಲ ಎಂಬುದಾಗಿ ಆರ್ಥರ್ ಲೂಯಿಸ್ ಎಂಬ ಅರ್ಥಶಾಸ್ತ್ರಜ್ಞ ಆಧಾರ ಸಮೇತ ಹೇಳಿದ್ದಾನೆ.

ಆರ್ಥಿಕಾಭಿವೃದ್ಧಿಯೊಡನೆ ತಲಾ ವರಮಾನದ ಏರಿಕೆಯೂ ಜನಜೀವನದ ಸಾಮಾನ್ಯ ಸ್ಥಿತಿಯಲ್ಲಿ ಮುಖ್ಯ ಬದಲಾವಣೆಗಳೂ ಉಂಟಾಗುವುವು. ಇವುಗಳ ಪರಿಣಾಮವಾಗಿ ಜನನ ಹಾಗೂ ಮರಣದರಗಳೆರಡೂ ಬದಲಾಯಿಸುವುವು. ಈ ಬದಲಾವಣೆಯಲ್ಲಿ ನಿರ್ದಿಷ್ಟ ಕ್ರಮವಿರುವುದನ್ನು ಜನಸಂಖ್ಯಾ ಪರಿವರ್ತನ ಸಿದ್ಧಾಂತ ತೋರಿಸಿದೆ. ಆರ್ಥಿಕಾಭಿವೃದ್ಧಿಯ ಪ್ರಥಮ ಹಂತದಲ್ಲಿ ಜನನದರ ಇಳಿಯದೆ ಮರಣದರ ಮಾತ್ರವೇ ಇಳಿಯುವ ಪ್ರವೃತ್ತಿ ತೋರಿಬರುತ್ತದೆಂಬುದು ಈ ಸಿದ್ಧಾಂತದ ಒಂದು ಅಂಶ. ಮರಣದರ ಇಳಿಯುವುದಕ್ಕೆ ಅನೇಕ ಕಾರಣಗಳುಂಟು. ಜನರ ಆರೋಗ್ಯಮಟ್ಟ ಹೆಚ್ಚಿಸುವ ಅನೇಕ ಬದಲಾವಣೆಗಳು ಅಭಿವೃದ್ಧಿಯಿಂದ ಸಂಭವಿಸುತ್ತವೆ. ಆಹಾರ ಪದಾರ್ಥಗಳ ಉತ್ಪಾದನೆ ಹೆಚ್ಚುವುದೇ ಅಲ್ಲದೆ ಅವುಗಳ ವಿತರಣಾ ವವ್ಯಸ್ಥೆಯೂ ಉತ್ತಮವಾಗುವುದರಿಂದ ಜನರ ಆಹಾರ ಸೇವನೆಯ ಮಟ್ಟ ಏರುತ್ತದೆ. ಕ್ಷಾಮಭೀತಿ ಕಡಿಮೆಯಾಗುತ್ತದೆ. ಸಾಂಕ್ರಾಮಿಕಗಳನ್ನು ತಡೆಗಟ್ಟುವ ಏರ್ಪಾಡುಗಳು, ಆರೋಗ್ಯ ಹಾಗೂ ವೈದ್ಯಕೀಯ ಸೇವೆಗಳು, ನಗರ ನೈರ್ಮಲ್ಯ ಕಾರ್ಯಗಳು, ನೀರು ಸರಬರಾಯಿ-ಇವೆಲ್ಲವೂ ಆರ್ಥಿಕಾಭಿವೃದ್ಧಿಯೊಡನೆ ಹೆಚ್ಚು ವ್ಯವಸ್ಥಿತವಾಗುತ್ತ ಬರುತ್ತವೆ. ಹೀಗೆ ವಿವಿಧ ರೀತಿಯಲ್ಲಿ ಜನಜೀವನದ ವಾತಾವರಣ ಉತ್ತಮವಾಗುವುದರಿಂದ ಮರಣದರ ಇಳಿಯುವುದೆಂದು ಹೇಳಲಾಗಿದೆ.

ಮರಣದರ ಇಳಿಯುವ ಅಭಿವೃದ್ಧಿಯ ಪ್ರಥಮ ಹಂತದಲ್ಲೇ ಜನನದರ ಇಳಿಯದಿರುವುದಕ್ಕೂ ಮುಖ್ಯ ಕಾರಣಗಳಿವೆ. ಮರಣದರ ಇಳಿಯುವಂತೆ ಮಾಡುವ ಕ್ರಮಗಳನ್ನು ಉತ್ಸಾಹದಿಂದ ಸ್ವಾಗತಿಸುವವರು ಜನನದರ ಇಳಿಯುವಂತೆ ಮಾಡುವ ಕ್ರಮಗಳನ್ನು ಕೈಗೊಳ್ಳುವುದರಲ್ಲಿ ಅಷ್ಟೇ ಆಸಕ್ತಿ ಹೊಂದಿರುವುದಿಲ್ಲ. ಬಹುಕಾಲದಿಂದಲೂ ನಡೆದು ಬಂದ ನಂಬಿಕೆಗಳು, ನಡೆವಳಿಕೆಗಳು, ಸಂಪ್ರದಾಯಗಳು, ಸಾಮಾಜಿಕ ಹಾಗೂ ಮತೀಯ ಕಟ್ಟಳೆಗಳು- ಇವೆಲ್ಲವೂ ಸುಲಭವಾಗಿ ಮತ್ತು ಶೀಘ್ರವಾಗಿ ಬದಲಾಯಿಸಲಾರವು. ಮಿತಕುಟುಂಬದ ಅಪೇಕ್ಷಣೀಯತೆಗಳನ್ನು ಜನರು ಅರಿತುಕೊಳ್ಳಲು ಕಾಲಾವಕಾಶ ಬೇಕಾಗುತ್ತದೆ. ಕ್ರಮೇಣ ಈ ಭಾವನೆ ಅವರಿಗೆ ಒಪ್ಪಿಗೆಯಾಗುವುದಾದರೂ ಸಂತಾನ ನಿಯಂತ್ರಣವನ್ನು ಕೈಗೊಳ್ಳಲು ಗರ್ಭನಿರೋಧಕಗಳ ಅಜ್ಞಾನ, ಅವುಗಳ ಅಭಾವ, ಅವನ್ನು ಆಚರಣೆಗೆ ತರಲು ಕಾರ್ಯತಃ ಅವರ ಬಡವಸತಿಗಳಲ್ಲಿರುವ ಅಡಚಣೆಗಳು ಇತ್ಯಾದಿ ಕಾರಣಗಳಿಂದಾಗಿ ಸಂತಾನ ನಿಯಂತ್ರಣ ಜಾರಿಗೆ ಬರುವುದು ನಿಧಾನ. ಆದ್ದರಿಂದ ಅಭಿವೃದ್ಧಿಯ ಪ್ರಥಮ ಹಂತದಲ್ಲಿ ಜನನದರ ಇಳಿಯುವುದಿಲ್ಲ. ಜನನದರ ಇಳಿಯದೆ ಮರಣದರವೊಂದೇ ಇಳಿಯುವುದರಿಂದ ಜನಸಂಖ್ಯಾ ಬೆಳೆವಣಿಗೆಯ ದರ ಹೆಚ್ಚುವುದು. ಜನನಮರಣದರಗಳೊಳಗೆ ಹಿಂದೆ ಇದ್ದ ಸಮತೋಲನ ಸ್ಥಿತಿಯನ್ನು ಅಭಿವೃದ್ಧಿ ಹೀಗೆ ತಪ್ಪಿಸಿದಂತಾಗುವುದು . ಆದರೆ ಅಭಿವೃದ್ಧಿ ಇನ್ನೂ ಮುಂದೆ ಸಾಗಿದಾಗ, ಹೀಗೆ ತಪ್ಪಿದ ಸಮತೋಲ ಹೊಸ ರೂಪದಲ್ಲಿ ಪುನಃ ಸ್ಥಾಪನೆಯಾಗುವುದು. ಆಗ ಜನನಮರಣ ದರಗಳೆರಡೂ ಕೆಳಮಟ್ಟದಲ್ಲಿ ನೆಲೆಸುತ್ತವೆ.

ಆರ್ಥಿಕಾಭಿವೃದ್ಧಿ ಮೇಲೆ ಹೇಳಿದ ಮೊದಲನೆಯ ಹಂತದಲ್ಲಿ ಇನ್ನೊಂದು ಹಂತಕ್ಕೆ ಮುಂದುವರಿದಾಗ ಜನನದರವೂ ಇಳಿಯಲಾರಂಭಿಸುವುದು. ಕೆಲಕಾಲದವರೆಗೆ ಮರಣದರದ ಇಳಿತದ ದರ ಜನನದರದ ಇಳಿತದ ದರಕ್ಕಿಂತ ಹೆಚ್ಚಾಗಿರುವುದು. ಈ ಪ್ರವೃತ್ತಿಗಳು ಹೀಗೆ ಮುಂದುವರಿದ ಅನಂತರ ಮರಣದರ ಇನ್ನು ಕೆಳಗೆ ಇಳಿಯಲಾಗದ ಒಂದು ಘಟ್ಟವನ್ನು ತಲುಪುವುದು. ಆ ಮಟ್ಟದಲ್ಲಿ ಮರಣದರ ಒಂದು ಸ್ಥಿರತೆ ಪಡೆಯುತ್ತದೆ. ಜನನದರವೂ ಗಣನೀಯವಾಗಿ ಇಳಿಯುವುದಾದರೂ ಮರಣದರಂತೆ ಅದು ಸ್ಥಿರತೆ ಪಡೆಯುವುದಿಲ್ಲ. ಏಕೆಂದರೆ ಇದು ಜನರ ಸ್ವಯಂ ಪ್ರೇರಿತ ನಿರ್ಣಯಗಳಿಗೆ ಸ್ವಲ್ಪಮಟ್ಟಿನ ಏರಿಳಿತಕ್ಕೆ ಅವಕಾಶವಿರುತ್ತದೆ.

ಆರ್ಥಿಕಾಭಿವೃದ್ಧಿಯ ಮುಂದುವರಿದ ಹಂತಗಳಲ್ಲಿ ಜನನದರದಲ್ಲಿ ಏಕೆ ಇಳಿತವಾಗುವುದು ಎಂಬುದು ಕುತೂಹಲಕಾರಿಯಾದ ಪ್ರಶ್ನೆ. ಇದಕ್ಕೆ ಜನಸಂಖ್ಯಾ ಪರಿವರ್ತನ ಸಿದ್ಧಾಂತ ಸೂಕ್ತ ವಿವರಣೆ ನೀಡಿದೆ. ಯಾವೊಂದು ರಾಷ್ಟ್ರದಲ್ಲೂ ಆರ್ಥಿಕ ಬೆಳೆವಣಿಗೆಯೊಡನೆ ಜನನದರ ಏರದಿರುವುದೂ ವಾಸ್ತವವಾಗಿ ಅದು ಇಳಿಯುತ್ತ ಸಾಗಿರುವುದೂ ಇತಿಹಾಸಸಿದ್ಧ ವಿಷಯಗಳು. ಅಭಿವೃದ್ಧಿ ಹೊಂದಿದ ಐರೋಪ್ಯ ರಾಷ್ಟ್ರಗಳಲ್ಲಿ ಕಳೆದ ಸುಮಾರು ಒಂದೂವರೆ ಶತಮಾನದಲ್ಲಿ ಜನನ ದರ 1000ಕ್ಕೆ ಸುಮಾರು 35 ರಿಂದ 1000ಕ್ಕೆ 15 ಇಳಿದಿದೆ. ಅಲ್ಲದೆ ಜನರ ಸಾಮಾಜಿಕ ನಡೆವಳಿಕೆ, ಮಾನಸಿಕ ಪ್ರವೃತ್ತಿಗಳು, ಆರ್ಥಿಕ ವ್ಯವಸ್ಥೆ ಇವುಗಳಲ್ಲಿ ಆರ್ಥಿಕಾಭಿವೃದ್ಧಿಯೊಡನೆ ಆಗುವ ಬದಲಾವಣೆಗಳು ಮಿತಕುಟುಂಬ ಭಾವನೆಗಳನ್ನು ಬೆಳೆಸುವುವು. ಪುರಾತನ ಕೃಷಿ ಆರ್ಥಿಕತೆಯಲ್ಲಿ ಉತ್ಪಾದನಘಟಕವಾಗಿದ್ದ ಕುಟುಂಬ ತನ್ನ ಪ್ರಾಮುಖ್ಯ ಕಳೆದುಕೊಳ್ಳುವುದು. ಜನರಲ್ಲಿ ವೈಯಕ್ತಿಕ ಧೋರಣೆ ಬೆಳೆಯುವುದು. ನಗರಗಳ ಸಂಖ್ಯೆ ಹೆಚ್ಚುವುದು. ವಿಸ್ತೃತ ನಗರ ವಾತಾವರಣದಲ್ಲಿ ಗ್ರಾಮೀಣ ವಾತಾವರಣದಲ್ಲಿದ್ದಂತೆ ಹೆಚ್ಚು ಜನರಿರುವ ಕುಟುಂಬಗಳು ಲಾಭದಾಯಕವಾಗದಿರುವುದರಿಂದಲೂ ಮಾತಾಪಿತೃಗಳಿಗೆ ಆರ್ಥಿಕಗತಿಶೀಲತೆಯ ಆವಶ್ಯಕತೆ ಹೆಚ್ಚುವುದರಿಂದಲೂ ಕುಟುಂಬದ ಸಂಖ್ಯೆಯನ್ನು ಪರಿಮಿತಗೊಳಿಸುವ ಭಾವನೆ ಹುಟ್ಟುವುದು. ಸಾಂಪ್ರದಾಯಿಕ ಮೌಲ್ಯಗಳ ಹಾಗೂ ನಂಬಿಕೆಗಳ ಹಿಡಿತ ಸಡಿಲವಾಗಿ, ಮಿತ ಕುಟುಂಬದ ಪರವಾದ ವಿವೇಚನಾಯುತ ಧೋರಣೆ ಜನರಲ್ಲಿ ಬೆಳೆಯುವುದು. ಆರ್ಥಿಕಾಭಿವೃದ್ಧಿಯೊಡನೆ ಸ್ತ್ರೀಯರ ಪಾತ್ರ ಕೇವಲ ಗೃಹಿಣಿಯ ಕರ್ತವ್ಯಗಳಿಗೆ ಸೀಮಿತವಾಗಿರದೆ, ಆರ್ಥಿಕತೆಯ ವಿವಿಧ ಕ್ಷೇತ್ರಗಳಿಗೆ ಹರಡುವುದರಿಂದ ಅವರ ಆರ್ಥಿಕ, ಸಾಮಾಜಿಕ ಅಂತಸ್ತು ಹೆಚ್ಚುವುದು. ಹೊಸ ವ್ಯಕ್ತಿತ್ವ ಬೆಳೆಸಿಕೊಳ್ಳುವ ಸ್ತ್ರೀಯರು ತಮ್ಮ ಪೂರ್ವಜರಂತೆ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಲು ಹೆಚ್ಚು ಮಕ್ಕಳನ್ನು ಹೆರಲು ಬಯಸುವುದಿಲ್ಲ. ಅವಿವಾಹಿತರಾಗಿಯೇ ಉಳಿಯಬಯಸುವವರ ಸಂಖ್ಯೆ ಹೆಚ್ಚಬಹುದು.

ಆರ್ಥಿಕಾಭಿವೃದ್ಧಿಯೊಡನೆ ಜನರಲ್ಲಿ ವಿದ್ಯಾಭ್ಯಾಸವೂ ತಾರ್ಕಿಕ ಮನೋಭಾವವೂ ವಿಸ್ತರಿಸುವುವು. ಕುಟುಂಬದ ಗಾತ್ರದ ಬಗ್ಗೆಯೂ ಜನರು ತಾರ್ಕಿಕ ಧೋರಣೆ ಅನುಸರಿಸುವರು. ಮಕ್ಕಳಿಂದ ನಿರೀಕ್ಷಿಸುವ ಅಥವಾ ಪಡೆಯುವ ಪ್ರಯೋಜನ ಮಕ್ಕಳ ಪೋಷಣೆಗೆ ತಗಲುವ ವೆಚ್ಚ ಇವನ್ನು ತಂದೆತಾಯಿಯರು ಲೆಕ್ಕ ಹಾಕುವರು. ಲೀಬಿನ್‌ಸ್ಟಿನ್ ಎಂಬ ಅರ್ಥಶಾಸ್ತ್ರಜ್ಞ ಈ ಲೆಕ್ಕಾಚಾರದ ವಿಶ್ಲೇಷಣೆಯನ್ನು ಶಾಸ್ತ್ರೀಯವಾಗಿ ವಿವರಿಸಿದ್ದಾನೆ. ಆರ್ಥಿಕಾಭಿವೃದ್ಧಿಯ ಮಂದಿನ ಹಂತಗಳಲ್ಲಿ ಹೆಚ್ಚು ಮಕ್ಕಳಿಂದ ತಂದೆತಾಯಿಗಳು ಪಡೆಯಬಹುದಾದ ತುಷ್ಟಿಗುಣಕ್ಕಿಂತ ಮಕ್ಕಳ ಪೋಷಣೆಯ ವೆಚ್ಚವೇ ಹೆಚ್ಚುವುದರಿಂದ ಅವರು ಕುಟುಂಬವನ್ನು ಮಿತಿಗೆ ಒಳಪಡಿಸಲು ಬಯಸುತ್ತಾರೆ ಎಂದು ಆತ ಹೇಳಿದ್ದಾನೆ.

ಭವಿಷ್ಯದಲ್ಲಿ ಕುಟುಂಬದ ಸಂಪಾದನೆಗೆ ತಮ್ಮ ಸಂಪಾದನೆಯನ್ನು ಸೇರಿಸುವುದರ ಮೂಲಕ ಮಾತಾಪಿತೃಗಳ ವೃದ್ಧಾಪ್ಯದಲ್ಲಿ ಅವರ ರಕ್ಷಕರಾಗಿರುವುದರ ಮೂಲಕ ತಂದೆತಾಯಿಗಳಿಗೆ ಮಕ್ಕಳು ನೀಡಬಲ್ಲ ತೃಪ್ತಿಗುಣ-ವರಮಾನದ ಏರಿಕೆಯ ಫಲವಾಗಿ-ಇಳಿಯುತ್ತದೆ. ಏಕೆಂದರೆ ಕುಟುಂಬದ ವರಮಾನಕ್ಕೆ ಹೆಚ್ಚು ಮಕ್ಕಳ ಉತ್ಪಾದನೆಯ ಪ್ರತಿಫಲದ ಆವಶ್ಯಕತೆ ಇರುವುದಿಲ್ಲ. ಮುಪ್ಪಿನ ಕಾಲಕ್ಕಾಗಿ ತಂದೆತಾಯಿಯರೇ ಸಾಕಷ್ಟು ಉಳಿತಾಯ ಮಾಡಬಲ್ಲವ ರಾಗುವುದರಿಂದಲೂ ಸರ್ಕಾರ ಈ ವರ್ಗದ ಜನಕ್ಕೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವುದರಿಂದಲೂ ದೇಶದ ಅನಭಿವೃದ್ಧಿಯ ಹಂತದಲ್ಲಿದ್ದಷ್ಟು ಮಟ್ಟಿಗೆ ಈಗ ತಂದೆತಾಯಿಯರು ತಮ್ಮ ಮಕ್ಕಳನ್ನು ಅವಲಂಬಿಸಬೇಕಾಗುವುದಿಲ್ಲ.

ಅಲ್ಲದೆ, ಮಕ್ಕಳ ಸಲುವಾಗಿ ಕುಟುಂಬ ವಹಿಸಬೇಕಾದ ವೆಚ್ಚ ಹೆಚ್ಚುತ್ತದೆ. ಅಭಿವೃದ್ಧಿಯ ಹಂತದಲ್ಲಿ ಮಕ್ಕಳಿಗೆ ಹಿಂದಿಗಿಂತ ಹೆಚ್ಚು ಕಾಲಾವಧಿಯ ವಿದ್ಯಾಭ್ಯಾಸವನ್ನೂ ಆಧುನಿಕ ಉತ್ಪಾದನಾ ವ್ಯವಸ್ಥೆಗೆ ಆವಶ್ಯಕವಾದ ತಾಂತ್ರಿಕ ಶಿಕ್ಷಣವನ್ನೂ ನೀಡಬೇಕಾಗುತ್ತದೆ. ತಲಾ ವರಮಾನದ ಏರಿಕೆಯ ಫಲವಾದ ಸಾಂಪ್ರದಾಯಿಕ ಜೀವನ ಮಟ್ಟ ಏರಿಕೆಯಿಂದಲೂ ಮಕ್ಕಳ ಪೋಷಣೆಯ ವೆಚ್ಚ ಹೆಚ್ಚುತ್ತದೆ. ಮಕ್ಕಳ ಪೋಷಣೆಯ ನೇರ ವೆಚ್ಚ ಹೆಚ್ಚುವುದು ಮಾತ್ರವೇ ಅಲ್ಲ, ಹೆಚ್ಚು ಮಕ್ಕಳಾದರೆ ತಂದೆತಾಯಿಯರು ಅವರ ಪಾಲನೆಗಾಗಿ ತಮ್ಮ ಕಾಲವನ್ನು ಹೆಚ್ಚಾಗಿ ವ್ಯಯಮಾಡಬೇಕಾಗುತ್ತದೆ. : ತತ್ಫಲವಾಗಿ ಹೆಚ್ಚು ಸಂಪಾದನೆಯ ಅವಕಾಶಗಳನ್ನೂ ತ್ಯಜಿಸಬೇಕಾಗುತ್ತದೆ. ಆದ್ದರಿಂದ ಅಪ್ರತ್ಯಕ್ಷ ಅಥವಾ ಪರೋಕ್ಷ ವೆಚ್ಚವೂ ಹೆಚ್ಚುತ್ತದೆ. ಹೀಗೆ ಆರ್ಥಿಕಾಭಿವೃದ್ಧಿಯೊಡನೆ ಮಕ್ಕಳ ತುಷ್ಟಿಗುಣ-ವೆಚ್ಚಗಳಲ್ಲಿ ಉಂಟಾಗುವ ಇಂಥ ಬದಲಾವಣೆಗಳಿಂದ ಜನರು ಮಿತ ಕುಟುಂಬದ ಭಾವನೆಯನ್ನು ಬೆಳೆಸಿಕೊಳ್ಳುವ ರೆಂಬುದು ಲೀಬನ್‍ಸ್ಟಿನನ ವಾದಸರಣಿ. ಒಟ್ಟಿನಲ್ಲಿ ಆರ್ಥಿಕಾಭಿವೃದ್ಧಿಯೊಡನೆ ಜನರಲ್ಲಿ ಉಂಟಾಗುವ ವಿದ್ಯಾಭ್ಯಾಸ ವಿಸ್ತರಣೆ, ತಾರ್ಕಿಕ ಮನೋಭಾವ, ತಲಾ ವರಮಾನ ಏರಿಕೆ-ಇವೆಲ್ಲವೂ ಸೇರಿ ಜನರ ಜೀವನಧ್ಯೇಯಗಳ ಬಗ್ಗೆ ಒಂದು ಆಂದೋಲನವೇ ಆಗುವುದು. ತಮ್ಮ ಆರ್ಥಿಕ ಜೀವನಮಟ್ಟವನ್ನು ಸುಧಾರಿಸಿಕೊಳ್ಳುವುದರ ಕಡೆಗೆ ಅವರು ತೀವ್ರವಾಗಿ ಗಮನ ಹರಿಸುವರು. ಈ ಪ್ರಯತ್ನದ ಅಂಗವಾಗಿ ಅವರು ಮಿತಕುಟುಂಬ ಧ್ಯೇಯ ಅನುಸರಿಸುವರು.

ಜನಸಂಖ್ಯಾ ಪರಿವರ್ತನ ಸಿದ್ಧಾಂತ ಜನಸಂಖ್ಯಾ ಪ್ರವೃತ್ತಿಗಳ ಮೇಲೆ ಆರ್ಥಿಕಾಭಿವೃದ್ಧಿಗಳ ಪರಿಣಾಮಗಳನ್ನು ಕುರಿತ ಜನಾದರಣೀಯ ಸಿದ್ಧಾಂತ. ಭಾರತವೇ ಮುಂತಾದ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜನನದರಕ್ಕಿಂತಲೂ ಮೊದಲು ಮರಣದರ ಇಳಿದಿರುವುದು ಮತ್ತು ತತ್ಪರಿಣಾಮವಾಗಿ ಜನಸಂಖ್ಯೆ ಏರಿಕೆಯ ದರ ಹೆಚ್ಚಿರುವುದು ಸಿದ್ಧಾಂತದ ಒಂದು ಮುಖ್ಯಾಂಶವನ್ನು ಸಮರ್ಥಿಸುವುದು. ಅಭಿವೃದ್ಧಿಯ ಮುಂದಿನ ಹಂತದಲ್ಲಿ ಜನನದರ ಇಳಿಯುವ ಸೂಚನೆಗಳುಂಟು. ಹಿಂದೆ ಯುರೋಪಿಯನ್ ರಾಷ್ಟ್ರಗಳಲ್ಲಿ ಆಧುನಿಕ ಗರ್ಭನಿರೋಧಕ ಉಪಾಯಗಳ ಆವಿಷ್ಕಾರಗಳು ಆದದ್ದು ಅಭಿವೃದ್ಧಿಯ ಮುಂದುವರೆದ ಹಂತಗಳಲ್ಲಿ. ಆದರೆ ಈಗ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಭಿವೃದ್ಧಿಯ ಪ್ರಥಮ ಹಂತದಿಂದಲೇ ಈ ಉಪಾಯಗಳನ್ನನುಸರಿಸಲಾಗುತ್ತಿದೆಯೆಂಬುದು ಗಮನಿಸ ಬೇಕಾದ ಸಂಗತಿ.

**ಕೇನ್ಸ್ ವಾದಿಗಳ ದೃಷ್ಟಿ :** ಅರ್ಥಶಾಸ್ತ್ರ ಅಧ್ಯಯನಕ್ಕೆ ಹೊಸ ಸ್ವರೂಪ ನೀಡಿದ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಜೆ.ಎಂ.ಕೇನ್ಸನ **(ನೋಡಿ)** ಅನುಯಾಯಿಗಳು ಅವನ ಮಾರ್ಗ ಅನುಸರಿಸಿ ಅನೇಕ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಆರ್ಥಿಕ ಬೆಳವಣಿಗೆಯ ಮೇಲೆ ಜನಸಂಖ್ಯೆಯು ಪ್ರಭಾವ ಬೀರುವುದೆಂಬುದು ಅವರ ಆರ್ಥಿಕ ಬೆಳವಣಿಗೆಯ ಸಿದ್ಧಾಂತಗಳ ಒಂದು ಭಾಗ. ಜನಸಂಖ್ಯೆ ಬೆಳವಣಿಗೆ ಆರ್ಥಿಕಾಭಿವೃದ್ಧಿಗೆ ಸಹಾಯಕವಾದ ಅಂಶವೆಂದೂ ಜನಸಂಖ್ಯೆಯ ಇಳಿತ ದೀರ್ಘಕಾಲೀನ ಆರ್ಥಿಕ ಸ್ಥಗಿತತೆಗೆ ಒಂದು ಮುಖ್ಯ ಕಾರಣವೆಂದೂ ಕೇನ್ಸನ ವಿಶ್ಲೇಷಣೆಯ ಆಧಾರದ ಮೇಲೆ ಆಲ್ವಿನ್ ಹ್ಯಾನ್‍ಸನ್ ಮತ್ತು ಇತರ ಆರ್ಥಿಕ ಸ್ಥಗಿತವಾದಿಗಳು ಅಭಿಪ್ರಾಯಪಟ್ಟಿದ್ದಾರೆ. ಜನಸಂಖ್ಯೆಯ ಏರಿಕೆಯಿಂದ ಪರಿಣಾಮಕಾರಿ ಬೇಡಿಕೆ ಹೆಚ್ಚುವುದೆಂದೂ ಉದ್ಯಮಶೀಲರ ಬಂಡವಾಳದ ಸೀಮಾಂತ ನಿರೀಕ್ಷಿತ ಪ್ರತಿಫಲವನ್ನು ಇದು ಏರಿಸುವುದರಿಂದ ಹೊಸ ಬಂಡವಾಳ ಹೂಡಿಕೆಗೆ ಮತ್ತು ಈ ಮೂಲಕ ಆರ್ಥಿಕ ಬೆಳವಣಿಗೆಗೆ ಜನಸಂಖ್ಯಾ ಏರಿಕೆ ಕಾರಣವಾಗುವುದೆಂದೂ ಹೇಳಲಾಗಿದೆ. ಜನಸಂಖ್ಯೆ ಇಳಿಯುವ ಪ್ರವೃತ್ತಿಯಿರುವಾಗ ಉದ್ಯಮಿಗಳು ತಮ್ಮ ಸರಕುಗಳಿಗೆ ಮಾರುಕಟ್ಟೆ ವಿಸ್ತರಿಸುವುದೆಂಬ ಆಶೆ ಹೊಂದಿರಲಾರರು. ಆದ್ದರಿಂದ, ಜನಸಂಖ್ಯೆ ಇಳಿತಾಯದಿಂದ ಆರ್ಥಿಕ ಬೆಳವಣಿಗೆಗೆ ತಡೆಯಾಗಬಹುದು.

ಜನಸಂಖ್ಯೆಯ ಏರಿಕೆಯೊಡನೆ ಉಂಟಾಗುವ ಒಟ್ಟು ಬೇಡಿಕೆಯ ವಿಸ್ತರಣೆಯೊಡನೆಯೇ ಬೇಡಿಕೆಯ ರಚನೆಯಲ್ಲಿ ಆಗುವ ಬದಲಾವಣೆಗಳು ಆರ್ಥಿಕಾಭಿವೃದ್ಧಿಗೆ ಉತ್ತೇಜಕ ವಾಗುವುವೆಂದು ಹೇಳಲಾಗಿದೆ. ಜನಸಂಖ್ಯೆ ಹೆಚ್ಚುತ್ತಿರುವಾಗ ಕಟ್ಟಡಗಳ ನಿರ್ಮಾಣಕ್ಕೂ ಲೋಕೋಪಯೋಗಿ ಉದ್ಯಮಗಳಲ್ಲಿ ಬಂಡವಾಳ ಹೂಡಿಕೆಗೂ ಬೇಡಿಕೆ ಹೆಚ್ಚುವುದು. ಆದ್ದರಿಂದ ಆರ್ಥಿಕಾಭಿವೃದ್ಧಿಯ ಮುಖ್ಯವಾದ ಅಂಗವಾದ ಬಂಡವಾಳ ಸಂಚಯನದ ವೇಗ ಜನಸಂಖ್ಯಾ ಏರಿಕೆಯನ್ನು ಅವಲಂಬಿಸಿರುವುದು.

ಬೃಹದ್ಗಾತ್ರ ಉತ್ಪಾದನೆಯ ಪ್ರತಿಫಲಗಳು ಜನಸಂಖ್ಯೆಯ ಏರಿಕೆಯಿಂದ ಲಭಿಸುವುವೆಂಬ ಇನ್ನೊಂದು ಮುಖ್ಯ ಅಂಶವನ್ನು ಆರ್ಥರ್ ಲೂಯಿಸ್ ಸೂಚಿಸಿದ್ದಾನೆ. ಮಾರುಕಟ್ಟೆಯ ವಿಸ್ತಾರಕ್ಕೆ ಶ್ರಮವಿಭಜನೆ ಸೀಮಿತವಾಗಿರುತ್ತದೆ-ಎಂಬ ಆ್ಯಡಂ ಸ್ಮಿತ್ತನ ನುಡಿಯ ಆಧಾರದ ಮೇಲೆ ಹೇಳುವುದಾದರೆ, ಹೆಚ್ಚು ಜನಸಂಖ್ಯೆಯಿಂದ ಸರಕುಸೇವೆಗಳಿಗೆ ಮಾರುಕಟ್ಟೆ ವಿಸ್ತರಿಸಲು ನೆರವಾಗುತ್ತದೆ. ತನ್ಮೂಲಕ ಆರ್ಥಿಕ ಬೆಳವಣಿಗೆಗೆ ಆಧಾರವಾದ ಶ್ರಮವಿಭಜನೆ ಮತ್ತು ವಿಶೇಷಜ್ಞತೆಗಳು ಆಂತರಿಕ ಹಾಗೂ ಬಾಹ್ಯ ಮಿತವ್ಯಯಗಳೂ ಬೆಳೆಯಲು ಕಾರಣವಾಗುವುವೆಂದು ವಿವರಿಸಲಾಗಿದೆ.

ಹೆಚ್ಚು ಜನಸಂಖ್ಯೆಯ ಪರವಾಗಿ ಇನ್ನೊಂದು ವಿವರಣೆ ನೀಡಲಾಗಿದೆ. ಉದ್ಯಮಶೀಲತೆ, ಬಂಡವಾಳ, ತಂತ್ರಜ್ಞಾನ, ವ್ಯವಸ್ಥಾ ಸಾಮರ್ಥ್ಯ ಇವು ಉತ್ಪಾದನೆಯ ಏರಿಕೆಗೆ ಅನುಕೂಲ ವಾದರೂ ಸಾಕಷ್ಟು ಕಾರ್ಮಿಕ ಬಲ ಒದಗಿಸಬಲ್ಲ ಗಾತ್ರದ ಜನಸಂಖ್ಯೆ ಇಲ್ಲದಿರುವುದಾದರೆ ಆರ್ಥಿಕ ಬೆಳವಣಿಗೆ ಕಷ್ಟವಾಗುವುದು. ಅಂಥ ಸಂದರ್ಭದಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸಲು ಬಂಡವಾಳಸಾಂದ್ರ ಉತ್ಪಾದನ ಕ್ರಮಗಳನ್ನು ಹುಡುಕಬೇಕಾಗುವುದು; ಇವುಗಳ ಮಿತಿಗೆ ಅದು ಒಳಪಟ್ಟಿರಬೇಕಾಗುವುದು.

ಹೆಚ್ಚು ಜನಸಂಖ್ಯೆಯೂ ಜನಸಂಖ್ಯಾ ಬೆಳವಣಿಗೆಯೂ ಹೀಗೆ ಸಾಮಾನ್ಯವಾಗಿ ಆರ್ಥಿಕ ಬೆಳವಣಿಗೆಗೆ ಅನುಕೂಲಕರವಾದ ಅಂಶವೆಂಬ ಅಭಿಪ್ರಾಯವನ್ನು ಮೇಲಿನ ವಾದಗಳಿಂದ ಸಮರ್ಥಿಸಲಾಗಿದೆ. ಆದರೆ, ಈ ಸಾಮಾನ್ಯ ವಿವರಣೆ ಇಂದಿನ ಜನನಿಬಿಡವಾದ, ಅಭಿವೃದ್ಧಿ ಹೊಂದದ ರಾಷ್ಟ್ರಗಳಿಗೆ ಅನ್ವಯಿಸುವುದಿಲ್ಲ ಎಂದು ಸ್ಪೆಂಗ್ಲರ್, ನೆಲ್ಸನ್ ಇತ್ಯಾದಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಬಹುಕಾಲದಿಂದ ಕೂಡಿಬಂದ ಅಪೂರ್ಣೋದ್ಯೋಗ ಹಾಗೂ ನಿರುದ್ಯೋಗ ಪರಿಸ್ಥಿತಿಯಲ್ಲಿ ಬಂಡವಾಳದ ಕೊರತೆ, ತಾಂತ್ರಿಕ ಜ್ಞಾನದ ಮತ್ತು ಉದ್ಯಮಶೀಲತೆಯ ಅಭಾವ, ನಿರಕ್ಷರತೆ, ಕಡಿಮೆ ಮಟ್ಟದ ವ್ಯವಸ್ಥಾದಕ್ಷತೆ, ಸಾಮಾಜಿಕ ನಿರ್ಬಂಧಗಳು ಇತ್ಯಾದಿ ಗುಣಲಕ್ಷಣಗಳು ಕೂಡಿರುವ ಸ್ಥಿತಿಯಲ್ಲಿ ಈ ದೇಶಗಳ ಜನಸಂಖ್ಯೆಯೂ ಅಲ್ಲಿ ಸಂಭವಿಸುತ್ತಿರುವ ಜನಸಂಖ್ಯಾಸ್ಫೋಟಗಳೂ ಅಭಿವೃದ್ಧಿಯ-ತಲಾವರಮಾನ ಏರಿಕೆಯ-ಗತಿಯನ್ನು ನಿಧಾನಗೊಳಿಸಿವೆ ಎಂಬುದು ಸ್ಪಷ್ಟವಾಗಿದೆ. ಈ ರಾಷ್ಟ್ರಗಳ ವಿಶೇಷ ಪರಿಸ್ಥಿತಿಯಲ್ಲಿ ಜನಸಂಖ್ಯೆಯ ಏರಿಕೆ ತೀವ್ರ ಅಭಿವೃದ್ಧಿಗೆ ಒಂದು ಹೊರೆಯಾಗಿದೆ ಎಂಬ ಅಭಿಪ್ರಾಯವನ್ನು ಅನೇಕರು ವ್ಯಕ್ತಪಡಿಸಿದ್ದಾರೆ. ಇಂದು ಈ ರಾಷ್ಟ್ರಗಳಲ್ಲಿ ಮಿತ ಕುಟುಂಬದ ಯೋಜನೆ ಪ್ರಚಾರವಾಗುತ್ತಿರುವುದಕ್ಕೆ ಈ ಅಭಿಪ್ರಾಯವೇ ಆಧಾರವಾಗಿದೆ.

ಜನಸಂಖ್ಯೆಯ ಸಮಸ್ಯೆಯನ್ನು ಮೇಲೆ ವಿವರಿಸಿರುವ ಆರ್ಥಿಕ ಸಿದ್ಧಾಂತಗಳ ದೃಷ್ಟಿಯಿಂದ ಮಾತ್ರವೇ ಪರಿಗಣಿಸಿ ಪರಿಹಾರ ಕೈಗೊಳ್ಳಲಾಗದೆಂಬ ಅಂಶವನ್ನು ಕೆಲವು ಅರ್ಥಶಾಸ್ತ್ರಜ್ಞರೇ ಸೂಚಿಸಿರುವುದು ಗಮನಾರ್ಹ. ಜನಸಂಖ್ಯೆ ಏರಿಕೆಯನ್ನು ದೀರ್ಘ ಕಾಲಾವಧಿಯ ಸ್ಥಳಾವಕಾಶ ದೃಷ್ಟಿಯಿಂದ ವಿವೇಚಿಸಬೇಕೆಂದು ಸೂಚಿಸಿ ಆರ್ಥರ್ ಲೂಯಿಸ್ ಈ ಬಗ್ಗೆ ಸ್ವಾರಸ್ಯಕರ ಲೆಕ್ಕಾಚಾರ ಹಾಕಿದ್ದಾನೆ. 5.6 ಕೋಟಿ ಚದರ ಮೈಲಿಗಳ ವಿಸ್ತೀರ್ಣದ ಭೂಭಾಗ ಹೊಂದಿರುವ ಈ ಪ್ರಪಂಚದಲ್ಲಿ ಜನಸಂಖ್ಯೆ ವರ್ಷಕ್ಕೆ ಸೇಕಡ 1ರಂತೆ ಬೆಳೆಯುತ್ತಾ ಹೋದರೆ 1120 ವರ್ಷಗಳ ತರುವಾಯ ಪ್ರಪಂಚದ ಜನರಲ್ಲಿ ಪ್ರತಿಯೊಬ್ಬನಿಗೆ ಒಂದು ಚದರ ಗಜ ಮಾತ್ರ ಸಿಗುವುದೆಂಬುದು ಲೂಯಿಸ್‍ನ ಗಣನೆ. ತಾಂತ್ರಿಕ ಸಾಧ್ಯತೆಗಳ ಫಲವಾಗಿ ಇಷ್ಟು ಜನರಿಗೂ ಸರಕು ಸೇವೆಗಳನ್ನು ಒದಗಿಸಲು ಸಾಧ್ಯವಾಗಬಹುದಾದರೂ ಸುಖಜೀವನಕ್ಕೆ ಅಡ್ಡಿ ತರಬಹುದಾದ ತೀವ್ರ ಸ್ಥಳ ಸಂಕೋಚ ಮೂಲಭೂತ ಪ್ರಶ್ನೆಯಾಗುತ್ತದೆ.

ಮಿತಿಮೀರಿದ ಜನಸಾಂದ್ರತೆಯ ವಿವಿಧ ಪರಿಣಾಮಗಳನ್ನು ಅಭಿಜಾತ ಅರ್ಥಶಾಸ್ತ್ರಜ್ಞ ಜೆ.ಎಸ್. ಮಿಲ್ ಒಂದೂವರೆ ಶತಮಾನಗಳ ಹಿಂದೆಯೇ ಮನಗಾಣುವಂತೆ ವರ್ಣಿಸಿದ್ದಾನೆ. ವ್ಯಕ್ತಿಗೆ ಬೇಕೆನ್ನಿಸಿದಾಗ ಏಕಾಂತವಾಗಿ ಅಥವಾ ಗೋಪ್ಯವಾಗಿ ಇರಲು ತಕ್ಕ ಸ್ಥಳಾವಕಾಶ ಜೀವನದ ಸುಖದ ಸುಖಾನುಭವಕ್ಕೆ ಆವಶ್ಯಕ. ತೀವ್ರವಾದ ಸ್ಥಳಾಭಾವದಿಂದ ಯಾವಾಗಲೂ ಇತರರ ಮಧ್ಯೆಯೇ ಇರಬೇಕಾದ ಪರಿಸ್ಥಿತಿ ಒದಗಿದರೆ ವ್ಯಕ್ತಿಗಳ ಆಂತರಿಕ ಶಕ್ತಿಗಳ ವಿಕಾಸಕ್ಕೆ ಸ್ಫೂರ್ತಿ ಇರುವುದಿಲ್ಲ. ಜನರು ಸಮಾಜದಲ್ಲಿ ಪರಸ್ಪರ ಕಲೆತು ಇರುವುದು ವ್ಯಕ್ತಿತ್ವದ ಬೆಳವಣಿಗೆಗೆ ಎಷ್ಟು ಮುಖ್ಯವೋ, ಪ್ರತ್ಯೇಕವಾಗಿ ಧ್ಯಾನ ಹಾಗೂ ಉನ್ನತ ಆಲೋಚನೆಗಳಲ್ಲಿ ಆಸಕ್ತರಾಗಿರುವುದೂ ಅಷ್ಟೇ ಮುಖ್ಯ. ನಿಸರ್ಗಸೌಂದರ್ಯದ ವಾತಾವರಣದಲ್ಲಿ ವ್ಯಕ್ತಿ ಏಕಾಂತವಾಗಿ ಕಾಲ ಕಳೆಯುವ ಅವಕಾಶ ವ್ಯಕ್ತಿಯ ನೈತಿಕ ಔನ್ನತ್ಯಕ್ಕೆ ಮಾತ್ರವೇ ಅಲ್ಲದೆ ಸಮಾಜಕ್ಕೆ ಕಲ್ಯಾಣವಾಗುವ ಭಾವನಾತರಂಗಗಳು ಮತ್ತು ಆಕಾಂಕ್ಷೆಗಳು ಅಭಿವ್ಯಕ್ತವಾಗಲೂ ಕಾರಣವಾಗುವುದು. ಏಕಾಂತತೆಗೆ ಇರುವ ಅವಕಾಶಗಳು ನಿರ್ಮೂಲವಾದ ಪ್ರಪಂಚ ಹೀನಪ್ರಪಂಚವೇ ಸರಿ. ಪ್ರತಿಯೊಂದು ಎಕರೆ ಭೂಭಾಗವು ಆಹಾರ ಬೆಳೆಗಾಗಿ ಸಾಗುವಳಿಗೆ ಒಳಪಟ್ಟಿರುವ ಹುಲ್ಲು-ಮರ-ಹೂ ಗಿಡಗಳೇ ಮುಂತಾದ ಸ್ವಾಭಾವಿಕವಾಗಿ ಬೆಳೆಯುವ ಅರಣ್ಯ ಪ್ರದೇಶವೆಲ್ಲವೂ ನಾಶಮಾಡಲ್ಪಟ್ಟು ಈ ಭಾಗವೂ

ಮಾನವನ ವಸತಿ ಮತ್ತು ಆಹಾರಗಳಿಗಾಗಿ ಉಪಯೋಗಿಸಲ್ಪಡುತ್ತಿರುವ, ಮಾನವನ ಪ್ರಯೋಜನಕ್ಕೆ ಬಾರದ ಪ್ರಾಣಿವರ್ಗವೆಲ್ಲವೂ ಉಚ್ಚಾಟನೆ ಮಾಡಲ್ಪಟ್ಟಿರುವ, ಒಟ್ಟಿನಲ್ಲಿ ನೈಸರ್ಗಿಕ ಚಲನವಲನಗಳು ತಾನೇ ವರ್ತಿಸಲು ಏನೂ ಅವಕಾಶವಿದ್ದಿಲ್ಲದಿರುವ ಪ್ರಪಂಚವನ್ನು ಸಮರ್ಪಕ ಪರಿಸ್ಥಿತಿಗಳಿರುವ ಪ್ರಪಂಚವೆಂದು ಪರಿಗಣಿಸಲಾಗುವುದಿಲ್ಲ. ಕೇವಲ ಅಧಿಕ ಜನಸಂಖ್ಯೆಯನ್ನು ಧರಿಸುವ ಸಲುವಾಗಿ ಭೂಮಿಯ ಪ್ರಕೃತಿದತ್ತ ಸೌಂದರ್ಯದ ಬಹುಭಾಗ ಹೀಗೆ ನಶೀಸಬೇಕಾಗುವುದಾದರೆ, ಭವಿಷ್ಯ ಪೀಳಿಗೆಯ ಉತ್ತಮ ಜೀವನದ ದೃಷ್ಟಿಯಿಂದ ಜನಂಖ್ಯೆ ಬೆಳೆಯದೆಯೇ ಸ್ಥಗಿತವಾಗಿರುವುದು ಅತ್ಯುತ್ತಮ.

ಒಂದೂವರೆ ಶತಮಾನಗಳ ಹಿಂದೆ ಇದ್ದ ಜನಸಂಖ್ಯಾ ಪರಿಸ್ಥಿತಿ ಹಾಗೂ ಪ್ರವೃತ್ತಿಗಳ ಬಗ್ಗೆಯೇ ಮೇಲೆ ಹೇಳಿದಂತೆ ಆತಂಕಕಾರಿ ಭಾವನೆ ಹೊಂದಿದ ಮಿಲ್ ಇಂದಿನ ಪ್ರಪಂಚದ ಜನಸಂಖ್ಯಾ ಪರಿಸ್ಥಿತಿಯ ಬಗ್ಗೆ ಏನು ಹೇಳುತ್ತಿದ್ದನೆಂಬುದನ್ನು ಊಹಿಸಿಕೊಳ್ಳಬಹುದು. (ಎ.ಪಿ.ಎಸ್.)

## III ಜನಸಂಖ್ಯಾ ವಿತರಣೆ

ಜನಸಂಖ್ಯೆ ಒಂದು ಪರಿಮಾಣಾತ್ಮಕ ಪರಿಕಲ್ಪನೆ. ನಾನಾ ಬಗೆಯ ಸಮುಚ್ಚಯಗಳನ್ನು ಸೂಚಿಸಲು ಇದನ್ನು ಬಳಸಲಾಗುತ್ತದೆ. ಈ ಸಮುಚ್ಚಯಗಳು ಒಂದು ಪ್ರದೇಶದಲ್ಲಿ ಯಾವ ರೀತಿ ವಿತರಣೆಯಾಗಿವೆಯೆಂಬುದನ್ನೂ ಆ ರೀತಿಯೇ ಏಕೆ ವಿತರಣೆಗೊಂಡಿವೆಯೆಂಬುದನ್ನೂ ಅರಿಯುವುದು ಜನಸಂಖ್ಯಾ ವಿತರಣೆಯ ಅಧ್ಯಯನದ ಉದ್ದೇಶ. ಜನಸಂಖ್ಯೆಯ ಬೆಳವಣಿಗೆಯ ದರ ಮತ್ತು ಜನವಲಸೆಗೂ ಜನಸಂಖ್ಯೆಯ ವಿತರಣೆಗೂ ನೇರ ಸಂಬಂಧ ಉಂಟು. ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಮಾನವಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದವಕ್ಕೆ–ಜನಸಮುದಾಯಗಳು, ಪ್ರದೇಶಗಳು, ಆರ್ಥಿಕತೆಗಳೇ ಮೊದಲಾದ ಮಾನವ ವ್ಯವಸ್ಥೆಗಳನ್ನು ಕುರಿತ ಎಲ್ಲ ಶಾಸ್ತ್ರಗಳಿಗೆ–ಇದು ತಾತ್ತ್ವಿಕವಾಗಿಯೂ ಅನುಭವಿಕವಾಗಿಯೂ ತುಂಬಾ ಕುತೂಹಲಕಾರಿಯಾಗಿದೆ.

ಜನಸಂಖ್ಯೆಯನ್ನು ಸಮಗ್ರವಾಗಿ ಅಥವಾ ಪ್ರಾದೇಶಿಕವಾಗಿ ಅಧ್ಯಯನ ಮಾಡುವುದು ಸಾಧ್ಯ. ಒಂದು ಸೀಮಿತ ಪ್ರದೇಶಕ್ಕೆ ಸಂಬಂಧಿಸಿದಂತೆ (ಉದಾ; ಒಂದು ಪ್ರಾಂತ್ಯ ಅಥವಾ ಒಂದು ನಗರ) ಜನಸಂಖ್ಯೆಯ ವಿತರಣೆ ಹೇಗಾಗಿದೆಯೆಂಬುದನ್ನು ಅಧ್ಯಯನ ಮಾಡುವುದು ಹಿಂದಿನಿಂದ ಬೆಳೆದು ಬಂದಿರುವ ಪರಿಪಾಟ. ಅದು ಬಹುತೇಕ ವಿವರಣಾತ್ಮಕವಾಗಿರುತ್ತಿತ್ತು. ವಿಶ್ಲೇಷಣಾತ್ಮಕ ದೃಷ್ಟಿ ಈಚೆಗೆ ಬೆಳೆಯುತ್ತಿದೆ. ಒಂದು ಪ್ರಾಂತ್ಯದ ಅಥವಾ ಒಂದು ಜಿಲ್ಲೆಯ ಕಿರು ವಿಭಾಗಗಳ ಜನಂಖ್ಯೆಗಳ ಗಾತ್ರ ಮತ್ತು ಸಂಯೋಜನೆಗಳ, ಒಂದು ಸ್ಥಳದ ಜನಸಂಖ್ಯೆಯಲ್ಲಿ ಕಾಲಕ್ರಮದಲ್ಲಿ ಆಗಿರುವ ಬದಲಾವಣೆಗಳ ಅಧ್ಯಯನ ನಡೆದಿದೆ.

**ಜನಸಾಂದ್ರತೆ:** ಒಂದು ಕಾಲದಲ್ಲಿ ಅಥವಾ ಒಂದು ಪ್ರದೇಶದಲ್ಲಿ ಜನಸಂಖ್ಯೆಯಲ್ಲಿ ಅಥವಾ ಅದರ ಗುಣಲಕ್ಷಣಗಳಲ್ಲಿ ಆಗಿರುವ ಬದಲಾವಣೆಗಳನ್ನು ಅರಿಯುವ ಉದ್ದೇಶದಿಂದ ಜನಸಂಖ್ಯಾ ವಿತರಣೆಯನ್ನು ಮಾಪನ ಮಾಡಲಾಗುತ್ತದೆ. ಜನಸಂಖ್ಯಾ ವಿತರಣೆಯ ಅತ್ಯಂತ ಸರಳ ಮಾಪನವೆಂದರೆ ಒಂದು ಭೂಪ್ರದೇಶಕ್ಕೆ ಸಂಬಂಧಿಸಿದಂತೆ ಜನಸಂಖ್ಯೆಯ ನಿಷ್ಪತ್ತಿ (ರೇಷಿಯೊ). ಒಂದು ಪ್ರದೇಶದ ವಿಸ್ತೀರ್ಣದಿಂದ (L)ಅಲ್ಲಿಯ ಜನಸಂಖ್ಯೆಯನ್ನು (N) ಭಾಗಿಸಿದರೆ(N/L) ಬರುವುದೇ ಜನಸಾಂದ್ರತೆ (D): D= N/L. ಭಾರತದ ವಿಸ್ತೀರ್ಣ 32,68,090 ಚ.ಕಿಮೀ. ಜನಸಂಖ್ಯೆ 54,79,49,809 (1971). ಅದರ ಜನಸಾಂದ್ರತೆ ಚ.ಕಿಮೀಗೆ 168. ಆದರೆ ಜನಸಂಖ್ಯಾ ನಿಷ್ಪತ್ತಿ ಒಂದು ಸ್ಥೂಲಮಾಪನ ಮಾತ್ರ. ಇಡೀ ದೇಶ ಅಥವಾ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತಿ ಚ.ಮೈ.ಯ ಅಥವಾ ಪ್ರತಿ ಚ.ಕಿಮೀ.ನ ಜನಸಾಂದ್ರತೆಯ ಬದಲು, ವ್ಯವಸಾಯಯೋಗ್ಯ ಜಮೀನಿನ ಪ್ರತಿ ಚ.ಕಿಮೀ ಜನಸಾಂದ್ರತೆಯನ್ನು ಕಂಡುಹಿಡಿಯಬಹುದು. ಮೊದಲನೆಯದಕ್ಕಿಂತ ಇದು ಸ್ವಲ್ಪ ಸುಧಾರಿಸಿದ ಮಾಪನ. ಸಾಂದ್ರತೆಯ ನಿಷ್ಪತ್ತಿಗಳು (ಡೆನ್ಸಿಟಿ ರೇಷಿಯೊ) ಸರಾಸರಿಗಳು ಮಾತ್ರ, ಗಮನಾರ್ಹ ಆಂತರಿಕ ವ್ಯತ್ಯಾಸಗಳನ್ನು ಅವು ಸೂಚಿಸಲಾರವು. ಆದರೂ ದೇಶ, ಪ್ರಾಂತ್ಯ, ಪ್ರದೇಶ, ನಗರಗಳೇ ಮುಂತಾದವುಗಳ ಸಾಪೇಕ್ಷ ಜನಸಾಂದ್ರತೆ ಮತ್ತು ಜನ ಚದರಿಕೆಗಳನ್ನು ತೌಲನಿಕವಾಗಿ ಅಭ್ಯಸಿಸಲು ಅವುಗಳ ಜನಸಾಂದ್ರತಾ ನಿಷ್ಪತ್ತಿಗಳು ಸಹಾಯಕ.

ಇಂಥ ಹೋಲಿಕೆಗಳನ್ನು ಮಾಡುವಾಗ ಎಚ್ಚರಿಕೆ ವಹಿಸಬೇಕಾದ್ದು ಅತ್ಯಾವಶ್ಯಕ. ಹೋಲಿಕೆಗೆ ಒಳಪಡಿಸಲಾದ ಪ್ರದೇಶಗಳು ಭೌಗೋಳಿಕ ಮತ್ತು ಸಾಂಸ್ಕೃತಿಕವಾಗಿ ಸಮಾನವಾಗಿದ್ದಾಗ ಈ ಬಗೆಯ ಹೋಲಿಕೆ ಉಪಯುಕ್ತವೆನಿಸುತ್ತದೆ. ಭಾರತದ ಜನಸಾಂದ್ರತೆಯನ್ನು ಐಸ್ಲೆಂಡಿನ ಜನಸಾಂದ್ರತೆಯೊಡನೆ ಹೋಲಿಸುವುದು ಅರ್ಥಶೂನ್ಯ. ಭಾರತ ಐಸ್ಲೆಂಡ್‌ಗಳೆರಡರಲ್ಲೂ ಬರ್ಫದಿಂದ ಆವೃತವಾದ ಪ್ರದೇಶಗಳಿವೆಂಬ ಕಾರಣದಿಂದಾಗಿಯೂ ಈ ಹೋಲಿಕೆ ಸರಿಯೆನಿಸದು. ಭಾರತ–ಐಸ್‌ಲೆಂಡ್‌ಗಳು ಭೌಗೋಳಿಕವಾಗಿ ಅತ್ಯಂತ ಭಿನ್ನವಾದವು. ಆದ್ದರಿಂದ ಅವುಗಳ ನೆಲಬಳಕೆಯ ವಿಧಾನಗಳು ಭಿನ್ನವಾಗಿರುವುದು ಅನಿವಾರ್ಯ. ವಾಸಿಸಲೂ ಜೀವನ ನಡೆಸಲೂ ಲಭ್ಯವಿರುವ ಸೌಲಭ್ಯಗಳಲ್ಲೂ ವ್ಯತ್ಯಾಸವಿರುತ್ತದೆ. ಆದ್ದರಿಂದ ಜನಸಂಖ್ಯಾ ವಿತರಣೆಯ ಸ್ವರೂಪದಲ್ಲೇ ಭಿನ್ನತೆ ಉಂಟಾಗುತ್ತದೆ.

ಪ್ರಪಂಚದ ವಿವಿಧ ಪ್ರದೇಶಗಳ ಜನಸಾಂದ್ರತೆಗಳನ್ನು ಅವಲೋಕಿಸಿದಾಗ ಗೋಚರವಾಗುವ ಅಂಶಗಳು ಸ್ವಾರಸ್ಯಕರ. ಸನ್ನಿವೇಶ, ಭೌತಲಕ್ಷಣ, ವಾಯುಗುಣ ಮುಂತಾದ ಸ್ವಾಭಾವಿಕ ಅಂಶಗಳಿಗೆ ಅನುಗುಣವಾಗಿ ಜನಸಾಂದ್ರತೆ ತೀವ್ರ ಅಥವಾ ವಿರಳ ಆಗಿರುವುದಂತೂ ಸರಿ. ಹೆಚ್ಚು ಜನಸಂಖ್ಯೆಯಿರುವ, ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಫಲವತ್ತಾದ ಮೈದಾನಗಳೂ ಅವುಗಳ ಬಳಿಯ ದೊಡ್ಡ ವಾಣಿಜ್ಯಕ ಮತ್ತು ಕೈಗಾರಿಕಾ ನಗರಗಳೂ ಅತ್ಯಂತ ಜನಸಾಂದ್ರ ಪ್ರದೇಶಗಳಾಗಿರುತ್ತವೆ, ಆದರೆ ಅಲ್ಲಿಯ ಜನರ ಜೀವನಮಟ್ಟಗಳು ಬಲು ಕಡಿಮೆಯಾಗಿರುತ್ತವೆ. ಆಧುನೀಕೃತ ದೇಶಗಳಲ್ಲಿಯ ಪ್ರವೃತ್ತಿ ಬೇರೆ ತೆರ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವ್ಯಾಪಾರಕ್ಕೆ ನೆರವಾಗಿ ಸರಕು–ಸೇವೆಗಳ ವಿನಿಮಯಕ್ಕೆ ಅನುಕೂಲ ಇರುವ ಸ್ಥಳಗಳಲ್ಲಿ ನಗರಗಳು ಬೆಳೆಯುತ್ತವೆ. ಆ ನಗರಗಳ ಮತ್ತು ಅವುಗಳ ಸುತ್ತಣ ಪ್ರದೇಶಗಳ ಜನಸಾಂದ್ರತೆಗಳು ಅತ್ಯಂತ ಹೆಚ್ಚಿನವಾಗಿರುತ್ತವೆ. ಆ ನಗರಗಳಲ್ಲೂ ಪ್ರದೇಶಗಳಲ್ಲೂ ನೆಲಸಿರುವ ಜನರ ಜೀವನಮಟ್ಟ ಸಾಪೇಕ್ಷವಾಗಿ ಹೆಚ್ಚಿನವಾಗಿರುತ್ತವೆ. *

**ತಲಾ ನೆಲ:** ಒಂದು ಪ್ರದೇಶದ ನೆಲವನ್ನು ಜನಸಂಖ್ಯೆಗೆ ಸಮವಾಗಿ ಹಂಚಿದಾಗ ಪ್ರತಿಯೊಬ್ಬನಿಗೂ ದೊರೆಯುವ ನೆಲಕ್ಕೆ ತಲಾನೆಲ (ಏರಿಯಾಲಿಟಿ) ಎಂದು ಹೆಸರು. ಎಂದರೆ ವಿಸ್ತೀರ್ಣವನ್ನು ($L$) ಜನಸಂಖ್ಯೆಯಿಂದ ($N$) ಭಾಗಿಸಿದರೆ ತಲಾನೆಲ ($A$) ಗೊತ್ತಾಗುತ್ತದೆ. $A=L/N$ ತಲಾನೆಲವೂ ಜನಸಾಂದ್ರತೆಯೂ ($D=N/L$) ಪರಸ್ಪರ ವ್ಯುತ್ಕ್ರಮ ಉತ್ಪನ್ನಗಳು ($A.D=1$). ಚ.ಕಿಮೀಗೆ ಇಷ್ಟು ಜನ ಎಂಬುದು ಜನಸಾಂದ್ರತೆ. ಪ್ರತಿಯೊಬ್ಬನಿಗೆ ಎಷ್ಟು ನೆಲ (ಆರ್, ಚದರ ಡೆಕಾಮೀಟರ್) ಎಂಬುದು ತಲಾನೆಲ. ಭಾರತದ ನೆಲದ ವಿಸ್ತೀರ್ಣ ಸು. 32.68 ಲಕ್ಷ ಚ.ಕಿಮೀ. ತಲಾ ನೆಲ 59.74 ಆರ್ ಗಳು (1971). 1961ರಲ್ಲಿದ್ದಂತೆ ತಲಾ ನೆಲ 74.00 ಆರ್‌ಗಳು. ದೇಶದ ವಿಸ್ತೀರ್ಣ ಸ್ಥಿರವಾಗಿದೆ. ಜನಸಂಖ್ಯೆ ಹೆಚ್ಚಿದೆ. ಆದ್ದರಿಂದಲೇ ತಲಾ ನೆಲದಲ್ಲಿ ಇಳಿತಾಯವಾಗಿದೆ. ಕರ್ನಾಟಕದ ತಲಾ ನೆಲ 65.5 ಆರ್‌ಗಳು (1971). (ಎಂ.ವಿ.ಜಿ.)

**ಪ್ರಪಂಚದ ಜನಸಂಖ್ಯೆಯ ವಿತರಣೆ :** ಪ್ರಪಂಚದ ಜನಸಂಖ್ಯೆಯ ವಿತರಣೆಯಲ್ಲಿ ಕಂಡುಬರುವ ಗಮನಾರ್ಹ ಸಂಗತಿಯೆಂದರೆ, ಅದರ ಅಸಮತೆ. ಪ್ರಪಂಚದ ಒಟ್ಟು ಜನರಲ್ಲಿ ಸುಮಾರು ಹತ್ತನೆಯ ಒಂಬತ್ತರಷ್ಟು ಮಂದಿ ಒಟ್ಟು ವಿಸ್ತೀರ್ಣದ ಕಾಲುಭಾಗಕ್ಕಿಂತ ಕಡಿಮೆ ಪ್ರದೇಶದಲ್ಲಿ ವಾಸಿಸುತ್ತಾರೆ. ಹೆಚ್ಚು ಜನಸಾಂದ್ರತೆಯ ವಿಶಾಲ ಪ್ರದೇಶಗಳು ಮೂರು. ಇವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಏಷ್ಯ. ಈ ಖಂಡದ ಜಪಾನ್, ದಕ್ಷಿಣ ಕೊರಿಯ ಚೀನ ಭೂಭಾಗ, ತೈವಾನ್, ಜಾವ, ಭಾರತ, ಬಾಂಗ್ಲಾ ದೇಶ–ಇವು ಹೆಚ್ಚು ಜನದಟ್ಟಣೆಯ ಪ್ರದೇಶಗಳು. ಯುರೋಪಿನ ಪಶ್ಚಿಮ ಭಾಗ, ಅಮೆರಿಕ ಸಂಯುಕ್ತಸಂಸ್ಥಾನಗಳ ಈಶಾನ್ಯ ತೀರ ಮತ್ತು ಮಹಾಸರೋವರಗಳ ತೀರಗಳು, ಕೆರಿಬಿಯನ್ ಮತ್ತು ದಕ್ಷಿಣ ಅಮೆರಿಕ ತೀರ ಪ್ರದೇಶಗಳು– ಇಲ್ಲೂ ಜನಸಾಂದ್ರತೆ ಹೆಚ್ಚು. ಏಷ್ಯದಲ್ಲಿ ಸೋವಿಯತ್ ದೇಶದ ಭಾಗವನ್ನುಳಿದ ಪ್ರದೇಶ ಇಡೀ ಭೂಮಿಯ ಶೇ. 20ರಷ್ಟಕ್ಕಿಂತ ಕಡಿಮೆ. ಆದರೆ ಪ್ರಪಂಚದ ಜನಸಂಖ್ಯೆಯ ಶೇ. 60ರಷ್ಟು ಜನ ಅಲ್ಲಿದ್ದಾರೆ. ಈ ಶೇಕಡವಾರು ಹೆಚ್ಚುತ್ತಲೇ ಇದೆ ; ಪ್ರಪಂಚದಲ್ಲಿ ದಕ್ಷಿಣ ಅಮೆರಿಕದ ಭೂಭಾಗ ಶೇ.13 ; ಪ್ರಪಂಚದ ಜನಸಂಖ್ಯೆಯ ಶೇ. 6 ರಷ್ಟು ಮಂದಿ ಇಲ್ಲಿ ವಾಸಿಸುತ್ತಿದ್ದಾರೆ. ಇಲ್ಲೂ ಜನಸಂಖ್ಯೆ ತೀವ್ರವಾಗಿ ಬೆಳೆಯುತ್ತಿದೆ.

ಒಂದು ಪ್ರದೇಶದ ಜನಸಾಂದ್ರತೆಯ ಪ್ರಾಕೃತಿಕ ನಿರ್ಣಾಯಕಗಳು ಇವು : 1. ವಾಯುಗುಣ, 2. ಫಲವತ್ತತೆ (ವಾಯುಗುಣವೂ ಇದರ ಮೇಲೆ ಪರಿಣಾಮ ಬೀರುತ್ತದೆ). 3. ಮೇಲ್ಮೈಯ ಲಕ್ಷಣ. ಆಧುನಿಕ ಪ್ರಪಂಚದಲ್ಲಿ ಅತ್ಯಂತ ತೀವ್ರ ಭೌಗೋಳಿಕ ಪರಿಸ್ಥಿತಿಗಳನ್ನು ಬಿಟ್ಟರೆ ಉಳಿದಂತೆ ಜನವಿತರಣೆಗೆ ಬಹುಮಟ್ಟಿಗೆ ಕಾರಣವಾಗುವವು ಸಾಂಸ್ಕೃತಿಕ ಅಂಶಗಳು. ವಿಶಿಷ್ಟ ಪ್ರದೇಶಗಳ ಜನವಸತಿಗೂ ಜನಸಂಖ್ಯೆಯ ಶೀಘ್ರ ಬೆಳವಣಿಗೆಗೂ ತತ್ ಕ್ಷಣದ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆಯೇ ಕಾರಣವಾಗಬಹುದು. ಆದರೆ ಕಬ್ಬಿಣ ಅದಿರು, ಕಲ್ಲಿದ್ದಲು ಮುಂತಾದ ಸಂಪನ್ಮೂಲಗಳನ್ನು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಉಪಯೋಗಿಸಿಕೊಳ್ಳಲಾರದ ಸಂಸ್ಕೃತಿಯ ದೃಷ್ಟಿಯಲ್ಲಿ ಅವಕ್ಕೆ ಏನೂ ಪ್ರಾಮುಖ್ಯ ಇರುವುದಿಲ್ಲ. ಕರಾವಳಿಯಲ್ಲಿ ಅಥವಾ ನದೀತೀರದಲ್ಲಿ ಜನಸಂಖ್ಯೆಯ ಬೆಳವಣಿಗೆಗೆ ಆ ಪ್ರದೇಶದ ವ್ಯಾಪಾರದ–ಕೈಗಾರಿಕಾ ವಾಣಿಜ್ಯದ–ಅಭಿವೃದ್ಧಿ ಕಾರಣ. ಕೈಗಾರಿಕೆಗಳ ಕಚ್ಚಾ ಸಾಮಗ್ರಿ, ಪೂರ್ಣ ಸಿದ್ಧ ಸರಕುಗಳು ಇವುಗಳ ದೃಷ್ಟಿಯಿಂದ ಯಾವ ಪ್ರದೇಶ ಹೆಚ್ಚು ಅನುಕೂಲವಾಗಿರುತ್ತದೋ ಅಲ್ಲಿ ಜನಸಾಂದ್ರತೆ ಅಧಿಕವಾಗಿರುತ್ತದೆ. ಆರ್ಥಿಕ ವೆಚ್ಚಗಳು,

ಸಾರಿಗೆಯ ಕಾಲ, ಸಂಚಾರ ಮಾರ್ಗಗಳ ಸೌಲಭ್ಯ, ಮಾರುಕಟ್ಟೆಯ ಆವಶ್ಯಕತೆಗಳು– ಇವೂ ಒಂದು ಪ್ರದೇಶದ ಜನಸಂಖ್ಯೆಯನ್ನು ಬಹುಮಟ್ಟಿಗೆ ನಿರ್ಣಯಿಸುತ್ತವೆ. **(ನೋಡಿ– ಕೈಗಾರಿಕೆಗಳ–ಸ್ಥಾನೀಕರಣ)**

ನಗರೀಯ ಜನಸಂಖ್ಯಾ ವಿತರಣೆ : ಮಾನವ ಸಂಘಟನೆಯಲ್ಲಿಯ ಬದಲಾವಣೆಗಳನ್ನು ನಗರಗಳ ಬೆಳವಣಿಗೆಯಲ್ಲಿ ಕಾಣಬಹುದು. ಪ್ರಪಂಚದಲ್ಲಿ ಹತ್ತು ಲಕ್ಷಕ್ಕಿಂತ ಅಧಿಕ ಜನಸಂಖ್ಯೆಯ ನಗರಗಳ ಸಂಖ್ಯೆ 1900–1960ರಲ್ಲಿ 10–63ಕ್ಕೆ ಏರಿತು. ಪ್ರಪಂಚದ ಜನರಲ್ಲಿ ಶೇ.20ರಷ್ಟು ಮಂದಿ ಒಂದು ಲಕ್ಷ ಅಥವಾ ಅದಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರಗಳಲ್ಲಿ ವಾಸಿಸುತ್ತಾರೆ. ನಗರಗಳ ಸಂಖ್ಯೆಯೂ ಅವುಗಳ ಜನಸಂಖ್ಯೆಯೂ ಬೆಳೆದಂತೆ, ಹಳ್ಳಿಗಳ ಜನಸಂಖ್ಯೆಯ ಅನುಪಾತ ಇಳಿಮುಖವಾಗಿದೆ.

ಶೀಘ್ರ ನಗರೀಕರಣ, ಬೆಳೆಯುತ್ತಿರುವ ಅಧಿಕ ಸಂಖ್ಯೆಯ ನಗರಗಳಲ್ಲಿ ಜನಸಾಂದ್ರೀಕರಣ – ಇವುಗಳಿಂದಾಗಿ ಜನಸಂಖ್ಯಾ ನಮೂನೆಗಳ ಮೇಲೆ ತೀವ್ರ ಪರಿಣಾಮ ಉಂಟಾಗಿದೆ. ಫಲವತ್ತಾದ ಕೃಷಿಪ್ರದೇಶಗಳು ವಾಣಿಜ್ಯ ಅಥವಾ ಆಡಳಿತ ಕೇಂದ್ರಗಳಾಗಿ ಆ ಪ್ರದೇಶಗಳ ಸಂಪತ್ತನ್ನೇ ಅವಲಂಬಿಸಿ ಒಂಟೊಂಟಿಯಾಗಿ ನಗರಗಳು ಬೆಳೆದ ನಿದರ್ಶನಗಳು ಇತಿಹಾಸದಲ್ಲಿ ಹಲವು ಇವೆ. ಆದರೆ ಬಲೆಯಂತೆ, ಒಂದಕ್ಕೊಂದು ಸಮೀಪದಲ್ಲಿ, ದೊಡ್ಡ ನಗರಗಳು ಬೆಳೆಯುವುದು ಈ ಕಾಲದ ಒಂದು ಮುಖ್ಯ ಪ್ರವೃತ್ತಿ.

**ಕೋಷ್ಟಕ–1**

**ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ಹತ್ತು ದೇಶಗಳು**

| ಕ್ರ. ಸಂ. | ಜನಸಂಖ್ಯೆ | 2000 ರಲ್ಲಿ | 2010 ರಲ್ಲಿ | 2012 ರಲ್ಲಿ |
|---|---|---|---|---|
| 1. | ಚೀನ | 1,268,853,362 | 1,330,141,295 | 1,343,239,923 |
| 2. | ಭಾರತ | 1,004,124,224 | 1,173,108,018 | 1,205,073,612 |
| 3. | ಅಮೆರಿಕ | 282,338,631 | 310,232,863 | 313,847,465 |
| 4. | ಇಂಡೋನೇಷ್ಯ | 213,829,469 | 242,968,342 | 248,645,008 |
| 5. | ಬ್ರೆಜಿಲ್ | 176,319,621 | 201,103,330 | 193,946,886 |
| 6. | ಪಾಕಿಸ್ತಾನ | 146,404,914 | 184,404,791 | 190,291,129 |
| 7. | ನೈಜೀರಿಯ | 123,178,818 | 152,217,341 | 170,123,740 |
| 8. | ಬಾಂಗ್ಲಾದೇಶ | 130,406,594 | 156,118,464 | 161,083,804 |
| 9. | ರಷ್ಯ | 146,709,971 | 139,390,205 | 142,517,670 |
| 10. | ಜಪಾನ್ | 126,729,223 | 126,804,433 | 127,368,088 |
| ಹತ್ತು ದೇಶಗಳ ಒಟ್ಟು ಜನಸಂಖ್ಯೆ | | 3,618,894,827 | 4,016,489,082 | 4,096,137,325 |
| ಪ್ರಪಂಚದ ಉಳಿದ ಎಲ್ಲಾ ದೇಶಗಳ ಜನಸಂಖ್ಯೆ | | 2,466,012,769 | 2,829,120,878 | 2,921,709,597 |
| ಪ್ರಪಂಚದ ಒಟ್ಟು ಜನಸಂಖ್ಯೆ | | 6,084,907,596 | 6,845,609,960 | 7,017,846,922 |

ನಗರಗಳ ಬೆಳೆವಣಿಗೆಗೆ ಕಾರಣಗಳು ತುಂಬ ಸಂಕೀರ್ಣವಾದವು. ಸಹಜವಾಗಿಯೇ ಅವುಗಳ ಜನಸಂಖ್ಯೆ ಕಾಲಕ್ರಮದಲ್ಲಿ ಅಧಿಕವಾಗುವುದುಂಟು. ಜನರ ವಲಸೆಯಿಂದಲೂ ಸಂಖ್ಯೆ ಅಧಿಕವಾಗುತ್ತದೆ. ಕೈಗಾರಿಕೆ, ಸಾರಿಗೆ, ಸಂಪರ್ಕ, ಕೃಷಿ ವಿಜ್ಞಾನ, ವೈದ್ಯ ಇವುಗಳ ಅಭಿವೃದ್ಧಿಯನ್ನೂ ನಗರಗಳ ಬೆಳವಣಿಗೆ ಅವಲಂಬಿಸುತ್ತದೆ. ಈ ಅಭಿವೃದ್ಧಿಗಳ ಫಲವಾಗಿ ಕೃಷಿಕಾರ್ಮಿಕರ ಆವಶ್ಯಕತೆ ಕಡಿಮೆಯಾಗುತ್ತದೆ. ದೂರದ ಹಾಗೂ ಸ್ಥಳೀಯ ಸಂಪನ್ಮೂಲಗಳ ಬಳಕೆ ಸಾಧ್ಯವಾಗುತ್ತದೆ. ವಲಸೆದಾರರಿಗೆ ನಗರಗಳು ಹಲವಾರು ಉದ್ಯೋಗಾವಕಾಶಗಳನ್ನು ನೀಡುತ್ತವೆ.ಸಾಂಕ್ರಾಮಿಕ ಜಾಡ್ಯಗಳ ನಿಯಂತ್ರಣ ಸಾಧ್ಯವಾಗುವುದರಿಂದ ಜನ ಒತ್ತೊತ್ತಾಗಿ ನಗರಗಳಲ್ಲಿ ವಾಸಿಸುವುದು ಸಾಧ್ಯವಾಗುತ್ತದೆ. ಜನ, ಆಹಾರ ಮತ್ತು ಇತರ ಸರಕುಗಳನ್ನು ಸಾಗಿಸಲು ಸಾರಿಗೆ ಸೌಲಭ್ಯ ಬೆಳೆಯುತ್ತದೆ.

**ಕೋಷ್ಟಕ–2**

ಭಾರತದ ಜನಸಂಖ್ಯೆ ಹೆಚ್ಚಾಗಿರುವ ನಗರಗಳ/ಪಟ್ಟಣಗಳ ಪಟ್ಟಿ

| ಕ್ರ. ಸಂ | ನಗರ | ಜನಸಂಖ್ಯೆ (2011) | ಜನಸಂಖ್ಯೆ (2011) | ರಾಜ್ಯ |
|---|---|---|---|---|
| 1. | ಮುಂಬೈ | 12,478,447 | 11,978,450 | ಮಹಾರಾಷ್ಟ್ರ |
| 2. | ದೆಹಲಿ | 11,007,835 | 9,879,172 | ದೆಹಲಿ |
| 3. | ಬೆಂಗಳೂರು | 8,425,970 | 5,438,065 | ಕರ್ನಾಟಕ |
| 4. | ಹೈದರಾಬಾದ್ | 6,809,970 | 3,637,483 | ಆಂಧ್ರಪ್ರದೇಶ |
| 5. | ಅಹಮದಾಬಾದ್ | 5,570,585 | 3,520,085 | ಗುಜರಾತ್ |
| 6. | ಚೆನ್ನೈ | 4,681,087 | 4,343,645 | ತಮಿಳುನಾಡು |
| 7. | ಕೊಲ್ಕತ್ತ | 4,486,679 | 4,572,876 | ಪಶ್ಚಿಮ ಬಂಗಾಲ |
| 8. | ಸೂರತ್ | 4,462,002 | 2,433,833 | ಗುಜರಾತ್ |
| 9. | ಪುಣೆ | 3,115,431 | 2,538,473 | ಮಹಾರಾಷ್ಟ್ರ |
| 10. | ಜಯ್‌ಪುರ್ | 3,073,350 | 2,322,575 | ರಾಜಾಸ್ಥಾನ್ |
| 11. | ಲಕ್ನೋ | 2,815,601 | 2,185,927 | ಉತ್ತರಪ್ರದೇಶ |
| 12. | ಕಾನ್ಪುರ್ | 2,767,031 | 2,551,337 | ಉತ್ತರಪ್ರದೇಶ |
| 13. | ನಾಗಪುರ್ | 2,405,421 | 2,052,066 | ಮಹಾರಾಷ್ಟ್ರ |
| 14. | ಇಂದೋರ್ | 1,960,631 | 1,474,968 | ಮಧ್ಯಪ್ರದೇಶ |
| 15. | ಥಾಣೆ | 1,818,872 | 1,262,551 | ಮಹಾರಾಷ್ಟ್ರ |
| 16. | ಭೋಪಾಲ್ | 1,795,648 | 1,437,354 | ಮಧ್ಯಪ್ರದೇಶ |
| 17. | ವಿಶಾಖಪಟ್ಟಣಂ | 1,730,320 | 982,904 | ಆಂಧ್ರಪ್ರದೇಶ |
| 18. | ಪಿಂಪ್ರಿ–ಚಿಂಚ್ವಾಡ್ | 1,729,359 | 1,012,472 | ಮಹಾರಾಷ್ಟ್ರ |
| 19. | ಪಾಟ್ನ | 1,683,200 | 1,366,444 | ಬಿಹಾರ |
| 20. | ವಡೋದರಾ | 1,666,703 | 1,306,227 | ಗುಜರಾತ್ |
| 21. | ಘಾಜಿಯಾಬಾದ್ | 1,636,068 | 968,256 | ಉತ್ತರಪ್ರದೇಶ |
| 22. | ಲೂಧಿಯಾನ | 1,613,878 | 1,398,467 | ಪಂಜಾಬ್ |
| 23. | ಆಗ್ರ | 1,574,542 | 1,275,134 | ಉತ್ತರಪ್ರದೇಶ |
| 24. | ನಾಸಿಕ್ | 1,486,973 | 1,077,236 | ಮಹಾರಾಷ್ಟ್ರ |
| 25. | ಫರೀದಾಬಾದ್ | 1,404,653 | 1,055,938 | ಹರಿಯಾಣ |
| 26. | ಮೀರತ್ | 1,309,023 | 1,068,772 | ಉತ್ತರಪ್ರದೇಶ |
| 27. | ರಾಜ್‌ಕೋಟ್ | 1,286,995 | 967,476 | ಗುಜರಾತ್ |
| 28. | ಕಲ್ಯಾಣ್– ದೊಂಬಿವಾಲಿ | 1,246,381 | 1,193,512 | ಮಹಾರಾಷ್ಟ್ರ |
| 29. | ವಾರಣಾಸಿ | 1,201,815 | 1,091,918 | ಉತ್ತರ ಪ್ರದೇಶ |
| 30. | ಶ್ರೀನಗರ್ | 1,192,792 | 898,440 | ಜಮ್ಮು ಮತ್ತು ಕಾಶ್ಮೀರ |
| 31. | ಔರಂಗಾಬಾದ್ | 1,171,330 | 873,311 | ಮಹಾರಾಷ್ಟ್ರ |
| 32. | ಧನ್‌ಬಾದ್ | 1,161,561 | 99,258 | ಝಾರ್‌ಖಂಡ್ |
| 33. | ಅಮೃತ್‌ಸರ್ | 1,132,761 | 966,862 | ಪಂಜಾಬ್ |

| | | | | |
|---|---|---|---|---|
| 34. | ಅಲಹಾಬಾದ್ | 1,117,094 | 975,393 | ಉತ್ತರ ಪ್ರದೇಶ್ |
| 35. | ರಾಂಚಿ | 1,073,440 | 847,093 | ಝಾರ್‌ಖಂಡ್ |
| 36. | ಹೌರ | 1,072,161 | 1,007,532 | ಪಶ್ಚಿಮ ಬಂಗಾಲ |
| 37. | ಕೊಯಮತ್ತೂರು | 1,061,447 | 930,882 | ತಮಿಳುನಾಡು |
| 38. | ಜಬ್ಬಲ್‌ಪುರ | 1,054,336 | 932,484 | ಮಧ್ಯಪ್ರದೇಶ್ |
| 39. | ಗ್ವಾಲಿಯರ್ | 1,053,505 | 827,026 | ಮಧ್ಯಪ್ರದೇಶ್ |
| 40. | ವಿಜಯವಾಡ | 1,033,918 | 851,051 | ಆಂಧ್ರಪ್ರದೇಶ |
| 41. | ಮಧುರೈ | 1,016,885 | 928,869 | ತಮಿಳುನಾಡು |
| 42. | ಗುವಾಹಟಿ | 963,429 | 809,895 | ಅಸ್ಸಾಂ |
| 43. | ಚಂಡೀಘಡ್ | 960,787 | 808,515 | ಚಂಡೀಗಢ |
| 44. | ಸೋಲಾಪುರ್ | 951,118 | 872,478 | ಮಹಾರಾಷ್ಟ್ರ |
| 45. | ಹುಬ್ಬಳ್ಳಿ–ಧಾರವಾಡ | 943,857 | 786,195 | ಕರ್ನಾಟಕ |
| 46. | ಮೈಸೂರು | 887,446 | 755,379 | ಕರ್ನಾಟಕ |
| 47. | ಅಲಿಘರ್ | 872,575 | 669,087 | ಉತ್ತರಪ್ರದೇಶ |
| 48. | ಜಲಂಧರ್ | 862,196 | 706,043 | ಪಂಜಾಬ್ |
| 49. | ಭುವನೇಶ್ವರ್ | 837,737 | 648,032 | ಒರಿಸ್ಸ |
| 50. | ಸೇಲಂ | 831,038 | 696,760 | ತಮಿಳುನಾಡು |
| 51. | ತಿರುವನಂತಪುರಂ | 752,490 | 744,983 | ಕೇರಳ |
| 52. | ಕೊಚ್ಚಿನ್ | 601,574 | 596,473 | ಕೇರಳ |
| 53. | ಗುಲ್ಬರ್ಗ | 532,031 | 422,569 | ಕರ್ನಾಟಕ |
| 54. | ಉಜ್ಜಯಿನಿ | 515,215 | 430,427 | ಮಧ್ಯಪ್ರದೇಶ |
| 55. | ಸಿಲಿಗುರಿ | 509,709 | 472,374 | ಪಶ್ಚಿಮಬಂಗಾಲ |
| 56. | ಝಾನ್ಸಿ | 507,293 | 383,644 | ಉತ್ತರಪ್ರದೇಶ |
| 57. | ಜಮ್ಮು | 503,690 | 369,959 | ಜಮ್ಮು ಮತ್ತು ಕಾಶ್ಮೀರ |
| 58. | ಬೆಳಗಾವಿ | 488,292 | 399,653 | ಕರ್ನಾಟಕ |
| 59. | ಮಂಗಳೂರು | 484,785 | 399,565 | ಕರ್ನಾಟಕ |
| 60. | ಗಯ | 463,454 | 385,432 | ಬಿಹಾರ |
| 61. | ತಿರುಪ್ಪೂರ್ | 444,543 | 344,543 | ತಮಿಳುನಾಡು |
| 62. | ದಾವಣಗೆರೆ | 435,128 | 364,523 | ಕರ್ನಾಟಕ |
| 63. | ಕೋಜೀಕೋಡ್ (ಕ್ಯಾಲಿಕಟ್) | 432,097 | 436,556 | ಕೇರಳ |
| 64. | ಕರ್ನೂಲ್ | 424,920 | 269,122 | ಆಂಧ್ರಪ್ರದೇಶ |
| 65. | ಬಳ್ಳಾರಿ | 409,644 | 316,766 | ಕರ್ನಾಟಕ |
| 66. | ಪಟಿಯಾಲ | 405,164 | 303,151 | ಪಂಜಾಬ್ |

**ಭಾರತದ ರಾಜ್ಯಗಳ / ಕೇಂದ್ರಾಡಳಿತ ಪ್ರದೇಶಗಳ ಜನಸಂಖ್ಯೆ ಹಾಗೂ ನಗರೀಯ ಜನಸಂಖ್ಯೆ, ಅನುಪಾತ**

| ಕ್ರ ಸಂ. | ರಾಜ್ಯ ಕೇಂದ್ರಾಡಳಿತ ಪ್ರದೇಶ | ಜನಸಂಖ್ಯೆ 2011ರ ಸೆನ್ಸಸ್‌ನಂತೆ | | | |
|---|---|---|---|---|---|
| | | ಗ್ರಾಮೀಣ ಜನಸಂಖ್ಯೆ | ನಗರ ಜನಸಂಖ್ಯೆ | ವಿಸ್ತೀರ್ಣ | ಚ.ಕಿಮೀ. |
| 1. | ಉತ್ತರಪ್ರದೇಶ | 199,581,477 | 155,111,022 | 44470,455 | 240,928 |
| 2. | ಮಹಾರಾಷ್ಟ್ರ | 112,372,972 | 61,545,441 | 50,827,53 | 1307,713 |
| 3. | ಬಿಹಾರ | 103,804,637 | 92,075,028 | 11,72,609 | 94,163 |
| 4. | ಪಶ್ಚಿಮ ಬಂಗಾಳ | 91,347,736 | 62,213,676 | 29,134,060 | 88,752 |
| 5. | ಆಂಧ್ರಪ್ರದೇಶ | 84,665,533 | 56,311,788 | 28,353,745 | 275,045 |
| 6. | ಮಧ್ಯಪ್ರದೇಶ | 72,597,565 | 52,537,899 | 20,059,666 | 308,245 |
| 7. | ತಮಿಳುನಾಡು | 72,138,958 | 37,189,229 | 34,949,729 | 130,058 |
| 8. | ರಾಜಾಸ್ಥಾನ | 68,621,012 | 51,540,236 | 17,080,776 | 342,239 |
| 9. | ಕರ್ನಾಟಕ | 61,130,704 | 37,552,529 | 23,578,175 | 191791 |
| 10. | ಗುಜರಾತ್ | 60,383,628 | 34,675,817 | 25712,811 | 196,024 |
| 11. | ಒರಿಸ್ಸ | 41,947,358 | 34,951,234 | 6996124 | 155,707 |
| 12. | ಕೇರಳ | 33,387,677 | 17,445,506 | 15,932,171 | 38,863 |
| 13. | ಝಾರ್ಖಂಡ್ | 32,966,238 | 25,03,946 | 7929292 | 79,714 |
| 14. | ಅಸ್ಸಾಂ | 31,169,272 | 26,780,526 | 4388756 | 78438 |
| 15. | ಪಂಜಾಬ್ | 27,704,236 | 17,316,800 | 110,387,436 | 50,362 |
| 16. | ಹರಿಯಾಣ | 25,353,081 | 16,531,493 | 8821588 | 44212 |
| 17. | ಛತ್ತೀಸ್‌ಘಡ್ | 25,540,196 | 19603,658 | 5936538 | 1351391 |
| 18. | ಜಮ್ಮು ಮತ್ತು ಕಾಶ್ಮೀರ | 12,548,926 | 9134820 | 3414106 | 222,23 |
| 19. | ಉತ್ತರಾಖಂಡ | 10,116,752 | 7025583 | 3091169 | 53,483 |
| 20. | ಹಿಮಾಚಲ ಪ್ರದೇಶ | 6,856,509 | 6,167,805 | 688704 | 55,673 |
| 21. | ತ್ರಿಪುರ | 3,671,032 | 2,710,051 | 960,981 | 10,486 |
| 22. | ಮೇಘಾಲಯ | 2,964,007 | 2368971 | 595036 | 22,429 |
| 23. | ಮಣಿಪುರ | 2721756 | 1,899,624 | 822,132 | 22,327 |
| 24. | ನಾಗಾಲ್ಯಾಂಡ್ | 1,980,602 | 1,406,861 | 593,741 | 16,579 |
| 25. | ಗೋವ | 1,457,723 | 551414 | 906,309 | 3702 |
| 26. | ಅರುಣಾಚಲ ಪ್ರದೇಶ | 1,382,611 | 1,069,165 | 313446 | 83,743 |
| 27. | ಮಿಜೋರಾಮ್ | 1,091,014 | 529,037 | 561,997 | 21,081 |
| 28. | ಸಿಕ್ಕಿಂ | 607,688 | 455,962 | 151,726 | 7096 |
| 29. | ದೆಹಲಿ | 16753,235 | 419319 | 16333916 | 11,297 |
| 30. | ಪಾಂಡಿಚೆರಿ (ಕೇಂದ್ರಾಡಳಿತ) | 1244,434 | 394,341 | 850,123 | 479 |
| 31. | ಚಂಡೀಘಡ್ (ಕೇಂದ್ರಾಡಳಿತ) | 1,054,686 | 29,004 | 1,025682 | 114 |
| 32. | ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳು(ಕೇಂ.ಪ್ರ) | 379,944 | 244,411 | 135,533 | 8249 |
| 33. | ದಾದ್ರ ಮತ್ತು ನಗರ್ ಹವೇಲಿ (ಕೇಂ. ಪ್ರ) | 342,853 | 183,024 | 159829 | 491 |
| 34. | ಡಯು ಮತ್ತು ಡಿಯು (ಕೇಂ.ಪ್ರ) | 242,911 | 60,331 | 182,580 | 112 |
| 35. | ಲಕ್ಷದ್ವೀಪ (ಕೇಂ. ಪ್ರ) | 64,429 | 14121 | 50,308 | 32 |
| | ಒಟ್ಟು | 1,210,193,422 | 833,087,662 | 377,125,700 | 3287240 |




ರಾಷ್ಟ್ರೀಯ ರಾಜಧಾನಿ ಪ್ರಾಂತ (NCT) ದೆಹಲಿಯಲ್ಲಿ ನಗರ ಜನಸಂಖ್ಯೆ ಶೇ.97.5 ಇದ್ದರೆ, ಕೇಂದ್ರಾಡಳಿತ ಪ್ರದೇಶಗಳಾದ ಚಂಡೀಗಢ ಶೇ. 97.25, ಲಕ್ಷದ್ವೀಪ ಶೇ. 78.08, ಡಾಮನ್ ಮತ್ತು ಡಿಯು ಶೇ. 75.16 ಇದೆ. ಭಾರತದಲ್ಲಿ ಅತ್ಯಂತ ನಗರೀಕೃತ ರಾಜ್ಯ ಗೋವ (ಶೇ.62.17) ; ಅನಂತರ ತಮಿಳುನಾಡು (ಶೇ. 48.45), ಮಹಾರಾಷ್ಟ್ರ (ಶೇ.45.23). ಅತ್ಯಂತ ಕಡಿಮೆ ನಗರ ಜನಸಂಖ್ಯೆಯ ರಾಜ್ಯಗಳೆಂದರೆ ಹಿಮಾಚಲಪ್ರದೇಶ (ಶೇ.10.04), ಬಿಹಾರ (ಶೇ.11.30), ಮತ್ತು ಅಸ್ಸಾಂ (ಶೇ.14.08).

ನಗರೀಯ ಜನಸಂಖ್ಯೆಗಳ ವ್ಯಾಖ್ಯೆ ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆಯಲ್ಲದೆ ಕಾಲದಿಂದ ಕಾಲಕ್ಕೂ ವ್ಯತ್ಯಾಸವಾಗುತ್ತದೆ. ಕೈಗಾರಿಕಾ ಬೆಳೆವಣಿಗೆಗೆ ಅನುಗುಣವಾಗಿ ನಗರೀಯ ಜನಸಂಖ್ಯೆ ಬೆಳೆಯುತ್ತದೆಯೆಂಬುದು ನಿಜ. ಆದರೆ ಕೃಷಿಯನ್ನು ವಾಣಿಜ್ಯ ದೃಷ್ಟಿಯಿಂದ ಪ್ರಧಾನವೆಂದು ಪರಿಗಣಿಸಿರುವ ಡೆನ್ಮಾರ್ಕಿನಂಥ ದೇಶದಲ್ಲಿ ಈ ಕಾರಣದಿಂದಾಗಿ ನಗರೀಯ ಜನಸಂಖ್ಯೆ ಬೆಳೆದಿದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಉದ್ಯೋಗಾವಕಾಶಗಳು ಬೆಳೆಯುವುದಕ್ಕಿಂತ ಹೆಚ್ಚಿನ ವೇಗದಲ್ಲಿ ನಗರಗಳು ಬೆಳೆಯುತ್ತಿವೆ. ಇದನ್ನು ಅತಿ

ನಗರೀಕರಣವೆಂದು ಕರೆಯಲಾಗಿದೆ. ಕೃಷಿ ನೆಲದ ಮೇಲೆ ಜನಸಂಖ್ಯೆಯ ಒತ್ತಡ ಹೆಚ್ಚಾಗಿ, ಹೆಚ್ಚುವರಿ ಜನಸಂಖ್ಯೆ ನಗರಗಳಿಗೆ ತಳ್ಳಲ್ಪಡುವುದೆಂದು ಹೇಳಲಾಗಿದೆ. ಆದರೆ ಆ ದೇಶಗಳಲ್ಲಿ ಬಹು ಕಾಲದಿಂದಲೂ ಗ್ರಾಮೀಣ ಜನಸಂಖ್ಯೆಯ ಒತ್ತಡ ಹೆಚ್ಚಾಗಿದ್ದರೂ ಹಿಂದೆ ಜನರು ಹೆಚ್ಚುಸಂಖ್ಯೆಯಲ್ಲಿ ನಗರಗಳಿಗೆ ಏಕೆ ವಲಸೆ ಹೋಗುತ್ತಿರಲಿಲ್ಲವೆಂಬುದಕ್ಕೆ ಉತ್ತರ ದೊರಕದು. ನಗರಕ್ಕೆ ವಲಸೆ ಹೋಗುವವರಿಗೆ ನಗರಗಳಲ್ಲಿ ಉದ್ಯೋಗ ದೊರಕುವುದೆಂಬ ಆಸೆ ಈ ವಲಸೆಗೆ ಒಂದು ಆಕರ್ಷಣೆ.

ದೇಶದ ಒಟ್ಟು ಜನಸಂಖ್ಯೆಯ ಅಥವಾ ಒಟ್ಟು ನಗರೀಯ ಜನಸಂಖ್ಯೆಯ ಪೈಕಿ, ಆ ದೇಶದ ಅತ್ಯಂತ ದೊಡ್ಡ ನಗರದಲ್ಲಿರುವ ಜನಸಂಖ್ಯೆಯೆಷ್ಟು ಎಂಬುದು ಕುತೂಹಲಕರವಾದ ಇನ್ನೊಂದು ಅಂಶ. ಇದರ ಶೇಕಡವಾರು ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತದೆ. ಅನೇಕ ದೇಶಗಳಲ್ಲಿ, ಮುಖ್ಯವಾಗಿ ಸಣ್ಣ ಹಾಗೂ ಮಧ್ಯಮ ಗಾತ್ರದ ದೇಶಗಳಲ್ಲಿ, ನಗರೀಯ ಜನಸಂಖ್ಯೆ ಕೇವಲ ಒಂದು ನಗರದಲ್ಲಿ ಕೇಂದ್ರೀಕೃತವಾಗುವ ಪ್ರವೃತ್ತಿ ಇರುವುದುಂಟು. ಇಂಥ ನಗರಗಳು ಅಗ್ರ ಅಥವಾ ಮುಖ್ಯ ನಗರಗಳೆನಿಸಿಕೊಳ್ಳುತ್ತವೆ (ಪ್ರೈಮೇಟ್ ಸಿಟೀಸ್). ಈ ನಗರಗಳು ಆರ್ಥಿಕ, ಸಾಮಾಜಿಕ, ರಾಜಕೀಯ ಕೇಂದ್ರಗಳೂ ಆಗುತ್ತವೆ. ಇವು ತಮ್ಮ ವಾಣಿಜ್ಯ, ಆಡಳಿತ, ಕೈಗಾರಿಕೆ, ಮನೋರಂಜನೆ ಮುಂತಾದ ಕಾರ್ಯಭಾರಗಳಿಂದಾಗಿ ಸ್ಥಳೀಯ ಜನಕ್ಕೆ ಜೀವನೋಪಾಯ ಒದಗಿಸುತ್ತವೆ. ಇವುಗಳೊಂದಿಗೆ ಸ್ಪರ್ಧಿಸಿ ಬೆಳೆಯುವ ಸಾಮರ್ಥ್ಯ ಇತರ ಸ್ಥಳಗಳಿಗೆ ಇರುವುದಿಲ್ಲ. ಹೀಗೆ ಬೆಳೆವಣಿಗೆಯ ಸಾಧನಗಳೆಲ್ಲ ಒಂದೇ ಕಡೆ ಕೇಂದ್ರೀಕೃತವಾಗುವುದರಿಂದ ರಾಷ್ಟ್ರೀಯ ಅಭಿವೃದ್ಧಿಗೆ ಅಡಚಣೆಯಾಗುವುದೆಂಬ ಒಂದು ವಾದವುಂಟು, ಆದರೆ ಬೆಳವಣಿಗೆಯ ಕಾರಕಗಳು ಒಂದೆಡೆಯಲ್ಲಿ ಕೇಂದ್ರೀಕೃತವಾಗುವುದರಿಂದ ಅಭಿವೃದ್ಧಿಗೆ ಪ್ರೋತ್ಸಾಹ ದೊರಕುವುದೆಂದೂ ಹೇಳಬಹುದು. ಅಗ್ರ ನಗರಗಳು ಸದಾ ಕಾಲದಲ್ಲೂ ತಮ್ಮ ಉನ್ನತ ಸ್ಥಾನವನ್ನು ಉಳಿಸಿಕೊಳ್ಳುವುದೆಂದು ಹೇಳುವಂತಿಲ್ಲ.

ಒಂದು ನಗರದಲ್ಲಿರುವ ಜನ ಸಾಮೂಹಿಕವಾಗಿ ಅಲ್ಲಿಯ ಪರಿಸರಕ್ಕೆ ಹೊಂದಿಕೊಳ್ಳುತ್ತಾರೆ. ಒಂದು ಪ್ರದೇಶದಲ್ಲಿ ಜನಸಂಖ್ಯೆಯ ವಿತರಣೆ ಹೇಗಾಗಿದೆ ಎಂಬುದು ಆ ಜನರ ಆರ್ಥಿಕ ಸಂಘಟನೆ, ಜೀವನವಿಧಾನ – ಇವನ್ನು ಅವಲಂಬಿಸಿರುತ್ತದೆ. ಸಂಕೀರ್ಣವಾದ ಹಾಗೂ ಸ್ಪಷ್ಟವಾಗಿ ವಿಂಗಡವಾದ ಜನಸಮುದಾಯಗಳು ಎಷ್ಟರಮಟ್ಟಿಗೆ ವಿಶೇಷಜ್ಞವೂ ಪರಸ್ಪರಾವಲಂಬಿಯೂ ಆಗಿವೆ–ಎಂಬುದನ್ನು ನಗರಗಳು ಸೂಚಿಸುತ್ತವೆ. ಈ ಸಮುದಾಯಗಳು ಸಾಪೇಕ್ಷವಾಗಿ ಹೆಚ್ಚು ಗತಿಶೀಲವಾಗಿರುತ್ತವೆ.

## VI ಜನಸಂಖ್ಯಾ ಸಂಯೋಜನೆ

ಒಂದು ಪ್ರದೇಶದ ಜನಸಂಖ್ಯೆಯಲ್ಲಿರುವ ವಿವಿಧ ಸಾಮಾಜಿಕ ಜೈವಿಕ ವರ್ಗಗಳಿಗೆ ಆ ಪ್ರದೇಶದ ಜನಸಂಖ್ಯಾ ಸಂಯೋಜನೆ (ಪಾಪ್ಯುಲೇಷನ್ ಕಾಂಪೊಸಿಷನ್) ಎಂದು ಹೆಸರು. ಯಾವುದೇ ಕಾಲದಲ್ಲಿ ಒಂದು ಜನಸಂಖ್ಯೆಯ ಸಂಯೋಜನೆ ಎಂಥದು ಎಂಬುದು ಅದರ ಸಾಮಾಜಿಕ ಇತಿಹಾಸವನ್ನೂ ಬರಲಿರುವ ವರ್ಷಗಳಲ್ಲಿ ಅದು ಎದುರಿಸಲಿರುವ ಸಾಮಾಜಿಕ ಸಮಸ್ಯೆಗಳ ಸ್ವರೂಪಗಳನ್ನೂ ಸೂಚಿಸುತ್ತದೆ. ಆದ್ದರಿಂದ ಜನಗಣತಿ, ಜನನ ಮರಣಗಳೇ ಮುಂತಾದ ಜೀವನಾಂಕಗಳ ದಾಖಲಾತಿ ಮುಂತಾದವುಗಳ ಮೂಲಕ ಜನಸಂಖ್ಯಾ ಸಂಯೋಜನೆಯನ್ನು ಕುರಿತ ಸಮಗ್ರ ಹಾಗೂ ನಿಷ್ಕೃಷ್ಟ ಮಾಹಿತಿಯನ್ನು ಪಡೆಯುವುದು ಸರ್ಕಾರಗಳಿಗೆ ಆವಶ್ಯಕ, ಜನಸಂಖ್ಯಾ ಸಂಯೋಜನೆಯ ವಿಶ್ಲೇಷಣೆಯ ಕೆಲಸ ಜನಸಂಖ್ಯಾಶಾಸ್ತ್ರದ ಒಂದು ಅವಿಭಾಜ್ಯ ಅಂಗ.

ಒಬ್ಬ ವ್ಯಕ್ತಿಗೂ ಇನ್ನೊಬ್ಬ ವ್ಯಕ್ತಿಗೂ ಲಕ್ಷಣಗಳಲ್ಲಿ ವ್ಯತ್ಯಾಸ ಇದ್ದೇ ಇರುವುದಾದರೂ ಜನರನ್ನು ಸ್ಥೂಲವಾಗಿ ವರ್ಗೀಕರಿಸುವುದು ಸಾಧ್ಯ. ಮೂಲ ಜನಸಂಖ್ಯಾಶಾಸ್ತ್ರೀಯ ಚರಗಳಾದ ವಯಸ್ಸು, ಲಿಂಗ, ವೈವಾಹಿಕ ಸ್ಥಿತಿ, ರಾಷ್ಟ್ರೀಯತೆ, ಜನಾಂಗ, ವರ್ಣ, ಭಾಷೆ, ಮತ, ವಿದ್ಯೆ, ದುಡಿಮೆ, ಕಸುಬು, ಕೈಗಾರಿಕಾ ವರ್ಗೀಕರಣ ಮುಂತಾದ ಮೂಲ ಆಧಾರಗಳ ಮೇಲೆ ಅವರನ್ನು ಸಾಮಾನ್ಯವಾಗಿ ವರ್ಗೀಕರಿಸಲಾಗುತ್ತದೆ. ಜನಗಣತಿ, ಜನನ ಮರಣ ವಿವಾಹಗಳೇ ಮುಂತಾದವುಗಳ ದಾಖಲಾತಿ–ಇವುಗಳ ಮೂಲಕ ಈ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಜನನ ಮರಣ ವಿವಾಹಗಳ ದಾಖಲಾತಿಗಳು ನಡೆಯುವುದು ವ್ಯಕ್ತಿಗೆ ಸಂಬಂಧಿಸಿದಂತೆ ಇಂಥ ಘಟನೆಗಳು ನಡೆದಾಗ ಮಾತ್ರ, ಆದರೆ ಅವುಗಳ ನೆರವಿನಿಂದ ಇಡೀ ಜನಸಂಖ್ಯೆಯ ಕೆಲವು ಗುಣಲಕ್ಷಣಗಳನ್ನು ಅರಿಯುವುದೂ, ಅವುಗಳ ಅವ್ಯಾಹತ ದಾಖಲೆ ಇಡುವುದೂ ಸಾಧ್ಯ. ವಿವಿಧ ಜನಾಂಗಗಳ ಜನನ–ಮರಣಗಳ ದಾಖಲೆಯ ನೆರವಿನಿಂದ, ಒಟ್ಟು ಜನಸಂಖ್ಯೆಯಲ್ಲಿ ಯಾವ ಯಾವ ಜನಾಂಗ ಎಷ್ಟೆಷ್ಟಿದೆ ಎಂಬುದರ ಮಾಹಿತಿ ಇಡುವುದು ಸಾಧ್ಯ. ಒಂದು ಜನಗಣತಿಗೂ ಇನ್ನೊಂದು ಜನಗಣತಿಗೂ ನಡುವಣ ಅವಧಿಯಲ್ಲಿ ಈ ಜನಾಂಗಗಳ ಜನಸಂಖ್ಯಾ ಪ್ರವೃತ್ತಿಗಳನ್ನು ಅಂದಾಜು ಮಾಡಬಹುದು.

ಜನಗಣತಿ ಮತ್ತು ಇತರ ಅಧಿಕೃತ ಸಂಖ್ಯಾಕಲನೀಯ ಅಂಕಿ–ಅಂಶಗಳಲ್ಲಿ ಸೇರಿಸಬೇಕಾಗುವ ಜನಸಂಖ್ಯಾ ಗುಣಲಕ್ಷಣಗಳೇನೆಂಬುದು ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತದೆ. ಒಂದೇ ಜನಾಂಗ ಇರುವ ದೇಶಗಳಲ್ಲಿ ಜನಾಂಗಗಳಿಗೆ ಸಂಬಂಧಿಸಿದ ವಿವರಗಳ ಅಗತ್ಯ ಇರುವುದಿಲ್ಲ. ಮುಂದುವರಿದ ದೇಶಗಳಲ್ಲಿ ಸಾಕ್ಷರತೆಯ ವಿವರಗಳು ಬೇಕಿರುವುದಿಲ್ಲ. ಏಕೆಂದರೆ ಅಲ್ಲಿ ಬಹುತೇಕ ಮಂದಿ ಅಕ್ಷರಸ್ಥರಾಗಿರುತ್ತಾರೆ. ಮತ್ತೆ ಕೆಲವು ದೇಶಗಳಲ್ಲಿ ಕೆಲವು ಮುಖ್ಯ ಗುಣಲಕ್ಷಣಗಳನ್ನು ಕುರಿತ ವಿವರಗಳನ್ನು ಉದ್ದೇಶಪೂರ್ವಕ ವಾಗಿಯೇ ಬಿಡಲಾಗುತ್ತದೆ. ಉದಾಹರಣೆಗೆ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಮತದ ಬಗ್ಗೆ ಪ್ರಶ್ನೆ ಕೇಳುವುದಿಲ್ಲ. ಸಂವಿಧಾನಾತ್ಮಕವಾಗಿ ರಾಷ್ಟ್ರವೂ ಮತವೂ ಪರಸ್ಪರ ಪ್ರತ್ಯೇಕವೆಂಬುದನ್ನು ಅಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಸ್ವಾತಂತ್ರ್ಯಾನಂತರ ಕಾಲದಲ್ಲಿ ಭಾರತದಲ್ಲಿ ವ್ಯಕ್ತಿಯ ಜಾತಿಯ ಬಗ್ಗೆ ಜನಗಣತಿಯಲ್ಲಿ ಮಾಹಿತಿ ಸಂಗ್ರಹಿಸುವುದನ್ನು ಕೈ ಬಿಡಲಾಗಿದೆ.

ಲಿಂಗ : ಜನಸಂಖ್ಯಾತ್ಮಕವಾಗಿಯೂ ಸಾಮಾಜಿಕವಾಗಿಯೂ ಬಹಳ ಮುಖ್ಯವಾದ ಅಂಶಗಳಲ್ಲಿ ಜನಸಂಖ್ಯೆಯ ಲಿಂಗಾನುಗುಣ ವಿಂಗಡಣೆ ಒಂದು. ಇದನ್ನು ಬಹಳ ಸುಲಭವಾಗಿ ಮಾಪಿಸಬಹುದು. ಯಾವುದೇ ಪ್ರದೇಶದಲ್ಲಿ ಲಿಂಗಾನುಗುಣವಾಗಿ ಜನಸಂಖ್ಯೆಯ ವಿತರಣೆ ಅಸಮವಾಗಿರುತ್ತದೆ. ಜನಿಸುವ ಗಂಡು ಹೆಣ್ಣುಗಳ ಸಂಖ್ಯೆ ಸಮವಾಗಿರುವುದಿಲ್ಲ. ಹುಟ್ಟುವ ಮಕ್ಕಳ ಪೈಕಿ ಹೆಣ್ಣುಗಳಿಗಿಂತ ಗಂಡುಗಳೇ ಎಲ್ಲೆಲ್ಲೂ ಅಧಿಕ. ಆದರೆ ವಿವಿಧ ವಯಸ್ಸುಗಳಲ್ಲಿ ಸಾಯುವವರ ಪೈಕಿ ಹೆಣ್ಣುಗಳಿಗಿಂತ ಗಂಡುಗಳ ಸಂಖ್ಯೆಯೇ ಅಧಿಕ. ವಲಸೆಯ ದೃಷ್ಟಿಯಿಂದಲೂ ಸ್ತ್ರೀ–ಪುರುಷ ವಿಭಿನ್ನತೆ ಎದ್ದುಕಾಣುತ್ತದೆ. ದೂರ ಪ್ರದೇಶಗಳಿಗೆ ವಲಸೆ ಹೋಗುವವರ ಪೈಕಿ ಹೆಂಗಸರಿಗಿಂತ ಗಂಡಸರ ಸಂಖ್ಯೆ ಹೆಚ್ಚು. ಲಿಂಗಾನುಗುಣ ವಿಂಗಡಣೆಯ ಅಧ್ಯಯನದಲ್ಲಿ ಸಾಮಾನ್ಯವಾಗಿ ಬಳಸಲಾಗುವ ಮಾಪಕವೆಂದರೆ ಲಿಂಗನಿಷ್ಪತ್ತಿ (ಸೆಕ್ಸ್ ರೇಷಿಯೊ). ಪ್ರತಿ 100 ಮಂದಿ ಸ್ತ್ರೀಯರಿಗೆ ಎಷ್ಟು ಮಂದಿ ಪುರುಷರಿದ್ದಾರೆಂಬುದಾಗಿ ಅಳೆಯಲಾಗುತ್ತದೆ. ಒಟ್ಟು ಜನಸಂಖ್ಯೆಯಲ್ಲಿರುವ ಸ್ತ್ರೀಯರ ಸಂಖ್ಯೆಯಿಂದ ಅದರಲ್ಲಿರುವ ಪುರುಷರ ಸಂಖ್ಯೆಯನ್ನು ಭಾಗಿಸಿದರೆ ಲಬ್ಧವಾಗುವುದೇ ಲಿಂಗನಿಷ್ಪತ್ತಿ. ಯುರೋಪಿಯನ್ ದೇಶಗಳಲ್ಲಿ ಪ್ರತಿ ನೂರು ಮಂದಿ ಪುರುಷರಿಗೆ ಎಷ್ಟು ಮಂದಿ ಸ್ತ್ರೀಯರಿರುತ್ತಾರೆಂದು ಕಂಡುಹಿಡಿಯುತ್ತಾರೆ. ಕೋಷ್ಟಕ 1ರಲ್ಲಿ ವಿವಿಧ ದೇಶಗಳಲ್ಲಿ ವರ್ಲ್ಡ್ ಫ್ಯಾಕ್ಟ್‌ಬು (2012)ರ ಜನನ ಸಮಯದ ಸ್ತ್ರೀ ಪುರುಷ ದಾಮಾಷಾವನ್ನು ನೀಡಲಾಗಿದೆ. ದಾಮಷಾ ಒಂದಕ್ಕಿಂತ ಹೆಚ್ಚಾಗಿದ್ದರೆ ಹೆಂಗಸರಿಗಿಂತ ಗಂಡಸರು ಹೆಚ್ಚಾಗಿದ್ದಾರೆ ಎಂದರ್ಥ.

**ಕೋಷ್ಟಕ–1**

| ದೇಶ | ಸ್ತ್ರೀ, ಪುರುಷ ದಾಮಾಷಾ (ಹುಟ್ಟಿದಾಗ) |
|---|---|
| ಶ್ರೀಲಂಕ | 1.07 |
| ಪಾಕಿಸ್ತಾನ | 1.1 |
| ಲಿಬಿಯ | 1.05 |
| ಟ್ಯೂನೀಷಿಯ | 1.07 |
| ಇಸ್ರೇಲ್ | 1.05 |
| ಭಾರತ | 1.12 |
| ಆರ್ಜೆಂಟೀನ | 1.052 |
| ಕ್ಯೂಬಾ | 1.06 |
| ಆಸ್ಟ್ರೇಲಿಯ | 1.055 |
| ಕೆನಡ | 1.056 |
| ಪನಾಮಾ | 1.04 |
| ಐರ್ಲೆಂಡ್ | 1.07 |
| ನ್ಯೂಜೀಲೆಂಡ್ | 1.05 |
| ದ. ಕೊರಿಯ | 1.07 |
| ಥೈಲೆಂಡ್ | 1.05 |
| ಬ್ರಜಿಲ್ | 1.05 |
| ಬಲ್ಗೇರಿಯ | 1.06 |
| ನಾರ್ವೇ | 1.05 |
| ಬೆಲ್ಜಿಯಮ್ | 1.045 |
| ಅಮೆರಿಕ ಸಂ. ಸಂ. | 1.05 |
| ಚಿಲಿ | 1.05 |
| ಇಟಲಿ | 1.07 |
| ಹಂಗರಿ | 1.057 |
| ಬ್ರಿಟನ್ | 1.05 |
| ಫ್ರಾನ್ಸ್ | 1.051 |
| ಜರ್ಮನಿ | 1.055 |
| ಆಸ್ಟ್ರಿಯ | 1.051 |

**ವಿ.ಸೂ :** ದಾಮಾಷಾ 1ಕ್ಕಿಂತ ಮೇಲ್ಪಟ್ಟಿದ್ದರೆ – ಉದಾ:ಗೆ 1.1 ಎಂದಿದ್ದರೆ – ಪ್ರತಿಯೊಬ್ಬ ಹೆಣ್ಣಿಗೆ 1.1 ಗಂಡಸರಿದ್ದಾರೆಂದು ಅರ್ಥ.

ವಲಸೆಗಾರ ಸಂಖ್ಯೆ ಹೆಚ್ಚಾಗಿಲ್ಲದ ದೇಶಗಳಲ್ಲಿ ಲಿಂಗನಿಷ್ಪತ್ತಿಯನ್ನು ನಿರ್ಣಯಿಸುವ ಮುಖ್ಯ ಅಂಶಗಳೆಂದರೆ ಜನನ ಮತ್ತು ಮರಣ ದರಗಳು, ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲಿ ಜನನ ಕಾಲದಲ್ಲಿ ಲಿಂಗನಿಷ್ಪತ್ತಿ 105–106 ಇರುತ್ತದೆ. ಆದರೆ ಮರಣ ದರಗಳು ಸ್ತ್ರೀಯರ ವಿಷಯದಲ್ಲಿ ಕಡಿಮೆ. ಆದ್ದರಿಂದ ಕ್ರಮೇಣ ಲಿಂಗ ನಿಷ್ಪತ್ತಿ ಕಡಿಮೆಯಾಗುತ್ತ ಸಾಗುತ್ತದೆ. 40, 50ನೆಯ ವಯಸ್ಸುಗಳ ನಡುವೆ ಇದು 100ಕ್ಕೆ ಇಳಿಯುತ್ತದೆ. ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಈ ದೇಶಗಳಲ್ಲಿ ಲಿಂಗನಿಷ್ಪತ್ತಿ 94–97ರಲ್ಲಿರುತ್ತದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲೂ ಹೆಚ್ಚಿನ ವಯಸ್ಸುಗಳಲ್ಲಿ ಸ್ತ್ರೀಯರ ಮರಣ ದರ ಕಡಿಮೆಯಾಗಿರುವುದಾದರೂ ಪ್ರಜನನ ವಯಸ್ಸುಗಳಲ್ಲಿ ಸ್ತ್ರೀಯರ ಮರಣ ಅಧಿಕವಾಗಿರುತ್ತದೆ. ಆದ್ದರಿಂದ ಈ ದೇಶಗಳ ಸರಾಸರಿ ಲಿಂಗನಿಷ್ಪತ್ತಿ ಸುಮಾರು 100.

ಒಂದು ದೇಶದೊಳಗೆ ಲಿಂಗನಿಷ್ಪತ್ತಿಯ ಮೇಲೆ ಪರಿಣಾಮ ಬೀರುವ ಇನ್ನೊಂದು ಅಂಶವೆಂದರೆ ವಲಸೆ. ಅಂತರ್ದೇಶೀಯ ವಲಸೆ ಸಾಮಾನ್ಯವಾಗಿ ಹಳ್ಳಿಗಳಿಂದ ಪಟ್ಟಣಗಳೆಡೆಗೆ. ಭಾರತದಲ್ಲಿ ಸಾಮಾನ್ಯವಾಗಿ ಪಟ್ಟಣಗಳಿಗೆ ವಲಸೆ ಹೋಗುವವರಲ್ಲಿ ಸ್ತ್ರೀಯರಿಗಿಂತ ಪುರುಷರು ಅಧಿಕ. ಮುಂದುವರಿದ ದೇಶಗಳ ಪಟ್ಟಣಗಳಲ್ಲಿ ಸ್ತ್ರೀಯರಿಗೆ ಉದ್ಯೋಗಾವಕಾಶಗಳು ಅಧಿಕವಾಗಿರುತ್ತವೆ. ಆದರೆ ಉಕ್ಕು, ಗಣಿಗಾರಿಕೆ ಮುಂತಾದ ಉದ್ಯಮಗಳು ಪ್ರಧಾನವಾದ ನಗರಗಳಲ್ಲಿ ಸ್ತ್ರೀಯರ ಸಂಖ್ಯೆ ಕಡಿಮೆಯಿರುತ್ತದೆ.

ಒಂದು ಪ್ರದೇಶದ ಲಿಂಗನಿಷ್ಪತ್ತಿ ಅಲ್ಲಿಯ ವಿವಾಹಗಳ ಸಂಖ್ಯೆಯ ಮೇಲೆ ಮುಖ್ಯ ಪರಿಣಾಮ ಬೀರುತ್ತದೆ. ಒಂದು ನಗರ ಪ್ರದೇಶದಲ್ಲಿ ಸ್ತ್ರೀಯರು ಅಧಿಕ ಸಂಖ್ಯೆಯಲ್ಲಿದ್ದರೆ ಹೆಚ್ಚುವರಿ ಸಂಖ್ಯೆಯ ಸ್ತ್ರೀಯರ ವಿವಾಹಾವಕಾಶಗಳು ಕಡಿಮೆ. ಲಿಂಗ ಸಮತೋಲ ಇಲ್ಲದಲ್ಲಿ ವಿಳಂಬವಿವಾಹ, ಔರಸ ಜನನಗಳ ಸಂಖ್ಯೆಯ ಇಳಿತ ಮುಂತಾದವು ಸಂಭವಿಸುತ್ತವೆ. ಅಸಮ ಲಿಂಗನಿಷ್ಪತ್ತಿಯಿಂದಾಗಿ ಒಟ್ಟು ಮರಣ ದರದ ಮೇಲೂ ಪರಿಣಾಮ ಉಂಟಾಗುತ್ತದೆ.

**ವಯಸ್ಸು :** ವಯಸ್ಸೂ ಲಿಂಗದಂತೆ ವ್ಯಕ್ತಿಗೆ ಸಂಬಂಧಿಸಿದ ಒಂದು ಮುಖ್ಯ ಲಕ್ಷಣ. ವಯಸ್ಸಿಗೂ ದೈಹಿಕ ಸಾಮರ್ಥ್ಯಕ್ಕೂ ಮಾನಸಿಕ ಪ್ರಬುದ್ಧತೆಗೂ ನೇರ ಸಂಬಂಧವುಂಟು. ಒಂದು ಸಮಾಜವ್ಯವಸ್ಥೆಯ ರಚನೆಯಲ್ಲಿ ವ್ಯಕ್ತಿಯ ವಯಸ್ಸೇ ಇಟ್ಟಿಗೆ. ವ್ಯಕ್ತಿಯ ವಯಸ್ಸಿಗೆ ಅನುಗುಣವಾಗಿ ಸಾಮಾಜಿಕ ಪಾತ್ರವೂ ಹೊಣೆಗಳೂ ಅವನಿಗೆ ಪ್ರಾಪ್ತವಾಗುತ್ತವೆ. ವಿವಿಧ ಸಾಮಾಜಿಕ ಕಲಾಪಗಳಿಗೆ ಲಭ್ಯವಿರುವ ಜನರ ಸಂಖ್ಯೆ ಎಷ್ಟು ಎಂಬುದು ಸಮಾಜದ ಜನರ ವಯೋಸಂಯೋಜನೆಯನ್ನೇ ಅವಲಂಬಿಸಿದೆ. ಅತ್ಯಂತ ಮುಖ್ಯವಾದ ವಿಷಯವೆಂದರೆ, ಕಾರ್ಮಿಕ ಬಲದ ಗಾತ್ರ, ಮತ್ತು ಈ ಬಲವನ್ನೇ ಅವಲಂಬಿಸಿರುವ ಜನರ ಸಂಖ್ಯೆ. ವಯಸ್ಸಿಗೂ ಫಲವಂತಿಕೆಗೂ ಮರಣ ಸಂಖ್ಯೆಗೂ ನೇರ ಜೈವಿಕ ಸಂಬಂಧವುಂಟು.

ವಯಸ್ಸಿಗೆ ಸಂಬಂಧಿಸಿದ ದತ್ತಾಂಶ, ಲಿಂಗಕ್ಕೆ ಸಂಬಂಧಿಸಿದ ದತ್ತಾಂಶದಷ್ಟು ವಿಶ್ವಸನೀಯವಲ್ಲ. ಅನಕ್ಷರಸ್ಥ ಸಮಾಜಗಳಲ್ಲಿ ಅನೇಕರಿಗೆ ತಮ್ಮ ವಯಸ್ಸು ಗೊತ್ತೇ ಇರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಜನಗಣತಿದಾರರು ವಯಸ್ಸುಗಳ ಅಂದಾಜು ಮಾಡ ಬೇಕಾಗುತ್ತದೆ. ಅಕ್ಷರಸ್ಥರೂ ತಮ್ಮ ವಯಸ್ಸುಗಳನ್ನು ಹೇಳುವಾಗ 0 ಅಥವಾ 5 ರಿಂದ ಅಂತ್ಯವಾಗುವ ಅಂಕಗಳಲ್ಲಿ ಅಥವಾ ಸಮಸಂಖ್ಯೆಗಳಲ್ಲಿ ಹೇಳುವುದುಂಟು. ಇಂಥ ವಯೋ ರಾಶೀಕರಣದ ತಪ್ಪುಗಳನ್ನು ಸರಿಪಡಿಸಲು ಕೆಲವು ವಿಧಾನಗಳನ್ನು ಅನುಸರಿಸಬೇಕಾಗುತ್ತದೆ.

ಯಾವುದೇ ಜನರ ಸರಿಯಾದ ವಯೋಸಂಯೋಜನೆಯು ಜನನ, ಮರಣ ಮತ್ತು ವಲಸೆಯ ದರಗಳನ್ನು ಅವಲಂಬಿಸಿರುತ್ತದೆ. ಹಲವು ದೇಶಗಳ ವಿವಿಧ ವಯೋ ಗುಂಪುಗಳನ್ನು ಹೋಲಿಸಿದಾಗ ಅವುಗಳಲ್ಲಿ ಬಹಳ ವ್ಯತ್ಯಾಸವಿರುವುದು ಗೋಚರವಾಗುತ್ತದೆ. ಏಷ್ಯ, ಆಫ್ರಿಕ, ಲ್ಯಾಟಿನ್ ಅಮೆರಿಕದ ಅಭಿವೃದ್ಧಿಶೀಲ ದೇಶಗಳಲ್ಲಿ ಜನನ–ಮರಣ ದರಗಳೆರಡೂ ಅಧಿಕ. ಇವುಗಳ ವಯೋಸಂಯೋಜನೆ ಒಂದೇ ರೀತಿ ಇರುತ್ತದೆ. ಇವುಗಳಲ್ಲಿ ಅನುಪಾತೀಯವಾಗಿ ಮಕ್ಕಳ ಸಂಖ್ಯೆ ಅಧಿಕ. ಒಟ್ಟು ಜನಸಂಖ್ಯೆಯ ಶೇ. 40ರಷ್ಟು 0–14ರ ವಯೋಗುಂಪಿನಲ್ಲಿರುತ್ತದೆ. ಸುಮಾರು ಅರ್ಧದಷ್ಟು ಜನ 15–64ರ ಅಂತರ ದಲ್ಲಿರುವವರು. 65ಕ್ಕಿಂತ ಹೆಚ್ಚಿನ ವಯಸ್ಸಿನವರ ಅನುಪಾತ ಶೇ. 4ಕ್ಕಿಂತ ಕಡಿಮೆ. ಮಕ್ಕಳ ಅನುಪಾತ ಹೆಚ್ಚಾಗಿರುವುದರಿಂದ, ಆರ್ಥಿಕವಾಗಿ ಕಾರ್ಯಪ್ರವೃತ್ತರಾದವರನ್ನು ಅವಲಂಬಿಸಿರುವವರ ಸಂಖ್ಯೆ ಹೆಚ್ಚು. ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲಿ ಜನನ ಮರಣ ದರಗಳೆರಡೂ ಕಡಿಮೆ. ಇಲ್ಲಿ 15 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳು ಒಟ್ಟು ಜನಸಂಖ್ಯೆಯ ಸುಮಾರು 1/5ರಷ್ಟು ಮಾತ್ರ. 2/3 ಮಂದಿ 15–64 ವಯಸ್ಸಿನವರು. 65ಕ್ಕಿಂತ ಹೆಚ್ಚು ವಯಸ್ಸಿನವರು ಸೇಕಡ 8–12. ಫಲವಂತಿಕೆಯ ಇಳಿತಾಯವೇ ಈ ವಯೋ ಸಂಯೋಜನೆಗೆ ಕಾರಣ. ವಲಸೆಯಿಂದಾಗಿ ಅಮೆರಿಕನ್ ದೇಶಗಳಲ್ಲಿ 15–64 ವಯೋಗುಂಪಿನ ಅನುಪಾತ ಹೆಚ್ಚಾಗಿದೆ. ಫಲವಂತಿಕೆ ಇಳಿಯುವುದರಿಂದ ಭವಿಷ್ಯದಲ್ಲಿ ಕಾರ್ಯಶೀಲ ವಯಸ್ಸುಗಳ ಜನರ ಸಂಖ್ಯೆ ಕಡಿಮೆಯಾಗುತ್ತದೆ. 65ಕ್ಕಿಂತ ಹೆಚ್ಚಿನ ವಯಸ್ಸಿನವರ ಸಂಖ್ಯೆ ಅಧಿಕವಾಗುತ್ತದೆ.

ಇನ್ನು ಕೆಲವು ರಾಷ್ಟ್ರಗಳು ಪರಿವರ್ತನೆಯ ಹಂತದಲ್ಲಿವೆ. ಅವುಗಳಲ್ಲಿ ಮರಣಸಂಖ್ಯೆ ಇಳಿಮುಖವಾಗಿದೆ. ಫಲವಂತಿಕೆಯೂ ಇಳಿಯಲಾರಂಭಿಸಿದೆ. ಜಪಾನ್, ಪೂರ್ವ ಯುರೋಪಿನ ದೇಶಗಳು ಇದಕ್ಕೆ ನಿದರ್ಶನ.

**ಕೋಷ್ಟಕ – 2**

ಹಲವು ದೇಶಗಳ ನಡುವಯಸ್ಸಿನ (median age) (ಅಂದರೆ 15 ರಿಂದ 40) ಜನಸಂಖ್ಯೆಯ ವಿತರಣೆ

| ದೇಶ | ಜನಗಣತಿ ವರ್ಷ | ಗಂಡಸು | ಹೆಂಗಸು | ವಯೋಗಣ 65 ಮತ್ತು ಅಧಿಕ |
|---|---|---|---|---|
| ಚೀನ | 2010 | 34.5 | 35.8 | 2.9 |
| ಶ್ರೀಲಂಕಾ | 2010 | 30.3 | 32.2 | 3.7 |
| ಮಲೇಷಿಯ | 2010 | 24.5 | 25.8 | 2.7 |
| ದ. ಕೊರಿಯ | 2010 | 36.5 | 39.1 | 3.2 |
| ಪರಗ್ವೇ | 2010 | 24.7 | 25.1 | 3.7 |
| ತುರ್ಕಿ | 2010 | 27.7 | 28.4 | 3.1 |
| ಜಪಾನ್ | 2010 | 42.9 | 46.5 | 3.4 |
| ಆಸ್ಟ್ರೇಲಿಯ | 2010 | 36.8 | 38.3 | 5.7 |
| ಅಮೆರಿಕ ಸಂ. ಸಂ.–3 | 2010 | 35.5 | 38.1 | 8.3 |
| ಜರ್ಮನಿ | 2010 | 42.3 | 45.3 | 8.2 |
| ಸ್ವಿಟ್ಜರ್ಲೆಂಡ್ | 2010 | 40.3 | 42.4 | 9.1 |
| ಸ್ವೀಡನ್ | 2010 | 40.9 | 42.9 | 9.3 |
| ಬ್ರಿಟನ್ | 2010 | 39.4 | 41.5 | 9.6 |
| ಫ್ರಾನ್ಸ್ | 2010 | 38.2 | 41.2 | 10.3 |
| ಬೆಲ್ಜಿಯಮ್ | 2010 | 40.7 | 43.3 | 10.8 |

ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲಿ ವೃದ್ಧಾಪ್ಯ ಒಂದು ಸಮಸ್ಯೆಯ ಸ್ವರೂಪ ತಳೆದಿದೆ. ಅಭಿವೃದ್ಧಿಶೀಲ ದೇಶಗಳಲ್ಲಿ ವೃದ್ಧರು ತಂತಮ್ಮ ಸಂಸಾರಗಳ ಅಂಗಗಳು. ಅವರ ಬಗ್ಗೆ ಸಾಮಾಜಿಕವಾಗಿ ಗೌರವ ಇರುತ್ತದೆ. ಅವರನ್ನು ನೋಡಿಕೊಳ್ಳುವುದು ಸಂಸಾರದ ಉಳಿದವರ ಹೊಣೆ. ಆದರೆ ಮುಂದುವರಿದ ದೇಶಗಳಲ್ಲಿ ಅವರು ಪ್ರತ್ಯೇಕವಾಗಿ, ಅನುಪಯುಕ್ತರಾಗಿ, ಸಾಮಾಜಿಕ ಹೊರೆಯಾಗಿ ಪರಿಣಮಿಸುತ್ತಾರೆ. ಯುರೋಪಿನ ದೇಶಗಳಲ್ಲಿ ಜನನದರ ಈಚೆಗೆ ಏರುತ್ತಿರುವುದರಿಂದ ವೃದ್ಧಾಪ್ಯದ ಸಮಸ್ಯೆ ಸಾಪೇಕ್ಷವಾಗಿ ಕಡಿಮೆಯಾಗಿದ್ದರೂ ಒಟ್ಟಿನಲ್ಲಿ ವೃದ್ಧರ ಸಂಖ್ಯೆ ಬೆಳೆಯುತ್ತಲೇ ಇದೆ.

**ವೈವಾಹಿಕ ಸ್ಥಿತಿ :** ಎಲ್ಲ ಜನಗಣತಿಗಳಲ್ಲೂ ವ್ಯಕ್ತಿಯ ವೈವಾಹಿಕ ಸ್ಥಿತಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ಕ್ರಮ ಕೈಗೊಳ್ಳುವುದುಂಟು. ಕುಟುಂಬ ರಚನೆಯಲ್ಲಿ ಆಗುವ ಬದಲಾವಣೆಗಳನ್ನು ಜನಸಂಖ್ಯಾಶಾಸ್ತ್ರಜ್ಞರೂ ಸಮಾಜವಿಜ್ಞಾನಿಗಳೂ ಅರ್ಥಶಾಸ್ತ್ರಜ್ಞರೂ ಬಹಳ ಎಚ್ಚರಿಕೆಯಿಂದ ಅಧ್ಯಯನ ಮಾಡುತ್ತಾರೆ. ವೈವಾಹಿಕ ಸ್ಥಿತಿಯಲ್ಲಿಯೇ ಆದ ಬದಲಾವಣೆಗಳು ಫಲವಂತಿಕೆ, ಮೃತ್ಯುಸಂಖ್ಯೆ–ಇವೆರಡರ ಮೇಲೂ ಪರಿಣಾಮ ಬೀರುತ್ತವೆ. ಜನರು ಯಾವ ವಯಸ್ಸಿನಲ್ಲಿ ಮದುವೆಯಾಗುತ್ತಾರೆ ಎಂಬುದು ಫಲವಂತಿಕೆಯನ್ನು ನಿರ್ಣಯಿಸುತ್ತದೆ. ಚಿಕ್ಕ ವಯಸ್ಸಿನಲ್ಲೇ ಮದುವೆ ಆಗುವ ಪದ್ಧತಿ ಇರುವಲ್ಲಿ ಮತ್ತು ವಿವಾಹಿತರ ಅನುಪಾತ ಅಧಿಕವಿರುವಲ್ಲಿ ಫಲವಂತಿಕೆಯೂ ಅಧಿಕವಾಗಿರುತ್ತದೆ. ವೈವಾಹಿಕ ಸ್ಥಿತಿಗೆ ಅನುಗುಣವಾಗಿ ಮರಣ ಸಂಖ್ಯೆಯೂ ವ್ಯತ್ಯಾಸವಾಗುತ್ತದೆ. ಒಂದು ವಯಸ್ಸಿನ ಅವಿವಾಹಿತರ ಮರಣ ದರಕ್ಕಿಂತ ಅದೇ ವಯಸ್ಸಿನ ವಿವಾಹಿತ ಪುರುಷರ ಮತ್ತು ಸ್ತ್ರೀಯರ ಮರಣ ದರ ಕಡಿಮೆಯಿರುತ್ತದೆ. ವಿವಾಹವನ್ನು ನಿರ್ಣಯಿಸುವ ಅಂಶಗಳಲ್ಲಿ ಆರೋಗ್ಯವೂ ಒಂದು ಮುಖ್ಯ ಅಂಶವಾದ್ದರಿಂದಲೂ ವಿವಾಹಿತ ಜೀವನ ನಡೆಸುವವರು ಹೆಚ್ಚು ಕ್ರಮಬದ್ಧ ಜೀವನ ನಡೆಸುವುದರಿಂದಲೂ ವಿವಾಹಿತರು ಅವಿವಾಹಿತರಿಗಿಂತ ಸಾಮಾನ್ಯವಾಗಿ ಹೆಚ್ಚು ದೀರ್ಘಾಯುಗಳಾಗಿರುತ್ತಾರೆ. ಮಾನವ ಸಮಾಜದಲ್ಲಿ ಕುಟುಂಬ ಒಂದು ಮೂಲ ಘಟಕ. ತಲೆಮಾರಿನಿಂದ ತಲೆಮಾರಿಗೆ ಜನಸಂಖ್ಯೆಯನ್ನು ಮುಂದುವರಿಸಿ ಕೊಂಡು ಹೋಗುವ ಹೊಣೆ ಕುಟುಂಬದ್ದು. ಕುಟುಂಬದ ಉದ್ದೇಶ ಪ್ರಜನನ ಮಾತ್ರವೇ

ಅಲ್ಲ. ಮಕ್ಕಳು ಸಾಮಾಜಿಕವಾಗಿ ಉಪಯುಕ್ತ ಪಾತ್ರ ವಹಿಸುವಂತೆ ದೀರ್ಘಕಾಲ ಅವರನ್ನು ಬೆಳೆಸಿ ತರಬೇತು ಮಾಡುವುದೂ ಕುಟುಂಬದ ಕಾರ್ಯಭಾರ. ಆದ್ದರಿಂದಲೂ ಜನರ ವೈವಾಹಿಕ ಸ್ಥಿತಿಯನ್ನು ಕುರಿತ ಮಾಹಿತಿಯ ಸಂಗ್ರಹ ಮತ್ತು ಅಧ್ಯಯನಕ್ಕೆ ಹೆಚ್ಚಿನ ಪ್ರಾಧಾನ್ಯವಿದೆ.

ವೈವಾಹಿಕ ಸ್ಥಿತಿಯ ದೃಷ್ಟಿಯಿಂದ ವಿವಿಧ ರಾಷ್ಟ್ರಗಳ ತೌಲನಿಕ ಅಧ್ಯಯನ ಮಾಡುವಾಗ ಎಚ್ಚರಿಕೆ ವಹಿಸುವುದು ಆವಶ್ಯ. ಕೆಲವು ದೇಶಗಳಲ್ಲಿ ಅನೇಕ ಗಂಡು ಹೆಣ್ಣುಗಳು ಸತಿಪತಿಗಳಂತೆ ಕೂಡಿ ಬಾಳು ನಡೆಸುತ್ತಿದ್ದರೂ ವಿವಾಹಿತರೆಂದು ಅಧಿಕೃತವಾಗಿ ಹೇಳಿಕೊಳ್ಳುವುದಿಲ್ಲ. ವಿವಾಹಿತ ಪುರುಷರ ಸಂಖ್ಯೆಯೂ ಸ್ತ್ರೀಯರ ಸಂಖ್ಯೆಯೂ ಸಾಮಾನ್ಯವಾಗಿ ಒಂದೇ ಸಮವಾಗಿರಬೇಕು. ಆದರೆ ಬಹುತೇಕ ದೇಶಗಳಲ್ಲಿ ಇವುಗಳಲ್ಲಿ ವ್ಯತ್ಯಾಸ ಇರುತ್ತದೆ. ಏಕೆಂದರೆ ವಿವಾಹವಾದ ಅನಂತರ ಶಾಸನಾತ್ಮಕವಾಗಿಯೋ ವಾಸ್ತವವಾಗಿಯೋ ಪ್ರತ್ಯೇಕಗೊಂಡವರಲ್ಲಿ ಅನೇಕರು ಹಾಗೆಂದು ಹೇಳಿಕೊಳ್ಳದಿರಬಹುದು.

ಭಾರತ, ತುರ್ಕಿ ಮುಂತಾದ ದೇಶಗಳಲ್ಲಿ ಚಿಕ್ಕ ವಯಸ್ಸಿನಲ್ಲೇ ವಿವಾಹವಾಗುವ ಪ್ರವೃತ್ತಿಯುಂಟು. ಐರ್ಲೆಂಡ್, ಸ್ಪೇನ್, ಜಪಾನ್ ಮುಂತಾದ ದೇಶಗಳಲ್ಲಿ ವಿವಾಹವನ್ನು ಆದಷ್ಟು ಮುಂತಳ್ಳುವ ಅಭ್ಯಾಸವುಂಟು. ವಿವಿಧ ವಯಸ್ಸುಗಳ ವಿವಾಹಿತರ ಅನುಪಾತ ಒಂದು ದೇಶದ ಸಾಮಾಜಿಕ ವ್ಯವಸ್ಥೆ, ಸಾಂಸ್ಕೃತಿಕ ಚೌಕಟ್ಟು ಇವುಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ವೈವಾಹಿಕ ಸ್ಥಿತಿಗೂ ಸಾಮಾಜಿಕ ರಚನೆಗೂ ಇರುವ ಸಂಬಂಧ ತುಂಬ ಸಂಕೀರ್ಣವಾದ್ದರಿಂದ ಈ ಬಗ್ಗೆ ಸುಲಭ ಸಾರ್ವತ್ರೀಕರಣ ಸಾಧ್ಯವಿಲ್ಲ. ಸ್ಥೂಲವಾಗಿ ಹೇಳುವುದಾದರೆ, ಪುರುಷರಿಗಿಂತ ಕಡಿಮೆ ವಯಸ್ಸಿನಲ್ಲೇ ಸ್ತ್ರೀಯರಲ್ಲಿ ವಿವಾಹಿತರ ಶೇಕಡವಾರು ಗರಿಷ್ಠ ಸ್ಥಿತಿ ಮುಟ್ಟುತ್ತದೆ.

**ಕಸುಬು :** ಜನಸಂಖ್ಯೆಯ ಸಾಮಾಜಿಕ ಲಕ್ಷಣಗಳ ಪರಿಶೀಲನೆಯಲ್ಲಿ ವಿಶೇಷ ಗಮನಕ್ಕೆ ಅರ್ಹವಾದ ಅಂಶವೆಂದರೆ ಕಸುಬು. ಮಾನವರಿಗೆ ಅನ್ನವೇ ಮುಖ್ಯವಲ್ಲ. ಆದರೆ ಎಲ್ಲ ಸಮಾಜಗಳಲ್ಲೂ ಜನಸಂಖ್ಯೆಯ ಒಂದು ಗಮನಾರ್ಹ ಭಾಗ ಜೀವನ ನಿರ್ವಹಣೆಗಾಗಿ ಸತತ ಶ್ರಮಿಸುತ್ತಿರುತ್ತದೆ. ಒಬ್ಬ ಕೆಲಸಗಾರನ ಜೀವನೋಪಾಯ ವಿಧಾನವೇ ಅವನ ಮತ್ತು ಅವನ ಕುಟುಂಬದ ಆರ್ಥಿಕ ಸಾಮಾಜಿಕ ಸ್ಥಿತಿಗೆ ಆಧಾರ. ಒಂದು ದೇಶದ ಜನಸಂಖ್ಯೆಯಲ್ಲಿ ಕೆಲಸಗಾರರ ಪ್ರಮಾಣ ಎಷ್ಟು ಎಂಬುದು ಬಲು ಮುಖ್ಯ. ಕೆಲಸಗಾರರನ್ನು ಕಸಬು ಮತ್ತು ಕೈಗಾರಿಕೆಗಳಿಗೆ ಅನುಗುಣವಾಗಿ ವರ್ಗೀಕರಿಸುವುದು ಉಪಯುಕ್ತ. ಇದರಿಂದ ಒಂದು ದೇಶದ ಆರ್ಥಿಕ ಅಭಿವೃದ್ಧಿಯನ್ನು ಅರಿಯಬಹುದಲ್ಲದೆ, ಆ ದೇಶದ ವಿವಿಧ ಪ್ರದೇಶಗಳ ಆರ್ಥಿಕ ಅಭಿವೃದ್ಧಿಯ ಮಟ್ಟವನ್ನು ಅಳೆಯಬಹುದು.

ಒಂದು ದೇಶದ ಜನಸಂಖ್ಯೆಯನ್ನು ಆರ್ಥಿಕವಾಗಿ ಕಾರ್ಯಶೀಲವಾದ್ದು, ಇಲ್ಲದ್ದು ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯ ಭಾಗದ ಜನರೇ ಆ ದೇಶದ ಕಾರ್ಯಶೀಲ ಬಲ, ಅಥವಾ ಕಾರ್ಮಿಕ ಬಲ. ಹಿಂದುಳಿದ ಸಮಾಜಗಳಲ್ಲಿ, ಬಲು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಹುತೇಕ ಎಲ್ಲರೂ ಉತ್ಪಾದನೆಯ ಕಾರ್ಯದಲ್ಲಿ ಭಾಗವಹಿಸುವುದರಿಂದ ಅಲ್ಲಿ ಈ ಬಗೆಯ ವಿಂಗಡಣೆ ಬಹು ಕಷ್ಟ. ಆದರೆ ಮಾರುಕಟ್ಟೆ ಆರ್ಥಿಕತೆ ಬೆಳೆದಂತೆ, ಸರಕು ಸೇವೆಗಳನ್ನು ಅನುಭೋಗಿಸುವ, ಆದರೆ ಅವುಗಳ ಉತ್ಪಾದನೆಯಲ್ಲಿ ಭಾಗವಹಿಸದ ಜನರ ಪ್ರಮಾಣ ಹೆಚ್ಚುತ್ತದೆ. ಅಂಥ ಸಮಾಜಗಳಲ್ಲಿ ಮೇಲೆ ಹೇಳಿದ ವರ್ಗೀಕರಣ ಸಾಧ್ಯ. ಆದರೂ ಅಂಥ ಸಮಾಜಗಳಲ್ಲೂ ಈ ವಿಂಗಡಣೆಗೆ ಸಮರ್ಪಕವಾದ ಸೂತ್ರ ರಚಿಸುವುದು ಸುಲಭವಲ್ಲ.

ಜನಗಣತಿಯ ಮಾಹಿತಿಗಳಲ್ಲಿ ಕಾರ್ಮಿಕ ಬಲವನ್ನು ಕುರಿತ ಅಂಕಿ-ಅಂಶಗಳೂ ಇರುತ್ತವೆ. ಈ ಕುರಿತ ವರ್ಗೀಕರಣದ ರೀತಿನೀತಿಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತವೆ.

ಒಂದು ದೇಶದಲ್ಲಿರುವ, ಆರ್ಥಿಕವಾಗಿ ಕ್ರಿಯಾಶೀಲವಾದ ಜನಸಂಖ್ಯೆಯ ಗಾತ್ರ ಅದರ ಒಟ್ಟು ಜನಸಂಖ್ಯೆಯ ವಯೋನುಗುಣ ಹಾಗೂ ಲಿಂಗಾನುಗುಣ ಸಂಯೋಜನೆಯನ್ನು ಬಹಳ ಮಟ್ಟಿಗೆ ಅವಲಂಬಿಸಿರುತ್ತದೆ. ಪ್ರತಿಯೊಂದು ದೇಶದಲ್ಲೂ ಎಲ್ಲ ಪುರುಷರೂ ಪ್ರಾಪ್ತವಯಸ್ಕರಾದಂದಿನಿಂದ ಮುದುಕರಾಗುವವರೆಗೆ ಸಾಮಾನ್ಯವಾಗಿ ಆರ್ಥಿಕವಾಗಿ ಕ್ರಿಯಾಶೀಲರಾಗಿರುತ್ತಾರೆ. ಆರ್ಥಿಕವಾಗಿ ಕ್ರಿಯಾಶೀಲರಾದ ಸ್ತ್ರೀಯರು, ಯುವಕರು ಮತ್ತು ಮುದುಕರ ಸಂಖ್ಯೆ ಒಂದು ದೇಶದ ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿರುತ್ತದೆ. ಆರ್ಥಿಕ ಉತ್ಪಾನೆಯ ಸ್ವರೂಪ ಮತ್ತು ಉತ್ಪಾದನ ವ್ಯವಸ್ಥೆ, ವರಮಾನದ ಮಟ್ಟ, ಶಿಕ್ಷಣ ಮುಂತಾದವು ಕಾರ್ಮಿಕ ಬಲವನ್ನು ನಿರ್ಧರಿಸುವ ಅಂಶಗಳು. ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಕ್ಕಳೂ ದುಡಿಯುತ್ತಾರೆ. ಅನೇಕರು ಮುಪ್ಪಾದ ಮೇಲೂ ದುಡಿತ ಮುಂದುವರಿಸುವುದು ಅನಿವಾರ್ಯವಾಗಿರುತ್ತದೆ. ಆದರೆ ಕೈಗಾರಿಕಾಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಕ್ಕಳು ವಯಸ್ಕರಾಗುವವರೆಗೆ ಶಾಲೆಗೆ ಹೋಗುತ್ತಾರೆ. ಮುಪ್ಪಿನಲ್ಲಿ ಅವರು ನಿವೃತ್ತಿವೇತನ ಸೌಲಭ್ಯ ಪಡೆಯುತ್ತಾರೆ. ಅಲ್ಲಿ ಒಂದು ವಯಸ್ಸಾದ ಮೇಲೆ ನಿವೃತ್ತರಾಗುವುದು ಕಡ್ಡಾಯ.

**ಶಿಕ್ಷಣ ಮಟ್ಟ :** ಕಸುಬಿಗೂ ಶಿಕ್ಷಣಕ್ಕೂ ನೇರ ಸಂಬಂಧವುಂಟು. ವ್ಯಕ್ತಿಯ ಜೀವನಮಟ್ಟ, ಅವನ ಸಾಂಸ್ಕೃತಿಕ ಚಟುವಟಿಕೆಗಳು, ಸಾಮಾಜಿಕ ಸ್ಥಾನಮಾನ ಇವು ಅವನ ಶೈಕ್ಷಣಿಕ ಮಟ್ಟವನ್ನು ಅವಲಂಬಿಸಿರುತ್ತವೆ. ಅವನ ಆಯುಸ್ಸು, ಮಾನಸಿಕ ಧೋರಣೆಗಳು, ಜೀವನದೃಷ್ಟಿ-ಇವೂ ಶಿಕ್ಷಣವನ್ನು ಆಧರಿಸಿರುತ್ತವೆ. ಒಂದು ಜನಾಂಗದ ಅಭಿವೃದ್ಧಿಯ ಮೇಲೆ ಪ್ರಭಾವ ಬೀರುವ ಅಂಶಗಳಿವು. ಒಂದು ಇಡೀ ಸಮಾಜದ ವರ್ಗಸಂಯೋಜನೆ, ಅದರಲ್ಲಿರುವ ವ್ಯಕ್ತಿಗಳ ಸಾಮಾಜಿಕ, ಆರ್ಥಿಕ ಸ್ಥಿತಿ ಇವೆಲ್ಲವನ್ನೂ ಅರಿಯಲು ಶಿಕ್ಷಣಮಟ್ಟ ಬಲು ಸಹಾಯಕ. ಒಂದು ಜನಾಂಗದಲ್ಲಿ ಓದು ಬರಹ ಬಲ್ಲವರ ಪ್ರಮಾಣವೆಷ್ಟು ಎಂಬುದು ಅತ್ಯಂತ ಸರಳಮಾಪಕ. ಆದರೆ ಹಲವು ಮುಂದುವರಿದ ದೇಶಗಳ ಜನಗಣತಿಗಳಲ್ಲಿ ಸಾಕ್ಷರತೆಯ ಬಗ್ಗೆ ಪ್ರಶ್ನೆಗಳು ಅನಗತ್ಯವೆನಿಸಿವೆ.

ಸಾಕ್ಷರತೆಯ ದರಗಳು ಅತ್ಯಂತ ಸ್ಥೂಲ ಮಾಪಕಗಳಾದ್ದರಿಂದ ಅನೇಕ ಜನಗಣತಿಗಳಲ್ಲಿ ಈ ಬಗ್ಗೆ ಪರಿಷ್ಕೃತ ಮಾಹಿತಿ ಸಂಗ್ರಹ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಶಾಲೆಗೆ ಹಾಜರಾತಿ ಹಾಕಿದ ಅವಧಿ, ವಿವಿಧ ವಯೋಗಣಗಳಲ್ಲಿ ಶಾಲೆಗೆ ಹೋಗುತ್ತಿರುವವರ ಸಂಖ್ಯೆ ಮುಂತಾದವುಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ವಿವಿಧ ದೇಶಗಳ ಶಿಕ್ಷಣ ವ್ಯವಸ್ಥೆಗಳಲ್ಲಿ ವ್ಯತ್ಯಾಸ ಇರುವುದರಿಂದ ಈ ಬಗ್ಗೆ ಅಂತಾರಾಷ್ಟ್ರೀಯ ತೌಲನಿಕ ಅಧ್ಯಯನ ಕಷ್ಟ.

**ಜನಾಂಗೀಯ ಮತ್ತು ಮತೀಯ ಸಂಯೋಜನೆ :** ಸಾಂಸ್ಕೃತಿಕ ಭಿನ್ನತೆಗಳು ಫಲವಂತಿಕೆ, ಮರಣಸಂಖ್ಯೆ, ವಲಸೆ, ವಿವಾಹಪದ್ಧತಿ, ವಿದ್ಯೆ, ಸಾಮಾಜಿಕ ಆರ್ಥಿಕ ಅಂತಸ್ತು ಮುಂತಾದವನ್ನು ನಿರ್ಣಯಿಸುತ್ತವೆ. ಆದ್ದರಿಂದ ಹಲವು ದೇಶಗಳಲ್ಲಿ ಜನರನ್ನು ಜನಾಂಗೀಯ ಹಾಗೂ ಮತೀಯವಾಗಿ ವಿಂಗಡಣೆ ಮಾಡುವುದು ಆವಶ್ಯ. ಮತೀಯ ಭಿನ್ನತೆಗಳು ಹಿಂಸೆ, ಪ್ರತ್ಯೇಕತೆ ಮುಂತಾದವಕ್ಕೆ ಕಾರಣವಾಗಬಹುದು. ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಧರ್ಮ ಈಗ ಅಷ್ಟೇನೂ ಪ್ರಧಾನ ಪಾತ್ರ ವಹಿಸುವುದಿಲ್ಲ. ಜನಾಂಗ ಗುಂಪುಗಳನ್ನು ಸಾಮಾನ್ಯವಾಗಿ ಕುಲ (ರೇಸ್), ವರ್ಣ (ಕಲರ್), ರಾಷ್ಟ್ರೀಯತೆ, ಭಾಷೆ ಇವುಗಳಿಗೆ ಅನುಗುಣವಾಗಿ ವರ್ಗೀಕರಿಸುವುದುಂಟು. ವಲಸೆ ದೇಶಗಳಲ್ಲಿ ಇವೆಲ್ಲ ಜನಜೀವನದ ಮೇಲೆ ಬಹಳ ಪ್ರಭಾವ ಬೀರುತ್ತವೆಯಲ್ಲದೆ ಅನೇಕ ಸಮಸ್ಯೆಗಳಿಗೆ ಕಾರಣವಾಗಿವೆ. ಕೈಗಾರಿಕೀಕರಣ, ನಗರೀಕರಣ ಮುಂತಾದ ಪ್ರಕ್ರಿಯೆಗಳಿಂದಾಗಿ ಕಾಲಕ್ರಮದಲ್ಲಿ ಜನಾಂಗ ಹಾಗೂ ಮತೀಯ ಭಿನ್ನತೆಗಳು ಮಾಯವಾಗಿ ಸಮಾನ ಸಾಮಾಜಿಕ ಆರ್ಥಿಕ ವ್ಯವಸ್ಥೆ ರೂಪುಗೊಳ್ಳಬಹುದು.

*

## V ಜನಸಂಖ್ಯೆಯ ಬೆಳವಣಿಗೆ

ಜನಸಂಖ್ಯೆಯ ಬೆಳವಣಿಗೆ ಎಂದರೆ ಇಲ್ಲಿ ಜನಸಂಖ್ಯೆಯ ಏರಿಕೆ ಮಾತ್ರವಲ್ಲ. ಜನಸಂಖ್ಯೆಯ ಧನಾತ್ಮಕ ಏಕದಿಷ್ಟ ಬದಲಾವಣೆ ಮಾತ್ರವಲ್ಲದೆ ಅದರ ಇಳಿತಾಯ, ಏರಿಳಿತಗಳು, ತೀವ್ರ ಬದಲಾವಣೆಗಳು ಮುಂತಾದವನ್ನೂ ಈ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಮಾಡಲಾಗುತ್ತದೆ. ಜನಸಂಖ್ಯೆಯ ಸಹಜ ಏರಿಕೆ (ಜನನ ಕಳೆ ಮರಣ), ನಿವ್ವಳ ವಲಸೆ (ವಲಸೆ ಬಂದವರು ಕಳೆ ವಲಸೆ ಹೋದವರು)-ಇವುಗಳ ಮೊತ್ತವೇ ಜನಸಂಖ್ಯೆಯ ಬೆಳವಣಿಗೆ. ಈ ಶಿಲ್ಕುಗಳಲ್ಲಿ ಒಂದೊಂದೂ ಋಣಾತ್ಮಕವಾಗಿರುವುದು ಸಾಧ್ಯ. ನಿವ್ವಳ ವಲಸೆ ಇಲ್ಲದಾಗ ಅಥವಾ ಗಣನೆಗೆ ತೆಗೆದುಕೊಳ್ಳದಷ್ಟು ಅಲ್ಪವಾಗಿದ್ದಾಗ, ಸಹಜ ಏರಿಕೆಗೆ ಜನಸಂಖ್ಯೆಯ ಏರಿಕೆ ಸಮವಾಗಿರುತ್ತದೆ.

ಕಾಲ ಮತ್ತು ದೇಶಗಳಲ್ಲಿ ಬೆಳವಣಿಗೆಯ ದರಗಳನ್ನು ಹೋಲಿಸುವುದರ ಮೂಲಕ ಜನಸಂಖ್ಯಾ ಬೆಳವಣಿಗೆಯ ಅಧ್ಯಯನ ಮಾಡಬಲಾಗುತ್ತದೆ. ಉದಾಹರಣೆಗೆ, ವಾರ್ಷಿಕ ಅಥವಾ ಸರಾಸರಿ ವಾರ್ಷಿಕ ಬೆಳವಣಿಗೆಯ ದರಗಳನ್ನು ಹೋಲಿಸಬಹುದು. ಹೀಗೆ ಮಾಡಬೇಕಾದರೆ, ಸುವ್ಯವಸ್ಥಿತ ಕಾಲಾನುಕ್ರಮಗಳನ್ನು (ಟೈಮ್ ಸೀಕ್ವೆನ್ಸ್) ಏರುಪೇರು ಮಾಡುವ ಯಾವ ಘಟನೆಗಳೂ ಸಂಭವಿಸಿರಬಾರದು. ಒಂದು ಪ್ರದೇಶದ ಆಕ್ರಮಣ, ಅಲ್ಪಸಂಖ್ಯಾತರ ನಿವಾರಣೆ ಅಥವಾ ಸ್ಥಾನಾಂತರಣ, ಕ್ಷಾಮಡಾಮರಗಳು-ಇವು ಇಂಥ ಘಟನೆಗಳು, ಇವುಗಳಿಂದ ಜನಸಂಖ್ಯೆಗೆ ಲಾಭ ಅಥವಾ ನಷ್ಟ ಉಂಟಾಗುತ್ತದೆ. ಇವು ಸಂಭವಿಸಿದ ಬಳಿಕ ಜನಸಂಖ್ಯೆಯ ಲಾಭನಷ್ಟ ತಃಖ್ತೆಯನ್ನು ತಯಾರಿಸಬಹುದು. ಆದರೆ ಇಂಥ ಘಟನೆಗಳಿಂದ ಜನಸಂಖ್ಯೆಯಲ್ಲಾದ ಬದಲಾವಣೆಗಳನ್ನೂ ಇತರ ಎಲ್ಲ ಬಗೆಯ ಬದಲಾವಣೆಗಳನ್ನೂ ಬೇರ್ಪಡಿಸುವುದು ಸಾಧ್ಯವಿಲ್ಲ. ಒಂದು ದೀರ್ಘ ಇತಿಹಾಸದ ವೀಕ್ಷಣೆಯಲ್ಲಿ ಎಲ್ಲ ಸಮಾಜಗಳೂ ಬಿಕ್ಕಟ್ಟುಗಳಿಗೆ ಒಳಗಾಗಿರುವುದನ್ನು ಕಾಣಬಹುದು. ಅಲ್ಪಕಾಲದಲ್ಲಿ ಅತಿಯೆನಿಸುವ ಮರಣಗಳು ದೀರ್ಘಕಾಲದಲ್ಲಿ ಒಂದು ಸಮಾಜದ ಪ್ರಸಾಮಾನ್ಯ ನಷ್ಟಸಂಭವಗಳೆಂದೇ ಪರಿಗಣಿತವಾಗುತ್ತವೆ. ಯುದ್ಧನಷ್ಟವೆಂದರೆ ಉದ್ದೇಶಪೂರ್ವಕ ಸೈನಿಕ ಕಾರ್ಯಾಚರಣೆಯಿಂದ ಸಂಭವಿಸಿದ ಮರಣಗಳು ಮಾತ್ರವೇ ಅಲ್ಲ; ಆಹಾರ, ವಸತಿ, ವೈದ್ಯ ಮುಂತಾದ ಸೌಲಭ್ಯಗಳ ಅಭಾವದಿಂದ ಸಂಭವಿಸಿದ ಹೆಚ್ಚಿನ ಮರಣಗಳೂ ಸೇನಾಜಮಾವಣೆ, ಸೆರೆ, ಭಾವೀ ತಂದೆಯರ ಮರಣ ಮುಂತಾದವುಗಳಿಂದ ಜನನದಲ್ಲಿ ಸಂಭವಿಸಿದ ಕೊರತೆಯೂ ಇದರಲ್ಲಿ ಸೇರುತ್ತವೆ. ಇಂಥ ನಷ್ಟಗಳನ್ನು ಎಣಿಸುವುದಕ್ಕಾಗುವುದಿಲ್ಲ.

ಜನಸಂಖ್ಯೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಎರಡು ಬಗೆಯ ದರಗಳನ್ನು ಬಳಸಲಾಗುತ್ತದೆ. ಪ್ರತಿ 1,000ಕ್ಕೆ ವರ್ಷಕ್ಕೆ ಇಷ್ಟು-ಎಂಬುದು ಘಾತೀಯ ದರ (ಎಕ್ಸ್‌ಪೊನೆನ್ಷಿಯಲ್ ರೇಟ್). ಇತರ ಜನಸಂಖ್ಯಾತ್ಮಕ ಅಳತೆಗಳೊಂದಿಗೆ ಹೋಲಿಸುವಾಗ ಘಾತೀಯ ದರಗಳನ್ನು ಬಳಸುತ್ತೇವೆ. ವರ್ಷಕ್ಕೆ ಶೇಕಡ ಇಷ್ಟು ಎಂಬುದು ಚಕ್ರಬಡ್ಡಿದರ (ಕಾಂಪೌಂಡ್ ಇಂಟರೆಸ್ಟ್ ರೇಟ್). ಜನಸಂಖ್ಯಾತ್ಮಕವಲ್ಲದ ಪರಿಮಾಣಗಳೊಂದಿಗೆ ಹೋಲಿಸುವಾಗ (ಉದಾಹರಣೆ: ವರಮಾನ) ಚಕ್ರಬಡ್ಡಿದರಗಳನ್ನು ಬಳಸುತ್ತೇವೆ. ಈ ದರಗಳ ಏಕಮಾನಗಳಲ್ಲಿ ಸ್ವಲ್ಪ ವ್ಯತ್ಯಾಸ ಇರುತ್ತದೆ. ವರ್ಷಮಧ್ಯದ ಜನಸಂಖ್ಯೆಗೆ ಅಥವಾ ಆ ಅವಧಿಯ ಮಾಧ್ಯಕಕ್ಕೆ ಸಂಬಂಧಿಸಿದ್ದು ಘಾತೀಯ ದರ. ಆದರೆ ಪ್ರತಿವರ್ಷದ ಆರಂಭದಲ್ಲಿದ್ದ ಜನಸಂಖ್ಯೆಗೆ ಸಂಬಂಧಿಸಿದ್ದು ಚಕ್ರಬಡ್ಡಿ ದರ.

**ಜಗತ್ತಿನ ಜನಸಂಖ್ಯೆಯ ಬೆಳವಣಿಗೆ :** ಕಳೆದ ನೂರಾರು ಸಾವಿರ ವರ್ಷಗಳ ಮಾನವ ಇತಿಹಾಸದ ದೃಷ್ಟಿಯಿಂದ ನೋಡಿದಾಗ, ಪ್ರಪಂಚದ ಜನಸಂಖ್ಯೆ ಆರಂಭದಲ್ಲಿ ಬಹುಶಃ ಬಹಳ ಅಲ್ಪವಾಗಿತ್ತೆಂದೂ ವಾರ್ಷಿಕವಾಗಿ ಬಹುಶಃ ಶೇಕಡ 0.01-0.02ರ ದರದಲ್ಲಿ ಇದು ಬೆಳೆದು ಇಂದು ಅಗಾಧವಾಗಿದೆಯೆಂದೂ ಹೇಳಬಹುದು. ಆದರೆ ಇಷ್ಟು ಅಲ್ಪ ದರದಲ್ಲೇ ಜನಸಂಖ್ಯೆ ಬೆಳೆದಿರಬಹುದೆಂದು ಭಾವಿಸುವುದು ಸರಿಯಲ್ಲ. ವಿವಿಧ ಕಾಲಗಳಲ್ಲಿ ವಿವಿಧ ಪ್ರದೇಶಗಳಲ್ಲಿ ಜನಸಂಖ್ಯೆಗಳು ತೀವ್ರವಾಗಿ ಏರಿಳಿದಿರಬಹುದು. ಆದರೆ ಕೆಲವು ಪರ್ವಕಾಲಗಳಲ್ಲಿ ಜನಸಂಖ್ಯೆಯ ಇಳಿಕೆಗಿಂತ ಏರಿಕೆ ಗಮನಾರ್ಹವಾಗಿ ಅಧಿಕವಾಗಿರ ಬಹುದು. ಪ್ರಾಚೀನ ಶಿಲಾಸಂಸ್ಕೃತಿಯ ಕಾಲದಲ್ಲಿ ಭೂಮಿಯ ಮೇಲೆ ಬದುಕು ಸಾಗಿಸುತ್ತಿದ್ದ ಜನರ ಸಂಖ್ಯೆ ಬಹುಶಃ ಕೆಲವೇ ಲಕ್ಷವಿದ್ದಿರಬೇಕು. ಆದರೆ ನವಶಿಲಾಯುಗದ ತಂತ್ರಜ್ಞತೆ ಮತ್ತು ಸಮಾಜ ವ್ಯವಸ್ಥೆಯಲ್ಲಿ ಜನ ತಕ್ಕಮಟ್ಟಿಗೆ ಅಧಿಕವಾಗಿದ್ದಿರಬೇಕು. ಯುಫ್ರೇಟಿಸ್, ನೈಲ್, ಸಿಂಧೂ ಮತ್ತು ಹಳದಿ ನದಿ ಪ್ರದೇಶಗಳಲ್ಲಿ ಬೆಳೆದಿದ್ದ ಆರಂಭದ ಮುಖ್ಯ ಲೋಹ ನಾಗರಿಕತೆಗಳ ಕಾಲದಲ್ಲಿ ಪ್ರತಿಯೊಂದು ನಾಗರಿಕತೆಯೂ ಲಕ್ಷಾಂತರ ಜನರಿಗೆ ಆಧಾರವಾಗಿದ್ದಿರಬಹುದು. ಅವರು ಆಕ್ರಮಣಗಳಿಗೆ ತುತ್ತಾಗುವ ಅಪಾಯವಿದ್ದೇ ಇತ್ತು. ಶಾಂತಿ ಭದ್ರತೆಗಳ ಸ್ಥಾಪನೆಯಾಗಿದ್ದ ಕಾಲದಲ್ಲಿ, ಅಂದರೆ ಚೀನದ ಹ್ಯಾನ್ ಸಾಮ್ರಾಜ್ಯ, ಭಾರತದಲ್ಲಿ ಅಶೋಕನ ಸಾಮ್ರಾಜ್ಯ, ಮೆಡಿಟರೇನಿಯನ್ ಸಮುದ್ರದ ಸುತ್ತ ಹಬ್ಬಿದ್ದ ರೋಮನ್ ಸಾಮ್ರಾಜ್ಯ ಇವುಗಳಲ್ಲಿ ಶಾಂತಿಭದ್ರತೆಗಳು ನೆಲೆಸಿದ್ದಾಗ 5-10ಕೋಟಿಗಳಷ್ಟು ಜನರಿದ್ದರು. ಪ್ರಸಕ್ತಶಕದ ಆರಂಭದಲ್ಲಿ ಜಗತ್ತಿನ ಜನಸಂಖ್ಯೆ ಸುಮಾರು 30 ಕೋಟಿಯಿತ್ತೆಂದು ಅಂದಾಜು ಮಾಡಲಾಗಿದೆ. ಸಾಮ್ರಾಜ್ಯ ಉರುಳಿದಾಗ ಜನಸಂಖ್ಯೆಯೂ ಇಳಿಯುತ್ತಿತ್ತು.

ಮಧ್ಯ ಅಮೆರಿಕ, ಮೆಸೊಪೊಟೇಮಿಯ ಮತ್ತು ಆಗ್ನೇಯ ಏಷ್ಯಗಳ ನಾಗರಿಕತೆಗಳೂ ಈ ರೀತಿ ಬೆಳೆದು ಅಳಿದಾಗ ಜನಸಂಖ್ಯೆಗಳು ಕ್ಷೀಣಿಸಿವೆ. ಆದರೆ ಯುರೋಪ್, ಚೀನಗಳ ಜನಸಂಖ್ಯೆಯನ್ನು ಕುರಿತ ಅಧ್ಯಯನ ನಡೆದಿರುವಂತೆ ಪ್ರಪಂಚದ ಇತರ ಭಾಗಗಳ ಜನಸಂಖ್ಯೆಯ ಅಧ್ಯಯನವಾಗಿಲ್ಲ. ಯುರೋಪ್-ಚೀನಗಳ ಜನಸಂಖ್ಯೆಗಳ ಗತಿಗಳ ಬಗ್ಗೆ ತಕ್ಕಮಟ್ಟಿನ ಮಾಹಿತಿ ನಮಗೆ ದೊರೆಯುತ್ತದೆ. ಪ್ರ.ಶ. 1ರಲ್ಲಿ ಯುರೋಪಿನ ಜನಸಂಖ್ಯೆ ಸುಮಾರು 3.3 ಕೋಟಿ. ಪ್ರ.ಶ. 600ರ ಹೊತ್ತಿಗೆ ಇದು 1.8 ಕೋಟಿಗೆ ಇಳಿಯಿತು ; 13ನೆಯ ಶತಮಾನದ ಕೊನೆಯ ಹೊತ್ತಿಗೆ 7 ಕೋಟಿಗೆ ಏರಿತು. ಕಪ್ಪು ಮೃತ್ಯು ಎಂದು ಪ್ರಸಿದ್ಧವಾದ ಪ್ಲೇಗ್ ಜಾಡ್ಯದಿಂದ ಬಹುಶಃ ಸುಮಾರು 4 ಕೋಟಿಗೆ ಇಳಿಯಿತು. ಪ್ರಶ.2ರಲ್ಲಿ ಚೀನದ ಜನಸಂಖ್ಯೆ 7.1 ಕೋಟಿಯಿತ್ತೆಂಬುದು ಒಂದು ಅಂದಾಜು. 705ರ ಹೊತ್ತಿಗೆ ಇದು 3.7 ಕೋಟಿಗೂ, 13ನೆಯ ಶತಮಾನದ ವೇಳೆಗೆ 12 ಕೋಟಿಗೂ ಏರಿತು. ಮುಂದಿನ ಶತಮಾನದಲ್ಲಿ 6 ಕೋಟಿಗೆ ತಗ್ಗಿತು. ಯುರೋಪ್-ಚೀನಗಳ ಜನಸಂಖ್ಯೆಯ ಏರಿಳಿತಗಳು ಹೆಚ್ಚು-ಕಡಿಮೆ ಏಕಕಾಲಗಳಲ್ಲಿ ಸಂಭವಿಸಿದುವೆಂಬುದು ಕುತೂಹಲಕರ. ಈ ಕಾಲದಲ್ಲಿ ಪ್ರಪಂಚದ ಇತರ ಭಾಗಗಳ ಈ ಜನಸಂಖ್ಯೆಗಳಲ್ಲಾದ ಬದಲಾವಣೆಗಳ ಬಗ್ಗೆ ಹೆಚ್ಚು ಸಂಗತಿ ನಮಗೆ ತಿಳಿದುಬಂದಿಲ್ಲ. ಆದ್ದರಿಂದ ಇಡೀ ಪ್ರಪಂಚದಲ್ಲಿ ಈ ಕಾಲದಲ್ಲಿ ಜನಸಂಖ್ಯೆಯಲ್ಲಿ ಆದ ವ್ಯತ್ಯಾಸಗಳ ಬಗ್ಗೆ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. 1650ರ ವೇಳೆಗೆ ಜಗತ್ತಿನ ಜನಸಂಖ್ಯೆ 54.5ಕೋಟಿಯಾಗಿತ್ತೆಂದೂ 1750ರ ವೇಳೆಗೆ 72.8 ಕೋಟಿಗೆ ಏರಿತೆಂದೂ ಕೆಲವರು ಅಂದಾಜು ಮಾಡಿದ್ದಾರೆ. ಪ್ರಸಕ್ತಶಕದ ಆರಂಭದ ಕೆಲವು ಶತಮಾನಗಳಲ್ಲೂ 14ನೆಯ ಶತಮಾನದಲ್ಲೂ ಜನಸಂಖ್ಯೆ ತೀವ್ರವಾಗಿ ಇಳಿದಿರಬಹುದೆಂದು ಊಹಿಸಲಾಗಿದೆ.

19ನೆಯ ಶತಮಾನದ ದ್ವಿತೀಯಾರ್ಧದವರೆಗೂ ಪ್ರಪಂಚದ ಜನಸಂಖ್ಯೆಯ ಬೆಳವಣಿಗೆಯ ವೇಗ ಪ್ರತಿ ಅರ್ಧ ಶತಮಾನದಲ್ಲೂ ನಿಧಾನವಾಗಿ ವರ್ಧಿಸುತ್ತಿದ್ದು, ಅನಂತರ ತೀವ್ರವಾಗಿ ಏರತೊಡಗಿತು. 19ನೆಯ ಶತಮಾನದಲ್ಲಿ ಮಂದಗೊಂಡಿದ್ದ ಏಷ್ಯದ ಜನಸಂಖ್ಯೆಯ ಏರಿಕೆಯ ವೇಗ 20ನೆಯ ಶತಮಾನದಲ್ಲಿ ವಿಶೇಷವಾಗಿ ಅಧಿಕವಾಯಿತು. ಯುರೋಪಿನ ಪ್ರವೃತ್ತಿ ತದ್ವಿರುದ್ಧ : 19ನೆಯ ಶತಮಾನದಲ್ಲಿ ಅದರ ಜನಸಂಖ್ಯೆಯ ಏರಿಕೆಯ ವೇಗ ಅಧಿಕವಾಗಿದ್ದು 20ನೆಯ ಶತಮಾನದಲ್ಲಿ ಮಂದವಾಯಿತು. ನೀಗ್ರೋ ಗುಲಾಮರ ವ್ಯಾಪಾರ ಬಿರುಸಿನಿಂದ ನಡೆಯುತ್ತಿದ್ದ ಕಾಲದಲ್ಲಿ ಆಫ್ರಿಕದ ಜನಸಂಖ್ಯೆ ಬಹುಶಃ ಕ್ಷೀಣಿಸುತ್ತಿತ್ತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಯತ್ನಗಳಿಂದ ಅದನ್ನು ತಡೆಗಟ್ಟಿದ ಮೇಲೆ ಅಲ್ಲಿಯ ಜನಸಂಖ್ಯೆ ತೀವ್ರವಾಗಿ ಏರುತ್ತಿದೆ. ಉತ್ತರ ಅಮೆರಿಕದಲ್ಲೂ ಓಷಿಯಾನಿಯದಲ್ಲೂ ಇದ್ದ ಸ್ಥಳೀಯ ಜನಸಂಖ್ಯೆ ಐರೋಪ್ಯ ವಲಸೆಗಾರರ ಪ್ರವಾಹದಿಂದಾಗಿ ಕೊಚ್ಚಿಯೇ ಹೋಯಿತು.

**ಕೋಷ್ಟಕ – 1**

**1750–1970ರಲ್ಲಿ ಪ್ರಪಂಚದ ಜನಸಂಖ್ಯೆ ಅಂದಾಜುಗಳು (ಕೋಟಿಗಳಲ್ಲಿ)**

| ವರ್ಷ | ಏಷ್ಯ | ಯುರೋಪು | ಆಫ್ರಿಕ | ಉತ್ತರ ಅಮೆರಿಕ | ಲ್ಯಾಟಿನ್ ಅಮೆರಿಕ | ಓಷಿಯಾನಿಯ | ಪ್ರಪಂಚದ ಒಟ್ಟು ಜನಸಂಖ್ಯೆ |
|---|---|---|---|---|---|---|---|
| 1750 | 47.9 | 14.0 | 9.5 | 0.13 | 1.11 | 0.2 | 72.8 |
| 1800 | 60.2 | 18.7 | 9.0 | 0.57 | 1.89 | 0.2 | 90.6 |
| 1850 | 74.9 | 26.6 | 9.5 | 2.60 | 3.30 | 0.2 | 117.1 |
| 1900 | 93.7 | 40.1 | 12.0 | 8.10 | 6.30 | 0.6 | 160.8 |
| 1910 | 101.8 | 45.0 | 13.5 | 10.00 | 7.50 | 0.75 | 178.6 |
| 1920 | 104.4 | 46.1 | 14.3 | 11.50 | 9.00 | 0.88 | 186.2 |
| 1930 | 114.9 | 50.5 | 16.4 | 13.40 | 10.70 | 1.04 | 206.9 |
| 1940 | 127.8 | 54.1 | 19.1 | 14.40 | 13.00 | 1.15 | 229.6 |
| 1950 | 141.7 | 53.6 | 22.2 | 16.60 | 16.20 | 1.32 | 251.6 |
| 1960 | 170.6 | 59.3 | 27.3 | 19.80 | 21.20 | 1.63 | 299.8 |
| 1970 | 210.4 | 71.1 | 35.4 | 22.90 | 29.10 | 2.00 | 370.9 |

**ಕೋಷ್ಟಕ – 2**

**1750–1960ರಲ್ಲಿ ಪ್ರಪಂಚದ ಜನಸಂಖ್ಯೆ ಬೆಳವಣಿಗೆಯ ಸರಾಸರಿ ವಾರ್ಷಿಕ ಶೇಕಡ ದರಗಳು**

| ವರ್ಷ | ಏಷ್ಯ | ಯುರೋಪು | ಆಫ್ರಿಕ | ಉತ್ತರ ಅಮೆರಿಕ | ಲ್ಯಾಟಿನ್ ಅಮೆರಿಕ | ಓಷಿಯಾನಿಯ | ಪ್ರಪಂಚದ ಒಟ್ಟು ಜನಸಂಖ್ಯೆ |
|---|---|---|---|---|---|---|---|
| 1750–1800 | 0.5 | 0.6 | – | 3.0 | 1.1 | – | 0.4 |
| 1800–1850 | 0.4 | 0.7 | – | 3.1 | 1.1 | – | 0.5 |
| 1850–1900 | 0.4 | 0.8 | 0.5 | 2.3 | 1.3 | 1.3 | 0.6 |
| 1900–1950 | 0.8 | 0.6 | 1.2 | 1.4 | 1.9 | 1.6 | 0.9 |
| 1900–1910 | 0.8 | 1.2 | 1.2 | 2.1 | 1.8 | 2.3 | 1.0 |
| 1910–1920 | 0.3 | 0.2 | 0.6 | 1.4 | 1.8 | 1.6 | 0.4 |
| 1920–1930 | 1.0 | 0.9 | 1.4 | 1.5 | 1.8 | 1.7 | 1.1 |
| 1930–1940 | 1.1 | 0.7 | 1.5 | 0.7 | 2.0 | 1.0 | 1.1 |
| 1940–1950 | 1.0 | –0.1 | 1.5 | 1.4 | 2.2 | 1.4 | 0.9 |
| 1950–1960 | 1.9 | 1.0 | 2.1 | 1.8 | 2.7 | 2.1 | 1.8 |

ವಲಸೆಗಾರರ ಸಂಖ್ಯೆ ತೀವ್ರವಾಗಿ ಏರಿತು. ಈಗ ಅದರ ಜನಸಂಖ್ಯೆಯ ಬೆಳವಣಿಗೆಯ ದರವೂ ಇಳಿಯುತ್ತಿದೆ. ದಕ್ಷಿಣ ಅಮೆರಿಕ ಖಂಡ ಸ್ಪ್ಯಾನಿಷರ ಆಕ್ರಮಣಕ್ಕೆ ಒಳಗಾದಾಗ ಅಲ್ಲಿಯ ಸ್ಥಳೀಯ ಜನರ ಸಂಖ್ಯೆ ಬಹಳ ಕ್ಷೀಣಿಸಿತು. ಸ್ಥಳೀಯ ಹಾಗೂ ವಲಸೆಗಾರ ಬಿಳಿಯರ ಸಂಕರದಿಂದ ಹೊಸ ತಳಿಯೊಂದು ಬೆಳೆಯತೊಡಗಿತು. ಬಿಳಿಯರೂ ಸಂಖ್ಯೆಯಲ್ಲಿ ಅಧಿಕವಾಗುತ್ತಿದ್ದಾರೆ.

20ನೆಯ ಶತಮಾನದ ಆದಿಯ ವೇಳೆಗೆ ಪ್ರಪಂಚದ ಜನಸಂಖ್ಯೆಯ ಏರಿಕೆಯ ವೇಗ ತೀವ್ರತರವಾಗಿತ್ತು. ಎರಡು ಮಹಾಯುದ್ಧಗಳು, ಇವುಗಳ ನಡುವಣ ಕಾಲದಲ್ಲಿ ವಿಶ್ವದಲ್ಲೆಲ್ಲ ಹಬ್ಬಿದ ಇನ್‌ಫ್ಲೂಯೆಂಜ಼ ವ್ಯಾಧಿ ಮತ್ತು ಆರ್ಥಿಕ ಮುಗ್ಗಟ್ಟು-ಇವು ಕೂಡ ಈ ಏರಿಕೆಯನ್ನು ತಡೆಗಟ್ಟಲಿಲ್ಲ. 1950ರ ಅನಂತರವಂತೂ ಯಾವ ಅಡೆತಡೆಯೂ ಇಲ್ಲದೆ

ಇದರ ವೇಗ ಇನ್ನೂ ವರ್ಧಿಸಿದೆ. 1750–1970ರಲ್ಲಿ ವಿವಿಧ ಖಂಡಗಳ ಮತ್ತು ಇಡೀ ಜಗತ್ತಿನ ಜನಸಂಖ್ಯೆಗಳ ಅಂದಾಜುಗಳನ್ನು ಕೋಷ್ಟಕ 1ರಲ್ಲೂ ಈ ಅವಧಿಯಲ್ಲಿ ಅವುಗಳ ವಾರ್ಷಿಕ ಜನಸಂಖ್ಯೆಯ ಏರಿಕೆ ದರವನ್ನು ಕೋಷ್ಟಕ 2ರಲ್ಲೂ 1950–60ರಲ್ಲಿ ಪ್ರಪಂಚದ ವಿವಿಧ ರಾಷ್ಟ್ರಗಳ ಜನಸಂಖ್ಯೆ, ವಿಸ್ತೀರ್ಣ, ಜನಸಂಖ್ಯೆಗಳ ಏರಿಕೆ, ವಾರ್ಷಿಕ ಏರಿಕೆ ದರ ಇವನ್ನು ಕೋಷ್ಟಕ 3ರಲ್ಲೂ ತೋರಿಸಿದೆ.

ಪ್ರಪಂಚದ ಜನಸಂಖ್ಯೆ ದ್ವಿಗುಣಗೊಳ್ಳಲು ಇನ್ನೂರು ವರ್ಷಗಳಾದುವು. ಅಂದರೆ 1650ರಲ್ಲಿ ಸುಮಾರು54.5 ಕೋಟಿ ಇದ್ದ ಜನಸಂಖ್ಯೆ 1850ರ ವೇಳೆಗೆ 117.1 ಕೋಟಿ ಮುಟ್ಟಿತು ಎಂದು ಲೆಕ್ಕ ಹಾಕಲಾಗಿದೆ. ಮುಂದಿನ ಒಂದು ಶತಮಾನದಲ್ಲಿ (1850–1950) ಅದು 251.6 ಕೋಟಿಗೆ ಏರಿತು. 20ನೆಯ ಶತಮಾನದ ಕೊನೆಯ ವೇಳೆಗೆ ಇದು ಸುಮರು 650 ಕೋಟಿ ಮುಟ್ಟಬಹುದೆಂದು ವಿಶ್ವಸಂಸ್ಥೆಯ ಜನಸಂಖ್ಯಾ ಅಧ್ಯಯನ ಸಂಸ್ಥೆಯ ಒಂದು ಅಂದಾಜು. ಎಂದರೆ 35 ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆ ಪುನಃ ದ್ವಿಗುಣಗೊಂಡೀತೆಂಬುದು ಭೀತಿ. ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಪ್ರತಿ ಸಾವಿರಕ್ಕೆ 15–20ರ ವರೆಗೆ ಜನನದರ ಇದ್ದರೆ, ಅಭಿವೃದ್ಧಿಶೀಲ ದೇಶಗಳಲ್ಲಿ ಅದು ಪ್ರತಿ ಸಾವಿರಕ್ಕೆ 30–40ರವರೆಗೆ ಇದೆ. ಆದರೆ ಮರಣ ದರ ಎಲ್ಲ ದೇಶಗಳಲ್ಲೂ ಪ್ರತಿ ಸಾವಿರಕ್ಕೆ ಸುಮಾರು 10–15. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜನಸಂಖ್ಯೆ ವರ್ಷಂಪ್ರತಿ ಶೇಕಡ 0.5–1ರಂತೆ ಬೆಳೆಯುತ್ತಿದ್ದರೆ, ಹಿಂದುಳಿದ ದೇಶಗಳಲ್ಲಿ ಶೇ. 2–3 ರಂತೆ ಬೆಳೆಯುತ್ತಿದೆ. ಶೇ. 3ರಷ್ಟು ಬೆಳವಣಿಗೆಯಾದರೆ ಜನಸಂಖ್ಯೆ 25 ವರ್ಷಗಳಲ್ಲಿ ಎರಡರಷ್ಟಾಗುತ್ತದೆ.

ಭಾರತದ ಜನಸಂಖ್ಯೆಯ ಬೆಳವಣಿಗೆ: ಭಾರತದಲ್ಲಿ 20ನೆಯ ಶತಮಾನದಲ್ಲಿ ಆದ ಜನಸಂಖ್ಯೆ ಬೆಳವಣಿಗೆಯನ್ನು ಕೋಷ್ಟಕ 3ರಲ್ಲಿ ಕೊಡಲಾಗಿದೆ.

**ಕೋಷ್ಟಕ – 3**

| ವರ್ಷ | ಭಾರತದ ಒಟ್ಟು ಜನಸಂಖ್ಯೆ | ಪ್ರತಿ ದಶಕದಲ್ಲೂ ಆಗಿರುವ ಬದಲಾವಣೆ | ಶೇಕಡವಾರು ಬದಲಾವಣೆ |
|---|---|---|---|
| 1901 | 23,83,96,237 | – | – |
| 1911 | 25,20,93,390 | + 1,36,97,063 | + 5.75 |
| 1921 | 25,13,21,213 | – 7,72,177 | – 0.31 |
| 1931 | 27,89,77,238 | + 2,76,56,025 | + 11.00 |
| 1941 | 31,86,60,580 | + 3,96,83,342 | + 14.22 |
| 1951 | 36,10,88,065 | + 4,24,27,485 | + 13.31 |
| 1961 | 43,92,34,771 | + 7,81,46,706 | + 21.51 |
| 1971 | 54,79,49,809 | + 10,87,15,038 | + 24.57 |
| 1981 | 683,329,000 | + 13,53,79,191 | + 24.7 |
| 1991 | 846,387,888 | + 16,30,58,888 | + 23.9 |
| 2001 | 1028,737,436 | + 18,23,49,548 | + 21.5 |
| 2011 | 1,210,193,422 | + 181455986 | + 17.6 |

ಭಾರತದ ಜನಸಂಖ್ಯೆ ಪ್ರಪಂಚದ ಒಟ್ಟು ಜನಸಂಖ್ಯೆಯ ಸುಮಾರು 1/7ರಷ್ಟು (14%). ವಿಸ್ತೀರ್ಣದಲ್ಲಿ ಪ್ರಪಂಚದ ದೇಶಗಳ ಪೈಕಿ ಭಾರತದ್ದು ಏಳನೆಯ ಸ್ಥಾನವಾದರೂ ಜನಸಂಖ್ಯೆಯಲ್ಲಿ ಅದರದು ಎರಡನೆಯ ಸ್ಥಾನ (ಚೀನ ಪ್ರಥಮ). (ಎನ್.ಪಿ.ಎಸ್.)

## VI ಜನಸಂಖ್ಯಾ ಅನುಗಣನೆ ಮತ್ತು ಮುನ್ಸೂಚನೆ

ವೈಜ್ಞಾನಿಕ ವಿವೇಚನೆಯಿಂದ ಕೆಲವು ಅಭಿಗೃಹೀತಗಳನ್ನು (ಅಸಂಪ್ಷನ್ಸ್) ನಿರೂಪಿಸಿ, ಅವುಗಳ ಆಧಾರದ ಮೇಲೆ ಒಂದು ದೇಶದ ಅಥವಾ ಪ್ರದೇಶದ ಭವಿಷ್ಯದ ಜನಸಂಖ್ಯೆಯನ್ನು ಅಂದಾಜು ಮಾಡುವುದು ಜನಸಂಖ್ಯಾ ಅನುಗಣನೆ (ಪ್ರೊಜೆಕ್ಷನ್). ಅಭಿಗೃಹೀತಗಳನ್ನು ನಿರೂಪಿಸುವಾಗ ಪ್ರಸ್ತುತದ ಫಲವಂತಿಕೆ ಪರಿಸ್ಥಿತಿ, ಮರಣಸಂಖ್ಯಾ ಪರಿಸ್ಥಿತಿ, ಜನವಲಸೆ ಪರಿಸ್ಥಿತಿ ಎಂಬ ಪ್ರಾಚಲಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಭವಿಷ್ಯದಲ್ಲಿ ಅವುಗಳ ಗತಿ ಹೇಗೆ ಇರಬಹುದೆಂಬುದನ್ನು ಪರಿಶೀಲಿಸುವುದು ಅಗತ್ಯ. ಇದಕ್ಕೆ ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳ ಬದಲಾವಣೆಗಳನ್ನೂ ಗಮನಿಸಬೇಕಾಗುತ್ತದೆ. (ಎಂ.ಎಸ್.ಎಂಯು.)

ಅನುಗಣನೆಗೂ ಮುನ್ಸೂಚನೆಗೂ (ಫೋರ್‌ಕ್ಯಾಸ್ಟ್) ವ್ಯತ್ಯಾಸವುಂಟು. ಒಂದು ವಿದ್ಯಮಾನದ ಮೇಲೆ ದತ್ತ ಪ್ರವೃತ್ತಿಗಳ ಪರಿಣಾಮಗಳೇನೆಂಬುದನ್ನು ತೋರಿಸುವುದು ಅನುಗಣನೆ. ಈ ಪ್ರವೃತ್ತಿಗಳು ಹೀಗೇ ಮುಂದುವರಿದರೆ ಆಗುವ ಪರಿಣಾಮವಿದು ಎಂಬುದು ಅನುಗಣನೆ. ಇವು ಸಂಭಾವ್ಯವೇ ಅಲ್ಲವೇ ಎಂಬುದು ಮುಖ್ಯವಲ್ಲ. ಪ್ರವೃತ್ತಿಗಳ ಅಥವಾ ಬದಲಾವಣೆಗಳ ಸಂಭಾವ್ಯವೆಂದು ನಿರ್ಧರಿಸಲಾದ ಪರಿಣಾಮ ಮುನ್ಸೂಚನೆಯೆನಿಸಿ ಕೊಳ್ಳುತ್ತದೆ. ಆದ್ದರಿಂದ ಮುನ್ಸೂಚನೆ ಹೆಚ್ಚು ಸಂಗತವೆನಿಸುತ್ತದೆ.

ಜನಸಂಖ್ಯಾ ಬೆಳವಣಿಗೆಯ ಗತಿವಿಜ್ಞಾನ ಒಂದು ಸಂಕೀರ್ಣ ವಿಷಯ. ಅದು ಸ್ವಯಂಪೂರ್ಣವಲ್ಲ. ಹಲವು ದಶಕಗಳ ಸರಣಿಯಲ್ಲಿ ಬೆಳವಣಿಗೆಯ ವಿಭವಗಳು (ಪೊಟೆನ್ಷಿಯಲ್ಸ್) ಜನಸಂಖ್ಯೆಯ ವಯೋಸಂಯೋಜನೆಯನ್ನು ಅವಲಂಬಿಸಿರುತ್ತವೆ. ಆದರೆ ಬೆಳವಣಿಗೆಯ ಕಾರಕಗಳಲ್ಲಿ ಬದಲಾವಣೆಯಾದಾಗ ವಯೋಸಂಯೋಜನೆಯಲ್ಲಿ ಬದಲಾವಣೆಗಳು ಸಂಭವಿಸುತ್ತವೆ. ಜನನ ದರದಲ್ಲಿ ಬದಲಾವಣೆಗಳು, ಸ್ವಲ್ಪಮಟ್ಟಿಗೆ ವಯೋನಿರ್ದಿಷ್ಟ ಮರಣ ಸಂಭವಗಳ ಸಾಪೇಕ್ಷ ವ್ಯತ್ಯಾಸಗಳು, ವಲಸೆಗಳು–ಇವೆಲ್ಲ ವಯೋಸಂಯೋಜನೆಗಳಲ್ಲಿ ಬದಲಾವಣೆಗಳನ್ನು ಉಂಟುಮಾಡುವುವು. ಸ್ಥೂಲ ಜನನ ದರಗಳೂ ಸ್ಥೂಲ ಮರಣ ದರಗಳೂ ಒಟ್ಟಿನಲ್ಲಿ ಫಲವಂತಿಕೆಯ ಮತ್ತು ಮರಣಸಂಖ್ಯೆಯ ಪ್ರವೃತ್ತಿಗಳನ್ನು ಸೂಚಿಸುತ್ತವೆ. ಇವೂ ತತ್ಫಲವಾಗಿ ಆದ ಸಹಜ ಬದಲಾವಣೆಗಳೂ ವಯೋಸಂಯೋಜನೆಯಲ್ಲಿ ವ್ಯತ್ಯಾಸಗಳನ್ನು ಉಂಟುಮಾಡುತ್ತವೆ. ಈ ದೃಷ್ಟಿಯಿಂದ ಇವನ್ನು ಅರ್ಥವಿಸಬೇಕು.

ಮರಣಸಂಖ್ಯೆಯಲ್ಲಿ ಇಳಿತವಾದರೆ ಅದರಿಂದ ಜನಸಂಖ್ಯೆಯ ಬೆಳವಣಿಗೆಯ ಮೇಲೆ ನೇರ ಪರಿಣಾಮ ಉಂಟಾಗುತ್ತದೆ. ಉನ್ನತ ಫಲವಂತಿಕೆ ಇರುವ ಜನಸಂಖ್ಯೆಗಳಲ್ಲಿ ಇದರ ಪ್ರಭಾವ ಬಲು ತೀವ್ರ. ಮರಣಸಂಭವದಲ್ಲಿ ಆದ ಬದಲಾವಣೆಯಿಂದ ಸ್ಥೂಲ ಮರಣದರದಲ್ಲಿ ವ್ಯತ್ಯಾಸ ಸಂಭವಿಸುತ್ತದೆ. ಆಫ್ರಿಕ, ಏಷ್ಯ, ಲ್ಯಾಟಿನ್ ಅಮೆರಿಕಗಳಲ್ಲಿ ಈಗ ಜನಸಂಖ್ಯೆಯ ಏರಿಕೆಯ ವೇಗವರ್ಧನಕ್ಕೆ ಇದು ಕಾರಣ.

ಫಲವಂತಿಕೆಯಲ್ಲಿ ಆದ ಬದಲಾವಣೆಯ ಪರಿಣಾಮ ಹಲವು ದಶಕಗಳವರೆಗೆ ಸಂಪೂರ್ಣವಾಗಿ ಗೊತ್ತಾಗುವುದಿಲ್ಲ. ಮಕ್ಕಳ ಸಂಖ್ಯೆಯಲ್ಲಿ ವ್ಯತ್ಯಾಸವಾದರೆ, ಅವರು ಸಂತಾನ ಪಡೆಯುವ ವಯಸ್ಸು ತಲಪಿದಾಗ ಜನನದರದ ಮೇಲೆ ತೀವ್ರ ಪರಿಣಾಮ ಉಂಟಾಗುತ್ತದೆ. ಇನ್ನೂ ದೀರ್ಘಕಾಲದಲ್ಲಿ ವೃದ್ಧರ ಪ್ರಮಾಣದಲ್ಲಿ ವ್ಯತ್ಯಾಸ ಉಂಟಾಗಿ ಸ್ಥೂಲ ಮರಣದರವೂ ವ್ಯತ್ಯಾಸವಾಗುತ್ತದೆ. ವೃದ್ಧರ ಪ್ರಮಾಣ ಅಧಿಕವಾದಾಗ, ಉತ್ತಮ ಆರೋಗ್ಯ ಪರಿಸ್ಥಿತಿಗಳಿದ್ದಾಗ್ಯೂ, ಮರಣದರ ಅಧಿಕವಾಗುರುತ್ತದೆ. ಯುರೋಪಿನ ದೇಶಗಳಲ್ಲಿ ಈ ಪ್ರವೃತ್ತಿಯನ್ನು ಕಾಣಬಹುದು.

ಜನಸಂಖ್ಯೆಯನ್ನು ಅನುಗಣಿಸುವಾಗ ಎದುರಾಗುವ ಜಟಿಲತೆಯೇನೆಂಬುದು ಮೇಲಣ ವಿವೇಚನೆಯಿಂದ ವ್ಯಕ್ತವಾಗುತ್ತದೆ. ಸಾಮಾಜಿಕ ಪರಿಸ್ಥಿತಿಗಳು, ಧೋರಣೆಗಳು ಮತ್ತು ಸಂಸ್ಕೃತಿ ಬದಲಾವಣೆಯಾದಾಗಲೂ ಫಲವಂತಿಕೆ, ಮರಣಸಂಖ್ಯೆ, ಮತ್ತು ವಲಸೆ ವ್ಯತ್ಯಾಸವಾಗುವುವೆಂಬುದನ್ನೂ ನೆನಪಿನಲ್ಲಿಡಬೇಕು.

ಜನಸಂಖ್ಯಾ ಅನುಗಣನೆ ಮೂರು ಬಗೆ : 1 ರಾಷ್ಟ್ರೀಯ ಜನಸಂಖ್ಯಾ ಅನುಗಣನೆ. ಒಂದು ರಾಷ್ಟ್ರದ ಜನಸಂಖ್ಯಾನುಗಣನೆಗೆ ಸಾಮಾನ್ಯವಾಗಿ ಹೆಚ್ಚು ಅಂಕಿ–ಅಂಶಗಳು ದೊರೆಯುತ್ತವೆ. ವಿದೇಶಗಳಿಗೆ ಹೋಗುವ ಹಾಗೂ ಅಲ್ಲಿಂದ ಬರುವ ವಲಸೆಗಾರರ ಸಂಖ್ಯೆ ಸಾಮಾನ್ಯವಾಗಿ ಹೆಚ್ಚು ಇರುವುದಿಲ್ಲವಾದ್ದರಿಂದ ಈ ಅನುಗಣನೆಗಳನ್ನು ಸಿದ್ಧಪಡಿಸುವುದು ಅಷ್ಟರಮಟ್ಟಿಗೆ ಸುಲಭವಾಗುತ್ತದೆ. 2 ಪ್ರಾದೇಶಿಕ ಜನಸಂಖ್ಯಾನುಗಣನೆ. ಒಂದು ರಾಷ್ಟ್ರದೊಳಗಿನ ನಗರ, ಪಟ್ಟಣ, ಹಳ್ಳಿ, ಪ್ರಾಂತ್ಯ ಮುಂತಾದವುಗಳ ಜನಸಂಖ್ಯಾನುಗಣನೆಗಳನ್ನು ತಯಾರಿಸಲು ಆಯಾ ಪ್ರದೇಶಗಳ ಅಂಕಿಅಂಶಗಳು ಬೇಕಾಗುತ್ತವೆ. ಇವು ದೊರೆಯುವುದು ಸುಲಭವಲ್ಲ. ಅಲ್ಲದೆ ಆಂತರಿಕವಾಗಿ ವಲಸೆಗಳು ಹೆಚ್ಚಾಗಿರುವುದುಂಟು. 3 ಜನಸಂಖ್ಯಾ ವಿಭಾಗಗಳ ಅನುಗಣನೆ. ಅನೇಕ ಕಡೆ ನಮಗೆ ಒಟ್ಟು ಜನಸಂಖ್ಯೆಯ ಅನುಗಣನೆಯ ಅಗತ್ಯ ಇರುವುದಿಲ್ಲ; ಜನಸಂಖ್ಯೆಯ ಒಂದು ಭಾಗವನ್ನು ಮಾತ್ರ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ವಿದ್ಯಾಖಾತೆಯಲ್ಲಿಯ ಯೋಜನೆಗಳನ್ನು ರೂಪಿಸಲು ಶಾಲಾಮಕ್ಕಳ ಸಂಖ್ಯೆಯ ಅನುಗಣನೆ ಮಾತ್ರ ಅಗತ್ಯ; ಉದ್ಯೋಗ ಯೋಜನೆಗೆ ಸಕ್ರಿಯರಾದ ಕೆಲಸಗಾರರ ಸಂಖ್ಯೆಯ ಅನುಗಣನೆ ಅಗತ್ಯ.

**ಅನುಗಣನೆಯ ವಿಧಾನಗಳು :** ಜನಸಂಖ್ಯಾನುಗಣನೆಗಳನ್ನು ಸಿದ್ಧಗೊಳಿಸುವ ವಿಧಾನಗಳನ್ನು ಮುಂದೆ ವಿವೇಚಿಸಿದೆ. 1 ಆಲೇಖ ವಿಧಾನ (ಗ್ರ್ಯಾಫಿಕ್ ಮೆಥಡ್); ಇದು ಅತ್ಯಂತ ಸುಲಭವಾದದ್ದು. ಹಲವು ನಿರ್ದಿಷ್ಟ ವರ್ಷಗಳಲ್ಲಿದ್ದ ಜನಸಂಖ್ಯೆಗಳು ತಿಳಿದಿದ್ದರೆ ಅವನ್ನು ಆಲೇಖ ರಚಿಸಿ, ಜನಸಂಖ್ಯೆಯ ಆ ರೇಖೆಯನ್ನು ಭವಿಷ್ಯ ವರ್ಷಗಳಿಗೆ ಮುಂದುವರಿಸಿ, ಬರಲಿರುವ ಯಾವುದೇ ವರ್ಷದ (ಆಲೇಖದ ಪರಿಮಿತಿಯೊಳಗೆ) ನಿರೀಕ್ಷಿತ ಜನಸಂಖ್ಯೆಯನ್ನು ಅರಿಯಬಹುದು. ಈ ವಿಧಾನ ಬಹಳ ಸ್ಥೂಲವಾದದ್ದು. ಇದು ವ್ಯಕ್ತಿನಿಷ್ಠಾತ್ಮಕವಾದ್ದು. ಅಲ್ಲದೆ ಜನಸಂಖ್ಯೆಯ ವಯೋಸಂಯೋಜನೆ, ಲಿಂಗ ಸಂಯೋಜನೆ ಮುಂತಾದವನ್ನು ಅರಿಯುವುದು ಈ ವಿಧಾನದಿಂದ ಸಾಧ್ಯವಿಲ್ಲ.

**2 ಗಣಿತವಿಧಾನ (ಮ್ಯಾಥಮ್ಯಾಟಿಕಲ್ ಮೆಥಡ್):** ಆಲೇಖ ವಿಧಾನದಲ್ಲಿಯ ವ್ಯಕ್ತಿನಿಷ್ಠಾತ್ಮಕ ಗುಣವನ್ನು ನಿವಾರಿಸಲು ಗಣಿತ ಉತ್ಪನ್ನಗಳನ್ನು (ಮ್ಯಾಥಮ್ಯಾಟಿಕಲ್ ಫಂಕ್ಷನಲ್ ರಿಲೇಷನ್), ಅವಕಲ ಸಮೀಕರಣ ಸಂಬಂಧ (ಡಿಫರೆನ್ಷಿಯಲ್ ಈಕ್ವೇಷನ್ ರಿಲೇಷನ್) ವೃದ್ಧಿಘಾತ ಪ್ರತಿರೂಪ ಸಂಬಂಧ (ಲಾಜಿಸ್ಟಿಕ್ ಮಾಡೆಲ್ ರಿಲೇಷನ್)–ಇವನ್ನು ಬಳಸಿಕೊಂಡು ಅನುಗಣನೆಗಳನ್ನು ಸಿದ್ಧಪಡಿಸುವುದು ರೂಢಿ. ಬೇರಾವ ರೀತಿಯ ಗಣಿತ ಉತ್ಪನ್ನಸಂಬಂಧವನ್ನಾದರೂ ಬಳಸಿಕೊಳ್ಳಬಹುದು. ಈ ವಿಧಾನದಿಂದಲೂ ಒಟ್ಟು ಜನಸಂಖ್ಯಾನುಗಣನೆಯನ್ನು ಮಾತ್ರ ಸುಲಭವಾಗಿ ಗುಣಿಸಬಹುದು. ವಯಸ್ಸು, ಲಿಂಗ ಮುಂತಾದ ವಿತರಣೆಗಳನ್ನು ಅಂದಾಜು ಮಾಡುವುದಕ್ಕೆ ಜಟಿಲವಾದ ಗಣಿತ ಉತ್ಪನ್ನಗಳನ್ನು ಬಳಸಬೇಕಾಗುತ್ತದೆ. ಆದರೆ ಯಾವ ಗಣಿತ ಪ್ರತಿರೂಪವನ್ನು ಬಳಸಬೇಕಾದರೂ, ಯುದ್ಧ, ಸಾಂಕ್ರಾಮಿಕ ರೋಗ, ಕ್ಷಾಮ ಮುಂತಾದ ಅಸಾಮಾನ್ಯ ಘಟನೆಗಳಿಗೆ ಜನಸಂಖ್ಯೆ ಬಲಿಯಾಗಿಲ್ಲವೆಂದು ಇಟ್ಟುಕೊಳ್ಳುವುದು ಅವಶ್ಯವಾಗಿದೆ. ಇಂಥ ಘಟನೆಗಳು ತಲೆದೋರಿದ್ದ ಪಕ್ಷದಲ್ಲಿ ಈ ಪ್ರತಿರೂಪಗಳು ಸೂಚಿಸುವ ಅಂಕಿಅಂಶಗಳು ತಪ್ಪಾಗುತ್ತವೆ.

**3 ಘಟಕ ವಿಧಾನ (ಕಾಂಪೊನೆಂಟ್ ಮೆಥಡ್)** : ಒಂದು ಜನಸಂಖ್ಯೆಯಲ್ಲಿ ವಿವಿಧ ವಯಸ್ಸುಗಳ ಗುಂಪುಗಳಿಗೆ ನಿರ್ದಿಷ್ಟವಾಗಿ ಸಂಬಂಧಿಸುವ ಫಲವಂತಿಕೆ ಮತ್ತು ಮರಣದರಗಳನ್ನು ಅನ್ವಯಿಸಿ ಭವಿಷ್ಯದ ಒಂದು ಗೊತ್ತಾದ ಅವಧಿಯಲ್ಲಿ ಪರಿಣಮಿಸಬಹುದಾದ ಒಟ್ಟು ಜನಸಂಖ್ಯೆಯನ್ನು ಅಂದಾಜು ಮಾಡಬಹುದು. ಇಲ್ಲಿ ಮೂಲ ದತ್ತಾಂಶ ಶುದ್ಧವಾಗಿರಬೇಕಾದ್ದು ಅತ್ಯಾವಶ್ಯಕ. ಇರಬಹುದಾದ ತಪ್ಪುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಆಧಾರ ವರ್ಷದ ಅಥವಾ ಆರಂಭದ ವರ್ಷದ ಜನಸಂಖ್ಯೆಯ ವಯೋಸಂಯೋಜನೆ, ಲಿಂಗನಿಷ್ಪತ್ತಿ ಉಳಿವಿನ ನಿಷ್ಪತ್ತಿ (ಸರ್ವೈವಲ್ ರೇಷಿಯೋ) ಮುಂತಾದವನ್ನು ಖಾತರಿ ಮಾಡಿಕೊಳ್ಳಬೇಕು.

**4 ಅರ್ಥಮಿತಿ ವಿಧಾನ (ಎಕನಾಮಿಟ್ರಿಕ್ಸ್ ಮೆಥಡ್)** : ಜನಸಂಖ್ಯಾ ಬೆಳೆವಣಿಗೆಗೆ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು ಕಾರಣವಾಗುತ್ತವೆ ಎನ್ನುವ ತತ್ತ್ವವನ್ನು ಈ ವಿಧಾನ ಆಧರಿಸಿದೆ. ಈ ಪರಿಸ್ಥಿತಿಗಳು ಮುಖ್ಯವಾಗಿ ತಲಾ ವರಮಾನ (ಪರ್‌ಕ್ಯಾಪಿಟ ಇನ್‌ಕಮ್, ಇದು $x_1$ ಆಗಿರಲಿ), ಉದ್ಯಮಗಳ ಬೆಳೆವಣಿಗೆ ($x_2$ ಆಗಿರಲಿ) ಮತ್ತು ಆಹಾರೋತ್ಪಾದನೆ ( $x_3$ ಆಗಿರಲಿ). ಇಲ್ಲಿ $x_2$ ಕೈಗಾರಿಕಾಭಿವೃದ್ಧಿಗೆ ರಾಷ್ಟ್ರೀಯ ವರಮಾನದ ನಿಷ್ಪತ್ತಿ. ಈಗ t ವರ್ಷಗಳಲ್ಲಿಯ ಜನಸಂಖ್ಯೆಯನ್ನು ಒಂದು ಗಣಿತೋತ್ಪನ್ನದ ಮೂಲಕ $x_1,x_2,x_3$ ಚರಗಳಿಗೆ ಸಂಬಂಧಿಸಬಹುದು. $P_t = a_0 + a_1 x_1^t + a_2 x_2^t + a_3 x_3^t$ ಇದು ಅಂಥ ಒಂದು ಸಾಮಾನ್ಯ ಉತ್ಪನ್ನ. ಇದನ್ನು ಸಹಜ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಜಟಿಲಗೊಳಿಸಬಹುದು. ಅಲ್ಲದೆ ಯಾದೃಚ್ಛಿಕ ಚರಗಳನ್ನು (ರ್‍ಯಾಂಡಮ್ ವೇರಿಯಬಲ್ಸ್) ಉಪಯೋಗಿಸಿ ಯಾದೃಚ್ಛಿಕ ಪ್ರತಿರೂಪವನ್ನು (ಸ್ಟೋಕ್ಯಾಸ್ಟಿಕ್ ಮಾಡೆಲ್) ರೂಪಿಸಿಕೊಳ್ಳಬಹುದು. ಈಗ $x_1,x_2,x_3$ ಮುಂತಾದ ಚರಗಳ ಭವಿಷ್ಯ ಅಂದಾಜುಗಳು ದೊರೆತಿದ್ದರೆ, ರೂಪಿತ ಉತ್ಪನ್ನದಿಂದ ಜನಸಂಖ್ಯಾನುಗಣನೆಯನ್ನು ಸಿದ್ಧಪಡಿಸಬಹುದು. ಈ ವಿಧಾನದಲ್ಲಿ ಒಂದು ಕಾಲಕ್ಕೆ ಸರಿಯೆನಿಸಿದ ಉತ್ಪನ್ನವೇ ಮುಂದುವರಿಯುತ್ತದೆಂದು ಭಾವಿಸಿಕೊಂಡಂತಾಗುತ್ತದೆ. ಇದಕ್ಕೆ ಬೇಕಾದ ವಿವಿಧ ಚರಗಳ ಪ್ರಸ್ತುತ ಬೆಲೆಗಳೇ ದೊರೆಯುವುದು ಕಷ್ಟವಾಗಿರುತ್ತದೆ; ಅವುಗಳ ಭವಿಷ್ಯಬೆಲೆಗಳನ್ನು ಶೋಧಿಸುವುದು ಇನ್ನೂ ದುಸ್ತರವಾಗುತ್ತದೆ. ಆದ್ದರಿಂದಲೇ ಈ ವಿಧಾನದ ಬಳಕೆ ಬಹಳ ವಿರಳ.

**5 ನಿಷ್ಪತ್ತಿ ವಿಧಾನ (ರೇಷಿಯೊ ಮೆಥಡ್)** : ಪ್ರಾದೇಶಿಕ ಜನಸಂಖ್ಯಾನುಗಣನೆಗಳನ್ನು ಸಿದ್ಧಪಡಿಸಲೂ ಜನಸಂಖ್ಯಾ ವಿಭಾಗಗಳ ಅನುಗಣನೆಗಳನ್ನು ಗಣಿಸಲೂ ಇದೊಂದು ವಿಶಿಷ್ಟ ವಿಧಾನ. ಪರಿಸ್ಥಿತಿಗೆ ತಕ್ಕಂತೆ ಈ ವಿಧಾನದಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡು ಬಳಸಲಾಗುತ್ತಿದೆಯಾದರೂ ಮೂಲ ತತ್ತ್ವ ಎಲ್ಲೆಡೆಯಲ್ಲೂ ಒಂದೇ. ಇದರ ಪ್ರಕಾರ ಪ್ರಾದೇಶಿಕ (ಅಥವಾ ವಿಶಿಷ್ಟ ವಿಭಾಗದ) ಜನಸಂಖ್ಯೆಗೂ ರಾಷ್ಟ್ರೀಯ ಜನಸಂಖ್ಯೆಗೂ ಇರುವ ನಿಷ್ಪತ್ತಿಯನ್ನು ಕೆಲವು ವರ್ಷಗಳಿಗೆ ಶೋಧಿಸಿ ಆ ನಿಷ್ಪತ್ತಿಗಳ ಗತಿಯನ್ನು ಗಮನಿಸಿ, ಭವಿಷ್ಯ ವರ್ಷಗಳಲ್ಲಿ ನಿಷ್ಪತ್ತಿಯ ಬೆಲೆಗಳನ್ನು ಪಡೆಯಲಾಗುತ್ತದೆ. ಹೀಗೆ ಲಬ್ಧವಾದ ನಿಷ್ಪತ್ತಿಗಳಿಂದ ರಾಷ್ಟ್ರೀಯ ಜನಸಂಖ್ಯಾನುಗಣನೆಯನ್ನು ಗಣಿಸಿದರೆ ಅಪೇಕ್ಷಿತ ಪ್ರದೇಶದ ಅಥವಾ ವಿಶಿಷ್ಟ ವಿಭಾಗದ ಅನುಗಣನೆ ದೊರೆಯುತ್ತದೆ. ರಾಷ್ಟ್ರೀಯ ಜನಸಂಖ್ಯೆ ತಿಳಿದಿರುವ ಯಾವ ವರ್ಷಕ್ಕಾದರೂ ಪ್ರಾದೇಶಿಕ (ಅಥವಾ ವಿಶಿಷ್ಟ ವಿಭಾಗದ) ಜನಸಂಖ್ಯಾನುಗಣನೆ ಪಡೆಯಬಹುದು. ಈ ವಿಧಾನವನ್ನು ಜನಸಂಖ್ಯೆಯ ವಯೋ ಸಂಯೋಜನೆ, ಲಿಂಗ ಸಂಯೋಜನೆಗಳನ್ನು ತಿಳಿಯಲು ಬಳಸುವುದು ಶ್ರಮದ ಕೆಲಸ.

ಜನಸಂಖ್ಯಾನುಗಣನೆಯನ್ನು ಸಿದ್ಧಪಡಿಸುವಾಗ ಕೆಲವು ಅಂಶಗಳನ್ನು ಗಮನಿಸಬೇಕು. ಆಧಾರವಾಗಿ ಉಪಯೋಗಿಸುವ ಅಂಕಿ–ಅಂಶಗಳು ದೋಷಮುಕ್ತವಾಗಿರುವುದು ಅವಶ್ಯ. ಅದಕ್ಕಾಗಿ ದೊರೆತ ಅಂಕಿ–ಅಂಶಗಳನ್ನು ಬಳಸುವ ಮೊದಲು ಅವನ್ನು ಪರಿಶೀಲಿಸಿ, ಸೂಕ್ತ ಕ್ರಮಗಳಿಂದ ದೋಷಗಳನ್ನು ಕಡಿಮೆ ಮಾಡಬೇಕು. ಭವಿಷ್ಯ ಅನಿಶ್ಚಿತವಾದ್ದರಿಂದ ಅನುಗಣನೆಗಳನ್ನು 15–20 ವರ್ಷಗಳಿಗಿಂತ ಹೆಚ್ಚು ವರ್ಷಗಳಿಗೆ ಸಿದ್ಧಪಡಿಸುವುದು ಸೂಕ್ತವಲ್ಲ. ಅಲ್ಲದೆ ಹೆಚ್ಚು ಹೆಚ್ಚು ವಿವರಗಳು ದೊರೆತಾಗ ಅನುಗಣನೆಗಳನ್ನು ಬದಲಾಯಿಸುತ್ತಿರುವುದು ಒಳ್ಳೆಯದು. ಒಂದೇ ಅಭಿಗೃಹೀತದ ಆಧಾರದಿಂದ ಅನುಗಣನೆಗಳನ್ನು ಗಣಿಸದೆ ಹೆಚ್ಚು ಪರ್ಯಾಯ ಅನುಗಣನೆಗಳನ್ನು ಬಳಸಿ ಅವುಗಳಲ್ಲಿ ನಾವು ಯಾವುದನ್ನು ಸೂಕ್ತವೆಂದು ಬಗೆಯುತ್ತೇವೆಂದು ನಿಷ್ಕರ್ಷಿಸಬಹುದು.

ಜನಸಂಖ್ಯಾನುಗಣನೆಯಿಂದ ಹಲವು ಪ್ರಯೋಜನಗಳುಂಟು. ಪ್ರಜಾರಾಜ್ಯದ ಪ್ರತಿಯೊಂದು ಪ್ರಸಂಗದಲ್ಲೂ ಜನಸಂಖ್ಯೆಯ ಪ್ರವೃತ್ತಿಗಳ ಬಗ್ಗೆ ಅರಿತುಕೊಳ್ಳುವುದು ಅವಶ್ಯ. ಚುನಾವಣಾ ಕ್ಷೇತ್ರಗಳ ಸೀಮಾನಿರ್ಧಾರಣ (ಡೀಲಿಮಿಟೇಷನ್ ಆಫ್ ಕಾನ್‌ಸ್ಟಿಟ್ಯೂಯೆನ್ಸೀಸ್) ಮಾಡಲು ಅಭಿವೃದ್ಧಿಯೋಜನೆಗಳನ್ನು ರೂಪಿಸಲು ಯೋಜನೆಗಳಿಂದ ಜನತೆಗೆ ಆಗುವ ಲಾಭ ಅರಿಯಲೂ ಆಡಳಿತ ಸಮಸ್ಯೆಗಳನ್ನು ಬಿಡಿಸಲು–ಹೀಗೆ ನಾನಾ ಉದ್ದೇಶಗಳಿಗೆ ಜನಸಂಖ್ಯಾನುಗಣನೆ ಉಪಯುಕ್ತವಾಗುತ್ತದೆ. (ಎಂಎಸ್.ಎಂಯು.)

**ಪ್ರಪಂಚದ ಭವಿಷ್ಯ ಜನಸಂಖ್ಯೆ** : ವಿಶ್ವಸಂಸ್ಥೆ ಆಗಿಂದಾಗ್ಗೆ ಪ್ರಪಂಚದ ಭವಿಷ್ಯ ಜನಸಂಖ್ಯೆ ಕುರಿತ ಅನುಗಣನೆಗಳನ್ನೂ ಮುನ್ಸೂಚನೆಗಳನ್ನೂ ತಯಾರಿಸುತ್ತಿರುತ್ತದೆ. 1950ರ ದಶಕದ ಪ್ರರೂಪಿ (ಟಿಪಿಕಲ್) ಪ್ರಪಂಚ ಜನಸಂಖ್ಯಾ ಪ್ರವೃತ್ತಿಗಳ ದೀರ್ಘಕಾಲದ ಮುಂದುವರಿಕೆಯ ಪರಿಣಾಮವೇನು ಎಂಬುದನ್ನು ಕೋಷ್ಟಕ 1 ಮತ್ತು 2 ರಲ್ಲಿ ಕೊಡಲಾಗಿದೆ. ಫಲವಂತಿಕೆ ಏಕರೀತಿಯಾಗಿರುವುದು ಮತ್ತು ವಲಸೆ ಇರುವುದಿಲ್ಲ ಎಂಬ ಅಭಿಗೃಹೀತವನ್ನು




**ಚಿತ್ರ 3. 1900–2000ರಲ್ಲಿ ಪ್ರಪಂಚದ ಜನಸಂಖ್ಯೆಯ ಬೆಳವಣಿಗೆ (ಅಂದಾಜು ಮತ್ತು ಅನುಗಣನೆ). (ಸೋವಿಯೆತ್ ದೇಶದ ಜನಸಂಖ್ಯೆ ಏಷ್ಯದ ಜನಸಂಖ್ಯೆಯಲ್ಲಿ ಸೇರಿಲ್ಲ; ಯೂರೋಪಿನ ಜನಸಂಖ್ಯೆಯಲ್ಲಿ ಸೇರಿದೆ)**

ಆಧರಿಸಿ ಇದನ್ನು ರಚಿಸಲಾಗಿದೆ. ಅಲ್ಲದೆ ಮರಣಸಂಖ್ಯೆಯ ಇಳಿತದ ಗತಿ ಮುಂದುವರಿಯುವುದೆಂದೂ ಭಾವಿಸಲಾಗಿದೆ. ಪ್ರತಿಯೊಂದು ಪ್ರದೇಶದಲ್ಲೂ ಈ ಪ್ರವೃತ್ತಿಗಳು ಮುಂದುವರಿಯುವುವೆಂದು ಭಾವಿಸಿಕೊಂಡು ಜನಸಂಖ್ಯೆಯ ಮೇಲೆ ಅವುಗಳಿಂದ ಆಗುವ ಪರಿಣಾಮಗಳನ್ನು ಲೆಕ್ಕ ಹಾಕಿ, ತರುವಾಯ ಅವನ್ನು ಸಾರೀಕರಿಸಲಾಗುತ್ತದೆ. 1950ರ ದಶಕದ್ದಕ್ಕಿಂತ ಹೆಚ್ಚಿನ ದರದಲ್ಲಿ ಪ್ರಪಂಚದ ಜನಸಂಖ್ಯೆಯ ಬೆಳವಣಿಗೆ ತರುವಾಯದ ದಶಕಗಳಲ್ಲಿ ವರ್ಧಿಸುವುದೆಂದು ಮುನ್ನುಡಿಯಲಾಗಿದೆ. 2020ರ ವೇಳೆಗೆ 7,584,821,144 (ಶೇ.18.7 ಹೆಚ್ಚಳ), 2030ರ ವೇಳೆಗೆ 8,246,619,341 (ಶೇ.7.3 ಹೆಚ್ಚಳ), 2040ರ ವೇಳೆಗೆ 8,850,045,889 (ಶೇ.5.6 ಹೆಚ್ಚಳ), 2050ರ ವೇಳೆಗೆ 9,346,399,468 ಎಂದು ಅಂದಾಜಿಸಲಾಗಿದೆ. *

### VII ಜನಸಂಖ್ಯಾ ನೀತಿ

ಪ್ರಚಲಿತ ಜನಸಂಖ್ಯಾ ಪ್ರವೃತ್ತಿಗಳನ್ನು ರಾಷ್ಟ್ರದ ಉಳಿವು ಹಾಗೂ ಕಲ್ಯಾಣಕ್ಕಾಗಿ ಬದಲಾಯಿಸುವ ಉದ್ದೇಶದಿಂದ ಸರ್ಕಾರ ಕೈಗೊಳ್ಳುವ ವೈಧಾನಿಕ, ಪ್ರಶಾಸನಿಕ ಮತ್ತು ಇತರ ಕ್ರಮಗಳು ಜನಸಂಖ್ಯಾನೀತಿ ಎನಿಸಿಕೊಳ್ಳುತ್ತವೆ. ಅನೇಕ ಸಾರ್ವಜನಿಕ ನೀತಿಗಳೂ ಸಮಾಜ ಪರಿವರ್ತನ ಕ್ರಮಗಳೂ ಒಟ್ಟಿನಲ್ಲಿ ಜನಸಂಖ್ಯಾ ಪ್ರವೃತ್ತಿಗಳ ಮೇಲೆ ಪರಿಣಾಮ ಬೀರುತ್ತವೆ. ಆದರೆ ಅನಿಷ್ಟ ಜನಸಂಖ್ಯಾ ಪ್ರವೃತ್ತಿಗಳನ್ನು ತಡೆಗಟ್ಟಲು ಕೈಗೊಂಡ ಸಾರ್ವಜನಿಕ ಕ್ರಮಗಳು ಮಾತ್ರ ಜನಸಂಖ್ಯಾ ನೀತಿಯ ವ್ಯಾಪ್ತಿಯಲ್ಲಿ ಬರುತ್ತವೆ. ಒಂದು ದೇಶದ ಜನಸಂಖ್ಯೆಯ ಬೆಳವಣಿಗೆಯ ದರವನ್ನು ಉಳಿಸುವ, ಬೆಳೆಸುವ ಅಥವಾ ತಡೆಹಿಡಿಯುವ ಕ್ರಮಗಳಿಗೆ ಈಚೆಗೆ ವಿಶೇಷ ಗಮನ ಸಂದಿದೆ. ಜನಸಂಖ್ಯೆಯ ಗಾತ್ರವನ್ನು ನಿಯಂತ್ರಿಸುವುದು ಜನಸಂಖ್ಯಾ ನೀತಿಯ ಮುಖ್ಯ ಉದ್ದೇಶ. ಜನಸಂಖ್ಯೆಯ ಸಂಯೋಜನೆಯನ್ನೂ ಭೌಗೋಳಿಕ ವಿತರಣೆಯನ್ನೂ ಬದಲಿಸುವ ದೃಷ್ಟಿಯಿಂದಲೂ ಆಗಾಗ್ಗೆ ಕ್ರಮ ಕೈಗೊಳ್ಳಬಹುದು. ಆದರೆ ಜನಸಂಖ್ಯೆಯ ಗಾತ್ರ ಮತ್ತು ಬದಲಾವಣೆಯ ದರಗಳನ್ನು ಬದಲಿಸುವ ದೃಷ್ಟಿಯಿಂದ ರೂಪಿಸಲಾದ ಕ್ರಮಗಳ ವಿವೇಚನೆಯನ್ನು ಮಾತ್ರ ಇಲ್ಲಿ ಮಾಡಲಾಗಿದೆ. ಪರಿಮಾಣಾತ್ಮಕವಲ್ಲದ ಅಥವಾ ಗುಣಾತ್ಮಕವಾದ ಬದಲಾವಣೆಗಳನ್ನು ತರುವ ಕ್ರಮಗಳು ಸರ್ಕಾರದ ಸಮಗ್ರ ನೀತಿಯ ವ್ಯಾಪ್ತಿಗೆ ಒಳಪಡುತ್ತವೆ. ಜನಸಂಖ್ಯೆಯ ಆನುವಂಶಿಕ ರಚನೆಯನ್ನು ನಿಯಂತ್ರಿಸುವ ಕ್ರಮಗಳೂ ಜನಸಂಖ್ಯಾ ನೀತಿಯ ಅಡಿಯಲ್ಲಿ ಬರುವುವೆಂದು ಹೇಳುವುದುಂಟು. ಗರ್ಭಪಾತ, ಸಂತಾನಶಕ್ತಿಹರಣ ಮುಂತಾದವಕ್ಕೆ ಕೆಲವು ಸಂದರ್ಭಗಳಲ್ಲಿ ಅವಕಾಶ ನೀಡುವ ಅಧಿನಿಯಮಗಳು ಕೆಲವು ದೇಶಗಳಲ್ಲಿ ಜಾರಿಗೆ ಬಂದಿವೆಯಾದರೂ ಇವುಗಳಿಂದ ಜನಸಂಖ್ಯೆಯ ಮೇಲೆ ಆಗುವ ಪರಿಣಾಮ ಸಾಮಾನ್ಯವಾಗಿ ಅಲ್ಪ.

ಇತಿಹಾಸ : ಜನಸಂಖ್ಯೆಯ ವಿಚಾರದಲ್ಲಿ ಸರ್ಕಾರದ ಆಸಕ್ತಿ ಬಹಳ ಪ್ರಾಚೀನವಾದ್ದು. ಮದುವೆಗೆ ಪ್ರೋತ್ಸಾಹ, ಅವಿವಾಹಿತರ ತೆರಿಗೆ, ಮಕ್ಕಳಿರುವ ಕುಟುಂಬಗಳಿಗೆ ಸಹಾಯಧನ ನೀಡಿಕೆ. ವಲಸೆಗಳ ನಿಯಂತ್ರಣ, ವಿವಾಹಕ್ಕೆ ಕನಿಷ್ಠ ವಯೋಮಿತಿ ನಿಗದಿ–ಮುಂತಾದ ಕ್ರಮಗಳಿಂದ ಸರ್ಕಾರ ಹಿಂದಿನಿಂದಲೂ ಈ ಕ್ಷೇತ್ರದಲ್ಲಿ ಕೈಹಾಕುತ್ತಲೇ ಬಂದಿದೆ. ಹೆಚ್ಚು ಜನಸಂಖ್ಯೆ ಇದ್ದಷ್ಟೂ ಹೆಚ್ಚು ಶಕ್ತಿ ಎಂಬುದು ಇಂಥ ಕ್ರಮಗಳ ಹಿಂದೆ ಇದ್ದ ತಾತ್ತ್ವಿಕ ದೃಷ್ಟಿ. ಭಾರತದಲ್ಲಂತೂ ಸಂತಾನಾಭಿವೃದ್ಧಿಗೆ ಹಿಂದಿನಿಂದಲೂ ಧಾರ್ಮಿಕ ಸ್ವರೂಪ ನೀಡಲಾಗಿದೆ.

ಎರಡು ಮಹಾಯುದ್ಧಗಳ ನಡುವಣ ಕಾಲದಲ್ಲಿ ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು ಜನಸಂಖ್ಯೆಯನ್ನು ವಿಸ್ತರಿಸುವ ನೀತಿ ಅನುಸರಿಸುತ್ತಿದ್ದುವು. ಹೆಚ್ಚು ಮಕ್ಕಳನ್ನು ಹಡೆದವಳು ರಾಷ್ಟ್ರದ ಗೌರವಕ್ಕೆ ಪಾತ್ರಗಳಾಗುತ್ತಿದ್ದಳು. ಹೆಚ್ಚು ಮಕ್ಕಳ ಸಂಸಾರಗಳಿಗೆ ಹಣ ನೀಡಲಾಗುತ್ತಿತ್ತು. ಜನನನಿಯಂತ್ರಣವನ್ನು ನಿರುತ್ತೇಜಿಸಲಾಗುತ್ತಿತ್ತು. ಉತ್ತಮ ಸಂತಾನವೃದ್ಧಿಗಾಗಿ ಕಾನೂನುಗಳಿದ್ದುವು. ಶುದ್ಧ ದೇಶೀಯ ಜನಾಂಗವನ್ನು ಬೆಳೆಸುವುದು ಈ ನಿಬಂಧನೆಗಳ ಉದ್ದೇಶ. ಆ ದೇಶಗಳ ರಾಜ್ಯ ವಿಸ್ತರಣಾಕಾಂಕ್ಷೆಯ ಕ್ರಮಗಳಿಗೆ ಇವೆಲ್ಲ ಪೂರಕವಾಗಿದ್ದುವು.

ಇನ್ನು ಕೆಲವು ದೇಶಗಳಲ್ಲಿ ಜಾರಿಯಲ್ಲಿದ್ದ ಕ್ರಮಗಳ ಉದ್ದೇಶಗಳೇ ಬೇರೆ. ಆ ದೇಶಗಳಲ್ಲಿ ಜನಸಂಖ್ಯೆ ಕಡಿಮೆಯಾಗುತ್ತಿದ್ದ ದರಕ್ಕಿಂತಲೂ ಫಲವಂತಿಕೆಯ ದರ ಕಡಿಮೆಯಿದ್ದುದರಿಂದ ಕಾಲಕ್ರಮದಲ್ಲಿ ಅಲ್ಲಿಯ ಜನಸಂಖ್ಯೆ ಕ್ಷಯಿಸಿಹೋಗಬಹುದೆಂಬ ಅಂಜಿಕೆಯಿತ್ತು. ಫ್ರಾನ್ಸ್ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿ ಜನನಗಳಿಗಿಂತ ಮರಣಗಳು ಅಧಿಕವಾಗಿದ್ದುದಕ್ಕೆ ದಾಖಲೆಗಳಿವೆ. ಇಡೀ ಪಶ್ಚಿಮ ಯುರೋಪಿನಲ್ಲೇ ಜನಸಂಖ್ಯೆ ಕ್ರಮೇಣ ಇಳಿಮುಖವಾಗುವುದೆಂದು ಭಾವಿಸಲಾಗಿತ್ತು. ಅದೇ ಸಮಯದಲ್ಲಿ ಸಂಭವಿಸಿದ ಆರ್ಥಿಕ ಬಿಕ್ಕಟ್ಟುಗಳಿಂದಾಗಿ, ಕೆಲಸಗಾರರಿಗೆ ನಿರುದ್ಯೋಗದ ವಿರುದ್ಧ ರಕ್ಷಣೆ ನೀಡುವತ್ತ ಸರ್ಕಾರಗಳು ಗಮನ ನೀಡಬೇಕಾಗಿ ಬಂದುದರಿಂದ ಸಾಮಾಜಿಕ ನ್ಯಾಯದ ಹೊಸ ಪರಿಕಲ್ಪನೆಯೊಂದು ರೂಪುಗೊಳ್ಳುತ್ತಿತ್ತು. ಕೆಲಸಗಾರನನ್ನೇ ನಂಬಿದ ಕುಟುಂಬದ ಗಾತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಕನಿಷ್ಠ ಕುಟುಂಬವೇತನ ನೀಡುವ ಕ್ರಮಗಳು ಜಾರಿಗೆ ಬರಲಾರಂಭಿಸಿದುವು. ಹೀಗಾಗಿ ಜನಸಂಖ್ಯೆಗೂ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೂ ಸಂಬಂಧ ಏರ್ಪಟ್ಟಿತು.

ಯುರೋಪಿನ ಆಗಿನ ಜನನದರಗಳ ಇಳಿತಾಯ ಎಷ್ಟರಮಟ್ಟಿಗೆ ದೀರ್ಘಕಾಲಿಕ ಪ್ರವೃತ್ತಿಗಳ ಮುಂದುವರಿಕೆಯಾಗಿತ್ತೆಂಬುದಾಗಲಿ, ಎಷ್ಟರಮಟ್ಟಿಗೆ ಅದು ತಾತ್ಕಾಲಿಕ ವಾಗಿತ್ತೆಂಬುದಾಗಲಿ ಸ್ಪಷ್ಟವಾಗಿರಲಿಲ್ಲ. ಆದ್ದರಿಂದ ವಿವಾಹ ಮತ್ತು ಫಲವಂತಿಕೆಯ ದರಗಳ ಇಳಿತಾಯಕ್ಕೆ ಆರ್ಥಿಕ ಕಾರಣಗಳಿದ್ದುವೆಂಬುದು ಆಗ ಇದ್ದ ಭಾವನೆ. ಆದ್ದರಿಂದ ಸಮಾಜ ಭದ್ರತಾ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಿಂದ ಕುಟುಂಬಕ್ಕೆ ಭದ್ರತೆ ನೀಡಿ ಜನನದರಗಳನ್ನು ಏರಿಸಬಹುದೆಂದು ತಿಳಿಯಲಾಗಿತ್ತು. ಕುಟುಂಬಕ್ಕೆ ಸಹಾಯ ನೀಡುವ ಯೋಜನೆಗಳ ಮತ್ತು ಗರ್ಭಿಣಿ ಶಿಶುಪೋಷಣೆಯ ಕ್ರಮಗಳ ಹಿಂದೆ ಇದ್ದ ದೃಷ್ಟಿ ಎಂಥದು? ಅದು ಜನಸಂಖ್ಯಾದೃಷ್ಟಿಯೆ, ಕಲ್ಯಾಣದೃಷ್ಟಿಯೆ?–ಎಂಬುದನ್ನು ಖಚಿತವಾಗಿ ಹೇಳುವುದ ಕ್ಕಾಗುವುದಿಲ್ಲ.

ಸೋವಿಯೆತ್ ದೇಶ ಮತ್ತು ಪೂರ್ವ ಯುರೋಪಿನಲ್ಲೂ ಇಂಥ ಕಾರ್ಯಗಳು ರೂಪುಗೊಂಡಿವೆ. ಸಮಾಜವಾದಿ ಪ್ರಭುತ್ವವನ್ನು ರಚಿಸುವ ಪ್ರಯತ್ನದ ಅಂಗವಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಮಾಲ್ಥಸನ ಜನಸಂಖ್ಯಾ ಸಿದ್ಧಾಂತವನ್ನು ಮಾರ್ಕ್ಸ್ ಒಪ್ಪುವುದಿಲ್ಲ. ಒಂದು ದೇಶದ ಜನಸಂಖ್ಯೆ ವಿಪರೀತವಾಗಿದೆಯೆಂದರೆ ಅಲ್ಲಿಯ ಸಾಮಾಜಿಕ ವ್ಯವಸ್ಥೆ ಕೆಟ್ಟಿದೆಯೆಂದೇ ಅರ್ಥ. ಉತ್ಪಾದನೆಯ ಮತ್ತು ವಿತರಣೆಯ ವ್ಯವಸ್ಥೆ ಸರಿಯಾಗಿದ್ದರೆ ಜನಸಂಖ್ಯೆ ಅತಿಯೆಂಬ ಪ್ರಶ್ನೆಯೇ ಬರುವುದಿಲ್ಲ ಎಂಬುದು ಮಾರ್ಕ್ಸನ ವಾದ. ಸೋವಿಯೆತ್ ದೇಶದ ಜನಸಂಖ್ಯಾ ನೀತಿ ಈ ಧೋರಣೆಗೆ ಅನುಗುಣವಾದ್ದು. ಜನಸಂಖ್ಯೆಯನ್ನು ವೃದ್ಧಿಪಡಿಸುವತ್ತ ಅದರ ನೀತಿ ರೂಪುಗೊಂಡಿದೆ.

ಎರಡನೆಯ ಮಹಾಯುದ್ಧದ ಅನಂತರ ಈ ಪ್ರಶ್ನೆಗೆ ಹೊಸ ತಿರುವು ಬಂದಿತು. ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ತಮ್ಮ ಆರ್ಥಿಕ ಸಮಸ್ಯೆಗಳ ಅರಿವು ಮೂಡಿತು. ಈ ದೇಶಗಳಲ್ಲಿ ಮರಣ ದರ ಇಳಿಯುತ್ತಿತ್ತು. ಆದರೆ ಫಲವಂತಿಕೆ ಮಾತ್ರ ಉನ್ನತ ಮಟ್ಟದಲ್ಲೇ ಮುಂದುವರಿಯಿತು. ಈ ದೇಶಗಳಲ್ಲಿ ವಾರ್ಷಿಕವಾಗಿ ಶೇ.2.5–3 ರಂತೆ ಜನಸಂಖ್ಯೆ ಬೆಳೆಯುತ್ತಿತ್ತು. ಒಂದು ತಲೆಮಾರಿನಲ್ಲಿ ಜನಸಂಖ್ಯೆ ಇಮ್ಮಡಿಸುವುದೆಂಬ ಅಂಜಿಕೆ ತಲೆದೋರಿತು. ಇಲ್ಲಿಯ ಜನರ ಜೀವನಮಟ್ಟವನ್ನು ಏರಿಸುವ ಪ್ರಯತ್ನವೆಲ್ಲ ಅಧಿಕ ಜನಸಂಖ್ಯೆಯ ಫಲವಾಗಿ ನಿಷ್ಪ್ರಯೋಜಕವಾಗುವುದೆಂಬ ಭಯ ಹುಟ್ಟಿತು. ಜನಸಂಖ್ಯಾ ಬೆಳವಣಿಗೆಯ ದರವನ್ನು ಇಳಿಸುವ, ಅಥವಾ ಅದು ಏರದಂತೆ ತಡೆಗಟ್ಟುವ ಕ್ರಮಗಳು ಅನೇಕ ದೇಶಗಳಲ್ಲಿ ಜಾರಿಗೆ ಬಂದುವು.

**ಜನಸಂಖ್ಯಾ ನೀತಿಯ ಮುಖ್ಯಾಂಶಗಳು:** 1.ಹಿಂದಿನ ಮತ್ತು ಪ್ರಚಲಿತ ಜನಸಂಖ್ಯಾ ಪ್ರವೃತ್ತಿಗಳ ಮತ್ತು ಅವುಗಳ ಕಾರಣಗಳ ಪರಿಶೀಲನೆ, 2.ಈ ಪ್ರವೃತ್ತಿಗಳ ಫಲವಾಗಿ ಮುಂದೆ ಜನಸಂಖ್ಯೆಯಲ್ಲಿ ಆಗಬಹುದಾದ ಅಂದಾಜು, 3.ರಾಷ್ಟ್ರಹಿತದೃಷ್ಟಿಯಿಂದ ಅವುಗಳ ಸಾಮಾಜಿಕ, ಆರ್ಥಿಕ ಪರಿಣಾಮಗಳ ಅರಿವು, 4.ಅಪೇಕ್ಷಿತ ಬದಲಾವಣೆಗಳನ್ನು ತರಲು ಅಥವಾ ಅನಪೇಕ್ಷಿತ ಬದಲಾವಣೆಗಳನ್ನು ನಿವಾರಿಸಲು ಕ್ರಮಗಳ ಜಾರಿ.

ಜನಸಂಖ್ಯೆಯ ಫಲವಂತಿಕೆ, ಮರಣದರ, ವಲಸೆ–ಈ ಬಲಗಳ ಪರಸ್ಪರ ಸಂಬಂಧದಲ್ಲಿ ಆಗುವ ಬದಲಾವಣೆಗಳೇ ಜನಸಂಖ್ಯಾ ಪ್ರವೃತ್ತಿಗಳು. ಈ ಮೂರೂ ಪ್ರಕ್ರಿಯೆಗಳಲ್ಲಿಯ ಬದಲಾವಣೆಯ ಅಂಶಗಳನ್ನು ಅರಿಯುವುದರಲ್ಲಿ ಜನಸಂಖ್ಯಾ ನೀತಿ ನಿರ್ಧಾರಕರು ಆಸಕ್ತರಾಗಿರುತ್ತಾರೆ.

ವಲಸೆ: ಹೆಚ್ಚು ಜನಸಾಂದ್ರತೆ ಇರುವ ದೇಶಗಳಿಂದ ಕಡಿಮೆ ಜನಸಾಂದ್ರತೆಯ ದೇಶಗಳಿಗೆ ವಲಸೆ ಏರ್ಪಡಿಸುವುದರಿಂದ ಜನಸಂಖ್ಯಾ ಹೊಂದಾವಣೆ ಸಾಧ್ಯ. ಆದರೆ ಇದು ಕಷ್ಟಸಾಧ್ಯ; ಅನೇಕ ವೇಳೆ ಅಸಾಧ್ಯ. ರಾಷ್ಟ್ರೀಯ ಭಾವನೆ, ರಾಜಕೀಯ ಭಿನ್ನತೆ, ಜನಾಂಗಭೇದ, ಪರಸ್ಪರ ಹೊಂದಾವಣೆಯ ಸಮಸ್ಯೆ–ಇವು ಇದಕ್ಕೆ ಮುಖ್ಯ ಕಾರಣಗಳು. ವಿವಿಧ ದೇಶಗಳ ಜನವಲಸೆ ಕಾನೂನುಗಳು ಬಲು ಕಟ್ಟುನಿಟ್ಟಾಗಿರುತ್ತವೆ. ಜನವಲಸೆಯನ್ನು ಸ್ವಾಗತಿಸುವ ದೇಶಗಳು ಕೂಡ ಈ ಬಗ್ಗೆ ಹಲವು ನಿಯಮಗಳನ್ನು ರಚಿಸಿರುತ್ತವೆ. ಎರಡು ದೇಶಗಳ ನಡುವೆ ಒಪ್ಪಂದದ ಮೂಲಕ ಮಾತ್ರವೇ ವಲಸೆ ಸಾಧ್ಯ.

ಒಂದು ದೇಶದೊಳಗೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಜನರು ವಲಸೆ ಹೋಗುವಂತೆ ಮಾಡುವುದೂ ಜನಸಂಖ್ಯಾನೀತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಅನೇಕ ವೇಳೆ ಆಂತರಿಕ ವಲಸೆಗಳು ಆಯೋಜಿತವಾಗಿರುತ್ತವೆ. ಹಳ್ಳಿಯಿಂದ ಪಟ್ಟಣಕ್ಕೆ ಜನರು ವಲಸೆ ಹೋಗುವುದು ಒಂದು ನಿದರ್ಶನ. ಅಭಿವೃದ್ಧಿಶೀಲ ದೇಶಗಳಲ್ಲಿ ಇದು ಅನೇಕ ವೇಳೆ ಆಯೋಜಿತ. ಇದು ನಾನಾ ಬಗೆಯ ಸಮಸ್ಯೆಗಳಿಗೆ ಎಡೆಕೊಡುತ್ತದೆ. ಜನಸಂಖ್ಯಾ ವಿತರಣೆಗೂ ಆರ್ಥಿಕ ಕ್ರಮಗಳಿಗೂ ಹೊಂದಾವಣೆ ಏರ್ಪಡುವುದಾದರೆ ಇಂಥ ದೇಶಗಳ ಆರ್ಥಿಕ ಪ್ರಗತಿ ಹೆಚ್ಚು ಸುಸೂತ್ರವಾಗುತ್ತದೆ.

ಮರಣ ದರ: ಮರಣ ದರದ ಮೇಲೆ ಪರಿಣಾಮ ಉಂಟುಮಾಡುವ ಕ್ರಮಗಳೂ ಸ್ಥೂಲವಾಗಿ ಜನಸಂಖ್ಯಾನೀತಿಯ ಅಡಿಯಲ್ಲಿ ಬರುತ್ತವೆ. ಆದರೆ ಇಂಥ ಕ್ರಮಗಳು ಜನಾರೋಗ್ಯವನ್ನು ಉತ್ತಮಪಡಿಸುವ ಉದ್ದೇಶದಿಂದ ಕೂಡಿದವು; ಇವುಗಳದು ಜನಸಂಖ್ಯಾ ನಿಯಂತ್ರಣೋದ್ದೇಶವಲ್ಲ. ಜನಸಂಖ್ಯೆಯ ನಿಯಂತ್ರಣಕ್ಕಾಗಿ ಮರಣ ದರದ ಹಸ್ತಕ್ಷೇಪ ಮಾಡುವುದು ಸೂಕ್ತವಲ್ಲ. ಜನಸಂಖ್ಯೆಯನ್ನು ಏರಿಸುವ ಉದ್ದೇಶದಿಂದ ಮರಣ ದರವನ್ನು ಇಳಿಸಬಹುದೇ ವಿನಾ, ಜನಸಂಖ್ಯೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮರಣ ದರವನ್ನು ಏರಿಸಲು ಯಾರೂ ಕೈಹಾಕಲಾರರು. ಅದು ಸಾಮಾಜಿಕವಾಗಿ ಸ್ವಾಗತಾರ್ಹವೆನಿಸದು. ಅದು ಮಾನವತೆಗೆ ಎಸಗಿದ ಅಪಚಾರ. ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲಿ ಮರಣ ದರ ಈಗಾಗಲೇ ಬಲು ಕಡಿಮೆ ಮಟ್ಟದಲ್ಲಿದೆ. ಅಲ್ಲಿ ಇದನ್ನು ಇನ್ನೂ ಕಡಿಮೆ ಮಾಡುವುದರಿಂದ ಅಲ್ಲಿಯ ಜನಸಂಖ್ಯೆಯನ್ನೇರಿಸಲು ಹೆಚ್ಚು ಸಹಾಯವಾಗಲಾರದು. ಅಂತೂ ಯಾವ ದೃಷ್ಟಿಯಿಂದ ನೋಡಿದರೂ ಮರಣ ದರವನ್ನು ಜನಸಂಖ್ಯಾನೀತಿಯ ಅಂಗವೆಂದು ಪರಿಗಣಿಸಲಾಗುವುದಿಲ್ಲ. ಸಮಾಜಕಲ್ಯಾಣ ನೀತಿಯಲ್ಲಿ

ಮರಣ ದರ ಇಳಿತಾಯ ಒಂದು ಮುಖ್ಯ ಕ್ರಮ. ಸಾರ್ವಜನಿಕ ಆರೋಗ್ಯ ಬೆಳೆಸಿ ಮರಣ ದರ ಇಳಿಸುವುದು ಇಂದು ಪ್ರತಿಯೊಂದು ನಾಗರಿಕ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅದಕ್ಕೂ ಜನಸಂಖ್ಯಾ ನಿಯಂತ್ರಣಕ್ಕೂ ಸಂಬಂಧ ಕಲ್ಪಿಸಲಾಗದು.

ಫಲವಂತಿಕೆಯ ನಿಯಂತ್ರಣ : ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ಜನಸಂಖ್ಯಾ ನಿಯಂತ್ರಣಕ್ಕೆ ಫಲವಂತಿಕೆಯ ನಿಯಂತ್ರಣವೇ ಅತ್ಯಂತ ಮುಖ್ಯ ಸಾಧನವೆನಿಸಿದೆ. ಜನಸಂಖ್ಯೆಯನ್ನು ಬೆಳೆಸಬೇಕೆಂದು ಕಾರ್ಯೋನ್ಮುಖವಾಗಿರುವ ದೇಶಗಳಲ್ಲಿ ಫಲವಂತಿಕೆಯ ದರ ಬಹಳ ಕಡಿಮೆ ಮಟ್ಟದಲ್ಲಿದೆ. ಜನಸಂಖ್ಯೆಯ ಬೆಳವಣಿಗೆಯ ದರವನ್ನು ಇಳಿಸಬೇಕೆಂದು ಪ್ರಯತ್ನಪಡುತ್ತಿರುವ ದೇಶಗಳಲ್ಲಿ ಫಲವಂತಿಕೆಯ ದರ ಬಲು ಹೆಚ್ಚಿನ ಮಟ್ಟದಲ್ಲಿದೆ.

**ಭಾರತದಲ್ಲಿ :** ಇಂದು ಪ್ರಪಂಚದಲ್ಲಿ ಮೂರು ರಾಷ್ಟ್ರಗಳು ವಾಸ್ತವವಾಗಿ ಸುಸಂಗತವಾದ, ವಿವೇಚನಾಯುತವಾದ, ಸ್ಪಷ್ಟವಾಗಿ ಘೋಷಿಸಿಕೊಂಡ ಜನಸಂಖ್ಯಾ ನೀತಿಗಳನ್ನು ಅನುಸರಿಸುತ್ತಿವೆ. ಅವು ಫ್ರಾನ್ಸ್, ಸ್ವೀಡನ್ ಮತ್ತು ಭಾರತ. ಫ್ರಾನ್ಸ್, ಸ್ವೀಡನ್‌ಗಳು ಜನಸಂಖ್ಯಾ ಬೆಳವಣಿಗೆಯ ದರವನ್ನು ಏರಿಸುವುದಕ್ಕೂ ಭಾರತ ಅದನ್ನು ಇಳಿಸುವುದಕ್ಕೂ ಕ್ರಮ ಕೈಗೊಂಡಿವೆ. ಆರ್ಥಿಕಾಭಿವೃದ್ಧಿ ಸಾಧಿಸಿ ಜನರ ಜೀವನಮಟ್ಟವನ್ನು ಏರಿಸಬೇಕಾದರೆ ಜನಸಂಖ್ಯೆಯನ್ನು ಹಿಡಿತದಲ್ಲಿಡುವುದು ಅತ್ಯಾವಶ್ಯಕವೆಂದು ಭಾರತ ಮನಗಂಡಿದೆ. ಇಳಿಯುತ್ತಿರುವ ಮರಣದರಕ್ಕೂ ಏರುತ್ತಿರುವ ಜನನದರಕ್ಕೂ ನಡುವಣ ಅಂತರವನ್ನು ಕಡಿಮೆ ಮಾಡಲು ಪ್ರಯತ್ನ ನಡೆಯುತ್ತಿದೆ. ಭಾರತದ ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಇದಕ್ಕಾಗಿ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಕುಟುಂಬಯೋಜನೆಗಾಗಿ ಪ್ರಚಾರ, ಅದನ್ನು ಕೈಗೊಳ್ಳಲು ಅಭಿಪ್ರೇರಣೆ, ಜನನ ನಿಯಂತ್ರಣದ ಬಗ್ಗೆ ಸಲಹೆ, ನಿಯಂತ್ರಣ ಸಾಧನಗಳ ಸರಬರಾಯಿ, ಕುಟುಂಬ ಯೋಜನಾ ಚಿಕಿತ್ಸಾಲಯಗಳ ಸ್ಥಾಪನೆ–ಇವು ಕೆಲವು ಕ್ರಮಗಳು. ನಿರೋಧ ಸಾಧನಗಳ ತಯಾರಿಕೆ ಹಂಚಿಕೆಗಳಿಗೆ ಸರ್ಕಾರ ಸಹಾಯಧನ ನೀಡುತ್ತಿದೆ. ಕುಟುಂಬ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ವಿಶ್ವಸಂಸ್ಥೆಯ ಪರಿಣತರು ಅಭ್ಯಸಿಸಿ ಸಲಹೆ ನೀಡಿದ್ದಾರೆ. **(ನೋಡಿ–ಕುಟುಂಬಯೋಜನೆ)**

ಪರಿಣಾಮ : ಜನಸಂಖ್ಯಾ ನೀತಿಯ ಪರಿಣಾಮಗಳೇನೆಂಬುದನ್ನು ಖಚಿತವಾಗಿ ಹೇಳುವ ಕಾಲ ಇನ್ನೂ ಬಂದಿಲ್ಲ. ಫ್ರಾನ್ಸ್, ಸ್ವೀಡನ್, ಭಾರತ ಈ ಮೂರು ದೇಶಗಳು ಮಾತ್ರ ಈ ಬಗ್ಗೆ ಸ್ಪಷ್ಟವಾದ ನೀತಿ ಅನುಸರಿಸುತ್ತಿವೆ. ಅವು ಇದರ ಫಲಾಫಲಗಳ ಬಗ್ಗೆ ಇನ್ನೂ ಸ್ಪಷ್ಟ ಮಾಹಿತಿಯನ್ನೇನೂ ಒದಗಿಸುವಂತಿಲ್ಲ. ಜನಸಂಖ್ಯೆ ಇಳಿಮುಖವಾಗಿದ್ದ ಐರೋಪ್ಯ ರಾಷ್ಟ್ರಗಳ ಈಚಿನ ಪ್ರವೃತ್ತಿಯೆಂದರೆ ಅದರ ಏರಿಕೆ. ಭಾರತದಲ್ಲಿ ಜನಸಂಖ್ಯೆಯ ಏರುವಿಕೆಯ ದರವನ್ನು ನೋಡಿದಾಗ ಅಲ್ಲಿ ಕುಟುಂಬ ಯೋಜನೆ ಇನ್ನೂ ತೀವ್ರಗತಿಯಲ್ಲಿ ಆಗಬೇಕೆಂದೇ ಹೇಳಬಹುದಾಗಿದೆ. *

**ಜನಸೇವಕ :** ಸಮಾಜದ ಏಳಿಗೆ ಮತ್ತು ಕಲ್ಯಾಣ ಸಾಧನೆಯ ಉದ್ದೇಶದಿಂದ ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯಿಂದ ಪ್ರಕಟವಾಗುತ್ತಿದ್ದ ವಾರಪತ್ರಿಕೆ. 1955ರಲ್ಲಿ ಪ್ರಾರಂಭವಾಗಿ 1972ರ ಆಗಸ್ಟ್‌ವರೆಗೆ ನಡೆಯಿತು. ದಿನಕರ ದೇಸಾಯಿ ಇದರ ಸಂಸ್ಥಾಪಕರು. ಅಮ್ಮೆಂಬಳ ಆನಂದ ಸಂಪಾದಕರು. ಇದು ಸಾರ್ವತ್ರಿಕ ಶಿಕ್ಷಣ ಚಳವಳಿಯ ಅಂಗವಾಗಿ ಕೆನರ ವೆಲ್‌ಫೇರ್ ಟ್ರಸ್ಟ್ ಆರಂಭಿಸಿದ ಪತ್ರಿಕೆ. ಈ ಪತ್ರಿಕೆಯ ಪ್ರಸಾರ ಸುಮಾರು 2,000 ಆಗಿತ್ತು. ಡಿಮ್ಮೆ ಅರ್ಧ ಆಕಾರದ ಎಂಟು ಪುಟಗಳ ಈ ಪತ್ರಿಕೆಯ ಬಿಡಿ ಸಂಚಿಕೆಯ ಬೆಲೆ 12 ಪೈಸೆ. ಆರ್ಥಿಕ ಕಾರಣಗಳಿಂದಾಗಿ ಪತ್ರಿಕೆ ನಿಂತುಹೋಯಿತು.

ಜನಸೇವಕದ ಮೊದಲ ಸಂಚಿಕೆ (26–1–1955) ಯಲ್ಲಿ ತನ್ನ ಧ್ಯೇಯ ಧೋರಣೆ ಸ್ಪಷ್ಟಪಡಿಸಿದೆ: 'ಪತ್ರಿಕೆ ತನ್ನ ಹೆಸರಿನಂತೆ ಜನರ ಸೇವೆ ಮಾಡುವ ಉದ್ದೇಶದಿಂದ ಕಾರ್ಯ ಎಸಗುವುದು. ಉತ್ತರ ಕನ್ನಡ ಜಿಲ್ಲೆಯ ಜನರ ದೈನಂದಿನ ತೊಡಕುಗಳನ್ನು ನಿವಾರಿಸಲು ಹೆಣಗುವುದು ಪತ್ರಿಕೆಯ ಧ್ಯೇಯ. ಜನಜಾಗೃತಿಗೆ ಉಪಯುಕ್ತವಿರುವ ಜ್ಞಾನಪ್ರಸಾರ ಮಾಡಿ ಕರಾವಳಿ ಕರ್ನಾಟಕ ಮಾತ್ರವಲ್ಲದೆ, ವಿಶಾಲ ಕರ್ನಾಟಕದ ಸರ್ವಾಂಗೀಣ ಏಳಿಗೆಗಾಗಿ ದುಡಿಯುವುದು ಪತ್ರಿಕೆಯ ಉದ್ದೇಶವಾಗಿತ್ತು. ವ್ಯಾವಹಾರಿಕ ಕನಸುಗಾರರಾದ ದಿನಕರ ದೇಸಾಯಿಯವರು 'ಜನಸೇವಕ' ಆದರ್ಶ ಪತ್ರಿಕೆಯಾಗಿ ಮುನ್ನಡೆಯುವ ಕಾರ್ಯ ಯೋಜನೆ ರೂಪಿಸಿದ್ದರು. ಆರಂಭದಲ್ಲಿ 'ನಿರೀಕ್ಷಕ' ಹೆಸರಿನಲ್ಲಿ ಮುಖಪುಟ ಲೇಖನ ಬರೆಯುತ್ತಿದ್ದವರು 'ಜನಸೇವಕ'ರಾದರು. ಸಾರ್ವತ್ರಿಕ ಸಾಕ್ಷರತೆ, ಭಾರತದಲ್ಲಿ ಬಡತನ, ಭ್ರಷ್ಟಾಚಾರದ ವಿಶ್ವರೂಪ, ಗ್ರಾಮೀಣ ಅಭಿವೃದ್ಧಿ, ಪಂಚವಾರ್ಷಿಕ ಯೋಜನೆಗಳ ಕಾರ್ಯಾಚರಣೆ, ಪಕ್ಷಾಂತರ ಪಿಡುಗು ಹೀಗೆ ವೈವಿಧ್ಯಮಯ ವಿಷಯಗಳ ಹರವು. ತಿಳಿಯಾದ ಭಾಷೆ, ಸಣ್ಣ ಸಣ್ಣ ವಾಕ್ಯಗಳು ಅಂಕಿ ಅಂಶಗಳಿಂದ ಕೂಡಿದ ಸಮರ್ಥ ವಾದಮಂಡನೆ, ಸಮಸ್ಯೆಯ ವಿಶ್ಲೇಷಣೆ. 'ಪ್ರಜಾವಾಣಿ', 'ಕಸ್ತೂರಿ' ಮತ್ತಿತರ ಪತ್ರಿಕೆಗಳೂ ಆ ಲೇಖನಗಳನ್ನೂ ಪುನರ್ಮುದ್ರಿಸುವುದು ಸಾಮಾನ್ಯವಾಗಿತ್ತು. ಪ್ರತಿ ಪುಟಗಳಲ್ಲೂ ರಾರಾಜಿಸುತ್ತಿದ್ದ ನಾಲ್ಕು ಸಾಲಿನ ಚುಟುಕಗಳು, ಹದವಾದ ಭಾಷೆ, ಮಾತಿನ ಮೊನಚು, ಕೊಂಕು, ಪ್ರಾಸಬದ್ಧ ರಚನೆ, ಸಂಪಾದಕೀಯ ಬರಹಕ್ಕಿಂತ ಪ್ರಬಲ ಅಸ್ತ್ರ. ಗೌರೀಶ ಕಾಯ್ಕಿಣಿ 'ಅಡಿಗೆ ಭಟ್ಟ'ರಾಗಿ ಬಡಿಸುತ್ತಿದ್ದ 'ಉಪ್ಪಿನಕಾಯಿ' ಪ್ರತಿವಾರದ ವಿಶೇಷ. ಯಶವಂತ ಚಿತ್ತಾಲ, ವಿ.ಕೃ. ಗೋಕಾಕ್, ಆನಂದ, ಶಿವರಾಮ ಕಾರಂತ, ಸಿದ್ಧವನಹಳ್ಳಿ ಕೃಷ್ಣ ಶರ್ಮ, ಶಾಂತಿನಾಥ ದೇಸಾಯಿ, ಬಿ.ಎಚ್. ಶ್ರೀಧರ, ಸೇವನಮೀ ರಾಜಮಲ್ಲರ ವೈಚಾರಿಕ ಲೇಖನಗಳು ಶ್ರೀನಿವಾಸ ಹಾವನೂರ, ದಯಾನಂದ ತೋರ್ಕೆ, ಮೊದಲಾದ ಉದಯೋನ್ಮುಖ ಬರೆಹಗಾರರಿಗೂ ಪ್ರೋತ್ಸಾಹ ನೀಡಿದ ಪತ್ರಿಕೆ.ಸಮಾಜವಾದಿ ಪಕ್ಷದ ಧ್ಯೇಯ ಧೋರಣೆ, ಸರ್ವೋದಯ ಧುರೀಣ ಜಯಪ್ರಕಾಶ ನಾರಾಯಣರ ವಿಚಾರಧಾರೆಯನ್ನು ಕನ್ನಡಿಗರಿಗೆ ಮೊದಲು ಪರಿಚಯಿಸಿದ್ದು ಜನಸೇವಕ.

ಪತ್ರಿಕೆ ಸಿದ್ಧಪಡಿಸಲು ಆಗುತ್ತಿದ್ದ ವೆಚ್ಚ 27 ಪೈಸೆ. ಆದರೆ ಜನಸಾಮಾನ್ಯರಿಗೆಲ್ಲ ತಲುಪಲೆಂದು 12 ಪೈಸೆಗೆ ಮಾರಾಟ ಮಾಡುತ್ತಿತ್ತು. ಮುದ್ರಣವೆಚ್ಚ ಏರುತ್ತಿತ್ತು. ಸಾರ್ವಜನಿಕರ ನಿರಾಶದಾಯಕ ಪ್ರೋತ್ಸಾಹ, ಪ್ರತಿವರ್ಷವೂ ಸಹಸ್ರಾರು ರೂಪಾಯಿ ನಷ್ಟ ಭರಿಸಲಾಗದೆ 'ಜನಸೇವಕ' 1972 ಆಗಸ್ಟ್ 2ರಂದು 18ನೆಯ ವರ್ಷದ 31ನೆಯ ಸಂಚಿಕೆಯನ್ನು ಬಿಡುಗಡೆ ಮಾಡಿ ಪ್ರಕಟಣೆ ನಿಲ್ಲಿಸಿತು. (ಎಸ್.ವಿ.ಪಿ.ಎ.; ಎಂ.ಬಿ.ಎಸ್.)

**ಜನಾಂಗ ಹತ್ಯೆ :** ಒಂದು ರಾಷ್ಟ್ರ, ಕುಲ, ಬುಡಕಟ್ಟು, ಧರ್ಮ ಅಥವಾ ರಾಜಕೀಯ ಸಮೂಹವನ್ನು ನಾಶಗೊಳಿಸುವ ಯತ್ನ (ಜೆನೊಸೈಡ್). ಇಂಗ್ಲಿಷಿನ ಜೆನೊಸೈಡ್ ಎಂಬ ಶಬ್ದವನ್ನು ರಚಿಸಿದವನು ರಾಫೇಲ್ ಲಿಮ್‌ಕಿನ್ ಎಂಬ ಅಮೆರಿಕನ್ ವಿದ್ವಾಂಸ. ಬುಡಕಟ್ಟು, ರಾಷ್ಟ್ರ ಅಥವಾ ಕುಲ ಎಂಬ ಅರ್ಥ ಇರುವ ಜೆನೋಸ್ ಎಂಬ ಗ್ರೀಕ್ ಪದವನ್ನೂ ಹತ್ಯೆ ಅಥವಾ ವಧೆ ಎಂಬ ಅರ್ಥದ ಸೈಡ್ ಎಂಬ ಲ್ಯಾಟಿನ್ ಪ್ರತ್ಯಯವನ್ನೂ ಕೂಡಿಸಿ ಅವನು ಈ ಶಬ್ದವನ್ನು ರಚಿಸಿದ. ಜನಾಂಗಹತ್ಯೆಯನ್ನು ನಿಷೇಧಿಸಲು ಅಂತಾರಾಷ್ಟ್ರೀಯ ಕ್ರಮ ಕೈಗೊಳ್ಳಬೇಕೆಂದು ಪ್ರತಿಪಾದಿಸಿದವನು ಆತ. 1933–45ರ ಕಾಲದ ಯುರೋಪಿನ ಅನುಭವದ ದೃಷ್ಟಿಯಲ್ಲಿ, ಮಾನವ ಸಮೂಹಗಳನ್ನೇ ನಾಶಗೊಳಿಸುವ ಕೃತ್ಯಕ್ಕೆ ಸಂಬಂಧಿಸಿದಂತೆ ನ್ಯಾಯಿಕ ಪರಿಕಲ್ಪನೆಯನ್ನು ರೂಪಿಸುವುದು ಆವಶ್ಯವೆಂದು ಆತ ಪ್ರತಿಪಾದಿಸಿದ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಎಸಗಲಾದ ಅಪರಾಧಗಳನ್ನು ಕುರಿತು ನಡೆಸಿದ ನ್ಯೂರೆನ್‌ಬರ್ಗ್ ಮತ್ತು ಇತರ ವಿಚಾರಣೆಗಳಿಂದ ಬೆಳಕಿಗೆ ಬಂದ ಸಂಗತಿಗಳ ಪರಿಣಾಮವಾಗಿ ಜನಾಂಗಕ್ಕೆ ಅಂತಾರಾಷ್ಟ್ರೀಯ ನ್ಯಾಯದ ದೃಷ್ಟಿಯಲ್ಲಿ ನಾಗರಿಕ ಪ್ರಪಂಚದ ಖಂಡನೆಗೆ ಅರ್ಹವಾದ ಅಪರಾಧವೆಂದೂ ಇದನ್ನು ಎಸಗುವವರೂ ಅವರ ಜೊತೆಗಾರರೂ ಶಿಕ್ಷಾರ್ಹರೆಂದೂ ವಿಶ್ವಸಂಸ್ಥೆ ಸಾರಿತು. ಜನಾಂಗಹತ್ಯೆಯ ಅಪರಾಧದ ತಡೆ ಹಾಗೂ ಶಿಕ್ಷೆಯ ಬಗ್ಗೆ 1948ರ ಡಿಸೆಂಬರ್ 9ರಂದು ವಿಶ್ವಸಂಸ್ಥೆಯ ಮಹಾಸಭೆ ಒಂದು ಒಡಂಬಡಿಕೆಗೆ ಒಪ್ಪಿಗೆ ನೀಡಿತು. ಜನಾಂಗಹತ್ಯೆ ಯುದ್ಧಕಾಲದಲ್ಲೇ ನಡೆಯಲಿ, ಶಾಂತಿಕಾಲದಲ್ಲೇ ನಡೆಯಲಿ, ಅದು ಅಂತಾರಾಷ್ಟ್ರೀಯ ನ್ಯಾಯದೃಷ್ಟಿಯಲ್ಲಿ ಅಪರಾಧ; ಅದಕ್ಕಾಗಿ ದಂಡನೆ ವಿಧಿಸಲು ಒಡಂಬಡಿಕೆಯ ರಾಷ್ಟ್ರಗಳು ವಾಗ್ದಾನ ಮಾಡಿವೆ.

ಜನಾಂಗಹತ್ಯೆಗೂ ಜನಹತ್ಯೆಗೂ ವ್ಯತ್ಯಾಸವುಂಟು. ಶಾಂತಿಗೆ ವಿರುದ್ಧವಾದ ಅಪರಾಧಗಳಿಗೆ ಅಥವಾ ಯುದ್ಧಾಪರಾಧಗಳಿಗೆ ಸಂಬಂಧಿಸಿದಂತೆ ಎಸಗಿದಾಗ ಮಾತ್ರ ಕೆಲವು ಅಮಾನುಷ ಕೃತ್ಯಗಳು ಅಂತಾರಾಷ್ಟ್ರೀಯ ಅಪರಾಧಗಳಾಗುತ್ತವೆ. ಎಂದರೆ ಮಾನವತೆಯ ವಿರುದ್ಧವಾದ ಅಪರಾಧಗಳಾಗುತ್ತವೆ. ಆದರೆ ಒಂದು ಕೃತ್ಯವನ್ನು ಜನಾಂಗಹತ್ಯೆಯೆಂದು ಕರೆಯಬೇಕಾದರೆ ಅದು ಯುದ್ಧಸಂಬಂಧಿಯಾಗಿಯೇ ಇರಬೇಕಾದ್ದಿಲ್ಲ; ಒಂದು ರಾಷ್ಟ್ರ, ಕುಲ ಬುಡಕಟ್ಟು, ಧರ್ಮ ಅಥವಾ ರಾಜಕೀಯ ಸಮೂಹವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅಳಿಸಿಹಾಕುವ ಉದ್ದೇಶದಿಂದ ಎಸಗಿದ ಈ ಕೃತ್ಯಗಳೆಲ್ಲವೂ ಒಡಂಬಡಿಕೆಯ ಪ್ರಕಾರ ಜನಾಂಗಹತ್ಯೆ ಎನಿಸುತ್ತವೆ: 1. ಒಂದು ಸಮೂಹದ ಸದಸ್ಯರ ಕೊಲೆ; 2. ಒಂದು ಸಮೂಹದ ಸದಸ್ಯರಿಗೆ ಶಾರೀರಿಕವಾದ ಅಥವಾ ಬೌದ್ಧಿಕವಾದ ತೀವ್ರ ಹಾನಿ ಉಂಟುಮಾಡುವುದು; 3. ಒಂದು ಸಮೂಹವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ನಾಶಗೊಳಿಸುವ ದೃಷ್ಟಿಯಿಂದ ಅದನ್ನು ದುರ್ಭರ ಜೀವನಸ್ಥಿತಿಗಳಿಗೆ ಒಳಪಡಿಸುವುದು; 4. ಒಂದು ಸಮೂಹದಲ್ಲಿ ಮಕ್ಕಳು ಹುಟ್ಟದಂತೆ ಕಟ್ಟುಕಟ್ಟಳೆಗಳನ್ನು ಜಾರಿಗೆ ತುರುವುದು; 5. ಒಂದು ಸಮೂಹದ ಮಕ್ಕಳನ್ನು ಬಲಾತ್ಕಾರವಾಗಿ ಇನ್ನೊಂದು ಸಮೂಹಕ್ಕೆ ವರ್ಗಾಯಿಸುವುದು.

1951ರ ಜನವರಿ 12ರಿಂದ ಈ ಒಡಂಬಡಿಕೆ ಕಾರ್ಯರೂಪಕ್ಕೆ ಬಂದಿದೆ. ಈ ನಿರ್ಣಯವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಂಗೀಕರಿಸಿದ ಬಳಿಕ 1965ರ ಫೆಬ್ರುವರಿ 28ರವರೆಗೆ 67 ರಾಷ್ಟ್ರಗಳು ಇದನ್ನು ಒಪ್ಪಿ ಸಹಿ ಮಾಡಿದ್ದುವು. ನೇರವಾಗಿ ಮತ್ತು ಸಾರ್ವಜನಿಕ ದೋಷಾರೋಪಣೆಯ ಮೂಲಕ ಸಂಚು ಹೂಡುವುದು ಹಾಗೂ ಜನಾಂಗಹತ್ಯೆ ನಡೆಸಲು ಪ್ರಯತ್ನಿಸುವುದು ಮತ್ತು ಅದರಲ್ಲಿ ಭಾಗಿಯಾಗುವುದು–ಈ ಎಲ್ಲ ಅಪರಾಧಗಳೂ ಶಿಕ್ಷಾರ್ಹವೆಂದು ಪರಿಗಣಿತವಾಗಿವೆ. ಅಪರಾಧಿಗಳು ಸಂವಿಧಾನಬದ್ಧ

ಆಡಳಿತಗಾರರಾಗಿರಲಿ, ಸರ್ಕಾರಿ ಅಧಿಕಾರಿಗಳಾಗಿರಲಿ, ಖಾಸಗಿ ವ್ಯಕ್ತಿಗಳಾಗಿರಲಿ ಅವರೆಲ್ಲ ಶಿಕ್ಷೆಗೆ ಒಳಗಾಗುತ್ತಾರೆ. ಕೃತ್ಯ ನಡೆದ ಪ್ರದೇಶದ ಸರ್ಕಾರದಿಂದ ರಚಿತವಾದ ಅರ್ಹ ವಿಚಾರಣಾಮಂಡಳಿಯಾಗಲಿ, ಒಡಂಬಡಿಕೆಯನ್ನೊಪ್ಪಿದ ರಾಷ್ಟ್ರಗಳ ಮೇಲೆ ಅಧಿಕಾರವ್ಯಾಪ್ತಿಯುಳ್ಳ, ಒಡಂಬಡಿಕೆ ರಾಷ್ಟ್ರಗಳು ಒಪ್ಪಿಕೊಂಡ, ಅಂತಾರಾಷ್ಟ್ರೀಯ ದಂಡನಾಮಂಡಳಿಯಾಗಲಿ ಆರೋಪಿಗಳ ವಿಚಾರಣೆ ಮಾಡತಕ್ಕದ್ದು.

ಒಂದು ರಾಷ್ಟ್ರದ ಸರ್ಕಾರವೇ ತನ್ನ ಸ್ವಂತ ಪ್ರದೇಶದೊಳಗೆ ಜನಹತ್ಯೆಯನ್ನೆಸಗಿದರೂ ಅದು ಆ ರಾಷ್ಟ್ರಕ್ಕೆ ಮಾತ್ರ ಸಂಬಂಧಪಟ್ಟ ವಿಷಯವಾಗದೆ ಅಂತಾರಾಷ್ಟ್ರೀಯ ವಿಷಯವಾಗುತ್ತದೆ ಎಂಬ ಅಂಶವನ್ನು ಒಡಂಬಡಿಕೆಯ ರಾಷ್ಟ್ರಗಳು ಮನಗಂಡಿವೆ. ಒಡಂಬಡಿಕೆಯ ಯಾವುದೇ ರಾಷ್ಟ್ರವಾದರೂ ಜನಾಂಗಹತ್ಯೆಯನ್ನು ತಡೆಗಟ್ಟಲು ಕ್ರಮಕೈಗೊಳ್ಳಬಹುದು; ವಿಶ್ವಸಂಸ್ಥೆಯ ಪ್ರಣಾಳಿಕೆಗಳಿಗನುಗುಣವಾಗಿ ವಿಶ್ವಸಂಸ್ಥೆಯ ಅಂಗಸಂಸ್ಥೆಗಳು ಮಧ್ಯ ಪ್ರವೇಶಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಕೋರಬಹುದು.

ಜನಾಂಗಹತ್ಯೆಯ ಪರಿಕಲ್ಪನೆ ಈಚಿನದಾದರೂ ಅದು ಇತಿಹಾಸದ ಉದ್ದಕ್ಕೂ ನಡೆದುಕೊಂಡು ಬಂದಿರುವ ಅಪರಾಧ. 1269ರಲ್ಲಿ ಭಾರತದ ನಶಾಪುರದ ಪ್ರದೇಶದಲ್ಲಿ ಜೆಂಗಿಸ್‌ಖಾನನ ಕಡೆಯವರು ನಡೆಸಿದ ಜನಾಂಗಹತ್ಯೆಯಿಂದ ಸುಮಾರು 17,47,000 ಜನ ಸತ್ತರೆಂದು ಹೇಳಲಾಗಿದೆ. ಉತ್ತರ ಐರ್ಲೆಂಡಿನಲ್ಲಿ 1641ರ ಅಕ್ಟೋಬರ್ 23ರಂದು 1,54,000 ಪ್ರಾಟೆಸ್ಟಂಟರನ್ನು ಕೆಥೊಲಿಕರು ಕೊಲೆ ಮಾಡಿದರು. ಜರ್ಮನ್ ಆಕ್ರಮಿತ ಪ್ರದೇಶದಲ್ಲಿ 1945ರ ಮೇ ವರೆಗೆ ನಾಟ್ಸಿಗಳು ಸುಮಾರು 57,00,000 ಯೆಹೂದ್ಯರನ್ನು ಕೊಂದರು. 1951 ರಿಂದ 1952ರವರೆಗೆ ಚೀನದಲ್ಲಿ ನಡೆದ ವಿಚಾರ ಸುಧಾರಣಾ ಚಳವಳಿಯ ಕಾಲದಲ್ಲಿ ಸಂಭವಿಸಿದ ಕ್ರಾಂತಿವಿರೋಧಿಗಳ ಹತ್ಯೆ 20,00,000 ಎಂದು ಅಂದಾಜು ಮಾಡಲಾಗಿದೆ. ಭಾರತ–ಪಾಕಿಸ್ತಾನ ವಿಭಜನೆಯ ಕಾಲದಲ್ಲಿ ಕಾಶ್ಮೀರದಲ್ಲಿ ಹತ್ಯೆಗೆ ಒಳಗಾದವರು 1,80,000 (1947).

ಮಂಗೋಲರೂ ಹೂಣರೂ ಯುರೋಪನ್ನು ಮುತ್ತಿದಾಗ, ಅಲೆಗ್ಸಾಂಡರ್ ದಂಡಯಾತ್ರೆ ನಡೆಸಿದಾಗ, ಇಸ್ಲಾಮ್ ಮತ ಹರಡಿದಾಗ, ಯುರೋಪಿಯನ್ನರು ಆಫ್ರಿಕ–ಅಮೆರಿಕಗಳಲ್ಲಿ ನೆಲೆಸಿದಾಗ ಆದ ಜನಾಂಗಹತ್ಯೆಗಳಲ್ಲಿ ಅಸಂಖ್ಯಾತ ಜನ ಬಲಿಯಾಗಿದ್ದಾರೆ. ಇತಿಹಾಸದ ಆದಿಯಿಂದ ಸತತವಾಗಿ ಹತ್ಯೆಗೆ ಒಳಗಾಗಿರುವವರೆಂದರೆ ಯೆಹೂದ್ಯರು. 1971ರಲ್ಲಿ ಬಾಂಗ್ಲಾದೇಶದಲ್ಲಿ ಪಾಕಿಸ್ತಾನ ನಡೆಸಿದ ಜನಾಂಗಹತ್ಯೆಯಲ್ಲಿ ಸತ್ತವರ ಸಂಖ್ಯೆ ಸುಮಾರು 30 ಲಕ್ಷ ಎಂದು ಅಂದಾಜು ಮಾಡಲಾಗಿದೆ. (ಡಿ.ಎಸ್.ಜೆ.)

**ಜನಾಬಾಯಿ :** 1260–1353. ಮಹಾರಾಷ್ಟ್ರದ ಒಬ್ಬ ಸಂತ ಕವಯಿತ್ರಿ. ಆ ಪ್ರಾಂತ್ಯದ ಭಕ್ತ ಮಹಿಳೆಯರಲ್ಲಿ ಮುಕ್ತಾಬಾಯಿಯನ್ನು ಬಿಟ್ಟರೆ ಈಕೆಯೇ ಹಿರಿಯಳು. ಗೋದಾವರೀ ತೀರದ ಗಂಗಾಖೇಡ ಎಂಬ ಗ್ರಾಮದಲ್ಲಿ ಈಕೆ ಜನಿಸಿದಳು. ತಂದೆ ದಮಾ. ತಾಯಿ ಕುರುಂಡ. ಇವರಿಬ್ಬರೂ ಪಂಡರಪುರದ ವಿಟ್ಠಲನ ಭಕ್ತರು. ಹೀಗಾಗಿ ಜನಾಬಾಯಿ ಬಾಲ್ಯದಲ್ಲಿಯೇ ಧಾರ್ಮಿಕ ಪ್ರಭಾವಕ್ಕೆ ಒಳಗಾದಳು. ಮುಂದೆ ಸಂತ ನಾಮದೇವನ ಶಿಷ್ಯಳಾಗಿ ಆತನ ಸೇವೆಯಲ್ಲಿಯೇ ತನ್ನ ಜೀವಮಾನವನ್ನು ಕಳೆದಳು.

ದೇವರು, ಭಕ್ತಿ, ಜೀವನ ಮುಂತಾದ ವಿಷಯಗಳನ್ನು ಕುರಿತು ಜನಾಬಾಯಿ ನೂರಾರು ಅಭಂಗಗಳನ್ನು ರಚಿಸಿದ್ದಾಳೆ. ಈ ಅಭಂಗಗಳು ಭಾವದ ಉತ್ಕಟತೆಯನ್ನು ಹೊಂದಿದ್ದು, ಒಳ್ಳೆಯ ಕಾವ್ಯ ಗುಣವನ್ನು ಹೊಂದಿವೆಯಾದರೂ ಇವುಗಳ ಭಾಷೆ ಸರಳವಾದದ್ದು. ಇವು ಕರ್ತೃವಿನ ವ್ಯಕ್ತಿತ್ವವನ್ನು ಸ್ಫುಟವಾಗಿ ಚಿತ್ರಿಸುತ್ತವೆ.

ಜನಾಬಾಯಿಯ ಸಂದೇಶ ಇದು : ಶೂರರ ಶಸ್ತ್ರ, ಕೃಪಣರ ಧನ, ಪತಿವ್ರತೆಯ ಸ್ತನ–ಇವು ಪ್ರಾಣಹೋಗದೆ ಅನ್ಯರ ಕೈಸೇರಲಾರವು. ಹಾಗೆಯೇ ಅಹಂಕಾರ ಅಳಿಯದೆ ದೇವರು ನಮ್ಮ ಕೈವಶನಾಗನು. ಸದ್ಗುರುಗಳ ಸೇವೆಯೇ ಸುಖದ ಸಾಧನ. ಸುಖದ ಆಸೆಯಿಂದ ಪತಂಗವು ಜ್ವಾಲೆಯನ್ನಪ್ಪಿ ಸುಟ್ಟು ಸತ್ತುಹೋಗುವಂತೆ ಜನ ವಿಷಯವಿಷದಲ್ಲಿ ಮುಳುಗಿ ಸತ್ತುಹೋಗುವರು. ಮದುಮಗನ ಜೊತೆಯಲ್ಲಿ ದಿಬ್ಬಣಿಗರಿಗೂ ಸವಿಯೂಟ ದೊರೆಯುವಂತೆ ನಾಮದೇವರ ಸಹವಾಸದಿಂದ ತನಗೂ ಪರಮಾತ್ಮನ ದರ್ಶನವಾಯಿತು. (ಎಂ.ಎ.)

**ಜನಾರ್ದನ ಸ್ವಾಮಿ :** 1504–1575. ಒಬ್ಬ ಅನುಭಾವಿ ಸಂತ. ಏಕನಾಥನ ಗುರು. ಈತ ಹುಟ್ಟಿದ್ದು ಈಗಿನ ಮಹಾರಾಷ್ಟ್ರದ ಒಂದು ಭಾಗವಾದ ಖಾಂದೇಶದ ಚಾಳೀಸಗಾಂವ್ ಎಂಬ ಹಳ್ಳಿಯಲ್ಲಿ. ಈತ ಮೊದಲು ಪರಮಾರ್ಥವನ್ನು ಒಲಿದಿರಲಿಲ್ಲ. ಒಳ್ಳೆಯ ರಾಜಕಾರಣಚತುರನಾದುದರಿಂದ ಈತನನ್ನು ಒಬ್ಬ ತುರುಕ ದೊರೆ ದೇವಗಡ ಕೋಟೆಯ ರಕ್ಷಕನಾಗಿ ನೇಮಕ ಮಾಡಿದ. ತನ್ನ ವಿವೇಕದಿಂದ ಜನಾರ್ದನ ಸ್ವಾಮಿ ಇಹಪರಗಳೆರಡನ್ನೂ ಚೆನ್ನಾಗಿ ಸಾಧಿಸಿದ. ಮುಂದೆ ಅಂಕಲಕೊಪ್ಪದಲ್ಲಿ ನರಸಿಂಹ ಸರಸ್ವತಿ ಸ್ವಾಮಿಯಿಂದ ಈತನಲ್ಲಿ ವೈರಾಗ್ಯ ಮೂಡಿತು. ಜನಾರ್ದನ ದತ್ತಾತ್ರೇಯನ ಉಪಾಸಕನಾದರೂ ಏಕನಾಥನಿಗೆ ಪಂಡರಿಯ ಸುಲಭ ದಾರಿಯನ್ನು ತೋರಿಸಿದ. ದೇವಗಡದ ಗವಿಯೊಂದರಲ್ಲಿ ಈತನ ಸಮಾಧಿ ಇದೆ.

ಜನಾರ್ದನ ಸ್ವಾಮಿ ಅನೇಕ ಅಭಂಗಗಳನ್ನು ರಚಿಸಿ ಭಕ್ತಿಭಾವವನ್ನು ತೋಡಿಕೊಂಡಿದ್ದಾನೆ. ಅವುಗಳಲ್ಲಿ ಆತನ ಅನುಭಾವಿ ಭಾವನೆಗಳು ಚೆನ್ನಾಗಿ ಮೂಡಿವೆ. (ಎಂ.ಎ.)

**ಜನ್ನ :** ಕನ್ನಡದ ಪ್ರಸಿದ್ಧ ಜೈನಕವಿ. 12ನೆಯ ಶತಮಾನದ ಉತ್ತರಾರ್ಧ ಮತ್ತು 13ನೆಯ ಶತಮಾನದ ಪೂರ್ವಾರ್ಧದಲ್ಲಿ ಕೃತಿರಚನೆ ಮಾಡಿದವ. ಹಳೆಯಬೀಡು ಪ್ರಾಂತದವನಾದ ಈತನ ತಂದೆ ಸುಮನೋಬಾಣನೆಂಬ ಬಿರುದು ಪಡೆದಿದ್ದ ಶಂಕರ. ತಾಯಿ ಗಂಗಾದೇವಿ, ಹೆಂಡತಿ ಲಕುಮಾದೇವಿ. ಧರ್ಮಗುರು ರಾಮಚಂದ್ರ ದೇವ ಮುನಿ. ಉಪಾಧ್ಯಾಯ ಇಮ್ಮಡಿ ನಾಗವರ್ಮ. ಹೊಯ್ಸಳ ಬಲ್ಲಾಳನಿಂದ ಈತ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದು, ಅನಂತರ ನರಸಿಂಹನಲ್ಲಿ ದಂಡಾಧಿಪತಿಯೂ ಮಂತ್ರಿಯೂ ಆಗಿದ್ದ. ನಾಟ್ಯಭುಜನಾರ್ದನದೇವ ಎಂದು ತನ್ನನ್ನು ಕರೆದುಕೊಂಡಿದ್ದಾನೆ. ಒಟ್ಟಿನಲ್ಲಿ ಈತ ಪಂಪನಂತೆ ಬಹುಮುಖ ವ್ಯಕ್ತಿತ್ವವುಳ್ಳವ.

ಅನುಭವಮುಕುರವೆಂಬ ಕಾಮಶಾಸ್ತ್ರಸಂಬಂಧವಾದ ಕೃತಿಯನ್ನೂ ಯಶೋಧರ ಚರಿತೆ, ಅನಂತನಾಥಪುರಾಣ ಎಂಬ ಎರಡು ಕಾವ್ಯಗಳನ್ನೂ ಬರೆದಿದ್ದಾನೆ, ಜನ್ನ. ಕೆಲವು ಶಾಸನಗಳೂ ಈತನಿಂದ ರಚಿತವಾಗಿವೆ. ಯಶೋಧರಚರಿತೆ, ಅನಂತನಾಥ ಪುರಾಣ ಎರಡೂ ಧಾರ್ಮಿಕ ಕೃತಿಗಳು. ಆದರೆ ಯಶೋಧರಚರಿತೆಯಲ್ಲಿ ಲೌಕಿಕದ ನೆಲೆಗಟ್ಟು ಇಲ್ಲದಿಲ್ಲ.

ಯಶೋಧರಚರಿತೆ ಬಹುಸುಂದರವಾದ ಪುಟ್ಟಕಾವ್ಯ. ಕೇವಲ ನಾಲ್ಕು ಅವತಾರಗಳೂ 310 ಪದ್ಯಗಳೂ ಇದರಲ್ಲಿವೆ. ಬರಿಯ ಕಂದಪದ್ಯಗಳಿಂದಲೇ ರಚಿತವಾಗಿರುವುದು ಈ ಕೃತಿಯ ವಿಶಿಷ್ಟತೆ. ಇದಕ್ಕೆ ಮೂಲ, ಸಂಸ್ಕೃತದಲ್ಲಿ ವಾದಿರಾಜ (11ನೆಯ ಶ.) ಬರೆದಿರುವ ಯಶೋಧರಚರಿತ. ಅದಕ್ಕಿಂತಲೂ ಹಿಂದೆ ಪ್ರಭಂಜನ, ಹರಿಭದ್ರ, ಸೋಮದೇವ ಮುಂತಾದ ಪ್ರಾಕೃತ ಸಂಸ್ಕೃತ ಕವಿಗಳು ಯಶೋಧರನ ಕತೆಯನ್ನು ನಿರೂಪಿಸಿದ್ದರು. ಮೂಲತಃ ಅದೊಂದು ಜನಪದ ಕತೆಯಿರಬೇಕು. ಹಿಂದಿನವರಲ್ಲಿ ಬಹುಮಟ್ಟಿಗೆ ಧಾರ್ಮಿಕ ಸ್ವರೂಪದ ಕತೆಯಷ್ಟೇ ಆಗಿದ್ದ ಯಶೋಧರಾಖ್ಯಾನವನ್ನು ತೆಗೆದುಕೊಂಡು ಅದರ ಅಸಂಗತಾಂಶಗಳನ್ನು ನಿವಾರಿಸಿ, ಉಚಿತ ಮಾರ್ಪಾಡುಗಳನ್ನು ಮಾಡಿಕೊಂಡು ಅದನ್ನೊಂದು ಸರಳರಮ್ಯವಾದ, ಮಾನವೀಯ ಸ್ವಾರಸ್ಯವುಳ್ಳ ಕಾವ್ಯವನ್ನಾಗಿ ಪರಿವರ್ತಿಸಿದವ ವಾದಿರಾಜ. ಅವನ ಕಾವ್ಯಕ್ಕೆ ಸಂಸ್ಕೃತದಲ್ಲಿ ಯಾವ ವೈಶಿಷ್ಟ್ಯವಿದೆಯೋ ಅದೇ ವೈಶಿಷ್ಟ್ಯ ಕನ್ನಡದಲ್ಲಿ ಜನ್ನನ ಕೃತಿಗಿದೆ.

ಜನ್ನ ವಾದಿರಾಜನನ್ನು ಹೆಜ್ಜೆಹೆಜ್ಜೆಗೂ ಅನುಸರಿಸಿದ್ದಾನಾದರೂ ತನ್ನ ಸ್ವಂತ ಪ್ರತಿಭೆಯನ್ನು ಸಾಕಷ್ಟು ತೋರಿದ್ದಾನೆ. ಕೆಲವೆಡೆ ಮೂಲವನ್ನು ಸೊಗಸಾಗಿ ಅನುವಾದಿಸಿ ತನ್ನ ಭಾಷಾಂತರ ಶಕ್ತಿಯನ್ನು ಮೆರೆದಿದ್ದಾನೆ; ಕೆಲವೆಡೆ ಮೂಲದ ಚೆಲುವನ್ನು ಹೆಚ್ಚಿಸಿದ್ದಾನೆ; ಎಷ್ಟೋ ಕಡೆ ಮೂಲವನ್ನು ಅಂದವಾಗಿ ಸಂಗ್ರಹಿಸಿದ್ದಾನೆ. ಕತೆಗೆ ಕೆಲವು ಅಂಶಗಳು ಹೊಸದಾಗಿ ಸೇರಿವೆ. ಅನೇಕ ಕಡೆ ಸೂಕ್ಷ್ಮವಾದ ಕೆಲವು ಮಾರ್ಪಾಟುಗಳಾಗಿವೆ. ಮೂಲದ ಕೆಲವು ಅನೌಚಿತ್ಯಗಳು ಹೋಗಿವೆ. ಅಲ್ಲದೆ, ಜನ್ನ ದೇಸಿಯ ಸೊಬಗನ್ನು ತನ್ನ ಕೃತಿಯಲ್ಲಿ ಸೂರೆಮಾಡಿದ್ದಾನೆ; ಅನ್ಯಭಾಷಾಕೃತಿಯೊಂದನ್ನು ತಾಯ್ನುಡಿಯಲ್ಲಿ ಎಷ್ಟು ಚೆನ್ನಾಗಿ ನಿರ್ವಹಿಸಬಹುದೊ ಅಷ್ಟೂ ಚೆನ್ನಾಗಿ ನಿರ್ವಹಿಸಿ ಯಶಸ್ವಿಯಾಗಿದ್ದಾನೆ.

ಜೀವದಯೆ ಜೈನಧರ್ಮಂ ಎಂಬ ಸಂದೇಶವನ್ನು ಬಿತ್ತರಿಸಿ, ಅಹಿಂಸೆಯ ಪಾರಮ್ಯವನ್ನು ಎತ್ತಿಹಿಡಿಯುವುದು ಯಶೋಧರಚರಿತೆಯ ಉದ್ದೇಶ. ಹಿಂಸೆಯಿಂದಾಗುವ ಘೋರ ದುರಂತವನ್ನು ಕವಿ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಯಶೋಧರ ಮತ್ತು ಚಂದ್ರಮತಿಯರು ಒಂದು ಹಿಟ್ಟಿನ ಕೋಳಿಯನ್ನು ಕೊಂದು ಸಂಕಲ್ಪ ಹಿಂಸೆಯನ್ನೆಸಗಿದ ಮಾತ್ರದಿಂದಲೇ ಹಲವಾರು ಜನ್ಮಗಳನ್ನೆತ್ತಿ ವಿವಿಧ ತಿರ್ಯಗ್ಗತಿಗಳಲ್ಲಿ ತೊಳಲಿ ಕಡೆಗೆ ಕರ್ಮದಿಂದ ಬಿಡುಗಡೆಗೊಳ್ಳುವುದನ್ನು ಇಲ್ಲಿ ನೋಡುತ್ತೇವೆ. ಈ ಕೃತಿಯಲ್ಲಿ ವ್ಯಕ್ತವಾಗುವ ಅಹಿಂಸಾತತ್ತ್ವ ಜೈನಧರ್ಮಕ್ಕೇ ಸೀಮಿತವಾದುದಲ್ಲ, ಅದು ಇಡೀ ಮಾನವಧರ್ಮದ ಸಂದೇಶವಾಗಿ ನಿಲ್ಲುತ್ತದೆ. ಅದನ್ನು ಕವಿ ಕಲಾವಿಲಾಸಪೂರ್ವಕವಾಗಿ ಪ್ರತಿಪಾದಿಸಿದ್ದಾನೆ.

ಯಶೋಧರಚರಿತೆಯಲ್ಲಿ ಅಮೃತಮತಿಯ ಅಧಾರ್ಮಿಕ ವಿಕೃತ ಪ್ರಣಯದ ಕತೆಯೊಂದು ಪೂರಕವಾಗಿ ಸೇರಿಕೊಂಡಿದೆ. ಅದರಲ್ಲಿ ಬರುವ ಸಮಸ್ಯೆ ಸಾಮಾಜಿಕ ವಾದುದು, ನಿತ್ಯನೂತನವಾದುದು. ಕವಿ ಅದನ್ನು ವೈರಾಗ್ಯಪ್ರಚೋದನೆಗೆ, ಧರ್ಮಬೋಧನೆಗೆ ಬಳಸಿಕೊಂಡಿದ್ದಾನಾದರೂ ಅದನ್ನು ಪ್ರತ್ಯೇಕಿಸಿ ನೋಡುವುದು ಸಾಧ್ಯ. ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ– ಎಂಬುದು ಇಲ್ಲಿ ಜನ್ನನ ಕಾಣ್ಕೆ.

ಒಟ್ಟಿನ ಮೇಲೆ ಮಾನವ ಸ್ವಭಾವದ ಸಂಕೀರ್ಣತೆಯ ಅರಿವು, ಸ್ವಾರಸ್ಯಪೂರ್ಣವೂ ಸಂಕ್ಷಿಪ್ತವೂ ಆದ ನಿರೂಪಣೆ, ಸರಳ ಸಮುಚಿತವಾದ ಅಲಂಕಾರಗಳು, ದೇಸಿಯ ಬೆಡಗು ಬಿನ್ನಾಣಗಳು–ಈ ಗುಣಗಳಿಂದ ಕೂಡಿರುವ ಯಶೋಧರಚರಿತೆ ಕನ್ನಡದಲ್ಲಿ ಒಂದು ವಿರಳವರ್ಗದ ಕಾವ್ಯವಾಗಿದೆ; ಧರ್ಮ, ಕಾವ್ಯಧರ್ಮಗಳ ಸಮನ್ವಯಕ್ಕೆ ಒಳ್ಳೆಯ ನಿದರ್ಶನವಾಗಿದೆ.

ಅನಂತನಾಥಪುರಾಣ 14ನೆಯ ತೀರ್ಥಂಕರನಾದ ಅನಂತನಾಥನ ಕತೆಯನ್ನು ಬಣ್ಣಿಸುವ 14 ಆಶ್ವಾಸಗಳ ಪ್ರೌಢ ಚಂಪೂ ಕಾವ್ಯ. ಇದಕ್ಕೆ ಮುಖ್ಯವಾದ ಆಕರ ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ರಚಿಸಿರುವ ಉತ್ತರಪುರಾಣ. ಅಲ್ಲಿ ಕಿರಿದಾಗಿ ಬರುವ ಅನಂತನಾಥನ ಕತೆಯನ್ನು ಜನ್ನ ಎಳೆದು, ಹಿಗ್ಗಲಿಸಿ 14 ಆಶ್ವಾಸಗಳಷ್ಟು ದೊಡ್ಡದು ಮಾಡಿದ್ದಾನೆ. ಈ ಕಾವ್ಯವು ಸಂಪ್ರದಾಯದ ಪ್ರಭಾವಕ್ಕೆ ವಿಶೇಷವಾಗಿ ಪಕ್ಕಾಗಿದೆ. ವಿದ್ವತ್ತಿನ ಪ್ರದರ್ಶನ, ಮಾತಿನ ಆಡಂಬರ, ಅಲಂಕಾರಗಳ ಜಟಿಲತೆ, ಮತೀಯ ಪ್ರಕ್ರಿಯೆಗಳ ಆಧಿಕ್ಯ, ಅನಾವಶ್ಯಕ ವರ್ಣನೆಗಳು, ಔಚಿತ್ಯಪ್ರಜ್ಞೆಯ ಕೊರತೆ–ಇವು ಇದರಲ್ಲಿ ಎದ್ದುಕಾಣುವ ಲಕ್ಷಣಗಳು. ಹೀಗಾಗಿ ಈ ಕೃತಿ ರಸವತ್ತಾದ ಕವಿತೆಯಾಗುವುದರ ಬದಲು ಬಹುಮಟ್ಟಿಗೆ ಶುಷ್ಕವಾದ ಪುರಾಣವಾಗಿ ಪರಿಣಮಿಸಿದೆ.

ಆದರೆ ಇದರಲ್ಲಿ ಅಂತರ್ಗತವಾಗಿರುವ ಚಂಡಶಾಸನನ ಉಪಾಖ್ಯಾನ ಒಂದು ಹೃದಯಂಗಮವಾದ ಭಾಗ. ಪ್ರತ್ಯೇಕಿಸಿದರೆ ಅದೊಂದು ಉಜ್ಜ್ವಲವಾದ ಖಂಡಕಾವ್ಯ ವಾಗುತ್ತದೆ. ಜಿನಕಥೆಗೂ ಅದಕ್ಕೂ ಸಾವಯವ ಸಂಬಂಧವೇನೂ ಇಲ್ಲ. ಉತ್ತರಪುರಾಣದಲ್ಲಿ ಬಿಂದುರೂಪವಾಗಿ ಬರುವ ಕತೆಯನ್ನು ಇಲ್ಲಿ ಜನ್ನ ಸೊಗಸಾಗಿ ವಿಸ್ತರಿಸಿದ್ದಾನೆ. ಯಶೋಧರಚರಿತೆಯಲ್ಲಿ ಹೆಣ್ಣಿನ ನಿಷಿದ್ಧಕಾಮ ಚಿತ್ರಿತವಾಗಿದ್ದರೆ ಚಂಡಶಾಸನ ವೃತ್ತಾಂತದಲ್ಲಿ ಗಂಡಿನ ದುರಂತ ವ್ಯಾಮೋಹ ನಿರೂಪಿತವಾಗಿದೆ. ಸುಮಾರು 80 ಪದ್ಯಗಳಷ್ಟು ಚಿಕ್ಕದಾದರೂ ಈ ಉಪಾಖ್ಯಾನ ಸಹೃದಯರ ಚಿತ್ತದ ಮೇಲೆ ಅಳಿಸಲಾಗದ ಮುದ್ರೆಯೊತ್ತುತ್ತದೆ.

ಯಶೋಧರಚರಿತೆ ಹಾಗೂ ಅನಂತನಾಥಪುರಾಣದ ಚಂಡಶಾಸನ ಕಥೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆಯುತ್ತವೆ. ಸಂಪ್ರದಾಯಬದ್ಧವೂ ಚಿರಪರಿಚಿತವೂ ಆದ ವಸ್ತುವನ್ನು ಬಿಟ್ಟು, ಕವಿ ವಿಷಮಪ್ರಣಯದ ಎರಡು ದಿಕ್ಕುಗಳನ್ನು ಚಿತ್ರಿಸಿ ಬದುಕಿನ ವಾಸ್ತವಿಕತೆಗೆ ಕನ್ನಡಿ ಹಿಡಿದಿದ್ದಾನೆ. ವಿಮರ್ಶಕರೊಬ್ಬರು ಹೇಳುವಂತೆ 'ಅದಮ್ಯವಾದ ಕಾಮದ, ಧರ್ಮವಿರುದ್ಧ ಪ್ರಣಯದ ಸ್ತ್ರೀಮುಖ ಪುರುಷಮುಖಗಳನ್ನು ಉಜ್ಜ್ವಲವಾಗಿ ಕ್ರಾಂತಿಕಾರಕ ರೀತಿಯಲ್ಲಿ ಚಿತ್ರಿಸಿ ಕನ್ನಡ ಸಾಹಿತ್ಯಕ್ಕೆ ಸ್ವಂತ ಕಾಣಿಕೆ ಸಲ್ಲಿಸಿದ್ದಾನೆ.' ಕನ್ನಡ ಸಾಹಿತ್ಯಕ್ಕೆ ಮಾತ್ರವಲ್ಲ, ಜಾಗತಿಕ ಸಾಹಿತ್ಯಕ್ಕೂ ಬೆಲೆಯುಳ್ಳ ಕಾಣಿಕೆ ಸಲ್ಲಿಸಿದ್ದಾನೆಂದರೆ ತಪ್ಪಲ್ಲ. ಮಹಾಕಾವ್ಯದ ಔನ್ನತ್ಯ, ಭವ್ಯತೆಗಳು ಆಂಶಿಕವಾಗಿಯಾದರೂ ಅವನ ಎರಡು ಕಿರುಗಬ್ಬಗಳಲ್ಲಿ ತಲೆದೋರಿವೆ. ಆದ್ದರಿಂದ, ಜನ್ನನು ಮಹಾಕವಿಗಳ ಸಾಲಿನಲ್ಲಿ ನಿಲ್ಲಲಾರನಾದರೂ ಮಧ್ಯಮವರ್ಗದ ಕವಿಗಳ ಪಂಕ್ತಿಯಲ್ಲಿ ಅಗ್ರಸ್ಥಾನಕ್ಕೆ ನಿಸ್ಸಂದೇಹವಾಗಿ ಅರ್ಹನಾಗುತ್ತಾನೆ. ನೇಮಿಜನ್ನಮರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ ಎಂಬ ಮಧುರ ಕವಿಯ ಪ್ರಶಂಸೆ ಉತ್ಪ್ರೇಕ್ಷೆಯಾದರೂ ಭಾಗಶಃ ಸತ್ಯವೆನ್ನಬಹುದು. (ಸಿ.ಪಿ.ಕೆ.)

**ಜನ್ಮಭೂಮಿ[1] :** 1928ರಿಂದ 1952ರ ವರೆಗೆ ಮಡಿಕೇರಿಯಿಂದ ಪ್ರಕಟವಾಗುತ್ತಿದ್ದ ಕನ್ನಡ ವಾರಪತ್ರಿಕೆ. ಸ್ಥಾಪಕ ಸಂಪಾದಕ, ಪ್ರಕಾಶಕ ಬಿ.ಎ. ಬೆಳ್ಯಪ್ಪ. ಬೆಳ್ಯಪ್ಪನವರ ನಿಧನದೊಂದಿಗೆ ಪತ್ರಿಕೆಯೂ ನಿಂತುಹೋಯಿತು. ತನ್ನ ಕಾಲದ ರಾಜಕೀಯ ವಿಚಾರಗಳಿಗೆ ಮಹತ್ತ್ವ ನೀಡುತ್ತಿದ್ದ ಇದು ಕೊಡಗಿನ ಅಭಿವೃದ್ಧಿಗಾಗಿ ದುಡಿಯಿತು. 1947ರ ಸ್ವಾತಂತ್ರ್ಯಾನಂತರ ಇಲ್ಲಿ ಅಧಿಕಾರಕ್ಕೆ ಬಂದ ಮಂತ್ರಿಮಂಡಲದ ಮುಖಪತ್ರದಂತೆ ಅದರ ಧೋರಣೆಗಳನ್ನು ಎತ್ತಿಹಿಡಿಯಿತು. ರಾಜ್ಯ ಪುನರ್ವಿಂಗಡಣೆಯ ಸಮಯದಲ್ಲಿ ಮೈಸೂರಿನಲ್ಲಿ ಕೊಡಗಿನ ವಿಲೀನೀಕರಣವನ್ನು ಪತ್ರಿಕೆ ಅನುಮೋದಿಸಿತು. (ಎಂ.ಎಸ್.ಎಂ.ಎ.)

**ಜನ್ಮಭೂಮಿ[2] :** ಗುಜರಾತ್ ರಾಜ್ಯದಲ್ಲಿ ಅಧಿಕ ಪ್ರಸಾರ ಹೊಂದಿರುವ ಗುಜರಾತಿ ಭಾಷೆಯ ಸಂಜೆ ಪತ್ರಿಕೆ. ಮುಂಬಯಿಯಿಂದ ಪ್ರಕಟವಾಗುತ್ತದೆ. 1934ರಲ್ಲಿ ಅಮೃತಲಾಲ್ ಸೇಠ್ ಇದನ್ನು ಆರಂಭಿಸಿದರು. ಅನಂತರ ಶ್ಯಾಮಲದಾಸ್ ಗಾಂಧಿಯವರ ಸಂಪಾದಕತ್ವದಲ್ಲಿ ಪತ್ರಿಕೆ ಖ್ಯಾತಿ ಗಳಿಸಿತು. ಗಾಂಧಿಯವರು ಈ ಪತ್ರಿಕೆಯನ್ನು ಬಿಟ್ಟು ಹೊಸದೊಂದು ಪತ್ರಿಕೆ ಹೊರಡಿಸಿದಾಗ ಸೇಠರು ಪತ್ರಿಕೆಯನ್ನು ಮುಂದುವರಿಸಿದರು. ಈ ಪತ್ರಿಕೆಯೂ ಅವರು ನಡೆಸುತ್ತಿದ್ದ ಇತರ ಪತ್ರಿಕೆಗಳೂ ಸಾರ್ವಜನಿಕ ಅಭಿಪ್ರಾಯದ ಮೇಲೆ ತುಂಬ ಪ್ರಭಾವ ಬೀರಿದುವು. ಮಹಾತ್ಮ ಗಾಂಧಿಯವರ ಧೋರಣೆಗಳನ್ನೂ ವಿಧಾನಗಳನ್ನೂ ಈ ಪತ್ರಿಕೆಗಳು ಬೆಂಬಲಿಸುತ್ತಿದ್ದುವು. ಈಗ ಇದರ ಪ್ರಸಾರ ಸಂಖ್ಯೆ 58,000; ಓದುಗರ ಸಂಖ್ಯೆ 2,50,000 (ಎಸ್.ಎಲ್.ಬಿ)

**ಜನ್ಮಾಂತರ ಸಿದ್ಧಾಂತ :** ಕರ್ಮಸಿದ್ಧಾಂತದೊಂದಿಗೆ ಅದರ ಮತ್ತೊಂದು ಮುಖದಂತಿರುವ ಈ ಸಿದ್ಧಾಂತ ಹಿಂದೂಧರ್ಮದಲ್ಲಿ ಕಂಡುಬರುತ್ತದೆ. ಇದನ್ನು ಪುನರ್ಜನ್ಮ ಸಿದ್ಧಾಂತವೆಂದೂ ಕರೆವುದಿದೆ. ದೇಹ ನಾಶವಾದಾಗ ಆತ್ಮ ನಾಶವಾಗದೆ ಪುನಃ ಜನ್ಮವನ್ನು ಪಡೆಯುತ್ತದೆ ಎಂದು ಈ ಸಿದ್ಧಾಂತ ತಿಳಿಸುತ್ತದೆ. ಅದು ಯಾವ ರೀತಿಯ ಜನ್ಮವನ್ನು ಪಡೆಯುತ್ತದೆ ಎಂಬುದನ್ನು ಅದರ ಪೂರ್ವಾರ್ಜಿತ ಕರ್ಮ ನಿರ್ಧರಿಸುತ್ತದೆ. ಆತ್ಮ ತನ್ನ ಕರ್ಮಫಲವನ್ನು ಅನುಭವಿಸಿಯೇ ತೀರಬೇಕು. ಆದ್ದರಿಂದ ಅದರ ಕರ್ಮಕ್ಷಯ ವಾಗುವವರೆಗೂ ಅದು ಪುನರ್ಜನ್ಮ ಪಡೆಯುತ್ತಲೇ ಇರಬೇಕು. ಭಗವದ್ಗೀತೆಯಲ್ಲಿ ಜಾತಸ್ಯ ಹಿ ಧ್ರುವೋ ಮೃತ್ಯುಃ–ಎಂಬ ಶ್ಲೋಕದಲ್ಲಿ ಹುಟ್ಟಿದವನಿಗೆ ಸಾವು ತಪ್ಪದು, ಸತ್ತವನಿಗೆ ಪುನರ್ಜನ್ಮ ತಪ್ಪದು ಎಂದು ಹೇಳಲಾಗಿದೆ. ವಾಸಾಂಸಿ ಜೀರ್ಣಾನಿ ಯಥಾ ವಿಹಾಯ–ಎಂಬ ಶ್ಲೋಕದಲ್ಲಿಯೂ, ದೇಹಿನೋಸ್ಮಿನ್ ಯಥಾ ದೇಹೇ–ಎಂಬ ಶ್ಲೋಕದಲ್ಲಿಯೂ ಹಳೆಯ ಬಟ್ಟೆಗಳನ್ನು ಬಿಟ್ಟು ಹೊಸ ಬಟ್ಟೆಗಳನ್ನು ಧರಿಸುವಂತೆ ಜೀವ ಜೀರ್ಣವಾದ ದೇಹವನ್ನು ಬಿಟ್ಟು ಹೊಸ ದೇಹವನ್ನು ತಾಳುವುದನ್ನು, ಒಂದೇ ಶರೀರದಲ್ಲಿ ಬಾಲ್ಯ–ಯೌವನ–ಮುಪ್ಪು ಎಂಬ ಅವಸ್ಥೆಗಳು ಪ್ರಾಪ್ತವಾಗುವಂತೆ ಬೇರೆ ದೇಹವೂ ಮರಣಾನಂತರ ಪ್ರಾಪ್ತವಾಗುವುದನ್ನು ಅರ್ಜುನನಿಗೆ ಕೃಷ್ಣ ಬೋಧಿಸುತ್ತಾನೆ. ಮುಂಡಕೋಪನಿಷತ್ತಿನಲ್ಲಿ, ಶ್ವೇತಾಶ್ವತರೋಪನಿಷತ್ತಿನಲ್ಲಿ, ಬೃಹದಾರಣ್ಯಕದಲ್ಲಿ, ಆತ್ಮ ತನ್ನ ಕರ್ಮವಾಸನೆಯಿಂದ (ಸ್ವರ್ಗಲೋಕದಲ್ಲಿ ಪುಣ್ಯಕರ್ಮದ ಫಲವನ್ನು ಅನುಭವಿಸಿದ ಅನಂತರ) ಪುನರ್ಜನ್ಮವನ್ನು ಹೊಂದುತ್ತದೆ ಎಂದು ತಿಳಿಸಲಾಗಿದೆ. ಆತ್ಮಜ್ಞಾನವೆಂಬ ಅಗ್ನಿಯಿಂದ ಕರ್ಮವನ್ನು ಸುಟ್ಟು ಮುಕ್ತಿಯನ್ನು ಪಡೆದರೆ ಮಾತ್ರ ಪುನರ್ಜನ್ಮದಿಂದ ತಪ್ಪಿಸಿಕೊಳ್ಳುವುದು ಸಾಧ್ಯ ಎಂದೂ, ಮರಣಕಾಲದಲ್ಲಿ ಜೀವಿಗೆ ಯಾವ ಕಾಮನೆಯೂ ಇಲ್ಲದೆ ಆತ್ಮನಲ್ಲಿಯೇ ನೆಲಸಿದ್ದರೆ, ಅವನು ಸಂಸಾರಕ್ಕೆ ಸಿಕ್ಕದೆ ಬ್ರಹ್ಮವನ್ನು ಸೇರುತ್ತಾನೆಂದೂ ಧರ್ಮಗ್ರಂಥಗಳು ಬೋಧಿಸಿವೆ. ಹೀಗೆ ಜನ್ಮಾಂತರ ದಶೆ ಕರ್ಮವನ್ನವಲಂಬಿಸಿದೆ. ಹಾಗೆಯೇ ಭಿನ್ನ ಭಿನ್ನ ಜೀವಿಗಳ ಭಿನ್ನ ಭಿನ್ನ ಅವಸ್ಥೆಗಳೂ ಅವರ ಕರ್ಮಗಳ ತಾರತಮ್ಯವನ್ನು ಅವಲಂಬಿಸಿವೆ–ಎಂದು ಕರ್ಮಸಿದ್ಧಾಂತ ಹೇಳಿದೆ. ಸಂಸಾರಚಕ್ರದಿಂದ ಬಿಡುಗಡೆಯಾಗುವುದಕ್ಕೆ (ಕರ್ಮಗಳನ್ನು ಮಾಡಲೇಬೇಕಾಗಿದ್ದರೂ) ಕರ್ಮಫಲದಲ್ಲಿ ಆಸಕ್ತಿಯನ್ನು ತ್ಯಜಿಸುವುದೇ–ಅಂದರೆ ಅನಾಸಕ್ತನಾಗುವುದೇ–ಸರಿಯಾದ ಮಾರ್ಗ. ಈ ನಿಷ್ಕಾಮಕರ್ಮಯೋಗವನ್ನು ಭಗವದ್ಗೀತೆಯಲ್ಲಿ ವಿಶದಪಡಿಸಲಾಗಿದೆ. ಆಸೆಯನ್ನು ಬಿಟ್ಟವನೇ ಸಂಸಾರಚಕ್ರದಿಂದ ಬಿಡುಗಡೆ ಹೊಂದುವವನು ಎಂದು ಮಹಾವೀರನೂ ಬುದ್ಧನೂ ಉಪದೇಶಿಸಿದರು. ಕರ್ಮ ಅನಾದಿ, ಜೀವನೂ ಅನಾದಿ ಎಂದು ಹೇಳುವ ಹಿಂದೂಧರ್ಮ ಜೀವನಿಗೆ ಹುಟ್ಟುಸಾವುಗಳನ್ನು ತಪ್ಪಿಸಿಕೊಳ್ಳುವ ಮೋಕ್ಷಮಾರ್ಗವಿದೆ ಎಂದು ಆಶಾದಾಯಕವಾಗಿ ಸಿದ್ಧಾಂತಪಡಿಸುತ್ತದೆ.

ಇಸ್ಲಾಂ ಮತ್ತು ಕ್ರೈಸ್ತಧರ್ಮಗಳು ಜೀವನಿಗೆ ಒಂದೇ ಜನ್ಮ, ಅದರಲ್ಲಿ ಗಳಿಸಿದ ಪುಣ್ಯಪಾಪಗಳಿಂದ ನಿರಂತರವಾಗಿ ನಾಕನರಕಗಳನ್ನು ಸೇರಿ ಅಲ್ಲಿಯೇ ಇರುವನೆಂದು ಹೇಳುತ್ತವೆ. ಮಾನವ ಒಂದೇ ಜನ್ಮದಲ್ಲಿ ಪರಿಪೂರ್ಣತೆಯನ್ನು ಸಾಧಿಸಲಾಗುವುದಿಲ್ಲ ಎಂದೂ, ಅವನ ಸಾಧನೆ ಅನೇಕ ಜನ್ಮಗಳಲ್ಲಿ ಮುಂದುವರಿಯುತ್ತದೆ ಎಂದೂ ಹಿಂದೂ ಧರ್ಮ ವಾದಿಸುತ್ತದೆ; ಅದಲ್ಲದೆ ಮಾನವಜನ್ಮ ಬರುವುದಕ್ಕೆ ಮುಂಚೆ ಎಷ್ಟೋ ಇತರ ಜನ್ಮಗಳಲ್ಲಿ ಪುಣ್ಯವನ್ನು ಗಳಿಸಿರಬೇಕು ಎಂದು ನಂಬುತ್ತದೆ. (ಎಸ್.ಎಸ್.ಆರ್.)

**ಜಪ :** ಮಂತ್ರವೊಂದನ್ನು ಒಂದು ಸಲ ಅಥವಾ ಅನೇಕ ಸಲ ಉಚ್ಚರಿಸುವುದು ಜಪವೆನಿಸುತ್ತದೆ. ಮನಸ್ಸನ್ನು ಬಿಗಿಹಿಡಿದು ಮಂತ್ರಾರ್ಥದಲ್ಲಿ ಗಮನವಿಟ್ಟುಕೊಂಡು ಅಕ್ಷರಗಳನ್ನು ಅತಿ ವೇಗವಾಗಿ ಅಥವಾ ನಿಧಾನವಾಗಿ ಉಚ್ಚರಿಸದೆ, ಸಮವೇಗದಲ್ಲಿ ಪಠಿಸಬೇಕು. ಇದು ನಾಲ್ಕು ವಿಧವಾಗಿದೆ. ಮನಸ್ಸಿನಲ್ಲಿಯೇ ಅಕ್ಷರಗಳನ್ನು ಆವೃತ್ತಿ ಮಾಡುವುದು ಮಾನಸಜಪ. ಬಹಳ ಸಣ್ಣದನಿಯಲ್ಲಿ ಉಚ್ಚರಿಸುವುದು ಉಪಾಂಶುಜಪ. ದನಿಯಿಲ್ಲದೆ ನಾಲಗೆ–ಬಾಯಿ ಆಡಿದರೆ ಜಿಹ್ವಾ ಜಪ. ಇತರರಿಗೆ ಕೇಳಿಸುವಂತೆ ಜಪಿಸುವುದು ವಾಚಕಜಪ. ಇವು ಒಂದಕ್ಕಿಂತ ಒಂದು ಗುಣದಲ್ಲಿ ಹತ್ತರಷ್ಟು ಕಡಿಮೆ. ಮಾನಸಜಪ ಅತ್ಯಂತ ಉತ್ಕೃಷ್ಟ. ವಾಚಕಜಪಕ್ಕೆ ಹೆಚ್ಚಿನ ಬೆಲೆಯಿಲ್ಲ. ಎಣಿಕೆಯಿಲ್ಲದ ಜಪದ ಫಲ ರಾಕ್ಷಸರ ಪಾಲಾಗುತ್ತದೆ. ಆದುದರಿಂದ ಉಪದಿಷ್ಟ ಜಪಸರವನ್ನು ಎಣಿಕೆಗೆ ಉಪಯೋಗಿಸಬೇಕು. ಜಪಕಾಲದಲ್ಲಿ ಅಂಗನ್ಯಾಸ ಕರನ್ಯಾಸಗಳ ಪೂರ್ವಕ ಮಂತ್ರದೇವತೆಯ ಧ್ಯಾನ ಮಾಡಬೇಕು. ಇದಕ್ಕೆ ಸಗರ್ಭಜಪವೆಂದು ಹೆಸರು. ಹಾಗೆ ದೇವತಾಧ್ಯಾನವಿಲ್ಲದ ಜಪ ಅಗರ್ಭಜಪವೆನಿಸುತ್ತದೆ. ಮಂತ್ರವೊಂದನ್ನು ನಿರ್ದಿಷ್ಟ ಸಂಖ್ಯೆಯಷ್ಟು ಜಪಿಸಿ ಅದರ ಹತ್ತನೆಯ ಒಂದು ಭಾಗದಷ್ಟು ಸಂಖ್ಯೆಯ ಹೋಮ ಮಾಡಬೇಕು; ತರ್ಪಣ, ಮಾರ್ಜನ, ಬ್ರಾಹ್ಮಣ ಭೋಜನಗಳನ್ನು

ಕ್ರಮವಾಗಿ ಅದರ ಹಿಂದಿನದರ ಹತ್ತನೆಯ ಒಂದರಷ್ಟು ಸಂಖ್ಯೆಯಲ್ಲಿ ನಡೆಸಬೇಕು. ಈ ಕ್ರಮವನ್ನು ಪುರಶ್ಚರಣವೆನ್ನುತ್ತಾರೆ. ಮಂತ್ರೋಪದೇಶವಾದ ಮೇಲೆ ಒಂದು ಸಲ ಪುರಶ್ಚರಣ ಮಾಡಬೇಕು. ಅನಂತರ ಯಾವಜ್ಜೀವ ಆ ಮಂತ್ರವನ್ನು ನಿತ್ಯವೂ ಜಪಿಸುತ್ತಿದ್ದರೆ, ಅಂಥದನ್ನು ಪುರಶ್ಚರಣಪೂರ್ವಕ ಜಪವೆನ್ನುತ್ತಾರೆ. ಇದು ಉತ್ತಮ. ಪುರಶ್ಚರಣ ಮಾಡಿ ಅಲ್ಲಿಗೆ ನಿಲ್ಲಿಸಿದರೆ ಪುರಶ್ಚರಣ ಜಪವಾಗುತ್ತದೆ; ಇದು ಮಧ್ಯಮ. ಪುರಶ್ಚರಣವನ್ನು ಮಾಡದೆ ನಿತ್ಯ ಜಪಿಸುವುದು ನಿತ್ಯಜಪ. ಇದು ಕನಿಷ್ಠ. ಜಪಿಸುವಾಗ ಮನಸ್ಸಿನಲ್ಲಿ ಯಾವ ಆತಂಕವೂ ಇರಬಾರದು; ಅಂತರಂಗ ಬಹಿರಂಗ ಶುದ್ಧವಿರಬೇಕು. ಜಪಕಾಲದಲ್ಲಿ ಆಲಸ್ಯ, ನಿದ್ದೆ, ಆಕಳಿಕೆ, ಸಿಂಬಳ ತೆಗೆಯುವುದು, ಉಗಿಯುವುದು, ನೀಚಾಂಗಗಳನ್ನು ಮುಟ್ಟುವುದು, ಕೋಪ–ಇವನ್ನು ವರ್ಜಿಸಬೇಕು. ಜಪಯಜ್ಞಕ್ಕಿಂತ ಅತಿಶಯವಾದ ಫಲ ಕೊಡುವಂಥ ಯಜ್ಞ ಇನ್ನಾವುದೂ ಇಲ್ಲ. ಜಪಿಸುವಂಥವನ ಬಳಿಗೆ ರಾಕ್ಷಸರಾಗಲೀ ಪಿಶಾಚ ಗ್ರಹಗಳಾಗಲೀ ಸರ್ಪ ಮೊದಲಾದುವಾಗಲೀ ಬರಲಾರವು.

ಹಿಂದೂಗಳಲ್ಲಿ ಮುಖ್ಯವಾಗಿ ವಿಷ್ಣು, ಈಶ್ವರ, ಲಕ್ಷ್ಮಿ, ಪಾರ್ವತಿ, ರಾಮ, ಕೃಷ್ಣ ಮೊದಲಾದ ದೇವರುಗಳ ಜಪ ಮಾಡುತ್ತಾರೆ. ಅವರವರ ಆರಾಧ್ಯದೈವವನ್ನು ಕುರಿತು ಜಪಿಸುವುದು ವಾಡಿಕೆ. ಬೌದ್ಧರು ಬೌದ್ಧ ತ್ರಿಮೂರ್ತಿಗಳ ಹೆಸರುಗಳು ಅಥವಾ ವಿಶೇಷಣಗಳನ್ನು ಉಚ್ಚರಿಸುತ್ತಾರೆ. ಅಲ್ಲಾನ ನೂರೊಂದು ಹೆಸರುಗಳನ್ನು ಹೇಳುವುದೂ ಉಂಟು. ಕ್ರೈಸ್ತರಲ್ಲಿ ಪ್ರಾರ್ಥನೆಗಳ ಜಪ ಕಂಡುಬರುತ್ತದೆ. ಕ್ರಿಸ್ತನ ಅಥವಾ ಮೇರಿಯ ಜೀವನದಲ್ಲಿ ಐದು ಸಂತೋಷಮಯ, ಐದು ದುಃಖಮಯ, ಐದು ಕೀರ್ತಿಪ್ರಾಯಗಳಾಗಿ ವಿಭಕ್ತವಾದ ಒಂದು, ಎರಡು ಅಥವಾ ಮೂರು ಮುಖ್ಯ ರಹಸ್ಯಗಳ ಧ್ಯಾನವನ್ನೂ ಮಾಡುತ್ತಾರೆ. ಒಂದೊಂದು ಧಾರ್ಮಿಕ ಪಂಥದವರೂ ಒಂದೊಂದು ವಿಶಿಷ್ಟ ರೀತಿಯ ಭಗವದ್ ಧ್ಯಾನವನ್ನು ಮಾಡುತ್ತಾರೆ.

**ಜಪಸರ :** ದೇವರ ನಾಮವನ್ನು ಜಪಿಸುವಾಗ ನಾಮದ ಎಣಿಕೆಗಾಗಿ ಉಪಯೋಗಿಸುವ ಮಣಿಸರ. ಜಪಮಾಲೆ, ಸ್ಮರಣೀ ಎಂದೂ ಕರೆಯುತ್ತಾರೆ. ಇದು ಮೊದಲು ಅಸ್ತಿತ್ವಕ್ಕೆ ಬಂದುದು ಏಷ್ಯದಲ್ಲಿಯೇ. ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಇದು ಬಳಕೆಯಲ್ಲಿದೆ. ಎಣಿಕೆಯಿಲ್ಲದ ಜಪ ವ್ಯರ್ಥವೆಂದು ಭಾವಿಸಿರುವುದರಿಂದ ಅದರ ಲೆಕ್ಕವಿಡಲು ಜಪಮಾಲೆ ಆವಶ್ಯ. ಚಿನ್ನ, ಬೆಳ್ಳಿ, ತಾಮ್ರ ಅಥವಾ ಕಬ್ಬಿಣದ ತಂತಿಯಲ್ಲಿ ಅಥವಾ ನೂಲಿನಲ್ಲಿ ಯೋಗ್ಯವಾದ ಮಣಿಗಳನ್ನು ಪೋಣಿಸಿ, ಸರ ಮಾಡಿಕೊಳ್ಳಬೇಕು. ರುದ್ರಾಕ್ಷಿ, ತುಲಸೀ (ಕಾಷ್ಠ), ಪುತ್ರಂಜೀವಿ (ಕಾಷ್ಠ), ಭಸ್ಮದ ಗುಳಿಗೆ, ಬಿಲ್ವ (ಕಾಷ್ಠ), ದರ್ಭೆ (ಬೇರು), ಪಾದರಸದ ಗುಳಿಗೆ, ಸ್ಫಟಿಕ, ಹವಳ, ಕೆಂಪು, ಪಚ್ಚೆ, ಮುತ್ತು, ಚಿನ್ನ ಇತ್ಯಾದಿಗಳಿಂದ ಜಪಮಣಿಗಳನ್ನು ತಯಾರಿಸುತ್ತಾರೆ. ಅಕ್ಷತೆ (ಅಕ್ಕಿ), ಬೆರಳಿನ ಗಿಣ್ಣುಗಳು, ಧಾನ್ಯಗಳು, ಹೂವು, ಚಂದನ, ಮಣ್ಣು–ಇವು ಮಣಿ ಮಾಡಲು ತಕ್ಕವಲ್ಲ. ಜಪಸರಕ್ಕೆ ಉಪಯೋಗಿಸುವ ವಸ್ತುಗಳಿಗೆ ಬೇರೆ ಬೇರೆ ಫಲಗಳುಂಟು. ಉದಾಹರಣೆಗೆ ರುದ್ರಾಕ್ಷಿಯನ್ನು ಜಪಕ್ಕೆ ಉಪಯೋಗಿಸಿದಲ್ಲಿ ಭೋಗಮೋಕ್ಷಗಳು ದೊರೆಯುತ್ತವೆ. ಸ್ಫಟಿಕದಿಂದ ಮೋಕ್ಷ. ಶಂಖದಿಂದ ಐಶ್ವರ್ಯ, ಹವಳದಿಂದ ಧನಧಾನ್ಯಾದಿ, ಮುತ್ತಿನಿಂದ ಸರ್ವವಿದ್ಯೆ, ಪಾದರಸದಿಂದ ಎಲ್ಲ ವಿಧ ಕಾಮನೆಗಳು ಲಭಿಸುತ್ತವೆ. ಜಪಿಸುವ ಮಂತ್ರದ ದೇವತೆಗೂ ಮಣಿಗೂ ಸಂಬಂಧ ಉಂಟು. ಉದಾಹರಣೆಗೆ ರುದ್ರಾಕ್ಷಿ ಶಿವನಿಗೆ, ತುಲಸಿ ವಿಷ್ಣುವಿಗೆ. ಇಂಥ ಜಪಸರದಲ್ಲಿ ಒಂದು ಮಣಿ ಇತರ ಮಣಿಗಳಿಗಿಂತ ದಪ್ಪವಾಗಿರುತ್ತದೆ. ಅಥವಾ ಸರದಲ್ಲಿ ಬೇರೆಯಾಗಿರುವಂತೆ ಅದನ್ನು ಕಟ್ಟಲಾಗಿರುತ್ತದೆ. ಮೇರುವೆಂದು ಕರೆಯಲಾದ ಇದು ಲೆಕ್ಕಕ್ಕೆ ಸೇರುವುದಿಲ್ಲ. ಎಣಿಕೆ ಮಾಡುವಾಗ ಸರದ ಒಂದು ಆವೃತ್ತಿಯಾಯಿತೆಂದು ಇದರಿಂದ ತಿಳಿಯುತ್ತದೆ. ಸಾಮಾನ್ಯವಾಗಿ ಸರದಲ್ಲಿ 32, 64 ಅಥವಾ 108 ಮಣಿಗಳಿರುತ್ತವೆ. ಮಾಲೆಯನ್ನು ಗುರುವಿನಿಂದ ಸ್ವೀಕರಿಸಬೇಕು. ಆಗಲೇ ಅದಕ್ಕೆ ಶಕ್ತಿ ಬರುವುದು. ಸರ ಕೆಳಕ್ಕೆ ಬೀಳದಂತೆ ಅಥವಾ ಅದಕ್ಕೆ ಮೈಲಿಗೆಯಾಗದಂತೆ ನೋಡಿಕೊಳ್ಳಬೇಕು.

ಶಾಕ್ತರಲ್ಲಿ ಕರಮಾಲೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಇದು ಮಣಿಸರವಲ್ಲ. ಬಲಗೈ ಬೆರಳುಗಳ ಗೆರೆಗಳೇ ಇದಕ್ಕೆ ಸಾಧನ. ಉಂಗುರದ ಬೆರಳಿನ ಮಧ್ಯದಿಂದ ಆರಂಭಿಸಿ, ಪ್ರದಕ್ಷಿಣ ಕ್ರಮದಲ್ಲಿ ಹತ್ತು ಗೆರೆಗಳನ್ನು ಹೆಬ್ಬೆಟ್ಟಿನಿಂದ ಎಣಿಸಿ ತೋರುಬೆರಳ ಬುಡಕ್ಕೆ ಬಂದರೆ ಒಂದು ಸುತ್ತು ಆದಂತೆ. ಮಧ್ಯಬೆರಳಿನ ಕೆಳಗಿನ ಎರಡು ಗೆರೆಗಳು ಲೆಕ್ಕಕ್ಕೆ ಬಾರವು. ಸವೆಯುವುದು; ಮುಕ್ಕಾಗುವುದು, ಕಿತ್ತುಹೋಗುವುದು, ಮೈಲಿಗೆಯಾಗುವುದು ಎಂಬುದೇ ಮೊದಲಾದ ದೋಷಗಳು ಇತರ ರೀತಿಯ ಮಾಲೆಯಲ್ಲಿವೆ; ಕರಮಾಲೆಗೆ ಇಂಥ ಯಾವ ದೋಷಗಳೂ ಇಲ್ಲ. ನಿತ್ಯಜಪಕ್ಕೆ ಇದೇ ಶ್ರೇಷ್ಠವೆಂದು ಪರಿಗಣಿಸಲಾಗಿದೆ.

ಬೌದ್ಧ, ಜೈನ, ಮಹಮ್ಮದೀಯ, ಕ್ರೈಸ್ತ ಪಂಥಗಳವರೂ ಜಪಸರವನ್ನು ಉಪಯೋಗಿಸುತ್ತಾರೆ.

ಜೈನರ ಸರದಲ್ಲಿ 108ರ ಅಪವರ್ತನಗಳ ಸಂಖ್ಯೆಯಲ್ಲಿ ಮಣಿಗಳಿರುತ್ತವೆ. ಮಣಿಗಳ ಬಣ್ಣ ಕೆಂಪು, ಹಳದಿ, ಹಸಿರು, ಬಿಳಿ ಮತ್ತು ಕಪ್ಪು.

ಸಿಖ್ಖರು ಮಣಿಗಳ ಬದಲು ಉಣ್ಣೆಯ ನೂಲಿನಲ್ಲಿ 108 ಗಂಟುಗಳನ್ನು ಮಾಡಿಕೊಳ್ಳುತ್ತಾರೆ. ಕಬ್ಬಿಣದ ಸರಪಳಿಗಳಲ್ಲಿ ಪೋಣಿಸಿದ ಕಬ್ಬಿಣದ ಮಣಿಗಳ ಸರವೊಂದು ಇವರಲ್ಲಿ ಕಂಡುಬರುತ್ತದೆ. ಮಣಿಬಂಧದಲ್ಲಿ ಇಂಥ ಇಪ್ಪತ್ತೇಳು ಮಣಿಗಳ ಮಾಲೆಯನ್ನು ಇವರು ಕಟ್ಟಿಕೊಳ್ಳುತ್ತಾರೆ. ಇದು ಈ ಪಂಗಡದ ಒಂದು ಗುರುತೂ ಆಗಿದೆ.

ಭಾರತೀಯ ಬೌದ್ಧರ ಜಪಮಾಲೆಯಲ್ಲಿ ವಿಶೇಷವೇನಿಲ್ಲ. ಮನಸ್ಸಿನ ಸ್ಥಿತಿ ಅಥವಾ ಪಾಪಪ್ರವೃತ್ತಿಗಳ ಸಂಖ್ಯೆಯಾದ 108 ಮಣಿಗಳ ಒಂದು ಸರವಿದೆ. ಇದನ್ನು ಎಣಿಸುವುದರಿಂದ ಮನಸ್ಸಿನ ಮೇಲೆ ಹತೋಟಿ ಸಾಧ್ಯವೆಂದು ನಂಬಿಕೆ. ಇನ್ನೊಂದು ಚಿಕ್ಕ ಸರವಿದೆ. ಇದು ಬುದ್ಧನ ಮುಖ್ಯ ಶಿಷ್ಯರ ಪ್ರತೀಕ.

ಮಯನ್ಮಾರಿನ ಬೌದ್ಧರಲ್ಲಿ 108 ಮಾಲೆ ಬಳಕೆಯಲ್ಲಿದೆ. ಸಂನ್ಯಾಸಿಗಳು ಕೆಲವರು ಬೋಧಿ ಎಂದು ಕರೆಯಲಾದ ಎಪ್ಪತ್ತೆರಡು ಮಣಿಗಳ ಸರವನ್ನು ಇಟ್ಟುಕೊಂಡಿದ್ದಾರೆ. ಮಂತ್ರಾಕ್ಷರಗಳನ್ನು ಬರೆಯಲಾದ ಎಲೆಗಳಿಂದ ಇದರ ಮಣಿಗಳನ್ನು ಮಾಡಲಾಗಿದೆ ಎಂದು ಹೇಳುತ್ತಾರೆ.

ಟಿಬೆಟ್ಟಿನ ಲಾಮಾಗಳ ವೇಷದಲ್ಲಿ ಜಪಸರವೂ ಒಂದು ಮುಖ್ಯವಾದುದು. ಸಾಮಾನ್ಯ ಜನರೂ ಇದನ್ನು ಧರಿಸುತ್ತಾರೆ. ಇದರಲ್ಲಿ 108 ಮಣಿಗಳಿರುತ್ತವೆ ಮತ್ತು ಮೂರು ಮೇರುಗಳಿರುತ್ತವೆ.

ಚೀನೀ ಬೌದ್ಧರೂ ಮೂರು ಮೇರುಗಳಿರುವ 108 ಮಣಿಗಳ ಮಾಲೆಯನ್ನು ಬಳಸುತ್ತಾರೆ. ಮೇರುಗಳ ಬಣ್ಣ ಮತ್ತು ಗಾತ್ರಗಳು ಬೇರೆಯಾಗಿರುತ್ತವೆ. ಬುದ್ಧನ ಹದಿನೆಂಟು ಜನ ಶಿಷ್ಯರಿಗೆ ಸಮಾನವಾದ ಹದಿನೆಂಟು ಮಣಿಗಳ ಸರವೂ ಇವರಲ್ಲಿ ಕಂಡುಬರುತ್ತದೆ. ಸು–ಚು ಎಂದು ಕರೆಯಲಾದ ಇದರಲ್ಲಿ ಎರಡು ಮೇರುಗಳಿರುತ್ತವೆ. ನಮಸ್ಕಾರಗಳನ್ನು ಲೆಕ್ಕ ಮಾಡಲೂ ಇದನ್ನು ಬಳಸುತ್ತಾರೆ.

ಕೊರಿಯದ ಬೌದ್ಧರು 110 ಮಣಿಗಳ ಸರವನ್ನು ಬಳಕೆಯಲ್ಲಿಟ್ಟುಕೊಂಡಿದ್ದಾರೆ. ಇದರಲ್ಲಿ ಎರಡು ದಪ್ಪ ಮಣಿಗಳಿರುತ್ತವೆ. ಒಂದು ಮೇರು; ಇನ್ನೊಂದು ಸರವನ್ನು ಇಬ್ಭಾಗ ಮಾಡುತ್ತದೆ. ಈ ಸರದ ಪ್ರತಿ ಮಣಿಗೂ ಒಂದೊಂದು ಹೆಸರು ಕೊಡಲಾಗಿದೆ.

ಜಪಾನೀ ಬೌದ್ಧರ ಸರ ಅತ್ಯಂತ ಸಂಯುಕ್ತ ರೂಪದ್ದು. ಜಪಾನೀಯರ ಪ್ರತಿಯೊಂದು ಪಂಗಡವೂ ತನ್ನದೇ ಆದ ಸರವನ್ನು ಹೊಂದಿದೆಯಾದರೂ ಎಲ್ಲರೂ ಸಾಮಾನ್ಯವಾಗಿ ಬಳಸುವ ಮಾಲೆಯೂ ಒಂದಿದೆ. ಅದರ ಹೆಸರು ಶೊ–ಜುಕು–ಜಿವು–ದ್ದು. ಇದರಲ್ಲಿ 112 ಮಣಿಗಳಿವೆ. ಎರಡು ದಪ್ಪ ಮಣಿಗಳು ಸರವನ್ನು ಇಬ್ಭಾಗ ಮಾಡುತ್ತವೆ. ಇವಕ್ಕೆ ಬೇರೆ ಮಣಿಗಳನ್ನು ದಾರಗಳಲ್ಲಿ ಕಟ್ಟಲಾಗಿದೆ. ಹೀಗೆ ಒಂದು ಸರದಲ್ಲಿ ಮಣಿಗಳ ಅನೇಕ ಕವಲುಗಳಿವೆ, ಜಪಾನೀಯರ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಜಪಸರ ಬಹು ಮುಖ್ಯ ಪಾತ್ರ ವಹಿಸಿದೆ.

ಮಹಮ್ಮದೀಯರಲ್ಲಿ ಒಂದು ನೂರು ಮಣಿಗಳ ಸರವಿದೆ. ಇದರಲ್ಲೊಂದು ಮೇರು. ಬೇರೆ ವಸ್ತು ಅಥವಾ ಆಕೃತಿಗಳಿಂದಾದ ಮಣಿಗಳಿಂದಾಗಿ ಈ ಸರ ಮೂವತ್ತುಮೂರರ ಮೂರು ಮೂರು ಭಾಗವಾಗಿರುತ್ತದೆ. ಇದರ ಜೊತೆಗೆ ನೂರೊಂದು ಹಾಗು ಮೂವತ್ತು ಮೂರು ಮಣಿಗಳ ಸರಗಳೂ ಇವೆ. ವಹಾಬಿಯೋ ಪಂಗಡದವರು ತಮ್ಮ ಬೆರಳುಗಳಲ್ಲಿ ಎಣಿಸುತ್ತಾರೆ. ಇದಕ್ಕೆ ಕೊರಾನಿನ ಒಪ್ಪಿಗೆ ಇಲ್ಲವೆಂದು ಹೇಳಲಾಗಿದೆ. ಮಕ್ಕಾದ ಮಣ್ಣಿನಿಂದ ಮಾಡಿದ ಮಣಿಗಳ ಮಾಲೆಯೂ ಬಳಕೆಯಲ್ಲಿದೆ.

ರೋಮನ್ ಕೆಥೊಲಿಕ್ ಚರ್ಚಿನವರು 150 ಮಣಿಗಳ ಸರವಿಟ್ಟುಕೊಂಡಿದ್ದಾರೆ. ಇದು ದಪ್ಪ ಮಣಿಗಳಿಂದ ಹತ್ತು ಸಮ ಭಾಗಗಳಾಗಿ ವಿಭಕ್ತವಾಗಿದೆ. ಇದಕ್ಕೆ ಒಂದು ಶಿಲುಬೆ ಆಕೃತಿಯ ಪದಕವೂ, ಒಂದು ದೊಡ್ಡ ಹಾಗೂ ಎರಡು ಚಿಕ್ಕ ಮಣಿಗಳೂ ಇರುತ್ತವೆ. ಒಂದೊಂದು ಧಾರ್ಮಿಕ ಪಂಥದವರು ಬಳಸುವ ಹಾಗೂ ಒಂದೊಂದು ಬಗೆಯ ಸೇವೆಗಾಗಿ ನಿರ್ದಿಷ್ಟವಾದ ನಾನಾ ಬಗೆಯ ಜಪಸರಗಳಿವೆ. ಮಂತ್ರ ಹಾಗೂ ದಿವ್ಯಜಲದಿಂದ ಪುರೋಹಿತರು ಪವಿತ್ರೀಕರಿಸಿದ ಸರಗಳನ್ನು ಭಕ್ತರು ಪಡೆದುಕೊಂಡು ಉಪಯೋಗಿಸಬೇಕು. ಲೆಪಾಂಟ್ ಯುದ್ಧದ ನೆನಪಿಗಾಗಿ ಅಕ್ಟೋಬರಿನ ಮೊದಲ ಭಾನುವಾರವನ್ನು ಜಪಸರ ಹಬ್ಬವೆಂದು ಆಚರಿಸುವರು. ಗ್ರೀಕ್ ಆರ್ಥೊಡಾಕ್ಸ್ ಚರ್ಚಿನ ಮಠಗಳಲ್ಲಿ ಜಪಮಾಲೆಗೆ ಬದಲು ಗಂಟುಗಳಿರುವ ಹಗ್ಗವನ್ನು ಬಳಸುತ್ತಾರೆ.

ಯೆಹೂದ್ಯರಲ್ಲಿ ಜಪಸರ ತನ್ನ ಧಾರ್ಮಿಕ ಪ್ರಾಮುಖ್ಯವನ್ನು ಕಳೆದುಕೊಂಡಿದೆ.

(ಆರ್.ಎಸ್.ಎಸ್.)

**ಜಪಾನ್ :** ಏಷ್ಯ ಖಂಡದ ಪೂರ್ವದಲ್ಲಿ ಉತ್ತರ ಪೆಸಿಫಿಕ್ ಸಾಗರದಲ್ಲಿರುವ ಒಂದು ದ್ವೀಪಸಮುದಾಯ(6852 ದ್ವೀಪಗಳಿವೆ). ಖಂಡದ ಮುಖ್ಯ ಭೂಮಿಯಿಂದ ಸುಮಾರು 160 ಕಿಮೀ ದೂರದಲ್ಲಿ ಬಿಲ್ಲಿನಂತೆ ತೋರುವ ಈ ದ್ವೀಪಸಮುದಾಯದಲ್ಲಿ ಹಲವಾರು ಚಿಕ್ಕ ದೊಡ್ಡ ದ್ವೀಪಗಳಿವೆ. ಇವು ಸಮುದ್ರದ ನೀರಿನ ಮೇಲೆ ತಲೆಯೆತ್ತಿ ನಿಂತಿರುವ ಬಂಡೆಕಲ್ಲುಗಳಂತೆ ಕಾಣುತ್ತವೆ. ನಿಪ್ಪನ್ ಎಂಬುದು ಇದರ ಜಪಾನೀ ನಾಮ.

ಜಪಾನನ್ನು ಏಷ್ಯದ ಗ್ರೇಟ್ ಬ್ರಿಟನ್ ಎಂದು ಕರೆಯುತ್ತಾರೆ. ಜಪಾನಿಗೂ ಬ್ರಿಟನ್ನಿಗೂ ಹಲವು ಸಾಮ್ಯಗಳಿರುವುದು ಇದಕ್ಕೆ ಕಾರಣ. ಎರಡೂ ದೇಶಗಳು ಮುಖ್ಯ ಭೂಖಂಡಗಳಿಂದ ಪ್ರತ್ಯೇಕಿಸಲ್ಪಟ್ಟ ದ್ವೀಪಗಳು. ಎರಡೂ ಸಮಶೀತೋಷ್ಣವಲಯದಲ್ಲಿವೆ. ಎರಡು ದೇಶಗಳಲ್ಲೂ ಸಂವಿಧಾನಬದ್ಧ ರಾಜತ್ವವಿದೆ. ಇವುಗಳ ತೀರಗಳು ಅಂಕುಡೊಂಕಾಗಿರುವುದರಿಂದ ಅನೇಕ ಸ್ವಾಭಾವಿಕ ಬಂದರುಗಳಿವೆ. ಎರಡು ದೇಶಗಳ ಜನರೂ ನಾವಿಕ ವೃತ್ತಿಯಲ್ಲಿ ನೈಪುಣ್ಯ ಪಡೆದಿದ್ದಾರೆ. ಈ ದೇಶಗಳ ಸುತ್ತ ಸಾಗರ ಪ್ರವಾಹಗಳು ಹರಿಯುವುದರಿಂದ ವಾಯುಗುಣ ಹಿತಕರ; ಜನರು ಚತುರರೂ, ಸಾಹಸಿಗಳೂ ಆಗಿದ್ದಾರೆ. ಜಪಾನಿನ ಸಮುದ್ರತೀರದಲ್ಲಿ 45 ದೊಡ್ಡ ಬಂದರುಗಳು ಹಡಗು ಸಂಚಾರಕ್ಕೆ ಅನುಕೂಲವಾಗಿವೆ. ಜಪಾನಿನಲ್ಲೂ ಬ್ರಿಟನ್ನಿನಲ್ಲಿರುವಂತೆಯೇ ನಾನಾ ಬಗೆಯ ಕೈಗಾರಿಕೆಗಳು ಬೆಳೆದಿವೆ. ಜಪಾನ್ ಸಮುದ್ರ ಮತ್ತು ಕೊರಿಯ ಜಲಸಂಧಿಯಿಂದಾಗಿ ಜಪಾನ್ ಏಷ್ಯ ಖಂಡದಿಂದ ಬೇರ್ಪಟ್ಟಿದೆ. ಹಾಗೆಯೇ ಉತ್ತರದಲ್ಲಿ ಸೋಯಾ ಜಲಸಂಧಿ ಸ್ಯಾಕಲೀನ್ ದ್ವೀಪವನ್ನು ಜಪಾನಿನಿಂದ ಬೇರ್ಪಡಿಸಿದೆ. ಜಪಾನ್ ದ್ವೀಪಸಮೂಹದಲ್ಲಿ ನಾಲ್ಕು ದ್ವೀಪಗಳಿವೆ. ಹಾನ್‌ಷ್ಯೂ ದ್ವೀಪದ ಉತ್ತರಕ್ಕೆ ಇರುವ ದ್ವೀಪ ಹಾಕ್ಕೈಡೋ. ಹಾನ್‌ಷ್ಯೂ ದ್ವೀಪದ ವಿಸ್ತೀರ್ಣ 225329 ಚ.ಕಿಮೀ. ಹಾಕ್ಕೈಡೋ 93239 ಚ.ಕಿಮೀ ವಿಸ್ತಾರವಾಗಿವೆ. ಹಾಕ್ಕೈಡೋ ಮತ್ತು ಹಾನ್‌ಷ್ಯೂ ದ್ವೀಪಗಳನ್ನು ತ್ಸುಗಾರೂ ಜಲಸಂಧಿ ಬೇರ್ಪಡಿಸುತ್ತದೆ. ಜಪಾನ್ ದ್ವೀಪಗಳು ಉ.ಅ. 30–46ಲಿ ಮತ್ತು ಪೂ.ರೇ. 12–147ಲಿ ನಡುವೆ ಇವೆ. ವಿಸ್ತೀರ್ಣ (ಜಪಾನಿಗೆ ಮರಳಿ ಬಂದ ರೀಯೂಕ್ಯೂ ದ್ವೀಪಗಳೂ ಸೇರಿ) 3,77,829 ಚ.ಕಿಮೀ. ಉತ್ತರ ದಕ್ಷಿಣವಾಗಿ ಇರುವ ಸಮುದ್ರ ತೀರ 9426 ಕಿ.ಮೀ. ಜಪಾನಿನ ಜನಸಂಖ್ಯೆ 128,056,026(2010) ಇದರಲ್ಲಿ ಶೇ. 78 ನಗರವಾಸಿಗಳು, 22 ಗ್ರಾಮಸ್ಥರು. ಟೋಕಿಯೋ ಜನಸಂಖ್ಯೆ 12.79 ಮಿಲಿಯನ್ (2007) ರಾಜಧಾನಿ ಟೋಕಿಯೋ.

**ಭೂವಿಜ್ಞಾನ :** ಫೆಸಿಫಿಕ್ ಸಾಗರದ ಪಶ್ಚಿಮಭಾಗದಲ್ಲಿ ದಕ್ಷಿಣೋತ್ತರವಾಗಿ ಸೈಬೀರಿಯದ ಕಮ್‌ಚಟಕಾ ಪರ್ಯಾಯದ್ವೀಪದ ದಕ್ಷಿಣ ತುದಿಯಿಂದ ಆಗ್ನೇಯ ಏಷ್ಯದವರೆಗೆ ಹರಡಿರುವ ಅನೇಕ ದ್ವೀಪವೃತ್ತಗಳಲ್ಲಿ ಜಪಾನ್ ದ್ವೀಪಸ್ತೋಮ ಬಹಳ ಮುಖ್ಯವಾದದ್ದು. ಜಪಾನಿನ ಭೂನಕಾಶೆಯಲ್ಲಿ ವಿವಿಧ ಭೂಕಾಲಗಳಿಗೆ ಸೇರಿದ ಐದು ಪ್ರಮುಖ ಶಿಲಾಸಮುದಾಯಗಳನ್ನು ಗುರುತಿಸಬಹುದು:

| | | |
|---|---|---|
| 5 ನವಜೀವಕಲ್ಪ (ಸೀನೋಜೋಯಿಕ್) | ಅಗ್ನಿಶಿಲೆಗಳು | ಘನೀಕೃತ ಶಿಲಾರಸ–ಟುಫ್–ಬ್ರೆಕ್ಷಿಯಾ ಜಪಾನಿನ ನಾಲ್ಕನೆಯ ಒಂದು ಭಾಗವನ್ನು ಆಕ್ರಮಿಸಿದೆ. |
| 4 ನವಜೀವಕಲ್ಪ (ಸೀನೋಜೋಯಿಕ್) | ಜಲಜಶಿಲೆಗಳು | ಮರಳುಕಲ್ಲು–ಜೇಡುಶಿಲೆಗಳು–(ಸಾಗರ ಹಾಗೂ ಸರೋವರಗಳಲ್ಲಿ ಉಗಮವಾದವು.ಹಾನ್‌ಷ್ಯೂ ಹಾಗೂ ಹಾಕ್ಕೈಡೋ ಸುತ್ತಮುತ್ತಲಿನ ಬೆಟ್ಟಗುಡ್ಡ ಪ್ರದೇಶಗಳಲ್ಲಿ. |
| 3 ಅಂತ್ಯಕ್ರಿಟೇಷಸ್ ಯುಗ | (ಗ್ರಾನೈಟ್ ಶಿಲೆಗಳು) | ಗ್ರಾನೈಟ್ ಹಾಗೂ ಅದಕ್ಕೆ ಸಂಬಂಧಪಟ್ಟ ಶಿಲೆಗಳು, ಮಧ್ಯ ಹಾಗೂ ಪಶ್ಚಿಮ ಹಾನ್‌ಷ್ಯೂ ಮತ್ತು ಉತ್ತರ ಕೀಯೂಷೂ ಪ್ರದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ಹೊರಹೊಮ್ಮಿದೆ. |
| 2 ಮಧ್ಯ ಜೀವಕಲ್ಪ (ಮೀಸೋಜೋಯಿಕ್) | ರೂಪಾಂತರ ಹೊಂದಿಲ್ಲದ ಶಿಲೆಗಳು | ಸರೋವರ ಜನಿತ ಮರಳುಗಲ್ಲು, ಸ್ಲೇಟು, ಚರ್ಟ್ ಬೆಣಚುಕಲ್ಲು |
| 2a ಪ್ರಾಚೀನ ಜೀವಕಲ್ಪ (ಪೇಲಿಯೋ ಜೋಯಿಕ್) | ರೂಪಾಂತರ ಹೊಂದಿಲ್ಲದ ಶಿಲೆಗಳು | ಸಾಗರ ಹಾಗೂ ಸರೋವರಜನಿತ ಮರಳುಕಲ್ಲು, ಸುಣ್ಣಕಲ್ಲು ಹಾಗೂ ಸ್ಲೇಟು. ಈ ಶಿಲಾಸ್ತೋಮ ಗಳು ಜಪಾನಿನ ಬಹು ಭಾಗವನ್ನು ಆವರಿಸಿದ್ದು ಬೃಹತ್ ಮಡಿಕೆಗಳಾಗಿ ಹಲವಾರು ಸ್ತರಭಂಗಗಳಾಗಿವೆ. |
| 1 ಅತಿ ಪ್ರಾಚೀನ ಯುಗ (ಪ್ರೀಕೇಂಬ್ರಿಯನ್) | ರೂಪಾಂತರ ಶಿಲೆಗಳು | ನೈಸ್ ಹಾಗೂ ಷಿಸ್ಟ್ ಶಿಲೆಗಳು. ಈ ಶಿಲೆಗಳು ಜಪಾನಿನ ಕೆಲವು ಭಾಗದಲ್ಲಿ ಮಾತ್ರ ಕಂಡುಬರುತ್ತವೆ. |

ಭೂಚರಿತ್ರೆಯ ಪ್ರಕಾರ ಜಪಾನ್ ದ್ವೀಪಗಳು ಸಮುದ್ರದ ಮೇಲೆ ಹೊರಹೊಮ್ಮಿದವು. ಪ್ರಾಚೀನ ಜೀವಕಲ್ಪಯುಗದಲ್ಲಿ ಭೂಭಾಗದಿಂದ ಸಾಗರವನ್ನು ಸೇರಿದ ಅಗಾಧ ಪ್ರಮಾಣದ ಮೆಕ್ಕಲು ನಿಕ್ಷೇಪ ಕಾಲಾನುಕ್ರಮದಲ್ಲಿ ಅನೇಕ ರೀತಿಯ ಭೂಕ್ರಿಯೆಗಳಿಗೆ ಒಳಗಾಗಿ ಮೇಲಕ್ಕೆತ್ತಲ್ಪಟ್ಟು ಈ ದ್ವೀಪಗಳಾಗಿ ಮಾರ್ಪಟ್ಟವು. ಮೆಕ್ಕಲು ನಿಕ್ಷೇಪದಲ್ಲಿ ದೊರಕುವ ಫಾಸಿಲುಗಳ ಆಧಾರದ ಮೇಲೆ ಸೈಲೂರಿಯನ್‌ನಿಂದ ಪರ್ಮಿಯನ್ ಕಾಲದ ವರೆಗಿನ (ಸು.440 ದ.ಲ. ವರ್ಷ ಪ್ರಾಚೀನದಿಂದ 280 ದ.ಲ. ವರ್ಷ ಪ್ರಾಚೀನದವರೆಗೆ) ವಿವಿಧ ಸ್ತರಗಳನ್ನು ಗುರುತಿಸಬಹುದು. ಈ ಸ್ತರಗಳೊಡನೆ ದೊರಕುವ ಅಗ್ನಿಶಿಲೆಗಳು ಆ ಕಾಲದ ಅಗ್ನಿಪರ್ವತಗಳ ಚಟುವಟಿಕೆಗಳನ್ನು ವ್ಯಕ್ತಪಡಿಸುತ್ತವೆ. ಇಂದಿನ ಜಪಾನಿನ ಬಹುಭಾಗ ಮಧ್ಯಮ ಹಾಗೂ ಅಂತ್ಯ ಟ್ರಯಾಸಿಕ್ ಕಾಲದ (ಸು.200 ದ.ಲ. ವ. ಪ್ರಾಚೀನ) ಅಕಿಯೋಸ್ಟಿಕ್ ಪರ್ವತೋದ್ಭವ ಕ್ರಿಯೆಯಿಂದ ಮೇಲಕ್ಕೆತ್ತಲ್ಪಟ್ಟ ಆ ಕಾಲದ ಶಿಲೆಗಳಿಂದ ಆವೃತವಾಗಿವೆ. ಹಾಗೆಯೇ ಜೂರಾಸಿಕ್ (190 ದ.ಲ.ವ. ಪ್ರಾಚೀನ) ಮತ್ತು ಆದಿ ಕ್ರಿಟೇಷಸ್ (135 ದ.ಲ. ವ. ಪ್ರಾಚೀನ) ಕಾಲದಲ್ಲಿ ಜಪಾನಿನ ಕೆಲಭಾಗಗಳು ಅಸಾಧಾರಣವಾದ ಭೂಕ್ರಿಯೆಗಳಿಂದ ಭಾಗಶಃ ಮುಳುಗಿಯೂ ಇವೆ. ಕ್ರಿಟೇಷಸ್ ಯುಗದಲ್ಲಿ (135 ದ.ಲ.ವ. ಪ್ರಾಚೀನದಿಂದ 65 ದ.ಲ. ವ. ಪ್ರಾಚೀನದವರೆಗೆ) ಅಗಾಧ ಪ್ರಮಾಣದ ಅಂತಸ್ಸರಣಗಳಾಗಿ ಅಗ್ನಿಶಿಲೆಗಳಿಗೆ ಎಡೆಕೊಟ್ಟಿವೆ. ನವಜೀವಕಲ್ಪದಲ್ಲಿ (ಟರ್ಷಿಯರಿ) ಅಗಾಧವಾದ ಪರ್ವತೋದ್ಭವ ಕ್ರಿಯೆಗಳಿಂದ ಬೃಹತ್ ಮಡಿಕೆಗಳುಂಟಾಗಿ ಬಹು ವ್ಯಾಪಕವಾದ ಬಹಿಸ್ಸರಣ ಅಗ್ನಿಶಿಲೆಗಳು ರೂಪುಗೊಂಡವು. ಪ್ಲೀಸ್ಟೊಸೀನ್ ಕಾಲದಲ್ಲಿ ನಡೆದ ಭೂಚಲನವಲನಗಳು ಸಮುದ್ರದಂಚಿನಲ್ಲಿ ಅನೇಕ ಮಾರ್ಪಾಡುಗಳಿಗೆ ಕಾರಣವಾಗಿವೆ. ಹಾಗೆಯೇ ಭೂಕಾಲದ ಇತ್ತೀಚಿನ ದಿವಸಗಳಲ್ಲಿಯೂ ಕೂಡ ಉಂಟಾಗುತ್ತಿರುವ ಭೂಕಂಪನಗಳು, ಅಗ್ನಿಪರ್ವತಗಳ ಚಟುವಟಿಕೆಗಳು, ಸಣ್ಣಪುಟ್ಟ ಭೂಚಲನೆಗಳು ನಿರಂತರವಾಗಿ ಜಪಾನಿನ ಭೂವಿನ್ಯಾಸದ ವ್ಯತ್ಯಾಸಗಳಿಗೆ ಪೂರಕವಾಗಿವೆ.

**ಖನಿಜ ಸಂಪತ್ತು :** ಕೈಗಾರಿಕೋದ್ಯಮದಲ್ಲಿ ಅಪಾರ ಪ್ರಗತಿಯನ್ನು ಜಪಾನ್ ಸಾಧಿಸಿದ್ದರೆ ಅದು ಖನಿಜಕ್ಷೇತ್ರದಲ್ಲಿ. ಕೈಗಾರಿಕೆಗಳಿಗೆ ಬೇಕಾಗುವ ಎಲ್ಲ ಖನಿಜಗಳನ್ನು ಪಡೆದಿದೆ ಎಂದು ಹೇಳುವ ಹಾಗಿಲ್ಲ. ಅನೇಕ ಖನಿಜಗಳನ್ನು ಪರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಕಬ್ಬಿಣದ ನಿಕ್ಷೇಪಗಳು ಅಲ್ಪ ಪ್ರಮಾಣದಲ್ಲಿವೆ. ಇವು ಬಹುತೇಕ ಹಾಕ್ಕೈಡೋ ಹಾಗೂ ಉತ್ತರ ಹಾನ್‌ಷ್ಯೂ ಪ್ರದೇಶಕ್ಕೆ ಸೀಮಿತವಾಗಿವೆ. ಈ ಪ್ರದೇಶದ ಅದಿರಿನಲ್ಲಿ 35ರಷ್ಟು ಕಬ್ಬಿಣಾಂಶ ಉಂಟು. ಹಾಕ್ಕೈಡೋ ಮತ್ತು ಹಾನ್‌ಷ್ಯೂವಿನ ಸುತ್ತಮುತ್ತ ಸುಮಾರು 50 ಗಣಿಗಳು ಕಾರ್ಯನಿರತವಾಗಿವೆ. ಪೆಟ್ರೋಲಿಯಮ್ ದೊರಕುವ ಪ್ರದೇಶ ಪಶ್ಚಿಮ ಹಾಕ್ಕೈಡೋನಿಂದ ದಕ್ಷಿಣ ಹಾನ್‌ಷ್ಯೂವಿನ–ವರೆಗೂ ಹಬ್ಬಿದೆ. ಆದರೆ ಪೆಟ್ರೋಲಿ–ಯಮ್‌ನ ಉತ್ಪಾದನೆ ಅತ್ಯಲ್ಪ. ಹೀಗಾಗಿ ಜಪಾನ್ ಅಧಿಕ ಪ್ರಮಾಣದಲ್ಲಿ ಪೆಟ್ರೋಲನ್ನು ಆಮದು ಮಾಡಿಕೊಳ್ಳುತ್ತದೆ. ನೈಸರ್ಗಿಕ ಅನಿಲವನ್ನು ಅಧಿಕ ಪ್ರಮಾಣದಲ್ಲಿ ನೀಗಾಟ ಹಾಗೂ ದಕ್ಷಿಣ ಕಾಂಟೋ ಪ್ರದೇಶಗಳಲ್ಲಿ ಹೊರತೆಗೆಯಲಾಗುತ್ತದೆ. ಜಪಾನಿನ ಖನಿಜ ಸಂಪತ್ತಿನಲ್ಲಿ ಕಲ್ಲಿದ್ದಲು ಅತಿಮುಖ್ಯವಾದದ್ದು. ಒಟ್ಟು ಖನಿಜೋ–ತ್ಪಾದನೆಯಲ್ಲಿ ಇದು 47ರಷ್ಟಾಗುತ್ತದೆ. ಈ ನಿಕ್ಷೇಪ ಸುಮಾರು 20.79 ಬಿಲಿಯನ್ ಟನ್‌ಗಳಷ್ಟು ಇದೆಯೆಂದು ಅಂದಾಜು ಮಾಡಲಾಗಿದೆ. ಉತ್ತರ ಕೀಯೂಷೂ, ಹಾಕ್ಕೈಡೋ, ಪೂರ್ವ ಹಾನ್‌ಷ್ಯೂ ಮತ್ತು ಪಶ್ಚಿಮ ಹಾನ್‌ಷ್ಯೂ ಕಲ್ಲಿದ್ದಲು ದೊರೆಯುವ ನಾಲ್ಕು ಪ್ರಮುಖ ಪ್ರದೇಶಗಳು. ಲೋಹ ಸಂಬಂಧ ಖನಿಜಗಳಲ್ಲಿ ಕಬ್ಬಿಣವನ್ನು ಬಿಟ್ಟರೆ ತಾಮ್ರ ಅತಿಮುಖ್ಯವಾದದ್ದು. ಸುಮಾರು 200 ತಾಮ್ರದ ಗಣಿಗಳಿವೆ. ಅವುಗಳ ಪೈಕಿ 6 ದೊಡ್ಡ ಪ್ರಮಾಣದವು. ಬಹುತೇಕ ಗಣಿಗಳು ಈಶಾನ್ಯ ಹಾನ್‌ಷ್ಯೂ ಹಾಗೂ ಷಿಕೋಕ್ಯೂ ಪ್ರದೇಶದ ಸುತ್ತ ಮುತ್ತ ಪ್ರಸರಿಸಿವೆ. ಸೀಸ ಹಾಗೂ ಸತು ಹೆಚ್ಚಾಗಿ ತಾಮ್ರದ ಅದಿರಿನಲ್ಲಿ ದೊರೆಯುತ್ತವೆ. ಅಲೋಹ ಖನಿಜಸಂಪತ್ತಿನಲ್ಲಿ ಗಂಧಕ ಅತಿಮುಖ್ಯವಾದದ್ದು. ಪೈರೈಟ್ ಇದರ ಅತಿಮುಖ್ಯ ಖನಿಜ. ಜಪಾನ್ ಪ್ರಪಂಚದಲ್ಲಿ ಅತಿ ಹೆಚ್ಚು ಪೈರೈಟ್ ಉತ್ಪಾದಿಸುವ ರಾಷ್ಟ್ರ. ಇತರ ಲೋಹ ಹಾಗೂ ಅಲೋಹಗಳಾದ ಚಿನ್ನ, ಬೆಳ್ಳಿ, ನೈಟ್ರೇಟ್ ಮುಂತಾದವು ಅತ್ಯಲ್ಪ ಪ್ರಮಾಣದಲ್ಲಿ ದೊರೆಯುತ್ತವೆ.

ದೇಶೀಯ ಬಳಕೆಯನ್ನು ಆಧಾರವಾಗಿಟ್ಟುಕೊಂಡು, ಜಪಾನಿನ ಖನಿಜ ಸಂಪತ್ತನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು : 1 ದೇಶೀಯ ಬಳಕೆಗೆ ಸಾಕಾಗುವಷ್ಟು ಅಥವಾ ಹೆಚ್ಚು ಕಡಿಮೆ ಸಾಕಾಗುವಷ್ಟು ದೊರೆಯುತ್ತಿರುವ ಖನಿಜಗಳು–ಕ್ರೋಮೈಟ್, ಕಲ್ಲಿದ್ದಲು, ಜಿಪ್‌ಸಮ್, ಸುಣ್ಣಕಲ್ಲು, ಮೆಗ್ನೀಸಿಯಮ್, ಪೈರೈಟ್, ಗಂಧಕ, ಸೀಸ, ಸತು, ತಾಮ್ರ, ಚಿನ್ನ ಮತ್ತು ಬೆಳ್ಳಿ, 2 ದೇಶೀಯ ಬಳಕೆಗೆ ಸಾಲದಷ್ಟು ಪ್ರಮಾಣದಲ್ಲಿ ದೊರೆಯುವುದರಿಂದ ಭಾಗಶಃ ಆಮದು ಮಾಡಿಕೊಳ್ಳಬೇಕಾದ ಖನಿಜಗಳು–ಕಬ್ಬಿಣದ ಅದಿರು, ಆಂಟಿಮನಿ, ಪಾದರಸ, ಮ್ಯಾಂಗನೀಸ್, ತವರ, ‘ಟೈಟೇನೀಯಮ್’, ಟಂಗ್‌ಸ್ಟನ್, ಕ್ರೋಮಿಯಮ್ ಹಾಗೂ ವೆನೆಡಿಯಮ್. 3 ಸಂಪೂರ್ಣವಾಗಿ ಆಮದು ಮಾಡಿಕೊಳ್ಳಲೇ ಬೇಕಾದ ಖನಿಜಗಳು–ನಿಕ್ಕಲ್, ಕೋಬಾಲ್ಟ್, ಅಲ್ಯೂಮಿನಿಯಮ್, ನೈಟ್ರೇಟ್ ಹಾಗೂ ವಿರಳ ಖನಿಜಗಳು.

(ಎಂಎನ್.ವಿ.)



**ತೀರಪ್ರದೇಶ :** ಜಪಾನಿನ ತೀರ 26500 ಕಿಮೀಗಳಷ್ಟು ಉದ್ದವಿದೆ. ಜಪಾನಿನ ಉದ್ದನೆಯ ತೀರ ಅದರ ಜನಜೀವನ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ಬಹಳ ಪರಿಣಾಮ ಬೀರಿದೆ. ಜಪಾನಿನ ಯಾವ ಪ್ರದೇಶವೂ ಸಮುದ್ರಕ್ಕೆ 120 ಕಿಮೀಗಳಿಗಿಂತ ಹೆಚ್ಚು ದೂರದಲ್ಲಿಲ್ಲ. ತೀರಪ್ರದೇಶದಲ್ಲಿ ಮರಳುದಂಡೆಗಳು ಹಾಗೂ ತಗ್ಗಾದ ದಂಡೆಗಳಿಂದ ಬೇರ್ಪಟ್ಟ ಉಪ್ಪುನೀರಿನ ಹರವುಗಳುಂಟು. ಇಲ್ಲಿಯ ತೀರಪ್ರದೇಶ ಚಳಿಗಾಲದ ಚಂಡಮಾರುತಗಳಿಗೆ ಮತ್ತು ಅಲೆಗಳ ಪರಿಣಾಮಕ್ಕೆ ಒಳಗಾಗುತ್ತದೆ. ಪೆಸಿಫಿಕ್ ತೀರಪ್ರದೇಶದಲ್ಲಿ

ಅನೇಕ ಒಳಚಾಚುಗಳುಂಟು. ಟೋಕಿಯೋ ಕೊಲ್ಲಿಯ ಬಳಿಯ ಪ್ರದೇಶ ಸಮತಟ್ಟಾದ ಮಣ್ಣಿನಿಂದ ಕೂಡಿದ ಮುಖಜ ಭೂಮಿ, ಸಗಾಮೀ ಕೊಲ್ಲಿಯ ಪೂರ್ವಭಾಗದಲ್ಲಿರುವ ವಿಸ್ತಾರ ಪ್ರದೇಶಗಳಲ್ಲಿ ಮರಳು ದಂಡೆಗಳು ಹಬ್ಬಿವೆ. ಅದರ ಪಶ್ಚಿಮ ಭಾಗ ಕಡಿದು, ಬಂಡೆಗಳಿಂದ ಕೂಡಿದ್ದು.




ಈಜ್ಹೂ ಪರ್ಯಾಯದ್ವೀಪದಲ್ಲಿ ಆಳವಾಗಿ ಸವೆದಿರುವ ಅಗ್ನಿಪರ್ವತಗಳು ಸಮುದ್ರದವರೆಗೂ ಹಬ್ಬಿವೆ. ಬಯಲುಗಳ ಕರಾವಳಿಗಳು ಮರಳಿನಿಂದ ಕೂಡಿದವು. ಬೆಟ್ಟಗಳ ಇಳಿಜಾರುಗಳು ನೇರವಾಗಿ ಸಮುದ್ರಕ್ಕೆ ಇಳಿದಿರುವ ಕಡೆಗಳಲ್ಲಿ ತೀರಗಳು ಶಿಲಾವೃತ. ಕುಮಾನೋ ಸಮುದ್ರಕ್ಕೆ ಎದುರಾಗಿರುವ ಕೀ ಪರ್ಯಾಯ ದ್ವೀಪದಲ್ಲಿ ಮತ್ತು ಕೀಟಾಕಾಮೀ ಪ್ರದೇಶದ ಈಶಾನ್ಯ ಭಾಗದುದ್ದಕ್ಕೂ ಅಧಿಕ ಒಳಚಾಚುಗಳನ್ನು ಕಾಣಬಹುದು. ಕೆಲವು ಕಡೆ ಸಮುದ್ರದಲ್ಲಿರುವ ಎತ್ತರವಾದ ಬಂಡೆಗಳನ್ನು ಆಧರಿಸಿ ನಿಂತಿರುವ ತೀರಸಮತಟ್ಟುಗಳುಂಟು. ಬೋಸೋ ಮತ್ತು ಕೀ ಪರ್ಯಾಯದ್ವೀಪಗಳಲ್ಲಿ ಈ ಲಕ್ಷಣಗಳನ್ನು ಕಾಣಬಹುದು.

ಒಟ್ಟಿನಲ್ಲಿ ಜಪಾನಿನ ತೀರಪ್ರದೇಶ ಎರಡು ಬಗೆ. ಒಂದು ಮರಳಿನಿಂದ ಕೂಡಿದ್ದರೆ, ಇನ್ನೊಂದು ಶಿಲಾವೃತ. ಕರಾವಳಿ ಅಂಕುಡೊಂಕು. ಆದ್ದರಿಂದ ಇಲ್ಲಿ ಕೆಲವು ಸ್ವಾಭಾವಿಕ ಬಂದರುಗಳುಂಟು. ಇದರ ಉದ್ದನೆಯ ಕರಾವಳಿ ಸಮುದ್ರಯಾನಕ್ಕೆ ಅನುಕೂಲಕರ. ಆಂತರಿಕ ಸಾರಿಗೆ ಹಾಗೂ ಮೀನುಗಾರಿಕೆ ಉದ್ಯಮಕ್ಕೆ ಇದು ಸಹಾಯಕ.

**ಮೇಲ್ಮೈ ಲಕ್ಷಣ:** ಜಪಾನಿನ ದ್ವೀಪಗಳು ಪರ್ವತಗಳಿಂದಲೂ ಅನೇಕ ಜ್ವಾಲಾಮುಖಿಗಳಿಂದಲೂ ಕೂಡಿದವು. ಇಲ್ಲಿ ಪದೇಪದೇ ಸಂಭವಿಸುತ್ತಿರುವ ಭೂಕಂಪಗಳನ್ನೂ ಜೀವಂತವಾಗಿರುವ ಜ್ವಾಲಾಮುಖಿಗಳನ್ನೂ ಗಮನಿಸಿದರೆ ಇಲ್ಲಿಯ ಪರ್ವತರಚನಾಕ್ರಿಯೆ ಇನ್ನೂ ಮುಂದುವರಿದಿದೆಯೆಂಬುದು ಕಂಡುಬರುತ್ತದೆ. ಇಲ್ಲಿಯ ಪರ್ವತಸ್ತೋಮಗಳನ್ನು ಆರು ಪ್ರಕಾರಗಳಾಗಿ ವಿಂಗಡಿಸಬಹುದು: 1. ಕ್ಯುರೀಲ್ ಅಥವಾ ಚೀಷೀಮಾ ದ್ವೀಪಗಳಿಗೆ ಕಾರಣವಾದ, ಹಾಕೈಡೋ ದ್ವೀಪದಲ್ಲಿ ಈಶಾನ್ಯದ ಕಡೆಯಿಂದ ಮುಂದುವರಿದಿರುವ ಪರ್ವತಶ್ರೇಣಿ, 2. ಹಾಕೈಡೋವನ್ನು ವಾಯವ್ಯ ಮೂಲೆಯಿಂದ ಪ್ರವೇಶಿಸುವ ಸ್ಯಾಕಲೀನ್ ಅಥವಾ ಕಾರಫ್ಯೂಟೋ ಪರ್ವತಗಳು, 3. ಹಾನ್‍ಷ್ಯೂವಿನ ಉತ್ತರಾರ್ಧ ಭಾಗವನ್ನೂ ಹಾಕೈಡೋವಿನ ದಕ್ಷಿಣದ ಪರ್ಯಾಯದ್ವೀಪವನ್ನೂ ಆವರಿಸಿರುವ ಟೋಹೋಕೂ ಅಥವಾ ಈಶಾನ್ಯ ಶ್ರೇಣಿ, 4. ಮಧ್ಯ ಹಾನ್‍ಷ್ಯೂವಿನಿಂದ ನೈರುತ್ಯದ ಕಡೆ ಹಬ್ಬಿ ಚೂಗೋಕೂ ಪರ್ಯಾಯದ್ವೀಪದ ಬೆನ್ನೆಲುಬಾಗಿರುವ ಮತ್ತು ಷಿಕೋಕ್ಯೂ ಪರ್ವತಗಳಾಗಿ ಬಹು ದೂರ ಹಬ್ಬಿರುವ ಸೇನಾನ್ ಅಥವಾ ನೈರುತ್ಯ ಭಾಗದ ಪರ್ವತಶ್ರೇಣಿ, 5. ಪೆಸಿಫಿಕ್ ದ್ವೀಪಸ್ತೋಮದ ಮೂಲಕ ಮಧ್ಯ ಹಾನ್‍ಷ್ಯೂವನ್ನು ದಾಟಿ ಉತ್ತರಕ್ಕೆ ಹಬ್ಬಿರುವ ಷಿಚಿಟೋ–ಮರಿಯಾನ ಶ್ರೇಣಿ, 6. ಫಾರ್ಮೋಸದಿಂದ ಉತ್ತರದ ಕಡೆ ಬಾಗಿ ಕೀಯೂಷೂವನ್ನು ಭೇದಿಸುವ ರೀಯೂಕ್ಯೂ ಶ್ರೇಣಿ. ಪರ್ವತಶ್ರೇಣಿಗಳು ಕೂಡುವ ಎಡೆಯಲ್ಲಿ ಉನ್ನತ ಪರ್ವತಗ್ರಂಥಿಗಳೂ ವಿಸ್ತಾರ ಬಯಲುಗಳೂ ಜ್ವಾಲಾಮುಖಿ ಸ್ತೋಮಗಳೂ ರೂಪುಗೊಂಡಿವೆ.

ಸಾಕರ ಜೀಮಾ ಅಗ್ನಿಪರ್ವತ, ಕಾಗಶೀಮಾ ನಗರದ ಬಳಿ ಇದೆ

ಹಾನ್‍ಷ್ಯೂವಿನ ಮಧ್ಯಭಾಗದಲ್ಲಿ ಸೇನಾನ್ ಮತ್ತು ಷಿಚಿಟೋ–ಮರಿಯಾನ ಪರ್ವತಶ್ರೇಣಿಗಳು ಸಂಧಿಸುತ್ತವೆ. ಜಪಾನಿನ ಜ್ವಾಲಾಮುಖೇತರ ಮೂಲದ ಅತ್ಯುನ್ನತ ಪರ್ವತಗಳು ಇರುವುದು ಅಲ್ಲೇ. ಫ್ಯೂಜೀ ಜ್ವಾಲಾಮುಖಿಸ್ತೋಮ ಇರುವುದೂ ಅಲ್ಲೇ. ಈ ಸ್ತೋಮದ ಫ್ಯೂಜೀ, ಆಕೈಷೀ, ಮತ್ತು ಹಿಡಾ ಶಿಖರಗಳ ಎತ್ತರ ಅನುಕ್ರಮವಾಗಿ 377 ಕಿಮೀ, 3187 ಮೀ, ಮತ್ತು 3103 ಮೀ. ಈ ಎರಡು ಮಹಾಶ್ರೇಣಿಗಳ ಸಂಧಿಸ್ಥಳದಲ್ಲೇ ಜಪಾನಿನ ಅತ್ಯಂತ ದೊಡ್ಡ ಮೈದಾನವಾದ ಕ್ಯಾಂಟೋ ಬಯಲು ಇದೆ.

ಟೋಹೋಕೂ, ಕ್ಯುರೀಲ್ ಮತ್ತು ಸ್ಯಾಕಲೀನ್ ಪರ್ವತಶ್ರೇಣಿಗಳು ಹಾಕೈಡೋನಲ್ಲಿ ಕೂಡುತ್ತವೆ. ಬೃಹತ್ ಜ್ವಾಲಾಮುಖಿಗಳು ಹೆಣೆದುಕೊಂಡಿರುವ ಆ ಪ್ರದೇಶ ಹಾಕೈಡೋನ ಜಾವಣಿ. ಜ್ವಾಲಾಮುಖಿಸ್ತೋಮದಿಂದ ಕೂಡಿದ ಇನ್ನೊಂದು ಪರ್ವತಗ್ರಂಥಿ ಇರುವುದು ಕೀಯೂಷೂನಲ್ಲಿ. ಇಲ್ಲಿ ಸೇನಾನ್ ಮತ್ತು ರೀಯೂಕ್ಯೂ ಶ್ರೇಣಿಗಳು ಸಂಧಿಸುತ್ತವೆ. ಇಲ್ಲೂ ಉನ್ನತ ಪರ್ವತಗ್ರಂಥಿಗಳೂ ನೆರೆಯಲ್ಲೇ ದೊಡ್ಡ ಪ್ರಸ್ಥಭೂಮಿಗಳೂ ವಿಶಾಲ ಮೈದಾನಗಳೂ ಇವೆ. ಸ್ಯಾಕಲೀನ್ ಪರ್ವತಶ್ರೇಣಿ ಎರಡು ಕವಲವಾಗಿ ಒಡೆದು ಹಾಕೈಡೋನಿಂದ ಮುಂದೆ ಸಾಗುವಾಗ, ದ್ವೀಪದ ಪೂರ್ವದಲ್ಲಿ ಕೀಟಾಮೀ ಮತ್ತು ಹಿಡಾಕ ಶ್ರೇಣಿಗಳಾಗಿಯೂ ಪಶ್ಚಿಮದಲ್ಲಿ ಟೆಷೀಯೋ ಮತ್ತು ಯೂಬರೀ ಪರ್ವತಗಳಾಗಿಯೂ ಪರಿಣಮಿಸುತ್ತದೆ. ಇವುಗಳ ನಡುವೆ ವಿಶಾಲ ಮೈದಾನಗಳುಂಟು.

ಹಾಕೈಡೋ ದ್ವೀಪದಲ್ಲಿರುವ ಓನುಮಾ ಉದ್ಯಾನದ ಸರೋವರ ಪ್ರದೇಶ ಹಿನ್ನೆಲೆಯಲ್ಲಿ ಕೋಮಾಗಟಾಕೀ ಅಗ್ನಿಪರ್ವತ

ದಕ್ಷಿಣದಲ್ಲಿ ಹಾಕೈಡೋನಲ್ಲಿ ವಿಸ್ತರಿಸಿರುವ ಕ್ಯುರೀಲ್ ಶ್ರೇಣಿ ಹಲವು ಜ್ವಾಲಾಮುಖಿಗಳಾಗಿ ಪರಿಣಮಿಸಿದೆ. ಇವುಗಳಲ್ಲಿ ಅತ್ಯುನ್ನತವಾದ್ದು ಅಸಾಹೀ–ಡಾಕೇ (2290ಮೀ). ಇದು ಮಧ್ಯ ಹಾಕೈಡೋನಲ್ಲಿದೆ. ಜಪಾನಿನ ಎರಡನೆಯ ದೊಡ್ಡ ಮೈದಾನವಾದ ಟೋಕಾಚೀ ಇರುವುದು ಹಾಕೈಡೋನ ಪಶ್ಚಿಮ ಭಾಗದಲ್ಲಿ–ಕ್ಯುರೀಲ್ ಮತ್ತು ಸಾಕಲೀನ್‍ಗಳು ಸಂಧಿಸುವೆಡೆಯಲ್ಲಿ.

ಹಾಕೈಡೋನ ನೈರುತ್ಯ ಪರ್ಯಾಯದ್ವೀಪ ಭಾಗವನ್ನಾವರಿಸಿರುವ ಟೋಹೋಕೂ ಪರ್ವತ ವ್ಯವಸ್ಥೆ ಹಾನ್‍ಷ್ಯೂವಿನ ಮಧ್ಯದ ಪ್ರದೇಶಕ್ಕೆ ಮುಂದುವರಿಯುತ್ತದೆ. ಇಲ್ಲಿ ಮೂರು ಪರ್ವತಶ್ರೇಣಿಗಳೂ ಇವುಗಳ ಅಂಚುಗಳಲ್ಲಿ ಮತ್ತು ನಡುವೆ ಇರುವ ಮೈದಾನಗಳೂ

ಟೋಹೋಕೂ ಶ್ರೇಣಿಗೆ ಸಮಾಂತರಗಳಲ್ಲಿವೆ. ಮಧ್ಯದ ಶ್ರೇಣಿ ಅತ್ಯುನ್ನತ. ಇದು ಈ ಪ್ರದೇಶದ ಬೆನ್ನೆಲುಬಿನಂತಿದೆ. ಇದರ ನೆತ್ತಿಯಲ್ಲಿ ಅನೇಕ ಉನ್ನತ ಜ್ವಾಲಾಮುಖಿಗಳುಂಟು. ಪಶ್ಚಿಮದಲ್ಲಿರುವ ದೇವಾ ಶ್ರೇಣಿ ಇದಕ್ಕಿಂತ ಬಲು ತಗ್ಗು. ಇವೆರಡರ ನಡುವೆ ಹರಡಿರುವ ಶ್ರೇಣಿಗಳು ತುಂಡುತುಂಡಾಗಿವೆ. ಅವುಗಳ ನಡುವಣ ನೆಲ ಫಲವತ್ತಾದ್ದು.

ಜಪಾನಿನ ಮುಖ್ಯ ಶ್ರೇಣಿಗಳಲ್ಲಿ ಷಿಚಿಟೋ ಮರಿಯಾನ ಒಂದು. ಪೆಸಿಫಿಕ್‍ನಿಂದ ಹರಿದುಬರುವ ಈ ಶ್ರೇಣಿ ಆರಂಭದಲ್ಲೇ ಏಳು ದ್ವೀಪಗಳನ್ನುಂಟುಮಾಡಿದೆ. ಇವು ಜ್ವಾಲಾಮುಖಿ ದ್ವೀಪಗಳು. ಇವುಗಳ ಹೆಸರು ಈಜೂ ಷಿಚಿಟೊ. ಈ ಶ್ರೇಣಿಯ ಇಲ್ಲಿಂದ ಮುಂದಿನ ಭಾಗವೇ ಈಜೂ ಪರ್ಯಾಯದ್ವೀಪ. ಇದರ ಬಿಸಿನೀರ ಊಟೆಗಳೂ ಮರಳ ದಂಡೆಯೂ ಪ್ರಸಿದ್ಧವಾದವು. ಇಲ್ಲಿಂದ ಉತ್ತರಕ್ಕೆ ಇರುವ ಪ್ರದೇಶದಲ್ಲಿ ಹಾಕೋನೀ ಜ್ವಾಲಾಮುಖಿ ಇದೆ. ಆಷಿ ಸರೋವರ ಇರುವುದು ಇದರ ವಿಶಾಲ ಬೋಗುಣಿಯಲ್ಲಿ. ಜಪಾನಿನ ಅತ್ಯಂತ ಎತ್ತರವಾದ ಮತ್ತು ಅತ್ಯಂತ ಸುಂದರವಾದ ಫ್ಯೂಜೀಯಾಮ ಅಗ್ನಿ ಪರ್ವತ 3778 ಮೀ. ಇದರ ಬಳಿಯಲ್ಲಿದೆ. ಸೇನಾನ್ ಶ್ರೇಣಿ ಪೂರ್ವಪಶ್ಚಿಮವಾಗಿ ಹಬ್ಬಿದೆ. ಇದರ ಒಂದು ಭಾಗ ಚೂಗೋಕೂ ಪರ್ವತ. ಇದು ಚೂಗೋಕೂ ಪರ್ಯಾಯ ದ್ವೀಪದ ಬೆನ್ನೆಲುಬಿನಂತಿದೆ. ಬೀವಾ ಸರೋವರಕ್ಕೆ ಪಶ್ಚಿಮದಲ್ಲಿ ಟಂಬ್ಬ ಪ್ರಸ್ಥಭೂಮಿ ಇದೆ. ಚೂಗೋಕೂ ಪರ್ವತದ ಮುಖ್ಯ ಶಿಖರ ಹೊಟಾಕಡಾಕೆ (3090 ಮೀ).

ಜಪಾನೀ ಯುವತಿಯರು

ಜಪಾನಿನ ಪರ್ವತರಚನೆಯಿಂದಾಗಿ ಜನವಸತಿಗೆ ಮತ್ತು ಸಂಪರ್ಕಸಾಧನಗಳ ವ್ಯವಸ್ಥೆಗೆ ಅಡಚಣೆಯಾಗಿದೆ. ಆದರೂ ಈ ಪರ್ವತಗಳಲ್ಲಿ ಅಪಾರ ಅರಣ್ಯ ಸಂಪತ್ತುಂಟು. ವಿಪುಲ ಜಲದ ನೆಲೆ ಈ ಪ್ರದೇಶಗಳಲ್ಲಿ ಇರುವುದರಿಂದ ಅನೇಕ ನದಿಗಳ ಉಗಮಕ್ಕೆ ಕಾರಣವಾಗಿದೆ. ಇವು ಸುಂದರ ದೃಶ್ಯಗಳ ಬೀಡುಗಳು.

ಜಪಾನಿನಲ್ಲಿ ಮುಖ್ಯ ಬಯಲುಗಳೆಲ್ಲ ಇರುವುದು ತೀರಪ್ರದೇಶಗಳಲ್ಲಿ. ಬಹುತೇಕವಾಗಿ ಅವು ಪರ್ವತಗಳಿಂದ ಹೊತ್ತು ತಂದ ಮೆಕ್ಕಲು ಮತ್ತಿತರ ಗೋಡು ಮಣ್ಣುಗಳಿಂದ ಆದಂಥವು. ಪೆಸಿಫಿಕ್ ತೀರದ ಮಧ್ಯ ಹಾನ್‍ಷ್ಯೂವಿನಲ್ಲಿರುವ ಕ್ವಾನ್‍ಟೋ ಬಯಲಿನ ವಿಸ್ತೀರ್ಣ ಸುಮಾರು 1250 ಚ.ಕಿಮೀ.

ಜಪಾನಿನಲ್ಲಿ 100ಕ್ಕೂ ಹೆಚ್ಚು ನದಿಗಳುಂಟು. ಅವುಗಳ ಪೈಕಿ ಮೂರು ಮಾತ್ರ 320 ಕಿಮೀಗಿಂತ ಉದ್ದ. ಅವುಗಳ ಹೆಸರು ಷಿನಾನೋ (368 ಕಿಮೀ), ಇಷಿಕಾರೀ (365 ಕಿಮೀ) ಮತ್ತು ಟೋನೇ (322 ಕಿಮೀ). ನದಿಗಳು ಬೆಟ್ಟದ ಇಳಿಜಾರಿನಲ್ಲಿ ರಭಸದಿಂದ ಹರಿಯುವಾಗ ಹೊತ್ತು ತಂದ ಮಣ್ಣಿನಿಂದ ಫಲವತ್ತಾದ ಮೈದಾನಗಳಾಗಿವೆ. ಪರ್ವತಪ್ರದೇಶದಿಂದ ಇಳಿದು ಮೈದಾನದಲ್ಲಿ ಹರಿಯುವಾಗ ಈ ನದಿಗಳ ಮಣ್ಣು ತಳದಲ್ಲಿ ತಂಗಿ ಇವುಗಳ ಪಾತ್ರಗಳು ನೆರೆಯ ನಾಡಿಗಿಂತ ಸಾಮಾನ್ಯವಾಗಿ ಎತ್ತರವಾಗಿರುತ್ತವೆ.

ಜಪಾನಿನ ವ್ಯವಸಾಯಕ್ಕೆ ಬೇಕಾದ ನೀರಿನಲ್ಲಿ ಮೂರನೆಯ ಎರಡು ಭಾಗ ಒದಗುವುದು ನದಿಗಳಿಂದ. ಇವುಗಳಿಂದ ವಿದ್ಯುತ್ತಿನ ಉತ್ಪಾದನೆಯೂ ಆಗುತ್ತಿದೆ.

**ವಾಯುಗುಣ:** ದಕ್ಷಿಣೋತ್ತರವಾಗಿ ಜಪಾನಿನ ಹರವು 15 ಅಕ್ಷಾಂಶೀಯ ಡಿಗ್ರಿಗಳಷ್ಟು ಇರುವುದರಿಂದ ಇದರ ಉಷ್ಣತೆ ಮತ್ತು ಅವಪಾತಗಳಲ್ಲಿ ಪ್ರಾದೇಶಿಕ ಭಿನ್ನತೆಗಳು ಅಧಿಕ. ದಕ್ಷಿಣದ ಕೀಯೂಷೂ ಉಪೋಷ್ಣವಲಯದಲ್ಲಿದೆ. ಅಲ್ಲಿ ಮಳೆ ಹೆಚ್ಚು. ಉತ್ತರದ ಹಾಕೈಡೋವಿನದು ಖಂಡಾಂತರ ವಾಯುಗುಣ. ಸುತ್ತಣ ಸಮುದ್ರವು ವಿಶೇಷ ಪ್ರಭಾವ ಬೀರಿದೆ. ಚಳಿಗಾಲದಲ್ಲಿ ಏಷ್ಯದ ಒಳನಾಡಿನ ತೀವ್ರ ಚಳಿಯಿಂದಾಗಿ ಪೂರ್ವ ಸೈಬೀರಿಯದಲ್ಲಿ ಹೆಚ್ಚು ಒತ್ತಡ ಪ್ರದೇಶ ಏರ್ಪಟ್ಟು, ಅಲ್ಲಿಯ ಚಳಿಗಾಳಿ ಪೆಸಿಫಿಕಿನತ್ತ ಹರಿಯುತ್ತದೆ. ಈ ಗಾಳಿ ಜಪಾನ್ ಸಮುದ್ರವನ್ನು ದಾಟುವಾಗ ತೇವವನ್ನು ಸಂಗ್ರಹಿಸಿ, ಜಪಾನಿನ ಮೇಲೆ ಮಳೆ ಹಿಮ ಸುರಿಸುತ್ತದೆ. ಬೇಸಗೆಯಲ್ಲಿ ಒತ್ತಡದ ಏರುತಗ್ಗು ತಿರುವುಮುರುವಾಗಿ, ಪೆಸಿಫಿಕಿನಿಂದ ಸೈಬೀರಿಯದತ್ತ ಬೀಸುವ ಮಾರುತದಿಂದ ಜಪಾನಿನಲ್ಲಿ ಮಳೆಯಾಗುತ್ತದೆ. ಮಾನ್ಸೂನಿನ ಪರಿಣಾಮದಿಂದಾಗಿ ಜಪಾನಿನಲ್ಲಿ ಅದರ ಅಕ್ಷಾಂಶಗಳಲ್ಲಿ ಇರಬೇಕಾದ್ದಕ್ಕಿಂತ ಚಳಿ ತೀವ್ರತರ; ಬೇಸಗೆಯೂ ತೇವಕರ. ಬೇಸಗೆಯಲ್ಲೂ ಅನಂತರದ ಎರಡು ತಿಂಗಳುಗಳಲ್ಲೂ ಜಪಾನು ಪದೇಪದೇ ಚಂಡಮಾರುತಕ್ಕೆ ಒಳಗಾಗುತ್ತದೆ. ದಕ್ಷಿಣ ಜಪಾನಿಗೆ ಇದರ ಬಾಧೆ ವಿಪರೀತ.

ಡಿಸೆಂಬರಿನಿಂದ ಫೆಬ್ರವರಿಯ ವರೆಗೆ ಜಪಾನಿನ ಹಲವು ಭಾಗಗಳಲ್ಲಿ ನೀರು ಗಡ್ಡೆ ಕಟ್ಟುವುದಕ್ಕಿಂತ ಕಡಿಮೆ ಉಷ್ಣತೆ ಇರುತ್ತದೆ. ಉತ್ತರದಿಂದ ದಕ್ಷಿಣಕ್ಕೆ ಬಂದಂತೆ ಉಷ್ಣತೆ ಅಧಿಕ. ಹಾಕೈಡೋನ ಪಶ್ಚಿಮ ಮಧ್ಯದಲ್ಲಿರುವ ಆಸಾಹೀಗಾವ ನಗರದಲ್ಲಿ ಜನವರಿಯ ಮಾಧ್ಯ (ಮೀನ್) ಉಷ್ಣತೆ $14^0$ಫ್ಯಾ. ; ಟೋಕಿಯೋದಲ್ಲಿ $37^0$ ಫ್ಯಾ. ನೈಋತ್ಯದಲ್ಲಿರುವ ಓಸಾಕದಲ್ಲಿ $30^0$ ಫ್ಯಾ. ಚಳಿಗಾಲದಲ್ಲಿ ಜಪಾನಿನಲ್ಲಿ ಅತ್ಯಧಿಕ ಉಷ್ಣತೆ ಇರುವ ಪ್ರದೇಶ ಕೀಯೂಷೂ. ಅಲ್ಲಿ ಜನವರಿಯ ಮಾಧ್ಯ ಉಷ್ಣತೆ $45^0$ಫ್ಯಾ.

ಜಪಾನಿನ ಅಕ್ಷಾಂಶೀಯ ವ್ಯಾಪ್ತಿಯಿಂದ ಅದರ ಬೇಸಗೆ ಉಷ್ಣತೆಯ ಮೇಲೆ ಹೆಚ್ಚಿನ ಪರಿಣಾಮವಾಗಿಲ್ಲ. ಆದರೆ ಎತ್ತರಕ್ಕೆ ಅನುಗುಣವಾಗಿ ಅದು ವ್ಯತ್ಯಾಸವಾಗುತ್ತದೆ. ಹಾಕೈಡೋ ಹೆಚ್ಚು ತಂಪು. ಅತ್ಯುಷ್ಣ ತಿಂಗಳಾದ ಆಗಸ್ಟಿನಲ್ಲಿ ಮಾಧ್ಯ ಉಷ್ಣತೆ ಹೀಗಿರುತ್ತದೆ: ಕಾಗಷೀಮ: $79^0$ಫ್ಯಾ., ಓಸಾಕ $81^0$ಫ್ಯಾ., ಟೋಕಿಯೋ $77^0$ಫ್ಯಾ., ಸಪೋರೋ $69^0$ಫ್ಯಾ.. ಹಾಕೈಡೋದಲ್ಲಿ ವರ್ಷದಲ್ಲಿ 120 ದಿನಗಳು ಹಿಮಮುಕ್ತ. ಕೀಯೂಷೂವಿನಲ್ಲಿ ಇಂಥ ದಿನಗಳ ಸಂಖ್ಯೆ ಎರಡರಷ್ಟು.

ಹೆಚ್ಚು ಮಳೆ ಅಥವಾ ಹಿಮ ಬೀಳದ ಪ್ರದೇಶ ಜಪಾನಿನಲ್ಲಿ ಇಲ್ಲ. ಬೇಸಗೆಯ ಆರಂಭಕಾಲದಲ್ಲಿ ಗರಿಷ್ಠ ಮಳೆ. ಇದಕ್ಕೆ ಅಪವಾದವೆಂದರೆ ಜಪಾನ್ ಸಮುದ್ರದ ನೆರೆಯ ಪ್ರದೇಶ. ಅಲ್ಲಿ ಚಳಿಗಾಲದ ಹಿಮಪಾತ ಹೆಚ್ಚು. ಜಪಾನಿನ ಬಹು ಭಾಗದಲ್ಲಿ 40" ಗಿಂತ ಹೆಚ್ಚು ಮಳೆ ಅಥವಾ ಹಿಮ ಬೀಳುತ್ತದೆ. ಪಶ್ಚಿಮ ಹಾಕೈಡೋ, ಪೂರ್ವ ಹಾನ್‍ಷ್ಯೂ, ಒಳ ಸಮುದ್ರಪ್ರದೇಶದಲ್ಲಿ ವರ್ಷಕ್ಕೆ 40"–60" ಅವಪಾತ.

ಜಪಾನಿನಲ್ಲಿ ಅನೇಕ ಸರೋವರಗಳುಂಟು. ಬಹುತೇಕ ಅವು ಸಣ್ಣವು. ಮಧ್ಯ ಹಾನ್‍ಷ್ಯೂವಿನ ಪಶ್ಚಿಮದಲ್ಲಿರುವ ಬೀವಾ ಸರೋವರ (673 ಚ.ಕಿಮೀ.) ಅತ್ಯಂತ ದೊಡ್ಡದು.

**ವಿದ್ಯುತ್:** ಜಪಾನ್ ಪರ್ವತಪ್ರದೇಶಗಳಿಂದ ಕೂಡಿರುವುದರಿಂದಲೂ ಅಲ್ಲಿಯ ನದಿಗಳು ವರ್ಷದ ಬಹು ಕಾಲ ತುಂಬಿ ಹರಿಯುವುದರಿಂದಲೂ ವಿದ್ಯುತ್ತಿನ ಉತ್ಪಾದನೆಗೆ ವಿಪುಲ ಅವಕಾಶವಿದೆ. ಜಪಾನಿನ ಜಲವಿದ್ಯುತ್ ಕಾರ್ಯಾಗಾರಗಳಲ್ಲಿ ಶೇಕಡ 88ರಷ್ಟು ಕಾರ್ಯಾಗಾರಗಳು 10,000 ಕಿವ್ಯಾ. ವಿದ್ಯುತ್ ಉತ್ಪಾದನೆಗೂ ಕಡಿಮೆ ಸಾಮರ್ಥ್ಯ ಉಳ್ಳವು. ಉಷ್ಣ ವಿದ್ಯುತ್ ಗಣನೀಯವಾಗಿ ಉತ್ಪಾದಿತವಾಗುತ್ತಿದೆ. ಜಪಾನಿನ ಇಂಧನ ಸಾಮರ್ಥ್ಯದ ಶೇ. 56ರಷ್ಟು ಕಲ್ಲಿದ್ದಲು ಮತ್ತು ಲಿಗ್ನೈಟ್ ಮೂಲವುಳ್ಳದ್ದು; ಶೇ. 33 ಜಲವಿದ್ಯುತ್.

**ಅರಣ್ಯ ಸಂಪತ್ತು:** ಜಪಾನಿನ ಅರ್ಧಕ್ಕಿಂತ ಹೆಚ್ಚು ಪ್ರದೇಶ ಅರಣ್ಯಾವೃತ. ಒಟ್ಟು ವಿಸ್ತೀರ್ಣವಾದ 9–14 ಕೋಟಿ ಎಕರೆಗಳಲ್ಲಿ 5.5 ಕೋಟಿ ಎಕರೆ ಅರಣ್ಯ ಪ್ರದೇಶ. ಇದರ ಅರ್ಧ ಭಾಗದಲ್ಲಿ ಅಗಲ ಎಲೆಗಳ ಕಾಡು ಶೇಕಡ 29ರಷ್ಟು ಪ್ರದೇಶದಲ್ಲಿ ಶಂಕುಧಾರಿ ಕಾಡು ಇವೆ. ಶೇ. 5ಕ್ಕಿಂತ ಕಡಿಮೆ ಪ್ರದೇಶ ಬಿದಿರು ಕಾಡು. ಇದರ ಜೊತೆಗೆ 60 ಲಕ್ಷ ಎಕರೆ ಪ್ರದೇಶಗಳಲ್ಲಿ ಕುರುಚಲು ಕಾಡಿದೆ. ಜಪಾನ್ ಸಸ್ಯಸಂಪತ್ತಿನಲ್ಲಿ ಸಮೃದ್ಧವಾಗಿರುವುದಕ್ಕೆ ಅಲ್ಲಿ ವರ್ಷದ ಬಹುಭಾಗ ಮಳೆ ಬೀಳುವುದು ಮತ್ತು ಗುಡ್ಡಬೆಟ್ಟಗಳಿಂದ ತುಂಬಿರುವುದೇ ಮುಖ್ಯ ಕಾರಣ.

ಜಪಾನಿನ ಅರಣ್ಯ ಪ್ರದೇಶಗಳನ್ನು ಸ್ಥೂಲವಾಗಿ ಮೂರು ವಲಯಗಳಾಗಿ ವಿಂಗಡಿಸಬಹುದು: 1. ಉತ್ತರವಲಯ: ಹಾಕೈಡೋದ ಮಧ್ಯ ಮತ್ತು ಪೂರ್ವ ಭಾಗ, ಹಾನ್‌ಷ್ಯೂವಿನ ಎತ್ತರ ಪ್ರದೇಶ. ಇಲ್ಲಿ ಹೆಚ್ಚಾಗಿ ಭೂರ್ಜ, ಫರ್, ಲಾರ್ಜ್ ಮತ್ತು ಸ್ಪ್ರೂಸ್ ಮರಗಳಿವೆ. 2. ಸಮಶೀತೋಷ್ಣವಲಯ: ಮಧ್ಯ ಹಾನ್‌ಷ್ಯೂವಿನ 1645 ಮೀ. ಗಿಂತ ಕಡಿಮೆ ಎತ್ತರದ ಪ್ರದೇಶ. ಇಲ್ಲಿಯದು ಮಿಶ್ರ ಅರಣ್ಯ. ಈ ಪ್ರದೇಶದಲ್ಲಿ ಎಲೆ ಉದುರುವ, ಅಗಲ ಎಲೆಯ ವಂಶಕ್ಕೆ ಸೇರಿದ, ಬೀಚ್, ಆಷ್, ಚೆಸ್‌ನಟ್ ಮತ್ತು ಓಕ್ ಮರಗಳಿವೆ. ಶಂಕುಧಾರಿ ಜಾತಿಯ ಪೈನ್, ಫರ್ ಮತ್ತು ದೇವದಾರು ಮರಗಳೂ ಬೆಳೆಯುತ್ತವೆ. 3. ಉಪೋಷ್ಣವಲಯ: ಕೀಯೂಷೂ, ಷಿಕೋಕೂ, ಕ್ವಾಂಟೋ ಮೈದಾನದವರೆಗಿನ ಹಾನ್‌ಷ್ಯೂ ಪ್ರದೇಶ. ಅಗಲ ಎಲೆಗಳ ನಿತ್ಯಹಸುರಿನ ಮತ್ತು ಎಲೆ ಉದುರುವ ಮರಗಳಿವೆ. ಆಲ, ತಾಳೆ, ನೀಲಗಿರಿ ಮುಂತಾದ ವೃಕ್ಷಗಳು ದಕ್ಷಿಣ ಷಿಕೋಕೂ ಮತ್ತು ಕೀಯೂಷೂಗಳಲ್ಲಿವೆ.

ಜಪಾನಿನ ಸರ್ಕಾರಿ ಮತ್ತು ಶ್ರೀಮಂತರ ಕೆಲವು ಕಟ್ಟಡಗಳನ್ನು ಬಿಟ್ಟರೆ ಉಳಿದೆಲ್ಲವನ್ನೂ ಬಹುತೇಕ ಮರದಿಂದಲೇ ಕಟ್ಟಲಾಗಿದೆ. ಮರಗಳು ಹೇರಳವಾಗಿರುವುದು ಒಂದು ಕಾರಣ. ಇಲ್ಲಿ ಆಗಾಗ ಸಂಭವಿಸುವ ಭೂಕಂಪಗಳ ಭಯ ಇನ್ನೊಂದು ಕಾರಣ. ಲೋಹದ ಉಪಕರಣಗಳ ಬದಲಿಗೆ ಸಾಧ್ಯವಾದಲ್ಲೆಲ್ಲ ಮರದ ಪಾತ್ರೆಗಳನ್ನೇ ಬಳಸಲಾಗುತ್ತದೆ. ಕಾಗದ, ಕೃತಕ ರೇಷ್ಮೆ ಇವು ಅರಣ್ಯವನ್ನವಲಂಬಿಸಿದ ಎರಡು ಮುಖ್ಯ ಕೈಗಾರಿಕೆಗಳು. ಮರದ ಇದ್ದಿಲನ್ನು ಅಡುಗೆಗೂ ಅನಿಲ ಉತ್ಪಾದನೆಗೂ ಬಳಸಲಾಗುತ್ತದೆ.

ಜಪಾನ್ ಈಗ ಮರದ ನಾಟಾಗಳನ್ನು ವಿದೇಶಗಳಿಂದಲೂ ಆಮದು ಮಾಡಿಕೊಳ್ಳುತ್ತಿದೆ. ಆದರೆ ಇನ್ನೂ ದುರ್ಗಮವಾಗಿರುವ ಅದರ ಕಾಡುಗಳನ್ನು ಬಳಸಿಕೊಳ್ಳಬಹುದು ಮತ್ತು ಪುನರ್ನವೀಕರಣದಿಂದ ಅದರ ಬೇಡಿಕೆಯ ಗಣನೀಯ ಭಾಗವನ್ನು ತುಂಬಿಕೊಳ್ಳಬಹುದು.

**ಪ್ರಾಣಿ ಸಂಪತ್ತು:** ಜಪಾನ್ ಅಪಾರ ಪ್ರಾಣಿಸಂಪತ್ತಿರುವ ದೇಶ. ಅಲ್ಲಿಯ ವಾಯುಗುಣ ಮತ್ತು ಸಸ್ಯಸಂಪತ್ತಿನಂತೆ ಪ್ರಾಣಿಸಂಪತ್ತೂ ವೈವಿಧ್ಯಪೂರ್ಣ. ಅಕ್ಷಾಂಶ ಹಾಗೂ ನೆಲದ ಎತ್ತರಕ್ಕೆ ಅನುಗುಣವಾಗಿ ಇದು ವ್ಯತ್ಯಾಸವಾಗುತ್ತದೆ. ಜಪಾನಿನ ನೆಲಪ್ರಾಣಿಗಳು ಬಹುತೇಕ ಸಮಶೀತೋಷ್ಣವಲಯ ಜಾತಿಗಳವು. ಹಾಕೈಡೋದಲ್ಲಿ ಉಪಶೀತವಲಯ ಪ್ರರೂಪಗಳೊಂದಿಗೂ ಇವು ಬೆರೆತು ಕೊಂಡಿವೆ. ಚೀನ, ಕೊರಿಯ, ಸೈಬೀರಿಯ ಮತ್ತು ಆಗ್ನೇಯ ಏಷ್ಯದ ಪ್ರಾಣಿ ಜಾತಿಗಳಿಗೂ ಇವಕ್ಕೂ ಸಾದೃಶ್ಯ ಗಳಿರುವುದರಿಂದ ಇವು ಮೂಲತಃ ಖಂಡಪ್ರದೇಶದಿಂದ ಇಲ್ಲಿಗೆ ಬಂದಿರ ಬಹುದೆಂದು ಊಹಿಸಬಹುದು. ಸಾಗರಿಕ ಪ್ರಾಣಿಗಳನ್ನೂ ಉತ್ತರ, ಮಧ್ಯ ಮತ್ತು ಉಷ್ಣವಲಯವೆಂದು ವಿಂಗಡಿಸಬಹುದು. ಆದರೆ ಒಂದು ವ್ಯತ್ಯಾಸ: ಉಷ್ಣವಲಯದ ಜಾತಿಗಳು ಇವೇ ಜಾತಿಗಳ ನೆಲ ಪ್ರಾಣಿ ಗಳಿರುವುದಕ್ಕಿಂತಲೂ ಉತ್ತರದಲ್ಲಿ ಸಾಗರದಲ್ಲಿವೆ. ಜಪಾನ್ ಉಷ್ಣೋದಕ ಪ್ರವಾಹದಲ್ಲಿ ಟೋಕಿಯೋ ಕೊಲ್ಲಿಯ ಹೊರಗಿರುವ ಬೋಸೋ ಪರ್ಯಾಯ ದ್ವೀಪದವರೆಗೂ ಉಷ್ಣ ನೀರಿನ ಪ್ರಾಣಿಜಾತಿಗಳು ಪ್ರಸರಿಸಿವೆ.

ಉದ್ದ ಬಾಲದ ಹುಂಜ. ಇದರ ಬಾಲ 8 ಮೀಟರ್ ಉದ್ದವಾಗಿದೆ. ಟೋಕೊಗಾವ ಕಾಲದ ಅಡ್ಡತಳಿ ಇದು. ಟೋಸಾ ಜನರಿಗೆ ಇದು ತುಂಬ ಪ್ರಿಯ

ಜಪಾನ್ ಮತ್ತು ನೆರೆಯ ಕಡಲುಗಳಲ್ಲಿ ಸುಮಾರು 140 ಸ್ತನಿಗಳನ್ನು ಗುರುತಿಸಲಾಗಿದೆ. ದಂಶಕ, ತಿಮಿಂಗಿಲ, ಹಂದಿಮೀನು, ಕಡಲ ಹಂದಿ, ಸಣ್ಣಿಲಿ, ಮಖಮಲ್ ಹೆಗ್ಗಣ, ಬಾವಲಿ, ಮಕಾಕ್ ಎಂಬ ವಾನರ, ಕರಡಿ, ಬ್ಯಾಡ್ಜರ್, ನೀರುನಾಯಿ, ಅರ್ಮಿನ್, ಮಿಂಕ್, ಮಾರ್ಟೆನ್, ರಾಕೂನ್, ನರಿ, ತೋಳ, ಸೀಲ್, ವಾಲ್ರಸ್, ಕಾಡುಹಂದಿ, ಜಿಂಕೆ, ಸಾರಂಗ–ಇವು ಕೆಲವು ಪ್ರಾಣಿಗಳು. ಜಪಾನಿನ ಸುತ್ತಣ ಸಮುದ್ರಗಳಲ್ಲಿ ಮೂವತ್ತಕ್ಕೂ ಹೆಚ್ಚು ಬಗೆಯ ತಿಮಿವರ್ಗ ಪ್ರಾಣಿಗಳಿವೆ. ಜಪಾನಿನಲ್ಲಿ ಸುಮಾರು 450 ಜಾತಿಯ ಹಕ್ಕಿಗಳಿವೆ. ಇವುಗಳಲ್ಲಿ ಸುಮಾರು ನೂರೈವತ್ತು ನೀರುಹಕ್ಕಿಗಳು, ಉರಗಗಳಲ್ಲಿ ಮೂವತ್ತು ಜಾತಿ.

ಜಪಾನಿನ ಸಾಕುಪ್ರಾಣಿಗಳಲ್ಲಿ ದನ, ಕುದುರೆ, ಕುರಿ, ಕೋಳಿ, ಹಂದಿ ಮುಖ್ಯ. ಸ್ವಾಭಾವಿಕ ಹುಲ್ಲುಗಾವಲುಗಳ ಕೊರತೆ ಇರುವುದರಿಂದ ದನಗಳ ಸಾಕಣೆ ವೆಚ್ಚ ದುಬಾರಿ. ಇಲ್ಲಿಯ ಬೆಟ್ಟದ ಹುಲ್ಲು ಒರಟು, ನಿಸ್ಸಾರ. ಆದ್ದರಿಂದ ದನಗಳ ಮೇವಿನ ಸಮಸ್ಯೆ ತೀವ್ರವಾದ್ದು. ದನಗಳನ್ನೂ ಕುದುರೆಗಳನ್ನೂ ವ್ಯವಸಾಯಕ್ಕೆ, ನೆಲ ಮಟ್ಟಮಾಡಲು ಮತ್ತು ಗೊಬ್ಬರಕ್ಕಾಗಿ ಸಾಕುತ್ತಾರೆ.

### ಜನಜೀವನ

ಇಲ್ಲಿಯ ಜನ ಏಷ್ಯದ ಮುಖ್ಯ ಭೂಭಾಗದಿಂದ ಬಂದು ನೆಲೆಸಿದವರು. ಬಹುಸಂಖ್ಯಾತರು ಮಾಂಗೋಲಾಯಿಡ್ ಬುಡಕಟ್ಟಿಗೆ ಸೇರಿದವರು. ಇವರಲ್ಲಿ ಇತರ ಮಾಂಗೋಲಾಯಿಡ್ ಜನರಿಂದ ಭಿನ್ನವೆನಿಸುವ ಲಕ್ಷಣಗಳು ಹಲವಿಲ್ಲ. ಉತ್ತರ ಜಪಾನಿನ ಮೂಲವಾಸಿ ಐನುಗಳ ಮತ್ತು ಆಗ್ನೇಯ ಏಷ್ಯ, ಕೊರಿಯ, ಯುರೋಪ್ ಮುಂತಾದವರ ಮಿಶ್ರಣದ ಜನರೂ ಅಲ್ಪಸಂಖ್ಯೆಯಲ್ಲುಂಟು. ಜಪಾನಿನ ಬಹುಸಂಖ್ಯಾತರು ಆನುವಂಶಿಕವಾಗಿ ಕೊರಿಯನರಿಗೆ, ಟುಂಗುಸ್ ಪಂಗಡಗಳಿಗೆ ಮತ್ತು ಉತ್ತರ ಚೀನೀ ಗುಂಪುಗಳಿಗೆ

ಒಬ್ಬ ಸೂಮೋ ಮಲ್ಲ

ಅತ್ಯಂತ ಸಮೀಪವೆಂದು ಹೇಳಲಾಗಿದೆ. ಇತರ ಮಾಂಗೋಲಾಯಿಡ್ ಗುಂಪುಗಳಿಗಿಂತ ಜಪಾನೀಯರಿಗೆ ಮೈ ಮತ್ತು ಮುಖಗಳ ಮೇಲೆ ಕೂದಲು ಹೆಚ್ಚು; ಮೈಬಣ್ಣ ಹಳದಿಗಿಂತ ಹೆಚ್ಚು ಕಂದು. ಮೈಕಟ್ಟು ಹೆಚ್ಚು ಗಟ್ಟಿಮುಟ್ಟು. ಜಪಾನೀಯರು ಕುಳ್ಳ ಜನಾಂಗವೆನಿಸಿದ್ದರೂ 1900 ರಿಂದೀಚೆಗೆ ಅವರಲ್ಲಿ ಅಸಾಧಾರಣ ದೈಹಿಕ ಬದಲಾವಣೆಗಳಾಗಿವೆ. ಅವರ ಸರಾಸರಿ ಎತ್ತರ 50 ವರ್ಷಗಳಲ್ಲಿ ಸುಮಾರು 3"ಗಳಷ್ಟು ಅಧಿಕವಾಗಿದೆ (5' 4'). ಇದು ಸುಧಾರಿತ ಆಹಾರ ಮತ್ತು ವೈದ್ಯ ಸೌಲಭ್ಯಗಳ ಫಲ ಎಂದು ಹೇಳಲಾಗಿದೆ. ಪಟ್ಟಣದ ಜನ ಹಳ್ಳಿಗರಿಗಿಂತ ಹೆಚ್ಚು ಎತ್ತರ. ಜಪಾನೀ ಕುಸ್ತಿಪಟುಗಳ ಮೈಕಟ್ಟು ಅಸಾಧಾರಣ.

ಅಲ್ಪಸಂಖ್ಯಾತ ಕುಲಗಳ ಪೈಕಿ ಐನುಗಳದು ಗಮನಾರ್ಹ, ದೈಹಿಕ ಲಕ್ಷಣ, ಸಂಸ್ಕೃತಿ ಮತ್ತು ಭಾಷೆಯಲ್ಲಿ ಅವರು ವಿಶಿಷ್ಟರು. ಅವರ ಮೂಲ ಗೊತ್ತಿಲ್ಲ. ಅವರ ಲಕ್ಷಣಗಳಿಂದ ಅವರು ಕಾಕಸಾಯಿಡ್ ಸಂಬಂಧ ಇರಬಹುದೆಂದು ಊಹಿಸಬಹುದು. ಅವರ ಮೈಮೇಲೆ ಕೂದಲು ಅಧಿಕ. ಜಪಾನಿನಲ್ಲಿ ಒಂದು ಪ್ರಮುಖ ಮತಧರ್ಮವಿಲ್ಲ. ಅಲ್ಲಿ ಅನೇಕ ಧರ್ಮಗಳೂ ಅರೆ ಧರ್ಮಗಳೂ ಜೊತೆಜೊತೆಯಾಗಿವೆ. ರಾಷ್ಟ್ರೀಯ ಮತ್ತು ಸಾಮಾಜಿಕ ಪದ್ಧತಿಗಳು ಷಿಂಟೋ ಧರ್ಮಕ್ಕೆ ಅನುಗುಣವಾಗಿವೆ. ಸಾರ್ವಜನಿಕ ಹಾಗೂ ಖಾಸಗಿ

ನೀತಿನಡೆವಳಿಕೆಗಳಿಗೆ ಕನ್‌ಫ್ಯೂಷಿಯಸ್‌ನ ತತ್ತ್ವ ಆಧಾರ. ತಾತ್ತ್ವಿಕ ವಿಚಾರಗಳಲ್ಲಿ ಬೌದ್ಧಧರ್ಮ ಪ್ರಧಾನ. ಈ ಎಲ್ಲ ಮತಧರ್ಮಗಳೂ ಪರಸ್ಪರ ಪ್ರಭಾವ ಬೀರಿವೆ. ಕ್ರೈಸ್ತಧರ್ಮವೂ ವ್ಯಾಪಕವಾಗಿದೆ.

**ಆರ್ಥಿಕತೆ**

**ಕೃಷಿ :** ಜಪಾನಿನ ಒಟ್ಟು ಭೂಪ್ರದೇಶದಲ್ಲಿ ಶೇ.16ರಷ್ಟು ಮಾತ್ರ ಸಾಗುವಳಿಗೆ ಯೋಗ್ಯವಾದದ್ದು. ಇರುವ ಜಮೀನಿನಲ್ಲೂ ಮಣ್ಣಿನಲ್ಲಿ ಆಮ್ಲದ ಲಾವ ಬೆರೆತಿರುವುದರಿಂದ ಅಷ್ಟು ಫಲವತ್ತಾಗಿಲ್ಲ. ಮಳೆಯ ಕಾರಣದಿಂದಾಗಿ ಆಗಾಗ ಮಣ್ಣು ತೊಳೆದುಹೋಗುವುದರಿಂದಲೂ ಅಧಿಕ ತೇವದಿಂದಾಗಿ ಮಣ್ಣಿನ ಸಾರ ಆಳಕ್ಕೆ ಇಳಿಯುವುದರಿಂದಲೂ ಜಮೀನಿನ ಫಲವಂತಿಕೆಯನ್ನು ಶ್ರಮಪೂರ್ವಕವಾಗಿ ಸಂರಕ್ಷಿಸಬೇಕು.

ಜಪಾನಿನ ವಾಯುಗುಣ ಆಹಾರಬೆಳೆಗೆ ಅನುಕೂಲಕರವಾದದ್ದು. ಜಪಾನಿನ ಎಲ್ಲ ಭಾಗಗಳಲ್ಲೂ ಸಾಕಷ್ಟು ಮಳೆಯಾಗುತ್ತದೆ. ಇಲ್ಲಿಯ ಸಾಗುವಳಿ ಭೂಮಿಯ ಶೇ.30ರಲ್ಲಿ ಎರಡು ಬೆಳೆ ಬೆಳೆಯುತ್ತಾರೆ. ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಚಳಿಗಾಲದಲ್ಲಿ ಬೀಳುವ ಮಂಜು ಮತ್ತು ಅಧಿಕ ಹಿಮದಿಂದಾಗಿ ಎರಡನೆಯ ಬೆಳೆ ಸಾಧ್ಯವಿಲ್ಲ. ಎರಡು ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬೇಸಿಗೆಯಲ್ಲಿ ಬತ್ತ ಬೆಳೆದರೆ ಚಳಿಗಾಲದಲ್ಲಿ ಗೋಧಿ ಮತ್ತು ಖುಷ್ಕಿ ಬೆಳೆಗಳನ್ನು ಬೆಳೆಯುತ್ತಾರೆ.



ವ್ಯವಸಾಯಕ್ಕೆ ಕ್ಯಾಂಟೋ, ಇಷಿಕಾರೀ, ಈಚಿಗೋ, ನೋಬೀ ಮೊದಲಾದ ಬಯಲುಗಳು ಪ್ರಸಿದ್ಧವಾಗಿವೆ. ಇಲ್ಲಿಯ ನದಿಗಳು ಬೆಟ್ಟಗುಡ್ಡಗಳು ಮತ್ತು ಕಣಿವೆಗಳಲ್ಲಿ ಹರಿದು ಬಹು ಬೇಗ ಸಮುದ್ರವನ್ನು ಸೇರುವುದರಿಂದ ವಿಶಾಲ ಬಯಲುಗಳಲ್ಲಿ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಿ ನೀರಾವರಿಯನ್ನು ಹೆಚ್ಚಿಸಲು ಕಷ್ಟಕರವಾಗಿದೆ. ಸಾಮಾನ್ಯವಾಗಿ ಈಗಿರುವ ವ್ಯವಸಾಯ ಕ್ಷೇತ್ರದ ಬಹುಭಾಗಕ್ಕೆ ನೀರಾವರಿಯ ಕೊರತೆಯಿಲ್ಲ.

ಮಹಾಯುದ್ಧದಲ್ಲಿ ಕೈಗಾರಿಕೆಗಳು ಮತ್ತು ಭಾರಿ ಉದ್ಯಮಗಳು ನಾಶಹೊಂದಿದಾಗ ಜಪಾನಿನ ಆರ್ಥಿಕ ಆಶ್ರಯವಾಗಿ ಉಳಿದುಕೊಂಡಿದ್ದು ವ್ಯವಸಾಯ ಒಂದೇ. 1860ರ ದಶಕದಲ್ಲಿ ಜಪಾನಿನ ಸುಮಾರು 80ರಷ್ಟು ಜನ ವ್ಯವಸಾಯವನ್ನು ಅವಲಂಬಿಸಿದರು. 1949ರ ಹೊತ್ತಿಗೆ ವ್ಯವಸಾಯವನ್ನು ಅವಲಂಬಿಸಿದ್ದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಅರ್ಧಕ್ಕೆ ಇಳಿದಿತ್ತು. ಯುದ್ಧೋತ್ತರ ಆರ್ಥಿಕ ಪುನಾರಚನೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದ ಜಪಾನ್‌ನಲ್ಲಿ 1970ರ ವೇಳೆಗೆ ವ್ಯವಸಾಯದಲ್ಲಿ ನಿರತರಾದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇಕಡ 15ಕ್ಕೂ ಕಡಿಮೆ.

ವ್ಯವಸಾಯ ಪ್ರದೇಶದ ಕೊರತೆಯಿಂದಾಗಿ ಅಲ್ಲಿ ಸಾಂದ್ರ ಬೇಸಾಯಕ್ಕೆ ಹೆಚ್ಚು ಗಮನ ಸಂದಿದೆ. ಬತ್ತದ ಗದ್ದೆಗಳು ಮೆಟ್ಟಿಲುಮೆಟ್ಟಿಲಾಗಿವೆ. ಪ್ರತಿ ಮೆಟ್ಟಿಲಿಗೂ ಮಧ್ಯೆ ಬದು ಹಾಕಲಾಗಿದೆ. ಅನೇಕ ಎತ್ತರದ ಪ್ರದೇಶಗಳನ್ನು ಸಮತಟ್ಟು ಮಾಡಿ ಗಟ್ಟಿ ಮಾಡಲಾಗಿದೆ. ಹಳೆಯ ವ್ಯವಸಾಯ ಪದ್ಧತಿಯನ್ನು ಬಿಟ್ಟು ಭೂಮಿಯ ಸಾರವನ್ನು ಕಾಯ್ದಿರಿಸಲೂ ಬಹು ಬೆಳೆಗಳನ್ನು ಬೆಳೆಯಲೂ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಪಾನಿನಲ್ಲಿ ಸಣ್ಣ ಹಿಡುವಳಿಗಳೇ ಹೆಚ್ಚು. ಆದರೂ ಅತ್ಯಾಧುನಿಕ ವಿಧಾನವನ್ನು ಅನ್ವಯಿಸುವುದರಲ್ಲಿ ಹಿಂದುಳಿದಿಲ್ಲ.

ಗೇಷ ಮಹಿಳೆಯರು

ಜಪಾನಿನಲ್ಲಿ ಯಾಂತ್ರೀಕರಣದ ಬೆಳವಣಿಗೆಯಾಗಿದ್ದರೂ ಪ್ರಾಣಿಗಳನ್ನು ಹೂಡಿ ಬೇಸಾಯ ಮಾಡುವುದು ಹೆಚ್ಚಾಗಿ ಬಳಕೆಯಲ್ಲಿತ್ತು. ಮಾನವಶಕ್ತಿ ಅಗಾಧವಾಗಿರುವುದರಿಂದ ಶ್ರಮ ತಗ್ಗಿಸುವ ಉಪಕರಣಗಳನ್ನು ಬಳಸುವಲ್ಲಿ ಜಪಾನೀಯರು ಅಷ್ಟು ಮುಂದಾಗಲಿಲ್ಲ. ಆದರೆ ಎರಡನೆಯ ಮಹಾಯುದ್ಧದ ಕಾಲದಿಂದ ವ್ಯವಸಾಯಕ್ಕೆ ವ್ಯಾಪಕವಾಗಿ ತಾಂತ್ರಿಕ ಕ್ರಮ ಅನ್ವಯಿಸಲಾಗಿದೆ. ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಿದೆ. ಕ್ರಿಮಿನಾಶಕಗಳು ಮತ್ತು ಕಳೆನಾಶಕ ವಸ್ತುಗಳನ್ನು ಹೆಚ್ಚಾಗಿ ಬಳಸುತ್ತಾರೆ. ಫಸಲನ್ನು ಹದಮಾಡಲು ಮತ್ತು ಭೂಮಿಯನ್ನು ಉಳಲು ಸಣ್ಣ ಕೈಯಂತ್ರಗಳನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಹಣ್ಣುಗಳು ಮತ್ತು ತರಕಾರಿಗಳ ಬೆಳೆಯನ್ನು ವಿಸ್ತರಿಸಲಾಗಿದೆ.

ಜಪಾನಿನ ವ್ಯವಸಾಯದಲ್ಲಿ ಆಹಾರಬೆಳೆಗಳಿಗೇ ಪ್ರಾಧಾನ್ಯ. ಕೃಷಿ ನೆಲದಲ್ಲಿ ಶೇ. 80ರಷ್ಟು ಇದಕ್ಕೆ ಮೀಸಲು. ಅದರಲ್ಲೂ ಬತ್ತಕ್ಕೆ ಅಗ್ರಸ್ಥಾನ. ಬತ್ತದ ಇಳುವರಿಯಲ್ಲಿ ಜಪಾನ್ ಏಷ್ಯದಲ್ಲೇ ಉನ್ನತ ಮಟ್ಟದಲ್ಲಿದೆ. ಶೇ. 55 ನೆಲದಲ್ಲಿ ಬತ್ತವನ್ನೂ, ಶೇ. 40 ನೆಲದಲ್ಲಿ ಧಾನ್ಯಗಳನ್ನೂ ಬೆಳೆಯಲಾಗುತ್ತದೆ. ಗೋಧಿ, ಬಾರ್ಲಿ, ಗೆಣಸು, ಬಿಳಿ ಆಲೂಗೆಡ್ಡೆ, ಉಪ್ಪುನೇರಳೆ, ಚಹಾ, ಹೊಗೆಸೊಪ್ಪು ಮತ್ತು ಮಿಲೆಟ್ಸ್ ಇತರ ಮುಖ್ಯ ಬೆಳೆಗಳು. ಎರಡನೆಯ ಮಹಾಯುದ್ಧದ ಅನಂತರ ಚಹಾ ಮತ್ತು ಉಪ್ಪುನೇರಳೆ ಬೆಳೆಯುವ ಪ್ರದೇಶ ಇಳಿಮುಖವಾಗಿದೆ. ರೇಷ್ಮೆ ಉತ್ಪಾದನೆ 1930ರ ದಶಕದಲ್ಲಿ ಪ್ರಮುಖವಾಗಿತ್ತು.

ಜಪಾನಿನಲ್ಲಿ ಸಣ್ಣ ಹಿಡುವಳಿಗಳೇ ಅಧಿಕ. ಹಿಡುವಳಿಗಳ ಸರಾಸರಿ 2.5 ಎಕರೆ. 1/3 ಭಾಗ ಒಕ್ಕಲುಗಳು 1.2 ಎಕರೆಗಳಿಗಿಂತಲೂ ಕಡಿಮೆ ಹಿಡುವಳಿ ಹೊಂದಿವೆ. 5 ಎಕರೆಗಳಿಗಿಂತ ಹೆಚ್ಚಿನ ವಿಸ್ತೀರ್ಣದ ಹಿಡುವಳಿಗಳು ಶೇ. 10 ಮಾತ್ರ.

**ಕೈಗಾರಿಕೆ :** ಜಪಾನ್ 19ನೆಯ ಶತಮಾನದ ಪೂರ್ವಾರ್ಧದವರೆಗೂ ವ್ಯವಸಾಯಪ್ರಧಾನ ರಾಷ್ಟ್ರವಾಗಿತ್ತು. ಅದು ಆ ಕಾಲದ ಏಷ್ಯದ ಇತರ ರಾಷ್ಟ್ರಗಳಂತೆ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರವಾಗಿತ್ತು. ಆದರೆ 1868ರಿಂದ ಅದು ಪಾಶ್ಚಾತ್ಯ ನಾಗರಿಕತೆಯ ವಿಧಾನಗಳನ್ನು ತ್ವರಿತವಾಗಿ ಅಳವಡಿಸಿಕೊಂಡಿದ್ದರಿಂದ ಅದರ ಆರ್ಥಿಕ ರಂಗ ಹೊಸ ಶಕೆಗೆ ಕಾಲಿಟ್ಟಿತು. ಜಪಾನ್ ತನ್ನ ಏಕಾಂತತೆಯಿಂದ ಹೊರಬಂದು ವೈಜ್ಞಾನಿಕ ಪ್ರಗತಿಯ ಮಹತ್ತ್ವವನ್ನು ಬಹುಬೇಗ ಗ್ರಹಿಸಿತು. ಇದರ ಪರಿಣಾಮವಾಗಿ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ಇಡೀ ಏಷ್ಯದಲ್ಲೇ ಇದು ಪ್ರಥಮ ಆಧುನಿಕ ರಾಷ್ಟ್ರವೆನಿಸಿತು.

19ನೆಯ ಶತಮಾನದ ಉತ್ತರಾರ್ಧದಲ್ಲಿ ಗಣಿಗಾರಿಕೆ, ಸಂಚಾರ ಮಾರ್ಗಗಳ ನಿರ್ಮಾಣ, ನೌಕಾನಿರ್ಮಾಣ, ಶಸ್ತ್ರಾಸ್ತ್ರಗಳ ತಯಾರಿಕೆ, ಸಿಮೆಂಟು, ಗಾಜು, ಕಬ್ಬಿಣ, ಉಕ್ಕು ಮುಂತಾದ ಕಾರ್ಖಾನೆಗಳ ಬಟ್ಟೆಗಿರಣಿಗಳ ರೇಷ್ಮೆ ಉದ್ಯಮಗಳ ಸ್ಥಾಪನೆ ಆರಂಭವಾಯಿತು. ವ್ಯವಸಾಯಪ್ರಧಾನ ರಾಷ್ಟ್ರವಾಗಿದ್ದ ಜಪಾನ್ ತನ್ನ ಆರ್ಥಿಕ ವ್ಯವಸ್ಥೆಯನ್ನು ಬದಲಿಸಿ ಕೈಗಾರಿಕಾ ರಾಷ್ಟ್ರವಾಗಿ ರೂಪುಗೊಂಡಿತು. (ಡಿ.ಎಸ್.ಜಿ.)

ಅನಾನಾಸ್ ತೋಟ, ಓಕಿನಾವ

ಜಪಾನಿನ ಕಾರ್ಖಾನೆಗಳು ಕಚ್ಚಾ ಸಾಮಗ್ರಿಗಳನ್ನು ಪರದೇಶದಿಂದ ಸಾಮಾನ್ಯವಾಗಿ ಆಮದು ಮಾಡಿಕೊಳ್ಳುತ್ತವೆ. ಆದರೆ ಜನಶಕ್ತಿ ಮತ್ತು ಕಾರ್ಖಾನೆ ನಡೆಸಲು ಬೇಕಾಗುವ ವಿದ್ಯುಚ್ಛಕ್ತಿ ಜಪಾನಿನಲ್ಲೇ ದೊರೆಯುತ್ತದೆ. ಕಾರ್ಖಾನೆಗಳಿಗೆ ಬೇಕಾಗುವ ಕಲ್ಲಿದ್ದಲಿನ 9/10 ಭಾಗ ಜಪಾನಿನಲ್ಲಿಯೇ ದೊರೆಯುತ್ತದೆ ಉಳಿದ 1/10 ಭಾಗ ಕಲ್ಲಿದ್ದಲನ್ನು ಬೇರೆ ದೇಶಗಳಿಂದ ತರಿಸಿಕೊಳ್ಳುತ್ತಾರೆ. ಇಲ್ಲಿ ದೊರೆಯುವ ಪೆಟ್ರೋಲಿಯಂ ಅದರ ಅಗತ್ಯದ 1/10 ಭಾಗ ಮಾತ್ರ. ಉಳಿದದ್ದನ್ನು ಆಮದು ಮಾಡಿಕೊಳ್ಳಲಾಗುತ್ತದೆ.




ಜಪಾನಿನಲ್ಲಿ ವ್ಯವಸಾಯ ಯೋಗ್ಯ ಭೂಮಿ ಬಹಳ ಕಡಿಮೆ ಇರುವುದೂ ಅಲ್ಲಿ ಹಲವು ಒಳ್ಳೆಯ ಬಂದರುಗಳಿರುವುದೂ ಅದು ಕೈಗಾರಿಕೆಯಲ್ಲಿ ಮುಂದುವರಿಯಲು ಕಾರಣವಾದುವು. ಟೋಕಿಯೋದಿಂದ ನಾಗಸಾಕಿ ವರೆಗಿನ 965 ಕಿಮೀ ಉದ್ದದ ಮಧ್ಯ ಪ್ರದೇಶದಲ್ಲಿ 100 ಕಾರ್ಖಾನೆಗಳಿವೆ. ಇವುಗಳ ಸ್ಥಾಪನೆಗೆ ಮುಖ್ಯವಾಗಿ ಅಲ್ಲಲ್ಲೇ ದೊರೆಯುವ ರೇಷ್ಮೆ ಮತ್ತು ಕಲ್ಲಿದ್ದಲೂ ಅಲ್ಲಿರುವ ಉತ್ತಮ ಬಂದರುಗಳೂ ಕಾರಣ. ಜಪಾನ್ ದೇಶದ ಕೈಗಾರಿಕಾ ಪ್ರದೇಶಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು: 1. ಓಸಾಕ, ಕೋಬೀ ಮತ್ತು ಕೀಯೋಟೋ ವಿಭಾಗ : ಇಲ್ಲಿ ಹತ್ತಿ ಗಿರಣಿಗಳು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು, ಹಡಗು ಕಟ್ಟುವ ಉದ್ಯಮ ರೇಷ್ಮೆ, ಮಣ್ಣಿನ ಪಾತ್ರೆಗಳ ಕಾರ್ಖಾನೆಗಳಿವೆ. ಕೋಬೀ ಈ ವಿಭಾಗದ ಮುಖ್ಯ ಬಂದರು. 2. ಟೋಕೀಯೋ, ಯೋಕಹಾಮ ವಿಭಾಗ: ಇಲ್ಲಿ ರೇಷ್ಮೆ, ಹತ್ತಿ ಜವಳಿ, ಸಣ್ಣ ಗಾತ್ರದ ಕೃಷಿ ಉಪಕರಣ, ವಿದ್ಯುದುಪಕರಣ ಮತ್ತು ತೈಲ ಶುದ್ಧೀಕರಣ ಕೈಗಾರಿಕೆಗಳಿವೆ. ಯೋಕಹಾಮ ಇಲ್ಲಿಯ ಮುಖ್ಯ ಬಂದರು. ಇಲ್ಲಿ ಹಡಗು ಕಟ್ಟುವ ಉದ್ಯಮವೂ ಇದೆ. 3. ನಗಾಯಿಯ ವಿಭಾಗ: ಇಲ್ಲಿ ರೇಷ್ಮೆ, ಹತ್ತಿ, ಉಣ್ಣೆ, ವಿಮಾನ ಮತ್ತು ಕಬ್ಬಿಣ–ಉಕ್ಕು ಕೈಗಾರಿಕೆಗಳಿವೆ. ಮುಖ್ಯ ಬಂದರು ನಗಾಯಿಯ. 4. ಉತ್ತರ ಕೀಯೂಷೂ ವಿಭಾಗ: ಮುಖ್ಯ ಕೈಗಾರಿಕೆ ಕಬ್ಬಿಣ ಮತ್ತು ಉಕ್ಕು. ಜಪಾನಿನ ಗೃಹಕೈಗಾರಿಕೆಗಳು ವೈಶಿಷ್ಟ್ಯಪೂರ್ಣವಾದವು. ಪ್ರತಿ ವಸತಿಯೂ ಯಾವುದಾದರೊಂದು ದೊಡ್ಡ ಕೈಗಾರಿಕೆಗೆ ಆವಶ್ಯವಾದ ಭಾಗಗಳನ್ನು ತಯಾರಿಸುತ್ತದೆ. ಇವನ್ನು ಸಹಕಾರ ಸಂಘಗಳು ಶೇಖರಿಸಿ ಕಾರ್ಖಾನೆಗಳಿಗೆ ಒದಗಿಸುತ್ತವೆ. ದಿನಬಳಕೆಯ ಹಲವು ಸರಕುಗಳೂ ಇಲ್ಲಿ ತಯಾರಾಗುತ್ತವೆ. ರೇಷ್ಮೆ ನೂಲು, ನೇಯ್ಗೆ, ಟೇಪ್, ರಿಬ್ಬನ್, ಬೆಂಕಿಕಡ್ಡಿ, ಬೊಂಬೆ, ಕಾಗದ, ರಟ್ಟು, ಪೆನ್ಸಿಲ್, ಚಾಪೆ, ಮರದ ಚಪ್ಪಲಿ, ಪಿಂಗಾಣಿ ವಸ್ತುಗಳು, ಛತ್ರಿ, ಫ್ಯಾನ್, ಬೈಸಿಕಲ್, ವಿದ್ಯುದುಪಕರಣ ಮುಂತಾದವು ಮುಖ್ಯವಾದವು. ಜಪಾನಿನಲ್ಲಿ ತಯಾರಾಗದ ಪದಾರ್ಥಗಳೇ ಇಲ್ಲವೆನ್ನಬಹುದು. ಅಂದವಾದ, ಅಗ್ಗವಾದ ಹಲವು ಪದಾರ್ಥಗಳು ತಯಾರಾಗುತ್ತವೆ.

ಜಪಾನಿನ ಒಂದು ಮೋಟಾರು ಕಾರ್ಖಾನೆ

**ಮೀನುಗಾರಿಕೆ:** ಜಪಾನಿನಲ್ಲಿ ಮೀನು ಅನೇಕರ ಮುಖ್ಯ ಆಹಾರ. ಆಹಾರಕ್ಕೆ ಆಗಿ ಉಳಿದ ಮೀನನ್ನು ಬೇರೆ ದೇಶಗಳಿಗೆ ಕಳುಹಿಸುತ್ತಾರೆ. ಜಪಾನಿನ ಸಮುದ್ರತೀರ ಅಂಕುಡೊಂಕಾಗಿ ಹೆಚ್ಚು ಆಳವಿಲ್ಲದೆ ಇರುವುದರಿಂದ ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮೀನುಗಳುಂಟು. ಅಲ್ಲಿ ಹರಿಯುವ ಉಷ್ಣೋದಕ ಮತ್ತು ಶೀತೋದಕ ಪ್ರವಾಹಗಳು ಮೀನುಗಳ ಬೆಳೆವಣಿಗೆಗೆ ಅನುಕೂಲಕರ. ಜಪಾನ್ ಸಮುದ್ರತೀರದಲ್ಲೆಲ್ಲ ಮೀನುಗಾರಿಕೆ ಒಂದು ಮುಖ್ಯ ಕಸುಬು. ಜಪಾನ್ ಸರ್ಕಾರ ಮೀನುಗಾರರಿಗೆ ವಿಶೇಷ ಪ್ರೋತ್ಸಾಹ ನೀಡಿದೆ.

**ಸಾರಿಗೆ ಸಂಪರ್ಕ:** ಜಪಾನಿನ ಸಾರಿಗೆ ವ್ಯವಸ್ಥೆ ವಿಶಿಷ್ಟವಾದದ್ದು. ಇದು ಪರ್ವತಮಯ ದೇಶವಾದ್ದರಿಂದ ರಸ್ತೆಗಳ ನಿರ್ಮಾಣದಲ್ಲಿ ಜಪಾನ್ ಮೊದಲಿನಿಂದಲೂ ಹೆಚ್ಚಿನ ಪ್ರಗತಿ ಸಾಧಿಸಲಾಗಲಿಲ್ಲ. ರೈಲುಮಾರ್ಗಗಳ ನಿರ್ಮಾಣವೂ ಈ ಸಮಸ್ಯೆಯನ್ನು ಎದುರಿಸುತ್ತದೆ. ಆದರೆ ಜಪಾನ್ ದ್ವೀಪಸಮೂಹಗಳ ದೇಶವಾಗಿರುವುದರಿಂದ ಅದರ ಆಂತರಿಕ ಸಾರಿಗೆಯ ಬಹುಭಾಗ ಸಮುದ್ರದ ಮೂಲಕವೇ ನಡೆಯುತ್ತದೆ. ಆದ್ದರಿಂದ ಅಲ್ಲಿ ನೌಕಾಸಂಚಾರ ತೀವ್ರ ಅಭಿವೃದ್ಧಿ ಸಾಧಿಸಿದೆ.

ರಸ್ತೆಗಳು: ಜಪಾನಿನ ರಸ್ತೆ ಸಾರಿಗೆ ಪುರಾತನವಾದದ್ದು. ಟೊಂಕಗಾವ ಕಾಲದಲ್ಲಿ ಐದು ಮುಖ್ಯ ಹೆದ್ದಾರಿಗಳನ್ನು ನಿರ್ಮಿಸಲಾಯಿತು. ಈ ಮಾರ್ಗಗಳು ಮುಂದೆ ಮೇಜಿ ಪುನಃ ಸ್ಥಾಪನೆಯ ಕಾಲದಲ್ಲಿ ಜಪಾನಿನ ಆಧುನಿಕ ರಸ್ತೆಸಾರಿಗೆ ವ್ಯವಸ್ಥೆಗೆ ಅಡಿಗಲ್ಲಾದುವು. 1966ರಲ್ಲಿ ರಾಷ್ಟ್ರೀಯ ಎಕ್ಸ್‌ಪ್ರೆಸ್ ಮಾರ್ಗವನ್ನು ನಿಮಿಸಲು ತೀರ್ಮಾನಿಸಿ, 2005ರ ವೇಳೆಗೆ 8730 ಕಿಮೀ ಮಾರ್ಗವನ್ನು ಪೂರ್ಣಗೊಳಿಸಲಾಯಿತು.

ನಗರಗಳೆಲ್ಲ ತೀರಪ್ರದೇಶದಲ್ಲಿದ್ದುದರಿಂದಲೂ ರಸ್ತೆ ನಿರ್ಮಾಣ ಕಾರ್ಯ ಕಷ್ಟವಾದ್ದರಿಂದಲೂ ರೈಲುಸಂಚಾರ ಹೆಚ್ಚಿದ್ದರಿಂದಲೂ ಹೆದ್ದಾರಿ ನಿರ್ಮಾಣ ಕಡೆಗಣಿಸಲ್ಪಟ್ಟಿತು. ಜಪಾನಿನ ರಸ್ತೆಗಳಲ್ಲಿ ನಾಲ್ಕು ವರ್ಗಗಳಿವೆ. ರಾಷ್ಟ್ರೀಯ ರಸ್ತೆಗಳು, ಪ್ರಿಫೆಕ್ಚರ್ (ಜಿಲ್ಲೆ) ರಸ್ತೆಗಳು, ಮುನಿಸಿಪಲ್ ರಸ್ತೆಗಳು ಮತ್ತು ಪಟ್ಟಣ ಹಾಗೂ ಹಳ್ಳಿ ರಸ್ತೆಗಳು.

ಜಪಾನ್ ಮೊಟ್ಟಮೊದಲಿಗೆ 1872ರ ಸೆಪ್ಟೆಂಬರ್‌ನಲ್ಲಿ ಟೋಕಿಯೋದಿಂದ ಯೋಕಹಾಮದವರೆಗಿನ ಇಲ್ಲಿಯ ರೈಲುಮಾರ್ಗ ರಚಿಸಿತು. ಈ ಮಾರ್ಗರಚನೆಗಾಗಿ ಬ್ರಿಟನ್ನಿನ ಖಾಸಗಿ ವ್ಯಕ್ತಿಯೊಬ್ಬನಿಂದ ಸಾಲ ಪಡೆದುದಲ್ಲದೆ ಬ್ರಿಟಿಷ್ ಎಂಜಿನಿಯರ್‌ಗಳು ಮತ್ತು ಆ ದೇಶದ ಉಪಕರಣಗಳ ನೆರವನ್ನು ಪಡೆಯಬೇಕಾಯಿತು. 1871ರ ಹೊತ್ತಿಗೆ

ನಾಹಾ ವಿಮಾನ ನಿಲ್ದಾಣ

ಕೋಬೀಯಿಂದ ಕೀಯೋಟೋವರೆಗೂ ಟೋಕಿಯೋದಿಂದ ಕೋಬೀ ವರೆಗೂ ಸುಮಾರು 643 ಕಿಮೀ ರೈಲುಮಾರ್ಗ ನಿರ್ಮಾಣವಾಯಿತು. ಜಪಾನಿನ ಬಹುತೇಕ ರೈಲುಮಾರ್ಗಗಳು ತೀರಪ್ರದೇಶಗಳಲ್ಲಿವೆ. ಅದಕ್ಕೆ ತೀರಪ್ರದೇಶಗಳಲ್ಲಿರುವ ಮುಖ್ಯ ನಗರಗಳು ಕಾರಣ. ಪ್ರಾರಂಭದಲ್ಲಿ ಸರ್ಕಾರಿ, ಖಾಸಗಿ ಈ ಎರಡೂ ಕ್ಷೇತ್ರಗಳಿಂದಲೂ ರೈಲುಮಾರ್ಗಗಳ ನಿರ್ಮಾಣಕಾರ್ಯ ನಡೆಯಿತು. 1892ರಲ್ಲಿ ಅಲ್ಲಿಯ ಸಂಸತ್ತು ಒಂದು ರೈಲುಮಾರ್ಗ ನಿರ್ಮಾಣ ವಿಧೇಯಕವನ್ನು ಅಂಗೀಕರಿಸಿ ಬೃಹತ್ ಯೋಜನೆಯೊಂದನ್ನು ಜಾರಿಗೆ ತಂದಿತು. ಜಪಾನಿನ ಬಹುತೇಕ ರೈಲುಮಾರ್ಗಗಳು ನ್ಯಾರೊ ಗೇಜಿನವು. ಅಲ್ಲಿಯ ಪ್ರದೇಶ ಪರ್ವತಮಯವಾಗಿರುವುದು ಇದಕ್ಕೆ ಕಾರಣ. ಜಪಾನಿನ ಒಟ್ಟು ರೈಲ್ವೆ ಜಾಲ 27,268 ಕಿಮೀ. ಇದರಲ್ಲಿ ಸು. 7133 ಕಿಮೀ ರೈಲುಮಾರ್ಗವನ್ನು ಖಾಸಗಿ ಕಂಪನಿಗಳು ನಿರ್ವಹಿಸುತ್ತವೆ.

ನಾಹಾ ನಗರದ ಒಂದು ದೃಶ್ಯ

ನೌಕಾಸಾರಿಗೆಯಲ್ಲಿ ಜಪಾನ್ ಬಹು ಮುಂದಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಜಪಾನಿನಲ್ಲಿ ದೀರ್ಘ ತೀರ ಪ್ರದೇಶವುಂಟು. ದ್ವೀಪಗಳ ನಡುವಣ ಸಮುದ್ರಗಳು ನೌಕಾ ಸಂಚಾರಕ್ಕೆ ಅನುಕೂಲವಾಗಿವೆ. ಜಪಾನ್ ದ್ವೀಪಸಮೂಹ–ವಾದ್ದರಿಂದ ಜಲಸಾರಿಗೆಯೇ ಆರ್ಥಿಕವಾಗಿ ಹೆಚ್ಚು ಅನುಕೂಲಕರ. ಅದರ ಕೈಗಾರಿಕಾ ನಗರಗಳು ತೀರ ಪ್ರದೇಶದಲ್ಲೇ ಹೆಚ್ಚಾಗಿವೆ.

ಜಪಾನ್ ಪ್ರಪಂಚದ ಮುಖ್ಯ ನೌಕಾನಿರ್ಮಾಣ ರಾಷ್ಟ್ರಗಳಲ್ಲಿ ಒಂದು. ಇಂದು ನೌಕಾನಿರ್ಮಾಣದಲ್ಲಿ ಅದು ಪ್ರಪಂಚದಲ್ಲೇ ಅಗ್ರಸ್ಥಾನ ಪಡೆದಿದೆ. ಅದರ ನೌಕೆಗಳಿಗೆ ವಿದೇಶೀ ಬೇಡಿಕೆ ಗಮನಾರ್ಹ. 1971ರಲ್ಲಿ 8,851 ವ್ಯಾಪಾರಿ ಹಡಗುಗಳಿದ್ದುವು. ಜಪಾನಿನಲ್ಲಿ ಮೊಟ್ಟಮೊದಲ ವಿಮಾನ ಹಾರಾಟ 1910ರಲ್ಲಿ ಪ್ರಾರಂಭವಾಯಿತು. ಜಪಾನಿನ ಮಿಲಿಟರಿ ವಿಮಾನಗಳು ಪ್ರಥಮ ಬಾರಿಗೆ 1914ರಲ್ಲಿ ಜರ್ಮನ್ ಸೈನ್ಯದ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದವು. ಕ್ರಮಬದ್ಧ ನಾಗರಿಕ ವಿಮಾನ ಸಾರಿಗೆ ವ್ಯವಸ್ಥೆ 1922ರಲ್ಲಿ ಪ್ರಾರಂಭವಾಯಿತು. ಪ್ರಪ್ರಥಮ ವಿಮಾನ ಅಂಚೆ ಸೇವೆ ಪ್ರಾರಂಭವಾದದ್ದು 1925ರಲ್ಲಿ. 2012ರ ಫೆಬ್ರವರಿಯ ವೇಳೆಗೆ ಜಪಾನಿನಲ್ಲಿ ಒಟ್ಟು 98 ವಿಮಾನ ನಿಲ್ದಾಣಗಳಿದ್ದವು.

ಜಪಾನಿನ ಮುಖ್ಯ ನಗರಗಳನ್ನೂ ಅವುಗಳ ಜನಸಂಖ್ಯೆಗಳನ್ನೂ ಮುಂದೆ ಕೊಟ್ಟಿದೆ (2010):

| | | |
|---|---|---|
| ಟೋಕಿಯೋ (ರಾಜಧಾನಿ) | ... | 8949,447 |
| ಓಸಾಕ | ... | 2666371 |
| ಯೋಕಹಾಮ | ... | 3689,603 |
| ನಗೋ | ... | 2263907 |
| ಕ್ಯೋಟೋ | ... | 1,474473 |
| ಕೋಬೀ | ... | 1,544,873 |
| ಕೀಟಾಕೀಯೂಷೂ | ... | 977288 |
| ಸಪೋರೋ | ... | 1914,434 |
| ಕಾವಸಾಕಿ | ... | 1,425678 |
| ಫುಕವೋಕ | ... | 1463826 |
| ಸಾಕೈ | ... | 842,134 |
| ಫುಕುಷಕ | ... | 1,463,826 |
| ಹಿರೋಷೀಮ | ... | 1,174,209 |
| ಚೀಬ | ... | 962,130 |
| ಕೂಮಮೋಟೋ | ... | 734,294 |
| ಹಾಮಮಾಟೊ | ... | 800912 |
| ನಾಗಸಾಕೀ | ... | 446,007 |
| ಷಿಜವೋಕ | ... | 716,328 |
| ನೀಗಾಟ | ... | 812,192 |
| ಸೈಟಮ | ... | 1,222,910 |
| ಹಿಮಮಟ್ಸು | ... | 800,912 |
| ಸಗಮಿಹರ | ... | 717,561 |
| ಸೆಂಡೈ | ... | 1045903 |

ಜಪಾನಿನ ನಾಣ್ಯ ಯೆನ್. ಮೆಟ್ರಿಕ್ ಅಳತೆ ತೂಕ ಪದ್ಧತಿ ಜಾರಿಯಲ್ಲಿದೆ. ಜೂಡೋ, ಸೂಮೋ (ಜಪಾನೀ ಕುಸ್ತಿ) ಮತ್ತು ಕೆಂಡೋ (ಕತ್ತಿವರಸೆ) ಪರಂಪರೆಯಿಂದ ಬಂದ ಕ್ರೀಡೆಗಳು. ಬೇಸ್ ಬಾಲ್, ಈಜು, ಸ್ಕೀಯಿಂಗ್, ಟೇಬಲ್–ಟೆನಿಸ್ ಇಲ್ಲಿಯ ಪ್ರಮುಖ ಆಟಗಳು. ಗಾಲ್ಫ್ ಜನಪ್ರಿಯವಾಗುತ್ತಿದೆ. 1964ರಲ್ಲಿ ಟೋಕಿಯೋದಲ್ಲಿ ಒಲಿಂಪಿಕ್ ಕ್ರೀಡೆಗಳನ್ನು ಏರ್ಪಡಿಸಲಾಗಿತ್ತು. 1972ರಲ್ಲಿ ಚಳಿಗಾಲದ ಒಲಿಂಪಿಕ್ ಕ್ರೀಡೆಗಳು ಸಪೋರೋದಲ್ಲಿ ನಡೆದುವು, 1998ರಲ್ಲಿ ಒಲಂಪಿಕ್ ಕ್ರೀಡೆ ನಗಾನೋನಲ್ಲಿ ನಡೆಯಿತು.

ನಾಹಾ ನಗರದ ಇನ್ನೊಂದು ದೃಶ್ಯ

ಜಪಾನ್ ಕಚ್ಚಾ ಹತ್ತಿ, ಕಬ್ಬಿಣದ ಅದಿರು, ಉಣ್ಣೆ, ಬೀಡು ಕಬ್ಬಿಣ, ಪೆಟ್ರೋಲ್ ಮತ್ತು ರಾಸಾಯನಿಕ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ. ಬಟ್ಟೆ, ರೇಷ್ಮೆ, ರೇಯಾನ್, ಸಿದ್ಧವಸ್ತುಗಳು, ಯಂತ್ರೋಪಕರಣಗಳು ಮತ್ತು ಹದ ಮಾಡಿದ ಮೀನು ರಫ್ತಾಗುತ್ತವೆ.

**ಆಡಳಿತ ವ್ಯವಸ್ಥೆ**

ಜಪಾನ್ ಪ್ರಾಚೀನಕಾಲದಿಂದಲೂ ರಾಜತ್ವವನ್ನು ಮನ್ನಿಸಿದ ದೇಶ. ರಾಜನು ದೇವರ ಸಾಕ್ಷಾತ್ ಪ್ರತಿನಿಧಿಯೆಂದೇ ಜಪಾನೀಯರು ನಂಬಿದ್ದರು. ಅಲ್ಲಿ ಚಕ್ರವರ್ತಿಯ ನಿರಂಕುಶಾಧಿಕಾರವಿತ್ತು. ದೇಶದ ಒಳಗೆಲ್ಲ ಊಳಿಗಮಾನ್ಯ ವ್ಯವಸ್ಥೆಯ ಆಡಳಿತ ಸಾಮಾನ್ಯ ಲಕ್ಷಣವಾಗಿತ್ತು. ದೊಡ್ಡದೊಡ್ಡ ಭೂಮಾಲೀಕರು ಮತ್ತು ರಾಜಕೀಯ ನಾಯಕರು ಸ್ವತಃ ಸಾಮಂತ ಪ್ರಭುಗಳಂತೆ ಸ್ಥಳೀಯ ಜನತೆಯ ಮೇಲೆ ಅಧಿಕಾರ ನಡೆಸುತ್ತಿದ್ದರು. ಆದರೆ 19ನೆಯ ಶತಮಾನದಲ್ಲಿ ಅಲ್ಲೊಂದು ಹೊಸ ರಾಷ್ಟ್ರೀಯ ಭಾವನೆ ಬೆಳೆಯಿತು. ಇದರಿಂದಾಗಿ ತಮ್ಮ ರಾಷ್ಟ್ರೀಯ ಏಕತೆಯ ಸಂಕೇತವಾಗಿ ಮೇಜಿ ಚಕ್ರವರ್ತಿ 1868ರಲ್ಲಿ ಪುನಃ ಸ್ಥಾಪಿತನಾದ. ತರುವಾಯ ಪಾಶ್ಚಾತ್ಯ ಮಾದರಿಯ ಸಂವಿಧಾನಬದ್ಧ ಆಡಳಿತವ್ಯವಸ್ಥೆಯನ್ನು ರಚಿಸಲು ಜಪಾನೀಯರು ಮುಂದಾದರು. ಇದರ ಫಲವಾಗಿ ಆಡಳಿತದಲ್ಲಿ ಮಹತ್ತರ ಬದಲಾವಣೆಗಳಾದುವು.

ಚೆರಿ ಬ್ಲಾಸಮ್ ಸರೋವರ, ಸಕುರ, ಜಪಾನ್

**ಸಂವಿಧಾನ ರಚನೆ :** 1880ರ ದಶಕದಲ್ಲಿ ಇಟೊ ಹಿರೋಬುಮಿಯ ನೇತೃತ್ವದಲ್ಲಿ ಸಂವಿಧಾನ ರಚನಾ ಆಯೋಗ ಸಂವಿಧಾನ ರಚಿಸುವ ಕಾರ್ಯ ಕೈಗೊಂಡಿತು. 1889ರ ಹೊತ್ತಿಗೆ ಈ ಕಾರ್ಯ ಮುಗಿಯಿತು. ಕೆಳಸದನಕ್ಕೆ ಚುನಾವಣೆಗಳು ನಡೆದು 1890ರಲ್ಲಿ ಸಂಸತ್ ಸಭೆ ಸೇರಿತು. ಸಂಸದೀಯ ವ್ಯವಸ್ಥೆಯಲ್ಲಿ ಚಕ್ರವರ್ತಿಯೇ ರಾಜ್ಯದ ಹಾಗೂ ಸಂವಿಧಾನಬದ್ಧ ಮುಖ್ಯನಾದ. ಇದರಿಂದಾಗಿ ಅವನಲ್ಲಿ ಕಾರ್ಯಾಂಗದ ಅಧಿಕಾರಗಳೂ ಸೇರಿಕೊಂಡುವು.

ಗೋಲ್ಡನ್ ಪೆವಿಲಿಯನ್ ಮಂದಿರ

ಎರಡು ಸದನಗಳ ಸಂಸತ್ತಿನಲ್ಲಿ ಮೇಲ್ಮನೆ ಪ್ರತಿಷ್ಠಿತರಿಂದ ಕೂಡಿದ್ದು ವಿಶೇಷ ಅಧಿಕಾರಗಳನ್ನು ಪಡೆಯಿತು. ಕೆಳಸದನಕ್ಕೆ ಕಾನೂನನ್ನು ಮಂಡಿಸುವ ಮತ್ತು ತೆರಿಗೆ ವಿಧಿಸುವ ವಿಧೇಯಕಗಳನ್ನು ಅಂಗೀಕರಿಸುವ ಅಧಿಕಾರವಿತ್ತು. ಚಕ್ರವರ್ತಿ ಸೈನ್ಯದ ಮೇಲೆ ಸಂಪೂರ್ಣ ಅಧಿಕಾರ ಪಡೆದಿದ್ದ. ಯುದ್ಧ ಘೋಷಿಸಲು ಮತ್ತು ಶಾಂತಿ ಮಾಡಿಕೊಳ್ಳಲು ಅವನು ವಿಧಿಬದ್ಧ ಅಧಿಕಾರ ಪಡೆದಿದ್ದ. ಸಂವಿಧಾನವನ್ನು ತಿದ್ದುಪಡಿ ಮಾಡಬೇಕಾದರೆ ಅಥವಾ ಯಾವುದೇ ಕಾನೂನು ಜಾರಿಗೆ ಬರಬೇಕಾದರೆ ಅದಕ್ಕೆ ಚಕ್ರವರ್ತಿಯ ಒಪ್ಪಿಗೆ ಅಗತ್ಯವಾಗಿತ್ತು. ಚುನಾವಣೆಯಲ್ಲಿ ಮತ ನೀಡುವವರು 15 ಯೆನ್ ತೆರಿಗೆ ಕೊಡುವಂಥ ಕನಿಷ್ಠ ಅರ್ಹತೆ ಪಡೆದಿರಬೇಕಾಗಿತ್ತು. ಕೆಲವರು ಅಭಿಪ್ರಾಯಪಡುವಂತೆ ಈ ಸಂವಿಧಾನದ ಅಳವಡಿಕೆಯ ಉದ್ದೇಶ ರಾಷ್ಟ್ರೀಯ ಏಕತೆಯನ್ನು ಸಾಧಿಸುವುದು ಮತ್ತು ಆಧುನಿಕ ಪಾಶ್ಚಾತ್ಯ ಮಾದರಿಯ ವೇಷದಲ್ಲಿ ಅಂತಾರಾಷ್ಟ್ರೀಯ ಮನ್ನಣೆ ಗಳಿಸುವುದಾಗಿತ್ತೇ ವಿನಾ ನಿಜವಾದ ಪ್ರಜಾಪ್ರಭುತ್ವದ ಹಕ್ಕುಗಳನ್ನು ಜನತೆಗೆ ನೀಡುವುದಾಗಿರಲಿಲ್ಲ.

ಮೇಜಿ ಪುನಃಸ್ಥಾಪನೆಯ ಕಾಲದಲ್ಲಿ ರಾಷ್ಟ್ರದ ಹಿರಿಯ ನಾಯಕರಿಂದ ಕೂಡಿದ ಜೆನ್ರೊ ಎಂಬ ಒಂದು ಮಂಡಲಿಯ ರಚನೆಯಾಯಿತು. ಅದು ಸರ್ಕಾರಕ್ಕೆ ರಾಜಕೀಯ ಸಲಹೆ ನೀಡುವುದಾಗಿತ್ತು. 1925ರಲ್ಲಿ ಸಾರ್ವತ್ರಿಕ ಮತದಾನ ಪದ್ಧತಿ ಜಾರಿಗೆ ಬಂತು. ಸರ್ಕಾರದ ರಚನೆಯಲ್ಲಿ ರಾಜಕೀಯ ಪಕ್ಷಗಳೂ ವಿಶೇಷ ಪಾತ್ರ ವಹಿಸುತ್ತಿದ್ದುವು. 1918ರಿಂದ 1931ರ ವರೆಗಿನ ಆಡಳಿತವನ್ನು ಜಪಾನಿನಲ್ಲಿ ಪಕ್ಷಗಳ ಸರ್ಕಾರದ ಕಾಲವೆಂದು ಕರೆಯಲಾಗಿದೆ. ಆದರೆ 1930ರ ದಶಕದಲ್ಲಿ ಯುದ್ಧಾಸಕ್ತ ವರ್ಗಗಳು ಪ್ರಬಲಿಸಿ ಸರ್ಕಾರದ ಮೇಲೆ ನಿಯಂತ್ರಣ ಪಡೆದುವು. ಇದರಿಂದ ಸಂವಿಧಾನಬದ್ಧ ಪ್ರಜಾಪ್ರಭುತ್ವ ನಶಿಸಿಹೋಯಿತು.

1947ರ ಸಂವಿಧಾನ: ಎರಡನೆಯ ಮಹಾಯುದ್ಧದಲ್ಲಿ ಜಪಾನನ್ನು ವಶಪಡಿಸಿಕೊಂಡ ಮೇಲೆ (1945) ಅದರ ಆಡಳಿತ ವಿಧಾನದಲ್ಲಿ ಅಪೂರ್ವ ಬದಲಾವಣೆಗಳಾದುವು. ಅಮೆರಿಕವು ಜಪಾನಿನಲ್ಲಿ ಪ್ರಜಾಪ್ರಭುತ್ವ ಶಕ್ತಿ ಬೆಳೆಸುವ ಉದ್ದೇಶ ಹೊಂದಿತ್ತು. ಅಮೆರಿಕನರು ಮತ್ತು ಜಪಾನೀಯರ ಸಂಯುಕ್ತ ಪ್ರಯತ್ನದಿಂದ 1947ರ ಮೇ 30ರಂದು ಒಂದು ಹೊಸ ಸಂವಿಧಾನ ಜಾರಿಗೆ ಬಂತು. ಇದನ್ನು 1889ರ ಸಂವಿಧಾನದ ಬದಲಿಗೆ ಅಳವಡಿಸಲಾಯಿತು.

ಟೋಕ್ಯೊ ಸ್ಟಾಕ್ ಎಕ್ಸ್‌ಚೇಂಜ್, ಏಷ್ಯಾದಲ್ಲೇ ದೊಡ್ಡ ಷೇರುಪೇಟೆ

ಈ ಹೊಸ ಸಂವಿಧಾನದಿಂದ ಚಕ್ರವರ್ತಿಯ ನಿರಂಕುಶ ಅಧಿಕಾರಗಳು ರದ್ದಾದುವು. ಅವನು ಸಾಂಕೇತಿಕವಾಗಿ ಸಂವಿಧಾನದ ಮುಖ್ಯಸ್ಥ. ಅಲ್ಲಿಯ ರಾಜತ್ವ ಬಹುತೇಕ ಇಂಗ್ಲೆಂಡಿನ ರಾಜತ್ವದ ಸ್ವರೂಪ ಪಡೆದುಕೊಂಡಿತು.

ಸರ್ವ ರಾಜಕೀಯ ಅಧಿಕಾರಗಳನ್ನೂ ಉಭಯ ಸದನಗಳುಳ್ಳ ಸಂಸತ್ತಿಗೆ ವಹಿಸಲಾಯಿತು. ಇದರ ಸದಸ್ಯರನ್ನು ಜನತೆ ಆರಿಸಬೇಕು. ಬಹುಮತ ಗಳಿಸಿದ ಪಕ್ಷ ಮಂತ್ರಿಮಂಡಲ ರಚಿಸಲು ಅವಕಾಶ ಕಲ್ಪಿಸಲಾಗಿದೆ. ಸಂಸತ್ತಿಗೆ ಸಂವಿಧಾನದ ತಿದ್ದುಪಡಿಯ ಅಧಿಕಾರ ಇದೆ. ಇದಕ್ಕೆ 2/3 ಭಾಗ ಸದಸ್ಯರ ಬೆಂಬಲ ಅಗತ್ಯ.

ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ಒಂದನ್ನು ಪ್ರತಿನಿಧಿ ಸಭೆಯೆಂದೂ ಇನ್ನೊಂದನ್ನು ಪರಿಷದ್ ಸಭೆಯೆಂದೂ ಕರೆಯಲಾಗಿದೆ. ಪ್ರತಿನಿಧಿ ಸಭೆಯಲ್ಲಿ ಸದಸ್ಯ ಸಂಖ್ಯೆ 480 (2012). ಪರಿಷದಸಭೆಯದು 242, ಪ್ರತಿನಿಧಿ ಸಭೆಯ ಸದಸ್ಯರನ್ನು ದೇಶಾದ್ಯಂತ ಇರುವ 118 ಚುನಾವಣಾ ಜಿಲ್ಲೆಗಳಿಂದ ಆರಿಸಲಾಗುತ್ತದೆ. ಇವರ ಅಧಿಕಾರಾವಧಿ ನಾಲ್ಕು ವರ್ಷ. ಪರಿಷತ್ತಿನ ಸದಸ್ಯರಲ್ಲಿ 100 ಜನ ಒಟ್ಟು ರಾಷ್ಟ್ರದಿಂದ ಆರಿಸಲ್ಪಟ್ಟರೆ ಇನ್ನು 150 ಜನ ಸದಸ್ಯರು ಪ್ರಿಫೆಕ್ಚರ್‌ಗಳಿಂದ (ಜಿಲ್ಲೆ) ಆರಿಸಲ್ಪಡುತ್ತಾರೆ. ಇದರ ಸದಸ್ಯರ ಅಧಿಕಾರಾವಧಿ 6 ವರ್ಷಗಳು. ಪ್ರತಿ ಮೂರು ವರ್ಷಗಳಿಗೊಮ್ಮೆ 1/3 ಭಾಗ ಸದಸ್ಯರನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಲಾಗುವುದು. ಪ್ರತಿಯೊಬ್ಬ ಮತದಾರನಿಗೂ ಒಂದು ವರ್ಗದ ಸದಸ್ಯರನ್ನು ಆರಿಸಲು ಒಂದು ಮತದ ಹಕ್ಕಿರುತ್ತದೆ. ಕೆಳಸದನವನ್ನು ಸಚಿವಸಂಪುಟ ವಿಸರ್ಜಿಸಬಹುದು. ಆದರೆ 40 ದಿವಸಗಳೊಳಗಾಗಿ ಮರುಚುನಾವಣೆ ನಡೆಯಬೇಕಾಗುತ್ತದೆ. ಚುನಾವಣೆ ಆದ 30 ದಿನಗಳೊಳಗೆ ಸಂಸತ್ ಸಭೆ ಸೇರಬೇಕು.

ವ್ಯಕ್ತಿಗೌರವವನ್ನು ಹಕ್ಕುಗಳ ವಿಧೇಯಕದ ಮೂಲಕ ಎತ್ತಿ ಹಿಡಿಯಲಾಗಿದೆ. ಸಂವಿಧಾನದ ಯಾವುದೇ ತಿದ್ದುಪಡಿಯನ್ನು ಪರಿಶೀಲಿಸುವ ಅಧಿಕಾರ ಮತ್ತು ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಅಧಿಕಾರವನ್ನು ಜನತೆಗೆ ನೀಡಲಾಗಿದೆ. ಇಲ್ಲಿಯ ಪರಮೋಚ್ಚ ನ್ಯಾಯಾಲಯಕ್ಕೆ ಯಾವುದೇ ಕಾನೂನು ಸಂವಿಧಾನಬದ್ಧವಾಗಿದೆಯೆ ಇಲ್ಲವೆ ಎಂದು ನಿರ್ಣಯಿಸುವ ಅಧಿಕಾರ ಇದೆ. ಸಂವಿಧಾನದಲ್ಲಿ ನಾಗರಿಕರಿಗೆ ಪ್ರಜಾಪ್ರಭುತ್ವದಲ್ಲಿರುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಕ್ಕುಗಳನ್ನು ನೀಡಲಾಗಿದೆ. 2009ರಲ್ಲಿ ಡೆಮೊಕ್ರಾಟಿಕ್ ಪಾರ್ಟಿ ಆದ ಜಪಾನ್' ಪಕ್ಷವು 54 ವರ್ಷಗಳ ಕಾಲ ಆಳಿದ ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿಯಿಂದ ಅಧಿಕಾರ ವಹಿಸಿಕೊಂಡಿತು.

**ಸ್ಯಾಂಡನ್ ಕೀಯೋ ಕಣಿವೆ, ಪಶ್ಚಿಮ ಚುಗೋಡು ಪರ್ವತೋದ್ಯಾನ**

**ನ್ಯಾಯಾಂಗ:** 1947ಕ್ಕೆ ಹಿಂದೆ ನ್ಯಾಯಾಂಗ ಕಾರ್ಯಾಂಗಕ್ಕೆ ಅಧೀನವಾಗಿದ್ದಿತು. 1947ರ ಸಂವಿಧಾನದಲ್ಲಿ ನ್ಯಾಯಾಂಗವನ್ನು ಆಮೂಲಾಗ್ರವಾಗಿ ಬದಲಾಯಿಸಲಾಯಿತು. ಇದಕ್ಕನುಗುಣವಾಗಿ ನ್ಯಾಯಾಂಗ ಕಾರ್ಯಾಂಗದ ಹತೋಟಿಯಿಂದ ಮುಕ್ತಗೊಂಡಿತು. ಇದೊಂದು ಸ್ವತಂತ್ರ ಶಾಖೆಯಾಗಿ ರೂಪುಗೊಂಡಿತು.

**ರಾಷ್ಟ್ರೀಯ ಸಂಸತ್ ಭವನ, ಟೋಕಿಯೋ**

ಪರಮೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಹೆಚ್ಚಿಸಲಾಯಿತು. ಯಾವುದೇ ಕಾನೂನು ಅಥವಾ ನಿಬಂಧನೆ ಸಂವಿಧಾನಬದ್ಧವಾಗಿ ಇದೆಯೇ ಇಲ್ಲವೇ ಎಂದು ಅಂತಿಮವಾಗಿ ನಿರ್ಣಯಿಸುವ ಅಧಿಕಾರ ಇದಕ್ಕೆ ಇದೆ. ಪರಮೋಚ್ಚ ನ್ಯಾಯಾಲಯದಲ್ಲಿ 15 ಜನ ನ್ಯಾಯಾಧೀಶರು ಇರುತ್ತಾರೆ. ಮುಖ್ಯ ನ್ಯಾಯಾಧೀಶನನ್ನು ಮಂತ್ರಿಮಂಡಲದ ಅನುಮೋದನೆಯ ಮೇರೆಗೆ ಚಕ್ರವರ್ತಿಯೇ ನೇಮಿಸಬೇಕು. ಉಳಿದ ನ್ಯಾಯಾಧೀಶರನ್ನು ಮಂತ್ರಿಮಂಡಲವೇ ನೇರವಾಗಿ ನೇಮಿಸುತ್ತದೆ. ಆದರೆ ಇಲ್ಲಿ ಅಳವಡಿಸಿದ ಹೊಸ ಸೂತ್ರವೆಂದರೆ, ಹೀಗೆ ನೇಮಿತರಾದ ನ್ಯಾಯಾಧೀಶರು ಮೊದಲ ಅವಧಿಗೆ ನೇಮಕವಾದ ಮೇಲೆ ಬರುವ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಜನರು ಅವರ ನೇಮಕವನ್ನು ಅನುಮೋದಿಸಬೇಕು. ತರುವಾಯ ಪ್ರತಿ ಹತ್ತು ವರ್ಷಗಳಿಗೊಮ್ಮೆ ಈ ಅನುಮೋದನೆ ನಡೆಯಬೇಕು. ಮತದಾರರು ಅವರ ನೇಮಕವನ್ನು ತಿರಸ್ಕರಿಸಿದರೆ ಅಂಥವರು ತಮ್ಮ ಸ್ಥಾನದಲ್ಲಿ ಮುಂದುವರಿಯುವಂತಿಲ್ಲ.



**ಸಾತಕೀ ಸ್ಮಾರಕ ಭವನ**

ಇತರ ನ್ಯಾಯಾಲಯಗಳಿಗೆ ಹತ್ತು ವರ್ಷಗಳ ಅವಧಿಗೆ ನ್ಯಾಯಾಧೀಶರನ್ನು ನೇಮಿಸಲಾಗುವುದು. ಸಂಸತ್ತಿನಿಂದ ಚುನಾಯಿತರಾದ 14 ಜನರ ಮಂಡಳಿಯೊಂದು ನ್ಯಾಯಾಧೀಶರುಗಳಲ್ಲಿ ಯಾರನ್ನೇ ಆದರೂ ಮಹಾಭಿಯೋಗಮಾಡಿ (ಇಂಪೀಚ್‌ಮೆಂಟ್) ಪದಚ್ಯುತಗೊಳಿಸಬಹುದು. ಪರಮೋಚ್ಚ ನ್ಯಾಯಾಲಯದ ಕೆಳಗೆ 8 ಉನ್ನತ ನ್ಯಾಯಾಲಯಗಳೂ 49 ಜಿಲ್ಲಾ ನ್ಯಾಯಾಲಯಗಳೂ 570 ಸ್ಥಳೀಯ ನ್ಯಾಯಾಲಯಗಳೂ ಇವೆ. ಜಪಾನಿನಲ್ಲಿ ಕೌಟುಂಬಿಕ ವಿಷಯಗಳಿಗೆ ಸಂಬಂಧಿಸಿದಂತೆ ತೀರ್ಪು ನೀಡಲು ಪ್ರತ್ಯೇಕ ನ್ಯಾಯಾಂಗ ವ್ಯವಸ್ಥೆಯಿದೆ.



**ವಾಯವ್ಯ ಕೀಯೂಷೂದಲ್ಲಿರುವ ಸಾಗಾ ನಗರದ ಒಂದು ದೃಶ್ಯ**

**ರಾಜಕೀಯ ಪಕ್ಷಗಳು :** ಜಪಾನಿನಲ್ಲಿ ಏಷ್ಯದ ಇತರ ರಾಷ್ಟ್ರಗಳಿಗಿಂತ ಬಹು ಬೇಗ, 19ನೆಯ ಶತಮಾನದ ಉತ್ತರಾರ್ಧದಲ್ಲೇ, ರಾಜಕೀಯ ಪಕ್ಷಗಳು ಹುಟ್ಟಿಕೊಂಡುವು. ಸರ್ಕಾರದ ರಚನೆಯಲ್ಲಿ ಅವುಗಳ ಪಾತ್ರ ವಿಶೇಷವಾಗಿತ್ತು. 1918ರಿಂದ 1931ರ ವರೆಗಿನ ಆಡಳಿತದಲ್ಲಿ ರಾಜಕೀಯ ಪಕ್ಷಗಳು ಪರಿಣಾಮಕಾರಿ ಪಾತ್ರ ವಹಿಸಿದುವು. ಆದರೆ 1889ರ ಸಂವಿಧಾನದಲ್ಲಿ ಚಕ್ರವರ್ತಿಗೆ ಮತ್ತು ಕಾರ್ಯಾಂಗಕ್ಕೆ ಹೆಚ್ಚಿನ ಅಧಿಕಾರಗಳು ದತ್ತವಾಗಿದ್ದುದರಿಂದ ರಾಜಕೀಯ ಪಕ್ಷಗಳ ಅಧಿಕಾರವ್ಯಾಪ್ತಿ ಸೀಮಿತವಾಗಿತ್ತು. 1930ರ ದಶಕದಲ್ಲಿ ರಾಜ್ಯದ ಆಡಳಿತದಲ್ಲಿ ಯುದ್ಧಾಸಕ್ತ ವರ್ಗದ ಪ್ರಾಬಲ್ಯ ಹೆಚ್ಚಿದ್ದರಿಂದ ರಾಜಕೀಯ ಪಕ್ಷಗಳು ಗೌಣವಾದುವು. 1940ರಲ್ಲಿ ಎಲ್ಲ ಪಕ್ಷಗಳು ಸ್ವಇಚ್ಛೆಯಿಂದ ಸಾಮ್ರಾಜ್ಯ ಆಡಳಿತ ಸಹಾಯಕ ಸಂಘವೆಂಬ ಏಕೈಕ ಪಕ್ಷ ಸ್ಥಾಪಿತವಾಯಿತು.

1945ರಲ್ಲಿ ಯುದ್ಧಾನಂತರ ಲಿಬರಲ್ ಮತ್ತು ಪ್ರಗತಿ ಪಕ್ಷಗಳು ಹುಟ್ಟಿಕೊಂಡುವು. ಸಮಾಜವಾದಿ ಪಕ್ಷವೂ ಸ್ಥಾಪನೆಗೊಂಡಿತು. 1945ರ ಅಕ್ಟೋಬರ್‌ನಲ್ಲಿ ಪ್ರಪ್ರಥಮವಾಗಿ ಕಾನೂನುಬದ್ಧ ಕಮ್ಯೂನಿಸ್ಟ್ ಪಕ್ಷದ ಸ್ಥಾಪನೆಯಾಯಿತು. ಜಪಾನಿನ ರಾಜಕೀಯ ಚಟುವಟಿಕೆಯಲ್ಲಿ ಸಂಪ್ರದಾಯವಾದಿಗಳ ಮತ್ತು ಸಮಾಜವಾದಿಗಳ ಪಕ್ಷಗಳ ಪ್ರಭಾವವನ್ನು ಕಾಣಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಸಂಪ್ರದಾಯವಾದಿಗಳ ಪಕ್ಷಗಳ ಪ್ರಭಾವವಿದೆ. ಕೈಗಾರಿಕಾ ನಗರಗಳಲ್ಲಿ ಸಮಾಜವಾದಿಗಳ ಪ್ರಭಾವ ಹೆಚ್ಚು.

ಲಿಬರಲ್ ಡೆಮೊಕ್ರಾಟಿಕ್ ಪಕ್ಷ ಈಗ ಆಡಳಿತ ನಡೆಸುತ್ತಿದೆ. ಸಮಾಜವಾದಿ ಮತ್ತು ಪ್ರಜಾಪ್ರಭುತ್ವ ಸಮಾಜವಾದಿ ಪಕ್ಷಗಳೂ ಜನಪ್ರಿಯವಾಗುತ್ತಿವೆ. ಶುದ್ಧ ಸರ್ಕಾರದ ಪಕ್ಷ 1964ರಲ್ಲಿ ಸ್ಥಾಪಿತವಾಯಿತು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಬಲವಾಗಿರುವ ವರ್ಗದ ಹಿಡಿತದಿಂದ ಇಲ್ಲಿಯ ರಾಜಕೀಯ ಇನ್ನೂ ಪಾರಾಗಿಲ್ಲ.

ಮಿನಾಮೋಟೊ ಯೊರಿಟೊಮೊ

**ಸ್ಥಳೀಯ ಆಡಳಿತ:** 1947ರಲ್ಲಿ ಸಂಸತ್ ಅಂಗೀಕರಿಸಿದ ಸ್ಥಳೀಯ ಸ್ವಯಮಾಡಳಿತ ಕಾನೂನು ಸ್ಥಳೀಯ ಆಡಳಿತ ಅಂಗಗಳಿಗೆ ಹೆಚ್ಚಿನ ಒಳಾಡಳಿತ ಸ್ವಾತಂತ್ರ್ಯ ನೀಡಿದೆ. ಇಡೀ ರಾಷ್ಟ್ರವನ್ನು 46 ಪ್ರಿಫೆಕ್ಚ್‌ಗಳಾಗಿ (ಜಿಲ್ಲೆಗಳು) ವಿಂಗಡಿಸಲಾಗಿದೆ. ಇವನ್ನು ನಗರಗಳು, ಪಟ್ಟಣಗಳು, ಹಳ್ಳಿಗಳೆಂದು ಉಪವಿಭಾಗಗಳನ್ನಾಗಿ ಮಾಡಲಾಗಿದೆ. ಪ್ರಿಫೆಕ್ಚ್‌ಗಳ ಗವರ್ನರ್‌ಗಳು ಮತ್ತು ಇತರ ಸ್ಥಳೀಯ ಅಧಿಕಾರಿಗಳನ್ನು ಚುನಾಯಿಸಲಾಗುತ್ತದೆ. ವಾರ್ಡ್‌ಗಳು, ಮುನಿಸಿಪಾಲಿಟಿಗಳು ಮತ್ತು ಪಟ್ಟಣಗಳ ಆಡಳಿತ ಸಭೆಗೂ ನೇರ ಚುನಾವಣಾಪದ್ಧತಿ ಇದೆ. ಪ್ರಿಫೆಕ್ಚ್‌ನ ಸಭೆಗೆ ನಾಲ್ಕು ವರ್ಷಗಳ ಅವಧಿಗೆ ಚುನಾವಣೆ ನಡೆಯುತ್ತದೆ. ಚುನಾಯಿತ ಸಮುದಾಯ ಇಚ್ಛೆಪಟ್ಟಾಗ ಸ್ಥಳೀಯ ಆಡಳಿತ ಸಭೆಗಳನ್ನು ವಿಸರ್ಜಿಸಲು ಒತ್ತಾಯ ಪಡಿಸಬಹುದು ಹಾಗೂ ಅವುಗಳ ಲೆಕ್ಕಪತ್ರಗಳನ್ನು ಪರಿಶೀಲಿಸಬಹುದು.

ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಮೇಲ್ವಿಚಾರಣೆ ಗೃಹಖಾತೆಗೆ ಸೇರಿದ್ದು. ಟೋಕಿಯೋವಿನಂಥ ದೊಡ್ಡ ನಗರಗಳಿಗೆ ವಿಶೇಷ ಆಡಳಿತ ವ್ಯವಸ್ಥೆ ಇದೆ.

**ರಾಷ್ಟ್ರರಕ್ಷಣೆ:** 1945ರಲ್ಲಿ ಮಿತ್ರರಾಷ್ಟ್ರಗಳು ಜಪಾನಿನ ಸಶಸ್ತ್ರ ಪಡೆಗಳನ್ನು ವಿಸರ್ಜಿಸಿದುವು. 1952ರಲ್ಲಿ ರಾಷ್ಟ್ರೀಯ ರಕ್ಷಣಾದಳ ಎಂಬ ಹೆಸರಿನಲ್ಲಿ ಪುನಃ ಸೈನ್ಯದ ಸಂಘಟನೆ ಪ್ರಾರಂಭವಾಯಿತು. 1945ರಲ್ಲಿ ಜಪಾನ್ ಮತ್ತು ಅಮೆರಿಕಗಳು ಪರಸ್ಪರ ರಕ್ಷಣಾ ಒಪ್ಪಂದಕ್ಕೆ ಸಹಿಮಾಡಿದುವು. ಅದೇ ವರ್ಷದ ಜೂನಿನಲ್ಲಿ ಜಪಾನಿನ ಸಂಸತ್ತು ಹೊಸ ಭೂಪಡೆ, ವಾಯುಪಡೆ ಮತ್ತು ನೌಕಾ ಪಡೆಯ ರಚನೆಗೆ ವಿಧೇಯಕ ಅಂಗೀಕರಿಸಿತು. (ಡಿ.ಎಸ್.ಜಿ.)

### ಇತಿಹಾಸ

**ಪ್ರಾಗಿತಿಹಾಸ:** ಪ್ಲೀಸ್ಟೊಸೀನ್ ಯುಗದ ಅಂತ್ಯಭಾಗದಲ್ಲಿ ಜಪಾನಿನಲ್ಲಿ ಜನವಸತಿ ಇದ್ದ ಬಗ್ಗೆ ಹಲವು ಕುರುಹುಗಳು ಇತ್ತೀಚೆಗೆ ದೊರೆತಿವೆ. ಹಾಕೈಡೋ ವಿಭಾಗದ ತಾರುಕೀಷಿ ಮತ್ತು ಇತರ ಕೆಲವು ಸ್ಥಳಗಳಲ್ಲಿ ಪಟ್ಟೆಚಕ್ಕೆಯ ಶಿಲಾಯುಧ ಪ್ರಕಾರಗಳು ದೊರೆತಿವೆ. ಅವು ಸುಮಾರು 13 ಅಥವಾ 12 ಸಾವಿರ ವರ್ಷಗಳಷ್ಟು ಹಳೆಯವೆಂದು ರೇಡಿಯೋ ಕಾರ್ಬನ್ ವಿಧಾನಗಳಿಂದ ತೀರ್ಮಾನಿಸಲಾಗಿದೆ. ಹಾಕೈಡೋ ವಿಭಾಗದ ಉತ್ತರದ ಪ್ರದೇಶಗಳಲ್ಲಿ, ಅದರಲ್ಲೂ ಯೂಬೆಟ್ಸು ನದೀ ಕಣಿವೆಯ ಷಿರತಾಕಿ ಮುಂತಾದ ನೆಲೆಗಳಲ್ಲಿ, ಈ ಶಿಲಾಯುಧ ಸಂಸ್ಕೃತಿಯ ಸ್ತರಗಳು ಕಂಡುಬಂದಿವೆ. ಅವುಗಳ ಅತ್ಯಂತ ಪ್ರಾಚೀನ ಘಟ್ಟದಲ್ಲಿ ಅಪರಿಷ್ಕೃತವಾದ, ಅಗಲವಾದ ಪಟ್ಟೆಚಕೆಯ ಶಿಲಾಯುಧಗಳೂ ಅನಂತರದ ಘಟ್ಟದ ತುದಿಯಲ್ಲಿ ಸಣ್ಣ ಚಕ್ಕೆಗಳನ್ನು ಎತ್ತಿ ಪರಿಷ್ಕರಿಸಿದ ಉದ್ದನೆಯ ಹಾಗೂ ಚಿಕ್ಕ ಪಟ್ಟೆಚಕ್ಕೆಯ ಆಯುಧಗಳೂ ಉಪಯೋಗದಲ್ಲಿದ್ದುವೆಂದು ತಿಳಿಯುತ್ತದೆ. ಇನ್ನೂ ಮುಂದಿನ ಘಟ್ಟದಲ್ಲಿ ಕೊರೆಗಗಳೂ ಪಟ್ಟೆಚಕ್ಕೆಗಳನ್ನು ತೆಗೆಯಲು ಬಳಸಿದ ಮಾತೃಶಿಲೆಗಳೂ ಸಿಗುತ್ತವೆ. ಹಾಕೈಡೋದ ಕರಾವಳಿಯಲ್ಲಿ ಇದೇ ಸಂಸ್ಕೃತಿ ಇನ್ನೊಂದು ರೂಪದಲ್ಲಿ ಕಾಣಸಿಗುತ್ತದೆ. ಇದರಲ್ಲಿ ಕೊರೆಗಗಳು, ಪಟ್ಟೆಚಕ್ಕೆಗಳು, ಉಜ್ಜಿ ನಯಗೊಳಿಸಿದ ಶಿಲಾಯುಧಗಳು, ಹಿಂದುಮುಂದಾಗಿ ಚಕ್ಕೆ ಎಬ್ಬಿಸಿ ಪರಿಷ್ಕರಿಸಿದ ಕಲ್ಲಿನ ಮೊನೆಗಳು ದೊರೆತಿವೆ. ಇಲ್ಲಿಯ ಆಯುಧಗಳೆಲ್ಲ ಆಬ್ಸಿಡಿಯನ್ ಎಂಬ ನಯವಾದ ಗಾಜಿನಂಥ ಕಲ್ಲಿನಲ್ಲಿ ಮಾಡಿದವುಗಳು. ಹಾನ್ಶ್ಯೂ ವಿಭಾಗದಲ್ಲಿ ಎರೆಕಲ್ಲು ಬಳಕೆಯಲ್ಲಿತ್ತು. ಅಲ್ಲಿಯ ಸಂಸ್ಕೃತಿಯಲ್ಲಿ ಕೊರೆಗಗಳೂ ಬರೆಯುವ ಸಾಧನಗಳೂ ಉಂಡೆಕಲ್ಲಿನಿಂದ ಮಾಡಿದ ಕೆಲವು ಆಯುಧಗಳೂ ಬೆಳಕಿಗೆ ಬಂದಿವೆ. ಕಾಂಟೋ ಬಯಲಿನ ಗೊಂಬೆನ್ಯಾಮದಲ್ಲಿ ಕೈಕೊಡಲಿಗಳು ಮತ್ತು ದೊಡ್ಡ ಚಕ್ಕೆಗಳು ಸಿಕ್ಕಿವೆ. ಇವು ಪ್ರಾಯಶಃ ಮೇಲಿನ ಸಂಸ್ಕೃತಿಗಳಿಗಿಂತ ಹಿಂದಿನ ಕಾಲದವಿರಬಹುದೆಂದು ಊಹಿಸಲಾಗಿದೆ. ಇವೆಲ್ಲ ಬೇಟೆಗಾರ ಜನಾಂಗಗಳು ಉಪಯೋಗಿಸುತ್ತಿದ್ದ ಆಯುಧಗಳು. ಹೆಚ್ಚಿನ ನೆಲೆಗಳು ನದಿ ಅಥವಾ ಸರೋವರಗಳ ಪಕ್ಕಗಳಲ್ಲಿ, ಇಳಿಜಾರು ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತವೆ. ಈ ಶಿಲಾಯುಧ ಸಂಸ್ಕೃತಿಗಳು ಚೀನ ಭೂಭಾಗದಿಂದ ಜಪಾನ್ ಪ್ರದೇಶಕ್ಕೆ ಬಂದಿರಬೇಕೆಂದು ಊಹೆ. ಪ್ಲಿಸ್ಟೊಸೀನ್ ಅಂತ್ಯದಲ್ಲಿ ಹಿಮಗಾಲದಲ್ಲಿ ಸಮುದ್ರಮಟ್ಟ ಕೆಳಕ್ಕೆ ಇಳಿದಿದ್ದುದರಿಂದ, ಅಂದು ಚೀನ ಮತ್ತು ಜಪಾನ್ ದ್ವೀಪಗಳು ಭೂಸೇತುವೆಗಳಿಂದ ಒಂದುಗೂಡಿದ್ದುದರಿಂದ, ಆ ಕಾಲದಲ್ಲೇ ಚೀನೀ ಭೂಭಾಗದಿಂದ ಜಪಾನ್‌ಗೆ ಜನ ವಲಸೆ ಬಂದಿರಬೇಕೆಂದು ಅನೇಕ ವಿದ್ವಾಂಸರು ತರ್ಕಿಸಿದ್ದಾರೆ.

ಕೀಯೋಟೋ ಸಮೀಪದ ಉಜಿಯಲ್ಲಿರುವ ಪುರಾತನ ಕಟ್ಟಡ–ಫೀನಿಕ್ಸ್ ಭವನ 11ನೆಯ ಶತಮಾನ

ಜಪಾನಿನಲ್ಲಿ ನೆಲೆ ಹೂಡಿದ್ದ ನವಶಿಲಾಯುಗ ಸಂಸ್ಕೃತಿ ಪ್ರಶ.ಪೂ. 3–2ನೆಯ ಸಹಸ್ರಮಾನಗಳಲ್ಲಿ ಯಾವಾಗಲೋ ಪ್ರಾರಂಭವಾಯಿತು. ಈ ಸಂಸ್ಕೃತಿಯ ಆದಿಘಟ್ಟವನ್ನು ಜೋಮೋನ್ ಎಂದು ಹೆಸರಿಸಲಾಗಿದೆ. ಈ ಘಟ್ಟದ ಕಾಲದ ವ್ಯಾಪ್ತಿ ಪ್ರಶ.ಪೂ. ಸು. 2500–250 ಇರಬಹುದು. ಈ ಘಟ್ಟದಲ್ಲಿ ವ್ಯವಸಾಯವಾಗಲಿ, ನಾಯಿಯ ವಿನಾ ಬೇರೆ ಪ್ರಾಣಿಗಳ ಸಾಕಣೆಯಾಗಲಿ ಇರಲಿಲ್ಲ. ಜನರು ಬೇಟೆಯಿಂದಲೂ ಮೀನು ಹಿಡಿದೂ ಜೀವನ ಸಾಗಿಸುತ್ತಿದ್ದರು. ನುಣುಪುಗೊಳಿಸಿದ ಆಯುಧಗಳು ಮತ್ತು ಮಡಕೆಗಳ ಉಪಯೋಗ ಪ್ರಾರಂಭವಾಗಿತ್ತು. ಮಡಕೆಗಳನ್ನು ಚಕ್ರದ ಉಪಯೋಗವಿಲ್ಲದೆ ಕೈಯಿಂದ ಮಾಡಿದ್ದರೂ ಹಗ್ಗದ ವಿನ್ಯಾಸದ ಉತ್ತಮ ಅಲಂಕರಣವನ್ನು ಅವುಗಳ ಮೇಲೆ ಮೂಡಿಸುವುದು ರೂಢಿಯಾಗಿತ್ತು. ಜನರು ಒಂದೇ ಕೋಣೆಯ ಮನೆಗಳಲ್ಲಿ ವಾಸಿಸುತ್ತಿದ್ದರು. ಇವು ನೆಲದಲ್ಲಿ ಅಗೆದು ಮಾಡಿದ ಗುಣಿಗಳು. ಗುಣಿಗಳ ಮಧ್ಯದಲ್ಲಿ ಒಂದು ಕಂಬ ನೆಟ್ಟು ಮೇಲೆ ಚಾವಣಿ ಹೊದಿಸುವ ಪದ್ಧತಿ ಇತ್ತು. ಈ ಸಂಸ್ಕೃತಿಗೂ ಸೈಬೀರಿಯ ಪ್ರದೇಶದಲ್ಲಿ ಕಂಡುಬಂದಿರುವ ಕೆಲವು ಸಂಸ್ಕೃತಿಗಳಿಗೂ ಸಾಮ್ಯ ಇರುವುದರಿಂದ ಜಪಾನಿನ ಜೋಮೋನ್ ಸಂಸ್ಕೃತಿ ಅತ್ತಣಿಂದ ಬಂದಿರಬಹುದೆಂದು ಊಹಿಸಲಾಗಿದೆ. ಯಯೋಇ ಎಂಬುದು ಇಲ್ಲಿಯ ನವಶಿಲಾಯುಗ ಸಂಸ್ಕೃತಿಯ ಮುಂದಿನ ಘಟ್ಟ. ಈ ಸಂಸ್ಕೃತಿಗೂ ಏಷ್ಯದ ಮುಖ್ಯ ಭೂಭಾಗದ ಬತ್ತ ಬೆಳೆಯುವ ಪ್ರದೇಶಗಳಲ್ಲಿದ್ದ ಸಂಸ್ಕೃತಿಗಳಿಗೂ ಬಹಳ

ಸಂಬಂಧ ಇರುವುದರಿಂದ ಮೊದಲಾಗಿ ಈ ಸಂಸ್ಕೃತಿಯನ್ನು ತಂದ ಜನ ರೀಯೂಕ್ಯೂ ದ್ವೀಪಗಳು ಮತ್ತು ಕೊರಿಯದ ಕಡೆಯಿಂದ ಜಪಾನಿನ ಕೀಯೂಷೂ ಪ್ರದೇಶದಲ್ಲಿ ಬಂದು ನೆಲಸಿ ಅಲ್ಲಿಂದ ಬೇರೆಡೆಗೆ ಪಸರಿಸಿರಬೇಕೆಂದು ತಿಳಿಯಲಾಗಿದೆ. ಯಯೋಇ ಸಂಸ್ಕೃತಿಯ ಕಾಲದಲ್ಲಿ ಜನರು ಚಕ್ರದ ಮೇಲೆ ಮಾಡಿದ ಮಡಕೆಗಳನ್ನು ಉಪಯೋಗಿಸುತ್ತಿದ್ದರು. ಬತ್ತದ ವ್ಯವಸಾಯದಿಂದ ಜನರ ಆರ್ಥಿಕ ಸ್ಥಿತಿ ಹಿಂದಿನ ಘಟ್ಟದ್ದಕ್ಕಿಂತ ಉತ್ತಮವಾಯಿತು. ಈ ಘಟ್ಟದ ಕೊನೆಯ ಭಾಗದಲ್ಲಿ ಏಷ್ಯದ ಉತ್ತರದ ನಾಡುಗಳಿಂದ ಕೊರಿಯದ ಮೂಲಕ ಹೊಸ ಜನರು ವಲಸೆ ಬಂದು ಈ ಸಂಸ್ಕೃತಿಯಲ್ಲಿ ಹಲವು ಮಾರ್ಪಾಡುಗಳನ್ನು ಉಂಟು ಮಾಡಿದರು. ಅವರು ತಂದ ಹೊಸ ಅಂಶಗಳಲ್ಲಿ ಕಂಚಿನ ಉಪಯೋಗ ಮುಖ್ಯವಾದ್ದು. ಇದರ ಉಪಯೋಗ ಮೊದಲು ದಕ್ಷಿಣ ಜಪಾನಿನಲ್ಲಿ, ಅದರಲ್ಲೂ ಕೀಯೂಷೂ ಪ್ರದೇಶದಲ್ಲಿ ರೂಢಿಗೆ ಬಂದದ್ದರಿಂದ, ಅಲ್ಲಿಯವರು ಜಪಾನಿನ ಇತರೆಡೆಗಳಲ್ಲಿದ್ದ ಜನರಿಗಿಂತ ಹೆಚ್ಚು ಆರ್ಥಿಕ ಹಾಗೂ ಕ್ಷಾತ್ರಬಲ ಸಾಧಿಸಿಕೊಳ್ಳುವುದಕ್ಕೆ ಅವಕಾಶವಾಗಿ ಅಲ್ಲಿಯ ಸಂಸ್ಕೃತಿ ಇತರ ಎಡೆಗಳಿಗೆ ಬೇಗ ಹರಡಲು ಕಾರಣವಾಯಿತು. ಜಪಾನಿನಲ್ಲಿ ಕಂಚಿನ ಯುಗ ಪ್ರಶ.ಪೂ. 2–3ನೆಯ ಶತಮಾನಗಳಲ್ಲಿ ಪ್ರಾರಂಭವಾಗಿ ಪ್ರಶ. 2–3ನೆಯ ಶತಮಾನಗಳವರೆಗೂ ಮುಂದುವರಿಯಿತು.

ಪ್ರಶ. 2ನೆಯ ಶತಮಾನದ ಹೊತ್ತಿಗೆ ಕಬ್ಬಿಣದ ಆಯುಧಗಳನ್ನು ಉಪಯೋಗಿಸುತ್ತಿದ್ದ ಚೀನೀ ಸಂಸ್ಕೃತಿ ಕೊರಿಯದಲ್ಲಿ ಪ್ರಚಲಿತವಾಗಿತ್ತು. 3ನೆಯ ಶತಮಾನದ ಹೊತ್ತಿಗೆ ಅದು ಜಪಾನಿಗೂ ಹರಡಿತು. ಜಪಾನಿನಲ್ಲಿ ಕಬ್ಬಿಣದ ಯುಗ ಆರಂಭವಾದ ಮೇಲೆ ಲಭ್ಯವಾದ ಹೊಸ ತಂತ್ರಜ್ಞಾನದಿಂದ ಸಾಮಾಜಿಕ ವ್ಯವಸ್ಥೆಯಲ್ಲೂ ಹಲವು ಬದಲಾವಣೆಗಳು ಆದುವು. 3ರಿಂದ 8ನೆಯ ಶತಮಾನದ ಅವಧಿಗೆ ಸೇರುವ ಹಲವಾರು ಬೃಹತ್ ಸಮಾಧಿಗಳು ಜಪಾನಿನ ಕರಾವಳಿ ಪ್ರದೇಶಗಳಲ್ಲಿ ಕಂಡುಬಂದಿವೆ. ಇವು ಆ ಕಾಲದ ಯೋಧಗಣಗಳ ಮುಖ್ಯರ ಸಮಾಧಿಗಳಿರಬೇಕೆಂದು ಊಹಿಸಲು ಆಧಾರಗಳಿವೆ. ಅಲ್ಲದೆ ಆ ಕಾಲದಲ್ಲಿ ಸಮಾಜ ಹಲವು ಅಂತಸ್ತುಗಳಾಗಿ ವಿಭಜಿತವಾಗಿತ್ತೆಂದೂ ತರ್ಕಿಸಬಹುದಾಗಿದೆ. ಆ ಕಾಲದ ಸಮಾಧಿಗಳು ಮಣ್ಣುಕಲ್ಲುಗಳಿಂದ ಮಾಡಿದವಾದರೂ ಕೆಲವು ಬಹು ದೊಡ್ಡವು. ನಿಂತೋಕು ರಾಜನದೆಂದು ಊಹಿಸಲಾಗಿರುವ ಒಂದು ಸಮಾಧಿ ಪ್ರಪಂಚದಲ್ಲೇ ಅತಿ ದೊಡ್ಡದು. ಇದನ್ನು ಕಟ್ಟಲು ಸುಮಾರು 5,000 ಜನ ಒಂದು ವರ್ಷ ಶ್ರಮಿಸಿರಬೇಕು. ಈ ಬೃಹತ್ ಸಮಾಧಿಗಳಲ್ಲಿ ಅನೇಕ ರೀತಿಯ ಆಯುಧಗಳು ಮತ್ತು ಆಭರಣಗಳನ್ನು ಮೃತನ ಜೊತೆಗೆ ಹೂಳಲಾಗುತ್ತಿತ್ತು. ಇಂಥ ವಸ್ತುಗಳ ಉಪಯೋಗ ಆ ಜನರ ಅನುಕೂಲ ಸ್ಥಿತಿಯನ್ನು ಸೂಚಿಸುತ್ತದೆ. ದುಡಿಮೆಯ ಬದಲು ಸುಲಭ ಆಕ್ರಮಣಗಳಿಂದ ಸಂಪತ್ತನ್ನು ಸಂಗ್ರಹಿಸುವವರು ಮಾತ್ರವೇ ಅದನ್ನು ಆ ರೀತಿ ವಿನಿಯೋಗ ಮಾಡಬಹುದು. ಈ ಕಾಲದ ಮಡಕೆಗಳು ಮತ್ತು ಆಯುಧಗಳು ಕೂಡ ಬಹಳ ಉತ್ತಮ ತಂತ್ರಗಳನ್ನು ಉಪಯೋಗಿಸಿ ತಯಾರಿಸಿದವು. ಮುಂದೆ ರಾಜಚಿಹ್ನೆಗಳಾಗಿ ಉಪಯೋಗಕ್ಕೆ ಬಂದ ಮಗತಮ ಎಂಬ ಬಾಗಿದ ಆಭರಣ, ಕತ್ತಿ ಹಾಗೂ ಕನ್ನಡಿಗಳು ಈ ಸಮಾಧಿಗಳಲ್ಲಿ ದೊರಕಿವೆ. ಅಲ್ಲದೆ ಒಳಭಾಗ ಟೊಳ್ಳಾಗಿರುವ ಹನೀವ ಎಂಬ ಮಣ್ಣಿನ ಬೊಂಬೆಗಳು ಈ ಸಮಾಧಿಗಳ ಜೊತೆಗೆ ಅಸಂಖ್ಯಾತವಾಗಿ ಸಿಗುತ್ತವೆ. ಈ ಹನೀವಗಳು ಯೋಧ, ಸ್ತ್ರೀ ಮತ್ತು ಕುದುರೆಗಳ, ಹಲವು ಬಾರಿ ಮನೆಗಳ, ಪ್ರತಿಕೃತಿಗಳು.

6ನೆಯ ಶತಮಾನದಲ್ಲಿ ಬೌದ್ಧ ಧರ್ಮ ಜಪಾನಿಗೆ ಬಂದ ಮೇಲೆ ಇಂಥ ಬೃಹತ್ ಸಮಾಧಿಗಳ ರಚನೆಯ ಪದ್ಧತಿ ನಿಂತುಹೋಯಿತು. ಅಲ್ಲದೆ ಅನತಿಕಾಲದಲ್ಲಿ ಬರವಣಿಗೆಯ ಕಲೆಯೂ ಚೀನದಿಂದ ಜಪಾನಿಗೆ ಹರಡಿದ್ದರಿಂದಲೂ ಅದರ ಜೊತೆಗೇ ಇತರ ಸಾಂಸ್ಕೃತಿಕ ಪ್ರಭಾವಗಳೂ ತ್ವರಿತವಾಗಿ ಪಸರಿಸಿದ್ದರಿಂದಲೂ ಜಪಾನಿನಲ್ಲಿ ಹೊಸ ಸಾಂಸ್ಕೃತಿಕ ಸಾಮಾಜಿಕ ವ್ಯವಸ್ಥೆ ರೂಪುಗೊಂಡು ಇತಿಹಾಸ ಕಾಲ ಪ್ರಾರಂಭವಾಯಿತು. (ಎಸ್.ಎನ್.)

**ಇತಿಹಾಸ :** ಜಪಾನಿನ ಇತಿಹಾಸಕಾಲ ಯಾವಾಗ ಆರಂಭವಾಯಿತು ಎಂಬ ಬಗ್ಗೆ ನಿಖರವಾಗಿ ಹೇಳುವುದು ಕಷ್ಟ. ಪ್ರಶ. 8ನೆಯ ಶತಮಾನದಿಂದೀಚಿನ ದೇಶೀಯ ಬರವಣಿಗೆಗಳ ಆಧಾರದ ಮೇಲೆ ಕೆಲವು ವಿಷಯಗಳು ತಿಳಿದುಬರುತ್ತವೆ. ಇಂಥ ಪ್ರಾಚೀನ ಗ್ರಂಥಗಳಲ್ಲಿ ಎರಡು ಬಹು ಮುಖ್ಯವಾದವು. ಒಂದು ಪ್ರಶ. 712ರಲ್ಲಿ ರಚಿತವಾದ ಕೋಜಿಕಿ ಅಥವಾ ಪ್ರಾಚೀನ ವಿಚಾರಗಳ ದಫ್ತರ. 720ರಲ್ಲಿ ಬರೆಯಲಾದ ನಿಹೋನ್‌ಗಿ ಎಂಬುದು ಇನ್ನೊಂದು. ಈ ಗ್ರಂಥಗಳಲ್ಲಿ ಜಪಾನಿನಲ್ಲಿ ರಾಜಕೀಯ ಯುಗ ಹೇಗೆ ಪ್ರಾರಂಭವಾಯಿತೆಂಬುದನ್ನು ಕುರಿತ ಐತಿಹ್ಯಗಳು ಇವೆ. ಈ ಗ್ರಂಥಗಳ ಪ್ರಕಾರ ಪ್ರಶ.ಪೂ. 6ನೆಯ ಶತಮಾನಕ್ಕಿಂತ ಮೊದಲು ಅಮತ್ಸುರತೇರ ಕಾಮಿ ಎಂಬ ಸೂರ್ಯದೇವತೆ ಸ್ವರ್ಗಲೋಕದಿಂದ ಬಂದು ಜಪಾನ್ ದೇಶದಲ್ಲಿ ಮೊಟ್ಟಮೊದಲು ರಾಜ್ಯವೊಂದನ್ನು ಸ್ಥಾಪಿಸಿದಳೆಂದು ತಿಳಿದುಬರುತ್ತದೆ. ಆಕೆಯ ಮೊಮ್ಮಗನಾದ ಜಿಮ್ಮು ಪ್ರಶ.ಪೂ. 660ರಲ್ಲಿ ರಾಜ್ಯಸೂತ್ರಗಳನ್ನು ಕೈಗೊಂಡು ಜಪಾನ್ ದೇಶದ ಮೊದಲನೆಯ ಚಕ್ರವರ್ತಿಯಾಗಿ ರಾಜ್ಯವಾಳಿದನೆಂದು ಈ ಗ್ರಂಥಗಳು ತಿಳಿಸುತ್ತವೆ. ಜಿಮ್ಮು ತನ್ನ ಅಜ್ಜಿಯಿಂದ ಒಂದು ಆಭರಣ, ಕತ್ತಿ ಮತ್ತು ಕನ್ನಡಿಯನ್ನು ತಂದ. ಈ ವಂಶಕ್ಕೆ ಸೇರಿದ ಚಕ್ರವರ್ತಿಗಳೇ ಅವ್ಯಾಹತವಾಗಿ ಜಪಾನನ್ನು ಆಳಿದರು. ಈ ಕಥೆಯ ಹಿಂದೆ ಐತಿಹಾಸಿಕ ಸತ್ಯವಿರಬಹುದೆಂದು ಊಹಿಸಿ ಆಧುನಿಕ ವಿದ್ವಾಂಸರು ಅದರ ಸಂಶೋಧನೆಗೆ ಶ್ರಮಿಸುತ್ತಿದ್ದಾರೆ. ಪ್ರಶ. 8ನೆಯ ಶತಮಾನಕ್ಕೆ ಮುಂಚೆ ಈ ಐತಿಹ್ಯ ಈಗಿನ ರೂಪದಲ್ಲಿ ಬರೆಯಲ್ಪಟ್ಟಿರಲಿಲ್ಲ. ಚೀನೀಯರ ಸಂಪರ್ಕ ಪಡೆದ ಜಪಾನೀಯರು ತಮ್ಮ ರಾಜವಂಶವೂ ಚೀನದ ರಾಜವಂಶಕ್ಕೆ ಸಮಾನವಾದದ್ದೆಂದು ಹೇಳಿಕೊಳ್ಳಲು ಈ ಮಾರ್ಗ ಹಿಡಿದಂತೆ ತೋರುತ್ತದೆ. ಈ ಐತಿಹ್ಯ ಈ ಶತಮಾನದ ಜಪಾನೀಯರ ಮೇಲೆ ಹೆಚ್ಚಿನ ಪ್ರಭಾವ ಬೀರಿದೆ. ಅವರು ತಮ್ಮ ದೇಶದ ರಚನೆಯಲ್ಲಿ ದೈವಾಂಶದ ಪ್ರಭಾವವನ್ನು ದೃಢವಾಗಿ ನಂಬಿದ್ದಾರೆ. ಚಕ್ರವರ್ತಿ ಸೂರ್ಯದೇವತೆಯಿಂದ ನೇಮಕನಾದವನೂ, ಆಕೆಯ ವಂಶಸ್ಥನೂ ಆದ್ದರಿಂದ ಆತ ದೈವಾಂಶ ಸಂಭೂತನೆಂದು ಸಮರ್ಥಿಸುತ್ತಾರೆ. ಮೊದಲನೆಯ ಚಕ್ರವರ್ತಿ ಜಿಮ್ಮುವಿಗೆ ತನ್ನ ಅಜ್ಜಿಯಿಂದ ದೊರಕಿತೆನ್ನಲಾದ ಆಭರಣವೂ ಖಡ್ಗವೂ ಕನ್ನಡಿಯೂ ಜಪಾನೀಯರ ರಾಜಚಿಹ್ನೆಗಳು.



**ಕಿಯೊಮಿಜುಡೆರ ಕಟ್ಟಡ, ಕೀಯೋಟೋ, 1633**

ಪ್ರಶ.ಪೂ. 660ರಿಂದ ಪ್ರಶ. 531ರ ವರೆಗಿನ ಕಾಲವನ್ನು ಸಾಂಪ್ರದಾಯಿಕ ಕಾಲವೆಂದು ಕರೆಯಬಹುದು. ಈ ಕಾಲದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಜಪಾನೀಯರ ಪ್ರಾಚೀನ ಗ್ರಂಥಗಳಾದ ಕೋಜಿಕಿ ಮತ್ತು ನಿಹೋನ್‌ಗಿ ಸಹಾಯಮಾಡುತ್ತವೆ. ತಾವು ಯಮಟೋ ಕುಲದವರೆಂದು ಜಪಾನೀಯರ ಹೆಮ್ಮೆ. ಯಮಟೋ ಜನಾಂಗ ದೇಶದಲ್ಲಿ ಶಾಂತವಾಗಿ ನೆಲಸಿದ ಮೇಲೆ ರಾಜಕೀಯ ವ್ಯವಸ್ಥೆ ಪ್ರಾರಂಭವಾಯಿತು. ಅರಸು ಮನೆತನಗಳು ಆದಿವಾಸಿ ಮನೆತನಗಳೆಂದೂ, ಮಿಕ್ಕೆಲ್ಲ ಜನರ ಮನೆತನಗಳು ಅವುಗಳ ಕವಲುಗಳೆಂದೂ ಆಗಿನ ಜನರ ನಂಬಿಕೆಯಾಗಿತ್ತು. ಅದರಂತೆ ರಾಜನೇ ಸರ್ವಕ್ಕೂ ಒಡೆಯನೆಂದು ತಿಳಿದು, ಜನ ಅವನ ವಶಕ್ಕೆ ರಾಜ್ಯವನ್ನು ಒಪ್ಪಿಸಿ ತಾವು ಆತನ ಅಪ್ಪಣೆಯಂತೆ ನಡೆದುಕೊಳ್ಳುತ್ತಿದ್ದರು. ಇಚುಮೋ ಮತ್ತು ಯಮಟೋಗಳು ಜಪಾನೀಯರ ಸಾಂಸ್ಕೃತಿಕ ಕೇಂದ್ರಗಳಾಗಿದ್ದುವು. ಬೌದ್ಧ ಧರ್ಮ ಜಪಾನಿನ ರಾಷ್ಟ್ರಧರ್ಮವೆಂದು ಅಧಿಕೃತವಾಗಿ ಘೋಷಿತವಾಯಿತು. 604ರಲ್ಲಿ ಜಪಾನಿನ ಇತಿಹಾಸದಲ್ಲೇ ಮೊದಲ ಬಾರಿಗೆ ಸಂವಿಧಾನದ ರಚನೆಯಾಯಿತು. 646ರಲ್ಲಿ ಚಕ್ರವರ್ತಿ ಕೊತುಕು ಚೀನದ ಟ್ಯಾಂಗ್ ಆಡಳಿತದಂತೆ ಹೊಸ ರೀತಿಯ ಆಡಳಿತವನ್ನು ವ್ಯವಸ್ಥೆಗೊಳಿಸಿದ.

8ನೆಯ ಶತಮಾದಿಂದೀಚಿನ ಜಪಾನೀಯರ ಇತಿಹಾಸವನ್ನು ಈ ರೀತಿ ಸ್ಥೂಲವಾಗಿ ವಿಭಾಗಿಸಬಹುದು : 1. ನಾರಾ ಕಾಲ (710–784), 2. ಹೀಯಾನ್ ಕಾಲ (784–1185), 3. ಕಾಮಾಕುರಾ ಕಾಲ (1185–1336), 4. ಆಷಿಕಾಗ ಕಾಲ (1336–1603), 5. ಟೋಕುಗಾವಾ ಕಾಲ (1603–1868), 6. ಆಧುನಿಕ ಕಾಲ (1868ರಿಂದ ಈಚೆಗೆ).

ನಾರಾ ಕಾಲ (710–784) : ನಾರಾ ಎಂಬುದನ್ನು ಖಾಯಂ ರಾಜಧಾನಿಯಾಗಿ ಮಾಡಿಕೊಂಡು ಆಳಿದ ಜಪಾನೀ ಚಕ್ರವರ್ತಿಗಳ ಕಾಲ ಇದು. 8ನೆಯ ಶತಮಾನಕ್ಕೆ ಹಿಂದೆ ಜಪಾನಿನಲ್ಲಿ ಒಂದು ಖಾಯಂ ರಾಜಧಾನಿ ಇರಲಿಲ್ಲ. ರಾಜನ ಆಸ್ಥಾನ ಊರಿಂದೂರಿಗೆ ಚಲಿಸುತ್ತಿತ್ತು. ಸರ್ಕಾರ ಸಂಕೀರ್ಣವಾದಾಗ ಒಂದು ಸ್ಥಿರ ರಾಜಧಾನಿಯ ಅಗತ್ಯವಾಯಿತು. ಅದಕ್ಕಾಗಿ ಆಯ್ಕೆಯಾದದ್ದು ನಾರಾ. ಆದ್ದರಿಂದ ಆಗಿನ ಕಾಲಕ್ಕೆ ನಾರಾ ಕಾಲವೆಂದೇ ಹೆಸರಾಗಿದೆ. ಜಪಾನಿನ ಇತಿಹಾಸದಲ್ಲಿ ಈ ಕಾಲ ಮಹತ್ತ್ವಪೂರ್ಣವಾದದ್ದು. ಜಪಾನೀಯರ ಧರ್ಮ, ಕಲೆ, ಸಾಹಿತ್ಯ, ಜನಜೀವನಗಳು ಚೀನದ ಸಂಸ್ಕೃತಿಯಿಂದ ಪ್ರಭಾವಗೊಂಡು ಬೆಳೆದುವು. ಈ ಕಾಲದಲ್ಲಿದ್ದ ಸೋಕೋಕು ಎಂಬ ಚಕ್ರವರ್ತಿ ಬೌದ್ಧಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ, ಅದು ದೇಶದಲ್ಲೆಲ್ಲ ಹರಡಲು ಕಾರಣವಾಗಿ, ಜಪಾನಿನ ಅಶೋಕ ಚಕ್ರವರ್ತಿ ಎಂಬ ಕೀರ್ತಿ ಪಡೆದ. ಅಶೋಕನಂತೆ ಇವನೂ ಬೌದ್ಧಧರ್ಮದ

ಪ್ರಚಾರದ ಜೊತೆಗೆ ದೇಶದಲ್ಲೆಲ್ಲ ಪ್ರಜೆಗಳ ಸೌಕರ್ಯಕ್ಕಾಗಿ ಛತ್ರಗಳನ್ನೂ ಔಷಧಾಲಯಗಳನ್ನೂ ಕಟ್ಟಿಸಿದ. ಚೀನದಿಂದ ಶಿಲ್ಪಿಗಳನ್ನು ಕರೆಸಿಕೊಂಡು ಅನೇಕ ಬೌದ್ಧ ದೇವಾಲಯಗಳನ್ನು ನಿರ್ಮಿಸಿದ. ರಾಜಧಾನಿ ನಾರಾದಲ್ಲಿ ಇಂದಿಗೂ ಆ ಭವ್ಯ ವೈಭವವನ್ನು ಪ್ರತಿನಿಧಿಸುವ ಐತಿಹಾಸಿಕ ಸ್ಮಾರಕಗಳಿವೆ. ಜಪಾನಿನಲ್ಲಿ ಇಂದಿಗೂ ಪ್ರಸಿದ್ಧವಾಗಿರುವ ತೋದೈಜಿ, ಯಾಕುಷ್ಷೀಜೀ, ಹೊರ್ಯೂಜಿ ಮೊದಲಾದ ಬೌದ್ಧ ದೇವಾಲಯಗಳು ಆ ಕಾಲದಲ್ಲಿ ನಿರ್ಮಿತವಾದುವು. ಬೌದ್ಧಧರ್ಮವು ರಾಷ್ಟ್ರದ ಸೊತ್ತೆಂದು ಘೋಷಿಸಲಾಯಿತು. ಆ ಧರ್ಮ ರಾಷ್ಟ್ರದ ಕಾನೂನಿನ ರಚನೆಯ ಮೇಲೆ ಪ್ರಭಾವ ಬೀರಿತು. ಪ್ರಖ್ಯಾತ ವ್ಯಕ್ತಿ ಸತ್ತಾಗ ಅವನ ಅನುಯಾಯಿಗಳು ಆತ್ಮಾರ್ಪಣೆ ಮಾಡಿಕೊಳ್ಳುವ ಪ್ರಾಚೀನ ಸಂಪ್ರದಾಯವನ್ನು ನಿಷೇಧಿಸಲಾಯಿತು. ಅಂತೆಯೇ ಅಪರಾಧಿಗಳಿಗೆ ಕೆಲವೊಂದು ಸಂದರ್ಭಗಳಲ್ಲಿ ವಿಶೇಷ ಕ್ಷಮೆ ನೀಡುವುದನ್ನು ಜಾರಿಗೆ ತರಲಾಯಿತು. ಇದಲ್ಲದೆ ವಿಶೇಷ ದಿವಸಗಳಲ್ಲಿ ಬೌದ್ಧಧರ್ಮದ ಮಠಾಧಿಪತಿಗಳು ರಾಜಕೀಯದಲ್ಲೂ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದರು.

ಆ ಕಾಲದಲ್ಲಿ ಸಾಹಿತ್ಯದ ನಿರ್ಮಾಣ ಆಯಿತು. ಪ್ರಾಚೀನ ಗ್ರಂಥಗಳೆಂದು ಪರಿಗಣಿಸಲ್ಪಟ್ಟಿರುವ ಹಾಗೂ ಐತಿಹಾಸಿಕ ಸಂಗತಿಗಳನ್ನು ಒಳಗೊಂಡಿರುವ ಕೋಜಿಕಿ ಮತ್ತು ನಿಹೋನ್‍ಗಿಗಳು ರಚಿಸಲ್ಪಟ್ಟುವು. ಮಾನ್ಯೋಷೂ ಎಂಬುದು ಈ ಕಾಲದ ಪ್ರಮುಖ ಸಾಹಿತ್ಯ ಗ್ರಂಥ. ಜಪಾನೀಯರು ಕಾವ್ಯದಲ್ಲಿ ಪ್ರಣಯ ಮತ್ತು ಪ್ರಕೃತಿ ವರ್ಣನೆಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಿದಂತೆ ಕಾಣುತ್ತದೆ.

**16ನೆಯ ಶತಮಾನದ ಹಿಮೆಜಿ ಅರಮನೆ**

ಈ ಕಾಲದ ರಾಜಕೀಯ ಜೀವನದಲ್ಲಿ ಚಕ್ರವರ್ತಿಗಳಿಗಿಂತ ಪಾಳೆಯಗಾರರ ಪ್ರಭಾವವೇ ಹೆಚ್ಚಾಗಿತ್ತು. ನಾಲ್ಕು ಜನ ಚಕ್ರವರ್ತಿನಿಯರು ಆಳ್ವಿಕೆ ನಡೆಸಿದ್ದು ಈ ಕಾಲದ ಮತ್ತೊಂದು ವಿಶೇಷ. ಸೋಕೋಕು ವಂಶೀಯರ ಆಳ್ವಿಕೆಯ ಅನಂತರ ಕಮ್ಮು ಎಂಬವನು ಪಟ್ಟಕ್ಕೆ ಬಂದು, 784ರಲ್ಲಿ ಹೊಸ ಯುಗವೊಂದನ್ನು ಪ್ರಾರಂಭಿಸಿದ.

ಹೀಯಾನ್ ಕಾಲ (784–1185) : ಈ ಅವಧಿಯಲ್ಲಿ ಜಪಾನಿನ ರಾಜಧಾನಿಯನ್ನು ನಾರಾ ಪಟ್ಟಣದಿಂದ ಹೊಸದಾಗಿ ನಿರ್ಮಿತವಾದ ಕೀಯೋಟೋಗೆ ವರ್ಗಾಯಿಸಲಾಯಿತು. ನಾರಾ ಪಟ್ಟಣದ ಬೌದ್ಧಧರ್ಮೀಯ ಮುಖಂಡರ ವಿಶೇಷ ರಾಜಕೀಯ ಪ್ರಭಾವಗಳಿಂದ ಬಿಡುಗಡೆ ಪಡೆಯುವುದೂ ಸಂಪರ್ಕದ ದೃಷ್ಟಿಯಿಂದ ಕ್ಯೋಟೋ ಉತ್ತಮವಾಗಿದ್ದುದೂ ಈ ಬದಲಾವಣೆಗೆ ಕಾರಣಗಳು. ಚಕ್ರವರ್ತಿ ಕಮ್ಮು (781–806) ಈ ಪಟ್ಟಣದ ನಿರ್ಮಾಪಕ. ಚೀನೀಯರ ಪ್ರಭಾವ ಇಲ್ಲೂ ಎದ್ದುಕಾಣುತ್ತಿತ್ತು. 1867ರ ವರೆಗೆ ಈ ಪಟ್ಟಣ ಜಪಾನೀ ಚಕ್ರವರ್ತಿಗಳ ಕೇಂದ್ರವಾಗಿ ಮುಂದುವರಿಯಿತು. ಜಪಾನ್ ದೇಶದ ಪ್ರಾಚೀನ ಕಲಾಕೌಶಲಗಳಿಗೆ ತವರುಮನೆಯಾಗಿ ಕ್ಯೋಟೋ ನಗರ ಇಂದಿಗೂ ಮೆರೆಯುತ್ತಿದೆ.

ಹೀಯಾನ್ ಕಾಲದಲ್ಲಿ ಕಾನಾ ವರ್ಣಮಾಲೆ ಪ್ರಚಾರಕ್ಕೆ ಬಂತು. ಇದರಿಂದ ಸಾಹಿತ್ಯದ ಬೆಳವಣಿಗೆಯಾಯಿತು. ಪುರುಷರು ಹೆಚ್ಚಾಗಿ ಯುದ್ಧಕಾರ್ಯಗಳಲ್ಲಿ ನಿರತರಾದ್ದರಿಂದಲೋ ಏನೋ, ಆ ಕಾಲದ ಸಾಹಿತ್ಯನಿರ್ಮಾಣ ಆಸ್ಥಾನದ ಪ್ರತಿಭಾವಂತ ಸ್ತ್ರೀಯರಿಗೆ ಸೀಮಿತವಾಯಿತು. ಆಗಿನ ಜಪಾನೀ ಸ್ತ್ರೀಯರು ರಚಿಸಿದ ಗದ್ಯಗ್ರಂಥಗಳು ಜಪಾನೀ ಭಾಷೆಯ ಪ್ರಾಚೀನ ಗದ್ಯಶೈಲಿಯ ಮಾದರಿಗಳಾಗಿವೆ. ಮುರಾಸಾಕಿ ಷಿಕಿಬು ಎಂಬವನು ರಚಿಸಿದ ಗೆಂಜಿ ಮನೊಗತಾರಿ ಅಥವಾ ಗೆಂಜಿಯ ಕತೆಗಳು ಎಂಬ ಗ್ರಂಥ ವಿಶ್ವಸಾಹಿತ್ಯದ ಅಗ್ರಕೃತಿಗಳ ಪಂಕ್ತಿಗೆ ಸೇರುತ್ತದೆ. ಮುರಾಸಾಕಿ ದಿನಚರಿಯೊಂದನ್ನೂ ಬರೆದ. ಸೆಯಿ ಷೊನಗನ್ ಎಂಬವಳು ಮಕೂರ–ನೋ–ಸೋಷಿ ಎಂಬ ದಿನಚರಿ ಬರೆದಿದ್ದಾಳೆ. ಕೊಂಕಿನ್‍ಷೂ ಎಂಬ ಪದ್ಯಸಂಕಲನವೂ ಈ ಕಾಲಕ್ಕೆ ಸೇರಿದ್ದು. ಈ ಗ್ರಂಥದಲ್ಲಿ ಪ್ರಣಯ ಮತ್ತು ಪ್ರಕೃತಿ ವರ್ಣನೆಗಳು ಹೆಚ್ಚಾಗಿ ಬಂದಿವೆ.

ರಾಷ್ಟ್ರದ ಆಡಳಿತದಲ್ಲಿ ಚಕ್ರವರ್ತಿಗಿಂತ ಪಾಳೆಯಗಾರರ ಮನೆತನಗಳು ಹೆಚ್ಚು ಪ್ರಭಾವಶಾಲಿಗಳಾಗಿದ್ದುವು. ಪ್ರಾಚೀನ ಕಾಲದಲ್ಲಿ ಸಾಮೂಹಿಕ ಅನುಭವದಲ್ಲಿದ್ದ ಜಮೀನುಗಳು ಈ ಕಾಲದಲ್ಲಿ ಖಾಸಗಿ ಜಮೀನುಗಳಾಗಿ ಪರಿವರ್ತನೆಗೊಂಡುವು. ಈ ಬದಲಾವಣೆಯನ್ನು ಚಕ್ರವರ್ತಿಗಳು ವಿರೋಧಿಸಿದರೂ ಪ್ರಯೋಜನವಾಗಲಿಲ್ಲ. ಕೆಲವು ವರ್ಷಗಳೊಳಗಾಗಿ ಹಲವು ಪ್ರಬಲ ಪಾಳೆಯಗಾರ ಮನೆತನಗಳು ತಲೆಯೆತ್ತಿದ್ದುವು. ಹೆಚ್ಚು ಬಲಿಷ್ಠವಾದ ಫುಜಿವಾರ ಮನೆತನ ರಾಜ್ಯಸೂತ್ರಗಳನ್ನು ವಹಿಸಿಕೊಂಡು ಚಕ್ರವರ್ತಿಯನ್ನು ಉತ್ಸವಮೂರ್ತಿಯನ್ನಾಗಿ ಮಾಡಿತು. ಫುಜಿವಾರ ಮನೆತನ ಜಪಾನಿಗೆ ಶ್ರೇಷ್ಠ ಆಡಳಿತಗಾರರನ್ನೂ ಪಂಡಿತರನ್ನೂ ಕೊಟ್ಟಿತು. ಈ ಮನೆತನದವರು ಅಶಕ್ತರಾದ ತರುವಾಯ ಟಾಯಿರಾ (1160–85) ಮತ್ತು ಮಿನಾಮೊಟೊ (1185–1219) ಮನೆತನಗಳು ಅಧಿಕಾರಕ್ಕಾಗಿ ಹೋರಾಟ ನಡೆಸಿದ್ದುವು. 1185ರಲ್ಲಿ ಮಿನಾಮೊಟೊ ಮನೆತನದವರು ಟಾಯಿರಾ ಮನೆತನದವರನ್ನು ಹತ್ತಿಕ್ಕಿ ಪ್ರಾಬಲ್ಯಕ್ಕೆ ಬಂದು, ಕಾಮಾಕುರಾ ಪಟ್ಟಣದಲ್ಲಿ ಆಳ್ವಿಕೆ ಪ್ರಾರಂಭಿಸಿದರು.

ಕಾಮಾಕುರಾ ಕಾಲ (1185–1336) : ಇದನ್ನು ಸಾಮುರೈ ಕಾಲವೆಂದು ಕರೆಯುವುದುಂಟು. ಸಾಮುರೈ ಎಂದರೆ ಕ್ಷತ್ರಿಯರು, ಯುದ್ಧ ಶೌರ್ಯ ಸಾಹಸ ಪ್ರದರ್ಶನಗಳಲ್ಲೇ ನಿರತರಾದ–ಅದಕ್ಕಾಗಿ ಶಿಕ್ಷಣ ಪಡೆದ, ಪ್ರಾಣವನ್ನು ಮೀಸಲಾಗಿಟ್ಟ–ಜನರು. ಮಿನಾಮೊಟೊ ಮನೆತನದ ಯೊರಿಟೊಮೊ ಎಂಬ ಪಾಳೆಯಗಾರ ಇತರ ಸಣ್ಣಪುಟ್ಟ ಪಾಳೆಯಗಾರರನ್ನು ಜಯಿಸಿ, ಚಕ್ರವರ್ತಿಗಳ ರಾಜಧಾನಿಯಾದ ಕೀಯೋಟೋ ಪಟ್ಟಣಕ್ಕೆ 483 ಕಿಮೀ. ದೂರದಲ್ಲಿ ಕಾಮಾಕುರಾ ಪಟ್ಟಣವನ್ನು ಕಟ್ಟಿಕೊಂಡು ರಾಜ್ಯವಾಳತೊಡಗಿದ (1192–98). 1192ರಲ್ಲಿ ಜಪಾನಿನ ಚಕ್ರವರ್ತಿ ಈತನಿಗೆ ಸೆಯಿ ತೈಷೋಗುನ್ ಅಥವಾ ಮುಖ್ಯ ಸೇನಾಪತಿ ಎಂಬ ಬಿರುದನ್ನಿತ್ತ. ಈತನ ಕೈಯಲ್ಲೇ ರಾಜ್ಯದ ಆಡಳಿತಸೂತ್ರಗಳೆಲ್ಲ ಇದ್ದುವು. ಚಕ್ರವರ್ತಿ ಹೆಸರಿಗೆ ಮಾತ್ರ ಆಡಳಿತದ ಮುಖ್ಯಸ್ಥ. ಅವನನ್ನು ದೇವಾಂಶಸಂಭೂತನೆಂದು ಪೂಜಿಸುತ್ತಿದ್ದುದುಂಟು. ಮಿನಾಮೊಟೊ ಮನೆತನದ ಈ ಪಾಳೆಯಗಾರ ಹೆಚ್ಚಿನಮಟ್ಟಿಗೆ ಸರಳ ಜೀವನ ನಡೆಸುತ್ತ ರಾಜ್ಯಕ್ಕೆ ಹೆಚ್ಚು ಸಹಾಯ ಮಾಡುತ್ತಿದ್ದ. ಇವನ ವಂಶೀಯರಿಗೂ ಇವನ ಗುಣಗಳೇ ಇದ್ದುವು.

ರಾಜ್ಯದ ಭದ್ರತೆಗಾಗಿ ಯೊರಿಟೊಮೊ ಸೈನಿಕರನ್ನೆಲ್ಲ ಒಟ್ಟುಗೂಡಿಸಿ, ಅವರಿಗೆ ಕ್ಷಾತ್ರಧರ್ಮವನ್ನು ಬೋಧಿಸಿದ. ಪ್ರತಿಯೊಬ್ಬ ಯೋಧನೂ ಪ್ರಾಮಾಣಿಕನಾಗಿರಬೇಕು; ಸರಳಜೀವನ ನಡೆಸಬೇಕು; ಅಬಲರಿಗೆ, ಅಶಕ್ತರಿಗೆ ನೆರವಾಗಬೇಕು. ಸಮಯ ಬಂದಾಗ ದೇಶಕ್ಕಾಗಿಯೂ, ಚಕ್ರವರ್ತಿಗಳಿಗಾಗಿಯೂ ಪ್ರಾಣವನ್ನು ಧಾರೆಯೆರೆಯಲು ಸಿದ್ಧನಿರಬೇಕು ಎಂದು ಉಪದೇಶಿಸಿದ. ಮೇಲ್ಕಂಡ ಸೂತ್ರಗಳನ್ನೊಳಗೊಂಡ ಬೂಷೀಡೋ ಸಂಪ್ರದಾಯ ಇತ್ತೀಚಿನವರೆಗೂ ಪ್ರಖ್ಯಾತವಾಗಿತ್ತು.

ಯೊರಿಟೊಮೊ ಮರಣಹೊಂದಿದ ಮೇಲೆ, ಷೋಗುನ್‍ಗೆ (ಸೇನಾಪತಿ, ಸರ್ವಾಧಿಕಾರಿ) ಅಧೀನರಾಗಿದ್ದ, ಸೇವಕರಾಗಿದ್ದ ಹೋಜೋಗಳ ಮನೆತನ ಪ್ರಾಬಲ್ಯಕ್ಕೆ ಬಂತು. ಚೀನೀ ಚಕ್ರವರ್ತಿಯಾಗಿದ್ದ ಕೂಬ್ಲೈಖಾನ್ ಜಪಾನು ತನಗೆ ಕಪ್ಪಕಾಣಿಕೆ ಕೊಟ್ಟು ಆಶ್ರಿತ ಸಂಸ್ಥಾನವಾಗಿರಬೇಕೆಂದೂ, ಇಲ್ಲದಿದ್ದರೆ ಅದರ ಮೇಲೆ ದಂಡೆತ್ತಿ ಬರುವುದಾಗಿಯೂ ಜಪಾನಿನ ಪಾಳೆಯಗಾರನಿಗೆ ಪತ್ರ ಬರೆದ. ಜಪಾನೀಯರು ಇದಕ್ಕೆ ಒಪ್ಪಲಿಲ್ಲ. 1280–81ರಲ್ಲಿ ಅವನು ಜಪಾನಿನ ಮೇಲೆ ದಾಳಿಮಾಡಲು ನೌಕಾಪಡೆಯೊಂದನ್ನು ಕಳುಹಿಸಿಕೊಟ್ಟ. ಹೋಜೋಗಳು ವೀರಾವೇಶದಿಂದ ಹೋರಾಡಿ, ನೌಕಾಪಡೆಯನ್ನು ನಾಶಮಾಡಿ, ದೇಶವನ್ನು ದಾಳಿಯಿಂದ ರಕ್ಷಿಸಿದರು. ಈ ಘಟನೆ ನಡೆದ ಸ್ವಲ್ಪ ಕಾಲದಲ್ಲೇ ಹೋಜೋ ಮನೆತನ ಅವನತಿ ಹೊಂದಿತು. ಚಕ್ರವರ್ತಿ ಗೊ–ದೈಗೊ (ಇಮ್ಮಡಿ ದೈಗೊ) ಹೋಜೋಗಳ ವಿರುದ್ಧ ಸಂಚು ನಡೆಸಿ ವಿಫಲನಾಗಿ ಸಿಂಹಾಸನ ಕಳೆದುಕೊಂಡು ಸೆರೆ ಸಿಕ್ಕಿ ದೇಶಭ್ರಷ್ಟನಾದ (1333); ಮತ್ತೆ ಬಂದು ಆಡಳಿತ ನಡಸಿದ; ಮತ್ತೆ ಓಡಿಸಲ್ಪಟ್ಟ. ಆಷಿಕಾಗ ಸರ್ವಾಧಿಕಾರಿ ಮನೆತನ ಪ್ರಬಲವಾಯಿತು. ರಾಜಮನೆತನದ ಮತ್ತೊಂದು ಕುಡಿಯ ವ್ಯಕ್ತಿಯೊಬ್ಬನನ್ನು ಸಿಂಹಾಸನಕ್ಕೆ ತರಲಾಯಿತು.

ಕಾಮಾಕುರಾ ಕಾಲದಲ್ಲಿ ಬೌದ್ಧ ಭಿಕ್ಷುಗಳು ಹಳ್ಳಿಹಳ್ಳಿಗೂ ಹೋಗಿ ಧರ್ಮಪ್ರಚಾರ ಮಾಡಿದರು. ಝೆನ್ ಬೌದ್ಧಪಂಥವೇ ಮೊದಲಾದವು ಈ ಕಾಲದಲ್ಲಿ ಉಗಮವಾದುವು. ಸ್ತ್ರೀಯರ ಶಿಕ್ಷಣದಲ್ಲಿ ಬಟ್ಟೆ ಹೊಲಿಯುವ, ಮನೆಯನ್ನು ಶುಚಿಯಾಗಿ ಇಟ್ಟುಕೊಳ್ಳುವ ವಿಷಯಗಳು ಸೇರಿದ್ದುವು. ಚೀನದ ಸೂಂಗ್ ಮತ್ತು ಟಾಂಗ್ ಅರಸರ ಕಾಲದ ಕಲೆ ಕಾಮಾಕುರಾ ಕಾಲದ ಕಲೆಯ ಮೇಲೆ ವಿಶಿಷ್ಟ ಪ್ರಭಾವ ಉಂಟುಮಾಡಿತು. ಸು. 1252ರಲ್ಲಿ ಕಾಮಾಕುರಾ ಪಟ್ಟಣದಲ್ಲಿ 10.6 ಮೀ. ಎತ್ತರದ ಹಿತ್ತಾಳೆಯ ಬುದ್ಧವಿಗ್ರಹವನ್ನು ಎರಕ ಹೊಯ್ಯಲಾಯಿತು. ಈ ಮೂರ್ತಿ ಬಹು ಸುಂದರವಾಗಿದ್ದು, ಜಪಾನೀಯರ ಕಲೆಗೆ ಒಂದು ಉತ್ತಮ ಸಾಕ್ಷಿಯಾಗಿ ಇಂದಿಗೂ ಕಾಮಾಕುರಾದಲ್ಲಿ ನಿಂತಿದೆ.

ಕಾಮಾಕುರಾ ಕಾಲದಲ್ಲಿ ಚಿಕ್ಕಪುಟ್ಟ ಕೈಗಾರಿಕೆಗಳಲ್ಲಿ ದೇಶ ಪ್ರಸಿದ್ಧಿ ಪಡೆಯಿತು. ಬಟ್ಟೆ ನೇಯುವುದು, ಕುಂಭಕಲೆ, ಮರದ ಮತ್ತು ಕಾಗದ ತಯಾರಿಕೆ ಸುಧಾರಿಸಲ್ಪಟ್ಟುವು. ದೇಶದಲ್ಲಿ ರಸ್ತೆಗಳು ನಿರ್ಮಾಣವಾದುವು. ವ್ಯಾಪಾರ ವೃದ್ಧಿಯಾಯಿತು.

ಕಾಮಾಕುರಾ ಕಾಲ ಪ್ರಧಾನವಾಗಿ ವೀರಯುಗ. ಇದನ್ನೇ ಈ ಕಾಲದ ಸಾಹಿತ್ಯದಲ್ಲೂ ಹೆಚ್ಚಾಗಿ ನೋಡಬಹುದು. ಹೀಯಾನ್ ಕಾಲದ ಸಾಹಿತ್ಯದಲ್ಲಿ ಶೃಂಗಾರ, ಪ್ರಕೃತಿ ವರ್ಣನೆಗಳಿಗೆ ಪ್ರಾಧಾನ್ಯವಿದ್ದರೆ, ಈ ಕಾಲದ ಸಾಹಿತ್ಯದಲ್ಲಿ ರಣಕಾಳಗಗಳ ವರ್ಣನೆಗೆ ಹೆಚ್ಚಿನ ಸ್ಥಾನ ಕೊಟ್ಟಂತೆ ಕಾಣುತ್ತದೆ. ಹೀಗೆ ಮನೋಗತಾರಿ (ಟಾಯಿರಾ ವಂಶದ ಕಥೆ) ಎಂಬುದು ಈ ಕಾಲದ ಪ್ರಖ್ಯಾತ ಗ್ರಂಥ.

ಆಷಿಕಾಗ ಕಾಲ (1336–1603) : 14ನೆಯ ಶತಮಾನದ ಮೊದಲ ಭಾಗದಲ್ಲಿ ಟಾಕಾವುಜಿ ಆಷಿಕಾಗನೆಂಬ ಪಾಳೆಯಗಾರ ಕಾಮಾಕುರಾದ ಪಾಳೆಯಗಾರನನ್ನು ಸೋಲಿಸಿ, ತನ್ನ ಆಡಳಿತವನ್ನು ಹಳೆಯ ರಾಜಧಾನಿಯಾದ ಕ್ಯೋಟೋದಲ್ಲಿ ಸ್ಥಾಪಿಸಿದ. ಇವನ ಮನೆತನದ ಆಡಳಿತ ಆ ನಗರದ ಮುರೊಮಾಚಿ ಎಂಬ ಬೀದಿಯಲ್ಲಿದ್ದ ಕಚೇರಿಯಲ್ಲಿ ನಡೆಯುತ್ತಿದ್ದುದರಿಂದ, ಈ ಮನೆತನದ ಆಳ್ವಿಕೆಯ ಕಾಲವನ್ನು ಮುರೊಮಾಚಿ ಕಾಲವೆಂದೂ ಕರೆಯುವುದುಂಟು. ಟಾಕಾವುಜಿ ಆಷಿಕಾಗನ ಕಾಲದಲ್ಲಿ ಚೀನ ಮತ್ತು ಕೊರಿಯಗಳಿಗೆ ಜಪಾನಿನಿಂದ ರಾಯಭಾರಿಗಳನ್ನು ಕಳುಹಿಸಲಾಗಿತ್ತು. ಇದರಿಂದ ಆ ದೇಶಗಳೊಡನೆ ಜಪಾನಿನ ವ್ಯಾಪಾರ ಸಂಬಂಧ ಉತ್ತಮಗೊಂಡಿತು. ಇದರಿಂದ ಆ ದೇಶಗಳೊಡನೆ ಜಪಾನಿನ ವ್ಯಾಪಾರ ಸಂಬಂಧ ಉತ್ತಮಗೊಂಡಿತು. ಈ ಕಾಲದಲ್ಲಿ ಸಾಮುರೈ ವ್ಯವಸ್ಥೆ ವೃದ್ಧಿಗೊಂಡಿತು. ಆಷಿಕಾಗನ ಉತ್ತರಾಧಿಕಾರಿಗಳು ಕಲೆಗಳ ಬೆಳವಣಿಗೆಯಲ್ಲಿ ಆಸಕ್ತರಾಗಿದ್ದಾಗ ಅಧಿಕಾರಕ್ಕಾಗಿ ಜಪಾನಿನ ಪ್ರಬಲ ಪಾಳೆಯಗಾರ ಮನೆತನಗಳಲ್ಲಿ ಕಲಹಗಳು ಜರುಗುತ್ತಿದ್ದುವು. ಒಂದು ಶತಮಾನದಷ್ಟು ಕಾಲ ದೇಶದಲ್ಲಿ ಅನಾಯಕತ್ವ ಉಂಟಾಯಿತು. ದೇಶದ ಏಕತೆಯನ್ನು ಸಾಧಿಸಲು ಟಾಯಿರಾ ಮನೆತನದ ಓಡಾ ನೊಬುನಾಗಾ ಎಂಬವನು ಪ್ರಯತ್ನಿಸಿದ. ಇತರ ಪಾಳೆಯಗಾರರನ್ನು ಅಡಗಿಸಿ, ಬೌದ್ಧರ ಪ್ರಭಾವವನ್ನು ತಗ್ಗಿಸಿದ. ಆದರೆ ಅತೃಪ್ತ ಸೇನಾಧಿಕಾರಿಯೊಬ್ಬನಿಂದ ಕೊಲೆಮಾಡಲ್ಪಟ್ಟ. ಅವನ ಸೇನಾನಿಯಾಗಿದ್ದ ಹಿದಯೋಷಿ ಎಂಬವನು ಟೋಕುಗಾವಾ ಆಯಯಾಸು ಎಂಬ ಮತ್ತೊಬ್ಬ ಸಾಮುರೈ ಸಹಾಯದಿಂದ 1590ರಲ್ಲಿ ದೇಶವನ್ನೆಲ್ಲ ಗೆದ್ದು ತನ್ನ ಹತೋಟಿಗೆ ತಂದುಕೊಂಡ. ಹಿದಯೋಷಿಯ ಮರಣಾನಂತರ ಟೋಕುಗಾವಾ ಆಯಯಾಸು ಅನೇಕ ಪಾಳೆಯಗಾರರನ್ನು ಸೋಲಿಸಿ ಇಡೀ ದೇಶದ ಸರ್ವಾಧಿಕಾರಿ (ಷೋಗುನ್) ಆದ. ಹಳೆಯ ರಾಜಧಾನಿಯಾದ ಕೀಯೋಟೋಗೆ 560 ಕಿಮೀಗಳ ದೂರದಲ್ಲಿ ಯೇದೋ ಎಂಬ ಹೊಸ ಪಟ್ಟಣ ಕಟ್ಟಿ, 1603ರಿಂದ ಅಲ್ಲಿ ರಾಜ್ಯ ಆಳಲಾರಂಭಿಸಿದ. ಅವನ ಆಳ್ವಿಕೆಯಿಂದ ಟೋಕುಗಾವಾ ಕಾಲ ಪ್ರಾರಂಭವಾಯಿತು.

ಆಷಿಕಾಗ ಕಾಲದಲ್ಲಿ ಜಪಾನ್ ಪಾಶ್ಚಾತ್ಯ ದೇಶಗಳೊಡನೆ ಸಂಪರ್ಕ ಪಡೆಯಿತು. ಪೋರ್ಚುಗೀಸರು 1542ರಲ್ಲಿ ವ್ಯಾಪಾರದ ಸಲುವಾಗಿ ಜಪಾನಿಗೆ ಬಂದರು. ಅವರ ಅನಂತರ ಸ್ಪ್ಯಾನಿಷರು ಮತ್ತು ಡಚ್ಚರು ಬಂದರು. ಐರೋಪ್ಯರೊಡನೆ ಕ್ರೈಸ್ತಧರ್ಮ ಜಪಾನಿನೊಳಗೆ ಕಾಲಿಟ್ಟಿತು. 1549ರಲ್ಲಿ ಕ್ರೈಸ್ತ ಪಾದ್ರಿ ಫ್ರಾನ್ಸಿಸ್ ಜೇವಿಯರ್ ಜಪಾನಿಗೆ ಬಂದು, ಆ ಧರ್ಮದ ಪ್ರಚಾರಕಾರ್ಯದಲ್ಲಿ ಉದ್ಯುಕ್ತನಾದ. ಈತ ಜಪಾನಿಗೆ ಬರುವ ಮುನ್ನ ಗೋವದಲ್ಲಿ ಭಾರತೀಯರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಿದ್ದ. ಕೇವಲ ಮೂವತ್ತು ವರ್ಷಗಳ ಪ್ರಚಾರದಿಂದ ದಕ್ಷಿಣ ಜಪಾನಿನಲ್ಲಿ 15 ಲಕ್ಷ ಜನ ಕ್ರೈಸ್ತಧರ್ಮಾವಲಂಬಿಗಳಾದರು. ನೂರಾರು ಚರ್ಚುಗಳು ನಿರ್ಮಾಣವಾದುವು.

ಟೋಕುಗಾವಾ ಕಾಲ (1603–1868) : ಟೋಕುಗಾವಾ ಆಡಳಿತ ಮನೆತನಕ್ಕೆ ಆಯಯಾಸು ಆದಿಪುರುಷ. ಈತನ ರಾಜಧಾನಿ ಯೇದೋ. ಜಪಾನಿನಲ್ಲಿ ಸುಭದ್ರವಾದ ಆಡಳಿತಕ್ಕೆ ತಕ್ಕ ಬುನಾದಿಯನ್ನು ಹಾಕಿದ ಕೀರ್ತಿ ಇವನದು. ದೇಶದ ಸಾಗುವಳಿ ಭೂಮಿ ಇವನ ನಲವತ್ತು ಸ್ನೇಹಿತರ ಕೈಯಲ್ಲಿತ್ತು. ಆಯಯಾಸುವಿನ ಸರ್ವಾಧಿಕಾರದಲ್ಲಿ ವಿಶಿಷ್ಟ ಊಳಿಗಮಾನ್ಯ ಪಾಳೆಯಗಾರ ಆಡಳಿತ ಸ್ಥಾಪಿತವಾಯಿತು. ಇವನ ವಂಶದವರು ಸುಮಾರು 250 ವರ್ಷಗಳ ಕಾಲ ಆಡಳಿತ ನಡೆಸಿದರು. ಟೋಕುಗಾವಾ ವಂಶದವರು ಜಪಾನಿನ ಚಕ್ರವರ್ತಿಗಳನ್ನು ಗಣನೆಗೆ ತಾರದೆ, ತಮ್ಮಲ್ಲೇ ಅಧಿಕಾರವನ್ನೆಲ್ಲ ಕೇಂದ್ರೀಕರಿಸಿಕೊಂಡಿದ್ದರು. ಈ ಕಾಲದಲ್ಲಿ ಚಕ್ರವರ್ತಿಗಳು ಹಳೆಯ ರಾಜಧಾನಿ ಕ್ಯೋಟೋದಲ್ಲಿ ನಿರ್ಬಂಧದ ಜೀವನ ನಡೆಸುತ್ತಿದ್ದರು. ಚಕ್ರವರ್ತಿಗಳು ದೇವಾಂಶಸಂಭೂತರೆಂದು ಪರಿಗಣಿಸಲ್ಪಟ್ಟಿದ್ದರೂ ಅವರಿಗೆ ಯಾವ ವಿಧವಾದ ಅಧಿಕಾರವೂ ಇರಲಿಲ್ಲ. ಟೋಕುಗಾವಾ ಸರ್ವಾಧಿಕಾರಿಗಳ ಆದಾಯ ಚಕ್ರವರ್ತಿಗಳ ಆದಾಯಕ್ಕಿಂತ 80ರಷ್ಟು ಹೆಚ್ಚಾಗಿತ್ತು. ಆಯಯಾಸು ತನ್ನ ವಂಶದವರ ಪ್ರಭುತ್ವದ ಭದ್ರತೆಗಾಗಿ ಹದಿಮೂರು ಸೂತ್ರಗಳನ್ನು ರಚಿಸಿದ. ಅವು ಕ್ಷತ್ರಿಯ ಶಾಸನ ಎಂಬುದಾಗಿ ಪ್ರಸಿದ್ಧವಾದುವು.

ಜನರನ್ನು ವ್ಯವಸ್ಥೆಯಲ್ಲಿಡುವುದಕ್ಕಾಗಿ ಸರ್ವಾಧಿಕಾರಿ ಆಯಯಾಸು ಅವರನ್ನು ಷಿ, ನೋ, ಕೊ, ಷೋ ಎಂಬ ನಾಲ್ಕು ಪಂಗಡಗಳಾಗಿ ವರ್ಗೀಕರಿಸಿದ. ಕ್ಷತ್ರಿಯ, ವ್ಯವಸಾಯಗಾರ, ಕೈಗಾರಿಕೋದ್ಯಮಿ ಮತ್ತು ವ್ಯಾಪಾರಿ ಎಂಬುವೇ ಅವು. ರಾಜ್ಯವನ್ನು ರಕ್ಷಿಸುವ ಜನರಿಗೆ ಅವನ ದೃಷ್ಟಿಯಲ್ಲಿ ಪ್ರಥಮಸ್ಥಾನ. ವ್ಯವಸಾಯದ ಮೂಲಕ ದೇಶಕ್ಕೆ ಸಹಾಯಮಾಡುವ ರೈತರಿಗೆ ಎರಡನೆಯ ಸ್ಥಾನ. ಆಯುಧ ಮುಂತಾದ ಯುದ್ಧಸಲಕರಣೆಗಳನ್ನು ಒದಗಿಸಿಕೊಡುವ ಕೈಗಾರಿಕಾ ಕುಶಲಕರ್ಮಿಗಳಿಗೆ ಮೂರನೆಯ ಸ್ಥಾನ. ದೇಶಕ್ಕೆ ಈ ಬಗೆಯ ಯಾವ ಪ್ರಯೋಜನವೂ ಇಲ್ಲದೆ, ಕೇವಲ ತಮ್ಮ ವ್ಯಾಪಾರದಲ್ಲಿ ನಿರತರಾಗಿರುವ ವ್ಯಾಪಾರಸ್ಥರದು ಸಮಾಜದಲ್ಲಿ ಕಡೆಯ ಸ್ಥಾನ.

ಟೋಕುಗಾವಾ ಸರ್ವಾಧಿಕಾರಿಗಳು ಐರೋಪ್ಯರ ವಿರುದ್ಧ ಕಠಿಣತರ ಕ್ರಮ ಕೈಗೊಂಡರು. ವ್ಯಾಪಾರಮಾಡಲು ಬಂದ ಪಾಶ್ಚಾತ್ಯರು ತಮ್ಮ ದೇಶವನ್ನೇ ವಶಮಾಡಿಕೊಳ್ಳುವರೆಂಬ ಭಯದಿಂದ ಸರ್ವಾಧಿಕಾರಿಗಳು 1624ರಲ್ಲಿ ಸ್ಪ್ಯಾನಿಷರನ್ನು ಮತ್ತು 1638ರಲ್ಲಿ ಪೋರ್ಚುಗೀಸರನ್ನು ಜಪಾನಿನಿಂದ ಓಡಿಸಿದರು. ಕ್ರೈಸ್ತ ಧರ್ಮಾವಲಂಬಿಗಳನ್ನು ಸಾಮೂಹಿಕವಾಗಿ ಕೊಲ್ಲಲಾಯಿತು. ಡಚ್ಚರು ಮಾತ್ರ ಈ ಕಠಿಣತರವಾದ ನಿಷೇಧಾಜ್ಞೆಗಳ ನಡುವೆಯೂ ಸ್ವಲ್ಪ ವ್ಯಾಪಾರ ನಡೆಸುತ್ತಿದ್ದರು. ಜಪಾನೀಯರು ದೇಶ ಬಿಟ್ಟು ಹೋಗದಂತೆ ಆಜ್ಞೆ ಹೊರಡಿಸಲಾಯಿತು. ಒಟ್ಟಿನಲ್ಲಿ 1854ರ ವರೆಗೆ ಜಪಾನ್ ಪರದೇಶಗಳ ಸಂಪರ್ಕದಿಂದ ಹೊರಗಿದ್ದು ತನ್ನದೇ ಆದ ರೀತಿಯಲ್ಲಿ ಮುಂದುವರಿಯುತ್ತಿತ್ತು.

ಟೋಕುಗಾವಾ ಮನೆತನದ ಆಡಳಿತದ ಕಾಲದ ಕೊನೆಯಲ್ಲಿ ರಾಜ್ಯದ ಬಿಗಿ ತಪ್ಪಿತು. ಎಷ್ಟೋ ಪಾಳೆಯಗಾರರು ಹೆಚ್ಚುಹೆಚ್ಚಿನ ಅಧಿಕಾರ ಪಡೆಯಲು ಹವಣಿಸತೊಡಗಿದರು. ಆರ್ಥಿಕ ದುಃಸ್ಥಿತಿಯಿಂದಾಗಿ ಕ್ಷತ್ರಿಯರು ಹಣದಾಸೆಗಾಗಿ ತಮ್ಮ ಮಾನವನ್ನು ಮಾರಿಕೊಳ್ಳಲು ಸಿದ್ಧರಾದರು. ಎರಡು ಕತ್ತಿಗಳನ್ನು ಸೊಂಟದಲ್ಲಿ ಧರಿಸುವುದು ಮೇಲಾದ ಮಾನ ವೆಂದೆನಿಸುತ್ತಿದ್ದುದರಿಂದ ರೈತರೂ ವ್ಯಾಪಾರಸ್ಥರೂ ಕ್ಷತ್ರಿಯರಿಗೆ ಬೇಕಾದಷ್ಟು ಹಣ ಕೊಟ್ಟು ಅವನ್ನು ಕೊಂಡು ಧರಿಸತೊಡಗಿದರು. ಕೆಲವು ಕ್ಷತ್ರಿಯರು ಧನದ ದಾಹದಿಂದ ವ್ಯಾಪಾರಸ್ಥರ ಕನ್ಯೆಯರನ್ನು ಮದುವೆಯಾಗತೊಡಗಿದರು. ಕ್ಷತ್ರಿಯರನ್ನು ಅಳಿಯಂದಿರನ್ನಾಗಿ ಮಾಡಿಕೊಳ್ಳುವುದರಿಂದ ಸಮಾಜದಲ್ಲಿ ತಾವು ಮೇಲಿನ ಮೆಟ್ಟಿಲನ್ನೇರುವೆವೆಂಬ ಭಾವನೆ ವ್ಯಾಪಾರಸ್ಥರಲ್ಲಿ ಬೆಳೆಯಲಾರಂಭಿಸಿತು. ಆದ್ದರಿಂದಲೇ ಬೇಡಿದಷ್ಟು ವರದಕ್ಷಿಣೆ ಕೊಡಲು ಅವರು ಸಿದ್ಧರಾದರು. ಪಾಳೆಯಗಾರರು ಕೂಡ ಸರ್ವಾಧಿಕಾರಿಯ ಕಿರುಕುಳಕ್ಕೆ ಸಿಕ್ಕಿಬಿದ್ದು, ತಕ್ಕಷ್ಟು ಹಣವನ್ನು ಗಳಿಸಿಕೊಳ್ಳದೆ ತಮ್ಮ ದರ್ಪವನ್ನುಳಿಸಿಕೊಳ್ಳುವುದು ಅಸಾಧ್ಯವೆಂದು ವ್ಯಾಪಾರಸ್ಥರಿಂದ ಸಾಲ ಪಡೆಯತೊಡಗಿದರು. ಸಾಲದ ಹಂಗಿನಿಂದಾಗಿ ಅವರು ವ್ಯಾಪಾರಸ್ಥರಿಗೆ ಹೆಚ್ಚಿನ ಮಾನ ಕೊಡಬೇಕಾಯಿತು. ಹೀಗಾಗಿ 1840ರ ವೇಳೆಗೆ ಕೆಲವು ವ್ಯಾಪಾರಸ್ಥರು ಹಣದ ಬಲದಿಂದ ಪಾಳೆಯಗಾರರ ದರ್ಪಕ್ಕೆ ಕುಂದು ತಂದರು ಮತ್ತು ಹಣದ ಆಸೆಗಾಗಿ ಎಷ್ಟೋ ಕ್ಷತ್ರಿಯರು ಸಾಹುಕಾರರ ಊಳಿಗದಲ್ಲಿ ಸೇರಿಕೊಂಡು ಅವರ ರಾಜಕೀಯ ಪ್ರಭಾವ ಹೆಚ್ಚಿಸಿದರು. ಈ ಬಗೆಯ ಬದಲಾವಣೆಗಳು ಸಮಾಜದಲ್ಲಿ ಭರದಿಂದ ಸಾಗಿಬರುತ್ತಿದ್ದರೂ ಅವನ್ನು ತಡೆಯದಷ್ಟು ಮಟ್ಟಿಗೆ ಸರ್ವಾಧಿಕಾರಿ ಬಲಹೀನನಾಗಿದ್ದ. ಈ ರೀತಿ ಸರ್ವಾಧಿಕಾರಿಯ ಹಿರಿಯರು ವಿರಚಿಸಿದ ಸಮಾಜದ ಕಟ್ಟು ಆರ್ಥಿಕ ದುಃಸ್ಥಿತಿಯಿಂದ ಕಳಚಿ ಸಡಿಲವಾಯಿತು.

ವ್ಯವಸಾಯಗಾರರು ಶಕ್ತಿಮೀರಿ ಕಂದಾಯ ಸಲ್ಲಿಸುತ್ತಿದ್ದರು. ಆದರೆ ಸರ್ವಾಧಿಕಾರಿಯ ದುಂದುಗಾರಿಕೆಯ ವೆಚ್ಚವನ್ನು ಇದೂ ಪೂರೈಸದಾಯಿತು. ಮಿತಿಮೀರಿದ ಕಂದಾಯ ತೆರಲಾರದೆ ಎಷ್ಟೋ ರೈತರು ಸರ್ಕಾರದ ವಿರುದ್ಧ ಬಂಡಾಯವೆದ್ದರು.

ಇಂಥ ಅಶಾಂತ ವಾತಾವರಣದಲ್ಲಿ ಜಪಾನ್ ಮುಳುಗಿದ್ದಾಗ, ಪಾಶ್ಚಾತ್ಯರು ಜಪಾನ್‌ನೊಡನೆ ಸಂಪರ್ಕ ಬೆಳೆಸಲು ಬಂದರು. ಇವರ ಆಗಮನದಿಂದ ದೇಶದಲ್ಲಿ ಒಂದು ರಾಜಕೀಯ ಆಂದೋಲನ ಸಂಭವಿಸಿತು. ಜಪಾನನ್ನು ಮೊದಲು ಪ್ರವೇಶಿಸಿದ ದೇಶ ಅಮೆರಿಕ. ಚೀನದೊಡನೆ ವ್ಯಾಪಾರ ಮಾಡುತ್ತಿದ್ದ ಅಮೆರಿಕಕ್ಕೆ ಜಪಾನಿನಲ್ಲಿ ತಂಗಲು ಹಾಗೂ ವ್ಯಾಪಾರ ಮಾಡಲು ಯೋಗ್ಯ ಬಂದರಿನ ಆವಶ್ಯಕತೆಯಿತ್ತು. 1853ರಲ್ಲಿ ಅಮೆರಿಕದ ನೌಕಾಧಿಕಾರಿ ಕಮೋಡೋ ಪೆರಿ ಎಂಬಾತ ಅಧ್ಯಕ್ಷ ಫಿಲ್ಮೋರನಿಂದ ಪತ್ರವೊಂದನ್ನು ತಂದು, ಟೋಕಿಯೋ ಬಳಿ ತನ್ನ ಬಲಪ್ರದರ್ಶನ ನಡೆಸಿ, ವ್ಯಾಪಾರಕ್ಕೆಂದು ದೇಶದ ಬಾಗಿಲುಗಳನ್ನು ತೆಗೆಯಬೇಕೆಂದು ಟೋಕುಗಾವಾ ಸರ್ವಾಧಿಕಾರಿಗೆ ಬೆದರಿಕೆ ಹಾಕಿದ. ಈ ಬಗ್ಗೆ ಯೋಚನೆ ಮಾಡಲು ಜಪಾನ್ ಸರ್ಕಾರಕ್ಕೆ ಸ್ವಲ್ಪ ಕಾಲಾವಕಾಶ ಕೊಟ್ಟು, ಮರುವರ್ಷ (1854) ಪೆರಿ ಹೆಚ್ಚಿನ ಬಲದೊಡನೆ ಜಪಾನ್‌ಗೆ ಬಂದ. ಸರ್ವಾಧಿಕಾರಿ ಅವನೊಡನೆ ಒಪ್ಪಂದ ಮಾಡಿಕೊಂಡು, ಎರಡು ಬಂದರುಗಳನ್ನು ವ್ಯಾಪಾರಕ್ಕಾಗಿ ತೆರೆದಿಟ್ಟ. ಆ ದೇಶದ ಪ್ರತಿನಿಧಿ ಜಪಾನ್‌ನಲ್ಲಿರಲು ಅನುಮತಿ ಕೊಟ್ಟ. ಅಮೆರಿಕದಂತೆ ಇಂಗ್ಲೆಂಡ್, ಫ್ರಾನ್ಸ್, ರಷ್ಯ ಮತ್ತು ಹಾಲೆಂಡ್ ದೇಶಗಳೂ ವ್ಯಾಪಾರ ಸೌಲಭ್ಯಗಳನ್ನು ಪಡೆದುಕೊಂಡುವು.

ಪರಕೀಯರೊಡನೆ ಮಾಡಿಕೊಂಡ ಈ ಒಪ್ಪಂದದಿಂದ ಸರ್ವಾಧಿಕಾರಿ ತನ್ನ ಸ್ಥಾನಕ್ಕೆ ತಾನೇ ಚ್ಯುತಿ ತಂದುಕೊಂಡಂತಾಯಿತು. ಹೆಚ್ಚಿನ ಪಾಳೆಯಗಾರರು ಮತ್ತು ಅವರ ಅನುಯಾಯಿಗಳಾದ ಸಾಮುರೈಗಳು ವಿದೇಶೀಯರಿಗೆ ಜಪಾನಿನಲ್ಲಿ ಸೌಲಭ್ಯಗಳನ್ನು ಕೊಟ್ಟ ಬಗ್ಗೆ ವಿರೋಧ

ವ್ಯಕ್ತಪಡಿಸಿದರು. ಇದರ ಜೊತೆಗೆ ಚಕ್ರವರ್ತಿ ತನ್ನ ಅಸಮಾಧಾನ ತೋರಿಸಿದ. ಹೀಗಾಗಿ, ಸರ್ವಾಧಿಕಾರಿ ಉಭಯ ಸಂಕಟಕ್ಕೆ ಸಿಕ್ಕಿಬಿದ್ದ. ತಮ್ಮ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆತರುವ ಸರ್ವಾಧಿಕಾರಿಯ ಈ ಕ್ರಮದಿಂದ ಅಸಮಾಧಾನಗೊಂಡ ಕೆಲವು ಪಾಳೆಯಗಾರರು ಚಕ್ರವರ್ತಿಯತ್ತ ತಿರುಗಿ, ಅವನು ಸರ್ವಾಧಿಕಾರಿಯನ್ನು ವಿರೋಧಿಸುವಂತೆ ಮಾಡಿದರು. 1857–1863ರಲ್ಲಿ ಪರಕೀಯರ ಬಗ್ಗೆ ಸಾರ್ವಜನಿಕರ ದ್ವೇಷ ಹೆಚ್ಚಿತು. ಅನೇಕ ಕಡೆ ಪರಕೀಯರ ಮೇಲೆ ಹಲ್ಲೆಗಳು ನಡೆದುವು. ಮತ್ತೆ ಕೆಲವರು ಇಂಥ ಕೃತ್ಯಗಳು ಉಪಯೋಗವಿಲ್ಲವೆಂದೂ, ವಿದೇಶೀಯರು ಪ್ರಬಲರಾಗಿರುವುದರಿಂದ ಅವರನ್ನು ಜಪಾನ್‌ನಿಂದ ಓಡಿಸುವ ಬದಲು ಬೇರೆ ರೀತಿಯ ನೀತಿ ಅನುಸರಿಸುವುದು ಉತ್ತಮವೆಂದೂ ಚಕ್ರವರ್ತಿಗೆ ಸಲಹೆ ಮಾಡಿದರು. ಒಟ್ಟಿನಲ್ಲಿ ಈ ವಿಷಯದ ಬಗ್ಗೆ ದೇಶದಲ್ಲಿ ಎರಡು ಪಕ್ಷಗಳು ಏರ್ಪಟ್ಟುವು. ಅಶಕ್ತನಾದ ಷೋಗುನ್ ತನ್ನ ಅಧಿಕಾರವನ್ನೆಲ್ಲ ಚಕ್ರವರ್ತಿಗೇ ಬಿಟ್ಟುಕೊಟ್ಟ. 1868ರಲ್ಲಿ ಚಕ್ರವರ್ತಿಯ ಪುನರಾಗಮನವಾಯಿತು. ಅವನನ್ನು ಕೀಯೋಟೋ ನಗರದಿಂದ ಟೋಕಿಯೋಗೆ ಬರಮಾಡಿಕೊಂಡು ಅಧಿಕಾರದಲ್ಲಿ ಕುಳ್ಳಿರಿಸಲಾಯಿತು. ಹೀಗೆ 250 ವರ್ಷಗಳ ಕಾಲ ಆಡಳಿತ ನಡೆಸಿದ ಟೋಕುಗಾವಾ ಮನೆತನದ ಕಾಲ ಕೊನೆಗೊಂಡಿತು.

ಆಧುನಿಕ ಕಾಲ (1868 ರಿಂದ ಈಚೆಗೆ) : ಜಪಾನಿನ ಆಧುನಿಕ ಇತಿಹಾಸ ಮೇಜಿ ಕಾಲದಿಂದ ಪ್ರಾರಂಭವಾಗುತ್ತದೆ. ಮೇಜಿ ಎಂದರೆ ಪ್ರಗತಿಶೀಲ ಪ್ರಭುತ್ವ. 1868ರಲ್ಲಿ ಮುಟ್ಸುಹಿಟೊ ಎಂಬ ಹೆಸರಿನ 15 ವರ್ಷದ ಬಾಲಕ ಚಕ್ರವರ್ತಿಯಾಗಿ ಸಿಂಹಾಸನವನ್ನೇರಿದ. ಇವನ ರಾಜ್ಯಭಾರದ ಕಾಲವನ್ನು (1868–1912) ಮೇಜಿ ಆಳ್ವಿಕೆಯ ಕಾಲವೆಂದು ಕರೆಯಲಾಗಿದೆ. ಇದು ಬಹಳ ಮಹತ್ತ್ವಪೂರ್ಣವಾದದ್ದು. ಈ ಕಾಲದಲ್ಲಿ ಅನೇಕ ಮೂಲಭೂತ ಬದಲಾವಣೆಗಳು ಸಂಭವಿಸಿದವು. ಪಾಶ್ಚಾತ್ಯ ಸಂಸ್ಕೃತಿ ತನ್ನ ಪ್ರಭಾವವನ್ನು ಎಲ್ಲ ಕ್ಷೇತ್ರಗಳ ಮೇಲೂ ಬೀರಿತು. ಪ್ರಗತಿಪರ ಮಾರ್ಗದಲ್ಲಿ ಜಪಾನ್ ಸಾಗಿದ ಕಾಲವಿದು.

ಚಕ್ರವರ್ತಿ ಮೇಜಿ

ಮೇಜಿ ಸುಧಾರಣೆಗಳು: ಊಳಿಗಮಾನ್ಯ ಪದ್ಧತಿಯನ್ನು ಕೊನೆಗೊಳಿಸಿ, ಹೊಸ ರೀತಿಯಲ್ಲಿ ಕೇಂದ್ರಸರ್ಕಾರವನ್ನು ರಚಿಸಲಾಯಿತು. ಪಾಳೆಯಗಾರರು ತಮ್ಮ ತಮ್ಮ ಹಕ್ಕುಬಾಧ್ಯತೆಗಳು, ಅಂತಸ್ತು, ಐಶ್ವರ್ಯಗಳನ್ನು ಚಕ್ರವರ್ತಿಗೆ ಒಪ್ಪಿಸಿದರು. ದೇಶದ ಎಲ್ಲ ಭೂಮಿ ಮತ್ತು ಜನಗಳಿಗೆ ಚಕ್ರವರ್ತಿಯೇ ಒಡೆಯನೆಂದು ಘೋಷಿಸಲಾಯಿತು. 1871ರಲ್ಲಿ ಅಧಿಕೃತವಾಗಿ ಊಳಿಗಮಾನ್ಯ ಪದ್ಧತಿ ಕೊನೆಗೊಂಡಿತು. ಪಾಳೆಯಗಾರರಿಗೂ ಅವರ ಅನುಯಾಯಿಗಳಾದ ಸಾಮುರೈಗಳಿಗೂ, ಭೂಮಿಯಿಂದ ಬರುವ ಬತ್ತವೇ ಮುಖ್ಯವಾದ ಆದಾಯವಾಗಿತ್ತು. ಆ ಆದಾಯವನ್ನು ಈಗ ಸರ್ಕಾರ ತನ್ನ ವಶಮಾಡಿಕೊಂಡು, ಅವರು ಗಳಿಸುತ್ತಿದ್ದ ಉತ್ಪತ್ತಿಗೆ ಅನುಗುಣವಾಗಿ ಅವರಿಗೆ ಸಾಲಪತ್ರಗಳನ್ನು ಪರಿಹಾರವಾಗಿ ಕೊಟ್ಟಿತು. ಯುರೋಪಿನ ವಿಜ್ಞಾನ, ತಂತ್ರಜ್ಞಾನ ಮತ್ತು ಕೈಗಾರಿಕಾ ಪದ್ಧತಿಯನ್ನು ಅಭ್ಯಾಸಮಾಡಲು ಸರ್ಕಾರ ಅನೇಕ ನಿಯೋಗಗಳನ್ನು ಕಳುಹಿಸಿಕೊಟ್ಟಿತು. ಸೇನೆಯಲ್ಲೂ ನೌಕಾಬಲದಲ್ಲೂ ಸೇವೆ ಕಡ್ಡಾಯವೆಂದು ಘೋಷಿಸಲಾಯಿತು. ಭೂಮಿಯ ಬೆಲೆಗೆ ಅನುಗುಣವಾಗಿ ಕಂದಾಯ ನಿಷ್ಕರ್ಷೆ, ರಾಷ್ಟ್ರಕ್ಕೆ ಒಂದೇ ನಾಣ್ಯಪದ್ಧತಿ, ರಸ್ತೆ, ರೈಲು, ಅಂಚೆ, ತಂತಿ, ಸಾರ್ವಜನಿಕ ಸೌಕರ್ಯಗಳ ಏರ್ಪಾಟು, ಎಲ್ಲರಿಗೂ ಕಡ್ಡಾಯ ಶಿಕ್ಷಣ ಮೊದಲಾದವು ಜಾರಿಗೆ ಬಂದುವು. ದೇಶದ ಸೈನ್ಯಬಲ ಹಾಗೂ ನೌಕಾಬಲಗಳನ್ನು ಹೆಚ್ಚಿಸಲು ಅನುಕೂಲವಾಗುವ ಭಾರಿ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಇಂಥ ಕೈಗಾರಿಕೆಗಳಲ್ಲಿ ಕೆಲವನ್ನು ಸರ್ಕಾರವೂ ಸಹಾಯದ ಮೇಲೆ ಖಾಸಗಿ ಸಂಸ್ಥೆಗಳೂ ಸ್ಥಾಪಿಸಿದವು. ಕೇಂದ್ರ ಸರ್ಕಾರದ ಉನ್ನತ ಹುದ್ದೆಗಳು ಕೆಲವರ ಕೈಯಲ್ಲಿದ್ದುವು. ಉದಾಹರಣೆಗೆ ದಂಡನಾಯಕ ರಾಜಕುಮಾರ ಆರಿತೊಮೊ ಯಾಮಾಗಾಟಾ ಮೊದಲು ಯುದ್ಧಮಂತ್ರಿಯಾಗಿದ್ದು ಸೇನೆಯನ್ನು ವ್ಯವಸ್ಥೆಗೊಳಿಸಿ, ಅನಂತರ ಆಂತರಿಕ ವ್ಯವಹಾರ ಸಚಿವ ಹಾಗೂ ಪ್ರಧಾನ ಮಂತ್ರಿ (1889–1891; 1898) ಆದ. ಹಾಗೆಯೇ ರಾಜಕುಮಾರ ಹಿರೋಬುಮಿ ಇಟೊ ಮೊದಲು ಹಣಕಾಸು ಮತ್ತು ಮರಾಮತ್ ಶಾಖೆಗಳಲ್ಲಿದ್ದು, ಅನಂತರ ಸಂವಿಧಾನದ ರಚನೆಯಲ್ಲಿ ಭಾಗವಹಿಸಿ, 1886–1901ರ ಅವಧಿಯಲ್ಲಿ ನಾಲ್ಕು ಬಾರಿ ಪ್ರಧಾನಮಂತ್ರಿಯಾಗಿದ್ದ.

ಮೇಜಿ ಕಾಲದಲ್ಲಿ ಹೊಸ ಸಂವಿಧಾನವನ್ನು ಸಿದ್ಧಪಡಿಸಲಾಯಿತು. ಜರ್ಮನಿಯಲ್ಲಿ ಅಸ್ತಿತ್ವದಲ್ಲಿದ್ದ ಸಂವಿಧಾನ ಜಪಾನಿಗೆ ಮಾದರಿಯಾಗಿತ್ತು. 1889ರ ಫೆಬ್ರುವರಿ 11ರಂದು ಈ ಸಂವಿಧಾನವನ್ನು ಜಾರಿಗೆ ತರಲಾಯಿತು. ಈ ಸಂವಿಧಾನ 1947ರ ವರೆಗೂ ಅಸ್ತಿತ್ವದಲ್ಲಿತ್ತು. ಇದರ ಪ್ರಕಾರ, ಚಕ್ರವರ್ತಿಯೇ ನಿಜವಾದ ಸರ್ಕಾರ. ಸೇನಾ ಮುಖಂಡರ ನೀತಿಗೆ ಮಂತ್ರಿಮಂಡಲದಿಂದ ವಿರೋಧ ಬಂದಾಗ ಅವರು ನೇರವಾಗಿ ಚಕ್ರವರ್ತಿಯ ಬಳಿ ಹೋಗಲು ಅವಕಾಶವಿತ್ತು. ಸಂಸತ್ತಿನ ಕೆಳಮನೆಯಲ್ಲಿ ಹೆಚ್ಚಿನ ಜನಬೆಂಬಲ ಪಡೆದ ಪಕ್ಷದಿಂದಲೇ ಪ್ರಧಾನಿಯನ್ನು ಆರಿಸಬೇಕೆಂದು ಕೇಳುವ ಹಕ್ಕು ರಾಜಕೀಯ ಪಕ್ಷಗಳಿಗೆ ಇರಲಿಲ್ಲ. ಏಕೆಂದರೆ ಸಂಸತ್ತಿಗೆ ಈ ಸಂವಿಧಾನದ ಪ್ರಕಾರ ಬಜೆಟ್ಟಿಗೆ ಸಂಬಂಧಿಸಿದ ವಿಷಯಗಳಲ್ಲಿ ಅಧಿಕಾರವಿರಲಿಲ್ಲ. ವ್ಯಕ್ತಿಸ್ವಾತಂತ್ರ್ಯಕ್ಕೆ ಅನೇಕ ಪ್ರತಿಬಂಧಕಗಳಿದ್ದವು. ಹೀಗೆ ಮೇಲುನೋಟಕ್ಕೆ ಸಂಸದೀಯ ಸರ್ಕಾರ ರಚಿತವಾಗಿದ್ದರೂ, ನಿಜವಾದ ಅಧಿಕಾರ ಕೆಲವೇ ಮಂದಿ ಪ್ರತಿಷ್ಠಿತರ ಹಾಗೂ ಸೇನಾಮುಖಂಡರ ಕೈಯಲ್ಲಿತ್ತು. ಆರ್ಥಿಕ ಕ್ಷೇತ್ರದಲ್ಲೂ ಕೆಲವೇ ಮಂದಿ ಪ್ರತಿಷ್ಠಿತರು ಪ್ರಭಾವಶಾಲಿಗಳಾಗಿದ್ದರು. ಜಪಾನಿನ ಹೆಚ್ಚು ಕಡಿಮೆ ಎಲ್ಲ ಕೈಗಾರಿಕೆಗಳೂ ಜೈಬಟ್ಸುಗಳೆಂಬ ಶ್ರೀಮಂತ ಕುಟುಂಬಗಳ ಸೊತ್ತುಗಳಾಗಿದ್ದವು.

ವಿಶ್ವದ ಪ್ರಬಲರಾಷ್ಟ್ರವಾಗಿ ಪ್ರಾಬಲ್ಯ : 1890–1900ರ ಅವಧಿಯಲ್ಲಿ ಜಪಾನ್ ಉಗ್ರರೀತಿಯ ಆಕ್ರಮಣಕಾರಿ ವಿದೇಶಾಂಗ ನೀತಿ ಅನುಸರಿಸಿತು. ಅಮೆರಿಕ, ಬ್ರಿಟನ್ ಮೊದಲಾದ ದೇಶಗಳು ಹೇರಿದ್ದ, ಜಪಾನಿನ ಹಿತಾಸಕ್ತಿಗೆ ಧಕ್ಕೆ ತರುವ ಕೌಲುಗಳನ್ನು ಅದು ಕೊನೆಗೊಳಿಸಿ, ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಪಾಶ್ಚಾತ್ಯ ರಾಷ್ಟ್ರಗಳೊಡನೆ ಸಮಸಮವಾಗಿ ನಿಲ್ಲುವ ಆಸೆ ಜಪಾನಿಗೆ ಉಂಟಾಯಿತು. ಈ ಕೌಲುಗಳ ಪ್ರಕಾರ ಪಾಶ್ಚಾತ್ಯರಿಗೆ ಜಪಾನಿನಲ್ಲಿರುವ ಹಕ್ಕು ದೊರೆತಿದ್ದರೂ ಅವರು ಜಪಾನಿನ ಕಾನೂನುಗಳ ನಿಯಂತ್ರಣಕ್ಕೆ ಒಳಗಾಗಿರಲಿಲ್ಲ. ಜಪಾನ್ ಸರ್ಕಾರ 1880ರಲ್ಲಿ ದಂಡಸಂಹಿತೆಯನ್ನೂ (ಕ್ರಿಮಿನಲ್ ಕೋಡ್) 1890ರಲ್ಲಿ ದೀವಾನಿ ಸಂಹಿತೆಯನ್ನೂ (ಸಿವಿಲ್ ಕೋಡ್) ಜಾರಿಗೆ ತಂದಿತು. ವಿದೇಶೀಯರನ್ನು ಜಪಾನಿನ ನ್ಯಾಯಾಲಯಗಳ ವ್ಯಾಪ್ತಿಗೆ ಒಳಪಡಿಸುವ ವ್ಯವಸ್ಥೆ ಏರ್ಪಟ್ಟಿತು.

ಚೀನ ಮತ್ತು ರಷ್ಯಗಳೊಡನೆ ಯುದ್ಧ ನಡೆಸಿ ಗೆದ್ದು ಜಪಾನ್ ಪ್ರಬಲ ರಾಷ್ಟ್ರಗಳ ಪಂಕ್ತಿಗೆ ಸೇರಿಕೊಂಡಿತು. ಜಪಾನ್ ಮತ್ತು ಚೀನಗಳು ಕೊರಿಯ ದೇಶದಲ್ಲಿ ಪ್ರತಿಸ್ಪರ್ಧಿಗಳಾಗಿದ್ದು ಆ ದೇಶದ ಮೇಲೆ ತಂತಮ್ಮ ಹತೋಟಿ ಸ್ಥಾಪಿಸಲು ಯತ್ನಿಸಿದುವು. 1894–1895ರಲ್ಲಿ ನಡೆದ ಚೀನ–ಜಪಾನ್ ಯುದ್ಧಕ್ಕೆ ಕಾರಣವಾದದ್ದು ಈ ಸ್ಪರ್ಧೆಯೇ. ಜಪಾನೀಯರು ಈ ಯುದ್ಧದಲ್ಲಿ ಜಯಶೀಲರಾದರು. ಕೊರಿಯದ ಮೇಲಿನ ಹತೋಟಿಯನ್ನು ಜಪಾನಿಗೆ ಚೀನ ಬಿಟ್ಟುಕೊಟ್ಟಿತಲ್ಲದೆ, ಫಾರ್ಮೋಸ ದ್ವೀಪವನ್ನೂ ಜಪಾನಿಗೆ ಒಪ್ಪಿಸಿತು. ದಕ್ಷಿಣ ಮಂಚೂರಿಯದಲ್ಲಿ ಜಪಾನಿಗೆ ಅನೇಕ ಸೌಲಭ್ಯಗಳು ದೊರೆತುವು. ಆದರೆ ಜಪಾನ್ ಈ ಹಕ್ಕುಗಳನ್ನೂ ಸೌಲಭ್ಯಗಳನ್ನೂ ಚೀನಕ್ಕೆ ಮರಳಿ ಒಪ್ಪಿಸುವಂತೆ ಪಾಶ್ಚಾತ್ಯ ರಾಷ್ಟ್ರಗಳು ಒತ್ತಾಯ ತಂದುವು. 1902ರಲ್ಲಿ ಜಪಾನ್ ಇಂಗ್ಲೆಂಡಿನೊಡನೆ ಮೈತ್ರಿಯ ಕೌಲು ಮಾಡಿಕೊಂಡಿತು.

ಮಂಚೂರಿಯ ಮತ್ತು ಕೊರಿಯಗಳಲ್ಲಿ ತನ್ನ ಪ್ರಭಾವ ಮತ್ತು ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳಲು ಹವಣಿಸುತ್ತಿದ್ದ ರಷ್ಯವನ್ನು 1904ರಲ್ಲಿ ಕೆಣಕುವ ಮಟ್ಟಿಗೆ ಜಪಾನಿನ ಶಕ್ತಿ ಬೆಳೆದಿತ್ತು. 1904–1905ರಲ್ಲಿ ರಷ್ಯದೊಡನೆ ಯುದ್ಧಮಾಡಿ, ಆ ರಾಷ್ಟ್ರವನ್ನು ಜಪಾನ್ ಸೋಲಿಸಿತು. ಅಮೆರಿಕದ ಅಧ್ಯಕ್ಷ ತೀಯೊಡೋರ್ ರೂಸ್‌ವೆಲ್ಟನ ಮಧ್ಯಸ್ಥಿಕೆಯಿಂದ ಯುದ್ಧ ಕೊನೆಗೊಂಡಿತು. ರಷ್ಯದ ಮೇಲೆ ಗಳಿಸಿದ ಜಯದಿಂದ ಜಪಾನಿನ ಕೀರ್ತಿ ಹೆಚ್ಚಿತು. ಪೋರ್ಟ್‌ಸ್ಮತ್ ಕೌಲಿನ (1905) ಪ್ರಕಾರ ಕೊರಿಯದ ಮೇಲಿನ ತನ್ನ ಹಕ್ಕುಗಳನ್ನೆಲ್ಲ ರಷ್ಯ ಸಂಪೂರ್ಣವಾಗಿ ತ್ಯಜಿಸಿತು. ಅಲ್ಲದೆ ತನ್ನ ವಶದಲ್ಲಿದ್ದ ದಕ್ಷಿಣ ಮಂಚೂರಿಯ ರೈಲ್ವೆ ಹೆದ್ದಾರಿಯನ್ನು ಜಪಾನಿಗೆ ಕೊಟ್ಟಿತು. ಮಂಚೂರಿಯದ ಲೀಯಾವುಡಂಗ್ ಪರ್ಯಾಯದ್ವೀಪದ ಮೇಲಣ ಗುತ್ತಿಗೆ ಹಕ್ಕು ಮತ್ತು ಸಾಕಲೀನ್ ದ್ವೀಪದ ದಕ್ಷಿಣ ಭಾಗಗಳು ಜಪಾನಿನ ವಶವಾದುವು.

ಒಂದನೆಯ ಮಹಾಯುದ್ಧ ಮತ್ತು ಅನಂತರ: ಒಂದನೆಯ ಮಹಾಯುದ್ಧದ ಆರಂಭದಲ್ಲೇ ಜಪಾನ್ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿತು. ಜಪಾನೀಯರು ಯುರೋಪಿನಲ್ಲಿ ಯುದ್ಧ ಮಾಡಲಿಲ್ಲ. ಆದರೆ ಚೀನದಲ್ಲಿ ಜರ್ಮನಿಗೆ ಸೇರಿದ್ದ ಚಿಂಗ್–ಡಾವ್ ಪಟ್ಟಣವನ್ನೂ ಷಾಂಟಂಗ್ ಪ್ರಾಂತ್ಯದಲ್ಲಿದ್ದ ಆಸ್ತಿಪಾಸ್ತಿಗಳನ್ನೂ ಪೆಸಿಫಿಕ್ ಸಾಗರದ ಕೆಲವು ಜರ್ಮನ್ ದ್ವೀಪಗಳನ್ನೂ ಜಪಾನ್ ವಶಪಡಿಸಿಕೊಂಡಿತು. 1915ರಲ್ಲಿ ಯುರೋಪಿನಲ್ಲಿ ನಡೆಯುತ್ತಿದ್ದ ಹೋರಾಟವನ್ನೇ ಒಂದು ಅವಕಾಶವೆಂದು ಎಣಿಸಿ ಜಪಾನ್ ಚೀನದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಹವಣಿಸಿ, ಚೀನ ಸರ್ಕಾರಕ್ಕೆ ತನ್ನ 21 ಬೇಡಿಕೆಗಳನ್ನು ಸಲ್ಲಿಸಿತು. ಜಪಾನಿಗೆ ಚೀನದಲ್ಲಿ ಅನೇಕ ಆರ್ಥಿಕ ಸವಲತ್ತುಗಳು ದೊರೆತುವು. ರಾಷ್ಟ್ರಗಳ ಕೂಟದ (ಲೀಗ್ ಆಫ್ ನೇಷನ್ಸ್) ಪರವಾಗಿ ಮಾರ್ಷಲ್, ಕಾರೋಲೈನ್ ಮತ್ತು ಮ್ಯಾರೀಯಾನ ದ್ವೀಪಗಳಲ್ಲಿ ನಿಯೋಗಿಯಾಗಿ ಆಡಳಿತ ನಡೆಸುವ ಅಧಿಕಾರವನ್ನು ಜಪಾನಿಗೆ ನೀಡಲಾಯಿತು.

ಯುದ್ಧ ಮುಗಿದ ಮೇಲೆ ರಾಷ್ಟ್ರಗಳ ಕೂಟದ ಸದಸ್ಯರಾಷ್ಟ್ರವಾಗಿ ಜಪಾನ್ ಅನೇಕ ಶಾಂತಿಸಂಧಾನಗಳಿಗೆ ಬೆಂಬಲ ನೀಡಿತು. 1921–22ರಲ್ಲಿ ನಡೆದ ವಾಷಿಂಗ್‌ಟನ್ ಸಮ್ಮೇಳನದಲ್ಲಿ, ಅಮೆರಿಕ ಮತ್ತು ಬ್ರಿಟನ್‌ಗಳಿಗಿಂತ ಚಿಕ್ಕದಾದ ನೌಕಾಪಡೆ ಇಟ್ಟುಕೊಳ್ಳುವುದಾಗಿ ಒಪ್ಪಿಕೊಂಡಿತು. ಚೀನದ ಷಾಂಟಂಗ್ ಪ್ರಾಂತ್ಯದಿಂದ ನಿರ್ಗಮಿಸುವುದಾಗಿಯೂ ವಾಷಿಂಗ್‌ಟನ್ ಸಮ್ಮೇಳನದಲ್ಲಿ ಒಪ್ಪಿಕೊಂಡಿತು. ಒಂಬತ್ತು ರಾಷ್ಟ್ರಗಳ ಕೌಲಿಗೆ ಸಹಿ ಹಾಕಿತು. ಚೀನದ ಸ್ವಾತಂತ್ರ್ಯಕ್ಕೆ ಧಕ್ಕೆ ಬರದ ರೀತಿಯಲ್ಲಿ ತಾನು ನಡೆದುಕೊಳ್ಳುವುದಾಗಿ ಭರವಸೆಕೊಟ್ಟಿತು. ಇದರ ಜೊತೆಗೆ 1928ರಲ್ಲಿ ಕೆಲ್ಲಾಗ್–ಬ್ರಿಯಾಂಡ್ ಒಪ್ಪಂದಕ್ಕೂ, 1930ರಲ್ಲಿ ಲಂಡನ್ ನೌಕಾ ಒಪ್ಪಂದಕ್ಕೂ ಸಹಿ ಹಾಕಿತು.

ಬಾಂಬ್ ದಾಳಿಗೆ ತುತ್ತಾದವರಿಗೆ ಒಂದು ಸ್ಮಾರಕ, ಹಿರೋಷೀಮ

ಸೈನಿಕವಾದದ ಪ್ರಾಬಲ್ಯ : 1930ರ ವರೆಗೆ ಜಪಾನಿನ ಆಡಳಿತ ಉದಾರತತ್ತ್ವಗಳಲ್ಲಿ ನಂಬಿಕೆಯಿದ್ದ ಪ್ರಜಾಪ್ರಭುತ್ವವಾದಿ ನಾಯಕರ ಕೈಯಲ್ಲಿ ಇತ್ತು. 1930ರಲ್ಲಿ ಜಪಾನ್ ಲಂಡನ್ ನೌಕಾ ಒಪ್ಪಂದಕ್ಕೆ ಸಹಿ ಹಾಕಿದ್ದೇ ಈ ಉದಾರವಾದಿ ರಾಜಕೀಯ ಮುಖಂಡರ ಕಡೆಯ ವಿಜಯವಾಯಿತು. ಜಪಾನು ಈ ಒಪ್ಪಂದಕ್ಕೆ ಸಹಿ ಹಾಕಲೇಬೇಕೆಂದು ಪ್ರಧಾನಮಂತ್ರಿ ಹಾಮಾಗೂಚಿ (1870–1931) ಒತ್ತಾಯ ಮಾಡಿದಾಗ ಅವನು ಕೊಲೆಗೆ ಈಡಾದ. 1930ರಲ್ಲಿ ತಲೆದೋರಿದ ವಿಶ್ವ ಆರ್ಥಿಕ ಮುಗ್ಗಟ್ಟು ಜಪಾನಿನ ಆರ್ಥಿಕ ಕ್ಷೇತ್ರವನ್ನು ಅಲ್ಲೋಲಕಲ್ಲೋಲ ಮಾಡಿತು. ನಿರುದ್ಯೋಗ, ಬಡತನ, ಆಹಾರದ ಕೊರತೆ ತಲೆದೋರಿದುವು. ಚೀನದೊಡನೆ ಸ್ನೇಹದಿಂದ ಇರಬೇಕೆಂಬ ಸರ್ಕಾರದ ನೀತಿಯನ್ನು ಜಪಾನೀಯರು ವಿರೋಧಿಸತೊಡಗಿದರು. ಜಪಾನೀ ಸರಕುಗಳಿಗೆ ಮಾರುಕಟ್ಟೆಗಳನ್ನು ಪಡೆಯುವ ಸಲುವಾಗಿ ಜಪಾನ್ ತನ್ನ ಪ್ರಭಾವವಲಯವನ್ನು ವಿಸ್ತರಿಸಬೇಕೆಂಬುದು ಜೈಬಟ್ಸುಗಳ ಅಭಿಪ್ರಾಯವಾಗಿತ್ತು. ಜಪಾನಿನ ಸೇನಾಮುಖಂಡರು ಯಾವಾಗಲೂ ಚೀನದ ವಿರುದ್ಧ ಕಠಿಣ ನೀತಿಯನ್ನೇ ಪ್ರತಿಪಾದಿಸುತ್ತಿದ್ದರು. ಜಪಾನ್ ಏಷ್ಯದಲ್ಲಿ ವಿಶೇಷ ಆರ್ಥಿಕ ಸೌಲಭ್ಯಗಳನ್ನು ಹೊಂದಿರಬೇಕೆಂಬುದು ಅವರ ವಾದವಾಗಿತ್ತು. ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸೇನಾಮುಖಂಡರಿಗೆ ಅಪ್ಪಣೆಯೇನೂ ಬೇಕಿರಲಿಲ್ಲ. ಸಂಸತ್ತನ್ನಾಗಲಿ ಮಂತ್ರಿಮಂಡಲವನ್ನಾಗಲಿ ಕೇಳದೆ ಚಕ್ರವರ್ತಿಯ ಹೆಸರಿನಲ್ಲಿ ಅವರು ತಮ್ಮ ನೀತಿ ಅನುಸರಿಸಲು ಅವಕಾಶವಿತ್ತು. ಉಗ್ರ ರಾಷ್ಟ್ರಾಭಿಮಾನಿಗಳು ಒಂದಾಗಿ ರಹಸ್ಯ ಹಾಗೂ ವಿಶೇಷರೀತಿಯ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡರು. ಜಪಾನೀಯರು ದೇವಾಂಶಸಂಭೂತರೆಂದೂ ಅವರು ವಿಶ್ವವನ್ನು ಆಳಬೇಕೆಂಬುದು ದೇವರ ಇಚ್ಛೆಯೆಂದೂ ಈ ಸಂಘಸಂಸ್ಥೆಗಳ ಸದಸ್ಯರು ನಂಬಿದ್ದರು.

ಚೀನದೊಡನೆ ಯುದ್ಧ : 1931ರಲ್ಲಿ ಚೀನೀಯರು ಮಂಚೂರಿಯದಲ್ಲಿ ತಮ್ಮ ಸರ್ಕಾರದ ಬಲವನ್ನು ಹೆಚ್ಚಿಸಿಕೊಂಡಾಗ ಜಪಾನಿನ ಸೇನಾಮುಖಂಡರಿಗೆ ದಿಗ್ಭ್ರಮೆಯಾಯಿತು. ತನ್ನ ರೈಲುಮಾರ್ಗಗಳನ್ನು ರಕ್ಷಿಸಲು ಅನುಕೂಲವಾಗುವಂತೆ ಮಂಚೂರಿಯದಲ್ಲಿ ಜಪಾನ್ ಸೈನ್ಯ ಇಟ್ಟುಕೊಳ್ಳಲು ಚೀನ ಸರ್ಕಾರ ಅನುಮತಿ ನೀಡಿತ್ತು. 1931ರ ಸೆಪ್ಟೆಂಬರ್ 18ರಂದು ಮುಕ್‌ಡೆನ್ ನಗರದ ಬಳಿ ನಡೆದ ಸಣ್ಣ ಘಟನೆಯನ್ನೇ ನೆಪಮಾಡಿಕೊಂಡು ಜಪಾನಿನ ಸೇನೆ ಮಂಚೂರಿಯವನ್ನು ಆಕ್ರಮಿಸಿಕೊಂಡಿತು. ಸೇನೆ ಈ ಉಗ್ರಕ್ರಮವನ್ನು ಕೈಗೊಂಡ ಮೇಲೆ ಜಪಾನ್ ಸರ್ಕಾರಕ್ಕೆ ಈ ವಿಷಯ ತಿಳಿಯಿತು ಎನ್ನುವುದು ದಾಖಲೆಗಳಿಂದ ಸ್ಪಷ್ಟವಾಗಿದೆ. ರಾಷ್ಟ್ರಗಳ ಕೂಟ ಈ ಘಟನೆಯ ಬಗ್ಗೆ ವಿಚಾರಿಸಿ, ಜಪಾನಿನ ನೀತಿ ತಪ್ಪೆಂದು ಖಂಡಿಸಿತಾದರೂ ಯಾವ ಕ್ರಮವನ್ನು ತೆಗೆದುಕೊಳ್ಳಲೂ ಅದು ಅಶಕ್ತವಾಗಿತ್ತು. ಜಪಾನ್ 1933ರಲ್ಲಿ ರಾಷ್ಟ್ರಗಳ ಕೂಟದಿಂದ ಹೊರಬಂತು. ಮಂಚೂ ಮನೆತನದ ಕೊನೆಯ ಚಕ್ರವರ್ತಿ ಪೂ–ಯೀಯ ಕೈಗೊಂಬೆ ಸರ್ಕಾರವೊಂದನ್ನು ಮಂಚೂರಿಯದಲ್ಲಿ ಸ್ಥಾಪಿಸಿ ಅದನ್ನು ಮಾಂಚೂಕ್ವೋ ಎಂದು ಕರೆಯಿತು.

ಜಪಾನಿನಿಂದ ಮಂಚೂರಿಯದಲ್ಲಿ ಗಣಿಗಳೂ ಕೈಗಾರಿಕೆಗಳೂ ಸ್ಥಾಪಿತವಾದುವು. ಮಂಚೂರಿಯದಲ್ಲಿ ಸುಲಭವಾಗಿ ಗಳಿಸಿದ ವಿಜಯದಿಂದ ಸೇನಾಮುಖಂಡರು ಉತ್ತೇಜಿತರಾದರು. ಸೇನೆಯ ಉಗ್ರಪಂಥಿಯರು ಪ್ರಧಾನಮಂತ್ರಿ ಕಿಇನುಕೈಯನ್ನು (1855–1932) 1932ರಲ್ಲಿ ಕೊಲೆಮಾಡಿದರು. 1936ರಲ್ಲಿ ನಡೆದ ದಂಗೆಯಲ್ಲಿ ಅನೇಕ ಉದಾರವಾದಿ ರಾಜಕೀಯ ಮುಖಂಡರುಗಳ ಕೊಲೆ ಆಯಿತು. ಅಲ್ಲಿಂದಾಚೆಗೆ ಜಪಾನಿನ ವಿದೇಶಾಂಗ ನೀತಿಯ ಮೇಲೆ ಉಗ್ರವಾದಿಗಳ ಹಿಡಿತ ಭದ್ರವಾಯಿತು.

ಮಂಚೂರಿಯದ ಆಕ್ರಮಣದ ಅನಂತರ ಜಪಾನ್ ಉತ್ತರ ಚೀನದ ಭಾಗಗಳಿಗೆ ತನ್ನ ಪ್ರಭಾವವನ್ನು ವಿಸ್ತರಿಸಿತು. 1937ರ ಜುಲೈ 7ರಂದು ಪೀಕಿಂಗ್ ನಗರದ ಬಳಿ ಮಾರ್ಕೊ ಪೋಲೊ ಸೇತುವೆಯ ಬಳಿ ನಡೆದ ಸಣ್ಣ ಘಟನೆಯನ್ನೇ ನೆವಮಾಡಿಕೊಂಡು ಜಪಾನ್ ಉತ್ತರ ಚೀನದ ಮೇಲೆ ಹತೋಟಿ ಸ್ಥಾಪಿಸಿತು. 1938ರ ವೇಳೆಗೆ ದಕ್ಷಿಣ ಚೀನದ ಮುಖ್ಯ ನಗರವಾದ ಕ್ಯಾಂಟನ್ ಜಪಾನಿನ ವಶವಾಯಿತು.

ಎರಡನೆಯ ಮಹಾಯುದ್ಧದ ಕಡೆಗೆ : ನಾಟ್ಸಿ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿಗಳೊಡನೆ ಜಪಾನ್ ಸ್ನೇಹ ಬೆಳೆಸಿತು. 1936ರಲ್ಲಿ ಜರ್ಮನಿ ಮತ್ತು ಇಟಲಿ ದೇಶಗಳೊಡನೆ ಜಪಾನ್ ಕಮ್ಯೂನಿಸ್ಟ್–ವಿರೋಧಿ ಒಪ್ಪಂದವನ್ನು ಮಾಡಿಕೊಂಡಿತು. 1939ರ ಆಗಸ್ಟ್‌ನಲ್ಲಿ ಜರ್ಮನಿ–ರಷ್ಯಗಳು ಒಪ್ಪಂದ ಮಾಡಿಕೊಂಡಾಗ ಜಪಾನಿಗೆ ಆಶ್ಚರ್ಯವಾಯಿತು. 1940ರಲ್ಲಿ ಜಪಾನ್ ಕೂಡ ರಷ್ಯದೊಡನೆ ಒಂದು ಒಪ್ಪಂದ ಮಾಡಿಕೊಂಡಿತು.

1939ರ ಸೆಪ್ಟಂಬರಿನಲ್ಲಿ ಎರಡನೆಯ ಮಹಾಯುದ್ಧ ಯುರೋಪಿನಲ್ಲಿ ಪ್ರಾರಂಭವಾದಾಗ, ಉತ್ತರ ಚೀನದಲ್ಲಿ ಬ್ರಿಟನ್ ಹೊಂದಿದ್ದ ಎಲ್ಲ ಹಕ್ಕುಬಾಧ್ಯತೆಗಳನ್ನೂ ಬಿಟ್ಟುಕೊಡಬೇಕೆಂಬುದು ಜಪಾನಿನ ಒತ್ತಾಯ. 1940ರಲ್ಲಿ ಫ್ರಾನ್ಸ್ ಜರ್ಮನಿಯ ವಶವಾಯಿತು. ಫ್ರೆಂಚರ ವಸಾಹತಾಗಿದ್ದ ಇಂಡೋಚೀನ ಪರ್ಯಾಯದ್ವೀಪವನ್ನು ಜಪಾನ್ ಆಕ್ರಮಿಸಿಕೊಂಡಿತು. ಜಪಾನಿನ ಆಕ್ರಮಣ ಹೆಚ್ಚಿದಂತೆಲ್ಲ ಅಮೆರಿಕ–ಜಪಾನ್ ವಿರಸ ಬೆಳೆಯಲಾರಂಭಿಸಿತು. 1940ರಲ್ಲಿ ಅಮೆರಿಕ ಜಪಾನ್‌ಗೆ ಮಾಡುತ್ತಿದ್ದ ಪೆಟ್ರೋಲ್ ಮತ್ತು ಕಬ್ಬಿಣದ ರಫ್ತಿನಲ್ಲಿ ಖೋತ ಮಾಡಿತು. 1941ರ ವೇಳೆಗೆ ಜಪಾನ್‌ನಲ್ಲಿ ಯುದ್ಧಸಿದ್ಧತೆಗಳೆಲ್ಲ ಮುಗಿದಿದ್ದುವು. 1941ರ ಅಕ್ಟೋಬರ್ 17ರಂದು ಜಪಾನ್‌ನಲ್ಲಿ ಕೊನೊಯೆ ಮಂತ್ರಿಮಂಡಲ ಅಧಿಕಾರ ಕಳೆದುಕೊಂಡಿತು. ದಂಡನಾಯಕ ಡಿಡೆಕಿ ಟೋಜೋ ಪ್ರಧಾನಮಂತ್ರಿಯಾದ. ಸೇನಾಮುಖಂಡರು ಜಪಾನ್ ಸರ್ಕಾರದ ಮೇಲೆ ತಮ್ಮ ಸಂಪೂರ್ಣ ಹತೋಟಿ ಸಾಧಿಸಿ, ಯುದ್ಧಕ್ಕೆ ಸಿದ್ಧರಾದರು.


ಭವಿಷ್ಯಕ್ಕೆ ಗತಕಾಲದ ಎಚ್ಚರಿಕೆ : ಪರಮಾಣು ಬಾಂಬ್ ಗುಮ್ಮಟ, ಶಾಂತಿವನ, ಹಿರೋಷೀಮ

ಎರಡನೆಯ ಮಹಾಯುದ್ಧ : 1941ರಲ್ಲಿ ಹವ್ವಾಯಿ ದ್ವೀಪದ ಪರ್ಲ್ ಹಾರ್ಬರಿನಲ್ಲಿ ತಂಗಿದ್ದ ಅಮೆರಿಕದ ಪೆಸಿಫಿಕ್ ನೌಕಾಪಡೆ ಜಪಾನ್‌ನ ವಿಮಾನ ದಾಳಿಗೆ ಗುರಿಯಾಗಿ ಧ್ವಂಸವಾಯಿತು. ಬಿರುಗಾಳಿಯಂತೆ ಮುಂದುವರಿದು ಪೆಸಿಫಿಕ್ ಸಾಗರ ಮತ್ತು ಹಿಂದೂ ಸಾಗರ ದ್ವೀಪಗಳನ್ನೆಲ್ಲ ಜಪಾನ್ ವಶಪಡಿಸಿಕೊಂಡಿತು. ಮಲಯವನ್ನೂ ಬರ್ಮವನ್ನೂ(ಈಗಿನ ಮಾಯನ್ಮಾರ್) ಆಕ್ರಮಿಸಿ ಭಾರತಕ್ಕೂ ಬೆದರಿಕೆ ಹಾಕಿತು. ಪಾಶ್ಚಾತ್ಯ ದೇಶಗಳಿಂದ ಚೀನಕ್ಕೆ ಸಾಗುತ್ತಿದ್ದ ಸರಬರಾಜನ್ನು ನಿಲ್ಲಿಸುವ ಉದ್ದೇಶದಿಂದ ಪ್ರಸಿದ್ಧ ಚೀನ ಮಾರ್ಗವನ್ನು ಜಪಾನ್ ಕಡಿದು ಹಾಕಿತು. ಇದರಿಂದ ಜಪಾನ್‌ನ ಕೈಗಾರಿಕೆಗಳಿಗೆ ಸಾಕಷ್ಟು ಕಚ್ಚಾವಸ್ತುಗಳು ಒದಗಿಬಂದವು.

ಆದರೆ 1944ರಲ್ಲಿ ಜಪಾನ್‌ನ ಭಾಗ್ಯ ಬದಲಾಯಿತು. ಜಪಾನ್‌ನ ದೌರ್ಬಲ್ಯ ಪ್ರಕಟವಾಗತೊಡಗಿತು. 1944ರ ಜುಲೈ 18ರಂದು ಟೋಜೋನ ಮಂತ್ರಿಮಂಡಲ ಉರುಳಿತು. ಅಮೆರಿಕವು ಪೆಸಿಫಿಕಿನ ಎಲ್ಲ ದ್ವೀಪಗಳನ್ನೂ ವಶಪಡಿಸಿಕೊಂಡಿತು. ಯುದ್ಧ ಜಪಾನಿನ ಬಾಗಿಲಿಗೇ ಬಂತು. ಅಮೆರಿಕನರು ಜಪಾನಿನ ಕೈಗಾರಿಕಾ ಕೇಂದ್ರಗಳ ಮೇಲೆಲ್ಲ ಕ್ರಮವಾಗಿ ಬಾಂಬ್ ದಾಳಿ ಮಾಡತೊಡಗಿದರು. 1945ರಲ್ಲಿ ಅಮೆರಿಕನ್ ಸೈನಿಕರು ಜಪಾನ್‌ನಲ್ಲಿ ಬಂದಿಳಿದರು. ಹಿರೋಷಿಮ ಮತ್ತು ನಾಗಸಾಕೀ ನಗರಗಳ ಮೇಲೆ ಅಮೆರಿಕ ಎರಡು ಪರಮಾಣು ಬಾಂಬುಗಳನ್ನು ಹಾಕಿದಾಗ ಸುಮಾರು ಎರಡು ಲಕ್ಷ ಜಪಾನೀಯರು ಪ್ರಾಣಬಿಟ್ಟರು. ಆ ನಗರಗಳು ನೆಲಸಮವಾದುವು.

ಯುದ್ಧದಲ್ಲಿ ಸೋಲುಂಟಾಗಿದೆಯೆಂಬ ಅಂಶ ಈ ವೇಳೆಗೆ ಜಪಾನೀ ನಾಯಕರಿಗೆ ಮನವರಿಕೆಯಾಗಿತ್ತು. ಚೀನ ಮತ್ತು ಪೆಸಿಫಿಕ್ ಸಾಗರ ದ್ವೀಪಗಳಲ್ಲಿ ಜಪಾನೀಯರ ದೊಡ್ಡ ಸೇನೆಯಿತ್ತು. ಆದರೆ ಅವುಗಳೊಂದಿಗೆ ಸಂಪರ್ಕ ತಪ್ಪಿಹೋಯಿತು. ಜಪಾನಿನ ಬಳಿ ಯುದ್ಧನೌಕೆಗಳಾಗಲಿ, ಸಾಮಗ್ರಿಗಳಾಗಲಿ ಇರಲಿಲ್ಲ. 1945ರ ಆಗಸ್ಟ್ 14ರಂದು ಜಪಾನ್ ಸಂಪೂರ್ಣವಾಗಿ ಶರಣಾಗತವಾಗಲು ಒಪ್ಪಿತು. ಮರುದಿನ ಮಧ್ಯಾಹ್ನ ಚಕ್ರವರ್ತಿ ಹಿರೊಹಿಟೋ ಜಪಾನ್‌ನ ಜನತೆಯನ್ನು ಉದ್ದೇಶಿಸಿ ರೇಡಿಯೋ ಭಾಷಣ ಮಾಡಿದರು. ಜಪಾನ್ ಯುದ್ಧ ಕೊನೆಗೊಳಿಸಲು ಒಪ್ಪಿರುವ ವಿಷಯವನ್ನು ತಿಳಿಸಿದರು. ಸೆಪ್ಟಂಬರ್ 2ರಂದು, ಯುದ್ಧನೌಕೆ ಮಿಸ್ಸೋರಿಯ ಮೇಲೆ, 1853ರಲ್ಲಿ ಪೆರಿ ಬೀಡುಬಿಟ್ಟಿದ್ದ ಟೋಕಿಯೋ ಕೊಲ್ಲಿಯ ಬಳಿಯಲ್ಲೇ, ಜಪಾನ್ ಶರಣಾಗತಿ ಪತ್ರಕ್ಕೆ ಸಹಿ ಹಾಕಿತು. ಏಷ್ಯದಲ್ಲಿ ಗೆದ್ದಿದ್ದ ಪ್ರದೇಶಗಳನ್ನೂ, ಪೆಸಿಫಿಕ್ ಸಾಗರದಲ್ಲಿ ಆಕ್ರಮಿಸಿಕೊಂಡಿದ್ದ ದ್ವೀಪಗಳನ್ನೂ ಜಪಾನ್ ಬಿಟ್ಟುಕೊಟ್ಟಿತು. ಫಾರ್ಮೋಸ, ಕ್ಯುರೈಲ್ಸ್ ಮತ್ತು ದಕ್ಷಿಣ ಸಾಖಲಿನ್ ದ್ವೀಪಗಳನ್ನು ಜಪಾನ್ ಕಳೆದುಕೊಂಡಿತು.

ಮಿತ್ರರಾಷ್ಟ್ರಗಳ ಆಳ್ವಿಕೆ (1945–1952) : ಅಮೆರಿಕದ ನೇತೃತ್ವದಲ್ಲಿ ಮಿತ್ರ ರಾಷ್ಟ್ರಗಳು 1945ರಿಂದ 1952ರವರೆಗೆ ಅಲ್ಲಿ ಆಳ್ವಿಕೆ ನಡೆಸಿದುವು. ದಂಡನಾಯಕ ಮೆಕಾರ್ಥರ್ ಈ ಆಡಳಿತದ ಮುಖ್ಯಾಧಿಕಾರಿಯಾಗಿದ್ದ. ಯುದ್ಧಾಪರಾಧಗಳ ವಿಚಾರಣೆ ನಡೆದು 28 ಪ್ರಧಾನ ಯುದ್ಧಕೈದಿಗಳಿಗೆ ಗಲ್ಲಿನ ಶಿಕ್ಷೆಯಾಯಿತು. 1946ರಲ್ಲಿ ಜಪಾನಿನಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದುವು. ಆ ವರ್ಷವೇ ಜಪಾನಿನ ಹೊಸ ಸಂವಿಧಾನದ ರಚನೆಯಾಗಿ 1947ರ ಮೇ 3ರಂದು ಅದು ಅಧಿಕೃತವಾಗಿ ಜಾರಿಗೆ ಬಂದಿತು. ಚಕ್ರವರ್ತಿಯಲ್ಲಿ ಕೇಂದ್ರೀಕೃತವಾಗಿದ್ದ ಕಾರ್ಯಾಂಗದ ಅಧಿಕಾರಗಳನ್ನು ತೆಗೆದುಹಾಕಲಾಯಿತು. ಸ್ತ್ರೀಯರಿಗೂ ಮತದಾನದ ಹಕ್ಕು ಲಭ್ಯವಾಯಿತು. ಸೇನೆ ಮತ್ತು ನೌಕೆಯನ್ನು ರದ್ದು ಮಾಡಿದ ಸಂವಿಧಾನದಲ್ಲಿ, ಯುದ್ಧವನ್ನು ರಾಜಕೀಯ ಅಸ್ತ್ರದಂತೆ ಜಪಾನ್ ಎಂದೆಂದಿಗೂ

ಶಾಂತಿವನ, ಹಿರೋಷೀಮ

ಬಳಸುವುದಿಲ್ಲವೆಂದು ಘೋಷಿಸಲಾಯಿತು. ಅಮೆರಿಕದ ನೆರವಿನಿಂದ ಜಪಾನಿನ ಆರ್ಥಿಕ ಸ್ಥಿತಿ ಸುಧಾರಿಸುತ್ತ ನಡೆಯಿತು. ಭೂಸುಧಾರಣೆಗಳಾದುವು. ಉಳುವವರು ಭೂಮಿಯ ಒಡೆಯರಾದರು. ಕೈಗಾರಿಕಾ ಕ್ಷೇತ್ರದಲ್ಲಿ ಜೈಬಟ್ಸುವಿನ ಪ್ರಭಾವ ತಗ್ಗಿಸುವ ಏರ್ಪಾಡುಗಳಾದುವು. 1950ರ ಕೊರಿಯ ಯುದ್ಧ ಮತ್ತು ಅನಂತರ ಜಪಾನಿನ ಕೈಗಾರಿಕೆ ಬಹು ಬೇಗ ಹಿಂದಿನ ಸ್ಥಿತಿಗೆ ಬಂದಿತು. ಆ ಕಾಲದಲ್ಲಿ ಜಪಾನಿನ ಪ್ರಧಾನಿಯಾಗಿದ್ದ ಷಿಗೆರು ಯೋಷಿದಾ ಅಮೆರಿಕದೊಡನೆ ಹೊಂದಾಣಿಕೆಯ ನೀತಿ ಅನುಸರಿಸಿದರು. ಜಪಾನ್ ಪ್ರಜಾಪ್ರಭುತ್ವದ ಹಾದಿ ಹಿಡಿಯಿತು.

ಯುದ್ಧೋತ್ತರ ಪ್ರಗತಿ : 1951ರ ಸೆಪ್ಟೆಂಬರ್ 8ರಂದು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋ ನಗರದಲ್ಲಿ 48 ಮಿತ್ರರಾಷ್ಟ್ರಗಳ ಸಮ್ಮೇಳನ ನಡೆದು, ಜಪಾನ್ ಶಾಂತಿ ಕೌಲಿಗೆ ಸಹಿ ಹಾಕಿತು. ಇದು ಅಧಿಕೃತವಾಗಿ ಜಾರಿಗೆ ಬಂದದ್ದು 1952ರ ಏಪ್ರಿಲ್ 28ರಂದು. ಮಿತ್ರರಾಷ್ಟ್ರಗಳ ಆಡಳಿತ ಕೊನೆಗೊಂಡಿತು. ಜಪಾನ್ ಸಂಪೂರ್ಣವಾಗಿ ಸ್ವತಂತ್ರವಾಯಿತು. ಜಪಾನ್ ಅಮೆರಿಕದೊಡನೆ ಭದ್ರತಾ ಒಪ್ಪಂದವೊಂದನ್ನು ಮಾಡಿಕೊಂಡಿತು. 1952ರಲ್ಲಿ ಜಪಾನ್ ವಿಶ್ವಸಂಸ್ಥೆಯ ಸದಸ್ಯರಾಷ್ಟ್ರವಾಗಲು ಬಯಸಿ ವಿಫಲವಾಯಿತು. ಇದಕ್ಕೆ ಕಾರಣ ಸೋವಿಯೆತ್

ಶಾಂತಿಗೋಪುರ, ಕಾಗಶೀಮಾ

ದೇಶದ ವಿರೋಧ. 1956ರಲ್ಲಿ ಸೋವಿಯೆತ್ ದೇಶ ಮತ್ತು ಜಪಾನ್‌ಗಳ ನಡುವೆ ಶಾಂತಿ ಒಪ್ಪಂದ ಆದ ಮೇಲೆ ಆ ವರ್ಷದ ಡಿಸೆಂಬರ್ ತಿಂಗಳಲ್ಲಿ ಜಪಾನ್ ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಿತು. 1955ರಲ್ಲಿ ಇಂಡೊನೇಷ್ಯದ ಬಾಂಡುಂಗ್‌ನಲ್ಲಿ ನಡೆದ ಆಫ್ರೊ–ಏಷ್ಯನ್ ಆಗ್ರ ಸಮ್ಮೇಳನದಲ್ಲಿ ಜಪಾನೂ ಭಾಗವಹಿಸಿತು. ಅಲ್ಲಿಂದೀಚೆಗೆ ಜಪಾನ್ ಎಲ್ಲ ಕ್ಷೇತ್ರಗಳಲ್ಲೂ ಮುಂದುವರಿದು ವಿಶ್ವದ ಶ್ರೀಮಂತ ರಾಷ್ಟ್ರಗಳಲ್ಲೊಂದಾಗಿದೆ.

(ಕೆ.ಎಸ್.ಎಸ್.)

### ಆರ್ಥಿಕ ಅಭಿವೃದ್ಧಿ

ಆಧುನಿಕ ಕೈಗಾರಿಕಾ ಪದ್ಧತಿಯನ್ನು ಯಶಸ್ವಿಯಾಗಿ ಆಚರಣೆಗೆ ತಂದ ಪ್ರಥಮ ಏಷ್ಯನ್ ರಾಷ್ಟ್ರವಿದು. ಸುಮಾರು ಒಂದು ಶತಮಾನದ ಹಿಂದೆ ಹೊರ ಜಗತ್ತಿನ ಸಂಪರ್ಕ ಸಹ ಇಲ್ಲದೆ ಪ್ರತ್ಯೇಕ ರಾಷ್ಟ್ರವೆನಿಸಿಕೊಂಡಿದ್ದ ಈ ದೇಶ ಇಂದು ಪ್ರಪಂಚದ ಅತ್ಯಂತ ಅಭ್ಯುದಯ ಹೊಂದಿದ ರಾಷ್ಟ್ರಗಳಲ್ಲಿ ಒಂದಾಗಿದೆ.

ಮಿತ ಭೂಪ್ರದೇಶ, ವಿರಳ ಪ್ರಕೃತಿಸಂಪತ್ತು, ಅಗಾಧ ಜನಸಂಖ್ಯೆ, ಎರಡನೆಯ ಮಹಾಯುದ್ಧದ ಆಘಾತ–ಇಷ್ಟೆಲ್ಲ ಪ್ರತಿಕೂಲಗಳನ್ನೆದುರಿಸಿಯೂ ಈ ಸಣ್ಣ ದೇಶ ಅಗಾಧ ಪ್ರಗತಿ ಸಾಧಿಸಿದೆ.

ಆಧುನಿಕ ಜಪಾನ್‌ನ ಅಭಿವೃದ್ಧಿ 1868ರಲ್ಲಿ ಮೇಜಿ ಚಕ್ರವರ್ತಿ ಅಧಿಕಾರಕ್ಕೆ ಬಂದಂದಿನಿಂದ ಪ್ರಾರಂಭವಾಯಿತು. ಇದಕ್ಕೆ ಮುಂಚೆ 265 ವರ್ಷ ಟೋಕುಗಾವಾ ವಂಶದ ಷೋಗುನ್‌ಗಳು ಚಕ್ರವರ್ತಿಯನ್ನು ಬದಿಗೊತ್ತಿ ತಾವೇ ಆತನ ಹೆಸರಿನಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದರು.

ಷೋಗುನ್ನರ ಆಳ್ವಿಕೆಯಲ್ಲಿ ಊಳಿಗಮಾನ್ಯ ಪದ್ಧತಿ ಇತ್ತು. ದೇಶದ ಮುಕ್ಕಾಲು ಪಾಲು ಜಮೀನು ಷೋಗುನ್ನರ ಸ್ವಂತ ಉಪಯೋಗಕ್ಕೆ ಮೀಸಲಾಗಿತ್ತು. ಉಳಿದುದನ್ನು ಅವರು ತಮ್ಮ ಅಧೀನರಾದ ಜಮೀನ್ದಾರರಲ್ಲಿ ಹಂಚಿದ್ದರು. ಇವರಲ್ಲದೆ ಯೋಧವರ್ಗ, ರೈತವರ್ಗ, ಬಹಿಷ್ಕೃತರಂತೆ ಜೀವಿಸುತ್ತಿದ್ದ ದಲಿತವರ್ಗ ಇವೂ ಇದ್ದುವು.

ಪಟ್ಟಣಗಳಲ್ಲಿ ಸಣ್ಣ ಕೈಗಾರಿಕೆಗಳು ವೃತ್ತಿಸಂಘಗಳ ಹತೋಟಿಯಲ್ಲಿ ಅಭಿವೃದ್ಧಿ ಹೊಂದಿದ್ದುವು. ವೃತ್ತಿಸಂಘಗಳು ಸರ್ಕಾರದ ಮಾನ್ಯತೆ ಪಡೆದು, ಅದಕ್ಕೆ ತೆರಿಗೆ ಕೊಡುತ್ತಿದ್ದುವು. 19ನೆಯ ಶತಮಾನದ ವೇಳೆಗೆ ಗೃಹಕೈಗಾರಿಕಾ ಪದ್ಧತಿ ಬೆಳೆಯಲಾರಂಭಿಸಿತ್ತು. ಸಣ್ಣ ಕಾರ್ಖಾನೆಗಳು ಆಗಲೇ ತಲೆಯೆತ್ತುತ್ತಿದ್ದವು. ಷೋಗುನ್ನರ ಕಾಲದಲ್ಲಿ ವಿದೇಶೀ ಸಂಪರ್ಕ ನಿಷೇಧಿಸಲ್ಪಟ್ಟಿತ್ತು. ಇದರಿಂದ ಜಪಾನ್ ಪಾಶ್ಚಾತ್ಯ ರಾಷ್ಟ್ರಗಳಲ್ಲಾಗುತ್ತಿದ್ದ ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಗತಿಯ ಪ್ರಯೋಜನ ಕಳೆದುಕೊಂಡಿತು. ವಿದೇಶೀ ವ್ಯಾಪಾರಕ್ಕೂ ಅವಕಾಶವಿರಲಿಲ್ಲ.

19ನೆಯ ಶತಮಾನದ ದ್ವಿತೀಯಾರ್ಧದ ವೇಳೆಗೆ ಈ ಆರ್ಥಿಕ ವ್ಯವಸ್ಥೆ ಆಂತರಿಕ ಒತ್ತಡಗಳಿಂದ ಕುಸಿಯತೊಡಗಿತು. ಜನರು ಊಳಿಗಮಾನ್ಯ ವ್ಯವಸ್ಥೆಯ ಹಾಗೂ ವೃತ್ತಿ ಸಂಘಗಳ ನಿರ್ಬಂಧಗಳನ್ನು ಕಡೆಗಣಿಸಿ, ಪಟ್ಟಣಗಳಿಗೆ ಇತರ ಉದ್ಯೋಗಗಳನ್ನರಸಿ ಹೋಗತೊಡಗಿದರು. ಆ ವೇಳೆಗೆ ಪಾಶ್ಚಾತ್ಯರ ಒತ್ತಡಕ್ಕೆ ಮಣಿದು ಷೋಗುನ್ನರು ಅವರಿಗೆ ಕೆಲವು ವ್ಯಾಪಾರಿ ರಿಯಾಯಿತಿಗಳನ್ನು ಕೊಟ್ಟರು. ಇದರಿಂದ ಜನ ಕುಪಿತರಾದರು. ವಿರೋಧ ಪ್ರಬಲವಾಗುತ್ತಿದ್ದುದನ್ನು ಕಂಡ ಕೊನೆಯ ಷೋಗುನ್ ತಾನಾಗಿಯೇ ಅಧಿಕಾರ ತ್ಯಜಿಸಿದ.

1868ರಲ್ಲಿ ಮೇಜಿ ಚಕ್ರವರ್ತಿ ಅಧಿಕಾರಕ್ಕೆ ಬಂದ. ಇವನು ಆಧುನಿಕ ಜಪಾನಿನ ನಿರ್ಮಾಪಕ. ದಕ್ಷನೂ ಪ್ರಗತಿಪರನೂ ದೂರದೃಷ್ಟಿಯುಳ್ಳವನೂ ಆದ ಈತ ಜಪಾನಿನ ಪ್ರತ್ಯೇಕತಾ ನೀತಿಯನ್ನು ತೊರೆದು ಪಾಶ್ಚಾತ್ಯ ಸಂಪರ್ಕವನ್ನು ಪ್ರೋತ್ಸಾಹಿಸಿದ. ಊಳಿಗಮಾನ್ಯ ಪದ್ಧತಿಯನ್ನು ರದ್ದುಗೊಳಿಸಿದ. ನಿರಕ್ಷರತೆಯನ್ನು ನಿರ್ಮೂಲ ಮಾಡುವುದು ಮಾತ್ರವಲ್ಲದೆ ವೈಜ್ಞಾನಿಕ ಬೆಳೆವಣಿಗೆಗೆ ಸಹಾಯ ಮಾಡುವ ನೂತನ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದ. ಕೃಷಿ, ಕೈಗಾರಿಕೆ ಮತ್ತು ವ್ಯಾಪಾರಾಭಿವೃದ್ಧಿಗೆ ವಿಶೇಷ ಪ್ರೋತ್ಸಾಹ ಮತ್ತು ಸಹಾಯ ನೀಡಿದ. ಕೆಲವು ಹಣಕಾಸಿನ ಸುಧಾರಣೆಗಳನ್ನು ಆಚರಣೆಗೆ ತಂದು, ಸರ್ಕಾರದ ವರಮಾನ ಹೆಚ್ಚಿಸಿದ.

ಈ ಸುಧಾರಣೆಗಳಿಂದ ಆಧುನಿಕ ಜಪಾನಿನ ಅಭಿವೃದ್ಧಿಗೆ ಭದ್ರ ತಳಹದಿ ಹಾಕಿದಂತಾಯಿತು. ಇವುಗಳ ಯಶಸ್ಸಿಗೆ ಚಕ್ರವರ್ತಿಯ ಪ್ರಗತಿಪರನೀತಿ ಮಾತ್ರವಲ್ಲದೆ ಜಪಾನಿನ ಭೌಗೋಳಿಕ ಸನ್ನಿವೇಶ, ರಾಷ್ಟ್ರೀಯ ಏಕತೆ, ಭಾಷಾ ಏಕರೂಪತೆ, ಜಪಾನೀಯರ ಶಿಸ್ತು, ಸಂಘಟನೆ, ಕರ್ತವ್ಯಪರತೆ, ರಾಷ್ಟ್ರಪ್ರೇಮ, ಚಕ್ರವರ್ತಿಯಲ್ಲಿ ಅವರಿಗಿದ್ದ ಅಪಾರಗೌರವ ಮುಂತಾದವೂ ಕಾರಣವಾದುವು. ಮೇಜಿ ಆಳ್ವಿಕೆಯಿಂದೀಚೆಗೆ ಜಪಾನ್ ಆರ್ಥಿಕವಾಗಿ ವಿಶೇಷ ಪ್ರಗತಿ ಸಾಧಿಸಿದೆ.

**ಕೃಷಿ :** ಮೇಜಿ ಸರ್ಕಾರ ಕೃಷಿ ಅಭಿವೃದ್ಧಿಗೆ ಅನೇಕ ಕ್ರಮಗಳನ್ನು ಕೈಗೊಂಡಿತು. ಜಮೀನ್ದಾರರಿಂದ ಪಡೆದ ಜಮೀನುಗಳನ್ನು ಸಣ್ಣ ಹಿಡುವಳಿಗಳಾಗಿ ಮಾಡಿ, ಸಾಮಾನ್ಯ ರೈತರಿಗೆ ಹಂಚಿತು. ಋಣಪರಿಹಾರ ಮತ್ತು ಕೃಷಿಕಾರ್ಯಗಳಿಗೆ ಹಣ ಒದಗಿಸಲು ಸಹಕಾರ ಸಂಘಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಿತು. ಗೇಣಿ ಶಾಸನಗಳ ಮೂಲಕ ಗೇಣಿದಾರರ ಹಿತರಕ್ಷಣೆ ಮಾಡಲು ಪ್ರಯತ್ನಿಸಿತು. ಜಮೀನು ಕೊಳ್ಳುವುದಕ್ಕೂ ಕೃಷಿ ಅಭಿವೃದ್ಧಿಪಡಿಸುವುದಕ್ಕೂ ಕೃಷಿ ಅಭಿವೃದ್ಧಿ ಬ್ಯಾಂಕುಗಳಿಂದಲೂ ನೇರವಾಗಿ ಸರ್ಕಾರದಿಂದಲೂ ದೀರ್ಘಾವಧಿ ಸಾಲಗಳು ದೊರಕುವಂತೆ ಮಾಡಿತು. ಮೇಜಿ ಸರ್ಕಾರದ ಈ ಕ್ರಮಗಳಿಂದ ರೈತರ ಸ್ಥಿತಿ ಉತ್ತಮಗೊಂಡಿತು.

ಆದರೆ ವಿಶ್ವ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ರೈತರು ಮತ್ತೆ ಕಷ್ಟಕ್ಕೊಳಗಾದರು. ಆಗ ಸರ್ಕಾರ ತೆರಿಗೆಗಳನ್ನಿಳಿಸಿ, ಪರಿಹಾರ ಕಾಮಗಾರಿಗಳನ್ನು ಕೈಗೊಂಡಿತು. ಸಹಕಾರ ಸಂಘಗಳಿಗೆ ರೈತರಿಂದ ಬಾಕಿ ಇದ್ದ ಸಾಲಗಳಿಗೆ ಸರ್ಕಾರ ಹೊಣೆಯಾಯಿತು. ಕೃತಕ ಗೊಬ್ಬರದ ಕಾರ್ಖಾನೆಗಳ ಸ್ಥಾಪನೆ ಆಯಿತು. ಕೃಷಿ ವಿಶ್ವವಿದ್ಯಾಲಯಗಳು ಮತ್ತು ಪ್ರಾಯೋಗಿಕ ಕೃಷಿ ಕೇಂದ್ರಗಳು ಪ್ರಾರಂಭವಾದುವು. ದೇಶದಾದ್ಯಂತ ಉಗ್ರಾಣಗಳನ್ನೂ ಮಳಿಗೆಗಳನ್ನೂ ಸ್ಥಾಪಿಸಿ ಬತ್ತದ ಬೆಲೆ ಸ್ಥಿರೀಕರಣ ನೀತಿಯನ್ನು ಆಚರಣೆಗೆ ತರಲಾಯಿತು. ಈ ಕಾರ್ಯಕ್ರಮಗಳಿಂದಲೂ ಯುದ್ಧಕಾಲದ ಬೆಲೆ ಏರಿಕೆಯಿಂದಲೂ ರೈತರ ಸ್ಥಿತಿ ಉತ್ತಮಗೊಂಡಿತು. ಆದರೂ ಗೇಣಿದಾರನ ಸ್ಥಿತಿ ಉತ್ತಮವಾಗಲಿಲ್ಲ.

ಎರಡನೆಯ ಮಹಾಯುದ್ಧದ ಅನಂತರ ಜಪಾನಿನಲ್ಲಿ ಏರ್ಪಟ್ಟ ಮಿತ್ರರಾಷ್ಟ್ರಗಳ ಆಡಳಿತ ಭೂಸುಧಾರಣಾ ಶಾಸನವನ್ನು ಜಾರಿಗೆ ತಂದು ಗೇಣಿಯ ಪ್ರಮಾಣವನ್ನು ನಿಗದಿಗೊಳಿಸಿತು. ಗೈರುಹಾಜರಿ ಜಮೀನ್ದಾರಿಯನ್ನು ರದ್ದುಗೊಳಿಸಿತು. ಸ್ಥಳೀಯ ಜಮೀನ್ದಾರರು 2.5 ಎಕರೆಗಳ ವರೆಗೆ ಗೇಣಿಗೆ ಕೊಟ್ಟು, ಮಿಕ್ಕ ಜಮೀನನ್ನು ಸರ್ಕಾರಕ್ಕೆ ಮಾರುವಂತೆ ಅಧಿನಿಯಮ ಜಾರಿಗೆ ಬಂದಿತು. ಸ್ವಂತ ಬೇಸಾಯಗಾರರು ತಲಾ 7.5 ಎಕರೆಗಳಿಗೆ ಮೀರದಷ್ಟು ಜಮೀನನ್ನು ಇಟ್ಟುಕೊಳ್ಳಲು ಅನುಮತಿಯಿತ್ತು. ನೆಲವಿಲ್ಲದ ರೈತರು ಸರ್ಕಾರದಿಂದ ಜಮೀನನ್ನು ಕೊಂಡು 30 ವಾರ್ಷಿಕ ಕಂತುಗಳಲ್ಲಿ ತೀರಿಸುವ ಅವಕಾಶ ಪಡೆದರು.

ಈ ಸುಧಾರಣೆಗಳ ಫಲವಾಗಿ ಕೃಷಿ ಉತ್ಪಾದನೆ ಹೆಚ್ಚಿ, ಅದು ರಾಷ್ಟ್ರಾದಾಯದ ಶೇ. 16ರ ಮಟ್ಟಕ್ಕೆ ಬಂದಿತು. ಅಲ್ಲಿಂದೀಚೆಗೆ ಜಪಾನಿನ ಬೇಸಾಯ ಮತ್ತಷ್ಟು ಪ್ರಗತಿ ಹೊಂದಿದ್ದರೂ ಆಹಾರ ಪದಾರ್ಥಗಳ ಆಮದು ನಿಂತಿಲ್ಲ. ಆದರೆ ಇದಕ್ಕೆ ಪ್ರತಿಯಾಗಿ ಕೈಗಾರಿಕಾ ವಸ್ತುಗಳನ್ನು ರಫ್ತು ಮಾಡುವ ಸಾಮರ್ಥ್ಯವಿರುವುದರಿಂದ ಆಹಾರ ಪದಾರ್ಥಗಳ ಆಮದು ಅಷ್ಟಾಗಿ ಹೊರೆಯೆನಿಸಿಲ್ಲ. ಮುಂದಿನ ದಶಕಗಳಲ್ಲಿ ಆಹಾರ ಧಾನ್ಯಗಳನ್ನು ತನಗೆ ಅನುಕೂಲವಾದ ದರದಲ್ಲಿ ಆಮದು ಮಾಡಿಕೊಳ್ಳಲು ಇರುವ ಸಾಧ್ಯತೆಗಳನ್ನು ಜಪಾನು ಈಗ ಪರಿಶೀಲಿಸುತ್ತಿದೆ. ಈ ಪರಿಶೀಲನೆಯ ಆಧಾರದ ಮೇಲೆ ತನ್ನ ಭವಿಷ್ಯ ಕೃಷಿ ನೀತಿಯನ್ನು ನಿರ್ಧರಿಸಲಿದೆ.

**ಕೈಗಾರಿಕೆ :** ಪಾಶ್ಚಾತ್ಯ ಸಂಪರ್ಕ ಬೆಳೆದ ಅನಂತರ ಆಮದಾದ ಕೈಗಾರಿಕೆ ವಸ್ತುಗಳಿಂದ ಜಪಾನೀಯರು ಆಕರ್ಷಿತರಾದರು. ತಮ್ಮ ದೇಶವೂ ಆರ್ಥಿಕ ಮತ್ತು ರಕ್ಷಣಾದೃಷ್ಟಿಯಿಂದ ಬಲವಾಗಲು ಆಧುನಿಕ ಕೈಗಾರಿಕೆಗಳ ಸ್ಥಾಪನೆ ತಮ್ಮ ದೇಶದಲ್ಲೇ ಆಗಬೇಕೆಂದು ಅವರು ತೀರ್ಮಾನಿಸಿದರು. ಆದರೆ ದೇಶದಲ್ಲಿ ಆಗ ಖಾಸಗಿ ಬಂಡವಾಳ ಮತ್ತು ಉದ್ಯಮ ಸಾಹಸದ ಕೊರತೆಯಿತ್ತು. ಆದ್ದರಿಂದ ಸರ್ಕಾರವೇ ಕೈಗಾರಿಕೆಗಳನ್ನು ಸ್ಥಾಪಿಸಿ, ಕ್ರಮೇಣ ಖಾಸಗಿಯವರು ಮುಂದೆ ಬಂದಾಗ ಅವರಿಗೆ ವರ್ಗಾವಣೆ ಮಾಡಲಾರಂಭಿಸಿತು. ವರ್ಗಾವಣೆಯ ಅನಂತರ ಆ ಕೈಗಾರಿಕೆಗಳಿಗೆ ಸರ್ಕಾರ ತನ್ನ ನೆರವನ್ನು ಮುಂದುವರಿಸಿತು. ರಾಷ್ಟ್ರಾಭಿವೃದ್ಧಿಗೆ ಅಗತ್ಯವೆನಿಸಿದ ಕೈಗಾರಿಕೆಗಳಿಗೆ ಸಹಾಯ ಮತ್ತು ಪ್ರೋತ್ಸಾಹ ಧನವೂ ಸಂರಕ್ಷಣೆಯೂ ಒದಗಿವೆ. ಕೈಗಾರಿಕೆಗಳಿಗೆ ಬಂಡವಾಳ ಒದಗಿಸಲು ಕೈಗಾರಿಕಾ ಬ್ಯಾಂಕುಗಳನ್ನು ಸ್ಥಾಪಿಸಿ, ಅವಶ್ಯವೆನಿಸಿದ ವಿದೇಶಿ ಬಂಡವಾಳ ಮತ್ತು ತಾಂತ್ರಿಕ ಸೌಲಭ್ಯವನ್ನು ದೊರಕಿಸಲು ಸರ್ಕಾರ ನೆರವಾಗಿದೆ. ಕೈಗಾರಿಕಾ ಸಂಶೋಧನೆಗೆ ವಿಶೇಷ ಹಣ ವೆಚ್ಚ ಮಾಡಿದೆ.

ಚೀನ, ರಷ್ಯಗಳೊಡನೆ ನಡೆದ ಯುದ್ಧಗಳೂ ಒಂದನೆಯ ಮಹಾಯುದ್ಧವೂ ಜಪಾನಿನ ಕೈಗಾರಿಕಾಭಿವೃದ್ಧಿಗೆ ವಿಶೇಷ ಅವಕಾಶ ನೀಡಿದವು. ಆದರೆ ಯುದ್ಧಾನಂತರ ಪಾಶ್ಚಾತ್ಯ ರಾಷ್ಟ್ರಗಳ ಪೈಪೋಟಿಯಿಂದ ಜಪಾನಿನ ಕೈಗಾರಿಕಾ ವಸ್ತುಗಳಿಗೆ ಬೇಡಿಕೆ ಇಳಿಯಿತು. 1923ರ ಭೂಕಂಪದಿಂದ ಕೈಗಾರಿಕೆಗಳಿಗೆ ಅಪಾರ ನಷ್ಟವುಂಟಾಯಿತು. 1929ರ ಆರ್ಥಿಕ ಮುಗ್ಗಟ್ಟಿನಿಂದ ಕೈಗಾರಿಕೆಗಳು ಕಷ್ಟಕ್ಕೀಡಾದುವು. ದೇಶದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಿತು.

ಆಗ ಸರ್ಕಾರ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಕೈಗೊಂಡ ಕ್ರಮಗಳೆಂದರೆ ಬೃಹತ್ ಕೈಗಾರಿಕೆಗಳ ಉತ್ಪನ್ನದ ನಿಯಂತ್ರಣ ಮತ್ತು ಬೆಲೆಗಳ ನಿಗದಿ. ಕೈಗಾರಿಕೆಗಳ ಆಧುನೀಕರಣವನ್ನು ಪ್ರೋತ್ಸಾಹಿಸಿ, ರಫ್ತು ಕೈಗಾರಿಕೆಗಳನ್ನು ಕೇಂದ್ರೀಯ ಹತೋಟಿಗೆ ಒಳಪಡಿಸಲಾಯಿತು. ರೇಷ್ಮೆ ಕೈಗಾರಿಕೆಗೆ ಸಹಾಯಧನ ನೀಡಿತು. ಅಗ್ಗದ ನೀತಿಗೆ ಅನುಗುಣವಾಗಿ ಯೆನ್‌ಅನ್ನು ಅಪಮೌಲ್ಯೀಕರಿಸಿತು.

ಕ್ರ್ಯಾಫ್ಟ್ ಕಾಗದ ತಯಾರಿಕಾ ಯಂತ್ರ

ಈ ಕಾರ್ಯಕ್ರಮಗಳಿಂದ ಜಪಾನಿನಲ್ಲಿ ಇತರ ದೇಶಗಳಿಗಿಂತಲೂ ಮುಂಚೆಯೇ ಕೈಗಾರಿಕೆಗಳು ಚೇತರಿಸಿಕೊಂಡುವು. ವಿಶ್ವಮಾರುಕಟ್ಟೆಯಲ್ಲಿ ಜಪಾನಿನ ಪೈಪೋಟಿ ತೀವ್ರಗೊಂಡಿತು. ಇದರಿಂದ ತೊಂದರೆಗೊಳಗಾದ ಬ್ರಿಟನ್ ಮುಂತಾದ ದೇಶಗಳು ಜಪಾನನ್ನು ಕಾರ್ಮಿಕ ಶೋಷಣೆ ಮತ್ತು ಅಯುಕ್ತ ವ್ಯಾಪಾರ ನಡವಳಿಕೆಯ ದೇಶವೆಂದು ದೂಷಿಸಿದುವು. ಜಪಾನಿನ ಕೈಗಾರಿಕೆಗಳ ಉತ್ತಮ ವ್ಯವಸ್ಥೆ, ಕಾರ್ಮಿಕರ ನಿಷ್ಠಾವಂತ ಸೇವೆ ಮತ್ತು ದೇಶಪ್ರೇಮ, ಸರ್ಕಾರದ ಸತತ ಸಹಾಯ ಮತ್ತು ಪ್ರೋತ್ಸಾಹ ಹಾಗೂ ಕೆಲವು ಸ್ಥಳೀಯ ಸೌಲಭ್ಯಗಳು–ಇವೂ ಜಪಾನಿನ ಕೈಗಾರಿಕೆಗಳ ಚೇತರಿಕೆಗೆ ಕಾರಣ.

ಜಪಾನಿನ ಉದ್ಯಮಗಳು ಜೈಬಟ್ಸು ಎಂಬ ಉದ್ಯಮಿ ಕುಟುಂಬಗಳ ಒಡೆತನಕ್ಕೆ ಒಳಪಟ್ಟಿದ್ದುವು. ಮಿತ್ಸುಯಿ, ಮಿತ್ಸುಬಿಷಿ, ಸುಮಿಟೋಮೊ, ಯಾಸುಡೊ ಎಂಬವು ಇವುಗಳಲ್ಲಿ ಮುಖ್ಯವಾದವು. ಇವು ಕೈಗಾರಿಕೆ ಮಾತ್ರವಲ್ಲದೆ ವಾಣಿಜ್ಯ, ಬ್ಯಾಂಕಿಂಗ್, ನೌಕೋದ್ಯಮ ಮುಂತಾದ ಇತರೆ ಕ್ಷೇತ್ರಗಳನ್ನೂ ಕೇಂದ್ರೀಕರಿಸಿ, ಅವುಗಳ ಏಕಸ್ವಾಮ್ಯ ಪಡೆದಿದ್ದುವು. ಇವುಗಳ ಪೈಪೋಟಿಯನ್ನೆದುರಿಸುವುದು ಇತರ ಸಂಸ್ಥೆಗಳಿಗೆ ಬಹಳ ಕಷ್ಟವಾಗಿತ್ತು. ಜಪಾನನ್ನು ಎರಡನೆಯ ಮಹಾಯುದ್ಧಕ್ಕೆ ಎಳೆಯಲು ಇವು ಮುಖ್ಯ ಕಾರಣ.

ಜಪಾನಿನ ಕೈಗಾರಿಕಾ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರ ಪ್ರಶಂಸನೀಯವಾದ್ದು. ಇವು ವಿದ್ಯುಚ್ಛಕ್ತಿ ಮತ್ತು ಸಣ್ಣ ಯಂತ್ರಗಳನ್ನು ಉಪಯೋಗಿಸಿ ಅತ್ಯಂತ ದಕ್ಷತೆಯಿಂದ ಕೆಲಸ ಮಾಡುತ್ತಿವೆ. ಸಣ್ಣ ಕೈಗಾರಿಕೆಗಳೂ ಬೃಹತ್ ಕೈಗಾರಿಕೆಗಳೂ ಪರಸ್ಪರ ಪೂರಕವಾಗಿ ಬೆಳೆಯಲು ಬೃಹತ್ ಕೈಗಾರಿಕೆಗಳಂತೆ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೂ ಸರ್ಕಾರ ಎಲ್ಲ ಬಗೆಯ ಸಹಾಯ ನೀಡಿದೆ.

ಹೀಗೆ ಹೆಮ್ಮೆ ಪಡಬಹುದಾದ ಜಪಾನಿನ ಕೈಗಾರಿಕಾ ಪ್ರಗತಿ ದುರಭಿಮಾನಕ್ಕೆ ಎಡೆ ಕೊಟ್ಟಿತು. ಬೆಳೆಯುತ್ತಿದ್ದ ಆರ್ಥಿಕ ವ್ಯವಸ್ಥೆ ರಾಜ್ಯವಿಸ್ತರಣಾಕಾಂಕ್ಷೆಗೆ ಎಡೆಕೊಟ್ಟಿತು. ಅದು ಆಕ್ರಮಣಶೀಲವಾಯಿತು. ಹಗುರವಾದ ಮತ್ತು ಗ್ರಾಹಕ ವಸ್ತುಗಳಿಗೆ ಪ್ರತಿಯಾಗಿ ಭಾರವಾದ ಉತ್ಪಾದಕ ವಸ್ತುಗಳ ಮತ್ತು ಯುದ್ಧ ಸಲಕರಣೆಗಳ ತಯಾರಿಕೆಗೆ ಪ್ರಾಮುಖ್ಯ ಏರ್ಪಟ್ಟಿತು. ಉಕ್ಕು, ವಿಮಾನಗಳು, ಟ್ರಕ್ಕುಗಳು, ಯುದ್ಧನೌಕೆಗಳು ಮುಂತಾದವುಗಳ ಉತ್ಪಾದನೆ ಅತ್ಯುನ್ನತ ಮಟ್ಟಕ್ಕೇರಿತು.



ನಗೋಯಿಯಾದ ಪ್ಲಾಸ್ಟಿಕ್ ಕಾರ್ಖಾನೆ

ಎರಡನೆಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ಕೈಗಾರಿಕೆಗಳು ಸರ್ಕಾರದ ಭದ್ರ ಹತೋಟಿಗೆ ಒಳಗಾದುವು. ಕಾರ್ಮಿಕರು ಸರ್ಕಾರದ ನಿರ್ದೇಶನದಂತೆ ಕೆಲಸ ಮಾಡುವಂತೆ ಒತ್ತಾಯ ಮಾಡಲಾಯಿತು. ಯುದ್ಧ ಮುಂದುವರಿದಂತೆ ಆರ್ಥಿಕ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಿತು. ಕೈಗಾರಿಕೆಗಳು ಬಾಂಬ್ ದಾಳಿಯಿಂದ ಬಹುಮಟ್ಟಿಗೆ ನಾಶವಾದುವು.

ಯುದ್ಧಾನಂತರ ಮಿತ್ರರಾಷ್ಟ್ರಗಳ ಆಡಳಿತ ಜೈಬಟ್ಸುಗಳನ್ನು ಒಡೆಯಲೇರ್ಪಡಿಸಿ, ಅವುಗಳ ಸಂಸ್ಥೆಗಳ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿಸಿತು. 10 ಭಾರಿ ಉದ್ಯಮಿ ಕುಟುಂಬಗಳು ಇನ್ನು 10 ವರ್ಷಗಳ ಕಾಲ ಕೈಗಾರಿಕಾ ಕ್ಷೇತ್ರಕ್ಕೆ ಪ್ರವೇಶಿಸಕೂಡದೆಂದು ನಿರ್ಬಂಧ ಹಾಕಿತು. ಅವುಗಳ ಮೇಲೆ ಅತ್ಯಧಿಕ ಮಟ್ಟದ ತೆರಿಗೆಗಳನ್ನು ಹಾಕಿತು. ಆರ್ಥಿಕ ವಿಕೇಂದ್ರೀಕರಣವೇ ಈ ನಿರ್ಬಂಧಗಳ ಉದ್ದೇಶವೆಂದು ಜನರಲ್ ಮೆಕಾರ್ಥರನ ಸರ್ಕಾರ ಹೇಳಿದರೂ, ಜಪಾನಿನ ಕೈಗಾರಿಕಾ ಪ್ರಾಬಲ್ಯವನ್ನಡಗಿಸಬೇಕೆಂಬುದೇ ಇದರ ಉದ್ದೇಶವೆಂದು ಜಪಾನೀಯರು ಭಾವಿಸಿದರು. ಈ ನಿರ್ಬಂಧಗಳಿಂದ ಉತ್ಪಾದನೆ ಇಳಿಯಿತು. ಇದರಿಂದ ಎಚ್ಚರಗೊಂಡ ಸರ್ಕಾರ, ಆಗ್ನೇಯ ಏಷ್ಯದಲ್ಲಿ ಕಮ್ಯೂನಿಸ್ಟ್ ಪ್ರಾಬಲ್ಯವನ್ನು ತಡೆಯಲು ಜಪಾನ್ ಬಲವಾದ ಕೈಗಾರಿಕಾ ರಾಷ್ಟ್ರವಾಗಿದ್ದರೆ ಒಳ್ಳೆಯದೆಂದು ಭಾವಿಸಿ, ಕೇವಲ 2 ವರ್ಷಗಳಲ್ಲೇ ತನ್ನ ಜೈಬಟ್ಸು ವಿರೋಧಿ ನೀತಿಯನ್ನು ಕೈಬಿಟ್ಟಿತು. ಅವುಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಿತು. ಜೈಬಟ್ಸು ಕಂಪನಿಗಳು ಶೀಘ್ರವೇ ಒಟ್ಟುಗೂಡಿ, ಮತ್ತೆ ತಮ್ಮ ಪ್ರಾಧಾನ್ಯವನ್ನು ಸ್ಥಾಪಿಸಿಕೊಂಡುವು.

ಕೊರಿಯ ಯುದ್ಧ ಜಪಾನಿನ ಕೈಗಾರಿಕಾ ವಿಸ್ತರಣೆಗೆ ಮತ್ತಷ್ಟು ಅವಕಾಶ ನೀಡಿತು. 1960ರ ವೇಳೆಗೆ ಪಶ್ಚಿಮ ಜರ್ಮನಿಯಂತೆ ಜಪಾನ್ ಕೂಡ ಮಹಾ ಕೈಗಾರಿಕಾ ರಾಷ್ಟ್ರವಾಗಿ ಪುನಃ ತಲೆಯೆತ್ತಿತು. ಜವಳಿ, ಕಾಗದ, ಉಕ್ಕು, ನೌಕೋದ್ಯಮ, ಮೋಟಾರು ತಯಾರಿಕೆ, ರೇಡಿಯೋ, ಟೆಲಿವಿಷನ್, ಪ್ಲಾಸ್ಟಿಕ್, ಭಾರವಾದ ವಿದ್ಯುದ್ಯಂತ್ರಗಳು, ರಾಸಾಯನಿಕ ವಸ್ತುಗಳು, ಕೃತಕ ಗೊಬ್ಬರ ಮುಂತಾದ ಅನೇಕ ಕೈಗಾರಿಕೆಗಳು ಅದ್ಭುತ ಪ್ರಗತಿ ಸಾಧಿಸಿವೆ.

ಮುಂದಿನ ಕಾಲು ಶತಮಾನದ ಕೈಗಾರಿಕಾಭಿವೃದ್ಧಿಗೆ ಜಪಾನ್ ಈಗಾಗಲೇ ಸಜ್ಜಾಗುತ್ತಿದೆ. ವಿಶ್ವದಾದ್ಯಂತ ಇಂಧನ ಮತ್ತು ಕಚ್ಚಾ ಪದಾರ್ಥಗಳ ಕೊರತೆ ಇರುವುದರಿಂದ, ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲಿನ ಆಮದಿಗಾಗಿ ಅನೇಕ ದೇಶಗಳೊಡನೆ ಅದು ದೀರ್ಘಾವಧಿ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ. ಇನ್ನು ಕೆಲವು ಲೋಹಗಳು ಮತ್ತು ಖನಿಜಗಳನ್ನು ಪಡೆಯಲು ಕೆಲವು ವಿದೇಶೀ ಗಣಿ ಕಂಪನಿಗಳಲ್ಲಿ ಬಂಡವಾಳ ಹೂಡಿದೆ. ಇದೇ ಉದ್ದೇಶಕ್ಕಾಗಿಯೇ ಕೆಲವು ದೇಶಗಳಿಗೆ ಆರ್ಥಿಕ ನೆರವು ನೀಡಿದೆ. ಉತ್ಪಾದನ ಕ್ರಮಗಳನ್ನು ಉತ್ತಮಪಡಿಸಲು ಕೆಲವು ಐರೋಪ್ಯ ರಾಷ್ಟ್ರಗಳೊಡನೆ ತಾಂತ್ರಿಕ ಒಪ್ಪಂದಗಳನ್ನು ಮಾಡಿಕೊಂಡಿದೆ. ಜಪಾನ್ ಈಗಾಗಲೆ ಪೂರ್ಣೋದ್ಯೋಗ ಮಟ್ಟವನ್ನು ಮೀರಿದೆ. ಕಾರ್ಮಿಕರ ಅಭಾವ ಮತ್ತು ಅಧಿಕ ವೇತನ ಮಟ್ಟ ಅಲ್ಲಿಯ ಕೈಗಾರಿಕೆಗಳಿಗೆ ದೊಡ್ಡ ಸಮಸ್ಯೆ. ಇದನ್ನು ಪರಿಹರಿಸಲು ದಕ್ಷ ಹಾಗೂ ಅಗ್ಗದ ಕಾರ್ಮಿಕ ಬಲ ಅಧಿಕ ಪ್ರಮಾಣದಲ್ಲಿರುವ ಭಾರತದಂಥ ದೇಶಗಳ ಸಹವರ್ತಿಯಾಗಿ, ತನ್ನ ಕೆಲವು ಕೈಗಾರಿಕೆಗಳನ್ನು ಅಲ್ಲಿಗೆ ಸ್ಥಳಾಂತರಿಸಲೂ ಹೊಸ ಉದ್ಯಮಗಳನ್ನು ಸಂಯುಕ್ತ ಉದ್ಯಮಗಳಾಗಿ ಅಲ್ಲಿ ಸ್ಥಾಪಿಸಲೂ ಪ್ರಯತ್ನಿಸುತ್ತಿದೆ. ಇನ್ನು ಮುಂದೆ ಈವರೆಗಿನ ಸಾಂಪ್ರದಾಯಿಕ ಕೈಗಾರಿಕೆಗಳಿಗೆ ಪ್ರತಿಯಾಗಿ ಕಂಪ್ಯೂಟರ್‌ಗಳು, ಸಂಪರ್ಕ ಸಾಧನಗಳು, ಪೆಟ್ರೊ ರಾಸಾಯನಿಕ ಕೈಗಾರಿಕೆಗಳು ಮುಂತಾದ ಬಂಡವಾಳ ಪ್ರಧಾನವಾದ ಅತ್ಯಾಧುನಿಕ ಕೈಗಾರಿಕೆಗಳಿಗೆ ಜಪಾನ್ ಹೆಚ್ಚು ಗಮನ ಕೊಡುವ ನಿರೀಕ್ಷೆಯುಂಟು.

1990ರ ದಶಕದಲ್ಲಿ ಜಪಾನಿನ ಬೆಳವಣಿಗೆ ಮಂದವಾಯಿತು. ಆರ್ಥಿಕ ಬೆಳೆವಣಿಗೆಯನ್ನು ಪುನರುಜ್ಜೀವನಗೊಳಿಸುವ ಸರ್ಕಾರದ ಪ್ರಯತ್ನ ಫಲ ನೀಡಲಿಲ್ಲ. 2000ದ ಜಾಗತಿಕ ಮಂದಗತಿಯಿಂದ ಜಪಾನಿನ ಬೆಳೆವಣಿಗೆಯೂ ಕುಂಠಿತವಾಯಿತು. ಆರ್ಥಿಕತೆ 2005ರಲ್ಲಿ ಸುಧಾರಿಸಲು ಆರಂಭಿಸಿತು. 2011ರಲ್ಲಿ ಜಪಾನ್ ಪ್ರಪಂಚದಲ್ಲಿ ಮೂರನೇ ಬೃಹತ್ ರಾಷ್ಟ್ರೀಯ ಅರ್ಥವ್ಯವಸ್ಥೆಯೆನ್ನಲಾಗಿದೆ. ಜಪಾನ್ ತಾಂತ್ರಿಕವಾಗಿ ಮುಂದುವರಿದ ಮೋಟಾರ್ ಉತ್ಪಾದಕ ರಾಷ್ಟ್ರಗಳಲ್ಲಿ ಒಂದು. ಅಲ್ಲದೆ ಎಲೆಕ್ಟ್ರಾನಿಕ್ಸ್, ಯಂತ್ರಸಾಧನಗಳು, ಉಕ್ಕು, ರಾಸಾಯನಿಕಗಳನ್ನು ಉತ್ಪಾದಿಸುತ್ತದೆ. 2010ರಲ್ಲಿ ಜಪಾನಿನ ಕಾರ್ಮಿಕ ಬಲ 65.9 ಮಿಲಿಯನ್. 2007ರಲ್ಲಿ ಆರರಲ್ಲಿ ಒಬ್ಬ ಜಪಾನಿ–ಅಥವಾ ಸು.20ಮಿಲಿಯನ್ ಜನ–ಬಡತನದಲ್ಲಿದ್ದಾರೆ.

**ವಿದೇಶೀ ವ್ಯಾಪಾರ :** ವಿದೇಶೀ ಸಂಪರ್ಕ ಪ್ರಾರಂಭವಾದ ತರುಣದಲ್ಲಿ ಜಪಾನ್ ಕೃಷಿವಸ್ತುಗಳನ್ನು ರಫ್ತು ಮಾಡಿ, ಕೈಗಾರಿಕಾ ಸಿದ್ಧವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಕಾಲಕ್ರಮದಲ್ಲಿ ಜಪಾನಿನಲ್ಲೇ ಕೈಗಾರಿಕೆಗಳು ಪ್ರಾರಂಭವಾದಾಗ ಅದು ಕಚ್ಚಾಸಾಮಗ್ರಿಯನ್ನೂ ಬಂಡವಾಳ ವಸ್ತುಗಳನ್ನೂ ಆಮದು ಮಾಡಿಕೊಳ್ಳಬೇಕಾಯಿತು. ಜನಸಂಖ್ಯೆ ಹೆಚ್ಚಿದಂತೆ, ಆಹಾರ ಪದಾರ್ಥಗಳ ಆಮದೂ ಅಗತ್ಯವಾಯಿತು. ಇದಕ್ಕೆ ಪ್ರತಿಯಾಗಿ ಅನುಭೋಗ ವಸ್ತುಗಳು, ಕರಕುಶಲ ವಸ್ತುಗಳು, ರೇಷ್ಮೆ, ಪಿಂಗಾಣಿ ಸಾಮಾನುಗಳು ಮುಂತಾದವನ್ನು ರಫ್ತುಮಾಡತೊಡಗಿತು. ವ್ಯಾಪಾರ ನಡೆಯುತ್ತಿದ್ದುದು ಬಹಳಮಟ್ಟಿಗೆ ಏಷ್ಯ ಮತ್ತು ಅಮೆರಿಕಗಳೊಡನೆ.

ಒಂದನೆಯ ಮಹಾಯುದ್ಧದ ಸಮಯದಲ್ಲಿ ಪಾಶ್ಚಾತ್ಯ ಪೈಪೋಟಿ ಇಲ್ಲದಿದ್ದುದರಿಂದ ಜಪಾನಿನ ವ್ಯಾಪಾರ ವಿಸ್ತರಿಸಿತು. ಆದರೆ ಯುದ್ಧಾನಂತರ ಪೈಪೋಟಿ ಪ್ರಾರಂಭವಾಯಿತು. 1923ರ ಭೂಕಂಪ ಮತ್ತು 1929ರ ಆರ್ಥಿಕ ಮುಗ್ಗಟ್ಟು ಜಪಾನಿನ ವ್ಯಾಪಾರಕ್ಕೆ ಧಕ್ಕೆಯುಂಟುಮಾಡಿದುವು. ಆದರೆ ಸರ್ಕಾರ ಕೈಗಾರಿಕೆಗಳ ಆಧುನೀಕರಣ ಮತ್ತು ಸರಕುಗಳ ರಫ್ತಿಗೆ ಪ್ರೋತ್ಸಾಹ ನೀಡಿದ್ದರಿಂದ, ಇತರ ರಾಷ್ಟ್ರಗಳಿಗಿಂತ ಮುಂಚೆಯೇ ಜಪಾನಿನ ವಿದೇಶೀ ವ್ಯಾಪಾರ ಚೇತರಿಸಿಕೊಂಡಿತು. ಹತ್ತಿ ಜವಳಿ ವ್ಯಾಪಾರದಲ್ಲಿ ಜಪಾನ್ ಬ್ರಿಟನ್ನಿಗೆ ಪ್ರಬಲ ಪ್ರತಿಸ್ಪರ್ಧಿಯಾಯಿತು. ಯುದ್ಧಕಾಲದಲ್ಲಿ ವಿದೇಶೀ ವ್ಯಾಪಾರ ಸಂಪೂರ್ಣವಾಗಿ ಸರ್ಕಾರದ ಹತೋಟಿಗೆ ಒಳಗಾಯಿತು.

ಯುದ್ಧಾನಂತರ 2 ವರ್ಷ ವಿದೇಶೀ ವ್ಯಾಪಾರದ ಮೇಲೆ ಸರ್ಕಾರದ ನಿರ್ಬಂಧವಿತ್ತು. ಆ ಬಳಿಕ ನಿರ್ಬಂಧಗಳನ್ನು ತೆಗೆದು ಮೊದಲಿನಂತೆ ಖಾಸಗಿಯವರಿಗೇ ಬಿಡಲಾಯಿತು. ಅಮೆರಿಕ ಯುದ್ಧ ಪರಿಹಾರವನ್ನು ಕೇಳುವುದಕ್ಕೆ ಪ್ರತಿಯಾಗಿ ತಾನೇ 200 ಕೋಟಿ ಡಾಲರ್ ನೆರವನ್ನು ಬಹುಮಟ್ಟಿಗೆ ಧಾನ್ಯರೂಪದಲ್ಲಿ ನೀಡಿತು. ಕಚ್ಚಾಸಾಮಗ್ರಿಯ ಆಮದಿಗೂ ಅಧಿಕ ಪ್ರಮಾಣದಲ್ಲಿ ಧನಸಹಾಯ ಮಾಡಿತು. ಜಪಾನಿನಲ್ಲಿದ್ದ ಅಮೆರಿಕದ ಪಡೆಗಳಿಗೆ ಬೇಕಿದ್ದ ಸಾಮಗ್ರಿಗಳನ್ನು ಜಪಾನಿನಲ್ಲೇ ಕೊಳ್ಳಲಾಯಿತು. ಇದಕ್ಕಾಗಿ 1952ರಿಂದ 1956ರ ವರೆಗೆ ಜಪಾನಿಗೆ 340 ಕೋಟಿ ಡಾಲರ್ ಕೊಡಲಾಯಿತು.

ಈ ಸಹಾಯಕ ಕ್ರಮಗಳಿಂದ ಜಪಾನ್ ವಿದೇಶೀ ವ್ಯಾಪಾರದಲ್ಲಿ ತನ್ನ ಯುದ್ಧಪೂರ್ವದ ಸ್ಥಾನ ಗಳಿಸಿತು. ಯುದ್ಧಕಾಲದಲ್ಲಿ ತೆರವು ಮಾಡಿದ್ದ ಏಷ್ಯನ್ ಮತ್ತು ಆಫ್ರಿಕನ್ ಮಾರುಕಟ್ಟೆಗಳಿಗೆ ಪುನಃ ಯಶಸ್ವಿಯಾಗಿ ಪ್ರವೇಶಿಸಿತು. ಅಮೆರಿಕವನ್ನು ಅತಿಯಾಗಿ ಅವಲಂಬಿಸದೆ ಇತರ ದೇಶಗಳೊಡನೆಯೂ ವ್ಯಾಪಾರಸಂಬಂಧವನ್ನು ಕುದುರಿಸಿಕೊಳ್ಳಲು ಉಪಕ್ರಮಿಸಿತು. ಈ ಪ್ರಯತ್ನದ ಫಲವಾಗಿ ಜಪಾನಿನ ವಿದೇಶೀ ವ್ಯಾಪಾರ ಅಭಿವೃದ್ಧಿ ಹೊಂದಿತು. 1972ರಲ್ಲಿ ಅದರ ರಫ್ತು 2,475.8 ಕೋಟಿ ಡಾಲರ್, ಆಮದು 1,620.6 ಕೋಟಿ ಡಾಲರ್; ವ್ಯಾಪಾರ ಹೆಚ್ಚಳ 855,2 ಕೋಟಿ ಡಾಲರ್.

ಈ ಹೆಚ್ಚಳದ ಪ್ರವೃತ್ತಿ ಹಲವು ವರ್ಷಗಳಿಂದಲೂ ಮುಂದುವರಿಯುತ್ತಿದ್ದುದರಿಂದ ಜಪಾನಿನೊಡನೆ ವಿಶೇಷ ವ್ಯಾಪಾರಸಂಬಂಧ ಹೊಂದಿದ್ದ ಅಮೆರಿಕ ಬಿಕ್ಕಟ್ಟನ್ನೆದುರಿಸ ಬೇಕಾಯಿತು. ಈ ಬಿಕ್ಕಟ್ಟಿನ ಪರಿಹಾರಕ್ಕಾಗಿ ಜಪಾನ್ ಯೆನ್ ಮೌಲ್ಯವನ್ನು ಅಧಿಕಗೊಳಿಸಿ,

ಆ ಮೂಲಕ ಆಮದನ್ನು ಹೆಚ್ಚಿಸಿ, ರಫ್ತನ್ನು ಕಡಿಮೆ ಮಾಡಲು ಪ್ರಯತ್ನಿಸಿದೆ. ಇಷ್ಟರಿಂದಲೇ ವ್ಯಾಪಾರ ಸಮಸ್ಯೆ ಬಗೆಹರಿಯದೆಂದರಿತು ಮುಂದಿನ 5 ವರ್ಷಗಳಲ್ಲಿ ರಫ್ತು ಪ್ರೋದನೆಗೆ ಬದಲು ಜಪಾನಿನ ಜನಜೀವನವನ್ನು ಉತ್ತಮಪಡಿಸುವ ಕಾರ್ಯಕ್ರಮಕ್ಕೆ ಹೆಚ್ಚು ಗಮನ ಕೊಡಲು ನಿರ್ಧರಿಸಿದೆ. ಈ ಅಭಿವೃದ್ಧಿ ಯೋಜನೆಗೆ ತನ್ನ ರಾಷ್ಟ್ರಾದಾಯದ ಶೇ. 12.6ರಷ್ಟನ್ನು ಉಪಯೋಗಿಸಲು ಉದ್ದೇಶಿಸಿದೆ. ವಿಶ್ವಬ್ಯಾಂಕು, ಅಂತಾರಾಷ್ಟ್ರೀಯ ಹಣ ನಿಧಿ ಮತ್ತು ಏಷ್ಯದ ಅಭಿವೃದ್ಧಿ ಬ್ಯಾಂಕಿನ ಮೂಲಕ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೂ ನೆರವಾಗುತ್ತಿದೆ. ಆದರೆ 1973ರಲ್ಲಿ ಸಂಭವಿಸಿದ ತೈಲ ಬಿಕ್ಕಟ್ಟಿನಿಂದಾಗಿ ಮತ್ತು ಅಂತಾರಾಷ್ಟ್ರೀಯ ಹಣವ್ಯವಸ್ಥೆಯ ಅಸ್ಥಿರತೆಯಿಂದಾಗಿ ಜಪಾನಿನ ಆರ್ಥಿಕತೆಯ ಮೇಲೂ ತೀವ್ರ ಪರಿಣಾಮಗಳುಂಟಾಗಿವೆ. 2012ರಲ್ಲಿ, ಜಪಾನಿನದು ಪ್ರಪಂಚದಲ್ಲೇ ಮೂರನೆಯ ಅತಿದೊಡ್ಡ ಅರ್ಥವ್ಯವಸ್ಥೆ (ಮೊದಲ ಎರಡು ದೇಶಗಳೆಂದರೆ ಅಮೆರಿಕ ಮತ್ತು ಚೀನ. 2011ರಲ್ಲಿ 500 'ಫಾರ್ಚೂನ್ 500 ಕಂಪನಿಗಳಲ್ಲಿ, 68 ಜಪಾನಿನಲ್ಲಿ ಇದ್ದುವು. 2011ರಲ್ಲಿ ವಿದೇಶೀ ರಫ್ತು 788 ಬಿಲಿಯನ್ ಡಾಲರುಗಳು, ಆಮದು 808.4 ಬಿಲಿಯನ್ ಡಾಲರುಗಳು.

ಜಪಾನಿನ ಅತ್ಯಂತ ಬೃಹತ್ತಾದ ಮತ್ತು ಹೆಸರಾಂತ ಉದ್ಯಮಗಳೆಂದರೆ ಟೊಯೋಟ, ನಿಂಟೆಂಡೊ, ಕ್ಯಾನನ್, ಹೊಂಡ, ಸೋನಿ, ಪ್ಯಾನಸಾನಿಕ್, ತೋಷಿಬ, ಶಾರ್ಪ್, ನಿಪ್ಪಾನ್ ಸ್ಟೀಲ್, ನಿಪ್ಪಾನ್ ಆಯಿಲ್, ಮೊದಲಾದವು.

**ಸಾರಿಗೆ :** 1. ರಸ್ತೆಸಾರಿಗೆ : ಮೇಜಿ ಅಧಿಕಾರ ಬರುವ ವೇಳೆಗೆ ರಕ್ಷಣೆಗೆ ಅಗತ್ಯವಾದ ಕೆಲವು ಹೆದ್ದಾರಿಗಳು ಮಾತ್ರ ಇದ್ದುವು. ಆದ್ದರಿಂದ ಮೇಜಿ ಆಳ್ವಿಕೆಯಲ್ಲಿ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳು, ಜಿಲ್ಲಾ ಹಾಗೂ ಸ್ಥಳೀಯ ರಸ್ತೆಗಳು ಎಂದು ವಿಂಗಡಿಸಿ, ಹೆದ್ದಾರಿಗಳ ನಿರ್ಮಾಣಕ್ಕಾಗಿ ಸಾರ್ವಜನಿಕ ಸಾಲ ಎತ್ತಲಾಯಿತು. 1950ರ ವೇಳೆಗೆ 96,4800 ಕಿಮೀ ರಸ್ತೆಗಳಿದ್ದರೂ ಅವುಗಳಲ್ಲಿ 24120 ಕಿಮೀ ಮಾತ್ರ ಹೆದ್ದಾರಿಗಳಾಗಿದ್ದುವು. ಸಮುದ್ರಸಾಮೀಪ್ಯವಿರುವುದರಿಂದ ಜಪಾನಿನಲ್ಲಿ ರಸ್ತೆಗಳ ಅಭಿವೃದ್ಧಿಗೆ ಸಾರ್ವಜನಿಕ ಒತ್ತಾಯ ಅಷ್ಟಾಗಿ ಇಲ್ಲ. ಆದರೂ ಮೋಟಾರು ಕೈಗಾರಿಕೆ ಅದ್ಭುತ ಪ್ರಗತಿ ಸಾಧಿಸಿದೆ. ವಾಣಿಜ್ಯ ವಾಹನಗಳನ್ನು ತಯಾರಿಸುವ ದೇಶಗಳಲ್ಲಿ ಜಪಾನಿನದು ಪ್ರಥಮ ಸ್ಥಾನ. ಅವು ಬಹು ಮಟ್ಟಿಗೆ ರಫ್ತಾಗುತ್ತವೆ. ಒಟ್ಟಾರೆ 1.2 ಮಿಲಿಯನ್ ಕಿಲೋಮೀಟರ್ ರಸ್ತೆ ನಿರ್ಮಿಸಲಾಗಿದೆ.

2. ರೈಲು ಸಾರಿಗೆ : 1869ರಲ್ಲಿ ಜಪಾನ್ ಸರ್ಕಾರ ಕ್ಷಾಮ ನಿವಾರಣೆಗೆಂದು ರೈಲು ನಿರ್ಮಾಣ ಕಾರ್ಯ ಪ್ರಾರಂಭಿಸಿತು. ಇದಕ್ಕಾಗಿ ಇಂಗ್ಲೆಂಡಿನಲ್ಲಿ ಹತ್ತು ಲಕ್ಷ ಪೌಂಡ್ ಸಾಲವೆತ್ತಿ, ಅಲ್ಲಿಂದಲೇ ರೈಲ್ವೆ ಸಲಕರಣೆಗಳು ಮತ್ತು ತಾಂತ್ರಿಕ ಸಿಬ್ಬಂದಿಯನ್ನು ಪಡೆಯಲಾಯಿತು. 1872ರಲ್ಲಿ ಟೋಕಿಯೋ ಮತ್ತು ಯೋಕಹಾಮಾ ನಡುವೆ ಪ್ರಥಮ ರೈಲುಮಾರ್ಗ ನಿರ್ಮಿಸಲಾಯಿತು. 1880ರ ವೇಳೆಗೆ ಖಾಸಗಿ ಕಂಪೆನಿಗಳೂ ರೈಲುಮಾರ್ಗ ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ವಹಿಸಿದುವು. ಕಂಪೆನಿಗಳು ಹೆಚ್ಚಿದಂತೆ ಅವುಗಳಲ್ಲಿ ಪರಸ್ಪರ ಹೊಂದಾಣಿಕೆ ಕಷ್ಟವಾಯಿತು. ಅನೇಕ ಅನಗತ್ಯ ರೈಲುಮಾರ್ಗಗಳು ನಿರ್ಮಾಣವಾದುವು. ನಷ್ಟ

ಟೋಕಿಯೋದ ಮಾನೋ ರೈಲು. ಇದು ನಗರದ ಕೇಂದ್ರಭಾಗಕ್ಕೂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ನಡುವೆ ಓಡುತ್ತದೆ

ಉಂಟಾಯಿತು. ಆದ್ದರಿಂದ 1906ರಲ್ಲಿ ಪ್ರಮುಖ ರೈಲುಮಾರ್ಗಗಳನ್ನು ಸರ್ಕಾರವೇ ವಹಿಸಿಕೊಂಡು, ಉಪಮಾರ್ಗಗಳನ್ನು ಮಾತ್ರ ಖಾಸಗಿಯವರಿಗೆ ಬಿಟ್ಟಿತು. ಎರಡನೆಯ ಮಹಾಯುದ್ಧಕ್ಕೆ ಮುಂಚೆ ಜಪಾನಿನಲ್ಲಿ 17,000 ಕಿಮೀ ರೈಲುಮಾರ್ಗಗಳು ಸರ್ಕಾರಕ್ಕೂ 7,000 ಕಿಮೀ. ಖಾಸಗಿ ಒಡೆತನಗಳಿಗೂ ಸೇರಿದ್ದುವು. ಈಗ ಜಪಾನ್‌ನಲ್ಲಿ 27,268 ಕಿಮೀ ರೈಲುಮಾರ್ಗವಿದೆ. ಜಪಾನಿನಲ್ಲಿ ಸರಕಿಗಿಂತಲೂ ಪ್ರಯಾಣಿಕರಿಂದಲೇ ರೈಲುಗಳಿಗೆ ಹೆಚ್ಚು ವರಮಾನ ಬರುತ್ತದೆ. ಸರಕು ವಿಶೇಷವಾಗಿ ಕರಾವಳಿ ನೌಕಾಸಾರಿಗೆಯ ಮೂಲಕ ಸಾಗುತ್ತದೆ. 'ತೊಕೈಡೋ ಷೆನ್‌ಕನ್‌ಸೆನ್' ಎನ್ನುವುದು ಪ್ರಪಂಚದ ಅತ್ಯಂತ ವೇಗದ 2387.7 ಕಿಮೀ ಉದ್ದದ ರೈಲ್ವೆ ಜಾಲ. ಇದು ಜಪಾನಿನ ಹೊನ್ಸು ಮತ್ತು ಕ್ಯುಷು ದ್ವೀಪಗಳ ಪ್ರಧಾನ ನಗರಗಳಿಗೆ ರೈಲ್ವೆ ಸಂಪರ್ಕ ಕಲ್ಪಿಸುತ್ತದೆ. ಈ ವೇಗದ ರೈಲುಗಳನ್ನು 'ಬುಲೆಟ್ ಟ್ರೇನುಗಳು' ಎಂದು ಕರೆಯುತ್ತಾರೆ. ಇವುಗಳ ಗರಿಷ್ಠ ವೇಗ ಗಂಟೆಗೆ 320 ಕಿಮೀ. ಇಲ್ಲಿ ವರ್ಷಕ್ಕೆ 151 ಮಿಲಿಯನ್ ಪ್ರಯಾಣಿಕರನ್ನು ಸಾಗಿಸುವ ವ್ಯವಸ್ಥೆಯಿದೆ.



ಜಪಾನಿನ ಬುಲೆಟ್ ರೈಲು

3. ಹಡಗು ಸಾರಿಗೆ : ಷೋಗನ್ನರ ಆಳ್ವಿಕೆಯ ಕೊನೆಯ ವೇಳೆಗೇ ದೊಡ್ಡ ಹಡಗುಗಳ ನಿರ್ಮಾಣ ಜಪಾನ್‌ನಲ್ಲಿ ಪ್ರಾರಂಭವಾಗಿತ್ತು. ಆದರೆ ಅವು ಸಾಕಷ್ಟು ಸಂಖ್ಯೆಯಲ್ಲಿರಲಿಲ್ಲ. ಆದ್ದರಿಂದ ಮೇಜಿ ಸರ್ಕಾರ ಮೊದಲು ಹೊರ ದೇಶಗಳಿಂದ ಆಧುನಿಕ ಹಡಗುಗಳನ್ನು ಕೊಂಡು, ಬಳಿಕ ಅವುಗಳ ನಿರ್ಮಾಣಕ್ಕೆ ಗಮನ ಕೊಟ್ಟಿತು. ಕೊಂಡ ಹಡಗುಗಳನ್ನು ಕ್ರಮೇಣ ಖಾಸಗಿಯವರಿಗೆ ಮಾರಿತು. ಹಡಗು ಕಟ್ಟುವ ಕಂಪನಿಗಳಿಗೆ ಸರ್ಕಾರ ಧಾರಾಳವಾಗಿ ಧನಸಹಾಯ ಮಾಡಿತು. 1914ರ ವೇಳೆಗೆ ಜಪಾನಿನಲ್ಲಿ 300 ನೌಕಾನಿರ್ಮಾಣ ಕೇಂದ್ರಗಳಿದ್ದುವು. ನೌಕಾ ಕ್ಷೇತ್ರದಲ್ಲಿ ಜಪಾನ್ ಪ್ರಪಂಚದಲ್ಲಿ 3ನೆಯ ಸ್ಥಾನ ಪಡೆದಿತ್ತು.

1930ರಲ್ಲಿ ನಿರ್ಮಾಣವಾದ ಯೋಕಹಾಮಾದ ಕಾರ್ಗೋ ಮತ್ತು ಪ್ರಯಾಣಿಕರ ಹಡಗು

ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಜಪಾನ್ ತನ್ನ ಹಳೆಯ ಹಡಗುಗಳನ್ನು ಒಡೆದು ಹೊಸವನ್ನು ನಿರ್ಮಿಸುವ ಬೃಹತ್ ಕಾರ್ಯಕ್ರಮ ಕೈಗೊಂಡಿತು. ಇದಕ್ಕಾಗಿ ಖಾಸಗಿ ಕಂಪನಿಗಳಿಗೆ ಸರ್ಕಾರ ಧನಸಹಾಯ ನೀಡಿತು. 1939ರ ವೇಳೆಗೆ ಜಪಾನ್‌ನ ಹಡಗು ಬಲ 56 ಲಕ್ಷ ಟನ್.

ಆದರೆ ಯುದ್ಧದಲ್ಲಿ ಜಪಾನ್‌ನ ಬಹುಪಾಲು ಹಡಗುಗಳೂ ಅನೇಕ ನೌಕಾ ನಿರ್ಮಾಣ ಕೇಂದ್ರಗಳೂ ನಾಶವಾದುವು. ಯುದ್ಧ ಮುಗಿದಾಗ ಜಪಾನಿನ ಹಡಗು ಬಲ 14 ಲಕ್ಷ ಟನ್. ಅವುಗಳಲ್ಲಿ ಹಲವು ಸಮುದ್ರಯಾನಕ್ಕೆ ಯೋಗ್ಯವಾಗಿರಲಿಲ್ಲ. ಆದರೆ ಯುದ್ಧಾನಂತರ ಹಡಗುಗಳ ದುರಸ್ತಿ ಮತ್ತು ನಿರ್ಮಾಣಕ್ಕೆ ಗಮನ ಕೊಟ್ಟದ್ದರಿಂದ 1969ರ ವೇಳೆಗೆ 86 ಲಕ್ಷ ಟನ್ ಹಡಗುಬಲವಿತ್ತು. ಪ್ರಪಂಚದ ಹೊಸ ಹಡಗು ನಿರ್ಮಾಣ ಕಾರ್ಯದ ಶೇ. 48ರಷ್ಟು ಜಪಾನಿನಲ್ಲಿ ನಡೆಯುತ್ತಿತ್ತು.

4. ವಾಯು ಸಾರಿಗೆ : ಜಪಾನ್‌ನಲ್ಲಿ ನಾಗರಿಕ ವಾಯುಯಾನಕ್ಕಾಗಿ 1929ರ ಅನಂತರ ಕೆಲವು ಖಾಸಗಿ ಕಂಪನಿಗಳು ತಲೆಯೆತ್ತಿದ್ದುವು. ಬಳಿಕ ಅವು ಒಟ್ಟುಗೂಡಿದುವು. ಜಪಾನ್ ಏರ್‌ವೇಸ್ ಕಂಪನಿ ಸ್ಥಾಪಿತವಾಯಿತು. ಯುದ್ಧಕಾಲದಲ್ಲಿ ನಾಗರಿಕ ವಾಯುಪಡೆಯೂ ಸೇನೆಯ ವಶದಲ್ಲಿತ್ತು. ಯುದ್ಧಾನಂತರವೂ 1951ರ ವರೆಗೆ ನಾಗರಿಕ ವಾಯುಯಾನವನ್ನು ನಿಲ್ಲಿಸಲಾಗಿತ್ತು. 1951ರಿಂದ ಅಂತರ್ದೇಶೀಯ ಮತ್ತು 1954ರಿಂದ ಅಂತಾರಾಷ್ಟ್ರೀಯ ವಾಯುಯಾನ ಇದೆ. ಇಲ್ಲಿ ಒಟ್ಟು 173 ವಿಮಾನ ನಿಲ್ದಾಣಗಳಿವೆ.

**ಬ್ಯಾಂಕು ವ್ಯವಸ್ಥೆ ಮತ್ತು ಹಣಕಾಸು :** ಜಪಾನ್‌ನಲ್ಲಿ ಬ್ಯಾಂಕುಗಳನ್ನು ಅಮೆರಿಕ ಮತ್ತು ಐರೋಪ್ಯ ಮಾದರಿಯಲ್ಲಿ ಸ್ಥಾಪಿಸಿದ್ದರೂ ಅವನ್ನು ಸ್ಥಳೀಯ ಪರಿಸ್ಥಿತಿಗೆ ಹೊಂದಿಸಿದೆ. 1882ರಲ್ಲಿ ಬೆಲ್ಜಿಯಮ್‌ನ ಕೇಂದ್ರ ಬ್ಯಾಂಕಿನ ಮಾದರಿಯಲ್ಲಿ ಬ್ಯಾಂಕ್ ಆಫ್ ಜಪಾನ್ ಎಂಬ ಕೇಂದ್ರ ಬ್ಯಾಂಕನ್ನು ಸ್ಥಾಪಿಸಲಾಯಿತು. ಇದು ಸರ್ಕಾರ ಮತ್ತು ಖಾಸಗಿ ಬಂಡವಾಳ ಪಡೆದಿದ್ದ ಕೂಡು ಬಂಡವಾಳ ಸಂಸ್ಥೆಯಾಗಿತ್ತು. ಇದಕ್ಕೆ ಮುಂಚೆ ವಾಣಿಜ್ಯ ಬ್ಯಾಂಕುಗಳೇ ನೋಟು ಚಲಾವಣೆಯನ್ನೂ ಮಾಡುತ್ತಿದ್ದುವು. ಆದರೆ ಬ್ಯಾಂಕ್ ಆಫ್ ಜಪಾನ್ ಸ್ಥಾಪನೆಯಾದ ಅನಂತರ ಅದಕ್ಕೆ ನೋಟು ಚಲಾವಣೆಯ ಏಕಸ್ವಾಮ್ಯ ಮತ್ತು ಇತರ ಕೇಂದ್ರ ಬ್ಯಾಂಕಿಂಗ್ ಕಾರ್ಯಭಾರಗಳನ್ನು ವಹಿಸಲಾಯಿತು. 1885ರಲ್ಲಿ ಚಿನ್ನ ಮತ್ತು ನಿರ್ದಿಷ್ಟ ಪ್ರತಿಭೂತಿಗಳ ಆಧಾರವುಳ್ಳ ಪರಿವರ್ತನೀಯ ನೋಟು ಪದ್ಧತಿಯನ್ನು ಜಾರಿಗೆ ತರಲಾಯಿತು. ಕೆಲವು ಮಾರ್ಪಾಟುಗಳ ಅನಂತರ 1950ರಲ್ಲಿ ಒಟ್ಟು ನೋಟುಗಳ ಪರಿಮಾಣವನ್ನು ಸರ್ಕಾರ ಗೊತ್ತುಪಡಿಸಿತು. ಅದನ್ನು ಮೀರಿದಾಗ ಹೆಚ್ಚಿನ ನೋಟುಗಳ ಮೇಲೆ ತೆರಿಗೆ ವಿಧಿಸುವ ಪದ್ಧತಿಯನ್ನು ಆಚರಣೆಗೆ ತರಲಾಯಿತು. ಹಣದುಬ್ಬರವನ್ನು ತಡೆಯುವುದು ಇದರ ಉದ್ದೇಶ. ಜಪಾನಿನ ವಾಣಿಜ್ಯ ಬ್ಯಾಂಕುಗಳು ಐರೋಪ್ಯ ಬ್ಯಾಂಕುಗಳಂತೆ ಮಿಶ್ರ ಬ್ಯಾಂಕಿಂಗ್ ಪದ್ಧತಿಯನ್ನನುಸರಿಸಿವೆ. ಇದರಿಂದ ನಾನಾ ಕ್ಷೇತ್ರಗಳ ಅಭಿವೃದ್ಧಿಗೆ ಬ್ಯಾಂಕುಗಳು ವಿಶೇಷ ಸಹಾಯಕವಾಗಿವೆ. (ಕೆ.ಎನ್.ಎಂ.)

**ಜಪಾನ್ ಮೆರುಗು :** ಲೋಹ, ಮರ ಮೊದಲಾದವುಗಳಿಂದ ತಯಾರಿಸಿದ ವಸ್ತುಗಳ ಮೇಲ್ಮೈಗೆ ಮೆರುಗು ಕೊಡುವುದರಲ್ಲಿ ಅನುಸರಿಸುವ ಒಂದು ವಿಶಿಷ್ಟ ಕ್ರಮ; ಹೀಗೆ ಒಪ್ಪಮಾಡಿದ ವಸ್ತುಗಳು ಜಪಾನ್ ಅರಗು ಸಾಮಾನುಗಳಂತೆಯೇ ರಂಜಿಸುವುದರಿಂದ ಈ ಹೆಸರು ಬಂದಿದೆ (ಜಪಾನಿಂಗ್). ಜಪಾನ್ ಮೆರುಗು ಕಲೆ ಮೊದಲು ಆ ದೇಶದ ಉರು ಎಂಬ ಮರದಿಂದ ಉಂಟಾದ ಮೆರುಗೆಣ್ಣೆಯ ಪ್ರಯೋಗದಿಂದ ಪ್ರಾರಂಭವಾಯಿತಾದರೂ ಈಚೆಗೆ ಇದು ಅನೇಕ ದೇಶಗಳಲ್ಲಿ ಅನೇಕ ತರಹೆಯ ಮೆರುಗೆಣ್ಣೆಯ ಬಳಕೆಯಿಂದ ಪ್ರಸಿದ್ಧವಾಗಿದೆ. ಸ್ವಚ್ಛ ಪಾರದರ್ಶಕ ಮೆರುಗೆಣ್ಣೆಗಳೊಂದಿಗೆ ಕಪ್ಪು ಅಥವಾ ಸ್ಥಿರವಾದ ಖನಿಜ ಬಣ್ಣಗಳ ಮಿಶ್ರಣವನ್ನು ಜಪಾನ್ ಮೆರುಗು ಕ್ರಿಯೆಯಲ್ಲಿ ಬಳಸುತ್ತಾರೆ. ಉದಾಹರಣೆಗೆ ಅಗಸೆ ಎಣ್ಣೆಯೊಡನೆ ಮಿಶ್ರಿತವಾದ ಕಪ್ಪು ರಾಳ ಮತ್ತು ಗೋಂದು. ಕೋಪಾಲ್ ವಾರ್ನಿಷ್ ಅನೇಕ ಕಡೆಗಳಲ್ಲಿ ಮೂಲಾಧಾರ ವಸ್ತುವಾಗಿರುವುದುಂಟು. ವಸ್ತುವಿನ ಹೊರಮೈಯನ್ನು ಶುದ್ಧಗೊಳಿಸಿ ನುಣುಪಿಸಿ ಮೆರುಗೆಣ್ಣೆಯನ್ನು ಅದರ ಮೇಲೆ ಸವರಬೇಕು. ಬಳಿಕ ಅದನ್ನು ಕಾವಿನಿಂದ ಸಂಸ್ಕರಿಸಿ (ಕೆಲವು ವೇಳೆ 300° ಫ್ಯಾ. ವರೆಗೂ) ನುಣುಪಿಸಿ ತಣಿಸಿ ಮುಂದಿನ ಲೇಪನವನ್ನು ಮಾಡಬೇಕು. ಈ ಪ್ರಕಾರ ಪದರ ಪದರವಾಗಿ ಒಪ್ಪಪಡೆದ ವಸ್ತು ತುಂಬ ಹೊಳಪಿನಿಂದಲೂ ಆಕರ್ಷಣೀಯವಾದ ಬಣ್ಣದಿಂದಲೂ ಕೂಡಿರುತ್ತದೆ. ಅಲ್ಲದೆ ಪರಿಸರದ ಉಷ್ಣತಾ ಏರುಪೇರುಗಳಿಂದಾಗಲಿ ತೇವದಿಂದಾಗಲಿ ಸಾಮಾನ್ಯವಾಗಿ ಇದು ಹಾಳಾಗುವುದಿಲ್ಲ. ಜಪಾನ್ ಮೆರುಗು ಕಲೆ ಬಣ್ಣಗಾರಿಕೆಯ ಮತ್ತು ಗಾಜುಲೇಪನದ ಮಧ್ಯವರ್ತಿ ಕಲೆ ಎನ್ನಬಹುದು. ಮುಖ್ಯವಾಗಿ ಕಬ್ಬಿಣದ ಸಾಮಾನುಗಳು ಕಬ್ಬಿಣದ ಗೃಹಸಲಕರಣೆಗಳು, ಕೈಪೆಟ್ಟಿಗೆಗಳು, ಗಡಿಯಾರಗಳ ಮುಖಫಲಕಗಳು, ಕಾಗದವನ್ನು ರುಬ್ಬಿ ಮಾಡಿದ ಸಾಮಾನುಗಳು–ಇವು ಜಪಾನ್ ಮೆರುಗಿಗೆ ಒಳಪಡುವ ಸಲಕರಣೆಗಳು. (ಕೆ.ಎಸ್.ಕೆ.)

**ಜಪಾನ್ ಸಮುದ್ರ :** ಪೆಸಿಫಿಕ್ ಸಾಗರದ ಒಂದು ಭಾಗ. ಪಶ್ಚಿಮದಲ್ಲಿ ಕೊರಿಯ ಮತ್ತು ಸೋವಿಯೆತ್ ಒಕ್ಕೂಟ, ಪೂರ್ವದಲ್ಲಿ ಜಪಾನಿನ ತೀರಗಳು ಇದರ ಎಲ್ಲೆಗಳಾಗಿವೆ. ಒಟ್ಟು ವಿಸ್ತೀರ್ಣ 1007765 ಚ.ಕಿಮೀ. ಈ ಸಮುದ್ರದ ಗರಿಷ್ಠ ಆಳ 3741 ಮೀ. ದಕ್ಷಿಣದ ಕೊರಿಯ ಜಲಸಂಧಿಯಿಂದಾಗಿ ಪೂರ್ವ ಚೀನ ಸಮುದ್ರಕ್ಕೂ ಉತ್ತರದ ಸೋಯ ಜಲಸಂಧಿಯಿಂದಾಗಿ ಓಕಾಟ್ಸ್ಕ್ ಸಮುದ್ರಕ್ಕೂ ಪೂರ್ವದ ಸುಗಾರೂ ಜಲಸಂಧಿಯಿಂದಾಗಿ ಪೆಸಿಫಿಕ್ ಸಾಗರಕ್ಕೂ ಈ ಸಮುದ್ರಕ್ಕೂ ಸಂಪರ್ಕ ಏರ್ಪಟ್ಟಿದೆ. ಸೋವಿಯೆತ್ ಒಕ್ಕೂಟಕ್ಕೆ ಸೇರಿದ ವ್ಲಾಡಿವಸ್ಟಾಕ್ ನಗರ ಈ ಸಮುದ್ರದ ತೀರದಲ್ಲಿರುವ ಪ್ರಮುಖ ಬಂದರು.

ಜಗತ್ತಿನ ಪ್ರಮುಖ ಮೀನುಗಾರಿಕೆ ಕ್ಷೇತ್ರಗಳಲ್ಲಿ ಈ ಸಮುದ್ರವೂ ಒಂದು. ಹೆರಿಂಗ್, ಸಾಮನ್, ಕ್ರ್ಯಾನನ್, ಕಾಡ್ ಮುಂತಾದ ಮೀನುಗಳು ಇಲ್ಲಿ ಹೇರಳವಾಗಿ ಸಿಗುತ್ತವೆ. ತಿಮಿಂಗಿಲಗಳ ಬೇಟೆಯೂ ಇಲ್ಲಿ ಸಾಕಷ್ಟು ಆಗುತ್ತದೆ. ಇದರಿಂದಾಗಿ ಸೋವಿಯೆತ್ ಒಕ್ಕೂಟ, ಕೊರಿಯ ಮತ್ತು ಜಪಾನಿನ ಸಮುದ್ರತೀರದ ಅನೇಕ ನಗರಗಳಲ್ಲಿ ಮೀನುಗಾರಿಕೆ ಒಂದು ಪ್ರಮುಖ ಉದ್ಯಮವಾಗಿದೆ. (ಎಸ್.ಎನ್.ಎಆರ್.ಇ.)

**ಜಪಾನೀ ಕಲೆ :** ಜಪಾನೀ ಕಲೆಯ ಉಗಮ ಚೀನ ದೇಶದಲ್ಲಿಯೇ ಆಯಿತು. ಪ್ರ.ಶ. 7ನೆಯ ಶತಮಾನಕ್ಕೆ ಮುಂಚೆ ಜಪಾನಿನಲ್ಲಿ ಕಲಾತ್ಮಕ ದೇವಾಲಯಗಳಾಗಲಿ ಕಲಾಕೃತಿಗಳಾಗಲಿ ಇದ್ದುವೆನ್ನಲು ಸ್ಪಷ್ಟವಾದ ಲಿಖಿತಾಧಾರಗಳಿಲ್ಲ. ಆ ವೇಳೆಗಾಗಲೇ ಚೀನದಲ್ಲಿ ಎಲ್ಲ ಕಲೆಗಳೂ ಸಂಪನ್ನವಾಗಿ ಬೆಳೆದಿದ್ದುವು. ಪ್ರ.ಶ. 6ನೆಯ ಶತಮಾನದ ಅಂತ್ಯಭಾಗದಲ್ಲಿ ಜಪಾನ್‌ಗೆ ಬೌದ್ಧಧರ್ಮವನ್ನು ಕೊಂಡುಹೋದವರು ಚೀನೀ ಜನ ಮತ್ತು ಕೊರಿಯ ಜನ. ಇಲ್ಲಿಯ ಕಲಾವಿದರೇ ಧರ್ಮದೊಂದಿಗೆ ಕಲಾಕೃತಿಗಳನ್ನೂ ಕಲೆಯ ವಿಚಾರದ ಕಲ್ಪನೆಗಳನ್ನೂ ಚೀನದಿಂದ ಜಪಾನಿಗೆ ತಂದವರು. ಈ ಕಾರಣದಿಂದ ಮುಂದಿನ ಮೂರು ಶತಮಾನಗಳವರೆಗೆ ಜಪಾನ್‌ನಲ್ಲಿ ಮೂಡಿ ಬಂದ ಕಲೆಯೆಲ್ಲ ಚೀನೀಕಲೆಯ ಪ್ರಭಾವವನ್ನು ವಿಶೇಷವಾಗಿ ತಳೆದಿದ್ದುವು. ಇದು ಜಪಾನ್‌ಗೆ ಮಾತ್ರ ಸೀಮಿತವಾದ ಪ್ರಭಾವವಲ್ಲ. ಕೊರಿಯ, ಮಧ್ಯ ಏಷ್ಯ, ಟಿಬೆಟ್, ಮಂಗೋಲಿಯ, ಅನ್ನಾಂ–ಈ ದೇಶಗಳ ಕಲೆಗಳೆಲ್ಲ ಚೀನೀ ಕಲೆಯ ಸ್ಫೂರ್ತಿಯಿಂದಲೇ ಮೈದಳೆದವು.

ಕಲಾಪ್ರಕಾರಗಳು ಮಾತ್ರವಲ್ಲದೆ, ಹಲವಾರು ಸಂವಿಧಾನಗಳೂ ಚೀನೀಯರಿಂದಲೇ ಈ ಪ್ರದೇಶಗಳಿಗೆ ಬಂದುವು. ಹೀಗಾಗಿ ಚೀನೀಕಲೆಯನ್ನು ಅಧ್ಯಯನ ಮಾಡಿದಲ್ಲದೆ ಜಪಾನೀ ಕಲೆ ಅರ್ಥವಾಗುವುದಿಲ್ಲ ಎಂದು ಹೇಳುತ್ತಾರೆ.

ಕಿಜುಕುರಿಯಲ್ಲಿ ದೊರೆತ ಒಂದು ಮಣ್ಣಿನ ವಿಗ್ರಹ

ಪ್ರ.ಶ. 756ರಲ್ಲಿ ಜಪಾನ್‌ನ ಚಕ್ರವರ್ತಿಯಾಗಿದ್ದ ಷೋಮು ಎಂಬಾತ ನಿಧನನಾದ ಮೇಲೆ ಅವನ ಸ್ವಂತ ಸಾಮಾನುಗಳನ್ನೆಲ್ಲ ನಾರಾದ ತೋಡೈಜಿ ದೇವಾಲಯಕ್ಕೆ ದಾನ ಮಾಡಿದರು. ಇವೆಲ್ಲವನ್ನೂ ಷೋಸೊಯ್ನ್ ವಿಹಾರದಲ್ಲಿ ಇಂದಿಗೂ ನಿಕ್ಷೇಪ ಮಾಡಿದ್ದಾರೆ. ಇವುಗಳಲ್ಲಿ 8ನೆಯ ಶತಮಾನದ ಅತ್ಯಮೂಲ್ಯ ಕೈಕೆಲಸಗಳು ಸೇರಿವೆ. ಇವೆಲ್ಲವೂ ಚೀನೀ ಕಲಾಕೃತಿಗಳೇ ಎನ್ನುವುದರಲ್ಲಿ ಸಂದೇಹವಿಲ್ಲ. ಆ ಕಾಲದಲ್ಲಿ ಜಪಾನ್‌ನಲ್ಲಿ ತಯಾರಾದ ವಸ್ತುಗಳೂ ಟಾಂಗ್ ಯುಗದ ಚೀನೀ ಕಲೆಯ ಪ್ರಕಾರಗಳನ್ನು ಅನುಕರಿಸಿದ್ದುವು. ಚೀನೀ ದೇವಾಲಯಗಳೂ ವಿಹಾರಗಳೂ ಅರಮನೆಗಳೂ ಬಹುಮಟ್ಟಿಗೆ ಮರದಲ್ಲಿಯೇ ಮಾಡಿದುವು. ಇದೇ ಪದ್ಧತಿ ಜಪಾನ್‌ನಲ್ಲೂ ಬಳಕೆಗೆ ಬಂತು. ಜಪಾನ್‌ನಲ್ಲಿ ಪರದೇಶೀಯರ ದಾಳಿ ಅಷ್ಟಾಗಿ ಇಲ್ಲದುದರಿಂದ ಈ ಮರದ ಕಟ್ಟಡಗಳು ಇಂದಿಗೂ ಉಳಿದುಬಂದಿವೆ. ಜಗತ್ತಿನಲ್ಲೇ ಇವು ಅಸಾಮಾನ್ಯವಾದ ಕಲಾಕೃತಿಗಳು. ಅದೂ ನಾರಾದ ಷೋಸೊಯ್ನ್ ರಾಜಭಂಡಾರವನ್ನು ಅದ್ಭುತವಾದ್ದೆಂದು ಬಣ್ಣಿಸಿದ್ದಾರೆ, ದಾರು ವಾಸ್ತುವಲ್ಲದೆ ಹಿತ್ತಾಳೆ ಪಾತ್ರೆ, ವಿಗ್ರಹಗಳು,

ಗಿಗಾಕು ಮುಖವಾಡ

ಪೋರ್ಸಿಲೀನ್ ಸಾಮಾನುಗಳು, ಜೇಡ್ ಕೃತಿಗಳು, ಲಾಕ್ಷಾರಸದ ಕೃತಿಗಳು ಇವೆಲ್ಲವೂ ಚೀನದಿಂದಲೇ ಜಪಾನ್‌ಗೆ ಬಂದುವು. ಈ ಕೊಡುಗೆಗಳಲ್ಲಿ ವರ್ಣಚಿತ್ರಕಲೆ ಪ್ರಮುಖವಾದುದು. ಸುಮಾರು 8ನೆಯ ಶತಮಾನದಲ್ಲಿ ನಾರಾದ ಬಳಿಯಿರುವ ಹೊರ್ಯೂಜಿ ಬೌದ್ಧ ದೇವಾಲಯದ ಗೋಡೆಗಳ ಮೇಲೆ ಸೊಗಸಾದ ವರ್ಣಚಿತ್ರಗಳು ಸಿದ್ಧವಾದುವು, ಶಿಲ್ಪಗಳು ಕಾಣಿಸಿಕೊಂಡುವು. ಈಚೆಗೆ ಈ ಕೃತಿಗಳೆಲ್ಲ ಗುಡಿಗೆ ಬಿದ್ದ ಬೆಂಕಿಯೊಂದರಲ್ಲಿ ನಾಶವಾದುವು.

ನಾರಾದ ಷೋಸೊಯ್ನ್ ನಲ್ಲಿಯೂ ವರ್ಣಚಿತ್ರಗಳಿವೆ, ಶಿಲ್ಪಗಳಿವೆ, ಸಾವಿರಾರು ಉತ್ತಮ ಕಲಾಕೃತಿಗಳಿರುವ ಈ ರಾಜಭಂಡಾರವನ್ನು ಜಗತ್ತಿನ ಅತಿ ಪ್ರಾಚೀನ ವಸ್ತು ಸಂಗ್ರಹಾಲಯ ಎಂದು ಹೇಳುತ್ತಾರೆ. ಪ್ರ.ಶ. 756ರಲ್ಲಿ ಜಪಾನಿನ ಸಾಮ್ರಾಜ್ಞಿ ತನ್ನ ಮನೆಯಲ್ಲಿದ್ದ ವಿಶಿಷ್ಟ ವಸ್ತುಗಳನ್ನೂ ಬುದ್ಧನಿಗೆ ಅರ್ಪಣೆ ಮಾಡಿದಳಂತೆ. ಇದರಲ್ಲಿ ಪಾತ್ರೆ, ಉಡುಗೆ, ತೊಡುಗೆ, ಚೆಂದದ ವಸ್ತುಗಳು,

ಆಟಿಕೆಗಳು ಎಲ್ಲವೂ ಇದ್ದುವು. ಇವು ಬಹುಮಟ್ಟಿಗೆ ಚೀನೀ ಪದ್ಧತಿಯ ಕೃತಿಗಳು. ಇವೆಲ್ಲವನ್ನೂ ನಿಕ್ಷೇಪ ಮಾಡಲು ಮರದ ಷೋಸೊಯ್ನ್ ಭವನವನ್ನು ನಿರ್ಮಿಸಿದರು. 10ನೆಯ ಶತಮಾನದ ಮಧ್ಯಭಾಗದಲ್ಲಿ ಟಾಂಗ್ ರಾಜವಂಶದವರ ಪ್ರಭುತ್ವ ಚೀನದಲ್ಲಿ ದುರ್ಬಲವಾದ ಪರಿಣಾಮವಾಗಿ ಜಪಾನೀಕಲೆಯ ಸಂವಿಧಾನಗಳೂ ಕಲ್ಪನೆಗಳೂ

ಜೋರಿ – ಬತ್ತದ ಹುಲ್ಲಿನಿಂದ ನೆಯ್ದ ಜನಪ್ರಿಯ ಪಾದರಕ್ಷೆ

ಸ್ವತಂತ್ರವಾಗತೊಡಗಿದುವು. ಈ ವೇಳೆಗಾಗಲೇ ಬೌದ್ಧಧರ್ಮ ಅಲ್ಲಿ ಬೇರೂರಿ ಜನಜೀವನದ ಮೇಲೆ ಅನಿವಾರ್ಯವಾದ ಓತಪ್ರೋತವಾದ ಪ್ರಭಾವವನ್ನು ಮೂಡಿಸಿತ್ತು. ಇದೇ ಧರ್ಮ ಜಪಾನೀ ಕಲೆಯ ಸ್ಫೂರ್ತಿಯಾಗಿ ಪರಿಣಮಿಸಿತು. ಬೌದ್ಧ ಮತ್ತು ಜಪಾನ್‌ನಲ್ಲಿ ಮೊದಲಿಗಿದ್ದ ಷಿಂಟೋ ಧರ್ಮಗಳ ಸಮನ್ವಯ ಒದಗಿ ಹೊಸದೊಂದು ದೃಷ್ಟಿ ಬೆಳೆಯತೊಡಗಿತು. ಈ ಸಂದರ್ಭದಲ್ಲಿ ಮೈದಳೆದ ಯಾಮಾಟೋ ಸಂಪ್ರದಾಯ ಶುದ್ಧ ಜಪಾನೀಸತ್ತ್ವವನ್ನು ಒಳಗೊಂಡು ಚೀನೀ ಪ್ರಭಾವದಿಂದ ಸ್ವತಂತ್ರವಾಗಿತ್ತು. ಆಗ ಸಿದ್ಧವಾದ ಧಾರ್ಮಿಕ, ಲೌಕಿಕ ಸಾಹಿತ್ಯದ ಗ್ರಂಥಗಳಲ್ಲಿ ಚಿತ್ರಣಗಳು ಅವಶ್ಯವಾದ ಅಂಗಗಳಂತೆ ಸೇರಿಬಂದುವು. ದೊಡ್ಡ ದೊಡ್ಡ ಸುರುಳಿಗಳ ಮೇಲೆ ಬಣ್ಣಬಣ್ಣದ ಚಿತ್ರಗಳನ್ನು ಮೂಡಿಸುವ ಪದ್ಧತಿ ಬಂತು. ಈ ಸುರುಳಿಗಳಿಗೆ ಜಪಾನೀ ಭಾಷೆಯಲ್ಲಿ ಮಾಕೀಮಾನಾ ಎನ್ನುತ್ತಾರೆ. ಜನಗಳ



ಸೆನ್ಸು – ಜಪಾನಿನ ಜನಪ್ರಿಯ ಮಡಿಸುವ ಬೀಸಣಿಗೆ

ನಿತ್ಯಜೀವನದ ಪ್ರಸಂಗಗಳನ್ನು ಆಧರಿಸಿಯೇ ಈ ಚಿತ್ರಗಳಿದ್ದುದು ಒಂದು ವೈಶಿಷ್ಟ್ಯ. ಈ ಚಿತ್ರಗಳಲ್ಲಿ ಚೀನೀ ಪ್ರಭಾವ ಇರಲೇ ಇಲ್ಲವೆಂದಲ್ಲ. ಜಪಾನೀ ಕಲೆಗಾರರು ಸಂವಿಧಾನಗಳ ಬಗ್ಗೆ, ಸಾಮಗ್ರಿಗಳ ಬಗ್ಗೆ ಸ್ವತಂತ್ರವಾದ ಪ್ರಯೋಗಗಳನ್ನು ನಡೆಸಲಾರಂಭಿಸಿದರು. ಚಿತ್ರನಿರೂಪಣೆಯ ವಸ್ತುಗಳ ವಿಚಾರವಾಗಿಯೂ ಸ್ವತಂತ್ರವಾದ ದೃಷ್ಟಿ ಬೆಳೆಯತೊಡಗಿತು. ಆದರೆ ಮೂಲಭೂತವಾಗಿ ಚೀನೀ ಸಂಪ್ರದಾಯವೇ ನಿಂತಿತ್ತು. 13ನೆಯ ಶತಮಾನದ ಆದಿಭಾಗದಲ್ಲಿ ಈ ಸುಪ್ತ ಚೀನೀ ಪ್ರಭಾವ ಮತ್ತೊಮ್ಮೆ ಸ್ಪಷ್ಟವಾಯಿತು. ಸೂಂಗ್ ರಾಜವಂಶ ಆಗ ಚೀನದಲ್ಲಿ ಪ್ರಭುತ್ವವನ್ನು ನಡೆಸುತ್ತಿತ್ತು. ರಸಿಕರಾದ ಈ ರಾಜರ ಆಶ್ರಯದಲ್ಲಿ ಚಿತ್ರಕಲೆ, ಶಿಲ್ಪ ಎರಡೂ ಮತ್ತೆ ವೈಭವದಿಂದ ತಲೆಯೆತ್ತಿಕೊಂಡುವು. ಇದರ ಪರಿಣಾಮ ಜಪಾನೀ ಕಲೆಯ ಮೇಲೂ ಆಯಿತು. ಚೀನೀ ಶೈಲಿಯ ಕೃತಿಗಳು ಕಾಣಿಸಿಕೊಳ್ಳ ತೊಡಗಿದುವು. ಚೀನದಲ್ಲಿ ಪ್ರಚುರವಾಗಿದ್ದ ಕರಿಶಾಯಿಯ ಚಿತ್ರಗಳು ಇಲ್ಲಿಯೂ ಬಳಕೆಗೆ ಬಂದುವು. ಅಲ್ಲಿದ್ದಂತೆ ನಿಸರ್ಗ, ಪ್ರಾಣಿಗಳು ಕಲಾಕೃತಿಗಳಿಗೆ ತುಂಬ ಸ್ಫೂರ್ತಿಯನ್ನು ಒದಗಿಸಲಾರಂಭಿಸಿದುವು.

ಇದೇ ಸಮಯದಲ್ಲಿಯೇ ಹಲವಾರು ಜಪಾನಿ ಕಲಾಪದ್ಧತಿಗಳು ತಲೆಯೆತ್ತಿಕೊಂಡುವು. ಒಂದೊಂದು ಪದ್ಧತಿಯೂ ಅದರ ಪ್ರವರ್ತಕನ ಮನೆತನದಲ್ಲಿ ಉಳಿದುಬರುವಂತೆ ವ್ಯವಸ್ಥೆ ಇತ್ತು. ಜಪಾನೀ ಕಲೆಗಾರರಲ್ಲಿ ಅತಿ ಪ್ರಖ್ಯಾತನಾದ ಸೆಷೂ (1420–1506)

ಜಪಾನೀ ಬೊಂಬೆಗಳು

ಚೀನೀ ಪದ್ಧತಿಗಳನ್ನು ಅಳವಡಿಸಿಕೊಂಡು ಜಪಾನೀ ಶೈಲಿಯ ಪುನರುಜ್ಜೀವನ ಕಾರ್ಯದಲ್ಲಿ ತೊಡಗಿದ. ಮತ್ತೆ ಮುಂದಿನ ಶತಮಾನದಲ್ಲಿ ಚೀನೀ ಪ್ರಭಾವ ಹಿಂದೆ ಬಿತ್ತು. ಪ್ರ.ಶ. 1603ರಿಂದ 1868ರವರೆಗೂ ಪ್ರಚಲಿತವಾಗಿದ್ದ ಟೋಕೂಗಾವ ಯುಗದಲ್ಲಿ ಹೆಚ್ಚುಹೆಚ್ಚಾಗಿ ಸ್ವತಂತ್ರ ಜಪಾನೀ ಶೈಲಿಗಳು ಅಭಿವ್ಯಕ್ತವಾದುವು. ಆದರೂ ಚೀನೀ ಕಲಾಕೃತಿಗಳನ್ನು ಅಧ್ಯಯನ ಮಾಡುವ ಪದ್ಧತಿ ಜಪಾನಿನಲ್ಲಿ ಮುಂದುವರಿಯಿತು. ಜಪಾನೀ ಕಲಾವಿದರು ಚೀನೀ ವರ್ಣಚಿತ್ರಗಳ ಪ್ರತಿಕೃತಿಗಳನ್ನು ಅವಿರತವಾಗಿ ಮಾಡುತ್ತಿದ್ದರು; ಶ್ರೀಮಂತರು ಚೀನೀ ಕಲಾಕೃತಿಗಳ ಸಂಗ್ರಹವನ್ನು ಆಸ್ಥೆಯಿಂದ ಮಾಡುತ್ತಿದ್ದರು. ಹಲವಾರು ಚೀನೀ ಕಲೆಗಾರರ (ಫಾನ್, ಚಿನ್, ಷಿಟವೋ. ಛು ಟ ಮುಂತಾದವರ) ಚಿತ್ರಗಳು ಜಪಾನೀ ಸಂಗ್ರಹಗಳಲ್ಲೇ ಉಪಲಬ್ಧವಾಗಿವೆ. ಚೀನೀ ಕಲೆಗಾರ ಕಓ ಛ್ ಇ–ಪ್ಐ (1672–1734) ಎಂಬಾತ ಆರಂಭ ಮಾಡಿದ ಬೆರಳು ಚಿತ್ರಣ ಚೀನದಲ್ಲಿ ಅಷ್ಟಾಗಿ ಪ್ರವರ್ಧಮಾನಸ್ಥಿತಿಗೆ ಬರದೆ ಕೊರಿಯ ಮತ್ತು ಜಪಾನುಗಳಲ್ಲಿ ವಿಶೇಷವಾದ ಪುರಸ್ಕಾರ ಪಡೆಯಿತು. ಯಾಮಾಟೊ ಪದ್ಧತಿ ಮಾತ್ರ ಯಥಾಸ್ಥಿತಿ ಉಳಿಯಿತು. ಕಾಲಾನುಕ್ರಮದಲ್ಲಿ ಚೀನೀ ಪ್ರಭಾವ ಮತ್ತು ಯಾಮಾಟೊ ಶೈಲಿ ಎರಡರ ಸಂಗಮದಿಂದ ನವ್ಯವಾದ ಒಂದು ಸಂಪ್ರದಾಯ ಕಾಣಿಸಿ ಕೊಂಡಿತು. ಪ್ರಕೃತಿಯನ್ನು ವಿವಿಧ ಅಲಂಕರಣ ಕ್ರಿಯೆ ಗಳಿಂದ ಸುಭಗವನ್ನಾಗಿ, ವಿಭವ ಯುಕ್ತವನ್ನಾಗಿ ಚಿತ್ರಿಸುವ ಪರಿಪಾಠ ಈ ಸಂಪ್ರದಾಯದಲ್ಲಿ ಬಂತು. ನಿಸರ್ಗದ ಹಿನ್ನೆಲೆಗೆ ಬಂಗಾರದ ಬಣ್ಣಗಳನ್ನು ಮೂಡಿಸುವ ಪದ್ಧತಿಯೂ ಈಗಲೇ ಆರಂಭವಾಯಿತು. ವರ್ಣವಿನ್ಯಾಸದಲ್ಲಿ ನವ್ಯ ಪ್ರಯೋಗಗಳು ನಡೆದುವು. ಸಂವಿಧಾನದ ನಿರ್ದಿಷ್ಟ ಮತ್ತು



12ನೆಯ ಶತಮಾನದ ಬುಗಾಕು ಮುಖವಾಡ

ನಿಷ್ಠ ಅಭಿವ್ಯಕ್ತಿ ಜಪಾನಿನ ಮನೋಧರ್ಮಕ್ಕೆ ಒಗ್ಗಿತು. ಕನೊ ಪದ್ಧತಿಯೆಂಬುದು ಆರಂಭದಲ್ಲಿ ಚೀನೀ ಪ್ರಭಾವವನ್ನೇ ವಿಶೇಷವಾಗಿ ತಳೆದಿತ್ತು. ಆದರೆ ಬರುಬರುತ್ತ ಈ ಹೊಸ ವಿವರಗಳನ್ನು ಅಳವಡಿಸಿಕೊಂಡು ಶುದ್ಧ ಜಪಾನೀ ಸಂಪ್ರದಾಯವಾಗಿ ಉಳಿಯಿತು. ಚೀನ ಮತ್ತು ಕೊರಿಯ ದೇಶಗಳಿಂದ ಜಪಾನಿಗೆ ಬಂದ ಧ್ಯಾನ ಪಂಥ (ಚೀನೀ ಭಾಷೆಯಲ್ಲಿ ಛ–ಅನ್, ಜಪಾನಿನ ಭಾಷೆಯಲ್ಲಿ ಜ಼ೆನ್) ಇಲ್ಲಿನ ಜನರ ಮೇಲೆ ತುಂಬ ಪ್ರಭಾವ ಬೀರಿತು. ಧ್ಯಾನ

ಪಂಥದ ಮುಖ್ಯ ವಿವರಗಳಾದ ಏಕಾಂತ, ಶಾಂತಿ, ನಿಸರ್ಗದೊಂದಿಗೆ ತಾದಾತ್ಮ್ಯ ಏಕಚಿತ್ತದ ಅನುಸಂಧಾನ ಇವು ಕಲೆಗಾರರ ಚೈತನ್ಯವನ್ನು ಉಜ್ಜ್ವಲಗೊಳಿಸಿದುವು. ಧ್ಯಾನಪಂಥದ ವಿವರಗಳನ್ನು ಚಿತ್ರಿಸುವ ಕಲಾಕೃತಿಗಳೇ ಜಪಾನ್‌ನಲ್ಲಿ ತುಂಬ ಪ್ರಚಲಿತವಾಗಿವೆ.

ಹೂಗಳು ಮತ್ತು ಹಕ್ಕಿಗಳು – ಒಂದು ವರ್ಣಚಿತ್ರ

ಅದೂ ಬೋಧಿಧರ್ಮನ (ಜಪಾನೀ ಭಾಷೆಯಲ್ಲಿ ದರುಮ) ಚಿತ್ರಣ ತುಂಬ ಸ್ವಾರಸ್ಯವಾಗಿ, ಸರಳ ಗಂಭೀರವಾಗಿ ಮೂಡಿಬಂದಿದೆ. ಈತ ಧ್ಯಾನ ಪಂಥದ ಪ್ರವರ್ತಕನೆಂದು ಪ್ರಸಿದ್ಧನಾಗಿದ್ದಾನೆ. ಕಾಂಚೀಪುರದವನಾದ ಈತ ಬೌದ್ಧಭಿಕ್ಷುವಾಗಿ ಚೀನಕ್ಕೆ ತೆರಳಿ ಅಲ್ಲಿ

ಚೆರಿಗಿಡ. ಸುನೇರಿ ಕಾಗದದ ಮೇಲಿನ ವರ್ಣಚಿತ್ರ

ಧ್ಯಾನ ಪಂಥವನ್ನು ಆರಂಭಿಸಿದನೆಂದು ಪ್ರತೀತಿ. ಇವನು ಜಪಾನೀ ಕಲಾವಿದರಿಗೆ ತುಂಬ ಪ್ರಿಯನಾದ ವಸ್ತು. ಇವನನ್ನು ವಿವಿಧ ಭಂಗಿಗಳಲ್ಲಿ ಚಿತ್ರಿಸಿದ್ದಾರೆ. ಧ್ಯಾನ ಪಂಥವಲ್ಲದೆ ಬೌದ್ಧ ಧರ್ಮದ ಮಹಾಯಾನ ಶಾಖೆಗಳೂ ಪ್ರವೃತ್ತವಾಗಿ ಈ ಶಾಖೆಗಳ ದೇವದೇವತೆಗಳೂ ಬುದ್ಧ ಬೋಧಿಸತ್ತ್ವರೂ ಅರ್ಹಂತರೂ ಮುನಿಗಳೂ ಕಲಾವಿದರ ಹೃದಯವನ್ನು ಹಿಡಿದು ಕಲಾಕೃತಿಗಳಲ್ಲಿ ಮೂಡಿಬಂದರು. ಅಮಿತಾಭ ಬುದ್ಧ (ಜಪಾನೀ ಭಾಷೆಯಲ್ಲಿ ಅಮಿದ), ಮಂಜುಶ್ರೀ (ಜಪಾನೀ ಭಾಷೆಯಲ್ಲಿ ಮೊಂಜು), ಅವಲೋಕಿತೇಶ್ವರ, ತಾರಾ, ಪ್ರಜ್ಞಾಪಾರಮಿತ ಮುಂತಾದ ಮಹಾಯಾನ ದೇವತೆಗಳ ವರ್ಣಚಿತ್ರಗಳೂ ಶಿಲ್ಪಗಳೂ ಪ್ರಸಿದ್ಧವಾಗಿವೆ. ಇವಲ್ಲದೆ ತಾಂತ್ರಿಕ ಮಂಡಲಗಳೂ ಯಂತ್ರಸ್ಥಿತ ದೇವತೆಗಳೂ ಗಣಪತಿಯುಗ್ಮ, ಗಣೇಶಾನೀ ಮುಂತಾದುವೂ ಕಲೆಯಲ್ಲಿ ಬಂದುವು. ಇಬ್ಬರು ಗಣಪತಿಗಳು ಪರಸ್ಪರ ಆಲಿಂಗನ ಮಾಡಿಕೊಳ್ಳುತ್ತಿರುವ ಶಿಲ್ಪಗಳೂ ಚಿತ್ರಗಳೂ ಅಲ್ಲಿ ತುಂಬ ಪ್ರಸಿದ್ಧವಾಗಿವೆ.

ಇಕೆಬಾನ–ಹೂಗಳ ಅಲಂಕರಣದಲ್ಲಿ ಮಹಿಳೆಯರಿಗೆ ವಿಶೇಷ ತರಬೇತಿ ನೀಡಲಾಗುತ್ತದೆ

ಹೀಗೆಯೇ ಪರ್ವತಗಳನ್ನು ದೇವತೆಗಳ ಮೂರ್ತಸ್ವರೂಪವೆಂಬ ಜಪಾನೀ ಕಲ್ಪನೆಯ ಆಧಾರದ ಮೇಲೆ ಆ ದೇಶದ ಪರ್ವತಗಳಲ್ಲಿ ಹಲವು ನಿಸರ್ಗ ಸುಂದರವಾದುವು ಕಲಾವಸ್ತುಗಳಾಗಿ ಪರಿಗೃಹೀತವಾದುವು. ಅವುಗಳ ಚಿತ್ರಣ ಕಲೆಗಾರರ ಉತ್ಸಾಹವನ್ನು ಮಿಡಿಯಿತು. ಈ ಪರ್ವತಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಫೂಜೀಯಾಮ ಎಂಬ

ಕುಂಭ ತಯಾರಿಕೆ

ಪವಿತ್ರ ಪರ್ವತ. ಭಾರತದ ಕೈಲಾಸಪರ್ವತವಿದ್ದಂತೆ ಅವರಲ್ಲಿ ಅದು. ಜಪಾನೀ ಕಲೆಗಾರರೂ ಕವಿಗಳೂ ಅದನ್ನು ವಿವಿಧ ಭಂಗಿಗಳಲ್ಲಿ ಚಿತ್ರಿಸಿದ್ದಾರೆ. ಜಪಾನೀ ಕಲೆಯಲ್ಲಿ ಫೂಜೀಯಾಮ ದೇವತಾತ್ಮನೆಂದು ಹಿರಿದಾದ ಸ್ಥಾನವನ್ನು ಪಡೆದಿದೆ.

16ನೆಯ ಶತಮಾನದ ಅನಂತರ ಮಡಿಸುವ ಅಂತರಪಟ ಫಲಕಗಳು ವಿಶೇಷವಾಗಿ ಪ್ರಚಾರಕ್ಕೆ ಬಂದುವು. ಜಪಾನೀ ಭಾಷೆಯಲ್ಲಿ ಇವನ್ನು ಬೋಬ್ಯು ಎನ್ನುತ್ತಾರೆ. ಇವುಗಳ ಮೇಲೆಯೂ ಚಲಿಸುವ ಗೋಡೆಗಳ (ಜಪಾನೀ ಭಾಷೆಯಲ್ಲಿ ಫುಸುಮ) ಮೇಲೆಯೂ ನಾಜೂಕಾದ ನಿಸರ್ಗಚಿತ್ರಗಳನ್ನು ಬಿಡಿಸುವ ಪದ್ಧತಿ ಬಂದಿತು. ಜಪಾನೀ ಕಲಾಶಾಖೆಗಳಲ್ಲಿ ಅತ್ಯಂತ ಪ್ರಸಿದ್ಧವಾದುದೆಂದರೆ ಕೋಏಟ್ಸು ಎಂಬುದು. ಇದರ ಪ್ರವರ್ತಕರು ಕೋಏಟ್ಸು (1557–1637) ಮತ್ತು ಕೋರಿನ್ (1658–1716). ಪಶ್ಚಿಮ ಜಪಾನ್‌ನಲ್ಲಿ ಉಕೀಯಾಯೆ (ಇದು ಪ್ರಾಣ ಎಂಬುದಕ್ಕೆ ಜಪಾನೀ ಪದ) ಶಾಖೆ ಪ್ರಸಿದ್ಧವಾಯಿತು. ಈ ಶಾಖೆಯವರು ಮರದ ಪಡಿಯಚ್ಚಿನ ಕೆಲಸದಲ್ಲಿ ತುಂಬ ಕುಶಲರು. ಬಡವರು ವರ್ಣಚಿತ್ರಗಳನ್ನು ಕೊಳ್ಳಲಾರದುದರಿಂದ ಇವರಿಗಾಗಿ ಈ ಪಡಿಯಚ್ಚಿನಿಂದ ಮುದ್ರಿಸಿದ ಪ್ರತಿಕೃತಿಗಳನ್ನು ಒದಗಿಸುವ ಉದ್ದೇಶ ಈ ಶಾಖೆಯ ಕಲಾವಿದರಿಗಿತ್ತು. ಇವರು ನಿಸರ್ಗವನ್ನು ಬಿಟ್ಟು ಜನಜೀವನ, ರೈತಾಪಿ ಜನ, ಕೂಲಿಕಾರರು ಇವರೆಲ್ಲರ ಸಾಮಾನ್ಯ ಚಿತ್ರಗಳನ್ನು ಬಿಡಿಸುವುದರಲ್ಲೇ ನಿಷ್ಣಾತರಾಗಿದ್ದರು. (ಎಸ್.ಕೆ.ಆರ್.)

**ಜಪಾನೀ ಜಾನಪದ :** ಜಪಾನ್‌ನ ಆಚಾರ ವಿಚಾರಗಳಲ್ಲಿ ಚೀನ, ಕೊರಿಯ, ಭಾರತಗಳ ಪ್ರಭಾವವಿದ್ದರೂ ಅದು ತನ್ನದೇ ಆದ ಸಂಸ್ಕೃತಿಯನ್ನು ರೂಪಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. ಅಲ್ಲಿ ದೊರೆಯುವ ಪುರಾಣಗಳು, ನೃತ್ಯಗಳು, ಗೀತೆ, ಕಥೆ, ನಂಬಿಕೆ, ಗಾದೆ ಮತ್ತು ಇನ್ನೂ ಅನೇಕ ಸಾಂಪ್ರದಾಯಿಕ ಪದ್ಧತಿಗಳ ಅಧ್ಯಯನದಿಂದ ಅಲ್ಲಿನ ಜಾನಪದ ಸಂಪತ್ತಿನ ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿದೆ.

ವಿಶ್ವದ ಹಾಗೂ ದೈವಗಳ ಹುಟ್ಟಿನ ಬಗ್ಗೆ ಅನೇಕ ಪುರಾಣಗಳು, ಜಪಾನಿನ ಷಿಂಟೋ ಮತ್ತು ಬೌದ್ಧಧರ್ಮಗಳಲ್ಲಿ ದೊರೆಯುತ್ತವೆ.

ವಿಶ್ವದ ಹುಟ್ಟಿನ ಬಗ್ಗೆ ಷಿಂಟೋ ಧರ್ಮದಲ್ಲಿ ಬರುವ ವಿವರಗಳು ಹೀಗಿವೆ : ಪ್ರಶ. 712ರಲ್ಲಿ ಬರೆದ ಜಪಾನ್‌ನ ಅತ್ಯಂತ ಪ್ರಾಚೀನ ಪುಸ್ತಕ ಕೊಜಿಕಿಯ ಪ್ರಕಾರ ಏಳು ದೈವಗಳಿಂದ ವಿಶ್ವಸೃಷ್ಟಿ ಆಯಿತು. ಅನಂತರ ಐದು ಜೊತೆ ದಂಪತಿಗಳು ಕಾಣಿಸಿಕೊಂಡರು. ಅವರಲ್ಲಿ ಕೊನೆಯ ಜೋಡಿ ಈಜ್ಞಾನಾಗೀ ಮತ್ತು ಈಜ್ಞಾನಾಮೀ ಅವರು ಉಳಿದ ದೇವತೆಗಳ ಆದೇಶದ ಮೇರೆಗೆ ಕಷ್ಟದಲ್ಲಿದ್ದ ಭೂಮಿಯ ಸ್ಥಿತಿಯನ್ನು ಸುಧಾರಿಸಲು ಆಭರಣಯುತ ಈಟಿಯನ್ನು ಹಿಡಿದು ಸ್ವರ್ಗದ ತೇಲುವ ಸೇತುವೆಯ (ಕಾಮನಬಿಲ್ಲು) ಮೇಲೆ ಬಂದು ನಿಂತರು. ಕೆಳಗಿದ್ದ ಸಮುದ್ರದಲ್ಲಿ ತಮ್ಮ ಈಟಿಯನ್ನು ಅದ್ದಿ ಮೇಲೆತ್ತಿದಾಗ ಅಂಟಿಕೊಂಡಿದ್ದ ಹನಿಯೊಂದು ಘನೀಭವಿಸಿ ಕೆಳಗೆ ಬಿದ್ದು ಒನೊಗೊರೊ ದ್ವೀಪವಾಗಿ ಪರಿಣಮಿಸಿತು. ಈ ದ್ವೀಪಕ್ಕೆ ಬಂದು ನೆಲಸಿದ ದೇವದಂಪತಿಗಳು ಮತ್ತೆ ಜಪಾನಿನ ಎಂಟು ದ್ವೀಪಗಳಿಗೆ ಜನ್ಮವಿತ್ತರು.

ದೈವಗಳ ಹುಟ್ಟಿನ ಬಗ್ಗೆ ಇದು ಅಲ್ಲಿರುವ ವಿವರ : ಈಜ್ಞಾನಾಗೀ ಮತ್ತು ಈಜ್ಞಾನಾಮೀಯವರ ಕೊನೆಯ ಮಗು ಅಗ್ನಿದೇವ ಹುಟ್ಟಿದ ಅನಂತರ ಈಜ್ಞಾನಾಮೀ ಮರಣ ಹೊಂದಿದಳು. ಅವಳ ಕೊಳೆಯುವ ದೇಹದಿಂದ ಮತ್ತು ಶೋಕತಪ್ತನಾದ ಅವಳ ಪತಿ ಈಜ್ಞಾನಾಗೀ ಕಣ್ಣೀರಿನಿಂದ ಅನೇಕ ದೈವಗಳು ಜನಿಸಿದುವು. ಪತ್ನಿಯ ಸಾವಿನಿಂದ ಅಸಮಾಧಾನಗೊಂಡ ಈಜ್ಞಾನಾಗೀ ತನ್ನ ಮಗ ಅಗ್ನಿದೇವನ ತಲೆ ಕತ್ತರಿಸಿದಾಗ ಚಿಮ್ಮುತ್ತಿದ್ದ ರಕ್ತದಿಂದ ಮತ್ತಷ್ಟು ದೈವಗಳು ಹುಟ್ಟಿದವು. ವಿರಹವೇದನೆಯನ್ನು ತಾಳಲಾರದೆ ಈಜ್ಞಾನಾಗೀ ತನ್ನ ಪತ್ನಿಯನ್ನು ಅಧೋಲೋಕವಾದ ಹೇಡೀಸ್‌ನಲ್ಲಿ ಹುಡುಕಲು ಹೊರಟ. ಅಲ್ಲಿ ಕೊಳೆಯುತ್ತಿದ್ದ ಅವಳ ಭಯಂಕರ ಸ್ಥಿತಿಯನ್ನು ಕಂಡು ಮತ್ತೆ ಮೇಲುಲೋಕಕ್ಕೆ ಬಂದು ನದಿಯಲ್ಲಿ ತನ್ನ ಪಾಪವನ್ನು ತೊಳೆಯಲಾರಂಭಿಸಿದಾಗ ಅವನ ಅಂಗಾಂಗಗಳಿಂದ, ಬಟ್ಟೆಬರೆಗಳಿಂದ ಅನೇಕ ದೇವತೆಗಳು ಜನಿಸಿದರು. ಅವನ ಮೂಗಿನಿಂದ ವಾಯುದೇವನಾದ ಸೂಸ–ನಾ–ವಾ, ಬಲಗಣ್ಣಿನಿಂದ ಚಂದ್ರ, ಎಡಗಣ್ಣಿನಿಂದ ಪ್ರಮುಖಳಾದ ಸೂರ್ಯ ದೇವತೆ ಆಮಾತಿರಾಸು ಹುಟ್ಟಿದರು. ಅವಿಧೇಯನಾದ ಸೂಸ–ನಾ–ವಾ, ತಂದೆಯನ್ನು ತ್ಯಜಿಸಿದ. ಸೋದರಿ ಆಮಾತಿರಾಸುವಿನೊಡನೆ ಜಗಳವಾಡಿದ. ಆಕೆ ಕೋಪಗೊಂಡು ಗುಹೆ ಸೇರಿದಾಗ ಜಗತ್ತನ್ನು ಕತ್ತಲೆ ಆವರಿಸಿತು. ಉಳಿದ ದೇವತೆಗಳು ಮತ್ತೆ ಅವಳನ್ನು ಒಂದು ಬಗೆಯ ನೃತ್ಯ ಮತ್ತು ಕನ್ನಡಿಗಳ ಸಹಾಯದಿಂದ ಆಕರ್ಷಿಸಿ ಹೊರಕ್ಕೆ ಬರುವಂತೆ ಮಾಡಿದರು.

ಸೂಸ–ನಾ–ವಾ ತನ್ನ ಸೋದರಿ ಅಮಾತಿರಾಸು ಕೊಟ್ಟಿದ್ದ ಅಭರಣಗಳಿಂದ ಐದು ದೇವರುಗಳನ್ನು ಸೃಷ್ಟಿಸಿದ. ಆಮಾತಿರಾಸು ಸೂಸ–ನಾ–ವಾವಿನ ಕತ್ತಿಯನ್ನು ಮೂರು ಚೂರಾಗಿ ಮುರಿದು ಅಗಿದು ಉಗುಳಿದಾಗ ಮೂರು ದೇವತೆಗಳು ಜನಿಸಿದರು. ಇವರಿಂದ ಸೃಷ್ಟಿಸಲ್ಪಟ್ಟ ಎಂಟು ದೇವತೆಗಳು ಜಪಾನ್‌ನ ಪ್ರಮುಖ ವಂಶಗಳ ಪ್ರವರ್ತಕರಾದರು.

ಸೂಸ–ನಾ–ವಾವಿನ ಚೇಷ್ಟೆಗಳು ಅಧಿಕಗೊಳ್ಳಲು ಉಳಿದ ದೇವತೆಗಳು ಅವನನ್ನು ಸ್ವರ್ಗದಿಂದ ಅಟ್ಟಿದರು. ತನ್ನ ಲೋಕವನ್ನು ಬಿಡುವಾಗ ಅವನು ಅನ್ನ ದೇವತೆಯನ್ನು ಕೊಂದದ್ದರಿಂದ ಅವಳ ಅಂಗಾಂಗಗಳು ಭೂಮಿಯ ಮೇಲೆ ಬಿದ್ದು ಉಪಯುಕ್ತ ಮರಗಿಡಗಳ ಬೀಜಗಳಾದುವು. ಸೂಸ–ನಾ–ವಾವನ್ನು ಕುರಿತ ಇನ್ನೂ ಅನೇಕ ಪುರಾಣಗಳಿವೆ. ಇವನ ವಂಶಜರೇ ಇಜ್ಯೂಮೋ ಪ್ರಾಂತ್ಯವನ್ನು ಜಪಾನಿನ ಮೊಟ್ಟಮೊದಲ ಕಲ್ಪಿತ ಚಕ್ರವರ್ತಿಗಿಂತ ಮುಂಚೆ ಆಳುತ್ತಿದ್ದರಂತೆ.

ಸ್ವರ್ಗ ಸಾಮ್ರಾಜ್ಯದಲ್ಲಿ ಶಾಂತಿ ನೆಲಸಿದ ಬಳಿಕ ಆಮಾತಿರಾಸು ಜಪಾನ್ ದ್ವೀಪಗಳ ಮೇಲೆ ತನ್ನ ಗಮನ ಹರಿಸಿದಳು. ಅವಳ ಹಿರಿಯ ಮಗ ನೀನೀಗೀಯೊಂದಿಗೆ ಎಂಟು ಮಂದಿ ದೂತರನ್ನು ಭೂಲೋಕದ (ಜಪಾನ್ ದ್ವೀಪಗಳು) ಆಡಳಿತವನ್ನು ವಹಿಸಿಕೊಳ್ಳಲು ಕಳುಹಿಸಿದಳು. ಇಜ್ಯೂಮೋ ಪ್ರಾಂತ್ಯವನ್ನಾಗಲೇ ಆಳುತ್ತಿದ್ದ ಸೂಸ–ನಾ–ವಾವಿನ ಸಂತತಿಯವರು ಆಮಾತಿರಾಸುವಿನ ಅಧಿಕಾರವನ್ನು ಒಪ್ಪಿ ಸ್ವಾಗತಿಸಿದರು. ನೀನೀಗೀ ಕೀಯೂಷೂಗೆ ಬಂದು ಅಲ್ಲಿ ಒಬ್ಬ ಸುಂದರಿಯನ್ನು ವಿವಾಹವಾದ. ಅವನಿಗೆ ಮೂರು ಮಕ್ಕಳಾದರು. ಮೂವರಲ್ಲಿ ಒಬ್ಬ ಸಮುದ್ರದೇವನ ಮಗಳನ್ನು ಮದುವೆಯಾಗಿ ಒಂದು ಗಂಡುಮಗುವಿನ ತಂದೆಯಾದ. ಈ ಮಗು ಬೆಳೆದು ದೊಡ್ಡವನಾಗಿ ತನ್ನ ತಾಯಿಯ ಕಿರಿಯ ತಂಗಿಯನ್ನು ವಿವಾಹವಾದ. ಇವರಿಬ್ಬರಿಗೆ ಜನಿಸಿದವನೇ ರಾಜಕುಮಾರ ಟಾಯಾಮೀಕೇನು. ಇವನು ಜಿಮ್ಮು ಟೆನ್ನೊ ಎಂಬ ಹೆಸರಿನಿಂದ ವಿಧಿಪೂರ್ವಕವಾಗಿ ಪ್ರಶ.ಪೂ. 660ರಲ್ಲಿ ಜಪಾನಿನ ಪ್ರಥಮ ಚಕ್ರವರ್ತಿಯಾದ.

2. ಬೌದ್ಧ ಪುರಾಣಗಳು : ಕೊರಿಯದಿಂದ ಜಪಾನ್‌ಗೆ ಬಂದ ಬೌದ್ಧಧರ್ಮದಿಂದ ಜಪಾನ್‌ನಲ್ಲಿ ಅನೇಕ ಹೊಸ ಬೌದ್ಧ ದೈವಗಳು ಹುಟ್ಟಿಕೊಂಡವು. ಕಾಲಕ್ರಮೇಣ ಅವುಗಳ ಸುತ್ತ ಅನೇಕ ಪುರಾಣಗಳು ಬೆಳೆದವು. ಷಿಂಟೋ ಧರ್ಮಕ್ಕೆ ಸೇರಿದ ಎಲ್ಲ ದೇವರುಗಳೂ ಬೌದ್ಧದೇವತೆಗಳ ಪುನರವತಾರವೆಂದು ಪರಿಗಣಿಸಲ್ಪಟ್ಟಿತು. ಸತ್ತ ಅನಂತರದ ಲೋಕಗಳಾದ ಸ್ವರ್ಗ ನರಕಗಳ ಬಗ್ಗೆ ಜಪಾನೀಯರಲ್ಲಿ ಪೂರ್ಣಕಲ್ಪನೆ ಉಂಟಾಗಿದ್ದು ಬೌದ್ಧಧರ್ಮದಿಂದ. ಬೌದ್ಧಪುರಾಣಶಾಸ್ತ್ರದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದ ದೈವಗಳೆಂದರೆ ಜಿಜೋ ಮತ್ತು ಕ್ವನ್ನೋನ್.

ಜಿಜೋದೇವ ಕಷ್ಟನಿವಾರಕ. ಅದರಲ್ಲೂ ಈತ ಸಣ್ಣ ಮಕ್ಕಳ ರಕ್ಷಕ ಮತ್ತು ಪೋಷಕ. ರೋಗಿಗಳನ್ನು ರೋಗದಿಂದ ಮುಕ್ತರನ್ನಾಗಿಸುತ್ತಾನೆ. ಇಹದಲ್ಲಿ ಮಾತ್ರವಲ್ಲ, ಪಾತಾಳಲೋಕಕ್ಕೆ ಹೋದಾಗಲೂ ತನ್ನ ಭಕ್ತರನ್ನು ಕಾಪಾಡುತ್ತಾನೆ. ಪಾಪಿಗಳನ್ನು ನರಕದಿಂದ ಸ್ವರ್ಗಕ್ಕೆ ಒಯ್ಯುವ ಶಕ್ತಿ ಈತನಿಗೆ ಇದೆ.

ಕ್ವನ್ನೋನ್ ಮೂಲತಃ ಬೋಧಿಸತ್ವನಾಗಿದ್ದು ಗಂಡುದೇವರಾದರೂ ಚೀನದ ಪ್ರತಿಮಾ ವಿವರಣಶಾಸ್ತ್ರ ಈ ದೇವರನ್ನು ಸ್ತ್ರೀ ಎಂದು ಪರಿಗಣಿಸಿದೆ ; ಜಪಾನ್‌ನಲ್ಲಿ ಈತ ದಯಾದೇವತೆ.

ಭಾರತ ಮತ್ತು ಚೀನಗಳ ಪ್ರಭಾವದಿಂದಾಗಿ ಜಪಾನ್‌ನಲ್ಲೂ ಭೂತವಿದ್ಯೆಯಲ್ಲಿ ನಂಬಿಕೆ ಇದೆ. ಅಲ್ಲಿ ಭೂತಗಳನ್ನು ಒನಿ ಎನ್ನುತ್ತಾರೆ. ಐತಿಹ್ಯಗಳಲ್ಲಿ ಜನಪದ ಕಥೆಗಳಲ್ಲಿ, ಅದರಲ್ಲೂ ಕಿನ್ನರ ಕಥೆಗಳಲ್ಲಿ, ಅನೇಕ ರೂಪಕಗಳಲ್ಲಿ ಭೂತಗಳ ಪಾತ್ರ ಹೆಚ್ಚಾಗಿ ಇರುತ್ತದೆ.

3. ಜನಪದ ಕಥೆಗಳು : ಜಪಾನಿನ ಜನಪದ ಕಥೆಗಳಲ್ಲಿ ಕಿನ್ನರ ಕಥೆಗಳು ಬಹಳಷ್ಟಿವೆ. ಇತರ ದೇಶಗಳ ಜನಪದ ಕಥೆಗಳಲ್ಲಿರುವಂತೆ ಇಲ್ಲಿನ ಕಥೆಗಳಲ್ಲೂ ಪ್ರಾಣಿ–ಪಕ್ಷಿಗಳ ಪಾತ್ರ ಹೆಚ್ಚಾಗಿದೆ. ಆದರೆ ನರಿ ಮತ್ತು ಬ್ಯಾಜರ್ ಎನ್ನುವ ಒಂದು ಜಾತಿಯ ಕರಡಿ ಇಲ್ಲಿನ ಕಥೆಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ. ಕಥೆಗಳಲ್ಲಿ ನರಿ ಒಂದು ವಿಚಿತ್ರ ಹಾಗೂ ದುಷ್ಟ ಪ್ರಾಣಿಯಾಗಿದ್ದು ರೂಪವನ್ನು ಯಾವ ಮನುಷ್ಯನ ಆಕಾರಕ್ಕೂ ಅದರಲ್ಲೂ ಸುಂದರ ಹೆಣ್ಣಿನ ರೂಪಕ್ಕೆ ಪರಿವರ್ತಿಸಿಕೊಂಡು ಸುಲಭವಾಗಿ ಮೋಸಗೊಳಿಸುತ್ತದೆ. ನರಿ–ಬೆಂಕಿ ಎಂಬ ಜನಪ್ರಿಯ ಉಕ್ತಿಯೇ ಜಪಾನೀಯರಲ್ಲಿ ಬಳಕೆಯಲ್ಲಿದೆ. ಕೆಲವು ದಯೆಯುಳ್ಳ ನರಿಗಳು ಅನ್ನದೇವನಾದ ಇನರಿಯ ದೂತರೆಂದು ಹೇಳುತ್ತಾರೆ. ಆದರೆ ಅನ್ನದೇವನೂ ಕೆಲವೊಮ್ಮೆ ಇಂಥ ನರಿಗಳಿಂದ ಗಾಬರಿಗೊಳ್ಳುತ್ತಾನಂತೆ. ಬ್ಯಾಜರ್ ಕರಡಿಯನ್ನು ಕುರಿತ ಇಂಥದೇ ಕಥೆಗಳಿವೆ. ನರಿಯ ವಿಶೇಷಣಗಳು ಈ ಪ್ರಾಣಿಗೂ ಉಂಟು.

ಕಿನ್ನರ ಕಥೆಗಳಲ್ಲಿ ಕೆಲವು ಬಹು ಪ್ರಸಿದ್ಧಿ ಪಡೆದಿವೆ. ಮೊಮೊತಾರೊವಿನ ಕಥೆ ಇದು. ಮಗು ಮೊಮೊತಾರೊ ಪೀಚ್ ಮರದ ಕೆಳಗೆ ಇದ್ದುದನ್ನು ಕಂಡ ವೃದ್ಧ ದಂಪತಿಗಳು ಮನೆಗೆ ಕೊಂಡೊಯ್ದು ಬೆಳೆಸುತ್ತಾರೆ. ಬೆಳೆದು ದೊಡ್ಡವನಾದ ಮೇಲೆ ಆತ ದೆವ್ವಗಳ ದ್ವೀಪ ಒನಿಗಷೀಮಕ್ಕೆ ಹೋಗಿ ದೆವ್ವಗಳಿಂದ ಅವುಗಳ ಐಶ್ವರ್ಯವನ್ನು ಕಸಿದುಕೊಂಡು ತನ್ನ ಮೂವರು ಪ್ರಾಣಸ್ನೇಹಿತರಾದ ನಾಯಿ, ಕೋತಿ ಮತ್ತು ಜೀವಂಜೀವ ಹಕ್ಕಿ (ಫೆಸೆಂಟ್)ಯೊಡನೆ ಮನೆಗೆ ಹಿಂದಿರುಗುತ್ತಾನೆ.

ಬಿದಿರು ಕಡಿಯುವವನ ಕಥೆ ಹೀಗಿದೆ: ತಪ್ಪಿಗೆ ಪ್ರಾಯಶ್ಚಿತ್ತವಾಗಿ ಚಂದ್ರನ ಹೆಣ್ಣುಮಗು ಭೂಮಿಯ ಒಂದು ಕಾಡಿನಲ್ಲಿ ಬಂದು ಬೀಳುತ್ತದೆ. ಮಗು ಬಿದಿರು ಕಡಿಯುವವನಿಗೆ ಸಿಕ್ಕಿ ಅವನಲ್ಲಿ ಬೆಳೆದು ದೊಡ್ಡವಳಾಗುತ್ತಾಳೆ. ಮದುವೆ ಮಾಡಲು ನಿಶ್ಚಯಿಸಿದಾಗ ಚಕ್ರವರ್ತಿಯೂ ಸೇರಿದಂತೆ ಅನೇಕ ವರಗಳನ್ನು ತಿರಸ್ಕರಿಸಿ ಕೊನೆಗೆ ಒಂದು ನಿರ್ದಿಷ್ಟ ಗಳಿಗೆಯಲ್ಲಿ ಚಂದ್ರನನ್ನು ಸೇರುತ್ತಾಳೆ. ಮಾಟ್ಸುಯಾಮಾನ ಕನ್ನಡಿ, ಕಿಂಟರೂ ಕಥೆಗಳೂ ಹೆಚ್ಚು ಪ್ರಸಿದ್ಧವಾದುವು.

4. ಹಬ್ಬಗಳು : ಪ್ರಾಚೀನ ಜಪಾನೀ ಸಾಂಪ್ರದಾಯಿಕ ಹಬ್ಬಗಳಲ್ಲಿ ಕೆಲವು ಚೀನದಲ್ಲಿ ಹುಟ್ಟಿದುವಾಗಿವೆ. ಜಪಾನ್‌ನಲ್ಲಿ ಐದು ಹಬ್ಬಗಳು ಬಹು ಪ್ರಮುಖ : 1. ನನಕುಶ ಅಥವಾ ಏಳು ಹುಲ್ಲುಗಳ ಹಬ್ಬ. ಇದನ್ನು ಪ್ರತಿ ಜನವರಿ 7ರಂದು ಆಚರಿಸುತ್ತಾರೆ. ಏಳು ಜಾತಿಯ ಹುಲ್ಲು ಮತ್ತು ಅಕ್ಕಿಯ ಗಂಜಿಯಿಂದ ತಯಾರಿಸಿದ ಒಂದು ಬಗೆಯ ಭಕ್ಷ್ಯವನ್ನು ಸೇವಿಸುವುದರಿಂದ ಆ ವರ್ಷ ಕಾಯಿಲೆಗಳು ಬರುವುದಿಲ್ಲ ಎಂದು ನಂಬಿಕೆ. 2. ಹಿನಮತ್ಸೂರಿ ಎಂಬುದು ಪ್ರತಿ ಮಾರ್ಚ್ ಮೂರರಂದು ಆಚರಿಸುವ, ಹುಡುಗಿಯರ ಹಬ್ಬ. ಚಕ್ರವರ್ತಿಗಳ ರಾಣಿಯರ ಬೊಂಬೆಗಳನ್ನು ಟೊಕೊನೊಮದಲ್ಲಿಟ್ಟು (ಜಪಾನಿನಲ್ಲಿ ಪ್ರತಿ ಮನೆಯಲ್ಲೂ ಇರುವ ಗೂಡು) ಅವುಗಳಿಗೆ ಎಡೆ ಇಡುತ್ತಾರೆ. ಹಿರಿಯರು ಹೆಣ್ಣು ಮಕ್ಕಳನ್ನು ಕೂರಿಸಿಕೊಂಡು ಜಪಾನ್‌ನ ಆದರ್ಶ ಹೆಣ್ಣುಗಳ ಬಗ್ಗೆ ಇರುವ ಕಥೆಗಳನ್ನು ಹೇಳುತ್ತಾರೆ. 3. ಟನಬಟ ಹಬ್ಬವನ್ನು ಜುಲೈ ಏಳರಂದು ಆಚರಿಸುತ್ತಾರೆ. ಇದು ನೇಯ್ಗೆಯವರ

ಬೊಂಬುನಿರ್ಮಿತ ಮಹಾಮತ್ಸ್ಯ : ತೋಯಾಹಾಮ್ ಮೀನುಗಾರರಿಂದ ಸಮುದ್ರ ದೇವತೆಗೆ ಕಾಣಿಕೆ. ಪ್ರತಿ ಜುಲೈ ತಿಂಗಳಲ್ಲೂ ಅವರು ಹಬ್ಬ ಆಚರಿಸುತ್ತಾರೆ.

ಹಬ್ಬ. ಚೀನದಲ್ಲಿ ಹುಟ್ಟಿದ್ದು. 4. ಟನಗೊನೊಸೆಕ್ಕು ಮೇ 5ರಂದು ಆಚರಿಸುವ ಮತ್ತೊಂದು ಹುಡುಗರ ಹಬ್ಬ. ಏಳು ವರ್ಷ ಕೆಳಗಿನ ಮಕ್ಕಳ ಮನೆಗಳಲ್ಲಿ ಇದನ್ನು ಆಚರಿಸುತ್ತಾರೆ. ಉದ್ದವಾದ ಕಂಬಕ್ಕೆ ಕಾಗದದಿಂದ ಮಾಡಿದ ಕಾರ್ಪ್ (ಸಿಹಿ ನೀರಿನಲ್ಲಿರುವ ಒಂದು ಜಾತಿಯ ಮೀನು) ಮೀನನ್ನು ತೂಗು ಬಿಡುತ್ತಾರೆ. ಈ ಜಾತಿಯ ಮೀನು ಕೂಡಿಕೆ ಸಂದರ್ಭ ಬಂದಾಗ ಜಲಪಾತದ ಎದುರಿಗೂ ಈಜಬಲ್ಲ ಶಕ್ತಿ ಉಳ್ಳದ್ದರಿಂದ ಇದು ಶಕ್ತಿ ಮತ್ತು ಪುರುಷಲಕ್ಷಣದ ಸಂಕೇತವಾಗಿದೆ. ಅನಂತರ ಪುರಾತನ ಯೋಧರ ಮತ್ತು ಪ್ರಮುಖ ವೀರನಾಯಕರುಗಳ ಬೊಂಬೆಗಳನ್ನು ಟೊಕೊನೊಮದಲ್ಲಿಟ್ಟು ಪೂಜಿಸುತ್ತಾರೆ. ಹುಡುಗರನ್ನು ಕೂರಿಸಿಕೊಂಡು ಜನಪ್ರಿಯ ಶೂರರಿಗೆ ಹಾಗೂ ಆಯುಧಗಳಿಗೆ ಸಂಬಂಧಿಸಿದ ಕಥೆಗಳನ್ನು ಹೇಳುತ್ತಾರೆ. 5. ಚೊಯೊ ಅಥವಾ ಸೇವಂತಿಗೆ ಹಬ್ಬವನ್ನು ಸೆಪ್ಟಂಬರ್ ಒಂಬತ್ತರಂದು ಆಚರಿಸುತ್ತಾರೆ. ಈ ಹಬ್ಬದಲ್ಲಿ ಸೇವಂತಿಗೆ ಹೂವಿನ ಪ್ರದರ್ಶನವಿರುತ್ತದೆ.

ಈ ಐದು ಹಬ್ಬಗಳಲ್ಲದೆ ಇನ್ನೂ ಬೇರೆ ಹಬ್ಬಗಳಿವೆ. ಹೊಸ ವರ್ಷದ ಹಬ್ಬವನ್ನು ಮೂರು ದಿವಸಗಳವರೆಗೆ ಆಚರಿಸುತ್ತಾರೆ. ವಯಸ್ಕರು ಪ್ರತಿ ಹೊಸ ವರ್ಷದ ಮೊದಲ ದಿನವನ್ನು ತಾವು ಹುಟ್ಟಿದ ಹಬ್ಬವೆಂದು ತಿಳಿಯುತ್ತಾರೆ. ಈ ಮೂರು ದಿವಸಗಳಲ್ಲಿ ಜನ ದೇವಸ್ಥಾನಕ್ಕೆ ಹೋಗುವುದು, ಹರಕೆ ಸಲ್ಲಿಸುವುದು, ವಿವಿಧ ಭಕ್ಷ್ಯಗಳನ್ನು ತಯಾರು ಮಾಡುವುದು, ಮೊದಲ ಕನಸು ಕಾಣುವುದು–ಇವುಗಳಲ್ಲಿ ನಿರತರಾಗುತ್ತಾರೆ. ಮೊದಲ ಕನಸು ಕಾಣಲು ಟಕರಬ್ಯೂನ್‌ನ ಚಿತ್ರವನ್ನು ಜನವರಿ ಮೂರರ ರಾತ್ರಿ ತಲೆದಿಂಬಿನ ಕೆಳಗೆ ಇಟ್ಟು ಮಲಗುತ್ತಾರೆ. ಅಂದು ಕಂಡ ಕನಸು ಅವರಿಗೆ ದೈವವಾಣಿಯಾಗುತ್ತದೆ. ಫೂಜೀ ಪರ್ವತವನ್ನು ಕಾಣುವುದು ಶುಭ ಹಾಗೂ ಉತ್ತಮ ಎಂದು ಭಾವಿಸುತ್ತಾರೆ.

ಒಬೊನ್ ಅಥವಾ ದೀಪಗಳ ಹಬ್ಬವನ್ನು ಜುಲೈ 13–16ರವರೆಗೆ ಆಚರಿಸುತ್ತಾರೆ. ಸತ್ತವರ ಆತ್ಮಗಳು ಈ ಹಬ್ಬದಲ್ಲಿ ಬರುತ್ತವೆ ಎಂಬ ನಂಬಿಕೆ ಇರುವುದರಿಂದ ಒಳ್ಳೆಯ ಭಕ್ಷ್ಯಗಳನ್ನು ಮಾಡಿ ಅವುಗಳಿಗೆ ಅರ್ಪಿಸುತ್ತಾರೆ. ಪ್ರತ್ಯೇಕ ದೀಪಗಳನ್ನು ಹಚ್ಚುವುದರಿಂದ ಆತ್ಮಗಳಿಗೆ ಮಾರ್ಗ ಕಾಣುವುದೆಂದು ನಂಬುತ್ತಾರೆ. ಬೌದ್ಧಭಿಕ್ಷುಗಳು ಮನೆಯಿಂದ ಮನೆಗೆ ಹೋಗಿ ಸತ್ತವರ ಆತ್ಮಕ್ಕೆ ಯೋಗ್ಯ ಸೇವೆ ಸಲ್ಲಿಸುತ್ತಾರೆ.

ಫೆಬ್ರುವರಿ ಮೂರರಂದು ಆಚರಿಸುವ ಸೆಟ್‌ಸುಬುನ್ ಎಂಬ ಹಬ್ಬದಲ್ಲಿ ಜನ ಸಾಯಂಕಾಲ ಅವರ ವಯಸ್ಸಿನಷ್ಟು ಹುರುಳಿಬೀಜವನ್ನು ಎತ್ತಿಕೊಂಡು ಅದೃಷ್ಟ ಬರಲಿ, ಅನಿಷ್ಟ ತೊಲಗಲಿ ಎಂದು ಕೂಗುತ್ತ ಎರಚುತ್ತಾರೆ.

5. ಗಾದೆಗಳು : ಜಪಾನೀಯರ ಚತುರತೆ ಹಾಗೂ ವಿವೇಕಗಳನ್ನು ಅವರಲ್ಲಿರುವ ಗಾದೆಗಳಲ್ಲಿ ಕಾಣಬಹುದು. ಕನ್ನಡ ಗಾದೆಗಳನ್ನು ಹೋಲುವ ಕೆಲವು ಅವರಲ್ಲೂ ಇವೆ. ಉದಾ : ಮನಸ್ಸಿನ ಭೂತ ತನ್ನನ್ನೇ ತೆಗಳಿತು ಎಂಬ ಜಪಾನಿನ ಗಾದೆ ತನ್ನ ವಿಷ ತನ್ನನ್ನೇ ತಿಂದಿತು ಎಂಬ ಕನ್ನಡ ಗಾದೆಯಂತಿದೆ. ಅಳುವ ಮುಖಕ್ಕೆ ಒಂದು ಜೇನುಹುಳು (ಕಷ್ಟಗಳು ಬರುವಾಗ ಒಟ್ಟಿಗೆ ಬರುತ್ತವೆ ಎಂದರ್ಥ); ಎಲ್ಲಿ ಅನುಕೂಲವಿದೆಯೊ ಅಲ್ಲಿ ಅನನುಕೂಲವಿದೆ; ಇರುವೆಯ ಆಸೆಯೂ ಸ್ವರ್ಗವನ್ನು ತಲಪುತ್ತದೆ; ಬೆನ್ನಿಗೆ ಕಣ್ಣಿಲ್ಲ; ಜ್ಯೋತಿ ತಾ ಉರಿದು ಬೇರೆಯವರಿಗೆ ಬೆಳಕಾಯಿತು; ಕುರುಡನಿಗೆ ಕನ್ನಡಿ; ಪೂಜಾರಿಗೆ ಬಾಚಣಿಗೆ; ಕಪ್ಪೆ–ಕಪ್ಪೆಗಳಿಗೇ ಜನ್ಮಕೊಡುತ್ತದೆ; ಸೇರುವುದು ಬೇರೆಯಾಗುವುದಕ್ಕೆ–ಇತ್ಯಾದಿ ಜಪಾನೀ ಗಾದೆಗಳು ಸರಳವಾಗಿ ನಿತ್ಯಸತ್ಯವನ್ನು ನುಡಿಯುತ್ತವೆ.

6. ನಂಬಿಕೆಗಳು : ಅದೃಷ್ಟ ದುರದೃಷ್ಟಗಳನ್ನು ತರುವ ವಸ್ತುಗಳ ಬಗ್ಗೆ, ಸ್ಥಳಗಳನ್ನು ಕುರಿತಂತೆ ಅನೇಕ ನಂಬಿಕೆಗಳು ಜಪಾನಿನಲ್ಲಿವೆ. ಯಾವುದೊ ಒಂದು ರಾಶಿಗೆ ಸೇರಿದವರು ಗುರುವಾರ ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡಬಾರದೆಂದೂ ಮೊದಲ ವರ್ಷದಲ್ಲಿ ಹುಟ್ಟಿದವನಿಗೆ ವ್ಯಾಘ್ರನ ದಿನ ಒಳ್ಳೆಯದಲ್ಲವೆಂದೂ ಹೇಳುವುದುಂಟು. ಈಶಾನ್ಯ ದಿಕ್ಕು ಕೆಟ್ಟದ್ದು. ಏಕೆಂದರೆ ಆ ದಿಕ್ಕಿನಿಂದಲೇ ದೆವ್ವಗಳು ಪ್ರವೇಶಮಾಡುತ್ತವೆ ಎಂದು ಅಲ್ಲಿನ ನಂಬಿಕೆ. ಅನೇಕ ವೈಯಕ್ತಿಕ ನಂಬಿಕೆಗಳು ಜಪಾನಿನಲ್ಲಿವೆ. ಒಂದು ಕಟ್ಟಡ ಬಿದ್ದುಹೋದರೆ ಕಟ್ಟಡದ ದುರದೃಷ್ಟವೆಂದೋ ಅಥವಾ ಕಟ್ಟಡದ ನಿವೇಶನ ಕೆಟ್ಟದ್ದೆಂದೋ ಹೇಳುತ್ತಾರೆ.

ಹತ್ತೊಂಬತ್ತು, ಮೂವತ್ತಮೂರು, ನಲವತ್ತೆರಡು, ನಲವತ್ತೇಳನೆಯ ವರ್ಷಗಳು ವ್ಯಕ್ತಿಯ ವಯಸ್ಸಿನಲ್ಲಿ ಕೆಡುಕು ತರುತ್ತವೆಯಂತೆ. ಈ ಅಂಕಿಗಳ ಉಚ್ಚಾರಣೆ ಜಪಾನೀಯರಲ್ಲಿ ಬೇರೆ ಅರ್ಥವನ್ನು ಕೊಡುತ್ತದೆ. ಉದಾ : ನಲವತ್ತೆರಡು ಅಂಕಿಯನ್ನು ಸೂಚಿಸುವ ಷೀ–ನೀ ಎಂಬ ಪದಕ್ಕೆ ಮರಣ ಎಂತಲೂ ಅರ್ಥವಾಗುತ್ತದೆ. ವಿವಾಹ ನಿಶ್ಚಯವಾಗುವುದಕ್ಕಿಂತ ಮುಂಚೆ ರಾಶಿ, ಗಣ ಜಾತಕಗಳ ಬಗ್ಗೆ ಜೋತಿಷ್ಯರನ್ನು ಕೇಳುತ್ತಾರೆ. 'ಜಾಲಾಶ್ವ'ದ ವರ್ಷದಲ್ಲಿ ಜನಿಸಿದವಳನ್ನು ಮದುವೆಯಾದರೆ ಅವಳು ತನ್ನ ಗಂಡನನ್ನು ದಹಿಸುತ್ತಾಳಂತೆ. ಅಂಥವಳನ್ನು ಯಾರೂ ಮದುವೆಯಾಗುವುದಿಲ್ಲ.

ಜಪಾನೀಯರು ಊಟಕ್ಕೆ ಎರಡು ಬಟ್ಟಲು ಅನ್ನಕ್ಕಿಂತ ಕಡಿಮೆ ಹಾಕಿಸಿಕೊಳ್ಳುವುದಿಲ್ಲ. ಏಕೆಂದರೆ ಒಂದು ಬಟ್ಟಲು ಅನ್ನ ಸತ್ತವರ ಆತ್ಮಕ್ಕೆ ಉಣಿಸಿದಂತೆ ಎಂದು ಅವರ ನಂಬಿಕೆ.

ಕಾಯಿಲೆಗೆ ಸಂಬಂಧಿಸಿದ ಕೆಲವು ವಿಚಿತ್ರ ಪದ್ಧತಿಗಳು ಬಳಕೆಯಲ್ಲಿವೆ. ಚರ್ಮರೋಗದಿಂದ ನರಳುತ್ತಿದ್ದರೆ ಹುಲ್ಲಿನಿಂದ ಮಾಡಿದ ಒಂದು ದೊಡ್ಡ ಟೋಪಿಯನ್ನು ನದಿಯ ಅಥವಾ ಕೊಳದ, ಸಮುದ್ರದ ನೀರಿಗೆ ತೇಲಿಬಿಟ್ಟರೆ ರೋಗ ಟೋಪಿಯೊಡನೆ ಹೊರಟುಹೋಗುತ್ತದೆ ಎಂದು ನಂಬಿಕೆ. ಷಿಂಟೊ ಧರ್ಮದ ಪ್ರಕಾರ ಅಶುಚಿ ದುರದೃಷ್ಟವನ್ನಾಗಿ ಮಾಡುತ್ತದೆ ಎಂಬ ನಂಬಿಕೆಯಿರುವುದರಿಂದ ಜಪಾನೀಯರು ಶುಚಿತ್ವಕ್ಕೆ ಹೆಚ್ಚು ಗಮನ ಕೊಡುತ್ತಾರೆ. ಸ್ವಚ್ಛಮಾಡಲು ಉಪ್ಪನ್ನು ಬಳಸುತ್ತಾರೆ.

ಮಧ್ಯಯುಗದಲ್ಲಿ ಕೆಲವೆಡೆ ಪ್ರಚಲಿತವಿದ್ದ ಅರ್ಥರಹಿತ ಮಂತ್ರಮಾಟದ ಸೂತ್ರ ಅಬ್ರಕಡಬ್ರದಂತೆ ಜಪಾನೀಯರಲ್ಲೂ ಕೆಲವು ಯಕ್ಷಿಣಿ ಸೂತ್ರಗಳಿವೆ. ಉದಾ : ಹಾವು ಕಂಡಾಗ ಅಬುರಉನ್‌ಕೆನ್‌ಸೊವಕ–ಎಂದು ಉಚ್ಚರಿಸಿದರೆ ಅದು ಮಾಯವಾಗುತ್ತದಂತೆ.

7. ಗೀತೆಗಳು ಮತ್ತು ವಾದ್ಯಗಳು : ಜಪಾನಿನ ಮೂರು ಮುಖ್ಯ ವಾದ್ಯಗಳನ್ನು ಸನ್‌ಕ್ಯೊಕು ಎನ್ನುತ್ತಾರೆ. ಅವು ಸಮಿಸೆನ್, ಕೋಟೋ ಮತ್ತು ಷಕುಹಚಿ. ಮೊದಲನೆಯದು ಮೂರು ತಂತಿಯ ಗಿಟಾರ್‌ನಂತೆ ಇದ್ದು, ಅದನ್ನು ದೊಡ್ಡ ಮೊನಚಾದ ಕಡ್ಡಿಯಿಂದ ಮೀಟುತ್ತಾರೆ. ಕೋಟೋ ಹೆಚ್ಚು ಧ್ವನಿಸುವ ಹದಿಮೂರು ತಂತಿಗಳ ವಾದ್ಯ. ಷಕುಹಚಿ ಬಿದಿರಿನ ಕೊಳವೆಯಿಂದ ಮಾಡಿದ ಕೊಳಲು ರೀತಿಯ ವಾದ್ಯ. ಇವಲ್ಲದೆ ತಮಟೆ, ಬಿವ ಮತ್ತು ನಾಲ್ಕು ತಂತಿಯ ಕಿನ್ನರಿ (ಲೈರ್) ವಾದ್ಯಗಳೂ ಬಳಕೆಯಲ್ಲಿವೆ. ಜಪಾನೀ ಸಂಗೀತ ಚೀನೀ ಹಾಗೂ ಕೊರಿಯನರ ಸಂಗೀತವನ್ನು ಹೋಲುತ್ತದೆ.

ಜಪಾನೀಯರಿಗೆ ಹಾಡುವುದರಲ್ಲಿ ಹೆಚ್ಚು ಆಸಕ್ತಿ. ವಿವಿಧ ಬಗೆಯ ಜನಪದ ಗೀತೆಗಳನ್ನು ವಿವಿಧ ರೀತಿಯ ರಾಗಗಳಲ್ಲಿ ಹಾಡುತ್ತಾರೆ. ಜನಪದ ಗೀತೆಗಳನ್ನು ಮಿನ್‌ಯೋ ಎನ್ನುತ್ತಾರೆ. ಈ ಹಾಡುಗಳನ್ನು ವಾದ್ಯವಿಶೇಷಗಳೊಂದಿಗೊ ಕೈ ಚಪ್ಪಾಳೆ ತಟ್ಟಿಕೊಂಡೊ ಕೇಕೆ ಹಾಕಿಕೊಂಡೊ ಹಾಡುತ್ತಾರೆ.

ಭೂಮಿ ಅಗೆಯುವಾಗ ಹಾಡುವ ಗೀತೆಗಳನ್ನು ಡೊಟ್‌ಸುಕಿ ಅಥವಾ ಜಿಟ್ಸುಕಿ–ಉತ ಎನ್ನುತ್ತಾರೆ. ರಸ್ತೆಮಾಡುವಾಗ, ಕಟ್ಟಡಗಳ ತಳಹದಿ ಮಾಡುವಾಗ ದಸಿದೂಲಗಳನ್ನು ನೆಡುವ ಯಂತ್ರಗಳನ್ನು ನಡೆಸುವಾಗ ಈ ವಿಧದ ಗೀತೆಗಳನ್ನು ಹಾಡುತ್ತಾರೆ. ಕಂಬಗಳನ್ನು ಎತ್ತುವಾಗ ಹಗ್ಗ ಎಳೆಯುವಾಗ ಪ್ರಾಸಬದ್ಧವಾಗಿ ಗುಂಪಿನ ನಾಯಕ ಹಾಡುತ್ತಾನೆ. ಕೆಲವೊಮ್ಮೆ ಇಂಥ ಪ್ರಾಸಬದ್ಧ ಹಾಡುಗಳು ದೊಡ್ಡ ಕಥೆಗಳಾಗಿರುತ್ತವೆ.

ದೊಡ್ಡ ಕಲ್ಲುಗಳನ್ನು ತಿರುಗಿಸುವಾಗ, ಎಳೆಯುವಾಗ ಹಾಡುವ ಗೀತೆಗಳಿಗೆ ಇಷಿ–ಹಿಕಿ–ಉತ ಎನ್ನುತ್ತಾರೆ. ಕುದುರೆ ಸವಾರಿಯ ಹಾಡುಗಳು (ಉಮಕತ–ಬುಷಿ) ಸಂದರ್ಭಕ್ಕೆ ತಕ್ಕಂತೆ ಇರುತ್ತವೆ. ಉದಾ : ಮದುವೆಯಲ್ಲಿ ವಧುವನ್ನು ಕುದುರೆಯ ಮೇಲೆ ಕೂರಿಸಿ

ಅವಳ ಮನೆಗೆ ಕರೆದೊಯ್ಯುವಾಗ ಹಾಡುವುದನ್ನು ಬೇರಾವ ಸಂದರ್ಭದಲ್ಲೂ ಹಾಡುವುದಿಲ್ಲ. ಶೋಕಗೀತೆಗಳನ್ನು (ಓ ಇವಕೆ ಬುಷಿ) ಕುದುರೆ ಸವಾರರು ಹೆಣದ ಮೆರವಣಿಗೆಯಲ್ಲಿ ಹಾಡುತ್ತಾರೆ. ಮರ ಕೊಯ್ಯುವವರ ಹಾಡುಗಳನ್ನು ಕಿಯಾರಿ–ಉತ ಎನ್ನುತ್ತಾರೆ.

ಮೀನುಗಾರರ ಹಾಡುಗಳಿಗೆ ಘುನ–ಉತ ಎಂದು ಹೆಸರು. ಬಲೆ ಬೀಸುವಾಗ, ದೋಣಿ ನಡೆಸುವಾಗ, ಬಲೆ ಎಳೆಯುವಾಗ ಇಂಥ ಹಾಡುಗಳನ್ನು ಹೇಳುತ್ತಾರೆ. ಪ್ರಣಯ, ಬೇಟೆ, ಅದೃಷ್ಟ ಇವೇ ಮುಂತಾದ ವಿಷಯಗಳನ್ನು ಇವು ಒಳಗೊಂಡಿರುತ್ತವೆ. ಮೀನು ಬೇಟೆ ಉತ್ಕೃಷ್ಟವಾದರೆ ಸಮಾರಂಭವನ್ನು ಆಚರಿಸಿ ಹಾಡುವ ಪದಗಳಿಗೆ ಟಿಇರ್‌ಯೊ–ಬುಷಿ ಎಂದು ಹೆಸರು.

ನೃತ್ಯಗಾರ್ತಿ. ಸುನೇರಿ ಕಾಗದದ ಮೇಲೆ ರಚಿಸಿದ ಒಂದು ವರ್ಣಚಿತ್ರ. 17ನೆಯ ಶತಮಾನ

ವ್ಯವಸಾಯಕ್ಕೆ ಸಂಬಂಧಿಸಿದ ಅನೇಕ ಜನಪದ ಗೀತೆಗಳುಂಟು. ಬತ್ತ ನಾಟಿ ಹಾಕುವಾಗ, ಟೀ ಬಿಡಿಸುವಾಗ, ನೆಡುವಾಗ ಹಾಡುತ್ತಾರೆ. ಬತ್ತದ ಬೆಳೆಗೆ ಸಂಬಂಧಿಸಿದಂತೆ ಹಾಡುವ ಗೀತೆಗಳನ್ನು ಟ–ಉಎ–ಉತ ಎನ್ನುತ್ತಾರೆ. ಕಣದ ಹಬ್ಬದಲ್ಲಿ ನೃತ್ಯಮಾಡಿಕೊಂಡು ವಾದ್ಯಗಳೊಂದಿಗೆ ಹಾಡುವುದುಂಟು. ಈ ಸಮಾರಂಭದಲ್ಲಿ ಬತ್ತ ನಾಟಿಮಾಡುವ ಅನುಕರಣೆ ನೃತ್ಯಗಳಾದ ಡೆಮ್‌ಬು ಅಥವಾ ಟ–ಮ್ಯೆಯೊಂದಿಗೆ ಹಾಡುತ್ತಾರೆ. ಕಳೆಕೀಳುವ ಪದಗಳು ಕುಸತೊರಿ–ಉತ ತಾಳಕ್ಕೆ ತಕ್ಕಂತೆ ಇರುತ್ತವೆ.

ರೇಷ್ಮೆ ಕೆಲಸಕ್ಕೆ ಸಂಬಂಧಿಸಿದ ಹಾಡುಗಳನ್ನು ಹಟ–ಒರಿ–ಉತ ಎನ್ನುತ್ತಾರೆ. ಎಲೆ ಕೀಳುವುದರಿಂದ ಬಟ್ಟೆ ತಯಾರಾಗುವವರೆಗೂ ವಿವಿಧ ಹಂತಗಳ ಬೇರೆಬೇರೆ ಗೀತೆಗಳಿವೆ. ಕೊ–ಉತ ಪದಗಳನ್ನು ಹಳ್ಳಿಯ ಹಬ್ಬಗಳಲ್ಲಿ ನಡೆಯುವ ನೃತ್ಯಗಳೊಂದಿಗೆ ಹಾಡುತ್ತಾರೆ. ಸಣ್ಣ ಕೊಳಲು, ತಮಟೆ ಅಥವಾ ಗಂಟೆ ಇಲ್ಲಿನ ಸಾಮಾನ್ಯ ವಾದ್ಯಗಳು. ಭೋಜನಕೂಟದ ಹಾಡುಗಳು ಕೆಲವೊಮ್ಮೆ ಆರು ಸ್ವರಗಳಿಂದ ಕೂಡಿರುತ್ತವೆ. ಇದನ್ನು ರೊಕುಚೊಸಿ ಎನ್ನುತ್ತಾರೆ.

ಹೆಚ್ಚು ಜೀವಂತವಾಗಿರುವ ಜನಪದ ಗೀತೆಗಳು ಬೋನ್–ಒಡೊರಿ–ಉತ ಅಥವಾ ಒ–ಬೋನ್ ಹಬ್ಬದ ಹಾಡುಗಳು. ಹಬ್ಬದ ಸಾಯಂಕಾಲ ನೃತ್ಯದೊಂದಿಗೆ ಗೀತೆಗಳನ್ನು ಹಾಡುತ್ತಾರೆ. ಈ ಬಗೆಯ ನೃತ್ಯ ಬಹು ಪ್ರಾಚೀನ ಬಗೆಯದು. ನೃತ್ಯ ನಡೆಯುವಾಗ ಲೈಂಗಿಕ ವಿಷಯಗಳಲ್ಲಿ ಸಡಿಲಿಕೆ ಇರುತ್ತದೆ. ಯುವಕ ಯುವತಿಯರ ಪ್ರಣಯಗಳಿಗೆ ಅವಕಾಶ ಉಂಟು. ಹಾಡುಗಳಲ್ಲಿ ಲೈಂಗಿಕ ವಿಷಯ ಪ್ರಧಾನವಾಗಿದ್ದು ಶುಭಕೋರುವ ಮತ್ತು ಇತರೆ ವಿಷಯಗಳು ಅಲ್ಪಸ್ವಲ್ಪವಿರುತ್ತವೆ.

ಸಿಂಹನೃತ್ಯ ಮತ್ತು ಮೂಕವೇಷಕ್ಕೆ ಸಂಬಂಧಿಸಿದ ಹೊಸವರ್ಷದ ಹಾಡುಗಳನ್ನು ಷಿಷಿ–ಮ್ಯೆ ಮತ್ತು ಷಿಷಿ–ಒಡೊರಿ ಎನ್ನುತ್ತಾರೆ. ಈ ಹಾಡುಗಳು ಶುಭ ಕೋರುವವುಗಳಾಗಿರುತ್ತವೆ.

ಧಾರ್ಮಿಕ ಹಾಡುಗಳಾದ ಕಮಿ–ಉತಗಳನ್ನು ಜಪಾನಿನ ಷಿಂಟೋ ಧರ್ಮದ ದೇವಸ್ಥಾನಗಳಲ್ಲಿ ಹಾಡುತ್ತಾರೆ.

ಬೌದ್ಧರ ಮಂಗಳಹಾಡು ನೆಂಬುತ್ಸು ಮತ್ತು ಮಂತ್ರ ವ–ಸನ್‌ಗಳಿಂದ ಅನೇಕ ಅಸಂಗತ ಹಾಡುಗಳು ಹುಟ್ಟಿಕೊಂಡಿವೆ.

ಮಕ್ಕಳ ಹಾಡುಗಳು (ಡು–ಯೊ) ಮತ್ತು ಲಾಲಿಪದಗಳು (ಕೊಮರಿ–ಉತ) ಮಿನ್–ಯೊ ಗೀತೆಗಳಿಂದ ಬೇರೆಯಾಗಿದ್ದು, ರೂಪ ಮತ್ತು ವಸ್ತುವಿನಲ್ಲಿ ಸರಳ ಹಾಗೂ ಪ್ರಾಸಬದ್ಧವಾಗಿವೆ. ಚಂದ್ರ, ಮಿಂಚುಹುಳು ಮುಂತಾದುವುಗಳ ಬಗ್ಗೆ ಅಲ್ಲದೆ ದೀರ್ಘ ಸರಳಕಥೆಗಳನ್ನು ಈ ರೀತಿಯ ಗೀತೆಗಳು ಒಳಗೊಂಡಿರುತ್ತವೆ. ಹಗ್ಗ ಜಿಗಿಯುವಾಗ, ಚೆಂಡು ಆಡುವಾಗ ಇಲ್ಲವೆ ಏನೂ ಆಟವಿಲ್ಲದಾಗ ಸುಮ್ಮನೆ ಚಪ್ಪಾಳೆ ತಟ್ಟಿಕೊಂಡು ಮಕ್ಕಳು ಹಾಡಿಕೊಳ್ಳುತ್ತಾರೆ.

ಕೆಲವು ಆಧುನಿಕ ಜನಪದ ಗೀತೆಗಳು (ಷಿನ್–ಮಿನ್–ಯೊ) ಜನಪದರಿಂದ ಹುಟ್ಟಿದುವುಗಳಲ್ಲವಾದರೂ ಪ್ರಮುಖ ಬರೆಹಗಾರರಿಂದ ರಚಿಸಲ್ಪಟ್ಟು ಹೆಚ್ಚು ಜನಪ್ರಿಯವಾಗಿವೆ.

8. ಮದುವೆ ಮತ್ತು ಅಂತ್ಯಕ್ರಿಯಾಪದ್ಧತಿಗಳು : ಸಂಪ್ರದಾಯದಂತೆ ಮದುವೆ ನಡೆಯಬೇಕಾದರೆ ಮಧ್ಯವರ್ತಿಯೊಬ್ಬ ಬೇಕು. ಈತ ವಧೂವರರ ಪೋಷಕರನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ವಿಹಾರಗಳಲ್ಲಿ ಸಂಧಿಸಿ ಈ ವಿಷಯದ ಬಗ್ಗೆ ಚರ್ಚಿಸಿ ಸಂಬಂಧ ಕಲ್ಪಿಸುತ್ತಾನೆ. ಈ ಮೊದಲ ಹೆಜ್ಜೆಗೆ ಮಿಐ ಎನ್ನುತ್ತಾರೆ. ವಧೂವರರ ಪೋಷಕರು ಒಪ್ಪಿದರೆ ಕೊಡುಗೆ ವಿನಿಮಯ ನಡೆಯುತ್ತದೆ. ಇದಕ್ಕೆ ಯುಇನೊ ಎನ್ನುತ್ತಾರೆ. ಬಟ್ಟೆ, ರೇಷ್ಮೆ, ಅಕ್ಕಿ, ಮದ್ಯ ಅಥವಾ ಹಣವನ್ನು ಹೆಣ್ಣು ಗಂಡುಗಳು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ವರನೇ ಈ ವಸ್ತುಗಳನ್ನು ಕಳುಹಿಸಬೇಕಾಗುತ್ತದೆ. ಈ ಹಂತಕ್ಕೆ ನಿಶ್ಚಯಶಾಸ್ತ್ರ ಮುಗಿದಂತೆ.

ಮದುವೆಯಲ್ಲಿ ಧಾರ್ಮಿಕ ವಿಧಿಗಳು ಕಡಿಮೆಯಿದ್ದು ಸಮಾರಂಭ ಸರಳವಾಗಿರುತ್ತದೆ. ವಧುವಿನ ಮದುವೆ ವಸ್ತ್ರಗಳನ್ನು ಮದುವೆ ದಿನದ ಬೆಳಗ್ಗೆ ವರನ ಮನೆಗೆ ಕಳುಹಿಸುತ್ತಾರೆ. ಅದೇ ದಿನ ಸಾಯಂಕಾಲ ವಧುವನ್ನು ವರನ ಮನೆಗೆ ಕರೆತಂದು ಪದ್ಧತಿಯಂತೆ ಅವಳಿಗೆ ಮದುವೆ ಉಡುಪು ತೊಡಿಸುತ್ತಾರೆ. ಮದುಮಕ್ಕಳು ಸಮಾರಂಭವನ್ನು (ಸನ್‌ಸನ್‌ಕುಡೊ) ಕೈಗೊಳ್ಳುತ್ತಾರೆ. ಇದರಲ್ಲಿ ಅಕ್ಕಿ ಮದ್ಯವನ್ನು ಒಂಬತ್ತು ಸಾರಿ ವಧೂವರರು ವಿನಿಮಯ ಮಾಡಿಕೊಳ್ಳುತ್ತಾರೆ. ವಧೂವರರನ್ನು ಪರಿಚಯಮಾಡಿಕೊಳ್ಳುವುದರ ಮೂಲಕ ಸಮಾರಂಭ ಮುಗಿಯುತ್ತದೆ.

ಅಂತ್ಯಕ್ರಿಯಾ ಸಮಾರಂಭಗಳು ಷಿಂಟೋ ಧರ್ಮದ ಪುರೋಹಿತರಿಂದ ನೆರವೇರುತ್ತವೆ. ಸುಡುವ ಹಾಗೂ ಹೂಳುವ ಎರಡೂ ಪದ್ಧತಿಗಳಿವೆ. ಬೌದ್ಧರು ಹೂಳುವಾಗ ಹೆಣವನ್ನು ಪದ್ಮಾಸನದಲ್ಲಿ ಕೂರಿಸಿ ಪ್ರಾರ್ಥನೆ ಸಲ್ಲಿಸಿ ತರುವಾಯ ಮಣ್ಣು ಮುಚ್ಚುತ್ತಾರೆ. ಮೂವತ್ತು ದಿನಗಳಿಂದ ಹದಿಮೂರು ತಿಂಗಳವರೆಗೆ ಶೋಕವನ್ನು ಆಚರಿಸುತ್ತಾರೆ. ಚೀನದಲ್ಲಿರುವಂತೆ ಬಿಳಿಯ ಬಣ್ಣದ ವಸ್ತುಗಳು ಇವರಲ್ಲೂ ಶೋಕದ ಸಂಕೇತ.

9. ನೃತ್ಯಗಳು : ಜನಪ್ರಿಯ ನೃತ್ಯ (ಒಡೊರಿ) ಮತ್ತು ಶಾಸ್ತ್ರೀಯ ನೃತ್ಯ (ಮೆಯ್) ಎಂಬ ಎರಡು ಬಗೆಯ ನೃತ್ಯಗಳಿವೆ. ಶಾಸ್ತ್ರೀಯ ನೃತ್ಯ ಮಂದ ಚಲನೆಗಳಿಂದ ಕೂಡಿರುತ್ತದೆ. ಬುಗಕು ಎಂಬುದು ಪ್ರಮುಖ ಶಾಸ್ತ್ರೀಯ ನೃತ್ಯವಾಗಿದ್ದು ಹಿಂದೆ ರಾಜರ ಆಸ್ಥಾನಗಳಲ್ಲಿ ಬಳಕೆಯಲ್ಲಿತ್ತು. ಸುಮಾರು ನೂರ ಅರುವತ್ತು ಬಗೆಯ ಬುಗಕುಗಳಿದ್ದು ಅವು ಭಾರತ, ಚೀನ, ಕೊರಿಯ ಮತ್ತು ಟಿಬೆಟ್‌ಗಳ ಪ್ರಾಚೀನ ಸಂಗತಿಗಳನ್ನು ನಿರೂಪಿಸುತ್ತವೆ.

ಸೂರ್ಯದೇವತೆ ಗುಹೆಯಿಂದ ಹೊರಬರುವಂತೆ ಮಾಡಲು ಉಝುಮೆ ದೇವತೆ ಮಾಡಿದ ಕಗುರು ಎಂಬ ನೃತ್ಯದಿಂದ ನೃತ್ಯಕಲೆ ಹುಟ್ಟಿತೆಂದು ಹೇಳುತ್ತಾರೆ. ಈಗಲೂ ದೇವಸ್ಥಾನಗಳಲ್ಲಿ ಕಗುರು ನೃತ್ಯ ಬಳಕೆಯಲ್ಲಿದೆ.

ಜನಪ್ರಿಯ ನೃತ್ಯ ಒಡೊರಿ ಹಳ್ಳಿಗಳಲ್ಲಿ ಹೆಚ್ಚು ಪ್ರಸಿದ್ಧಿಯಲ್ಲಿದೆ. ಇದರಲ್ಲಿ ಮುಖ್ಯವಾದ ನೃತ್ಯ ಒ–ಬೋನ್ ಹಬ್ಬದಲ್ಲಿ ನಡೆಯುತ್ತದೆ. ಹೆಂಗಸರು ಗಂಡಸರು ಸುತ್ತುಗಟ್ಟಿ ಹಾಡುಗಳನ್ನು ಹೇಳುತ್ತ ತಮಟೆ, ಕೊಳಲು ಮುಂತಾದ ವಾದ್ಯಗಳೊಂದಿಗೆ ಈ ಬಗೆಯ ನೃತ್ಯವನ್ನು ಮಾಡುತ್ತಾರೆ.

(ಎಸ್.ಎನ್.ಜಿ.)

**ಜಪಾನೀ ತತ್ತ್ವ :** ಜಪಾನಿನ ತತ್ತ್ವಸಂಪ್ರದಾಯಕ್ಕೆ ಚೀನೀ ಹಿನ್ನೆಲೆಯಿದೆಯೆನ್ನುವುದು ನಿರ್ವಿವಾದ. ಮೊದ ಮೊದಲ ಜಪಾನಿನ ತಾತ್ತ್ವಿಕ ಬರೆಹಗಳೆಲ್ಲವೂ ಚೀನೀ ಲಿಪಿಯಲ್ಲಿಯೇ ಮೂಡಿಬಂದುವು. ಆಗ ಜಪಾನಿಗೆ ತನ್ನದೇ ಆದ ಲಿಪಿ ಇರಲಿಲ್ಲವೆಂದಲ್ಲ; ತಾತ್ತ್ವಿಕ ಭಾವನೆಗಳನ್ನೂ ಚಿಂತನೆಗಳನ್ನೂ ಸ್ಪಷ್ಟಗೊಳಿಸಲು ಅದರಲ್ಲಿ ಸಾಧ್ಯವಿರಲಿಲ್ಲ, ಅಷ್ಟೆ. ಚೀನೀ ಭಾಷೆಯೂ ಲಿಪಿಯೂ ಜಪಾನಿನ ಆಲೋಚನಾಪದ್ಧತಿಯ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದುವು. ಜಪಾನ್ ಬೌದ್ಧಧರ್ಮದೊಂದಿಗೆ ಸಂಪರ್ಕ ಹೊಂದಿದುದೂ ಸೂತ್ರಗಳ ಚೀನೀ ಅನುವಾದಗಳ ಮೂಲಕವೇ. ಚೀನೀ ಪ್ರಭಾವ ಜಪಾನನ್ನು ಮುಟ್ಟಿದುದು ಪ್ರಶ. 6ನೆಯ ಶತಮಾನದಲ್ಲಿ. ಎಂಟೊಂಬತ್ತನೆಯ ಶತಮಾನಗಳಲ್ಲಿ ಸುಯಿ ಮತ್ತು ಟ್ಯಾಂಗ್ ರಾಜವಂಶಗಳ ಕಾಲದಲ್ಲಿ ಚೀನದೊಂದಿಗೆ ನೇರವಾದ ಸಂಪರ್ಕ ಬೆಳೆಯಿತು. ಜಪಾನ್‍ನಲ್ಲಿ ಚೀನೀ ಮಾತನಾಡುವವರ ಸಂಖ್ಯೆ ಬೆಳೆಯಿತು. ಚೀನೀ ಭಾಷೆಗೆ ಗೌರವ ಸ್ಥಾನ ದೊರೆಯಿತು. ಕಾಮಾಕುರಾ ಕಾಲದಲ್ಲಂತೂ (1185–1333) ಬೌದ್ಧ ಧರ್ಮ ಬೇರೂರಿದಾಗ ಚೀನೀ ಪಂಡಿತರೇ ಜಪಾನಿಗೆ ಬಂದು ಭಾಷೆಯ ಮೇಲೂ ಭಾವನೆಗಳ ಮೇಲೂ ತಮ್ಮ ಪ್ರಭಾವ ಬೀರಿದರು. ಪಾಂಡಿತ್ಯಪ್ರಪಂಚದಲ್ಲಿ ಹಳೆಯ ಜಪಾನೀ ವಿದ್ವಾಂಸರು ತಮ್ಮ ಬರೆಹಗಳನ್ನು ಚೀನೀ ಭಾಷೆಯಲ್ಲಿಯೇ ಮೂಡಿಸುತ್ತಿದ್ದರು. ಕಾಮಾಕುರಾ ಕಾಲದಲ್ಲಿಯೇ ಜಪಾನೀ ಭಾಷೆ ವಿಶೇಷವಾಗಿ ಬಳಕೆಗೆ ಬಂದುದು. ಆದರೂ 18ನೆಯ ಶತಮಾನದಲ್ಲಿ ಕೂಡ ಚೀನೀ ಭಾಷೆಯಲ್ಲಿಯೇ ಗ್ರಂಥಗಳನ್ನು ರಚಿಸುತ್ತಿದ್ದ ಜಪಾನೀ ಪಂಡಿತರಿದ್ದರು (ನೊಕಮೊತೊ–ತೊಮಿನಗ, ಬೈಎನ್– ಮಿಉರ ಮೊದಲಾದವರು). ಚೀನ, ಜಪಾನ್‍ಗಳ ನಡುವೆ ಸಂಪರ್ಕವಿದ್ದರೂ ಜಪಾನ್‍ನ ಪ್ರಭಾವ ಮಾತ್ರ ಚೀನದ ಮೇಲೆ ಬೀಳಲಿಲ್ಲ ಎನ್ನುವುದು ಗಮನಾರ್ಹ.

ಜಪಾನ್‍ನ ಪ್ರಾಚೀನ ಮತ್ತು ರಾಷ್ಟ್ರೀಯ ಧರ್ಮ ಷಿಂಟೋ (ದೇವ ಮಾರ್ಗ). ಇದಕ್ಕೂ ಚೀನದ ಕನ್‍ಫ್ಯೂಷಿಯಸ್ಸಿನ ಧರ್ಮಕ್ಕೂ ಸಾದೃಶ್ಯಗಳು ಬಹಳ ಇವೆ. ಇದರಿಂದಾಗಿ ಎರಡೂ ಜನಾಂಗಗಳ ಆಚಾರವ್ಯವಹಾರಗಳೂ ಮನೋವೃತ್ತಿಗಳೂ ಕುಟುಂಬ ವ್ಯವಸ್ಥೆಯ ವಿವರಗಳೂ ಸುಮಾರಾಗಿ ಒಂದೇ ಆಗಿವೆಯೆನ್ನಬಹುದು. ಷಿಂಟೊ ಧರ್ಮದ ಮುಖ್ಯ ಲಕ್ಷಣವೆಂದರೆ ಪಿತೃದೇವತೆಗಳ ಆರಾಧನೆ. ಮೊದಲಿಗೆ ಜಪಾನೀ ಜನ ಸಣ್ಣಸಣ್ಣ ಬುಡಕಟ್ಟುಗಳಲ್ಲಿ ವಾಸಿಸುತ್ತಿದ್ದರು. ಪ್ರತಿ ಬುಡಕಟ್ಟಿನವರು ತಮ್ಮ ಮೂಲಪುರುಷನನ್ನು (ಉಜಿಗಮಿ) ಪೂಜಿಮಾಡುವ ಪದ್ಧತಿಯಿತ್ತು. ಕುಟುಂಬದೇವತೆ ಇದ್ದ ಹಾಗೆ ಈ ಮೂಲಪುರುಷ. ನಿಧನರಾದವರಿಗೆಲ್ಲ ಮರ್ಯಾದೆ ಸಲ್ಲಿಸುವ ಮನೋವೃತ್ತಿ ಅಲ್ಲಿ ಹೀಗೆ ಆರಂಭವಾಯಿತು. ಹಳ್ಳಿಗಳ ಕಡೆ ಅದು ಇಂದಿಗೂ ಉಳಿದಿದೆ. ಜಪಾನ್‍ನಲ್ಲಿ ವಂಶಕ್ಕೆ ಗೌರವ ಹೆಚ್ಚು; ಪ್ರತಿಯೊಬ್ಬನೂ ತನ್ನ ಹಿರಿಯರ ಬಗ್ಗೆ, ತನ್ನ ವಂಶದ ಪ್ರಾಚೀನತೆಯ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಾನೆ. ಕಿರಿಯರು ಹಿರಿಯರ ವಿಚಾರವಾಗಿ ನಡೆದುಕೊಳ್ಳಬೇಕಾದ ರೀತಿನೀತಿಗಳನ್ನು ಕನ್‍ಫ್ಯೂಷಿಯಸ್ಸಿನ ಧರ್ಮ ನಿರ್ಧರಿಸಿದಾಗ, ಜಪಾನೀಯರು ಇದನ್ನು ತಮ್ಮ ಧರ್ಮದಲ್ಲಿ ಅಳವಡಿಸಿಕೊಂಡರು. ಅಲ್ಲಿನ ಕುಟುಂಬ ವ್ಯವಸ್ಥೆಯೂ ಇದರ ಆಧಾರದ ಮೇಲೆ ಆಯಿತು. ಈಗಲೂ ಜಪಾನೀಯರ ಮನಸ್ಸಿನಲ್ಲಿ ಇಡೀ ಜಪಾನ್ ರಾಷ್ಟ್ರವೊಂದು ವಿಸ್ತೃತ ಕುಟುಂಬವೇ. ಈ ನೆಲೆಯಲ್ಲಿಯೇ ರಾಜವಂಶಕ್ಕೆ, ಚಕ್ರವರ್ತಿಗೆ ಅಲ್ಲಿ ವಿಶೇಷವಾದ ಪ್ರಾಶಸ್ತ್ಯ ಒದಗಿಬಂತು. ಚಕ್ರವರ್ತಿ ಆಮಾತಿರಾಸು (ಸೂರ್ಯಾಣಿ) ಎಂಬ ಅಧಿದೇವತೆಯ ವಂಶಕ್ಕೆ ಸೇರಿದವನೆಂಬ ಕಲ್ಪನೆ ಅಲ್ಲಿದೆ.

ಜಪಾನ್‍ನಲ್ಲಿ ಕನ್‍ಫ್ಯೂಷಿಯಸ್ಸಿನ ಧರ್ಮ ಮತ್ತು ತಾಓ ಧರ್ಮ ಸುಮಾರು 6ನೆಯ ಶತಮಾನದಲ್ಲಿಯೂ, ಬೌದ್ಧಧರ್ಮ ಅದೇ ಸುಮಾರಿನಲ್ಲಿಯೂ, ಕ್ರೈಸ್ತಧರ್ಮ 16ನೆಯ ಶತಮಾನದಲ್ಲಿಯೂ ನೆಲೆಯೂರಿದವು. ಇವೆಲ್ಲ ಆಗಂತುಕ ಧರ್ಮಗಳೇ. ಜಪಾನಿಗೆ ಸಹಜವಾಗಿ ಪ್ರಾಚೀನವಾಗಿದ್ದ ಧರ್ಮವೆಂದರೆ ಷಿಂಟೋ. ಷಿಂಟೋ ಎನ್ನುವ ಪದ ಚೀನೀ ಭಾಷೆಯ ಷೆನ್–ತಾಓ (ದೇವತೆಗಳ ಮಾರ್ಗ) ಎನ್ನುವ ಪದದ ಜಪಾನೀ ರೂಪ. ತತ್ತ್ವಪ್ರಣಾಳಿಕೆಗಳೇನೂ ಇರದಿದ್ದರೂ ಇದು ಮುಖ್ಯವಾಗಿ ಪ್ರಕೃತಿಪೂಜೆಯ ಲಕ್ಷಣಗಳನ್ನೊಳಗೊಂಡ ಧರ್ಮ. ಇದಕ್ಕೆ ಆಧಾರವಾಗಿ ಬರೆಹಗಳೇನೂ ಇರವು, ಷಿಂಟೋವಿನ ಧರ್ಮಗ್ರಂಥಗಳೆನ್ನುವುವು ಯಾವುವೂ ಇಲ್ಲ; ನೀತಿನಿಯಮಾವಳಿಗಳೂ ಇಲ್ಲ. ಮರಣಾನಂತರದ ಕಲ್ಪನೆಯೂ ಇಲ್ಲ. ಪಾಪ–ಪುಣ್ಯ ಎಂಬ ಭಾವನೆ ತೀರ ಪ್ರಾಚೀನ ಸ್ತರಕ್ಕೆ ಸೇರಿದ್ದು. ಪಾಪ ಮತ್ತು ಮೋಕ್ಷ ಎರಡೂ ಕಲ್ಪನೆಗಳು ಈ ಧರ್ಮದಲ್ಲಿವೆಯಾದರೂ ಅವು ಬಾಲಿಶ ಎನ್ನಬಹುದಾದಷ್ಟು ಸರಳವಾದವು. ವ್ರತಾಚರಣೆಗೆ ಹೆಚ್ಚು ಗಮನಕೊಟ್ಟಿರುವ ಈ ಧರ್ಮದಲ್ಲಿ ಸಾವಿರಾರು ದೇವತೆಗಳು. ಪ್ರತಿಯೊಂದು ಪ್ರಾಕೃತಿಕ ವಿವರವೂ ಪ್ರಸಂಗವೂ ವಸ್ತುವೂ ಒಂದು ದೇವತೆಯ ಇರವನ್ನು, ಪ್ರಭಾವವನ್ನು ಸೂಚಿಸುವಂಥದೇ. ಐದು–ಆರನೆಯ ಶತಮಾನಗಳಲ್ಲಿ ಕನ್‍ಫ್ಯೂಷಿಯಸ್ಸಿನ ಧರ್ಮದ ಸಂಪರ್ಕದಿಂದ ಈ ಧರ್ಮ ಹಿರಿಯರ ಆರಾಧನೆಯನ್ನು ವಿಶೇಷವಾಗಿ ಬೆಳೆಸಿಕೊಂಡಿತು.

ಷಿಂಟೋ ಧರ್ಮದ ಪ್ರಭಾವದಿಂದ ಜಪಾನ್‍ನಲ್ಲಿ ನೂರಾರು ದೇವತೆಗಳೂ, ಅವರ ಬಗ್ಗೆ ಸ್ವಾರಸ್ಯವಾದ ಪುರಾಣಕಥೆಗಳೂ ಮೈದಳೆದವು. ಬೌದ್ಧಧರ್ಮ ಅಲ್ಲಿಗೆ ಬಂದಾಗ ಷಿಂಟೋ ಧರ್ಮದೊಂದಿಗೆ ವಿರಸ ಅನಿವಾರ್ಯವಾಯಿತು. ಆದರೆ 8ನೆಯ ಶತಮಾನದ ಸುಮಾರಿಗೆ ಬೌದ್ಧಧರ್ಮ ಪ್ರಬಲವಾಗಲು, ಷಿಂಟೋ ಹಾಗೂ ಬೌದ್ಧಧರ್ಮಗಳ ಸಮನ್ವಯ ಪ್ರಯತ್ನ ನಡೆಯಿತು. ಕೋಬೋ ದಾಯ್‍ಷಿ (774–835) ಎಂಬ ಬೌದ್ಧಭಿಕ್ಷುವೇ ಇದಕ್ಕೆ ಕಾರಣನಾದ. ರ್‍ಯೋಬುಷಿಂಟೋ ಎಂಬ ಹೆಸರಿನಿಂದ ಈ ಹೊಸ ಪ್ರಯತ್ನ ಜನಪ್ರೀತಿಯನ್ನು ಪಡೆಯಿತು. ಕೆಲವು ಷಿಂಟೋ–ಬೌದ್ಧ ದ್ವಂದ್ವಮಂದಿರಗಳು ಮೈದಳೆದವು. ಕೆಲವು ಆಚಾರಗಳಲ್ಲಿ, ವ್ರತಗಳಲ್ಲಿ ಮಾರ್ಪಾಟು ತಲೆದೋರಿತು. ಮುಖ್ಯವಾಗಿ ಷಿಂಟೋ ಧರ್ಮಕ್ಕೆ ಒಂದು ನೈತಿಕ ಮನೋವೃತ್ತಿಯನ್ನೂ ತಾತ್ತ್ವಿಕ ತಳಹದಿಯನ್ನೂ ಒದಗಿಸುವುದು ಈ ಪ್ರಯತ್ನದ ಉದ್ದೇಶವಾಗಿತ್ತು. ಆದರೆ 17ನೆಯ ಶತಮಾನದ ವೇಳೆಗೆ ಶುದ್ಧ ಷಿಂಟೋಗಳ ವಿರೋಧ ಹೆಚ್ಚಾಗಿ ರ್‍ಯೋಬು ಷಿಂಟೋ ಕಳೆಗುಂದಿ ಮರೆಯಾಯಿತು.

ಚೀನದಿಂದ ಒದಗಿಬಂದ ಕನ್‍ಫ್ಯೂಷಿಯಸ್‍ನ ಪ್ರಭಾವ ರಾಷ್ಟ್ರೀಯ ಧರ್ಮವಾಗಿದ್ದ ಷಿಂಟೋವಿನಲ್ಲಿ ಅಡಕವಾಗಿತ್ತು. ಪ್ರತ್ಯೇಕವಾದ ಕನ್‍ಫ್ಯೂಷಿಯಸ್ ಧರ್ಮವಾಗಲೀ ತಾತ್ತ್ವಿಕ ಸಂಪ್ರದಾಯವಾಗಲೀ ಬೆಳೆಯಲಿಲ್ಲ. ಆದರೆ ನವ್ಯ ಕನ್‍ಫ್ಯೂಷಿಯಸ್ ಸಂಪ್ರದಾಯ ಕೊಂಚ ಪ್ರಭಾವ ಬೀರಿತು. ಮುಖ್ಯವಾಗಿ ಚು–ಹ್ಸಿ (1130–1200) ಮತ್ತು ವಂಗ್ ಯಂಗ್–ಮಿಂಗ್ (1472–1529) ಇವರಿಬ್ಬರ ತತ್ತ್ವಪ್ರಣಾಳಿಕೆಗಳು ಜಪಾನೀ ಪಂಡಿತರ ಆಸಕ್ತಿಯನ್ನು ಕೆರಳಿಸಿದವು. ಪ್ರಾಚೀನ ಕನ್‍ಫ್ಯೂಷಿಯಸ್ ಸ್ತರಕ್ಕೆ ಸೇರಿದ ನಾಲ್ಕು ವೇದಗಳಿಗೆ ಚು–ಹ್ಸಿ (ಜಪಾನಿಯಲ್ಲಿ ಶು–ಶಿ) ಹೊಸದಾಗಿ ವ್ಯಾಖ್ಯಾನಗಳನ್ನು ಬರೆದು ನೈತಿಕ ಮತ್ತು ಸಾಮಾಜಿಕ ತಾತ್ತ್ವಿಕ ನೆಲೆಯನ್ನು ಸ್ಪಷ್ಟಗೊಳಿಸಿದ. ಚೀನೀ ಶಿಕ್ಷಣಪದ್ಧತಿಗೆ ಇವನ ಬರೆಹಗಳು ಆಧಾರಭೂತವಾದುವು. ವಂಗ್ ಯಂಗ್–ಮಿಂಗ್ ಕನ್‍ಫ್ಯೂಷಿಯಸ್‍ನ ಧರ್ಮದ ವಿರುದ್ಧವಾಗಿ ಪ್ರಚಾರ ನಡೆಸಿ ಆಡಳಿತವರ್ಗದ ಆಗ್ರಹಕ್ಕೆ ತುತ್ತಾದ ಪ್ರತಿಭಾಶಾಲಿ. ಈತನ ಸಿದ್ಧಾಂತದಲ್ಲಿ ವಿಶ್ವವ್ಯಾಪಕತತ್ತ್ವ (ಲಿ) ಮತ್ತು ಮನುಷ್ಯನ ಮನಸ್ಸು ಎರಡೂ ಅಭಿನ್ನವಾದುವು. ಒಂದು ಬಗೆಯ ಅದ್ವೈತವಾದ ಇದು. ಮನುಷ್ಯನ ಮನಸ್ಸಿನಲ್ಲಿ ಇಡೀ ವಿಶ್ವದ ಸಾರಸರ್ವಸ್ವ ಅಡಗಿರುವುದು ಮಾತ್ರವಲ್ಲದೆ, ವಿಶ್ವವಿಕಾಸದ ಅತ್ಯುಚ್ಚ ನೆಲೆಯೂ ಅಡಗಿದೆ. ಅದು ಸತ್ಯಂ, ಶಿವಂ ಎರಡೂ ಹೌದು. ಮುನಿಯಾದವ ಎಲ್ಲ ವಸ್ತುಗಳೊಂದಿಗೆ ತಾದಾತ್ಮ್ಯವನ್ನು ಅನುಭವಿಸುತ್ತಾನೆ. ನಮ್ಮ ಅನುಭವಕ್ಕೆ ಬಂದ ಜ್ಞಾನವನ್ನು ಕ್ರಿಯೆಯ ಮೂಲಕ ಅಭಿವ್ಯಕ್ತಗೊಳಿಸುವುದೇ ನೈತಿಕ ಜೀವನದ ಪ್ರಮುಖ ಲಕ್ಷಣ. ಈ ಇಬ್ಬರು ಚೀನೀ ಪಂಡಿತರ ಬರೆಹಗಳು ಜಪಾನ್‍ನಲ್ಲಿ ಹೆಚ್ಚಿನ ಪ್ರಭಾವವನ್ನು ಬೀರಿದುವು. ಇವರ ವಿಚಾರಧಾರೆಯಿಂದ ಪ್ರಚೋದಿತವಾಗಿ ಹಲವಾರು ಗ್ರಂಥಗಳು ಮೈದಳೆದುವು.

**ಕೋಸಾಂಜಿ ದೇವಾಲಯ, ಈಕುಚಿಜಿಮಾ ದ್ವೀಪ**

ಕನ್‍ಫ್ಯೂಷಿಯಸ್‍ನ ಧರ್ಮದ ಸಂಪರ್ಕದಿಂದಾಗಿ ಜಪಾನಿನ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಪದ್ಧತಿಗಳು ಅದರ ಪಡಿಯಚ್ಚಿನಲ್ಲಿಯೇ ರೂಪಿತವಾದವು. ಆದರೆ ಜನರ ಮನೋವೃತ್ತಿಯನ್ನು ಮಾರ್ಪಡಿಸುವುದಾಗಲಿಲ್ಲ. ವಿಶ್ವವ್ಯವಸ್ಥೆಯ ಬಗ್ಗೆ, ಮನುಷ್ಯ ಜೀವನದ ತಾತ್ತ್ವಿಕ ನೆಲೆಯ ಬಗ್ಗೆ ಜಪಾನೀ ಚಿಂತನಕ್ಕೆ ಸ್ಫೂರ್ತಿ ಕೊಟ್ಟಿದ್ದು ನವ್ಯ ಕನ್‍ಫ್ಯೂಷಿಯಸ್‍ನ ಧರ್ಮ, ಈ ಸ್ಫೂರ್ತಿಯೂ ತುಂಬ ಸಮರ್ಥವೇನಾಗಲಿಲ್ಲ.

ಜಪಾನೀ ತತ್ತ್ವಶಾಸ್ತ್ರದಲ್ಲಿ ಪ್ರಧಾನಪಾತ್ರ ಬೌದ್ಧದರ್ಶನದ್ದೇ. ಜನಗಳಿಗೆ ಅಗತ್ಯವಾದ, ಅನುಕೂಲವಾದ ಧರ್ಮವನ್ನು ಒದಗಿಸಿಕೊಟ್ಟುದೂ ಅದೇ; ಅದರ ನೆಲೆಯಲ್ಲಿಯೇ ತಾತ್ತ್ವಿಕ ವಿಚಾರಧಾರೆಯೂ ಬೆಳೆಯಿತು. ದೆಂಗ್ಯೊ ದಾಯ್‍ಷಿ (767ರ ಸುಮಾರು) ಎಂಬ ಜಪಾನೀ ಭಿಕ್ಷು ಚೀನಕ್ಕೆ ಹೋಗಿ ಅಲ್ಲಿ ಟಿಯಾನ್–ತಾಯ್‍ಪಂಥದ ಬರೆಹಗಳನ್ನು ಅಧ್ಯಯನಮಾಡಿ ಹಿಂದಿರುಗಿದ ಅನಂತರ ಕೀಯೋಟೋ ನಗರದ ಬಳಿ ಹಿಏ ಬೆಟ್ಟದ ಮೇಲೆ ತೆಂಡಾಯ್ ಬೌದ್ಧ ಪಂಥದ ಕೇಂದ್ರವನ್ನು ಸ್ಥಾಪಿಸಿದ. ಇದು ಜಪಾನಿನಲ್ಲಿ ತುಂಬ ಪ್ರಭಾವಶಾಲಿಯಾಯಿತು.

ಇದಕ್ಕೆ ಮೊದಲೇ, ಅಂದರೆ ಪ್ರಶ. 712ರ ಸುಮಾರಿಗೆ ಟಿಂಪ್ಯೊ ಯುಗದಲ್ಲಿ ವೈ–ಷಿ ಎಂಬ ಚೀನೀ ಬೌದ್ಧ ಪಂಥ ಜಪಾನಿಗೆ ಬಂದಿತ್ತು. ಇದು ಹೋಸ್ಸೋ ಎಂಬ ಹೆಸರಿನಿಂದ ಅಲ್ಲಿ ಬಳಕೆಗೆ ಬಂದು, ಕಿಯೋಟೋ ಬಳಿಯ ಹಿಏಐ (ಹಿಏಐ–ಸನ್) ಎಂಬ

ಕೇಂದ್ರವೊಂದನ್ನು ಪಡೆದಿತ್ತು. ಇದರಿಂದ ಪ್ರಭಾವಿತನಾದ ಕಮ್ಮು ಚಕ್ರವರ್ತಿಯೇ ದೆಂಗ್ಯೋದಾಯ್‌ಷಿಯನ್ನು ಚೀನಕ್ಕೆ ಸೂತ್ರಸಂಗ್ರಹಕ್ಕಾಗಿ ಕಳುಹಿಸಿದ್ದು. ಚೀನದಲ್ಲಿ ಭಿಕ್ಷುಪ್ರಮುಖವಾದ ಟಿಎನ್–ತಾಯ್‌ಪಂಥಕ್ಕೆ ಈತನ ಮನಸ್ಸು ಒಲಿಯಿತು. ಈ ಪಂಥದ ಪ್ರವರ್ತಕ ದೋಷೋ (629–700) ಎಂಬ ಬೌದ್ಧ ಭಿಕ್ಷು. ಸುಮಾರು 806ರಲ್ಲಿ ಕೋಬೋ ದಾಯ್‌ಷಿ ಎಂಬ ಪ್ರಖ್ಯಾತ ಸಂತ ಷಿಂಗಾನ್ ಬೌದ್ಧಪಂಥವನ್ನು ಆರಂಭಿಸಿದ. ಚೀನದ ಛೆ–ಎನ್ ಎನ್ (ದಿಟವಾದ ಮಾತು) ಎಂಬ ಪಂಥದ ಮಾದರಿಯ ಮೇಲೆ ಮೂಡಿಸಿದ ಷಿಂಗಾನ್‌ನಲ್ಲಿ ಮಂತ್ರ ತಂತ್ರಗಳಿಗೆ ಹೆಚ್ಚು ಬೆಲೆ. ವಿಶ್ವವನ್ನು ಮಂಡಲದಲ್ಲಿ ನಿರೂಪಿಸುವ ಪದ್ಧತಿ ಈ ಪಂಥದಿಂದ ಆರಂಭವಾಯಿತು. ಮಹಾ ವೈರೋಚನ ಬುದ್ಧನ (ದೈನಿಚಿ) ಮೈಯೇ ಇಡೀ ವಿಶ್ವ. ಇದರ ರಹಸ್ಯಗಳನ್ನು ಪ್ರತೀಕಗಳಲ್ಲಿ, ಮಂಡಲಗಳಲ್ಲಿ, ಮಂತ್ರಗಳಲ್ಲಿ ಅಡಗಿಸಬಹುದು. ಈ ದೃಷ್ಟಿಯನ್ನು ಪ್ರತಿಪಾದಿಸಿದ ಷಿಂಗಾನ್ ಪಂಥ ತೆಂಡಾಯ್ ವಿಚಾರಧಾರೆಯನ್ನು ಅಂಗೀಕರಿಸಿತು.

ತೆಂಡಾಯ್ ಶಾಖೆಯ ತಾತ್ತ್ವಿಕ ನಿಲವು ಸ್ವಾರಸ್ಯವಾದುದು. ವ್ಯಾವಹಾರಿಕವಾಗಿ ಇರುವುದು ಪಾರಮಾರ್ಥಿಕವಾಗಿಯೂ ಇದೆ. ಬುದ್ಧಸ್ವಭಾವ ವಿಶ್ವದ ಎಲ್ಲ ವಸ್ತುಗಳಲ್ಲಿಯೂ ಅಡಗಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಸುಪ್ತವಾಗಿದೆ. ನಮ್ಮ ಬುದ್ಧಸ್ವಭಾವವನ್ನು ಸಂಪೂರ್ಣವಾಗಿ ಅರಿಯುವುದೇ ಸಂಬೋಧಿ (ಹೊಂಕಕು); ಬುದ್ಧನ ಕೆಲಸದಲ್ಲಿ ನಾವೆಲ್ಲ ಭಾಗಿಗಳಾಗಬೇಕು. ಅವನ ಉದ್ದೇಶಸಾಧನೆಗೆ ನೆರವಾಗಬೇಕು. ನೀತಿನಿಯಮಗಳು, ವ್ರತಾಚರಣೆ, ಧ್ಯಾನ ಇವೆಲ್ಲವೂ ಬುದ್ಧನಲ್ಲಿ ಶ್ರದ್ಧೆಯಿಲ್ಲದಿದ್ದರೆ ವ್ಯರ್ಥ. ಶ್ರದ್ಧೆಯೆಂದರೆ ಕೇವಲ ಬುದ್ಧಪೂಜೆಯಲ್ಲ, ಅವನ ದರ್ಶನವನ್ನು ಒಪ್ಪಿಕೊಳ್ಳುವುದಲ್ಲ; ವಿಶ್ವಬುದ್ಧ–ಸ್ವಭಾವದಲ್ಲಿ ಪಾಲ್ಗೊಳ್ಳುವುದು. ವೈಯಕ್ತಿಕ ಬದುಕನ್ನು ವಿಶ್ವಜೀವನಕ್ಕೆ ಅಳವಡಿಸಿಕೊಳ್ಳುವುದೇ ಶ್ರದ್ಧೆ. ಈ ವಿಶ್ವ, ಸನಾತನ ಬುದ್ಧಸ್ವಭಾವದ ಐತಿಹಾಸಿಕ ಅಭಿವ್ಯಕ್ತಿ ಗೌತಮ ಬುದ್ಧ; ವಿಶ್ವಮೋಕ್ಷವನ್ನು ಸಾಧಿಸಲು ಯಾವ ಕಾಲದಲ್ಲಾದರೂ ಎಲ್ಲಿಯಾದರೂ ಬುದ್ಧ ಅವತರಿಸಬಹುದು. ಅದು ಧರ್ಮದ ಒಂದು ಅಭಿವ್ಯಕ್ತಿ, ಅಷ್ಟೆ; ಧರ್ಮಯೆನ್ನುವುದು ಪ್ರಪಂಚದ ಮೂಲಸ್ವರೂಪ. ಈ ಪಂಥದವರು ತ್ರಿಕಾಯ ಸಿದ್ಧಾಂತವನ್ನು ಒಪ್ಪಿಕೊಂಡಿದ್ದಾರೆ. ಎಲ್ಲರೂ ಪಾಲ್ಗೊಳ್ಳುವ, ವಿಶ್ವಬುದ್ಧ ಸ್ವಭಾವವುಳ್ಳ ಧರ್ಮಕಾಯ (ಹೊಶ್ಶಿನ್), ಶ್ರದ್ಧೆಗೆ ಆಕಾರವಾದ, ಮೂರ್ತ ಪ್ರಕಾರದ ನಿರ್ಮಾಣಕಾಯ(ವೋ–ಜಿನ್), ಮತ್ತು ಸ್ವರ್ಗದ ಇರವಿನ ವೈಭವದಲ್ಲಿ ಮೂಡಿಬರುವ ಸಂಭೋಗಕಾಯ (ಹೋ–ಜಿನ್) ಇವೇ ತ್ರಿಕಾಯಗಳು.

ನಿರ್ವಾಣ ಮತ್ತು ಸಂಸಾರಗಳ ತಾದಾತ್ಮ್ಯವನ್ನು ಕೀಗೊನ್ ಪಂಥವೂ ಅಂಗೀಕರಿಸಿದೆ. ಅವತಂಸಕಸೂತ್ರದ ಆಧಾರದ ಮೇಲೆ ರೂಪಿತವಾದ ಈ ಪಂಥವನ್ನು ಕೊರಿಯದ ಭಿಕು ಜಿಂಜೋ(ಸಮಾಧಿ 742) ಜಪಾನ್‌ನಲ್ಲಿ ಬೇರೂರಿಸಿದ. ಎಲ್ಲ ಜಂಗಮ ಪ್ರಾಣಿಗಳಲ್ಲಿಯೂ ಬುದ್ಧಸ್ವಭಾವ ಇದೆ. ನಾವು ಬೇರೆ, ವಿಶ್ವ ಬೇರೆ ಎಂದು ಬಗೆಯುವುದು ಮಾಯೆ. ವ್ಯಕ್ತಿಯ ಅಹಂಕಾರ ಅಳಿಯದೆ ಮುಕ್ತಿಯಿಲ್ಲ. ಬೋಧಿಸತ್ತ್ವರು ತಮ್ಮ ಅನುಕಂಪದಿಂದ ಜ್ಞಾನದಿಂದ ನಮ್ಮನ್ನೆಲ್ಲ ಬುದ್ಧತ್ವದ ಕಡೆ ಒಯ್ಯುವರು. ಈ ನಿಲವನ್ನು ತಳೆದ ಕೀಗೊನ್ ಪಂಥ ಮುಂದೆ ಝೆನ್‌ಪಂಥಕ್ಕೆ ದಾರಿ ಮಾಡಿಕೊಟ್ಟಿತು. ಚೀನದಲ್ಲಿ ಈ ಪಂಥ ಹುಅ ಯೆನ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಿತು. ಅಲ್ಲಿ ತು–ಷುನ್ (557–640) ಎಂಬಾತನೇ ಅದರ ಪ್ರವರ್ತಕನಾಗಿದ್ದು ಮಹಾವೈಪುಲ್ಯಸೂತ್ರದ ಆಧಾರದ ಮೇಲೆ ತನ್ನ ಉಪದೇಶಗಳನ್ನು ರೂಪಿಸಿದ. ಬುದ್ಧ ಸಂಬೋಧಿಯನ್ನು ಪಡೆದೊಡನೆ ಬೋಧಿಸತ್ತ್ವರಿಗೆ ಈ ಸೂತ್ರವನ್ನು ಉಪದೇಶಿಸಿದನಂತೆ; ಸಾಮಾನ್ಯ ಮನುಷ್ಯರಿಗೆ ದುರ್ಗ್ರಾಹ್ಯವಾಗಿದ್ದ ಈ ಸೂತ್ರವನ್ನು ತು–ಷುನ್ ಸರಳಗೊಳಿಸಿದ. ಪ್ರಖ್ಯಾತ ಯಾತ್ರಿಕನಾಗಿದ್ದ ಹ್ಯು–ಎನ್–ತ್ಸಾಂಗ್ ಈ ಪಂಥಕ್ಕೆ ಸೇರಿದ್ದವ. ಸತ್ತ್ವ, ಅಸತ್ತ್ವಗಳೆರಡೂ ಮಾಯಾಕಲ್ಪಿತ; ಮಹಾಶೂನ್ಯದಲ್ಲಿ ಅವೆರಡರ ಅಭಾವವಿರುತ್ತದೆ. ಶಾಶ್ವತವಾದ ಅವಿಕಾರ್ಯವಾದ ಆಲಯ ವಿಜ್ಞಾನವೇ ಎಲ್ಲ ಸಂಸ್ಕೃತ ಧರ್ಮಗಳಿಗೂ ಮೂಲ. ಇದು ಕೀಗೊನ್ ಪಂಥದ ನಿಲವು.

ಜಪಾನ್‌ನಲ್ಲಿ ತುಂಬ ಜನಪ್ರಿಯವಾದ ಬೌದ್ಧಪಂಥವೆಂದರೆ ಜೋಡೋ (ಚೀನೀ–ಚಿ)ಇದರಲ್ಲಿ ಅಮಿತಾಭನೆಂಬ (ಅಮಿದ) ಬುದ್ಧನ ಶುದ್ಧಕ್ಷೇತ್ರದ ಕಲ್ಪನೆ ಮುಖ್ಯವಾದುದು. ಪುನರ್ಜನ್ಮದ ಅಗತ್ಯದಿಂದ ಮುಕ್ತರಾದ ಜೀವರು ಇಲ್ಲಿ ರಹಸ್ಯ ಕಮಲದಲ್ಲಿ ಹುಟ್ಟುತ್ತಾರೆ; ನಿರ್ವಾಣವೆಂಬ ಆಧ್ಯಾತ್ಮಿಕ ಪ್ರಯೋಜನಕ್ಕಿಂತ ಜನಸಾಮಾನ್ಯರಿಗೆ ಅಮಿತಾಭನ ಕರುಣೆಯಿಂದ ಎಂದೆಂದೂ ಸುಖವಿರುವ ಸ್ವರ್ಗದಲ್ಲಿ ಹುಟ್ಟುವುದು ಹೆಚ್ಚು ಪ್ರಿಯವಾದುದು ಸಹಜವೇ. ಅಮಿತಾಭ (ಅಥವಾ ಅಮಿತಾಯುಸ್) ಪೌರಮಾರ್ಥಿಕ ತತ್ತ್ವವಲ್ಲ. ಮನುಷ್ಯರ ಭಕ್ತಿಗೆ ನಿಲುಕುವ ದೈವ. ಅವನ ಸ್ವರ್ಗವೇ ಶುದ್ಧಕ್ಷೇತ್ರ; ಅದಕ್ಕೆ ಸುಖಾವತಿಯೆಂದು ಹೆಸರು. ಇಲ್ಲಿ ಹುಟ್ಟಿದೊಡನೆ ನಿರ್ವಾಣ ಸುಲಭಸಾಧ್ಯವಾಗುತ್ತದೆ. ಜೀವದ ಶ್ರದ್ಧೆ, ಅಮಿತಾಭನ ಕರುಣೆ ಎರಡೂ ಕಲೆತು ಸಾಧನೆಯೆನಿಸಿಕೊಳ್ಳುತ್ತದೆ; ಇದಕ್ಕೆ ಜಪಾನೀ ಭಾಷೆಯಲ್ಲಿ ತಾರಿಕಿ ಎನ್ನುತ್ತಾರೆ. ಪಶ್ಚಿಮ ದಿಗ್ಭಾಗದಲ್ಲಿರುವ ಸುಖಾವತಿಯಲ್ಲಿ ಹುಟ್ಟಲು ನೆರವಾಗುವುದು ಅಮಿತಾಭನ ಹೆಸರಿನ ಪುರಶ್ಚರಣೆ (ನೆಂಬುತ್ಸು). ಸುಖಾವತೀವ್ಯೂಹ ಸೂತ್ರ ಮತ್ತು ಅಮಿತಾಯುರ್ಧ್ಯಾನ ಸೂತ್ರ ಎರಡೂ ಈ ಪಂಥದ ಆಧಾರಗ್ರಂಥಗಳು.

ಜೋಡೋ ಪಂಥದಲ್ಲಿ ನಾಲ್ಕು ಶಾಖೆಗಳು : ಶುದ್ಧ ಜೋಡೋ, ಜೋಡೋ–ಶಿನ್–ಶೂ, ಯುಸುನೆಂಬುತ್ಸು ಮತ್ತು ಜಿ. ಶುದ್ಧಜೋಡೋ ಶಾಖೆಯ ಪ್ರವರ್ತಕ ಹೊನೆನ್–ಶೋನಿನ್(ಗೆಂಕು) 1133–1212. ಮೊದಲಿಗೆ ತೆಂಡಾಯ್ ಪಂಥಕ್ಕೆ ಸೇರಿದ್ದ ಈತ ಅಲ್ಲಿಂದ ಹೊರಬಂದು ಸಂತನೆಂದು ಪ್ರಖ್ಯಾತನಾದ. ಈತನ ಕವಿತೆಗಳು ಇಂದಿಗೂ ಉಳಿದಿವೆ. ಈತನ ಶಿಷ್ಯನಾದ ಶಿನ್‌ರಾನ್ (1173–1263) ಎಂಬಾತ ಜೋಡೋ–ಶಿನ್–ಶೂ ಶಾಖೆಯನ್ನು ಆರಂಭಿಸಿದ. ಜಪಾನಿನ ಬೌದ್ಧರಲ್ಲಿ ಬಹುಮಂದಿ ಈ ಶಾಖೆಗೆ ಸೇರಿದವರು. ಮೊದಲು ಭಿಕ್ಷುವಾಗಿದ್ದ ಶಿನ್‌ರಾನ್ ಈ ಶಾಖೆಯನ್ನು ಆರಂಭಿಸಿದ ಮೇಲೆ ಮದುವೆಯಾಗಿ ಸಂಸಾರಿಯಂತೆ ಬಾಳನ್ನು ಕಳೆದ. ಸುಖಾವತಿಯನ್ನು ಮುಟ್ಟಬೇಕಾದರೆ ಭಿಕ್ಷುವೇ ಆಗಿರಬೇಕೆಂಬ ನಿಯಮವಿಲ್ಲ–ಎಂಬುದು ಆತನ ನಿಲವು. ಅಮಿತಾಭ ಬುದ್ಧನ ಕರುಣೆ ಉಚಿತವಾದ ದಾನ; ಶೀಲವಾಗಲೀ ಜ್ಞಾನವಾಗಲೀ ಅವಕ್ಕೆ ಕಾರಣವಲ್ಲ. ಶ್ರದ್ಧೆ ಮುಖ್ಯವಾದುದು. ಅಮಿತಾಭನ ಶಕ್ತಿಯಾದ ಕ್ವಾನ್ನನ್ ದೇವತೆ ಈ ಶಾಖೆಯಲ್ಲಿ ಮುಖ್ಯಪಾತ್ರ ವಹಿಸುತ್ತಾಳೆ. ಭಿಕ್ಷುವಾಗಿದ್ದ ಶಿನ್‌ರಾನ್‌ಗೆ ಮದುವೆಯಾಗೆಂದು ಸಲಹೆ ಮಾಡಿದವಳು ಈಕೆಯೇ ಎಂದು ಪ್ರತೀತಿ. ಅವಲೋಕಿತೇಶ್ವರನ ಸ್ತ್ರೀರೂಪವಾದ ಈಕೆ ಜಪಾನ್‌ನ ಜನಪ್ರಿಯ ದೇವತೆ. 15ನೆಯ ಶತಮಾನದ ವೇಳೆಗೆ ಈ ಜೋಡೋ–ಶಿನ್–ಶೂ ಪಂಥ ಜಪಾನಿನಲ್ಲೆಲ್ಲ ಹರಡಿತು.

ಜೋಡೋ ಪಂಥಕ್ಕೆ ವಿರುದ್ಧವಾದ ನಿಲವನ್ನು ತಳೆದು ಹೆಸರು ಪಡೆದವರಲ್ಲಿ ನಿಚಿರೆನ್ (1222–1282) ಪ್ರಮುಖ. ಇವನ ಪ್ರಕಾರ ನಿಜವಾದ ಬೌದ್ಧಧರ್ಮ ಇರುವುದು ಸದ್ಧರ್ಮ ಪುಂಡರೀಕಸೂತ್ರದಲ್ಲಿ. ಈ ಸೂತ್ರದ ಹೆಸರನ್ನು ಪುರಶ್ಚರಣ ಮಾಡಿದರೆ ನಿರ್ವಾಣಕ್ಕೆ ನೆರವಾಗುವ ಶಕ್ತಿಬರುತ್ತದೆ (ನಮು–ವ್ಯೊಹೋ–ರೆಂಗೆ–ಕ್ಯೋ ಎನ್ನುವ ಮಂತ್ರ) ಈ ಕಲಿಕಾಲದಲ್ಲಿ ಹೆಸರನ್ನು ಸ್ಮರಿಸಿದರೇ ಸಂಬೋಧಿ ಒದಗುತ್ತದೆ ಎಂದು ನಿಚಿರೆನ್ ವಾದ. ಪರಾತ್ಪರ ವಸ್ತುವಾದ ಬುದ್ಧನ ಮೂರ್ತ ಮತ್ತು ಸಾಂಕೇತಿಕ ಅಸ್ತಿತ್ವ ಪ್ರತಿಯೊಂದು ಪ್ರಾಣಿಯಲ್ಲಿಯೂ ಇರುತ್ತದೆ. ಬುದ್ಧನ ಸ್ವಭಾವ ಮತ್ತು ಅದರ ಅನೇಕಾನೇಕ ಅಭಿವ್ಯಕ್ತಿಗಳು ಮೂಲತಃ ಒಂದೇ. ವಿಶ್ವದಲ್ಲೆಲ್ಲ ಇರುವ ಬೌದ್ಧಧರ್ಮಕ್ಕೆ ಒಂದೇ ಕೇಂದ್ರವನ್ನು ಸ್ಥಾಪಿಸಬೇಕೆಂದು ನಿಚಿರೆನ್ ಪ್ರಯತ್ನಪಟ್ಟ. ಇವನ ನಿಲವನ್ನು ತಳೆದ ಶಾಖೆಗೆ ಇವನ ಹೆಸರೇ ಉಳಿದಿದೆ.

ವಿಶ್ವದಲ್ಲೆಲ್ಲ ವಿಖ್ಯಾತವಾದ ಜಪಾನೀ ತತ್ತ್ವ ಪದ್ಧತಿಯೆಂದರೆ ಝೆನ್ ಅಥವಾ ಧ್ಯಾನಪಂಥ. ಚೀನದಲ್ಲಿ ಚಾನ್ ಎಂದು ಬಳಕೆಗೆ ಬಂದ ಈ ಪಂಥದಲ್ಲಿ ತರ್ಕ, ಅನುಮಾನಗಳಿಗಿಂತ ಹೆಚ್ಚಾಗಿ ಧ್ಯಾನಕ್ಕೆ ಪ್ರಾಶಸ್ತ್ಯವಿದೆ. ಸಂಬೋಧಿಯ ಅನುಭವ ಹಠಾತ್ತಾಗಿ ಒಟ್ಟಾಗಿ ಆಗುವುದೇ ಇಲ್ಲಿಯ ಮುಖ್ಯ ವಿವರ. 6ನೆಯ ಶತಮಾನದ ಆದಿಭಾಗದಲ್ಲಿ ಬೋಧಿಧರ್ಮನೆಂಬ ದಕ್ಷಿಣಭಾರತದ ಬೌದ್ಧಭಿಕ್ಷು ಚೀನಕ್ಕೆ ಬಂದು ಅಲ್ಲಿ ಈ ಪಂಥವನ್ನು ಪ್ರವರ್ತಿಸಿದನೆಂದು ಪ್ರತೀತಿ. 1180ರಲ್ಲಿ ಜಪಾನೀ ಭಿಕ್ಷುವಾದ ಐಸಾಯ್ (1141–1215) ಚೀನಕ್ಕೆ ಬಂದು ಈ ಧ್ಯಾನಮಾರ್ಗದಲ್ಲಿ ಕೌಶಲವನ್ನು ಪಡೆದು ಜಪಾನಿಗೆ ಹಿಂದಿರುಗಿ ಹಕಾಟಾ ಎಂಬಲ್ಲಿ ಶೋಜುಕುಜಿ ವಿಹಾರವನ್ನು ಸ್ಥಾಪಿಸಿ ಅಲ್ಲಿ ಝೆನ್ ಉಪದೇಶಕ್ಕೆ ಆರಂಭಿಸಿದ. ಮೂವತ್ತು ವರ್ಷಗಳ ಅನಂತರ ದೋಗೆನ್ (1200–1253) ಎಂಬ ಭಿಕ್ಷು ಚೀನಕ್ಕೆ ಹೋಗಿ ಅಲ್ಲಿಂದ ಹಿಂದಕ್ಕೆ ಬಂದು ಪರಿಷ್ಕೃತ ಝೆನ್ ಪಂಥವನ್ನು ಸ್ಥಾಪಿಸಿದ. ಹೀಗೆ ಝೆನ್ ಪಂಥದಲ್ಲಿ ಎರಡು ಶಾಖೆಗಳು: ಮೊದಲನೆಯದು ರಿನ್‌ಜಾಯ್ ಎನಿಸಿಕೊಳ್ಳುತ್ತದೆ. ಕಾಮಾಕುರಾ ಯುಗದಲ್ಲಿ (1185–1338) ಇದು ಬಹಳ ಪ್ರಚಾರದಲ್ಲಿತ್ತು. ಇದರ ಮಠಗಳು ಜಪಾನ್‌ನ ಸಾಂಸ್ಕೃತಿಕ ಕೇಂದ್ರಗಳಾದುವು. ಮುಂದೆ ಝೆನ್ ತತ್ತ್ವಪದ್ಧತಿ ಬೆಳೆಯಲು ಕಾರಣನಾದ ಹಕುಯಿನ್ (1685–1768) ಈ ಶಾಖೆಗೆ ಸೇರಿದವ. ಎರಡನೆಯದು ಸೋಟೋ; ಇದನ್ನು ಸ್ಥಾಪಿಸಿದವ ದೋಗೆನ್.

ದೋಗೆನ್ ಪರಿಷ್ಕರಿಸಿದ ಝೆನ್ ಶಾಖೆ ಎಚಿಜೆನ್ ಪ್ರಾಂತ್ಯದ ಐಹೈಜಿ ದೇವಾಲಯದಲ್ಲಿ ಬೆಳೆಯಿತು. ದೋಗೆನ್ನನನ್ನು ಜಪಾನೀ ಜನರು ಬೋಧಿಸತ್ತ್ವನೆಂದೇ ಪರಿಗಣಿಸುತ್ತಾರೆ. 1223ರಲ್ಲಿ ಈತ ಚೀನಕ್ಕೆ ಹೋಗಿ ಅಲ್ಲಿ ಚಾನ್ ಆಚಾರ್ಯ ಜು–ಛಿಂಗ್ ಎಂಬುವನ ಬಳಿ ಶಿಷ್ಯವೃತ್ತಿಮಾಡಿ ಸಂಬೋಧಿಯನ್ನು ಪಡೆದು 1227ರಲ್ಲಿ ಜಪಾನಿಗೆ ಹಿಂದಿರುಗಿದ. 1236ರಲ್ಲಿ ಕೋಷೋಹೋರಿಂಗ್‌ಜಿ ಎಂಬ ಪ್ರಪ್ರಥಮ ಝೆನ್ ವಿಹಾರವನ್ನು ಈತ ಸ್ಥಾಪಿಸಿದ. ಧ್ಯಾನಮಾರ್ಗದ ಅಂಗವಾಗಿ ಅಸನಜಯವನ್ನು (ಜಾಜೆನ್) ಇಲ್ಲಿ ನೂರಾರು ಗೃಹಸ್ಥರಿಗೂ ಭಿಕ್ಷುಗಳಿಗೂ ಕಲಿಸಿದ. ಬೌದ್ಧಧರ್ಮದ ತಿರುಳೆನಂತಿರುವ ಈ ಅಸನಜಯದಲ್ಲಿ ಸಿದ್ಧಾಂತ ಮತ್ತು ಆಚಾರಗಳ ಸಂಪೂರ್ಣ ಸಮನ್ವಯ ಇದೆ. ಇದೇ ಬುದ್ಧಸ್ವರೂಪ. ಮನುಷ್ಯನ ಸತ್ತ್ವ ಮತ್ತು ಎಲ್ಲ ಪ್ರಾಣಿಗಳ ಸತ್ತ್ವ ಇರುವುದು ಬುದ್ಧಸ್ವಭಾವದಲ್ಲಿಯೇ. ಇದನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಅಹಂಭಾವ ಆರಬೇಕು, ಸತ್ತ್ವಶುದ್ಧಿಯಾಗಬೇಕು; ಸ್ವಾರ್ಥಕಾಮನೆಯಿಂದ ಮಾಡುವ ಎಲ್ಲ ಕೆಲಸಗಳ, ಎಲ್ಲ ಚಿಂತನೆಗಳ ಕ್ಷಯವಾಗಬೇಕು; ತನ್ನನ್ನು ತಾನು ಸಂಪೂರ್ಣವಾಗಿ ಒಪ್ಪಿಸಿಕೊಳ್ಳಬೇಕು, ಇದು ಶರಣಾಗತಿ ಅಥವಾ

ಪ್ರಾಪ್ತಿ. ಇದೇ ಜ಼ೆನ್ ತಾತ್ತ್ವಿಕ ನೆಲೆ. ವ್ಯಾವಹಾರಿಕ ಪ್ರಪಂಚ ದಿಟವಾಗಿ ಪಾರಮಾರ್ಥಿಕ ಸತ್ಯವೇ; ಇದನ್ನು ಮೀರಿ ಅಥವಾ ಇದಕ್ಕೆ ಶೇಷವಾಗಿ ಇರುವುದು ಏನೂ ಇಲ್ಲ. ಇದೊಂದು ಬಗೆಯ ಅದ್ವೈತವೇ. ಆದರೆ ದೋಗೆನ್ ಸೂತ್ರಪಠಣ, ಪೂಜೆ, ಆರಾಧನೆ, ವ್ರತ ಇವುಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟಿದ್ದ. ಮುಂದೆ ಜ಼ೆನ್ ಪಂಥದಲ್ಲಿ ಇವುಗಳಿಗೆ ಪ್ರಾಶಸ್ತ್ಯ ತಪ್ಪಿತು. ಕೋಆನ್ ಎಂಬ ಸಂದಿಗ್ಧ ಸ್ಫೋಟನವಾಕ್ಯಗಳು ದೋಗೆನ್ ಕಾಲದಿಂದಲೂ ಜ಼ೆನ್ ಸಂಪಾದದಲ್ಲಿ ಮುಖ್ಯ ಪರಿಕರವಾಗಿ ಉಳಿದಿವೆ. ಇವನ ಶೋಬೋಗೆನ್ ಜೋ ಎಂಬ ಸಿದ್ಧಾಂತಗ್ರಂಥ ಇಂದಿಗೂ ಪ್ರಸಿದ್ಧವಾಗಿದೆ.

ಜಪಾನ್‌ನ ಇತಿಹಾಸದಲ್ಲಿ ಮೇಜಿ ಪುನರುದ್ಧಾರವೆಂಬುದು ಮುಖ್ಯವಾದ ಘಟ್ಟ; ಇದು ನಡೆದುದು 1898ರಲ್ಲಿ, 17ನೆಯ ಶತಮಾನದಿಂದಲೂ ಅಲ್ಲಿಯವರೆಗೆ ಟೋಕೂಗಾವ ಎಂಬ ಶೊಗುನೇಟ್ ಅಧಿಕಾರಿಗಳು ಪರಂಪರಾಗತವಾಗಿ ಬಂದ ಚಕ್ರವರ್ತಿಗಳನ್ನು ಮೂಲೆಗೆ ತಳ್ಳಿ ತಾವು ರಾಜ್ಯವನ್ನಾಕ್ರಮಿಸಿಕೊಂಡಿದ್ದರು. ಆಗ ಜಪಾನ್ ಉಳಿದೆಲ್ಲ ರಾಷ್ಟ್ರಗಳಿಂದಲೂ ದೂರವಾಗಿ, ಕ್ರೈಸ್ತಧರ್ಮ ಬಹಿಷ್ಕೃತವಾಗಿ, ಸ್ವತಂತ್ರ ಚಿಂತನೆ ಅಸಾಧ್ಯವಾಗಿದ್ದಿತು. ಮೇಜಿ ಪ್ರಕರಣದ ಅನಂತರ ಚಕ್ರವರ್ತಿ ಮತ್ತೆ ಅಧಿಕಾರಕ್ಕೆ ಬಂದ; ಟೋಕಿಯೋ ರಾಜಧಾನಿಯಾಯಿತು. ಇಲ್ಲಿಂದ ಮುಂದೆ ಹಲವಾರು ತಾತ್ತ್ವಿಕ ಪ್ರಣಾಳಿಕೆಗಳು ಮೈದಳೆದುವು. ಆದರೆ ಇವೆಲ್ಲ ಸಂಪ್ರದಾಯದ ಪಡಿಯಚ್ಚಿನಲ್ಲಿಯೇ ಬಂದುವು. ನಿದರ್ಶನಕ್ಕೆ ಯೋಷಿಮೂರ ಮಸಮೋಚಿ (ಜನನ 1839) ಸ್ಥಾಪಿಸಿದ ಶಿಂಶು-ಕ್ಯೋ ಧರ್ಮ. ಇದು ಷಿಂಟೋ ಧರ್ಮದ ಪರಿಷ್ಕೃತರೂಪ. ಕೋಜಿಕಿ ಮತ್ತು ನಿಹೋಂಗಿ ಎಂಬ ಎರಡು ಗ್ರಂಥಗಳಿಗೆ ಈತ ವ್ಯಾಖ್ಯಾನ ಬರೆದು ವ್ರತಾಚರಣೆ ಮತ್ತು ಧ್ಯಾನದ ಸಮನ್ವಯ ಮಾಡಲೆತ್ನಿಸಿದ. ಪಾಪಗಳನ್ನು ತೊಡೆದುಹಾಕಲು ಬೆಂಕಿಯ ಮೇಲೆ ನಡೆಯುವುದು, ಕುದಿಯುವ ನೀರಿನಿಂದ ಶುದ್ಧೀಕರಣ ಮಾಡಿಕೊಳ್ಳುವುದು ಇವು ಈ ಧರ್ಮದಲ್ಲಿ ಮುಖ್ಯ. ಅಭ್ಯಂತರ ಪಾಪಗಳನ್ನು ನಿವಾರಿಸಿಕೊಂಡಲ್ಲದೆ ದೈವಿಕಸತ್ತ್ವ ದೇಹವನ್ನು ಆಕ್ರಮಿಸಿಕೊಳ್ಳಲಾರದೆಂದು ಇಲ್ಲಿನ ಕಲ್ಪನೆ.

ಜಪಾನಿನ ತತ್ತ್ವಶಾಸ್ತ್ರದಲ್ಲಿ ಮೂಲಭೂತವಾದ ಕಲ್ಪನೆಯೆಂದರೆ ಕಾನ್ನಗರ ಎನ್ನುವುದು. ಈ ಮಾತಿಗೆ ದೇವತೆಗಳು ಇಷ್ಟಪಟ್ಟಂತೆ, ದೇವತೆಗಳನ್ನು ಅನುಸರಿಸಿ, ನಿಸರ್ಗಸಿದ್ಧವಾಗಿ ಎಂಬ ಅರ್ಥಗಳಿವೆ. ಜಪಾನ್‌ನ ರಾಜವಂಶ ಆಮಾತಿರಾಸುವಿನಿಂದ ಬಂದುದು ಎಂದು ಕೋಟೋಕು ಚಕ್ರವರ್ತಿ (ಸು. 645) ಸ್ಪಷ್ಟಪಡಿಸಿದಾಗ ಈ ಮಾತನ್ನು ಬಳಸಿದ. ಹೀಗೆ ಆರಂಭವಾದ ಕಲ್ಪನೆ ಭಾರತದ ಋತ ಎನ್ನುವುದಕ್ಕೆ ಸಮಾನಾರ್ಥದ ಪದವಾಗಿಬಿಟ್ಟಿತು. ಪರಿಷ್ಕೃತ ಷಿಂಟೋ ಧರ್ಮದ ನೆಲೆಯಲ್ಲಿ ಈ ಅರ್ಥ ಸ್ಫುರಿಸಿತು. ಮುಖ್ಯವಾಗಿ ಮೋಟೊ-ಒರಿ-ನೊರಿನಗ (1730-1801) ಮತ್ತು ಕವೋ-ನೋ-ವಬುಂಚಿ ಇವರ ವಿಚಾರಧಾರೆಯಲ್ಲಿ ಈ ವಿಶೇಷಾರ್ಥ ಸ್ಪಷ್ಟವಾಯಿತು. ಜಪಾನೀ ವಿದ್ವಾಂಸರು ಕಾನ್ನಗರ ಕಲ್ಪನೆಯಲ್ಲಿ ಸಮಾಜವಾದ, ಮಾನವವಾದಗಳನ್ನು ನಿಲ್ಲಿಸಲು ಪ್ರಯತ್ನಪಟ್ಟಿದ್ದಾರೆ. ಇದು ಕನ್‌ಫ್ಯೂಷಿಯಸ್ ಸಿದ್ಧಾಂತಕ್ಕೆ ಮೇಲೆ ಮೇಲೆ ಸರಿಹೋಗುವಂತೆ ತೋರಿದರೂ ಮೂಲದಲ್ಲಿ ಲಾವೋಟ್ಸುವಿನ ತಾಓ ಸಿದ್ಧಾಂತಕ್ಕೆ ಹೊಂದಿಕೊಳ್ಳುತ್ತದೆ ಎಂದು ವಿದ್ವಾಂಸರ ಅಭಿಪ್ರಾಯ. ಚೀನದಿಂದಲೇ ಜಪಾನಿಗೆ ಬಂದ ಯಿನ್-ಯಂಗ್ (ಪುಂಸ್ತ್ರೀ) ಕಲ್ಪನೆಯೂ ಕಾನ್ನಗರದ ನೆಲೆಯಲ್ಲಿಯೇ ವಿವೇಚಿಸಲ್ಪಟ್ಟಿತು.

ಇದು ಜಪಾನೀ ದರ್ಶನಗಳಲ್ಲಿ ಹಾಸುಹೊಕ್ಕಾಗಿ ಸೇರಿಬಂದಿರುವ ವಿಚಾರಧಾರೆ. ಜಪಾನೀ ತತ್ತ್ವಜ್ಞಾನಕ್ಕೆ ಯಾವುದಾದರೂ ಮೂಲಭೂತವಾದ ಕಲ್ಪನೆಯಿದ್ದರೆ ಅದು ಕಾನ್ನಗರ. ಷಿಂಟೋ ಪಂಥದ ಗ್ರಂಥಗಳಲ್ಲಿ ಇದು ಮುಖ್ಯವಾಗಿಯೇ ಬರುವ ವಿಚಾರ. ಬೌದ್ಧಧರ್ಮ ಜಪಾನಿನ ಹೃದಯವನ್ನು ಹಿಡಿದಾಗಲೂ ಇದು ಅಮಿತಾಭ (ಅಮಿದ) ಬುದ್ಧನ ಆದಿಸಂಕಲ್ಪವೆಂದು ಪರಿಗಣಿತವಾಯಿತು. ಕಾನ್ನಗರ ನಮ್ಮ ಒಡಲಲ್ಲಿ ಇರುವ ಮಾನ ರಾಗ-ದ್ವೇಷಗಳು ಇದನ್ನು ಮರೆಮಾಚಿಬಿಡುತ್ತವೆ. ಕಾನ್ನಗರ ಮತ್ತೆ ಬೆಳಕಿಗೆ ಬರಬೇಕಾದರೆ ಮನುಷ್ಯ ಯಥಾರ್ಥವಾದ ಭಾವಗಳನ್ನು ತಳೆಯಬೇಕು. ಇದನ್ನು ಜಪಾನೀ ಭಾಷೆಯಲ್ಲಿ ಮೊನೊ-ನೋ-ಅವಾರೆ ಎಂದು ಕರೆಯುತ್ತಾರೆ. ಕಾನ್ನಗರ ಜ್ಞಾನಾತ್ಮಕವಾದರೆ ಮೊನೊ-ನೋ-ಅವಾರೆ ಕ್ರಿಯಾತ್ಮಕ. ಎರಡೂ ಜಪಾನೀ ತತ್ತ್ವಶಾಸ್ತ್ರದಲ್ಲಿ ಪ್ರಮುಖವಾದ, ಪರಸ್ಪರ ಸಂಬದ್ಧವಾದ ಕಲ್ಪನೆಗಳು.

ಜಪಾನೀ ತತ್ತ್ವಚಿಂತನೆಯಲ್ಲಿ ವ್ಯಕ್ತಿ ತನ್ನ ಮೂಲ, ನಿಸರ್ಗಸಿದ್ಧ ಸ್ವಭಾವದೊಳಗೆ ನಿಲ್ಲುವುದು ಸಬಿ ಎನಿಸಿಕೊಳ್ಳುತ್ತದೆ. ಇದನ್ನು ಕೈವಲ್ಯವೆಂದು ಅನುವಾದ ಮಾಡಬಹುದು. ತಾನು ತನ್ನೊಳಗೆ ದಿಟವಾಗಿ ಮುಳುಗುವುದು ಎಂದಿದರರ್ಥ. ಇಲ್ಲಿ ಮನುಷ್ಯ ತನ್ನ ಪ್ರವೃತ್ತಿಗಳನ್ನು ಅರಿತು ಅದಕ್ಕೆ ತನ್ನ ಕಾಮನೆಗಳನ್ನೂ ಕ್ರಿಯೆಗಳನ್ನೂ ಅಳವಡಿಸಿಕೊಳ್ಳಬೇಕು. ಇದು ನೆರವು ಅಥವಾ ಉಪಾಸನೆ (ಸಮನ್ವಯ). ಅಂತೂ ಜಪಾನೀಯರ ಮನೋವೃತ್ತಿಯಲ್ಲಿ ವ್ಯಕ್ತಿ ಮುಖ್ಯ. ವಿಶ್ವವೆಲ್ಲವನ್ನೂ ವ್ಯಕ್ತಿಯಲ್ಲೇ ಅವರು ಕಾಣುತ್ತಾರೆ. (ಎಸ್.ಕೆ.ಆರ್.)

**ಜಪಾನೀ ತೋಟ** : ಉದ್ಯಾನದ ಹಲವಾರು ಬಗೆಗಳಲ್ಲಿ ಒಂದು. ಉಳಿದೆಲ್ಲ ಬಗೆಗಳಿಗಿಂತ ಭಿನ್ನ ಹಾಗೂ ವಿಚಿತ್ರ ರೀತಿಯಾಗಿದೆ. ಹಾಗೆಯೇ ಉಳಿದವುಗಳಿಗಿಂತ ವೈಯಕ್ತಿಕವಾದುದು ಹಾಗೂ ಆತ್ಮೀಯವಾದುದು. ಇದು ಮೊದಲು ರೂಪ ತಾಳಿದ್ದು ಚೀನದಲ್ಲಿ ಅಥವಾ ಕೊರಿಯದಲ್ಲಿ ಎನ್ನಲಾಗಿದೆ. 5ನೆಯ ಶತಮಾನಕ್ಕೂ ಮುಂಚೆಯೇ ಈ ಪದ್ಧತಿ ಜಪಾನ್‌ಗೆ ಕಾಲಿಟ್ಟಿತು ಎಂದು ಅಲ್ಲಿನ ರಾಜವಂಶದ ದಾಖಲೆಗಳಿಂದ ತಿಳಿದುಬರುತ್ತದೆ. ಜಪಾನೀ ತೋಟಗಾರಿಕೆಯ ಕಲೆ ಮೂಲತಃ ಭಾರತದ್ದು; ಭಾರತದಿಂದ ಬೌದ್ಧಧರ್ಮ ಜಪಾನ್‌ಗೆ ಹೋದಾಗ ಇದೂ ಹೋಯಿತು ಎಂಬ ಅಭಿಪ್ರಾಯವೂ ಇದೆ. ಆಧುನಿಕ ಜಪಾನೀ ತೋಟ ಜಪಾನ್‌ನ ದೈವಾರಾಧಕರ ಮತ್ತು ಉದ್ಯಾನಪ್ರೇಮಿಗಳ ಸುಮಾರು 11 ಶತಮಾನಗಳ ದೀರ್ಘಾವಧಿಯ ಪ್ರಯತ್ನಗಳಿಂದ ರೂಪುಗೊಂಡಿದೆ ಯೆನ್ನಬಹುದು.

ಇದರ ಉದ್ದೇಶ-ಸೂಕ್ಷ್ಮಾಕಾರದಲ್ಲಿ ಪರ್ವತಪ್ರದೇಶಗಳ ದೃಶ್ಯವನ್ನು ಪ್ರತಿಬಿಂಬಿಸುವುದು. ವಿಶಿಷ್ಟಬಗೆಯ ಒಂದು ಸಣ್ಣ ಜಲಪಾತ, ಒಂದು ಸಣ್ಣ ಕೊಳ ಮತ್ತು ಅದರಲ್ಲಿ ಒಂದು ನಡುಗಡ್ಡೆ (ದ್ವೀಪ), ಒಂದು ಸೇತುವೆ, ವಿಶಿಷ್ಟರೀತಿಯಲ್ಲಿ ಹೊಂದಿಸಿದ ಕಲ್ಲುಬಂಡೆಗಳು, ಬೆಳಕನ್ನು ಸೂಚಿಸುವಂತೆ ಇರಿಸಿರುವ ಒಂದು ಸಾಲಂಕೃತ ಕಲ್ಲುಕಂಬ ಮತ್ತು ಕಲ್ಲಿನ ತೂಗುದೀಪ-ಇವನ್ನೆಲ್ಲ ಒಳಗೊಂಡಿರುತ್ತದೆ.

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಜಪಾನೀ ತೋಟದ ಮಾದರಿ

ಬೌದ್ಧಧರ್ಮದ ಜ಼ೆನ್ ಪಂಗಡದಲ್ಲಿ ಸುಂದರ ಉದ್ಯಾನಗಳನ್ನು ನಿರ್ಮಿಸುವುದು ಆ ಧರ್ಮದ ಅನುಷ್ಠಾನದ ಒಂದು ಅಂಗ ಆಗಿತ್ತು. ಜ಼ೆನ್ ಪಂಗಡದ ಆರಾಧಕ ಮ್ಯೂಸೊ ಕೋಕುಷಿ ಎಂಬವನಿಂದ 14ನೆಯ ಶತಮಾನದ ಆದಿಭಾಗದಲ್ಲಿ ರೂಪುಗೊಂಡ ಒಂದು ಉದ್ಯಾನವನ್ನು ಇಂದಿಗೂ ಕೀಯೋಟೋ ನಗರದಲ್ಲಿ ರಕ್ಷಿಸಿಕೊಂಡು ಬರಲಾಗಿದೆ. ನೀರಿನ ಪೂರೈಕೆ ಕಡಿಮೆಯಿದ್ದಲ್ಲಿ ಶುಷ್ಕ ವಾತಾವರಣದ ಶಿಲಾ ತೋಟಗಳು ಎಂಬುವು ಅಸ್ತಿತ್ವದಲ್ಲಿ ಬರುತ್ತವೆ. ಅಲ್ಲಿ ನೀರಿನ ನೆಲೆಯನ್ನು ಸೂಚಿಸಲು ಸಣ್ಣ ಕಣಗಳ ಉಸುಕನ್ನು (ಮರಳು) ಅಲ್ಲಲ್ಲಿ ಚೆಲ್ಲಿ ಹರಡಿರುವುದುಂಟು. ಅಲ್ಲಿ ಮರಗಳ ಗುಂಪು ಕಂಡುಬರುವುದಿಲ್ಲ. ನಿತ್ಯಹರಿದ್ವರ್ಣ ಎಲೆಗಳುಳ್ಳ ಮರಗಳ ಹಿನ್ನೆಲೆಯಲ್ಲಿ ಒಂದು ಸೂಕ್ತ ಕೋನ ನಿರೂಪಿಸುವಂತೆ ಒಂದೇ ಒಂದು ಚೆರಿಹಣ್ಣಿನ ಮರವನ್ನು ನೆಟ್ಟಿರುವುದುಂಟು. ಸಾಲುಮರ ಇಲ್ಲವೆ ಮರಗಳ ಗುಂಪುಗಳಿಗಿಂತ ಇದು ಬಹುಮಟ್ಟಿಗೆ ಸುಂದರವಾಗಿ ಕಾಣುತ್ತದೆ. ಇಂಥ ಉದ್ಯಾನಗಳಲ್ಲೆಲ್ಲ ಸರಳತೆಯೇ ಪ್ರಧಾನ ಅಂಶ. ಸಾಧ್ಯವಿದ್ದ ಮಟ್ಟಿಗೆ ಆಯಾ ಪ್ರದೇಶಗಳ ನೈಸರ್ಗಿಕವಸ್ತುಸ್ಥಿತಿಗೆ ಸರಿಹೊಂದುವ ಸನ್ನಿವೇಶಗಳನ್ನು ನಿರ್ಮಿಸಿ ಅಲ್ಲಿ ಮರಗಳನ್ನು ನೆಡುವುದು ಮುಖ್ಯ ಉದ್ದೇಶವಾಗಿರುತ್ತದೆ. ಆದರೆ ಜಪಾನೀ ತೋಟ ಎಂದ ಕೂಡಲೇ ಕೆಲವು ಕಲ್ಲುಗುಡ್ಡಗಳು, ಸೇತುವೆ ಮತ್ತು ಕಲ್ಲಿನ ತೂಗು ದೀಪ ಇವು ಮಾತ್ರ ಇರುತ್ತವೆಯೆಂದು ಭಾವಿಸಲಾಗದು. ಜಪಾನೀ ತೋಟದ ಮೂಲಭಾವನೆ ನಿಶ್ಶಬ್ದತೆ ಮತ್ತು ಶಾಂತಿಯಲ್ಲಿ ಅಡಗಿದೆ. ಅಲ್ಲಿಗೆ ಹೋಗುವುದು ಧ್ಯಾನಕ್ಕೆ, ಜಗತ್ತಿನ ಜಂಜಡಗಳನ್ನೆಲ್ಲ ಕೆಲಕಾಲ ಮರೆತು ಹಾಯಾಗಿ ವಿರಮಿಸುವುದಕ್ಕೆ ಮತ್ತು ಆಧುನಿಕ ಜನಜೀವನದ ಅವಸರ, ಸದ್ದುಗದ್ದಲಗಳನ್ನು ತಪ್ಪಿಸಿಕೊಳ್ಳುವುದಕ್ಕೆ.

ಬೇಸಿಲ್ ಟೇಲರ್ ಎಂಬಾಕೆ ಜಪಾನೀ ತೋಟದ ಬಗ್ಗೆ ಹೇಳುವ ಮಾತುಗಳು ಅತ್ಯಂತ ಸಮಂಜಸವೆನಿಸುತ್ತವೆ: "ಇದರ ನಿರ್ಮಾಣದಲ್ಲಿ ಅಡಗಿರುವ ಸಂಕೀರ್ಣತೆ ಮತ್ತು ಉಚ್ಚಕಲೆಯನ್ನು ಅರ್ಥಮಾಡಿಕೊಳ್ಳುವಾಗ ದೊರೆಯುವ ಪರಿಹಾರ ಆಧ್ಯಾತ್ಮಿಕ ಹಿನ್ನೆಲೆಯದಾಗಿರುತ್ತದೆ. ಅದರಲ್ಲಿರುವ ಕಲೆ ಜಾಗೃತವಾಗಿ ಇಲ್ಲವೆ ಅಜಾಗೃತವಾಗಿ ನಮ್ಮ ಮನಸ್ಸಿನ ಭಾವನೆಗಳನ್ನು ಮೇಲಿನ ಸ್ತರಕ್ಕೆ ಒಯ್ದು, ದೈಹಿಕ, ಮಾನಸಿಕ ಸ್ಫೂರ್ತಿ ವಿಶ್ರಾಂತಿಗಳನ್ನು ನೀಡುವಂತಾಗುತ್ತದೆ."

ಜಪಾನೀ ತೋಟದಲ್ಲಿ ಯಾರೇ ಆಗಲಿ, ಅವಸರದಿಂದ ಹಾಯ್ದುಹೋಗುವ ಉದ್ದೇಶವಿಟ್ಟುಕೊಳ್ಳಲಾಗದು. ಅಲ್ಲಿನ ಸೇತುವೆ, ಹಂತಹಂತಗಳಾಗಿ ಜೋಡಿಸಿರುವ ಕಲ್ಲುಬಂಡೆಗಳು, ಗಿಡಮರಗಳ ನೆಳಲು, ಚಹಾಪಾನಗೃಹಗಳು, ಕೊಳದಲ್ಲಿರುವ ಬಂಗಾರದ ಬಣ್ಣದ ಮೀನುಗಳು, ಸಣ್ಣ ಜಲಪಾತಗಳಿಂದ ಬೀಳುವ ನೀರಿನ ತುಂತುರುಗಳು-ಇವು ದೈಹಿಕ ಆಹ್ಲಾದತೆಯನ್ನು ನೀಡುವುವಲ್ಲದೆ ಅಲ್ಲಿಯೇ ಬಹಳ ಹೊತ್ತು ಕಳೆಯುವ ಹಾಗೆ ಆಮಿಷ ಒಡ್ಡುತ್ತವೆ. ಆಗ ಅಲ್ಲಿನ ಚೆರಿ ಮರಗಳ ಗುಲಾಬಿ ಬಣ್ಣದ ನಾಜೂಕಾದ ಹೂಗಳ, ಪ್ಲಮ್ ಗಿಡಗಳ ಬಿಳಿ ಹೂಗಳ ಸೌಂದರ್ಯಕ್ಕೆ ಮಾರುಹೋಗಿ ತೆರೆದ ಮನಸ್ಸು ಮತ್ತು ಹೃದಯಗಳಿಂದ ಅದರಲ್ಲಿ ತನ್ಮಯತೆ ಹೊಂದುವುದು ಸಾಮಾನ್ಯ. ಈ ಅಚ್ಚ ಬಿಳಿ ಹೂಗಳು, ಕ್ರಿಪ್ಟೊ ಮೀರಿಯ, ಫರ್ ಮುಂತಾದ ಶಂಕುಪರ್ಣಿ ಸಸ್ಯಗಳ ಹಚ್ಚಹಸಿರಿನ ಹಿನ್ನೆಲೆಯಲ್ಲಿ ಅತ್ಯಂತ ಆಕರ್ಷಕವಾಗಿ ಕಂಡರೆ ಆಶ್ಚರ್ಯವೇನಲ್ಲ.

ಉದ್ಯಾನದ ಬಾಗಿಲ ಬಳಿ ರಕ್ಷಕರಂತೆ ಎರಡೂ ಕಡೆ ಪೂಜನೀಯವೆನಿಸಿದ ಮತ್ತು ದೀರ್ಘ ಜೀವನಾವಧಿಯ ಸೂಚಕವೆಂಬಂತಿರುವ ಪೈನ್ ಮರಗಳು ಇರುವುದುಂಟು. ಕಲ್ಲುಬಂಡೆಗಳ ಮೇಲೆ ರಕ್ತ ಚೆಲ್ಲಿದಂತೆ ಅಚ್ಚ ಕೆಂಪಿನ ಅಜೇಲಿಯ ಸಸ್ಯಗಳು ಇರುತ್ತವೆ. ಐರಿಸ್ ಗಿಡಗಳು ತಮ್ಮ ಅತಿ ಸುಂದರ ಪುಷ್ಪಗಳ ಬೆಡಗನ್ನು ಪ್ರದರ್ಶಿಸುತ್ತ ಇರುತ್ತವೆ. ಅಲ್ಲಲ್ಲೇ ಇರುವ ಚಿಕ್ಕ ಕೊಳಗಳ ನೀರಿನಲ್ಲಿ ತಮ್ಮ ಪ್ರತಿಬಿಂಬಕ್ಕೆ ತಾವೇ ಮಾರು ಹೋಗುವಂತೆ ಅವು ತೋರುತ್ತವೆ.

ಉದ್ಯಾನದಲ್ಲಿ ಕೂತಲ್ಲಿಯೇ ಪಕ್ಷಿಗಳ ಚಲನೆಯನ್ನು ಗಮನಿಸುತ್ತ ಕಮೇಲಿಯ, ಪಿಯೋನಿಯ ಮುಂತಾದ ಕೆಲವು ವೃಕ್ಷಗಳ ಸೌಂದರ್ಯವನ್ನು ಮೆಲುಕು ಹಾಕುತ್ತಿರಬಹುದು. ಕೆಲವು ಸೂಕ್ಷ್ಮಬಗೆಯ ಹೂಗಳು ಮತ್ತು ಅವುಗಳ ಬಣ್ಣ ಒಂದಾದ ಮೇಲೊಂದು ಸರದಿಯಂತೆ ತಿಂಗಳು ತಿಂಗಳಿಗೂ ಬದಲಾಗುತ್ತಲೇ ಇರುತ್ತವೆ. ಹೀಗಾಗಿ ವರ್ಷವಿಡೀ ಅಲ್ಲಿ ಒಂದಲ್ಲ ಒಂದನ್ನು ನೋಡಿ ಮೆಚ್ಚುವುದಕ್ಕೆ ಅವಕಾಶವಿರುತ್ತದೆ. ಹೂಬಿಡುವ ಮರಗಳನ್ನು ಅಲ್ಲೊಂದು ಇಲ್ಲೊಂದರಂತೆ ಕೆಲವು ಆಯ್ದ ಸೂಕ್ತಸ್ಥಳಗಳಲ್ಲಿ ಬೆಳೆಸಿರುವುದರಿಂದ ನಿಸರ್ಗದ ಸುಂದರ ಭೂದೃಶ್ಯಾವಳಿಯೇ ಕಣ್ಣೆದುರಿಗೆ ಬಂದು ನಿಂತಿದೆಯೆಂಬ ಭಾವನೆ ಮೂಡುತ್ತದೆ. ಜಪಾನ್‌ನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಉದ್ಯಾನಗಳು ಭೂದೃಶ್ಯಾವಳಿಯ ತೋಟಗಳೇ ಆಗಿದ್ದು, ಅವು ಒಂದು ಚಿಕ್ಕ ಪ್ರಮಾಣದಲ್ಲಿ ಜಪಾನ್‌ನ ನಿಸರ್ಗ ಸೌಂದರ್ಯವನ್ನು ಸೆರೆಹಿಡಿದಿಟ್ಟು ಒಂದು ವಿಶಿಷ್ಟ ಪ್ರತಿರೂಪವೆಂತಲೇ ತೋರುತ್ತವೆ.

ಜಪಾನೀ ತೋಟದಲ್ಲಿ ಮೊಗಲ್ ತೋಟಗಳಲ್ಲಿರುವಂತೆಯೇ ನೀರಿಗೆ ಬಹು ಪ್ರಾಶಸ್ತ್ಯವುಂಟು. ನೀರಾವರಿಯನ್ನು ಬಿಟ್ಟರೂ ಉಳಿದ ಉದ್ದೇಶಗಳಿಗೆ ಜಪಾನೀಯರು ನೀರನ್ನು ಹೇಗೆ ಬಳಸಿಕೊಳ್ಳುತ್ತಾರೆಂಬುದನ್ನು ವಿವರಿಸುತ್ತ ಬೇಸಿಲ್ ಟೇಲರ್ ಹೀಗೆ ಬರೆಯುತ್ತಾರೆ-"ಕಲ್ಲು ಬಂಡೆಗಳು ಉದ್ಯಾನದ ಅಸ್ಥಿಪಂಜರ ಮತ್ತು ಮೂಳೆಗಳಿದ್ದಂತೆ. ಭೂಮಿಯ ಬಾಹ್ಯಾಕಾರ ಉದ್ಯಾನದ ಪ್ರಮುಖ ಲಕ್ಷಣಗಳನ್ನು ನಿರ್ಧರಿಸುತ್ತದೆ. ಹೂ ಮರಗಳು ಉದ್ಯಾನವೆಂಬ ದೇಹಕ್ಕೆ ಮಾಂಸಖಂಡಗಳು ಮತ್ತು ಪೋಷಾಕಿನ ಸೊಗಸು ಇದ್ದಂತೆ. ಈ ಭೂ ಉದ್ಯಾನದಲ್ಲಿ ಹಲವಾರು ವಿಶೇಷಗಳನ್ನು ಪುನರಾವರ್ತನೆ ಗೊಳಿಸುವುದರಿಂದ ಮತ್ತು ಅವುಗಳನ್ನು ನೀರಿನಲ್ಲಿ ಪ್ರತಿಬಿಂಬಿಸುವುದರಿಂದ ಏನು ಲಾಭವಿದೆಯೋ, ಅದು ಜಪಾನೀ ಭೂದೃಶ್ಯ ಕಲಾಕಾರನಿಗಷ್ಟೇ ಹೊರತು, ಇತರರಿಗೆ ತಿಳಿಯುವುದು ಸಾಧ್ಯವಿಲ್ಲ. ನಿಲುಗನ್ನಡಿಗಳು ಚಿಕ್ಕ ಕೋಣೆಗಳಲ್ಲಿ ವಸ್ತುಗಳನ್ನು ಹಿಗ್ಗಿಸಿ ತೋರಿಸುವಂತೆ, ಸೂರ್ಯಾಸ್ತದ ಸಮಯದಲ್ಲಿ ಪಶ್ಚಿಮ ತೀರದ ಸಮುದ್ರದಲ್ಲಿ ಆಕಾಶವು ತನ್ನ ವೈಭವ ಮತ್ತು ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವಂತೆ, ಉದ್ಯಾನದಲ್ಲಿನ ಕೊಳಗಳು ತಮ್ಮ ಸೌಂದರ್ಯ, ವಿಶಿಷ್ಟ ನೆಲೆ, ಹಿನ್ನೆಲೆ ಇತ್ಯಾದಿಗಳ ದೃಷ್ಟಿಯಿಂದ ಇಡೀ ಉದ್ಯಾನದ ವೈಭವ, ಗಾಂಭೀರ್ಯಗಳನ್ನು ಹೆಚ್ಚಿಸುತ್ತವೆ.

ಪೈನ್ ಮರಗಳು ಜಪಾನೀಯರಿಗೆ ಪರಮಪ್ರಿಯವಾದುದರಿಂದ ಅವುಗಳನ್ನು ಕಲಾತ್ಮಕವಾಗಿ ಕತ್ತರಿಸಿ ನೀರಿನ ಮೇಲೆ ಆಕರ್ಷಕ ರೀತಿಯಲ್ಲಿ ಬಾಗಿರುವಂತೆ ಮಾಡಿರುವುದೂ ಒಂದು ವೈಶಿಷ್ಟ್ಯ. ಒಮ್ಮೊಮ್ಮೆ ಮರಗಳನ್ನು ಸಾಗಾಟದ ದೋಣಿಗಳಂತೆ ವಿಚಿತ್ರರೂಪಕ್ಕೆ ಪರಿವರ್ತಿಸುವುದೂ ಉಂಟು. ಅಲ್ಲಿನ ತಂಗುಮನೆಗಳ ಬಳಿ ತೆಂಗಿನಮರಗಳನ್ನು ಬೆಳೆಸಿ, ಅವುಗಳ ಅಗಲವಾದ ಹಾಗೂ ಮೇಣದ ಲೇಪವಿರುವ ಎಲೆಗಳ ಮೇಲೆ ಮಳೆಹನಿಗಳು ಬಿದ್ದು ಉಂಟುಮಾಡುವ ಶಬ್ದವನ್ನು ಕೇಳಿ ಆನಂದಿಸಬಹುದು. ಚಳಿಗಾಲದಲ್ಲಿ ತೆಂಗಿನ ಜಾತಿಯ ಗಿಡಗಳ ಮೇಲೆ ದಟ್ಟವಾಗಿ ಬತ್ತದ ಹುಲ್ಲಿನ ಹೊದಿಕೆ ಹಾಕಿ ರಕ್ಷಿಸುವುದುಂಟು. ಫಲಗಳು ಸೇವನೆಗೆ ಯೋಗ್ಯವಲ್ಲದಿದ್ದರೆ, ಅವುಗಳನ್ನು ಮೊದಲೇ ಕಿತ್ತುಬಿಡುವುದುಂಟು. ಇದರಿಂದ ಮರದ ಸತ್ತ್ವ ಶಕ್ತಿ ಹಾಗೇ ಉಳಿಯುತ್ತದೆ.

ಜಪಾನೀ ತೋಟಗಳಲ್ಲಿ ತ್ಸುಕಿ-ಯಾಮ ಮತ್ತು ಹೀರ-ನೀವ ಎಂಬ ಮುಖ್ಯ ಬಗೆಗಳನ್ನು ಗುರುತಿಸಬಹುದು. ಮೊದಲನೆಯ ಬಗೆಯಲ್ಲಿ ಕೃತಕ ಕಲ್ಲುಗುಡ್ಡಗಳೂ ಕೊಳಗಳೂ ಪ್ರಧಾನವಾಗಿದ್ದರೆ ಎರಡನೆಯದರಲ್ಲಿ ಕಣಿವೆಯನ್ನು ಸೂಚಿಸುವ ಬಯಲುಪ್ರದೇಶ ಮುಖ್ಯವಾಗಿರುತ್ತದೆ. ತ್ಸುಕಿ-ಯಾಮದಲ್ಲಿ ಸೆನ್-ಟೈ ಮತ್ತು ರಿನ್-ಸೆನ್ ಎಂಬ ಉಪಬಗೆಗಳೂ ಹೀರ-ನೀವದಲ್ಲಿ ಬುಂಜಿನ್-ಸುಕುರಿ ಎಂಬ ಉಪ ಬಗೆಯೂ ಇವೆ. ಇವು ಒಂದೊಂದಕ್ಕೂ ವಿಶಿಷ್ಟವಾದ ಲಕ್ಷಣಗಳಿವೆ. ಚಹಾಪಾನದ ಸಮಾರಂಭಕ್ಕೆಂದೇ ಮೀಸಲಾದ ರೋಜಿ ಎಂಬ ತೋಟವೂ ಉಂಟು. (ಎಂ.ಎಸ್.ಎಸ್.ಆರ್.)

**ಜಪಾನೀ ನಾಟಕ :** 15ನೆಯ ಶತಮಾನಕ್ಕಿಂತ ಮುಂಚೆ ಹಲವಾರು ವರ್ಷಗಳು ಜಪಾನ್‌ನಲ್ಲಿ ಪ್ರಚಲಿತವಿದ್ದ ನಾಟಕಪ್ರಕಾರಕ್ಕೆ ಸಾರು-ಗಾಕು ಎಂಬ ಹೆಸರಿತ್ತು. ಅರ್ಥಾತ್ ಮರ್ಕಟಗೀತನೃತ್ಯ ಎಂದರೂ ಸರಿಯೆ. ಸಾಮಾನ್ಯ ಭಾಷೆಯಲ್ಲಿ ಕೋತಿಯ ಕುಣಿತ ಎಂದರೂ ಸರಿಯೆ. ಆದರೆ ಅದರಷ್ಟು ಲಾಘವವಲ್ಲ. ವ್ಯಾಯಾಮಪಟುವೊಬ್ಬ ಗಾಯಕನಾಗಿ ರಂಗಭೂಮಿಗೆ ಬಂದು ನಿಂತು ಆಗಾಗ ಮೈ, ಮಾಂಸಖಂಡ, ಅಂಗಾಂಗಗಳ ವಿವಿಧ ಬಗೆಯ ಚಲನ ಚಮತ್ಕಾರದ ಪ್ರದರ್ಶನ ಮಾಡಿ, ಮಧ್ಯೆಮಧ್ಯೆ ಲಘುಹಾಸ್ಯದ ಮಾತನಾಡುತ್ತ ತಕ್ಕ ಅಭಿನಯದಿಂದ ಪ್ರೇಕ್ಷಕರನ್ನು ನಗಿಸುತ್ತಿದ್ದ ಪರಿಪಾಠ ಇದರಲ್ಲಿತ್ತು. ಈ ಬಗೆಯ ನಾಟಕ ಯಾಮಾಟೊ ಪ್ರಾಂತದಲ್ಲಿ ಜನಿಸಿ ಜಪಾನ್‌ಗೆಲ್ಲ ಹರಡಿ ಮನೋರಂಜನೆಯ ಏಕಮೇವ ಸಾಧನವಾಗಿತ್ತು ಎಂಬುದು ಮುಖ್ಯವಿಷಯ.

15ನೆಯ ಶತಮಾನದಲ್ಲಿ ಕ್ವಾನಾಮಿ ಕಿಯೋಟ್ಸುಗು ಮತ್ತು ಆತನ ಮಗ ಸೀಆಮಿ ಮೊಟೊಕಿಯೊ ರಂಗಭೂಮಿಯ ಅವತಾರಪುರುಷರಾಗಿ ಬಂದು ಸಾರು-ಗಾಕುವನ್ನು ತಲೆಕೆಳಗು ಮಾಡಿ ನೋಗಾಕು ಅಥವಾ ನೋಸಂಗೀತ ನಾಟಕ ಪ್ರಕಾರವನ್ನು ಜನತೆಗಿತ್ತರು. ಷೋಗನ್‌ಯೋಷಿ ಮಾಸಾ ಮನೆತನದವರಿಂದ ಪೋಷಿತರಾಗಿ ಸಾರು-ಗಾಕುವನ್ನು ಪೂರ್ಣ ಸುಧಾರಿಸಿದರು. ಜೊತೆ ಜೊತೆಗೇ ದನಿಗೂಡಿಸುತ್ತಿದ್ದ ದೆನ್ ಗಾಕುಗಳಿಂದ (ಬತ್ತದ ಗದ್ದೆಯ ಗೀತ) ತಮಗೆ ಉಚಿತವೆಂದು ತೋಚಿದ್ದನ್ನು ಆಯ್ದುಕೊಂಡು ಸಾರು-

ಕಾಬೂಕೀ ಸಂಗೀತನಾಟಕದ ಸಿಂಹಪಾತ್ರಧಾರಿ

ಗಾಕುವನ್ನು ಬುನಾದಿಯಾಗಿಸಿ ಅದರ ಮೇಲೆ ಭವ್ಯ ನಾಟಕ ಕಟ್ಟಡ ಒಂದನ್ನು ರಚಿಸಿದರು. ಈ ಇಬ್ಬರೂ ಬಹಳ ಪ್ರತಿಭಾವಂತರು. ಸಾರು-ಗಾಕುವಿನಲ್ಲಿ ಅಲಂಕಾರಪ್ರಾಯ ವಾಗಿದ್ದುದನ್ನು ಗೌರವ ಗಾಂಭೀರ್ಯಗಳಿಂದ ತುಂಬಿ, ಲಘುಹಾಸ್ಯದ ಕೈಕಾಲು ಮೈಚಳಕಗಳನ್ನು ವರ್ಜಿಸಿ ಕೀಯೋಜೆನ್‌ಗಳನ್ನಾಗಿ (ಪ್ರಹಸನ) ಮಾರ್ಪಡಿಸಿದರು. ನೋ ಮತ್ತು ಕೀಯೋಜೆನ್ ಹದವಾಗಿ ಬೆರೆತು ಸಮರಸವಾಗಿ ಪ್ರದರ್ಶನಗೊಂಡು ಜಪಾನ್ ರಂಗಭೂಮಿಯಲ್ಲಿ ನೋ ನಾಟಕಗಳು ಮೊದಲ ಬಾರಿಗೆ ಜನತೆಯ ಮನೋರಂಜನಾ ಸಾಧನವಾಗಿ ಪರಿಣಮಿಸಿದ್ದು 15ನೆಯ ಶತಮಾನದ ಮಧ್ಯ ಭಾಗದಲ್ಲಿ.

ಸಾರು–ಗಾಕು ಗೋಗಿ ನೋಗಾಕು ಆದ ನಾಟಕ ಸಾಮಾನ್ಯವಾಗಿ ಶ್ರೀಮಂತರು, ಮಧ್ಯಯುಗದ ಜಪಾನಿನ ಪಾಳೆಯಗಾರ ಕ್ಷತ್ರಿಯರು–ಇವರಿಗೆ ಮುಖ್ಯ ಮನೋರಂಜನಾ ಪ್ರಕಾರವಾಗಿತ್ತು. ಕೆಲವಾರು ಸಲ ಜಪಾನ್‌ನ ಚಕ್ರವರ್ತಿಯ ಸಮ್ಮುಖದಲ್ಲೂ ಇದರ ಪ್ರದರ್ಶನ ಆಗುತ್ತಿತ್ತು. ಕೆಲವೊಮ್ಮೆ ಟೋಕುಗಾವಾ ಷೋಗನ್‌ರವರ ಹಬ್ಬಹರಿದಿನದ ಉತ್ಸವಗಳಲ್ಲೂ ಯಾವ ಯಾವ ಇಂಥ ಸಂದರ್ಭಗಳು ಬಿದ್ದಾಗಲೂ ನೋ ನಾಟಕಗಳು ಪ್ರದರ್ಶನ ಮೊದಲ ಕರ್ತವ್ಯವಾಗಿರುತ್ತಿತ್ತು.

ಪ್ರದರ್ಶನ : ಮರಮುಟ್ಟುಗಳಿಂದ ಆದ 18 ಚೌಕದ ರಂಗಸ್ಥಳ ನೆಲಮಟ್ಟಕ್ಕೆ ಸ್ವಲ್ಪ ಎತ್ತರದ ಒಂದು ವೇದಿಕೆಯ ಮೇಲಿರುತ್ತದೆ. ರಂಗಕ್ಕೆ ಮೂರು ಕಡೆ ತೆರೆಯಿಲ್ಲ. ಎರಡು ಬಾಗಿಲುಗಳು. ಒಂದು ಗಾಯಕರ ಓಡಾಟಕ್ಕೆ, ಇನ್ನೊಂದು ಇತರ ಕೆಲಸಗಾರರ ಓಡಾಟಕ್ಕೆ. ಹಿಂದಿನ ದ್ವಾರದ ಆಚೆ ಕಡೆಗೊಂದು ಸೇತುವೆ–ಹಷಿಗಾಕಾರಿ. ಇದನ್ನು ಅರ್ಧ ತೆರೆಯೊಂದು ಮುಚ್ಚಿರುತ್ತದೆ. ತೆರೆಯ ಕೆಳಗಿನಿಂದ ಅಭಿನೇತೃಗಳ ಆಗಮನ. ರಂಗಭೂಮಿಯ ನೆಲ ಸ್ವಲ್ಪ ಹಿಂದೆ ಎತ್ತರವಾಗಿದ್ದು, ಮಧ್ಯೆ ಎತ್ತರವಾಗಿದ್ದು ಪ್ರೇಕ್ಷಕರ ಕಡೆಗೆ ತಗ್ಗಿ ಸ್ವಲ್ಪ ಇಳಿಜಾರು ಪ್ರದೇಶವಾಗಿರುತ್ತದೆ. ವೇದಿಕೆಯ ನೆಲಮಾಳಿಗೆಗೆ ಸರಿಯಾಗಿ 7–8 ಸುಟ್ಟ ಮಣ್ಣಿನ ಜಾಡಿಗಳನ್ನಿಟ್ಟಿರುತ್ತಾರೆ. ಎರಡು ಮೂರನ್ನು ಹಿಂದಿನ ಪ್ರವೇಶದ್ವಾರದ ಕಡೆಗಿನ ಸೇತುವೆಯ ಕೆಳಗಿಟ್ಟಿರುತ್ತಾರೆ. ಜಾಡಿಗಳ ಗಾಳಿ ಕಂಪಿಸುವುದರಿಂದ ವೇದಿಕೆಯ ಮೇಲಿನ ಧ್ವನಿಗಳು ಇಮ್ಮಡಿಯಾಗುತ್ತವೆ. ಹಿಂದೆ ಪರದೆಯ ಮೇಲೆ ಕಾಡಿನ ಭವ್ಯದೃಶ್ಯ ಚಿತ್ರಿಸಿರುತ್ತಾರೆ. ಇದರ ಅರ್ಥ ಒಂದಾನೊಂದು ಕಾಲದಲ್ಲಿ ನೋ ನಾಟಕಗಳನ್ನೆಲ್ಲ ಅರಣ್ಯಗಳಲ್ಲೋ ತಪೋವನಗಳಲ್ಲೋ ಪ್ರದರ್ಶಿಸುತ್ತಿದ್ದರು–ಎಂದು. ಈ ಚಿತ್ರಗಳು ಕತೆಗೆ ತಕ್ಕಂತಿರುತ್ತವೆ.

ನೋ ನಾಟಕಗಳು: 250ಕ್ಕೂ ಹೆಚ್ಚು ರಚಿತವಾಗಿರುವ ನೋ ನಾಟಕಗಳನ್ನು ಅನುಕೂಲಕ್ಕಾಗಿ ಐದು ವಿಭಾಗಗಳಾಗಿ ವಿಂಗಡಿಸಲಾಗಿದೆ: (1) ವಾಕಿ–ನೋ: ಇದರಲ್ಲಿ ನಾಟಕದ ಎರಡನೆಯ ಪ್ರಮುಖ ನಟ ಮುಖ್ಯಭಾಗವಹಿಸುತ್ತಾನೆ. (2) ಷುರ–ಮೊನೊ. ಯೋಧರ ಭೂತಕತೆಗಳೇ ಇದರ ವಸ್ತು. (3) ಕಜುರ–ಮೊನೊ. ಇದರಲ್ಲಿ ಪ್ರಮುಖ ಪಾತ್ರ ವಹಿಸುವವರು ಶ್ರೀಮಂತ ಮಹಿಳೆಯರು. (4) ಗೆನ್‌ಜಾಯಿಮೊನೊ. ಆಧುನಿಕ ನಾಟಕಪ್ರಕಾರವಿದು ; ಉನ್ಮಾದ, ಪ್ರೇಮ, ಮುಂತಾದ ಮಾನವೀಯ ಭಾವೋದ್ವೇಗಗಳನ್ನು ವಸ್ತುವಾಗಿ ಉಳ್ಳದ್ದು. (5) ರಾಕ್ಷಸರು, ಕುಬ್ಜರು, ಮಂತ್ರಗಾರರು ಮುಂತಾದವರ ಕತೆಗಳನ್ನು ವಸ್ತುವಾಗಿ ಉಳ್ಳದ್ದು, ಅಥವಾ ಲಘು ಮನರಂಜನೆ, ಆನಂದೋತ್ಸಾಹದ ಸನ್ನಿವೇಶಗಳಿಂದ ಕೂಡಿದ್ದು, ಅಭಿನಂದನ ಕಾರ್ಯಕ್ರಮವೊಂದನ್ನು ವಸ್ತುವಾಗುಳ್ಳದ್ದು.

17ನೆಯ ಶತಮಾನದ ಒಂದು ಚಿತ್ರ, ಗೊಂಬೆಗಳ ನಾಟಕದ ಪುಸ್ತಕ ಒಂದರಿಂದ

ಇಡೀ ಒಂದು ದಿನವೆಲ್ಲ ನಡೆಯುವ ನೋ ಪ್ರದರ್ಶನದಲ್ಲಿ ಮೇಲ್ಕಂಡ ಅಂಶಗಳು ಒಂದಾದಮೇಲೊಂದರಂತೆ ಮೇಲೆ ಸೂಚಿಸಿದ ಕ್ರಮದಲ್ಲಿ ಬರುತ್ತವೆ. ಒಂದೊಂದು ವಿಭಾಗಕ್ಕೂ ಮಧ್ಯೆ (ಕಿಯೋಜೆನ್) ಒಂದೊಂದು ಪ್ರಹಸನ, ಜೊತೆಗೆ ಸಾಮಾನ್ಯ ಪೋಷಾಕಿನಲ್ಲಿ ಒಂದು ನೃತ್ಯ ನಡೆಯುತ್ತವೆ.

ದೊಡ್ಡ ನಾಟಕಕ್ಕಿಂತ ಮೊದಲು, ತುಂಬ ಭಕ್ತಿರಸಪೂರಿತವಾದ 'ಓಕಿನ'ದ ಕಿರುನಾಟಕವಿರುತ್ತದೆ. ಚಿಕ್ಕದಾದರೂ ಇದಕ್ಕೆ ವಿಶೇಷ ಗೌರವವಿದೆ. ಏಕೆಂದರೆ, ಇದರ ಪ್ರಮುಖ ಅಭಿನೇತೃ ಓಕಿನ–ಕಾಂತಿಯುಕ್ತನಾದ ಸೂರ್ಯದೇವತೆಯ ಸಂಕೇತ.

ನೋ ನಾಟಕದ ರಚನೆ : ಸ್ಥೂಲವಾಗಿ ನೋ ನಾಟಕದ ರಚನೆ ಹೀಗಿರುತ್ತದೆ: ನಟರಲ್ಲಿ ಎರಡನೆಯ ದರ್ಜೆಯವನಾದ ವಾಕಿ–ಒಬ್ಬ ತಾಪಸಿ ಅಥವಾ ರಾಜ್ಯದ ಮಂತ್ರಿಗಳಲ್ಲೊಬ್ಬ, ಮೊದಲು ರಂಗಭೂಮಿಯ ಮೇಲೆ ಅವತರಿಸಿ ತನ್ನ ಪರಿಚಯ ಮಾಡಿಕೊಡುತ್ತಾನೆ. ಆಮೇಲೆ ಆಚೀಚೆಗೆ ಓಡಾಡುತ್ತಾನೆ. ತಾನು ಪ್ರವಾಸ ಕೈಗೊಂಡಿದ್ದೇನೆಂಬುದರ ಸೂಚನೆ ಇದು. ಹಾಗೇ ಹಾಡುತ್ತ ಪ್ರಯಾಣ ಬೆಳೆಸಿ, ಒಂದು ಕಡೆ ಸ್ತಬ್ಧವಾಗಿ ನಿಲ್ಲುತ್ತಾನೆ. ಒಂದು ಪ್ರಖ್ಯಾತ ಸ್ಥಳಕ್ಕೋ ನಗರಕ್ಕೋ ಕ್ಷೇತ್ರಕ್ಕೋ ಬಂದಿಳಿದನೆಂದು ಇದಕ್ಕೆ ಅರ್ಥ. ಅನಂತರ ರಂಗಭೂಮಿಯ ಬಲ ಭಾಗದ ಕಂಬಕ್ಕೆ ಮೈ ಆತುನಿಂತು ರಂಗಸ್ಥಳದ ಕಡೆ ಮುಖ ಮಾಡಿಕೊಂಡಿರುತ್ತಾನೆ.

ನೋ ನಾಟಕಗಳಲ್ಲಿ ಉಪಯೋಗಿಸುವ ಮುಖವಾಡಗಳು

ಅನಂತರ ಮೊದಲ ಸಲ ಪ್ರಮುಖನಾಗಿ ಮುಖದೋರುವ ನಟ ಮಯೆಜಿತೆ–ಒಬ್ಬ ರೈತ ಬೆಸ್ತ ಅಥವಾ ಪೂಜಾರಿಯ ವೇಷದಲ್ಲಿ ರಂಗಭೂಮಿಗೆ ಬಂದು ಸುತ್ತಲಿನ ದೃಶ್ಯವನ್ನು ವರ್ಣಿಸುತ್ತಾನೆ. ಅಥವಾ ಕಂಬಕ್ಕೆ ಮೈಗೊಟ್ಟು ನಿಂತಿರುವ ವಾಕಿಯೊಡನೆ ಸಂಭಾಷಿಸುತ್ತಾನೆ. ಅವರ ಸಂಭಾಷಣೆಯಲ್ಲಿ ಆ ಕ್ಷೇತ್ರದ ಇತಿಹಾಸ, ಅಲ್ಲಿ ಆಗಿಹೋದ ವೀರಯೋಧರು ಮುಂತಾದ ವಿವರಣೆ ಬರುತ್ತದೆ. ಅಥವಾ ಸಂದರ್ಭೋಚಿತವಾಗಿ ಅಲ್ಲೊಂದು ದೇವಾಲಯ, ಗುಡಿಯಿದ್ದರೆ ಅದರ ಉಗಮ, ಚರಿತ್ರೆ, ಸಂಬಂಧಿಸಿದ ಕತೆ ತಿಳಿಯುತ್ತದೆ. ಹೀಗೆ ಮುಂದೆ ಬರುವ ನಾಟಕದ ಮುನ್ಸೂಚನೆ ಇದಾಗುತ್ತದೆ ಮತ್ತು ಅದಕ್ಕೆ ಉತ್ತಮ ಹಿನ್ನೆಲೆಯೂ ಆಗುತ್ತದೆ.

ಆ ಕ್ಷಣದಲ್ಲಿ ಮಯೆಜಿತ ಅವಸರದಲ್ಲಿ ಅಂತರ್ಧಾನನಾಗುತ್ತಾನೆ. ವಾಸ್ತವವಾಗಿ ಅವನೊಬ್ಬ ಬುದ್ಧ ಅಥವಾ ಷಿಂಟೋ ದೇವತೆ. ಇಲ್ಲದಿದ್ದರೆ ಛದ್ಮವೇಷದಲ್ಲಿ ಬಂದಿರುವ ಯಾರೋ ವೀರಯೋಧನ ಭೂತ, ವಾಕಿಗೆ ಇದರಿಂದ ಅಚ್ಚರಿ. ಒಡನೆಯೇ ಸಾಮಾನ್ಯ ರೈತಾಪಿ ಜನ, ಮರ ಕಡಿದು ರೂಪುಗೊಳಿಸುವ ಮರಗೆಲಸದವರು ಅಥವಾ ಸೌದೆ ಒಡೆಯುವವರು, ಸ್ವಲ್ಪ ಸಂಖ್ಯೆಯಲ್ಲಿ ರಂಗಭೂಮಿಗೆ ಬರುತ್ತಾರೆ. ಆ ಕ್ಷೇತ್ರದ ಬಗ್ಗೆ ಮೊದಲು ಕಾವ್ಯಮಯವಾಗಿ ಕೊಟ್ಟ ವಿವರಣೆಯನ್ನು ಮತ್ತೊಮ್ಮೆ ಸಾಧಾರಣವಾದ ಆಡುಭಾಷೆಯಲ್ಲಿ, ಸರಳವಾಗಿ, ಸುಲಭವಾಗಿ ಅರ್ಥಕೊಡುವಂತೆ, ಹೇಳುತ್ತಾರೆ. ಇದರಲ್ಲಿ ವಿವರ ಇನ್ನೂ ಹೆಚ್ಚಿರುತ್ತದೆ. ಮಾತು ಮುಗಿದೊಡನೆ ಬಂದವರೆಲ್ಲ ನೇಪಥ್ಯಕ್ಕೆ ತೆರಳುತ್ತಾರೆ. ಈ ದೃಶ್ಯ ನಡೆಯುವ ಹೊತ್ತಿನಲ್ಲಿ ಮಯೆಜಿತ ಒಳಗೆ ಹೋಗಿದ್ದವ ಪೋಷಾಕು ಬದಲಾಯಿಸಿ ಹೊಸ ವೇಷದಲ್ಲಿ ಬರಲು ಅವಕಾಶವಾಗುತ್ತದೆ. ಇದೇ ಹೊತ್ತು ಕಳೆಯಲು ವಾಕಿ ಹಾಡುತ್ತಿರುತ್ತಾನೆ. ಕಾಲ ಕಳೆದುದರ ಸೂಚನೆ ಇದು. ಇದು ಮುಗಿದೊಡನೆ ಎರಡನೆಯ ಅವತಾರದಲ್ಲಿ ಪ್ರಮುಖನೆನಿಸಿದ ನೊಚಿಜಿತೆ ಎಂಬಾತ ಬುದ್ಧ ದೇವತೆ ಅಥವಾ ಷಿಂಟೋ ದೇವತೆ ಅಥವಾ ವೀರಯೋಧ–ಇವರಿಗೆ ಯೋಗ್ಯವಾದ ಬಟ್ಟೆಬರೆ ಮುಖವಾಡಗಳನ್ನು ಧರಿಸಿ ರಂಗಭೂಮಿಯ ಮುಂಭಾಗಕ್ಕೆ ಬರುತ್ತಾನೆ. ರಾತ್ರಿಯಲ್ಲಿ ವಿಹರಿಸುತ್ತಾನೆಂಬುದರ ಸೂಚಕವಾಗಿ ಅತ್ತಿಂದಿತ್ತ ಒಮ್ಮೆ ಮೆಲು ನಡೆಯಿಡುತ್ತ ಒಮ್ಮೆ ನೃತ್ಯ ಮಾಡುತ್ತ ಅಭಿನಯ ಅಂಗವಿನ್ಯಾಸಗಳಿಂದ ತನಗಿರುವ ದೇವತ್ವಗುಣವನ್ನು ಸೂಚಿಸುತ್ತಾನೆ. ಮಾತಿನಲ್ಲಿ, ಅಭಿನಯದಲ್ಲಿ ತನ್ನ ಸಾಹಸಕೃತ್ಯಗಳನ್ನೂ ತ್ಯಾಗ ಸಹಿಷ್ಣುತೆಯ ಕಷ್ಟಕೋಟಲೆಗಳನ್ನೂ ಸಾವಿನ ಸಂಕಟವನ್ನೂ ನರಕದಲ್ಲಿನ ನರಕಾಟವನ್ನೂ ಬಣ್ಣಿಸುತ್ತಾನೆ. ತನಗೆ, ತನ್ನ ಆತ್ಮಕ್ಕೆ, ವಾಕಿ ಶಾಂತಿ ದಯಪಾಲಿಸಿ ಮೋಕ್ಷವೀಯಲೆಂದು ಬೇಡುತ್ತಾನೆ. ವಾಕಿ ಅದಕ್ಕಾಗಿ ಪ್ರಾರ್ಥನೆ ಸಲ್ಲಿಸಬೇಕೆನ್ನುತ್ತಾನೆ. ಆಗಲೇ ಷಿತೆಯು ತನ್ನ ಕತೆಯನ್ನು ಅಭಿನಯಿಸಿ ನುಡಿಯುತ್ತಾನೆ. ಅಥವಾ ಏನೂ ನುಡಿಯದೆ ನೃತ್ಯದಲ್ಲಿ ಭಾವವನ್ನು ತೋರಿಸುತ್ತಾನೆ.

ನಾಟಕ ಪ್ರದರ್ಶನ ಪೂರ್ತಿ ಸಾಮಾನ್ಯವಾಗಿ ಹಿಮ್ಮೇಳವಿರುತ್ತದೆ ಅಥವಾ ಮೇಳದವರು ಅಭಿನೇತೃಗಳ ಜೊತೆಗೋ ತಾವೇ ಬೇರೆಯಾಗಿಯೋ ಹಾಡುತ್ತಿರುತ್ತಾರೆ.

ಮೇಳದವರು ರಂಗದ ಒಂದು ಪಾರ್ಶ್ವ ಕುಳಿತಿರುತ್ತಾರೆ–ಸಾಮೂಹಿಕಗಾಯನ, ಒಬ್ಬೊಬ್ಬರು ಇಬ್ಬಿಬ್ಬರು ಹಾಡುವುದು. ಅಭಿನೇತೃಗಳ ಜೊತೆಗಿನ ಗಾಯನ, ಇವು ಈ ಮೇಳದವರ ಕರ್ತವ್ಯ. ಅಡ್ಡಪಟ್ಟಿಯಿರುವ ಕೊಳಲು, ಭುಜದ ಮೇಲಿನ ಮೃದಂಗ ಅಥವಾ ತಮಟೆ (ಟ್ಸುಜುಮಿ)–ಇವು ವಾದ್ಯಗಳು. ಮೊಣಕಾಲಿನ ಮೇಲೆ ಪವಡಿಸಿರುವ ದೊಡ್ಡ ಮೃದಂಗ ಅಥವಾ ತಮಟೆ (ಓಕಾವ)ಯನ್ನೂ ಬಳಸುವುದುಂಟು.

ಜಪಾನೀ ರಂಗಭೂಮಿಯ 'ಸಜ್ಜಿಕೆ' ತುಂಬ ಸರಳ. ಸಾಧಾರಣವಾಗಿ ಒಂದು ಕೈ ಬೀಸಣಿಗೆ ಇದ್ದೇ ಇರುತ್ತದೆ. ಅದರಲ್ಲೂ ನೃತ್ಯದೃಶ್ಯಗಳಲ್ಲಿ ಪ್ರಮುಖ ಅಭಿನೇತೃ 'ಷಿತೆ' ಮತ್ತು ಆತನ ಸಹಾಯಕ ನಟ 'ಷಿತೆ-ಜ್ಯೂರೆ' ಇವರು ಮೊಖವಾಡಗಳನ್ನು ಧರಿಸುತ್ತಾರೆ. ಬತ್ತದ ಗದ್ದೆಯಿಂದ ಹಕ್ಕಿಗಳನ್ನು ಓಡಿಸಬೇಕಾದರೆ ಅವರ ಪರಿಕರಣ ದೋಣಿಯ ಆಕಾರದಲ್ಲಿ ಜೋಡಿಸಿದ ಬೊಂಬಿನ ಸರಗಳು. ಅದರ ಮಧ್ಯೆ ಮೂವರು ನಿಲ್ಲುವರು. ದೋಣಿಯ ಒಂದು ಕೊನೆಯಲ್ಲಿ ಬತ್ತದ ತೆನೆ ಸಿಕ್ಕಿಸಿರುತ್ತದೆ.. ಇನ್ನೊಂದು ಕೊನೆಯಲ್ಲಿ ಕೈಯಲ್ಲಿ ಹುರಿಯೊಂದನ್ನು ಹಿಡಿದು ಬೀಸುತ್ತಿರುವ ಮನುಷ್ಯ. ಜೊತೆಯ ಇನ್ನಿಬ್ಬರು ಭಾಷಣ ಮತ್ತು ಹಾಡುಗಳಿಗೆ. ಇಡೀ ನೋ ನಾಟಕದ ಸ್ವರೂಪ ಹೀಗಿ ಬಹು ಸರಳವಾಗಿದ್ದರೂ ಹೃದಯಂಗಮವಾಗಿರುತ್ತದೆ.

ಕಾಬೂಕೀ ನಾಟಕದ ಖಳನಾಯಕ. ಆರಾಗೋಟೋ ಶೈಲಿ

ನೋ ನಾಟಕಗಳೆಲ್ಲ ಸೃಷ್ಟಿಯಾದುದು 15ನೆಯ ಶತಮಾನದಲ್ಲಿ. ಈ ನಾಟಕಗಳ ಮುಖ್ಯ ಗುಣ ಸಂಯಮ ಹಾಗೂ ಸಾಂಕೇತಿಕತೆ. ನಾಟಕದ ಬಿಗುಪನ್ನು ಸಡಿಲಿಸಲು ನಡುನಡುವೆ ಕೀಯೋಜೆನ್ ಎಂಬ ಪ್ರಹಸನಗಳ ಬಳಕೆ ಅನಂತರದ ಕಾಲದಲ್ಲಿ ಹೆಚ್ಚಿತು. ಬುದ್ಧಿಪ್ರಧಾನವಾದ ನೋ ನಾಟಕ ಮುಖ್ಯವಾಗಿ ಪಂಡಿತರಂಜಕವಾಗಿತ್ತು. 17ನೆಯ ಶತಮಾನದಲ್ಲಿ, ಜನಸಾಮಾನ್ಯರಿಗಾಗಿ ರಚನೆಗೊಂಡ ಕಾಬುಕೀ (**ನೋಡಿ**) ನಾಟಕಗಳು ಹುಟ್ಟಿಕೊಂಡವು. ಸಾಂಪ್ರದಾಯಿಕವಾದರೂ ಜನಪ್ರಿಯವಾಗಿದ್ದ ಈ ನಾಟಕಗಳಲ್ಲಿ ವಿಪರೀತ ವೇಷಭೂಷಣಗಳೂ ಪ್ರಾಸಬದ್ಧ ಸಂಭಾಷಣೆಗಳೂ ವಿಚಿತ್ರ ರೀತಿಯ ಅಭಿನಯಗಳೂ ಇದ್ದು ನೃತ್ಯ ಹಾಗೂ ಸಂಗೀತಗಳಿಂದ ನಾಟಕ ರಂಜಕವಾಗಿರುತ್ತದೆ. ಜೊರೂರಿ ಎಂಬ ನಾಟಕೀಯ ಲಾವಣಿಯ ಬಳಕೆ ಕಾಬುಕೀ ನಾಟಕಗಳಲ್ಲಿನ ಇನ್ನೊಂದು ಆಕರ್ಷಣೆ. 19ನೆಯ ಶತಮಾನದ ಕೊನೆಕೊನೆಗೆ ಐರೋಪ್ಯ ನಾಟಕಗಳ ಅನುವಾದಗಳು ಜಪಾನೀ ರಂಗಭೂಮಿಗೆ ಬರತೊಡಗಿದವು. 20ನೆಯ ಶತಮಾನದ ಜಪಾನೀ ನಾಟಕ ಆಧುನಿಕ ಐರೋಪ್ಯ ರಂಗಭೂಮಿಯ ಎಲ್ಲ ಪರಿಕರಗಳನ್ನೂ ಬಳಸಿಕೊಂಡು ಸಮೃದ್ಧವಾಗಿ ಬೆಳೆದಿದೆ. (ಬಿ.ಎಸ್.ಆರ್.ಆರ್.)

ಒಂದು ಬಗೆಯ ನಾಟಕ ಜಪಾನ್‌ನಲ್ಲಿ 7ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಅಂದಿನಿಂದ ಕಾಣುವುದು ನಾಟಕದ, ಸಂಗೀತದ ಮತ್ತು ನೃತ್ಯದ ಅಂಶಗಳನ್ನು ಬೆರೆಸುತ್ತ ಹೊಸ ಪ್ರಕಾರಗಳನ್ನು ಸೃಷ್ಟಿಸುತ್ತ ಬಂದಿರುವ ಪ್ರಕ್ರಿಯೆಯನ್ನು. ತಿಳಿದು ಬಂದಿರುವ ಮಟ್ಟಿಗೆ ಜಪಾನ್‌ನ ಮೊದಲನೆಯ ರಂಗಪ್ರದರ್ಶನ 'ಗಿಗಕು'. ಇದು ಪ್ರ.ಶ., 612ರಲ್ಲಿ ಚೀನದಿಂದ ಬಂದಿತು (ಆದರೆ ಚೀನಕ್ಕೆ ಗ್ರೀಸ್‌ನಿಂದ ಅಥವಾ ಭಾರತದಿಂದ ಹೋಗಿರುವ ಸಾಧ್ಯತೆ ಉಂಟು). ಮುಖವಾಡಗಳನ್ನು ಧರಿಸಿದ ನೃತ್ಯಗಾರರ ನೃತ್ಯಕ್ಕೇ 'ಗಿಗಕು ಇವುಗಳಲ್ಲಿ ವಿನೋದವಿರುತ್ತಿತ್ತು. 8ನೇ ಶತಮಾನದಲ್ಲಿ ಆಳರಸರು ಇದು ಗಾಂಭೀರ್ಯವಿಲ್ಲದ ಹುಡುಗಾಟ ಎಂದು ಭಾವಿಸಿದ್ದರಿಂದ ಗಿಗಕು ನಿಂತುಹೋಯಿತು. ಚೀನದಿಂದ ಬಂದ 'ಬಿಗರು' ಇದರ ಸ್ಥಾನವನ್ನು ಆಕ್ರಮಿಸಿತು. ಈ ಪ್ರದರ್ಶನವು ಸರಳವಾದ ಸನ್ನಿವೇಶಗಳನ್ನು (ಉದಾ: ಸೈನ್ಯಾಧಿಕಾರಿಯೊಬ್ಬ ಯುದ್ಧರಂಗದಿಂದ ಹಿಂದಿರುಗುವುದು) ನಿರೂಪಿಸುತ್ತಿತ್ತು. ಭಾಗವಹಿಸುವವರು ಕಣ್ಣನ್ನು ಸೆಳೆಯುವಂಥ ಉಡುಪನ್ನು ಧರಿಸುತ್ತಿದ್ದರು. ವಿನೂತನ ವೈಭವ ಈ ನೃತ್ಯಗಳಿಗಿರುತ್ತಿತ್ತು. ಚೀನಾದ ಆಸ್ಥಾನವನ್ನು ಅನುಕರಿಸಲು ಹೊರಟಿದ್ದ ಜಪಾನೀ ರಾಜರು ಈ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡಿದರು.

8ನೆಯ ಶತಮಾನದಲ್ಲಿ 'ಸಂಗಕು' ಎನ್ನುವ ಪ್ರದರ್ಶನವೂ ಜನಪ್ರಿಯವಾಗಿತ್ತು. ಇದರಲ್ಲಿ ದೊಂಬರಾಟವೇ ಹೆಚ್ಚು. ಬಿಗಿಯಾದ ಹಗ್ಗದ ಮೇಲೆ ನಡೆಯುವುದು ಇದರ ಒಂದು ಭಾಗ. ಮತ್ತೊಂದು ಕತ್ತಿಗಳನ್ನು ನುಂಗುವುದು.

11ನೆಯ ಶತಮಾನದಲ್ಲಿ ಹ್ರಸ್ವ ವಿನೋದ ನಾಟಕಗಳ ಪ್ರದರ್ಶನವು ಪ್ರಾರಂಭವಾಯಿತು. ಆಧುನಿಕ ಕಾಲದಲ್ಲಿಯೂ ಪ್ರದರ್ಶಿಸುವ ಒಕಿನಾ ಎನ್ನುವ ಧಾರ್ಮಿಕ ವಿಧಿಯ ನೃತ್ಯವು ಈ ಕಾಲದಲ್ಲಿ ಪ್ರಾರಂಭವಾಗಿರಬಹುದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಒಳ್ಳೆಯ ಬೆಳೆಗಾಗಿ ಪ್ರಾರ್ಥನೆ ಅಥವಾ ಒಂದು ದೇವಾಲಯದ ಚರಿತ್ರೆ ಇವು ವಸ್ತುಗಳಾಗಿದ್ದ ನಾಟಕಗಳ ಪ್ರದರ್ಶನವೂ ಆಗುತ್ತಿತ್ತು.

14ನೆಯ ಶತಮಾನದಲ್ಲಿ ಕಲಾತ್ಮಕವಾದ ನೋನಾಟಕ ರೂಪವು ಕಾಣಿಸಿಕೊಂಡಿತು. ಈ ನಾಟಕರೂಪ ಇಂದಿಗೂ ಜೀವಂತವಾಗಿದೆ. ಸಾಮಾನ್ಯವಾಗಿ ಪ್ರೇಕ್ಷಕರು ರಂಗಮಂಟಪದ ಎರಡು ಪಾರ್ಶ್ವಗಳಲ್ಲಿ ಕುಳಿತಿರುತ್ತಾರೆ. ಒಮ್ಮೊಮ್ಮೆ ಮೂರು ಪಾರ್ಶ್ವಗಳಲ್ಲಿ ಕುಳಿತುಕೊಳ್ಳುವುದೂ ಉಂಟು. ನೋ ನಾಟಕಗಳಲ್ಲಿ ಪುರುಷರು ಮಾತ್ರ ಪಾತ್ರಧಾರಿಗಳು. ಇವರು ಸ್ತ್ರೀಯರ ಪಾತ್ರಗಳನ್ನು ವಹಿಸಿದಾಗ ಅಥವಾ ತಮಗಿಂತ ಬಹು ಹೆಚ್ಚಾದ ಅಥವಾ ಕಡಿಮೆ ವಯಸ್ಸಿನ ಪುರುಷರ ಪಾತ್ರಗಳನ್ನು ವಹಿಸಿದಾಗ ಸುಂದರವಾದ ಮುಖವಾಡಗಳನ್ನು ಧರಿಸುತ್ತಾರೆ. ರಂಗಮಂಟಪದ ಒಂದು ಪಾರ್ಶ್ವದಲ್ಲಿ ಮೇಳದವರು ಕುಳಿತುಕೊಳ್ಳುತ್ತಾರೆ, ಪಾತ್ರಧಾರಿಗಳು ನೃತ್ಯ ಮಾಡುವಾಗ ಹಾಡುತ್ತಾರೆ. ಆದರೆ ನಾಟಕಕ್ಕೂ ಇವರಿಗೂ ಸಂಬಂಧವಿಲ್ಲ. ಕಿಯೊಜನ್ ನೋ ನಾಟಕದ ಭಾಗವಾಗಿದೆ. ಇದು ಬದುಕಿನ ವಿನೋದದ ಮುಖಗಳನ್ನು ಪ್ರದರ್ಶನಕ್ಕೆ ತರುತ್ತದೆ.

20ನೆಯ ಶತಮಾನದ ಪ್ರಾರಂಭದಿಂದ ಹಿಂದಿನ ಜಪಾನೀ ನಾಟಕಗಳನ್ನು ಆಧುನಿಕ ಜಪಾನೀ ಭಾಷೆಯಲ್ಲಿ ಅಳವಡಿಸಿ ಪ್ರದರ್ಶಿಸುವ ಪ್ರಯೋಗಗಳು ನಡೆದವು. ಯುರೋಪಿನ ನಾಟಕಗಳನ್ನು ಅನುವಾದಿಸಿ ಪ್ರದರ್ಶಿಸಲಾಗಿದೆ. ಕೆಲವರು ಆಧುನಿಕ ನಾಟಕಕಾರರು ಪ್ರಾಚೀನ ಕಥೆಗಳನ್ನು ಆಧುನಿಕ ಮನಶ್ಶಾಸ್ತ್ರದ ದೃಷ್ಟಿಯಿಂದ ನಿರೂಪಿಸಿ ಬಳಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್'ನಂಥ ನಾಟಕಗಳನ್ನು ಕಬೂಕಿ ಮಾದರಿಯ ನಾಟಕಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದ್ದಾರೆ. ಮಿಷಿಮ ಯೂಕಿಯೊ ಸಾಂಪ್ರದಾಯಿಕ ವಸ್ತುಗಳನ್ನು ಆಧುನಿಕ ರೀತಿಯಲ್ಲಿ ನಿರೂಪಿಸುವಲ್ಲಿ ಬಹಳ ಯಶಸ್ವಿಯಾಗಿದ್ದಾನೆ.

ಈಚೆಗೆ ಜಪಾನೀ ನಾಟಕಕಾರರು ಜಪಾನೀ ಸಮಾಜದಲ್ಲಿ ಘರ್ಷಣೆ, ಸಾಮಾಜಿಕ ನ್ಯಾಯ-ಇಂಥ ವಸ್ತುಗಳನ್ನು ಆರಿಸಿಕೊಳ್ಳುತ್ತಿದ್ದಾರೆ. (ಎಲ್.ಎಸ್.ಎಸ್.)

**ಜಪಾನೀ ನ್ಯಾಯ :** ಜಪಾನ್‌ನ ಪ್ರಾಚೀನ ದೇಶೀಯ ನ್ಯಾಯ ಇತರ ದೇಶಗಳ ಆದಿಮ ನ್ಯಾಯಗಳಂತೆ ಮಾಂತ್ರಿಕ-ಧಾರ್ಮಿಕ ಅಂಶಗಳಿಂದ ಕೂಡಿದ್ದು. ಪ್ರಾಚೀನ ಜಪಾನ್‌ನಲ್ಲಿ ನ್ಯಾಯವನ್ನು ನೋರಿ ಎಂದು ಕರೆಯುತ್ತಿದ್ದರು. ನೋರಿ ಎಂದರೆ ಘೋಷಿತವಾಣಿ ಎಂದು ಅರ್ಥ. ನ್ಯಾಯವನ್ನು ದೈವಪ್ರೇರಣೆಯಿಂದ ಬಂದ ವಾಣಿ ಎಂದು ಜನ ನಂಬಿದ್ದರು. ನೋರಿಯನ್ನು ಅಧಿಕಾರಿ ಒಂದು ಗುಡ್ಡದಿಂದ (ತ್ಸುಕಾ) ಘೋಷಿಸುತ್ತಿದ್ದ. ತ್ಸುಕಾಸಾ ಎಂದರೆ ಅಧಿಕಾರಿ. ನೋರಿ ಅಲಿಖಿತ. ನ್ಯಾಯವೆಂದು ಪರಿಗಣಿಸಬಹುದಾದ ಅತ್ಯಂತ ಪ್ರಾಚೀನ ಲಿಖಿತ ದಾಖಲೆಯೆಂದರೆ ಷೋಟೊಕೂ ದೊರೆಯದು (ಪ್ರ.ಶ. 604). ಇದನ್ನು ಮಹಾ ಪ್ರಣಾಳಿಕೆ ಎಂದು ಕರೆಯಲಾಗಿದೆ. ಇದರಲ್ಲಿ ಏಳು ಕಟ್ಟಳೆಗಳಿವೆ. ದೈವೇಚ್ಛೆಯನ್ನು ಜನಕ್ಕೆ ತಿಳಿಯಪಡಿಸುವುದು ಮಾಂತ್ರಿಕ ಆಡಳಿತಗಾರರ ಒಂದು ಮುಖ್ಯ ಕಾರ್ಯಭಾರವಾಗಿತ್ತು. ಆದ್ದರಿಂದ ಅವರನ್ನು ಹಿಜಿರಿ ಅಥವಾ ದೈವಜ್ಞರೆಂದು ಕರೆಯುತ್ತಿದ್ದರು. ಆಡಳಿತ ಕ್ರಿಯೆಯನ್ನು ಷಿರು, ಷಿರಾಸು, ಷಿರೋಷಿಮೇಸು (ತಿಳಿಯುವುದು) ಎಂದು ಕರೆಯಲಾಗುತ್ತಿತ್ತು.

ಅಪರಾಧಗಳನ್ನು ತ್ಸುಮಿ ಎಂದು ಕರೆಯುತ್ತಿದ್ದರು. ಅವು ಪಾಪಕೃತ್ಯಗಳಾದ್ದರಿಂದ ಅವನ್ನು ದೇವರುಗಳಿಂದ ಮುಚ್ಚಿಡತಕ್ಕದ್ದೆಂದು ಜನ ಭಾವಿಸಿದ್ದರು. ಪಾಪದಿಂದ ಕೋಪಗೊಂಡ ದೇವರುಗಳ ಕ್ರೋಧಶಮನಾರ್ಥವಾಗಿ ಪ್ರಾಯಶ್ಚಿತ್ತ ಅಥವಾ ಶುದ್ಧೀಕರಣ ಕ್ರಿಯೆ ನಡಸಲಾಗುತ್ತಿತ್ತು. ಅದಕ್ಕೆ ಹರಾಯಿ ಎಂದು ಹೆಸರು. ತ್ಸುಮಿ ಆಗಿದೆಯೇ ಇಲ್ಲವೇ ಎಂಬುದನ್ನು ಕುದಿಯುವ ನೀರಿನ ಪರೀಕ್ಷೆಯಿಂದ ತೀರ್ಮಾನಿಸಲಾಗುತ್ತಿತ್ತು.

ಬಹುತೇಕ ಜಪಾನೀ ದೇವತೆಗಳು ಪೂರ್ವಜರ ಪ್ರೇತಾತ್ಮಗಳೇ ಆಗಿದ್ದುದರಿಂದ ಆಯಾ ಪ್ರೇತಾತ್ಮಗಳ ವಂಶಜರು ಅವವುಗಳಿಗೆ ನಡೆದುಕೊಳ್ಳುತ್ತಿದ್ದರು. ಹೀಗೆ ಬೇರೆಬೇರೆ ಕಟ್ಟಳೆಗಳಿಗೆ ಒಳಗಾದ ಬೇರೆಬೇರೆ ವಂಶ ಅಥವಾ ಗೋತ್ರಗಳಿದ್ದುವು. ಇಂಥ ಗೋತ್ರವನ್ನು ಉಜಿ ಎನ್ನುತ್ತಿದ್ದರು. ಉಜಿಯ ಸದಸ್ಯರು ಉಜಿಬಿಟೊ ಅಥವಾ ಉಕರ. ಇದರ ಮುಖಂಡ ಉಜಿಕೊ-ನೊ-ಕಾಮಿ, ಉಜಿ ಮಕ್ಕಳ ಪಿತ. ಇದರ ದೇವತೆ ಉಜಿಗಾಮಿ. ಉಜಿ ಸಾಮಾಜಿಕ ಘಟಕ ಮಾತ್ರವಾಗಿರಲಿಲ್ಲ, ಆರ್ಥಿಕ ರಾಜಕೀಯ ಘಟಕವೂ ಆಗಿತ್ತು. ಅತ್ಯಂತ ಪ್ರಭಾವಶಾಲಿಯಾದ ಉಜಿಯ ಮುಖ್ಯಸ್ಥನೇ ಪ್ರಾಚೀನ ಜಪಾನ್‌ನ ಸರ್ಕಾರವನ್ನು ನಡೆಸುತ್ತಿದ್ದ. ಇತರ ಉಜಿಗಳು ಅವನಿಗೆ ಅಧೀನವಾಗಿದ್ದುವು. ಇವನು ದೈವೇಚ್ಛೆಗೆ ಅನುಗುಣವಾಗಿ ರಾಜ್ಯವಾಳುವವನೆಂದು ನಂಬಿಕೆಯಿತ್ತು. ಉಜಿಗಳ ಸ್ಥಾನಕ್ಕನುಗುಣವಾಗಿ ಅವಕ್ಕೆ ಸಂಬಂಧಿಸಿದ ವ್ಯಕ್ತಿಗಳೆಲ್ಲರ ಸಾಮಾಜಿಕ ಸ್ಥಾನಮಾನಗಳು ನಿರ್ಧರಿಸಲ್ಪಡುತ್ತಿದ್ದುವು. ಅವರೆಲ್ಲ ತಂತಮ್ಮ ಸ್ಥಾನಮಾನಗಳಿಗಿಂತ ಮೇಲಿನವನ್ನು ಆಶಿಸದೆ, ನೋರಿಗಳನ್ನು ಪಾಲಿಸಿಕೊಂಡು ಹೋಗುವುದೇ ಪರಮ ಆದರ್ಶವಾಗಿತ್ತು. ಈ ಪ್ರಕಾರ ನಾಡಿನಲ್ಲಿ ಸಾಮಾಜಿಕ ಶಾಂತಿ, ಸುವ್ಯವಸ್ಥೆ ನಡೆದುಕೊಂಡು ಬರುತ್ತಿದ್ದುವು. ಜಪಾನಿನ ಇತಿಹಾಸಕಾಲ ಆರಂಭವಾದಾಗ ಜಪಾನ್‌ಅನ್ನು ಆಳುತ್ತಿದ್ದ ಉಜಿ ಮಿಕಾಡೊ. ಅದರ ನಾಯಕನನ್ನು ಸುಮೇರ ಮಿಕೋಟೊ ಎಂದು ಕರೆಯಲಾಗುತ್ತಿತ್ತು. ಒಟ್ಟಿನಲ್ಲಿ ಪ್ರಾಚೀನ ಜಪಾನ್‌ನ ನ್ಯಾಯಪದ್ಧತಿಯನ್ನರಿಯಲು ಯಾವ ದಾಖಲೆಗಳೂ ಇಲ್ಲ. ಲಭ್ಯವಿರುವ ಅನಂತರದ ದಾಖಲೆಗಳಲ್ಲಿ ಚೀನೀ ಸಂಸ್ಕೃತಿಯ ಪ್ರಭಾವ ಕಲಬೆರಕೆಯಾದ್ದು ಕಂಡುಬರುತ್ತದೆ.

6ನೆಯ ಶತಮಾನದ ಅಂತ್ಯದಿಂದ ಚೀನದಲ್ಲಿ ಅನುಕ್ರಮವಾಗಿ ಸೂಯಿ ಮತ್ತು ಟಾಂಗ್ ರಾಜವಂಶಗಳು ಪ್ರಬಲವಾಗಿ, ಜಪಾನ್‌ನ ಮೇಲೆ ಪದೇ ಪದೇ ಆಕ್ರಮಣ ನಡಸಿದುವು. ಜಪಾನ್‌ನ ಉಳಿವಿಗೇ ಧಕ್ಕೆ ಬರುವ ಸ್ಥಿತಿ ಒದಗಿತು. ಅದು ತನ್ನ ಹಳೆಯ, ಗೋತ್ರಗಳ ಸಡಿಲವಾದ ಒಕ್ಕೂಟ ವ್ಯವಸ್ಥೆಯನ್ನು ಬಿಟ್ಟುಕೊಟ್ಟು ಚೀನೀ ಮಾದರಿಯ ಕೇಂದ್ರೀಕೃತ ನ್ಯಾಯವ್ಯವಸ್ಥೆಯನ್ನು ಜಾರಿಗೆ ತರುವುದು ಅನಿವಾರ್ಯವಾಯಿತು. ಪ್ರ.ಶ. 645ರಲ್ಲಿ ಈ ಬಗೆಯ ಸುಧಾರಣೆಗಳಾದುವು. ಹೊಸ ಪ್ರಭುತ್ವ ಕಾರ್ಯಸಾಧ್ಯವಾಗುವಂತೆ 661ರಲ್ಲಿ ಚೀನೀ ನ್ಯಾಯಪದ್ಧತಿಯನ್ನೇ ಅಲ್ಲಿ ಜಾರಿಗೆ ತರಲಾಯಿತು. 678ರಲ್ಲಿ ಟೆನ್ಮು ಆಳ್ವಿಕೆಯ ಕಾಲದಲ್ಲಿ ಈ ಸಂಹಿತೆಯನ್ನು ಪರಿಷ್ಕರಿಸಿದ ಫಲವಾಗಿ ರಿಟ್ಸು ಮತ್ತು ರೀಯೋ ಎಂಬ ಎರಡು ಸಂಹಿತೆಗಳಾದುವು. ಮತ್ತೆ 701ರಲ್ಲೂ 718ರಲ್ಲೂ ಈ ಸಂಹಿತೆಗಳು ಸುಧಾರಣೆಗಳಿಗೆ ಒಳಗಾದುವು. ರಿಟ್ಸು ಎಂದರೆ ನಿರೋಧ. ಇದು ದಂಡಸಂಹಿತೆ. ರೀಯೋ ಎಂದರೆ ಆದೇಶ. ಇದು ಆಡಳಿತ, ವಿಚಾರಣೆ, ದೀವಾನಿ ಮತ್ತು ವಾಣಿಜ್ಯ ಕಾನೂನುಗಳ ಕಡತ, ಕನ್‌ಫ್ಯೂಷಿಯಸ್‌ನ ತತ್ತ್ವಗಳನ್ನು ಅನುಷ್ಠಾನಕ್ಕೆ ತರುವುದು ಅವುಗಳ ಉದ್ದೇಶವಾದ್ದರಿಂದ ವ್ಯಕ್ತಿಗತ ಕಾನೂನುಗಳು ಅದರಲ್ಲಿ ಸೇರಿರಲಿಲ್ಲ. ಈ ಸಂಹಿತೆಗಳು ಪದೇ ಪದೇ ಪರಿಷ್ಕೃತವಾಗುತ್ತಿದ್ದುವು. ಇವಕ್ಕೆ ಅಧಿಕೃತವಾದ ವ್ಯಾಖ್ಯಾನಗಳೂ ಬಂದುವು. ಇವು ಚೀನೀ ವ್ಯವಸ್ಥೆಯ ಹಿನ್ನೆಲೆಯಲ್ಲಿ ರಚಿತವಾಗಿದ್ದರೂ ಜಪಾನೀ ಮೂಲಭೂತ ಅಂಶಗಳು ಇವುಗಳಲ್ಲಿ ಉಳಿದುಕೊಂಡೇ ಬಂದುವು.

939ರಲ್ಲಿ ಸಂಭವಿಸಿದ ಮಸಾಕಾಡೊ ದಂಗೆಯಿಂದ ಕೇಂದ್ರಸರ್ಕಾರದ ಪ್ರಭಾವ ಕಡಿಮೆಯಾಯಿತು. ಸಾಮುರೈಗಳು ಪ್ರಬಲರಾದ ಮೇಲೆ ದೇಶೀಯ ನ್ಯಾಯಪದ್ಧತಿ ಮತ್ತೂ ಪ್ರಭಾವಶಾಲಿಯಾಯಿತು. ಆದರೆ ಇದಕ್ಕೂ ಜಪಾನಿನ ಆದಿಮ ನ್ಯಾಯಪದ್ಧತಿಗೂ ವ್ಯತ್ಯಾಸವಿತ್ತು. ಚೀನೀಯರಿಂದ ಸ್ವೀಕೃತವಾಗಿ ಜಪಾನಿನ ಮನೋಭಾವಕ್ಕೆ ವ್ಯತಿರಿಕ್ತವಾಗಿಲ್ಲದ ಹಲವು ಅಂಶಗಳು ಸ್ಥಿರವಾಗಿ ಉಳಿದುವು. ಕಾಮಾಕುರಾ ಷೋಗನದಿಂದ 1232ರಲ್ಲಿ ರೂಪಿತವಾದ ನ್ಯಾಯಪದ್ಧತಿಯಲ್ಲಿ ಇವೆರಡನ್ನೂ ಬಲು ಚೆನ್ನಾಗಿ ಹೊಂದಿಸಲಾಯಿತು. ಇದು ವಸ್ತುನಿಷ್ಠವೂ ನಮ್ಯವೂ ಸಂಗ್ರಹವೂ ಆಗಿತ್ತು.

17ನೆಯ ಶತಮಾನದಲ್ಲಿ ಈ ಪದ್ಧತಿ ಬಹಳ ಅಭಿವೃದ್ಧಿ ಹೊಂದಿತು. 1600ರ ಅನಂತರ, ಟೋಕುಗಾವಾ ಆಡಳಿತದಲ್ಲಿ, ಸುಮಾರು 270 ವರ್ಷಗಳ ಕಾಲ ಜಪಾನ್‌ನಲ್ಲಿ ಶಾಂತಿ ನೆಲೆಸಿತ್ತು. ದೇಶೀಯ ಸಂಸ್ಕೃತಿ, ವಾಣಿಜ್ಯ, ಕೈಗಾರಿಕೆ ಬೆಳೆದುವು. ಊಳಿಗಮಾನ್ಯವಾಗಿದ್ದ ದೇಶೀಯ ನ್ಯಾಯಪದ್ಧತಿ ಸುಸಂಸ್ಕೃತವಾಗಿ ಬೆಳೆಯಿತು. ವಾಣಿಜ್ಯ ನ್ಯಾಯ, ಹುಂಡಿಯ ನ್ಯಾಯ ಕೂಡ, ಯಾವ ವಿದೇಶೀಯ ಪ್ರಭಾವವೂ ಇಲ್ಲದೆ ರೂಪುಗೊಂಡಿತು. ಅಸಂಖ್ಯಾತ ನ್ಯಾಯಿಕ ಪೂರ್ವನಿರ್ಣಯಗಳ ಆಧಾರದ ಮೇಲೆ 1742ರಲ್ಲಿ ಸಂಕಲಿತವಾದ ಒಸಾಡಮೆಗಾಕಿ-ಹ್ಯಾಕ್ಕಾಜೋ ಎಂಬ ಸಂಹಿತೆ ಜಪಾನೀ ನ್ಯಾಯಪದ್ಧತಿಯ ವೈಶಿಷ್ಟ್ಯವನ್ನು ಸಾರುತ್ತದೆ.

1853ರಲ್ಲಿ ಅಮೆರಿಕನ್ ನೌಕಾಪಡೆಯ ಕಮೊಡೋರ್ ಪೆರಿ ಜಪಾನ್‌ಅನ್ನು ಸಂದರ್ಶಿಸಿದ. ಜಪಾನ್‌ನೊಳಕ್ಕೆ ಬಲವಂತವಾಗಿ ಪ್ರವೇಶಿಸಲೆಳಸಿದ ವಿದೇಶೀ ಶಕ್ತಿಗಳ ಪ್ರಥಮ ಪ್ರಯತ್ನವಿದು. ಊಳಿಗಮಾನ್ಯ ವ್ಯವಸ್ಥೆಯ ಮೇಲೆ ರಚಿತವಾಗಿದ್ದ ಟೋಕುಗಾವಾ ಆಡಳಿತ 1868ರಲ್ಲಿ ಮುರಿದುಬಿತ್ತು. ಅದರ ಸ್ಥಾನದಲ್ಲಿ ಪ್ರಾಚೀನ ಚಕ್ರವರ್ತಿಯ ಹೊಸ ಸಾಮ್ರಾಜ್ಯವೊಂದು, ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ಅಡಿಪಾಯದ ಮೇಲೆ, ಸ್ಥಾಪಿತವಾಯಿತು. ಇಂದಿನ ಜಪಾನೀ ನ್ಯಾಯವ್ಯವಸ್ಥೆ ಜರ್ಮನ್ ನ್ಯಾಯವ್ಯವಸ್ಥೆಯ ಆಧಾರದ ಮೇಲೆ ರೂಪಿತವಾಗಿದೆ. ಹೊಸ ಸಾಮ್ರಾಜ್ಯ ಸ್ಥಾಪಿತವಾದ ಮೇಲೆ ಐರೋಪ್ಯ ಅಂಶಗಳನ್ನು ಆತುರದಿಂದ ತಂದು ಅದರಲ್ಲಿ ತುರುಕಲಾಯಿತು. ಜಪಾನೀ ಪದ್ಧತಿಯ ಅಂಶಗಳನ್ನೂ ಉಳಿಸಿಕೊಳ್ಳಬೇಕೆಂದು ಮೊದಮೊದಲು ಉದ್ದೇಶಿಸಲಾಗಿತ್ತು. ಆದರೆ ವಿದೇಶೀ ಶಕ್ತಿಗಳ ಒತ್ತಡದಿಂದಾಗಿ ಆಗಿಂದಾಗ್ಗೆ ಮಾಡಿಕೊಂಡಿದ್ದ ಅನ್ಯಾಯದ ಕೌಲುಗಳ ಪರಿಣಾಮಗಳನ್ನು ತಿದ್ದುವ ಸಲುವಾಗಿ 1908ರಲ್ಲಿ ತರಲಾದ ಹೊಸ ಸಂಹಿತೆಗಳು ಐರೋಪ್ಯ ಮಾದರಿಯಲ್ಲಿ ರಚಿತವಾದುವು. ಆದ್ದರಿಂದ ಆಧುನಿಕ ಜಪಾನೀ ನ್ಯಾಯಪದ್ಧತಿಯಲ್ಲಿ ದೇಶೀಯ ಅಂಶಗಳು ಬಹಳ ಕಡಿಮೆ. ಜಪಾನೀತನವನ್ನು ಅಷ್ಟಿಷ್ಟು ಉಳಿಸಿಕೊಂಡಿರುವ ಕ್ಷೇತ್ರಗಳೆಂದರೆ ಸಂವೈಧಾನಿಕ ನ್ಯಾಯ, ಕುಟುಂಬ ನ್ಯಾಯ, ಉತ್ತರಾಧಿಕಾರ ನ್ಯಾಯ ಮತ್ತು ವಾಣಿಜ್ಯ ನ್ಯಾಯ.

ಇಂಕೀಯೋ, ಇರಿಯೈಕೆನ್, ಮ್ಯುಜಿನ್‌ಗೀಯೋ ಹಾಗೂ ಸೆಕೀಪು-ಈ ವ್ಯವಸ್ಥೆಗಳು ಇಂದಿಗೂ ಉಳಿದುಕೊಂಡು ಬಂದಿವೆ.

ಕುಟುಂಬದ ಯಜಮಾನನ ನಿವೃತ್ತಿಯನ್ನು ಕುರಿತ ಇಂಕೀಯೋ ನ್ಯಾಯದಲ್ಲಿ ಜಪಾನೀ ವೈಶಿಷ್ಟ್ಯವನ್ನು ಕಾಣಬಹುದು. ತನ್ನ ಉತ್ತರಾಧಿಕಾರಿ ತನ್ನ ಸ್ಥಾನಕ್ಕೆ ಬರುವಂತೆ ಮಾಡಲು ಕುಟುಂಬದ ಯಜಮಾನ ತನ್ನ ಅಧಿಕಾರಕ್ಕೆ ರಾಜೀನಾಮೆ ಕೊಡುವುದನ್ನು ಕುರಿತ ನಿಯಮಗಳು ಇದರಲ್ಲಿವೆ. ನಿವೃತ್ತಿಗೆ ನೀಡಬಹುದಾದ, ಕಾನೂನಿನಿಂದ ಪುರಸ್ಕೃತವಾದ, ಕಾರಣಗಳು ನಾಲ್ಕು : 1. ವೃದ್ಧಾಪ್ಯ (60 ವರ್ಷಕ್ಕೂ ಮೇಲ್ಪಟ್ಟ ವಯಸ್ಸು), 2. ಕಾಯಿಲೆ ಅಥವಾ ಇತರ ಅನಿವಾರ್ಯ ಪರಿಸ್ಥಿತಿ, 3. ಮದುವೆಯ ಮೂಲಕ ಇನ್ನೊಂದು ಕುಟುಂಬಕ್ಕೆ ಪ್ರವೇಶ, 4. ಕುಟುಂಬದ ಮುಖ್ಯಸ್ಥೆ ಹೆಂಗಸಾಗಿದ್ದು, ಆಕೆ ಆ ಸ್ಥಾನದಿಂದ ನಿವೃತ್ತಿ ಹೊಂದಲು ವ್ಯಕ್ತಪಡಿಸಿದ ಬಯಕೆ. ನಿವೃತ್ತಿಗೆ ಬಲು ಸಾಮಾನ್ಯ ಕಾರಣ ವೃದ್ಧಾಪ್ಯ. ಇದು ಚೀನೀಪದ್ಧತಿಯ ಅನುಕರಣ, 718ರಲ್ಲಿ ಜಪಾನ್‌ಗೆ ಬಂದದ್ದು. ಇಂಕೀಯೋ ಸಂಪೂರ್ಣವಾಗಿ ಜಪಾನೀ ಪದ್ಧತಿಯಲ್ಲವಾದರೂ ಜಪಾನೀ ಕುಟುಂಬ ಹಾಗೂ ಗೋತ್ರದ ವೈಶಿಷ್ಟ್ಯಗಳು ಇದರಲ್ಲಿ ಸೇರಿಕೊಂಡು ಇದಕ್ಕೆ ಜಪಾನೀ ಲಕ್ಷಣವನ್ನು ತಂದಿವೆ.

ಇರಿಯೈ ಹಕ್ಕು ಇರಿಯೈಕೆನ್ ನ್ಯಾಯದಲ್ಲಿ ನಿರೂಪಿತವಾಗಿದೆ. ಇರಿಯೈ ಎಂದರೆ ಸಾರ್ವತ್ರಿಕ ಪ್ರವೇಶ. ಕೆಲವು ಸ್ವತ್ತುಗಳನ್ನು ಸಾಮೂಹಿಕವಾಗಿ ಅನುಭವಿಸುವ ಹಕ್ಕನ್ನು ಕುರಿತದ್ದು ಇದು. ಸಾಮೂಹಿಕ ಒಡೆತನದ ಕಾಲದಿಂದ ಉಳಿದುಕೊಂಡು ಬಂದ ಈ ಹಕ್ಕು ಇಂದಿಗೂ ಸ್ಥಳೀಯ ಪದ್ಧತಿಗಳಿಗೆ ಅನುಗುಣವಾಗಿ ವಿವಿಧ ಪ್ರಕಾರಗಳಲ್ಲಿ ಜಾರಿಯಲ್ಲಿದೆ.

ಮ್ಯುಜಿನ್ ಎಂಬುದು ವಿಶಿಷ್ಟವಾದ ಸಹಕಾರಿ ವಿಮಾವ್ಯವಸ್ಥೆ. ಟೋಕುಗಾವಾ ಕಾಲದಿಂದ ಈ ಪದ್ಧತಿ ಬೆಳೆದುಕೊಂಡು ಬಂದಿದೆ. ಇದು ಮೂಲತಃ ಒಂದು ಬಗೆಯ ಉದ್ದರಿ ವ್ಯವಸ್ಥೆಯಾಗಿತ್ತು. ಟೋಕುಗಾವಾ ಕಾಲದಲ್ಲಿ ಇದಕ್ಕೆ ವಿಮಾ ಸ್ವರೂಪ ಬಂತು. ಸಾಮೂಹಿಕ ನಿಧಿಗೆ ನಿಯತಕಾಲಿಕವಾಗಿ ಚಂದಾ ಕೊಡುವ ಸದಸ್ಯರಲ್ಲಿ ಯಾರಾದರೂ ನಿಧನಗೊಂಡರೆ ನಿಧಿಯಿಂದ ಪರಿಹಾರಾರ್ಥವಾಗಿ ಒಂದು ನಿಗದಿಯಾದ ಮೊಬಲಗು ಕೊಡಲಾಗುತ್ತದೆ.

ಸೆಕೀಪು ಇನ್ನೊಂದು ವಿಶಿಷ್ಟ ಪದ್ಧತಿ. ಸೆಕೀಪು ಎಂದರೆ ಹೊಣೆಗೆ ವಹಿಸುವುದು. ಆಪಾದನೆಗೆ ಒಳಗಾದವನ ಆರಂಭಿಕ ವಿಚಾರಣೆ ನಡೆಸುವ ನ್ಯಾಯಾಧೀಶ, ಆರೋಪಿಯನ್ನು ಅವನ ಬಂಧುಗಳ ಅಥವಾ ಸ್ನೇಹಿತರ ವಶಕ್ಕೆ ವಹಿಸಿ, ಕರೆ ಬಂದಾಗ ಅವನನ್ನು ಕೋರ್ಟಿನ ಮುಂದೆ ಹಾಜರುಪಡಿಸುವಂತೆ ಆದೇಶ ನೀಡುತ್ತಾನೆ. ಜಾಮೀನಿನ ಮೇಲೆ ಬಿಡುಗಡೆ ಮಾಡುವುದಕ್ಕೂ ಇದಕ್ಕೂ ವ್ಯತ್ಯಾಸವುಂಟು. ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆಪಾದಿತನ ಅಥವಾ ಅವನ ನ್ಯಾಯಿಕ ಪ್ರತಿನಿಧಿಯ ಅರ್ಜಿ ಅವಶ್ಯ. ಇಲ್ಲಿ ನ್ಯಾಯಾಧೀಶನೇ ಆದೇಶ ನೀಡುತ್ತಾನೆ. ಈ ಪದ್ಧತಿ ಟೋಕುಗಾವಾ ಕಾಲದಲ್ಲಿ ಉಗಮಗೊಂಡಿತು. ಆಪಾದಿತ ತಪ್ಪಿಸಿಕೊಳ್ಳದಂತೆ ಮಾಡಲು ಅವನಿಗೆ ಶಿಕ್ಷೆಯ ಬೆದರಿಕೆ ಒಡ್ಡುವ ಬದಲು, ಅವನ ಕುಟುಂಬದ ಸದಸ್ಯರ ಕರ್ತವ್ಯಪ್ರಜ್ಞೆ ಹಾಗೂ ಮಾನವಪ್ರಜ್ಞೆಗಳಿಗೆ ಪ್ರಾಧಾನ್ಯ ನೀಡುವ ಈ ಪದ್ಧತಿಯಲ್ಲಿ ಜಪಾನೀ ಕುಟುಂಬವ್ಯವಸ್ಥೆಯ ವಿಶಿಷ್ಟ ಲಕ್ಷಣ ಎದ್ದುಕಾಣುತ್ತದೆ.

(ಬಿ.ಡಿ.ಎಚ್.)

**ಜಪಾನೀ ಪುರಾಣ :** ಜಪಾನೀ ಜನರ ಪೂರ್ವಜರು ಕೊರಿಯ ದೇಶದಿಂದ ಬಂದವರು. ಇಲ್ಲಿಗೆ ಬಂದೊಡನೆ ಏನೂ ಆದಿವಾಸಿಗಳೊಂದಿಗೆ ಕಾದಾಡಿ ಅವರನ್ನು ಉತ್ತರ ಭಾಗಕ್ಕಟ್ಟಿದರು. ದಕ್ಷಿಣದಲ್ಲಿ ಹಲವಾರು ಆದಿವಾಸಿ ಜನಾಂಗಗಳ ಸಂಪರ್ಕಕ್ಕೆ ಒಳಗಾದರು. ಮೊದಲು ಬುಡಕಟ್ಟುಗಳಲ್ಲಿಯೇ ವಾಸಿಸುತ್ತಿದ್ದ ಜಪಾನೀ ಜನಕ್ಕೆ ಬಹುಮಟ್ಟಿಗೆ ಹೆಂಗಸರೇ ಮುಖ್ಯ ಅಧಿಕಾರಿಗಳಾಗಿರುತ್ತಿದ್ದರು. ಕೊರಿಯದೊಂದಿಗೆ ಮತ್ತು ಇತರ ಏಷ್ಯ ಸಂಸ್ಕೃತಿಯೊಂದಿಗೆ ಈ ಜನ ನಂಟನ್ನು ಉಳಿಸಿಕೊಂಡೇ ಇದ್ದರಾಗಿ, ಅವರಲ್ಲಿ ಮೂಡಿಬಂದ ಪೌರಾಣಿಕ ಕಲ್ಪನೆಗಳಲ್ಲಿ ಈ ದೇಶದ ಪ್ರಭಾವ ಕಾಣಬರುತ್ತದೆ. ದಕ್ಷಿಣದ ಆದಿವಾಸಿಗಳ ಕಲ್ಪನೆಗಳೂ ಇಲ್ಲಿ ಸೇರಿಬಂದಿವೆ. ಆದರೂ ಪ್ರಾದೇಶಿಕ ವೈವಿಧ್ಯ ಸ್ಪಷ್ಟವಾಗಿದೆ.

ಗೋಹೀ–ದೈವತ್ವದ ಸಂಕೇತ

ಮುಖ್ಯವಾಗಿ ಜಪಾನೀ ಪುರಾಣ ಕಥೆಗಳು ಜಪಾನೀ ರಾಜವಂಶದ ಉಗಮವನ್ನು ಕುರಿತವು. ಇವನ್ನು ಕತರಿ–ಬೆ ಎಂಬ ಕುಶೀಲವರು ಹಾಡುಗಬ್ಬಗಳಲ್ಲಿ ಮೂಡಿಸಿ, ಕಾಲಕಾಲಕ್ಕೆ ವಿಶೇಷ ಸಂದರ್ಭಗಳಲ್ಲಿ ಜನರೆದುರು ಹಾಡುತ್ತ ಉಳಿಸಿಕೊಂಡು ಬಂದರು. ಷಿಂಟೋ ಧಾರ್ಮಿಕ ಸಮಾರಂಭಗಳಲ್ಲಿ ಈ ಪಾಠಕರು ಇದ್ದೇ ಇರುತ್ತಿದ್ದರು. ಶ್ರೀಮಂತರ ಮನೆಗಳಲ್ಲಿಯೂ ರಾಜರ ಎದುರೂ ಇವರು ಈ ಪುರಾಣಕಥೆಗಳನ್ನು ನಿರೂಪಿಸುತ್ತಿದ್ದರು. ದೇವತೆಗಳ ಮತ್ತು ಪಿತೃಗಳ ಪ್ರಸ್ತಾಪ ಈ ಕಥೆಗಳಲ್ಲಿ ವಿಶೇಷವಾಗಿ ಬರುತ್ತಿತ್ತು. 8ನೆಯ ಶತಮಾನದ ಆದಿಭಾಗದವರೆಗೆ ಇವು ಮೌಖಿಕ ಪರಂಪರೆಯಾಗಿಯೇ ಉಳಿದುವು. ಅಲ್ಲಿಂದ ಮುಂದೆ ಜಪಾನೀ ಇತಿಹಾಸಕಾರರು ಈ ಕಥೆಗಳನ್ನು ತಂತಮ್ಮ ಗ್ರಂಥಗಳಲ್ಲಿ ಬಳಸಿಕೊಳ್ಳಲಾರಂಭಿಸಿದರು.

ಚೀನೀ ಪಾಂಡಿತ್ಯ ಜಪಾನನ್ನು ಮುಟ್ಟಿದುದು 405ರಲ್ಲಿ; ಆಗಲೇ ಚೀನೀ ಬರೆಹ ಪದ್ಧತಿಯೂ ಇಲ್ಲಿಗೆ ಬಂತು. 522ರ ಸುಮಾರಿಗೆ ಕೊರಿಯದ ಮೂಲಕ ಬೌದ್ಧಧರ್ಮವೂ ಇಲ್ಲಿಗೆ ಬಂದು ಕಾಲಕ್ರಮದಲ್ಲಿ ದೇಶದ ಆಡಳಿತಧರ್ಮವಾಗಿ ಪರಿಣಮಿಸಿತು. ಇದು ಯೋಮ್ಯೆ ಚಕ್ರವರ್ತಿಯ (585–587) ಕಾಲದ ಮಾತು. ಜಪಾನೀ ಪುರಾಣಗಳಲ್ಲಿ ಬೌದ್ಧಧರ್ಮವೇ ಮುಖ್ಯ ವಿವರವಾಗಿ ಬಂದಿರುವುದು ಈ ಕಾರಣದಿಂದ. 672ರಲ್ಲಿ ಜಪಾನೀ ರಾಜ್ಯಭಾರವನ್ನು ವಹಿಸಿಕೊಂಡ ಚಕ್ರವರ್ತಿ ತೆಮ್ಮು ಪ್ರಾಚೀನ ಪುರಾಣಕಥೆಗಳನ್ನು ಮೊಟ್ಟಮೊದಲ ಬಾರಿಗೆ ಗ್ರಂಥಗಳಲ್ಲಿ ಬರೆಸುವ ವ್ಯವಸ್ಥೆಮಾಡಿದ. ಮುಂದೆ ಚಕ್ರವರ್ತಿನಿಯಾದ ಗೆಮ್ಮ್ಯೋ (707–715) ತನ್ನ ರಾಜ್ಯದಲ್ಲಿ ಪ್ರಚಲಿತವಾಗಿದ್ದ ಎಲ್ಲ ಕಥೆಗಳನ್ನೂ ಸಂಗ್ರಹಿಸಿ ಬರೆಸಿಟ್ಟಳು. 712ರಲ್ಲಿ ಪೌರಾಣಿಕ ಕಥಾಸಂಗ್ರಹ ಕೋಜಿಕಿ ಎನ್ನುವ ಹೆಸರಿನಿಂದ ಬಹುಮಟ್ಟಿಗೆ ಚೀನೀ ಲಿಪಿಯಲ್ಲಿ ಮೂಡಿಬಂತು. ರಾಜವಂಶಾವಳಿಯನ್ನು ವಿವಾದಕ್ಕೆಡೆಯಿಲ್ಲದಂತೆ ನಿಶ್ಚಯಿಸಿ ನಿರೂಪಿಸುವುದೇ ಈ ಸಂಗ್ರಹದ ಮುಖ್ಯ ಉದ್ದೇಶವಾಗಿತ್ತು. 714ರಂದು ಈ ಚಕ್ರವರ್ತಿನಿಯೇ ಜಪಾನೀ ರಾಷ್ಟ್ರೇತಿಹಾಸವನ್ನೂ ಪ್ರಕಟಿಸಲು ಅಪ್ಪಣೆ ಮಾಡಿದಳು. ಇದರ ಮೊದಲ ಭಾಗ (ಜಿಂದೈಕಿ) ದೇವತೆಗಳನ್ನು ಕುರಿತದ್ದು. ಪ್ರಾಚೀನ ಕಥೆಗಳ ಇನ್ನೊಂದು ಸಂಗ್ರಹ 807ರಲ್ಲಿ ಇಮಿಬೆ ನೊ ಹಿರೋನರಿ ಎಂಬ ಕವಿಯಿಂದ ಸಿದ್ಧವಾಯಿತು. ಇದರ ಹೆಸರು ಕೊಗೋಷುಇ. ಇದರಲ್ಲಿಯೇ ಪುರಾಣಕಥೆಗಳ ದೊಡ್ಡ ಸಂಕಲನವಿರುವುದು. ಅದೇ ಸುಮಾರಿಗೆ ಪ್ರಾದೇಶಿಕ ಕಥೆಗಳನ್ನು ಒಂದೆಡೆ ಕಲೆಹಾಕಿ ಫುಡೋಕಿಗಳೆಂಬ ಪುರಾಣ ಪರಿಚ್ಛೇದಗಳಲ್ಲಿ ಬರೆಸಿಟ್ಟರು. ಇವುಗಳಲ್ಲಿ ಐದು ಮಾತ್ರ ಈಗ ಉಳಿದಿವೆ.

ಜಪಾನೀ ಪುರಾಣಗಳಲ್ಲಿ ಮೂಲಭೂತವಾಗಿ ಕಮಿ ಎನ್ನುವ ಪ್ರಕೃತಿದೇವತೆಗಳು ಬರುತ್ತಾರೆ. ತುಂಬ ಶಕ್ತರಾದ ಇವರು ಬೆಟ್ಟಗಳ ಮೇಲೆ, ಮರಗಳಲ್ಲಿ, ನದಿಗಳಲ್ಲಿ ವಾಸಿಸುತ್ತಾರೆಂದು ನಂಬಿಕೆ. ಮನುಷ್ಯಾಕಾರದಲ್ಲಿಯೇ ಇದ್ದು, ಮನುಷ್ಯ ಸ್ವಭಾವವನ್ನೇ ಪಡೆದ ಈ ದೇವತೆಗಳಿಗೆ ಎರಡು ಜೀವಗಳು: ಒಂದು ಸತ್ತ್ವ ಪ್ರಧಾನವಾದುದು (ನಿಗಿ–ಮಿ–ತಮ) ಇನ್ನೊಂದು ರಜೋಗುಣ ಪ್ರಧಾನವಾದುದು (ಅರ–ಮಿ–ತಮ). ಹೀಗೆ ದೇವತೆಗಳು ಹಿತವನ್ನೂ ಅಹಿತವನ್ನೂ ಉಂಟುಮಾಡುವರು. ಆದರೆ ದೇವತೆಗಳಲ್ಲಿ ದುಷ್ಟದೇವತೆಗಳೆಂಬುದಿಲ್ಲ. ಕೆಲವರು ಸ್ವರ್ಗದಲ್ಲಿದ್ದಾರೆ. ಕೆಲವರು ನರಕದಲ್ಲಿದ್ದಾರೆ. ಒಮ್ಮೊಮ್ಮೆ ಇವರಿಂದ ಉಪದ್ರವಗಳೂ ತೊಂದರೆಗಳೂ ಆಗುವುದುಂಟು, ಆದರೆ ದೇವತೆಗಳು ಎಲ್ಲವನ್ನೂ ಮತ್ತೆ ನೆಟ್ಟಗೆಮಾಡುವ ಶಕ್ತಿಯುಳ್ಳವರು. ರೋಗಕ್ಕೆ, ಕ್ಷಾಮಕ್ಕೆ, ಉಪದ್ರವಕ್ಕೆ ಕಾರಣರಾದ ದುಷ್ಟಸತ್ತ್ವಗಳನ್ನು ಜಪಾನೀ ಜನ ನಂಬುತ್ತಾರೆ. ಆದರೆ ಇವೆಲ್ಲ ಕಮಿ ದೇವತಾವರ್ಗಕ್ಕೆ ಕೆಳಗಿನ ಮಟ್ಟದಲ್ಲಿರುವುವು.



ಬತ್ತದ ಅಧಿದೈವ–ಇನಾರಿ. ಪ್ಯಾರಿಸ್ಸಿನ ಗ್ಯುಮೆ ವಸ್ತುಸಂಗ್ರಹಾಲಯದಲ್ಲಿದೆ

ಅವರಲ್ಲಿ ಸ್ವರ್ಗ (ಅಮ), ಭೂಮಿ, ನರಕ (ಯೋಮಿ–ತ್ಸು–ಕುನಿ) ಎನ್ನುವ ಮೂರು ನೆಲೆಗಳಿವೆ. ಮೊದಲಿಗೆ ಭೂಮಿಗೂ ಸ್ವರ್ಗಕ್ಕೂ ಸೇತುವೆಯೊಂದಿದ್ದಿತು (ಅಮ–ನೋ–ಹಶೀದಾತೆ). ಇದರ ಮೂಲಕ ದೇವತೆಗಳು ಸ್ವರ್ಗದಿಂದ ಭೂಮಿಗೆ ಬಂದು ಮರಳುತ್ತಿದ್ದರು. ಒಮ್ಮೆ ದೇವತೆಗಳೆಲ್ಲ ನಿದ್ರಿಸುತ್ತಿದ್ದಾಗ ಈ ಸೇತುವೆಯ ಒಂದು ಭಾಗ ಸಮುದ್ರದಲ್ಲಿ ಬಿದ್ದುಹೋಯಿತಂತೆ; ಕೀಯೋಟೋಗೆ ಪಶ್ಚಿಮ ಭಾಗದಲ್ಲಿ ಈ ಸ್ಥಳವನ್ನು ಈಗಲೂ ತೋರಿಸುತ್ತಾರೆ. ಸ್ವರ್ಗದಲ್ಲಿರುವ ದೇವತೆಗಳಿಗೆ ಅಮ–ತ್ಸು–ಕಮಿ ಎಂದು ಹೆಸರು; ಭೂಮಿಯ ಮೇಲಿರುವ ದೇವತೆಗಳು ಕುನಿ–ತ್ಸು–ಕಮಿ ಎನಿಸಿಕೊಳ್ಳುತ್ತಾರೆ. ಭೂಮಿಯ ದೇವತೆಗಳ ಸಂಖ್ಯೆಯೇ ಹೆಚ್ಚು ; ಅವರೆಲ್ಲರೂ ಬಹುಮಟ್ಟಿಗೆ ಜಪಾನಿನಲ್ಲೇ ಇರುವವರು. ಭೂಮಿಯ ಕೆಳಗಿರುವ ನರಕ ಕತ್ತಲೆಯ ಪ್ರದೇಶ, ಇಝೂಮೋ ಪ್ರಾಂತ್ಯದಲ್ಲಿ ಭೂಗರ್ಭಕ್ಕಿಳಿಯುವ ರಸ್ತೆಯೊಂದರ ಮೂಲಕ ನರಕವನ್ನು ಮುಟ್ಟಬಹುದು; ಇದು ಒಂದು ದಾರಿಯಾದರೆ ಸಮುದ್ರತೀರದಿಂದ ಇನ್ನೊಂದು ದಾರಿಯಿದೆ; ನರಕವೆಂದರೆ ಅಡಿಯೇ ಇಲ್ಲದ ಆಳ ; ಇಲ್ಲಿ ಕ್ರೂರ ರಾಕ್ಷಸರೂ ಕುರೂಪಿ ರಾಕ್ಷಸಿಯರೂ ಇರುತ್ತಾರೆ. ಅವರಿಗೆ ಮನೆಗಳೂ ಇರುತ್ತವೆ. ಜಪಾನೀ ಪುರಾಣಗಳಲ್ಲಿ ನರಕವೆಂದರೆ ಮೃತರ ಜೀವವಿರುವ ಸ್ಥಳವಲ್ಲ.

ಸ್ವರ್ಗವೂ ಭೂಮಿಯೂ ಮೈದಳೆಯುವ ಮೊದಲು ದೇವತೆಗಳ ಏಳು ತಲೆಮಾರುಗಳ ಅನಂತರ ಈಝಾನಾಗೀ ಮತ್ತು ಈಝಾನಾಮೀ ಎಂಬ ದಂಪತಿಗಳಿದ್ದರು. ಆಗ ಭೂಮಿಯು ನೀರಿನ ಮೇಲೆ ತೇಲುವ ಎಣ್ಣೆಯಂತೆ ಇತ್ತು. ಈ ದಂಪತಿಗಳು ಸ್ವರ್ಗಸೇತುವೆಯ ಮೇಲೆ ನಿಂತು ಈ ಹರಿಯುವ ಭೂಮಿಯನ್ನು ಭರ್ಜಿಯಿಂದ ಚೆನ್ನಾಗಿ ಕದಡಿದರು. ನೊರೆ ಕಾಣಿಸಿಕೊಂಡಾಗ ಭರ್ಜಿಯನ್ನು ಮೇಲೆ ತೆಗೆದು ಪಕ್ಕಕ್ಕಿರಿಸಿದರು. ಆಗ ಅದರ

ಮೊನೆಯಿಂದ ಭೂಮಿಯ ಹನಿಯೊಂದು ಕೆಳಗೆ ಬಿತ್ತು. ಇದೇ ಓನೋ ಕೊರೊ ಎಂಬ ದ್ವೀಪ. ಇಲ್ಲಿ ದಿವ್ಯದಂಪತಿಗಳು ನೆಲಸಿದರು. ಒಂದು ಕಂಬವನ್ನು ನೆಟ್ಟು ಮನೆಯನ್ನೂ ಮಾಡಿಕೊಂಡರು. ಒಮ್ಮೆ ಕಂಬದ ಸುತ್ತಲೂ ಇಬ್ಬರೂ ಆಟವಾಡುತ್ತಿದ್ದರು. ಈಜ಼ಾನಾಗೀ ಎಡದಿಂದಲೂ ಈಜ಼ಾನಾಮೀ ಬಲಭಾಗದಿಂದಲೂ ಬಂದು ಒಟ್ಟಿಗೆ ಕಲೆತರು. ಈಜ಼ಾನಾಮಿ 'ಎಂಥ ಚೆಲುವ'! ಎಂದು ಉದ್ಗಾರ ತೆಗೆದಳು. ಹೆಂಗಸಾದವಳೇ ಮೊದಲು ಮಾತನಾಡಿದಳೆಂದು ಈಜ಼ಾನಾಗಿಗೆ ಅಸಮಾಧಾನವಾಯಿತು. ಆದರೂ ಅವರಿಬ್ಬರೂ ಕೂಡಿಕೊಂಡು ಕೆಲವು ದ್ವೀಪಗಳನ್ನು ಸೃಷ್ಟಿ ಮಾಡಿದರು. ಇವು ಸಮರ್ಪಕವಾಗಿರಲಿಲ್ಲ. ಇತರ ದೇವತೆಗಳೊಂದಿಗೆ ಸಮಾಲೋಚನೆ ನಡೆಸಿದಾಗ ಹೆಂಗಸು ಮೊದಲು ಮಾತನಾಡಿದುದೇ ಇದಕ್ಕೆ ಕಾರಣವೆಂದು ತಿಳಿಸಿದರು. ಆಗ ದಂಪತಿಗಳು ಮತ್ತು ಮೊದಲಿನಂತೆಯೇ ಕಂಬವನ್ನು ಸುತ್ತಿಬಂದು ಈಜ಼ಾನಾಗಿ 'ಎಂಥ ಚೆಲುವೆ!' ಎಂಬ ಉದ್ಗಾರವನ್ನು ಮೊದಲು ತೆಗೆದ. ಅನಂತರ ಅವರು ಕೂಡಿಕೊಂಡಾಗ ಸೊಗಸಾದ ದ್ವೀಪಗಳಾದುವು. ಈಗಿನ ಜಪಾನ್ ಹೀಗೆ ಆದುದು. ಇತರ ಪ್ರಕೃತಿ ದೇವತೆಗಳೂ ಹೀಗೆಯೇ ಮೈದಳೆದವರು.

ಮುಕ್ಕಣ್ಣ ಐಜೆನ್–ಮೈಯೋ ದೈವ. ಗ್ಯುಮೆ ವಸ್ತುಸಂಗ್ರಹಾಲಯದಲ್ಲಿದೆ

ವಾಯುದೇವತೆ, ವೃಕ್ಷದೇವತೆ, ಪರ್ವತದೇವತೆ ಮೊದಲಾದವರೆಲ್ಲ ಬಂದಮೇಲೆ ಈ ದಂಪತಿಗಳು ಅಗ್ನಿದೇವತೆಯನ್ನೂ ಪಡೆದರು. ಆದರೆ ಅಗ್ನಿ ಹುಟ್ಟಿದೊಡನೆ ತಾಯಿಯಾದ ಈಜ಼ಾನಾಮೀಗೆ ಅಸಾಧ್ಯವಾದ ಬೇನೆಯುಂಟಾಯಿತು. ಅವಳ ವಾಂತಿಯಿಂದ, ಮೂತ್ರದಿಂದ, ಪುರೀಷದಿಂದ ಇತರ ದೇವತೆಗಳು ಹುಟ್ಟಿದರು. ಆದರೆ ಈಜ಼ಾನಾ ತಾಪವನ್ನು ತಾಳಲಾರದೆ ಸತ್ತುಹೋದಳು. ವಿರಹದಿಂದ ಈಜ಼ಾನಾ ಅಳತೊಡಗಿದ. ಅವನ ಕಣ್ಣೀರು ನದಿಯಾಗಿ ಹರಿಯತೊಡಗಿತು; ಇದೇ ದುಃಖನದಿ. ತನ್ನ ಮಡದಿಯನ್ನು ಕೊಂದನೆಂದು ಅವನಿಗೆ ಅಗ್ನಿಯ ಮೇಲೆ ಕೋಪ ಬಂದು ಕತ್ತಿಯಿಂದ ಅವನ ಕತ್ತು ಕತ್ತರಿಸಿದ. ಕತ್ತಿಯಿಂದ ಕೆಳಗೆ ಬಿದ್ದ ರಕ್ತದ ಹನಿಗಳು ಎಂಟು ದೇವತೆಗಳಾದುವು. ಇಷ್ಟಾದರೂ ಸಮಾಧಾನಗೊಳ್ಳದೆ ಈಜ಼ಾನಾಗೀ ತನ್ನ ಹೆಂಡತಿಯನ್ನು ಅರಸಿಕೊಂಡು ನರಕಕ್ಕೆ ಹೋದ. ಅಲ್ಲಿ ಈಜ಼ಾನಾಮೀ ಅವನನ್ನು ಭೇಟಿಯಾದಳು; ಆದರೆ ನರಕದ ಅನ್ನವನ್ನು ಉಂಡಿದ್ದ ಅವಳಿಗೆ ಭೂಮಿಗೆ ಹಿಂದಿರುಗುವ ಮನಸ್ಸಾಗಲಿಲ್ಲ. ತಾನು ನರಕದೊಡೆಯನನ್ನು ಕೇಳಿಕೊಂಡು ಬರುತ್ತೇನೆಂದು ಅವನ ಅರಮನೆಯ ಬಳಿ ಬಂದು ಗಂಡಸು ತನ್ನನ್ನು ಮನೆಯೊಳಗೆ ಹಿಂಬಾಲಿಸಬಾರದೆಂದು ತಿಳಿಸಿ ಒಳಗೆ ಹೋದಳು. ಈಜ಼ಾನಾಗೀ ಕುತೂಹಲವನ್ನು ತಡೆಯಲಾರದೆ ಕಾಣದಂತೆ ಅವಳನ್ನು ಹಿಂಬಾಲಿಸಿದ. ಮನೆಯೊಳಗೆ ಕಾಲಿಟ್ಟೊಡನೆ ಆಕೆಯ ಮೈಯೆಲ್ಲ ಕೊಳೆತು ಹುಳುಗಳು ಓಡಾಡತೊಡಗಿದುವು; ಎಂಟು ಗುಡುಗಿನ ಪಿಶಾಚಿಗಳು ಅವಳನ್ನು ಸುತ್ತುವರಿದುವು. ಇದನ್ನು ನೋಡಿದ ಈಜ಼ಾನಾಗೀಗೆ ಗಾಬರಿಯಾಗಿ ಹಿಂದಕ್ಕೆ ಓಡತೊಡಗಿದ. ಈ ಶಬ್ದವನ್ನು ಕೇಳಿ ಈಜ಼ಾನಾಮೀ ನನ್ನ ಮಾತನ್ನು ಮೀರಿದ್ದೀಯೆ; ನನ್ನನ್ನು ಅವಮಾನಗೊಳಿಸಿದ್ದೀಯೆ ಎಂದು ಸಿಟ್ಟಿನಿಂದ ನುಡಿದು ಅವನನ್ನು ಹಿಡಿದು ತರಲು ನರಕದ ಕುರೂಪಿ ಹೆಂಗಸರನ್ನು ಅಟ್ಟಿದಳು.

ಮಿಯಾಜೀಮಾದಲ್ಲಿನ ದೇವಾಲಯದ ದ್ವಾರ

ಇವರಿಂದಲೂ, ಹಿಂಬಾಲಿಸಿ ಬಂದ ಎಂಟು ಗುಡುಗಿನ ಪಿಶಾಚಿಗಳಿಂದಲೂ ತಪ್ಪಿಸಿಕೊಂಡು ಅವನು ವೇಗವಾಗಿ ಓಡಿ ನರಕದಿಂದ ಮೇಲೆ ಬಂದು ನರಕದ ಬಾಗಿಲಿಗೆ ದೊಡ್ಡದೊಂದು ಬಂಡೆಯನ್ನು ಅಡ್ಡವಾಗಿರಿಸಿದ. ಇತ್ತಕಡೆ ಈಜ಼ಾನಾಗೀ, ಅತ್ತಕಡೆ ಈಜ಼ಾನಾಮೀ ಒಬ್ಬರನ್ನೊಬ್ಬರು ಬಯ್ದಾಡಿ ಬೇರೆಯಾದರು.

ಜೈಜೋ–ಷಟ್‌ಸ್ಥಿತಿಗಳ ಪಾಲಕರು

ತಾನು ನರಕಕ್ಕೆ ಹೋಗಿಬಂದು ಕಲುಷಿತನಾದೆನೆಂದು ಈಜ಼ಾನಾಗೀ ತ್ಸುಕಿಜಿ ದ್ವೀಪಕ್ಕೆ ಹೋಗಿ, ಹ್ಯುಗ ಪ್ರದೇಶದಲ್ಲಿರುವ ತಕಿಬಾನ ನದಿಯಲ್ಲಿ ಸ್ನಾನ ಮಾಡಿ ಶುದ್ಧವಾದ. ನರಕಕ್ಕೆ ಹೋದಾಗ ತಾನು ಹಿಡಿದಿದ್ದ ಕೋಲನ್ನು ಎಸೆದಾಗ ಅದರಿಂದ ಒಂದು ದೇವತೆ ಹುಟ್ಟಿತು. ನಾಲ್ಕು ರಸ್ತೆಗಳು ಸೇರುವ ಕಡೆ ಅನಿಷ್ಟ ಪರಿಹಾರಕ್ಕೆಂದು ಈ ದೇವತೆಯನ್ನು ನಿಲ್ಲಿಸುತ್ತಾರೆ. ನದಿಯಲ್ಲಿ ಮುಳುಗಿದಾಗ ನರಕದಲ್ಲಿ ತಾನು ಅಂಟಿಸಿಕೊಂಡಿದ್ದ ಕೊಳೆಗಳು ಮೇಲೆ ಬಂದು ಅದರಿಂದ ಇಬ್ಬರು ದುಷ್ಟದೈವಗಳು ಮೈದಳೆದುವು. ಅವನ ಮೈಲಿಗೆ ಬಟ್ಟೆಯನ್ನು ದೂರ ಎಸೆಯಲು ಅದರಿಂದ ಕೆಲವು ದೇವತೆಗಳು ಕಾಣಿಸಿಕೊಂಡುವು. ಈ ದುಷ್ಟಶಕ್ತಿಗಳಿಗೆ ಪ್ರತಿಯಾಗಿ ಈಜ಼ಾನಾಗೀ ಇನ್ನೆರಡು ದೇವತೆಗಳನ್ನು ಸೃಷ್ಟಿ ಮಾಡಿದ; ದೋಷಗಳನ್ನು ಸರಿಪಡಿಸುವ ದೇವತೆಗಳಿವು. ತನ್ನ ಎಡಗಣ್ಣನ್ನು ತೊಳೆದುಕೊಂಡಾಗ ಸೂರ್ಯಾಣಿ ದೇವತೆಯೂ (ಆಮಾತಿರಾಸು) ಬಲಗಣ್ಣನ್ನು ತೊಳೆದುಕೊಂಡಾಗ ಚಂದ್ರದೇವತೆಯೂ (ತ್ಸುಕಿಯೋಮಿ) ಮೈದಳೆದರು. ಜಪಾನೀ ಪುರಾಣಕಥೆಗಳಲ್ಲಿ ಸೂರ್ಯ

ಹೆಣ್ಣು ದೇವತೆ, ಚಂದ್ರ ಗಂಡುದೇವತೆ. ಮೂಗನ್ನು ತೊಳೆದುಕೊಳ್ಳಲು ಸೂಸ–ನಾ–ವಾ ದೇವತೆ ಹೊರಬಂದ. ತಂದೆಯ ಅಪ್ಪಣೆಯಂತೆ ಸೂರ್ಯಾಣಿಯೂ ಚಂದ್ರನೂ ಸ್ವರ್ಗ ಭೂಮಿಗಳನ್ನು ಆಕ್ರಮಿಸಿಕೊಂಡರು; ಹಗಲಿಗೆ ರಾತ್ರಿಗೆ ಒಡೆಯರಾದರು. ಸುಸಾನೂ ಅಳಲು ಮೊದಲಿಟ್ಟು ತನ್ನ ತಾಯಿಯ ಬಳಿ ಹೋಗಬೇಕೆಂದು ಹಟ ಮಾಡಲು, ಇಸನಗಿ ಅವನನ್ನು ಹೊಡೆದಟ್ಟಿಬಿಟ್ಟ.

ತಾಯಿಯ ಬಳಿ ಹೋಗುವ ಮೊದಲು ಸೂಸ–ನಾ–ವಾ ತನ್ನ ಅಕ್ಕ ಆಮಾತಿರಾಸುವನ್ನು (ಸೂರ್ಯಾಣಿ) ಕಂಡು ಹೋಗಲು ನಿಶ್ಚಯಿಸಿ ಸ್ವರ್ಗಕ್ಕೇರಿದ. ಏರುವ ರಭಸದಲ್ಲಿ ಬೆಟ್ಟಗಳು ಅಲುಗಾಡಿದುವು. ನದಿಗಳು ಅಲ್ಲೋಲಕಲ್ಲೋಲವಾದುವು. ಭೂಮಿ ನಡುಗಿತು. ಇದನ್ನು ಕಂಡ ಆಮಾತಿರಾಸು ತನ್ನ ಬಿಲ್ಲು ಬಾಣಗಳನ್ನು ಹಿಡಿದೇ ತಮ್ಮನನ್ನು ಎದುರುಗೊಂಡಳು. ಬಂದ ಕಾರಣವೇನೆಂದು ಕೇಳಿದಳು. ತಾನು ಸುಮ್ಮನೆ ಆಕೆಗೆ ಹೇಳಿ ಹೋಗಲು ಬಂದೆನೆಂದೂ ತನ್ನ ತಾಯಿಯ ರಾಜ್ಯಕ್ಕೆ ಹೊರಟಿರುವುದಾಗಿಯೂ ಹೇಳಿದ ಸೂಸ–ನಾ–ವಾ ತನ್ನ ಕತ್ತಿಯನ್ನು ಆಕೆಗೆ ಕೊಟ್ಟು ಮೂರು ಪಾಲಾಗಿ ಒಡೆಯಲು ತಿಳಿಸಿದ. ಆಕೆ ಹಾಗೆ ಮಾಡಲು ಅದನ್ನು ಅವನು ಬಾಯಿಗೆ ಹಾಕಿಕೊಂಡು ಅಗಿದು ಉಸಿರಾಡಿಸಿದಾಗ ಮೂವರು ಸ್ತ್ರೀದೇವತೆಗಳು ಮೈದಳೆದರು. ಅನಂತರ ಸೂಸ–ನಾ–ವಾ ತನ್ನ ಅಕ್ಕ ಹಾಕಿಕೊಂಡಿದ್ದ ಐದೆಳೆ ರತ್ನಹಾರವನ್ನು ಸ್ವಲ್ಪ ಕೊಡೆಂದು ಕೇಳಿದ. ಆಕೆ ಕೊಟ್ಟಾಗ ಅದನ್ನು ಹಲ್ಲಿನಿಂದ ಅಗಿದು, ಉಸಿರಾಡಿದ; ಐವರು ಪುರುಷದೇವತೆಗಳು ಕಾಣಿಸಿಕೊಂಡರು. ಆಮಾತಿರಾಸು ಅವರೆಲ್ಲ ತನ್ನ ರತ್ನಹಾರದಿಂದ ಹುಟ್ಟಿದುದರಿಂದ ತನ್ನ ಮಕ್ಕಳೆಂದು ವಾದಿಸಿದಳು. ಇವರೆಲ್ಲರೂ ಪಿತೃದೇವತೆಗಳು; ಇವರಲ್ಲಿ ಜ್ಯೇಷ್ಠನಾದವ ಜಪಾನೀ ಚಕ್ರವರ್ತಿ ವಂಶದ ಮೂಲಪುರುಷನೆಂಬ ಕಲ್ಪನೆಯಿದೆ.

ಆಮಾತಿರಾಸುವಿನ ವಾದ ಸೂಸ–ನಾ–ವಾಗೆ ಹಿಡಿಸಲಿಲ್ಲ. ಆಕೆ ಸಿದ್ಧಪಡಿಸಿದ ಬತ್ತದ ಬೆಳೆಯನ್ನೆಲ್ಲ ನಾಶಪಡಿಸಿದ; ಆಕೆಯ ದೇವಾಲಯಗಳನ್ನೆಲ್ಲ ಅಪವಿತ್ರಗೊಳಿಸಿದ. ಮಾಯಾಕುದುರೆಯೊಂದನ್ನು ಆಕೆಯ ಮೇಲೆ ಹರಿಬಿಟ್ಟಾಗ ಆಕೆ ಹೆದರಿ ಸ್ವರ್ಗದ ಗವಿಯೊಂದರಲ್ಲಿ ಅಡಗಿಕೊಂಡಳು. ಇದೇ ಜಪಾನೀ ಪುರಾಣಗಳಲ್ಲಿ ಸೂರ್ಯಗ್ರಹಣದ ವಿವರಣೆ. ಅಂತೂ ಜಗತ್ತಿನಲ್ಲೆಲ್ಲ ಕತ್ತಲೆ ಕವಿಯಿತು. ಈ ಕಾಳಕತ್ತಲೆಯಲ್ಲಿ ದುಷ್ಟಶಕ್ತಿಗಳು ತಾವೇತಾವಾಗಿ ಮೆರೆಯತೊಡಗಿದುವು. ಆಗ ಎಂಟುನೂರು ಕೋಟಿ ದೇವತೆಗಳೆಲ್ಲರೂ ಸಭೆ ಸೇರಿ ಸೂರ್ಯಾಣಿಯನ್ನು ಗವಿಯಿಂದ ಹೊರತರುವ ಉಪಾಯವನ್ನು ಹುಡುಕಿದರು. ಮುಂಜಾನೆ ಕೂಗುವ ಹುಂಜಗಳನ್ನೆಲ್ಲ ಒಟ್ಟುಗೂಡಿಸಿದರು, ದಿವ್ಯವಾದ ಕನ್ನಡಿಯೊಂದನ್ನು ಮಾಡಿ, ರತ್ನಹಾರಗಳಿಂದ ಸಕಕಿ ವೃಕ್ಷವನ್ನು ಸಿಂಗರಿಸಿ ಅದರ ರೆಂಬೆಗಳ ಮೇಲೆ ಕನ್ನಡಿಯನ್ನಿರಿಸಿದರು. ಅಮಾ–ನೋ–ಉಸುಮೆ ಎಂಬ ದೇವತೆ ಎಲೆ ಹೂಗಳಿಂದ ಅಲಂಕರಿಸಿಕೊಂಡು, ಆಮಾತಿರಾಸು ಅಡಗಿಕೊಂಡಿದ್ದ ಗವಿಯ ಹೊರಗೆ ನರ್ತನ ಮಾಡಲಾರಂಭಿಸಿದಳು. ಮಾಡುತ್ತ ಮಾಡುತ್ತ ಮೈಮುಚ್ಚಿಕೊಂಡಿದ್ದ ಎಲೆಗಳನ್ನೆಲ್ಲ ಕಿತ್ತೊಗೆದು ಬೆತ್ತಲೆಯಾಗಿಬಿಟ್ಟಳು. ನೆರೆದಿದ್ದ ದೇವತೆಗಳು ಗಟ್ಟಿಯಾಗಿ ನಗತೊಡಗಿದರು. ಈ ಶಬ್ದವನ್ನು ಕೇಳಿ ಒಳಗಿದ್ದ ಆಮಾತಿರಾಸು ಹೊರಗೆ ಬಂದಳು. ಗವಿಯ ಬಾಗಿಲ ಬಳಿ ಬಂದೊಡನೆ ಶಕ್ತಿದೇವತೆ ಆಕೆಯ ಕೈಹಿಡಿದು ಹೊರಗೆಳೆದ ; ಇತರ ದೇವತೆಗಳು ಗವಿಯ ಬಾಗಿಲನ್ನು ಮುಚ್ಚಿಬಿಟ್ಟರು. ಮತ್ತೆ ಗವಿಯಲ್ಲಿ ಅಡಗಿಕೊಳ್ಳಲಾರದೆ ಸೂರ್ಯಾಣಿ ಜಗತ್ತನ್ನು ಎಂದಿನಂತೆ ಬೆಳಗತೊಡಗಿದಳು. ಆಕೆಯನ್ನು ಹೆದರಿಸಿದ್ದ ಸೂಸ–ನಾ–ವಾನನ್ನು ದೇವತೆಗಳು ಹಿಡಿದು ದಂಡಿಸಿ ಸ್ವರ್ಗದಿಂದ ಹೊರದೂಡಿದರು.

ವಾಸ್ತವವಾಗಿ ಸೂಸ–ನಾ–ವಾ ದುಷ್ಟದೇವತೆಯಲ್ಲ. ಅವನ ಎರಡು ಜೀವಗಳಲ್ಲಿ ರಜೋಗುಣಪ್ರಧಾನವಾದ ಜೀವ ಮೇಲಿದ್ದಾಗ ಅವನು ಹಾಗಾಗುತ್ತಾನಷ್ಟೆ. ಸತ್ತ್ವಪ್ರಧಾನ ಜೀವ ಮೇಲಿದ್ದಾಗ ಆತ ಒಳ್ಳೆಯ ದೇವತೆ. ವ್ಯವಸಾಯಕ್ಕೆ ಅಭಿಮಾನಿದೇವತೆಯಾದ ಸೂಸ–ನಾ–ವಾ ದೋಹದ ಶಕ್ತಿಯೆಂದೇ ಎಣಿಕೆ. ಗುಡುಗು, ಸಿಡಿಲು, ಬಿರುಗಾಳಿ, ಮಳೆ ಎಲ್ಲವೂ ಅವನಿಂದಲೇ. ಅವನಿಗೂ ಹಾವುಗಳಿಗೂ ಸಂಬಂಧ ವಿಶೇಷವಾದುದು. ಅಹಿರಾಜ (ಡ್ರೇಗನ್) ಗುಡುಗಿನ ಒಡೆಯನೂ ಹೌದೆಂದು ಜಪಾನೀ ಪುರಾಣಗಳಲ್ಲಿ ಬರುತ್ತದೆ. ಸ್ವರ್ಗದಿಂದ ಓಡಿಬಂದ ಸೂಸಾನೂ ಜಪಾನಿನ ಇಝೂಮೋ ಪ್ರಾಂತ್ಯಕ್ಕೆ ಬಂದ. ಅಲ್ಲಿ ಒಂದು ಹುಡುಗಿಯ ಪಕ್ಕದಲ್ಲಿ ಒಬ್ಬ ಮುದುಕ ಒಬ್ಬ ಮುದುಕಿ ಕುಳಿತು ಅಳುತ್ತಿದ್ದರು. ಕಾರಣವೇನೆಂದು ಕೇಳಲು, ಅವನಿಗೆ ಎಂಟು ಮಂದಿ ಹೆಣ್ಣು ಮಕ್ಕಳಿದ್ದರೆಂದೂ ವರ್ಷಕ್ಕೊಮ್ಮೆ ಎಂಟು ಹೆಡೆಗಳ ಘಟಸರ್ಪವೊಂದು ಬಂದು ಒಂದು ಹುಡುಗಿಯನ್ನು ತಿಂದು ಹೋಗುವುದೆಂದೂ, ಹೀಗೆ ಏಳು ಮಕ್ಕಳನ್ನು ಕಳೆದುಕೊಂಡು ಈ ವರ್ಷ ಉಳಿದ ಮಗಳೂ ಅದರ ಬಾಯಿಗೆ ತುತ್ತಾಗುವುದೆಂದೂ ಮುದುಕ ಹೇಳಿದ. ತಾನು ಆಮಾತಿರಾಸುವಿನ ತಮ್ಮನೆಂದೂ ತನಗೆ ಹುಡುಗಿಯನ್ನು ಕೊಡಬೇಕೆಂದೂ ಕೇಳಿಕೊಳ್ಳಲು, ಅವರು ಸಂತೋಷದಿಂದ ಒಪ್ಪಿದರು. ಒಡನೆಯೇ ಸೂಸ–ನಾ–ವಾ ಹುಡುಗಿಯನ್ನು ಬಾಚಣಿಗೆಯನ್ನಾಗಿ ಮಾರ್ಪಡಿಸಿ ತನ್ನ ತಲೆಕೂದಲಿನಲ್ಲಿ ಸಿಕ್ಕಿಸಿಕೊಂಡ. ಅನಂತರ ಎಂಟು ಬಟ್ಟಲುಗಳಲ್ಲಿ ಅಕ್ಕಿ ಹೆಂಡವನ್ನು ತುಂಬಿಟ್ಟು ಘಟಸರ್ಪಕ್ಕಾಗಿ ಕಾದು ಕುಳಿತ. ಹೆಂಡದ ವಾಸನೆಯಿಂದ ಆಕರ್ಷಿತವಾದ ಘಟಸರ್ಪ ತನ್ನ ಎಂಟು ತಲೆಗಳನ್ನು ಎಂಟು ಬಟ್ಟಲುಗಳಿಗೆ ಹಾಕಿ ಕುಡಿದು, ಹೆಂಡದ ಮತ್ತಿನಿಂದ ನಿದ್ರೆ ಮಾಡಿತು. ಆಗ ಸೂಸ–ನಾ–ವಾ ತನ್ನ ಕತ್ತಿಯಿಂದ ಸರ್ಪವನ್ನು ಚೂರುಚೂರಾಗಿ ಕತ್ತರಿಸಿಬಿಟ್ಟ.

ಸರ್ಪದ ಬಾಲದಲ್ಲಿ ಅದ್ಭುತವಾದ ಕತ್ತಿಯೊಂದಿತ್ತು. ಸೂಸ–ನಾ–ವಾ ಅದನ್ನು ತನ್ನ ಅಕ್ಕ ಆಮಾತಿರಾಸುವಿಗೆ ಉಡುಗೊರೆಯಾಗಿ ಕೊಟ್ಟ. ಪುರಾಣಗಳಲ್ಲಿ ಈ ಕತ್ತಿಗೆ ಕುಸನಗಿ ಎಂಬ ಹೆಸರಿದ್ದು ಇದು ಜಪಾನೀ ಚಕ್ರವರ್ತಿಗಳ ರಾಜಲಾಂಛನಗಳಲ್ಲೊಂದಾಗಿದೆ. ನಗಾಯಿಯ ನಗರದ ಬಳಿಯಿರುವ ಅತ್ಸುತ ದೇವಾಲಯದಲ್ಲಿ ಈ ಕತ್ತಿಯನ್ನು ಇರಿಸಲಾಗಿದೆಯೆಂದು ಹೇಳುತ್ತಾರೆ. ಹೀಗೆ ಘಟಸರ್ಪವನ್ನು ಕೊಂದಮೇಲೆ ಸುಗ ಎಂಬಲ್ಲಿ ಅರಮನೆಯನ್ನು ಕಟ್ಟಿಕೊಂಡು ಸೂಸ–ನಾ–ವಾ ತನ್ನ ಹೆಂಡತಿಯೊಂದಿಗೆ ಇರತೊಡಗಿದ. ಅವರ ಮಗ ಓ–ಕುನಿ–ನುಷಿ ಎಂಬಾತನೇ ಇಝೂಮೋ ಪ್ರಾಂತ್ಯದ ಒಡೆಯನಾದ.

ಓ–ಕುನಿ–ನುಷಿ ಭಾರತದ ಧನ್ವಂತರಿಯಂತೆ ವೈದ್ಯದೇವತೆ; ತಾಂತ್ರಿಕ ಮತ್ತು ಆಭಿಚಾರಿಕ ಕ್ರಿಯೆಗಳಿಗೂ ಅವನಿಗೂ ತೀರದ ನಂಟು. ಜಪಾನೀ ವೈದ್ಯಪದ್ಧತಿಗೆ ಅವನೇ ಪ್ರವರ್ತಕ. ಅವನ ಬಗ್ಗೆಯೂ ಜಪಾನೀ ಪುರಾಣಗಳಲ್ಲಿ ಹಲವಾರು ಸ್ವಾರಸ್ಯವಾದ ಸಾಹಸದ ಕಥೆಗಳಿವೆ.

ಜಪಾನೀ ಪುರಾಣಗಳಲ್ಲಿ ಎಂಟು ನೂರು ಕೋಟಿ ದೇವತೆಗಳಿದ್ದಾರೆ. ಪ್ರತಿಯೊಂದು ಹಳ್ಳಿಗೂ ಕೇರಿಗೂ ಒಂದು ದೇವತೆ ಇರುವುದರಿಂದ ಈ ಸಂಖ್ಯೆಯೇನೂ ಉತ್ಪ್ರೇಕ್ಷೆಯಲ್ಲ. ಆದರೆ ಪುರಾಣಕಥೆಗಳಲ್ಲೆಲ್ಲ ಪ್ರಧಾನ ದೇವತೆಯೆಂದರೆ ಆಮಾತಿರಾಸು. ಪ್ರತಿದಿನವೂ ಬೆಳಗ್ಗೆ ಜಪಾನೀಯರು ಸೂರ್ಯನ ಕಡೆ ತಿರುಗಿ ಚಪ್ಪಾಳೆ ತಟ್ಟಿ ಪೂಜೆ ಸಲ್ಲಿಸುತ್ತಾರೆ. ಮೊದಲಿಗೆ ಆಮಾತಿರಾಸು ಜಪಾನೀ ರಾಜವಂಶದಲ್ಲಿ ಮಾತ್ರ ಪೂಜೆಗೊಳ್ಳುತ್ತಿದ್ದ ದೇವತೆ, ರಾಜವಂಶದ ಪೂರ್ವಜಳೆನ್ನುವ ಕಾರಣದಿಂದ. ಪ್ರ.ಶ.ಪೂರ್ವ 97ರ ಸುಮಾರಿಗೆ ಚಕ್ರವರ್ತಿ ಸುಜಿನ್ ಸೂರ್ಯಪೂಜೆಗೆಂದು ದೊಡ್ಡ ಗುಡಿಯನ್ನು ಕಟ್ಟಿಸಿ ತನ್ನ ಮಗಳನ್ನೇ ಅಲ್ಲಿ ಅರ್ಚನೆಗೆ ಬಿಟ್ಟಿದ್ದ. ರಾಜವಂಶದವರು ಸೌರಪಂಥವನ್ನು ಎತ್ತಿ ನಿಲ್ಲಿಸಿದರು. ಪ್ರ.ಶ.ಪೂರ್ವ 20ರ ಸುಮಾರಿಗೆ ಇಸೆ ಎಂಬಲ್ಲಿ ಸೂರ್ಯನ ಭವ್ಯವಾದ ಗುಡಿಯೊಂದು ಮೈದಳೆಯಿತು. ಆ ಕಾಲದಿಂದ ಇಲ್ಲಿಯವರೆಗೆ, ಮತ್ತೆ ಮತ್ತೆ ದುರಸ್ತಿಯ ಕೆಲಸ ನಡೆಯದಿದ್ದರೂ ಪ್ರಾಚೀನ ಶೈಲಿಯ ಕಟ್ಟಡ ಉಳಿದುಕೊಂಡು ಬಂದಿದೆ. ಈ ಗುಡಿಯ ಗರ್ಭಗೃಹದಲ್ಲಿ ಎಂಟು ಕೋನಗಳ ಕನ್ನಡಿಯೊಂದನ್ನಿರಿಸಿದ್ದಾರೆ. ದೇವತೆಯ ಶಕ್ತಿ ಇದರಲ್ಲಿರುವುದೆಂದು ಕಲ್ಪನೆ. ದೇವತೆಗಳು ಆಮಾತಿರಾಸುವನ್ನು ಗುಹೆಯಿಂದ ಹೊರಗೆ ತರಲು ಬಳಸಿದ ಕನ್ನಡಿಯಿದೆಂದು ಕಥೆ ಹೇಳುತ್ತದೆ. ದೇವಾಲಯದ ಆವರಣದಲ್ಲಿ ನೂರಾರು ಹುಂಜಗಳು ಓಡಾಡುತ್ತಿರುತ್ತವೆ; ಸೂರ್ಯನನ್ನು ಮೊಟ್ಟ ಮೊದಲು ಪೂಜೆ ಮಾಡುವ ಪವಿತ್ರ ಪಕ್ಷಿಗಳಿವೆ ಎಂದು ಅವಕ್ಕೆ ಅಲ್ಲಿ ಬಹಳ ಮರ್ಯಾದೆ. ಹಲವಾರು ಕಾಲುಗಳಿರುವ ಯತ–ಗರಸು ಎಂಬ ದೊಡ್ಡ ಸೂರ್ಯನ ಸಂದೇಶವಾಹಕವೆಂದು ಪ್ರತೀತಿಯಿತ್ತು. ಷಿಂಟೋ ಧರ್ಮದವರು ಗಾಳಿಪಟ ಮತ್ತು ಬಾಣಗಳನ್ನೂ ಸೂರ್ಯನ ಲಾಂಛನಗಳೆಂದು ಬಗೆಯುತ್ತಾರೆ. ಸೂರ್ಯನನ್ನು ಸ್ತ್ರೀದೇವತೆಯೆಂದು ಬಗೆದಿರುವುದು ಜಪಾನೀಯರಿಗೆ ವಿಶಿಷ್ಟವಾದುದು. ಷಿಂಟೋಧರ್ಮದಲ್ಲಿ ತಾಂತ್ರಿಕ ಕ್ರಿಯೆಗಳನ್ನು ನಡೆಸುತ್ತಿದ್ದ ಪುರೋಹಿತವರ್ಗ ಹೆಂಗಸರದ್ದೇ ಆಗಿದ್ದುದು ಇದಕ್ಕೆ ಕಾರಣವೆಂದು ತೋರುತ್ತದೆ.

ಇಷ್ಟಾದರೂ ಸೂರ್ಯಾಣಿ ಸರ್ವಶಕ್ತೆಯಲ್ಲ. ತನ್ನ ಕೆಲಸಕ್ಕೆ ಮೊದಲು ಉಳಿದೆಲ್ಲ ದೇವತೆಗಳ ಸಲಹೆಯನ್ನೂ ಪಡೆಯುತ್ತಾಳೆ. ಅವಳ ಆಡಳಿತ ಸ್ವರ್ಗದಲ್ಲಿ ಮಾತ್ರ; ಸಮುದ್ರದ ಅಧೋಲೋಕಗಳ ಮೇಲೆ ಆಕೆಯ ಒಡೆತನವಿಲ್ಲ. ಭೂಮಿಯಿಂದ ವಿವರಗಳನ್ನು ಪಡೆಯಲು ಆಕೆ ಕೆಲವು ಸುದ್ದಿಗಾರರನ್ನು ನೇಮಿಸಿಕೊಂಡಿದ್ದಾಳೆ. ಆಕೆಯ ಕಾರ್ಯನಿರ್ವಹಣೆಯಲ್ಲಿ ತಕಮಿ–ಮುಸುಬಿ ಎಂಬ ದೇವತೆ ನೆರವಾಗುತ್ತಾನೆ. ಆಕೆಯ ತಂಗಿ ವಕಹಿರು–ಮೆ ಮತ್ತು ಹಿರುಕೊ ಇವರೂ ಸೌರಪಂಥದ ದೇವತೆಗಳೇ. ಚಂದ್ರದೇವತೆ ತ್ಸುಕಿ–ಯೋಮಿ ಕಾಲಕ್ರಮದಲ್ಲಿ ಜನಪ್ರೀತಿಯನ್ನು ಪಡೆದ. ಜಪಾನೀ ಪಂಚಾಂಗದಲ್ಲಿ ಪ್ರಮುಖವಾಗಿ ಬರುವ ದೇವತೆ ಈತ. ಇಸೆ ಮತ್ತು ಕಾಡೊನೊಗಳಲ್ಲಿ ಈ ದೇವತೆಗಳಿಗೆ ಗುಡಿಗಳಿವೆ. ಇಲ್ಲಿಯೂ ಗರ್ಭಗೃಹದಲ್ಲಿ ಕನ್ನಡಿಗಳನ್ನಿಟ್ಟಾಗ ಅದರಲ್ಲಿ ಚಂದ್ರನ ಸತ್ತ್ವ ಮೂಡಿತೆಂಬ ಭಾವನೆಯಿದೆ.

ಚಂದ್ರನಲ್ಲಿ ಮೊಲವಿರುವುದು ಜಪಾನೀ ಪುರಾಣಗಳಲ್ಲಿ ವಿಶೇಷವಾಗಿ ಬರುವ ವಿವರ : ಮೊಲ ಅಲ್ಲಿರುವುದಕ್ಕೆ ಹಲವಾರು ಕಥೆಗಳಿವೆ. ಒರಳಿನಲ್ಲಿ ಬತ್ತವನ್ನು ಕುಟ್ಟುತ್ತಿರುವಂತೆ ಚಂದ್ರನಲ್ಲಿರುವ ಮೊಲವನ್ನು ಅವರು ಚಿತ್ರಿಸಿಕೊಳ್ಳುತ್ತಾರೆ. ಚಂದ್ರನಲ್ಲದೆ ಮಳೆರಾಯ (ತಕಓ–ಕಮಿ), ಗಾಳಿರಾಯ (ಶಿನಾ–ತ್ಸು–ಹಿಕೊ), ಬೆಟ್ಟರಾಯರು (ಫೂಜೀಯಾಮದ ಶಿಖರದ ಮೇಲಿರುವ ಸೆಂಗೆನ್–ಸಮ, ಷಿನಾನೋ ಪ್ರಾಂತ್ಯದಲ್ಲಿ ಓಂತಕೆ–ಸನ್ ಮತ್ತು ನಂತಾಯ್, ಎಲ್ಲ ಬೆಟ್ಟಗಳೊಡೆಯ ಓ–ಯಮ–ತ್ಸು–ಮಿ ಮೊದಲಾದವರು), ನದೀ

ದೇವತೆಗಳು (ಕವಾನೋ–ಕಮಿ), ಸಮುದ್ರ ದೇವತೆ (ಓ–ವತ–ತ್ಸು–ಮಿ), ಅಗ್ನಿದೇವತೆ (ಕಗು–ಸುಚಿ), ಮಾರ್ಗಪಾಲ ದೇವತೆಗಳು (ಚಿಮತ–ನೋ–ಕಮಿ ಮೊದಲಾದವರು), ಅಡುಗೆಮನೆ ದೇವತೆಗಳು (ಓಕಿ–ತ್ಸು–ಹಿಕೊ) ಮೊದಲಾದವರೆಲ್ಲ ಜಪಾನೀ ಪುರಾಣಗಳಲ್ಲಿ ಬರುತ್ತಾರೆ. ಹಲವಾರು ವೀರರೂ ಚಕ್ರವರ್ತಿಗಳೂ ಸತ್ತ ಬಳಿಕ ದೇವತೆಗಳಾದರು. ಜುನ್ನಿನ್ ಚಕ್ರವರ್ತಿ (750–764), ಚಕ್ರವರ್ತಿ ಸುತೋಕು (1124–1141), ಚಕ್ರವರ್ತಿ ಗೋ–ದಾಯ್ ಗೊ (1319–1338) ಮೊದಲಾದವರು ನಿದರ್ಶನಗಳು. ಜಪಾನಿನಲ್ಲಿ ಭೂಕಂಪ ಹೆಚ್ಚಾದುದರಿಂದ ಭೂಕಂಪದೇವತೆ ನೈ–ನೋ–ಕಮಿಯ ಕಲ್ಪನೆಯೂ ಇದೆ.

4ನೆಯ ಶತಮಾನದ ಸುಮಾರಿಗೆ ಮಹಾಯಾನ ಬೌದ್ಧ ಪಂಥದ ವಿವರಗಳು ಇಲ್ಲಿ ನೆಲೆಗೊಂಡ ಬಳಿಕ ಬೌದ್ಧ ಕಥೆಗಳ, ಬೌದ್ಧ ಸಂತರ ಪ್ರಭಾವ ತಲೆದೋರಲಾರಂಭಿಸಿತು. ಅಮಿದನೆಂಬ (ಅಮಿತಾಭ) ಧ್ಯಾನಿಬುದ್ಧ ದೈನಿಚಿ–ನ್ಯೊರಾಯ್ (ಮಹಾವೈರೋಚನ), ಫುಗೆನ್ ಬೊಸತ್ಸು (ಸಮಂತಭದ್ರ ಬೋಧಿಸತ್ತ್ವ), ಕ್ವನ್ನೋನ್ (ಕ್ಯುಆನ್–ಯನ್, ಅವಲೋಕಿತೇಶ್ವರ), ಮಿರೋಕು (ಮೈತ್ರೇಯ), ಜಿಸೋ (ಕ್ಷಿತಿಗರ್ಭ), ಮೊಂಜು (ಮಂಜುಶ್ರೀ) ಮೊದಲಾದ ಬೋಧಿಸತ್ತ್ವರ ಕಥೆಗಳು ತೆಂಡಾಯ್, ಷಿಂಗಾನ್, ಕೀಗನ್ ಪಂಥಗಳಲ್ಲಿ ಪ್ರಚಲಿತವಾದುವು. ಇವರಲ್ಲಿ ಕ್ವನ್ನೋನ್ ಬಹು ಜನಪ್ರೀತಿಯನ್ನು ಪಡೆದ ದೇವತೆ. ಇವನಿಗೆ ಅಲ್ಲಿ ಮಂದಿರಗಳೂ ಬಹಳ. ಸಹಸ್ರಮುಖ, ಸಹಸ್ರನೇತ್ರ, ಷಡ್ಭುಜ (ಚಿಂತಾಮಣಿಚಕ್ರ) ಏಕಾದಶಮುಖ, ಅಮೋಘಪಾಶ, ಹಯಗ್ರೀವ ಮೊದಲಾದುವೆಲ್ಲ ಈ ದೇವತೆಯ ಮೂರ್ತಿಗಳೇ. ಈ ದೇವತೆಗಳಿಗೆ ಅನುಚರರಾಗಿ ಹದಿನಾರು ರಾಹನ್‌ಗಳು (ಅರ್ಹಂತರು), ಇಪ್ಪತ್ತೆಂಟು ಪರಿಚಾರಕರು (ನಿಜುಹಚಿ ಬುಷು), ಸ್ತ್ರೀವೇಷಧಾರಿಯಾದ ಮರೀಚಿದೇವ (ಮರಿಷಿತೆನ್), ನಾಲ್ವರು ಲೋಕಪಾಲರು (ಷಿತೆನ್ನೊ), ಹಾರೀತಿಯೆಂಬ ಹೆಣ್ಣುದೇವತೆ (ಕಿಷಿಮೊಜಿನ್), ಕುಬೇರ (ಕೊಂಪಿರ) ಇವರೂ ಪೂಜೆಗೊಳ್ಳುತ್ತಾರೆ. ಇವರ ವಿಚಾರವಾಗಿಯೂ ಪುರಾಣ ಕಥೆಗಳು ಹೆಚ್ಚಾಗಿ ಬಳಕೆಯಲ್ಲಿವೆ. (ಎಸ್.ಕೆ.ಆರ್.)

**ಜಪಾನೀ ಭಾಷೆ :** ಎಲ್ಲ ಜಪಾನಿಗಳೂ ಐನುಗಳೂ ಕೊರಿಯ ಹಾಗೂ ಫಾರ್ಮೋಸಗಳಲ್ಲಿನ ಕೆಲ ಜನರೂ, ಮತ್ತು ಹವಾಯಿ ದ್ವೀಪಗಳು ದಕ್ಷಿಣ ಅಮೆರಿಕ ಮತ್ತು ಇತರ ಕಡೆಗಳಿಗೆ ವಲಸೆ ಹೋಗಿ ನಿಂತಿರುವ ಜಪಾನಿಗಳೂ ಆಡುವ ಭಾಷೆ. ಇದರಲ್ಲಿ ಪ್ರಾದೇಶಿಕ ಉಪಭಾಷೆಗಳನ್ನು ಗುರುತಿಸಬಹುದಾದರೂ ಟೋಕಿಯೊ ಪ್ರಾಂತ್ಯದಲ್ಲಿ ಜನರಾಡುವ ಮಾತಿನ ನೆಲಗಟ್ಟಿನಲ್ಲಿ ಬೆಳೆದ ಚೊಕ್ಕ ಜಪಾನೀ ಭಾಷೆ ಆ ದೇಶದ ಎಲ್ಲ ಕಡೆಯವರಿಗೂ ತಿಳಿಯುತ್ತದೆ. ಜಪಾನೀ ಭಾಷೆ ಅನ್ಯಸಂಪರ್ಕವಿಲ್ಲದ ಭಾಷೆ ಎಂಬುದು ಅಂಗೀಕೃತವಾದ ವಿಷಯ. ಈ ಭಾಷೆ ಮತ್ತಾವುದಾದರೂ ಭಾಷೆಗಳ ಪೀಳಿಗೆಯೊಂದಿಗೆ ಸಂಬಂಧ ಹೊಂದಿದೆಯೆ ಎಂಬ ಅಂಶವನ್ನು ಇದುವರೆಗೂ ಯಾರೂ ನಿಖರವಾಗಿ ನಿರ್ಣಯಿಸಿಲ್ಲ.

ಜಪಾನಿ ಭಾಷೆಯಲ್ಲಿನ ಸ್ವರ, ಅರ್ಧಸ್ವರ ಮತ್ತು ವ್ಯಂಜನಗಳ ಉಚ್ಚಾರಣೆಯಲ್ಲಿ ವ್ಯತ್ಯಾಸಗಳುಂಟು. ಆದರೆ ಅರ್ಧಸ್ವರ ಮತ್ತು ವ್ಯಂಜನಗಳ ಉಚ್ಚಾರಣೆ ಯಾವಾಗಲೂ ಸ್ವರಗಳೊಡನೆ ಕೂಡಿಯೇ ಇರುತ್ತವೆ. ಈ ಸಂಯೋಜನೆಗಳು ಕಾನ ವರ್ಣಮಾಲೆ ಅಥವಾ ಹಿಯಾನ್ ಕಾಲದಲ್ಲಿ ನಿರ್ಮಿತವಾದ ಐವತ್ತು ಅಕ್ಷರಗಳ ಮಾಲಿಕೆಯಲ್ಲಿ ಉದಾಹೃತವಾಗಿವೆ. ಅನೇಕ ಅರ್ಧಸ್ವರ ಮತ್ತು ಸ್ವರಗಳ ಧ್ವನಿಗಳೀಗ ಲುಪ್ತವಾಗಿವೆ; ಯ, ವು, ಯೊ, ಮತ್ತು ವ ಇವು ಮಾತ್ರ ಯಾವ ಬದಲಾವಣೆಯೂ ಇಲ್ಲದೆ ಉಳಿದಿವೆ. ಸಿ, ಟಿ, ಟು, ಮತ್ತು ಹು ಇವುಗಳ ಉಚ್ಚಾರಣೆ ಷಿ, ಚಿ, ಟ್ಸು ಮತ್ತು ಫು ಎಂಬುದಾಗಿ ದೀರ್ಘ ಕಾಲಾವಧಿಯಲ್ಲಿ ಬದಲಾವಣೆ ಹೊಂದಿದೆ. ಮೇಲಿನ ಪಟ್ಟಿಯಲ್ಲಿ ನಿರ್ದೇಶಿಸುವ ಏಳು ಮಹಾಪ್ರಾಣಗಳ ಜೊತೆಗೆ ಗ್(g), ಜ್(z), ಡ್(d), ಬ್(b), ಪ್(p) ಎಂಬ ಅಲ್ಪಪ್ರಾಣಗಳೂ ಸ್ವರಗಳೊಡನೆ ಮೇಲೆ ಹೇಳಿದ ರೀತಿಯಲ್ಲೇ ಸಂಯೋಜಿತವಾಗಿ ಕ್ಯ, ಕ್ಯು, ಕ್ಯೊ ಮುಂತಾದ ಉಚ್ಚಾರಣೆಗಳಿಗೆ ಎಡೆಗೊಡುತ್ತವೆ. ಜಪಾನೀ ಭಾಷೆಯ ಮಾತುಗಳು (ನಾಮಪದ, ಸರ್ವನಾಮ, ಸಂಖ್ಯಾವಾಚಕ), ನಾಮವಾಚಕಗಳು, ಕ್ರಿಯಾವಾಚಕಗಳು (ಕ್ರಿಯಾಪದ), ಸಹಾಯಕ ಕ್ರಿಯಾಪದ, ವಿಶೇಷಣ ಮತ್ತು ವಿಶೇಷಣ ಕ್ರಿಯಾವಾಚಕಗಳು, ಅವ್ಯಯಗಳು (ಕ್ರಿಯಾವಿಶೇಷಣ, ಸಮುಚ್ಚಯಾವ್ಯಯ, ಭಾವಸೂಚಕಾವ್ಯಯಗಳು) ಮತ್ತು ಪ್ರತ್ಯಯಗಳು ಎಂಬುದಾಗಿ ವರ್ಗೀಕೃತವಾಗಿವೆ. ನಾಮಾದಿ ವಾಚಕಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚುವುದಿಲ್ಲ. ಅವುಗಳ ವಿಭಕ್ತಿಯನ್ನು ಪ್ರತ್ಯೇಕ ಪ್ರತ್ಯಯಗಳು ಸೂಚಿಸುತ್ತವೆ. ಪ್ರತ್ಯಯದ ಉಪಯೋಗ ಬಗೆಬಗೆಯಾಗಿದೆ. ಉದಾಹರಣೆಗಾಗಿ ಕೃದಂತ, ಸಂಭಾವನಾರ್ಥಕ ರೂಪ, ಸಂಯುಕ್ತವಾಕ್ಯ ಇತ್ಯಾದಿಗಳ ನಿರ್ಮಾಣಗಳನ್ನು ನೋಡಬಹುದು.

ಜಪಾನೀ ಭಾಷೆಗೆ ಕಟಿಕನ ಮತ್ತು ಹಿರಕನ ಎಂಬುದಾಗಿ ಎರಡು ತರದ ಲಿಪಿಗಳಿವೆ. ಇವೆರಡೂ ಹಿಂದಿನ ಕಾಲದಿಂದ ಜಪಾನೀ ಧ್ವನಿಗಳನ್ನು ಸಂಕೇತಿಸುವುದಕ್ಕೆ ಬಳಸಿಕೊಳ್ಳುತ್ತಿದ್ದ ಚೀನೀ ಲಿಪಿಗಳನ್ನು ಸರಳ ಮಾಡಿಕೊಂಡು ಹಿಯಾನ್ ಕಾಲದಲ್ಲೇ ನಿರ್ಮಾಣಗೊಂಡಂಥವು. ಜಪಾನೀ ಭಾಷೆ ತನ್ನ ಶಬ್ದಸಂಪತ್ತಿಯನ್ನು ಸಹಸ್ರಾರು ಚೀನೀ ಶಬ್ದಗಳಿಂದ ಹೆಚ್ಚಿಸಿಕೊಂಡಿದೆ. ಈ ಶಬ್ದಗಳ ಉಚ್ಚಾರಣೆ ಹಾನ್ ಅಥವಾ ವೂ ಅಥವಾ ಟಾಂಗ್ ವಂಶದವರ ಆಳ್ವಿಕೆಯ ಕಾಲದ ಚೀನೀ ಉಚ್ಚಾರಣೆಯಂತಿದೆ. ಈ ಶಬ್ದಗಳನ್ನು ಚೀನೀ ಲಿಪಿಯಲ್ಲಿ ಬರೆಯುತ್ತಾರೆ. ಚೀನಿ ಲಿಪಿಯಲ್ಲಿರುವ ಶಬ್ದಗಳನ್ನು ಜಪಾನೀ ಬಗೆಯಲ್ಲಿ ಉಚ್ಚರಿಸುವುದುಂಟು. ಈ ರೀತಿಯಲ್ಲಿ ಒಂದೇ ಲಿಪಿಗೆ ಆನ್ (ಚೀನೀ) ಮತ್ತು ಕೂನ್ (ಜಪಾನೀ) ಎಂಬ ಎರಡು ಬಗೆಯ ಉಚ್ಚಾರಣೆಗಳಿವೆ. ಆಧುನಿಕ ಯುಗದಲ್ಲಿ, ಐರೋಪ್ಯ ಪದಗಳಿಗೆ ಸಮಾನಾರ್ಥಕಗಳೆನಿಸುವ ಅನೇಕ ಹೊಸ ಪದಗಳ ಸೃಷ್ಟಿಯಾಗಿದೆ ಮತ್ತು ಅದೇ ಸಮಯದಲ್ಲಿ ಜಪಾನೀಗೆ ಹೊಂದಾಣಿಕೆ ಮಾಡಿಕೊಂಡ ಅನೇಕ ಐರೋಪ್ಯ ಶಬ್ದಗಳೂ ಜಪಾನೀ ಶಬ್ದಭಂಡಾರವನ್ನು ಹೊಕ್ಕಿವೆ. ಈಗಿನ ಕಾಲದಲ್ಲಿ ಚೊಕ್ಕ ಜಪಾನೀ ಭಾಷೆಯನ್ನು ಬರೆಯುವಾಗ, ಹಿರಕನ ಲಿಪಿಯೊಂದಿಗೆ ಚೀನೀ ಲಿಪಿಯನ್ನು ಬೆರಸಿ ಬರೆಯುವುದು ವಾಡಿಕೆ; ಐರೋಪ್ಯ ಶಬ್ದಗಳ ಜಪಾನೀ ರೂಪಗಳನ್ನಾಗಲೀ ಅಥವಾ ಅವುಗಳ ಮೂಲಕ ಉಚ್ಚಾರಣೆಯ ರೂಪವನ್ನಾಗಲಿ ಲೇಖಿಸುವಾಗ ಕಟಿಕನ ಲಿಪಿಗಳು ಉಪಯೋಗಿಸಲ್ಪಡುತ್ತವೆ. (ಎಂ.ಎಚ್.ವಿ.)

(ವ್ಯಂಜನಗಳು. ಯ್ ವ್ ಎಂಬವು ಅರ್ಧ ಸ್ವರಗಳು)

| | (ಕ್) | (ಸ್) | (ಟ್) | (ನ್) | (ಹ್) | (ಮ್) | (ಯ್) | (ರ್) | (ವ್) |
|---|---|---|---|---|---|---|---|---|---|
| (ಎ)ಅ | ಕ | ಸ | ಟ | ನ | ಹ | ಮ | ಯ | ರ | ವ |
| (ಐ)ಇ | ಕಿ | ಸಿ(ಷಿ) | ಟಿ(ಚಿ) | ನಿ | ಹಿ | ಮಿ | ಯಿ(ಇ) | ರಿ | ವಿ(ಇ) |
| (ಯು)ಉ | ಕು | ಸು | ಟು(ಟ್ಸು) | ನು | ಹು(ಫು) | ಮು | ಯು | ರು | ವು(ಉ) |
| (ಇ)ಎ | ಕೆ | ಸೆ | ಟೆ | ನೆ | ಹೆ | ಮೆ | ಯೆ(ಎ) | ರೆ | ವೆ(ಎ |
| (ಒ)ಒ | ಕೊ | ಸೊ | ಟೊ | ನೊ | ಹೊ | ಮೊ | ಯೊ | ರೊ | ವೊ(ಒ) |

**ಜಪಾನೀ ವಾಸ್ತು :** ಜಪಾನ್‌ನಲ್ಲಿ ವಾಸ್ತುನಿರ್ಮಾಣಕ್ಕೆ ಬೇಕಾದ ಕಲ್ಲುಗಳು ದೊರಕುವುದಿಲ್ಲ. ಜಪಾನ್‌ನ ಕಾಡುಗಳಲ್ಲಿ ಕಟ್ಟಡಗಳಿಗೆ ಬೇಕಾದ ಮರ ಧಾರಾಳವಾಗಿ ದೊರಕುತ್ತದೆ. ಅಲ್ಲಿಯ ವಾಯುಗುಣ ಮತ್ತು ಕಚ್ಚಾ ಸಾಮಗ್ರಿಯ ಪ್ರಭಾವಗಳನ್ನು ಜಪಾನೀ ವಾಸ್ತುನಿರ್ಮಾಣಗಳಲ್ಲಿ ಪುರಾತನ ಕಾಲದಿಂದಲೂ ಕಾಣಬಹುದಾಗಿದೆ. ಅಲ್ಲಿಯ ಕಟ್ಟಡಗಳು ಸಾಮಾನ್ಯವಾಗಿ ಬೇಸಗೆಯ ಬೇಗೆಯನ್ನು ತಡೆಯುವ ಸಲುವಾಗಿ ಕಟ್ಟಿದವು. ಕಟ್ಟಡಗಳ ನಿರ್ಮಾಣಯೋಜನೆಯಲ್ಲಿ ಗಾಳಿ ಬೆಳಕುಗಳು ಬರುವುದಕ್ಕೆ ಅನುಕೂಲಕರವಾಗಿರುವಂತೆ ನೆಲಗಟ್ಟಿನಿಂದ ಚಾವಣಿಯವರೆಗೂ, ಒಂದು ಕಂಬದಿಂದ ಮತ್ತೊಂದು ಕಂಬದವರೆಗೂ ಪ್ರಸರಿಸಿರುವ ಬಾಗಿಲು ಕಿಟಕಿಗಳು ಪ್ರಧಾನವಾಗಿವೆ. ಅರ್ವಾಚೀನ ಯುಗದವರೆಗೂ ಕಟ್ಟಡಗಳಿಗೆ ಮರದ ಸಾಮಗ್ರಿಗಳನ್ನು ಮಾತ್ರ ಉಪಯೋಗಿಸುತ್ತಿದ್ದುದರಿಂದ,

ಕಂಬ ಮತ್ತು ಅಡ್ಡತೊಲೆಗಳು ಕಟ್ಟಡಗಳ ಪ್ರಮುಖ ಅಂಗಗಳಾಗಿದ್ದು, ಗೋಡೆಗಳು ಕೇವಲ ತಡಿಕೆಗಳಾಗಿದ್ದುವೇ ಹೊರತು ಚಾವಣಿಯ ಭಾರವನ್ನು ಹೊರುವ ಸಾಧನಗಳಾಗಿರಲಿಲ್ಲ. ಜಪಾನೀ ವಾಸ್ತುನಿರ್ಮಾಣಗಳು ಇತರ ದೇಶಗಳ ವಾಸ್ತುನಿರ್ಮಾಣಗಳಿಗಿಂತ ಪ್ರತ್ಯೇಕವಾದ ಲಕ್ಷಣಗಳನ್ನು ಪ್ರದರ್ಶಿಸುತ್ತವೆ. ಕಂಬ ಮತ್ತು ಕಟ್ಟಡಗಳಲ್ಲಿ ಜ್ಯಾಮಿತೀಯ ಆಕಾರಗಳು ಪ್ರಮುಖವಾಗಿವೆ. ಅಲ್ಪಕಾಲಾವಧಿಯಲ್ಲಿ ಅವು ನಾಶವಾಗುತ್ತಿದ್ದುವಲ್ಲದೆ ಬೆಂಕಿಗೆ ತುತ್ತಾಗುವ ಭಯವೂ ಅಧಿಕವಾಗಿತ್ತು. ಅವು ಬಹುವಾಗಿ ತೆರೆದಿರುತ್ತಿದ್ದುದರಿಂದ ಒಳಭಾಗಕ್ಕಿಂತಲೂ ಹೊರಭಾಗದ ಸೌಂದರ್ಯಕ್ಕೆ ಹೆಚ್ಚು ಗಮನ ಕೊಡಲಾಗುತ್ತಿತ್ತು. ಮರದ ಸಾಮಗ್ರಿಗಳಿಂದ ನಿರ್ಮಿತವಾಗಿರುತ್ತಿದ್ದ ಆ ಕಟ್ಟಡಗಳು ಸುತ್ತಣ ಪ್ರಕೃತಿಯಲ್ಲಿರುವ ಹಸಿರು ಗಿಡಮರಗಳೊಂದಿಗೆ ಸಮ್ಮಿಳಿತವಾಗಿದ್ದುವು. ಕಡೆಯ ಎರಡು ಕಾರಣಗಳಿಂದಾಗಿ ಜಪಾನೀ ಕಟ್ಟಡಗಳ ಸುತ್ತಮುತ್ತ ಪ್ರಾಕೃತಿಕ ಸೊಬಗಿನಿಂದ ಕೂಡಿದ ಉದ್ಯಾನಗಳನ್ನು ಬೆಳೆಸುವುದು ಸಾಮಾನ್ಯವಾಯಿತು.

**ಈಸೇಯ ಮಂದಿರ**

ಜಪಾನ್‌ನ ವಾಸ್ತುಕಲೆಯಲ್ಲಿ ಅಸಮ ಪ್ರಮಾಣದ ತಳಹದಿಯುಳ್ಳ ಕಟ್ಟಡಗಳೇ ಹೆಚ್ಚು. ಈ ಲಕ್ಷಣ ಚೀನೀ ಪ್ರಭಾವದಿಂದ ಬಂದದ್ದಾದರೂ ಕಟ್ಟಡದ ವಿವಿಧ ಅಂಗಗಳು ಒಂದರಲ್ಲೊಂದು ಮಿಳಿತವಾಗಿ ಸೇರಿಕೊಂಡಿರುವಂತೆ ಕಾಣುತ್ತವೆ.

ಈಚೆಗೆ ಜಪಾನಿನಲ್ಲಿ ನಡೆದ ಪುರಾತತ್ತ್ವ ಶೋಧನೆಗಳಿಂದ ಪ್ರಶ.ಪೂ. 8000ದ ಸುಮಾರಿನಲ್ಲಿ ಅಲ್ಲಿ ಮಾನವ ಮೊಟ್ಟಮೊದಲು ಕಾಣಿಸಿಕೊಂಡನೆಂದು ತಿಳಿದುಬಂದಿದೆ. ಆದರೂ ಅತ್ಯಂತ ಪ್ರಾಚೀನ ವಾಸ್ತುನಿರ್ಮಾಣಗಳ ಕುರುಹುಗಳು ಕಾಣಸಿಗುವುದು ಪ್ರಶ.ಪೂ. 3000ದ ಸುಮಾರಿನಲ್ಲಿ ಪ್ರಾರಂಭವಾದ ನವಶಿಲಾಯುಗಕ್ಕೆ ಸೇರಿದ ಜೊಮೊನ್ ಸಂಸ್ಕೃತಿಯ ಕಾಲದಿಂದ ಮಾತ್ರ. ಅನೇಕ ಪ್ರಾಕ್ತನ ನೆಲೆಗಳಿಂದ ತಿಳಿದುಬಂದಿರುವ ಪ್ರಕಾರ ಆ ಕಾಲದ ಜನರು 4–5 ಮೀ. ಉದ್ದದ, 3–4ಮೀ. ಅಗಲದ ಮತ್ತು ಭೂಮಟ್ಟದಿಂದ 1 ಮೀ. ಆಳ ಇರುತ್ತಿದ್ದ ಗುಂಡಿಮನೆಗಳನ್ನು ನಿರ್ಮಿಸಿಕೊಂಡು ಅವುಗಳಲ್ಲಿ ವಾಸಿಸುತ್ತಿದ್ದರು. ಗುಂಡಿಗಳ ಎರಡು ತುದಿಗಳಲ್ಲಿ ಮರದ ದಿಮ್ಮಿಗಳಿಂದ ಮುಕ್ಕಾಲಿನ ಕಂಬಗಳನ್ನು ನಿರ್ಮಿಸಿ, ಅಂಥ ಕಂಬಗಳ ಮೇಲೆ ಬೆನ್ನುತೊಲೆಯನ್ನು ಇಡುತ್ತಿದ್ದರು. ಬೆನ್ನುತೊಲೆಯನ್ನು ಆಧರಿಸಿದ್ದ, ಗುಂಡಿಯ ಅಂಚಿನವರೆಗೆ ಇಳಿಜಾರಾಗಿ ಬರುತ್ತಿದ್ದ ಅಡ್ಡತೊಲೆಗಳನ್ನು ಜೋಡಿಸಲಾಗುತ್ತಿತ್ತು. ಗೋಡೆ, ಚಾವಣಿ ಎರಡರ ಕೆಲಸವನ್ನೂ ನಿರ್ವಹಿಸುತ್ತಿದ್ದ ಹುಲ್ಲಿನ ಹೊದಿಕೆಯನ್ನು ಅವುಗಳ ಮೇಲೆ ಹಾಕಲಾಗುತ್ತಿತ್ತು. ಕೆಲವೊಂದು ಬಾರಿ ಇಂಥ ಇಳಿಜಾರು ಚಾವಣಿಯನ್ನು ಮೊದಲಿನ ಗುಡಿಸಿಲ ಚಾವಣಿಗೆ ಆಧಾರವಾಗಿರುವಂತೆ ಒಳಭಾಗದಲ್ಲಿ ನಿರ್ಮಿಸಿ ಮೇಲಿನ ಚಾವಣಿಗೆ ಹೆಚ್ಚಿನ ಭದ್ರತೆ ಒದಗಿಸಲಾಗುತ್ತಿತ್ತು. ಸಾಮಾನ್ಯವಾಗಿ ಇಂಥ ಗುಂಡಿಮನೆಗಳು ಪ್ರವಾಹಗಳಿಂದ ನಿರ್ಮಿತವಾದ ಬಯಲು ಪ್ರದೇಶಗಳಲ್ಲಿ ನಿರ್ಮಿತವಾಗಿರುತ್ತಿದ್ದುವು. ಮನೆಗಳ ನೆಲಗಟ್ಟು ಗಟ್ಟಿಸಿದ ಮಣ್ಣಿನದಾಗಿರುತ್ತಿತ್ತು. ಅದರ ಮಧ್ಯಭಾಗದಲ್ಲಿ ಒಲೆ ಇರುತ್ತಿತ್ತು. ಒಲೆಯ ಸುತ್ತಲ ಸ್ಥಳಕ್ಕೆ ಕಲ್ಲುಗಳನ್ನು ಹಾಸಿರಲಾಗುತ್ತಿತ್ತು. ಚಾವಣಿಯ ಎರಡು ತುದಿಗಳಲ್ಲಿ ಸೂರುಗಳನ್ನು ತೆರವಾಗಿ ಬಿಟ್ಟಿರುತ್ತಿದ್ದುದರಿಂದ ಹೊಗೆ ಹೋಗಲು ಅನುಕೂಲವಾಗಿರುತ್ತಿತ್ತು. ಕಾಲಕ್ರಮದಲ್ಲಿ ಆ ಗುಂಡಿಮನೆಗಳ ನಿರ್ಮಾಣದಲ್ಲಿ ಸುಧಾರಣೆಯಾಯಿತು; ಅನಂತರಕಾಲದ ಜಪಾನ್‌ನ ಹೊಲಮನೆಯಂತೆ ಅವನ್ನು ಕಟ್ಟಲಾಗುತ್ತಿತ್ತು. ಪ್ರಶ. 7–8ನೆಯ ಶತಮಾನಗಳ ವರೆಗೂ ಗುಂಡಿಮನೆಗಳು ನಿರ್ಮಿತ ವಾಗುತ್ತಿದ್ದುವು.

ವ್ಯವಸಾಯ ಮುಖ್ಯ ವೃತ್ತಿಯಾಗಿದ್ದ ಯಯೋಇ ಸಂಸ್ಕೃತಿಯ ಜನರು ಕ್ರಿಸ್ತಶಕದ ಆರಂಭದೊಂದಿಗೆ ಕಾಣಿಸಿಕೊಂಡರು. ಅದರೊಂದಿಗೆ ತಲೆದೋರಿದ ಶ್ರೀಮಂತ ವರ್ಗದವರು ವಾಸ್ತುನಿರ್ಮಾಣದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿದರು. ಆ ಕಾಲದಲ್ಲಿ ಗುಂಡಿಮನೆಗಳೊಂದಿಗೆ ನೆಲಮಟ್ಟದಲ್ಲಿ ಮತ್ತು ಭೂಮಟ್ಟದಿಂದ ಎತ್ತರದಲ್ಲಿ ಚೂಪುಗಂಬಗಳ ಮೇಲಿನ ವಾಸಗೃಹಗಳು ನಿರ್ಮಾಣವಾದುವು. ಅವೆರಡೂ ಬಗೆಯ ಮನೆಗಳ ನೆಲಗಟ್ಟು ಮತ್ತು ಗೋಡೆಗಳನ್ನು ಮರದಿಂದ ಮಾಡಲಾಗುತ್ತಿತ್ತು. ಯಯೋಇ ಸಂಸ್ಕೃತಿಯ ಆದಿಕಾಲದ ಕಂಚಿನ ಮತ್ತು ಮಣ್ಣಿನ ಪಾತ್ರೆಗಳ ಮೇಲೆ ಕಾಣುವ ರೇಖಾಚಿತ್ರಗಳಿಂದಲೂ ಸ್ವಲ್ಪ ಅನಂತರದ ಕಾಲದಿಂದ ದೊರಕುವ ಜೇಡಿಮಣ್ಣಿನ ಪ್ರತಿಕೃತಿಗಳಿಂದಲೂ ಆ ಮನೆಗಳ ರೂಪರೇಷೆಗಳನ್ನು ತಿಳಿದುಕೊಳ್ಳಬಹುದು.

ಚೂಪುಗಂಬಗಳ ಮೇಲೆ ನೆಲಗಟ್ಟಿರುವ ವಾಸಗೃಹಗಳಿಂದ ಯುಯೋಇ ಜನ ದಕ್ಷಿಣ ದಿಕ್ಕಿನಿಂದ ಬಂದವರಿರಬಹುದೆಂದು ಊಹಿಸಬಹುದಾಗಿದೆ. ತೇವದಿಂದ ಧಾನ್ಯಗಳನ್ನು ರಕ್ಷಿಸುವ ಉದ್ದೇಶದಿಂದ ಬಹುಶಃ ಮೊದಮೊದಲು ನಿರ್ಮಿಸುತ್ತಿದ್ದಿರಬಹುದಾದ ಈ ಮಾದರಿಯ ವಾಸಗೃಹಗಳು ಇತ್ತೀಚಿನವರೆಗೆ ಶ್ರೀಮಂತವರ್ಗದವರ ವಾಸಕ್ಕೆ ಮೀಸಲಾಗಿದ್ದುವು.

ಯುಯೋಇ ಕಾಲದಲ್ಲಿ ಜಪಾನಿನಾದ್ಯಂತ ಅನೇಕ ಸಣ್ಣಪುಟ್ಟ ಸ್ವತಂತ್ರ ರಾಜ್ಯಗಳು ತಲೆದೋರಿದುವು. ತಮ್ಮ ತಮ್ಮಲ್ಲಿ ಹೋರಾಡುತ್ತಿದ್ದ ಈ ಗುಂಪುಗಳಲ್ಲಿ ಒಂದು ಗುಂಪು ಯಾಮಾಟೋ ಬಯಲುಪ್ರದೇಶದಲ್ಲಿ ಆಳುತ್ತಿದ್ದು, ಕ್ರಮೇಣ ಇಡೀ ದೇಶವನ್ನು ವಶಪಡಿಸಿಕೊಂಡಿತು. ಮೃತರಾದ ದೊರೆಗಳ ಗೌರವಾರ್ಥ 4–5ನೆಯ ಶತಮಾನಗಳಲ್ಲಿ ಈಜಿಪ್ಟಿನ ಪಿರಮಿಡ್ಡುಗಳನ್ನು ಹೋಲುವ, ಮಣ್ಣಿನ ದೊಡ್ಡ ದಿಬ್ಬಗಳನ್ನು ಮಾಡಲಾಗುತ್ತಿತ್ತು.

**ನಾರಾದ ಬಳಿ ಇರುವ ಯಕುಷಿಜಿ ಮಂದಿರ. 7–8ನೆಯ ಶತಮಾನ**

ವಾಸ್ತುಶೈಲಿಯ ದೃಷ್ಟಿಯಿಂದ ಜಪಾನಿನ ಪ್ರಾಚೀನತಮ ನಿರ್ಮಾಣಗಳಲ್ಲಿ ಇಝೂಮೋ ಮತ್ತು ಈಸೇಯ ದೇವಾಲಯಗಳು ಮುಖ್ಯವಾದವು. ಇವೆರಡೂ ಚೂಪುಗಂಬಗಳ ಮೇಲೆ ನೆಲಗಟ್ಟುಳ್ಳ, ಗೇಬಲ್ ಆಕಾರದ ಚಾವಣಿಗಳುಳ್ಳ, ಮರದ ಕಟ್ಟಡಗಳು. ಇವುಗಳಲ್ಲಿ ಹಳೆಯದೆಂದು ಪರಿಗಣಿತವಾಗಿರುವ ಇಝೂಮೋ ಮಂದಿರದಲ್ಲಿ ಜಪಾನೀ ಪುರಾಣಗಳಿಗೆ ಅನುಗುಣವಾಗಿ ಸೂರ್ಯ ಸ್ತ್ರೀದೇವತೆಯ ಸಹೋದರನ ಮಗ ಓನಮೋಚಿ ದೇವನನ್ನು

ಪೂಜಿಸಲಾಗುತ್ತದೆ. ಆ ದೇವಾಲಯದ ಈಗಿನ ಕಟ್ಟಡವನ್ನು 1744ರಲ್ಲಿ ಪುನರ್ನಿರ್ಮಿಸಲಾಗಿದ್ದರೂ ಜಪಾನ್‍ನ ಪ್ರಾಚೀನ ಷಿಂಟೋ ಧರ್ಮದ ಸಂಪ್ರದಾಯದಂತೆ ಪ್ರತಿ ಇಪ್ಪತ್ತು ವರ್ಷಗಳಿಗೊಮ್ಮೆ ಈ ಮಂದಿರಗಳನ್ನು ಚಾಚೂ ತಪ್ಪದಂತೆ ಮೊದಲಿನ ಆಕಾರದಲ್ಲಿ ಪುನಃ ಕಟ್ಟುತ್ತಿದ್ದರೆಂದು ಹೇಳಲಾಗಿದೆ. ಆದ್ದರಿಂದ ಈಗಿನ ಕಟ್ಟಡ ಪ್ರಾಚೀನತಮ ಇಝೂಮೋ ಮಂದಿರದ ವಾಸ್ತುಲಕ್ಷಣ ಮತ್ತು ಪ್ರಮಾಣಗಳನ್ನು ಉಳಿಸಿಕೊಂಡು ಬಂದಿದೆಯೆಂದು ನಂಬಲಾಗಿದೆ. ಆದರೆ 10ನೆಯ ಶತಮಾನದ ಆಧಾರಗಳಿಂದ ಆಗಿನ ಕಟ್ಟಡದ ಎತ್ತರ 48 ಮೀ. ಎಂದು ತಿಳಿದುಬರುತ್ತದೆ. 1744ರಲ್ಲಿ ಪುನಾರಚಿತವಾದಾಗ ಕಟ್ಟಡದ ಎತ್ತರ ಸು. 24ಮೀ. ಆಯಿತು. ಸಮಾನಾಂತರಗಳಲ್ಲಿರುವ ಒಂಬತ್ತು ಕಂಬಗಳುಳ್ಳ ಚಚ್ಚೌಕನಾದ ಈ ಮಂದಿರದ ಪ್ರವೇಶದ್ವಾರ ಒಂದು ತುದಿಯ ಗೇಬಲ್ಲಿನ ಕೆಳಗಿದೆ. ಚಾವಣಿಯ ಸುತ್ತಲೂ ಮೊಗಸಾಲೆಯಂತೆ ಭೂಮಟ್ಟದಿಂದ ಇಕ್ಕಟ್ಟಾಗಿರುವ ಸೋಪಾನ ಪಂಕ್ತಿಯ ಮೂಲಕ ಅದನ್ನು ಪ್ರವೇಶಿಸಬೇಕಾಗುತ್ತದೆ. ಮಂದಿರದ ಒಳಮಧ್ಯಭಾಗದಲ್ಲಿ ಒಂದು ಕಂಬವಿದೆ. ಆ ಕಂಬದಿಂದ ಬಲಬದಿಯ ಗೋಡೆಯವರೆಗೆ ಇರುವ ಅಡ್ಡಗೋಡೆಯ ಹಿಂದೆ ಗರ್ಭಗೃಹವಿದೆ. ಇದೇ ಮಾದರಿಯ ಮತ್ತೆ ಕೆಲವು ನಿರ್ಮಾಣಗಳನ್ನು ಜಪಾನ್‍ನ ಕೆಲವು ಪ್ರದೇಶಗಳಲ್ಲಿ ಕಾಣಬಹುದು.

ಟೋಷೋಡೈಜಿ ಕಾಂಡೋ (ಸುವರ್ಣಹಜಾರ). 8ನೆಯ ಶತಮಾನ

ಜಪಾನ್‍ನ ವಾಸ್ತುನಿರ್ಮಾಣಗಳ ಮುಂದಿನ ಹಂತವನ್ನು ಸೂಚಿಸುವ ಈಸೇಯ ಮಂದಿರ ಆಯಾಕಾರವಾದದ್ದು. ಇದು ಮೂರಂಕಣ ಉದ್ದ ಮತ್ತು ಎರಡಂಕಣ ಅಗಲವಾಗಿದೆ. ಇದರ ಪ್ರವೇಶದ್ವಾರ ಉದ್ದವಾದ ಒಂದು ಪಾರ್ಶ್ವದಲ್ಲಿದೆ. 3ನೆಯ ಶತಮಾನದಲ್ಲಿದ್ದ ಒಬ್ಬ ಚಕ್ರವರ್ತಿಯ ಆಶ್ರಯದಲ್ಲಿ ಇದನ್ನು ನಿರ್ಮಿಸಲಾಯಿತೆಂದು ತಿಳಿದುಬರುತ್ತದೆ. ಇದೇ ಮಾದರಿಯ ಮತ್ತೊಂದು ಮಂದಿರವನ್ನು 5ನೆಯ ಶತಮಾನದಲ್ಲಿ ನಿರ್ಮಿಸಲಾಯಿತೆಂದು ಹೇಳಲಾಗಿದೆ. ಸಂಪ್ರದಾಯದಂತೆ 20 ವರ್ಷಗಳಿಗೊಮ್ಮೆ ಪುನರ್ನಿರ್ಮಿತವಾಗುವ ಈ ಮಂದಿರಗಳೂ ತಮ್ಮ ಮೊದಲಿನ ರೂಪರೇಷೆಗಳನ್ನು ಉಳಿಸಿಕೊಂಡು ಬಂದಿವೆಯೆಂದು ನಂಬಲಾಗಿದೆ. 1953ರಲ್ಲಿ ಇದನ್ನು 59ನೆಯ ಬಾರಿಗೆ ಪುನಃ ನಿರ್ಮಿಸಲಾಗಿದೆ.

ಇಝೂಮೋ ಮಂದಿರಗಳಿಗಿಂತ ಈಸೇಯ ಮಂದಿರಗಳು ಹೆಚ್ಚು ಸುಂದರ. ಅವುಗಳ ಮೇಲೆ ಚೀನೀ ಪ್ರಭಾವ ಕಂಡುಬರುತ್ತದೆ. ಅವುಗಳ ಆಕಾರದಲ್ಲಿ ಎದ್ದು ಕಾಣುವ ಅಂಶವೆಂದರೆ ಘನವಾದ ಗೇಬಲ್ ಚಾವಣಿ. ಎರಡು ತುದಿಗಳಲ್ಲಿ ಗೇಬಲ್ ಸೂರುಗಳು ಗೋಡೆಗಳಿಗಿಂತ ಮುನ್‍ಚಾಚಿವೆ. ಚಾವಣಿಯ ಬೆನ್ನುತೊಲೆಗೆ ಆಧಾರವಾಗಿ ನಿಲ್ಲಿಸಲಾದ ಎರಡು ಕಂಬಗಳ ತುದಿಗಳು ಚಾವಣಿಯ ಮೇಲೆ ಎದ್ದುನಿಂತಿವೆ. 685ರ ಪುನರ್ನಿರ್ಮಾಣದ ಅನಂತರ ಅದರ ಆಕಾರದಲ್ಲಿ ಯಾವುದೇ ಬದಲಾವಣೆಯನ್ನೂ ಮಾಡಿದಂತೆ ಕಾಣುವುದಿಲ್ಲ. ಕೊರಿಯದ ಪೆಕ್‍ಚೆ ರಾಜ್ಯದ ದೊರೆ 6ನೆಯ ಶತಮಾನದ ಮಧ್ಯಭಾಗದಲ್ಲಿ ಜಪಾನ್‍ನ ದೊರೆಗೆ ಬೌದ್ಧ ಪ್ರತಿಮೆಗಳನ್ನೂ ಪವಿತ್ರ ಗ್ರಂಥಗಳನ್ನೂ ಕಳಿಸಿಕೊಟ್ಟ ತರುವಾಯದ ಎರಡು ಶತಮಾನಗಳಲ್ಲಿ ಬೌದ್ಧಧರ್ಮ ತನ್ನ ವಾಸ್ತು ಮತ್ತು ಶಿಲ್ಪಕಲೆಗಳೊಂದಿಗೆ ಜಪಾನ್‍ನಲ್ಲಿ ಪ್ರಬಲವಾಗಿ ತಳವೂರಿತು. ಚೀನ ಮತ್ತು ಕೊರಿಯ ಭೂಭಾಗಗಳಿಂದ ಅಧಿಕ ಸಂಖ್ಯೆಯಲ್ಲಿ ಬೌದ್ಧಭಿಕ್ಷುಗಳೂ ಕಲಾಕಾರರೂ ಜಪಾನ್‍ಗೆ ಬಂದು ಅಲ್ಲಿಯವರಿಗೆ ಆ ಧರ್ಮ ಮತ್ತು ಸಾಂಸ್ಕೃತಿಕ ವಿಷಯಗಳ ಪರಿಚಯ ಮಾಡಿಕೊಟ್ಟರು. 593ರ ಅನಂತರ ರಾಜಪ್ರತಿನಿಧಿಯಾದ ಬೌದ್ಧ ಮತಾನುಯಾಯಿ ಷೋಟೊಕು ರಾಜಕುಮಾರನ ಆಶ್ರಯದಲ್ಲಿ ಚೀನೀ ಸಂಪ್ರದಾಯದ ಬೌದ್ಧಮಂದಿರಗಳು ಜಪಾನಿನಲ್ಲಿ ನಿರ್ಮಾಣವಾದುವು. ಅದರ ಪರಿಣಾಮವಾಗಿ 624ರ ವೇಳೆಗೆ 816 ಭಿಕ್ಷುಗಳಿಗೆ ಮತ್ತು 569 ಭಿಕ್ಷುಣಿಯರಿಗೆ ಆಶ್ರಯ ನೀಡುವ 46 ವಿಹಾರಗಳು ನಿರ್ಮಿತವಾದುದಾಗಿ ತಿಳಿದುಬರುತ್ತದೆ.

ಷೋಟೊಕು 7ನೆಯ ಶತಮಾನದಲ್ಲಿ ಕಟ್ಟಿಸಿದ ಹೊರ್ಯೂಜಿ ಇಂಥ ನಿರ್ಮಾಣಗಳಲ್ಲಿ ಮುಖ್ಯವಾದ್ದು. 670ರಲ್ಲಿ ಬೆಂಕಿಗೆ ಆಹುತಿಯಾದ ಆ ಮಂದಿರವನ್ನು ಪುನರ್ನಿರ್ಮಿಸಿದ್ದರೂ 552–645ರ ಕಾಲಕ್ಕೆ ಸೀಮಿತವಾದ ಆಸೂಕಾ ಯುಗದ ಶೈಲಿಗೆ ಅದನ್ನು ನಿರ್ದೇಶಿಸಲಾಗಿದೆ. ಹೊರ್ಯೂಜಿಯ ಪ್ರಮುಖ ಭಾಗಗಳೆಂದರೆ ಎರಡು ಅಂತಸ್ತುಗಳ ಮಧ್ಯ ಹಜಾರ ಮತ್ತು ಐದು ಅಂತಸ್ತುಗಳ ಪಗೋಡ. ವಿಶಾಲವಾದ ಪ್ರಾಕಾರದಲ್ಲಿ, ಅಂಗಳಗಳಿಂದ ಸುತ್ತುವರಿಯಲ್ಪಟ್ಟ ಈ ಹಜಾರ ಮತ್ತು ಪಗೋಡಗಳು ಅಕ್ಕಪಕ್ಕದಲ್ಲಿ ನಿಂತಿವೆ. ಇವನ್ನು ಮರದಿಂದ ಸುಭದ್ರವಾಗಿ ನಿರ್ಮಿಸಲಾಗಿದೆ. ಹೆಂಚಿನ ಚಾವಣಿಯುಳ್ಳ ಮಧ್ಯ ಹಜಾರ ಆಯಾಕಾರವಾದ್ದು. ಅದರ ಕೆಳಗಿನ ಅಂತಸ್ತಿನ ಸುತ್ತ ಅಂಗಳವಿದೆ. ಮೇಲಣ ಅಂತಸ್ತಿನ ಸುತ್ತ ಸ್ವಸ್ತಿಕ ಆಕಾರದ ಕಟಕಟೆ ಇದೆ. ಬಹಳ ಉದ್ದವಾಗಿರುವ ಸೂರುಗಳಿಗೆ ಕಂಬಗಳ ಮೇಲಿನ ವಿಶಿಷ್ಟ ರೀತಿಯ ಕಂಸಗಳ ಆಧಾರಗಳಿವೆ.

ಈ ಕಟ್ಟಡದ ಮಧ್ಯಭಾಗದಲ್ಲಿರುವ ವೇದಿಕೆಯ ಮೇಲೆ ಪರಿವಾರದೇವತೆಗಳು ಮತ್ತು ದಿಕ್ಪಾಲಕರಿಂದ ಸುತ್ತುವರಿಯಲ್ಪಟ್ಟ ಶಾಕ್ಯಮುನಿ ಬುದ್ಧನ ವಿಗ್ರಹವನ್ನು ಪ್ರತಿಷ್ಠಿಸಲಾಗಿದೆ. ಒಳಮಂದಿರದ ಸುತ್ತಣ ಅಂಗಳಗಳ ಮೂಲಕ ಪ್ರದಕ್ಷಿಣೆ ಮಾಡಲು ಮಾರ್ಗವನ್ನು ನಿರ್ಮಿಸಲಾಗಿತ್ತು.

ಇತರ ಜಪಾನೀ ಪಗೋಡಗಳಂತೆ ಹೊರ್ಯೂಜಿ ಪಗೋಡ ಕೂಡ ಸ್ಮಾರಕ ಮಂದಿರವಾಗಿತ್ತು. ಕೆಳಗಿನ ಅಂತಸ್ತಿನಲ್ಲಿ ಬುದ್ಧನ ಜಾತಕ ಕಥೆಗಳ ನಿರೂಪಣೆಯಿತ್ತು. ಅದರ ಮೇಲಣ ಅಂತಸ್ತುಗಳನ್ನು ಮಂದಿರದ ಎತ್ತರವನ್ನು ಹೆಚ್ಚಿಸುವ ಸಲುವಾಗಿ ಬಲವಾದ ಮರದ ಕಂಬತೊಲೆಗಳಿಂದ ಭದ್ರವಾಗಿ ನಿರ್ಮಿಸಲಾಗಿತ್ತು. ಮಂದಿರದ ಮಧ್ಯದಲ್ಲಿ ಅಡಿಪಾಯದಿಂದ ತುದಿಯ ಶಿಖರದವರೆಗೂ ಅಖಂಡವಾದ ಒಂದು ದೊಡ್ಡ ಮರದ ಕಂಬ ಕಟ್ಟಡಕ್ಕೆ ಆವಶ್ಯಕವಾದ ಹಿಡಿತವನ್ನು ಒದಗಿಸಿತ್ತು. ನಿರ್ಮಾಣತಂತ್ರದಲ್ಲೂ ಹೊರ್ಯೂಜಿ ಪಗೋಡ ಗಮನಾರ್ಹವಾದ ಕಟ್ಟಡ. ಕೆಳಗಿನ ಪ್ರತಿಯೊಂದು ಅಂತಸ್ತೂ ತನ್ನ ಮೇಲಿನ ಅಂತಸ್ತಿಗೆ ಭದ್ರವಾದ ಅಡಿಪಾಯದಂತೆ ನಿರ್ಮಿತವಾಗಿರುತ್ತಿತ್ತು. ಮಧ್ಯ ಹಜಾರದ ರೀತಿಯಲ್ಲಿ ಈ ಕಟ್ಟಡವೂ ಮೂರಂತಸ್ತಿನದಾಗಿತ್ತು. ಕೆಳಗಿನ ಅಂತಸ್ತಿನ ಸುತ್ತಲೂ ದೀರ್ಘವಾದ ಸೂರುಗಳುಳ್ಳ ಚಾವಣಿಯಿದ್ದ ಅಂಗಳಗಳಿದ್ದುವು. ಮೇಲಣ ಅಂತಸ್ತುಗಳು ಕೆಳಗಿನವುಗಳಿಗಿಂತ ಸ್ವಲ್ಪ ಸಣ್ಣವಾಗಿರುತ್ತಿದ್ದುವು.

ಕಟಕಟೆಗಳು, ಸೂರುಗಳಿಗೆ ಆಧಾರವಾದ ಕಂಸಗಳು ಮತ್ತು ಇತರ ವಾಸ್ತು ಲಕ್ಷಣಗಳಲ್ಲಿ ಹೊರ್ಯೂಜಿ 5–6ನೆಯ ಶತಮಾನಗಳಲ್ಲಿ ನಿರ್ಮಿತವಾಗಿದ್ದ ಚೀನದ ಯುನ್‍ಕಾಂಗ್ ಮತ್ತು ಲಂಗ್‍ಮೆನ್ ಗುಹಾಮಂದಿರಗಳನ್ನು ಹೋಲುತ್ತವೆ. ಆದರೆ ಬಹುಶಃ ಈ ಚೀನೀಪ್ರಭಾವಗಳು ಕೊರಿಯದ ಮೂಲಕ ಜಪಾನ್‍ಅನ್ನು ತಲುಪಿದಂತೆ ಕಾಣುತ್ತದೆ.

ಜಪಾನ್‍ನ ಪ್ರಾಚೀನ ವಾಸ್ತುನಿರ್ಮಾಣಗಳಿಗೂ ಚೀನೀ ಭೂಭಾಗದಿಂದ ಪ್ರವೇಶಿಸಿದ ವಾಸ್ತುಕಲೆಯ ಪ್ರಭಾವಗಳಿಂದ ಹುಟ್ಟಿಕೊಂಡ ಹೊರ್ಯೂಜಿ ವಾಸ್ತುಶೈಲಿಗೂ ನಡುವೆ ಹಲವು ವ್ಯತ್ಯಾಸಗಳಿವೆ. ಪ್ರಾಚೀನ ಜಪಾನೀ ವಾಸ್ತುನಿರ್ಮಾಣಗಳಲ್ಲಿ ಹುಲ್ಲಿನ ಚಾವಣಿಗಳನ್ನು ಉಪಯೋಗಿಸುತ್ತಿದ್ದರೆ ಚೀನೀಪ್ರಭಾವದ ಕಟ್ಟಡಗಳಲ್ಲಿ ಚಾವಣಿಗಳನ್ನು ಹೆಂಚುಗಳಿಂದ ನಿರ್ಮಿಸಲಾಗುತ್ತಿತ್ತು. ಪ್ರಾಚೀನ ಜಪಾನೀ ಕಟ್ಟಡಗಳ ಕಂಬಗಳನ್ನು ಭೂಮಿಯಲ್ಲಿ ನೆಟ್ಟಿರುತ್ತಿದ್ದರೆ ಚೀನೀಪ್ರಭಾವಿತ ನಿರ್ಮಾಣಗಳಲ್ಲಿ ಕಲ್ಲಿನ ತಳಹದಿಯ ಮೇಲೆ ಮರದ ಕಂಬಗಳನ್ನು ನಿಲ್ಲಿಸಲಾಗುತ್ತಿತ್ತು. ಈ ಮಾದರಿಯ ಕಂಬಗಳು ಪಕ್ಕಕ್ಕೆ ವಾಲದಂತೆ ಅಡ್ಡತೊಲೆಗಳನ್ನು ಆಸರೆಯಾಗಿ ನಿಲ್ಲಿಸಲಾಗುತ್ತಿತ್ತು. ಮೊದಲಿನ ಕಟ್ಟಡಗಳಲ್ಲಿ ಸರಳವಾದ ಕಂಬ ಮತ್ತು ತೊಲೆಗಳು ಕಟ್ಟಡದ ಮುಖ್ಯ ಆಧಾರಗಳಾಗಿದ್ದರೆ, ಅನಂತರದ ಶೈಲಿಯಲ್ಲಿ ಕಂಸಗಳಿಂದ ಕೂಡಿದ ಸೂರುಗಳು ಪ್ರಧಾನವಾದುವು. ಮೊದಲಿನ ಕಟ್ಟಡಗಳ ಮರದ ಭಾಗಗಳು ತಮ್ಮ ನೈಜವರ್ಣದಲ್ಲಿದ್ದರೆ ಹೊರ್ಯೂಜಿ ಕಟ್ಟಡದಲ್ಲಿ ಬಳಸಲಾದ ಮರದ ಭಾಗಗಳು

ವಿವಿಧ ಬಣ್ಣಗಳಿಂದಲೂ ಲೋಹಗಳ ಜೋಡಣೆ ಸಾಮಗ್ರಿಗಳಿಂದಲೂ ಅಲಂಕೃತವಾಗಿದ್ದುವು. ಹೊರ್ಯೂಜಿಯ ಮಧ್ಯ ಹಜಾರದ ಗೋಡೆಗಳ ಮೇಲೆ ಭಿತ್ತಿಚಿತ್ರಗಳ ಅಲಂಕರಣವನ್ನೂ ಬಳಸಲಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಚೀನೀ ಪ್ರಭಾವದ ನಿರ್ಮಾಣಗಳು ಸುಭದ್ರವಾಗೂ ವಿಶಾಲವಾಗೂ ಇದ್ದುವು. ಅವುಗಳ ನಿರ್ಮಾಣದ ವೆಚ್ಚ ಅಧಿಕವಾಗಿತ್ತು.

7ನೆಯ ಶತಮಾನದಲ್ಲಿ ಚೀನದ ಟಾಂಗ್ ರಾಜವಂಶ ಪ್ರಬಲವಾದಾಗ ಚೀನೀ ಪ್ರಭಾವಗಳು ನೆರೆಹೊರೆಯ ಪ್ರದೇಶಗಳಲ್ಲಿ ಅಧಿಕವಾಗತೊಡಗಿದುವು. ಚೀನ ಮತ್ತು ಜಪಾನುಗಳ ನಡುವೆ ಮೊದಲ ಬಾರಿಗೆ ನೇರ ಸಂಬಂಧಗಳು ಹೆಚ್ಚಿದುವು. 645ರಲ್ಲಿ ಜಪಾನೀ ಆಡಳಿತ ಚೀನೀ ಮಾದರಿಯ ಸಾಂಸ್ಕೃತಿಕ ಸುಧಾರಣೆಗಳನ್ನು ಕೈಗೊಂಡದ್ದರಿಂದ ಚೀನೀ ವಾಸ್ತುಕಲೆ ಜಪಾನ್‌ನಲ್ಲಿ ಹೆಚ್ಚಿನ ಪ್ರಭಾವ ಬೀರುವಂತಾಯಿತು. ನಾರಾ ಬಳಿ ಇರುವ ಯಕುಷಿಜಿ ಮಂದಿರದ ಆವರಣದಲ್ಲಿರುವ ಪಗೋಡದಲ್ಲಿ ಈ ಪ್ರಭಾವಗಳು ಎದ್ದು ಕಾಣುತ್ತವೆ. ಚೀನೀ ಆಡಳಿತ ಪದ್ಧತಿಗೆ ಅನುಗುಣವಾಗಿ ಜಪಾನಿನ ರಾಜಧಾನಿಯನ್ನು ಪ್ರತಿ ಚಕ್ರವರ್ತಿಯ ಆಳ್ವಿಕೆಯಲ್ಲೂ ಸ್ಥಳಾಂತರಿಸುತ್ತಿದ್ದ ಪದ್ಧತಿ ನಿಂತುಹೋಯಿತು. ಚೀನೀ ರಾಜಧಾನಿ ಚಾಂಗ್–ಆನ್ ಮಾದರಿಯಲ್ಲಿ ನಾರಾದಲ್ಲಿ ಶಾಶ್ವತ ರಾಜಧಾನಿಯೊಂದು ನಿರ್ಮಿತವಾಯಿತು. ಉತ್ತರ ದಕ್ಷಿಣವಾಗಿ 4 ಕಿಮೀ. ಪೂರ್ವ ಪಶ್ಚಿಮವಾಗಿ 3.6 ಕಿಮೀ. ಇದ್ದ ಹೊಸನಗರದಲ್ಲಿ ನೇರವೂ ಅಗಲವೂ ಆದ ರಸ್ತೆಗಳನ್ನು ನಿರ್ಮಿಸಲಾಯಿತು. ಉತ್ತರ ಮಧ್ಯಭಾಗದಲ್ಲಿ ರಾಜಮನೆತನದ ವಸತಿಗಳನ್ನೂ ಇತರ ಭಾಗಗಳಲ್ಲಿ ಶ್ರೀಮಂತವರ್ಗದವರ ನಿವಾಸಗಳನ್ನೂ ವಿಶಾಲವಾದ ದೇವಮಂದಿರಗಳನ್ನೂ ನಿರ್ಮಿಸಲಾಯಿತು. ನಾರಾ ನಗರ ನಿರ್ಮಾಣಯೋಜನೆ ಮಹತ್ತ್ವದ್ದಾಗಿತ್ತು, ಅದರ ಸಫಲತೆ ಜಪಾನೀ ಸಾರ್ವಭೌಮತ್ವದ ದ್ಯೋತಕವಾಯಿತು.



ಹೊರ್ಯೂಜಿಯ ಉಪನ್ಯಾಸ ಮಂದಿರ

741ರಲ್ಲಿ ಚಕ್ರವರ್ತಿ ಷೋಮುವಿನ ಅಪ್ಪಣೆಯಂತೆ ಪ್ರತಿಯೊಂದು ಪ್ರಾಂತ್ಯದಲ್ಲೂ ಒಂದೊಂದು ಬೌದ್ಧವಿಹಾರ ಮತ್ತು ಮಠವನ್ನು ನಿರ್ಮಿಸಲಾಯಿತು. 745ರಲ್ಲಿ ಅವನ ಆದೇಶದಂತೆ ರಾಜಧಾನಿ ನಾರಾದಲ್ಲಿ ಜಪಾನೀ ಬೌದ್ಧಧರ್ಮದ ಕೇಂದ್ರವೆಂದು ಪರಿಗಣಿಸಲಾದ ಟೋದೈಜಿಯ ನಿರ್ಮಾಣವಾಯಿತು. 50,000 ಬಡಗಿಗಳು, 3,70,000 ಲೋಹಶಿಲ್ಪಿಗಳು, 21,80,000 ಕೂಲಿಗಾರರು ದುಡಿಯುತ್ತಿದ್ದ ಮಂದಿರದಲ್ಲಿ ಅಮೋಘವಾದ ಬುದ್ಧಮೂರ್ತಿಯನ್ನು ಪ್ರತಿಷ್ಠಾಪಿಸಲು ಕಟ್ಟಿಸಿದ ಹಜಾರ 88 52 ಮೀ. ವಿಸ್ತೀರ್ಣವುಳ್ಳದ್ದಾಗಿಯೂ 47.5 ಮೀ. ಎತ್ತರವಾಗಿಯೂ ಇತ್ತು. ಅದರ ಉತ್ತರಕ್ಕೆ ಉಪನ್ಯಾಸ ಮಂದಿರ ಮತ್ತು ದಕ್ಷಿಣಕ್ಕೆ ಒಂದು ಸಣ್ಣ ಬಾಗಿಲು, ಮತ್ತೊಂದು ಬಹಳ ದೊಡ್ಡ ಹೆಬ್ಬಾಗಿಲು ಇದ್ದುವು. ಆ ಬಾಗಿಲುಗಳ ಮಧ್ಯೆ 91 ಮೀ. ಎತ್ತರದ ಎರಡು ಪಗೋಡಗಳು ಇದ್ದುವು. ಬಹುಶಃ ಜಪಾನ್‌ನ ಮರದ ನಿರ್ಮಾಣಗಳಲ್ಲಿ ಈ ಪಗೋಡಗಳೇ ಅತ್ಯಂತ ಎತ್ತರವಾದವು.

ಜಪಾನೀ ಶಿಲ್ಪಿಗಳಿಗೆ ಕಟ್ಟಡಗಳ ಅಡ್ಡಗಲದ ಭದ್ರತೆಯನ್ನು ಹೆಚ್ಚಿಸುವ ಮಾರ್ಗ ಗೊತ್ತಿರಲಿಲ್ಲ. ಆದ್ದರಿಂದ ಇಂಥ ಭಾರವಾದ ಚಾವಣಿಗಳಿಗೆ ಬಹಳ ದಪ್ಪನಾದ ಮರದ ಅಡ್ಡತೊಲೆಗಳನ್ನು ಉಪಯೋಗಿಸುತ್ತಿದ್ದರು. ಆ ಪ್ರಮಾಣದ ಮರದ ತೊಲೆಗಳು ದೊರಕುತ್ತಿದ್ದರೂ ಅವುಗಳ ಸಾಗಣೆ ಬಹಳ ಶ್ರಮಸಾಧ್ಯವಾಗಿತ್ತು. ಕಟ್ಟಡಗಳ ವಿಸ್ತಾರವನ್ನು ಹೆಚ್ಚಿಸಲು ಕಂಸಗಳನ್ನು, ಮುನ್‌ಚಾಚಿದ ಕಮಾನುಗಳನ್ನು ಹೆಚ್ಚಿಗೆ ಬಳಸುತ್ತಿದ್ದರು. ಅನಂತರದ ಕಾಲದಲ್ಲಿ ಅಡ್ಡದಿಮ್ಮಿಯನ್ನು ಆಧರಿಸಿದ್ದ ಕಂಬದ ಮೇಲೆ ಸೂರುಗಳ ಭಾರ ನಿಲ್ಲುವಂತೆ ಮಾಡಿದ್ದುದರಿಂದ ಈ ಕಂಸಗಳು ಮತ್ತು ಮುನ್‌ಚಾಚಿದ ಕಮಾನುಗಳು ಕೇವಲ ಆಲಂಕಾರಿಕ ಅಂಗಗಳಾದುವು.

ಟೋದೈಜಿ ಗುಂಪಿನ ಕಟ್ಟಡಗಳಲ್ಲಿ ಬಹು ಭಾಗ ನಾಶವಾಗಿದ್ದರೂ ಬುದ್ಧಪ್ರತಿಮೆಯನ್ನು ನಿಲ್ಲಿಸಿರುವ ಹಜಾರವನ್ನು ಮೊದಲಿಗಿಂತ ಸ್ವಲ್ಪ ವಿಶಾಲವಾಗಿ 1705ರಲ್ಲಿ ಪುನಃ ನಿರ್ಮಿಸಲಾಯಿತು. ಅದು ಈಗ ಪ್ರಪಂಚದ ಅತಿ ದೊಡ್ಡ ಮರದ ಕಟ್ಟಡವೆಂದು ಪರಿಗಣಿತವಾಗಿದೆ. ನಾರಾ ದೊರೆಗಳು ನಿರ್ಮಿಸಿದ ಬೌದ್ಧಮಂದಿರಗಳಲ್ಲಿ ಟೋದೈಜಿ ಅತ್ಯಂತ ಹಿರಿದಾದುದಾದರೂ ಅದಕ್ಕಿಂತ ಸಣ್ಣವಾದ ಹಲವಾರು ಮಂದಿರಗಳನ್ನು ಅವರು ಸ್ಥಾಪಿಸಿದರು. ಬೌದ್ಧಧರ್ಮಕ್ಕೆ ಅವರು ನೀಡಿದ ಆಶ್ರಯದ ಫಲವಾಗಿ ರಾಜ್ಯದ ಭಂಡಾರ ಬರಿದಾಗಿ, ರಾಜ್ಯ ಬಲಹೀನವಾಯಿತೆಂದು ಹೇಳಲಾಗಿದೆ. ಈ ಕಾರಣದಿಂದ 794ರಲ್ಲಿ ರಾಜಧಾನಿಯನ್ನು ಉತ್ತರದ ಕೀಯೋಟೋಗೆ ವರ್ಗಾಯಿಸಲಾಯಿತು. ನಾರಾ ಮಾದರಿಯಲ್ಲಿ ಹೊಸದೊಂದು ರಾಜಧಾನಿಯನ್ನು ಅಲ್ಲಿ ನಿರ್ಮಿಸಲಾಯಿತು.

9ನೆಯ ಶತಮಾನದ ಪೂರ್ವಾರ್ಧದಲ್ಲಿ ಚೀನೀ–ಜಪಾನೀ ಸಂಬಂಧಗಳಲ್ಲಿ ತಲೆದೋರಿದ ಅಭಿಪ್ರಾಯಭೇದಗಳ ದೆಸೆಯಿಂದ ನೇರ ಸಂಪರ್ಕ ಕಡಿದುಹೋಯಿತು. ಜಪಾನೀ ವಾಸ್ತುಕಲೆ ಆ ವರೆಗಿನ ಬೆಳವಣಿಗೆಗಳನ್ನು ತನ್ನದಾಗಿಸಿಕೊಂಡು ಅಭಿವೃದ್ಧಿಯ ಹೊಸ ಮಾರ್ಗವನ್ನು ಅನುಸರಿಸಲಾರಂಭಿಸಿತು. ಜಪಾನೀ ಸಾಂಪ್ರದಾಯಿಕ ಶೈಲಿ ಪುನಃ ಪ್ರಬಲವಾದರೂ ಆ ವರೆಗೆ ಜಪಾನಿಗೆ ತಲುಪಿದ್ದ ಚೀನೀ ಪ್ರಭಾವಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದರ ಫಲವಾಗಿ ಹೊಸದೊಂದು ಮಿಶ್ರಶೈಲಿ ಬೆಳೆಯಿತು. ನಾರಾ ಪಂಥಗಳ ಮಂದಿರಗಳನ್ನು ನಗರದ ಒಳ ವಲಯದಲ್ಲಿ ಸಮತಟ್ಟಾದ ಪ್ರದೇಶಗಳಲ್ಲಿ ಸಮಪ್ರಮಾಣದ ತಳಹದಿಯ ಮೇಲೆ ನಿರ್ಮಿಸಲಾಗಿದ್ದರೆ ಹೊಸ ಟೆಂಡೈ ಮತ್ತು ಷಿಂಗೋನ್ ಪಂಥಗಳ ಮಂದಿರಗಳನ್ನು ನಗರದ ಹೊರಪ್ರದೇಶಗಳಲ್ಲಿ ಬೆಟ್ಟಗಳ ಮೇಲೆ ಅವುಗಳ ಅಸಮ ಪ್ರಮಾಣಗಳಿಗೆ ಸರಿಹೊಂದುವಂತೆ ನಿರ್ಮಿಸಲಾಗುತ್ತಿತ್ತು. ಆ ಕಾಲದ ಬೌದ್ಧಮಂದಿರಗಳು ಸಣ್ಣವಾಗಿಯೂ ಸರಳವಾಗಿಯೂ ಇರುತ್ತಿದ್ದುವು.

ನಾರಾ ಮಂದಿರಗಳ ಮೂರ್ತಿಗಳು ಮಂದಿರದ ಹೊರಗೆ ನಿಂತ ಭಕ್ತಜನಕ್ಕೆ ಕಾಣುವಂತೆ ಆ ಮಂದಿರಗಳನ್ನು ರೂಪಿಸಲಾಗುತ್ತಿತ್ತು. ಭಕ್ತರು ನಿಲ್ಲುವ ಸ್ಥಳದಲ್ಲಿ ಅವರಿಗೆ ಮಳೆಯಿಂದ ರಕ್ಷಣೆ ಒದಗಿಸಲು ಮಂಟಪವನ್ನು ನಿರ್ಮಿಸುವ ಸಂಪ್ರದಾಯ ಬೆಳೆಯಿತು. ಕ್ರಮೇಣ ಈ ಮಂಟಪ ಮತ್ತು ಮೂರ್ತಿ ಇದ್ದ ಗುಡಿಗಳನ್ನು ಒಂದುಗೂಡಿಸಲಾಯಿತು. ಇದರಿಂದ ಆ ಮಂದಿರಗಳು ಹೆಚ್ಚು ಉದ್ದವಾಗಿ ಒಳಭಾಗ ಮಸುಕುಮಸುಕಾಗಿ ಇರುವಂತಾಯಿತು. ಟೆಂಡೈ ಮತ್ತು ಷಿಂಗೋನ್ ಪಂಥಗಳ ರಹಸ್ಯಮಯ ವಾತಾವರಣಕ್ಕೆ ಇದು ಅನುಕೂಲಕರವಾಯಿತು.

ಬೌದ್ಧಧರ್ಮದ ಪ್ರಾಬಲ್ಯದಿಂದ ಷಿಂಟೋ ಮತ ನಾಶಗೊಳ್ಳದಿದ್ದರೂ ಅದರಲ್ಲಿ ಅನೇಕ ಬದಲಾವಣೆಗಳಾದುವು. ಷಿಂಟೋ ಪಂಥದ ದೇವತೆಗಳು ಬುದ್ಧನ ಜಪಾನೀ ಅವತಾರಗಳೆಂದು ಬೌದ್ಧಧರ್ಮ ಪರಿಗಣಿಸಿ 8ನೆಯ ಶತಮಾನದ ವೇಳೆಗೆ ಜಪಾನ್‌ನಲ್ಲಿ ತನ್ನ ಜನಪ್ರಿಯತೆಯನ್ನೂ ಪ್ರಾಬಲ್ಯವನ್ನೂ ದ್ವಿಗುಣಗೊಳಿಸಿಕೊಂಡಿತು. ಬೌದ್ಧ ಮಂದಿರಗಳಲ್ಲಿ ಷಿಂಟೋ ದೇವಾಲಯಗಳೂ ಷಿಂಟೋ ದೇವಾಲಯಗಳಲ್ಲಿ ಬೌದ್ಧ ಮಂದಿರಗಳೂ ನಿರ್ಮಿತವಾದುವು. ಷಿಂಟೋ ಮಂದಿರಗಳು ತಮ್ಮ ವಿಶಿಷ್ಟ ಲಕ್ಷಣಗಳನ್ನು ಉಳಿಸಿಕೊಂಡರೂ ಬೌದ್ಧ ವಾಸ್ತುಶಿಲ್ಪಕ್ಕೆ ಸೀಮಿತವಾಗಿದ್ದ ಡೊಂಕಾದ ಚಾವಣಿ, ಬಣ್ಣಗಳನ್ನು ಲೇಪಿಸಿದ ಹೊರಭಾಗ ಮತ್ತು ಚಾವಣಿಯ ಗೇಬಲ್ಲಿನ ಕೆಳಭಾಗದಲ್ಲಿ ಅಲಂಕರಣ–ಈ ಲಕ್ಷಣಗಳನ್ನು ಅಳವಡಿಸಿಕೊಳ್ಳಲಾರಂಭಿಸಿದುವು.

ಹೊರ್ಯೂಜಿಯ ಉಪನ್ಯಾಸಮಂದಿರ ಮೊದಲು ಒಬ್ಬ ಶ್ರೀಮಂತ ಮಹಿಳೆಯ ವಾಸಗೃಹವಾಗಿತ್ತು. ಆ ಕಾಲದ ಶ್ರೀಮಂತವರ್ಗದವರ ವಾಸಗೃಹಗಳಲ್ಲಿ ಕಂಸಗಳ ಮೇಲೆ ಆಧಾರಿತವಾದ ಸೂರುಗಳು ಮತ್ತು ಡೊಂಕಾದ ಚಾವಣಿಗಳು ಇರುತ್ತಿದ್ದುವೆಂಬುದು ಅದರ ವಾಸ್ತುಲಕ್ಷಣಗಳಿಂದ ತಿಳಿದುಬರುತ್ತದೆ. 9ನೆಯ ಶತಮಾನದ ಕೀಯೋಟೋ ಶ್ರೀಮಂತರ ನಿವಾಸಗಳನ್ನು ಪ್ರಮಾಣಬದ್ಧ ತಳಹದಿಯ ಮೇಲೆ ಒಂದಕ್ಕೊಂದು ಹೊಂದಿಕೊಂಡಂತೆ ಇದ್ದ ಅನೇಕ ಒಳಾಂಗಣಗಳು ಇರುವಂತೆ ಯೋಜಿಸಲಾಗಿತ್ತು. ಮಧ್ಯಭಾಗದಲ್ಲಿ ಶಯ್ಯಾಗೃಹಗಳನ್ನೊಳಗೊಂಡಿದ್ದ ಷಿನ್‌ಡೆನ್; ಅದರ ದಕ್ಷಿಣಕ್ಕೆ ಒಂದು ಕೊಳ; ಉತ್ತರ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ವಾಸಗೃಹದ ಇತರ ಭಾಗಗಳು ಇರುತ್ತಿದ್ದುವು. ಆ ಕಟ್ಟಡಗಳ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲೂ ಕೊಳದ ಹೊರಬದಿಯಲ್ಲೂ ಸಣ್ಣಕೋಣೆಗಳಿರುತ್ತಿದ್ದುವು. ಅವಲ್ಲದೆ ಅಡಿಗೆ ಮನೆ, ನೌಕರರ ವಸತಿಗಳು, ಕೊಟ್ಟಿಗೆ ಮುಂತಾದ ಕಟ್ಟಡಗಳೂ ಇರುತ್ತಿದ್ದುವು. ಇಂಥ ಕಟ್ಟಡಗಳನ್ನು ಷಿನ್‌ಡೆನ್‌ಜುಕುರಿ ಎಂದು ಕರೆಯಲಾಗುತ್ತಿತ್ತು. ಆ ರೀತಿಯ ವಸತಿಗಳು ಶ್ರೀಮಂತರಿಗೆ ಮಾತ್ರ ಮೀಸಲಾಗಿದ್ದುವು. ಚೀನೀ ಮೂಲದ ಸಮಪ್ರಮಾಣದ ನಿರ್ಮಾಣಗಳು ಕ್ರಮೇಣ ಕಣ್ಮರೆಯಾದುವು. ಷಿನ್‌ಡೆನ್‌ಜುಕುರಿ ಶೈಲಿಯ ವಸತಿಗಳು ದೇಶದ ಎಲ್ಲೆಡೆಗಳಲ್ಲೂ ಜನಪ್ರಿಯವಾಗಿದ್ದರೂ ಪ್ರತಿಯೊಂದು ಪ್ರದೇಶದಲ್ಲೂ ಅವು ತಮ್ಮ ವೈಶಾಲ್ಯ ಮತ್ತು ಶ್ರೀಮಂತಿಕೆಯನ್ನು ಉಳಿಸಿಕೊಂಡು ಬರಲಾಗಲಿಲ್ಲ.

ಷಿನ್‌ಡೆನ್ ಆಯಾಕಾರವಾಗಿತ್ತು. ಸುತ್ತಲೂ ವರಾಂಡ ಮತ್ತು ಸೂರುಗಳು ಇದ್ದುವು. ಅದರ ಒಂದು ಮೂಲೆಯಲ್ಲಿದ್ದ ಶಯ್ಯಾಗೃಹವನ್ನು ಬಿಟ್ಟರೆ ಉಳಿದ ಭಾಗವೆಲ್ಲ ತೆರೆದಿರುತ್ತಿತ್ತು. ರಂಧ್ರಗಳೂ ಕೀಲಿಗಳೂ ಇದ್ದ ಮೇಲ್ಭಾಗವನ್ನುಳ್ಳ, ಪೂರ್ಣವಾಗಿ ಹೊರತೆಗೆಯಬಹುದಾಗಿದ್ದ ಕೆಳಭಾಗವನ್ನುಳ್ಳ ಮರದ ತಡಿಕೆಗಳನ್ನು ಆ ಕಟ್ಟಡಗಳಲ್ಲಿ ಗೋಡೆಗಳ ಬದಲು ಉಪಯೋಗಿಸುತ್ತಿದ್ದರು. ರಾತ್ರಿಯ ಕಾಲವನ್ನು ಬಿಟ್ಟು ಉಳಿದೆಲ್ಲ ಸಮಯಗಳಲ್ಲೂ ಮೇಲ್ಭಾಗವನ್ನು ತೆರೆದಿಟ್ಟಿರಲಾಗಿರುತ್ತಿತ್ತು. ವಿಶೇಷ ಸಂದರ್ಭಗಳಲ್ಲಿ ಕೆಳಭಾಗವನ್ನೂ ತೆಗೆಯುತ್ತಿದ್ದರು;

ಹಜಾರವನ್ನು ಸಂದರ್ಭಕ್ಕನುಸಾರವಾಗಿ ಪರದೆಗಳಿಂದ ವಿಭಜಿಸಿಕೊಳ್ಳಲಾಗುತ್ತಿತ್ತು. ನೆಲಗಟ್ಟನ್ನು ಮರದ ಸಾಮಗ್ರಿಗಳಿಂದ ಮಾಡಿರಲಾಗುತ್ತಿತ್ತು. ಜನರು ಕೂಡಲು ಹುಲ್ಲಿನ ಚಾಪೆಗಳನ್ನು ಉಪಯೋಗಿಸಲಾಗುತ್ತಿತ್ತು. ಇಂಥ ಷಿನ್‌ಡೆನ್‌ಜುಕುರಿ ಗೃಹಗಳನ್ನು ಶ್ರೀಮಂತ ಮನೆತನಗಳವರು ತಮ್ಮ ಅಮಿತವಾದ ಸೇವಕವರ್ಗದವರ ಸಹಾಯದಿಂದ ಮಾತ್ರ ಉಪಯೋಗಿಸಲು ಸಾಧ್ಯವಿತ್ತು. ವಿಲಾಸೀ ಜೀವನ ನಡೆಸುತ್ತಿದ್ದ ಕೀಯೋಟೋ ನಗರದ ಶ್ರೀಮಂತರು ತಮ್ಮ ಕೊನೆಮೊದಲಿಲ್ಲದ ಭೋಜನಕೂಟ–ಮೋಜಿನಜೀವನ ನಡೆಸಲು ಅವು ಅನುಕೂಲಕರವಾಗಿದ್ದುವೆಂಬುದು ನಿಜ. ಷಿನ್‌ಡೆನ್ ಹೆಚ್ಚು ತೆರವಾಗಿದ್ದುದರಿಂದ ಸುತ್ತಣ ಉದ್ಯಾನದೊಂದಿಗೆ ಹೊಂದಿಕೊಂಡಿರುತ್ತಿತ್ತು. ಬೇಸಗೆಯಲ್ಲಿ ಕೀಯೋಟೋ ನಗರದ ಬಿಸಿಲಿನ ಬೇಗೆಯನ್ನು ಉಪಶಮನಗೊಳಿಸಲು ಧಾರಾಳವಾಗಿ ಗಾಳಿ ಬರುವಂತೆ ಹೆಚ್ಚಿನ ಸೌಲಭ್ಯವಿರುತ್ತಿತ್ತು. 19ನೆಯ ಶತಮಾನದಲ್ಲಿ ನಿರ್ಮಿಸಲಾದ ಕೀಯೋಟೋ ಅರಮನೆ ಮೊದಲ ಕಾಲದ ಷಿನ್‌ಡೆನ್‌ಜುಕುರಿ ಗೃಹಗಳ ವಾಸ್ತುಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆಂದು ನಂಬಲಾಗಿದೆ.

ಷಿನ್‌ಡೆನ್ ಚಕ್ರವರ್ತಿಯ ಅರಮನೆ. ಕೀಯೋಟೋ. 19ನೆಯ ಶತಮಾನದ ಪುನರ್‌ನಿರ್ಮಾಣ

10–11ನೆಯ ಶತಮಾನಗಳಲ್ಲಿ ಜಪಾನ್‌ನಲ್ಲಿ ಬುದ್ಧ ಅಮಿದನನ್ನು (ಅಮಿತಾಭ ಬುದ್ಧ) ಪೂಜಿಸುತ್ತಿದ್ದ ಹೊಸ ಪಂಥ ಅಸ್ತಿತ್ವಕ್ಕೆ ಬಂದದ್ದರ ಫಲವಾಗಿ ಟೆಂಡೈ ಮತ್ತು ಷಿಂಗೊನ್ ಪಂಥಗಳ ಮಾಂತ್ರಿಕ ಮತ್ತು ತಾತ್ತ್ವಿಕ ನಂಬಿಕೆಗಳು ಮೂಲೆಗುಂಪಾದುವು. ಬುದ್ಧ ಅಮಿದನ ನಾಮದ ಧ್ಯಾನಪ್ರಧಾನವಾಗಿದ್ದ ಈ ಹೊಸ ಪಂಥ ಶ್ರೀಮಂತರಿಗೂ ಸಾಮಾನ್ಯಜನರಿಗೂ ಸಮಾನವಾಗಿ ಆಕರ್ಷಕವಾಯಿತು. ಕ್ರಮೇಣ ಈ ಹೊಸ ಪಂಥ ಬಹಳ ಜನಪ್ರಿಯತೆ ಗಳಿಸಿತಲ್ಲದೆ ಇತರ ಬೌದ್ಧ ಪಂಥಗಳನ್ನೂ ಸಹ ಮೂಲೆಗುಂಪಾಗಿಸಿತು. ಶ್ರೀಮಂತವರ್ಗದವರು ಮರಣೋತ್ತರ ಸ್ವರ್ಗಸುಖಕ್ಕಾಗಿ ಕಾಯಲಾರದೆ ಈ ಹೊಸ ಪಂಥದ ಪವಿತ್ರ ಗ್ರಂಥಗಳಲ್ಲಿ ವರ್ಣಿಸಲಾದ ಬುದ್ಧ ಅಮಿದನ ಪಶ್ಚಿಮದಿಕ್ಕಿನ ಸ್ವರ್ಗವನ್ನು ಹೋಲುವ ಮಂದಿರಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಅಂಥ ಮಂದಿರಗಳ ಮಧ್ಯಭಾಗದಲ್ಲಿ ಒಂದಂಕಣ ಚೌಕದ ಗರ್ಭಗುಡಿಯಲ್ಲಿ ಅಮಿದ ವಿಗ್ರಹವನ್ನು ಪ್ರತಿಷ್ಠಾಪಿಸಲಾಗುತ್ತಿತ್ತು. ಅದಕ್ಕೆ ಕೂಡಿದಂತೆ ವಿಶಾಲವಾದ ಬುದ್ಧ ಅಮಿದನ ಹಜಾರವಿರುತ್ತಿತ್ತು. ಅವುಗಳ ಸುತ್ತ ಭಕ್ತಜನರ ಉಪಯೋಗಕ್ಕಾಗಿ ಪ್ರದಕ್ಷಿಣ ಮಾರ್ಗವಿರುತ್ತಿತ್ತು. ಹಜಾರಗಳಲ್ಲಿ ಸರಳವಾದ್ದು ಕೇವಲ ಮೂರಂಕಣಗಳ ಚೌಕವಾಗಿದ್ದರೆ ಮತ್ತೆ ಕೆಲವು ಬಹಳ ವಿಶಾಲವಾಗಿದ್ದುವು. ಅವುಗಳ ಒಳಭಾಗವನ್ನು ವಿಶೇಷವಾಗಿ ಅಲಂಕರಿಸಲಾಗುತ್ತಿತ್ತು. ಈ ಹಜಾರಗಳಲ್ಲಿ ಗಮನಾರ್ಹವಾದ್ದು ಉಜಿಯ ಬ್ಯೋಡೋಇನ್‌ಗೆ ಸೇರಿದ ಫೀನಿಕ್ಸ್ ಹಜಾರ. ಅದು ಸಣ್ಣದಾದರೂ ಆಕರ್ಷಕವಾಗಿಯೂ ಸೌಂದರ್ಯಪೂರ್ಣವಾಗಿಯೂ ಇದೆ. ಷಿನ್‌ಡೆನ್‌ಜುಕುರಿ ಶೈಲಿಯ ಕೆಲವು ಲಕ್ಷಣಗಳನ್ನು ಸಹ ಅದರಲ್ಲಿ ಕಾಣಬಹುದು.

12ನೆಯ ಶತಮಾನದಲ್ಲಿ ಕೀಯೋಟೋ ಆಡಳಿತ ಕ್ಷೀಣಿಸಿ ಕಾಮಾಕುರಾದಲ್ಲಿ ಕೇಂದ್ರೀಯ ಸೈನಿಕ ಪ್ರಭುತ್ವ ಅಧಿಕಾರಕ್ಕೆ ಬಂದಿತು. ಆ ಕಾಲದಲ್ಲಿ ಚೀನದೊಂದಿಗೆ ಪುನಃ ಸಂಪರ್ಕ ಬೆಳೆಯಿತು. ಜೆನ್ ಬೌದ್ಧ ಪಂಥದ ಪ್ರವೇಶವಾಯಿತು. ಅದರ ಪ್ರಭಾವದಿಂದ ವಾಸ್ತುಕಲೆಯಲ್ಲಿ ಹೆಚ್ಚಿನ ಮಾರ್ಪಾಟುಗಳಾದುವು. ಎರಡು ಹೊಸ ಬೌದ್ಧ ವಾಸ್ತುಶೈಲಿಗಳು ಹುಟ್ಟಿಕೊಂಡುವು. ದಕ್ಷಿಣ ಚೀನದಲ್ಲಿ ಮೊದಲಿಗೆ ಆವಿರ್ಭವಿಸಿದ ಭಾರತೀಯ ಶೈಲಿ (ಟೆಂಜಿಕುಯೊ) ಸತ್ತ್ವಪೂರ್ಣವಾಗಿತ್ತು. ಬೃಹತ್ ಪ್ರಮಾಣದ ಚಾವಣಿಗಳು ಮತ್ತು ನೇರವಾದ ಕಟ್ಟಡಗಳ ಅಂಶಗಳು ಆ ಶೈಲಿಯ ಪ್ರಮುಖಲಕ್ಷಣಗಳು. ಜಪಾನ್‌ನಲ್ಲಿ ಆ ಶೈಲಿಯನ್ನು ಸೀಮಿತವಾಗಿ ಬಳಸಲಾಗಿದ್ದರೂ ಅನಂತರ ಕಾಲದ ವಾಸ್ತುನಿರ್ಮಾಣಗಳ ಮೇಲೆ ಅದರ ಪ್ರಭಾವ ವಿಶೇಷವಾಗಿದೆ. ಎರಡನೆಯದಾದ ಚೀನೀ ಶೈಲಿ (ಕರಯೋ) ಆಹ್ಲಾದಕರವೂ ಅಲಂಕಾರಪೂರ್ಣವೂ ಆಗಿತ್ತು. ವಿಶೇಷವಾದ ಚಾವಣಿಗಳಿಗೆ ಆಧಾರವಾದ ವಿಶಾಲ ಕಂಸಗಳು, ಬೀಸಣಿಗೆಯಾಕಾರದ ಅಡ್ಡತೊಲೆಗಳು, ಬಹಳ ಡೊಂಕಾದ ಮತ್ತು ಇಳಿಜಾರಾದ ಚಾವಣಿಗಳು ಮತ್ತು ಮೊನಚಾದ, ಕಮಾನಿನ ಆಕಾರದ ಕಿಟಕಿಗಳು ಆ ಶೈಲಿಯ ಮುಖ್ಯ ಲಕ್ಷಣಗಳು. ಜೆನ್ ಪಂಥದ ಪೂಜಾಹಜಾರಗಳನ್ನು ಈ ಶೈಲಿಯಲ್ಲಿ ನಿರ್ಮಿಸಲಾಗುತ್ತಿತ್ತು. ಕಾಮಾಕುರಾದಲ್ಲಿರುವ ಎಂಗಕುಜಿಯ ಅವಶೇಷಗಳ ಹಜಾರ ಈ ಶೈಲಿಗೆ ಉತ್ತಮ ನಿದರ್ಶನ.

ಪ್ರತಿಮೆಯ ಮೇಲಿನ ಚಾವಣಿ. ಹೂಡೋ ಮಂದಿರ. 11ನೆಯ ಶತಮಾನ

ಈ ಹೊಸ ಶೈಲಿಗಳಿಗೆ ಪ್ರತಿಯಾಗಿ, ಮೊದಲಿನಿಂದ ಜಪಾನ್‌ನಲ್ಲಿ ಬಳಕೆಯಲ್ಲಿದ್ದ ವಾಸ್ತುಶೈಲಿಯನ್ನು ಜಪಾನೀ ಶೈಲಿ (ವಯೊ) ಎಂದು ಕರೆಯಲಾಗಿತ್ತು. ಆ ಕಾಲದ ಬೌದ್ಧ ವಾಸ್ತುನಿರ್ಮಾಣಗಳಲ್ಲಿ ಸಾಮಾನ್ಯವಾಗಿ ಈ ಮೂರೂ ಶೈಲಿಗಳ ಸಮ್ಮಿಲನ ಕಂಡುಬರುತ್ತದೆ. ಮೊದಲು ಜಪಾನೀ ಮತ್ತು ಭಾರತೀಯ ಶೈಲಿಗಳ ಸಂಗಮವಾಯಿತು. ಅನಂತರ ಜಪಾನೀ ಮತ್ತು ಚೀನೀ ಶೈಲಿಗಳು ಸೇರಿದ ಕಟ್ಟಡಗಳು ನಿರ್ಮಾಣವಾದುವು. ತರುವಾಯ ಜಪಾನೀ, ಭಾರತೀಯ ಮತ್ತು ಚೀನೀ ಶೈಲಿಗಳು ಬೆರೆತವು. ಓಸಾಕದಲ್ಲಿರುವ ಕನ್‌ಷಿನ್‌ಜಿ ಮಂದಿರದ ಪ್ರಧಾನ ಹಜಾರದಲ್ಲಿ ಈ ಮೂರೂ ಶೈಲಿಗಳ ಲಕ್ಷಣಗಳು ಕೂಡಿರುವುದನ್ನು ಕಾಣಬಹುದು.

ಕಾಮಕೂರ ಕಾಲದಲ್ಲಿ ಯೋಧವರ್ಗ ಪ್ರಧಾನವಾಗಿತ್ತು. ಬುಕೆಝುಕುರಿ ಎಂಬ ವಾಸಗೃಹಗಳ ಹೊಸ ಶೈಲಿ ಹುಟ್ಟಿಕೊಂಡಿದ್ದು ಆ ಕಾಲದಲ್ಲಿ. ಷಿನ್‌ಡೆನ್ ಝುಕುರಿಯ ಕೆಲವು ಅಂಶಗಳೂ ಹೊಲಮನೆಗಳ ಕೆಲವಂಶಗಳೂ ಈ ಕಟ್ಟಡಗಳಲ್ಲಿ ಸೇರಿದ್ದುವು. ಷಿನ್‌ಡೆನ್‌ಝುಕುರಿಯಂತೆ ವಿಶಾಲವಾದ ಹಜಾರ ಪ್ರಧಾನವಾಗಿದ್ದರೂ ಬುಕೆಝುಕುರಿಯಲ್ಲಿ, ಹಜಾರದ ಸುತ್ತ ಅಥವಾ ಒಂದು ಪಾರ್ಶ್ವದಲ್ಲಿ, ಸರಿಸಬಹುದಾಗಿದ್ದ ರಟ್ಟಿನ ಹಲಗೆಗಳಿಂದ ಬೇರ್ಪಡಿಸಿದ ಕೆಲವು ಕೋಣೆಗಳಿದ್ದುವು. ಈ ಕಟ್ಟಡಗಳಲ್ಲಿ ಜಾಲಂಧ್ರಗಳಿದ್ದ ಬಾಗಿಲುಗಳ ಬದಲು ಅಂಥ ಜಾಲಂಧ್ರಗಳಿಗೆ ಕಾಗದವನ್ನು ಅಂಟಿಸಿದ ಬಾಗಿಲುಗಳನ್ನು ಬಳಸಲಾಗುತ್ತಿತ್ತು. ಕೋಣೆಗಳ ನೆಲಗಟ್ಟಿನ ಮೇಲೆ 2ಮೀ.X1ಮೀ. ವಿಸ್ತಾರದ ಹುಲ್ಲಿನ ಚಾಪೆಗಳನ್ನು ಹಾಸುತ್ತಿದ್ದರು. ಅನಂತರಕಾಲದ ಜಪಾನೀ ಗೃಹಗಳಲ್ಲಿ ಅಂಥ ಚಾಪೆಗಳನ್ನು ಸದಾ ಉಪಯೋಗಿಸಲಾಗುತ್ತಿತ್ತು. ಶ್ರೀಮಂತ ಯೋಧರ ಮನೆಗಳ ಸುತ್ತ ಕೋಟೆ ಕಂದಕಗಳನ್ನು ನಿರ್ಮಿಸಲಾಗುತ್ತಿತ್ತು. ಕೋಟೆಗೋಡೆಗಳಲ್ಲಿ ಹೆಬ್ಬಾಗಿಲುಗಳೂ ಕಾವಲುಗಾರರ ಬುರುಜುಗಳೂ ಇದ್ದುವು.

ಹೆಚ್ಚು ಶ್ರೀಮಂತಿಕೆಯುಳ್ಳ ಎಲ್ಲ ವರ್ಗದವರೂ ಷಿನ್‌ಡೆನ್‌ಝುಕುರಿ ಮಾದರಿಯ ಮನೆಗಳನ್ನು ಕಟ್ಟಿಸುತ್ತಿದ್ದರೂ ಶ್ರೀಮಂತ ಯೋಧರು ತಮ್ಮ ವಾಸಗೃಹಗಳಲ್ಲಿ ಬುಕೆಝುಕುರಿ ಗೃಹಗಳ ಲಕ್ಷಣಗಳನ್ನೂ ಅಳವಡಿಸಿಕೊಳ್ಳುತ್ತಿದ್ದರು. ಶ್ರೀಮಂತ ಧಾರ್ಮಿಕವರ್ಗದವರ ಮನೆಗಳಲ್ಲಿ ಅಧ್ಯಯನ ಕೋಣೆ (ಷಾಯಿನ್) ಎಂಬ ನೂತನ ಅಂಗವೊಂದು ಸೇರಿತು. ಇದರಲ್ಲಿ ಪ್ರಮುಖವಾಗಿ ಒಂದು ಕಿಟಕಿ, ಅದಕ್ಕೆ ಹೊಂದಿದಂತೆ ಮೇಜಿನಂತೆ ಉಪಯೋಗಿಸಬಹುದಾಗಿದ್ದ, ಆವಶ್ಯಕವಿಲ್ಲದಾಗ ಮಡಿಸಬಹುದಾಗಿದ್ದ ಅಗಲವಾದ ಹಲಗೆ ಇದ್ದುವು. ಕಿಟಕಿಯ ಪಕ್ಕದಲ್ಲಿ ಪುಸ್ತಕಗಳನ್ನು ಇಡಲು ಒಂದು ಕಪಾಟನ್ನೂ ಚಿತ್ರಪಟಗಳನ್ನು ನೇತುಹಾಕಲು ನಿರ್ದಿಷ್ಟಸ್ಥಳಗಳನ್ನೂ ಒದಗಿಸಲಾಗಿತ್ತು.

ಜೆನ್ ಬೌದ್ಧಪಂಥದ ಪ್ರಭಾವಕ್ಕೊಳಗಾದ ಶ್ರೀಮಂತ ಯೋಧರು ಅಧ್ಯಯನ ಕೋಣೆಯನ್ನುಳ್ಳ ಕಟ್ಟಡಗಳನ್ನು ಹೆಚ್ಚುಹೆಚ್ಚಾಗಿ ಕಟ್ಟಿಸಲಾರಂಭಿಸಿದರು. ಆದರೆ ಅವರಲ್ಲಿ ವಿದ್ಯೆಗೆ ಹೆಚ್ಚು ಪ್ರಾಧಾನ್ಯವಿಲ್ಲದ್ದರಿಂದ ಅವರು ಅಧ್ಯಯನಕೋಣೆಗಳನ್ನು ಆಮೋದ–ಪ್ರಮೋದಗಳಿಗೆ ಉಪಯೋಗಿಸುತ್ತಿದ್ದರು. ಆದ್ದರಿಂದ ಅವು ವಿಸ್ತಾರವಾಗಿಯೂ ಅಲಂಕಾರಪೂರ್ಣವಾಗಿಯೂ ಇದ್ದುವು. 14–15ನೆಯ ಶತಮಾನಗಳಲ್ಲಿ ಇಡೀ ಕಟ್ಟಡಕ್ಕೆ ಷಾಯಿನ್ ಎಂಬ ಹೆಸರು ಬಂತು.

ಆ ಕಾಲದ ವಾಸಗೃಹಗಳಲ್ಲಿ ಪ್ರಸಿದ್ಧವೆಂದರೆ ಕಿಂಕುಕುಜಿ ಅಥವಾ ಚಿನ್ನದ ಪ್ರಾಂಗಣಗಳು ಮತ್ತು ಗಿಂಕಕುಜಿ ಅಥವಾ ಬೆಳ್ಳಿಯ ಪ್ರಾಂಗಣಗಳು. ಕಿಂಕುಕುಜಿಗಳಲ್ಲಿ ಮುಖ್ಯವಾದ್ದು 14ನೆಯ ಶತಮಾನದಲ್ಲಿ ಆಷಿಕಾಗಾ ಯೊಷಿಮಿಟ್ಸು ಎಂಬ ಶೋಗನ್ ಕಟ್ಟಿಸಿದ ಅರಮನೆಯ ಭಾಗ. ಅದನ್ನು 1950ರಲ್ಲಿ ಒಬ್ಬ ದಂಗೆಕೋರ ನಾಶಗೊಳಿಸಿದರೂ ಬಹು ಮಟ್ಟಿಗೆ ಮೊದಲಿನ ರೂಪದಲ್ಲಿ ಅದನ್ನು ಪುನರ್ನಿರ್ಮಿಸಲಾಗಿದೆ. ಸಣ್ಣದಾದ, ಮೂರು ಅಂತಸ್ತುಗಳ ಈ ಕಟ್ಟಡದಲ್ಲಿ ಕೆಳಗಿನ ಎರಡು ಅಂತಸ್ತುಗಳದು ಷಿನ್‌ಡೆನ್‌ಜುಕುರಿ ಮಾದರಿ. ಮೂರನೆಯ ಅಂತಸ್ತು ಚೀನೀ ಜ಼ೆನ್ ಪಂಥದ ವಿಹಾರಗಳನ್ನು ಹೋಲುತ್ತದೆ. ಈ ಎರಡು ವಿಭಿನ್ನಶೈಲಿಗಳನ್ನು ಬಹಳ ಪ್ರಯತ್ನಪೂರ್ವಕವಾಗಿ ಒಂದುಗೂಡಿಸಿ ಸುಂದರ ಸಮನ್ವಯತೆಯನ್ನು ಸಾಧಿಸಲಾಗಿದೆ. ಯೊಷಿಮಿಟ್ಸುವಿನ ವಂಶದವನಾದ ಆಷಿಕಾಗ ಯೊಷಿಮಾಸಾ 1480ರಲ್ಲಿ ಕಟ್ಟಿಸಿದ, ಅರಮನೆಗೆ ಸೇರಿದ, ಗಿಂಕಕುಜಿ ಕಟ್ಟಡ ಕಿಂಕುಕುಜಿಗಿಂತ ಸಣ್ಣದೂ ಕಡಿಮೆ ವೈಭವವುಳ್ಳದ್ದೂ ಆಗಿದ್ದರೂ ಷಿನ್‌ಡೆನ್‌ಝುಕುರಿ ಶೈಲಿಯಿಂದ ಷಾಯಿನ್ ಝುಕುರಿ ಶೈಲಿಯತ್ತ ಆದ ಮಾರ್ಪಾಟುಗಳನ್ನು ನಿರೂಪಿಸುವ ಉತ್ತಮ ನಿದರ್ಶನವೆನಿಸಿದೆ.

ಮುರೋಮಚಿ ಕಾಲದಲ್ಲಿ (1335–1573) ಚೀನದಿಂದ ಪ್ರವೇಶಿಸಿದ ಚಹ ಕುಡಿಯುವ ಪದ್ಧತಿ ಬಹಳ ಜನಪ್ರಿಯವಾಯಿತು. ಕ್ರಮೇಣ ಚಹ ಕುಡಿಯುವ ವೈಶಿಷ್ಟ್ಯಪೂರ್ಣವಾದ ವಿಧ್ಯುಕ್ತ ಪದ್ಧತಿಗಳು ಬೆಳೆದುವು. ಇವುಗಳಲ್ಲಿ ವಬಿ ಪದ್ಧತಿ ಒಂದು. ಇದು ಶ್ರೀಮಂತವರ್ಗಗಳಲ್ಲಿ ಜನಪ್ರಿಯತೆ ಗಳಿಸಿತು. ಅದಕ್ಕಾಗಿಯೇ ಚಷಿಟ್ಸು (ಚಹಾಗೃಹ) ಎಂಬ ವಿಶಿಷ್ಟವಾದರಿಯ ಕಟ್ಟಡಗಳು ನಿರ್ಮಾಣವಾದುವು. ಚಷಿಟ್ಸು ಮೊದಲು ಜಪಾನಿ ಹೊಲಮನೆಯ ಅನುಕರಣೆ. ಅದು ಬಹಳ ಸಣ್ಣದು. ನೋಡಲು ಬಲು ಸರಳ. ಅದರ ಚಾವಣಿ ಹುಲ್ಲಿನದು. ಅದರ ಮರದ ಕಂಬಗಳೂ ಅಡ್ಡತೊಲೆಗಳೂ ಬಹಳ ನವಿರು. ಗೋಡೆಗಳು ಮಣ್ಣಿನವು. ಗೋಡೆಗಳಲ್ಲಿದ್ದ ರಂಧ್ರಗಳೇ ಕಿಟಕಿಗಳು, ಒಂದು ವರ್ಣಚಿತ್ರ, ಒಂದು ಹೂವಿನ ಗುಚ್ಛ, ಒಂದು ಕಲಾವಸ್ತು–ಇವಿಷ್ಟೇ ಈ ಗೃಹಗಳ ಅಲಂಕಾರ ವಸ್ತುಗಳು.



ಕ್ಯೂರೊ–ಷಾಯಿನ್ ಒಂದರ ಒಳಭಾಗ. 16ನೆಯ ಶತಮಾನದ ಕೊನೆ

ಕೀಯೋಟೋದ ಸೈನಿಕ ಆಡಳಿತ ಮುರೋಮಚಿ ಕಾಲದ ಕೊನೆಯವರೆಗೂ ದೇಶದ ಏಕತೆಯನ್ನು ಹೆಸರಿಗೆ ಮಾತ್ರ ಉಳಿಸಿಕೊಂಡು ಬರುತ್ತಿದ್ದರೂ, ಪ್ರಾಂತೀಯ ಶ್ರೀಮಂತರು ಸ್ವತಂತ್ರ ಮನೋವೃತ್ತಿ ಬೆಳೆಸಿಕೊಂಡು, ತಮ್ಮತಮ್ಮಲ್ಲೇ ಕಚ್ಚಾಡುತ್ತಿದ್ದರು. ಇವರು ಅನೇಕ ಕೋಟೆಗಳನ್ನು ಕಟ್ಟಿಸಿದರು. ಇವುಗಳಲ್ಲಿ ಬೇರೆ ಬಗೆಯ ವಾಸ್ತುವಿಧಾನಗಳು ಬೆಳೆದುವು. 16ನೆಯ ಶತಮಾನದ ಕೊನೆಯಲ್ಲಿ ಟೊಯೊಟೊಮಿ ಹಿಡೆಯೊಷಿ ದೇಶದ ಐಕ್ಯವನ್ನು ಮತ್ತೆ ಸಾಧಿಸಿದಾಗ ಅವನು ಅನೇಕ ಅಂತಸ್ತುಗಳ ಕೋಟೆಗಳ ದೊಡ್ಡ ಸರಣಿಯನ್ನೇ ನಿರ್ಮಿಸಿದ. ಅವುಗಳ ರಕ್ಷಣೆಗಾಗಿ ಕಾವಲುಗಾರರ ಗೋಪುರಗಳನ್ನು ಕೋಟೆಗಳ ಗೋಡೆ ಮತ್ತು ಅವುಗಳ ಸುತ್ತ ಕಂದಕಗಳನ್ನು ನಿರ್ಮಿಸಲಾಯಿತು. ದೇಶಾದ್ಯಂತ ಅಂಥ ಅನೇಕ ಕೋಟೆಗಳು ಶ್ರೀಮಂತವರ್ಗದವರಿಂದ ನಿರ್ಮಿತವಾದುವು. 17ನೆಯ ಶತಮಾನದ ಅನಂತರ ಅಂಥ ಕೋಟೆಗಳಿಗೆ ಯಾವುದೇ ರಕ್ಷಣೆಯ ಆವಶ್ಯಕತೆಯಿಲ್ಲದಿದ್ದರೂ ಅವು ಪ್ರಗತಿದಾಯಕವಾದ ವ್ಯಾಪಾರಕೇಂದ್ರಗಳಾಗಿ ಜಪಾನೀ ಸಾಮಾಜಿಕ ಜೀವನದಲ್ಲಿ ತಮ್ಮ ವೈಶಿಷ್ಟ್ಯವನ್ನುಳಿಸಿಕೊಂಡುವು. ಅಂಥ ಕೋಟೆಗಳ ಉತ್ತಮ ನಿದರ್ಶನವೆಂದರೆ ಹಿಮೆಜಿ ಕೋಟೆ. ಅದರ ಬಿಳಿಯ ಗೋಡೆಗಳು ಮತ್ತು ಎತ್ತರದ ಚಾವಣಿಗಳು ಸೌಂದರ್ಯ ಪೂರ್ಣವಾಗಿವೆ.

ಅಂಥ ಕೋಟೆಗಳ ಒಳಭಾಗದಲ್ಲಿ ಷಾಯಿನ್‌ಝುಕುರಿ ಶೈಲಿಯ ಔನ್ನತ್ಯವನ್ನು ಪ್ರತಿನಿಧಿಸುವ ಭವ್ಯ ಅರಮನೆಗಳು ಸಂಪದ್ಭರಿತವಾದ ಮೊಮೊಯಮ ಕಾಲದಲ್ಲಿ (1574–1603) ನಿರ್ಮಿತವಾಗಿರುವುದರಿಂದ ಅವು ವಿಸ್ತಾರವಾಗಿವೆ. ಒಳಭಾಗದ ಅಲಂಕರಣ ಪ್ರಧಾನವಾಗಿದೆ. ಒಳಗೋಡೆಗಳಲ್ಲಿ ಮತ್ತು ಬಾಗಿಲು ಚೌಕಟ್ಟುಗಳಲ್ಲಿ ಉಪಯೋಗಿಸಿರುವ ಮರದ ಕಂಬ ಮತ್ತು ತೊಲೆಗಳಿಗೆ ವಿಶಿಷ್ಟವಾದ ಗಾಂಭೀರ್ಯಗಳನ್ನು ಪುಷ್ಟಿಗೊಳಿಸುವ ಸಲುವಾಗಿ ಕಟ್ಟಡಗಳ ಮಹತ್ತ್ವವನ್ನು ಹೆಚ್ಚಿಸಲಾಗಿತ್ತು.

ಸುಮಾರು ಅದೇ ಕಾಲದಲ್ಲಿ ಸುಕಿಯಝುಕುರಿ ಎಂಬ ಹೊಸ ಶೈಲಿಯ, ಷಾಯಿನ್ ಮತ್ತು ಚಹಗೃಹಗಳೆರಡರ ಸಮ್ಮಿಲನದ, ಕಟ್ಟಡಗಳು ನಿರ್ಮಾಣವಾಗಲಾರಂಭಿಸಿದುವು. ಅವು ಸರಳವೂ ವರ್ಗಪ್ರಧಾನವಾಗಿಲ್ಲದೆಯೂ ಇದ್ದುವು. ಕಂಬಗಳು, ಅಡ್ಡತೊಲೆಗಳು ತೆಳುವಾಗಿಯೂ ಚಾವಣಿ ಹಗುರವಾಗಿಯೂ ಅಲಂಕರಣ ಕಡಿಮೆಯಾಗಿಯೂ ಇದ್ದುವು. 17ನೆಯ ಶತಮಾನದ ಪೂರ್ವಾರ್ಧದಲ್ಲಿ ಕೀಯೋಟೋ ನಗರದಲ್ಲಿ ಕಟ್ಟಿಸಲಾದ ಅರಮನೆ ಈ ಶೈಲಿಯ ಉತ್ತಮ ನಿದರ್ಶನ. ಅದರ ಮುಖ್ಯಕಟ್ಟಡ ಹಗುರವೂ ಸರಳವೂ ಆಗಿರುವುದಲ್ಲದೆ ನೆರೆಹೊರೆಯ ಸಣ್ಣ ನಿರ್ಮಾಣಗಳೂ ಗಮನಾರ್ಹ.

ಚಹಗೃಹ–17ನೆಯ ಶತಮಾನ

ಮಧ್ಯದಲ್ಲಿರುವ ಅರಮನೆಯ ಭಾಗದಲ್ಲಿ ಡೊಂಕುಡೊಂಕಾಗಿ ವ್ಯವಸ್ಥೆಗೊಳಿಸಿದ ಮೂರು ಷಾಯಿನ್ ಕೊಠಡಿಗಳುಂಟು. ಅವುಗಳ ಪೂರ್ವದಿಕ್ಕಿನಲ್ಲಿ ಅವೆಲ್ಲದರ ಮುಂಭಾಗದಲ್ಲಿ ಕಾಣುವಂತೆ ಅಲ್ಲಿಯ ಸುಂದರ ಉದ್ಯಾನದ ಮಧ್ಯದಲ್ಲಿ ಒಂದು ಕೊಳವನ್ನು ನಿರ್ಮಿಸಲಾಗಿದೆ. ಕೊಳದ ಆಚೆ ಇರುವ ಚಹಗೃಹದ ಹೆಸರು ಷೋಕಿಂಟಿಯಿ. ಗ್ರಾಮೀಣ ನಿರ್ಮಾಣದಂತಿರುವ ಆ ಚಹಗೃಹ ಅರಮನೆಯ ಶ್ರೀಮದ್ಗಾಂಭೀರ್ಯವನ್ನು ಅಣಕಿಸುವಂತಿದೆ. ಉತ್ತರದಂಚಿನಿಂದ ಬಳಸಾದ ಕಾಲುಹಾದಿಯೊಂದು ಕೊಳವನ್ನು ಸುತ್ತಿಕೊಂಡು ಕಲ್ಲುಚಪ್ಪಡಿಗಳ ಸೇತುವೆಯನ್ನು ಹಾಯ್ದು ಅರಮನೆಯನ್ನು ತಲಪುತ್ತದೆ. ಅಲ್ಲಿಂದ ಮುಂದೆ ಹೋದರೆ ಮತ್ತೆರಡು ಚಹಗೃಹಗಳು ಮತ್ತು ಪ್ರಾಚೀನವಾದ ಒಂದು ಪುರಾತನ ಮಂದಿರವನ್ನು ಹಾಯ್ದು ವನಪ್ರದೇಶದ ಮೂಲಕ ಉದ್ಯಾನವನದ ದಕ್ಷಿಣದಂಚಿಗೆ ಆ ಕಾಲುಹಾದಿ ಕೊಂಡೊಯ್ಯುತ್ತದೆ.

ಕಟ್ಸುರ ಅರಮನೆ ಜಪಾನೀ ವಾಸ್ತುನಿರ್ಮಾಣಗಳಲ್ಲಿ ಉತ್ತಮವಾದ್ದೆಂದು ಹೇಳಲಾಗಿದ್ದರೂ ಅದರಲ್ಲಿ ಬಳಸಿರುವ ಕಂಬಗಳು ತೆಳುವಾದವು. ಅವನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗಿದೆ. ಸರಿಯಾದ ನಿರ್ಮಾಣತಂತ್ರಗಳನ್ನು ಬಳಸಿಲ್ಲ. ಇಂಥ ಕೊರತೆಗಳಿಂದಾಗಿ ಷಾಯಿನ್ ಶೈಲಿಯ ಶ್ರೀಮಂತಿಕೆ ಕಣ್ಮರೆಯಾಗಿದೆಯೆಂದು ಆರೋಪಿಸಲಾಗಿದೆ. ಆದರೆ ಅದರ ಸರಳಸೌಂದರ್ಯ ಆಧುನಿಕ ಪಾಶ್ಚಾತ್ಯ ವಾಸ್ತುಶಿಲ್ಪಿಗಳ ಮೆಚ್ಚುಗೆ ಗಳಿಸಿದೆ.

ಜಪಾನ್‌ನ ಜನಜೀವನದ ಮೇಲೆ ಉಂಟಾಗಿದ್ದ ವಿದೇಶೀ ಪ್ರಭಾವಗಳನ್ನು 17ನೆಯ ಶತಮಾನದ ಮೊದಲ ಭಾಗದಲ್ಲಿ ಅಧಿಕಾರಕ್ಕೆ ಬಂದ ಟೋಕುಗಾವಾ ಮನೆತನ ಕಾನೂನುಗಳ ಮೂಲಕ ನಿಷೇಧಿಸಿತಲ್ಲದೆ, ಯಾವುದೇ ಹೊಸ ರಾಜಕೀಯ ಸಾಮಾಜಿಕ ಸುಧಾರಣೆಗಳಿಗೂ ಅವಕಾಶ ನೀಡಲಿಲ್ಲ. ಪ್ರತಿಯೊಂದು ವರ್ಗದವರೂ ನಿರ್ದಿಷ್ಟ ಶೈಲಿಯಲ್ಲಿ ನಿರ್ಮಿಸಿದ, ತಮ್ಮ ಅಂತಸ್ತಿಗೆ ಉಚಿತವಾದ, ಮನೆಗಳಲ್ಲೇ ವಾಸಿಸಬೇಕೆಂದು ವಿಧಿಸಿದ್ದರಿಂದ ಆ ಕಾಲದಲ್ಲಿ ವಿವಿಧ ಶೈಲಿಗಳ ವಾಸಗೃಹಗಳು ಪ್ರಚಲಿತವಾಗಿದ್ದುವು.

ಸುದೀರ್ಘವಾದ ಶಾಂತಿಯುತ ಆಡಳಿತವಿದ್ದುದರಿಂದ ಜನರ ಸಂಪತ್ತು ವೃದ್ಧಿಗೊಂಡಿತು. ಆಡಳಿತದ ವಿಧಿನಿಯಮಗಳಿಗನುಸಾರವಾಗಿ ವಿವಿಧ ವರ್ಗಗಳವರ ವಾಸಗೃಹಗಳ ಹೊರಭಾಗದ ನೋಟದಲ್ಲಿ ಹೆಚ್ಚಿನ ಬದಲಾವಣೆಗಳಾಗದಿದ್ದರೂ ಒಳಭಾಗದ ಅಲಂಕರಣದ ಕೆಲಸ ವೈಭವಪೂರ್ಣವಾಗುತ್ತ ನಡೆದಿತ್ತು. ಅವು ಹೆಚ್ಚು ವಿಶಾಲವೂ ಉಪಯುಕ್ತ ಅಂಶಗಳನ್ನೊಳಗೊಂಡವೂ ಆದುವು.

ಟೋಕುಗಾವಾ ಆಡಳಿತ ಅನೇಕ ಸಾರ್ವಜನಿಕ ಕಟ್ಟಡಗಳ ನಿರ್ಮಾಣಕಾರ್ಯವನ್ನು ಕೈಗೊಂಡಿತಲ್ಲದೆ ಬೌದ್ಧದೇವಾಲಯಗಳ ಮತ್ತು ಮೃತ ಶ್ರೀಮಂತ ಅಧಿಕಾರಿಗಳ ಸ್ಮಾರಕಮಂದಿರಗಳ ಪುನರ್ನಿರ್ಮಾಣ ಕಾರ್ಯವನ್ನೂ ಪ್ರಾರಂಭಿಸಿತು. ಆದರೆ ವಾಸ್ತುನಿರ್ಮಾಣಪದ್ಧತಿಯಲ್ಲಿ ಯಾವ ಮಹತ್ತ್ವಪೂರ್ಣ ಬದಲಾವಣೆಯೂ ಆಗಲಿಲ್ಲ. ಮರಗೆಲಸದಲ್ಲಿ ಬಹಳ ಸುಧಾರಣೆಗಳಾದುವು. ಸಾರ್ವಜನಿಕ ಕಟ್ಟಡಗಳಲ್ಲೂ ಶ್ರೀಮಂತರ ಭವನಗಳಲ್ಲೂ ಹೆಚ್ಚಿನ ಅಲಂಕರಣ ಕಂಡುಬರುತ್ತದೆ. ನಿಕ್ಕೊದಲ್ಲಿರುವ ಟೊಷೊಗು ಕಟ್ಟಡದಲ್ಲಿ ಈ ಅಲಂಕರಣದ ಅತಿರೇಕವನ್ನು ಕಾಣಬಹುದು. ಮೊದಲ ಟೋಕುಗಾವಾ ಶ್ರೀಮಂತ ಅಧಿಕಾರಿ ಆಯಯಾಸು ಸ್ಮಾರಕವೆಂದು ನಿರ್ಮಿಸಿದ ಈ ಮಂದಿರದ ವೈಭವವನ್ನು ಪರಾಕಾಷ್ಠೆಗೆ ಮುಟ್ಟಿಸಲು ದೇಶದ ಎಲ್ಲ ಭಾಗಗಳಿಂದಲೂ ವಾಸ್ತುಶಿಲ್ಪಿಗಳನ್ನೂ ಬಡಗಿಗಳನ್ನೂ ಕರೆಸಲಾಯಿತು. ಬೆಲೆಬಾಳುವ ಮರಮುಟ್ಟು ಮತ್ತು ಇತರ ಸಾಮಗ್ರಿಗಳನ್ನು ಆಯ್ದು ತರಲಾಯಿತು. ಇಷ್ಟಾದರೂ ಅತಿರೇಕದ ಅಲಂಕಾರ ತುಂಬಿರುವುದರಿಂದ ಮೊಮೊಯಮದ ವಾಸ್ತುಲಕ್ಷಣಗಳು ಕಾಣವಾಗಿವೆ. ವಾಸ್ತುಲಕ್ಷಣಗಳು ಪ್ರಮುಖವಾಗಿ ಎದ್ದು ಕಾಣುವ ಬದಲು ವಿವಿಧ ಬಣ್ಣಗಳಿಂದ ಚಿತ್ರಿತವಾದ ಕೆತ್ತನೆಗಳು ಪ್ರಧಾನವಾಗಿವೆ. ಸುಂದರವಾದ ದಟ್ಟ ಕಾಡಿನ ಮಧ್ಯೆ ಇದನ್ನು ನಿರ್ಮಿಸಲಾಗಿರುವುದರಿಂದ ಕಟ್ಟಡಗಳ ದಟ್ಟ ಬಣ್ಣಗಳು ಅತಿಯಾಗಿ ಎದ್ದುಕಾಣುವುದಿಲ್ಲವಾದರೂ ಜಪಾನೀ ವಾಸ್ತುಶೈಲಿಯ ಸರಳತೆ ಮತ್ತು ಸುರುಚಿ ಕಾಣವಾಗಿವೆ.

1868ರಲ್ಲಿ ಮೇಜಿ ಅಧಿಕಾರ ಬಂದ ಅನಂತರ ಜಪಾನಿನ ಜನಜೀವನದಲ್ಲಿ ಪಾಶ್ಚಾತ್ಯ ಪ್ರಭಾವಗಳು ಹೆಚ್ಚಿದುವು. ಪಾಶ್ಚಾತ್ಯ ವಾಸ್ತುಪದ್ಧತಿಗಳೂ ಸಾಮಗ್ರಿಗಳೂ ಸಾರ್ವಜನಿಕ ಕಟ್ಟಡಗಳ ನಿರ್ಮಾಣದಲ್ಲಿ ಬಳಕೆಗೆ ಬಂದುವು. ಪಾಶ್ಚಾತ್ಯ ವಾಸ್ತುಶಿಲ್ಪಿಗಳು ಜಪಾನೀ ಕಟ್ಟಡಗಳಿಗಾಗಿ ನಕ್ಷೆ ತಯಾರಿಸಿದರು; ಜಪಾನೀಯರಿಗೆ ತರಬೇತು ನೀಡಿದರು. ಪಾಶ್ಚಾತ್ಯ ಭವನಗಳ ಶೈಲಿಯ ಅನುಕರಣೆಯ ಜೊತೆಗೆ ಪಾಶ್ಚಾತ್ಯ ಹಾಗೂ ಪ್ರಾಚೀನ ಜಪಾನೀ ಶೈಲಿಯೂ ಸಂಮಿಶ್ರಣಗೊಂಡುವು. ಸಿಮೆಂಟು ಗಾರೆಗಳನ್ನು ಬಳಸಿ ಪ್ರಾಚೀನ ಜಪಾನೀ ಶೈಲಿಯ ಕಟ್ಟಡಗಳು ನಿರ್ಮಾಣವಾದುವು.

ಎರಡನೆಯ ಮಹಾಯುದ್ಧದ ತರುವಾಯದ ಜಪಾನೀ ವಾಸ್ತುಕಲೆಯ ಬೆಳವಣಿಗೆಯನ್ನು ಮೂರು ಹಂತಗಳನ್ನಾಗಿ ವಿಂಗಡಿಸಲಾಗಿದೆ. 1945 ರಿಂದ 1950ರ ವರೆಗಿನ ಮೊದಲ ಹಂತದಲ್ಲಿ ಆರ್ಥಿಕ ಮುಗ್ಗಟ್ಟು ಮತ್ತು ಸಾಮಗ್ರಿಗಳ ಕೊರತೆಯಿಂದ ಯಾವುದೇ ಹೊಸ ನಿರ್ಮಾಣಗಳು ಆಗಲಿಲ್ಲ. ಕೊರಿಯ ಯುದ್ಧ ಪ್ರಾರಂಭವಾದಾಗಿನಿಂದ ಜಪಾನಿನ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಕಟ್ಟಡಗಳ ನಿರ್ಮಾಣಕಾರ್ಯ ಭರದಿಂದ ಸಾಗಿತು. 1950–1955ರ ಕಾಲದಲ್ಲಿ ಪಾಶ್ಚಾತ್ಯ ವಾಸ್ತುಕಲೆಯ ಮುನ್ನಡೆಯ ಅಂಶಗಳನ್ನು ಅಳವಡಿಸಿಕೊಳ್ಳಲಾಯಿತು. 1954ರ ವೇಳೆಗೆ ಹಿರೋಷಿಮದಲ್ಲಿ ಶಾಂತಿಕೇಂದ್ರ ಭವನವನ್ನು ನಿರ್ಮಿಸಿದ ಟಂಗೆಕೆಂಜೋ ವಿಶ್ವಖ್ಯಾತಿ ಗಳಿಸಿದರು. ಆ ವೇಳೆಗಾಗಲೇ ಖ್ಯಾತಿ ಪಡೆದಿದ್ದ ಹೊರಿಗುಚಿ ಸುಟಮಿ ಎಂಬ ಖ್ಯಾತ ವಾಸ್ತುಶಿಲ್ಪಿ ಪರಂಪರಾಗತ ಶೈಲಿಯಲ್ಲಿ ನಿರ್ಮಿಸಿದ ಹಷ್ಪೋಕನ್ ಹೋಟಲು ಕಟ್ಟಡ ಈ ಕಾಲದ ವಾಸ್ತುವಿನ ಒಂದು ಉತ್ತಮ ನಿದರ್ಶನ. ವಾಸ್ತುನಿರ್ಮಾಣ ಕ್ಷೇತ್ರದಲ್ಲಿ ಪ್ರಗತಿಸಾಧಿಸಿದ ಮತ್ತೊಬ್ಬ ಖ್ಯಾತ ಶಿಲ್ಪಿ ಮೇಕದ ಕುನಿಯೊ.

ಪಾಶ್ಚಾತ್ಯ ಮಾದರಿಯಲ್ಲಿ ಪರಿಪಕ್ವತೆ ಸಾಧಿಸಿದ ಜಪಾನೀ ವಾಸ್ತುಕಲೆ 1955ರ ಅನಂತರ ಸ್ವತಂತ್ರ ಮಾರ್ಗದಲ್ಲಿ ಮುಂದುವರಿದರೂ ಜಪಾನೀ ವಾಸ್ತುಶಿಲ್ಪಿಗಳು ತಮ್ಮದೇ ಆದ ಹೊಸ ಅಂಶಗಳನ್ನು ಅಳವಡಿಸಿಕೊಂಡು ವಿಶ್ವಖ್ಯಾತಿ ಗಳಿಸಿದರು. ಅದರ ಫಲವಾಗಿ 1960ರ ತರುವಾಯ ಜಪಾನೀ ವಾಸ್ತುಶಿಲ್ಪಿಗಳು ಅಮೆರಿಕ, ಯುರೋಪ್‍ಗಳಲ್ಲಿ ಸಹ ವಾಸ್ತುನಿರ್ಮಾಣಕಾರ್ಯಗಳಿಗೆ ಸಲಹೆಗಾರರಾಗಿ ಹೋದರು.

1945ರ ವರೆಗೆ ವಾಸಗೃಹಗಳು ಸಾಂಪ್ರದಾಯಿಕ ಶೈಲಿಯಲ್ಲಿ ನಿರ್ಮಾಣವಾಗುತ್ತಿದ್ದುವು. ಕೆಲವರು ಪಾಶ್ಚಾತ್ಯ ಶೈಲಿಯ ಭವನಗಳನ್ನು ಕಟ್ಟಿಸಿದರೆ, ಮತ್ತೆ ಕೆಲವರು ತಮ್ಮ ಮನೆಗಳಿಗೆ ಪಾಶ್ಚಾತ್ಯ ಶೈಲಿಯ ಕೋಣೆಯನ್ನು ಸೇರಿಸಿಕೊಳ್ಳುತ್ತಿದ್ದರು. ಹಳೆಯ ಮಾದರಿಯ ಗೃಹಗಳಲ್ಲಿ ಹೊರಭಾಗದಲ್ಲಿ ಹೊಸದಾಗಿ ಗಾಜಿನ ಕಿಟಕಿಗಳನ್ನು ಅಳವಡಿಸಲಾಯಿತು. ವಿದ್ಯುದ್ದೀಪ, ಕೊಳಾಯಿ ಮೊದಲಾದ ಆಧುನಿಕ ಸೌಲಭ್ಯಗಳು ಸಜ್ಜುಗೊಂಡುವು. ಯುದ್ಧಾನಂತರ ಕಾಲದಲ್ಲಿ ಕಾಂಕ್ರೀಟಿನ ಕಟ್ಟಡಗಳು ಹೆಚ್ಚು ಹೆಚ್ಚಾಗಿ ನಿರ್ಮಾಣವಾದರೂ ಅವುಗಳಲ್ಲಿ ಜಾರುಬಾಗಿಲು, ಕಿಟಕಿಗಳನ್ನು ನಿರ್ಮಿಸಲಾಗುತ್ತಿತ್ತು. ಹಳೆಯ–ಹೊಸ ಪದ್ಧತಿಗಳ ಸಮ್ಮಿಲನದ ಈ ಜೀವನರೀತಿಯಲ್ಲಿ 1960ರ ವರೆಗೆ ಕುರ್ಚಿಗಳ ಉಪಯೋಗ ಸಹ ಇರಲಿಲ್ಲ. ವಾಸ್ತು ನಿರ್ಮಾಣಗಳ ಹೊರನೋಟದಲ್ಲಿ ಸಾಂಪ್ರದಾಯಿಕತೆ ಕಣ್ಮರೆಯಾಗುತ್ತಿದ್ದರೂ ಒಳ ವ್ಯವಸ್ಥೆಯಲ್ಲಿ ಬದಲಾವಣೆಗಳು ಬಹಳಷ್ಟು ನಿಧಾನವಾಗಿ ನಡೆಯುತ್ತಿವೆ. ಆದರೂ ಪಾಶ್ಚಾತ್ಯ ಜನಜೀವನ ಪದ್ಧತಿ ಕ್ರಮೇಣ ತನ್ನ ಆಕ್ರಮಣ ನಡೆಸುತ್ತಿರುವುದರಿಂದ ಮನೆಗಳ ಒಳಭಾಗಗಳಲ್ಲೂ ಸೂಕ್ತ ಬದಲಾವಣೆ ಆವಶ್ಯಕವೆನಿಸುತ್ತಿದೆ. ಆದರೂ ಹಲವಾರು ಪ್ರಾಚೀನ ಸಂಪ್ರದಾಯಗಳು ಶಾಶ್ವತವಾಗಿ ಉಳಿದುಬರುವಂತೆ ತೋರುತ್ತದೆ. (ಬಿ.ಕೆ.ಜಿ.)

**ಜಪಾನೀ ಶಿಕ್ಷಣ ಪದ್ಧತಿ :** ಜರ್ಮನಿಯಂತೆ ಜಪಾನೂ ಎರಡನೆಯ ಮಹಾಯುದ್ಧದ ಅನಂತರ ಬಹುಬೇಗ ಚೇತರಿಸಿಕೊಂಡು ಇಂದು ಔದ್ಯೋಗಿಕ ಪ್ರಗತಿಯ ಮುಂಚೂಣಿ ರಾಷ್ಟ್ರಗಳಲ್ಲೊಂದಾಗಿದೆ. ಔದ್ಯೋಗಿಕ ಪ್ರಗತಿಗೂ ಆ ಮೂಲಕ ರಾಷ್ಟ್ರದ ಆರ್ಥಿಕಾಭಿವೃದ್ಧಿಗೂ ನೆರವಾಗುವಂಥ ಶಿಕ್ಷಣ ವ್ಯವಸ್ಥೆ ಇವೆರಡು ದೇಶಗಳಲ್ಲೂ ಏರ್ಪಟ್ಟಿದೆ. ಯುರೋಪ್‍ನಲ್ಲಿ ಕಡ್ಡಾಯ ಶಿಕ್ಷಣವನ್ನು ಜರ್ಮನಿ ಮೊದಲು ಆಚರಣೆಗೆ ತಂದಂತೆ ಏಷ್ಯದಲ್ಲಿ ಜಪಾನ್ ಮೊದಲು ಆಚರಣೆಗೆ ತಂದು ಇತರ ಪೌರಸ್ತ್ಯ ದೇಶಗಳಿಗೆ ಮೇಲ್ಪಂಕ್ತಿಯಾಯಿತು. ಜೊತೆಗೆ, ಜಪಾನ್ ಅಕ್ಷರಸ್ಥರ ಪ್ರಮಾಣದಲ್ಲಿ ಪ್ರಪಂಚದಲ್ಲೇ ಅಗ್ರಸ್ಥಾನ ಪಡೆದಿದೆ. ಈ ಎಲ್ಲ ಕಾರಣಗಳಿಂದ ಅಲ್ಲಿನ ಶಿಕ್ಷಣ ಪದ್ಧತಿ ಕುತೂಹಲಕಾರಿಯೆನಿಸುತ್ತದೆ.

ವೈದ್ಯಕೀಯ ಗ್ರಂಥಾಲಯ, ಟೋಕಿಯೋ ವಿಶ್ವವಿದ್ಯಾಲಯ

ಪ್ರಾಚೀನ ಜಪಾನ್‍ನಲ್ಲಿ ಶಿಕ್ಷಣ : ಅಂಥ ವೈಶಿಷ್ಟ್ಯಪೂರ್ಣವೆನ್ನಬಹುದಾದ ಪ್ರಾಚೀನ ಶಿಕ್ಷಣಪದ್ಧತಿಯೊಂದು ಜಪಾನ್‍ನಲ್ಲಿ ಇರದಿದ್ದರೂ ಅದು ಅಂದು ಚೀನದಲ್ಲಿದ್ದ ಶಿಕ್ಷಣಪದ್ಧತಿಯನ್ನು ಸ್ವಾಗತಿಸಿ, ತನ್ನ ಅಗತ್ಯಕ್ಕನುಗುಣವಾಗಿ ಮಾರ್ಪಡಿಸಿ, ತನ್ನದೇ ಆದ ಪದ್ಧತಿಯನ್ನು ಕ್ರಮಕ್ರಮವಾಗಿ ರೂಪಿಸಿಕೊಂಡಿತು. ಮೊದಮೊದಲು ಚೀನದ ಸಾಹಿತ್ಯ, ಸಂಸ್ಕೃತಿಗಳನ್ನೇ ಅವರು ಅಧ್ಯಯನ ಮಾಡುತ್ತಿದ್ದರು. ಚೀನ ಮತ್ತು ಕೊರಿಯದ ಕಲಾವಿದರು, ಪುರೋಹಿತರು ಮತ್ತು ಲೇಖಕರು ಜಪಾನಿನಲ್ಲಿ ಆಡಳಿತ, ಮತಧರ್ಮ, ಬರೆವಣಿಗೆಯ ಕಲೆ ಮುಂತಾದ ಅಂಶಗಳ ಮೇಲೆ ಹೊಸ ಭಾವನೆಗಳನ್ನು ಹರಡಿದರು. ಬರೆವಣಿಗೆಯ ಪರಿಚಯದಿಂದ ಅಲ್ಲಿನ ಬುದ್ಧಿಜೀವಿಗಳ ಮೇಲೆ ಮಹತ್ತರ ಪರಿಣಾಮವಾಯಿತು. ಅಲ್ಲಿಯ ತನಕ ಜ್ಞಾನವನ್ನು ಒಬ್ಬರಿಂದೊಬ್ಬರು ಕಲಿತು ಸಂರಕ್ಷಿಸಬೇಕಾಗಿತ್ತು. ಈಗ ಬರೆವಣಿಗೆಯ ಮೂಲಕ ಅದನ್ನು ಸಂರಕ್ಷಿಸುವುದಕ್ಕೂ ಅಭಿವೃದ್ಧಿಪಡಿಸುವುದಕ್ಕೂ ಸಾಧ್ಯವಾಯಿತು. ಚೀನದಿಂದ ಎಂದು ಅವರು ಬರೆವಣಿಗೆಯನ್ನು ಕಲಿತರೆಂದು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲವಾದರೂ. ಪ್ರ.ಶ. 400ರ ಸುಮಾರಿಗೆ ಅವರಿಗೆ ಅದು ಪರಿಚಯವಾಗಿದ್ದಿರಬೇಕು. ಕೊರಿಯದ ಬರೆಹಗಾರರು ಇಲ್ಲಿ ಸಾಮ್ರಾಜ್ಯದ ದಾಖಲೆಗಳನ್ನು ಚೀನೀ ಭಾವಲಿಪಿಗಳಲ್ಲಿ ಬರೆದಿಟ್ಟಿರುವುದು ಕಂಡುಬಂದಿರುವುದೇ ಇದಕ್ಕೆ ಆಧಾರ. ಬರೆಯುವ ಕಲೆ ಕೈಗೂಡಿದಂತೆ ಜಪಾನಿನ ಶಿಕ್ಷಣ ಹಲವಾರು ಮೂಲಗಳಿಂದ ಪ್ರಭಾವಿತವಾಗಿ ವಿವಿಧ ರೀತಿಯಲ್ಲಿ ಬೆಳೆಯಲಾರಂಭಿಸಿತು. ಅಲ್ಲಿನ ವಿದ್ಯಾರ್ಥಿಗಳು ಚೀನಕ್ಕೆ ಹೋಗಿ ಶಿಕ್ಷಣ ಪಡೆದು ಬರುತ್ತಿದ್ದರು; ಚೀನ ಮತ್ತು ಏಷ್ಯದ ಇತರ ದೇಶಗಳಿಂದ ಅಧ್ಯಾಪಕರೂ ಪುರೋಹಿತರೂ ಬಂದು ಶಿಕ್ಷಣ, ಧರ್ಮ, ಸಂಸ್ಕೃತಿಗಳನ್ನು ಪ್ರಚಾರ ಮಾಡಿ ಹೋಗುತ್ತಿದ್ದರು. ಇವೆಲ್ಲದರ ಫಲವಾಗಿ ಪ್ರ.ಶ. 7ನೆಯ ಶತಮಾನದ ವೇಳೆಗೆ ನಾರಾ–ಕೀಓಟ ಕ್ಷೇತ್ರದಲ್ಲಿ ಒಂದು ರೀತಿಯ ಉನ್ನತ ಶಿಕ್ಷಣ ಪದ್ಧತಿ ರೂಪುಗೊಂಡಿತು. ಚೀನೀಯರ ಪ್ರಾಚೀನ ಮಹಾಕೃತಿಗಳ ಅಧ್ಯಯನ, ಚೀನೀ ಲಿಪಿಯ ಬಳಕೆ, ನ್ಯಾಯಶಾಸ್ತ್ರ, ಅಂಕಗಣಿತ ಮುಂತಾದ ಅಂಶಗಳು ಅಲ್ಲಿ ಮಾನ್ಯತೆ ಪಡೆದುವು. ವೈದ್ಯಶಾಸ್ತ್ರ, ಪಂಚಾಂಗರಚನೆ, ದೇವತಾಶಾಸ್ತ್ರ ಮುಂತಾದವನ್ನು ಬೋಧಿಸುವ ತಾಂತ್ರಿಕ ಶಾಲೆಗಳು ಅಸ್ತಿತ್ವಕ್ಕೆ ಬಂದುವು. ಚೀನದಲ್ಲಿದ್ದಂತೆ ಇಲ್ಲಿಯೂ ಶಿಕ್ಷಣ ಶ್ರೀಮಂತವರ್ಗದವರ ಹಿತಾಸಕ್ತಿಗಳಿಗೆ ಅನುಗುಣವಾಗಿ ರೂಪುಗೊಳ್ಳುತ್ತ ಬಂದಿತು. ಆದರೆ ಸಾರ್ವಜನಿಕ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಆರಿಸಲು ಚೀನದಲ್ಲಿ ಅಂದು

ಆಚರಣೆಯಲ್ಲಿದ್ದ ಪರೀಕ್ಷಾಪದ್ಧತಿಯನ್ನು ಇಲ್ಲಿ ಅಷ್ಟಾಗಿ ಪುರಸ್ಕರಿಸಲಿಲ್ಲ. ಆ ಕಾಲದಲ್ಲಿ ಅನೇಕ ಶ್ರೀಮಂತ ಕುಟುಂಬಗಳು ತಮ್ಮ ಮಕ್ಕಳಿಗೆ ಮನೆಯಲ್ಲೇ ಶಿಕ್ಷಣ ಸೌಲಭ್ಯಗಳನ್ನು ಕಲ್ಪಿಸಿಕೊಂಡು ತಮ್ಮ ನಾಡಿನಲ್ಲಿ ಶ್ರೀಮಂತಿಕೆಗೆ ಕಾರಣವೆನಿಸಿದ್ದ ವಿದ್ಯೆಗಳನ್ನು ಕಲಿಸುವ ಏರ್ಪಾಟು ಮಾಡಿಕೊಂಡಿದ್ದುವು. ಹೀಗೆ ಚೀನೀಯರ ಶಿಕ್ಷಣದ ಮೂಲಭೂತ ವ್ಯವಸ್ಥೆಯನ್ನು ಅವರು ಒಪ್ಪದಿದ್ದರೂ ಅದರ ಪ್ರಧಾನ ಲಕ್ಷಣಗಳನ್ನು ಆಯ್ದುಕೊಂಡು ತಮ್ಮ ಶಿಕ್ಷಣಪದ್ಧತಿಯನ್ನು ರೂಪಿಸಿಕೊಂಡರು. 8ನೆಯ ಶತಮಾನದ ಕೊನೆಯ ವೇಳೆಗೆ ತಮ್ಮದೇ ಆದ ಲಿಪಿಯ ಸೌಂದರ್ಯವನ್ನು ರೂಢಿಸಿಕೊಂಡು ಶಿಕ್ಷಣ ಸಂಸ್ಥೆಗಳು ಉತ್ತಮ ಗದ್ಯಪದ್ಯ ರಚನೆಗೆ ಆರಂಭಿಸಿದ್ದುವು; ಚೀನದ ಪ್ರಾಚೀನ ಗ್ರಂಥಗಳ ಪಠನಕ್ಕೂ ಅವಕಾಶ ಮಾಡಿಕೊಂಡಿದ್ದುವು.

ಸಾಮಂತ ಪ್ರಭುಗಳ ಕಾಲದಲ್ಲಿ ಶಿಕ್ಷಣ: ಸಾಮ್ರಾಟರ ಕೇಂದ್ರ ಸರ್ಕಾರದ ಬಲ ಕುಂದಿದಂತೆ ದೇಶಾದ್ಯಂತ ಸಾಮಂತ ಮಂಡಲಗಳು ರೂಪುಗೊಂಡ ಮೇಲೆ ಶಿಕ್ಷಣಪ್ರಸಾರದ ಹೊಣೆಗಾರಿಕೆಯ ಬಹುಪಾಲು ಬೌದ್ಧಮಠಗಳ ಪಾಲಿಗೆ ಬಂತು. ಆ ಮಠಗಳು ಅಲ್ಲಲ್ಲಿ ದೇವಾಲಯದ ಪಾಠಶಾಲೆಗಳನ್ನು ಆರಂಭಿಸಿ ಮಕ್ಕಳಿಗೆ ಓದುಬರೆಹ, ಲೆಕ್ಕಗಳನ್ನೂ ನೀತಿಪಾಠಗಳನ್ನೂ ಬೋಧಿಸುತ್ತಿದ್ದುವು. ಪ್ರಾಥಮಿಕ ಮಟ್ಟದ ಈ ಶಿಕ್ಷಣ ಅಭಿವೃದ್ಧಿಯಾದಂತೆ ದೇಶದಲ್ಲಿ ಆಗಲೇ ರೂಪುಗೊಳ್ಳಲು ಆರಂಭವಾಗಿದ್ದ ಉನ್ನತ ಶಿಕ್ಷಣ ವ್ಯವಸ್ಥೆ ಮುನ್ನಡೆ ಸಾಧಿಸಿತು. ಬೌದ್ಧಮಠಗಳು ಮಧ್ಯಯುಗದ ಯುರೋಪಿನ ಕ್ರೈಸ್ತಧರ್ಮ ಪೀಠಗಳಂತೆ, ಜನಾಂಗ ರೂಢಿಸಿದ್ದ ಜ್ಞಾನಸಂಪತ್ತನ್ನು ಪ್ರಚಾರ ಮಾಡುವುದರ ಜೊತೆಗೆ ಅದನ್ನು ಸಂರಕ್ಷಿಸುವ ಮತ್ತು ಸಂವರ್ಧನಗೊಳಿಸುವ ಸಂಸ್ಥೆಗಳಾಗಿ ಕೆಲಸ ಮಾಡುತ್ತಿದ್ದುವು. ಅವುಗಳ ಆಶ್ರಯದಲ್ಲಿ ಆಷೀಕಾಗಾದಂಥ ಅನೇಕ ಕಾಲೇಜುಗಳು ಆರಂಭವಾದುವು. ಷೋಮಿಯೋಜಿಯಂಥ ಗ್ರಂಥಾಲಯಗಳೂ (1275) ಸ್ಥಾಪನೆಯಾದುವು. ಎಲ್ಲೆಲ್ಲೂ ಸಾಮಂತರ ಆಡಳಿತವಿದ್ದು, ಆಗಾಗ ಸೈನಿಕ ಕಾರ್ಯಾಚರಣೆಗಳಿಗೆ ಪ್ರಾಶಸ್ತ್ಯವಿದ್ದ ಈ ಕಾಲದಲ್ಲಿ ಸಾಮಂತರನೇಕರು ತಮ್ಮ ಆಸ್ಥಾನಗಳಲ್ಲಿ ಪಂಡಿತರಿಗೆ ತೋರುತ್ತಿದ್ದ ಗೌರವಾಭಿಮಾನಗಳು ಜನತೆ ಹಾಗೂ ಆಡಳಿತಗಾರರು ಶಿಕ್ಷಣದ ಬಗ್ಗೆ ತಳೆದಿದ್ದ ಆಸಕ್ತಿಯನ್ನು ವ್ಯಕ್ತಪಡಿಸುತ್ತವೆ.



**ಟೋಕಿಯೋ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿಭಾಗದಲ್ಲಿರುವ 2,000 ಟನ್ ತೂಗುವ ಒಂದು ಯಂತ್ರ**

ಟೋಕುಗಾವಾನ ಕಾಲದಲ್ಲಿ ಶಿಕ್ಷಣ: 17ನೆಯ ಶತಮಾನದ ಆದಿಯಲ್ಲಿ ಆರಂಭವಾದ ಟೋಕೂಗಾವಾನ ಆಳ್ವಿಕೆಯಲ್ಲಿ ಶಿಕ್ಷಣಕ್ಕೆ ತುಂಬ ಪ್ರೋತ್ಸಾಹ ದೊರಕಿತು. ಅವರ ಕಾಲದಲ್ಲಿ ಅದುವರೆಗೆ ಭೋರ್ಗರೆಯುತ್ತಿದ್ದ ಕದನಗಳಲ್ಲಿ ಭಾಗವಹಿಸಲು ಸೈನಿಕ ಶಿಕ್ಷಣಕ್ಕೆ ಮಾತ್ರ ಪ್ರಾಶಸ್ತ್ಯವಿತ್ತು; ಈಗ ಯುವಕರಿಗೆ ಶಾಂತಿಕಾಲದ ನಾಗರಿಕ ಆಡಳಿತದ ಶಿಕ್ಷಣವನ್ನು ಕೊಡುವ ಕಾರ್ಯ ಆರಂಭವಾಯಿತು. ಅದಕ್ಕಾಗಿ ದೇಶಾದ್ಯಂತ ನೂರಾರು 'ಸಾಮುರೈ' ಶಾಲೆಗಳು ಆರಂಭವಾದುವು. ಅಲ್ಲಿಗೆ 7ರಿಂದ 15 ವರ್ಷದ ಬಾಲಕರು ಸೇರಿ ಶಿಕ್ಷಣ ಪಡೆಯುತ್ತಿದ್ದರು. 15 ವರ್ಷದವರೆಗೆ ಶಿಕ್ಷಣ ಪಡೆದವರು ಅಲ್ಲೇ ವಸತಿ ವಿದ್ಯಾರ್ಥಿಗಳಾಗಿ ಶಿಕ್ಷಣವನ್ನು ಮುಂದುವರಿಸುತ್ತಿದ್ದರು. ವರ್ಷಕ್ಕೆ ಎರಡಾವರ್ತಿ ಉನ್ನತಾಧಿಕಾರಿಗಳ ಸಮ್ಮುಖದಲ್ಲಿ ಪರೀಕ್ಷೆ ನಡೆಯುತ್ತಿತ್ತು. ಭಾರತದ ಗುರುಕುಲಗಳಲ್ಲಿದ್ದಂತೆ ಈ ಶಾಲೆಗಳೂ ಗುರುಶಿಷ್ಯ ಬಾಂಧವ್ಯದ ಉನ್ನತ ಆದರ್ಶಗಳ ಮೇಲೆ ರೂಪುಗೊಂಡಿತ್ತು. ವಿದ್ಯಾರ್ಥಿಗಳು ತಮ್ಮ ಗುರುಗಳೊಡನೆ ಭಕ್ತಿಗೌರವಗಳಿಂದ ನಡೆದುಕೊಳ್ಳುತ್ತಿದ್ದರು. ಟೋಕೂಗಾವಾ ಸೈನಿಕವರ್ಗ ಕನ್‌ಫ್ಯೂಷಿಯಸ್‌ನ ನವೀಕೃತ ಸಿದ್ಧಾಂತವನ್ನು ನಿಷ್ಠೆಯಿಂದ ಅಧ್ಯಯನ ಮಾಡಿ ಅನುಷ್ಠಾನಕ್ಕೆ ತರುತ್ತಿದ್ದರು. ಸಾಮುರೈ ಶಾಲೆಗಳು ಮಾತಾಪಿತೃಗಳಲ್ಲಿ ಭಕ್ತಿಯನ್ನೂ ಹಿರಿಯರಲ್ಲಿ ಗೌರವವನ್ನೂ ವಿದ್ಯಾರ್ಥಿಸಮೂಹದಲ್ಲಿ ಬೆಳೆಸುತ್ತಿದ್ದುವು; ಸೈನಿಕರಲ್ಲಿ ನೈತಿಕ ದೃಷ್ಟಿಯ ಶಿಸ್ತನ್ನು ಪೋಷಿಸುತ್ತಿದ್ದುವು. ನಗರಗಳಲ್ಲಿ ವರ್ತಕರು ತಮ್ಮದೇ ಆದ ಶಾಲೆಗಳನ್ನು ಸ್ಥಾಪಿಸಿಕೊಂಡು ವಾಣಿಜ್ಯ ವ್ಯವಹಾರಗಳನ್ನೂ ಕನ್‌ಫ್ಯೂಷಿಯಸ್‌ನ ಸಿದ್ಧಾಂತವನ್ನೂ ಬೋಧಿಸಲು ವ್ಯವಸ್ಥೆ ಮಾಡಿಕೊಂಡಿದ್ದರು. ಹಿಂದಿನಿಂದ ನಡೆದುಕೊಂಡು ಬರುತ್ತಿದ್ದ ಇತರ ವಿಧದ ಶಿಕ್ಷಣ ಸಂಸ್ಥೆಗಳೂ ಮುಂದುವರಿಯುತ್ತಿದ್ದುವು. ದೇವಾಲಯದ ಶಾಲೆಗಳು ದೇಶದಾದ್ಯಂತ ವ್ಯವಸ್ಥೆಗೊಂಡು ಪ್ರಾಥಮಿಕ ಶಿಕ್ಷಣವನ್ನು ನೀಡುತ್ತಿದ್ದುವು. ಸರ್ಕಾರ ಚೀನೀ ಪಠ್ಯಪುಸ್ತಕಗಳನ್ನು ಭಾಷಾಂತರಿಸಿ ಬಳಕೆಗೆ ತರಲು ಪ್ರೋತ್ಸಾಹ ನೀಡುತ್ತಿತ್ತು. ಆದರೆ ಪಾಶ್ಚಾತ್ಯ ದೇಶಗಳ ಗ್ರಂಥಗಳನ್ನು ದೇಶದೊಳಕ್ಕೆ ಬರಗೊಡುತ್ತಿರಲಿಲ್ಲ. ಯುರೋಪಿನ ಸಾಹಿತ್ಯವನ್ನು ರಾಷ್ಟ್ರದಲ್ಲಿ ಬಹಿಷ್ಕರಿಸಿದ್ದರಿಂದ ಜ್ಞಾನಪ್ರಗತಿಗೆ ಆಗುತ್ತಿದ್ದ ನಷ್ಟವನ್ನು ಮನಗಂಡ ಪ್ರಗತಿಶೀಲರು ಈ ಧೋರಣೆಯನ್ನು ಒಪ್ಪಲಿಲ್ಲ. ಕೆಲವರು ಟೋಕೂಗಾವಾನ ಆಳ್ವಿಕೆಯ ಕೊನೆಕೊನೆಗೆ ಡಚ್ಚರ ಗ್ರಂಥಗಳನ್ನು ಅಧ್ಯಯನ ಮಾಡಿ ಜಪಾನಿನ ಶಿಕ್ಷಣಪದ್ಧತಿಗೂ ಜ್ಞಾನರಾಶಿಗೂ ಪ್ರಗತಿಯ ನೂತನ ಅಂಶವನ್ನು ರಚಿಸಿಕೊಟ್ಟರು. ಅವರ ಯತ್ನದ ಫಲವಾಗಿ ಜಪಾನಿನ ಶಿಕ್ಷಣದ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು.

ಮೇಜೀ ಸಾಮ್ರಾಟರ ಕಾಲದಲ್ಲಿ ಶಿಕ್ಷಣ: ಜಪಾನ್‌ನ ಆಧುನಿಕ ಶಿಕ್ಷಣ ಪದ್ಧತಿ 1868ರಲ್ಲಿ ಮೇಜೀ ಸಾಮ್ರಾಟರ ಪುನಃಸ್ಥಾಪನೆಯೊಡನೆ ಆರಂಭವಾಯಿತು. ಕಿರಿಯ ಮೇಜೀ ಸಾಮ್ರಾಟ ಸಿಂಹಾಸನವೇರುವಾಗ ಜನತೆ 'ಸಾಮ್ರಾಜ್ಯದ ಕಲ್ಯಾಣಕ್ಕಾಗಿ ಪ್ರಪಂಚದ ಎಲ್ಲೆಡೆಯಿಂದಲೂ ಜ್ಞಾನವನ್ನು ಅರಸಲಾಗುವುದು' ಎಂದು ಪ್ರಮಾಣವಚನ ಸ್ವೀಕರಿಸುವಂತೆ ಮಾಡಿತು. ಆ ವಚನಪಾಲನೆಯ ಪ್ರಥಮ ಯತ್ನವಾಗಿ ಸಾಮ್ರಾಜ್ಯ ಸರ್ಕಾರ ಶಿಕ್ಷಣ ಸಚಿವಾಲಯವನ್ನು ಸ್ಥಾಪಿಸಿತು. ಸಾಮಂತ ಪ್ರಭುಗಳ ದೀರ್ಘಾವಧಿಯ ಆಳ್ವಿಕೆಯಲ್ಲಿ 'ತೆರಕೋಯ' ಪಾಠಶಾಲೆಗಳು ಆರಂಭವಾಗಿ ಅಂದಿಗಾಗಲೇ ಅಧಿಕ ಸಂಖ್ಯೆಯಲ್ಲಿ ಸ್ಥಾಪನೆಯಾಗಿದ್ದುವು. 1872ರಲ್ಲಿ ಸಾಮ್ರಾಟರು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸೌಲಭ್ಯವನ್ನೊಳಗೊಂಡ ಕಾನೂನನ್ನು ಮಾಡಿದರು. ಇದರಿಂದ ಶಿಕ್ಷಣ ತೀವ್ರಗತಿಯಲ್ಲಿ ಪ್ರಸಾರವಾಗಲು ಅವಕಾಶವಾಯಿತು. 1873ರ ವೇಳೆಗೆ ದೇಶದಲ್ಲಿ 8,000 ಖಾಸಗಿ ಮತ್ತು ಸರ್ಕಾರದ ಪ್ರಾಥಮಿಕ ಶಾಲೆಗಳು ಅಸ್ತಿತ್ವದಲ್ಲಿದ್ದುವು. ಅವುಗಳಲ್ಲಿ 80,00,000ಕ್ಕೂ ಹೆಚ್ಚು ಮಂದಿ ಶಿಕ್ಷಣ ಪಡೆಯುತ್ತಿದ್ದರು. 1879ರ ವೇಳೆಗೆ ಆ ಶಾಲೆಗಳ ಸಂಖ್ಯೆ 26,000ಕ್ಕೆ ಹೆಚ್ಚಿ, ಅಲ್ಲಿ 25,00,000 ವಿದ್ಯಾರ್ಥಿಗಳು ಸೇರಿದ್ದರು. ಅದೇ ಕಾಲಾವಧಿಯಲ್ಲಿ ಪ್ರೌಢಶಾಲೆಗಳು ಸಂಖ್ಯೆಯಲ್ಲಿ 20ರಿಂದ 700ಕ್ಕೆ ಹೆಚ್ಚಿದುವು. 1877ರಲ್ಲಿ ಟೋಕೀಯೊದ ಸಾಮ್ರಾಜ್ಯ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. 1886ರಲ್ಲಿ 3 ವರ್ಷದ ಶಿಕ್ಷಣವನ್ನು ಕಡ್ಡಾಯಗೊಳಿಸಲಾಯಿತು. ದೇಶದ ಬೇರೆ ಬೇರೆ ಭಾಗಗಳಲ್ಲಿ ಅನೇಕ ಔದ್ಯೋಗಿಕ ಶಾಲೆಗಳೂ ನಾರ್ಮಲ್ ಶಾಲೆಗಳೂ ಸಿದ್ಧತಾಪಾಠಶಾಲೆಗಳೂ ನೂತನವಾಗಿ ಅಸ್ತಿತ್ವಕ್ಕೆ ಬಂದುವು. 1900ರಲ್ಲಿ ಕಡ್ಡಾಯ ಶಿಕ್ಷಣದ ಕಾಲಾವಧಿ ನಾಲ್ಕು ವರ್ಷಕ್ಕೆ ಹೆಚ್ಚಿತು. ಸರ್ಕಾರದ ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯ ಶಿಕ್ಷಣದ ಶಾಸನದನ್ವಯ ಶುಲ್ಕ ವಜಾ ಆಯಿತು. 1908ರಲ್ಲಿ ವಿಶ್ವವಿದ್ಯಾಲಯಕ್ಕಿಂತ ಸ್ವಲ್ಪ ಕಡಿಮೆ ಮಟ್ಟದ ವೃತ್ತಿಶಿಕ್ಷಣ ಸಂಸ್ಥೆಗಳು (ಕಾಲೇಜು) ಆರಂಭವಾದುವು. ನಾಲ್ಕು ವರ್ಷದ ಕಡ್ಡಾಯ ಶಿಕ್ಷಣದ ಕಾಲಾವಧಿಯನ್ನು ಆರು ವರ್ಷಕ್ಕೆ ಹೆಚ್ಚಿಸಲಾಯಿತು. ಪ್ರೌಢಶಾಲೆಯ ಶಿಕ್ಷಣ ಆರು ವರ್ಷದ್ದಾಗಿ, ಆರು ತರಗತಿಗಳನ್ನು ಅಳವಡಿಸಿಕೊಂಡಿತು. 1920ರ ವೇಳೆಗೆ ಕಡ್ಡಾಯ ಶಿಕ್ಷಣದ ವಯೋಮಾನದ ಮಕ್ಕಳಲ್ಲಿ 99ರಷ್ಟು ಯೋಜನೆಗೆ ಒಳಪಟ್ಟಿದ್ದರು. ಅನಂತರ ತಾಂತ್ರಿಕ ಮತ್ತು ಔದ್ಯೋಗಿಕ ಶಾಲೆಗಳೂ, ಬಾಲಕಿಯರಿಗೆ ಪ್ರತ್ಯೇಕ ಪಾಠಶಾಲೆಗಳೂ ವಿಶಿಷ್ಟ ಪಾಠಶಾಲೆಗಳೂ ಆರಂಭವಾದುವು. 1938ರ ವೇಳೆಗೆ ದೇಶದಲ್ಲಿ ಒಟ್ಟು 1,20,00,000 ಮಂದಿ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದರು. ಆಗ 22,000 ಪ್ರೌಢ ಮತ್ತು ಇತರ ವಿಶಿಷ್ಟ ಪಾಠಶಾಲೆಗಳಿದ್ದು, ಅಲ್ಲಿ 35,00,000 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಅಂದಿಗಾಗಲೇ ಜಪಾನ್ ಪ್ರಪಂಚದಲ್ಲೆಲ್ಲ ಅತ್ಯಂತ ಹೆಚ್ಚಿನ ಶೇಕಡಾ ಪ್ರಮಾಣದಲ್ಲಿ ಅಕ್ಷರಸ್ಥರನ್ನೊಳಗೊಂಡಿತ್ತು.

ಯುರೋಪಿನ, ಮುಖ್ಯವಾಗಿ ಜರ್ಮನಿಯ, ಶಿಕ್ಷಣ ಪದ್ಧತಿಯಿಂದ ಪ್ರಗತಿಪರ ಅಂಶಗಳನ್ನು ಜಪಾನ್ ಆಯ್ದುಕೊಂಡು ತನ್ನ ಶಿಕ್ಷಣ ಪದ್ಧತಿಯನ್ನು ಪರಿಪುಷ್ಟಿಗೊಳಿಸಿಕೊಂಡಿತು. ಪಠ್ಯಕ್ರಮದಲ್ಲಿ ಯುರೋಪಿನ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೂ ತನ್ನ ಸಾಂಪ್ರದಾಯಿಕ ಮೌಲ್ಯ ಮತ್ತು ಆದರ್ಶಗಳಿಗೂ ಸಮಸಮವಾಗಿ ಅವಕಾಶ ಕಲ್ಪಿಸಿಕೊಂಡಿತು; ಪ್ರಾಥಮಿಕ ಶಾಲೆಯಲ್ಲಿ ನೀತಿಪಾಠಕ್ಕೆ ಮಹತ್ತ್ವ ನೀಡಿ ಮಕ್ಕಳು ಕುಟುಂಬ, ರಾಷ್ಟ್ರ ಮತ್ತು ಚಕ್ರವರ್ತಿಗೆ ವಿಧೇಯತೆಯಿಂದ ನಡೆದುಕೊಳ್ಳುವುದನ್ನು ಕಲಿಸಬೇಕೆಂದು ಸೂಚಿಸಿತು. ಚರಿತ್ರೆ, ರಾಜನೀತಿ, ಭೂಗೋಳ ಮುಂತಾದ ಪಾಠಗಳ ಮೂಲಕ ಮಕ್ಕಳಲ್ಲಿ ರಾಷ್ಟ್ರೀಯ ಭಾವನೆಯನ್ನು ಪೋಷಿಸುವ ವ್ಯವಸ್ಥೆ ಮಾಡಿತು. ಪುರಾಣದ ಕಟ್ಟುಕಥೆಗಳಿಗೆ ಬದಲು ಜೀವನದ ವಾಸ್ತವ ಅಂಶಗಳನ್ನು ಸೇರಿಸುವುದು ಹೆಚ್ಚಿತು. ಪ್ರಾಥಮಿಕ ಹಂತದಲ್ಲಿ ಸಾರ್ವತ್ರಿಕ ಶಿಕ್ಷಣವನ್ನೂ, ಆಯ್ದ ಕೆಲವರಿಗೆ ಮಾತ್ರ ಉನ್ನತ ಶಿಕ್ಷಣವನ್ನೂ ಒದಗಿಸುವ ನೀತಿಯನ್ನು

ರಾಷ್ಟ್ರ ಪುರಸ್ಕರಿಸುತ್ತ ಬಂದಿತು. ಕಿಯೊ, ವಾಸಿಡ, ದೋಷಿಷಗಳಂಥ ಖ್ಯಾತ ವಿಶ್ವವಿದ್ಯಾಲಯಗಳನ್ನೂ ಇತರ ಉನ್ನತ ಶಿಕ್ಷಣಸಂಸ್ಥೆಗಳನ್ನೂ ಅಷ್ಟಾಗಿ ಹೆಚ್ಚಿಸಹೋಗಲಿಲ್ಲ. ಕೇಂದ್ರ ಸರ್ಕಾರ ಅವುಗಳ ಆಡಳಿತ, ಪಠ್ಯಕ್ರಮ, ಪ್ರವೇಶ ನಿಯಮ ಮುಂತಾದವುಗಳ ಮೇಲೆ ಬಿಗಿಯಾದ ನಿಯಂತ್ರಣ ಇಟ್ಟುಕೊಂಡಿತ್ತು.

ಪ್ರಾಚ್ಯ ಸಂಸ್ಕೃತಿ ಸಂಸ್ಥೆ ಮತ್ತು ವಿಶ್ವವಿದ್ಯಾಲಯದ ವಸ್ತುಸಂಗ್ರಹಾಯಲಗಳನ್ನೊಳಗೊಂಡ ಕಟ್ಟಡ, ಟೋಕಿಯೋ ವಿಶ್ವವಿದ್ಯಾಲಯ

ಎರಡನೆಯ ಮಹಾಯುದ್ಧಕ್ಕೆ ಸ್ವಲ್ಪ ಮುಂಚೆ ಜಪಾನ್‌ನ ಶಿಕ್ಷಣಪದ್ಧತಿ ವರ್ಗೀಕೃತ ಸಮಾಜ ರಚನೆಗೂ ಉತ್ಕಟ ದೇಶಾಭಿಮಾನದ ಬೆಳವಣಿಗೆಗೂ ಸಾಮ್ರಾಜ್ಯವಿಸ್ತರಣ ನೀತಿಗೂ ಅವಕಾಶ ಮಾಡಿಕೊಡುವಂತೆ ವ್ಯವಸ್ಥೆಗೊಂಡಿತ್ತು. 3 ವರ್ಷದಿಂದ 6 ವರ್ಷದ ಮಕ್ಕಳು ಕಿಂಡರ್‌ಗಾರ್ಟನ್‌ಗಳಲ್ಲಿ ಶಿಕ್ಷಣವನ್ನು ಆರಂಭಿಸುತ್ತಿದ್ದರು. ವಿಧಾಯಕ ಕಡ್ಡಾಯ ಶಿಕ್ಷಣ ಆರು ವರ್ಷದ ಪ್ರಾಥಮಿಕ ಶಾಲೆಯಲ್ಲಿ ಆರಂಭವಾಗುತ್ತಿತ್ತು. 6 ರಿಂದ 14 ವರ್ಷದವರೆಗೆ ಶಿಕ್ಷಣ ಕಡ್ಡಾಯವಾಗಿದ್ದುದರಿಂದ ಅನಂತರ ಎರಡು ವರ್ಷದ ಹಿರಿಯ ಪ್ರಾಥಮಿಕ ಶಾಲೆಗೂ ಮಾಧ್ಯಮಿಕ ಶಾಲೆಗೂ ಹೋಗಬಹುದಾಗಿತ್ತು. ಮಾಧ್ಯಮಿಕ ಶಾಲೆ 14ರಿಂದ 19ನೆಯ ವಯಸ್ಸಿನವರೆಗೆ 5 ವರ್ಷಗಳ ಶಿಕ್ಷಣವೀಯುತ್ತಿತ್ತು. ಅಲ್ಲಿ ಉತ್ತಮ ರೀತಿಯ ಶಿಕ್ಷಣ ದೊರೆಯುತ್ತಿತ್ತು. ಆದರೆ ವಿದ್ಯಾರ್ಥಿಗಳು ಶುಲ್ಕ ಕೊಡಬೇಕಾಗಿತ್ತು. ಸೈನಿಕ ಶಿಕ್ಷಣ, ಗಣಿತ, ವಿಜ್ಞಾನ, ಸಾಹಿತ್ಯ–ಇವು ಪಠ್ಯಕ್ರಮದಲ್ಲಿ ಮುಖ್ಯ ವಿಷಯಗಳಾಗಿದ್ದುವು. ಪ್ರತಿಭಾವಂತರು ಮೂರು ವರ್ಷದ ಪ್ರೌಢಶಾಲೆಗೆ ಸೇರುತ್ತಿದ್ದರು. ಅಲ್ಲಿನ ಶಿಕ್ಷಣ ಮುಗಿಸಿದ ಕೆಲವರು ವಿಶ್ವವಿದ್ಯಾಲಯದಲ್ಲಿ ಪದವಿ ತರಗತಿಗೆ ಸೇರುತ್ತಿದ್ದರು. ಪ್ರೌಢಶಾಲೆ ಅಥವಾ ವಿಶ್ವವಿದ್ಯಾಲಯಗಳಿಗೆ ಹೋಗಲಾಗದವರಿಗೆ ಇತರ ಶಿಕ್ಷಣಸಂಸ್ಥೆಗಳಲ್ಲಿ ಸೇರುವ ಅವಕಾಶವೇನೋ ಇತ್ತು.

ಯುದ್ಧಾನಂತರದ ಪುನರ್ವ್ಯವಸ್ಥೆ: ಎರಡನೆಯ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಜಪಾನು ಜರ್ಮನಿಯಂತೆ ಅಂತಿಮವಾಗಿ ಮಿತ್ರರಾಷ್ಟ್ರಗಳಿಗೆ ಸೋತಿತ್ತು. ಆಕ್ರಮಣರಾಷ್ಟ್ರವಾದ ಅಮೆರಿಕ ಮುಂತಾದ ಮಿತ್ರರಾಷ್ಟ್ರಗಳ ನಿರ್ದೇಶನದಂತೆ 1946ರಲ್ಲಿ ಜಪಾನಿನ ಹೊಸ ರಾಜ್ಯಾಂಗ ರೂಪುಗೊಂಡಿತು. ಅದರಲ್ಲಿ ಶಿಕ್ಷಣಸೌಲಭ್ಯದ ಬಗ್ಗೆ ಜನತೆಯ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಕುರಿತ ಕಾನೂನಿನಲ್ಲಿ ನಿರ್ಧಾರವಾಗಿರುವಂತೆ ಎಲ್ಲರೂ ತಮ್ಮ ಯೋಗ್ಯತೆಗೆ ಅನುಗುಣವಾಗಿ ಸಮಾನ ಶಿಕ್ಷಣವನ್ನು ಪಡೆಯುವರು. ಜನರು ತಮ್ಮ ರಕ್ಷಣೆಯಲ್ಲಿರುವ ಬಾಲಕ ಬಾಲಕಿಯರಿಗೆ ಕಾನೂನಿನಲ್ಲಿ ಸೂಚಿಸಿರುವಂತೆ ಸಾಮಾನ್ಯ ಶಿಕ್ಷಣವೊದಗಿಸತಕ್ಕದ್ದು. ಅಂಥ ಕಡ್ಡಾಯ ಶಿಕ್ಷಣ ಉಚಿತವಾಗಿರುತ್ತದೆ' ಎಂದು ಸೂಚಿಸಿತ್ತು. ರಾಜ್ಯಾಂಗ ರಚನೆಯ ಉದ್ದೇಶಕ್ಕನುಗುಣವಾಗಿ ಶಿಕ್ಷಣದ ಉದ್ದೇಶ ಮತ್ತು ತತ್ತ್ವಗಳನ್ನು ಒಳಗೊಂಡ ಶಿಕ್ಷಣದ ಮೂಲಭೂತ ಕಾನೂನು 1947ರಲ್ಲಿ ಆಚರಣೆಗೆ ಬಂದಿತು. ಅದರಲ್ಲಿ 'ಮಾನವೀಯ ಮೌಲ್ಯಗಳನ್ನು ಗೌರವಿಸುವ ಒಂದು ಶಾಂತಿಪ್ರಿಯ ಲೋಕತಂತ್ರ ರಾಷ್ಟ್ರದ ಹಾಗೂ ಸಮಾಜದ ಸ್ವಾವಲಂಬಿ ಪೌರರನ್ನಾಗಿ ರೂಪಿಸುವುದು ಶಿಕ್ಷಣದ ಮುಖ್ಯ ಉದ್ದೇಶ' ಎಂದು ಉಲ್ಲೇಖಿಸಿದೆ. 'ಸಾರ್ವತ್ರಿಕ ಹಾಗೂ ವೈಯಕ್ತಿಕ ಸಂಸ್ಕಾರವೇ ಉದ್ದೇಶವಾಗುಳ್ಳ ಶಿಕ್ಷಣವನ್ನು ಎಲ್ಲೆಡೆಯೂ ಪ್ರಸಾರ ಮಾಡುವುದರ ಜೊತೆಗೆ ವೈಯಕ್ತಿಕ ಘನತೆಯನ್ನು ಗೌರವಿಸಿ ಸತ್ಯವಂತರೂ ಶಾಂತಿಪ್ರಿಯರೂ ಆದ ಜನತೆಯ ನಿರ್ಮಾಣಕ್ಕಾಗಿ ಶ್ರಮಿಸಬೇಕು' ಎಂದು ಆ ಮೂಲಭೂತ ಕಾನೂನಿನ ಪೀಠಿಕೆಯಲ್ಲಿ ಸೂಚಿಸಿದೆ; ಕುಲ, ಧರ್ಮ, ಲಿಂಗ, ಸಾಮಾಜಿಕ ಅಂತಸ್ತು, ಆರ್ಥಿಕ ಸ್ಥಿತಿ, ಕುಟುಂಬದ ಹಿನ್ನೆಲೆ–ಇವೇ ಮುಂತಾದ ಅಂಶಗಳ ಆಧಾರದ ಮೇಲೆ ವ್ಯತ್ಯಾಸ ಕಲ್ಪಿಸದೆ ಎಲ್ಲರಿಗೂ ಅವರವರ ಯೋಗ್ಯತೆಯನ್ನನುಸರಿಸಿ ಸಮಾಜ ಶಿಕ್ಷಣ ಸೌಲಭ್ಯವನ್ನು ಒದಗಿಸಬೇಕಾಗಿ ಸೂಚಿಸಿದೆ; ಸಹಶಿಕ್ಷಣವನ್ನು ಅಧಿಕೃತವಾಗಿ ಅಂಗೀಕರಿಸಿದೆ; ಸಾರ್ವಜನಿಕ ಶಾಲೆಗಳಲ್ಲಿ ಸಮಾಜಪಾಠಕ್ಕೆ ಪ್ರಾಮುಖ್ಯವಿತ್ತಿದೆ; ವಯಸ್ಕರ ಶಿಕ್ಷಣಕ್ಕಾಗಿ ಗ್ರಂಥಾಲಯ, ವಸ್ತುಸಂಗ್ರಹಾಲಯ, ಪೌರಭವನ ಮುಂತಾದವನ್ನು ಸ್ಥಾಪಿಸಲು ಸ್ಥಳೀಯ ಪ್ರಾಧಿಕಾರಗಳಿಗೆ (ಲೋಕಲ್ ಎಜುಕೇಷನ್ ಅಥಾರಿಟೀಸ್) ಆಣತಿಯಿತ್ತಿದೆ.

ಶಿಕ್ಷಣದ ಮೂಲಭೂತ ಕಾನೂನನ್ನನುಸರಿಸಿ ಹೊರಡಿಸಿದ ನಿಯಮಗಳು ಸಾರ್ವಜನಿಕ ಶಿಕ್ಷಣದ ಆಡಳಿತವನ್ನು ವಿಕೇಂದ್ರೀಕರಿಸಿದುವು. 6+3+3+4ರ ಶಿಕ್ಷಣ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದುವು; ಪಠ್ಯಕ್ರಮ, ಪಠ್ಯವಿಷಯ, ಬೋಧನವಿಧಾನ, ಪಠ್ಯಪುಸ್ತಕ–ಒಟ್ಟಿನಲ್ಲಿ ಇಡೀ ಶಿಕ್ಷಣವನ್ನು ಪುನರ್ವ್ಯವಸ್ಥೆಗೊಳಿಸಿದುವು. 1946ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸರ್ಕಾರ ಕಳಿಸಿದ ಶಿಕ್ಷಣ ಆಯೋಗ ಸೂಚಿಸಿದಂತೆ ಹಿಂದಿನಿಂದಲೂ ಬಂದಿದ್ದ ಷಿಂಟೋ ಮತ್ತು ಷುಷಿನ್ (ನೀತಿ)ಪಾಠಗಳನ್ನು ತೆಗೆದುಹಾಕಲಾಯಿತು. ಹೊಸ ಪಠ್ಯಪುಸ್ತಕಗಳು ಬರುವವರೆಗೆ ಜಪಾನ್‌ನ ಇತಿಹಾಸ ಮತ್ತು ಭೂವಿವರಣೆಯ ಪಾಠಗಳ ಬೋಧನೆಯನ್ನು ನಿಲ್ಲಿಸಲಾಯಿತು. ಸಮಾಜವಿಜ್ಞಾನ, ತರಗತಿಯ ಕಾರ್ಯವಿಧಾನ, ವಿದ್ಯಾರ್ಥಿಗಳ ವ್ಯಕ್ತಿತ್ವದ ಬೆಳವಣಿಗೆ, ಸ್ವಯಂ ಅಭಿವ್ಯಕ್ತಿ–ಇವಕ್ಕೆ ಶಿಕ್ಷಣದ ಎಲ್ಲ ಹಂತಗಳಲ್ಲೂ ಪ್ರಾಧಾನ್ಯ ಬಂತು. ಕಾವ್ಯಭಾಗಗಳನ್ನು ಹೃದ್ಗತ ಮಾಡುವುದರ ಬದಲು ತರಗತಿಯಲ್ಲಿ ಚರ್ಚೆ, ಸಾಮೂಹಿಕ ಮತ್ತು ವೈಯಕ್ತಿಕ ರಚನಾತ್ಮಕ ಕಾರ್ಯ–ಇವು ಶಿಕ್ಷಣದ ಕೇಂದ್ರವಾಗುತ್ತ ಬಂದುವು.

ಶಿಕ್ಷಣ ವ್ಯವಸ್ಥೆಯಲ್ಲಿ ಅಮೆರಿಕದಲ್ಲಿರುವಂತೆ 6+3+3+4ರ ಯೋಜನೆ ಆಚರಣೆಗೆ ಬಂತು. ಕಡ್ಡಾಯ ಶಿಕ್ಷಣದ ಕಾಲಾವಧಿ 6 ರಿಂದ 9 ವರ್ಷಕ್ಕೆ ಹೆಚ್ಚಿತು. ಎಲ್ಲರಿಗೂ ಉನ್ನತ ಶಿಕ್ಷಣ ಸೌಲಭ್ಯವನ್ನು ದೊರಕಿಸುವುದಕ್ಕಾಗಿ ಅಮೆರಿಕದ ರಾಜ್ಯ ವಿಶ್ವವಿದ್ಯಾಲಯಗಳ ಮಾದರಿಯಲ್ಲಿ ಜಿಲ್ಲಾ ಕಾಲೇಜುಗಳನ್ನು ಆರಂಭಿಸಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಜಿಲ್ಲೆಯ ಮತ್ತು ಪೌರಸಭೆಗಳ ಆರಿಸಿದ ಪ್ರತಿನಿಧಿಗಳನ್ನೊಳಗೊಂಡ ಮಂಡಲಿಗಳಿಗೆ ವರ್ಗವಾಯಿತು. ಕೇಂದ್ರ ಮಂತ್ರಿಮಂಡಲಕ್ಕೆ ಸ್ಥಳೀಯ ಸರ್ಕಾರಗಳಿಗೆ ಕೇವಲ ಸಲಹೆ ನೀಡುವ ಅಧಿಕಾರ ಮಾತ್ರ ಉಳಿದಿತ್ತು.

ನೂತನ ಸುಧಾರಣೆಗಳು ಆಚರಣೆಗೆ ಬಂದಮೇಲೆ 1950ರ ವೇಳೆಗೆ ರಾಷ್ಟ್ರದಲ್ಲಿ 6,500 ಕಿಂಡರ್‌ಗಾರ್ಟನ್‌ಗಳೂ, ಅವುಗಳಲ್ಲಿ 32,000 ಅಧ್ಯಾಪಕರೂ, 6,65,000 ವಿದ್ಯಾರ್ಥಿಗಳೂ ಇದ್ದರು; 22,500 ಪ್ರಾಥಮಿಕ ಶಾಲೆಗಳೂ ಇವುಗಳಲ್ಲಿ 3,55,000 ಅಧ್ಯಾಪಕರೂ 13,00,000 ವಿದ್ಯಾರ್ಥಿಗಳೂ ಇದ್ದರು ; 12,700 ಕಿರಿಯ ಪ್ರೌಢಶಾಲೆಗಳೂ ಅವುಗಳಲ್ಲಿ 2,06,000 ಅಧ್ಯಾಪಕರೂ, 58,00,000 ವಿದ್ಯಾರ್ಥಿಗಳೂ ಇದ್ದರು ; 3,380 ಹಿರಿಯ ಪ್ರೌಢಶಾಲೆಗಳೂ ಅವುಗಳಲ್ಲಿ 1,40,000 ಅಧ್ಯಾಪಕರೂ 30,00,000 ವಿದ್ಯಾರ್ಥಿಗಳೂ ಇದ್ದರು: 270 ಕಿರಿಯ (ಜೂನಿಯರ್) ಕಾಲೇಜುಗಳೂ ವಿಶ್ವವಿದ್ಯಾಲಯಗಳೂ ಅಲ್ಲಿ 1,40,000 ಅಧ್ಯಾಪಕರೂ 5,70,000 ವಿದ್ಯಾರ್ಥಿಗಳೂ ಇದ್ದರು.

ಯುದ್ಧದಲ್ಲಿ ಸೋಲನ್ನನುಭವಿಸಿ ಅನ್ಯರಿಗೆ ಪದಾಕ್ರಾಂತವಾದ ರಾಷ್ಟ್ರ ವಿಧಿಯಿಲ್ಲದೆ ಅಮೆರಿಕ ಹೊರಿಸಿದ ಶಿಕ್ಷಣ ಸುಧಾರಣೆಗಳನ್ನು ಆಚರಣೆಗೆ ತರಬೇಕಾಯಿತು. ಆದರೆ ಅನ್ಯದೇಶದ ಆ ಪದ್ಧತಿ ತಮ್ಮ ಜನಕ್ಕೆ ಉಚಿತವಾಗಲಾರದೆಂಬುದನ್ನು ಅವರು ಬೇಗ ಕಂಡುಕೊಂಡರು. ಕಾಲ ಕಳೆದಂತೆ ಸುಧಾರಣೆಗಳ ಮೇಲೆ ವಿಧವಿಧವಾದ ಟೀಕೆಗಳು ಬರಲಾರಂಭಿಸಿದುವು. ಹೊಸ ಪಠ್ಯಕ್ರಮದಿಂದ ಮಕ್ಕಳು ತಂದೆತಾಯಿಯರಲ್ಲಿ ಇಡಬೇಕಾದ ಭಕ್ತಿಭಾವಕ್ಕೂ ರಾಷ್ಟ್ರದ ಬಗ್ಗೆ ತಳೆಯಬೇಕಾದ ಅಭಿಮಾನಕ್ಕೂ ವೈಯಕ್ತಿಕವಾಗಿ ರೂಢಿಸಿಕೊಳ್ಳಬೇಕಾದ ನೈತಿಕ ಜೀವನಕ್ಕೂ ಧಕ್ಕೆಯೊದಗುವುದೆಂದು ದೇಶಾದ್ಯಂತ ಪ್ರತಿಭಟನೆ ಎದ್ದಿತು. ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಯುದ್ಧದ ಸೋಲಿನ ಅಧಃಪತನದಿಂದ ಚೇತರಿಸಿಕೊಂಡು ಮೇಲೆದ್ದ ರಾಷ್ಟ್ರ ಪ್ರಾಥಮಿಕ ಶಾಲೆಯಲ್ಲಿ ಮತ್ತೆ ನೀತಿಪಾಠವನ್ನು ಆರಂಭಿಸಿತು. ಪಠ್ಯಕ್ರಮ ಮತ್ತು ಬೋಧನವಿಧಾನಗಳ ಮೇಲೆ ಕೇಂದ್ರ ನಿಯಂತ್ರಣವೂ ಆರಂಭವಾಯಿತು. 6+3+3+4ರ ವ್ಯವಸ್ಥೆಯಿಂದ ಶಿಕ್ಷಣ ಅನಗತ್ಯವಾಗಿ ದೀರ್ಘಕಾಲ ಹಿಡಿಯುತ್ತಿದೆಯೆಂಬ ಗೊಣಗಾಟ ಆರಂಭವಾಯಿತು. ಮಿತಿಯಿಲ್ಲದೆ ಆರಂಭಿಸಲಾದ ಜಿಲ್ಲಾ ಕಾಲೇಜುಗಳು ಕೇವಲ ಘನತೆಗೇರಿಸಿದ ಪ್ರೌಢಶಾಲೆಗಳಂತಾಗಿವೆಯೆಂಬುದು ಗೊತ್ತಾಯಿತು. ಮೇಲಿನ ಟೀಕೆಗಳ ಬೆಳಕಿನಲ್ಲಿ ಹಲವು ಸುಧಾರಣೆಗಳು ಆಚರಣೆಗೆ ಬಂದಿವೆ. ಅವನ್ನು ಒಳಗೊಂಡಂತೆ ಸದ್ಯದ ಜಪಾನ್‌ನ ಶಿಕ್ಷಣದ ಸ್ವರೂಪವನ್ನು ಮುಂದೆ ವಿವರಿಸಿದೆ.

ಶಿಕ್ಷಣ ವ್ಯವಸ್ಥೆ : ಯುದ್ಧಾನಂತರದ ರಾಷ್ಟ್ರಘಟನೆ ಲೋಕತಂತ್ರಭಾವನೆಯನ್ನು ಶಿಕ್ಷಣಕ್ಷೇತ್ರಕ್ಕೂ ಅನ್ವಯಿಸಿದ ನಂತರ ಅಮೆರಿಕದ ಶಿಕ್ಷಣ ಆಯೋಗ ಸಲಹೆ ಮಾಡಿದ 6 ವರ್ಷಗಳ ಪ್ರಾಥಮಿಕ ಶಾಲೆ, 3 ವರ್ಷಗಳ ಕಿರಿಯ ಪ್ರೌಢಶಾಲೆ, 3 ವರ್ಷಗಳ ಹಿರಿಯ ಪ್ರೌಢಶಾಲೆ ಮತ್ತು 4 ವರ್ಷಗಳ ಉನ್ನತ ಶಿಕ್ಷಣ ಸಂಸ್ಥೆ, ಎಂದರೆ 6+3+3+4ರ ಯೋಜನೆ ಅನುಷ್ಠಾನಕ್ಕೆ ಬಂತು. ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದ ವರೆಗೆ ಯಾವ ಆತಂಕವೂ ಇಲ್ಲದೆ ಶಿಕ್ಷಣಸೌಲಭ್ಯವನ್ನು ಎಲ್ಲ ಪೌರರಿಗೂ ಒದಗಿಸಿದ್ದಲ್ಲದೆ ಅವರವರ ಪ್ರತಿಭೆ ಮತ್ತು ಅಗತ್ಯಗಳಿಗೊಪ್ಪುವಂಥ ಉನ್ನತ ಶಿಕ್ಷಣ ಪಡೆಯಬಹುದಾದ ಅವಕಾಶವನ್ನು ಕಲ್ಪಿಸಿಕೊಟ್ಟಿತು. 1946ರಲ್ಲಿ ಶಿಕ್ಷಣ ಆಯೋಗ ಸೂಚಿಸಿದ ಅಮೆರಿಕದ ಮಾದರಿಯ ಶಿಕ್ಷಣ ವ್ಯವಸ್ಥೆ, ಪಠ್ಯಕ್ರಮ, ಬೋಧನವಿಧಾನ, ಪರೀಕ್ಷಾವ್ಯವಸ್ಥೆ ಮುಂತಾದವನ್ನು ಆಗ ಅಕ್ಷರಶಃ ಆಚರಣೆಗೆ ತಂದರೂ ಜಪಾನಿನ ಸ್ಥಿತಿಗತಿಗಳಿಗೂ ಶಿಕ್ಷಣ ಸಂಸ್ಕೃತಿಗಳ ಪರಂಪರೆಗೂ ಹೊಂದಿಕೊಳ್ಳುವಂತೆ ಅನಂತರ ಮಾರ್ಪಡಿಸಿಕೊಳ್ಳುತ್ತ ಬಂದಿದೆ.

ಪ್ರಾಥಮಿಕ ಶಿಕ್ಷಣ : ಈಗ 6–15 ವರ್ಷದ ಮಕ್ಕಳೆಲ್ಲ ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕೆಂದು ಕಾನೂನು ಮಾಡಿದೆ. ಕಡ್ಡಾಯ ಶಿಕ್ಷಣದ ಈ 9 ವರ್ಷದ ಅವಧಿಯನ್ನು ಎರಡು ಹಂತಗಳಿಗೆ ಹಂಚಿದೆ. ಅದರ ಮೊದಲ ಹಂತ 6 ವರ್ಷದ ಪ್ರಾಥಮಿಕ ಶಾಲೆಯಲ್ಲೂ ಎರಡನೆಯ ಹಂತ 3 ವರ್ಷದ ಕಿರಿಯ ಪ್ರೌಢಶಾಲೆಯಲ್ಲೂ ವ್ಯವಸ್ಥೆಗೊಂಡಿದೆ. 6–12 ವರ್ಷದವರೆಗಿನ ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಾರೆ. ಶಿಕ್ಷಣ ಎಲ್ಲ ಮಕ್ಕಳಿಗೂ ಉಚಿತ. ಬಡ ಕುಟುಂಬದವರಾದರೆ ರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು ಅವರ ಉಪಾಹಾರ, ಪ್ರವಾಸ, ಪುಸ್ತಕ, ವೈದ್ಯಚಿಕಿತ್ಸೆ ಮುಂತಾದವಕ್ಕೆ ವಿಶೇಷ ಅನುದಾನ ನೀಡುವುವು. ಶಾಲೆಗೆ ಆ ವಯೋಮಾನದ ಮಕ್ಕಳ ಸೇ. 99.9ರಷ್ಟು ಸೇರಿರುವರು. 1968ರಲ್ಲಿ ರಾಷ್ಟ್ರದಲ್ಲಿ ಒಟ್ಟು 25,014 ಪ್ರಾಥಮಿಕ ಶಾಲೆಗಳೂ ಅಲ್ಲಿ 3,61,148 ಅಧ್ಯಾಪಕರೂ 94,03221 ವಿದ್ಯಾರ್ಥಿಗಳೂ ಇದ್ದರು. ಶಾಲೆಯ ಪಠ್ಯಕ್ರಮದಲ್ಲಿ ಜಪಾನೀ ಭಾಷೆ, ಸಮಾಜಪಾಠಗಳು, ಅಂಕಗಣಿತ, ವಿಜ್ಞಾನ, ಸಂಗೀತ ಕಲೆ ಮತ್ತು ಕೈಕೆಲಸ, ಗೃಹಕಾರ್ಯನಿರ್ವಹಣೆ, ದೈಹಿಕ ಶಿಕ್ಷಣ, ನೀತಿಶಿಕ್ಷಣ–ಇವೆಲ್ಲ ಸೇರಿವೆ. ಪ್ರಾಥಮಿಕ ಮೊದಲ ತರಗತಿಗೆ ವಾರಕ್ಕೆ 45 ನಿಮಿಷಗಳ 24 ಪಾಠಗಳೂ 2ನೆಯ ತರಗತಿಗೆ 25 ಪಾಠಗಳೂ 3ನೆಯ ತರಗತಿಗೆ 27 ಪಾಠಗಳೂ 4ನೆಯ ತರಗತಿಗೆ 29 ಪಾಠಗಳೂ 5ನೆಯ ತರಗತಿಗೆ 31 ಪಾಠಗಳೂ 6ನೆಯ ತರಗತಿಗೆ 31 ಪಾಠಗಳೂ ಇರುತ್ತವೆ. ಶಾಲಾವರ್ಷದಲ್ಲಿ 35 ವಾರಗಳಿರುತ್ತವೆ.




ಜಪಾನಿನ ಶಿಕ್ಷಣ ವ್ಯವಸ್ಥೆ

ಪ್ರಾಥಮಿಕ ಪೂರ್ವದ ಶಿಕ್ಷಣ : 3 ರಿಂದ 6 ವರ್ಷದವರೆಗಿನ ಮಕ್ಕಳನ್ನು ಸೇರಿಸಿಕೊಳ್ಳುವ ಕಿಂಡರ್‌ಗಾರ್ಟನ್ ಶಾಲೆಗಳು ರಾಷ್ಟ್ರದ ವಿಧಾಯಕ ಶಿಕ್ಷಣವ್ಯವಸ್ಥೆಯಲ್ಲಿ ಸೇರಿರದಿದ್ದರೂ ಆ ವಯೋಮಾನದ ಮಕ್ಕಳಲ್ಲಿ ಸುಮಾರು ಮೂರನೆಯ ಒಂದು ಭಾಗದಷ್ಟು ಮಂದಿಗೆ ಆ ಹಂತದ ಶಿಕ್ಷಣಸೌಲಭ್ಯ ವ್ಯವಸ್ಥೆಗೊಂಡಿದೆ. ಆ ಶಾಲೆಗಳಲ್ಲಿ ಬಹುಪಾಲು ಖಾಸಗಿ ಸಂಘಸಂಸ್ಥೆಗಳಿಂದ ನಡೆಯುತ್ತಿವೆ. ಮೂರು ವರ್ಷದ ಮಕ್ಕಳನ್ನು ಅಲ್ಲಿನ ಮೂರು ವರ್ಷದ ವ್ಯಾಸಂಗ ವಿಭಾಗಕ್ಕೂ ನಾಲ್ಕು ವರ್ಷದ ಮಕ್ಕಳನ್ನು ಎರಡು ವರ್ಷದ ವಿಭಾಗಕ್ಕೂ ಐದು ವರ್ಷದವರನ್ನು ಒಂದು ವರ್ಷದ ವಿಭಾಗಕ್ಕೂ ಸೇರಿಸಿಕೊಳ್ಳುವರು. ಅಲ್ಲಿ ಇತರ ದೇಶಗಳಲ್ಲಿರುವ ಕಿಂಡರ್‌ಗಾರ್ಟನ್‌ಗಳಂತೆ ಓದುಬರಹ, ಲೆಕ್ಕಗಳನ್ನು ಕಲಿಸುವುದಿಲ್ಲ. ಆಟದ ಮೂಲಕ ಅವರ ಆರೋಗ್ಯ ಜೀವನವನ್ನು ಉತ್ತಮಪಡಿಸಿ, ವೈಯಕ್ತಿಕ ಮತ್ತು ಸಾಮಾಜಿಕ ಜೀವನಕ್ಕೆ ಬೇಕಾದ ಅಭ್ಯಾಸ ಮತ್ತು ಕೌಶಲ್ಯಗಳನ್ನು ರೂಢಿಸಿಕೊಡಲು ಯತ್ನಿಸುವರು. ಇವುಗಳ ಜೊತೆಗೆ ಹಗಲುವೇಳೆ ಮಕ್ಕಳಿಗೆ ಶಿಕ್ಷಣವೀಯುವ ಶಿಶುಗೃಹಗಳೂ ಇವೆ. ಅಲ್ಲಿ ಒಂದು ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳಿಂದ ಐದು ವರ್ಷದವರೆಗಿನ ಮಕ್ಕಳನ್ನು ಸೇರಿಸಿಕೊಳ್ಳುವರು. ತಾಯಂದಿರು ಕೆಲಸಕ್ಕೆ ಹೋಗುವಾಗ ತಮ್ಮ ಮಕ್ಕಳನ್ನೂ ಈ ಶಿಶುಗೃಹಕ್ಕೆ ಕಳಿಸುವರು. ಸಂಸ್ಥೆಯ ರಕ್ಷಣೆ ಅಗತ್ಯವೆನಿಸಿರುವಂಥ ಮಕ್ಕಳನ್ನೂ ಅಲ್ಲಿ ಸೇರಿಸಿಕೊಳ್ಳುವರು. ಮೂರು ವರ್ಷದ ಅಥವಾ ಹೆಚ್ಚಿನ ವಯಸ್ಸಿನ ಮಕ್ಕಳಾದರೆ ಅಲ್ಲಿ ಕಿಂಡರ್‌ಗಾರ್ಟನ್ ಮಾದರಿಯ ಶಿಕ್ಷಣವನ್ನು ಅವರಿಗೆ ಒದಗಿಸುವರು. ಇವನ್ನು ಮುಖ್ಯವಾಗಿ ಸ್ಥಳೀಯ ಸರ್ಕಾರದ ಸಂಸ್ಥೆಗಳು ನಡೆಸುತ್ತವೆ. 1968ರಲ್ಲಿ ಈ ಹಂತದ 10,418 ಶಾಲೆಗಳಿದ್ದವು. ಅವುಗಳಲ್ಲಿ 62,439 ಅಧ್ಯಾಪಕರೂ, 15,51,017 ಮಂದಿ ವಿದ್ಯಾರ್ಥಿಗಳೂ ಇದ್ದರು.

ಕಿರಿಯ ಪ್ರೌಢಶಾಲೆ : ಪ್ರಾಥಮಿಕ ಶಾಲೆಯನ್ನು ಮುಗಿಸಿದ ಮಕ್ಕಳು ನೇರವಾಗಿ 3 ವರ್ಷದ ಕಿರಿಯ ಪ್ರೌಢಶಾಲೆಗೆ ಸೇರುವರು. ಅಲ್ಲೂ ಶಿಕ್ಷಣ ಕಡ್ಡಾಯ ಮತ್ತು ಉಚಿತ. ಮಕ್ಕಳ ಹಾಜರಾತಿ ಸೇ. 99.9. ರಾಷ್ಟ್ರದಲ್ಲಿ 1968ರಲ್ಲಿ ಒಟ್ಟು 11,278 ಕಿರಿಯ ಪ್ರೌಢಶಾಲೆಗಳೂ ಅಲ್ಲಿ 2,27,405 ಅಧ್ಯಾಪಕರೂ 48,65,206 ವಿದ್ಯಾರ್ಥಿಗಳೂ ಇದ್ದರು. ಪ್ರಾಥಮಿಕ ಶಾಲೆಯ ಪಠ್ಯಕ್ರಮ ಇಲ್ಲಿ ಮುಂದುವರಿಯುತ್ತದೆ. ಆದರೆ ಅಂಕಗಣಿತ ಗಣಿತವಾಗಿ ವಿಸ್ತರಿಸುತ್ತದೆ. ಲಲಿತಕಲೆ, ಔದ್ಯೋಗಿಕ ಕಸಬು ಕಲೆಗಳು, ಐಚ್ಛಿಕ ವಿಷಯಗಳು ಹೊಸದಾಗಿ ಸೇರಿವೆ. ಪಠ್ಯೇತರ ಚಟುವಟಿಕೆಗಳನ್ನೂ ಸೇರಿಸಿದೆ. ವರ್ಷದಲ್ಲಿ 35 ವಾರಗಳಿದ್ದು ಪ್ರತಿ ವಾರದಲ್ಲೂ 33–34 ಪಾಠಗಳಿರುತ್ತವೆ. ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚು ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳಬಹುದು. ಅನ್ಯಭಾಷೆ (ಇಂಗ್ಲಿಷ್) ಔದ್ಯೋಗಿಕ ವಿಷಯಗಳು, ಇತರ ವಿಷಯಗಳು ಎಲ್ಲ ಶಾಲೆಗಳಲ್ಲೂ ಪಠ್ಯಕ್ರಮದಲ್ಲಿ ಸೇರಿರುತ್ತವೆ. ವಿದ್ಯಾರ್ಥಿಗಳ ಅಭಿರುಚಿ ಆಸಕ್ತಿಗಳನ್ನೂ ಸ್ಥಳೀಯ ಆವಶ್ಯಕತೆಗಳನ್ನೂ ಮುಂದಿನ ಉದ್ಯೋಗಾವಕಾಶವನ್ನೂ ಗಮನದಲ್ಲಿರಿಸಿಕೊಂಡು ಸ್ಥಳೀಯ ಪ್ರಾಧಿಕಾರದವರು ಆಯಾ ವಿದ್ಯಾರ್ಥಿ ಆರಿಸಿಕೊಳ್ಳಬಹುದಾದ ಐಚ್ಛಿಕ ವಿಷಯವನ್ನು ನಿರ್ಧರಿಸುತ್ತಾರೆ. ಈ ವಯೋಮಾನದ ಮಕ್ಕಳಲ್ಲಿ ಶೇ.99.9ರಷ್ಟು ಶಾಲೆಗೆ ಸೇರಿರುತ್ತಾರೆ. ಎಂದರೆ ಪ್ರಪಂಚದಲ್ಲೆಲ್ಲ ಕಡ್ಡಾಯ

ಶಿಕ್ಷಣ 6–15ರ ವಯೋಮಾನದ ಮಕ್ಕಳಿಗೆ ಜಪಾನ್‌ನಲ್ಲಿ ಅತ್ಯಂತ ಪೂರ್ಣವಾಗಿ ಆಚರಣೆಗೆ ಬಂದಿದೆ. ಅಮೆರಿಕದ ಜೂನಿಯರ್ ಹೈಸ್ಕೂಲಿನ ಮಾದರಿಯಲ್ಲಿ ವ್ಯವಸ್ಥೆಗೊಳಿಸಿರುವ ಈ ಶಾಲೆಗಳಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳ ಅಭಿರುಚಿಯ ಅನ್ವೇಷಣೆ ನಡೆಯುತ್ತದೆ.

ವಿಜ್ಞಾನ ವಸ್ತುಸಂಗ್ರಹಾಲಯ, ಟೋಕಿಯೋ

ಹಿರಿಯ ಪ್ರೌಢಶಾಲೆ: ಕಿರಿಯ ಪ್ರೌಢಶಾಲೆಯ ಮೂರು ವರ್ಷದ ಶಿಕ್ಷಣದ ಅನಂತರ ವಿದ್ಯಾರ್ಥಿಗಳು ಮೂರು ವರ್ಷದ ಹಿರಿಯ ಪ್ರೌಢಶಾಲೆಗೆ ಸೇರಬಹುದು. ಸ್ಥಳೀಯ ಪ್ರಾಧಿಕಾರ ನಡೆಸುವ ಪ್ರವೇಶ ಪರೀಕ್ಷೆಯೊಂದರ, ಹಾಗೂ ಕಿರಿಯ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯ ಶಿಕ್ಷಣಾಭಿವೃದ್ಧಿಯ ಆಧಾರದ ಮೇಲೆ ಅಲ್ಲಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಪಠ್ಯಕ್ರಮದ ಆಧಾರದ ಮೇಲೆ ದೇಶದಲ್ಲಿ ನಾಲ್ಕು ಮುಖ್ಯ ವಿಧದ ಪ್ರೌಢಶಾಲೆಗಳನ್ನು ಗುರುತಿಸಬಹುದು; ಸಾಮಾನ್ಯ, ತಾಂತ್ರಿಕ, ವಾಣಿಜ್ಯ ಮತ್ತು ಗೃಹಕಾರ್ಯದ ಪ್ರೌಢಶಾಲೆಗಳು. ಜೊತೆಗೆ ಇತರ ವಿಧದವೂ ಉಂಟು. ಅವುಗಳಲ್ಲಿ ಕೆಲವು ಸಂಜೆಯ ಪಾಠಶಾಲೆಗಳು. ಅಲ್ಲಿನ ಶಿಕ್ಷಣ ನಾಲ್ಕು ಅಥವಾ ಹೆಚ್ಚು ವರ್ಷಗಳ ಕಾಲ ಹಿಡಿಯುತ್ತದೆ. ಮತ್ತೆ ಕೆಲವು ಅಂಚೆ ಶಿಕ್ಷಣವೀಯುವ ಪಾಠಶಾಲೆಗಳು; ಅಲ್ಲೂ ಶಿಕ್ಷಣ 4–5 ವರ್ಷ ಹಿಡಿಯುತ್ತದೆ. ಪೂರ್ಣಕಾಲದ ಶಾಲೆಗಳಲ್ಲಿ ಓದಿದವರಿಗೆ ಕೊಡುವಂಥ ಅರ್ಹತಾಪತ್ರವನ್ನು ಭಾಗಶಃ ಮತ್ತು ಅಂಚೆಶಾಲೆಗಳಲ್ಲಿ ಶಿಕ್ಷಣ ಪಡೆದವರಿಗೂ ಕೊಡಲಾಗುವುದು. ಕಿರಿಯ ಪ್ರೌಢಶಾಲೆಯ ಶಿಕ್ಷಣ ಮುಗಿಸಿ 15–16ನೆಯ ವರ್ಷದಲ್ಲಿ ಕೆಲಸಕ್ಕೆ ಸೇರಿದವರಿಗಾಗಿ ಈ ಎರಡು ರೀತಿಯ ಪ್ರೌಢಶಾಲೆಗಳು ಏರ್ಪಟ್ಟಿವೆ. ರಾಷ್ಟ್ರದಲ್ಲಿ 1968ರಲ್ಲಿ ಒಟ್ಟು 4,817 ಹಿರಿಯ ಪ್ರೌಢಶಾಲೆಗಳೂ ಅಲ್ಲಿ 2,00,806 ಅಧ್ಯಾಪಕರೂ 43,37,905 ಮಂದಿ ವಿದ್ಯಾರ್ಥಿಗಳೂ ಇದ್ದರು. 15–17ರ ವಯೋಮಾನದ ಶೇ.74.7ರಷ್ಟು ವಿದ್ಯಾರ್ಥಿಗಳು

ಟೋಕಿಯೋದ ಉಪನಗರವೊಂದರ ಬಾಲಿಕಾ ಶಾಲೆ

ಅಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಅವರಲ್ಲಿ ಶೇ. 88ರಷ್ಟು ಪೂರ್ಣಕಾಲದ ಪ್ರೌಢಶಾಲೆಗಳಲ್ಲೂ ಶೇ. 9ರಷ್ಟು ಭಾಗಶಃ ಪ್ರೌಢಶಾಲೆಗಳಲ್ಲೂ ಶೇ. 3ರಷ್ಟು ಅಂಚೆ ಪ್ರೌಢಶಾಲೆಗಳಲ್ಲೂ ಇದ್ದರು. ಶೇ. 32ರಷ್ಟು ಪ್ರೌಢಶಾಲೆಗಳು ಸಾಮಾನ್ಯ ಮತ್ತು ಔದ್ಯೋಗಿಕ ಪಠ್ಯಕ್ರಮಗಳೆರಡನ್ನೂ, ಶೇ. 30ರಷ್ಟು ಪ್ರೌಢಶಾಲೆಗಳು ವೃತ್ತಿ ಪಠ್ಯಕ್ರಮಗಳನ್ನೂ ಮಾತ್ರ ಹೊಂದಿದ್ದುವು. ಒಟ್ಟು ವಿದ್ಯಾರ್ಥಿಗಳಲ್ಲಿ ಶೇ. 75.9ರಷ್ಟು ಗಂಡಸರೂ ಶೇ. 73.4ರಷ್ಟು ಹೆಂಗಸರೂ ಇದ್ದರು.

ವಿಶಿಷ್ಟ ಪಾಠಶಾಲೆಗಳು: ದೇಶಾದ್ಯಂತ ಅಂಗವಿಕಲರಿಗೂ ಕಿವುಡ ಮತ್ತು ಕುರುಡರಿಗೂ ಮಂದಬುದ್ಧಿಯವರಿಗೂ 407 ವಿಶಿಷ್ಟ ಶಾಲೆಗಳಿದ್ದು, ಅಲ್ಲಿ ಅವರಿಗೆ ವಿಶೇಷ ವಿಧಾನಗಳ ಮೂಲಕ ಶಿಕ್ಷಣವೀಯುವುದರ ಜೊತೆಗೆ ಅವರವರಿಗೆ ಅನುಕೂಲಿಸುವ ಉದ್ಯೋಗ ವೊಂದರಲ್ಲಿ ತರಪೇತು ನೀಡುವ ವ್ಯವಸ್ಥೆಯೂ ಉಂಟು. 1968ರಲ್ಲಿ ಅವುಗಳಲ್ಲಿ ಒಟ್ಟು 50,183 ವಿದ್ಯಾರ್ಥಿಗಳಿದ್ದರು. ಅವರಿಗೆ ಶಿಕ್ಷಣವೀಯಲು ವಿಶೇಷ ಶಿಕ್ಷಣ ಪಡೆದ 11,429 ಮಂದಿ ಅಧ್ಯಾಪಕರಿದ್ದರು.

ಉನ್ನತ ಶಿಕ್ಷಣ: ವಿಶ್ವವಿದ್ಯಾಲಯ, ಕಿರಿಯ (ಜೂನಿಯರ್) ಕಾಲೇಜುಗಳು, ತಾಂತ್ರಿಕ ಕಾಲೇಜುಗಳು–ಇವು ಜಪಾನ್‌ನಲ್ಲಿ ಉನ್ನತ ಶಿಕ್ಷಣವೀಯುವ ಸಂಸ್ಥೆಗಳು. ವಿಶ್ವವಿದ್ಯಾನಿಲಯಗಳು ಮೂರು ವರ್ಷದ ಹಿರಿಯ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿದವರನ್ನು ಸೇರಿಸಿಕೊಂಡು ನಾಲ್ಕು ವರ್ಷದ ಪದವಿ ತರಗತಿಯ ಶಿಕ್ಷಣವೀಯುವುವು. 2005ರಲ್ಲಿ ಒಟ್ಟು 726 ವಿಶ್ವವಿದ್ಯಾಲಯಗಳಿದ್ದು ಅಲ್ಲಿ 2.8 ಮಿಲಿಯನ್ ವಿದ್ಯಾರ್ಥಿಗಳಿದ್ದರು. ಒಂದು ವರ್ಷದ ಉನ್ನತ ಶಿಕ್ಷಣದ ವೆಚ್ಚ (1986ರಲ್ಲಿ)1.4 ಮಿಲಿಯನ್ ಯೆನ್(=ಅಮೆ. $10,000). ಈ ವೆಚ್ಚ ಭರಿಸಲು ವಿದ್ಯಾರ್ಥಿಗಳು ಒಪ್ಪೊತ್ತು ಕೆಲಸ ಮಾಡಿ ಸಂಪಾದಿಸುವರು ಇಲ್ಲವೆ ಸರ್ಕಾರಿ ವಿದ್ಯಾರ್ಥಿವೇತನ ಪಡೆಯುವರು. ಜಪಾನ್‌ನ ಶ್ರೇಷ್ಠ ವಿಶ್ವವಿದ್ಯಾಲಯಗಳೆಂದರೆ 'ಯೂನಿವರ್ಸಿಟಿ ಆಫ್ ಟೋಕಿಯೋ', 'ಕ್ಯೋಟೋ ಯೂನಿವರ್ಸಿಟಿ' ಕೆಇಒ ಯೂನಿವರ್ಸಿಟಿ ಮತ್ತು ವಸೇಡ ಯೂನಿವರ್ಸಿಟಿ. ಏಷ್ಯದ 100 ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಜಪಾನಿನ 33 ವಿಶ್ವವಿದ್ಯಾಲಯಗಳು ಸೇರಿವೆ. (ಎನ್.ಎಸ್.ವಿ)

**ಜಪಾನೀ ಶಿಲ್ಪ :** ಜಪಾನಿನ ಶಿಲ್ಪಕಲೆಯ ಇತಿಹಾಸ ಆ ದೇಶದ ವಾಸ್ತು ಮತ್ತು ಚಿತ್ರಕಲೆಗಳ ಇತಿಹಾಸದ ಮಾದರಿಯಲ್ಲಿ ಪ್ರಾಕ್ತನ ಕಾಲಕ್ಕೆ ಸೇರಿದ ಜೋಮೊನ್ ಸಂಸ್ಕೃತಿ ಕಾಲದಿಂದ ಪ್ರಾರಂಭವಾಗುತ್ತದೆ. ನವಶಿಲಾಯುಗದ ಈ ಸಂಸ್ಕೃತಿಯ ಕಾಲ ಪ್ರ.ಶ.ಪೂ. 1ನೆಯ ಸಹಸ್ರಮಾನ. ಆ ಕಾಲಕ್ಕೆ ಸೇರಿದ, ಸುಟ್ಟ ಜೇಡಿಮಣ್ಣಿನಿಂದ ಮಾಡಿದ, ಮಾತೃದೇವತೆ ಅಥವಾ ಬಹುಸಂತಾನೋತ್ಪಾದಕ ಸ್ತ್ರೀದೇವತೆಗಳ ಶಿಲ್ಪಗಳು ಆ ಕಾಲದ ವಿಶ್ವದ ಇತರೆಡೆಗಳ ಅಂಥ ಶಿಲ್ಪಗಳ ಸಾಲಿಗೆ ಸೇರುತ್ತವೆ. ಆ ಕಾಲದಲ್ಲಿ ಉತ್ತರ ಜಪಾನಿನ ಕೆಲವು ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದ ಇತರ ಸಂಸ್ಕೃತಿಗಳಿಗೆ ಸೇರಿದ, ಗಿಡ್ಡಾದ, ದುಂಡು ಕೈಗಳಿಂದಲೂ ದುಂಡಾದ ನಿತಂಬಗಳಿಂದಲೂ ಅಗಲವಾದ ಕಣ್ಣುಗಳಿಂದಲೂ ಕೂಡಿದ, ಮಡಕೆಗಳ ಆಕಾರದ, ವಿಕೃತ ಗೊಂಬೆಗಳೂ ಗಮನಾರ್ಹ. ಬಹುಶಃ ಆ ಶಿಲ್ಪಕೃತಿಗಳಿಗೆ ಈಗ ಉತ್ತರ ಜಪಾನಿನ ಹಾಕೈಡೋ ದ್ವೀಪವಾಸಿಗಳಾದ ಐನೂ ಜನಾಂಗ ಕಾರಣವಾಗಿದ್ದಿರಬಹುದು.

ಷಾಕ ಬುದ್ಧ ಪ್ರತಿಮೆ. ಇಕ್ಕೆಲದಲ್ಲಿ ಬೋಧಿಸತ್ವರು, 623 ಹೋರ್ಯೂಜಿ

ಜಪಾನ್‌ನಲ್ಲಿ ಅನಂತರ ಅನೂಚಾನವಾಗಿ ಬೆಳೆದು ಬಂದ ಶಿಲ್ಪಕಲೆಯ ಉಗಮ ಕ್ರಿಸ್ತಶಕದ ಪ್ರಾರಂಭಕಾಲದಲ್ಲಿ ಆದಂತೆ ಕಾಣುತ್ತದೆ. ಆದಿಕಾಲದ ಶಿಲ್ಪಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು: 1. ಏಷ್ಯ ಭೂಭಾಗದಿಂದ ಜಪಾನಿಗೆ ಬಂದ ಶಿಲ್ಪಗಳು,

2. ಅವುಗಳ ಅನುಕರಣೆಯಿಂದ ರಚಿಸಿದ ಶಿಲ್ಪಗಳು ಮತ್ತು 3. ಸ್ಥಳೀಯ ಶಿಲ್ಪಗಳು ಸ್ವಯಂಪ್ರೇರಣೆಯಿಂದ ರಚಿಸಿದ ಶಿಲ್ಪಗಳು. ಹೊರಗಣ ಪ್ರಭಾವಗಳು ಬಂದದ್ದು ಮುಖ್ಯವಾಗಿ ಚೀನ, ಕೊರಿಯ ಮತ್ತು ಇಂಡೋಚೀನಗಳಿಂದ. ಇದನ್ನು ಪ್ರತಿಬಿಂಬಿಸುವ ಮೊದಲ ಜಪಾನೀ ಶಿಲ್ಪಗಳೆಂದರೆ ಹನೀವ ಗೊಂಬೆಗಳು. ಸುಟ್ಟ ಜೇಡಿಮಣ್ಣಿನಿಂದ ಮಾಡಿದ ಕೊಳವೆಯಾಕಾರದ ಈ ಗೊಂಬೆಗಳನ್ನು ಸಮಾಧಿಗಳ ಸುತ್ತಲೂ ಮತ್ತಿತರ ಆತ್ಮಗಳ ರಕ್ಷಣೆಗಾಗಿ ವೃತ್ತಾಕಾರದಲ್ಲಿ ನೆಡಲಾಗುತ್ತಿತ್ತು. ಈ ಶಿಲ್ಪಗಳು ಮೇಲ್ಭಾಗದಲ್ಲಿ ಸಾಮಾನ್ಯವಾಗಿ ಮಾನವಾಕಾರದಲ್ಲಿ ಇದ್ದುವು. ಅಪರೂಪವಾಗಿ ಕುದುರೆ, ಪಕ್ಷಿ ಅಥವಾ ಮನೆಯ ಆಕಾರಗಳಲ್ಲೂ ಇದನ್ನು ಮಾಡುತ್ತಿದ್ದದ್ದುಂಟು. ಅನಂತರಕಾಲದ ಜಪಾನಿನ ಮರದ ಅಥವಾ ಜೇಡಿಮಣ್ಣಿನ ಶಿಲ್ಪಗಳು ಕೊಳವೆಯ ಆಕಾರದಲ್ಲಿರಲು ಹನೀವ ಗೊಂಬೆಗಳ ಪ್ರಭಾವವೇ ಕಾರಣ. ಇವುಗಳಲ್ಲಿ ಆಯುಧಧಾರಿ ಯೋಧ, ಸಂಗೀತ ವಾದ್ಯಗಾರ್ತಿಯರು, ಜೇನು ತೊಟ್ಟ ಕುದುರೆಗಳು ಮತ್ತು ಇತರ ಪ್ರಾಣಿಗಳನ್ನು ಬಹಳ ಸೂಕ್ಷ್ಮವಾಗಿ ರೂಪಿಸಲಾಗಿದೆ. ಹನೀವ ಶಿಲ್ಪಗಳು ಆಗಿನ ಕಾಲದ ಚೀನೀ ಶಿಲ್ಪಗಳನ್ನು ಹೋಲುವುವಾದರೂ, ಅವುಗಳ ವ್ಯತ್ಯಾಸಗಳೂ ಪ್ರಧಾನವಾಗಿ ಕಾಣುತ್ತವೆ.

**ಅಸುಕ ಕಾಲ :** 552–645. ಈ ಕಾಲದಲ್ಲಿ ಬೌದ್ಧಮತ ಜಪಾನಿಗೆ ಪ್ರವೇಶಿಸಿತು. ಮಾನವಾಕೃತಿಯ ಶಿಲ್ಪಗಳು ಹೆಚ್ಚು ಬಳಕೆಗೆ ಬಂದುವು. ಆದರೂ ಜಪಾನೀಯರಿಗೆ ಮಾನವಾಕೃತಿಯ ಶಿಲ್ಪಗಳ ತಯಾರಿಕೆ ಹೊಸದೇನೂ ಆಗಿರಲಿಲ್ಲ. ಮೊದಮೊದಲಿಗೆ ವಿದೇಶೀ ದೇವತಾಶಿಲ್ಪಗಳ ಬಗ್ಗೆ ವಿರೋಧವಿತ್ತು. ಕ್ರಮೇಣ ಬೌದ್ಧಧರ್ಮ ಅಲ್ಲಿ ಸ್ಥಿರವಾದಂತೆ,

ಸಿದ್ಧಾರ್ಥನ ಜನನವನ್ನು ನಿರೂಪಿಸುವ ಮಾಯಾದೇವಿಯ ಕಂಚಿನ ಶಿಲ್ಪ

ಆ ಶಿಲ್ಪಗಳು ಹೆಚ್ಚು ಪ್ರಚಲಿತವಾದುವು. ಚೀನೀ ಭೂಭಾಗದಿಂದ ಜಪಾನಿಗೆ ಪ್ರವೇಶಿಸಿದ ಮಹಾಯಾನ ಪಂಥದ ದೇವತೆಗಳ ಶಿಲ್ಪಗಳು ಆಗಿನ ಶಿಲ್ಪಿಗಳ ಗಮನ ಸೆಳೆದುವು. ಸರಳವೂ ಸೌಮ್ಯವೂ ಆಹ್ಲಾದಕರವೂ ಆದ ಆ ಹೊಸ ಧರ್ಮ ಬೇಗನೆ ಜನರ ಮನಸ್ಸನ್ನು ಸೆರೆ ಹಿಡಿದುದರ ಫಲವಾಗಿ ಹೊಸ ಧರ್ಮದ ದೇವತಾಶಿಲ್ಪಗಳಿಗೆ ಬೇಡಿಕೆ ಹೆಚ್ಚಿತು. 593–628ರಲ್ಲಿ ಅಸ್ತಿತ್ವಕ್ಕೆ ಬಂದ ಸುಯಿಕೊ ಶೈಲಿಗೆ ಸೇರಿದ ಇಂಥ ಶಿಲ್ಪಗಳನ್ನು ಅಧಿಕ ಸಂಖ್ಯೆಯಲ್ಲಿ 607ರಲ್ಲಿ ನಿರ್ಮಿತವಾದ ಹೊರ್ಯೂಜಿ ಮಂದಿರದ ಪ್ರಧಾನ ಪೂಜಾ ಹಜಾರದಲ್ಲಿ ಕಾದಿರಿಸಲಾಗಿದೆ. ಅಂಥ ಶಿಲ್ಪಗಳಲ್ಲಿ, ಇಕ್ಕೆಲಗಳಲ್ಲೂ ನಿಂತ ಬೋಧಿಸತ್ತ್ವರ ನಡುವೆ ಕುಳಿತ ಷಾಕ (ಶಾಕ್ಯಮುನಿ) ಬುದ್ಧನ ಪ್ರತಿಮೆ ಧ್ಯಾನಮಗ್ನವಾದ ದೇವ ಮಾನವಾಕೃತಿಯಾಗಿ ಗಮನ ಸೆಳೆಯುತ್ತದೆ: ಕೊರಿಯ ದೇಶದವನಾದ ಟೋರಿ ಬುಷ್ಷಿ ಎಂಬ ಶಿಲ್ಪಿಯ ನೇತೃತ್ವದಲ್ಲಿ ಅದನ್ನು ಮಾಡಲಾಗಿದ್ದರೂ, ಆ ಶಿಲ್ಪದಲ್ಲಿ ಚೀನೀ ಪ್ರಭಾವಗಳು ಎದ್ದು ಕಾಣುತ್ತವೆ. ಇದೇ ಕಾಲಕ್ಕೆ ಸೇರಿದ ದಿಕ್ಪಾಲಕರ ದೇವತೆಗಳ ಮರದ ಶಿಲ್ಪಗಳೂ ಸುಂದರ ಕೃತಿಗಳು. ಪ್ರಾಚೀನ ಪರಂಪರೆಯ ಪ್ರಕಾರ ಕೊಳವೆಯ ಆಕಾರದ ಅಂಗಾಂಗಗಳುಳ್ಳ, ಮರದಲ್ಲಿ ನಿರ್ಮಿಸಲಾಗಿದ್ದರೂ ಕಂಚಿನ ಮುಲಾಮಿನಿಂದ ಲೇಪಿತವಾಗಿರುವ ಈ ಸತ್ತ್ವಪೂರ್ಣ ಶಿಲ್ಪಗಳು ಆಗಿನ ಕಲಾಪ್ರೌಢಿಮೆಗೆ ಉತ್ತಮ ನಿದರ್ಶನಗಳು. ಇವು ಪೂರ್ವ ದಿಕ್ಪಾಲಕ ಜಿಕೊಕು–ಟೆನ್, ಪಶ್ಚಿಮ ದಿಕ್ಪಾಲಕ ಕೊಮೊಕು–ಟೆನ್, ದಕ್ಷಿಣ ದಿಕ್ಪಾಲಕ ಜೊಕೊಟೆನ್ ಮತ್ತು ಉತ್ತರ ದಿಕ್ಪಾಲಕ ಟಮೊನ್‌ಟೆನ್‌ಗಳೆಂದು ಗುರುತಿಸಲಾಗಿದೆ. ಭಾರತೀಯ ಪರಂಪರೆಯ ದಿಕ್ಪಾಲಕರಾದ ಇಂದ್ರ, ವರುಣ, ಯಮ ಮತ್ತು ಕುಬೇರ ರೊಂದಿಗೆ ಅನುಕ್ರಮವಾಗಿ ಅವರನ್ನು ಹೋಲಿಸಬಹುದು. ವಿಗ್ರಹಗಳ ಮೇಲ್ಭಾಗದಲ್ಲಿರುವ ತೆರೆಗಳ ಮೇಲೆ ಪದ್ಮಪುಷ್ಪಗಳನ್ನು ಹಿಡಿದ, ಹಾರುತ್ತಿರುವ ಉಡುಪುಗಳನ್ನು ಧರಿಸಿದ, ಸಂಗೀತ ವಾದ್ಯಗಳನ್ನು ನುಡಿಸುತ್ತಿರುವ, ಬುದ್ಧದೇವನನ್ನು ಸ್ತುತಿಸುತ್ತಿರುವ ಅಪ್ಸರೆಯರ ಶಿಲ್ಪಗಳನ್ನು ರೂಪಿಸಲಾಗಿದೆ. ಮರದ ಈ ಎಲ್ಲ ಶಿಲ್ಪಗಳಿಗೂ ಬಣ್ಣಗಳನ್ನೂ ಲೇಪಿಸಲಾಗಿತ್ತು.

ಬಿಷಮಾಂಟೆನ್ ದೇವತೆಯ ಮರದ ವಿಗ್ರಹ
ಸು. 650. ಹೋರ್ಯೂಜಿ

ಹೊರ್ಯೂಜಿಯ ಪ್ರಧಾನ ಪೂಜಾ ಹಜಾರದಲ್ಲಿ ಕಾದಿರಿಸಿರುವ ಆರು ಅಡಿ ಎತ್ತರದ ನಯವಾದ ಕ್ವಾನೋನ್ ಬೋಧಿಸತ್ತ್ವನ ಪ್ರತಿಮೆ ಬಹುಶಃ ಕೊರಿಯದ ಪೇಕ್ಚೆ ರಾಜ್ಯದ ದೊರೆ ನೀಡಿದ ಕೊಡುಗೆ, ಅದಕ್ಕೂ ಬಣ್ಣಗಳನ್ನು ಲೇಪಿಸಲಾಗಿತ್ತು. ಮರದಲ್ಲಿ ಕೆತ್ತಿರುವ ಮತ್ತೊಂದು ಕ್ವಾನೋನ್ ಪ್ರತಿಮೆಯನ್ನು ಬಳಿಯಿರುವ ಯುಮೆಡೊನೊ ಮಂದಿರದಲ್ಲಿ ಅನೇಕ ಶತಮಾನಗಳ ಕಾಲ ಗುಪ್ತವಾಗಿ ಕಾದಿರಿಸಲಾಗಿತ್ತು. ಕರುಣಾಮೂರ್ತಿ ಬೋಧಿಸತ್ತ್ವ ವಿಗ್ರಹಗಳಲ್ಲಿ ಅತ್ಯಂತ ಮನೋಹರವಾದ ಈ ಶಿಲ್ಪದ ಕಿರೀಟವನ್ನು ಬಹಳ ಅಂದವಾಗಿ ಕೆತ್ತಲಾಗಿದೆ.

ಕಂಚಿನ ಶಿಲ್ಪಗಳ ಮಾದರಿಯಲ್ಲಿ ಮರದಲ್ಲಿ ಕೆತ್ತಲಾದ ಮತ್ತೆ ಆರು ಕ್ವಾನೋನ್ ಶಿಲ್ಪಗಳನ್ನು ಆ ಮಂದಿರದಲ್ಲಿ ರಕ್ಷಿಸಿಡಲಾಗಿದೆ. ಅವೂ ಆಗಿನ ಶಿಲ್ಪಗಳ ಕೌಶಲದ ಪ್ರತೀಕಗಳು. ಹೊರ್ಯೂಜಿ ಮಂದಿರಕ್ಕೆ ಸೇರಿದ 50 ಕಂಚಿನ ಪ್ರತಿಮೆಗಳ ಪೈಕಿ ಇರುವ ಹಲವು ಬುದ್ಧ ಬೋಧಿಸತ್ತ್ವ ವಿಗ್ರಹಗಳು ಗಮನಾರ್ಹವಾಗಿವೆ. ಅವುಗಳಲ್ಲಿ ಒಂದಾದ, ಸಿದ್ಧಾರ್ಥನ ಜನನವನ್ನು ನಿರೂಪಿಸುವ ಮಾಯಾದೇವಿಯ ಶಿಲ್ಪ ಅಪೂರ್ವವಾದ್ದು. ಆಕೆಯ ಉಡುಪಿನ ಬಲತೋಳಿನೊಳಗಿಂದ ದೇವಶಿಶು ಹೊರಬರುತ್ತಿರುವಂತೆ ರೂಪಿಸಲಾಗಿದೆ. ಈ ಶಿಲ್ಪಗಳನ್ನು 19ನೆಯ ಶತಮಾನದಲ್ಲಿ ರಾಜಮನೆತನಕ್ಕೆ ಕಾಣಿಕೆಯಾಗಿ ನೀಡಲಾಗಿತ್ತು. ಈಗ ಅವನ್ನು ಟೋಕಿಯೋದಲ್ಲಿರುವ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಹೊರಿಂಜಿಯದಲ್ಲಿರುವ ಮರದ ಬೋಧಿಸತ್ತ್ವ ವಿಗ್ರಹ ಅದೇ ಶೈಲಿಗೆ ಸೇರಿದ್ದು. ಇದು ಬಹಳ ದೊಡ್ಡದಾಗಿಯೂ ಘನವಾಗಿಯೂ ಇದೆ. ಸುಯಿಕೊ ಶಿಲ್ಪಗಳಲ್ಲಿ ಪ್ರಾಚೀನ ಶಿಲ್ಪಶೈಲಿಗಳ ಲಕ್ಷಣಗಳು ಎದ್ದುಕಾಣುತ್ತವೆ. ಚೀನ ಕೊರಿಯಗಳ ಶಿಲ್ಪಕಲೆಯ ಪ್ರಭಾವಗಳೊಂದಿಗೆ ಪ್ರಾಚೀನ ಜಪಾನೀ ಲಕ್ಷಣಗಳು ಪ್ರತ್ಯೇಕಿಸಲು ಸಾಧ್ಯವಾಗದ ರೀತಿಯಲ್ಲಿ ಬೆರೆತುಕೊಂಡಿವೆ.

ದೊಡ್ಡ ತಲೆ, ನಯವಾದ ನಗುಮುಖ, ಬಾದಾಮಿಯಾಕಾರದ ಕಣ್ಣುಗಳು, ಬೆಣೆಯಂಥ ಕತ್ತು ಮುಂತಾದ ಲಕ್ಷಣಗಳಿಂದ ಕೂಡಿದ ಈ ಶಿಲ್ಪಗಳ ಶೈಲಿ ಪಾಶ್ಚಾತ್ಯ ರೋಮನೆಸ್ಕ್ ಶೈಲಿಯನ್ನು ಹೋಲುತ್ತದೆ.

**ಹಕುಹೋ ಕಾಲ :** 645–710. 645ರ ಸುಮಾರಿನಲ್ಲಿ ಜಪಾನ್‌ಗೆ ಪ್ರವೇಶಿಸಿದ ಕನ್‌ಫ್ಯೂಷಿಯಸ್ ಪಂಥ ಮತ್ತು ಟೈಯಿಕ್ವ ಸುಧಾರಣೆಗಳು ಬೌದ್ಧಧರ್ಮದ ಜನಪ್ರಿಯತೆಗೆ ಅಡ್ಡಿಯಾಗಲಿಲ್ಲ. ಈ ಕಾಲದಲ್ಲೂ ಸುಯಿಕೊ ಶೈಲಿಯ ಶಿಲ್ಪಗಳು ಮುಂದುವರಿದು ಕ್ರಮೇಣ ಹೊಸ ಶೈಲಿಯೊಂದಿಗೆ ಸೇರಿಹೋದುವು. ಈ ಬದಲಾಗುತ್ತಿರುವ ಕಾಲಕ್ಕೆ ಸೇರಿದ, ಮರದಲ್ಲಿ ಕೆತ್ತಿದ ಗಮನಾರ್ಹ ಮಿರೊಕು ಬೊಸಟ್ಸು (ಮೈತ್ರೇಯ ಬುದ್ಧ) ಶಿಲ್ಪಗಳನ್ನು ಹಕುಹೋ ಶೈಲಿಯ ನಿದರ್ಶನಗಳೆಂದು ಕರೆಯಲಾಗಿದೆ. ಮೈತ್ರೇಯ ಬುದ್ಧಶಿಲ್ಪಗಳನ್ನು ಕಮಲ ಪುಷ್ಪಗಳ ಪೀಠಗಳ ಮೇಲೆ ರಾಜಲೀಲಾಸನ ಅಥವಾ ಲಲಿತಾಸನ ಮುದ್ರೆಯಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ. ಇಂಥ ಒಂದು ಶಿಲ್ಪವನ್ನು ಹೊರ್ಯೂಜಿ ಮಂದಿರದ ಬಳಿ ಇರುವ ಚೂಗುಜಿ ಭಿಕ್ಷುಣಿಯರ ವಿಹಾರದಲ್ಲಿ ಇಟ್ಟಿದೆ. 1.6 ಮೀ. ಇರುವ ಈ ಮೂರ್ತಿ ಎತ್ತರವಾದ ಪೀಠದ ಮೇಲೆ ಎಡಗಾಲನ್ನು ಕೆಳಗೆ ಇಳಿಬಿಟ್ಟು, ಬಲಗಾಲನ್ನು ಎಡ ಮೊಳಕಾಲಿನ ಮೇಲೆ ಇಟ್ಟುಕೊಂಡಿದೆ. ಎಡಗೈಯನ್ನು ಬಲಗಾಲಿನ ಮೇಲೆ ಊರಿದೆ. ಬಲಗೈ ಗದ್ದದ ಮೇಲಿದೆ. ಚಿಂತೆಯ ಭಾವವನ್ನು ತೋರಿಸುತ್ತದೆ. ಜಗತ್ತಿನ ತೊಂದರೆಗಳನ್ನು ನಿವಾರಿಸುವ ಭಾರವನ್ನು ಹೊತ್ತು ಚಿಂತಾಕುಲನಾದ ಭವಿಷ್ಯ ಬುದ್ಧನಾದ ಮೈತ್ರೇಯನ ಮೂರ್ತಿಶಿಲ್ಪಗಳು ಅಮೋಘ ಶಿಲ್ಪಕೃತಿಗಳು. ಇದು 7ನೆಯ ಶತಮಾನದ ಮಧ್ಯ ಭಾಗದ್ದೆಂದು ಭಾವಿಸಲಾಗಿದೆ.

ಕುಹಾಂಡ ಅರಗಿನ ಪ್ರತಿಮೆ

ಚೀನದಲ್ಲಿ ಟಾಂಗ್ ವಂಶದ ಪ್ರಾರಂಭಕಾಲದಲ್ಲಿ ಆದ ಬದಲಾವಣೆಗಳ ಪ್ರಭಾವಗಳಿಂದ ಜಪಾನ್‌ನ ಅಸುಕ ಕಾಲದಲ್ಲಿ ಶಿಲ್ಪಗಳಲ್ಲಿ ಕಂಡು ಬರುತ್ತಿದ್ದ ಸರಳತೆ ಸೌಮ್ಯತೆಗಳು ಮಾಯವಾಗಿ ಕ್ರಮೇಣ ನೈಜತೆಯ ಅಭಾವ ತಲೆದೋರಲಾರಂಭಿಸಿತು. ದುಂಡಾದ ಮುಖ, ಉದ್ದವಾದ ಕೊಳವೆಗಳಂತೆ ಇರುವ ಕೈಗಳು, ಮನುಷ್ಯಗಾತ್ರದ ದೇಹ, ಸಮಾನಾಂತರ ಮಡಿಕೆಗಳುಳ್ಳ ಉಡುಪುಗಳು–ಇವು ಈ ಶಿಲ್ಪಗಳ ಪ್ರಧಾನ ಲಕ್ಷಣಗಳು. ಈ ಹೊಸ ಕಾಲದ ಶಿಲ್ಪಗಳ ಕೈಚಳಕವನ್ನು ನಿರೂಪಿಸುವ, ಆದರೂ ಮೊದಲಿನ ಘನತೆಯನ್ನು ಉಳಿಸಿಕೊಂಡು ಬಂದಿರುವ, ಶಿಲ್ಪಶೈಲಿಯ ಅತ್ಯುತ್ತಮ ನಿದರ್ಶನವೆಂದರೆ ಷಿನ್‌ಯ ಕುಷಿಜಿಯಲ್ಲಿರುವ ಕಂಚಿನ ಸುವಾಸನಾ ಬುದ್ಧ.

ಈ ಕಾಲದ ಶಿಲ್ಪಕಲೆಯ ಅತ್ಯುತ್ತಮ ನಿಧಿಯೆಂದರೆ ಹೊರ್ಯೂಜಿಯ ಶ್ರೀಮತಿ ಟಚಿಬನಳ ಮಂದಿರದಲ್ಲಿರುವ ಮೂರ್ತಿಗಳು. ಅವುಗಳಲ್ಲಿ ಪದ್ಮದ ಮೇಲೆ ಕುಳಿತ ಅಮಿದ (ಅಮಿತಾಭ) ಬುದ್ಧ, ಇಬ್ಬದಿಗಳಲ್ಲಿ ನಿಂತ ಕ್ವಾನೋನ್ ಮತ್ತು ಸೆಯಿಷಿ ಬೋಧಿಸತ್ತ್ವ ಮೂರ್ತಿಗಳು– ಈ ತ್ರಿಮೂರ್ತಿಸಮೂಹ ಅಪೂರ್ವ ಸೌಂದರ್ಯದಿಂದ ಕೂಡಿದ್ದು, ಅದರ ಹಿಂಬದಿಯ ತೆರೆಯೂ ಬುದ್ಧವಿಗ್ರಹದ ತಲೆಯ ಹಿಂಬದಿಯ ತೇಜೋವಲಯಗಳೂ ಬಹು ಸೂಕ್ಷ್ಮವಾದ ಕೆತ್ತನೆಗಳಿಂದ ಶೋಭಿಸುತ್ತವೆ. ಕಮಲಪುಷ್ಪಗಳ ಮೇಲೆ ಕುಳಿತ ಅಪ್ಸರಸ್ತ್ರೀಯರು ಮುಂಭಾಗದಲ್ಲಿರುವ ಬುದ್ಧನ ಸೇವೆಯಲ್ಲಿ ತೊಡಗಿರುವ ತೆರೆಯ ಮೇಲೆ ಚಿತ್ರಿಸಲಾಗಿದೆ. ಕೇವಲ 2’ ಎತ್ತರದ ಈ ತ್ರಿಮೂರ್ತಿ ಮಂಟಪಕ್ಕೆ ಕಂಚಿನ ಗಿಲೀಟು ಹಾಕಲಾಗಿದೆ.

ಅಸುಕ, ಹಕುಹೋ–ಈ ಎರಡೂ ಕಾಲಗಳ ಲಕ್ಷಣಗಳನ್ನು ಪ್ರತಿಬಿಂಬಿಸುವ, ಯಕುಷಿಜಿಯಲ್ಲಿರುವ 2 ಮೀ. ಎತ್ತರದ ಕಂಚಿನ ಷೋ–ಕ್ವಾನೋನ್ ಶಿಲ್ಪ ಆ ಕಾಲದ ಅತ್ಯಂತ ದೊಡ್ಡ ಕೃತಿ. ಆ ಕಾಲಕ್ಕೆ ಸೇರಿದ ಇನ್ನೂ ದೊಡ್ಡದಾದ ಕೃತಿಯೊಂದಿತ್ತೆಂಬುದು ಕೋಫುಕುಜಿಯಲ್ಲಿ ದೊರಕಿದ 1ಮೀ. ಎತ್ತರದ, ಬುದ್ಧನ ತಲೆಯ ಶಿಲ್ಪದಿಂದ ತಿಳಿದುಬರುತ್ತದೆ.

ಕಂಚಿನ ದೀಪದ ಮೇಲಣ ಜಾಲರಿಯ ಮೇಲೆ ರೂಪಿತವಾದ ಬೋಧಿಸತ್ತ್ವ ಚಿತ್ರ

**ನಾರಾ ಕಾಲ :** 710–84. ಪ್ರಸಿದ್ಧ ಚಕ್ರವರ್ತಿ ಷೋಮು (724–49) ಮತ್ತು ಇತರರ ಆಶ್ರಯ ಪಡೆದ ಬೌದ್ಧ ಧರ್ಮ ಈ ಕಾಲದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂತು. ಅಧಿಕ ಸಂಖ್ಯೆಯಲ್ಲಿ ನಿರ್ಮಿತವಾಗುತ್ತಿದ್ದ ಬೌದ್ಧ ಮಂದಿರಗಳಿಂದ ಪ್ರತಿಮೆಗಳಿಗಾಗಿ ಬೇಡಿಕೆ ಹೆಚ್ಚಿತು. ಇವಕ್ಕಾಗಿ ಹೊಸ ರಾಜಧಾನಿಯಾದ ನಾರಾದಲ್ಲಿದ್ದ ಶಿಲ್ಪಿಗಳು ಅತ್ಯಧಿಕ ಸಂಖ್ಯೆಯಲ್ಲಿ ಮರದ, ಕಂಚಿನ, ಸುಟ್ಟ ಮಣ್ಣಿನ ಮತ್ತು ಅರಗಿನ ಮೂರ್ತಿಗಳನ್ನು ತಯಾರಿಸಲಾರಂಭಿಸಿದರು. ಆ ಕಾಲದ ಜಪಾನೀ ಶಿಲ್ಪಕಲೆ ಚೀನದ ಟಾಂಗ್ ಕಾಲದ ಶಿಲ್ಪಕಲೆಯೊಂದಿಗೆ ಸ್ಪರ್ಧಿಸುವಂಥ ಮಟ್ಟ ತಲಪಿದ್ದುವೆಂದು ಹೇಳಬಹುದು. ಆಗ ನಿರ್ಮಿತವಾದ ನೂರಾರು ಬೌದ್ಧಶಿಲ್ಪಗಳಲ್ಲಿ ಬಹುಶಃ ಅಸಾಮಾನ್ಯವಾದ್ದೆಂದರೆ, ಇಕ್ಕೆಲಗಳಲ್ಲೂ 3.3ಮೀ. ಎತ್ತರದ ನಿಕೊ ಮತ್ತು ಗಕೊ ಬೋಧಿಸತ್ತ್ವದಿಂದ ಕೂಡಿದ, 2.7 ಮೀ. ಎತ್ತರ ಇರುವ, ಕುಳಿತಿರುವ ಯಕುಷಿ ಬುದ್ಧನ ಅದ್ವಿತೀಯ ಶಿಲ್ಪ.

ಈ ಕಾಲದ ಶಿಲ್ಪಗಳು ದುಂಡಾಗಿ ಮಾಂಸಖಂಡಗಳಿಂದ ಉಬ್ಬಿದ ಶರೀರಲಕ್ಷಣ ಹೊಂದಿರುತ್ತವೆ. ಅವುಗಳ ಉದ್ದವೂ ಸಡಿಲವೂ ಆದ ಉಡುಪುಗಳ ಮಡಿಕೆಗಳು ಹರಿಯುವ ನೀರಿನ ಅಲೆಗಳಂತೆ ಸಹಜವಾಗಿವೆ. ಅವುಗಳ ಬೃಹದಾಕಾರ, ಆದರ್ಶಪ್ರಾಯವಾದ ಗಂಭೀರ ಮುಖಲಕ್ಷಣಗಳು ದೈವೀಭಾವನೆಗಳನ್ನು ಮೂಡಿಸುತ್ತವೆ. ತುಂಬುಮುಖ, ಕಮಾನಿನಂಥ ಕಣ್ಣೆವೆ–ಇವು ಆ ಭಾವನೆಯನ್ನು ದ್ವಿಗುಣಗೊಳಿಸುತ್ತವೆ. ಬುದ್ಧ ಪ್ರತಿಮೆಗಳನ್ನುಳಿದು ಇತರ ಶಿಲ್ಪಗಳಲ್ಲಿ ಕಿರೀಟಗಳು ಸುಂದರ ಹಾಗೂ ನೈಜ. ಕಂಠಹಾರಗಳೂ ತೋಳ್ಬಂದಿಗಳೂ ಶರೀರದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಭಕ್ತಜನರ ಗಮನವನ್ನು ಸೆಳೆಯುವ ಚಿತ್ತಾಕರ್ಷಕ ಮುದ್ರೆಗಳಲ್ಲಿ ಪ್ರತಿಮೆಗಳನ್ನು ನಿರೂಪಿಸುವ ಕಲೆಯಲ್ಲಿ ಆ ಕಾಲದ ಶಿಲ್ಪಿಗಳು ನಿಷ್ಣಾತರಾಗಿದ್ದರು.

752ರಲ್ಲಿ ನಾರಾ ನಗರದ ಟೋಡೈಜಿ ಮಂದಿರಕ್ಕಾಗಿ ನಿರ್ಮಿಸಲಾದ 16ಮೀ. ಎತ್ತರದ, ಕುಳಿತಿರುವ ಬುದ್ಧರೋಷಣ (ವೈರೋಚನ) ಮೂರ್ತಿ ಜಪಾನಿನ ಶಿಲ್ಪಕೃತಿಗಳಲ್ಲೇ ಅತ್ಯಂತ ಬೃಹತ್ತಾದ್ದು. ಇತರ ಎಲ್ಲ ಬುದ್ಧರಿಗಿಂತಲೂ ಮಿಗಿಲಾದ, ಅಗಣಿತ ಲೋಕಗಳ ನ್ನೊಳಗೊಂಡ ಪರಮವ್ಯೋಮದ ಅಧಿನಾಯಕನಾದ ಸೂರ್ಯಮಂಡಲಾಧಿಪತಿಯೆಂದು ಪರಿಗಣಿತನಾದ ರೋಷಣಬುದ್ಧ ಮೂರ್ತಿಯ ನಿರ್ಮಾಣಕಾರ್ಯದಲ್ಲಿ ತಾಂತ್ರಿಕ ಕೌಶಲದ ಪರಮಾವಧಿಯನ್ನು ಬಳಸಿಕೊಂಡಿದ್ದಿರಬೇಕು. ಅನಂತರ ಸಂಭವಿಸಿದ ಬೆಂಕಿಯ ಅಪಘಾತದಲ್ಲಿ ಈ ಮೂರ್ತಿ ನಾಶವಾಯಿತು. ಅದೇ ಕಾಲಕ್ಕೆ ಸೇರಿದ ಮತ್ತು ಅದೇ ಮಂದಿರದಲ್ಲಿರುವ, ಕಂಚಿನ ದೀಪದ ಮೇಲಣ ಜಾಲರಿಯ ಮೇಲೆ ರೂಪಿಸಿರುವ, ಬೋಧಿಸತ್ತ್ವ ಚಿತ್ರಗಳು ಇಟಲಿಯ ಪುನರುಜ್ಜೀವನ ಯುಗದ ಶಿಲ್ಪಗಳಿಗೆ ಸಮನೆಂದು ವರ್ಣಿಸಲಾಗಿದೆ. ಕನಿಮಾನ್‌ಜಿಯ 2.6 ಮೀ. ಎತ್ತರದ, ಷಾಕ (ಶಾಕ್ಯಮುನಿ) ಬುದ್ಧನ ಶಿಲ್ಪಸೌಂದರ್ಯವೂ ಉಡುಪಿನ ಮಡಿಕೆಗಳನ್ನು ನಿರೂಪಿಸಿರುವ ಚಾತುರ್ಯವೂ ಗಮನಾರ್ಹ. ಇದು ಆ ಕಾಲದ ಪ್ರಮುಖ ಕಂಚಿನ ಶಿಲ್ಪಗಳಲ್ಲೊಂದು. ಟೋಡೈಜಿಯಲ್ಲಿರುವ, 0.5 ಮೀ. ಎತ್ತರದ ಶಿಶು ಬುದ್ಧ ವಿಗ್ರಹವೂ ಉತ್ತಮ ಕೃತಿ.

ಕಂಚಿನ ಶಿಲ್ಪಕಲೆಯ ಇಂಥ ಉಚ್ಛ್ರಾಯ ಕಾಲದಲ್ಲೂ ಜೇಡಿಮಣ್ಣಿನ ಪ್ರತಿಮೆಗಳೂ ತಯಾರಾಗುತ್ತಿದ್ದುವು. 711ರಲ್ಲಿ ಮಾಡಲಾದ, 60ಕ್ಕೂ ಹೆಚ್ಚಿನ ಜೇಡಿಮಣ್ಣಿನ ಸಣ್ಣ ಮೂರ್ತಿಗಳು ಹೊರ್ಯೂಜಿಯ ಪಗೋಡದ ಗೂಡುಗಳಲ್ಲಿ ಉಳಿದುಬಂದಿವೆ. ಚೀನದ

ಬೋನ್‌ಟೆನ್ ವಿಗ್ರಹ

ಯಕುಷಿ ಶಿಲ್ಪ, ಷಿನ್ ಯಕುಷಿಜಿ

ತುನ್‌ಹುವಾಂಗ್ ಪ್ರಾಂತ್ಯದಲ್ಲಿ ಟಾಂಗ್ ವಂಶದ ಕಾಲಕ್ಕೆ ಸೇರಿದ ಜೇಡಿಮಣ್ಣಿನ ಶಿಲ್ಪಗಳನ್ನು ಈ ಗುಂಪಿನ ಬೋಧಿಸತ್ತ್ವ ಮೂರ್ತಿಗಳು ಹೋಲುತ್ತವೆ. ಮಾನವ ಗಾತ್ರಕ್ಕಿಂತಲೂ ದೊಡ್ಡವಾದ ಮೂವತ್ತು ಪ್ರತಿಮೆಗಳು ನಾರಾ ಮತ್ತು ಅದರ ಪರಿಸರದಲ್ಲಿ ಉಳಿದುಬಂದಿವೆ. ಅವುಗಳಲ್ಲಿ ಹೆಚ್ಚು ಭಾಗ ಒಂದೇ ಶೈಲಿಯಲ್ಲಿ, ಬಹುಶಃ ಒಂದೇ ಕಲಾಶಾಲೆಯಲ್ಲಿ, ನಿರ್ಮಿತವಾದಂತೆ ಕಾಣುತ್ತವೆ. ನಾಲ್ಕು ದಿಕ್ಪಾಲಕರ ಎರಡು ಗುಂಪುಗಳು ಕೈಡನ್–ಇನ್‌ನಲ್ಲೂ ಹೊರ್ಯೂಜಿಯ ಜಿಕಿಡೊದಲ್ಲೂ ಇವೆ. ಇವುಗಳಲ್ಲಿ ಅತ್ಯಂತ ಭಯಂಕರವಾಗಿ ಕಾಣುವುದು ಷುಕ್ಕುಂಗೊ–ಜಿನ್ (ವಜ್ರಪಾಣಿ). ಇದನ್ನು ಟೋಡೈಜಿಯ ಸಂಗಟ್ಸು ಡೋದಲ್ಲಿ ಇಡಲಾಗಿದೆ. ಭಾರತೀಯ ಬೌದ್ಧಮಂಡಲದ ಬ್ರಹ್ಮವನ್ನು ಹೋಲುವ ಬೋನ್‌ಟೆನ್ ವಿಗ್ರಹವನ್ನು ಅಂಜಲಿಬದ್ಧ ಧ್ಯಾನಮುದ್ರೆಯಲ್ಲಿ ನಿಂತಿರುವಂತೆ ರೂಪಿಸಲಾಗಿದೆ. ಈ ವಿಗ್ರಹವನ್ನು ಹಾಕೈಡೋ ಮಂದಿರದಲ್ಲಿ ಇಡಲಾಗಿದೆ. ತಲೆಗೂದಲನ್ನು ಮೇಲ್ಭಾಗದಲ್ಲಿ ಸುಂದರವಾದ ಕೊಂಡೆಯನ್ನಾಗಿ ಕಟ್ಟಲಾಗಿದೆ. ಜೇಡಿಮಣ್ಣಿನ ಈ ಎಲ್ಲ ವಿಗ್ರಹಗಳಿಗೆ ಸುಂದರವಾದ ಬಣ್ಣಗಳನ್ನು ಹಾಕಲಾಗಿತ್ತು.

ಅರಗಿನ ಶಿಲ್ಪಗಳು ಈ ಕಾಲದ ಮತ್ತೊಂದು ವಿಶಿಷ್ಟ ಪ್ರಕಾರ. ಮರದ ಜಾಲರಿಯ ಅಥವಾ ಜೇಡಿಮಣ್ಣಿನ ಮೂಲಕೃತಿಗಳ ಮೇಲೆ ಕರಗಿದ ಅರಗಿನಲ್ಲಿ ಅದ್ದಿದ ಬಟ್ಟೆಯನ್ನು ಸುತ್ತಿ ಅದರ ಮೇಲೆ ಶಿಲ್ಪಗಳ ವಿವಿಧ ಅಂಗಾಂಗಗಳನ್ನು ಸೂಕ್ಷ್ಮವಾಗಿ ಬಿಡಿಸಿದ ಅನಂತರ ಒಳಗಿನ ಮೂಲಕೃತಿಯನ್ನು ಹೊರ ತೆಗೆಯಲಾಗುತ್ತಿತ್ತು. ಡೊಳ್ಳಾದ ಅರಗಿನ ಬಟ್ಟೆಯ ಇಂಥ ಶಿಲ್ಪಗಳ ಐವತ್ತು ಕೃತಿಗಳು ಉಳಿದುಬಂದಿವೆ.

ಹನ್ನೊಂದು ಮುಖಗಳ ಕ್ವಾನ್ನಾನ್ ಶಿಲ್ಪ

ಎಂಟು ದೇವತೆಗಳ, ಬುದ್ಧನ ಮೊದಲ ಹತ್ತು ಶಿಷ್ಯವರ್ಗದ ಪೈಕಿ ಆರು ಶಿಷ್ಯರ ಒಟ್ಟು 14 ಮಂದಿಯ ಅರಗಿನ ಸುಂದರ ಶಿಲ್ಪಗಳು ಈ ಪ್ರಕಾರದ ಅತ್ಯುತ್ತಮ ನಿದರ್ಶನಗಳು. 1,200 ವರ್ಷಗಳಿಗೂ ಹಿಂದೆ ಕೋಫುಕುಜಿ ಮಂದಿರಕ್ಕಾಗಿ ಇವನ್ನು ನಿರ್ಮಿಸಲಾಗಿತ್ತು. ನೆಟ್ಟಗೆ ನಿಂತ ಅಚಲ ದೇಹ, ಯೋಧರ ಅಥವಾ ಭಿಕ್ಷುಗಳ ಪೋಷಾಕು, ವರ್ಣರಂಜಿತ ಅಂಗಾಂಗಗಳು, ನೈಜ ಮುಖ ಚರ್ಯೆ–ಇವು ಈ ಶಿಲ್ಪಗಳ ಸಹಜತೆಯನ್ನು ಎತ್ತಿ ತೋರಿಸುತ್ತವೆ.

ಚೀನೀ ಧರ್ಮಗುರು ಗಾಂಜಿನ್ 759ರಲ್ಲಿ ನಿರ್ಮಿಸಿದ ಟೋಷೊಡೈಜಿ ಮಂದಿರದಲ್ಲಿರುವ ಈ ಬಗೆಯ ಅರಗಿನ ಶಿಲ್ಪಗಳೂ ಗಮನಾರ್ಹ. ಗಾಂಜಿನನೊಂದಿಗೆ ಜಪಾನ್‌ಗೆ ಬಂದ ಚೀನೀ ಕೆಲಸಗಾರರು ಮಂದಿರದ ನಿರ್ಮಾಣ ಮತ್ತು ಅಲಂಕರಣ ಕಾರ್ಯದಲ್ಲಿ ಜಪಾನೀ ಕೆಲಸಗಾರರೊಂದಿಗೆ ದುಡಿದರು. ಅವರ ಪ್ರಯತ್ನಗಳಿಂದ ನಿರ್ಮಿತವಾದ ಶಿಲ್ಪಗಳಲ್ಲಿ ಧ್ಯಾನಮಗ್ನನಾದ ಕುರುಡ ಧರ್ಮಗುರು ಗಾಂಜಿನನ ಶಿಲ್ಪದಲ್ಲಿ ಸೌಮ್ಯ ಜೀವಂತ ಸೌಂದರ್ಯ ಇದೆ. ಆ ಮಂದಿರದ ಪ್ರಧಾನ ಮೂರ್ತಿ ರೋಷಣ (ವೈರೋಚನ) ಬುದ್ಧ. ಈ ದೊಡ್ಡ ಮೂರ್ತಿ ಡೊಳ್ಳಾದ ಅರಗಿನ ಶಿಲ್ಪ. ಪೀಠವನ್ನೂ ಒಂದು ಸಾವಿರ ಬುದ್ಧಮೂರ್ತಿಗಳನ್ನೂ ಒಳಗೊಂಡ ಪ್ರಭಾವಲಯಗಳನ್ನು ಬಿಟ್ಟು ಈ ವಿಗ್ರಹದ ಎತ್ತರ 3.3 ಮೀ. ಅದೇ ಹಜಾರದಲ್ಲಿ 5.3 ಮೀ. ಎತ್ತರದ ಒಂದು ಸಾವಿರ ಕೈಗಳ ಸೆಂಜು ಕ್ವಾನೋನ್ ಪ್ರತಿಮೆ ಇದೆ. ಅರಗುಲೇಪಿತ ಬಟ್ಟೆಯ ವಿಗ್ರಹಗಳಲ್ಲಿ ಇದು ಅತ್ಯಂತ ದೊಡ್ಡದು. ಅಲ್ಲೇ 3.6 ಮೀ. ಎತ್ತರದ ಯಕುಷಿ ವಿಗ್ರಹವೂ ಇದೆ. ಷೊರಿಂಜಿಯಲ್ಲಿರುವ, 2ಮೀ. ಎತ್ತರದ, 11 ಮುಖಗಳ, ಕ್ವಾನೋನ್ ಬೋಧಿಸತ್ವ ವಿಗ್ರಹ ಸೌಮ್ಯವಾದ್ದು. ಹೊಕ್ಕೇಜಿಯ ಭಿಕ್ಷುಣಿಯರ ವಿಹಾರದಲ್ಲಿರುವ ಬುದ್ಧದೇವನ ಪರಮಮಿತ್ರ ಯುಇಮ (ವಿಮಲಕೀರ್ತಿ) ಈ ಪ್ರಕಾರದ ಮತ್ತೊಂದು ಉತ್ತಮ ಪ್ರತಿಮೆ.

ಈ ಕಾಲದ ಕೊನೆಯ ಭಾಗದಲ್ಲಿ ಮರದ ಶಿಲ್ಪಗಳ ಮೇಲೆ ಸುದ್ದೆ ಮಣ್ಣು ಮತ್ತು ಅಂಟನ್ನು ಲೇಪಿಸಿ ಅದರ ಮೇಲೆ ವಿವಿಧ ಬಣ್ಣಗಳಿಂದ ಅಲಂಕಾರ ಮಾಡುವ ವಿಧಾನ ರೂಢಿಗೆ ಬಂತು. ಈ ಬಗೆಯ ಮೊದಮೊದಲ ಐದು ವಿಗ್ರಹಗಳ ಒಂದು ತಂಡ

ಡೈಯಂಜಿ ಮಂದಿರದಲ್ಲಿದೆ. ಕ್ವಾನೋನ್ ಬೋಧಿಸತ್ತ್ವನ ವಿವಿಧ ಅಂಶಗಳನ್ನು ರೂಪಿಸುವ ಈ ಶಿಲ್ಪಗಳಲ್ಲಿ ಟಾಂಗ್ ಕಾಲದ ಚೀನೀ ಶಿಲ್ಪಗಳ ಪ್ರಭಾವಗಳನ್ನು ಕಾಣಬಹುದು. ಟೋಷೋಡೈಜಿ ಮಂದಿರದಲ್ಲಿರುವ ಈ ಪ್ರಕಾರದ ಹನ್ನೆರಡಕ್ಕೂ ಹೆಚ್ಚಿನ ಮೂರ್ತಿಗಳು 8ನೆಯ ಶತಮಾನದ ಕೊನೆಯ ಭಾಗಕ್ಕೆ ಸೇರಿದವು. ಈ ಕಾಲದಲ್ಲಿ ಹೊರಗಿನಿಂದ ಜಪಾನನ್ನು ಪ್ರವೇಶಿಸಿದ ಧಾರ್ಮಿಕ ಪ್ರಭಾವಗಳು ನೈಜವಾಗಿ ಸಾಗುತ್ತಿದ್ದ ಶಿಲ್ಪಕಲೆಗೆ ಕ್ರಮೇಣ ಪ್ರತಿಬಂಧಕವಾಗಿ ಪರಿಣಮಿಸಿ, ಹೊಸದೊಂದು ಶೈಲಿಗೆ ಬುನಾದಿ ಹಾಕಿದುವು.

ಕೊಂಗೋ–ಕೊಕುಜೊ ಶಿಲ್ಪ, ಜಿಂಗೋಜಿ

**ಪೂರ್ವ ಹೀಯೂನ್ ಕಾಲ:** 784–897. 784–794ರ ದಶಕದಲ್ಲಿ ಜಪಾನ್‍ನ ಆಡಳಿತ ಬದಲಾಯಿತು. ರಾಜಧಾನಿಯನ್ನು ನಾರಾದಿಂದ ಕ್ಯೋಟೋಗೆ ಬದಲಾಯಿಸಲಾಯಿತು. ಆಗ ಮತೀಯ ಮತ್ತು ಕಲಾಕ್ಷೇತ್ರಗಳಲ್ಲೂ ಕೆಲವು ಮಹತ್ತ್ವ ಪೂರ್ಣ ಬದಲಾವಣೆಗಳಾದುವು. ಧಾರ್ಮಿಕ ವಿಷಯಗಳಲ್ಲಿ ಆಡಳಿತ ವರ್ಗದವರ ಆಸಕ್ತಿ ಕುಗ್ಗಿತು. ಆ ಸಮಯದಲ್ಲಿ ಪ್ರಬಲವಾಗುತ್ತಿದ್ದ ಷಿಂಗೋನ್ ಮತ್ತು ಟೆಂಡೈ ಪಂಥಗಳ ವಿಹಾರಗಳಲ್ಲಿ ಬಳಸುತ್ತಿದ್ದ ಪ್ರತಿಮೆಗಳಿಗೆ ಹೆಚ್ಚಿನ ಬೇಡಿಕೆ ಬಂತು. ಶಿಲ್ಪ ನಿರ್ಮಾಣದಲ್ಲಿ ಮರದ ಬಳಕೆ ಹೆಚ್ಚಾಯಿತು. ಬೌದ್ಧಧರ್ಮದ ಪ್ರತಿಮೆಗಳು ತಮ್ಮ ನೈಜತೆಯನ್ನು ಕಳೆದುಕೊಂಡು, ತತ್ತ್ವಧ್ಯಾನಮಗ್ನ ಸಂತರ ಲಕ್ಷಣಗಳನ್ನು ಹೆಚ್ಚಾಗಿ ಬಿಂಬಿಸಲು ಆರಂಭಿಸಿದುವು. ಜಪಾನೀ ಮರದ ಶಿಲ್ಪಗಳು ತಾಂತ್ರಿಕ ನೈಪುಣ್ಯದ ಪರಾಕಾಷ್ಠೆ ಮುಟ್ಟಿದುವು. ಈ ಕಾಲದ ಶೈಲಿಯ ಶಿಲ್ಪಗಳು ತಮ್ಮ ಸ್ಥೂಲತೆ ಮತ್ತು ಸತ್ತ್ವಕ್ಕೆ ಹೆಸರು ಗಳಿಸಿದುವು.

ಮರದ ದಿಮ್ಮಿಗಳಲ್ಲಿ ದೊಡ್ಡ ವಿಗ್ರಹಗಳನ್ನು ಕಡೆಯುವುದರಲ್ಲಿ ಶಿಲ್ಪಿಗಳು ಸಿದ್ಧಹಸ್ತರಾದರು. ಈ ಕಾಲದ ಮುರೋಜಿ, ಗಂಗೋಜಿ ಮತ್ತು ಜಿಂಗೋಜಿಯ ಬುದ್ಧ ವಿಗ್ರಹಗಳ ಮುಖ, ದೇಹ ಮತ್ತು ಉಡುಪುಗಳಲ್ಲಿ ಒಂದು ಹೊಸ ಶಕ್ತಿ ಕಾಣುತ್ತದೆ. 9ನೆಯ ಶತಮಾನದ ಮೂರೋಜಿಯ ದೇವಾಲಯದಲ್ಲಿರುವ, ಕುಳಿತ ಷಾಕ (ಶಾಕ್ಯಮುನಿ) ಬುದ್ಧ ವಿಗ್ರಹ ಈ ಶೈಲಿಗೆ ಉತ್ತಮ ನಿದರ್ಶನ. ಹೋಕೈಜಿಯ, ಹನ್ನೊಂದು ಮುಖಗಳ ಕ್ವಾನೋನ್ ಶಿಲ್ಪ ಘನವಾದರೂ ಹಗುರತೆಯ ಭಾವವನ್ನು ಸೂಸುವ ಆ ಶೈಲಿಯಲ್ಲಿ ಇದು ಅತ್ಯುತ್ತಮ ಸುಂದರಶಿಲ್ಪ. ಇದನ್ನು ಶ್ರೀಗಂಧದ ಮರದಲ್ಲಿ ಕಡೆಯಲಾಗಿದೆ. ನ್ಯೊಯಿರಿನ್‍ನ ಕ್ವಾನ್‍ಷಿನ್‍ಜಿಯ ಆರು ಕೈಗಳ ಕ್ವಾನೋನ್ ಬೋಧಿಸತ್ತ್ವ ಮೂರ್ತಿ ಅತಿಮಾನವತೆಯ ಮತ್ತು ಮಾತೃತ್ವದ ಭಾವನೆಗಳನ್ನು ಪ್ರದರ್ಶಿಸುತ್ತದೆ. ಇದು ಹೋಕೈಜಿ ಬೋಧಿಸತ್ತ್ವನಿಗಿಂತ ಭಿನ್ನವಾಗಿದೆ. ದೈವೀಶಕ್ತಿ ಮತ್ತು ದೈವೀಕರುಣೆಗಳ ಭಾವನೆಗಳನ್ನು ಶಿಲ್ಪಿ ಇದರಲ್ಲಿ ತುಂಬಿದ್ದಾನೆ. ಕಲಾತಂತ್ರದಲ್ಲಿ ಹೆಚ್ಚು ಪರಿಶ್ರಮ ಪಡೆದವರಿಗೆ ಮಾತ್ರ ಅರ್ಥವಾಗುವಂತೆ ಇದನ್ನು ರೂಪಿಸಲಾಗಿದೆ. ಧ್ಯಾನಮಗ್ನ ಜಿಂಗೋಜಿಯ ಕೊಂಗೊ ಕೊಕುಜೊ ಶಿಲ್ಪಗಳಲ್ಲಿ ಮಾನವತೆಯ ಹೋಲಿಕೆ ಅಪ್ರಧಾನ. ಅಲ್ಲಿ ಯೋಗಮುದ್ರೆಗಳಿಗೆ ಪ್ರಾಮುಖ್ಯ. ಷಿಂಟೋಮತಕ್ಕೆ ಸೇರಿದ ಹಲವಾರು ಸ್ತ್ರೀಪುರುಷ ದೇವತೆಗಳ ವಿಗ್ರಹಗಳು ಅದೃಷ್ಟವಶಾತ್ ಉಳಿದುಬಂದಿವೆ. ಸರಳವಾದರೂ ಭವ್ಯಶೂನ್ಯತೆಯ ಪ್ರತೀಕಗಳಂತಿರುವ ಈ ಶಿಲ್ಪಗಳಿಗೆ ಚೀನೀ ಪರಂಪರೆಯ ವಿಗ್ರಹಗಳಂತೆ ಉಡುಪುಗಳಿವೆ. ಇವನ್ನು ಕುಳಿತಭಂಗಿಗಳಲ್ಲಿ ನಿರೂಪಿಸಲಾಗಿದ್ದರೂ ಬೌದ್ಧಶಿಲ್ಪಗಳೊಂದಿಗೆ ಇವಕ್ಕೆ ಯಾವ ಹೋಲಿಕೆಯೂ ಇಲ್ಲ. ಜಪಾನಿನ ಯಕುಷಿಜಿ ಮತ್ತು ಇತರ ಎಡೆಗಳಲ್ಲಿ ಆ ಗುಂಪಿನ ಆರು ಶಿಲ್ಪಗಳು ಉಳಿದುಬಂದಿವೆ. ಅವುಗಳಲ್ಲಿ ಚಕ್ರವರ್ತಿನಿ ಜಿಂಗೊ ಎಂಬವಳ ಶಿಲ್ಪ ಗಮನಾರ್ಹ.

**ಉತ್ತರ ಹೀಯಾನ್ (ಫುಜಿವಾರಾ) ಕಾಲ :** 897–1185. ಈ ಆಡಳಿತದ ಕಾಲದಲ್ಲಿ ಬೌದ್ಧಧರ್ಮಕ್ಕೆ ಮತ್ತೆ ರಾಜಾಶ್ರಯ ದೊರಕಿತು. ಆದ್ದರಿಂದ ಈ ಕಾಲದಲ್ಲಿ ಅನೇಕ ಬೌದ್ಧವಿಹಾರಗಳೂ ಅಸಂಖ್ಯಾತ ಶಿಲ್ಪಗಳೂ ಸೃಷ್ಟಿಯಾದುವು. ಅಮಿದ (ಅಮಿತಾಭ) ಬುದ್ಧನ ಕಲ್ಪನೆಯ ಸ್ವರ್ಗದ ಅನುಭವವನ್ನು ಆಡಳಿತಗಾರ ಶ್ರೀಮಂತರು ಇಹಲೋಕದಲ್ಲಿ ಕಾಣಲು ಎಳಸಿದ್ದರಿಂದ ಅವರ ಆಶ್ರಿತರಾದ ಶಿಲ್ಪಿಗಳೂ ಕಲೆಗಾರರೂ ಅಂಥ ಕಲ್ಪನೆಯ ಸ್ವರ್ಗತುಲ್ಯವಾದ ಮಂದಿರಗಳನ್ನೂ ಆ ಮಂದಿರಗಳಲ್ಲಿ ಆ ಸ್ವರ್ಗದ ಸುಖಸಂತೋಷದಾಯಕ ದೃಶ್ಯಗಳನ್ನೂ ನಿರ್ಮಿಸಲಾರಂಭಿಸಿದರು. ಉಜಿ ಎಂಬಲ್ಲಿಯ ಬ್ಯೋಡೋಯಿನ್ ಮಂದಿರದ ಹೂಡೊ ಹಜಾರದಲ್ಲಿ ಜೋ ಚೋ ಎಂಬ ಶಿಲ್ಪಿಯಿಂದ 1053ರಲ್ಲಿ ನಿರ್ಮಿತವಾದ, 2.7ಮೀ. ಎತ್ತರದ, ಚಿನ್ನದ ರೇಕುಗಳಿಂದ ಅಲಂಕೃತವಾದ, ಮರದ ಅಮಿದ ಬುದ್ಧನ ವಿಗ್ರಹ ಈ ಶೈಲಿಯ ಉತ್ತಮ ಪ್ರತೀಕ. ಅದರ ಭವ್ಯ ಕೆತ್ತನೆಗಳಿಂದ ಕೂಡಿದ ಪ್ರಭಾವಳಿ ಅದ್ಭುತವಾದ್ದು. ಅದೇ ಶೈಲಿಗೆ ಸೇರಿದ, 1124ರಲ್ಲಿ ನಿರ್ಮಿತವಾದ, ಚೂಸೊನ್‍ಜಿ ಮಂದಿರದ ಕೊಂಜಿ ಕಿಡೊ ಹಜಾರದಲ್ಲಿರುವ, ಮರದ ಇಚಿಜಿ ಕಿನ್‍ರಿನ್ ಶಿಲ್ಪವೂ ಬೋಧಿಸತ್ತ ಮತ್ತು ಇತರ ದೇವತೆಗಳ ಅಲಂಕೃತ ಶಿಲ್ಪಗಳೂ ಗಮನಾರ್ಹ.

ಅಮಿದ ಬುದ್ಧನ ಮರದ ವಿಗ್ರಹ. ಶಿಲ್ಪಿ ಜೋಚೋ 1053

ಫುಜಿವಾರಾ ಶೈಲಿಯಲ್ಲಿ ಆ ಮೊದಲು ಬಳಕೆಯಲ್ಲಿದ್ದ ಹಲವು ಶೈಲಿಗಳ ಪ್ರಭಾವಗಳು ಪುನಃ ಬಳಕೆಗೆ ಬಂದುವು. ನಾರಾ ಕಾಲಗಳ ಶೈಲಿಗಳೊಂದಿಗೆ ಬೆರೆತ ಸೌಮ್ಯ ನಯಗಾರಿಕೆ ಈ ಕಾಲದಲ್ಲಿ ರೂಢಿಗೆ ಬಂತು. ಈ ಕಾಲದಲ್ಲೂ ಬೌದ್ಧಶಿಲ್ಪಗಳಿಗೆ ಬೇಡಿಕೆ ಹೆಚ್ಚುತ್ತಿತ್ತು. ಶಿಲ್ಪನಿರ್ಮಾಣದಲ್ಲಿ ಒಂದು ಹೊಸ ತಂತ್ರ ತಲೆದೋರಿತು. ದೇಹದ ವಿವಿಧ ಅಂಗಗಳನ್ನು ಬಿಡಿಯಾಗಿ ತಯಾರಿಸಿ ಅದನ್ನು ಜೋಡಿಸಿ ಮೂರ್ತಿಯನ್ನು ತಯಾರಿಸಲಾಗುತ್ತಿತ್ತು. ಇದರಿಂದ ಶಿಲ್ಪಗಳನ್ನು ಶೀಘ್ರ ಹಾಗೂ ಕಡಿಮೆ ಖರ್ಚಿನಿಂದಲೂ ತಯಾರಿಸುವುದು ಸಾಧ್ಯವಾಯಿತು. ದೊಡ್ಡ ಮೂರ್ತಿಗಳ ತಯಾರಿಕೆಗೆ ಈ ವಿಧಾನ ಬಹಳ ಸಹಾಯಕವಾಯಿತು.

ಈ ಶೈಲಿಯ ಉತ್ತಮ ಕೌಶಲದ ಅನೇಕ ಶಿಲ್ಪಗಳು ಜಪಾನಿನಾದ್ಯಂತ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಚೂಸೊನ್‍ಜಿ ಮಂದಿರದ ಇಚಿಜಿ ಕಿನ್ ರಿನ್ ಗಮನಾರ್ಹ. ಅದರ ಮುಂಭಾಗವನ್ನು ದುಂಡುಶಿಲ್ಪ ಪದ್ಧತಿಯಲ್ಲಿ ನಿರ್ಮಿಸಲಾಗಿದೆ. ಹಿಂಭಾಗವನ್ನು

ಡೊಳ್ಳಾಗಿ ಬಿಡಲಾಗಿದೆ. ನಾರಾ ಬಳಿಯ ಜೋರುರಿಜಿ ಮಂದಿರದಲ್ಲಿರುವ ಶುಭಶಕುನಗಳ ಅಧಿದೇವತೆ ಕಿಚಿಜೋಟೆನ್ ಶಿಲ್ಪ ಗಮನಾರ್ಹ. ಕಮಲಪುಷ್ಪದ ಮೇಲೆ ತೇಲಿ ಹೋಗುತ್ತಿರುವಂತೆ ಅದನ್ನು ರೂಪಿಸಲಾಗಿದೆ. ರಾಜಮನೆತನದ ಸ್ತ್ರೀಯಂತೆ ಮೈತುಂಬ ಉಡುಪು ತೊಟ್ಟು ತಲೆಗೂದಲನ್ನು ಇಬ್ಬದಿಗೂ ಹರಿದು ಬೀಳುತ್ತಿರುವಂತೆ ಧರಿಸಿ, ಅದರ ಮೇಲೆ ಅಲಂಕಾರಪೂರ್ಣ ಕಿರೀಟವನ್ನು ಧರಿಸಿರುವಂತೆ ರೂಪಿಸಲಾಗಿರುವ ಈ ಶಿಲ್ಪ ಕೇವಲ ಸ್ತ್ರೀ ಸೌಂದರ್ಯವನ್ನು ಮಾತ್ರವಲ್ಲ, ನಿರಾಸಕ್ತ ಕರುಣಾಮೂರ್ತಿಯ ದೈವೀಭಾವವನ್ನು ಸೂಸುತ್ತದೆ.

ಶಕ್ತವಾದ ದೇಹ, ಸುಕ್ಕಾದ ಮುಖ, ವಿಕೃತವಾದ ತಿರುವುಮುರುವುಗಳಿಂದ ಕೂಡಿದ ದೇಹ ಉಳ್ಳ ಕೋಫು ಕುಜಿ ಮಂದಿರದ ಹನ್ನೆರಡು ದಳಪತಿಗಳ ಶಿಲ್ಪಗಳನ್ನು ವ್ಯಂಗ್ಯಶಿಲ್ಪಗಳೆಂದು ಪರಿಗಣಿಸಬಹುದು.



**ಪಾಲಕದೇವತೆ ನಿಯೋ. ಶಿಲ್ಪಿ ಉನ್‌ಕೆಯಿ 1203**

**ಕಾಮಾಕುರಾ ಕಾಲ :** 1185–1333. ಈ ಕಾಲದ ಆರಂಭದಲ್ಲಿ ದೇಶದ ಆಡಳಿತ ಮಿನಾಮೊಟೊ ಯೊರಿಟೊಮೊ ಎಂಬವನ ಕೈವಶವಾಯಿತು. ಆಡಳಿತ ಕೇಂದ್ರ ರಾಜಧಾನಿಯನ್ನು ಕ್ಯೋಟೋದಿಂದ ಕಾಮಾಕುರಾಗೆ ಬದಲಾಯಿಸಲಾಯಿತು. ಆ ಸಂದರ್ಭದಲ್ಲಿ ಸಾಂಸ್ಕೃತಿಕ ರಂಗದಲ್ಲೂ ಕೆಲವು ಮಾರ್ಪಾಟುಗಳಾದುವು. ಫುಜಿವಾರಾ ಕಾಲದ ಧಾರ್ಮಿಕ ಶ್ರದ್ಧೆ ಕಡಿಮೆಯಾದರೂ ಹೊಸ ಯುಗದಲ್ಲಿ ಶಿಲ್ಪಿಗಳ ಮತ್ತು ಕುಶಲ ಕೆಲಸಗಾರರ ಕೃತಿಗಳಿಗೆ ಬೇಡಿಕೆ ಹೆಚ್ಚಿತು. ಶಿಲ್ಪಕಲೆಯಲ್ಲಿ ಹಳೆಯ ಶೈಲಿ ಸ್ವಲ್ಪ ಕಾಲ ಮುಂದುವರಿದರೂ ಹೊಸ ಪದ್ಧತಿಗಳೂ ತಂತ್ರಗಳೂ ತಲೆದೋರಿದುವು. ಮಾನವೀಯತೆಗೆ ಪ್ರಾಧಾನ್ಯ ನೀಡಿ ಧಾರ್ಮಿಕ ಕ್ಷೇತ್ರದಲ್ಲಿ ಜನರ ಸುಖಸಂತೋಷಗಳಿಗೆ ಪ್ರಾಶಸ್ತ್ಯ ನೀಡಲಾಯಿತು.

ಈ ಕಾಲದಲ್ಲಿ ನಾರಾ ನಗರದ ಬಳಿಯ ಮಂದಿರಗಳನ್ನು ದುರಸ್ತಿಗೊಳಿಸಲಾಯಿತು. ದೊಡ್ಡ ಗಾತ್ರದ ದೇವತಾವಿಗ್ರಹಗಳನ್ನು ಹೆಚ್ಚು ಸಂಖ್ಯೆಯಲ್ಲಿ ನಿರ್ಮಿಸಲು ಉತ್ತೇಜನ ನೀಡಲಾಯಿತು. ನಾರಾದಲ್ಲಿ ಭಗ್ನಾವಸ್ಥೆಯಲ್ಲಿದ್ದ ದೈಬುಟ್ಸು–ಡೆನ್ ಮಂದಿರವನ್ನು ಜೀರ್ಣೋದ್ಧಾರಗೊಳಿಸಿದಾಗ, 9.7ಮೀ. ಎತ್ತರದ ಆರು ವಿಗ್ರಹಗಳನ್ನು–ನಾಲ್ಕು ದಿಕ್ಪಾಲಕರು, ಕ್ವಾನೋನ್ ಮತ್ತು ಕೊಕುಜೊಗಳನ್ನು–ಮಾಡಲು ಯೊರಿಟೊಮೊ ಆದೇಶವಿತ್ತ. ಅವುಗಳ ಭಾಗಗಳನ್ನು ಬಿಡಿಬಿಡಿಯಾಗಿ ಮಾಡಿ ಅನಂತರ ಜೋಡಿಸಲಾಯಿತು. ಆ ಕಾರ್ಯವನ್ನು ಸುಪ್ರಸಿದ್ಧ ಶಿಲ್ಪಿ ಉನ್ ಕೆಯಿ ಎಂಬವನ ನಾಯಕತ್ವದಲ್ಲಿ ನಾಲ್ವರು ಶಿಲ್ಪಗುರುಗಳು ಸುಮಾರು 250 ಮಂದಿ ಸಹಾಯಕರೊಂದಿಗೆ ಎರಡು ವರ್ಷಗಳಿಗೂ ಹೆಚ್ಚು ಕಾಲ ದುಡಿದು ಪೂರ್ಣಗೊಳಿಸಿದರು. ದುರದೃಷ್ಟವಶಾತ್ ಅವು 15ನೆಯ ಶತಮಾನದಲ್ಲಿ ಅಗ್ನಿಗೆ ಆಹುತಿಯಾದುವು. ಆದರೆ ನಾರಾ ಮತ್ತು ಟಾಂಗ್ ಶೈಲಿಗಳ ಪ್ರಭಾವದಿಂದ ಕೂಡಿದ, ಅದೇ ಶೈಲಿಗೆ ಸೇರಿದ 8ಮೀ.ಎತ್ತರದ, ನಿಯೋ ಪಾಲಕ ದೇವತೆಗಳ ಮರದ ಎರಡು ಶಿಲ್ಪಗಳು ಇನ್ನೂ ಉಳಿದುಬಂದಿವೆ. ಈ ವಿಗ್ರಹಗಳನ್ನು ತಯಾರಿಸಿದ ಶಿಲ್ಪಿಗಳು ಉನ್ ಕೆಯಿ ಮತ್ತು ಕೈಕೆ. ಅವುಗಳ ಮುಖದಲ್ಲಿಯ ರೌದ್ರ ಭಾವ, ಉಬ್ಬಿದ ಅಂಗಾಂಗಗಳು, ದೌಷ್ಟ್ಯ–ಇವು ಕಾಮಾಕುರಾ ಶೈಲಿಯ ವಿಶಿಷ್ಟ ಲಕ್ಷಣಗಳು. ಕೋಫುಕುಜಿಯ ಹೊಕು ಎನ್–ಡೊದಲ್ಲಿ ಉನ್‌ಕೆಯಿ ಮತ್ತು ಅವನ ನಾಲ್ವರು ಪುತ್ರರು ಸೇರಿ ನಿರ್ಮಿಸಿದ, ಮೈತ್ರೇಯನ ಅನುಚರರಾದ ಸೆಯಿಷಿನ್ ಮತ್ತು ಮುಜಕು ಇವರ 1.8 ಮೀ. ಎತ್ತರದ ಶಿಲ್ಪಗಳು ಜೀವಂತವಾಗಿರುವಂತೆ ಇವೆ.

**ಸಂತ ಕೂಯ**

ಕಾಮಾಕುರಾ ಕಾಲದಲ್ಲಿ ಶಿಲ್ಪಿಗಳ ಸಂಘಗಳು ಅಸ್ತಿತ್ವದಲ್ಲಿದ್ದುವು. ಅಂಥ ಶ್ರೇಣಿಗಳಲ್ಲಿ ಶಿಲ್ಪಗುರು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ಸಹಾಯಕರು ಎರಕ ಹೊಯ್ದಂತೆ ಅಧಿಕ ಸಂಖ್ಯೆಯಲ್ಲಿ ಪ್ರತಿಕೃತಿಗಳನ್ನು ತಯಾರಿಸುತ್ತಿದ್ದರು. ಹಾಗೆ ತಯಾರಿಸಿದ ಶಿಲ್ಪಗಳು ದೇಶಾದ್ಯಂತ ಬಳಕೆಯಲ್ಲಿದ್ದುವು. ಇವು ಆಯಾ ಸಂಘಗಳ ಕಾರ್ಯಕುಶಲತೆಯ ಸಾಕ್ಷ್ಯಗಳಾಗಿದ್ದುವು. ಕ್ಯೋಟೋದ ಸಂಜುಸನ್–ಜೆನ್–ಡೊ ಮಂದಿರದಲ್ಲಿರುವ, ಮರದಿಂದ ಮಾಡಿದ, ಕಂಚಿನ ಲೇಪವುಳ್ಳ ಒಂದು ಸಾವಿರ ಶಿಲ್ಪಗಳು ಆ ಪದ್ಧತಿಗೆ ಸಾಕ್ಷಿಗಳು. ಆ ಶಿಲ್ಪ ಗಳನ್ನು ಉನ್‌ಕೆಯಿ, ಅವನ ತಂದೆ ಕೊಕೆಯಿ, ಅವನ ಮಗ ಟುನ್‌ಕೆಯಿ ಮುಂತಾದವರು ಹಲವು ವರ್ಷಗಳ ಅವಧಿಯಲ್ಲಿ ರೂಪಿಸಿದರು. ಆ ಶಿಲ್ಪಿಗಳ ಪ್ರತಿಮೆಗಳನ್ನೂ ಆ ಮಂದಿರ ದಲ್ಲಿ ಇಡಲಾಗಿದೆ. ಅಮಿದ ಬುದ್ಧನ ನಾಮಸ್ಮರಣೆ ಮಾಡುತ್ತ ಕೈಯಲ್ಲಿ ಕೋಲನ್ನು ಹಿಡಿದು ಕಾಲ್ನಡಗೆಯಿಂದ ದೇಶಾಟನೆ ಮಾಡುತ್ತಿದ್ದ ಸಂತ ಕೂಯನ ಮೂರ್ತಿಯನ್ನು ನಿರ್ಮಿಸಿದ ಶಿಲ್ಪಿ ಕೋಷೊ. ಅದು ಈಗ ರೊಕುಹರ ಮಿಟ್ಸುಜಿಯಲ್ಲಿದೆ. ಅದು ಬಹಳ ಸುಂದರ ಮತ್ತು ನೈಜ ಕೃತಿ. ಕೋಷೊನ ಸೋದರ ಕೋಬೆನ್ ಕೂಡ ಹೆಸರಾಂತ ಶಿಲ್ಪಿ. ತಲೆಯ ಮೇಲೆ ಕೊಂಬುಗಳೂ ಮೂರು ಕಣ್ಣುಗಳೂ ಉಳ್ಳ ದೈತ್ಯ ದೀಪಧಾರಿಗಳ ಶಿಲ್ಪಗಳು ಕೋಫುಕುಜಿ ಮಂದಿರದಲ್ಲಿವೆ. ಇವನ್ನು ಕೊಪೆನ್ ನಿರ್ಮಿಸಿದ.

**ಜೆನ್ ಜ್ಯೆಟೆನ್ ವಿಗ್ರಹ, 1266**

ಕಾಮಾಕುರಾ ನಗರದ ನಾಗರಿಕ ಶಿಲ್ಪಕೃತಿಗಳಲ್ಲೂ ಉನ್ನತ ಕಲಾಪ್ರೌಢಿಮೆಯನ್ನು ಕಾಣಬಹುದು. ಉದ್ದನೆಯ ಟೊಪ್ಪಿಗೆ, ಗಂಜಿ ಹಾಕಿ ಇಸ್ತ್ರಿ ಮಾಡಿದಂತೆ ಕಾಣುವ ಅಂಗಿ, ಉಬ್ಬಿ ನಿಂತ ಚಲ್ಲಣ–ಇವನ್ನು ಧರಿಸಿ ಕುಳಿತಿರುವ ಷೆಗೆ ಘುಸನ ಮರದ ಶಿಲ್ಪ ಈ ನೈಜ ಪ್ರೌಢಕಲೆಗೆ ಉತ್ತಮ ನಿದರ್ಶನ. ವಾದ್ಯವನ್ನು ನುಡಿಸುತ್ತ ನಗ್ನಳಾಗಿ ಸುಖಾಸನದಲ್ಲಿ ಕುಳಿತಿರುವ ಬೈಸಾಂಟೈನ್ ಶಿಲ್ಪ ಮತ್ತೊಂದು ಉತ್ತಮ ಕಲಾಕೃತಿ. 1252ರಲ್ಲಿ ನಿರ್ಮಿಸಲಾದ ಅಮಿದಬುದ್ಧ ಮೂರ್ತಿ ಜಗತ್ಪ್ರಸಿದ್ಧ. ಇದು 15 ಮೀ. ಎತ್ತರವಿದೆ. ಕಾಮಾಕುರಾ ಕಾಲದಲ್ಲಿ ಶಿಲ್ಪಿಗಳು ಪರಂಪರಾಗತ ಶೈಲಿಯೊಂದಿಗೆ ಆ ಕಾಲದ ಹೊಸ ಲಕ್ಷಣಗಳನ್ನೂ ಸಮನ್ವಯಗೊಳಿಸಿಕೊಂಡು ಅಸಂಖ್ಯಾತ ಸುಂದರ ಶಿಲ್ಪಗಳನ್ನು ನಿರ್ಮಿಸಿದರು. ಈ ಕಾಲ ಜಪಾನೀ ಶಿಲ್ಪಕಲೆಯ ಕೊನೆಯ ಉಚ್ಛ್ರಾಯ ಕಾಲವೆಂದು ಪರಿಗಣಿತವಾಗಿದೆ. ಅನಂತರ ಶಿಲ್ಪಕಲೆ ಕ್ಷೀಣಿಸಿತು.



ಅಮಿದ ಬುದ್ಧನ ಬೃಹತ್ ಕಂಚಿನ ಶಿಲ್ಪ. ಎತ್ತರ 49', 1252, ಕೋಟೊಕುಯಿನ್

14ನೆಯ ಶತಮಾನದಲ್ಲಿ ಜಪಾನ್ ಅನೇಕ ಯುದ್ಧಗಳಲ್ಲೂ ದಂಗೆಗಳಲ್ಲೂ ಸಿಲುಕಿಕೊಂಡಿತು. ಸಾಮಾಜಿಕ ಏರುಪೇರುಗಳು ಸಂಭವಿಸಿದುವು. ಚೀನದಿಂದ ಪ್ರವೇಶಿಸಿದ ಹೊಸ ಜ಼ೆನ್ ಬೌದ್ಧಪಂಥ ಪ್ರಬಲವಾಯಿತು. ಆ ಹೊಸ ಪಂಥದಲ್ಲಿ ವಿಗ್ರಹಾರಾಧನೆಗೆ ಪ್ರಾಶಸ್ತ್ಯ ಇರಲಿಲ್ಲ. ಹಳೆಯ ಸಂಪ್ರದಾಯದಂತೆ ಆಗಾಗ್ಗೆ ನಿರ್ಮಿಸುತ್ತಿದ್ದ ಬುದ್ಧಶಿಲ್ಪಗಳಲ್ಲಿ ಯಾವುದೇ ನಾವೀನ್ಯವಾಗಲಿ ಮೋಹಕ ಗುಣವಾಗಲಿ ಕಾಣಬರುತ್ತಿರಲಿಲ್ಲ. ಅನಂತರದ ಕಾಲದಲ್ಲಿ ಉತ್ತಮಕೃತಿಗಳೆಂದು ಪರಿಗಣಿಸಬಹುದಾದ ಒಂದೆರಡು ಕೃತಿಗಳು ಆಗಾಗ್ಗೆ ಬಿಡಿಬಿಡಿಯಾಗಿ ನಿರ್ಮಿತವಾಗುತ್ತಿದ್ದವು. ಅಂಥ ಶಿಲ್ಪಗಳಲ್ಲಿ ಪ್ರಾಣಿಗಳ ಕೆಲವು ಗೊಂಬೆಗಳು ಗಮನಾರ್ಹ. (ಬಿ.ಕೆ.ಜಿ.)

**ಜಪಾನೀ ಸಂಗೀತ :** ಇದು ಚೀನೀ ಸಂಗೀತವನ್ನು ತಳಹದಿಯಾಗಿಟ್ಟುಕೊಂಡು ತನ್ನದೇ ನಡೆಯಲ್ಲಿ ರಾಗ ತಾಳಗಳಲ್ಲಿ ಸಾಹಿತ್ಯದಲ್ಲಿ ವಾದ್ಯಗಳಲ್ಲಿ ಎರಡೂ ಕಲೆಗಳ ಮಿಶ್ರಣವನ್ನೂ ಮೈಗೂಡಿಸಿಕೊಂಡಿದೆ. ಅನೇಕ ಶತಮಾನಗಳ ಕಾಲ ಇಂಥ ಮಿಶ್ರಣ ನಡೆದು ಬಂದಿತಾಗಿ ಜಪಾನೀ ಸಂಗೀತದಲ್ಲಿ ಒಂದು ಸ್ಥಿರವಾದ ಹೊಸ ನಡೆ ಏರ್ಪಟ್ಟಿದೆ.

ಸುಮಾರು 3ನೆಯ ಶತಮಾನದಲ್ಲಿ ಚೀನೀಯರ ಸಂಗೀತ ಕೊರಿಯವನ್ನು ಹಾದು ಜಪಾನನ್ನು ಸೇರಿತೆಂದು ಇತಿಹಾಸ ತಿಳಿಸುತ್ತದೆ.

ಜಪಾನಿನ ವಾದ್ಯಮೇಳದಲ್ಲಿ ಹಿಚಿರಿಕಿ (ಪಾಶ್ಚಾತ್ಯ ದೇಶದ ಪಿಕಲೊ ಎಂಬ ವಾದ್ಯವನ್ನು ಹೋಲುತ್ತದೆ) ಹಾಗೂ ಷೋ ಎಂಬ ಸುಶಿರವಾದ್ಯವೂ ಹಲವಾರು ವೇಣುವಾದ್ಯಗಳೂ ತಾಳಗಳೂ ಮದ್ದಳೆಗಳೂ ಇವೆ. ಸಂಗೀತ ವಿದ್ವಾಂಸರು ಚೀನದಿಂದ ಹಿಂದಿರುಗುವಾಗ ತಮ್ಮೊಡನೆ ಬಿವಾ ಮತ್ತು ಷಕುಹಜೀ ವಾದ್ಯಗಳನ್ನು ತಂದು ತಮ್ಮ ದೇಶದ ವಾದ್ಯಮೇಳವನ್ನು ಅತ್ಯಂತ ರಂಜನೀಯವನ್ನಾಗಿ ಮಾಡಿದರು. ಚೀನದಲ್ಲಿನಂತೆ ಮತಧರ್ಮಕ್ಕನುಸಾರವಾಗಿ ನಾರಾ ಮುಂತಾದ ದೇವಾಲಯಗಳಲ್ಲಿ ಜಪಾನಿನಲ್ಲಿಯೇ ಹುಟ್ಟಿ ಬೆಳೆದ ಮತ್ತೊಂದು ರೀತಿಯ ಸಂಗೀತ ಮತ್ತು ನೃತ್ಯಕ್ರಮಗಳು ಬಳಕೆಯಲ್ಲಿದ್ದುವು. ಜಪಾನಿನಲ್ಲಿ ಪ್ರಧಾನವಾಗಿ



ಕೋಟೋ–ಫೂಕುಯಾಮಾ ಜಿಲ್ಲೆಯ ಒಂದು ತಂತೀ ವಾದ್ಯ

ಬಳಸುತ್ತಿದ್ದ ಇತರ ವಾದ್ಯಗಳೆಂದರೆ ಕೋಟೋ ಮತ್ತು ಕೊಳಲು, ಷಿಂಟೋ ಮತ್ತು ಬೌದ್ಧ ಮತಾಚಾರ ಹಬ್ಬಗಳಲ್ಲಿ ರೂಢಿಯಲ್ಲಿದ್ದ ಕಾಂಗಾರು ಸಂಗೀತ ಮೇಲೆ ಹೇಳಿದ ವಾದ್ಯಗಳನ್ನೊಳಗೊಂಡಿತ್ತು. ಮನೋರಂಜನೆಯೇ ಪ್ರಧಾನವಾಗಿದ್ದ ಮತ್ತೊಂದು ಸಂಗೀತಶೈಲಿಯೊಂದು ಮತೀಯ ಗಾಯನದ ಜೊತೆಜೊತೆಗೇ ಕ್ರಮವಾಗಿ ವೃದ್ಧಿಯಾಗುತ್ತಿತ್ತು. ಕೋಟೋ ವಾದ್ಯದ ಉಗಮ ಜಪಾನಿನಲ್ಲಿಯೇ ಆದುದೆಂದು ಕೆಲವು ಗ್ರಂಥಗಳು ಉಲ್ಲೇಖಿಸುತ್ತವೆ. 17ನೆಯ ಶತಮಾನದಲ್ಲಿ ಈ ವಾದ್ಯ ಮತೀಯ ಗಾಯನ ಮತ್ತು ಲೌಕಿಕ ಗಾಯನಗಳಲ್ಲಿಯೂ ಬಳಕೆಯಲ್ಲಿತ್ತು. ಇದು ಚೀನದಲ್ಲಿನ ಕಿನ್ ವಾದ್ಯದ ಪರಿವರ್ತನೆ ಹೊಂದಿದ ರೂಪವೆಂತಲೂ ಹೇಳುವವರಿದ್ದಾರೆ. ಸುಮಾರು 1.8 ಮೀ.ನಷ್ಟು ಉದ್ದವಿರುವ ಈ ವಾದ್ಯದ ಅನುರಣಕ ಸ್ವಲ್ಪ ಉಬ್ಬಿದೆ. ರೇಷ್ಮೆಯಿಂದ ಸುತ್ತಲ್ಪಟ್ಟಿರುವ ಹದಿಮೂರು ತಂತಿಗಳನ್ನು ವಾದ್ಯದ ಒಂದು ತುದಿಯಲ್ಲಿ ಬಿಗಿದು ಮತ್ತೊಂದು ತುದಿಯನ್ನು ಚಲಿಸುವ ಕುದುರೆಗಳ ಮೇಲೆ ಹಾಯಿಸಿ ಕಟ್ಟಿರುತ್ತಾರೆ. ತಂತಿಯನ್ನು ಶ್ರುತಿಗೆ ಸಿದ್ಧಪಡಿಸಿ ನಾದದಲ್ಲಿ ಸ್ವಲ್ಪ ಏರಿಳಿತಗಳು ಬೇಕಾದ ಸಂದರ್ಭಗಳಲ್ಲಿ ಈ ಚಲಿಸುವ ಕುದುರೆಗಳನ್ನು ಹಿಂದಕ್ಕೂ ಮುಂದಕ್ಕೂ ಜರುಗಿಸಿ ತೀವ್ರ ಮತ್ತು ಕೋಮಲ ಸ್ವರಗಳನ್ನು ಉತ್ಪತ್ತಿ ಮಾಡಬಹುದು. ಈ ವಾದ್ಯದಲ್ಲಿ ಪೂರ್ಣ ಶ್ರುತಿ, ಅರ್ಧ ಶ್ರುತಿ ಅಂತರಗಳನ್ನು ಪಡೆಯಲವಕಾಶವಿದೆ. ಚೀನ ಮತ್ತು ಇತರ ಪಾಶ್ಚಾತ್ಯ ದೇಶದವರಂತೆಯೇ 12 ಸ್ವರಗಳನ್ನು ಸಮಾನ ಅಂತರದಲ್ಲಿ ಒಂದು ಅಷ್ಟಕದಲ್ಲಿ ಸೇರಿಸಿ ಹಲವಾರು ಸ್ವರಶ್ರೇಣಿಗಳನ್ನು ಜಪಾನೀಯರೂ ಬಳಸುತ್ತಾರೆ. ಆದರೆ ಇವರಲ್ಲಿ ಅತಿ ಪ್ರಮುಖವಾದ ಒಂದು ಔಡವ ಸ್ವರಶ್ರೇಣಿ ಇದೆ. ಈ ಶ್ರುತಿಗೆ ಸೇರಿಸುವ ಕ್ರಮವನ್ನು ಹಿರಾಜೋಷಿ ಎನ್ನುತ್ತಾರೆ. ಇದೇ ಕ್ರಮವಲ್ಲದೆ ಹಲವಾರು ಕ್ರಮಗಳುಳ್ಳ ಸ್ವರಶ್ರೇಣಿಗಳನ್ನು ಕಲ್ಪಿಸಿರುವುದುಂಟು. ಮೇಲೆ ಹೇಳಿದ ಸ್ವರಶ್ರೇಣಿಗೆ ಸೆಮಿಟೋನಲ್ ಪೆಂಟಟೋನಿಕ್ ಎಂದು ಹೆಸರು. ಈ ಸ್ವರಶ್ರೇಣಿಯ ಸ್ವರಗಳೂ ಬಹಳ ಸಾಮ್ಯವುಳ್ಳವು. ಪ್ರಮುಖವಾದ ಮತ್ತೆರಡು ಸ್ವರಶ್ರೇಣಿಗಳೆಂದರೆ ಕುಮಾಯ್ ಅಥವಾ ಐಪ್‌ಮೋಡ್ ಮತ್ತು ಯಿವಾಟೋ ಅಥವಾ ಡಿ ಮೋಡ್. ಕೋಟೋ ವಾದ್ಯದಲ್ಲಿ ಬೇರೆ ಬೇರೆ ಸ್ವರಶ್ರೇಣಿಗಳನ್ನು ಆಯ್ದುಕೊಳ್ಳುವಾಗ ಅವಕ್ಕೆ ಬೇಕಾದ ತೀವ್ರ ಮತ್ತು ಕೋಮಲ ಸ್ವರಗಳನ್ನು ಕುದುರೆಗಳನ್ನು ಜರುಗಿಸುವುದರ ಮೂಲಕ ಶ್ರುತಿಗೆ ಹೊಂದಿಸುತ್ತಾರೆ. ಈ ರೀತಿ ವಿವಿಧ ರೀತಿಯ ಕಂಪನಾವರ್ತ ಸಂಖ್ಯೆಗಳನ್ನು ಉಂಟು ಮಾಡಿ ನಾದವೈವಿಧ್ಯವನ್ನು ಪಡೆಯಬಹುದು. ಕೋಟೋ ವಾದ್ಯ ಚೀನದ ಪ್ರಮುಖ ವಾದ್ಯವಾದ ಚಿನ್‌ಜಿತರ್ ವಾದ್ಯವನ್ನೇ ಹೋಲುತ್ತದೆ. ಜಪಾನೀ ಸಂಗೀತದಲ್ಲಿ ಸ್ವರಸಾಂಗತ್ಯ ಮತ್ತು ಧ್ವನಿಗುಣವೇ ಪ್ರಮುಖವಾದ ಅಂಶಗಳು.

ರಾಜಾಸ್ಥಾನದಲ್ಲಿ ನೆಲೆಸಿದ ಸಂಗೀತವನ್ನು ಮನೋರಂಜನೆಯನ್ನೇ ಮುಖ್ಯಧ್ಯೇಯವನ್ನಾಗಿಟ್ಟುಕೊಂಡು ಆಗಾಗ ಪರಿಷ್ಕರಿಸಲಾಯಿತು. ಹಲವಾರು ವಾದ್ಯಗಳನ್ನು ಪರಿವರ್ತನೆಗೊಳಿಸಿ, ಮತ್ತೆ ಹಲವಾರು ವಾದ್ಯಗಳನ್ನು ಹೊಸದಾಗಿ ಸೃಷ್ಟಿಸಿದರು. ಅವುಗಳಲ್ಲಿ ಸೆಮಿಸಾನ್ ವಾದ್ಯ ಬಹು ಮುಖ್ಯವಾದುದು. ಇವುಗಳಲ್ಲಿ ಹಲವನ್ನು ಜಪಾನಿನ ವೇದಿಕೆಯ ಮೇಲೆ ನಡೆಯುವ ನರ್ತನ ಮತ್ತು ನಾಟಕಗಳಲ್ಲಿ ಸಂಗೀತವನ್ನೊದಗಿಸುವುದಕ್ಕಾಗಿ

ಬಳಸುತ್ತಿದ್ದರು. ತರುಣದಲ್ಲಿ ವಾದ್ಯಮೇಳಗಳಲ್ಲಿ ಪಾಲ್ಗೊಳ್ಳುತ್ತಿದ್ದ ಈ ವಾದ್ಯ ರಂಗಮಂಟಪದ ಸಂಗೀತದ ನಡೆಗೆ ಸರಿಹೊಂದಿ ಅಲ್ಲಿಯ ಸಂಗೀತಕ್ಕೆ ಪ್ರಧಾನವಾದ ವಾದ್ಯವಾಯಿತು. ಸೆಮಿಸಾನ್ ವಾದ್ಯ ಮೊಗೆ ಗುದ್ದಲಿಯಾಕಾರದಲ್ಲಿದ್ದು ಮೂರು ತಂತಿಗಳನ್ನು ಹೊಂದಿದೆ. ಅದರಲ್ಲಿ ಉದ್ದವಾದ ಕುತ್ತಿಗೆ ಹಾಗೂ ಚಚ್ಚೌಕವಾದ ಅನುರಣಕವಿರುತ್ತವೆ. ಈ ವಾದ್ಯದ ಎದೆ ಹಲಗೆಯನ್ನು ಬೆಕ್ಕಿನ ಚರ್ಮದಿಂದ ಮುಚ್ಚಿರುತ್ತಾರೆ. ಮೆಟ್ಟಲುಗಳಿಲ್ಲದ ಇದನ್ನು ನುಡಿಸುವಾಗ ಕೊಡಲಿಯಾಕಾರದ ಸ್ವಲ್ಪ ದೊಡ್ಡದಾದ ಕೋನದಿಂದ ತಂತಿಗಳನ್ನು ತಾಡಿಸುತ್ತಾರೆ. ಕೋಕ್‍ಯೂ ಎಂಬ ಮತ್ತೊಂದು ವಾದ್ಯ ಸೆಮಿಸಾನ್ ವಾದ್ಯವನ್ನೇ ಹೋಲುತ್ತಿದ್ದು ನಾಲ್ಕು ತಂತಿಗಳನ್ನು ಹೊಂದಿದೆ. ಹಿಚಿರಿಕಿ ಎಂಬ ಮತ್ತೊಂದು ವಾದ್ಯ ಎರಡು ಜೊಂಡುಗಳನ್ನು ಪೀಪಿಯಂತೆ ಮಾಡಿ ಸೇರಿಸಿರುವ ವಾದ್ಯಗಳ ವರ್ಗಕ್ಕೆ ಸೇರಿದುದು. ಬಾಯಿಂದ ಪೀಪಿಗೆ ಉಸಿರು ಪ್ರಸಾರವಾದಾಗ ಗಾಳಿಯ ಒತ್ತಡದಿಂದ ಗುಂಭವಾದ ನಾದ ಉತ್ಪತ್ತಿಯಾಗುತ್ತದೆ. ಈ ನಾದಕ್ಕೆ ಕರುಣರಸವನ್ನು ಉದ್ರೇಕಿಸುವ ಗುಣವಿದೆ.

ಈಚೀಚೆಗೆ ಜಪಾನೀಯ ವಾಗ್ಗೇಯಕಾರರೂ ಇತರ ಪಾಶ್ಚಾತ್ಯ ದೇಶಗಳ ಪ್ರಭಾವದಿಂದ ಅತ್ಯಾಧುನಿಕ ಸಂಗೀತವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹಾಗೂ ಜಾಸ್ ಮತ್ತು ಪಾಪ್ ಸಂಗೀತವನ್ನೂ ರೂಢಿಗೆ ತರುತ್ತಿದ್ದಾರೆ. ಹಲವಾರು ಹೊಸ ಪ್ರಕಾರಗಳನ್ನು ರಚಿಸಿ ಅವನ್ನು ಪಾಶ್ಚಾತ್ಯ ಸಂಗೀತ ಮತ್ತು ಸ್ವರಲಿಪಿಯಲ್ಲಿ ಬರೆಯುತ್ತಿದ್ದಾರೆ. ಪಿಯಾನೊಫೋರ್ಟೆ, ಚೇಂಬರ್ ಸಂಗೀತ ಮತ್ತು ವಾದ್ಯಮೇಳಗಳಿಗಾಗಿ ಹಲವಾರು ರಚನೆಗಳನ್ನು ರಚಿಸುತ್ತಿದ್ದಾರೆ. ಆಧುನಿಕ ವಾಗ್ಗೇಯಕಾರನಾದ ಬುನ್‍ಯೋಕೋಲನ ರಚನೆಗಳು ಪ್ರಖ್ಯಾತ ಪಾಶ್ಚಾತ್ಯ ವಾಗ್ಗೇಯಕಾರರಾದ ಬಾರ್‌ಟಕ್ ಮತ್ತು ಷ್ಟುಯಂಬರ್ಗ್ ಮುಂತಾದವರ ರಚನೆಗಳನ್ನೇ ಹೋಲುತ್ತವೆ. ಶಕುಹಚಿ ಎಂಬುದು ಮತ್ತೊಂದು ಸುಶಿರ ವಾದ್ಯ. ಇದನ್ನು ನುಡಿಸುವಾಗ ಎರಡು ತುಟಿಗಳನ್ನೂ ಮುಚ್ಚಿ ಮಧ್ಯೆ ಒಂದು ಸಣ್ಣ ತೂತನ್ನು ಮಾಡಿಕೊಂಡು ಅದರ ಮೂಲಕ ನಾದೋತ್ಪತ್ತಿಯನ್ನುಂಟುಮಾಡಬೇಕು.

ಜಪಾನೀಯರ ರಾಜಾಸ್ಥಾನದ ಸಂಗೀತಕ್ಕೆ ತೋಗಾಕು ಎಂದು ಹೆಸರು. ಈ ಸಂಗೀತದಲ್ಲಿ ನಾದವೈವಿಧ್ಯಕ್ಕಾಗಿ ಟ್ರಂಪೆಟ್ ಎಂಬ ಅವನದ್ಧ ವಾದ್ಯವನ್ನೂ ಇ.ಪ್ಲಾಟ್ ಕ್ಲಾರಿನೆಟ್ ವಾದ್ಯವನ್ನೂ ರ‍್ಯುತೇಕಿ ಎಂಬ ವೇಣುವಾದ್ಯವನ್ನೂ ಹಿಚಿರಿಕಿ ಮುಂತಾದ ವಾದ್ಯಗಳನ್ನೂ ಬಳಸುತ್ತಿದ್ದರು. ಪಿಕಲೊ ಮತ್ತು ಬಿ.ಪ್ಲಾಟ್‌ಕ್ಲಾರಿನೆಟ್ ವಾದ್ಯ ಉಚ್ಚಸ್ಥಾಯಿಯ ಶಬ್ದಗಾಂಭೀರ್ಯವನ್ನು ನುಡಿಸುತ್ತಿದ್ದರೆ ಷೋ ಮತ್ತು ಟ್ರಂಬೋನ್ ವಾದ್ಯಗಳು ತಗ್ಗು ಸ್ಥಾಯಿಯಲ್ಲಿ ತುಂಬುನಾದವನ್ನು ಹೊಮ್ಮಿಸುತ್ತವೆ. ಲಯವಾದ್ಯಗಳ ಕೂಡುವಿಕೆಯಿಂದ ತೋಗಾಕು ಸಂಗೀತಕ್ಕೆ ಉತ್ತಮ ಸ್ಥಾನ ಸಿಕ್ಕಿತು. ಪ್ರತಿಯೊಂದು ವಾದ್ಯವೂ ತನ್ನದೇ ಆದ ವೈಶಿಷ್ಟ್ಯ, ನಾದಗುಣ, ನಾದವ್ಯಾಪ್ತಿಯನ್ನು ಪಡೆದಿರುತ್ತದೆ. ಜಪಾನೀಯರ ಕಲೆಗಳಲ್ಲಿ ಸರ್ವ ಸಾಮಾನ್ಯವಾಗಿ ಪಾಶ್ಚಾತ್ಯ ಪ್ರಭಾವ ಹೆಚ್ಚಾಗಿದ್ದು ಸಂಗೀತದಲ್ಲಿ ಅತ್ಯುತ್ಕೃಷ್ಟವಾದ ಸಿಂಫೋನಿ ವಾದ್ಯಮೇಳ, ಜಾಸ್, ರಾಕ್ ಅಂಡ್ ರೋಲ್ ಸಂಗೀತ ಬೆಳೆಯುತ್ತಿವೆ.

(ಎಂ.ವಿ.ಆರ್‌ಎ.)

**ಜಪಾನೀ ಸಾಹಿತ್ಯ :** ಯಾಮಾಟೋ ಕಾಲ (ಪ್ರಾಚೀನ ಯುಗ) : 794ರವರೆಗೆ: ಮೊದಲನೆಯ 4 ಶತಮಾನಗಳಲ್ಲಿ ಕೊರಿಯದ ಮೂಲಕ ಕ್ರಮೇಣ ಪ್ರವೇಶಿಸಿದ ಚೀನೀ ನಾಗರಿಕತೆಯನ್ನು ರಕ್ತಗತ ಮಾಡಿಕೊಂಡುದರ ಪರಿಣಾಮವಾಗಿ ಪ್ರಾಚೀನ ಜಪಾನೀ ಸಾಹಿತ್ಯ ಬೆಳೆಯಿತು. ಚೀನೀ ಲಿಪಿಯನ್ನು ಬಳಸಿಕೊಳ್ಳುವುದಕ್ಕೆ ಮೊದಲು ಜಪಾನೀಯರಿಗೆ ಸ್ವಂತ ಲಿಪಿ ಇರಲಿಲ್ಲ. ಜಪಾನೀ ಭಾಷಾಧ್ವನಿಗಳಿಗೆ ಚೀನೀ ಲಿಪಿಯನ್ನು ಬಳಸುವುದರ ಪರಿಣಾಮವಾಗಿ ಅಂದಿನ ನಾಲ್ಕು ಶತಮಾನಗಳಲ್ಲಿ ಸಾಹಿತ್ಯ ನಿರ್ಮಾಣ ಹೇರಳವಾಗಿ ಆಯಿತು. ನೋರಿಟೊ (ಷಿಂಟೋ ಸ್ತೋತ್ರಗಳು), ಸೆನ್‍ಮ್ಯೊ (ಚಕ್ರವರ್ತಿಯ ಶಾಸನಗಳು), ಕೊಜಿಕಿ ಮತ್ತು ನಿಹೋನ್ ಷೋಕಿ (ಎರಡೂ ಅರ್ಧಭಾಗ ಪುರಾಣ ರೂಪದಲ್ಲಿರುವ ಇತಿಹಾಸಗಳು) ಮತ್ತು ಫುಡೋಕಿ (ಸ್ಥಳವೃತ್ತಾಂತಗಳು) –ಇವು 7ನೆಯ ಮತ್ತು 8ನೆಯ ಶತಮಾನಗಳಲ್ಲಿ ಹುಟ್ಟಿದ ಕೃತಿಗಳು. ಮನ್ಯೋಷೂ ಎಂಬುದು ಆ ಕಾಲದ ಮುಖ್ಯ ಸಾಹಿತ್ಯ ಕೃತಿ. ಅದರಲ್ಲಿರುವ ಕವಿತೆಯ ಸಂಖ್ಯೆ ನಾಲ್ಕು ಸಾವಿರದ್ಯೆನೂರಕ್ಕೂ ಮೀರಿದೆ. ಕವಿಗಳ ಸಂಖ್ಯೆ ನಾನೂರೈವತ್ತಕ್ಕೂ ಹೆಚ್ಚಾಗಿದೆ. ಅಲ್ಲದೆ ಜನಜೀವನದ ಪ್ರಾಯಶಃ ಎಲ್ಲ ಪ್ರಸಂಗಗಳೂ ಕಾವ್ಯವಿಷಯಗಳಾಗಿವೆ. ಅದರಲ್ಲಿನ ಪದ್ಯಗಳಲ್ಲಿ ನೈಜ ಹೃದಯಾನುಭೂತಿಗಳೂ ಆಳವಾದ ಭಾವಗಳೂ ಸರಳವೂ ನೇರವೂ ಆದ ಮಾತುಗಳಲ್ಲಿ ನಿರೂಪಿತವಾಗಿವೆ. ಐದು ಏಳು, ಐದು ಏಳು ಅಕ್ಷರಗಳುಳ್ಳ ವಾಕ ಎಂಬ ಛಂದಸ್ಸು ಆ ಕಾಲದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿತ್ತಲ್ಲದೆ ಕಾವ್ಯರೂಪಕ್ಕೆಲ್ಲ ಈ ಛಂದಸ್ಸೇ ಮಾದರಿಯಾಗಿತ್ತು.

ಹೀಯಾನ್ ಕಾಲ (ಪ್ರೌಢಕಾವ್ಯಗಳ ಕಾಲ) : 794–1192. ಈ ಕಾಲದಲ್ಲಿ ಕಾನಾ ಎಂಬ ಅಕ್ಷರಮಾಲಿಕೆ ನಿರ್ಮಾಣಗೊಂಡು ಜಪಾನೀ ಭಾಷೆಯನ್ನು ಬರೆಹಕ್ಕಿಳಿಸಲು ಸುಲಭವಾಯಿತು. ಅದರ ಪರಿಣಾಮವಾಗಿ ಜಪಾನೀ ಸಾಹಿತ್ಯ ಹುಲುಸಾಗಿ ಬೆಳೆಯ ತೊಡಗಿತು. ಸಾಹಿತ್ಯದ ಕೃತಿಗಳಿಗೆಲ್ಲ ರಾಜಾಸ್ಥಾನದ ಸರದಾರರೂ ಸ್ತ್ರೀಯರೂ ಆಸರೆಯಾಗಿದ್ದುದರಿಂದ ಕಾವ್ಯದ ವಿಷಯದಲ್ಲಿ ರಸಜ್ಞತೆಗೂ ಸದಭಿರುಚಿಗೂ ಹೆಚ್ಚು ಪ್ರಾಶಸ್ತ್ಯ ದೊರೆಯಿತು. 10ನೆಯ ಶತಮಾನದ ಪ್ರಾರಂಭದಲ್ಲಿ ಚಕ್ರವರ್ತಿಯ ಅಪೇಕ್ಷೆಯಂತೆ ಕೋಕಿನ್‍ಷೂ ಎಂಬ ಗ್ರಂಥದಲ್ಲಿ ಸಂಗ್ರಹಿತವಾದ ಕವಿತೆಗಳ ರೂಪ ಅತ್ಯಂತ ಕುಶಲವೂ ಪರಿಷ್ಕೃತವೂ ಆಗಿರುವುದಲ್ಲದೆ ಅವುಗಳ ಭಾವಗಳೂ ಬಹಳ ನವುರಾಗಿವೆ. ಆ ಕಾಲದಲ್ಲಿ ಸಾಹಿತ್ಯದ ಒಂದು ಪ್ರತ್ಯೇಕ ಪ್ರಕಾರವಾಗಿ ದಿನಚರಿಗಳೂ ಪ್ರವಾಸಕಥನಗಳೂ ಕಾನಾ ಎಂಬ ಶೈಲಿಯಲ್ಲಿ ಅಧಿಕ ಸಂಖ್ಯೆಯಲ್ಲಿ ನಿರ್ಮಿತವಾದವು. ಈ ಯುಗದ ಅತ್ಯಂತ ಶ್ರೇಷ್ಠ ಕೃತಿ ಗೆಂಜಿಮೊನೊಗಟರಿ (ಗೆಂಜಿಯ ಕಥೆ) ಎಂಬುದು. ಈ ಗ್ರಂಥ ಪ್ರಪಂಚದ ಸಾಹಿತ್ಯಚರಿತ್ರೆಯಲ್ಲಿ ಮೊದಲ ಬಾರಿಗೆ ಗೋಚರವಾಗುವ ಕಾದಂಬರಿ ಎಂಬುದಾಗಿ ಪರಿಗಣಿತವಾಗಿದೆ.

ಕಾಮಾಕೂರಾ ಮುರೊಮಾಜಿ ಯುಗ (ಮಧ್ಯಯುಗ) : 1192–1603 : ಹೀಯಾನ್ ಯುಗದ ಕೊನೆಯಲ್ಲಿ ಯೋಧವರ್ಗ ಪ್ರಾಬಲ್ಯಕ್ಕೆ ಬರಲು ಪ್ರಾರಂಭವಾಯಿತು ಮತ್ತು ಒಂದಾದ ಮೇಲೊಂದು ಯುದ್ಧ ಒದಗಿ ಪ್ರಭುಗಳು ಪದೇ ಪದೇ ಬದಲಾಗುತ್ತಿದ್ದರು. ಈ ಯುಗದ ಸಾಹಿತ್ಯಪ್ರಕಾರಗಳಲ್ಲಿ ಸಮಾಜದ ಅನಿಶ್ಚಿತ ಪರಿಸ್ಥಿತಿ ಪ್ರತಿಬಿಂಬಿತವಾಗಿ ಜಗತ್ತು ಮತ್ತು ಜೀವ ಇವುಗಳು ಅನಿತ್ಯವೆಂಬ ಬೌದ್ಧಧರ್ಮದ ನೆರಳು ಅವುಗಳ ಮೇಲೆ ಬಿದ್ದಿದೆ. ಜಪಾನೀ ಶಬ್ದಗಳೊಂದಿಗೆ ಅನೇಕ ಚೀನೀ ಪದಗಳನ್ನು ಬೆರೆಸಿರುವ ವೀರ್ಯವತ್ತಾದ ಶೈಲಿಯಲ್ಲಿ ಹೇರಳವಾಗಿ ಸೈನಿಕ ಕಥೆಗಳು ಈ ಕಾಲದಲ್ಲಿ ಉದ್ಭವವಾದವು. ವೃದ್ಧಿಯ ಬೆಂಗಡೆಯೇ ಹಾನಿಯೂ ಬರುತ್ತದೆ–ಎಂಬ ತತ್ತ್ವವನ್ನು ಅನುಸರಿಸಿ ಅತ್ಯಂತ ಪ್ರಸಿದ್ಧವಾದ ಹೈಕೂ ಮೊನೊಗಟರಿ (ಹೈಕೂ ಕಥೆ) ಎಂಬ ಕಾವ್ಯ ಬೌದ್ಧಧರ್ಮದ ಸಮಸ್ತ ವಸ್ತುಗಳ ಅನಿತ್ಯವಾದವನ್ನು ಎತ್ತಿಹೇಳುವ ಮಾತಿನಿಂದ ಪ್ರಾರಂಭವಾಗುತ್ತದೆ. ತ್ಸುರೆಸುರೆ ಗುಸ (ಸೋಮಾರಿತನವನ್ನು ಕುರಿತ ಪ್ರಬಂಧಗಳು) ಮತ್ತು ಹುಜೊಕಿ (ಸಂನ್ಯಾಸಿಯನ್ನು ಕುರಿತ ಪ್ರಬಂಧ) ಇತ್ಯಾದಿ ಹಲವು ಪ್ರಬಂಧಗಳೂ ಈ ಅನಿತ್ಯತಾವಾದವನ್ನೇ ಎತ್ತಿ ಹಿಡಿಯುತ್ತವೆ. ಕನ್ನಮಿ ಕ್ರಿಯೊತ್ಸುಗು ಮತ್ತು ಸಿಯಾಮಿ ಮೊಟೋಕಿಯೊ ಎಂಬಿಬ್ಬರು ಪ್ರತಿಭಾಶಾಲಿಗಳಿಂದ ಪರಿಣತಿಯನ್ನು ಪಡೆದ ನೋ ಎಂಬ ನಾಟಕಗಳೂ ಈ ಬೌದ್ಧಮತದ ಭಾವನೆಯಿಂದಲೇ ಬಣ್ಣಗೊಂಡಿವೆ. ಈ ಕಾಲದಲ್ಲಿ ಕವಿತಾ ಸಂಕಲನಗಳ 15 ಸಂಚಿಕೆಗಳು ಸಂಪಾದಿತವಾದವು. ಇವುಗಳಲ್ಲಿ ಷಿಂಕೋಕಿನ್‍ಷು ಎಂಬುದು ಅದರ ಸಮೀಚೀನವಾದ ಸಂಕೇತಾರ್ಥ ಮತ್ತು ಕುಶಲವಾದ ಭಾವನೆಗಳ ದೆಸೆಯಿಂದ ಎಲ್ಲಕ್ಕಿಂತ ಹೆಚ್ಚು ಪ್ರಾಶಸ್ತ್ಯ ಪಡೆದಿದೆ.

ಟೋಕೂಗಾವಾ ಯುಗ (ಆಧುನಿಕ ಯುಗಕ್ಕೆ ಮುಂಚಿನ ಕಾಲ) : 1603–1867. 17ನೆಯ ಶತಮಾನದ ಮೊದಮೊದಲ ವರ್ಷಗಳಲ್ಲಿ ಜಪಾನಿನಲ್ಲಿ ಟೋಕೂಗಾವಾ ಸರ್ಕಾರ ಸ್ಥಾಪಿತವಾಗಿ ದೇಶದೊಳಗೆ ನೆಮ್ಮದಿ ಮೂಡಿತು. ಮತ್ತು ಅಲ್ಲಿಂದ ಮುಂದಕ್ಕೆ ಮೂರು ಶತಮಾನಗಳ ಪರ್ಯಂತ ಈ ಶಾಂತಿಯನ್ನು ಮುರಿಯುವ ಯಾವ ಪ್ರಸಂಗಗಳೂ ಬರಲಿಲ್ಲ.

17ನೆಯ ಶತಮಾನದ ಮಧ್ಯಭಾಗದಿಂದ 19ನೆಯ ಶತಮಾನದ ಮಧ್ಯದವರೆಗೆ, ಸರ್ಕಾರದ ಶಾಸನದ ಪ್ರಕಾರ, ಜಪಾನಿಗೆ ಹೊರದೇಶಗಳ ಸಾಮಾನ್ಯ ಸಂಪರ್ಕ ತಪ್ಪಿಹೋಯಿತು. ಈ ಶಾಂತಯುಗದಲ್ಲಿ ಅನೇಕ ವಿಧವಾದ ಸಾಹಿತ್ಯ ಪ್ರಕಾರಗಳೂ ಅಭಿವೃದ್ಧಿಗೊಂಡುವು. ಆರ್ಥಿಕವಾಗಿ ತುಂಬ ಪ್ರಬಲವಾದ ವಣಿಕವರ್ಗದವರೂ ಅಂತರ್ಯುದ್ಧಗಳಿಂದ ಬಿಡುಗಡೆ ಹೊಂದಿದ ಕ್ಷೇತ್ರವರ್ಗದವರೂ ಸಾಹಿತ್ಯ ನಿರ್ಮಾಣದಲ್ಲಿ ಮುಂದೆ ಬಂದರು. ಇವರ ಭಾವನೆಗಳು ರಾಜಾಸ್ಥಾನದ ಸರದಾರರ ಮತ್ತು ಬೌದ್ಧ ಪುರೋಹಿತರ ಭಾವನೆಗಳಿಗಿಂತಲೂ ಸಹಜವಾಗಿಯೇ ಭಿನ್ನವಾಗಿದ್ದವು. ವಣಿಕವರ್ಗ ಹಾಗೂ ವೇಶ್ಯಾಸ್ತ್ರೀಯರ ಪ್ರಣಯ ಮತ್ತು ಧನಕನಕ ವಸ್ತು ವ್ಯವಹಾರ–ಇವನ್ನು ಕುರಿತು ಅವೆಲ್ಲ ನಿಜವೆಂಬ ಹಾಗೆ ಮನಸ್ಸಿಗೆ ತಟ್ಟುವಂತೆ ಇಹರ ಸೈಕಾಕು ಎಂಬಾತ ವರ್ಣಿಸಿದ. ಅವನ ಕಾದಂಬರಿಗಳು ಅಭಿವೃದ್ಧಿ ಸ್ಥಿತಿಗೆ ಬರುತ್ತಿರುವ ಪಟ್ಟಣಿಗರನ್ನು ಆಕರ್ಷಿಸಿತು. ಜೋಯಾರಿ ಮತ್ತು ಕಾಬೂಕೀ ಎಂಬ ಜನಪ್ರಿಯ ನಾಟಕಗಳು ಕರುಣರಸಪ್ರಧಾನವಾದ ನೋ ನಾಟಕಗಳನ್ನು ಹಿಂದೆ ಹಾಕಿದವು. ಅನೇಕ ಜೋಯಾರಿ ನಾಟಕಗಳ ಕರ್ತೃವಾದ ಚಿಕಮಟ್ಸು ಮಾನ್ ಸೆಯಿಮಾರ್ ಎಂಬ ಕವಿಯೂ ಜಪಾನಿನಲ್ಲೆಲ್ಲ ಅತ್ಯಂತ ಶ್ರೇಷ್ಠ ನಾಟಕಕಾರನೆಂದು ಪ್ರಸಿದ್ಧನಾಗಿದ್ದಾನೆ. ಮುಖ್ಯವಾಗಿ ಮಾಟ್ಸು ಓ ಭಾಷೋ ಎಂಬ ಅತ್ಯಂತ ಶ್ರೇಷ್ಠ ದರ್ಜೆಯ ಕವಿಯ ಪ್ರಭಾವದಿಂದ ಹೈಕೂ ಎಂಬ ಐದು, ಏಳು ಮತ್ತು ಐದು ಅಕ್ಷರಗಳ ಬಹಳ ಚಿಕ್ಕ ಪದ್ಯಗಳು ಹುಲುಸಾಗಿ ಬೆಳೆದವು. ಭಾಷೋನ ಹೈಕೂ ಅನೇಕವೇಳೆ ತನ್ನ ಒಡಲಲ್ಲಿ ಇಡೀ ವಿಶ್ವವನ್ನೇ ಒಳಗೊಂಡಿರುತ್ತದೆ.

ಆಧುನಿಕ ಯುಗ : 1868ರಿಂದ ಮುಂದೆ : 1852ರಲ್ಲಿ ಜಪಾನ್ ತನ್ನ ಬಾಗಿಲನ್ನು ಹೊರಪ್ರಪಂಚಕ್ಕೆ ತೆರದಿಟ್ಟಿತು. ಹಾಗೂ 1868ರಲ್ಲಿ ಟೋಕೂಗಾವಾ ಷೋಗುಣಾಟೆ ಎಂಬುದರ ಬದಲಾಗಿ ಬಂದ ಸಾರ್ವಭೌಮ ಸರ್ಕಾರ ದೇಶವಿದೇಶಗಳಿಂದ ಜ್ಞಾನಸಂಪಾದನೆ ಮಾಡುವುದನ್ನೇ ತನ್ನ ರಾಜನೀತಿಯಾಗಿ ಮಾಡಿಕೊಂಡಿತು. ಪಾಶ್ಚಾತ್ಯ ನಾಗರಿಕತೆಯ

ಪ್ರಬಲ ಪ್ರಭಾವ ಸಾಹಿತ್ಯ ಮೊದಲಾದ ಜನಜೀವನದ ಸಕಲ ಕ್ಷೇತ್ರಗಳಲ್ಲೂ ಗಣನೀಯವಾದ ಬದಲಾವಣೆಯನ್ನು ಉಂಟುಮಾಡಿತು. ಕಾಲ್ಪನಿಕ, ವಾಸ್ತವಿಕ ಮತ್ತು ಸಾಂಕೇತಿಕ ಮುಂತಾದ ಪಾಶ್ಚಾತ್ಯ ಸಾಹಿತ್ಯ ಪ್ರವೃತ್ತಿಗಳು ಇಲ್ಲಿಗೂ ಕ್ರಮೇಣ ಪ್ರವೇಶಿಸಿ ಜಪಾನೀ ಸಾಹಿತ್ಯದ ಮುನ್ನಡೆಗಳನ್ನು ತುಂಬ ಪ್ರಚೋದಿಸಿದವು. ಪಾಶ್ಚಾತ್ಯ ಲೇಖಕರ ಅನೇಕ ಕೃತಿಗಳು ಜಪಾನೀ ಭಾಷೆಗೆ ಭಾಷಾಂತರಗೊಂಡವು. ವಿದ್ಯೆ ಹರಡಿ ಓದುವವರ ಸಂಖ್ಯೆಯೂ ಹೆಚ್ಚಿತು. ಕಾವ್ಯದಲ್ಲಿ ಯೋಸಾನೋ ಅಕಿಕೊ ಮೊದಲಾದವರು ಹೊಸ ಕಲ್ಪನೆಗಳನ್ನೂ ಹೊಸ ಮಾತುಗಳನ್ನೂ ವಾಕ ಮತ್ತು ಹೈಕೂ ಎಂಬ ಸಾಂಪ್ರದಾಯಿಕ ಕಾವ್ಯರೂಪಗಳಲ್ಲಿ ತರುವ ಪ್ರವರ್ತನೆಗಳನ್ನು ಪ್ರಾರಂಭಿಸಿದರು. ಷಿಮೊಸಾಕಿ ಟೋಸನ್ ಎಂಬಾತ ಅನಿಯತ ಛಂದಸ್ಸಿನ ಪದ್ಯರಚನೆಯನ್ನು ಮೊದಲು ಮಾಡಿದ.

ಪಾಶ್ಚಾತ್ಯ ನಾಟಕಗಳನ್ನು ಭಾಷಾಂತರಿಸಿದ ಫಲವಾಗಿ ಜಪಾನೀ ನವೀನ ರಂಗಭೂಮಿ ಅಭಿವೃದ್ಧಿಗೊಂಡಿತು. ಅನೇಕ ಲೇಖಕರು ಕತೆಗಳನ್ನು ಹೇರಳವಾಗಿ ರಚಿಸಿದರು. ಅವುಗಳಲ್ಲಿ ಹಲವು ಪಾಶ್ಚಾತ್ಯ ಕಥಾತಂತ್ರಗಳನ್ನು ಅಳವಡಿಸಿಕೊಂಡಿವೆ. ಜಪಾನೀ ಸಾಹಿತ್ಯದಲ್ಲಿ ತುಲನಾತ್ಮಕವಾಗಿ ಅಲ್ಪಕಾಲದಲ್ಲಿಯೇ ಪಾಶ್ಚಾತ್ಯ ಪ್ರವಾಹಗಳು ದೇಹಗತವಾದುವು ಎಂದು ಹೇಳಬಹುದು ಮತ್ತು ಆಧುನಿಕ ಸಾಹಿತ್ಯಶೈಲಿಯನ್ನು ಪ್ರತಿಷ್ಠಾಪಿಸಿದ ಮೋರಿ ಓ ಗೈ ಮೊದಲಾದ ಶ್ರೇಷ್ಠವರ್ಗದ ಸ್ವತಂತ್ರ ಕೃತಿಕಾರರೂ ಅಹಂಪ್ರಜ್ಞೆಯ ಒಂದು ಸಮಸ್ಯೆಯನ್ನು ಆಧುನಿಕಾರ್ಥದಲ್ಲಿ ಒಂದೇ ಸಮನಾಗಿ ನಿರೂಪಿಸಿದ ನಟ್ಸುಮೇ ಸೋಸೆಕಿ ಎಂಬಾತನೂ 20ನೆಯ ಶತಮಾನದಲ್ಲಿ ಪ್ರವರ್ಧಿಸಿದರು. (ಎಂ.ಎಚ್.ಎ)

ಆಧುನಿಕ ಯುಗದ ಹಿಂದಿನ ಘಟ್ಟಗಳಿಗೆ ಆಯಾ ಕಾಲದಲ್ಲಿನ ಆಡಳಿತದ ಕೇಂದ್ರದ ಹೆಸರನ್ನು ಕೊಡಲಾಗಿದೆ. 'ಜಪಾನೀ ಸಾಹಿತ್ಯ' ಎಂದರೆ ಜಪಾನೀಯರು ಜಪಾನೀ ಭಾಷೆಯಲ್ಲಿ ಮತ್ತು ಚೀನೀ ಭಾಷೆಯಲ್ಲಿ ಬರೆದ ಸಾಹಿತ್ಯ. ಈ ಲೇಖನದಲ್ಲಿ ಜಪಾನೀ ಭಾಷೆಯಲ್ಲಿ ರಚಿತವಾದ ಸಾಹಿತ್ಯವನ್ನು ಮಾತ್ರ ಪರಿಗಣಿಸಲಾಗಿದೆ.

ಪ್ರಶ.ಪೂ. 2ನೆಯ ಶತಮಾನದವರೆಗೆ ಬರೆಹ ರೂಪದ ಸಾಹಿತ್ಯ ಇಲ್ಲದಿದ್ದರೂ ಲಾವಣಿಗಳು, ಭಜನೆಗಳು, ಪ್ರಾರ್ಥನೆಗಳು, ಪೌರಾಣಿಕ ಕಥೆಗಳು ಸೃಷ್ಟಿಯಾದವು. ಇವು ಮುಂದಿನ ಗ್ರಂಥಗಳಲ್ಲಿ ದಾಖಲಾದವು. 'ನೋರಿಟೊ', 'ಸೆನ್‌ಮೊ', ಕೊಜಿಕಿ ಮತ್ತು ನಿ ಹೋನ್ ಷೋಕಿ, ಮಡೋಕಿಗಳು ಲಭ್ಯವಿರುವ ಜಪಾನ್‌ನ ಅತ್ಯಂತ ಪ್ರಾಚೀನ ಇತಿಹಾಸ ಸಾಮಗ್ರಿ. ಷಿಂಟೊ ಪೌರಾಣಿಕ ಕಥೆಗಳ ರೂಪದಲ್ಲಿದೆ. ಜಪಾನೀಯರ ಮೂಲ, ಆಡಳಿತ ವ್ಯವಸ್ಥೆಯ ವಿಕಾಸ ಇವೆಲ್ಲವುಗಳ ವಿವರಣೆ ಇಲ್ಲಿದೆ. 'ಮನೋಷೂ' ಸಂಕಲನವನ್ನು ಸಿದ್ಧಪಡಿಸಿದವನು ಕವಿ ಒಟೋಮೊ. ಇಲ್ಲಿನ ಕವನಗಳ ಮುಖ್ಯ ಮನೋಧರ್ಮ 'ಮಕೋಟೊ' (ಸತ್ಯ ಅಥವಾ ಪ್ರಾಮಾಣಿಕತೆ, ಶ್ರದ್ಧೆ).

ಹೀಯಾನ್ ಕಾಲದಲ್ಲಿ ಸಾಹಿತ್ಯಕ್ಕೂ ಆಸ್ಥಾನದ ಶ್ರೀಮಂತ ವರ್ಗಕ್ಕೂ ಬಾಂಧವ್ಯ. ಈ ಘಟ್ಟದ ಹಿಂದಿನ ಕಾವ್ಯದಲ್ಲಿ ಪ್ರಾಮಾಣಿಕ ವೈಯಕ್ತಿಕ ಭಾವನೆಗಳು ಕಾವ್ಯದ ವಸ್ತುವಾದರೆ ಈ ಘಟ್ಟದಲ್ಲಿ ಮನುಷ್ಯ ನಿಸರ್ಗಗಳ ಸಂಬಂಧವು ಕವಿಗಳ ಗಮನವನ್ನು ಸೆಳೆಯಿತು. ಈ ಕಾಲದ ಪ್ರಮುಖ ಸಂಪಾದಕ ಕಿ ತ್ಸುರಯುಕಿ (ಸುಮಾರು 945ರಲ್ಲಿ ನಿಧನನಾದ) ಸ್ವತಃ ಕವಿಯಾಗಿದ್ದ; ಸಾಹಿತ್ಯಮೀಮಾಂಸೆಗೆ ಅಸ್ತಿಭಾರ ಹಾಕಿದವನು. ಇವನೇ ಸಾಹಿತ್ಯಕ ದಿನಚರಿ ಪ್ರಕಾರದ ಜನಕ; ತನ್ನ ಪ್ರವಾಸದ ಅನುಭವವನ್ನು ದಾಖಲಿಸಿದ್ದಾನೆ. 10ನೆಯ ಶತಮಾನದ ಪ್ರಾರಂಭದಲ್ಲಿ ಕಿನ್ನರಿ ಕಥೆಗಳು ಮತ್ತು ಕಥನ ಕವನಗಳು ರಚಿತವಾದವು. ಈ ಘಟ್ಟದ ಅತಿ ಮುಖ್ಯ ಕೃತಿಗಳು ಮುರ ಸಾಕಿ ಶಿಖಬು ಬರೆದ ಗೆಂಜಿಯ ಕಥೆ' ಮತ್ತು ಆಸ್ಥಾನದಲ್ಲಿದ್ದ ಮಹಿಳೆ ಸೇ ಷೊನಗಾನ್ ಬರೆದ ಮುಕುರ-ನೊ-ಷೊಷಿ (ತಲೆದಿಂಬಿನ ಪುಸ್ತಕ) ಗೆಂಜಿಯ ಕಥೆ ಹೀಯಾನ್ ಕಾಲದ ಆಸ್ಥಾನ ಜೀವನವನ್ನು ಚಿತ್ರಿಸುತ್ತದೆ. 'ತಲೆದಿಂಬಿನ ಪುಸ್ತಕ'ವೂ ಇದೇ ಬದುಕಿನ ಬೇರೆ ಮುಖಗಳನ್ನು ಚಿತ್ರಿಸುವ ಉಜ್ವಲ ಕೃತಿ.

ಕಾಮಾಕೂರ ಮುರೊಮಾಚಿ ಕಾಲ ಪ್ರಕ್ಷುಬ್ಧತೆಯ ಕಾಲ. ಈ ಕಾಲದಲ್ಲಿ ಹಲವು ಕವನಸಂಕಲನಗಳನ್ನು ಸಿದ್ಧಪಡಿಸಲಾಯಿತು. ಷಿನ್ ಕೊಕಿನ್-ಷು (1205) ಈ ಯುಗದ ವಿಷಾದ ಮತ್ತು ಏಕಾಕಿತನದ ಭಾವಗಳನ್ನು ವ್ಯಕ್ತಪಡಿಸುತ್ತದೆ. ಜಪಾನಿ ಸಾಹಿತ್ಯವಿಮರ್ಶಕರು ಈ ಯುಗದ ಮನೋಧರ್ಮವನ್ನು 'ಯುಗೆನ್' ಎಂದು ವರ್ಣಿಸುತ್ತಾರೆ. ಹೀಗೆಂದರೆ 'ನಿಗೂಢತೆ ಮತ್ತು ಗಾಢತೆ'. ಈ ಪದದಲ್ಲಿ ಧಾರ್ಮಿಕ ಧ್ವನಿ ಇದೆ. ಈ ಕಾಲದ ಪ್ರಮುಖ ಕವಿಗಳಲ್ಲಿ ಒಬ್ಬ ಅರ್ಚಕಿ ಸೈಗೋ. ಸನ್ಯಾಸಿ-ಸನ್ಯಾಸಿನಿಯರು ಹಲವರು ಈ ಯುಗದಲ್ಲಿ ಸಾಹಿತ್ಯರಚನೆ ಮಾಡಿದರು. ಈ ಕಾಲದ ಒಂದು ಸ್ವಾರಸ್ಯವಾದ ಬೆಳವಣಿಗೆ ಎಂದರೆ 'ರೆಂಗ' ಎನ್ನುವ ಕಾವ್ಯಪ್ರಕಾರ ರೂಪುಗೊಂಡದ್ದು (14ನೆಯ ಶತಮಾನದ್ದು). ಇದರ ಛಂದಸ್ಸು ಸಂಕೀರ್ಣವಾದದ್ದು. ಮೂವರು ಅಥವಾ ಇನ್ನೂ ಹೆಚ್ಚು ಮಂದಿ ಕವಿಗಳು ಒಂದಾದ ಮೇಲೊಂದು ಪದ್ಯವನ್ನು ಸರದಿ ಪ್ರಕಾರ ರಚಿಸಿ ಕವನವನ್ನು ರೂಪಿಸುತ್ತಿದ್ದರು. ಈ ಪ್ರಕಾರದ ಅತ್ಯಂತ ಶ್ರೇಷ್ಠ ಕೃತಿ 'ಮಿನಾಸೆ ಸಂಗಿನ್' (ಮಿನಾಸೆಯ ಮೂವರು ಕವಿಗಳು-1488).

ಟೊಕೂಗಾವಾ ಯುಗದ ಸೈಕಾಕ್ಸ್ ವಣಿಕ ವರ್ಗದ ಸುಖಲೋಲುಪ ಬದುಕನ್ನು ನಿರೂಪಿಸಿದ. ಇವನದು ಉಜ್ವಲ ಸಾಧನೆ. ಇವನನ್ನು ಸರಿಗಟ್ಟಲಾರದಿದ್ದರೂ ಮತ್ತೊಬ್ಬ ಪ್ರಮುಖ ಬರೆಹಗಾರ ಜಿಪ್ಪನ್‌ಷ ಇಕ್ಕು. ಇವನು ಬರೆದ 'ಟೊಕೈಡೋಚು ಹಿಜಾಕುರಿಗೆ' (1822) ಇಬ್ಬರು ಅಲೆಮಾರಿಗಳ ವಿಫಲ ಸಾಹಸಗಳ, ಖುಷಿಕೊಡುವ ವೃತ್ತಾಂತ. ಹೈಕು ಈ ಕಾಲದಲ್ಲಿ ಪರಿಪೂರ್ಣತೆಯನ್ನು ಕಂಡಿತು. ಅರ್ಚಕ ಬಷೊ ಚಿತ್ರಕಾರ ಯೊಸ ಬುಸನ್ ಮತ್ತು ಬಡಕುಟುಂಬದಲ್ಲಿ ಹಳ್ಳಿಯಲ್ಲಿ ಜನಿಸಿದ ಕೊಬಯಷಿ ಇಸ-ಇವರು ಹೈಕು ಪ್ರಕಾರವನ್ನು, ಅತ್ಯಂತ ಪರಿಣಾಮಕಾರಿಯಾಗಿ ಬಳಸಿದರು.

19ನೆಯ ಶತಮಾನದಲ್ಲಿ ಮೊದಲು ಅನುವಾದವಾದದ್ದು ಬ್ರಿಟಿಷ್ ಬರೆಹಗಾರರ ಕೃತಿಗಳು. ಇದರಿಂದಾಗಿ ರಾಜಕೀಯ ಕಾದಂಬರಿ ರೂಪುಗೊಂಡಿತು. ಸಾಹಿತ್ಯವನ್ನು ಕುರಿತ ಹೊಸ ಮನೋಧರ್ಮದ ಚಿಂತನೆ ಪ್ರಾರಂಭವಾಯಿತು. ಟ್ಸು ಚಾಚಿ ಶೊಯೋ ಎನ್ನುವ ಸಾಹಿತಿಯು, ಷೊಸೆಟ್ಸು ಷಿನ್‌ಜ್ಞು ಇ (ಕಾದಂಬರಿಯ ತಿರುಳು 1885) ಎನ್ನುವ ಕೃತಿಯಲ್ಲಿ, ಪಾಶ್ಚಾತ್ಯ ಮಾದರಿಯ ವಾಸ್ತವಿಕ ಕಾದಂಬರಿಗಳು ಬರಬೇಕೆಂದು ಪ್ರತಿಪಾದಿಸಿದ. ಆಡುಮಾತಿನಲ್ಲಿ ರಚಿತವಾದ ಮೊದಲನೆಯ ಕಾದಂಬರಿ ಫುಟಬಟೇ ಷಿ ಮೇಯ 'ಅಲೆದಾಡುವ ಮೋಡ' (1887) ಕಾದಂಬರಿಕಾರ, ಕವಿ ಒಜಾಕಿ ಕೋಯೊ ಕೆನ್ಯೂಷ್ ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಿದ. ಇದು ವಿದ್ಯಾರ್ಥಿಗಳ ಸಾಹಿತ್ಯ ಸಂಘ. 1890ರ ನಂತರ ಇದು ಪ್ರಭಾವೀ ಸಂಸ್ಥೆಯಾಯಿತು. ಪಾಶ್ಚಾತ್ಯ ತಂತ್ರಗಳನ್ನು ಬಳಸಿಕೊಂಡು ಪರಂಪರಾಗತ ಸಾಹಿತ್ಯಕ ಮೌಲ್ಯಗಳನ್ನು ಪ್ರತಿಪಾದಿಸುವ ಧೋರಣೆಯನ್ನು ಇದು ಅನುಸರಿಸಿತು.

20ನೆಯ ಶತಮಾನದಲ್ಲಿ ಜಪಾನ್‌ನ ತರುಣ ಬರಹಗಾರನನ್ನು ಫ್ರಾನ್ಸಿನ 'ನ್ಯಾಚುರಲಿಸ್ಟ್' ಸಿದ್ಧಾಂತವು ಆಕರ್ಷಿಸಿತು. ಈ ಸಿದ್ಧಾಂತವು ಸಾಮಾಜಿಕ ಹೂರಣವನ್ನು ಕಡಿಮೆ ಮಾಡಿ ಮಾರ್ಪಡಿಸಿಕೊಂಡು ಈ ಬರೆಹಗಾರರು ಸ್ವೀಕರಿಸಿದರು. ಷಿಮಜಾಕಿ ಟೋಸನ್‌ನ 'ಹಕಾರ್ಯ' (ಉಲ್ಲಂಘಿಸಿದ ದೈವಾಜ್ಞೆ, 1906) ಈ ಪಂಥವು ಬೇರುಬಿಡಲು ನೆರವಾಯಿತು. ಇದು ಸಮಾಜಭ್ರಷ್ಟವಾದ ತರುಣನೊಬ್ಬನ ತಪ್ಪೊಪ್ಪಿಗೆಯ ರೂಪದಲ್ಲಿದೆ. ಇಬ್ಬರು ಪ್ರಮುಖ ಬರೆಹಗಾರರು ಈ ಪಂಥದಿಂದ ದೂರ ಉಳಿದರೂ 'ಗಾನ್' (ಕಾಡು ಹೆಬ್ಬಾತು, 1911-13) ಬರೆದ ಮೊರಿ ಓಗೈ ಬಲಾತ್ಕಾರದಿಂದಾಗಿ ಒಬ್ಬ ಜಿಪುಣನ ಉಪಪತ್ನಿಯಾದ ಹುಡುಗಿಯ ಭಾವನೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾನೆ. ನಟಸುಮೆ ಸೊಸೆಕಿ ಮನೋವಿಶ್ಲೇಷಣಾತ್ಮಕ ಕಾದಂಬರಿ ಪ್ರಕಾರದಲ್ಲಿ ಅದ್ಭುತ ಸಾಧನೆಯನ್ನು ಕೈಗೂಡಿಸಿಕೊಂಡ. ಇವನು ಜಪಾನ್‌ನ ಅತ್ಯಂತ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬ. ಆಧುನಿಕ ಮನುಷ್ಯನ ಅಹಂಭಾವವನ್ನು ವಿಶ್ಲೇಷಿಸಿ ಖಂಡಿಸುವ ಒಂದು ಕಾಲ್ಪನಿಕ ಜಗತ್ತನ್ನೇ ಸೃಷ್ಟಿಸಿದ. 1910-30ರ ಅವಧಿಯಲ್ಲಿ ಅಕುಟಗಾವ ದಿಯುನೋಸುಕ ಶ್ರೇಷ್ಠ ಸಣ್ಣ ಕಥೆಗಳನ್ನು ರಚಿಸಿದ.

1930ರಿಂದ ಜಪಾನ್‌ನಲ್ಲಿ ಯುದ್ಧೋತ್ಸಾಹ ವಾತಾವರಣವು ಬೆಳೆದು ಸಾಹಿತ್ಯ ಮತ್ತು ಕಥೆಗಳು ಹಿಂದಕ್ಕೆ ಸರಿದವು. ಯಸುನಾರಿ ಕವಾಬಾಟ ಮತ್ತು ಟಾನಿಜಾಕಿ ಜುನಿಚಿಕೊ ಸಮರೋತ್ತರ ಜಪಾನ್‌ನಲ್ಲಿ ಪ್ರಸಿದ್ಧ ಬರೆಹಗಾರರಾದರು. ಭಾವಗೀತಾತ್ಮಕ ರೀತಿಯ ಸಾಹಿತ್ಯದ ರಚನೆಯಲ್ಲಿ ಕವಾಬಾಟ ಖ್ಯಾತಿ ಗಳಿಸಿದ. 1968ರಲ್ಲಿ ಇವನಿಗೆ ನೋಬೆಲ್ ಪ್ರಶಸ್ತಿ ಬಂದಿತು. ಮಿಷಿಮ ಯುಕಿಯೊನ ಕಾದಂಬರಿಗಳು, ಕಥೆಗಳು ಮತ್ತು ನಾಟಕಗಳಲ್ಲಿ ತನ್ನ ದೇಶವನ್ನು ಪಾಶ್ಚಾತ್ಯ ಸಂಸ್ಕೃತಿ ಆವರಿಸುತ್ತದೆ ಎನ್ನುವ ವಿಷಾದವನ್ನು ಅಭಿವ್ಯಕ್ತಿಗೊಳಿಸುತ್ತವೆ. 1994ರಲ್ಲಿ ಕಾದಂಬರಿಕಾರ ಓವ ರೆನ್ಜಬುರೊ ನೊಬೆಲ್ ಬಹುಮಾನವನ್ನು ಗಳಿಸಿದ. (ಎಲ್.ಎಸ್.ಎಸ್)

**ಜಪ್ತಿ :** ಯಾವೊಂದು ಸ್ವತ್ತು ಅಥವಾ ವ್ಯಕ್ತಿಯನ್ನು ಕಾನೂನಿನ ಅಭಿರಕ್ಷೆಗೆ ಅಥವಾ ಹಿಡಿತಕ್ಕೆ ಒಳಪಡಿಸುವುದು (ಅಟ್ಯಾಚ್‌ಮೆಂಟ್). ಸ್ವತ್ತನ್ನು ಹಿಡಿಯುವುದಕ್ಕೆ ಸಂಬಂಧಿಸಿದಂತೆ ಮಾತ್ರ ಸಾಮಾನ್ಯವಾಗಿ ಈ ಪದವನ್ನು ಬಳಸಲಾಗುತ್ತಿದೆ. ಯಾವೊಬ್ಬ ವ್ಯಕ್ತಿಯ ಸ್ವತ್ತನ್ನು ಜಪ್ತಿ ಮಾಡಬೇಕಾದರೆ, ತತ್ಸಂಬಂಧದಲ್ಲಿ ನ್ಯಾಯಾಲಯದ ಆಜ್ಞೆ ಇರುವುದು ಅವಶ್ಯ. ಯಾವೊಂದು ಸ್ವತ್ತನ್ನು ಜಪ್ತಿ ಮಾಡಬೇಕೆಂದು ಹೊರಡಿಸಿದ ಆಜ್ಞೆಯಲ್ಲಿ ಜಪ್ತಿಯನ್ನು ಏಕೆ ಮಾಡಲಾಗುತ್ತದೆಯೆಂಬುದನ್ನು ನ್ಯಾಯಾಲಯ ವಿಶದಪಡಿಸಿರುತ್ತದೆ. ಸಂದಾಯ ಮಾಡಬೇಕಾಗಿದ್ದ ಸಾಲದ ಹಣ, ಕಂದಾಯ, ಬಾಡಿಗೆ ಮುಂತಾದವನ್ನು ಪಾವತಿಮಾಡಿಲ್ಲ ಅಥವಾ ಆ ಬಗ್ಗೆ ಕಾನೂನಿನ ಉಲ್ಲಂಘನೆ ಆಗಿದೆ ಎಂಬ ಕಾರಣಗಳ ಮೇಲೆ ಸಾಮಾನ್ಯವಾಗಿ ಜಪ್ತಿ ಮಾಡಲಾಗುವುದು. ಕೆಲವು ಸಂದರ್ಭಗಳಲ್ಲಿ ಜಪ್ತಿಗೆ ಮುಂಚೆ ಅದಕ್ಕೆ ಕಾರಣವಾದ ತೀರ್ಪನ್ನು ಕಾರ್ಯಗತಗೊಳಿಸಲು ನಿರ್ದಿಷ್ಟ ಸಮಯದ ಅವಕಾಶವನ್ನೂ ಕೊಡಲಾಗುತ್ತದೆ. ಭಾರತದಲ್ಲಿ ನ್ಯಾಯಾಲಯಗಳು ಜಪ್ತಿಯನ್ನು ಕುರಿತ ಆಜ್ಞೆಯನ್ನು 1908ರ ದಿವಾಣೀ ಪ್ರಕ್ರಿಯಾಸಂಹಿತೆಯಲ್ಲಿ ಅಡಕವಾಗಿರುವ ನಿಯಮಾವಳಿಗಳ ಮೇರೆಗೆ ಹೊರಡಿಸಬೇಕಾಗುತ್ತದೆ. ಈ ಸಂಬಂಧದಲ್ಲಿ ಹೆಚ್ಚಿನ ವಿವರಗಳು 1908ರ ದಿವಾಣೀ ಪ್ರಕ್ರಿಯಾ ಸಂಹಿತೆಯಲ್ಲಿ 46,51,52,53,60,61,63,64,81,94 ಮತ್ತು 95ನೆಯ ಪ್ರಕರಣಗಳಲ್ಲಿ ಹಾಗೂ ಅದರಲ್ಲಿಯ

16,21 ಮತ್ತು 38ನೆಯ ಆದೇಶಗಳಲ್ಲಿ ಇವೆ. ಭಾರತದ ಅನೇಕ ರಾಜ್ಯಗಳು 1908ರ ದಿವಾಣೀ ಪ್ರಕ್ರಿಯಾ ಸಂಹಿತೆಯಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡಿದ್ದರೂ ಜಪ್ತಿಗೆ ಸಂಬಂಧಿಸಿದ ನಿಯಮಗಳಲ್ಲಿ ಮತ್ತು ಜಪ್ತಿಯನ್ನು ಮಾಡುವ ಪ್ರಕ್ರಿಯಾ ವಿಧಾನಗಳಲ್ಲಿ ಹೆಚ್ಚಿನ ಬದಲಾವಣೆಗಳು ಇಲ್ಲ. ಅವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು:

ಡಿಕ್ರಿಯನ್ನು (ಆಜ್ಞಪ್ತಿ) ಪಡೆದವನು ತನಗೆ ಡಿಕ್ರಿ ದೊರೆತ ನ್ಯಾಯಾಲಯದಲ್ಲಿ ಡಿಕ್ರಿಯನ್ವಯ ಸಾಲಗಾರನಾದವನ ಸ್ವತ್ತನ್ನು, ಅದು ಬೇರೊಂದು ನ್ಯಾಯಾಲಯದ ಅಧಿಕಾರವ್ಯಾಪ್ತಿಗೊಳಪಟ್ಟಿದಲ್ಲಿ, ಅಂಥ ನ್ಯಾಯಾಲಯ ಆ ಸ್ವತ್ತನ್ನು ಜಪ್ತಿ ಮಾಡಬೇಕೆಂದು ಆದೇಶ ಹೊರಡಿಸುವಂತೆ ಅರ್ಜಿ ಹಾಕಿಕೊಳ್ಳಬಹುದು, ಮತ್ತು ಡಿಕ್ರಿಯನ್ನು ಹೊರಡಿಸಿದ ನ್ಯಾಯಾಲಯ ಸಂಬಂಧಪಟ್ಟ ನ್ಯಾಯಾಲಯಕ್ಕೆ ಆದೇಶ ನೀಡಬಹುದು. ಇಂಥ ಸಂದರ್ಭಗಳಲ್ಲಿ ಜಪ್ತಿ ಕೇವಲ ಎರಡು ತಿಂಗಳ ಅವಧಿಗೆ ಇರುತ್ತದೆ. ಈ ಅವಧಿಯಲ್ಲಿ ಜಪ್ತಿ ಮಾಡಿದ ನ್ಯಾಯಾಲಯಕ್ಕೆ ಆದೇಶ ನೀಡಬಹುದು. ಇಂಥ ಸಂದರ್ಭಗಳಲ್ಲಿ ಜಪ್ತಿ ಮಾಡಿದ ನ್ಯಾಯಾಲಯಕ್ಕೆ ಡಿಕ್ರಿ ವರ್ಗಾಯಿಸಲ್ಪಡಬೇಕು ಇಲ್ಲವೆ ಜಪ್ತಿಯ ಅವಧಿಯನ್ನು ವಿಸ್ತರಿಸುವ ಆಜ್ಞೆಯಾಗಬೇಕು. ಡಿಕ್ರಿಯನ್ನು ಕಾರ್ಯಗತಗೊಳಿಸುವ ವಿಧಾನಗಳಲ್ಲಿ ಸ್ವತ್ತನ್ನು ಜಪ್ತಿಮಾಡುವುದು ಮತ್ತು ಅದನ್ನು ಮಾರುವುದು ಸೇರಿದ್ದು, ಹಾಗೆ ಮಾಡಲು ನ್ಯಾಯಾಲಯಗಳಿಗೆ ಅಧಿಕಾರವಿರುತ್ತದೆ. ಹಣದ ಸಂದಾಯ ಕುರಿತ ಡಿಕ್ರಿಯಾಗಿದ್ದು ಅದು ಮೃತನ ಸ್ವತ್ತಿಗೆ ಸಂಬಂಧಿಸಿದ್ದರೆ, ಅಂಥ ಆಸ್ತಿಯನ್ನು ಜಪ್ತಿಮಾಡಿ, ಅದನ್ನು ಮಾರುವುದರ ಮೂಲಕ ಡಿಕ್ರಿಯನ್ನು ಕಾರ್ಯಗತಗೊಳಿಸಬಹುದು. ಹಾಗೆ ಮಾಡುವುದಕ್ಕೆ ಮುಂಚಿತವಾಗಿ ಮೃತನ ನ್ಯಾಯಿಕ ಪ್ರತಿನಿಧಿಯ ವಿರುದ್ಧ ಅಂಥ ಡಿಕ್ರಿಯನ್ನು ಪಡಿದಿರಬೇಕು.

1908ರ ದಿವಾಣೀ ಪ್ರಕ್ರಿಯಾ ಸಂಹಿತೆಯ 60ನೆಯ ಪ್ರಕರಣದಲ್ಲಿ ಯಾವ ಯಾವ ತರಹದ ಸ್ವತ್ತನ್ನು ಜಪ್ತಿ ಮಾಡಬಹುದು ಎಂಬುದನ್ನು ಕುರಿತಂತೆ ವಿಧಿನಿಷೇಧಗಳನ್ನು ಹೇಳಲಾಗಿದೆ. ಒಟ್ಟಾರೆ ಜೀವನೋಪಾಯಕ್ಕೆ ಅಗತ್ಯವಾದಷ್ಟು ಬಟ್ಟೆ ಹಾಗೂ ಅಡುಗೆಯ ಪಾತ್ರೆಗಳು, ಧಾರ್ಮಿಕ ರೂಢಿಗನುಸಾರವಾಗಿ ಮಹಿಳೆಯರು ಬಿಟ್ಟುಕೊಡಲು ಬಾರದಂಥ ವ್ಯಕ್ತಿಗತ ಆಭರಣಗಳು, ಕೃಷಿಕನ ಕೆಲಸದ ಅಗತ್ಯದ ಸಾಮಾನುಗಳು, ಕಾನೂನಿನನ್ವಯ ನಿಗದಿಗೊಳಿಸಿದಂತೆ ಧಾನ್ಯ ಹಾಗೂ ಸಂಬಳದ ಮೊತ್ತ ಮುಂತಾದವನ್ನು ಜಪ್ತಿಮಾಡಲು ಬರುವುದಿಲ್ಲ.

ಸಾಕ್ಷಿಯಾದವನು ನ್ಯಾಯಾಲಯದ ಮುಂದೆ ಆದೇಶದಂತೆ ಹಾಜರಾಗಲು ತಪ್ಪಿದರೆ ಆತನ ಸ್ವತ್ತನ್ನೂ ಜಪ್ತಿ ಮಾಡಬಹುದು. ನ್ಯಾಯಾಲಯದ ಮುಂದೆ ಯಾವೊಂದು ವಿವಾದ ಇದ್ದಾಗ ಜಪ್ತಿ ಮಾಡಬೇಕಾದಂಥ ಮತ್ತು ವಿವಾದ ಇತ್ಯರ್ಥವಾದ ಮೇಲೆ ತತ್ಸಂಬಂಧದಲ್ಲಿ ಜಪ್ತಿ ಮಾಡಬೇಕಾದಂಥ ಸಂದರ್ಭಗಳನ್ನೂ ಜಪ್ತಿ ಮಾಡುವ ಪ್ರಕ್ರಿಯಾ ವಿಧಾನಗಳನ್ನೂ ದಿವಾಣೀ ಪ್ರಕ್ರಿಯಾ ಸಂಹಿತೆಯಲ್ಲಿ ವಿವರಿಸಲಾಗಿದೆ.

ವಿವಾದ ಇತ್ಯರ್ಥವಾಗದಿದ್ದು, ತೀರ್ಪಿಗೆ ಮುಂಚಿತವಾಗಿ ಜಪ್ತಿ ಮಾಡಬೇಕೆಂದು ಮನವಿ ಸಲ್ಲಿಸಿದ್ದರೆ ಅಥವಾ ಜಪ್ತಿಯನ್ನು ಮಾಡಿಸಿದ್ದರೆ ಮತ್ತು ಅನಂತರದಲ್ಲಿ ಹಾಗೆ ಮಾಡಿರುವುದಕ್ಕೆ ಸರಿಯಾದ ಅಥವಾ ಸಾಕಷ್ಟು ಕಾರಣಗಳಿಲ್ಲದಿದ್ದ ಪಕ್ಷದಲ್ಲಿ, ಮನವಿದಾರ ಅಥವಾ ಜಪ್ತಿಮಾಡಿಸಿದವನು ತತ್ಸಂಬಂಧವಾಗಿ ಪ್ರತಿವಾದಿಗೆ ಅಥವಾ ಜಪ್ತಿಯಾಗಿದ್ದ ಸ್ವತ್ತಿಗೆ ಉಂಟಾದ ಹಾನಿಯನ್ನು ತುಂಬಿಕೊಡಲು ಹೊಣೆಯಾಗುತ್ತಾನೆ.

ಜಪ್ತಿಗೆ ಸಂಬಂಧಿಸಿದಂತೆ ಈ ಬಗೆಯ ಸಾಮಾನ್ಯ ನಿಯಮಗಳು ಪ್ರಪಂಚದ ಅನೇಕ ರಾಷ್ಟ್ರಗಳ ಕಾನೂನುಗಳಲ್ಲಿ ಇವೆ. (ಎಲ್.ಎಸ್.ಜೆ.)

**ಜಬಲ್‌ಪುರ :** ಮಧ್ಯಪ್ರದೇಶ ರಾಜ್ಯದ ಒಂದು ನಗರ, ಜಿಲ್ಲೆ, ವಿಭಾಗ. ಜಬಲ್‌ಪುರ ನಗರ ಅಲಹಾಬಾದಿನ ಆಗ್ನೇಯಕ್ಕೆ 312 ಕಿಮೀ ದೂರದಲ್ಲಿ ಮುಂಬಯಿ–ಅಲಹಾಬಾದ್–ಕೊಲ್ಕತ ಮತ್ತು ಜಬಲ್‌ಪುರ–ಗೋಂಡಿಯ ರೈಲು ಮಾರ್ಗಗಳ ಸಂಧಿಸ್ಥಳದಲ್ಲಿ ಇದೆ. ಮಧ್ಯಪ್ರದೇಶ ರಾಜ್ಯದ ಎರಡನೆಯ ದೊಡ್ಡ ನಗರವಾದ ಇದರ ಜನಸಂಖ್ಯೆ 1254,336(2011)

ನರ್ಮದಾ ನದಿಗೆ 8 ಕಿಮೀ ಉತ್ತರದಲ್ಲಿರುವ ಈ ನಗರದ ಸನ್ನಿವೇಶ ಬಹಳ ಮಹತ್ತ್ವದ್ದು. ಇದು ಪಶ್ಚಿಮದ ನರ್ಮದಾ ಕಣಿವೆ, ದಕ್ಷಿಣದ ಮಹದೇವ–ಮೈಕಲ್ ಘಾಟಿ, ಭಾನ್ರೇರ್–ಮೈಕಲ್ ತಗ್ಗು ನೆಲ–ಇವುಗಳ ನಡುವೆ ಇದೆ.

ಜಬಲ್‌ಪುರದ ಒಂದು ಉಪನಗರವಾಗಿರುವ ಗಢ ಎಂಬುದು 14ನೆಯ ಶತಮಾನದಲ್ಲಿ ಹುಟ್ಟಿಕೊಂಡ ನಾಲ್ಕು ಗೋಂಡ್ ರಾಜ್ಯಗಳಲ್ಲಿ ಒಂದರ ಮುಖ್ಯ ಪಟ್ಟಣವಾಗಿತ್ತು. ಬ್ರಿಟಿಷರ ಆಡಳಿತದ ಕಾಲದಲ್ಲಿ ನರ್ಮದಾ ಪ್ರದೇಶ ಕಮಿಷನರ ಆಡಳಿತ ಕೇಂದ್ರವಾಗಿ ಇದರ ಪ್ರಾಮುಖ್ಯ ಅಧಿಕವಾಯಿತು. ಈಗ ಇದು ಜಬಲ್‌ಪುರ ಜಿಲ್ಲೆ ಮತ್ತು ವಿಭಾಗಗಳ ಆಡಳಿತ ಕೇಂದ್ರ. ಜಿಲ್ಲಾ ಮತ್ತು ವಿಭಾಗಾಧಿಕಾರಿಗಳ ಕಚೇರಿಗಳ ಜೊತೆಗೆ ಇಲ್ಲಿ ಉಚ್ಚ ನ್ಯಾಯಾಲಯವೂ ವಿಶ್ವವಿದ್ಯಾಲಯವೂ ಅದರಿಂದ ಮನ್ನಣೆ ಪಡೆದ ಕಾಲೇಜುಗಳೂ ಇವೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿ, ಡಿಸೈನ್ ಆ್ಯಂಡ್ ಮ್ಯಾನ್ಯುಫ್ಯಾಕ್ಚರಿಂಗ್, ಎಂಬ ಸಂಸ್ಥೆಯೂ ಇದೆ. ಇದು ಒಂದು ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರ ಕೂಡ. ಕೇಂದ್ರದ ಫಿರಂಗಿ ಗಾಡಿ ಕಾರ್ಖಾನೆ, ಆರ್ಡ್‌ನೆನ್ಸ್ ಕಾರ್ಖಾನೆ, ಸೈನ್ಯ ಇಲಾಖೆಯ ವರ್ಕ್‌ಷಾಪ್, ಎಣ್ಣೆ ಮತ್ತು ಹಿಟ್ಟಿನ ಗಿರಣಿಗಳು, ಮರ ಕೊಯ್ಯುವ ಕಾರ್ಖಾನೆ, ಬೀಡಿ ತಯಾರಿಕೆ, ಎಂಜಿನಿಯರಿಂಗ್ ಮತ್ತು ಗಾಜು ಕೆಲಸ, ಬಟ್ಟೆ ನೆಯ್ಗೆ – ಇವು ಕೆಲವು ಮುಖ್ಯ ಕೈಗಾರಿಕೆಗಳು.

ಜಬಲ್‌ಪುರ ಜಿಲ್ಲೆಯ ವಿಸ್ತೀರ್ಣ 5211 ಚ.ಕಿಮೀ. ಪೂರ್ವ ಈಶಾನ್ಯಗಳಲ್ಲಿ ಸೋನ್ ನದೀ ಕಣಿವೆಯ ಭಾಗಗಳನ್ನೂ ವಾಯವ್ಯದಲ್ಲಿ ಸೋನ್–ಕೇನ್–ನರ್ಮದಾ ನದಿಗಳ ಶಿರಃ ಪ್ರದೇಶವನ್ನೂ ಈ ಜಿಲ್ಲೆ ಒಳಗೊಂಡಿದೆ. ನರ್ಮದಾ ನದೀ ಕಣಿವೆ ಪ್ರದೇಶದ ಪಶ್ಚಿಮ ಭಾಗ ಮಧ್ಯಪ್ರದೇಶದ ಅತ್ಯಂತ ಫಲವತ್ತಾದ ಪ್ರದೇಶಗಳಲ್ಲೊಂದು. ಅಲ್ಲಿಯದು ಕಪ್ಪು ಮಣ್ಣು. ಗೋದಿ ಅಲ್ಲಿಯ ಮುಖ್ಯ ಬೆಳೆ. ಜಿಲ್ಲೆಯ ದಕ್ಷಿಣ ಮತ್ತು ಪೂರ್ವ ಭಾಗಗಳು ಡೆಕ್ಕನ್ ಟ್ರ್ಯಾಪ್ ಶಿಲಾಭೂಯಿಷ್ಠ ಪ್ರದೇಶ. ಉತ್ತರ ಭಾಗದಲ್ಲಿ ಸ್ಲೇಟ್, ಕ್ವಾರ್ಟ್‌ಜೈಟ್, ಸುಣ್ಣಕಲ್ಲು, ಜ್ಯಾಸ್ಪರ್ ಮತ್ತು ಅಭ್ರಕೀಯ ಹೆಮಟೈಟ್ ಶಿಲೆಗಳಿವೆ. ಇವುಗಳಲ್ಲಿ ಕಬ್ಬಿಣ ಅದಿರು, ಮ್ಯಾಂಗನೀಸ್, ಸೀಸ ಮತ್ತು ತಾಮ್ರ ನಿಕ್ಷೇಪಗಳುಂಟು. ಇಟ್ಟಿಗೆ, ಮಡಕೆ ಮತ್ತು ಗಾಜಿನ ಪದಾರ್ಥ ತಯಾರಿಸಲು ಉಪಯುಕ್ತವಾದ ಮಣ್ಣುಗಳೂ ಇವೆ.

ಭೇಡಾಘಾಟ್ ಬಳಿಯಲ್ಲಿ ನರ್ಮದಾ ನದಿ 15 ಮೀ. ಎತ್ತರದಿಂದ ಧುಮುಕಿ ಅಲ್ಲಿಂದ ಮುಂದೆ ಅಮೃತಶಿಲಾ ಕಂದರವೊಂದರಲ್ಲಿ ಹರಿಯುತ್ತದೆ. ಈ ಸ್ಥಳ ಪ್ರವಾಸಿಗಳನ್ನು ಆಕರ್ಷಿಸುತ್ತದೆ.

ಜಿಲ್ಲೆಯ ಒಟ್ಟು ನೆಲದಲ್ಲಿ ಶೇ. 41ರಷ್ಟು ಭಾಗ ಕೃಷಿಯೋಗ್ಯ. ಶೇ. 21ರಷ್ಟು ನೆಲ ಅರಣ್ಯಾವೃತ. ಮುಖ್ಯ ಬೆಳೆಗಳು ಗೋದಿ, ಬತ್ತ, ಜೋಳ, ಎಣ್ಣೆಬೀಜ. ಸಿಮೆಂಟ್, ಕುಂಭ ವಸ್ತು, ಸಿದ್ಧ ವಸ್ತ್ರಗಳ ತಯಾರಿಕೆ, ಬಟ್ಟೆ ನೇಯ್ಗೆ, ಆಟಿಕೆ, ಹಿತ್ತಾಳೆ ಪದಾರ್ಥಗಳು ತಯಾರಾಗುತ್ತವೆ. ಕಟ್ನಿ ಮತ್ತು ಕೈಮೂರ್ ಸಿಮೆಂಟ್ ತಯಾರಿಕಾ ಕೇಂದ್ರಗಳು. ಕಲ್ಲುಗಳನ್ನು ಕಡೆಯುವುದೂ ಒಂದು ಉದ್ಯಮ.

ಜಬಲ್‌ಪುರವು ಮಹರ್ಷಿ ಮಹೇಶ್ ಯೋಗಿ ಹಾಗೂ ರಜನೀಷ್ (ಓಷೋ) ಅವರ ಹುಟ್ಟೂರೂ ಆಗಿದೆ.

ಜಬಲ್‌ಪುರ್ ಜಿಲ್ಲೆಯ 7 ಬ್ಲಾಕುಗಳಲ್ಲಿ 1449 ಜನಭರಿತ ಗ್ರಾಮಗಳೂ, 60 ಜನರಹಿತ ಗ್ರಾಮಗಳೂ, 4 ಅರಣ್ಯವುಳ್ಳ ಗ್ರಾಮಗಳೂ ಇವೆ. *

**ಜಬೋರ್ರ್ಯಾಂಡಿ :** ಬೆವರು ಮತ್ತು ಲಾಲಾರಸಗಳ ಅಧಿಕ ಸ್ರಾವವನ್ನು ಉಂಟು ಮಾಡಲು ಬ್ರಜಿಲ್ ಪೆರು ಮುಂತಾದ ದಕ್ಷಿಣ ಅಮೆರಿಕ ಪ್ರದೇಶಗಳಲ್ಲಿನ ಜನ ಉಪಯೋಗಿಸುತ್ತಿದ್ದ ಒಂದು ಮೂಲಿಕೆ. 1837ರಲ್ಲಿ ಈ ಸಸ್ಯವನ್ನು ಯುರೋಪ್‌ಗೆ ತಂದು ಬೆಳೆಸಲಾಯಿತು. 1875ರಲ್ಲಿ ಜಬೋರ್ರ್ಯಾಂಡಿ ಎಂಬ ಹೆಸರಿನಲ್ಲಿ ಇದರ ಉತ್ಪನ್ನವಾದ ಒಂದು ಔಷಧ ವಸ್ತು ಯುರೋಪ್, ಇಂಗ್ಲೆಂಡ್‌ಗಳಲ್ಲಿ ಬಳಕೆಗೆ ಬಂದಿತು. ಆಗ ಈ ಗಿಡದ ಶಾಸ್ತ್ರೋಕ್ತವಾದ ಹೆಸರು ಗೊತ್ತಿರಲಿಲ್ಲ. ಅನಂತರ ಅದು ರೂಟೇಸೀ ಕುಟುಂಬಕ್ಕೆ ಸೇರಿದ ಪೈಲೋಕಾರ್ಪಸ್ ಜಾತಿಯ ಸಸ್ಯ–ಪೈ.ಜಬೊರ್ರ್ಯಾಂಡಿ (ಪೈ.ಪೆನ್ನೇಟಿಫೋಲಿಯಸ್) ಎಂದು ತಿಳಿಯಿತು. ಇದು ನಿಂಬೆ, ಹರಳು ಗಿಡಗಳಂತೆ ಸುಮಾರು 3 ಮೀಟರ್ ಎತ್ತರ ಬೆಳೆಯುವ ಗಟ್ಟಿಯಾದ ಕುರುಚಲುಗಿಡ. ಇದರ ಒಣಗಿದ ಎಲೆಗಳ ಚೂರ್ಣವೇ ಜಬೊರ್ರ್ಯಾಂಡಿ. ಹಸಿಎಲೆಗಳನ್ನು ಹಿಸುಕಿದರೆ ಒಂದು ವಿಶಿಷ್ಟ ಕಂಪು ಸೂಸುತ್ತದೆ. ಅಗಿದರೆ ಕಹಿ ಹಾಗೂ ತಿಕ್ತ ಅನುಭವ ಉಂಟಾಗಿ ಶೀಘ್ರದಲ್ಲಿ ಅತಿಯಾಗಿ ಜೊಲ್ಲು ಸ್ರವಿಸುವುದು.

ಜಬೊರ್ರ್ಯಾಂಡಿಯಲ್ಲಿ ಪೈಲೋಕಾರ್ಪಿನ್ ಎಂಬ ದ್ರವರೂಪ ಕ್ಷಾರವಸ್ತು (ಆಲ್ಕಲಾಯ್ಡ್) ಸುಮಾರು ಶೇ.0.5ರಷ್ಟು ಉಂಟು. ಇದೇ ಜಬೊರ್ರ್ಯಾಂಡಿಯ ಕಾರ್ಯನಿರ್ವಾಹಕ ಘಟಕ. ಹೆಚ್ಚು ಪ್ರಮಾಣದಲ್ಲಿ ನೀರಿನೊಡನೆ ಮಿಶ್ರವಾಗಲಾರದಾದರೂ ಮದ್ಯಸಾರ, ಈಥರ್, ಕ್ಲೋರೊಫಾರಮ್ ಮುಂತಾದ ದ್ರವಗಳೊಡನೆ ಪೈಲೋಕಾರ್ಪಿನ್ ಧಾರಳವಾಗಿ ಮಿಶ್ರವಾಗುತ್ತದೆ. ಆಮ್ಲಗಳೊಡನೆ ಅನುಗುಣವಾದ ಲವಣಗಳು ಫಲಿಸುವುವು. ಜಬೊರ್ರ್ಯಾಂಡಿಯಲ್ಲಿ ಪೈಲೋಕಾರ್ಪಿನ್ ಅಲ್ಲದೆ ಇನ್ನೂ ಎರಡು ಮೂರು ಕ್ಷಾರವಸ್ತುಗಳು ಅಲ್ಪಪ್ರಮಾಣದಲ್ಲಿ ಇರುತ್ತವೆ. ಅವುಗಳಲ್ಲಿ ಜಬರೈನ್ ಎಂಬುದು ಮುಖ್ಯ. ದೇಹದಲ್ಲಿ ಇದರ ವರ್ತನೆ ಅಟ್ರೋಪಿನ್ನಿನ ವರ್ತನೆಯಂತೆಯೇ. ಅರ್ಥಾತ್ ಪೈಲೋಕಾರ್ಪಿನ್ ಉಂಟುಮಾಡುವ ಪರಿಣಾಮಗಳಿಗೆ ವಿರುದ್ಧ ಪರಿಣಾಮಗಳನ್ನು ಜಬರೈನ್ ಉಂಟು ಮಾಡುತ್ತದೆ. ಜಬರೈನ್ ಗಣನೀಯ ಪ್ರಮಾಣದಲ್ಲಿದ್ದರೆ ಪೈಲೋಕಾರ್ಪಿನ್ ಜಬರೈನುಗಳ ಪರಸ್ಪರ ವಿರುದ್ಧ ಪರಿಣಾಮಗಳ ಉಳಿಕೆಯಾಗಿ ಜಬೊರ್ರ್ಯಾಂಡಿಯ ಕಾರ್ಯ ದೇಹದಲ್ಲಿ ಏನಾಗಿರುತ್ತದೆ ಎಂಬುದು ಅನಿಶ್ಚಿತ. ಈ ಕಾರಣದಿಂದಲೂ ಪೈಲೋಕಾರ್ಪಿನ್ನನ್ನು ಸುಲಭವಾಗಿ ಪಡೆಯಬಹುದಾದ್ದರಿಂದಲೂ ಜಬೊರ್ರ್ಯಾಂಡಿಯ ಬದಲು ಪೈಲೋಕಾರ್ಪಿನ್ನಿನ ಉಪಯೋಗ ಬಳಕೆಗೆ ಬಂದಿದೆ. ಬೆವರಿ ಜ್ವರ ಇಳಿಯುವಂತೆ ಮಾಡಲೂ ಕಣ್ಣಿನ ಪಾಪೆಯನ್ನು ಕಿರಿದುಮಾಡಲೂ ಪೈಲೋಕಾರ್ಪಿನ್ ನೈಟ್ರೇಟನ್ನು ಉಪಯೋಗಿಸುತ್ತಾರೆ. ತಲೆಕೂದಲು ಉದುರಿ ಬೋಳಾಗಿದ್ದಾಗ ಜಬೊರ್ರ್ಯಾಂಡಿ ಟಿಂಕ್ಚರನ್ನು ಲೇಪಿಸಿ ನೀವುತ್ತ

ಬಂದರೆ ಕೂದಲು ಪುನಃ ಹುಟ್ಟುವ ಸಂಭವ ತಕ್ಕಮಟ್ಟಿಗೆ ಇದೆ. ಈಚೆಗೆ ಈ ಸ್ಥಿತಿಗೂ ಪೈಲೋಕಾರ್ಪಿನ್ ನೈಟ್ರೇಟ್ ದ್ರಾವಣವನ್ನು ಉಪಯೋಗಿಸುತ್ತಾರೆ (**ನೋಡಿ– ಪೈಲೋಕಾರ್ಪಿನ್**). (ಎಸ್.ಆರ್.ಆರ್.)

**ಜಮಖಂಡಿ :** ಕರ್ನಾಟಕ ರಾಜ್ಯದ ಬಾಗಲಕೋಟೆ ಜಿಲ್ಲೆಯ ಒಂದು ಪಟ್ಟಣ. ಜಮಖಂಡಿ ಉಪವಿಭಾಗದಲ್ಲಿ ಮುಧೋಳ, ಜಮಖಂಡಿ ಮತ್ತು ಬೀಳಗಿ ತಾಲ್ಲೂಕುಗಳಿವೆ. ಬೆಳಗಾವಿ ಜಿಲ್ಲೆಯ ರಾಯಬಾಗ್ ಮತ್ತು ಅಥಣಿ ತಾಲ್ಲೂಕುಗಳೂ ವಿಜಯಪುರ ಜಿಲ್ಲೆಯ ವಿಜಯಪುರ, ಬೀಳಗಿ ಮತ್ತು ಮುಧೋಳ ತಾಲ್ಲೂಕುಗಳೂ ಜಮಖಂಡಿ ತಾಲ್ಲೂಕನ್ನು ಬಳಸಿವೆ. ಜಮಖಂಡಿ ತಾಲ್ಲೂಕಿನ ವಿಸ್ತೀರ್ಣ 126 ಚ.ಕಿಮೀ. ಜನಸಂಖ್ಯೆ 4,08,436 (2001). ತಾಲ್ಲೂಕಿನಲ್ಲಿರುವ ರೆವಿನ್ಯೂ ವಲಯಗಳು ಜಮಖಂಡಿ, ಸಾವಳಗಿ ಮತ್ತು ತೇರದಾಳ. ತಾಲ್ಲೂಕಿನಲ್ಲಿ ಒಟ್ಟು 65 ಹಳ್ಳಿಗಳಿವೆ.

ತಾಲ್ಲೂಕಿನ ಎರೆಮಣ್ಣಿನ ಭೂಮಿಗಳಲ್ಲಿ ಗೋದಿ ಮತ್ತು ಹತ್ತಿ ಬೆಳೆಯುತ್ತಾರೆ. ಕೃಷ್ಣಾ ನದಿಯ ಎರಡೂ ದಂಡೆಯ ಮೈದಾನಗಳಲ್ಲಿ ಈ ಬೆಳೆಗಳನ್ನು ವಿಪುಲವಾಗಿ ಬೆಳೆಯುತ್ತಾರೆ. ಸುಣ್ಣದ ಕಲ್ಲಿನ ಗಣಿಗಳೂ ತಾಲ್ಲೂಕಿನಲ್ಲಿ ಹೇರಳವಾಗಿ ಉಂಟು. ಮನೆಮನೆಯಲ್ಲಿ ಕೈಮಗ್ಗದ ಬಟ್ಟೆಗಳು ತಯಾರಾಗುತ್ತವೆ. ಇಲ್ಲಿಯ ಕೈಮಗ್ಗದ ಬಟ್ಟೆಗಳಿಗೆ ಸಾಕಷ್ಟು ಬೇಡಿಕೆ ಉಂಟು.

1948ಕ್ಕೆ ಮೊದಲು ಜಮಖಂಡಿ ಒಂದು ಚಿಕ್ಕ ಸಂಸ್ಥಾನವಾಗಿತ್ತು. ಪಟವರ್ಧನ ಸಂಸ್ಥಾನವೆಂದು ಇದನ್ನು ಕರೆಯಲಾಗುತ್ತಿತ್ತು. ಹರಭಟ್ಟನೆಂಬವನು ಈ ಸಂಸ್ಥಾನದ ಮೂಲಪುರುಷ. ಇವನು ಬಾಳಾಜಿ ವಿಶ್ವಾಥನ ಜೊತೆಗೆ ಇಲ್ಲಿಗೆ ಬಂದು ಈ ಸಂಸ್ಥಾನವನ್ನು ಸ್ಥಾಪಿಸಿದ. 1821ರಲ್ಲಿ ಬ್ರಿಟಿಷರೊಡನೆ ಆದ ಸಂಧಿಗೆ ಅನುಗುಣವಾಗಿ ಈ ಸಂಸ್ಥಾನಿಕರಲ್ಲಿ ಒಬ್ಬನಾಗಿದ್ದ ಪರಶುರಾಮ ಭಾವು ವಿದ್ವಾಂಸ. ಇವನ ಕಾಲದಲ್ಲಿ ಜಮಖಂಡಿ ಸಂಸ್ಥಾನ ಅತ್ಯುನ್ನತ ಶಿಖರ ಮುಟ್ಟಿತ್ತು. 1948ರಲ್ಲಿ ಈ ಸಂಸ್ಥಾನ ಮುಂಬಯಿ ರಾಜ್ಯದಲ್ಲಿ ವಿಲೀನವಾಯಿತು.

ಜಮಖಂಡಿ ಉಪವಿಭಾಗ ಮತ್ತು ತಾಲ್ಲೂಕಿನ ಆಡಳಿತಕೇಂದ್ರ ಜಮಖಂಡಿ. ಕುಡಚಿ ರೈಲ್ವೆ ನಿಲ್ದಾಣದಿಂದ 55 ಕಿಮೀ ದೂರದಲ್ಲಿ, ವಿಜಾಪುರದ ನೈಋತ್ಯಕ್ಕೆ 56 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 57,887 (2001). ಪಟ್ಟಣದ ಆಡಳಿತಕ್ಕೆ ಒಂದು ಪುರಸಭೆ ಉಂಟು. ಬಳಿಯ ಬೆಟ್ಟದ ಮೇಲೆ ನಿರ್ಮಿಸಲಾದ ಜಲಾಶಯದಿಂದ ಪಟ್ಟಣಕ್ಕೆ ನೀರು ಸರಬರಾಜು ಆಗುತ್ತಿದೆ. ಇಲ್ಲಿ ವರ್ಷಕ್ಕೊಮ್ಮೆ ಏಪ್ರಿಲ್‌ನಲ್ಲಿ ದನಗಳ ಜಾತ್ರೆ ಸೇರುತ್ತದೆ. ಆ ಸಮಯದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚು ದನಗಳು ಸೇರುತ್ತವೆ. ಜಮಖಂಡಿಯಲ್ಲಿ ಅನೇಕ ದೇವಾಲಯಗಳುಂಟು. ಮುಖ್ಯವಾದವು ನಾಲ್ಕು : ಉಮಾರಾಮೇಶ್ವರ, ಜಂಬುಕೇಶ್ವರ, ಕಲ್ಲೇಶ್ವರ ಮತ್ತು ಬಸವಣ್ಣ. ಪಟ್ಟಣದ ಹೊರಗೂ ಅನೇಕ ಪ್ರಖ್ಯಾತ ದೇವಾಲಯಗಳುಂಟು. ಜಮಖಂಡಿಯಲ್ಲಿ ಮುಸ್ಲಿಮರ ಒಂದು ಪ್ರಾಚೀನ ದರ್ಗಾ ಇದೆ. ಜಮಖಂಡಿಯಿಂದ ಸುಮಾರು 5 ಕಿಮೀ ದೂರದಲ್ಲಿ ಇರುವ ಒಂದು ಸುಂದರ ದೇವಾಲಯ ಎಲ್ಲಮ್ಮನದು. ವೆಂಕಟರಮಣನ ಗುಡಿಯೊಂದು ಜಮಖಂಡಿಯಿಂದ ಸುಮಾರು 9.5 ಕಿಮೀ ಇದೆ. ಪಟ್ಟಣದಲ್ಲಿ ಅನೇಕ ಸುಂದರ ಕಟ್ಟಡಗಳುಂಟು. ದರ್ಬಾರ್ ಭವನ ಈಗ ಕಾಲೇಜೊಂದರ ಸಭಾಭವನ. ರಾಮನಿವಾಸ ಎಂಬ ಸುಂದರ ವಿಶ್ರಾಂತಿ ಮಂದಿರ ಒಂದು ಗುಡ್ಡದ ಮೇಲುಂಟು.

ಜಮಖಂಡಿ ಒಂದು ವ್ಯಾಪಾರ ಕೇಂದ್ರ. ಸಹಕಾರ ಬ್ಯಾಂಕೂ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘವೂ ನಿಯಂತ್ರಿತ ಮಾರುಕಟ್ಟೆಯೂ ಇವೆ. ಇಲ್ಲೊಂದು ಕೈಗಾರಿಕಾ ಕ್ಷೇತ್ರವುಂಟು (ಇಂಡಸ್ಟ್ರಿಯಲ್ ಎಸ್ಟೇಟ್). ಶಾಲೆ ಕಾಲೇಜುಗಳೂ ಇವೆ. (ಪಿ.ಪಿ.)

**ಜಮಖಾನೆ :** ಸಾಮಾನ್ಯವಾಗಿ ವಿವಿಧ ವರ್ಣಗಳ ಹತ್ತಿ ನೂಲುಗಳಿಂದ ತಯಾರಿಸಿದ, ನೆಲದ ಮೇಲೆ ಹಾಸಲು ಚಾಪೆಯಂತೆ ಬಳಸುವ, ದಪ್ಪನೆಯ ಹಾಸು. ರೇಷ್ಮೆ ದಾರದ, ಸಸ್ಯಜನ್ಯ ನಾರುಗಳ ಮತ್ತು (ಈಚೆಗೆ) ಕೃತಕ ಎಳೆಗಳ ಬಳಕೆಯೂ ಉಂಟು. ಈ ಎಳೆಗಳ ಬದಲಾಗಿ ಉಣ್ಣೆ ನೂಲನ್ನು ಬಳಸಿ ತಯಾರಿಸಿದ ಹಾಸಿಗೆಗೆ ರತ್ನಗಂಬಳಿ (**ನೋಡಿ**) ಎಂಬ ಹೆಸರಿದೆ. ಜಮಖಾನೆಯಲ್ಲಿ ಕಸೂತಿಯ ಕುಸುರಿ ಕೆಲಸಗಳನ್ನು ಮಾಡಿ ಅದರ ಸೌಂದರ್ಯವನ್ನು ವರ್ಧಿಸುವುದು ಸಾಧ್ಯ.

ಜಮಖಾನೆ ತಯಾರಿಸಲು ಭಾರತದಲ್ಲಿ ಅನೇಕ ಕಾರ್ಖಾನೆಗಳಿವೆ. ಇವು ಮುಖ್ಯವಾಗಿ, ಬೆಂಗಳೂರು, ವಿಜಯಪುರ, ಗುಲ್ಬರ್ಗ, ಸೇಲಮ್, ಭವಾನಿ, ಲಖನೌ, ಪಂಜಾಬ್, ಸೌರಾಷ್ಟ್ರ, ಕಾಶ್ಮೀರ ಮುಂತಾದ ಎಡೆಗಳಲ್ಲಿ ಹರಡಿಹೋಗಿವೆ.

ಜಮಖಾನೆಗಳಲ್ಲಿ ಪ್ರಸಿದ್ಧವಾದ ವಿಧಗಳಿವು : ರೇಷ್ಮೆ ಡ್ರಗ್ಗೆಟ್ಸ್, ರತ್ನ ಜಮಖಾನೆ (ಪೈಲ್ ಕಾರ್ಪೆಟ್), ಚಿತ್ರ ಜಮಖಾನೆ (ಡಿಸೈನ್ ಕಾರ್ಪೆಟ್) ಮತ್ತು ಸಾದಾ ಜಮಖಾನೆ. ಕೊನೆಯ ಮೂರು ವಿಧಗಳನ್ನು ರೇಷ್ಮೆ ಇಲ್ಲವೇ ನೂಲಿನ ಇಲ್ಲವೇ ಇವೆರಡರ ಮಿಶ್ರಿತ ದಾರಗಳಿಂದ ನೇಯ್ಗೆ ಮಾಡಬಹುದು. ಜಮಖಾನೆಗೆ ಬೇಕಾದ ಎಳೆಗಳಿಗೆ ಬೇಕಾದ ಬಣ್ಣ ಹಾಕಬೇಕು. ಉಂಡೆಯನ್ನು ಬಿಲ್ಲಿನಿಂದ ಹೊಡೆದು, ಹಿಂಜಿಕೊಂಡು ಕೈ ಚರಕದಿಂದ ಬೇಕಾದಷ್ಟು ದಪ್ಪಕ್ಕೆ ನುಲಿದು, ದಾರ ಮಾಡಿ, ಕದರಿಗೆ (ಸ್ಪಿಂಡಲ್) ಸುತ್ತಿಕೊಳ್ಳಬೇಕು. ಈಗ ದೊರೆಯುವ ರೂಪಕ್ಕೆ ಕಂಡಿಗೆ ಎಂದು ಹೆಸರು. ಕಂಡಿಗೆಯನ್ನು ಎರಡು ಎಳೆಯಾಗಿ ಎಳೆದು ಲಟ್ಟಿ ಹಾಕಿಕೊಳ್ಳಬೇಕು. ಇದಾದಮೇಲೆಯೇ ಬಣ್ಣ ಹಾಕಬೇಕು. ಕೆಲವು ದಾರಗಳಿಗೆ ಬಣ್ಣ ಹಾಕದೆ ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳಬಹುದು. ಇವುಗಳಿಗೆ ಉಣ್ಣೆದಾರ ಎಂದು ಹೆಸರು. ಜಮಖಾನೆಗಳನ್ನು ನಿಲುಮಗ್ಗ (ವರ್ಟಿಕಲ್ ಲೂಮ್) ಅಥವಾ ನೆಲಮಗ್ಗದಲ್ಲಿ (ಹಾರಿಶಾಂಟಲ್ ಲೂಮ್) ನೇಯ್ಗೆ ಮಾಡುತ್ತಾರೆ. ಆದರೆ ಡ್ರಗ್ಗೆಟ್ ಮತ್ತು ರತ್ನ ಜಮಖಾನೆಗಳನ್ನು ನಿಲುಮಗ್ಗದಲ್ಲಿಯೇ ತಯಾರಿಸುವುದು ಸಾಧ್ಯ.



ಪ್ಯಾಸಿರಿಕ್ ಕಾರ್ಪೆಟ್. ಅಮೆರಿಕನ್ ಮೂಲದ ಪ್ರ.ಶ.ಪೂ. 5ನೇ ಶತಮಾನದ ಜಮಖಾನೆ (ಅತ್ಯಂತ ಪ್ರಾಚೀನವಾದುದು)

ಜಮಖಾನೆಯ ತಯಾರಿಕೆಗೆ, ಮೊಟ್ಟಮೊದಲು ನಿಲುಮಗ್ಗವನ್ನು ಸ್ಥಾಪಿಸಬೇಕು. ಈ ಮಗ್ಗದಲ್ಲಿ ಕೆಳಗೆ ಕೊಡುವ ದೊಡ್ಡ ಚದರ ಮರಕ್ಕೆ ಕೂರು (ರೋಲರ್) ಎಂದು ಹೆಸರು. ಇದಕ್ಕೆ ಒಂದು ಉಕ್ಕಿನ ಕಂಬಿಯನ್ನು (ಇಂಡಿಕಂಬಿ) ಕಟ್ಟಿರುತ್ತದೆ. ಮಗ್ಗದ ಮೇಲ್ಭಾಗದಲ್ಲಿ ದಪ್ಪ ಮರದ ಒಂದು ದಿಂಡನ್ನೂ (ಟೊಳ್ಳು ಬೊಂಬು) ಅದರ ಕೆಳಗೆ ಗಟ್ಟಿಯಾದ ಒಂದು ಬೊಂಬನ್ನೂ (ಕೆಳಬೊಂಬು) ಬಿಗಿಯಾಗಿ ಕಟ್ಟಿರುತ್ತದೆ. 10 ಸಂಖ್ಯೆಯ ದಾರವನ್ನು 8 ಎಳೆಯಾಗಿ ಎಳೆದುಕೊಂಡು ರಾಟೆಯಿಂದ ಹುರಿ ಮಾಡಬೇಕು. ಈ ದಾರಗಳನ್ನು ಮಗ್ಗಕ್ಕೆ ಹಾಕುವ ಕ್ರಿಯೆಗೆ ಹಾಸು ಹಾಕುವುದು ಎಂದು ಹೆಸರು. ದಾರವನ್ನು ಮೇಲಿನ ಟೊಳ್ಳು ಬೊಂಬಿಗೆ ಹಾಕಿ ಕೆಳಬೊಂಬಿಗೆ ಮುಂದಿನಿಂದ ಒಂದು ಎಳೆಯೂ ಮತ್ತೆ ಹಿಂದಿನಿಂದ ಒಂದು ಎಳೆಯೂ ಬರುವ ಹಾಗೆ (ಅಂದರೆ ಈ ಹಾಸು ಎರಡು ಹೋಳಾಗಬೇಕು) ಹಾಕಿ ಕೆಳಗೆ ಇಂಡಿ ಕಂಬಿಯ ಮೇಲಸಾಲಾಗಿ ನಿಲ್ಲಿಸಬೇಕು. ಒಂದು ಅಡಿಗೆ 72 ಎಳೆ ಎರಡು ಹೋಳಾಗಿ ಸಾದಾ ಮಗ್ಗದಲ್ಲಿ ಬರುತ್ತದೆ. ಕೆಲವು ಜಮಖಾನೆಗಳಿಗೆ 1 ಅಡಿಗೆ 72ಕ್ಕಿಂತ ಹೆಚ್ಚಾಗಿ (86ರ ವರೆಗೆ) ಎಳೆಗಳು ಬರುವುದುಂಟು. ಈಗ ಮುಂದಿನಿಂದ ಬಂದ ಮೂರು ಎಳೆಗಳನ್ನೂ ಹಿಂದಿನಿಂದ ಬಂದ ಮೂರು ಎಳೆಗಳನ್ನೂ ಕೆಳ ಬೊಂಬಿಗೆ ಗಟ್ಟಿಯಾಗಿ ಕಟ್ಟಬೇಕು. ಈ ಕ್ರಿಯೆಗೆ ಹಲ್ಲುಕಟ್ಟುವುದು ಎಂದು ಹೆಸರು. ಎರಡು ಹೋಳಾಗಿರುವ ಈ ಎಳೆಗಳ ಮಧ್ಯದಲ್ಲಿ ಒಂದು ಗಳುವನ್ನು ಸೇರಿಸಿ (ಇದಕ್ಕೆ ಜೋಗು ಕಂಬಿ ಎಂದು ಹೆಸರು, ರೀಡ್ ಚೇಂಜರ್) ಮೇಲಕ್ಕೆ ಎತ್ತಿ ಕಟ್ಟಬೇಕು. ಎಳೆಗಳು ಬೇರೆ ಬೇರೆಯಾಗಿರುವಂತೆ ಏರ್ಪಡಿಸಲು ಜೋಗು ಕಂಬಿ ನೆರವಾಗುತ್ತದೆ. ಈಗ ಈ ಎಳೆಗಳಿಗೆ ಹುರಿ ಮಾಡಿದ ದಾರಗಳಿಂದ ಬೆದೆ ಕಟ್ಟು (ಗಂಟು ಹಾಕುವಿಕೆ) ಕಟ್ಟಬೇಕು. ಮುಂದಿನಿಂದ ಬಂದ ಎಳೆಗಳ ಬೆದೆಯಲ್ಲಿ (ಗಂಟಿನಲ್ಲಿ) ಒಂದು ಸಣ್ಣ ಗಳು ಅಥವಾ ಕೊಳಾಯಿ (ಜಿ.ಐ. ಪೈಪ್) ಹಾಗೆಯೇ ಹಿಂದಿನಿಂದ ಬಂದ ಎಳೆಗಳ ಬೆದೆಯಲ್ಲಿಯೂ ಒಂದು ಗಳುವನ್ನು ಸೇರಿಸಿ, ನೇಯ್ಗೆಯಿಂದ ಒಂದು ಗಜ ಮೇಲೆ ಬರುವ ಹಾಗೆ ಕಟ್ಟಬೇಕು. ಇವು ಒಂದಕ್ಕೊಂದು ಒಂದು ಅಡಿ ದೂರದಲ್ಲಿರಬೇಕು. ಈ ಗಳುಗಳು ಹಣಿ (ರೀಡ್) ಬದಲಾಯಿಸುವ ಸಲಕರಣೆಗಳು.

ನೇಯ್ಗೆ ಸರಿಯಾಗಿ ಬರಬೇಕಾದರೆ ಮಗ್ಗ ಬಿಗಿಯಾಗಿರಬೇಕಾದ್ದು ಅವಶ್ಯ. ಆದ್ದರಿಂದ ಕೂರಿನಲ್ಲಿ ಒಂದು ಗಡಪಾರೆ (ಕ್ರೋಬಾರ್) ಕೊಟ್ಟು ಮಗ್ಗವನ್ನು ಬಿಗಿ ಮಾಡಬೇಕು. ತರುವಾಯ ಬೆದೆ ಕಂಬಿಗಳಿಗೆ ಎರಡು ಅಥವಾ ಮೂರು ಕಡೆ (ಮಗ್ಗದ ಅಗಲ ಜಾಸ್ತಿ ಇದ್ದಲ್ಲಿ ಮತ್ತೆರಡು ಮೂರು ಕಡೆ) ಪಾಸಿ ಕೋಲು (ಹಣಿ ಬದಲಾಯಿಸುವ ಸಲಕರಣೆ–ಸನ್ನೆ ಹೊಂದಾಣಿಕೆ) ಕೊಟ್ಟು ಬಿಗಿಯಾಗಿ ಕಟ್ಟಬೇಕು. ಈಗ ಮಗ್ಗ ನೇಯ್ಗೆಗೆ ತಯಾರಾದಂತಾಯಿತು.

ಫ್ರಾನ್ಸ್ ಅರಮನೆಯಲ್ಲಿನ 18ನೇ ಶತಮಾನದ ಒಂದು ಜಮಖಾನೆ

ಚಿತ್ರ ಅಥವಾ ರತ್ನ ಜಮಖಾನೆಗಳಿಗೆ ಬೇಕಾಗುವ ಚಿತ್ರವನ್ನು (ಡಿಸೈನ್) ಒಂದು ಗ್ರಾಫ್ ಕಾಗದದಲ್ಲಿ ಬರೆದುಕೊಳ್ಳಬೇಕು. ಗ್ರಾಫ್‌ನ ಒಂದೊಂದು ಗೆರೆಯೂ ಒಂದು ಎಳೆ ಅಥವಾ ನಮಗೆ ಬೇಕಾದಷ್ಟು ಎಳೆಗಳಿಗೆ ಸಮಾನವೆಂದು ಲೆಕ್ಕ ಹಾಕಿಕೊಂಡು ಓದಬೇಕು. ಚಿತ್ರಗಳ ವೈಶಿಷ್ಟ್ಯವನ್ನು ಬಣ್ಣಗಳ ಬದಲಾವಣೆಯಲ್ಲಿ ತೋರ್ಪಡಿಸಬೇಕು. ಜಮಖಾನೆ ಯಾವ ತರಹ ಆದರೂ ಮೊದಲು ಜಮಖಾನೆಯ ಪ್ರಾರಂಭದಲ್ಲಿ ಬಿಳಿ ನೂಲನ್ನು ಹಣಿಯಲ್ಲಿ ಸೇರಿಸಿ ನೇಯ್ಗೆ ಮಾಡಬೇಕು. ಈ ನೂಲಿಗೆ ಕಕ್ಕು ಎಂದು ಹೆಸರು. ಕಕ್ಕುವನ್ನು ಬಹು ಬಿಗಿಯಾಗಿ ಹಾಕಬೇಕು. ಇದು ಸುಮಾರು ಅರ್ಧ ಅಂಗುಲ ಇರಬೇಕು. ಕಕ್ಕು ಹಾಕಿದ ಬಳಿಕ ನಮಗೆ ಬೇಕಾದ ಬಣ್ಣದ ಉಣ್ಣೆ ದಾರಗಳಿಂದ ನೇಯ್ಗೆ ಮಾಡಬೇಕು. ಉಣ್ಣೆ ದಾರಗಳು ಸರಿಯಾಗಿ ಕುಳಿತುಕೊಳ್ಳಲು ಮಗ್ಗವನ್ನು ಆಗಾಗ್ಗೆ (ಅಂದರೆ ಎರಡು ಸಾಲಿಗೆ ಒಂದು ಸಲ) ಕಬ್ಬಿಣದ ಹಸ್ತದಿಂದ (ಐರನ್ ಕೂಂಬ್) ಹೊಡೆಯಬೇಕು. ಜಮಖಾನದ ಕೊನೆಯಲ್ಲಿಯೂ ಕಕ್ಕು ಹಾಕಬೇಕು. ಸಾದಾ ಮತ್ತು ಚಿತ್ರ ಜಮಖಾನಗಳೆರಡರ ನೇಯ್ಗೆಯೂ ಒಂದೇ ರೀತಿ. ಚಿತ್ರದ ಜಮಖಾನೆಯಲ್ಲಿ ಬೇರೆ ಬೇರೆ ಬಣ್ಣದ ಉಣ್ಣೆಯನ್ನು ಅಥವಾ ಬತ್ತಿಯನ್ನು ಸೇರಿಸಲಾಗುವುದು. ಕೊನೆಯಿಂದ ಬರುವ ಬತ್ತಿಗೆ ಪ್ರಾಧಾನ್ಯ ಕೊಟ್ಟು ಅದರ ಬಿಗಿತದಲ್ಲಿ ಒಳಗಿನ (ಅಂದರೆ ಮೈದಾನದ) ಬತ್ತಿಯನ್ನು ನೇಯ್ಗೆ ಮಾಡುವುದಕ್ಕೆ ಟಿಕೇಟ್ ಕೊಡುವುದು ಎಂದು ಹೆಸರು. ರತ್ನ ಜಮಖಾನೆಯ ತಯಾರಿಕೆಯಲ್ಲಿ, ಅದಕ್ಕೆ ಬೇಕಾದ ಬಣ್ಣದ ನೂಲುಗಳು, ನೇಯುವವರಿಗೆ ಅವರ ಮೇಲಿನಿಂದ ಉಂಡೆಯಿಂದ, ಸಿಕ್ಕು ಸೇರದ ಹಾಗೆ ನೇತಾಡಿಸಬೇಕು. ಈ ಜಮಖಾನೆಯ ಚಿತ್ರದ ಪ್ರಕಾರ ದಾರಗಳನ್ನು ಒಳಗಿನ ಎಳೆಗೂ ಹೊರಗಿನ ಎಳೆಗೂ ಸೇರಿಸಿ ನಿಲ್ಲಿಸಿ ಕೊಯ್ಯಬೇಕು. ಹಾಗೆ ಒಂದು ಪಾಟಿ ಹಾಕಿದ ಬಳಿಕ ಹಣಿಯಲ್ಲಿ ನೂಲನ್ನು ಸೇರಿಸಿ ಜಮಖಾನೆಯ ಅರ್ಧಕ್ಕೂ ಮತ್ತು ಅಣಿ ಬದಲಾಯಿಸಿ ಮಿಕ್ಕ ಅರ್ಧಕ್ಕೂ ಹಾಕಿ ಹಸ್ತದಿಂದ ಗಟ್ಟಿಯಾಗಿ ಹೊಡೆಯಬೇಕು. ಆಮೇಲೆ ಕತ್ತರಿಯಿಂದ ಮಟ್ಟವಾಗಿ ಉಣ್ಣೆದಾರವನ್ನು ಕತ್ತರಿಸಬೇಕು. ಈ ಕೆಲಸಕ್ಕೆ ಬೇಕಾದ ಕತ್ತಿ ಬಹು ಚೂಪಾಗಿಯೂ ಮತ್ತೆ ಮೂಲೆಯಲ್ಲಿ ಭಾರವಾಗಿಯೂ ಇರುತ್ತದೆ. ರತ್ನ ಜಮಖಾನೆಯ ಕೆಲಸದಲ್ಲಿ ಚಿತ್ರವನ್ನು ಓದುವುದು ಉಣ್ಣೆ ಸೇರಿಸುವುದು ಮತ್ತು ಮಟ್ಟವಾಗಿ ಕತ್ತರಿಸುವುದು ಬಹು ಮುಖ್ಯವಾದ ಕೆಲಸ. ಜಮಖಾನೆ ನೇಯ್ಗೆ ಮುಗಿದ ತರುವಾಯ ಕಕ್ಕುವಿನಿಂದ 4 ಅಥವಾ 5 ಅಂಗುಲ ತಾಣೆದಾರಗಳನ್ನು ಬಿಟ್ಟು ಕೊಯ್ಯಬೇಕು. ಬಳಿಕ ಆ ದಾರಗಳನ್ನು ಒಂದಕ್ಕೊಂದು ಗಂಟು ಹಾಕಿ ಜಮಖಾನೆಗೆ ಬಿಗಿತ ಕೊಡಬೇಕು. ಅಲ್ಲಿಗೆ ಜಮಖಾನೆಯ ಕೆಲಸ ಪೂರೈಸುತ್ತದೆ. (ಕೆ.ಎನ್.ಆರ್.)

**ಜಮದಗ್ನಿ :** ಭೃಗುವಂಶದ ಋಷಿ. ವೈವಸ್ವತ ಮನ್ವಂತರದ ಸಪ್ತರ್ಷಿಗಳಲ್ಲೊಬ್ಬ, ಗೋತ್ರಪ್ರವರ್ತಕ. ತಂದೆ ಋಚೀಕ. ತಾಯಿ ಕುಶಿಕವಂಶದ ಗಾಧಿರಾಜನ ಮಗಳಾದ ಸತ್ಯವತಿ. ಭೃಗುವಂಶದ ಇವನಿಗೂ ಕೌಶಿಕವಂಶದ ವಿಶ್ವಾಮಿತ್ರನಿಗೂ ಇದ್ದ ಸಂಬಂಧವನ್ನು ನಾವಿಲ್ಲಿ ಕಲ್ಪಿಸಿಕೊಳ್ಳಬಹುದು. ಪ್ರಸೇನಜಿತನ ಮಗಳಾದ ರೇಣುಕೆ ಈತನ ಹೆಂಡತಿ. ರುಮಣ್ವಂತ, ಸುಷೇಣ, ವಸು, ವಿಶ್ವಾವಸು ಮತ್ತು ಪರಶುರಾಮ–ಇವರು ಅನುಕ್ರಮವಾಗಿ ಐವರು ಮಕ್ಕಳು.

ಮಹಾಭಾರತದ (ವನಪರ್ವ) ಪ್ರಕಾರ, ಒಂದು ದಿನ ರೇಣುಕೆ ನದೀಸ್ನಾನಕ್ಕಾಗಿ ಹೋದಳು. ಅಲ್ಲಿ ಚಿತ್ರರಥನೆಂಬ ಗಂಧರ್ವ ಜಲಕ್ರೀಡೆಯಾಡುತ್ತಿದ್ದುದನ್ನು ನೋಡಿ ಮೋಹವಶಳಾದಳು. (ಚಿತ್ರರಥ ತನ್ನ ಪ್ರೇಯಸಿಯರೊಡನೆ ಜಲಕ್ರೀಡೆಯಾಡುತ್ತ ರಮಿಸುತ್ತಿದ್ದನೆಂದೂ ಪಾಠಾಂತರವಿದೆ). ಇದರಿಂದ ಆಕೆ ಹಿಂದಿರುಗುವುದು ತಡವಾಯಿತು. ಮೊದಲೇ ಕೋಪದ ಅಪರಾವತಾರದಂತಿದ್ದ ಜಮದಗ್ನಿ ಸಂಶಯಗೊಂಡು ಶಿರಚ್ಛೇದನ ಮಾಡಲು ತನ್ನ ಮೊದಲ ನಾಲ್ವರು ಮಕ್ಕಳಿಗೆ ಅಜ್ಞಾಪಿಸಿದ. ಅವರಾರೂ ಅದಕ್ಕೆ ಒಪ್ಪಲಿಲ್ಲ. ಕಡೆಯ ಮಗ ಪರಶುರಾಮ ಮರುಮಾತಾಡದೆ, ಹಿಂದು ಮುಂದು ನೋಡದೆ ತನ್ನ ಕೊಡಲಿಯಿಂದ ತಾಯಿಯ ತಲೆಯನ್ನು ಕತ್ತರಿಸಿಬಿಟ್ಟ. ಮಗನ ಸದ್ಯಃಪಿತೃವಾಕ್ಯಪರಿಪಾಲನಾ ಬುದ್ಧಿಯನ್ನು ಕಂಡು ಸಂತೃಪ್ತನಾದ ಜಮದಗ್ನಿ ವರವೊಂದನ್ನು ಕೇಳಿಕೊಳ್ಳಬೇಕೆಂದು ಹೇಳಲು, ಆತ ತನ್ನ ಪ್ರಿಯಮಾತೆಯನ್ನು ಮತ್ತೆ ಬದುಕಿಸಬೇಕೆಂದೂ ಇನ್ನು ಮುಂದೆ ಇಂಥ ಉಗ್ರಕೋಪ ಪ್ರದರ್ಶನವನ್ನು ಬಿಟ್ಟುಬಿಡಬೇಕೆಂದೂ ಬೇಡಿಕೊಂಡ. ರೇಣುಕಾ ಮಾತೆ ಬದುಕಿದಳು. (ಸಿ.ಜಿ.ಪಿ)

ಶಿಷ್ಟಪುರಾಣಗಳು ಜನಪದ ಪುರಾಣಗಳನ್ನೂ ಜನಪದ ಪುರಾಣಗಳು ಶಿಷ್ಟ ಪುರಾಣಗಳನ್ನೂ ಸ್ಪರ್ಶಿಸಿರುವುದಕ್ಕೆ ಹಾಗೂ ಘರ್ಷಿಸಿರುವುದಕ್ಕೆ ಜಮದಗ್ನಿಯನ್ನು ಕುರಿತ ಪ್ರಸಂಗಗಳೂ ಉತ್ತಮ ನಿದರ್ಶನಗಳಾಗಿವೆ. ಇದರಿಂದಾಗಿ ಜಮದಗ್ನಿಯ ಐತಿಹಾಸಿಕತೆಯನ್ನು ಖಚಿತವಾಗಿ ಹೇಳುವುದು ತೀರ ಕ್ಲಿಷ್ಟವಾಗಿದೆ. ಹೆಸರಿನ ಸಾಮ್ಯ ಹಾಗೂ ಘಟನೆಗಳ ಏಕರೂಪತೆ ಇದ್ದಾಗಲಂತೂ ಒಬ್ಬನೇ ವ್ಯಕ್ತಿಯ ಹೆಸರಿನ ಸುತ್ತ ಹಲವಾರು ವ್ಯಕ್ತಿಗಳ ಜೀವನ ಪ್ರಸಂಗಗಳು ಸಮಾವೇಶಗೊಳ್ಳುವ ಸಾಧ್ಯತೆಗಳಿರುತ್ತವಾಗಿ ಅಲ್ಲಿನ ವಿಚಿತ್ರಕಥೆಗಳ ಪದರುಗಳನ್ನು ಶೋಧಿಸಿ ನೋಡಬೇಕಾಗುತ್ತದೆ.

ಓರಂಗಲ್ಲು ಪ್ರತಾಪರುದ್ರನ ಕಾಲವಾದ 13ನೆಯ ಶತಮಾನದಲ್ಲಿ ಜೀವಿಸಿದ್ದಿರಬಹುದಾದ ಸವದತ್ತಿ ಎಲ್ಲಮ್ಮನ ಪತಿಯ ಹೆಸರು ಜಮದಗ್ನಿ ಎಂದಿರುವುದರಿಂದ ಎಲ್ಲಮ್ಮನನ್ನೇ ರೇಣುಕೆಯೆಂದು ಹೇಳಲಾಗಿದೆ. ಇವರಿಬ್ಬರ ಮಗನೂ ಪರಶುರಾಮನೇ ಆಗಿರುವುದರಿಂದ ಶಿಷ್ಟಪುರಾಣಗಳ ಜಮದಗ್ನಿ ರೇಣುಕೆಯರ ಜೀವನದ ಘಟನಾವಳಿಗಳು ಜನಪದ ಪುರಾಣಗಳಲ್ಲಿ ಹೆಣೆದುಕೊಂಡು ಅತ್ಯಂತ ತೊಡಕನ್ನುಂಟುಮಾಡಿವೆ.

ಜನಪದ ಪುರಾಣಗಳ ಪ್ರಕಾರ ಜಮದಗ್ನಿ ಗೌತಮಋಷಿಯ ಮಾನಸಪುತ್ರ, ಗೌತಮ ಅಹಲ್ಯೆಯನ್ನು ಪರಿಗ್ರಹಿಸುವ ಪೂರ್ವದಲ್ಲಿ ತಪಸ್ಸುಮಾಡುತ್ತಿದ್ದು ನಿಷ್ಫಲವಾದ ತಪಸ್ಸಾದರೂ ಏತಕ್ಕಾಗೆಂದು ಯೋಚಿಸುತ್ತಿರುವಾಗ ಬೆವತುಹೋಗುತ್ತಾನೆ. ಹಣೆ ಬೆವರನ್ನು ತೆಗೆದು ಭೂಮಿಗೊಗೆದಾಗ ಆ ಜಲದಿಂದ ಉರಿಯುವ ಪುತ್ರನೊಬ್ಬ ಉದ್ಭವಿಸುತ್ತಾನೆ. ಜಲದಿಂದ ಅಗ್ನಿಯಂತೆ ಉರಿಯುತ್ತ ಮೇಲೆದ್ದ ಆ ಕುಮಾರನೇ ಜಲದಗ್ನಿ. ಜಲದಗ್ನಿ ಎಂಬ ಹೆಸರು ರೂಪಾಂತರ ಹೊಂದಿ ಜಮದಗ್ನಿಯಾಗುತ್ತದೆ. ಜಮದಗ್ನಿ ಋಷಿ ತಂದೆ ಗೌತಮನಾಜ್ಞೆಯಂತೆ ಆಲ್ಮುನಿ, ಬಾಲ್ಮುನಿ, ಕೆಂಜೆಡೆಮುನಿ, ರಗುತ್ಮುನಿ, ಹೆಮ್ಮುನಿ ಮುಂತಾದ

ಮುನಿಪುಂಗವರೊಡನೆ ತಪಸ್ಸನ್ನಾಚರಿಸುತ್ತ ಕಾರಂಜಿ ಹೊಳೆಯಲ್ಲಿ ಸ್ನಾನಕ್ಕಿಳಿದಾಗ ಆ ಹೊಳೆಯಲ್ಲಿ ಎಲ್ಲಮ್ಮನ ಏಳುಮಾರುದ್ದ ಮಂಡೆಕೂದಲು ಜಾಲಾಡುತ್ತಿತ್ತು. ಜಮದಗ್ನಿಗೆ ಈ ಮಂಡೆಕೂದಲಿನವಳನ್ನೇ ತನ್ನ ಹೆಂಡತಿಯನ್ನಾಗಿ ಪಡೆಯಬೇಕೆಂಬ ಬಯಕೆಯಾಯಿತು. ಅವಳಿರುವ ನೆಲೆಯನ್ನರಸುತ್ತ ಎಲ್ಲಮ್ಮನ ತಂದೆತಾಯಿಗಳಾದ ಗಿರ್‍ರಾಜಮುನಿ ಮತ್ತು ಜಮ್ಮುಕ್ಕನ್ದೇವಿ ಆಶ್ರಮಕ್ಕೆ ಬಂದ. ತನ್ನ ಬಯಕೆಯನ್ನು ತಿಳಿಸಿದಾಗ ಎಲ್ಲಮ್ಮ ಒಂದು ಸವಾಲೊಡ್ಡುತ್ತಾಳೆ. ಅದೇನೆಂದರೆ ಏಳು ಸಮುದ್ರದಾಚೆ ಕೀಳು ಸಮುದ್ರ, ಅದರಾಚೆ ಎಡದಿಣ್ಣೆ, ಎಡದಿಣ್ಣೆ ಬೋರೆಯಲ್ಲಿ ಪಡುಲೆಂಕೆ, ಪಡುಲೆಂಕೆ ನೆರಳಲ್ಲಿ ಮಾವಿನಪುರ, ಅದರಾಚೆ ಜಾಪಾನುಪುರ, ಅದರಾಚೆ ಏಳ್ಸೆಲೆಹುತ್ತ, ಹುತ್ತದಾಚೆ ಗಂಗಾನದಿ. ಅದರಾಚೆ ಹಾಲ್ಗೊಣ ನೀರ್ಗೊಣ ಪನ್ನೀರ್‍ಬಾವಿ. ಆ ಬಾವಿ ನೀರನ್ನು ತಂದು ಯಾರು ತನಗೆ ಕೊಡಬಲ್ಲರೋ ಅವರೇ ತನ್ನ ಪತಿಯಾಗಬಲ್ಲರು–ಎಂದು ಹೇಳುತ್ತಾಳೆ. ಜಮದಗ್ನಿ ತಪಶ್ಶಕ್ತಿಯಿಂದ ತನ್ನ ಮುಡಿಯನ್ನು ಬೆಳೆಸಿ ಹಾಲ್ಗೊಣ ನೀಲ್ಗೊಣ ಪನ್ನೀರ್‍ಬಾವಿಯ ನೀರನ್ನು ಕುಳಿತಲ್ಲಿಂದಲೇ ಅದ್ದಿ ಸೆಳೆದುಕೊಂಡು ಎಲ್ಲಮ್ಮನ ಮೇಲೆ ಹಿಂಡುತ್ತಾನೆ. ಹೀಗೆ ಎಲ್ಲಮ್ಮ ಜಮದಗ್ನಿಯರ ವಿವಾಹ ನಡೆಯುತ್ತದೆ.

ಜಮದಗ್ನಿಗೆ ಪರಮೇಶ್ವರ ಕಾಮಧೇನುವನ್ನು ಬಳುವಳಿಯಾಗಿ ಕೊಟ್ಟು ಹೋದ. ಎಲ್ಲಮ್ಮನ ಅಣ್ಣನಾದ ಕಾರ್ತವೀರ್ಯ ಕಾಮಧೇನುವನ್ನು ಬಯಸಿ ಜಮದಗ್ನಿಯ ಶಿರವನ್ನು ಕತ್ತರಿಸಿದ ಪ್ರಸಂಗ ಶಿಷ್ಟಪುರಾಣಗಳನ್ನೇ ಹೋಲುತ್ತದೆ. ಆದರೆ ಗಮನಿಸಬೇಕಾದ ಮುಖ್ಯ ವ್ಯತ್ಯಾಸವೆಂದರೆ–ಎಲ್ಲಮ್ಮ ತನ್ನ ಪತಿಯ ಶಿರವನ್ನು ತೆಗೆದುಕೊಂಡು ಹೋಗಿ ಪರಮೇಶ್ವರನನ್ನು ಕಾಣುತ್ತಾಳೆ. ಪಾರ್ವತಿ ಪರಮೇಶ್ವರರು ದೇವತೆಗಳು ಜಮದಗ್ನಿಗೆ ಪುನರ್ಜನ್ಮವನ್ನು ಕೊಡುತ್ತಾರೆ. ಆದರೆ ಜಮದಗ್ನಿ ಮಹರ್ಷಿ ಜಮದಗ್ನಿಯಾಗಿ ಭೂಲೋಕಕ್ಕೆ ಬರದೆ ನಂಜನಗೂಡಿನ ನಂಜುಂಡನಾಗಿ ಬರುತ್ತಾನೆ. ಎಲ್ಲಮ್ಮ ತಾಯಿ ಆದಿಶಕ್ತಿಯ ಅಂಶವಾದ್ದರಿಂದ ಅವಳ ಇನ್ನೊಂದು ಅಂಶ ಚಾಮುಂಡಿಯಾಗಿ ಅವತರಿಸುತ್ತದೆ.

ಇನ್ನೊಂದು ಪಾಠದ ಕತೆಯಲ್ಲಿ ಎಲ್ಲಮ್ಮ ಜಮದಗ್ನಿಯರ ಸಮಾಗಮ ವಿಚಿತ್ರ ರೀತಿಯಾಗಿದೆ. ಎಲ್ಲಮ್ಮ ವಿವಾಹಪೂರ್ವದಲ್ಲಿ ಸಮುದ್ರಕ್ಕೆ ಹೋಗಿ ಒಂದು ಕಾಲನ್ನು ಆಮೆಯ ಮೇಲೂ, ಮತ್ತೊಂದು ಕಾಲನ್ನು ಮೊಸಳೆಯ ಮೇಲೂ ಇಟ್ಟುಕೊಂಡು ಸ್ನಾನಮಾಡುತ್ತಿರುವಾಗ ಇವಳು ಮುಡಿದಿದ್ದ ಮರುಗ ಜವನಪುನುಗುಗಳ ಕಂಪು ಹನ್ನೆರಡು ಮೈಲಿ ದೂರದಲ್ಲಿ ತಪಸ್ಸು ಮಾಡುತ್ತಿದ್ದ ಜಮದಗ್ನಿಯನ್ನು ಸೋಂಕಿತು. ಇದಾವ ಕನ್ನಿಕೆಯ ಮೈಯಿಂದ ಇಂಥ ಪರಿಮಳ ಬರುತ್ತಿದೆಯೊ ಏನೋ ಎಂದು ಚಿಂತಿಸಿದ ಜಮದಗ್ನಿ ತನ್ನ ಮೈಬೆವರನ್ನು ತೆಗೆದು ಸಮುದ್ರಕ್ಕೆಸೆದ. ಅದು ಹೂವಾಗಿ ತೇಲಿಬಂದು ಎಲ್ಲಮ್ಮನ ದೇಹವನ್ನು ಸೇರಿ ಅವಳು ಗರ್ಭವತಿಯಾಗಿ ಹುಟ್ಟಿದ ಮಗ ಪರಶುರಾಮ ತಂದೆಯನ್ನು ತೋರಿಸೆಂದು ಹಟ ಹಿಡಿದಾಗ ಅಗ್ನಿಪರೀಕ್ಷೆಗೆ ಗುರಿಯಾಗುತ್ತಾಳೆ. ಕೊನೆಗೆ ಮಗನೊಡನೆ ಕೈಲಾಸ, ವೈಕುಂಠ, ಬ್ರಹ್ಮಲೋಕಗಳಲ್ಲೆಲ್ಲ ತನ್ನ ಪತಿ ಯಾರೆಂದು ವಿಚಾರಿಸಿ ಎಲ್ಲಿಯೂ ಸರಿಯಾದ ಉತ್ತರ ಸಿಗದೆ ಹಿಂದಿರುಗುತ್ತಿರುವಾಗ ನಾರದ ಬಂದು ಪಾತಾಳದಲ್ಲಿರುವ ತಪೋನಿರತ ಜಮದಗ್ನಿಯನ್ನು ತೋರಿಸುತ್ತಾನೆ. ಋಷಿಗಳೆಲ್ಲರ ಆದೇಶದಂತೆ ಜಮದಗ್ನಿ ಎಲ್ಲಮ್ಮನನ್ನು ಪರಿಗ್ರಹಿಸುತ್ತಾನೆ.

ಎಲ್ಲಮ್ಮ ಜಮದಗ್ನಿಯರ ಜೀವನವೃತ್ತಾಂತಗಳ ವಿಚಿತ್ರ ಕತೆಗಳನ್ನು ದಕ್ಷಿಣ ಕರ್ನಾಟಕದ ವೃತ್ತಿಗಾಯಕರಾದ ಚೌಡಿಕೆಯವರು ಮತ್ತು ಉತ್ತರ ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಕಾಣಸಿಗುವ ಗೊಂದಲಿಗರು ಚೌಡಿಕೆಯೆಂಬ ವಾದ್ಯವನ್ನು ನುಡಿಸಿಕೊಂಡು ಮೇಳ ನಡೆಸುತ್ತಾರೆ. ವಿಸ್ತಾರವಾದ ಈ ಎಲ್ಲಮ್ಮನ ಕಾವ್ಯಪುರಾಣ ಐತಿಹ್ಯ ಇತಿಹಾಸಗಳಿಂದಾಗಿ ಸಿಕ್ಕು ಸಿಕ್ಕಾಗಿ ಹೆಣೆದುಕೊಂಡಿದೆ. ಸಂಶೋಧಕರು ಈ ಪುರಾಣಕಾವ್ಯಗಳಿಂದ ಅಲಿಖಿತ ಇತಿಹಾಸವನ್ನು ಗ್ರಹಿಸಿ ನಿಜ ಇತಿಹಾಸವನ್ನು ಪುನಾರಚಿಸಬೇಕಾಗಿದೆ. (ಪಿ.ಕೆ.ಆರ್.ಎ.)

**ಝಮಾನ್ ಷಹ :** ಆಫ್ಘಾನಿಸ್ತಾನದ ದೊರೆ 1793–99, ಅಹಮದ್ ಷಹ ಅಬ್ದಾಲಿಯ ಮೊಮ್ಮಗ, ದುರಾನಿ ವಂಶದವ. ತಂದೆ ತೈಮೂರನಿಗೆ ಈತ ಐದನೆಯ ಮಗ. ತೈಮೂರ 1793ರಲ್ಲಿ ಕಾಲವಾದಾಗ ಸರದಾರ ಪೇಂಡೇಖಾನನ ಸಹಾಯದಿಂದ ಸಿಂಹಾಸನವನ್ನು ಆಕ್ರಮಿಸಿದ. ಆದರೆ, ಕಾಂದಾಹಾರ್ ಮತ್ತು ಹೆರಾತ್‌ಗಳಲ್ಲಿ ಪ್ರಾಂತ್ಯಾಧಿಕಾರಿಗಳಾಗಿದ್ದ ಅವನ ಅಣ್ಣಂದಿರು ಹುಮಾಯೂನ್ ಮತ್ತು ಮಹಮೂದ್ ಇಬ್ಬರೂ ದಂಗೆಯೆದ್ದರು. ಝಮಾನ್ ಷಹ ಅವರ ವಿರುದ್ಧ ಹೋರಾಡಿದ. ಹುಮಾಯೂನ್ ಸೋತು ಸೆರೆ ಸಿಕ್ಕಿದ. ಝಮಾನ್ ಷಹ ಅವನ ಕಣ್ಣನ್ನು ಕೀಳಿಸಿದ. ಮಹಮೂದ್ ಪರ್ಷಿಯಕ್ಕೆ ಓಡಿಹೋಗಿ, ಅಲ್ಲಿ ಆಶ್ರಯ ಪಡೆದ. ಈ ವಿಜಯದಿಂದ ಉಬ್ಬಿಹೋದ ಝಮಾನ್ ಷಹ ತನ್ನ ತಾತ ಅಹಮದ್ ಷಹನಂತೆ ತಾನೂ ಭಾರತದ ಮೇಲೆ ದಂಡಯಾತ್ರೆ ನಡೆಸಲು ಉದ್ದೇಶಿಸಿದ. 1794ರಲ್ಲಿ ಅವನು ಕಾಶ್ಮೀರವನ್ನು ವಶಪಡಿಸಿಕೊಂಡನಲ್ಲದೆ ಸಿಂಧ್‌ನ ಅಮೀರರು ತನಗೆ ಕಪ್ಪ ಒಪ್ಪಿಸುವಂತೆ ಮಾಡಿದ. ಕಾಬೂಲಿನಿಂದ ಹೊರಟು ರೊಹ್ವಾಸ್‌ವರೆಗೆ ಅವನು ಮುಂದುವರಿದ. ಆದರೆ ಆ ವೇಳೆಗೆ ಆಫ್ಘಾನಿಸ್ತಾನದಲ್ಲಿ ದಂಗೆಗಳಾದ್ದರಿಂದ ಅವನು ಹಿಂದಿರುಗಬೇಕಾಯಿತು. ಅವನು ಪಂಜಾಬಿಗೆ ಕಳುಹಿಸಿದ್ದ ಮುಂಚೂಣಿ ದಳಗಳು ಸಿಕ್ಖರನ್ನು ಎದುರಿಸಲಾರದೆ ಹಿಂದಿರುಗಿದುವು. 1796–97ರಲ್ಲಿ ಝಮಾನ್ ಷಹ ಮತ್ತೆ ಭಾರತದ ಆಕ್ರಮಣ ನಡೆಸಲು ಯತ್ನಿಸಿದ. ಕಾಬೂಲಿನಿಂದ ಪೆಷಾವರದವರೆಗೆ ಬಂದು ಪಂಜಾಬಿನ ಮೂಲಕ ಲಾಹೋರಿನತ್ತ ಮುನ್ನಡೆದ. ಸಿಕ್ಖರ ಪ್ರಬಲ ವಿರೋಧವನ್ನು ಅವನು ಆಗಲೂ ಎದುರಿಸಬೇಕಾಯಿತು. ಝಮಾನ್ ಷಹ ಬಲು ನಿಧಾನವಾಗಿ ಮುಂದುವರಿದ. ತಾನು ಗೆದ್ದ ನೆಲದ ಮೇಲೆ ಹತೋಟಿ ಏರ್ಪಡಿಸಲು ಅವನಿಗೆ ದೀರ್ಘ ಸಮಯ ಬೇಕಾಯಿತು. ಆ ವೇಳೆಗೆ ಆಫ್ಘಾನಿಸ್ತಾನದಲ್ಲಿ ಮತ್ತೆ ದಂಗೆ ಎದ್ದಿತು. ಝಮಾನ್ ಷಹ ಮತ್ತೆ ಸ್ವದೇಶಕ್ಕೆ ಹಿಂದಿರುಗಿದ. 1798ರಲ್ಲಿ ಅವನು ಮೂರನೆಯ ಮತ್ತು ಕೊನೆಯ ಬಾರಿ ಭಾರತದ ಆಕ್ರಮಣ ಮಾಡಲು ಯತ್ನ ನಡೆಸಿ, ತಾನು ಹಿಂದೆ ಗೆದ್ದಿದ್ದ ಪ್ರದೇಶಗಳನ್ನು ಸುಲಭವಾಗಿ ಮತ್ತೆ ಗೆದ್ದುಕೊಂಡು, ಮುಂದುವರಿಯಲು ಯತ್ನಿಸಿದ.

ಆ ಸಮಯದಲ್ಲಿ ಭಾರತದಲ್ಲಿದ್ದ ಬ್ರಿಟಿಷರಿಗೆ ಫ್ರೆಂಚರಿಂದಲೂ ಆಫ್ಘನ್ನರಿಂದಲೂ ಅಪಾಯದ ಭಯವಿತ್ತು. ಅವರು 1800ರಲ್ಲಿ ಕ್ಯಾಪ್ಟನ್ ಜಾನ್ ಮಾಲ್‌ಕಾಮನನ್ನು ಪರ್ಷಿಯದ ದೊರೆ ಫತ್ ಅಲೀ ಷಹನ ಬಳಿಗೆ ನಿಯೋಗ ಕಳಿಸಿ, ಆಫ್ಘನ್ ದೊರೆ ಭಾರತದ ಮೇಲೆ ದಂಡೆತ್ತಿ ಬರುವುದನ್ನು ತಪ್ಪಿಸಲು ಯತ್ನಿಸಿದರು. ಫತ್ ಅಲಿ ಷಹ ತನ್ನಲ್ಲಿ ಆಶ್ರಯ ಪಡೆದಿದ್ದ ಮಹಮೂದನಿಗೆ ಸೈನ್ಯ, ಧನ ಮುಂತಾದ ನೆರವು ನೀಡಿ, ಕಾಂದಹಾರದ ಮೇಲೆ ದಂಡೆತ್ತಿ ಹೋಗಲು ಅವನನ್ನು ಪ್ರೋತ್ಸಾಹಿಸಿದ. ಇದರಿಂದಲೂ ಸರದಾರ ಪೇಂಡೇಖಾನನ ಹಿರಿಯ ಮಗ ವಜೀರ್ ಫತ್ ಖಾನನ ನೆರವಿನಿಂದಲೂ ಕಾಂದಹಾರಿನ ಮೇಲೆ ದಂಡೆತ್ತಿ ಹೋದ ಮಹಮೂದ 42 ದಿನಗಳ ಮುತ್ತಿಗೆಯ ತರುವಾಯ ಅದನ್ನು ಸ್ವಾಧೀನ ಪಡಿಸಿಕೊಂಡ. ಅನಂತರ ಕಾಬೂಲಿನ ಮೇಲೆ ಎರಗಿದ. ಝಮಾನ್ ಷಹ ಮಹಮೂದನನ್ನು ಎದುರಿಸಲು ಆಫ್ಘಾನಿಸ್ತಾನಕ್ಕೆ ಓಡಿ ಬಂದ. ಆದರೆ, ಆಷಿಕ್ ಖಾನ್ ಎಂಬ ಹಿರಿಯ ಅನುಯಾಯಿಯೊಬ್ಬನ ವಂಚನೆಯ ಪರಿಣಾಮವಾಗಿ ಅವನು ಮಹಮೂದನಿಗೆ ಕೈಸೆರೆಯಾದ. ಮಹಮೂದ ಅವನ ಕಣ್ಣನ್ನು ಕೀಳಿಸಿ, ಕಾಬೂಲಿನ ಬಾಲಾ ಹಿಸ್ಸಾರ್ ಕೋಟೆಯಲ್ಲಿ ಆಜೀವ ಬಂಧನದಲ್ಲಿಟ್ಟ. ಝಮಾನ್ ಷಹ ತನ್ನ ಭಾರತ ದಂಡಯಾತ್ರೆಯ ಆಕಾಂಕ್ಷೆಯನ್ನು ಪೂರೈಸಲಾರದೆ ಹೋದನಾದರೂ ಭಾರತದಲ್ಲಿ ಬ್ರಿಟಿಷರ ಆಕ್ರಮಣವನ್ನು ಭಾರತೀಯ ದೊರೆಗಳು ಯಶಸ್ವಿಯಾಗಿ ಎದುರಿಸಲು ಸಾಧ್ಯವಾಗದಂತೆ ದೀರ್ಘಕಾಲ ಅವರಿಗೆ ವಾಯವ್ಯ ದಿಕ್ಕಿನಲ್ಲಿ ಕೋಟಲೆಯನ್ನುಂಟುಮಾಡಿದ; ಪರೋಕ್ಷವಾಗಿ ಇವನಿಂದ ಬ್ರಿಟಿಷರಿಗೆ ಅನುಕೂಲವಾಯಿತು. (ಜಿ.ವಿ.ಎಸ್)

**ಝಮಾಲ್–ಉದ್–ದೀನ್ ಆಫ್ಘನಿ :** 1838–97. ದಾರ್ಶನಿಕ, ಲೇಖಕ, ಪ್ರಖ್ಯಾತ ವಾಗ್ಮಿ. ರಾಜಕೀಯ ಪ್ರಮುಖ. ಈಜಿಪ್ಟಿನ ಆಧುನಿಕ ಇಸ್ಲಾಂ ರಾಷ್ಟ್ರೀಯ ಆಂದೋಲನದ ಜನಕನೆಂದು ಖ್ಯಾತನಾಗಿದ್ದಾನೆ. ಕಾಬೂಲಿನ ಹತ್ತಿರದ ಅಸದಾಬಾದಿನಲ್ಲಿ ಹುಟ್ಟಿದ. ಷಿಯಾ ಪಂಗಡದ ವಿಮರ್ಶಕರಲ್ಲಿ ಕೆಲವರು ಪರ್ಷಿಯದ ಅಸದಾಬಾದ್ ಎಂಬಲ್ಲಿ ಈತ ಹುಟ್ಟಿದ ಎಂದು ಅಭಿಪ್ರಾಯಪಡುತ್ತಾರೆ. ಬಾಲ್ಯದ ವಿದ್ಯಾಭ್ಯಾಸವಂತೂ ಕಾಬೂಲಿನಲ್ಲಾಯಿತು. ಆಮೇಲೆ ಈಜಿಪ್ಟ್, ಇರಾನ್, ಭಾರತ, ಪರ್ಷಿಯ ಮತ್ತು ಇಂಗ್ಲೆಂಡ್‌ಗಳಲ್ಲಿ ಪರ್ಯಟನ ಮಾಡಿ ಅಪಾರ ಜ್ಞಾನಾರ್ಜನೆ ಮಾಡಿಕೊಂಡ. ಲೋಕಾಯತವಾದ (ಭೌತಿಕವಾದ) ಮತ್ತು ಚಾರ್ಲ್ಸ್ ಡಾರ್ವಿನ್ನನ ವಿಕಾಸವಾದಗಳನ್ನು ತೀವ್ರವಾಗಿ ವಿರೋಧಿಸಿದ. ಇಸ್ಲಾಂ ಧರ್ಮ ಮತ್ತು ತತ್ತ್ವಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತನಾದರೂ ಅವುಗಳ ಬಗ್ಗೆ ಏನನ್ನೂ ಬರೆಯಲಿಲ್ಲ. ಆದರೂ ಇಸ್ಲಾಮೀ ಜನರ ಸಂಘಟನೆಗಾಗಿ ಬಹಳ ಶ್ರಮಿಸಿದ. ಆಫ್ಘಾನಿಸ್ತಾನದ ಇತಿಹಾಸಕ್ಕೆ ಸಂಬಂಧಿಸಿದಂತೆ ತಾತಿಮತ್–ಅಲ್–ಬಯಾನ್ ಎಂಬ ಪ್ರಸಿದ್ಧ ಗ್ರಂಥವೊಂದನ್ನು ಬರೆದ. ಸಮಕಾಲೀನ ರಾಜನೀತಿ, ಮತ್ತು ಸಾಮಾಜಿಕ ಆಗುಹೋಗುಗಳ ಬಗೆಗೆ ಈತ ಬರೆದ ಲೇಖನಾವಳಿ ವಿಮರ್ಶಾತ್ಮಕವೂ ವಿಚಾರಪೂರ್ಣವೂ ಆಗಿದೆ. (ಸಿ.ಜಿ.ಪಿ)

**ಜಮಾಲಾಬಾದ್ :** ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ, ಕುದುರೆಮುಖ ಶ್ರೇಣಿಯ ಚಾಚಿನ ಕೊನೆಯಲ್ಲಿ 545ಮೀ ಎತ್ತರಕ್ಕೆ ಎದ್ದು ನಿಂತಿರುವ ಕಡಿದಾದ ಶಿಖರದ ಮೇಲೆ ಕಟ್ಟಲಾದ ದುರ್ಗ. ಆ ಜಿಲ್ಲೆಯಲ್ಲಿ ಅಳಿದುಳಿದಿರುವ ಕೋಟೆಕೊತ್ತಳಗಳಲ್ಲೆಲ್ಲ ಹೆಚ್ಚು ಸ್ವಾರಸ್ಯಕರವಾದ್ದು. ಆ ಶಿಖರದ ಅಡಿವಾರದಲ್ಲಿರುವ ನರಸಿಂಹಂಗಡಿ ಎಂಬ ಹಳೆಯ ಊರಿಗೂ ಜಮಾಲಾಬಾದ್ ಎಂಬ ಹೊಸ ಹೆಸರೇ ಅಂಟಿಕೊಂಡಿದೆ. ಆ ಊರಿಗೆ ನಡ ಎಂಬ ಹೆಸರೂ ಇದೆ. ದುರ್ಗಕ್ಕೆ ಇರುವುದು ಒಂದೇ ಒಂದು ಇಕ್ಕಟ್ಟಿನ ದಾರಿ. ಫೆಬ್ರವರಿ–ಮೇ ತಿಂಗಳುಗಳ ಅವಧಿಯನ್ನು ಬಿಟ್ಟರೆ ಉಳಿದ ಕಾಲದಲ್ಲಿ ಆ ದಾರಿ ದುರ್ಗಮವಾದ್ದು.

1784ರಲ್ಲಿ ಮಂಗಳೂರಿನಿಂದ ಹಿಂದಿರುಗುತ್ತಿದ್ದ ಟೀಪು ಸುಲ್ತಾನ ಆ ಶಿಖರದ ದುರ್ಗಮ ಸ್ಥಿತಿಗತಿಗಳನ್ನು ಮನಗಂಡು, ಅಲ್ಲಿಯ ಪಾಳುಬಿದ್ದ ಹಳೆಯ ಕೋಟೆಯ ಅವಶೇಷಗಳ ಮೇಲೆ ಹೊಸ ದುರ್ಗವೊಂದನ್ನು ನಿರ್ಮಿಸಿ, ಅದಕ್ಕೆ ತನ್ನ ತಾಯಿ ಜಮಾಲ್ ಬೀಯ ಗೌರವಾರ್ಥವಾಗಿ ಜಮಾಲಾಬಾದ್ ಎಂದು ಹೆಸರಿಟ್ಟು, ಅಲ್ಲಿ ನಾನೂರು

ಯೋಧರ ಕಾವಲು ದಂಡೊಂದನ್ನೂ ಅಡಿವಾರದ ಜಮಾಲಾಬಾದಿನಲ್ಲಿ ತನ್ನ ಅಧಿಕಾರಿಯೊಬ್ಬನನ್ನೂ ನಿಲ್ಲಿಸಿದ. ಕಲ್ಲಿನಲ್ಲಿ ಕಡಿಯಲಾದ ಮೆಟ್ಟಲುಗಳನ್ನು ಶ್ರಮವಹಿಸಿ ಹತ್ತಿ ಕೋಟೆಯನ್ನು ಪ್ರವೇಶಿಸುವವರು, ಮೇಲ್ಮಟ್ಟದ ಯಂತ್ರಶಿಲ್ಪ ಜ್ಞಾನವನ್ನು ಬಳಸಿ ಬಂಡೆಗಳನ್ನು ಕೊರೆದು ನಿರ್ಮಿಸಲಾಗಿರುವ ಓಣಿಗಳನ್ನು ಕಾಣಬಹುದು. ದುರ್ಗದ ಗೋಡೆಗಳನ್ನೂ ಕೊತ್ತಳಗಳನ್ನೂ ಪ್ರವೇಶದ್ವಾರಗಳನ್ನೂ ಬೆಣಚುಕಲ್ಲಿನ ದಿಮ್ಮಿಗಳಿಂದ ರಚಿಸಲಾಗಿದೆ. ಕೋಟೆಯೊಳಗೆ ಎರಡು ಕೆರೆಗಳೂ ಒಳ್ಳೆಯ ನೀರಿನ ಒಂದು ಸಣ್ಣ ಬುಗ್ಗೆಯೂ ಇವೆ. ಯೂರೋಪಿನಲ್ಲಿ ತಯಾರಿಸಲಾದ ಫಿರಂಗಿಯೊಂದು ಕೋಟೆಯ ಜೀರ್ಣ ಕೊತ್ತಳವೊಂದರಲ್ಲಿ ಕೆಡೆದುಬಿದ್ದಿರುವುದನ್ನು ಇಂದಿಗೂ ಕಾಣಬಹುದು. ದುರ್ಗವನ್ನು ತಲುಪುವ ದಾರಿ ದುಸ್ತರವಾದ್ದರಿಂದ, ಹಿಂದೆ ಆಕ್ರಮಣ ಕಾಲದಲ್ಲಿ ಕೆಳಗಿನಿಂದ ಯೋಧರು ಮೇಲಕ್ಕೆ ಹೋಗಿ ಹೋರಾಡುವುದು ಎಷ್ಟು ಕಷ್ಟಸಾಧ್ಯವಿತ್ತೋ, ಮೇಲಿಂದ ಸೈನಿಕರು ಕೆಳಕ್ಕಿಳಿದು ಆಕ್ರಮಣಕಾರರನ್ನು ತಡೆಗಟ್ಟುವುದೂ ಅಷ್ಟೇ ಕಷ್ಟದ ಕೆಲಸವಿದ್ದಿರಬೇಕು. ಕೆಲವೇ ಸೈನಿಕರು ಫಿರಂಗಿಗಳ ಸಹಾಯದಿಂದ ದುರ್ಗದ ಎಷ್ಟು ದೊಡ್ಡ ರಕ್ಷಣಾಸೇನೆಯನ್ನೂ ಸ್ಥಾನಬದ್ಧಗೊಳಿಸುವುದು ಸುಲಭವೇ ಆಗಿದ್ದಿರಬೇಕು.

1799ರಲ್ಲಿ ಮೈಸೂರು ಯುದ್ಧ ನಡೆಯುತ್ತಿದ್ದಂತೆ ಜಮಾಲಾಬಾದಿನ ಅಡಿವಾರದ ಊರನ್ನು ಕೊಡಗಿನವರು ನಾಶಗೊಳಿಸಿದರು. ಯುದ್ಧದಲ್ಲಿ ಟೀಪುವಿಗೆ ಆದ ಪರಾಭವದಿಂದಾಗಿ ಪಶ್ಚಿಮ ಕರಾವಳಿ ಪ್ರದೇಶದ ಆಧಿಪತ್ಯ ಇಂಗ್ಲಿಷರದಾಯಿತು. ಅದೇ ವರ್ಷ ಅವರು ಜಮಾಲಾಬಾದ್ ದುರ್ಗವನ್ನು ವಶಪಡಿಸಿಕೊಂಡರಾದರೂ ಕೆಲವೇ ದಿನಗಳಲ್ಲಿ ಮೈಸೂರು ಸಿಂಹಾಸನದ ಸುಳ್ಳು ಹಕ್ಕುದಾರನೊಬ್ಬನ ಬೆಂಬಲಿಗನಾದ ತಿಮ್ಮಾನಾಯಕನೆಂಬಾತ ಇಂಗ್ಲಿಷರನ್ನು ಓಡಿಸಿ ಕೋಟೆಯನ್ನು ಆಕ್ರಮಿಸಿಕೊಂಡ. ಮೂರು ತಿಂಗಳುಗಳ ಸತತ ಮುತ್ತಿಗೆಯ ಅನಂತರ (1800) ಇಂಗ್ಲಿಷರು ಆ ದುರ್ಗವನ್ನು ಸ್ವಾಧೀನಪಡಿಸಿಕೊಂಡರು.

ಹೀಗೆ 18–19ನೆಯ ಶತಮಾನಗಳ ಸಂಧಿಕಾಲದಲ್ಲಿ ಸಾಕಷ್ಟು ಐತಿಹಾಸಿಕ ಮಹತ್ತ್ವಹೊಂದಿದ್ದ ಜಮಾಲಾಬಾದ್ ದುರ್ಗ ಇಂದು ಹಾಳುಬಿದ್ದಿದೆ. ಅಡಿವಾರದ ಜಮಾಲಾಬಾದ್ ಹಾಳೂರೇ ಆಗಿದೆ. (ಕೆ.ವಿ.ಆರ್.)

**ಜಮೀನ್ದಾರಿ ಪದ್ಧತಿ :** ಬ್ರಿಟಿಷ್ ಭಾರತದಲ್ಲಿ ವ್ಯಾಪಕವಾಗಿ ಜಾರಿಯಲ್ಲಿದ್ದು, ಸ್ವತಂತ್ರ ಭಾರತದಲ್ಲೂ ಹಲವು ವರ್ಷಗಳ ಕಾಲ ವಿವಿಧ ರಾಜ್ಯಗಳಲ್ಲಿ ಮುಂದುವರಿದುಕೊಂಡು ಬಂದಿದ್ದ ಜಮೀನು ಹಿಡುವಳಿ ಪದ್ಧತಿಗಳಲ್ಲೊಂದು. ಒಂದು ಇಡೀ ಪ್ರದೇಶದ ಮೇಲೆ ನಿಗದಿಯಾದ ಕಂದಾಯವನ್ನು ಸಲ್ಲಿಸಲೊಪ್ಪಿ, ಪ್ರತಿಯಾಗಿ ಆ ಪ್ರದೇಶದ ರೈತರಿಂದ ಪ್ರತ್ಯೇಕವಾಗಿ ಕಂದಾಯ ವಸೂಲು ಮಾಡಿಕೊಳ್ಳಲು ಒಬ್ಬನಿಗೆ ಅಥವಾ ಜಂಟಿಯಾಗಿ ಕೆಲವು ಮಂದಿಗೆ ಸರ್ಕಾರ ನೀಡಿದ್ದ ಹಕ್ಕು. ಈ ಹಕ್ಕು ಪಡೆದ ವ್ಯಕ್ತಿ ಜಮೀನ್ದಾರ. ಆ ಪ್ರದೇಶದ ರೈತರೆಲ್ಲ ಜಮೀನ್ದಾರನಿಗೆ ಅಧೀನರಾಗಿರುತ್ತಿದ್ದರು. ಜಮೀನ್ದಾರಿ ಪದ್ಧತಿ ಒಂದೊಂದು ಕಡೆ ಒಂದೊಂದು ರೀತಿ ಇತ್ತಾದರೂ ಸ್ಥೂಲವಾಗಿ ಜಮೀನ್ದಾರಿ ಪದ್ಧತಿಯ ಲಕ್ಷಣ ಇದು.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸರ್ಕಾರಗಳು ರೈತರಿಂದ ಜಮೀನಿನ ಹುಟ್ಟುವಳಿಯಲ್ಲಿ ಒಂದು ಭಾಗವನ್ನು ಕಂದಾಯವಾಗಿ ಪಡೆಯುತ್ತ ಬಂದಿವೆ. ಮೊದಮೊದಲು ಒಟ್ಟು ಫಸಲಿನಲ್ಲಿ ಒಂದು ನಿಗದಿಯಾದ ಪಾಲನ್ನು ನೇರವಾಗಿ ಭೂಗಂದಾಯವಾಗಿ ಪಡೆಯಲಾಗುತ್ತಿತ್ತು. ಆದರೆ ಈ ಪದ್ಧತಿಯಲ್ಲಿ ಅನೇಕ ತೊಂದರೆಗಳಿದ್ದುವು. ಆದ್ದರಿಂದ ಇದರಲ್ಲಿ ಕ್ರಮೇಣ ಅನೇಕ ಸುಧಾರಣೆಗಳಾದುವು. ಸಾಗುವಳಿ ನೆಲವನ್ನು ಅಳತೆ ಮಾಡಿ, ಗುಣಕ್ಕೆ ಅನುಗುಣವಾಗಿ ಅದನ್ನು ಸ್ಥೂಲವಾಗಿ ನಾಲ್ಕು ದರ್ಜೆಗಳಾಗಿ ವಿಂಗಡಿಸಲಾಯಿತು.

ಮೊಗಲ್ ಸಾಮ್ರಾಜ್ಯ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ವ್ಯಾಪಕವಾಗಿ ಜಾರಿಯಲ್ಲಿದ್ದ ಈ ಪದ್ಧತಿ ಅನಂತರ ವಿಕೃತರೂಪಗಳನ್ನು ತಳೆಯಿತು. ಕ್ರಮೇಣ ಜಮೀನ್ದಾರಿ ಪದ್ಧತಿ ಹುಟ್ಟಿಕೊಂಡಿತು. ಮೊಗಲ್ ಸಾಮ್ರಾಜ್ಯ ಕ್ಷೀಣಿಸತೊಡಗಿದಾಗ ದೆಹಲಿಯ ಸರ್ಕಾರಕ್ಕೆ ತನ್ನ ಸಾಮ್ರಾಜ್ಯದ ದೂರ ಪ್ರಾಂತ್ಯಗಳಲ್ಲಿದ್ದ ಕಂದಾಯ ವಸೂಲಿ ಅಧಿಕಾರಿಗಳ ಮೇಲೆ ಸರಿಯಾದ ಹತೋಟಿ ಇಟ್ಟುಕೊಳ್ಳುವುದು ಸಾಧ್ಯವಾಗದೆ ಹೋಯಿತು. ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ವರಮಾನ ತಪ್ಪದಂತೆ ಯಾವುದಾದರೊಂದು ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅಗತ್ಯವೆನಿಸಿತು. ಫರೂಕ್‌ಸಿಯಾರನ ಆಳ್ವಿಕೆಯ ಕಾಲದಲ್ಲಿ (1713–19) ಜಮೀನ್ದಾರಿ ಪದ್ಧತಿ ಖಚಿತವಾಗಿ ರೂಪುಗೊಂಡಿತೆನ್ನಬಹುದು. ಪ್ರತಿಯೊಂದು ಜಿಲ್ಲೆ ಅಥವಾ ಪರಗಣದಲ್ಲೂ ಆಢ್ಯನಾದ ರೈತನೊಬ್ಬ ಆ ಸುತ್ತಿನ ಎಲ್ಲ ರೈತರಿಂದ ಕಂದಾಯ ವಸೂಲು ಮಾಡಿ, ಒಟ್ಟು ವಸೂಲಿಯ ಮೊಬಲಗಿನಲ್ಲಿ ಹತ್ತನೆಯ ಒಂಬತ್ತು ಭಾಗವನ್ನು ಸರ್ಕಾರಕ್ಕೆ ಸಲ್ಲಿಸಿ, ಉಳಿದ ಒಂದು ಭಾಗವನ್ನು ತನಗೆ ಸಂಭಾವನೆಯಾಗಿ ಉಳಿಸಿಕೊಳ್ಳುವ ಪದ್ಧತಿ ರೂಪುಗೊಂಡಿತು.

ವಸೂಲಿಯ ಶ್ರಮವಿಲ್ಲದೆ ಒಟ್ಟೊಟ್ಟಾಗಿ ಕಂದಾಯ ಪಡೆಯುವುದು ಸಾಧ್ಯವೆನಿಸಿದಾಗ ಸರ್ಕಾರ ಈ ಪರಿಸ್ಥಿತಿಯ ದುರುಪಯೋಗ ಪಡೆದುಕೊಳ್ಳಲು ಕ್ರಮ ತೆಗೆದುಕೊಂಡಿತು. ಪ್ರತಿಯೊಂದು ಪರಗಣದ ಕಂದಾಯ ವಸೂಲಿ ಹಕ್ಕನ್ನೂ ಹರಾಜು ಮಾಡಿ, ಅತಿ ಹೆಚ್ಚಿನ ಬಿಡ್ಡುದಾರನಿಗೆ ಅದನ್ನು ನೀಡಲಾರಂಭಿಸಿದ್ದು ಮುಂದಿನ ಮಜಲು. ಈ ಹಕ್ಕು ಪಡೆದವನು ಸರ್ಕಾರಕ್ಕೆ ಒಂದು ಗಂಟಿನಲ್ಲಿ ಬಿಡ್ಡಿನ ಮೊಬಲಗನ್ನು ಪಾವತಿ ಮಾಡಿ, ಇದಕ್ಕಿಂತ ಹೆಚ್ಚಿಗೆಯಾಗಿ ವಸೂಲಾದ ಮೊಬಲಗನ್ನು ತಾನೇ ಉಳಿಸಿಕೊಳ್ಳಬಹುದಿತ್ತು. ಇಂಥ ಹಕ್ಕುದಾರರು ರೈತರನ್ನು ಅತಿಯಾಗಿ ಶೋಷಿಸುತ್ತಿದ್ದರು. ಸರ್ಕಾರಕ್ಕೆ ಆದಷ್ಟು ಕಡಿಮೆ ಪಾವತಿ ಮಾಡಲು ಯತ್ನಿಸುತ್ತಿದ್ದರು. ಮೊಗಲರಿಗೆ ಮಣಿಯಬೇಕಾಗಿ ಬಂದ ಅನೇಕ ಹಿಂದೂ ದೊರೆಗಳು ಕೇವಲ ಕಂದಾಯ ವಸೂಲಿ ಹಕ್ಕುದಾರರಾಗಬೇಕಾಗಿ ಬಂದದ್ದೂ ಉಂಟು. ಆರಂಭದೆಸೆಯಲ್ಲಿ ಇದು ವಂಶಪಾರಂಪರ್ಯವಾದ ಹಕ್ಕಾಗಿರಲಿಲ್ಲವಾದರೂ ಕೇಂದ್ರಾಧಿಕಾರ ಸಡಿಲವಾದಂತೆ ಇದು ಆನುವಂಶಿಕವಾಯಿತು. ದೇಶದಲ್ಲಿ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿ ಉಂಟಾದಾಗ ಕಂದಾಯ ವಸೂಲಿ ಹಕ್ಕುದಾರನ ಸ್ಥಿತಿ ಭದ್ರವಾಯಿತು. ತನ್ನ ಹಕ್ಕಿಗೆ ಒಳಪಟ್ಟಿದ್ದ ಪ್ರದೇಶಕ್ಕೆಲ್ಲ ತಾನೇ ಮಾಲೀಕನೆಂಬಂತೆ ಅವನು ವರ್ತಿಸತೊಡಗಿದ. ತನ್ನ ಸ್ವಂತ ಜಮೀನಿನ ಜೊತೆಗೆ ಅಲ್ಲಿಯ ಪಾಳುನೆಲವನ್ನೆಲ್ಲ ಅವನು ಸಾಗುವಳಿ ಮಾಡತೊಡಗಿದ. ನಾನಾ ಉಪಾಯಗಳಿಂದ ಇತರ ರೈತರ ಜಮೀನುಗಳನ್ನೂ ಕೊಂಡುಕೊಳ್ಳಲಾರಂಭಿಸಿದ. ಲಾರ್ಡ್ ಕಾರ್ನ್‌ವಾಲಿಸ್ ಭಾರತದ ಗವರ್ನರ್–ಜನರಲ್ ಆಗುವ ವೇಳೆಗೆ (1786) ಅಂತ್ಯದಶೆಯಲ್ಲಿದ್ದ ಮೊಗಲ್ ಪ್ರಭುತ್ವಕ್ಕೆ ಏಕೈಕ ಧನ ಮೂಲಗಳಾಗಿದ್ದ ಈ ಹಕ್ಕುದಾರರು, ಜಮೀನ್ದಾರರು, ಆರ್ಥಿಕವಾಗಿ ತುಂಬ ಬಲಿಷ್ಠರಾಗಿ ಪರಿಣಮಿಸಿದ್ದರು. ಸಂಪೂರ್ಣ ಮಾಲೀಕರಂತೆಯೇ ಆಗಿದ್ದರು ; ಪ್ರಭುಗಳಾಗಿದ್ದರು. ಭೂಗಂದಾಯ ಆಡಳಿತ ವ್ಯವಸ್ಥೆಯೇ ಇಲ್ಲವಾಗಿದ್ದದ್ದರಿಂದ ಇವರ ಚಟುವಟಿಕೆಗಳಿಗೆ ಯಾವ ನಿರ್ಬಂಧವೂ ಇಲ್ಲದೆ, ಜಮೀನ್ದಾರರಿಂದ ರೈತರ ಸುಲಿಗೆ ಅಬಾಧಿತವಾಗಿ ಸಾಗಿತ್ತು.

ಮೊಗಲ್ ಸಾಮ್ರಾಜ್ಯಕ್ಕೆ, ಅದರಲ್ಲೂ ಬಂಗಾಲ ಪ್ರಾಂತ್ಯಕ್ಕೆ, ಸೀಮಿತವಾಗಿದ್ದ ಈ ಪದ್ಧತಿ ಕ್ರಮೇಣ ದೇಶದ ಇತರ ಭಾಗಗಳಿಗೂ ಹಬ್ಬಿತು. ಆ ಕಡೆಗಳಲ್ಲೂ ಆಡಳಿತ ಶಿಥಿಲವಾದ್ದೇ ಇದಕ್ಕೆ ಕಾರಣ. ಆದರೆ ಇದು ಎಲ್ಲ ಕಡೆಗಳಲ್ಲೂ ಒಂದೇ ರೀತಿಯಾಗಿರಲಿಲ್ಲ. ಉತ್ತರ ಭಾರತದಲ್ಲಿ ಈ ಪದ್ಧತಿ ಮೊದಲು ಜಾರಿಗೆ ಬಂದದ್ದರಿಂದಲೂ ಅಲ್ಲಿ ಕೇಂದ್ರಾಡಳಿತ ಬಲು ಬೇಗ ದುರ್ಬಲವಾದ್ದರಿಂದಲೂ ಭಾರತದ ಆ ಭಾಗದಲ್ಲಿ ಜಮೀನ್ದಾರಿ ಪದ್ಧತಿ ಹೆಚ್ಚಾಗಿ ಬೆಳೆಯಿತು. ಬಂಗಾಲದಲ್ಲಿ ಈ ಹಕ್ಕುಗಳು ದೃಢವಾಗಿ ಬೇರೂರಿದುವು. ದಕ್ಷಿಣ ಭಾರತದಲ್ಲಿ ಈ ಪದ್ಧತಿ ಹೆಚ್ಚು ಸ್ಥಿರವಾಗಲಿಲ್ಲ. ಕೊಂಕಣದಲ್ಲಿ ಮಾತ್ರ ಖೋಟರು ಜಮೀನ್ದಾರಿ ಹಕ್ಕುಗಳನ್ನು ಪಡೆದುಕೊಂಡರು. ಸಂಯುಕ್ತ ಪ್ರಾಂತ್ಯಗಳಲ್ಲಿ (ಈಗಿನ ಉತ್ತರ ಪ್ರದೇಶ) ಜಮೀನ್ದಾರರು ಕೆಲವು ಭೂಒಡೆತನ ಹಕ್ಕುಗಳನ್ನು ಪಡೆದುಕೊಂಡರು. ಪಂಜಾಬಿನಲ್ಲೂ ಈ ಪದ್ಧತಿ ಇದೇ ರೀತಿ ಬೆಳೆಯಿತು. ಈ ಪರಿಸ್ಥಿತಿಯಲ್ಲಿ ಬ್ರಿಟಿಷರು ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು.

ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿಯ ಆಡಳಿತದ ಆರಂಭ ಕಾಲದಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ಕ್ಲೈವ್ ಜಾರಿಗೆ ತಂದ ದ್ವಿಮುಖ ಆಡಳಿತ ಪದ್ಧತಿಯೂ ಇದಕ್ಕೆ ಸಹಾಯ ಮಾಡಿತು. ಬಂಗಾಲದಲ್ಲಿದ್ದ ನವಾಬನ ಕಂದಾಯ ವಸೂಲಿ ಅಧಿಕಾರಿಗಳಾಗಲಿ ಕಂಪನಿಯ ನೌಕರರಾಗಲಿ ಸುರಾಜ್ಯಭಾರದ ಕಡೆಗೆ ಲಕ್ಷ್ಯ ಕೊಡಲಿಲ್ಲ. ತತ್ಫಲವಾಗಿ ಜನರು ಹಿಂಸೆಗೆ ಒಳಗಾದರು. ಎರಡೂ ಕಡೆಗಳಿಂದ ಅವರು ಶೋಷಣೆಗೆ ಒಳಗಾಗಿದ್ದರು. ಆದರೆ ಅವರ ಹಿತವನ್ನು ರಕ್ಷಿಸುವವರು ಮಾತ್ರ ಯಾರೂ ಇರಲಿಲ್ಲ. ಜಮೀನ್ದಾರರ ಸುಲಿಗೆಯಿಂದ ರೈತರನ್ನು ರಕ್ಷಿಸಬೇಕೆಂಬ ಉದ್ದೇಶದಿಂದ ಕಂದಾಯ ಮೇಲ್ವಿಚಾರಣೆಗಾಗಿ 1769ರಲ್ಲಿ ನೇಮಕವಾದ ಅಧಿಕಾರಿಗಳು ಚಿಕ್ಕ ವಯಸ್ಸಿನವರೂ ಅನನುಭವಿಗಳೂ ಆಗಿದ್ದುದರಿಂದ ಅವರು ಏನೂ ಮಾಡಲಾಗಲಿಲ್ಲ. ಜಮೀನಿಗೆ ಸಂಬಂಧಿಸಿದ ವಿವರಗಳೆಲ್ಲ ಜಮೀನ್ದಾರರ ವಶದಲ್ಲಿದ್ದುವು. ಅವರು ಅಧಿಕಾರಿಗಳಿಗೆ ಆ ವಿವರಗಳನ್ನು ನೀಡಲಿಲ್ಲ. 1770ರಲ್ಲಿ ಸಂಭವಿಸಿದ ಕ್ಷಾಮದಿಂದ ಜನರ ಕಷ್ಟ ಇನ್ನೂ ಹೆಚ್ಚಿತು. ಕಂಪನಿಯ ನಿರ್ದೇಶಕರಿಗೆ ಆಗ ಗಂಭೀರ ಪರಿಸ್ಥಿತಿಯ ಅರಿವು ಉಂಟಾಯಿತು. ಕಂದಾಯ ಆಡಳಿತದ ನೇರ ನಿರ್ವಹಣೆಯನ್ನು ವಹಿಸಿಕೊಳ್ಳಬೇಕೆಂದು ಅವರು 1772ರಲ್ಲಿ ವಾರನ್ ಹೇಸ್ಟಿಂಗ್ಸ್‌ನಿಗೆ ಆದೇಶ ನೀಡಿದರು. ಅವನು ಕಂದಾಯ ವಸೂಲಿಗಾಗಿ ವ್ಯವಸ್ಥೆಯೊಂದನ್ನು ನಿರ್ಮಿಸಿದನಾದರೂ ಹೆಚ್ಚು ಹಣ ಸಂಪಾದನೆಯ ಉದ್ದೇಶದಿಂದ ಹಳೆಯ ಜಮೀನ್ದಾರರನ್ನು ತಳ್ಳಿಹಾಕಿ, ಕಂದಾಯ ವಸೂಲಿ ಹಕ್ಕುಗಳನ್ನು ಹರಾಜು ಮೂಲಕ ಏರ್ಪಾಟು ಮಾಡಿದ. ಇದರಿಂದ ಜನರಿಗೆ ಬಹಳ ತೊಂದರೆಯಾಯಿತು.

ಈ ಸಮಯದಲ್ಲಿ ಲಾರ್ಡ್ ಕಾರ್ನ್‌ವಾಲಿಸ್ ಬಂದ (1786). ಅವನ ಅತ್ಯಂತ ಮುಖ್ಯ ಕ್ರಮವೆಂದರೆ ಬಂಗಾಲದ ಖಾಯಂ ಭೂಗಂದಾಯ ವ್ಯವಸ್ಥೆ ಅಥವಾ ಶಿಸ್ತು. ಮೂರು ವರ್ಷಗಳ ಕಾಲ ಕೂಲಂಕಷ ವಿಚಾರಣೆ ನಡೆಸಿದ ಮೇಲೆ ಇದನ್ನು ಜಾರಿಗೆ ತರಲಾಯಿತು. ಜಮೀನ್ದಾರರ ಕಂದಾಯ ವಸೂಲಿ ಅಧಿಕಾರವ್ಯಾಪ್ತಿಗೆ ಒಳಪಟ್ಟ ಪ್ರದೇಶಕ್ಕೆ ಆಯಾ ಜಮೀನ್ದಾರರೇ ಸಂಪೂರ್ಣ ಒಡೆಯರೆಂದು ಘೋಷಿಸಿ ಜಮೀನ್ದಾರರ ಸ್ಥಾನವನ್ನು ಕಾನೂನುಬದ್ಧಗೊಳಿಸಲಾಯಿತು. ಜಮೀನ್ದಾರರು ಹೆಚ್ಚು ಆಸಕ್ತಿ ವಹಿಸಿ ವಸೂಲಿ ಕ್ರಮ

ಕೈಗೊಂಡು ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯವನ್ನು ಪಾವತಿ ಮಾಡುವವರೆಂಬುದು ಇದರ ಹಿಂದೆ ಇದ್ದ ಆಶಯ. ಬಾಕಿದಾರರಾದ ಜಮೀನ್ದಾರರ ಜಮೀನನ್ನು ವಿಕ್ರಯ ಮಾಡುವ ಅಧಿಕಾರವನ್ನು ಸರ್ಕಾರ ಉಳಿಸಿಕೊಂಡಿತು. 1793ರಲ್ಲಿ ಈ ವ್ಯವಸ್ಥೆಯನ್ನು ಖಾಯಂ ಮಾಡಲಾಯಿತು.

ಬಂಗಾಲದ 1793ರ ಖಾಯಂ ಕಂದಾಯ ವ್ಯವಸ್ಥೆಯಲ್ಲಿ ಅನೇಕ ದೋಷಗಳಿದ್ದುವು. ಕೂಲಂಕಷ ಸರ್ವೆ, ನೆಲದ ವರ್ಗೀಕರಣ, ಹಕ್ಕುಗಳ ದಾಖಲೆಯ ಸ್ಥಾಪನೆ ಮುಂತಾದ ಕ್ರಮಗಳನ್ನು ಕೈಗೊಳ್ಳದೆ ಮಾಡಲಾದ ಈ ವ್ಯವಸ್ಥೆ ತುಂಬ ಯಾದೃಚ್ಛಿಕವಾದದ್ದೆಂದೂ, ರೈತರ ಜಮೀನುಗಳ ವೈಯಕ್ತಿಕ ಒಡೆತನವೇ ಮುಂತಾದ ಹಿತಗಳ ರಕ್ಷಣೆ ಆದಂತಾಗಲಿಲ್ಲವೆಂದೂ ಅವರು ಅನೇಕ ವೇಳೆ ಅತ್ಯಂತ ಹೆಚ್ಚಿನ ಕಂದಾಯ ಕೊಡಬೇಕಾಗಿ ಬರುವುದೆಂದೂ ಅವರಿಗೆ ಭದ್ರತೆ ಇಲ್ಲದಂತಾಗಿ ಉತ್ಪಾದನೆ ಕ್ಷೀಣಿಸುವುದೆಂದೂ ವಾದಿಸಲಾಯಿತಾದರೂ ಮುಂದಿನ ಸುಮಾರು ಎಪ್ಪತ್ತೈದು ವರ್ಷಗಳ ಕಾಲ ರೈತರಿಗೆ ಯಾವ ರಕ್ಷಣೆಯೂ ದೊರಕಲಿಲ್ಲ. ಬಂಗಾಲದ ಮಾದರಿಯನ್ನು ಇತರ ಪ್ರದೇಶಗಳಿಗೂ ವಿಸ್ತರಿಸಲು ಯತ್ನಿಸಲಾಯಿತು. ಸಂಯುಕ್ತ ಪ್ರಾಂತ್ಯಗಳು, ಮಧ್ಯ ಪ್ರಾಂತ್ಯ, ಪಂಜಾಬ್, ಅಸ್ಸಾಂ, ಬಿಹಾರ, ಒರಿಸ್ಸ, ಬೊಂಬಾಯಿ ಮುಂತಾದ ಅನೇಕ ಪ್ರಾಂತ್ಯಗಳಲ್ಲಿ ಕಂದಾಯ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಯತ್ನಗಳಾದುವು.

**ನಿವಾರಣೆಯ ಕ್ರಮಗಳು :** ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿ ಜಮೀನ್ದಾರಿ ಮತ್ತು ಇಂಥ ಇತರ ದೋಷಪೂರ್ಣ ಜಮೀನು ಹಿಡುವಳಿ ವ್ಯವಸ್ಥೆಗಳನ್ನು ನಿವಾರಿಸಲು ತೀವ್ರವಾದ ಕ್ರಮಗಳೇನೂ ಜಾರಿಗೆ ಬರಲಿಲ್ಲ. 1947ರ ಅನಂತರ ಭಾರತದ ನಾನಾ ರಾಜ್ಯ ಸರ್ಕಾರಗಳು ಜಮೀನ್ದಾರಿ ಮತ್ತು ಇತರ ಹಕ್ಕುಗಳನ್ನು ತೊಡೆದು ಹಾಕಲು ಅಧಿನಿಯಮಗಳನ್ನು ಜಾರಿಗೆ ತಂದಿವೆ. ತತ್ಫಲವಾಗಿ ಜಮೀನ್ದಾರಿ ಪದ್ಧತಿ ಇಂದು ಭಾರತದಲ್ಲಿ ಸಂಪೂರ್ಣವಾಗಿ ಇಲ್ಲವಾಗಿದೆ.

ಜಮೀನ್ದಾರಿ ಪದ್ಧತಿಯನ್ನು ತೊಡೆದು ಹಾಕಲು ನೀಡಲಾದ ಮುಖ್ಯವಾದ ಕಾರಣಗಳಿವು: 1 ಜಮೀನ್ದಾರ ಪರೋಪಜೀವಿ. ತನ್ನ ಅಧೀನದಲ್ಲಿರುವ ಜಮೀನನ್ನು ಅಭಿವೃದ್ಧಿ ಪಡಿಸಲು ಅವನು ಏನೂ ಕ್ರಮ ಕೈಗೊಳ್ಳಲಿಲ್ಲ. ಉಳುವ ರೈತನಿಗೂ ಸರ್ಕಾರಕ್ಕೂ ನಡುವೆ ಇರುವ ಈತ ಸಣ್ಣ ಜಮೀನುಗಳ ಬಲಪಡಿಸಿಕೆಗೆ (ಕನ್ಸಾಲಿಡೇಷನ್) ಭಾರಿ ಅಡ್ಡಿ. ಜಮೀನಿನ ಅಭಿವೃದ್ಧಿ, ಆಹಾರೋತ್ಪಾದನೆಯಲ್ಲಿ ಹೆಚ್ಚಳ ಸಾಧನೆ, ಭೂ ಸುಧಾರಣೆ–ಇವನ್ನು ಜಮೀನ್ದಾರಿ ಪದ್ಧತಿಯನ್ನು ತೊಡೆದುಹಾಕದೆ ಸಾಧಿಸಲಾಗುವುದಿಲ್ಲ. 2 ಜಮೀನ್ದಾರಿ ಪದ್ಧತಿಯನ್ನು ತೊಡೆದು ಹಾಕುವುದರಿಂದ ಸರ್ಕಾರಕ್ಕೆ ಭೂಗಂದಾಯದಿಂದ ಬರುವ ವರಮಾನ ಅಧಿಕವಾಗುತ್ತದೆ. ಜಮೀನ್ದಾರರ ಪಾಲೂ ಸರ್ಕಾರಕ್ಕೆ ಸಂದಾಯವಾಗುತ್ತದೆ–ಎಂಬುದು ಇನ್ನೊಂದು ವಾದ. ಈ ವಾದ ಸುಳ್ಳಾಗಲಿಲ್ಲ. ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡುವ ಕ್ರಮ ಕೈಗೊಂಡ ಮೇಲೆ ಭೂಗಂದಾಯದಿಂದ ರಾಜ್ಯ ಸರ್ಕಾರಗಳ ವರಮಾನ ಇಮ್ಮಡಿಸಿತು. ಈ ಅಧಿಕ ವರಮಾನದಿಂದ ರಾಜ್ಯ ಸರ್ಕಾರಗಳಿಗೆ ಭೂ ಅಭಿವೃದ್ಧಿ ಹಾಗೂ ಭೂ ಸುಧಾರಣೆಗೆ ಹೆಚ್ಚು ಹಣ ಒದಗುವಂತಾಯಿತು. 3 ಜಮೀನ್ದಾರಿ ಪದ್ಧತಿಯ ನಿವಾರಣೆ ಕೇವಲ ಆರ್ಥಿಕ ಕ್ರಮವಲ್ಲ. ಅದು ರಾಜಕೀಯ ಕ್ರಮ ಕೂಡ. ಪ್ರಜಾಪ್ರಭುತ್ವ ಭಾರತದಲ್ಲಿ ಬಹುತೇಕ ಮತದಾರರು ಸಣ್ಣಪುಟ್ಟ ರೈತರು. ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಮೂಡುವಂತೆ ಮಾಡಲು ಅವರ ಸ್ಥಿತಿಯನ್ನು ಉತ್ತಮಪಡಿಸುವುದು ಅತ್ಯವಶ್ಯ.

ಜಮೀನ್ದಾರಿ ಪದ್ಧತಿಯನ್ನು ರದ್ದುಪಡಿಸ–ಬಾರದೆಂಬುದಕ್ಕೂ ಅನೇಕ ಕಾರಣಗಳನ್ನು ನೀಡಬಹುದಾಗಿತ್ತು : 1 ಜಮೀನ್ದಾರಿ ಪದ್ಧತಿಯ ರದ್ದಿಯಾತಿಯಿಂದ ಈ ಪದ್ಧತಿಯನ್ನೇ ಆಶ್ರಯಿಸಿದ ಅನೇಕರು ನಿರುದ್ಯೋಗಿಗಳಾಗುವರೆಂಬುದು ಒಂದು ವಾದ. ಆದರೆ ಅದರ ರದ್ದಿನಿಂದ ಒಟ್ಟಿನಲ್ಲಿ ಹಲವರಿಗೆ ಲಭ್ಯವಾಗುವ ಅನುಕೂಲದ ದೃಷ್ಟಿಯಿಂದ ಕೆಲವೇ ಮಂದಿಗೆ ಆಗುವ ಈ ತೊಂದರೆಯನ್ನು ಪರಿಗಣಿಸಬೇಕಾಗಿಲ್ಲವೆಂಬುದು ಇದಕ್ಕೆ ಉತ್ತರ. 2 ಜಮೀನ್ದಾರಿ ಪದ್ಧತಿಯ ರದ್ದಿನಿಂದ ರೈತನಿಗೂ ತೊಂದರೆಯಾಗುವುದೆಂದು ವಾದಿಸಲಾಗಿತ್ತು. ಅವನಿಗೆ ಜಮೀನ್ದಾರನಿಂದ ಧನಸಹಾಯ ಲಭ್ಯವಾಗುತ್ತಿತ್ತು. ಜಮೀನ್ದಾರ ಇಲ್ಲವಾದಾಗ ಇದು ಅವನಿಗೆ ದೊರಕದೆಂದೂ ಸರ್ಕಾರ, ಸಹಕಾರ ಮತ್ತು ಇತರ ಉದ್ದರಿ ವ್ಯವಸ್ಥೆಗಳು ರೈತನಿಗೆ ನೆರವು ನೀಡಲು ಅವುಗಳೇ ರಚಿಸಿಕೊಂಡ ಅನೇಕ ನಿಬಂಧನೆಗಳು ಅಡ್ಡ ಬರುವುವೆಂದೂ ಹೇಳಲಾಗಿತ್ತು. ಆದರೆ ಗ್ರಾಮಪ್ರದೇಶದ ಯಾವುದೇ ಸುಧಾರಣೆ ಸಾಧಿಸುವ ಮುನ್ನ ಅತ್ಯಂತ ಕ್ರೂರವಾದ ಜಮೀನ್ದಾರಿ ವ್ಯವಸ್ಥೆಯನ್ನು ರದ್ದುಮಾಡುವುದು ಅನಿವಾರ್ಯವೆಂಬುದರಲ್ಲಿ ಸಂದೇಹವಿರಲಿಲ್ಲ.

ಉತ್ತರ ಪ್ರದೇಶ, ಮಧ್ಯ ಪ್ರದೇಶ ಮುಂತಾದ, ಹಂಗಾಮಿ ಕಂದಾಯ ವ್ಯವಸ್ಥೆಯಿದ್ದ ರಾಜ್ಯಗಳಲ್ಲಿ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡುವುದು ಹೆಚ್ಚು ಕಷ್ಟವಾಗಲಿಲ್ಲ. ಏಕೆಂದರೆ ಅಲ್ಲಿ ಸಾಕಷ್ಟು ದಾಖಲೆಗಳೂ ಕಂದಾಯ ಆಡಳಿತ ಯಂತ್ರವೂ ಲಭ್ಯವಿದ್ದುವು. ಬಿಹಾರ, ಒರಿಸ್ಸ, ಪಶ್ಚಿಮ ಬಂಗಾಲ ರಾಜ್ಯಗಳ ವಿಚಾರ ಹಾಗಲ್ಲ. ಖಾಯಂ ಕಂದಾಯ ವ್ಯವಸ್ಥೆ ಇದ್ದ ಆ ರಾಜ್ಯಗಳಲ್ಲೂ ಜಾಗೀರ್‌ದಾರಿ ವ್ಯವಸ್ಥೆ ಇದ್ದ ರಾಜಸ್ಥಾನ, ಸೌರಾಷ್ಟ್ರ ರಾಜ್ಯಗಳಲ್ಲೂ ಜಮೀನುಗಳನ್ನು ಕುರಿತ ದಾಖಲೆಗಳನ್ನೂ ಕಂದಾಯ ವ್ಯವಸ್ಥೆಯನ್ನೂ ಹೊಸದಾಗಿ ರಚಿಸಬೇಕಾಗಿ ಬಂತು. ಅಂತೂ ಎಲ್ಲ ರಾಜ್ಯಗಳಲ್ಲೂ ಸರ್ಕಾರಕ್ಕೂ ರೈತನಿಗೂ ನಡುವಣ ಹಿಡುವಳಿಗಳನ್ನು ರದ್ದುಮಾಡುವ ಕಾನೂನುಗಳು ಜಾರಿಗೆ ಬಂದುವು.

ಜಮೀನ್ದಾರಿ ಪದ್ಧತಿಯ ರದ್ದಿಗಾಗಿ ಸ್ಥೂಲವಾಗಿ ಈ ರೀತಿ ಕ್ರಮ ಕೈಗೊಳ್ಳಲಾಯಿತು: 1 ಪಾಳು ನೆಲ, ಅರಣ್ಯ ಆಬಾದಿ ನೆಲ ಮುಂತಾದ–ಜಮೀನ್ದಾರರೇ ಮುಂತಾದ ಮಧ್ಯವರ್ತಿಗಳಿಗೆ ಸೇರಿದ್ದ–ಒಟ್ಟಿನ ನೆಲದ ವ್ಯವಸ್ಥೆ ಮತ್ತು ಅಭಿವೃದ್ಧಿಗಾಗಿ ಅವನ್ನು ಸರ್ಕಾರವೇ ವಹಿಸಿಕೊಂಡಿತು. 2 ಹಿತ್ತಲು, ಮಧ್ಯವರ್ತಿಗಳು ಖುದ್ದಾಗಿ ಸಾಗುವಳಿ ಮಾಡುತ್ತಿದ್ದ ಜಮೀನು ಮುಂತಾದವನ್ನು ಅವರ ವಶದಲ್ಲೇ ಇರಗೊಡಲಾಯಿತು. 3 ಬಹುತೇಕ ಎಲ್ಲ ರಾಜ್ಯಗಳಲ್ಲೂ ಮುಖ್ಯ ಗೇಣಿದಾರರಿಗೂ ಸರ್ಕಾರಕ್ಕೂ ನೇರಸಂಬಂಧ ಏರ್ಪಡಿಸಲಾಯಿತು. ಕೆಲವು ರಾಜ್ಯಗಳಲ್ಲಿ ಮುಖ್ಯ ಗೇಣಿದಾರರಿಗೆ ನೆಲದಲ್ಲಿ ಖಾಯಂ ಹಾಗೂ ವರ್ಗ ಮಾಡುವ ಹಕ್ಕುಗಳಿದ್ದದ್ದರಿಂದ ಅಲ್ಲಿ ಹೊಸದಾಗಿ ಸಂಬಂಧ ಏರ್ಪಡಿಸಬೇಕಾಗಿರಲಿಲ್ಲ.

ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡಿದ್ದಕ್ಕೆ ಪ್ರತಿಯಾಗಿ ಜಮೀನ್ದಾರರಿಗೆ ನೀಡಬೇಕೆಂದು ಗೊತ್ತುಮಾಡಿದ ಪರಿಹಾರ ಸೂತ್ರ ಎಲ್ಲ ರಾಜ್ಯಗಳಲ್ಲೂ ಒಂದೇ ರೀತಿಯಾಗಿರಲಿಲ್ಲ. ಅಸ್ಸಾಂ, ಬಿಹಾರ, ಒರಿಸ್ಸ, ಮಧ್ಯಪ್ರದೇಶ–ಈ ರಾಜ್ಯಗಳಲ್ಲಿ ಜಮೀನ್ದಾರನ ನಿವ್ವಳ ವರಮಾನವೇ ಪರಿಹಾರಧನ ನಿಷ್ಕರ್ಷೆಗೆ ಆಧಾರ. ಉತ್ತರ ಪ್ರದೇಶದಲ್ಲಿ ನಿವ್ವಳ ಆಸ್ತಿಯ ಆಧಾರದ ಮೇಲೆ ಇದನ್ನು ನಿಷ್ಕರ್ಷಿಸಲಾಯಿತು. ಮದ್ರಾಸಿನಲ್ಲಿ ಮೂಲವಾರ್ಷಿಕ ಮೊಬಲಗನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿತ್ತು. ನಿವ್ವಳ ವರಮಾನ, ಮೂಲವಾರ್ಷಿಕ ಮೊಬಲಗು ಅಥವಾ ನಿವ್ವಳ ಆಸ್ತಿಯ ಒಂದು ನಿರ್ದಿಷ್ಟ ಗಣಕವನ್ನು ಪರಿಹಾರಧನವಾಗಿ ನಿಷ್ಕರ್ಷಿಸಲಾಯಿತು. ಜಮೀನ್ದಾರರ ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳುವುದಕ್ಕೂ ಪರಿಹಾರಧನ ನಿಷ್ಕರ್ಷೆ ಹಾಗೂ ಪಾವತಿಗೂ ಇದ್ದ ನಾನಾ ಸಂವೈಧಾನಿಕ ತೊಡಕುಗಳನ್ನು ನಿವಾರಿಸಲು 1951, 1955 ಮತ್ತು 1964–65ರಲ್ಲಿ ಸಂವಿಧಾನಕ್ಕೆ ತಿದ್ದುಪಡಿಗಳನ್ನು ಮಾಡಲಾಯಿತು. ಜಮೀನ್ದಾರಿ ರದ್ದಿನಿಂದಾಗಿ ಭೂಸುಧಾರಣೆಯ ಮುಂದಿನ ಹಂತಗಳು ಸುಸೂತ್ರವಾಗಲು ಸಹಾಯವಾಯಿತು.

*

**ಜಮೇಕ :** ವೆಸ್ಟ್ ಇಂಡೀಸ್ ಗುಂಪಿನಲ್ಲಿರುವ ಸ್ವತಂತ್ರ ದ್ವೀಪ. ಕ್ಯಾರಿಬೀಯನ್ ಸಮುದ್ರದಲ್ಲಿರುವ ಇದರ ಉತ್ತರಕ್ಕೆ ಕ್ಯೂಬ (153 ಕಿಮೀ. ದೂರ) ಪೂರ್ವಕ್ಕೆ ಹೇಟೀ ದ್ವೀಪಗಳಿವೆ. ಉ.ಅ.$17^{0}43'$ ಮತ್ತು $18^{0}32'$ ಹಾಗೂ ಪ.ರೇ.$76^{0}11'$ ಮತ್ತು $78^{0}\ 21'$ ಮಧ್ಯದಲ್ಲಿದೆ. ಪೂರ್ವಪಶ್ಚಿಮವಾಗಿ ಸು. 233ಕಿ.ಮೀ. ಉದ್ದವಿರುವ ಇದರ ಒಟ್ಟು ವಿಸ್ತೀರ್ಣ 10,990ಚ.ಕಿಮೀ. ಜನಸಂಖ್ಯೆ 2,889,187 (2012). ರಾಜಧಾನಿ ಕಿಂಗ್‌ಸ್ಟನ್ (ಜನಸಂಖ್ಯೆ 937700,2011)

ಜಮೇಕದ ಬಹುಪಾಲು ಪ್ರದೇಶ ಟರ್ಷಿಯರಿ ಯುಗದ ನಿಕ್ಷೇಪಗಳಿಂದ ಕೂಡಿದೆ. ಈಶಾನ್ಯದ ಬ್ಲೂ ಪರ್ವತ ಪ್ರದೇಶದಲ್ಲಿ ಪುರಾತನ ಶಿಲೆಗಳಿವೆ. ಬ್ಲೂ ಪರ್ವತದ ಎತ್ತರ 2256ಮೀ. ಇದರ ಪೂರ್ವಕ್ಕೆ ಜಾನ್ ಕ್ರೌ (ಬ್ಲೇಕ್) ಪರ್ವತ ಪ್ರದೇಶವಿದೆ. ಇದು ಸುಣ್ಣಶಿಲೆಗಳಿಂದ ಕೂಡಿದ ತಪ್ಪಲು ಪ್ರದೇಶ (ಎತ್ತರ ಸು.1158ಮೀ.) ಜಮೇಕದ 3/4 ಭಾಗ ಸುಣ್ಣಶಿಲೆಗಳ ಪ್ರದೇಶ. ಇಲ್ಲಿ ಸಾಕಷ್ಟು ದಿಣ್ಣೆಗಳು, ಕೊಳ್ಳಗಳು ಹಾಗೂ ಇಂಗುಕುಳಿಗಳು (ಸಿಂಕ್ ಹೋಲ್ಸ್) ಉಂಟು. ದಟ್ಟನೆಯ ಹಸಿರು ಕಾಡು ಆವರಿಸಿದ ಜಾನ್ ಕ್ರೌ ಪರ್ವತ ಪ್ರದೇಶದಲ್ಲಿ ಅನೇಕ ಝರಿಗಳು, ನದಿಗಳು, ನೀರಿನ ಬುಗ್ಗೆಗಳು ಇವೆ. ಅಲ್ಲಲ್ಲಿ ಜ್ವಾಲಾಮುಖಿಗಳನ್ನೂ ಬಿಸಿನೀರಿನ ಬುಗ್ಗೆಗಳನ್ನೂ ಕಾಣಬಹುದು. ಜಮೇಕದ ಬಹುಪಾಲು ನದಿಗಳು ಸಾರಿಗೆಗೆ ಅನುಕೂಲವಾಗಿಲ್ಲ. ಕಪ್ಪು ನದಿಯಲ್ಲಿ ಮುಖದ ಬಳಿಯಿಂದ ಕೇವಲ 40ಕಿ.ಮೀ. ದೂರ ನೌಕೆಗಳ ಯಾನ ಸಾಧ್ಯ. ಪೋರ್ಟ್ ಮರ್ಯಾಂಟ್, ಕಿಂಗ್‌ಸ್ಟನ್, ಓಲ್ಡ್ ಹಾರ್ಬರ್, ಮಾಂಟೀಗೋ ಬೇ, ಫ್ಯಾಲ್‌ಮತ್, ಪೋರ್ಟ್ ಆಂಟೆನಿಯೋ–ಇವು ಇಲ್ಲಿಯ ಕೆಲವು ಪ್ರಸಿದ್ಧ ಬಂದರುಗಳು.

ಜಮೇಕದ ವಾಯುಗುಣದಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸಗಳುಂಟು. ಸಮುದ್ರ ಪಾತಳಿಯ ಪ್ರದೇಶದಲ್ಲಿ ಉಷ್ಣವಲಯದ ವಾಯುಗುಣ ಇದ್ದರೆ ಎತ್ತರದ ಉತ್ತರ ನಾಡಿನಲ್ಲಿ ಸಮಶೀತೋಷ್ಣ ವಾಯುಗುಣ ಇದೆ. ಸಾಮಾನ್ಯವಾಗಿ ಇಲ್ಲಿಯ ಉಷ್ಣತೆಯಲ್ಲಿ ಶ್ರಾಯೀಣ ವ್ಯತ್ಯಾಸಗಳು ಕಡಿಮೆ. ಚಳಿಗಾಲದ ಉಷ್ಣತೆ $75^{0}$ ಫ್ಯಾ. ಬೇಸಗೆಯಲ್ಲಿ ಅದು ಕೇವಲ ಸು $80^{0}$ ಫ್ಯಾ.ಗೆ ಏರುತ್ತದೆ. ಜಮೇಕದ ದಕ್ಷಿಣ ತೀರದಲ್ಲಿರುವ ಕಿಂಗ್‌ಸ್ಟನಿನ ವಾರ್ಷಿಕ ಸರಾಸರಿ ಉಷ್ಣತೆ $80^{0}$ ಫ್ಯಾ. ಇಲ್ಲಿಯ ವಾರ್ಷಿಕ ಸರಾಸರಿ ಮಳೆ 77’ ಆದರೆ ಉತ್ತರ ತೀರದಿಂದ ದಕ್ಷಿಣ ತೀರದ ವರೆಗೆ ಮಳೆಯ ಪರಿಮಾಣ ಬಲು ವ್ಯತ್ಯಾಸವಾಗುತ್ತದೆ. ಈಶಾನ್ಯದಲ್ಲಿರುವ ಬ್ಲೂ ಪರ್ವತ ಪ್ರದೇಶದಲ್ಲಿ $200^{0}$ ಆದರೆ, ದಕ್ಷಿಣದ ಕಿಂಗ್‌ಸ್ಟನ್ ಸುತ್ತಣ ಪ್ರದೇಶದ ವಾರ್ಷಿಕ ಮಳೆ ಕೇವಲ 33’ ಮೇ–ಅಕ್ಟೋಬರ್ ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುವ ಕಾಲ.

ಆಗಸ್ಟ್–ನವೆಂಬರ್‌ಗಳಲ್ಲಿ ಚಂಡಮಾರುತ ಬೀಸುತ್ತದೆ. ಜಮೇಕ ಅನೇಕ ಸಲ ಇದಕ್ಕೆ ಬಲಿಯಾಗಿದೆ. ಜಮೇಕದಲ್ಲಿಯ ಬಹುಪಾಲು ಕಾಡನ್ನು ಕಡಿದುಹಾಕಲಾಗಿದೆ. ಈಶಾನ್ಯ ಪ್ರದೇಶದಲ್ಲಿ ನೈಸರ್ಗಿಕ ಕಾಡು ಸ್ವಲ್ಪಮಟ್ಟಿಗೆ ಉಳಿದುಬಂದಿದೆ. ಇಲ್ಲಿ ಬಿದಿರು, ಎಬೊನಿ, ಮಹಾಗನಿ, ಕರಿಮರ ಬೆಳೆಯುತ್ತವೆ. ದಕ್ಷಿಣ ಪ್ರದೇಶದಲ್ಲಿ ಒಣನಾಡಿನ ಕುರುಚಲು ಗಿಡಗಳು ಬೆಳೆಯುತ್ತವೆ. ಈಗ ಸರ್ಕಾರ ಮತ್ತೆ ಕಾಡು ಬೆಳೆಸುವುದರ ಕಡೆ ಗಮನವೀಯುತ್ತಿದೆ. ಪ್ರತಿವರ್ಷ ಸುಮಾರು 500 ಎಕರೆ ಪ್ರದೇಶದಲ್ಲಿ ಕಾಡನ್ನು ವಿಸ್ತರಿಸಲಾಗುತ್ತಿದೆ. ಇಲ್ಲೆಲ್ಲ ಪೈನ್, ನೀಲಗಿರಿ, ದೇವದಾರು ಮತ್ತು ಮಹಾಗನಿ ಗಿಡಗಳನ್ನು ನೆಡಲಾಗುತ್ತಿದೆ. ಕಾಡುಹಂದಿ ಇಲ್ಲಿಯ ಕೆಲವೇ ಮೂಲವಾಸಿ ಸಸ್ತನಿಗಳಲ್ಲೊಂದು. ಇಲ್ಲಿಯ ಬಹುಪಾಲು ಪ್ರಾಣಿಗಳು ಐರೋಪ್ಯ ವಲಸೆಗಾರರೊಂದಿಗೆ ಬಂದವು. ಉರಗಗಳು, ಹಲ್ಲಿಗಳು ಅಪಾರ ಸಂಖ್ಯೆಯಲ್ಲಿವೆ. ಹಕ್ಕಿಗಳಿಗಂತೂ ಕೊರತೆಯೇ ಇಲ್ಲ.




ಗಣಿ ಉದ್ಯಮದಲ್ಲಿ ಜಮೇಕ ತುಂಬ ಪ್ರಮುಖವಾದ ದೇಶ. ಜಗತ್ತಿನ ಬಾಕ್ಸೈಟ್ ಅದಿರಿನ ಬಹು ದೊಡ್ಡ ನಿಕ್ಷೇಪ ಇರುವುದು ಇಲ್ಲಿಯೇ. 1963ರಲ್ಲಿ ಜಗತ್ತಿನ ಒಟ್ಟು ಬಾಕ್ಸೈಟ್ ಉತ್ಪಾದನೆಯಲ್ಲಿ ಜಮೇಕದ ಪಾಲೇ ಶೇ.25 ಆಗಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡದ ಕಂಪನಿಗಳು ಇಲ್ಲಿಯ ಗಣಿ ಉದ್ಯಮದಲ್ಲಿ ಹೆಚ್ಚಿನ ಪಾಲು ಹೊಂದಿವೆ. 1952ರಲ್ಲಿ ಮೊದಲ ಬಾರಿಗೆ ಬಾಕ್ಸೈಟಿನ ರಫ್ತು ಪ್ರಾರಂಭವಾದರೂ ಇಂದು ಈ ಉದ್ಯಮವೇ ದೇಶದ ಆರ್ಥಿಕತೆಯಲ್ಲಿ ಮುಖ್ಯವಾದ್ದು. 2006ರಲ್ಲಿ ಬಾಕ್ಸೈಟ್ ಅದಿರಿನ ರಫ್ತಿನಿಂದ ಜಮೇಕ ಗಳಿಸಿದ ವಿದೇಶೀ ವಿನಿಮಯ 1.3 ಬಿಲಿಯನ್ ಅಮೆರಿಕನ್ ಡಾಲರುಗಳು. ಜಿಪ್ಸಮ್ ಇಲ್ಲಿಯ ಇನ್ನೊಂದು ಮುಖ್ಯ ಅದುರು. 1984ರಲ್ಲಿ 83.000 ಟನ್ ಜಿಪ್ಸಮ್ಮನ್ನು ರಫ್ತು ಮಾಡಲಾಯಿತು. ಬ್ಲೂ ಪರ್ವತ ಪ್ರದೇಶದಲ್ಲಿ ಒಳ್ಳೆಯ ಅಮೃತಶಿಲೆ ಸಿಗುತ್ತದೆ. ಇತ್ತೀಚಿಗೆ ತಾಮ್ರ, ಕಬ್ಬಿಣ ಹಾಗೂ ತೈಲನಿಕ್ಷೇಪಗಳ ಅನ್ವೇಷಣೆ ಪ್ರಾರಂಭವಾಗಿದೆ.

**ಇತಿಹಾಸ :** 1494ರಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಇದನ್ನು ಮೊದಲು ಗುರುತಿಸಿದ. 16ನೆಯ ಶತಮಾನದ ಆದಿಯಲ್ಲಿ ಸ್ಪ್ಯಾನಿಷರು ಇಲ್ಲಿ ವಲಸೆ ಹೊಡಿದರು. ಅದಕ್ಕೂ ಮೊದಲೇ ಸು.1000ದಿಂದ ಇಲ್ಲಿ ನೆಲೆಯೂರಿದ್ದ ಆರಾವಾಕ್ ಇಂಡಿಯನರನ್ನು ಕ್ರಮೇಣ ಹೊರದೊಡಲಾಯಿತು. ತಮ್ಮ ದನದ ದೊಡ್ಡಿ ಹಾಗೂ ಇತರ ಕೆಲಸಗಳಿಗಾಗಿ ಸ್ಪ್ಯಾನಿಷರು ಆಫ್ರಿಕದಿಂದ ಇಲ್ಲಿಗೆ ಗುಲಾಮರನ್ನು ತಂದರು. 1665ರಲ್ಲಿ ಇಂಗ್ಲಿಷರು ಜಮೇಕವನ್ನು ವಶಪಡಿಸಿಕೊಂಡರು. ಆಗ ಇದರ ಜನಸಂಖ್ಯೆ ಕೇವಲ 3,000.

1670ರ ವೇಳೆಗೆ ಬ್ರಿಟಿಷರು ಜಮೇಕದಲ್ಲಿ ಒಳ್ಳೆಯ ಆಡಳಿತ ಸ್ಥಾಪಿಸಿದರು. 1672ರಲ್ಲಿ ಗುಲಾಮಗಿರಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಬ್ರಿಟಿಷರ ಏಕಸ್ವಾಮ್ಯ ಏರ್ಪಟ್ಟು ರಾಯಲ್ ಆಫ್ರಿಕನ್ ಕಂಪನಿ ಎಂಬ ಸಂಸ್ಥೆ ಸ್ಥಾಪಿತವಾಯಿತು. ಅನಂತರ ಜಮೇಕ ಗುಲಾಮ ವ್ಯಾಪಾರದ ಪ್ರಮುಖ ಕೇಂದ್ರವಾಗಿ ಮಾರ್ಪಟ್ಟಿತು. ಬ್ರಿಟಿಷರ ವಸಾಹತಾದ ಅನಂತರ ಜಮೇಕ ಆರ್ಥಿಕವಾಗಿ ಮುಂದುವರಿಯಿತು. 17ನೆಯ ಶತಮಾನದ ಉತ್ತರಾರ್ಧದಲ್ಲಿ ಜಮೇಕದಲ್ಲಿ 70 ಸಕ್ಕರೆ ತಯಾರಿಸುವ ಕೇಂದ್ರಗಳೂ 60 ಇಂಡಿಗೊ ಕೇಂದ್ರಗಳೂ 60 ಕೋಕೋ ಕೇಂದ್ರಗಳೂ ಇದ್ದುವು. ಜಮೇಕದಲ್ಲಿ ಬ್ರಿಟಿಷ್ ಕಾನೂನುಗಳು ಜಾರಿಗೆ ಬಂದು ವರ್ಷಂಪ್ರತಿ 8,000 ಪೌಂಡುಗಳನ್ನು ಚಕ್ರವರ್ತಿಗೆ ಸಲ್ಲಿಸಬೇಕೆಂದು ನಿಗದಿಯಾಗಿತ್ತು. 1692ರ ಭೂಕಂಪದಲ್ಲಿ ಜಮೇಕದ ಮುಖ್ಯ ಪಟ್ಟಣವಾದ ಪೋರ್ಟ್ ರಾಯಲ್‌ನ ಹೆಚ್ಚು ಭಾಗ ನಾಶವಾಯಿತು. ಅಲ್ಲಿ ಕಿಂಗ್‌ಸ್ಟನ್ ಎಂಬ ಹೊಸ ಪಟ್ಟಣವನ್ನು ಕಟ್ಟಿ ಆಡಳಿತ ಕೇಂದ್ರವನ್ನಾಗಿ ಮಾಡಿಕೊಳ್ಳಲಾಯಿತು.

1782ರಲ್ಲಿ ಸ್ಪೇನ್ ಮತ್ತು ಫ್ರಾನ್ಸ್ ದೇಶಗಳು ಜಮೇಕದಿಂದ ಬ್ರಿಟಿಷರನ್ನು ಓಡಿಸಲು ಪ್ರಯತ್ನಪಟ್ಟು ಸೋತುವು. 1806ರಲ್ಲಿ ಫ್ರೆಂಚರು ಪುನಃ ಜಮೇಕವನ್ನು ಆಕ್ರಮಿಸಲು ವಿಫಲ ಪ್ರಯತ್ನ ನಡೆಸಿದರು. ಆ ವೇಳೆಗೆ ಜಮೇಕ ಆರ್ಥಿಕವಾಗಿ ವಿಶೇಷ ಪ್ರಗತಿ ಸಾಧಿಸಿತ್ತು. ಅಲ್ಲಿ 3,00,000 ಮಂದಿ ಗುಲಾಮರಿದ್ದರು. ಕಾಫಿ ಮತ್ತು ಸಕ್ಕರೆಯ

ರಡ್ನಿ ಸ್ಮಾರಕ, ಸ್ಪ್ಯಾನಿಷ್ ಟೌನ್

ಉತ್ಪಾದನೆ ವಿಶೇಷವಾಗಿ ಅಧಿಕವಾಗಿ, ಹೆಚ್ಚು ಭಾಗವನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. 1807ರಲ್ಲಿ ಗುಲಾಮ ವ್ಯಾಪಾರವನ್ನೂ 1834ರಲ್ಲಿ ಗುಲಾಮಗಿರಿಯನ್ನೂ ನಿಷೇಧಿಸುವ ಕಾನೂನುಗಳು ಬಂದು ಜಮೇಕದ ಆರ್ಥಿಕತೆಯ ಮೇಲೆ ವಿಪರೀತ ಪರಿಣಾಮ ಬೀರಿದುವು. ಪ್ಲಾಂಟೇಷನ್ ಆದಾಯ ಕುಸಿದು ಬಿತ್ತು. 1838ರ ವೇಳೆಗೆ ಗುಲಾಮರನ್ನು ಸ್ವತಂತ್ರ ಗೊಳಿಸಲಾಯಿತು. ವಿಮೋಚನೆ ಹೊಂದಿದ ಪ್ರತಿ ವ್ಯಕ್ತಿಗೂ 19 ಪೌಂಡುಗಳಂತೆ ಸಹಾಯ ಧನ ಕೊಡಲಾಯಿತು. ಗುಲಾಮಗಿರಿಯಿಂದ ಮುಕ್ತವಾದ ಹೆಚ್ಚು ಮಂದಿ ಬೆಟ್ಟ ಪ್ರದೇಶಗಳತ್ತ ಹೋಗಿ ಸ್ವಂತ ಬೇಸಾಯದಲ್ಲಿ ತೊಡಗಿದ್ದರು. ಇಂದಿಗೂ ಅವರ ವಂಶಸ್ಥರು ಚಿಕ್ಕ ತೋಟಗಳಲ್ಲಿ ಲಾಭದಾಯಕವಾಗಿ ಬೇಸಾಯ ಮಾಡಿಕೊಂಡಿದ್ದಾರೆ.

ಹೆಣೆದ ಬುಟ್ಟಿ ಮತ್ತು ಇತರ ವಸ್ತುಗಳು. ಕಿಂಗ್‌ಸ್ಟನ್ನಿನಲ್ಲಿ ಇಂಥವು ಪ್ರವಾಸಿಗಳನ್ನು ಆಕರ್ಷಿಸುತ್ತವೆ

ಕಾರ್ಯಾಂಗ ಮತ್ತು ಶಾಸಕಾಂಗಗಳ ಮಧ್ಯೆ ಆಡಳಿತ ನೀತಿಯ ಬಗ್ಗೆ ಒಡಕು ತಲೆದೋರಿತು. ಸರ್ ಚಾರ್ಲ್ಸ್ ಮೆಟ್ಕಾಫ್ ಮತ್ತು ಅರ್ಲ್ ಆಫ್ ಎಲ್ಗಿನ್ನರು ಜಮೇಕದ ರಾಜ್ಯಪಾಲರಾಗಿದ್ದಾಗ ದೇಶದ ಆಂತರಿಕ ಸ್ಥಿತಿಗಳನ್ನು ಉತ್ತಮ ಪಡಿಸಲು ಹಲವು ಸುಧಾರಣೆಗಳನ್ನು ಜಾರಿಗೆ ತಂದರು. ಭಾರತದಿಂದ ವಲಸೆ ಬರುವವರಿಗೆ ಪ್ರೋತ್ಸಾಹ ನೀಡಿದರು; ರೈಲುಮಾರ್ಗಗಳನ್ನು ಸ್ಥಾಪಿಸಿದರು. ಹೀಗೆ ಪ್ಲಾಂಟೇಷನ್‌ಗಳಲ್ಲಿ ಕೆಲಸಗಾರರ ಕೊರತೆಯನ್ನು ನೀಗಿಸಲು ಪ್ರಯತ್ನಿಸಿದರು. ಆದರೆ ಬಡತನ, ತೆರಿಗೆಯ ಹೊರೆ ಮತ್ತು ನ್ಯಾಯಾಂಗದ ಅಸಮರ್ಪಕತೆಯಿಂದ ಜಮೇಕದಲ್ಲಿ ಚಳವಳಿಯ ವಾತಾವರಣ ಮೂಡಿತು. 1865ರಲ್ಲಿ ಮರ್‍ಯಾಂಟ್ ಬೇಯಲ್ಲಿ ನಡೆದ ದಂಗೆಯಲ್ಲಿ ಒಬ್ಬ ನ್ಯಾಯಾಧೀಶ ಮತ್ತು 18 ಮಂದಿ ಬಿಳಿಯರು ಕೊಲೆಯಾದರು. ದಂಗೆಯನ್ನು ಪ್ರಚೋದಿಸಿದ ಗೋರ್ಡನ್ ಎಂಬುವನನ್ನು ಸರ್ಕಾರ ನೇಣು ಹಾಕಿ ಉಗ್ರವಾಗಿ ಹತ್ತಿಕ್ಕಿತು. ಈ ಉಗ್ರ ದಂಡನೆಯ ಪರಿಣಾಮ ಇಡೀ ವೆಸ್ಟ್ ಇಂಡೀಸ್‌ನಲ್ಲಿ ಪರಿಣಾಮ ಬೀರಿತು. ಇಂಗ್ಲೆಂಡಿನಲ್ಲಿ ಹಲವರು ಈ ಉಗ್ರ ದಮನ ನೀತಿಯನ್ನು ಖಂಡಿಸಿದರು. ಈ ಕಾರಣದಿಂದ ಅಲ್ಲಿಯ ರಾಜ್ಯಪಾಲನನ್ನು ಬ್ರಿಟಿಷ್ ಸರ್ಕಾರ ಹಿಂದಕ್ಕೆ ಕರೆಸಿಕೊಂಡು ಜಮೇಕ ದ್ವೀಪದ ಆಡಳಿತ ನೀತಿಯಲ್ಲಿ ಸುಧಾರಣೆಗಳನ್ನು ಆಚರಣೆಗೆ ತಂದಿತು.

1866ರಲ್ಲಿ ಜಾನ್ ಪೀಟರ್ ಗ್ರ್ಯಾಂಟನನ್ನು ಜಮೇಕದ ರಾಜ್ಯಪಾಲನಾಗಿ ಬ್ರಿಟಿಷ್ ಸರ್ಕಾರ ನೇಮಿಸಿತು. ಪೀಟರ್ ಗ್ರ್ಯಾಂಟ್ ಅನೇಕ ಉಪಯುಕ್ತ ಸುಧಾರಣೆಗಳನ್ನು ಜಾರಿಗೆ ತಂದ. ಹಳೆಯ ನ್ಯಾಯಾಂಗದಲ್ಲಿ ನ್ಯೂನತೆಗಳಿದ್ದದ್ದರಿಂದ ಅದನ್ನು ರದ್ದುಗೊಳಿಸಿ ಐರ್ಲೆಂಡಿನಲ್ಲಿ ಆಚರಣೆಯಲ್ಲಿದ್ದ ನ್ಯಾಯಾಂಗ ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತರಲಾಯಿತು. ಸಾರ್ವಜನಿಕ ವೈದ್ಯಕೀಯ ಸೌಲಭ್ಯ, ಲೋಕೋಪಯೋಗಿ ಇಲಾಖೆ, ಸರ್ಕಾರಿ ಉಳಿತಾಯ ಬ್ಯಾಂಕ್–ಇವುಗಳ ಸ್ಥಾಪನೆಯಾಯಿತು. ವಿದ್ಯಾಭ್ಯಾಸ ಸೌಲಭ್ಯವನ್ನು ವಿಸ್ತರಿಸಲಾಯಿತು. ವ್ಯವಸಾಯಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಯಿತು. ಪೀಟರ್ ಗ್ರ್ಯಾಂಟನ ಆಳ್ವಿಕೆಯ ಕಾಲದಲ್ಲಿ ಜಮೇಕದಲ್ಲಿ ಕ್ಯಾಪ್ಟನ್ ಎ.ಡಬ್ಲ್ಯು. ಬೇಕರ್ ಎಂಬವನು ಬಾಳೆಹಣ್ಣಿನ ವ್ಯಾಪಾರವನ್ನು ಪ್ರಾರಂಭಿಸಿದ. ಅನಂತರ ಅವನು ಸ್ಥಾಪಿಸಿದ ಬಾಳೆಹಣ್ಣಿನ ವ್ಯಾಪಾರ ಸಂಸ್ಥೆ ಯುನೈಟೆಡ್ ಫ್ರೂಟ್ ಕಂಪನಿ ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂತು. ಬಾಳೆಯನ್ನು ಚಿಕ್ಕ ಮತ್ತು ದೊಡ್ಡ ತೋಟಗಳಲ್ಲೆಲ್ಲ ವಿಶೇಷವಾಗಿ ಬೆಳೆಯುವಂತಾಗಿ ಲಾಭದಾಯಕವಾಗಿ ರಫ್ತು ಮಾಡುವಂತಾಯಿತು.

1907ರಲ್ಲಿ ರಾಜಧಾನಿಯಾದ ಕಿಂಗ್‌ಸ್ಟನ್ ತೀವ್ರ ಭೂಕಂಪಕ್ಕೆ ತುತ್ತಾಯಿತು. ಪಟ್ಟಣದ ಅನೇಕ ಕಟ್ಟಡಗಳು ಹಾಳಾದುವು. ಬಹುಭಾಗ ಸುಟ್ಟುಹೋಯಿತು. ಆಗ ಸತ್ತವರ ಸಂಖ್ಯೆ ಸು.800. ಹಾಳುಬಿದ್ದಿದ್ದ ಕಿಂಗ್‌ಸ್ಟನ್ ನಗರವನ್ನು ರಾಜ್ಯಪಾಲ ಸರ್ ಸಿಡ್ನಿ ಆಲಿವರನ ಕಾಲದಲ್ಲಿ ಆಧುನಿಕವಾಗಿ ಪುನಃ ಕಟ್ಟಲಾಯಿತು. ಬೃಹತ್ ಕಟ್ಟಡಗಳಿಂದಲೂ ವಿಶಾಲ ಬೀದಿಗಳಿಂದಲೂ ಉದ್ಯಾನಗಳಿಂದಲೂ ಕಿಂಗ್‌ಸ್ಟನ್ ಪಟ್ಟಣ ಶೋಭಿಸತೊಡಗಿತು.

1884ರಲ್ಲಿ ಪ್ರಜಾಪ್ರತಿನಿಧಿ ಸರ್ಕಾರವನ್ನು ಪ್ರಾರಂಭಿಸಲಾಯಿತು. 9 ಮಂದಿ ಚುನಾಯಿತ ಪ್ರತಿನಿಧಿಗಳನ್ನು ಶಾಸಕಾಂಗಕ್ಕೆ ತೆಗೆದುಕೊಳ್ಳಲಾಯಿತು. 1895ರ ವೇಳೆಗೆ ಚುನಾಯಿತ ಪ್ರತಿನಿಧಿಗಳ ಸಂಖ್ಯೆಯನ್ನು 14ಕ್ಕೆ ಏರಿಸಲಾಯಿತು. 1922 ಮತ್ತು 1926ರಲ್ಲಿ ಅನೇಕ ಸುಧಾರಣೆಗಳನ್ನು ತರಲಾಯಿತು. 1944ರಲ್ಲಿ ಜಾರಿಗೆ ಬಂದ ಸಂವಿಧಾನದ ಪ್ರಕಾರ ವಯಸ್ಕ ಪ್ರಜೆಗಳಿಂದ ಚುನಾಯಿತರಾದ ಸದಸ್ಯರನ್ನುಳ್ಳ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಲಾಯಿತು. ಕ್ರಮೇಣ ಎರಡು ರಾಜಕೀಯ ಪಕ್ಷಗಳಿಂದ ಕೂಡಿದ ವ್ಯವಸ್ಥೆ ರೂಪುಗೊಂಡಿತು. 1953ರ ಸುಧಾರಣೆಯ ಪ್ರಕಾರ ಸರ್ಕಾರದ ಇಲಾಖೆಗಳನ್ನು ಚುನಾಯಿತರಾದ ಸಚಿವರು ವಹಿಸಿಕೊಂಡರು. ನಾಮಕರಣ ಸದಸ್ಯರಿಂದ ಕೂಡಿ ಪರಿಮಿತ ಅಧಿಕಾರ ಹೊಂದಿದ್ದ ವಿಧಾನ ಪರಿಷತ್ತು, ಉನ್ನತ ಅಧಿಕಾರಿಗಳು ಮತ್ತು ಸಚಿವರಿಂದ ಕೂಡಿದ ಕಾರ್ಯಾಂಗ ಇವು ರಾಜ್ಯಪಾಲನ ಅಧ್ಯಕ್ಷತೆಯಲ್ಲಿ ಆಡಳಿತ ನಡೆಸುವ ಏರ್ಪಾಡಾಯಿತು. ಅಧಿಕಾರ ವರ್ಗದ ಸದಸ್ಯರನ್ನು ಕಾರ್ಯಾಂಗದಿಂದ ತೆಗೆದು ಹಾಕಿ ಮುಖ್ಯಮಂತ್ರಿಯ ನಾಯಕತ್ವದ ಸಂಪುಟ ಪದ್ಧತಿಯ ಮಂತ್ರಿಮಂಡಳವನ್ನು ಸ್ಥಾಪಿಸಿದ್ದು 1957ರಲ್ಲಿ. ಪ್ರಪಂಚದ ಎರಡು ಮಹಾಯುದ್ಧಗಳಲ್ಲೂ ಜಮೇಕನರು ಬ್ರಿಟಿಷ್ ಸೇನೆಯಲ್ಲಿ ಸೈನಿಕರಾಗಿ ಯುದ್ಧದಲ್ಲಿ ಪಾಲ್ಗೊಂಡರೂ ಜಮೇಕ ಯುದ್ಧಕ್ಕೆ ಸೇರಲಿಲ್ಲ. ಎರಡನೆಯ ಮಹಾಯುದ್ಧಾನಂತರ ವಸಾಹತು ಅಭಿವೃದ್ಧಿ ಮತ್ತು ಕಲ್ಯಾಣ ಅಧಿನಿಯಮಗಳ ಅಡಿಯಲ್ಲಿ ಜಮೇಕ ವಿಶೇಷ ಅಭಿವೃದ್ಧಿ ಹೊಂದಿತು. 1947ರಲ್ಲಿ ಇದೇ ಅಧಿನಿಯಮದ ಪ್ರಕಾರ ವೆಸ್ಟ್ ಇಂಡೀಸ್ ವಿಶ್ವವಿದ್ಯಾಲಯ ಜಮೇಕದಲ್ಲಿ ಸ್ಥಾಪಿತವಾಯಿತು.

ಅನೇಕ ಕ್ಯಾರಿಬಿಯನ್ ದ್ವೀಪಗಳು ಸೇರಿ ಒಟ್ಟಾಗಿ ಸ್ಥಾಪಿಸಿಕೊಂಡಿದ್ದ ವೆಸ್ಟ್ ಇಂಡೀಸ್ ಒಕ್ಕೂಟವನ್ನು 1958ರ ಜನವರಿ 3ರಂದು ಜಮೇಕ ಸೇರಿತು. 1959ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪೀಪಲ್ಸ್ ನ್ಯಾಷನಲಿಸ್ಟ್ ಪಕ್ಷದ ಮುಖಂಡನಾದ ನಾರ್ಮನ್ ಮ್ಯಾನ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ. ಆದರೆ 1960ರಲ್ಲಿ ಜಮೇಕ ಲೇಬರ್ ಪಕ್ಷದ ನಾಯಕನಾದ ಅಲೆಕ್ಸಾಂಡರ್ ಬಸ್ಟಮಂಟ್ ಒಕ್ಕೂಟದಿಂದ ಜಮೇಕ ಹಿಂದಿರುಗಬೇಕೆಂದು ಚಳವಳಿ ಹೂಡಿದ. ಈ ಚಳವಳಿಗೆ ಹೆಚ್ಚು ಪುರಸ್ಕಾರ ದೊರೆಯಿತು. 1962ರ ಸಾರ್ವತ್ರಿಕ ಚುನಾವಣೆಯಲ್ಲಿ ಲೇಬರ್ ಪಕ್ಷ ವಿಜಯಗಳಿಸಿ ಬಸ್ಟಮಂಟ್ ಪ್ರಧಾನಮಂತ್ರಿಯಾದ. ಅದೇ ವರ್ಷ ವೆಸ್ಟ್ ಇಂಡೀಸ್ ಒಕ್ಕೂಟದಿಂದ ಜಮೇಕ ಹೊರಬಂತು. 1962ರ ಆಗಸ್ಟ್ 6ರಂದು ಜಮೇಕ ಸ್ವತಂತ್ರ ರಾಷ್ಟ್ರವಾಗಿ ಕಾಮನ್‌ವೆಲ್ತ್ ಒಕ್ಕೂಟ ಸೇರಿತು.

ಜಮೇಕದಲ್ಲಿ ಮೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ. ಕೇವಲ 272 ಕಿಮೀ ಉದ್ದದ ರೈಲು ಮಾರ್ಗದಲ್ಲಿ, 57 ಕಿಮೀ ಮಾತ್ರ ಉಪಯೋಗದಲ್ಲಿದೆ.

(ಜಿ.ಆರ್.ಆರ್.)

**ಜಮ್ಮು :** ಜಮ್ಮು ಮತ್ತು ಕಾಶ್ಮೀರ ರಾಜ್ಯದ ಚಳಿಗಾಲದ ರಾಜಧಾನಿ; ಜಮ್ಮು ಜಿಲ್ಲೆಯ, ಜಮ್ಮು ವಿಭಾಗದ ಮುಖ್ಯ ಪಟ್ಟಣ. ಚೀನಾಬ್ ನದಿಯ ಉಪನದಿಯಾದ ಟಾವಿಯ ದಡದ ಮೇಲೆ, ಶ್ರೀನಗರದಿಂದ 153 ಕಿಮೀ ದಕ್ಷಿಣಕ್ಕೆ, ಉ.ಅ. 32° 47' ಮತ್ತು ಪೂ.ರೇ. 74° 50' ಮೇಲೆ ಇದೆ. ಜನಸಂಖ್ಯೆ 5.9ಮಿಲಿಯನ್(2011). ಜಮ್ಮು ವಿಭಾಗದಲ್ಲಿ ಜಮ್ಮು (2011 ಜನಸಂಖ್ಯೆ 15,26,406), ಕಾಟುವಾ (615711), ಉಧಮ್‌ಪುರ (555357), ದೋಡಾ (409576) ಮತ್ತು ಪುಂಚ್ (476820), ರಾಜೌರಿ (619266), ರಾಮ್‌ಬನ್(283313), ರಿಅಸಿ (314714), ಸಾಂಬ (283313), ಕಿಷ್ತವಾರ್ (231037)ಎಂಬ ಜಿಲ್ಲೆಗಳಿವೆ. ಈ ವಿಭಾಗ ಹೆಚ್ಚಾಗಿ ಗುಡ್ಡಗಾಡು. ವಾರ್ಷಿಕ ಮಳೆ 41". ಕೆಲವೆಡೆ ಗೋದಿ ಮತ್ತು ಮೆಕ್ಕೆಜೋಳ ಬೆಳೆಯುತ್ತಾರೆ.

ಶ್ರೀ ವೈಷ್ಣೋದೇವಿ ದೇವಾಲಯ

ಜಮ್ಮುವನ್ನು ದೇವಾಲಯಗಳ ನಗರ ಎಂದು ಕರೆಯುತ್ತಾರೆ. ಅಧಿಕೃತವಾಗಿ ಇದನ್ನು ಜಮ್ಮು ತಾವಿ ಎಂದು ಕರೆಯುತ್ತಾರೆ. ಪ್ರಸಿದ್ಧವಾದ ವೈಷ್ಣೋದೇವಿ ದೇವಸ್ಥಾನ ಇಲ್ಲಿದೆ. ಜಮ್ಮು ನಗರದಲ್ಲಿ ಅನೇಕ ಪುರಾಣಪ್ರಸಿದ್ಧ ಅವಶೇಷಗಳನ್ನು ನೋಡಬಹುದು. ಇಲ್ಲಿಯ ರಘುನಾಥ ದೇವಾಲಯ ಪ್ರಸಿದ್ಧವಾದ್ದು. ಟಾವಿ ನದಿಯ ಎಡದಡದಲ್ಲಿ ರಾಜಮಹಲ್ ಇದೆ. ಭಾರತೀಯ ರೈಲ್ವೆ ಮಾರ್ಗದ ಅಂತಿಮ ನಿಲ್ದಾಣವಾದ ಪಠಾಣ್‌ಕೋಟೆಯೊಡನೆ ಜಮ್ಮು ನಗರ ಸಂಪರ್ಕ ಹೊಂದಿದೆ. ಇಲ್ಲಿ ಅರಣ್ಯ ಇಲಾಖೆಯ ಕೇಂದ್ರವುಂಟು. ಜಮ್ಮು ನಗರದ ಹತ್ತಿರ ಇರುವ ಜಂಗಲಗಲಿ ಮತ್ತು ಕಾಲಕೋಟ್ ಪ್ರದೇಶಗಳಲ್ಲಿ ಕಲ್ಲಿದ್ದಲನ್ನು ತೆಗೆಯುತ್ತಾರೆ. ಜಿಪ್ಸಮ್ ಗಣಿಯೂ ಉಂಟು. ಜಮ್ಮು ನಗರದಲ್ಲಿ ಶಾಲಾಕಾಲೇಜುಗಳೂ ಔದ್ಯೋಗಿಕ ಶಿಕ್ಷಣ ಸಂಸ್ಥೆಯೂ ಇವೆ. ಜಮ್ಮು ನಗರದ ಬಹುಸಂಖ್ಯಾತರು ಡೋಗ್ರಾ ಮತ್ತು ಸಿಕ್ಖರು. ವ್ಯಾಪಾರ ಮತ್ತು ವ್ಯವಸಾಯ ಜನರ ಮುಖ್ಯ ಉದ್ಯೋಗ.



ರಘುನಾಥ ದೇವಾಲಯ

ಜಮ್ಮು ಪ್ರದೇಶ ಮೊದಲು ರಜಪೂತರ ಆಳ್ವಿಕೆಯಲ್ಲಿತ್ತು. ಅವರನ್ನು ಸಿಕ್ಖರು ಜಯಿಸಿದ ಅನಂತರ ಜಮ್ಮು ನಗರ ಸಿಖ್ ಸಾಮ್ರಾಜ್ಯದ ಒಂದು ಭಾಗವಾಯಿತು. ಜಮ್ಮು ನಗರವನ್ನು ಸ್ವಲ್ಪ ಸಮಯ ರಣಜಿತ್ ಸಿಂಗನೂ ಅವನ ಮರಣಾನಂತರ ಗುಲಾಬ್ ಸಿಂಗನೂ ಆಳಿದರು. 1846ರಲ್ಲಿ ಜಮ್ಮು ಮತ್ತು ಕಾಶ್ಮೀರ ಸೇರಿ ಒಂದು ಸಂಸ್ಥಾನವಾಯಿತು.

**(ನೋಡಿ– ಜಮ್ಮು–ಮತ್ತು–ಕಾಶ್ಮೀರ)** (ಎಚ್.ಜಿ.ಎ.)

**ಜಮ್ಮು ಮತ್ತು ಕಾಶ್ಮೀರ:** ಭಾರತದ ಒಂದು ರಾಜ್ಯ. ಭಾರತದ ಉತ್ತರದಂಚಿನಲ್ಲಿ ವಾಯವ್ಯ ಪ್ರದೇಶಕ್ಕೆ ಸೇರಿದಂತಿರುವ ಈ ರಾಜ್ಯ ಉ.ಅ. 32°17' –35°58'. ಪೂ.ರೇ. 73°26' – 80°30' ವರೆಗೆ ವಿಸ್ತರಿಸಿದೆ. ಈ ರಾಜ್ಯವನ್ನು ದಕ್ಷಿಣದಲ್ಲಿ ಹಿಮಾಚಲ್

ಪ್ರದೇಶ ಮತ್ತು ಪಂಜಾಬ್ ರಾಜ್ಯಗಳೂ ಪೂರ್ವ ಮತ್ತು ಉತ್ತರದಲ್ಲಿ ಟಿಬೆಟ್ ಮತ್ತು ಚೀನ, ಹಾಗೂ ಆಫ್ಘಾನಿಸ್ತಾನ, ಪಶ್ಚಿಮದಲ್ಲಿ ಪಾಕಿಸ್ತಾನ ಸುತ್ತುವರೆದಿವೆ. ಈ ರಾಜ್ಯದ ವಿಸ್ತೀರ್ಣ 2,22,236 ಚ.ಕಿಮೀ. (ಇದರಲ್ಲಿ 78,114 ಚ.ಕಿಮೀ ಪ್ರದೇಶವನ್ನು ಪಾಕಿಸ್ತಾನ ನ್ಯಾಯಬಾಹಿರವಾಗಿ ಆಕ್ರಮಿಸಿಕೊಂಡಿದೆ. 5,180 ಚ.ಕಿಮೀ ಪ್ರದೇಶವನ್ನು ಪಾಕಿಸ್ತಾನ ಚೀನ ದೇಶಕ್ಕೆ ನೀಡಿದೆ, ಜೊತೆಗೆ ಭಾರತದ 37,555 ಚ.ಕಿ.ಮೀ ಪ್ರದೇಶವನ್ನು ನ್ಯಾಯಬಾಹಿರವಾಗಿ ಚೀನ ಆಕ್ರಮಿಸಿಕೊಂಡಿದೆ. (ಆಕ್ರಮಿತ ಪ್ರದೇಶ ಬಿಟ್ಟು) ಜನಸಂಖ್ಯೆ 1,00,69,987 (2001). ರಾಜಧಾನಿ ಶ್ರೀನಗರ, ಜಮ್ಮು ಚಳಿಗಾಲದ ಆಡಳಿತಕೇಂದ್ರ.

**ಭೂವಿಜ್ಞಾನ :** ಈ ಪ್ರದೇಶದ ಆರ್ಷೇಯ ಕಲ್ಪದ ಶಿಲೆಗಳಿಗೆ ಡಿ.ಎನ್. ವಾಡಿಯ ಸಲ್ಕಲ ಶಿಲಾಸಮುದಾಯ ಎಂದು ಹೆಸರು ಕೊಟ್ಟಿದ್ದಾರೆ. ಇವು ಪಿರ್ ಪಂಜಾಲ್ ಮತ್ತು ನಂಗಪರ್ಬಾತ್ ಪ್ರದೇಶಗಳಲ್ಲಿ ಅತ್ಯುತ್ತಮವಾಗಿ ರೂಪುಗೊಂಡಿವೆ. ಇವು ಸ್ಲೇಟು, ಫಿಲ್ಲೈಟ್, ಬೆಣಚುಶಿಲೆ, ಅಭ್ರಕ, ಸಿಸ್ಟ್, ನೈಸ್, ಸುಣ್ಣಶಿಲೆ ಮತ್ತು ಡಾಲೊಮೈಟುಗಳಿಂದ ಕೂಡಿವೆ. ಹಿಮಾಲಯದ ಭೂಚಲನೆಯ ಪರಿಣಾಮವಾಗಿ ಇವು ಮಡಿಚಿ ಮಡಿಕೆಗಳಾಗಿ, ಕಿರಿಯ ಶಿಲೆಗಳಿಂದ ಪರ್ಮೋಕಾರ್ಬಾನಿಫೆರಸ್ ಶಿಲೆಗಳ ಮೇಲೆ ಚಾಚಿವೆ. ಇವು ಪ್ರಾದೇಶಿಕ ಅಂತಸ್ಸರಣ ಕಾರ್ಯಕ್ಕೊಳಗಾಗಿ ಅಧಿಕ ಮಟ್ಟದ ರೂಪಾಂತರವನ್ನು ವ್ಯಕ್ತಪಡಿಸುತ್ತವೆ. ಈ ಶಿಲೆಗಳ ಮೇಲೆ ಸ್ಲೇಟುಗಳಿವೆ. ಇವಕ್ಕೆ ಡೋಗ್ರಾ ಸ್ಲೇಟುಗಳು ಎಂದು ಹೆಸರು. ಇವು ಕಡಪ ಮತ್ತು ವಿಂಧ್ಯನ್ ಶಿಲೆಗಳಿಗೆ ಸರಿಸಮಾನವಾದ ಪುರಾಣಕಲ್ಪದ ಶಿಲೆಗಳು. ಲಿಡಾರ್ ಕಣಿವೆ ಮತ್ತು ಶಾಮ್ಸ್– ಅಬಾರಿ ಪ್ರದೇಶದ ಹುಂಡವಾರ ಮುಂತಾದ ಕಡೆಗಳಲ್ಲಿ, ಡೋಗ್ರಾ ಸ್ಲೇಟುಗಳ ಮೇಲೆ ಜೀವ್ಯವಶೇಷಗಳಿಂದ ಕೂಡಿದ ಪ್ರಾಚೀನ ಕಲ್ಪದ ಶಿಲೆಗಳಿವೆ. ತಳದಲ್ಲಿ ಜೇಡುಶಿಲೆ ಮತ್ತು ಬೆಣಚುಶಿಲೆ ಮತ್ತು ಎರೆಹುಳುಗಳ ಜಾಡುಗಳು ಇವೆ. ಇವು ಕೇಂಬ್ರಿಯನ್ ಯುಗದ ಆದಿಕಾಲದವು. ಮೇಲ್ಭಾಗದಲ್ಲಿ ಟ್ರೈಲೊಬೈಟ ಮತ್ತು ಬಾಹುಪಾದಿ ಗುಂಪಿನ ಪ್ರಾಣಿಗಳ ಅವಶೇಷಗಳಿವೆ. ಇವು ಕೇಂಬ್ರಿಯನ್ ಅಂತ್ಯ ಕಾಲವನ್ನು ಸೂಚಿಸುತ್ತವೆ. ಇವು ಸ್ಪಿತಿ ಮತ್ತು ಸಾಲ್ಟ್ ರೇಂಜ್ ಪ್ರದೇಶಗಳ ಪ್ರಾಣಿಗಳನ್ನು ಹೋಲದೆ, ಚೀನ ಮತ್ತು

ಪರ್ಷಿಯದ ಪ್ರಾಣಿವರ್ಗವನ್ನು ಹೋಲುವುವು. ಆರ್ಡೋವೀಷಿಯನ್ ಯುಗದ ಶಿಲಾಸಮುದಾಯ ಕೆಲವೇ ಸ್ಥಳಗಳಲ್ಲಿ ಮಾತ್ರ ಕಾಣಬರುತ್ತದೆ. ಆದರೆ ಇದರಲ್ಲಿ ಉತ್ಕೃಷ್ಟ ರೀತಿಯಲ್ಲಿ ರಕ್ಷಿತವಾಗಿರುವ ಅವಶೇಷಗಳಿಲ್ಲ. ಸೈಲೂರಿಯನ್ ಯುಗದ ಶಿಲೆಗಳು ಲಿಡಾರ್ ಕಣಿವೆಯಲ್ಲಿ ವಿಮುಖ ಮಡಿಕೆಯಾಗಿ ಹೊರಕಾಣಿಸಿವೆ. ಇವು ಮರಳುಮಿಶ್ರ ಜೇಡುಶಿಲೆ ಮತ್ತು ಹಳದಿ ಸುಣ್ಣಶಿಲೆಗಳಿಂದ ಕೂಡಿ, ಶಿಲಾಸಂಯೋಜನೆಯಲ್ಲಿ ಆರ್ಡೋವೀಷಿಯನ್ ಶಿಲೆಗಳನ್ನು ಹೋಲಿದರೂ ಇವುಗಳಲ್ಲಿ ಹೇರಳವಾದ ಜೀವ್ಯವಶೇಷಗಳಿರುವುದರಿಂದ ಇವನ್ನು ಸುಲಭವಾಗಿ ಗುರುತಿಸಬಹುದು. ಈ ಕಾಲದ ಜೀವರಾಶಿ, ಉತ್ಕೃಷ್ಟ ರೀತಿಯಲ್ಲಿ ರಕ್ಷಿತವಾಗಿರುವ ಭಾರತದ ಕೆಲವೇ ಪ್ರದೇಶಗಳಲ್ಲಿ ಇದೂ ಒಂದು. ಆರ್ತಿಸ್, ಸ್ಟ್ರೋಪೊಮೀನ ಮುಂತಾದ ಬಾಹುಪಾದಿಗಳು, ಹವಳಗಳು ಮತ್ತು ಕ್ರೈನಾಯಿಡುಗಳು ಈ ಶಿಲಾಸಮುದಾಯದಲ್ಲಿ ಸಿಕ್ಕುವ ಮುಖ್ಯ ಜೀವ್ಯವಶೇಷಗಳು. ಈ ಶಿಲಾಸಮುದಾಯದ ಮೇಲೆ ಗಡಸು ಸ್ವಭಾವದ 3,000 ದಪ್ಪವಿರುವ ಜೀವ್ಯವಶೇಷರಹಿತ ಬಿಳಿ ಬೆಣಚು ಶಿಲೆಗಳಿವೆ. ಇವಕ್ಕೆ ಮುತ್ ಬೆಣಚುಶಿಲೆಗಳು ಎಂದು ಹೆಸರು. ಇವು ಎಲ್ಲ ರೀತಿಯಲ್ಲಿಯೂ ಸ್ಪಿತಿ ಪ್ರದೇಶದ ಮುತ್ ಬೆಣಚುಶಿಲೆಗಳನ್ನು ಹೋಲುತ್ತವೆ. ಶಿಲಾಪೇರಿಕೆಯ ಕ್ರಮದಿಂದ ಇವು ಭಾಗಶಃ ಸೈಲೂರಿಯನ್ ಅಂತ್ಯಕಾಲ ಮತ್ತು ಡಿವೋನಿಯನ್ ಯುಗದ ನಿಕ್ಷೇಪಗಳೆಂದು ಹೇಳಬಹುದು. ಲಿಡಾರ್ ಕಣಿವೆಯಲ್ಲಿ ಮುತ್ ಬೆಣಚುಶಿಲೆಗಳ ಮೇಲೆ ಕಾರ್ಬಾನಿಫೆರಸ್ ಯುಗದ ಶಿಲೆಗಳು ನಿಕ್ಷೇಪವಾಗಿವೆ. ಇವನ್ನು ಎರಡು ಭಾಗಗಳನ್ನಾಗಿ ವಿಭಾಗಿಸಬಹುದು. ಇದರ ಕೆಳಭಾಗ ಸುಣ್ಣಶಿಲೆ. ಅದರಲ್ಲಿ ಸಿರಿಂಗೋಥೀರಿಸ್ ಬಾಹುಪಾದಿಯ ಅವಶೇಷಗಳು ಅಧಿಕವಾಗಿರುವುದರಿಂದ ಅದಕ್ಕೆ ಸಿರಿಂಗೋಥೀರಿಸ್ ಸುಣ್ಣಶಿಲೆ ಎಂದು ಹೆಸರು ಬಂದಿದೆ. ಮೇಲ್ಭಾಗಕ್ಕೆ ಫೆನೆಸ್ಟೆಲಾ ಜೇಡುಶಿಲೆಗಳು ಎಂದು ಹೆಸರು. ಇವೆರಡರ ಮಧ್ಯೆ ಜೀವ್ಯವಶೇಷರಹಿತ ಪದರುಗಳಿವೆ. ಜೀವ್ಯವಶೇಷರಹಿತವಾದ ಈ ಪದರಗಳು ಅನುಕ್ರಮವಾಗಿ ಸ್ಪಿತಿ ಪ್ರದೇಶದ ಲಿಪಾಕ್ ಮತ್ತು ಪೊ ಶ್ರೇಣಿಗಳ ಸಮಕಾಲೀನ ಶಿಲೆಗಳು.

ಅಮರನಾಥ್‌ಗೆ ಹೋಗುವ ಮಾರ್ಗದಲ್ಲಿ ಹಿಮಾಚ್ಛಾದಿತ ಪಂಚತಾರಿಣಿ ಪರ್ವತ

ಕಾರ್ಬಾನಿಫೆರಸ್ ಯುಗವಾದ ಬಳಿಕ ಒಂದು ಮಹಾಪ್ರಳಯವಾಯಿತು. ಇದಕ್ಕೆ ಹರ್ಷೀನಿಯನ್ ಪ್ರಳಯ ಎಂದು ಹೆಸರು. ಇದು ಕಾಶ್ಮೀರವನ್ನು ಭೂಮಟ್ಟಕ್ಕೆ ತಂದು, ಅದನ್ನು ಜ್ವಾಲಾಮುಖಿಗಳ ಚಟುವಟಿಕೆಯ ಕೇಂದ್ರವನ್ನಾಗಿ ಪರಿವರ್ತಿಸಿತು. ಈ ಕಾರ್ಯ ಮೊದಲು ಸ್ಫೋಟಕ ರೀತಿಯದಾಗಿತ್ತು. ಶಿಲಾಚೂರುಗಳು ಮೇಲೊಗೆಯಲ್ಪಟ್ಟು ರಾಶಿರಾಶಿಯಾಗಿ ಬಿದ್ದುವು. ತರುವಾಯ ಶಿಲಾರಸದ ಉಗುಳುವಿಕೆ ಪ್ರಾರಂಭವಾಗಿ, ಈ ಕಾರ್ಯ ಪರ್ಮಿಯನ್ ಯುಗದ ಆದಿಯಲ್ಲಿ ತೀವ್ರಗತಿ ಮುಟ್ಟಿದ ಬಳಿಕ, ಕ್ರಮೇಣ ಇಳಿಮುಖವಾಯಿತು. ಒಂದು ಕಡೆ ಜ್ವಾಲಾಮುಖಿಯ ಕಾರ್ಯಾಚರಣೆಯಾಗುತ್ತಿದ್ದರೆ ಮತ್ತೊಂದು ಕಡೆ ಸಾಗರಾಕ್ರಮಣವಾಯಿತು. ಆದ್ದರಿಂದಲೇ ಜ್ವಾಲಾಮುಖಿಜ ಶಿಲೆಗಳು ಮತ್ತು ಸಾಗರಜನಿತ ಶಿಲೆಗಳನ್ನು ಪಕ್ಕಪಕ್ಕದಲ್ಲಿಯೇ ಈ ಪ್ರದೇಶದಲ್ಲಿ ಕಾಣುತ್ತೇವೆ. ಜೊತೆಗೆ ಗೋಂಡ್ವಾನ ನಿಕ್ಷೇಪಗಳೂ ಇವೆ. ಸ್ಫೋಟಕವಸ್ತುಗಳಿಂದಾದ ನಿಕ್ಷೇಪಗಳಿಗೆ ಅಗ್ಲಾಮರೇಟಿಕ್ ಸ್ಲೇಟುಗಳೆಂದೂ ಶಿಲಾರಸದಿಂದಾದವುಗಳಿಗೆ ಪಂಜಾಲ್ ಟ್ರ್ಯಾಪ್ ಎಂದೂ ಹೆಸರು. ಪಂಜಾಲ್ ಟ್ರ್ಯಾಪುಗಳು ಹಸಿರು ಅಥವಾ ಊದಾ ಬಣ್ಣದವು. ಇವುಗಳಲ್ಲಿ ನಾನಾ ವಿಧಗಳ ಭಿನ್ನ ಒಳರಚನೆಗಳಿವೆ. ಇವು ಮುಖ್ಯವಾಗಿ ಆ್ಯಂಡಿಸೈಟ್ ಮತ್ತು ಬೆಸಾಲ್ಟ್ ಶಿಲೆಗಳಿಂದಾಗಿವೆ. ಈ ಶಿಲೆಗಳ ಮಧ್ಯೆ ಕೆಲವೆಡೆ ಗ್ಲಾಸಾಪ್ಟರಿಸ್ ಇಂಡಿಕ ಮತ್ತು ಗಂಗಮಾಪ್ಟರಿಸ್ ಕಾಶ್ಮೀರೆನ್ಸಿಸ್ ಎಂಬ ಸಸ್ಯಾವಶೇಷಗಳಿಂದ ಕೂಡಿದ ಜಲಜಶಿಲೆಗಳಿವೆ. ಇವುಗಳಿಗೆ ಗಂಗಮಾಪ್ಟರಿಸ್ ಪದರುಗಳೆಂದು ಹೆಸರು. ಇವು ಕಾರ್ಬಾನಿಫೆರಿಸ್ ಅಂತ್ಯ ಮತ್ತು ಪರ್ಮಿಯನ್ ಆದಿಕಾಲವನ್ನು ಸೂಚಿಸುತ್ತವೆ. ಇವುಗಳಲ್ಲಿ ಆರ್ಕಿಗೋಸಾರಸ್ ಆರ್ನಾಟಸ್ ಎಂಬ ದ್ವಿಚರ ಪ್ರಾಣಿ ಮತ್ತು ಆಮ್ಲಿಪ್ಟರಸ್ ಮೀನುಗಳ ಅವಶೇಷಗಳಿವೆ. ಇವುಗಳ ಮೇಲೆ ಝೀವಾನ್ ಮತ್ತು ಬಾರುಸ್ ಎಂಬಲ್ಲಿ ಪ್ರೋಟೊರೆಟಿಫೋರ ಆಮ್ಪ ಮುಂತಾದ ಬ್ರಯೋಝೋವ ಮತ್ತು ಪರ್ಮಿಯನ್ ಯುಗದ ವಿಶಿಷ್ಟ ಬಾಹುಪಾದಿಗಳು ಮತ್ತು ಹವಳಗಳಿಂದ ಕೂಡಿದ ಸಾಗರಶಿಲೆಗಳಿವೆ. ಇವು ಸಾಲ್ಟ್ ರೇಂಜಿನ ಪೊಡಕ್ಟಸ್ ಶಿಲಾ ಸಮುದಾಯದ ಮೇಲ್ಭಾಗದ ಸಮಕಾಲೀನ ಶಿಲೆಗಳು.

ಕಾಶ್ಮೀರ ಹಜ಼ಾರ ಪ್ರದೇಶದಲ್ಲಿ ಡೋಗ್ರಾ ಸ್ಲೇಟುಗಳ ಮೇಲೆ ಮತ್ತು ಟ್ರಯಾಸಿಕ್ ಶಿಲೆಗಳ ಕೆಳಗೆ ಜೀವ್ಯವಶೇಷರಹಿತ ಶಿಲಾರಾಶಿ ಇದೆ. ಇವನ್ನು ಜೀವ್ಯವಶೇಷರಹಿತ ಪ್ರಾಚೀನ ಜೀವಕಲ್ಪ ಶಿಲೆಗಳು ಎಂದು ಕರೆಯಲಾಗಿದೆ. ಇವುಗಳ ಮಧ್ಯೆ ನೀರ್ಗಲ್ಲು ನಿಕ್ಷೇಪ ಗುಂಡುಶಿಲೆ ಇದೆ. ಇದಕ್ಕೆ ತಾನಕ್ಕಿ ಗುಂಡು ಶಿಲೆ ಎಂದು ಹೆಸರು. ಇದರ ಕೆಳಗಿರುವ ಶಿಲೆಗಳಿಗೆ ತನವಾಲ್ ಶಿಲಾಶ್ರೇಣಿ ಎಂದು ಹೆಸರು. ಇದರ ವಯಸ್ಸನ್ನು ನಿಖರವಾಗಿ ನಿರ್ಧರಿಸುವುದು ಕಷ್ಟ. ಇವು ಕೇಂಬ್ರಿಯನ್ ಕಾಲದಿಂದ ಕಾರ್ಬಾನಿಫೆರಿಸ್ ಮಧ್ಯಕಾಲದವರೆಗಿನ ಯಾವ ಕಾಲವನ್ನಾದರೂ ಪ್ರತಿನಿಧಿಸಬಹುದು. ತಾನಕ್ಕಿ ಗುಂಡುಶಿಲೆಯ ಮೇಲೆ ಸುಣ್ಣಶಿಲೆ ಮತ್ತು ಡಾಲೊಮೈಟುಗಳಿವೆ. ಇದನ್ನು ಇನ್ಫ್ರಟ್ರಯಸ್ ಎಂದು ಕರೆಯಲಾಗಿದೆ. ಟ್ರಯಾಸಿಕ್ ಶಿಲಾಸಮುದಾಯ ಕಾಶ್ಮೀರದ ಭೂಕಡಿತದಲ್ಲೆಲ್ಲ ಅತ್ಯುತ್ತಮವಾಗಿ ರೂಪುಗೊಂಡು ಎದ್ದುಕಾಣುತ್ತದೆ. ಇದರಲ್ಲಿ ನೀಲಿ ಮತ್ತು ಬೂದುಬಣ್ಣದ ಸುಣ್ಣಶಿಲೆಗಳು ಮತ್ತು ಡಾಲೋಮೈಟುಗಳು ಪ್ರಮುಖ ಶಿಲೆಗಳು. ಅವು 915 ಮೀ. ಅಡಿಗಳಷ್ಟು ಸಂಚಯಿಸಿ ಸ್ಪಿತಿ ಪ್ರದೇಶದ ಟ್ರಯಾಸಿಕ್ ಶಿಲೆಗಳನ್ನೆಲ್ಲ ಪ್ರತಿನಿಧಿಸುವುದಲ್ಲದೆ ದಪ್ಪದಲ್ಲಿ ಅವನ್ನು ಮೀರಿಸಿವೆ. ಆದರೆ ಜೀವ್ಯವಶೇಷಗಳು ಹೇರಳವಾಗಿಲ್ಲ. ಈ ಶಿಲೆಗಳು ಸಿಂಧ್, ಲಿಡಾರ್ ಮತ್ತು ವಾರ್ದ್ವಾನ್ ಕಣಿವೆಗಳು, ಗುರೈಲ್ ಮತ್ತು ಲಡಾಕ್ ಪ್ರದೇಶಗಳಲ್ಲಿ ಅತ್ಯುತ್ತಮವಾಗಿ ರೂಪುಗೊಂಡಿವೆ. ಪೀರ್ ಪಂಜಾಲ್ ಮತ್ತು ಹಜ಼ಾರ ಪ್ರದೇಶಗಳಲ್ಲಿ ಮೇಲ್ಭಾಗ ಮಾತ್ರ ರೂಪುಗೊಂಡಿವೆ.

ಶ್ರೀನಗರದ ಒಂದು ನೋಟ

ಕಾಶ್ಮೀರ ಪ್ರಾಂತ್ಯದಲ್ಲಿ ಜುರಾಸಿಕ್ ಯುಗದ ಶಿಲೆಗಳು ಅತಿ ವಿರಳ. ಪೀರ್‌ಪಂಜಾಲ್ ಪ್ರದೇಶದ ಬನಿಹಾಲ್ ಮತ್ತು ಲಡಾಕ್ ಪ್ರದೇಶಗಳಲ್ಲಿ ಟ್ರಯಾಸಿಕ್ ಸ್ಟೋಮದ ಮೆಗಲೊಂಡಾನ್ ಸುಣ್ಣಶಿಲೆಯ ಸಂಚಯನ ಜುರಾಸಿಕ ಯುಗದ ಆದಿಕಾಲಕ್ಕೂ (ಲಯಾಸಿಕ್) ಮುಂದುವರಿದಿದೆ. ಇವುಗಳ ಮೇಲೆ ಕಪ್ಪು ಬಣ್ಣದ ಸ್ಪಿತಿ ಜೇಡು ಶಿಲೆಗಳು ನಿಕ್ಷೇಪವಾಗಿವೆ. ಈ ಶಿಲೆಗಳಲ್ಲಿ ಮ್ಯಾಕ್ರೋಕೆಫಲಸ್ ಇತ್ಯಾದಿ ಅಮ್ಮೋನೈಟುಗಳೂ ಅವಿಕ್ಯುಲ, ಪೆಕ್ಟೆನ್, ಸೆರಿತಿಯಮ್, ನರಿನಿಯ ಮುಂತಾದ ಕಪ್ಪೆಚಿಪ್ಪುಗಳೂ ಇವೆ. ಹಜ಼ಾರ ಪ್ರದೇಶದಲ್ಲಿ ಜುರಾಸಿಕ್ ನಿಕ್ಷೇಪದ ಎರಡು ಮುಖಗಳನ್ನು ಕಾಣಬಹುದು. ಉತ್ತರ ಭಾಗದಲ್ಲಿರುವ ನಿಕ್ಷೇಪಗಳು ಶಿಲಾಸಂಯೋಜನೆ ಮತ್ತು ಜೀವ್ಯವಶೇಷಗಳಲ್ಲಿ ಸ್ಪಿತಿ ಜೇಡುಶಿಲೆಗಳನ್ನು ಹೋಲುತ್ತವೆ. ದಕ್ಷಿಣ ಭಾಗದ ನಿಕ್ಷೇಪಗಳು ತೀರ ನಿಕ್ಷೇಪಗಳು. ಇವು ಸಾಲ್ಟ್ ರೇಂಜ್ ಪ್ರದೇಶದ ಶಿಲೆಗಳನ್ನು ಹೋಲುತ್ತವೆ. ಜುರಾಸಿಕ್ ಯುಗದ ಶಿಲೆಗಳು ಅತಿವಿರಳವಾದರೆ, ಕ್ರಿಟೇಷಸ್ ಯುಗದ ಶಿಲೆಗಳು ಅತ್ಯಂತ ವಿರಳ. ಗ್ರಾಫಿಯ ವೆಸಿಕ್ಯುಲೋಸವಿರುವ ಶಿಲೆಗಳು ಬುರ್ಜಿಲ್, ಡ್ರಾಸ್, ಲಡಾಕ್ ಮುಂತಾದ ಕಡೆಗಳಲ್ಲಿರುವುದು ಕ್ರಿಟೇಷಸ್ ಶಿಲೆಗಳು ಇರುವಿಕೆಯ ಕುರುಹು. ಈ ಶಿಲೆಗಳಲ್ಲಿ ಗ್ರ್ಯಾನೈಟು, ಗ್ಯಾಬ್ರೊ ಮತ್ತು ಪೆರಿಡೊಟೈಟುಗಳು ಅಂತಸ್ಸರಣವಾಗಿರುವುದು ಒಂದು ವಿಶೇಷ ಸಂಗತಿ. ಗ್ರ್ಯಾನೈಟು ಹಿಮಾಲಯ ಪ್ರದೇಶದಲ್ಲಿ ಸಿಗುವ ಮೂರು ವಿಧಗಳಲ್ಲಿ ಒಂದು. ಆದ್ದರಿಂದ ಈ ಗ್ರ್ಯಾನೈಟು ನವಜೀವಿಕಲ್ಪದಲ್ಲಿ ರೂಪಗೊಂಡಿತೆಂಬುದು ನಿರ್ವಿವಾದವಾದಂತಾಯಿತು. ಲಡಾಕಿನಲ್ಲಿ ಪೆರಿಡೊಟೈಟ್ ಮತ್ತು ಗ್ಯಾಬ್ರೊಗಳ ಅಂತಸ್ಸರಣದಿಂದ ಕ್ರೋಮೈಟ್ ನಿಕ್ಷೇಪವಾಗಿವೆ. ಈ ಕಾಲದಲ್ಲಿ ಜ್ವಾಲಾಮುಖಿ ಕಾರ್ಯಾಚರಣೆಯೂ ನಡೆದಿದೆ. ಹಜ಼ಾರ ಪ್ರಾಂತ್ಯದ ಉತ್ತರ ಮತ್ತು ದಕ್ಷಿಣ ಭಾಗಗಳೆರಡರಲ್ಲೂ ಕ್ರಿಟೇಷಸ್ ಯುಗದ ಗುಯಮಲ್ ಮರಳುಶಿಲೆ ಮತ್ತು ಚಿಕ್ಕಿಮ್ ಜೇಡುಶಿಲೆಗಳು ರೂಪುಗೊಂಡಿವೆ. ಇವುಗಳಲ್ಲಿ ಅಮ್ಮೋನೈಟುಗಳು ಹೇರಳವಾಗಿವೆ. ಇವು ಮತ್ತು ಇಯೋಸೀನ್ ಶಿಲೆಗಳ ಮಧ್ಯೆ ಇರುವ ಲ್ಯಾಟರೈಟ್ ನಿಕ್ಷೇಪ ಅನನುರೂಪತೆಯನ್ನು ವ್ಯಕ್ತಪಡಿಸುತ್ತದೆ.

ಟೆತಿಸ್ ಸಾಗರದಲ್ಲಿ ಸಂಚಯಿಸಿದ ನಿಕ್ಷೇಪಗಳೆಲ್ಲ ಭೂಚಲನೆಗೊಳಗಾಗಿ ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಹಿಮಾಲಯ ಪರ್ವತಗಳಾಗಿ ಮೇಲೊಗೆಯಲ್ಪಟ್ಟವು. ಈ ಕಾರ್ಯ ಇಯೋಸೀನ್ ಯುಗದ ಮಧ್ಯದಲ್ಲಿ ನಡೆಯಿತು. ಇದರ ಪರಿಣಾಮವಾಗಿ ಟೆತಿಸ್ ಸಾಗರದ ನೀರು ಟಿಬೆಟ್, ಹಿಮಾಲಯ ಪ್ರದೇಶಗಳಿಂದ ಸಿಂಧ್–ಬಲೂಚಿಸ್ತಾನ ಮತ್ತು ಅಸ್ಸಾಮ್–ಬರ್ಮ ಖಾರಿಗಳ ಮೂಲಕ ನಿರ್ಗಮಿಸಿತು. ಆದರೆ ಇದು ಲಡಾಕ್, ಹುಂಡೆಸ್, ಕಮಾಯೂನ್ ಪ್ರದೇಶಗಳಲ್ಲಿ ಸರೋವರಗಳ ರೂಪದಲ್ಲಿ ಉಳಿಯಿತು. ಆದ್ದರಿಂದ ಇಯೋಸೀನ್ ಯುಗದ ಆದಿ ಮತ್ತು ಮಧ್ಯಕಾಲಗಳನ್ನು ಪ್ರತಿನಿಧಿಸುವ ರಾಣಿಕೋಟ್

ಮತ್ತು ಲಾಕಿ ಶಿಲಾಶ್ರೇಣಿಗಳು ಕೋಹಟ್‌ನಿಂದ ಹಜ಼ಾರ ಪರ್ವತ, ಕಾಶ್ಮೀರಗಳ ಮೂಲಕ ಕಾಶ್ಮೀರದಲ್ಲಿ ಹಿಮಾಲಯ ಪರ್ವತಗಳ ಮಂಡಿಬಾಗಿಲಿನಲ್ಲಿ ತಿರುಗಿ ಪೀರ್‌ಪಂಜಾಲ್‌ವರೆಗೆ ವಿಸ್ತರಿಸಿವೆ. ರಾಣಿಕೋಟ್ ಶಿಲೆಗಳು ನಮ್ಮುಲಿಟಿಕ್ ಸುಣ್ಣಶಿಲೆಯಿಂದ ಕೂಡಿವೆ. ಇವಕ್ಕೆ ಪರ್ವತಸುಣ್ಣಶಿಲೆ ಎಂದು ಹೆಸರು. ಈ ಶಿಲೆಗಳ ಮೇಲೆ ಇಂಗಾಲಯುಕ್ತ ಜೇಡುಶಿಲೆಗಳಿವೆ. ಇವು ಲಾಕಿಶಿಲೆಗಳಿಗೆ ಸಮಕಾಲೀನ ಶಿಲೆಗಳು. ಪೀರ್ ಪಂಜಾಲ್‌ಗೆ ದಕ್ಷಿಣದಲ್ಲಿ ಸಿಮ್ಲಾಶಿಲೆಗಳನ್ನು ಹೋಲುವ ನಿಕ್ಷೇಪಗಳಿವೆ. ಇವನ್ನು ಸುಬತು ಶಿಲಾಶ್ರೇಣಿ ಎನ್ನುತ್ತೇವೆ. ಇವು ಇಯೋಸೀನ್ ನಿಕ್ಷೇಪಗಳ ಎರಡನೆಯ ಮುಖ. ಕಾಶ್ಮೀರ ಪ್ರದೇಶದಲ್ಲಿ ಆಲಿಗೋಸೀನ್ ಕಾಲದ ಶಿಲೆಗಳು ಸಂಚಯಿಸಿಲ್ಲ. ಇನ್ನು ಮುಂದಿನ ಶಿಲೆಗಳು ಜಮ್ಮು ಪ್ರಾಂತ್ಯದಲ್ಲಿ ಮಾತ್ರ ರೂಪುಗೊಂಡಿವೆ. ಇಲ್ಲಿ ಇಯೋಸೀನ್ ಶಿಲೆಗಳ ಮೇಲೆ ಕೆಂಪು ಮತ್ತು ಊದಾ ಬಣ್ಣದ ಮರಳುಶಿಲೆಗಳು ಮತ್ತು ಜೇಡುಶಿಲೆಗಳು ಅನನುರೂಪವಾಗಿ ನಿಕ್ಷೇಪಿಸಿವೆ. ಇವುಗಳಲ್ಲಿ ಪಾಮ್ ಜಾತಿಯ ಮರಗಳ ಎಲೆಗಳು, ಸಬಲ್ ಮೇಜರ್ ಮುಂತಾದವುಗಳ ಅವಶೇಷಗಳಿವೆ. ಇವು ಇಯೋಸೀನ್ ಯುಗದ ಆದಿಕಾಲದವು. ಇವನ್ನು ಮುರ್ರಿ ಶಿಲಾಶ್ರೇಣಿ ಎಂದು ಕರೆಯಲಾಗಿದೆ.

ಮಯೋಸೀನ್ ಆದಿಕಾಲದ ಬಳಿಕ ಹಿಮಾಲಯದ ಮೇಲೊಗೆತದ ಕಾರ್ಯಾಚರಣೆಯ ಮತ್ತೊಂದು ಹಂತ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಟೆತಿಸ್ ಸಾಗರದಲ್ಲಿ ಸಂಚಯಿಸಿದ್ದ ನಿಕ್ಷೇಪ ಅನೇಕ ಕಡೆಗಳಲ್ಲಿ ಪರ್ವತಗಳ ರೂಪದಲ್ಲಿ ಮೇಲೆದ್ದಿತು. ಜೊತೆಗೆ ಈ ಪರ್ವತಗಳ ಉದ್ದಕ್ಕೂ ಅವುಗಳ ತಪ್ಪಲಲ್ಲಿ ಕಡಿಮೆ ಅಗಲದ ತಗ್ಗು ಉಂಟಾಯಿತು. ಈ ಪರ್ವತಶ್ರೇಣಿಗಳಲ್ಲಿ ಉದಯಿಸಿದ ನದಿ ಮತ್ತು ಉಪನದಿಗಳು ಈ ಪರ್ವತ ಪ್ರದೇಶದ ಶಿಥಿಲೀಕರಿಸಿದ ಮೆಕ್ಕಲನ್ನು ಈ ತಗ್ಗುಪ್ರದೇಶಕ್ಕೆ ಒಯ್ದು ಹರಡಿದುವು. ಈ ಕಾರ್ಯ ಮೆಯೋಸೀನ್ ಮಧ್ಯ ಕಾಲದಲ್ಲಿ ಪ್ರಾರಂಭವಾಗಿ ಪ್ಲೀಸ್ಟೋಸೀನ್ ಯುಗದ ಆದಿಯವರೆಗೆ ಮುಂದುವರಿಯಿತು. ಈ ಅವಧಿಯಲ್ಲಿ ನಿಕ್ಷೇಪಗೊಂಡ ಶಿಲಾಸಮುದಾಯಕ್ಕೆ ಶಿವಾಲಿಕ್ ಶಿಲಾ ಸಮುದಾಯವೆಂದು ಹೆಸರು. ಇವು ಜಮ್ಮು ಬೆಟ್ಟ ಪ್ರದೇಶದಲ್ಲಿ ಸುಮಾರು ಇಪ್ಪತ್ತನಾಲ್ಕು ಮೈಲಿ ಅಗಲದ ಪ್ರದೇಶದಲ್ಲಿ ರೂಪುಗೊಂಡಿವೆ. ಇವು ಶಿಲಾರಚನೆ, ಜೀವ್ಯವಶೇಷಗಳು ಮುಂತಾದ ಎಲ್ಲ ವಿಚಾರಗಳಲ್ಲಿಯೂ ಮಾದರಿ ಪ್ರದೇಶದ ಶಿವಾಲಿಕ್ ಶಿಲಾಸಮುದಾಯವನ್ನು ಹೋಲುತ್ತವೆ. ಇವನ್ನು ಕೆಳಕಂಡಂತೆ ವಿಭಜಿಸಲಾಗಿದೆ :

ಮೇಲಣ ಶಿವಾಲಿಕ್ : 1830 ಮೀ ಗುಂಡುಶಿಲೆ, ಗ್ರೀಟ್; ಮರಳು ಮತ್ತು ಜೇಡು

ಮಧ್ಯ ಶಿವಾಲಿಕ್ : 1830 ಮೀ ಬೂದು ಮರಳು ಶಿಲೆ ಮತ್ತು ಜೇಡು ಶಿಲೆಗಳ

ಕೆಳ ಶಿವಾಲಿಕ್ : 1525 ಮೀ ಕಂದು ಮರಳು ಶಿಲೆ ಮತ್ತು ಕೆಂಪು ಜೇಡು ಶಿಲೆಗಳು

ಈ ಶಿಲಾಸಮುದಾಯದ ವೈವಿಧ್ಯವೆಂದರೆ, ಅದರಲ್ಲಿರುವ ಹೇರಳವಾದ ಬೆನ್ನೆಲುಬುಳ್ಳ ಪ್ರಾಣಿಗಳ (ಸಸ್ತನಿಗಳ) ಅವಶೇಷಗಳು. ಮಾಸ್ಟಡಾನ್ ಆನೆ (ವಂಶನಷ್ಟ ಆನೆ), ಜಿರಾಫೆ, ಒಂಟೆ, ಕುದುರೆ, ನೀರಾನೆ, ಖಡ್ಗಮೃಗ, ಜಿಂಕೆ , ಕಪಿ, ಆಮೆ–ಇವೆಲ್ಲವುಗಳ ಅವಶೇಷಗಳಿವೆ.

ಕಾಶ್ಮೀರದಲ್ಲಿ ಪ್ಲೀಸ್ಟೋಸೀನ್ ಕಾಲದ ಶಿಲಾವರ್ಗ ನದಿ, ಸರೋವರ ಮತ್ತು ನೀರ್ಗಲ್ಲು ನದೀ ನಿಕ್ಷೇಪಗಳಿಂದ ಕೂಡಿದೆ. ಇವಕ್ಕೆ ಕೆರೆವ ಶಿಲೆಗಳು ಎಂದು ಹೆಸರು. ಇವು ವಾಯವ್ಯದಲ್ಲಿ 13–26 ಕಿಮೀ ಅಗಲವಿದ್ದು, ಸೋಪ್ಯಾನ ಮತ್ತು ಬಾರಾಮುಲದಲ್ಲಿ 80 ಕಿ.ಮೀ ಅಗಲ ಇವೆ. ಈ ನಿಕ್ಷೇಪಗಳಲ್ಲಿ ನೀಲಿ, ಬೂದು ಮತ್ತು ಕಾಕಿ ಬಣ್ಣದ ಒಂದು ಮರಳು, ಅರೆಗಟ್ಟಿಯಾದ ಗುಂಡುಶಿಲೆ ಮತ್ತು ನೀರ್ಗಲ್ಲು ನದಿಯ ಮುರುಕಲು ಗುಪ್ಪೆಗಳಿವೆ. ಇವುಗಳ ಮಧ್ಯೆ ಲಿಗ್ನೈಟ್ ಪದರಗಳೂ ಇವೆ. ಆದ್ದರಿಂದ ತೀವ್ರ ಶೀತವಾಯುಗುಣಗಳ ಮಧ್ಯೆ ಸಾಮಾನ್ಯ ವಾಯುಗುಣವನ್ನು ಹೊಂದಿ, ಸಾಕಷ್ಟು ಸಸ್ಯನಿಬಿಡವಾದ ಕಾಲಗಳೂ ಇದ್ದುವೆಂದು ಅರ್ಥವಾಗುವುದು. ತೀವ್ರ ಶೀತವಾಯುಗುಣವಿದ್ದ ಕಾಲಗಳನ್ನು ನೀರ್ಗಲ್ಲುಯುಗಗಳೆಂದೂ ಮತ್ತು ತೇವಭರಿತ ಉಷ್ಣವಾಯು ಗುಣವಿದ್ದ ಕಾಲಗಳನ್ನು ಅಂತರ ನೀರ್ಗಲ್ಲುಯುಗಗಳೆಂದೂ ಕರೆಯುತ್ತೇವೆ. ಡಿ.ಟೆರ್‍ರಾರವರು ನಾಲ್ಕು ಕಾಲಗಳ ನೀರ್ಗಲ್ಲು ನದಿ ಮುರುಕಲು ಗುಪ್ಪೆಗಳನ್ನೂ ಅವುಗಳ ನಡುವೆ ಕೆರವಾ ನಿಕ್ಷೇಪಗಳಿರುವುದನ್ನೂ ವರದಿ ಮಾಡಿದ್ದಾರೆ. (ಡಿ.ಆರ್.)

**ಭೌತ ಲಕ್ಷಣ :** ಇಡೀ ರಾಜ್ಯ ಬಹುತೇಕ ಪರ್ವತಮಯ. ದಕ್ಷಿಣದ ಹೊರ ಬೆಟ್ಟಗಳ ಅಂಚಿನಲ್ಲಿ ಫಲವತ್ತಾದ ಮೈದಾನವುಂಟು. ಜಮ್ಮು ಮತ್ತು ಕಾಶ್ಮೀರ ರಾಜ್ಯದ ಪ್ರದೇಶ ಸ್ಥೂಲವಾಗಿ ಮೂರು ಅಂತಸ್ತುಗಳ ಮನೆಯಂತಿದೆ. ಶಿವಾಲಿಕ್ ಮತ್ತು ಹೊರ ಬೆಟ್ಟಗಳನ್ನೊಳಗೊಂಡ ಜಮ್ಮು ಪ್ರದೇಶ ಇದರ ಮೊದಲ ಅಂತಸ್ತು. ಮಧ್ಯ ಹಿಮಾಲಯದ ಎತ್ತರ ಶ್ರೇಣಿಗಳು ಎರಡನೆಯ ಅಂತಸ್ತು. ಅಂಡಾಕಾರದ ಕಾಶ್ಮೀರ ಕಣಿವೆಯನ್ನು ಎತ್ತರದ ಬೆಟ್ಟಗಳು ಸುತ್ತುಗಟ್ಟಿವೆ. ಕಾಶ್ಮೀರ ಕಣಿವೆಯಿಂದಾಚೆಗೆ ಉತ್ತರದಲ್ಲೂ ಪಶ್ಚಿಮದಲ್ಲೂ ಮಹಾ ಹಿಮಾಲಯ ಶ್ರೇಣಿಗಳು ಹಬ್ಬಿವೆ. ಗಿಲ್ಗಿಟ್ ಮತ್ತು ಲಡಾಕ್ ಜಿಲ್ಲೆಗಳನ್ನೊಳಗೊಂಡ ಈ ಪ್ರದೇಶದಲ್ಲಿ ಸಮುದ್ರ ಮಟ್ಟದಿಂದ 4572 ಮೀ. ಎತ್ತರದಲ್ಲೂ ಜನವಸತಿಯಿದೆ. ಇದು ಪ್ರಪಂಚದ ಅತ್ಯಂತ ಎತ್ತರದ ಜನವಸತಿ ಪ್ರದೇಶ.

ಭೌಗೋಳಿಕವಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಏಳು ಪ್ರದೇಶಗಳನ್ನಾಗಿ ವಿಂಗಡಿಸಬಹುದು: 1 ಹೊರ ಮೈದಾನ: ಪಂಜಾಬಿನ ಝೀಲಮ್, ಗುಜರಾತ್, ಸ್ಯೆಯಲ್ ಕೋಟ್ ಮತ್ತು ಗುರುದಾಸಪುರಗಳಿಂದ ಮುಂದುವರಿದ ಮೈದಾನ 386 ಕಿಮೀಗಳಷ್ಟು ದೂರ ಹಬ್ಬಿದೆ. ಇದರ ಸರಾಸರಿ ಎತ್ತರ 3050–3660ಮೀ. ರಾವಿಯ ಪಶ್ಚಿಮಕ್ಕೆ ಝೀಲಮ್ ನದಿಯ ಪೂರ್ವಕ್ಕೆ ಇರುವ ಈ ಮೈದಾನದ ಅಗಲ 6 ರಿಂದ 42 ಕಿಮೀ. ಈ ಮೈದಾನದ ಅಂಚಿನಲ್ಲಿ ಕಿರುಬೆಟ್ಟಗಳ ಸಾಲಿದೆ.

2 ಹೊರಬೆಟ್ಟ ಪ್ರದೇಶ : ಈ ಪ್ರದೇಶ ವೈವಿಧ್ಯಮಯ, ಸಂಕೀರ್ಣ. ಉತ್ತರದಲ್ಲಿ ಬಹಳ ಕಡಿದಾಗಿದೆ. ಮಧ್ಯೆ ಮಧ್ಯೆ ಸಣ್ಣ ಕಣಿವೆಗಳುಂಟು. ಬೆಟ್ಟಸಾಲಿನ ಪಶ್ಚಿಮ ಭಾಗ ವಿಶಾಲವಾದ್ದು. ಭಾರಿ ಉಂಡೆಗಲ್ಲುಗಳೂ ಬಂಡೆಗಳೂ ಜೇಡಿಮಣ್ಣೂ ಹೇರಳವಾಗಿವೆ.

3 ಮಧ್ಯ ಹಿಮಾಲಯ : ಜಮ್ಮು ಮತ್ತು ಕಾಶ್ಮೀರ ರಾಜ್ಯದ ಈ ಪ್ರದೇಶ ಮಧ್ಯ ಹಿಮಾಲಯದ ಅನೇಕ ಶ್ರೇಣಿಗಳಿಂದ ಕೂಡಿ ಅತ್ಯಂತ ಸುಂದರವಾದ ಪ್ರದೇಶವೆನಿಸಿಕೊಂಡಿದೆ. 4570 ಮೀ.ಗಿಂತ ಎತ್ತರವಾಗಿರುವ ಶ್ರೇಣಿಗಳು ನಿರಂತರವಾಗಿ ಹಿಮಾಚ್ಛಾದಿತ. ಬ್ರಹ್ಮ ಶಿಖರ 6400 ಮೀ. ಗಿಂತ ಎತ್ತರ. ಇಲ್ಲಿಯ ಅನೇಕ ಆಳವಾದ ಪ್ರಪಾತಗಳಲ್ಲಿ ನದಿಗಳು ತುಂಬಿ ಹರಿಯುತ್ತವೆ. ಇಲ್ಲಿ ಬಲು ಸುಂದರವಾದ ಅರಣ್ಯಗಳುಂಟು. ಅವುಗಳ ಉತ್ತರಕ್ಕೆ ಪೀರ್ ಪಂಜಾಲ್ ಪರ್ವತಶ್ರೇಣಿ ಇದೆ. ಈ ಪರ್ವತಶ್ರೇಣಿಯನ್ನು ದಾಟಿದರೆ ಕಾಶ್ಮೀರ ಕಣಿವೆ ಸಿಗುತ್ತದೆ.

4 ಕಾಶ್ಮೀರ ಕಣಿವೆ : ಕಾಶ್ಮೀರ ಕಣಿವೆಯ ವಿಸ್ತೀರ್ಣ ಸುಮಾರು 15,120.3 ಚ.ಕಿಮೀ (5,838 ಚ.ಮೈ) ಸುಮಾರು 310 ಕಿಮೀಗಳಷ್ಟು ಪ್ರದೇಶ ಜಲಾವೃತ. ಈ ಕಣಿವೆ ಝೀಲಮ್ ಮತ್ತು ಅದರ ಉಪನದಿಗಳಿಗೆ ಜಲಾನಯನ ಭೂಮಿ. ಇಲ್ಲಿಯ ವೂಲಾರ್ ಭಾರತದ ಅತ್ಯಂತ ದೊಡ್ಡ ಸಿಹಿನೀರಿನ ಸರೋವರ. ಫಲವತ್ತಾದ ಭೂಮಿಯೂ ಸಮೃದ್ಧಿಯೂ ಇರುವ ಈ ಎತ್ತರದ ಕಣಿವೆಯಲ್ಲಿ ಜನ ಹೆಚ್ಚಾಗಿ ನೆಲೆಸುತ್ತಿದ್ದಾರೆ. ಬಾರಾಮುಲದ ಉತ್ತರಕ್ಕಿರುವ ಮನೋಹರವಾದ ಲೋಲಬ್ ಕಣಿವೆಯಲ್ಲಿ ಅನೇಕ ತೊರೆಗಳು ಹರಿಯುತ್ತವೆ.

ನಿಷಾತ್ ಬಾಗ್

5 ಸಿಂಧ್ ಕಣಿವೆ : ಇದು ಝೀಲಮ್ ನದಿಯನ್ನು ಸೇರುವ ಸಿಂದ್ ನಾಲ ಹರಿಯುವ ಕಣಿವೆ. ಇದರ ಉದ್ದ ಸು. 96 ಕಿಮೀ. ಕಣಿವೆಯ ಪಶ್ಚಿಮಕ್ಕೆ ಮೆಕ್ಕಲು ಮಣ್ಣಿನ ಫಲವತ್ತಾದ ಭೂಮಿಯಿದೆ. ಕಣಿವೆಯ ಗಂದರ್‌ಬಾಲ್ ಎಂಬ ಸ್ಥಳ ಆರೋಗ್ಯಧಾಮ. ಅದರ ಬಳಿಯ ಅಂಚರ್ ಸರೋವರಕ್ಕೆ ಷಾದಿಪುರದಿಂದ ಸಿಂದ್ ನಾಲಾ ಮೂಲಕ ಜಲಯಾನ ಸಾಧ್ಯ. ಡಾಲ್ ಸರೋವರಕ್ಕೂ ರಸ್ತೆ ಸೌಕರ್ಯವುಂಟು. ಸಿಂದ್ ಕಣಿವೆ ಜೋಜಿ ಲಾ ಕಣಿವೆ ಮಾರ್ಗದ ಬಳಿ ಹಠಾತ್ತನೆ ಕೊನೆಗೊಳ್ಳುತ್ತದೆ. ಅಲ್ಲಿಂದ ಮುಂದಕ್ಕೆ ಇರುವುದು ಲಡಾಕ್ ಪ್ರದೇಶ.

6 ಲಿಡಾರ್ ಕಣಿವೆ : ಝೀಲಂ ನದಿಯ ಪೂರ್ವಕ್ಕೆ ಇರುವ ಎತ್ತರದ ಕಣಿವೆ ಇದು. ಇಲ್ಲಿ 1980 ಮೀಗಿಂತ ಎತ್ತರದ ಪ್ರದೇಶಗಳಲ್ಲಿ ನೀರ್ಗಲ್ಲ ನದಿಗಳು ತಂದು ಹಾಕಿದ ಮುರುಕಲು ಗುಪ್ಪೆಗಳು ಬಂಡೆಗಳ ಮೇಲೆ ತುಂಬಿವೆ. ಅವುಗಳಿಂದ ಬಂಡೆಗಳು ನುಣುಪಾಗಿರುವುದನ್ನು ಪಹಲ್ಗಾಂ ಪ್ರದೇಶದಲ್ಲಿ ಕಾಣಬಹುದು. 3414 ಮೀ ಎತ್ತರದಲ್ಲಿ ಕೊಲಾಹೈ ನೀರ್ಗಲ್ಲ ನದಿ ಹರಿಯುತ್ತದೆ.

7 ಒಳ ಹಿಮಾಲಯ : ಉತ್ತರದಲ್ಲಿ ಕಾಜ್ ನಾಗ್ ಶ್ರೇಣಿಯತ್ತ ಕಾಶ್ಮೀರ ಕಣಿವೆ ಕಿರಿದಾಗಿದೆ. ಗುಲ್ ಮಾರ್ಗ್ ಪಶ್ಚಿಮಕ್ಕೆ ಪೀರ್ ಪಂಜಾಲ್ ಪರ್ವತ ಶ್ರೇಣಿ 96 ಕಿಮೀ ದೂರ ಮುಂದುವರಿಯುತ್ತದೆ. ಇದರ ಎತ್ತರ ಸಮುದ್ರಮಟ್ಟದಿಂದ 2743–3658 ಮೀ

ಉರಿಯಿಂದ ಪುಂಚ್‌ಗೆ ಹೋಗುವ ರಸ್ತೆಯೊಂದು ಹಾಜಿ ಪೀರ್ ಕಣಿವೆಯನ್ನು ದಾಟಿ ಸಾಗುತ್ತದೆ. ಇಲ್ಲಿ ದೇವದಾರು ಅರಣ್ಯಗಳಿಂದ ಕೂಡಿದ ಶ್ರೇಣಿಗಳುಂಟು. ಇಲ್ಲಿ ಹಿಮಾಲಯದ ಮಹಾಶ್ರೇಣಿಗಳು ಹಿಮರೇಖೆಯಿಂದಲೂ ಮೇಲಕ್ಕೆ 6100 ಮೀ.ವರೆಗೆ ಏರಿವೆ. ನಂಗ ಪರ್ವತ 8114 ಮೀ. ಒಂದು ಉನ್ನತ ಶಿಖರ. ಮಧ್ಯ ಹಿಮಾಲಯನ್ ಅಕ್ಷ ಕುಲು ಬಳಿ ಕವಲೊಡೆಯುತ್ತದೆ. ಅದರ ವಾಯವ್ಯ ಶಾಖೆಯೇ ಜನ್ಸ್‌ಕಾರ್ ಶ್ರೇಣಿ. ನುನ್ ಕುನ್‌ನ ಎರಡು ಶಿಖರಗಳು 7055 ಮೀ. ಎತ್ತರ ನಿಲುಕುತ್ತವೆ. ಹಿಮಾಲಯದ ಧವಳಧರ ಶ್ರೇಣಿ ಇನ್ನೂ ಆಚೆಗೆ ಹಬ್ಬಿದೆ.

ಹಿಂದೂಕುಷ್ ಮತ್ತು ಕಾರಕೋರಂ ಶ್ರೇಣಿಗಳು ಹಿಂದೂಸಾಗರಕ್ಕೆ ಹರಿಯುವ ಏಷ್ಯನ್ ನದೀ ವ್ಯವಸ್ಥೆಯ ಜಲವಿಭಾಗ ರೇಖೆಗಳು. ಹಿಮಾಲಯದ ಈಶಾನ್ಯ ಶ್ರೇಣಿಗಳು ಆಳವಾದ ಕಮರಿಗಳಿಂದ ಕೂಡಿವೆ. ಸಸ್ಯಗಳು ಕಡಿಮೆ. ಇದು ಬರಡು ಪ್ರದೇಶ. ಶಿಖರಗಳು ಹಿಮದಿಂದ ಕೂಡಿ ಠೀವಿಯಿಂದ ನಿಂತಿವೆ. ಈ ಭಾಗದಲ್ಲಿ ಪ್ರಪಂಚದ ಎರಡನೆಯ ಅತ್ಯುನ್ನತ ಶಿಖರವಾದ ಗಾಡ್ವಿನ್ ಆಸ್ಟಿನ್ ಶಿಖರವಿದೆ (8615 ಮೀ). ಇಲ್ಲಿ ನೀರ್ಗಲ್ಲ ನದಿಗಳು ಹರಿಯುತ್ತವೆ; ನೀರ್ಗಲ್ಲ ಮೈದಾನಗಳು 130 ಚ.ಕಿಮೀಗಳಷ್ಟು ವ್ಯಾಪಿಸಿವೆ. ಗಿಲ್ಗಿಟ್ ನದಿಯನ್ನು ಸೇರುವ ಹುನ್‌ಜಾ ನದಿ ಉಗಮಿಸುವುದು ಇಲ್ಲಿ. ವಿಶಾಲವಾದ ಲಡಾಕ್ ಪ್ರದೇಶ ಇರುವುದು ಈ ಭಾಗದಲ್ಲೇ. ವಾಯವ್ಯದಲ್ಲಿರುವ ಗಿಲ್ಗಿಟ್ ಸಮುದ್ರಮಟ್ಟದಿಂದ 1524 ಮೀ. ಎತ್ತರದಲ್ಲಿರುವ ಕಣಿವೆ.

**ನದಿಗಳು, ಸರೋವರಗಳು :** ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಅನೇಕ ಸರೋವರಗಳೂ ನೀರ್ಗಲ್ಲ ನದಿಗಳೂ ಊಟೆಗಳೂ ಇವೆ.



ತೆರೆನೊರೆ ಸವಾರಿ

ರಾವಿ (ಇರಾವತಿ) ನದಿ ಪೀರ್ ಪಂಜಾಲ್ ಶ್ರೇಣಿಯ ದಕ್ಷಿಣ ಇಳಿಜಾರಿನಲ್ಲೂ ಧವಳಧರ ಶ್ರೇಣಿಯ ಉತ್ತರ ಇಳಿಜಾರಿನಲ್ಲೂ ಹರಿದುಬರುತ್ತದೆ. ಬಸೋಲಿಯ ಬಳಿ ಹಿಮಾಲಯವನ್ನು ಬಿಟ್ಟು ಕಾಟುವಾ ಮತ್ತು ಮಾಧೋಪುರ್ ಬಳಿ ಪಂಜಾಬ್ ಬಯಲನ್ನು ಸೇರುತ್ತದೆ. ಇದರ ಉದ್ದ 640 ಕಿಮೀ. ಇದರ ಒಟ್ಟು ಪತನ 5030 ಮೀ (2,640 ಕಿಮೀ).

ಚಂದ್ರಾ ನದಿ ಸಮುದ್ರಮಟ್ಟಕ್ಕೆ 6100 ಮೀ. ಅಡಿ ಎತ್ತರದಲ್ಲಿರುವ ಬರಲಾಚ ಪರ್ವತದ ಆಗ್ನೇಯ ಭಾಗದ ವಿಶಾಲ ಮಂಜಿನ ಬಯಲಿನಲ್ಲೂ, ಭಾಗಾ ನದಿ ಬರಲಾಚ ಕಣಿವೆಯ ವಾಯವ್ಯ ಇಳಕಲು ಪ್ರದೇಶದಲ್ಲೂ ಹುಟ್ಟಿ ತಂಡಿ ಎಂಬಲ್ಲಿ ಸಂಗಮವಾಗಿ ಅಲ್ಲಿಂದ ಚಂದ್ರಭಾಗಾ (ಚೀನಾಬ್) ನದಿಯಾಗಿ ಪರಿಣಮಿಸುತ್ತವೆ. ಅದು ಪಂಗಿ ಕಣಿವೆಯ ಮಾರ್ಗವಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಪ್ರವೇಶಿಸಿ ಕಿಷ್ಟವಾರ್ ಬಳಿ ವಾದ್ವಾನ್ ನದಿಯೊಡನೆ ಕೂಡಿ, ಅಲ್ಲಿಂದ ಮುಂದೆ 288 ಕಿಮೀ ಹರಿದು, ಆಖ್‌ನೂರ್ ಬಳಿ ಹಿಮಾಲಯವನ್ನು ಬಿಟ್ಟು ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ರಾಮ್‌ಬನ್ ಬಳಿ ಈ ನದಿಗೆ ಅಡ್ಡಲಾಗಿ ಸೇತುವೆ ಕಟ್ಟಿದೆ.

ರಾವಿ ಮತ್ತು ಚೀನಾಬ್ ನದಿಗಳ ನಡುವಣ ಪ್ರದೇಶಗಳಲ್ಲಿ ಹರಿಯುವ ಕಿರು ನದಿಗಳು ಉಜ್ ಮತ್ತು ತಾವಿ. ಉಜ್ ಶಿವಾಲಿಕ್ ಪರ್ವತಗಳಿಂದ ಹರಿದುಬರುತ್ತದೆ. ತಾವಿ ಜಮ್ಮು ನಗರವನ್ನು ಬಳಸಿ ಹರಿದು ಉಧಮ್‌ಪುರದ ಬಳಿ ಬಾಗಿ ಸಾಗುತ್ತದೆ.

ಝೀಲಮ್ ನದಿ ಪೀರ್ ಪಂಜಾಲ್ ಶ್ರೇಣಿಯಲ್ಲಿ ಹುಟ್ಟುತ್ತದೆ. ರಾಮ್ ಬಿಯಾರ, ರೋಮೂಷಿ, ಸಿಂದ್ ಇವು ಇದರ ಕೆಲವು ಉಪನದಿಗಳು. ಝೀಲಮ್ ನದಿ ವೂಲರ್ ಸರೋವರವನ್ನು ಅದರ ಆಗ್ನೇಯ ದಿಕ್ಕಿನಲ್ಲಿ ಸೇರಿ, ಪಶ್ಚಿಮದಲ್ಲಿ ಅದರಿಂದ ಹೊರಬರುತ್ತದೆ. ವೂಲಾರ್ ಅನ್ನು ಸೇರುವ ಕಿರುನದಿಗಳು ಹರ್ಬೂಜಿ, ಆರಾಹಿ, ಎರಿನ್, ಪೊಹ್ರು ಮತ್ತು ಬಂದಿಪುರ್ ಬಹ್ರಾಂಗುಲ್‌ನಿಂದ ಆಚೆಗೆ ಝೀಲಂ 91 ಮೀ ಗಳಿಗಿಂತ ಹೆಚ್ಚು ಅಗಲವಿಲ್ಲ. ಅದರ ಆಳ 3ಮೀ ಗಿಂತ ಕಡಿಮೆ. ಅಲ್ಲಿ ನದಿ ಕಡಿದಾದ ಕಮರಿಯ ಮೂಲಕ 128 ಕಿಮೀ ದೂರ ಹರಿದು ಸಾಗುತ್ತದೆ. ಮುಜಫರ್‌ಬಾದ್ ಬಳಿ ಕಿಷನ್‌ಗಂಗಾ ಇದನ್ನು ಸಂಗಮಿಸುತ್ತದೆ.

ಸಿಂಧೂ ನದಿ ಆಗ್ನೇಯದಲ್ಲಿ ಚೀನೀ ಟಿಬೆಟ್ ಗಡಿಯಿಂದ ರಾಜ್ಯವನ್ನು ಪ್ರವೇಶಿಸಿ, ಲೇ ಬಳಿ ಜನ್ಸ್‌ಕಾರ್ ನದಿಯೊಡನೆ ಸಂಗಮವಾಗುತ್ತದೆ. ಅಲ್ಲಿಂದ ಮುಂದೆ ಲಡಾಕ್ ಪ್ರದೇಶದಲ್ಲಿ ಶಯೋಕ್ ನದಿಯೊಂದಿಗೆ ಕೂಡಿ ನಂಗಪರ್ವತ ಭಾಗದಲ್ಲಿ ವಾಯವ್ಯಕ್ಕೆ ಹರಿದು, ಅಲ್ಲಿಂದ ಸಾಗಿ ಪಾಕಿಸ್ತಾನದ ಗಡಿಯನ್ನು ಪ್ರವೇಶಿಸುತ್ತದೆ.

ಹಿಮಾಲಯ ಕಣಿವೆಗಳಲ್ಲಿ ಹರಿಯುವ ಮುಖ್ಯ ನದಿಗಳೊಂದಿಗೆ ಸಂಗಮವಾಗುವ ಉಪನದಿಗಳು ಪರ್ವತಗಳ ಅಂಚಿನಲ್ಲಿ ನೂರಾರು ಅಡಿಗಳ ಮೇಲಿರುವ ತೂಗುಕಣಿವೆಗಳಲ್ಲಿ ಹರಿಯುತ್ತವೆ. ನೀರ್ಗಲ್ಲ ನದಿಗಳ ಕ್ರಿಯೆ ಮತ್ತು ಅವು ಹೊತ್ತು ತಂದ ಭೂಸಾರ–ಇವೇ ಈ ಮೇಲು ಕಣಿವೆಗಳ ನಿರ್ಮಾಣಕ್ಕೆ ಕಾರಣ.

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಶಿಗರ್ ನದಿಗೆ ಪೋಷಕವಾದ ಅತ್ಯಂತ ಹಿರಿಯ ನೀರ್ಗಲ್ಲ ನದಿ ಇದೆ. ರಾಜ್ಯದಲ್ಲಿ ಜಲಪಾತಗಳೂ ಊಟೆಗಳೂ ಹೆಚ್ಚು.

ಪ್ರಮುಖ ಸಿಹಿನೀರಿನ ಸರೋವರಗಳಲ್ಲಿ ವೂಲಾರ್ ಮತ್ತು ದಾಲ್ ದೊಡ್ಡವು. ವೂಲಾರ್ ಸರೋವರ 16 ಕಿಮೀ ಉದ್ದ, 9.6 ಕಿಮೀ ಅಗಲ ಇದೆ. ಮನ್ ಸಾರ್ ಜಮ್ಮು ನಗರಕ್ಕೆ ನೈಋತ್ಯದಲ್ಲಿದೆ. ಇದರ ವಿಸ್ತೀರ್ಣ 15.5 ಚ.ಕಿಮೀ. ಸುರಿಮ್ ಸಾರ್ ಮನ್‌ಸಾರ್‌ನ ಪಶ್ಚಿಮದಲ್ಲಿದೆ. ಸನಸಾರ್ ಎಂಬುದು ಪಟ್ನಿ ಟಾಪ್‌ಗೆ ಉತ್ತರದಲ್ಲಿದೆ. ಲಡಾಕ್ ಪ್ರದೇಶದ ಪಾಂಗ್ ಕಾಂಗ್ ಉಪ್ಪುನೀರಿನ ಸರೋವರ. ಇದು 64 ಕಿಮೀ ಉದ್ದ, 3–6 ಕಿಮೀ ಅಗಲ ಇದೆ ; ಸಮುದ್ರಮಟ್ಟಕ್ಕಿಂತ 4267 ಮೀ ಎತ್ತರದಲ್ಲಿದೆ. ತ್ಸಿಮೋರಿರಿ ಸರೋವರ 24 ಕಿಮೀ ಉದ್ದ 3–5 ಕಿಮೀ ಅಗಲವಾಗಿದೆ.

**ವಾಯುಗುಣ :** ಕಾಶ್ಮೀರ ಉ.ಅ.$32^0$17' ರಿಂದ ಉ.ಅ.$36^0$58' ವರೆಗೆ ಹಬ್ಬಿದೆ. ಈ 644 ಕಿಮೀಗಳ ಅಗಲದಲ್ಲಿ ನೆಲದ ಎತ್ತರ ಸಮುದ್ರ ಮಟ್ಟದಿಂದ 305 ಮೀ ನಿಂದ 8611 ಮೀ ಗೆ ಥಟ್ಟನೆ ಏರುತ್ತದೆ. ಇದರಿಂದ ಜಮ್ಮು–ಕಾಶ್ಮೀರ ಪ್ರದೇಶದ ವಾಯುಗುಣದ ಮೇಲೆ ಆಗಿರುವ ಪರಿಣಾಮ ಅಗಾಧ. ಎತ್ತರ, ಪರ್ವತಶ್ರೇಣಿಗಳ ದಿಕ್ಕು, ಗಾಳಿಯ ವೇಗ, ಸೂರ್ಯಕಿರಣಗಳ ಬಾಗು–ಇವು ಈ ರಾಜ್ಯದ ವಿವಿಧ ಭಾಗಗಳ ವಾಯುಗುಣವನ್ನು ನಿರ್ಣಯಿಸುವ ಅಂಶಗಳು.

ಹೊರ ಮೈದಾನ ಮತ್ತು ಹೊರ ಬೆಟ್ಟಗಳನ್ನು ವಾಯುಗುಣದ ದೃಷ್ಟಿಯಿಂದ ಒಂದು ಪ್ರದೇಶವೆಂದು ಪರಿಗಣಿಸಬಹುದು. ಈ ಪ್ರದೇಶದ ಒಟ್ಟು ಮಳೆ 41.4" ಉತ್ತರಕ್ಕೆ ಹೋದಂತೆ ಮಳೆ ಅಧಿಕ. ಅಲ್ಲಿ ಚಳಿಗಾಲದಲ್ಲಿ ಮಂಜು ಬೀಳುತ್ತದೆ. ಮಾರ್ಚ್ ತಿಂಗಳಾದ ಮೇಲೆ ಪಂಜಾಬಿನ ಪ್ರದೇಶದಂತೆ ಇಲ್ಲೂ ಉಷ್ಣತೆ ಹೆಚ್ಚುತ್ತದೆ; ಮಳೆಯಾದ ಮೇಲೆ ಇಳಿಯುತ್ತದೆ. ಒಟ್ಟಿನಲ್ಲಿ ಇಲ್ಲಿಯದು ಉಪೋಷ್ಣವಲಯದ ವಾಯುಗುಣ.



ನಾಗಿನ್ ಸರೋವರ

ಮಧ್ಯ ಪರ್ವತಗಳ ಮತ್ತು ಕಣಿವೆಗಳ ಪ್ರದೇಶ ಇನ್ನೊಂದು ವಾಯುಗುಣವಲಯ. ಎತ್ತರಕ್ಕೆ ಅನುಗುಣವಾಗಿ ಉಷ್ಣತೆಯೂ ಅವಪತನವೂ ವ್ಯತ್ಯಾಸವಾಗುತ್ತವೆ. ಬೇಸಗೆಯಲ್ಲಿ ಹೊರ ಬೆಟ್ಟಗಳ ವಲಯದಲ್ಲಿ ಮಳೆ ಸುರಿಸುವ ಮುಂಗಾರು ಮಾರುತಗಳು ಮಧ್ಯ ಪರ್ವತಗಳನ್ನೇರುವಾಗ ದುರ್ಬಲವಾಗುತ್ತವೆ. ಚಂದ್ರಭಾಗಾ ನದಿಯ ಕಣಿವೆಯಲ್ಲಿ ಚಳಿಗಾಲ ದೀರ್ಘ, ತೀವ್ರ; ಬೇಸಗೆ ಹ್ರಸ್ವ, ಚುರುಕು. ಇನ್ನೂ ಎತ್ತರದ ಕಣಿವೆಗಳಲ್ಲಿ ಬೇಸಗೆಯ ಚುರುಕು ಕಡಿಮೆ. ಪರ್ವತಗಳ ನೆತ್ತಿಯಲ್ಲಿ ಬೀಳುವ ಹಿಮ ಏಪ್ರಿಲ್ ತಿಂಗಳಿನಿಂದ ಕರಗತೊಡಗುತ್ತದೆ. ಉಷ್ಣತೆ, ಅವಪತನ, ತೇವಾಂಶ ಮುಂತಾದ ದೃಷ್ಟಿಗಳಿಂದ ಕಾಶ್ಮೀರ ಕಣಿವೆ ಒಂದು ಪ್ರತ್ಯೇಕ ವಾಯುಗುಣವಲಯ. ಮಾರ್ಚ್‌ವರೆಗೆ ಚಳಿಗಾಲ ತುಂಬ ತೀವ್ರ.

ಮೆಡಿಟರೇನಿಯನ್ ಮೇಲಿಂದ ಆಫ್ಘನ್ ಗಡಿಯ ಮೂಲಕ ಬೀಸುವ ಮಾರುತದಿಂದ ಹಿಮರೂಪದಲ್ಲಿ ಅವಪತನವಾಗುತ್ತದೆ. ಮಾರ್ಚ್ ತಿಂಗಳಿಂದ ಮೇವರೆಗೆ ವಸಂತಕಾಲ. ಜುಲೈ-ಆಗಸ್ಟ್ ಗರಿಷ್ಠ ಸೆಕೆಯ ತಿಂಗಳುಗಳು. ಕಾಶ್ಮೀರ ಕಣಿವೆಯ ಉತ್ತರ ಪೂರ್ವಗಳ ಉನ್ನತ ಪರ್ವತಗಳ ನದೀಕಣಿವೆಗಳು ತಂಪಾಗಿರುತ್ತವೆ. ಪೀರ್ ಪಂಜಾಲ್ ಶ್ರೇಣಿಯ ದಕ್ಷಿಣಕ್ಕೆ ಮುಂಗಾರು ಸ್ತಬ್ಧವಾಗುತ್ತದೆ. ಉ.ಅ.34$^0$ಯ ಮೇಲೆ, ಸಮುದ್ರಮಟ್ಟದಿಂದ 1585 ಮೀ.ಎತ್ತರದಲ್ಲಿರುವ ಶ್ರೀನಗರದ್ದು ಸಮಶೀತೋಷ್ಣ ಹಾಗೂ ಮೆಡಿಟರೇನಿಯನ್ ಪ್ರರೂಪಿ ವಾಯುಗುಣ. ಕಾಶ್ಮೀರ ಕಣಿವೆಯಲ್ಲಿ ಜುಲೈ, ಆಗಸ್ಟ್ ತಿಂಗಳುಗಳು ಮಳೆಗಾಲ. ಆ ತಿಂಗಳುಗಳಲ್ಲಿ ಸರಾಸರಿ ಮಳೆ ಅನುಕ್ರಮವಾಗಿ 2.33" ಮತ್ತು 2.42" ಆಗಸ್ಟ್ ಗರಿಷ್ಠ ಉಷ್ಣತೆಯ ತಿಂಗಳು. ಗರಿಷ್ಠ ಉಷ್ಣತೆ 83.3$^0$ ಫ್ಯಾ. ಸರಾಸರಿ ವಾರ್ಷಿಕ ಮಳೆ ಶ್ರೀನಗರದಲ್ಲಿ 27.2".

**ಸಸ್ಯಗಳು :** ರಾಜ್ಯದ ಅರಣ್ಯಗಳ ಒಟ್ಟು ವಿಸ್ತೀರ್ಣ 21238 ಚ.ಕಿಮೀ. ವಾಯುಗುಣ, ಮಳೆ, ಭೂಗುಣ ಹಾಗೂ ಭೂಮಟ್ಟಗಳಿಂದ ಸಸ್ಯವರ್ಗ ಪ್ರಭಾವಿತ. ದಕ್ಷಿಣ ಭಾಗದಲ್ಲಿ ಕುರುಚಲು ಅರಣ್ಯ, ವಿವಿಧ ಜಲಸಸ್ಯಗಳು, ಮಾವು ಇವೆ. ಜಮ್ಮು ಭಾಗದ ಶಿವಾಲಿಕ್ ಬೆಟ್ಟ ಪ್ರದೇಶದಲ್ಲಿ ಕುರುಚಲುಕಾಡು. ಕಾಶ್ಮೀರ ಕಣಿವೆಯ ದಕ್ಷಿಣ ಅಂಚಿನ ಪೀರ್ ಪಂಜಾಲ್ ಕಣಿವೆಯ 290 ಕಿಮೀ ಉದ್ದಕ್ಕೂ ವಿವಿಧ ಮರಗಿಡಗಳೂ ಹುಲ್ಲುಗಾವಲುಗಳೂ ಮೂಲಿಕೆ ಗಿಡಗಳೂ ಉಂಟು. ಕಾಶ್ಮೀರ ಕಣಿವೆಯಲ್ಲಿ ಜೌಗು ಭೂಮಿ ಹೆಚ್ಚು ; ನಾನಾ ತರದ ಕಾಡು ಹೂ, ಹಳದಿ ಐರಿಸ್ ಹೂ ಗಿಡಗಳು ಬೆಳೆಯುತ್ತವೆ. ಹಿಮಾಲಯ ಪರ್ವತಶ್ರೇಣಿಗಳಲ್ಲಿ ಫಿರ್, ಬರ್ಚ್, ಹೇಜ಼ಲ್, ಓಕ್, ಮೇಪಲ್, ಬೀಚ್ ಮೊದಲಾದ ಮರಗಳಿವೆ. ಚೌಬೀನೆಗೆ ಯೋಗ್ಯವಾದ ವೃಕ್ಷಗಳು ಹಾಗೂ ದೇವದಾರು ಮರಗಳು ಹೇರಳ. ಮರದ ದಿಮ್ಮಿಗಳನ್ನು ನದಿಗಳಲ್ಲಿ ಸಾಗಿಸುತ್ತಾರೆ. ಲಡಾಕ್ ಪ್ರದೇಶದಲ್ಲಿ ಸಸ್ಯಗಳು ಕಡಿಮೆ.

**ಪ್ರಾಣಿಗಳು :** ಅರಣ್ಯಗಳಲ್ಲಿ ಐಬೆಕ್ಸ್, ಕಾಡುಮೇಕೆ, ತೋಳ, ನರಿ, ಕೆಂಪು ಮತ್ತು ಕಪ್ಪು ಕರಡಿ, ಕಾಡುಹಂದಿ, ಕಸ್ತೂರಿಮೃಗ ಇವೆ. ಸರೋವರಗಳಲ್ಲಿ ವಿವಿಧ ಬಾತುಗಳು, ಉಲ್ಲಂಗಿ ಹಕ್ಕಿ, ಕೊಕ್ಕರೆ, ಮೀನು. ಆಮೆ, ಇವೆ. ಜೀವಂಜೀವ, ಕವುಜಗ ಮೊದಲಾದ ಹಕ್ಕಿಗಳಿವೆ.

ಸಾಕುಪ್ರಾಣಿಗಳಲ್ಲಿ ಪ್ರಮುಖವಾದವು ಚಮರೀಮೃಗ ಮತ್ತು ಜೆಹೊ. ಜೆಹೊ ಎಂಬುದು ಹಸು ಮತ್ತು ಚಮರೀಮೃಗಗಳ ಅಡ್ಡತಳಿ.

**ಖನಿಜಗಳು :** ಜಮ್ಮು ಜಿಲ್ಲೆಯ ಕಾಲಕೋಟ್, ಚಿನ್‌ಮರ್, ರಿಯಾಸಿ, ಗೋವ ಬೆರ್, ಸಿಯಾರ್ ಮತ್ತು ಕಾಶ್ಮೀರ ಕಣಿವೆಯ ನಿಚಹೋಮದಲ್ಲಿ ಕಲ್ಲಿದ್ದಲು ನಿಕ್ಷೇಪಗಳಿವೆ. ಪಿಂಗಾಣಿ ಮಣ್ಣು, ಮುಲಾಮು ತಯಾರಿಕೆಯಲ್ಲಿ ಉಪಯೋಗಿಸುವ ಒಚ್ರೆ ಕಾವಿ ಮಣ್ಣು, ತಾಮ್ರ, ಬಾಕ್ಸೈಟ್, ನಿಕಲ್, ಸೀಸ, ಕಬ್ಬಿಣದ ಅದುರು-ಇವೂ ಸ್ವಲ್ಪ ಮಟ್ಟಿಗೆ ಸಿಗುತ್ತವೆ. ಪಚ್ಚೆ, ಕೆಂಪು, ಸ್ಫಟಿಕ ಮೊದಲಾದ ಶಿಲೆಗಳ ಪದರಗಳು ಪರ್ವತಗಳ ಕೆಲವು ಭಾಗಗಳಲ್ಲಿವೆ.

**ಸಂವಿಧಾನ ಮತ್ತು ಸರ್ಕಾರ :** 26ರ ಅಕ್ಟೋಬರ್ 1947ರಂದು ಜಮ್ಮು ಮತ್ತು ಕಾಶ್ಮೀರ ಸಂಸ್ಥಾನ ಭಾರತದಲ್ಲಿ ವಿಲೀನಗೊಂಡಿತು. ರಾಜ್ಯಕ್ಕೆ ಸಂವಿಧಾನವನ್ನು ರಚಿಸಲು 1951ರಲ್ಲಿ ಸಂವಿಧಾನ ಸಭೆ ಏರ್ಪಟ್ಟಿತು. ವಯಸ್ಕರ ಮತದಾನದ ಪ್ರಕಾರ ಚುನಾವಣೆಗಳು ನಡೆದುವು. ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜತ್ವ ರದ್ದಾಗಬೇಕೆಂದೂ ಪ್ರಜಾಸತ್ತಾತ್ಮಕ ರಾಜ್ಯ ಭಾರತಕ್ಕೆ ಸೇರಬೇಕೆಂದೂ ಸಭೆ ಐತಿಹಾಸಿಕ ನಿರ್ಣಯ ಕೈಗೊಂಡಿತು. ನವೆಂಬರ್ 1952ರಲ್ಲಿ ರಾಜಪ್ರಭುತ್ವ ರದ್ದಾಯಿತು. ಜನವರಿ 26, 1957ರಲ್ಲಿ ಹೊಸ ಸಂವಿಧಾನ ಜಾರಿಗೆ ಬಂತು.

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಶಾಸಕಾಂಗ ದ್ವಿಸದನಗಳಿಂದ ಕೂಡಿದ್ದು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಇರುತ್ತವೆ. ರಾಜ್ಯಕ್ಕೆ ಕೇಂದ್ರ ಸಂಸತ್ತಿನ ಲೋಕಸಭೆ ರಾಜ್ಯಸಭೆಗಳಲ್ಲೂ ಪ್ರಾತಿನಿಧ್ಯವಿದೆ.

ಸರ್ವೋಚ್ಚ ನ್ಯಾಯಾಲಯದ ಮತ್ತು ಚುನಾವಣಾ ಆಯೋಗದ ಅಧಿಕಾರ ರಾಜ್ಯಕ್ಕೂ ವ್ಯಾಪಿಸುತ್ತದೆ. ಕೇಂದ್ರ ಸರ್ಕಾರದ ಕಾನೂನುಗಳನ್ನು ರಾಜ್ಯ ಸರ್ಕಾರ ಅಳವಡಿಸಿಕೊಂಡಿದೆ.

ಈಗ ರಾಜ್ಯಪಾಲರು ರಾಜ್ಯದ ಆಡಳಿತ ಮುಖ್ಯರು. ಮುಖ್ಯಮಂತ್ರಿಯಿಂದ ಕೂಡಿದ ಮಂತ್ರಿಮಂಡಲವಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರು ವಿಭಾಗ (ಡಿವಿಜ಼ನ್)ಗಳಿವೆ. ಜಮ್ಮು, ಕಾಶ್ಮೀರ ಕಣಿವೆ ಮತ್ತು ಲಡಾಕ್ ಅದನ್ನು 22 ಜಿಲ್ಲೆಗಳಾಗಿ ವಿಭಾಗಿಸಲಾಗಿದೆ. ಸಿಯಾಚಿನ್ ಹಿಮನದಿ, ಭಾರತದ ಮಿಲಿಟರಿಯ ಅಧೀನದಲ್ಲಿದ್ದರೂ, ಅದು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಆಡಳಿತಕ್ಕೊಳಪಡುವುದಿಲ್ಲ. ಕಿಷ್ತ್‌ವಾರ್, ರಾಮ್‌ಬನ್, ರಿಯಸಿ, ಸಾಂಬ, ಬಂಡಿಪೊರ, ಗಂಡೇರ್‌ಬಲ್, ಕುಲ್‌ಗಾಂ ಮತ್ತು ಕೋಪಿಯನ್‌ಗಳು ಹೊಸದಾಗಿ ರಚಿತವಾದ ಜಿಲ್ಲೆಗಳು.

**ಶಿಕ್ಷಣ :** 2001ರ ಗಣತಿಯ ಪ್ರಕಾರ ರಾಜ್ಯದ ಸಾಕ್ಷರರ ಸಂಖ್ಯೆ ಸರಾಸರಿ 54.46 ಗ್ರಾಮೀಣರ ಸಂಖ್ಯೆ ಶೇ. 48.22. ನಗರವಾಸಿಗಳು ಶೇ. 72.17 ಇತ್ತು. 5 ವಿಶ್ವವಿದ್ಯಾ ನಿಲಯಗಳೂ, 41 ಕಾಲೇಜುಗಳೂ ಇದ್ದವು. 2004ರಲ್ಲಿ 168 ಪ್ರೌಢಶಾಲೆಗಳು, 1030 ಮಾಧ್ಯಮ, 2560 ಪ್ರಾಥಮಿಕ ಶಾಲೆಗಳಿದ್ದವು.

**ವ್ಯವಸಾಯ :** ಪರ್ವತಗಳು, ಕಮರಿಗಳು ಹಾಗೂ ಹಿಮ ಹೆಚ್ಚಾಗಿರುವುದರಿಂದ ಸಾಗುವಳಿಗೆ ಒಳಪಟ್ಟ ಭೂಮಿ ಕಡಿಮೆ. ರಾಜ್ಯದ ಶೇ.80ರಷ್ಟು ಮಂದಿಯ ಕಸಬು ವ್ಯವಸಾಯ. ಬತ್ತ ಮತ್ತು ಮುಸುಕಿನ ಜೋಳ ಮುಖ್ಯ ಬೆಳೆಗಳು. ಪರ್ವತ ಭಾಗಗಳಲ್ಲಿ 2130 ಮೀ. ಎತ್ತರದಲ್ಲೂ ಬತ್ತ ಬೆಳೆಯುತ್ತದೆ. ಹೆಚ್ಚಿನ ಗೋಧಿ ಬೆಳೆಯುವುದು ಜಮ್ಮು ಪ್ರದೇಶದಲ್ಲಿ. ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತನೆ, ಜೂನ್ ತಿಂಗಳಲ್ಲಿ ಕುಯಿಲು. ಬಾರ್ಲಿ, ಜೋಳ, ಎಣ್ಣೆಬೀಜಗಳು ಸ್ವಲ್ಪಮಟ್ಟಿಗೆ ಬೆಳೆಯುತ್ತವೆ. ಕುಂಕುಮ ಕೇಸರಿ ಕಾಶ್ಮೀರ ಕಣಿವೆಯಲ್ಲಿ ಬೆಳೆಯುತ್ತದೆ. ಇದರಿಂದ ರಾಜ್ಯಕ್ಕೆ ಒಳ್ಳೆಯ ಆದಾಯವುಂಟು.

ರಾಜ್ಯ ಹಣ್ಣಿನ ಬೆಳೆಗೆ ಪ್ರಸಿದ್ಧ. ಸೇಬು, ಮರಸೇಬು, ಪ್ಲಮ್, ಪೀಚ್, ಜರದಾಳು(ಏಪ್ರಿಕಾಟ್), ವಾಲ್‌ನಟ್, ದ್ರಾಕ್ಷಿ, ಮಾವು, ಬಾಳೆ, ಕಿತ್ತಲೆ-ಇವು ಬೆಳೆಯುತ್ತವೆ.

ಪರ್ವತಭಾಗಗಳ ಮೇಡುಗಳಲ್ಲಿ ನದಿಗಳು ರಭಸದಿಂದ ಹರಿಯುವುದರಿಂದ ಮತ್ತು ನೀರು ಮಂಜುಗಟ್ಟಿರುವುದರಿಂದ ನೀರಾವರಿ ಕಷ್ಟ. ರಾಜ್ಯದ ಕಣಿವೆಗಳಲ್ಲಿ ನೀರ್ಗಾಲುವೆಗಳು ಹೇರಳ. ರಣಭೀರ್ ನಾಲ, ಪ್ರತಾಪ ನಾಲ, ಬಸಂತಪುರ್ ನಾಲ, ಉಜ್ ನಾಲ, ಝೀಲಂ ನಾಲ-ಇವು ಬಂಜರುಪ್ರದೇಶಗಳನ್ನು ಸಾಗುವಳಿಗೆ ತಂದಿವೆ. ರಣಭೀರ್ ನಾಲ 402 ಕಿಮೀ. ಹರಿಯುತ್ತದೆ. ಝೀಲಂ ನದಿಯ ಪ್ರವಾಹ 1950, 1953, 1956, 1957 ಮತ್ತು 1959ರಲ್ಲಿ ಹೆಚ್ಚು ನಷ್ಟ ಉಂಟು ಮಾಡಿತು. ನದಿಗಳ ಪ್ರವಾಹದಿಂದ ಬೆಳೆಗಳನ್ನು ರಕ್ಷಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ.

**ಕೈಗಾರಿಕೆ ಮತ್ತು ವಾಣಿಜ್ಯ :** ಮುಖ್ಯ ಕೈಗಾರಿಕೆ ಉಣ್ಣೆ ಬಟ್ಟೆ ಮತ್ತು ಕಂಬಳಿ ತಯಾರಿಕೆ. ಪಿಂಗಾಣಿ ಸಾಮಾನು, ಔಷಧವಸ್ತು, ಬೆಂಕಿಕಡ್ಡಿ, ಸಿಮೆಂಟ್, ಚರ್ಮ ಹದಗಾರಿಕೆ, ಕರ್ಪೂರ ತೈಲ, ರೇಷ್ಮೆ-ಇವುಗಳ ಕಾರ್ಖಾನೆಗಳಿವೆ. ಕುಶಲಕಲೆ, ಕೈಕಸಬು, ಕೆತ್ತನೆ ಕೆಲಸಗಳಿಗೆ ರಾಜ್ಯ ಹೆಸರಾಗಿದೆ. ಸುಂದರವಾಗಿ ಕಸೂತಿ ಹಾಕಿದ ಶಾಲುಗಳು, ಕಾಶ್ಮೀರಿ ಜಮಖಾನೆಗಳು, ಕೃತಕ ಆಭರಣಗಳು ತಯಾರಾಗುತ್ತವೆ. ಕಾಗದದ ತಿಳ್ಳಿನಿಂದ ವಿವಿಧ ವಸ್ತುಗಳನ್ನು ತಯಾರಿಸುತ್ತಾರೆ. ವಿಲೋ ಕಡ್ಡಿಗಳಿಂದ ಬುಟ್ಟಿ, ಸೋಫ, ಕುರ್ಚಿ, ಪೆಟ್ಟಿಗೆ ಮೊದಲಾದ ವಸ್ತುಗಳನ್ನು ಮಾಡುತ್ತಾರೆ. ಈ ವಸ್ತುಗಳನ್ನು ಚಳಿಗಾಲದಲ್ಲಿ ತಯಾರಿಸಿ, ಬೇಸಗೆಯಲ್ಲಿ ಅಲ್ಲಿಗೆ ಬರುವ ಪ್ರವಾಸಿಗಳಿಗೆ ಮಾರುತ್ತಾರೆ. 2003-04ರಲ್ಲಿ ಗೃಹ ಕೈಗಾರಿಕೆ 8.21 ಕೋಟಿ ರೂಪಾಯಿಗಳ ಆದಾಯ ತಂದಿತ್ತು. ಸು. 3.40 ಲಕ್ಷ ಮಂದಿಗೆ ಉದ್ಯೋಗ ಒದಗಿಸಿತ್ತು.

ವಿದ್ಯುತ್ ಉತ್ಪಾದನ ಕೇಂದ್ರಗಳಲ್ಲಿ ಮುಖ್ಯವಾದವು ಗಂದರ್‌ಬಲ್‌ನಲ್ಲಿರುವ ಸಿಂದ್ ನಾಲಾ ಜಲವಿದ್ಯುತ್ ಕೇಂದ್ರ, ಪಹಲ್ಗಾಂ ಬಳಿಯ ಝೀಲಂ ಜಲವಿದ್ಯುತ್ ಕೇಂದ್ರ, ಲಡಾಕ್‌ನ ಕಾರ್ಗಿಲ್ ಮತ್ತು ಲೇ ನಗರಗಳ ವಿದ್ಯುತ್ ಕೇಂದ್ರಗಳು, ಜಮ್ಮು ಪ್ರದೇಶದ ಸಲಾಲ್ ಜಲವಿದ್ಯುತ್ ಕೇಂದ್ರ.

ರಾಜ್ಯ ಆಮದು ಮಾಡಿಕೊಳ್ಳುವ ವಸ್ತುಗಳು ಹತ್ತಿ ಬಟ್ಟೆ, ಸಕ್ಕರೆ, ಚಹ, ಉಪ್ಪು, ಹೊಗೆಸೊಪ್ಪು, ಔಷಧ, ಯಂತ್ರೋಪಕರಣ. ರಾಜ್ಯದಿಂದ ರಫ್ತಾಗುವ ವಸ್ತುಗಳು ಉಣ್ಣೆ ಬಟ್ಟೆ, ಶಾಲು, ಜಮಖಾನೆ, ಚಕ್ಕಳ, ಚೌಬೀನೆ, ರೇಷ್ಮೆ, ಕುಂಕುಮಕೇಸರಿ, ಹಣ್ಣುಗಳು.

ಶ್ರೀನಗರಕ್ಕೆ ಹೋಗುವ, ಸಾಲುಮರಗಳ ರಸ್ತೆ

**ಸಾರಿಗೆ ಸಂಪರ್ಕ :** ಎತ್ತರದ ಪರ್ವತಮಾರ್ಗಗಳಲ್ಲಿ ಚಮರೀಮೃಗ ಮತ್ತು ಮೇಕೆಗಳ ಮೇಲೆ ಸಾಮಾನುಗಳನ್ನು ಹೇರಿ ಪ್ರಯಾಣ ಮಾಡುತ್ತಾರೆ. ತಗ್ಗುಪ್ರದೇಶಗಳಲ್ಲಿ ಕುದುರೆ ಮತ್ತು ಹೇಸರಗತ್ತೆಗಳ ಉಪಯೋಗ. ಕಡಿದಾದ ಭಾಗಗಳಲ್ಲಿ ಸ್ಲೆಡ್ಜ್ ಮಾದರಿಯ ಚಕ್ರವಿಲ್ಲದ ಬಂಡಿಗಳನ್ನು ಉಪಯೋಗಿಸುತ್ತಾರೆ. ಪಠಾಣ್‌ಕೋಟ್-ಜಮ್ಮು-ಕಾಶ್ಮೀರ ರಸ್ತೆ ರಾಜ್ಯದ ಬಹು ಮುಖ್ಯ ಹೆದ್ದಾರಿ. ಕಾಶ್ಮೀರ ಕಣಿವೆಯಲ್ಲಿ ರಸ್ತೆಗಳು ಹಾಸುಹೊಕ್ಕಾಗಿ ಸಾಗಿ

ಮುಖ್ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುತ್ತವೆ. ಇತರ ಮುಖ್ಯ ರಸ್ತೆ ಮಾರ್ಗಗಳು ಝೀಲಂ ಕಣಿವೆ ರಸ್ತೆ, ಬನಿಹಾಲ್ ರಸ್ತೆ ಮತ್ತು ಗಿಲ್ಗಿಟ್ ರಸ್ತೆ. ಕೆಲವು ರಸ್ತೆಗಳು ತೀರ ಕಿರಿದಾಗಿವೆ; ಅವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತವೆ. ರಾಜ್ಯದಲ್ಲಿ ನಬಾರ್ಡ್ ಸಿ.ಆರ್.ಎಫ್ ಇವುಗಳ ಮೂಲಕ ವಿವಿಧ ರಸ್ತೆ ನಿರ್ಮಾಣ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ ಲೋಕೋಪಯೋಗಿ ಇಲಾಖೆಯ ಉಸ್ತುವಾರಿಗೆ 15,102 ಕಿಮೀ ರಸ್ತೆ ಸೇರಿದೆ.

ರಾಜ್ಯದಲ್ಲಿ ಜಲಮಾರ್ಗಗಳು ಹೆಚ್ಚು, ಅಗ್ಗ ಹಾಗೂ ಅನುಕೂಲಕರ. ಕಾಶ್ಮೀರ ಕಣಿವೆಯಲ್ಲಿ ಖಾನಾಬಾಲ್‌ನಿಂದ ಬಾರಾಮೂಲವರೆಗೆ ಜಲಯಾನವಿದೆ. ಶಿಕಾರಾ ಎಂಬ ಪ್ರಯಾಣಿಕ ದೋಣಿಯಲ್ಲಿ ಐವತ್ತು ಪ್ರಯಾಣಿಕರು ಸಂಚರಿಸಬಹುದು. ಸರಕು ಸಾಗಿಸಲು ಡೂಂಗ ಎಂಬ ದೋಣಿಗಳಿವೆ; ಕೆಲವು ಕಡೆ ದೋಣಿಗಳಲ್ಲೇ ಜನ ವಾಸಿಸುತ್ತಾರೆ. ಪ್ರವಾಸಿಗರ ಉಪಯೋಗಕ್ಕೆ ದೋಣಿ ಮನೆಗಳಿವೆ.

ಜಮ್ಮು-ಸಿಯಾಲ್ ಕೋಟ್ ನಡುವೆ ರೈಲುಮಾರ್ಗವಿದೆ. ಇದು ವಾಯವ್ಯ ರೈಲ್ವೆ ವಿಭಾಗದ ಶಾಖೆ. ಪಠಾಣ್ ಕೋಟ್ ರೈಲುಮಾರ್ಗವನ್ನು ಕಾಟುವಾ ಜಿಲ್ಲೆಗೆ ವ್ಯಾಪಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರ ನಗರಗಳಲ್ಲಿ ವಿಮಾನ ನಿಲ್ದಾಣಗಳು ಇವೆ. ಶ್ರೀನಗರದಿಂದ ದೆಹಲಿ, ಪಠಾಣ್ ಕೋಟ್ ಮತ್ತು ಜಮ್ಮು ನಗರಗಳಿಗೆ ವಿಮಾನ ಸಂಚಾರವುಂಟು.

ಶ್ರೀನಗರದ ಒಂದು ದೃಶ್ಯ

**ಪ್ರವಾಸ :** ಶ್ರೀನಗರಕ್ಕೆ ಸಮೀಪದಲ್ಲಿ ಮೊಗಲರ ಕಾಲದ ಹಲವು ತೋಟಗಳಿವೆ. ನಗರದ ಸುತ್ತಮುತ್ತಣ ಪ್ರದೇಶದಲ್ಲಿ ಮನೋಹರವಾದ ಸರೋವರಗಳುಂಟು. ದಾಲ್ ಸರೋವರದಲ್ಲಿ ತೆಪ್ಪದ ತೋಟಗಳಿವೆ. ಪ್ರಯಾಣಿಕರ ಸಂಚಾರಕ್ಕೆ ದೋಣಿಗಳು, ತಂಗಲು ಸರೋವರದಲ್ಲಿ ತೇಲುವ ಗೃಹದೋಣಿಗಳು ಉಂಟು. ವೂಲಾರ್ ಸರೋವರ ಪ್ರವಾಸಿಗಳನ್ನು ಆಕರ್ಷಿಸುತ್ತದೆ. ಗುಲ್ಮಾರ್ಗ್ ರಮಣೀಯವಾದ ಹೂಗಾವಲು ; ಚಳಿಗಾಲದ ಸ್ಕೇಟಿಂಗ್ ಕ್ರೀಡೆಯ ಕೇಂದ್ರ. ಶ್ರೀನಗರಕ್ಕೆ 97 ಕಿಮೀ ದೂರದಲ್ಲಿರುವ ಪಹಲ್ಗಾಂ ಮತ್ತೊಂದು ಸುಂದರ ಸ್ಥಳ. ಅಲ್ಲಿಂದ 45 ಕಿಮೀ ದೂರದಲ್ಲಿರುವ ಅಮರನಾಥ್ ಗವಿಗೆ ಹೋಗಬಹುದು. ಶ್ರೀನಗರದಿಂದ ಈಶಾನ್ಯಕ್ಕೆ 82 ಕಿಮೀ ದೂರದಲ್ಲಿರುವ ಸೋನಾಮಾರ್ಗ ಪ್ರವಾಸಿಕ್ಷೇತ್ರ. ಅಲ್ಲಿಂದ ಸಮೀಪದ ನೀರ್ಗಲ್ಲ ನದಿಗಳಿರುವ ಸ್ಥಳಗಳನ್ನು ನೋಡಿಬರಬಹುದು. ಶ್ರೀನಗರದ ಬಳಿ ಶಂಕರಾಚಾರ್ಯರ ಬೆಟ್ಟವಿದೆ. ನಗರದಲ್ಲಿ ಪ್ರತಾಪ್ ಸಿಂಗ್ ವಸ್ತುಸಂಗ್ರಹಾಲಯವುಂಟು.

ಜಮ್ಮು ಜಿಲ್ಲೆಯ ಬಹುಕೋಟೆ, ರಾಂನಗರದ ಅಮರ್‌ಮಹಲ್ ಅರಮನೆ, ಕಪೂರಗಢದ ಕೋಟೆ, ಆಖ್-ನೂರ್ ಮತ್ತು ಸಾಂಬ ಕೋಟೆಗಳು, ಉಧಮ್‌ಪುರದ ಬಳಿಯ ಪ್ರಾಚೀನ ದೇವಾಲಯಗಳು-ಇವು ಆಕರ್ಷಣೀಯ ಸ್ಥಳಗಳು.

ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರ. ಜಮ್ಮು ಇನ್ನೊಂದು ಮುಖ್ಯ ನಗರ. ಇದು ಚಳಿಗಾಲದ ರಾಜಧಾನಿ. 2011 ರ ಜನಗಣತಿಯ ಪ್ರಕಾರ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಜಿಲ್ಲೆಗಳ ವಿಸ್ತೀರ್ಣ ಮತ್ತು ಜನಸಂಖ್ಯೆಗಳನ್ನು ಈ ಕೆಳಗೆ ಕೊಟ್ಟಿದೆ:

(ವಿ.ಜಿ.ಕೆ.)

**ಜಮ್ಮು ವಿಭಾಗ**

| ಜಿಲ್ಲೆಯ ಹೆಸರು | ಆಡಳಿತ ಕೇಂದ್ರ | ವಿಸ್ತೀರ್ಣ (ಚ.ಕಿಮೀ.) | ಜನಸಂಖ್ಯೆ |
|---|---|---|---|
| ಕಿಷ್ತವಾರ್ | ಕಿಷ್ತವಾರ್ | – | 231,037 |
| ರಾಂಬನ್ | ರಾಂಬನ್ | – | 283313 |
| ರಿಯಾಸಿ | ರಿಯಾಸಿ | – | 314714 |
| ಸಾಂಬ | ಸಾಂಬ | – | 318,611 |
| ದೋಡ | ದೋಡ | 11,691 | 409,576 |
| ಪೂಂಚ್ | ಪೂಂಚ್ | 1,674 | 476,820 |
| ಉಧಾಂಪುರ್ | ಉಧಾಂಪುರ್ | 4550 | 555,357 |
| ಕಥುವಾ | ಕಥುವಾ | 2651 | 615,711 |
| ರಾಜೌರಿ | ರಾಜೌರಿ | 2630 | 619,266 |
| ಜಮ್ಮು | ಜಮ್ಮು | 3097 | 1,526,406 |

**ಕಾಶ್ಮೀರ ಕಣಿವೆ ವಿಭಾಗ**

| | | | |
|---|---|---|---|
| ಅನಂತನಾಗ್ | ಅನಂತನಾಗ್ | 3,984 | 1,069,749 |
| ಕುಲ್‌ಗಾಂವ್ | ಕುಲ್‌ಗಾಂವ್ | – | 423181 |
| ಪುಲ್ವಾಮ | ಪುಲ್ವಾಮ | 1398 | 570,060 |
| ಷೋಪಿಯನ್ | ಷೋಪಿಯನ್ | – | 265,960 |
| ಬುದ್ಗಮ್ | ಬುದ್ಗಂ | 1371 | 755,331 |
| ಶ್ರೀನಗರ್ | ಶ್ರೀನಗರ್ | 2228 | 1,250,173 |
| ಗಂದೇರ್‌ಬಲ್ | ಗಂದೇರ್‌ಬಲ್ | – | 297,003 |
| ಬಂಡಿಪೊರ | ಬಂಡಿಪೊರ | – | 385099 |
| ಬಾರಮುಲ್ಲ | ಬಾರಮುಲ್ಲ | 4,588 | 1,015,503 |
| ಕುಪ್ವಾರ | ಕುಪ್ವಾರ | 2379 | 875,564 |

**ಲಡಾಖ್ ವಿಭಾಗ**

| | | | |
|---|---|---|---|
| ಕಾರ್ಗಿಲ್ | ಕಾರ್ಗಿಲ್ | 14,036 | 143,388 |
| ಲೇ | ಲೇ | 45,110 | 147,104 |

(ಇದರಲ್ಲಿ 37,555 ಚ.ಕಿ.ಮೀ ನ್ಯಾಯಬಾಹಿರವಾಗಿ ಚೀನ ಆಕ್ರಮಿಸಿ ಕೊಂಡಿರುವುದೂ ಸೇರಿದೆ.)



ನೆಹರು ಉದ್ಯಾನ, ಶ್ರೀನಗರ

**ಪ್ರಾಗಿತಿಹಾಸ :** ಕಾಶ್ಮೀರದ ಪ್ರಾಚೀನ, ಮಧ್ಯ ಮತ್ತು ಅಂತ್ಯ ಶಿಲಾಯುಗ ಸಂಸ್ಕೃತಿಗಳ ಬಗ್ಗೆ ಸಿಕ್ಕಿರುವ ಮಾಹಿತಿ ಅತ್ಯಲ್ಪ ಮತ್ತು ಅನಿರ್ದಿಷ್ಟ. ಆದರೆ ವಿಶ್ವದ ಇತರ ಎಡೆಗಳಲ್ಲಿ ಪ್ರಾಚೀನ ಶಿಲಾಯುಗ ಸಂಸ್ಕೃತಿಗಳು ಹರಡಿದ್ದ ಪ್ಲೀಸ್ಟೋಸೀನ್ ಯುಗದಲ್ಲಿ ಕಾಶ್ಮೀರದಲ್ಲೂ ವಾಯುಗುಣ ಮತ್ತು ಭೂಲಕ್ಷಣಗಳಲ್ಲಿ ಹಲವು ಬದಲಾವಣೆಗಳು ಆದುವು. ಆ ಕಾಲದಲ್ಲಿ ಕಾಶ್ಮೀರದ ನೆರೆಯ ಪ್ರದೇಶಗಳಲ್ಲಿ ಶಿಲಾಯುಧ ಸಂಸ್ಕೃತಿಗಳು ಹರಡಿದ್ದುದರಿಂದ, ಕಾಶ್ಮೀರದಲ್ಲೂ ಈ ಸಂಸ್ಕೃತಿಗಳು ಇದ್ದಿರಬಹುದು. ಈಚೆಗೆ ಆ ಕಾಲದ ಕೆಲವು ಶಿಲಾಯುಧಗಳು ಅಲ್ಲಿ ದೊರಕಿವೆ.

ಕಳೆದ ಕೆಲವು ವರ್ಷಗಳಲ್ಲಿ ಶ್ರೀನಗರದಿಂದ 11 ಕಿಮೀ ಈಶಾನ್ಯಕ್ಕಿರುವ ಬುರ್ಜಹೋಮ್ ಎಂಬಲ್ಲಿ ನಡೆದ ಉತ್ಖನನಗಳಲ್ಲಿ ನಾಲ್ಕು ಸಾಂಸ್ಕೃತಿಕ ಘಟ್ಟಗಳು ಗುರುತಿಸಲ್ಪಟ್ಟಿವೆ. ಇವುಗಳಲ್ಲಿ ಮೊದಲ ಎರಡು ನವಶಿಲಾಯುಗದ ಸಂಸ್ಕೃತಿಗೆ ಸೇರಿದವು. ಮೂರನೆಯದು ಬೃಹತ್ ಶಿಲಾಯುಗದ ಸಂಸ್ಕೃತಿಯದು, ನಾಲ್ಕನೆಯದು ಚಾರಿತ್ರಿಕ ಕಾಲದ್ದು. ನವಶಿಲಾಯುಗಕ್ಕೆ ಮೊದಲು ಇಲ್ಲಿಯ ಜನ ನೆಲದಲ್ಲಿ ಅಗೆದ ಹಳ್ಳಗಳ ಮೇಲೆ ಮರದ ಕಂಬಗಳನ್ನು ನಿಲ್ಲಿಸಿ, ಇಳಿಜಾರಾಗಿ ಹೊಂದಿಸಿದ ಚಾವಣಿಗಳಿದ್ದ ಗುಡಿಸಿಲುಗಳಲ್ಲಿ ವಾಸಿಸುತ್ತಿದ್ದರು. ಇವು ಗುಂಡಗೆ ಅಥವಾ ಅಂಡಾಕಾರವಾಗಿ ಇರುತ್ತಿದ್ದುವು. ಇವುಗಳಲ್ಲಿ ಅತ್ಯಂತ ದೊಡ್ಡದು 3.96 ಮೀ ಆಳವಾಗಿ 4.57 ಮೀ ತಳವ್ಯಾಸ ಮತ್ತು 2.74 ಮೀ ಬಾಯಿವ್ಯಾಸ ಉಳ್ಳುದಾಗಿ ಇದೆ. ಈ ಗುಳಿಗಳ ಒಳಕ್ಕೆ ಇಳಿಯಲು ಮೆಟ್ಟಿಲುಗಳೂ ಒಳಗೆ

ಪದಾರ್ಥಗಳನ್ನಿಡಲು ಗೂಡುಗಳೂ ನೆಲದಲ್ಲಿ ಒಲೆಗಳೂ ಇದ್ದವು. ಈ ಗುಳಿಮನೆಗಳಲ್ಲಿ ವಾಸಿಸುತ್ತಿದ್ದ ಜನ ಕಲ್ಲಿನ ನುಣುಪು ಕೊಡಲಿ, ಉದ್ದದ ಚಾಕು, ಹಲವು ರೀತಿಯ ಎಲುಬಿನ ಆಯುಧಗಳು ಮತ್ತು ಕಂದುಬಣ್ಣದ ನಯ ಮಾಡಿದ, ಕೈಯಲ್ಲಿ ತಯಾರಿಸಿದ ಮಡಕೆಗಳನ್ನು ಉಪಯೋಗಿಸುತ್ತಿದ್ದರು.



ಶಾಲಿಮಾರ್ ಉದ್ಯಾನ

ನವಶಿಲಾಯುಗದ ಎರಡನೆಯ ಘಟ್ಟದ ಜನ ಗುಳಿಮನೆಗಳಿಗೆ ಬದಲಾಗಿ ಮಣ್ಣು ಮತ್ತು ಹಸಿ ಇಟ್ಟಿಗೆಗಳ ಮನೆಗಳಲ್ಲಿ ವಾಸಿಸಲಾರಂಭಿಸಿದರು. ಈ ಮನೆಗಳು ಸಾಮಾನ್ಯವಾಗಿ ಚೌಕ ಮತ್ತು ಆಯಾಕಾರವಾಗಿರುತ್ತಿದ್ದುವು. ನೆಲಕ್ಕೆ ಕೆಂಪು ಮಣ್ಣಿನ ಗಚ್ಚೂ ಇತ್ತು. ಈ ಕಾಲದಲ್ಲಿ, ಕುಂಬಾರಚಕ್ರದಿಂದ ಮಾಡಿದ, ಹೊಳಪಿನ ಕಪ್ಪು ಮಡಕೆಗಳು ಬಳಕೆಗೆ ಬಂದುವು. ಈ ಕಾಲದಲ್ಲೂ ಹಿಂದಿನ ಹಂತದಲ್ಲಿದ್ದಂಥ ಕಲ್ಲಿನ ಆಯುಧಗಳೂ ಇನ್ನೂ ಹೆಚ್ಚು ಎಲುಬಿನ ಉಪಕರಣಗಳೂ ಬಳಕೆಯಲ್ಲಿದ್ದವು. ಈ ಹಂತದ ಅಂತ್ಯದಲ್ಲಿ ತಾಮ್ರವನ್ನೂ

ಅವಂತೀಪುರದ ಭಗ್ನಾವಶೇಷಗಳು

ಉಪಯೋಗಿಸುತ್ತಿದ್ದುದಾಗಿ ಕಂಡುಬರುತ್ತದೆ. ಆ ಕಾಲದ ಕೆಲವು ಸಮಾಧಿಗಳವು ಅಲ್ಲಿಯ ವಾಸದ ನೆಲೆಯಲ್ಲೇ ದೊರಕಿವೆ. ಇವುಗಳಲ್ಲಿ ಎರಡು ವಿಧ. ಮೊದಲನೆಯ ರೀತಿಯಲ್ಲಿ ಇಡೀ ದೇಹವನ್ನು ಹಳ್ಳದಲ್ಲಿ ಹೂಳುತ್ತಿದ್ದುದು ಒಂದು ಬಗೆ. ಶವವನ್ನು ಬೇರೆಲ್ಲಿಯೋ ಸ್ವಲ್ಪಕಾಲ ಇಟ್ಟಿದ್ದು, ಅನಂತರ ಅದರ ದೊಡ್ಡ ಎಲುಬುಗಳನ್ನೇ ತಂದು ಸಂಸ್ಕರಿಸುತ್ತಿದ್ದುದು ಎರಡನೆಯ ಬಗೆ. ಈ ಸಮಾಧಿಗಳಲ್ಲಿ ಶವದ ಜೊತೆಯಲ್ಲಿ ಮೇಕೆ, ನಾಯಿ ಮುಂತಾದ ಸಾಕುಪ್ರಾಣಿಗಳನ್ನೂ ಹೂಳುತ್ತಿದ್ದರು. ಇವಲ್ಲದೆ ಸಾಕುಪ್ರಾಣಿಗಳಿಗೇ ಮೀಸಲಾದ ಕೆಲವು ಸಮಾಧಿಗಳೂ ಸಿಕ್ಕಿವೆ. ಬುರ್ಜಹೋಮ್‌ನ ಮೊದಲನೆಯ ಎರಡು ಸಂಸ್ಕೃತಿಗಳನ್ನು ನವಶಿಲಾಯುಗದ್ದೆಂದು ಕರೆದರೂ ಆಗ ಧಾನ್ಯಗಳನ್ನು ಬೆಳೆಯುತ್ತಿದ್ದುದಕ್ಕೆ ನೇರ ಆಧಾರಗಳೇನೂ ದೊರಕಿಲ್ಲ. ದೊರಕಿರುವ ಕೆಲವು ಕಲ್ಲಿನ ಚಾಕುಗಳು ಮತ್ತು ತೂತಿರುವ ದುಂಡುಕಲ್ಲುಗಳಿಂದ ಆ ಕಾಲದಲ್ಲಿ ವ್ಯವಸಾಯವಿದ್ದಿರಬಹುದೆಂದು ಹೇಳಬಹುದಾದರೂ ಅಲ್ಲಿ ಎಲುಬಿನ ಆಯುಧಗಳು ವಿಪುಲವಾಗಿ ದೊರಕಿರುವುದರಿಂದ ಜನರಿಗೆ ಬೇಟೆ ಮುಖ್ಯ ಕಸುಬಾಗಿದ್ದಿರಬೇಕು. ಹಿಮಾಲಯಕ್ಕೆ ಉತ್ತರದಲ್ಲಿರುವ ಚೀನ, ಸೈಬೀರಿಯ ಮುಂತಾದ ದೇಶಗಳ ನವಶಿಲಾಯುಗದ ಸಂಸ್ಕೃತಿಗಳಿಗೂ ಇಲ್ಲಿಯ ಸಂಸ್ಕೃತಿಗೂ ಹೆಚ್ಚಿನ ಸಾಮ್ಯ ಇದೆ. ಕಾರ್ಬನ್–14ರ ಗಣನೆಯಿಂದ ಇಲ್ಲಿಯ ಈ ಸಂಸ್ಕೃತಿ ಪ್ರಶ.ಪೂ.2300ರ ಸುಮಾರಿನಲ್ಲೇ ಆರಂಭವಾಗಿದ್ದಂತೆ ತಿಳಿಯುತ್ತದೆ.

ಮುಂದಿನ ಹಂತ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ್ದು. ಪ್ರಾಯಶಃ ಮೃತರ ಸ್ಮಾರಕವಾಗಿ ನೆಟ್ಟ ಇಲ್ಲಿಯ ಕೆಲವು ದೊಡ್ಡ ಬಂಡೆಗಳು ಈ ಕಾಲಕ್ಕೆ ಸೇರಿದವಾದ್ದರಿಂದ, ಈ ಸಂಸ್ಕೃತಿಗೆ ಆ ಹೆಸರು ಬಂದಿದೆ. ಆದರೆ ಈ ಶಿಲಾಸ್ಮಾರಕಗಳ ಅಡಿಯಲ್ಲಿ ಸಮಾಧಿಗಳಾಗಲಿ ಅವಕ್ಕೆ ಸಂಬಂಧಿಸಿದ ಇತರ ಸಾಂಸ್ಕೃತಿಕ ಅಂಶಗಳಾಗಲಿ ಸ್ಪಷ್ಟವಾಗಿಲ್ಲ. ಇದರ ಅನಂತರದ ಹಂತದಲ್ಲಿ ಪ್ರಾಚೀನ ಚಾರಿತ್ರಿಕ ಕಾಲದ ಅವಶೇಷಗಳು ದೊರಕಿವೆ. ಈ ಸಂಸ್ಕೃತಿಗಳನ್ನು ಬಿಂಬಿಸುವ ಇತರ ನೆಲೆಗಳು, ಅದೇ ಪ್ರದೇಶದಲ್ಲಿ ಹರಿಪರಿಗೋನ್, ಜಯದೇವಿ–ಉದರ್, ಪಾಂಪುರ್, ಸೋಂಬರ್ ಓಲ್ಚಿಬಾಗ್ ಮುಂತಾದ ಎಡೆಗಳಲ್ಲಿ ಬೆಳಕಿಗೆ ಬಂದಿವೆ.

ಕಾಶ್ಮೀರದ ಸಸ್ಸಿರ್ ಕಣಿವೆಯ ಕೆಲವು ಗುಹೆಗಳಲ್ಲಿ ಪ್ರಾಗೈತಿಹಾಸಿಕ ರೀತಿಯ ಚಿತ್ರಗಳಿವೆ. ಆದರೆ ಅವುಗಳ ಸರಿಯಾದ ಕಾಲವನ್ನು ನಿಷ್ಕರ್ಷಿಸುವುದು ಕಷ್ಟ ದಾರ್ದಿಸ್ತಾನದಲ್ಲೂ ಬಂಡೆಗಳ ಮೇಲೆ ಸ್ಥೂಲವಾಗಿ ಸಸ್ಸಿರ್ ಕಣಿವೆಯ ಗುಹೆಗಳಲ್ಲಿರುವ ಚಿತ್ರಗಳಲ್ಲಿರುವ ಪ್ರಾಣಿಗಳ ಮತ್ತು ಬೇಟೆಯ ಚಿತ್ರಗಳು ಇವೆಯಾದರೂ ಇಲ್ಲಿ ಇವುಗಳ ಜೋತೆಯಲ್ಲೇ ಕೆಲವು ಬ್ರಾಹ್ಮೀ ಮತ್ತು ಖರೋಷ್ಠೀ ಶಾಸನಗಳೂ ಇರುವುದರಿಂದ ಇವು ಐತಿಹಾಸಿಕ ಯುಗಕ್ಕೆ ಸೇರಿದವಾಗಿರಬಹುದು. (ಎಸ್.ಎನ್.)

**ಇತಿಹಾಸ :** ಈ ರಾಜ್ಯದ ಇತಿಹಾಸವನ್ನು ಅರಿಯಲು ದೇಶೀಯ ಗ್ರಂಥರಾಶಿ, ಇತಿಹಾಸ ಮತ್ತು ಪ್ರಾಚೀನ ಅವಶೇಷಗಳು ಆಧಾರ. ಪರ್ಷಿಯನ್ ಭಾಷೆಯಲ್ಲಿ ಬರೆದ ಕೆಲವು ಗ್ರಂಥಗಳು ಸಹಾಯಕ. 1148–49ರಲ್ಲಿ ಕಲ್ಹಣನಿಂದ ಸಂಸ್ಕೃತದಲ್ಲಿ ರಚಿತವಾದ ರಾಜತರಂಗಿಣಿ ಒಂದು ಮುಖ್ಯ ಗ್ರಂಥ. ಇದು ಕಾಶ್ಮೀರ ಇತಿಹಾಸವನ್ನು ನಿರೂಪಿಸುವ ನಾಲ್ಕು ಸಂಸ್ಕೃತ ಗ್ರಂಥಗಳಲ್ಲಿ ಒಂದು. ಇದರಲ್ಲಿ ಪ್ರಾಚೀನ ಕಾಲದಿಂದ ಹಿಡಿದು 1006ರಲ್ಲಿ ಸಂಗ್ರಾಮದೇವ ಪಟ್ಟಾಭಿಷಿಕ್ತನಾಗುವವರೆಗಿನ ಇತಿಹಾಸವಿದೆ. ಪ್ರಾಚೀನ ಕಾಲದಿಂದ ಗ್ರಂಥಕರ್ತೃ ಜೀವಿಸಿದ್ದ ಕಾಲದವರೆಗೆ ಕಾಶ್ಮೀರವನ್ನು ಆಳಿದ ರಾಜವಂಶಗಳನ್ನು ಇದರಲ್ಲಿ ವಿವರಿಸಲಾಗಿದೆ. ಈ ಗ್ರಂಥದ ಮೊದಲನೆಯ ಮೂರು ಸರ್ಗಗಳಲ್ಲಿ ನಿರೂಪಿಸಲಾಗಿರುವ ಘಟನಾವಳಿಗಳು ದಂತಕಥೆಗಳು. ಉಳಿದ 5 ಚರಿತ್ರೆ ಕಲ್ಹಣನ ಇತಿಹಾಸ ರಚನಾಕಾರ್ಯವನ್ನು ಜೋನರಾಜ ಮುಂದುವರಿಸಿದ. ಕಲ್ಹಣ ಬಿಟ್ಟಲ್ಲಿಂದ ಮುಂದಕ್ಕೆ ಮುಸ್ಲಿಮರ ಏಳಿಗೆಯ ಕಾಲದವರೆಗೆ–1420ರಲ್ಲಿ ಸಿಂಹಾಸನಾರೋಹಣ ಮಾಡಿದ ಜೈನ್–ಉಲ್_ಅಬದಿನನ ಕಾಲದವರೆಗೆಜಕಾಶ್ಮೀರವನ್ನು ಆಳಿದ ರಾಜರ ವಿವರಗಳು ಈ ಗ್ರಂಥದಲ್ಲಿವೆ. ಅವನ ಅನಂತರ ಅವನ ಶಿಷ್ಯನಾದ ಶ್ರೀವರ ಈ ಕೆಲಸವನ್ನು ಮುಂದುವರಿಸಿದ. 1459ರಿಂದ 1489ರವರೆಗಿನ ಘಟನಾವಳಿಗಳನ್ನು ಅವನು ವರದಿ ಮಾಡಿದ್ದಾನೆ. ನಾಲ್ಕನೆಯ ಗ್ರಂಥ ರಾಜಾವಳೀ ನಾಟಕ. ಇದು ಪ್ರಾಜ್ಯಭಟ್ಟನಿಂದ ವಿರಚಿತವಾದ್ದು. ಇದರಲ್ಲಿ 1586ರ ವರೆಗಿನ ಕಾಶ್ಮೀರ ಮೊಗಲರ ಸಾಮ್ರಾಜ್ಯದಲ್ಲಿ ವಿಲೀನಗೊಳ್ಳುವ ವರೆಗಿನ ಇತಿಹಾಸವಿದೆ.

ಕಾಶ್ಮೀರ ಕಣಿವೆಯ ಮೂಲವನ್ನು ಕುರಿತ ಐತಿಹ್ಯ ಅತ್ಯಂತ ಸ್ವಾರಸ್ಯಕರವಾದ್ದು. ಹಿಂದೆ ಅದೊಂದು ಪುಷ್ಕರಿಣಿಯಾಗಿತ್ತಂತೆ. ಅದರ ಸುತ್ತಲೂ ಚಾಚಿ ಹಬ್ಬಿಕೊಂಡಿರುವ ಪರ್ವತಶಿಖರಗಳಿಂದ ಹರಿದು ಬರುತ್ತಿದ್ದ ಇಬ್ಬನಿಯಿಂದಲೂ ಮಂಜುಗಡ್ಡೆಗಳು ಕರಗಿಬರುತ್ತಿದ್ದ ನೀರಿನಿಂದಲೂ ಆ ಪುಷ್ಕರಿಣಿ ತುಂಬಿ ಮನಸ್ಸಿಗೆ ಆನಂದವನ್ನುಂಟು ಮಾಡುತ್ತಿತ್ತು. ರಾಜತರಂಗಿಣಿಯ ಪ್ರಕಾರ ಅದಕ್ಕೆ ಸತೀಸರಸ್ ಎಂಬ ಹೆಸರಿತ್ತು. ಏಳನೆಯ ಮನುವಿನ ಕಾಲದಲ್ಲಿ ಆ ಪುಷ್ಕರಿಣಿಯಲ್ಲಿ ಜೀವಿಸಿದ್ದ ಜಲೋದ್ಭವನೆಂಬ ರಾಕ್ಷಸ ತನ್ನ ಪಾಶವೀಕೃತ್ಯಗಳಿಂದ ನೆರೆಹೊರೆಯ ಪ್ರದೇಶಗಳಿಗೆ ಕಂಟಕಪ್ರಾಯನಾಗಿದ್ದ. ಕಶ್ಯಪ ಮಹರ್ಷಿ. ಆ ರಾಕ್ಷಸನನ್ನು ಧ್ವಂಸ ಮಾಡಲು ನಿಶ್ಚಯಿಸಿ, ಬ್ರಹ್ಮನ ಸಹಾಯ ಯಾಚಿಸಿದ. ಬ್ರಹ್ಮನ ಆಜ್ಞೆಯ ಮೇರೆಗೆ ಎಲ್ಲ ದೇವತೆಗಳೂ ಕಶ್ಯಪನನ್ನು ಹಿಂಬಾಲಿಸಿ ಸತೀಸರಸ್ಸಿನ ನೆರೆಯ ಪರ್ವತದ ಮೇಲೆ ತಳ ಊರಿದರು. ರಾಕ್ಷಸ ಆ ಪುಷ್ಕರಿಣಿಯಿಂದ ಹೊರಬರಲು ನಿರಾಕರಿಸಿದ. ಬಲಭದ್ರ ತನ್ನ ಅಸ್ತ್ರವಾದ ನೇಗಿಲಿನಿಂದ ಪರ್ವತವನ್ನು ಸೀಳಿ ಆ ಕಂದಕದ ಮೂಲಕ ನೀರು ಹೊರಗೆ ಹೋಗುವಂತೆ ಮಾಡಿದ. ಪುಷ್ಕರಿಣಿ ಒಣಗಿಹೋಯಿತು. ಆಗ ವಿಷ್ಣು ಆ ರಾಕ್ಷಸನ ಮೇಲೆ ಬಿದ್ದು ಅವನನ್ನು ಸಂಹರಿಸಿದ. ಕಾಶ್ಮೀರವನ್ನು ಕಟ್ಟುವ ಕೆಲಸ ಕಶ್ಯಪನದಾಯಿತು. ದೇವತೆಗಳೂ ನಾಗರೂ ಅಲ್ಲಿ ವಾಸಿಸತೊಡಗಿದರು. ಅನೇಕ

ಮಂದಿ ದೇವತೆಗಳು ನದಿಗಳ ರೂಪ ತಳೆದು ಅಲ್ಲಿ ಹರಿಯಲು ಆರಂಭಿಸಿದರು. ಆದರೆ ವರ್ಷದಲ್ಲಿ ಆರು ತಿಂಗಳು ಅಲ್ಲಿ ವಿಪರೀತವಾದ ಚಳಿ ಇತ್ತು. ಆ ಕಾಲದಲ್ಲಿ ಅಲ್ಲಿ ಪಿಶಾಚಿಗಳು ನೆಲಸಿರುತ್ತಿದ್ದವು. ಆಗ ಜನರು ಕಣಿವೆಯನ್ನು ಬಿಟ್ಟುಹೋಗಿದ್ದು, ಚೈತ್ರಮಾಸದಲ್ಲಿ, ಪಿಶಾಚಿಗಳು ಹಿಮ್ಮೆಟ್ಟಿದಾಗ, ಅಲ್ಲಿಗೆ ಮತ್ತೆ ಬರುತ್ತಿದ್ದರು. ನಾಲ್ಕು ಯುಗಗಳು ಕಳೆದ ಮೇಲೆ ಚಂದ್ರದೇವನೆಂಬ ಒಬ್ಬ ಬ್ರಾಹ್ಮಣನ ಶ್ರಮದ ಫಲವಾಗಿ ಆ ದೇಶ ಪಿಶಾಚಿಗಳಿಂದಲೂ ವಿಪರೀತವಾದ ಚಳಿಯಿಂದಲೂ ಮುಕ್ತಿ ಪಡೆಯಿತು. ಅನಂತರ ಕಾಶ್ಮೀರ ಮಾನವರಿಗೆ ವರ್ಷಪೂರ್ತಿ ವಾಸಿಸಲು ಯೋಗ್ಯವಾದ ಸ್ಥಳವಾಯಿತು.

ಅಮರನಾಥ ಗುಹೆ

ಕಾಶ್ಮೀರಿಗಳು ಭಾರತಕ್ಕೆ ಇಂಡೊ–ಯುರೋಪಿಯನ್ ಭಾಷೆಗಳನ್ನು ತಂದವರ ವಂಶದವರು. ಇಂಡೊ–ಆರ್ಯರ ಪೂರ್ವಜರು ಆಕ್ಸಸ್ ಮಾರ್ಗವಾಗಿ ಬಂದು ಖೋಕಂದ್ ಸುತ್ತ ಇರುವ ಎತ್ತರದ ಪ್ರದೇಶದಲ್ಲಿ ನೆಲಸಿದರು. ಅಲ್ಲಿ ಕೆಲವರು ಪ್ರತ್ಯೇಕಗೊಂಡು ದಕ್ಷಿಣಾಭಿಮುಖವಾಗಿ ಹೊರಟು ಹಿಂದೂಕುಷ್‌ನ ಪಶ್ಚಿಮದ ಕಣಿವೆಗಳನ್ನು ಹಾಯ್ದು ಕಾಬುಲ್ ನದೀ ಕಣಿವೆಯಲ್ಲೂ ಭಾರತದ ಬಯಲು ಪ್ರದೇಶದಲ್ಲೂ ನೆಲಸಿದರು. ಕಾಬುಲ್ ಕಣಿವೆಗೆ ವಲಸೆ ಬಂದವರ ಜೊತೆ ಸೇರದೆ, ಹಿಂದೂಕುಷ್‌ನ ಉತ್ತರ ಭಾಗದಲ್ಲಿಯೇ ಉಳಿದ ಆರ್ಯರು ಪೂರ್ವ ಪಶ್ಚಿಮವಾಗಿ ಹರಡಿದರು. ಆರ್ಯರನ್ನು ಅನುಸರಿಸಿ ಬಂದು ಅನೇಕರು ಕಾಶ್ಮೀರದಲ್ಲಿ ನೆಲಸಿದರು. ಅನಂತರ ಪರ್ಷಿಯನರು, ಗ್ರೀಕರು ಮತ್ತು ಯೂಚಿಗಳು ಅಥವಾ ತುರ್ಕಿ ವಂಶಜರು ಬಂದು ಕಾಶ್ಮೀರದಲ್ಲಿ ನೆಲಸಿದರು.

ಸಾಂಪ್ರದಾಯಿಕ ಉಡುಗೆಯಲ್ಲಿ ಕಾಶ್ಮೀರೀ ಬಾಲೆ

ಕಲ್ಹಣ ಕಾಶ್ಮೀರವನ್ನು ಆಳಿದ ರಾಜರುಗಳ ಪಟ್ಟಿಯನ್ನು ಕೊಡುತ್ತಾನೆ. ಅಶೋಕನಿಗೆ ಮೊದಲು ಕಾಶ್ಮೀರವನ್ನು ಆಳಿದ ರಾಜರ ಬಗ್ಗೆ ನಿಖರವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ. ಈ ರಾಜರ ಬಗ್ಗೆ ಚರ್ಚಿಸುತ್ತ ಕಲ್ಹಣ ವಾಸ್ತವಿಕ ಅಥವಾ ಕಾಲ್ಪನಿಕ ಸ್ಥಿತಿಯ ರಾಜರುಗಳ ವಿಷಯವನ್ನು ವಿವರಿಸುತ್ತಾನೆ. ಪಾಂಡವರಲ್ಲಿ ಮುಖ್ಯನಾದ ಯುಧಿಷ್ಠಿರ ಪಟ್ಟಕ್ಕೆ ಬಂದಾಗ 1ನೆಯ ಗೋಣಂದ ಕಾಶ್ಮೀರದ ಸಿಂಹಾಸನವನ್ನೇರಿದವನೆಂದು ಕಲ್ಹಣ ತನ್ನ ಚರಿತ್ರೆಯನ್ನು ಆರಂಭಿಸುತ್ತಾನೆ. ಜರಾಸಂಧ ಕೃಷ್ಣನ ವಿರುದ್ಧ ಯುದ್ಧಕ್ಕೆ ನಿಂತಾಗ 1ನೆಯ ಗೋಣಂದರಾಜ ಅವನ ಸಹಾಯಕ್ಕೆ ಹೋಗಿ ರಣರಂಗದಲ್ಲಿ ಕೃಷ್ಣನ ಸಹೋದರನಾದ ಬಲಭದ್ರನಿಂದ ಕೊಲ್ಲಲ್ಪಟ್ಟ. ಅವನ ಮಗನಾದ ದಾಮೋದ್ರನೂ ಕೃಷ್ಣನ ವಿರುದ್ಧ ಹೋರಾಡಿ ಹತನಾದ. ಅವನ ಸತಿ ಯಶೋವತಿ ಸಿಂಹಾಸನವನ್ನೇರಿದಳು. ಇದನ್ನು ಶ್ರೀಮಂತ ಸಭಿಕರು ವಿರೋಧಿಸಿದರು. ಕೃಷ್ಣ ಮಧ್ಯೆ ಪ್ರವೇಶಿಸಿ ಅವರಿಗೆ ಬುದ್ಧಿವಾದ ಹೇಳಿದ್ದರಿಂದ ಅವರು ಸುಮ್ಮನಾದರು. ಅವಳ ಮಗನಾದ 2ನೆಯ ಗೋಣಂದ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗಲೇ ಅವನಿಗೆ ಪಟ್ಟಕಟ್ಟಲಾಯಿತು. ಅದೇ ಕಾಲದಲ್ಲಿ ಮಹಾಭಾರತ ಯುದ್ಧ ಆರಂಭವಾಯಿತು. ಅವನ ಅನಂತರ ಆಡಳಿತ ನಡೆಸಿದ ಮೂವತ್ತೈದು ಮಂದಿ ರಾಜರ ಬಗ್ಗೆ ಪ್ರಮಾಣಭೂತವಾದ ಯಾವ ಗ್ರಂಥವೂ ಇಲ್ಲದಿರುವುದರಿಂದ ಅವರ ಬಗ್ಗೆ ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ಕಲ್ಹಣ ತಿಳಿಸುತ್ತಾನೆ.

ಅಶೋಕನ ಕಾಲದಿಂದ ಈಚೆಗೆ ನಮಗೆ ಸರಿಯಾದ ಖಚಿತವಾದ ಐತಿಹಾಸಿಕ ನೆಲೆ ಸಿಗುತ್ತದೆ. ಕಾಶ್ಮೀರವನ್ನಾಳಿದ ಅಶೋಕ ಮಗಧರಾಜ್ಯವನ್ನಾಳಿದ ಚಕ್ರವರ್ತಿ ಅಶೋಕನೇ ಹೊರತು ಬೇರೆಯವನಲ್ಲವೆಂದು ಇತಿಹಾಸಕಾರರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಏಕೆಂದರೆ ಅಶೋಕಚಕ್ರವರ್ತಿಯ ಸಾಮ್ರಾಜ್ಯ ಪೂರ್ವದಲ್ಲಿ ಬಂಗಾಳದವರೆಗೂ ಪಶ್ಚಿಮದಲ್ಲಿ ಹಿಂದೂಕುಷ್‌ವರೆಗೂ ವ್ಯಾಪಿಸಿತ್ತು. ಕಲ್ಹಣ ತನ್ನದೇ ಆದ ಕಾಲಗಣನೆಯ ಶಾಸ್ತ್ರವನ್ನು ಅನುಸರಿಸಿ, ಅಶೋಕನಿಗೆ ಪ್ರಶ.ಪೂ.1182ಕ್ಕೆ ಸಮನಾದ ಕಾಲವನ್ನು ಸೂಚಿಸಿದ್ದರಿಂದ ಸ್ವಲ್ಪ ತೊಡಕುಂಟಾಗಿದೆ. ಶಕಾನುಕ್ರಮದಲ್ಲಿ ಸ್ವಲ್ಪ ದೋಷವಿದೆ ಎಂದು ಹೇಳಲಾಗಿದೆ.

ಅಶೋಕನ ಕಾಲಕ್ಕೆ ಮೊದಲು ಕಾಶ್ಮೀರದ ಪರಿಸ್ಥಿತಿ ಹೇಗಿತ್ತು ಎಂಬುದರ ಬಗ್ಗೆ ರಾಜತರಂಗಿಣಿ ಖಚಿತವಾಗಿ ಏನನ್ನೂ ಹೇಳುವುದಿಲ್ಲ. ಸಂಸ್ಕೃತದ ಕೆಲವು ಗ್ರಂಥಗಳಿಂದಲೂ ವೇದದ ಉತ್ತರ ಭಾಗಗಳಲ್ಲಿ ಕಂಡುಬರುವ ವಿಷಯಗಳಿಂದಲೂ ಅಕಿಮೆನಿಡೀಸ್ ಮನೆತನದ ದೊರೆಗಳು ಮತ್ತು ಗ್ರೀಕರು ಭಾರತದ ಮೇಲೆ ನಡೆಸಿದ ದಂಡಯಾತ್ರೆಯ ಸೂಚನೆಗಳಿಂದಲೂ ಕಾಶ್ಮೀರ ಆಫ್ಘಾನಿಸ್ಥಾನಕ್ಕೆ ಉತ್ತರದಲ್ಲಿದ್ದ ಗಾಂಧಾರದ ಒಂದು ಭಾಗವಾಗಿತ್ತೆಂದು ತಿಳಿಯಬಹುದು. ಪರ್ಷಿಯದ ದೊರೆ ಕೈರಸ್, ಪೆಲೊಪೋನೀಸಸ್ ಮತ್ತು ಕಾಬುಲ್ ಕಣಿವೆಯಲ್ಲಿ ಭಾರತೀಯ ಜನರನ್ನು ಅಧೀನಕ್ಕೆ ಒಳಪಡಿಸಿಕೊಂಡಿದ್ದನೆಂದು ಗ್ರೀಕ್ ಚರಿತ್ರಕಾರರ ಬರೆಹಗಳಿಂದ ತಿಳಿದುಬರುತ್ತದೆ. ಡೇರಿಯಸನ ಒಂದು ಶಾಸನದಲ್ಲಿ ಗಾಂಧಾರ ಅವನ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿತ್ತೆಂದು ಉಲ್ಲೇಖವಿದೆ. ಅವನ ಉತ್ತರಾಧಿಕಾರಿಗಳು ಪಶ್ಚಿಮ ರಾಜ್ಯಗಳ ವ್ಯವಹಾರದಲ್ಲಿ ಕೈಹಾಕಿದ್ದರಿಂದ ಅವರು ಪೂರ್ವದ ರಾಜ್ಯಗಳ ಕಡೆ ಗಮನ ನೀಡಲಿಲ್ಲ. ಆದರೆ 1ನೆಯ ಡೇರಿಯಸ್ (ಪ್ರಶ.ಪೂ.5582–486) ಸಿಂಧು ಪ್ರದೇಶದ ಒಂದು ಭಾಗವನ್ನು ಪ್ರಶ.ಪೂ.518ರಲ್ಲಿ ಆಕ್ರಮಿಸಿದಂತೆ ಕಂಡುಬರುತ್ತದೆ. ಕಾಶ್ಮೀರ ಸ್ವಲ್ಪ ಕಾಲ ಅಕಿಮೆನಿಡೀಸ್ ದೊರೆಗಳ ಆಧೀನದಲ್ಲಿತ್ತು ಎನ್ನುವುದರ ಬಗ್ಗೆ ಯಾವ ಸಂಶಯವೂ ಇಲ್ಲ. ಅಲೆಗ್ಸಾಂಡರ್ ಭಾರತದ ಮೇಲೆ ಕೈಗೊಂಡ ದಂಡಯಾತ್ರೆಯನ್ನು ಕುರಿತ ದಾಖಲೆಗಳಲ್ಲಿ ಕಾಶ್ಮೀರದ ಉಲ್ಲೇಖವಿಲ್ಲ.

ಡೋಗ್ರಾ ಹೆಂಗಸು

ಕೋನ್ಸಾರ್‌ನಾಗ್ ಸರೋವರ

ಅಲೆಗ್ಸಾಂಡರ್ ಭಾರತವನ್ನು ಬಿಟ್ಟು ಹೋದಮೇಲೆ ಚಂದ್ರಗುಪ್ತ ಮಗಧ ರಾಜ್ಯದ ದೊರೆಯಾಗಿ ತನ್ನ ಪ್ರಭುತ್ವವನ್ನು ಉತ್ತರ ಹಿಂದೂಸ್ಥಾನಕ್ಕೆಲ್ಲ ವಿಸ್ತರಿಸಿದ. ಅವನು ಗಾಂಧಾರವನ್ನೂ ಭಾರತದ ವಾಯವ್ಯ ಭಾಗದಲ್ಲಿದ್ದ ಎಲ್ಲ ಸತ್ರಪಿಗಳನ್ನೂ ವಶಪಡಿಸಿಕೊಂಡ. ಚಂದ್ರಗುಪ್ತನ ಮೊಮ್ಮಗನಾದ ಅಶೋಕ ಕಾಶ್ಮೀರದಲ್ಲಿ ಅನೇಕ ಕಟ್ಟಡಗಳನ್ನು ಕಟ್ಟಿಸಿ, ಅಲ್ಲಿಗೆ ಆಗಾಗ್ಗೆ ಭೇಟಿ ಕೊಡುತ್ತಿದ್ದ. ಕಾಶ್ಮೀರದ ರಾಜಧಾನಿಯಾದ ಶ್ರೀನಗರವನ್ನು ಸ್ಥಾಪಿಸಿ ಅಲ್ಲಿ 96,000 ಮನೆಗಳನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಇವುಗಳ ಜೊತೆಗೆ

ಅಶೋಕ ಅಲ್ಲಿ ಅನೇಕ ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟಿಸಿದ. ವಿಜಯೇಶ್ವರ ದೇವಾಲಯದ ಸುತ್ತ ಕಲ್ಲುಗೋಡೆ ಕಟ್ಟಿಸಿ ಆ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ. ಅಲ್ಲದೆ ಅವನು ಭೂತೇಶ ಶಿವದೇವಾಲಯದ ಭಕ್ತನಾಗಿದ್ದಂತೆ ಕಂಡುಬರುತ್ತದೆ.

ಮಾನಸಬಲ್ ಸರೋವರ

ಕಾಶ್ಮೀರದಲ್ಲಿ ಬೌದ್ಧಧರ್ಮವನ್ನು ಪ್ರಚಾರಕ್ಕೆ ತಂದವನು ಅವನೇ. ಮೊಗ್ಗಲಿಪುತ್ತ ತಿಸ್ಸನ ಅಧ್ಯಕ್ಷತೆಯಲ್ಲಿ ಸೇರಿದ್ದ ಬೌದ್ಧಸಭೆಯ ಕಾರ್ಯಕಲಾಪಗಳು ಮುಕ್ತಾಯವಾದ ಮೇಲೆ, ಮಜ್ಜಂತಿಕನೆಂಬ ಧರ್ಮಪ್ರಚಾರಕನನ್ನು ಕಾಶ್ಮೀರ ಮತ್ತು ಗಾಂಧಾರಗಳಿಗೆ ಕಳುಹಿಸಲಾಯಿತು. ಅಶೋಕನ ಆಜ್ಞೆಯ ಮೇರೆಗೆ 5,000 ಬೌದ್ಧ ಸನ್ಯಾಸಿಗಳು ಕಾಶ್ಮೀರಕ್ಕೆ ಬಂದು ನೆಲಸಿದರೆಂದು ಹ್ಯೂಯೆನ್ ತ್ಸಾಂಗ್ ಮತ್ತು ಔಕಾಂಗ್ ತಿಳಿಸುತ್ತಾರೆ. ಬೌದ್ಧಧರ್ಮ ಪ್ರಚಾರಕ್ಕೂ ಅಧ್ಯಯನಕ್ಕೂ ಅದನ್ನೇ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಳ್ಳುವಂತೆ ಹೇಳಿ ಅಶೋಕ ಆ ಕಣಿವೆಯನ್ನು ಸಂಘಕ್ಕೆ ಬಿಟ್ಟುಕೊಟ್ಟ. ಅಶೋಕನ ಚಕ್ರಾಧಿಪತ್ಯ ಆಫ್ಘಾನಿಸ್ಥಾನ, ಕಾಶ್ಮೀರ ಮತ್ತು ನೇಪಾಲ ದೇಶಗಳಿಂದ ಹಿಡಿದು ದಕ್ಷಿಣದಲ್ಲಿ ಕರ್ನಾಟಕದವರೆಗೂ ವಿಸ್ತರಿಸಿತ್ತೆಂಬುದು ಆ ಶಾಸನಗಳಿಂದ ತಿಳಿದುಬರುತ್ತದೆ. ಅಶೋಕನ ಕಾಲವಾದ ಬಳಿಕ ಮಗಧ ಸಾಮ್ರಾಜ್ಯ ಅವನತಿಯ ಹಾದಿ ಹಿಡಿಯಿತು. ಕಾಶ್ಮೀರದಲ್ಲಿದ್ದ ಹರ ಮುಕುಟ ಗಂಗಾ ಎಂಬ ವಿಖ್ಯಾತವಾದ ದೇವಾಲಯದ ಶಿವಭೂತ ದೇವರನ್ನು ಪೂಜಿಸಿ, ಅವನ ಕೃಪಾಕಟಾಕ್ಷದಿಂದ ಅಶೋಕ ಒಬ್ಬ ಮಗನನ್ನು ಪಡೆದನೆಂದು ಕಲ್ಹಣ ತಿಳಿಸುತ್ತಾನೆ. ಜಲೌಕನೆಂದು ಪ್ರಸಿದ್ಧನಾದ ಅವನು ತನ್ನ ತಂದೆಯ ಮರಣಾನಂತರ ಕಾಶ್ಮೀರದಲ್ಲಿ ಒಬ್ಬ ಸ್ವತಂತ್ರ ರಾಜನಾದ. ಅವನು ಶಿವನ ಆರಾಧಕನಾಗಿದ್ದು



ಪಹಲ್ಗಾಂ

ಪ್ರತಿನಿತ್ಯವೂ ಭೂತೇಶ ಮತ್ತು ವಿಜಯೇಶ್ವರ ದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಿದ್ದ. ಮೊದಲು ಅವನು ಬೌದ್ಧರ ವಿರೋಧಿಯಾಗಿದ್ದು, ಅನಂತರ ಅವರ ಸ್ನೇಹಿತನಾದ. ಬಾರಾಮೂಲಕ್ಕೆ 8 ಕಿಮೀ ದೂರವಿರುವ ಝೀಲಂ ನದಿಯ ಎಡದಂಡೆಯ ಕೃತ್ಯಶ್ರಾಮ ಎಂಬ ಹಳ್ಳಿಯಲ್ಲಿ ಅವನು ಒಂದು ಬೌದ್ಧ ವಿಹಾರ ಕಟ್ಟಿಸಿ, ಬೌದ್ಧಧರ್ಮಕ್ಕೆ ಪ್ರೋತ್ಸಾಹ ನೀಡಿದ. ಅವನು ಅಪ್ರತಿಮ ವೀರನಾಗಿದ್ದ. ದೇಶದ ಮೇಲೆ ದಾಳಿಯಿಟ್ಟು ಮ್ಲೇಚ್ಛರನ್ನು ಹೊಡೆದೋಡಿಸಿ ರಾಜ್ಯವನ್ನು ವಿಸ್ತರಿಸಿದ, ಕನೌಜ್ ಮತ್ತು ಗಾಂಧಾರಗಳನ್ನು ಗೆದ್ದು ಅಲ್ಲಿದ್ದ ವಿದ್ವಾಂಸರನ್ನು ಸೆರೆಹಿಡಿದು ತಂದು ಕಾಶ್ಮೀರದಲ್ಲಿ ನೆಲಸುವಂತೆ ಮಾಡಿದ. ಆಫ್ಘಾನಿಸ್ಥಾನದ ಕೆಲವು ಭಾಗಗಳಲ್ಲೂ ಪಂಜಾಬಿನಲ್ಲೂ ಕೆಲವು ಗ್ರೀಕ್ ರಾಜರು ಸುಮಾರು 300 ವರ್ಷಗಳ ಕಾಲ ಆಳಿದರು. ಪ್ರಶ.ಪೂ.150ರಲ್ಲಿ ರಾಜ್ಯವಾಳುತ್ತಿದ್ದ ಮಿನಾಂಡರ್ ಎಂಬುವನು ಇವರಲ್ಲಿ ಅತ್ಯಂತ ಪ್ರಸಿದ್ಧ. ಕಾಶ್ಮೀರದಿಂದ 12 ಯೋಜನ ದೂರದಲ್ಲಿದ್ದ ಒಂದು ಸ್ಥಳದಲ್ಲಿ ಭಾರತದ ವಾಯವ್ಯ ಭಾಗದಲ್ಲಿ ಆಳುತ್ತಿದ್ದ ಇಂಡೋ-ಗ್ರೀಕ್ ದೊರೆಯಾದ ಮಿನಾಂಡರ್ ಮತ್ತು ಬೌದ್ಧ ಸಂನ್ಯಾಸಿಯಾದ ನಾಗಸೇನ ಇವರ ನಡುವೆ ಚರ್ಚೆ ನಡೆದುದು ಮಿಳಿಂದ ಪನ್ಹ ಎಂಬ ಗ್ರಂಥದಿಂದ ತಿಳಿದುಬರುತ್ತದೆ. ಅನಂತರ ಪಾರ್ಥಿಯನರೂ ಶಕರೂ ಗ್ರೀಕರಿಗೆ ಸೇರಿದ್ದ ಭಾಗಗಳನ್ನು ಜಯಿಸಿದರು. ಶಕರ ತರುವಾಯ ಬಂದ ಕುಶಾಣರ ವಿಸ್ತಾರವಾದ ರಾಜ್ಯದಲ್ಲಿ ಕಾಶ್ಮೀರ ಸೇರಿತ್ತು. ಕನಿಷ್ಕ ಇವರಲ್ಲಿ ಪ್ರಸಿದ್ಧನಾದವನು. ಪುರುಷಪುರವೇ (ಪೆಷಾವರ್) ಅವನ ರಾಜಧಾನಿಯಾಗಿತ್ತು. ಕನಿಷ್ಕ ಬೌದ್ಧಧರ್ಮ ವನ್ನವಲಂಬಿಸಿದ. ಬೌದ್ಧ ಸಿದ್ಧಾಂತಗಳನ್ನು ವ್ಯವಸ್ಥೆಗೊಳಿಸಿ ಕ್ರಮಪಡಿಸುವುದಕ್ಕಾಗಿ ಅವನು ಕಾಶ್ಮೀರದಲ್ಲಿ ಬೌದ್ಧಮಹಾಸಭೆಯನ್ನು ಕೂಡಿಸಿದ. ಕನಿಷ್ಕನ ತರುವಾಯ ಬೌದ್ಧಧರ್ಮಕ್ಕೆ ಭಾರಿ ಪೆಟ್ಟು ಬಿದ್ದಿತು. ನಾಗಾರ್ಜುನನ ಮಾರ್ಗದರ್ಶನದಲ್ಲಿ ಮುಂದುವರಿದ ಬೌದ್ಧರು ವೈದಿಕಧರ್ಮವನ್ನು ಮೂಲೋತ್ಪಾಟನೆ ಮಾಡಲು ಯತ್ನಿಸಿದರು. ಇದರಿಂದ ಕೋಪಗೊಂಡ ನಾಗರು ಬೌದ್ಧರನ್ನು ಹಿಂಸಿಸಲು ಪ್ರಾರಂಭಿಸಿದರು. ಅಂತ್ಯದಲ್ಲಿ ಕಾಶ್ಮೀರದ ನಾಗರ ರಾಜನಾದ ನೀಲನಾಗನೆಂಬ ದೊರೆಯ ಅಪ್ಪಣೆ ಪಡೆದ ಒಬ್ಬ ಬ್ರಾಹ್ಮಣ ಹಿಂದೂಮತವನ್ನು ಪುನರುಜ್ಜೀವನಗೊಳಿಸಿ, ಬೌದ್ಧರ ಪ್ರಾಬಲ್ಯವನ್ನು ಕಡಿಮೆ ಮಾಡಿದ. ಎರಡೂ ಧರ್ಮಗಳೂ ಕಾಶ್ಮೀರದಲ್ಲಿ ಬೆಳೆದುವು. ಈ ಹಿಂದೂ-ಬೌದ್ಧ ಕಾಲದಲ್ಲಿ, ಅದರಲ್ಲೂ ಪ್ರಧಾನವಾಗಿ 5ನೆಯ ಶತಮಾನದಿಂದ 10ನೆಯ ಶತಮಾನದವರೆಗೆ, ಹಿಂದೂಗಳು ಕಾಶ್ಮೀರದಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದರು.

ಕಾಶ್ಮೀರಿ ಸನ್ಯಾಸಿಗಳು, ಧರ್ಮಪ್ರಚಾರಕರು, ಬರೆಹಗಾರರು ಮತ್ತು ವಿದ್ವಾಂಸರು ಭಾರತೀಯ ಸಂಸ್ಕೃತಿಯನ್ನೂ ಮತಧರ್ಮವನ್ನೂ ಚೀನದಲ್ಲಿ ಹರಡುತ್ತಿದ್ದಂತೆಯೇ ಅಲ್ಲಿಂದ ಪ್ರವಾಹದೋಪಾದಿಯಲ್ಲಿ ಯಾತ್ರಿಕರೂ ವಿದ್ಯಾರ್ಥಿಗಳೂ ಭಾರತದ ಪವಿತ್ರ ಸ್ಥಳಗಳನ್ನೂ ವಿದ್ಯಾಕೇಂದ್ರಗಳನ್ನೂ ಸಂದರ್ಶಿಸುವ ಸಲುವಾಗಿ ಬರತೊಡಗಿದರು. ಅವರಲ್ಲಿ ಅನೇಕ ಮಂದಿ ಕಾಶ್ಮೀರಕ್ಕೆ ಭೇಟಿ ಕೊಟ್ಟರು. ಕಾಶ್ಮೀರದಲ್ಲಿ ಸಂಪಾದಿಸಿದ ಜ್ಞಾನವನ್ನು ಅವರು ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಪ್ರಸಾರ ಮಾಡತೊಡಗಿದರು. ಬುದ್ಧನ ಪವಿತ್ರ ಗ್ರಂಥಗಳನ್ನು ಸಂಗ್ರಹಿಸುವುದಕ್ಕೂ ಬುದ್ಧನ ಜನ್ಮಸ್ಥಳದಲ್ಲಿ ಜನರು ಅವನ ವಿಷಯವಾಗಿ ಏನನ್ನು ನೆನಪಿನಲ್ಲಿಟ್ಟಿದ್ದಾರೆಂಬುದನ್ನು ತಿಳಿಯುವುದಕ್ಕೂ ಫಾಹಿಯೆನ್ ಎಂಬ ಬೌದ್ಧ ಸನ್ಯಾಸಿ ಚೀನದಿಂದ ಹೊರಟು, ಕಾಶ್ಮೀರದ ಗಡಿಯ ಮೂಲಕ ಭಾರತಕ್ಕೆ ಬಂದ (ಪ್ರ.ಶ.399). ಪೂರ್ವ ತುರ್ಕಿಸ್ತಾನದ ಮಾರ್ಗವಾಗಿ ಬರುತ್ತ ಅವನು ಗಿಲ್ಗಿಟ್ ಮತ್ತು ಲಡಾಕ್‌ಗಳಿಗೆ ಭೇಟಿ ಕೊಟ್ಟ. ಅಲ್ಲಿ ಬೌದ್ಧಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದುದನ್ನು ಅವನು ಕಂಡ. ಅವನು ಚೀನಕ್ಕೆ ಹಿಂದಿರುಗುವಾಗ ಜೊತೆಯಲ್ಲಿ ಕಾಶ್ಮೀರದ ನಿವಾಸಿಯಾದ ಬುಧಜೀವಿಯನ್ನು ಕರೆದುಕೊಂಡು ಹೋದ. ಫಾಹಿಯೆನನ ತರುವಾಯ ಮತ್ತೊಬ್ಬ ಚೀನೀ ಯಾತ್ರಿಕನಾದ ಚೆ-ಮಾಂಗ್ ಮತ್ತು ಅವನ ಜೊತೆಗಾರರು ಕಾಶ್ಮೀರದಲ್ಲಿ ಬಹಳ ಕಾಲದವರೆಗೆ ಇದ್ದು, ಬೌದ್ಧಧರ್ಮದ ಪ್ರಗತಿಯನ್ನು ಕಂಡು ಆನಂದಿಸಿ, ಅನಂತರ ಭಾರತದ ಪವಿತ್ರ ಸ್ಥಳಗಳ ಸಂದರ್ಶನಾರ್ಥವಾಗಿ ಅಲ್ಲಿಂದ ಹೊರಟರು. ಪ್ರ.ಶ.424ರಲ್ಲಿ ಅವನು ಚೀನವನ್ನು ಮರಳಿ ಸೇರಿದ. ಮತ್ತೊಬ್ಬ ಚೀನೀ ಸಂನ್ಯಾಸಿ ಫ-ಯಂಗ್ 20 ಮಂದಿ ಸಂನ್ಯಾಸಿಗಳ ಗುಂಪಿನೊಂದಿಗೆ 420ರಲ್ಲಿ ಹೊರಟು, ಗಿಲ್ಗಿಟ್ ಮೂಲಕ ಕಾಶ್ಮೀರಕ್ಕೆ ಬಂದು, ಒಂದು ವರ್ಷಕ್ಕೂ ಹೆಚ್ಚು ಕಾಲ ಅಲ್ಲಿದ್ದು ಸಂಸ್ಕೃತ ಭಾಷೆ ಕಲಿತು, ಬೌದ್ಧ ಗ್ರಂಥವನ್ನು ಅಧ್ಯಯನ ಮಾಡಿ, ಸ್ವದೇಶಕ್ಕೆ ಮರಳಿದ. ಹ್ಯೂಯೆನ್‌ತ್ಸಾಂಗ್ ಕೂಡ ಕಾಶ್ಮೀರವನ್ನು ಪ್ರವೇಶಿಸಿ ಅಲ್ಲಿ ಸೂತ್ರಗಳ ಮತ್ತು ಶಾಸ್ತ್ರಗಳ ಅಧ್ಯಯನದಲ್ಲಿ ಎರಡು ವರ್ಷಗಳನ್ನು ಕಳೆದ (ಏಪ್ರಿಲ್ 631-ಏಪ್ರಿಲ್ 633). ಕಾಶ್ಮೀರದ ರಾಜ ಅವನಿಗೆ ಅದ್ದೂರಿಯ ಸ್ವಾಗತ ಕೋರಿದ. ಐದು ಸಾವಿರಕ್ಕೂ ಹೆಚ್ಚು ಮಂದಿ ಬೌದ್ಧ ಸಂನ್ಯಾಸಿಗಳು ಅನೇಕ ಸಂಘಗಳಲ್ಲಿ ಜೀವಿಸುತ್ತಿದ್ದುದನ್ನು ಹ್ಯೂಯೆನ್‌ತ್ಸಾಂಗ್ ಅಲ್ಲಿ ಕಂಡ. ಔ-ಕಾಂಗ್ ಎಂಬ ಮತ್ತೊಬ್ಬ ಚೀನೀ ಬೌದ್ಧಯಾತ್ರಿಕ ಕಾಬೂಲ್ ಕಣಿವೆ ಮತ್ತು ಗಾಂಧಾರದ ಮೂಲಕ ಪ್ರ.ಶ.759ರಲ್ಲಿ ಕಿ-ಪಿನ್‌ಗೆ ಬಂದ. ಅವನು ಕಾಶ್ಮೀರದಲ್ಲಿ ನಾಲ್ಕು ವರ್ಷಗಳ ಕಾಲ ಇದ್ದ. ಅವನು ಸಂಸ್ಕೃತವನ್ನು ಅಭ್ಯಸಿಸಿ, ಮೂರು ಮಂದಿ ಉಪಾಧ್ಯಾಯರ ಸಹಾಯದಿಂದ ವಿನಯಪಿಟಕವನ್ನು ಕಲಿತುಕೊಂಡ. ಹೀಗೆ ಚೀನೀ ಯಾತ್ರಿಕರು ಕಾಶ್ಮೀರಕ್ಕೆ ಪದೇಪದೇ ಬರುತ್ತಲೇ ಇದ್ದರು.

ಕಾರ್ಕೋಟ ರಾಜವಂಶದ ದುರ್ಲಭವರ್ಧನ ಕಾಶ್ಮೀರದ ಸಿಂಹಾಸನವನ್ನೇರಿದ ಕಾಲದಿಂದ ಕಲ್ಹಣನ ಚರಿತ್ರೆ ಅಧಿಕೃತ ಗ್ರಂಥದ ಸ್ವರೂಪ ಪಡೆಯುತ್ತದೆ. ಪ್ರ.ಶ.7ನೆಯ ಶತಮಾನದಿಂದ 12ನೆಯ ಶತಮಾನದವರೆಗೂ ಕಾಶ್ಮೀರವನ್ನು ಆಳಿದ ರಾಜರ ಚರಿತ್ರೆಯನ್ನು ಅವನು ಖಚಿತವಾಗಿಯೂ ನಿರ್ಣಾಯಕವಾಗಿಯೂ ವಿವರಿಸಿದ್ದಾನೆ. ಕಲ್ಹಣನ ಪ್ರಕಾರ ದುರ್ಲಭವರ್ಧನ ಕಾಶ್ಮೀರವನ್ನು ಸುಮಾರು 36 ವರ್ಷಗಳ ಕಾಲ ಆಳಿದ. ಅವಂತಿವರ್ಮನವರೆಗೆ ಕಾಶ್ಮೀರವನ್ನಾಳಿದ ಕಾರ್ಕೋಟ ರಾಜವಂಶದ ಅರಸರು ಇವರು: ದುರ್ಲಭವರ್ಧನ (600-636), 2ನೆಯ ಪ್ರತಾಪಾದಿತ್ಯ (636-686), ಚಂದ್ರಾಪೀಡ (686-694), ತಾರಾಪೀಡ (694-699), ಮುಕ್ತಾಪೀಡ (699-736), ಕುವಲಾಯಾಪೀಡ (736-737), ವಜ್ರಾದಿತ್ಯ (737-744) ಪ್ರಿತ್ಯಪೀಡ (744-748), ಸಂಗ್ರಾಮಪೀಡ (748), ಜಜ್ಜ (748-751), ಜಯಾಪೀಡ (751-782), ಲಲಿತಾಪೀಡ (782-794), 2ನೆಯ ಸಂಗ್ರಾಮಪೀಡ (794-801), ಸಿಪ್ಪತ ಜಯಾಪೀಡ (801-853), ಉತ್ಪಲಾಪೀಡ (853-855).

ಅವಂತಿವರ್ಮನ ಕಾಲದಲ್ಲಿ (855–83) ಕಾಶ್ಮೀರ ಸಂಪದ್ಭರಿತವಾದ ರಾಜ್ಯವಾಗಿ ಬೆಳೆಯಿತು. ಯುದ್ಧಗಳನ್ನು ತೊರೆದು ದೇಶದಲ್ಲಿ ಶಾಂತಿ ನೆಮ್ಮದಿಗಳನ್ನು ಸ್ಥಾಪಿಸಲು ಅವನು ಬಹುವಾಗಿ ಶ್ರಮಿಸಿದ. ಅನೇಕ ದೇವಸ್ಥಾನಗಳನ್ನು ಕಟ್ಟಿಸಿ, ನಗರ ನಿರ್ಮಾಣ ಕಾರ್ಯದಲ್ಲಿ ಹೆಚ್ಚು ಆಸಕ್ತಿ ವಹಿಸಿದ. ಅವನ ಪತ್ನಿ ಮತ್ತು ಮಕ್ಕಳು ಅನೇಕ ದೇವಾಲಯಗಳನ್ನೂ ಮಠಗಳನ್ನೂ ಕಟ್ಟಿಸಿದರು. ಅವನ ಮಗನೂ ಉತ್ತರಾಧಿಕಾರಿಯೂ ಆದ ಶಂಕರವರ್ಮ (883–902) ತನ್ನ ವಿರೋಧಿಗಳನ್ನು ದಮನಮಾಡಿ, ಅನೇಕ ರಾಜ್ಯಗಳನ್ನು ಜಯಿಸಿ, ಕಾಶ್ಮೀರದ ಕೀರ್ತಿಯನ್ನು ಎತ್ತಿಹಿಡಿದ. ಗೋಪಾಲವರ್ಮ (902–904). ರಾಣಿ ಸುಗಂಧಾ (904–906). ಸುರವರ್ಮ (933–34), ಉನ್ಮತ್ತವಂತಿ (937–939), ಯಶಸ್ಕರ (939–948), ಪರ್ವಗುಪ್ತ (949–50), ಅಭಿಮನ್ಯು (958–972), ನಂದಿಗುಪ್ತ (972–73), ಭೀಮಗುಪ್ತ (975–981), ದಿಡ್ಡಾ (981–1003) – ಇವರು ಕಾಶ್ಮೀರವನ್ನು ಆಳಿದರು.

ಗುಲ್‌ಮಾರ್ಗದ ಒಂದು ನೋಟ

11ನೆಯ ಶತಮಾನದಲ್ಲಿ ಘಜ್ನಿ ಮಹಮೂದ ನಡೆಸಿದ ದಂಡಯಾತ್ರೆಗಳಿಂದ ಕಾಶ್ಮೀರ ಕಣಿವೆಗೆ ಯಾವ ಅಪಾಯವೂ ತಗುಲಲಿಲ್ಲ. ಆನಂದಪಾಲನ ಮಗನಾದ ತ್ರಿಲೋಚನಪಾಲ ಘಜ್ನಿ ಮಹಮೂದನ ವಿರುದ್ಧ ನಡೆಸಿದ ಯುದ್ಧದಲ್ಲಿ ಕಾಶ್ಮೀರದ ಸೇನಾನಾಯಕನಾದ ತುಂಗ ಎಂಬುವನು ತ್ರಿಲೋಚನಪಾಲನ ಪರವಾಗಿ ಹೋರಾಡಿ ಸೋತುಹೋದನೆಂದು ತಿಳಿದುಬರುತ್ತದೆ. ಮಹಮೂದ ಆರನೆಯ ಸಾರಿ ಭಾರತದ ಮೇಲೆ ದಂಡಯಾತ್ರೆ ಮಾಡಿದಾಗ ಕಾಶ್ಮೀರದ ಮೇಲೆ ದಾಳಿ ಮಾಡಿದ. ಆದರೆ ಈ ವಿಷಯದ ಬಗ್ಗೆ ಕಲ್ಹಣ ಏನನ್ನೂ ಹೇಳುವುದಿಲ್ಲ.

ಕಾಶ್ಮೀರವನ್ನು ಆಳಿದ ಹರ್ಷ (1089–1101) ಪ್ರಸಿದ್ಧನಾದ ದೊರೆ. ಅವನು ಅಪ್ರತಿಮ ವೀರ, ಮಹಾವಿದ್ವಾಂಸ, ಬಹುಭಾಷಾವಿದ, ಸಂಗೀತಪ್ರಿಯ, ಸಾಹಿತ್ಯ ಕಲಾಪ್ರವೀಣ, ಕಾಶ್ಮೀರವನ್ನು ಆಳಿದ ಕೊನೆಯ ಹಿಂದೂರಾಜರಲ್ಲಿ ಅವನು ಶ್ರೇಷ್ಠ ಕಾಶ್ಮೀರದ ರಾಜಾಸ್ಥಾನದ ವೈಭವವನ್ನು ಕುರಿತು ಕಲ್ಹಣ ಒಂದು ಹೃದಯಂಗಮ ಚಿತ್ರ ಕೊಟ್ಟಿದ್ದಾನೆ. ಉಡುಪು, ಆಭರಣಗಳಲ್ಲಿ ಹೊಸ ಹೊಸ ಶೈಲಿಗಳನ್ನು ಹರ್ಷ ಜಾರಿಗೆ ತಂದ. ಹರ್ಷನ ಮರಣಾನಂತರ ಕಾಶ್ಮೀರ ಸಿಂಹಾಸನವನ್ನು ಪಡೆಯುವುದಕ್ಕಾಗಿ ಉಕ್ಕಾಲ ಮತ್ತು ಸುಸ್ಸಾಲ ಎಂಬ ಇಬ್ಬರು ಸಹೋದರರು ನಡೆಸಿದ ಘೋರ ಹೋರಾಟವನ್ನು ಕಲ್ಹಣ ಚಿತ್ರಿಸಿದ್ದಾನೆ. ಸುಸ್ಸಾಲನ ಕೊಲೆಯಾದ ಮೇಲೆ ಅವನ ಮಗನಾದ ಜಯಸಿಂಹ (1128–1155) ತನ್ನ ರಕ್ಷಣೆಗಾಗಿ ಕಾಶ್ಮೀರವನ್ನು ಬಿಟ್ಟು ಲೊಹಾರ ಎಂಬ ಸ್ಥಳಕ್ಕೆ ಓಡಿಹೋದ. ಅಲ್ಲಿ ಸ್ವಲ್ಪ ಕಾಲವಿದ್ದು, ಒಂದು ಸೈನ್ಯವನ್ನು ಸಜ್ಜುಗೊಳಿಸಿಕೊಂಡ. ಭಿಕ್ಷಕರನೆಂಬ ಶತ್ರು ಶ್ರೀನಗರದ ಕಡೆಗೆ ಧಾವಿಸುತ್ತಿದ್ದಾನೆಂಬ ವರ್ತಮಾನವನ್ನು ಕೇಳಿ, ಧಾರಾಕಾರವಾಗಿ ಬೀಳುತ್ತಿದ್ದ ಹಿಮವನ್ನು ಲೆಕ್ಕಿಸದೆ ಸೇನಾಸಮೇತನಾಗಿ ಹೊರಟು, ಯುದ್ಧದಲ್ಲಿ ಶತ್ರುವನ್ನು ಸೋಲಿಸಿ, ಕಾಶ್ಮೀರ ಸಿಂಹಾಸನವನ್ನೇರಿ ರಾಜ್ಯವನ್ನು ವಿಸ್ತರಿಸಿದ. ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದ ದಾರ್ದ್ ಜನರನ್ನು ಹೊಡೆದೋಡಿಸಿದ. ಹಿಂದೂ ರಾಜರ ಆಳ್ವಿಕೆಯ ಇನ್ನುಳಿದ ಕಾಲದ ಚರಿತ್ರೆಯನ್ನು 1459ರಲ್ಲಿ ಜೋನರಾಜನಿಂದ ರಚಿತವಾದ ಕೃತಿಯಿಂದ ತಿಳಿಯಬಹುದು.

13ನೆಯ ಶತಮಾನದ ಆರಂಭದಲ್ಲಿ ಉತ್ತರ ಭಾರತ ಮತ್ತು ಮಧ್ಯ ಏಷ್ಯದ ಮೇಲೆ ಇಸ್ಲಾಂ ಪರಿಣಾಮಕಾರಿಯಾದ ಪ್ರಭಾವ ಬೀರಿತು. ಘಜ್ನಿ ಮಹಮೂದ ಮತ್ತು ಇತರರ ಆಕ್ರಮಣಗಳನ್ನು ಕಾಶ್ಮೀರ ತಪ್ಪಿಸಿಕೊಂಡರೂ ಇಸ್ಲಾಂ ಧರ್ಮಪ್ರಚಾರದಿಂದ ಅದು ಪ್ರಭಾವಿತವಾಯಿತು. ಸಹದೇವ (1301–1320) ಸಿಂಹಾಸನಕ್ಕೆ ಬರುವ ಹೊತ್ತಿಗೆ ಕಾಶ್ಮೀರದಲ್ಲಿ ಹಲವರು ಇಸ್ಲಾಂಧರ್ಮವನ್ನು ಅವಲಂಬಿಸಿದ್ದರು. ಇಪ್ಪತ್ತು ವರ್ಷಗಳ ಕಾಲ (1318–1338) ಪಿತೂರಿ, ಗಲಭೆ, ಕ್ರಾಂತಿ ಮತ್ತು ಯುದ್ಧಗಳ ಒಂದು ನಾಟಕವೇ ನಡೆದು ಅಂತ್ಯದಲ್ಲಿ ಕಾಶ್ಮೀರ ಮುಸ್ಲಿಂ ಆಳ್ವಿಕೆಗೆ ಒಳಪಟ್ಟಿತು. ಹಿಂದೂ ರಾಜರ ಆಳ್ವಿಕೆ 1338ರಲ್ಲಿ ಮುಕ್ತಾಯಗೊಂಡಿತು. ರಾಮಚಂದ್ರ ಸಹದೇವನ ದಕ್ಷ ಪ್ರಧಾನಿಯೂ ಸೇನಾಧಿಕಾರಿಯೂ

ಕಾಶ್ಮೀರೀ ನೃತ್ಯ–ರೋಫ್

ಆಗಿದ್ದ. ರಾಜ್ಯಾಡಳಿತದ ಎಲ್ಲ ಭಾಗಗಳನ್ನೂ ನೋಡಿಕೊಳ್ಳುತ್ತಿದ್ದವನು ರಾಮಚಂದ್ರನೇ. ಅವನ ಮಗಳಾದ ಕೋಟಾ ಎಂಬವಳು ತಂದೆಗೆ ಸಹಾಯಕಳಾಗಿದ್ದಳು. ರಿಂಚೆನ್ ಎಂಬ ನಿರಾಶ್ರಿತ ರಾಜಕುಮಾರ ಟಿಬೆಟ್ಟಿನಿಂದ ಓಡಿಬಂದು ರಾಮಚಂದ್ರನ ಆಶ್ರಯ ಬೇಡಿದ. ಸ್ವಲ್ಪ ಕಾಲಾನಂತರ ರಿಂಚೆನ್ ಕುತಂತ್ರದಿಂದ ಕಾಶ್ಮೀರವನ್ನು ವಶಪಡಿಸಿಕೊಂಡು ಅದರ ರಾಜನೆಂದು ಘೋಷಿಸಿಕೊಂಡ, ತನ್ನ ಸ್ಥಾನವನ್ನು ಭದ್ರಪಡಿಸಿ ಕೊಂಡು, ಕೋಟಾಳ ಕೈಹಿಡಿದು, ರಾಜ್ಯಭಾರ ಮಾಡತೊಡಗಿದ. ಲಾಮಾ ಧರ್ಮವನ್ನು ಬಿಟ್ಟು ಹಿಂದೂಧರ್ಮವನ್ನು ಅವಲಂಬಿಸುವಂತೆ ರಾಣಿ ಕೋಟಾ ಅವನನ್ನು ಕೇಳಿಕೊಂಡಳು. ಆದರೆ ಅವನು ಹಾಗೆ ಮಾಡದೆ ಇಸ್ಲಾಂ ಧರ್ಮಾವಲಂಬಿಯಾದ. ಅವನೇ ಕಾಶ್ಮೀರದ ಮೊಟ್ಟ ಮೊದಲನೆಯ ಮುಸ್ಲಿಂ ದೊರೆ. ರಿಂಚೆನ್ ಮತ್ತು ಅವನ ರಾಣಿ ಇಬ್ಬರೂ ರಾಜ್ಯಾಡಳಿತವನ್ನು ದಕ್ಷತೆಯಿಂದಲೂ ನ್ಯಾಯಪರತೆಯಿಂದಲೂ ನಡೆಸಿದರು. ದೇಶದಲ್ಲಿ ಶಾಂತಿ, ನೆಮ್ಮದಿ ನೆಲಸುವಂತೆ ಶ್ರಮಿಸಿದರು. ಸಹದೇವನ ಸಹೋದರನಾದ ಉದ್ಯಾನದೇವ ಕಾಶ್ಮೀರದ ಮೇಲೆ ಆಕ್ರಮಣ ನಡೆಸಿ, ರಿಂಚೆನನ ಕೊಲೆಗೆ ಪ್ರಯತ್ನಿಸಿದ. ಆದರೆ ರಿಂಚೆನ್ ಅವನನ್ನು



ರುಬ್ಬುಕಾಗದದಿಂದ ಕಲಾಕೃತಿಗಳ ತಯಾರಿಕೆ

ಅಡಗಿಸಿ ದೇಶದಲ್ಲಿ ಶಾಂತಿ ನೆಲಸುವಂತೆ ಮಾಡಿದ. ರಿಂಚೆನ್ ಮೃತಿ ಹೊಂದಿದ ಮೇಲೆ ಉದ್ಯಾನದೇವ ಕಾಶ್ಮೀರದ ಮೇಲೆ ದಾಳಿ ಮಾಡಿದ. ಕೋಟಾ ರಾಣಿ ಅವನನ್ನು ಬರಮಾಡಿಕೊಂಡು, ಸಿಂಹಾಸನವನ್ನು ಅವನಿಗೆ ಅರ್ಪಿಸಿ, ಅವನ ಕೈಹಿಡಿದಳು. ತನ್ನ ಸೌಂದರ್ಯ, ಪ್ರೇಮ ಮತ್ತು ಬುದ್ಧಿವಂತಿಕೆಯಿಂದ ಅವನ ಮೇಲೆ ತನ್ನ ಅಧಿಕಾರ ಸ್ಥಾಪಿಸಿ, ರಾಜ್ಯಾಡಳಿತವನ್ನು ತಾನೇ ನಡೆಸತೊಡಗಿದಳು. ಇವಳೇ ಕಾಶ್ಮೀರದ ಕೊನೆಯ ಹಿಂದೂ ಮಹಾರಾಣಿ. ಅವಳು ಬಹಿರಂಗವಾಗಿ ದರ್ಬಾರಿನಲ್ಲಿ ನಡೆಸುತ್ತಿದ್ದಳು. ಯುದ್ಧಸಮಯದಲ್ಲಿ ಸೈನ್ಯದ ನಾಯಕಿಯಾಗುತ್ತಿದ್ದಳು. ಬಹಳ ದರ್ಪದಿಂದ ರಾಜ್ಯವಾಳಿದಳು. 1338ರಲ್ಲಿ ಉದ್ಯಾನ ದೇವ ಮೃತಿ ಹೊಂದಿದ. ಉದ್ಯಾನದೇವನ ಕೈಕೆಳಗೆ ವಜೀರನಾಗಿದ್ದ ಷಮೀರನಿಗೂ ರಾಣಿಗೂ ಹೋರಾಟ ಆರಂಭವಾಯಿತು. ಷಾಮೀರನ ಕಿರುಕುಳವನ್ನು ತಾಳಲಾರದೆ ಅವಳು ಆತ್ಮಹತ್ಯೆ ಮಾಡಿಕೊಂಡಳು.

ಷಾಮೀರ ಸುಲ್ತಾನ್ ಷಂಸುದ್ದೀನ್ ಎಂಬ ಹೆಸರಿನಿಂದ (1339–42) ಕಾಶ್ಮೀರದ ಸಿಂಹಾಸನವನ್ನೇರಿ, ಕಾಶ್ಮೀರದಲ್ಲಿ ಸುಲ್ತಾನ್ ಸಂತತಿ ಅಭಿವೃದ್ಧಿ ಹೊಂದಲು ತಳಪಾಯವನ್ನು ಹಾಕಿದ. ಸುಲ್ತಾನ್ ಸಂತತಿಯವರು ಸುಮಾರು 222 ವರ್ಷಗಳ ಕಾಲ ಕಾಶ್ಮೀರವನ್ನು ಆಳಿದರು. ಕಾಶ್ಮೀರದ ದೀರ್ಘ ಇತಿಹಾಸದಲ್ಲಿ ಈ ಕಾಲ ಬಹಳ ಮುಖ್ಯವಾದ್ದು. ಕಾಶ್ಮೀರದ ಫಲವತ್ತಾದ ಭೂಮಿಯಲ್ಲಿ ಇಸ್ಲಾಂಧರ್ಮ ಬಹುಬೇಗ ಬೇರುಬಿಟ್ಟು ಹೆಮ್ಮರವಾಗಿ ಬೆಳೆಯತೊಡಗಿತು. ಸುಲ್ತಾನ್ ವಂಶದ ಜೈನ್–ಉಲ್–ಅಬದಿನನ ಕಾಲದಲ್ಲಿ ಕಾಶ್ಮೀರಿಗಳು ಸಾಹಿತ್ಯ ಮತ್ತು ಕಲೆಗಳ ಕ್ಷೇತ್ರದಲ್ಲಿ ಉನ್ನತ ಸ್ಥಾನ ಗಳಿಸಿದರು. ಕಾಶ್ಮೀರಿ ಭಾಷೆ ಬೆಳೆಯಿತು. ಮೀರ್ ಷಂಸುದ್ದೀನ್ ಇರಾಕಿಯಿಂದ ಷಿಯಾ ಧರ್ಮ ಜಾರಿಗೆ ಬಂತು. ಜೈನ್–ಉಲ್–ಅಬದಿನನ ಕಾಲದಲ್ಲಿ ಸಂಸ್ಕೃತದ ಬದಲು ಪರ್ಷಿಯನ್ ಅಧಿಕೃತ ಭಾಷೆಯಾಯಿತು. ಈ ಕಾಲದಲ್ಲಿ ಪರ್ಷಿಯನ್ ಮತ್ತು ಅರಬ್ಬೀ ಕಲೆ ಮತ್ತು ಸಂಸ್ಕೃತಿಗಳು ಕಾಶ್ಮೀರದ ಮೇಲೆ ತಮ್ಮ ಪ್ರಭಾವ ಬೀರಿದುವು. ಇಸ್ಲಾಂ, ಬೌದ್ಧ ಮತ್ತು ಹಿಂದೂ ಸಂಸ್ಕೃತಿಗಳ ಸಂಯೋಜನೆ ಅಲ್ಲಿ ಸಾಧ್ಯವಾಯಿತು. ಮೂರು ವರ್ಷಗಳ ಆಳ್ವಿಕೆಯಲ್ಲಿ ಷಂಸುದ್ದೀನ್ ದೇಶದ ಪ್ರಗತಿಗಾಗಿ ಶ್ರಮಿಸಿ, ಜನರ ಸುಖದುಃಖಗಳಲ್ಲಿ ಭಾಗಿಯಾಗಿ, ಒಳ್ಳೆಯ ಆಡಳಿತಗಾರನೆಂಬ ಹೆಸರು ಪಡೆದ. ಸುಲ್ತಾನ್ ಅಲ್ಲಾಉದ್ದೀನ್ (1343–54), ಸುಲ್ತಾನ್ ಶಿಹಾಬ್–ಉದ್ದೀನ್ (1354–73), ಸುಲ್ತಾನ್ ಕುತ್ಬುದ್ದೀನ್ (1373–89), ಸುಲ್ತಾನ್ ಸಿಕಂದರ್ (1389–1413), ಸುಲ್ತಾನ್ ಅಲಿ ಷಾ (1413–20) ಇವರು ದೇಶವನ್ನು ಹೊರಗಿನ ಆಕ್ರಮಣದಿಂದ ರಕ್ಷಿಸಿ, ಜನರಿಗೆ ಸುಭದ್ರವಾದ ಸರ್ಕಾರ ನೀಡಲು ಶ್ರಮಿಸಿದರು.

ಸುಲ್ತಾನ್ ಜೈನ್–ಉಲ್–ಅಬದಿನ್ (1420–70) ಸಿಂಹಾಸನಾರೋಹಣ ಮಾಡಿದಂದಿನಿಂದ ಕಾಶ್ಮೀರ ವೈಭವಯುತವಾಗಿಯೂ ಸಂಪದ್ಭರಿತವಾಗಿಯೂ ಏಳಿಗೆ ಹೊಂದಲು ಅರಂಭಿಸಿತು. ಅವನು ಉದಾರಿ, ಕ್ಷಮಾಶೀಲ, ವಿಶಾಲ ಬುದ್ಧಿಯುಳ್ಳವ, ಪರಮತಸಹಿಷ್ಣು. ಅವನನ್ನು ಬುದ್ ಷಾ ಅಥವಾ ಮಹಾ ದೊರೆ ಎಂದು ಜನರು ಕರೆದು ತಮ್ಮ ಗೌರವವನ್ನು ಸೂಚಿಸಿದರು. ಒಳ್ಳೆಯ ಶಿಕ್ಷಣ ಪಡೆದು, ಸಾಮರ್‌ಕಂಡ್ ಮೊದಲಾದ ದೇಶಗಳಲ್ಲಿ ಸಂಚರಿಸಿ, ಜನರ ರೀತಿನೀತಿಗಳನ್ನು ಗಮನಿಸಿ, ವಿವಿಧ ಸರ್ಕಾರಗಳ ಸ್ವರೂಪವನ್ನು ಕಂಡು ಅವನು ಜನರಿಗೆ ಯಾವುದು ಹಿತವೋ ಅಂಥ ಕೆಲಸಗಳನ್ನು ಮಾಡಲು ಯತ್ನಿಸಿದ. ಆಡಳಿತ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಅಪ್ರಾಮಾಣಿಕ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ವಿಧಿಸುತ್ತಿದ್ದ. ಜನತೆಗೆ ಶೀಘ್ರವಾಗಿ ನ್ಯಾಯ ದೊರಕಿಸಿ ಕೊಡುತ್ತಿದ್ದ. ಸರ್ಕಾರವನ್ನು ಮಾನವೀಯತೆ ಮತ್ತು ಕಾನೂನುಗಳ ತಳಪಾಯದ ಮೇಲೆ ರಚಿಸಿದ. ಸೈನ್ಯ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ ಶಿಸ್ತು ನೆಲಸುವಂತೆ ಕ್ರಮ ಕೈಗೊಂಡ. ಅನೇಕ ಕೈಗಾರಿಕೆಗಳು ಸ್ಥಾಪಿತವಾದವು. ಸಂಗೀತ ಮತ್ತು ನೃತ್ಯ ಕಲೆಗಳ ಅಭಿವೃದ್ಧಿಗೆ ಉದಾರವಾಗಿ ಧನಸಹಾಯ ಮಾಡಿದ. ನಗರಗಳು, ಹಳ್ಳಿಗಳು ನಾಲೆಗಳು ಮತ್ತು ಸೇತುವೆಗಳ ನಿರ್ಮಾಣಕಾರ್ಯ ಕೈಗೊಂಡ. ವಿದ್ಯಾವಂತರಿಗೆ ಆಶ್ರಯ ದೊರಕಿತು. ಬೋಧಿಭಟ್ಟ ಅನೇಕ ಸಂಸ್ಕೃತ ಗ್ರಂಥಗಳನ್ನು ಪರ್ಷಿಯನ್ ಭಾಷೆಗೆ ತರ್ಜುಮೆ ಮಾಡಿದ. ಜೋನರಾಜ ಮತ್ತು ಶ್ರೀವರರಾಜ ಇವನ ಆಶ್ರಯದಲ್ಲಿದ್ದರು. ಪರ್ಷಿಯನ್ ಮತ್ತು ಅರಬ್ಬೀ ವಿದ್ವಾಂಸರಾದ ಮೌಲಾನಾ ಕಬೀರ್, ಮುಲ್ಲಾ ಜಮಾಲ್ ಉದ್ದೀನ್ ಮತ್ತು ಕಾಜಿ ಮೀರ್ ಆಲಿ ಇವನ ಆಸ್ಥಾನವನ್ನು ಬೆಳಗಿದರು. 1470ರಲ್ಲಿ ಇವನು ಮರಣ ಹೊಂದಿದ.

ಜೈನ್–ಉಲ್–ಅಬದಿನನ ಎರಡನೆಯ ಮಗನಾದ ಹಾಜಿಖಾನ ಹೈದರ್ ಷಹ ಎಂಬ ಹೆಸರಿನಿಂದ 1470ರಲ್ಲಿ ಸಿಂಹಾಸನವನ್ನೇರಿದ. 1472ರಲ್ಲಿ ಅವನು ಕುಡಿದು ಮತ್ತನಾಗಿ ಅರಮನೆಯ ಉಪ್ಪರಿಗೆಯಿಂದ ಕಾಲುಜಾರಿ ಬಿದ್ದು ಸತ್ತ. ಹಸನ್ ಷಹ (1472–84). ಮಹಮದ್ ಷಹ (1484–86), ಫತೇ ಷಹ (1486–93), 2ನೆಯ ಮಹಮದ್ ಷಹ (1493–1505), 2ನೆಯ ಫತೇ ಷಹ (1505–14). 3ನೆಯ ಮಹಮದ್ ಷಹ (1514–15), 3ನೆಯ ಫತೇ ಷಹ (1515–17) ಮತ್ತು 4ನೆಯ ಮಹಮದ್ ಷಹ (1517–28) ಇವರು ಅನುಕ್ರಮವಾಗಿ ಕಾಶ್ಮೀರವನ್ನು ಆಳಿದರು. 1528ರಿಂದ ಮೊಗಲರು ಕಾಶ್ಮೀರವನ್ನು ವಶಪಡಿಸಿಕೊಳ್ಳುವವರೆಗೆ (1586) ಚಾಕ್ ವಂಶದವರು ಇಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ಹುಮಾಯೂನನ ಹೆಸರಿನಲ್ಲಿ ಮಿರ್ಜಾ ಹೈದರ್ ದುಗ್ಲಕ್ ಕಾಶ್ಮೀರವನ್ನು ವಶಪಡಿಸಿಕೊಂಡಿದ್ದರಿಂದ ಆ ರಾಜ್ಯ ತನಗೆ ಸೇರಬೇಕೆಂದು ಅಕ್ಬರ್ ಚಕ್ರವರ್ತಿ ಕಾಶ್ಮೀರವನ್ನು ಆಳುತ್ತಿದ್ದ ಯೂಸುಫ್ ಖಾನನಿಗೆ ತಿಳಿಸಿ, ಆ ಬಗ್ಗೆ ಮಾತುಕತೆ ನಡೆಸಲು ಕೂಡಲೆ ಬರುವಂತೆ ಆಜ್ಞೆ ಮಾಡಿದ. ಯೂಸುಫ್ ಖಾನ್ ಅವನ ಆಜ್ಞೆಯನ್ನು ಉಪೇಕ್ಷಿಸಿದ. ಕೋಪಕೊಂಡ ಚಕ್ರವರ್ತಿ 1585ರಲ್ಲಿ ಐದು ಸಾವಿರ ಸೈನಿಕರ ಪಡೆಯನ್ನು ಭಗವಾನ್ ದಾಸನ ನಾಯಕತ್ವದಲ್ಲಿ ಕಾಶ್ಮೀರಕ್ಕೆ ಕಳುಹಿಸಿಕೊಟ್ಟ. ಯೂಸುಫ್ ಖಾನನ ಮಗ ಯಾಕೂಬ್ ವೀರಾವೇಶದಿಂದ ಹೋರಾಡಿ ಮೊಗಲರ ದಾಳಿಯನ್ನು ಪ್ರತಿಭಟಿಸಿದ. ಭಗವಾನ್‌ದಾಸ ಕಂಗೆಟ್ಟು ಯೂಸುಫ್ ಷಹನೊಂದಿಗೆ ಶಾಂತಿಸಂಧಾನ ಮಾಡಿಕೊಂಡು, ಯೂಸುಫ್ ಷಹನನ್ನು ಮೋಸದಿಂದ ಸೆರೆ ಹಿಡಿಸಿದ. 1592ರಲ್ಲಿ ಯೂಸುಫ್ ಷಹ ಕಾರಾಗೃಹದಲ್ಲಿ ಮರಣಹೊಂದಿದ. ಮತ್ತೆ ಅಕ್ಬರ್ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ. ಕಾಸಿಮ್‌ಖಾನನನ್ನು ಕಳುಹಿಸಿಕೊಟ್ಟ. 1586ರ ಅಕ್ಟೋಬರ್ 14ರಂದು ಮೊಗಲ್ ಸೈನ್ಯ ಶ್ರೀನಗರದ ಮೇಲೆ ದಾಳಿಮಾಡಿತು. ಯಾಕೂಬ್ ಆಕ್ರಮಣಕಾರರನ್ನು ಎದುರಿಸಲಾರದೆ ದೇಶ ಬಿಟ್ಟು ಓಡಿಹೋದ. ಶ್ರೀನಗರ ಮೊಗಲರ ವಶವಾಯಿತು. ಅಂದಿನಿಂದ ಕಾಶ್ಮೀರ ಮೊಗಲ್ ಸಾಮ್ರಾಜ್ಯದ ಒಂದು ಪ್ರಾಂತ್ಯವಾಯಿತು.

ಅಕ್ಬರ್ ಕಾಶ್ಮೀರದ ಮೇಲೆ ತನ್ನ ಅಧಿಕಾರವನ್ನು 19 ವರ್ಷಗಳ ಕಾಲ ಸ್ಥಾಪಿಸಿದ್ದ. ಆ ಕಾಲದಲ್ಲಿ ಮಿರ್ಜಾ ಖಾಸಿಂ (1586–1587), ಮಿರ್ಜಾ ಯೂಸುಫ್ ಖಾನ್ ರಿಜ್ವಿ (1587–1590), ಮಹಮದ್ ಕುಲಿಚ್ ಖಾನ್ (1590–1601), ಮತ್ತು ಮಿರ್ಜಾ ಅಲಿ ಅಕ್ಬರ್ (1601–1606) ಸುಬೇದಾರರಾಗಿ ಕಾಶ್ಮೀರದ ಆಡಳಿತ ನಡೆಸಿದರು. ಅಕ್ಬರ್ ಕೈಗಾರಿಕೆಗಳನ್ನು ಸ್ಥಾಪಿಸಲು ಧನಸಹಾಯ ಮಾಡಿ, ಕಾಶ್ಮೀರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ. ಅಕ್ಬರನ ಮಗ ಜಹಾಂಗೀರ್ ಕಾಶ್ಮೀರದ ಸೌಂದರ್ಯದಿಂದ ಆಕರ್ಷಿತನಾಗಿ, ತನ್ನ ತಂದೆಯ ಜೊತೆಯಲ್ಲಿ 1589ರಲ್ಲಿ ಪ್ರಥಮವಾಗಿ ಅಲ್ಲಿಗೆ ಭೇಟಿಕೊಟ್ಟಿದ್ದ. ಆಮೇಲೆ ಪದೇಪದೇ ಕಾಶ್ಮೀರಕ್ಕೆ ಭೇಟಿಕೊಡುತ್ತಿದ್ದ. ಅವನ ಕಾಲದಲ್ಲಿ ಹಷಾಮ್ ಖಾನ್ (1609–12), ಸರ್ದಾರ್ ಖಾನ್ (1612–15), ಅಹಮದ್ ಬೇಗ್ (1615–18), ದಿಲಾವರ್ ಖಾನ್ (1618–20), ಇರಾದತ್ ಖಾನ್ (1620–22) ಮತ್ತು ಇತ್‌ಕದ್ ಖಾನ್ (1622–33) ಮೊಗಲ್ ಸುಬೇದಾರರಾಗಿ ಕಾಶ್ಮೀರದ ಆಡಳಿತವನ್ನು ದಕ್ಷತೆಯಿಂದ ನಡೆಸಿದರು. ಜಹಾಂಗೀರ್ ನಾನಾ ಬಗೆಯ ಹೂಗಿಡಗಳನ್ನೂ ಮರಗಳನ್ನೂ ಅಲ್ಲಿ ನೆಡಿಸಿ ಬೆಳೆಸಿದ. ಷಾಲಿಮಾರ್ ಮತ್ತು ನಿಷಾತ್ ಬಾಗ್ ಎಂಬ ಉದ್ಯಾನಗಳು ಫಲಪುಷ್ಪ ಸಮೃದ್ಧವಾದ ಗಿಡಮರಗಳಿಂದ ಕಂಗೊಳಿಸತೊಡಗಿದವು. ಜನರು ಮೂಢನಂಬಿಕೆಯಿಂದ ನಡೆಸುತ್ತಿದ್ದ ಕೆಲವು ಹೇಯಕೃತ್ಯಗಳನ್ನು ಜಹಾಂಗೀರ್ ನಿಲ್ಲಿಸಿದ. ಸಹಗಮನ, ಮಕ್ಕಳ ಬಲಿ, ಬಲವಂತ ಮತಾಂತರ ಮೊದಲಾದವನ್ನು ತೊಡೆದುಹಾಕಿದ.

ಜಹಾಂಗೀರನ ಮಗನಾದ ಷಾಹಜಹಾನನಿಗೂ (1627–1658) ಕಾಶ್ಮೀರದಲ್ಲಿ ಹೆಚ್ಚು ಆಸಕ್ತಿಯಿತ್ತು. ಅವನು ಕಾಶ್ಮೀರಕ್ಕೆ ಅನೇಕ ಬಾರಿ ಭೇಟಿ ಕೊಟ್ಟ. ಕಾಶ್ಮೀರದ ಗಿರಿಶ್ರೇಣಿಗಳು, ಪುಷ್ಕರಿಣಿಗಳು, ಉದ್ಯಾನಗಳು, ನದಿಗಳು, ಝರಿಗಳು, ಶುಕಪಿಕಗಳು ಅವನನ್ನು ಬಹುವಾಗಿ ಆಕರ್ಷಿಸಿದ್ದವು. ಅವನು ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದ. ಕಾಶ್ಮೀರದಲ್ಲಿ ಅನೇಕ ತೋಟಗಳನ್ನು ಬೆಳೆಸಿದ. ಮಸೀದಿಗಳನ್ನೂ ಸರಾಯ್‌ಗಳನ್ನೂ ಕಟ್ಟಿಸಿದ. ಜಫಾರ್ ಖಾನ್, ಅಲಿಮರ್ದನ್ ಖಾನ್, ಲಷ್ಕರ ಖಾನ್ ಇವರು ಮೊಗಲ್ ಸುಬೇದಾರರಾಗಿದ್ದರು. ಕವಿಯೂ ರಾಜಕಾರಣಿಯೂ ಯೋಧನೂ ಆದ ಜಫಾರ್ ಖಾನ್ ಬಾಲ್ಟಿಸ್ತಾನದ ದಂಗೆಕೋರರನ್ನು ಅಡಗಿಸಿ, ಕಾಶ್ಮೀರದಲ್ಲಿ ಸುಖಶಾಂತಿ ನೆಲಸುವಂತೆ ಕ್ರಮ ಕೈಗೊಂಡ. ಷಾಹಜಹಾನನ ಮಗನಾದ ಮುರಾದ್ ರಾಜಕುಮಾರ ಕಾಶ್ಮೀರದ ಆಡಳಿತಾಧಿಕಾರಿಯಾಗಿ ಒಂದು ವರ್ಷ ಇದ್ದ.

ಷಾಹಜಹಾನನ ಮರಣಾನಂತರ (1658) ಅವನ ಮಗ ಔರಂಗ್‌ಜೇಬ್ ದೆಹಲಿ ಸಿಂಹಾಸನವನ್ನೇರಿದ. 1665ರಲ್ಲಿ ಒಂದೇ ಒಂದು ಸಾರಿ ಅವನು ಕಾಶ್ಮೀರಕ್ಕೆ ಭೇಟಿಕೊಟ್ಟ. ತನ್ನ ಮಗಳು ರೋಷನಾರಳೊಂದಿಗೆ ಔರಂಗ್‌ಜೇಬ್ ಕಾಶ್ಮೀರಕ್ಕೆ ಭೇಟಿ ಕೊಟ್ಟದ್ದನ್ನು ಫ್ರಾಂಕೋಯಿಸ್ ಬರ್ನಿಯರ್ ಎಂಬ ಪ್ರವಾಸಿ ಬಹು ರಮ್ಯವಾಗಿ ವರ್ಣಿಸಿದ್ದಾನೆ. ಔರಂಗ್‌ಜೇಬನ 49 ವರ್ಷಗಳ ಆಳ್ವಿಕೆಯಲ್ಲಿ 14 ಮಂದಿ ಗವರ್ನರುಗಳು ದಕ್ಷತೆಯಿಂದ ಕಾಶ್ಮೀರದ ಆಡಳಿತ ನಡೆಸಿದರು. ಅವರೂ ಹೊಸಹೊಸ ತೋಟಗಳನ್ನೂ ಮಸೀದಿಗಳನ್ನೂ ವಿಹಾರಸ್ಥಳಗಳನ್ನೂ ಕಟ್ಟಿಸಿದರು. ಔರಂಗ್‌ಜೇಬನ ಮರಣಾನಂತರ (1707) ದೆಹಲಿ ಸಿಂಹಾಸನಕ್ಕೆ ಬಂದ ಬಾದಷಹರೂ ಕಾಶ್ಮೀರದ ಆಡಳಿತದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದರು.

ಅನಂತರ ಆಫ್ಘನರ ಆಳ್ವಿಕೆ ಬಂತು. ಅಹಮದ್ ಷಾ ಅಬ್ದಾಲಿ ತನ್ನ ದಿಗ್ವಿಜಯವನ್ನು ಮುಗಿಸಿಕೊಂಡು ಲಾಹೋರಿನಲ್ಲಿ ಬೀಡುಬಿಟ್ಟಿದ್ದಾಗ, ಪ್ರಭಾವಶಾಲಿಗಳಾದ ಇಬ್ಬರು ಕಾಶ್ಮೀರಿಗಳು, ಗವರ್ನರ್ ಅಬುಲ್ ಖಾಸಿಂ ಖಾನನ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಹೊರಿಸಿ, ಕಾಶ್ಮೀರದ ಮೇಲೆ ದಾಳಿ ಮಾಡುವಂತೆ ಅಬ್ದಾಲಿಯನ್ನು ಕೇಳಿಕೊಂಡರು. ಅಬ್ದಾಲಿ ಬಹು ಸಂತೋಷದಿಂದ ಅವರ ಆಹ್ವಾನವನ್ನು ಅಂಗೀಕರಿಸಿ, 1753ರಲ್ಲಿ ಒಂದು ದೊಡ್ಡ ಆಫ್ಘನ್ ಸೈನ್ಯವನ್ನು ಕಳುಹಿಸಿಕೊಟ್ಟ. ಹದಿನೈದು ದಿವಸಗಳವರೆಗೆ ಆಫ್ಘನರಿಗೂ ಖಾಸಿಂಖಾನನ ಸೈನಿಕರಿಗೂ ಭೀಕರ ಯುದ್ಧ ನಡೆದು, ಅಂತ್ಯದಲ್ಲಿ ಆಫ್ಘನರು ಗೆದ್ದರು. ಆಫ್ಘನರು ಕಾಶ್ಮೀರದಲ್ಲಿ ಮೊಗಲರ ಆಳ್ವಿಕೆಯನ್ನು ಕೊನೆಗಾಣಿಸಿದರು.

ಆಫ್ಘನರ ಆಳ್ವಿಕೆಯಲ್ಲಿ ದೇಶ ಅಧೋಗತಿಗೆ ಇಳಿಯಿತು. ಆಫ್ಘನ್ ಸೈನಿಕರು ಪಟ್ಟಣಗಳನ್ನೂ ಹಳ್ಳಿಗಳನ್ನೂ ಲೂಟಿಮಾಡಿ, ಹಿಂಸಾಕೃತ್ಯಗಳಲ್ಲಿ ತೊಡಗಿದರು. ಅರಮನೆಯಲ್ಲಿದ್ದ ಧನಕನಕ ವಸ್ತುವಾಹನಗಳನ್ನೆಲ್ಲ ಆಕ್ರಮಣಕಾರರು ವಶಪಡಿಸಿಕೊಂಡರು. ಸುಖಜೀವನಮಲ್ಲನೆಂಬವನು

ಪ್ರಬಲನಾಗಿ ಕಾಶ್ಮೀರದ ದೊರೆಯಾದ. ಅಹಮದ್ ಷಾ ಅಬ್ದಾಲಿ ಸುಖಜೀವನನ ಮೇಲೆ ಯಾವ ಶಿಸ್ತಿನ ಕ್ರಮವನ್ನೂ ಕೈಗೊಳ್ಳದೆ, ಕಾಶ್ಮೀರದ ವೈಸ್‌ರಾಯಿಯೆಂದು ಅವನಿಗೆ ಮಾನ್ಯತೆ ನೀಡಿ, ಅವನ ಸಹಾಯಕ್ಕೆ ಖ್ವಾಜಾ ಕಿಜ್ಞಾಕ್ ಎಂಬ ಆಫ್ಘನ್ ಶ್ರೀಮಂತನನ್ನು ಕಳುಹಿಸಿಕೊಟ್ಟ. ಆದರೆ ಅಹಮದ್ ಷಾ ಅಬ್ದಾಲಿಯ ದಂಡಯಾತ್ರೆಯಿಂದಲೂ ಮರಾಠರು ಮತ್ತು ಸಿಖ್ಖರನ್ನು ಎದುರಿಸಬೇಕಾದ್ದರಿಂದಲೂ ಆಫ್ಘನರಿಗೆ ಆರ್ಥಿಕ ತೊಂದರೆಗಳು ಉದ್ಭವಿಸಿದುವು. ಹಣಕ್ಕಾಗಿ ಅವರು ಸುಖಜೀವನನನ್ನು ಪೀಡಿಸಿದರು. ಸುಖಜೀವನ ಶ್ರೀಮಂತರ ಸಲಹೆಯ ಮೇರೆಗೆ ಆಫ್ಘನರನ್ನೂ ಖ್ವಾಜಾ ಕಿಜ್ಞಾಕನನ್ನೂ ಬಾರಾಮುಲದಲ್ಲಿ ಸೋಲಿಸಿ ಓಡಿಸಿದ. ಕೋಪಗೊಂಡ ಅಬ್ದಾಲಿ ಸುಖಜೀವನನನ್ನು ಶಿಕ್ಷಿಸಿ ಕಾಶ್ಮೀರವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತೊಂದು ಸೈನ್ಯವನ್ನು ಕಳುಹಿಸಿಕೊಟ್ಟ. ಆದರೆ ಆ ಸೈನ್ಯ ಮಳೆಗಾಲದಲ್ಲಿ ದಂಡಯಾತ್ರೆ ಕೈಗೊಂಡದ್ದರಿಂದ ಕಾಶ್ಮೀರಿಗಳಿಗೆ ಸೋತು ರಣರಂಗವನ್ನು ಬಿಟ್ಟು ಓಡಿತು. ಹೊರ ಆಕ್ರಮಣದಿಂದ ರಾಜ್ಯವನ್ನು ರಕ್ಷಿಸಿದರೂ ಪ್ರಕೃತಿಯ ಪ್ರಕೋಪಕ್ಕೆ ಗುರಿಯಾದ ಕಾಶ್ಮೀರವನ್ನು ಸುಖಜೀವನ ರಕ್ಷಿಸಲಾರದೆ ಹೋದ. 1755ರಲ್ಲಿ ಕ್ಷಾಮ ತಲೆದೋರಿ ಅನೇಕ ಮಂದಿ ಕಾಶ್ಮೀರಿಗಳನ್ನು ಆಹುತಿ ತೆಗೆದುಕೊಂಡಿತು. ಅದಲ್ಲದೆ ಮದ್ದು ಸಿಡಿದು ಅನೇಕ ಮಂದಿ ಕಾಶ್ಮೀರಿಗಳು ಬಲಿಯಾದರು. 1762ರಲ್ಲಿ ಅಹಮದ್ ಷಾ ಅಬ್ದಾಲಿ ದೊಡ್ಡ ಸೈನ್ಯವನ್ನು ಕಾಶ್ಮೀರದ ಮೇಲೆ ದಾಳಿ ಮಾಡಲು ಕಳುಹಿಸಿದ. ಕಾಶ್ಮೀರೀ ಸೈನಿಕರ ದ್ರೋಹದಿಂದ ಸುಖಜೀವನ ಸೆರೆಸಿಕ್ಕಿದ. ಕಣ್ಣುಗಳನ್ನು ಕೀಳಿಸಿ, ಆನೆಯ ಕಾಲಿನಿಂದ ತುಳಿಸಿ ಅವನನ್ನು ಸಾಯಿಸಲಾಯಿತು. ಮತ್ತೊಮ್ಮೆ ಕಾಶ್ಮೀರ ಆಫ್ಘನರ ಆಳ್ವಿಕೆಗೆ ಒಳಪಟ್ಟಿತು. ಅಹಮದ್ ಷಾ ಅಬ್ದಾಲಿಯ ಮರಣಾನಂತರ ಅವನ ಮಗನಾದ ತೈಮೂರ್ ಷಹ ಆಫ್ಘನ್ ಸಿಂಹಾಸನವನ್ನೇರಿದ. ಅವನು ತನ್ನ ಅಧಿಕಾರವನ್ನು ಕಾಶ್ಮೀರದ ಮೇಲೆ ಭದ್ರವಾಗಿ ಸ್ಥಾಪಿಸಿದ. ಕಾಶ್ಮೀರ ಸಂಪತ್ತಿನ ಗಣಿಯೆಂದು ಆಫ್ಘನರು ಭಾವಿಸಿದ್ದರು. ಅನೇಕ ಮಂದಿ ಆಫ್ಘನ್ ಆಡಳಿತಾಧಿಕಾರಿಗಳು ಕಾಶ್ಮೀರವನ್ನು ಆಳಿದರು. ಕೊನೆಗೆ ಕಾಶ್ಮೀರದಲ್ಲಿ ಆಫ್ಘನ್ ಆಡಳಿತ ಅಂತ್ಯಗೊಳ್ಳಲು ಆಡಳಿತಾಧಿಕಾರಿಗಳು ಅನುಸರಿಸಿದ ಕಠಿಣನೀತಿಯೇ ಬಹುಮಟ್ಟಿಗೆ ಕಾರಣವಾಯಿತು. ಎಲ್ಲ ಪಂಥದ ಜನರೂ ಅವರ ಆಳ್ವಿಕೆಯನ್ನು ಕಿತ್ತೊಗೆಯಬೇಕೆಂದು ಸಂಕಲ್ಪಿಸಿದರು. ಕಾಶ್ಮೀರವನ್ನು ರಕ್ಷಿಸಬೇಕೆಂದು ಸಿಖ್ ದೊರೆಯಾದ ರಣಜಿತ್ ಸಿಂಗನಿಗೆ ಮೊರೆಯಿಟ್ಟರು. ಅವನು 1819ರಲ್ಲಿ ಕಾಶ್ಮೀರವನ್ನು ಆಫ್ಘನರಿಂದ ಕಸಿದುಕೊಂಡ. ರಣಜಿತ್ ಸಿಂಗನ ಮತ್ತು ಅವನ ಉತ್ತರಾಧಿಕಾರಿಗಳ ಕಾಲದಲ್ಲಿ ಎಂಟು ಮಂದಿ ಹಿಂದೂ ಮತ್ತು ಸಿಖ್ ಗವರ್ನರುಗಳೂ ಅಂತ್ಯದಲ್ಲಿ ಇಬ್ಬರು ಮುಸ್ಲಿಂ ಗವರ್ನರುಗಳೂ ಕಾಶ್ಮೀರದ ಆಡಳಿತ ನಡೆಸಿದರು.

ಸಿಖ್ಖರು ಕಾಶ್ಮೀರವನ್ನು ವಶಪಡಿಸಿಕೊಂಡ ಮೇಲೆ, ದೋಗ್ರ ರಜಪೂತ ಗುಲಾಬ್ ಸಿಂಗನ ಆಡಳಿತದಲ್ಲಿದ್ದ ಜಮ್ಮುವಿಗೆ ಐತಿಹಾಸಿಕ ಪ್ರಾಮುಖ್ಯ ಬಂತು. ಈತ ಕಾಶ್ಮೀರದ ಮೇಲೂ ತನ್ನ ಅಧಿಕಾರವನ್ನು ವಿಸ್ತರಿಸಿ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅಸ್ತಿಭಾರ ಹಾಕಿದ. 18ನೆಯ ಶತಮಾನದ ಮಧ್ಯಭಾಗದಲ್ಲಿ ಜಮ್ಮುವನ್ನು ಆಳುತ್ತಿದ್ದ ರಾಜ ರಣಜೀತ್ ದೇವ ಎಂಬವನ ಸಂತತಿಗೆ ಸೇರಿದವನು ಗುಲಾಬ್ ಸಿಂಗ್. ಕೆಲವರು ಅವನನ್ನು ರಾಜತರಂಗಿಣಿಯಲ್ಲಿ ಉಲ್ಲೇಖಿತನಾದ ಗೋಣಂದನ ಸಂತತಿಯವನೆಂದು ಹೇಳುತ್ತಾರೆ. ಗುಲಾಬ್ ಸಿಂಗನ ಕಾಲಕ್ಕೆ ಹಿಂದೆ ಜಮ್ಮುವಿಗೆ ಕೇವಲ ಸ್ಥಳೀಯ ಪ್ರಾಮುಖ್ಯ ಇತ್ತು. 1780ರ ತರುವಾಯ ಜಮ್ಮುವಿನ ದೊರೆಗಳು ಲಾಹೋರಿನ ಸಿಖ್ಖರ ಸಾಮಂತರಾಗಿದ್ದರು. ಸಿಖ್ ಸೇನೆಗೆ ಸೇರಿದ ಗುಲಾಬ್ ಸಿಂಗನಿಗೆ ರಣಜಿತ್ ಸಿಂಗ್ ಉನ್ನತ ಅಧಿಕಾರ ನೀಡಿದ; 1820ರಲ್ಲಿ ಅವನನ್ನು ಜಮ್ಮುವಿನ ದೊರೆಯಾಗಿ ನೇಮಿಸಿದ. ಮೊದಮೊದಲು ಜಮ್ಮುವನ್ನು ಆಳುವುದು ಅವನಿಗೆ ಬಲು ಕಷ್ಟವಾಗಿತ್ತು. ಹೀಗೆ ಸುಮಾರು ಹತ್ತು ವರ್ಷಗಳ ಕಾಲ ಹೆಣಗಿದ ಮೇಲೆ ಅವನೂ ಅವನ ಇಬ್ಬರು ಸೋದರರೂ ಕಾಶ್ಮೀರದಿಂದ ಪಂಜಾಬಿನ ನೆಲದ ಮೇಲೆ ಪ್ರಭುತ್ವ ಸ್ಥಾಪಿಸಿದರು. ಭದರ್ ವಾರ್ ಮತ್ತು ಕಿಷ್ತ್ ವಾರ್ ಪ್ರದೇಶಗಳೂ ಅವರಿಗೆ ಸೇರಿದುವು. ರಣಜಿತ್ ಸಿಂಗ್ 1839ರಲ್ಲಿ ತೀರಿಕೊಂಡ. 1845–46ರಲ್ಲಿ ಇಂಗ್ಲಿಷರಿಗೂ ಸಿಖ್ಖರಿಗೂ ನಡೆದ ಯುದ್ಧದಲ್ಲಿ ಸಿಖ್ಖರು ಸೋತರು. 1846ರ ಲಾಹೋರ್ ಒಪ್ಪಂದದ ಪ್ರಕಾರ ಕೆಲವು ಪ್ರದೇಶಗಳ ಜೊತೆಗೆ ಕೊಡಬೇಕಾದ ಒಂದೂವರೆ ಕೋಟಿ ರೂ.ಗಳನ್ನು ಕೊಡಲಾರದ ಸಿಖ್ಖರು ಅದರ ಬದಲು ಕಾಶ್ಮೀರ ಪ್ರದೇಶವನ್ನು ಬ್ರಿಟಿಷರಿಗೆ ಕೊಡಬೇಕಾಯಿತು. ಜಮ್ಮುವನ್ನಾಳುತ್ತಿದ್ದ ಗುಲಾಬ್ ಸಿಂಗನಿಗೆ ಕಾಶ್ಮೀರವನ್ನು ವಹಿಸಿಕೊಟ್ಟು ಅವನ ಸ್ನೇಹ ಸಂಪಾದಿಸಲು ಬ್ರಿಟಿಷರು ಬಯಸಿದರು. ಬ್ರಿಟಿಷರಿಗೆ ಸಿಖ್ಖರಿಂದ ಬರಬೇಕಾಗಿದ್ದ ಹಣವನ್ನು ಕೊಡಲು ಗುಲಾಬ್ ಸಿಂಗ್ ಸಿದ್ಧನಿದ್ದ. 1846ರ ಮಾರ್ಚ್ 16ರಂದು ಇಂಗ್ಲಿಷರಿಗೂ ಗುಲಾಬ್ ಸಿಂಗನಿಗೂ ಆದ ಅಮೃತಸರ ಕೌಲಿನ ಪ್ರಕಾರ ಇಂಗ್ಲಿಷರು ಗುಲಾಬ್ ಸಿಂಗನಿಗೆ ಜಮ್ಮು ಮತ್ತು ಕಾಶ್ಮೀರದ ದೊರೆಯೆಂದು ಮನ್ನಣೆ ನೀಡಿದರು. ಆ ವೇಳೆಗೆ ಆಗಲೇ ಗುಲಾಬ್ ಸಿಂಗ್ ಜಮ್ಮುವಿನ ಪೂರ್ವ ಪಶ್ಚಿಮ ಪ್ರದೇಶಗಳನ್ನೂ ಲಾಸಕ್ಕೆ ಸೇರಿದ ಲಡಾಕನ್ನೂ ಸ್ವತಂತ್ರ ಮುಸ್ಲಿಂ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಸ್ಕಾರ್ದುವನ್ನೂ ಗೆದ್ದುಕೊಂಡಿದ್ದ.

ಗುಲಾಬ್ ಸಿಂಗ್ 1857ರಲ್ಲಿ ತೀರಿಕೊಂಡ. ಅವನ ಮಗನಾದ ರಣಬೀರ್ ಸಿಂಗ್ (1857–85) ಪಟ್ಟಕ್ಕೆ ಬಂದ. 1857ರಲ್ಲಿ ಭಾರತದಲ್ಲಿ ನಡೆದ ಬಂಡಾಯದಲ್ಲಿ ರಣಬೀರ್ ಸಿಂಗ್ ಬ್ರಿಟಿಷರಿಗೆ ವಿಧೇಯನಾಗಿದ್ದುದರಿಂದ, ಸ್ವಂತ ಮಕ್ಕಳಿಲ್ಲದ ಅವನು ದತ್ತು ತೆಗೆದುಕೊಳ್ಳಲು ಬ್ರಿಟಿಷರು ಅವಕಾಶ ನೀಡಿದರು. ಮುಂದಿನ ದೊರೆ ಮಹಾರಾಜ ಪ್ರತಾಪ್ ಸಿಂಗ್. ಅವನ ಆಡಳಿತದ ಕಾಲದಲ್ಲಿ (1885–1925) ಪ್ರಥಮವಾಗಿ ಕಾಶ್ಮೀರಕ್ಕೆ ಒಬ್ಬ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಲಾಯಿತು. ಆಡಳಿತದಲ್ಲಿ ಸುಧಾರಣೆಗಳಾದುವು. ಭೂಕಂದಾಯವನ್ನು ನಿರ್ಧರಿಸಲಾಯಿತು. ಇವನು ಗಿಲ್ಗಿಟ್‌ನ ಮೇಲೆ ಕಾಶ್ಮೀರದ ಸಾರ್ವಭೌಮತ್ವವನ್ನು ಮತ್ತೆ ಸ್ಥಾಪಿಸಿದ. ಮಹಾರಾಜ ಹರಿ ಸಿಂಗ್ ಪಟ್ಟಕ್ಕೆ ಬಂದದ್ದು 1925ರಲ್ಲಿ.

1947ರಲ್ಲಿ ಭಾರತದ ವಿಭಜನೆಯಾದ ಅನಂತರ ಭಾರತ ಮತ್ತು ಪಾಕಿಸ್ತಾನಗಳ ನಡುವಣ ಕಲಹಕ್ಕೆ ಕಾಶ್ಮೀರ ಒಂದು ಕಾರಣವಾಯಿತು. 1947ರ ಅಕ್ಟೋಬರ್ 20ರಂದು ಪಾಕಿಸ್ತಾನದ ವಾಯವ್ಯ ಗಡಿಪ್ರದೇಶದಿಂದ ಪಾಕಿಸ್ತಾನಿಗಳು ಕಾಶ್ಮೀರದ ಮೇಲೆ ಆಕ್ರಮಣ ನಡೆಸಿ ರಾಜಧಾನಿಯಾದ ಶ್ರೀನಗರದವರೆಗೆ ಧಾವಿಸಿ ಬಂದರು. ಕಾಶ್ಮೀರದ ದೊರೆ ಆ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸಿ, ಆಕ್ರಮಣಕಾರರನ್ನು ಎದುರಿಸಲು ಭಾರತದ ಸಹಾಯ ಕೋರಿದರು. ಭಾರತದ ಸೇನೆ ದಾಳಿಕಾರರನ್ನು ಹಿಮ್ಮೆಟ್ಟಿಸಿತಲ್ಲದೆ, ಪಾಕಿಸ್ತಾನಿ ಆಕ್ರಮಣವನ್ನು ನಿಲ್ಲಿಸಲು ವಿಶ್ವಸಂಸ್ಥೆಗೆ ದೂರು ನೀಡಿತು. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯದಂತೆ ಕಾಶ್ಮೀರದಲ್ಲಿ ಕದನ ನಿಲುಗಡೆ ಆಯಿತು. ಆಕ್ರಮಣ ಸಂಪೂರ್ಣವಾಗಿ ತೆರವಾಗಿ ಆ ರಾಜ್ಯದಲ್ಲಿ ಪ್ರಸಾಮಾನ್ಯ ಪರಿಸ್ಥಿತಿ ಏರ್ಪಟ್ಟ ಮೇಲೆ ಆ ರಾಜ್ಯದ ಭವಿಷ್ಯದ ಬಗ್ಗೆ ಜನಮತಗಣನೆ ಆಗಬೇಕೆಂದು ನಿರ್ಣಯಿಸಲಾಯಿತು. ಆದರೆ ಆಕ್ರಮಿತ ಪ್ರದೇಶದಿಂದ ಪಾಕಿಸ್ತಾನ ವಾಪಸಾಗಲಿಲ್ಲವಾದ್ದರಿಂದ ಇದು ಸಾಧ್ಯವಾಗಲಿಲ್ಲ. 1949ರಲ್ಲಿ ಜಮ್ಮು ಮತ್ತು ಕಾಶ್ಮೀರದ ದೊರೆ ಹರಿ ಸಿಂಗ್ ಸಿಂಹಾಸನ ತ್ಯಾಗ ಮಾಡಿದರು. ಅವರ ಮಗ ಯುವರಾಜ ಕರಣ್ ಸಿಂಗ್‌ರು ರೀಜೆಂಟ್ ಆದರು. ಕಾಶ್ಮೀರದ ಆಕ್ರಮಣ ತೆರವಾಗುವಂತೆ ಭಾರತ ನಡೆಸಿದ ಪ್ರಯತ್ನವೆಲ್ಲ ವ್ಯರ್ಥವಾಗಿದೆ. ಕಾಶ್ಮೀರ ಭಾರತದ ಅವಿಭಾಜ್ಯ ಭಾಗವಾಗಿದ್ದರೆ ಮಾತ್ರವೇ ತಮ್ಮ ಭವಿಷ್ಯ ಸುಭದ್ರವೆಂಬುದನ್ನು ಅಲ್ಲಿಯ ಪ್ರಜೆಗಳು ಅನಂತರ ಅಲ್ಲಿ ನಡೆದ ಚುನಾವಣೆಗಳಲ್ಲಿ ಸುವ್ಯಕ್ತಪಡಿಸಿದ್ದಾರೆ. ಕ್ರಮಕ್ರಮವಾಗಿ ಕಾಶ್ಮೀರದ ಜನತೆಯ ಆಶಯವನ್ನು ಭಾರತ ಸರ್ಕಾರ ಕಾರ್ಯಗತಗೊಳಿಸಿದೆ. 1952–56ರಲ್ಲಿ ಕರಣ್ ಸಿಂಗರನ್ನು ಜಮ್ಮು–ಕಾಶ್ಮೀರದ ಸದರ್–ಇ–ರಿಯಾಸತ್ ಆಗಿ ಭಾರತ ಸರ್ಕಾರ ನೇಮಕ ಮಾಡಿತು. ಆಕ್ರಮಿತ ಪ್ರದೇಶವನ್ನು ತೆರವು ಮಾಡುವ ಬದಲು ಜಮ್ಮು–ಕಾಶ್ಮೀರದ ಉಳಿದ ಭಾಗಗಳನ್ನೂ ಆಕ್ರಮಿಸಿಕೊಳ್ಳಲು ಪಾಕಿಸ್ತಾನ ಹಲವು ಬಾರಿ ಪ್ರಯತ್ನಿಸಿತು. ಆದರೆ ಅದು ಸಾಧ್ಯವಾಗಲಿಲ್ಲ.

ಜಮ್ಮು–ಕಾಶ್ಮೀರದ ಭಾಗವಾದ ಲಡಾಕಿನಲ್ಲಿ ಚೀನಿಯರು ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡು, ಸಿಂಕಿಯಾಂಗ್ ಟಿಬೆಟ್‌ಗಳೊಡನೆ ಸಂಪರ್ಕ ಏರ್ಪಡಿಸುವ ರಸ್ತೆಯೊಂದನ್ನು ನಿರ್ಮಿಸಿದ್ದುದಾಗಿ 1959ರಲ್ಲಿ ತಿಳಿಯಿತು. ಗಡಿಯನ್ನು ಕಾಯುತ್ತಿದ್ದ ಭಾರತ ಸೈನಿಕರ ಮೇಲೆ ಚೀನಿಯರು ಗುಂಡು ಹಾರಿಸಿ ಕೆಲವರನ್ನು ಕೊಂದರು. ಚೀನೀಯರ ಆಕ್ರಮಣ ನೀತಿಯನ್ನು ಭಾರತ ಖಂಡಿಸಿತು. ಭಾರತದ ವಿರೋಧಕ್ಕೆ ಉತ್ತರವಾಗಿ ಚೀನೀ ಸರ್ಕಾರ ವಿವಾದಕ್ಕೊಳಪಟ್ಟ ಪ್ರದೇಶವೆಲ್ಲವೂ ತನಗೆ ಸೇರಬೇಕೆಂದು ಹೇಳಿ, ತನ್ನ ಸೇನೆಯನ್ನು ಅಲ್ಲಿಂದ ವಾಪಸ್ ಕರೆಸಿಕೊಳ್ಳಲು ನಿರಾಕರಿಸಿತು. 1962ರ ಅಕ್ಟೋಬರಿನಲ್ಲಿ ಚೀನ ಭಾರತದ ಗಡಿಯಲ್ಲಿ ವ್ಯಾಪಕವಾಗಿ ಆಕ್ರಮಣ ನಡೆಸಿತು. ಆ ವರ್ಷದ ನವೆಂಬರ್ ತಿಂಗಳಲ್ಲಿ ಅದು ಏಕಪಕ್ಷೀಯವಾಗಿ ಕದನವಿರಾಮ ಘೋಷಿಸಿತು. ಆದರೆ ಉತ್ತರ ಲಡಾಕ್ ಪ್ರದೇಶದಲ್ಲಿ ಅದು ಆಕ್ರಮಿಸಿಕೊಂಡಿದ್ದ 36260 ಚ.ಕಿಮೀ ಪ್ರದೇಶದಿಂದ ಹಿನ್ನಡೆಯಲಿಲ್ಲ.

ಕಾಶ್ಮೀರದಲ್ಲಿ ಆಗಿಂದಾಗ್ಗೆ ಕದನವಿರಾಮ ರೇಖೆಯನ್ನು ಉಲ್ಲಂಘಿಸುತ್ತಿದ್ದ ಪಾಕಿಸ್ತಾನ 1965ರ ಆಗಸ್ಟ್ 5ರಂದು ಮುಂಜಾನೆ ಅತಿ ಭಾರಿ ಪ್ರಮಾಣದಲ್ಲಿ ಅದನ್ನು ಅತಿಕ್ರಮಣ ಮಾಡಿತು. ಕದನವಿರಾಮರೇಖೆಯನ್ನು ನಾಲ್ಕಾರು ಕಡೆಗಳಿಂದ ದಾಟಿಬಂದ ಸಹಸ್ರಾರು ಮಂದಿ ಸಶಸ್ತ್ರ ಪಾಕಿಸ್ತಾನಿಗಳು ಶ್ರೀನಗರದ ಕಡೆಗೆ ಧಾವಿಸಲಾರಂಭಿಸಿದರು. ಜಮ್ಮು–ಕಾಶ್ಮೀರ ಸರ್ಕಾರ ರಕ್ಷಣಾ ಮತ್ತು ಪೊಲೀಸ್ ಬಲದಿಂದ ಅತಿಕ್ರಮಣಕಾರರನ್ನು ಹಿಮ್ಮೆಟ್ಟಿಸಿತು. ಭಾರತ ಮತ್ತೆ ವಿಶ್ವಸಂಸ್ಥೆಗೆ ಸಲ್ಲಿಸಿದ ದೂರಿನಿಂದ ಪ್ರಯೋಜನವಾಗಲಿಲ್ಲ. 1965ರ ಸೆಪ್ಟೆಂಬರ್ ಒಂದರಂದು ಪಾಕಿಸ್ತಾನಿಗಳು ಜಮ್ಮುವಿನ ಚಂಬ್ ವಲಯದಲ್ಲಿ ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ನುಗ್ಗಿ ಬಂದಾಗ ಭಾರತ–ಪಾಕಿಸ್ತಾನಿಗಳ ನಡುವೆ ಯುದ್ಧ ಆರಂಭವಾಯಿತು. ಭಾರತ ಸೈನಿಕರು ಪಾಕ್ ಸೈನಿಕರನ್ನು ಹಿಮ್ಮೆಟ್ಟಿಸಿದರು. ಪಾಕಿಸ್ತಾನದ ಲಾಹೋರ್ ವಲಯವನ್ನು ಭಾರತದ ಸೈನ್ಯ ಪ್ರವೇಶಿಸಿತು. ಪಾಕಿಸ್ತಾನದ ಲಾಹೋರ್ ವಲಯವನ್ನು ಭಾರತದ ಸೈನ್ಯ ಪ್ರವೇಶಿಸಿತು. ಪಾಕಿಸ್ತಾನದ ರಕ್ಷಣಾ ಠಾಣ್ಯಗಳ ಮೇಲೂ ಶಸ್ತ್ರಾಸ್ತ್ರ ಕೋಠಿಗಳ ಮೇಲೂ ಭಾರತೀಯ ವಿಮಾನಬಲದವರು ಕಾರ್ಯಾಚರಣೆ ನಡೆಸಿದರು. ಅಂತ್ಯದಲ್ಲಿ 1965ರ ಸೆಪ್ಟೆಂಬರ್ 23ರಂದು ಭಾರತ–ಪಾಕಿಸ್ತಾನಗಳೆರಡೂ

ಭದ್ರತಾಸಮಿತಿಯ ನಿರ್ಣಯಕ್ಕನುಗುಣವಾಗಿ ಕದನ ನಿಲ್ಲಿಸಿದವು. 1971ರ ಡಿಸೆಂಬರಿನಲ್ಲಿ ನಡೆದ ಭಾರತ-ಪಾಕಿಸ್ತಾನ ಯುದ್ಧದಲ್ಲೂ ಪಾಕಿಸ್ತಾನ ಕಾಶ್ಮೀರದ ಉಳಿದ ಪ್ರದೇಶವನ್ನು ಆಕ್ರಮಿಸಿಕೊಳ್ಳಲು ಯತ್ನಿಸಿ ವಿಫಲಗೊಂಡಿತು. ಭಾರತ ಗಣರಾಜ್ಯದ ಅಂಗವಾಗಿ ಜಮ್ಮು-ಕಾಶ್ಮೀರ ರಾಜ್ಯ ಪ್ರಗತಿಯ ಹಾದಿಯಲ್ಲಿ ಸಾಗುತ್ತಿದೆ. (ಬಿ.ಎಂ)

**ವಾಸ್ತು, ಶಿಲ್ಪ :** ಕಾಶ್ಮೀರ ಅಶೋಕನ ಸಾಮ್ರಾಜ್ಯದ ಭಾಗವಾಗಿದ್ದಾಗ, ಅವನು ಅಲ್ಲಿ ಶ್ರೀನಗರಿ (ಈಗಿನ ಪಂಸ್ರಿಥಾನ್) ಎಂಬ ಪಟ್ಟಣ ಕಟ್ಟಿ ಅಲ್ಲಿ ಒಂದು ಸ್ತೂಪವನ್ನು ನಿರ್ಮಿಸಿದನೆಂದು ಬೌದ್ಧ ಗ್ರಂಥಗಳಿಂದ ತಿಳಿಯುತ್ತದೆ. ಹಾಗೆಯೇ ಅವನ ಮಗ ಜಲೌಕ ಗುಷ್ಕುರ್‌ನಲ್ಲಿಯ ಜೇಷ್ಠೇಶ, ಬಿಜ್ಜೆಹರಾದಲ್ಲಿನ ಅಶೋಕೇಶ್ವರ ಮತ್ತು ವಂಗಥ್‌ನಲ್ಲಿಯ ಜೇಷ್ಠರುದ್ರ ದೇವಾಲಯಗಳನ್ನೂ, ಜಲೌಕನ ತಾಯಿ ಈ ಪ್ರದೇಶದಲ್ಲಿ ಅನೇಕ ಮಾತೃಚಕ್ರಗಳನ್ನೂ (ವೃತ್ತಾಕಾರದ ಮಾತೃದೇವತೆಗಳ ಗುಡಿಗಳು) ಕಟ್ಟಿಸಿದರೆಂದು ಪ್ರತೀತಿ. ಆದರೆ ಈ ಸ್ಥಳಗಳಲ್ಲಿ ಉಳಿದಿರುವ ಈಗಿನ ದೇವಾಲಯಗಳು ಅನಂತರಕಾಲದ ಪುನಾರಚನೆಗಳು. ಮೌರ್ಯರ ಅನಂತರ ಕುಶಾನ ಅರಸರಾದ ಕನಿಷ್ಕ, ಜುಷ್ಕ ಮತ್ತು ಹುವಿಷ್ಕರು ಅನುಕ್ರಮವಾಗಿ ಕಾನಿಷ್ಕಪುರ (ಈಗಿನ ಉಷ್ಕೂರ್) ಕಟ್ಟಿದರು. ಇವುಗಳಲ್ಲಿ ಹುವಿಷ್ಕಪುರ ಪ್ರಸಿದ್ಧವಾದ್ದು. ಇಲ್ಲಿ ಹುವಿಷ್ಕ ಒಂದು ಸ್ತೂಪವನ್ನೂ ಅದರ ಸುತ್ತಲೂ ಅನೇಕ ಸಂಘಾರಾಮಗಳನ್ನೂ ಕಟ್ಟಿಸಿದ್ದನೆಂಬುದಕ್ಕೆ ಕೆಲವು ಮಾಹಿತಿಗಳಿವೆ. ಇಲ್ಲಿ ನಡೆದಿರುವ ಉತ್ಖನನದಿಂದ ಸ್ತೂಪದ ಅಡಿಪಾಯವಷ್ಟೇ ಬೆಳಕಿಗೆ ಬಂದಿದೆ.

ಕುಶಾನರ ಸಾಮ್ರಾಜ್ಯ ಕಾಶ್ಮೀರವಲ್ಲದೆ ಪಂಜಾಬ್ ಮತ್ತು ಉತ್ತರ ಪ್ರದೇಶಗಳ ಭಾಗಗಳನ್ನೂ ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯದ ಭಾಗಗಳನ್ನೂ ಒಳಗೊಂಡಿದ್ದರಿಂದಲೂ ಅನಂತರ ಈ ಪ್ರದೇಶಗಳು ಆಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯದಿಂದ ಬಂದ ಪಾರ್ಥೀಯ, ಸಸ್ಸಾನೀಯ ಮತ್ತು ಶ್ವೇತಹೂಣರ ಆಳ್ವಿಕೆಗೆ ಒಳಪಟ್ಟಿದ್ದರಿಂದಲೂ ಇಲ್ಲಿ ಭಾರತೀಯ ವಾಸ್ತುಶಿಲ್ಪಶೈಲಿಗಳು ಇತರ ಶೈಲಿಗಳೊಂದಿಗೆ ಮಿಳಿತವಾಗಿ ಬೆಳೆದದ್ದು ಕಂಡುಬರುತ್ತದೆ. ಕುಶಾನ ಅರಸನ ಪ್ರತಿಮೆಯೊಂದು ಶ್ರೀನಗರದಲ್ಲಿದೆ. ಇದರದು ಪಾರ್ಥೀಯ ಶಿಲ್ಪಶೈಲಿ. ಗಾಂಧಾರ ಶಿಲ್ಪಶೈಲಿಯ ಅನೇಕ ಸುದ್ದೆವಿಗ್ರಹಗಳು ಅಖ್ನೂರ್, ಉಷ್ಕೂರ್ ಮುಂತಾದೆಡೆಗಳಲ್ಲಿ ದೊರಕಿವೆ. ಕೆಲವು ವಿದ್ವಾಂಸರ ಪ್ರಕಾರ ಇವು ಕುಶಾನರ ಕಾಲದ ಅನಂತರ 4-8ನೆಯ ಶತಮಾನಗಳ ಇಳಿಮುಖದ ಗಾಂಧಾರ ಶೈಲಿಯ ಕೃತಿಗಳು. ಈ ಸುದ್ದೆವಿಗ್ರಹಗಳಲ್ಲಿ ಹೆಚ್ಚಿನವು ಬುದ್ಧ, ಬೋಧಿಸತ್ವ ಮತ್ತು ಬೌದ್ಧಕಥೆಗಳ ನಿರೂಪಣೆಗಳಾಗಿವೆ.

ಹಾರ್ವಾನ್ ಎಂಬಲ್ಲಿಯ ಉತ್ಖನನದಲ್ಲಿ ಬೆಳಕಿಗೆ ಬಂದ ಬೌದ್ಧಸಂಘಾರಾಮದಲ್ಲಿ ಪಾರ್ಥೀಯ ಶೈಲಿ ಚೆನ್ನಾಗಿ ವ್ಯಕ್ತವಾಗಿದೆ. ಇಲ್ಲಿ ಅನೇಕ ಸ್ತೂಪಗಳು ಅರ್ಧವೃತ್ತಾಕಾರದ ಹಿಂಭಾಗವಿರುವ ಚೈತ್ಯ ಗೃಹಗಳ ಮತ್ತು ಭಿಕ್ಷುಗಳಿಗಾಗಿ ಕಟ್ಟಿದ ಸಣ್ಣ ಕೊಠಡಿಗಳ ಅಡಿಪಾಯಗಳು ಕಂಡುಬಂದಿವೆ. ಇಲ್ಲಿಯ ಒಂದು ಹಜಾರದಲ್ಲಿ ಸುಂದರ ಚಿತ್ರಣವಿರುವ ನೆಲಹೆಂಚುಗಳನ್ನು ಹಾಸಲಾಗಿದೆ. ಪಾರ್ಥೀಯ ಕುದುರೆ ಸವಾರರ, ಎದೆಮಟ್ಟ ಚಿತ್ರಗಳ, ಭಾರತೀಯ ವಸ್ತ್ರ ಧರಿಸಿದ ಪಾರ್ಥೀಯರ, ಬ್ರಾಹ್ಮಣ ಸನ್ಯಾಸಿಗಳ, ಬಳ್ಳಿಗಳೇ ಮುಂತಾದವುಗಳ ಉಬ್ಬುಶಿಲ್ಪಗಳು ಈ ಹೆಂಚುಗಳಲ್ಲಿವೆ. ಇವು ಪಾರ್ಥೀಯ ಶಿಲ್ಪ ಶೈಲಿಯವಾದರೂ, ಗುಪ್ತರ ಕಲೆಯ ಪ್ರಭಾವ ಕಂಡುಬರುತ್ತದೆ.

ಬಿಜ್ಜೆಹರಾದಲ್ಲಿ ಶ್ರೀ ಲಕ್ಷ್ಮೀ, ಗಜಲಕ್ಷ್ಮೀ ಮುಂತಾದ ಕೆಲವು ಸುದ್ದೆವಿಗ್ರಹಗಳು ದೊರಕಿವೆ. ಗಾಂಧಾರ ಶೈಲಿಯ ಇಳಿಗಾಲದ ಈ ವಿಗ್ರಹಗಳಲ್ಲೂ ಗುಪ್ತ ಸಂಪ್ರದಾಯದ ಛಾಯೆಯನ್ನು ಕಾಣಬಹುದು. ಇವು ಬೌದ್ಧ ಧರ್ಮಕ್ಕೆ ಮಾರಕವಾಗಿ ಹಿಂದೂ ಧರ್ಮವನ್ನು ಎತ್ತಿಹಿಡಿಯಲು ಯತ್ನಿಸಿದ ಹೂಣಮಿಹಿರಗುಲನ (ಸು.520-530) ಕಾಲದವಾಗಿರ ಬಹುದೆಂದು ಕೆಲವರ ಅಭಿಪ್ರಾಯ. ಮಿಹಿರಗುಲ ವಿಜ್ಜೆಹರಾದಲ್ಲಿ ವಿಜಯೇಶ್ವರ ಎಂಬ ಶಿವದೇವಾಲಯವನ್ನು ಕಟ್ಟಿಸಿದ್ದ.

ಸು.410ರಿಂದ 470ರವರೆಗೆ ಆಳಿದ ಇಮ್ಮಡಿ ಪ್ರವರಸೇನ ಪ್ರವರಪುರವನ್ನು (ಈಗಿನ ಶ್ರೀನಗರ) ಕಟ್ಟಿಸಿದ. ಇವನ ಕಾಲದ ಪ್ರವರೇಶ್ವರ ದೇವಾಲಯವೂ ಇವನ ವಂಶದವನೇ ಆದ ರಾಣಾದಿತ್ಯನೆಂಬುವನ ರಾಣಾಸ್ವಾಮಿ ದೇವಾಲಯವೂ ಈಗಿನ ಬಹಾಉದ್ದೀನ್ ಮತ್ತು ಪೀರ್ ಹಾಜ್ಜ್ ಮುಹಮ್ಮದ್ ಸಾಹಿಬ್ ಗೋರಿಗಳು ಇರುವ ಎಡೆಗಳಲ್ಲಿದ್ದುವೆಂದು ತಿಳಿದುಬಂದಿದೆ. ಆದರೆ 8ನೆಯ ಶತಮಾನದ ಕೆಲವು ಸೇರ್ಪಡೆಗಳಷ್ಟೇ ಈಗ ಇಲ್ಲಿ ಕಂಡುಬರುವ ಅತ್ಯಂತ ಪ್ರಾಚೀನ ಅವಶೇಷಗಳು. ಕಾಶ್ಮೀರದ ಆ ಕಾಲದ ವಾಸ್ತುಶಿಲ್ಪಕಲೆ ಗುಪ್ತಶೈಲಿಯಿಂದ ಬಹು ಪ್ರಭಾವಿತವಾಗಿದ್ದಿತೆಂಬುದು ಆಗಿನ ಇತರ ಕೆಲವು ಸಣ್ಣಪುಟ್ಟ ಅವಶೇಷಗಳಿಂದ ತಿಳಿದುಬರುತ್ತದೆ.

ಕಾಶ್ಮೀರದ ಕಲೆಯ ಇತಿಹಾಸದಲ್ಲಿ ಕಾರ್ಕೋಟ ರಾಜವಂಶದ ಕಾಲ ಮುಖ್ಯವಾದ್ದು. ಈ ವಂಶದ ಲಲಿತಾದಿತ್ಯ ಮುಕ್ತಾಪೀಡ ತನ್ನ ಅಪಾರ ಸಂಪತ್ತನ್ನು ದೊಡ್ಡ ದೇವಾಲಯಗಳ ನಿರ್ಮಾಣಕ್ಕೆ ವಿನಿಯೋಗಿಸಿದನೆಂದು ಪ್ರತೀತಿ. ಶ್ರೀನಗರದ ಬಳಿಯ ಕಶ್-ಇ-ಸುಲೈಮಾನ್ ಬೆಟ್ಟದ ಮೇಲಿರುವ ಶಂಕರಾಚಾರ್ಯ (ಜೇಷ್ಠೇಶ) ದೇವಾಲಯ ಪ್ರಾಯಶಃ ಕಾರ್ಕೋಟ ಶೈಲಿಯ ಅತ್ಯಂತ ಪ್ರಾಚೀನ ಕಟ್ಟಡ. ಅಷ್ಟಭುಜಾಕೃತಿಯ ಜಗತಿಯ ಮೇಲೆ ನಿಂತಿರುವ ಮಧ್ಯಭಾರತದ ಗುಡಿಗಳ ಶಿಖರಗಳಂತಿರುವ ಈ ಗುಡಿ ದೊಡ್ಡದಾದರೂ ಕಲೆಯ ದೃಷ್ಟಿಯಲ್ಲಿ ಬಹು ಒರಟು. ಆದರೂ ಮುಂದೆ ಕಾಶ್ಮೀರ ವಾಸ್ತುಶೈಲಿಯಲ್ಲಿ ಪ್ರಚುರವಾದ ಕೆಲವು ಅಂಶಗಳ ಉಗಮ ಇಲ್ಲಿ ಕಾಣುತ್ತದೆ. ಪಾಂಪುರ್ ಬಳಿಯ ಲೋದುವ್‌ನ (ಪ್ರಾಯಶಃ ಪ್ರಾಚೀನ ಲಲಿತಪುರ) ರುದ್ರೇಶ ದೇವಾಲಯ ಗಾಂಧಾರ ವಾಸ್ತುಶಿಲ್ಪ ರೀತಿಯದು. 14.6ಮೀ ಚೌಕದ ಜಗತಿಯ ಮೇಲೆ 8.5ಮೀ ಚೌಕದ ಈ ಗುಡಿಯ ಒಳಭಾಗ ವೃತ್ತಾಕಾರವಾದ್ದು. ಮುಂದೆ ಕುದುರೆಲಾಳದ ಆಕೃತಿಯ ತಲೆ ಇರುವ ದ್ವಾರವಿದೆ. ಗುಡಿಯ ಚಾವಣಿ ಉಳಿದಿಲ್ಲವಾದರೂ ದುಂಡನೆಯ ಮರದ ಹಂಜರ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಸಮೀಪದ ನೋರ್ವಾದಲ್ಲೂ ಇದೇ ರೀತಿಯ ಇನ್ನೊಂದು ದೇವಾಲಯ ಇದೆ. ಇವು ಲಲಿತಾದಿತ್ಯನ ಆಳ್ವಿಕೆಯ ಮೊದಲ ಭಾಗದಲ್ಲಿ ಕಟ್ಟಿದವಿರಬಹುದು.

ನಾಜೂಕಿನ ಕಸೂತಿ ಕೆಲಸ

ಚೀನದ ಆಸ್ಥಾನದಲ್ಲಿದ್ದು ಅನಂತರ ಲಲಿತಾದಿತ್ಯನ ಪ್ರಧಾನಿಯಾದ ಚಂಕುಣ ಕಾಶ್ಮೀರದ ವಾಸ್ತುಶಿಲ್ಪದಲ್ಲಿ ಕೆಲವು ಹೊಸ ಅಂಶಗಳನ್ನು ಅಳವಡಿಸಿದ. ಇವನ ಕಾಲದಲ್ಲಿ ಕಟ್ಟಿದ ಗುಪ್ತಶೈಲಿಯ ಸ್ತೂಪಗಳ ಅಲಂಕರಣದಲ್ಲಿ ಗುಪ್ತ ಶೈಲಿಯ ಬುದ್ಧವಿಗ್ರಹಗಳು ಅರೆಚೀನೀ ರೀತಿಯ ಬೋಧಿಸತ್ತ್ವ ವಿಗ್ರಹಗಳೂ ಮಿಳಿತವಾಗಿವೆ. ಬೋಧಿಸತ್ತ್ವ ವಿಗ್ರಹಗಳಲ್ಲಿ ಚೀನದ ವೀ ಮತ್ತು ಕಾಂಗ್ ಶೈಲಿಗಳ ಸಂಬಂಧವನ್ನು ಗುರುತಿಸಬಹುದು. ಲಲಿತಾದಿತ್ಯ ಪರಿಹಾಸಪುರವೆಂಬ (ಈಗಿನ ಪರಸ್ಪೋರ್) ಹೊಸ ರಾಜಧಾನಿಯನ್ನು ನಿರ್ಮಿಸಿದಾಗ ಅಲ್ಲಿ ಚಂಕುಣ ರಾಜ ವಿಹಾರವೆಂಬ ಸಂಘಾರಾಮವನ್ನೂ ಚೈತ್ಯ ಮತ್ತು ಸ್ತೂಪವನ್ನೂ ಕಟ್ಟಿಸಿದ. ಇಲ್ಲಿಯ ಸ್ತೂಪ ಗಾಂಧಾರ ಶೈಲಿಯದಾದರೂ ಮುಂಭಾಗದಲ್ಲಿ ಬಾಮಿಯನ್ ರೀತಿಯ ಬೃಹತ್ ಬುದ್ಧವಿಗ್ರಹಗಳನ್ನೂ ಟಾಂಗ್ ಶೈಲಿಯ ಬೋಧಿಸತ್ತ್ವ ವಿಗ್ರಹಗಳನ್ನೂ ಗಾಂಧಾರ ರೀತಿಯ ವಿನ್ಯಾಸಗಳನ್ನೂ ಅಲಂಕರಣಕ್ಕಾಗಿ ಬಳಸಲಾಗಿದೆ. ಹೀಗಾಗಿ ಇಲ್ಲಿ ಹಲವು ಶೈಲಿಗಳ ಮಿಶ್ರಣವನ್ನು ಕಾಣಬಹುದು. ಇವು ಸು.747ಕ್ಕಿಂತ ಹಿಂದಿನವು.

ಲಲಿತಾದಿತ್ಯನ ಕಾಲಕ್ಕೆ ಸೇರಿದ ಅನಂತರದ ದೇವಾಲಯಗಳಲ್ಲಿ ಬೈಜ಼ಾಂಟಿಯನ್ ಮತ್ತು ಸಿರಿಯನ್–ರೋಮನ್ ಶೈಲಿಯ ಅಂಶಗಳು ಎದ್ದು ಕಾಣುತ್ತವೆ. ಮಾರ್ತಾಂಡದಲ್ಲಿರುವ ಸೂರ್ಯದೇವಾಲಯ ಇದಕ್ಕೆ ಉದಾಹರಣೆ. ಎರಡೂ ಕಡೆ ಚಿಕ್ಕ ಗುಡಿಗಳಿರುವ ಚೌಕಾಕಾರದ ಈ ದೇವಾಲಯ ವಿಶಾಲವಾದ ಜಗತಿಯ ಮೇಲೆ ಇದೆ. ಗಾರೆ ಮತ್ತು ಬೆಣೆಯ ಉಪಯೋಗ, ದುಂಡು ಕಮಾನುಗಳು, ಪರಸ್ಪರ ಕತ್ತರಿಸುವಂತೆ ಒಂದರ ಮೇಲೊಂದು ಎತ್ತಿರುವ ಚೌಕಗಳ ಭುವನೇಶ್ವರಿ, ಡೋರಿಕ್ ಸ್ತಂಭಗಳು, ಪಟ್ಟಿಕೆ ಮತ್ತು ಕೋಷ್ಠಗಳನ್ನೊಳಗೊಂಡಿರುವ ಕಾರಿಂತಿಯನ್ ಅರೆಗಂಬಗಳು ಮುಂತಾದ ರೋಮನ್ ವಾಸ್ತು ಅಂಶಗಳೂ ಸಿರಿಯದ ವಾಸ್ತುವಿನ ರೀತಿಯ ದೊಡ್ಡ ಕಪೋತಗಳುಳ್ಳ ಕಿಟಕಿಗಳೂ, ಬೈಜ಼ಾಂಟಿಯನ್ ರೀತಿಯ ಮುಂಚಾಚಿದ ತಲೆಯ ಅಲಂಕರಣವಿರುವ ತ್ರಿಕೋಣಪಟ್ಟಿಕೆಗಳೂ ಈ ದೇವಾಲಯದಲ್ಲಿವೆ. ಈ ಕಾಲದಲ್ಲಿ ಸಿರಿಯ ಮತ್ತು ಏಷ್ಯ ಮೈನರ್ ಪ್ರದೇಶಗಳು ಅರಬರ ಆಕ್ರಮಣಕ್ಕೆ ಒಳಗಾದ್ದರಿಂದ, ಅಲ್ಲಿಯ ಶಿಲ್ಪಿಗಳಿಗೆ ಅಲ್ಲಿ ಆಸರೆ ದೊರೆಯದೆ ಅಲ್ಲಿಯವರು ಕಾಶ್ಮೀರದೆಡೆಗೆ ಬಂದಿರಬಹುದೆಂದೂ ಕಾಶ್ಮೀರದ ಕಲೆಯಲ್ಲಿಯ ಈ ಪಾಶ್ಚಾತ್ಯ ಪ್ರಭಾವಕ್ಕೆ ಅವರೇ ಕಾರಣರೆಂದೂ ಅಭಿಪ್ರಾಯವಿದೆ. ಆದರೆ ಮಾರ್ತಾಂಡದ ಮೂರ್ತಿಶಿಲ್ಪ ಬಹುತೇಕ ಗುಪ್ತಶೈಲಿಯಲ್ಲಿರುವುದು ಗಮನಾರ್ಹ. ಸಮಕಾಲೀನ ಕಲೆಯಲ್ಲಿಯ ರೋಮನ್ ಪ್ರಭಾವ ಪರಿಹಾಸಪುರದ ಅವಶೇಷಗಳಲ್ಲಿ ಎದ್ದು ಕಾಣುತ್ತದೆ. ಲಲಿತಾದಿತ್ಯನ ಕಾಲದ ದೇವಾಲಯಗಳು ವಂಗಥ್, ಪಂದ್ರೆಥಾನ್, ನರಸ್ತಾನ್ ಮುಂತಾದ ಎಡೆಗಳಲ್ಲೂ ಇವೆ. ಗುಪ್ತ ರೀತಿಯ ಅಧಿಷ್ಠಾನ, ಡೋರಿಕ್ ಅಥವಾ ಕಾರಿಂತಿಯನ್ ರೀತಿಯ ಕಂಬಗಳು ಮತ್ತು ಅರೆಗಂಬಗಳು, ಇಳಿಕಪೋತದ ಕೆಳಗಿರುವ ತ್ರಿಪತ್ರ ಕಮಾನು ಮತ್ತು ದ್ವಿಪಿರಮಿಡ್ಡಿನಂತಿರುವ ಚಾವಣಿ–ಇವು ಕಾಶ್ಮೀರದ ಕಾರ್ಕೋಟ ವಾಸ್ತುಶೈಲಿಯ ಸಾಮಾನ್ಯ ಲಕ್ಷಣಗಳು. ಈ ಕಾಲದ ಶಿಲ್ಪಗಳು ಹೆಚ್ಚಿಲ್ಲವಾದರೂ, ಅವುಗಳಲ್ಲಿ ಗುಪ್ತ, ಗಾಂಧಾರ ಮತ್ತು ರೋಮನ್ ಅಂಶಗಳನ್ನು ಕಾಣಬಹುದು.

ಕಾರ್ಕೋಟ ವಂಶದ ಜಯಾಪೀಡ ಜಯಪುರವೆಂಬ ರಾಜಧಾನಿಯ ನಿರ್ಮಾತ. ಇಲ್ಲಿಯ ಅವಶೇಷಗಳಲ್ಲಿ ಅನೇಕ ದೇವಾಲಯಗಳ ಉಳಿಕೆಗಳಿವೆ. ಇವುಗಳಲ್ಲಿ ಲಲಿತಾದಿತ್ಯನ ಕಾಲದ್ದಕ್ಕಿಂತಲೂ ಶಕ್ತಿಯುತವೂ ಪರಿಷ್ಕೃತವೂ ಆದ ಕಲಾಶೈಲಿಯನ್ನು ಗುರುತಿಸಬಹುದು. ಕಾರ್ಕೋಟ ವಂಶದ ಕೊನೆಯ ಕಾಲದ ಕಟ್ಟಡಗಳಲ್ಲಿ ಪದ್ಮಪುರದ (ಈಗಿನ ಪಾಂಪುರ್) ಪದ್ಮಸ್ವಾಮಿ ದೇವಾಲಯ 9ನೆಯ ಶತಮಾನದ ಆದಿಭಾಗಕ್ಕೆ ಸೇರಿದ್ದು.

ಕಾರ್ಕೋಟರ ಅನಂತರ ಆಳಿದ ಉತ್ಪಲ ವಂಶದ ಕಾಲ ಕಾಶ್ಮೀರದ ವಾಸ್ತುಶಿಲ್ಪ ಇತಿಹಾಸದ ಮತ್ತೊಂದು ವೈಭವಯುಗ. ಈ ವಂಶದ ಅವಂತಿವರ್ಮ (855–83) ಅವಂತಿಪುರದ ಅವಂತಿಸ್ವಾಮಿ ಎಂಬ ವಿಷ್ಣುದೇವಾಲಯವನ್ನೂ ಅವಂತೀಶ್ವರ ಎಂಬ ಶಿವದೇವಾಲಯವನ್ನೂ ನಿರ್ಮಿಸಿದ. ವಿಶಾಲ ಪ್ರಾಂಗಣದ ಮಧ್ಯೆ ಜಗತಿಯ ಮೇಲೆ ಕಟ್ಟಿರುವ ಈ ದೇವಾಲಯಗಳ ಸುತ್ತಲೂ ನಾಲ್ಕು ಚಿಕ್ಕ ಗುಡಿಗಳಿವೆ. ಇವು ಪಂಚಾಯತನ ರೀತಿಯವು. ಇಲ್ಲಿಯ ವಾಸ್ತುವಿನ್ಯಾಸ ಲಲಿತಾದಿತ್ಯನ ಕಾಲದವುಗಳಿಗಿಂತ ಹೆಚ್ಚು ಪರಿಷ್ಕೃತ, ಅಲಂಕಾರಯುತ. ಅಲಂಕರಣದಲ್ಲಿ ಸಸ್ಯಾನೀಯ ಅಂಶಗಳು ಹೆಚ್ಚು. ಇಲ್ಲಿಯ ಶಿಲ್ಪಗಳು ಹಿಂದಿನವುಗಳಿಗಿಂತ ಉತ್ತಮವೂ ಹೆಚ್ಚು ಶಕ್ತಿಯುತವೂ ಆಗಿವೆ. ದೇವ ಮತ್ತು ಮಾನವರ ನಿರೂಪಣೆಯಲ್ಲಿ ಗಾಂಭೀರ್ಯ ಎದ್ದುಕಾಣುತ್ತದೆ. ಶಂಕರವರ್ಮ (883–902) ಅನೇಕ ಪ್ರಾಚೀನ ದೇವಾಲಯಗಳನ್ನು ಒಡೆದು ಅವನ್ನು ತನ್ನ ಕಟ್ಟಡಗಳಿಗಾಗಿ ಬಳಸಿಕೊಂಡ. ಶಂಕರಪುರದಲ್ಲಿರುವ ಶಂಕರ, ಗೌರೀಶ್ವರ ಮತ್ತು ಸುಗಂಧೇಶ್ವರ ದೇವಾಲಯಗಳು ಆ ಕಾಲದ ಕೃತಿಗಳಲ್ಲಿ ಮುಖ್ಯವಾದುವು. ಶಂಕರವರ್ಮನ ಅನಂತರದ ಕಾಲವು ಕಾಶ್ಮೀರದ ಇತಿಹಾಸದಲ್ಲಿ ಘೋರಯುಗ. ಅರಾಜಕತೆಯೂ ಅನೀತಿಯೂ ಪ್ರಬಲಿಸಿದ್ದ ಆ ಕಾಲದಲ್ಲೂ ವಾಸ್ತುಶಿಲ್ಪ ಮುಂದುವರಿದರೂ ಆಗಿನ ಕೃತಿಗಳಲ್ಲಿ ಹೆಚ್ಚಿನವು ಸುಲಭದ ದಾರುಕೃತಿಗಳು. ಉತ್ಪಲ ಕಲೆಯ ಕಾಲಿಕ ವ್ಯಾಪ್ತಿ ಹೆಚ್ಚಿಲ್ಲವಾದರೂ ಅದರ ಪ್ರಭಾವವನ್ನು ಗಿಲ್ಗಿಟ್, ಆಗ್ನೇಯ ಹಿಮಾಲಯ, ಜಮ್ಮು ಮತ್ತು ಕಾಶ್ಮೀರದ ಪ್ರಾಚೀನ ಹಿಂದೂ ವಾಸ್ತುಶಿಲ್ಪದ ಇತಿಹಾಸದ ಕಡೆಯ ಅಧ್ಯಾಯವೆನ್ನಬಹುದು. ಈ ಕಾಲದ ಶಿಲಾ ದೇವಾಲಯಗಳು ಬುಮಜುವ್, ಪಂದ್ರೆಥಾನ್, ಜ಼ರಿಬಲ್, ಕೋಥೇರ್, ಪಾಯರ್, ಮಾಮಲ್, ಗರೂರ್ ಮುಂತಾದೆಡೆಗಳಲ್ಲಿವೆ. ದೇವಾಲಯಗಳ ವಿನ್ಯಾಸ ಕ್ರಮೇಣ ಸರಳವಾಯಿತಲ್ಲದೆ ಅವುಗಳ ಗಾತ್ರವೂ ಚಿಕ್ಕದಾಯಿತು, ಅಲಂಕರಣದಲ್ಲೂ ಇದೇ ರೀತಿಯ ಬಡತನ ಕಾಣಿಸಿಕೊಳ್ಳುತ್ತದೆ. ಪಂದ್ರೆಥಾನ್‌ನಲ್ಲಿರುವ ರಿಲ್ಹಣೇಶ್ವರ ದೇವಾಲಯ (1135) ಈ ಶೈಲಿಗೆ ಒಳ್ಳೆಯ ಉದಾಹರಣೆ. ಶಿಲಾದೇವಾಲಯಗಳಿಗಿಂತ ಮರದ ಗುಡಿಗಳ ರಚನೆ ಹೆಚ್ಚಿದ್ದು ಈ ಕಾಲದ ವೈಶಿಷ್ಟ್ಯ. ಕಾಶ್ಮೀರ ಕಣಿವೆಯಲ್ಲಿಯ ಈ ಕಾಲದ ಮರದ ದೇವಾಲಯಗಳು ಬಹುಮಟ್ಟಿಗೆ ನಷ್ಟವಾಗಿದ್ದರೂ ಈ ಪ್ರದೇಶದ ಹೊರಗೆ ಇದೇ ಶೈಲಿಯಲ್ಲಿ ಕಟ್ಟಿದ ಮರದ ರಚನೆಗಳು ಉಳಿದಿವೆ. ಚಂಬಾದ ಮಿರ್ಕುಲ–ಉದಯಪುರ್‌ದಲ್ಲಿರುವ ಕಾಳಿ ದೇವಾಲಯ, ಪಶ್ಚಿಮ ಟಿಬೆಟ್ಟಿನ ಗುಗೆ ಭಾಗದಲ್ಲಿರುವ ತ್ಸಪರಂಗ್‌ನ ಬೌದ್ಧ ಗುಡಿಗಳಲ್ಲಿರುವ ಕೆತ್ತನೆಗಳು, ಸ್ಥಿತಿಯ ಕೋಲುಂಗ್ ಮತ್ತು ಲ್ಹಕುನ್, ಲಡಾಕ್‌ನ ಅಲಿ ಮುಂತಾದ ಎಡೆಗಳಲ್ಲಿರುವ ದಾರುಕೃತಿಗಳು ಈ ರೀತಿಯವು. ಇವು ಸಮಕಾಲೀನ ಕಾಶ್ಮೀರ ವಾಸ್ತುಶಿಲ್ಪದ ಬಗ್ಗೆ ಬೆಳಕು ಚೆಲ್ಲುತ್ತವೆ. ಜಮ್ಮು–ಕಾಶ್ಮೀರದ ಈ ಕಾಲದ ಹಲವು ಶಿಲ್ಪಕೃತಿಗಳು ಶ್ರೀನಗರದ ವಸ್ತು ಸಂಗ್ರಹಾಲಯದಲ್ಲಿವೆ. ವಿಚಿತ್ರ ಕೋಷ್ಠಗಳಲ್ಲೋ ಸುತ್ತುವರಿದ ಬಳ್ಳಿಯಿಂದೆದ್ದ ಕಮಲಗಳ ಮೇಲೋ ನಿರೂಪಿಸಿದ ಮೂರ್ತಿಗಳು ಮತ್ತು ಅತಿಯಾದ ಕುಸುರಿಕೆಲಸ–ಇವು ಈ ಕಾಲದ ಕಟ್ಟಡಗಳ ಅಲಂಕರಣಶಿಲ್ಪಗಳ ವೈಶಿಷ್ಟ್ಯ. ಮೂರ್ತಿಶಿಲ್ಪಗಳು ಎಚ್ಚರಿಕೆಯಿಂದ ಮಾಡಿದವಾದರೂ ಅವುಗಳಲ್ಲಿ ಅಂಗಾಂಗ ಪ್ರಮಾಣ ವ್ಯತ್ಯಾಸವಾಗಿರುವುದಲ್ಲದೆ, ಮುಖ ಸಪ್ಪೆಯಾಗಿಯೂ ಸ್ವಲ್ಪ ಉಬ್ಬಿಕೊಂಡೂ ಇರುತ್ತದೆ. ಈ ದೋಷಗಳಿದ್ದರೂ ಈ ಕಾಲದಲ್ಲಿ ಕಾಶ್ಮೀರದ ಅನೇಕ ಶಿಲ್ಪಿಗಳನ್ನು ಟಿಬೆಟ್ಟಿನ ಲಾಮಾಗಳು ಆಹ್ವಾನಿಸುತ್ತಿದ್ದುದರಿಂದ ಈ ಇಳಿಮುಖ ಶಿಲ್ಪಶೈಲಿಯೇ ಮುಂದೆ ಟಿಬೆಟ್ಟಿನ ಲಾಮಾ ಪಂಥೀಯ ಶಿಲ್ಪಗಳಲ್ಲಿ ಬೇರೂರಿತು.

ಕಾಶ್ಮೀರದಲ್ಲಿ ಇಸ್ಲಾಮೀ ಪ್ರಭುತ್ವ ಪ್ರಾರಂಭವಾದ್ದು 1339ರಲ್ಲಿ. ಆದರೆ 16ನೆಯ ಶತಮಾನದ ಅಂತ್ಯದಲ್ಲಿ ಮೊಗಲರ ಆಳ್ವಿಕೆ ಆರಂಭವಾಗುವವರೆಗೆ ಅಲ್ಲಿಯ ವಾಸ್ತುಶೈಲಿಯಲ್ಲಿ ಗಮನಾರ್ಹ ಬದಲಾವಣೆಯೇನೂ ಆಗಲಿಲ್ಲ. ಕಾಶ್ಮೀರ ಸುಲ್ತಾನರ ಹೆಚ್ಚು ಕಟ್ಟಡಗಳೆಲ್ಲ ಮರದವಾದ್ದರಿಂದ ಅವು ಯಾವುವೂ ಉಳಿದಿಲ್ಲ. ಆದರೆ ಶ್ರೀನಗರದಲ್ಲಿರುವ ಜಾಮಿ ಮಸೀದಿ, ಷಾಹಾಮಾದಾನ್‌ನ ಗೋರಿ–ಮಸೀದಿ ಮತ್ತು ಪಾಂಪುರ್‌ನಲ್ಲಿರುವ ಮಸೀದಿಗಳು ಅನಂತರ ನವೀಕೃತವಾಗಿದ್ದರೂ ಹೆಚ್ಚು ಕಡಿಮೆ ಹಳೆಯ ವಿನ್ಯಾಸವನ್ನೇ ಉಳಿಸಿಕೊಂಡಿರುವುದರಿಂದ ತತ್ಕಾಲೀನ ವಾಸ್ತುರೀತಿಯ ಅಧ್ಯಯನಕ್ಕೆ ಉಪಯುಕ್ತವಾಗಿವೆ. ಈ ಕಟ್ಟಡಗಳು ವಿಶೇಷವಾಗಿ ಚೌಕಾಕಾರದವು. ಮಧ್ಯೆ ಒಂದು ಅಥವಾ ಎರಡು ಅಂತಸ್ತುಗಳ, ಕೆಲವೊಮ್ಮೆ ನಾಲ್ಕು ಕಂಬಗಳ ಮೇಲೆ ನಿಂತ, ಹಜಾರಗಳು ಇರುತ್ತವೆ. ಒಳಭಾಗದಲ್ಲಿ ಸುತ್ತುಗೋಡೆಗಳಿಗೆ ಸೇರಿದ ಹಾಗೆ ಉಗ್ರಾಣ ಕೋಣೆಗಳೂ ಕೆಲವು ಕಟ್ಟಡಗಳಲ್ಲಿವೆ. ಚಾವಣಿ ಸ್ವಲ್ಪ ಮಾತ್ರ ಇಳಿಜಾರಾಗಿರುತ್ತದೆ. ಮೂಲೆಗಳಲ್ಲಿ ಘಂಟಾಕೃತಿಯ ಅಲಂಕರಣವಿರುತ್ತದೆ. ಚಾವಣಿಯ ಮೇಲೆ ಮಧ್ಯದಲ್ಲಿ ಕಲಶಾಕೃತಿಯ ಮಜೀನ್ ಇರುತ್ತದೆ. ಈ ಕಟ್ಟಡಗಳು ಇಸ್ಲಾಮ್ ಮತೀಯವಾಗಿದ್ದರೂ ಇವುಗಳಲ್ಲಿ ಕಾಶ್ಮೀರದ ಪ್ರಾಚೀನ ಹಿಂದೂ ಬೌದ್ಧ ವಾಸ್ತುಸಂಪ್ರದಾಯವೇ ಮುಂದುವರಿದಿರುವುದನ್ನು ಗುರುತಿಸಬಹುದು. ಅಲ್ಲದೆ ಇಲ್ಲಿಯ ಕೆಲವು ಜ಼ಿಯರಾಗಳನ್ನು ಹಿಂದೂ ದೇವಾಲಯಗಳ ಅಡಿಪಾಯದ ಮೇಲೆ ಕಟ್ಟಿರುವುದರಿಂದ ಅವು ಆ ದೇವಾಲಯಗಳ ವಿನ್ಯಾಸವನ್ನೇ ಅನುಸರಿಸುತ್ತವೆ.

1585ರಲ್ಲಿ ಅಕ್ಬರ್ ಕಾಶ್ಮೀರವನ್ನು ಆಕ್ರಮಿಸಿದ ಮೇಲೆ ಈ ಪ್ರದೇಶದಲ್ಲಿ ಮೊಗಲ್ ಶೈಲಿಯ ಕಟ್ಟಡಗಳು ನಿರ್ಮಿತವಾದುವು. 1589–99ರಲ್ಲಿ ಹರಿ ಪರ್ವತದ ಮೇಲೆ ಅಕ್ಬರ್ ಒಂದು ಕೋಟೆ ಕಟ್ಟಿಸಿದ. 1619ರ ಅನಂತರ ಜಹಾಂಗೀರ್ ಪೀರ್ ಪಂಜಾಲ್ ಕಣಿವೆಯ ಮುಖ್ಯರಸ್ತೆಯ ಅಕ್ಕಪಕ್ಕಗಳಲ್ಲಿ ನೂರ್‌ಮಹಲ್, ಸೈದಾಬಾದ್ ಮುಂತಾದೆಡೆಗಳಲ್ಲಿ ಸರಾಯ್‌ಗಳನ್ನು ಕಟ್ಟಿಸಿದ. ಶ್ರೀನಗರದ ಬಳಿ ಷಾಲಿಮಾರ್ ಉದ್ಯಾನವನ್ನೂ ವೇರಿನಾಗ್‌ನಲ್ಲಿ ಸ್ನಾನಕೊಳವನ್ನೂ ಅಚಾಬಲ್, ಮಾನಸಬಲ್, ಗಂಧರ್‌ಬಲ್‌ಗಳಲ್ಲಿ ಉದ್ಯಾನಗಳನ್ನೂ ನಿರ್ಮಿಸಿದ. ಶ್ರೀನಗರದ ಪತ್ಥರ್ ಮಸೀದಿಯನ್ನು ನೂರ್‌ಜಹಾನ್ ಕಟ್ಟಿಸಿದಳು. ಚಶ್ಮ–ಇ–ಷಾಹಿಯನ್ನು ಷಾಹಜಹಾನ್ 1632–33ರಲ್ಲಿ ನಿರ್ಮಿಸಿದ. ಯುವರಾಜ ದಾರಾ ಶಿಕೋ 1644ರಲ್ಲಿ ಶ್ರೀನಗರದ ಪರೀಮಹಲನ್ನೂ ಹರಿಪರ್ವತದಲ್ಲಿ ಒಂದು ಮಸೀದಿಯನ್ನೂ ಕಟ್ಟಿಸಿದ. ಇವೆಲ್ಲ ಮೊಗಲ್ ವಾಸ್ತುಶೈಲಿಯಲ್ಲೇ ಇವೆ. ಇವುಗಳಲ್ಲಿ ಮುಖ್ಯವಾದ್ದು ಕಾಶ್ಮೀರದಲ್ಲೇ ದೊಡ್ಡದಾದ ಪತ್ಥರ್ ಮಸೀದಿ. ಇದರಲ್ಲಿ 27 ಗುಮ್ಮಟಗಳೂ, ಮುಂದೆ ಒಂಬತ್ತು ಕಮಾನುಗಳೂ ಇವೆ. ಇದರದು ಪರ್ಷಿಯನ್ ಮಾದರಿ. ಕಟ್ಟಡವನ್ನು ಪೂರ್ತಿಯಾಗಿ ಕಂದುಬಣ್ಣದ ಸುಣ್ಣಕಲ್ಲಿನಲ್ಲಿ ಕಟ್ಟಲಾಗಿದೆ. ಭಾರತದಲ್ಲೇ ಪ್ರಪ್ರಥಮವಾಗಿ, ಹಲ್ಲುಹಲ್ಲಿನ ಕಮಾನನ್ನು ಇಲ್ಲಿ ರಚಿಸಲಾಗಿದೆ.

ಹರಿಪರ್ವತದ ಮೇಲೆ ಈಗ ಇರುವ ಕೋಟೆಯನ್ನು 18ನೆಯ ಶತಮಾನದಲ್ಲಿ, ಕಾಶ್ಮೀರ ಆಫ್ಘನ್ ರಾಜರ ಆಳ್ವಿಕೆಗೆ ಒಳಪಟ್ಟಿದ್ದಾಗ ಕಟ್ಟಲಾಯಿತು. ಆ ಕಾಲದಲ್ಲಿ ಶ್ರೀನಗರದ ಅನೇಕ ಕಟ್ಟಡಗಳು ದುರಸ್ತಿಗೊಂಡವು. ಡೋಗ್ರಾ ಅರಸರ ಕಾಲದ ಕಾಶ್ಮೀರ ವಾಸ್ತುಕಲೆಯಲ್ಲಿ ಭಾರತೀಯ, ಆಫ್ಘನ್, ಸಿಖ್ ಮತ್ತು ಕಾಂಗ್ರಾ–ರಾಜಸ್ಥಾನಗಳ ಅಂಶಗಳನ್ನು ಕಾಣಬಹುದು. ಆದರೆ ಶೇರ್ ಗಡಿಯಲ್ಲಿ ಕಟ್ಟಿರುವ ಬೇಸಗೆ ಅರಮನೆಯೊಂದೇ ಈ ಕಾಲದ ಹೆಸರಿಸಬಹುದಾದ ಕಟ್ಟಡ. ಈ ಕಾಲದಲ್ಲಿ ಲಡಾಕ್ ಕಾಶ್ಮೀರದಲ್ಲಿ ಸೇರಿದ್ದರಿಂದ ಅಲ್ಲಿ ಹರಡಿದ್ದ ಚೀನೀ ಶಿಲ್ಪಕಲೆ ಇಲ್ಲೂ ಪ್ರಸಾರಗೊಂಡಿತು. ಈ ಪ್ರಭಾವ ಹೆಚ್ಚಾಗಿ ಕಾಶ್ಮೀರದ ಮರದ ಕೆತ್ತನೆಯಲ್ಲಿ ಕಂಡುಬರುತ್ತದೆ.

**ಶಾಸನಗಳು :** ಜಮ್ಮು–ಕಾಶ್ಮೀರಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಶಾಸನಗಳು ಕಡಿಮೆ. ಲಡಾಕ್‌ನ ಖಲಾತ್ಸೆ ಎಂಬಲ್ಲಿ ಖರೋಷ್ಠೀ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿ ಇರುವ ಕುಶಾನ ವರ್ಷ 187ರ ವೀಮ ಕಡ್‌ಫೀಸಿಸ್‌ನ ಶಾಸನವೇ ಅತ್ಯಂತ ಪ್ರಾಚೀನವಾದ್ದು. ಅನಂತರ ದಿದ್ದಾ ರಾಣಿಯಿಂದ ಬೆಳೆದ ಶಾರದಾ ಲಿಪಿಯಲ್ಲಿವೆ. ಇವು ಹೆಚ್ಚಾಗಿ

ದಾನಶಾಸನಗಳು. ಕೆಲವು ಶಾಸನಗಳು ದೇವಾಲಯ ಅಥವಾ ವಿಗ್ರಹಗಳ ಸ್ಥಾಪನೆಯನ್ನು ತಿಳಿಸುತ್ತವೆ. ಅರಿಗೋಮ್ ಎಂಬಲ್ಲಿಯ 1197ರ ಒಂದು ಶಾಸನದಲ್ಲಿ ಇಟ್ಟಿಗೆಯಲ್ಲಿ ಕಟ್ಟಿದ ವಿಹಾರವೊಂದರ ಸ್ಥಾಪನೆಯ ವಿಷಯವಿದೆ. ಆ ಕಾಲದಲ್ಲಿಯ ಶಾಸನಗಳಲ್ಲಿ ಲೌಕಿಕ ವರ್ಷವನ್ನು ನಮೂದಿಸುವುದು ಒಂದು ವಿಶೇಷ. ಕಾಶ್ಮೀರದ ಮುಸ್ಲಿಮ್ ಅರಸರ ಕಾಲದಲ್ಲೂ ಸಂಸ್ಕೃತ ಮತ್ತು ಕಾಶ್ಮೀರೀ ಭಾಷೆಯಲ್ಲಿ, ಶಾರದಾ ಲಿಪಿಯಲ್ಲಿ ಶಾಸನಗಳನ್ನು ಬರೆಯುತ್ತಿದ್ದರು. ಸುಲ್ತಾನ್ ಜೈನುಲ್ ಅಬಿದೀನನ ಆಳ್ವಿಕೆಯಲ್ಲಿ ಕಲಿ ಸಂವತ್ಸರ 4530ರಲ್ಲಿ (ಪ್ರ.ಶ.1428) ಹೊರಡಿಸಲಾದ ಒಂದು ಶಾಸನ ಆಶ್ರಮವೊಂದರ ಸ್ಥಾಪನೆಯ ವಿಷಯವನ್ನು ಕುರಿತದ್ದು. ಆ ಕಾಲದ ಕೆಲವು ಅರಬ್ಬೀ ಶಾಸನಗಳೂ ದೊರಕಿವೆ. ಮೊಗಲರ ಶಾಸನಗಳು ಬಹುಮಟ್ಟಿಗೆ ಪಾರಸೀ ಲಿಪಿ ಮತ್ತು ಭಾಷೆಯವು. ಕಾಶ್ಮೀರದ ಇತಿಹಾಸದ ಬಗ್ಗೆ ವಿಪುಲವಾದ ಗ್ರಂಥಸಾಮಗ್ರಿ ದೊರಕುವುದರಿಂದ ಶಾಸನಗಳಿಂದ ದೊರಕುವ ಸಾಮಗ್ರಿ ಕಡಿಮೆ.

ನಾಣ್ಯಗಳು : ಕಾಶ್ಮೀರದಲ್ಲಿ ಇಂಡೋ-ಗ್ರೀಕ್ ಅರಸರಿಂದ ಇತ್ತೀಚಿನವರೆಗೆ ಆಳಿದ ಎಲ್ಲ ರಾಜವಂಶಗಳ ನಾಣ್ಯಗಳೂ ದೊರಕಿವೆ. ಇಂಡೋ-ಗ್ರೀಕ್ ಅರಸರಾದ ಅಜೆಸ್ ಮತ್ತು ಅಜೆಲೈಸೆಸ್‍ರ ಬೆಳ್ಳಿ ನಾಣ್ಯಗಳು ಬಾರಾಮುಲ ಬಳಿಯೂ ಕನಿಷ್ಕ, ಹುವಿಷ್ಕ ಮುಂತಾದ ಕುಶಾನ ಅರಸರ ನಾಣ್ಯಗಳು ಉಷ್ಕೂರ್, ಹಾರ್ವಾನ್ ಮುಂತಾದ ಸಮಕಾಲೀನ ನಿವೇಶನಗಳಲ್ಲೂ ದೊರಕಿವೆ.

ಕಾಶ್ಮೀರದ್ದೇ ಆದ ಪ್ರತ್ಯೇಕ ನಾಣ್ಯ ಚಲಾವಣೆಗೆ ಬಂದದ್ದು ಮಿಹಿರಗುಲನ ಕಾಲದಲ್ಲಿ. ಇವನ ನಾಣ್ಯಗಳು ಬೆಳ್ಳಿ ಮತ್ತು ತಾಮ್ರದವು. ಇವು ಸಸ್ಸಾನೀಯ ಮಾದರಿಯಲ್ಲಿವೆ. ಬೆಳ್ಳಿಯ ನಾಣ್ಯಗಳ ಮುಂಬದಿಯಲ್ಲಿ ರಾಜನ ತಲೆ, ನಂದಿಯ ಚಿತ್ರವಿರುವ ರಾಜದಂಡ ಮತ್ತು ತ್ರಿಶೂಲವು, ಹಿಂಬದಿಯಲ್ಲಿ ಜಯತು ಮಿಹಿರಗುಲ ಅಥವಾ ಜಯತು ವೃಷಧ್ವಜ ಎಂಬ ಲೇಖವೂ ಇರುತ್ತವೆ. ಕೆಲವು ನಾಣ್ಯಗಳ ಹಿಂಬದಿಯಲ್ಲಿ ಅರ್ಧೋಕ್ಷೋ ದೇವತೆಯ ಚಿತ್ರವಿರುವುದೂ ಉಂಟು. ತಾಮ್ರದ ನಾಣ್ಯಗಳೂ ಸುಮಾರು ಇದೇ ತರಹದವೇ. ಇವನ ಅನಂತರ ಆಳಿದ ತೋರಮಾನ ಮತ್ತು ಪ್ರವರಸೇನರ ನಾಣ್ಯಗಳೂ ಇದೇ ಮಾದರಿಯವೇ. ಆದರೆ ಅವುಗಳ ಮೇಲಣ ಬರೆಹ ಸೂಕ್ತವಾಗಿ ಬದಲಾಗುತ್ತದೆ.

ಕಾರ್ಕೋಟ ಅರಸರ ನಾಣ್ಯಗಳು ತೂಕ ಮತ್ತು ಮಾದರಿಗಳಲ್ಲಿ ಕುಶಾನರ ನಾಣ್ಯಗಳಂತೆ ಇದ್ದರೂ ಅವು ಬಹು ಒರಟು. ಈ ವಂಶದ ದುರ್ಲಭ, ವಿಗ್ರಹ, ಪ್ರತಾಪಾದಿತ್ಯ, ಜಯಾಪೀಡ ಮುಂತಾದವರ ನಾಣ್ಯಗಳ ಮುಂಬದಿಯಲ್ಲಿ ರಾಜನ ತಲೆಯೂ ಹಿಂಬದಿಯಲ್ಲಿ ದೇವಿಯ ವಿಗ್ರಹವೂ ರಾಜನ ಹೆಸರೂ ಇರುತ್ತವೆ.

ಉತ್ಪಲವಂಶದ ಮತ್ತು ಅನಂತರದ ಹಿಂದೂ ರಾಜರ ನಾಣ್ಯಗಳೂ ಇದೇ ರೀತಿಯವು. ಆದರೆ ಇವುಗಳಲ್ಲಿ ರಾಜರ ಹೆಸರು ದಪ್ಪ ಅಕ್ಷರಗಳಲ್ಲಿ ಎರಡೂ ಬದಿಗಳಲ್ಲೂ ಭಾಗಶಃ ಇರುತ್ತದೆ. ಉದಾಹರಣೆಗೆ, ಕ್ಷೇಮಗುಪ್ತನ ನಾಣ್ಯಗಳ ಮುಂಬದಿಯಲ್ಲಿ ಕ್ಷೇಮಗು ಎಂದೂ ಹಿಂಬದಿಯಲ್ಲಿ ಪ್ರದೇವ ಎಂದೂ ಬರೆಯಲಾಗಿದೆ. ಈ ವಂಶದ ಬಹುತೇಕ ಎಲ್ಲ ಅರಸರ ನಾಣ್ಯಗಳೂ ಬೆಳಕಿಗೆ ಬಂದಿವೆ. ಈ ಹಿಂದೂ ಅರಸರ ಪೈಕಿ ಹರ್ಷದೇವ ಹೊರಡಿಸಿದ ನಾಣ್ಯಗಳಲ್ಲಿ ಕೆಲವು ವೈಶಿಷ್ಟ್ಯಗಳುಂಟು. ಇವನು ಕರ್ನಾಟಕದ ನಾಣ್ಯಗಳ ರೀತಿಯಲ್ಲಿ ಮುಂಬದಿಯಲ್ಲಿ ಆನೆಯ ಚಿತ್ರ ಇರುವ ಚಿನ್ನದ ನಾಣ್ಯಗಳನ್ನೂ ಕಾಬೂಲಿನ ಬ್ರಾಹ್ಮಣೀ ಅರಸರ ನಾಣ್ಯಗಳ ರೀತಿಯಲ್ಲಿ ಮುಂಬದಿಯಲ್ಲಿ ಕುದುರೆ ಸವಾರರ ಚಿತ್ರ ಇರುವ ನಾಣ್ಯಗಳನ್ನೂ ಕಾಶ್ಮೀರದಲ್ಲಿ ಚಲಾವಣೆಗೆ ತಂದ.

ಕಾಶ್ಮೀರದ ಮುಸ್ಲಿಮ್ ಅರಸರ ನಾಣ್ಯಗಳು ಬೇರೆ ರೀತಿಯವು. ಇವುಗಳಲ್ಲಿ ಹೆಚ್ಚಿನವು ತಾಮ್ರದವು. ಗುಂಡಗಿನ ಮತ್ತು ಚೌಕಾಕಾರದ ಎರಡೂ ಬಗೆಯ ನಾಣ್ಯಗಳು ಬಳಕೆಯಲ್ಲಿದ್ದುವು. ಹೆಚ್ಚಿನ ನಾಣ್ಯಗಳಲ್ಲಿ ಮುಂಬದಿಯಲ್ಲಿ ಮಧ್ಯೆ ಗಂಟಿರುವ ಒಂದು ಅಡ್ಡಗೆರೆಯೂ ತಳದಲ್ಲಿ ಅರಬ್ಬೀ ಲಿಪಿಯಲ್ಲಿ ರಾಜನ ಹೆಸರೂ ಇರುತ್ತವೆ. ಹಿಂಬದಿಯಲ್ಲಿ ನಾಲ್ಕು ಮೂಲೆಗಳಲ್ಲೂ ಗಂಟುಗಳುಳ್ಳ ಚೌಕವಿದೆ. ನಾಣ್ಯ ಅಚ್ಚಾದ ಸ್ಥಳವೂ ಹೆಸರೂ ಮಧ್ಯದಲ್ಲಿ ಅರಬ್ಬೀ ಲಿಪಿಯಲ್ಲಿದೆ. ಈ ನಾಣ್ಯಗಳಲ್ಲಿ ಹೆಚ್ಚಿನವು ಕಾಶ್ಮೀರದಲ್ಲೇ ಅಚ್ಚಾದ್ದರಿಂದ ಜ಼ರ್ಬ್-ಇ-ಕಾಶ್ಮೀರೀ ರೀತಿಯಲ್ಲಿ ತಮ್ಮ ನಾಣ್ಯಗಳನ್ನಲ್ಲದೆ ತಮ್ಮ ಇತರ ರೀತಿಯ ನಾಣ್ಯಗಳನ್ನೂ ಚಲಾವಣೆಗೆ ತಂದರು.

ಅನಂತರ ಈ ಪ್ರದೇಶ ಪಂಜಾಬಿನ ರಣಜಿತ್ ಸಿಂಗ್, ರಣಬೀರ್ ಸಿಂಗ್ ಮುಂತಾದವರ ಕೈವಶವಾದಾಗ, ಇಲ್ಲಿ ಅವರ ನಾಣ್ಯಗಳು ಚಲಾವಣೆಗೆ ಬಂದುವು. ಇವುಗಳಲ್ಲಿ ಸಾಮಾನ್ಯವಾಗಿ ಮುಂಬದಿಯಲ್ಲಿ ಗುರುಮುಖಿಯಲ್ಲಿ ಅಕಾಲ್ ಸಹಾಇ ಗುರು ನಾನಕ್‍ಜೀ ಎಂದೂ, ಹಿಂಬದಿಯಲ್ಲಿ ನಸ್ತಾಲಿಕ್‍ನಲ್ಲಿ ಜ಼ರ್ಬ್-ಇ-ಕಶ್ಮೀರ್ ಎಂದೂ ಇರುತ್ತವೆ. ಇತ್ತೀಚಿನ ಡೋಗ್ರಾ ಅರಸರ ನಾಣ್ಯಗಳೂ ಸುಮಾರು ಇದೇ ರೀತಿಯವೇ.

ಇವಲ್ಲದೆ ಕಾಶ್ಮೀರದಲ್ಲೇ ಆಫ್ಘನ್ ಮತ್ತು ನೇಪಾಲೀ ರಾಜರ ಕೆಲವು ನಾಣ್ಯಗಳೂ ದೊರಕಿವೆ. (ಎಸ್.ಎನ್.)

**ಜಮ್ಷೆಡ್‍ಪುರ :** ಝಾರ್ಖಂಡ್ ರಾಜ್ಯದ ಸಿಂಘ್‍ಭೂಮ್ ಜಿಲ್ಲೆಯಲ್ಲಿರುವ ಉಕ್ಕು ತಯಾರಿಕೆ ನಗರ. ಇದನ್ನು 'ಸ್ಟೀಲ್ ಸಿಟಿ'(ಉಕ್ಕಿನ ನಗರ) ಎಂದೂ, ಟಾಟಾ ನಗರ ಎಂದೂ, ಟಾಟಾ ಎಂದು ಕರೆಯುತ್ತಾರೆ. ಭಾರತದಲ್ಲಿ ಸುಯೋಜಿತವಾದ ಮೊಟ್ಟಮೊದಲ ಕೈಗಾರಿಕೆಯ ನಗರ ಇದು. ಮುಂಬಯಿ-ನಾಗಪುರ-ಕೋಲ್ಕತ್ತ ರೈಲು ಮಾರ್ಗದಲ್ಲಿ, ಕೋಲ್ಕತ್ತದಿಂದ ಪಶ್ಚಿಮ-ವಾಯವ್ಯಕ್ಕೆ 250 ಕಿಮೀ ದೂರದಲ್ಲಿ ಖನಿಜ ನಿಕ್ಷೇಪಯುಕ್ತವಾದ ಛೋಟಾ ನಾಗಪುರ ಪ್ರಸ್ಥಭೂಮಿಯ ಆಗ್ನೇಯ ಅಂಚಿನ ಬಳಿ, ಉ.ಅ.22°44' ಮತ್ತು ಪೂ.ರೇ. 86°20' ಮೇಲೆ ಇದೆ, ಜನಸಂಖ್ಯೆ 1,337,131(2011). ಸುವರ್ಣರೇಖಾ, ಖಾರ್‍ಖಾಯಿ ಹಾಗೂ ಸಂಜಯ್ ನದಿಗಳ ಸಂಗಮದ ಬಳಿ 75

ತಾತಾ ಉಕ್ಕಿನ (ಟಾಟಾ ಸ್ಟೀಲ್) ಕಾರ್ಖಾನೆ, ಜಮ್ಷೆಡ್‍ಪುರ

ಚ.ಕಿಮೀ ಪ್ರದೇಶದಲ್ಲಿ ನಿರ್ಮಿತವಾಗಿದೆ. ಸಾಕ್ಚಿ ಎಂಬ ಸಣ್ಣ ಹಳ್ಳಿ ಇದ್ದ ಸ್ಥಳದಲ್ಲಿ ಈ ನಗರ ಬೆಳೆದಿದೆ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಾಗಿ ಸ್ಥಳವನ್ನು ಆರಿಸುವುಕ್ಕೆ ಚಂದಾ ಜಿಲ್ಲೆಯ ಮತ್ತು ಮಧ್ಯ ಪ್ರದೇಶದ ದುರ್ಗ್ ಜಿಲ್ಲೆಯ ಕಬ್ಬಿಣ ಅದಿರಿನ ನಿಕ್ಷೇಪಗಳ ಪ್ರದೇಶಗಳನ್ನು ಪರಿಶೋಧಿಸಲಾಯಿತು. ಆದರೆ ಅವಕ್ಕಿಂತ ಜಮ್‍ಷೆಡ್‍ಪುರದ ನಿವೇಶನ ಎಲ್ಲ ರೀತಿಗಳಲ್ಲೂ ಅನುಕೂಲಕರವೆಂದು ವೇದ್ಯವಾಯಿತು. ಕಿಟ್ಟದ ಕಲ್ಲಿದ್ದಲೇ ಮುಂತಾದವನ್ನು ಕೈಗಾರಿಕಾ ನಿವೇಶನಕ್ಕೆ ಸಾಗಿಸುವುದರ ತೊಂದರೆಯ ದೃಷ್ಟಿಯಿಂದ ಆ ನಿವೇಶನಗಳನ್ನು ಕೈಬಿಡಲಾಯಿತು. 1907ರಲ್ಲಿ ಇಲ್ಲಿ ತಾತಾ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸ್ಥಾಪಿತವಾಯಿತು. ಶೀಘ್ರವಾಗಿ ಈ ಕೈಗಾರಿಕೆಯೂ ಇತರ ಸಂಬಂಧಿತ ಕೈಗಾರಿಕೆಗಳೂ ಇಲ್ಲಿ ಬೆಳೆದುವು. ಕಬ್ಬಿಣ-ಉಕ್ಕಿನ ಕಾರ್ಖಾನೆಯ ಸ್ಥಾಪಕರಾದ, ಭಾರತದ

ಜಮ್ಷೆಡ್‍ಪುರದ ಒಂದು ನೋಟ

ಆದ್ಯಪ್ರವರ್ತಕ ಉದ್ಯಮಪತಿಗಳಾದ ಜಮ್ಷೆಡ್‍ಜಿ ನಸರ್‍ವಾಂಜಿ ತಾತಾ ಅವರ ಹೆಸರಿನಲ್ಲಿ ಇದಕ್ಕೆ ಜಮ್ಷೆಡ್‍ಪುರ ಎಂಬ ಹೆಸರು ಬಂದಿದೆ. ಅರಣ್ಯಾವೃತ ಹಾಗೂ ವ್ಯವಸಾಯ ಪ್ರದೇಶದ ನಡುವೆ ಜಮ್ಷೆಡ್ ಪುರ ನಗರ ಒಂದು ಭಾರಿ ಕೈಗಾರಿಕಾ ದ್ವೀಪದಂತಿದೆ. ಬಹುತೇಕ ಆದಿವಾಸಿ ಜನರಿರುವ ಈ ಪ್ರದೇಶ ಬಂಡವಾಳದ ಉದ್ಯಾನದಂತಿದೆ.

ಸನ್ನಿವೇಶದ ದೃಷ್ಟಿಯಿಂದ ಜಮ್ಷೆಡ್‍ಪುರಕ್ಕೆ ಅನೇಕ ಅನುಕೂಲತೆಗಳುಂಟು. ಇಲ್ಲಿಂದ 245 ಕಿಮೀ ದೂರದಲ್ಲಿರುವ ಕೋಲ್ಕತ್ತ ಇದರ ಪ್ರಧಾನ ಬಂದರು. ಇದು ಪೂರ್ವತೀರಕ್ಕೆ ಬಹಳ ಹತ್ತಿರದಲ್ಲಿದೆ. ಕಬ್ಬಿಣ ಮತ್ತು ಉಕ್ಕಿನ ವಸ್ತುಗಳಿಗಾಗಿ ವಿಶಾಲ ಹಾಗೂ ಸಿದ್ಧ ಮಾರುಕಟ್ಟೆಯುಂಟು. ಹೊಸ ಕಾರ್ಖಾನೆಗಳ ಸ್ಥಾಪನೆಗೆ ಅನುಕೂಲವಾದ ಸೂಕ್ತವಾದ

ಭೂಮಿ ಬೇಕಾದಷ್ಟು ಇಲ್ಲಿ ದೊರೆಯುತ್ತದೆ. ಕಬ್ಬಿಣ ಅದಿರಿನ ಗಣಿಗಳುಂಟು. ಕಚ್ಚಾಸಾಮಗ್ರಿಗಳ ದೃಷ್ಟಿಯಿಂದಲೂ ಇದರ ಪ್ರಾಮುಖ್ಯ ಹೆಚ್ಚಿನದು. 110 ಕಿಮೀ ಅಂತರದಲ್ಲೇ ಅವು ಬಹುತೇಕ ಲಭ್ಯವಿವೆ. ಸಿಂಘ್‍ಭೂಮ್‍ನ ಕಬ್ಬಿಣ ಅದಿರಿನ ನಿಕ್ಷೇಪಗಳು ಅಗಾಧ. ಸುಮಾರು

ರಾತ್ರಿಯ ವೇಳೆಯಲ್ಲಿ ತಾತಾ ಉಕ್ಕಿನ ಕಾರ್ಖಾನೆಯ ಒಂದು ದೃಶ್ಯ

270ಕೋಟಿ ಟನ್‍ಗಳಷ್ಟು ಹೆಮಟೈಟ್ ಇದೆಯೆಂಬುದು ಅಂದಾಜು. ಮಿಶ್ರಣ ಲೋಹಗಳ ಪೈಕಿ ಸ್ಥಳೀಯ ಮ್ಯಾಂಗನೀಸ್ ಹೆಚ್ಚು ವೆಚ್ಚದಾಯಕ. ಇದನ್ನು ಮಧ್ಯ ಪ್ರದೇಶದಿಂದ ತರಿಸಿಕೊಳ್ಳಬೇಕು. ಒರಿಸ್ಸದ ಕ್ರೋಮೈಟ್ ಹೆಚ್ಚು ಅಗ್ಗವಾಗಿ ದೊರಕುತ್ತದೆ. ತಾಪಧಾರಕವಾಗಿ (ರಿಫ್ರಾಕ್ಟರಿ) ಉಪಯುಕ್ತವಾದ ಕೈಯನೈಟ್ ಸ್ಥಳೀಯವಾಗಿ ಲಭ್ಯವಿದೆ. ಅಪಟೈಟ್ ಕೂಡ ದೊರಕುತ್ತದೆ. ಝೂರಿಯಾದಲ್ಲಿ ಕಾವು ಝೇಡು, ಮನ್‍ಭೂಮ್‍ನಲ್ಲಿ ಸಿಲಿಕ ದೊರಕುತ್ತವೆ. ತಾಮ್ರ ಭಾರತದಲ್ಲಿ ಹೆಚ್ಚಾಗಿ ಉತ್ಪಾದನೆಯಾಗುವುದಿಲ್ಲ. ಅದೊಂದು ಕೊರತೆಯ ಲೋಹ. ಜಮ್ಷೆಡ್‍ಪುರಕ್ಕೆ 56 ಕಿಮೀ ದೂರದಲ್ಲಿ ಸುವರ್ಣರೇಖಾ ನದಿಯ ದಂಡಗುಂಟ ತಾಮ್ರ ನಿಕ್ಷೇಪಗಳುಂಟು ಇದನ್ನು ಘಟ್ಸಿಲಾದಲ್ಲಿ ಕರಗಿಸಿ ಮನಭಂದರ್‌ದಲ್ಲಿ ಉರುಳೆಗಳನ್ನಾಗಿ ಮಾಡಲಾಗುತ್ತದೆ. ಉತ್ತರಕ್ಕೆ ಮುರಿಯಲ್ಲಿ ಅಲ್ಯೂಮಿನಿಯಂ ಸ್ಥಾವರ (ಪ್ಲಾಂಟ್) ಇದೆ. ಪುರುಲಿಯದಲ್ಲಿ ಪರಿಷ್ಕರಣ ಕೇಂದ್ರವುಂಟು. ದಕ್ಷಿಣಕ್ಕೆ ಒರಿಸ್ಸದ ಬಾಕ್ಸೈಟ್ ನಿಕ್ಷೇಪಗಳಿವೆ. ಬಾಕ್ಸೈಟನ್ನು ಹಿರಾಕುಡ್ ಜಲವಿದ್ಯುತ್ ಕೇಂದ್ರದಲ್ಲಿ ಕರಗಿಸಲಾಗುತ್ತದೆ. ಕಿಟ್ಟಕಲ್ಲಿದ್ದಲು ಮುಖ್ಯವಾಗಿ ಬರುವುದು ದಾಮೋದರ್ ಕಣಿವೆ ಪ್ರದೇಶದಿಂದ. ಸಾಮಗ್ರಿಗಳ ಲಭ್ಯತೆಯ ದೃಷ್ಟಿಯಿಂದ ಜಮ್ಷೆಡ್‍ಪುರಕ್ಕಿಂತ ಒಳ್ಳೆಯ ಸನ್ನಿವೇಶ ಪಡೆದಂಥ ಸ್ಥಳಗಳೂ ಹೆಚ್ಚಿಲ್ಲ. ಕೈಗಾರಿಕೆಗೆ ಬೇಕಾದ ಅಕುಶಲ ಕಾರ್ಮಿಕರು ಸ್ಥಳೀಯ ನಿವಾಸಿಗಳಲ್ಲಿ, ಮುಖ್ಯವಾಗಿ ಸಂತಾಲರಲ್ಲಿ, ದೊರಕುತ್ತಾರೆ. ಹೆಚ್ಚು ಕುಶಲ ಕಾರ್ಮಿಕರು ಭಾರತದ ಎಲ್ಲೆಡೆಗಳಿಂದಲೂ ಮುಖ್ಯವಾಗಿ ಬಂಗಾಲ ಬಿಹಾರಗಳಿಂದ, ಬಂದಿದ್ದಾರೆ.

ಜೆಜೆಆರ್‌ಡಿ ತಾತಾ ಕ್ರೀಡಾಸಮುಚ್ಚಯ

ಕಬ್ಬಿಣದ ಉರುಳೆಗಳು, ವ್ಯವಸಾಯ ಉಪಕರಣಗಳು, ಉಕ್ಕಿನ ತಗಡುಗಳು, ಉಕ್ಕಿನ ತಂತಿ, ಹೊರಜಿಗಳು, ಮುಂತಾದ ಅನೇಕ ಕೈಗಾರಿಕೆಗಳ ಸಂಕೀರ್ಣ ಇದು. ತಾತಾ ಗುಂಪಿನ ಟಾಟಾ ಮೋಟಾರ್ಸ್, ಟಾಟಾ ಪವರ್ ಕಂಪನಿಗಳಲ್ಲದೆ ಲಫಾರ್ಜ್ ಸಿಮೆಂಟ್, ಟೆಲ್ಕಾನ್, ಬಿ.ಓ.ಸಿ ಗ್ಯಾಸಸ್, ಟಾಟಾ ಟೆಕ್ನಾಲಜೀಸ್ ಲಿ.ಟಿ.ಸಿ.ಇ, ಟಿ.ಸಿ.ಎಸ್, ಟಿನ್‍ಪ್ಲೇಟ್ ಮೊದಲಾದ ಹಲವಾರು ದೊಡ್ಡ ಹಾಗೂ ಚಿಕ್ಕ ಕಾರ್ಖಾನೆಗಳಿವೆ. ಜಮ್ಷೆಡ್‍ಪುರವು ಭಾರತದ ಅತಿ ನಿರ್ಮಲವಾದ ನಗರಗಳಲ್ಲಿ ಏಳನೆಯದೆಂದು ಭಾರತ ಸರ್ಕಾರವು ಮಾಡಿದ ಸಮೀಕ್ಷೆಯಿಂದ ತಿಳಿದುಬರುತ್ತದೆ. ಅಲ್ಲದೆ ಅದು ಭಾರತದಲ್ಲಿ ಏಳನೆಯ ಶ್ರೀಮಂತ ನಗರವೆಂದೂ ಒಂದು ಸರ್ವೇಕ್ಷಣೆಯಿಂದ ತಿಳಿದುಬಂದಿದೆ. ಜಮ್ಷೆಡ್‍ಪುರವನ್ನು ದಕ್ಷಿಣ ಏಷ್ಯದಲ್ಲೇ 'ಗ್ಲೋಬಲ್ ಕಾಂಪಾಕ್ಟ್ ಸಿಟಿ' ಗಳಲ್ಲಿ ಒಂದೆಂದು 'ಯುನೈಟೆಡ್ ನೇಷನ್ಸ್' ಆರಿಸಿದೆ. ಸಾಮಾನ್ಯ ಮತ್ತು ವೈದ್ಯಕೀಯ ಕಾಲೇಜುಗಳೂ ರಾಷ್ಟ್ರೀಯ ಲೋಹವಿಜ್ಞಾನ ಪ್ರಯೋಗಶಾಲೆಯೂ ಇಲ್ಲಿ ಇವೆ. (ಬಿ.ಜಿ.ಟಿ.ಎ.)

**ಜಯಂಗೊಂಡಾರ್ :** ತಮಿಳಿನ 96 ಪ್ರಬಂಧಕಾವ್ಯಗಳಲ್ಲೊಂದಾದ ಕಳಿಂಗತ್ತು ಪರಣಿಯೆಂಬ ಕಾವ್ಯದ ಕರ್ತೃ. ಕಾಲ ಪ್ರ.ಶ. 11ನೆಯ ಶತಮಾನ. ಈತ ಹುಟ್ಟಿದ್ದು ತಂಜಾವೂರು ಜಿಲ್ಲೆಯ ನನ್ನಿಲಂ ತಾಲ್ಲೂಕಿನ ದೀಪಂಕುಡಿ ಗ್ರಾಮದಲ್ಲಿ. ಅಂದಿಗೆ ಅದು ಚೋಳನಾಡಿಗೆ ಸೇರಿತ್ತು. ಈತನ ವಂಶ ಹಾಗೂ ಜೀವನದ ಬಗ್ಗೆ ಇದುವರೆಗೆ ಏನೂ ಖಚಿತವಾಗಿ ತಿಳಿದುಬಂದಿಲ್ಲ.

ಜಯಂಗೊಂಡಾರ್ ಮೊದಲ ಕುಲೋತ್ತುಂಗ ಚೋಳನ ಆಸ್ಥಾನಕವಿಯಾಗಿದ್ದು ತನ್ನ ದೊರೆ ಕಳಿಂಗದ ಮೇಲೆ ಯುದ್ಧ ಮಾಡಿ ಗೆದ್ದ ವಿಷಯವನ್ನು ತನ್ನ ಕಾವ್ಯದಲ್ಲಿ ಬಣ್ಣಿಸಿದ್ದಾನೆ. ಪರಣಿಯೆಂದರೆ ಯುದ್ಧದಲ್ಲಿ ಸಾವಿರ ಆನೆಗಳನ್ನು ಗೆದ್ದು ಬಂದವನ ಯಶಸ್ಸನ್ನು ಹೊಗಳುವುದು. ಪರಣಿಯನ್ನು ಕೇಳಿದ ಅರಸ ಒಂದೊಂದು ಹಾಡಿಗೂ ಒಂದೊಂದು ಬಂಗಾರದ ತೆಂಗಿನಕಾಯನ್ನು ಕವಿಗೆ ಬಹುಮಾನವಾಗಿತ್ತನಂತೆ. ಪರಣಿ ಸಾಹಿತ್ಯಪ್ರಕಾರಕ್ಕೆ ತಮಿಳಿನಲ್ಲಿ ಮೊದಲು ಎಡೆಮಾಡಿಕೊಟ್ಟವನು ಈ ಕವಿಯೇ ಎಂದು ಹೇಳಲಾಗಿದೆ.

ಕಳಿಂಗತ್ತುಪರಣಿಯಲ್ಲಿ ಹದಿಮೂರು ಭಾಗಗಳಿವೆ. ಕಾವ್ಯದಲ್ಲಿ ಉದ್ದಕ್ಕೂ ಕವಿಯ ಸುಂದರ ಕಲ್ಪನೆಗಳು, ಮಧುರ ಪ್ರೇಮ, ಶೌರ್ಯ ಸಾಹಸಗಳ ವರ್ಣನೆಗಳು ವಿಪುಲವಾಗಿ ಬರುತ್ತವೆ. ಇದರಲ್ಲಿ ಸಾಮಾನ್ಯವಾಗಿ ಚೋಳ ಅರಸರ ಚರಿತ್ರೆಯನ್ನು ಅದರಲ್ಲೂ ಮುಖ್ಯವಾಗಿ ಕುಲೋತ್ತುಂಗ ಚೋಳನ ಚರಿತ್ರೆಯನ್ನು ಹೇಳಿರುವುದರಿಂದ ಇತಿಹಾಸಜ್ಞರಿಗೂ ಈ ಗ್ರಂಥ ತುಂಬ ಉಪಯುಕ್ತವಾಗಿದೆ. (ವಿ.ಪಿ.ಎ.)

**ಜಯಂತಿ[1] :** ದೇವರ ಅವತಾರದಿನ. ಇತ್ತೀಚೆಗೆ ಮಹಾತ್ಮರ, ಸಾಧುಸಂತರ ಜನ್ಮದಿನಕ್ಕೂ ಈ ಹೆಸರು ಪ್ರಚಲಿತವಾಗಿದೆ. ಜಯಂ ಪುಣ್ಯಂ ಚ ಕುರುತೇ ಜಯಂತೀಮಿತಿ ತಾಂ ವಿದುಃ– ಎಂದು ಸ್ಕಂದಪುರಾಣದಲ್ಲಿ ತಿಳಿಸಿರುವಂತೆ ದೇವರ ಜನ್ಮ ದಿವಸ ಜಯ ಮತ್ತು ಪುಣ್ಯಫಲಪ್ರದವಾದುದರಿಂದ ಇದಕ್ಕೆ ಜಯಂತಿ ಎಂಬ ಹೆಸರು ಅನ್ವರ್ಥವಾಗಿದೆ. ಎಂಟು ವಿಧ ದ್ವಾದಶಿಗಳಲ್ಲಿ ಜಯಂತಿ ಎನ್ನುವುದೂ ಒಂದು.

ಆಯಾ ದೇವತೆಗಳಿಗೆ ಗೊತ್ತಾದ ವೇಳೆಗಳಲ್ಲಿ ನಡೆಸುವ ಪೂಜೆಯೇ ಜಯಂತಿಯ ದಿನದ ಮುಖ್ಯ ಕಾರ್ಯ. ಇದಲ್ಲದೆ ಆಯಾ ಮೂರ್ತಿಯ ಉತ್ಸವವೂ ಅಂದು ವೈಭವದಿಂದ ನಡೆಯುತ್ತದೆ. ಶ್ರೀಕೃಷ್ಣನ ಜನ್ಮದಿವಸಕ್ಕೂ ಜಯಂತಿ ಎನ್ನುವುದು ರೂಢನಾಮವಾಗಿದೆ.

ಜನ್ಮದಿನಾಚರಣೆಯನ್ನು ಅವರವರು ಜನಿಸಿದ ತಿಂಗಳು, ತಿಥಿ, ನಕ್ಷತ್ರ ಮತ್ತು ಜನನವೇಳೆಯನ್ನು ಗಮನಿಸಿ ಗೊತ್ತುಮಾಡಬೇಕೆಂದು ನಿಬಂಧಗ್ರಂಥಗಳಲ್ಲಿ ಉಕ್ತವಾಗಿದೆ. ಕೆಲವು ಜಯಂತಿಗಳಿಗೆ ನಕ್ಷತ್ರವನ್ನು, ಮತ್ತೆ ಕೆಲವಕ್ಕೆ ತಿಥಿಯನ್ನು ಪ್ರಧಾನವಾಗಿ ಗಣನೆಗೆ ತೆಗೆದುಕೊಳ್ಳಬೇಕು. ಶ್ರೀಕೃಷ್ಣಜಯಂತಿಯಲ್ಲಿ ತಿಥಿ, ವಾರ, ನಕ್ಷತ್ರ – ಈ ಮೂರನ್ನೂ ಗಣನೆಗೆ ತೆಗೆದುಕೊಳ್ಳುವುದುಂಟು.

ಇತ್ತೀಚೆಗೆ ನಡೆಸುತ್ತಿರುವ ಕೆಲವು ಮಹಾತ್ಮರ ಜಯಂತಿಗಳಿಗೆ ಆಂಗ್ಲೇಯ ಮಾಸ ಮತ್ತು ತಾರೀಖನ್ನು ಪರಿಗಣಿಸುತ್ತಾರೆ.

ಶ್ರೀವೈಷ್ಣವ ಸಂಪ್ರದಾಯದ ರೀತ್ಯಾ ಆಳ್ವಾರುಗಳು ಮತ್ತು ಕೆಲವು ಮಠಾಧಿಪತಿಗಳ ಜನ್ಮದಿನ ಸಮಾರಂಭವನ್ನು ತಿರುನಕ್ಷತ್ರ ಎಂಬ ಹೆಸರಿನಿಂದ ಆಚರಿಸುತ್ತಾರೆ.

ಮುಖ್ಯವಾದ ಕೆಲವು ಜಯಂತಿಗಳು ಬರುವ ದಿವಸಗಳ ವಿವರಗಳನ್ನೊಳಗೊಂಡ ಪಟ್ಟಿಯೊಂದನ್ನು ಮುಂದೆ ಕೊಟ್ಟಿದೆ.

| | | |
|---|---|---|
| ಶ್ರೀರಾಮನವಮಿ | : | ಚೈತ್ರಮಾಸದ ಶುಕ್ಲಪಕ್ಷದಲ್ಲಿ ನವಮೀ ತಿಥಿ ಮಧ್ಯಾಹ್ನ ಕಾಲದಲ್ಲಿ ಇರುವ ದಿವಸ. |
| ಮತ್ಸ್ಯಜಯಂತಿ | : | ಚೈತ್ರಮಾಸ ಕೃಷ್ಣಪಕ್ಷದ ಪಂಚಮಿ ಸೂರ್ಯೋದಯ ಕಾಲದಿಂದ ಆರು ಘಳಿಗೆಗಳ ಕಾಲ ಇರುವ ದಿವಸ. |
| ಹಯಗ್ರೀವ ಜಯಂತಿ | : | ಶ್ರಾವಣ ಮಾಸದ ಶ್ರವಣ ನಕ್ಷತ್ರ–ಸೂರ್ಯೋದಯವಾದ ಮೇಲೆ 10 ಘಳಿಗೆ ವ್ಯಾಪ್ತಿ ಇರುವ ದಿವಸ. |
| ವಿಖನಚಾರ್ಯರ ಜಯಂತಿ | : | ಹಯಗ್ರೀವ ಜಯಂತಿ ದಿವಸ. |
| ಕಲ್ಕಿ ಜಯಂತಿ | : | ಭಾದ್ರಪದ ಮಾಸ ಶುಕ್ಲಪಕ್ಷದ ದ್ವಿತೀಯ ಉದಯಕಾಲದಲ್ಲಿ ಇರುವ ದಿವಸ. |
| ಪರಶುರಾಮ ಜಯಂತಿ | : | ವೈಶಾಖಮಾಸ ಶುಕ್ಲಪಕ್ಷದ ತೃತೀಯೆ ರಾತ್ರಿ ಮೊದಲ ಯಾಮದಲ್ಲಿ ಇರುವ ದಿವಸ. |

| | |
|---|---|
| ನೃಸಿಂಹ ಜಯಂತಿ | : ವೈಶಾಖಮಾಸ ಶುಕ್ಲಪಕ್ಷದ ಚತುರ್ದಶಿ ಸೂರ್ಯಾಸ್ತ ಕಾಲದಲ್ಲಿ ಇರುವ ದಿವಸ. |
| ವಾಮನ ಜಯಂತಿ | : ಭಾದ್ರಪದ ಮಾಸ ಶುಕ್ಲಪಕ್ಷದ ದ್ವಾದಶಿಯ ಮಧ್ಯಾಹ್ನ ಕಾಲದಲ್ಲಿ ಇರುವ ದಿವಸ. |
| ವಾಲ್ಮೀಕಿ ಜಯಂತಿ | : ಆಶ್ವಯುಜ ಮಾಸದ ಹುಣ್ಣಿಮೆ ದಿವಸ. |
| ಧನ್ವಂತರಿ ಜಯಂತಿ | : ಆಶ್ವಯುಜ ಮಾಸ ಕೃಷ್ಣಪಕ್ಷದ ತ್ರಯೋದಶಿಯ ರಾತ್ರಿ ಮೊದಲ ಯಾಮದಲ್ಲಿರುವ ದಿವಸ. ಇದನ್ನು ಕಾರ್ತಿಕಮಾಸದಲ್ಲಿ ಕೆಲವರು ಆಚರಿಸುತ್ತಾರೆ. |
| ಗೀತಾ ಜಯಂತಿ | : ಮಾರ್ಗಶಿರ ಮಾಸದ ಶುಕ್ಲ ಏಕಾದಶಿಯ ದಿವಸ. |
| ಹನುಮ ಜಯಂತಿ | : ಮಾರ್ಗಶಿರ ಮಾಸದ ಶುಕ್ಲ ತ್ರಯೋದಶಿಯ ಮಧ್ಯಾಹ್ನ ಕಾಲದಲ್ಲಿರುವ ದಿವಸ. |
| ದತ್ತಾತ್ರೇಯ ಜಯಂತಿ | : ಮಾರ್ಗಶಿರ ಮಾಸದ ಹುಣ್ಣಿಮೆ ಪ್ರದೋಷ ಕಾಲದಲ್ಲಿರುವ ದಿವಸ. |
| ಗರುಡ ಜಯಂತಿ | : ಪುಷ್ಯಮಾಸದ ಅಮಾವಾಸ್ಯೆ ಉದಯಾದಿ ಹತ್ತನೆಯ ಘಳಿಗೆ ವೇಳೆಯಲ್ಲಿರುವ ದಿವಸ. |
| ವರಾಹ ಜಯಂತಿ | : ಮೇಷ ಮಾಸದ ರೇವತಿ ನಕ್ಷತ್ರ ಉದಯಾದಿ ಹತ್ತನೆಯ ಘಳಿಗೆ ವೇಳೆಯಲ್ಲಿರುವ ದಿವಸ. |
| ವರದರಾಜ ಜಯಂತಿ | : ವೃಷಭಮಾಸದ ಹಸ್ತ ನಕ್ಷತ್ರ ಉದಯಾದಿ ಹತ್ತನೆಯ ಘಳಿಗೆ ವೇಳೆಯಲ್ಲಿರುವ ದಿವಸ. |
| ವೆಂಕಟೇಶ ಜಯಂತಿ | : ಕನ್ಯಾಮಾಸದ ಶ್ರವಣ ನಕ್ಷತ್ರದ ದಿವಸ. |
| ನಾರಾಯಣಸ್ವಾಮಿ ಜಯಂತಿ | : ಮೀನಮಾಸದ ಹಸ್ತ ನಕ್ಷತ್ರ ಉದಯಾದಿ ಹತ್ತನೆಯ ಘಳಿಗೆ ವೇಳೆಯಲ್ಲಿರುವ ದಿವಸ. |
| ಶ್ರೀಕೃಷ್ಣ ಜಯಂತಿ | : ಸಿಂಹಮಾಸದ ಕೃಷ್ಣಪಕ್ಷದಲ್ಲಿ ಸಪ್ತಮೀ ಮತ್ತು ಕೃತ್ತಿಕ ನಕ್ಷತ್ರ ವೇಧೆ ಇಲ್ಲದ ರೋಹಿಣೀ ನಕ್ಷತ್ರದ ದಿವಸ. |
| ದೇವಲದಾಸಯ್ಯ ಜಯಂತಿ | : ಚೈತ್ರಮಾಸದ ಶುಕ್ಲ ಪಕ್ಷ ಪಂಚಮಿ ಉದಯ ಕಾಲದಲ್ಲಿ ಇರುವ ದಿವಸ. |
| ಮಹಾವೀರ ಜಯಂತಿ | : ಚೈತ್ರಮಾಸದ ಶುಕ್ಲತ್ರಯೋದಶಿ ದಿವಸ. |
| ಶಿವಾಜಿ ಜಯಂತಿ | : ವೈಶಾಖ ಶುಕ್ಲ ದ್ವಿತೀಯ ದಿವಸ. |
| ಶಂಕರ ಜಯಂತಿ | : ವೈಶಾಖ ಶುಕ್ಲ ಪಂಚಮಿ ಉದಯ ಕಾಲದಲ್ಲಿ ಇರುವ ದಿವಸ. |
| ವಾಸವೀ ಜಯಂತಿ | : ವೈಶಾಖ ಶುಕ್ಲ ದಶಮೀ ದಿವಸ. |
| ಬಸವ ಜಯಂತಿ | : ವೈಶಾಖ ಶುಕ್ಲ ಪಕ್ಷದ ರೋಹಿಣಿ ಉದಯ ಕಾಲದಲ್ಲಿ ಇರುವ ದಿವಸ. |
| ಕನಕದಾಸ ಜಯಂತಿ | : ಕಾರ್ತಿಕ ಕೃಷ್ಣಪಕ್ಷದ ತೃತೀಯ ದಿವಸ. |
| ರೇಣುಕಾರಾಧ್ಯರ ಜಯಂತಿ | : ಫಾಲ್ಗುಣ ಶುಕ್ಲಪಕ್ಷದ ತ್ರಯೋದಶೀ ದಿವಸ. |
| ರಾಮನುಜಾಚಾರ್ಯರ ತಿರುನಕ್ಷತ್ರ | : ಮೇಷಮಾಸದ ಆರ್ದ್ರಾ ನಕ್ಷತ್ರ ಉದಯಾದಿ 10ನೆಯ ಘಳಿಗೆ ವೇಳೆಯಲ್ಲಿರುವ ದಿವಸ. |
| ಗಾಂಧೀ ಜಯಂತಿ | : ಅಕ್ಟೋಬರ್ ತಿಂಗಳಿನ ಎರಡನೆಯ ತಾರೀಖು.ನೆಹರು |
| ಜಯಂತಿ | : ನವೆಂಬರ್ ತಿಂಗಳಿನ 14ನೆಯ ತಾರೀಖು. |

(ಎಸ್.ಎನ್.ಕೆ.)

**ಜಯಂತಿ**[2] **:** ಧಾರವಾಡದಿಂದ ಪ್ರಕಟವಾಗುತ್ತಿದ್ದ ಒಂದು ಕನ್ನಡ ಮಾಸಪತ್ರಿಕೆ. ಮರಾಠಿಯ ಕಿರ್ಲೋಸ್ಕರದಂಥ ಒಂದು ಪತ್ರಿಕೆ ಕನ್ನಡದಲ್ಲಿರಬೇಕೆಂದು ವಿ.ವೈ.ಜಠಾರ, ಶಂಕರರಾವ್ ಜಠಾರ, ಸಿ.ಡಿ.ದೇಶಪಾಂಡೆ, ಮಾಧವರಾವ್ ಪಾಟೀಲ ಇವರು 1938ರ ಮೇ ತಿಂಗಳಲ್ಲಿ ಇದನ್ನು ಪ್ರಾರಂಭಿಸಿದರು. ಪ್ರಾರಂಭದಿಂದಲೂ ಬೆಟಗೇರಿ ಕೃಷ್ಣಶರ್ಮ (ಆನಂದ ಕಂದ) ಸಂಪಾದಕರು. ಜೊತೆಗೆ ಮೊದಲ ಮೂರು ವರ್ಷ ಮಾಧವರಾವ್ ಪಾಟೀಲರೂ ಸಂಪಾದಕರಾಗಿದ್ದರು. ಕೃಷ್ಣ ಶರ್ಮರೇ ಸಾಹಿತ್ಯದ ಎಲ್ಲ ಹೊಣೆಯನ್ನೂ ನಿರ್ವಹಿಸುತ್ತಿದ್ದರು. 1941ರಲ್ಲಿ ಆರ್ಥಿಕ ಕಾರಣಗಳಿಗಾಗಿ ಇದನ್ನು ನಿಲ್ಲಿಸಬೇಕೆಂದು ನಿರ್ಣಯವಾದಾಗ ಬೆಟಗೇರಿಯವರು ತಮ್ಮ ಕೆಲವು ಸ್ನೇಹಿತರ ಸಹಾಯದಿಂದ ಇದನ್ನು ಪಡೆದುಕೊಂಡು 1961ರ ಜುಲೈವರೆಗೆ ನಡೆಸಿಕೊಂಡು ಬಂದರು. ಆ ವರ್ಷದ ಸೆಪ್ಟೆಂಬರ್‌ನಲ್ಲಿ ಸಿ.ಎಸ್. ಕುಲಕರ್ಣಿ ಇದನ್ನು ವಹಿಸಿಕೊಂಡರು. ಅನಂತರ ಎರಡು ವರ್ಷ ಸಂಪಾದಕರಾಗಿದ್ದರು. 1963ರಲ್ಲಿ ಹೊರಡಿಯವರು ಇದನ್ನು ವಹಿಸಿಕೊಂಡರು. ರಾಮಚಂದ್ರ ಕೊಟ್ಟಲಗಿಯವರು ಸ್ವಲ್ಪಕಾಲ ಸಂಪಾದಕರಾಗಿದ್ದರು. 1964ರ ಹೊತ್ತಿಗೆ ಈ ಪತ್ರಿಕೆ ನಿಂತುಹೋಯಿತು. ಪ್ರಾರಂಭದಲ್ಲಿ ಡಿಮ್ಮೈ ಚತುಷ್ಪಮದ ಆಕಾರದ 64 ಪುಟಗಳಿಂದ ಕೂಡಿದ ಪತ್ರಿಕೆಯ ಪುಟಗಳ ಸಂಖ್ಯೆ ಕಾಲಕ್ರಮದಲ್ಲಿ 80ಕ್ಕೆ ಏರಿತು. ಕೊನೆಯಲ್ಲಿ 48ಕ್ಕೆ ಇಳಿದಿತ್ತು. ಬೆಲೆ ಮೊದಲು ನಾಲ್ಕು ಆಣೆ (25 ಪೈಸೆ). 1939ರಲ್ಲಿ ಇದನ್ನು 5 ಆಣೆಗಳಿಗೂ 1942ರಲ್ಲಿ 6 ಆಣೆಗಳಿಗೂ ಕೊನೆಗೆ 8 ಆಣೆಗಳಿಗೂ ಹೆಚ್ಚಿಸಲಾಗಿತ್ತು. ವಾರ್ಷಿಕ ಚಂದಾ ಅನುಕ್ರಮವಾಗಿ ರೂ. 3,4,5 ಮತ್ತು 6. ಪ್ರಸಾರ 3,000ದ ವರೆಗೆ ಏರಿತ್ತು. ಕೊನೆ ಕೊನೆಗೆ ಸುಮಾರು 1,000ಕ್ಕೆ ಇಳಿದಿತ್ತು. ಕನ್ನಡದ ಅನೇಕ ಪ್ರಮುಖ ಲೇಖಕರು ಈ ಪತ್ರಿಕೆಗೆ ಬರೆಯುತ್ತಿದ್ದರು. ಹೊಸ ಲೇಖಕರನೇಕರಿಗೆ ಜಯಂತಿ ಪ್ರೋತ್ಸಾಹ ನೀಡಿತು. ಅನೇಕ ಲೇಖಕರು ಇದರ ಮೂಲಕ ಹೆಸರು ಪಡೆದರು. 23 ವರ್ಷಗಳ ಕಾಲ ಅಖಂಡವಾಗಿ ಸಂಪಾದಕರಾಗಿದ್ದ ಬೆಟಗೇರಿ ಕೃಷ್ಣಶರ್ಮರು 'ವಿಹಾರಿ' ನಾಮಾಂಕಿತದಲ್ಲಿ ಬರೆಯುತ್ತಿದ್ದ ಇವರ ಸಾಹಿತ್ಯ ಸಮಾಲೋಚನೆಯ ಬರೆಹ ಚುರುಕಾಗಿರುತ್ತಿತ್ತು. ಸೃಜನಶೀಲತೆಯನ್ನು ಪ್ರೋತ್ಸಾಹಿಸಿ ಸಣ್ಣ ಕಥಾಸ್ಪರ್ಧೆಗಳನ್ನು ಏರ್ಪಡಿಸಿದರು. ಆ ಸ್ಪರ್ಧೆಗಳಲ್ಲಿ ಮಿರ್ಜಿ ಅಣ್ಣಾರಾಯರು, ಭಾರತೀಸುತ ಮೊದಲಾದವರು ಬೆಳಕಿಗೆ ಬಂದರು. ವಿಮರ್ಶೆಯ ಶಿಕ್ಷಣರಂಗ ವಿಭಾಗದ ಮೂಲಕ ಓದುಗರಿಗೆ ವಿಮರ್ಶೆಯ ವಿಷಯದಲ್ಲಿ ತಿಳಿವಳಿಕೆ ನೀಡಲಾಗುತ್ತಿತ್ತು. ಒಳ–ಹೊರನಾಡುಗಳ ಕನ್ನಡಿಗರ ಚಟುವಟಿಕೆಗಳಿಗೆ ಪತ್ರಿಕೆ ಪ್ರಚಾರ ನೀಡಿತು. ಲಲಿತಸಾಹಿತ್ಯವನ್ನೇ ಹೆಚ್ಚಾಗಿ ಪ್ರಕಟಿಸುತ್ತಿದ್ದ ಜಯಂತಿ ಒಂದು ಶ್ರೇಷ್ಠ ದರ್ಜೆಯ ಮಾಸಪತ್ರಿಕೆಯೆನಿಸಿ ಕನ್ನಡಕ್ಕೆ ವಿಶೇಷ ರೀತಿಯಲ್ಲಿ ಸೇವೆ ಸಲ್ಲಿಸಿತು. (ಎಸ್.ವಿ.ಪಿ.ಎ.)

**ಜಯಂತಿ**[3] **:** ಕನ್ನಡದ ಪ್ರಸಿದ್ಧ ಚಿತ್ರನಟಿ. ಬಳ್ಳಾರಿಯಲ್ಲಿ ಜನಿಸಿದರು. ಇವರ ಮೊದಲ ಹೆಸರು ಕಮಲಕುಮಾರಿ. ಬಾಲ್ಯದಲ್ಲಿಯೇ ಕಾಳಹಸ್ತಿಗೆ ವಲಸೆ ಹೋದರು. 1959ರಲ್ಲಿ ಮದರಾಸಿನ ಖ್ಯಾತ ನಾಟ್ಯಾ ಚಾರ್ಯ ಜಗನ್ನಾಥಶರ್ಮ ಹಾಗೂ ಜೈಮಿನಿಚಂದ್ರ ಇವರ ಬಳಿ ನಾಟ್ಯಾಭ್ಯಾಸ ಮಾಡಿದರು. ಕೃಷ್ಣಲೀಲೆ ಹಾಗೂ ಚೆಂಚುಲಕ್ಷ್ಮಿ ಎಂಬ ತೆಲುಗು

ಚಿತ್ರಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡ ಮೇಲೆ ಜಯಂತಿ ಎಂಬ ಹೆಸರು ಸ್ಥಿರವಾಗಿ ನಿಂತಿತು. ಅನಂತರ ತಮಿಳು ಮತ್ತು ತೆಲುಗು ಚಿತ್ರಗಳ ಖ್ಯಾತ ನಟರಾದ ಶಿವಾಜಿ ಗಣೇಶನ್, ಎಂ.ಜಿ.ರಾಮಚಂದ್ರನ್, ಎನ್.ಟಿ. ರಾಮರಾವ್, ಎ. ನಾಗೇಶ್ವರರಾವ್ ಅವರ ಜೊತೆ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿದರು. ವೈ.ಆರ್.ಸ್ವಾಮಿ ನಿರ್ದೇಶಿಸಿದ ಜೇನುಗೂಡು ಚಿತ್ರದ ಮೂಲಕ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದರು. ಭಗವಾನ್ ದೊರೈ ನಿರ್ಮಿಸಿದ ಚಂದವಳ್ಳಿಯ ತೋಟದಲ್ಲಿ (1964) ಶೋಕಪ್ರಧಾನ ಪಾತ್ರವನ್ನು ಗಂಭೀರವಾಗಿ ನಿರ್ವಹಿಸಿ ಎಲ್ಲರ ಗಮನ ಸೆಳೆದರು. ಆ ವರ್ಷದ ಅತ್ಯುತ್ತಮ ಚಿತ್ರವಾಗಿ ಅದು ಪ್ರಶಸ್ತಿ ಗಳಿಸಿತು. ಪೆಕೇಟಿ ಶಿವರಾಂ ನಿರ್ದೇಶಿಸಿದ ಚಕ್ರತೀರ್ಥದಲ್ಲಿ ದ್ವಿಪಾತ್ರದಲ್ಲಿ (ತಾಯಿ ಮತ್ತು ಮಗಳು) ಉತ್ತಮ ಅಭಿನಯ ನೀಡಿದರು. ಈ ಚಿತ್ರ 1967ರ ಉತ್ತಮ ಚಿತ್ರವೆಂದು ಪರಿಗಣಿತವಾಯಿತು. 1964ರಿಂದ ಇತರ ಭಾಷೆಯ ಚಿತ್ರಗಳು ಸೇರಿದಂತೆ ಇವರು 100ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಕನ್ನಡದಲ್ಲಿ 80ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಅವುಗಳಲ್ಲಿ 30ಕ್ಕೂ ಹೆಚ್ಚು ಚಿತ್ರಗಳಲ್ಲಿ ರಾಜಕುಮಾರ್ ಜೊತೆ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಪದ್ಮಿನಿ ಚಿತ್ರಸಂಸ್ಥೆಯವರ ವರ್ಣಚಿತ್ರ ಶ್ರೀ ಕೃಷ್ಣದೇವರಾಯ ಇವರ 50ನೆಯ ಚಿತ್ರ. ಚಂದವಳ್ಳಿಯ ತೋಟ, ಮಿಸ್ ಲೀಲಾವತಿ, ಚಕ್ರತೀರ್ಥ, ಶ್ರೀ ಕೃಷ್ಣದೇವರಾಯ, ಗೃಹಲಕ್ಷ್ಮಿ, ಎರಡು ಮುಖ, ಕುಲಗೌರವ, ಬೆಟ್ಟದ ಹುಲಿ, ರೌಡಿರಂಗಣ್ಣ, ದೇವರ ಮಕ್ಕಳು, ಬದುಕು ಬಂಗಾರವಾಯಿತು, ಮಸಣದ ಹೂವು ಇವು ಇವರು ನಟಿಸಿರುವ ಮುಖ್ಯ ಚಿತ್ರ ಗಳು. ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ ಎಡಕಲ್ಲು ಗುಡ್ಡದ ಮೇಲೆ ಎಂಬ ವರ್ಣಚಿತ್ರದ ಅತ್ಯುತ್ತಮ ಅಭಿನಯಕ್ಕಾಗಿ ಇವರಿಗೆ ರಾಜ್ಯ ಪ್ರಶಸ್ತಿ ಲಭಿಸಿತು. ಕನ್ನಡ ಅಭಿಮಾನಿಗಳಿಂದ ಇವರು ಕಲಾಕೋಕಿಲೆ ಹಾಗೂ ಅಭಿನಯಶಾರದೆ ಎಂಬ ಬಿರುದುಗಳನ್ನು ಪಡೆದಿದ್ದಾರೆ. ದಾದ್, ಲಾಲ್ ಬಂಗಾಲಾ, ಏಕ್ ಫೂಲ್ ಏಕ್ ಭೂಲ್, ತೀನ್ ಬಹುರಾಣಿಯಾ, ತುಂಸೆ ಅಚ್ಛಾ ಕೌನ್ ಹೈ ಮೊದಲಾದ ಹಿಂದಿ ಚಿತ್ರಗಳಲ್ಲಿಯೂ ಪ್ರೇಂ ನಜೀರ್ ನಾಯಕನಾಗಿರುವ ಒಂದು ಮಲೆಯಾಳಂ ಚಿತ್ರದಲ್ಲಿಯೂ ಅಭಿನಯಿಸಿ ಪಂಚಭಾಷಾ ತಾರೆ ಎನಿಸಿಕೊಂಡಿದ್ದಾರೆ. ರಾಜಕೀಯ ರಂಗದ ಬಗ್ಗೆ ಆಸಕ್ತರಾದ ಇವರು 2004ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರು. ಜಯಂತಿಯವರು ವಿವಿಧ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನು ತೊಡಗಿಸಿಕೊಂಡಿದ್ದಾರೆ. (ಎಸ್.ಎಸ್.ಎಂಯು.)

**ಜಯಕರ್ ಮುಕುಂದ ರಾಮರಾವ್ :** 1873–1959. ಭಾರತೀಯ ವಿದ್ವಾಂಸ, ಶಿಕ್ಷಣತಜ್ಞ, ನ್ಯಾಯವಾದಿ, ರಾಜಕಾರಣಿ ಮತ್ತು ಕಲಾಭಿಮಾನಿ. 1873ರ ನವೆಂಬರ್ 13ರಂದು ಮುಂಬಯಿಯಲ್ಲಿ ಜನನ. ತಂದೆ ರಾಮರಾವ್, ತಾಯಿ ಸೋನಾಬಾಯಿ.

ಬಾಲ್ಯದಲ್ಲೇ ತಂದೆಯ ಮರಣದಿಂದ ತಾತನ ಪೋಷಣೆಗೆ ಒಳಗಾದರು. ತಾತ ವಾಸುದೇವ ಜಗನ್ನಾಥ ಕೀರ್ತಿಕರ್ ಪಂಡಿತರು. ತತ್ವಜ್ಞರು ಮತ್ತು ನ್ಯಾಯವಾದಿಗಳು. ಇವರು ಮೊಮ್ಮಗನ ಮೇಲೆ ಅಪಾರ ಪ್ರಭಾವ ಬೀರಿದರು. ಜಯಕರ್ 1899ರಲ್ಲಿ ಸುಶೀಲಾಬಾಯಿಯನ್ನು ವಿವಾಹವಾದರು.

ಜಯಕರ್ ಮುಂಬಯಿಯ ಎಲ್ಫಿನ್‌ಸ್ಟನ್ ಪ್ರೌಢಶಾಲೆ ಮತ್ತು ಸೇಂಟ್ ಸ್ಸೇವಿಯರ್ ಕಾಲೇಜಿನಲ್ಲಿ ಓದಿ 1895 ರಲ್ಲಿ ಪದವೀಧರರಾದರು. 1897ರಲ್ಲಿ ಎಂ.ಎ. ಯನ್ನೂ 1902ರಲ್ಲಿ ಎಲ್‌ಎಲ್.ಬಿ. ಯನ್ನೂ ಗಳಿಸಿ, 1903ರಲ್ಲಿ ಇಂಗ್ಲೆಂಡಿಗೆ ಹೋಗಿ 1905ರಲ್ಲಿ ಬಾರ್–ಅಟ್–ಲಾ ಆದರು. ಅದೇ ವರ್ಷ ಭಾರತಕ್ಕೆ ಹಿಂದಿರುಗಿ ಮುಂಬಯಿಯ ಉಚ್ಚ ನ್ಯಾಯಾಲಯದಲ್ಲಿ ವಕೀಲಿಯನ್ನಾರಂಭಿಸಿದರು. 1907ರಲ್ಲಿ ಮುಂಬಯಿ ನ್ಯಾಯಶಾಸ್ತ್ರ ಶಾಲೆಯಲ್ಲಿ ಪ್ರಾಧ್ಯಾಪಕರಾಗಿ ನೇಮಿತರಾದರು. ಆದರೆ ಇವರಿಗಿಂತ ಕಿರಿಯನಾಗಿದ್ದ ಆಂಗ್ಲನೊಬ್ಬನನ್ನು ಪ್ರಿನ್ಸಿಪಾಲನಾಗಿ ನೇಮಕ ಮಾಡಿದ್ದರಿಂದ ಇವರು ತಮ್ಮ ಕೆಲಸಕ್ಕೆ ರಾಜಿನಾಮೆ ಇತ್ತರು. 1937ರಲ್ಲಿ ಇವರು ಫೆಡರಲ್ ನ್ಯಾಯಾಲಯದ ನ್ಯಾಯಮೂರ್ತಿಯಾದರು. ಅನಂತರ ಲಂಡನಿನ ಪ್ರಿವಿ ಕೌನ್ಸಿಲಿನ ನ್ಯಾಯಸಮಿತಿಯ ಸದಸ್ಯರಾದರು. 1942ರಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿದರು.

ಜಯಕರರು ಆರ್ಯನ್ ಎಜುಕೇಷನ್ ಸೊಸೈಟಿ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ ಉನ್ನತ ಪ್ರೌಢಶಾಲೆಯೊಂದನ್ನು ಪ್ರಾರಂಭಿಸಿದರು. ತಾವೇ ಅದರ ಪ್ರಿನ್ಸಿಪಾಲರಾಗಿ ಕೆಲಸಮಾಡಿದರು. ಜಯಕರರು ಸಂಸ್ಕೃತ ಪಂಡಿತರು. ಇವರ ಬರೆಹ ಹಿಂದೂ ಧರ್ಮಶಾಸ್ತ್ರಕ್ಕೆ ಒಂದು ಉತ್ತಮ ಕೊಡುಗೆ. ತಮ್ಮ ತಾತ ರಚಿಸಿದ ಸ್ಟಡೀಸ್ ಇನ್ ವೇದಾಂತ ಗ್ರಂಥವನ್ನು 1924ರಲ್ಲಿ ಇವರು ಸಂಪಾದಿಸಿ ಪ್ರಕಟಿಸಿದರು. ತಮ್ಮ ತಾತನ ನೆನಪಾಗಿ ಇವರು ಮುಂಬಯಿ ಉಚ್ಚ ನ್ಯಾಯಾಲಯದ ವಕೀಲ ಸಂಘಕ್ಕೆ ತಮ್ಮ ಅಮೂಲ್ಯ ಗ್ರಂಥಗಳನ್ನು ದಾನ ಮಾಡಿದರಲ್ಲದೆ ಅವುಗಳ ನಿರ್ವಹಣೆಗಾಗಿ ಹಣದ ವ್ಯವಸ್ಥೆಯನ್ನೂ ಮಾಡಿದರು.

ಜಯಕರರಿಗೆ ಕಲೆ ಸಂಗೀತಗಳಲ್ಲಿ ವಿಶೇಷ ಅಭಿಮಾನವಿತ್ತು. ಇವರು ಶಾಸ್ತ್ರೀಯ ಸಂಗೀತವನ್ನೂ ಕಲೆಯನ್ನೂ ಬಾಲ್ಯದಲ್ಲಿ ಅಭ್ಯಾಸ ಮಾಡಿದ್ದರು. ಗಂಧರ್ವ ಮಹಾವಿದ್ಯಾಲಯ ಸಂಗೀತ ಸಭೆಯ ಆಶ್ರಯದಲ್ಲಿ ಸೇರಿದ್ದ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಇವರು ಮಾಡಿದ ಭಾಷಣ ಆಧುನಿಕ ಸಂಗೀತಕ್ಕೆ ಉತ್ತಮ ಕೊಡುಗೆ. 1918ರಲ್ಲಿ ಇವರು ನಾಟಕ ಸಮ್ಮೇಳನದ ಅಧ್ಯಕ್ಷರಾಗಿಯೂ 1937–38ರಲ್ಲಿ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸಮಾಡಿದರು. ಭಂಡಾರ್‌ಕರ್ ಪ್ರಾಚ್ಯವಸ್ತು ಸಂಶೋಧನಾಲಯ ಮಹಾಭಾರತವನ್ನು ಸಂಪಾದಿಸಿ ಪ್ರಕಟಿಸಲು ಧನಸಹಾಯ ಮಾಡಿಸಿ,–ತಾವೂ ಉದಾರವಾಗಿ ಧನ ನೀಡಿದರು.

ಜಯಕರರಿಗೆ ಸಮಾಜಸುಧಾರಣೆಯಲ್ಲೂ ಆಸಕ್ತಿಯಿತ್ತು. ಇವರು 1917ರಲ್ಲಿ ನಾಸಿಕದಲ್ಲಿ ಜರುಗಿದ ಸಾಮಾಜಿಕ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1918ರಲ್ಲಿ ಪುಣೆ ಜಿಲ್ಲಾ ಸಮ್ಮೇಳನದಲ್ಲಿ ಇವರು ಮಾಡಿದ ಭಾಷಣವನ್ನು ಲೋಕಮಾನ್ಯ ತಿಲಕರು ಮೆಚ್ಚಿಕೊಂಡಿದ್ದರು. 1917ರಲ್ಲಿ ಕಲ್ಕತ್ತದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಇವರು ಸ್ವರಾಜ್ಯ ಕುರಿತು ಮಾಡಿದ ಭಾಷಣ ತುಂಬ ಪ್ರಭಾವಕಾರಿಯಾಗಿತ್ತು. ಇವರು 1918ರಲ್ಲಿ ಮುಂಬಯಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಿದ ಭಾಷಣವೂ ಪ್ರಸಿದ್ಧವಾಗಿದೆ. 1925ರ ಕಾನ್ಪುರ ಕಾಂಗ್ರೆಸ್ ಅಧಿವೇಶನದಲ್ಲಿ ಇವರು ಪ್ರತಿಯೋಗಿ ಸಹಕಾರ ಮತ್ತು ಬಂಗಾಳ ರಾಜಕೀಯ ನಾಯಕರ ಬಂಧನ ಕುರಿತು ಮಾತನಾಡಿದರು. ತಿಲಕರ ಸ್ವರಾಜ್ಯನಿಧಿಗೆ ಇವರು 25,000ರೂ. ದಾನಮಾಡಿದರು. 1923–26ರಲ್ಲಿ ಮುಂಬಯಿಯ ಶಾಸನಸಭೆಯಲ್ಲಿ ಸ್ವರಾಜ್ಯ ಪಕ್ಷದ ನಾಯಕರಾಗಿ ಇವರು ಮಾಡಿದ ಭಾಷಣಗಳು ಎಲ್ಲರ ಮೆಚ್ಚುಗೆ ಸಂಪಾದಿಸಿದವು. ಇವರು 1926ರಲ್ಲಿ ಕೇಂದ್ರ ಶಾಸನಸಭೆಗೆ ಆಯ್ಕೆಯಾಗಿ ನ್ಯಾಷನಲಿಸ್ಟ್ ಪಕ್ಷದ ಉಪನಾಯಕರಾಗಿ ಕೆಲಸಮಾಡಿದರು.

ಜಯಕರರು ರಾಜಕೀಯ ಮುತ್ಸದ್ದಿಯಾಗಿಯೂ ಇದ್ದರು. ಭಾರತೀಯ ನಾಯಕರ ಮತ್ತು ಬ್ರಿಟಿಷ್ ಸರ್ಕಾರದ ನಡುವೆ ಇವರು ಅನೇಕ ಬಾರಿ ಸಂಧಾನ ಏರ್ಪಡಿಸಿ ಪರಸ್ಪರ ಅರಿವಿಗೆ ಸಹಾಯ ಮಾಡಿದರು. ಗಾಂಧಿ–ಅರ್ವಿನ್ ಒಪ್ಪಂದ ಇವರ ಮತ್ತು ಸಪ್ರು ಅವರ ಪ್ರಯತ್ನದ ಫಲವೆನ್ನಬಹುದು. ಗಾಂಧಿಯವರು ತಮ್ಮ ಉಪವಾಸವನ್ನು ತ್ಯಜಿಸುವಂತೆ ಮಾಡಿದ ಪುಣೆ ಒಪ್ಪಂದವೂ ಜಯಕರರ ಪ್ರಯತ್ನದ ಫಲ. ಇವರು ಲಂಡನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಮೂರು ಬಾರಿ ಭಾರತವನ್ನು ಪ್ರತಿನಿಧಿಸಿದ್ದರು.

ಜಯಕರರು ಭಾರತದ ಎಲ್ಲ ಪಕ್ಷಗಳ ಜನರ ವಿಶ್ವಾಸ ಗೌರವಗಳಿಗೆ ಪಾತ್ರರಾಗಿದ್ದರು. ಬ್ರಿಟಿಷ್ ಸರ್ಕಾರ ನೀಡಿದ ಕೆ.ಸಿ.ಎಸ್.ಐ. ಬಿರುದನ್ನೂ ಉನ್ನತ ವೇತನದ ಹುದ್ದೆಗಳನ್ನೂ ತಿರಸ್ಕರಿಸಿದರು. ಸಾಮಾಜಿಕ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಇವರು ರೂ. 2,00,000 ವರೆಗೆ ದಾನ ಮಾಡಿದರು. ಕೈಗಾರಿಕೆಯಲ್ಲಿ ಭಾರತ ಮುಂದುವರಿಯಬೇಕೆಂಬುದು ಇವರ ಅಭಿಲಾಷೆಯಾಗಿತ್ತು. ಭಾರತದ ವಾಣಿಜ್ಯ ಮತ್ತು ಕೈಗಾರಿಕಾಭಿವೃದ್ಧಿಯಾಗಬೇಕೆಂದು ದುಂಡುಮೇಜಿನ ಪರಿಷತ್ತಿನಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಇವರು ಮನವಿ ಮಾಡಿದರು.

ಜಯಕರರನ್ನು 1942–43ರಲ್ಲಿ ಮುಂಬಯಿ ಸರ್ಕಾರ ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕಮಾಡಿತು. ಅನಂತರ ಸ್ಥಾಪಿತವಾದ ಪುಣೆ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿ ಇವರು ನೇಮಕವಾಗಿ, 1948–1956ರಲ್ಲಿ ಆ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ದುಡಿದರು. ಇವರು ನಾಗಪುರ, ಲಖನೌ, ಪಾಟ್ನಾ ಮತ್ತು ಅಣ್ಣಾಮಲೈ ವಿಶ್ವವಿದ್ಯಾಲಯಗಳ ಘಟಿಕೋತ್ಸವಗಳಲ್ಲಿ ಮಾಡಿದ ಭಷಣಗಳು ಇವರ ವಿದ್ವತ್ತಿನ ದ್ಯೋತಕಗಳು. ಜಯಕರರು 1959ರ ಮಾರ್ಚ್ 10ರಂದು ಮುಂಬಯಿಯಲ್ಲಿ ತೀರಿಕೊಂಡರು. ಇವರು ಇಂಗ್ಲೆಂಡಿಗೆ ಅನೇಕ ಸಾರಿ ಭೇಟಿ ಕೊಟ್ಟಿದ್ದರೂ ಹಿಂದೂ ಸಂಪ್ರದಾಯಗಳನ್ನೂ ಆಚರಣೆಗಳನ್ನೂ ಬಿಟ್ಟಿರಲಿಲ್ಲ. (ಎಂ.ಎಸ್.ಎಂ.ಎ.)

**ಜಯಕರ್ನಾಟಕ** : ಧಾರವಾಡದಿಂದ ಪ್ರಕಟವಾಗುತ್ತಿದ್ದ ಒಂದು ಕನ್ನಡ ಮಾಸಪತ್ರಿಕೆ. ಆಲೂರು ವೆಂಕಟರಾಯರಿಂದ ಅವರ ಸಂಪಾದಕತ್ವದಲ್ಲೇ 1923ರ ನವೆಂಬರಿನಲ್ಲಿ ಇದು ಪ್ರಾರಂಭವಾಯಿತು. ಕಿರೀಟ ಅಷ್ಟದಳದ 80 ಪುಟಗಳಿಂದ ಕೂಡಿರುತ್ತಿದ್ದ ಈ ಸಚಿತ್ರ ಪತ್ರಿಕೆ ಆಗ ಅಖಿಲ ಕರ್ನಾಟಕದ ವಿಶಿಷ್ಟ ಪತ್ರಿಕೆಯೆನಿಸಿತು. ಕನ್ನಡ ನಾಡು, ನುಡಿ, ಚರಿತ್ರೆ, ಸಂಸ್ಕೃತಿಗಳ ಪರಿಚಯ–ಪ್ರಚಾರಗಳ ಹಾಗೂ ಕರ್ನಾಟಕ ಏಕೀಕರಣಕ್ಕೆ ಹೆಚ್ಚಿನ ಮಹತ್ವ ನೀಡುವ ಉದ್ದೇಶವಿರಿಸಿಕೊಂಡು ಹೊರಟ ಈ ಪತ್ರಿಕೆ, ತೆರೆಯ ಮರೆಯಲ್ಲಿದ್ದ

ಹಲವು ಕನ್ನಡ ಲೇಖಕರನ್ನು ಹೊರಗೆ ತಂದಿತು. ಅನೇಕ ಕವಿಗಳನ್ನೂ ಕಥೆಗಾರರನ್ನೂ ಸೃಷ್ಟಿಸಿತು. ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಮೇಲ್ತರದ ಲೇಖನ ಪ್ರಬಂಧಗಳೂ, ರಾಜಕೀಯ ಸಾಮಾಜಿಕ ವಿಚಾರಗಳನ್ನು ಕುರಿತ ಕಾಲೋಚಿತ ಟೀಕೆ–ಟಿಪ್ಪಣಿಗಳೂ ಸುಶಿಕ್ಷಿತ ವಾಚಕರ ಮನಸ್ಸು ಬುದ್ಧಿಗಳನ್ನು ಆಕರ್ಷಿಸಿ, ಕನ್ನಡದ ಮಾಡರ್ನ್ ರಿವ್ಯೂ ಎಂದು ಪ್ರಸಿದ್ಧವಾಯಿತು. 1929ರಲ್ಲಿ ಈ ಪತ್ರಿಕೆ ಧಾರವಾಡದ ಗೆಳೆಯರ ಗುಂಪಿನ ಕಡೆಗೆ ಬಂತು. ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅಭ್ಯಾಸಿಗಳಾಗಿದ್ದ ಗುಂಪಿನ ಗೆಳೆಯರು ಹೊಸ ಹುಮ್ಮಸ್ಸಿನಿಂದ ಪತ್ರಿಕೆಯನ್ನು ಮುಂದಿನ ಮೂರು ವರ್ಷ ಯಶಸ್ವಿಯಾಗಿ ನಡೆಸಿದರು. ವ್ಯಾವಹಾರಿಕ ತೊಡಕಿನಿಂದಾಗಿ ಬೆಳಗಾಂವಿ (ಈಗ ವಿನೀತ) ರಾಮಚಂದ್ರರಾಯರಿಗೆ ಒಪ್ಪಿಸಿಕೊಟ್ಟರು. ಎಲ್ಲ ಬಗೆಯ ಒಡೆತನವನ್ನೂ ಪಡೆದುಕೊಂಡ ಬೆಳಗಾಂವಿ ರಾಮಚಂದ್ರರಾಯರು ಜಯಕರ್ನಾಟಕವನ್ನು ಹಲವು ವರ್ಷಗಳ ಕಾಲ ನಡೆಸಿ ಶಿ.ಶಿ. ಬಸವನಾಳ ಅವರ ಒಡೆತನಕ್ಕೆ ಒಪ್ಪಿಸಿದರು. ಅವರು ಈ ಮಾಸಪತ್ರಿಕೆಯೊಂದಿಗೆ ಇದೇ ಹೆಸರಿನ ವಾರಪತ್ರಿಕೆಯನ್ನೂ ಪ್ರಾರಂಭಿಸಿ ನಡೆಸುತ್ತಿದ್ದರು.

1951ರ ಡಿಸೆಂಬರಿನಲ್ಲಿ ಶಿ.ಶಿ. ಬಸವನಾಳ ಅವರು ದಿವಂಗತರಾದಾಗ ಅವರ ತಮ್ಮಂದಿರಾದ ವಿ.ಎಸ್.ಬಸವನಾಳ ಅವರು ಮಾಸಪತ್ರಿಕೆ, ವಾರಪತ್ರಿಕೆಗಳೆರಡಕ್ಕೂ ಸಂಪಾದಕರಾಗಿ 3–4 ವರ್ಷಗಳ ಕಾಲ ಮುಂದುವರಿಸಿದರು. ಆಮೇಲೆ ಎರಡೂ ಪತ್ರಿಕೆಗಳು ನಿಂತುಹೋದುವು. (ಬಿ.ಕೆ.ಆರ್.)

**ಜಯಕಾಂತಲ** : ಸ್ಪರ್‌ಕ್ಯೂಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ವೃಕ್ಷ. ಭಟಲಪಿನಾರಿ ಪರ್ಯಾಯ ನಾಮ. ಸ್ಪರ್‌ಕ್ಯೂಲಿಯ ಫೀಟಿಡ ಇದರ ಶಾಸ್ತ್ರೀಯ ಹೆಸರು. ಆಫ್ರಿಕ, ಉತ್ತರ ಆಸ್ಟ್ರೇಲಿಯ, ಶ್ರೀಲಂಕಾ ಹಾಗೂ ಭಾರತಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಜಯಕಾಂತಲ ಸುಮಾರು 6–12 ಮೀ. ಎತ್ತರಕ್ಕೆ ಬೆಳೆಯುತ್ತದೆ. ರೆಂಬೆಗಳಲ್ಲ ವಿಶಾಲವಾಗಿ ಹರಡುವುದರಿಂದ ಮರ ಸುಂದರವಾಗಿ ಕಾಣುತ್ತದೆ. ಹೂಗಳು ಬಿಳಿ ಬಣ್ಣದವು; ಅರಳಿದಾಗ ಒಂದು ಬಗೆಯ ತೀಕ್ಷ್ಣ ವಾಸನೆ ಬೀರುತ್ತವೆ. ಕಾಯಿಯ ಆಕಾರ ದೋಣಿಯಂತೆ. ಬಣ್ಣ ಎಳೆಯಾಗಿದ್ದಾಗ ಹಸಿರು, ಬಲಿತಾಗ ಕೆಂಪು. ಜಯಕಾಂತಲಕ್ಕೆ ಉದ್ಯಾನಪ್ರಾಮುಖ್ಯವೊಂದೇ ಅಲ್ಲದೆ ಔಷಧೀಯ ಮಹತ್ತ್ವವೂ ಉಂಟು. ಧೂಪಕವಾಗಿ ಇದನ್ನು ಬಳಸಲಾಗುತ್ತದೆ. ತುರಿ ಮತ್ತು ಕೆಲವು ಚರ್ಮರೋಗಗಳಲ್ಲಿ ಉಪಯುಕ್ತವೆನಿಸಿದೆ. ಬರಗಾಲದಲ್ಲಿ ಇದರ ಬೀಜಗಳನ್ನು ಹುರಿದು ತಿನ್ನುವುದುಂಟು. ಇದರ ತೊಗಟೆಯಿಂದ ಪಡೆಯುವ ನಾರಿನಿಂದ ಹಗ್ಗ ಹೊಸೆಯುತ್ತಾರೆ. ಚೌಬೀನೆಯಿಂದ ಹಗುರವಾದ ಉಪಕರಣಗಳನ್ನು ತಯಾರಿಸಬಹುದು. (ಎಂ.ಎಚ್.ಎಂ.)

**ಜಯಕೀರ್ತಿ :** ಛಂದೋನುಶಾಸನ ಎಂಬ ಸಂಸ್ಕೃತ ಛಂದೋಗ್ರಂಥದ ಕರ್ತೃ. ಈತನ ಬೇರೆ ಗ್ರಂಥಗಳಾವುವೂ ತಿಳಿದುಬಂದಿಲ್ಲವಲ್ಲದೆ ಬೇರೆ ಯಾವ ಗ್ರಂಥಕರ್ತೃವೂ ಈತನನ್ನು ಹೆಸರಿಸಿದಂತೆ ತೋರುವುದಿಲ್ಲ. ಈತ ಜೈನ ಎಂಬುದು ಗ್ರಂಥಾದಿಯ ವರ್ಧಮಾನ ಜಿನಸ್ತುತಿಯಿಂದ ಸೂಚಿತವಾಗುತ್ತದೆ. ಗ್ರಂಥದಲ್ಲಿ ಅರ್ಹಂತ ಮಹಿಮೆಯ ಸ್ತುತಿ, ಅಲ್ಲಲ್ಲಿ ಜೈನಪರಿಭಾಷಾ ಶಬ್ದಗಳ ಬಳಕೆ, ಜೈನಕವಿ ಕಾವ್ಯ ಲಾಕ್ಷಣಿಕರನ್ನು ವಿಶೇಷವಾಗಿ ಉಲ್ಲೇಖಿಸಿರುವುದು–ಈತ ಜೈನನೆಂಬುದಕ್ಕೆ ಪೂರಕವಾಗುತ್ತವೆ. ಈತ ದಿಗಂಬರ ಜೈನಸಂನ್ಯಾಸಿಯೆಂದು ಎಚ್.ಡಿ.ವೇಲಣಕರ್ ಅಭಿಪ್ರಾಯಪಟ್ಟಿದ್ದಾರಲ್ಲದೆ ಈತನ ಕಾಲವನ್ನು ಪ್ರ.ಶ. 1000–1113 ಎಂದು ಊಹಿಸಿದ್ದಾರೆ.

ಜಯಕೀರ್ತಿ ಸ್ಮರಿಸಿದ ಪೂರ್ವ ಕವಿಗಳು ಹಾಗೂ ಲಾಕ್ಷಣಿಕರಲ್ಲಿ ಅಸಗ, ಜನಾಶ್ರಯ, ಜಯದೇವ, ಪಿಂಗಳ, ಪೂಜ್ಯಪಾದ, ಭರತ, ಸ್ವಯಂಭು–ಈ ಕೆಲವರ ಹಾಗೂ ಅವರ ಕೃತಿಗಳ ವಿಚಾರ ಪ್ರಸಿದ್ಧವಾದ್ದು. ಉಳಿದವರ ವಿಚಾರ ಅಷ್ಟಾಗಿ ತಿಳಿಯದು.

ಕರ್ಣಾಟಕ ಕುಮಾರಸಂಭವ ಕಾವ್ಯ, ಕರ್ಣಾಟಕ ಮಾಲತೀಮಾಧವ ಕಾವ್ಯ, ಕರ್ಣಾಟೇಶ್ವರ ಕಥಾ (ಅರ್ಹತ), ಗೋಗ್ರಹ (ಕಾವ್ಯ?), ಮಹಾರ್ಹದ್ದೇವತಾಸ್ತವ, ಶೃಂಗಾರ ಪಿಂಡಕಾವ್ಯ–ಇವು ಈತ ಉಲ್ಲೇಖಿಸಿರುವ ಗ್ರಂಥಗಳು. ಸಪ್ತಮಾಧಿಕಾರದಲ್ಲಿ ಉಲ್ಲೇಖಗೊಂಡ ಗ್ರಂಥನಾಮಗಳು, ಜಯಕೀರ್ತಿಯ ಕನ್ನಡ ಸಾಹಿತ್ಯ ಪರಿಜ್ಞಾನವನ್ನು ಸೂಚಿಸುವ ಸಾಕ್ಷ್ಯಗಳಾಗಿವೆ. ಅವು ಯಾವುವೂ ಈಗ ದೊರೆಯುವುದಿಲ್ಲ. ಆದರೆ ಅಂದಿನ ಕನ್ನಡ ಸಾಹಿತ್ಯದ ವಿಸ್ತಾರ ಹಾಗೂ ವೈವಿಧ್ಯವನ್ನು ತಿಳಿಯಲು ಇರುವ ಆಕರಗಳಲ್ಲಿ ಛಂದೋನುಶಾಸನವೂ ಒಂದಾಗಿದೆ. ಸಂಸ್ಕೃತ ವರ್ಧಮಾನ ಮತ್ತು ಶಾಂತಿಪುರಾಣಗಳ ಕರ್ತೃವಾಗಿ ಖ್ಯಾತನಾಗಿರುವ ಅಸಗ ಕವಿ ಕರ್ಣಾಟಕ ಕುಮಾರಸಂಭವ ಎಂಬ ಕನ್ನಡ ಕಾವ್ಯದ ಕರ್ತೃ ಕೂಡ ಆಗಿದ್ದ ಸಂಗತಿ ತಿಳಿಯುವುದೂ ಭವಭೂತಿಯ ಮಾಲತೀಮಾಧವ ಕನ್ನಡಕ್ಕೆ ಇಳಿದಿತ್ತೆಂಬ ಸ್ಪಷ್ಟವಾದ ಕುರುಹು ದೊರೆಯುವುದೂ ಇದರಿಂದಲೇ. ಇದರಿಂದ ಜಯಕೀರ್ತಿ ದಕ್ಷಿಣಭಾರತದವನೆಂದೂ ಬಲುಮಟ್ಟಿಗೆ ಕನ್ನಡಿಗನೆಂದೂ ಊಹಿಸಲು ಅವಕಾಶವಿದೆ.

ಛಂದೋನುಶಾಸನ, ಜೈಸಲ್ಮೇರ್ ಜೈನಭಂಡಾರದ ಓಲೆ ಪ್ರತಿಗಳ ಕಟ್ಟಿನಲ್ಲಿ ನಿಕ್ಷಿಪ್ತವಾಗಿದ್ದುದನ್ನು ಮೊದಲಬಾರಿಗೆ ಕಂಡುಹಿಡಿದು, ದೊರೆತ ಏಕೈಕ ಪ್ರತಿಯನ್ನೇ ಸಂಪಾದಿಸಿ ಪ್ರಕಟಿಸಿದವರು ಮುಂಬಯಿಯ ಎಚ್.ಡಿ.ವೇಲಣಕರ್ ಅವರು. ಮುಂಬಯಿಯ ಹರಿತೋಷ ಸಮಿತಿಯಿಂದ ಮಾಲೆಯ ಮೊದಲ ಪುಸ್ತಕವಾಗಿ ಹೊರಬಂದ ಜಯದಾಮನ್ ಎಂಬ ಛಂದೋಗ್ರಂಥಗಳ ಸಮುಚ್ಚಯ ಸಂಪುಟದಲ್ಲಿದು ಪ್ರಕಟವಾಯಿತು (1949).

ಗ್ರಂಥದಲ್ಲಿ 8 ಅಧಿಕಾರಗಳಿದ್ದು, ಅವು ಕ್ರಮವಾಗಿ ಸಂಜ್ಞಾ, ಸಮವೃತ್ತ, ಅರ್ಧಸಮವೃತ್ತ, ವಿಷಮವೃತ್ತ, ಆರ್ಯಾಜಾತಿ, ಮಾತ್ರಾಸಮಕಜಾತಿ, ಮಿಶ್ರ, ಕರ್ಣಾಟ ವಿಷಯ ಭಾಷಾಜಾತಿ, (ಪ್ರಸ್ತಾರಾದಿ ಪ್ರತ್ಯಯ)–ಎಂಬ ಹೆಸರುಳ್ಳವಾಗಿವೆ. ಮೊದಲಿಂದ ಕೊನೆಯವರೆಗೆ ವಿಷಯನಿರೂಪಣೆ ಸಂಸ್ಕೃತಪದ್ಯದಲ್ಲಿದೆ; ಬಳಸಿರುವ ಛಂದಸ್ಸು ಸಾಧಾರಣವಾಗಿ ಅನುಷ್ಟುಪ್, ಆರ್ಯೆ ಮತ್ತು ಸ್ಕಂಧಕ. ವಿವಿಧ ವೃತ್ತಗಳ ಸ್ವರೂಪವನ್ನು ಹೇಳುವಲ್ಲಿ ಮಾತ್ರ ಆಯಾ ವೃತ್ತಜಾತಿಯೇ ಬಳಕೆಯಾಗಿದೆ; ಎಂದರೆ ಲಕ್ಷಣ–ಲಕ್ಷ್ಯ ಸಮೀಕರಣವಿಧಾನವನ್ನು ಅನುಸರಿಸಿದೆ. ನಿರೂಪಣೆಯಲ್ಲಿ ಮುಖ್ಯವಾಗಿ ಸಂಸ್ಕೃತ ಛಂದಸ್ಸಿನ ವರ್ಣವೃತ್ತಗಳಿಗೆ ಪ್ರಾಧಾನ್ಯ ಸಂದಿದೆ. ಕೆಲವು ಸಂಸ್ಕೃತ ಮಾತ್ರಾವೃತ್ತಗಳನ್ನೂ ತಾಳವೃತ್ತಗಳನ್ನೂ ಹೇಳಿದೆ. ಪ್ರಾಕೃತ ಛಂದಸ್ಸಿನ ವಿಷಯವಿಲ್ಲ. ಸಪ್ತಮಾಧಿಕಾರ ಪೂರ್ತಿ ಅಚ್ಚಕನ್ನಡ ಛಂದಸ್ಸಿನ ಬೇರೆ ಬೇರೆ ಮಟ್ಟುಗಳ ವಿವರಣೆಗೆ ಮೀಸಲಾಗಿದೆ. ಇದು ಈ ಗ್ರಂಥದ ಒಂದು ವಿಶೇಷ. ಈ ಭಾಗ ಛಂದೋಂಬುಧಿಯ ಪಂಚಮಾಧಿಕಾರದ ಸದೃಶ ಭಾಗದೊಡನೆ ಹತ್ತಿರದಿಂದ ಹೋಲುವುದರಿಂದ, ಕೆಲವರು ಆ ಕನ್ನಡ ಛಂದೋಗ್ರಂಥದ ಪ್ರಭಾವವನ್ನು ಇಲ್ಲಿ ಗುರುತಿಸಿದ್ದಾರೆ. ಹೀಗೆಯೇ ಇತರ ಅಧಿಕಾರಗಳಲ್ಲಿಯೂ ವಿಷಯ ಮತ್ತು ನಿರೂಪಣೆಗಳಲ್ಲಿ ಕನ್ನಡ ಛಂದಸ್ಸಿನ ಕನ್ನಡತನದ ಪ್ರಭಾವ ಕೆಲಮಟ್ಟಿಗೆ ತೋರುತ್ತದೆ. ಕೆಲವು ವರ್ಣವೃತ್ತಗಳ ಹೆಸರು, ಲಕ್ಷಣಗಳು, ಮಾಲಾವೃತ್ತ, ಗುಣ ಎಂಬ ಮಿಶ್ರವೃತ್ತ, ದ್ವಿಪದಿ, ಉತ್ಸವ ಮತ್ತು ಲಯೋತ್ತರವೃತ್ತಗಳು, ಉತ್ಸವ, ದಂಡಕ, ಸ್ಕಂದ (ಕಂದ), ರಗಳೆ, ಅಕ್ಕರ, ಷಟ್ಪದಿ, ತ್ರಿಪದಿ ಮುಂತಾದ ಅಚ್ಚಗನ್ನಡ ವೃತ್ತಗಳು, ಪ್ರಾಸಲಕ್ಷಣ–ಇಂಥ ಕೆಲವು ಛಂದೋವಿಷಯಗಳಲ್ಲಿ ಅದನ್ನು ಗಮನಿಸಬಹುದು. ಕನ್ನಡ ಪದ್ಯಲಕ್ಷಣವಾದ ಆದಿಪ್ರಾಸದಿಂದ ಘಟಿತವಾದ ಪದ್ಯರಚನೆ ಅಲ್ಲಲ್ಲಿ ಇರುವುದೂ ಈ ದೃಷ್ಟಿಯಿಂದ ಗಮನಾರ್ಹವಾದ್ದು. ಇವೆಲ್ಲ ಜಯಕೀರ್ತಿ ಕನ್ನಡಿಗನೆಂಬುದನ್ನು ಪ್ರಕಟಿಸುವ ಸಾಕ್ಷ್ಯಗಳು. ಸ್ವೀಯ ವಿಮರ್ಶೆಯಿಂದ ಅಲ್ಲಲ್ಲಿ ಈತ ಕನ್ನಡ ಛಂದಸ್ಸಿನ ವಿವೇಚನೆಗೆ ಪೂರಕವೂ ಪೋಷಕವೂ ಆದ ಹೊಸ ಅಂಶಗಳನ್ನು ಕೂಡಿಸಿರುವುದು ಮೆಚ್ಚತಕ್ಕದ್ದಾಗಿದೆ. (ಟಿ.ವಿ.ವಿ.)

**ಜಯಚಂದ್ರ**[1] **:** ಕ್ರಿ.ಶ. 9ನೆಯ ಶತಮಾನದಲ್ಲಿ ತ್ರಿಗರ್ತವನ್ನು (ಇಂದಿನ ಕಾಂಗ್ರಾ ಕಣಿವೆಯ ಪ್ರದೇಶ) ಆಳುತ್ತಿದ್ದ ಅರಸುಮನೆತನವೊಂದರ ಒಬ್ಬ ಅರಸ. ಜಯಚ್ಚಂದ್ರ ಎಂದೂ ಇವನು ಸಂಬೋಧಿತನಾಗಿದ್ದಾನೆ. ಈತನ ವಿಷಯವಾಗಿ ಹೆಚ್ಚಿನ ಐತಿಹಾಸಿಕ ವಿಷಯಗಳು ದೊರೆಯುವುದಿಲ್ಲ. ಕಾಂಗ್ರಾ ಜಿಲ್ಲೆಯ ಸಾಜನಾಥ ಎಂಬಲ್ಲಿ ದೊರೆತ ಎರಡು ಶಾಸನಗಳಲ್ಲಿ ಇವನ ಹೆಸರು ಉಕ್ತವಾಗಿದೆ. ಇವುಗಳ ಪ್ರಶಸ್ತಿಗಳನ್ನು ಬರೆದವನು ರಾಮ ಎಂಬ ಕವಿ–804ರಲ್ಲಿ. ಜಯಚಂದ್ರನ ಸಾಮಂತನೂ ಕೀರಗ್ರಾಮದ (ಆ ಜಿಲ್ಲೆಯ ಇಂದಿನ ಕೀರಗಾಂವ್) ರಾಜಾನಕನೂ ಆದ ಲಕ್ಷ್ಮಣಚಂದ್ರನೆಂಬವನ ಮತ್ತು ಅವನ ವಂಶದ ವರ್ಣನೆ ಇವುಗಳಲ್ಲಿದೆ. ತ್ರಿಗರ್ತದ ಅರಸನಾದ ಹೃದಯಚಂದ್ರನ ಮಗಳಾದ ಲಕ್ಷಣಿಕಾ ಎಂಬವಳನ್ನು ಲಕ್ಷ್ಮಣಚಂದ್ರನ ತಂದೆಯಾದ ಬಿಲ್ಹಣ ಮದುವೆಯಾದನೆಂದು ಇವುಗಳಲ್ಲಿ ಹೇಳಿದೆ. ಜಯಚಂದ್ರ ಹೃದಯಚಂದ್ರನ ಮಗನೂ, ಲಕ್ಷ್ಮಣಿಕೆಯ ಸೋದರನೂ ಆಗಿದ್ದಿರಬಹುದೆಂಬುದು ಈ ಪ್ರಶಸ್ತಿಗಳನ್ನು ಸಂಪಾದಿಸಿದ ಬ್ಯೂಲರರ ಅಭಿಪ್ರಾಯ. ಇದೇ ಮನೆತನದ ಪೃಥ್ವೀಚಂದ್ರ, ಅವನ ಮಗ ಭುವನಚಂದ್ರ ಎಂಬ ಇಬ್ಬರ ಹೆಸರುಗಳನ್ನು ಕಾಶ್ಮೀರದ ಕವಿಯಾದ ಕಲ್ಹಣ ತನ್ನ ರಾಜತರಂಗಿಣಿ ಗ್ರಂಥದಲ್ಲಿ ಹೆಸರಿಸಿದ್ದಾನೆ. ಕಾಶ್ಮೀರದ ಅರಸನಾದ ಶಂಕರವರ್ಮನಿಂದ ಪೃಥ್ವೀಚಂದ್ರ ಸೋಲಿಸಲ್ಪಟ್ಟನೆಂದು ಹೇಳಿದ್ದಾನೆ. (ಎಸ್.ಆರ್.)

**ಜಯಚಂದ್ರ**[2] **:** ಸ್ಥೂಲವಾಗಿ ಇಂದಿನ ಉತ್ತರಪ್ರದೇಶದ ಭೂಭಾಗವನ್ನು ಆಳುತ್ತಿದ್ದ ಗಾಹದ್ವಾಲ ಎಂಬ ಮನೆತನಕ್ಕೆ ಸೇರಿದ ಒಬ್ಬ ದೊರೆ. 12ನೆಯ ಶತಮಾನದ ಉತ್ತರಾರ್ಧದಲ್ಲಿ ಇದ್ದವ. ಜಯಚ್ಚಂದ್ರ ಎಂದೂ ಇವನಿಗೆ ಹೆಸರಿತ್ತು. ಇವನ ತಂದೆಯ ಹೆಸರು ವಿಜಯಚಂದ್ರ. 10ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಗಾಹದ್ವಾಲ ಮನೆತನದ ಅರಸರಿಗೆ ಈಗಿನ ಕನೋಜ್ ರಾಜಧಾನಿಯಾಗಿತ್ತು.

ಜಯಚಂದ್ರ 1170ರಲ್ಲಿ ಪಟ್ಟಕ್ಕೆ ಬಂದ. ಜಯಚಂದ್ರನಿಗೂ ನೆರೆಯ ರಾಜ್ಯವನ್ನಾಳುತ್ತಿದ್ದ ಚಾಹಮಾನ ಮನೆತನದ 3ನೆಯ ಪೃಥ್ವೀರಾಜನಿಗೂ ವೈಮನಸ್ಯವಿತ್ತೆಂದು ತಿಳಿದುಬರುತ್ತದೆ. ರಾಜಸ್ಥಾನದ ಚಾಂದ ಎಂಬುವನು ತನ್ನ ಪೃಥ್ವೀರಾಜ ರಾಸೋ ಎಂಬ ಕಾವ್ಯದಲ್ಲಿ ಇದನ್ನು ರಮ್ಯವಾಗಿ ಬಣ್ಣಿಸಿದ್ದಾನೆ. ಆತನ ಹೇಳಿಕೆಯಂತೆ, ಜಯಚಂದ್ರ ತನ್ನ ಮಗಳಾದ ಸಂಯೋಗಿತೆ ಅಥವಾ ಸಂಯುಕ್ತ ಎಂಬವಳ ಸ್ವಯಂವರವನ್ನೇರ್ಪಡಿಸಿ ಅದಕ್ಕೆ ಪೃಥ್ವೀರಾಜನನ್ನು ಬಿಟ್ಟು ಉಳಿದವರನ್ನೆಲ್ಲ ಆಹ್ವಾನಿಸಿದ. ಸಂಯುಕ್ತೆಯಲ್ಲಿ ಪ್ರಣಯಾಸಕ್ತನಾದ ಪೃಥ್ವೀರಾಜ ತನ್ನ ತೋಳಬಲದಿಂದ ರಾಜಕುಮಾರಿಯನ್ನು ಅಪಹರಿಸಿಕೊಂಡು ಹೋದ. ಪೃಥ್ವೀರಾಜ ರಾಸೋದಲ್ಲಿ ವರ್ಣಿಸಲಾಗಿರುವ ಈ ಘಟನೆಗೆ ಐತಿಹಾಸಿಕ ಆಧಾರಗಳಾವುವೂ ದೊರೆಯುವುದಿಲ್ಲ. ಜಯಚಂದ್ರ ಬಂಗಾಳದ ಲಕ್ಷ್ಮಣಸೇನನೊಡನೆಯೂ ಹೋರಾಡಿದ.

ಜಯಚಂದ್ರನ ಆಳ್ವಿಕೆಯ ಮೊದಲ ಭಾಗ ಸಾಮಾನ್ಯವಾಗಿ ಶಾಂತಿಯುತವಾಗಿತ್ತು. ಆದರೆ ಅದು ಘೋರ ವಿಪತ್ತಿನಲ್ಲಿ ಕೊನೆಗೊಂಡಿತು. ಮಹಮ್ಮದ್ ಘೋರಿ ದಿಲ್ಲಿಯನ್ನು ಗೆದ್ದು, ಚಾಹಮಾನರನ್ನು ಹತ್ತಿಕ್ಕಿ ಕನೌಜಿಗೆ ದಂಡೆತ್ತಿ ನಡೆದ. ವೈರದಿಂದಾಗಿ ಜಯಚಂದ್ರ ಚಾಹಮಾನ ಪೃಥ್ವೀರಾಜನಿಗೆ ಸಹಾಯ ಮಾಡದೆ ಹೋದ. ಕೊನೆಗೆ ವಿಪತ್ತು ಅವನ ಬಾಗಿಲಿಗೇ ಬಂತು. 1193ರಲ್ಲಿ ಘೋರಿ ಮತ್ತು ಜಯಚಂದ್ರರ ನಡುವೆ ಚಂದವಾರ ಎಂಬಲ್ಲಿ (ಆಗ್ರ–ಇಟಾವಗಳ ನಡುವೆ ಇರುವ ಈಗಿನ ಫಿರೋಜಾಬಾದ್) ಘೋರ ಯುದ್ಧ ನಡೆದು, ಜಯಚಂದ್ರ ಹತನಾದ. ಮುಸಲ್ಮಾನ ಸೈನಿಕರು ಅವನ ರಾಜ್ಯವನ್ನು ಲೂಟಿ ಮಾಡಿ, ಅದನ್ನು ವಶಪಡಿಸಿಕೊಂಡರು. ಜಯಚಂದ್ರನ ಮಗನಾದ ಹರಿಶ್ಚಂದ್ರ ಮುಸಲ್ಮಾನರಿಂದ ರಾಜ್ಯವನ್ನು ತಿರುಗಿ ಪಡೆಯುವುದರಲ್ಲಿ ಯಶಸ್ವಿಯಾದನಾದರೂ ಈ ಮನೆತನದ ಕೊನೆಯವನಾದ ಅಡಕ್ಕ ಮಲ್ಲನ ಕಾಲದಲ್ಲಿ ಅಲ್ತಮಿಷ್ ಗಾಹದ್ವಾಲ ರಾಜ್ಯವನ್ನು ಪೂರ್ಣವಾಗಿ ವಶಪಡಿಸಿಕೊಂಡ. ಜಯಚಂದ್ರ ಸಾಹಿತ್ಯಾಭಿಮಾನಿಯಾಗಿದ್ದ. ನೈಷಧೀಯ ಚರಿತಂ ಎಂಬ ಪ್ರಸಿದ್ಧ ಸಂಸ್ಕೃತಕಾವ್ಯದ ಕರ್ತೃವಾದ ಶ್ರೀಹರ್ಷ ಇವನ ಆಸ್ಥಾನದಲ್ಲಿದ್ದನೆಂದು ಪ್ರತೀತಿಯಿದೆ. (ಎಸ್.ಆರ್.)

**ಜಯಚಾಮರಾಜ ಒಡೆಯರು :** 1919–1974. ಮೈಸೂರು ಸಂಸ್ಥಾನದ ಮಾಜಿ ಮಹಾರಾಜರು, ಯದುವಂಶದ ಕೊನೆಯ ದೊರೆ. ತತ್ತ್ವಜ್ಞಾನಿ. ಸಂಗೀತಜ್ಞ, ರಾಜನೀತಿಜ್ಞ, ಉದಾರ ದಾನಿ. ಹುಟ್ಟಿದ್ದು 1919ರ ಜುಲೈ 18ರಂದು. ತಂದೆ ಯುವರಾಜ ಕಂಠೀರವ ನರಸಿಂಹರಾಜ ಒಡೆಯರು. ತಾಯಿ ಕೆಂಪು ಚಲುವಾಜಮ್ಮಣ್ಣಿ. ಆಧ್ಯಾತ್ಮಿಕ ಆಸಕ್ತಿಯನ್ನೂ ಸಂಗೀತದಲ್ಲಿ ಅಭಿರುಚಿಯನ್ನೂ ಉಂಟು ಮಾಡಿದವರು. ನಾಲ್ವಡಿ ಕೃಷ್ಣರಾಜ ಒಡೆಯರ್ ಇವರ ದೊಡ್ಡಪ್ಪ. ಪ್ರಾರಂಭಿಕ ಶಿಕ್ಷಣ ನಡೆದದ್ದು ರಾಜಮನೆತನದ ವಿಶೇಷ ಶಾಲೆಯಲ್ಲಿ. ತಮಗೆ ಸಂತಾನವಿಲ್ಲದಿದ್ದುದರಿಂದ ತಮ್ಮ ಕಿರಿಯ ಸಹೋದರರಾದ ನರಸಿಂಹರಾಜ ಒಡೆಯರವರ ಪುತ್ರರಾದ ಇವರನ್ನು ಪಟ್ಟಕ್ಕೇರಿಸುವ ಸಲುವಾಗಿ ಕೃಷ್ಣರಾಜ ಒಡೆಯರವರು ಇವರಿಗೆ ಇನ್ನೂ 15–16 ವರ್ಷ ವಯಸ್ಸಿದ್ದಾಗಲೇ ಮೈಸೂರಿನ ಲೋಕರಂಜನ ಮಹಲ್‌ನಲ್ಲಿ ಒಂದು ವಿಶೇಷ ಶಾಲೆ ಏರ್ಪಡಿಸಿ ಶಿಕ್ಷಣ ಕೊಡಿಸಿದರು. ಮುಂದೆ ಇವರು ತಮ್ಮ 19ನೆಯ ವಯಸ್ಸಿನಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿ ಪಡೆದರು (1938). ಕನ್ನಡ, ಇಂಗ್ಲಿಷ್ ಭಾಷೆಗಳ ಜೊತೆಗೆ ರಾಜನೀತಿ ಮತ್ತು ಅರ್ಥಶಾಸ್ತ್ರಗಳನ್ನು ಅಭ್ಯಸಿಸಿದರು.

ಉತ್ತಮ ಪಾಂಡಿತ್ಯಕ್ಕೆ ಮೀಸಲಾದ ಐದು ಬಹುಮಾನಗಳು, ಸುವರ್ಣಪದಕಗಳೊಂದಿಗೆ ಇವರಿಗೆ ಲಭಿಸಿದುವು. ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಹಿಸ್ಟಾರಿಕಲ್ ಅಸೋಸಿಯೇಷನ್ನಿನ ಗೌರವಾಧ್ಯಕ್ಷರೂ ಆಗಿದ್ದರು.

ಬನಾರಸ್ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪದವಿಯನ್ನೂ (1942), ಅಣ್ಣಾಮಲೈ ವಿಶ್ವವಿದ್ಯಾಲಯ ಡಿ.ಲಿಟ್. ಪದವಿಯನ್ನೂ (1955) ನೀಡಿ ಗೌರವಿಸಿದುವು. ಇದಕ್ಕೂ ಮುನ್ನ (1937) ಲಂಡನಿನ ಗಿಲ್ಡ್ ಹಾಲ್ ಸಂಗೀತಶಾಲೆಯ ಲೈಸೆನ್ಷಿಯೇಟ್ ಪದವೀಧರರಾಗಿದ್ದ ಇವರು ಲಂಡನಿನ ಟ್ರಿನಿಟಿ ಸಂಗೀತ ಕಾಲೇಜಿನ ಗೌರವ ಫೆಲೊ ಆದದ್ದು 1945ರಲ್ಲಿ. ಇವರ ಪಾಂಡಿತ್ಯ ಮತ್ತು ಪ್ರತಿಭೆಗಳನ್ನು ಮನಗಂಡು ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡ್ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್. ಪದವಿ ನೀಡಿ (1936) ಸನ್ಮಾನಿಸಿತು. ಬ್ರಿಟಿಷ್ ಸರ್ಕಾರ ಇವರಿಗೆ 1945ರಲ್ಲಿ ಜಿ.ಸಿ.ಎಸ್.ಐ. ಬಿರುದನ್ನೂ, 1946ರಲ್ಲಿ ಜಿ.ಸಿ.ಬಿ. ಬಿರುದನ್ನೂ ನೀಡಿತು.

ಇವರು ರಾಜ್ಯಶಾಸ್ತ್ರ, ಚರಿತ್ರೆ, ಅರ್ಥಶಾಸ್ತ್ರ ಮತ್ತು ಆಫ್ರಿಕನ್ ವಿಷಯಗಳಲ್ಲಿ ವಿಶೇಷ ಪರಿಣತಿ ಪಡೆದರು. ಒಳ್ಳೆಯ ಕುದುರೆಸವಾರರು, ಟೆನಿಸ್ ಮತ್ತು ರ‍್ಯಾಕೆಟ್ಸ್ ಆಟವಾಡುವುದರಲ್ಲಿ ನಿಪುಣರೂ ನುರಿತ ಶಿಕಾರಿಯೂ ಆಗಿದ್ದರು. ಓದಿನಂತೆ ಸಂಗೀತದಲ್ಲೂ ಇವರಿಗೆ ಅಮಿತ ಆಸಕ್ತಿ. ಪಿಯಾನೋ ಬಾರಿಸುವುದರಲ್ಲಿ ಒಳ್ಳೆಯ ಪರಿಣತಿ ಪಡೆದಿದ್ದರು. ಪಾಶ್ಚಾತ್ಯ ಸಂಗೀತದಲ್ಲಿ ಇವರಿಗೆ ವಿಶೇಷ ಆಸಕ್ತಿ ಇತ್ತು. ಅದನ್ನು ಕುರಿತಂತೆ ಭಾರತದಲ್ಲೇ ಅತಿ ದೊಡ್ಡದೆನಿಸುವ ಗ್ರಂಥಭಂಡಾರವನ್ನಿವರು ತಮ್ಮ ಅರಮನೆಯಲ್ಲಿ ಕೂಡಿಸಿದರು. ವಿಶ್ವದ ಹೆಸರಾಂತ ಸಂಗೀತಗಾರರೊಂದಿಗೆ ಇವರಿಗೆ ಸಂಪರ್ಕವಿತ್ತು. ಖ್ಯಾತ ಆಪೆರಗಳ ಕರ್ತೃವಾದ ಜರ್ಮನಿಯ ರಿಚರ್ಡ್ ವ್ಯಾಗ್ನರ್ (1813–1883), ಪ್ರಸಿದ್ಧ ಜರ್ಮನ್ ಸಂಗೀತಗಾರ ಲಡ್ವಿಗ್ ಫಾನ್ ಬೇತೋವನ್ (1770–1827), ಬಾಕ್ ಮನೆತನದ ಸಂಗೀತ ವಿದ್ವಾಂಸರು ಮುಂತಾದವರು ಇವರ ಮೆಚ್ಚಿನ ಸಂಗೀತಗಾರರಾಗಿದ್ದರು.

ಭಾರತೀಯ ಸಂಸ್ಕೃತಿ ಮತ್ತು ತತ್ತ್ವಶಾಸ್ತ್ರದ ಅನಧಿಕೃತ ರಾಯಭಾರಿಯಾಗಿ ಇವರು ಅನೇಕ ಸಲ ದೇಶ ವಿದೇಶಗಳ ಪ್ರವಾಸ ಕೈಗೊಂಡಿದ್ದರು. ಆಗ ಇವರು ಅಲ್ಲಲ್ಲಿ ಮಾಡಿದ ಭಾಷಣಗಳು ವಿಚಾರಪರಿಪ್ಲುತವಾಗಿವೆ. ವನ್ಯಮೃಗಗಳ ಬಗ್ಗೆ ಇವರಿಗೆ ಆಸಕ್ತಿ ಇತ್ತು. ಭಾರತೀಯ ವನ್ಯಮೃಗಗಳ ಮಂಡಳಿಯ ಅಧ್ಯಕ್ಷರಾಗಿದ್ದುದಲ್ಲದೆ ಮೈಸೂರು ನಗರದಲ್ಲಿನ ತಮ್ಮ ಸ್ವಂತ ಮೃಗಾಲಯವನ್ನು ಸರ್ಕಾರದ ಅಧೀನಕ್ಕೆ ವಹಿಸಿಕೊಟ್ಟು ಅದರ ಅಭಿವೃದ್ಧಿಗೆ ಕಾರಣರಾದರು.

ಜಯಚಾಮರಾಜರು ಮೈಸೂರಿನ ಪಟ್ಟಕ್ಕೆ ಬಂದದ್ದು 1940ರ ಸೆಪ್ಟೆಂಬರ್ 8ರಂದು. ವಿಶಾಲ ಕರ್ನಾಟಕವಾಗಬೇಕೆಂಬ ಕನಸನ್ನು ಇವರು ಬಹು ಹಿಂದೆಯೇ ಕಂಡರು. ಈ ಕನಸು ನನಸಾಗುವುದಾದಲ್ಲಿ ತಮ್ಮ ರಾಜತ್ವವನ್ನು ತ್ಯಜಿಸಲೂ ಸಿದ್ಧವೆಂದು ಹೇಳಿದರು. ಇವರು ಮೈಸೂರು ಸಂಸ್ಥಾನದ ಅರಸರಾಗಿದ್ದುದು 1940 ರಿಂದ 1947ರ ವರೆಗೆ. ಈ ಸಮಯದಲ್ಲಿ ಇವರು ಲಲಿತಕಲೆಗಳಿಗೆ ನೀಡಿದ ಪ್ರೋತ್ಸಾಹ ಸ್ಮರಣೀಯ. ಇವರ ಆಡಳಿತಕಾಲದಲ್ಲಿ ಜಯಚಾಮರಾಜ ಗ್ರಂಥಮಾಲಾ ಎಂಬ ಯೋಜನೆ ರೂಪುಗೊಂಡಿತು. ಈ ಯೋಜನೆಯ ಅಂಗವಾಗಿ ವೇದಶಾಸ್ತ್ರ, ಪುರಾಣ ಮುಂತಾದ ಉದ್ಗ್ರಂಥಗಳು ಪ್ರಸಿದ್ಧ ಪಂಡಿತರಿಂದ ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾದುವು. ಸ್ವಾತಂತ್ರ್ಯಾನಂತರ ಭಾರತ ಒಕ್ಕೂಟದಲ್ಲಿ ತಮ್ಮ ಸಂಸ್ಥಾನವನ್ನು ವಿಲೀನಗೊಳಿಸಲು ಮುಂದಾದವರಲ್ಲಿ ಇವರೇ ಮೊದಲಿಗರು. ಭಾರತ ಗಣರಾಜ್ಯವಾದಾಗ ಇವರು ರಾಜಪ್ರಮುಖರಾದರು (1950–56). ರಾಜ್ಯಗಳ ಪುನರ್ವಿಂಗಡಣೆಯಾದಾಗ ವಿಶಾಲ ಮೈಸೂರಿನ (ಇಂದಿನ ಕರ್ನಾಟಕ) ಪ್ರಥಮ ರಾಜ್ಯಪಾಲರಾದರು (1956). ಈ ಹುದ್ದೆಯಲ್ಲಿರುವಾಗ ಅವರು ಸಂಬಳ ಸ್ವೀಕರಿಸಲಿಲ್ಲ. ಮುಂದೆ 1964ರಲ್ಲಿ ಮದ್ರಾಸಿನ ರಾಜ್ಯಪಾಲರಾಗಿ ನೇಮಕಗೊಂಡು ಕೆಲವು ಕಾಲ ಆ ಹುದ್ದೆಯಲ್ಲೂ ಇದ್ದರು.

**ವಿಜಯಯಾತ್ರೆಯ ಅಂಗವಾಗಿ ಪಲ್ಲಕ್ಕಿಯಲ್ಲಿ ಒಡೆಯರು**

ಮೈಸೂರು ನಗರದಲ್ಲಿರುವ ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆಗಾಗಿ ಇವರು ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿಕೊಟ್ಟರು. ಕೇಂದ್ರೀಯ ಆಹಾರ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಮುಂತಾದವುಗಳಿಗಾಗಿ ನಿವೇಶನ ಮತ್ತು ಕಟ್ಟಡಗಳನ್ನು ಉದಾರವಾಗಿ ದಾನ ನೀಡಿದರು. ಇದಲ್ಲದೆ ತಮ್ಮ ಇನ್ನಿತರ ಕಟ್ಟಡ, ನಿವೇಶನಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ದಾನ ಮಾಡಿರುವುದೂ ಉಂಟು.

ಮೈಸೂರು ನಗರದಲ್ಲಿ ಇವರು ಆಚರಿಸಿಕೊಂಡು ಬರುತ್ತಿದ್ದ ವೈಭವೋಪೇತ ದಸರಾ ಉತ್ಸವಕ್ಕೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಹತ್ತ್ವ ಬಂದಿತ್ತು. ಆಗ ಪ್ರತಿನಿತ್ಯ ಸಂಜೆ ಅರಮನೆಯಲ್ಲಿ ನಡೆಯುತ್ತಿದ್ದ ರಾಜಸಭೆಗಳು, ಮಹಾನವಮಿಯ ದಿನದ ಆಯುಧಪೂಜೆಗಳು, ವಿಜಯದಶಮಿಯ ದಿನದ ಜಂಬೂಸವಾರಿ–ಇವೆಲ್ಲವೂ ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸಿತ್ತು.

ಇವರಿಗೆ ಇಬ್ಬರು ಮಡದಿಯರು, ಸತ್ಯಪ್ರೇಮಕುಮಾರಿ ಮತ್ತು ತ್ರಿಪುರಸುಂದರಮ್ಮಣ್ಣಿ. ಐದು ಮಂದಿ ಹೆಣ್ಣು ಮಕ್ಕಳು. ಒಬ್ಬನೇ ಪುತ್ರ–ಶ್ರೀಕಂಠದತ್ತ ನರಸಿಂಹರಾಜ ಒಡೆಯರ್.

ತಮ್ಮ ಕೊನೆಯ ದಿವಸಗಳನ್ನು ಪುರಾಣ ಮತ್ತು ಧಾರ್ಮಿಕ ಗ್ರಂಥಗಳ ಶ್ರವಣದಲ್ಲೇ ಕಳೆಯುತ್ತಿದ್ದ ಇವರು ಶ್ವಾಸಕೋಶದ ಉರಿಯೂತಕ್ಕೆ ಬಲಿಯಾಗಿ 1974ರ ಸೆಪ್ಟೆಂಬರ್ 23ರಂದು ಬೆಂಗಳೂರಿನಲ್ಲಿ ನಿಧನರಾದರು. (ಎ.ವಿ.ವಿ.)

ಅರಮನೆಯ ನುರಿತ ಪಂಡಿತರಲ್ಲಿ ಇವರು ಸಂಸ್ಕೃತ ಭಾಷೆಯನ್ನೂ ತತ್ತ್ವಗ್ರಂಥಗಳನ್ನೂ ಆಳವಾಗಿ ಅಭ್ಯಾಸ ಮಾಡಿದರು. ಹಠಯೋಗವನ್ನೂ ಸ್ವಲ್ಪ ಅಭ್ಯಾಸ ಮಾಡಿದ್ದುಂಟು. ಅನೇಕ ಸಂಸ್ಕೃತ ಗ್ರಂಥಗಳನ್ನು ಭಾಷಾಂತರಿಸಿದ್ದಾರೆ. ಅಲ್ಲದೆ ಇವರು ರಚಿಸಿದ ಕೃತಿಗಳಲ್ಲಿ ಮುಖ್ಯವಾದವು : ದತ್ತಾತ್ರೇಯ–ದಿ ವೇ ಅಂಡ್ ದಿ ಗೋಲ್ (1956), ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್, ಭಾರತೀಯ ಸೌಂದರ್ಯಶಾಸ್ತ್ರದ ಹಲವು ಮುಖಗಳು,

ದಿ ರಿಲಿಜನ್ ಅಂಡ್ ದಿ ಮ್ಯಾನ್, ಆತ್ಮ ಮತ್ತು ಬ್ರಹ್ಮ. ಇವರ ಆಳವಾದ ತತ್ತ್ವಶಾಸ್ತ್ರಾಧ್ಯಯನದ ಫಲವೇ ಆಂಗ್ಲ ಭಾಷೆಯಲ್ಲಿ ರಚಿತವಾಗಿರುವ ದತ್ತಾತ್ರೇಯ–ದಿ ವೇ ಅಂಡ್ ದಿ ಗೋಲ್. ಇದಕ್ಕೆ ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಅವರು ಮುನ್ನುಡಿ ಬರೆದಿದ್ದಾರೆ. ಇದು ಇವರು ರಚಿಸಿರುವ ಮೇಲ್ಮಟ್ಟದ ಗ್ರಂಥವೆನಿಸಿದೆ.

ದತ್ತಾತ್ರೇಯ ತತ್ತ್ವದ ಸ್ವರೂಪವನ್ನು ಕುರಿತು ಗ್ರಂಥಕರ್ತರ ಕಲ್ಪನೆ ಹೀಗಿದೆ:

ದತ್ತಾತ್ರೇಯ ಮಾನವರ ಆತ್ಮಗಳ ಬೇಟೆಗಾರ. ಆತನ ಬಳಿಯಿರುವ ನಾಲ್ಕು ನಾಯಿಗಳೆಂದರೆ ನಾಲ್ಕು ವೇದಗಳು. ಇವು ಸತ್ಯವನ್ನು ರಕ್ಷಿಸುತ್ತವೆ. ದತ್ತಾತ್ರೇಯನ ಕಾವಿ ಬಣ್ಣದ ಉಡುಪು ಸಂನ್ಯಾಸದ ಸಂಕೇತ ; ತ್ಯಾಗ ಮತ್ತು ನಿರ್ಲಿಪ್ತತೆಗಳಿಲ್ಲದೆ ಪರಮ ಸತ್ಯದ ಸಾಕ್ಷಾತ್ಕಾರ ಅಸಂಭವ ಎಂಬುದನ್ನು ಇದು ಸೂಚಿಸುತ್ತದೆ.

ಏಕ ಏವ ತ್ರಿಧಾ ಸ್ಮೃತಃ ಎಂಬಂತೆ ದತ್ತಾತ್ರೇಯನ ಶರೀರ ಒಂದು, ಮುಖಗಳು ಮೂರು. ಇವು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನು ಪ್ರತಿನಿಧಿಸುತ್ತವೆ. ಕೈಗಳು ಆರು. ಬಲಗಡೆಯ ಮೂರು ಕೈಗಳಲ್ಲಿ ತ್ರಿಶೂಲ, ಜಪಮಾಲೆ ಮತ್ತು ಕಮಲಗಳೂ ಎಡಗಡೆಯ ಮೂರು ಕೈಗಳಲ್ಲಿ ಚಕ್ರ, ಶಂಖ, ಭಿಕ್ಷಾಪಾತ್ರೆಗಳೂ ಇವೆ. ದತ್ತಾತ್ರೇಯ ಒಂದೇ ಸತ್ಯಸ್ವರೂಪದ ಮೂರು ಕ್ರಿಯೆಗಳ (ಸೃಷ್ಟಿ, ಸ್ಥಿತಿ, ಲಯ) ಸಂಕೇತ. ಕೈಗಳಲ್ಲಿನ ಶಂಖಚಕ್ರಗಳು ವಿಷ್ಣುವನ್ನೂ ತ್ರಿಶೂಲ ಭಿಕ್ಷಾಪಾತ್ರೆಗಳು ಶಿವನನ್ನೂ, ಕಮಲ ಜಪಮಾಲೆಗಳು ಬ್ರಹ್ಮನನ್ನೂ ಸಂಕೇತಿಸುತ್ತವೆ. ಈ ತ್ರಿಮೂರ್ತಿಗಳ ಸಂಯೋಜಿತ ರೂಪವೇ ಭಾರತೀಯ ತತ್ತ್ವಶಾಸ್ತ್ರದ ಮೂರ್ತ ಸ್ವರೂಪ. ಇದೇ ದತ್ತಾತ್ರೇಯ ತತ್ತ್ವದ ಗುರಿ.

ಈ ಗ್ರಂಥದ ಐದು ಪ್ರಕರಣಗಳಲ್ಲಿ ಕ್ರಮವಾಗಿ ಮಾನವನಿಗೆ ಈಶ್ವರಾನುಗ್ರಹದ ಅಗತ್ಯತೆ, ದತ್ತಾತ್ರೇಯನ ಪರತತ್ತ್ವ ಸ್ವರೂಪ, ದತ್ತಾತ್ರೇಯ ಉಪೇಯ ಮತ್ತು ಉಪಾಯ ಎರಡೂ ಆಗಿದ್ದಾನೆ ಎಂಬುದು. ದತ್ತಾ ದ್ವೈತಸ್ವರೂಪ ಮತ್ತು ಜೀವನ್ಮುಕ್ತ ಗೀತೆ ಇವು ಬರುತ್ತವೆ. ಅನಂತರ ಅವಧೂತ ಗೀತೆಗಳ ಭಾಷಾಂತರ, ಕಡೆಯಲ್ಲಿ ಇದಕ್ಕೆ ಹಿನ್ನೆಲೆಯಾಗಿ ದತ್ತಾದ್ವೈತದ ತುಲನಾತ್ಮಕ ವಿಮರ್ಶೆ ಬಂದಿವೆ.

ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್ ಎಂಬುದು ಈ ದಿಶೆಯಲ್ಲಿ ಮತ್ತೊಂದು ಅವಲೋಕನೀಯ ಗ್ರಂಥ. ಇದು ಧರ್ಮ ಮತ್ತು ಗೀತೆ ಹಾಗೂ ಭಗವದ್ಗೀತೆಯಲ್ಲಿನ ಕ್ಷೇತ್ರ ಮತ್ತು ಕ್ಷೇತ್ರಜ್ಞ ಎಂಬ ಕಲ್ಪನೆಗಳ ಸ್ವರೂಪ ಎಂಬ ಎರಡು ಪ್ರಬಂಧಗಳ ಸಂಕಲನ.

ಒಡೆಯರ ಅಭಿಪ್ರಾಯದಂತೆ ಇಂದಿನ ಜಗತ್ತು ಐಹಿಕಕ್ಕೆ ಹೆಚ್ಚು ಬೆಲೆ ಕೊಡುತ್ತದೆ. ಇದರಿಂದ ಶಾಂತಿ ಸಮಾಧಾನಗಳು ಮರೆಯಾಗಿವೆ. ಗೊಂದಲ, ಅಶಾಂತಿ ತಾಂಡವವಾಡುತ್ತಿವೆ. ಇಂಥ ಸ್ಥಿತಿಯಲ್ಲಿ ಜಗತ್ತಿಗೆ ಶಾಂತಿಯ ಬೆಳಕನ್ನು ನೀಡಬಲ್ಲುದು ಭಾರತೀಯ ಸಂಸ್ಕೃತಿ ಮಾತ್ರ. ಎಲ್ಲ ಪ್ರಾಪಂಚಿಕ ಘಟನೆಗಳ ಹಿಂದೆ ಭಗವಂತನ ಅಭಯಹಸ್ತವೊಂದಿದೆ. ಅದು ನಿರ್ದೇಶನ ಮತ್ತು ಸಮಾಧಾನ ರೂಪದ್ದು. ಜಗತ್ತಿಗೆ ನಂಬಿಕೆ ನೀಡಿ ಧ್ಯಾನ ಮತ್ತು ಧರ್ಮದ ಅಖಂಡ ನಂಬಿಕೆಯ ತತ್ತ್ವಗಳ ಮಹತ್ವಪೂರ್ಣ ವಿಚಾರಧಾರೆಯನ್ನು ಹರಿಸಿದ್ದು ಭಾರತ. ಜಗತ್ತನ್ನು ವಿಜ್ಞಾನ ವಿಂಗಡಿಸಿ, ವಿಶ್ಲೇಷಿಸಿ, ಅಣು–ಪರಮಾಣು ಎಂದು ವಿಭಾಗಿಸಿ ನೋಡುತ್ತದೆ ; ಮಾನವನನ್ನು ಬೃಹತ್ ವಿಶ್ವದ ಹೊರಗೆ ನಿಲ್ಲಿಸಿ ನೋಡಲು ಯತ್ನಿಸುತ್ತದೆ; ಆದರೆ ಭಾರತವು ಇಡಿಯ ಸೃಷ್ಟಿಯನ್ನು ಪೂರ್ಣವೊಂದರ ಘಟಕವಾಗಿ ಕಂಡಿದೆ. ಅದೇ ಉಪನಿಷತ್ತಿನ ಪೂರ್ಣಮದಃ ಪೂರ್ಣಮಿದಂ ಎಂಬುದು. ವಿಶ್ವದ ಒಂದೊಂದು ಅಣುವೂ ಒಬ್ಬನೇ ಬ್ರಹ್ಮನ ಬೇರೆ ಬೇರೆ ರೂಪವೆಂದು ತಿಳಿದರೆ ಮಾನವರಲ್ಲಿ ಪರಸ್ಪರ ಘರ್ಷಣೆಗೆ ಅವಕಾಶವಿರದು.

ರಾಜಕೀಯ, ಆರ್ಥಿಕ, ವೈಜ್ಞಾನಿಕ ಹಾಗೂ ತಾತ್ತ್ವಿಕ ಸಮಸ್ಯೆಗಳಿಂದ ಪರಸ್ಪರ ಸೌಹಾರ್ದ ಕಳಚುತ್ತಿರುವ ಈ ಸಮಯದಲ್ಲಿ ಭಾರತೀಯ ವಿಚಾರಧಾರೆ ಎಷ್ಟು ಅಗತ್ಯ ಎಂದು ತೋರಿಸುವುದೇ ಈ ಸಂಕಲನದ ಮುಖ್ಯ ಉದ್ದೇಶ.

**ಸಂಗೀತಾಸಕ್ತಿ :** ಒಡೆಯರಿಗೆ ಸಂಗೀತವೆಂದರೆ ಪಂಚಪ್ರಾಣ. ಪ್ರತಿನಿತ್ಯ ಅವರು ಶಿವಪೂಜೆಗೆ ಕುಳಿತಾಗ ಸುಮಾರು 4–5 ಗಂಟೆಗಳ ವರೆಗೆ ಅರಮನೆಯ ಸಂಗೀತ ವಿದ್ವಾಂಸರು ಸರದಿಯ ಮೇಲೆ ಹಾಡುತ್ತಿದ್ದರು. ಈ ಕಾರ್ಯಕ್ರಮ ಒಂದೊಂದು ದಿನ ಬೆಳಗಿನ ಜಾವ 3–4 ಗಂಟೆಯಿಂದಲೇ ಪ್ರಾರಂಭವಾಗುತ್ತಿದ್ದುದು ಅಪರೂಪವಲ್ಲ. ಅನೇಕ ವಿದ್ವಾಂಸರನ್ನಿವರು ಆಸ್ಥಾನವಿದ್ವಾಂಸರನ್ನಾಗಿ ಮಾಡಿ ಗೌರವಿಸಿದುದೂ ಉಂಟು. ಸಂಸ್ಕೃತದಲ್ಲಿ ಇವರು ರಚಿಸಿರುವ ಸಂಗೀತಕೃತಿಗಳು ಸುಮಾರು 94 ಎನ್ನಲಾಗಿದೆ. ಇವುಗಳಲ್ಲಿ ಅನೇಕವು ಇನ್ನೂ ಅಚ್ಚಾಗಿಲ್ಲ. ಆದರೆ ಅನೇಕವನ್ನು ವಿದ್ವಾಂಸರು ಬಳಸಿಕೊಂಡು ಹಾಡುತ್ತಿದ್ದಾರೆ. ಪ್ರಾಯಃ ದೀಕ್ಷಿತ ಸಂಪ್ರದಾಯದವೆಂದು ಹೇಳಲಾಗಿರುವ ಇವರ ಕೀರ್ತನೆಗಳಲ್ಲಿ ಅಕ್ಷರಕ್ಕೆ ಹೆಚ್ಚು ಪ್ರಾಧಾನ್ಯ. ವಿದ್ಯಾ ರಾಜಯೋಗೀಂದ್ರ ಮುಂತಾದ ಸಂಕೇತಗಳು ಇವರ ಕೀರ್ತನೆಗಳ ಅಂಕಿತಗಳು. ಅವುಗಳಲ್ಲಿ ಕೆಲವು ಹೀಗಿವೆ:

1 ಶ್ರೀಮಹಾಗಣಪತಿಂ ಭಜೇಹಂ(ಅಠಾಣ, ಆದಿತಾಳ)
2 ಲಂಬೋದರ ಪಾಹಿ ಮಾಂ (ನಾರಾಯಣ ಗೌಳ, ಮಿಶ್ರಜಾತಿ, ತ್ರಿಪುಟ ತಾಳ)
3 ಚಿಂತಯಾಮಿ ಜಗದಂಬಾ (ಹಿಂದೋಳ, ಮಿಶ್ರಜಾತಿ, ಝಂಪೆ ತಾಳ)
4 ಸರಸ್ವತೀಂ ಭಗವತೀಂ ನಮಾಮ್ಯಹಂ (ಹಂಸವಿನೋದಿನಿ, ಮಿಶ್ರ ಜಾತಿ, ಝಂಪೆ ತಾಳ)
5 ಬ್ರಹ್ಮಾಂಡವಲಯೇ, ಮಾಯೇ (ಮಾಂಡ್, ಆದಿತಾಳ)
6 ಪನ್ನಗಶಯನ ಪರಿಪಾಹಿ ಮಾಂ (ಬೃಹಸ್ಪತಿಪ್ರಿಯ)
7 ಶಿವಶಿವಶಿವ ಭೋ

ಈಗ ಬಳಕೆಯಲ್ಲಿರುವ ರಾಗಗಳಲ್ಲದೆ ಬೃಹಸ್ಪತಿಪ್ರಿಯ ಮುಂತಾದ ಕೆಲವು ನೂತನ ರಾಗಗಳನ್ನೂ ಇವರು ಸೃಜಿಸಿದ್ದಾರೆ ಎನ್ನಲಾಗಿದೆ.

ಇವರ ಕೃತಿಗಳು ನಾದಮಾಧುರ್ಯಕ್ಕೆ, ಅರ್ಥಾಭಿವ್ಯಕ್ತಿಗೆ ಹೆಸರಾಗಿವೆ. (ಎಂ.ಎನ್.)

**ಜಯಚಾಮರಾಜೇಂದ್ರ ಚಿತ್ರಶಾಲೆ :** ಮೈಸೂರು ನಗರದಲ್ಲಿರುವ ಪ್ರಸಿದ್ಧ ಚಿತ್ರಶಾಲೆ. ಇದನ್ನು ಮೊದಲಿಗೆ ಜಗನ್ಮೋಹನ ಚಿತ್ರಶಾಲೆ ಎನ್ನುತ್ತಿದ್ದರು. ಇದಿರುವುದು ಮುಮ್ಮಡಿ ಕೃಷ್ಣರಾಜ ಒಡೆಯರು 1861ರಲ್ಲಿ ಕಟ್ಟಿಸಿದ ಜಗನ್ಮೋಹನ ಅರಮನೆಯಲ್ಲಿ ಮೈಸೂರು ಮಹಾರಾಜರುಗಳ ಸತತ ಪ್ರಯತ್ನದಿಂದ ಈ ಚಿತ್ರಶಾಲೆಯಲ್ಲಿ ಉತ್ತಮ ಚಿತ್ರಗಳು ಮತ್ತು ಶಿಲ್ಪಕೃತಿಗಳು ಸಂಗ್ರಹವಾಗಿವೆ.

ಚಿತ್ರಶಾಲೆ ಇರುವ ಕಟ್ಟಡ ಎರಡು ಉಪ್ಪರಿಗೆಗಳಿಂದ ಕೂಡಿದೆ. ಕೆಳಭಾಗದಲ್ಲಿ ನಾಲ್ಕು ವಿಶಾಲವಾದ ಹಜಾರಗಳುಂಟು. ಪ್ರತಿಯೊಂದು ಹಜಾರಕ್ಕೂ ಲಗತ್ತಿಸಿದಂತೆ ಎಡಬಲಗಳಲ್ಲಿ ಎರಡೆರಡು ಕೋಣೆಗಳಿವೆ. ಮೊದಲನೆಯ ಮತ್ತು ಎರಡನೆಯ ಉಪ್ಪರಿಗೆಗಳಲ್ಲಿ ಕ್ರಮವಾಗಿ ಮೂರು ಮತ್ತು ಎರಡು ಹಜಾರಗಳು ಮತ್ತು ಅವಕ್ಕೆ ಸೇರಿದಂತೆ ಕಿರಿಯ ಕೋಣೆಗಳೂ ಇವೆ.

ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿಯೇ ಚಿತ್ರಿಸಲಾದ ಭಿತ್ತಿಚಿತ್ರಗಳನ್ನು ಎರಡನೆಯ ಉಪ್ಪರಿಗೆಯ ಮೂರು ಕೋಣೆಗಳಲ್ಲಿ ಕಾಣಬಹುದು. ಮೊದಲ ಉಪ್ಪರಿಗೆಯ ನೆಲದ ಭಾಗವನ್ನು ಮರದಿಂದ ಅಳವಡಿಸಲಾಗಿದೆ. ಹಿಂದೆ ಇದು ನೃತ್ಯಾಲಯವಾಗಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರ ಸವಿನೆನಪಿಗಾಗಿ 1915ರ ಸುಮಾರಿಗೆ ಈ ಚಿತ್ರಶಾಲೆಯನ್ನು ವ್ಯವಸ್ಥೆಗೊಳಿಸಲಾಯಿತು. ಇದರಲ್ಲಿ ಅಂದಿಗೆ, ಕಾಲಕಾಲಕ್ಕೆ ಅರಮನೆಯಲ್ಲಿ ಸಂಗ್ರಹವಾಗಿದ್ದ ಕಲಾವಸ್ತುಗಳನ್ನೆಲ್ಲ ಕಲೆಹಾಕಲಾಯಿತು. ಬಾಲರಾಜ ಅರಸ್ ಈ ಸಂಗ್ರಹಾಲಯದ ಮೇಲ್ವಿಚಾರಕರಾಗಿದ್ದವರಲ್ಲಿ ಮೊದಲಿಗರು. ಅನಂತರ ಜನಾಬ್ ಷಾ ಎಂಬುವರು ವಸ್ತುಸಂಗ್ರಹಾಲಯಕ್ಕೆ ನಾಲ್ವಡಿಯವರ ಆದೇಶದಂತೆ ಚಿತ್ರಗಳನ್ನೂ ಸೇರಿಸಿದರು. ಈ ವಸ್ತುಸಂಗ್ರಹಾಲಯವನ್ನು ಅಲ್ಲಿಂದಾಚೆ ಜಗನ್ಮೋಹನ ಚಿತ್ರಶಾಲೆ ಎಂದು ಕರೆಯಲಾಯಿತು. ದೇಶೀಯ ಕಲಾವಿದರ ಕಲಾಕೃತಿಗಳ ಜೊತೆಗೆ ವಿವಿಧ ರಾಜ್ಯಗಳ ಕಲಾವಿದರಿಂದ ರಚಿತವಾದ ಕಲಾವಸ್ತುಗಳಿಗೂ ಇಲ್ಲಿ ಅವಕಾಶ ಕಲ್ಪಿಸಿದ್ದರಿಂದ 1924ರ ಹೊತ್ತಿಗೆ ಇದಕ್ಕೆ ಅಖಿಲಭಾರತ ಮಟ್ಟದ ವ್ಯಾಪ್ತಿ ದೊರೆತಿತು.

ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆಯನ್ನು ಒಳಗೊಂಡಿರುವ ಜಗನ್ಮೋಹನ ಅರಮನೆ

1932ರಿಂದ 1937ರವರೆಗೆ ಪ್ರತಿವರ್ಷವೂ ಅನೇಕ ಉತ್ತಮ ಚಿತ್ರಗಳನ್ನು ಕೊಳ್ಳಲಾಯಿತು. ಮೆಕ್ ಆಲ್ಫೀ ಎಂಬಾತ ಕನ್ನಡ ಕಲಾವಿದ ಕೆ. ವೆಂಕಟಪ್ಪನವರ ಸಹಾಯದಿಂದ ಸಂಗ್ರಹಾಲಯವನ್ನು ಸುವ್ಯವಸ್ಥೆಗೊಳಿಸಿ ಚಿತ್ರಪಟಗಳನ್ನು ಹೊಸತಾಗಿ ಜೋಡಿಸಿ ಪ್ರದರ್ಶಿಸಿದ. ತಿರುವಾಂಕೂರಿನ ಲಲಿತಕಲಾ ಸಂಸ್ಥೆಯ ಮುಖ್ಯಸ್ಥನಾಗಿದ್ದ ಜೇಮ್ಸ್. ಎಚ್. ಕಸಿನ್ಸ್ ಈ ಚಿತ್ರಶಾಲೆಯ ಅಧಿಕಾರಿಗಳಾಗಿದ್ದ ಮದನ ಗೋಪಾಲರಾಜ ಅರಸರೊಂದಿಗೆ ಕೆಲಸ ಮಾಡಿ ಇಲ್ಲಿನ ಕಲಾಕೃತಿಗಳನ್ನು ಮತ್ತೊಮ್ಮೆ ಜೋಡಿಸಿ ಹೊಸ ರೂಪಕೊಟ್ಟರು (1942). ಅವನ ಸಂಪಾದಕತ್ವದಲ್ಲಿ ಚಾರಿತ್ರಿಕ ವ್ಯಕ್ತಿಗಳ ರೂಪಚಿತ್ರಗಳ ಪಟ್ಟಿಯೊಂದು ಪ್ರಕಟವಾಯಿತು. ಈ ಚಿತ್ರಶಾಲೆಯಲ್ಲಿ ಹೈದರ್, ಟಿಪ್ಪೂ ಮತ್ತು ಇಂಗ್ಲಿಷ್ ಅಧಿಕಾರಿಗಳ ಅನೇಕ ಚಿತ್ರಗಳು ಇದ್ದುವು. ಅವನ್ನೆಲ್ಲ ತೆಗೆದುಕೊಂಡು ಹೋಗಿ (1942) ಕಾವೇರಿ ನದಿಯ ತೀರದಲ್ಲಿದ್ದ

ಸ್ಕಾಟ್ ಬಂಗಲೆಯ ಚಿತ್ರಶಾಲೆಯಲ್ಲಿ ಪ್ರದರ್ಶಿಸಲಾಯಿತು. 1950ರಲ್ಲಿ ಸ್ಕಾಟ್ ಬಂಗಲೆಯಲ್ಲಿದ್ದ ಚಿತ್ರಗಳೆಲ್ಲ ಮತ್ತೆ ಜಯಚಾಮರಾಜೇಂದ್ರ ಚಿತ್ರಶಾಲೆಗೇ ಮರಳಿ ಬಂದುವು. ಮೈಸೂರು ದಸರಾ ಕಲಾಪ್ರದರ್ಶನ ನಡೆಯುತ್ತಿದ್ದಾಗ ಅಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ ಪಡೆದ ಉತ್ತಮ ಚಿತ್ರಗಳನ್ನೂ ಖರೀದಿಸಿ ಸೇರಿಸಲಾಯಿತು. 1946ರಲ್ಲಿ ಚಿತ್ರಶಾಲೆಯ ಮೇಲ್ವಿಚಾರಕರಾಗಿ ಬಂದ ಚೆನ್ನರಾಜ ಅರಸರು ಪುನಃ ಕಲಾಕೃತಿಗಳನ್ನು ಬೇರೆಬೇರೆಯಾಗಿ ವಿಂಗಡಿಸಿ ಸುಂದರವಾಗಿ ಜೋಡಿಸಲು ಏರ್ಪಾಡು ಮಾಡಿದರು. ಇದರಿಂದಾಗಿ ಭಾರತದ ಚಿತ್ರಕಲಾ ಶೈಲಿಯ ಸಂಪ್ರದಾಯದ ವಿವಿಧ ರೀತಿಯ ಚಿತ್ರಗಳನ್ನು ವೀಕ್ಷಿಸುವ ಅವಕಾಶ ಏರ್ಪಟ್ಟಿತು.

ನಾಲ್ವಡಿ ಕೃಷ್ಣರಾಜ ಒಡೆಯರ ವಿವಾಹ ಮಹೋತ್ಸವಕ್ಕಾಗಿ ಬಂಗಲೆಯ ಮುಂಭಾಗವನ್ನು ಸಭಾಂಗಣವಾಗಿ 1900ರಲ್ಲಿ ವಿಸ್ತಾರಗೊಳಿಸಲಾಯಿತು. ಅಲ್ಲಿಂದೀಚೆಗೆ ಅಲ್ಲಿ ಪ್ರಜಾಪ್ರತಿನಿಧಿ ಸಭೆಗಳೂ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭಗಳೂ ಅನೇಕವರ್ಷ ಜರುಗುತ್ತ ಬಂದುವು. ನಾಲ್ವಡಿ ಪ್ರಭುಗಳು ಲಾರ್ಡ್ ಕರ್ಜನ್ನನೊಂದಿಗೆ ದರ್ಬಾರು ನಡೆಸಿದ್ದೂ ಇದೇ ಸಭಾಂಗಣದಲ್ಲಿಯೇ (1902).

ಭಕ್ಷಿ ನರಸಪ್ಪಾಜಿಯರವರ ಮಕ್ಕಳಾದ ಚಾಮರಾಜ ಒಡೆಯರವರನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ದತ್ತುಮಗನಾಗಿ ಸ್ವೀಕರಿಸುತ್ತಿರುವುದು-ಕರ್ನಾಟಕ ಚಿತ್ರಶೈಲಿಗೊಂದು ನಿದರ್ಶನ

ಚಿತ್ರಶಾಲೆ ಇರುವುದು ಸಭಾಂಗಣದ ಹಿಂಬದಿಯ ಮಹಲಿನಲ್ಲಿ. ಚಿತ್ರಗಳಲ್ಲಿ ಬಹುಪಾಲು ಕನ್ನಡನಾಡಿನ ಅರಸು ಮನೆತನಕ್ಕೆ ಸೇರಿದವಾಗಿವೆ. ಈ ಕಲಾಗಾರಕ್ಕೆ ಹಾಗೂ ಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದ ರಾಜರಲ್ಲಿ ಮುಮ್ಮಡಿ ಮತ್ತು ನಾಲ್ವಡಿ ಕೃಷ್ಣರಾಜರನ್ನು ಹೆಸರಿಸಬೇಕು. ಇವರ ಕಾಲದಲ್ಲೇ ಈ ಚಿತ್ರಶಾಲೆಗೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ, ಬೆಂಬಲ ದೊರೆತದ್ದು.

ಮುಮ್ಮಡಿ ಕೃಷ್ಣರಾಜರ ಆಳ್ವಿಕೆಯ ಕಾಲದಲ್ಲಿ ಕನ್ನಡದ ಅನೇಕ ಚಿತ್ರಕಾರರು ರಚಿಸಿದ ಭಿತ್ತಿಚಿತ್ರಗಳನ್ನು ಎರಡನೆಯ ಉಪ್ಪರಿಗೆಯಲ್ಲಿ ಕಾಣಬಹುದು. ಅವರ ಕಾಲದ ಚಿತ್ರಕಾರರಲ್ಲಿ ಶಿಕಾರಿಪುರದ ಚಿತ್ರಗಾರ ಮನೆತನದ ತಿಪ್ಪಯ್ಯ, ಮೈಸೂರಿನ ಕೊಂಡಯ್ಯ, ವೀರಣ್ಣ, ಬಸಣ್ಣ,ಯಲ್ಲಪ್ಪ ಮುಂತಾದವರು ಮುಖ್ಯರು. ಇವರ ಅನೇಕ ಚಿತ್ರಗಳು ಈಗಲೂ ಮಾಸದೆ ಚಿರನೂತನವಾಗಿವೆ.

ಕರ್ನಾಟಕದ ಚಿತ್ರಶೈಲಿಯನ್ನು ಮೆರೆಯುವ ಈ ಭಿತ್ತಿಚಿತ್ರಗಳನ್ನು ಗಮನಿಸುವುದು ಇಲ್ಲಿ ಮುಖ್ಯ. ಎರಡನೆಯ ಉಪ್ಪರಿಗೆಯ ಮೂರು ಕೋಣೆಗಳ ಗೋಡೆಗಳೆಲ್ಲ ವರ್ಣಮಯವಾಗಿವೆ. ಎಲ್ಲಿ ನೋಡಿದರಲ್ಲಿ ಮುಮ್ಮಡಿ ಪ್ರಭುಗಳ ಆಳ್ವಿಕೆಯ ಸಂಕೇತದ ಚಿತ್ರಗಳೇ ಇವೆ. ಮುಮ್ಮಡಿಯವರ ವಂಶವೃಕ್ಷ ಎಲೆಯಾಕರದಲ್ಲಿ ಚಿತ್ರಿತವಾಗಿದೆ. ಆದಿಯಿಂದ ಮುಮ್ಮಡಿಯವರವರೆಗಿನ ವಂಶಾವಳಿಯನ್ನು ನಿರ್ದೇಶಿಸುವ ಸಂತಾನಾಂಬುಜ, ವಿಜಯದಶಮಿಯಂದು ಆರು ಆನೆಗಳನ್ನು ಕಟ್ಟಿದ ರಥದಲ್ಲಿ ಮುಮ್ಮಡಿಯವರ ಜಂಬೂ ಸವಾರಿಯ ಚಿತ್ರ, ಅಲ್ಲದೆ ಕಿತ್ತೂರು, ಗೊತ್ತಗಾಲ, ಚಟ್ನಹಳ್ಳಿಗಳಲ್ಲಿ ನಡೆದ ಹುಲಿ ಷಿಕಾರಿ, ಚಾಮರಾಜನಗರದ ಕಾಡಿನಲ್ಲಿ ಪಟ್ಟದಾನೆಯಾದ ಕೆಂಪನಂಜಯ್ಯನನ್ನು ಹಿಡಿದ ದೃಶ್ಯ, ರಾಜರು ಚದುರಂಗದಾಟವನ್ನು ಆಡುತ್ತಿರುವ ದೃಶ್ಯ, ಅನೇಕ ಸುಂದರಿಯರೊಂದಿಗೆ ಮುಮ್ಮಡಿಯವರು ಆಚರಿಸುತ್ತಿರುವ ವಸಂತೋತ್ಸವದ ದೃಶ್ಯ-ಇವೇ ಮುಂತಾದ ಭಿತ್ತಿಚಿತ್ರಗಳಿವೆ. ಮುಮ್ಮಡಿಯವರ ಎಡಬಲ ಭಾಗಗಳಲ್ಲಿ ರಾಜಬಂಧುಗಳ ಮತ್ತು ಅಧಿಕಾರಿಗಳ ಅಲ್ಲದೆ ಪೇಷ್ವೆಗಳ ಹಾಗೂ ರಣಜಿತ್ ಸಿಂಗ್, ನಾನಾ ಫಡ್ನವೀಸ್, ಕೊಡಗಿನ ವೀರರಾಜ, ತಂಜಾವೂರಿನ ರಾಜರುಗಳ ಇತರ ನವಾಬರನೇಕರ ಸ್ವಾಭಾವಿಕವಾದ ರೂಪಚಿತ್ರಗಳನ್ನು ಬಿಡಿಸಲಾಗಿದೆ.

ಇದಲ್ಲದೆ ಪ್ರಸನ್ನಪಾರ್ವತಿ, ದುರದುಂಡಿ, ಸರ್ವಮಂಗಳ, ಜಗದಾಂಬ, ಪುಟ್ಟ ಚಾಮುಂಡಿ, ವರಚಾಮುಂಡಿ, ಚೆಲುವೆ ಚಾಮುಂಡಿಯರೆಂಬ ಪಟ್ಟದ ಹಸುಗಳನ್ನೂ, ವಿಜಯ ಎಂಬ ಪಟ್ಟದ ಕುದುರೆಯನ್ನೂ ಸರ್ವಚಿತ್ರರಂಜಿನಿ, ಸರ್ವಾಂಗಸುಂದರಿ ಎಂಬ ಮೋಹಕ ಕನ್ಯೆಯರನ್ನೂ ಅಲ್ಲಿ ಚಿತ್ರಿಸಲಾಗಿದೆ.

ಶಿಕಾರಿಪುರದ ತಿಪ್ಪಯ್ಯ (ತಿಪ್ಪಾಜಪ್ಪ) ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಬಹುಸೂಕ್ಷ್ಮವಾಗಿ ಬಿಡಿಸಿದ (1886) ಭೀಷ್ಮಾರ್ಜುನ ಯುದ್ಧದ ಸುಂದರ ಚಿತ್ರ ಈ ಸಂಗ್ರಹಾಲಯದಲ್ಲೇ ಅಪರೂಪವಾದದ್ದು.

ದೈವಿಕ ಚಿತ್ರಗಳ ಮೇಲೆ ಚಿತ್ರಕಾರ ತನ್ನ ಹೆಸರನ್ನು ಬರೆದಿರುವುದಿಲ್ಲ. ಅವನ ಹೆಸರು ಸಿಕ್ಕಬೇಕಾದರೆ ಏನಿದ್ದರೂ ಲೌಕಿಕ ಚಿತ್ರಗಳ ಅಡಿಯಲ್ಲಿ ಮಾತ್ರ. ಮುಮ್ಮಡಿಯವರ ಚಿತ್ರಪಟದಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಪಾದಚಾರಕನಾದ ಕೊಂಡಯ್ಯ ಬರೆದು ಒಪ್ಪಿಸಿದ್ದು-ಎಂದಿದೆ. ಈ ಚಿತ್ರ ಕೆಳಭಾಗದ ಮೊದಲ ಕೋಣೆಯಲ್ಲಿದೆ. ಇದೇ ಶೈಲಿಯ ಮತ್ತೊಂದು ಹೆಸರಿಸಬಹುದಾದ ಕೃತಿಯೆಂದರೆ ಶಿವ ಎಂಬ ಎರಡು ಕನ್ನಡ ಅಕ್ಷರಗಳನ್ನೂ ರೇಖೆಗಳಾಗಿ ಬಳಸಿಕೊಂಡು ಮುಮ್ಮಡಿ ಭೂಪರು ಸಿಂಹಾಸನಾರೂಢರಾಗಿರುವಂತೆ ಚಿತ್ರಿಸಿರುವುದು ಅತ್ಯಮೋಘವೆನಿಸುತ್ತದೆ. ಇದನ್ನು ವೀಕ್ಷಿಸಲು ಭೂತಕನ್ನಡಿಯೇ ಬೇಕು.

ಮುಮ್ಮಡಿಯವರ ಅನಂತರ ಬಂದ ಚಾಮರಾಜರ ಕಾಲದ ಪ್ರಮುಖ ಕಲಾವಿದರಲ್ಲಿ ಕೆ.ವೆಂಕಟಪ್ಪನವರ ತಾತಂದಿರಾದ ದುರ್ಗದ ವೆಂಕಟಪ್ಪನವರೂ ಒಬ್ಬರು. ಇವರು ರಚಿಸಿದ ಚಿತ್ರಗಳನ್ನೂ ಇಲ್ಲಿ ಕಾಣಬಹುದು.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೊರೆತ ಕಲಾಪ್ರೋತ್ಸಾಹದಿಂದಾಗಿ ಒಳನಾಡು ಹಾಗೂ ಹೊರನಾಡುಗಳಿಂದ ಕಲಾವಿದರು ರಾಜಾಶ್ರಯ ಪಡೆದು ಕಲಾಸೇವೆ ಸಲ್ಲಿಸಿದರು. ಇವರ ಕಾಲದಲ್ಲಿ ಪಾಶ್ಚಾತ್ಯ ತಂತ್ರದ ಅನೇಕ ಕೃತಿಗಳು ಬೆಳಕು ಕಂಡಿವೆ. ಅವನ್ನು ಬಹುಪಾಲು ಪಾಶ್ಚಾತ್ಯ ಹಾಗೂ ಭಾರತೀಯ ಕಲಾವಿದರು ರಚಿಸಿದ್ದಾರೆ. ರಾಜಾಶ್ರಯ ಪಡೆದ ಹೊರನಾಡಿನ ಕಲಾವಿದರಾದ ಜರ್ಮನಿಯ ಜೆರಾರ್ಡ್‌ಟನ್, ಇಂಗ್ಲೆಂಡಿನ ಸ್ಟರ್ಲಿನ್, ಶಿಲ್ಪಿ ಕೋಲ್ಟನ್, ವೆಕ್ಸ್‌ಲರ್ ಅಲ್ಲದೆ ತಿರುವಾಂಕೂರಿನ ರಾಜಾ ರವಿವರ್ಮ ಮತ್ತು ಅವನ ಸೋದರ ರಾಮವರ್ಮ ಮುಂತಾದವರ ತೈಲವರ್ಣದ ಬೃಹದಾಕಾರದ ಚಿತ್ರಗಳನ್ನು ಸಂಗ್ರಹಿಸಿ ಈ ಕಲಾಗಾರದ ಒಂದು ಕೋಣೆಯಲ್ಲಿ ಪ್ರದರ್ಶಿಸಲಾಗಿದೆ. ರಜಪೂತ, ಮೊಗಲಾಯಿ, ಬಂಗಾಳಿ, ಮುಂತಾದ ಶೈಲಿಯ ಅನೇಕ ಉತ್ತಮ ಕೃತಿಗಳನ್ನು ದಸರಾ ಕಲಾ ಪ್ರದರ್ಶನದಿಂದ ಕೊಂಡು ಈ ಕಲಾಭಂಡಾರಕ್ಕೆ ಸೇರಿಸಿದುದು ಈ ಕಾಲದಲ್ಲೇ. ಅಭ್ಜೀಜ್, ಕೆ. ವೆಂಕಟಪ್ಪ, ಕೆ. ಕೇಶವಯ್ಯ ಮುಂತಾದ ಕನ್ನಡ ಕಲಾವಿದರೂ ಇವರ ಆಶ್ರಯದಲ್ಲಿದ್ದು ಉತ್ತಮ ಕೃತಿಗಳನ್ನು ನೀಡಿದ್ದಾರೆ.

ಇಲ್ಲಿಯ ಕಲಾಕೃತಿಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು : ತೈಲ ಹಾಗೂ ಜಲವರ್ಣದ ಚಿತ್ರಗಳಲ್ಲಿ ರೂಪಸಾದೃಶ್ಯದ ಕೃತಿಗಳು: ವಸ್ತುನಿಷ್ಠ ಚಿತ್ರಣಗಳು; ಪ್ರಕೃತಿ ದೃಶ್ಯಗಳು; ಹತ್ತಿಯಲ್ಲಿ ಮಾಡಿದ, ಗಂಧದ ಮರದಲ್ಲಿ, ಅಮೃತಶಿಲೆಯಲ್ಲಿ ಕೆತ್ತಿದ ಕರಕೌಶಲದ ವಿವಿಧ ಸುಂದರ ವಸ್ತುಗಳು; ಕತ್ತಿ, ಗುರಾಣಿ, ಫಿರಂಗಿ, ಮೊದಲಾದ ಯುದ್ಧಸಾಮಗ್ರಿಗಳು; ಕಲಾವಸ್ತುಗಳು, ಹಿಂದಿನ ಕಾಲದ ವಸ್ತ್ರಾಭರಣಗಳು; ವಿವಿಧ ರೂಪದ ನಾನಾ ಸಂಗೀತ ವಾದ್ಯಗಳು.

ಸಂಗ್ರಹಾಲಯದ ಕೆಳಭಾಗದ ಹನ್ನೊಂದು ಕೋಣೆಗಳಲ್ಲೂ ಮೊದಲ ಉಪ್ಪರಿಗೆಯ 8 ಕೋಣೆಗಳಲ್ಲೂ ಚಿತ್ರಗಳನ್ನೂ ಪ್ರದರ್ಶಿಸಲಾಗಿದೆ. 1961ರಲ್ಲಿ ಜಿ. ವೆಂಕಟಾಚಲಂ ಅವರು ಕಲಾವಿದ ರಾಮನರಸಯ್ಯನವರ ಸಹಾಯದೊಂದಿಗೆ ಕಲಾಕೃತಿಗಳನ್ನು ಹೊಸದಾಗಿ ವಿಂಗಡಿಸಿ ಜೋಡಿಸಿದರು.

ಸದಾ ನೆನಪಿನಲ್ಲಿರುವ ಮುಖ್ಯ ಕೃತಿಗಳಲ್ಲಿ ಮುಂಬಯಿಯ ಹಲ್ದಂಕರ್ ಅವರು ರಚಿಸಿದ, ಬೆಳಗುವ ದೀಪ ಹಿಡಿದು ನಿಂತ ಯುವತಿಯ ಚಿತ್ರ ಪ್ರಮುಖವಾದದ್ದು; ಇದು ತುಂಬ ಜನಪ್ರಿಯತೆ ಗಳಿಸಿದೆ. ಅಬನೀಂದ್ರನಾಥ ಠಾಕೂರರ ಶಿಷ್ಯರಾದ ಕೆ. ವೆಂಕಟಪ್ಪನವರ

ಭಾರತೀಯ ಶೈಲಿಯ ನಾಲ್ಕು ಚಿತ್ರಗಳಲ್ಲಿ ವೀಣೆ ಹುಚ್ಚು ಮತ್ತು ಮಹಾಶಿವಾರಾತ್ರಿ ಬಹು ಪ್ರಸಿದ್ಧ ಕೃತಿಗಳು. ಇಲ್ಲಿನ ಸೂಕ್ಷ್ಮ ಕುಸುರಿ ಕಲೆಗಾರಿಕೆ ವರ್ಣಸಂಯೋಜನೆ ಅಪ್ರತಿಮವಾದುದು. ಪಾಶ್ಚಾತ್ಯ ಶೈಲಿಯ ಮಹಾಶಿವರಾತ್ರಿ ಚಿತ್ರದಲ್ಲಿ ಕಲಾವಿದ ತನ್ನತನವನ್ನು ವ್ಯಕ್ತಪಡಿಸಿದ್ದಾನೆ.



ಹಿಮಾಲಯ-ಜಲವರ್ಣ ಚಿತ್ರ : ಕಲಾವಿದ ನಿಕೊಲಾಸ್ ರೋರಿಕ್‌ನ ಕೃತಿ

ಇವುಗಳ ಜೊತೆಗೆ ರಾಜಾ ರವಿವರ್ಮನ ಬೃಹದಾಕಾರದ ಚಿತ್ರಗಳು ಇಲ್ಲಿವೆ. ಈತ ಪಾಶ್ಚಾತ್ಯ ಸಂಪ್ರದಾಯದಲ್ಲಿ ಹೆಸರಾದ ಭಾರತದ ಕಲಾವಿದ. ಇಲ್ಲಿರುವ ಇವನ ಹದಿನಾರು ಪೌರಾಣಿಕ ಹಾಗೂ ಚಾರಿತ್ರಿಕ ತೈಲವರ್ಣದ ಚಿತ್ರಗಳು ಎಂಥವರ ಹೃದಯವನ್ನೂ ಸೆಳೆಯದಿರವು. ಎರಡನೆಯ ಉಪ್ಪರಿಗೆಯ ಹಿಂಬದಿಯ ಹಜಾರದಲ್ಲಿರುವ ಇವನ



ಕೃಷ್ಣದೌತ್ಯ-ರವಿವರ್ಮನ ಕಲಾಕೃತಿ

ಚಿತ್ರಗಳಲ್ಲಿ ಬೆಳದಿಂಗಳ ಮೋಹಿನಿ. ಮಲಬಾರ್ ಹೆಣ್ಣು, ಹಾಲು ಕುಡಿಯುವ ಮಗು, ದಾನ ಮಾಡುವ ಸ್ತ್ರೀ, ಶ್ರೀರಾಮನ ಸಾಗರದರ್ಪಹರಣ, ಕೀಚಕನ ಮನೆಯತ್ತ ಸಾಗಿರುವ ದ್ರೌಪದಿ-ಸೈರಂಧ್ರಿ, ಪತ್ರಲೇಖೆ ಶಕುಂತಲ, ಮತ್ಸ್ಯಗಂಧಿ, ಹಂಸಗೀತೆ, ರಾವಣ ಜಟಾಯು ವಧೆ, ಇಂದ್ರಜಿತು ವಿಜಯ, ಕೃಷ್ಣದೌತ್ಯ, ರಾಮಬಲರಾಮ ಮುಂತಾದವು ಅಮೋಘವಾಗಿವೆ.

ಹರಿಶ್ಚಂದ್ರ ತನ್ನ ಮಡದಿ ಮಕ್ಕಳನ್ನು ಮಾರುವ ದೃಶ್ಯದ ಚಿತ್ರವನ್ನು ರಚಿಸಿದವ ರಾಮವರ್ಮ. ಚಿತ್ರಶಾಲೆಯ ಎಡಭಾಗದ ಮಹಾದ್ವಾರವನ್ನು ಪ್ರವೇಶಿಸಿದಾಗ ಮುಮ್ಮಡಿಯವರ ಹುಟ್ಟುಹಬ್ಬದ ಮತ್ತು ಚಾಮರಾಜರ ದಸರಾ ಮೆರವಣಿಗೆಯ ಚಿತ್ರಗಳು ಕಾಣುತ್ತವೆ. ನಾಲ್ವಡಿಯವರ ದರ್ಬಾರು ಚಿತ್ರವೂ ಬೆಳ್ಳಿಯ ಮೇಲೆ, ಗಾಜಿನ ಮೇಲೆ ರಚಿತವಾದ ಚಾರಿತ್ರಿಕ ಸನ್ನಿವೇಶಗಳ ಉಬ್ಬಚ್ಚಿನ ಚಿತ್ರಗಳು ಆಕರ್ಷಕವಾಗಿವೆ.

ಸಭಾಂಗಣದ ನಡುವೆ ರೇಷ್ಮೆಯ, ಕಾಗೆಬಂಗಾರದ ಜಪಾನೀ ಕೃತಿಗಳಿವೆ. ಪಕ್ಕದಲ್ಲೇ ಹೈದರ್, ಟಿಪ್ಪುಗಳಿಗೆ ಸೇರಿದ ಲಿತೋ ಹಾಗೂ ಛಾಯಾಚಿತ್ರಗಳೂ ಮೈಸೂರು, ಹೈದರಾಬಾದು, ತಿರುವಾಂಕೂರು ಮುಂತಾದ ಅರಸರ ಛಾಯಾಚಿತ್ರಗಳು ಇವೆ.

ಮೊದಲ ಒಳಾಂಗಣಗಳಿಗೆ ಬಂದರೆ ಅಲ್ಲಿ ಮೈಸೂರಿನ ರಾಜರುಗಳ ಬೃಹದಾಕಾರದ ತೈಲವರ್ಣದ ಚಿತ್ರಗಳೂ ಕೆಲವು ಅಮೃತಶಿಲೆಯಲ್ಲಿನ ಅರ್ಧ ದೇಹಾಕೃತಿಗಳೂ ಜೊತೆಜೊತೆಯಾಗಿ ಕನ್ನಡ ಕಲಾವಿದರು ರಚಿಸಿರುವ ರೂಪಚಿತ್ರಗಳೂ ಇವೆ. ಪ್ರಸಿದ್ಧ ಆಂಗ್ಲ ಚಿತ್ರಕಾರ ಸ್ಟರ್ಲಿಂಗ್ 1853ರಲ್ಲಿ ಚಿತ್ರಿಸಿದ, ಮುಮ್ಮಡಿಯವರೊಡನೆ ಇಂಗ್ಲಿಷರ ದರ್ಬಾರು ಚಿತ್ರ ಸೊಗಸಾಗಿದೆ. ಚಿತ್ರಕಾರ ತನ್ನನ್ನೂ ಈ ಚಿತ್ರದಲ್ಲಿ ರೂಪಿಸಿಕೊಂಡಿರುವುದು ಒಂದು ವೈಶಿಷ್ಟ್ಯ.

ಮತ್ತೊಂದು ಒಳಾಂಗಣದಲ್ಲಿ ಖ್ಯಾತ ಚಿತ್ರಕಾರರ ವೈಕ್ಸ್ ಸ್ಲರ್ ಮತ್ತು ಜರಾಲ್ಡೀನ್ ರಚಿಸಿದ ನಾಲ್ವಡಿಯವರ ಚಿತ್ರಗಳು ಅಮೋಘವಾಗಿವೆ. ಉಡ್‌ವಿಲ್ ಎಂಬ ಚಿತ್ರಕಾರ ಚಾಮರಾಜ ಒಡೆಯರ ಹುಟ್ಟುಹಬ್ಬದ ಮೆರವಣಿಗೆಯ ಚಿತ್ರವನ್ನು ರಚಿಸಿದ್ದಾನೆ. ಚಾಮರಾಜರ ಪಟ್ಟಾಭಿಷೇಕದ ಚಿತ್ರ ರಚಿಸಿದವ ಕರ್ನಾಟಕದ ವೆಂಕಟಸುಬ್ಬಯ್ಯ. ಅಲ್ಲದೆ ಅಜೀಜ್, ಕೇಶವಯ್ಯ, ನಾಗರಾಜು, ರಾಮನರಸಯ್ಯ ಮುಂತಾದವರು ರಾಜರುಗಳ ಚಿತ್ರಗಳನ್ನು ಬರೆದಿದ್ದಾರೆ. 1900ರಲ್ಲಿ ನಡೆದ ನಾಲ್ವಡಿ ಕೃಷ್ಣರಾಜರ ವಿವಾಹ ಮಹೋತ್ಸವದ ಚಿತ್ರವನ್ನು ವೈಕ್ಸ್‌ಸ್ಲರ್ ತುಂಬ ಶ್ರಮದಿಂದ ಸ್ವಾಭಾವಿಕವಾಗಿ ರೂಪಿಸಿದ್ದಾನೆ.

ಕೆಳಗಿನ ಮೂರನೆಯ ಒಳಾಂಗಣದಲ್ಲಿ ಪಾಶ್ಚಾತ್ಯ ತಂತ್ರದ ಅನೇಕ ತೈಲವರ್ಣ ಚಿತ್ರಗಳಿವೆ; ಗಾಜಿನ ಕಲಾವಸ್ತುಗಳಿವೆ, ಮಣ್ಣಿನ ಪ್ರತಿಮೆಗಳಿವೆ. ಆನೆಗಳನ್ನು ಹಿಡಿಯುವ ಖೆಡ್ಡಾದ ಮೂರು ಚಿತ್ರಗಳನ್ನು ರಾಮವರ್ಮ ರಚಿಸಿದ್ದಾನೆ. ಸೈನ್ಯಾಧಿಪತಿ ಸ್ಕಾಟ್, ರೆಂಬ್ರಾಂಟ್, ಗ್ಲ್ಯಾಡ್‌ಸ್ಟನ್, ಜೇಮ್ಸ್ ಗೋರ್ಡನ್ ಮತ್ತು ವೆಲ್ಲೆಸ್ಲಿ ಮುಂತಾದವರ ರೂಪಚಿತ್ರಗಳಿವೆ. ವಿಶ್ವವಿಖ್ಯಾತ ಕಲಾವಿದ ಟಿಷನ್ ಹಾಗೂ ರೂಬನ್ಸರ ಚಿತ್ರಗಳೂ ಇಲ್ಲಿವೆ. ರೆಂಬ್ರಾಂಟನ ಚಿತ್ರಗಳನ್ನು ಕಲಾವಿದ ಎನ್.ಜಿ.ಪಾವಂಜೆ ಸ್ವಾಭಾವಿಕವಾಗಿ ನಕಲು ಮಾಡಿದ್ದಾರೆ. ಅವೂ ಅಲ್ಲಿವೆ. ಈ ಒಳಾಂಗಣಕ್ಕೆ ಲಗತ್ತಿಸಿರುವ ಸುಮಾರು ಏಳು ಕೋಣೆಗಳಲ್ಲಿ ರೋರಿಕ್‌ನ ಚಿತ್ರಗಳನ್ನೂ, ರಜಪೂತ, ಮೊಗಲಾಯಿ ಶೈಲಿಯ, ಕನ್ನಡ ಶೈಲಿಯ ಚಿತ್ರಗಳನೇಕವನ್ನೂ ಕಾಣುತ್ತೇವೆ. ರೋರಿಕ್ ಚಿತ್ರಗಳ ಕೋಣೆಯಲ್ಲಿ ಹಿಮಾಲಯ, ಲಡಾಕ್ ಪ್ರದೇಶದ ಆರು ಪ್ರಕೃತಿಚಿತ್ರಗಳನ್ನು ಪ್ರದರ್ಶಿಸಲಾಗಿದೆ. ರಜಪೂತ ಮತ್ತು ಮೊಗಲಾಯಿ ತಂತ್ರದ ಮೂವತ್ತೆರಡು ಚಿತ್ರಗಳನ್ನು ಹಿಂಬದಿಯ ಕೋಣೆಯಲ್ಲಿರಿಸಲಾಗಿದೆ.

ಕೆಳಗಡೆಯ ಮೊದಲ ಹಜಾರದ ಬಲಕೋಣೆಗೆ ಬಂದು ಅಲ್ಲಿನ ಹಂತಗಳನ್ನು ಏರಿ ಮೇಲುಪ್ಪರಿಗೆಗೆ ಹೋಗುವಾಗ ಹದಿನೈದು ಜಲವರ್ಣದ ನಿಸರ್ಗಚಿತ್ರಗಳನ್ನು ಕಾಣುತ್ತೇವೆ. ಲಖ್‌ನೌ, ಗುಜರಾತ್, ಮದ್ರಾಸು, ಆಂಧ್ರ, ಶಾಂತಿನಿಕೇತನ, ನವದೆಹಲಿ, ಕಲ್ಕತ್ತ, ಕೇರಳ, ಅಜ್ಮೀರ್, ಬೆಂಗಳೂರು ಮತ್ತು ಮೈಸೂರು ಮುಂತಾದ ಕಡೆಯ ಪ್ರಖ್ಯಾತ ಕಲಾವಿದರಿಂದ ರಚಿತವಾದ 110 ಚಿತ್ರಗಳು ಮೊದಲ ಉಪ್ಪರಿಗೆಯಲ್ಲಿವೆ. ಇವುಗಳಲ್ಲಿ ಚಾರಿತ್ರಿಕ ಸಂಯೋಗ ಚಿತ್ರಗಳು ಹೆಚ್ಚಿನವು; ಕೆಲವು ಪ್ರಕೃತಿ ಚಿತ್ರಗಳು.

ವೆಂಕಟಪ್ಪನವರ ಐದು ಚಿತ್ರಗಳಿಗೇ ಒಂದು ಕೋಣೆ ಮೀಸಲಾಗಿದೆ. ಅಲ್ಲಿ ಬಂಗಾಳೀ ಶೈಲಿಯ ಭಾರತೀಯ ಸಂಪ್ರದಾಯದ ಚಿತ್ರಗಳೂ ಕೆಲವಿವೆ. ಶಾಂತಿನಿಕೇತನದ ಗಗನೇಂದ್ರನಾಥ ಠಾಕುರ್, ಅಬನೀಂದ್ರನಾಥ ಠಾಕುರ್, ಬ್ಯಾನರ್ಜಿ ಮತ್ತು ಕಲ್ಕತ್ತದ ಪ್ರಮೋದಕುಮಾರ ಚಟರ್ಜಿಯವರಿಂದ ರೂಪಿತವಾದ ಚಿತ್ರಗಳಿವು.

ಕರ್ನಾಟಕದ ಕಲಾವಿದರ ಕೃತಿಗಳಿಗೇ ಒಂದು ಪ್ರತ್ಯೇಕ ಕೋಣೆ ಇದೆ. ಮುಂಬಯಿಯ ಎಸ್.ಎಲ್. ಹಲ್ದಂಕರ್ ಪ್ರಸಿದ್ಧ ಕೃತಿಯಾದ ಬೆಳಗುವ ದೀಪ ಹಿಡಿದಿರುವ ಸ್ತ್ರೀ ಬಿಟ್ಟರೆ ಉಳಿದ ಚಿತ್ರಗಳೆಲ್ಲ ಕೇಶವಯ್ಯ, ಸುಬ್ಬಕೃಷ್ಣ, ರಾಮಚಂದ್ರ, ವೀರಪ್ಪ, ಪಿ.ಆರ್.ತಿಪ್ಪೇಸ್ವಾಮಿ, ರಾಮನರಸಯ್ಯ ಮುಂತಾದವರವು.

ಪಾರಸಿ ಸಂಪ್ರದಾಯದ ಚಿತ್ರ ರಚಿಸುವ ಲಖನೌನ ರಹಮಾನ್ ಚುಗ್ತಾಯ್‌ನ ಒಂಬತ್ತು ಚಿತ್ರಗಳು ಬೇರೊಂದು ಕೋಣೆಯಲ್ಲಿವೆ.

ಅನಂತರ ರಂಗಮಹಲಿಗೆ ಬರುವಾಗ ಹಂತಗಳ ಕೋಣೆಯ ಗೋಡೆಯಲ್ಲಿ ತೂಗಹಾಕಿರುವ ಹದಿನಾರು ಜಲವರ್ಣದ ಕೃತಿಗಳನ್ನು ಮರೆಯುವಂತಿಲ್ಲ. ಮಹಲಿಗೆ ಕಾಲಿಟ್ಟೊಡನೆ ವಿವಿಧ ಸಂಗೀತವಾದ್ಯಗಳನ್ನು ನೋಡುತ್ತೇವೆ. ಅದರ ಪಕ್ಕದ ಸಭಾಂಗಣದ ಭಿತ್ತಿಗಳೆಲ್ಲ ಕರ್ನಾಟಕ ಶೈಲಿಯ ಚಿತ್ರಗಳಿಂದ ತುಂಬಿಹೋಗಿವೆ. ಅಲ್ಲದೆ ಅಲ್ಲಿ ರಾಜರುಗಳು ವಿನೋದಕ್ಕಾಗಿ ಇಸ್ಪೀಟನಂತೆ ಆಡಲು ಬಳಸುತ್ತಿದ್ದ ಗಂಜೀಫದ ಎಲೆಗಳಿವೆ.

ಉಪ್ಪರಿಗೆಯಿಂದ ಕೆಳಭಾಗದ ಹಿಂಬದಿಯ ನಾಲ್ಕನೇ ಗಾಜಿನ ಪಡಸಾಲೆಯಲ್ಲಿ ಅನೇಕ ಕಲಾತ್ಮಕವಾದ ಕಂಚು, ಹಿತ್ತಾಳೆ, ತಾಮ್ರ, ಗಂಧ, ಮತ್ತು ದಂತದ ವಸ್ತುಗಳಿವೆ. ಕೆಲವು ಅಪರೂಪದ ಕರಕುಶಲ ವಸ್ತುಗಳನ್ನು ಇಲ್ಲಿ ಹೆಸರಿಸಬಹುದು. ತಂಜಾವೂರಿನ ಕಡೆಯ ತಾಮ್ರದ ತಟ್ಟೆಯೊಂದರಲ್ಲಿ ಮಹಾಭಾರತದ ದೃಶ್ಯವನ್ನು ಉಬ್ಬಚ್ಚಿನಲ್ಲಿ ಬಿಡಿಸಿದ್ದಾರೆ. ದ್ರೌಪದಿ ಕಲ್ಯಾಣ, ಪಗಡೆಯಾಟ, ಅಶ್ವಮೇಧಯಾಗ, ಭೀಮ ಧುರ್ಯೋಧನರ ಕಾಳಗ, ಕರ್ಣಾರ್ಜುನರ ಯುದ್ಧ ಇವನ್ನು ಲೋಹದಲ್ಲಿ ಬಹು ಸೊಗಸಾಗಿ ರೂಪಿಸಿದ್ದಾರೆ. ಅನೇಕ ಹಿತ್ತಾಳೆಯ ದೇವಾಲಯ ಮಾದರಿಗಳೂ ಇವೆ.

ಚತುರ್ಮುಖ ಬ್ರಹ್ಮ (ಚಂದನದ ಕೃತಿ). ಸೊರಬದ ಗುಡಿಗಾರ ವಾಮನಪ್ಪನವರ ಕಲಾಕೃತಿ

ದಂತದ ಕೃತಿಗಳಲ್ಲಿ ಆನೆ, ಕುದುರೆ, ಜಿಂಕೆ, ನಾಯಿ, ಕೊಕ್ಕರೆ, ಹಸು, ಎಮ್ಮೆ, ಮುಂತಾದ ಪ್ರಾಣಿಪಕ್ಷಿಗಳನ್ನೂ ಬೀಸಣಿಗೆ, ದುರ್ಬೀನು, ಫಿರಂಗಿ, ಭರಣಿ, ಪಗಡೆ ಆಟದ ವಸ್ತುಗಳು, ಎತ್ತಿನಗಾಡಿ, ವೇಣುಗೋಪಾಲ, ಚಾಮುಂಡೇಶ್ವರಿ, ಶ್ರೀರಾಮ ಮುಂತಾದ ದೇವರ ವಿಗ್ರಹಗಳನ್ನೂ ಪಲ್ಲಕ್ಕಿ, ಕೈಗನ್ನಡಿ, ಬಾಚಣಿಗೆ, ಸೀರಣಿಗೆಗಳನ್ನೂ ನೋಡಬಹುದು. ಚಿನ್ನದ ಬಣ್ಣದಲ್ಲಿ ತೆಳುವಾದ ದಂತದ ಫಲಕದ ಮೇಲೆ ಮೈಸೂರಿನ ವೈ. ಸುಂದರಯ್ಯನು ಮುಮ್ಮಡಿಯವರ ರೂಪಚಿತ್ರಗಳನ್ನು ಬಿಡಿಸಿದ್ದಾನೆ. ಬಾಚಣಿಗೆಗಳ ಎಡುಬಲ ಮೈಗಳಲ್ಲಿ ರಾಮರಾವಣರ ಯುದ್ಧ, ರಾವಣನ ಕೈಲಾಸದಲ್ಲಿನ ಸೋಲು, ಗಜೇಂದ್ರಮೋಕ್ಷ, ಶೇಷಶಯನ, ಮಾರ್ಕಂಡೇಯ, ಶ್ರೀರಾಮನ ವಾನರಸಭೆ ಮುಂತಾದುವು ಅತ್ಯಂತ ಕುಸುರಿ ಕೆಲಸವಾಗಿದ್ದು ಕನ್ನಡನಾಡಿನ ಶಿಲ್ಪಿಗಳ ಕೀರ್ತಿಯನ್ನು ಬೆಳಗುವಂತಿವೆ. ಒಂದು ಕೈಗನ್ನಡಿಯಲ್ಲಿ ಇಡೀ ಕಾಡುಪ್ರಾಣಿಗಳ ವಿಶ್ವವನ್ನೇ ಸೃಷ್ಟಿಸಲಾಗಿದೆ. ತಾಂಡವನೃತ್ಯ ಶ್ರೀರಾಮ ಪಟ್ಟಾಭಿಷೇಕ-ಮೋಹಕ ಕೃತಿಗಳಾಗಿವೆ.

ಸೀಸೆಯೊಂದರಲ್ಲಿ ಮಂದಹಾಸದಲ್ಲಿ ಕುಳಿತ ರಾಜನ ಪ್ರತಿಮೆ ಇದೆ. ಒಂದೊಂದು ಅಕ್ಕಿಕಾಳಿನ ಮೇಲೆ ಒಂದೊಂದರಂತೆ ಶಿವಾಜಿ, ಗಾಂಧಿ, ಕೃಷ್ಣ, ಈಶ್ವರ, ಲಕ್ಷ್ಮಿ, ಸರಸ್ವತಿ, ತಾಜಮಹಲ್ ಮತ್ತು ನವಿಲುಗಳನ್ನು ವರ್ಣಗಳಲ್ಲಿ ಚಿತ್ರಿಸಲಾಗಿದೆ. ಇವು ಕೃಷ್ಣಗಿರಿಯ ವೈದ್ಯನಾಥನ ಕುಸುರಿ ಕೆಲಸ.

ಗಂಧದಲ್ಲಿ ಸೀತಾಪಂಚವಟಿ, ಕೃಷ್ಣಜಲಕ್ರೀಡೆಗಳನ್ನು ಸೊಗಸಾಗಿ ರಚಿಸಿದವ ಸೊರಬದ ಸಿದ್ದಾಪುರ ತಿಮ್ಮಣ್ಣ. ಅಹಲ್ಯಾ ಶಾಪವಿಮೋಚನೆ, ಭಗವದ್ಗೀತೆ, ಚಾಮುಂಡೇಶ್ವರಿ, ಚತುರ್ಮುಖ ಬ್ರಹ್ಮ ಕೃತಿಗಳನ್ನು ಸೊರಬದ ಗುಡಿಗಾರ ವಾಮನಪ್ಪ, ಎಚ್. ವೆಂಕಟಪ್ಪ ಮುಂತಾದವರು ಸುಂದರವಾಗಿ ರಚಿಸಿದ್ದಾರೆ.

ಇಲ್ಲಿನ ಈಶ್ವರ, ವಿಷ್ಣು, ಬ್ರಹ್ಮ ಮೊದಲಾದ ನೇಪಾಳದ ಕೃತಿಗಳು ನವರತ್ನದಲ್ಲಿ ರಚಿತವಾಗಿವೆ.

ಹಂಪೆಯ ಕಾವಲು ಗೋಪುರ. ಪಿ.ಆರ್. ತಿಪ್ಪೇಸ್ವಾಮಿಯವರ ವರ್ಣಚಿತ್ರ

ಚಿತ್ರಶಾಲೆಯ ಹಿಂಬದಿಯ ಹಳೆಯ ಕೋಣೆಯಲ್ಲಿ ಅಮೃತಶಿಲೆಯ ಮೈಸೂರು ಅರಮನೆಯ ಮಾದರಿಯೊಂದಿದೆ. ಅನೇಕ ಮರದ ಮೂರ್ತಿಗಳೂ ಇವೆ. ಲಾರ್ಡ್ ಡಾಲ್‌ಹೌಸಿ ಮೈಸೂರು ಅರಸರಿಗೆ ಕಳುಹಿಸಿದ ಟಿಪ್ಪುವಿನ ಮಡದಿಯ ಮರದ ಮೇನೆಯೊಂದನ್ನು ಇಲ್ಲಿರಿಸಲಾಗಿದೆ. ಮೈಸೂರಿನ ರಾಜರು ಉಪಯೋಗಿಸಿ ಮೆರೆದ ನೂರ ಎರಡು ವಿವಿಧಾಕಾರದ ಸುಂದರ ಕಲಾತ್ಮಕ ಕೈಚಿತ್ರಗಳಿವೆ. ಚಾಮುಂಡೇಶ್ವರಿಯ ಮರದ ರಥದ ಮಾದರಿಯೂ ಇಲ್ಲಿದೆ. ರಾಜರು ಉಪಯೋಗಿಸಿದ ಕಾಶ್ಮೀರಿ ಶಾಲುಗಳೂ ಮೊಸಳೆಯ ಚರ್ಮದಲ್ಲಿ ಮಾಡಿದ ಚಾಮುಂಡಿ ಪಾದದ ಕೃತಿಯೂ ಇವೆ. ಚಿತ್ರ ಕೊರೆತದ ತೆಂಗಿನ ಕರಟದ, ನಾನಾ ಆಕಾರದ ರೂಪದ ಕತ್ತಿಗಳು, ಗುರಾಣಿಗಳು, ಬಂದೂಕುಗಳು, ಇತರ ಆಯುಧಗಳು, ಗಂಟೆಗಳು ಇಲ್ಲಿ ಕಾಣಸಿಗುತ್ತವೆ. ಇದರ ನೆರೆಯ ಕೋಣೆಯೆಲ್ಲ ಪೂಜಾಮಂದಿರ, ಅದರ ಭಿತ್ತಿಗಳಲ್ಲಿ ಅನೇಕ ಶಾಸ್ತ್ರೀಯ ರೀತಿಯಲ್ಲಿ ದೇವರುಗಳನ್ನು ಚಿತ್ರಿಸಲಾಗಿದೆ.

ಮೈಸೂರು ನಗರದ ಆಕರ್ಷಣೆಗಳಲ್ಲಿ ಜಯಚಾಮರಾಜೇಂದ್ರ ಚಿತ್ರಶಾಲೆ ಬಹು ಮುಖ್ಯವಾದುದು. ಅನೇಕ ವರ್ಷಗಳ ಸತತ ಪ್ರಯತ್ನದಿಂದಾದ ಈ ಕಲೆಯ ಆಗರ ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತ ಬಂದಿದೆ. (2003-04ರ ಅವಧಿಯಲ್ಲಿ ಚಿತ್ರಶಾಲೆಯ ಒಳಾಂಗಣದಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಗಿದೆ. (ಪಿ.ಆರ್.ಟಿ.)

**ಜಯತೀರ್ಥ :** ದ್ವೈತವೇದಾಂತದಲ್ಲಿ ಮಧ್ವಾಚಾರ್ಯರ ಅನಂತರ ಅತ್ಯಂತ ಪ್ರಭಾವಶಾಲೀ ವ್ಯಕ್ತಿತ್ವವನ್ನು ಪ್ರದರ್ಶಿಸಿದ ವಿದ್ವಾಂಸ, ವೇದಾಂತಿ. ಬ್ರಹ್ಮಸೂತ್ರಗಳಿಗೆ ಮಧ್ವಾಚಾರ್ಯರು ಬರೆದ ಮಹಾಭಾಷ್ಯವನ್ನು ಸಮಂಜಸವಾಗಿ ಅರ್ಥಮಾಡಿಕೊಳ್ಳಲು

ಈತ ಬರೆದ ತತ್ತ್ವಪ್ರಕಾಶಿಕಾದಿ ವ್ಯಾಖ್ಯಾನಗಳಿಗೇ ಮೊರೆ ಹೋಗಬೇಕು. ಹೀಗಾಗಿ ಈತ ಟೀಕಾಚಾರ್ಯ ಎಂಬ ಹೆಸರಿನಿಂದಲೇ ಜನಪ್ರಿಯನಾಗಿದ್ದಾನೆ. ಮಧ್ವವೇದಾಂತದಲ್ಲಿ ಪ್ರವೇಶ ಪಡೆಯುವುದಕ್ಕೆ ಮಹಾದ್ವಾರವಿದ್ದಂತಿದೆ ಈತನ ಪ್ರಮಾಣಪದ್ಧತಿ ಎಂಬ ಗ್ರಂಥ. ತತ್ತ್ವವಾದದಲ್ಲಿ ಸಾಮರ್ಥ್ಯಸಂಪಾದನೆಗೆ ಈತನ ವಾದಾವಳಿ ಎಂಬ ಗ್ರಂಥ ಸಹಾಯಕವಾಗಿದೆ. ಶ್ರೀಮನ್ ನ್ಯಾಯಸುಧಾ ಈತನ ಬೃಹದ್ ಗ್ರಂಥ. ಮಾಧ್ವದ್ವೈತ ವೇದಾಂತದ ಪರಮ ಸಮರ್ಥನಾತ್ಮಕವಾದ ವ್ಯಾಖ್ಯಾನಗ್ರಂಥವಿದು. ತಾನು ಶಬ್ದಾಬ್ಧಿಯ ಗಾಢತೆಯನ್ನೂ ನಿಗಮಚರ್ಚಾಚಾತುರ್ಯವನ್ನೂ ನ್ಯಾಯಪ್ರೌಢಿಮೆಯನ್ನೂ ಹೆಚ್ಚಾಗಿ ಸಂಪಾದಿಸಿದವನಲ್ಲವೆಂದು ಜಯತೀರ್ಥ ಹೇಳಿಕೊಂಡಿರುವನಾದರೂ ಈತನ ಗ್ರಂಥ ಇವೆಲ್ಲದರಲ್ಲಿಯೂ ಈತನಿಗಿದ್ದ ಪ್ರಕಾಂಡ ಪಾಂಡಿತ್ಯ, ಸಾಮರ್ಥ್ಯಗಳನ್ನು ತೋರಿಸುತ್ತದೆ. ಅದಕ್ಕೆಂದೇ ಸುಧಾ ವಾ ಪಠನೀಯಾ, ವಸುಧಾ ವಾ ಪಾಲನೀಯಾ– ಸುಧಾ ಓದಬೇಕು. ಪ್ರಪಂಚವನ್ನಾಳಬೇಕು ಎಂಬುದು ಆಗಿನ ಆದರ್ಶವಾಗಿತ್ತು. ವೇದಾಂತಪ್ರಪಂಚದಲ್ಲಿ ಈ ಗ್ರಂಥಕ್ಕೆ ಅಂಥ ಮನ್ನಣೆಯಿದೆ. ಇದರಂತೆಯೇ ಅನೇಕ ಉಪನಿಷತ್ತುಗಳಿಗೂ ಈತನ ಟೀಕೆಗಳೇ ಆಧಿಕೃತ ವ್ಯಾಖ್ಯಾನ ಒದಗಿಸುತ್ತವೆ.

ಹೈದರಾಬಾದು ಹಾಗೂ ಮಹಾರಾಷ್ಟ್ರ ವಿಭಾಗಗಳಲ್ಲಿ ದ್ವೈತಮತ ಹಾಗೂ ಭಕ್ತಿಮಾರ್ಗ ಪ್ರಚಾರಕ್ಕೆ ಹೆಚ್ಚಾಗಿ ಕಾರಣನಾದವ ಜಯತೀರ್ಥ. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಕಾಗಿಣೀನದಿಯ ತೀರದಲ್ಲಿ ಇದ್ದ ಮಳಖೇಡ (ರಾಷ್ಟ್ರಕೂಟರ ಕಾಲದ ಮಾನ್ಯಖೇಟ) ಈತನ ಕಾರ್ಯಕೇಂದ್ರವಾಗಿತ್ತು.

ಜಯತೀರ್ಥನ ಕಾಲ 14ನೆಯ ಶತಮಾನ. ಮಹಾರಾಷ್ಟ್ರದ ಅಂಚಿನಲ್ಲಿ ಇರುವ ಮಂಗಳವೇಡೆ ಗ್ರಾಮದ ದೇಶಪಾಂಡೆ ಮನೆತನದಲ್ಲಿ ಈತ ಜನಿಸಿದ. ಈತನ ಬಾಲ್ಯನಾಮ ಧೋಂಡೂ ಪಂತ ಎಂದು. ತಂದೆ ರಘುನಾಥರಾಯ. ಶ್ರೀಮಂತಿಕೆ ಮತ್ತು ರಾಜಕೀಯ ಅಧಿಕಾರಗಳು ಹೇರಳವಾಗಿದ್ದ ಮನೆಯಲ್ಲಿ ಬೆಳೆದವನಾದ್ದರಿಂದ ಜಯತೀರ್ಥ ಸ್ವೇಚ್ಛೆಯಾಗಿ ಉಂಡು ತಿಂದು, ಕುದುರೆ ಸವಾರಿ, ಓಡಾಟಗಳಲ್ಲಿ ಕಾಲಕಳೆಯುತ್ತ ದೊಡ್ಡವನಾದ. ಒಮ್ಮೆ, ಮದುವೆಯಾದ ಹೊಸದರಲ್ಲಿಯೇ, ಕುದುರೆ ಸವಾರಿ ಹೊರಟ ಕುಮಾರ ದೇಶಪಾಂಡೆ ಭೀಮಾ ನದಿಯನ್ನು ತಲಪುವ ಹೊತ್ತಿಗೆ ಮಧ್ಯಾಹ್ನವಾಗಿ ಬಾಯಾರಿಕೆಯಾಯಿತಂತೆ. ಭೀಮಾನದಿಯಲ್ಲಿ ಕುದುರೆಯನ್ನು ಈಜುಬಿಟ್ಟು ಕುದುರೆ ಮುಳುಗುವಷ್ಟು ಬಂದ ನದೀ ಪ್ರವಾಹಕ್ಕೆ ಬಾಯಿ ಹಚ್ಚಿ ನೀರು ಕುಡಿಯಲಾರಂಭಿಸಿದನಂತೆ. ಎದುರಿನ ದಡದಲ್ಲಿ ಕುಳಿತು ಇದನ್ನೆಲ್ಲ ನೋಡುತ್ತಿದ್ದ ವೃದ್ಧ ತಾಪಸ ಯತಿ ಅಕ್ಷೋಭ್ಯತೀರ್ಥ ಈ ತರುಣನನ್ನು ಕೂಗಿ ಕರೆದು ಕಿಂ ಪಶುಃ ಪೂರ್ವದೇಹೇ–ಹಿಂದಿನ ಜನ್ಮದಲ್ಲಿ ನೀನು ಪಶುವೇನಾದರೂ ಆಗಿದ್ದೆಯಾ–ಎಂದು ಕೇಳಿದನಂತೆ. ಈ ಪ್ರಶ್ನೆ ದೇಶಪಾಂಡೆಯ ಜಾಗ್ರತಿಗೆ ಕಾರಣವಾಯಿತು ; ಹಿಂದಿನ ಜನ್ಮದಲ್ಲಿ ತಾನು ಮಧ್ವಾಚಾರ್ಯರ ಗ್ರಂಥಭಾರವನ್ನು ಹೊತ್ತ ಎತ್ತೆಂಬ ಭಾವ ಸ್ಫುರಿಸಿ ತನ್ನ ಮೇಲೆ ದ್ವೈತ ವೇದಾಂತ ಜ್ಞಾನಸಂಪಾದನೆ ಹಾಗೂ ಸಮರ್ಥನೆಗಳ ಭಾರವಿದೆಯೆಂಬ ಪ್ರಜ್ಞೆ ಈತನಲ್ಲಿ ಉದಯವಾಯಿತು. ಯುವಕ ದೇಶಪಾಂಡೆ ಆಚೆಯ ದಡ ತಲಪಿ ಅಕ್ಷೋಭ್ಯತೀರ್ಥನ ಅಡಿಗೆರಗಿದ. ಈ ತೇಜಸ್ವೀ ಯುವಕನ ಭವಿಷ್ಯ ಅಕ್ಷೋಭ್ಯತೀರ್ಥನ ಕಣ್ಣೆದುರಿಗೆ ಸ್ಪಷ್ಟವಾಗಿ ಕಂಡಿತು. ಯತಿಯ ಸಾನ್ನಿಧ್ಯ ತರುಣ ದೇಶಪಾಂಡೆಯನ್ನು ಪೂರ್ಣ ಪರಿವರ್ತಿಸಿತು. ಗೃಹಸ್ಥ ಜೀವನವನ್ನು ತ್ಯಜಿಸಿ ಅಕ್ಷೋಭ್ಯತೀರ್ಥನಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿ ದೇಶಪಾಂಡೆಯಾಗಿದ್ದ ತರುಣ ಜಯತೀರ್ಥಯತಿಯಾದ; ಅಕ್ಷೋಭ್ಯತೀರ್ಥನಲ್ಲಿಯೇ ಅಧ್ಯಯನ ಮಾಡಲು ತೊಡಗಿದ.

ಅಕ್ಷೋಭ್ಯ ತೀರ್ಥ ಮಧ್ವಾಚಾರ್ಯರ ನಾಲ್ಕು ಜನ ಪ್ರಮುಖ ಶಿಷ್ಯರಲ್ಲಿ ಒಬ್ಬ, ಮಹಾತಪಸ್ವಿ, ವಿದ್ವಾಂಸ. ಅವರ ಗರಡಿಯಲ್ಲಿ ತಯಾರಾದ ಜಯತೀರ್ಥ ಅವರಿಗಿಂತ ಒಂದು ದೃಷ್ಟಿಯಲ್ಲಿ ಪ್ರಬಲ. ಇವರಿಬ್ಬರೂ ಪ್ರಖ್ಯಾತ ಅದ್ವೈತ ಯತಿಗಳಾದ ವಿದ್ಯಾರಣ್ಯರ ಸಮಕಾಲೀನರು. ಇಬ್ಬರೂ ವಿದ್ಯಾರಣ್ಯರೊಂದಿಗೆ ಶಾಸ್ತ್ರಾರ್ಥ ವಿಚಾರಗಳನ್ನು ಚರ್ಚಿಸಿದಂತೆ ಉಲ್ಲೇಖಗಳೂ ಆಖ್ಯಾಯಿಕೆಗಳೂ ಇವೆ.

ರಾಷ್ಟ್ರಕೂಟರ ಕಾಲದಲ್ಲಿ ಪ್ರಸಿದ್ಧಿ ಪಡೆದ ಮಾನ್ಯಖೇಟ, ಮಳಖೇಡವಾಗಿ ಮತ್ತೊಮ್ಮೆ ಪ್ರಸಿದ್ಧಿ ಪಡೆದುದು ಜಯತೀರ್ಥನಿಂದ. ಅಲ್ಲಿನ ಕಾಗಿಣೀನದಿಯ ದಂಡೆಯ ಮೇಲೆ ಜಯತೀರ್ಥನ ವೃಂದಾವನ ಇದೆ. ಆತ ಕುಳಿತು ಗ್ರಂಥರಚನೆ ಮಾಡುತ್ತಿದ್ದ ಗುಹೆಯೊಂದು ಗುಲ್ಬರ್ಗ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಯರಗೋಳವೆಂಬ ಗ್ರಾಮದ ಹತ್ತಿರದ ಮರಡಿಯ ಮೇಲೆ ಇದೆ. ಮಳಖೇಡದಲ್ಲಿ ಈಗಲೂ ಜಯತೀರ್ಥನ ಪುಣ್ಯತಿಥಿಯನ್ನು ಟೀಕಾರಾಯರ ಪಂಚಮಿಯೆಂದು ಪ್ರತಿ ವರ್ಷ ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಾರೆ.

(ಜಿ.ಆರ್.ಪಿ.)

**ಜಯದೇವ**[1] : ಶೃಂಗಾರಪ್ರಧಾನವಾದ ಗೀತಗೋವಿಂದ ಕಾವ್ಯದ ಕರ್ತೃ. ಈ ಕವಿಯ ಜೀವಿತವೇ ಒಂದು ಕಾವ್ಯವೆಂಬುದು ಕವಿಸಮಯ. ಆದರೆ ಈತನ ವಿಚಾರವಾಗಿ ನಿಖರವಾದ ವಿವರ ಅಷ್ಟಾಗಿ ದೊರೆಯದು. ಗೀತಗೋವಿಂದದ ವ್ಯಾಖ್ಯಾನಗ್ರಂಥಗಳಾದ ಶಂಕರಮಿಶ್ರನ ರಸಮಂಜರೀ, ರಾಣಾಕುಂಭನ ರಸಿಕಪ್ರಿಯಾ ಮತ್ತು ಭಕ್ತಮಾಲಾ ಎಂಬ ಪೌರಾಣಿಕ ಗ್ರಂಥ–ಇವುಗಳ ಹಾಗೂ ಜನಜನಿತವಾದ ಕಿಂವದಂತಿಗಳ ಆಧಾರದ ಮೇಲೆ ಈತನ ಜೀವಿತವನ್ನು ಹೆಣೆಯುತ್ತಾರೆ. ಅಲ್ಲಿನ ಉತ್ಪ್ರೇಕ್ಷೆ ಅಲಂಕಾರಗಳನ್ನು ಬಿಟ್ಟರೆ ಉಳಿಯುವ ವಿವರ ಇಷ್ಟು: ಈತ ಹುಟ್ಟಿದ್ದು ಕ್ರಿಸ್ತಾಬ್ದ ಹನ್ನೆರಡನೆಯ ಶತಮಾನದ ಅಂತ್ಯಭಾಗದಲ್ಲಿ; ಬಂಗಾಳದ ಕೆಂದುಬಿಲ್ವ ಅಥವಾ ಕೆಂದೂಲಿ ಎಂಬ ಗ್ರಾಮದಲ್ಲಿ. ತಂದೆ ಭೋಜದೇವ, ತಾಯಿ ರಾಮಾದೇವಿ. ಸಹಜವಾಗಿಯೇ ಭಾವುಕಪ್ರಕೃತಿ ಈತನಿಗೆ ಎಳೆತನದ ಗೆಳೆಯನಾದ ಪರಾಶರ ಎಂಬ ರಸಿಕನ ಸಹವಾಸದಿಂದ ಉದ್ದೀಪ್ತವಾಯಿತು. ತನ್ನ ಪಾಂಡಿತ್ಯ ಪ್ರಭಾವದಿಂದ ಬಂಗಾಳದ ದೊರೆ ಲಕ್ಷ್ಮಣಸೇನನ ಆಸ್ಥಾನದಲ್ಲಿದ್ದ ಪಂಚರತ್ನಗಳಲ್ಲಿ ಈತನೂ ಒಬ್ಬನೆನಿಸಿದ. ಕೃಷ್ಣಭಕ್ತನಾದ ಈತನ ಸಹಧರ್ಮಿಣಿ ಪದ್ಮಾವತಿಯ ಪ್ರೇರಣೆಯಿಂದ ಗೀತಗೋವಿಂದ ಕಾವ್ಯ ಬೆಳಕು ಕಂಡಿತೆಂದು ಹೇಳುತ್ತಾರೆ. ತನ್ನ ಕಾವ್ಯದಲ್ಲಿ ಈತ ಒಂದೆಡೆ ತನ್ನನ್ನು ಪದ್ಮಾವತೀ ಚರಣಚಾರಣಚಕ್ರವರ್ತೀ ಎಂದು ಹೇಳಿಕೊಂಡು ಪತ್ನಿಯ ಪ್ರಭಾವವನ್ನು ಸ್ಮರಿಸಿಕೊಂಡಿರುವುದೇ ಇದಕ್ಕೆ ಸಾಕ್ಷಿ.

ಗೀತಗೋವಿಂದದಲ್ಲಿ ಇಪ್ಪತ್ತನಾಲ್ಕು ಗೇಯ ಪದ್ಯಗಳ ಹನ್ನೆರಡು ಸರ್ಗಗಳು, ಮಧ್ಯೆ ಹಲವಾರು ಸಂಯೋಜನಾ ಶ್ಲೋಕಗಳು ಇವೆ. ಬ್ರಹ್ಮವೈವರ್ತಪುರಾಣದಲ್ಲಿ ಬರುವ ಒಂದು ಪ್ರಸಂಗವನ್ನು ಅಧಿಕರಿಸಿ ಇಡಿಯ ಕಾವ್ಯ ರಚಿತವಾಗಿದೆಯೆಂಬ ಸೂಚನೆ ಮಂಗಳಶ್ಲೋಕದಲ್ಲಿದೆ. ಈ ಕಾವ್ಯವನ್ನು ಅಷ್ಟಪದಿ ಎಂದು ವ್ಯವಹರಿಸಿರುವುದುಂಟು.

ಈ ಕಾವ್ಯ ಕಾಶ್ಮೀರದಿಂದ ಕೇರಳದವರೆಗೆ, ಗುಜರಾತಿನಿಂದ ಅಸ್ಸಾಮಿನವರೆಗೆ ನಟವರ್ಗದವರಿಂದ, ದೇವದಾಸಿಯರಿಂದ, ಹಲವಾರು ರಾಗ ನಾಟ್ಯಗಳೊಂದಿಗೆ ಇಂದಿಗೂ ಪ್ರದರ್ಶಿತವಾಗುತ್ತಿರುವುದು ಇದರ ಅದ್ಭುತ ಜನಪ್ರಿಯತೆಗೆ ಒಂದು ಸಾಕ್ಷಿ. ಇಂದಿಗೂ ಈ ಕಾವ್ಯದ ಹಲವಾರು ಚಿತ್ರವಿನ್ಯಾಸಗಳನ್ನು ಬೇರೆ ಬೇರೆ ಕಲಾಸಂಗ್ರಹಾಲಯಗಳಲ್ಲಿ ನೋಡಬಹುದು. ವೈಷ್ಣವರಿಗೆ ಇದು ನಿಸ್ಸೀಮ ಭಕ್ತಿಯ ಆವಿಷ್ಕಾರ, ರಸಿಕರಿಗೆ ಅತ್ಯಂತ ಮನಮೋಹಕವಾದ ಶೃಂಗಾರದ ಉದ್ಗಾರ; ಸಂಗೀತಲೋಲರಿಗೆ ಅಭೂತಪೂರ್ವ ರಾಗಲಹರಿಯ ಚಮತ್ಕಾರ, ಕವಿಯೇ ತನ್ನ ಗ್ರಂಥಾದಿಯಲ್ಲಿ "ನಿಮಗೆ ಹರಿಸ್ಮರಣೆಯಲ್ಲಿ ಆಸಕ್ತಿಯಿದ್ದುದಾದರೆ, ಅಥವಾ ವಿಲಾಸಕಲಾವಿನೋದಗಳಲ್ಲಿ ಕುತೂಹಲವಿರುವುದಾದರೆ, ಮಧುರ; ಕೋಮಲ ಗೀತ ಪದಗಳಿಂದ ತುಂಬಿದ ನನ್ನ ರಚನೆಯನ್ನು ಸವಿಯಿರಿ" – ಎಂದು ಕೋರಿದ್ದಾನೆ.

ಗೀತಗೋವಿಂದ ಕಾವ್ಯ ಆಕೃತಿಯಲ್ಲಿ ಸಣ್ಣದು, ಕಥಾಭಾಗವಂತೂ ತುಂಬ ಕಡಿಮೆ. ಇರುವುದೆಲ್ಲ ವರ್ಣನೆ, ಸಂಗೀತ, ಶೃಂಗಾರ. ಸಣ್ಣ ಸಣ್ಣ ಹನ್ನೆರಡು ಸರ್ಗಗಳಲ್ಲಿ ವರ್ಣನಾ ಪದ್ಯಗಳೂ, ಗಾನಕ್ಕಾಗಿಯೇ ಬರೆದ ಹಾಡುಗಳಾದ ಅಷ್ಟಪದಿಗಳೂ ಇವೆ. ಅಷ್ಟಪದಿಗಳ ಕಡೆಯಲ್ಲಿ ಜಯದೇವ ಎಂಬ ಅಂಕಿತ ತಪ್ಪದೆ ಬರುತ್ತದೆ. ಮೊದಲು ಮಂಗಳ, ಪ್ರಸ್ತಾವನೆ, ಕವಿವಿಚಾರ; ಆಮೇಲೆ ದಶಾವತಾರ ಸ್ತೋತ್ರ. ಗ್ರಂಥಾರಂಭ ಇಲ್ಲಿಂದಲೇ ಎನ್ನಬಹುದು. ರಾಧೆ ವಿರಹೋತ್ಕಂಠಿತೆಯಾಗಿದ್ದಾಳೆ. ಅವಳ ಸಖಿ ಬಂದು ವಸಂತ ಋತುವನ್ನು ಬಣ್ಣಿಸಿ ಹಾಡುತ್ತಾಳೆ. ದೂರದಲ್ಲಿ ಗೋಪಿಯರೊಡನೆ ರಾಸಕ್ರೀಡೆಯಾಡುತ್ತಿರುವ ಕೃಷ್ಣನನ್ನೂ ತೋರಿಸುತ್ತಾಳೆ. ರಾಧೆಗೆ ಅಸೂಯೆ ಕೆರಳುತ್ತದೆ. ತಾನಾಗಿ ಅವನತ್ತ ಅಭಿಸಾರಿಕೆಯಾಗಲು ಇದು ಅಡ್ಡಿಯಾಗುತ್ತದೆ. ವಿರಹದಿಂದ ಬಳಲುತ್ತ ಕುಂಜವೊಂದರಲ್ಲಿ ರಾಧೆ ಕೃಷ್ಣನನ್ನು ನೆನೆಯುತ್ತಿರುತ್ತಾಳೆ. ಅತ್ತ ಕೃಷ್ಣನಿಗೂ ಇದರ ಅರಿವಾಗಿ, ಮಿಕ್ಕ ಗೋಪಿಯರಿಂದ ದೂರ ಸರಿದು ರಾಧಾವಿರಹದಿಂದ ತೊಳಲುತ್ತಾನೆ. ಯಮುನಾತೀರದ ಒಂದು ಕುಂಜದಲ್ಲಿ ಅವಳನ್ನೇ ಧ್ಯಾನಿಸುತ್ತ ಕುಳಿತ ಕೃಷ್ಣ ದೂತಿಯೊಬ್ಬಳನ್ನು ರಾಧೆಯ ಬಳಿಗೆ ಕಳಿಸುತ್ತಾನೆ. ದೂತಿ ಬಂದು ರಾಧೆಗೆ ಕೃಷ್ಣನ ವಿರಹತಾಪವನ್ನು ಬಣ್ಣಿಸುತ್ತಾಳೆ; ಹಾಗೆಯೇ ರಾಧೆಯ ಸಖಿಯೂ ಕೃಷ್ಣನ ಬಳಿಗೆ ಹೋಗಿ ರಾಧೆಯ ವಿರಹಾವಸ್ಥೆಯನ್ನು ವರ್ಣನೆ ಮಾಡುವುದಲ್ಲದೆ, ರಾಧೆಯನ್ನು ಹೋಗಿ ಕಂಡು ಸಮಾಧಾನಪಡಿಸಬೇಕೆಂದು ಬಿನ್ನವಿಸುತ್ತಾಳೆ. ಅಷ್ಟು ಹೊತ್ತಿಗೆ ಚಂದ್ರೋದಯವಾಗುತ್ತದೆ. ಕೃಷ್ಣ ಬರುವುದು ತಡವಾಯಿತೆಂದು ರಾಧೆಯ ಪ್ರಣಯಕೋಪ ಮತ್ತೆ ಉಕ್ಕೇರುತ್ತದೆ. ಕೃಷ್ಣ ಅಷ್ಟರಲ್ಲಿ ಬಂದು ಎಷ್ಟು ಒಲಿಸಿದರೂ ರಾಧೆಯ ಕೋಪ ಇಳಿಯುವುದಿಲ್ಲ. ಕೃಷ್ಣ ಹೊರಟುಹೋಗುತ್ತಾನೆ. ಆಗ ಸಖಿ ರಾಧೆಯನ್ನು ಸಂತೈಸಿ ಆಭಿಸಾರಿಕೆಯಾಗುವಂತೆ ಪ್ರೇರೇಪಿಸುತ್ತಾಳೆ. ರಾಧೆ ಅಲಂಕರಿಸಿಕೊಂಡು ವಿರಹವನ್ನು ತಾಳಲಾರದೆ ಅಭಿಸಾರಿಕೆಯಾಗಿ ಕೃಷ್ಣನಲ್ಲಿಗೆ ಹೋಗುತ್ತಾಳೆ. ಅವರ ಸಮಾಗಮದಿಂದ ಕಾವ್ಯ ಮುಗಿಯುತ್ತದೆ.

ಇಲ್ಲಿ ಕವಿಯ ಮುಖ್ಯ ಉದ್ದೇಶ ಕೃಷ್ಣನ ಚರಿತ್ರೆಯನ್ನು ಹೇಳುವುದಾಗಿರದೆ ರಾಸಲೀಲೆಯ ವಿಲಾಸವನ್ನೂ ಶೃಂಗಾರರಸದ ನಾನಾ ಪರಿಗಳನ್ನೂ ಗೀತಮಾಧ್ಯಮದಿಂದ ಧ್ವನಿಸುವುದೇ ಆಗಿದೆಯೆನ್ನಬಹುದು. ಗೀತಗೋವಿಂದದಲ್ಲಿ ಉತ್ಕಟ ಭಾವಗೀತೆ, ಆವೇಶಪೂರ್ಣ ಭಕ್ತಿಸ್ತೋತ್ರ, ನಾಟಕೀಯ ಸಂವಾದಶೈಲಿ, ಅಭಿನಯಯೋಗ್ಯ ನಾಟ್ಯಕಲಾಸಾಮಗ್ರಿ, ಚಿತ್ರಮಯ ಭಾವಸಂಪತ್ತು, ಶೃಂಗಾರನಿರ್ಭರ ಕವಿತಾಪ್ರವಾಹ–ಎಲ್ಲವೂ ಸುಂದರವಾಗಿ, ಅಭೂತಪೂರ್ವವಾಗಿ, ಸಮ್ಮಿಳಿತವಾಗಿವೆ. ಉತ್ಕಂಠಿತೆ, ಪ್ರೋಷಿತಭರ್ತೃಕೆ, ವಾಸಕಸಜ್ಜೆ, ವಿಪ್ರಲಬ್ಧೆ, ಖಂಡಿತೆ,

ಕಲಹಾಂತರಿತೆ, ಅಭಿಸಾರಿಕೆ, ಸ್ವಾಧೀನಪತಿಕೆ ಎಂಬ ಶೃಂಗಾರನಾಯಿಕೆಯರ ಎಂಟು ಬಗೆಯ ಹಾವಭಾವ ವಿಲಾಸಗಳ ಬಣ್ಣನೆಗೂ ಇಲ್ಲಿ ಪೂರ್ಣ ಅವಕಾಶ ಸಿಕ್ಕಿದೆ. ಕಾಮಶಾಸ್ತ್ರದಲ್ಲಿ ಹೇಳುವಂತೆ ಅಭಿಲಾಷೆ, ಚಿಂತೆ, ಸ್ಮರಣ, ವ್ಯಾಧಿ, ಆವೇಗ–ಇವೇ ಮುಂತಾದ ನಾಟ್ಯಶಾಸ್ತ್ರಾಭಿಮತ ಸಂಚಾರೀ ಭಾವಗಳಿಗೂ ಉತ್ತಮ ಪರಿಪುಷ್ಟಿ ದೊರೆತಿದೆ. ಶೈಲಿಯಲ್ಲಂತೂ ಹೊಸದೊಂದು ಸ್ತೋತ್ರಮಾರ್ಗವೇ ತೆರೆದಿಟ್ಟಂತಾಗಿದೆ. ಮುಂದಿನವರ ಮೇಲೆ ಜಯದೇವನ ಪ್ರತಿಭೆ ಎಷ್ಟೊಂದು ಪ್ರಭಾವ ಬೀರಿತೆಂದರೆ ಸಾಮಾನ್ಯವಾಗಿ ಈ ಜಾತಿಯ ಕಾವ್ಯ ಬರೆದವರೆಲ್ಲ ಹತ್ತಾರು ಮಹಾಕವಿಗಳು –ಚಾಚೂ ತಪ್ಪದಂತೆ ಜಯದೇವನ ಮಾದರಿಯನ್ನೇ ಅನುಸರಿಸಿದ್ದಾರೆ. ಕಥೆಯನ್ನು ಮಾತ್ರ ರಾಧಾಮಾಧವರ ಬದಲು, ರಾಮ–ಸೀತೆಯರದೆಂದೋ, ಶಿವ–ಪಾರ್ವತಿಯರದೆಂದೋ ಬದಲಾಯಿಸಿಕೊಂಡಿದ್ದಾರೆ.

ಗೀತಗೋವಿಂದದ ಕನ್ನಡ ಅನುವಾದಗಳಲ್ಲಿ ಎಸ್.ವಿ.ಪರಮೇಶ್ವರ ಭಟ್ಟರ ಕೃತಿ ಗಮನಾರ್ಹವಾದುದು.

ಕಾಳಿದಾಸನಂಥ ಮಹಾಕವಿಗಳಲ್ಲಿ ಕಂಡುಬರುವ ನವನವೋನ್ಮೇಷಶಾಲಿನಿಯಾದ ಪ್ರತಿಭೆ ಜಯದೇವನಿಗಿಲ್ಲದಿದ್ದರೂ ರಸಪೋಷಣೆಯಲ್ಲಿ, ಪದವಿನ್ಯಾಸದಲ್ಲಿ, ಅರ್ಥಗಾಂಭೀರ್ಯ ದಲ್ಲಿ ಈತ ಸಮರ್ಥನಾದ ಕವಿ. ಒಂದೊಂದು ಶ್ಲೋಕದಲ್ಲೂ ಈತನ ರಸಿಕತೆ ವ್ಯಕ್ತವಾಗುತ್ತದೆ. ಶ್ರುತಿಮನೋಹರವಾದ, ಅಕ್ಲಿಷ್ಟವಾದ, ಧ್ವನಿಪೂರ್ಣವಾದ ಪದಗಳನ್ನು ಮಧುರವಾಗಿ ಜೋಡಿಸುವುದರಲ್ಲಿ ಈತನಿಗಿರುವಷ್ಟು ಜಾಣ್ಮೆ ಬೇರಾವ ಕವಿಗೂ ಇರದು. ರಾಗಬದ್ಧವಾದ ವೃತ್ತಗಳನ್ನು ಹೆಣೆಯುವುದರಲ್ಲಿ ಜಯದೇವ ಚತುರ. ಕೇದಾರ, ಗುರ್ಜರೀ, ಗುಣಕರೀ, ದೇಶಾಂಕ, ಭೈರವ, ವರಾಡಿ, ವಿಭಾಗ ರಾಗಗಳಲ್ಲಿ ಸುಂದರವಾದ ಸರ್ಗಗಳನ್ನು ಗೇಯಗುಣಪ್ರಧಾನವಾಗಿ ಈತ ರಚಿಸಿದ್ದಾನೆ. (ಎಸ್.ಕೆ.ಆರ್.; ಯು.ಎಸ್.ಕೆ.)

**ಜಯದೇವ**[2] **:** ಸು. 1200 ಸಂಸ್ಕೃತ ಆಲಂಕಾರಿಕ, ನಾಟಕಕಾರ. ಪ್ರಸನ್ನರಾಘವ ಎಂಬ ನಾಟಕವನ್ನೂ ಚಂದ್ರಾಲೋಕ ಎಂಬ ಅಲಂಕಾರ ಗ್ರಂಥವನ್ನೂ ಬರೆದವ. ಈತ ವಿದರ್ಭದೇಶದವ. ಬ್ರಾಹ್ಮಣ. ಮಹಾದೇವ, ಸುಮಿತ್ರೆ ಈತನ ತಂದೆತಾಯಿಗಳು. ತನ್ನ ನಾಟಕದ ಪ್ರಸ್ತಾವನೆಯಲ್ಲಿ ಭಾಸ, ಕಾಳಿದಾಸ, ಬಾಣ ಮತ್ತು ಮಯೂರ ಇವರನ್ನು ಪ್ರಶಂಸಿಸಿದ್ದಾನೆ. ಈ ನಾಟಕದ ಕೆಲವು ಪದ್ಯಗಳನ್ನು 13ನೆಯ ಶತಮಾನದಲ್ಲಿದ್ದ ಜಲ್ಹಣ ತನ್ನ ಸೂಕ್ತಿಮುಕ್ತಾವಳಿಯಲ್ಲಿ ಉದ್ಧರಿಸಿದ್ದಾನೆ. ಭೋಜ ಈ ನಾಟಕದ ಬಗ್ಗೆ ಏನನ್ನೂ ಪ್ರಸ್ತಾಪಿಸಿಲ್ಲವಾದ್ದರಿಂದ ಈತ 12ನೆಯ ಶತಮಾನದಲ್ಲಿದ್ದಿರಬೇಕೆಂದು ಕೃಷ್ಣಮಾಚಾರ್ಯರ ಅಭಿಮತ.

ಪ್ರಸನ್ನರಾಘವ: ಏಳು ಅಂಕಗಳ ಈ ನಾಟಕದಲ್ಲಿ ಸೀತಾಸ್ವಯಂವರದಿಂದ ಹಿಡಿದು ರಾಮ ಅಯೋಧ್ಯೆಗೆ ಹಿಂತಿರುಗುವವರೆಗಿನ ರಾಮಾಯಣದ ಕಥೆ ಪ್ರತಿಪಾದಿತವಾಗಿದೆ. ನಾಟಕಕ್ಕೆ ವಿಶೇಷವಾದ ಕಳೆಯನ್ನು ತರಲಿಕ್ಕಾಗಿ ಕವಿ ಮೂಲಕಥೆಯಲ್ಲಿ ಕೆಲವು ಸಮುಚಿತವಾದ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಶ್ರೀರಾಮ ಸೀತಾಲಕ್ಷ್ಮಣರೊಡನೆ ಪುಷ್ಪಕವಿಮಾನವನ್ನೇರಿ ಅಯೋಧ್ಯೆಗೆ ಹಿಂತಿರುಗಿ ಪಟ್ಟಾಭಿಷಿಕ್ತನಾದ ವಿಚಾರದೊಡನೆ ನಾಟಕ ಕೊನೆಗೊಂಡಿದೆ. ನಾಟಕದಲ್ಲಿ ರಾಮನ ವನವಾಸ, ಯುದ್ಧ, ಚಂದ್ರೋದಯ, ಅಯೋಧ್ಯೆಯ ದಾರಿ ಇವುಗಳ ದೀರ್ಘವರ್ಣನೆಗಳು ಬಂದಿವೆ. ಒಟ್ಟು 392 ಪದ್ಯಗಳಿವೆ.

ಪಾತ್ರಗಳ ನಡೆನುಡಿಗಳಲ್ಲಿ ಕವಿ ತೋರಿಸಿರುವ ಸಣ್ಣ ದೊಡ್ಡ ಚಮತ್ಕಾರಗಳೇ ಈ ನಾಟಕದಲ್ಲಿರುವ ವೈಶಿಷ್ಟ್ಯ. ನಾಟಕದ ಹೆಸರನ್ನು ಹೇಳುವುದರಲ್ಲಿಯೂ ಇದನ್ನು ಕಾಣಬಹುದು:

ಪ್ರತ್ಯಂಕಮಂಕುರಿತ ಸರ್ವರಸಾವತಾರ ।
ನ್ನವ್ಯೋಲ್ಲಸತ್ಕುಸುಮ ರಾಜಿವಿರಾಜಿಬಂಧಮ್ ॥
ಘರ್ಮೇತರಾಂಶುರಿವ ವಕ್ರತಯಾತಿರಮ್ಯಂ ।
ನಾಟ್ಯಪ್ರಬಂಧಮತಿಮಂಜುಲಸಂವಿಧಾನಮ್ ॥

ಮೇಲಿನ ಶ್ಲೋಕದಲ್ಲಿರುವ ದಪ್ಪ ಅಕ್ಷರಗಳನ್ನು ಜೋಡಿಸಿದರೆ ನಾಟಕದ ಹೆಸರು ಬರುತ್ತದೆ. ಕವಿ ಪ್ರತಿಭಾಸಂಪನ್ನನೂ ಕವಿತಾನಿಪುಣನೂ ಕಲ್ಪನಾಚತುರನೂ ಆಗಿದ್ದಾನೆ. ಶೈಲಿ ರಮಣೀಯವೂ ಹೃದಯಂಗಮವೂ ಆಗಿದೆ. ವರ್ಣನೆಗಳೂ ಸ್ವಾಭಾವಿಕವಾಗಿವೆ. ಮನೋಹರವಾದ ಕವಿತೆಯಿಂದ ಕೂಡಿ ನಾಟಕ ಇಂಪಾಗಿದೆ.

**ಚಂದ್ರಾಲೋಕ:** ಈ ಅಲಂಕಾರಗ್ರಂಥದಲ್ಲಿ ಅನುಷ್ಟುಪ್ ಛಂದಸ್ಸಿನಲ್ಲಿ ರಚಿತವಾಗಿರುವ 350 ಪದ್ಯಗಳಿವೆ. ವಾಗ್ವಿಕಾರ, ದೋಷನಿರೂಪಣ, ಲಕ್ಷಣನಿರೂಪಣ, ಗುಣನಿರೂಪಣ, ಅಲಂಕಾರನಿರೂಪಣ, ರಸಾದಿನಿರೂಪಣ, ಧ್ವನಿನಿರೂಪಣ, ಗುಣೀಭೂತವ್ಯಂಗ್ಯ, ಲಕ್ಷಣನಿರೂಪಣ, ಅಭಿಧಾನಿರೂಪಣ–ಎಂಬುವು ಇಲ್ಲಿನ ಹತ್ತು ಅಧ್ಯಾಯಗಳು. ಇದರಲ್ಲಿ 5ನೆಯ ಅಧ್ಯಾಯದಲ್ಲಿ ಬರುವ ಅರ್ಥಾಲಂಕಾರ ಪ್ರಕರಣ ಬಹುಮುಖ್ಯವಾದದ್ದು. ಈತ ಅಲಂಕಾರಗಳನ್ನು ಲಕ್ಷಣ ಲಕ್ಷ್ಯಗಳೊಡನೆ ತಿಳಿಸಿರುತ್ತಾನೆ. ಈತನಂತೆ ಅಲಂಕಾರಲಕ್ಷಣ ಗಳನ್ನಾಗಲಿ ಸಮಂಜಸ ಉದಾಹರಣೆಗಳನ್ನಾಗಲಿ ಬೇರೆ ಯಾವ ಆಲಂಕಾರಿಕರೂ ಹೇಳಿಲ್ಲ. ಉದ್ದಾಮ ಪಂಡಿತನೆನಿಸಿದ ಅಪ್ಪಯ್ಯ ದೀಕ್ಷಿತ ಚಂದ್ರಾಲೋಕಕ್ಕೆ ಕುವಲಯಾನಂದ ಎಂಬ ವ್ಯಾಖ್ಯಾನಗ್ರಂಥವನ್ನು ರಚಿಸಿದ್ದಾನೆ. ಅನೇಕರು ಅಲಂಕಾರಗಳಲ್ಲಿ ಜಯದೇವ ಹೇಳಿರುವ ಲಕ್ಷಣಗಳನ್ನು ಪ್ರಮಾಣವಾಗಿ ಸ್ವೀಕರಿಸಿದ್ದಾರೆ. (ಟಿ.ಜಿ.ಎಸ್.)

**ಜಯದ್ರಥ :** ಮಹಾಭಾರತದ ಪ್ರಕಾರ ಸಿಂಧುದೇಶದ ಅರಸ ವೃದ್ಧಕ್ಷತ್ರನ ಮಗ. ಧೃತರಾಷ್ಟ್ರನ ಮಗಳಾದ ದುಶ್ಶಲೆಯ ಪತಿ. ಇವನನ್ನು ಸೈಂಧವ ಎಂದೂ ಸಂಬೋಧಿಸಲಾಗಿದೆ. ಸಾಳ್ವರಾಜಪುತ್ರಿಯ ಸ್ವಯಂವರಕ್ಕೆ ಹೊರಟ ಈತ ಕಾಮ್ಯಕ ವನಪ್ರದೇಶಕ್ಕೆ ಬಂದು ಅಲ್ಲಿ ಆಶ್ರಮವೊಂದರಲ್ಲಿ ವಾಸಮಾಡುತ್ತಿದ್ದ ಪಾಂಡವರ ಪತ್ನಿ ದ್ರೌಪದಿಯನ್ನು ಕಂಡು ಮೋಹಗೊಂಡು ಅವಳನ್ನು ಬಲಾತ್ಕಾರದಿಂದ ರಥದಲ್ಲಿ ಒಯ್ಯುತ್ತಾನೆ. ಆಶ್ರಮಕ್ಕೆ ಹಿಂತಿರುಗಿದ ಪಾಂಡವರಿಗೆ ಈ ಸುದ್ದಿ ತಿಳಿಯುತ್ತದೆ. ಭೀಮ ಇವನನ್ನು ಸೋಲಿಸಿ ದ್ರೌಪದಿಯನ್ನು ಹಿಂತಿರುಗಿಸುತ್ತಾನೆ. ದುಶ್ಶಲೆ ಹಾಗೂ ಧೃತರಾಷ್ಟ್ರ ಗಾಂಧಾರಿಯರ ಹಿತದೃಷ್ಟಿಯಿಂದ ಇವನನ್ನು ಸಂಹರಿಸಬಾರದೆಂದು ಅರ್ಜುನಾದಿಗಳು ಭೀಮನನ್ನು ಒತ್ತಾಯಪಡಿಸುತ್ತಾರಾಗಿ ಭೀಮ ಇವನ ಜೀವಕ್ಕೆ ಹಾನಿಮಾಡದೆ ಸಾಕಷ್ಟು ಅವಮಾನಕ್ಕೆ ಗುರಿಮಾಡಿ ಬಿಟ್ಟುಕೊಡುತ್ತಾನೆ. ಸ್ವಯಂವರಕ್ಕೆಂದು ಹೊರಟಿದ್ದ ಜಯದ್ರಥ ಪ್ರಯಾಣವನ್ನು ಮುಂದುವರಿಸದೆ ತನ್ನ ಪಟ್ಟಣಕ್ಕೆ ಹಿಂತಿರುಗಿ ಬಂದು, ಗಂಗಾದ್ವಾರದಲ್ಲಿ ಶಿವನನ್ನು ಕುರಿತು ತಪಸ್ಸುಮಾಡಿ, ಪ್ರತ್ಯಕ್ಷನಾದ ಶಿವನಿಂದ ಅರ್ಜುನನ ಹೊರತಾಗಿ ಮಿಕ್ಕ ನಾಲ್ವರು ಪಾಂಡವರನ್ನು ಒಂದು ಬಾರಿ ಮಾತ್ರ ಗೆಲ್ಲುವ ವರವನ್ನು ಪಡೆದುಕೊಳ್ಳುತ್ತಾನೆ. ಭಾರತಯುದ್ಧದ ಹದಿಮೂರನೆಯ ದಿನ ಚಕ್ರವ್ಯೂಹವನ್ನು ಭೇದಿಸಿ ಒಳಹೊಕ್ಕ ಅಭಿಮನ್ಯುವಿನ ಕೊಲೆಗೆ ಜಯದ್ರಥ ಮುಖ್ಯ ಕಾರಣನಾಗುತ್ತಾನೆ. ಅದೇ ಕಾರಣದಿಂದಾಗಿ, ಕುಪಿತನಾದ ಅರ್ಜುನನ ಬಾಣಕ್ಕೆ ಗುರಿಯಾಗಿ ಅಸುನೀಗುತ್ತಾನೆ. (ಬಿ.ಕೆ.ಎಸ್.)

**ಜಯಪಾಲ :** ಹತ್ತನೆಯ ಶತಮಾನದ ಕೊನೆಯಲ್ಲಿ ಕಾಂಗ್ರಾದಿಂದ ಆಫ್ಘಾನಿಸ್ತಾನದ ಲಂಘಾನ್ ವರೆಗಿನ ಪ್ರದೇಶವನ್ನು ಆಳುತ್ತಿದ್ದ ಉದಬಾಂಢಪುರದ ಹಿಂದುಷಾಹಿ ವಂಶದ ಒಬ್ಬ ದೊರೆ. 977–997ರಲ್ಲಿ ಘಜ್ನಿಯನ್ನಾಳುತ್ತಿದ್ದ ಸಬಕ್ತಗಿನ್ ಇವನ ಸಮಕಾಲೀನ. ಮಧ್ಯ ಏಷ್ಯದ ಸಮನಿಡ್ ರಾಜರಿಗೆ ಸೇರಿದ ತುಖಾರಿಸ್ತಾನ್ ಮತ್ತು ಖುರಾಸಾನ್ ಪ್ರಾಂತ್ಯಗಳ ಅಧಿಕಾರಿಯಾಗಿದ್ದ ಅಲ್ಪ್ತಗಿನ್‌ಗೆ ಮೊದಲು ಗುಲಾಮನಾಗಿದ್ದು, ತನ್ನ ಯಜಮಾನ ಜಾಬೂಲಿಸ್ತಾನವನ್ನು ಅಬೂಬಕರ್‌ನಿಂದ ಕಸಿದು ಅದರ ರಾಜಧಾನಿಯಾದ ಘಜ್ನಿಯಲ್ಲಿ ಒಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದಾಗ ಆತನ ಸೇನಾನಿಯಾಗಿ ನೇಮಕಗೊಂಡಿದ್ದ ಸಬಕ್ತಗಿನ್ ಜಯಪಾಲನೊಡನೆ ಹಲವಾರು ಬಾರಿ ಕಾದಿದ. ಅಲ್ಪ್ತಗಿನನ ಅನಂತರ ಇಷಾಖ್ ಮತ್ತು ಬಲ್ಕಾತ್ಗಿನ್ ಅನುಕ್ರಮವಾಗಿ ಘಜ್ನಿಯನ್ನಾಳಿದ ಮೇಲೆ ಅಧಿಕಾರಕ್ಕೆ ಬಂದ ಪೀರಾಯನ ಆಳ್ವಿಕೆಯ ಕಾಲದಲ್ಲಿ ಪ್ರಜೆಗಳು ದಂಗೆ ಎದ್ದಾಗ ಜಯಪಾಲ ತನ್ನ ಸೇನೆಯೊಂದನ್ನು ಘಜ್ನಿಗೆ ಕಳುಹಿಸಿದ. ಆದರೆ ಚರ್ಖ್ ಬಳಿ ಸಬಕ್ತಗಿನ್ ಅದನ್ನು ಸೋಲಿಸಿದ. 977ರಲ್ಲಿ ಪೀರಾಯ್‌ನ ಸ್ಥಾನದಲ್ಲಿ ಸುಲ್ತಾನನಾದ ಸಬಕ್ತಗಿನ್ ತನ್ನ ರಾಜ್ಯವನ್ನು ವಿಸ್ತರಿಸುವ ನೆಪದಲ್ಲಿ ಜಯಪಾಲನ ರಾಜ್ಯದ ಮೇಲೆ ಹಲವಾರು ಬಾರಿ ದಾಳಿ ಮಾಡಿದ. ಜಯಪಾಲ ಕೊನೆಗೆ ಅನೇಕ ಆನೆಗಳನ್ನೊಳಗೊಂಡ ದೊಡ್ಡ ಸೈನ್ಯವೊಂದನ್ನು ಸಿದ್ಧಗೊಳಿಸಿ ಸಬಕ್ತಗಿನನನ್ನು ಎದುರಿಸಿದ. ಲಂಘಾನ್ ಮತ್ತು ಘಜ್ನಿಗಳ ನಡುವೆ ಇದ್ದ ಉಕ್ಬಘುಜ್ಞಾಕ್ ಎಂಬಲ್ಲಿ ಭೀಕರ ಕಾಳಗ ನಡೆಯಿತು (986–87). ಜಯಪಾಲನ ಸೈನ್ಯವನ್ನು ಎದುರಿಸಲಾರದ ಸಬಕ್ತಗಿನ್ ಮೋಸಕೃತ್ಯಗಳಿಂದ ಜಯಪಾಲನ ಸೈನಿಕರಲ್ಲಿ ಭೀತಿಯನ್ನು ಮೂಡಿಸಿದ. ಮಳೆಯಂತೆ ಸುರಿಯುತ್ತಿದ್ದ ಹಿಮದ ಚಳಿಯನ್ನು ಜಯಪಾಲನ ಸೈನಿಕರು ತಡೆಯಲಾರದೆ ಹೋದಾಗ ಯುದ್ಧ ನಿಲ್ಲಿಸಿ, ಶತ್ರುವಿನೊಡನೆ ಕರಾರು ಮಾಡಿಕೊಂಡ. ಆದರೆ ಸ್ವಸ್ಥಾನಕ್ಕೆ ಹಿಂದಿರುಗಿದ ಕೂಡಲೇ ಒಪ್ಪಂದವನ್ನು ಅಲ್ಲಗಳೆದಾಗ ಕೋಪಗೊಂಡ ಸಬಕ್ತಗಿನ್ ಜಯಪಾಲನನ್ನು ಸೋಲಿಸಿ ಲಂಘಾನ್‌ವರೆಗಿನ ಪ್ರದೇಶವನ್ನು ವಶಪಡಿಸಿಕೊಂಡ. ಮತ್ತೊಮ್ಮೆ ಜಯಪಾಲ ತೋಮರ, ಚಾಹಮಾನ, ಚಂದೇಲ ಅರಸರು ಕಳುಹಿಸಿದ ಸೈನ್ಯದ ನೆರವಿನೊಡನೆ ಸಬಕ್ತಗಿನನನ್ನು ಎದುರಿಸಿದ. ಆ ಯುದ್ಧದಲ್ಲೂ ಅವನಿಗೆ ಸೋಲಾಯಿತು. ಆ ಬಾರಿ ಪೆಷಾವರ್ ವರೆಗೂ ಸಬಕ್ತಗಿನನ ರಾಜ್ಯ ವಿಸ್ತರಿಸಿತು. ಸಬಕ್ತಗಿನ್ 997ರಲ್ಲಿ ಸತ್ತು ಮರುವರ್ಷ ಆತನ ಮಗ ಮಹಮೂದ ಅಧಿಕಾರಕ್ಕೆ ಬಂದ. 1000 ಮತ್ತು 1001ರಲ್ಲಿ, ಎರಡು ಬಾರಿ, ಅವನೂ ಜಯಪಾಲನನ್ನು ಸೋಲಿಸಿದ. ಎರಡನೆಯ ಬಾರಿ ಸೋತಾಗ ಜಯಪಾಲ 25,000 ದೀನಾರಗಳನ್ನೂ, 25 ಆನೆಗಳನ್ನೂ ಅವನಿಗೆ ಕಾಣಿಕೆಯಾಗಿ ಸಲ್ಲಿಸಲು ಒಪ್ಪಿ ತನ್ನ ಇಬ್ಬರು ಮಕ್ಕಳನ್ನೂ ಒತ್ತೆಯಾಗಿಡಬೇಕಾಯಿತು. ಇನ್ನೊಬ್ಬ ಮಗ ಆನಂದಪಾಲ ಆ ಕರಾರನ್ನು ಪಾಲಿಸಿ ರಾಜಕುಮಾರರನ್ನು ಬಿಡಿಸಿಕೊಂಡನಾದರೂ ಸೋಲಿನ ಹೊಡೆತಗಳಿಂದ ತನಗಾದ ಅವಮಾನವನ್ನು ತಾಳಲಾಗದ ಜಯಪಾಲ ಅಗ್ನಿಪ್ರವೇಶ ಮಾಡಿ ಮರಣಹೊಂದಿದ (1001). (ಎಚ್.ಕೆ.; ಎಸ್.ಎಚ್.ಐ.)

**ಜಯಪುರ :** ಭಾರತ ಗಣರಾಜ್ಯದ ರಾಜಸ್ಥಾನ ರಾಜ್ಯದ ರಾಜಧಾನಿ; ಜಯಪುರ ಜಿಲ್ಲೆಯ ಆಡಳಿತ ಕೇಂದ್ರ. ರೈಲುಮಾರ್ಗದಲ್ಲಿ ಮುಂಬಯಿಯಿಂದ 1120 ಕಿಮೀ ಈಶಾನ್ಯಕ್ಕೆ, ದೆಹಲಿಯಿಂದ 307ಕಿಮೀ ನೈರುತ್ಯಕ್ಕೆ ಇದೆ. ವಿಸ್ತೀರ್ಣ 11,117.8 ಚ.ಕಿಮೀ. ಜನಸಂಖ್ಯೆ 3,073,350 (2011). ಜಯಪುರವು ಭಾರತದ ಹತ್ತನೆಯ ದೊಡ್ಡ ನಗರ. ಇಲ್ಲಿ ಹಿಂದುಗಳು ಶೇ. 77, ಮುಸಲ್ಮಾನರು ಶೇ. 17, ಜೈನರು ಶೇ. 4, ಕ್ರೈಸ್ತರು ಶೇ. 0.5,

ಮತ್ತು ಸಿಖ್ಖರು ಶೇ. 0.5 ಇದ್ದಾರೆ. ಜಿಲ್ಲೆಯ ಸಾಕ್ಷರತೆ ಶೇ. 76.44; 1000 ಗಂಡಸರಿಗೆ 898ರಂತೆ ಸ್ತ್ರೀಯರಿದ್ದಾರೆ. ಹಿಂದಿ ಮತ್ತು ರಾಜಾಸ್ಥಾನಿ ಭಾಷೆಗಳನ್ನು ಹೆಚ್ಚಾಗಿ ಆಡುತ್ತಾರೆ. ಸಮುದ್ರಮಟ್ಟದಿಂದ 431 ಮೀ ಎತ್ತರದಲ್ಲಿರುವ ಜಯಪುರ ಭಾರತದ ಸುಂದರ ನಗರಗಳಲ್ಲಿ ಒಂದು. ಇಲ್ಲಿಯ ಹಲವು ಕಟ್ಟಡಗಳ ಬಣ್ಣ ಪಾಟಲ. ಆದ್ದರಿಂದ ಇದು ಪಾಟಲ ನಗರವೆಂದು (ಪಿಂಕ್ ಸಿಟಿ) ಪ್ರಸಿದ್ಧವಾಗಿದೆ. 1727ರಲ್ಲಿ ಮಹಾರಾಜ ಸವಾಯಿ ಜಯಸಿಂಹನಿಂದ ಸ್ಥಾಪಿತವಾದ ಈ ನಗರದ ರಚನಾಕೌಶಲ ವಿಶಿಷ್ಟವಾದ್ದು. ನಗರವನ್ನು ಚತುರಸ್ರಾಕಾರದ ಆರು ವಿಭಾಗಗಳಾಗಿ ರಚಿಸಲಾಗಿದೆ. ನಗರದಲ್ಲಿ ಹಲವಾರು ಕೋಟೆಗಳೂ ಸ್ಮಾರಕಗಳೂ ಇವೆ. ಅವುಗಳಲ್ಲಿ ಹವಾ ಮಹಲ್, ಅಂಬರ್ ಕೋಟೆ, ಜೈಗರ್ ಕೋಟೆ, ನಹಾರ್‌ಗರ್ ಕೋಟೆ ಮುಖ್ಯವಾದವು.

ಹಿಂದಿನ ಜಯಪುರ ಸಂಸ್ಥಾನದ ದೊರೆಗಳು ಕಟ್ಟಿಸಿದ ಹಲವಾರು ಕಟ್ಟಡಗಳು ಈ ನಗರದ ಸೌಂದರ್ಯದವನ್ನು ಹೆಚ್ಚಿಸಿವೆ. ಅವುಗಳಲ್ಲಿ ಜಯಪುರದ ಜಂತರ್ ಮಂತರ್ ಬಲು ಪ್ರಖ್ಯಾತವಾದದ್ದು. ಇದು ಜಯಸಿಂಹ ಕಟ್ಟಿಸಿದ ಖಗೋಳ ವೀಕ್ಷಣಾಲಯಗಳಲ್ಲೊಂದು **(ನೋಡಿ- ಜಂತರ್-ಮಂತರ್)** 1718-1734ರಲ್ಲಿ ಇದನ್ನು ಕಟ್ಟಲಾಯಿತು. ಜಯಪುರದ ಅರಮನೆ ಏಳು ಮಹಡಿಗಳ ಮಹಾಸೌಧ. ಪ್ರಮಾಣಬದ್ಧವಾಗಿ ಕಟ್ಟಿರುವ ದಿವಾನ್-ಇ-ಖಾಸ್, ಪೀತಮ್ ನಿವಾಸ್, ರಂಗಮಂದಿರ, ಶೋಭಾನಿವಾಸ-ಇವು ಈ ಅರಮನೆಯ ಮುಖ್ಯ ವಿಭಾಗಗಳು. 1616ರಲ್ಲಿ ಮೊಗಲ್ ದೊರೆ ಜಹಾಂಗೀರನೊಡನೆ ಪ್ರತಿನಿಧಿ ಸರ್

ಹವಾಮಹಲ್

ಥಾಮಸ್ ರೋ ನಡೆಸಿದ ಮಾತುಕತೆಯ ಚಿತ್ರವೂ ಅಬುಲ್ ಫಜಲನಿಂದ ಅನುವಾದಗೊಂಡ ಮಹಾಭಾರತದ ನಾಲ್ಕು ಹಸ್ತಪ್ರತಿಗಳೂ ಉಳ್ಳ ಗ್ರಂಥಾಲಯ ಇಲ್ಲಿದೆ. ಇದು ಹಿಂದಿನ ರಜಪೂತ ದೊರೆಗಳ ಸಾಹಿತ್ಯ ಮತ್ತು ಕಲಾವಿಭಾಗದ ಪ್ರತೀಕ. ಹಸಿರುಹುಲ್ಲಿನ ಹಾಸಿಗೆಗಳು, ಅಲ್ಲಲ್ಲಿ ತಿಳಿಗೊಳಗಳು, ನೀರುಬೀಳುಗಳು ಇರುವಂಥ ಉದ್ಯಾನದಿಂದ ಅರಮನೆಯ ಸೌಂದರ್ಯ ಹೆಚ್ಚಿದೆ. 1803ರಲ್ಲಿ ಪಟ್ಟಕ್ಕೆ ಬಂದ ರಾಜಾ ಜುಗ್ಗಲ್‌ಸಿಂಗ ಅರಮನೆಯ ಕಿಲಕಿಲಾಟದಿಂದ ದೂರವಿರಬೇಕೆಂದು ಬಯಸಿ ಈ ಉದ್ಯಾನವನದ ಜಲಾಶಯಗಳ ಪ್ರಶಾಂತ ವಾತಾವರಣದಲ್ಲಿಯೇ ಹೆಚ್ಚಾಗಿ ಕಾಲ ಕಳೆಯುತ್ತಿದ್ದನೆಂದೂ, ಅಲ್ಲಿಂದಲೇ ಅಂತಃಪುರದ ಏಕಾಂತದಲ್ಲಿದ್ದ ತನ್ನ ರಾಣಿಯರೊಡನೆ ತನ್ನ ನೆಚ್ಚಿನ ನಾಯಿಯೊಂದರ ಮುಖಾಂತರ ಪತ್ರವ್ಯವಹಾರ ಮಾಡುತ್ತಿದ್ದನೆಂದೂ ಪ್ರತೀತಿಯುಂಟು. ಅದರ ಪ್ರತೀಕವಾಗಿ ಉದ್ಯಾನವನದಲ್ಲಿ ಶಿಲಾಶ್ವಾನವೊಂದನ್ನು ನಿಲ್ಲಿಸಲಾಗಿದೆ. ಜಯಪುರದ ಅರಮನೆಯಲ್ಲಿ ಪಾರಿವಾಳಗಳ ಪಾಲನೆ-ಪೋಷಣೆಗಾಗಿ ಮಾಡಿದ್ದ ವ್ಯವಸ್ಥೆ ಪಾಶ್ಚಾತ್ಯ ಪ್ರವಾಸಿಗಳಿಗೆ ವೆನಿಸ್ ನಗರದ ಸೇಂಟ್ ಮಾರ್ಕ್ಸ್ ಚೌಕದ ನೆನಪು ಕೊಡುತ್ತದೆಂದು ಹೇಳಲಾಗಿದೆ.

ಮೊಸಳೆಗಳನ್ನು ಸಾಕಲು ಕಟ್ಟಿಸಿದ ಮೊಸಳೆ ಕೊಳ ಇನ್ನೊಂದು ವೈಶಿಷ್ಟ್ಯ. 1876ರಲ್ಲಿ ಸ್ವಿಂಟನ್ ಜೇಕಬ್ ರಚಿಸಿದ ಆಲ್ಬರ್ಟ್ ಹಾಲ್ ವಸ್ತು ಸಂಗ್ರಹಾಲಯದ ಕಟ್ಟಡದಲ್ಲಿ ಹಿಂದೂ-ಮುಸ್ಲಿಂ ಶಿಲ್ಪಶೈಲಿಗಳು ಸಂಗಮಿಸಿವೆ. ರಜಪೂತ ದೊರೆಗಳು ಬಳಸುತ್ತಿದ್ದ ಆಯುಧಗಳು ಮತ್ತು ವೇಷಭೂಷಣಗಳನ್ನು ಇಲ್ಲಿ ಸಂಗ್ರಹಿಸಿಡಲಾಗಿದೆ. ವೈರಿಗಳ ಆಗಮನವನ್ನು ದೂರದಿಂದಲೇ ಗೊತ್ತು ಮಾಡಿಕೊಳ್ಳುವ ಹಂಚಿಕೆಗಾಗಿ ಮಹಾರಾಜ ಇತಾರೀ ಸಿಂಗ್ ಕಟ್ಟಿಸಿದ ಸ್ವರ್ಗಶೂಲಿಯು ಜಯಪುರದ ಮತ್ತೊಂದು ಮುಖ್ಯ ಆಕರ್ಷಣೆ. ಅಮರ ಮಹಲ್, ನಹರ್‌ಗಡ್, ಸಂಗಾನೇರ ಜೈನಮಂದಿರ-ಇವು ಇತರ ಕೆಲವು ಕಟ್ಟಡಗಳು. ನಗರದೊಳಗಿನ ಪ್ರಮುಖ ಸ್ಥಳಗಳಲ್ಲಿ ರಜಪೂತ ದೊರೆಗಳ ಶಿಲಾಪ್ರತಿಮೆಗಳು ಎದ್ದು ಕಾಣುತ್ತವೆ. ಜಯಪುರದ ಹತ್ತಿರದಲ್ಲಿರುವ ಅಂಬರ್ ಬೆಟ್ಟದಲ್ಲಿ ಪ್ರಾಚೀನ ರಾಜಧಾನಿಯ ಅವಶೇಷಗಳಿವೆ. ಜಯಪುರದಿಂದ ಪಶ್ಚಿಮಕ್ಕೆ 65 ಕಿಮೀ. ದೂರದಲ್ಲಿರುವ ಸಾಂಭಾರ್ ಸರೋವರ ರಮ್ಯವಾದ್ದು. ಜಯಪುರದಲ್ಲಿ 1947ರಲ್ಲಿ ರಾಜಸ್ಥಾನ ವಿಶ್ವವಿದ್ಯಾಲಯ ಸ್ಥಾಪಿತವಾಯಿತು.



ಜಯಪುರದ ವೀಕ್ಷಣಾಲಯ-ಸಾಮ್ರಾಟ್ ಯಂತ್ರದ ಕಡೆಯಿಂದ ನೋಡಿದಾಗ

ಜಯಪುರವು ಗುಡಿಕೈಗಾರಿಕೆ ಮತ್ತು ಇತರ ಕೈಕಸಬುಗಳಿಗೆ ಪ್ರಸಿದ್ಧವಾಗಿದೆ. ಬಾಂಧನೀ ಸೀರೆಗಳ ತಯಾರಿಕೆ, ಬಟ್ಟೆಗಳ ಮೇಲೆ ಚಿನ್ನದ ಅಚ್ಚು ಹಾಕುವುದು, ಎನಾಮೆಲ್ ಕೆಲಸ, ಕುಂದಣಗೆಲಸ, ಹರಳುಗಳ ತಯಾರಿಕೆ, ಕಬ್ಬಿಣ ಉಕ್ಕು ಹಿತ್ತಾಳೆ ಮತ್ತು ತಾಮ್ರ ವಸ್ತುಗಳ ಮೇಲೆ ಚಿಕನ್, ಮರೋರಿ ಮತ್ತು ಬೀಚಿ ಚಿತ್ರ ಕೊರೆತ, ಕತ್ತಿ-ಕಠಾರಿಗಳ ತಯಾರಿಕೆ-ಇವು ಮುಖ್ಯ ಕೈಕಸಬುಗಳು. ರಜಪೂತ ಶೈಲಿಯ ಬಳೆಗಳು, ಪಾದರಕ್ಷೆಗಳು, ಮಡಕೆಗಳು, ದಂತದ ಮತ್ತು ಶ್ವೇತ ಶಿಲೆಯ ಆಟಿಕೆ ಮತ್ತು ಮೂರ್ತಿಗಳು ಜಯಪುರದ ಮನೆಮನೆಯಲ್ಲೂ ಕಾಣಸಿಗುತ್ತಿವೆ. ಇವಕ್ಕೆ ದೇಶದ ವಿವಿಧ ಭಾಗಗಳಲ್ಲಿ ಬೇಡಿಕೆಯುಂಟು. ರಾಜಸ್ಥಾನದ ಇತರ ಭಾಗಗಳಿಂದಲೂ ದಿಲ್ಲಿ, ವಾರಾಣಸಿಗಳಿಂದಲೂ ಕಸುಬುದಾರರು ಬಂದು ಜಯಪುರದಲ್ಲಿ ನೆಲೆಸಿದ್ದಾರೆ.

ಜಯಪುರ ಜಿಲ್ಲೆ ಉ.ಅ. $26^0 23'$-$27^0 51''$ಮತ್ತು ಪೂ.ರೇ. $74^0 55'$-$76^0 50'$ ನಡುವೆ ಇದೆ. ಈ ಜಿಲ್ಲೆಯ ಉತ್ತರಕ್ಕೆ ರಾಜಸ್ಥಾನದ ಶಿಕಾರ್ ಜಿಲ್ಲೆ ಮತ್ತು ಹರಿಯಾಣ, ದಕ್ಷಿಣಕ್ಕೆ ರಾಜಸ್ಥಾನದ ಟೋಂಕ್ ಜಿಲ್ಲೆ, ಪೂರ್ವಕ್ಕೆ ಆಳ್ವಾರ್ ಮತ್ತು ಸವಾಯಿ ಮಾಧೋಪುರ ಜಿಲ್ಲೆಗಳು, ಪಶ್ಚಿಮಕ್ಕೆ ನಾಗೌರ್ ಮತ್ತು ಅಜ್ಮೀರ್ ಜಿಲ್ಲೆಗಳು ಇದರ ಮೇರೆಗಳು. ಜಿಲ್ಲೆಯ ನೆಲ ಕಂದು ಮತ್ತು ಬೂದಿಬಣ್ಣದ ಉಸುಕು ಮಣ್ಣಿನಿಂದ ಕೂಡಿ ಫಲವತ್ತಾಗಿದೆ. ಬಂಗಾಂಗಾ, ಧೂಂಡ್, ಮೊರೆಲ್, ಮಾಸಿ ಮುಂತಾದ ನದಿಗಳ ನೀರಿನ ಆಸರೆ ಉಂಟು. ವರ್ಷಕ್ಕೆ ಸರಾಸರಿ 25-50 ಸೆಂಮೀ. ಮಳೆ ಆಗುತ್ತದೆ. ಇಲ್ಲಿಯ ಕನಿಷ್ಠ ಸರಾಸರಿ ಉಷ್ಣತೆ $15.0^0$-$17.5^0$ ಸೆಂ., ಗರಿಷ್ಠ ಸರಾಸರಿ ಉಷ್ಣತೆ $30.0^0$-$32.5^0$ ಸೆಂ. ಅರಾವಲೀ ಬೆಟ್ಟದ ಕೆಲವು ಭಾಗಗಳು ಈ ಜಿಲ್ಲೆಯಲ್ಲಿ ಚಾಚಿವೆ. ಬೆಲೆಬಾಳುವ ಹರಳುಗಳು, ಸುಣ್ಣಕಲ್ಲು, ಕಬ್ಬಿಣ ಅದಿರು, ಗಾಜು ತಯಾರಿಕೆಗೆ ಉಪಯುಕ್ತವಾದ ಮರಳು ಈ ಜಿಲ್ಲೆಯಲ್ಲಿ ವಿಪುಲವಾಗಿ ದೊರೆಯುತ್ತವೆ; ಬೆಟ್ಟಗಳನ್ನು ಆವರಿಸಿರುವ ಕಾಡಿನ ಮರಗಳು ಸೌದೆಗೆ ಮಾತ್ರ ಉಪಯುಕ್ತ. ಸಾಂಭಾರ್ ಸರೋವರದಲ್ಲಿ ಉಪ್ಪು ತಯಾರಾಗುತ್ತದೆ. ನಕ್ಕಿ ಬಟ್ಟೆ, ಬಾಂಧನೀ ಸೀರೆಗಳು, ದಂತದ ಆಟಿಕೆಗಳು, ಶ್ವೇತ ಶಿಲಾಮೂರ್ತಿಗಳು ಹಿತ್ತಾಳೆಯ ಪಾತ್ರೆಗಳು ಈ ಜಿಲ್ಲೆಯಲ್ಲಿ ಉತ್ಪಾದನೆಯಾಗುವ, ಇಲ್ಲಿಂದ ರಫ್ತಾಗುವ ಸರಕುಗಳು.

ಜಯಪುರವನ್ನು ಮೊದಲು ಕಛವಾ ವಂಶದ ರಜಪೂತ ದೊರೆಗಳು ಆಳುತ್ತಿದ್ದರು. 1857ರ ಬಂಡಾಯದ ಸಮಯದಲ್ಲಿ ಜಯಪುರ ಸಂಸ್ಥಾನದ ದೊರೆ ಬ್ರಿಟಿಷರಿಗೆ ಬೆಂಬಲ ನೀಡಿದ್ದಕ್ಕೆ ಪ್ರತಿಯಾಗಿ ಅವನ ಸಂಸ್ಥಾನಕ್ಕೆ ಹೆಚ್ಚಿನ ಪ್ರದೇಶಗಳು ಸೇರಿದುವು. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಜಯಪುರವನ್ನಾಳುತ್ತಿದ್ದವರು ಮಹಾರಾಜ ಸವಾಯ್ ಮಾನ್‌ಸಿಂಗ್. 1949ರ ಮಾರ್ಚ್ 30ರಂದು ಜಯಪುರ ಸಂಸ್ಥಾನ ರಾಜಸ್ಥಾನದಲ್ಲಿ ವಿಲೀನಗೊಂಡಿತು.

(ಬಿ.ಎ.ಎಸ್.)

**ಜಯಮಾಲ :** (1959- ). ವಾಣಿಜ್ಯ ಚಿತ್ರಗಳಲ್ಲದೆ, ಹೊಸ ಅಲೆಯ ಕನ್ನಡ ಚಿತ್ರಗಳಲ್ಲೂ ತನ್ನ ಅಭಿನಯ ಕೌಶಲವನ್ನು ಅಭಿವ್ಯಕ್ತಿಗೊಳಿಸಿದ ಅಭಿನೇತ್ರಿ, ಬಹುಭಾಷಾ ತಾರೆ. ಅಭಿನಯಕ್ಕಾಗಿ ರಾಜ್ಯ, ರಾಷ್ಟ್ರ ಪ್ರಶಸ್ತಿ ಪುರಸ್ಕೃತೆ, ನಿರ್ಮಾಪಕಿ. - ಜಯಮಾಲ ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಪಾಣೆ, ಮಂಗಳೂರಿನಲ್ಲಿ 1959ರ ಫೆಬ್ರುವರಿ 2ರಂದು. ತಂದೆ ಜಿ. ಓಮಯ್ಯ, ತಾಯಿ ಕಮಲಮ್ಮ, ರಾಜ್ಯಶಾಸ್ತ್ರದಲ್ಲಿ ಪದವೀಧರೆ. ಪ್ರದರ್ಶನ ಕಲೆಯಲ್ಲಿ ಆಸಕ್ತಿ. 'ಕಾಸ್‌ದಾಯಿ ಕಂಡನೆ' (1973) ತುಳು ಚಿತ್ರದಲ್ಲಿ ಅಭಿನಯಿಸುವ ಮೂಲಕ ಚಲನಚಿತ್ರರಂಗ ಪ್ರವೇಶ. ಹದಿಮೂರು ವರ್ಷದ ಈ ತಾರೆಗೆ 'ನವಭಾರತ'

ಪತ್ರಿಕೆಯ ಪ್ರಶಸ್ತಿ. ಸುಮಾರು 65 ಕನ್ನಡ ಚಿತ್ರಗಳಲ್ಲಿ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ರಾಜ್‌ಕುಮಾರ್ ಅವರ ಜೊತೆ ಏಳು ಜನಪ್ರಿಯ ಚಿತ್ರಗಳಲ್ಲಿ ನಟಿಸಿದ್ದಾರೆ. ಕನ್ನಡ, ತುಳು, ಭಾಷಾಚಿತ್ರಗಳಲ್ಲದೆ ತೆಲುಗು, ತಮಿಳು, ಮಲೆಯಾಳಂ ಭಾಷಾಚಿತ್ರಗಳಲ್ಲೂ ಅಭಿನಯಿಸಿದ್ದಾರೆ. ಜಯಮಾಲ ಚಿತ್ರನಿರ್ಮಾಣಕ್ಕೂ ತೊಡಗಿದರು. 'ಅಗ್ನಿಪರೀಕ್ಷೆ' (1986) ಜಯಮಾಲ ನಿರ್ಮಿಸಿದ ಮೊದಲ ಚಿತ್ರ. ಗಿರೀಶ್ ಕಾಸರವಳ್ಳಿಯವರ ನಿರ್ದೇಶನದ ಈ ಚಿತ್ರಕ್ಕೆ ಕೇಂದ್ರ ಸರಕಾರದ 1997ನೇ ಸಾಲಿನ 'ಸ್ವರ್ಣಕಮಲ' ಪ್ರಶಸ್ತಿ ದೊರೆತಿದೆ. ಅಭಿನಯಕ್ಕಾಗಿ ಜಯಮಾಲ ಅವರಿಗೆ ತೀರ್ಪುಗಾರರ ವಿಶೇಷ ಪ್ರಶಸ್ತಿ ಲಭ್ಯವಾಯಿತು.

'ತಾಯಿ ಸಾಹೇಬ' 1997–98ನೇ ಸಾಲಿನ ಅತ್ಯುತ್ತಮ ಚಿತ್ರವಾಗಿ ರಾಜ್ಯ ಸರಕಾರದಿಂದಲೂ ಪುರಸ್ಕೃತವಾಯಿತು. ಅತ್ಯುತ್ತಮ ನಟಿಯಾಗಿ ಜಯಮಾಲ, ಅತ್ಯುತ್ತಮ ಪೋಷಕ ನಟಿರಾಗಿ ಎಸ್. ಶಿವರಾಮ್, ಅತ್ಯುತ್ತಮ ಕಥಾ ಲೇಖಕರಾಗಿ ಆರ್.ಎಸ್. ಲೋಕಾಪುರ (ರಂ.ಶಾ), ಅತ್ಯುತ್ತಮ ಛಾಯಾಗ್ರಹಕರಾಗಿ ಎಚ್.ಎಂ.ರಾಮಚಂದ್ರ ಮತ್ತು ಅತ್ಯುತ್ತಮ ಕಲಾ ನಿರ್ದೇಶಕರಾಗಿ ರಮೇಶ ದೇಸಾಯಿ ಪುರಸ್ಕೃತರಾದರು. ತುತ್ತೂರಿ (2004) ಪನೋರಮಾಕ್ಕೆ ಆಯ್ಕೆಯಾದ ಚಿತ್ರ. ಜಯಮಾಲ ಗಂಗವ್ವ, ಗಂಗಾಮಾಯಿ, ಖಂಡವಿದೆಕೊ, ಮಾಂಸವಿದೆಕೊ ಸಂಗೀತ ಮೊದಲಾದ ಹೊಸ ಅಲೆಯ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಚಿತ್ರದಲ್ಲಿ ಪಾತ್ರದಲ್ಲಿನ ಆವಶ್ಯಕತೆ ಮನಗಂಡು ಮುಕ್ತ ಮನಸ್ಸಿನಿಂದ ಅಭಿನಯಿಸುವ ಗುಣ ಇವರದು. 'ಅಂತ' ಚಿತ್ರದಲ್ಲಿ ಅಂಬರೀಷರೊಂದಿಗೆ ಹಸಿಬಿಸಿಯಾಗಿ ಅಭಿನಯಿಸಿದ ಜಯಮಾಲರವರ ಅಭಿನಯದ ಇನ್ನೊಂದು ಪ್ರಬುದ್ಧ ಮುಖವನ್ನು ತೆರೆದಿಟ್ಟದ್ದು 'ತಾಯಿ ಸಾಹೇಬ'.

'ಕನ್ನಡ ಚಿತ್ರೋದ್ಯಮದ ಒಳ ಹೊರಗನ್ನೆಲ್ಲಾ ಆಳವಾಗಿ ಅರಿತಿರುವ ಜಯಮಾಲಾ ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಳಿಯಲ್ಲಿ ಖಜಾಂಚಿಯಾಗಿ, ಕಾರ್ಯದರ್ಶಿಯಾಗಿ ಸಕ್ರಿಯವಾಗಿ ದುಡಿದವರು. ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಭೆಯನ್ನು ಪ್ರವೇಶಿಸಿದ ಮೊದಲ ಮಹಿಳೆ ಖಜಾಂಚಿಯಾಗಿ, ಕಾರ್ಯದರ್ಶಿಯಾಗಿ ಕೆಲಸಮಾಡಿದರು. ಸಮಾಜ ಸೇವೆ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿಯೂ ಜಯಮಾಲಾ ಆಸಕ್ತಿಯಿಂದ ಪಾಲ್ಗೊಳ್ಳುತ್ತಾ ಬಂದಿದ್ದಾರೆ. ಬೀದಿ ಮಹಿಳೆಯರಿಗೆ ಆಶ್ರಯ ನೀಡಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರಲು ಪ್ರಯತ್ನಿಸುತ್ತಿರುವ ಮೈಸೂರಿನ ಶಕ್ತಿಧಾಮ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿಯಾಗಿ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. (ಶ್ರೀಕೃಪಾ)

**ಜಯಮ್ಮ ಬಿ :** 1915–88. ಕನ್ನಡ ಚಲನಚಿತ್ರ ಮತ್ತು ರಂಗಭೂಮಿ ಕಲಾವಿದೆ. ಮೂಕಿ ಚಿತ್ರಗಳ ಕಾಲದಿಂದ ಬಣ್ಣದ ಚಿತ್ರಗಳವರೆಗೆ ದೀರ್ಘಕಾಲ ಚಲನಚಿತ್ರ ಹಾಗೂ ರಂಗಭೂಮಿಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಇವರು 1915ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಪೊಲೀಸ್ ಇನ್ಸ್‌ಪೆಕ್ಟರಾಗಿದ್ದ ಟಿ.ಎನ್. ಮಲ್ಲಪ್ಪನವರು, ತಾಯಿ ಕಮಲಮ್ಮ. ತಾಯಿಯ ಮನೆತನದವರೆಲ್ಲ ನಾಟಕ ಮತ್ತು ಸಂಗೀತದಲ್ಲಿ ಪರಿಶ್ರಮವಿದ್ದವರೇ. ಇವರ ದೊಡ್ಡಮ್ಮ ಬಿ. ಸುಂದರಮ್ಮ ಕೂಡ ಆ ಕಾಲದ ಪ್ರಸಿದ್ಧ ನಟಿ. ಈ ಸಂಪರ್ಕದಿಂದಾಗಿ ಜಯಮ್ಮನವರಿಗೆ ಬಾಲ್ಯದಿಂದಲೂ ನಾಟಕದಲ್ಲಿ ಆಸಕ್ತಿ ಬೆಳೆಯಿತು. ಇವರ ತಂದೆಗೆ ಮಗಳು ಓದಿ ವೈದ್ಯಳಾಗಬೇಕೆಂಬ ಆಸೆ. ಆದರೆ ತಂದೆಯ ಅನಿರೀಕ್ಷಿತ ನಿಧನದಿಂದ ಇವರ ಶಾಲಾವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿಲ್ಲವಾಯಿತು. ಒಂಬತ್ತನೆಯ ವಯಸ್ಸಿನಲ್ಲಿಯೇ ರಸಿಕ ಜನಾನಂದ ನಾಟಕ ಸಭೆಯವರ ಸೀತಾಕಲ್ಯಾಣ ನಾಟಕದಲ್ಲಿ ಸೀತೆಯಾಗಿ ಅಭಿನಯಿಸಿದರು. ಇದೇ ಇವರ ಪ್ರಥಮ ವೃತ್ತಿನಾಟಕ.

ಹದಿಮೂರು ವರ್ಷದವರಾಗಿದ್ದಾಗ ಬಾಳ್ಳು ಬಸವೇಗೌಡರ ಕಂಪನಿಯಲ್ಲಿ ಉಪನಾಯಕಿಯ ಪಾತ್ರಗಳನ್ನು ವಹಿಸುತ್ತಿದ್ದರು. 1928ರಲ್ಲಿ ಗುಬ್ಬಿ ವೀರಣ್ಣನವರ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಭಾ ಸೇರಿದರು. ಅಲ್ಲಿ ರಾಜಭಕ್ತಿ, ಸದಾರಮೆ, ಕಬೀರದಾಸ, ದಶಾವತಾರ ಮತ್ತು ತೆಲುಗು ನಾಟಕ ಕುರುಕ್ಷೇತ್ರದಲ್ಲೂ ಪಾತ್ರವಹಿಸಿ ಕರ್ನಾಟಕ ಮತ್ತು ಆಂಧ್ರ ಈ ಎರಡು ಪ್ರದೇಶಗಳಲ್ಲೂ ಹೆಸರು ಪಡೆದರು. ಗುಬ್ಬಿ ವೀರಣ್ಣನವರ ಕರ್ನಾಟಕ ಕಾರ್ಪೊರೇಷನ್ ಸಂಸ್ಥೆಯ ಮೂಕಿ ಚಿತ್ರಗಳಲ್ಲಿ ನಾಯಕಿಯಾದರು. ಮುಂದೆ ವೀರಣ್ಣನವರೊಂದಿಗೆ ಇವರ ವಿವಾಹವಾಯಿತು. ಹಿಸ್ ಲವ್ ಅಫೇರ್ ಚಿತ್ರದಲ್ಲಿ ಹಾಲಿವುಡ್ಡಿನ ನಿರ್ದೇಶಕರ ಮುಂದೆ ಪ್ರಥಮವಾಗಿ ನಟಿಸಿ ಚಲನಚಿತ್ರರಂಗಕ್ಕೆ ಅಡಿಯಿಟ್ಟರು. ಇದಾದ ಅನಂತರ ವೈ.ವಿ. ರಾವ್ ನಿರ್ದೇಶಿಸಿದ ಜಾಂಬವತಿ ಚಿತ್ರದಲ್ಲಿ ಅಭಿನಯಿಸಿದರು.

ಗುಬ್ಬಿ ಕಂಪನಿಯ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದುದರ ಜೊತೆಗೇ ಸದಾರಮೆ, ಸುಭದ್ರ, ಜೀವನ ನಾಟಕ, ಹೇಮರೆಡ್ಡಿ ಮಲ್ಲಮ್ಮ, ತ್ಯಾಗಯ್ಯ ಮುಂತಾದ ವಾಕ್ಚಿತ್ರಗಳಲ್ಲೂ ನಾಯಕಿಯ ಪಾತ್ರವಹಿಸಿ ಪ್ರಸಿದ್ಧರಾದರು. ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನ ಸ್ವರ್ಗಸೀಮಾ, ತಮಿಳಿನ ಭರ್ತೃಹರಿ ಮುಂತಾದ ಚಿತ್ರಗಳಲ್ಲಿ ಅಭಿನಯಿಸಿ ತ್ರಿಭಾಷಾತಾರೆ ಎಂದು ಹೆಸರು ಪಡೆದರು. ಮುಕ್ತಿ, ಸಾಕ್ಷಾತ್ಕಾರ, ಗುಣಸಾಗರಿ, ರಾಜಾವಿಕ್ರಮ, ಪ್ರೇಮಮಯಿ, ಮಾವನ ಮಗಳು, ಅಣ್ಣತಂಗಿ ಇವು ಇವರು ಪಾತ್ರವಹಿಸಿದ ಕೆಲವು ಪ್ರಮುಖ ಚಿತ್ರಗಳು.

ಇವರಿಗೆ ಅಭಿನಯದಂತೆ ಸಂಗೀತದಲ್ಲೂ ಆಸಕ್ತಿಯಿತ್ತು. ಅನೇಕ ಸಂಗೀತ ಕಛೇರಿಗಳನ್ನೂ ಮಾಡಿ ಸಂಗೀತ ಸುಧಾ, ಸಂಗೀತಸರಸ್ವತಿ ಮುಂತಾದ ಪ್ರಶಸ್ತಿಗಳನ್ನು ಪಡೆದರು. ಸಾಮಾಜಿಕ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ಬಹುಕಾಲ ಕನ್ನಡ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿದ್ದರು. ಅಶಕ್ತ ಕಲಾವಿದರ ಸಂಘದ ಆಡಳಿತ ವರ್ಗದಲ್ಲೂ ಇವರು ಸೇವೆ ಸಲ್ಲಿಸಿದ್ದರು. ಇವರ ಅಭಿನಯ ಕಲೆಗಾಗಿ ಕರ್ನಾಟಕ ರಾಜ್ಯಸರ್ಕಾರ ಸನ್ಮಾನಿಸಿತ್ತು. (ಎಚ್.ಎಸ್.ಪಿ.)

**ಜಯರಾಂ, ಕೆ ವಿ :** ಅತಿಹೆಚ್ಚು ಕಾದಂಬರಿ ಆಧಾರಿತ ಚಿತ್ರಗಳನ್ನು ನಿರ್ದೇಶಿಸಿದವರು. ಇದು ಇವರ ಹೆಗ್ಗಳಿಕೆ. ಮೈಸೂರಿನವರಾದ ಕೆ.ವಿ.ಜಯರಾಂ ಚಿಕ್ಕ ವಯಸ್ಸಿನಿಂದಲೂ ಕಥೆ–ಕಾದಂಬರಿ ಪ್ರಿಯರು. ವ್ಯಾಸಂಗದ ದಿನಗಳಲ್ಲಿ ಚಿತ್ರೀಕರಣ ವೀಕ್ಷಿಸಲು ಆಗಾಗ ಹೋಗುತ್ತಿದ್ದ ಜಯರಾಂ ಕಾಲೇಜು ವಿದ್ಯಾಭ್ಯಾಸವನ್ನು ತ್ಯಜಿಸಿ ಚಿತ್ರರಂಗದತ್ತ ಧಾವಿಸಿ ಬಂದವರು. ಆರಂಭದಲ್ಲಿ "ವಂಶವೃಕ್ಷ" ಚಿತ್ರದಲ್ಲಿ ಸಹಾಯಕರಾಗಿ ಕೆಲಸ ಮಾಡಿದರು. ಹಿರಿಯ ನಿರ್ದೇಶಕ ಎಂ.ಆರ್.ವಿಠ್ಠಲ್‌ರ ಸಹಾಯಕರಾಗಿ ಪಳಗಿದರು. "ವಂಶವೃಕ್ಷ" ಚಿತ್ರದಲ್ಲಿ ಸಂಕಲನ ತಜ್ಞೆ ಅರುಣಾ ವಿಕಾಸ್ ದೇಸಾಯಿಯವರಿಗೂ ಸಹಾಯಕರಾಗಿ ದುಡಿದು ಸಂಕಲನದಲ್ಲಿಯೂ ಪರಿಣತಿ ಪಡೆದರು. ನಿರ್ದೇಶನದೊಂದಿಗೆ ಸಂಭಾಷಣೆ, ಚಿತ್ರಕಥಾ ರಚನೆ, ಸಂಕಲನ ಕಾರ್ಯಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಅನುಭವಪಡೆದವರು. ಇವರ ಪ್ರಥಮ ನಿರ್ದೇಶನದ ಚಿತ್ರ ಟಿ.ಕೆ.ರಾಮರಾಯರ ಕಾದಂಬರಿ ಆಧಾರಿತ "ಮರಳು ಸರಪಣಿ". ಇವರ ನಿರ್ದೇಶನದಲ್ಲಿ ತೆರೆಕಂಡ ಚಿತ್ರಗಳಲ್ಲಿ ಕಾದಂಬರಿ ಆಧಾರಿತವಾದವೇ ಅಧಿಕ. ಬಾಡದ ಹೂ, ಬೆತ್ತಲೆಸೇವೆ, ಇಬ್ಬನಿ ಕರಗಿತು, ಅರುಣರಾಗ, ವರ್ಣಚಕ್ರ, ಶರವೇಗದ ಸರದಾರ, ರಂಜಿತಾ–ಇವು ಜಯರಾಂ ನಿರ್ದೇಶಿಸಿದ ಚಿತ್ರಗಳಲ್ಲಿ ಕೆಲವು. 16 ಎಂ.ಎಂ.ಗಾತ್ರದಲ್ಲಿ ಚಿತ್ರೀಕರಿಸಿ, 35 ಎಂ.ಎಂ.ಗೆ ಹಿಗ್ಗಿಸಿ, 35 ಎಂ.ಎಂ.ನಲ್ಲಿ ಚಿತ್ರಿಸಿದಲ್ಲಿ ಕಂಡುಬರುವ ತಾಂತ್ರಿಕ ಮಟ್ಟವನ್ನೇ 16 ಎಂ.ಎಂ. ಚಿತ್ರೀಕರಣದಲ್ಲಿಯೂ ಉಳಿಸಿಕೊಳ್ಳುವ ಪ್ರಯೋಗದಲ್ಲಿ ಯಶಸ್ವಿಯಾದವರು.

1981–82ರಲ್ಲಿ "ಬಾಡದ ಹೂ", 1985–86ರಲ್ಲಿ "ಹೊಸನೀರು" ಚಿತ್ರಗಳಿಗಾಗಿ ರಾಜ್ಯ ಪ್ರಶಸ್ತಿ ಪುರಸ್ಕೃತರಾದರು. ನಿರ್ಮಾಪಕರಾಗಿಯೂ ಉತ್ತಮ ಗುಣಮಟ್ಟದ ಚಿತ್ರಗಳನ್ನು ನೀಡಿದ್ದಾರೆ. "ಹೊಸರಾಗ", "ರಂಜಿತ" ಈ ನಿಟ್ಟಿನಲ್ಲಿ ಒಂದೆರಡು ಉದಾಹರಣೆಗಳು. ಕಡಿಮೆ ವೆಚ್ಚದಲ್ಲಿ ಮನೆಮಂದಿಯೆಲ್ಲಾ ಕೂಡಿ ಕುಳಿತು ನೋಡುವಂಥ–ಸದಭಿರುಚಿಯ ಯಶಸ್ವೀ ಚಿತ್ರಗಳನ್ನು ನೀಡಿದ್ದಾರೆ. ಕನ್ನಡ ಚಿತ್ರರಂಗಕ್ಕೆ ನಿರ್ದೇಶಕರಾಗಿ ಜಯರಾಂ ಅವರು ನೀಡಿರುವ ಸಮಗ್ರಕಾಣಿಕೆಗಳನ್ನು ಕರ್ನಾಟಕ ಸರ್ಕಾರವು ಗುರುತಿಸಿ 2000–2001ನೇ ಸಾಲಿನ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ಇವರಿಗೆ ನೀಡಿ ಪುರಸ್ಕರಿಸಿತು. ಕೆ.ವಿ.ಜಯರಾಂರವರ ಸೋದರ ಕೆ.ವಿ.ರಾಜು ಅವರೂ ಕನ್ನಡ ಚಿತ್ರರಂಗದಲ್ಲಿ ಮಿಂಚಿದ ನಿರ್ದೇಶಕ ಹಾಗೂ ಚಿತ್ರಕಥಾ ಲೇಖಕ. (ಶ್ರೀಕೃಪಾ)

**ಜಯಲಲಿತ, ಜೆ. :** (1948– ). ಖ್ಯಾತ ನಟಿ ಮತ್ತು 3 ಬಾರಿ ತಮಿಳುನಾಡಿನ ಮುಖ್ಯಮಂತ್ರಿ. ಕರ್ನಾಟಕದ ಮೇಲುಕೋಟೆಯಲ್ಲಿ ಫೆಬ್ರವರಿ 24, 1948ರಂದು ಜನನ. ತಂದೆ ಜಯರಾಂ, ತಾಯಿ ವೇದವಲ್ಲಿ (ಅನಂತರ ಸಂಧ್ಯಾ ಎಂದು ಹೆಸರು ಬದಲಿಸಿಕೊಂಡರು). ಜಯಲಲಿತಾ ಅವರ ಮೊದಲ ಹೆಸರು ಕೋಮಲವಲ್ಲಿ. ಐಯ್ಯಂಗಾರ್

ಕುಟುಂಬಕ್ಕೆ ಸೇರಿದವರು. ಆಕೆಗೆ ಎರಡು ವರ್ಷ ಆಗಿದ್ದಾಗ ತಂದೆ ತೀರಿಕೊಂಡರು. ಆಗ ತಾಯಿ ಜಯಲಲಿತಾರನ್ನು ಬೆಂಗಳೂರಿಗೆ ಕರೆದೊಯ್ದರು. ನಂತರ ತಾಯಿ ತಮಿಳು ಸಿನಿಮಾಗಳಲ್ಲಿ ನಟಿಸಲು ಚೆನ್ನೈಗೆ ಹೋದರು. ಜಯಲಲಿತಾ ಅನೇಕ ಭಾಷೆಗಳನ್ನು (ತಮಿಳು, ಕನ್ನಡ, ತೆಲುಗು, ಹಿಂದಿ, ಮಲೆಯಾಳಂ ಮತ್ತು ಇಂಗ್ಲಿಷ್) ಕಲಿತರು. ಆಕೆಗೆ 15 ವರ್ಷವಾದಾಗ ತಾಯಿಯ ಶಾಲೆಯ ರಜೆ ಅವಧಿಯಲ್ಲಿ ಸಿನಿಮಾಗಳಲ್ಲಿ ನಟಿಸಬೇಕೆಂದು ಒತ್ತಾಯಿಸಿದರು. 'ಎಪಿಸ್ಲ್' ಎಂಬ ಇಂಗ್ಲಿಷ್ ಸಿನಿಮಾದಲ್ಲಿ (1961) ಮೊದಲು ನಟಿಸಿದರು. 1964ರಲ್ಲಿ ಕನ್ನಡದಲ್ಲಿ ನಾಯಕಿಯಾಗಿ (ಚಿತ್ರ–ಚಿನ್ನದ ಗೊಂಬೆ) ನಟಿಸಿದರು. ತಮಿಳಿನಲ್ಲಿ ಅವರ ಮೊದಲ ಸಿನಿಮಾ 'ವೆನ್ನೀರ ಆಡೈ' (1965). 1966ರಲ್ಲಿ ತೆಲುಗು ಭಾಷೆಯಲ್ಲಿ ನಟಿಸಿದರು. ತಮಿಳಿನಲ್ಲಿ ತುಂಡುಲಂಗ ಧರಿಸಿ ದಿಟ್ಟವಾಗಿ ನಟಿಸಿದ ಮೊದಲ ನಾಯಕಿ ಈಕೆ. ಹಿಂದಿಯಲ್ಲಿ ನಟ ಧರ್ಮೇಂದ್ರ ಅವರೊಡನೆ 'ಇಜ್ಜತ್' (1968) ಎಂಬ ಚಲನಚಿತ್ರದಲ್ಲಿ ನಟಿಸಿದರು.

1972ರಲ್ಲಿ ಜಯಲಲಿತಾ ಅವರು ಶಿವಾಜಿಗಣೇಶನ್ ಜೊತೆ ನಟಿಸಿದ 'ಪಟ್ಟಿಕಾಡಾ ಪಟ್ಟಣಮ' ಎಂಬ ಚಲನಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ (1973) ದೊರಕಿತು. ಜನಪ್ರಿಯತೆಯ ಉತ್ತುಂಗ ಶಿಖರಕ್ಕೆ ಏರಿದ ಆಕೆ 140ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

60, 70ರ ದಶಕಗಳಲ್ಲಿ ಶ್ರೀ ಎಂ.ಜಿ. ರಾಮಚಂದ್ರನ್ ಅವರೊಡನೆ 28 ಯಶಸ್ವೀ ಚಿತ್ರಗಳಲ್ಲಿ ನಟಿಸಿ ಜನಪ್ರಿಯ ತಾರಾಜೋಡಿಯಾದರು. ಆಕೆಯ ಕೊನೆಯ ಚಿತ್ರ 1980ರಲ್ಲಿ ಬಿಡುಗಡೆಯಾಯಿತು.

1977ರಲ್ಲಿ ಮುಖ್ಯಮಂತ್ರಿಯಾದ ಎಂ.ಜಿ. ರಾಮಚಂದ್ರನ್ ಅವರು ಆಕೆಯನ್ನು ರಾಜಕೀಯಕ್ಕೆ ಪರಿಚಯಿಸಿದರು. ಆಗ ಆಕೆ. ಎ.ಐ.ಎ.ಡಿ.ಎಂ.ಕೆ. ಪಕ್ಷ ಸೇರಿದರು. 1983ರಲ್ಲಿ ಆ ಪಕ್ಷದ ಪ್ರಚಾರ ಕಾರ್ಯದರ್ಶಿಯಾಗಿ, ತಿರುಚಂದೂರು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದರು. ಎಂ.ಜಿ.ಆರ್. ಅವರ ಮರಣಾನಂತರ ಜಯಲಲಿತಾ ಆ ಪಕ್ಷದ ಉತ್ತರಾಧಿಕಾರಿಯಾದರು. 1991ರಿಂದ 96ರ ವರೆಗೆ ಮೊದಲ ಅವಧಿಗೆ ಮುಖ್ಯಮಂತ್ರಿಯಾದರು. 1996ರ ಚುನಾವಣೆಯಲ್ಲಿ ಆಕೆಯ ಪಕ್ಷ ಸೋಲನ್ನನುಭವಿಸಿ ಅಧಿಕಾರ ಕಳೆದುಕೊಂಡಿತು. 'ಬರಗೂರ್' ಕ್ಷೇತ್ರದಲ್ಲಿ ಆಗ ಜಯಲಲಿತ ಡಿ.ಎಂ.ಕೆ. ಅಭ್ಯರ್ಥಿಯಿಂದ ಪರಾಭವಗೊಂಡರು. 2001ರಲ್ಲಿ ಆಕೆ ಮತ್ತೆ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಬಂದರು. 2011ರಲ್ಲಿ ಆಕೆ ಮತ್ತೆ ಮೂರನೇ ಬಾರಿಗೆ ಚುನಾವಣೆಯಲ್ಲಿ ಗೆದ್ದು ಮುಖ್ಯಮಂತ್ರಿಯಾದರು. ಮಿತಿಮೀರಿ ಆಸ್ತಿ ಗಳಿಕೆಯ ಆಪಾದನೆ ಸಾಬೀತಾಗಿ ಬೆಂಗಳೂರಿನ ವಿಶೇಷ ನ್ಯಾಯಾಲಯವು ಅವರಿಗೆ ನಾಲ್ಕು ವರ್ಷಗಳ ಜೈಲು ಶಿಕ್ಷೆ ಮತ್ತು 100 ಕೋಟಿ ರೂ. ದಂಡ ವಿಧಿಸಿತು.

ಆಕೆಯನ್ನು ಬೆಂಬಲಿಗರು 'ಅಮ್ಮ', 'ಪುರಚ್ಚಿ ತಲೈವಿ' (ಕ್ರಾಂತಿಕಾರಿ ನಾಯಕಿ) ಎಂದು ಕರೆಯುವರು. (ಬಿ.ವಿ.ಎಸ್.)

**ಜಯಲಕ್ಷ್ಮೀ ಆಳ್ವ :** (1933– ). ನಶಿಸಿಹೋಗುತ್ತಿದ್ದ ಸಂಪ್ರದಾಯ ನೃತ್ಯಗಳಾದ ನವಸಂಧಿ, ನವಗ್ರಹ ಸ್ತೋತ್ರಂ ಇತ್ಯಾದಿ ನೃತ್ಯ ಪ್ರಕಾರಗಳನ್ನು ಪುನರ್ ಜಾಗೃತಿಗೊಳಿಸಿದ್ದಲ್ಲದೆ ಸಮಕಾಲೀನವಾಗಿಯೂ ಹಲವಾರು ನೃತ್ಯಗಳನ್ನು ಸಂಯೋಜಿಸಿ ರಂಗಪ್ರಯೋಗ ಮಾಡಿದವರು.

ಆಳ್ವ ಅವರು 1933ರಲ್ಲಿ ತಮಿಳುನಾಡಿನ ಕುಂಭಕೋಣಂನಲ್ಲಿ ಜನಿಸಿದರು. ಅವರ ಪತಿ ರಾಮಕೃಷ್ಣ ಆಳ್ವರವರೊಂದಿಗೆ ಮಂಗಳೂರಿನಲ್ಲಿ ನೆಲೆಸಿ ನೃತ್ಯವನ್ನೇ ತಮ್ಮ ಕಾರ್ಯಕ್ಷೇತ್ರವಾಗಿಸಿ ಇಂದಿಗೂ ಮುಂದುವರಿಸುತ್ತಿದ್ದಾರೆ. ಪದ್ಮಶ್ರೀ ದುಡಾಯುಧಪಾಣಿ ಪಿಳ್ಳೆ ಅವರಲ್ಲಿ ಭರತನಾಟ್ಯವನ್ನು, ಸ್ವರಂ ಸರಸ್ವತಿ ಹಾಗೂ ಗೌರಿ ಅಮ್ಮಾಳ್ ಅವರಲ್ಲಿ ಅಭಿನಯವನ್ನೂ ಕರುಣಾಕರ ಪಣಿಕರ್ ಅವರಲ್ಲಿ ಕಥಕ್ಕಳಿ ನೃತ್ಯ ಪದ್ಧತಿಯಲ್ಲಿ ಪರಿಣಿತಿ ಪಡೆದರು.

ಮೊಟ್ಟಮೊದಲ ರಂಗಪ್ರವೇಶ 1948ರ ಮಾರ್ಚ್ ಏಳರಂದು. ಅಂದಿನಿಂದ ನೃತ್ಯ ಕಾರ್ಯಕ್ರಮಗಳನ್ನು ನಿರಂತರವಾಗಿ ನೀಡುತ್ತಿದ್ದಾರೆ. ನೃತ್ಯಗಾರಿಕೆಯಲ್ಲಿ ಸಂಚಾರಿಭಾವದ ಶ್ರೀಮಂತಿಕೆ ಹಾಗೂ ನಾಯಿಕಾ ಪಾತ್ರದಲ್ಲಿ ಸಹಜ ಅಭಿನಯ ಶ್ರೀಮತಿ ಜಯಲಕ್ಷ್ಮೀ ಆಳ್ವ ಅವರಿಗೆ ಕರಗತವಾಗಿದೆ. 1953–56ರಲ್ಲಿ ಖ್ಯಾತ ನರ್ತಕಿ ಮೃಣಾಲಿನಿ ಸಾರಾಭಾಯಿ ಅವರ 'ದರ್ಪಣ್' ನೃತ್ಯಕಲಾ ತಂಡದೊಡನೆ ರೋಮ್, ಇಟಲಿ, ಸ್ವಿಟ್ಜರ್‌ಲ್ಯಾಂಡ್, ಜಪಾನ್, ಜರ್ಮನಿ, ರಷ್ಯಾ ಮೊದಲಾದ ದೇಶಗಳಲ್ಲಿ ಎರಡು ಬಾರಿ ಪ್ರವಾಸ ಮಾಡಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮುಂಬಯಿಯ ಕಲಾ ತರಂಗ್ ಅವರಿಗೆ 'ಸೌಗಂಧ' ಎಂಬ ನೃತ್ಯ ನಾಟಕವನ್ನು ರೂಪಿಸಿ ನಿರ್ದೇಶಿಸಿದ್ದಾರೆ. 1959ರಲ್ಲಿ ಮುಂಬಯಿಯಲ್ಲಿಯೇ 'ಚಿತ್ರಾಂಬಲಮ್ ನೃತ್ಯ ಕೇಂದ್ರ' ಆರಂಭಿಸಿದರು. 1974ರಿಂದ ಮಂಗಳೂರಿನಲ್ಲಿ 'ಶ್ರೀದೇವಿ ನೃತ್ಯ ಕೇಂದ್ರ' ನಡೆಸುತ್ತಿದ್ದಾರೆ.

ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಆಧುನಿಕ, ಸಮಕಾಲೀನ ವಾಸ್ತವತೆ, ಭಾವನೆಗಳನ್ನು ಪ್ರೇರೆಪಿಸುವಂತೆ ಅನೇಕ ಗೀತನೃತ್ಯಗಳನ್ನು ರೂಪಿಸಿದರು. ಅವುಗಳಲ್ಲಿ ಚಿತ್ರಾಂಬಲ, ಕುರವಂಜಿ, ಸ್ವಾತಿ ತಿರುನಾಳ್ ಅವರ ರಾಮಾಯಣ, ಕೃಷ್ಣ ಕೀರ್ತನ, ಕೃಷ್ಣ ತುಲಾಭಾರ, ವಸಂತವಲ್ಲಿ, ಬಾಲ ರಾಮಾಯಣ, ನವಗ್ರಹ, ನೃತ್ಯ ಗೋವಿಂದ, ಕರಾವಳಿಗಾಥೆ ಹಾಗೂ ಇತ್ತೀಚಿನ ಪಂಚಕನ್ಯೆಗಳನ್ನು ಉದಾಹರಿಸಬಹುದು.

ಈವರೆಗೆ ನೂರಕ್ಕೂ ಹೆಚ್ಚು ಶಿಷ್ಯೆಯರಿಗೆ ರಂಗಪ್ರವೇಶ ಯಶಸ್ವಿಯಾಗಿ ಮಾಡಿಸಿದ್ದು, ತಮ್ಮ ಶ್ರೀದೇವಿ ನೃತ್ಯ ಕೇಂದ್ರದಿಂದ ಪ್ರತಿ ವರ್ಷ ವಾರ್ಷಿಕೋತ್ಸವ, ವಿಚಾರ ಸಂಕಿರಣ, ನೃತ್ಯ ಕಲಾಶಿಬಿರ, ಕಲಾ ಪ್ರಾತ್ಯಕ್ಷಿಕೆಗಳಲ್ಲದೆ ನೃತ್ಯೋತ್ಸವ ಸಹ ನಡೆಸುತ್ತಿದ್ದಾರೆ. ಜಯಲಕ್ಷ್ಮಿ ಆಳ್ವರವರ ಶಿಷ್ಯ ಪರಂಪರೆ ಬಹಳ ದೊಡ್ಡದು. ಇವರ ಶಿಷ್ಯರುಗಳಲ್ಲಿ ಸದ್ಭಾವನಾ ಕಾಲೇಜಿನ ಪ್ರಾಂಶುಪಾಲರಾದ ಆರತಿ ಶೆಟ್ಟರಲ್ಲದೆ, ಖ್ಯಾತ ಕಲಾವಿದರಾದ ಪದ್ಮಾ ಸುಬ್ರಹ್ಮಣ್ಯಂ, ವಹೀದಾ ರೆಹಮಾನ್, ಕುಮಾರಿ ಜಯಾ ಮುಂತಾದವರೆಲ್ಲಾ ಸೇರಿದ್ದಾರೆ.

ಜಯಲಕ್ಷ್ಮಿ ಆಳ್ವ ಅವರಿಗೆ ಪ್ರಶಸ್ತಿ ಗೌರವಗಳು ಸಂದಿವೆ. 1949ರಲ್ಲೇ ಚೆನ್ನೈನಲ್ಲಿ 'ನೃತ್ಯಕಲಾ ಸರಸ್ವತಿ' ಎಂಬ ಬಿರುದು ನೀಡಿ ಸನ್ಮಾನಿಸಲಾಗಿತ್ತು. ನಂತರ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾ ತಿಲಕ ಪ್ರಶಸ್ತಿ (1986), ರಾಜ್ಯೋತ್ಸವ ಪ್ರಶಸ್ತಿ (1993), ಚೆನ್ನೈನ ಭಾರತೀಯ ವಿದ್ಯಾಭವನದಿಂದ 'ಸ್ತ್ರೀರತ್ನ' ಪ್ರಶಸ್ತಿ (1998), ಕರ್ನಾಟಕ ನೃತ್ಯ ಕಲಾ ಪರಿಷತ್ ಪ್ರಶಸ್ತಿ (2000), ಉಡುಪಿಯ ಸಂಸ್ಕಾರ ಭಾರತೀಯವರಿಂದ ನೃತ್ಯಕಲಾರತ್ನ ಪ್ರಶಸ್ತಿ (2001), ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಕರ್ನಾಟಕ ಶ್ರೀ ಪ್ರಶಸ್ತಿ' (2003), ಕರ್ನಾಟಕ ನೃತ್ಯ ಕಲಾ ಪರಿಷತ್‌ನಿಂದ ನೃತ್ಯಕಲಾ ಶಿರೋಮಣಿ (2004) ಮೊದಲಾದ ಪ್ರಶಸ್ತಿಗಳು ಲಭಿಸಿವೆ.

ಏಕಾಗ್ರತೆ, ಕ್ರಿಯಾಶೀಲತೆ ಮತ್ತು ಸಾಂಪ್ರದಾಯಿಕ ನೃತ್ಯ ಕ್ಷೇತ್ರಕ್ಕೆ ಅನನ್ಯ ಸೇವೆ ನೀಡಿದ ಖ್ಯಾತ ನೃತ್ಯ ಕಲಾವಿದೆ ಶ್ರೀಮತಿ ಜಯಲಕ್ಷ್ಮಿ ಆಳ್ವ ಅವರಿಗೆ 2004ನೆಯ ಸಾಲಿನ ಶಾಂತಲಾ ನಾಟ್ಯ ಪ್ರಶಸ್ತಿಯನ್ನು ಕರ್ನಾಟಕ ಸರಕಾರವು ನೀಡಿ ಗೌರವಿಸಿದೆ. *

**ಜಯಲಕ್ಷ್ಮೀ ಶ್ರೀನಿವಾಸನ್ :** ಇಪ್ಪತ್ತನೆಯ ಶತಮಾನದ ಮೊದಲಲ್ಲಿ ಬರೆಯಲಾರಂಭಿಸಿದ ಹಿರಿಯ ಲೇಖಕಿಯರಲ್ಲಿ ಜಯಲಕ್ಷ್ಮೀ ಶ್ರೀನಿವಾಸನ್ ಪ್ರಮುಖರು. ತಮಿಳು ಮಾತೃಭಾಷೆಯಾದರೂ ಪತಿಯ ನೌಕರಿಯ ಕಾರಣದಿಂದಾಗಿ ಬಹುಕಾಲ ಬೆಂಗಳೂರಿನಲ್ಲೇ ನೆಲಸಿದ್ದರಿಂದ ಕನ್ನಡವನ್ನು ಚೆನ್ನಾಗಿ ಕಲಿತು ಕನ್ನಡದಲ್ಲೇ ಕಥೆ ಕಾದಂಬರಿ ಬರೆಯುವಂತಾದರು. ಕನ್ನಡದ ಶ್ರೇಷ್ಠ ಸಾಹಿತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ಯರು ಸಂಪಾದಕರಾಗಿದ್ದ 'ಜೀವನ' ಪತ್ರಿಕೆಯಲ್ಲಿ ಇವರ ಮೊದಲ ಬರಹಗಳು ಪ್ರಕಟವಾದವು. ಆ ಪ್ರೋತ್ಸಾಹದಿಂದ ಪ್ರೇರಿತರಾಗಿ ಬರವಣಿಗೆಯನ್ನು ಮುಂದುವರಿಸಿದರು. ಅಂದಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಇವರ ಕಥೆಗಳು, ಅನುವಾದಿತ ಕಥೆಗಳು ಪ್ರಕಟವಾಗತೊಡಗಿದವು. ಜಯಲಕ್ಷ್ಮಿ ಅವರು ಕನ್ನಡ, ತಮಿಳು, ಇಂಗ್ಲಿಷ್, ಹಿಂದಿ ಹೀಗೆ ಬಹುಭಾಷಾ ಪರಿಣತರು. ತಮಿಳಿನಲ್ಲೂ ಬರೆಯುತ್ತಿದ್ದರು. ತಮಿಳಿನಿಂದ ಅನೇಕ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಸರೋಜ' ಇವರ ಕಾವ್ಯನಾಮ. ಆದರೆ ನಿಜನಾಮ ಜಯಲಕ್ಷ್ಮೀ ಶ್ರೀನಿವಾಸನ್ ಎನ್ನುವುದೇ ಹೆಚ್ಚು ಪ್ರಸಿದ್ಧವಾಯಿತು. 'ಪರಿಣಿತೆ' ಮುಂತಾದ ಕಾದಂಬರಿಗಳನ್ನು, 'ಮೊಗ್ಗು' ಮೊದಲಾದ ಕಥಾಸಂಕಲಗಳನ್ನು ರಚಿಸಿರುವುದಲ್ಲದೆ, ಮಕ್ಕಳಿಗಾಗಿಯೇ ಅನೇಕ ಕಥೆಗಳನ್ನು ಬರೆದಿದ್ದಾರೆ. ಗೃಹವಿಜ್ಞಾನದಲ್ಲಿ ಹೆಚ್ಚಿನ ಆಸಕ್ತಿ ಇದ್ದುದರಿಂದ ಅದಕ್ಕೆ ಸಂಬಂಧಿಸಿದ "ವೈಭವದ ಮನೆ" ಎಂಬ ಕೃತಿಯನ್ನು, 'ಸರೋಜ ನಳಿನಿ' ಎನ್ನುವ ಜೀವನಚರಿತ್ರೆಯನ್ನು ಬರೆದಿದ್ದಾರೆ.

ಜಯಲಕ್ಷ್ಮಿಯವರು ವಿದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ದಕ್ಷಿಣ ಆಫ್ರಿಕ, ಕೆನಡ, ಇಂಗ್ಲೆಂಡ್, ಫ್ರಾನ್ಸ್ ದೇಶಗಳಿಗೆ ಹೋಗಿ ಬಂದಿದ್ದಾರೆ. ಇವರ ಕೃತಿಗಳಲ್ಲಿ ಆ ಪ್ರವಾಸದ ಪ್ರಭಾವ ಕಾಣಬಹುದು.

ಈ ಹಿರಿಯ ಲೇಖಕಿಯಿಂದ ರಚಿತವಾದ ಪುಸ್ತಕಗಳು ಅನೇಕ. ಈ ಸಾಧನೆಯ ಫಲವಾಗಿ ಇವರಿಗೆ ಅನೇಕ ಪ್ರಶಸ್ತಿಗಳೂ ಸಂದಿವೆ. ಅವುಗಳಲ್ಲಿ ಮುಖ್ಯವಾದವುಗಳು: ತಮಿಳುನಾಡಿನ 'ವಿದ್ಯಾರತ್ನ' ಪ್ರಶಸ್ತಿ, 1971ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಿವಂಗತ ಚಂದ್ರಕಲಾ ಅವರು ಸ್ಥಾಪಿಸಿರುವ ಸ್ವರ–ಲಿಪಿ ಪ್ರತಿಷ್ಠಾನದ 'ಲಿಪಿ ಪ್ರಜ್ಞೆ'

ಪ್ರಶಸ್ತಿ ಮುಂತಾದವುಗಳು. 1965ರಲ್ಲಿ ನಡೆದ ಅಖಿಲ ಭಾರತ ಲೇಖಕಿಯರ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇಳಿವಯಸ್ಸಿನಲ್ಲಿ ಕಾಯಿಲೆಯಿಂದ ನರಳುತ್ತಿದ್ದಾಗ ಕರ್ನಾಟಕ ಸರ್ಕಾರದ ಪ್ರತಿಷ್ಠಿತ 'ದಾನಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿಯನ್ನು (2000) ಇವರ ಮನೆಗೇ ಬಂದು ನೀಡಲಾಯಿತು. ಜಯಲಕ್ಷ್ಮೀ ಶ್ರೀನಿವಾಸನ್ ಅವರ ಮೂರು ಮಕ್ಕಳೂ ಪ್ರತಿಭಾವಂತರು (ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗ) ಮಗಳು ಮಾಲತಿ ಸುಬ್ರಹ್ಮಣ್ಯಂ ಕೂಡ ಒಳ್ಳೆಯ ಲೇಖಕಿ; ದೌರ್ಭಾಗ್ಯದಿಂದ ಚಿಕ್ಕವಯಸ್ಸಿನಲ್ಲೇ ತೀರಿಕೊಂಡರು. (ಎಚ್.ಎಸ್.ಪಿ.)

**ಜಯವಿಜಯರು :** ಕರ್ದಮಬ್ರಹ್ಮನ ಸಂದರ್ಶನಮಾತ್ರದಿಂದ ತೃಣಬಿಂದುವಿನ ಮಗಳಾದ ದೇವಹೂತಿಯಲ್ಲಿ ಜನಿಸಿದ ಅವಳಿಮಕ್ಕಳು. ಇವರು ವಿಷ್ಣುವಿನ ಪರಮಭಕ್ತರು, ಧರ್ಮಶೀಲರು ಮತ್ತು ಜಿತೇಂದ್ರಿಯರು. ಪ್ರತಿ ದಿನವೂ ಪೂಜೆಯ ಸಮಯದಲ್ಲಿ ವಿಷ್ಣು ಇವರಿಗೆ ದರ್ಶನ ಕೊಡುತ್ತಿದ್ದನಂತೆ. ಮರುತ್ತನೆಂಬ ರಾಜ ಆಚರಿಸಿದ ಯಾಗವೊಂದರಲ್ಲಿ ಈ ಸಹೋದರರು ಪಾಲ್ಗೊಂಡು ವಿಪುಲ ಧನಧಾನ್ಯಗಳನ್ನೂ ದೇವತೆಗಳ ಮೆಚ್ಚುಗೆಯನ್ನೂ ಪಡೆಯುತ್ತಾರೆ. ತಾವು ಸಂಪಾದಿಸಿದುದನ್ನು ಹಂಚಿಕೊಳ್ಳುವಾಗ ಇವರಲ್ಲಿ ಪರಸ್ಪರ ವೈಮನಸ್ಯವುಂಟಾಗಿ ವಿಜಯನನ್ನು ಜಯ ಮೊಸಳೆಯಾಗೆಂದು ಶಪಿಸುತ್ತಾನೆ. ಹಾಗೆಯೇ ಜಯನಿಗೆ ವಿಜಯ ಆನೆಯಾಗೆಂದು ಶಾಪಕೊಡುತ್ತಾನೆ. ಪೂಜೆಯ ಸಮಯದಲ್ಲಿ ಪ್ರತ್ಯಕ್ಷನಾದ ವಿಷ್ಣುವಿಗೆ ಆ ಪ್ರಸಂಗವನ್ನು ಇವರೇ ನಿವೇದಿಸಿಕೊಳ್ಳುತ್ತಾರೆ. ತನ್ನ ಭಕ್ತರ ಶಾಪ ಸುಳ್ಳಾಗಲಾರದೆಂದು ಹೇಳಿ, ಅದನ್ನು ಇವರು ಸ್ವಲ್ಪಕಾಲ ಅನುಭವಿಸಿದ ತರುವಾಯ ವಿಮೋಚನೆ ಮಾಡುವುದಾಗಿ ವಿಷ್ಣು ಇವರಿಗೆ ಭರವಸೆ ಕೊಡುತ್ತಾನೆ. ಜಯ ವಿಜಯರು ಗಂಡಕೀ ನದಿಯ ತೀರದಲ್ಲಿ ಕ್ರಮವಾಗಿ ಆನೆ ಮೊಸಳೆಗಳಾಗಿ ಜನ್ಮತಾಳುತ್ತಾರೆ. ಒಮ್ಮೆ ಆನೆ ರೂಪದ ಜಯ ನದಿಯಲ್ಲಿ ನೀರು ಕುಡಿಯಲು ಹೋದಾಗ, ಮೊಸಳೆಯಾಗಿದ್ದ ವಿಜಯ ಅವನನ್ನು ಹಿಡಿಯುತ್ತಾನೆ; ಜಯ ವಿಷ್ಣುವಿನ ಮೊರೆಹೋಗುತ್ತಾನೆ. ವಿಷ್ಣು ಪ್ರತ್ಯಕ್ಷನಾಗಿ ತನ್ನ ಚಕ್ರಾಯುಧದಿಂದ ಇಬ್ಬರನ್ನೂ ವಧಿಸಿ ಸಾರೂಪ್ಯ ಮುಕ್ತಿಯನ್ನು ಕೊಟ್ಟು ಜಯವಿಜಯ ಎಂಬ ಹೆಸರಿನಿಂದಲೇ ಇವರನ್ನು ವೈಕುಂಠದ ದ್ವಾರಪಾಲಕರನ್ನಾಗಿ ಮಾಡುತ್ತಾನೆ. ಇವರು ಆ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಒಮ್ಮೆ ವೈಕುಂಠಕ್ಕೆ ಬಂದ ಸನಕಾದಿ ಮುನಿಗಳನ್ನು ದ್ವಾರದಲ್ಲಿ ತಡೆಯುತ್ತಾರೆ. ಅದರಿಂದ ಕುಪಿತರಾದ ಮುನಿಗಳು ಇವರನ್ನು ಶಪಿಸಿದ್ದರ ಪರಿಣಾಮವಾಗಿ ಇವರು ಭೂಲೋಕದಲ್ಲಿ ಮೂರು ಜನ್ಮವೆತ್ತುವಂತಾಗುತ್ತದೆ. ಒಂದು, ಎರಡು, ಮೂರನೆಯ ಜನ್ಮಗಳಲ್ಲಿ ಕ್ರಮವಾಗಿ ಅವರು ಹಿರಣ್ಯಾಕ್ಷ, ಹಿರಣ್ಯಕಶಿಪು; ರಾವಣ, ಕುಂಭಕರ್ಣ; ಶಿಶುಪಾಲ, ದಂತವಕ್ತ್ರ–ಇವರ ರೂಪದಲ್ಲಿ ಜನಿಸುತ್ತಾರೆ; ಅಲ್ಲದೆ ಅನುಕ್ರಮವಾಗಿ ವರಾಹ ನೃಸಿಂಹರಿಂದ, ಶ್ರೀರಾಮನಿಂದ, ಶ್ರೀಕೃಷ್ಣನಿಂದ ಹತರಾಗಿ ಪುನಃ ವಿಷ್ಣು ಸಾನ್ನಿಧ್ಯವನ್ನು ಪಡೆಯುತ್ತಾರೆ. (ಬಿ.ಕೆ.ಎಸ್.)

**ಜಯವೇಂಕಟಾಚಾರ್ಯ :** ಪ್ರ.ಶ. 1727. ಕನ್ನಡದಲ್ಲಿ ವಿರಳವಾಗಿರುವ ದಂಡಕ ಹಾಗೂ ಭಟ್ಟಂಗಿಗಳ ಕರ್ತೃ. ಒಂದು ಗಳಿಗೆಯಲ್ಲಿ ನೂರು ಶ್ಲೋಕಗಳನ್ನು ರಚಿಸಬಲ್ಲ ಹೆಗ್ಗಳಿಕೆ ತನ್ನದೆಂದು ಹೇಳಿಕೊಂಡಿದ್ದಾನಾದರೂ ಈಗ ಉಪಲಬ್ಧವಾಗಿರುವುದು ಈತನ ಒಂದು ದಂಡಕ ಮತ್ತು ಇಪ್ಪತ್ತೆಂಟು ಭಟ್ಟಂಗಿಗಳು ಮಾತ್ರ. ಕವಿಯ ಸ್ಥಳ ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿರುವ ಕನಕಗಿರಿ. ಕನಕಗಿರಿ ಸಂಸ್ಥಾನವನ್ನು ಅಂದಿಗೆ ಆಳುತ್ತಿದ್ದ ರಂಗಪ್ಪನಾಯಕ ಕವಿಗೆ ಆಶ್ರಯವಿತ್ತಂತೆ ತಿಳಿದುಬರುತ್ತದೆ.

ಜಯವೇಂಕಟಾಚಾರ್ಯನ ಗುರು ಹಾಗೂ ತಂದೆ ಶ್ರೀನಿಧಿ ಆಚಾರ್ಯ. ಬಾಲ್ಯದಲ್ಲಿ ಚಂಚಲಚಿತ್ತನಾದ ಜಯವೆಂಕಟ ಸಂಜೀವ ಮುಖ್ಯಪ್ರಾಣನ ವರದಿಂದ ಪಾಂಡಿತ್ಯ ಸಂಪಾದಿಸಿದನೆಂದು ಜನಜನಿತ ಕಥೆ. ಈತನ ವಂಶದವರಿಗೆ ಹಿಂದಕ್ಕೆ ಕೃಷ್ಣರಾಯ ಧರಣೀಪತಿ ಬಿಟ್ಟ ದತ್ತಿಯನ್ನು ಕವಿ ನೆನೆದಿದ್ದಾನೆ. ಅರಳಿಹಳ್ಳಿ, ನರಸಾಪುರ ಎಂಬ ಹಳ್ಳಿಗಳು ಜಾಗೀರುಗಳಾಗಿ ಮೊನ್ನೆ ಮೊನ್ನೆಯ ವರೆಗೆ ಈ ವಂಶದವರ ಅನುಭವದಲ್ಲಿದ್ದವು.

ಜಯವೇಂಕಟಾಚಾರ್ಯ ವೀರವೈಷ್ಣವನೇ ಆಗಿರಬೇಕು. ಅದ್ವೈತ ಸಂನ್ಯಾಸಿಯೊಬ್ಬನೊಂದಿಗೆ ವಾದವಿವಾದದಲ್ಲಿ ಕೈಗೆ ಕೈ ಹತ್ತಿ ಮುಸ್ಲಿಮ್ ನ್ಯಾಯಾಧೀಶನೆದುರಿಗೆ ಹೋಗುವ ಪ್ರಸಂಗ ಬಂತಂತೆ. ಸಮಯಸ್ಫೂರ್ತಿಯಿಂದ ದ್ವೈತ ಮತ್ತು ಇಸ್ಲಾಂನ ಸಮನ್ವಯವನ್ನು ಈತ ಸಾರಿದ ರೀತಿ ಕುತೂಹಲಕರವಾಗಿದೆ:

ಅಲ್ಲಾ–ದೇವೋ, ದೇವಪ್ರಜಾ–ನಮಾಜಾ ।
ಖಾಜೀ–ವಿದ್ವಾನ್, ಪಂಡಿತಃ–ತತ್ರ ಮುಲ್ಲಃ ॥
ಪುರಾಣಃ–ಕುರಾನಃ ಕಿತಾಬಂ–ಚ ಶಾಸ್ತ್ರಂ ।
ಭಾಷಾಭೇದೋ ನೈವ ಶಾಸ್ತ್ರೇಷು ಭೇದಃ ॥

ಈತ ವಿಪುಲವಾಗಿ ದೇಶಾಟನೆಮಾಡಿದ್ದನೆಂದು ಈತನ ಒಂದು ಭಟ್ಟಂಗಿಯಿಂದ ತಿಳಿಯುತ್ತದೆ. ತಾನು ಬಾಲ್ಯದಲ್ಲಿ ರಸಿಕ ಜೀವನಕ್ಕೆ ಮಾರುಹೋಗಿದ್ದುದು, ಕನಕಗಿರಿಯ ಮೇಲೆ ಆದ ದಾಳಿ, ತನಗೆ ಕೊನೆಗಾಲಕ್ಕೆ ಬಂದ ಕಷ್ಟಗಳು–ಇವನ್ನು ಕವಿ ತನ್ನ ಕೃತಿಯಲ್ಲಿ ಸೂಚ್ಯವಾಗಿ ತಿಳಿಸಿದ್ದಾನೆ.

ಈತನ ಭಟ್ಟಂಗಿಗಳಲ್ಲಿ ಕಾವ್ಯಸೌಂದರ್ಯವನ್ನೂ ಕಾಣಬಹುದು. ಈ ಕವಿಯ ದೃಷ್ಟಿಯಲ್ಲಿ ಲಕ್ಷ್ಮೀದೇವಿ 'ಮದನನು ಮತ್ತೆ ಜೈಭೇರಿಯ ಹೊಯ್ಸುತಾ । ಕದನದಿ ಮೂರು ಲೋಕವ ಗೆದ್ದಮೇಲೆ ಫಲವಿಲ್ಲದ ಭೇರಿಯ ಡಬ್ಬುಹಾಕಿ ತನ್ನ ಹಸನದಿ ತೋರ್ಪ ಕುಚಕುಂಭಗಳೋಳ್ ಸಮಸ್ತ ಸೌಂದರೀ ಅಮಿತಗುಣಾಭಿರಾಮ ಕನಕಾಚಲರಂಗನ ಪಟ್ಟದೊಲ್ಲಭೆಯಾಗಿ ಕಾಣುತ್ತಾಳೆ. ಈತನಿಗೆ ಭಾಷೆಯ ಮೇಲಿದ್ದ ಹಿಡಿತಕ್ಕೆ 'ಅಂಬೇ ದಯಾಕದಂಬೇ ನೆರೆನಂಬಿದೆ ನಿನ್ನ ಪದಾಂಬುಜ ದ್ವಯಾ ।' ಮುಂತಾದ ಪಂಕ್ತಿಗಳು ಸಾಕ್ಷಿಯಾಗಿವೆ. ಈ ಕವಿ ಪಡೆದ ದರ್ಶನ ಇಲ್ಲಿದೆ:

ಮೇರೂ ಪೀಠವಾಗಿ ಇನಚಂದ್ರರು ತಾವು ಸೂರ್ಯಪಾನಗಳಾಗಿ ।
ತಾರಕೆಯು ದಿವ್ಯಪುಷ್ಪಗಳಾಗಿ ಧ್ರುವಮಂಡಳವು ದೀಪ್ತಕಿರೀಟವಾಗಿ ॥
ಧಾರುಣಿಯು ರಾಣಿಯಾಗಿ ಶ್ರೀದೇವಿಯು ಭೂಷಣವಾಗಿ ।
ಪಾರ್ವತಿಯು ದಿವಾಣಕಾಯ್ದ ವಿಭವ ರಕ್ಷಿಸೋ ವೆಂಕಟಶೈಲವಲ್ಲಭಾ ॥

ಈತನ ದಂಡಕದ ಶೈಲಿ ಇನ್ನೂ ಮನೋಜ್ಞವಾಗಿದೆ.

ಶುಭಗುಣಮಯ ವಿಗ್ರಹೋಲ್ಲಾಸ । ಲಕ್ಷ್ಮೀಮನೋನಾಥ । ನಾಭೀ ಸರೋಜಾತ । ಜಾತಾಂಡ ಮಧ್ಯೋಲ್ಲ । ಸದ್ದೇಶ ಕರ್ನಾಟ । ವೆಂಬಲ್ಲಿ ಬಲ್ಲಂಥ । ಪಂಪಾಸರೋವಾಮ । ಷಟ್ಕೋಶದುರ್ಗದಲ್ಲಿ । ಸರ್ವರ್ ನೆರೇಗೊಂಡು । ಮೆರೆವಂಥ ಹೇಮಾದ್ರಿ । ಎಂಬೋ ಪೆಸರ್ನಿಂದ । ವಿಖ್ಯಾತಮಾದಂಥ । ಭೂ ಪಟ್ಟಣಂ ಸರ್ವ ಸಾಮ್ರಾಜ್ಯದಿಂದಾಳಿ ಬಾಳ್ವಂಥ ಶ್ರೀ ಮನ್ಮ । ಹಾನಾಯಕಾಚಾರ್ಯ । ನಾಯಕ ಶಿರೋರತ್ನ । ಗುಜ್ಜಲಮಹಾವಂಶ । ವಾರಾನಿಧೀಚಂದ್ರ । ಧೀಸಾಂದ್ರರಂಗಾಖ್ಯ । ಭೂಮೀಂದ್ರನಂ ಪೊಂದಿ । ವಿಖ್ಯಾತಪಾಂಡಿತ್ಯ । ಧೀರೋನ್ನತ ಶ್ರೀನಿಧಿ, ಶ್ರೀನಿಧಿ, ಶ್ರೀನಿಧೀ । ಎಂಬೋಗುರ್ವಂಘ್ರಿ..............

ಹೀಗೆ ನಿರ್ಗಳವಾಗಿ ಸಾಗುತ್ತದೆ, ಈ ಕವಿಯ ಶೈಲಿ. ಈತ ಸಂಸ್ಕೃತ ಗ್ರಂಥಗಳನ್ನೂ ರಚಿಸಿರುವನೆಂದು ಪ್ರತೀತಿ. ಆದರೆ ಈತನವೆಂದು ಹೇಳಲಾಗುವ ಒಂದೆರಡು ಶ್ಲೋಕಗಳ ಹೊರತು ಯಾವ ಗ್ರಂಥವೂ ಇದುವರೆಗೆ ದೊರೆತಿಲ್ಲ. (ಜಿ.ಆರ್.ಪಿ.)

**ಜಯಶಂಕರ ಪ್ರಸಾದ್ :** 1890–1937. ಕವಿ, ನಾಟಕಕಾರ, ಕಾದಂಬರಿಕಾರ. ಆಧುನಿಕ ಹಿಂದೀ ಸಾಹಿತ್ಯದ ಛಾಯಾವಾದ ಮತ್ತು ರಹಸ್ಯವಾದಗಳ ಪ್ರವರ್ತಕನೆಂದು ಹೆಸರಾದವ. ಕಾಶಿಯ ದೇವೀಪ್ರಸಾದ ಸಾಹು ಎಂಬಾತನ ಮಗ. ತಂದೆ ದಾನಶೀಲನೂ ವಿದ್ವಾಂಸ ಕಲಾವಿದರ ಪೋಷಕನೂ ಆಗಿದ್ದ. ಕವಿಯ ಶಿಕ್ಷಣ ಮನೆಯಲ್ಲೇ ಆರಂಭವಾಗಿ ಸಂಸ್ಕೃತ, ಹಿಂದೀ, ಉರ್ದು, ಪಾರಸಿ, ಇಂಗ್ಲಿಷ್, ಬಂಗಾಳಿ ಭಾಷೆಗಳಲ್ಲಿ ಸಾಕಷ್ಟು ವ್ಯವಸಾಯ ನಡೆಯಿತು. ಶಾಲೆಯ ಶಿಕ್ಷಣ ಮಾತ್ರ 8ನೆಯ ತರಗತಿಗೇ ಕೊನೆಗೊಂಡಿತು. 15ನೆಯ ವಯಸ್ಸಿಗೆಲ್ಲ ತಂದೆ ತಾಯಿಯನ್ನು ಕಳೆದುಕೊಂಡು ಅನಾಥನಾದ. ಗೃಹಕಲಹ, ವ್ಯಾಪಾರದಲ್ಲಿನ ನಷ್ಟ, ಅಣ್ಣನ ಸಾವುಗಳಿಂದ ಜರ್ಜರಿತನಾಗಿ ತನ್ನ 17ನೆಯ ವಯಸ್ಸಿಗೆಲ್ಲ ಗೃಹಕೃತ್ಯದ ಭಾರವನ್ನು ಹೊರಬೇಕಾಗಿ ಬಂತು. ಮೂರು ನಾಲ್ಕು ಸಾರಿ ಯಾತ್ರೆ ಮಾಡಿದ್ದರ ಹೊರತು ಉಳಿದ ತನ್ನ ಜೀವನವೆಲ್ಲ ಈತ ಕಾಶಿಯಲ್ಲೇ ಕಳೆದ.

ಈ ಕವಿ ತನ್ನ 9ನೆಯ ವಯಸ್ಸಿಗೇ ಬ್ರಜಭಾಷೆಯಲ್ಲಿ ಕವಿತಾರಚನೆಯನ್ನು ಆರಂಭಿಸಿದ. 1909ರಲ್ಲಿ ಆರಂಭವಾದ ಇಂದು ಎಂಬ ಪತ್ರಿಕೆಯಲ್ಲಿ ಈತನ ಆರಂಭಿಕ ರಚನೆಗಳು ಪ್ರಕಟವಾದವು. ಕಲಾಧರ್ ಎಂಬುದು ಕವಿಯ ಅಂದಿನ ಕಾವ್ಯನಾಮ. 1918ರಲ್ಲಿ ಪ್ರಕಟವಾದ ಚಿತ್ರಾಧಾರ್‌ನಲ್ಲಿ ಈತನ ಮೊದಲ ಕವಿತೆ, ಕತೆ, ನಾಟಕ, ನಿಬಂಧಗಳು ಪ್ರಕಟವಾದವು. ಕಾನನ್ ಕುಸುಮ್, ಊರ್ವಶಿ, ಮಹಾರಾಣಾ ಕಾ ಮಹತ್ತ್ವ, ಪ್ರೇಮಪಥಿಕ್, ಕರುಣಾಲಯ, ಝರೇನಾ, ಆಂಸೂ, ಲಹರ್, ಕಾಮಾಯನೀ, ಸಜ್ಜನ್, ಕಲ್ಯಾಣೀ ಪರಿಣಯ್, ಪ್ರಾಯಶ್ಚಿತ್ತ್, ರಾಜ್ಯಶ್ರೀ, ವಿಶಾಖ, ಕಾಮನಾ, ಜನಮೇಜಯ್ ಕಾ ನಾಗಯಜ್ಞ್, ಸ್ಕಂದಗುಪ್ತ, ಏಕ್ ಘೂಂಟ್, ಚಂದ್ರಗುಪ್ತ, ಅಜಾತಶತ್ರು, ಧ್ರುವಸ್ವಾಮಿನೀ, ಛಾಯಾ, ಪ್ರತಿಧ್ವನಿ, ಆಕಾಶದೀಪ್, ಆಂಧೀ, ಇಂದ್ರಜಾಲ್, ಕಂಕಾಲ್, ತಿತಲೀ, ಇರಾವತೀ (ಅಪೂರ್ಣ ಕಾದಂಬರಿ), ಕಾವ್ಯ ಔರ್ ಕಲಾ–ಇವು ಈ ಕವಿಯ ಕಾವ್ಯ, ನಾಟಕ, ಕಥಾಸಂಗ್ರಹ, ಕಾದಂಬರಿ ಮತ್ತು ನಿಬಂಧಸಂಗ್ರಹಗಳು. ಇವಲ್ಲದೆ ಶೋಕೋಚ್ಛಾಸ್. ಬಭ್ರುವಾಹನ್ ಎಂಬ ಕೃತಿಗಳು ಈ ಕವಿಯವೆಂದು ತಿಳಿದುಬರುತ್ತದೆ.

ಈತನ ಸಾಹಿತ್ಯ ರಚನಾಕಾಲ ಒಟ್ಟು 26 ವರ್ಷಗಳಷ್ಟು ವ್ಯಾಪ್ತಿಯದು. ಈ ಕವಿಯ ಆರಂಭದ ರಚನೆಗಳು ಶಿಥಿಲವಾಗಿದ್ದರೂ ಬರಬರುತ್ತ ಅನುಭೂತಿ ಮತ್ತು ಶಿಲ್ಪದ ದೃಷ್ಟಿಯಿಂದ ಜಾಗರೂಕವಾದದ್ದು ಕಾಣಬಹುದು. ಈತ ತನ್ನ ನಾಟಕಗಳ ಮೂಲಕ ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ, ಅಭಿವ್ಯಕ್ತಗೊಳಿಸಿದ. ಭಾರತೀಯ ಇತಿಹಾಸ, ದರ್ಶನ, ಸಂಸ್ಕೃತಿಗಳ ವಿಷಯದಲ್ಲಿ ರಾಗಾತ್ಮಕತೆ ಭಾವಮಯತೆ, ಅನುಭೂತಿಪ್ರವಣತೆ, ಮಾನವೀಯತೆ ಮತ್ತು ಸಾಂಸ್ಕೃತಿಕ ದೃಷ್ಟಿ–ಇವು ಈ ಕವಿಯ ಕೃತಿಗಳಲ್ಲಿ ಕಂಡುಬರುವ ವೈಶಿಷ್ಟ್ಯಗಳು. ಛಾಯಾವಾದೀಯುಗ ಪ್ರವರ್ತಕನಾದ ಈ ಕವಿಯ ಕೃತಿಗಳಲ್ಲಿ ಛಾಯಾವಾದೀ ಪ್ರವೃತ್ತಿಗಳು ಅನ್ಯಕವಿಗಳಲ್ಲಿ ಕಂಡುಬರುವುದಕ್ಕಿಂತ

ಹೆಚ್ಚು ಗೋಚರಿಸುತ್ತವೆ. ಅನುಭೂತಿಯ ಗಂಭೀರತೆ, ಲಾಕ್ಷಣಿಕ ಶೈಲಿ, ಚಿತ್ರಾತ್ಮಕತೆ, ವ್ಯಂಗ್ಯಾತ್ಮಕತೆ, ಪ್ರೇಮಾನುಭೂತಿ, ಸೌಂದರ್ಯ ಚೇತನ, ಕಲ್ಪನಾತತ್ತ್ವ, ಸಾಂಸ್ಕೃತಿಕ ಭಾವನೆ, ಆದರ್ಶವಾದೀ ದೃಷ್ಟಿ, ಆತ್ಮಪ್ರಕಾಶನ ಮೊದಲಾದ ಛಾಯಾವಾದೀ ಗುಣಲಕ್ಷಣಗಳು ವಿಪುಲವಾಗಿ ಈತನಲ್ಲಿ ಕಾಣಸಿಗುತ್ತವೆ. ಕಾಮಾಯನೀಯಲ್ಲಂತು ಛಾಯಾವಾದ ತುಟ್ಟತುದಿಗೇರಿದೆ.

ಶಿಲ್ಪದ ದೃಷ್ಟಿಯಿಂದ ಈತನಲ್ಲಿ ಮೌಲಿಕತೆ ಕಂಡುಬರುತ್ತದೆ. ಪ್ರಾಂಜಲ ಪ್ರಸಾದ ಗುಣಯುತ ಭಾಷೆ ಭಾವಪರಿಚಾಲಿತವಾಗಿ ಎಲ್ಲ ರಚನೆಗಳಲ್ಲೂ ಕವಿತ್ವಮಯತೆಯನ್ನು ಹೊಂದಿ ಸಮರ್ಥವೆನಿಸಿಕೊಂಡು ಶೋಭಿಸುತ್ತದೆ. ಅಭಿವ್ಯಕ್ತಿಯಲ್ಲಿ ಎಲ್ಲೂ ತೊಡಕಿಲ್ಲವಾಗಿ ಕವಿಯ ಭಾಷೆ ಲಕ್ಷಣಾ ವ್ಯಂಜನಾಶಕ್ತಿಗಳ ಪ್ರಧಾನತೆಯಿಂದ ಕೂಡಿದೆ. ಸಂಕೇತ, ಹಾಗೂ ಧ್ವನಿಗಳಿಂದ ಅಭಿವ್ಯಕ್ತಿಶ್ರೀಮಂತವಾಗಿದೆ. ಭಾವನೆಗಳ ಮೂರ್ತೀಕರಣ ಮನೋಹರವಾಗಿದೆ. ಛಂದೋವೈವಿಧ್ಯದಿಂದ ವಿಲಾಸಮಯವಾಗಿದೆ.

ಈತನ ನಿಬಂಧಗಳಲ್ಲಿ ಅಗಾಧ ಅಧ್ಯಯನ, ಚಿಂತನ, ಮನನ, ವೈಚಾರಿಕ ಮೌಲಿಕತೆ, ಸಮರ್ಥ ಅಭಿವ್ಯಕ್ತಿಗಳು ಕಂಡುಬಂದರೆ, ಕಥೆಗಳಲ್ಲಿ ಪಾತ್ರಗಳ ಮಾನಸಿಕ ತುಯ್ದಾಟ ಗೋಚರಿಸುತ್ತದೆ. ಕಾದಂಬರಿಗಳಲ್ಲಿ ಯಾಥಾರ್ಥತೆಯ ಪ್ರಾಧಾನ್ಯವಿದ್ದರೆ ನಾಟಕಗಳಲ್ಲಿ ಐತಿಹಾಸಿಕ ಸಾಂಸ್ಕೃತಿಕತೆಯ ಗೌರವಗಾಥೆ ಇದೆ. ಕಾವ್ಯಗಳಲ್ಲಂತೂ ಆಂತರಿಕ ಅನುಭೂತಿಯ ದೃಶ್ಯಮಯ ಅಭಿವ್ಯಕ್ತಿ ಎಲ್ಲೆಲ್ಲೂ ಗೋಚರಿಸುತ್ತದೆ.

ಈತನ ಕಾವ್ಯವಿಷಯ ಪ್ರೇಮ ಮತ್ತು ಸೌಂದರ್ಯ. ಇವು ಲೌಕಿಕದಿಂದ ದಿವ್ಯರೂಪವನ್ನು ಯಾವಾಗ ಹೊಂದುತ್ತವೆಂದು ಹೇಳುವುದು ತೊಡಕಿನ ವಿಷಯ. ಆಂಸೂ ಮತ್ತು ಕಾಮಾಯನೀ ಈ ಕವಿಯ ಉತ್ಕೃಷ್ಟ ಕಾವ್ಯಗಳು. ಆಂಸೂ ಉತ್ತಮ ಗೀತಕಾವ್ಯ. ಕಾಮಾಯನೀ ಮಹಾಕಾವ್ಯ, ಏಕಾರ್ಥಕಾವ್ಯವೂ ಹೌದು. ಆಂಸೂನಲ್ಲಿ ವಿರಹ–ಮಿಲನಗಳ ಇಂಗಿತಗಳ ಮೇಲೆ ಕವಿ ವಿರಾಟ್ ಪ್ರಕೃತಿಯನ್ನು ಸರ್ವಾಲಂಕಾರವಿಭೂಷಿತವನ್ನಾಗಿ ಮಾಡಿ ಕುಣಿಸಬಲ್ಲ ಸಿದ್ಧಿಯನ್ನು ವ್ಯಕ್ತಗೊಳಿಸಿದ್ದಾನೆ. ಆಂಸೂ ಛಾಯಾವಾದೀ ಉಪನಿಷತ್ತು. ಜೀವನ ಯಾವ ಮಹಾಕಾವ್ಯದ ಆದರ್ಶಗಳಿಂದಲೂ ಬದ್ಧವಲ್ಲ. ಪ್ರಪಂಚದ ಸ್ಥಿತಿಯಿಂದ ಮನಸ್ಸಿನ ವೃತ್ತಿ. ಈ ವೃತ್ತಿಯೇ ಸಾಹಿತ್ಯ ಪ್ರವೃತ್ತಿಯಾಗಿ ಅಭಿವ್ಯಕ್ತಿಹೊಂದುವುದು. ಶಿವತತ್ತ್ವದ ಉಪಾಸಕನಾದ ಈ ಕವಿಗೆ ಅಮೃತ ಕೂಡ ಹಾಲಾಹಲ ಸಮಾನ. ಬಹುಮುಖಜೀವನವನ್ನು ಕಂಡರೂ ಈತ ಉಂಡವನಲ್ಲ. ಅಂತೆಯೇ ಪ್ರಪಂಚದ ಬಹುಮುಖ ಜೀವನದಿಂದ ಬೇರೆಯಾಗಿ ತನ್ನದೇ ಪಂಥ ಬೆಳೆಸಿದ್ದಾನೆ.

ಕಾಮಾಯನೀ ಕಾವ್ಯದ ಆರಂಭದಲ್ಲೇ ಆದರ್ಶದ ದೇವಸೃಷ್ಟಿಯ ನಾಶವಾಗಿ ಮಾನವ ಸಭ್ಯತೆಯ ಉದಯವಾಗುವುದು ಕಂಡುಬರುತ್ತದೆ. ಅತಿಬುದ್ಧಿವಾದ ಮತ್ತು ಆದರ್ಶವಾದ ಎರಡೂ ಈ ಕವಿಗೆ ಅಷ್ಟೇನೂ ಮಾನ್ಯವಲ್ಲ. ಕಾಮಾಯನೀ ಕಾವ್ಯದಲ್ಲಿ ಶಿವನ 5 ರೂಪಗಳ ಸಾಕ್ಷಾತ್ಕಾರವಿದೆ. 1 ಸಂಹಾರಕ, 2 ಸೃಷ್ಟ್ಯಾತ್ಮಕ, 3 ಮಾಯಾ ಯೋಗಿದಿಗಂಬರ, 4 ಮಂತ್ರವಿದ್ ಋಷಿ, 5 ನಟರಾಜ–ಇವೇ ಆ ಪಂಚರೂಪಗಳು.

ಮಹಾಕಾವ್ಯದ ಧ್ಯೇಯಸಾಧನೆಗಳ ದೃಷ್ಟಿಯಿಂದ ಕಾಮಾಯನೀ ಪೂರ್ಣ ಸಫಲತೆಯನ್ನು ಪಡೆದಿದೆ. ಇದರ ಆಧಾರ ದರ್ಶನಪ್ರಧಾನವಾಗಿ ಶೈವದರ್ಶನ ಮತ್ತು ಇದರ ಒಂದು ವಿಶಿಷ್ಟ ಪ್ರಕಾರವಾದ ತ್ರಿಕದರ್ಶನ ಗೀತೆಯ ಕರ್ಮಯೋಗ ಮತ್ತು ವೇದಾಂತದ ಅದ್ವೈತವಾದದ ಸಂಮಿಶ್ರಣಗಳಿಂದ ಕೂಡಿದ್ದಾಗಿದೆ. ಈ ಮಹಾಕಾವ್ಯ ಭಾವಪಕ್ಷ ಕಲಾಪಕ್ಷಗಳೆರಡರಿಂದಲೂ ಪುಷ್ಟವಾಗಿ ಸಂಪೂರ್ಣ ಮಾನವತಾ ವಿಕಾಸದ ಅಂತರಂಗ ಗಾಥೆಯಾಗಿದೆ. ತುಲಸೀದಾಸನ ರಾಮಚರಿತಮಾನಸವಾದ ಮೇಲೆ ಕಾಮಾಯನೀ ಕಾವ್ಯಕ್ಕೆ ಹಿಂದೀ ಸಾಹಿತ್ಯದಲ್ಲಿ ಮೊದಲನೆಯ ಸ್ಥಾನ. ಭಾವನೆ, ವಿಚಾರ, ಶೈಲಿ–ಈ ಮೂರೂ ಇದರಲ್ಲಿ ಪ್ರೌಢತೆಯನ್ನು ಸಾಕ್ಷಾತ್ಕರಿಸಿಕೊಂಡಿವೆ. ಈ ಕಾವ್ಯದಲ್ಲಿ ಇಚ್ಛಾ, ಜ್ಞಾನ, ಕ್ರಿಯಾ, ಆನಂದ–ಇವುಗಳ ಸಮನ್ವಯವಿದೆ. ಜಲಪ್ಲಾವನದಲ್ಲಿ (ಪ್ರಳಯ) ಅನ್ನಮಯಕೋಶ ಸ್ಥಿತಿಯಿಂದ ಮೊದಲುಗೊಂಡು ಕಡೆಗೆ ಕೈಲಾಸಶಿಖರದಲ್ಲಿ ಆನಂದಮಯ ಕೋಶಸ್ಥಿತಿಯನ್ನು ಹೊಂದುವವರೆಗಿನ ಮಾನವ ಚೇತನದ ಯಾತ್ರೆಯ ವರ್ಣನೆ ಇದರಲ್ಲಿದೆ. ಆದರೆ ಶೈವತಂತ್ರಗಳ ಸಾಂಪ್ರದಾಯಿಕತೆಯ ಆಧಿಕ್ಯದಿಂದ ರಸಾತ್ಮಕತೆಯ ಅಖಂಡಧಾರೆ ಕುಂಠಿತವಾಗಿದೆ.

ಈ ಕವಿಯ ಕೃತಿಗಳಲ್ಲಿ ಈ ಮೂರು ಪ್ರವೃತ್ತಿಗಳನ್ನು ಮುಖ್ಯವಾಗಿ ಗಮನಿಸಬಹುದು: ಪ್ರೇಮದ ಚಿತ್ರಣದಲ್ಲಿ ಲೌಕಿಕತೆ ಹಾಗೂ ಅಲೌಕಿಕತೆಗಳ ಸಾಮಂಜಸ್ಯ, ಪ್ರಕೃತಿಯ ಸುಂದರಭಯಾನಕ ಚಿತ್ರಗಳ ವರ್ಣನೆ, ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿ ಅಪಾರ ನಿಷ್ಠೆಯಿಂದ ಕೂಡಿದ ಗೌರವಪೂರ್ಣ ಅಭಿವ್ಯಕ್ತಿ. (ಎಂ.ಡಿ.ಜಿ.)

**ಜಯಶೀಲರಾವ್ ಎಸ್.ವಿ. :** 1928–. ತಮ್ಮ ಬರೆಹಗಳಿಂದಲ್ಲದೆ, ಪತ್ರಿಕೋದ್ಯಮಕ್ಕೆ ಸಂಬಂಧಪಟ್ಟ ಸಂಘಟನೆಗಳಲ್ಲಿನ ಬಹುಮುಖ ಸೇವೆಯಿಂದಾಗಿ ಕರ್ನಾಟಕವಲ್ಲದೆ, ಹೊರ ರಾಜ್ಯಗಳಲ್ಲಿ ಪರಿಚಿತರಾದ ಪತ್ರಕರ್ತ. ಎಸ್.ವಿ. ಜಯಶೀಲರಾಯರು ಹುಟ್ಟಿದ್ದು ಜುಲೈ 1, 1928ರಲ್ಲಿ ಚಾಮರಾಜ ನಗರದಲ್ಲಿ. ತಂದೆ ಕೆ. ವೆಂಕಟಸುಬ್ಬಯ್ಯ, ತಾಯಿ ಕೃಷ್ಣಮ್ಮ. ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಶಾಲೆಗೆ ಚಕ್ಕರ್ ಹೊಡೆದು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು. ಸ್ವಾತಂತ್ರ್ಯ ಬಂದ ನಂತರ ರಾಷ್ಟ್ರದ ಅಂಗವಾಗಿ ಸೇರುವಂತೆ ಆಗಿನ ಮೈಸೂರು ಮಹಾರಾಜರನ್ನು 'ಒತ್ತಾಯ ಮಾಡಲು 1947ರಲ್ಲಿ ನಡೆದ 'ಮೈಸೂರು ಚಲೋ' ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು.

'ದೇಶ ಬಂಧು' ಪತ್ರಿಕೆಯ ಮೂಲಕ 1947ರಲ್ಲಿ ಪತ್ರಿಕೋದ್ಯಮ ಪ್ರವೇಶ. 1948ರಲ್ಲಿ ಪ್ರಜಾವಾಣಿಯಿಂದ ಕರೆ, ವರದಿಗಾರನಾಗಿ ನೇಮಕ; ನಂತರ ಮುಖ್ಯ ವರದಿಗಾರರಾಗಿ 26 ವರ್ಷಗಳ ಕಾಲ ಪ್ರಜಾವಾಣಿಯಲ್ಲಿ ಸೇವೆ.

ಪ್ರಜಾವಾಣಿಯಲ್ಲಿ ಜಯಶೀಲರಾಯರು ಸಮೀಪದರ್ಶಿ ಅಂಕಿತದಲ್ಲಿ ಬರೆಯುತ್ತಿದ್ದ ವಿಧಾನಮಂಡಲದ ಕಲಾಪ ಕುರಿತಾದ 'ಸದನ ಸಮೀಕ್ಷೆ' ಅಂಕಣ, ವಿನೂತನ, ಜನಪ್ರಿಯ. ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ನ ಕಲಾಪಗಳ ಶುಷ್ಕ ವರದಿಗೆ ಭಿನ್ನವಾದ ಶೈಲಿಯಲ್ಲಿ ಅವರು ದಾಖಲಿಸುತ್ತಿದ್ದ ಅಂಕಣ ಕನ್ನಡ ಪತ್ರಿಕೋದ್ಯಮದ ವರದಿಗಾರಿಕೆ ಶೈಲಿಗೆ ಬೇರೆಯದೇ ಆದ, ಆದರೆ ಸ್ವಾಗತಾರ್ಹವಾದ ಆಯಾಮವನ್ನೇ ಕೊಟ್ಟಿತು. ಈಗ ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಹೊಸ ಬಗೆಯ ಪ್ರಯೋಗಗಳು ದಿನವೂ ನಡೆಯುತ್ತಿರುವುದನ್ನು ನಾವು ನೋಡಬಹುದು. ಆದರೆ ಮೂರೂವರೆ ನಾಲ್ಕು ದಶಕದ ಹಿಂದೆ ಹೊಸ ಪ್ರಯೋಗಕ್ಕೆ ತೆರೆದುಕೊಳ್ಳುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಜಯಶೀಲರಾಯರು ತಮ್ಮ ಆ ಹೊಸ ಪ್ರಯೋಗದಲ್ಲಿ ಜಯಶೀಲರಾದರು.

ಸಾರ್ವತ್ರಿಕ ಚುನಾವಣಾ ಸಮೀಕ್ಷೆ ನಡೆಸುವುದನ್ನೂ ಆರಂಭಿಸಿದ್ದು ಪ್ರಜಾವಾಣಿ. ಸಂಪಾದಕ ಟಿ.ಎಸ್ ರಾಮಚಂದ್ರರಾಯರ ಮಾರ್ಗದರ್ಶನದಲ್ಲಿ ಜಯಶೀಲರಾಯರು ಬರೆದ 1952ರ ಮಹಾಚುನಾವಣಾ ಸಮೀಕ್ಷಾ ವರದಿಗಳು ಓದುಗರ ಮೆಚ್ಚುಗೆಗೆ ಪಾತ್ರವಾದವು.

1974ರಲ್ಲಿ ಹುಬ್ಬಳ್ಳಿ ಹಾಗೂ ಬೆಂಗಳೂರುಗಳಿಂದ ಪ್ರಕಟವಾಗುತ್ತಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಜಂಟಿ ಸಂಪಾದಕರಾದರು. ಅನಂತರ ಎರಡು ಅವಧಿಗೆ ಸಂಪಾದಕರೂ ಆದರು. ಈ ಮಧ್ಯೆ 1982ರಲ್ಲಿ ಹೊಸ ಕನ್ನಡ ಪತ್ರಿಕೆ 'ಮುಂಜಾನೆ'ಯ ಸಂಪಾದಕರಾಗಿ ಅದನ್ನು ಜನಪ್ರಿಯಗೊಳಿಸಿದರು.

ಇವರು ಸಂಯುಕ್ತ ಕರ್ನಾಟಕದ ಜಂಟಿ ಸಂಪಾದಕರಾಗಿದ್ದಾಗ 'ಯಾರಿವರು' ಎಂಬ ನೂತನ ಅಂಕಣವನ್ನು ಆರಂಭಿಸಿದರು. ನಾನಾ ಸಾಮರ್ಥ್ಯಗಳಿರುವ ಹಾಗೂ ಸಮಾಜಕ್ಕೆ ಸೇವೆ ಸಲ್ಲಿಸುವ ಬಹುಮಂದಿ ಯಾವ ಗಮನ ಹಾಗೂ ಮನ್ನಣೆಯಿಂದ ವಂಚಿತರಾಗಿದ್ದರೂ ಅಂತಹವರನ್ನು ಹುಡುಕಿ ಜನತೆಗೆ ಪರಿಚಯಿಸುವುದು ಈ ಅಂಕಣದ ಉದ್ದೇಶವಾಗಿತ್ತು.

ರಾಯರು ವಿದೇಶಗಳಲ್ಲಿ ಅಧ್ಯಯನ ಪ್ರವಾಸ ನಡೆಸಿದ್ದಾರೆ. 1963ರಲ್ಲಿ ಇಂಡೋನೇಷಿಯದ ಜಕಾರ್ತದಲ್ಲಿ ನಡೆದ 'ಏಷ್ಯ ಆಫ್ರಿಕ ಪತ್ರಕರ್ತರ ಸಮ್ಮೇಳನದಲ್ಲಿ ಐ.ಎಫ್.ಡಬ್ಲ್ಯುಜೆಯ ನಿಯೋಗದ ಸದಸ್ಯರಾಗಿದ್ದರು.

1982ರಲ್ಲಿ ಸೋವಿಯತ್ ರಷ್ಯಾದ ಪತ್ರಕರ್ತರ ಸಂಘದ ಆಹ್ವಾನದ ಮೇಲೆ 1982ರಲ್ಲಿ ಫ್ರೂಂಜೆಯಲ್ಲಿ ನಡೆದ ಅಂತಾರಾಷ್ಟ್ರೀಯ ಪತ್ರಕರ್ತರ ಸಮ್ಮೇಳನದಲ್ಲಿ ಭಾಗವಹಿಸಿದ ನಿಯೋಗದ ನಾಯಕರಾಗಿದ್ದರು. 1985 ಐ.ಎಫ್.ಡಬ್ಲ್ಯುಜೆಯ ದ್ವಿಸದಸ್ಯ ನಿಯೋಗದ ನಾಯಕರಾಗಿ ಬಲ್ಗೇರಿಯಾ ಹಾಗೂ ಜೆಕೊಸ್ಲಾವಿಯ ರಾಷ್ಟ್ರಗಳಿಗೆ ಭೇಟಿ ನೀಡಿದರು.

ಥಾಂಪ್‌ಸನ್ ಫೌಂಡೇಷನ್ ಆಶ್ರಯದಲ್ಲಿ ಪತ್ರಿಕೋದ್ಯಮದಲ್ಲಿ ಹೆಚ್ಚಿನ ತರಬೇತಿ ಪಡೆಯಲು ಪ್ರಜಾವಾಣಿ ಇವರನ್ನು 1969ರಲ್ಲಿ ಇಂಗ್ಲೆಂಡಿಗೆ ಕಳುಹಿಸಿತ್ತು. ಕೇಂದ್ರಸರ್ಕಾರದ ರಕ್ಷಣಾ ಇಲಾಖೆ ಪತ್ರಕರ್ತರಿಗಾಗಿ ಏರ್ಪಡಿಸಿದ ತರಬೇತಿ ಶಿಬಿರದಲ್ಲೂ ರಾಯರು ಭಾಗವಹಿಸಿದ್ದರು. ಜಯಶೀಲರಾಯರು ಪತ್ರಿಕೋದ್ಯಮಕ್ಕೆ ನೀಡಿದ ಕೊಡುಗೆ ಎಂದರೆ ಕಿರಿಯರಿಗೆ, ಉದಯೋನ್ಮುಖ ಪತ್ರಕರ್ತರಿಗೆ ತರಬೇತಿ.

'ಸಂಯುಕ್ತ ಕರ್ನಾಟಕ' ಪತ್ರಿಕೆಯ ಜಂಟಿ ಸಮಪಾದಕರಾಗಿದ್ದಾಗ, ಪ್ರಧಾನ ಸಂಪಾದಕ ಖಾದ್ರಿ ಶಾಮಣ್ಣ ಅವರೊಡನೆ, ನೇಮಕಗೊಂಡ ಪತ್ರಕರ್ತ–ಅಭ್ಯರ್ಥಿಗಳಿಗೆ ತರಬೇತಿ ನೀಡಿದರು.

'ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ' ಆಡಳಿತ ವರ್ಗ ಇವರನ್ನು ತರಬೇತು ಸಂಯೋಜಕರಾಗಿ (1991) ಒಂದು ವರ್ಷ ಕಾಲ ನೇಮಿಸಿತು.

ಪತ್ರಿಕಾ ಅಕಾಡೆಮಿ, ಮತ್ತವರ ಸಂಸ್ಥೆಗಳು ನಡೆಸುವ ಪತ್ರಕರ್ತರ ತರಬೇತಿ ಶಿಬಿರದಲ್ಲೂ ಭಾಗವಹಿಸಿ ಮಾರ್ಗದರ್ಶನ ನೀಡುತ್ತಿದ್ದಾರೆ.

ಪತ್ರಿಕಾ ಮಂಡಳಿಯ ಸದಸ್ಯ (1988–91), ಕೆಯುಡಬ್ಲು ಜೆ ಅಧ್ಯಕ್ಷ (1961–63), ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ, ಬೆಂಗಳೂರು ವರದಿಗಾರರ ಗಿಲ್ಡ್‌ನ ಸ್ಥಾಪಕ ಅಧ್ಯಕ್ಷ (1971), ಬೆಂಗಳೂರು ಪ್ರೆಸ್ ಕ್ಲಬ್‌ನ ಸ್ಥಾಪಕ ಸದಸ್ಯ–ಹೀಗೆ ಅವರದು ಬಹುಮುಖೀ ಸೇವೆ.

ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಜಯಶೀಲರಾಯರು, ಗೌಡರ ಪತ್ರಿಕಾ ಕಾರ್ಯದರ್ಶಿಯಾಗಿದ್ದರು. ದೇವೇಗೌಡರು ಪ್ರಧಾನಿ ಆದಾಗಲೂ ಅವರಿಗೆ ಪತ್ರಿಕಾ ಕಾರ್ಯದರ್ಶಿಯಾಗಿದ್ದರು. ಯುವ ಪೀಳಿಗೆಯ ಪತ್ರಕರ್ತರ ನಡುವೆ ಹಮ್ಮು-ಬಿಮ್ಮು ತೋರದೆ ಸಹಜವಾಗಿ, ಸರಳವಾಗಿ ಬೆರೆಯುವ ಗುಣ ಜಯಶೀಲರಾಯರಲ್ಲೂ ಎದ್ದು ಕಾಣುತ್ತದೆ. ಟೆಲಿವಿಷನ್, ಆಕಾಶವಾಣಿ ಹಾಗೂ ಅನೇಕ ವೃತ್ತಿಪರ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಜಯಶೀಲರಾಯರಿಗೆ ಸಂದ ಪ್ರಶಸ್ತಿಗಳು, ಸನ್ಮಾನಗಳು ಅಸಂಖ್ಯ. 1969ರಲ್ಲಿ ತುಮಕೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆಗಾಗಿ ಸನ್ಮಾನಿತರಾಗಿದ್ದಾರೆ. ಇದಲ್ಲದೆ ಪತ್ರಿಕಾ ಅಕಾಡೆಮಿ ಪ್ರಶಸ್ತಿ (1987), ರಾಜ್ಯೋತ್ಸವ ಪ್ರಶಸ್ತಿ (1990), ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ (1999) ಪಡೆದಿದ್ದಾರೆ. ಕರ್ನಾಟಕದ ಅತ್ಯುನ್ನತ ಟಿಯೆಸ್ಸಾರ್ ಪ್ರಶಸ್ತಿ ಪುರಸ್ಕೃತರು (1998).

**ಜಯಸಿಂಹ :** ಭಾರತ ಹಾಗೂ ಕರ್ನಾಟಕದ ಇತಿಹಾಸದಲ್ಲಿ ಈ ಹೆಸರಿನ ಅನೇಕ ಅರಸರೂ ಮಾಂಡಲಿಕರೂ ಇದ್ದಾರೆ. ಅವರಲ್ಲಿ ಪ್ರಮುಖರಾದ ಕೆಲವರ ಬಗ್ಗೆ ಇಲ್ಲಿ ವಿವರಗಳಿವೆ. ನೋಡಿ- ಜಯಸಿಂಹ,-ಸವಾಯಿ.

1. ಬಾದಾಮಿ ಚಳುಕ್ಯರ ಮೂಲಪುರುಷ. ಒಂದನೆಯ ಪುಲಕೇಶಿಯ ತಾತ. ಪ್ರ.ಶ. ಸು. 500–520ರಲ್ಲಿ ಈತ ಉನ್ನತವಾದ ಅಧಿಕಾರ ಪಡೆದು ತನ್ನ ಪ್ರಾಬಲ್ಯವನ್ನು ಬೆಳೆಸಿಕೊಂಡಿರಬೇಕು.

2. 1015–1044. ಬಾದಾಮಿ ಚಳುಕ್ಯ ಅರಸ. ಈತನನ್ನು ಇಮ್ಮಡಿ ಜಯಸಿಂಹನೆಂದು ಕರೆಯಲಾಗಿದೆ, ಜಗದೇಕಮಲ್ಲ, ಮಲ್ಲಿಕಾಮೋದ–ಇವು ಈತನ ಬಿರುದುಗಳು. ಕಳಚುರಿ ಗಾಂಗೇಯದೇವ ಮತ್ತು ಚೋಳ ರಾಜೇಂದ್ರರೊಡಗೂಡಿ ಪರಮಾರ ಭೋಜ, ಇವನ ರಾಜ್ಯವನ್ನು ಮುತ್ತಿದ. ಗೋದಾವರೀ ತೀರದಲ್ಲಿ ನಡೆದ ಕದನದಲ್ಲಿ ಜಯಸಿಂಹ ಈ ಮುಕ್ಕೂಟ ಸೈನ್ಯವನ್ನು ಸೋಲಿಸಿ ದಿಕ್ಕಾಪಾಲಾಗಿ ಓಡುವಂತೆ ಮಾಡಿದ. ಕೊಂಕಣವನ್ನು ಆಕ್ರಮಿಸಿದ್ದ ಭೋಜನಿಂದ ಅದನ್ನು ಹಿಂದಕ್ಕೆ ಪಡೆದ. ಸಾಮಂತನಾದ ಸೇವುಣ 3ನೆಯ ಭಿಲ್ಲಮನ ದಂಗೆಯನ್ನು ಹತ್ತಿಕ್ಕಿ ಆತನ ನೆರವನ್ನು ಕಳೆದುಕೊಳ್ಳಬಾರದೆಂದು ತನ್ನ ಮಗಳು ಅವ್ವಲ್ಲದೇವಿಯನ್ನು ಅವನಿಗೆ ಧಾರೆಯೆರೆದುಕೊಟ್ಟ. ಚೋಳರು ಈತನ ಪ್ರಬಲ ಶತ್ರುಗಳಾಗಿದ್ದರು. ಜಯಸಿಂಹನಿಗೂ ಚೋಳರಿಗೂ ನಡೆದ ಬಹುಪಾಲು ಕದನಗಳು ಪೂರ್ವದ ವೇಂಗಿಯನ್ನು ವಶಪಡಿಸಿಕೊಳ್ಳಲು ಆದವೇ. ಅಂದು ವೇಂಗಿಯ ಚಾಳುಕ್ಯರು ಬಲಹೀನರಾಗಿದ್ದುದ್ದರಿಂದ ಇಬ್ಬರೂ ಅಲ್ಲಿಯ ರಾಜಕೀಯದಲ್ಲಿ ತಲೆ ಹಾಕಿ ತಮಗೆ ಬೇಕಾದವರನ್ನು ಪಟ್ಟಕ್ಕೆ ತರಲು ಪ್ರಯತ್ನಿಸಿದರು. 1021ರ ಸುಮಾರಿಗೆ ಮಾಸ್ಕಿಯ ಕದನದಲ್ಲಿ ಜಯಸಿಂಹ ಚೋಳರನ್ನೆದುರಿಸಿ ಸೋತ. ಅನಂತರದ ಬೆಜವಾಡ ಕದನದಲ್ಲಿ ಚಾಳುಕ್ಯ ದಂಡನಾಯಕ ವಾವಣರಸ ಅಲ್ಲಿಯ ಕೋಟೆಯನ್ನು ವಶಪಡಿಸಿಕೊಂಡ. ತನ್ನ ನೆರವನ್ನು ಬಯಸಿದ್ದ 7ನೆಯ ವಿಕ್ರಮಾದಿತ್ಯನನ್ನು ಜಯಸಿಂಹ ವೇಂಗಿಯ ಸಿಂಹಾಸನದ ಮೇಲೆ ಕುಳ್ಳಿರಿಸಿದ. ಜಯಸಿಂಹನಿಗೆ ಸುಗ್ಗಲದೇವಿ, ದೇವಲದೇವಿ ಮತ್ತು ಲಕ್ಷ್ಮಾದೇವಿ ಎಂಬ ಮೂವರು ಪತ್ನಿಯರಿದ್ದರು. ಸೋಮೇಶ್ವರ ಮತ್ತು 3ನೆಯ ಜಯಸಿಂಹ ಈತನ ಮಕ್ಕಳು. ಅಕ್ಕಾ ದೇವಿ ಈತನ ಸೋದರಿ.

3. ಚಾಳುಕ್ಯ ಸೋಮೇಶ್ವರನ ತಮ್ಮ : 3ನೆಯ ಜಯಸಿಂಹ. ಈತ ಸಮ ರೈಕಮಲ್ಲನೆನಿಸಿಕೊಂಡಿದ್ದ. ಚೋಳರ ವಿರುದ್ಧ ನಡೆದ ಕದನವೊಂದರಲ್ಲಿ ಈತ ತೀರಿಕೊಂಡ.

4. ಚಾಳುಕ್ಯ ಸೋಮೇಶ್ವರನ ಕಿರಿಯ ಮಗ ; 4ನೆಯ ಜಯಸಿಂಹ. ಈತನ ಅಣ್ಣಂದಿರಾದ ಭುವನೈಕಮಲ್ಲ ಸೋಮೇಶ್ವರ ಹಾಗೂ 6ನೆಯ ವಿಕ್ರಮಾದಿತ್ಯರ ನಡುವೆ ನಡೆದ ಕದನದಲ್ಲಿ ವಿಕ್ರಮಾದಿತ್ಯನ ಪಕ್ಷ ವಹಿಸಿದ. 2ನೆಯ ಸೋಮೇಶ್ವರನ ಆಳ್ವಿಕೆಯಲ್ಲಿ ಬೆಳ್ವೊಲ ಮತ್ತು ಪುರಿಗೆರೆ ಪ್ರಾಂತ್ಯಗಳ ಆಧಿಪತ್ಯವನ್ನೂ ಅನಂತರ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಕೋಗಳಿ 1000, ಕುಂದೂರು 1000, ಬನವಾಸಿ 12000, ಸಾಂತಳಿಗೆ 1000 ಮುಂತಾದ ಪ್ರಾಂತ್ಯಗಳ ಆಧಿಪತ್ಯವನ್ನೂ ವಹಿಸಿಕೊಂಡು ಯುವರಾಜನೆನಿಸಿಕೊಂಡಿದ್ದ. ಆದರೆ ಕೆಲವೇ ವರ್ಷಗಳಲ್ಲಿ ಅಣ್ಣನ ವಿರುದ್ಧ ಈತ ದಂಗೆ ಎದ್ದ. ವಿಕ್ರಮಾದಿತ್ಯ ಈತನ ದಂಗೆಯನ್ನಡಗಿಸಿ ಸೆರೆಯಲ್ಲಿಟ್ಟು ಬುದ್ಧಿವಾದ ಹೇಳಿದನೆಂದು ಬಿಲ್ಹಣ ಕವಿಯ ಹೇಳಿಕೆ. ಆದರೆ ಇದರ ಬಗ್ಗೆ ಐತಿಹಾಸಿಕ ದಾಖಲೆಗಳೇನೂ ಇಲ್ಲ. ಈತನ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲ.

5. ಪೂರ್ವ ಚಳುಕ್ಯ ಮನೆತನದ ಮೂಲಪುರುಷನಾದ ವಿಷ್ಣುವರ್ಧನನ ಹಿರಿಯ ಮಗ. 641ರಿಂದ 678ರ ವರೆಗೆ ಈತ ವೇಂಗಿಯ ಅರಸನಾಗಿದ್ದ. ವಿಶಾಖಪಟ್ಟಣದಿಂದ ಜಂಗೋಲುವರೆಗಿನ ಪೂರ್ವತೀರಪ್ರದೇಶ ಈತನ ಅಧೀನದಲ್ಲಿತ್ತು. ಇವನಿಗೆ ಮಕ್ಕಳಿಲ್ಲದ ಕಾರಣ ತಮ್ಮನಾದ ಇಂದ್ರಭಟ್ಟಾರಕ ಪಟ್ಟಕ್ಕೆ ಬಂದ.

6. ಇಮ್ಮಡಿ ಜಯಸಿಂಹ 705ರಿಂದ 717ರವರೆಗೆ ವೇಂಗಿಯನ್ನು ಆಳಿದ. ಸಕಲ ಲೋಕಾಶ್ರಯ, ಸರ್ವಸಿದ್ಧಿ, ನಿರವದ್ಯ ಎಂಬ ಬಿರುದುಗಳನ್ನು ಧರಿಸಿದ್ದ ಈತ ಮಂಗಿ ಯುವರಾಜನ ಮಗ.

7. ಮಾಲವದೇಶದಲ್ಲಿ ಆಳಿದ ಪರಮಾರ ವಂಶದ ಪರಮಾರ ಭೋಜನ ಉತ್ತರಾಧಿಕಾರಿಯಾಗಿ 1ನೆಯ ಜಯಸಿಂಹ 1055ರಲ್ಲಿ ಆಳತೊಡಗಿದ. ಭೋಜ ಗತಿಸಿದ ಬಳಿಕ ರಾಜ್ಯಕ್ಕಾಗಿ ನಡೆದ ಕಲಹಗಳಲ್ಲಿ ಈತನೂ ಪಾಲ್ಗೊಂಡಿದ್ದ. ಈತನಿಗೂ ಭೋಜನಿಗೂ ನಡುವಣ ಸಂಬಂಧವೆಂಥದೆಂಬುದು ತಿಳಿಯದು. ಈತನ ಪ್ರತಿಸ್ಪರ್ಧಿ ಇನ್ನೊಬ್ಬ ಹಕ್ಕುದಾರನಾದ ಉದಯಾದಿತ್ಯ. ರಾಜ್ಯವನ್ನು ಪಡೆಯಲು ಜಯಸಿಂಹ ಕಲ್ಯಾಣದ ಚಾಳುಕ್ಯ ಅರಸನಾದ 1ನೆಯ ಸೋಮೇಶ್ವರನ ನೆರವನ್ನು ಕೋರಿದ. ಆಗ ಯವರಾಜನಾಗಿದ್ದ ವಿಕ್ರಮಾದಿತ್ಯ ಈತನ ಬೆಂಬಲಕ್ಕೆ ಬಂದು ಈತನ ಮೇಲೆರಗಿದ್ದ ಶತ್ರುಗಳನ್ನು ಓಡಿಸಿ ಈತನನ್ನು ಸಿಂಹಾಸನದ ಮೇಲೆ ಕೂಡಿಸಿದ. ಬಹುಶಃ ಈ ಸಂದರ್ಭದಲ್ಲಿ ಜಯಸಿಂಹನ ಮಗಳನ್ನು ವಿಕ್ರಮಾದಿತ್ಯ ಮದುವೆಯಾಗಿರಬಹುದೆಂದು ಊಹಿಸಲಾಗಿದೆ. ಮುಂದೆ ಈತ ಚಾಳುಕ್ಯರ ಬೆಂಬಲಿಗನಾಗಿ ಅವರು ವೇಂಗಿಯನ್ನು ಮುತ್ತಿದ ಸಂದರ್ಭದಲ್ಲಿ ಅವರಿಗೆ ಸಹಾಯ ನೀಡಿದ. ಆದರೆ ಚಾಳುಕ್ಯ 1ನೆಯ ಸೋಮೇಶ್ವರ ಕಾಲವಾದ ಬಳಿಕ ಅವನ ಹಿರಿಯ ಮಗ ಇಮ್ಮಡಿ ಸೋಮೇಶ್ವರ ಪಟ್ಟಕ್ಕೆ ಬಂದ. ತನ್ನ ಕಿರಿಯ ಸೋದರನಾದ ವಿಕ್ರಮಾದಿತ್ಯನ ಚಟುವಟಿಕೆಗಳನ್ನು ಸಂಶಯ ದೃಷ್ಟಿಯಿಂದ ಕಾಣುತ್ತಿದ್ದ ಈ ಅರಸ ಆತನನ್ನು ಮಾಲವದೇಶದಿಂದ ಹಿಂದಕ್ಕೆ ಕರೆಯಿಸಿಕೊಂಡು, ತಂದೆ ಅನುಸರಿಸಿದ ನೀತಿಯನ್ನು ಬಿಟ್ಟುಕೊಟ್ಟು ಮಾಲವದ ಮೇಲೆ ದಂಡೆತ್ತಿ ಹೋದ. ಇವನ ಜೊತೆಗೆ ಕಳಚುರಿ ಕರ್ಣನೂ ಹೊಯ್ಸಳ ಮನೆತನದ ಎಱೆಯಂಗ ಮತ್ತು ಉದಯಾದಿತ್ಯರೂ ಸೇರಿಕೊಂಡರು. ಸುಮಾರು 1069–70ರಲ್ಲಿ ನಡೆದ ಈ ಶತ್ರುವಿನ ದಾಳಿಯನ್ನು ಎದುರಿಸಲಾಗದ ಜಯಸಿಂಹ ಕದನದಲ್ಲಿ ಸೋತು ಸಾವನ್ನಪ್ಪಿದ.

8. 1255ರಿಂದ 1274ರವರೆಗೆ ಆಳಿದ ಪರಮಾರ ವಂಶದ ಇಮ್ಮಡಿ ಜಯವರ್ಮನನ್ನು 2ನೆಯ ಜಯಸಿಂಹನೆಂದೂ ಕರೆಯಲಾಗಿದೆ. ಈತ ಸೇವುಣ ರಾಮಚಂದ್ರ ಮತ್ತು ಚಾಹಮಾನ ಹಮ್ಮೀರರೊಡನೆ ಕಾದಿದ.

9. 1209ರಲ್ಲಿ 3ನೆಯ ಜಯಸಿಂಹನೆಂಬ ಅರಸ ಮಾಲವದೇಶದ ಒಂದು ಭಾಗವನ್ನು ಮಾತ್ರ ಉದಯಪುರ ರಾಜಧಾನಿಯಿಂದ ಆಳುತ್ತಿದ್ದನೆಂಬುದು ತಿಳಿದಿದೆ.

10. ಗುಜರಾತಿನಲ್ಲಿ ಆಳಿದ ಚೌಳುಕ್ಯ ವಂಶಕ್ಕೆ ಸೇರಿದ ಜಯಸಿಂಹ ಕರ್ಣ ಮತ್ತು ಮಯಣಲ್ಲ ದೇವಿಯರಿಗೆ ಜನಿಸಿದ. ಈತ ಸಿದ್ಧರಾಜನೆಂಬ ಬಿರುದನ್ನು ಧರಿಸಿ ಜಯಸಿಂಹ ಸಿದ್ಧರಾಜನೆಂದೇ ಪ್ರಸಿದ್ಧನಾಗಿದ್ದಾನೆ. ಈತ ಅನೇಕ ಕದನಗಳನ್ನು ಹೂಡಿ ಚಾಹಮಾನ, ಪರಮಾರ, ಚಂದೇಲ, ಕಳಚುರಿ ಮುಂತಾದ ಮನೆತನಗಳ ಅರಸರನ್ನು ಎದುರಿಸಿದ. ಹೀಗೆ ಇವನು ವಿರೋಧಿಸಿದವರಲ್ಲಿ ಚಾಳುಕ್ಯ ಆರ್ವಡಿ ವಿಕ್ರಮಾದಿತ್ಯನೂ ಒಬ್ಬ. ಪ್ರಸಿದ್ಧ ಜೈನಪಂಡಿತನಾದ ಹೇಮಚಂದ್ರ ಈತನ ಆಸ್ಥಾನದಲ್ಲಿದ್ದ.

11. ಕರ್ನಾಟಕದ ಮಾಂಡಲಿಕ ಮನೆತನಗಳಲ್ಲಿ ಒಂದಾದ ಹಾನಗಲ್ಲಿನ ಕದಂಬವಂಶಕ್ಕೆ ಸೇರಿದವನೊಬ್ಬ ಜಯಸಿಂಹ. ಈತ ಆ ಮನೆತನದ ಮೊದಲಿಗನಾದ ಬಟ್ಟಯ್ಯನ ಮಗ. ಈತನಿಗೆ ಐವರು ಮಕ್ಕಳು. ಅವರಲ್ಲಿ ಶಾಂತಯದೇವನ (ಶಾಂತಿವರ್ಮ) ಶಾಸನಗಳು ಲಭಿಸಿವೆ. ಈತನ ಕುರಿತಾದ ಹೆಚ್ಚಿನ ವಿವರಗಳು ದೊರೆತಿಲ್ಲ. (ಜಿ.ಬಿ.ಆರ್.)

**ಜಯಸಿಂಹ, ಸವಾಯಿ :** 1686–1743. ಭಾರತದ ಐದು ಪ್ರಧಾನ ನಗರಗಳಲ್ಲಿ (ದೆಹಲಿ, ಜಯಪುರ, ಉಜ್ಜಯಿನಿ, ಬನಾರಸ್ ಮತ್ತು ಉತ್ತರ ಮಥುರಾ) ಖಗೋಳ ವೀಕ್ಷಣಾಲಯಗಳನ್ನು ನಿರ್ಮಿಸಿ, ಆಕಾಶದ ದೃಶ್ಯಗಳನ್ನು ಅವಲೋಕಿಸಿ ನಿರ್ದುಷ್ಟವಾದ ಖಗೋಳಶಾಸ್ತ್ರೀಯ ಕೋಷ್ಟಕಗಳನ್ನು ತಯಾರಿಸಿದ ವಿಜ್ಞಾನಿ ಮತ್ತು ರಾಜನೀತಿಜ್ಞ. ಈತ ಜಯಪುರದ ಮಹಾರಾಜನೂ ಆಗಿದ್ದ. 13ನೆಯ ವಯಸ್ಸಿನಲ್ಲಿ (1699) ಅಂಬಾರ್ ಸಂಸ್ಥಾನದ ಅಧಿಪತಿಯಾದ. ಆಗ ಭಾರತದ ಚಕ್ರವರ್ತಿಯಾಗಿದ್ದ ಮಹಮ್ಮದ್ ಷಾ (1719–1748) ಈತನನ್ನು ಆಗ್ರ ಸಂಸ್ಥಾನದ ರಾಜ್ಯಪಾಲನಾಗಿ ನೇಮಿಸಿದ (1719). ಮಾಳ್ವ ರಾಜ್ಯಪಾಲನಾಗಿ ಮುಂದೆ ಚಕ್ರವರ್ತಿಯ ಅಪ್ಪಣೆ ಪಡೆದು, ರಾಜ್ಯಾಡಳಿತದ ಹೊಣೆಯಿಂದ ನಿವೃತ್ತಿಹೊಂದಿ, ಖಗೋಳಶಾಸ್ತ್ರದ ಅಧ್ಯಯನದಲ್ಲೇ ನಿರತನಾದ. ಈತನಿಂದ ಖಗೋಳಶಾಸ್ತ್ರದ ಅಧ್ಯಯನಕ್ಕೆ ಹೊಸ ತಿರುವು ದೊರೆತದ್ದರಿಂದ ಚಕ್ರವರ್ತಿ ಮಹಮ್ಮದ್ ಷಾ ತನ್ನ ಮೆಚ್ಚುಗೆಯನ್ನು ಸೂಚಿಸಲು ಜಯಸಿಂಹನಿಗೆ ಸವಾಯಿ ಎಂಬ ಬಿರುದನ್ನು ಕೊಟ್ಟ. ಈ ಪದದ ಅರ್ಥ ಒಂದೂಕಾಲು ಎಂದು. ಆಗಿನ ಕಾಲದ ರಾಜರುಗಳಲ್ಲೆಲ್ಲ ಜಯಸಿಂಹ ಒಂದೂಕಾಲು ಪಾಲು ಉತ್ತಮನಾದವನು ಎಂದು ಈ ಬಿರುದಿನಿಂದ ಸೂಚಿತವಾಗುತ್ತದೆ. ಇಂದಿಗೂ ಜಯಸಿಂಹನ ವಂಶದವರು ಈ ಬಿರುದನ್ನು ಹೊಂದಿರುವರು. 1743ರಲ್ಲಿ ಈತ ಗತಿಸಿದ.

ಜಯಸಿಂಹನಿಗೆ ಬಾಲ್ಯದಿಂದಲೂ ಖಗೋಳಶಾಸ್ತ್ರದಲ್ಲಿ ಉತ್ಕಟಾಸಕ್ತಿ. ಅದರ ವಿಶೇಷವಾದ ಅಧ್ಯಯನಕ್ಕಾಗಿ ಜಯನಗರ ಅಥವಾ ಜಯಪುರ ಎಂಬ ನಗರವನ್ನು 1728ರಲ್ಲಿ ನಿರ್ಮಿಸಿ ತನ್ನ ಅಧ್ಯಯನದ ಕೇಂದ್ರವನ್ನಾಗಿ ಮಾಡಿಕೊಂಡ. ಆಗಿನ ಕಾಲದಲ್ಲಿ ನಾನಾ ಸಿದ್ಧಾಂತಗಳ ಆಧಾರದಿಂದ ತಯಾರಾಗಿ ಬಳಕೆಯಲ್ಲಿದ್ದ ಖಗೋಳಶಾಸ್ತ್ರೀಯ

ಕೋಷ್ಟಕಗಳಲ್ಲಿ ಅನೇಕ ದೋಷಗಳನ್ನು ಗಮನಿಸಿ, ದೋಷರಹಿತವಾದ ಮತ್ತು ಯಾವುದಾದರೊಂದು ಸಿದ್ಧಾಂತಕ್ಕೆ ಒಳಪಟ್ಟಿರುವ ಕೋಷ್ಟಕಗಳನ್ನು ತಯಾರಿಸಬೇಕೆಂದು ನಿಶ್ಚಯಿಸಿದ. ಇದಕ್ಕಾಗಿ ಜಯಸಿಂಹ ಹಿಂದೂ, ಮುಸ್ಲಿಮ್ ಮತ್ತು ಯೂರೋಪಿಯನ್ ಪದ್ಧತಿಗಳ ಖಗೋಳಶಾಸ್ತ್ರ ಗ್ರಂಥಗಳನ್ನು ಓದಿ 1728ರಲ್ಲಿ ಚಕ್ರವರ್ತಿಯ ಹೆಸರಿನಲ್ಲಿ ಜೀಜ್ ಮಹಮ್ಮದ್ ಷಾಹಿ ಎಂಬ ಖಗೋಳಶಾಸ್ತ್ರೀಯ ಕೋಷ್ಟಕಗಳನ್ನು ತಯಾರಿಸಿದ. ಜಯಸಿಂಹ ಅಧ್ಯಯನ ಮಾಡಿದ ಗ್ರಂಥಗಳಲ್ಲಿ ಟಾಲೆಮಿಯ ಆಲ್ಮಜೆಸ್ಟ್, ಉಲೂಗ್



ಬೇಗ್‌ನ ಖಗೋಳಶಾಸ್ತ್ರೀಯ ಕೋಷ್ಟಕಗಳು, ಅರಿಸ್ಟಾಟಲನ ಕೆಲವು ಗ್ರಂಥಗಳು, ಲಾಹೆರ್‌ನ ಖಗೋಳಶಾಸ್ತ್ರೀಯ ಕೋಷ್ಟಕಗಳು, ಫ್ಲೇಮ್‌ಸ್ಟೀಡನ ಹಿಸ್ಟೋರಿಯಾ ಸೆಲೆಸ್ಟಿಸ್ ಬ್ರಿಟಾನಿಕಾ, ಯೂಕ್ಲಿಡನ ಎಲಿಮೆಂಟ್ಸ್, ಸಮತಲ ಮತ್ತು ಗೋಳೀಯ ತ್ರಿಕೋಣಮಿತಿಯನ್ನು ಕುರಿತ ಕೆಲವು ಪಾಶ್ಚಾತ್ಯ ಗ್ರಂಥಗಳು ಮುಖ್ಯವಾದವು. ತನಗೆ ಅಧ್ಯಯನದಲ್ಲಿ ನೆರವಾಗಲು ಭಾರತೀಯ, ಮುಸ್ಲಿಮ್ ಮತ್ತು ಯೂರೋಪಿಯನ್ ಖಗೋಳಶಾಸ್ತ್ರಜ್ಞರನ್ನು ಈತ ನೇಮಕ ಮಾಡಿಕೊಂಡಿದ್ದ. ಖಗೋಳಶಾಸ್ತ್ರದ ಅಧ್ಯಯನದಲ್ಲಿ ತನ್ನ ಪ್ರಧಾನ ಸಹಾಯಕನಾದ, ಅರ್ಯಾಬಿಕ್ ಮತ್ತು ಸಂಸ್ಕೃತ ಭಾಷೆಗಳ ಹಾಗೂ ಭಾರತೀಯ ಖಗೋಳಶಾಸ್ತ್ರ ವಿದ್ವಾಂಸನಾದ, ಸಾಮ್ರಾಟ್ ಜಗನ್ನಾಥನೆಂಬ ಪಂಡಿತನಿಂದ ಈತ ಯೂಕ್ಲಿಡನ ಎಲಿಮೆಂಟ್ಸ್ ಎಂಬ ಗ್ರಂಥವನ್ನು ರೇಖಾಗಣಿತ ಕ್ಷೇತ್ರ ವ್ಯವಹಾರ ಎಂಬ ಹೆಸರಿನಲ್ಲಿ ಸಂಸ್ಕೃತಕ್ಕೆ ಅನುವಾದ ಮಾಡಿಸಿದ (1730). ಅರ್ಯಾಬಿಕ್ ಭಾಷೆಗೆ ಮಿಜಾಸ್ತಿ ಎಂಬ ಹೆಸರಿನಲ್ಲಿ ಅನುವಾದವಾಗಿದ್ದ ಟಾಲೆಮಿಯ ಆಲ್ಮಜೆಸ್ಟ್ ಎಂಬ ಗ್ರಂಥವನ್ನು ಜಗನ್ನಾಥ 1731ರಲ್ಲಿ ಸಮ್ರಾಟ್ ಜಗನ್ನಾಥ ಎಂಬ ಹೆಸರಿನಿಂದ ಸಂಸ್ಕೃತಕ್ಕೆ ಅನುವಾದಿಸಿದ. ಇದಕ್ಕೆ ಸಿದ್ಧಾಂತಸಾರ ಕೌಸ್ತುಭವೆಂದೂ ಹೆಸರುಂಟು. ಇದು ಆಲ್ಮಜೆಸ್ಟ್ ಗ್ರಂಥದ ಕೇವಲ ಅನುವಾದ ಅಲ್ಲ. ಬದಲು ಜಯಸಿಂಹನಿಂದ ನಿರೂಪಿತವಾದ ಖಗೋಳಶಾಸ್ತ್ರದ ಹೊಸ ಪದ್ಧತಿಗಳನ್ನೂ ಒಳಗೊಂಡಿರುವುದಾಗಿ ಜಯಸಿಂಹ ಹೇಳಿದ್ದಾನೆ. ಇವು ಮುದ್ರಿತವಾಗಿರುವಂತೆ ಕಾಣುವುದಿಲ್ಲ. ಹೀಗೆ ಪಾಶ್ಚಾತ್ಯ ವಿಜ್ಞಾನಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಸಂಸ್ಕೃತಕ್ಕೆ ಅನುವಾದ ಮಾಡಿಸಿರುವುದಲ್ಲದೆ ಜಯಸಿಂಹ ಸ್ವತಂತ್ರವಾಗಿ ಖಗೋಳದೃಶ್ಯಗಳ ಪರೀಕ್ಷೆಗೆ ಉಪಯುಕ್ತವಾದ ಲೋಹಯಂತ್ರಗಳ ರಚನೆಯನ್ನು ಕುರಿತ ಎರಡು ಗ್ರಂಥಗಳನ್ನು ಕೂಡ ರಚಿಸಿದ್ದಾನೆ. ಇವುಗಳಲ್ಲಿ ಯಂತ್ರರಾಜ ಎಂಬ ಗ್ರಂಥ ಛಾಯಾಯಂತ್ರದ ರಚನಾಕ್ರಮವನ್ನೂ ಯಂತ್ರರಾಜರಚನಾಪ್ರಕಾರ ಎಂಬ ಗ್ರಂಥ ನಾಕ್ಷತ್ರಿಕ ಹಾಗೂ ಸೂರ್ಯೋದಯ ಮತ್ತು ಸೂರ್ಯಾಸ್ತಮಾನ ಕಾಲಗಳನ್ನು ತಿಳಿಯಲು ಸಹಾಯಕವಾಗುವ ಯಂತ್ರದ ರಚನೆಯನ್ನೂ ತಿಳಿಸುತ್ತವೆ. ಇವೂ ಮುದ್ರಣಗೊಂಡಿಲ್ಲವೆಂದು ತೋರುತ್ತದೆ.

ಜಯಸಿಂಹ ಖಗೋಳಶಾಸ್ತ್ರದ ನಾನಾ ಸಿದ್ಧಾಂತ ಗ್ರಂಥಗಳ ಕೇವಲ ಅಧ್ಯಯನದಿಂದ ತೃಪ್ತನಾಗದೆ, ಆ ಶಾಸ್ತ್ರದ ಹಲವು ವಿಷಯಗಳನ್ನು ಪ್ರತ್ಯಕ್ಷವಾಗಿ ತಿಳಿದು ಸಂಗ್ರಹಿಸಲು ಪಾದ್ರೆ ಮ್ಯಾನ್ಯುಯಲ್ ಎಂಬ ಪೋರ್ಚುಗಲ್ ಕ್ರೈಸ್ತಮಂಡಲಿಯ ಸದಸ್ಯನೊಡನೆ ಕೆಲವು ವಿದ್ವಾಂಸರನ್ನು ಯೂರೋಪಿಗೆ ಕಳುಹಿಸಿದ. ಮಹಮ್ಮದ್ ಷರೀಫ್ ಎಂಬ ವಿದ್ವಾಂಸನನ್ನು ದಕ್ಷಿಣ ಮೇರುವಿನ ಸಮೀಪದ ಒಂದು ಸ್ಥಳಕ್ಕೂ, ಮಹಮ್ಮದ್ ಮಹದಿ ಎಂಬ ವಿದ್ವಾಂಸನನ್ನು ಇನ್ನೂ ಆಚಿನ ದ್ವೀಪಗಳಿಗೂ ಕಳುಹಿಸಿದ್ದ. ಅಲ್ಲದೆ ಪಾಶ್ಚಾತ್ಯ ದೇಶಗಳಿಂದಲೂ ಖಗೋಳಶಾಸ್ತ್ರ ಪಂಡಿತರನ್ನು ಜಯಪುರಕ್ಕೆ ಆಹ್ವಾನಿಸಿ ವಿಚಾರಗೋಷ್ಠಿಗಳನ್ನು ಏರ್ಪಡಿಸಿದ್ದ. ಅಂಡ್ರೋಸ್ಟ್ರೋಬೆಲ್ ಎಂಬ ಜರ್ಮನಿಯ ಖಗೋಳಶಾಸ್ತ್ರಜ್ಞನನ್ನು ಕರೆಯಿಸಿ ತನ್ನಲ್ಲೇ ಇರಿಸಿಕೊಂಡಿದ್ದ. ಹೀಗೆ ಖಗೋಳಶಾಸ್ತ್ರದ ನಾನಾ ಸಿದ್ಧಾಂತಗಳ ಪರಿಚಯವನ್ನು ಹೊಂದಿ ಅನಂತರ ವೀಕ್ಷಣಾಲಯಗಳ ನಿರ್ಮಾಣಕಾರ್ಯವನ್ನು ಜಯಸಿಂಹ ಪ್ರಾರಂಭಿಸಿದ. ಲೋಹಗಳಿಂದ ರಚಿತವಾದ ಯಂತ್ರಗಳು ಉಪಯೋಗವಾದಂತೆಲ್ಲ ಸವೆದುಹೋಗುವುದರಿಂದ ಅವುಗಳಿಂದ ಸೂಚಿತವಾದ ಅಳತೆಗಳು ಒಂದೇ ರೀತಿಯಾಗಿ ಇರುವುದಿಲ್ಲವೆಂದೂ, ಅವನ್ನು ಸುಲಭವಾಗಿ ಸರಿಪಡಿಸುವುದು ಸಾಧ್ಯವಿಲ್ಲವೆಂದೂ, ತಿಳಿದು ಅದೇ ಮಾದರಿಯಲ್ಲಿ ಬೃಹದಾಕಾರದ ಮತ್ತು ಕಲ್ಲಿನಿಂದ ನಿರ್ಮಿತವಾದ ಯಂತ್ರಗಳನ್ನು ಒಳಗೊಂಡ ವೀಕ್ಷಣಾಲಯಗಳನ್ನು ನಿರ್ಮಿಸುವುದರಲ್ಲಿ ಆಸಕ್ತನಾದ. ಜಯಸಿಂಹನಿಂದ ರಚಿತವಾದ ಲೋಹಯಂತ್ರಗಳನ್ನು ಈಗಲೂ ನಾವು ಜಯಪುರದ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದು.

ದೆಹಲಿ ವೀಕ್ಷಣಾಲಯ : ಇದು ಜಂತರ್ ಮಂತರ್ (**ನೋಡಿ**) ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಜಯಸಿಂಹನಿಂದ ಮೊಟ್ಟಮೊದಲು ನಿರ್ಮಿತವಾದ ಖಗೋಳ ವೀಕ್ಷಣಾಲಯವಿದು (1734). ಇಲ್ಲಿ ಏಳು ವರ್ಷಗಳ ಕಾಲ ಸತತವಾಗಿ ಖಗೋಳ ದೃಶ್ಯಗಳನ್ನು ಅವಲೋಕಿಸಿ ಜಯಸಿಂಹ ಜೀಜ್ ಮಹಮ್ಮದ್ ಷಾಹಿ ಎಂಬ ಖಗೋಳಶಾಸ್ತ್ರೀಯ ಕೋಷ್ಟಕಗಳನ್ನು ತಯಾರಿಸಿದ. ಈ ವೀಕ್ಷಣಾಲಯದ ಮುಖ್ಯಾಂಶಗಳು ಈ ರೀತಿಯಾಗಿವೆ :

ಅಕ್ಷಾಂಶ : $28^{0}$ 37' 35" ಉತ್ತರಕ್ಕೆ

ರೇಖಾಂಶ : $77^{0}$ 18' 5" ಗ್ರೀನಿಚ್‌ನಿಂದ ಪೂರ್ವಕ್ಕೆ

ಸಮುದ್ರ ಮಟ್ಟದಿಂದ ಎತ್ತರ : 212 ಮೀಟರುಗಳು

ಕಾಂತ ವಿಚಲನೆ : 1919ರಲ್ಲಿ ಪೂರ್ವಕ್ಕೆ $1^{0}$ 45', ವಾರ್ಷಿಕ ವ್ಯತ್ಯಾಸ 3'

**ಸ್ಥಾನಿಕ ಕಾಲ :** ಶಿಷ್ಟಕಾಲದ ತರುವಾಯ 21 ಮಿ. 7.7 ಸೆ.

ಸಮ್ರಾಟ್ ಯಂತ್ರ, ಜೈಪ್ರಕಾಶ್ ಯಂತ್ರ, ರಾಮಯಂತ್ರ, ಮಿಶ್ರಯಂತ್ರ, ಚಿಕ್ಕ ಸಮ್ರಾಟ್‌ಯಂತ್ರ, ದಕ್ಷಿಣಾವೃತ್ತಿಯಂತ್ರ, ಕರ್ಕರಾಶಿವಲಯ ಯಂತ್ರ ಮತ್ತು ಕೆಲವು ಲೋಹದ ಯಂತ್ರಗಳನ್ನು ಇಲ್ಲಿ ಕಾಣಬಹುದು. ಇವುಗಳಲ್ಲಿ ಮಿಶ್ರಯಂತ್ರ ಜಯಸಿಂಹನ ಮಗ ಮಧುಸಿಂಗ್‌ನಿಂದ ಸೇರಿಸಲ್ಪಟ್ಟಿದೆಂದು ಭಾವಿಸಲಾಗಿದೆ.

ಜಯಪುರದ ವೀಕ್ಷಣಾಲಯ : ಜಯಸಿಂಹನಿಂದ ನಿರ್ಮಿತವಾದ (1728) ಈ ನಗರದಲ್ಲಿ 1734ರಲ್ಲಿ ಸಮೀಕ್ಷಾಮಂದಿರದ ನಿರ್ಮಾಣವಾಯಿತು. ಇದರ ಮುಖ್ಯಾಂಶಗಳು ಈ ರೀತಿಯಾಗಿವೆ:

ಅಕ್ಷಾಂಶ : $28^{0}$ 55' 27.4" ಉತ್ತರಕ್ಕೆ

ರೇಖಾಂಶ : $75^{0}$ 49' 18.7" ಗ್ರೀನಿಚ್‌ನಿಂದ ಪೂರ್ವಕ್ಕೆ

ಸಮುದ್ರಮಟ್ಟದಿಂದ ಎತ್ತರ : 482 ಮೀಟರುಗಳು

ಕಾಂತವಿಚಲನೆ : 1919ರಲ್ಲಿ ಪೂರ್ವಕ್ಕೆ $1^{0}$ 35'

ಸ್ಥಾನಿಕ ಕಾಲ : ಶಿಷ್ಟಕಾಲದ ತರುವಾಯ 26 ಮಿ.45 ಸೆ.

ಸಮ್ರಾಟ್ ಯಂತ್ರ, ಜೈಪ್ರಕಾಶ್‌ಯಂತ್ರ, ರಾಶಿವಲಯ ಯಂತ್ರ, ಷಷ್ಠಾಂಶ ಯಂತ್ರ, ಕಪಾಲ ಯಂತ್ರ, ರಾಮಯಂತ್ರ, ದಿಗಂಶಯಂತ್ರ, ನಾರೀವಲಯ ಯಂತ್ರ ಮತ್ತು ದಕ್ಷಿಣಾವೃತ್ತಿಯಂತ್ರಗಳನ್ನು ಇಲ್ಲಿ ಕಾಣಬಹುದು.

ಉಜ್ಜಯಿನಿಯ ವೀಕ್ಷಣಾಲಯ : ಉಜ್ಜಯಿನಿ ಹಿಂದಿನಿಂದಲೂ ಖಗೋಳಶಾಸ್ತ್ರದ ಅಧ್ಯಯನದ ಕೇಂದ್ರವಾಗಿದ್ದು ಭಾರತದ ಗ್ರೀನಿಚ್ ಎಂದು ಪ್ರಸಿದ್ಧವಾಗಿದೆ. ಪ್ರಾಚೀನ ಭಾರತದಲ್ಲಿ ಇದು ಅವಂತಿಯೆಂದು ಪ್ರಸಿದ್ಧವಾಗಿದ್ದ ದೇಶದ ರಾಜಧಾನಿ. 1728 ರಿಂದ 1734ರ ಅವಧಿಯಲ್ಲಿ ಜಯಸಿಂಹ ಈ ಸಮೀಕ್ಷಾಮಂದಿರವನ್ನು ನಿರ್ಮಿಸಿದ. ಇದರ ಮುಖ್ಯಾಂಶಗಳು ಈ ರೀತಿಯಾಗಿವೆ :

ಅಕ್ಷಾಂಶ : $28^{0}$ 10' 16" ಉತ್ತರಕ್ಕೆ

ರೇಖಾಂಶ : $75^{0}$ 46' 3" ಗ್ರೀನಿಚ್‍ನಿಂದ ಪೂರ್ವಕ್ಕೆ

ಸಮುದ್ರಮಟ್ಟದಿಂದ ಎತ್ತರ : 457 ಮೀಟರುಗಳು

ಕಾಂತವಿಚಲನೆ : 1915ರಲ್ಲಿ $0^{\circ}$ 49', ವಾರ್ಷಿಕ ವ್ಯತ್ಯಾಸ –3'

ಸ್ಥಾನಿಕ ಕಾಲ : ಶಿಷ್ಟಕಾಲದ ತರುವಾಯ 26 ಮಿ. 52 ಸೆ.

ಬಹಳ ಶಿಥಿಲವಾಗಿರುವ ಈ ಸಮೀಕ್ಷಾಮಂದಿರದಲ್ಲಿ ಸಮ್ರಾಟ್‍ಯಂತ್ರ, ನಾರೀವಲಯ ಯಂತ್ರ, ದಿಗಂಶಯಂತ್ರ ಮತ್ತು ದಕ್ಷಿಣಾವೃತ್ತಿಯಂತ್ರಗಳನ್ನು ಕಾಣಬಹುದು.

ಬನಾರಸ್ ವೀಕ್ಷಣಾಲಯ : ಜಯಸಿಂಹನಿಂದ ನಿರ್ಮಿತವಾದ ಸಮೀಕ್ಷಾ ಮಂದಿರಗಳಲ್ಲಿ ಇದು ನಾಲ್ಕನೆಯದು. ಹದಿನೇಳನೆಯ ಶತಮಾನದಲ್ಲಿ ಅಂಬರ್ ಸಂಸ್ಥಾನದ ಒಡೆಯನಾಗಿದ್ದ ಮಾನ್‍ಸಿಂಗ್ ಎಂಬುವನಿಂದ ನಿರ್ಮಿತವಾಗಿದ್ದ ಮಾನಮಂದಿರವೆಂಬ ಮಹಾಸೌಧದ ಮಹಡಿಯ ಮೇಲೆ ಇದು ನಿರ್ಮಿತವಾಗಿದೆ. ಇದರ ಮುಖ್ಯಾಂಶಗಳು ಈ ರೀತಿಯಾಗಿವೆ:

ಅಕ್ಷಾಂಶ : $25^{0}$ 18' 24.9" ಪೂರ್ವಕ್ಕೆ

ರೇಖಾಂಶ : $83^{0}$ 0' 46.1" ಗ್ರೀನಿಚ್‍ನಿಂದ ಪೂರ್ವಕ್ಕೆ

ಸಮುದ್ರಮಟ್ಟದಿಂದ ಎತ್ತರ : 107 ಮೀಟರುಗಳು

ಕಾಂತವಿಚಲನೆ : 1919ರಲ್ಲಿ $0^{0}$ 55' ಪೂರ್ವಕ್ಕೆ

ಸ್ಥಾನಿಕ ಕಾಲ : ಶಿಷ್ಟಕಾಲಕ್ಕೆ 2 ಮಿ. 3 ಸೆ. ಮುಂಚೆ

ಇಲ್ಲಿ ಸಮ್ರಾಟ್‍ಯಂತ್ರ ನಾರೀವಲಯ ಯಂತ್ರ, ಚಕ್ರಯಂತ್ರ ಮತ್ತು ದಿಗಂಶ ಯಂತ್ರಗಳನ್ನು ಕಾಣಬಹುದು.

ಉತ್ತರ ಮಥುರಾ ವೀಕ್ಷಣಾಲಯ: ಜಯಪುರದ ಮಹಾರಾಜನಾಗಿದ್ದ ರಾಜಾ ಮಾನ್ ಸಿಂಗ್ ಎಂಬುವವನಿಂದ ಜೀರ್ಣೋದ್ಧಾರ ಮಾಡಲ್ಪಟ್ಟ ಮಥುರಾ ಕೋಟೆಯ ಮೇಲೆ ಜಯಸಿಂಹ ಈ ಸಮೀಕ್ಷಾ ಮಂದಿರವನ್ನು ನಿರ್ಮಿಸಿದ. ಈಗ ಇದು ಸಂಪೂರ್ಣವಾಗಿ ನಾಶಹೊಂದಿ ಇಲ್ಲಿ ನಿರ್ಮಿತವಾದ ಯಂತ್ರಗಳ ಸುಳಿವೇ ಇಲ್ಲ.

ದೆಹಲಿಯ ಸಮೀಕ್ಷಾಮಂದಿರ ಜಯಸಿಂಹನ ಪ್ರಧಾನ ಕೇಂದ್ರವಾಗಿತ್ತು. ಇಲ್ಲಿ ಅವಲೋಕಿಸಿದ ಖಗೋಳ ದೃಶ್ಯಗಳ ಸ್ಥಿರೀಕರಣಕ್ಕಾಗಿ ಬೇರೆ ಬೇರೆ ಸ್ಥಳಗಳಲ್ಲಿ ಸಮೀಕ್ಷಾಮಂದಿರಗಳನ್ನು ನಿರ್ಮಿಸಿ, ಮಧ್ಯಯುಗೀನ ಭಾರತದ ವಿಜ್ಞಾನ ಸಾರ್ವಭೌಮನೆಂದು ಈತ ಕೀರ್ತಿ ಗಳಿಸಿದ್ದಾನೆ. (ಕೆ.ವಿ.ಎಸ್.ಎ.)

**ಜಯಸ್ವಾಲ್, ಕಾಶೀಪ್ರಸಾದ :** 1871–1937. ಭಾರತದ ಇತಿಹಾಸಶಾಸ್ತ್ರಜ್ಞ, ವಿದ್ವಾಂಸ. ಪ್ರಾಚೀನ ಭಾರತದ ರಾಜತಾಂತ್ರಿಕ ವಿಚಾರಗಳನ್ನೂ ಸಂಸ್ಥೆಗಳನ್ನೂ ಶಾಸ್ತ್ರೀಯವಾಗಿ ಅಭ್ಯಸಿಸಿ, ಅವನ್ನು ಸುಸಂಯೋಜಿತ ರೀತಿಯಲ್ಲಿ ಬೆಳಕಿಗೆ ತರುವ ಪ್ರಥಮ ಪ್ರಯತ್ನಮಾಡಿದವರು. ಜನನ 1871ರಲ್ಲಿ, ಈಗಿನ ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ. ತಂದೆ ಸಾಹು ಮಹಾದೇವ ಪ್ರಸಾದ್, ಮಿರ್ಜಾಪುರದ ಒಬ್ಬ ದೊಡ್ಡ ವ್ಯಾಪಾರಿ. ಜಯಸ್ವಾಲ್ ವೈಶ್ಯ. ಇವರಿಗೆ ಹಿಂದೂ ಧರ್ಮದಲ್ಲಿ ವಿಶೇಷ ಅಭಿಮಾನ, ಗೌರವ ಇದ್ದುವು.

ಜಯಸ್ವಾಲ್ ಚಿಕ್ಕ ವಯಸ್ಸಿನಲ್ಲೇ ಸಂಸ್ಕೃತವನ್ನು ಅಭ್ಯಾಸ ಮಾಡಿದರು. ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ಇಂಗ್ಲೆಂಡಿಗೆ ತೆರಳಿ ಆಕ್ಸ್‍ಫರ್ಡ್ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಮಿಡ್ಲ್ ಟೆಂಪಲ್‍ನಲ್ಲಿ ನ್ಯಾಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಕ್ಸ್‍ಫರ್ಡಿನಲ್ಲಿ ಚೀನೀ ವಿಷಯದಲ್ಲಿ ಡೇವಿಸ್ ವಿದ್ಯಾರ್ಥಿಯೂ, ಅನಂತರ ಸಂಶೋಧನ ವಿದ್ಯಾರ್ಥಿಯೂ ಆಗಿ ಜಯಸ್ವಾಲರು ಆಳವಾಗಿ ಅಧ್ಯಯನ ನಡೆಸಿದರು. ಸಂಸ್ಕೃತ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ವಿಶೇಷವಾದ ಆಸಕ್ತಿ ಬೆಳೆಸಿಕೊಂಡರು.

ಇಂಗ್ಲೆಂಡಿನಲ್ಲಿದ್ದಾಗಲೂ ಅವರು ರಾಜಕೀಯ ಅಂದೋಲನದಿಂದ ದೂರ ಇರಲಿಲ್ಲ. ಹರದಯಾಳರ ಕ್ರಾಂತಿಕಾರಿ ಸಂಘಟನೆಗೆ ಸಂಬಂಧಿಸಿದವನೆಂದು ಸರ್ಕಾರ ಜಯಸ್ವಾಲರನ್ನು ಅಪಾಯಕಾರಿ ಕ್ರಾಂತಿಕಾರಿಯೆಂದು ಪರಿಗಣಿಸಿತು. ಅವರು ಭಾರತಕ್ಕೆ ಮರಳಿದ ಮೇಲೆಯೂ ಅವರ ಚಟುವಟಿಕೆಗಳ ಬಗ್ಗೆ ನಿಗಾ ಇಟ್ಟಿತ್ತು. 1913ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಇವರಿಗೆ ನೀಡಲಾದ ಅಧ್ಯಾಪಕ ಹುದ್ದೆಯನ್ನು ಸರ್ಕಾರ ಮಂಜೂರು ಮಾಡಲಿಲ್ಲ. ಸರ್ಕಾರದ ಈ ಕ್ರಮದ ವಿರುದ್ಧ ತೀವ್ರ ಚಳವಳಿಯೂ ನಡೆಯಿತು. ಜಯಸ್ವಾಲ್ ಆಗ ಕಲ್ಕತ್ತ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ಪ್ರಾರಂಭಿಸಿದರು. ಆಮೇಲೆ ಅವರು ಪಟ್ನಾಕ್ಕೆ ಬಂದರು. ಅವರ ಚಲನವಲನಗಳನ್ನು ಗಮನಿಸಲು ಅಲ್ಲಿಯ ಪೊಲೀಸ್ ಮತ್ತು ಜಿಲ್ಲಾಧಿಕಾರಿಗಳಿಗೆ ಸೂಚನೆಗಳು ಬಂದುವು. ಜಯಸ್ವಾಲ್ ಬಹಿರಂಗವಾಗಿಯೇ ಕಾಂಗ್ರೆಸ್ ಸದಸ್ಯರಾದರು. ರಾಜೇಂದ್ರ ಪ್ರಸಾದರಂಥ ಮುಖಂಡರೊಂದಿಗೆ ಅವರ ಸ್ನೇಹ ಬೆಳೆಯಿತು. ಅವರು ಬಿಹಾರದ ಮೂಂಚೂಣಿ ನಾಯಕರಲ್ಲೊಬ್ಬರಾದರು. ಜಯಸ್ವಾಲ್ ಉತ್ತಮ ನ್ಯಾಯವಾದಿಯೆಂದು ಖ್ಯಾತರಾದರು. ಅವರು ಇಂಗ್ಲೆಂಡ್, ಫ್ರಾನ್ಸ್‍ಗಳಿಗೆ ಅನೇಕ ಸಲ ಹೋಗಿ ಬಂದರು.

ಆದರೆ ಜಯಸ್ವಾಲರ ಮುಖ್ಯ ಕಾರ್ಯಕ್ಷೇತ್ರ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಕುರಿತ ಸಂಶೋಧನೆಯೇ ಆಗಿತ್ತು. ಇಂಡಿಯನ್ ಪಾಲಿಟಿ (ಹಿಂದೂ ರಾಜನೀತಿ) ಎಂಬುದು ಅವರ ಪ್ರಖ್ಯಾತ ಗ್ರಂಥ. ಪ್ರ.ಶ. ಸು. 150–350ರ ಭಾರತ ಚರಿತ್ರೆಯನ್ನು ಕುರಿತದ್ದು ಇನ್ನೊಂದು ಗ್ರಂಥ. ಭಾರತದ ಇತಿಹಾಸದ ಅಂಧಕಾರಯುಗವೆಂದು ಹೆಸರಾದ ಅವಧಿಯ ಇತಿಹಾಸವನ್ನು ಜಯಸ್ವಾಲರು ಇದರಲ್ಲಿ ಸುಸಂಬದ್ಧವಾಗಿ ಪುನಾರಚಿಸುವ ಪ್ರಯತ್ನ ಮಾಡಿದ್ದಾರೆ. ಇವರ ವಿಚಾರಗಳು ಅನೇಕ ಅಜ್ಞಾತ ವಿಷಯಗಳ ಮೇಲೆ ಬೆಳಕು ಬೀರಿದುವು. ಮನು, ಯಾಜ್ಞವಲ್ಕ್ಯ ಇವರನ್ನು ಕುರಿತು ಜಯಸ್ವಾಲ್ ಮಾಡಿದ ಠಾಕೂರ್ ಸ್ಮಾರಕ ಉಪನ್ಯಾಸಗಳು ಹಿಂದೂ ಸಾಮಾಜಿಕ ಹಾಗೂ ನ್ಯಾಯಿಕ ಸಂಸ್ಥೆಗಳ ಅಧ್ಯಯನಕ್ಕೆ ತುಂಬ ಸಹಾಯಕ. ಭಾರತದ ಬುದ್ಧ ಯುಗದ ಪ್ರಾರಂಭದ ಇತಿಹಾಸದಲ್ಲೂ ನೇಪಾಳದ ಪ್ರಾಚೀನ ಇತಿಹಾಸದಲ್ಲೂ ಜಯಸ್ವಾಲರು ಮೌಲಿಕ ಸಂಶೋಧನೆ ನಡೆಸಿದರು. ರಾಹುಲ ಸಾಂಕೃತ್ಯಾಯನರೊಂದಿಗೆ ಸೇರಿ ಇವರು ಟಿಬೆಟನ್ ಭಾಷೆಯ ಮಂಜುಶ್ರೀ ಮೂಲಕಲ್ಪ ಎಂಬ ಗ್ರಂಥವನ್ನು ಸಂಪಾದಿಸಿದರು. ಇಂಪೀರಿಯಲ್ ಹಿಸ್ಟರಿ ಆಫ್ ಇಂಡಿಯದಲ್ಲಿ ಈ ಗ್ರಂಥದ ಬಗ್ಗೆ ಅಮೂಲ್ಯವಾದ ಹಾಗೂ ಉದ್ಬೋಧಕ ಲೇಖನವೊಂದನ್ನು ಬರೆದರು. ಒರಿಸ್ಸದ ಹಾಥಿಗುಂಫದ ಖಾರವೇಲ ಶಾಸನವನ್ನು ಓದುವುದರಲ್ಲೂ ಜಯಸ್ವಾಲ್ ಶ್ಲಾಘನೀಯ ಪ್ರಯತ್ನ ಮಾಡಿದರು. ನಾಣ್ಯಶಾಸ್ತ್ರ ಕ್ಷೇತ್ರದಲ್ಲೂ ಜಯಸ್ವಾಲರು ವಿಶೇಷವಾದ ಕೆಲಸ ಮಾಡಿದ್ದಾರೆ.

ಪಟ್ನಾ ವಸ್ತುಸಂಗ್ರಹಾಲಯವೂ ಬಿಹಾರ್ ಸಂಶೋಧನ ಸಂಘವೂ ಸ್ಥಾಪಿತವಾಗಲು ಜಯಸ್ವಾಲರ ಪ್ರಯತ್ನವೇ ಕಾರಣ. ಶಿಕ್ಷಣ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಜಯಸ್ವಾಲ್ ಮಾಡಿದ ಮಹತ್ ಸಾಧನೆಗಳನ್ನು ಗಮನಿಸಿ ಪಟ್ನಾ ವಿಶ್ವವಿದ್ಯಾಲಯ ಅವರಿಗೆ 1936ರಲ್ಲಿ ಡಾಕ್ಟೊರೇಟ್ ಪದವಿ ನೀಡಿತು. ಬರೋಡದಲ್ಲಿ ನಡೆದ ಭಾರತೀಯ ಪ್ರಾಚ್ಯ ಸಮ್ಮೇಳನದ ಅಧಿವೇಶನಕ್ಕೆ ಅವರು ಅಧ್ಯಕ್ಷರಾಗಿದ್ದರು. ಭಾರತದ ನಾಣ್ಯಶಾಸ್ತ್ರ ಸಂಘದವರು ನಾಣ್ಯಶಾಸ್ತ್ರಕ್ಕೆ ಅವರು ಸಲ್ಲಿಸಿದ ಕೊಡುಗೆಯನ್ನು ಮನ್ನಿಸಿ ಅವರಿಗೆ ಪದಕವೊಂದನ್ನು ನೀಡಿದರು.

ಜಯಸ್ವಾಲ್ ನಿಷ್ಠುರ ರಾಷ್ಟ್ರವಾದಿಯಾಗಿದ್ದರು. ತಮ್ಮ ದೇಶದ ಆದರ್ಶ ಪರಂಪರೆಗಳಲ್ಲಿ ಅವರಿಗೆ ಅಚಲ ಶ್ರದ್ಧೆ ಇತ್ತು. ತಮ್ಮ ರಾಷ್ಟ್ರಕ್ಕೆ ಅಪಮಾನವಾಗುವುದನ್ನು ಅವರು ಎಂದೂ ಸಹಿಸುತ್ತಿರಲಿಲ್ಲ. ಒಮ್ಮೆಯಂತೂ ಅಪಮಾನಕ್ಕೆ ಪ್ರತೀಕಾರವಾಗಿ ಒಬ್ಬ ಯೂರೋಪಿಯನನ್ನು ಚೆನ್ನಾಗಿ ಥಳಿಸಿದರೆಂದು ಹೇಳಲಾಗಿದೆ. ಸ್ತ್ರೀಯರ ಹಕ್ಕುಬಾಧ್ಯತೆಗಳನ್ನು ರಕ್ಷಿಸಲು ಅವರು ಸದಾ ಪ್ರವೃತ್ತರಾಗಿದ್ದರು. ಸ್ವತಃ ತಮ್ಮ ಹೆಣ್ಣುಮಕ್ಕಳಿಗೆ ಉಚ್ಚ ಶಿಕ್ಷಣದ ಸೌಲಭ್ಯ ಒದಗಿಸಿದರು.

ಆಕಾರದಲ್ಲಿ ಎತ್ತರ, ಆರೋಗ್ಯವಂತ, ದೃಢಕಾಯ. ಪಾಶ್ಚಾತ್ಯ, ಪ್ರಾಚ್ಯ ಎರಡೂ ಬಗೆಯ ಉಡುಪು ಧರಿಸುತ್ತಿದ್ದರು. ಕೆ.ಪಿ. ಜಯಸ್ವಾಲರದು ವರ್ಣಮಯ ವ್ಯಕ್ತಿತ್ವ. ಕ್ರಾಂತಿಕಾರಿ, ರಾಷ್ಟ್ರೀಯವಾದಿ, ಇತಿಹಾಸಶಾಸ್ತ್ರಜ್ಞ, ಸಂಶೋಧಕ. ಭಾರತಶಾಸ್ತ್ರ ಕ್ಷೇತ್ರದಲ್ಲಿ ಜಯಸ್ವಾಲರ ಸಂಶೋಧನೆಗಳಿಗೆ ಮೌಲಿಕ ಮಹತ್ವವಿದೆ. ಅವರ ಎಲ್ಲ ಅಭಿಪ್ರಾಯಗಳನ್ನೂ ಈಚಿನ ಇತಿಹಾಸಕಾರರು ಒಪ್ಪದಿರಬಹುದಾದರೂ ಅವರು ಭಾರತಶಾಸ್ತ್ರದ ವಿವಿಧ ಕ್ಷೇತ್ರಗಳ ಆದ್ಯಪ್ರವರ್ತಕರು. ವೇದಕಾಲದಿಂದ ಆರಂಭವಾಗುವ ಭಾರತದ ಇತಿಹಾಸದಲ್ಲಿ ಅನೇಕ ಪ್ರಶ್ನೆಗಳನ್ನೆಬ್ಬಿಸಿ ಸಂಶೋಧನ ಸರಣಿಯನ್ನು ಪ್ರಾರಂಭಿಸಿದ ಕೀರ್ತಿ ಜಯಸ್ವಾಲರಿಗೆ ಸಲ್ಲುತ್ತದೆ. (ಜಿ.ಆರ್.ಪಿ.)

**ಜಯಾದಿತ್ಯ :** ಪ್ರಶ ಸು. 650. ಪಾಣಿನಿಯ ಸಂಸ್ಕೃತ ವ್ಯಾಕರಣ ಅಷ್ಟಾಧ್ಯಾಯಿಯ ಮೇಲೆ ಬಂದಿರುವ ಅತ್ಯಂತ ಉತ್ಕೃಷ್ಟ ವಿವರಣೆಯಾದ ಕಾಶಿಕಾವೃತ್ತಿಯ ಕರ್ತೃ. ಸಂಕ್ಷಿಪ್ತತೆ ಮತ್ತು ಸ್ಪಷ್ಟತೆಗಳಿಂದ ಕೂಡಿದ ಈ ವೃತ್ತಿ ಪಾಣಿನಿಯ ಸೂತ್ರಗಳಿಗೆ ಉತ್ತಮ ವ್ಯಾಖ್ಯಾನವೆನಿಸಿಕೊಂಡಿದೆ. ಕಾಶಿಕಾವೃತ್ತಿಯ ಮೊದಲಿನ ಐದು ಅಧ್ಯಾಯನಗಳನ್ನು ಜಯಾದಿತ್ಯನೂ ಮಿಕ್ಕಿದ್ದನ್ನು ವಾಮನನೂ ಬರೆದಿದ್ದಾರೆ. ಪಾಣಿನಿಯ ಸೂತ್ರಕ್ರಮವನ್ನು ವ್ಯತ್ಯಾಸ ಮಾಡಿಕೊಳ್ಳದೆ ಇದರಲ್ಲಿ ವೃತ್ತಿರಚನೆಯಾಗಿದೆ. ವ್ಯಾಕರಣದ ಮೊದಲ ಪಾಠಕ್ಕೆ ಇದನ್ನು ಬಳಸಿಕೊಳ್ಳಲಾಗುತ್ತಿತ್ತಲ್ಲದೆ ಭಾರತಕ್ಕೆ ಬಂದ ಚೀನೀಯರು ಮೊಟ್ಟಮೊದಲು ಇದರ ಮೂಲಕ ಸಂಸ್ಕೃತ ವ್ಯಾಕರಣವನ್ನು ಕಲಿಯುತ್ತಿದ್ದರು ಎಂದು ಭಾರತಕ್ಕೆ ಬಂದಿದ್ದ (ಪ್ರ.ಶ. 672) ಚೀನೀ ಯಾತ್ರಿಕ ಇ–ತ್ಸಿಂಗ್ ಹೇಳಿದ್ದಾನೆ. ಈ ವ್ಯಾಕರಣದ ಮೂಲಕವೇ ಆತನೂ ಸಂಸ್ಕೃತವನ್ನು ಕಲಿತನೆನ್ನಲಾಗಿದೆ. ಕಾಶಿಕಾವೃತ್ತಿಯ ಮೇಲೆ ನ್ಯಾಸವೆಂದು ಪ್ರಸಿದ್ಧವಾಗಿರುವ ಕಾಶಿಕಾವಿವರಣ ಪಂಜಿಕಾ ಎಂಬ ವಿವರಣ ಗ್ರಂಥ ಜಿನೇಂದ್ರಬುದ್ಧಿ ಯಿಂದಲೂ, ಪದಮಂಜರಿ ಎಂಬ ವಿಸ್ತಾರವಾದ ವ್ಯಾಖ್ಯಾನಗ್ರಂಥ ಹರದತ್ತನಿಂದಲೂ ರಚಿತವಾಗಿವೆ. (ಎಸ್.ಎಚ್.ಪಿ.)

**ಜರ :** ಶ್ರೀಕೃಷ್ಣನ ನಿರ್ಯಾಣಕ್ಕೆ ನಿಮಿತ್ತನಾದ ಒಬ್ಬ ಬೇಡ. ಈತನನ್ನು ಜರಾ ಎಂದೂ ಕರೆಯುವುದಿದೆ. ಶ್ರೀ ಕೃಷ್ಣನ ಮಾಯೆ ಮತ್ತು ಬ್ರಹ್ಮನ ಶಾಪಗಳಿಂದ ವ್ಯಾಮೋಹಿತರಾದ ಯಾದವರೆಲ್ಲ ದ್ವಾರಕಾನಗರದಿಂದ ಹೊರಟು ಪ್ರಭಾಸ ಕ್ಷೇತ್ರಕ್ಕೆ ಬಂದು ಮಿತಿಮೀರಿ ಮದ್ಯಪಾನಮಾಡಿ ಪರಸ್ಪರ ಹೋರಾಡಿ ಹತರಾಗುತ್ತಾರಷ್ಟೆ. ಇದರಿಂದ

ವ್ಯಸನಗೊಂಡ ಶ್ರೀಕೃಷ್ಣ ತನ್ನ ಅವಸಾನಕಾಲ ಬಂದುದನ್ನರಿತು ಒಂದು ಮರದ ಬಳಿ ಕಾಲುಚಾಚಿ ಮಲಗಿಕೊಂಡು ಸ್ವಸ್ವರೂಪವನ್ನು ಧ್ಯಾನಮಾಡುತ್ತ ಬಾಹ್ಯಪ್ರಜ್ಞೆಯಿಲ್ಲದೆ ಇರುತ್ತಾನೆ. ಮಲಗಿದ ಶ್ರೀಕೃಷ್ಣನ ಕಾಲನ್ನು ದೂರದಿಂದ ನೋಡಿದ ಜರನು ಜಿಂಕೆ ಎಂದು ಭ್ರಮಿಸಿ ಥಟ್ಟನೆ ಬಾಣ ಬಿಡುತ್ತಾನೆ. ಆ ಬಾಣದೇಟಿನಿಂದ ಶ್ರೀಕೃಷ್ಣನಿಗೆ ಸಾವು ಸಂಭವಿಸುತ್ತದೆ. ಹತ್ತಿರಕ್ಕೆ ಬಂದು ನಿಜವನ್ನರಿತ ಬೇಡ ಶ್ರೀಕೃಷ್ಣನ ಮೊರೆ ಹೋಗುತ್ತಾನೆ. ಸಾಯುವ ಮುನ್ನ ಕೃಷ್ಣನು ಅರಿಯದ ಈ ಬೇಡನಿಗೆ ಸದ್ಗತಿಯಾಗುವಂತೆ ಹರಸುತ್ತಾನೆ. ರಾಮಾಯಣದ ವಾಲಿಯೇ ಬೇಡನ ಜನ್ಮವೆತ್ತಿ ಸೇಡುತೀರಿಸಿಕೊಂಡನೆಂದು ಒಂದು ಕಥೆ ಇದೆ. (ಕೆ.ಕೆ.)

**ಜರಗು :** ಬೆಟ್ಟದ ಅಥವಾ ಪ್ರಪಾತದ ಕಡಿದಾದ ಪಕ್ಕದ ಶಿಲೆಯ ಮೇಲ್ಭಾಗ. ಗಾಳಿ, ಮಳೆ, ನೀರು ಹಿಮಗಳ ಹಾವಳಿಯಿಂದ ಸಡಿಲಗೊಂಡು ತಲೆದೋರುವ ಚೂಪಾದ ಬಂಡೆಗಳೂ ಬೂರುಗಳೂ ಜಾರಿ ಉರುಳಿಕೊಂಡು ಕೆಳಕ್ಕೆ ಬಂದು ಹರಡಿಕೊಂಡಿರುವ ಭಾಗ (ಸ್ಲೈಡ್ ರಾಕ್). ಇದರಲ್ಲಿ ಮಣ್ಣು ಕಡಿಮೆ. ಕಲ್ಲುಗಳ ಗಾತ್ರ 5 ಮೀ. ಅಗಲದ ದೊಡ್ಡ ಬಂಡೆಗಳಿಂದ ಖನಿಜದ ಕಣದವರೆಗೂ ಇರಬಹುದು. ಸಾಮಾನ್ಯವಾಗಿ ಹೊಚ್ಚ ಹೊಸ ಶಿಲಾಖಂಡಗಳು ಮೇಲ್ಗಡೆ ಇರುತ್ತವೆ. ಕಾಲಗತಿಯಲ್ಲಿ ಇವು ಕೂಡ ಚೂರು ಚೂರಾಗಿ ಕೆಳಕ್ಕೆ ಜಾರಿಕೊಂಡು ಬರುತ್ತವೆ. ಹಿಮ ಬೀಳುವ ಪ್ರದೇಶಗಳಲ್ಲಿ ಜರುಗು ವಸಂತಋತುವಿನಲ್ಲಿ ಅಧಿಕವಾಗಿ ಶೇಖರವಾಗುವುದು. ಜರುಗು ಕೆಳಕ್ಕೆ ಸರಿದಂತೆ ಅದರ ಒತ್ತಡದಿಂದ ಮರಗಳು ಮುರಿದು ಬೀಳುವುದುಂಟು; ನದಿಗಳಿಗೆ ಅಣೆಕಟ್ಟಿದಂತಾಗಿ ಸರೋವರಗಳು ಉತ್ಪತ್ತಿಯಾಗುವುದುಂಟು. ತೇವವಿರುವ ಪ್ರದೇಶದಲ್ಲಿ ಬಹು ಸೂಕ್ಷ್ಮವಾದ, ಫಲವತ್ತಾದ ಮತ್ತು ಸಸ್ಯಾವೃತವಾದ ಮಣ್ಣು ಬೆಟ್ಟದ ಅಡಿಯಲ್ಲಿ ಶೇಖರವಾಗುತ್ತದೆ. ಪ್ರಪಾತದ ಅಥವಾ ಪರ್ವತ ಝರಿಗಳ ಅಡಿಯಲ್ಲಿ ವಿಶೇಷವಾಗಿ ಶಂಕುವಿನ ಆಕಾರದಲ್ಲಿ ಜರುಗು ಶೇಖರಣವಾಗುತ್ತದೆ. ಹಿಮಾವೃತ ಪ್ರದೇಶಗಳಲ್ಲಿ ಮಂಜು ಕರಗಿ ನೀರಾದ ಬಳಿಕ ಜರುಗು ಬಹಳ ದೂರದವರೆಗೆ ಕೊಚ್ಚಿಕೊಂಡು ಬಂದು ಶೇಖರಣವಾದಾಗ ಇದು ಅಲ್ಲಿಗೆ ಹೇಗೆ ಬಂದಿತು ಎಂಬ ಸಮಸ್ಯೆಯನ್ನು ನೋಡುವವರ ಮುಂದಿಡುತ್ತದೆ.

(ಎ.ಎನ್.ಎಸ್.ಐ.)

**ಜರತಾರಿ ಕೆಲಸ :** ಪ್ರಮುಖವಾಗಿ ಚಿನ್ನ ಬೆಳ್ಳಿ ಎಳೆಗಳನ್ನು ವಿವಿಧ ನಮೂನೆಗಳಲ್ಲಿ ಹೆಣೆದುಕೊಂಡು ನಯನಮನೋಹರವಾದ ವಸ್ತ್ರಗಳನ್ನು ತಯಾರಿಸುವ ಕೆಲಸ. ಕೈಮಗ್ಗದ ಕೆಲಸಗಳಲ್ಲಿ ನಿಷ್ಣಾತರಾಗಿದ್ದ ಹಾಗೂ ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ್ದ ಪ್ರಾಚೀನ ಜನಾಂಗಗಳು ಜರತಾರಿ ಕೆಲಸಕ್ಕೆ ಸಂಬಂಧಿಸಿದಂತೆ ಅನೇಕ ಮಾದರಿಯ ವಸ್ತ್ರಗಳನ್ನು ತಯಾರಿಸಿದ್ದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಇಂಥ ಎಳೆಗಳನ್ನು ಉಪಯೋಗಿಸಿ ಮೊದಲಿಗೆ ಪರ್ಷಿಯನ್ನರು ವೈಭವೋಪೇತ ರತ್ನಗಂಬಳಿಗಳನ್ನು ತಯಾರಿಸುತ್ತಿದ್ದರು. ಪ್ರಾಚೀನ ಭಾರತೀಯರು ಜರತಾರಿ ಕೆಲಸದಲ್ಲಿ ಎಷ್ಟರಮಟ್ಟಿಗೆ ಸಿದ್ಧಹಸ್ತರಾಗಿದ್ದರು ಎಂಬುದರ ಬಗ್ಗೆ ಭಾರತೀಯ ಪುರಾಣಗಳಲ್ಲಿ ಕಂಡುಬರುವ ರಾಜಮಹಾರಾಜರುಗಳ ವೇಷಭೂಷಣಗಳ ವರ್ಣನೆಗಳೇ ಸಾಕು.

ಜರತಾರಿ ಕೆಲಸವನ್ನು ಸಾಮಾನ್ಯವಾಗಿ ಕಲಾಬತಿನ ಕೆಲಸವೆಂತಲೂ ಕರೆಯುವುದಿದೆ. ಜರಿಯೇ ಮುಂತಾದ ಸಿಂಗಾರ ಪಟ್ಟಿಕೆಗಳನ್ನು ವಸ್ತ್ರ ನೇಯುವಾಗಲೇ ಅಳವಡಿಸಿಕೊಂಡು ಅಲಂಕಾರಕ್ಕಾಗಿ ಮಾಡುವ ದಾರದ ಚಿತ್ರಕೆಲಸ ಕಸೂತಿಯಲ್ಲಿ ಮತ್ತು ಚಿನ್ನ ಮತ್ತು ಬೆಳ್ಳಿಯ ಎಳೆಗಳನ್ನು ಅಡ್ಡೆಳೆಗಳಾಗಿ ಉಪಯೋಗಿಸಿ ಭಾರವೂ ಅಮೂಲ್ಯವೂ ಆದ ವಿಶಿಷ್ಟ ಬಗೆಯ ಬಟ್ಟೆ ಕಿಂಕಾಪನ್ನು ತಯಾರಿಸುವುದರಲ್ಲಿ ಜರತಾರಿಯ ಮಹತ್ತ್ವ ಎದ್ದು ಕಾಣುತ್ತದೆ. ಸಾಮಾನ್ಯವಾಗಿ ಜರತಾರಿ ಎಳೆಯ ಒಳ ಎಳೆ ಲಿನನ್ನಿನಿಂದಾಗಿರುತ್ತದೆ. ಈ ಒಳ ಎಳೆಯ ಮೇಲೆ ಶುದ್ಧ ಚಿನ್ನದ ಹೊದಿಕೆ ಇರುತ್ತದೆ. ಮಧ್ಯಯುಗದಲ್ಲಿ ಚಿನ್ನವನ್ನು ಮೊದಲು ತೆಳುಹಾಳೆಯಾಗಿ ತಟ್ಟಿಕೊಂಡು, ಅನಂತರ ಅದನ್ನು ಕಿರಿಯಗಲದ ಎಳೆಗಳ ರೂಪದಲ್ಲಿ ಕತ್ತರಿಸಲಾಗುತ್ತಿತ್ತು. ರೇಷ್ಮೆ ಇಲ್ಲವೆ ಲಿನನ್ನಿನ ಒಳ ಎಳೆಯ ಮೇಲೆ ಈ ಚಿನ್ನದ ಎಳೆಗಳನ್ನು ಹೊದಿಸಲಾಗುತ್ತಿತ್ತು. ಈಚಿನ ವರ್ಷಗಳಲ್ಲಿ ಶುದ್ಧ ರೇಷ್ಮೆ ಇಲ್ಲವೆ ವಿಸ್ಕೋಸ್ ರೇಯಾನನ್ನು ಒಳ ಎಳೆಯಾಗಿ ಉಪಯೋಗಿಸಿಕೊಂಡು ಬೆಳ್ಳಿ ಅಥವಾ ಬೆಳ್ಳಿಲೇಪಿತ ತಾಮ್ರದ ತಂತಿಯನ್ನು ಬಣ್ಣಗಚ್ಚಾಗಿಯೂ ಬಳಸಿಕೊಂಡು ಚಿನ್ನದ ಎಳೆಗಳನ್ನು ತಯಾರಿಸಲಾಗುತ್ತಿದೆ. ಸೂಕ್ತ ವ್ಯಾಸದ ಲೋಹದ ತಂತಿಯನ್ನು ಮೊದಲು ತಯಾರಿಸಿಕೊಂಡು ಅನಂತರ ಅದನ್ನು ಅಧಿಕ ಹೊಳಪುಳ್ಳ ಸ್ಟೇನ್‌ಲೆಸ್ ಉಕ್ಕಿನ ಉರುಳೆಗಳ ನಡುವೆ ಹಾಯಿಸಿ, ಚಪ್ಪಟೆ ಎಳೆಗಳನ್ನು (ಲ್ಯಾಮೆಟ) ಮಾಡುತ್ತಾರೆ. ಕೆಂಪು ಅಥವಾ ಕಿತ್ತಲೆ ಬಣ್ಣ ಕೊಟ್ಟಿರುವ ಶುದ್ಧ ರೇಷ್ಮೆಯ ಇಲ್ಲವೆ ವಿಸ್ಕೋಸ್ ರೇಯಾನಿನ ಒಳ ಎಳೆಯ ಮೇಲೆ ಇದನ್ನು ಸುತ್ತಲಾಗುತ್ತದೆ.

ಚಿನ್ನದ ಇಲ್ಲವೆ ಬೆಳ್ಳಿಯ ಎಳೆಗಳಲ್ಲಿ ಮೂರು ಬಗೆಗಳುಂಟು:

1 ಶುದ್ಧ ರೇಷ್ಮೆ ಒಳ ಎಳೆಯನ್ನು ಹೊಂದಿರುವ ಶುದ್ಧ ಚಿನ್ನದ ಇಲ್ಲವೇ ಚಿನ್ನದ ಲೇಪವನ್ನು ಹೊಂದಿರುವ ಬೆಳ್ಳಿಯ ಎಳೆ.

2 ರೇಷ್ಮೆಯ ಒಳ ಎಳೆಯ ಮೇಲೆ ಬೆಳ್ಳಿಲೇಪಿತ ತಾಮ್ರದ ಹೊದಿಕೆ. ಈ ಹೊದಿಕೆಗೆ ಚಿನ್ನದ ಲೇಪ ನೀಡಲಾಗಿರುತ್ತದೆ. ಇದು ಅರೆಶುದ್ಧ ಚಿನ್ನದ ಎಳೆ.

3 ನಕಲಿ ಚಿನ್ನದ ಎಳೆ (ಪುಡಿ ಗುಣಮಟ್ಟದ್ದು). ಇದರಲ್ಲಿ ರೇಯಾನಿನ ಒಳಎಳೆ ಇರುತ್ತದೆ. ಅದರ ಮೇಲೆ ಬೆಳ್ಳಿಯನ್ನು ಲೇಪನ ಮಾಡಿರುವ ತಾಮ್ರದ ಹೊದಿಕೆ ಉಂಟು. ಈ ಹೊದಿಕೆಯ ಮೇಲೆ ರಾಳದ ಲೇಪನವಿರುತ್ತದೆ. ಇದೇ ಅತ್ಯಂತ ಕಡಿಮೆ ಬೆಲೆಯ ಚಿನ್ನದ ಎಳೆ.

ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದ ಇನ್ನಿತರ ರಾಷ್ಟ್ರಗಳಲ್ಲೂ ಹಬ್ಬ–ಹರಿದಿನಗಳ ಸಂದರ್ಭಗಳಲ್ಲಿ ಶ್ರೀಮಂತರಾದಿಯಾಗಿ ಎಲ್ಲರೂ ಅವರವರ ಯೋಗ್ಯತೆಗೆ ತಕ್ಕಂತೆ ಚಿನ್ನಬೆಳ್ಳಿಯ ಕಲಾಬತ್ತಿನ ಬಣ್ಣಬಣ್ಣದ ಉಡುಗೆಗಳನ್ನು ಉಡುತ್ತಾರೆ. ಧರ್ಮಾವರಂ ಮತ್ತು ಕಾಂಜೀವರಂಗಳಲ್ಲಿ ಶುದ್ಧ ರೇಷ್ಮೆ ಸೀರೆಗಳ ಅಂಚು ಮತ್ತು ಸೆರಗನ್ನು ಚಿನ್ನದ ಕಲಾಬತ್ತು ಅಥವಾ ಎಳೆಗಳನ್ನು ಬಳಸಿ ನೇಯುತ್ತಾರೆ. ಚೌಕಳಿ ಮಾದರಿಯ ಸೀರೆ ಹಾಗೂ ಒಡಲಿನಲ್ಲೆಲ್ಲ ಚಿತ್ತಾರಗಳನ್ನು ಹೊಂದಿರುವ ಬುಟ್ಟಾ ಸೀರೆಗಳನ್ನು ನೇಯುವುದೂ ಉಂಟು. ಸುಪ್ರಸಿದ್ಧ ಮೈಸೂರು ಪೇಟವನ್ನು ನೇಯುವಾಗ ಹಾಸು ಎಳೆಯಾಗಿ ಉತ್ತಮ ನೂಲನ್ನೂ, ಪಟ್ಟಿಯಂತೆ ಬರುವ ಹೊಕ್ಕು ಎಳೆಯ ಜಾಗದಲ್ಲಿ ಚಿನ್ನದ ಎಳೆಯನ್ನೂ ಬಳಸುತ್ತಾರೆ. ಜರತಾರಿ ವಸ್ತ್ರಗಳಲ್ಲಿ ವಾರಾಣಸಿಯ ಮತ್ತು ಅಹಮದಾಬಾದಿನ ಕಿಂಕಾಪು ವಸ್ತ್ರಗಳೂ ಸೇರಿವೆ. ರೇಷ್ಮೆ, ಚಿನ್ನ ಮತ್ತು ಬೆಳ್ಳಿಯ ಎಳೆಗಳನ್ನು ಬಳಸಿ ಇವುಗಳನ್ನು ನೇಯಲಾಗುತ್ತದೆ. ಟಿಷ್ಯು ಅಥವಾ ನವಿರು ಸೀರೆಗಳಲ್ಲಿ ಬಣ್ಣದ ರೇಷ್ಮೆ ಎಳೆಯನ್ನು ಹಾಸಾಗಿಯೂ ಚಿನ್ನದ ಎಳೆಯನ್ನು ಹೊಕ್ಕಾಗಿಯೂ ಬಳಸುತ್ತಾರೆ. ಭಾರತದಲ್ಲಿನ ಕೈಮಗ್ಗದ ಕೇಂದ್ರಗಳಲ್ಲಿ ಇಂಥ ಜರತಾರಿ ವಸ್ತ್ರಗಳ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜರತಾರಿಯನ್ನು ಬಳಸುವ ಮತ್ತೊಂದು ಕ್ಷೇತ್ರವೆಂದರೆ ಕಸೂತಿಯದು. ಭಾರತದ ಕಾಶ್ಮೀರ, ರಾಜಸ್ಥಾನ, ಗುಜರಾತ್ ಮುಂತಾದ ಕಡೆಗಳಲ್ಲಿರುವ ಮಹಿಳೆಯರು ಪರಂಪರಾಗತವಾಗಿ ಈ ಕೆಲಸದಲ್ಲಿ ತೊಡಗಿದ್ದಾರೆ.

ಜಗತ್ತಿನ ಬಹುತೇಕ ಪ್ರಸಿದ್ಧ ವಸ್ತುಸಂಗ್ರಹಾಲಯಗಳಲ್ಲಿ ಬಣ್ಣದ ನೂಲು, ಚಿನ್ನದ ಹಾಗೂ ಬೆಳ್ಳಿಯ ಕಲಾಬತ್ತನ್ನು ಬಳಸಿ ಅದ್ಭುತವಾಗಿ ನೆಯ್ದಿರುವ ಆಧುನಿಕ ಹಾಗೂ ಸಾಂಪ್ರದಾಯಿಕ ವಸ್ತ್ರಗಳ ಸುಂದರ ಸಂಗ್ರಹ ಕಾಣಬರುತ್ತದೆ. **ನೋಡಿ– ಕಲಾಬತು, ಕಸೂತಿ, ಕಿಂಕಾಪು.** (ವಿ.ಎಸ್.ವಿ.)

**ಝ಼ರತುಷ್ಟ್ರ :** ಪ್ರಾಚೀನ ಇರಾನೀ ಜನರ ಪ್ರವಾದಿ. ಗ್ರೀಕ್ ಮತ್ತು ಇತರ ಐರೋಪ್ಯ ಭಾಷೆಗಳಲ್ಲಿ ಈತನನ್ನು ಝ಼ೋರೋ ಆಸ್ಟರ್ ಎನ್ನಲಾಗಿದೆ.

ಈತನ ಕಾಲವೂ ವೈದಿಕ ಋಷಿಮುನಿಗಳ ಕಾಲ ಹೇಗೋ ಹಾಗೆ ನಿಖರವಾಗಿ ತಿಳಿದುಬಂದಿಲ್ಲ. ಕ್ರಿಸ್ತನಿಗಿಂತ ಈತ 5000 ವರ್ಷಗಳಷ್ಟು ಹಿಂದಿನವನಿದ್ದಿರಬೇಕೆಂದು ವಿದ್ವಾಂಸರ ಊಹೆ.

ಝ಼ರತುಷ್ಟ್ರ ವೀರಕ್ಷತ್ರಿಯರ ಪವಿತ್ರ ಕುಟುಂಬದಲ್ಲಿ ಜನಿಸಿದ. ತಾಯಿ ದುಗ್ಧಾ. ಕನ್ಯಾವಸ್ಥೆಯಲ್ಲಿದ್ದ ಆಕೆಯ ಗರ್ಭವನ್ನು ಜ್ಯೋತಿಕಿರಣವೊಂದು ಪ್ರವೇಶಿಸಿತು. ಗರ್ಭವತಿಯಾದಳು. ಹೂಮೊಗದ ಹಸುಗೂಸು ಹುಟ್ಟಿತು. ಹುಟ್ಟುತ್ತಲೇ ನಸುನಕ್ಕಿತು. ಝ಼ರತುಷ್ಟ್ರ ಹುಟ್ಟಿದಾಗಲೇ ನಕ್ಕ ಏಕೈಕ ಮಾನವ. ಹದಿನೈದನೆಯ ವರ್ಷಕ್ಕಾಗಲೇ ಅವನಿಗೆ ವೈರಾಗ್ಯ ಮೂಡಿತು. ಮಾನವನ ಅಸ್ತಿತ್ವದ ರಹಸ್ಯವನ್ನರಿಯುವ ಗಹನ ಚಿಂತನೆಯಲ್ಲಿ ಧ್ಯಾನಮಗ್ನನಾಗಿ ಏಳು ವರ್ಷ ಏಕಾಂತ ವಾಸಮಾಡಿದ. ಮದುವೆ ಆಯಿತು. ಮೂರು ಜನ ಹೆಂಡತಿಯರು. ಮೂರು ಹೆಣ್ಣು, ಮೂರು ಗಂಡು ಮಕ್ಕಳು. ಕೊನೆಗೆ ಎಲ್ಲವನ್ನೂ ಬಿಟ್ಟು ವರ್ಷಗಟ್ಟಲೆ ಕಾಡಿನಲ್ಲಿದ್ದುಕೊಂಡು ಹಾಲುಕೆನೆಯಿಂದಲೇ ಜೀವನ ನಿರ್ವಹಣೆ ಮಾಡಿ, ಕೊನೆಗೆ ಏಲ್‌ಬುರ್ಜ್ ಗುಡ್ಡದ ಮೇಲೆ ಕಾಲದ ಪರಿವೆ ಇಲ್ಲದೆ ಧ್ಯಾನಮಗ್ನನಾಗಿ ಕುಳಿತುಬಿಟ್ಟ. ಅಹ್ರಿಮನ್ ಎಂಬ ದುಷ್ಟಶಕ್ತಿ ಆತನಿಗೆ ದುರಾಶೆ ತೋರಿಸಿ ವಿಚಲಿತನನ್ನಾಗಿ ಮಾಡಲು ಯತ್ನಿಸಿ ಸೋತು ಹಿಂತಿರುಗಿತು. ಝ಼ರತುಷ್ಟ್ರ ಗೆದ್ದ. ಜ್ಞಾನೋದಯವಾಯಿತು. ಅದು ಅವನ ಆತ್ಮವನ್ನು ಅಹುರಮಜ್ದ ಸನ್ನಿಧಿಗೊಯ್ಯಿತು. ಹೇ ಮಜ್ದ, ಪ್ರಪ್ರಥಮವಾಗಿ ನನ್ನ ಧ್ಯಾನದಲ್ಲಿ ನಿನ್ನ ಕಲ್ಪನೆ ಮಾಡಿಕೊಂಡಾಗ ಶುದ್ಧ ಹೃದಯದಿಂದ ನಾನು ನಿನ್ನನ್ನು ವಿಶ್ವದ ಪ್ರಥಮ ಅಭಿನೇತೃವೆಂದು ನಂಬಿದೆ. ವಿವೇಕದ ಜನಕ ನೀನು; ಸದಾಚಾರದ ಮಾನವ ಚಟುವಟಿಕೆಗಳ ನಿಯಂತ್ರಕ ನೀನು–ಎಂದು ಝ಼ರತುಷ್ಟ್ರ ಹೊಗಳಿದ.

ಜ್ಞಾನಿ ಝ಼ರತುಷ್ಟ್ರ ಹೊರಲೋಕದಲ್ಲೀಗ ಅಡ್ಡಾಡಿದ. ಜನಕ್ಕೆ ಧರ್ಮಬೋಧನೆ ಮಾಡಿದ. ಧರ್ಮ ಮತ್ತು ಅಧರ್ಮಗಳ ಹೋರಾಟ ನಿರಂತರವೆಂದೂ ಅದರಲ್ಲಿ ಧರ್ಮಕ್ಕೆ ಅಂತಿಮ ಜಯ ಎಂದೂ ತಿಳಿಸಿದ. ಆ ಕಾಲದ ಖಳ ಸ್ವಭಾವದ ದೊರೆಯೊಬ್ಬ ಈತನಿಗೆ ಚಿತ್ರಹಿಂಸೆಯನ್ನಿತ್ತನಂತೆ. ಭರ್ಜಿಗಳಿಂದ ಗಾಯಗೊಳಿಸಿ, ಕುದುರೆಗಳಿಂದ ಗೂಳಿಗಳಿಂದ ತುಳಿಸಿ, ಅಗ್ನಿದಿವ್ಯಕ್ಕೆ ಒಡ್ಡಿದಾಗಲೂ ಝ಼ರತುಷ್ಟ್ರ ಸೋಲದೆ ಕಾಯ್ದ ಹಿತ್ತಾಳೆಯಂತೆ ತೊಳಗಿ ಬೆಳಗಿದನೆನ್ನಲಾಗಿದೆ.

ಸುಮಾರು ಐವತ್ತು ವರ್ಷಗಳ ಕಾಲ ಜ಼ರತುಷ್ಟ್ರ ತನ್ನ ಮತಪ್ರಚಾರ ಮಾಡಿದ. ಈತನ ಮತ ಜ಼ರತುಷ್ಟ್ರ ಮತವೆಂದು ಪ್ರಸಿದ್ಧವಾಗಿದೆ. (ಸಿ.ಜಿ.ಪಿ.; ಬಿ.ಎಸ್.ಎನ್.)

**ಜ಼ರತುಷ್ಟ್ರ ಮತ :** ಪ್ರಾಚೀನ ಪರ್ಷಿಯನ್ ಸಾಮ್ರಾಜ್ಯರ ಸೌಭಾಗ್ಯದ ದಿನಗಳಲ್ಲಿ ಪಶ್ಚಿಮ ಏಷ್ಯದಲ್ಲಿ ಅತ್ಯಂತ ಪ್ರಬಲವಾಗಿದ್ದ ಮತ. ಇದು ಮಿತ್ರಾಯಿಸಂ ಎಂಬ ರೂಪದಲ್ಲಿ ರೋಮನ್ ಸಾಮ್ರಾಜ್ಯದ ವಿಶಾಲ ಪ್ರದೇಶಗಳಲ್ಲಲ್ಲದೆ ದೂರದ ಬ್ರಿಟನ್ನಿನವರೆಗೂ ಹರಡಿತ್ತು. ಜ಼ರತುಷ್ಟ್ರ (ಜ಼ೋರೋ ಆಸ್ಟರ್) ಎಂಬಾತನಿಂದ ಪ್ರವೃತ್ತವಾದ ಈ ಮತವನ್ನು ಪಾಶ್ಚಾತ್ಯರು ಸಾಮಾನ್ಯವಾಗಿ ಜ಼ೋರೋ ಆಸ್ಟ್ರಿಯಾನಿಸಂ ಎನ್ನುತ್ತಾರಾದರೂ ಮಜ್ದಯಾಸ್ನಿಸಂ ಎಂದು ಇದನ್ನು ಹೇಳುವುದು ಹೆಚ್ಚು ಯುಕ್ತವೆನಿಸುತ್ತದೆ. ಹೀಗೆಂದರೆ ಅಹುರಮಜ್ದ ಎಂಬ ಏಕೈಕ ದೇವತೆಯ ಉಪಾಸನೆ ಎಂದು ಅರ್ಥ. ಜ಼ರತುಷ್ಟ್ರ ಮತವೆಂದರೆ ಅಗ್ನಿಪೂಜೆಯೆಂದು ಭಾವಿಸುವುದು ರೂಢಿಯಾದರೂ ಅದು ತಪ್ಪು ತಿಳಿವಳಿಕೆ. ಏಕೆಂದರೆ ಈ ಮತದವರು ಅಗ್ನಿಯನ್ನು, ಮುಖ್ಯವಾಗಿ ಅದು ಕಾಂತಿಯುಕ್ತವೂ ಪಾವನವೂ ಆಗಿರುವುದೆಂದು ಮಾತ್ರ ಅಹುರಮಜ್ದನ ಪ್ರತೀಕವಾಗಿ ಪೂಜಿಸುತ್ತಾರಷ್ಟೆ.

ಜ಼ರತುಷ್ಟ್ರ ಯಾವಾಗ ಜನ್ಮತಾಳಿದ ಎಂಬಂಶ ಇನ್ನೂ ಚರ್ಚೆಯಲ್ಲಿಯೇ ಇದೆ. ಜ್ಯಾಕ್ಸನ್ ಮತ್ತು ವೆಸ್ಟ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಆತ ಜನ್ಮವೆತ್ತಿದ್ದು ಪ್ರ.ಶ.ಪೂ.660 ರಿಂದ 583ರ ಒಳಗೆ ಎನ್ನುತ್ತಾರೆ. ಆದರೆ ಈ ಕಾಲ ತುಂಬ ಇತ್ತೀಚಿನದು. ಏಕೆಂದರೆ ಪ್ರಾಚೀನ ರೋಮ್ ಸಾಮ್ರಾಜ್ಯದ ಪ್ಲಿನೀ ಎಂಬಾತ ಸಹ ಪ್ಲೇಟೋವಿನ ಮರಣಕ್ಕೆ ಆರು ಸಾವಿರ ವರ್ಷಗಳ ಹಿಂದೆ ಜ಼ರತುಷ್ಟ್ರ ಜೀವಿಸಿದ್ದನೆಂದೂ ನಂಬಿದ್ದ. ಹಿಂದೂಗಳ ವೇದಗಳಿಗೂ ಜ಼ರತುಷ್ಟ್ರ ಗಾದೆಗಳಿಗೂ ಇರುವ ನಿಕಟ ಸಂಬಂಧವನ್ನು ರಿಶೀಲಿಸಿದರೆ, ಜರತುಷ್ಟ್ರ ಕ್ರಿಸ್ತನಿಗಿಂತ ಐದು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದನೆಂದು ಧಾರಾಳವಾಗಿ ಹೇಳಬಹುದು–ಹಿಂದೂ ವಿದ್ವಾಂಸರು ವೇದಗಳು ಇನ್ನೂ ಪ್ರಾಚೀನವೆಂದು ಹೇಳುತ್ತಾರಾದ್ದರಿಂದ, ವೈದಿಕ ಹಿಂದೂ ಮತಕ್ಕೂ ಜ಼ರತುಷ್ಟ್ರ ಮತಕ್ಕೂ ಇರುವ ಸಂಬಂಧ ಯೆಹೂದ್ಯ ಮತಕ್ಕೂ ಕ್ರೈಸ್ತಧರ್ಮಕ್ಕೂ ಇರುವ ಸಂಬಂಧಕ್ಕೆ ಸಮಾನವಾದದ್ದು. ಆರ್ಯರು ಭಾರತಕ್ಕೆ ಸ್ಥಳೀಯರಲ್ಲವೆಂಬುದೂ, ಅವರು ಪುರಾತನ ಕಾಲದಲ್ಲಿ ಆ ದೇಶವನ್ನು ಆಕ್ರಮಿಸಿಕೊಂಡರೆಂಬುದೂ ಎಲ್ಲರೂ ಒಪ್ಪಿರುವ ವಿಷಯ. ಈ ಆಕ್ರಮಣಕ್ಕೆ ಅವರ ಆರ್ಥಿಕ ಪರಿಸ್ಥಿತಿ ಕಾರಣವಾಗಿರಬಹುದು. ಏಕೆಂದರೆ ಭಾರತದ ಫಲವತ್ತಾದ ಬಯಲುಗಳು ಹೊರನಾಡಿನ ವಿಜಿಗೀಷುಗಳನ್ನು ಯಾವಾಗಲೂ ಆಕರ್ಷಿಸುತ್ತಿವೆ. ಅಲ್ಲದೆ, ಮಧ್ಯ ಏಷ್ಯದ ಇರಾನೀ ಆರ್ಯರಿಗೂ ಭಾರತದಲ್ಲಿ ನೆಲೆಗೊಂಡ ಆರ್ಯರಿಗೂ ಮತದ ವಿಷಯದಲ್ಲಿ ಭೇದವುಂಟಾಗಿ ಅದೇ ಕಾರಣಕ್ಕಾಗಿ ಒಂದು ಗುಂಪಿನವರು ವಲಸೆ ಹೋಗಿರಲಿಕ್ಕೂ ಸಾಕು. ಇಬ್ಬರ ಪವಿತ್ರ ಗ್ರಂಥಗಳೂ ಇದನ್ನು ಹೇರಳವಾಗಿ ತೋರಿಕೊಡುತ್ತವೆ. ಇಂದ್ರ, ಮಿತ್ರ, ಅಗ್ನಿ, ಇತ್ಯಾದಿ ವೈದಿಕ ದೇವತೆಗಳು ಇರಾನೀ ದೇವತಾವರ್ಗದಲ್ಲೂ ಕಾಣಿಸಿಕೊಳ್ಳುತ್ತಾರೆ. ಸಂಸ್ಕೃತ ಶಬ್ದಗಳಿಗೂ ತುಂಬ ಹೋಲಿಕೆಯಿದೆ; ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕಾಣಿಸಿದೆ:

| **ಸಂಸ್ಕೃತ** | **ಅವೆಸ್ತ** |
|---|---|
| ವೇದ (ಜ್ಞಾನ) | ಅ–ವೆಸ್ತ(ಜ್ಞಾನ) |
| ಸೋಮ (ಮಾದಕ ರಸ) | ಹೋಮ |
| ಯಜ್ಞ(ಬಲಿದಾನ) | ಯಾಸ್ನ (ಪೂಜೆ, ಮೊರೆ) |
| ಗಾಥಾ (ಹಾಡು) | ಗಾಥಾ |
| ಅಥರ್ವನ್ (ಅಗ್ನಿಪುರೋಹಿತ) | ಅಥ್ರವನ್ |

ವೈದಿಕ ಆರ್ಯರ ಸೋಮಪಾನಕ್ಕೂ ಇರಾನಿಗಳ ಹೋಮಕ್ಕೂ ಸಾಮ್ಯವಿರುವುದು ತುಂಬ ಕುತೂಹಲಜನಕವಾಗಿದೆ. ಇದಕ್ಕಿಂತ ಸ್ವಾರಸ್ಯವಾದ ಅಂಶವೇನೆಂದರೆ, ವೇದದ ಉತ್ತರ ಭಾಗಗಳಲ್ಲಿ ಅಸುರರು ಎಂಬ ಪದ ದೈತ್ಯರೆಂಬರ್ಥದಲ್ಲಿಯೂ, ದೇವರು ಎಂಬ ಶಬ್ದ ಸ್ವರ್ಗದಲ್ಲಿ ನೆಲೆಸಿರುವ ಅಮರಗಣ ಎಂಬರ್ಥದಲ್ಲಿಯೂ ಪ್ರಯುಕ್ತವಾಗಿವೆ. ಆದರೆ ಅವೆಸ್ತದಲ್ಲಿ ದೇವರು ಎಂದರೆ ದೈತ್ಯರೆಂದೇ ಅರ್ಥ ಮತ್ತು ಅಹುರ ಎಂಬುದು ಸರ್ವಶಕ್ತನಾದ ದೇವರ ಹೆಸರು. ವೈದಿಕ ಸಂಪ್ರದಾಯಗಳನ್ನು ಬಿಟ್ಟು ಬೇರೆ ದಾರಿ ಹಿಡಿದು ಹೊಸ ಮತವೊಂದು ಹೊರಟಿರುವುದಕ್ಕೆ ಇದೊಂದು ಹೆಗ್ಗುರುತು. ಮತ್ತು ಇಂಥ ಭಿನ್ನ ಮಾರ್ಗಾನುಸರಣ ಪ್ರಾಯಶಃ ಜ಼ರತುಷ್ಟ್ರ ವಿಗ್ರಹಾರಾಧನೆಯನ್ನೂ ಯಜ್ಞಗಳನ್ನೂ ವಿರೋಧಿಸಿದಂದಿನಿಂದ ಪ್ರಾರಂಭವಾಯಿತೆನ್ನಬೇಕು. ಯಾಸ್ನ 32, 12, ಮತ್ತು 14ರಲ್ಲಿ ಜ಼ರತುಷ್ಟ್ರ ಹರ್ಷೋದ್ಗಾರಗಳಿಂದ ಎತ್ತನ್ನು ಕೊಲ್ಲುವವರ ವಿರುದ್ಧವಾಗಿ ಎತ್ತಿಯಾಡಿದ್ದಾನೆ. ಮಾರ್ಖಾಂ ಎಂಬ ವಿದ್ವಾಂಸ ಹೇಳಿರುವ ಹಾಗೆ ತನ್ನ ಇತಿಹಾಸದಲ್ಲಿ ಯಾವ ಕಾಲದಲ್ಲಾಗಲಿ ಎಂದಿಗೂ ಎಂಥ ವಿಗ್ರಹವನ್ನೂ ಪೂಜಿಸದಿರುವ ಒಂದೇ ಒಂದು ದೇಶವೆಂದರೆ ಪರ್ಷಿಯವೇ. ಒಂದು ಮಾತಿನಲ್ಲಿ ಹೇಳಬಹುದಾದರೆ ವಿಗ್ರಹಾರಾಧನೆ, ಯಜ್ಞಾದಿಗಳಲ್ಲಿ ವಿಶೇಷಾಭಿಮಾನ ಮತ್ತು ಪೌರೋಹಿತ್ಯಗಳ ವಿರುದ್ಧವಾಗಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ತಂದು ಏಕದೈವೋಪಾಸನೆಯನ್ನು ಪ್ರಚುರಗೊಳಿಸಿ, ಉನ್ನತ ನೈತಿಕ ಜೀವನವನ್ನು ಉಪದೇಶಿಸುವ ಹೊಣೆ ಹೊತ್ತ. ತನ್ನ ಗಾಥೆಗಳಲ್ಲಿ ಕರ್‌ಪಾನ್‌ಗಳ ಮತ್ತು ಕವಿಗಳ ವಿಷಯದಲ್ಲಿ ವ್ಯಕ್ತಪಡಿಸಿರುವ ಖಂಡನೆಗಳಿಂದ ಈ ವಿರೋಧ ವಿಶದವಾಗಿರುತ್ತದೆ. ಕರಪಾನ್ ಎಂಬ ಶಬ್ದ ಸಂಸ್ಕೃತದ ಕಲ್ಪ ಎಂಬುದಕ್ಕೆ ಸಂಬಂಧಿಸಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಪ್ರಕಾರ ಕರ್‌ಪಾನ್ ಎಂಬ ಶಬ್ದದಿಂದ ಯಜ್ಞಾದಿವಿಧಿಗಳಿಗೂ ವ್ರತಗಳಿಗೂ ಅಂಟಿಕೊಂಡಿರುವ ಮಾಟಗಾರ ಎಂಬ ಅರ್ಥ ಹೊರಡುವಂತಿದೆ. ಕವಿ ಎಂಬ ಶಬ್ದಕ್ಕೆ ಅದು ಕವಿಗಳಿಗೂ ರಾಜರಿಗೂ ಅನ್ವಯವಾಗುವಾಗ ಕೆಟ್ಟರ್ಥವಿಲ್ಲ. ಆದರೆ ಈ ಶಬ್ದವನ್ನು ಪುರೋಹಿತನಿಗೂ ಅನ್ವಯಿಸುತ್ತಿದ್ದರು. ಆ ಕಾರಣದಿಂದ ಜ಼ರತುಷ್ಟ್ರನಿಗೆ ಅದು ರುಚಿಸಲಿಲ್ಲ. ಗಾಥೆಗಳು ಮಾತ್ರ ಆತನ ಸ್ವಂತ ಕೃತಿ ಎಂದು ಹೇಳಲಾಗಿದೆ. ಅವುಗಳಲ್ಲಿ ಆತನ ಆಶಾಭಂಗಗಳು ಧರ್ಮಪ್ರಚಾರಕಾರ್ಯಗಳು ಮತ್ತು ಆ ಕಾಲದ ಸಮಾಜ–ಇವುಗಳ ವಿಶದವಾದ ಚಿತ್ರಗಳಿವೆ.

ಹೀಗೆ ವೈದಿಕ ಹಿಂದೂ ಮತಕ್ಕೂ ಜ಼ರತುಷ್ಟ್ರ ಮತಕ್ಕೂ ಸಾವಿರಾರು ವರ್ಷಗಳ ಸಂಬಂಧವಿದೆ. ಮುಸ್ಲಿಮರು ಪರ್ಷಿಯವನ್ನು ಜಯಿಸಿದ ಬಳಿಕ ಜ಼ರತುಷ್ಟ್ರ ಮತದ ಕೆಲವರು ತಮ್ಮ ತಾಯಿನಾಡನ್ನು ತ್ಯಜಿಸಿ ಗುಜರಾತಿನ ನೆಲದಲ್ಲಿ ಆಶ್ರಯವನ್ನು ಪಡೆದುದರ ಪರಿಣಾಮವಾಗಿ ಈ ಹಳೆಯ ಸಂಬಂಧ ಕೆಲವು ಶತಮಾನಗಳ ಅನಂತರ (ಪ್ರ.ಶ.ಸು.717) ಪುನರುಜ್ಜೀವನಗೊಂಡಿತು.

ಸಂನ್ಯಾಸವನ್ನು ಬೋಧಿಸದ ಮಹಾಮತಗಳಲ್ಲಿ ಜ಼ರತುಷ್ಟ್ರ ಮತ ಪ್ರಮುಖವಾದುದು. ಅದು ಆಜೀವ ಬ್ರಹ್ಮಚರ್ಯವನ್ನು ಉಪದೇಶಿಸುವುದಿಲ್ಲ. ಬಹುಪತ್ನೀತ್ವಕ್ಕೆ ಅಲ್ಲಿ ಅವಕಾಶ ವುಂಟು. ಜ಼ರತುಷ್ಟ್ರನೇ ಮೂರು ಸಲ ಮದುವೆಯಾದನೆಂದು ಸಂಪ್ರದಾಯ ತಿಳಿಸುತ್ತದೆ. ಸಂತಾನವಿಲ್ಲದ ವಿಧವೆ ತನ್ನ ಗಂಡನ ತಮ್ಮನನ್ನು ಮದುವೆಯಾಗುವುದು ಸಾಮಾನ್ಯವಾದ ವಾಡಿಕೆಯಾಗಿತ್ತು. ವೆಂಡೀಡಾಡ್ ಎಂಬ ಜ಼ರತುಷ್ಟ್ರ ಮತದ ಅರ್ವಾಚೀನ ಪವಿತ್ರ ಗ್ರಂಥ ಸಂನ್ಯಾಸವನ್ನು ವಿರೋಧಿಸುವ ವಾದವನ್ನು ತುಂಬ ಸಮರ್ಥವಾಗಿ ಎತ್ತಿ ಹಿಡಿದಿದೆ:

ಸತ್ಯವಾಗಿ ನಿನಗೆ ನಾನು ಹೇಳುವುದಿಷ್ಟು. ಹೆಂಡತಿಯೊಂದಿಗಿರುವವ ಮದುವೆಯಿಲ್ಲದ ಬ್ರಹ್ಮಚಾರಿಗಿಂತ ತುಂಬ ಮೇಲು. ಮನೆಯಿಲ್ಲದವನಿಗಿಂತ ಮನೆಯುಳ್ಳವ ತುಂಬ ಲೇಸು. ಮಕ್ಕಳಿದ್ದವ ಮಕ್ಕಳಿಲ್ಲದವನಿಗಿಂತ ತುಂಬ ಉತ್ತಮ. ಐಶ್ವರ್ಯವಂತ ನಿರ್ಗತಿಕನಿಗಿಂತ ತುಂಬ ಶ್ರೇಷ್ಠ.

ಇಬ್ಬರಲ್ಲಿ ಯಾವನೊಬ್ಬನಿಗೆ ತುಂಬ ದನದ ಕೊಟ್ಟಿಗೆಗಳಿವೆಯೋ ಅವನು ತನ್ನ ವೋಹು ಮನೋವಿಗೆ (ಎಂದರೆ ಸನ್ಮನಸ್ಸಿಗೆ) ಇನ್ನೊಬ್ಬನಿಗಿಂತ ಹೆಚ್ಚು ಆಸ್ಪದವಾಗುತ್ತಾನೆ. ಮತ್ತೊಬ್ಬ ಸತ್ತವನಂತೆಯೇ ಸರಿ; ಮುಂಚಿನವನು ಇವನಿಗಿಂತ ಒಂದು ಆಸ್ಪರಾನಾದಷ್ಟು (ಎಂದರೆ ಒಂದು ದಿರ್ ಹೀನ್ ಎಂಬ ಪರ್ಷಿಯದ ನಾಣ್ಯದಷ್ಟು) ಬೆಲೆಯಲ್ಲಿ ಉತ್ತಮ, ಒಂದು ಕುರಿಯ ಬೆಲೆಯಷ್ಟು, ಒಂದು ಎತ್ತಿನ ಬೆಲೆಯಷ್ಟು, ಒಬ್ಬ ಮನುಷ್ಯನ ಬೆಲೆಯಷ್ಟು ಶ್ರೇಷ್ಠ. ಈ ಮನುಷ್ಯ ಅಸ್ಟೋಜಿವಿಧೋತುವಿನೊಡನೆ (ಮೃತ್ಯುದೇವತೆ) ಹೋರಾಡಬಲ್ಲ. ಗರಿಗೂಡಿದ ಅಂಬಿನ ಇದಿರು ಸ್ಪರ್ಧಿಸಬಲ್ಲ. ಒಂದು ತೆಳ್ಳನೆಯ ಬಟ್ಟೆಯನ್ನು ಹೊದೆದು ಚಳಿಗಾಲದ ದೆವ್ವದೊಡನೆ ಸೆಣಸಬಲ್ಲ; ಕೆಟ್ಟ ಪ್ರಜಾಪೀಡಕ ಅಪರಾಜನ ವಿರುದ್ಧ ಎದ್ದು ನಿಂತು ಅವನ ತಲೆಯ ಮೇಲೆ ಹೊಡೆಯಬಲ್ಲ. ಅಷೆಮಓಗ ಎಂಬ ಉಪವಾಸದ ದುರ್ದೈವದೊಡನೆ ಕಾಳಗವೆಸಗಬಲ್ಲ.

ಜ಼ರತುಷ್ಟ್ರ ಮತ ಉಪವಾಸವನ್ನು ಬೋಧಿಸುವುದಿಲ್ಲ. ಮತಪ್ರಕ್ರಿಯೆಗಳಲ್ಲಿ ಸಹ ಮದ್ಯಪಾನವುಂಟು. ಆತನ ನೀತಿಬೋಧೆಯನ್ನು ಸೂಕ್ಷ್ಮವಾಗಿ ಮೂರು ಮಾತುಗಳಲ್ಲಿ ಹೇಳಬಹುದು. ಹೂಮ್ತ, (ಒಳ್ಳೆ ಭಾವನೆಗಳು). ಹೂಕ್ತ (ಒಳ್ಳೆ ಮಾತುಗಳು), ಹೂವೆರೆಷ್ಟ (ಒಳ್ಳೆ ಕ್ರಿಯೆಗಳು). ಜ಼ರತುಷ್ಟ್ರ ಮತದವರ ಮತ್ತೊಂದು ಪವಿತ್ರ ಗ್ರಂಥ ದಿನ್‌ಕಾರ್ಡ್ ಎಂಬುದು ಏನು ಹೇಳುತ್ತದೆಯೆಂದರೆ, ಮನುಷ್ಯರು ಒಬ್ಬರನ್ನೊಬ್ಬರು ತಮ್ಮ ಶಕ್ತಿ ಸಾಮರ್ಥ್ಯಗಳಿದ್ದಷ್ಟೂ ಪ್ರೀತಿಸುತ್ತ ಉಪಕರಿಸುತ್ತಿದ್ದರೆ ಅವರಿಗೆ ತುಂಬ ಸುಖವುಂಟಾಗುತ್ತದೆ ಎಂದು. ಈ ನಿರ್ದೇಶವೇ ದಾನಧರ್ಮಗಳಿಗೆ ತಳಹದಿಯಾಗಿದೆ. ಪಾರ್ಸಿಗಳೆಂದರೆ ದಾನಿಗಳು ಎಂಬಷ್ಟರಮಟ್ಟಿಗೆ ಆಗಲು ಇದೇ ಕಾರಣ. ಭಾರತದಲ್ಲಿನ ಅನೇಕ ಪಾರ್ಸಿಗಳಲ್ಲಿ ಈ ಗುಣದ ಉತ್ಕರ್ಷವನ್ನು ಇಂದಿಗೂ ಕಾಣಬಹುದಾಗಿದೆ.

ಆರ್‌ದ್ವಿರಾಫ್‌ನಾಮೆ ಹೇಳುತ್ತದೆ: ಇರುವುದು ಒಂದೇ ಒಂದು ಮಾರ್ಗ; ಅದಾವುದೆಂದರೆ ಸದ್ವರ್ತನೆ. ನೈರ್ಮಲ್ಯ ಅತ್ಯಂತ ಮುಖ್ಯವಾದುದೆಂದು ಒತ್ತಿ ಒತ್ತಿ ಹೇಳಲಾಗಿದೆ. ಜ಼ರತುಷ್ಟ್ರನಾಚೆಗಿನ ವೆಂಡೀಡಾಡ್ ಎಂಬುದು ಹೀಗೆ ಹೇಳುತ್ತದೆ: ಪ್ರಾಣದ ಬಳಿಕ ಮನುಷ್ಯರಿಗೆ ಅತ್ಯಂತ ಹಿತವಾದುದು ಯಾವುದೆಂದರೆ ನೈರ್ಮಲ್ಯ. ಓ ಜ಼ರತುಷ್ಟ್ರ, ಮರ್‌ಜ್ದನ ಮತದಲ್ಲಿರುವ ಪಾವನತ್ವ ಯಾರಿಗೆ ಲಭಿಸುತ್ತದೆ ಎಂದರೆ, ಸತ್ಕರ್ಮಗಳಿಂದ, ಸದ್‌ವಾಕ್ಯಗಳಿಂದ ಮತ್ತು ಸತ್‌ಕಾರ್ಯಗಳಿಂದ ಯಾವನು ತನ್ನನ್ನು ಶುದ್ಧಿಗೊಳಿಸಿಕೊಳ್ಳುತ್ತಾನೋ ಅಂಥವನಿಗೆ ಜ಼ರತುಷ್ಟ್ರನ ಗಾಥೆಗಳು ಭೂವ್ಯವಸಾಯವನ್ನು ಶ್ರದ್ಧೆಯಿಂದಲೂ ಮಮತೆಯಿಂದಲೂ ಕಾಣುತ್ತಿದ್ದ ಸಮಾಜದ ಸ್ಥಿತಿಗತಿಗಳ ಚಿತ್ರವನ್ನು ಕೊಡುತ್ತವೆ. ಮನುಷ್ಯಪಾಲಿತವಾದ

ಸಾಧುಪ್ರಾಣಿಗಳ ಹಿಂಡುಗಳೊಂದಿಗೂ ಮಂದೆಗಳೊಂದಿಗೂ ಅದರ ಸಂಪರ್ಕ ತೀರ ಹತ್ತಿರದ್ದು. ಹಸುವಿನ ವಿಷಯದಲ್ಲಿ ಆ ಜನಕ್ಕಿರುವ ಪೂಜ್ಯ ಭಾವನೆಗೆ ಇದು ಕಾರಣವಾಯಿತು. ಬೆಹ್ರಾಂ ಯೆಸ್ತ್ ಎಂಬ ಪವಿತ್ರ ಗ್ರಂಥದಲ್ಲಿ ಈ ವಾಕ್ಯವಿದೆ: ಹಸುವಿನ ಬಲ ವರ್ಧಿಸಲಿ, ಒಳ್ಳೆ ಹಾರೈಕೆಗಳು ಅದಕ್ಕೆ ಸಲ್ಲಲಿ, ಶೋಭನವಾದ ನುಡಿಗಳು ಅದಕ್ಕೆ ಲಭಿಸಲಿ, ಒಳ್ಳೆ ಹೊದಿಕೆ ಅದಕ್ಕಿರಲಿ. ಈ ಭಾವನೆ ಹಿಂದುಗಳ ಗೋಪೂಜೆಗೂ ಝರತುಷ್ಟ್ರ ಮತಕ್ಕೂ ನಿಕಟ ಸಂಬಂಧವಿರುವುದರ ಮತ್ತೊಂದು ನಿದರ್ಶನ.

ಒಳ್ಳೆಯ ಆತ್ಮಕ್ಕೂ ಕೆಟ್ಟ ಆತ್ಮಕ್ಕೂ ಇರುವ ದ್ವೈತವನ್ನು ಝರತುಷ್ಟ್ರನ ಮತ ಎತ್ತಿ ಹಿಡಿಯುತ್ತದೆ ಎಂದು ಅನೇಕ ವೇಳೆ ಹೇಳುವುದುಂಟು. ಕೇಡಿನ ಪ್ರಶ್ನೆಗಿಂತ ತೊಡಕಾದ ಪ್ರಶ್ನೆ ಬೇರೊಂದಿಲ್ಲ: ಮಾನವ ಇತಿಹಾಸದಲ್ಲಿ ಮೊದಲ ಬಾರಿಗೆ ಈ ಪ್ರಶ್ನೆಗೆ ಉತ್ತರ ಕೊಡಲು ಪ್ರಯತ್ನಿಸಿದವ ಝರತುಷ್ಟ್ರ. ಅರ್ವಾಚೀನ ಝರತುಷ್ಟ್ರ ಮತದಲ್ಲಿ ಮುಖ್ಯವಾಗಿ ವೆಂಡೀಡಾಡ್ ಎಂಬುದರಲ್ಲಿ ಈ ದ್ವೈತ ಜಗತ್ತಿನಲ್ಲಿ ಎಲ್ಲೆಡೆಯಲ್ಲೂ ಹಬ್ಬಿದೆ ಎಂದೂ ಇಲ್ಲಿರುವುದೆಲ್ಲ ಸ್ಪೆಂಟಾಮನ್ಯು ಎಂದರೆ ಸತ್‌ದೈವ, ಇಲ್ಲವೆ, ಆಂಗ್ರಮನ್ಯು ಎಂದರೆ ದುಷ್ಟದೈವ ಇವೆರಡರ ಸೃಷ್ಟಿಯೆಂದೂ ನಿರೂಪಣೆಯಿದೆ. ಆದರೆ ದಾರ್ಶನಿಕ ದೃಷ್ಟಿಯಲ್ಲಿ ಇದನ್ನು ಸಮರ್ಥಿಸುವುದು ಕಷ್ಟ. ಏಕೆಂದರೆ ಪ್ರಕೃತಿಯ ವಿತರಣೆಯಲ್ಲಿ ಯಾವುದೊಂದೂ ತೀರ ಅಪ್ರಯೋಜಕ ಅಥವಾ ಕೆಟ್ಟದು ಎನಿಸದು. ಪ್ರತಿಯೊಂದು ಗಿಡ, ಪ್ರತಿಯೊಂದು ಪ್ರಾಣಿ, ಪ್ರತಿಯೊಂದು ಕೀಟಕ್ಕೂ ಅದರದರ ಉಪಯೋಗಿತೆ ಅದಕ್ಕೆ ಉಂಟೇ ಉಂಟು, ನಿರ್ವಹಿಸ ತಕ್ಕ ಕಾರ್ಯವುಂಟು. ಜರತುಷ್ಟ್ರ ತನ್ನ ಗಾಥೆಗಳಲ್ಲಿ ಬೋಧಿಸಿದ ದ್ವೈತ ನಿಜವಾಗಿ ದಾರ್ಶನಿಕ ದೃಷ್ಟಿಯಿಂದ ಸಿದ್ಧಾಂತಿಸಿದುದಲ್ಲ ; ನೈತಿಕ ದೃಷ್ಟಿಯಿಂದ ಪ್ರತಿಷ್ಠಾಪಿಸಿದುದು. ಆತ ಒತ್ತಿ ಹೇಳಬಯಸಿದುದು, ಸದ್ಭಾವನೆಯಿಂದ ಪ್ರೇರಿತನಾದ ಮನುಷ್ಯನ ಕರ್ಮಗಳಿಗೂ ದುರ್ಭಾವನೆಯಿಂದ ಪ್ರೇರಿತನಾದ ಮನುಷ್ಯನ ಕರ್ಮಗಳಿಗೂ ಇರುವ ಅಂತರವನ್ನು ಕುರಿತು. ಮನೋವಾಕ್ಕರ್ಮಗಳಲ್ಲಿ ವಿರುದ್ಧವಾಗಿರುವವನಿಗೆ ಸತ್ಕರ್ಮ ಪ್ರೇರಣೆ, ಮಾನವ ಸಮಾಜ ಸುಖದಿಂದ ಬಾಳುವಂತಾಗಲು ಮನುಷ್ಯರನ್ನು ಉತ್ತಮಗೊಳಿಸುವ ಪ್ರೇರಣೆ ಇದ್ದೇ ಇರುತ್ತದೆ. ಈ ಪ್ರೇರಣೆಯಿಂದ ಪ್ರಭಾವಿತವಾಗದಿರುವ ಯಾವುದೂ ಕೇಡಿಗಿಳಿಯುವ ಸಂಭವವುಂಟು. ಇದೀಗ ಜರತುಷ್ಟ್ರನ ದ್ವೈತದ ತಿರುಳು. ಕೆಲವು ಕ್ರೈಸ್ತ ಗ್ರಂಥಕರ್ತರು ಜರತುಷ್ಟ್ರ ಮತದ ಈ ದ್ವೈತ ಏಕದೈವತ್ವ ತತ್ತ್ವವನ್ನು ನಿರಾಕರಿಸುತ್ತದೆ ಎಂದು ವಾದಿಸಲು ಹವಣಿಸಿದ್ದಾರೆ. ಮತ್ತು ಕೆಲವು ಪಾರ್ಸಿ ವಿದ್ವಾಂಸರು ಈ ವಿಮರ್ಶೆಯಿಂದ ಪ್ರಭಾವಿತರಾಗಿ ಜರತುಷ್ಟ್ರ ಮತದಲ್ಲಿನ ಈ ದ್ವೈತ ಅದರ ಕೊನೆಯ ನಿಲುವಲ್ಲ ಎಂದು ತೋರಿಸಲು ಯತ್ನಿಸಿದ್ದಾರೆ. ವಸ್ತುತಃ ಈ ವಿದಾಂಸರು ಈ ದ್ವೈತದ ಅಂತರಾರ್ಥವನ್ನು ಕಂಡುಕೊಳ್ಳಲು ಹೇಗೆ ಅಸಮರ್ಥರಾಗಿದ್ದಾರೆ ಎಂಬುದನ್ನು ಇದು ತೋರಿಸಿಕೊಡುತ್ತದೆ. ದೈವ ಒಳ್ಳೆಯದೆಂದು ಭಾವಿಸುವ ಯಾವ ಏಕದೈವ ಮತದಲ್ಲೂ ಸಹ ಕೇಡಿನ ಸಮಸ್ಯೆ ಬೃಹದಾಕಾರವಾಗಿ ತಲೆದೋರುತ್ತದೆ. ಏಕೆಂದರೆ ಅಲ್ಲಿ ಅನಿವಾರ್ಯವಾಗಿ ಈ ಪ್ರಶ್ನೆ ಏಳುತ್ತದೆ: ದೇವರು ಒಳ್ಳೆಯವನಾದರೆ ಕೇಡನ್ನೇತಕ್ಕೆ ನಿರ್ಮಿಸಿದ ? ದೇವರ ಒಳ್ಳೆಯತನವನ್ನು ಕಾಪಿಡುವುದಕ್ಕಾಗಿ, ಕೆಡುಕಿನ ಪ್ರಾದುರ್ಭಾವಕ್ಕೆ ಮತ್ತೊಂದು ದೈವವಿರುದ್ಧ ಶಕ್ತಿ ಕಾರಣವೆಂದು ನಿರೂಪಿಸಲಾಗಿದೆ. ಯಾವ ಏಕದೈವಮತವಾಗಲಿ ಇದರಿಂದ ಮುಕ್ತವಾಗಿಲ್ಲ. ಕ್ರೈಸ್ತಮತ ತ್ರೈಕ್ಯ ತತ್ತ್ವದಿಂದ ಉದ್ಭವಿಸಿರುವ ದೈವಶಾಸ್ತ್ರದ ತೊಡಕುಗಳ ಜೊತೆಗೆ, ಜರತುಷ್ಟ್ರ ಮತದ ಆಂಗ್ರಮನ್ಯುವಿಗೆ ಸರಿದೂಗುವ ಸೈತಾನ್ ಎಂಬುವನ ಶಕ್ತಿಯನ್ನು ವಸ್ತುತಃ ಗಣನೆಗೆ ತಂದುಕೊಳ್ಳಬೇಕಾಗಿದೆ. ಹಾಗೆಯೇ ಏಕದೈವ ಪ್ರತಿಪಾದಕವಾದ ಎಂಥ ಮತದೊಡನೆಯೂ ಸರಿತೂಗಬಲ್ಲ ಇಸ್ಲಾಂ ಮತವೂ ಇಬ್ಲಿಸ್ ಎಂಬವನ ಶಕ್ತಿಯನ್ನು ಗಣನೆಗೆ ತಂದುಕೊಳ್ಳುತ್ತದೆ. ಆಂಗ್ರಮನ್ಯುವಾಗಲಿ, ಸೈತಾನನಾಗಲಿ, ಇಬ್ಲಿಸ್ ಆಗಲಿ ಸ್ವತಃ ಶಕ್ತಿಶಾಲಿಗಳಲ್ಲ. ಸನ್ಮಾರ್ಗವನ್ನು ಬಿಟ್ಟು ಹೋಗಲು ಮಾನವನ ಆತ್ಮದಲ್ಲಿರುವ ದುಷ್ಟ ಪ್ರೇರಣೆಯನ್ನು ಈ ಪ್ರತಿದೈವಗಳು ಒಂದೊಂದೂ ಪ್ರತಿನಿಧಿಸುತ್ತವೆ. ಆಲ್‌ಬರ್ಟ್‌ಷ್ವೈಟ್ಸರ್ ಹೇಳುವಂತೆ 'ಪ್ರತಿಯೊಂದು ಯುಕ್ತಿನಿಷ್ಠಮತವೂ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕು. ಇಲ್ಲ ಅದು ನೀತಿಯನ್ನೇ ಆಧಾರವಾಗಿ ಉಳ್ಳ ಮತವಾಗಿರಬೇಕು ಅಥವಾ ಈ ಸೃಷ್ಟಿಯನ್ನು ವಿಶದೀಕರಿಸುವ ಮತವಾಗಿರಬೇಕು. ಹೆಚ್ಚು ಬೆಲೆಯುಳ್ಳದ್ದೆಂದು ಕ್ರೈಸ್ತ ಮತದವರಾದ ನಾವು ಮೊದಲನೆಯದನ್ನು ಆರಿಸಿಕೊಂಡೆವು. ಅತ್ಯಂತ ಶ್ರೇಷ್ಠವಾದ ಏಕದೈವನಿಷ್ಠ ಮತಗಳಲ್ಲಿಯೂ ಈ ದ್ವೈತ ನೈತಿಕವಾದದ್ದೇ ಹೊರತು ಬೇರೆಯಲ್ಲ. ಯಾರು ಒಳಿತನ್ನು ಇಚ್ಛಿಸುತ್ತಾನೋ ಆತನ ಇಚ್ಛೆ ದೈವೇಚ್ಛೆಯೊಂದಿಗೆ ಮಿಲಿತವಾಗಿದೆ. ಕೆಟ್ಟದ್ದನ್ನು ಇಚ್ಛಿಸುವವ ದೈವೇಚ್ಛೆಯನ್ನು ನಿರಾಕರಿಸುತ್ತಾನೆ ಮತ್ತು ಆಲಂಕಾರಿಕವಾಗಿ ಹೇಳಬಹುದಾದರೆ, ಕೇಡಿನ ಸತ್ತ್ವದ ಹಾದಿಯನ್ನು ಹಿಡಿಯುತ್ತಾನೆ. ಕೇಡಿನ ಸಮಸ್ಯೆಗೆ ಸದುತ್ತರವನ್ನು ಜರತುಷ್ಟ್ರ ಮತ ಕೊಟ್ಟಿದೆಯೆಂದು ಧಾರಾಳವಾಗಿ ಹೇಳಬಹುದು. ಇದನ್ನು ಎತ್ತಿ ಹಿಡಿಯುವವರು ಇಪ್ಪತ್ತನೆಯ ಶತಮಾನದಲ್ಲಿಯೂ ಇದ್ದಾರೆ. ವಿಲಿಯಂ ಜೇಮ್ಸನ ದರ್ಶನದಲ್ಲಿಯೂ ಇದರ ಹೊಳವಿದೆ.

ಜರತುಷ್ಟ್ರ ಮತ ತನ್ನ ದ್ವೈತ ತತ್ತ್ವದಿಂದ ಮನುಷ್ಯನ ಚರಮಗತಿಯ ಸಿದ್ಧಾಂತವನ್ನು ಬೆಳೆಸುತ್ತದೆ. ವಸ್ತುತಃ ಆತ್ಮ ಅಮೃತವೆಂದು ಮೊದಲ ಬಾರಿಗೆ ನುಡಿದವ ಜರತುಷ್ಟ್ರನೆಂದರೆ ತಪ್ಪಾಗಲಾರದು. ಒಳ್ಳೆಯವರ ಆತ್ಮಗಳು ಸ್ವರ್ಗಕ್ಕೆ ಹೋಗುತ್ತವೆ. ಕೆಡುಕರ ಆತ್ಮಗಳು ನರಕಕ್ಕಿಳಿಯುತ್ತವೆ. ಯಹೂದ್ಯರು ಬ್ಯಾಬಿಲೋನಿಯದಲ್ಲಿ ಸೆರೆ ಸಿಕ್ಕಿದಾಗ ಈ ನಂಬಿಕೆಯನ್ನು ಪರ್ಷಿಯನ್ನರಿಂದ ಪಡೆದುಕೊಂಡರು. ಕೋಟಿಗಟ್ಟಲೆ ಮುಸ್ಲಿಮರಿಂದಲೂ ಕ್ರೈಸ್ತರಿಂದಲೂ ಪರಿಗ್ರಹೀತವಾದ ನಂಬಿಕೆ ಇದು. ಜರತುಷ್ಟ್ರ ಮತದವರ ಸಾಹಿತ್ಯ ಮುಖ್ಯವಾಗಿ ಆ ತತ್ತ್ವದ ವಿಚಾರದಲ್ಲಿ ತುಂಬ ಸಂಪನ್ನವಾಗಿದೆ. ದದಿಸ್ತಾನ್-ಇ-ದಿನಿಕ್, ಮಿನೋ-ಖೆರಾದ್ ಮತ್ತು ಆರ್ದ್ವಿರಾಫ್ ನಾಮೆ ಎಂಬವು ಸ್ವರ್ಗ ಮತ್ತು ನರಕಗಳ ಸುಸ್ಪಷ್ಟ ವರ್ಣನೆಯನ್ನು ಕೊಡುತ್ತವೆ. ಸತ್ತ ನಾಲ್ಕನೆಯ ದಿನ ಒಳ್ಳೆಯವನ ಆತ್ಮವನ್ನು ಆತನ ಪುಣ್ಯಕರ್ಮಸ್ವರೂಪಿಣಿಯಾದ ಸುಂದರ ದೇವತೆಯೊಬ್ಬಳು ಇದಿರುಗೊಳ್ಳುತ್ತಾಳೆ. ಇದೇ ರೀತಿಯಲ್ಲಿ ಕೇಡಿಗನ ಆತ್ಮವನ್ನು ಇದಿರುಗೊಳ್ಳುವವಳು ಆತನ ಪಾಪಿಷ್ಠ ಜೀವನದ ಪ್ರತೀಕವೆಂದು ಹೇಳಲಾಗಿರುವ ಕುರೂಪಿ ವೃದ್ಧೆಯೊಬ್ಬಳು.

ಪಾರ್ಸಿಗಳ ಆಚರಣೆಗಳು ಹಿಂದೂಗಳ ಆಚಾರಗಳಿಂದ ತುಂಬ ಪ್ರಭಾವಿತವಾಗಿವೆ. ಮದುವೆಯ ಶಾಸ್ತ್ರಗಳಲ್ಲಿ ಅವೆಸ್ತದಲ್ಲಿನ ಸ್ತೋತ್ರಗಳ ಜೊತೆಗೆ ಸಂಸ್ಕೃತದ ಸ್ತೋತ್ರಗಳನ್ನೂ ಪಠಿಸುತ್ತಾರೆ. ಯಜ್ಞೋಪವೀತಧಾರಣೆ ಗಂಡಸರಿಗೂ ಹೆಂಗಸರಿಗೂ ಉಂಟು. ಸಾಮಾನ್ಯವಾಗಿ ಅವರು ವಯಸ್ಸಿಗೆ ಬರುವ ಮುಂಚೆ ಈ ಕರ್ಮ ನಡೆಯುತ್ತದೆ. ಆದರೆ ಮೃತದೇಹದ ಚರಮ ಸಂಸ್ಕಾರ ಕ್ರಮ ಮಾತ್ರ ಪಾರ್ಸಿಗಳಿಗೇ ವಿಶಿಷ್ಟವಾದದ್ದು. ಮೃತದೇಹಗಳನ್ನವರು ಹೂಳುವುದೂ ಇಲ್ಲ, ಸುಡುವುದೂ ಇಲ್ಲ. ಎತ್ತರದ ಸ್ಥಳಗಳಲ್ಲಿ ಅವನ್ನು ಗಾಳಿಗೊಡ್ಡಿ ಬಿಡುತ್ತಾರೆ. ಒಂದು ಕ್ಷಣದಲ್ಲಿ ಅವನ್ನು ರಣಹದ್ದುಗಳು ತಿಂದುಹಾಕುತ್ತವೆ. ಅಗ್ನಿಯಾಗಲಿ ಭೂಮಿಯಾಗಲಿ ಅಪವಿತ್ರವಾಗಬಾರದೆಂಬ ಭಾವನೆ ಈ ಪದ್ಧತಿಯಲ್ಲಿ ಅಡಗಿದೆಯೆನ್ನಲಾಗಿದೆ. ಇದಲ್ಲದೆ ಮೃತದೇಹಗಳನ್ನು ಬೇಗನೆ ಸಂಸ್ಕರಿಸಲು ಈ ಮಾರ್ಗ ಸಮೀಚೀನವೆಂಬ ವಾದವೂ ಉಂಟು. ಬೆಟ್ಟದ ಮೇಲೆ ಹೆಣಗಳನ್ನು ಬಲಿಗೊಡುವ ಇರಾನಿನ ಪ್ರಾಚೀನಾಚಾರ ಇದಕ್ಕೆ ಮೂಲ ಎಂದು ತೋರುತ್ತದೆ.

ಆಧುನಿಕ ಕಾಲದಲ್ಲಿ ಲೆಕ್ಕಹಾಕಿದರೆ, ಪ್ರಪಂಚದಲ್ಲೆಲ್ಲ ಜರತುಷ್ಟ್ರ ಅನುಯಾಯಿಗಳು ನೂರ ಹತ್ತು ಸಾವಿರಕ್ಕೆ ಸ್ವಲ್ಪ ಮಿಗಿಲಾಗಿದ್ದಾರೆ. ಪರ್ಷಿಯದಲ್ಲುಳಿದಿರುವ ಸುಮಾರು ಹತ್ತು ಸಾವಿರ ಮಂದಿಯನ್ನು ಬಿಟ್ಟರೆ, ಮಿಕ್ಕವರೆಲ್ಲ ಭಾರತದಲ್ಲಿದ್ದಾರೆ. ಮತ್ತು ಇವರ ಪೈಕಿ ಹೆಚ್ಚು ಮಂದಿ ಮುಂಬಯಿ ಪಟ್ಟಣದಲ್ಲೇ ಇದ್ದಾರೆ. ಜರತುಷ್ಟ್ರ ಮತದ ದೇವಸ್ಥಾನಗಳು ಅಗ್ನಿದೇವತಾ ಮಂದಿರಗಳಂತಿವೆ. ಅವುಗಳಲ್ಲಿ ಮೂರು ದರ್ಜೆಗಳುಂಟು-ಅತಾಷ್ ಬೆಹ್ರಾಂಗಳು, ಆಗಿಯಾರಿಗಳು, ದಾದ್‌ಗಾಗಳು ಎಂದು. ಅತಾಷ್ ಬೆಹ್ರಾಂಗಳ ಸಂಖ್ಯೆ ಕೇವಲ ಎಂಟು; ಉದ್‌ವಾಡದಲ್ಲಿ ಒಂದು, ನವಸಾರಿಯಲ್ಲಿ ಒಂದು, ಸೂರತ್ತಿನಲ್ಲಿ ಎರಡು, ಮುಂಬಯಿಯಲ್ಲಿ ನಾಲ್ಕು. ಇವುಗಳ ಪೈಕಿ ಅತ್ಯಂತ ಪ್ರಾಚೀನವಾದುದು ಇರಾನ್‌ಷ ಎಂಬ ಹೆಸರಾದಂಥ ಅಗ್ನಿ. ಇದು ಒಂದು ಸಾವಿರದ ಮುನ್ನೂರು ವರ್ಷಗಳಿಂದ ಜಾಜ್ವಲ್ಯಮಾನವಾಗಿ ಉರಿಯುತ್ತಿದೆ. ಮಾನವನ ಚರಿತ್ರೆಯಲ್ಲೇ ಇದು ಅಸಾಧಾರಣವಾದ ವಿಷಯ. ಪವಿತ್ರಾಗ್ನಿ ಪ್ರತಿಷ್ಠಾಪಿತವಾದ ಕೂಡಲೇ ಅದನ್ನು ಗಂಟೆ ಗಂಟೆಗೂ, ದಿನ ದಿನಕ್ಕೂ, ಮಾಸ ಮಾಸಕ್ಕೂ, ವರ್ಷ ವರ್ಷಕ್ಕೂ, ಶತಮಾನದಿಂದ ಶತಮಾನದ ಪರ್ಯಂತವೂ ಜ್ವಲಂತವಾಗಿರಿಸಬೇಕು. ಅದು ಆಕಾಂಕ್ಷೆಯ ಸಂಕೇತ, ಪಾವನತ್ವದ ಸಂಕೇತ. ಏಕೆಂದರೆ ಪಾವನಗೊಳಿಸುವುದೇ ಅಗ್ನಿಯ ಕರ್ಮ.

ಈಗಲೂ ಪಾಶ್ಚಾತ್ಯ ವಿದ್ಯಾಪ್ರಭಾವದಿಂದ ಅವರ ಲೌಕಿಕಾಸಕ್ತಿ ಬೆಳೆದಿದ್ದರೂ ಪಾರ್ಸಿಗಳಲ್ಲಿ ಅನೇಕ ಮಂದಿ ತುಂಬ ಮತಶ್ರದ್ಧೆಯುಳ್ಳವರಾಗಿದ್ದಾರೆ.

ತಾನು ಉಬ್ಬಿ ಹಬ್ಬುತ್ತಿದ್ದ ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಜರತುಷ್ಟ್ರ ಮತ ಇರಾನಿನ ಪೂರ್ವ ಮತ್ತು ಪಶ್ಚಿಮ ದಿಗ್ಭಾಗಗಳ ಕೋಟ್ಯಂತರ ಪ್ರಜೆಗಳ ಸಚೇತನ ಸಂಪರ್ಕವನ್ನು ಹೊಂದಿತು ಮತ್ತು ಈ ಅವಧಿಯಲ್ಲಿ ಇತರ ಜನಾಂಗಗಳಿಗು ತನ್ನ ನೈತಿಕ ಹಾಗೂ ಆಧ್ಯಾತ್ಮಿಕ ಸ್ಫೂರ್ತಿಯನ್ನು ಬೀರಿತು. ಹೀಬ್ರೂಗಳೂ ಕ್ರೈಸ್ತರೂ ಮುಸಲ್ಮಾನರೂ ತಾವು ಇಚ್ಛಿಸಿಯೋ ಇಚ್ಛಿಸದೆಯೋ ಈ ಮತದ ಸತ್ತ್ವವನ್ನು ತಮ್ಮದನ್ನಾಗಿಸಿಕೊಂಡಿದ್ದಾರೆ. ಅದರಂತೆ ಕಾಲಕಾಲಕ್ಕೆ ಜರತುಷ್ಟ್ರ ಮತವೂ ಬೇರೆಯವರಿಂದ ಒಳಿತನ್ನು ಪಡೆದುಕೊಂಡಿದೆ. ಅಲ್ಲದೆ ಇದರಲ್ಲಿ ಯಾವುದು ಶ್ರೇಷ್ಠತಮವೋ ಅದು ಇತರ ಮತಗಳ ಶ್ರೇಷ್ಠತಮಾಂಶಗಳಲ್ಲಿ ನೆಲೆಗೊಂಡುಬಿಟ್ಟಿದೆ. (ಎ.ಆರ್.ಡಬ್ಲ್ಯೂ.)

**ಜರಾವಿಕೃತಿ :** ವೃದ್ಧಾಪ್ಯದಲ್ಲಿ ಕೆಲವು ದೈಹಿಕ ಮತ್ತು ಮಾನಸಿಕ ಶಕ್ತಿಗಳ ಅವನತಿ ಹಾಗೂ ಮಾರ್ಪಾಡುಗಳಿಂದಾಗಿ ಉದ್ಭವಿಸುವ ಕೆಲವು ವರ್ತನ ವೈಪರೀತ್ಯಗಳಿಗೆ ಈ ಹೆಸರಿದೆ (ಸಿನಿಲಿಟಿ). ಹಾಗಾದಾಗ ಶಕ್ತಿಸಾಮರ್ಥ್ಯಗಳು ಕುಗ್ಗುತ್ತವೆ, ವಿಸ್ಮೃತಿ ಪ್ರಬಲವಾಗುತ್ತದೆ. ಸಂಶಯ, ಅಭದ್ರತೆ ಮತ್ತು ಸಿಡಿಮಿಡಿ ಇತ್ಯಾದಿಗಳು ಕಾಣಿಸಿಕೊಳ್ಳುತ್ತವೆ. ಇವು ಮಿತಿಯಲ್ಲಿದ್ದರೆ ಆ ವ್ಯಕ್ತಿಗಾಗಲೀ ಆತನಿಗೆ ಸಂಬಂಧಿಸಿದವರಿಗಾಗಲೀ ಹೆಚ್ಚು ತ್ರಾಸವಾಗುವುದಿಲ್ಲ. ಹೇಗೋ

ಆತನನ್ನು ಸುಧಾರಿಸಬಹುದು. ಕೆಲವೊಮ್ಮೆ ದೈಹಿಕ ಮತ್ತು ಮಾನಸಿಕ ಮಾರ್ಪಾಡುಗಳು ವಿಪರೀತವಾಗಿ, ಅವನತಿ ಅತಿಯಾಗಿ ವರ್ತನ ವೈಪರೀತ್ಯಗಳು ಉಗ್ರರೂಪ ತಾಳುತ್ತವೆ. ಅವುಗಳಲ್ಲಿ ಮುಖ್ಯವಾದವು ಎರಡು : ಒಂದು ಮುಪ್ಪಿನ ಚಿತ್ತಭ್ರಂಶ ಅಥವಾ ಮುಪ್ಪಿನ ಮನೋವಿಕೃತಿ ಮತ್ತು ಎರಡನೆಯದು ಮಿದುಳಿನ ರಕ್ತನಾಳಗಳ ಪೆಡಸಿನಿಂದಾಗುವ ಮನೋವಿಕೃತಿ ಅಥವಾ ಪೆಡಸು ರಕ್ತನಾಳ ಮನೋವಿಕೃತಿ. ಈ ಎರಡಕ್ಕೂ ದೈಹಿಕ ಹಿನ್ನಲೆ ಇರುವುದರಿಂದ ಇವನ್ನು ಆಂಗಿಕ ಮನೋವಿಕೃತಿಗಳೆಂದು ವರ್ಗೀಕರಣ ಮಾಡಲಾಗಿದೆ.

1. ಮುಪ್ಪಿನ ಚಿತ್ತಭ್ರಂಶ : ವೃದ್ಧಾಪ್ಯದಲ್ಲಿ ಮಿದುಳಿನ ಜೀವಕಣಗಳು ನಾಶವಾಗಿ, ಮೂಲವ್ಯಕ್ತಿತ್ವ ಮಾರ್ಪಟ್ಟು, ಶಕ್ತಿಸಾಮರ್ಥ್ಯಗಳು ಕುಗ್ಗಿ, ವರ್ತನ ವೈಪರೀತ್ಯಗಳು ಉಗ್ರರೂಪ ತಾಳಿದಾಗ, ಅ ರೋಗಿಯನ್ನು ಮನೆಯಲ್ಲಿ ಸುಧಾರಿಸುವುದು ದುಸ್ಸಾಧ್ಯವಾಗಿ ಮನೋರೋಗಿಗಳ ಆಸ್ಪತ್ರೆಗೆ ಸೇರಿಸುತ್ತಾರೆ. ಆಸ್ಪತ್ರೆ ಸೇರುವ ರೋಗಿಗಳಲ್ಲಿ ಶೇ.8 ಮಂದಿ ಈ ಮನೋವಿಕೃತರು ಎಂದು ತಿಳಿದುಬಂದಿದೆ. ಇಂಥ ವಿಕೃತಿ 60ರಿಂದ 90ನೆಯ ವಯಸ್ಸಿನಲ್ಲಿ ಎಂದಾದರೂ ಕಾಣಿಸಿಕೊಳ್ಳಬಹುದು. ರೋಗಿಯ ಸರಾಸರಿ ವಯಸ್ಸು ಸುಮಾರು 75 ವರ್ಷ. ಸ್ತ್ರೀಯರ ಆಯುರ್ ಅವಧಿ ಪುರುಷರಿಗಿಂತ ದೀರ್ಘವಾದುದರಿಂದ ರೋಗ ಪುರುಷರಿಗಿಂತ ಸ್ತ್ರೀಯರಲ್ಲಿ ಹೆಚ್ಚು. ಈ ರೋಗಕ್ಕೆ ವಿದ್ಯಾಭೇದವಾಗಲೀ ಸಾಮಾಜಿಕ ಮತ್ತು ಆರ್ಥಿಕ ಭೇದವಾಗಲೀ ಕಂಡುಬರುವುದಿಲ್ಲ. ಆದರೆ ಅಲ್ಪಬುದ್ಧಿ ಮತ್ತು ಅಲ್ಪಸಾಧನೆಯವರಲ್ಲಿ ಇದು ಹೆಚ್ಚೆಂದು ವರದಿಗಳಿಂದ ವ್ಯಕ್ತವಾಗುತ್ತದೆ. ರೋಗಿಗಳಲ್ಲಿ ಹಳ್ಳಿಗರಿಗಿಂತ ಪಟ್ಟಣಿಗರೇ ಹೆಚ್ಚು.

ಮುಪ್ಪಿನ ಚಿತ್ತಭ್ರಂಶದಲ್ಲಿ ಐದು ಒಳವರ್ಗಗಳನ್ನು ಕಾಣಬಹುದು: (1) ಸರಳ ಅವನತಿ, (2) ಸಂಭ್ರಾಂತಿ ಪ್ರತಿಕ್ರಿಯೆ, (3) ಜರಾಮನೋವಿಕ್ಷೇಪ, (4) ಉನ್ಮತ್ತ ಪ್ರಲಾಪ ಮತ್ತು ಗೊಂದಲ, (5) ವಿಷಣ್ಣತೆ ಮತ್ತು ಕ್ಷೋಭೆ. ಈ ವರ್ಗೀಕರಣ ಕೃತಕವಾದುದು ಮತ್ತು ಕೇವಲ ನಮ್ಮ ಅನುಕೂಲಕ್ಕಾಗಿ ಎನ್ನಬಹುದು.

ಈ ರೋಗದ ಪ್ರಧಾನ ಲಕ್ಷಣಗಳಿವು: ಸ್ಮೃತಿಭ್ರಂಶತೆ, ಅಸ್ಥಿರತೆ, ಅಭದ್ರತೆ, ವಿಷಣ್ಣತೆ, ಅಶಾಂತಿ, ಚಪಲಚಿತ್ತತೆ, ಕಳವಳ, ಸಂಭ್ರಾಂತಿ, ಸನ್ನಿ, ಕಾಲ–ಸ್ಥಳಗಳ ಗೊಂದಲ ಮತ್ತು ಕಾಮವಿಕಾರ. ಈ ರೋಗಚಿಹ್ನೆಗಳು ಎಲ್ಲರಲ್ಲೂ ಒಂದೇ ವಿಧವಾಗಿರುವುದಿಲ್ಲ. ರೋಗಿಯ ರೊಗಪೂರ್ವದ ವ್ಯಕ್ತಿತ್ವ, ಅವನತಿಯ ಪ್ರಮಾಣ, ಅದರ ಸ್ವರೂಪ ಮತ್ತು ಆತನ ಮೇಲಣ ಸಾಮಾಜಿಕ ಒತ್ತಡ–ಇವುಗಳಿಗೆ ಅನುಸಾರವಾಗಿ ಅವು ಭಿನ್ನವಾಗಿರುತ್ತವೆ.

ವೃದ್ಧನಿಗೆ ಸ್ಮೃತಿಭ್ರಂಶವುಂಟಾಗುವುದರಿಂದ, ತಾನಾರು, ತನ್ನ ಹೆಸರೇನು, ತಾನೆಲ್ಲಿದ್ದೇನೆ ಎಂಬೆಲ್ಲವೂ ಮರೆತುಹೋಗಿರುತ್ತವೆ. ಇತ್ತೀಚಿನ ಘಟನೆಗಳಂತೂ ಪೂರ್ಣವಾಗಿ ಮರೆತು ಹೋಗಿರುತ್ತವೆ. ಆಡುವ ಮಾತು ಮಾಡುವ ಕೆಲಸ ಎಲ್ಲವೂ ಅಸಂಬದ್ಧ. ಕಲಿಕೆ, ಗ್ರಹಿಕೆ, ವಿವೇಚನೆ ಮತ್ತು ಆಲೋಚನೆ ಅಸ್ತವ್ಯಸ್ತ. ಬಹಳ ಸ್ವಾರ್ಥಿಯಾದುದರಿಂದ ತನ್ನ ಊಟ, ನಿದ್ರೆ, ಮತ್ತು ಆರೋಗ್ಯಗಳ ಬಗ್ಗೆ ಚಿಂತಿಸುತ್ತಾನೆಯೇ ಹೊರತು ಇತರರು ಆತನ ಮನಸ್ಸಿಗೆ ಬರುವುದೇ ಇಲ್ಲ. ರಾತ್ರಿಯೆಲ್ಲ ನಿದ್ರೆಯಿಲ್ಲದೆ ಚಡಪಡಿಸುತ್ತಾನೆ. ಹಗಲೆಲ್ಲ ಮಲಗಿ ನಿದ್ರಿಸುತ್ತಾನೆ. ರಾತ್ರಿ ಮನೆ ಬಿಟ್ಟು ಹೋಗುವ ಸಂಭವವೂ ಉಂಟು. ಅಪರಿಚಿತರೊಡನೆ ಬಹಳ ಪರಿಚಿತರೇನೋ ಎನ್ನುವಂತೆ ಸಂಸಾರದ ಗುಟ್ಟನ್ನೆಲ್ಲ ಹೇಳಿಕೊಳ್ಳುತ್ತಾನೆ. ಅಸೂಯೆ ಮತ್ತು ಮಾತ್ಸರ್ಯಗಳಿಂದ ತುಂಬಿ ಹೋಗಿ ಇತರರ ಮುಖಸ್ತುತಿಗೆ ಮರುಳಾಗುತ್ತಾನೆ. ಸಂಭ್ರಾಂತಿ ಈತನನ್ನು ಕಾಡುತ್ತದೆ. ತನ್ನ ಆಸೆಗಳು ಪೂರೈಸದೆ ಹೋದಾಗ ಜಗಳವಾಡುತ್ತಾನೆ, ಆರೋಪಿಸುತ್ತಾನೆ.

ಕಾಮವಿಕಾರವಾಗಿ ತೋರ್ಪಡಿಕೆ, ಅತ್ಯಾಚಾರ, ವಿವೇಕಶೂನ್ಯ ವಿವಾಹ–ಇವು ಕಂಡುಬರುತ್ತವೆ. ಬರುಬರುತ್ತ ಸ್ಥಿತಿ ಚಿಂತಾಜನಕವಾಗಿ, ಜೀವಂತ ಶವದಂತೆ ಕಾಣುತ್ತಾನೆ. ರೋಗನಿರೋಧಕ ಶಕ್ತಿ ಕುಗ್ಗಿ, ಯಾವುದೋ ಒಂದು ಕಾಯಿಲೆಯಿಂದ ಅಸು ನೀಗುತ್ತಾನೆ.

ಇಂಥ ಅವನತಿಗೆ ಕಾರಣಗಳು ಅನೇಕ. ಮಿದುಳಿನ ಜೀವಕಣಗಳ ನಾಶ, ಉಪಾಪಚಯಗಳ ವೈಪರೀತ್ಯ, ಅಂತಃಸ್ರಾವಗಳ ಕೊರತೆ, ಆರ್ಥಿಕ, ಸಾಮಾಜಿಕ ಸ್ಥಿತಿಯ ಕುಸಿತ, ಅಗಲಿಕೆ, ನಿವೃತ್ತಿ ಮತ್ತು ಸಮಾಜದ ಒತ್ತಡ ಇತ್ಯಾದಿಗಳ ಜೊತೆಗೆ ಹಿಂದಿನಿಂದಲೂ ಇದ್ದ ಮನೋಬೇನೆಯ ಚಿಹ್ನೆಗಳೂ ಕೂಡಿ ಈ ವಿಕೃತಿ ಕಾಣಿಸಿಕೊಳ್ಳುತ್ತದೆ.

**ಚಿಕಿತ್ಸೆ:** ಈ ಮನೋವಿಕೃತಿ ಬಹಳ ಇಳಿವಯಸ್ಸಿನಲ್ಲಿ ಕಾಣಿಸಿಕೊಳ್ಳುವುದರಿಂದ ರೋಗ ಪ್ರಬಲವಾಗುತ್ತದೆಯೇ ವಿನಾ ಗುಣವಾಗುವ ಸಾಧ್ಯತೆ ಬಹಳ ಕಡಿಮೆ. ಒಳ್ಳೆಯ ಆರೈಕೆ, ಮೇಲ್ವಿಚಾರಣೆಗಳಿಂದ ಸ್ವಲ್ಪ ಸುಧಾರಿಸಬಹುದು. ಆದರೆ ಗುಣ ಹೊಂದುವವರ ಸಂಖ್ಯೆ ಶೇ. 10ಕ್ಕಿಂತ ಹೆಚ್ಚಿರಲಾರದು.

2 ಮಿದುಳಿನ ರಕ್ತನಾಳಗಳ ಪೆಡಸಣೆಯಿಂದಾಗುವ ಮನೋವಿಕೃತಿ : ಮುಪ್ಪಡರಿದಂತೆ ಮಿದುಳಿನ ರಕ್ತನಾಳಗಳು ಪೆಡಸಾಗಿ ರಕ್ತಸಂಚಾರಕ್ಕೆ ಅಡ್ಡಿಯುಂಟಾಗಿ ಪೋಷಣೆಯಿಲ್ಲದೆ ಅಲ್ಲಿನ ಜೀವಕಣಗಳು ನಾಶವಾಗುತ್ತವೆ. ಜೊತೆಗೆ ಕೆಲವು ಮಾನಸಿಕ ತಾರುಮಾರುಗಳು ಕೂಡಿ ಈ ಮನೋವಿಕೃತಿ ಕಾಣಿಸಿಕೊಳ್ಳುತ್ತದೆ. ಆನುವಂಶಿಕತೆ, ಮಿತಿಮೀರಿದ ಆಹಾರಸೇವನೆ, ಅತಿಯಾದ ಕುಡಿತ, ವಿಶ್ರಾಂತಿಯ ಕೊರತೆ, ಬಿಡುವಿಲ್ಲದ ಚಿಂತೆ–ಇವೂ ಈ ರೋಗ ಉಲ್ಬಣಗೊಳ್ಳುವಂತೆ ಮಾಡುತ್ತವೆ. ಸುಮಾರು 65ರಿಂದ 75ನೆಯ ವಯಸ್ಸಿನಲ್ಲಿ ಈ ರೋಗ ಕಾಣಿಸಿಕೊಳ್ಳುತ್ತದೆ. ಹಿಂದೆಯೇ ತಿಳಿಸಿರುವಂತೆ ರೋಗಿಗಳಲ್ಲಿ ಹಳ್ಳಿಗರಿಗಿಂತ ಪಟ್ಟಣಿಗರೇ ಹೆಚ್ಚು. ಆಸ್ಪತ್ರೆಯ ರೋಗಿಗಳಲ್ಲಿ ಶೇ.12 ಮತ್ತು ಮಹಾಜನತೆಯಲ್ಲಿ ಶೇ.2 ಈ ರೋಗಿಗಳಿರುತ್ತಾರೆ.

ತಲೆ ಸುತ್ತುವಿಕೆ, ತಲೆನೋವು, ಅನಾವಶ್ಯಕ ಆಯಾಸ, ಅವಧಾನ ಚಾಂಚಲ್ಯ, ಅಸಾಮರ್ಥ್ಯ, ಖಿನ್ನತೆ, ನಿದ್ರಾಹೀನತೆ, ಸೆಳವು, ಸಿಡಿಮಿಡಿ, ಮಾನಸಿಕ ಗೊಂದಲ ಮತ್ತು ಸ್ಮೃತಿ ತಾರುಮಾರುಗಳು–ಇವು ರೋಗದ ಚಿಹ್ನೆಗಳು. ರೋಗ ಪ್ರಬಲವಾದಂತೆ, ಸ್ಥಳ–ಕಾಲದ ಗೊಂದಲ, ಭ್ರಾಂತಿ, ಅಸ್ಥಿರತೆ, ಉದ್ವಿಗ್ನತೆ, ರೋಷಾವೇಶ ಮತ್ತು ಆತ್ಮಹತ್ಯೆಯ ಪ್ರಯತ್ನ–ಈ ಲಕ್ಷಣಗಳೂ ಕಾಣಿಸಿಕೊಳ್ಳುತ್ತವೆ.

ರಕ್ತನಾಳಗಳ ಪೆಡಸಿಗೆ ಕಾರಣಗಳೇನು, ಅದನ್ನು ತಡೆಗಟ್ಟುವುದು ಹೇಗೆ, ಅದರ ಚಿಕಿತ್ಸೆ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಕೆಲವರು ತಾವಾಗಿಯೇ ಗುಣ ಹೊಂದುತ್ತಾರೆ. ಗುಣವಾಗಿ ಬದುಕಿಕೊಳ್ಳುವವರ ಸಂಖ್ಯೆ ಶೇ.10 ಆರೈಕೆ ಮತ್ತು ಮೇಲ್ವಿಚಾರಣೆಯೇ ಇದಕ್ಕೆ ಚಿಕಿತ್ಸೆ. (ಪಿ.ಎಸ್.)

**ಜರಾಶಾಸ್ತ್ರ :** ಪ್ರಾಣಿಗಳ ಹಾಗೂ ಮಾನವನ ವೃದ್ಧಾಪ್ಯ ಮತ್ತು ಅದರ ಸಮಸ್ಯೆಗಳಿಗೆ ಸಂಬಂಧಿಸಿದ ಶಾಸ್ತ್ರ (ಜೆರಂಟಾಲಜಿ). ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವೂ–ಅದು ಸಜೀವಮೇ ಆಗಿರಲಿ ನಿರ್ಜೀವಮೇ ಆಗಿರಲಿ–ತನ್ನದೇ ಆದ ರೀತಿಯಲ್ಲಿ ಬೆಳೆವಣಿಗೆ ಹೊಂದುತ್ತದೆ, ವೃದ್ಧಿಯಾಗುತ್ತದೆ. ಕಾಲಕ್ರಮೇಣ ಕ್ಷೀಣವಾಗುತ್ತ ಬಂದು ಕಟ್ಟಕಡೆಗೆ ಸಾಯುತ್ತದೆ, ಇಲ್ಲವೆ ನಾಶವಾಗುತ್ತದೆ. ಈ ಕಾರಣದಿಂದಲೇ ಯಾವುದೇ ಜೀವಿಯ ಜೀವಮಾನದಲ್ಲಿ ಜನನ, ಶೈಶವ, ಬಾಲ್ಯ, ಯೌವನ, ಪ್ರೌಢಾವಸ್ಥೆ, ವೃದ್ಧಾಪ್ಯ, ಸಾವು ಎಂಬ ವಿವಿಧ ಘಟ್ಟಗಳು ಗಡಿಯಾರದ ಮುಳ್ಳಿನ ಚಲನೆಯಂತೆ ಕಂಡುಬರುತ್ತವೆ. ಜನನದಿಂದ ಯೌವನಾವಸ್ಥೆ ಮತ್ತು ಪ್ರೌಢಾವಸ್ಥೆಗಳ ಕಡೆಗೆ ಮುಂದುವರಿಯುವ ಚಟುವಟಿಕೆಗಳು ಏರುಮುಖವಾಗಿರುತ್ತವೆ. ಆದರೆ ಪ್ರೌಢಾವಸ್ಥೆಯಿಂದ ಸಾವಿನವರೆಗೆ ಇಳಿಮುಖವಾಗಿರುತ್ತವೆ. ಈ ಇಳಿಮುಖದ ಬೆಳೆವಣಿಗೆಯನ್ನೇ ಮುಪ್ಪಾಗುವಿಕೆ, ವೃದ್ಧಾಪ್ಯ ಎಂದು ಕರೆಯುವುದು.

ಜೀವನದ ಉತ್ತರೋತ್ತರ ಕಂಡುಬರುವ ಈ ವೃದ್ಧಾಪ್ಯದ ಹಂತದಲ್ಲಿ ಅನುವಂಶೀಯತೆ, ಆಹಾರ, ದೇಹಕ್ರಿಯಾವಿಶೇಷದಲ್ಲಾಗುವ ಬದಲಾವಣೆಗಳು, ಹವೆ, ಸಮಾಜ ಪದ್ಧತಿ ಮೊದಲಾದ ಘಟಕಗಳು ಪರಸ್ಪರ ಪ್ರತಿಕ್ರಿಯೆಗಳನ್ನು ತೋರುತ್ತವೆ. ಇವುಗಳಲ್ಲಿ ಏರುಪೇರಾದರೆ ಮುಪ್ಪಾಗುವಿಕೆಯ ಪ್ರಕ್ರಿಯೆಗಳ ವೇಗದಲ್ಲೂ ಬದಲಾವಣೆಗಳಾಗುತ್ತವೆ. ಮುಪ್ಪಾಗುವಿಕೆಯ ಬಗ್ಗೆ ಎರಡು ಅಭಿಪ್ರಾಯಗಳು ಇವೆ. ಒಂದರ ಪ್ರಕಾರ ವೃದ್ಧಾಪ್ಯ ಪ್ರಕೃತಿಬದ್ಧವಾದ ಜೀವನದ ಒಂದು ಹಂತ. ದೇಹದೊಳಗಿನ ಪ್ರಕ್ರಿಯೆಗಳು ಮುಪ್ಪಾಗುವಿಕೆಯನ್ನು ಅನಿವಾರ್ಯವಾಗಿ ಚುರುಕುಗೊಳಿಸುತ್ತವೆ. ಇನ್ನೊಂದು ದೃಷ್ಟಿಯಲ್ಲಿ ವೃದ್ಧಾಪ್ಯ ಬೆಳೆವಣಿಗೆಯ ಜೊತೆಯಲ್ಲಿಯೇ ಪ್ರಾರಂಭದಿಂದಲೂ ಗುಪ್ತಗಾಮಿನಿಯಂತೆ ದೇಹದ ಒಳಗೆ ನಡೆಯುತ್ತಿದ್ದು ಇಳಿವಯಸ್ಸಿನಲ್ಲಿ ಪ್ರಕಟವಾಗುವ ಒಂದು ಕ್ರಿಯಾವಿಶೇಷ. ಅಂದರೆ ಈ ಪ್ರಾರಂಭದ ಹಂತದಿಂದಲೂ ರೋಗಗಳು ಮತ್ತು ಶರೀರ ಕ್ರಿಯಾವಿಶೇಷದಲ್ಲಿನ ಲೋಪದೋಷಗಳು ಅನುಕ್ರಮವಾಗಿ ಸಂಗ್ರಹವಾಗುವುದರಿಂದ ಇವುಗಳ ಆಧಿಕ್ಯದಿಂದ ವೃದ್ಧಾಪ್ಯ ಅನಿವಾರ್ಯವಾಗುತ್ತದೆ. ಅಂತೂ ಮೇಲಿನ ಎರಡು ಅಭಿಪ್ರಾಯಗಳ ಪ್ರಕಾರವೂ ವೃದ್ಧರಲ್ಲಿ ಪರಿಸರದ ಆಗುಹೋಗುಗಳಿಗೆ ಹೊಂದಾಣಿಕೆಯಾಗುವ ಶಕ್ತಿ ಸಾಮರ್ಥ್ಯಗಳು ಕ್ರಮಕ್ರಮವಾಗಿ ಕುಂದುತ್ತ ಹೋಗಿ ಕೊನೆಗೆ ಸಾವು ಪ್ರಾಪ್ತವಾಗುತ್ತದೆ.

ಸಮಾಜದಲ್ಲಿ ವೃದ್ಧರ ಸಂಖ್ಯೆ ಅಧಿಕಗೊಳ್ಳುತ್ತಿರುವುದರಿಂದ ವೃದ್ಧರಿಗೆ ಸಂಬಂಧಿಸಿದ ಸಮಸ್ಯೆಗಳ ಅಧ್ಯಯನ 1940 ರಿಂದೀಚೆಗೆ ಹೆಚ್ಚಾಗಿದೆ. ಜರಾಶಾಸ್ತ್ರದ ಅಧ್ಯಯನ ಕ್ಷೇತ್ರಗಳು ಕೇವಲ ಒಂದೆರಡು ಶಾಸ್ತ್ರಗಳ ಮಿತಿಗೆ ಒಳಪಡದೆ ಜೀವಶಾಸ್ತ್ರ, ಜೀವರಸಾಯನಶಾಸ್ತ್ರ, ಶರೀರಕ್ರಿಯಾಶಾಸ್ತ್ರ, ಮನೋವಿಜ್ಞಾನ, ವೈದ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರಗಳನ್ನು ಒಳಗೊಂಡಿವೆ. ಆದ್ದರಿಂದಲೇ ಇದರ ಅಧ್ಯಯನದ ವಿಧಿವಿಧಾನಗಳು ಆಯಾ ಶಾಸ್ತ್ರಗಳ ವಿಧಿವಿಧಾನಗಳನ್ನು ಅನುಸರಿಸುತ್ತವೆ. ತತ್ಫಲವಾಗಿ ಇದರ ವಿಧಿವಿಧಾನಗಳು ಬಗೆಬಗೆ ಯಾಗಿರುತ್ತವೆ. ಮುಪ್ಪಾಗುವಿಕೆಯ ಕ್ರಿಯಾವಿಶೇಷಗಳ ಮತ್ತು ವೃದ್ಧರಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸುವುದು ಮತ್ತು ಸಮಾಜದ ಮೇಲೆ ಬೀಳುವ ವೃದ್ಧರ ಹೊರೆಯನ್ನು ಕಡಿಮೆ ಮಾಡಿ ಅವರನ್ನು ಸುಧಾರಿಸುವುದು ಈ ಶಾಸ್ತ್ರದ ಮೂಲ ಉದ್ದೇಶವೇ ಹೊರತು ವೃದ್ಧರ ಆಯುಷ್ಯವನ್ನು ಹೆಚ್ಚಿಸುವುದಾಗಲೀ ಸಮಾಜದಲ್ಲಿ ಇವರ ಸಂಖ್ಯೆಯನ್ನು ಅಧಿಕಗೊಳಿಸುವುದಾಗಲೀ ಇದರ ಗುರಿಯಲ್ಲ.

ಜರಾಶಾಸ್ತ್ರದಲ್ಲಿ ನಾಲ್ಕು ಪ್ರಮುಖ ವಿಭಾಗಗಳನ್ನು ಗುರುತಿಸಬಹುದು:

1 ಮಾನವನೇ ಮೊದಲಾದ ಸಮಸ್ತ ಪ್ರಾಣಿಗಳ ಮುಪ್ಪಿಗೆ ಸಂಬಂಧಿಸಿದ ಸಾಮಾನ್ಯ ಜೈವಿಕ ದೃಷ್ಟಿ.

2 ಮುಪ್ಪಿಗೆ ಸಂಬಂಧಿಸಿದ ದೇಹಕ್ರಿಯಾತ್ಮಕ ಅಧ್ಯಯನಗಳು. ಇದರಲ್ಲಿ ವ್ಯಕ್ತಿಯ ರೋಗಸಂಬಂಧದ ಪ್ರಕ್ರಿಯೆಗಳೂ ರೋಗವೈಜ್ಞಾನಿಕ ವಿಚಲನೆಗಳೂ ಸೇರಿರುತ್ತವೆ. ಈ ಕ್ಷೇತ್ರ ವಾಸ್ತವವಾಗಿ ವೈದ್ಯಶಾಸ್ತ್ರಕ್ಕೆ ಸೇರಿದ್ದು, ವೃದ್ಧರ ರೋಗಲಕ್ಷಣ, ಪರೀಕ್ಷೆ, ರೋಗನಿರೋಧ, ಔಷಧೋಪಚಾರ, ವೈದ್ಯೋಪಚಾರಗಳನ್ನು ಒಳಗೊಂಡಿರುವ ಈ ಶಾಸ್ತ್ರಕ್ಕೆ ಜೆರಿಯಾಟ್ರಿಕ್ಸ್ ಅಥವಾ ಜರಾರೋಗಶಾಸ್ತ್ರ ಎಂದು ಹೆಸರು.

3 ವೃದ್ಧಾಪ್ಯಕ್ಕೆ ಸಂಬಂಧಿಸಿದ ಮನೋವೈಜ್ಞಾನಿಕ ದೃಷ್ಟಿ.

4 ಜೀವಸಂದಣಿಯಲ್ಲಿ ವೃದ್ಧರ ಸಂಖ್ಯೆ ಅಪಾರವಾದಾಗ ತಲೆದೋರುವ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳು.

1. ಮುಪ್ಪಿಗೆ ಸಂಬಂಧಿಸಿದ ಜೈವಿಕ ದೃಷ್ಟಿ : ಮುಪ್ಪಾಗುವುದು ಎಲ್ಲ ಜೀವಿಗಳಲ್ಲಿ ಕಂಡುಬರುವ ಪ್ರಕೃತಿದತ್ತವಾದ ಒಂದು ಜೈವಿಕ ಪ್ರಕ್ರಿಯೆ. ಒಂದು ಜೀವಿಯ ಆಯುಷ್ಯ ವಿವಿಧ ಜೀವಿಗಳಲ್ಲಿ ಬಗೆಬಗೆಯಾಗಿರುತ್ತದೆ. ಕೆಲವು ಜಾತಿಯ ಆಮೆಗಳ ಸರಾಸರಿ ಆಯುಸ್ಸು 177 ವರ್ಷಗಳು. ಮಾನವರಲ್ಲಿ ಕೂಡ ನೂರು ವರ್ಷಗಳನ್ನು ದಾಟಿರುವ ಕೆಲವರನ್ನು ಕಾಣಬಹುದು. ಆದರೆ ಎಳೆವಯಸ್ಸಿನಲ್ಲಿಯೇ ಹಲವು ಬಗೆಯ ರೋಗಗಳಿಗೆ ಬಲಿಯಾಗುವುದರಿಂದಲೂ ಪೌಷ್ಟಿಕಾಹಾರವನ್ನು ಸೇವಿಸದೆ ಇರುವುದರಿಂದಲೂ ಮಾನವನ ಸರಾಸರಿ ಜೀವಿತಾವಧಿ ಕಡಿಮೆಯಾಗಿದೆ. ಅಂತೂ ಆನುವಂಶಿಕ ಗುಣವಿಶೇಷ, ಪೋಷಣೆ, ರೋಗ, ವಿಕಿರಣ, ದೇಹದ ತಾಪ ಮೊದಲಾದುವು ಸರಾಸರಿ ಆಯುಷ್ಯದ ಮೇಲೆ ಪ್ರಮುಖವಾಗಿ ಪ್ರಭಾವ ಬೀರುವ ಘಟಕಗಳು. ಕಡಿಮೆವರ್ಷಗಳ ಕಾಲ ಬದುಕುವ ದಂಪತಿಗಳಲ್ಲಿ ಹುಟ್ಟುವ ಮಕ್ಕಳ ಸರಾಸರಿ ಆಯುಷ್ಯ ಕಡಿಮೆಯಾಗುತ್ತದೆ. ಹಾಗೆಯೇ ಹೆಚ್ಚುವರ್ಷಗಳ ಕಾಲ ಬದುಕುವ ಸಾಮರ್ಥ್ಯವುಳ್ಳ ಕುಟುಂಬದಲ್ಲಿ ಹುಟ್ಟುವ ಮಕ್ಕಳು ದೀರ್ಘಕಾಲ ಬದುಕುತ್ತವೆ. ಪೌಷ್ಟಿಕಾಹಾರವನ್ನು ಸೇವಿಸುವವನ ಸರಾಸರಿ ಆಯುರ್ಮಾನ ಅಂಥ ಆಹಾರವನ್ನು ಸೇವಿಸದವನ ಆಯುರ್ಮಾನಕ್ಕಿಂತ ಬಹು ಉತ್ತಮವಾಗುತ್ತದೆ. ರೋಗನಿರೋಧಶಕ್ತಿ ಕೂಡ ಆನುವಂಶಿಕ. ಅಲ್ಲದೆ ರೋಗಗಳೂ ಆಯುಸ್ಸನ್ನು ಮೊಟಕುಗೊಳಿಸುತ್ತವೆ.

ಮಾನವರಲ್ಲಿ ವೃದ್ಧಾಪ್ಯ ಯಾವ ವಯಸ್ಸಿನಲ್ಲಿ ಪ್ರಾರಂಭವಾಗುತ್ತದೆ ಎನ್ನುವುದನ್ನು ನಿರ್ಧರಿಸುವುದು ಕಷ್ಟವಾದರೂ ಇದು ಮಾನವನ ವಯಸ್ಸಿನ 40–60 ವರ್ಷಗಳ ನಡುವಣ ಹಂತದಲ್ಲಿ ಯಾವಾಗಲಾದರೂ ಪ್ರಾರಂಭವಾಗಬಹುದು. ಈ ಹಂತದಲ್ಲಿ ಅಥವಾ ಇದಕ್ಕೂ ಮುನ್ನವೇ ಜೀವಿಯ ಅಂಗರಚನೆಗಳಲ್ಲಿ ಹಾಗೂ ದೇಹಕ್ರಿಯಾವಿಶೇಷಗಳಲ್ಲಿ ಕ್ರಮಕ್ರಮವಾಗಿ ಬದಲಾವಣೆಗಳು ಆರಂಭವಾಗುತ್ತವೆ. ಕಪ್ಪುಕೂದಲು ಬೆಳ್ಳಗಾಗುವುದು ಜರಾವಸ್ಥೆಯ ಪ್ರಾರಂಭ ಲಕ್ಷಣ. ಅಂಗಾಂಗಗಳ ಒಳಗೆ ಆಗುವ ಬದಲಾವಣೆಗಳಿಂದ ಮೇಲಿನ ಚರ್ಮ ಸುಕ್ಕು ಸುಕ್ಕಾಗುತ್ತದೆ. ಈ ಬದಲಾವಣೆಗಳಲ್ಲಿ ಕೆಲವು ಸಾಮಾನ್ಯವಾಗಿ ದೀರ್ಘಕಾಲ ನಿಧಾನವಾಗಿ ಮುನ್ನಡೆಯತಕ್ಕವು. ಆದ್ದರಿಂದಲೇ ಮುಪ್ಪಾಗುವಿಕೆಗೆ ಸಂಬಂಧಿಸಿದ ಸಮಸ್ಯೆ ಮತ್ತು ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಜೀವಕೋಶಗಳ ಹಾಗೂ ಅವುಗಳ ಒಳಗೆ ನಡೆಯುವ ಜೈವಿಕ ಪ್ರತಿಕ್ರಿಯೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ.

ಜೀವಕೋಶಗಳು ಬಹುಕೋಶಿಕ ಜೀವಿಗಳ ಅಂಗ ಅಂಗಾಂಶಗಳಲ್ಲಿ ಕಂಡುಬರುವ ಮೂಲಭೂತ ಘಟಕಗಳು. ಇವುಗಳ ಕ್ರಿಯಾ ಚಟುವಟಿಕೆಗಳು ಪೂರ್ವಾರ್ಧದಲ್ಲಿದ್ದಂತೆ ಉತ್ತರಾರ್ಧದಲ್ಲಿರುವುದಿಲ್ಲ. ಈ ಬದಲಾವಣೆಗೆ ಜೀವಕೋಶದಲ್ಲಿ ಹುದುಗಿರುವ ರಾಸಾಯನಿಕ ಕ್ರಿಯಾವಿನ್ಯಾಸದಲ್ಲಿ ಕ್ರಮಕ್ರಮವಾಗಿ ತಲೆದೋರುವ ಮಾರ್ಪಾಡುಗಳೇ ಕಾರಣ. ಈ ಮಾರ್ಪಾಟಿನ ಬಗ್ಗೆ ಜೀವಕೋಶಶಾಸ್ತ್ರಜ್ಞರು ಕಳೆದ 40–50 ವರ್ಷಗಳಿಂದ ಸಂಶೋಧನೆ ನಡೆಸಿ ಕಾರಣಗಳನ್ನು ಹುಡುಕುತ್ತಿದ್ದಾರೆ. ಇವರ ಸಂಶೋಧನೆ ತೃಪ್ತಿಕರವಾದ ಸಿದ್ಧಿಯನ್ನು ಪಡೆಯದಿದ್ದರೂ ಸಾಕಷ್ಟು ತಿಳಿವಳಿಕೆಯನ್ನು ನೀಡಿದೆ. ಅಲ್ಲದೆ ದೇಹಕ್ರಿಯಾತ್ಮಕ ಹಾಗೂ ಜೀವರಾಸಾಯನಿಕ ಅಧ್ಯಯನಗಳು ಜೀವಕೋಶಗಳ ಮುಪ್ಪು ಸಾವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿವೆ.

ಪ್ರತಿಯೊಂದು ಬಹುಕೋಶಿಕ ಜೀವಿಯೂ ಪ್ರಾರಂಭದಲ್ಲಿ ಒಂದೇ ಒಂದು ಜೀವಕೋಶದಿಂದ (ನಿಷೇಚಿತ ಅಂಡಾಣು) ತನ್ನ ಜೀವನವನ್ನು ಪ್ರಾರಂಭಿಸುತ್ತದೆ. ಈ ಜೀವಕೋಶ ಕ್ರಮ ಕ್ರಮವಾಗಿ ಎರಡು, ನಾಲ್ಕು, ಎಂಟು, ಹದಿನಾರು ಮುಂತಾಗಿ ವಿಭಜನೆಹೊಂದಿ ಬಹುಕೋಶಿಕ ಜೀವಿಯಾಗಿ ಪರಿವರ್ತನೆ ಹೊಂದುತ್ತದೆ. ಬೆಳೆವಣಿಗೆ ಮುಂದುವರಿದಂತೆ ಜೀವಕೋಶಗಳಲ್ಲಿ ವಿಭೇದನೆಯಾಗಿ, ನರ, ಸ್ನಾಯು, ರಕ್ತ ಮೊದಲಾದ ಜೀವಕೋಶಗಳು ರೂಪುಗೊಳ್ಳುತ್ತವೆ. ಕೊನೆಕೊನೆಗೆ ಜೀವನದ ಒಂದು ಹಂತದಲ್ಲಿ ಜೀವಕೋಶಗಳು ವಿದಲನ ಹೊಂದುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಆದರೆ ದೇಹದ ಕೆಲವೆಡೆ ಕೆಲವು ಜೀವಕೋಶಗಳು ಜೀವನಪರ್ಯಂತ ವಿದಲನವಾಗುವುದರಿಂದ ಅವುಗಳ ಸಂಖ್ಯೆ ಹೆಚ್ಚುತ್ತದೆ. ಜೀವಕೋಶಗಳಿಗೆ ವಯಸ್ಸಾದಂತೆ ಅವುಗಳ ಕಾರ್ಯನಿರ್ವಹಣಾ ಸಾಮರ್ಥ್ಯ ಕುಂದುತ್ತದೆ. ಕೊನೆಗೆ ಅವು ಸಾಯುತ್ತವೆ. ಅಂತೂ ಬೆಳೆವಣಿಗೆಯ ಹಂತದಲ್ಲಿ ಕಂಡುಬರುವ ಜೀವಕೋಶಗಳ ಉತ್ಪತ್ತಿಯ ಪ್ರಮಾಣ ವೃದ್ಧಾಪ್ಯದಲ್ಲಿರುವುದಿಲ್ಲ. ವೃದ್ಧಾಪ್ಯದಲ್ಲಿ ಜೀವಕೋಶಗಳ ಇಳಿಮುಖದ ಉತ್ಪತ್ತಿಗೆ ಜೀವಕೋಶಗಳಲ್ಲಿ ದೇಹಕ್ರಿಯಾಶಕ್ತಿ ಕುಂದುವುದೇ ಕಾರಣ. ಈ ಕ್ರಿಯಾಶಕ್ತಿಯನ್ನು ಉತ್ತಮಪಡಿಸಿದ್ದೇ ಆದರೆ ಸಾವನ್ನು ಹೆಚ್ಚು ಕಾಲ ಮುಂದೂಡಬಹುದು, ಜೀವನವನ್ನೇ ಮಾರ್ಪಡಿಸಬಹುದು.

ಜೀವಕೋಶಗಳ ವಿಭಜನೆಯ ಸಂಯಂತ್ರದಲ್ಲಿ ಬದಲಾವಣೆಗಳಾಗಬೇಕಾದರೆ, ಪರಿಸರದ ಲೋಪದೋಷಗಳು ಕಾರಣವಿರಬೇಕೆಂದೂ ತತ್ಫಲವಾಗಿ ಜೀವಕೋಶಗಳಿಗೆ ಮುಪ್ಪು ಮತ್ತು ಸಾವು ಪ್ರಾಪ್ತವಾಗುತ್ತದೆಯೆಂದೂ ಅಲೆಕ್ಸಿಸ್ ಕ್ಯಾರೆಲ್ ಪ್ರಯೋಗಾತ್ಮಕವಾಗಿ ತೋರಿಸಿಕೊಟ್ಟಿದ್ದಾನೆ. ಅವನು ಕೋಳಿಯ ಭ್ರೂಣದ ಹೃದಯದಿಂದ ತೆಗೆದ ಜೀವಕೋಶಗಳನ್ನು ಪೋಷಕಮಾಧ್ಯಮದಲ್ಲಿಟ್ಟು 34 ವರ್ಷಗಳ ಕಾಲ ಬೆಳೆಸಿ ನೋಡಿದ್ದಾನೆ. ಇಂಥ ಜೀವಕೋಶಗಳು ಮೂಲಜೀವಕೋಶಗಳಷ್ಟೇ ಚಟುವಟಿಕೆಯಿಂದ ವಿಭಜನೆ ಹೊಂದುವ ಸಾಮರ್ಥ್ಯವನ್ನು ಉಳಿಸಿಕೊಂಡಿರುತ್ತವೆಂದು ತೋರಿಸಿಕೊಟ್ಟಿದ್ದಾನೆ. ಅಂದರೆ ಸೂಕ್ತ ಪರಿಸರದಲ್ಲಿ ಎಲ್ಲ ಜೀವಕೋಶಗಳೂ ಅಮರವಾಗಿರುತ್ತವೆಂಬುದು ಈ ಪ್ರಯೋಗದ ತಿರುಳು. ಪೋಷಕ ಮಾಧ್ಯಮದ ಸ್ವಚ್ಛತೆಯನ್ನು ಉಳಿಸಿಕೊಳ್ಳಲು ಮಾಧ್ಯಮವನ್ನು ಎರಡು ದಿನಗಳಿಗೊಮ್ಮೆ ಬದಲಾಯಿಸುತ್ತಿರಬೇಕು. ಪರಿಸರ ಮಾಧ್ಯಮದಲ್ಲಿ ಚಯಾಪಚಯ ಕ್ರಿಯೆಯ ಉತ್ಪನ್ನಗಳು ಸಂಗ್ರಹವಾಗುವುದರಿಂದ ಜೀವಕೋಶಗಳ ಬದುಕಿನ ಕ್ರಿಯಾವಿನ್ಯಾಸದಲ್ಲಿ ಅಡೆತಡೆಗಳಾಗುತ್ತವೆ. ಬಾಹ್ಯ ಮತ್ತು ಪರಿಸರದ ಕ್ರಿಯಾವಿನ್ಯಾಸಗಳಲ್ಲಿ ಏರುಪೇರಾದರೆ ಜೀವಕೋಶಗಳ ಸಾವಿಗೆ ನಾಂದಿಯಾಗುತ್ತದೆ.

ಅಂತೂ ದೇಹದೊಳಗಿನ ಜೀವಕೋಶಗಳ ಸಾವಿಗೆ ಆಕ್ಸಿಜನ್ ಹಾಗೂ ಪೋಷಕಾಂಶಗಳ ಸರಬರಾಜಿನಲ್ಲಿ ಅಡೆತಡೆಗಳುಂಟಾಗುವುದೇ ಕಾರಣ. ಜೀವಕೋಶದ ಸಾವಿನ ಬಗ್ಗೆ ವಿಜ್ಞಾನಿಗಳು ಮೂರು ಪರಿಕಲ್ಪನೆಗಳನ್ನು ಮುಂದಿಟ್ಟಿದ್ದಾರೆ:

(a) ದೇಹದಲ್ಲಿರುವ ಜೀವಕೋಶಗಳಿಗೆ ಆಗಾಗ್ಗೆ ಕೆಲವು ಅತ್ಯಗತ್ಯವಾದ ವಸ್ತುಗಳ ಕೊರತೆಯುಂಟಾಗುತ್ತದೆ, ಆಗ ಜೀವಕೋಶಗಳು ದಣಿದು ಸಾಯುತ್ತವೆ.

(b) ಜೀವಕೋಶಗಳ ಚಯಾಪಚಯಕ್ರಿಯೆಗೆ ಅತ್ಯಗತ್ಯವಾದ ಪ್ರೋಟೀನು ಅಣುಗಳ ರಾಸಾಯನಿಕ ಕ್ರಿಯೆಗಳಲ್ಲಿ ಲೋಪದೋಷಗಳು ತಲೆದೋರುವುದರಿಂದ ಜೀವಕೋಶಗಳ ಸಾವಿಗೆ ಕಾರಣವಾಗುತ್ತದೆ.

(c) ಜೀವಕೋಶದಲ್ಲಿ ಹುದುಗಿರುವ ಜೀನ್ಯಾತ್ಮಕ ವಸ್ತುವಾದ ಡಿಆಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲದಲ್ಲಿ (ಡಿಎನ್‌ಎ) ಲೋಪದೋಷಗಳುಂಟಾಗಿ, ಅದರ ಕ್ರಿಯಾವಿಶೇಷದಲ್ಲಿ ನ್ಯೂನತೆಗಳು ತುಂಬಿ ದೋಷಪೂರ್ಣವಾದ ಹೊಸ ಹೊಸ ಎಂಜೈಮುಗಳು ಉತ್ಪತ್ತಿಯಾಗುವುದರಿಂದ ಜೀವಕೋಶಗಳು ಮುದಿಯಾಗಿ ಕೊನೆಗೆ ಸಾಯುತ್ತವೆ.

2. ಮುಪ್ಪಿಗೆ ಸಂಬಂಧಿಸಿದ ದೇಹಕ್ರಿಯಾತ್ಮಕ ಅಧ್ಯಯನಗಳು : ದೇಹಕ್ಕೆ ವಯಸ್ಸಾದಂತೆ ಅಂಗಮಂಡಲದ ಕ್ರಿಯಾವಿಶೇಷಗಳು ಕ್ರಮಕ್ರಮವಾಗಿ ಕುಂದುತ್ತ ಬರುತ್ತವೆ. ಹೀಗೆ ಕುಂದಲು ಪ್ರಾರಂಭಿಸುವುದು ಪ್ರಾಯಶಃ 30–35ನೆಯ ವಯಸ್ಸಿನಲ್ಲಿ. ಕಣ್ಣಿನ ದೃಷ್ಟಿ ಮಂದವಾಗುತ್ತ ಬರುತ್ತದೆ. ಹಲವು ಸಂದರ್ಭಗಳಲ್ಲಿ ನಲವತ್ತು ವರ್ಷ ವಯಸ್ಸಾದರೆ ಕನ್ನಡಕವನ್ನು ಧರಿಸುವುದು ಅನಿವಾರ್ಯವಾಗುತ್ತದೆ. ಓಡಾಡುವುದರಲ್ಲಿ ಚುರುಕುತನ ಕಡಿಮೆಯಾಗುತ್ತ ಬರುತ್ತದೆ. ಜೀರ್ಣಶಕ್ತಿ, ಗ್ರಹಣಸಾಮರ್ಥ್ಯ, ರೋಗನಿರೋಧಕ ಸಾಮರ್ಥ್ಯ, ಇಮ್ಯೂನಿಟಿ ಕಡಿಮೆಯಾಗುತ್ತ ಬರುತ್ತವೆ. ಪರಿಸರದ ಬದಲಾವಣೆಗಳಿಗೆ ತೋರುವ ಪ್ರತಿಕ್ರಿಯೆಯ ತೀಕ್ಷ್ಣತೆ ಕೂಡ ಕುಂಠಿತವಾಗುತ್ತದೆ. ಈ ಬದಲಾವಣೆಗಳು ಸಾಮಾನ್ಯವಾಗಿ ಕ್ರಮಕ್ರಮವಾಗಿ ತಲೆದೋರುತ್ತವೆಯೇ ಹೊರತು ದಿಢೀರನೆ ಪ್ರಕಟವಾಗುವುದು ಅಪರೂಪ.

ವೃದ್ಧಾಪ್ಯವನ್ನು ರೋಗವೆಂದು ಪರಿಗಣಿಸುವುದು ತಪ್ಪು. ಜರಾವಸ್ಥೆ ಜೀವನದ ಕೊನೆಯಲ್ಲಿನ ಇಳಿಮುಖದ ಬೆಳವಣಿಗೆ. ಕೆಲವು ಕಾಯಿಲೆಗಳು–ಆರ್ಟೀರಿಯೋಸ್ಕ್ಲೀರೋಸಿಸ್ ಅಥವಾ ಅಪಧಮನಿಗಳ ಕಾಠಿಣ್ಯ; ಹೈಪರ್‌ಟೆನ್ಷನ್ ಅಥವಾ ತೀವ್ರರಕ್ತದ ಒತ್ತಡ, ಮಧುಮೇಹ (ಸಿಹಿಮೂತ್ರರೋಗ), ವಾತರೋಗ, ಸಂಧಿವಾಯು, ಶ್ರೋಣಿತವಾತ, ಏಡಿಗಂತಿ, ಕಣ್ಣುಪೊರೆ–ಇವು ವೃದ್ಧರಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಇವು ವೃದ್ಧರಿಗೆ ಮಾತ್ರ ಸೀಮಿತವಾದುವಲ್ಲ. ಜರಾಶಾಸ್ತ್ರದ ವ್ಯಾಪ್ತಿಯಲ್ಲಿ ಮುದುಕರ ಆರೋಗ್ಯ ಮತ್ತು ಮುದುಕರ ರೋಗರುಜಿನಗಳಲ್ಲದೆ ಪ್ರಸಾಮಾನ್ಯ ವೃದ್ಧರಲ್ಲಿ ಕಂಡುಬರುವ ಬದಲಾವಣೆಗಳನ್ನು ಅಧ್ಯಯನ ಮಾಡಬಹುದು. ಪ್ರಸಾಮಾನ್ಯ ವೃದ್ಧಾಪ್ಯದ ಕ್ರಿಯಾವಿಶೇಷಗಳಲ್ಲಿ ಕಂಡುಬರುವ ಸೂಕ್ಷ್ಮ ಬದಲಾವಣೆಗಳನ್ನು ಗುರುತಿಸಲು ಪ್ರಯತ್ನಿಸಬಹುದು. ಈ ರೋಗಗಳನ್ನು ಸಂಪೂರ್ಣವಾಗಿ ವಾಸಿಮಾಡಲು ಸಾಧ್ಯವಾಗದಿದ್ದರೂ ಅವುಗಳ ತೀವ್ರತೆಯನ್ನು ತಡೆಗಟ್ಟುವ ಅಥವಾ ಶಮನಗೊಳಿಸುವ ಪ್ರಯತ್ನಗಳನ್ನು ನಡೆಸಬಹುದು. ಅಲ್ಲದೆ ನಿತ್ರಾಣಗೊಳಿಸುವ ಕಾಯಿಲೆಗಳ ತೀವ್ರತೆಯನ್ನು ದುರ್ಬಲಗೊಳಿಸಬಹುದು.

ಹೃದಯಸಂಬಂಧದ ಹಾಗೂ ರಕ್ತಪರಿಚಲನೆಗೆ ಸಂಬಂಧಿಸಿದ ಕಾಯಿಲೆಗಳಾದ ಅಪಧಮನಿಗಳ ಕಾಠಿಣ್ಯ ಮತ್ತು ತೀವ್ರ ರಕ್ತದ ಒತ್ತಡಗಳು ವೃದ್ಧಾಪ್ಯಪೂರ್ವದಲ್ಲಿಯೇ ಕಾಣಿಸಿಕೊಳ್ಳುವುದುಂಟು. ಈ ಕಾಯಿಲೆಗಳು ಮಧ್ಯವಯಸ್ಸು ದಾಟಿದ ಗಂಡಸರು ಹೆಂಗಸರೆನ್ನದೆ ಬಲಿತೆಗೆದುಕೊಳ್ಳುತ್ತವೆ. ಇವುಗಳಿಂದುಂಟಾಗುವ ಮರಣಸಂಖ್ಯೆ ಇತರ ಕಾರಣಗಳಿಂದ ಉಂಟಾಗುವ ಮರಣಸಂಖ್ಯೆಗಿಂತಲೂ ಹಿರಿದು.

ಜರಾವಸ್ಥೆಯ ಕಾಯಿಲೆಗಳಲ್ಲಿ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದು.

(a) ವೃದ್ಧಾಪ್ಯಕ್ಕೆ ಸಂಬಂಧಿಸಿದ ರೋಗಗಳಿಗೆ ದೇಹದೊಳಗಣ ದೇಹಕ್ರಿಯಾ ಲೋಪದೋಷಗಳು ಕಾರಣವೇ ವಿನಃ ಬಾಹ್ಯಪರಿಸರದ ಸೋಂಕುಕಾರಕಗಳಲ್ಲ.

(b) ಅಂಗಕ್ಷಯ ಕಾಯಿಲೆಗಳು ವ್ಯಕ್ತಿಯನ್ನು ಬಹುದೀರ್ಘಕಾಲ ನಿತ್ರಾಣಗೊಳಿಸುತ್ತವೆ.

(c) ವೃದ್ಧರಲ್ಲಿ ಒಂದಕ್ಕಿಂತಲೂ ಹೆಚ್ಚಿನ ರೋಗಗಳು ಒಮ್ಮೆಗೇ ತಲೆದೋರುತ್ತವೆ.

ಆದಕಾರಣ ವೈದ್ಯನಾದವ ಬಹುಮುಖದ ಕ್ರಿಯಾವಿನ್ಯಾಸವನ್ನು ತಹಬಂದಿಗೆ ತರುವ ಪ್ರಯತ್ನ ಮಾಡಬೇಕಾಗುತ್ತದೆ. ಜರಾವಸ್ಥೆಯ ಹಲವು ರೋಗಗಳು ಪ್ರಕಟವಾಗುವುದಕ್ಕೆ ಹಲವು ವರ್ಷಗಳ ಹಿಂದೆಯೇ ಅಂದರೆ 2–20 ವರ್ಷಗಳ ಕಾಲ ಶರೀರದಲ್ಲಿ ಗುಪ್ತವಾಗಿ ಹುದುಗಿರುತ್ತವೆ. ಈ ಕಾರಣದಿಂದಲೇ ಇವುಗಳ ಸೂಚನೆ ಯಾವುದೂ ವೃದ್ಧರಲ್ಲಿ ಕಂಡುಬರುವುದಿಲ್ಲ. ಅನೇಕ ವೇಳೆ ವೈದ್ಯ ಬೇರೆ ಬೇರೆ ಕಾಯಿಲೆಗಳನ್ನು ಗುಣಪಡಿಸುವಾಗ ಇವು ಪ್ರಕಟವಾಗಬಹುದು.

ವೃದ್ಧಾಪ್ಯದಲ್ಲಿ ವಿಶಿಷ್ಟವಾದ ಕಾಯಿಲೆಗಳಲ್ಲದೆ ಇಳಿವಯಸ್ಸಿನ ಪ್ರಬಲ ಶತ್ರುಗಳಿಂದ ಕೊಬ್ಬುದೇಹ, ಡೊಳ್ಳು ಹೊಟ್ಟೆ ಇವೂ ಕಾಣಿಸಿಕೊಳ್ಳುತ್ತವೆ. ಆದ್ದರಿಂದ 30–40 ವರ್ಷ ದಾಟಿದ ಮಾನವ ತನ್ನ ದೇಹದಲ್ಲಿ ಹೆಚ್ಚು ಕೊಬ್ಬನ್ನು ಬೆಳೆಸಿಕೊಳ್ಳದೇ ಇರುವುದು ಒಳ್ಳೆಯದು. ಮುಪ್ಪಿನಲ್ಲಿ ತಲೆದೋರುವ ಅಂಗಸಂಬಂಧದ ಹಾಗೂ ಅಂಗಗಳನ್ನು ಕ್ಷೀಣಿಸುವ ಕಾಯಿಲೆಗಳ ಬಗ್ಗೆ ವೈದ್ಯರ ಸಲಹೆಗಳನ್ನು ನಡುವಯಸ್ಸು ದಾಟಿದವ ಆಗಾಗ್ಗೆ ಪಡೆಯುತ್ತಿರುವುದು ಒಳ್ಳೆಯದು. ಇದರಿಂದ ವೃದ್ಧಾಪ್ಯದಲ್ಲಿ ತಲೆಯೆತ್ತುವ ರೋಗಗಳನ್ನು ಹತೋಟಿಯಲ್ಲಿಡಲು ಸಾಧ್ಯವಾಗುತ್ತದೆ.

3. ವೃದ್ಧಾಪ್ಯದ ಬಗ್ಗೆ ಮನೋವೈಜ್ಞಾನಿಕ ದೃಷ್ಟಿ: ವೃದ್ಧಾಪ್ಯ ಪ್ರಾಪ್ತವಾದ ಮೇಲೆ ಬಾಹ್ಯ ಪರಿಸರದ ಪ್ರಚೋದನೆಗಳಿಗೆ ತೀಕ್ಷ್ಣವಾದ ಪ್ರತಿಕ್ರಿಯೆ ತೋರಿಸುವುದು ಕಡಿಮೆಯಾಗುತ್ತದೆ. ಶ್ರವಣ ಹಾಗೂ ದೃಷ್ಟಿ ಸಾಮರ್ಥ್ಯಗಳು ಕಡಿಮೆಯಾಗುತ್ತವೆ. ಬೌದ್ಧಿಕ, ಮಾನಸಿಕ ಮತ್ತು ಭಾವೋದ್ರೇಕ ಸಂಬಂಧಗಳಲ್ಲಿ ಬದಲಾವಣೆಗಳಾಗುತ್ತವೆ. ಕಲಿಕೆಯ ಸಾಮರ್ಥ್ಯ ಎಳೆಯ ವಯಸ್ಸಿನಲ್ಲಿರುವಷ್ಟು ತೀಕ್ಷ್ಣವಾಗಿರುವುದಿಲ್ಲವೆಂದು ಮನೋವಿಜ್ಞಾನಿಗಳ ಅಭಿಪ್ರಾಯ. ವೃದ್ಧರಲ್ಲಿ ದೇಹದ ಬೆಳವಣಿಗೆಯ ವೇಗ ಕಡಿಮೆಯಾದರೂ ತಾಳ್ಮೆ ಮತ್ತು ಸಹನಾಶಕ್ತಿ ಹೆಚ್ಚುತ್ತವೆ. ವೃದ್ಧರ ತೀರ್ಮಾ ಯುವಕರ ತೀರ್ಪಿಗಿಂತ ತೃಪ್ತಿಕರವಾಗಿರುತ್ತದೆ.

ವೃದ್ಧಾಪ್ಯದಲ್ಲಿ ಜನರ ದೇಹಶಕ್ತಿ ಮತ್ತು ಹಣಗಳಿಕೆಯ ಸಾಮರ್ಥ್ಯ ಕಡಿಮೆ ಯಾಗುವುದರಿಂದ ಯುವಜನದ ಪರಿಸರದಲ್ಲಿ ವೃದ್ಧರು ಹೊಂದಾಣಿಕೆಯಾಗಬೇಕಾಗುತ್ತದೆ. ಯುವಜನಾಂಗ ವೃದ್ಧರ ಹೊರೆ ಹೊರಬೇಕಾಗುತ್ತದೆ. ಒಂದು ಕಾಲಕ್ಕೆ ಅವರ ಮಾತಿಗೆ ಬೆಲೆಯಿರುತ್ತದೆ. ಆದರೆ ವೃದ್ಧಾಪ್ಯಕ್ಕೆ ಕಾಲಿಟ್ಟಮೇಲೆ ಅವರ ಮಾತಿಗೆ ಬೆಲೆಯಿಲ್ಲವಾಗಬಹುದು. ಅಂಥ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಶಕ್ತಿ ಅವರಿಗಿದ್ದರೆ ಸಮಾಜದಲ್ಲಿ ಶಾಂತಿಯಿರುತ್ತದೆ. ಆದ್ದರಿಂದ ವೃದ್ಧರು ಬದಲಾಗುವ ಪರಿಸರಕ್ಕೆ ಹೊಂದಿಕೊಳ್ಳುವುದು ಲೇಸು.

4. ಸಾಮಾಜಿಕ ಹಾಗೂ ಅರ್ಥಿಕ ಸಮಸ್ಯೆ : ವೃದ್ಧಾಪ್ಯ ಸಮಾಜದ ಸಮಸ್ಯೆಯೂ ಹೌದು. ಅರ್ಥಿಕ ಪ್ರಶ್ನೆಯೂ ಹೌದು. ಇದು ಇತ್ತೀಚಿನ ದಶಕಗಳಲ್ಲಿ ಜಟಿಲವಾಗಲು ಪ್ರಾರಂಭಿಸಿದೆ. ಇದಕ್ಕೆ ಸಮಾಜದಲ್ಲಿ ವೃದ್ಧರ ಸಂಖ್ಯೆ ಅಧಿಕವಾಗುತ್ತಿರುವುದೇ ಕಾರಣ. ಏಕೆಂದರೆ ಹುಟ್ಟಿದ ಮಗುವಿನ ಸರಾಸರಿ ಜೀವನ ಅವಧಿ ಅಥವಾ ಆಯುರ್ಮಾನ ಪ್ರಪಂಚಾದ್ಯಂತ ಅಧಿಕವಾಗಿದೆ. ಭಾರತದಲ್ಲಿ ಹುಟ್ಟಿದ ಮಗುವಿನ ಜೀವನದ ಅವಧಿ 1910–11ರಲ್ಲಿ 23 ವರ್ಷಗಳಿದ್ದು 1951–61 ರಲ್ಲಿ 45ಕ್ಕೆ ಏರಿದೆ. ಜೀವನದ ಅವಧಿಯ ಏರಿಕೆ ಮುಂದುವರಿದ ರಾಷ್ಟ್ರಗಳಲ್ಲಂತೂ ಇನ್ನೂ ಗಮನಾರ್ಹವಾಗಿದೆ. ಅಮೇರಿಕ ಸಂಯುಕ್ತಸಂಸ್ಥಾನಗಳಲ್ಲಿ 1850ರಲ್ಲಿ ಹುಟ್ಟಿದ ಮಗುವಿನ ಸರಾಸರಿ ಜೀವನದ ಅವಧಿ 39 ವರ್ಷಗಳಿದ್ದು, ಇದು 1960ರಲ್ಲಿ 69ಕ್ಕೆ ಏರಿತು. ಅಲ್ಲದೆ ಅಂಕಿ ಅಂಶಗಳ ಪ್ರಕಾರ ಅಲ್ಲಿ ಈ ಶತಮಾನದ ಪೂರ್ವಾರ್ಧದಲ್ಲಿಯೇ ಒಟ್ಟು ಜನಸಂಖ್ಯೆ ಎರಡರಷ್ಟೂ 65 ವರ್ಷ ಮೇಲ್ಪಟ್ಟವರ ಸಂಖ್ಯೆ ನಾಲ್ಕು ಪಟ್ಟು ಏರಿದೆ. ಇದರಿಂದ ಸಮಾಜದಲ್ಲಿ ವೃದ್ಧರ ಸಂಖ್ಯೆ ಗಣನೀಯವಾಗಿ ಏರಲೇಬೇಕು. ಮುಂದುವರಿದ ರಾಷ್ಟ್ರವೆನಿಸಿಕೊಂಡಿರುವ ಫ್ರಾನ್ಸಿನಲ್ಲಿ 60ರ ದಶಕದಲ್ಲಿ 65 ವರ್ಷ ದಾಟಿದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ.12 ಇತ್ತು. ಹಿಂದುಳಿದ ರಾಷ್ಟ್ರಗಳಲ್ಲಿ ಇದು ಶೇ.3–4 ಇರಬಹುದು. ಕಳೆದ ಒಂದು ಶತಮಾನದಿಂದಲೂ ವೈದ್ಯಕೀಯ ರಂಗದಲ್ಲಿ ನಡೆದಿರುವ ಸಂಶೋಧನೆಗಳು ಶಿಶುಗಳ ಹಾಗೂ ಬಾಲಕ ಬಾಲಕಿಯರ ಸೋಂಕುಕಾರಕ ಕಾಯಿಲೆಗಳನ್ನು ತಡೆಗಟ್ಟಿರುವುದೇ ಈ ಬದಲಾವಣೆಗೆ ಕಾರಣ. ಅದರೆ ಇಲ್ಲಿ ಒಂದು ಅಂಶವನ್ನು ಗಮನಿಸುವುದು ಲೇಸು. ವೈದ್ಯಕೀಯ ಸಂಶೋಧನೆಗಳು ಎಳೆ ವಯಸ್ಸಿನವರ ಅಕಾಲಮರಣವನ್ನು ತಡೆಗಟ್ಟಿರುವಂತೆ ಇಳಿ ವಯಸ್ಸಿನವರ ರೋಗರುಜಿನಗಳನ್ನು ನಿವಾರಿಸಲು ಸಾಧ್ಯವಾಗಿಲ್ಲ. ಏಕೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 1850ರಲ್ಲಿ ಒಬ್ಬ ಮನುಷ್ಯ 60 ವರ್ಷ ಬದುಕಿದ್ದರೆ ಅವನು ಮುಂದೆ ಸರಾಸರಿ 16 ವರ್ಷ ಬದುಕಿ ತನ್ನ 76ನೆಯ ವಯಸ್ಸಿನಲ್ಲಿ ಸಾಯುತ್ತಿದ್ದ. ಆದರೆ 1957ರಲ್ಲಿ ಅದೇ ವಯಸ್ಸಿನ ಮನುಷ್ಯ ಮುಂದೆ ಸರಾಸರಿ 17 ವರ್ಷ ಬಾಳುವಂತಾಯಿತು. ಅಂದರೆ ಒಂದು ಶತಮಾನದ ಕಾಲದಲ್ಲಿ ಹುಟ್ಟಿದ ಮಗುವಿನ ಸರಾಸರಿ ಜೀವನದ ಅವಧಿ 30 ವರ್ಷಗಳು ಹೆಚ್ಚಾದರೆ, 60 ವರ್ಷದವರಲ್ಲಿ ಅದು ಕೇವಲ ಒಂದು ವರ್ಷ ಹೆಚ್ಚಾದಂತಾಯಿತು. ಕಳೆದ ಕೆಲವು ದಶಕಗಳಲ್ಲಿ ಆಯುರ್ನಿರೀಕ್ಷೆ ಹೆಚ್ಚಾಗಿದೆ. ಅಮೆರಿಕದಲ್ಲಿ 1900 ರಲ್ಲಿ 65 ವರ್ಷದವರು ಶೇ.4 ರಷ್ಟಿದ್ದು, 2000 ದಲ್ಲಿ ಅದರ ಸಂಖ್ಯೆ ಶೇ.12 ರಷ್ಟಿದೆ. 2000ದಲ್ಲಿ ಅಮೆರಿಕದಲ್ಲಿ ಹಿರಿಯ ನಾಗರಿಕರ ಸಂಖ್ಯೆ 35 ಮಿಲಿಯನ್ ಇದ್ದರೆ, ಭಾರತದಲ್ಲಿ 90 ಮಿಲಿಯನ್ ಇದ್ದರು.

ಸಮಾಜದಲ್ಲಿ ವೃದ್ಧರ ಸಂಖ್ಯೆ ಹೆಚ್ಚಿದಂತೆ ವೈಯುಕ್ತಿಕ, ಅರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಜಟಿಲವಾಗಿ ಅಧಿಕಗೊಳ್ಳುತ್ತವೆ. ಚಟುವಟಿಕೆಯಿಂದ ಜೀವನ ಸಾಗಿಸದವರನ್ನು ಇಳಿವಯಸ್ಸಿನಲ್ಲಿ ಬದಲಾಗುತ್ತಿರುವ ಜಗತ್ತಿಗೆ ಉಪಯೋಗಿಸಿಕೊಳ್ಳುವ ವಿಧಿವಿಧಾನಗಳನ್ನು ಸಮಾಜಶಾಸ್ತ್ರಜ್ಞರು ಕಂಡುಹಿಡಿಯಬೇಕಾಗುತ್ತದೆ. ದೃಢಕಾಯರಾದ ವೃದ್ಧರಿಗೆ ಸೂಕ್ತವಾದ ಉದ್ಯೋಗಗಳನ್ನು ಕಲ್ಪಿಸಬೇಕಾಗುತ್ತದೆ. ಇಲ್ಲವಾದಲ್ಲಿ ಅವರ ಹೊರೆ ಅವರ ಮಕ್ಕಳ ಮೇಲೆ ಅಥವಾ ಅವರಿಗಿಂತ ಚಿಕ್ಕ ವಯಸ್ಸಿನವರ ಮೇಲೆ ಬೀಳುತ್ತದೆ. ಅಲ್ಲದೆ ಹಲವು ಸಂದರ್ಭಗಳಲ್ಲಿ ವೃದ್ಧಾಪ್ಯದಲ್ಲಿ ತಮ್ಮ ಜೀವನಕ್ಕೆ ಬೇಕಾಗುವಷ್ಟು ಸಂಪಾದಿಸಿಕೊಳ್ಳುವ ಸಾಮರ್ಥ್ಯ ಕಡಿಮೆ ಆಗಿರುವುದು. ಅವರಿಗೆ ವಯಸ್ಸು ಹೆಚ್ಚಾದಂತೆ ಓಡಾಡುವುದು, ದೈನಂದಿನ ಕೆಲಸಕಾರ್ಯಗಳನ್ನು ಮಾಡುವುದು ಕಠಿಣವೆನಿಸುತ್ತದೆ. ಇದರಿಂದ ಇವರು ಯುವ ಸಮಾಜಕ್ಕೆ ಹೊರೆಯಾಗುತ್ತಾರೆ. ವೃದ್ಧಾಪ್ಯವೇತನಗಳನ್ನು ಕಲ್ಪಿಸುವುದು, ವಸತಿ ಗೃಹಗಳನ್ನು ನಿರ್ಮಿಸುವುದು, ರೋಗಗ್ರಸ್ತ ಮುದುಕರಿಗೆ ಔಷಧೋಪಚಾರಗಳನ್ನು ನಡೆಸುವುದು ಸಮಾಜದ ಕರ್ತವ್ಯವಾಗುತ್ತದೆ. ಈ ಹೊರೆಯನ್ನು ಸರ್ಕಾರ ಹೊರಬೇಕಾಗುತ್ತದೆ.

ವೃದ್ಧರ ಸಮಸ್ಯೆ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಜಟಿಲವಾಗಿದೆ. ಇದಕ್ಕಾಗಿ ಅಲ್ಲಿಯ ಸರ್ಕಾರಗಳು ವೃದ್ಧರಿಗಾಗಿ ಯೋಗ್ಯ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿವೆ. ಜೀವವಿಮಾ ಸಂಸ್ಥೆಗಳು, ರಾಸಾಯನಿಕ ಹಾಗೂ ಔಷಧಾಗಾರಗಳು ಹೆಚ್ಚು ಹಣ ವ್ಯಯಮಾಡಿ ವೃದ್ಧರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದು ಅವರ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಿಸುತ್ತಿವೆ. (ಬಿ.ಎಸ್.ಬಿ.)

**ಜರಾಸಂಧ :** ಬೃಹದ್ರಥನ ಮಗ. ಮಗಧ ದೇಶದ ದೊರೆ. ಆದ್ದರಿಂದ ಇವನಿಗೆ ಮಾಗಧನೆಂದೂ ಹೆಸರು. ಗಿರಿವ್ರಜ ಈತನ ರಾಜಧಾನಿ.

ಬೃಹದ್ರಥ ಕಾಶಿರಾಜನ ಅವಳಿ ಜವಳಿ ಹೆಣ್ಣುಮಕ್ಕಳನ್ನು ವಿವಾಹವಾಗಿದ್ದ. ಬಹಳ ಕಾಲ ಅವನಿಗೆ ಮಕ್ಕಳಾಗಲಿಲ್ಲ. ಪುತ್ರೇಚ್ಛೆಯಿಂದ ಒಂದು ದಿನ ಅರಣ್ಯಕ್ಕೆ ಹೋಗಿ, ಮಾವಿನ ಮರದಡಿಯಲ್ಲಿ ತಪೋನಿರತನಾಗಿದ್ದ ಮಹರ್ಷಿ ಚಂಡಕೌಶಿಕನಲ್ಲಿ ತನ್ನ ವ್ಯಥೆಯನ್ನು ನಿವೇದಿಸಿದ. ಮಹರ್ಷಿ ಆಗ ತಾನೆ ಬಿದ್ದ ಒಂದು ಮಾವಿನಹಣ್ಣನ್ನು ಅಭಿಮಂತ್ರಿಸಿ ರಾಜನಿಗಿತ್ತು ಅದನ್ನು ರಾಣಿಗೆ ಕೊಡಲು ಹೇಳಿದ. ರಾಜ ಆ ಹಣ್ಣನ್ನು ರಾಣಿಯರಿಬ್ಬರಿಗೂ ಸಮಾನವಾಗಿ ಹಂಚಿಕೊಟ್ಟ. ಇಬ್ಬರೂ ಆ ಹಣ್ಣನ್ನು ಸೇವಿಸಿ ಗರ್ಭಿಣಿಯರಾಗಿ ಒಂದೇ ಶಿಶುವಿನ ಎರಡು ಸೀಳುಗಳನ್ನು ಬೇರೆ ಬೇರೆಯಾಗಿ ಹೆತ್ತರು. ತಮ್ಮ ದುರ್ದೈವಕ್ಕೆ ಮರುಗುತ್ತ ನಿಷ್ಪ್ರಯೋಜಕವಾಗಿದ್ದ ಶಿಶುಭಾಗಗಳನ್ನು ದಾದಿಯರ ಮೂಲಕ ತಿಪ್ಪೆಗೆ ಬಿಸಾಡಿದರು. ಅಲ್ಲಿದ್ದ ಜರೆಯೆಂಬ ರಾಕ್ಷಸಿ ಶಿಶುವಿನ ಎರಡು ಭಾಗಗಳ್ನೂ ಸರಿಯಾಗಿ ಜೋಡಿಸಿದೊಡನೆಯೇ ಮಗುವಿಗೆ ಜೀವಬಂದು ಗಟ್ಟಿಯಾಗಿ ಅಳಲು ಪ್ರಾರಂಭಿಸಿತು. ಎರಡು ಹೋಳು ಸೇರಿ ಆದ್ದರಿಂದ ಅದಕ್ಕೆ ಜರಾಸಂಧ ಎಂದು ಹೆಸರಾಯಿತು. ಬೃಹದ್ರಥ ಮಗುವನ್ನು ತರಿಸಿ ಅರಮನೆಯಲ್ಲಿ ಬೆಳೆಸಿದನಲ್ಲದೆ ಪ್ರಾಪ್ತವಯಸ್ಕನಾದೊಡನೆಯೇ ಆತನಿಗೆ ಪಟ್ಟಕಟ್ಟಿ ತಾನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದ.

ಜರಾಸಂಧ ಪರಾಕ್ರಮಿ. ಪಟ್ಟಕ್ಕೆ ಬಂದ ಕೂಡಲೆ ದಿಗ್ವಿಜಯ ಮಾಡಿ ಅನೇಕ ರಾಜರನ್ನು ಗೆದ್ದನಲ್ಲದೆ ಸೆರೆಸಿಕ್ಕಿದ ರಾಜಪುತ್ರರನ್ನು ಸೆರೆಮನೆಯಲ್ಲಿಟ್ಟ. ಜರಾಸಂಧನಿಗೆ ಆಸ್ತಿ ಪ್ರಾಸ್ತಿಯರೆಂಬ ಇಬ್ಬರು ಹೆಣ್ಣುಮಕ್ಕಳಿದ್ದರು. ಅವರನ್ನು ಕಂಸನಿಗೆ ಕೊಟ್ಟು ವಿವಾಹವಾಯಿತು. ಕಂಸನನ್ನು ವಧಿಸಿದುದರಿಂದ ಕೃಷ್ಣನ ಬಗೆಗೆ ಜರಾಸಂಧನಿಗೆ ಹೆಚ್ಚು ದ್ವೇಷ ಬೆಳೆಯಿತು. ಜರಾಸಂಧನಾದರೋ ಲೋಕಕಂಟಕನಾಗಿ ಎಂಬತ್ತಾರು ಸಾವಿರ ರಾಜಪುತ್ರರನ್ನು ಸೆರೆಹಾಕಿ, ತನ್ನ ಆರಾಧ್ಯದೈವವಾದ ಭೈರವನಿಗೆ ಪುರುಷಮೇಧವನ್ನು ಮಾಡಬೇಕೆಂದಿರಲು ದಾನವಾಂತಕನಾದ ಶ್ರೀಕೃಷ್ಣ ಭೀಮಾರ್ಜುನರೊಡನೆ ಜರಾಸಂಧನ ರಾಜಧಾನಿಗೆ ಗುಟ್ಟಾಗಿ ಹೋಗಿ ಮಲ್ಲಯುದ್ಧದಲ್ಲಿ ಭೀಮನಿಂದ ಜರಾಸಂಧನನ್ನು ಕೊಲ್ಲಿಸಿದ. ಜರಾಸಂಧನ ಮಗನಾದ ಸಹದೇವ ಶರಣಾಗತನಾಗಲು ಆತನಿಗೆ ಪಟ್ಟಗಟ್ಟಲಾಯಿತು. (ಎಚ್.ಪಿ.ಎಂ.ಎ.)

**ಜರಿ :** ಮಿರಿಯಾಪೊಡವರ್ಗದ ಕೈಲೋಪೊಡ ಉಪವರ್ಗಕ್ಕೆ ಸೇರಿದ ಸಂಧಿಪದಿ (ಸೆಂಟಿಪೀಡ್). ಶತಪದಿ, ಲಕ್ಷ್ಮೀಚೇಳು ಪರ್ಯಾಯ ನಾಮಗಳು. ನಿಶಾಚರಿಯಾದ ಇದು ತೇವವಿರುವ ಕತ್ತಲೆ ಪ್ರದೇಶಗಳಲ್ಲಿ ಕಲ್ಲುಗಳ ಕೆಳಗೆ ಬಿರುಕುಗಳಲ್ಲಿ, ಮರದ ತೊಲೆ, ತೊಗಟೆಗಳ ಕೆಳಗೆ ಮತ್ತು ತರಗೆಲೆಗಳಲ್ಲಿ ವಾಸಿಸುತ್ತದೆ. ಇದು ಮಾಂಸಾಹಾರಿ. ಕೀಟಗಳು, ಹುಳುಗಳು, ಮೃದ್ವಂಗಿ ಮತ್ತು ಇತರ ಸಣ್ಣ ಪ್ರಾಣಿಗಳು ಇದರ ಆಹಾರ. ಸಸ್ಯಾಹಾರಿ ಜರಿಗಳೂ ಇಲ್ಲದಿಲ್ಲ. ಉದಾಹರಣೆಗೆ ಹ್ಯಾಪ್ಲೋಫೈಲಸ್ ಸಬ್‌ಟೆರೇನಿಯಸ್. ಜರಿಗಳು ವಿಷಜಂತುಗಳು : ಕೆಲವು ಪ್ರಭೇದಗಳ ವಿಷವಂತೂ ಮನುಷ್ಯನಿಗೆ ಬಹಳ ಅಪಾಯಕಾರಿ.



ಮೇಲಿನದು–ಜಿಯೋಫಯಲಸ್ ಪ್ರಭೇದ, ಕೆಳಗಿನದು–ಸ್ಕುಟಿಗೆರ ಪ್ರಭೇದ

ಜರಿಯ ದೇಹ ಉದ್ದ ಹಾಗೂ ಚಪ್ಪಟೆ. ದೇಹದ ಸುತ್ತ ಬಹಿರ್‌ಕಂಕಾಲ (ಎಕ್ಸೋಸ್ಕೆಲಿಟನ್) ಇದೆ. ದೇಹದಲ್ಲಿ ಶಿರ ಮತ್ತು ಮುಂಡ ಎಂಬ ಎರಡು ಭಾಗಗಳನ್ನು ಗುರುತಿಸಬಹುದು. ತಲೆಯಲ್ಲಿ ಅನೇಕ ತುಂಡುಗಳಿಂದ ಕೂಡಿದ ಒಂದು ಜೊತೆ ಕುಡಿಮೀಸೆಗಳೂ ಅವುಗಳ ಹಿಂಭಾಗದಲ್ಲಿ ಒಂದು ಜೊತೆ ಕಣ್ಣುಗಳೂ ಇರುವುವು. ತಲೆಯ ಪಾಲಿಯಲ್ಲಿ ಮೇಲುತುಟಿ ಮತ್ತು ಹೈಪೊಫ್ಯಾರಿಂಕ್ಸ್ ಇವೆ. ಇವು ಮತ್ತು ತಲೆಯ ಮಿಕ್ಕ ಉಪಾಂಗಗಳಾದ ಒಂದು ಜೊತೆ ಮ್ಯಾಂಡಿಬಲುಗಳು ಮತ್ತು ಎರಡು



ಸ್ಕೋಲೊಪೆಂಡ್ರ ಪ್ರಭೇದ. ಮೇಲುಚಿತ್ರ–ಬೆನ್ನುಭಾಗ, ಕೆಳಚಿತ್ರ–ಉದರಭಾಗ

ಜೊತೆ ಮ್ಯಾಕ್ಸಿಲಗಳು ಜರಿಯ ವದನಾಂಗಗಳು. ಮುಂಡ ಬಲು ಉದ್ದವಾಗಿದ್ದು ಅನೇಕ ಖಂಡಗಳಿಂದ ಕೂಡಿದೆ. ಪ್ರತಿಯೊಂದು ಖಂಡದಲ್ಲೂ ಒಂದು ಜೊತೆ ಕಾಲುಗಳಿರುವುವು. ಪ್ರತಿ ಕಾಲಿನಲ್ಲೂ ಏಳು ಕೀಲುಗಳುಂಟು. ಮುಂಡದ ಹಿಂತುದಿಯಲ್ಲಿ ಟೆಲ್ಸನ್ ಎಂಬ ರಚನೆ ಇದೆ. ಇದರ ಮುಂದಿನ ಖಂಡವೇ ಪ್ರಜನನ ಖಂಡ. ಈ ಖಂಡದ ಅಧೋಭಾಗದಲ್ಲಿ ಜನನರಂಧ್ರವಿದೆ. ಜೊತೆಗೆ ಒಂದು ಜೊತೆ ಲಿಂಗಪದಿಗಳು (ಗೋನೊಪಾಡ್ಸ್) ಇರುವುವು. ಮುಂಡದ ಮೊದಲ ಜೊತೆ ಕಾಲುಗಳು ಮ್ಯಾಕ್ಸಿಲಿಪಿಡುಗಳಾಗಿ ಮಾರ್ಪಾಡಾಗಿವೆ. ಅವುಗಳ ತುದಿಯಲ್ಲಿ ವಿಷನಖಗಳುಂಟು. ಜರಿಯ ಉಸಿರಾಟ ಟ್ರೇಕಿಯಗಳ ವ್ಯವಸ್ಥೆಯ ಮೂಲಕ ನಡೆಯುತ್ತದೆ. ಪ್ರತಿಯೊಂದು ಖಂಡದಲ್ಲೂ ಗಾಳಿಯನ್ನು ಎಳೆದುಕೊಳ್ಳಲು ಸಹಾಯಕವಾಗಿ ಒಂದು ಜೊತೆ ಸ್ಪಿಗ್ಮೇಟ ರಂಧ್ರಗಳಿವೆ. ಜರಿ ನಿಶಾಚರಿಯಾದ್ದರಿಂದಲೂ ಯಾವಾಗಲೂ ಅವಿತಿಟ್ಟುಕೊಂಡೇ ಇರುವುದರಿಂದಲೂ ಜರಿಯ ಪ್ರಜನನದ ಬಗ್ಗೆ ಹೆಚ್ಚು ವಿಚಾರಗಳು ತಿಳಿದಿಲ್ಲ. ಗಂಡು ಹೆಣ್ಣುಗಳ ಮೈಥುನಕ್ರಿಯೆ ಇದುವರೆಗೂ ಕಣ್ಣಿಗೆ ಬಿದ್ದಿಲ್ಲ. ಬಹುಶಃ ಗಂಡು ಬಲೆಯೊಂದರ ಮೇಲೆ ಶುಕ್ರಾಣುಗಳನ್ನು ಸಿಂಪಡಿಸುತ್ತದೆಯೆಂದೂ ಅನಂತರ ಹೆಣ್ಣೊಂದು ಇವನ್ನು ಸಂಗ್ರಹಿಸಿ ನಿಷೇಚನಕ್ರಿಯೆಯಲ್ಲಿ ಬಳಸಿಕೊಳ್ಳುತ್ತದೆಯೆಂದೂ ಹೇಳಲಾಗಿದೆ. ನಿಷೇಚಿತ ಅಂಡಗಳನ್ನು ಗುಂಪಾಗಿ ಇಡುವುದು ಸಾಮಾನ್ಯ ನಡವಳಿಕೆ. ಇವನ್ನು ಹೆಣ್ಣು ಕಾಯುವುದೂ ಉಂಟು. ಕೆಲವು ಸಲ ಮೊಟ್ಟೆಗಳನ್ನು ಒಂಟೊಂಟಿಯಾಗಿ ಮಣ್ಣಿನಲ್ಲಿಡುವುದೂ ಇದೆ. ಮೊಟ್ಟೆಗಳಲ್ಲಿ ಬಂಡಾರ ಅಧಿಕ ಮೊತ್ತದಲ್ಲಿ ಇದೆ. ಭ್ರೂಣದ ಬೆಳವಣಿಗೆಯಲ್ಲಿ ಇದು ಉಪಯೋಗವಾಗುತ್ತದೆ.

ವಾನ್ಡೆಲ್‌ರವರ ವರ್ಗೀಕರಣದ ಪ್ರಕಾರ ಕೈಲೋಪೊಡ ವರ್ಗದಲ್ಲಿ 4 ಗಣಗಳಿವೆ:

1 ಸ್ಕುಟಿಗೆರೊಮಾರ್ಫ : ಈ ಗಣದ ಜರಿಗಳಲ್ಲಿ ಬಹಳ ಉದ್ದವಾದ 15 ಜೊತೆ ಕಾಲುಗಳಿವೆ. ಕಣ್ಣುಗಳು ಸಂಕೀರ್ಣ ರೀತಿಯವು. ಕುಡಿಮೀಸೆಗಳು ಬಹು ಉದ್ದ. ಸಾಮಾನ್ಯವಾಗಿ ಮುಂಡದ ಎಲ್ಲ ಖಂಡಗಳ ಬೆನ್ನ ಮಧ್ಯಭಾಗದಲ್ಲಿ ಒಂದೊಂದು ಸ್ಪೈರಕಲ್‌ಗಳಿವೆ. ತಲೆಯ ಮೇಲ್ಭಾಗ ಕಮಾನಿನ ಆಕಾರದ್ದಾಗಿದೆ. ಉದಾಹರಣೆಗೆ ಸ್ಕುಟಿಗೆರ.

2 ಲಿಥೊಬಿಯೊಮಾರ್ಫ : ಇವುಗಳಲ್ಲಿ ಮೊಟಕಾದ 15 ಜೊತೆ ಕಾಲುಗಳಿವೆ. ತಲೆ ಮತ್ತು ಮುಂಡದ ಮೇಲ್ಭಾಗ ಚಪ್ಪಟೆಯಾಗಿದೆ. ಸ್ಪೈರಕಲ್‌ಗಳು ಪಾರ್ಶ್ವಗಳಲ್ಲಿದೆ. ಉದಾಹರಣೆಗೆ ಲಿಥೊಬಿಯಸ್.

3 ಸ್ಕೊಲೊಪೆಂಡ್ರೊಮಾರ್ಫ : ಈ ಗಣದ ಜರಿಗಳು ಬಲವಾದ ದೇಹವುಳ್ಳ ಪ್ರಾಣಿಗಳು. 21–23 ಜೊತೆ ಕಾಲುಗಳನ್ನು ಪಡೆದಿವೆ. ಮುಂಡದ ಅಗ್ರಭಾಗದ ಪಾರ್ಶ್ವಗಳಲ್ಲಿ ಮಾತ್ರ ಸ್ಪೈರಕಲುಗಳು ಇವೆ. ಮುಂಡದ ಮೇಲ್ಭಾಗದಲ್ಲಿರುವ ದೊಡ್ಡ ಫಲಕಗಳು ಮತ್ತು ಸಣ್ಣ ಫಲಕಗಳು ಒಂದಾದ ಮೇಲೆ ಮತ್ತೊಂದು ಕ್ರಮವಾಗಿ ಅಳವಡಿಕೆಯಾಗಿವೆ. ಉದಾಹರಣೆಗೆ ಸ್ಕೊಲೊಪೆಂಡ್ರ.

4 ಜಿಯೊಫೈಲೊಮಾರ್ಫ : ದೇಹವು ನೀಳವಾಗಿ ಹುಳುವಿನ ಹಾಗಿದೆ. ಕಾಲುಗಳು 35 ರಿಂದ 181ರವರೆಗೆ ಇರಬಹುದು. ಕಾಲುಗಳು ಸಣ್ಣವು. ಕಣ್ಣುಗಳಿಲ್ಲ. ಸ್ಪೈರಕಲುಗಳು ಪಾರ್ಶ್ವಗಳಲ್ಲಿವೆ. ಉದಾಹರಣೆಗೆ ಜಿಯೊಫೈಲಸ್. (ಎನ್.ವಿ.ಎ.)

**ಜರೀಗಿಡಗಳು :** ಟೆರಿಡೋಫೈಟ ವಿಭಾಗ, ಫಿಲಿಸಿನೀ ವರ್ಗ– ಇವುಗಳ ಹಲವಾರು ಕುಟುಂಬಗಳಿಗೆ ಸೇರಿದ ನಿಮ್ನರೀತಿಯ ನಾಳೀಯ ಸಸ್ಯಗಳು (ಫರ್ನ್ಸ್). ಹೂ ಬಿಡದ ಗಿಡಗಳಾದ ಇವು ಸಾಮಾನ್ಯವಾಗಿ ತೇವಯುತವಾದ ನೆರಳು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ. ಇಂಡೋಮಲಯ ಪ್ರಾಂತಗಳಲ್ಲಿಯೂ ಪೆಸಿಫಿಕ್ ಸಾಗರದ ದಕ್ಷಿಣ

ಪ್ರದೇಶಗಳಲ್ಲಿಯೂ ಇವುಗಳ ಸಂಖ್ಯೆ ಅಪಾರ. ಪ್ರಪಂಚಾದ್ಯಂತ ಸುಮಾರು 300ಕ್ಕೂ ಹೆಚ್ಚು ಜಾತಿಗಳು 6,000ಕ್ಕೂ ಹೆಚ್ಚು ಪ್ರಭೇದಗಳು ಇವೆ. ಭಾರತದಲ್ಲಿ ಸುಮಾರು 700ಕ್ಕೂ ಹೆಚ್ಚು ಪ್ರಭೇದಗಳು ಇವೆ ಎಂದು ಬೆಡೋಮ್ ಎಂಬ ವಿಜ್ಞಾನಿ ಅಂದಾಜು ಮಾಡಿದ್ದಾನೆ. ಇವುಗಳ ಗಾತ್ರ, ಆಕಾರ, ಎಲೆಗಳ ಆಕಾರ, ಸ್ವಾಭಾವಿಕ ಬೆಳವಣಿಗೆ ಮುಂತಾದ ಲಕ್ಷಣಗಳಲ್ಲಿ ವೈವಿಧ್ಯ ಉಂಟು. ಹಾಗೆಯೇ ಇವು ಬೆಳೆಯುವ ನೆಲೆಗಳಲ್ಲೂ ಭಿನ್ನತೆ ಇದೆ. ಹೈಮಿನೋಫಿಲಮ್, ಡ್ರೈಆಪ್ಟರಿಸ್, ಮುಂತಾದವು ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಬೆಳೆದರೆ ಟೆರಿಡಿಯಮ್, ಆಕ್ವಿಲಿನಿಯಮ್, ಗ್ಲೈಕೀನಿಯ ಮುಂತಾದವು

ಬಿಸಿಲು ಹೆಚ್ಚಾಗಿರುವ ಜಾಗಗಳಲ್ಲಿ ಬೆಳೆಯುತ್ತವೆ. ಅಜೋಲ, ಸಾಲ್ವೀನಿಯ, ಮಾರ್ಸಿಲಿಯ, ಫೈಲುಲೇರಿಯ, ರೆಗ್ನೆಲಿಡಿಯಮ್ ಮುಂತಾದವು ಜಲವಾಸಿಗಳು. ಅನೇಕ ಜರೀಗಿಡಗಳು ಮಳೆಗಾಲದಲ್ಲಿ ಚೆನ್ನಾಗಿ ಬೆಳೆಯುತ್ತಿದ್ದು ತೇವಾಂಶ ಆರುತ್ತ ಬಂದಂತೆ ಒಣಗಿ ಹೋಗುತ್ತವೆ. ಕೆಲವು ಕಲ್ಲುಬಂಡೆಗಳ ಮೇಲೆ ಬೆಳೆಯುತ್ತವೆ. ಮತ್ತೆ ಕೆಲವು ಮರಗಳ ತೊಗಟೆಗಳ ಸಂದಿಗಳಲ್ಲಿ ಬೆಳೆಯುತ್ತವೆ.

ಜರೀಗಿಡಗಳಲ್ಲಿ ಕೆಲವು ಅತಿ ಪುಟ್ಟವು. ಅಂದರೆ ಕೇವಲ ಕೆಲವೇ ಮಿಮೀ. ಉದ್ದ ಇರುತ್ತವೆ. ಉದಾಹರಣೆಗೆ ಅಜೋಲ, ಇನ್ನು ಕೆಲವು 8–15 ಮೀ. ಎತ್ತರದ ಮರಗಳಾಗಿ ಬೆಳೆಯುತ್ತವೆ. ಇವಕ್ಕೆ ವೃಕ್ಷ ಜರೀಸಸ್ಯಗಳೆಂದು (ಟ್ರೀ–ಫರ್ನ್ಸ್) ಹೆಸರು. ಉದಾಹರಣೆಗೆ ಸಯಾತಿಯ. ಅದರೆ ಬಹುಮಟ್ಟಿನ ಜರೀಗಿಡಗಳು ಪೊದೆ ಸಸ್ಯಗಳು.

ಜರೀಗಿಡಗಳ ಎಲೆಗಳು ವಿವಿಧಾಕಾರವಾಗಿರುವುದರಿಂದ ಇವನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಇವಕ್ಕೆ ಬೇರೆ ರೀತಿಯ ಬಳಕೆಗಳೂ ಉಂಟು. ಆಸ್ಪ್ಲೀನಿಯಮ್ ಎಸ್ಕುಲೆಂಟಮ್, ನೆಫ್ರೋಡಿಯ ಈರಿಯೋಕಾರ್ಪಮ್, ಬಾಟ್ರಿಕಿಯಮ್ ಪರ್ಜಿನಿನಮ್ ಮುಂತಾದ ಗಿಡಗಳನ್ನು ಆಹಾರಕ್ಕಾಗಿ ಹಿಮಾಲಯದ ಗುಡ್ಡಗಾಡಿನ ಜನ ಉಪಯೋಗಿಸುತ್ತಾರೆ. ನ್ಯೂಜೀಲೆಂಡಿನಲ್ಲಿ ಆಲ್ಸೊಫೈಲ ಮತ್ತು ಸಯಾತಿಯ ಮುಂತಾದವುಗಳಿಂದ ಬೆಂಡನ್ನು ಬೇರ್ಪಡಿಸಿ ಆಹಾರಕ್ಕಾಗಿ ಬಳಸುವುದುಂಟು. ಆಲ್ಸೊಫೈಲ ಲಾಟಿಬ್ರೋಸವನ್ನು ಸಿಕ್ಕಿಂನಲ್ಲಿ ಆಹಾರಕ್ಕಾಗಿ ಉಪಯೋಗಿಸುವುದಿದೆ. ಅಡಿಯಾಂಟಮ್ ವೆನುಸ್ಟಮ್, ಆಕ್ಟಿನಿಯಾಪ್ಟರಿಸ್ ಡೈಕಾಟೋಮ, ಆಸ್ಪ್ಲೀನಿಯಮ್ ಫಿಂಬ್ರಿಯೇಟಮ್ ಮುಂತಾದವಕ್ಕೆ ಔಷಧೀಯ ಪ್ರಾಮುಖ್ಯ ಉಂಟು.

ಜರೀಗಿಡಗಳು ಸ್ಪೋರೋಫೈಟುಗಳು. ಇವು ಸಂತಾನೋತ್ಪತ್ತಿಗಾಗಿ ಎಲೆಗಳಲ್ಲಿ ಸ್ಪೋರ್ಯಾಂಜಿಯಗಳನ್ನು ಉತ್ಪತ್ತಿಮಾಡುತ್ತವೆ. ಇವುಗಳಲ್ಲಿ ಬೀಜಾಣುಗಳು (ಸ್ಪೋರ್ಸ್) ಉತ್ಪತ್ತಿಯಾಗುತ್ತವೆ. ಸ್ಪೋರುಗಳು ಪ್ರಸಾರವಾಗಿ ಸೂಕ್ತ ಸ್ಥಳಗಳಲ್ಲಿ ಬಿದ್ದಾಗ ಗ್ಯಾಮಿಟೊಫೈಟುಗಳಾಗಿ ಮೊಳೆಯುತ್ತವೆ. ಗ್ಯಾಮಿಟೊಫೈಟುಗಳಿಗೆ ಪ್ರೋಥ್ಯಾಲಸ್ ಎಂಬ ಹೆಸರೂ ಉಂಟು. ಇವು ಬಹಳ ಚಿಕ್ಕಗಾತ್ರದವು. ಹೃದಯಾಕಾರದಲ್ಲಿರುತ್ತವೆ. ಇವುಗಳಲ್ಲಿ ಸಂತಾನೋತ್ಪತ್ತಿ ಲೈಂಗಿಕ ರೀತಿಯಲ್ಲಿ ನಡೆಯುತ್ತದೆ. ಗ್ಯಾಮಿಟೊಫೈಟುಗಳಲ್ಲಿ ಹುಟ್ಟುವ ಲೈಂಗಿಕ ಕಣಗಳು ಪರಸ್ಪರ ಸಂಯೋಗವಾಗಿ ಯುಗ್ಮವನ್ನು ರೂಪಿಸುತ್ತವೆ. ಇದರಿಂದ ಸ್ಪೋರೋಫೈಟ್ ಉತ್ಪತ್ತಿಯಾಗುತ್ತದೆ. ಜರೀಗಿಡಗಳ ಜೀವನಚಕ್ರದಲ್ಲಿ ಈ ರೀತಿ ಗ್ಯಾಮಿಟೊಫೈಟ್ ಮತ್ತು ಸ್ಪೋರೋಫೈಟ್ ಎಂಬ ಎರಡು ವಿಭಿನ್ನರೀತಿಯ ಪೀಳಿಗೆಗಳನ್ನು ಕಾಣಬಹುದು. ಗ್ಯಾಮಿಟೊಫೈಟ್ ಲೈಂಗಿಕ ರೀತಿ ಸಂತಾನವೃದ್ಧಿ ಮಾಡುವ ಪೀಳಿಗೆ. ಇದು ಗಾತ್ರದಲ್ಲಿ ಅತಿ ಸಣ್ಣದು. ಸ್ಪೋರೋಫೈಟ್ ಎಂಬುದು ನಿರ್ಲಿಂಗರೀತಿಯಲ್ಲಿ ಸಂತಾನವೃದ್ಧಿ ನಡೆಸುವ ಪೀಳಿಗೆ; ಗಾತ್ರದಲ್ಲಿ ಅತಿ ದೊಡ್ಡದು. ಇದರಲ್ಲಿ ಶಾಖಾಪ್ರಜನನ ರೀತಿಯಿಂದ ವಂಶ ಅಭಿವೃದ್ಧಿಯಾಗುತ್ತದೆ. ಜರೀಗಿಡಗಳ ವರ್ಗೀಕರಣಕ್ಕೆ ನೋಡಿ–ಟೆರಿಡೊಫೈಟ. (ಎಂ.ಸಿ.ಆರ್.)(ಪರಿಷ್ಕರಣೆ : ಕೆ.ಬಿ.ಸದಾನಂದ)

**ಜರ್ಬರ್ ಪರೀಕ್ಷೆ :** ಹಾಲಿನಲ್ಲಿರುವ ಕೊಬ್ಬಿನ ಪ್ರಮಾಣವನ್ನೂ ಅದು ಸಾಮಾನ್ಯವಾಗಿರಬೇಕಾದ ಪರಿಮಾಣದಲ್ಲಿದೆಯೇ ಅಥವಾ ಕಡಿಮೆಯಾಗಿದೆಯೇ ಎಂಬುದನ್ನೂ ಕಂಡುಹಿಡಿಯಲು ಉಪಯೋಗಿಸುವ ಪ್ರಯೋಗಗಳಲ್ಲಿ ಒಂದು. ಹಾಲಿನಲ್ಲಿ ಸೇರಿಸಿರಬಹುದಾದ ನೀರಿನ ಮೊತ್ತವನ್ನು ಈ ಪರೀಕ್ಷೆಯಿಂದ ಪತ್ತೆ ಹಚ್ಚಬಹುದು. ಜರ್ಬರ್ ಪರೀಕ್ಷೆಯ ಸಾಮಾನ್ಯ ತತ್ತ್ವವೇನೆಂದರೆ ಅಪಕೇಂದ್ರ ಬಲದ ಸಹಾಯದಿಂದ ಕ್ಷೀರರಸದಿಂದ ಕೊಬ್ಬನ್ನು ಸಲ್ಫ್ಯೂರಿಕ್ ಆಮ್ಲವನ್ನು ಉಪಯೋಗಿಸಿ ಪ್ರತ್ಯೇಕಿಸುವುದು. ಲಸದಲ್ಲಿರುವ ಇತರ ಕ್ಷೀರಸತ್ತ್ವಗಳಿಂದಲೂ ಕೊಬ್ಬನ್ನು ಪ್ರತ್ಯೇಕಿಸಲು ಅದಕ್ಕೆ ಅಲ್ಪ ಪ್ರಮಾಣದಲ್ಲಿ ಅಮೈಲ್ ಆಲ್ಕೊಹಾಲ್ ಎಂಬ ದ್ರವವನ್ನು ಸೇರಿಸುತ್ತಾರೆ. ಹೀಗೆ ಬೇರೆ ಮಾಡಲ್ಪಟ್ಟ ಕೊಬ್ಬು ಈ ಕೆಲಸಕ್ಕೆಂದೇ ಇರುವ ಅಪಕೇಂದ್ರಕದಲ್ಲಿ ಪರಿಭ್ರಮಿತವಾದ ಮೇಲೆ ಟೆಸ್ಟ್ ಬಾಟಲಿನ (ಬ್ಯೂಟಿಕೋಮೀಟರ್) ನಾಳದಲ್ಲಿ ಸಂಗ್ರಹವಾಗುತ್ತದೆ. ಬ್ಯೂಟಿಕೋಮೀಟರಿನ ನಾಳದಲ್ಲಿ ನಿಲ್ಲುವ ಕೊಬ್ಬಿನ ಮಟ್ಟವನ್ನು ಅಳೆಯುವುದರಿಂದ ಕೊಬ್ಬಿನ ಸೇಕಡಾವಾರು ಮೊತ್ತವನ್ನು ಗೊತ್ತುಪಡಿಸಬಹುದು.

0.815ರಷ್ಟು ಅಪೇಕ್ಷಿತ ಸಾರತೆ ಇರುವ 10ಎಂ.ಎಲ್. ಸಲ್ಫ್ಯೂರಿಕ್ ಆಮ್ಲವನ್ನು ಪಿಪೆಟ್ಟಿನಲ್ಲಿ ಅಳೆದು ಶುದ್ಧವಾದ ಬ್ಯೂಟಿಕೋಮೀಟರಿನೊಳಕ್ಕೆ ಹಾಕಬೇಕು. ಹಾಲಿನ ಸೀಸೆಯನ್ನು ಕುಲುಕಿ ಪರೀಕ್ಷಿಸಬೇಕಾದ ಹಾಲನ್ನು ಚೆನ್ನಾಗಿ ಬೆರೆಸಬೇಕು. ವಿಶಿಷ್ಟ ರಚನೆಯ ಇನ್ನೊಂದು ಪಿಪೆಟ್ಟಿನ ಮೂಲಕ 11 ಎಂ.ಎಲ್. ಹಾಲನ್ನು ಅದೇ ಮೀಟರಿಗೆ ಸುರಿಯಬೇಕು. ಬಳಿಕ ಮೂರನೆಯ ಪಿಪೆಟ್ಟಿನ ಮೂಲಕ 1 ಎಂ.ಎಲ್. ಅಮೈಲ್ ಆಲ್ಕೊಹಾಲನ್ನು ತೆಗೆದುಕೊಂಡು ಎಚ್ಚರಿಕೆಯಿಂದ ಮೀಟರಿಗೆ ವರ್ಗಾಯಿಸಬೇಕು. ಆಮ್ಲವನ್ನಾಗಲಿ ಹಾಲನ್ನಾಗಲಿ ಅಮೈಲ್ ಆಲ್ಕೊಹಾಲನ್ನಾಗಲಿ ಬ್ಯೂಟಿಕೋಮೀಟರಿಗೆ ವರ್ಗಾಯಿಸುವಾಗ ಅದರ ಕೊರಳಿನ ಒಳಭಾಗ ತೇವವಾಗಕೂಡದು. ಬ್ಯೂಟಿಕೋಮೀಟರಿನ ರಬ್ಬರ್ ಮುಚ್ಚಳವನ್ನು ಗಟ್ಟಿಯಾಗಿ ತಿರುವಬೇಕು. ಆಮ್ಲದಿಂದ ಉಂಟಾದ ಗರಣೆಯೆಲ್ಲ ಸಂಪೂರ್ಣವಾಗಿ ಕರಗಿ, ಆ ದ್ರವದಲ್ಲಿನ ಯಾವ ಬಿಳಿ ಕಣವೂ ಇಲ್ಲದಿರುವವರೆಗೂ ಅದನ್ನು ಕುಲುಕಬೇಕು. ಬಳಿಕ ಅದನ್ನು ಅಪಕೇಂದ್ರಕದಲ್ಲಿ ರಬ್ಬರ್ ತಿರುಪು ಹೊರಗಿರುವಂತೆ ಇಟ್ಟು ಮಿನಿಟಿಗೆ 1100 ಸುತ್ತುಗಳ ದರದಲ್ಲಿ ನಾಲ್ಕೈದು ಮಿನಿಟುಗಳವರೆಗೆ ಅಪಕೇಂದ್ರಕವನ್ನು ಸುತ್ತಿಸಬೇಕು. ಬಳಿಕ ಮೀಟರುಗಳನ್ನು ಅಲುಗಾಡಿಸದೆ 68ಹಈ. ಉಷ್ಣತೆಯುಳ್ಳ ನೀರಿನಲ್ಲಿ ಬಿರಟೆಗಳು ಕೆಳಮೊಗವಾಗಿರುವಂತೆ ಎರಡು ಮಿನಿಟುವರೆಗಾದರೂ ಮುಳುಗಿಸಿಡಬೇಕು. ಅನಂತರ ನೀರಿನಿಂದ ಮೇಲಕ್ಕೆ ತೆಗೆದು ಬ್ಯೂಟಿಕೋಮೀಟರಿನ ನಾಳದಲ್ಲಿ ಸಂಗ್ರಹವಾಗಿರುವ ಕೊಬ್ಬಿನ ಮೊತ್ತವನ್ನು ಗೊತ್ತುಮಾಡಬೇಕು. ಇದರಿಂದ ಪರೀಕ್ಷೆಗೆ ತೆಗೆದುಕೊಂಡ ಹಾಲಿನಲ್ಲಿ ಸೇಕಡ ಎಷ್ಟು ಕೊಬ್ಬು ಇದೆ ಎಂಬುದು ಗೊತ್ತಾಗುತ್ತದೆ. (ಪಿ.ಎಸ್.ಆರ್.ಎ.)

**ಜರ್ಬರ :** ಆಸ್ಟರೇಸೀ (ಕಂಪಾಸಿಟೀ) ಕುಟುಂಬಕ್ಕೆ ಸೇರಿದ ಒಂದು ಪ್ರಸಿದ್ಧ ಅಲಂಕಾರ ಸಸ್ಯ (gerbera). ಆಫ್ರಿಕ ಹಾಗೂ ಏಷ್ಯಗಳ ಉಷ್ಣ ಮತ್ತು ಸಮಶೀತೋಷ್ಣ ವಲಯಗಳ ಮೂಲದ್ದು. ಸುಮಾರು 40 ಪ್ರಭೇದಗಳನ್ನು ಒಳಗೊಂಡಿದೆ. ಇವುಗಳಲ್ಲಿ

ಜೇಮ್‌ಸೋನಿಯೈ ಪ್ರಭೇದ ಬಲು ಮುಖ್ಯವಾದ್ದು. ಇದೊಂದು ಕುಳ್ಳುಗಾತ್ರದ ಬಹುವಾರ್ಷಿಕ ಮೂಲಿಕೆ; ಇದರ ಎತ್ತರ ಸುಮಾರು 30–45 ಸೆಂ.ಮೀ. ಇದಕ್ಕೆ ಕಾಂಡವೇ ಇಲ್ಲ. ಎಲೆಗಳು ಬೇರಿನ ಮೇಲ್ತುದಿಯಲ್ಲಿ ಕಮಲದಳಗಳಂತೆ ಜೋಡಣೆಗೊಂಡಿವೆ. ಎಲೆಗಳ ಉದ್ದ ಸುಮಾರು 15 ಸೆಂ.ಮೀ. ಅಂಚು ನಯವಾಗಿರಬಹುದು ಇಲ್ಲವೆ ಹಾಲೆಗಳಾಗಿ ವಿಭಾಗವಾಗಿರಬಹುದು. ಹೂಗಳು ಉದ್ದ ತೊಟ್ಟಿನ ಚಂಡು ಮಂಜರಿಗಳಲ್ಲಿ ಸಮಾವೇಶಗೊಂಡಿವೆ. ಹೂಗಳ ಬಣ್ಣ ಬಿಳಿ, ಕೆನೆ, ಹಳದಿ, ಊದಾ, ಕೆಂಪು, ಕಡುಗೆಂಪು, ಕಿತ್ತಳೆ ಮುಂತಾಗಿ ವೈವಿಧ್ಯಮಯ. ಇದರಿಂದಾಗಿ ಹೂಗಳು ಬಹುಚೆಲುವಾಗಿ ಕಾಣುತ್ತವೆ. ಕೆಲವು ಬಗೆಗಳಲ್ಲಿ ಜೋಡಿಸುತ್ತಿನ ದಳಗಳೂ ಇರುವುದರಿಂದ ಹೂಗಳ ಅಂದ ಇಮ್ಮಡಿಯಾಗುವುದು. ಜರ್‌ಬರವನ್ನು ಬೀಜಗಳಿಂದ ಇಲ್ಲವೆ ಮೋಸುಗಳಿಂದ ವೃದ್ಧಿಸಲಾಗುತ್ತದೆ. ಬೀಜ ಬಿತ್ತುವ ಕಾಲ ಜೂನ್ ತಿಂಗಳು. ಬಿತ್ತಿದ 1 1/2 ತಿಂಗಳ ಅನಂತರ ಸಸಿಗಳನ್ನು ಬೇಕಾದ ಸ್ಥಳಗಳಲ್ಲಿ ನಾಟಿ ಮಾಡಲಾಗುತ್ತದೆ. ಅಕ್ಟೋಬರ್ ವೇಳೆಗೆ ಹೂಗಳು ಅರಳತೊಡಗುತ್ತವೆ. (ಬಿ.ಎ.ಸಿ.)(ಪರಿಷ್ಕರಣೆ : ಕೆ ಬಿ ಸದಾನಂದ)

**ಜರ್ಮನ್ ಛಂದಸ್ಸು :** ಹಳೆಯ ಜರ್ಮನ್ ಛಂದಸ್ಸು ಟ್ಯೂಟನ್ನರ ಛಂದಸ್ಸೇ ಆಗಿತ್ತು. ವೀರಕಾವ್ಯಕ್ಕೆ ಉಪಯೋಗಿಸುತ್ತಿದ್ದ ಪಂಕ್ತಿ ನಾಲ್ಕು ಸ್ವರಭಾರದ ಉಚ್ಚಾರಾಂಶದಿಂದಲೂ ಅನಿಯತ ಸಂಖ್ಯೆಯ ಭಾರರಹಿತ ಉಚ್ಚಾರಾಂಶದಿಂದಲೂ ಕೂಡಿ ಇಬ್ಭಾಗವಾಗಿ ಒಡೆದಿರುತ್ತಿತ್ತು. ಆದ್ಯಕ್ಷರ ಪ್ರಾಸವೇ ಅದರ ಪ್ರಧಾನ ಲಕ್ಷಣ. ಆದರೆ ಆ ಬಗೆಯ ಕವಿತ್ವ ಬೇಗ ಬೇಗ ಹಲ ಕೆಲವು ವ್ಯತ್ಯಾಸಗಳಿಗೆ ಎಡೆಕೊಟ್ಟು ಮೂಲರೂಪದಿಂದ ಭಿನ್ನವಾಗುತ್ತ ಬಂತು. ಆದ್ಯಕ್ಷರ ಪ್ರಾಸದ ಕಳೆತ, ಎರಡು ಅರ್ಧಪಂಕ್ತಿಗಳಿಗೆ ಅಂತ್ಯಪ್ರಾಸದಿಂದ ಜೋಡಣೆ, ಉದ್ದಪಂಕ್ತಿಗಳ ರಚನೆ, ಎರಡೆರಡು ಉದ್ದಪಂಕ್ತಿಗಳ ಕೂಡಿಕೆಯಿಂದಾದ ದ್ವಿಪದಿ–ಇವೆಲ್ಲ ತಲೆಯೆತ್ತಿದುವು. ಸ್ವರಭಾರವೊಂದೇ ಕಾವ್ಯಪಂಕ್ತಿಯ ಪಲ್ಲಟವಿಲ್ಲದ ಗುಣವಾಗಿತ್ತು. 10, 11ನೆಯ ಶತಮಾನದಲ್ಲಿ ಆಟೊ ಪೀಳಿಗೆಯ ಚಕ್ರವರ್ತಿಗಳು ಲ್ಯಾಟಿನ್ ಭಾಷೆಗೆ ಮನಸೋತರು. ಲ್ಯಾಟಿನ್ ಬಳಸಿದ ವೃತ್ತ ನಮೂನೆಗಳೂ ಗ್ರೀಕಿನಿಂದ ಲ್ಯಾಟಿನ್ ಎರವಲು ಪಡೆದು ತನ್ನದನ್ನಾಗಿಸಿಕೊಂಡಿದ್ದ ಆರು ಗಣಗಳ ಒಳಪ್ರಾಸ ಪಂಕ್ತಿಯೂ ಆಕರ್ಷಕವಾದುವು. ಜರ್ಮನ್ ಭಾಷೆಯ ಪದ್ಯಗಳಲ್ಲೂ ಅವಕ್ಕೆ ಪ್ರವೇಶ ಸಿಕ್ಕಿತು. 18ನೆಯ ಶತಮಾನದಲ್ಲಿ ಅದೇ ಆರು ಗಣಗಳ ಪಂಕ್ತಿ (ಡ್ಯಾಕ್ಟಿಲಿಕ್ ಹೆಕ್ಸಮೀಟರ್) ಜರ್ಮನ್ ವೀರಕಾವ್ಯ ಅಥವಾ

ಮಹಾಕಾವ್ಯಕ್ಕೆ ಏಕವಾಹನವಾಯಿತು. ಕ್ಲಾಪ್‌ಸ್ಟಾಕ್ ಬಾಡ್ಮರ್ ವಾಸ್, ಗಯಟೆ ಮುಂತಾದವರೆಲ್ಲರೂ ಅದನ್ನು ಬಹಳ ಸ್ವಾತಂತ್ರ್ಯದಿಂದ ಉಪಯೋಗಿಸಿದರು. ಡ್ಯಾಕ್ಟಿಲ್ ಬದಲು ಸ್ಪಾಂಡಿ ಹೇರಳವಾಗಿ ಬರುತ್ತದೆ. ಟ್ರೋಕಿಗೂ ಜಾಗವುಂಟು. 2ನೆಯ ಮತ್ತು 4ನೆಯ ಸ್ವರಭಾರದ ಮೇಲೆ ಸತತವಾಗಿ ಹೆಚ್ಚು ಅವಧಾರಣೆ ಕಂಡುಬರುತ್ತದೆ. ಅನೇಕ ಕವಿಗಳಲ್ಲಿ ಒಂದೇ ಬಗೆಯ ಒತ್ತು ಇರುವುದರಿಂದ ಬೇಸರಿಕೆ ಅನಿವಾರ್ಯ. ಕೆಲವು ಕವಿಗಳಾದರೋ ಸ್ವರಭಾರದ ಮಟ್ಟವನ್ನು ಕಲಾತ್ಮಕವಾಗಿ ಏರಿಸಿ ಇಳಿಸಿ ವೈವಿಧ್ಯ ಪ್ರದರ್ಶಿಸಿದ್ದಾರೆ. ಗಯಟೆ ಇನ್ನೂ ಬೇರೆ ಬಗೆಯ ಪಂಕ್ತಿ ವೃತ್ತಗಳಿಗೆ ಸ್ವಾಮಿಯಾದ; 16ನೆಯ ಶತಮಾನದ ಹ್ಯಾನ್ಸ್ ಜ್ಯಾಕ್ಸ್ ಬಳಕೆಗೆ ತಂದಿದ್ದ ಪ್ರಾಸಬದ್ಧ ದ್ವಿಪದಿಯನ್ನು ಪುನರುಜ್ಜೀವಿಸಿದ. ಅದರಲ್ಲಿ ಭಾರರಹಿತ ಉಚ್ಚಾರಾಂಶಕ್ಕೆ ಸ್ಥಳವಿದ್ದದ್ದರಿಂದ ಇಂಪೂ ಅಂದಚೆಂದವೂ ಹೆಚ್ಚಿದುವು. ಆ ದ್ವಿಪದಿಗೆ ನಿಟ್ಟೆಲ್ವರ್ ಎಂದು ಹೆಸರು. ಇನ್ನೊಂದು ಮಾಡ್ರಿಗಾಲ್ವರ್. ಆ ವೃತ್ತದಲ್ಲಿ 2ರಿಂದ 6 ಗಣಗಳ ಪಂಕ್ತಿಗಳೂ ಕ್ಲುಪ್ತವಲ್ಲದ ಅಂತ್ಯಪ್ರಾಸವೂ ಸೇರಿ ಒಂದು ಬಗೆಯ ಸೊಬಗು ಏರ್ಪಟ್ಟಿದೆ. ಗಯಟೆ ನಾನಾ ಬಗೆಯ ಲಯಬದ್ಧ ಗುಚ್ಛಗಳನ್ನು ವಿರಚಿಸಿದ. ಗ್ರೀಕ್ ಪ್ರಗಾಥದ ಮಾದರಿಯನ್ನು ಹಲವರು ಅನುಸರಿಸಿದರು. ಹಲ್ಡರ್‌ಲಿನ್ ಮತ್ತು ಪ್ಲಾಟನ್ ಅದಕ್ಕೆ ಹೆಸರಾದವರು. ರುಕ್ಕರ್ಟ್ ಮತ್ತು ಪ್ಲಾಟನ್ ಪರ್ಷಿಯದ ಶಿಷ್ಟ ವೃತ್ತವಾದ ಗಜಲ್ ಬಗೆಯ ಪದ್ಯಗಳನ್ನು ಬರೆದರು.

19ನೆಯ ಶತಮಾನದಲ್ಲಿ ಎರಡು ಛಂದೋವಿಧಾನಗಳಿಗೇ ಹೆಚ್ಚು ಪ್ರಾಬಲ್ಯವಿತ್ತು. ಎರಡು ಉಚ್ಚಾರಾಂಶ ಗಣದಿಂದಾದ ಒಂದೇ ತರದ ಪಂಕ್ತಿಗಳ ಜೋಡಣೆಯ ಗಂಭೀರ ವೃತ್ತ–ಒಂದು. ಒಂದು ಬಗೆಯ ರಾಗವಾಚನಕ್ಕೆ ಅದು ಯುಕ್ತ. ಇನ್ನೊಂದು, ಆಡುಮಾತಿನ ಲಯಗಳಿಂದ ಎದ್ದುಬಂದು, ಸ್ವರಭಾರದ ವೈವಿಧ್ಯ ಮತ್ತು ಎರಡೂ ಮೂರೂ ಉಚ್ಚಾರಾಂಶದ ಗಣಗಳ ಮಿಶ್ರಣಗಳಿಂದ ಕೊಂಚ ಲಘುವಾದರೂ ಹಿತವಾದ ಕವನ.

ಛಂದಶ್ಶಾಸ್ತ್ರದ ಮೀಮಾಂಸೆಯಲ್ಲಿ ಜರ್ಮನಿಗೆ ವಿಶೇಷ ಪ್ರಖ್ಯಾತಿ ಇದೆ.

(ಎಸ್.ವಿ.ಆರ್.)

**ಜರ್ಮನ್ ನ್ಯಾಯ :** ಜರ್ಮನ್ ನ್ಯಾಯ ಜರ್ಮ್ಯಾನಿಕ್ ಜನಾಂಗಗಳ ನ್ಯಾಯವೂ ಹೌದು, ಜರ್ಮನಿಯ ನ್ಯಾಯವೂ ಹೌದು. ಹಾಗೆಯೇ ಆಧುನಿಕ ಜರ್ಮನ್ ನ್ಯಾಯದಲ್ಲಿ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ಕಾನೂನುಗಳು ವಿವೇಚನೆಯ ವಿಷಯವಾಗುತ್ತವೆ. 1945ರಿಂದ ಈಚೆಗೆ ಈ ಎರಡೂ ರಾಜ್ಯಗಳಲ್ಲಿಯ ನ್ಯಾಯಿಕ ಮೌಲ್ಯಗಳು ವ್ಯತ್ಯಾಸಗೊಂಡಿವೆ. ಈ ಲೇಖನದಲ್ಲಿ 1945ರ ವರೆಗಿನ ಜರ್ಮನ್ ನ್ಯಾಯವನ್ನೂ ಈ ಎರಡು ರಾಜ್ಯಗಳಲ್ಲಿ ಆಗಿರುವ ಬದಲಾವಣೆಯನ್ನೂ ಕುರಿತು ವಿವೇಚಿಸಲಾಗಿದೆ.

ಜರ್ಮನ್ ನ್ಯಾಯ ಜರ್ಮ್ಯಾನಿಕ್ ಜನಾಂಗಗಳಲ್ಲಿ ರೂಢಿಯಲ್ಲಿದ್ದ ನ್ಯಾಯವಾಗಿತ್ತು. ಅದು ಕೇವಲ ಧಾರ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡ ನ್ಯಾಯಶಾಸ್ತ್ರವಾಗಿರಲಿಲ್ಲ. ಅಲ್ಲದೆ ಮೂಲತಃ ಪ್ರಾದೇಶಿಕ ಮೇರೆಗಳಿಂದ ಇದು ಸೀಮಿತವಾಗಿಯೂ ಇರಲಿಲ್ಲ. ಜರ್ಮನ್ ಮೂಲದ ಹಲವಾರು ಜನಾಂಗಗಳಿಗೆ ಸೇರಿದ್ದ ಜನರ ರೂಢಿ, ಸಂಪ್ರದಾಯ, ನೀತಿ, ನಿಯಮಗಳು ಪ್ರಾಚೀನ ಜರ್ಮನ್ ನ್ಯಾಯದ ತಳಹದಿಯಾಗಿವೆ. ಜರ್ಮನ್ ಮೂಲದ ವಿವಿಧ ಜನಾಂಗಗಳಲ್ಲಿದ್ದ ಅನೇಕತೆಯಲ್ಲಿಯ ಏಕತೆ ಅವರ ಸಾಮಾಜಿಕ ಹಾಗೂ ಪ್ರಾದೇಶಿಕ ಒಗ್ಗಟ್ಟಿಗೆ ಮಾತ್ರವೇ ಅಲ್ಲದೆ ಅವರ ನ್ಯಾಯ ಬೆಳೆಯುವುದಕ್ಕೂ ಕಾರಣವಾಯಿತು. ಇದು ಪ್ರಾಚೀನ ಜರ್ಮನ್ ನ್ಯಾಯದ ವೈಶಿಷ್ಟ್ಯ.

ಪ್ರಶ.ಪೂ. 2ನೆಯ ಶತಮಾನದವರೆಗೆ ಜರ್ಮನ್ ಮೂಲದ ಸ್ಯಾಲಿಕ್, ಫ್ರಾಂಕ್, ಆಲಮಾನ್, ವಿಸಿಗಾತ್, ಬವೇರಿಯನ್, ಲೊಂಬಾರ್ಡಿ–ಮುಂತಾದ ಅನೇಕ ಪಂಗಡಗಳು ಅಲೆಮಾರಿ ಗುಂಪುಗಳಂತೆ ಸಂಚಾರನಿರತವಾಗಿದ್ದುವು. ಆ ಜನರ ನ್ಯಾಯಿಕ ಸೂತ್ರಗಳು ಅನಾಗರಿಕವಾಗಿದ್ದುವೆಂದು ಪ್ರಶ.ಪೂ. 58ರ ಸುಮಾರಿಗೆ ರೈನ್ ನದಿಯವರೆಗಿನ ಜರ್ಮನ್ ಪ್ರದೇಶವನ್ನು ಆಕ್ರಮಿಸಿದ ಜೂಲಿಯಸ್ ಸೀಸರ್ ಹೇಳಿದ್ದಾನೆ. ಕೊಲೆಗಡುಕನು ಕೊಲೆಯಾದವನ ಸ್ಥಾನಮಾನಕ್ಕನುಗುಣವಾಗಿ ಹಣದ ದಂಡ ಕೊಡಬೇಕಾಗುತ್ತಿತ್ತು. ಜೂಲಿಯಸ್ ಸೀಸರನಿಂದ ಜರ್ಮನ್ ನ್ಯಾಯ ಸೂತ್ರಗಳ ಸ್ಪಷ್ಟ ವಿವರಗಳು ದೊರೆಯದಿದ್ದರೂ ಅವರು ಉತ್ತಮ ಕೃಷಿಕರಾಗಿರಲಿಲ್ಲವೆಂದೂ ಅವರ ರಾಜಕೀಯ ಸಾಮಾಜಿಕ ಜೀವನ ಮುಖಂಡರ ನಿಯಂತ್ರಣಕ್ಕೆ ಒಳಪಟ್ಟಿತ್ತೆಂದೂ ತಿಳಿದುಬರುತ್ತದೆ.

ಟ್ಯಾಸಿಟಸ್ ಪ್ರಶ. ಸುಮಾರು 98ರಲ್ಲಿ ಬರೆದಿರಬಹುದಾದ ಜರ್ಮೇನಿಯ ಎಂಬ ಪುಸ್ತಕದಿಂದ ಜರ್ಮನ್ ನ್ಯಾಯವ್ಯವಸ್ಥೆಯ ಕೆಲವು ವಿವರಗಳು ದೊರೆಯುತ್ತವೆ. ಸಣ್ಣಪುಟ್ಟ ವಿವಾದಗಳನ್ನು ಬಂಧುಗಳೇ ನಿರ್ಣಯ ಮಾಡುತ್ತಿದ್ದರು. ಆ ಕಾಲಕ್ಕೆ ಆಗಲೇ ನ್ಯಾಯನಿರ್ಣಯ ಕೊಡುತ್ತಿದ್ದ ಮುಖಂಡರು ಆರಿಸಿ ಬಂದ ಜನಪ್ರತಿನಿಧಿಗಳಾಗಿರುತ್ತಿದ್ದರು. ಅಪರಾಧಗಳ ತಾರತಮ್ಯದ ಪರಿಕಲ್ಪನೆ ಮತ್ತು ಅವುಗಳಿಗೆ ವಿಧಿಸಬಹುದಾದ ದಂಡಗಳು ನ್ಯಾಯಸೂತ್ರದ ರೂಪತಾಳಿದ್ದುವು. ಮುಖಂಡರು ಅನೇಕ ಅಪರಾಧಗಳ ವಿಚಾರಣೆಯ ಮತ್ತು ದಂಡ ವಿಧಿಸುವ ಕೆಲಸ ಮಾಡುತ್ತಿದ್ದರು. ಅವರು ಈ ಕೆಲಸಕ್ಕಾಗಿ ಬೇರೆಬೇರೆ ಸ್ಥಳಗಳಿಗೆ ಭೇಟಿ ಕೊಡಬೇಕಾಗುತ್ತಿತ್ತು ; ಅವರಿಗೆ 100 ಜನರ ಬೆಂಗಾವಲು ಇರುತ್ತಿತ್ತು. ಅಪರಾಧದ ಮಹತ್ತ್ವಕ್ಕೆ ಅನುಗುಣವಾಗಿ, ಕುದುರೆ ಮತ್ತು ದನಗಳ ರೂಪದಲ್ಲಿ, ದಂಡ ಕೊಡಬೇಕಾಗುತ್ತಿತ್ತು. ಈ ಅಲೆಮಾರಿ ಜನಾಂಗಗಳು ಸಾಗುವಳಿ ಕೆಲಸವನ್ನು ಆರಂಭಿಸಿದ್ದರು. ಆದ್ದರಿಂದ ಭೂಮಿಯ ಅನುಭೋಗ ಮತ್ತು ಒಡೆತನದ ಪರಿಕಲ್ಪನೆಗಳು ನ್ಯಾಯಿಕ ಸ್ವರೂಪ ತಾಳಿದುವು. ಪ್ರಶ. 2ನೆಯ ಶತಮಾನದಿಂದ ಭೂಮಿಯ ಒಡೆತನದ ಹಕ್ಕು ಆಚರಣೆಯಲ್ಲಿದ್ದುದು ಕಂಡುಬರುತ್ತದೆ.

ಸುಮಾರು 4ನೆಯ ಶತಮಾನದವರೆಗೆ ಜರ್ಮನ್ ನ್ಯಾಯವನ್ನು ಬರೆದಿಡಲಾಗಿರಲಿಲ್ಲ. ಜರ್ಮನ್ ಪ್ರದೇಶದಲ್ಲಿ ರಾಜರ ಆಳ್ವಿಕೆ ಬಾರದಿದ್ದುದು ಇದಕ್ಕೆ ಕಾರಣವಾಗಿರಬಹುದು. ಆ ಕಾಲಕ್ಕಾಗಲೇ ಜರ್ಮನರಿಗೆ ಬರೆಯುವ ಕಲೆ ಗೊತ್ತಿತ್ತು. ವಿವಿಧ ಜನಾಂಗಗಳಲ್ಲಿ ಆಚರಣೆಯಲ್ಲಿದ್ದ ನ್ಯಾಯಸೂತ್ರಗಳು ಬೇರೆ ಬೇರೆ ಆಗಿದ್ದುವು. ಅವುಗಳ ಸ್ವರೂಪವೂ ಬೇರೆಯಾಗಿತ್ತು. ಫ್ರಾಂಕಿಷ್ ಜನರ ನ್ಯಾಯಸೂತ್ರಗಳು ವಿಶೇಷ ಆಜ್ಞೆಗಳ ರೂಪದಲ್ಲಿರುತ್ತಿದ್ದುವು. ಆದರೆ ಸ್ಕ್ಯಾಂಡಿನೇವಿಯನ್ ಜನರ ನ್ಯಾಯಸೂತ್ರಗಳು ವಿಶೇಷ ಸಭೆಗಳಲ್ಲಿ ಘೋಷಿತವಾಗುತ್ತಿದ್ದುವು. ಸಾರ್ವಜನಿಕ ಸಮ್ಮತಿ ಪಡೆದ ಈ ನ್ಯಾಯಸೂತ್ರಗಳು ನಿರ್ದಿಷ್ಟಪಡಿಸಿದ ಕಾಲದವರೆಗೆ ಜಾರಿಯಲ್ಲಿರುತ್ತಿದ್ದುವು. ಸಾರ್ವಜನಿಕ ಸಭೆಯಲ್ಲಿ ನ್ಯಾಯಸೂತ್ರಗಳ ಪೂರ್ಣಪಾಠವನ್ನು ಒಬ್ಬನೇ ಪಠಿಸುತ್ತಿದ್ದ. ಅಲ್ಲಿ ತಿದ್ದುಪಡಿಗಳನ್ನು ಮಂಡಿಸುವ ಪದ್ಧತಿ ಇರಲಿಲ್ಲ. ಮಂಡಿಸಲಾದ ನ್ಯಾಯಸೂತ್ರಗಳ ಪೂರ್ಣ ಪಾಠವನ್ನು ಸಭೆ ಒಪ್ಪುತ್ತಿತ್ತು, ಇಲ್ಲವೆ ನಿರಾಕರಿಸುತ್ತಿತ್ತು.

ಸು. 410ರಲ್ಲಿ ಜರ್ಮನರು ರೋಮನರನ್ನು ಸೋಲಿಸಿದ್ದು ಅವರ ನ್ಯಾಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಜರ್ಮನ್ ಜನಾಂಗಗಳು ಒಂದು ಕಡೆ ರಾಜಕೀಯವಾಗಿ ಪ್ರಬಲವಾದುವು ; ಇನ್ನೊಂದು ಕಡೆ ಸಾಮಾಜಿಕವಾಗಿ ಗ್ರೀಕ್ ಹಾಗೂ ರೋಮನರ ಸಂಸ್ಕೃತಿಗಳ ಮತ್ತು ಕ್ರೈಸ್ತಧರ್ಮದ ತತ್ತ್ವಗಳ ಪ್ರಭಾವಕ್ಕೆ ಹೊಂದಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಯಿತು. ಹೀಗಾಗಿ ಜರ್ಮನ್ ನ್ಯಾಯವನ್ನು ಬರೆದಿಡುವ ಕಾರ್ಯ ಆರಂಭವಾಯಿತು. ಆ ಕಾಲದಲ್ಲಿ ಏಕರೂಪದ ಜರ್ಮನ್ ನ್ಯಾಯ ಅಸ್ತಿತ್ವದಲ್ಲಿರಲಿಲ್ಲ. ಕಾಲಕ್ರಮದಲ್ಲಿ ವಿವಿಧ ಜನಾಂಗಗಳವರು ತಂತಮ್ಮ ನ್ಯಾಯಸೂತ್ರಗಳನ್ನು ಕ್ರೋಡೀಕರಿಸಿ ಸಂಹಿತೆಗಳ ರೂಪದಲ್ಲಿ ಬರೆದಿಟ್ಟರು. ಅವುಗಳಲ್ಲಿ ಸ್ಯಾಲಿಕ್ ಮೂಲದ ಲೆಜಿಸ್ ಜರ್ಮನೋರಮ್, ಗಾತಿಕ್ ಜನಕ್ಕೆ ಸಂಬಂಧಿಸಿದ ಲೆಜಿಸ್ ವಿಸಿಗಾತೊರಮ್, ಬರ್ಗಂಡಿ ಜನಕ್ಕೆ ಸಂಬಂಧಿಸಿದ ಲೆಕ್ಸ್ ಬರ್ಗೊಂಡಿಯನಮ್, ಲೊಂಬಾರ್ಡಿ ಜನರ ಲೆಜಿಸ್ ಲ್ಯಾಂಗೋ ಬಾರ್ಡೊರಮ್, ಫ್ರಾಂಕಿಷ್ ಮೂಲದ ಆಲಮಾನಿಕ್ ಸಂಹಿತೆಗಳು ಮುಖ್ಯವಾದವು. ಹಾಗೆಯೇ, ಲೆಕ್ಸ್ ಸ್ಯಾಕ್ಸೋನಮ್, ಲೆಕ್ಸ್ ಬವೇರಿಯನ್ ಸಂಹಿತೆಗಳೂ ಆಚರಣೆಯಲ್ಲಿ ಬಂದವು. ಸಮ್ರಾಟ್ 1ನೆಯ ಫ್ರೆಡರಿಕ್ ಜರ್ಮನಿಯನ್ನು ಒಂದುಗೂಡಿಸಿದರೂ ಆತನ ಮರಣಾನಂತರ ಸಣ್ಣಪುಟ್ಟ ರಾಜ್ಯಗಳು ಮತ್ತೆ ಸ್ವತಂತ್ರವಾದುವು. 15ನೆಯ ಶತಮಾನದಿಂದ ರೋಮನ್ ನ್ಯಾಯದಿಂದ (ಕಾರ್ಪಸ್ ಜುರಿಸ್) ಪ್ರಭಾವ ಹೊಂದಿ ಬೆಳೆಯಹತ್ತಿದರೂ ಮೂವತ್ತು ವರ್ಷಗಳ ಯುದ್ಧ (1618–1648) ಜರ್ಮನಿಯನ್ನು ಹಾಳು ಮಾಡಿತಲ್ಲದೆ ನ್ಯಾಯಶಾಸ್ತ್ರದ ಬಹುಮುಖ ಬೆಳವಣಿಗೆಗೆ ಅಡ್ಡಿಯಾಯಿತು.

1656ರ ಬವೇರಿಯನ್ ಸಂಹಿತೆಯ ಮೂಲಕ ಜರ್ಮನ್ ನ್ಯಾಯದ ಕ್ರೋಡೀಕರಣದ ಎರಡನೆಯ ಯುಗ ಆರಂಭವಾಯಿತು. 1794ರ ಪ್ರಷ್ಯದ ಸಂಹಿತೆ ರಾಜ್ಯದ ಯೋಜನಾದೃಷ್ಟಿ ಹಾಗೂ ಸಕಾರಣಿಕ ವಿವೇಚನೆಗಳ ಸಂಯೋಗದ ಉದಾಹರಣೆಯಾಗಿದೆ. ನ್ಯಾಯಾಧೀಶರ ವ್ಯಾಖ್ಯಾನಕ್ಕೆ ಎಡೆ ಇರಬಾರದೆಂಬುದು ಈ ಸಂಹಿತೆಯ ಉದ್ದೇಶವಾಗಿತ್ತು. 1811ರ ಆಸ್ಟ್ರಿಯದ ದಿವಾಣೀ ಸಂಹಿತೆ ತಿದ್ದುಪಡಿಗಳ ಸಹಿತ ಆಚರಣೆಯಲ್ಲಿತ್ತು. 1814ರಲ್ಲಿ ಜರ್ಮನಿಯ ಎಲ್ಲ ರಾಜ್ಯಗಳಿಗೂ ಏಕರೂಪದ ದಿವಾಣೀ ಸಂಹಿತೆ ಅನ್ವಯಿಸಬೇಕೆಂದು ನ್ಯಾಯಶಾಸ್ತ್ರ ಪ್ರಾಧ್ಯಾಪಕನಾಗಿದ್ದ ಎ.ಎಫ್. ಥೈಬಾಟ್ ಪ್ರತಿಪಾದಿಸಿದ. ಆದರೆ ಜರ್ಮನ್ ನ್ಯಾಯಶಾಸ್ತ್ರ ಪಂಡಿತ ಎಫ್. ಕೆ. ಓ. ಸ್ಯಾವಿಗ್ನಿ ಇದನ್ನು ವಿರೋಧಿಸಿದ. ಜನರ ಆಂತರಿಕ ಮನವರಿಕೆಯ ಫಲವಾಗಿ ನ್ಯಾಯ ಬೆಳೆಯಬೇಕೆಂಬುದೂ ಸಮಕಾಲೀನ ಜನತೆಗೆ ನ್ಯಾಯಶಾಸ್ತ್ರದ ವಿಶಿಷ್ಟಜ್ಞಾನ ಇರಲಿಲ್ಲವೆಂಬುದೂ ಆತನ ಅಭಿಪ್ರಾಯಗಳಾಗಿದ್ದುವು. ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಜರ್ಮನಿ ರಾಜಕೀಯವಾಗಿ ಆಗ ಒಂದು ರಾಷ್ಟ್ರವಾಗಿರಲಿಲ್ಲ. ಆದ್ದರಿಂದ ಏಕರೂಪದ ದಿವಾಣೀ ಸಂಹಿತೆಯ ಆವಶ್ಯಕತೆ ಉಂಟಾಗಲಿಲ್ಲ. ನ್ಯಾಯಶಾಸ್ತ್ರದ ದೃಷ್ಟಿಯಿಂದ 1849ರಲ್ಲಿ ರೂಪುಗೊಂಡ ಪ್ರಥಮ ಸಹಕಾರೀ ಸಂಸ್ಥೆಯ ಮತ್ತು 1848ರ ವಿನಿಮಯ ಪತ್ರಗಳ ನ್ಯಾಯಸೂತ್ರಗಳು ಮುಖ್ಯವಾದವು. ಈ ಕಾಲದಲ್ಲಿ ವಾಣಿಜ್ಯೋದ್ಯಮ ಬೆಳೆದ ಕಾರಣ 1861ರ ವಾಣಿಜ್ಯ ಸಂಹಿತೆ ಆಚರಣೆಯಲ್ಲಿ ಬಂತು. ಪ್ರಾದೇಶಿಕ ದಿವಾಣೀ ಸಂಹಿತೆಗಳಲ್ಲಿ 1863ರ ಸ್ಯಾಕ್ಸೊನಿ ದಿವಾಣಿ ಸಂಹಿತೆಯೂ ಒಂದು.

1848–49ರ ಫ್ರಾಂಕ್‌ಫರ್ಟ್ ಸಂವಿಧಾನದ ಮೂಲಕ ಜರ್ಮನಿಯ ಆಧುನಿಕ ಸಂವೈಧಾನಿಕ ನ್ಯಾಯದ ಇತಿಹಾಸ ಆರಂಭವಾಗುತ್ತದೆ ಎನ್ನಬಹುದು. ಇದನ್ನು ರಾಜ್ಯಗಳು ಒಪ್ಪಲಿಲ್ಲ. 1871ರಲ್ಲಿ ಬಿಸ್ಮಾರ್ಕನ ಪ್ರಭಾವದಿಂದಾಗಿ ಜರ್ಮನ್ ಸಾಮ್ರಾಜ್ಯ ಅಸ್ತಿತ್ವಕ್ಕೆ

ಬಂತು. 1873ರಲ್ಲಿ ಆಚರಣೆಗೆ ಬಂದ ನಗರಪಾಲಿಕೆಗಳ ಅಧಿನಿಯಮ ಸ್ಥಳೀಯ ಪ್ರಜಾಧಿಕಾರದ ಕಾನೂನಿಗಳಿಗೆ ನಾಂದಿಯಾಯಿತು. ಸಾಮ್ರಾಜ್ಯದ ನ್ಯಾಯವಿಭಾಗಕ್ಕೆ ಸಂಬಂಧಿಸಿದ ಅಧಿನಿಯಮಗಳನ್ನು 1874ರಲ್ಲಿ ಅನುಮೋದಿಸಲಾಯಿತು. ಅದೇ ವರ್ಷದಲ್ಲಿ ವೃತ್ತಪತ್ರಿಕೆಗಳ ಮೇಲಿನ ನಿರ್ಬಂಧಗಳನ್ನು ಕೂಡ ತೆಗೆಯಲಾಯಿತು.

1919ರ ವೈಮಾರ್ ಸಂವಿಧಾನ, ಹಿಟ್ಲರನ ಆಡಳಿತ, 1933ರ ಅಧಿನಿಯಮ ಎರಡನೆಯ ಮಹಾಯುದ್ಧದ ಅನಂತರ ಅಸ್ತಿತ್ವಕ್ಕೆ ಬಂದ ಜರ್ಮನ್ ಪ್ರದೇಶದ ನಾಲ್ಕು ಭಾಗಗಳು, ಮುಂದೆ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳಾಗಿ ಎರಡು ರಾಜ್ಯಗಳು ರೂಪುಗೊಂಡದ್ದು, ಅವಕ್ಕೆ ಅನ್ವಯಿಸುವ ಆಡಳಿತ ಸೂತ್ರಗಳು–ಇವು ಜರ್ಮನಿಯ ಸಂವೈಧಾನಿಕ ನ್ಯಾಯದ ಇತಿಹಾಸದ ಮುಖ್ಯ ಘಟ್ಟಗಳು. 1919ರ ವೈಮಾರ್ ಸಂವಿಧಾನದ ಮೇರೆಗೆ ಅಧ್ಯಕ್ಷನನ್ನು ನೇರವಾಗಿ ಚುನಾಯಿಸಲಾಗುತ್ತಿತ್ತು.ಚಾನ್ಸಲರ ಮತ್ತು ಮಂತ್ರಿಮಂಡಲವನ್ನು ಅಧ್ಯಕ್ಷ ನೇಮಿಸುತ್ತಿದ್ದ. ಜನರ ಪ್ರಾತಿನಿಧ್ಯವುಳ್ಳ ಸಾಮಾನ್ಯ ಸಭೆ ಅಥವಾ ಸಂಸತ್ತು ಕಾನೂನುಗಳನ್ನು ರಚಿಸಬಹುದಾಗಿತ್ತಾದರೂ ಅಧ್ಯಕ್ಷನಿಗೇ ಹೆಚ್ಚಿನ ಅಧಿಕಾರಗಳು ಇದ್ದುವು. ಸಂಸತ್ತನ್ನು ವಿಘಟಿಸುವ ಅಧಿಕಾರ ಕೂಡ ಆತನಿಗಿತ್ತು. 1933ರ ಅಧಿನಿಯಮವನ್ನು ಜಾರಿಗೆ ತಂದು ಹಿಟ್ಲರ್ ಈ ಸಂವಿಧಾನವನ್ನು ನಿಷ್ಕ್ರಿಯಗೊಳಿಸಿದ.

1945ರ ಹಿಂದೆ ಜರ್ಮನ್ ನ್ಯಾಯ ಬೆಳೆದು ಬಂದ ರೀತಿ ಹೀಗಿದೆ : 1871ರಲ್ಲಿ ಜರ್ಮನ್ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದುದನ್ನು ಹಿಂದೆಯೇ ಹೇಳಲಾಗಿದೆ. 1871 ರಿಂದ 1945ರವರೆಗೆ ಜರ್ಮನಿ ದೇಶಕ್ಕೆಲ್ಲ ಏಕರೂಪದ ನ್ಯಾಯಸೂತ್ರಗಳು ಅನ್ವಯವಾಗುತ್ತಿದ್ದುವು. 1900ರಲ್ಲಿ ಇಂಥ ಏಕರೂಪದ ದಿವಾಣೀ ಸಂಹಿತೆ ಆಚರಣೆಯಲ್ಲಿ ಬಂತು. ಈ ಸಂಹಿತೆಯನ್ನು ಸಿದ್ಧಗೊಳಿಸಿದವರು ಜರ್ಮನ್ ನ್ಯಾಯಶಾಸ್ತ್ರ ತಜ್ಞರು. ಇದರಲ್ಲಿ ರಾಜಕೀಯ ಹಾಗೂ ನೈತಿಕ ಮೌಲ್ಯಗಳನ್ನು ಪ್ರತಿಪಾದಿಸಿಲ್ಲ. ದಿವಾಣಿ ಸಂಹಿತೆಯಲ್ಲಿ ಐದು ಭಾಗಗಳಿವೆ: 1. ವ್ಯಕ್ತಿ ವಿಷಯಗಳು ಮತ್ತು ಕ್ರಿಯೆ ಇವುಗಳ ವಿವೇಚನೆ, 2. ಕರ್ತವ್ಯ ಹಾಗೂ ಬಾಧ್ಯತೆಗಳ ಸಂಬಂಧ ಕುರಿತ ನಿಯಮಗಳು, 3. ಸ್ವತ್ತಿಗೆ ಸಂಬಂಧಿಸಿದ ನಿಯಮಗಳು, 4. ಕೌಟುಂಬಿಕ ನಿಯಮಗಳು ಮತ್ತು 5. ಉತ್ತರಾಧಿಕಾರಕ್ಕೆ ಸಂಬಂಧಿಸಿದ ನಿಯಮಗಳು. ಪ್ರತಿಯೊಬ್ಬನಿಗೂ ಜನ್ಮಾರಭ್ಯ ಹಕ್ಕುಗಳು ಮತ್ತು ಕರ್ತವ್ಯಗಳು ಲಭಿಸುತ್ತವೆ. ಪೂರ್ಣಾಧಿಕಾರ ಪಡೆಯಲು ಆವಶ್ಯವಾದ ಪ್ರಾಪ್ತವಯಸ್ಸು 21. ಅಪ್ರಾಪ್ತವಯಸ್ಕರು ತಮ್ಮ ಪ್ರತಿನಿಧಿಯ ಮೂಲಕ ದಾವೆ ಹಾಕಬಹುದು. ಏಳು ವರ್ಷಗಳಿಗೆ ಹೆಚ್ಚಿನ ವಯಸ್ಸಿನವರು ತಮ್ಮ ಹಿತಕ್ಕೆ ಲಾಭದಾಯಕವಾದ ವ್ಯವಹಾರ ಮಾಡಬಹುದು. ವ್ಯಕ್ತಿಸ್ವಾತಂತ್ರ್ಯದ ಮತ್ತು ವ್ಯಕ್ತಿತ್ವದ ರಕ್ಷಣೆಗೆ ಅವಕಾಶವುಂಟು.

ಕರಾರು ವಿಧಿಬದ್ಧವಾಗಬೇಕಾದರೆ ಅದರಲ್ಲಿ ಪರಸ್ಪರರು ಉದ್ದೇಶಗಳನ್ನು ಒಪ್ಪಿದ ಬಗ್ಗೆ ಘೋಷಣೆ ಇರಬೇಕು. ಜರ್ಮನ್ ನ್ಯಾಯದ ಕರಾರು ಇಂಗ್ಲಿಷ್ ಮತ್ತು ಇಟ್ಯಾಲಿಯನ್ ನ್ಯಾಯಗಳನ್ವಯದ ಕರಾರುಗಳಿಂದ ಸ್ವಲ್ಪ ಭಿನ್ನವಾದ್ದು. ಇಂಗ್ಲಿಷ್ ನ್ಯಾಯದ ಪ್ರತಿಫಲದ, ಇಟಲಿಯ ನ್ಯಾಯದ ಸಮರ್ಥನೀಯ ಹಿತದ ನ್ಯಾಯಿಕ ಪರಿಕಲ್ಪನೆಗಳು ಇದರಲ್ಲಿ ಅಡಕವಾಗಿಲ್ಲ. ಇದರಲ್ಲಿ ಸದುದ್ದೇಶಕ್ಕೆ ಮಾನ್ಯತೆ ಇದೆ. ಅವಧಿ ನಿರ್ಣಯ ಪ್ರಕ್ರಿಯಾವಿಧಿಯಾಗಿಲ್ಲ. ದಾನ, ವಿಕ್ರಯ ಮುಂತಾದ ರೀತಿಯಲ್ಲಿ ಸ್ವತ್ತನ್ನು ಪರಭಾರೆ ಮಾಡದೆ ವಂಶಪಾರಂಪರ್ಯವಾಗಿ ಅನುಭೋಗ ಮಾಡುವ ಪದ್ಧತಿಯನ್ನು ಒಂದನೆಯ ಮಹಾಯುದ್ಧದ ಅನಂತರ ರದ್ದು ಮಾಡಲಾಯಿತು. ಬೇರೊಬ್ಬನ ಆದಾಯವನ್ನು ಮರೆ ಮಾಚಿ ದೋಚಿದ್ದಲ್ಲಿ ಅದನ್ನು ಸಂದಾಯ ಮಾಡುವ, ಇತರರ ಸ್ವತ್ತಿಗೆ ಹಾನಿ ಮಾಡಿದ್ದರೆ ಪರಿಹಾರ ಕೊಡಬೇಕಾಗುವ ಬಗ್ಗೆ ನಿಯಮಗಳೂ ಇದರಲ್ಲಿವೆ.

ಸ್ಥಿರ, ಚರ ಸ್ವತ್ತುಗಳು, ಅವುಗಳ ಸ್ವಾಧೀನತೆ ಹಾಗೂ ಒಡೆತನ, ಅವುಗಳ ಪರಭಾರೆ ಮಾಡುವುದನ್ನು ಕುರಿತ ನಿಯಮಗಳು ಇದರಲ್ಲಿವೆ. 1875ರಿಂದ ಈಚೆಗೆ, ವಿವಾಹವನ್ನು ರಿಜಿಸ್ಟ್ರಾರನ ಮೂಲಕ ಸಾಮಾಜಿಕವಾಗಿ ನೆರವೇರಿಸಿದ ಮೇಲೆ ಚರ್ಚಿನಲ್ಲೂ ಮಾಡಬಹುದು. ಕುಟುಂಬಕ್ಕೆ ಸಂಬಂಧಿಸಿದ ನ್ಯಾಯಸೂತ್ರಗಳು ಇತ್ತೀಚಿನ ಶಾಸನಗಳಿಂದಾಗಿ ಮಾರ್ಪಾಟು ಹೊಂದಿವೆ. ಮೃತನ ಉಯಿಲಿನಲ್ಲಿ ಉಕ್ತನಾದ ಉತ್ತರಾಧಿಕಾರಿ, ಉಯಿಲು ಇಲ್ಲದಿದ್ದಲ್ಲಿ ಆತನ ರಕ್ತಸಂಬಂಧಿ ಉತ್ತರಾಧಿಕಾರಿ, ಮೃತನ ಎಲ್ಲ ಹಕ್ಕುಬಾಧ್ಯತೆಗಳಿಗೂ ಬಾಧ್ಯನಾಗುತ್ತಾನೆ. ಉಯಿಲು ಸಾಮಾಜಿಕ ಅಥವಾ ವೈಯಕ್ತಿಕವಾಗಿರಬಹುದು. ಉಯಿಲು ಮಾಡಿರದ ಮೃತನ ಆಸ್ತಿಗೆ ಬಾಧ್ಯರಾಗುವ ಉತ್ತರಾಧಿಕಾರಿಗಳನ್ನು ಪಂಗಡಗಳನ್ನಾಗಿ ವಿಂಗಡಿಸಲಾಗಿದೆ. 1. ಮೃತನ ಮಕ್ಕಳು ; 2. ಮೃತನ ತಂದೆ, ತಾಯಿ ಮತ್ತು ಅವರ ಮಕ್ಕಳು ; 3. ಮೃತನ ಅಜ್ಜ, ಅಜ್ಜಿ ಹಾಗೂ ಅವರ ಮಕ್ಕಳು ; ಹೀಗೆಯೇ ಪಂಗಡಗಳು ಮುಂದುವರಿಯುತ್ತವೆ. ಅಲ್ಲದೆ ಒಂದು ಪಂಗಡದಲ್ಲಿ ಯಾರಾದರೂ ಇದ್ದರೆ ಅನಂತರದ ಪಂಗಡದವರಿಗೆ ಯಾವ ಹಕ್ಕುಗಳೂ ಲಭಿಸುವುದಿಲ್ಲ. ಬದುಕಿದ್ದ ಪತಿ ಅಥವಾ ಪತ್ನಿಗೆ ಮೃತನ ಆಸ್ತಿಯಲ್ಲಿ ಭಾಗ ಇರುತ್ತದೆ.

ಎರಡನೆಯ ಮಹಾಯುದ್ಧದಲ್ಲಿ ಪರಾಜಯಗೊಂಡ ಜರ್ಮನಿ ಒಡೆದು ನಾಲ್ಕು ಭಾಗಗಳಾಗಿ ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ಸೋವಿಯತ್ ದೇಶಗಳ ಆಧಿಪತ್ಯಕ್ಕೆ ಒಳಗಾಯಿತು. ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್‌ಗಳ ಆಧಿಪತ್ಯದಲ್ಲಿದ್ದ ಮೂರು ಭಾಗಗಳು ಸೇರಿ ಜರ್ಮನ್ ಸಂಯುಕ್ತ ಗಣರಾಜ್ಯ (ಪಶ್ಚಿಮ ಜರ್ಮನಿ) ಆಯಿತು. ಸೋವಿಯತ್ ಆಧಿಪತ್ಯದಲ್ಲಿದ್ದ ಭಾಗ ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯವಾಯಿತು (ಪೂರ್ವ ಜರ್ಮನಿ). ಈ ರಾಷ್ಟ್ರಗಳ ರಾಜಕೀಯ ಧೋರಣೆಗಳಿಂದ ಅಲ್ಲಿಯ ನ್ಯಾಯಿಕ ಕಲ್ಪನೆ ಮತ್ತು ಮೌಲ್ಯಗಳಲ್ಲಿ ಬದಲಾವಣೆಗಳಾಗಿವೆ.

ಪೂರ್ವ ಜರ್ಮನಿ ಕಮ್ಯೂನಿಸ್ಟ್ ರಾಜ್ಯ, ಇದು ಸಮಾಜವಾದೀ ಪ್ರಜಾಸತ್ತಾತ್ಮಕ ಗಣರಾಜ್ಯ, ಜಿಲ್ಲೆಗಳು ಆಡಳಿತ ಘಟಕಗಳು. ಸರಕಾರದ ಧೋರಣೆಗಳನ್ನು ಅನುಮೋದಿಸುವ ಮಟ್ಟಿಗೆ ಜನತಾಸಭೆಯ ಅಧಿಕಾರ ಸೀಮಿತವಾದ್ದು. ಮಂತ್ರಿಮಂಡಲದ ಅಧ್ಯಕ್ಷ ಸರ್ಕಾರದ ಮುಖ್ಯಸ್ಥ. ಇಲ್ಲಿ ಚುನಾವಣೆಗಳು ನಡೆಯುತ್ತವೆ. ಆದರೆ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳ ಒಂದೇ ಪಟ್ಟಿ ಇರುತ್ತದೆ. ಪಕ್ಷದ ಪ್ರಮುಖರು ಸರ್ಕಾರವನ್ನು ನಿಯಂತ್ರಣಗೊಳಿಸುತ್ತಾರೆ. ಖಾಸಗಿ ಸ್ವತ್ತು ರದ್ದಾಗಿರುವ ಕಾರಣ ದಿವಾಣೀ ಮತ್ತು ದಂಡನ್ಯಾಯ ಸೂತ್ರಗಳಲ್ಲಿ ಅನೇಕ ಬದಲಾವಣೆಗಳಾಗಿವೆ. 1952ರಲ್ಲಿ ಹೊಸ ದಂಡಪ್ರಕ್ರಿಯಾ ಕಾನೂನು ಜಾರಿಗೆ ಬಂತು. ಸಮಾಜದ (ರಾಷ್ಟ್ರದ) ಸ್ವತ್ತಿನ ಸಂಬಂಧದಲ್ಲಿ ಸಾಮಾಜಿಕ ಕಾನೂನುಗಳು ಬಂದಿವೆ. ಕಾರ್ಮಿಕ ಶಿಸ್ತುಪಾಲನೆ ಮತ್ತು ಯೋಗಕ್ಷೇಮದ ಬಗ್ಗೆ ಕಾನೂನುಗಳುಂಟು. ಇಲ್ಲಿ ಮೂರು ರೀತಿಯ ನ್ಯಾಯಾಲಯಗಳಿವೆ: 1. ಜಿಲ್ಲಾ ನ್ಯಾಯಾಲಯಗಳು, 2. ಪ್ರಾದೇಶಿಕ ನ್ಯಾಯಾಲಯಗಳು 3. ಶ್ರೇಷ್ಠ ನ್ಯಾಯಾಲಯ, ಸರ್ಕಾರದ ಮೇಲರ್ಜಿಗಳನ್ನು ಮಾತ್ರ ಸ್ವೀಕರಿಸಿ ಆ ಬಗ್ಗೆ ನಿರ್ಣಯಗಳನ್ನು ಕೊಡುವುದು ಮಾತ್ರ ಶ್ರೇಷ್ಠ ನ್ಯಾಯಾಲಯದ ಕಾರ್ಯಭಾರ.

ಪಶ್ಚಿಮ ಜರ್ಮನಿ 16 ರಾಜ್ಯಗಳ ಸಂಯುಕ್ತ ಗಣರಾಜ್ಯ. ಪ್ರತಿಯೊಂದು ರಾಜ್ಯಕ್ಕೂ ಪ್ರತ್ಯೇಕ ರಾಜ್ಯ ಸರ್ಕಾರವುಂಟು. ಸಂಯುಕ್ತ ಗಣರಾಜ್ಯದ ಕೇಂದ್ರ ಸರ್ಕಾರದ ಎಲ್ಲ ಅಧಿಕಾರಿಗಳೂ ಗಣರಾಜ್ಯದ ಚಾನ್ಸೆಲರನ ಹಿಡಿತದಲ್ಲಿವೆ. ಚಾನ್ಸೆಲರನ್ನು ಬುಂಡೆಸ್ಟ್ಯಾಗಿನಿಂದ–ಕೆಳಮನೆಯಿಂದ–ಚುನಾಯಿಸಲಾಗುತ್ತದೆ. ಕೆಳಮನೆಯ ಸಂಸತ್ ಸದಸ್ಯರು 4 ವರ್ಷಗಳಿಗೊಮ್ಮೆ ಚುನಾಯಿತರಾಗುತ್ತಾರೆ. ರಾಜ್ಯಸಭೆಯ ಸದಸ್ಯರು ರಾಜ್ಯಸರ್ಕಾರಗಳ ಸದಸ್ಯರು. ರಾಷ್ಟ್ರಾಧ್ಯಕ್ಷ ರಾಷ್ಟ್ರದ ಸಂವೈಧಾನಿಕ ಮುಖ್ಯಸ್ಥ. ಅವನನ್ನು 5 ವರ್ಷಗಳ ಅವಧಿಗೆ ಆರಿಸಿರುತ್ತಾರೆ. 1949ರ, ಬಾನ್‌ನ ಮೂಲಭೂತ ನ್ಯಾಯವನ್ನು ಸಿದ್ಧಗೊಳಿಸಿದವರು ಜರ್ಮನರು. ಗೆದ್ದ ರಾಜ್ಯಗಳ ನಿಯಂತ್ರಣದ ಕಾನೂನು 1955ರ ಮೇರೆಗೆ ಇಲ್ಲಿ ಆಚರಣೆಯಲ್ಲಿತ್ತು.

ಪಶ್ಚಿಮ ಜರ್ಮನಿಯ ಅಭಿವೃದ್ಧಿ ಎಲ್ಲ ರಂಗಗಳಲ್ಲೂ ಓತಪ್ರೋತವಾಗಿ ನಡೆದಿದೆ. ನ್ಯಾಯಶಾಸ್ತ್ರವೂ ಇದಕ್ಕೆ ಹೊರತಾಗಿಲ್ಲ. ಪರಂಪರಾನುಗತವಾಗಿ ಬಂದ ಹಿಂದಿನ ಕಾನೂನುಗಳನ್ನು ಆಧಾರವಾಗಿ ಇಟ್ಟುಕೊಂಡು ಆವಶ್ಯ ಮಾರ್ಪಾಡುಗಳನ್ನು ಮಾಡಲಾಗಿದೆ. ಉದ್ಯಮಗಳ ಬೆಳೆವಣಿಗೆ ಕಾರ್ಮಿಕ ನ್ಯಾಯದ ಬೆಳವಣಿಗೆಗೆ ಕಾರಣವಾಗಿದೆ. 1951ರಲ್ಲಿ ಕೂಲಿಕಾರರ ಸಹಭಾಗಿತ್ವದ ಅಧಿನಿಯಮ ಆಚರಣೆಗೆ ಬಂತು. 1952ರಲ್ಲಿ ಕೆಲಸದ ಕಾಲವನ್ನು ನಿಗದಿಗೊಳಿಸಲು ಅವಕಾಶ ಮಾಡಿಕೊಡಲಾಯಿತು. ಬಿಸ್ಮಾರ್ಕನ ಕಾಲದಿಂದಲೂ ಕಾರ್ಮಿಕರಿಗೆ ಸೌಲಭ್ಯಗಳು ಹೆಚ್ಚುತ್ತ ಬಂದಿವೆ. 1953ರಲ್ಲಿ ಕಾರ್ಖಾನೆಗಳಲ್ಲಿ ಆಕಸ್ಮಿಕಕ್ಕೆ ಒಳಗಾಗಿ ಅಂಗವಿಕಲರಾಗುವವರಿಗೆ ಬೇರೆ ರೀತಿಯ ಕೆಲಸವನ್ನು ಕೊಡಲು 1953ರಲ್ಲಿ ಕಾನೂನು ಮಾಡಲಾಗಿದೆ. ವಿಮೆ, ಪ್ರವಾಸದ ಖರ್ಚು, ಆದಾಯ ತೆರಿಗೆ ವಿನಾಯಿತಿ, ಆರೋಗ್ಯ ವಿಮೆ ಮುಂತಾದ ಅನೇಕ ಸೌಲಭ್ಯಗಳನ್ನು ಕಾನೂನುಬದ್ಧವಾಗಿ ಒದಗಿಸಲಾಗಿದೆ. ಅನೇಕ ರೀತಿಯ ತೆರಿಗೆಗಳನ್ನು ಹಾಕಲಾಗುತ್ತಿದ್ದರೂ ಜನಸಾಮಾನ್ಯರಲ್ಲಿ ತೆರಿಗೆ ಕೊಡುವುದನ್ನು ತಪ್ಪಿಸುವ ಪ್ರವೃತ್ತಿ ಕಡಿಮೆ ಎಂದು ಹೇಳಬಹುದು.

ಪಶ್ಚಿಮ ಜರ್ಮನಿಯಲ್ಲಿ ಕುಟುಂಬಕ್ಕೆ ಸಂಬಂಧಿಸಿದ ನ್ಯಾಯಸೂತ್ರಗಳಲ್ಲಿಯೂ ಬದಲಾವಣೆಗಳಾಗಿವೆ. 1949ರ ಮೂಲಭೂತ ನ್ಯಾಯದಲ್ಲಿ ಪತಿಪತ್ನಿಯರು ಸಮಾನರು ಎಂದು ಹೇಳಲಾಗಿದ್ದರೂ ಅದು ಆಚರಣೆಯಲ್ಲಿ ಬಂದದ್ದು 1957ರಲ್ಲಿ. ಸರಿಯಾದ ಕಾರಣ ಕೊಟ್ಟು ವಿವಾಹವಿಚ್ಛೇದನ ಪಡೆಯಬಹುದು. ಈ ವಿಷಯದಲ್ಲೂ ಸ್ತ್ರೀಪುರುಷ ರಿಬ್ಬರಿಗೂ ಸಮಾನ ಹಕ್ಕುಗಳನ್ನು ಕೊಡಲಾಗಿದೆ. ವಿವಾಹವಿಚ್ಛೇದನಾನಂತರ ಮಕ್ಕಳು ಯಾರಲ್ಲಿ ಇರಬೇಕೆಂಬ ಬಗ್ಗೆ ಮಕ್ಕಳ ಹಿತವನ್ನು ಗಮನದಲ್ಲಿ ಇಟ್ಟುಕೊಂಡು ನ್ಯಾಯಾಲಯ ಆಜ್ಞೆ ಮಾಡಲು ಅವಕಾಶವಿದೆ. ಮಿತಸಂತಾನ ರಾಷ್ಟ್ರದ ಧೋರಣೆ ಆಗಿರಲಿಲ್ಲ. ಮಕ್ಕಳು ಇದ್ದವರಿಗೆ ಸರ್ಕಾರ ತೆರಿಗೆ ರಿಯಾಯಿತಿ ಕೊಡುತ್ತಿತ್ತು. ನಾಲ್ಕಕ್ಕಿಂತ ಹೆಚ್ಚು ಮಕ್ಕಳಿದ್ದರೆ ಸರ್ಕಾರ ಸಹಾಯಧನ ನೀಡುತ್ತಿತ್ತು. ಈ ಸೌಲಭ್ಯಗಳು ಕಡಿಮೆಯಾಗಹತ್ತಿದೆ. ದಂಡವಿಧಿಯ ಗ್ರಂಥಗಳು 6ನೆಯ ಶತಮಾನದಿಂದಲೂ ದೊರೆಯುತ್ತವೆ. ಪಶ್ಚಿಮ ಜರ್ಮನಿಯಲ್ಲಿ ಹೊಸ ದಂಡಸಂಹಿತೆ 1959ರಿಂದ ಈಚೆಗೆ ಆಚರಣೆಯಲ್ಲಿ ಬಂದಿದೆ. ನ್ಯಾಯಾಧೀಶನೇ ಪ್ರಶ್ನೆಗಳನ್ನು ಕೇಳಿ ವಿವರಗಳನ್ನು ಪಡೆಯುವುದು ಜರ್ಮನ್ ದಂಡಪ್ರಕ್ರಿಯೆಯ ವೈಶಿಷ್ಟ್ಯ. ನ್ಯಾಯಾಧೀಶರು ಸರ್ಕಾರಿ ನೌಕರರು, ತರಬೇತು ಹೊಂದಿದವರು. ಸ್ಥಳೀಯ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ, ಸಂಯುಕ್ತ ಉಚ್ಚ ನ್ಯಾಯಾಲಯ ಎಂದು ಮೂರು ಬಗೆಯ

ನ್ಯಾಯಾಲಯಗಳುಂಟು. ಸಂಯುಕ್ತ ಪರಮೋಚ್ಚ ನ್ಯಾಯಾಲಯವನ್ನು ಮೂಲಭೂತ ನ್ಯಾಯದಲ್ಲಿ ಹೇಳಿದ್ದರೂ ಅದು ಅಸ್ತಿತ್ವದಲ್ಲಿ ಇಲ್ಲ. ಸಂಯುಕ್ತ ಸಂವೈಧಾನಿಕ ಪರಮೋಚ್ಚ ನ್ಯಾಯಾಲಯ ಸಂವೈಧಾನಿಕ ವಿಷಯಗಳಲ್ಲಿ ನಿರ್ಣಯ ಕೊಡುತ್ತದೆ.

ವಿಶ್ವದ ನ್ಯಾಯಶಾಸ್ತ್ರಕ್ಕೆ ಜರ್ಮನ್ ನ್ಯಾಯಶಾಸ್ತ್ರದ ಕೊಡುಗೆ ಸಾಕಷ್ಟಿದೆ. 19ನೆಯ ಶತಮಾನದ ಇತಿಹಾಸಕಾರರು ಆಧುನಿಕ ಪ್ರಜಾತಂತ್ರಕ್ಕೆ ಜರ್ಮನಿಯ ಅಲೆಮಾರಿ ಗುಂಪುಗಳು ಮೂಲವೆಂದು ಅಭಿಪ್ರಾಯಪಟ್ಟಿದ್ದಾರೆ. ಸಹಕಾರಿ ನ್ಯಾಯಸೂತ್ರಗಳೂ ಕಾರ್ಮಿಕ ಯೋಗಕ್ಷೇಮದ ಕಾನೂನುಗಳೂ ಅನೇಕ ದೇಶಗಳ ಕಾನೂನುಗಳ ಮೇಲೆ ಪ್ರಭಾವ ಬೀರಿವೆ. 1900ರಲ್ಲಿ ಆಚರಣೆಗೆ ಬಂದ ಜರ್ಮನ್ ದಿವಾಣೀ ಸಂಹಿತೆ ಮತ್ತು ತತ್ಸಂಬಂಧಿ ಕಾನೂನುಗಳು ಕೂಡ ವಿಶ್ವದ ಅನೇಕ ರಾಷ್ಟ್ರಗಳ ಕಾನೂನುಗಳ ಮೇಲೆ ಪ್ರಭಾವ ಬೀರಿವೆ. ಜರ್ಮನಿಯ ದಿವಾಣೀ ಸಂಹಿತೆಯ ಪ್ರಥಮ ಕರಡನ್ನು ಆಧಾರವಾಗಿಟ್ಟುಕೊಂಡು ಜಪಾನಿನ 1898ರ ದಿವಾಣೀ ಸಂಹಿತೆಯನ್ನು ರಚಿಸಲಾಗಿತ್ತು. 1925ರ ಸ್ಯೆಯಾಮಿನ ದಿವಾಣೀ ಸಂಹಿತೆ ಮತ್ತು 1920–31ರ ಚೀನೀ ಸಂಹಿತೆಗಳಿಗೂ ಜರ್ಮ್ನ್ ದಿವಾಣೀ ಸಂಹಿತೆ ಸ್ಫೂರ್ತಿ ನೀಡಿದೆ. ಸ್ವಿಟ್ಜರ್ಲೆಂಡ್, ಆಸ್ಟ್ರಿಯ, ಪೋಲೆಂಡ್, ರಷ್ಯ, ಚೆಕೋಸ್ಲೋವಾಕಿಯ ಹಾಗೂ ಸ್ಕ್ಯಾಂಡಿನೇವಿಯನ್ ದೇಶಗಳ ಕಾನೂನುಗಳ ಮೇಲೂ ಇದರ ಪ್ರಭಾವ ಬಿದ್ದಿದೆ. ಮುಸ್ತಫ ಕೆಮಾಲ್–ಅತಾತುರ್ಕ ತನ್ನ ದೇಶದ ಕಾನೂನನ್ನು ಇದೇ ಮಾದರಿಯಲ್ಲಿ ಸುಧಾರಿಸಲು ಯೋಚಿಸಿದ್ದ. ಎರಡನೆಯ ಮಹಾಯುದ್ಧದ ಕಾವಿನಲ್ಲೂ ಗ್ರೀಕ್ ನ್ಯಾಯಶಾಸ್ತ್ರಜ್ಞರು 1946ರ ದಿವಾಣೀ ಸಂಹಿತೆಯನ್ನು ಸಿದ್ಧಗೊಳಿಸುವಾಗ ಜರ್ಮನ್ ದಿವಾಣೀ ಸಂಹಿತೆಯ ಲಾಭ ಪಡೆದರು. ಹೀಗೆ ಜರ್ಮನ್ ನ್ಯಾಯ ವಿಶ್ವದ ನ್ಯಾಯಸೂತ್ರಗಳ ಮೇಲೆ ಅನೇಕ ರೀತಿಯಲ್ಲಿ ಪ್ರಭಾವ ಬೀರಿದೆ. (ಎಲ್.ಎಸ್.ಜಿ.)

**ಜರ್ಮನ್ ಭಾಷೆ :** ಸು. 108 ಮಿಲಿಯನ್ (2005ರ ಗಣತಿಯ ಪ್ರಕಾರ) ಜನ ಮಾತನಾಡುವ ಈ ಭಾಷೆ ಯೂರೋಪಿಯನ್ ಯೂನಿಯನ್ನಿನ ಪ್ರಮುಖ ಭಾಷೆಗಳಲ್ಲೊಂದು. ಜರ್ಮನಿ ಮತ್ತು ಆಸ್ಟ್ರಿಯಗಳಲ್ಲಿ ಆಡಳಿತ ಭಾಷೆಯಾಗಿಯೂ ಸ್ವಿಟ್ಜರ್ಲೆಂಡಿನಲ್ಲಿ ಆಡಳಿತ ಭಾಷೆಗಳಲ್ಲೊಂದಾಗಿಯೂ (ಫ್ರೆಂಚ್, ಇಟ್ಯಾಲಿಯನ್ ಮತ್ತು ರೋಮನ್‌ಗಳೊಡನೆ) ಪರಿಗಣಿತವಾಗಿದೆ. ಈ ಭಾಷೆಯ ಶಿಷ್ಟ ರೂಪ ಈ ಮೂರು ದೇಶಗಳಲ್ಲೂ ಪ್ರಾಯಃ ಒಂದೇ ಆದರೂ ಆಡುಭಾಷೆ ಮಾತ್ರ ಆಯಾ ಪ್ರದೇಶವನ್ನವಲಂಬಿಸಿ ಸ್ವಲ್ಪ ಬೇರೆಯಾಗಿದೆ. ಜರ್ಮನ್ ಭಾಷೆಯಲ್ಲಿ ಶಿಷ್ಟ ಭಾಷೆಯೊಂದಿಗೆ ಹಲವು ಉಪಭಾಷೆಗಳಿವೆ. ಮೇಲೆ ಸೂಚಿಸಿದ ದೇಶಗಳಲ್ಲೇ ಅಲ್ಲದೆ ಈ ಉಪಭಾಷೆಗಳು ನೆರೆಯ ಫ್ರಾನ್ಸ್ (ಆಲ್‌ಸೇಸ್ ಮತ್ತು ಲೋರೆನ್‌ಗಳ ಕೆಲವು ಭಾಗಗಳಲ್ಲಿ), ಲಕ್ಸಂಬರ್ಗ್ ಮತ್ತು ಉತ್ತರ ಇಟಲಿಯಲ್ಲಿ (ದಕ್ಷಿಣ ಟೈರೋಲ್) ಕೂಡ ವ್ಯವಹಾರದಲ್ಲಿವೆ. ಎರಡನೆಯ ಮಹಾಯುದ್ಧದ ಅಂತ್ಯದ ವೇಳೆಗೆ ಜರ್ಮನ್ ಭಾಷೆ ಇಂದಿನ ಪಶ್ಚಿಮ ಪೋಲೆಂಡ್ ಹಾಗೂ ಚೆಕೊಸ್ಲೊವಾಕಿಯಾದ ಕೆಲವು ಭಾಗಗಳಲ್ಲಿ ಉಪಯೋಗದಲ್ಲಿದ್ದಿತಲ್ಲದೆ, ಪೂರ್ವ ಯೂರೋಪಿನಲ್ಲಿ ವೋಲ್ಗಾ ನದಿಯವರೆಗೂ ಜರ್ಮನ್ ಮಾತನಾಡುವವರು ಹರಡಿ ಹೋಗಿದ್ದರು.

ಜರ್ಮನ್ ಭಾಷೆಯ ಶಿಷ್ಟರೂಪದಲ್ಲಿ ಕೆಳಗೆ ಕಾಣಿಸಿರುವ ಸ್ವರಗಳು ಮತ್ತು ವ್ಯಂಜನಗಳು ಇವೆ:

| | | | | | | | |
|---|---|---|---|---|---|---|---|
| ಸ್ವರಗಳು : ಶಿಥಿಲ : | ಇ | ಉ̈ | ಉ | ಮಂದ : | ಈ | ಊ̈ | ಊ |
| | ಎ | ಒ | ಒ | | ಏ | ಏ | ಓ |
| | | ಅ | | | | ಆ | |

ಸಂಯುಕ್ತ : ಅಯ್ (ಐ) ಒಯ್ ಅವ್ (ಔ)

ನಿರ್ಬಲ : ಅ (ə)

ಇವುಗಳಲ್ಲದೆ ಏ (ɛ) ಕೂಡ ಕೆಲವರ ಮಾತಿನಲ್ಲಿ ವಿಶೇಷವಾಗಿಯೂ ಇತರರ ಮಾತಿನಲ್ಲಿ ಅಪರೂಪವಾಗಿಯೂ ಕಂಡುಬರುತ್ತದೆ.

ವ್ಯಂಜನಗಳು :

| | | | | | | | |
|---|---|---|---|---|---|---|---|
| ಸ್ಪರ್ಶ : | ಪ್ | ಬ್ | ತ್ | ದ್ | ಕ್ | ಗ್ | |
| ಸಂಘರ್ಷೀ | ಫ್ | ವ್ | ಸ್ | ಜ್ | ಖ಼್ | ಕ಼್ | ಹ್ |
| | | | | | | ಶ್ | ಜ್ |
| ನಾಸಿಕ್ಯ : | ಮ್ | ನ್ | ಙ | | | | |
| ಅವರ್ಗೀಯ: | ಯ್ | ಲ್ | ರ್ | | | | |

ಜರ್ಮನ್ ಭಾಷೆಯಲ್ಲಿ ನಾಮ, ವಿಶೇಷಣ ಮತ್ತು ಕ್ರಿಯಾ ಎಂದು ಹೆಸರಿಸಬಹುದಾದ ಮೂರು ಗುಂಪಿನ ಪದಗಳನ್ನು ಕಾಣಬಹುದು. ನಾಮಪದಗಳು ಮತ್ತು ವಿಶೇಷಣಗಳು ಎರಡು ವಚನ (ಏಕ ಮತ್ತು ಬಹು) ಮತ್ತು ನಾಲ್ಕು ವಿಭಕ್ತಿ (ಪ್ರಥಮಾ, ದ್ವಿತೀಯಾ, ಚತುರ್ಥೀ, ಷಷ್ಠೀ) ರೂಪಗಳಲ್ಲಿ ಮಾರ್ಪಡುತ್ತವೆ. ವಿಶೇಷಣಗಳಲ್ಲಿ ವಚನ, ವಿಭಕ್ತಿಗಳಲ್ಲದೆ ಲಿಂಗಭೇದ (ಪುಂ., ಸ್ತ್ರೀ., ನಪುಂ.) ಮತ್ತು ತರತಮ ರೂಪಗಳಿವೆ. ವಿಶೇಷಣಗಳಲ್ಲಿ ತಮ್ಮ ಮೂಲರೂಪದಲ್ಲಿ ವಾಕ್ಯಗಳಲ್ಲಿ ಉಪಯೋಗವಾದಾಗ ಕ್ರಿಯಾ ವಿಶೇಷಣ ವೆನಿಸಿಕೊಳ್ಳುತ್ತವೆ. ಕ್ರಿಯಾಪದಗಳಲ್ಲಿ ಪುರುಷಭೇದ (ಪ್ರಥಮ, ಮಧ್ಯಮ, ಅನ್ಯ) ಮತ್ತು ವಚನಭೇದಗಳ (ಏಕ, ಬಹು) ಜೊತೆಗೆ ಕಾಲಭೇದ (ವರ್ತಮಾನ, ಭೂತ) ಮತ್ತು ವಿಧ್ಯರ್ಥಕ ಭೇದ (ನಿರ್ದೇಶಾತ್ಮಕ, ವಸ್ತುನಿಷ್ಠಾತ್ಮಕ, ಆಜ್ಞಾರ್ಥಕ ವಿಧಿ)ಗಳಿವೆ. ಇದಲ್ಲದೆ ಕೃದಂತ ರೂಪಗಳು (ವರ್ತಮಾನ, ಭೂತ) ಸಹ ಕಾಣಸಿಗುತ್ತವೆ. ಮೇಲಿನ ಮುಖ್ಯವಾದ ಮೂರು ಗುಂಪಿನ ಪದಗಳಲ್ಲದೆ ನಿರ್ದೇಶಕ ಇತ್ಯಾದಿ ಸರ್ವನಾಮ, ಉಪಸರ್ಗ ಮತ್ತು ಸಂಯೋಗಾವ್ಯಯ ಮತ್ತು ಹಲವು ಪ್ರಕಾರದ ಕ್ರಿಯಾವಿಶೇಷಣಗಳೂ ಇವೆ.

ಇಂಡೊ–ಯೂರೋಪಿಯನ್ ಭಾಷಾ ಪರಿವಾರಕ್ಕೆ ಸೇರಿದ ಜರ್ಮ್ಯಾನಿಕ್ ಭಾಷೆಯ, ಅದರಲ್ಲೂ ಪಶ್ಚಿಮ ಜರ್ಮ್ಯಾನಿಕ್ ಗುಂಪಿನಲ್ಲಿ ಜರ್ಮನ್ ಭಾಷೆ ಅಂತರ್ಗತವಾಗಿದೆ. ನೆದರ್‌ಲ್ಯಾಂಡಿನ ಭಾಷೆಗಳಾದ ಡಚ್ ಮತ್ತು ಫ್ಲೆಮಿಷ್‌ಭಾಷೆಗಳು ಇದರ ಹತ್ತಿರದ ಸಂಬಂಧಿಗಳು. ಪ್ರಾಂತೀಯ ಉಪಭಾಷೆಗಳ ದೃಷ್ಟಿಯಿಂದ ಜರ್ಮನ್ ಮತ್ತು ನೆದರ್‌ಲ್ಯಾಂಡಿನ ಭಾಷೆಗಳು ಒಂದೇ ಮಾಂಡಲಿಕ ರೂಪವೆನಿಸಿಕೊಳ್ಳುತ್ತವೆ. ಹಾಗೂ ಬೆಲ್ಜಿಯಂನ ಉತ್ತರ ತೀರ, ಹಾಲೆಂಡ್, ಜರ್ಮನಿಯಿಂದ ಪ್ರಾರಂಭಿಸಿ ಸ್ವಿಟ್ಜರ್ಲೆಂಡಿನ ಬಹುಭಾಗಗಳಲ್ಲಿ ಮತ್ತು ಆಸ್ಟ್ರಿಯಗಳಲ್ಲಿ ಈ ಮಾಂಡಲಿಕ ರೂಪದ ವ್ಯಾಪ್ತಿ ಇರುವುದು ಕಂಡುಬರುತ್ತದೆ. ಈ ಒಂದೇ ಮಾಂಡಲಿಕ ರೂಪದಿಂದ ಪ್ರ.ಶ. 15 ರಿಂದ 17ನೆಯ ಶತಮಾನದ ಒಳಗೆ ಎರಡು ಪ್ರತ್ಯೇಕ ಭಾಷೆಗಳು ಹುಟ್ಟಿಕೊಂಡು ಅವುಗಳಲ್ಲಿ ವಾಯವ್ಯ ಪ್ರದೇಶದಲ್ಲಿ ನೆದರ್‌ಲ್ಯಾಂಡಿಕ್ (ಇದನ್ನೇ ಹಾಲೆಂಡಿನಲ್ಲಿ ಡಚ್ ಎಂದೂ ಬೆಲ್ಜಿಯಂನಲ್ಲಿ ಫ್ಲೆಮಿಷ್ ಎಂದೂ ಕರೆಯುತ್ತಾರೆ) ಮತ್ತು ಇತರೆಡೆಗಳಲ್ಲಿ ಜರ್ಮನ್ ಬೆಳೆದು ಬಂದವು.

ಜರ್ಮನ್ ಭಾಷೆಯ ಶಿಷ್ಟರೂಪ ದಕ್ಷಿಣದ ಉನ್ನತ ಪ್ರದೇಶಗಳಲ್ಲಿ ವ್ಯವಹಾರದಲ್ಲಿದ್ದ ಉಚ್ಚ ಜರ್ಮನ್ ಉಪಭಾಷೆಯಿಂದ ಬೆಳೆಯಿತು. ಉತ್ತರದ ಕೆಳಭಾಗದಲ್ಲಿ ಉಪಯೋಗದಲ್ಲಿದ್ದ ನಿಮ್ನ ಜರ್ಮನ್ ಪ್ರಭಾವ ಶಿಷ್ಟ ಭಾಷೆಯ ಮೇಲೆ ಸ್ವಲ್ಪವೂ ಆಗಲಿಲ್ಲವೆನ್ನಬಹುದು. ಈ ಎರಡು ಉಪಭಾಷೆಗಳಿಗೂ ಇರುವ ಮುಖ್ಯ ಭೇದವೆಂದರೆ ಆರನೆಯ ಶತಮಾನದಲ್ಲಿ ದಕ್ಷಿಣದ ಕಡೆಯಿಂದ ಆರಂಭಗೊಂಡು ಬಹುವೇಗವಾಗಿ ಉತ್ತರದೆಡೆಗೆ ಹರಡಿದ ವ್ಯಂಜನ ಧ್ವನಿಗಳು ವಿವಿಧ ಮಾರ್ಪಾಡುಗಳಿಂದ ಉಚ್ಚ ಜರ್ಮನ್‌ನಲ್ಲಿ ಕಂಡುಬಂದಿವೆ. ಆದರೆ ನಿಮ್ನ ಜರ್ಮನ್‌ನಲ್ಲಿ ಅವು ಕಂಡುಬಂದಿಲ್ಲ. ಈ ಧ್ವನಿಮಾರ್ಪಾಡಿನ ಪರಿಣಾಮದಿಂದ (ನಿಮ್ನ ಜರ್ಮನ್ ಮತ್ತು ಇಂಗ್ಲಿಷಿನಲ್ಲಿ ಇನ್ನೂ ಕಂಡುಬರುವ) ಮೂಲಭಾಷೆಯ ಪ್, ತ್, ಕ್ ವ್ಯಂಜನ ವರ್ಣಗಳು ಪದಾದಿಯಲ್ಲಿದ್ದಾಗ ಸಂಘರ್ಷೀ ಮತ್ತು ದ್ವಿತ್ವ ರೂಪಗಳಲ್ಲಿದ್ದಾಗ ಅನುವರ್ಷಧ್ವನಿಗಳಾಗಿ ಮಾರ್ಪಟ್ಟು, ಸ್ವರಗಳು ಪೂರ್ವದಲ್ಲಿದ್ದಾಗ ಅದೇ ಮತ್ತೆ ಸಂಘರ್ಷೀ ವರ್ಣಗಳಾಗಿರುವುದನ್ನು ಕಾಣಬಹುದು.

| ಜರ್ಮ್ಯಾನಿಕ್ | ಇಂಗ್ಲಿಷ್ |
|---|---|
| ಪ್– | ಪಾತ್ |
| ಟ್– | ಟೆನ್ |
| ಕ್– | ಕ್ಯಾನ್ |
| –ಪ್ಪ್– | ಆ್ಯಪಲ್ |
| –ಟ್ಟ್– | ಸಿಟಿಂಗ್ |
| –ಕ್ಕ್– | ಲಿಕಿಂಗ್ |
| –ಪ್– | ಹೋಪ್ |
| –ಟ್– | ಬೈಟ್ |
| –ಕ್– | ಮೇಕ್ |
| –ಪ್– | ಷೀಪ್ |
| –ಟ್ | ಫೂಟ್ |
| –ಕ್– | ಬೂಕ್ |

(ಡಬ್ಲ್ಯೂ.ಜಿ.ಎಂ.)

**ಜರ್ಮನ್ ವಾಸ್ತು, ಶಿಲ್ಪ, ಕಲೆ :** ಜರ್ಮನ್ ಎಂದು ನಿರ್ದಿಷ್ಟವಾಗಿ ಹೇಳಬಹುದಾದ ಕಲಾಸಂಪ್ರದಾಯ ಆಟೋನಿಯನ್ ಕಾಲದಲ್ಲಿ ಆರಂಭವಾಗಿ ಮುಂದೆ ಫ್ರಾನ್ಸ್, ಇಟಲಿ ಮುಂತಾದ ದೇಶಗಳೊಂದಿಗೆ ಆದ ಸಾಂಸ್ಕೃತಿಕ ವಿನಿಮಯದಿಂದ ವಿಶಿಷ್ಟ ರೀತಿಯಲ್ಲಿ ಬೆಳೆಯಿತು. ಈ ಬೆಳವಣಿಗೆಯ ಘಟ್ಟಗಳನ್ನು ಕೆಳಕಂಡಂತೆ ವಿವರಿಸಬಹುದು : I ಆಟೋನಿಯನ್, II ರೋಮನೆಸ್ಕ್, III ಗಾತಿಕ್, IV ಪುನರುಜ್ಜೀವನ ಕಾಲ ಮತ್ತು ಮ್ಯಾನರಿಸಂ, V ಬರೋಕ್ ಮತ್ತು ರೋಕೋಕೋ, VI 19ನೇ ಶತಮಾನ, VII ಆಧುನಿಕ.

1 ಆಟೋನಿಯನ್ ಕಾಲದ (10ನೆಯ ಶತಮಾನದ ಮಧ್ಯದಿಂದ 11ನೆಯ ಶತಮಾನದವರೆಗೆ) ಜರ್ಮನ್ ವಾಸ್ತುಶಿಲ್ಪಕಲೆಯ ಜ್ಞಾನ ಅಂದಿನ ಕಟ್ಟಡಗಳ ತಳಪಾಯ ಹಾಗೂ ಇತರ ಬಿಡಿ ಭಾಗಗಳಿಗೆ ಸೀಮಿತವಾದ್ದು. ಮ್ಯಾಗ್ಡಬರ್ಗ್‌ನ ಪ್ರಥಮ ಜರ್ಮನ್

ಇಂಪೀರಿಯಲ್ ಕತೀಡ್ರಲ್‌ನ (ಪ್ರ.ಶ. 955), ಬೆಲ್ಜಿಯಮ್‌ನ ಲೀಯೆಜ್ (1015), ಮೈಂಟ್ಸ್ (975), ವೋಮ್ಸ್ (1018), ಸ್ಟ್ರಾಸ್‌ಬರ್ಗ್ (1015) ಮುಂತಾದ ಕಡೆಗಳಲ್ಲಿರುವ ಕತೀಡ್ರಲ್‌ಗಳ ಕಟ್ಟಡಗಳ ಅಸ್ತಿವಾರಗಳಿಂದ ಆಟೋನಿಯನ್ ವಾಸ್ತು ಲಕ್ಷಣಗಳನ್ನು ಅರಿಯಬಹುದು. ಆ ಕಾಲದವಾಗಿ ಉಳಿದಿರುವ ಕಟ್ಟಡಗಳು ಬಲು ವಿರಳವಾದರೂ ಎಚ್ಚರಿಕೆಯಿಂದ ರಕ್ಷಿಸಿಟ್ಟಿರುವ ಕಟ್ಟಡಗಳಲ್ಲಿ ಆಟೋನಿಯನ್ ಕಾಲದ ವಾಸ್ತುಕಲಾ ಸ್ವರೂಪವನ್ನು ಅರಿಯಬಹುದು. ಹಿಲ್ಡಸ್ ಹೈಮ್‌ನ ಸೇಂಟ್ ಮೈಕಲ್ ಚರ್ಚ್ ಇವುಗಳಲ್ಲಿ ಮುಖ್ಯವಾದ್ದು. ಇದರ ನಿರ್ಮಾಣವನ್ನು ಬಿಷಪ್ ಬರ್ನ್‌ವಾರ್ಡ್ 1000ರಲ್ಲಿ ಆರಂಭಿಸಿದ. ಇದರಲ್ಲಿನ ವಿವಿಧಾಂಗಗಳಲ್ಲಿ ಉತ್ತಮ ಸಮತೋಲವಿರುವಂತೆ ಎಚ್ಚರಿಕೆಯಿಂದ ರೂಪಿಸಲಾಗಿರುವ ತಳವಿನ್ಯಾಸದಲ್ಲಿ ಮೂರು ಉದ್ದಸಾಲೆಗಳಾಗಿ ವಿಭಜಿತವಾಗಿರುವ ಒಂದು ದೊಡ್ಡ ಹಜಾರ, ಅದನ್ನು ಸಮಕೋನದಲ್ಲಿ ಅಡ್ಡಹಾಯ್ದು ಶಿಲುಬೆಯ ವಿನ್ಯಾಸವನ್ನು ರಚಿಸುವ ಅಡ್ಡಸಾಲೆ, ಇದಕ್ಕೆ ಸೇರಿದಂತೆ ಅರ್ಧವೃತ್ತಾಕರದ ಮೂರು ಕೋಷ್ಠಗಳು ಮತ್ತು ಅದರ ಎದುರುಬದಿಯಲ್ಲಿ ಗೀತರಂಗ (ಕ್ವೈಯರ್) –ಈ ಭಾಗಗಳಿವೆ. ಏರು ವಿನ್ಯಾಸದಲ್ಲಿ ಮೇಗಣ ಭಾರವನ್ನು ಹೊರುವಂತಿರುವ ಕಂಬಗಳು ಭಿತ್ತಿಯ ಅಲಂಕಾರವಾಗಿವೆ. ಚೌಕಾಕಾರದ ಬೋದಿಗೆಯನ್ನು ಹೊಂದಿರುವ ಇಲ್ಲಿಯ ಕಂಬಗಳಲ್ಲಿ ಹೊಸ ಸಂಪ್ರದಾಯದ ನಾಂದಿಯನ್ನು ಗುರುತಿಸಬಹುದು. ಹೊರಭಾಗ ಅನೇಕ ಜ್ಯಾಮಿತೀಯ ಅಲಂಕರಣಗಳಿಂದ ಕೂಡಿದ್ದು ಕಟ್ಟಡದ ಪ್ರತಿಯೊಂದು ಅಂಗವೂ ಮತ್ತೊಂದರಿಂದ ಸ್ಪಷ್ಟವಾಗಿ ಬೇರ್ಪಟ್ಟಿರುವಂತೆ ರಚಿತವಾಗಿದೆ. ಇಲ್ಲಿಯ ಮತ್ತೊಂದು ಮುಖ್ಯ ಅಂಶವೆಂದರೆ ಜರ್ಮನ್ ಕಲೆಯ ಪ್ರಪ್ರಥಮ ಶಿಲ್ಪಕಲಾಕೃತಿಗಳನ್ನು ಪ್ರತಿನಿಧಿಸುವ ಶಿಲ್ಪಗಳನ್ನು ಹೊಂದಿರುವ 4.8ಮೀ. ಎತ್ತರವಿರುವ ಎರಕದ ಕಂಚಿನ ಬಾಗಿಲುಗಳು.

ಎಚ್. ಫೋನ್ ಮರಿಸ್‌ನ ಒಂದು ಚಿತ್ರ–ಟೂ ಫ್ರೆಂಡ್ಸ್

ಆಟೋನಿಯನ್ ಕಾಲದ ಕಲೆಗೆ ಸ್ಫೂರ್ತಿಯ ನೆಲೆಯೆಂದರೆ ಪ್ರ.ಶ. 8–11ನೆಯ ಶತಮಾನಗಳಲ್ಲಿ ಪಶ್ಚಿಮ ಯೂರೋಪಿನಲ್ಲಿ ಪ್ರಚಲಿತವಾಗಿದ್ದ ಕಾರೊಲಿಂಜಿಯನ್ ಕಾಲದ ಕಲಾಕೃತಿಗಳು. ಬೈಜಾಂಟಿಯನ್ ಮತ್ತು ರೋಮನ್ ಕಲೆಯ ಪ್ರತಿರೂಪಗಳೂ ಜರ್ಮನ್ ಶಿಲ್ಪಕಲೆಯ ಅಲಂಕರಣದ ಮತ್ತು ಚಿತ್ರಕಲೆಯ ಸ್ಫೂರ್ತಿಗಳಾದುವು. ಈ ಕಾಲದ ಜರ್ಮನ್ ಕಲಾಕೃತಿಗಳು ನಿರೂಪಣೆಯಲ್ಲಿ ಭವ್ಯವೂ ಭಾವಗರ್ಭಿತವೂ ಆಗಿರುವುವಲ್ಲದೆ ಹೆಚ್ಚಾಗಿ ದೈವಿಕ ವಿಷಯಗಳಿಂದ ತುಂಬಿರುತ್ತವೆ. ಭಾವದ ಬಿಗಿ ಮತ್ತು ಪಾರಮಾರ್ಥಿಕ ದೃಷ್ಟಿ ಇವುಗಳ ವೈಶಿಷ್ಟ್ಯ. ಹಿಲ್‌ಡಸ್‌ಹೈಮ್‌ನಲ್ಲಿರುವ ಮೈಕಲ್ ಇಗರ್ಜಿಯ ಕಂಚಿನ ಎರಕದ ಬಾಗಿಲುಗಳು ಆಟೋನಿಯನ್ ಕಾಲದ ಶಿಲ್ಪಕ್ಕೆ ಉತ್ತಮ ಉದಾಹರಣೆ. ಆ ಕಾಲದಲ್ಲಿ ಪ್ರಭಾವಿಯಾಗಿದ್ದ ಸ್ಯಾಕ್ಸನ್ ಮಾದರಿಯ ಶಿಲ್ಪಗಳ ಮುಖ್ಯವಾದ ಗುಂಪೊಂದು ಈ ಸುಂದರವೂ ಬೃಹದಾಕಾರದ್ದೂ ಆಗಿರುವ ಬಾಗಿಲುಗಳ ಮೇಲೆ ಇದೆ. ಅಲಂಕರಣ ಕೆತ್ತನೆಗಳು ಹಿಂದಿನ ಕಾರೋಲಿಂಜಿಯನ್ ಶೈಲಿಯಲ್ಲಿವೆ. ಚಕ್ರವರ್ತಿ ಎರಡನೆಯ ಹೆನ್ರಿಯಿಂದ ನಿಯೋಜಿತವಾದ ಬಾಸಲ್ ಕತೀಡ್ರಲ್ ಪವಿತ್ರ ಪೀಠದ ಮುಂದಿನ ತೆರೆ ಕಲೋನ್ ಕತೀಡ್ರಲ್‌ನ ಜೀರೋಕ್ರಾಸ್ (ಪ್ರ.ಶ. 970). ಜರ್ಮನಿಯ ಮರೋನ್ ಶಿಲ್ಪಗಳಲ್ಲಿ ಅತ್ಯಂತ ಪುರಾತನವಾದ ಎಸೆನ್‌ನ ಮಡೋನ ಮುಂತಾದವು ಈ ಕಾಲದ ಪ್ರಮುಖ ಕಲಾಕೃತಿಗಳು.

ಈ ಕಾಲದಲ್ಲಿ ಚಿನ್ನ, ಬೆಳ್ಳಿ ಮತ್ತು ದಂತದ ಕುಶಲ ಕೈಗಾರಿಕೆ ಸಹ ಬಹಳ ಮಟ್ಟಿಗೆ ಪ್ರಗತಿ ಸಾಧಿಸಿತ್ತು. ರೈಕನೌ ದ್ವೀಪದ ಸಂನ್ಯಾಸಿ ಮಠಗಳು, ಬ್ಯಾಂಬರ್ಗಿನ ಕ್ರೈಸ್ತಮಠಗಳೇ ಮೊದಲಾದವು ಈ ಕೈಗಾರಿಕೆಗಳ ಮುಖ್ಯ ಕೇಂದ್ರಗಳು. ಈ ಕಾಲದ ಚಿನ್ನದ ಆಭರಣಗಳಲ್ಲಿ ಮತ್ತು ಇತರ ಕುಶಲ ಕೃತಿಗಳಲ್ಲಿ ಬೈಜಾಂಟಿಯನ್ ಕಲೆಯ ಪ್ರಭಾವವನ್ನು ಕಾಣಬಹುದು. ಜೌಬೆನ್‌ನ ಲೋಥರ್ ಕ್ರಾಸ್ (ಸು. 980) ಮತ್ತು ಟ್ರೀರ್‌ನ ಸೇಂಟ್ ಆಂಡ್ರ್ಯೂವಿನ ಸಂಪುಟ (977–83) ಇತ್ಯಾದಿ ಇನ್ನೂ ಅನೇಕ ವಸ್ತುಗಳು ಈ ಕಾಲದ ಸೂಕ್ಷ್ಮಕಲೆಯ ಉತ್ಕೃಷ್ಟ ಕೃತಿಗಳು.

ಆಟೋನಿಯನ್ ಕಾಲದಲ್ಲಿ ಚಿತ್ರಿತ ಹಸ್ತಪ್ರತಿಗಳ ತಯಾರಿಕೆಯೂ ಅಸಾಧಾರಣ ಪ್ರಗತಿಯನ್ನು ಸಾಧಿಸಿತ್ತು. ಇದರ ಮುಖ್ಯವಾದ ಜರ್ಮನ್ ಪಂಥವೆಂದರೆ ರೈಕ್‌ನೌ ದ್ವೀಪದ್ದು. ಕೆರಾಲ್ಡ್ ಮತ್ತು ಹೆರಿಬರ್ಟ್ ಎಂಬಿಬ್ಬರು ಪಾದ್ರಿಗಳು ಚಿತ್ರಸಹಿತ ಬರೆದು ಅಲಂಕರಿಸಿದ ಕ್ರೈಸ್ತಧರ್ಮದ ಕೆಲವು ಪ್ರಕರಣಗಳುಳ್ಳ ಕೋಡೆಕ್ಸ್ ಎಗ್ಬೆರ್ಟಿ ಎಂಬ ಹಸ್ತಪ್ರತಿ (ಸು.990) ಮುಖ್ಯವಾದುದು. ಇದರಲ್ಲಿನ ಐವತ್ತು ಸೂಕ್ಷ್ಮಚಿತ್ರಗಳು ಯೇಸುವಿನ ಜೀವನಕ್ಕೆ ಸಂಬಂಧಿಸಿದ ಜರ್ಮನ್ ಕಲೆಯ ಮೊಟ್ಟಮೊದಲ ಚಿತ್ರಗಳು. ಪ್ರತಿಮಾಚಿತ್ರದ ಪ್ರಕಾರ ಮತ್ತು ಸಾಂಪ್ರದಾಯಿಕ ರೀತಿಯಲ್ಲಿ ಇವು ತಮ್ಮ ಹಿಂದಿನ ಅಂದರೆ ಪ್ರಶ. 4–6ನೆಯ ಶತಮಾನದ ಮಾದರಿಗಳನ್ನು ಹೋಲುತ್ತವೆ. ಇವಲ್ಲದೆ ರೈಕ್‌ನೌ ಪಂಥದಲ್ಲಿ ಜಿರೋ ಕೋಡೆಕ್ಸ್ (ಸು. 970), ಕೋಡೆಕ್ಸ್ ಆಫ್ ದಿ ಗಾಸ್ಪೆಲ್ ಬುಕ್ ಆಫ್ ಆಟೋಸ್ 10ನೇ ಶತಮಾನದ ಕೊನೆ), ದಿ ಗಾಸ್ಪೆಲ್ ಬುಕ್ ಆಫ್ ಆಟೊ (ಸು.1000), ಮುಂತಾದ ಇನ್ನೂ ಅನೇಕ ಕೃತಿಗಳು ರಚಿಸಲ್ಪಟ್ಟುವು. ಇವು ಉತ್ಸವ ಸಮಾರಂಭಗಳ ಚಿತ್ರಗಳು ಮತ್ತು ಯಥೇಚ್ಛವಾದ ಅಲಂಕರಣಗಳಿಂದ ಕೂಡಿದ ಕ್ರೈಸ್ತಧರ್ಮದ ಪುಸ್ತಕಗಳು. ರೈಕ್‌ನೌ ಶೈಲಿ ಪವಿತ್ರ ರೋಮನ್ ಸಾಮ್ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಗೂ ಆವರಿಸಿತು. ಟ್ರೀರ್‌ನ ಗ್ರಿಗೊರಿ ಪ್ರಾಯಶಃ ಆ ಕಾಲದ ಶ್ರೇಷ್ಠ ಕಲೆಗಾರ. ರೀಗೆನ್ಸ್ ಬರ್ಗ್ ಪಂಥದ ಚಿತ್ರಿತ ಹಸ್ತಪ್ರತಿಗಳು ಬಹಳವಾಗಿ ಧಾರ್ಮಿಕ ವಿದ್ವತ್ತಿನ ಒಂದು ಮುಖ್ಯವಾದ ವಾಹಕವಾಗಿ ಪರಿಣಮಿಸಿದ್ದುವು. ಚಿತ್ರಗಳ ಜ್ಯಾಮಿತೀಯ ವಿಂಗಡಣೆ, ವೈವಿಧ್ಯಮಯವಾದ ಮತ್ತು ವಿವರಣಾತ್ಮಕವಾದ ಪುರಾಣಕಥೆಗಳ ಅಳವಡಿಕೆ ಈ ಪಂಥದ ಮುಖ್ಯ ಅಂಶಗಳು. ಆಟೋನಿಯನ್ ಕಾಲದಲ್ಲಿ ಅದ್ಭುತವಾದ ವರ್ಣಮಯವಾದ ಭಿತ್ತಿಚಿತ್ರಗಳು ಬರೆಯಲ್ಪಟ್ಟುವು. ಆದರೆ ಈಗ ಕೆಲವು ತುಣುಕುಗಳು ಮಾತ್ರ ಉಳಿದಿವೆ.



ಗ್ರೈಫ್ಸ್‌ವಾಲ್ಡಿನ ಒಂದು ಮನೆ, 15ನೆಯ ಶತಮಾನ

ರೋಮನೆಸ್ಕ್ ಕಾಲದಲ್ಲಿ (11ನೆಯ ಶತಮಾನದಿಂದ 13ನೆಯ ಶತಮಾನದ ಮಧ್ಯ ಭಾಗದವರೆಗೆ) ವಾಸ್ತುಶಿಲ್ಪದ ಅಂಗಗಳ ರೂಪಣೆಯಲ್ಲಿ ಕೆಲವು ಬದಲಾವಣೆಗಳಾದುವು. ಅವುಗಳಲ್ಲಿ ಮುಖ್ಯವಾದುದೆಂದರೆ ಚರ್ಚಿನ ಚಾವಣಿಯನ್ನು ಕಮಾನಿನಾಕಾರ ಮಾಡಿದ್ದು. ಆಟೋನಿಯನ್ ಕಾಲದ ಸರಳ ಗೋಡೆಗಳಿಗೆ ಬದಲಾಗಿ ಉಬ್ಬು ವಿನ್ಯಾಸಗಳಿಂದ ಗೋಡೆಯನ್ನು ರಚಿಸಲಾಯಿತು. ಪಶ್ಚಿಮ ಮತ್ತು ಪೂರ್ವದ ಎರಡು ತುದಿಗಳಲ್ಲೂ ಅರ್ಧವೃತ್ತಾಕಾರದ ಕೋಷ್ಠಗಳನ್ನು ರಚಿಸಿ, ಪಕ್ಕಗಳಲ್ಲಿ ಇಳಿಚಾವಣಿಯುಳ್ಳ ಎತ್ತರದ ಗೋಪುರಗಳನ್ನು ರಚಿಸುವ ಪದ್ಧತಿ ಬೆಳೆಯಿತು. ಸ್ಪೇಯರ್ ಕತೀಡ್ರಲ್ ರೋಮನೆಸ್ಕ್ ಶೈಲಿಯ ಮೊದಲ ಹಾಗೂ ಉತ್ತಮ ಉದಾಹರಣೆ. ಇದರ ತಳವಿನ್ಯಾಸ ದೀರ್ಘ

ಚತುರಸ್ರಾಕಾರವಾಗಿದ್ದು ಮಧ್ಯದ ಎರಡು ಕಂಬಗಳ ಸಾಲಿನಿಂದ ಮೂರು ಹಜಾರಗಳಾಗಿ ವಿಂಗಡಣೆ ಹೊಂದಿದೆ. ಮಧ್ಯದ ಹಾಗೂ ಇಕ್ಕೆಲಗಳ ಹಜಾರಗಳು ಮೇಲ್ಭಾಗದಲ್ಲಿ ಕಮಾನಿನಾಕಾರದ ಚಾವಣಿಯನ್ನು ಹೊಂದಿವೆ. ಇದು ಅನಂತರದ ಮೈಂಟ್ಸ್ ಮತ್ತು ವೋರ್ಮ್ಸ್‌ನ ಇಗರ್ಜಿಗಳಿಗೆ ಮಾದರಿಯಾಯಿತು. ಆ ಕಾಲದ ಇನ್ನಿತರ ಸಣ್ಣ ಸಣ್ಣ ಇಗರ್ಜಿಗಳಲ್ಲಿ ರೋಮನೆಸ್ಕ್ ಶೈಲಿಯ ಸ್ವರೂಪವನ್ನು ಇನ್ನೂ ಚೆನ್ನಾಗಿ ಕಾಣಬಹುದು. ಅವುಗಳಲ್ಲಿ ಹಿರಸುವಿನ ಸೇಂಟ್ ಆರೇಲಿಯಸ್, ಸೇಂಟ್ ಪೀಟರ್ ಮತ್ತು ಸೇಂಟ್ ಪಾಲ್ ಇಗರ್ಜಿಗಳು ಈ ಕಾಲದ ಶಿಲ್ಪಾಲಂಕೃತ ವಾಸ್ತುವಿಗೆ ಉತ್ತಮ ಉದಾಹರಣೆಗಳು.

ಆಟೋನಿಯನ್ ಕಾಲದಲ್ಲಿದ್ದ ರಚನಾತ್ಮಕ ಮನೋಭಾವ ರೋಮನೆಸ್ಕ್ ಕಾಲದಲ್ಲಿ ತೆಳುವಾಯಿತು. ನವೋನ್ವೇಷಣ ಶಕ್ತಿ ಕಡಿಮೆಯಾಗಿ ಅಲಂಕರಣ, ನಿರೂಪಣೆ ಮುಂತಾದ ವಿಷಯದಲ್ಲಿ ಸ್ಥಾಯೀ ಮನೋಭಾವ ಬೇರೂರಿತು. ಸು. 12ನೆಯ ಶತಮಾನದ ಮಧ್ಯಭಾಗದಲ್ಲಿ ಇದರ ಪ್ರಭಾವ ಅತ್ಯಂತ ಹೆಚ್ಚು. ಅನಂತರ ಈ ರೀತಿಯ ಸೆಳೆತ ಇಳಿಮುಖವಾಗಿ ಶಿಲ್ಪದ ರೂಪಣೆಗಳು ಸ್ವಲ್ಪಮಟ್ಟಿಗೆ ಜೀವಂತವಾಗಿ ಕಾಣಲಾರಂಭಿಸಿದವು.

ಫ್ರೈಬರ್ಗ್ ಇಂ ಬ್ರೈಸ್‌ಗೌ ಚರ್ಚಿನಲ್ಲಿರುವ ದೇವತೆಯ ವಿಗ್ರಹ

ಈ ಕಾಲದಲ್ಲಿ ರೈನ್ ನದಿಯ ಕೆಳಪ್ರದೇಶ ಮತ್ತು ಮ್ಯೂಸ್ ಭಾಗಗಳಲ್ಲಿ ಸುಂದರವಾದ ಚಿನ್ನದ ವಸ್ತುಗಳು ರಚಿತವಾದವು. 1100ರಲ್ಲಿ ರೋಜರ್ ಎಂಬಾತ ಮಾಡಿದ ಅನೇಕ ಪವಿತ್ರ ಪೀಠಗಳು ಮತ್ತು ಶಿಲುಬೆಗಳು ಅಲ್ಲದೆ ಅಲಂಕರಿಸಿದ ಬೆಳ್ಳಿಯ ಫಲಕಗಳು, ಆಭರಣಗಳು ಇತ್ಯಾದಿ ಕೃತಿಗಳು ಅತಿಮುಖ್ಯವಾದವು. ರೀನಿಯರ್ ಡ ವೀ ಎಂಬಾತ ರೋಜರನ ಸಮಕಾಲೀನ. ಈತನ ಕೃತಿಗಳಲ್ಲಿ ಕಾರೋಲಿಂಜಿಯನ್ ಮತ್ತು ರೋಮನೆಸ್ಕ್ ಶೈಲಿಗಳ ಸಮ್ಮಿಳನ ಕಾಣುತ್ತದೆ. ವರ್ಡನ್ನಿನ ನಿಕಲಸ್ ಈ ಕಾಲದ ಅತ್ಯಂತ ಶ್ರೇಷ್ಠ ಅಕ್ಕಸಾಲಿಗ. ಈತನವು ಆ ಕಾಲದ ಎಲ್ಲ ಕೃತಿಗಳಿಗಿಂತ ಸುಂದರವಾದವು.

ರೋಮನೆಸ್ಕ್ ಕಾಲದ ಫ್ರೆಸ್ಕೋ ವಿಧಾನದಲ್ಲಿ ಮಾಡಿದ ಜರ್ಮನ್ ಭಿತ್ತಿಚಿತ್ರಗಳು ಬರ್ಗ್‌ಫೆಲ್ಡನ್, ಇಡ್ನೆಸ್ ಮುಂತಾದೆಡೆಗಳಲ್ಲಿ ಅನೇಕ ಸಂಖ್ಯೆಯಲ್ಲಿವೆಯಾದರೂ ಅವು ಅನಂತರದ ಚಿತ್ರಕಾರರ ಕೈಯಲ್ಲಿ ಬಹಳ ಮಾರ್ಪಾಟು ಹೊಂದಿದ್ದು ತಮ್ಮ ಮೂಲ ಸ್ಥಿತಿಯನ್ನು ಉಳಿಸಿಕೊಂಡಿಲ್ಲ. ಜರ್ಮನಿಯ ಅತ್ಯಂತ ಪ್ರಾಚೀನವಾದ ಗಾಜಿನ ಮೇಲಿನ ವರ್ಣಚಿತ್ರಗಳು ಆಗ್ಸ್‌ಬರ್ಗ್‌ನಲ್ಲಿ ಇವೆ (1130–40).

ರೋಮನೆಸ್ಕ್ ಕಾಲದ ಚಿತ್ರಿತ ಜರ್ಮನ್ ಹಸ್ತಪ್ರತಿಗಳು ಆಟೋನಿಯನ್ ಕಾಲದ ಹಸ್ತಪ್ರತಿಗಳ ಗುಣಮಟ್ಟದವಾಗಿರಲಿಲ್ಲ. ಸಾಲ್ಸ್‌ಬರ್ಗ್ ಈ ಕಾಲದ ಹಸ್ತಪ್ರತಿ ತಯಾರಿಕೆಯ ಮುಖ್ಯ ಕೇಂದ್ರ. ಇಲ್ಲಿ ತಯಾರಿಸಲಾದ ಗೆಬ್‌ಹಾರ್ಪ್ ಬೈಬಲ್ (12ನೆಯ ಶತಮಾನ) ಮತ್ತು ಸೇಂಟ್ ಪೀಟರನ ಆ್ಯಂಟಿಫೋನರಿ (ಸು. 1150) ಮುಂತಾದವು ಮುಖ್ಯವಾದವು. ಜರ್ಮನಿಯ ಮೊದಲ ಭೂದೃಶ್ಯ ಚಿತ್ರಗಳು ಸು. 1225 ರಲ್ಲಿ ರಚಿತವಾದ ಕಾರ್ಮಿನ ಬುರಾನ ಎಂಬ ಚಿತ್ರಗ್ರಂಥದಲ್ಲಿ ಕಂಡುಬಂದಿದೆ. ಉತ್ತರ ರೈನ್ ಭಾಗದಲ್ಲಿ ಹೆರಾಡ್ ಫಾನ್ ಲ್ಯಾಂಡ್ಸ್‌ಬರ್ಗ್ ಎಂಬಾತ ಮಧ್ಯಯುಗದ ಪ್ರತಿಮಾಶಾಸ್ತ್ರದ ಬಗ್ಗೆ ಒಂದು ಸಚಿತ್ರ ಸಂಹಿತೆಯಲ್ಲಿ ರಚಿಸಿದ.

ಸ್ವೇಬಿಯದ ರುಡಾಲ್ಫ್‌ನ ಸಮಾಧಿ ಫಲಕ (ಸು. 1080), ಗೇರ್ನ್ರೋಡನ ಪವಿತ್ರ ಸಮಾಧಿ (ಸು. 1120), ಕ್ವೆಡ್ಲಿನ್‌ಬರ್ಗ್‌ನ ಸಮಾಧಿಕಲ್ಲು (ಸು. 1130) ಇತ್ಯಾದಿ ಇನ್ನೂ ಅನೇಕ ಕೃತಿಗಳು ಈ ಕಾಲದ ಶ್ರೇಷ್ಠ ಶಿಲ್ಪದ ಸಾಲಿಗೆ ಸೇರಿದವು.

13–14ನೆಯ ಶತಮಾನಗಳು ಜರ್ಮನ್ ಗಾತಿಕ್ ಸಂಪ್ರದಾಯದ ಕಾಲ. ಫ್ರೆಂಚ್–ಗಾತಿಕ್ ವಾಸ್ತು ಸಂಪ್ರದಾಯದ ಪ್ರಭಾವ 13ನೆಯ ಶತಮಾನದ ಜರ್ಮನ್ ವಾಸ್ತುರಚನೆಯ ಪ್ರಮುಖ ಲಕ್ಷಣ. ಮೊದಮೊದಲು ಜರ್ಮನ್ ವಾಸ್ತುಕೃತಿಗಳಲ್ಲಿ ಫ್ರೆಂಚ್ ಗಾತಿಕ್ ಶೈಲಿಯ ಬಿಡಿ ರೂಪಗಳು ಮಾತ್ರವಿದ್ದು ಕಟ್ಟಡ ಮೂಲತಃ ರೋಮನೆಸ್ಕ್ ಶೈಲಿಯ ದಾಗಿರುತ್ತಿತ್ತು. ಅನಂತರ ತಳವಿನ್ಯಾಸ, ಮುಖವಿನ್ಯಾಸ ಇತ್ಯಾದಿಗಳ ನಿರೂಪಣೆಯಲ್ಲೂ ಫ್ರೆಂಚ್ ಗಾತಿಕ್ ಮಾದರಿಗಳನ್ನು ಅಳವಡಿಸಿಕೊಳ್ಳಲಾಯಿತು. ಆದರೂ ಜರ್ಮನ್ ಸಂಪ್ರದಾಯದ ಮೆಟ್ಟಿಲು ಮೆಟ್ಟಲಾದ ಆಸರೆ ಕಂಬ, ಉಬ್ಬುಶಿಲ್ಪಾಲಂಕೃತ ಗೋಡೆ ಮುಂತಾದ ಜರ್ಮನ್ ಅಂಶಗಳು ಮುಂದುವರಿದುವು. ಮ್ಯಾಗ್ಡೆಬರ್ಗ್ ಕತೀಡ್ರಲ್ ಮತ್ತು ಲಿಂಬರ್ಗ್ ಕತೀಡ್ರಲ್‌ಗಳು ಈ ಶೈಲಿಗಳ ಸಮ್ಮಿಳನದ ಉತ್ತಮ ಉದಾಹರಣೆಗಳು. ಕಲೋನ್,

ಕಲೋನ್ ವಸ್ತುಸಂಗ್ರಹಾಲಯದಲ್ಲಿರುವ ಒಂದು ಚಿತ್ರ. ಸು. 1330

ಸ್ಟ್ರಾಸ್‌ಬರ್ಗ್ ಮತ್ತು ರೀಗೆನ್ಸ್‌ಬರ್ಗ್, ಮುಂತಾದೆಡೆಗಳಲ್ಲಿರುವ ಇಗರ್ಜಿಗಳಲ್ಲಿ ಗಾತಿಕ್ ಶೈಲಿಯ ಗಾಢ ಪ್ರಭಾವ ಎದ್ದು ಕಾಣುತ್ತದೆ. ಹಿಂದಿನಂತೆ ಇವೂ ಮೂಲತಃ ಫ್ರಾನ್ಸಿನ ಗಾತಿಕ್ ಸಂಪ್ರದಾಯದ ಅನುಕರಣೆಗಳು. ಇವುಗಳಲ್ಲಿ ಪ್ರಾಚೀನ ಜರ್ಮನ್ ಅಂಶಗಳಿಗಿಂತಲೂ ಗಾತಿಕ್ ಅಂಶ ಬಹಳ ಹೆಚ್ಚು ಮಾರ್ಬರ್ಗ್ ಮಿಂಡನ್ ನ್ಯೂರೆಂಬರ್ಗ್, ಮ್ಯೂನಿಕ್ ಇತ್ಯಾದಿ ಕಡೆಗಳಲ್ಲಿ ಜರ್ಮನ್ ಗಾತಿಕ್ ಸಂಪ್ರದಾಯದ ಚರ್ಚುಗಳಿವೆ. ಗಾತಿಕ್ ಸಂಪ್ರದಾಯ ಜರ್ಮನಿಯ ಅನೇಕ ಸಂನ್ಯಾಸಿ ಮಠಗಳ ಕಟ್ಟಡದ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸಿತು. ಸಿಸ್ಟರ್‌ಸಿಯನ್ ಪಂಗಡದವರು ಹಿಂದಿನ ರೋಮನೆಸ್ಕ್ ಶೈಲಿಯನ್ನು ಮುಂದುವರಿಸಿದರು. ಅಥವಾ ಫ್ರೆಂಚ್ ಶೈಲಿಯ ಪೂರ್ವ ಕೃತಿಗಳನ್ನು ಅನುಸರಿಸಿದರು. ಆದರೆ ಇತರ ಕ್ರೈಸ್ತ ಸಂನ್ಯಾಸಿ ಪಂಗಡಗಳು ತಮ್ಮವೇ ಆದ ವಿಧಾನವನ್ನು ಬೆಳೆಸಿಕೊಂಡವು. ರೀಗೆನ್ಸ್‌ಬರ್ಗ್ ಮತ್ತು ಎಸ್ಲಿಂಗನ್‌ಗಳಲ್ಲಿರುವ ಈ ಪಂಗಡಗಳ ಇಗರ್ಜಿಗಳು ಅವರ ವಾಸ್ತುಶಿಲ್ಪದ ಸರಳತೆಯನ್ನು ತೋರುತ್ತವೆ. ಬಸಿಲಿಕದ ತಳವಿನ್ಯಾಸವುಳ್ಳ ಇವುಗಳಲ್ಲಿ ಅಡ್ಡಸಾಲೆಗಳಿಲ್ಲ. ಇವುಗಳ ಮೇಲ್ಭಾಗದಲ್ಲಿ ಕಡಿದಾದ ಚಾವಣಿ ಇದೆ. ಈ ರೀತಿಯ ಇಗರ್ಜಿಗಳು ಆ ಕಾಲದ ವಿವಿಧಾಲಂಕೃತ ಸಿರಿವಂತ ಕತೀಡ್ರಲ್‌ಗಳಿಂದ ಸಂಪೂರ್ಣವಾಗಿ ವಿಭಿನ್ನವಾದವು. 14ನೆಯ ಶತಮಾನದ ಮಧ್ಯಭಾಗದಲ್ಲಿ ಪ್ರವರ್ಧಿಸುತ್ತಿದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಶಕ್ತಿ ಕಲೆಯ ಬೆಳವಣಿಗೆಗೆ ಬಹಳ ಸಹಕಾರಿಯಾಯಿತು. ಭವ್ಯವಾದ ಕಟ್ಟಡಗಳು ಆ ಪಟ್ಟಣದ ಸಿರಿತನವನ್ನು ಸಾರುತ್ತಿದ್ದುವು. ಸುಂದರವೂ ಬೃಹದಾಕಾರವೂ ಆದ ಅನೇಕ ಧಾರ್ಮಿಕ ಲೌಕಿಕ ಕಟ್ಟಡಗಳೂ ಕೋಟೆ ಕೊತ್ತಲಗಳೂ ಜರ್ಮನಿಯ ಹಲವು ಪಟ್ಟಣಗಳಲ್ಲಿ ನಿರ್ಮಿತವಾದವು. ಮಧ್ಯಮ ವರ್ಗದ ಜನರ ಹೊಸ ಆತ್ಮಜ್ಞಾನ ಸಹ ಧಾರ್ಮಿಕ ಶಿಲ್ಪದ ಜೊತೆಗೆ ಅಭಿವ್ಯಕ್ತವಾಯಿತು. ಆಯಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಉದ್ದುದ್ದವಾಗಿ ಮಧ್ಯದಲ್ಲಿ ಮತ್ತು ಇಕ್ಕೆಲಗಳಲ್ಲಿ ಹಜಾರಗಳನ್ನು ಹೊಂದಿದ್ದ ಈ ಇಗರ್ಜಿಗಳಲ್ಲಿ ಗೀತರಂಗ ಪ್ರತ್ಯೇಕವಾಗಿರುತ್ತಿರಲಿಲ್ಲ. ಇಂಥ ಹಜಾರ ಚರ್ಚ್‌ಗಳಲ್ಲಿ ಇದುವರೆವಿಗೂ ವಿವಿಧ ಮಟ್ಟದಲ್ಲಿ ಕಟ್ಟುತ್ತಿದ್ದ ಹಜಾರದ ಮೂರುಸಾಲೆ ಭಾಗಗಳ ಮೇಲ್ಛಾವಣಿಯನ್ನು ಸಮಾನ ಎತ್ತರದಲ್ಲಿ ಕಮಾನಿನಾಕಾರವಾಗಿ ನಿರ್ಮಿಸಲಾಯಿತು. ಮುಂಭಾಗದಲ್ಲಿರುತ್ತಿದ್ದ ಎರಡು ಗೋಪುರಗಳ ಬದಲಾಗಿ ಒಂದೇ ಒಂದು ಗೋಪುರವುಳ್ಳ ಅಥವಾ ಅದೂ ಇಲ್ಲದ ನಿರ್ಮಾಣ ಸಾಮಾನ್ಯವಾಯಿತು. ಉನ್ನತವಾದ ಮೇಲ್ಛಾವಣಿಗಳು, ಅವನ್ನು ಎತ್ತಿ ಹಿಡಿದಿರುವ ನೀಳವಾದ ಕಂಬಗಳು, ಬಣ್ಣಬಣ್ಣದ ಗಾಜಿನ ಕಿಟಕಿಗಳು ಮತ್ತು ಅವುಗಳಿಂದ ಬರುವ ವರ್ಣರಂಜಿತ ಕಿರಣಗಳು ಇಡೀ ಕಟ್ಟಡಕ್ಕೆ ಒಂದು ಹೊಸ ಚೈತನ್ಯವನ್ನು ತಂದಿತ್ತುವು.

ಗಾತಿಕ್ ಕಾಲದ ಹೆಚ್ಚಿನ ಶಿಲ್ಪಗಳು ಧಾರ್ಮಿಕ ರೀತಿಯವು–ಅವುಗಳಲ್ಲೂ ಚರ್ಚ್‌ಗಳು ಮತ್ತು ಗೋರಿಕಲ್ಲುಗಳ ಅಲಂಕರಣಕ್ಕೆ ಬಳಸಿದಂಥವು. ಕ್ರೈಸ್ತ ಸಂಪ್ರದಾಯದ ಮೇರಿ ಮತ್ತು ಮಗು, ಯೇಸುವಿನ ಮರಣವೇ ಮುಂತಾದ ಪುರಾಣಕಥೆಗಳು, ಸಂತರ ವಿಗ್ರಹಗಳು ವಿಶೇಷವಾಗಿ ಈ ಶಿಲ್ಪಗಳಲ್ಲಿನ ವಸ್ತು. ಶಿಲ್ಪಗಳಲ್ಲಿ ಹಿಂದಿನ ರೋಮನೆಸ್ಕ್ ಶೈಲಿಯ ಸೊಗಸು ಮೊದಮೊದಲು ಕಂಡುಬಂದರೂ ಗಾತಿಕ್ ಕಾಲದ ಅಂತ್ಯಭಾಗದಲ್ಲಿ ಇವು ನಿರೂಪಣೆಯಲ್ಲಿ ಹೆಚ್ಚು ಸ್ನಿಗ್ಧವಾದುವು. ಅಧ್ಯಾತ್ಮ ಭಾವನೆ ಪ್ರಧಾನವಾಗಿ ಎಲ್ಲ ಶಿಲ್ಪಗಳಲ್ಲೂ ಎದ್ದು ಕಾಣುವುದಲ್ಲದೆ, ವಸ್ತುವಿಗಿಂತಲೂ ಭಾವದ ಪ್ರಕಟಣೆಯೇ ಶಿಲ್ಪಗಳ ಗುರಿಯಾಗಿರುತ್ತದೆ. ಅನೇಕ ಎಡೆಗಳಲ್ಲಿರುವ ಬಿಷಪ್ ಮತ್ತು ಪಾದ್ರಿಗಳ ವಿಗ್ರಹಗಳಲ್ಲಿ ಇದನ್ನು ಚೆನ್ನಾಗಿ ಗುರುತಿಸ

ಬಹುದು. ಇವುಗಳಲ್ಲಿ ಆಯಾ ವ್ಯಕ್ತಿಗಳ ಪ್ರತಿಕೃತಿ ನಿರೂಪಣೆಗಿಂತಲೂ ಸಂತತ್ವದ ಅಥವಾ ಸಂನ್ಯಾಸತ್ವದ ನಿರೂಪಣಾ ದೃಷ್ಟಿಯಿಂದ ನಮ್ರಭಾವ, ಕೃಶ ಶರೀರ ಇತ್ಯಾದಿ ಭಾವಗಳನ್ನು ಚಿತ್ರಿಸಿರುವುದೇ ಕಂಡುಬರುತ್ತದೆ. ಗಾತಿಕ್ ಯುಗದ ಮೊದಲ ಶಿಲ್ಪಗಳು ವಾಸ್ತುವಿನೊಡನೆ

ಎಸ್ಲಿಂಗನ್ನಿನ ಡಾಮಿನಿಕನ್ ಚರ್ಚಿನ ನಡು ಅಂಕಣ. 1250–68

ಹೊಂದಿಕೊಂಡಂತೆಯೇ ಕಂಡುಬರುವುವಾದರೂ ಕೊನೆಕೊನೆಗೆ ಇಲ್ಲಿ ಶಿಲ್ಪಕ್ಕೂ ಚಿತ್ರಕಲೆಗೂ ಹೆಚ್ಚಿನ ಸಂಬಂಧ ಬೆಳೆದು ಅನೇಕ ಶಿಲ್ಪಗಳನ್ನು ವರ್ಣಗಳಿಂದ ಅಲಂಕರಿಸುವ ಪದ್ಧತಿ ರೂಢಿಯಾಯಿತು. ಜರ್ಮನಿಯಲ್ಲಿ ಗಾತಿಕ್ ಸಂಪ್ರದಾಯದ ಶಿಲ್ಪ 13ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಸ್ಟ್ರಾಸ್‌ಬರ್ಗ್ ಮತ್ತು ಬ್ಯಾಂಬರ್ಗ್‌ನ ಕತೀಡ್ರಲ್‌ಗಳಲ್ಲಿರುವ ಈ ಕಾಲದ ಪ್ರಾಚೀನ ಶಿಲ್ಪಗಳಲ್ಲಿ ಫ್ರೆಂಚ್ ಗಾತಿಕ್ ಶಿಲ್ಪಶೈಲಿಯ ಪ್ರಭಾವ ಎದ್ದು ಕಾಣುತ್ತದೆ.

ಕನ್ಯೆ ಮೇರಿ, ಮಗು ಮತ್ತು ಸೇಂಟ್ ಆನ್ ಸು. 1467ರ ಒಂದು ಶಿಲ್ಪ
ಬರ್ಲಿನಿನ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿದೆ

ವಾಸ್ತುವಿಗೂ ಶಿಲ್ಪಕ್ಕೂ ಕಲ್ಪಿಸಿರುವ ಹಿತ ಸಮತೋಲ ಈ ಕೃತಿಗಳ ವೈಶಿಷ್ಟ್ಯ. ಆದರೆ 13ನೆಯ ಶತಮಾನದ ಕೊನೆಯ ಭಾಗದಲ್ಲಿ ಶಿಲ್ಪಗಳು ವಾಸ್ತುರಚನೆಗಳಿಗೆ ಸೇರಿದಂತಿದ್ದರೂ ಮುಂದೆ ಅವನ್ನೇ ವಿಶಿಷ್ಟವಾಗಿ ನಿರೂಪಿಸುವ ಸಂಪ್ರದಾಯ ಬೆಳೆಯಿತು. ಹೆಚ್ಚಿನ ಶಿಲ್ಪಗಳು ಚರ್ಚ್‌ಗಳ ಒಳ ಮತ್ತು ಹೊರಮೈಗಳಲ್ಲಿ ಕಂಡುಬರದೆ ಕೇವಲ ಮುಂದಣ ಹಜಾರದಲ್ಲಿ ಕೇಂದ್ರೀಕೃತವಾಗಲಾರಂಭಿಸಿದುವು. ಇದರಿಂದ ಒಂದೊಂದು ಶಿಲ್ಪಕ್ಕೂ ಹೆಚ್ಚಿನ ಗಮನ ಸಿಕ್ಕು ಶಿಲ್ಪವೇ ಪ್ರಧಾನವಾಗಿ, ಪ್ರಭಾವಿಯಾಗಿ ರೂಪಿತವಾಗಲು ಸಾಧ್ಯವಾಯಿತು. ಸ್ಟ್ರಾಸ್‌ಬರ್ಗ್ ಕತೀಡ್ರಲ್‌ನ ಪಶ್ಚಿಮ ಮುಖ (ಸು. 1280), ಮಾರ್ಬರ್ಗ್ ಕತೀಡ್ರಲ್‌ನ (ಸು.1290) ಮುಮ್ಮುಖದಲ್ಲಿರುವ ಶಿಲ್ಪಗಳು ಇದಕ್ಕೆ ಒಳ್ಳೆಯ ಉದಾಹರಣೆಗಳು. ಈ ಶೈಲಿ 14 ಮತ್ತು 15ನೆಯ ಶತಮಾನಗಳಲ್ಲಿ ಮುಂದುವರಿಯಿತಾದರೂ ಅಂದು ಬಹುನಿಷ್ಣಾತರೆನಿಸಿದ್ದ ಪಾರ್ಲರ್ ಮನೆತನದ ಶಿಲ್ಪಗಳು ತತ್ಕಾಲೀನ ಶಿಲ್ಪಸಂಪ್ರದಾಯದಲ್ಲಿ ಕೆಲವು ಹೊಸ ಅವಿಷ್ಕಾರಗಳಿಗೆ ಕಾರಣರಾಗಿದ್ದಾರೆ. ಆ ವಂಶದವರಲ್ಲಿ ಹೈನ್‌ರಿಖ್ ಪಾರ್ಲರ್ ಮತ್ತು ಪೀಟರ್ ಪಾರ್ಲರ್ ಮುಖ್ಯ ಶಿಲ್ಪಿಗಳು. ಪೀಟರ್ ಪಾರ್ಲರ್ ಗಾತಿಕ್ ಸಂಪ್ರದಾಯದ 'ಮೃದುಶೈಲಿ' ಎಂಬ ಒಂದು ಹೊಸ ರೀತಿಯನ್ನೇ ಪ್ರಾರಂಭಿಸಿದ. ಸೇಂಟ್ ವೇಟಸ್‌ನ ಕತೀಡ್ರಲ್‌ನಲ್ಲಿರುವ ಶಿಲ್ಪಗಳು ಮತ್ತು ಈಗ ಲೆನಿನ್‌ಗ್ರಾಡಿನ ಹರ್ಮಿಟೇಜಿನಲ್ಲಿರುವ ಕೆಲವು ಮಡಾನ ಶಿಲ್ಪಗಳು ಈ ಕಾಲದ ಶಿಲ್ಪರಾಶಿಯಲ್ಲಿ ಅತ್ಯುತ್ತಮವಾದವು. ಈ ಕಾಲದ ಕೆಲವು ದಾರುಶಿಲ್ಪಗಳೂ ಉಳಿದುಬಂದಿವೆ.

ಕಲೋನ್ ಮತ್ತು ಬೋಹೀಮಿಯಗಳು ಜರ್ಮನಿಯ ಗಾತಿಕ್ ಚಿತ್ರಕಲೆಯ ಕೇಂದ್ರಗಳು. ಬೋಹೀಮಿಯದ ಹೋಹೆನ್ ಫರ್ತ್‌ನ ಚರ್ಚ್ ಒಂದರಲ್ಲಿರುವ ಕೆಲವು ಚಿತ್ರಗಳು (ಸು. 1345), ಬರ್ಲಿನ್ನಿನಲ್ಲಿರುವ ಯೇಸುವನ್ನು ಶಿಲುಬೆಗೇರಿಸುವ ಚಿತ್ರ (ಸು.1350) ಗಾತಿಕ್ ಸಂಪ್ರದಾಯದ ಉತ್ತಮ ವರ್ಣಚಿತ್ರಗಳು. ಇವುಗಳಲ್ಲಿ ಸಾಮಾನ್ಯ ಗಾತಿಕ್ ರೀತಿಯ ಜೊತೆಗೆ ಇಟಲಿಯ ಸಮಕಾಲೀನ ಚಿತ್ರರೀತಿಗಳ ಪ್ರಭಾವ ಸಹ ಕಂಡುಬರುತ್ತದೆ. 1400ರ ಸುಮಾರಿನಲ್ಲಿ ಕಲೋನಿನಲ್ಲಿ ಚಿತ್ರರೀತಿಗಳ ಪ್ರಭಾವವಾದ ಒಂದು ಚಿತ್ರಶೈಲಿ 15ನೆಯ ಶತಮಾನದ ಜರ್ಮನಿಯ ಚಿತ್ರಕಲೆಯನ್ನು ರೂಪಿಸಿತು. ಮನೋಹರವಾದ ಭಾರರಹಿತ ರೂಪು ಮತ್ತು ಶ್ರೀಮಂತ ಗಾಂಭೀರ್ಯದ ನಿರೂಪಣೆ ಈ ಶೈಲಿಯ ವೈಶಿಷ್ಟ್ಯ. ಮ್ಯೂನಿಕ್‌ನಲ್ಲಿರುವ ಸೇಂಟ್ ವೆರೋನಿಕ ಚಿತ್ರ ಈ ಶೈಲಿಯ ಒಳ್ಳೆಯ ಉದಾಹರಣೆ. ಸ್ಟೀಫನ್ ಲೋಕ್ನರ್, ಮಾರ್ಟಿನ್ ಷೋಂಗಾಯರ್ , ಜಾನ್ ಪೊಲಕ್, ಫ್ರಾಫ್ ಸೋದರರು ಈ ಕಾಲದ ಪ್ರಸಿದ್ಧ ಚಿತ್ರಕಾರರು. ಗಾತಿಕ್ ಸಂಪ್ರದಾಯದ ಕೊನೆಯ ಪ್ರಸಿದ್ಧ ಚಿತ್ರಕಾರ ಹ್ಯಾನ್ಸ್ ಹಾಲ್ಬೀಮ್, ವೈನ್ ಗಾರ್ಟೆನ್ (1493) ಮತ್ತು ಫ್ರಾಂಕ್‌ಫರ್ಟ್ ಮುಂತಾದೆಡೆಗಳಲ್ಲಿರುವ ಇವನ ಚಿತ್ರಗಳು ಈ ಶೈಲಿಯಲ್ಲಿದ್ದರೂ ಈತ ಇಟಲಿಯ ಪುನರುಜ್ಜೀವನ ಶೈಲಿಯನ್ನು ಜರ್ಮನಿಯಲ್ಲಿ ಹುಟ್ಟುಹಾಕಿದವನೆಂದೂ ಪ್ರಸಿದ್ಧನಾಗಿದ್ದಾನೆ.

16ನೆಯ ಶತಮಾನ ಜರ್ಮನ್ ಕಲಾ ಇತಿಹಾಸದಲ್ಲಿ ಪುನರುಜ್ಜೀವನ ಕಾಲ. ವೈವಿಧ್ಯ ಈ ಕಾಲದ ಲಕ್ಷಣ. ವಿಶಾಲವೂ ಆಲಂಕಾರಿಕವೂ ಆದ ಗಾತಿಕ್ ಶೈಲಿಯ ಕಟ್ಟಡಗಳ ನಿರ್ಮಾಣ ಉತ್ತರ ಜರ್ಮನಿಯಲ್ಲಿ ಮುಂದುವರಿಯಿತು. ಜರ್ಮನಿಯ ದಕ್ಷಿಣ ಮತ್ತು ಪೂರ್ವಭಾಗಗಳಲ್ಲೂ ಗಾತಿಕ್ ಶೈಲಿಯ ಕಟ್ಟಡಗಳ ನಿರ್ಮಾಣ ಮುಂದುವರಿಯಿತಾದರೂ ಈ ಪ್ರದೇಶದಲ್ಲಿ ಇಟ್ಯಾಲಿಯನ್ ಶಿಲ್ಪಿಗಳು ಪುನರುಜ್ಜೀವನ ಕಲೆಯ ಶೈಲಿಯ ಕಟ್ಟಡಗಳನ್ನೂ ಕಟ್ಟಲು ಪ್ರಾರಂಭಿಸಿದರು. ಜರ್ಮನಿಯ ಮೊಟ್ಟಮೊದಲ ಪುನರುಜ್ಜೀವನ ಕಟ್ಟಡವೆಂದರೆ ಆಗ್ಸ್ ಬರ್ಗ್‌ನಲ್ಲಿರುವ ವೆನೀಷಿಯನ್ ಮಾದರಿಯ, ಫುಗರ್ ವಂಶದ ಸಮಾಧಿ ಮಂದಿರ (1509–18). (ಆದರೆ ಅದೇ ಸ್ಥಳದ ಡಾಮಿನಿಕನ್ ಇಗರ್ಜಿ (1512–15) ಗಾತಿಕ್ ಶೈಲಿಯಲ್ಲಿದೆ) ಕಾನ್ರಾಡ್ ಕ್ರೆಬ್ಸ್, ಕ್ಯಾಸ್ಪರ್ ತ್ರೈನ್ ಮುಂತಾದವರು ಪುನರುಜ್ಜೀವನ ಶೈಲಿಯ ಮುಖ್ಯ ಶಿಲ್ಪಿಗಳು. ಇವರಲ್ಲಿ ಕ್ರೆಬ್ಸ್ ಕಟ್ಟಿದ ಹಾರ್ಟನ್‌ಫೆಲ್ಸ್ ಅರಮನೆ ಮುಖ್ಯವಾದದ್ದು.

16ನೆಯ ಶತಮಾನದ ಜರ್ಮನ್ ವಾಸ್ತು ಇತಿಹಾಸದಲ್ಲಿ ಮತೀಯ ಕಟ್ಟಡಗಳ ಜೊತೆಗೆ ಇತರ ಲೌಕಿಕ ಕಟ್ಟಡಗಳೂ ಪ್ರಮುಖವಾಗಿವೆ. ಲುಡ್ವಿಗ್‌ವುಲ್ಫ್ ಎಂಬಾತ ಕಟ್ಟಿದ ರೋಟ್ರೆನ್‌ಬರ್ಗ್‌ನ ಪುರಭವನ ಮತ್ತು ನ್ಯೂರೆಂಬರ್ಗ್‌ನ ಗಾರ್ಡನ್ ಹಾಲ್ ಪುನರುಜ್ಜೀವನ ಶೈಲಿಯವುಗಳಲ್ಲಿ ಮುಖ್ಯವಾದವು. ದಕ್ಷಿಣ ಮತ್ತು ಪೂರ್ವ ಜರ್ಮನಿಯಲ್ಲಿ ನೆದರ್‌ಲೆಂಡ್ ಶೈಲಿಯ ಕಟ್ಟಡಗಳ ಮಾದರಿಯನ್ನು ಅನುಸರಿಸಿ ಇಟ್ಟಿಗೆ ಮತ್ತು ತುಂಡು ಅಥವಾ ಚದರಗಲ್ಲುಗಳಿಂದ ಅನೇಕ ಕಟ್ಟಡಗಳನ್ನು ಈ ಕಾಲದಲ್ಲಿ ನಿರ್ಮಿಸಲಾಯಿತು. ಕಟ್ಟಡ ಅಲಂಕರಣದಲ್ಲಿ ಹೊಸ ರೀತಿಯ ಆಕೃತಿಗಳು ವ್ಯಕ್ತವಾದುವು. ಈ ವಿಧದ ಕಟ್ಟಡಗಳಲ್ಲಿ ಅತ್ಯಂತ ಆಕರ್ಷಕವೂ ಸುಂದರವೂ ಆದುವೆಂದರೆ ಬ್ರೆನ್ ಮೆನ್ ಮತ್ತು ಡೇನಿಜ್‌ಗಳ ಪುರಭವನಗಳು, ಹೈಡೆಲ್‌ಬರ್ಗ್‌ನ ಕ್ಯಾಸೆಲ್ ಇತ್ಯಾದಿ. ಜರ್ಮನಿಯ ಪುನರುಜ್ಜೀವನ ಶೈಲಿಯ ವಾಸ್ತು ಎಲಿಯಸ್ ಹಾಲ್ ಎಂಬ ಶಿಲ್ಪಿಯ ನಿರ್ಮಾಣಗಳಲ್ಲಿ ಪರಾಕಾಷ್ಠೆಯನ್ನು ಮುಟ್ಟಿತು. ಆಗ್ಸ್‌ಬರ್ಗ್‌ನ ಪುರಭವನ ಇವನ ಮೇರುಕೃತಿ. ಮ್ಯೂನಿಕ್‌ನಲ್ಲಿ ವೆನೀಷನ್ ಮಾದರಿಯ ಕಟ್ಟಡಗಳಿಗಿಂತ ರೋಮನ್ ಮಾದರಿಯ ಕಟ್ಟಡಗಳು ಹೆಚ್ಚಿಗೆ ಪ್ರಭಾವವನ್ನು ಬೀರಿದವು. ಮೊಟ್ಟಮೊದಲು ಜರ್ಮನ್ ವಸ್ತುಸಂಗ್ರಹಾಲಯದ ಕಟ್ಟಡ ಆಂಟಿಕ್ವೇರಿಯಂ ಮತ್ತು ಸೇಂಟ್ ಮೈಕಲ್ ಚರ್ಚ್ ಇವು ಅರ್ಧ ಪಿಪಾಯಿಯ ಆಕಾರದ ಮೇಲ್ಛಾವಣಿಗಳನ್ನು ಹೊಂದಿವೆ.

16ನೆಯ ಶತಮಾನದ ಆದಿಭಾಗದಲ್ಲಿದ್ದ ಡ್ಯೂರರ್, ಗ್ರೂನೆನಾಲ್ಟ್ ಮತ್ತು ಹೋಲ್ಬೈನ್ ಎಂಬ ಮೂವರು ಚಿತ್ರಕಾರರ ಕೃತಿಗಳಲ್ಲಿ ಜರ್ಮನ್ ಕಲೆಯ ಸಾಮರ್ಥ್ಯ ಪ್ರಕಟವಾಯಿತು. ಈ ಮೂರೂ ಚಿತ್ರಕಾರರ ಕೃತಿಗಳನ್ನು ನಿಜವಾದ ಜರ್ಮನ್ ಕಲೆಯ ಪ್ರತಿನಿಧಿಗಳು

ಬರ್ಲಿನಿನ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿರುವ ಚಿತ್ರ–ಅಡೊರೇಷನ್ ಆಫ್ ದಿ ಮ್ಯಾಗಿ. ಚಿತ್ರಕಾರ ಎಚ್. ಫೋನ್ ಕುಲ್ಮ್‌ಬಾಕ್. 16ನೆಯ ಶತಮಾನ

ಎಂದು ಪರಿಗಣಿಸಬಹುದು. ರ್‍ಯಾಫೀಯಲ್ ಮೈಕೇಲೆಂಜಲೋ ಅವರ ಕೃತಿಗಳಂತೆ ಈ ಮೂವರು ಚಿತ್ರಕಾರರ ರಚನೆಗಳು ಹೊಸ ಶೈಲಿಯ ಅಧ್ಯಾಯವನ್ನೇನೂ ಪ್ರಾರಂಭಿಸಲಿಲ್ಲವಾದರೂ ಇವರ ಕೃತಿಗಳಲ್ಲಿ ಜರ್ಮನ್ ಕಲೆ ಎಂದೂ ಕಾಣದ ಪರಿಪೂರ್ಣತೆಯನ್ನು

ಪೋಮರ್ಸ್ ಫೆಲ್ಡೆನ್ ಅರಮನೆ. 1711

ಕಂಡಿತು. ಚಿತ್ರಯುತ ಗ್ರಂಥಗಳನ್ನು ನಿರ್ಮಿಸಿದ ಹ್ಯಾನ್ಸ್ ಲಿಯೊನಾರ್ಡ್ ಷೋಪೆಲೈನ್, ತಾಮ್ರದ ಫಲಕಗಳ ಮೇಲೆ ಕೆತ್ತನೆ ಮಾಡಿರುವ ಸೀಬಾಲ್ಡ್ ಬೀಹ್ಯಾಮ್ ಮುಂತಾದವರು ಡ್ಯೂರರನ ಶಿಷ್ಯರು. ಇವನ ಶಿಷ್ಯರಲ್ಲಿ ಪ್ರಖ್ಯಾತನಾದ ಮತ್ತೊಬ್ಬನೆಂದರೆ ಹ್ಯಾನ್ಸ್ ಬಾಲ್ಡುಂಗ್ ಗ್ರೀನ್.

ಹಾಲೆ ಕತೀಡ್ರಲ್‌ನ ಪವಿತ್ರ ಪೀಠದ ಮೇಲಿರುವ ಚಿತ್ರಗಳು ಪ್ರಚೋದಿಸುವಂಥ ಮತ್ತು ಎದ್ದು ಕಾಣುವ ಬಣ್ಣಗಳಿಂದ ಕೂಡಿದ್ದು ಇವನ ಉತ್ತಮ ರಚನೆಗಳಾಗಿವೆ. ಹ್ಯಾನ್ಸ್ ಬರ್ಕ್‌ಮೈರ್ ಎಂಬಾತ ಪುನರುಜ್ಜೀವನದ ಕಾಲದ ಮತ್ತೊಬ್ಬ ಚಿತ್ರಕಾರ. ಈತ ಇಟ್ಯಾಲಿಯನ್ ಪುನರುಜ್ಜೀವನ ಶೈಲಿಯ ವಾಸ್ತುಶಿಲ್ಪ ಮತ್ತು ಅಲಂಕರಣ ವಿಧಾನಗಳನ್ನು ಜರ್ಮನ್ ಶೈಲಿಗೆ ಅಳವಡಿಸಿದ. ಆಗ್ಸ್‌ಬರ್ಗ್‌ನ ಮೂರು ಕ್ರೈಸ್ತ ದೇವಾಲಯಗಳಲ್ಲಿನ ಈತನ ಚಿತ್ರಗಳು ಇಟ್ಯಾಲಿಯನ್ ಪುನರುಜ್ಜೀವನ ಶೈಲಿಯ ಪ್ರಭಾವವನ್ನು ಹೊಂದಿವೆ. ಇಟ್ಯಾಲಿಯನ್ ಚಿತ್ರಕಲೆಯ ಶಾಂತ ತೇಜಸ್ಸು ಮತ್ತು ಜರ್ಮನ್ ಕನ್ಯೆಯ ಚೆಲುವು ಇವೆರಡೂ ಕೂಡಿರುವ ನ್ಯೂರೆಂಬರ್ಗ್‌ನ ಮೇರಿಯ ಚಿತ್ರ ಇವನ ಮೇರುಕೃತಿ.

ಜರ್ಮನ್ ಶಿಲ್ಪಕಲೆಯ ಮೇಲೆ ಇಟ್ಯಾಲಿಯನ್ ಪುನರುಜ್ಜೀವನ ಕಲೆಯ ಪ್ರಭಾವ ಆಗ್ಸ್‌ಬರ್ಗ್ ಮೂಲಕ ಆಯಿತು. ಇಲ್ಲಿಯೇ ಅನೇಕ ಮಂದಿ ಶಿಲ್ಪಿಗಳು ಪುನರುಜ್ಜೀವನ ಶೈಲಿಯ ಶಿಲ್ಪಕಲೆಯಲ್ಲಿ ತರಬೇತಿ ಹೊಂದಿದರು. ಸೆಬಾಸ್ಟಿಯನ್ ಲೋಷರ್, ವಿಕ್ಟರ್

ಮ್ಯೂನಿಕ್‌ನ ಬವೇರಿಯನ್ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿರುವ ಒಂದು ಮರದ ಶಿಲ್ಪ, 1767

ಕೇಜರ್ ಇತ್ಯಾದಿ ಇನ್ನೂ ಅನೇಕ ಶಿಲ್ಪಿಗಳು ಪುನರುಜ್ಜೀವನ ಶೈಲಿಯ ಶಿಲ್ಪಕಲೆಯಲ್ಲಿ ನುರಿತವರು. ಇವರ ಶಿಲ್ಪದ ಮೂರ್ತಿಭಾಗಕ್ಕಿಂತ ಆಲಂಕಾರಿಕ ಭಾಗಗಳಲ್ಲಿಯೇ ಹೆಚ್ಚಾಗಿ ಪುನರುಜ್ಜೀವನ ಕಲೆಯ ಪ್ರಭಾವ ಕಾಣುತ್ತದೆ. ಜರ್ಮನ್ ಚಕ್ರವರ್ತಿ ಮಾಕ್ಸಿಮಿಲಿಯನ್ ಮೊದಲ ಬಾರಿಗೆ ಮನುಷ್ಯ ಶಿಲ್ಪಗಳ ಬಗ್ಗೆ ಪ್ರಚಾರ ನಡೆಸಿದ. ಇವನ ಆಶ್ರಯದಲ್ಲಿ ಪುನರುಜ್ಜೀವನ ಶೈಲಿಯ ಪ್ರಭಾವವನ್ನು ಹೊಂದಿರುವ ಅನೇಕ ಪೂರ್ವಜರ, ಪೋಪರ ಮತ್ತು ಬಿಷಪರ ಶಿಲ್ಪಗಳು ಸಹಜಾಕೃತಿಗೂ ಮೀರಿದ ಅಳತೆಯಲ್ಲಿ ನಿರ್ಮಿಸಲ್ಪಟ್ಟವು. ಷ್ಟೈಬರ್ ಎಂಬಾತನ ನೇತೃತ್ವದಲ್ಲಿ ಒಂದು ಪ್ರತ್ಯೇಕ ಕಾರ್ಯಾಗಾರವೂ ಇದಕ್ಕಾಗಿ ನಿರ್ಮಾಣವಾಯಿತು.

16ನೆಯ ಶತಮಾನದ ಉತ್ತರಾರ್ಧದಲ್ಲಿ ಜರ್ಮನ್ ಶಿಲ್ಪಕಲೆಯಲ್ಲಿ ರಚನಾತ್ಮಕ ಮನೋಭಾವ ಸ್ವಲ್ಪವಾಗಿ ಕಡಿಮೆಯಾಯಿತು. ಆ ಕಾಲದ ಕಲೆಯಲ್ಲಿ ಇಟ್ಯಾಲಿಯನ್ ಶೈಲಿಗೆ ಹೊಂದಿಕೆ ಇರುವ ನೆದರ್‌ಲೆಂಡಿನ ಶಿಲ್ಪದ ಪ್ರಭಾವ ಪ್ರಾರಂಭವಾಯಿತು. ಕಾರ್ನೆಲಿಸ್ ಫ್ಲೋರಿಸ್ ಎಂಬ ಶಿಲ್ಪಿ ನೆದರ್‌ಲೆಂಡಿನ ಶಿಲ್ಪಕಲೆಯನ್ನು ಜನಪ್ರಿಯಗೊಳಿಸಿದ. ಡೆನ್ಮಾರ್ಕಿನ ರಾಜ ಫ್ರೆಡರಿಕ್‌ನ ಸಮಾಧಿ ಮತ್ತು ಪ್ರಷ್ಯದ ಡ್ಯೂಕ್ ಆಲ್ಬರ್ಟನ ಸಮಾಧಿ ಇವನ ಕೃತಿಗಳು. ಆದರೆ ದಕ್ಷಿಣ ಜರ್ಮನಿಯಲ್ಲಿ ಮಾತ್ರ ನಿಜವಾದ ಜರ್ಮನ್ ಶಿಲ್ಪಕಲೆ 16ನೆಯ ಶತಮಾನದ ಉತ್ತರಾರ್ಧದ ಕಂಚಿನ ಶಿಲ್ಪಗಳಲ್ಲಿ ಮುಂದುವರಿಯಿತು. ಜೋಕಿಮ್ ಫಾರ್ಸ್ಟರ್, ಪಂಕ್ರಾಟ್ಸ್ ಲಾಬನ್‌ವುಲ್ಫ್ ಮುಂತಾದವರು ಮೂಲ ಜರ್ಮನ್ ಶಿಲ್ಪಶೈಲಿಯನ್ನು ಮುಂದುವರಿಸಿಕೊಂಡು ಬಂದರು.

17ನೆಯ ಶತಮಾನದ ಪೂರ್ತ ಜರ್ಮನ್ ಕಲೆಯ ಬೆಳವಣಿಗೆಯ ಮೇಲೆ ಮೂವತ್ತು ವರ್ಷಗಳ ಯುದ್ಧದ ಮಬ್ಬು ಕವಿಸಿತ್ತು. ಆದರೆ 18ನೆಯ ಶತಮಾನದ ಆದಿಭಾಗದಲ್ಲಿ ಬರೋಕ್ ಮತ್ತು ರೊಕೋಕೋ ಶೈಲಿಗಳು ಬೀರಿದ ಪ್ರಭಾವ ಜರ್ಮನ್ ಕಲೆಗೆ ಒಂದು ಹೊಸ ಚೈತನ್ಯವನ್ನು ಮೂಡಿಸಿತು. ವಿವಿಧ ಶೈಲಿಗಳ ಸಮ್ಮಿಳನದಿಂದ ಕೂಡಿದ, ನೂತನ ಧಾರ್ಮಿಕ ಮತ್ತು ಲೌಕಿಕ ಕಟ್ಟಡಗಳು ಅನೇಕ ಪಟ್ಟಣಗಳಲ್ಲಿ ನಿರ್ಮಿತವಾದವು. ಸಮ್ಮಿಶ್ರಿತ ಸ್ವರೂಪವುಳ್ಳ ಮತ್ತು ಸಮೃದ್ಧವಾದ ಕೆತ್ತನೆಗಳುಳ್ಳ ಬರೋಕ್ ಶೈಲಿ ಮತ್ತು ಹೆಚ್ಚಾಗಿ ಒಳ

ಅಲಂಕರಣಕ್ಕೆ ಸೀಮಿತವಾದ ಹಾಗೂ ಬರೋಕ್ ಶೈಲಿಯ ಶಾಖೆಯಾದ ರೊಕೋಕೋ ಶೈಲಿಗಳು ಜರ್ಮನಿಯಲ್ಲಿ ಅತ್ಯಂತ ಜನಪ್ರಿಯವಾದುವು. ಈ ಎರಡೂ ಕಲೆಗಳಿಂದ ಪ್ರಭಾವಿತವಾದ ಜರ್ಮನ್ ವಾಸ್ತುಶಿಲ್ಪದಲ್ಲಿ ಅನೇಕ ವೈಭವೋಪೇತವಾದ ಅರಮನೆಗಳು, ಕತೀಡ್ರಲ್‍ಗಳು, ಕೈತೋಟಗಳು ಮತ್ತು ಅಚ್ಚುಕಟ್ಟಾದ ಮಾರ್ಗಗಳು ನಿರ್ಮಾಣಗೊಂಡವು. ಫ್ರಾನ್ಸ್‍ನಲ್ಲಿ ಹುಟ್ಟಿದ ರೊಕೋಕೋ ಶೈಲಿಯ ಅಲಂಕರಣ ಮಾದರಿಗಳನ್ನು ಜರ್ಮನಿಯ ಕಟ್ಟಡಗಳ ಒಳಾಲಂಕರಣದಲ್ಲಿ ಮಿತಿಮೀರಿ ಉಪಯೋಗಿಸಲಾಯಿತು.

ಬ್ಯಾಂಬರ್ಗ್, ವಿಯೆನ್ನ, ಸಾಲ್ಟ್ಸ್‍ಬರ್ಗ್ ಮುಂತಾದೆಡೆ ಇರುವ ಕೆಥೊಲಿಕ್ ಇಗರ್ಜಿಗಳು ಮತ್ತು ಡ್ರೆಸ್‍ಡೆನ್, ಹ್ಯಾಂಬರ್ಗ್‍ಗಳಲ್ಲಿರುವ ಪ್ರಾಟೆಸ್ಟಂಟ್ ಇಗರ್ಜಿಗಳು ಬರೋಕ್ ಶೈಲಿಯ ಅನೇಕ ಇಗರ್ಜಿಗಳಲ್ಲಿ ಮುಖ್ಯವಾದುವು. ಜೊಹಾನ್ ಬಿ. ಫಿಷರ್, ಫಾನ್ ಎರ್ಲ್ಯಾಕ್, ಲೂಕಾಸ್ ಹೈಡಲ್‍ಬ್ರಾಂಟ್ ಮುಂತಾದ ಶಿಲ್ಪಿಗಳು ಆಸ್ಟ್ರಿಯ ಮತ್ತು ದಕ್ಷಿಣ ಜರ್ಮನಿಯ ಮುಖ್ಯವಾದ ಬರೋಕ್ ಶೈಲಿಯ ವಾಸ್ತು ನಿರ್ಮಾಪಕರು. ಪಾಟ್ಸ್‍ಡ್ಯಾಮ್‍ನ ಫ್ರೆಡರಿಕ್ ಮಹಾಶಯನ ಸ್ಯಾನ್ಸ್‍ಸೋಸಿ ಎಂಬುದು ರೊಕೋಕೋ ಕಲಾಶೈಲಿಯ ಮುಖ್ಯ ಕೇಂದ್ರ. ಜೊಹಾನ್ ಕ್ರಿಶ್ಚನ್ ಹೋಪೆನ್ ಹಾಪ್ಟ್ ಎಂಬ ಕಲೆಗಾರ ರೊಕೋಕೋ ಮಾದರಿಯ ಒಳಾಲಂಕರಣ ಕಲೆಯಲ್ಲಿ ಪ್ರವೀಣನಾಗಿದ್ದ.



ಕ್ಯೋನಿಗ್ಸ್‍ಭಾಷೆ, ಬರ್ಲಿನ್, 1815–18

17ನೆಯ ಶತಮಾನದಲ್ಲಿ ಆದ ವಾಸ್ತುಶಿಲ್ಪದ ಬೆಳೆವಣಿಗೆಯೊಡನೆ ಹೋಲಿಸಿದರೆ ಮೂರ್ತಿಶಿಲ್ಪದ ಬೆಳೆವಣಿಗೆ ಕಡಿಮೆಯಾಗಿ ಕಾಣುತ್ತದೆ. ಈ ಕಾಲದಲ್ಲಿ ಸಾಮಾನ್ಯವಾಗಿ ಇಟಲಿ ಮತ್ತು ಇತರ ಭಾಗಗಳಿಂದ ಆಹ್ವಾನಿತರಾದವರು ರಚಿಸಿದ ಶಿಲ್ಪಗಳೇ ಹೆಚ್ಚು. ಬರೋಕ್ ಮತ್ತು ರೊಕೋಕೋ ಶೈಲಿಯ ಈ ಕಾಲದ ಉತ್ತಮ ಶಿಲ್ಪಗಳು ಬಹಳ ವಿರಳ. ಆ್ಯಂಡ್ರಿಯಾಸ್ ಷ್ಲ್ಯೂಟರ್, ಬಲ್‍ಥಸಾರ್ ಪರ್ ಮೋಸರ್, ಜಾರ್ಜ್ ಆರ್.ಡೋನರ್ ಇತ್ಯಾದಿ ಕೆಲವರು ಈ ಕಾಲದ ಅಗ್ರಮಾನ್ಯ ಶಿಲ್ಪಿಗಳು. ನಿಖರವಾಗಿ ಹೇಳುವುದಾದರೆ ಈ ಕಾಲದಲ್ಲಿ ಬರೋಕ್ ಮತ್ತು ರೊಕೋಕೋ ಶೈಲಿಯ ಜರ್ಮನ್ ಚಿತ್ರಕಾರರೇ ಇಲ್ಲ. ಈ ಕಾಲದ ಎಲ್ಲ ಚರ್ಚ್‍ಗಳ ಒಳ ಮತ್ತು ಹೊರಾಲಂಕರಣಗಳು ಹೊರನಾಡಿನಿಂದ ಬಂದ ಜರ್ಮನೇತರ ಶಿಲ್ಪಿಗಳೇ ಮಾಡಿದಂಥವು. ಜೊವಾನಿ ಟಿಯೇಪಲೋ ಎಂಬಾತ ಇವರಲ್ಲೆಲ್ಲ ಹೆಸರುವಾಸಿಯಾದವ. ಪಿಂಗಾಣಿ ಕೈಗಾರಿಕೆ ಈ ಕಾಲದಲ್ಲಿ ಪ್ರಗತಿ ಸಾಧಿಸಿತು. ಗಾತಿಕ್ ಕಾಲದಿಂದಲೂ ಜರ್ಮನರಲ್ಲಿ ಕಲಾಸೃಷ್ಟಿಯಲ್ಲಿ ಇದ್ದ ಸಿದ್ಧಿ ಮತ್ತು ಭಾವಪೂರಿತ ಸೂಕ್ಷ್ಮತೆ ಪಿಂಗಾಣಿ ಕಲೆಯಲ್ಲಿ ಚೆನ್ನಾಗಿ ವ್ಯಕ್ತವಾದುವು. ಜೊಹಾನ್ ಬಾಟ್ಗರ್ ಮತ್ತು ಎರಲ್‍ಫ್ರೆಟ್ ಬಿರ್ನ್‍ಹೌಸ್ ಎಂಬಿಬ್ಬರು ಯೂರೋಪಿನಲ್ಲೆಲ್ಲ ಮೊತ್ತ ಮೊದಲಾಗಿ ಪಿಂಗಾಣಿಯನ್ನು ತಯಾರಿಸಿದರು.

ಈ ಕಾಲದ ಜರ್ಮನ್ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪ ಕಲೆ ಇಟ್ಯಾಲಿಯನ್ ಮತ್ತು ಫ್ರೆಂಚ್ ಕಲೆಗಳ ಪ್ರಭಾವದಲ್ಲಿ ಐಕ್ಯವಾಗಿ ಹೋಗಿತ್ತು. ಜರ್ಮನಿಯ ಕಲಾಸೃಷ್ಟಿಯಲ್ಲಿ ರೋಮನೆಸ್ಕ್ ಕಾಲದಲ್ಲಿದ್ದ ಜಾಗೃತಿ, ಸ್ವಂತಿಕೆ ಮತ್ತು ನೈಜ ಪ್ರತಿಭೆ ಮುದುಡಿಹೋಗಿತ್ತು. ಆದುದರಿಂದ ಇಡೀ ಪಾಶ್ಚಾತ್ಯ ಸಂಸ್ಕೃತಿಯನ್ನೇ ಬದಲಿಸಿದ ಪ್ರ.ಶ. 1600–1750ರ ನಡುವಿನ ಸಂಧಿಕಾಲದಲ್ಲಿ ಜರ್ಮನರು ಕಲಾರಂಗದಲ್ಲಿ ಹಿಂದುಳಿದಿದ್ದರಲ್ಲದೆ ಅವರ ಕಾಣಿಕೆಯೂ ಬಹು ಕಡಿಮೆಯಾಗಿತ್ತು.

19ನೆಯ ಶತಮಾನದ ಗ್ರೀಕ್ ಪುನರುಜ್ಜೀವನ ವಾಸ್ತು ಜರ್ಮನಿಯಲ್ಲಿ ರೂಪಿತವಾಯಿತು. ಫಾನ್ ಕ್ಲೆನ್ಸ್ (1784–1864) ಮತ್ತು ಫಾನ್ ಷಿಂಕೆಲ್ ಇದರ ಪ್ರವರ್ತಕರು. ಮ್ಯೂನಿಕ್‍ನ ಪ್ರಾಪಿಲೇಯಿಯ, ಪಿನಕೊತೆಕ್, ಬರ್ಲಿನ್ನಿನ ಬ್ರ್ಯಾಂಡೆನ್‍ಬರ್ಗ್ ದ್ವಾರ, ಹಳೆಯ ಮ್ಯೂಸಿಯಮ್ ಈ ಸಂಪ್ರದಾಯದ ಉತ್ತಮ ಉದಾಹರಣೆಗಳು. ಅಲ್ಲದೆ ಗಾತಿಕ್‍ನ ಪುನರುಜ್ಜೀವನ ಸಹ ಸ್ವಲ್ಪಮಟ್ಟಿಗೆ ಈ ಕಾಲದಲ್ಲಿ ಉಂಟಾಯಿತು. ಶಿಲ್ಪ, ಚಿತ್ರಕಲೆ ಮುಂತಾದುವುಗಳಲ್ಲಿ ಅನೇಕ ಸಂಪ್ರದಾಯಗಳ ಸಂಗಮ, ಸಂಘರ್ಷ ಕಂಡುಬರುವುದು ಈ ಕಾಲದ ವೈಶಿಷ್ಟ್ಯ. ಈ ಶತಮಾನದ ಆದಿಭಾಗದಲ್ಲಿ ನವ ಅಭಿಜಾತ ಸಂಪ್ರದಾಯ ಹಾಗೂ ರಮ್ಯ ಕಾಲ, ಜೊತೆಯಾಗಿ ರೂಢಿಯಲ್ಲಿದ್ದುವು. ಜೇಕಬ್ ಕಾರ್‍ಸ್ಟೆನ್ಸ್, ಹೆನ್ರಿ ಫುಸೆಲಿ ಮೊದಲ ಸಂಪ್ರದಾಯದ ಮುಖ್ಯ ವಕ್ತಾರರಾದರೆ, ಆಟೋ ರುಂಗ್, ಪೀಟರ್ ಫಾನ್ ಕಾರ್ನೀಲಿಯಸ್, ಜೋಹಾನ್ ಫ್ರೀಡ್ರಿಕ್ ಓವರ್‍ಬೆಕ್ ಮೊದಲಾದವರು ರಮ್ಯ ಸಂಪ್ರದಾಯದ ಖ್ಯಾತ ಚಿತ್ರಕಾರರು.

20ನೆಯ ಶತಮಾನದ ಆದಿಭಾಗದಿಂದ ವಾಸ್ತು ಹಾಗೂ ಕಲಾರಂಗದಲ್ಲಿ ಹೊಸ ಹೊಸ ರೀತಿಯ ರಚನೆಗಳು ಜರ್ಮನಿಯಲ್ಲೂ ಹುಟ್ಟಿವೆಯಾದರೂ ಈ ಕಲಾಸ್ಫೋಟ ಸಮಕಾಲೀನ ಪಾಶ್ಚಾತ್ಯ ದೇಶಗಳಲ್ಲೆಲ್ಲ ಸುಮಾರು ಏಕರೀತಿಯಲ್ಲಿ ಕಂಡುಬರುವುದರಿಂದ ಇಲ್ಲಿ ಜರ್ಮನಿಯ ವೈಶಿಷ್ಟ್ಯವನ್ನು ಗುರುತಿಸಲಾಗುವುದಿಲ್ಲ. (ಎಂ.ಎಸ್.ಕೆ.ಎಂ.)

**ಜರ್ಮನ್ ಶಿಕ್ಷಣ ಪದ್ಧತಿ :** ಯುರೋಪಿನ ಇತರ ರಾಷ್ಟ್ರಗಳಂತೆ ಜರ್ಮನಿಯೂ ತನ್ನ ಜನತೆಯ ಪ್ರತಿಭೆ ಮತ್ತು ಆಸಕ್ತಿಗಳ ಫಲವಾಗಿ ತನ್ನವರ ಪುರೋಭಿವೃದ್ಧಿಗೆ ನೆರವಾಗುವಂತೆ ರಾಷ್ಟ್ರೀಯ ಶಿಕ್ಷಣಪದ್ಧತಿಯೊಂದನ್ನು ರೂಪಿಸಿಕೊಂಡಿದೆ. ನಿತ್ಯಪರಿವರ್ತನೆಗೊಳಗಾಗುತ್ತಿರುವ ಜನಜೀವನಕ್ಕೆ ಅತ್ಯಂತ ಪರಿಣಾಮಕಾರಿಯಾಗಿ ಹೊಂದಿಕೊಳ್ಳಬಲ್ಲ ನಮ್ಯವೂ ಗತಿಶೀಲವೂ ಆದ ಶಿಕ್ಷಣಪದ್ಧತಿಯೆಂದು ಅದು ಪ್ರಪಂಚದಲ್ಲೆಲ್ಲ ಹೆಸರು ಪಡೆದಿದೆ. ಎರಡನೆಯ ಮಹಾಯುದ್ಧಾನಂತರ ನಾಮಾವಶೇಷವಾಗಿ ಉಳಿದ ಹಾಗೂ ನಾಲ್ಕು ವಿಜೇತ ರಾಷ್ಟ್ರಗಳ ಆಕ್ರಮಣದಿಂದಾಗಿ ಹರಿದು ಹಂಚಿಹೋದ ನಾಡು ಕಾಲು ಶತಮಾನದಲ್ಲಿ ಮತ್ತೆ ಚೇತರಿಸಿಕೊಂಡು ಪ್ರಪಂಚದ ಔದ್ಯೋಗಿಕ ಕ್ಷೇತ್ರದಲ್ಲಿ ಅಗ್ರಗಣ್ಯ ರಾಷ್ಟ್ರವಾಗಿ ಎದ್ದು ನಿಂತಿರುವುದು ಅಲ್ಲಿನ ಶಿಕ್ಷಣಪದ್ಧತಿಯ ದಕ್ಷತೆಯನ್ನು ಸೂಚಿಸುತ್ತದೆ. ಇಷ್ಟು ಪರಿಣಾಮಕಾರಿಯೆನಿಸಿರುವ ಆ ಶಿಕ್ಷಣಪದ್ಧತಿ ಇತರ ರಾಷ್ಟ್ರಗಳ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ಆಸಕ್ತಿಯನ್ನು ಸ್ವಾಭಾವಿಕವಾಗಿಯೇ ಸೆಳೆದಿರುತ್ತದೆ.

**ಬೆಳೆವಣಿಗೆ :** ಯುರೋಪಿನಲ್ಲಿ ಮಾನವಾಸಕ್ತಿವಾದ ಪ್ರಚಾರಕ್ಕೆ ಬಂದು ರೋಮನ್ ಮತ್ತು ಗ್ರೀಕ್ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಧ್ಯಯನಕ್ಕೆ ಪ್ರಾಶಸ್ತ್ಯ ಬಂದು ನವೋದಯ ಆರಂಭವಾದ 14,15, 16ನೆಯ ಶತಮಾನಗಳಲ್ಲಿ ಕ್ರೈಸ್ತಧರ್ಮ ಪೀಠಗಳು ಜರ್ಮನಿಯಲ್ಲಿ ಗ್ರೀಕ್ ಗ್ರಾಮರ್ ಪಾಠಶಾಲೆಗಳನ್ನು ಆರಂಭಿಸಿ ರಾಷ್ಟ್ರದಲ್ಲಿ ವ್ಯವಸ್ಥಿತ ರೀತೀಯ ಶಿಕ್ಷಣಸೌಲಭ್ಯವನ್ನೊದಗಿಸಿದುವು. 16ನೆಯ ಶತಮಾನದಲ್ಲಾದ ಕ್ರೈಸ್ತಧರ್ಮೀಯ ಪರಿಷ್ಕರಣದ ಫಲವಾಗಿ ರಾಷ್ಟ್ರದ ಆಳರಸರು ಪ್ರಾಟೆಸ್ಟಂಟ್ ಧರ್ಮಪೀಠಗಳ ನಾಯಕತ್ವವನ್ನು ವಹಿಸಿಕೊಂಡಂತೆ ಆ ಶಿಕ್ಷಣಸಂಸ್ಥೆಗಳು ಕ್ರಮಕ್ರಮವಾಗಿ ರಾಷ್ಟ್ರದ ನಿಯಂತ್ರಣಕ್ಕೆ ಒಳಪಡುತ್ತ ಬಂದುವು. 17–18ನೆಯ ಶತಮಾನಗಳಲ್ಲಿ ಕಡ್ಡಾಯ ಶಿಕ್ಷಣದ ತತ್ತ್ವ ಪ್ರಚಾರಕ್ಕೆ ಬಂತು. ಆ ತತ್ತ್ವ 1619ರಲ್ಲಿ ಆರಂಭವಾಗಿ 1763ರ ವೇಳೆಗೆ ರಾಷ್ಟ್ರಾದ್ಯಂತ ಅನುಷ್ಠಾನಕ್ಕೆ ಬಂತು. ಆಗಲೂ ಧರ್ಮಪೀಠಗಳಿಗೂ ಶಿಕ್ಷಣಕ್ಕೂ ನಿಕಟಸಂಪರ್ಕವಿದ್ದುದರಿಂದ ಮಠದ ಅಧಿಕಾರಿಗಳೇ ಮೂಲಶಿಕ್ಷಣಶಾಲೆಯ ಪರೀಕ್ಷೆ ನಿರೀಕ್ಷೆಗಳನ್ನು ನಡೆಸುತ್ತಿದ್ದರು.

19ನೆಯ ಶತಮಾನದ ಆದಿಯಲ್ಲಿ ಅಲ್ಲಿನ ಪ್ರಸಿದ್ಧ ಮಾನವಾಸಕ್ತಿವಾದಿಯೆನಿಸಿದ್ದ ವಿಲ್‍ಹೆಲ್ಮ್ ಫಾನ್ ಹೂಂಬೋಲ್ಟ್ ಎಂಬಾತ ತನ್ನ ಕಾಲದ ಶಿಕ್ಷಣ ಮತ್ತು ತತ್ತ್ವದೃಷ್ಟಿಯನ್ನು ಅಳವಡಿಸಿಕೊಂಡು ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಸೂಕ್ತ ತಳಹದಿಯೆನಿಸುವಂತೆ ಶಾಲಾಶಿಕ್ಷಣದಲ್ಲಿ ಪುನರ್ವ್ಯವಸ್ಥೆಯನ್ನು ತಂದ. ಇದರ ಫಲವಾಗಿ ಸಾಮಾನ್ಯ ಶಿಕ್ಷಣದ ಉದ್ದೇಶ ಹೊಸರೂಪವನ್ನು ತಾಳಿತಲ್ಲದೆ ಮಾನವಾಸಕ್ತಿವಾದಕ್ಕೆ ಹೊಸ ಅರ್ಥ ಬಂತು. ಲ್ಯಾಟಿನ್ ಮತ್ತು ಗ್ರೀಕ್ ಭಾಷಾಧ್ಯಯನ ಗ್ರಾಮರ್ ಶಾಲೆಗಳಲ್ಲಿ ಪ್ರಮುಖ ಕೇಂದ್ರವಾಗಿದ್ದುಕೊಂಡು ಆ ಶಾಲೆಗಳ ಬೋಧನಾ ವ್ಯವಸ್ಥೆಯನ್ನು ಇತ್ತೀಚಿನವರೆಗೂ ನಿರ್ದೇಶಿಸುತ್ತ ಬಂತು. 19ನೆಯ ಶತಮಾನದ ಕೊನೆಕೊನೆಗೆ 'ಜಿಮ್ನ್ಯಾಷಿಯಂ' ಎಂಬ ನೂತನ ರೀತಿಯ ಗ್ರಾಮರ್ ಶಾಲೆಗಳು ಅಸ್ತಿತ್ವಕ್ಕೆ ಬರಹತ್ತಿದವು. ಅವು ಲಾಕ್ಷಣಿಕ ಭಾಷೆಗಳಂತೆ ಆಧುನಿಕ ಭಾಷೆಗಳಿಗೂ ಪ್ರಾಮುಖ್ಯವಿತ್ತುವು ; ಅನಂತರ ಗಣಿತವಿಜ್ಞಾನ ಮುಂತಾದ ವಿಷಯಗಳ ಬೋಧನೆಗೆ ಪ್ರಾಧಾನ್ಯವೀಯುವ ಇನ್ನೂ ನೂತನ ರೀತಿಯ ಪ್ರೌಢಶಾಲೆಗಳು ಅಸ್ತಿತ್ವಕ್ಕೆ ಬಂದುವು. ಪರಿವರ್ತನೆಗೊಳಗಾಗಿದ್ದ ಜೀವನದ ಆವಶ್ಯಕತೆಗಳಿಗೆ ಹೊಂದಿಕೊಳ್ಳಲು ಅವು ಕ್ರಮಕ್ರಮವಾಗಿ ಮಾರ್ಪಡುತ್ತ ಬಂದುವು.

ಜರ್ಮನಿಯ ಮೊಟ್ಟಮೊದಲ ಆಧುನಿಕ ವಿಶ್ವವಿದ್ಯಾಲಯವಾದ ಪ್ರಷ್ಯನ್ ರಾಷ್ಟ್ರೀಯ ಬರ್ಲಿನ್ ವಿಶ್ವವಿದ್ಯಾಲಯ (ಫ್ರೀಡ್ರಿಕ್ ವಿಲ್‍ಹೆಲ್ಮ್ ವಿಶ್ವವಿದ್ಯಾಲಯ) 1810ರಲ್ಲಿ ಸ್ಥಾಪನೆಯಾದರೂ 15–16ನೆಯ ಶತಮಾನಗಳಲ್ಲೆ ಅಲ್ಲಿ ವಿಶ್ವವಿದ್ಯಾಲಯಗಳು ಆರಂಭವಾಗಿದ್ದುವು. 1939ರ ವೇಳೆಗೆ 23 ವಿಶ್ವವಿದ್ಯಾಲಯಗಳಿದ್ದುವು. ವೂಂಟ್ ನಿರ್ದೇಶಿಸಿದಂತೆ ಅವು ಸರ್ಕಾರದ ನಿಯಂತ್ರಣದಿಂದ ವಿಮುಕ್ತವಾಗಿ ಬೋಧಿಸುವ ಮತ್ತು ಸಂಶೋಧಿಸುವ ಕಾರ್ಯಗಳೆರಡನ್ನೂ ತಮ್ಮ ಕರ್ತವ್ಯವನ್ನಾಗಿ ಅಂಗೀಕರಿಸಿದುವು. ಜೊತೆಗೆ ಬೋಧಿಸುವ ಮತ್ತು ಕಲಿಯುವ ಸ್ವಾತಂತ್ರ್ಯವನ್ನು ಎತ್ತಿಹಿಡಿದುವು. 1929ರವರೆಗೆ ಅವು ಮೇಲ್ವರ್ಗದವರಿಗೆ ಮಾತ್ರ ಮೀಸಲಾಗಿದ್ದುವು. ಸೇ. 5ರಷ್ಟು ಮಾತ್ರ ಕೆಳವರ್ಗದ

ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಸೌಲಭ್ಯವನ್ನು ಪಡೆಯುತ್ತಿದ್ದರು. ಒಂದನೆಯ ಮಹಾಯುದ್ಧಾನಂತರ, 1920ರಲ್ಲಿ ಶಿಕ್ಷಣಸೌಲಭ್ಯವನ್ನು ಸರ್ವಸಾಮಾನ್ಯ ಮಾಡುವ ಉದ್ದೇಶದಿಂದ ಎಲ್ಲ ಮಕ್ಕಳಿಗೂ 4 ವರ್ಷಗಳ ಗ್ರೂಂಡ್‌ಶೂಲೆ ಎಂಬ ಮೂಲಶಿಕ್ಷಣ ಪಾಠಶಾಲೆಗಳನ್ನು ದೇಶಾದ್ಯಂತ ಸ್ಥಾಪಿಸುವ ಕಾನೂನು ಆಚರಣೆಗೆ ಬಂತು. ಅನಂತರ ವಿವಿಧ ರೀತಿಯ ಮುನ್ನಡೆಯ (ಕಂಟಿನ್ಯುಯೇಷನ್) ಶಾಲೆಗಳನ್ನು ಸ್ಥಾಪಿಸಿ, ಅವರವರ ಅಗತ್ಯ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ಶಿಕ್ಷಣದ ಹಂತದಲ್ಲಿ ಮುಂದುವರಿಯುವ ಅವಕಾಶವನ್ನು ಕಲ್ಪಿಸಲಾಯಿತು.

19ನೆಯ ಶತಮಾನದ ಕೊನೆಯ ಪಾದದಲ್ಲಿ ಅಸ್ತಿತ್ವದಲ್ಲಿದ್ದ ಮೂರು ಮುಖ್ಯ ವಿಧದ ಶಾಲೆಗಳನ್ನು ಆಧಾರಮಾಡಿಕೊಂಡು ಜರ್ಮನಿಯ ಇಂದಿನ ಶಾಲಾವ್ಯವಸ್ಥೆ ಏರ್ಪಟ್ಟಿದೆ. 6–14 ವರ್ಷ ವಯಸ್ಸಿನವರೆಗೆ ಉಚಿತ ಶಿಕ್ಷಣವೀಯುತ್ತಿದ್ದ ಮೂಲಶಿಕ್ಷಣ ಶಾಲೆಗಳು, ಪ್ರಾಥಮಿಕ ನಾಲ್ಕನೆಯ ತರಗತಿಯ ಅನಂತರ ಪ್ರಾಯೋಗಿಕ, ವಾಣಿಜ್ಯ ಮತ್ತು ಒಂದು ಆಧುನಿಕ ವ್ಯಾವಹಾರಿಕ ಭಾಷೆಯನ್ನು ಬೋಧಿಸುತ್ತಿದ್ದ, ಅಲ್ಪಸ್ವಲ್ಪ ಶುಲ್ಕ ವಿಧಿಸುತ್ತಿದ್ದ 6ವರ್ಷಗಳ ಇಂಟರ್‌ಮೀಡಿಯಟ್ ಶಾಲೆಗಳು, ಪ್ರೌಢಿಮೆಯ (ಮೆಚೂರಿಟಿ) ಪರೀಕ್ಷೆಯೊಂದರ ಮೂಲಕ ಸಾಮಾನ್ಯ ಮತ್ತು ತಾಂತ್ರಿಕ ವಿಶ್ವವಿದ್ಯಾಲಯಗಳಿಗೆ ಸಿದ್ಧಪಡಿಸುತ್ತಿದ್ದ ವಿವಿಧ ಪ್ರೌಢಶಾಲೆಗಳು–ಇವೇ ಆ ಮೂರು ವಿಧದ ಶಾಲೆಗಳು. ಅವುಗಳಲ್ಲಿ ಸಾಂಪ್ರದಾಯಿಕ ಪ್ರೌಢಶಾಲೆ (ಕ್ಲಾಸಿಕಲ್ ಜಿಮ್ನಾಷಿಯಂ) ಎಲ್ಲಕ್ಕಿಂತ ಹಳೆಯದು.

1918ರಿಂದ 1923ರವರೆಗೆ ಅಸ್ತಿತ್ವದಲ್ಲಿದ್ದ ವೈಮರ್ ರಿಪಬ್ಲಿಕ್ಕಿನಲ್ಲಿ ಮೂಲ ಶಾಲೆಯ ನಾಲ್ಕು ವರ್ಷದ ಶಿಕ್ಷಣ ಎಲ್ಲರಿಗೂ ಕಡ್ಡಾಯವಾಯಿತು. ಮಾಧ್ಯಮಿಕ ಅಥವಾ ಪ್ರೌಢಶಾಲೆಗಳಿಗೆ ಹೋದವರಿಗೆ 2–3 ವರ್ಷದ ಭಾಗಶಃ ಕಾಲದ ಔದ್ಯೋಗಿಕ ಶಿಕ್ಷಣವೂ ಕಡ್ಡಾಯವಾಯಿತು. ಜರ್ಮನ್ ಸಂಪ್ರದಾಯದಲ್ಲಿ ಬೋಧಿಸುವ 'ಓಬರ್‌ಶೂಲೆ'ಗಳನ್ನೂ ಗ್ರಾಮೀಣ ಪ್ರದೇಶದಲ್ಲಿ 12ನೆಯ ವಯಸ್ಸಿಗೆ ಶಾಲೆ ಬಿಡತಕ್ಕವರಿಗೆ 'ಆಫ್ ಬಾ' ಶಾಲೆಗಳನ್ನೂ ಆರಂಭಿಸಲಾಯಿತು. ಆಗ ಧಾರ್ಮಿಕ ಶಿಕ್ಷಣವೀಯುತ್ತಿದ್ದ ಮತೀಯ ಶಾಲೆಗಳೂ ಲೌಕಿಕ ಶಿಕ್ಷಣವೀಯುತ್ತಿದ್ದ ಜಾತ್ಯತೀತ ಖಾಸಗೀ ಶಾಲೆಗಳೂ ಇದ್ದುವು.

ಮೂರನೆಯ ರೈಖ್ ಅಸ್ತಿತ್ವಕ್ಕೆ ಬಂದೊಡನೆ ಅಲ್ಲಿಯ ತನಕ ರಾಜ್ಯಗಳಿಗೆ ಶಿಕ್ಷಣದಲ್ಲಿದ್ದ ಆಡಳಿತಸ್ವಾತಂತ್ರ್ಯ ಮೊಟಕಾಗಿ ಅದರ ಆಡಳಿತ ಕೇಂದ್ರೀಕೃತವಾಯಿತು. 1934ರಲ್ಲಿ ಕೇಂದ್ರದ ಶಿಕ್ಷಣ ಸಚಿವಾಲಯ ಆರಂಭವಾಗಿ ಶಿಕ್ಷಣ ಸಚಿವರು ಸರ್ವಾಧಿಕಾರಿ ಹಿಟ್ಲರನಿಗೂ ವಿಶ್ವವಿದ್ಯಾಲಯಗಳ ರೆಕ್ಟರರು (ಅಧ್ಯಕ್ಷರು) ಶಿಕ್ಷಣ ಸಚಿವರಿಗೂ ಹೊಣೆಗಾರರಾಗಿರ ಬೇಕಾಯಿತು. ಯೆಹೂದಿಗಳನ್ನೂ ರಾಷ್ಟ್ರೀಯ ಸಮಾಜವಾದದ ಭಾವನೆಯ ವಿರೋಧಿಗಳನ್ನೂ ರಾಷ್ಟ್ರದ್ರೋಹಿಗಳೆಂದು ಸರ್ಕಾರ ಹೊರಹಾಕಿತು. ಮಕ್ಕಳನ್ನು ಆರ್ಯ–ಜರ್ಮನ್ ವ್ಯಕ್ತಿಗಳನ್ನಾಗಿ ರೂಪಿಸುವುದು ಶಿಕ್ಷಣದ ಗುರಿಯೆಂದು ಸಾರಿತು. ಚರಿತ್ರೆ, ಭೂಗೋಳ, ರಾಜ್ಯಶಾಸ್ತ್ರ ಮುಂತಾದ ವಿಷಯಗಳ ಬೋಧನೆಯ ಮೂಲಕ ಜರ್ಮನ್ ಜನಾಂಗದ ಶ್ರೇಷ್ಠತೆಯನ್ನು ಘೋಷಿಸಿತು. 20 ಕೋಟಿ ಜರ್ಮನರನ್ನು ಒಂದುಗೂಡಿಸಲು ಆಗ ತೀವ್ರ ರೀತಿಯ ರಾಷ್ಟ್ರೀಯ ಭಾವನೆಯನ್ನು ಪ್ರಚಾರ ಮಾಡಿತು. ಇದರ ಫಲವಾಗಿ 1930ರಲ್ಲಿದ್ದ ವಿಶ್ವವಿದ್ಯಾಲಯದ ಒಂದೂವರೆ ಲಕ್ಷ ವಿದ್ಯಾರ್ಥಿಸಂಖ್ಯೆ 60 ಸಹಸ್ರಕ್ಕಿಳಿಯಿತು.

ಎರಡನೆಯ ಮಹಾಯುದ್ಧ ಮುಗಿದು 1945ರ ಪಾಟ್ಸ್‌ಡ್ಯಾಂ ಒಪ್ಪಂದವಾದ ಅನಂತರ ನಾಟ್ಸಿ ಪ್ರಚಾರವನ್ನು ತೊಡೆದು ಹಾಕಿ ವಿದ್ಯಾರ್ಥಿಗಳಿಗೂ ಶಿಕ್ಷಣಸಂಸ್ಥೆಗಳಿಗೂ ಹಿಂದಿನ ಸ್ವಾತಂತ್ರ್ಯವನ್ನು ನೀಡಿ ವೈಚಾರಿಕ ಮನೋಭಾವವನ್ನು ಬೆಳೆಸಲು ಆಕ್ರಮಣ ರಾಷ್ಟ್ರಗಳು ಸುಧಾರಣೆ ಆರಂಭಿಸಿದುವು. ಅದಕ್ಕಾಗಿ ನಿಯಂತ್ರಣ ಮಂಡಲಿ ಸ್ಥಾಪನೆಯಾಗಿ ಮೂಲ ಕಾನೂನು ರಚನೆಯಾಯಿತು. ಶಿಕ್ಷಣದ ಆಡಳಿತ ಪಶ್ಚಿಮ ಜರ್ಮನಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರಗಳಿಗೆ ವರ್ಗವಾಯಿತು.

**ಪಶ್ಚಿಮ ಜರ್ಮನಿಯಲ್ಲಿ ಶಿಕ್ಷಣ :** 1949 ರಿಂದ 1990ರ ವರೆಗಿನ ಹನ್ನೊಂದು ರಾಜ್ಯಗಳ ಒಕ್ಕೂಟದಿಂದ ಆದ ಪಶ್ಚಿಮ ಜರ್ಮನಿ ಯುದ್ಧಪೂರ್ವ ಜರ್ಮನಿಯ ಬಹುಭಾಗವನ್ನೊಳಗೊಂಡಿದ್ದು ತನ್ನ ಸಾಂಪ್ರದಾಯಿಕ ಶಿಕ್ಷಣಸಂಸ್ಥೆಗಳನ್ನೇ ಆಧಾರ ಮಾಡಿಕೊಂಡು ಪೌರಪ್ರಭುತ್ವ ತತ್ತ್ವವನ್ನು ಅಳವಡಿಸಿಕೊಂಡು ಇಂದಿನ ಶಿಕ್ಷಣ ಪದ್ಧತಿಯನ್ನು ರೂಪಿಸಿಕೊಂಡಿದೆ. ಸಾಂಸ್ಕೃತಿಕ ವಿಷಯಗಳಲ್ಲಿ ರಾಜ್ಯಗಳಿಗೆ ಪರಮಾಧಿಕಾರ ಎಂಬ ತತ್ತ್ವದಂತೆ ಶಿಕ್ಷಣಕ್ಕೆ ಸಂಬಂಧಿಸಿದ ಶಾಸನ ಮಾಡುವುದೂ ಅದನ್ನು ಆಚರಣೆಗೆ ತರುವುದೂ ರಾಜ್ಯಗಳಿಗೆ ಸೇರಿದೆ. ಕೇಂದ್ರಸರ್ಕಾರ ಜ್ಞಾನದ ಪುರೋಭಿವೃದ್ಧಿಗೂ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಂಸ್ಕೃತಿಕ ನೀತಿಗೂ ಸಂಬಂಧಿಸಿದ ಸಾಮಾನ್ಯ ಹೊಣೆಗಾರಿಕೆಯನ್ನೂ ಮಾತ್ರ ನಿರ್ವಹಿಸುತ್ತಿದೆ. ವೈಜ್ಞಾನಿಕ ಸಂಶೋಧನೆಯ ಬಗ್ಗೆ ರಾಜ್ಯಸರ್ಕಾರಗಳೊಡನೆ ಸಹವರ್ತಿಸಿ ಶಾಸನಮಾಡುತ್ತಿದೆ. ಅದಕ್ಕೆ ಅಗತ್ಯವಾದ ಹಣ ಒದಗಿಸಲು ರಾಜ್ಯಸರ್ಕಾರಗಳೂ ಖಾಸಗಿ ಸಂಸ್ಥೆಗಳೂ ಉದ್ಯೋಗಗಳೂ ಭಾಗವಹಿಸುತ್ತವೆ. ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಸಹಾಯಧನನೀಡಿಕೆ ಕೇಂದ್ರ ಸರ್ಕಾರ ಒಳಾಡಳಿತ ಸಚಿವಾಲಯಕ್ಕೂ ಅವುಗಳಿಗೆ ಸಂಬಂಧಿಸಿದ ಶಾಸನಮಾಡುವುದು ಆಯಾ ರಾಜ್ಯಸರ್ಕಾರಕ್ಕೂ ಸೇರಿದೆ. ಆದ್ದರಿಂದ ಒಂದೊಂದು ರಾಜ್ಯವೂ ತನ್ನದೇ ರೀತಿಯಲ್ಲಿ ಶಿಕ್ಷಣಪದ್ಧತಿಯನ್ನು ರೂಪಿಸಿ ನಡೆಸಿಕೊಂಡು ಹೋಗುವ ಅವಕಾಶವಿದೆ. ಆದರೆ ಇಡೀ ರಾಷ್ಟ್ರದ ಶಿಕ್ಷಣಪದ್ಧತಿಯಲ್ಲಿ ಅಗತ್ಯವೆನಿಸುವಷ್ಟು ಮಟ್ಟಿನ ಏಕರೂಪತೆಯನ್ನೂ ಸಮನ್ವಯವನ್ನೂ ಸಾಧಿಸಲು ನೆರವಾಗುವ ಸಲಹೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರಲು ಎಲ್ಲ ರಾಜ್ಯಗಳ ಶಿಕ್ಷಣ ಸಚಿವರನ್ನೊಳಗೊಂಡ ಒಂದು ಮಂಡಲಿಯೂ ವಿಶ್ವವಿದ್ಯಾಲಯಗಳ ಮತ್ತು ತಾಂತ್ರಿಕ ವಿಶ್ವವಿದ್ಯಾಲಯಗಳ ಅಧ್ಯಕ್ಷರ ಮಂಡಲಿಯೂ ಇವೆ. ರಾಷ್ಟ್ರಕ್ಕೆ ಸಂಬಂಧಿಸಿದ, ಆದರೆ ರಾಜ್ಯಗಳಿಗೆ ಅತೀತವೆನಿಸುವ ಶೈಕ್ಷಣಿಕ ಅಂಶಗಳ ಬಗ್ಗೆ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ಸಲಹೆ ನೀಡುವ ಸ್ವಯಂಸೇವಾ ಸಂಸ್ಥೆಗಳಿವೆ. ಇವುಗಳ ಜೊತೆಗೆ 1965ರಲ್ಲಿ ಶಿಕ್ಷಣ ಮಂಡಲಿ (ಕೌನ್ಸಿಲ್ ಆಫ್ ಎಜುಕೇಷನ್) ಎಂಬ ಮತ್ತೊಂದು ಸಲಹಾಸಮಿತಿಯೂ ರಚನೆಯಾಗಿದೆ. ಪ್ರಾಥಮಿಕ ಶಿಕ್ಷಣದ

ಡ್ರೆಸ್‌ಡೆನ್ನಿನ ಕಿಂಡರ್‌ಗಾರ್ಟನ್ ಮಕ್ಕಳು

ಪುನರ್ವ್ಯವಸ್ಥೆ, ವಯಸ್ಕರ ಶಿಕ್ಷಣಕ್ಕೆ ಹೊಸರೂಪ ನೀಡುವುದು, ಸೆಕೆಂಡರಿ ಶಿಕ್ಷಣವನ್ನು ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳು ಪ್ರವೇಶಪಡೆಯಲು ಅನುಕೂಲಿಸುವಂತೆ ಪುನರ್ವ್ಯವಸ್ಥೆಗೊಳಿಸುವುದು, ಪ್ರಾಥಮಿಕ ಶಾಲಾನಂತರ ವಿದ್ಯಾರ್ಥಿಗಳಿಗೆ ಉದ್ಯೋಗಗಳನ್ನು ಕೊಡಿಸುವುದು–ಈ ರೀತಿಯ ಸಲಹೆಗಳನ್ನು ಸರ್ಕಾರಕ್ಕೆ ನೀಡುವುದು ಇದರ ಕೆಲಸ. ಸಾಂಸ್ಕೃತಿಕ ವಿಷಯಗಳಲ್ಲಿ ರಾಜ್ಯಗಳಿಗಿರುವ ಪರಮಾಧಿಕಾರವನ್ನು 1871–1918ರ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ರೈಖ್ ಸರ್ಕಾರವೂ 1919–33ರ ವರೆಗೆ ಅಸ್ತಿತ್ವದಲ್ಲಿದ್ದ ವೈಮರ್ ಸರ್ಕಾರವೂ ಮನ್ನಿಸಿದ್ದುವು. ಅದು 3ನೆಯ ರೈಖ್ ಕಾಲದಲ್ಲಿ ಮಾತ್ರ ಕೇಂದ್ರಕ್ಕೆ ಸೇರಿತ್ತು. 1945ರ ಅನಂತರ ಮತ್ತೆ ರಾಜ್ಯಗಳು ಆ ವಿಷಯದಲ್ಲಿ ಸ್ವಾತಂತ್ರ್ಯ ಪಡೆದುಕೊಂಡುವು. ಇಡೀ ರಾಷ್ಟ್ರದ ಶಿಕ್ಷಣದಲ್ಲಿ ಏಕರೂಪತೆಯನ್ನು ಸಾಧಿಸಲು ಕೇಂದ್ರ ಶಿಕ್ಷಣ ಸಚಿವಾಲಯವನ್ನು ಸ್ಥಾಪಿಸುವ ಆಲೋಚನೆ ಕೆಲವರಲ್ಲಿ ಕಂಡುಬಂದರೂ ರಾಜಕೀಯ ಪಕ್ಷವಾಗಲಿ ಸಾಂಸ್ಕೃತಿಕ ಸಂಘಗಳಾಗಲೀ ಇದನ್ನು ಪುರಸ್ಕರಿಸುತ್ತಿಲ್ಲ. ರಾಜ್ಯಗಳು ಶಿಕ್ಷಣದ ಬಗ್ಗೆ ಸ್ವಯಮಾಡಳಿತಾಧಿಕಾರ ಹೊಂದಿದ್ದರೂ ಅಗತ್ಯಕ್ಕಿಂತ ಹೆಚ್ಚಾಗಿ ಅಧಿಕಾರವನ್ನು ಬಳಸಿಕೊಳ್ಳುತ್ತಿಲ್ಲ.

ಪ್ರಾಥಮಿಕ ಪೂರ್ವದ ಶಿಕ್ಷಣ : ಪ್ರಾಥಮಿಕ ಪೂರ್ವದ ಶಿಕ್ಷಣ ಸರ್ಕಾರದ ಹೊಣೆಗಾರಿಕೆಯ ಪರಿಮಿತಿಗೆ ಸೇರಿರದಿದ್ದರೂ ದೇಶಾದ್ಯಂತ ವ್ಯಾಪಕವಾಗಿ ವ್ಯವಸ್ಥೆಗೊಂಡಿದೆ. ಜರ್ಮನ್ ಶಿಶುವಿಹಾರಗಳು ಮುಖ್ಯವಾಗಿ ಫ್ರೊಬೆಲ್ಲನ ಕಿಂಡರ್‌ಗಾರ್ಟನ್ ಪದ್ಧತಿಯನ್ನನುಸರಿಸುತ್ತಿವೆ. ಕೆಲವು ಮಾಂಟೆಸೋರಿ ಪದ್ಧತಿಯವೂ ಉಂಟು. ಆಟದ ಚಟುವಟಿಕೆಗಳ ಮೂಲಕ ಅಲ್ಲಿ ಮಕ್ಕಳ ಅವಧಾನವನ್ನು ಕೇಂದ್ರೀಕರಿಸುವುದು, ಕಲ್ಪನೆ, ಅಭಿವ್ಯಕ್ತೀಕರಣ, ಸಾಮಾನ್ಯ ಉಪಕರಣಾದಿಗಳ ಬಳಕೆ, ಶುಚಿಯಾಗಿರುವಿಕೆ, ವ್ಯವಸ್ಥೆ, ಮತ್ತು ಇತರರೊಡನೆ ಕಲಿತು ಬಾಳುವುದು ಮುಂತಾದ ಜೀವನವಿಧಾನವನ್ನು ರೂಢಿಸಿಕೊಳ್ಳಲು ಸಹಾಯ ನೀಡುವರು. ಆದರೆ ಓದುಬರಹ ಲೆಕ್ಕಗಳನ್ನು ಕಲಿಸುತ್ತಿಲ್ಲ. ಮನೆಯಂತೆ ಮಮತೆಯಿಂದ ಅವರನ್ನು ನೋಡಿಕೊಳ್ಳುವರು. ಅಲ್ಲಿ ವೇಳಾಪಟ್ಟಿಯಾಗಲಿ ನಿಯಮಿತ ಬೋಧನವಿಧಾನವಾಗಲಿ ಕಂಡುಬರುವುದಿಲ್ಲ. ದಿನದ ನಾಲ್ಕು ಗಂಟೆಗಳಷ್ಟು ಕಾಲ ಮಕ್ಕಳು ಅಲ್ಲಿರುವರು. ಅಲ್ಲಿನ ಅಧ್ಯಾಪಕಿಯರು ಪ್ರೌಢಶಾಲೆಯ ಹತ್ತನೆಯ ತರಗತಿಯವರೆಗೆ ವ್ಯಾಸಂಗಮಾಡಿ ಶಿಶುವಿಹಾರದ 2 ವರ್ಷದ ಅಧ್ಯಾಪಕರ ವೃತ್ತಿಶಿಕ್ಷಣ ಪಡೆದಿರುತ್ತಾರೆ. ಅವುಗಳ ಮೇಲ್ವಿಚಾರಣೆ ನಡೆಸುವ ಅಧಿಕಾರಿಗಳಿಗೆ ಅಧ್ಯಾಪಕರ ಶಿಕ್ಷಣದ ಕಾಲೇಜುಗಳಲ್ಲಿ 2 ವರ್ಷದ ಶಿಕ್ಷಣವೂ ಅನಂತರ 2 ವರ್ಷದ ಅಧ್ಯಾಪಕವೃತ್ತಿಯ ಅನುಭವವೂ ಇರಬೇಕೆಂಬ ನಿಯಮವುಂಟು.

ಪ್ರಾಥಮಿಕ ಶಿಕ್ಷಣ : ಬೇರೆ ಬೇರೆ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣ ಬೇರೆ ಬೇರೆ ವಿಧದಲ್ಲಿ ವ್ಯವಸ್ಥೆಗೊಂಡಿದೆ. 15ರವರೆಗೆ 9 ವರ್ಷ ಕಾಲದ ಮತ್ತು ಅನಂತರ 18ರವರೆಗೆ 3 ವರ್ಷ ಕಾಲದ ಭಾಗಶಃ ಕಡ್ಡಾಯ ಶಿಕ್ಷಣ ಆಚರಣೆಯಲ್ಲಿದೆ. ಎಂದರೆ 9 ವರ್ಷದ

ಶಿಕ್ಷಣದ ನಂತರ ಅವರು ಉದ್ಯೋಗಕ್ಕೆ ಸೇರಿ ಕಡ್ಡಾಯ ವೃತ್ತಿಶಿಕ್ಷಣ ಪಡೆಯುವರು. ಆದರೆ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ವಯೋಮಾನದಲ್ಲಿ ಮಕ್ಕಳು ಶಾಲೆ ಬಿಟ್ಟು ಉದ್ಯೋಗಕ್ಕೆ ಸೇರುವರು. ಕೆಲವು ರಾಜ್ಯಗಳಲ್ಲಿ 6 ವರ್ಷಗಳ ಶಿಕ್ಷಣದ ನಂತರ ಉದ್ಯೋಗಕ್ಕೆ ಸೇರಿದರೆ ಮತ್ತೆ ಕೆಲವು ರಾಜ್ಯಗಳಲ್ಲಿ ಒಂಬತ್ತು ಅಥವಾ ಹತ್ತು ವರ್ಷಗಳ ಶಿಕ್ಷಣದ ನಂತರ ಸೇರುವರು. ಈ ವ್ಯತ್ಯಾಸಗಳ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಏಕೋಪಾಧ್ಯಾಯಶಾಲೆಗಳಿದ್ದು ಅಲ್ಲಿ ಒಂದೆರಡು ತರಗತಿಗಳು ಮಾತ್ರ ಇರುವುದುಂಟು. ಅಥವಾ ಎಲ್ಲ ತರಗತಿಯವರನ್ನೂ ಒಟ್ಟುಗೂಡಿಸಿ ಪಾಠಮಾಡುವುದುಂಟು. ಈ ಹಲಕೆಲವು ವ್ಯತ್ಯಾಸಗಳನ್ನು ಬಿಟ್ಟರೆ, ಶಿಕ್ಷಣ ಇಡೀ ರಾಷ್ಟ್ರದಲ್ಲಿ 9 ವರ್ಷದ್ದಾಗಿದ್ದು ಅದನ್ನು ಎರಡು ಅಂತಸ್ತುಗಳಲ್ಲಿ ವ್ಯವಸ್ಥೆಗೊಳಿಸಿದೆ. ಮೊದಲ ಅಂತಸ್ತಿನ 4 ವರ್ಷದ (ಜೂನಿಯರ್) ಪ್ರಥಮ ಭಾಗವೂ ಎರಡನೆಯ ಅಂತಸ್ತಿನ 5 ವರ್ಷದ ಎರಡನೆಯ (ಸೀನಿಯರ್) ಭಾಗವೂ ಬೇರೆಬೇರೆಯಾಗಿ ವ್ಯವಸ್ಥೆಗೊಂಡಿವೆ. ಕಡ್ಡಾಯ ಶಿಕ್ಷಣ 6ನೆಯ ವಯಸ್ಸಿನಿಂದ ಆರಂಭವಾಗುತ್ತದೆ. ಶಿಶುವಿಹಾರದಿಂದ ಬರುವ ಮಕ್ಕಳು ಆಟಕ್ಕೆ ಬದಲು ಕೆಲಸದ ರೂಪದಲ್ಲಿ ಓದುಬರೆಹ ಲೆಕ್ಕ ಈ ಮೂಲಕೌಶಲಗಳನ್ನು ಇಲ್ಲಿ ಕಲಿಯಲಾರಂಭಿಸುವರು. ಎರಡನೆಯ ಅಂತಸ್ತಿನಲ್ಲಿ ಎರಡು ರೀತಿಯ ಬೋಧನವಿಧಾನಗಳನ್ನು ಅನುಸರಿಸಲಾಗುವುದು. ಪ್ರೌಢಶಾಲೆಗೆ ಹೋಗತಕ್ಕವರಿಗೆ ಜ್ಞಾನ ಮತ್ತು ಕೌಶಲಗಳ ಬಗ್ಗೆ ಹೆಚ್ಚಿನ ಗಮನವಿತ್ತು, ಮುಂದೆ ಹೆಚ್ಚು ಅಮೂರ್ತವಿಧಾನದಲ್ಲಿ ಕಲಿಯಲು ತರಪೇತು ನೀಡಲಾಗುವುದು. ಆ ಶಾಲೆಯಲ್ಲೇ ಉಳಿದು ಅನಂತರ ಕೆಲಸಕ್ಕೆ ಸೇರಲು ಎಳಸತಕ್ಕವರಿಗೆ ವಿಶಿಷ್ಟ ವಿಷಯಗಳನ್ನು ಅಗತ್ಯಕ್ಕೆ ತಕ್ಕಂತೆ ಬೋಧಿಸುವರು. 4 ವರ್ಷದ ಪ್ರಾಥಮಿಕ ಶಿಕ್ಷಣದನಂತರ ಅನೇಕರು ಸೆಕೆಂಡರಿ ಶಾಲೆಗೆ ಸೇರುವರು. ಅವರು ಬಹುಮಟ್ಟಿಗೆ ಸಮಾಜದ ಮಧ್ಯಮ ವರ್ಗದವರು. ಕೆಳವರ್ಗದವರು ಅಷ್ಟಾಗಿ ಪ್ರೌಢಶಾಲೆಗೆ ಹೋಗದೆ ಅಲ್ಲೇ ಶಿಕ್ಷಣ ಮುಂದುವರಿಸುವರು. ಪ್ರೌಢಶಾಲೆಗೆ ಸೇರತಕ್ಕವರ ಸಂಖ್ಯೆ ಹೆಚ್ಚಬೇಕೆಂದೂ ಅಧಿಕಸಂಖ್ಯೆಯಲ್ಲಿ ಉನ್ನತಮಟ್ಟದ ತಾಂತ್ರಿಕ ಜನಬಲ ಔದ್ಯೋಗಿಕ ಕ್ಷೇತ್ರಕ್ಕೆ ಅಗತ್ಯವೆಂದೂ ಪ್ರಚಾರ ನಡೆಯುತ್ತಿದೆ. ಇದರಿಂದ ಕೆಲವೆಡೆ ಪ್ರಾಥಮಿಕ ಶಿಕ್ಷಣದ 9 ವರ್ಷಗಳಿಗಿಂತ ಹೆಚ್ಚಿನ ಕಾಲಾವಧಿಯ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬರುತ್ತಿವೆ. 6 ಅಥವಾ 7ನೆಯ ತರಗತಿಯ ನಂತರ ನಡೆಸುವ ಒಂದು ಪ್ರವೇಶಪರೀಕ್ಷೆಯ ಮೂಲಕ ಪ್ರೌಢಶಾಲೆಗೆ ಸೇರಿಸಿಕೊಳ್ಳುವುದುಂಟು. ಆದರೆ ಅನೇಕರಲ್ಲಿ ಪ್ರತಿಭೆ ಅಂದಿಗೆ ವಿಕಸಿಸಿರುವುದಿಲ್ಲ. ಆದ್ದರಿಂದ ಪ್ರತಿಭಾವಂತರನೇಕರು ಆ ಶಿಕ್ಷಣದ ಸೌಲಭ್ಯವಿಲ್ಲದೆ ಹೋಗಬಹುದೆಂಬ ಶಂಕೆಯಿಂದ ಆ ಪ್ರವೇಶಪರೀಕ್ಷೆಯನ್ನು ಮನ್ನಾಮಾಡಿ ಪ್ರಾಥಮಿಕ ಶಾಲೆಯಲ್ಲಿ ಅವರು ಸಾಧಿಸಿರುವ ಕಲಿವನ್ನು ಆಧಾರಮಾಡಿಕೊಂಡು ಪ್ರೌಢಶಾಲೆಗೆ ಪ್ರವೇಶ ನೀಡಬೇಕೆಂಬ ಭಾವನೆ ಬಲಿಯುತ್ತಿದೆ. ಆದರೂ ಆ ವಯೋಮಾನದ ಸೇ. 70ರಷ್ಟು ಮಕ್ಕಳು ಪ್ರಾಥಮಿಕ ಶಾಲೆಯ ಎರಡನೆಯ ವಿಭಾಗದಲ್ಲಿ ಓದುವರು. ಆದ್ದರಿಂದ ಆ ಶಾಲೆಯನ್ನು ಈಗ ಮುಖ್ಯ (ಮೇನ್) ಪಾಠಶಾಲೆಯೆಂದು ಹೆಸರಿಸಲಾಗಿದೆ. ಅಲ್ಲಿ 15ನೆಯ ವಯಸ್ಸಿನವರೆಗೆ ಸಾಮಾನ್ಯ ಶಿಕ್ಷಣ ಪಡೆದರೂ ಔದ್ಯೋಗಿಕ ಆವಶ್ಯಕತೆಯ ಅಲ್ಲಿನ ಜನರು ತಮ್ಮ ಮಕ್ಕಳಿಗೆ ಅಷ್ಟು ಸಾಮಾನ್ಯ ಶಿಕ್ಷಣ ಸಾಲದೆಂದು ಶಿಕ್ಷಣದಲ್ಲಿ ಹಲವಾರು ರೀತಿಯ ಅನುಸರಣೆಯನ್ನು ಮಾಡಿಕೊಂಡಿರುವರು. ಉದ್ಯೋಗ ಪ್ರಪಂಚಕ್ಕೆ ಅಗತ್ಯವೆನಿಸುವ ನೂತನ ವಿಷಯಗಳು, ಹಾಗೂ ವಿಜ್ಞಾನ ವಿಷಯಗಳು ಆ ಶಾಲೆಯ ಪಠ್ಯವಸ್ತುವಿನಲ್ಲಿ ಸೇರಿರುತ್ತವೆ. ಅಲ್ಲಿನ ಅಧ್ಯಾಪಕರು ಎಲ್ಲ ವಿಷಯಗಳನ್ನೂ ಬೋಧಿಸುವುದರ ಬದಲು ತಾವು ವಿಶಿಷ್ಟ ಶಿಕ್ಷಣ ಪಡೆದಿರುವ ವಿಷಯವನ್ನು ಮಾತ್ರ ಬೋಧಿಸುವ ಸಂಪ್ರದಾಯ ಆಚರಣೆಗೆ ಬರುತ್ತಿದೆ. ಜೊತೆಗೆ 5 ಅಥವಾ 6ನೆಯ ತರಗತಿಯಲ್ಲಿ ಒಂದು ಆಧುನಿಕ ವ್ಯಾವಹಾರಿಕ ಅನ್ಯಭಾಷೆಯನ್ನು (ಇಂಗ್ಲಿಷ್) ಬೋಧಿಸುವುದೂ ಮೊದಲಾಗಿದೆ. ಜೊತೆಗೆ ಶಾಲೆಯನ್ನು ಬಿಟ್ಟೊಡನೆ ದುಡಿಮೆಯ ಪ್ರಪಂಚಕ್ಕೆ ಹೊಂದಿಕೊಳ್ಳಲು ನೆರವಾಗುವಂತೆ, ಕೊನೆಯ ತರಗತಿಯಲ್ಲಿ ಅಥವಾ ಅನಂತರ ಅವರಿಗೆ ಯಾವ ರೀತಿಯ ಶಿಕ್ಷಣ ವ್ಯವಸ್ಥೆ ಮಾಡಬೇಕೆಂಬ ಸಮಸ್ಯೆ ಈಗ ಅಲ್ಲಿ ತೀವ್ರವಾಗಿ ಎದ್ದಿದೆ. ಹತ್ತನೆಯ ತರಗತಿಯ ಕೊನೆಯಲ್ಲಿ 4 ವಾರಗಳ ಕಾಲ ಕಾರ್ಖಾನೆ ಕಾರ್ಯಾಲಯಾದಿಗಳಲ್ಲಿ ವಾಸ್ತವಿಕ ರೀತಿಯ ತರಬೇತನ್ನು ಕೆಲವೆಡೆ ಸೇರಿಸಿರುವರು. ಅದರಿಂದ ದುಡಿಮೆಯ ಕ್ಷೇತ್ರದ ವಾಸ್ತವಿಕ ಪರಿಚಯವಾಗಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಅಂಕುರಿಸಿ ಆ ಬಗ್ಗೆ ಬೋಧಿಸುವ ಪಾಠಗಳಲ್ಲಿ ಹೆಚ್ಚಿನ ಆಸಕ್ತಿ ಮೂಡುವುದೆಂದೂ ಕಾಲನಿಷ್ಠೆ, ವಿಶ್ವಾಸಾರ್ಹತೆ, ಅನ್ವಯಶೀಲತೆ ಮುಂತಾದ ಗುಣಗಳು ವರ್ಧಿಸುವುವೆಂದೂ ನಂಬಲಾಗಿದೆ.

ಕೆಲವು ರಾಜ್ಯಗಳು ಹಿರಿಯ ಪ್ರಾಥಮಿಕ ಶಾಲೆಗೆ ಹನ್ನೊಂದನೆಯ ತರಗತಿಯೊಂದನ್ನು ಸೇರಿಸಿ ಅದನ್ನು ಇಂಟರ್‌ಮೀಡಿಯೆಟ್ ತರಗತಿಯೆಂದು ಕರೆದಿರುವರು. ಇನ್ನು ಕೆಲವು ರಾಜ್ಯಗಳು ಪ್ರತ್ಯೇಕ ಇಂಟರ್‌ಮೀಡಿಯೆಟ್ ಶಾಲೆಗಳನ್ನೇ ಆರಂಭಿಸಿರುವರು. ಇವು ಅಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಶಾಲೆಗಳೇ ಆದರೂ ವಿಜ್ಞಾನ ಮತ್ತು ಆಧುನಿಕ ಭಾಷೆಗಳ ಬೋಧನೆಗೆ ಈಗ ಹೆಚ್ಚು ಪ್ರಾಧಾನ್ಯವಿತ್ತಿರುವುವು. ಅಲ್ಲಿನ ಶಿಕ್ಷಣ ಮುಗಿಸಿದವರು ಸರ್ಕಾರದ ಕಾರ್ಯನಿರ್ವಹಣಾಂಗದ ದರ್ಜೆಯ ಅಥವಾ ಸಾಮಾಜಿಕ ಸೇವಾಕಾರ್ಯದ ನೌಕರಿಗೆ ಸೇರಬಹುದು. ಮುಂದುವರಿದ ತಾಂತ್ರಿಕ ಶಾಲೆಗೂ ಸೇರಬಹುದು. ಜೊತೆಗೆ ಪ್ರೌಢಶಾಲೆಗೂ ಸೇರಿ ಪ್ರೌಢಿಮೆಯ ಪರೀಕ್ಷೆಗೆ ಕೂಡಲು ಅವಕಾಶವುಂಟು. ನೂತನ ರೀತಿಯ ಯಂತ್ರವಿಜ್ಞಾನವನ್ನು ಆಧರಿಸಿ ಹೊಸಹೊಸ ಉದ್ಯೋಗಗಳು ಆರಂಭವಾಗಲಿರುವ ಅಲ್ಲಿನ ಔದ್ಯೋಗಿಕ ಕ್ಷೇತ್ರಕ್ಕೆ ಈ ಇಂಟರ್‌ಮೀಡಿಯೆಟ್ ಶಾಲೆಗಳಲ್ಲಿ ಶಿಕ್ಷಣ ಪಡೆದವರಿಗೆ ಒಳ್ಳೆಯ ಉದ್ಯೋಗಗಳು ದೊರಕುತ್ತಿವೆ. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೂ ಅಲ್ಲಿಂದ ಸಾಮಾನ್ಯ ವಿಶ್ವವಿದ್ಯಾಲಯ ಅಥವಾ ತಾಂತ್ರಿಕ ವಿಶ್ವವಿದ್ಯಾಲಯಗಳಿಗೂ ಹೋಗುವಂತಿದ್ದು ಏಕಮಾರ್ಗ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಗೂ ನೂತನ ಔದ್ಯೋಗಿಕ ಕ್ಷೇತ್ರಗಳ ಆವಶ್ಯಕತೆಗಳಿಗೂ ಹೊಂದಿಕೊಳ್ಳುವಂತೆ ನೂತನ ರೀತಿಯ ಮಧ್ಯವರ್ತಿ ಶಿಕ್ಷಣಸಂಸ್ಥೆಗಳು ಅಗತ್ಯವಾಗಿ ಈಗ ಹುಟ್ಟಿಕೊಳ್ಳುತ್ತಿವೆ. ಎಲ್ಲ ರಾಜ್ಯಗಳೂ ಈ ರೀತಿಯ ಇಂಟರ್‌ಮೀಡಿಯೆಟ್ ಶಾಲೆಗಳನ್ನು ಆರಂಭಿಸುತ್ತಿವೆ. ಅವು ಬೇರೆ ಬೇರೆ ತರಗತಿಯ ಪ್ರಾಥಮಿಕ ಹಂತದಿಂದ ಮುಂದುವರಿದರೂ ಅವೆಲ್ಲ ಹತ್ತನೆಯ ತರಗತಿಯನ್ನು ಒಳಗೊಂಡಿರುತ್ತವೆ. ಗಣಿತ, ವಿಜ್ಞಾನ ಮತ್ತು ಆಧುನಿಕ ವ್ಯಾವಹಾರಿಕ ಅನ್ಯಭಾಷೆಗಳನ್ನು ಬೋಧಿಸುತ್ತವೆ. ಕೆಲವು ರಾಜ್ಯಗಳಲ್ಲಿ ಕೊನೆಯ (ಹತ್ತನೆಯ) ತರಗತಿಯಲ್ಲಿ ಔದ್ಯೋಗಿಕ ರೀತಿಯಲ್ಲಿ ತರಬೇತಿಯನ್ನು ಸೇರಿಸಿರುವುದುಂಟು.

ಪ್ರೌಢ (ಸೆಕೆಂಡರಿ) ಶಿಕ್ಷಣ: ಯುದ್ಧಾನಂತರದ ದಶಕಗಳಲ್ಲಿ ಈ ಹಂತದ ಶಿಕ್ಷಣ ನೂತನ ಆವಶ್ಯಕತೆಗಳಿಗೆ ಹೊಂದಿಕೊಳ್ಳಲು ತೀವ್ರರೀತಿಯ ಪರಿವರ್ತನೆಗೊಳಗಾಗಿದೆ. ಅಲ್ಲಿಯ ತನಕ ಬೇರೆ ಬೇರೆ ರಾಜ್ಯಗಳಲ್ಲಿ ಪ್ರಚಾರದಲ್ಲಿದ್ದ ಓಬರ್‌ಷೂಲೆ, ಓಬರ್‌ರಿಯಲ್‌ಷೂಲೆ, ಜಿಮ್ನಾಷಿಯಂ ಮುಂತಾದ ವಿವಿಧ ರೀತಿಯ ಪ್ರೌಢಶಾಲೆಗಳಿಗೆ ಬದಲು 1955ರ ಹ್ಯಾಂಬರ್ಗ್ ಒಡಂಬಡಿಕೆಯ ಪ್ರಕಾರ ಪ್ರೌಢಿಮೆಯ ಪರೀಕ್ಷೆಗೆ ಸಿದ್ಧಪಡಿಸುವ ಎಲ್ಲ ಶಾಲೆಗಳಿಗೂ ಈ ಹೆಸರನ್ನು ಬಳಸುವುದು ಪ್ರಚಾರಕ್ಕೆ ಬಂದಿದೆ; ಅವನ್ನು ಎರಡು ಮುಖ್ಯವರ್ಗಗಳನ್ನಾಗಿ ವಿಂಗಡಿಸಬಹುದು: ಸಾಮಾನ್ಯ ಪ್ರೌಢಶಾಲೆಗಳು ಮತ್ತು ತೇರ್ಗಡೆಯ ಪ್ರೌಢಶಾಲೆಗಳು.

ಬಾನ್ ನಗರದ ಒಂದು ಶಾಲೆ

ಸಾಮಾನ್ಯ ಪ್ರೌಢಶಾಲೆ ಹೆಚ್ಚು ಪ್ರಚಾರದಲ್ಲಿದ್ದು ನಾಲ್ಕನೆಯ ತರಗತಿಯ ಅನಂತರ ವಿದ್ಯಾರ್ಥಿಗಳನ್ನು ಪ್ರವೇಶಪರೀಕ್ಷೆಯೊಂದರ ಮೂಲಕ ಆರಿಸಿ ಸೇರಿಸಿಕೊಳ್ಳುತ್ತದೆ. ಈ ಮಾದರಿಯ ಶಾಲೆಗಳು ಎಲ್ಲ ರಾಜ್ಯಗಳಲ್ಲೂ ಸಂಖ್ಯೆಯಲ್ಲಿ ಅಧಿಕವಾಗಿವೆ. ಇಲ್ಲಿನ 7 ಅಥವಾ 9 ವರ್ಷಗಳ ಶಿಕ್ಷಣದ ಅನಂತರ ವಿದ್ಯಾರ್ಥಿಗಳು ಪ್ರೌಢಿಮೆಯ ಪರೀಕ್ಷೆಗೆ ಕೂಡುವರು. ಏಳು ವರ್ಷದ್ದಾದರೆ, 5 ಅಥವಾ 7ನೆಯ ತರಗತಿಯಲ್ಲಿ ಒಂದು ಆಧುನಿಕ ವ್ಯಾವಹಾರಿಕ ಭಾಷೆಯನ್ನು ಅಧ್ಯಯನ ಮಾಡಿರಬೇಕು. ತೇರ್ಗಡೆಯ ಮಾದರಿಯ ಪ್ರೌಢಶಾಲೆಗಳು ಹತ್ತು ವರ್ಷದ ಇಂಟರ್‌ಮೀಡಿಯೆಟ್ ಶಾಲೆಯ ಶಿಕ್ಷಣದ ಅನಂತರ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅಲ್ಲಿಯ ಮೂರು ವರ್ಷದ ಶಿಕ್ಷಣದ ಅನಂತರ ಪ್ರೌಢಿಮೆಯ ಪರೀಕ್ಷೆಗೆ ಕಳಿಸುತ್ತವೆ.

ಭಿನ್ನ ಅಭಿರುಚಿ ಆಸಕ್ತಿಗಳಿಗೆ ತಕ್ಕ ಅವಕಾಶವೀಯಲು ಪಠ್ಯಕ್ರಮದಲ್ಲಿ ವೈವಿಧ್ಯವನ್ನೊದಗಿಸಿದೆ. ಇದನ್ನು ಆಧಾರವಾಗಿಟ್ಟುಕೊಂಡು ಪ್ರೌಢಶಾಲೆಗಳನ್ನು ಮೂರು ಪ್ರಮುಖ ವಿಧದವನ್ನಾಗಿ ವಿಂಗಡಿಸಬಹುದು :

1 ಲಾಕ್ಷಣಿಕ ಭಾಷೆಗಳ ಪ್ರೌಢಶಾಲೆ : ಪ್ರಾಥಮಿಕ 5ನೆಯ ತರಗತಿಯ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು 9 ವರ್ಷಗಳ ಶಿಕ್ಷಣವೀಯುವ ಈ ಶಾಲೆಯಲ್ಲಿ 5ನೆಯ ತರಗತಿಯಲ್ಲಿ ಲ್ಯಾಟಿನ್ ಭಾಷೆಯನ್ನೂ ಏಳನೆಯ ತರಗತಿಯಿಂದ ಒಂದು ಆಧುನಿಕ ಭಾಷೆಯನ್ನೂ 9ನೆಯ ತರಗತಿಯಿಂದ ಗ್ರೀಕ್ ಭಾಷೆಯನ್ನೂ ಬೋಧಿಸುವ ವ್ಯವಸ್ಥೆಯಿದೆ.

2 ಆಧುನಿಕ ಭಾಷೆಗಳ ಪ್ರೌಢಶಾಲೆ : ಇದು 7ನೆಯ ತರಗತಿಯಲ್ಲಿ ಲ್ಯಾಟಿನ್ ಭಾಷೆಯನ್ನು ದ್ವಿತೀಯ ಅನ್ಯಭಾಷೆಯನ್ನಾಗಿ ಬೋಧಿಸುತ್ತದೆ.

3 ಗಣಿತ ಮತ್ತು ಭೌತವಿಜ್ಞಾನಗಳ ಪ್ರೌಢಶಾಲೆ : ಇದು 7ನೆಯ ತರಗತಿಯಲ್ಲಿ ಫ್ರೆಂಚ್ ಭಾಷೆಯನ್ನು ದ್ವಿತೀಯ ಭಾಷೆಯನ್ನಾಗಿ ಬೋಧಿಸುತ್ತದೆ.

ಮೂರು ವಿಧದ ಈ ಪ್ರೌಢಶಾಲೆಗಳ ತರಗತಿಯಲ್ಲಿ ಸಮಾನತೆಯನ್ನು ಅಂಗೀಕರಿಸಿದೆ. ಪ್ರೌಢಶಾಲೆಗಳಲ್ಲಿ ವಿಶೇಷ ಜ್ಞಾನದ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವುದರ ಮೂಲಕ ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ನಿರ್ದಿಷ್ಟ ವೃತ್ತಿಯನ್ನು ಅಧ್ಯಯನ ಮಾಡಲು ಅನುಕೂಲಿಸುವ ಬಗ್ಗೆ ಶಿಕ್ಷಣತಜ್ಞರಲ್ಲಿ ವಾದವಿವಾದಗಳು ನಡೆದು ಈಚೆಗೆ ಪ್ರೌಢಶಾಲೆಯಲ್ಲಿ ವಿಶಾಲತಳಹದಿಯ ಶಿಕ್ಷಣ ಇರಬೇಕೇ ಹೊರತು ಆ ತಳಹದಿಯನ್ನು ಸಂಕುಚಿಸಿ, ಯಾವುದೋ ವಿಷಯದಲ್ಲಿ ಆಳವಾದ ಅಭ್ಯಾಸ ಮಾಡುವುದು ಉಚಿತವಲ್ಲವೆಂಬ ವಾದಕ್ಕೆ ಪುರಸ್ಕಾರ ದೊರೆತಿದೆ. ಅದಕ್ಕಿಂತ ಮುಖ್ಯವಾಗಿ ವಿವಿಧ ರೀತಿಯ ಅಭಿರುಚಿಗಳಿಗೆ ಪ್ರೋತ್ಸಾಹವೀಯಲು ಪಠ್ಯವಸ್ತುವಿನಲ್ಲಿ ವೈವಿಧ್ಯವನ್ನು ಕಲ್ಪಿಸಬೇಕೆಂದು ಒತ್ತಿಹೇಳುತ್ತಿರುವರು.

ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಲ್ಲಿ ಕೇವಲ ಸೇ. 6ರಷ್ಟು ಮಾತ್ರ ಪ್ರೌಢಶಾಲೆಗೆ ಹೋಗುವರು. ತಕ್ಕಷ್ಟು ಪ್ರತಿಭೆಯಿಲ್ಲದವರು ಆ ಶಿಕ್ಷಣವನ್ನು ಪೂರ್ಣವಾಗಿ ಮುಗಿಸಲಾರದ ಹತ್ತನೆಯ ತರಗತಿಯ ಅನಂತರ ಶಾಲೆ ಬಿಡುವರು. ಪ್ರೌಢಶಾಲೆಗೆ ಬಂದ ವಿದ್ಯಾರ್ಥಿಗಳಲ್ಲಿ ಕೇವಲ ಸೇ. 40ರಷ್ಟು ಮಾತ್ರ ಪ್ರೌಢಿಮೆಯ ಪರೀಕ್ಷೆಗೆ ಕೂಡುವರು.

ಬೋಧನಕ್ರಮ : ಪ್ರೌಢಶಾಲೆಯ ಅಂತಿಮ ತರಗತಿಯಲ್ಲಿ ಬೋಧನವಿಧಾನ ವೈಶಿಷ್ಟ್ಯಪೂರ್ಣವಾಗಿದೆ. ಅಲ್ಲಿನ ವಿದ್ಯಾರ್ಥಿ ಮುಂದೆ ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಸರಾಗವಾಗಿ ಹೊಂದಿಕೊಳ್ಳಲು ನೆರವಾಗುವಂತೆ ಬೋಧನವಿಧಾನವನ್ನು ರೂಪಿಸಿದೆ. ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಪೀಠಿಕಾರೂಪವಾಗಿ ಸ್ವತಂತ್ರವಾಗಿ, ನಿಷ್ಪಕ್ಷವಾಗಿ ಜ್ಞಾನಾರ್ಜನೆ ಮಾಡುವ ಮತ್ತು ಮೌಲ್ಯಗಳನ್ನು ನಿರ್ಧರಿಸುವ ವ್ಯಾಸಂಗವಿಧಾನವನ್ನು ಅವರಿಗೆ ಪರಿಚಯ ಮಾಡಿಕೊಡಲಾಗುತ್ತದೆ. ಬೋಧಿಸುವ ವಿಷಯವನ್ನು ಆಳವಾಗಿ ಅಭ್ಯಾಸಮಾಡುವ, ಹಾಗೂ ಇತರ ಆಕರಗಳಿಂದ ಸ್ವಂತ ಜ್ಞಾನ ಪಡೆಯುವ, ಅಲ್ಲದೆ ವಿವೇಚನೆಯಿಂದ ಗುಣಗ್ರಹಣ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ಪಳಗಿಸಲಾಗುತ್ತದೆ. ಇದು ಜರ್ಮನ್ ಪ್ರೌಢಶಾಲೆಗಳ ಕೊನೆಯ ಹಂತದಲ್ಲಿ ಕಂಡುಬರುವ ವಿಶಿಷ್ಟ ಲಕ್ಷಣವೆನ್ನಬಹುದು.

ಶಾಲೆಯನ್ನು ಬಿಡತಕ್ಕವರ ಸಮಸ್ಯೆ : ಪ್ರೌಢಶಾಲೆಯ ವಯೋಮಾನದ ವಿದ್ಯಾರ್ಥಿಗಳಲ್ಲಿ ಸುಮಾರು ಸೇ. 60 ರಷ್ಟು ಪ್ರೌಢಿಮೆಯ ಪರೀಕ್ಷೆಯ ಹಂತವನ್ನು ಮುಟ್ಟದೆ ಮಧ್ಯೆ ಎಂದರೆ 10 ವರ್ಷಗಳ ಶಿಕ್ಷಣವನ್ನು ಮುಗಿಸಿ ಶಾಲೆಯನ್ನು ಬಿಡುವರು. ಅದರಲ್ಲಿ ಕಡ್ಡಾಯ ಶಿಕ್ಷಣದ ಅವಧಿಯನ್ನು ಪ್ರಾಥಮಿಕ ಶಾಲೆಯ 9 ಅಥವಾ 10ನೆಯ ತರಗತಿಯಲ್ಲಿ ಮುಗಿಸಿದವರಿಗೆ ಆ ಬಗ್ಗೆ ಅರ್ಹತಾಪತ್ರವನ್ನು ನೀಡುವರು. ಆದರೆ ಕೆಲವರು ಮಧ್ಯೆ ಯಾವುದಾದರೂ ತರಗತಿಯಲ್ಲಿ ನಿಲುಗಡೆಯಾಗಿ ಆ ವಯಸ್ಸನ್ನು ಮುಟ್ಟಿದೊಡನೆ ಆ ಅರ್ಹತಾಪತ್ರವನ್ನು ಪಡೆಯದೆ ಶಾಲೆಯನ್ನು ಬಿಡುವರು. ಅಂಥವರು ಸಾಮಾನ್ಯವಾಗಿ ಯಾವುದಾದರೂ ಕಾರ್ಖಾನೆ ಅಥವಾ ಕಾರ್ಯಾಲಯಗಳಲ್ಲಿ ಕೆಲಸಕ್ಕೆ ಸೇರಿಕೊಂಡು ಮುಂದೆ ಆ ಪರೀಕ್ಷೆಗೆ ಕುಳಿತು ಅರ್ಹತಾಪತ್ರ ಪಡೆಯಬಹುದು. ಅದರಿಂದ ಒಪ್ಪೊತ್ತಿನ ಔದ್ಯೋಗಿಕ ಶಾಲೆಗೆ ಸೇರಲು ಅರ್ಹತೆ ಬರುತ್ತದೆ ; ಅವರು ಪ್ರೌಢಶಾಲೆಗೂ ಸೇರಬಹುದು; ಅಥವಾ ಸಂಜೆಯ ತರಗತಿ, ಅಂಚೆಮುಖೇನ ಶಿಕ್ಷಣ, ಮುನ್ನಡೆಯ ಶಿಕ್ಷಣದ ಕಾಲೇಜು ಮುಂತಾದ ಸಂಸ್ಥೆಗಳಲ್ಲಿ ವ್ಯಾಸಂಗಮಾಡಿ ಪ್ರತಿಭಾವಂತ ವಿದ್ಯಾರ್ಥಿಗಳು ಪ್ರೌಢಿಮೆಯ ಪರೀಕ್ಷೆಗೆ ಕೊಡಬಹುದು.

ಉನ್ನತ ಶಿಕ್ಷಣ: ಜರ್ಮನಿಯ ಉನ್ನತ ಶಿಕ್ಷಣ ಸಂಸ್ಥೆಗಳು ಯುರೋಪಿನ ಮತ್ತು ಇತರ ದೇಶಗಳ ಶಿಕ್ಷಣ ಸಂಸ್ಥೆಗಳಿಗಿಂತ ಭಿನ್ನವಾಗಿವೆ. 1910ರಲ್ಲಿ ಹೂಂಬೋಲ್ಟ್ ನಿರ್ದೇಶಿಸಿ ದಂತೆ ಸಂಶೋಧನೆ ಮತ್ತು ಬೋಧನೆಗಳೆರಡನ್ನೂ ನಿರ್ವಹಿಸುವ ಕರ್ತವ್ಯವನ್ನು ಅವು ಹೊಂದಿವೆ. ಇತರ ತಾಂತ್ರಿಕ ಪಾಠಶಾಲೆಗಳಂತೆ ಯಾವ ನಿರ್ದಿಷ್ಟ ವೃತ್ತಿಗೂ ತರಪೇತು ನೀಡುವುದಿಲ್ಲ; ಯಾವ ವೃತ್ತಿಗಾದರೂ ಸೇರಲು ಅನುಕೂಲಿಸುವಂಥ ಸಾಮಾನ್ಯ ಶಿಕ್ಷಣವನ್ನು ಮಾತ್ರ ನೀಡುತ್ತವೆ. ಜರ್ಮನ್ ವಿಶ್ವವಿದ್ಯಾಲಯಗಳು ಸಂಶೋಧನೆ ಮತ್ತು ಬೋಧನೆಯ ಕರ್ತವ್ಯಗಳನ್ನು ನಿಷ್ಠೆಯಿಂದ ಇಂದಿಗೂ ನಿರ್ವಹಿಸಿಕೊಂಡು ಬರುತ್ತಿವೆ. ಅಲ್ಲಿ ಸಂಶೋಧನ ಕಾರ್ಯಗಳಿಗೇ ಮೀಸಲಾಗಿರುವ ಮ್ಯಾಕ್ಸ್ ಪ್ಲಾಂಕ್ ಸೊಸೈಟಿಗಳಿದ್ದರೂ ವಿಶ್ವವಿದ್ಯಾಲಯಗಳು ಬೋಧನೆಯಷ್ಟೇ ಪ್ರಾಮುಖ್ಯವನ್ನು ಸಂಶೋಧನೆಗೂ ನೀಡಿ ಅವೆರಡನ್ನೂ ಜೊತೆಯಲ್ಲೇ ನಿರ್ವಹಿಸುತ್ತವೆ.

ಸಾಮಾನ್ಯ (ಜನರಲ್) ವಿಶ್ವವಿದ್ಯಾಲಯಗಳು, ತಾಂತ್ರಿಕ ವಿಶ್ವವಿದ್ಯಾಲಯಗಳು, ದೇವತಾಶಾಸ್ತ್ರದ (ಥಿಯಲಾಜಿಕಲ್) ಕಾಲೇಜುಗಳು, ಶಿಕ್ಷಣಶಾಸ್ತ್ರದ ಕಾಲೇಜುಗಳು– ಇವು ಜರ್ಮನಿಯಲ್ಲಿ ಉನ್ನತ ಶಿಕ್ಷಣಕ್ಕೆ ಮೀಸಲಾಗಿರುವ ಸಂಸ್ಥೆಗಳು. ಅವೆಲ್ಲ ಪ್ರೌಢಿಮೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನೂ ಸೇರಿಸಿಕೊಳ್ಳುತ್ತವೆ. ಈ ಪರೀಕ್ಷೆ ಪ್ರೌಢಶಾಲೆಯ 15ನೆಯ ತರಗತಿಯ ಅನಂತರ ಬರವಣಿಗೆಯ ಮತ್ತು ಮೌಖಿಕ ಪರೀಕ್ಷೆಗಳೆರಡರ ಮೂಲಕವೂ ನಡೆಯುವುದು. ಪರೀಕ್ಷೆಯಲ್ಲಿ ಉತ್ತೀರ್ಣನಾದ ವಿದ್ಯಾರ್ಥಿ ಯಾವ ಉನ್ನತ ಶಿಕ್ಷಣ ಸಂಸ್ಥೆಗಾದರೂ ಸೇರಿ ತನ್ನ ಅಭಿರುಚಿಗನುಗುಣವಾದ ಶಿಕ್ಷಣ, ಸಂಶೋಧನೆಗಳನ್ನು ಮುಂದುವರಿಸಬಹುದು. ವಿಶ್ವವಿದ್ಯಾಲಯವನ್ನು ಪ್ರವೇಶಿಸುವವರಲ್ಲಿ 97.2ರಷ್ಟು ಈ ರೀತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದವರು. ಮಿಕ್ಕ 2.8ರಷ್ಟು ಮಂದಿ ಸಂಜೆಯ

ಗಟಿಂಗೆನ್ ವಿಶ್ವವಿದ್ಯಾಲಯದ ಒಂದು ತರಗತಿ

ಪ್ರೌಢಶಾಲೆ, ವಿಶ್ವವಿದ್ಯಾಲಯಗಳು ಏರ್ಪಡಿಸುವ ಪ್ರೌಢಿಮೆಯ ಪರೀಕ್ಷಾ ತರಗತಿ, ಮುಂತಾದವುಗಳಲ್ಲಿ ಸೇರಿಕೊಂಡು ಆ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿ ಬರತಕ್ಕವರು. ಪ್ರತಿಭಾವಂತರಲ್ಲಿ ಹಲವರು ಯಾವುದಾದರೂ ಒಂದು ಕ್ಷೇತ್ರದಲ್ಲಿ ಮಾತ್ರ ಪ್ರಾವೀಣ್ಯ ಪಡೆದಿದ್ದು ಆ ವಿಷಯದ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿ ವಿಶ್ವವಿದ್ಯಾಲಯದಲ್ಲಿ ಆ ವಿಷಯ ವಿಭಾಗದಲ್ಲಿ ಮಾತ್ರ ಅಧ್ಯಯನ ನಡೆಸಲು ಸೇರಬಹುದು. ಕೆಲವು ಶಿಕ್ಷಣಸಂಸ್ಥೆಗಳು ತುಂಬ ಪ್ರತಿಭಾವಂತರಿಗೆ ಪಂಡಿತ ಪದವಿ (ವಿದ್ವತ್ ಪದವಿ) ನೀಡಿ ಗೌರವಿಸುವರು. ಅಂಥವರೂ ವಿಶ್ವವಿದ್ಯಾಲಯದಲ್ಲಿ ಸೇರಿ ಅಧ್ಯಯನ ನಡೆಸಬಹುದು. ಜೊತೆಗೆ ಕೆಲವು ತಾಂತ್ರಿಕ ಶಾಲೆಗಳಲ್ಲಿ ಅಧ್ಯಯನ ನಡೆಸಿ ಪ್ರಮಾಣಪತ್ರವನ್ನು ಹೊಂದಿರತಕ್ಕವರು ವಿಶ್ವವಿದ್ಯಾಲಯಕ್ಕೆ, ಹಾಗೂ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸೇರುವ ಅವಕಾಶವುಂಟು.

ಪಶ್ಚಿಮ ಜರ್ಮನಿಯಲ್ಲಿರುವ ರೆಕ್ಟರ್ ಅಥವಾ ಅಧ್ಯಕ್ಷರನ್ನು ಆರಿಸುವ, ಡಾಕ್ಟರೇಟ್ ಪದವಿ ನೀಡುವ ಮತ್ತು ಸಾಮಾನ್ಯ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯಗಳಲ್ಲಿ ಬೋಧಿಸುವ ಅಧಿಕಾರನೀಡುವ ಸಂಸ್ಥೆ ವಿಶ್ವವಿದ್ಯಾಲಯ. ಅಂಥ ಸಂಸ್ಥೆಗಳಲ್ಲಿ 1 ಅಥವಾ 2 ವರ್ಷದ ಅವಧಿಗೆ ಪ್ರಾಧ್ಯಾಪಕರು ತಮ್ಮಲ್ಲೊಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸುವರು. ಅವರು ವಿಶ್ವವಿದ್ಯಾಲಯವನ್ನು ಅಧಿಕೃತವಾಗಿ ಆಯೋಗ ನಿಯೋಗಗಳಲ್ಲೂ ಸಭೆಸಮ್ಮೇಳನಗಳಲ್ಲೂ ಪ್ರತಿನಿಧಿಸುವರು. ಜರ್ಮನಿಯ ಎಲ್ಲ ವಿಶ್ವವಿದ್ಯಾಲಯಗಳ ಅಧ್ಯಕ್ಷರುಗಳೂ ಸೇರಿ 'ರೆಕ್ಟರ್ಸ್ ಕಾನ್ಫರೆನ್ಸ್' ಅನ್ನು ರಚಿಸಿಕೊಂಡಿರುವರು. ನಾರ್ತ್–ರೈನ್ ವೆಸ್ಟ್‌ಫೇಲಿಯದ ಶಿಕ್ಷಣಶಾಸ್ತ್ರದ ಕಾಲೇಜುಗಳಲ್ಲಿ ಕೆಲವನ್ನು ವಿಶ್ವವಿದ್ಯಾಲಯಗಳೆಂದು ಪರಿಗಣಿಸಿದ್ದರೂ ರೆಕ್ಟರ್ ಕಾನ್ಫರೆನ್ಸಿನಲ್ಲಿ ಅವು ಪ್ರಾತಿನಿಧ್ಯ ಪಡೆದಿಲ್ಲ.

ಪಠ್ಯಕ್ರಮ : ವಿಶ್ವವಿದ್ಯಾಲಯಗಳಲ್ಲೂ ತಾಂತ್ರಿಕ ವಿಶ್ವವಿದ್ಯಾಲಯಗಳಲ್ಲೂ ಆಯಾ ವಿಷಯದ ಪಠ್ಯಕ್ರಮ ಅಂತಿಮ ಪರೀಕ್ಷೆಯ ಗುರಿಯನ್ನು ಇಟ್ಟುಕೊಂಡು ರಚಿಸಿದ್ದಾಗಿದೆ. ಬೇರೆ ಬೇರೆ ವ್ಯಾಸಂಗಾವಧಿಗೆಂದು ಪಾಠವಿವರವನ್ನು ಗೊತ್ತುಮಾಡಿರುವುದಿಲ್ಲ. ಆದರೆ ಈಚೆಗೆ ಹೊಸ ವಿಶ್ವವಿದ್ಯಾಲಯಗಳಲ್ಲಿ ಅದನ್ನು ಪೂರ್ವಭಾವಿ, ಪ್ರಧಾನ ಮತ್ತು ಉನ್ನತ ಅಥವಾ ಪ್ರೌಢ ಎಂಬ ಮೂರು ಅಂತಸ್ತುಗಳಲ್ಲಿ ವ್ಯವಸ್ಥೆಗೊಳಿಸಲಾಗುತ್ತಿದೆ. ಮೊದಲ ಅಂತಸ್ತು ಪೀಠಿಕಾರೂಪದ್ದಾಗಿದ್ದು, ಆ ವಿಷಯಕ್ಕೆ ಸಂಬಂಧಿಸಿದ ಮೂಲಭೂತ ಜ್ಞಾನವನ್ನೂ ಅದನ್ನು ಅಧ್ಯಯನ ಮಾಡುವ ವಿಧಾನಗಳನ್ನೂ ಪರಿಚಯ ಮಾಡಿಕೊಡಲು ಮೀಸಲಾಗಿರುತ್ತದೆ. ಎರಡನೆಯ ವರ್ಷದ ಕೊನೆಯಲ್ಲಿ ಒಂದು ಪರೀಕ್ಷೆ ಇರುತ್ತದೆ. ಪ್ರಧಾನ ಅಂತಸ್ತಿನಲ್ಲಿ, ಮೊದಲ ಅಂತಸ್ತಿನಲ್ಲಿ ಅರ್ಜಿಸಿದ ಜ್ಞಾನದ ಬಗ್ಗೆ ಆಳವಾದ ಪರಿಜ್ಞಾನ ಪಡೆದುಕೊಂಡು ಸ್ವತಂತ್ರ ಅಧ್ಯಯನ ನಡೆಸುವುದಕ್ಕೆ ಮೀಸಲಾಗಿರುತ್ತದೆ; ಅನಂತರ ಅಂತಿಮ ಪರೀಕ್ಷೆಯಿದ್ದು ಅದರಲ್ಲಿ ಉತ್ತೀರ್ಣರಾದವರಿಗೆ ಡಿಪ್ಲೊಮ ಅಥವಾ ಪ್ರಥಮ ಪದವಿ ನೀಡಲಾಗುವುದು. ಮೂರನೆಯ ಉನ್ನತ ಅಂತಸ್ತು ಇನ್ನೂ ಆಳವಾಗಿ ವಿಷಯವನ್ನು ಅಧ್ಯಯನ ಮಾಡಿ ಡಾಕ್ಟರ್ ಪದವಿ ಗಳಿಸತಕ್ಕವರಿಗೆಂದು ರೂಪುಗೊಂಡಿರುತ್ತದೆ. ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಕೇವಲ 3, 4 ಅಥವಾ 5 ವಿದ್ವದ್ವಿಭಾಗಗಳು

(ಫ್ಯಾಕಲ್ಟಿ) ಮಾತ್ರ ಇರುತ್ತವೆ. ಒಂದೊಂದರಲ್ಲೂ ಸಂಬಂಧಿಸಿದ ವಿಷಯ ವಿಭಾಗಗಳೆಲ್ಲ ಸೇರಿರುತ್ತವೆ. ನೂತನ ವಿಶ್ವವಿದ್ಯಾಲಯಗಳಲ್ಲಿ ಎಲ್ಲ ವಿಷಯ ವಿಭಾಗಗಳೂ ಇರುವುದಿಲ್ಲ. ಕೇವಲ ಹಲವು ವಿಭಾಗಗಳು ಮಾತ್ರವಿದ್ದು ಆ ವಿಷಯಗಳಲ್ಲಿ ಉನ್ನತ ಶಿಕ್ಷಣ ದೊರಕಿಸುವಂತೆ ವ್ಯವಸ್ಥೆಗೊಂಡಿರುತ್ತವೆ. ತಾಂತ್ರಿಕ ವಿಶ್ವವಿದ್ಯಾಲಯಗಳಲ್ಲೂ ವಿಷಯ ವಿಭಾಗಗಳ ವ್ಯವಸ್ಥೆಯುಂಟು. ಉದಾಹರಣೆಗೆ. ಕಟ್ಟಡರಚನಾಶಿಲ್ಪದ ವಿಭಾಗ, ಯಂತ್ರಶಿಲ್ಪ ವಿಭಾಗ, ಗಣಿಕೆಲಸ ಮತ್ತು ಲೋಹವಿದ್ಯೆಗಳ ವಿಭಾಗ, ವಿದ್ಯುತ್‌ಶಿಲ್ಪ ವಿಭಾಗ ಇತ್ಯಾದಿ.

ಇಲ್ಲಿ 1939ರಲ್ಲಿ ಒಟ್ಟು 23 ವಿಶ್ವವಿದ್ಯಾಲಯಗಳಿದ್ದುವು. ಅವುಗಳಲ್ಲಿ ಕೆಲವು 15–16ನೆಯ ಶತಮಾನದಷ್ಟು ಹಿಂದೆ ಆರಂಭವಾದವು. ಬರ್ಲಿನ್ನಿನ ಫ್ರೀಡ್ರಿಕ್ ವಿಲ್‌ಹೆಲ್ಮ್ ವಿಶ್ವವಿದ್ಯಾಲಯ (1810) ಜರ್ಮನಿಯ ಮೊಟ್ಟಮೊದಲ ಆಧುನಿಕ ವಿಶ್ವವಿದ್ಯಾಲಯ. 1920ರ ಸುಮಾರಿನಲ್ಲೇ ಅಲ್ಲಿನ ವಿಶ್ವವಿದ್ಯಾಲಯಗಳ ಸುಧಾರಣೆಯ ಬಗ್ಗೆ ವಾದವಿವಾದಗಳು ಆರಂಭವಾಗಿದ್ದುವು. 20ನೆಯ ಶತಮಾನದ ಸಮಸ್ಯೆಗಳ ಕಡೆ ಅವು ತಕ್ಕಷ್ಟು ಗಮನ ಕೊಡುತ್ತಿಲ್ಲವೆಂಬ ಟೀಕೆ ಎಲ್ಲೆಲ್ಲೂ ಕೇಳಿಬರುತ್ತಿತ್ತು. ಆದರೆ ನಾಟ್ಸಿ ಜರ್ಮನಿಯಲ್ಲಿ ಅದೆಲ್ಲ

ಬಾನ್ ವಿಶ್ವವಿದ್ಯಾಲಯ

ತಣ್ಣಗಾಯಿತು. ಎರಡನೆಯ ಮಹಾಯುದ್ಧಾನಂತರ ಪಾಶ್ಚಾತ್ಯ ಹಾಗೂ ಅಮೆರಿಕದ ರಾಜಕೀಯ ಪ್ರಭಾವದ ಫಲವಾಗಿ ಬಗೆಬಗೆಯ ಪುನರ್ವ್ಯವಸ್ಥೆಯ ಸಲಹೆಗಳು ಬರಲಾರಂಭಿಸಿದುವು. ವಿಶ್ವವಿದ್ಯಾಲಯದಲ್ಲಿ ರಿಪಬ್ಲಿಕನ್ ಮನೋಭಾವವನ್ನು ತರಬೇಕೆಂದೂ ಡಿಪ್ಲೊಮ ಮಟ್ಟದ ಪದವಿಗೆ ಬೋಧಿಸುವ ಮತ್ತು ಉನ್ನತ ಸಂಶೋಧನೆಗೆ ವಿದ್ಯಾರ್ಥಿಗಳನ್ನು ನಡೆಸುವ ಎರಡು ವಿಭಾಗಗಳನ್ನಾಗಿ ಮಾಡಬೇಕೆಂದೂ ಅದಕ್ಕಾಗಿ ವೃತ್ತಿನಿರತರಾಗಲು ಹೋಗತಕ್ಕವರಿಗೆ ಅಗತ್ಯ ಜ್ಞಾನವನ್ನು ದೊರಕಿಸುವ ಸೈದ್ಧಾಂತಿಕ ವಿಶ್ವವಿದ್ಯಾಲಯಗಳನ್ನು ಆರಂಭಿಸಬೇಕೆಂದೂ ವಾದಿಸಲಾಗುತ್ತಿದೆ. ಪರಿವರ್ತನೆಯಾಗಿರುವ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ವಾಸ್ತವ ಸಮಸ್ಯೆಗಳ ಕಡೆ ಗಮನಕೊಡಬೇಕೆಂದೂ ವಾದಿಸಲಾಗುತ್ತಿದೆ. ಜೊತೆಗೆ ವಿಶ್ವವಿದ್ಯಾಲಯದ ವಿವಿಧ ವಿಷಯ ವಿಭಾಗಗಳಲ್ಲಿ ಬೋಧನೆ ಮತ್ತು ಸಂಶೋಧನೆಯ ಅಂತಸ್ತುಗಳೆರಡರಲ್ಲೂ ಸಹಕಾರ ಏರ್ಪಟ್ಟು ಅಂತರ್ವಿಷಯ ವಿಭಾಗಗಳ ಅಧ್ಯಯನಕ್ಕೆ ಅವಕಾಶ ಕಲ್ಪನೆಯಾಗಬೇಕೆಂಬ ಸಲಹೆಯೂ ಬರುತ್ತಿದೆ. ಇವೆಲ್ಲ ಕ್ರಮಕ್ರಮವಾಗಿ ಕಾರ್ಯರೂಪಕ್ಕೆ ಬರಬೇಕಾಗಿದೆ. 1966ರಲ್ಲಿ ಆರಂಭವಾದ ಬೋಕಮ್ ವಿಶ್ವವಿದ್ಯಾಲಯದಲ್ಲಿ ಮೇಲಿನ ಕೆಲವು ಸಲಹೆಗಳನ್ನು ಆಚರಣೆಗೆ ತಂದಿದೆ. ಅಲ್ಲಿ 18 ವಿಷಯ ವಿಭಾಗಗಳಿದ್ದು ಒಂದೊಂದೂ ಪ್ರತ್ಯೇಕವಾಗಿದ್ದರೂ ಅವೆಲ್ಲ ಸೇರಿ ವಿಶ್ವವಿದ್ಯಾಲಯದ ಒಕ್ಕೂಟವನ್ನು ರಚಿಸಿವೆ. ಆದರೆ ಅಗತ್ಯವೆನಿಸುವಂತೆ ಸಹಕರಿಸುತ್ತವೆ. ಕೆಲವು ನೂತನ ವಿಷಯ ವಿಭಾಗಗಳು (ಉದಾ: ಸಮಾಜಶಾಸ್ತ್ರ, ಪತ್ರಿಕೋದ್ಯಮಶಾಸ್ತ್ರ, ಸಂಪರ್ಕಶಾಸ್ತ್ರ ಮುಂತಾದವು) ಪ್ರತ್ಯೇಕ ವಿದ್ವತ್ಪೀಠಗಳನ್ನು ಪಡೆದುಕೊಂಡಿವೆ. ವಿಜ್ಞಾನ ಮತ್ತು ಮಾನವಿಕ ವಿಭಾಗಗಳಲ್ಲಿ ಅಂತರ್ವಿಷಯ ವಿಭಾಗಗಳು (ಇಂಟರ್–ಡಿಸಿಪ್ಲಿನರಿ ಫ್ಯಾಕಲ್ಟೀಸ್) ಏರ್ಪಟ್ಟಿವೆ. ಇಷ್ಟಾದರೂ ಜರ್ಮನಿಯ ಶಿಕ್ಷಣಕ್ಷೇತ್ರದಲ್ಲಿ ಪ್ರೂಂಟನ ವಿಶ್ವವಿದ್ಯಾಲಯ ಸಂಶೋಧನೆ ಬೋಧನೆಗಳೆರಡನ್ನೂ ನಡೆಸುವ ಕರ್ತವ್ಯ ಹೊಂದಿದೆ' ಎಂಬ ತತ್ತ್ವಕ್ಕೆ ಇಂದಿಗೂ ನಿಷ್ಠೆ ಕಂಡುಬರುತ್ತದೆ.

ಅಧ್ಯಾಪಕರ ಮತ್ತು ಪಾದ್ರಿಗಳ ಶಿಕ್ಷಣ : ಸಾಮಾನ್ಯ ಮತ್ತು ತಾಂತ್ರಿಕ ವಿಶ್ವವಿದ್ಯಾಲಯಗಳಂತೆ ಶಿಕ್ಷಣಶಾಸ್ತ್ರದ ಮತ್ತು ದೇವತಾಶಾಸ್ತ್ರದ ಕಾಲೇಜುಗಳೂ ಉನ್ನತ ಶಿಕ್ಷಣ ನೀಡುವ ಸಂಸ್ಥೆಗಳೇ. ಪಶ್ಚಿಮ ಜರ್ಮನಿಯ ಬೇರೆ ಬೇರೆ ರಾಜ್ಯಗಳಲ್ಲಿ ಒಟ್ಟು ಧರ್ಮಶಾಸ್ತ್ರದ 17 ಕಾಲೇಜುಗಳಿವೆ. ಅವು ಕ್ರೈಸ್ತ ಪಾದ್ರಿಗಳಿಗೂ ಚರ್ಚಿನ ಇತರ ಕಾರ್ಯನಿರ್ವಾಹಕರಿಗೂ ಶಿಕ್ಷಣ ನೀಡುತ್ತವೆ. ಪ್ರೌಢಿಮೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಅಲ್ಲಿಗೆ ಪ್ರವೇಶಾವಕಾಶ. ಈ ಕಾಲೇಜುಗಳಲ್ಲಿ ವಿದ್ಯಾರ್ಥಿಸಂಖ್ಯೆ ಕಡಿಮೆಯಿರುತ್ತದೆ. ಅಧ್ಯಾಪಕರ ಶಿಕ್ಷಣಕ್ಕಾಗಿ ವ್ಯವಸ್ಥೆಗೊಂಡಿರುವ ಕಾಲೇಜುಗಳು ಶಿಕ್ಷಣನೀತಿಗೂ ವಿಶ್ವವಿದ್ಯಾಲಯ–ಪೂರ್ವದ ಶಿಕ್ಷಣಸಂಸ್ಥೆಗಳ ಅಧ್ಯಾಪಕರ ಶಿಕ್ಷಣಕ್ಕೂ ಮೀಸಲಾಗಿರುವುದರಿಂದ ಅವನ್ನಿಲ್ಲಿ ವಿವರವಾಗಿ ಪರಿಶೀಲಿಸಬಹುದು.

ಶಿಕ್ಷಣಶಾಸ್ತ್ರದ ಕಾಲೇಜುಗಳೂ ಉಪಾಧ್ಯಾಯ ಸಂಬಂಧಿ ಸಂಸ್ಥೆಗಳೂ ಪ್ರಾಥಮಿಕ ಶಾಲೆಯ ಅಧ್ಯಾಪಕರ ಶಿಕ್ಷಣಕ್ಕೆ ಮೀಸಲಾಗಿವೆ. ಪ್ರೌಢಿಮೆಯ ಪರೀಕ್ಷೆಯಾದವರು ಅಲ್ಲಿಗೆ ಪ್ರವೇಶಾವಕಾಶ ಪಡೆಯುವರು. ಕಳೆದ ಶತಮಾನದಲ್ಲಿ ಈ ಕಾರ್ಯಕ್ಕಾಗಿ ಸೆಮಿನರಿಗಳೆಂಬ



ರಾಸ್ಟಾಕ್ ವಿಶ್ವವಿದ್ಯಾಲಯ

ಸಂಸ್ಥೆಗಳಿದ್ದುವು. ಅಲ್ಲಿ ಅಧ್ಯಾಪಕರಿಗೆ ಪಾಠಮಾಡುವ ಕೆಲಸವನ್ನೂ ಸಂಗೀತವನ್ನೂ ಕಲಿಸುತ್ತಿದ್ದರು. 1918ರ ಅನಂತರ, ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೆ ಪಾಠಮಾಡುವ ವಿಧಾನದಲ್ಲಿ ಮಾತ್ರ ತರಪೇತಿ ಸಾಲದೆಂದೂ ಅವರಿಗೆ ಶಿಕ್ಷಣಶಾಸ್ತ್ರವನ್ನು ಕುರಿತ ಜ್ಞಾನವೂ ಅಗತ್ಯವೆಂದೂ ಶಿಕ್ಷಣತಜ್ಞರು ಪರಿಗಣಿಸಿದರು. ಅದಕ್ಕಾಗಿ 1826ರಲ್ಲಿ 2 ವರ್ಷದ ಪ್ರಶಿಕ್ಷಣವೀಯುವ ಉಪಾಧ್ಯಾಯ ಅಕಾಡೆಮಿಗಳೆಂಬ ಸಂಸ್ಥೆಗಳು ಆರಂಭವಾದುವು. ಪ್ರಾಥಮಿಕ ಶಿಕ್ಷಣ 8–10 ವರ್ಷಗಳ ಕಾಲಾವಧಿಯವರೆಗಿದ್ದುದರಿಂದ ನೂತನ ವಿಷಯಗಳನ್ನು ತಕ್ಕಷ್ಟು ಆಳವಾಗಿ ಬೋಧಿಸಬೇಕಾಗಿತ್ತು. ಜೊತೆಗೆ ಕೊನೆಯ ಹಂತದಲ್ಲಿ ಔದ್ಯೋಗಿಕ ಶಿಕ್ಷಣವೂ ಸೇರಿಕೊಂಡಿತ್ತು. ಆದ್ದರಿಂದ ಅಲ್ಲಿ ಅಧ್ಯಾಪಕರ ಶಿಕ್ಷಣ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಪಡೆಯಬೇಕೆಂಬ ಭಾವನೆ ಬೆಳೆಯುತ್ತ ಬಂತು. ಹ್ಯಾಂಬರ್ಗ್‌ನಂಥ ಕೆಲವು ರಾಜ್ಯಗಳು ಅದನ್ನು ವಿಶ್ವವಿದ್ಯಾಲಯದ ಪರಿಮಿತಿಗೆ ಸೇರಿಸಿದುವು. ಮತ್ತೆ ಕೆಲವು ರಾಜ್ಯಗಳು ಅಕಾಡೆಮಿಗಳನ್ನೇ ಉಳಿಸಿಕೊಂಡುವು. 1945ರ ಅನಂತರ ಶಿಕ್ಷಣಶಾಸ್ತ್ರದ ಕಾಲೇಜುಗಳೆಂದು ಅವುಗಳ ಹೆಸರನ್ನು ಬದಲಾಯಿಸಲಾಯಿತು.

ಪ್ರಾಥಮಿಕ ಒಂದು ಮತ್ತು ಎರಡನೆಯ ಅಂತಸ್ತಿನ ಶಾಲೆಗಳ ಅಧ್ಯಾಪಕರ ಶಿಕ್ಷಣ ಸಂಸ್ಥೆಗಳು ಹ್ಯಾಂಬರ್ಗ್, ಹೆಸ್ ಮತ್ತು ಬವೇರಿಯ ರಾಜ್ಯಗಳಲ್ಲಿ ವಿಶ್ವವಿದ್ಯಾಲಯಗಳಿಗೆ ಸೇರಿದಂತಿವೆ; ಅಥವಾ ಅವುಗಳ ಅಂಗೀಕೃತ ಸಂಸ್ಥೆಗಳಾಗಿವೆ. ಇನ್ನುಳಿದ 8 ರಾಜ್ಯಗಳಲ್ಲಿ ಅವು ಪ್ರತ್ಯೇಕ ಸ್ವತಂತ್ರ ಸಂಸ್ಥೆಗಳಾಗಿವೆ. ಆದರೂ ಅವು ಅಲ್ಲಿನ ವಿಶ್ವವಿದ್ಯಾಲಯಗಳೊಡನೆ ನಿಕಟ ಸಂಪರ್ಕ ಹೊಂದಿವೆ. ನಾರ್ತ್–ರೈನ್ ವೆಸ್ಟ್‌ಫೇಲಿಯದ 15 ಕಾಲೇಜುಗಳು ತಾವೇ ಒಂದು ವಿಶ್ವವಿದ್ಯಾಲಯವಾಗಿ ಸಂಘಟಿಸಿಕೊಂಡಿವೆ. ಪ್ರೌಢಿಮೆಯ ಪರೀಕ್ಷೆಯ ಅನಂತರ ಅಲ್ಲಿಗೆ ಪ್ರವೇಶಿಸುವ ವಿದ್ಯಾರ್ಥಿಗಳು ನಾಲ್ಕು ವರ್ಷದ ಶಿಕ್ಷಣದ ಅನಂತರ ಶಿಕ್ಷಣಶಾಸ್ತ್ರದ ಡಿಪ್ಲೊಮ ಪಡೆಯುತ್ತಾರೆ. ಆಗ ಅವರಿಗೆ ಮೇಲಿನ ಶಾಲೆಗಳಲ್ಲಿ ಬೋಧಿಸುವ ಹಕ್ಕು ಬರುತ್ತದೆ. ಅಲ್ಲಿ ಶಿಕ್ಷಣಶಾಸ್ತ್ರ ಮತ್ತು ಅದಕ್ಕೆ ಸಂಬಂಧಿಸಿದ ತತ್ತ್ವಶಾಸ್ತ್ರ, ಮನಶ್ಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯಶಾಸ್ತ್ರ, ಬೋಧನಕ್ರಮ ಮುಂತಾದ ವಿಷಯಗಳನ್ನು ಬೋಧಿಸುವುದರ ಜೊತೆಗೆ ಸಂಗೀತ, ದೈಹಿಕಶಿಕ್ಷಣ, ಕಲೆ–ಇವುಗಳಲ್ಲೂ ತರಪೇತು ನೀಡಲಾಗುವುದು. ಜೊತೆಗೆ ಒಂದು ಐಚ್ಛಿಕ ವಿಷಯವನ್ನೂ ಬೋಧಿಸುವರು. ಅಭ್ಯಾಸಾರ್ಥ ಪಾಠಬೋಧನೆ ವಾರಕ್ಕೊಂದು ಪಾಠದಂತೆ ನಡೆಯುವುದಲ್ಲದೆ ವಾರಕ್ಕೆ ಎರಡು ಪಾಠಗಳಂತೆ ದೀರ್ಘಾವಧಿ ರಜಾಕಾಲದಲ್ಲಿ ಹಲವು ವಾರಗಳ ಪಾಠಮಾಡಬೇಕಾಗುತ್ತದೆ. ಕಲೆ, ಸಂಗೀತ ಮುಂತಾದವನ್ನು ಬೋಧಿಸುವ ಅಧ್ಯಾಪಕರ ಶಿಕ್ಷಣಕ್ಕಾಗಿ ಪ್ರತ್ಯೇಕ ಸಂಸ್ಥೆಗಳಿವೆ. ಅವು ಉನ್ನತ ಶಿಕ್ಷಣ ಸಂಸ್ಥೆಗಳಲ್ಲ. ಅಲ್ಲಿಗೆ ಸೇರತಕ್ಕವರು ಹತ್ತನೆಯ ತರಗತಿ ಮುಗಿಸಿದ್ದರೆ ಸಾಕು.

ಹತ್ತನೆಯ ತರಗತಿಯವರೆಗೆ ಮಾತ್ರ ಇರುವ ಪ್ರೌಢಶಾಲೆಗಳ ಅಧ್ಯಾಪಕರ ಶಿಕ್ಷಣ: ಹ್ಯಾಂಬರ್ಗ್, ಬ್ರೇಮೆನ್ ಮುಂತಾದ ಕೆಲವು ರಾಜ್ಯಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅಧ್ಯಾಪಕರ ಶಿಕ್ಷಣವನ್ನು ಜೊತೆಗೂಡಿಸಿದೆ. 2 ವರ್ಷಗಳ ಅನಂತರ ನಡೆಯುವ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಪ್ರಾಥಮಿಕ ಮತ್ತು ಕಿರಿಯ ಪ್ರೌಢಶಾಲೆಗಳಲ್ಲಿ ಬೋಧಿಸುವ ಹಕ್ಕು ಪಡೆಯುತ್ತಾರೆ. ಇನ್ನು ಕೆಲವು ರಾಜ್ಯಗಳ ಮೊದಲ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿರುವವರು ವಿಶೇಷ ಖಾಸಗಿ ಶಿಕ್ಷಣ ಪಡೆದು ಎರಡನೆಯ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿ ಕಿರಿಯ ಪ್ರೌಢಶಾಲೆಯ ಅಧ್ಯಾಪಕರಾಗುವ ಹಕ್ಕು ಪಡೆಯುವರು.

ಜಿಮ್ನಾಷಿಯಂ ಅಥವಾ 13ನೆಯ ತರಗತಿಯವರೆಗಿನ ಹಿರಿಯ ಪ್ರೌಢಶಾಲೆಯ ಅಧ್ಯಾಪಕರ ವೃತ್ತಿಶಿಕ್ಷಣ ನಿಜಕ್ಕೂ ವಿಶ್ವವಿದ್ಯಾಲಯ ಅಥವಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವ್ಯವಸ್ಥೆಗೊಂಡಿದೆ. ಇದರ ಕಾಲಾವಧಿ 4 ವರ್ಷವೆಂದು ಗೊತ್ತು ಮಾಡಿದ್ದರೂ ಅನೇಕ ವಿದ್ಯಾರ್ಥಿಗಳು ತೇರ್ಗಡೆಯಾಗಲು 5–6 ವರ್ಷಗಳಾದರೂ ಆಗುತ್ತದೆ. ಮೊದಲ ಎರಡು ವರ್ಷದ ಅನಂತರ ನಡೆಯುವ ಪ್ರಥಮ ಪರೀಕ್ಷೆಗೆ ತತ್ತ್ವಶಾಸ್ತ್ರ ಅಥವಾ ಮನಶ್ಶಾಸ್ತ್ರ ಮತ್ತು ಶಿಕ್ಷಣಶಾಸ್ತ್ರ–ಈ ಎರಡು ವಿಷಯಗಳಿರುತ್ತವೆ. ಕೆಲವು ರಾಜ್ಯಗಳಲ್ಲಿ ಮತ್ತೊಂದು ವಿಷಯವೂ ಸೇರಿರುತ್ತದೆ. ಅನಂತರ ಎರಡು ವರ್ಷಕಾಲ ಉಮೇದುವಾರಿ ಬೋಧನೆ ಯಿರುತ್ತದೆ. ಆಗ ಅಭ್ಯರ್ಥಿಗೆ ಸಂಬಳದ $\frac{1}{3}$ ಭಾಗ ಭತ್ಯೆ ದೊರೆಯುವುದು. ಎರಡು ವರ್ಷದ ಅನಂತರ ನಡೆಯುವ ಎರಡನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಹಿರಿಯ ಪ್ರೌಢಶಾಲೆಯಲ್ಲಿ ನೇಮಕವಾಗಬಹುದು.

ಹಿರಿಯ ತಾಂತ್ರಿಕ ಶಾಲೆಗಳ ಮತ್ತು ಎಂಜಿನಿಯರಿಂಗ್ ಶಾಲೆಯ ಅಧ್ಯಾಪಕರ ಶಿಕ್ಷಣ: ಯಂತ್ರವಿಜ್ಞಾನದ ಕಾಲೇಜುಗಳಲ್ಲಿ ಶಿಕ್ಷಣ ಪಡೆದ ಡಿಪ್ಲೊಮ ಪದವೀಧರರು ಅಥವಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೊಮ ಪಡೆದವರು 5 ವರ್ಷಕಾಲ ಒಂದು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಕೆಲಸಕ್ಕೆ ಸೇರಿ ಅನುಭವ ಪಡೆದ ಮೇಲೆ ಮೇಲಿನ ಸಂಸ್ಥೆಗಳಲ್ಲಿ ಅಧ್ಯಾಪಕರಾಗಲು ಹಕ್ಕು ಪಡೆಯುತ್ತಾರೆ.

ವಾಣಿಜ್ಯ ಶಾಲೆಯ ಅಧ್ಯಾಪಕರು ವಾಣಿಜ್ಯ ಕಾಲೇಜಿನಲ್ಲಿ ನಾಲ್ಕು ವರ್ಷದ ಶಿಕ್ಷಣ ಪಡೆಯುವರು. ಅಲ್ಲಿಗೆ ಸೇರಲು ಪ್ರೌಢಿಮೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದರ ಜೊತೆಗೆ ಉದ್ಯೋಗ ಅಥವಾ ಕಾರ್ಯಾಲಯದಲ್ಲಿ ತಕ್ಕಷ್ಟು ವಾಣಿಜ್ಯ ವ್ಯವಹಾರಗಳ ಅನುಭವ ಪಡೆದಿರಬೇಕು. ಕಾಲೇಜಿನ ಎರಡು ವರ್ಷದ ಅನಂತರ ನಡೆಯುವ ಪ್ರಥಮ ಪರೀಕ್ಷೆ ವಾಣಿಜ್ಯ ವಿಷಯಗಳನ್ನು ಕುರಿತದ್ದಾಗಿರುತ್ತದೆ. ಆಮೇಲೆ ಇನ್ನೆರೆಡು ವರ್ಷ ವಾಣಿಜ್ಯ ಶಾಲೆಯೊಂದರಲ್ಲಿ ನಡೆಸುವ ಉಮೇದುವಾರಿ ಬೋಧನೆಯ ಅನಂತರ ನಡೆಯುವ ಎರಡನೆಯ ಪರೀಕ್ಷೆ ಬೋಧನತತ್ತ್ವ ಮತ್ತು ಅನುಷ್ಠಾನಗಳನ್ನು ಕುರಿತದ್ದಾಗಿರುತ್ತದೆ. ಅದರಲ್ಲಿ ಉತ್ತೀರ್ಣರಾದವರು ಅಧ್ಯಾಪಕರಾಗಿ ನೇಮಕವಾಗುವರು.

ಔದ್ಯೋಗಿಕ ಶಾಲೆಯ ಅಧ್ಯಾಪಕರ ಶಿಕ್ಷಣ ಔದ್ಯೋಗಿಕ ಶಿಕ್ಷಣಶಾಸ್ತ್ರದ ಕಾಲೇಜಿನಲ್ಲೋ ತಾಂತ್ರಿಕ ವಿಶ್ವವಿದ್ಯಾಲಯದಲ್ಲೋ ವ್ಯವಸ್ಥೆಗೊಂಡಿರುತ್ತದೆ. ಸಾಮಾನ್ಯವಾಗಿ ಅದು ಮೂರು ವರ್ಷಗಳ ಅವಧಿಯದು. ಅಲ್ಲಿಗೆ ಸೇರತಕ್ಕವರು ತಾಂತ್ರಿಕ ಕ್ಷೇತ್ರದಲ್ಲಿ ನಿರ್ದಿಷ್ಟ ಕಾಲಾವಧಿಯ ಪ್ರಾಯೋಗಿಕ ಅನುಭವ ಪಡೆದಿರಬೇಕು. ಎರಡು ವರ್ಷಗಳ ಅಧ್ಯಯನದ ಅನಂತರ ಮೊದಲ ಪರೀಕ್ಷೆ ನಡೆದು ಆಮೇಲೆ ಒಂದು ಅಥವಾ ಎರಡು ವರ್ಷ ಉಮೇದುವಾರಿ ಬೋಧನೆಗೆ ಸೇರಬೇಕು. ಆ ಅವಧಿಯ ಕೊನೆಯಲ್ಲಿ ಎರಡನೆಯ ಪರೀಕ್ಷೆ ನಡೆದು ಅದರಲ್ಲಿ ಉತ್ತೀರ್ಣರಾದವರು ಔದ್ಯೋಗಿಕ ಶಾಲೆಯಲ್ಲಿ ನೇಮಕವಾಗಲು ಅರ್ಹತೆ ಪಡೆಯುತ್ತಾರೆ.

ಕೃಷಿ ಮತ್ತು ತೋಟಗಾರಿಕೆಯ ಔದ್ಯೋಗಿಕ ಶಾಲೆಯ ಅಧ್ಯಾಪಕರ ಶಿಕ್ಷಣವನ್ನು ರಾಜ್ಯದ ಕೃಷಿಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಿದೆ. ಅಲ್ಲಿಗೆ ಸೇರತಕ್ಕವರು ಪ್ರೌಢಿಮೆಯ ಪರೀಕ್ಷೆಯ ಜೊತೆಗೆ ವ್ಯವಸಾಯ ಕ್ಷೇತ್ರದಲ್ಲಿ ಪ್ರಾಯೋಗಿಕ ಅನುಭವವನ್ನೂ ಪಡೆದಿರಬೇಕು. ಅಲ್ಲಿ ಶಿಕ್ಷಣ ಮುಗಿಸಿದ ಮೇಲೆ ಎರಡು ವರ್ಷದ ಪರೀಕ್ಷಾರ್ಥ ಬೋಧನೆ ಯಶಸ್ವಿಯಾಗಿ ಮುಗಿದ ಅನಂತರ ನೇಮಕಕ್ಕೆ ಅರ್ಹತೆ ಬರುವುದು. ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷ ವ್ಯಾಸಂಗಮಾಡಿ ಡಿಪ್ಲೊಮ ಪಡೆದು ಅನಂತರ ಅಧ್ಯಾಪಕರ ಶಿಕ್ಷಣವನ್ನು ಪಡೆದು ಕೃಷಿಕಾಲೇಜುಗಳಲ್ಲಿ ಅಧ್ಯಾಪಕರಾಗಿ ನೇಮಕವಾಗುವರು.

ವೃತ್ತಿನಿರತ ಅಧ್ಯಾಪಕರ ಶಿಕ್ಷಣ : ವೃತ್ತಿಶಿಕ್ಷಣ ಪಡೆದು ವೃತ್ತಿನಿರತರಾಗಿರುವ ಅಧ್ಯಾಪಕರಿಗೆ ವೃತ್ತಿನಿರತ ಶಿಕ್ಷಣ ಕಡ್ಡಾಯವಲ್ಲವಾದರೂ ಅದಕ್ಕಾಗಿ ವ್ಯಾಪಕವಾದ ವ್ಯವಸ್ಥೆಯನ್ನೂ ಮಾಡಿದೆ. ರಾಜ್ಯಸರ್ಕಾರಗಳೂ ಅಧ್ಯಾಪಕರ ಸಂಸ್ಥೆಗಳೂ ಇತರ ಸಂಘಗಳೂ ಆ ಕಾರ್ಯದಲ್ಲಿ ಪಾತ್ರವಹಿಸುತ್ತವೆ. ಶಿಕ್ಷಣಕ್ಷೇತ್ರದಲ್ಲಿ ಮುಖ್ಯವಾಗಿ ಮನಃಶಾಸ್ತ್ರ, ಶಿಕ್ಷಣಶಾಸ್ತ್ರ, ಸಮಾಜಶಾಸ್ತ್ರ, ಬೋಧನಕ್ರಮ–ಇವುಗಳಲ್ಲಿ ಆಗಿರುವ ಪ್ರಗತಿಯನ್ನು ಬೋಧಿಸತಕ್ಕ ವಿಷಯಗಳಲ್ಲಾಗಿರುವ ಮುನ್ನಡೆಯನ್ನೂ ಪರಿಚಯಮಾಡಿಕೊಳ್ಳುವುದು ಇದರ ಉದ್ದೇಶ. ಕೆಲವು ರಾಜ್ಯಗಳಲ್ಲಿ ಅದಕ್ಕಾಗಿ ಪ್ರತ್ಯೇಕ ಕಾಲೇಜುಗಳೇ ಏರ್ಪಟ್ಟಿವೆ. ರಜಾಕಾಲದಲ್ಲಿ ಅವು ಸಭೆ, ಸಮ್ಮೇಳನ, ವಿಚಾರಗೋಷ್ಠಿ, ಉಪನ್ಯಾಸಮಾಲೆ ಮುಂತಾದವನ್ನು ಏರ್ಪಡಿಸುವುವು. ಇಡೀ ರಾಷ್ಟ್ರಕ್ಕೆಲ್ಲ ಇರುವ ಕೇಂದ್ರಸಂಸ್ಥೆಯೂ ದೀರ್ಘಾವಧಿಯ ತರಗತಿಗಳನ್ನು ನಡೆಸುವುದು. ಅದರಲ್ಲಿ ಭಾಗವಹಿಸಲು ಅಧ್ಯಾಪಕರಿಗೆ ಅವಕಾಶ ನೀಡಲಾಗುವುದು. ಈಚೆಗೆ ಅಂಚೆ ಮುಖೇನವೂ ಈ ಕಾರ್ಯವನ್ನು ಮಾಡಲು ಆಲೋಚಿಸಲಾಗುತ್ತಿದೆ.

ಔದ್ಯೋಗಿಕ ಮತ್ತು ತಾಂತ್ರಿಕ ಶಿಕ್ಷಣ: 14–15ನೆಯ ವಯಸ್ಸಿನ ಲಕ್ಷಾಂತರ ಯುವಕ ಯುವತಿಯರು ಕಾರ್ಖಾನೆ, ಕಾರ್ಯಾಲಯ, ಕೃಷಿಕ್ಷೇತ್ರ, ಪಾಠಶಾಲೆ ಮುಂತಾದೆಡೆ ಉದ್ಯೋಗಗಳಲ್ಲಿ ನಿರತರಾಗುವರು. ಆದರೆ ಅವರಿಗೆ 18ನೆಯ ವಯಸ್ಸಿನವರೆಗೆ ಭಾಗಶಃ ಕಾಲದ ಉದ್ಯೋಗ ಅಥವಾ ತಾಂತ್ರಿಕ ಶಿಕ್ಷಣ ಕಡ್ಡಾಯ ಮಾಡಿದೆ. ಈ ಕಡ್ಡಾಯ ಶಿಕ್ಷಣ ಜರ್ಮನಿಯ ಔದ್ಯೋಗಿಕ ಪ್ರಗತಿಗೂ ಆರ್ಥಿಕ ಮುನ್ನಡೆಗೂ ಮೂಲಕಾರಣವೆಂದು ಪರಿಗಣಿಸುವುದುಂಟು. ಉದ್ಯೋಗನಿರತವಾದ ಯುವಜನಕ್ಕೆ ಮೂರು ವರ್ಷಗಳ ತನಕ ನೀಡುವ ಒಪ್ಪೊತ್ತಿನ ಈ ಶಿಕ್ಷಣದಿಂದ ಅವರ ಸಾಮಾನ್ಯ ಶಿಕ್ಷಣ ಮುಂದುವರಿಯುವುದರ ಜೊತೆಗೆ ಅವರು ಮಾಡುತ್ತಿರುವ ಉದ್ಯೋಗಕ್ಕೆ ಸಂಬಂಧಿಸಿದ ಜ್ಞಾನವೂ ದೊರಕುತ್ತದೆ.

ಒಂದು ಭಾಷಾ ಪ್ರಯೋಗಶಾಲೆ

ಪ್ರಾಥಮಿಕ ಶಾಲೆಗೆ ಹತ್ತನೆಯ ತರಗತಿಯನ್ನೂ ಸೇರಿಸಿ ಆ ಕಾಲದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ಮಾರ್ಗದರ್ಶನ, ಕಾರ್ಖಾನೆ ಕಾರ್ಯಾಲಯಗಳಲ್ಲಿ ಪ್ರಾಯೋಗಿಕ ಶಿಕ್ಷಣ, ಆರ್ಥಿಕ ಮತ್ತು ಔದ್ಯೋಗಿಕ ಕ್ಷೇತ್ರಗಳ ಪರಿಚಯ, ಉದ್ಯೋಗಾವಕಾಶ–ಮುಂತಾದ ಅಂಶಗಳಲ್ಲಿ ಶಿಕ್ಷಣವಿತ್ತು ಮರುವರ್ಷದಿಂದ ಉದ್ಯೋಗಕ್ಕೆ ಸೇರಲು ಸಿದ್ಧತೆ ನೀಡಲಾಗುತ್ತದೆ. ಹಾಗೆ ಸೇರಿದವರಿಗೆ ಅವರವರ ಉದ್ಯೋಗಕ್ಕೆ ಸಂಬಂಧಿಸಿದ ಒಪ್ಪೊತ್ತಿನ ಔದ್ಯೋಗಿಕ ಶಾಲೆಗಳಲ್ಲಿ ಅವರು ಒಪ್ಪೊತ್ತಿನ ಶಿಕ್ಷಣಕ್ಕೆ ಸೇರುವುದು ಕಡ್ಡಾಯವಾಗುತ್ತದೆ. ಅಂಥ ಶಾಲೆಗಳು ದೇಶಾದ್ಯಂತ ವ್ಯಾಪಕವಾಗಿ ಏರ್ಪಟ್ಟಿವೆ. ಅಲ್ಲಿ ಕಟ್ಟಡಗಳ ಕೆಲಸಗಳು, ನೇಯ್ಗೆ, ಹೊಲಿಗೆ, ಚರ್ಮದ

ಶಿಕ್ಷಣಾರ್ಥಿಗಳ ಒಂದು ತರಗತಿ

ಕೆಲಸ, ಕಬ್ಬಿಣ ಮತ್ತು ಇತರ ಲೋಹಗಳ ಕೆಲಸ, ಆಹಾರ ವಸ್ತುಗಳ ವಿತರಣೆ ಮುಂತಾದ ವಿವಿಧ ಉದ್ಯೋಗಗಳ ಶಿಕ್ಷಣ ಒಂದೊಂದು ಶಾಲೆಯಲ್ಲೂ ವ್ಯವಸ್ಥೆಗೊಂಡಿರುತ್ತದೆ. ಆದರೂ ಆಯಾ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಉದ್ಯೋಗಗಳನ್ನು ಅವಲಂಬಿಸಿ ಅಲ್ಲಿನ ಶಾಲೆಯಲ್ಲಿ ವಿವಿಧ ಉದ್ಯೋಗಗಳ ಶಿಕ್ಷಣಕ್ಕೆ ಏರ್ಪಡಿಸಿರುವುದುಂಟು. ಆಯಾ ಉದ್ಯೋಗಗಳಲ್ಲಿ ಉಮೇದುವಾರಿ ಶಿಕ್ಷಣ ಪಡೆಯುತ್ತಿರುವವರನ್ನೂ ಒಪ್ಪೊತ್ತಿನ ಕಡ್ಡಾಯ ಶಿಕ್ಷಣದ ವಿದ್ಯಾರ್ಥಿಗಳನ್ನೂ ಒಟ್ಟಿಗೆ ಸೇರಿಸಿ ಇಲ್ಲಿ ಶಿಕ್ಷಣವೀಯುವುದೂ ಉಂಟು.

ಒಪ್ಪೊತ್ತಿನ ವಾಣಿಜ್ಯಶಾಲೆಗಳು ಅಂಗಡಿ, ಕಾರ್ಖಾನೆ, ಕಾರ್ಯಾಲಯಗಳಲ್ಲಿ ವಾಣಿಜ್ಯ ವ್ಯವಹಾರಗಳ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳಿಗೆ ಅನುಕೂಲಿಸುವಂಥ ಶಿಕ್ಷಣವನ್ನು ಒದಗಿಸುತ್ತವೆ. ಚಿಲ್ಲರೆ ವ್ಯಾಪಾರ, ಸಗಟುವ್ಯಾಪಾರ, ದ್ರವ್ಯವ್ಯವಹಾರ, ವಿಮೆ, ಉಪಾಹಾರ

ಭೋಜನಗೃಹಾದಿಗಳ ಉದ್ಯಮ, ಕಾರ್ಯಾಲಯದ ಸಿಬ್ಬಂದಿ ಕೆಲಸ, ಪ್ರವಾಸ ಸಂಸ್ಥೆ, ಸಾರಿಗೆ ವ್ಯವಸ್ಥೆ, ನ್ಯಾಯವಾದಿ ಕಾರ್ಯಾಲಯದ ಉಮೇದುವಾರಿಕೆ, ಲೇಖನ ಪ್ರಮಾಣ ಮುಂತಾದ ಉದ್ಯೋಗಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಏರ್ಪಟ್ಟಿರುತ್ತದೆ.

ಕೃಷಿ, ಗಣಿಕೆಲಸ, ಗೃಹವಿಜ್ಞಾನ ಮುಂತಾದ ಕ್ಷೇತ್ರಗಳ ಭಾಗಶಃ ಔದ್ಯೋಗಿಕ ಶಾಲೆಗಳೂ ಉಮೇದುವಾರಿಕೆಗೆ ಸೇರಿದ ಕಿರಿಯರ ಭಾಗಶಃ ಶಾಲೆಗಳೂ ಅಸ್ತಿತ್ವದಲ್ಲಿವೆ. ದೇಶಾದ್ಯಂತ ಏರ್ಪಟ್ಟಿರುವ ಅಂಥ 2500 ಭಾಗಶಃ ಔದ್ಯೋಗಿಕ ಶಾಲೆಗಳಲ್ಲಿ 20 ಲಕ್ಷಕ್ಕಿಂತ ಹೆಚ್ಚು ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವರು, ಅದಕ್ಕಾಗಿ ಒಟ್ಟು 23,755 ಮಂದಿ ಅಧ್ಯಾಪಕರು ನೇಮಕವಾಗಿದ್ದಾರೆ.

ಕೆಲವು ರಾಜ್ಯಗಳಲ್ಲಿ ಔದ್ಯೋಗಿಕ ಪ್ರೌಢಶಾಲೆಗಳು ಅಸ್ತಿತ್ವಕ್ಕೆ ಬಂದಿವೆ. ಅಲ್ಲಿ ಕಟ್ಟಡ ನಿರ್ಮಾಣ, ಕಾರ್ಖಾನೆಕೆಲಸ, ವಾಣಿಜ್ಯವಿದ್ಯೆ, ಕೃಷಿ, ಕಾರ್ಯಾಲಯದ ಕೆಲಸ ಮುಂತಾದ ಉದ್ಯೋಗಗಳಲ್ಲಿ ಶಿಕ್ಷಣ ಏರ್ಪಟ್ಟಿದೆ. 9 ವರ್ಷದ ಪ್ರಾಥಮಿಕ ಶಾಲೆಯನ್ನು ಮುಗಿಸಿಕೊಂಡು ಬರತಕ್ಕ ಪ್ರತಿಭಾವಂತ ವಿದ್ಯಾರ್ಥಿಗಳು ಅಲ್ಲಿ ಸೇರಿ ಸಾಮಾನ್ಯ ಶಿಕ್ಷಣದ ಜೊತೆಗೆ ವೃತ್ತಿಶಿಕ್ಷಣವನ್ನೂ ಪಡೆಯಬಹುದು. ಅಲ್ಲಿ ಎರಡು ವರ್ಷದ ಶಿಕ್ಷಣ ಪಡೆದು ಇಂಜಿನಿಯರಿಂಗ್ ಶಾಲೆಗೂ ತಾಂತ್ರಿಕ ಶಾಲೆಗೂ ಶಿಕ್ಷಣಕ್ಕೆ ಸೇರಬಹುದು. ಕೆಲವು ರಾಜ್ಯಗಳು ಸಂಜೆಯ ಔದ್ಯೋಗಿಕ ಪ್ರೌಢಶಾಲೆಗಳನ್ನು ನಡೆಸುತ್ತಿವೆ.

ಒಪ್ಪೊತ್ತಿನ ಔದ್ಯೋಗಿಕ ಶಿಕ್ಷಣಕ್ಕೆ ಸೇರಲು ಉಮೇದುವಾರಿ ಕೆಲಸದಲ್ಲಿರತಕ್ಕವರು ಕಾನೂನಿನ ಪ್ರಕಾರ ವಾರಕ್ಕೆ ಒಂದು ದಿನ ಸಂಬಳಸಹಿತ ರಜ ಪಡೆಯುವರು. ಈ ಕಾಲ ಸಾಲದೆಂದು ಈಚೆಗೆ, ವಾರಕ್ಕೆ ಎರಡು ದಿನವಾದರೂ ಉದ್ಯಮಪತಿಗಳು ರಜ ಕೊಡಬೇಕೆಂಬ ಒತ್ತಾಯ ಆರಂಭವಾಗಿದೆ. ಕೆಲವು ಉದ್ಯೋಗಗಳು ತಮ್ಮವೇ ಆದ ಒಪ್ಪೊತ್ತಿನ ಔದ್ಯೋಗಿಕ ಶಾಲೆಗಳನ್ನು ನಡೆಸುತ್ತಿವೆ.

ಹದಿನೆಂಟು ವರ್ಷ ವಯಸ್ಸಾದವರಿಗೆ ಭಾಗಶಃ ಔದ್ಯೋಗಿಕ ಶಿಕ್ಷಣ ಮುಗಿಯುತ್ತದೆ. ಹಾಗೆ ಶಿಕ್ಷಣ ಮುಗಿಸಿದವರು ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ಸಂಸ್ಥೆ ನಡೆಸುವ ಪರೀಕ್ಷೆಯೊಂದಕ್ಕೆ ಕೂಡಬಹುದು. ಅದರಲ್ಲಿ ಉತ್ತೀರ್ಣರಾದವರು ತಮ್ಮ ಆಯ್ಕೆಯ ಉದ್ಯೋಗದಲ್ಲಿ ಪಡೆದಿರುವ ಶಿಕ್ಷಣದ ಸ್ವರೂಪವನ್ನು ವಿವರವಾಗಿ ನಮೂದಿಸಿರುವ ಅರ್ಹತಾಪತ್ರವನ್ನು ಪಡೆಯುವರು.

ಔದ್ಯೋಗಿಕ ವಿಸ್ತರಣ ಪಾಠಶಾಲೆ : ಮೇಲೆ ವಿವರಿಸಿದ ಒಪ್ಪೊತ್ತಿನ ಔದ್ಯೋಗಿಕ ಪಾಠಶಾಲೆಗಳ ಜೊತೆಗೆ ಈಚೆಗೆ ವಿಶಿಷ್ಟರೀತಿಯ ಪೂರ್ಣಕಾಲದ ಪ್ರತ್ಯೇಕ ಔದ್ಯೋಗಿಕ ಶಾಲೆಗಳೂ ಏರ್ಪಟ್ಟಿವೆ. ಪ್ರಾಥಮಿಕ ಶಿಕ್ಷಣ ಮುಗಿಸಿ 5-6 ತಿಂಗಳು ಒಪ್ಪೊತ್ತಿನ ಪಾಠಶಾಲೆಯಲ್ಲಿ ಶಿಕ್ಷಣ ಪಡೆದವರು ಇಲ್ಲಿಗೆ ಸೇರಬಹುದು. ಇಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ಔದ್ಯೋಗಿಕ ಶಿಕ್ಷಣವನ್ನು ನೀಡುವರು.

ಪೂರ್ಣ ಕಾಲದ ಔದ್ಯೋಗಿಕ ಪಾಠಶಾಲೆ : ಇವು ಮೇಲಿನ ಎಲ್ಲ ಔದ್ಯೋಗಿಕ ಶಾಲೆಗಳಿಗಿಂತ ಹೆಚ್ಚಿನ ಪ್ರಾಯೋಗಿಕ ಅನುಭವವನ್ನು ದೊರಕಿಸುವುದರ ಜೊತೆಗೆ ಸೈದ್ಧಾಂತಿಕ ಜ್ಞಾನವನ್ನೂ ದೊರಕಿಸುತ್ತವೆ. ಇಲ್ಲಿನ ಶಿಕ್ಷಣ 1000 ದಿಂದ 1500 ಗಂಟೆಗಳ ಬೋಧನೆಯನ್ನೊಳಗೊಂಡಿದ್ದು ಅದನ್ನು ಮುಗಿಸಿದವರಿಗೆ ಉದ್ಯೋಗದಲ್ಲಿ ಪಡೆಯಬೇಕಾಗಿರುವ 1 ವರ್ಷ ಉಮೇದುವಾರಿ ಶಿಕ್ಷಣದ ಕಾಲಾವಧಿಯನ್ನು ಮನ್ನಾ ಮಾಡಲಾಗುವುದು. ಜೊತೆಗೆ ಅಂಥವರು ಉನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣವನ್ನು ಮುಂದುವರಿಸಬಹುದು.

ತಾಂತ್ರಿಕ ಮತ್ತು ಉನ್ನತ ತಾಂತ್ರಿಕ ಶಾಲೆಗಳು : ಮಧ್ಯಮ ಮತ್ತು ಉನ್ನತ ಮಟ್ಟದ ಸಾರ್ವಜನಿಕ ಸ್ಥಾನಗಳಿಗೆ ಸೇರಲು ನೆರವಾಗುವಂಥ ಶಿಕ್ಷಣವೀಯುವ ಈ ಸಂಸ್ಥೆಗಳನ್ನು ಜರ್ಮನಿಯಲ್ಲಿ ಇತ್ತೀಚಿನವರೆಗೆ ನಿರ್ಲಕ್ಷಿಸಲಾಗಿತ್ತು. ಶಿಕ್ಷಣವ್ಯವಸ್ಥೆ ಪ್ರಾಥಮಿಕ, ಪ್ರೌಢ, ಉನ್ನತ-ಈ ಮೂರು ಅಂತಸ್ತುಗಳ ಗೋಪುರಾಕೃತಿಯದೆಂಬ ಭಾವನೆಯಿದ್ದು ಔದ್ಯೋಗಿಕ ಶಿಕ್ಷಣ ಪಡೆದವರ ಮುನ್ನಡೆಯ ಶಿಕ್ಷಣಕ್ಕೆ ನೆರವಾಗುವ ಈ ಸಂಸ್ಥೆಗಳು ಸ್ವಾಭಾವಿಕವಾಗಿ ಹಿಂಬದಿಗೆ ಬಿದ್ದಿದ್ದುವು. ಈ ಸಂಕುಚಿತ ಭಾವನೆಯ ಫಲವಾಗಿ ಒಮ್ಮೆ ಸಾಧಾರಣ ಉದ್ಯೋಗವೊಂದಕ್ಕೆ ಸೇರಿದವರು ಬಡ್ತಿಗೆ ಅವಕಾಶವಿಲ್ಲದೆ ಅಲ್ಲೇ ಕೊಳೆಯಬೇಕಾಗಿತ್ತು. ಹಾಗೂ ಪ್ರೌಢಿಮೆಯ ಪರೀಕ್ಷೆ ಆಗದವರಂತೂ ಮೇಲ್ದರ್ಜೆಯ ಸಂಸ್ಥೆಗಳಿಗೆ ಶಿಕ್ಷಣಕ್ಕೆ ಸೇರಿ ಅಭಿವೃದ್ಧಿ ಸಾಧಿಸಲು ಅಸಾಧ್ಯವಾಗಿತ್ತು. ತಾಂತ್ರಿಕ ಶಾಲೆಗಳು ಅವರ ಉದ್ಯೋಗಕ್ಕೂ ವಿಶ್ವವಿದ್ಯಾಲಯದ ಶಿಕ್ಷಣಕ್ಕೂ ಮಧ್ಯದ ಅಂತಸ್ತಿನವು. ಈಚೆಗೆ ಉದ್ಯೋಗಗಳ ಬೆಳವಣಿಗೆ ಯಿಂದ, ಹಾಗೂ ಸಂಕೀರ್ಣ ಸಮಾಜದ ಆವಶ್ಯಕತೆಗಳಿಂದ ಈ ಭಾವನೆ ಬದಲಾಗಿದೆ. ರಾಷ್ಟ್ರದ ವಿವಿಧ ಉದ್ಯೋಗಗಳಿಗೆ ಸಾಮಾನ್ಯ ಕುಶಲ ಕಾರ್ಮಿಕನಿಗಿರುವುದಕ್ಕಿಂತ ಹೆಚ್ಚಿನ ತಾಂತ್ರಿಕ ಜ್ಞಾನ ಅಗತ್ಯ; ಆದರೆ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಪದವೀಧರ ಮುಖ್ಯವಾಗಿ ಸೈದ್ಧಾಂತಿಕ ಪ್ರವೀಣ; ಪ್ರಾಯೋಗಿಕ ಅನುಭವ ಮತ್ತು ಸೈದ್ಧಾಂತಿಕ ಜ್ಞಾನ ಇವೆರಡನ್ನೂ ತಕ್ಕಷ್ಟು ಸಮನ್ವಯ ಮಾಡಿಕೊಂಡ ತಾಂತ್ರಿಕ ಜನಬಲ ಉದ್ಯೋಗ ಕ್ಷೇತ್ರಕ್ಕೆ ಅಧಿಕ ಸಂಖ್ಯೆಯಲ್ಲಿ ಬೇಕು. ಜೊತೆಗೆ ಕೆಲವು ಉದ್ಯೋಗಗಳು ಈಚೆಗೆ ತೀರ ಶಾಸ್ತ್ರೀಯವಾಗಿ ಹೋಗಿವೆ. ; ಕೆಲವು ಹೊಸ ಉತ್ಪನ್ನ ವಿಧಾನಗಳೂ ಕಾರ್ಖಾನೆಗಳೂ ಅಸ್ತಿತ್ವಕ್ಕೆ ಬಂದಿವೆ. ಅಲ್ಲಿಗೆಲ್ಲ ತಂತ್ರಜ್ಞರನ್ನು ರೂಪಿಸಲು ತಾಂತ್ರಿಕ ಶಾಲೆಗಳಿಗೆ ಮಾತ್ರ ಸಾಧ್ಯ. ಈ ಕಾರಣಗಳಿಂದ ಅವು ಈಚಿನ ದಿನಗಳಲ್ಲಿ ಪ್ರಾಮುಖ್ಯಕ್ಕೆ ಬಂದಿವೆ. ಉದ್ಯೋಗಕ್ಷೇತ್ರಕ್ಕೂ ಅವುಗಳ ನಿರ್ವಾಹಕ ಸಿಬ್ಬಂದಿಗೂ ಅಗತ್ಯವಾದ ಕಿರಿಯ ತಾಂತ್ರಿಕ ಮತ್ತು ಯಂತ್ರವಿಜ್ಞಾನದ ಜನಬಲವನ್ನು ರೂಪಿಸಲು ಅಂಥ ಅನೇಕ ಶಿಕ್ಷಣ ಸಂಸ್ಥೆಗಳು ಸ್ಥಾಪನೆಯಾಗಿವೆ. ಅವನ್ನು ಮುಂದೆ ವಿವರಿಸಿದೆ.

ಎಲೆಕ್ಟ್ರಾನಿಕ್ ಲೆಕ್ಕಾಚಾರ ಯಂತ್ರಗಳ ಬಳಕೆಯ ಶಿಕ್ಷಣ ತರಬೇತು

1 ತಾಂತ್ರಿಕ ಶಾಲೆ : ಇವು ಸುಮಾರು 1.5 ಲಕ್ಷ ಮಂದಿ ವಿದ್ಯಾರ್ಥಿಗಳಿಗೆ ಮುಂದುವರಿದ ಉದ್ಯೋಗ ಶಿಕ್ಷಣವನ್ನೊದಗಿಸುತ್ತವೆ. ಉದ್ಯೋಗ ತರಪೇತಿ ಮುಗಿಸಿ ಕೆಲಸಕ್ಕೆ ಸೇರುವ ಅರ್ಹತಾಪತ್ರ (ಜರ್ನಿಮನ್ ಸರ್ಟಿಫಿಕೆಟ್) ಪಡೆದು ಉದ್ಯೋಗದಲ್ಲಿದ್ದು ಅನುಭವ ಸಾಧಿಸಿದವರು ಇಲ್ಲಿಗೆ ಸೇರಬಹುದು. ಜೊತೆಗೆ ಅವರು 9 ವರ್ಷದ ಪ್ರಾಥಮಿಕ ಶಾಲೆಯ ಶಿಕ್ಷಣವನ್ನೂ ಮುಗಿಸಿರಬೇಕು. ಪೂರ್ಣಕಾಲದ ಈ ಶಿಕ್ಷಣ ಒಂದರಿಂದ ಎರಡು ವರ್ಷಗಳ ಕಾಲ ಹಿಡಿಯುತ್ತದೆ. ಕೆಲಸದಲ್ಲಿದ್ದುಕೊಂಡೇ ಓದತಕ್ಕವರಿಗೆ ಸಂಜೆ ತರಗತಿಗಳಿರುತ್ತವೆ. ಎಲ್ಲ ರೀತಿಯ ಉದ್ಯೋಗಗಳಿಗೂ ತಾಂತ್ರಿಕ ಶಾಲೆಗಳು ಏರ್ಪಟ್ಟಿವೆ. ಕುಶಲಕಲೆ ಮತ್ತು ಔದ್ಯೋಗಿಕ ಕಸುಬುಗಳಲ್ಲಿ ಮಾಸ್ಟರ್ ಸ್ಥಾನ ಪಡೆಯಲು, ಗಣಿಕೆಲಸ, ಕಿಂಡರ್ ಗಾರ್ಟನ್ ಶಿಕ್ಷಣ, ಗೃಹಕಾರ್ಯನಿರ್ವಹಣೆ, ತಂತ್ರಶಾಸ್ತ್ರ, ವಾಣಿಜ್ಯವಿದ್ಯೆ, ಕೃಷಿವಿದ್ಯೆ, ಸಮುದ್ರವ್ಯಾಪಾರ, ರಾಸಾಯನಿಕಶಿಲ್ಪ ಮುಂತಾದ ಉದ್ಯೋಗಗಳಿಗೆ ಶಿಕ್ಷಣವೀಯುವ ಪ್ರತ್ಯೇಕ ತಾಂತ್ರಿಕ ಶಾಲೆಗಳಿವೆ. ಅಲ್ಲಿ ಶಿಕ್ಷಣ ಪಡೆದವರು ಮಧ್ಯಮಟ್ಟದ ಹೊಣೆಗಾರಿಕೆಯ ಹಾಗೂ ನಾಯಕತ್ವ ವಹಿಸಬೇಕಾಗುವ ಸ್ಥಾನಗಳಿಗೆ ಅರ್ಹರಾಗುತ್ತಾರೆ. ಈ ವರ್ಗದ ಶಾಲೆಗಳಲ್ಲಿ ಎಂಜಿನಿಯರನ್ನು ತರಪೇತು ಮಾಡುವ ಎಂಜಿನಿಯರಿಂಗ್ ಶಾಲೆಗಳು ಈಚೆಗೆ ತುಂಬ ಪ್ರಾಮುಖ್ಯಕ್ಕೆ ಬಂದಿವೆ. ಉದ್ಯೋಗಗಳಿಗೆ, ಮಧ್ಯಮಟ್ಟದ ತಾಂತ್ರಿಕ ಜನಬಲದ ಅಗತ್ಯ ಹೆಚ್ಚಿದಂತೆ ಇವುಗಳ ಸಂಖ್ಯೆಯೂ ಹೆಚ್ಚಿದೆ. ಯಂತ್ರಶಿಲ್ಪ, ವಿದ್ಯುತ್‌ಶಿಲ್ಪ, ರಚನಾಶಿಲ್ಪ, ನೆಯ್ಗೆಶಿಲ್ಪ- ಈ ಕ್ಷೇತ್ರಗಳಿಗೆ ಸಂಬಂಧಿಸಿದ ಶಾಲೆಗಳು ಅಧಿಕವಾಗಿ ಹೆಚ್ಚಿವೆ. ಶಿಕ್ಷಣಸಚಿವರ ಮಂಡಲಿ ಆಯಾ ಶಾಲೆಯಲ್ಲಿ ತರಬೇತು ನೀಡುವ ವಿಷಯವನ್ನೂ ಅದರ ಪಠ್ಯಕ್ರಮವನ್ನೂ ನಿಗದಿ ಮಾಡುತ್ತದೆ. ಅಲ್ಲಿನ ಶಿಕ್ಷಣ ಮುಗಿಸಿದವರು ರಾಜ್ಯಮಟ್ಟದ ಎಂಜಿನಿಯರಿಂಗ್ ಪರೀಕ್ಷೆಗೆ ಕೂಡುವರು. ತೀವ್ರವೇಗದಲ್ಲಿ ಹೆಚ್ಚುತ್ತಿರುವ ತಾಂತ್ರಿಕ ಶಾಲೆಗಳ ಸಂಖ್ಯೆ 1963ರಲ್ಲಿ 214 ಇತ್ತು. ಆಗ ಅಲ್ಲಿ 29,598 ಮಂದಿ ಶಿಕ್ಷಣ ಪಡೆಯುತ್ತಿದ್ದರು.

2 ಉನ್ನತ ತಾಂತ್ರಿಕ ಶಿಕ್ಷಣ ಶಾಲೆ : ಇವಕ್ಕೆ ಪ್ರವೇಶ ಪಡೆಯಲು ತಾಂತ್ರಿಕ ಶಾಲೆಗೆ ಬೇಕಾದುದಕ್ಕಿಂತ ಹೆಚ್ಚಿನ ಶಿಕ್ಷಣಾರ್ಹತೆಯಿರಬೇಕು ; ಇಲ್ಲಿನ ಶಿಕ್ಷಣ ಮೂರು ವರ್ಷಗಳ ಕಾಲ ಹಿಡಿಯುವುದಲ್ಲದೆ ಪರೀಕ್ಷೆಯೂ ಕಠಿಣವಾಗಿರುತ್ತದೆ. ಜೊತೆಗೆ ಅವರು ಕಿರಿಯ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿರಬೇಕು. ಕೊನೆಯಲ್ಲಿ ನಡೆಯುವ ರಾಜ್ಯಮಟ್ಟದ ಪರೀಕ್ಷೆಯಲ್ಲಿ ಉತ್ತೀರ್ಣರಾಗದವರು ವಿಶ್ವವಿದ್ಯಾಲಯದ ಆ ವಿಷಯ ವಿಭಾಗದಲ್ಲಿ ವ್ಯಾಸಂಗ

ಮುಂದುವರಿಸಲು ಪ್ರವೇಶಾವಕಾಶ ಪಡೆಯಬಹುದು. ಉನ್ನತ ವಾಣಿಜ್ಯಶಾಲೆ, ಉನ್ನತ ಸಮಾಜಕಲ್ಯಾಣಶಾಲೆ, ಉನ್ನತ ವಿಮಾಶಾಲೆ, ಭಾಷಾಂತರಕಾರರ ಮತ್ತು ದುಭಾಷಿಗಳ ಪಾಠಶಾಲೆ, ಉನ್ನತ ಕೃಷಿಶಾಲೆ, ನೆಯ್ಗೆಯ ಶಾಲೆ, ಗೃಹವಿಜ್ಞಾನದ ಶಾಲೆ, ಕುಶಲಕಲೆಗಳ ಶಾಲೆ, ಛಾಯಾಚಿತ್ರ ಮತ್ತು ದರ್ಶಕವಿಜ್ಞಾನದ ಶಾಲೆ–ಇವೆಲ್ಲ ಉನ್ನತ ತಾಂತ್ರಿಕ ಶಿಕ್ಷಣ ಶಾಲೆಗಳು.

ಎಂಜಿನಿಯರಿಂಗ್ ಶಿಕ್ಷಣ : ಜರ್ಮನಿಯಲ್ಲಿ ಎರಡು ಮಟ್ಟದ ಎಂಜಿನಿಯರುಗಳಿರುವರು. ಸಾಮಾನ್ಯ ಎಂಜಿನಿಯರು ಎಂಜಿನಿಯರಿಂಗ್ ಶಾಲೆಯಲ್ಲೂ ಡಿಪ್ಲೊಮ ಎಂಜಿನಿಯರು (ಪದವೀಧರರು) ಉನ್ನತ ಟೆಕ್ನಾಲಜಿ ಕಾಲೇಜುಗಳಲ್ಲೂ ಶಿಕ್ಷಣ ಪಡೆದಿರುತ್ತಾರೆ. ಇವೆರಡು ಸಂಸ್ಥೆಗಳಿಗೆ ಪ್ರವೇಶನಿಯಮ, ಪಠ್ಯಕ್ರಮ, ಶಿಕ್ಷಣದ ಮಟ್ಟ ಇವೆಲ್ಲ ಬೇರೆ ಬೇರೆಯಾಗಿರುತ್ತವೆ. ಟೆಕ್ನಾಲಜಿ ಕಾಲೇಜುಗಳು ಉನ್ನತ ಸೈದ್ಧಾಂತಿಕ ಶಿಕ್ಷಣವನ್ನಿತ್ತು ಉತ್ತೀರ್ಣರಾದವರಿಗೆ ಪದವಿ ನೀಡುತ್ತವೆ. ಅವರು ಸಂಶೋಧನಕಾರ್ಯದಲ್ಲಿ ಮುನ್ನಡೆ ಸಾಧಿಸುವ ಶಕ್ತಿ ಪಡೆದಿರುವರು. ಎಂಜಿನಿಯರಿಂಗ್ ಶಾಲೆಗಳು ತಕ್ಕಮಟ್ಟಿಗೆ ಸೈದ್ಧಾಂತಿಕ ಜ್ಞಾನದ ಬುನಾದಿಯನ್ನೂ ಉನ್ನತ ಪ್ರಾಯೋಗಿಕ ಕೌಶಲ್ಯವನ್ನೂ ದೊರಕಿಸಿ ಕೊಡುತ್ತವೆ. ಅಲ್ಲಿ ಓದಿದವರು ಸ್ವತಂತ್ರ ಸ್ಥಾನಗಳಲ್ಲೂ ಪ್ರಾಯೋಗಿಕ ಕ್ಷೇತ್ರದಲ್ಲೂ ಹೊಣೆಗಾರಿಕೆಯಿಂದ ಸೇವೆ ಸಲ್ಲಿಸಬಲ್ಲರು.

ಎಂಜಿನಿಯರಿಂಗ್ ಶಾಲೆಗಳ ಸಂಖ್ಯೆ ರಾಷ್ಟ್ರದಲ್ಲಿ ಒಂದೇ ಸಮನೆ ಹೆಚ್ಚುತ್ತಿದೆ. ಅಲ್ಲಿಗೆ ಸೇರಲು ಕಿರಿಯ ಪ್ರೌಢಶಾಲೆಯಲ್ಲಿ ಅಥವಾ ಔದ್ಯೋಗಿಕ ಪಾಠಶಾಲೆಯಲ್ಲಿ ಆ ಮಟ್ಟದ ಶಿಕ್ಷಣ ಮುಗಿಸಿರಬೇಕು; ಜೊತೆಗೆ ಅಲ್ಲಿ ವಿದ್ಯಾರ್ಥಿ ಶಿಕ್ಷಣ ಪಡೆಯುವ ವಿಷಯಕ್ಕೆ ಸಂಬಂಧಿಸಿದಂತೆ 2 ವರ್ಷಗಳ ನಿರ್ದೇಶಿತ ಪ್ರಾಯೋಗಿಕ ತರಪೇತು ಅಥವಾ ಉಮೇದುವಾರಿ ಶಿಕ್ಷಣ ಮುಗಿಸಿರಬೇಕು. ಇಲ್ಲಿನ ಶಿಕ್ಷಣ ಮೂರು ವರ್ಷಗಳ ಕಾಲಾವಧಿಯದು. 1½ ವರ್ಷದ ಅನಂತರ ಒಂದು ಪೂರ್ವಭಾವಿ ಪರೀಕ್ಷೆಯೂ ಮೂರು ವರ್ಷದ ಅನಂತರ ಅಂತಿಮ ಪರೀಕ್ಷೆಯೂ ನಡೆಯುತ್ತವೆ. ರಾಜ್ಯಮಟ್ಟದ ಎಂಜಿನಿಯರಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆ ಅವರು ಗ್ರಾಜುಯೇಟ್ ಎಂಜಿನಿಯರ್ ಪದವಿ ಪಡೆಯುವರು. ಉನ್ನತ ಪಾಂಡಿತ್ಯದಲ್ಲಿ ಅಭಿರುಚಿ ವ್ಯಕ್ತಪಡಿಸಿದರೆ ಅವರು ವಿಶ್ವವಿದ್ಯಾಲಯಕ್ಕೂ ಸೇರಬಹುದು. 1964ರಲ್ಲಿ ಪಶ್ಚಿಮ ಜರ್ಮನಿಯಲ್ಲಿ 125 ಎಂಜಿನಿಯರಿಂಗ್ ಶಾಲೆಗಳೂ ಅವುಗಳಲ್ಲಿ 58,212 ವಿದ್ಯಾರ್ಥಿಗಳೂ ಇದ್ದರು. ಇದೇ ಕಾಲದಲ್ಲಿ 125 ಎಂಜಿನಿಯರಿಂಗ್ ಕಾಲೇಜುಗಳೂ ಅವುಗಳಲ್ಲಿ 58,050 ವಿದ್ಯಾರ್ಥಿಗಳೂ ಇದ್ದರು. ಅಲ್ಲಿ ಸುಮಾರು 2,000 ವಿದೇಶೀ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು.

**ಬೃಹತ್ ವ್ಯಾಪಾರಿ ಸಂಸ್ಥೆಗಳು ತಮ್ಮವೇ ಆದ ತೆರಪಿನ ಶಿಕ್ಷಣ ತರಬೇತಿಯನ್ನು ನೀಡುತ್ತವೆ**

ವಿಶಿಷ್ಟ ಶಿಕ್ಷಣ : ಚರ್ಚುಗಳು ಹಿಂದಿನಿಂದಲೂ ನ್ಯೂನ ಮಕ್ಕಳ ರಕ್ಷಣೆಯನ್ನು ನಿರ್ವಹಿಸಿಕೊಂಡು ಬರುತ್ತಿದ್ದುವು. ಜರ್ಮನಿಯಲ್ಲಿ ಇಂದು ಅವರಿಗಾಗಿ ವ್ಯಾಪಕವಾದ ಶಿಕ್ಷಣ ಮತ್ತು ರಕ್ಷಣೆಯ ಸೌಲಭ್ಯಗಳು ಏರ್ಪಟ್ಟಿವೆ. ಅವುಗಳಲ್ಲಿ ಬಹುಪಾಲು ಖಾಸಗಿ ಸಂಸ್ಥೆಗಳು. ಈಚೆಗೆ ದೈಹಿಕ ನ್ಯೂನತೆಯ, ಅಂಗಹೀನರ ಮತ್ತು ಅಂಗವಿಕಲರ ನೂತನ ರೀತಿಯ ಶಿಕ್ಷಣಸಂಸ್ಥೆಗಳೂ ಏರ್ಪಟ್ಟಿವೆ.

ನ್ಯೂನ ಮಕ್ಕಳ ಶಿಕ್ಷಣಕ್ಕೆ ವಿಶಿಷ್ಟ ಸಂಸ್ಥೆಗಳೇ ಸರಿಯೆಂಬ ತತ್ತ್ವ ದೃಢಗೊಂಡಂತೆ ರಾಜ್ಯಸರ್ಕಾರಗಳು ಅವರ ಶಿಕ್ಷಣಕ್ಕಾಗಿ ವಿಶೇಷ ಗಮನ ಕೊಡುತ್ತಿವೆ. ವಿಶೇಷ ಪಾಠಶಾಲೆಗಳಲ್ಲಿ ಶಿಕ್ಷಣ ಪಡೆದ ಅನಂತರ ಅವರ ನ್ಯೂನತೆ ಸಾಮಾನ್ಯ ಸಮಸ್ಯೆಯ ರೂಪದ್ದಾದರೆ ಮುಂದಿನ ಶಿಕ್ಷಣಕ್ಕೆ ಅವರನ್ನು ಮತ್ತೆ ಪ್ರಾಥಮಿಕ ಅಥವಾ ಸಾಮಾನ್ಯ ಶಾಲೆಗೆ ಕಳಿಸುವರು.

ಕುರುಡರು, ದೃಷ್ಟಿಮಾಂದ್ಯದ ಮಕ್ಕಳು, ಕಿವುಡರು, ಸರಿಯಾಗಿ ಕೇಳದವರು, ಮೂಗರು, ವಾಗ್ದೋಷವುಳ್ಳವರು, ಇತರ ಆಂಗಿಕ ನ್ಯೂನತೆಯುಳ್ಳವರು, ಸೆಳವಿನ ಮಕ್ಕಳು, ಬುದ್ಧಿಮಾಂದ್ಯದ ಮಕ್ಕಳು, ಹೊಂದಿಕೆ ತಪ್ಪಿರುವ ಮಕ್ಕಳು, ರೋಗಿ ಮಕ್ಕಳು–ಈ ರೀತಿಯ ಸಮಸ್ಯೆಯ ಮಕ್ಕಳಿಗೆಲ್ಲ ಸೂಕ್ತರೀತಿಯ ವಿಶಿಷ್ಟ ಶಾಲೆಗಳು ಏರ್ಪಟ್ಟಿರುವುದಲ್ಲದೆ ಮಾರ್ಗದರ್ಶನದ (ಗೈಡೆನ್ಸ್) ಶಾಲೆಗಳೂ ಕಾರಾಗೃಹದ ಶಾಲೆಗಳೂ ಅಪರಾಧಿ ಮಕ್ಕಳ ಶಾಲೆಗಳೂ ಅಸ್ತಿತ್ವಕ್ಕೆ ಬಂದಿವೆ.

ವಿಶಿಷ್ಟ ಶಾಲೆಗಳು ಸಾಧ್ಯವಾದ ಮಟ್ಟಿಗೆ ವಿಕಲಾಂಗ ಮಕ್ಕಳು ಸಾಮಾನ್ಯ ಶಿಕ್ಷಣದ ಗುರಿಯನ್ನು ಸಾಧಿಸಲು ಸಹಾಯ ಮಾಡಬೇಕು. ಅಲ್ಲಿನ ಅಧ್ಯಾಪಕರು ವೃತ್ತಿಶಿಕ್ಷಣ ಪಡೆದು ಅನಂತರ ವಿಶ್ವವಿದ್ಯಾಲಯದಲ್ಲಿ ವಿಶಿಷ್ಟ ಶಿಕ್ಷಣವನ್ನೂ ಪಡೆದಿರುತ್ತಾರೆ. ಬೇರೆ ಬೇರೆ ವಿಧದ ನ್ಯೂನತೆಗಳಿಗೆ ಉಚಿತವೆನಿಸುವ ನಿವಾರಕ (ರೆಮಿಡಿಯಲ್) ಬೋಧನೆಯ ವಿಧಾನದಲ್ಲಿ ಅಲ್ಲಿ ಶಿಕ್ಷಣವೀಯುವ ವ್ಯವಸ್ಥೆಯಿದೆ. ವಿಶಿಷ್ಟ ಶಿಕ್ಷಣದ ಶಾಲೆಗಳಲ್ಲಿ ತರಗತಿಗಳು ಸಣ್ಣವಾಗಿರುತ್ತವೆ. ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಗಮನ ಕೊಡಬೇಕಾಗುವುದರಿಂದ ಪ್ರತಿ ತರಗತಿಯಲ್ಲಿ 10–15 ಮಂದಿ ಮಕ್ಕಳು ಮಾತ್ರ ಇರುತ್ತಾರೆ. ಬುದ್ಧಿಮಾಂದ್ಯದ ಮಕ್ಕಳ ತರಗತಿಯಾದರೆ 20ರವರೆಗೂ ಇರುವುದುಂಟು.

ವಿಶಿಷ್ಟ ಶಿಕ್ಷಣ ಸೌಲಭ್ಯ ಮುಖ್ಯವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಏರ್ಪಟ್ಟಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆ ಸೌಲಭ್ಯವನ್ನು ಒದಗಿಸುವುದು ಕಷ್ಟವೆಂದು ಪರಿಗಣಿಸಿ ಅಂಥ ಮಕ್ಕಳನ್ನು ವಸತಿಯುಳ್ಳ ವಿಶಿಷ್ಟ ಶಾಲೆಗಳಿಗೆ ಸೇರಿಸಿಕೊಳ್ಳುವುದೂ ಹಲವಾರು ಗ್ರಾಮಗಳಿಗೆ ಕೇಂದ್ರಸ್ಥಳದಲ್ಲಿ ಅಂಥ ಶಾಲೆಗಳನ್ನು ಆರಂಭಿಸುವುದೂ ಕಂಡುಬಂದಿದೆ. ಸರ್ಕಾರದ ಶಾಲೆಗಳಲ್ಲಿ ರಾಜ್ಯಸರ್ಕಾರವೂ ಮಕ್ಕಳ ಪೋಷಕರೂ ವೆಚ್ಚವನ್ನು ಹಂಚಿಕೊಳ್ಳುವರು. ಖಾಸಗಿ ಶಾಲೆಗಳಾದರೆ ಸರ್ಕಾರ ಅವಕ್ಕೆ ಸಹಾಯಧನ ನೀಡುವುದು.

ವಿಕಲಾಂಗ ಮಕ್ಕಳಲ್ಲಿ ಅನೇಕರು ಪ್ರೌಢಶಾಲೆಯ ಮಟ್ಟಕ್ಕಾದರೂ ಹತ್ತಬಲ್ಲರು. ಅವರ ಸಂಖ್ಯೆ ಎಲ್ಲ ದೇಶಗಳಲ್ಲೂ ಅಧಿಕವಾಗಿಯೇ ಇರುತ್ತದೆ. ಹಾಗೆಯೇ ಬಿಟ್ಟರೆ ಕುಟುಂಬಕ್ಕೂ ಸಮಾಜಕ್ಕೂ ಅವರು ಸಮಸ್ಯೆಯಾಗುತ್ತಾರೆ. ಜೊತೆಗೆ ಅವರ ಸಾಮರ್ಥ್ಯಗಳು ವಿಕಸಿಸಲಾರದೆ ರಾಷ್ಟ್ರಕ್ಕೆ ದೊಡ್ಡ ನಷ್ಟವಾಗುವುದು. ಇದನ್ನರಿತ ಜರ್ಮನಿ ವಿಶೇಷ ಆಸಕ್ತಿ ವಹಿಸಿ ಅವರ ಶಿಕ್ಷಣ ರಕ್ಷಣೆಗಾಗಿ ವ್ಯವಸ್ಥೆಗೊಳಿಸಿದೆ. ಅವರಿಗೆ ಬೋಧಿಸಲು ಬೇಕಾಗುವ ಅಧ್ಯಾಪಕರಿಗೆ ಸರ್ಕಾರ ತನ್ನ ವೆಚ್ಚದಲ್ಲಿ ವೃತ್ತಿಶಿಕ್ಷಣ ಒದಗಿಸುತ್ತದೆ; ಬೋಧಿಸಲು ಬೇಕಾದ ವಿಶೇಷ ಉಪಕರಣಗಳನ್ನೂ ಒದಗಿಸುತ್ತಿದೆ. ನಿರ್ಗತಿಕ ಮಕ್ಕಳ ಊಟವಸತಿಗಳಿಗೂ ಏರ್ಪಾಟುಮಾಡುತ್ತಿದೆ. ಅವರನ್ನು ಸಾಮಾನ್ಯ ಜೀವನಕ್ಕೆ ಸಿದ್ಧಪಡಿಸುವುದರ ಜೊತೆಗೆ ಅವರಿಗಾಗಿ ಏರ್ಪಡಿಸಿರುವ ವಿಶೇಷ ಔದ್ಯೋಗಿಕ ಶಾಲೆಗಳಲ್ಲಿ ಕಸುಬು ಕಲೆಗಳಲ್ಲಿ ಶಿಕ್ಷಣವಿತ್ತು ತಮ್ಮ ಕಾಲಮೇಲೆ ನಿಂತು ಜೀವಿಸುವ ಶಕ್ತಿಯನ್ನು ದೊರಕಿಸಲು ಯತ್ನಿಸುತ್ತಿದೆ.

ವಯಸ್ಕರ ಶಿಕ್ಷಣ : ಪಶ್ಚಿಮ ಜರ್ಮನಿಯ ಇಡೀ ಶಿಕ್ಷಣ ವ್ಯವಸ್ಥೆಯನ್ನು ಮೂರು ಶಾಖೆಗಳಾಗಿ ವಿಂಗಡಿಸುವುದುಂಟು: ಸರ್ಕಾರ ಏರ್ಪಡಿಸಿರುವ ವಿಧಾಯಕ ಶಿಕ್ಷಣ ಮೊದಲನೆಯ ಶಾಖೆ; ಉದ್ಯೋಗದಲ್ಲಿದ್ದು ಭಾಗಶಃ ಕಾಲದ ಉದ್ಯೋಗ ಶಿಕ್ಷಣ, ಸಂಜೆಯ ತರಗತಿ, ರಜಾದಿಗಳ ತರಗತಿ ಮುಂತಾದ ವಿಧವಿಧವಾದ ಸೌಲಭ್ಯಗಳು ಎರಡನೆಯ ಶಾಖೆ; ಉತ್ಸಾಹ, ಆಸಕ್ತಿ, ತಕ್ಕಷ್ಟು ಪ್ರತಿಭೆ ಇರತಕ್ಕವರು ಕಾರಣಾಂತರಗಳಿಂದ ಬಾಲ್ಯದಲ್ಲೇ ಶಾಲೆ ಬಿಟ್ಟಿದ್ದರೂ ಮುಂದೆ ಈ ಸೌಲಭ್ಯವನ್ನು ಬಳಸಿಕೊಂಡು ವಿಶ್ವವಿದ್ಯಾಲಯದ ವರೆಗೂ ಶಿಕ್ಷಣ ಪಡೆಯಬಹುದು. ಇದರಿಂದ ವ್ಯಕ್ತಿಗೂ ಅನುಕೂಲ; ಅವರ ಪ್ರತಿಭೆಯ ಫಲವನ್ನು ರೂಢಿಸಿಕೊಳ್ಳುವ ರಾಷ್ಟ್ರಕ್ಕೂ ಅನುಕೂಲ. ವಯಸ್ಕಪೌರರಿಗೆ ಹಾಗೂ ತಕ್ಕಷ್ಟು ಶಿಕ್ಷಣ ಪಡೆದಿರುವವರಿಗೆ ಮುಂದಿನ ಶಿಕ್ಷಣಕ್ಕಾಗಿ ಮಾಡಿರುವ ವ್ಯವಸ್ಥೆಯೇ ಶಿಕ್ಷಣದ ಮೂರನೆಯ ಶಾಖೆ. ಈ ಮೂರು ಶಾಖೆಗಳು ಸಮಾಂತರವಾಗಿ ವ್ಯವಸ್ಥೆಗೊಂಡಿದ್ದರೂ ಒಂದರ ಸೌಲಭ್ಯ ಇನ್ನೊಂದರಲ್ಲಿ ಬೆರೆತಿರಬಹುದಾದರೂ ಇಲ್ಲಿ ವಯಸ್ಕರ ಶಿಕ್ಷಣ ವ್ಯವಸ್ಥೆಯನ್ನು ಮಾತ್ರ ಪರಿಶೀಲಿಸಲಾಗುವುದು.

ಇತರ ಶಿಕ್ಷಣ ಸಂಸ್ಥೆಗಳ ಬಗ್ಗೆ ದೊರಕುವಂತೆ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿಅಂಶಗಳು ಅಷ್ಟಾಗಿ ದೊರೆಯುತ್ತಿಲ್ಲ. ನಾರ್ತ್–ರೈನ್ ವೆಸ್ಟ್‍ಫೇಲಿಯ ರಾಜ್ಯದ ಜನತಾ ಕಾಲೇಜುಗಳು (ಪೀಪಲ್ಸ್ ಕಾಲೇಜು) ಅಲ್ಲಿನ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ. ಪ್ರಾಥಮಿಕ ಶಾಲೆಯ ಅಂತಿಮ ಪರೀಕ್ಷೆಗೆ ವಯಸ್ಕರನ್ನು ಕಳಿಸುವ ಸೌಲಭ್ಯಗಳನ್ನೂ ಪಡೆದುಕೊಂಡಿವೆ. ಸರ್ಕಾರ ವಯಸ್ಕರ ಶಿಕ್ಷಣ ಸಂಸ್ಥೆಗಳನ್ನು ಪುರಸ್ಕರಿಸಿ ಅವಕ್ಕೆ ಅಗತ್ಯ ಸಹಾಯ ಸೌಲಭ್ಯಗಳನ್ನು ಒದಗಿಸುವುದರಿಂದ ಅವು ಹೆಚ್ಚು ಪರಿಣಾಮಕಾರಿಯಾಗಿ ಸಮಾಜಸೇವೆ ಸಲ್ಲಿಸಬಹುದೆಂಬ ಭಾವನೆ ಈಚೆಗೆ ಬೆಳೆಯುತ್ತಿದೆ.

ಸದ್ಯದಲ್ಲಿ ವಯಸ್ಕರ ಶಿಕ್ಷಣ ಸಂಸ್ಥೆಗಳು ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆಯಾಗಿ ಸ್ವಪ್ರೇರಣೆಯಿಂದ ಸೇವೆ ಸಲ್ಲಿಸುತ್ತಿವೆ. ಸ್ಥಳೀಯ ಸರ್ಕಾರದ ಸಂಸ್ಥೆಗಳಿಂದ ಅಷ್ಟಿಷ್ಟು ನೆರವು ಪಡೆಯುತ್ತಿವೆ. ಮುಖ್ಯವಾಗಿ ಅವು ಸಾಮಾನ್ಯ ಶಿಕ್ಷಣವನ್ನು ನೀಡುತ್ತವೆ. ಸಮಾಜವಿಜ್ಞಾನ, ರಾಜಕೀಯ ವಿಚಾರ, ಅನ್ಯಭಾಷೆ–ಇವುಗಳಲ್ಲಿ ಶಿಕ್ಷಣವೀಯುವುದು ಹೆಚ್ಚು. ಈಚೆಗೆ ಕಾರ್ಮಿಕ ಸಂಘಗಳ ಸಹಕಾರದಿಂದ ಔದ್ಯೋಗಿಕ ಶಿಕ್ಷಣವೀಯುವ ವ್ಯವಸ್ಥೆಯೂ ಆರಂಭವಾಗಿದೆ. ಕೃಷಿ ಸಂಘಗಳು, ಕಾರ್ಮಿಕ ಸಂಘಗಳು, ಉದ್ಯೋಗ ವಲಯಗಳು, ಮಾಲೀಕರ ಸಂಘಗಳು ತಮ್ಮ ತಮ್ಮ ಕೆಲಸಗಾರರಿಗೆ ಶಿಕ್ಷಣವೀಯುವ ಕಾರ್ಯಕ್ರಮವನ್ನು ಹೊಂದಿವೆ. ಮುಂದೆ ವಯಸ್ಕರ ಶಿಕ್ಷಣವನ್ನು ರಾಜ್ಯದ ಶಿಕ್ಷಣ ವ್ಯವಸ್ಥೆಯ ಪರಿಮಿತಿಗೆ ಸೇರಿಸಿಕೊಳ್ಳಲು ಆಲೋಚಿಸಲಾಗುತ್ತಿದೆ. ಆಗ ಹೆಚ್ಚು ಸಂಖ್ಯೆಯಲ್ಲಿ ವಯಸ್ಕರು ಶಿಕ್ಷಣ ಪಡೆದು ರಾಷ್ಟ್ರಜೀವನದಲ್ಲಿ ಹೆಚ್ಚಿನ ಅನುಭವ, ಜ್ಞಾನ ಮತ್ತು ಪ್ರಜ್ಞೆಯಿಂದ ಭಾಗವಹಿಸುವುದು ಸಾಧ್ಯವಾಗುತ್ತದೆ.

ಶಿಕ್ಷಣದ ಆಡಳಿತ ವ್ಯವಸ್ಥೆ : ಪಶ್ಚಿಮ ಜರ್ಮನಿಯ ಹನ್ನೊಂದು ರಾಜ್ಯಗಳು ತಮ್ಮ ತಮ್ಮ ಎಲ್ಲೆಯೊಳಗಿನ ಎಲ್ಲ ಶಿಕ್ಷಣ ಸಂಸ್ಥೆಗಳ ಆಡಳಿತವನ್ನೂ ನಡೆಸುತ್ತವೆ. ಇದರ ಫಲವಾಗಿ ಒಂದೊಂದು ರಾಜ್ಯವೂ ತನ್ನದೇ ಆದ ಶಿಕ್ಷಣದ ಗುರಿ, ಶಿಕ್ಷಣದ ವ್ಯವಸ್ಥೆ, ಪರೀಕ್ಷಾ ಪದ್ಧತಿ ಇತ್ಯಾದಿಯನ್ನು ರೂಢಿಸಿಕೊಂಡು ಹೋಗುವುದು ಸುಲಭ. ಆದರೆ ಇಡೀ ರಾಷ್ಟ್ರದ ಶಿಕ್ಷಣದಲ್ಲಿ ತಕ್ಕಷ್ಟು ಏಕರೂಪತೆ ಇರುವುದು ಅಗತ್ಯ. ಅದಕ್ಕಾಗಿ 1948 ರಿಂದ ಎಲ್ಲ ರಾಜ್ಯಗಳ ಶಿಕ್ಷಣ ಸಚಿವರನ್ನೊಳಗೊಂಡ ಮಂಡಲಿ ಆಗಾಗ ಸಭೆ ಸೇರಿ ಸೂಕ್ತ ರೀತಿಯ ಸಲಹೆಗಳನ್ನು ರೂಪಿಸಿ ಕಾರ್ಯಗತ ಮಾಡಲು ನೆರವಾಗುತ್ತದೆ. ಇದೇ ರೀತಿ ಶಿಕ್ಷಣ ಸಮಿತಿ, ವಿಶ್ವವಿದ್ಯಾಲಯದ ಅಧ್ಯಕ್ಷರುಗಳ ಮಂಡಲಿ ಮುಂತಾದುವು ತಮ್ಮ ತಮ್ಮ ಉಪಸಮಿತಿಗಳ ಸಲಹೆಗಳನ್ನು ಅನುಸರಿಸಿ ರಾಷ್ಟ್ರವ್ಯಾಪಿ ನೀತಿಯನ್ನು ರೂಪಿಸುತ್ತವೆ.

ಸಾಮಾನ್ಯವಾಗಿ ರಾಜ್ಯದ ಶಿಕ್ಷಣ ಸಚಿವರು ತಮ್ಮ ರಾಜ್ಯದ ಶಾಲೆಗಳಿಗೆ ಪಠ್ಯಕ್ರಮವನ್ನು ಸ್ಥೂಲವಾಗಿ ರೂಪಿಸುವರು. ತರಗತಿಗಳಿಗೆ ಬಳಸಬಹುದಾದ ಪಟ್ಟಿಯನ್ನು ಪ್ರಕಟಿಸುವರು. ಶಾಲೆಗಳು ವಿವರವಾದ ಪಠ್ಯಕ್ರಮವನ್ನು ರೂಪಿಸುವುದಕ್ಕೂ ತಮಗೆ ಬೇಕಾದ ಪಠ್ಯಪುಸ್ತಕವನ್ನು ಪಟ್ಟಿಯಿಂದ ಆರಿಸಿಕೊಳ್ಳುವುದಕ್ಕೂ ಅವಕಾಶವುಂಟು. ಪ್ರತಿ ಶಾಲೆಗೂ ಅಲ್ಲಿನ ಜನರನ್ನೊಳಗೊಂಡ ಸಲಹಾಸಮಿತಿ ಇರುತ್ತದೆ. ಅದು ಶಾಲೆಯ ಅಧ್ಯಾಪಕರ ಮತ್ತು ಮುಖ್ಯಸ್ಥರ ನೇಮಕದಲ್ಲಿ ಪಾತ್ರವಹಿಸುವುದು; ಶಾಲೆಯ ಕಟ್ಟಡ ಮತ್ತು ಸಾಮಾನು ಸರಬರಾಜುಗಳ ಬಗ್ಗೆ ಉಸ್ತುವಾರಿ ನಡೆಸುವುದು.

ಶಿಕ್ಷಣದ ವೆಚ್ಚ : ಜರ್ಮನಿಯಲ್ಲಿ ಸಾಮಾನ್ಯ ಮತ್ತು ಔದ್ಯೋಗಿಕ ಶಿಕ್ಷಣಗಳೆರಡೂ ಉಚಿತ. ಖಾಸಗೀ ಸಂಸ್ಥೆಗಳು ಪ್ರೌಢ ಮತ್ತು ಔದ್ಯೋಗಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಇತರ ಕ್ಷೇತ್ರಗಳಲ್ಲೂ ತಕ್ಕಮಟ್ಟಿಗೆ ಸೇವೆ ಸಲ್ಲಿಸುತ್ತಿವೆ. ಅವಕ್ಕೆ ಸರ್ಕಾರ ಅನುದಾನ ನೀಡುತ್ತದೆ. ಸಾಮಾನ್ಯವಾಗಿ ಅಧ್ಯಾಪಕರ ಸಂಬಳವನ್ನು ರಾಜ್ಯಸರ್ಕಾರವೇ ಬಟವಾಡೆ ಮಾಡುತ್ತದೆ.; ಕಟ್ಟಡ ಮತ್ತು ವಿದ್ಯಾರ್ಥಿಸಾಗಣೆಗೆ ಹಿಡಿಯುವ ಖರ್ಚಿನಲ್ಲಿ ತನ್ನ ಭಾಗದ ಹಣವನ್ನೂ ಕೊಡುತ್ತದೆ.

1964ರಲ್ಲಿ ಪಶ್ಚಿಮ ಜರ್ಮನಿ ಸಾರ್ವಜನಿಕ ವೆಚ್ಚದ 7.6 ಭಾಗವನ್ನು ಶಿಕ್ಷಣಕ್ಕಾಗಿ ವಿನಿಯೋಗಿಸಿತು. ಇದು ರಾಷ್ಟ್ರೀಯ ಒಟ್ಟು ಉತ್ಪನ್ನದ 2.4ರಷ್ಟು. ಈ ಸಂವತ್ಸರದಲ್ಲಿ ಆದ ಒಟ್ಟು ವೆಚ್ಚವನ್ನೂ ಆ ವೆಚ್ಚದ ಪ್ರಮಾಣದಲ್ಲಿ ಸೇರಿದ್ದ ಬೇರೆ ಬೇರೆ ಮೂಲಗಳ ವೆಚ್ಚದ ಅಂಶಗಳನ್ನೂ ಮುಂದಿನ ಪಟ್ಟಿಯಲ್ಲಿ ಕಾಣಬಹುದು:

| | | |
|---|---|---|
| ಕೇಂದ್ರಸರ್ಕಾರ ಮಾಡಿದ ವೆಚ್ಚ | 62841352000 | ಡಾಯಿಶೆ ಮಾರ್ಕ್ಸ್ |
| ರಾಜ್ಯಸರ್ಕಾರಗಳು ಮಾಡಿದ ಒಟ್ಟು ವೆಚ್ಚ | 39753039000 | " " |
| ಸಮಾಜ ಮಾಡಿದ ವೆಚ್ಚ | 29387133000 | " " |
| ಒಟ್ಟು | 131981524000 | |

ಎಂದರೆ ರಾಷ್ಟ್ರದ ಸಮಗ್ರ ವೆಚ್ಚದಲ್ಲಿ ಕೇಂದ್ರ ಸರ್ಕಾರದ್ದು 47.6% ; ರಾಜ್ಯ ಸರ್ಕಾರಗಳದ್ದು 30.1% ; ಸಮಾಜದ್ದು 22.3%. ಇದೇ ಮೂಲಗಳು ಆ ಸಂವತ್ಸರದಲ್ಲಿ ಕೇವಲ ಶಿಕ್ಷಣಕ್ಕಾಗಿ ಮಾಡಿದ ವೆಚ್ಚವನ್ನು ಮುಂದಿನ ಪಟ್ಟಿಯಲ್ಲಿ ತೋರಿಸಿದೆ.

| | | |
|---|---|---|
| ಕೇಂದ್ರ ಸರ್ಕಾರ ಮಾಡಿದ ವೆಚ್ಚ | 74324000 | ಡಾಯಿಶೆ ಮಾರ್ಕ್ಸ್ |
| ರಾಜ್ಯಸರ್ಕಾರಗಳು ಮಾಡಿದ ವೆಚ್ಚ | 5481149000 | " " |
| ಸಮಾಜ ಮಾಡಿದ ವೆಚ್ಚ 2 | 9387133000 | " " |
| ಒಟ್ಟು | 10083134000 | |

ಎಂದರೆ ಒಟ್ಟು ಶಿಕ್ಷಣದ ವೆಚ್ಚದಲ್ಲಿ ಕೇಂದ್ರ ಸರ್ಕಾರ 0.7%ನ್ನೂ ರಾಜ್ಯಸರ್ಕಾರಗಳು 54.4%ನ್ನೂ ಸಮಾಜ 44.9%ನ್ನೂ ವೆಚ್ಚಮಾಡಿವೆ. ಶಿಕ್ಷಣದ ಬಹುಪಾಲು ವೆಚ್ಚವನ್ನು ರಾಜ್ಯಸರ್ಕಾರಗಳೂ ಸಮಾಜದ ಹಾಗೂ ಔದ್ಯೋಗಿಕ ಸಂಸ್ಥೆಗಳೂ ನಿರ್ವಹಿಸುತ್ತಿರುವುದು ವ್ಯಕ್ತಪಡುತ್ತದೆ.

**ಪೂರ್ವ ಜರ್ಮನಿಯಲ್ಲಿ ಶಿಕ್ಷಣ :** ಎರಡನೆಯ ಮಹಾಯುದ್ಧದ ನಂತರ ಸೋವಿಯೆತ್ ಸಮಾಜವಾದಿ ರಾಷ್ಟ್ರಗಳ ಬಣಕ್ಕೆ ಸೇರಿಹೋದ ಪೂರ್ವ ಜರ್ಮನಿಯ ಶಿಕ್ಷಣ ಪದ್ಧತಿ ಜರ್ಮನ್ ಶಿಕ್ಷಣ ಸಂಪ್ರದಾಯದ ಮೇಲೆ ಪುನರ್ವ್ಯವಸ್ಥೆಗೊಂಡಿದ್ದರೂ ಕ್ರಮಕ್ರಮವಾಗಿ ಸಮಾಜವಾದಿ ತತ್ತ್ವದೃಷ್ಟಿಯ ಆಧಾರದ ಮೇಲೆ ರೂಪುಗೊಳ್ಳುತ್ತಿದೆ. 1945ರಲ್ಲಿ ಏಕಮಾರ್ಗದ ಶಾಲಾವ್ಯವಸ್ಥೆ ಆರಂಭವಾಯಿತು. 4 ವರ್ಷಗಳ ಪ್ರಾಥಮಿಕ ಶಾಲೆಯ ಅನಂತರ ವಿವಿಧ ಸಾಮಾಜಿಕ ವರ್ಗಗಳ ಆಧಾರದ ಮೇಲೆ ಹಿಂದೆ ವ್ಯವಸ್ಥೆಯಾಗಿದ್ದ ವಿವಿಧ ರೀತಿಯ ಶಾಲೆಗಳನ್ನು ತೊಡೆದುಹಾಕಿ ಎಲ್ಲರಿಗೂ ಏಕರೀತಿಯ ಶಾಲಾವ್ಯವಸ್ಥೆ ಮೊದಲಾಯಿತು. ಜೊತೆಗೆ ಆ ವ್ಯವಸ್ಥೆಯಲ್ಲಿ ನಾಟ್ಸಿ ತತ್ತ್ವದೃಷ್ಟಿಯಲ್ಲಿ ಅಳವಟ್ಟಿದ್ದ ಅಂಶಗಳನ್ನೂ ತೊಡೆದುಹಾಕಲಾಯಿತು. ಆ ಪುನರ್ವ್ಯವಸ್ಥೆಯಲ್ಲಿ ದುಡಿಮೆಗೆ ಪ್ರಾಶಸ್ತ್ಯವಿತ್ತು. ಕೃಷಿಕ ಮತ್ತು ಕಾರ್ಮಿಕವರ್ಗಗಳ ಕೌಶಲ್ಯವನ್ನು ಬೆಳೆಸಲು ಪಾಲಿಟೆಕ್ನಿಕ್ ವಿಧಾನದ ಪಠ್ಯವಿಷಯಗಳನ್ನು ಆಧಾರಮಾಡಿಕೊಳ್ಳಲಾಯಿತು. ಅದರಿಂದ ರೈತಕುಟುಂಬಗಳ ಮಕ್ಕಳು ಪ್ರೌಢಶಿಕ್ಷಣಕ್ಕೆ ಬರಲು ಅನುಕೂಲವಾಗಿ ಅವರ ಸಾಮಾಜಿಕ ಅಂತಸ್ತು ಉತ್ತಮಗೊಳ್ಳುವಂತಾಯಿತು. ಶಿಕ್ಷಣದ ಎಲ್ಲ ವ್ಯವಸ್ಥೆಗಳನ್ನೂ ಕೇಂದ್ರಸರ್ಕಾರದಿಂದ ನಿಯಂತ್ರಿಸುವುದೂ ರಾಷ್ಟ್ರದ ಆರ್ಥಿಕ ಶಕ್ತಿಗೂ ಕಮ್ಯೂನಿಸ್ಟ್ ರಾಜಕೀಯಕ್ಕೂ ಅನುಕೂಲಿಸುವಂತೆ ಶಿಕ್ಷಣವನ್ನು ಬಳಸಿಕೊಳ್ಳುವುದೂ ಆರಂಭವಾಯಿತು. ಈಗ ಪಠ್ಯಕ್ರಮದಲ್ಲಿ ಮಾನವಿಕ ಮತ್ತು ವರ್ತನೆಯ ವಿಜ್ಞಾನದ ವಿಷಯಗಳಿಗಿಂತ ತಾಂತ್ರಿಕ ಕೌಶಲ್ಯ, ನಿಸರ್ಗವಿಜ್ಞಾನಗಳು, ಮಾರ್ಕ್ಸ್ ತತ್ತ್ವಜ್ಞಾನ, ತರ್ಕಶಾಸ್ತ್ರ–ಇವಕ್ಕೇ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಇಡೀ ಶಿಕ್ಷಣ ವ್ಯವಸ್ಥೆ ಸಾರ್ವಜನಿಕ ಬೊಕ್ಕಸದಿಂದ ಏರ್ಪಟ್ಟು ಎಲ್ಲರಿಗೂ ಆ ಸೌಲಭ್ಯ ಉಚಿತವಾಗಿ ದೊರಕುತ್ತಿದೆ. ಮಹಿಳೆಯರೂ ಶ್ರಮಜೀವಿಗಳ ಮಕ್ಕಳೂ ಹೆಚ್ಚುಹೆಚ್ಚಾಗಿ ಶಿಕ್ಷಣ ಪಡೆಯುವ ಅವಕಾಶವೊದಗಿ ಅವರು ಸಾಮಾಜಿಕವಾಗಿ ಮೇಲ್ದರ್ಜೆಗೇರಲು ಅನುಕೂಲವಾಗಿದೆ. ಅಲ್ಲಿನ ರಾಜ್ಯಾಂಗ ರಚನೆಯ 31ನೆಯ ಅನುಚ್ಛೇದದ 1ನೆಯ ಭಾಗದ ಪ್ರಕಾರ ರಾಷ್ಟ್ರದ ಎಲ್ಲ ಮಕ್ಕಳಿಗೂ ಸಮಾನ ಶಿಕ್ಷಣ ಸೌಲಭ್ಯವನ್ನೊದಗಿಸುವ ಹಾಗೂ ಒಂದಕ್ಕೊಂದಕ್ಕೆ ಸಂಬಂಧಿಸಿದಂತೆ ಏರ್ಪಟ್ಟಿರುವ ಶಿಕ್ಷಣಸಂಸ್ಥೆಗಳಲ್ಲಿ ಸಮಾಜವಾದಿ ಶಿಕ್ಷಣ, ತರಪೇತು ಮತ್ತು ಮುನ್ನಡೆಯ ಶಿಕ್ಷಣವನ್ನು ಯಾವ ಭೇದವೂ ಇಲ್ಲದೆ ದೊರಕಿಸುವ ಆಶ್ವಾಸನೆ ಏರ್ಪಟ್ಟಿದೆ ; ಅದರ 4ನೆಯ ಭಾಗ ಪ್ರತಿಯೊಬ್ಬರೂ ಒಂದು ವೃತ್ತಿಯನ್ನು ಕಲಿಯಬೇಕೆಂದು ಕಡ್ಡಾಯ ಮಾಡುತ್ತದೆ; ವಿದ್ಯಾರ್ಥಿಯ ಶಿಕ್ಷಣಾಭಿವೃದ್ಧಿ, ಸಾಮಾಜಿಕ ಆವಶ್ಯಕತೆ, ಸಾಮಾಜಿಕ ರಚನೆ ಇವುಗಳನ್ನನುಸರಿಸಿ ವಿಶ್ವವಿದ್ಯಾಲಯದವರೆಗೂ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರವೇಶಾವಕಾಶವನ್ನು ಒದಗಿಸುವ ಭರವಸೆ ನೀಡುತ್ತದೆ.

ಶಿಕ್ಷಣ ವ್ಯವಸ್ಥೆ : ಶಿಕ್ಷಣ ನಿಚ್ಚಣಿಗೆಯ ಅತ್ಯಂತ ಕೆಳಹಂತದಲ್ಲಿ ಕಿಂಡರ್‍ಗಾರ್ಟನ್ ಶಾಲೆಗಳಿವೆ. ಅಲ್ಲಿಗೆ ಹಾಜರಾತಿ ಕಡ್ಡಾಯವಲ್ಲದಿದ್ದರೂ ರಾಷ್ಟ್ರದ 6 ವರ್ಷದವರೆಗಿನ ಮಕ್ಕಳಲ್ಲಿ ಸೇ. 60ರಷ್ಟು ಅಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಮಕ್ಕಳನ್ನು ವಿಧಾಯಕ ಶಿಕ್ಷಣಕ್ಕೆ ಸಿದ್ಧಪಡಿಸುವುದೇ ಆ ಶಾಲೆಗಳ ಉದ್ದೇಶ. ಆ ಶಾಲೆಗಳ ಭಾಗಶಃ ವೆಚ್ಚವನ್ನು ಅವನ್ನು ಹೊಂದಿರುವ ಕೃಷಿಕ್ಷೇತ್ರ ಅಥವಾ ಕಾರ್ಖಾನೆಗಳು ವಹಿಸುತ್ತವೆ. ಪೋಷಕರು ಸಾಮಾನ್ಯವಾಗಿ ಸ್ವಲ್ಪ ಶುಲ್ಕ ನೀಡುವುದುಂಟು. ವೃತ್ತಿನಿರತ ತಾಯಂದಿರ ಮಕ್ಕಳ ಉಪಯೋಗಕ್ಕೆಂದೇ ಕೆಲವು ಕಿಂಡರ್‍ಗಾರ್ಟನ್‍ಗಳು ಏರ್ಪಟ್ಟಿವೆ. ಅಲ್ಲಿಗೆ ಬಾರದ ಮಕ್ಕಳನ್ನು ವಿಧಾಯಕ ಶಿಕ್ಷಣಕ್ಕೆ ಸಿದ್ಧಗೊಳಿಸಲು ಅವರಿಗಾಗಿ ಆ ಶಾಲೆಗಳಲ್ಲೇ ವಾರಕ್ಕೊಮ್ಮೆ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುವುದುಂಟು.

ಸಾಮಾನ್ಯ ಪಾಲಿಟೆಕ್ನಿಕ್ (ಪ್ರೌಢ) ಶಾಲೆ : 6ನೆಯ ವರ್ಷದ ಮಕ್ಕಳು 10 ವರ್ಷದ ಪಾಲಿಟೆಕ್ನಿಕ್ ಪ್ರೌಢಶಾಲೆಯಲ್ಲಿ ವಿಧಿವತ್ತಾಗಿ ಶಿಕ್ಷಣ ಆರಂಭಿಸುವರು. ಅದು 4 ವರ್ಷಗಳ ಪ್ರಥಮ ಮತ್ತು 6 ವರ್ಷಗಳ ದ್ವಿತೀಯ ಹಂತಗಳಾಗಿ ವಿಭಾಗವಾಗಿದೆ. ಕೆಲವರು 4ವರ್ಷಗಳ ಅನಂತರ ಹಿರಿಯ ಶಾಲೆಯನ್ನು ಬಿಟ್ಟು ಉದ್ಯೋಗವೊಂದರಲ್ಲಿ ಉಮೇದುವಾರರಾಗಿ ಸೇರಿಕೊಳ್ಳುವರು. ಆಗ ಅವರಿಗೆ ಮೂರು ವರ್ಷದ ತನಕ ವಾರಕ್ಕೊಮ್ಮೆ ಉದ್ಯೋಗ ಶಿಕ್ಷಣ ನೀಡಲಾಗುತ್ತದೆ. ಆದರೆ ಬಹುತೇಕ ವಿದ್ಯಾರ್ಥಿಗಳು ಹಿರಿಯ ಶಾಲೆಯಲ್ಲಿ ಸಾಮಾನ್ಯ ಮತ್ತು ಔದ್ಯೋಗಿಕ ಸಿದ್ಧತೆಯ ಶಿಕ್ಷಣವನ್ನು ಪಡೆಯುವರು. ಹತ್ತು ವರ್ಷ ಶಿಕ್ಷಣ ಪಡೆದ ಅನಂತರ ಅವರು ಅಲ್ಲಲ್ಲಿ ಉದ್ಯೋಗಗಳ ಹಿತಾಸಕ್ತಿಯಲ್ಲಿ ಏರ್ಪಟ್ಟಿರುವ ಔದ್ಯೋಗಿಕ ಶಾಲೆಗೆ ಸೇರುವರು. ಆ ಶಾಲೆಗಳಲ್ಲಿ ವಿದ್ಯಾರ್ಥಿಗಳು ತಾವು ಸೇರಲಿರುವ ಉದ್ಯೋಗಕ್ಕೆ ಸಂಬಂಧಿಸಿದ ತರಪೇತು ಪಡೆಯುವರು. ಕೈಗಾರಿಕೆ, ಕೃಷಿ ವಾಣಿಜ್ಯ–ಇವಕ್ಕೆ ಸಂಬಂಧಿಸಿದ ಉದ್ಯೋಗಗಳಿಗೆ ತರಪೇತು ನೀಡುವ ಶಾಲೆಗಳೂ ಉಂಟು. ಕೆಲವು ವಿದ್ಯಾರ್ಥಿಗಳು 9ನೆಯ 10ನೆಯ ಹಾಗೂ 11ನೆಯ ತರಗತಿಗಳಲ್ಲಿ ಉಳಿದು ಸಾಮಾನ್ಯ ಮತ್ತು ವೃತ್ತಿಪರ ಶಿಕ್ಷಣ ಪಡೆದು ಉದ್ಯೋಗ ಕೌಶಲ್ಯದ ಅರ್ಹತಾಪತ್ರ ಪಡೆಯುವರು. ಅವರು ಪ್ರೌಢಿಮೆಯ ಪರೀಕ್ಷೆಗೂ ಕುಳಿತು ಉನ್ನತ ಶಿಕ್ಷಣ ಸಂಸ್ಥೆಗೆ ಪ್ರವೇಶಾರ್ಹತೆ ಪಡೆಯಬಹುದು.

ಉನ್ನತ ಪ್ರೌಢಶಾಲೆ : 9ನೆಯ ತರಗತಿಯ ಕೆಲವು ವಿದ್ಯಾರ್ಥಿಗಳು 12 ವರ್ಷದ ಉನ್ನತ ಪ್ರೌಢಶಾಲೆಗೆ ಸೇರಿ ಅಲ್ಲಿ ನಾಲ್ಕು ವರ್ಷಗಳ ಶಿಕ್ಷಣ ಪಡೆಯುವರು. ಆಗ ಅವರು ಆಧುನಿಕ ಭಾಷಾವಿಭಾಗದ ಶಾಖೆಯಲ್ಲೂ ಗಣಿತ, ನಿಸರ್ಗಶಾಸ್ತ್ರಗಳ ಶಾಖೆಯಲ್ಲೂ ಲಾಕ್ಷಣಿಕ ಭಾಷಾಶಾಖೆಯಲ್ಲೂ ಓದಬಹುದು. 7, 8ನೆಯ ತರಗತಿಗಳಲ್ಲಿ ಆಗಲೆ ಆರಂಭಿಸಿರುವ ಉದ್ಯೋಗದಲ್ಲಿ ಅವರು 9 ಮತ್ತು 10ನೆಯ ತರಗತಿಗಳಲ್ಲೂ ಶಿಕ್ಷಣ ಪಡೆಯುವರು. ಆದರೆ ಅವರು ಮುಖ್ಯವಾಗಿ ಪ್ರೌಢಿಮೆಯ ಪರೀಕ್ಷೆಗೆ ಕುಳಿತು ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಹೋಗತಕ್ಕವರು.

ಉನ್ನತ ಶಿಕ್ಷಣ : ವಿಶ್ವವಿದ್ಯಾಲಯಗಳು ಪೂರ್ವ ಜರ್ಮನಿಯ ಶಿಕ್ಷಣದ ನಿಚ್ಚಣಿಗೆಯಲ್ಲಿ ಅತ್ಯುನ್ನತ ಮೆಟ್ಟಿಲು. 1945ಕ್ಕೆ ಹಿಂದೆ ಆರಂಭವಾಗಿದ್ದ 7 ವಿಶ್ವವಿದ್ಯಾಲಯಗಳಲ್ಲಿ 1409ರಲ್ಲಿ ಲೈಪ್ಸಿಗ್ ವಿಶ್ವವಿದ್ಯಾಲಯವೇ ಪ್ರಾಚೀನತಮವಾದುದು. 1810ರಲ್ಲಿ ಆರಂಭವಾದ ಬರ್ಲಿನ್ನಿನ ಹುಂಬೋಲ್ಟ್ ವಿಶ್ವವಿದ್ಯಾಲಯ ಸಂಶೋಧನೆಗೆ ಪ್ರಾಧಾನ್ಯವಿತ್ತ ಮೊಟ್ಟಮೊದಲ ಆಧುನಿಕ ವಿಶ್ವವಿದ್ಯಾಲಯವಷ್ಟೇ. ಅದರಂತೆ 1828ರಲ್ಲಿ ಆರಂಭವಾದ ಡ್ರೆಸ್ಡನ್ ವಿಶ್ವವಿದ್ಯಾಲಯವೂ ಸಂಶೋಧನೆಗಳ ಮೂಲಕ ಔದ್ಯೋಗಿಕ ಸಮಾಜದ ಪ್ರಗತಿಗೆ ನೆರವಾಗುವ ಆಶಯದಿಂದ ಏರ್ಪಟ್ಟಿತು. 1945ರ ಅನಂತರ ಎಂಜಿನಿಯರಿಂಗ್ ಕಾಲೇಜುಗಳೂ ವೈದ್ಯವಿದ್ಯಾಲಯಗಳೂ ಕೃಷಿವಿದ್ಯಾಲಯಗಳೂ ವಾಣಿಜ್ಯ ವ್ಯವಹಾರಗಳ ವಿದ್ಯಾಲಯಗಳೂ ಅಧ್ಯಾಪಕರ ಶಿಕ್ಷಣದ ಕಾಲೇಜುಗಳೂ, ಲಲಿತಕಲಾಪೀಠಗಳೂ ಆಯಾ ಕ್ಷೇತ್ರದ ಉನ್ನತ ಶಿಕ್ಷಣಕ್ಕಾಗಿ ಆರಂಭ ವಾಗಿವೆ. ಅವುಗಳ ಒಟ್ಟು ಸಂಖ್ಯೆ 37. ಯುದ್ಧಪೂರ್ವ ಜರ್ಮನಿಯ ಉನ್ನತ ಶಿಕ್ಷಣ ಸಂಸ್ಥೆಗಳ ಸಂಪ್ರದಾಯದಂತೆ ಅವುಗಳೂ ಸಂಶೋಧನೆ ಮತ್ತು ಬೋಧನೆಗಳೆರಡನ್ನೂ ತಮ್ಮ ಕರ್ತವ್ಯವಾಗಿ ಪರಿಗಣಿಸಿವೆ.

ಪೂರ್ವ ಜರ್ಮನಿಯಲ್ಲಿ 35 ವರ್ಷ ವಯಸ್ಸಿನೊಳಗಿನ ಯಾರು ಬೇಕಾದರೂ ಉನ್ನತ ಶಿಕ್ಷಣ ಪಡೆಯಲು ಯತ್ನಿಸಬಹುದು. ಅಂಥವರು 12 ವರ್ಷದ ಉನ್ನತ ಪ್ರೌಢಶಾಲೆಯ ಅಥವಾ ತಾಂತ್ರಿಕ ಶಿಕ್ಷಣ ಸಂಸ್ಥೆಯ ಶಿಕ್ಷಣವನ್ನು ಮುಗಿಸಿರಬೇಕು. ಸಾಮಾನ್ಯವಾಗಿ ಅವರಿಗೆ ಒಂದು ಪ್ರವೇಶಪರೀಕ್ಷೆ ನಡೆಯುವುದು. ಅದಕ್ಕೆ ವಿಶ್ವವಿದ್ಯಾಲಯದ, ಅಧ್ಯಾಪಕ ವರ್ಗದ ಹಾಗೂ ಯುವಜನ ಸಂಘದ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ನೇಮಕವಾಗುವುದು. ಆ ಸಮಿತಿ ಉದ್ಯೋಗ ಶಿಕ್ಷಣವನ್ನು ಮುಗಿಸಿ ಎರಡು ವರ್ಷಗಳ ಕಾರ್ಯಾನುಭವವನ್ನೂ ಸೇನಾಸೇವೆಯನ್ನೂ ಮುಗಿಸಿದವರಿಗೆ ಆದ್ಯತೆ ನೀಡಿ ಉನ್ನತ ಶಿಕ್ಷಣಕ್ಕೆ ಆಯ್ಕೆಮಾಡುವುದು. ರಾಷ್ಟ್ರದಲ್ಲಿ ಇರತಕ್ಕ ಕುಶಲ ಹಾಗೂ ತಾಂತ್ರಿಕ ಜನಬಲದ ಅಗತ್ಯವನ್ನು ಅವಲಂಬಿಸಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ವಿಷಯಗಳನ್ನು ಆರಿಸಿಕೊಳ್ಳಬೇಕು. ಸಾಮಾನ್ಯವಾಗಿ ಅಲ್ಲಿ 5 ವರ್ಷದ ಪಠ್ಯಕ್ರಮವನ್ನು ಗೊತ್ತು ಮಾಡಿರುವುದುಂಟು. ಪೂರ್ವ ಜರ್ಮನಿಯ ಸಮಾಜ ರಚನೆಗೆ ಸಂಬಂಧಿಸಿದ ಮಾರ್ಕ್ಸನ ಮೂಲಭೂತ ತತ್ತ್ವಗಳ ಅಧ್ಯಯನ ಎಲ್ಲರಿಗೂ ಕಡ್ಡಾಯ. ವಿದ್ಯಾರ್ಥಿ ಸಾಧಿಸುವ ಶಿಕ್ಷಣಾಭಿವೃದ್ಧಿಯನ್ನೂ ತಾನು ಆಯ್ದುಕೊಂಡ ವಿಷಯದಲ್ಲಿ ನಡೆಸುವ ಪ್ರಾಯೋಗಿಕ ಅಧ್ಯಯನವನ್ನೂ ಎರಡು ವರ್ಷಕ್ಕೊಮ್ಮೆ ಪರೀಕ್ಷಿಸಿ ತೃಪ್ತಿಕರವಾಗಿದ್ದರೆ ಮಾತ್ರ ಮುಂದುವರಿಯಲು ಅವಕಾಶವೀಯಲಾಗುವುದು. ವಿದ್ಯಾರ್ಥಿಗಳಲ್ಲಿ ಸೇ. 85ರಷ್ಟು ಮಂದಿ ರಾಷ್ಟ್ರದಿಂದ ಸಹಾಯಧನ ಪಡೆಯುವರು. ಸಂಜೆಯ ಭಾಗಶಃ ಕಾಲದ ತರಗತಿಗಳೂ ಅಂಚೆ ಮುಖೇನ ಶಿಕ್ಷಣ ಸೌಲಭ್ಯವೂ ಅಸ್ತಿತ್ವದಲ್ಲಿವೆ.

ಉನ್ನತ ಶಿಕ್ಷಣದ ವಿದ್ಯಾರ್ಥಿಗಳಲ್ಲಿ ಸೇ. 60ಕ್ಕಿಂತ ಹೆಚ್ಚು ಮಂದಿ ಶ್ರಮಜೀವಿಗಳ ಕುಟುಂಬದಿಂದ ಬಂದವರಿರುತ್ತಾರೆ. ಸೇ. 20ರಷ್ಟು ಮಂದಿ ಮಧ್ಯಮ ವರ್ಗದವರೂ ಸುಮಾರು ಸೇ. 15ರಷ್ಟು ಮಂದಿ ಉನ್ನತವರ್ಗದ ಪ್ರತಿಭಾವಂತ ಸಮಾಜದವರೂ ಇರುವರು.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಸೇ. 30ರಷ್ಟು ಅಧ್ಯಾಪಕರ ವೃತ್ತಿಶಿಕ್ಷಣವನ್ನೂ ಸೇ.24ರಷ್ಟು ಎಂಜಿನಿಯರಿಂಗ್ ಶಿಕ್ಷಣವನ್ನೂ ಸೇ. 13ರಷ್ಟು ವೈದ್ಯಶಿಕ್ಷಣವನ್ನೂ ಪಡೆಯುವರು. ಇನ್ನುಳಿದವರು (ಇಳಿಮುಖದ ಅನುಕ್ರಮದಲ್ಲಿ) ಗಣಿತ ಮತ್ತು ನಿಸರ್ಗ ವಿಜ್ಞಾನ, ಕೃಷಿ, ತೋಟಗಾರಿಕೆ ಮತ್ತು ಅರಣ್ಯಶಾಸ್ತ್ರ, ತತ್ತ್ವಶಾಸ್ತ್ರ, ಇತಿಹಾಸ ಮತ್ತು ಭಾಷೆ, ನ್ಯಾಯಶಾಸ್ತ್ರ, ಲಲಿತಕಲೆಗಳು, ಪಶುವೈದ್ಯ, ದೈಹಿಕ ಶಿಕ್ಷಣ, ದೇವತಾಶಾಸ್ತ್ರ, ರಾಜ್ಯಶಾಸ್ತ್ರ, ಮತ್ತು ಪತ್ರಿಕೋದ್ಯಮ–ಈ ವಿಭಾಗಗಳನ್ನು ಆರಿಸಿಕೊಳ್ಳುವರು.

ವೈದ್ಯಶಾಸ್ತ್ರದ ಕಾಲೇಜುಗಳಲ್ಲಿ ಸೇ. 51ರಷ್ಟು ಮಹಿಳಾ ವಿದ್ಯಾರ್ಥಿಗಳಿರುವರು ; ಶಿಕ್ಷಣಶಾಸ್ತ್ರದ ಕಾಲೇಜಿನಲ್ಲಿ ಅವರು ಸೇ. 45ರಷ್ಟೂ ಕಲಾಶಾಸ್ತ್ರದ ವಿದ್ಯಾಲಯಗಳಲ್ಲಿ ಸುಮಾರು ಸೇ. 40ರಷ್ಟೂ ಸಮಾಜವಿಜ್ಞಾನದ ಶಿಕ್ಷಣಸಂಸ್ಥೆಗಳಲ್ಲಿ ಸೇ. 33ರಷ್ಟೂ ದೈಹಿಕ ಶಿಕ್ಷಣ ಸಂಸ್ಥೆಗಳಲ್ಲಿ ಸೇ. 30ರಷ್ಟೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾತ್ರ ಸೇ.8ರಷ್ಟೂ ಇರುವರು. ಒಟ್ಟಿನಲ್ಲಿ ಸಮಾಜವಾದಿ ಸಮಾಜರಚನೆಗೆ ಅನುಗುಣವಾಗಿ ಮಹಿಳೆಯರು ಶಿಕ್ಷಣದ ಎಲ್ಲ ಹಂತಗಳಲ್ಲೂ ಪುರುಷರಿಗೆ ಸರಿಸಮಾನದ ಸಂಖ್ಯೆಯಲ್ಲಿ ಸೇರುತ್ತಿರುವರು.

ಅಧ್ಯಾಪಕರ ಶಿಕ್ಷಣ : ಅಧ್ಯಾಪಕರ ಶಿಕ್ಷಣ ಹಲವಾರು ವಿಧದ ಸಂಸ್ಥೆಗಳಲ್ಲಿ ವ್ಯವಸ್ಥೆಗೊಂಡಿದೆ. ಕಿಂಡರ್‌ಗಾರ್ಟನ್ ಮತ್ತು ಪ್ರಾಥಮಿಕ ನಾಲ್ಕನೆಯ ತರಗತಿಯವರೆಗಿನ ಶಿಕ್ಷಕರು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಶಿಕ್ಷಣ ಪಡೆಯುವರು. ಕಿಂಡರ್‌ಗಾರ್ಟನ್ ಶಿಕ್ಷಕರಿಗೆ ಅದು ಎರಡು ವರ್ಷಗಳ ಅವಧಿಯದೂ ಪ್ರಾಥಮಿಕ ಶಿಕ್ಷಕರಿಗೆ ಮೂರು ವರ್ಷಗಳ ಅವಧಿಯದೂ ಆಗಿರುತ್ತದೆ. 5ರಿಂದ 12ನೆಯ ತರಗತಿಯ ಅಧ್ಯಾಪಕರು ತಮ್ಮ ತಮ್ಮ ವಿಷಯಗಳಲ್ಲಿ ಹೆಚ್ಚಿನ ಪರಿಶ್ರಮ ಪಡೆದಿರಬೇಕಾಗುವುದರಿಂದ ಅವರು ವಿಶ್ವವಿದ್ಯಾಲಯಗಳಲ್ಲೊ ಅಧ್ಯಾಪಕರ ಕಾಲೇಜುಗಳಲ್ಲೊ 5 ವರ್ಷಗಳ ಅವಧಿಯ ಶಿಕ್ಷಣ ಪಡೆಯುವರು. ಅಂಚೆ ಮುಖೇನ ಶಿಕ್ಷಣದ ಸೌಲಭ್ಯವನ್ನೂ ಪಡೆಯಬಹುದು.

ವೃತ್ತಿನಿರತ ಅಧ್ಯಾಪಕರು ತಮ್ಮ ಕ್ಷೇತ್ರದಲ್ಲಿ ಆಗಿರುವ ಮುನ್ನಡೆಯನ್ನು ಪರಿಚಯ ಮಾಡಿಕೊಳ್ಳಲು ವೃತ್ತಿನಿರತ ಅಧ್ಯಾಪಕರಿಗಾಗಿ ಏರ್ಪಡುವ ವಿಶೇಷ ತರಗತಿಗಳಲ್ಲೂ ಉಪನ್ಯಾಸಮಾಲೆಗಳಲ್ಲೂ ಭಾಗವಹಿಸುವರು. ವೃತ್ತಿಯಲ್ಲಿದ್ದುಕೊಂಡು ಅಧ್ಯಯನವನ್ನು ಮುಂದುವರಿಸಿ ಉನ್ನತ ಪದವಿಗಳನ್ನೂ ಗಳಿಸಬಹುದು. ಅದಕ್ಕೆ ತಗಲುವ ವೆಚ್ಚವನ್ನು ಸರ್ಕಾರ ವಹಿಸಿಕೊಳ್ಳುವುದು.

ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣ : ಪೂರ್ವ ಜರ್ಮನಿಯಲ್ಲಿ ಶಿಕ್ಷಣ ಆದ್ಯಂತವಾಗಿ ಉದ್ಯೋಗಮುಖವಾಗಿ ವ್ಯವಸ್ಥೆಯಾಗಿರುವುದರ ಜೊತೆಗೆ ಕುಶಲ ಕೆಲಸಗಾರರನ್ನೂ ತಾಂತ್ರಿಕ ಜನಬಲವನ್ನೂ ರೂಪಿಸುವ ವಿಶಿಷ್ಟ ಉದ್ದೇಶದ ಸಂಸ್ಥೆಗಳೂ ಏರ್ಪಟ್ಟಿವೆ. ನಿಪುಣ ತಂತ್ರಜ್ಞರನ್ನೂ ಮಧ್ಯಮಟ್ಟದ ಕುಶಲಕಾರ್ಮಿಕರನ್ನೂ ರೂಪಿಸಲು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಏರ್ಪಟ್ಟಿವೆ. ಅಲ್ಲಿ ವಿದ್ಯುತ್‌ತಂತ್ರಜ್ಞರೂ ಅರಣ್ಯಸಂರಕ್ಷಕರೂ ನಕಾಶೆ ಬರೆಯುವವರೂ ಭಾಷಾಂತರಕಾರರೂ ಪತ್ರಾಗಾರದ ಅಧಿಕಾರಿಗಳೂ ಸಂಗೀತಗಾರರೂ ನಟರೂ ಶಿಕ್ಷಣ ಪಡೆಯುವರು. ಅಲ್ಲಿನ ಶಿಕ್ಷಣ ಮೂರು ವರ್ಷಗಳ ಕಾಲಾವಧಿಯದಾಗಿರುತ್ತದೆ. ಅಲ್ಲಿಗೆ ಯಾರು ಬೇಕಾದರೂ ಪ್ರವೇಶ ಬಯಸಬಹುದಾದರೂ ಉದ್ಯೋಗದ ಅರ್ಹತಾಪತ್ರವನ್ನು ಕಡ್ಡಾಯ ಮಾಡಿರುವರು. ಅಲ್ಲಿ ಶಿಕ್ಷಣ ಮುಗಿಸಿದವರು ವಿಶ್ವವಿದ್ಯಾಲಯದಲ್ಲಿ ಪ್ರವೇಶಾವಕಾಶವನ್ನು ಪಡೆಯುವರು.

ಪಠ್ಯಕ್ರಮ : ಔದ್ಯೋಗಿಕವಾಗಿ, ಬೌದ್ಧಿಕವಾಗಿ, ನೈತಿಕವಾಗಿ, ದೈಹಿಕವಾಗಿ ಚೆನ್ನಾಗಿ ಅಭಿವೃದ್ಧಿ ಸಾಧಿಸಿದ, ಸಾಮಾಜಿಕವಾಗಿ ಸೃಜನಶೀಲರಾಗಿರುವ ಹಾಗೂ ಕಾವ್ಯದಂತೆ ಗಣಿತ, ಯಂತ್ರವಿಜ್ಞಾನ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಲ್ಲೂ ಆಸಕ್ತಿಯುಳ್ಳ ವ್ಯಕ್ತಿಗಳ ನಿರ್ಮಾಣ ಪೂರ್ವ ಜರ್ಮನ್ ಶಿಕ್ಷಣದ ಅಧಿಕೃತ ಉದ್ದೇಶ. ಅದರ ಸಾಧನೆಗಾಗಿ ಉಚಿತವೆನಿಸುವ ಪಠ್ಯಯೋಜನೆಯನ್ನು ಬೇರೆಬೇರೆ ಹಂತಗಳ ಶಿಕ್ಷಣ ಸಂಸ್ಥೆಗಳಲ್ಲಿ ನಿಯೋಜಿಸಿದೆ. ಕಿಂಡರ್‌ಗಾರ್ಟನ್ ಶಾಲೆಯಲ್ಲಿ ಜರ್ಮನ್ ಭಾಷೆ ಮತ್ತು ಸಂಖ್ಯಾಪರಿಚಯ ವನ್ನು ಬೋಧಿಸುವರು. ಆಟಗಳ ಮೂಲಕ ಜೀವನದ ಮೂಲಭೂತ ಪರಿಚಯವನ್ನೂ ಉದ್ಯೋಗ, ಶ್ರಮಜೀವನ ಮತ್ತು ತನ್ನ ವಾತಾವರಣಗಳ ಪರಿಚಯವನ್ನೂ ಅರಿಯಲು ಸಹಾಯ ಮಾಡುವರು. ಮಕ್ಕಳ ಪರಿಶೀಲನೆ ಮತ್ತು ಆಲೋಚನೆಯ ಶಕ್ತಿಗಳನ್ನು ಉತ್ತೇಜಿಸಿ, ಸಹಕರಿಸಿ ದುಡಿಯುವ ಮತ್ತು ಕೊಟ್ಟ ಕೆಲಸವನ್ನು ಮಾಡುವ ಪ್ರವೃತ್ತಿಯನ್ನು ಬೆಳೆಸುವರು. ವರ್ಣಕಲೆ, ಸಂಗೀತ, ಕೈಕೆಲಸಗಳ ಮೂಲಕ ಅವರ ದೈಹಿಕ ಕೌಶಲ್ಯ, ರಚನಾತ್ಮಕ ಕಲ್ಪನೆ, ರುಚಿಶುದ್ಧಿ ಮುಂತಾದವನ್ನು ಪೋಷಿಸುವರು. ಆರೋಗ್ಯ ಮತ್ತು ದೇಹವೃದ್ಧಿಗೆ ಅನುಗುಣವಾದ ಅಂಗಸಾಧನೆ ಆಟೋಟಗಳನ್ನು ಸೇರಿಸಿರುವರು. ಪಾಲಿಟೆಕ್ನಿಕ್ಕಿನ ಕೆಳಹಂತದ 4 ವರ್ಷದ ಶಾಲೆಯಲ್ಲಿ ಓದುಗಾರಿಕೆ, ಬರೆವಣಿಗೆ, ಭಾಷಾಕೌಶಲ್ಯ, ಗಣಿತ, ನಿಸರ್ಗದ ಹಾಗೂ ಸಮಾಜವಾದಿ ರಾಷ್ಟ್ರಜೀವನದ ಮೂಲತತ್ತ್ವಗಳ ಸ್ವರೂಪವನ್ನು ಪರಿಚಯ ಮಾಡಿಕೊಡಲಾಗುವುದು. ಜರ್ಮನ್ ಭಾಷೆ, ಅಂಕಗಣಿತ, ಕಸಬುಕಲೆಗಳು (ಕೈಕೆಲಸ), ಚಿತ್ರಬರೆಯುವುದು, ಅಂಗಸಾಧನೆ ಮತ್ತು ಹೊಲಿಗೆಯ ಕೆಲಸ ಇವನ್ನೂ ಬೋಧಿಸುವರು. 5ನೆಯ ವರ್ಷದಿಂದ ಪ್ರತಿ ವಿಷಯದಲ್ಲೂ ತಜ್ಞರಾದವರು ತಮ್ಮತಮ್ಮ ವಿಷಯಗಳನ್ನು ಬೋಧಿಸುವರು. ಜರ್ಮನ್ ಭಾಷೆ, ಚರಿತ್ರೆ, ಪೌರನೀತಿ, ಭೂವಿವರಣೆ, ರಷ್ಯನ್ ಭಾಷೆ, ಗಣಿತ, ಭೌತವಿಜ್ಞಾನ, ಖಗೋಳವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ, ಕೈಕೆಲಸ, ತಾಂತ್ರಿಕ ನಕ್ಷೆ, ಸಂಗೀತ ಮತ್ತು ಸಮಾಜವಾದಿ ಉತ್ಪನ್ನ ಕಾರ್ಯದಲ್ಲಿ ತರಪೇತು–ಇವನ್ನೆಲ್ಲ ಅಲ್ಲಿ ಸೇರಿಸಿರುವರು. ಇಂಗ್ಲಿಷ್ ಅಥವಾ ಫ್ರೆಂಚ್ ಭಾಷೆಯನ್ನು ದ್ವಿತೀಯ ಪರಭಾಷೆಯನ್ನಾಗಿ ವ್ಯಾಸಂಗ ಮಾಡುವುದನ್ನು ಐಚ್ಛಿಕ ಮಾಡಿದೆ. ಜರ್ಮನ್ ಭಾಷೆ ಮತ್ತು ಸಾಹಿತ್ಯ, ಗಣಿತ ಮತ್ತು ರಷ್ಯನ್ ಭಾಷೆಯ ಅಧ್ಯಯನಕ್ಕೆ ಪ್ರಾಮುಖ್ಯವಿತ್ತಿದೆ. ಪ್ರೌಢಶಿಕ್ಷಣದ ಹಂತವನ್ನು ಮುಟ್ಟಿದಂತೆ ಕೈಕೆಲಸ ಹೊಲಿಗೆಕೆಲಸಗಳಿಗೆ ಬದಲು ಉದ್ಯೋಗ ಶಿಕ್ಷಣ ಆರಂಭವಾಗುತ್ತದೆ. ಮೊದಲು ಅದು ಜೀವವಿಜ್ಞಾನ ಪಾಠಕ್ಕೆ ಸೇರಿದಂತೆ ತೋಟದ ಕೆಲಸದಲ್ಲಿ ಮೊದಲಾಗುತ್ತದೆ. 7ನೆಯ ತರಗತಿಯಲ್ಲಿ ವಾರಕ್ಕೊಂದು ದಿನ ಔದ್ಯೋಗಿಕ ಶಿಕ್ಷಣಕ್ಕೆ ಮೀಸಲಾಗುತ್ತದೆ. ಕಾರ್ಖಾನೆ, ಬೇಸಾಯ ಕ್ಷೇತ್ರ ಅಥವಾ ಇತರ ಉತ್ಪನ್ನ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಕೆಲಸ ಮಾಡಬೇಕು. ಆ ಮೂಲಕ ವಿದ್ಯಾರ್ಥಿಗಳು ಔದ್ಯೋಗಿಕ

ಮತ್ತು ಕೃಷಿ ಉತ್ಪನ್ನಗಳ ವಿಧಾನವನ್ನೂ ಸಂಬಂಧಿಸಿದ ಜ್ಞಾನವನ್ನೂ ಪಡೆಯುವರು. ಸಮಾಜವಾದಿ ರಾಷ್ಟ್ರದ ತತ್ತ್ವದೃಷ್ಟಿ ಮತ್ತು ವಿವಿಧ ಉದ್ಯೋಗಗಳನ್ನು ವಿಜ್ಞಾನ ಪಾಠದಲ್ಲಿ ಸೇರಿಸಿಕೊಂಡು ಬೋಧಿಸುವರು. ಅಲ್ಲಿ ಬೋಧಿಸುವ ಯಂತ್ರವಿಜ್ಞಾನ, ಅರ್ಥಶಾಸ್ತ್ರ, ಯಂತ್ರಶಿಲ್ಪ, ಎಲೆಕ್ಟ್ರಾನಿಕ್ಸ್–ಈ ವಿಷಯಗಳು ಔದ್ಯೋಗಿಕ ಕ್ಷೇತ್ರಗಳಿಗೆ ಸಂಬಂಧಿಸಿರುತ್ತವೆ. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಯಂತ್ರವಿಜ್ಞಾನ, ಸಸ್ಯಪೋಷಣೆ, ಪಶುಸಂಗೋಪನ, ವ್ಯವಸಾಯೋಪಕರಣಗಳ ಯಂತ್ರಶಿಲ್ಪ ಮತ್ತು ವಿದ್ಯುತ್‍ಶಿಲ್ಪ–ಇವನ್ನು ಸೇರಿಸಿರುವರು. 9, 10ನೆಯ ತರಗತಿಗಳಲ್ಲಿ ಯಾವ ಉದ್ಯೋಗವನ್ನೇ ಬೋಧಿಸಲಿ ಅದು ಅಂದಿಗಾಗಲೇ ಅವರು ಪಡೆದಿರುವ ಜ್ಞಾನ ಮತ್ತು ಅನುಭವಗಳ ಆಧಾರದ ಮೇಲೆ ಬೋಧನೆಯಾಗುತ್ತದೆ. ಶಾಲಾದಿನಗಳಲ್ಲಿ ಕಮ್ಯುನಿಸ್ಟ್ ತತ್ತ್ವದೃಷ್ಟಿಯಲ್ಲೂ ನಿಷ್ಠೆಯಿಂದ ಸರ್ಕಾರಕ್ಕೆ ನಡೆದುಕೊಳ್ಳುವ ಜೀವನವಿಧಾನದಲ್ಲೂ ತರಪೇತು ನೀಡಲಾಗುವುದು. ವಿಶ್ವವಿದ್ಯಾಲಯದಲ್ಲೂ ವಾರಕ್ಕೆ ಎರಡು ಗಂಟೆಗಳ ಕಾಲ ಮಾರ್ಕ್ಸ್–ಲೆನಿನ್ ತತ್ತ್ವವನ್ನು ಕಡ್ಡಾಯವಾಗಿ ಬೋಧಿಸುವರು. ಒಟ್ಟಿನಲ್ಲಿ ವ್ಯಕ್ತಿಯ ಪರಿಪೂರ್ಣ ಬೆಳವಣಿಗೆಯ ಅಗತ್ಯವನ್ನೂ ಆ ಬೆಳವಣಿಗೆ ರಾಷ್ಟ್ರಹಿತಕ್ಕಾಗಿ ಎಂಬುದನ್ನೂ' ಪಠ್ಯಕ್ರಮ ಕಾರ್ಯರೂಪಕ್ಕಿಳಿಸುವಂತಿರುತ್ತದೆ.

ವಿಶಿಷ್ಟ ಶಿಕ್ಷಣ : ಸಮಾಜದಲ್ಲಿ ಪ್ರತಿಭಾವಂತರು ವಿರಳ ; ಹಾಗೂ ಅಪ್ರತಿಮ ಪ್ರತಿಭಾವಂತರು ಇನ್ನೂ ವಿರಳ. ಪೂರ್ವ ಜರ್ಮನಿಯಲ್ಲಿ ಅಂಥ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಅವರಿಗೆ ವಿಶಿಷ್ಟ ಶಿಕ್ಷಣ ಸೌಲಭ್ಯವನ್ನೊದಗಿಸುವ ವ್ಯವಸ್ಥೆಯಿದೆ. ಅವರಿಗಾಗಿ ಹನ್ನೆರಡು ತರಗತಿಗಳ ಶಾಲೆಗಳನ್ನು ಆರಂಭಿಸಿರುವರು. ಸೋವಿಯೆತ್ ದೇಶದಲ್ಲಿರುವ ಈ ಮಾದರಿಯ ಪಾಠಶಾಲೆಗಳಂತೆ ಇಲ್ಲಿಯೂ ಗಣಿತ, ಭೌತವಿಜ್ಞಾನ, ರಸಾಯನವಿಜ್ಞಾನ, ಅವರ ಅಭಿರುಚಿಯಂತೆ ವಿಧವಿಧವಾದ ತಾಂತ್ರಿಕ ಉದ್ಯೋಗಗಳು, ಅನ್ಯಭಾಷೆ, ಅಭಿನಯಕಲೆ ಮುಂತಾದವುಗಳಲ್ಲಿ ಆಳವಾದ ಶಿಕ್ಷಣವೀಯಲಾಗುವುದು. ಪ್ರಾಥಮಿಕ ವಯಸ್ಸಿನ ಮಕ್ಕಳು ಆ ಶಾಲೆಗೆ ಸೇರಿ ಅದನ್ನು ಮುಗಿಸುವ ವೇಳೆಗೆ ಸಾಮಾನ್ಯ ಶಿಕ್ಷಣದ ಜೊತೆಗೆ ಅವರವರ ಅಭಿರುಚಿಗೊಪ್ಪುವ ಆಳವಾದ ವಿಶಿಷ್ಟ ಶಿಕ್ಷಣವನ್ನೂ ಪಡೆಯುವರು.

ವಿಕಲಾಂಗ ಮಕ್ಕಳಿಗಾಗಿ ವಸತಿ ವಿದ್ಯಾಲಯಗಳೂ ಅವರವರ ಮನೆಗಳಲ್ಲೇ ವಿಶಿಷ್ಟ ಶಿಕ್ಷಣ ದೊರಕಿಸುವ ವ್ಯವಸ್ಥೆಯೂ ಉಂಟು. ತಬ್ಬಲಿ (ನಿರ್ಗತಿಕ) ಮಕ್ಕಳಿಗೂ ತಾಯಂದಿರು ಸಾಕಲಾರದ ಮಕ್ಕಳಿಗೂ ಅನಾಥಾಲಯಗಳೂ ಶಿಶುಗೃಹಗಳೂ ಏರ್ಪಟ್ಟಿವೆ. ಭಾವವಿಕಾರ ಕ್ಕೊಳಗಾದವರ ಹಾಗೂ ಬಾಲಾಪರಾಧಿಗಳ ಶಿಕ್ಷಣಕ್ಕೂ ವಿಶೇಷ ಸಂಸ್ಥೆಗಳು ಅಸ್ತಿತ್ವದಲ್ಲಿವೆ.

ಯುವಜನ ಶಿಕ್ಷಣ : ಶಾಲೆಯಲ್ಲಿ ನೀಡುವ ಶಿಕ್ಷಣಕ್ಕೆ ಪೂರಕವೆನಿಸುವಂತೆ ಕಮ್ಯುನಿಸ್ಟ್ ಪಕ್ಷೀಯ ಬೋಧನೆಗೂ ಕಾರ್ಯಕ್ರಮಗಳಿಗೂ ಮೀಸಲಾದ ಹಲವು ಸಂಸ್ಥೆಗಳಿವೆ. ಪಯೊನಿಯರ್ಸ್, ಫ್ರೀ ಡಾಯಿಟ್ಷೆ ಯೂಗೆಂಡ್ (ಎಫ್. ಡಿ. ಜೆ.) ಮುಂತಾದ ಸಂಸ್ಥೆಗಳು ರಷ್ಯದಲ್ಲಿರುವ ಅಂಥ ಸಂಸ್ಥೆಗಳ ಮಾದರಿಯಲ್ಲಿ ವ್ಯವಸ್ಥೆಗೊಂಡಿವೆ. ಯುವಜನರಿಗೆ ಶಾಲಾ ಗ್ರಂಥಾಲಯಗಳೂ ಸಾರ್ವಜನಿಕ ಗ್ರಂಥಾಲಯಗಳೂ ಶಿಕ್ಷಣ ಸೌಲಭ್ಯವನ್ನು ಒದಗಿಸುತ್ತವೆ. ವಿದ್ಯಾರ್ಥಿಗಳು ನಾಟಕ, ಸಂಗೀತ ಕಚೇರಿ, ನೃತ್ಯಪ್ರದರ್ಶನ ಮುಂತಾದುವಕ್ಕೆ ಹೋಗುವ ಸೌಲಭ್ಯವೂ ಉಂಟು. ಅವನ್ನು ಶಾಲೆಯ ಕಾರ್ಯವೆಂದು ಪರಿಗಣಿಸುವರು. ರಜಾಕಾಲದಲ್ಲಿ ಪಯೊನಿಯರ್ಸ್ ಮತ್ತು ಔದ್ಯೋಗಿಕ ಸಂಘಸಂಸ್ಥೆಗಳು ಏರ್ಪಡಿಸುವ ಶಿಬಿರಗಳಲ್ಲೂ ಭಾಗವಹಿಸುವ ಅವಕಾಶವುಂಟು.

ಇಡೀ ದಿನದ ಶಾಲೆ : ಮುಂಜಾನೆ ಕಾರ್ಖಾನೆ, ಕಾರ್ಯಾಲಯ ಕೃಷಿಕ್ಷೇತ್ರ ಮುಂತಾದುವುಗಳಲ್ಲಿ ಕೆಲಸಕ್ಕೆ ಹೋಗತಕ್ಕ ತಂದೆತಾಯಿಗಳ ಮಕ್ಕಳ ಅನುಕೂಲಕ್ಕಾಗಿ ಇಡೀ ದಿನದ ಶಾಲೆಗಳು ಆರಂಭವಾಗಿವೆ. ಅಲ್ಲಿ ಮಕ್ಕಳು ಬೆಳಿಗ್ಗೆ ಮಾತ್ರ ಇರದೆ ಸಂಜೆಯವರೆಗೂ ಇದ್ದು ಪಾಠ ಕಲಿಯುವರು. ಅಂಥ ಶಾಲೆಗಳಲ್ಲಿ ಮಕ್ಕಳನ್ನು ತರಗತಿಗಳಾಗಿ ವಿಂಗಡಿಸದೆ ಅಭಿರುಚಿಯ ಆಧಾರದ ಮೇಲೆ ಗುಂಪುಗಳನ್ನಾಗಿ ಮಾಡಿ ಬೋಧಿಸುವರು. ಅವರಿಗೆ ಅಲ್ಲೇ ಮಧ್ಯಾಹ್ನದ ಊಟಕ್ಕೂ ಏರ್ಪಡಿಸುವರು.

ಆಡಳಿತ ವ್ಯವಸ್ಥೆ : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಆಡಳಿತದ ಹೊಣೆ ರಾಜ್ಯಸರ್ಕಾರದ ಸಚಿವಾಲಯಕ್ಕೆ ಸೇರಿದೆ. ಪ್ರಾದೇಶಿಕ ಮತ್ತು ಜಿಲ್ಲಾ ಮಟ್ಟಗಳಲ್ಲಿ ಆಡಳಿತದ ಉಪವಿಭಾಗಗಳಿವೆ. ರಾಜ್ಯದ ಉನ್ನತ ಮತ್ತು ತಾಂತ್ರಿಕ ಶಿಕ್ಷಣಗಳ ಕಾರ್ಯದರ್ಶಿ (ಸಚಿವ) ಉನ್ನತ ಶಿಕ್ಷಣದ ಆಡಳಿತವನ್ನು ನಡೆಸುತ್ತಾನೆ. ಔದ್ಯೋಗಿಕ ಶಿಕ್ಷಣದ ಆಡಳಿತಕ್ಕಾಗಿ ಒಬ್ಬ ಅಧಿಕಾರಿ ಇದ್ದಾನೆ. ಯುವಜನ ಶಿಕ್ಷಣಕ್ಕಾಗಿ ಒಬ್ಬ ಸಂಸ್ಕೃತಿ ಸಚಿವನುಂಟು. ಅವರೆಲ್ಲ ರಾಷ್ಟ್ರದ ಮಂತ್ರಿಮಂಡಲಕ್ಕೆ ಸೇರಿದವರಾಗಿದ್ದು ಕಾರ್ಯಾಚರಣೆಯ ಶಾಸನ ವಿಧಾನಸಭೆಯ ಸದಸ್ಯರಾಗಿರುವರು. ಕಮ್ಯೂನಿಸ್ಟ್ ಪಕ್ಷವು ಶಿಕ್ಷಣದ ನೀತಿಯನ್ನು ನಿರೂಪಿಸುವ ಪರಮಾಧಿಕಾರ ಹೊಂದಿರುತ್ತದೆ. ಶಾಲೆಗಳ ಮತ್ತು ಅವುಗಳ ಸುಧಾರಣೆಗಳ ಬಗ್ಗೆ ಕಮ್ಯೂನಿಸ್ಟ್ ಪಕ್ಷ ಪೋಷಕರೊಡನೆ ಆಲೋಚಿಸುವುದು. ಹಾಗೆಯೇ ಆಯಾ ಪ್ರದೇಶದ ಟ್ರೇಡ್ ಯೂನಿಯನ್ ನಾಯಕರೊಡನೆಯೂ ಸಮಾಲೋಚನೆ ನಡೆಸುವುದು. ಶಿಕ್ಷಣದ ಮಟ್ಟ, ಬೋಧನಕ್ರಮ, ಉಪಕರಣಗಳ ಸರಬರಾಜು, ಮಕ್ಕಳ ಆರೋಗ್ಯಜೀವನ ಮುಂತಾದ ವಿಷಯಗಳಲ್ಲಿ ಆಸಕ್ತಿವಹಿಸಲು ಪೋಷಕರಿಗೆ ಪ್ರೋತ್ಸಾಹ ನೀಡುವುದು.

ನೂತನ ಪ್ರವೃತ್ತಿಗಳು : ಪೂರ್ವ ಜರ್ಮನಿಯಲ್ಲಿ ಶಿಕ್ಷಣ ಒಂದು ರಾಜಕೀಯ ಉಪಕರಣ. ವಿವಿಧ ಕಲಾಶಿಕ್ಷಣದ ಪಾಲಿಟೆಕ್ನಿಕ್ಕುಗಳ ಮೂಲಕವೂ ಪೂರ್ವ ಜರ್ಮನ್ ರಾಷ್ಟ್ರಭಾವನೆಯ ಪ್ರಚಾರದ ಮೂಲಕವೂ ಶಿಕ್ಷಣದ ರಾಷ್ಟ್ರಹಿತಕ್ಕಾಗಿ ಕೆಲಸಮಾಡುತ್ತಿದೆ. ಈ ನಿಯಂತ್ರಣವನ್ನು ಸ್ವಾತಂತ್ರ್ಯಪ್ರಿಯ ಯುವಜನರು ಪ್ರತಿಭಟಿಸುವುದು ಸ್ವಾಭಾವಿಕ. ಆದರೆ ಅದಕ್ಕೆ ಅವಕಾಶವೀಯದಿರಲು ಸರ್ಕಾರ ಅಂದಂದು ಬಿಗಿಮುಷ್ಟಿಯನ್ನು ಪ್ರಯೋಗಿಸಬೇಕಾಗುತ್ತದೆ.

ವಯಸ್ಸಾದ ಮಕ್ಕಳಿಗೆ ನೀಡುವ ಔದ್ಯೋಗಿಕ ಶಿಕ್ಷಣ, ತರಪೇತಿ ಮತ್ತು ಪ್ರಾಯೋಗಿಕ ಶಿಕ್ಷಣ ಇವುಗಳ ಮೂಲಕ ರಾಷ್ಟ್ರದ ಆರ್ಥಿಕ ಜೀವನಕ್ಕೂ ಶಿಕ್ಷಣಕ್ಕೂ ಪೂರ್ವ ಜರ್ಮನಿ ನಿಕಟ ಸಂಪರ್ಕವನ್ನು ಕಲ್ಪಿಸಿಕೊಂಡಿದೆ. ಹಿಂದೆ ಎಂಟನೆಯ ತರಗತಿಯವರೆಗೆ ಮಾತ್ರ ಶಾಲೆಗೆ ಬರುತ್ತಿದ್ದ ಕೆಳವರ್ಗದ ಜನತೆಗೆ ಉನ್ನತ ಶಿಕ್ಷಣದವರೆಗೂ ಸಾಗಲು ಅವಕಾಶ ಒದಗಿಸಿ, ಸಾಮಾಜಿಕ ಅಂತಸ್ತಿನ ಪರಿಗಣನೆಯೇ ಇಲ್ಲದೆ ಪ್ರತಿಭಾವಂತರಿಗೆ ವಿಶೇಷ ಶಿಕ್ಷಣ ಸೌಲಭ್ಯವನ್ನು ನೀಡಿ, ತಾಂತ್ರಿಕ ಕೌಶಲ್ಯಕ್ಕೆ ಉನ್ನತ ಸ್ಥಾನವಿತ್ತು ಕಮ್ಯೂನಿಸ್ಟ್ ತತ್ತ್ವವನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಯತ್ನಿಸುತ್ತಿದೆ. ರಾಷ್ಟ್ರದ ದುಡಿವವರ ಕೊರತೆಯನ್ನು ನೀಗಲು ಶಿಕ್ಷಣದಲ್ಲಿ ಕಾರ್ಯಾನುಭವಕ್ಕೆ ಪ್ರಾಮುಖ್ಯ ನೀಡಿದೆ.

ಶಿಕ್ಷಣದಲ್ಲಿ ಜನತೆಯ ಆಸಕ್ತಿಯನ್ನು ಮುಂದುವರಿಸಲು ಪೂರ್ವ ಜರ್ಮನಿ ಕೆಲವು ಹಿಂದಿನ ಸಂಪ್ರದಾಯಗಳನ್ನು ಉಳಿಸಿಕೊಂಡಿದೆ. ತರಗತಿಗಳ ಸಂಖ್ಯೆ, ಪಠ್ಯವಿಷಯಗಳ ಸೇರ್ಪಡೆ, ಕೆಳಗಿನ ತರಗತಿಗಳಲ್ಲಿ ಇಡೀ ದಿನವೆಲ್ಲ ಒಬ್ಬ ಅಧ್ಯಾಪಕರೇ ಬೋಧಿಸುವುದು–ಇವೆಲ್ಲ ಆ ರೀತಿಯ ಸಂಪ್ರದಾಯಗಳು; ಚಲನಚಿತ್ರ, ರೇಡಿಯೊ, ಟೆಲಿವಿಷನ್ ತುಂಬ ಪ್ರಿಯವೆನಿಸುವ ಸಾಮೂಹಿಕ ಶಿಕ್ಷಣಸಾಧನವೆನಿಸಿವೆ. ವಿಶ್ವವಿದ್ಯಾಲಯಕ್ಕೂ ಉನ್ನತ ಪ್ರೌಢಶಾಲೆಗೂ ಪ್ರವೇಶಾವಕಾಶ ನೀಡುವಾಗ ವಿದ್ಯಾರ್ಥಿಯ ಶಿಕ್ಷಣಾಭಿವೃದ್ಧಿಗೆ ಗಮನ ಕೊಡಲಾಗುತ್ತಿದೆ. ಇದು ಕಮ್ಯೂನಿಸ್ಟ್ ಪಕ್ಷ ಎತ್ತಿಹಿಡಿದಿರುವ ಎಲ್ಲರಿಗೂ ವಿಶಾಲಾವಕಾಶದ ಶಿಕ್ಷಣದ ದೃಷ್ಟಿಗೆ ವಿರುದ್ಧವಾಗಿ ತೋರಬಹುದು. (ಎನ್.ಎಸ್.ವಿ.)

**ಜರ್ಮನ್ ಸಾಹಿತ್ಯ :** ಇಲ್ಲಿ ಜರ್ಮನ್ ಸಾಹಿತ್ಯವೆಂದರೆ ಜರ್ಮನಿ, ಆಸ್ಟ್ರಿಯ ಮತ್ತು ಸ್ವಿಟ್‍ಜ಼ರ್‍ಲೆಂಡ್‍ಗಳಲ್ಲಿ ವಾಸಿಸುತ್ತಿದ್ದು ಜರ್ಮನ್ ಮಾತನಾಡುವ ಐರೋಪ್ಯರ ಸಾಹಿತ್ಯವೆಂದು ಅರ್ಥವಿಸಲಾಗಿದೆ. ಜರ್ಮನ್ ಸಾಹಿತ್ಯವನ್ನು ಸುಲಭವಾಗಿ ಎಂಟು ಭಾಗಗಳಾಗಿ ವಿಭಜಿಸಬಹುದು: 1 ಹಳೆಯ ಹೈ ಜರ್ಮನ್ ಯುಗ, 2 ಮಧ್ಯದ ಹೈ ಜರ್ಮನ್ ಯುಗ, 3 ಹದಿನೈದು ಮತ್ತು ಹದಿನಾರನೆಯ ಶತಮಾನಗಳು, 4 ಹದಿನೇಳನೆಯ ಶತಮಾನ, 5 ಹೊಸ ಅರಿವಿನ ಕಾಲ, 6 ಗಯಟೆಯ ಯುಗ, 7 ಹತ್ತೊಂಬತ್ತನೆಯ ಶತಮಾನ, 8 ಇಪ್ಪತ್ತನೆಯ ಶತಮಾನ.

**1. ಹಳೆಯ ಹೈ ಜರ್ಮನ್ ಯುಗ :** ಜರ್ಮನ್ ಭಾಷೆಯಲ್ಲಿನ ಮೊಟ್ಟಮೊದಲ ಲಿಖಿತ ದಾಖಲೆಗಳು 8ನೆಯ ಶತಮಾನದ ಉತ್ತರಾರ್ಧ ಕಾಲದಷ್ಟು ಹಿಂದಿನವು. ಜರ್ಮನ್ ಜನಾಂಗಗಳ ನಡುವೆ ಕ್ರೈಸ್ತಧರ್ಮವನ್ನು ಪ್ರಸಾರ ಮಾಡುತ್ತಿದ್ದವರ ಪ್ರಯತ್ನಗಳ ಫಲಶ್ರುತಿಯೇ ಈ ಪಾಠಗ್ರಂಥಗಳು. ಇವು ನೀತಿಬೋಧಕವಾಗಿದ್ದು, ಲ್ಯಾಟಿನ್ ಬೈಬಲಿನ ಅಥವಾ ಚರ್ಚಿನ ಮತ ವಿಧಾನಗಳನ್ನು ಕುರಿತ ಭಾಷಾಂತರಗಳಾಗಿದ್ದುವು. ಉದಾಹರಣೆಗೆ ನಾವು ಟಾಷಿಯನ್ನನ ಇವ್ಯಾಂಜೆಲಿಯನ್ ಹಾರ್ಮೊನಿ ಅಥವಾ ಗಾಸ್ಪೆಲ್ ಹಾರ್ಮೊನಿ, ಅಥವಾ ಪ್ರಸಿದ್ಧ ಲ್ಯಾಟಿನ್ ಗ್ರಂಥಕರ್ತರ ಪ್ರವಚನಗಳನ್ನು ನೋಡಬಹುದು. ಚಕ್ರವರ್ತಿ ಚಾರ್ಲ್‍ಸ್ ಮಹಾಶಯ (768–814), ತನ್ನ ಮತಪ್ರಚಾರಕರ ಕೆಲಸವನ್ನು ಹೆಚ್ಚು ಪರಿಣಾಮಶಾಲಿಯಾಗಿಸಲು ಲ್ಯಾಟಿನ್ ಭಾಷೆಯ ಬದಲು ದೇಶಭಾಷೆಯ ಬಳಕೆಯನ್ನು ಸಮರ್ಥಿಸಿದ. ಮೌಖಿಕ ಪ್ರಸಾರ ಪರಂಪರೆಯ ಮೇಲೆಯೇ ನಿಂತಿದ್ದ ಕ್ರಿಸ್ತಪೂರ್ವ ಯುಗದ ಪುರಾತನ ಸಾಹಿತ್ಯವನ್ನು ಉಳಿಸಿಕೊಳ್ಳಬೇಕೆನ್ನುವುದು ಅವನ ಇನ್ನೊಂದು ಉದ್ದೇಶವಾಗಿತ್ತು. ಚಿಕ್ಕ ಚಿಕ್ಕ ವೀರಕಾವ್ಯಗಳು (ಹೆಲ್ಡನ್ ಲೀಡರ್) ಹಾಗೂ ಪ್ರಖ್ಯಾತ ವೀರರ ಸಾಹಸಗಳನ್ನು ಪ್ರಶಂಸಿಸುವ ಕಥನ ಕವನಗಳು ಬಹುತೇಕ ಆ ಸಾಹಿತ್ಯದಲ್ಲಿ ತುಂಬಿದ್ದವು. ಕ್ರೈಸ್ತ ಧರ್ಮಕ್ಕೆ ಸಂಬಂಧಪಡದ (ಪೇಗನ್) ಕೃತಿಗಳ ಬಗ್ಗೆ ಆಸಕ್ತಿ ತೋರಿಸಬಾರದೆನ್ನುವುದು ಕ್ರೈಸ್ತಚರ್ಚಿನ ಧೋರಣೆಯಾಗಿತ್ತು. ಆದರೆ ಮರ್ಸ್‍ಬರ್ಗರ್ ಟ್ಸೌಬರ್ಸ್ ಷ್ಪ್ರೂಕೆ (ಮರ್ಸ್‍ಬರ್ಗ್ ಮಂತ್ರಗಳು, ಸು. 760) ಮುಂತಾದ ಕೆಲವು ಲೌಕಿಕ ಗ್ರಂಥಗಳೂ ಉಳಿದುಕೊಂಡುವು. ಇದರಲ್ಲಿ ಕುದುರೆಗಳಿಗೆ ಯುದ್ಧದಲ್ಲಿ ಗಾಯವಾಗದಂತೆ, ಯುದ್ಧ ಖೈದಿಗಳನ್ನು ಸೆರೆಯಿಂದ ಬಿಡಿಸುವಂತೆ, ಹೇಗೆ ಮಂತ್ರ ಹಾಕಬಹುದು ಎಂಬ ವಿವರಗಳಿವೆ. ಹಳೆಯ ಹೈ ಜರ್ಮನ್ ಭಾಷೆಯ ವೀರಕಾವ್ಯವನ್ನು ಪ್ರತಿನಿಧಿಸುವ ಒಂದೇ ಉದಾಹರಣೆಯಾಗಿ ಉಳಿದಿರುವ ಅಪೂರ್ಣಕೃತಿ ಹಿಲ್ಡೆಬ್ರಾಂಡ್ಸ್ ಲೀಡ್ (ಹಿಲ್ಡೆಬ್ರಾಂಡನ ಹಾಡು, ಸು. 800). ರಾಜನಾದ ಡೀಟ್ರಿಕ್‍ನ ಜೊತೆಗೆ ದೇಶಚ್ಯುತನಾಗಿದ್ದ ಹಿಲ್ಡೆಬ್ರಾಂಡ್ ತನ್ನ ಮಗ ಹ್ಯಾಡುಬ್ರಾಂಡನನ್ನು ದ್ವಂದ್ವಯುದ್ಧದಲ್ಲಿ ಎದುರಿಸುತ್ತಾನೆ. ಪುರಾಣಕಾವ್ಯದ ವಿಶಿಷ್ಟ ರೀತಿಯಲ್ಲಿ, ಇಬ್ಬರೂ ತಮ್ಮ ತಮ್ಮ ಹೆಸರುಗಳನ್ನು ಘೋಷಿಸುತ್ತಾರೆ. ತಮ್ಮ

ತಂದೆ ಬಹುಕಾಲದ ಹಿಂದೆಯೇ ಸತ್ತುಹೋಗಿದ್ದನೆಂದು ಭ್ರಮಿಸಿದ್ದ ಹ್ಯಾಡುಬ್ರಾಂಡ್ ತನ್ನ ಎದುರಿಗೆ ನಿಂತವನು ತನ್ನ ತಂದೆಯೆಂದು ನಂಬಲು ನಿರಾಕರಿಸುತ್ತಾನೆ: ಹೇಡಿಯೆಂದು ಅವನನ್ನು ಹಂಗಿಸುತ್ತಾನೆ. ಹಿಲ್ಡೆಬ್ರಾಂಡ್ ಪುತ್ರವಾತ್ಸಲ್ಯ ಮತ್ತು ಆತ್ಮಗೌರವಗಳ ನಡುವೆ ಸಿಕ್ಕಿಬಿದ್ದು, ಹೆಣಗುತ್ತ, ಒಲ್ಲದ ಮನಸ್ಸಿನಿಂದ ಯುದ್ಧ ಮಾಡುತ್ತಾನೆ. ಅಷ್ಟಕ್ಕೇ ಆ ಕಾವ್ಯ ನಿಂತುಹೋಗಿದೆ. ಆದರೆ ಸೊಹ್ರಾಬ್-ರುಸ್ತುಮರ ಪರ್ಷಿಯನ್ ಕಥೆಯಲ್ಲಿ ಬರುವಂತೆ, ಕುಕುಲೈನ್-ಕೊನ್‍ಲಾ ಕೆಲ್ಟಿಕ್ ಕಥೆಯಲ್ಲಿ ಬರುವಂತೆ, ಇಲ್ಲಿಯೂ ಮಗನ ಸಾವಿನಿಂದ ಯುದ್ಧ ಪರ್ಯವಸಾನವಾಗುತ್ತದೆ ಎಂದು ಊಹಿಸಬಹುದು. ಈ ಅಮೂಲ್ಯ ಹಸ್ತಪ್ರತಿಯಲ್ಲಿ ಓಲ್ಡ್ ಇಂಗ್ಲಿಷ್ ಮತ್ತು ಓಲ್ಡ್ ನಾರ್ಸ್ ಕಾವ್ಯದಲ್ಲಿ ಸಾಮಾನ್ಯವಾಗಿ ಬಳಸುವ ಪುರಾತನ ಅನುಪ್ರಾಸ ರಚನೆಯ ವಿಶಿಷ್ಟ ಸ್ವರೂಪವನ್ನು ಕಾಣಬಹುದು. ಧರ್ಮಪ್ರಚಾರಕರು ಪೇಗನ್ ವೀರಕಾವ್ಯಗಳಿಗೆ ಸರಿಸಾಟಿಯಾಗುವಂತೆ ಕ್ರಿಸ್ತನ ಜೀವನವನ್ನು ನಿರೂಪಿಸಲು ಜನಪದೀಯ ಪರಂಪರೆಯನ್ನು ಬಳಸಿಕೊಂಡರು. ಹಳೆಯ ಸ್ಯಾಕ್ಸನ್ (ಹಳೆಯ ಲೋ ಜರ್ಮನ್) ಭಾಷೆಯ ಹೀಲಿಯಂಡ್ (ಉದ್ಧಾರಕ ಸು. 830) ಎನ್ನುವ ಕೃತಿಯಲ್ಲಿ ಅದನ್ನು ಬರೆದ ಅಜ್ಞಾತ ಕವಿ ಕ್ರೈಸ್ತನನ್ನು ಜರ್ಮನ್ ವೀರನೆಂಬಂತೆ ವರ್ಣಿಸಿದ್ದಾನೆ. ವೈಸನ್‍ಬರ್ಗಿನ ಸಂನ್ಯಾಸಿ ಆಟ್‍ಫ್ರೀಡ್ ವಿರಚಿತ ಇವ್ಯಾಂಜೆಲಿಯನ್ ಬುಕ್ಕಿನಲ್ಲಿ (ಗಾಸ್ಪೆಲ್ ಗ್ರಂಥ-ಸು.870) ಮೊಟ್ಟಮೊದಲ ಬಾರಿಗೆ ಅನುಪ್ರಾಸದ ಬದಲು ಮಧ್ಯಯುಗದ ಲ್ಯಾಟಿನ್ ಕಾವ್ಯದ ಅಂತ್ಯಪ್ರಾಸವನ್ನು (ಎಂಡ್ ರೈಮ್) ಬಳಸಲಾಗಿದೆ. ಲುಡ್‍ವಿಗ್ಸ್ ಲೀಡ್ (ಲುಡ್‍ವಿಗ್ಗ ನ ಹಾಡು-881) ಜರ್ಮನ್ ಭಾಷೆಯ ಪ್ರಪ್ರಥಮ ಐತಿಹಾಸಿಕ ಲಾವಣಿ. ಇದರಲ್ಲಿ ದೊರೆ ಲುಡ್‍ವಿಗ್ಗ ನ ಸಾಹಸಗಳನ್ನು ಕೊಂಡಾಡಲಾಗಿದೆ. ಅನೇಕ ವಿದ್ವಾಂಸರು ಹೆಚ್ಚಾಗಿ ಲ್ಯಾಟಿನ್‍ನಲ್ಲೇ ಬರೆಯಲು ಆಶಿಸುತ್ತಿದ್ದುದರಿಂದ, ಜರ್ಮನ್ ಭಾಷೆ ತಾನೊಂದು ಸಾಹಿತ್ಯಕ ಭಾಷೆಯೆಂಬ ಮನ್ನಣೆ ಪಡೆಯಲು ಬಹಳವಾಗಿ ಹೆಣಗಬೇಕಾಯಿತು.

**2. ಮಧ್ಯ ಹೈ ಜರ್ಮನ್ ಯುಗ :** ಹಳೆಯ ಹೈ ಜರ್ಮನ್ ಭಾಷೆ, ಮಧ್ಯ ಹೈ ಜರ್ಮನ್ ಭಾಷೆಯಾಗಿ ಕೆಲವು ಮಾರ್ಪಾಡುಗಳಿಗೆ ಪಕ್ಕಾಗಿದ್ದ 11ನೆಯ ಶತಮಾನದ ಮಧ್ಯದ ಸುಮಾರಿನಲ್ಲಿ ಈ ಯುಗ ಪ್ರಾರಂಭವಾಯಿತು. ಈ ಯುಗ ಜರ್ಮನ್ ಸಾಹಿತ್ಯದ ಪ್ರಥಮ ಕ್ಲಾಸಿಕಲ್ (ಅಭಿಜಾತ) ಯುಗಕ್ಕೆ ದಾರಿ ಮಾಡಿಕೊಟ್ಟಿತು. ಈ ಯುಗದ ಪ್ರಾರಂಭದಲ್ಲಿ ಹೊಸ ಲಕ್ಷಣಗಳು ಸ್ಪಷ್ಟವಾಗಿ ಎದ್ದು ಕಾಣಿಸಿಕೊಳ್ಳದಿದ್ದರೂ ಕ್ರಮೇಣ ಹಳೆಯ ಧಾರ್ಮಿಕ ನೀತಿಪರತೆ ಮಾಯವಾಗಿ ಅದರ ಬದಲು ಪ್ರೊವೆನ್ಸಿನ ಆಸ್ಥಾನಗಳಲ್ಲಿ ರೂಪಗೊಂಡ ಆಸ್ಥಾನಿಕ ಊಳಿಗಮಾನ್ಯ ಪದ್ಧತಿಯ ಹೊಸ ಪ್ರಭಾವಗಳು ಕಾಣಿಸಿಕೊಂಡವು. ಪಾದ್ರಿಯ ಬದಲು ಶ್ರೀಮಂತ ವೀರ ಕವಿಯೆಂಬ ಗೌರವಕ್ಕೆ ಪಾತ್ರನಾಗಿ, ಅವನ ಆಸ್ಥೆ ಆದರ್ಶಗಳು ಹೊಸ ಸಾಹಿತ್ಯಕ್ಕೆ ವಸ್ತುವಾದವು. ಹೊಹೆನ್ ಸ್ಟೌಫೆನ್ ಚಕ್ರವರ್ತಿಗಳಾದ ಮೊದಲನೆಯ ಬಾರ್ಬರೋಸ ಫ್ರೆಡರಿಕ್, ನಾಲ್ಕನೆಯ ಹೆನ್ರಿ, ಎರಡನೆಯ ಫ್ರೆಡರಿಕ್ ಮುಂತಾದವರ ಆಳ್ವಿಕೆಯ (1152-1250) ಅವಧಿಯಲ್ಲಿ ಪ್ರೇಮಗೀತೆ (ಮಿನ್ನೆಸಾಂಗ್) ಮತ್ತು ಪುರಾಣಕಾವ್ಯ ಪ್ರಭೇದಗಳು ಹುಟ್ಟಿದವು. ಹೊಸ ಕಾವ್ಯ ಬರೆದವರು ಹೆಚ್ಚಾಗಿ ಶ್ರೀಮಂತರೇ. ಅವರು ಆಸ್ಥಾನಿಕ ಸಂಪ್ರದಾಯಗಳಿಗೆ ತಕ್ಕಂತೆ ತಮ್ಮ ಪ್ರೇಮವನ್ನು ವ್ಯಕ್ತಪಡಿಸುತ್ತಿದ್ದರು; ಸಾಂಪ್ರದಾಯಿಕವಾದ ಯುದ್ಧ ವರ್ಣನೆಯ ಕಥೆಗಳನ್ನೂ ಅದ್ಭುತ ರಮ್ಯ ಕಥೆಗಳನ್ನೂ ನಿರೂಪಿಸುತ್ತಿದ್ದರು. ಜನಪದೀಯ ಮೌಖಿಕ ಪರಂಪರೆಯ ಜೊತೆಗೆ ಅವರು ಫ್ರಾನ್ಸಿನ ಪ್ರಭಾವದಿಂದ ಪಡೆದ ಹೊಸ ಸಾಮಾಜಿಕ ನಡವಳಿಕೆ ಮತ್ತು ಹೊಸ ಹೊಸ ಛಂದೋರೂಪಗಳು ಮುಂತಾದ ವಿಶಿಷ್ಟ ಮೌಲ್ಯಗಳನ್ನು ರೂಢಿಸಿಕೊಂಡರು. ಜರ್ಮನಿಯ ರಾಷ್ಟ್ರೀಯ ಪುರಾಣಗಳಲ್ಲಿ ಅತ್ಯಂತ ಮಹತ್ತ್ವಪೂರ್ಣವಾದ ನೀಬೆಲುಂಗೆನ್ ಲೀಡ್ (ಸು. 1200) ಜನಪದೀಯ ಪರಂಪರೆಯೊಂದಿಗೆ ಅತ್ಯಂತ ನಿಕಟ ಸಂಪರ್ಕ ಪಡೆದಿದೆ. ಅದು ಸೀಗ್‍ಫ್ರೀಡ್ ಎಂಬ ವೀರನ ಕಥೆ. ಹಾಗೆನ್ ಎಂಬಾತನೂ ಬರ್ಗಂಡಿಯನ್ನರೂ ಸೇರಿ ಸೀಗ್‍ಫ್ರೀಡ್‍ನನ್ನು ಕೊಲ್ಲುವುದು, ಸೀಗ್‍ಫ್ರೀಡನ ಪತ್ನಿ ಕ್ರೀಮ್ ಹಿಲ್ಡ್ ತನ್ನ ಸಹೋದರರ ಮೇಲೆ ಪ್ರತೀಕಾರವೆಸಗುವುದು-ಈ ಕಾವ್ಯದ ವಸ್ತು. ಇದನ್ನು ರಚಿಸಿದ ಅಜ್ಞಾತ ಕವಿ ಬಹುಶಃ ಆಸ್ಟ್ರಿಯದ ಯಾವನೋ ಒಬ್ಬ ಚಾರಣಕವಿ (ಮಿನ್‍ಸ್ಟ್ರಲ್) ಆಗಿರಬೇಕು. ಇದರಲ್ಲಿ ಕವಿ ಬರ್ಗಂಡಿಯನ್ನರ ಪೈಕಿ ಜರ್ಮನ್ ಬುಡಕಟ್ಟಿಗೆ ಸೇರಿದ್ದವರು ನಾಶಗೊಂಡ ಐತಿಹಾಸಿಕ ಘಟನೆಯನ್ನು ಹಲವಾರು ವೀರ ಕವನಗಳು ಮತ್ತು ಪುರಾಣ, ಆಖ್ಯಾಯಿಕೆಗಳ ಅಂಶಗಳೊಂದಿಗೆ ಬೆರೆಸಿಬಿಟ್ಟಿದ್ದಾನೆ. ಅತ್ಯಂತ ಜನಪ್ರಿಯವಾದ ಈ ಪುರಾಣ ಕಾವ್ಯ ಅಂದಿನಿಂದಲೂ (ಕೊನೆಯ ಪಕ್ಷ 36 ಬೇರೆ ಬೇರೆ ಪ್ರತಿಗಳಲ್ಲಿ ಉಳಿದುಕೊಂಡಿದ್ದು) ಅನೇಕ ಕವಿಗಳಿಗೆ ಸ್ಫೂರ್ತಿ ನೀಡಿದೆ. ಮಹಾಶಯ ತಿಯೋಡರಿಕ್ ಮತ್ತು 6ನೆಯ ಶತಮಾನದ ತಿರುವಿನಲ್ಲಿ ಇಟಲಿಯನ್ನು ಆಳುತ್ತಿದ್ದ ಗಾತಿಕ್ ದೊರೆ ಡೀಟ್ರಿಕ್ ಫಾನ್ ಬರ್ನ್ ಮುಂತಾದವರ ಜೀವನಕ್ಕೆ ಸಂಬಂಧಿಸಿದಂತೆ ತೋರುವ ಅದ್ಭುತ ರಮ್ಯಕಥೆಗಳು, ಗುಡ್ರನ್ (ಸು. 1210) ಎನ್ನುವ ಇನ್ನೊಂದು ಕಾವ್ಯ-ಇವು ರಾಷ್ಟ್ರವೀರರನ್ನು ಕುರಿತ ಪುರಾಣಕಾವ್ಯಗಳ ಪರಂಪರೆಗೆ ಸೇರಿವೆ. ಇವು ಹೆಚ್ಚಾಗಿ ಜರ್ಮನಿಯ ದಕ್ಷಿಣ ಭಾಗದಲ್ಲಿ, ಆಗ್ನೇಯ ಪ್ರದೇಶಗಳಲ್ಲಿ ರಚಿತವಾದವು. ಆದರೆ ಆರ್ಥರ್ ದೊರೆಯ ಜೀವನಕ್ಕೆ ಸಂಬಂಧಿಸಿದ ಒಂದು ರೀತಿಯ ಆಸ್ಥಾನಿಕ ಪುರಾಣ ಕಾವ್ಯಗಳು (ಫ್ರಾನ್ಸಿನ ವಿಶೇಷ ಪ್ರಭಾವದಿಂದ ಪ್ರೇರಿತವಾಗಿ) ಜರ್ಮನಿಯ ದೂರ ಪಶ್ಚಿಮದಲ್ಲಿ ರೂಪ ತಳೆದವು. ಜರ್ಮನಿಯ ಆಸ್ಥಾನಿಕ ಪುರಾಣ ಕಾವ್ಯಗಳನ್ನು ಬರೆದವರಲ್ಲಿ ಹಾರ್ಟ್‍ಮನ್ ಫಾನ್ ಔವೆ, ವುಲ್ಫ್‍ರ್ಯಾಮ್ ಫಾನ್ ಎಸ್ಕೆನ್‍ಬಾಕ್ ಮತ್ತು ಗಾಟ್‍ಫ್ರೀಡ್ ಫಾನ್ ಸ್ಟ್ರಾಸ್‍ಬರ್ಗ್ ಅತ್ಯಂತ ಪ್ರಮುಖ ಕವಿಗಳು. ಇವರು 1190ರಿಂದ 1210ರವರೆಗಿನ ಅವಧಿಯಲ್ಲಿ ಕಾವ್ಯರಚನೆ ಮಾಡಿದರು. ಹಾರ್ಟ್‍ಮನ್ನನ ಎರಿಕ್ ಮತ್ತು ಐವೈನ್ ಕಾವ್ಯಗಳು 12ನೆಯ ಶತಮಾನದ ಫ್ರೆಂಚ್ ಕವಿ ಕ್ರೇಷಿಯನ್ ದ ಟ್ರಾಯ್‍ನ ಎರಡು ಬೇರೆಬೇರೆ ಕಾವ್ಯಗಳ ಆಧಾರದ ಮೇಲೆ ರಚಿತವಾಗಿವೆ. ವಿಭಿನ್ನ ರೀತಿಯ ಕರ್ತವ್ಯನಿಷ್ಠೆಯನ್ನು ಪ್ರತಿನಿಧಿಸುವ ಇಬ್ಬರು ವ್ಯಕ್ತಿಗಳು ಎದುರಿಸುವ ಸಂಘರ್ಷವೇ ಈ ಕಾವ್ಯಗಳ ವಸ್ತು. ಎನಿಟೆಯನ್ನು ಮದುವೆಯಾಗಿ ಸುಖದಿಂದಿರುವ ಎರಿಕ್ ಶ್ರೀಮಂತವೀರನಾಗಿ ತಾನು ಮಾಡಬೇಕಾಗಿದ್ದ ವೀರಸಾಹಸಗಳನ್ನು ನಿರ್ಲಕ್ಷಿಸುತ್ತಾನೆ. ತದ್ವಿರುದ್ಧವಾಗಿ ಐವೈನ್ ಎರಿಕ್‍ನ ನಡವಳಿಕೆಯಿಂದ ಮುನ್ನೆಚ್ಚರಗೊಂಡು,

**ವಾಲ್ಟರ್ ಫಾನ್ ಡೆರ್ ಫೋಗೆಲ್‍ವೈಡೆ-12ನೆಯ ಶತಮಾನದ ಕವಿ**

ತನ್ನ ಪತ್ನಿ ಲಾಡೀನಳನ್ನು ಅಗಲಿ ಒಂದು ವರ್ಷದ ಅನಂತರ ಹಿಂದಿರುಗುವ ವಾಗ್ದಾನವಿತ್ತು ಹೊರಟುಹೋಗುತ್ತಾನೆ. ಆ ಅವಧಿ ಕಳೆದ ಮೇಲೂ ತನ್ನ ಕರ್ತವ್ಯದಲ್ಲಿ ಮಗ್ನನಾಗಿದ್ದ ಐವೈನ್, ಕೊಟ್ಟ ಮಾತಿನಂತೆ ಹಿಂದುರುಗಿ ಬರುವುದಿಲ್ಲ. ಇಬ್ಬರೂ ತಮ್ಮ ತಮ್ಮ ದೋಷಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡ ಮೇಲೆ ನಿಜವಾದ ಕರ್ತವ್ಯನಿಷ್ಠೆ ಎಂದರೇನು ಎಂಬುದನ್ನು ಅರಿತುಕೊಳ್ಳುತ್ತಾರೆ. ಯಾವುದರಲ್ಲೂ ಹಾಳತ ತಪ್ಪಬಾರದು, ಎಲ್ಲದರಲ್ಲೂ ಇತಿಮಿತಿ ಬೇಕು-ಎನ್ನುವ ಔಚಿತ್ಯಪ್ರಜ್ಞೆಯೇ ಈ ಕಾವ್ಯಗಳಲ್ಲಿ ಪ್ರತಿಪಾದಿತವಾಗಿರುವ ನೀತಿ. ಇದು ಮಧ್ಯ ಹೈ ಜರ್ಮನ್ ನೀತಿತತ್ತ್ವದ ಒಂದು ಮುಖ್ಯ ಅಂಶ. ದರ್ ಆರ್ಮೀ ಹೈನ್ರಿಕ್ (ಬಡ ಹೆನ್ರಿ) ಎನ್ನುವ ಕವನಗಳಲ್ಲಿ ಹಾರ್ಟ್‍ಮನ್ ದೇವಮಾನವ ಸಂಬಂಧವನ್ನು ಚಿತ್ರಿಸಿದ್ದಾನೆ. ಒಬ್ಬ ಪುಟ್ಟ ಹುಡುಗಿಯ ನಿಷ್ಕಪಟ ಭಕ್ತಿಯಿಂದಾಗಿ ಶ್ರೀಮಂತ ವೀರನೊಬ್ಬ ಹೇಗೆ ಕುಷ್ಠರೋಗದಿಂದ ಗುಣಮುಖನಾಗುತ್ತಾನೆಂಬುದು ಈ ಕವನದ ವಸ್ತು. ವುಲ್ಫ್ ರ್ಯಾಮ್ ಫಾನ್ ಎಸ್ಸೆನ್‍ಬಾಕ್‍ನ ಪರ್ಸಿವಲ್ ಆಸ್ಥಾನಿಕ ಪುರಾಣಕಾವ್ಯಗಳಲ್ಲಿ ಅತ್ಯಂತ ಶ್ರೇಷ್ಠ ಕೃತಿ.

ಮನುಷ್ಯ ಮತ್ತು ದೇವರ ನಡುವಣ ಸಂಬಂಧದಲ್ಲಿ ಮನುಷ್ಯ ನಡೆಸುವ ಸತ್ಯಾನ್ವೇಷಣೆ ಈ ಕವನದ ವಸ್ತು. ಇದನ್ನು ಕವಿ ಅತ್ಯಂತ ಸೂಕ್ಷ್ಮವಾಗಿ, ಬೃಹತ್ ಪ್ರಮಾಣದಲ್ಲಿ ನಿರ್ವಹಿಸಿದ್ದಾನೆ. ಇದರಲ್ಲಿ ಮೊಟ್ಟಮೊದಲು ಹಮ್ಮು ಮತ್ತು ವ್ಯಥೆಗಳಿಗೆ ಸಿಕ್ಕಿ ಸೋತು ಪರಿತಪಿಸುವ ನಿಷ್ಕಪಟ ಹೃದಯಿಯಾದ ಹುಂಬನೊಬ್ಬ ಆಮೇಲೆ ವಿಚಾರಮತಿಯೂ ಸಾಹಸಿಯೂ ಆಗಿ, ದಿವ್ಯ ಪಾತ್ರೆಯ ಪಾಲಕನಾಗಿ ವಿಕಾಸಗೊಳ್ಳುವ ಕಥೆಯಿದೆ. ಗಾಟ್‌ಫ್ರೀಡ್ ಫಾನ್ ಸ್ಟ್ರಾಸ್‌ಬರ್ಗ್ ತನ್ನ ಟ್ರಿಸ್ಟಾನ್ ಎನ್ನುವ ಕವನದಲ್ಲಿ ಆದರ್ಶಪ್ರೇಮದ ಉತ್ಕೃಷ್ಟತೆಯನ್ನು ಚಿತ್ರಿಸಿದ್ದಾನೆ. ಜರ್ಮನ್ ಸಾಹಿತ್ಯದಲ್ಲಿ ಪ್ರೇಮದ ದುರಂತವನ್ನು ಚಿತ್ರಿಸುವ ಮೊಟ್ಟಮೊದಲ ಕಥೆ ಅದು. ಈ ಮೂವರು ಸಾಹಿತಿಗಳೂ ತದನಂತರ ಅನೇಕ ಚಿಕ್ಕ ಪುಟ್ಟ ಕವಿಗಳ ಮೇಲೆ ವ್ಯಾಪಕ ಪ್ರಭಾವ ಬೀರಿದರು. ಇವರನ್ನು ಅನುಕರಿಸಿ ಹಲವರು ಅನೇಕ ಆಸ್ಥಾನಿಕ ಪುರಾಣಕಾವ್ಯಗಳನ್ನು ಬರೆದರಾದರೂ ಯಾರೂ ಈ ಅಗ್ರಗಣ್ಯರನ್ನು ಮೀರಿಸುವ ಮಟ್ಟಕ್ಕೆ ಏರಲಿಲ್ಲ. ಆದರೆ 1280ರ ಹೊತ್ತಿಗೆ ಆಗಲೇ ವೆರ್ನ್‌ಹರ್ ಡೆರ್ ಗಾರ್ಟ್‌ನರ್ ತನ್ನ ಮೈಯರ್ ಹೆಲ್ಮ್‌ಬ್ರೆಕ್ಟ್ (ರೈತ ಹೆಲ್ಮ್ ಬ್ರೆಕ್ಟ್) ಎಂಬ ಪುರಾಣಕಾವ್ಯದಲ್ಲಿ, ಅವನತಿಗೆ ಗುರಿಯಾಗುತ್ತಿರುವ ಊಳಿಗಮಾನ್ಯ ಸಮಾಜದ (ಫ್ಯೂಡಲ್) ಸ್ವಚ್ಛಂದತೆಯನ್ನೂ ಹಿಂಸಾತ್ಮಕ ಪ್ರವೃತ್ತಿಯನ್ನೂ ಯಥಾರ್ಥವಾಗಿ ಚಿತ್ರಿಸಿ ಆಸ್ಥಾನಿಕ ಸಾಹಿತ್ಯದ ಮುಕ್ತಾಯವನ್ನು ಘೋಷಿಸಿದ.

ಮಿನ್ನೆಸಾಂಗ್ ಎನ್ನುವ ಶಬ್ದ ಮಧ್ಯ ಹೈ ಜರ್ಮನ್ ಸಾಹಿತ್ಯದ ಭಾವಗೀತೆಯ ಸಮಗ್ರ ಪ್ರಕಾರಕ್ಕೇ ಅನ್ವಯಿಸುತ್ತದೆ. ಅದರಲ್ಲಿ ಮೂರು ಮುಖ್ಯ ರೂಪಗಳಿವೆ. ಲೀಟ್ ಎನ್ನುವುದು ವ್ಯಕ್ತಿನಿಷ್ಠ ಭಾವನೆಗಳನ್ನು ರೂಪಿಸುತ್ತದೆ. ಹೆಚ್ಚು ವ್ಯವಸ್ಥಿತ ರಚನೆಯಿಲ್ಲದ, ಧಾರ್ಮಿಕ ಭಾವಗೀತೆಯಂತಿರುವ ಲೈಕ್ ಮತ್ತು ರಾಜಕೀಯ, ನೀತಿಬೋಧಕ, ಜಿಜ್ಞಾಸೆಗಳನ್ನು ವಸ್ತುವಾಗುಳ್ಳ ಸ್ಪ್ರೂಕ್–ಮಿನ್ನೆ ಸಾಂಗಿನ ಉಳಿದ ಎರಡು ರೂಪಗಳು. ಕವಿಗಳು ತಮ್ಮ ರಚನೆಗಳನ್ನು ತಾವೇ ಹಾಡುವುದು ಆಗಿನ ಪದ್ಧತಿಯಾಗಿತ್ತು. ಪಿಟೀಲು, ಹಾರ್ಪ್ ಮುಂತಾದ ವಾದ್ಯಗಳನ್ನು ನುಡಿಸುವುದು ಕವಿಯ ಶಿಕ್ಷಣದ ಭಾಗವಾಗಿತ್ತು. ಹೊಸ ಹೊಸ ಶಬ್ದಪುಂಜಗಳನ್ನು ರಚಿಸಿ ಸಂಗೀತಕ್ಕೆ ಅಳವಡಿಸುವುದು, ಬೇರೆಯವರು ರಚಿಸಿದುದನ್ನು ಅನುಕರಣೆ ಮಾಡದಿರುವುದು, ಇವು ಕವಿಯ ವೃತ್ತಿಗೆ ಹೆಮ್ಮೆ ತರುವ ವಿಷಯವಾಗಿದ್ದವು. ಭಾವಗೀತೆಗಳನ್ನು ಬರೆದ ಜರ್ಮನಿಯ ಅತ್ಯುನ್ನತ ಕವಿಗಳಲ್ಲಿ ಒಬ್ಬನಾದ ವಾಲ್ಟರ್ ಫಾನ್ ಡೆರ್ ಫೋಗೆಲ್‌ವೈಡೆ ಮಿನ್ನೆಸಾಂಗ್ ಪ್ರಭೇದದ ಉತ್ಕೃಷ್ಟ ಲಕ್ಷಣಗಳನ್ನು ಸಾಧಿಸುವ ಶ್ರೇಷ್ಠ ಸಾಹಿತಿ. ಸರಳ ಹಾಗೂ ಉನ್ನತ ಪ್ರೇಮಕವನಗಳನ್ನೂ ಧಾರ್ಮಿಕ ಕಾವ್ಯಗಳನ್ನೂ ರಾಜಕೀಯ ಮತ್ತು ದೇಶಭಕ್ತಿ ಗೀತೆಗಳನ್ನೂ ಬರೆಯುವುದರಲ್ಲಿ ನಿಷ್ಣಾತನೆನಿಸಿಕೊಂಡ. ಸು. 1170ರಲ್ಲಿ ಹುಟ್ಟಿದ ಈತ 1230ರಲ್ಲಿ ಕಾಲವಾದ. ತನ್ನ ಕವನಗಳಲ್ಲಿ ಈತ ಜರ್ಮನಿಯ ಪ್ರಭುಗಳನ್ನು ಪ್ರಶಂಸಿಸಿ, ಲೌಕಿಕ ಆಸೆಗಳಿಗೆ ಬಾಯಿಬಿಡುವ ಪೋಪ್ ಗುರುಗಳನ್ನು ಖಂಡಿಸುತ್ತ ಜರ್ಮನಿಯ ಆದ್ಯಂತ ಸಂಚರಿಸಿದ. ಈತ ಜರ್ಮನ್ ಸಾಹಿತ್ಯ ಚರಿತ್ರೆಯಲ್ಲಿ ಮೊಟ್ಟಮೊದಲ ಒಬ್ಬ ರಾಜಕೀಯ ಕವಿ.

**3. ಹದಿನೈದು ಮತ್ತು ಹದಿನಾರನೆಯ ಶತಮಾನಗಳು :** 15ನೆಯ ಶತಮಾನ ಜನಪದೀಯ ಸಾಹಿತ್ಯದ ಕಾಲ. ಧಾರ್ಮಿಕ ವಸ್ತುಗಳನ್ನು ಬಳಸಿಕೊಂಡ, ನೀತಿಪ್ರಧಾನವಾದ ಪವಾಡದ ಮತ್ತು ನೀತಿಯ(mystery & morality) ನಾಟಕಗಳು ದೇಶದ ಮೂಲೆಮೂಲೆಯಲ್ಲಿನ ಜನರ ನಾಟಕಾಸಕ್ತಿಯನ್ನು ಕೆರಳಿಸಿದವು. ಅವು ಸಾಮಾನ್ಯ ಜನರಿಗೆ ಬೈಬಲ್ ಕಥೆಗಳಲ್ಲಿನ ಮುಖ್ಯ ಪಾತ್ರಗಳ ಪರಿಚಯವಾಗುವಂತೆ ಮಾಡಿದವು. ಜನಪದ ಹಾಡುಗಳು ಹುಲುಸಾಗಿ ಬೆಳೆದವು ; ಪ್ರೇಮ ಮತ್ತು ಪ್ರಕೃತಿ, ಯುದ್ಧ, ಸಾವು ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಹಾಡುಗಳು, ಧಾರ್ಮಿಕ ಭಾವಗೀತೆಗಳು, ಪುರಾಣೇತಿಹಾಸಗಳಿಗೆ ಸಂಬಂಧಿಸಿದ ಲಾವಣಿಗಳು ವಿಶೇಷವಾಗಿ ರಚಿತವಾದವು. ಅವು ಕ್ಲಾರಾ ಹೆಟ್ಸ್‌ಲರ್ಲಿನ್ಸ್ ಸಾಂಗ್ ಬುಕ್ (1471) ಮುಂತಾದ ಆ ಕಾಲದ ಹಲವು ಕವನಸಂಗ್ರಹಗಳಲ್ಲಿ ಇನ್ನೂ ಅಚ್ಚಳಿಯದೆ ಉಳಿದುಕೊಂಡಿವೆ. ಒಂದೇ ವ್ಯಕ್ತಿಯ ಸುತ್ತಲೂ ಹೆಣೆಯಲಾದ ಹಾಸ್ಯಮಯ ದಂತಕಥೆ (ಷ್ವೆಂಕೆ)ಗಳಲ್ಲಿ ಫಾರರ್ ಫಾನ್ ಕ್ಯಾಲೆನ್‌ಬರ್ಗ್ (ಕ್ಯಾಲೆನ್‌ಬರ್ಗಿನ ಪಾದ್ರಿ, ಮುದ್ರಣ–1473) ಟೆಲ್‌ಯೂಲೆನ್ ಷ್ಪೀಗೆಲ್ (ಮುದ್ರಣ–1515) ಮೊದಲಾದವು ಬಹುಬೇಗ ಜನಪ್ರಿಯತೆ ಗಳಿಸಿದವು. ಜರ್ಮನಿಯ ಗಾಟೆನ್‌ಬರ್ಗ್ ಮುದ್ರಣಯಂತ್ರವನ್ನು ಕಂಡುಹಿಡಿಯುವುದಕ್ಕೆ ಮುಂಚೆ ಸಾಹಿತ್ಯದ ಅಮೂಲ್ಯ ಹಸ್ತಪ್ರತಿಗಳು ಸಾಮಾನ್ಯರ ಕೈಗೆ ಎಟುಕುವಂತಿರಲಿಲ್ಲ. ಆದರೆ ಮುದ್ರಣಯಂತ್ರ ಬಂದ ಮೇಲೆ ಸಾಹಿತ್ಯ ಕೃತಿಗಳು ವ್ಯಾಪಕವಾಗಿ ಪ್ರಸಾರಗೊಂಡು ಹೆಚ್ಚು ಜನಪ್ರಿಯವಾದವು. ಮುದ್ರಿತವಾಗುತ್ತಿದ್ದ ಪುಸ್ತಕ ಪುಟಗಳಲ್ಲಿ ಎದ್ದುಕಾಣುತ್ತಿದ್ದ ಒಂದು ಮುಖ್ಯ ವಸ್ತು ಪಾದ್ರಿಗಳ ನೈತಿಕ ಅವನತಿ. ಅದು ವೈವಿಧ್ಯಮಯವಾದ ವಿಡಂಬನ ರಚನೆಗಳಿಗೂ, ಗಹನವಾದ ಧಾರ್ಮಿಕ ಜಿಜ್ಞಾಸೆಗಳಿಗೂ ಪ್ರೇರಣೆ ಒದಗಿಸಿತು. ಸೆಬ್ಯಾಸ್ಟಿಯನ್ ಬ್ರ್ಯಾಂಟ್ ವಿರಚಿತ ನಾರೆನ್‌ಷಿಫ್ (ಗಾಂಪರ ಹಡಗು–1494) ಆ ತೆರನ ಒಂದು ಪ್ರಖ್ಯಾತ ವಿಡಂಬನ ಕೃತಿ. ಅದರಲ್ಲಿ ಆ ಕಾಲದ ಎಲ್ಲ ರೀತಿಯ ದುರಾಚಾರಗಳನ್ನೂ ಕುರಿತ ವ್ಯಂಗ್ಯ ವಿಮರ್ಶೆ ಇದೆ. ಈ ಗ್ರಂಥಕ್ಕೆ ಸಮಗ್ರ ಯೂರೋಪಿನಲ್ಲಿ ವ್ಯಾಪಕ ಖ್ಯಾತಿ ಸಿಕ್ಕು, ಆಮೇಲೆ ದಡ್ಡರನ್ನು ಕುರಿತ ಗಾಂಪಸಾಹಿತ್ಯ ಪ್ರಭೇದವೇ ವಿಶಿಷ್ಟವಾಗಿ ರೂಢಿಗೆ ಬಂತು.

1450ರ ಅನಂತರ ಹ್ಯೂಮನಿಸ್ಟ್ (ಮಾನವತಾವಾದದ) ಚಳವಳಿ ಜರ್ಮನ್ ಸಾಹಿತ್ಯದಲ್ಲಿ ಒಂದು ಹೊಸ ಅಂಶವನ್ನು ಸೃಷ್ಟಿಸಿತು. ಸಾಹಿತಿಗಳಲ್ಲಿ ಹಲವರಿಗೆ ವಿಶ್ವವಿದ್ಯಾಲಯದ ವಿದ್ವತ್‌ಗೋಷ್ಠಿಗಳ ಸಂಪರ್ಕವಿದ್ದುದರಿಂದ ಅವರು ಸಂಪೂರ್ಣವಾಗಿ ಲ್ಯಾಟಿನ್ ಭಾಷೆಯಲ್ಲೇ ಬರೆದರು. ಆ ಕೃತಿ ಶಿಲ್ಪಕಲೆಗಳಲ್ಲಿ (ಪ್ಲಾಸ್ಟಿಕ್ ಆರ್ಟ್ಸ್) ಇಡೀ ಯೂರೋಪಿನಲ್ಲೇ ವಿಖ್ಯಾತ ರೆನಿಸಿಕೊಂಡ ಆಲ್‌ಬ್ರೆಕ್ಟ್ ಡ್ಯೂರರ್ ಮತ್ತು ಹ್ಯಾನ್ಸ್ ಹಾಲ್‌ಬೈನರಂಥ ಉಜ್ವಲ ಚಿತ್ರಕಾರರಿದ್ದರೂ ಪ್ರಾದೇಶಿಕ ಸಾಹಿತ್ಯದಲ್ಲಿ ಉತ್ಕೃಷ್ಟ ಲೇಖಕರು ತೀರ ವಿರಳವಾಗಲು ಇದೇ ಕಾರಣ. ಆ ಕಾಲವನ್ನೂ ಅನಂತರದ ಯುಗವನ್ನೂ ಮೈಸ್ಟರ್ ಸ್ಯಾಂಗರ್ ಅಥವಾ ಕರ್ಮಚಾರಿ ಕವಿಗಳ ಯುಗವೆಂದು ಕರೆಯಬಹುದು. ಛಂದೋಬದ್ಧ ಷ್ವೆಂಕೆಗಳನ್ನೂ (ಹಾಸ್ಯಮಯ ದಂತಕಥೆ) ಫಾಸ್ಟ್‌ನಾಕ್ಟ್‌ಷ್ಪೀಲೆಗಳನ್ನೂ (ವಿಡಂಬನ ನಾಟಕ) ಬರೆದ ನ್ಯೂರೆಂಬರ್ಗಿನ ಮೋಚಿ ವೃತ್ತಿಯ ಹ್ಯಾನ್ಸ್ ಜ್ಯಾಕ್ಸ್ (1494–1576) ಕರ್ಮಚಾರಿ ಕವಿಗಳೆನ್ನುವ ಪಂಥದ ಅತ್ಯಂತ ಪ್ರಸಿದ್ಧ ಲೇಖಕ. ಇವರು ಆ ಹೊತ್ತಿಗೆ ಆಗಲೇ ತಮ್ಮ ವೃತ್ತಿಗೆ ಸಂಬಂಧಿಸಿದ ಸಂಘಗಳನ್ನು ರಚಿಸಿಕೊಂಡಿದ್ದರು. ಕಾವ್ಯರಚನೆ ಮಾಡುವುದಕ್ಕೂ ಅಂಥ ಸಂಘಗಳನ್ನು ಸ್ಥಾಪಿಸಿ ಉತ್ತಮ ಕಾವ್ಯನಿರ್ಮಾಣಕ್ಕೆ ಬೇಕಾದ ಮಾದರಿ, ಪ್ರಮಾಣಗಳನ್ನೂ ಸೂತ್ರಗಳನ್ನೂ ರಚಿಸಬೇಕೆಂಬ ಯೋಚನೆ ಅವರಿಗೆ ಹೊಳೆಯಿತು. ಆ ಕಾಲದ ಅತ್ಯಂತ ಮಹತ್ತ್ವದ ಘಟನೆಯೆಂದರೆ ರೆಫರ್ಮೇಷನ್. ಅನುಭಾವ ಸಿದ್ಧಾಂತ (ಮಿಸ್ಟಿಸಿಸಮ್) ಹಾಗೂ ಮಾನವತಾವಾದಗಳು (ಹ್ಯೂಮನಿಸಮ್) ಅದಕ್ಕೆ ದಾರಿ ಹಾಕಿಕೊಟ್ಟವು. ಮೂಲತಃ ಅನುಭಾವ ಸಿದ್ಧಾಂತ ಕ್ರೈಸ್ತಧರ್ಮವನ್ನು ಕುರಿತ ವೈಯಕ್ತಿಕ ವ್ಯಾಖ್ಯಾನವಾದುದರಿಂದ ಅದು ಪ್ರಾಟೆಸ್ಟಂಟ್ ಧರ್ಮ ಎತ್ತಿ ಹಿಡಿಯುವ ವ್ಯಕ್ತಿಸ್ವಾತಂತ್ರ್ಯಕ್ಕೆ ಸಮರ್ಥನೆ ಒದಗಿಸಿತು. ಮಾನವತಾವಾದಿಗಳಲ್ಲಿ ಅತ್ಯಂತ ಶ್ರೇಷ್ಠನಾದ ರಾಟರ್‌ಡ್ಯಾಮಿನ ಎರಾಸ್ಮಸ್ (1466–1536) ಜ್ಞಾನಾರ್ಜನೆ ಹಾಗೂ ಚಿಂತನೆಯಲ್ಲಿ ಎಲ್ಲರಿಗೂ ಸಾತಂತ್ರ್ಯವಿರಬೇಕೆಂದು ಹೋರಾಡಿದ. ಮಾರ್ಟಿನ್ ಲೂಥರ್ (1483–1546) ಕ್ರೈಸ್ತಧರ್ಮದ ಕೆಲವು ತತ್ತ್ವಗಳನ್ನು ಟೀಕಿಸಿ ಧರ್ಮಪ್ರಭುಗಳು ನಡೆಸುತ್ತಿದ್ದ ಅನಾಚಾರಗಳ ವಿರುದ್ಧ ಪ್ರತಿಭಟಿಸಿದ; ಆ ಮೂಲಕ ರೆಫರ್ಮೇಷನ್ ಚಳವಳಿಯನ್ನು ಪ್ರಚೋದಿಸಿದ. ಇದು ಜರ್ಮನಿಯ ಸಮಗ್ರ ರಾಜಕೀಯ ಹಾಗು ಸಾಮಾಜಿಕ ಜೀವನದ ಮೇಲೆ ಆಳವಾದ ಪ್ರಭಾವ ಬೀರಿತು. ಲೂಥರ್ ಮೂರು ರೀತಿಯಲ್ಲಿ ಜರ್ಮನ್ ಸಾಹಿತ್ಯದ ಮೇಲೆ ಪ್ರಬಲ ಪ್ರಭಾವ ಬೀರಿದ. ಆತ ತನ್ನ ಬೈಬಲ್ ಭಾಷಾಂತರದಲ್ಲಿ ಶಕ್ತಿಯುತವಾದ ಜನಪ್ರಿಯ ಶೈಲಿಯನ್ನು ರೂಪಿಸಿ (1522–1534) ಮುಂದಿನ ಪೀಳಿಗೆಯ ಜರ್ಮನ್ ಸಾಹಿತಿಗಳಿಗೆ ಒಂದು ಸೊಗಸಾದ ಮಾದರಿಯನ್ನು ಸೃಷ್ಟಿಸಿದ. ಹೊಸ ಹೈ ಜರ್ಮನ್ ಎಂಬ ಸರ್ವಾದರಣೀಯ ಮಟ್ಟದ ಸಾಹಿತ್ಯಕ ಭಾಷೆ ವಿಕಾಸವಾಗುವುದಕ್ಕೆ ಲೂಥರನ ಬೈಬಲ್ ಭಾಷಾಂತರವೇ ಮುಖ್ಯ ಕಾರಣ. ಎರಡನೆಯದಾಗಿ ಪ್ರಾರ್ಥನಾ ಗೀತವನ್ನು ಹಾಡುವ (ಹಿಮ್ ಸಿಂಗಿಂಗ್) ಸಂಪ್ರದಾಯ ಪ್ರಾಟೆಸ್ಟಂಟ್ ಧಾರ್ಮಿಕ ವಿಧಿಯ ಮುಖ್ಯ ಭಾಗವಾಗಿರಬೇಕೆಂಬ ಆಚರಣೆಯನ್ನು ಆತ ಜಾರಿಗೆ ತಂದ. ಸ್ವತಃ ತಾನೇ ಪ್ರಾರ್ಥನಾಗೀತಗಳನ್ನು ರಚಿಸುವುದರ ಮೂಲಕ ಹೊಸದೊಂದು ಸಾಹಿತ್ಯಪ್ರಭೇದವನ್ನು ಸೃಷ್ಟಿಸಿದ. ಜರ್ಮನ್ ಸಾಹಿತಿಗಳು ಬೆಳೆಸಿದ ಈ ಪರಂಪರೆಯ ಪ್ರಾರ್ಥನಾಗೀತೆಗಳು ಯೂರೋಪಿನ ಸಾಹಿತ್ಯಕ್ಕೆ ಅವರು ಕೊಟ್ಟ ಶ್ರೇಷ್ಠ ಕೊಡುಗೆಗಳಾಗಿವೆ. ಮೂರನೆಯದಾಗಿ, ಲೂಥರ್ ಬೈಬಲ್ಲಿನ ವಸ್ತುಗಳ ಆಧಾರದ ಮೇಲೆ ನಾಟಕಗಳನ್ನು ಬರೆಯಬಹುದೆಂದು ಸೂಚಿಸಿದ. ಇದರಿಂದಾಗಿ ಹಲವು ಜರ್ಮನ್ ನಾಟಕಕಾರರು ಲೂಥರನ ತತ್ತ್ವಗಳ ಪ್ರಸಾರಕ್ಕಾಗಿ ನಾಟಕ ಮಾಧ್ಯಮವನ್ನು ಬಳಸಿಕೊಂಡು ಮಧ್ಯಯುಗದ ಸಾಂಪ್ರದಾಯಿಕ ನಾಟಕಗಳಿಂದ ತೀರ ಭಿನ್ನವಾದ ಹೊಸ ಕೃತಿಗಳನ್ನು ರಚಿಸಿದರು.

ಹ್ಯಾನ್ಸ್ ಜ್ಯಾಕ್ಸ್

**4. ಹದಿನೇಳನೆಯ ಶತಮಾನ :** ಈ ಯುಗವನ್ನು ಬರೋಕ್ ಸಾಹಿತ್ಯದ ಕಾಲವೆನ್ನುತ್ತಾರೆ. ಸಣ್ಣಸಣ್ಣ ರಾಜರುಗಳು ನಿರಂಕುಶ ಪ್ರಭುಗಳಾಗಿದ್ದರು; ಸಾಮಾಜಿಕ ಸ್ಥಿತಿಗತಿಗಳು ಮಾರ್ಪಾಡಾಗುತ್ತಿದ್ದವು. ರಾಜಕೀಯ ಅನಿಶ್ಚಿತತೆಯ ಜೊತೆಗೆ, ಧಾರ್ಮಿಕ

ಜಗಳಗಳು ಮೂವತ್ತು ವರ್ಷಗಳ ಯುದ್ಧದ (1618–1648) ಹೊತ್ತಿಗೆ ಅಸಹನೀಯ ಪರಿಸ್ಥಿತಿಗೆ ಬಂದಿದ್ದವು. ಜರ್ಮನಿಯ ಬರೋಕ್ ಸಾಹಿತ್ಯದ ನಾಟಕ, ಪುರಾಣಕಾವ್ಯ, ಭಾವಗೀತೆ ಮುಂತಾದ ಪ್ರಕಾರಗಳಲ್ಲಿ ಕೆಲವು ವಿಶಿಷ್ಟ ಆಶಯಗಳು ರೂಢಿಯಾಗಿ ಕಾಣಿಸಿಕೊಂಡವು. ಇವು 17ನೆಯ ಶತಮಾನದ ಸಮಗ್ರ ಯೂರೋಪಿನ ಸಾಹಿತ್ಯದಲ್ಲೂ ಕಂಡುಬಂದವು. ಅನಿಶ್ಚಿತವಾದ ಜಗತ್ತನ್ನು ಆಳುವವಳು ಅದೃಷ್ಟದೇವತೆ. ಅವಳು ಚಂಚಲಮನಸ್ಸಿನವಳು. ಎಲ್ಲವೂ ಕ್ಷಣಿಕವಾಗಿರುವ ಈ ಲೋಕ ಕಣ್ಣೀರಿನ ಕಣಿವೆ. ಜಗತ್ತಿನ ಲೌಕಿಕ ಸುಖಗಳಿಗೂ ಮರಣಾನಂತರ ಬರುವ ಶಾಶ್ವತ ಮೌಲ್ಯಗಳಿಗೂ ವೈದೃಶ್ಯವಿದೆ–ಇವು ಬರೋಕ್ ಸಾಹಿತ್ಯದಲ್ಲಿ ಆಗಾಗ ಬರುವ ಆಶಯಗಳು. ಬರೋಕ್ ಹುತಾತ್ಮ ಈ ಲೋಕವನ್ನು ನಿಕೃಷ್ಟವಾಗಿ ಕಾಣುತ್ತಾನೆ. ಸಂನ್ಯಾಸಿ ಬೆನ್ನು ತಿರುಗಿಸಿ ಪಲಾಯನ ಮಾಡುತ್ತಾನೆ. ವಿರಕ್ತನಾದವ ಎಲ್ಲ ಕ್ಲೇಶಗಳನ್ನೂ ದೃಢ ಮನಸ್ಸಿನಿಂದ ತಾಳಿಕೊಳ್ಳುತ್ತಾನೆ–ಎಂಬ ವೈಚಾರಿಕ ವಸ್ತುಗಳು ಎಲ್ಲಕ್ಕಿಂತ ಮಿಗಿಲಾಗಿ ಭಾವಗೀತೆಯಲ್ಲಿ ಅಭಿವ್ಯಕ್ತಿ ಪಡೆದಿವೆ... ಪಾಲ್ ಫ್ಲೆಮಿಂಗ್, ಆ್ಯಂಡ್ರಿಯಾಸ್ ಗ್ರಿಫಿಯಸ್, ಕ್ರಿಶ್ಚನ್ ಫಾನ್ ಹಾಫ್‌ಮನ್ಸ್ ವಾಲ್‌ಡೊ, ಏಂಜಲಸ್ ಸೈಲೀಷಿಯಸ್ ಮತ್ತು ಫ್ರೀಡ್ರಿಕ್ ಫಾನ್ ಲೋಗೋ ಇವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬೇಕು. ಇವರೆಲ್ಲರೂ ಆ ಕಾಲದ ಪ್ರಖ್ಯಾತ ಸಾಹಿತಿ ಮಾರ್ಟಿನ್ ಓಪಿಟ್ಸ್‌ನಿಂದ (1597–1639) ಪ್ರಭಾವಿತರಾದರು. ಫ್ರೆಂಚರ ಆಚಾರ ವ್ಯವಹಾರಗಳು, ಫ್ರೆಂಚ್ ಭಾಷೆಯ ಪ್ರಭಾವ, ಜರ್ಮನಿಯ ಶಿಷ್ಟ ಸಾಹಿತ್ಯಕ್ಕೆ ನಿಚ್ಚಳವಾಗಿ ರೂಪುಕೊಟ್ಟಿದ್ದವು. ಆ ಕಾಲದಲ್ಲಿ ಆ ಪ್ರಭಾವಗಳಿಂದ ತಪ್ಪಿಸಿಕೊಂಡು (ಸುಸಂಸ್ಕೃತಗೊಳಿಸಲಾಗಿದ್ದ) ಜರ್ಮನ್ ಭಾಷೆಯನ್ನು ಸಾಹಿತ್ಯಾಭಿವ್ಯಕ್ತಿಯ ಮಾಧ್ಯಮವಾಗಿ ಬಳಸಿಕೊಳ್ಳಲು ಸಾಧ್ಯವೆಂದು ತೋರಿಸಿಕೊಟ್ಟವ ಓಪಿಟ್ಸ್. ಅಂದಿನ ನಾಟಕದ ವಿಷಯವಾಗಿ ಹೇಳುವುದಾದರೆ ಅದು ಕೇವಲ ಸಾಹಿತ್ಯಪ್ರಕಾರವಾಗಿತ್ತೇ ಹೊರತು ಜನತೆಯೊಡನೆ ಸಂಪರ್ಕ ಪಡೆದಿರಲಿಲ್ಲ. ಆ ಮೇಲಿನ ಪೀಳಿಗೆಗಳ ಮೇಲೆ ಯಾವ ವರ್ಚಸ್ಸನ್ನೂ ಬೀರಿರಲಿಲ್ಲ. ಆದರೆ ಕಾದಂಬರಿಗಳ ವಿಷಯ ಮಾತ್ರ ಬೇರೆಯೇ ಆಗಿತ್ತು. ಆ ಕಾಲದ ಕಾದಂಬರಿಗಳಲ್ಲಿ ಗ್ರಿಮೆಲ್ಸ್ ಹೌಸನ್ ಬರೆದ ಡೆರ್ ಅಬೆಂಟಾಯರ್‌ಲಿಖೆ ಜ಼ಿಂಪ್ಲಿಟ್ಸಿಸಿಮಸ್ ಎನ್ನುವ ಕೃತಿ ಜರ್ಮನ್ ಸಾಹಿತ್ಯದಲ್ಲಿ ಒಂದು ಮಹತ್ತ್ವದ ಕಾದಂಬರಿ ಎನಿಸಿಕೊಂಡಿತು. (ಅಲೆಮಾರಿ ಕಥಾನಾಯಕನ ವಿವಿಧ ಸಾಹಸಗಳನ್ನು ವರ್ಣಿಸುವ) ಪಿಕಾರೆಸ್ಕ್ ಪ್ರಕಾರದ ಕಾದಂಬರಿಯಂತಿರುವ ಈ ಕೃತಿಯಲ್ಲಿ ಮೂವತ್ತು ವರ್ಷಗಳ ಯುದ್ಧ ನಡೆಯುತ್ತಿದ್ದ ಕಾಲದ ಜರ್ಮನಿಯ ಕಡುವಾಸ್ತವಿಕ ಚಿತ್ರಣವಿದೆ.

ಮಾರ್ಟಿನ್ ಲೂಥರ್

**5. ಹೊಸ ಅರಿವಿನ ಕಾಲ :** ಹದಿನೇಳನೆಯ ಶತಮಾನದ ಜೀವನದಲ್ಲಿ ಮತಧರ್ಮಗಳೇ ಪ್ರಬಲ ಅಂಶಗಳಾಗಿದ್ದವು. ಆದರೆ ಹೊಸ ಅರಿವಿನ ಕಾಲದಲ್ಲಿ ವಿಭಿನ್ನ ಪ್ರತಿಕ್ರಿಯೆಗಳುಂಟಾದುವು. ಅಲೌಕಿಕ ದಿವ್ಯದರ್ಶನದ ಸಹಾಯವಿಲ್ಲದೆ ಕೇವಲ ವಿವೇಚನಾಶಕ್ತಿಯಿಂದ ಮನುಷ್ಯ ಪ್ರಪಂಚವನ್ನು ಅರಿಯಬಹುದು ಎನ್ನುವಂತಾಯಿತು. ಅನೇಕರು ಉದ್ಧತ ಧರ್ಮದ ಸಾಂಪ್ರದಾಯಿಕ ಅಧಿಕಾರತೆಯನ್ನು ತಿರಸ್ಕರಿಸಿ ಮನುಷ್ಯನ ಪರಿಪೂರ್ಣತೆ ಸಾಧ್ಯವೆಂದು ಹೇಳುವ ಆಶಾವಾದವನ್ನು ತಳೆದರು. ಜರ್ಮನಿಯ ಮೊಟ್ಟಮೊದಲಿನ ಶ್ರೇಷ್ಠ ದಾರ್ಶನಿಕರಲ್ಲೊಬ್ಬನಾದ ಲೈಬ್ನಿಟ್ಸ್ (1646–1716) ಮನುಷ್ಯನ ಗ್ರಹಿಕೆಗೆ ಸಾಧ್ಯವಾದ ಲೋಕಗಳಲ್ಲಿ ಈ ಪ್ರಪಂಚವೇ ಅತ್ಯಂತ ಶ್ರೇಷ್ಠವಾದುದೆಂದು ಹೇಳಿದ. ಲೈಪ್‌ಸಿಗ್‌ನಲ್ಲಿ ಪ್ರಾಧ್ಯಾಪಕನಾಗಿದ್ದ ಗಾಟ್‌ಷೆಡ್ ತನ್ನ ಕ್ರಿಟಿಷೆ ಡಿಕ್ಟ್‌ಕುನ್‌ಸ್ಟ್ (1730) (ಕಾವ್ಯದ ವಿಮರ್ಶನಾಕಲೆ) ಎಂಬ ಗ್ರಂಥದಲ್ಲಿ ವಿವೇಚನೆಯ ಆಧಾರದ ಮೇಲೆ ಎಲ್ಲ ಸಾಹಿತ್ಯ ಪ್ರಕಾರಗಳನ್ನೂ ನಿಯಂತ್ರಿಸಲು ಪ್ರಯತ್ನಿಸಿದ. ಫ್ರೆಂಚ್ ಕ್ಲಾಸಿಕಲ್ ಪರಂಪರೆಯ ಪ್ರಮಾಣಗಳನ್ನು ಅನುಸರಿಸಬೇಕು ಎನ್ನುವುದು ಅವನ ಸೂತ್ರವಾಗಿತ್ತು. ಆದರೆ ಅದೇ ಕಾಲದಲ್ಲಿ ಫ್ರೆಂಚ್ ಸಾಹಿತ್ಯಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಸಾಹಿತ್ಯ ಅತಿಯಾದ ವರ್ಚಸ್ಸು ಬೀರಿ ಫ್ರೆಂಚ್ ಮಾದರಿಗಳು ಮೂಲೆಗುಂಪಾಗುವಂತೆ ಮಾಡಿತು. ಗಾಟ್‌ಷೆಡ್‌ನ ವೈಚಾರಿಕತೆಗೆ ಪ್ರತಿಕ್ರಿಯೆಯಾಗಿ ಸ್ವಿಟ್ಜರ್ಲೆಂಡಿನ ವಿದ್ವಾಂಸರುಗಳಾದ ಬಾಡ್ಮರ್ ಮತ್ತು ಬ್ರೈಟಿಂಗರ್ ಇಬ್ಬರೂ ಮಿಲ್ಟನನ ಪ್ಯಾರಡೈಸ್ ಲಾಸ್ಟ್ ಕಾವ್ಯವನ್ನು ಆಧಾರವಾಗಿಟ್ಟುಕೊಂಡು, ಕಾವ್ಯರಚನೆಯಲ್ಲಿ ಪ್ರತಿಭೆ ಮತ್ತು ಸ್ಫೂರ್ತಿಯ ಚಲನೆಗೂ ಅವಕಾಶವಿರಬೇಕೆಂದು ವಾದಿಸಿದರು. ಹದಿನೆಂಟನೆಯ ಶತಮಾನದ ಅತಿಶ್ರೇಷ್ಠ ಕವಿ ಕ್ಲಾಪ್‌ಸ್ಟಾಕ್ (1724–1803) ತನ್ನ ಡೆರ್ ಮೆಸಯಾಸ್‌ನಲ್ಲಿ (1748) ಪ್ಯಾರಡೈಸ್ ಲಾಸ್ಟ್ ಕಾವ್ಯವನ್ನೇ ಮಾದರಿಯಾಗಿ ಅನುಸರಿಸಿದ. ದೇಶಪ್ರೇಮ ಮುಂತಾದ ಭಾವುಕ ವಿಚಾರಗಳೇ ಹೆಚ್ಚಾಗಿರುವ ಅವನ ಹಾಡುಗಳು ಮತ್ತು ಪ್ರಗಾಥಗಳು ಅವನಿಗೆ ಅಪಾರ ಜನಪ್ರಿಯತೆ ಗಳಿಸಿಕೊಟ್ಟವು. ಪ್ರಕೃತಿ ಸೃಷ್ಟಿಕರ್ತನ ವಿವೇಚನೆಯ ಅಭಿವ್ಯಕ್ತಿಯಾಗಿದ್ದು ಅದು ಭಗವಂತ ಉದ್ದೇಶಿಸಿದ ವ್ಯವಸ್ಥೆ ಹಾಗೂ ಸಾಮರಸ್ಯಗಳ ಪ್ರತೀಕವಾಗಿದೆ ಎನ್ನುವ ವಿಚಾರ ಅಂದಿನ ಕಾವ್ಯಗಳಲ್ಲಿ ಹಾಸುಹೊಕ್ಕಾಗಿ ಬಂದಿದೆ. ಇದಕ್ಕೆ ಉತ್ತಮ ಉದಾಹರಣೆಗಳೆಂದರೆ ಹಾಲರ್‌ನ ಡೀ ಆಲ್ಪೆನ್ (ಆಲ್ಪ್ಸ್ ಪರ್ವತಗಳು 1729) ಮತ್ತು ಇವಾಲ್ಡ್ ಫಾನ್ ಕ್ಲೈಸ್ಟ್‌ನ ಡೆರ್ ಫ್ರ್ಯೂಲಿಂಗ್ (ವಸಂತ ಋತು 1749). ಜಿ. ಇ. ಲೆಸಿಂಗ್ (1729–1781) ನಿಸ್ಸಂದೇಹವಾಗಿ ಆ ಯುಗದ ಅತ್ಯುನ್ನತ ಲೇಖಕ. ಜರ್ಮನ್ ಸಾಹಿತ್ಯ ಆಗ ಸಾಧಿಸಿದ ಮಹತ್ತ್ವದ ಪ್ರಗತಿಗೆ ಅವನೇ ಪ್ರೇರಕಶಕ್ತಿ. ಆತ ತನ್ನ ವಿಮರ್ಶಾತ್ಮಕ ಲೇಖನಗಳಲ್ಲಿ ಕ್ಲಾಸಿಕ್ ಎಂಬ ಮಾತು ಫ್ರೆಂಚ್ ಕ್ಲಾಸಿಕಲ್ ತತ್ತ್ವಕ್ಕೆ ಸಂಬಂಧಿಸಿದುದಲ್ಲ–ಗ್ರೀಕ್ ಕಲೆ ಮತ್ತು ಸಾಹಿತ್ಯಗಳಿಂದ ಅದರ ಅರ್ಥವನ್ನು ಗ್ರಹಿಸಬೇಕು ಎಂದು ವಾದಿಸಿ ಫ್ರೆಂಚ್ ನಿಯೋ ಕ್ಲಾಸಿಕಲ್ ನಾಟಕಕಾರರಿಗಿಂತ ಷೇಕ್ಸ್‌ಪಿಯರ್ ಅತ್ಯಂತ ಶ್ರೇಷ್ಠನೆಂಬುದನ್ನು ಒತ್ತಿ ಹೇಳಿದ. ಲೆಸಿಂಗ್ ಬರೆದ ಪುರೋಗಾಮಿ ನಾಟಕಗಳು ವಿಶೇಷ ವರ್ಚಸ್ಸಿನಿಂದ ಕೂಡಿದ್ದು ಜರ್ಮನಿಯ ರಂಗಭೂಮಿಯನ್ನು ಪುನರುಜ್ಜೀವನಗೊಳಿಸಿದವು. ಮಿಸ್ ಸಾರಾ ಸ್ಯಾಂಪ್ಸನ್ (1755) ಎಂಬುದು ಇಂಗ್ಲಿಷ್ ಕೃತಿಗಳನ್ನು ಅನುಸರಿಸಿ ಬರೆದ, ಗೃಹಕೃತ್ಯದ ಜೀವನಕ್ಕೆ ಸಂಬಂಧಿಸಿದ ದುರಂತನಾಟಕ. ಮಿನಾ ಫಾನ್ ಬಾರ್ನ್‌ಹೆಲ್ಮ್ (1767)ಎನ್ನುವ ನಾಟಕವನ್ನು ಬರೆದು ಲೆಸಿಂಗ್ ವಿನೋದನಾಟಕ ಕ್ಷೇತ್ರದಲ್ಲಿ ಅನನ್ಯ ಸ್ಥಾನ ಗಳಿಸಿದ. ಎಮೀಲಿಯ ಗಲೋಟ್ಟಿ (1772) ಜರ್ಮನ್ ಭಾಷೆಯಲ್ಲಿ ಮೊಟ್ಟಮೊದಲನೆಯ ಕ್ಲಾಸಿಕಲ್ ದುರಂತನಾಟಕ. ನ್ಯಾಥನ್ ಡೆರ್ ವೈಸೆ (ವಿವೇಕಸ್ಥ ನ್ಯಾಥನ್–1779) ಎಂಬ ಇನ್ನೊಂದು ನಾಟಕದಲ್ಲಿ ಬದುಕಿನಲ್ಲಿ ವಿವೇಚನಾಯುತವಾದ ಅರಿವು, ಸಹಿಷ್ಣುತೆಗಳಿರಬೇಕೆಂಬ ವಿಚಾರವನ್ನು ಲೆಸಿಂಗ್ ಪ್ರತಿಪಾದಿಸಿದ್ದಾನೆ. ಇಷ್ಟಲ್ಲದೆ ಆತ ಬರೆದ ಅನೇಕ ಕಟ್ಟುಕಥೆಗಳು, ಎಪಿಗ್ರಾಮುಗಳು, ವಿಡಂಬನೆಗಳು–ಮುಂತಾದ ಬೇರೆಬೇರೆ ಪ್ರಕಾರದ ನೀತಿಪ್ರಧಾನ ಕೃತಿಗಳನ್ನು ಹೊಸ ಅರಿವಿನ ಯುಗದ ಜನರು ಬಹಳವಾಗಿ ಮೆಚ್ಚಿಕೊಂಡರು. ಕಾದಂಬರಿಕಾರರಲ್ಲಿ ವೀಲ್ಯಾಂಡನ ಹೆಸರು ಉಲ್ಲೇಖಾರ್ಹ. ಆತ ಅಗೆಥಾನ್ (1766) ಎಂಬ ಮನೋವೈಜ್ಞಾನಿಕ ಕಾದಂಬರಿಯನ್ನು ಡೀ ಅಬ್‌ಡೆರಿಟನ್ (ಅಬ್‌ಡೇರೀಟನಿಂದ ಬಂದವರು, 1774) ಎಂಬ ಹಾಸ್ಯಭರಿತ ವಿಡಂಬನೆಯನ್ನು ಬರೆಯುವುದರ ಜೊತೆಗೆ ಷೇಕ್ಸ್‌ಪಿಯರ್‌ನ 22 ನಾಟಕಗಳನ್ನು ಅನುವಾದ ಮಾಡಿದ.

**6. ಗಯಟೆಯ ಯುಗ :** ಈ ಯುಗದ ಮೂರು ಘಟ್ಟಗಳನ್ನು ಸ್ಟುರ್ಮ್ ಉಂಟ್ ಡ್ರಾಂಗ್, ಕ್ಲಾಸಿಸಿಸಮ್ ಮತ್ತು ರೊಮ್ಯಾಂಟಿಕ್ ಕಾಲ ಎಂಬುದಾಗಿ ವಿಭಜಿಸಬಹುದು. ಇದರಲ್ಲಿ ಮೊದಲಿನ ಎರಡು ಘಟ್ಟಗಳು ಒಂದೇ ಪೀಳಿಗೆಯ ಸಾಹಿತಿಗಳ ಸಾಧನೆಯನ್ನು ಪ್ರತಿನಿಧಿಸುವಂತಿದ್ದು, ಮೂರನೆಯ ಘಟ್ಟ ಹೊಸ ತಲೆಮಾರಿನ ಸಾಹಿತಿಗಳನ್ನು ಒಳಗೊಂಡಿದೆ. ಪ್ರಕೃತಿ, ಪ್ರತಿಭೆ ಮತ್ತು ಸ್ವೋಪಜ್ಞತೆ–ಇವು ಸ್ಟುರ್ಮ್ ಉಂಟ್ ಡ್ರಾಂಗ್ ಕಾಲದ ಘೋಷಣೆಗಳಾಗಿದ್ದವು. ವಿಚಾರತತ್ತ್ವವನ್ನು (ರ್‍ಯಾಷನಲಿಸಮ್) ವಿರೋಧಿಸುವುದು ಅದರ ಉದ್ದೇಶವಾಗಿತ್ತು. ಈ ತತ್ತ್ವಗಳು ಮುಖ್ಯವಾಗಿ ನಾಟಕಪ್ರಕಾರದಲ್ಲಿ ವಿಶಿಷ್ಟ ಅಭಿವ್ಯಕ್ತಿ ಪಡೆದವು. ನಾಟಕದಲ್ಲಿ ವಸ್ತುವಿಗಿಂತ, ರೂಪಕ್ಕಿಂತ, ಬೃಹದಾಕಾರದ ಭಾವೋದ್ರೇಕಗಳಿಂದ ತುಂಬಿದ ಪಾತ್ರಗಳಿಗೆ ಹೆಚ್ಚು ಗಮನ ಕೊಡಲಾಯಿತು. ಇಂಥ ನಾಟಕಗಳಲ್ಲಿ ಷೇಕ್ಸ್‌ಪಿಯರನ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದಕ್ಕೆ ಉದಾಹರಣೆಯಾಗಿ ನಾವು ಗಯಟೆಯ ಗಾಟ್ಸ್ ಫಾನ್ ಬರ್ಲಿಕಿಂಗೆನ್ (1773), ಷಿಲ್ಲರನ ಡೀ ರಾಯ್‌ಬರ್ (ದರೋಡೆಗಾರರು 1781) ಮತ್ತು ಲೆಂಟ್ಸ್ ಕ್ಲಿಂಗರ್ (ಸ್ಟುರ್ಮ್ ಉಂಟ್ ಡ್ರಾಂಗ್ ಚಳವಳಿ ಹೆಸರು ಬಂದದ್ದು ಕ್ಲಿಂಗರನ ಒಂದು ನಾಟಕದ ಶೀರ್ಷಿಕೆಯಿಂದ) ಲೈಸೆವಿಟ್ಸ್ ಮತ್ತು ಇತರ ಸಾಹಿತಿಗಳ ಕೃತಿಗಳನ್ನು ನೋಡಬಹುದು. ಕಾದಂಬರೀ ಪ್ರಕಾರದಲ್ಲಿ ಗಮನಾರ್ಹವೆನಿಸಿಕೊಂಡ, ಗಯಟೆಯ ಡೀ ಲೈಡನ್ ಡೆಸ್ ಯುಂಗನ್ ವರ್ಡರ್ (ಯುವಕ ವರ್ಡರನ ದುಃಖಗಳು)–ಅವನನ್ನು ವಿಶ್ವವಿಖ್ಯಾತನನ್ನಾಗಿ ಮಾಡಿತು. ನಾಗರಿಕತೆಯ ವಿಷಯವಾಗಿ ಅತೃಪ್ತಿ, ಪ್ರಕೃತಿಯಲ್ಲಿ ಹಾಗೂ ವ್ಯಕ್ತಿಯ ಭಾವುಕತೆಯಲ್ಲಿ ನಂಬಿಕೆ–ಈ ಅಂಶಗಳಿಂದಾಗಿ ಕಾದಂಬರಿಯ ನಾಯಕ ಐಹಿಕ ಬೇಸರಕ್ಕೆ (ವೆಲ್ಟ್‌ಷ್ಮರ್ಟ್ಸ್) ತುತ್ತಾಗುತ್ತಾನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇಂಥ ಪ್ರತಿಭಟನಾ ಮನೋವೃತ್ತಿಯನ್ನು ಷಿಲರ್‌ನ ಗದ್ಯನಾಟಕಗಳಾದ ಫೀಸ್ಕೊ (1783), ಕಬಾಲೆ ಉಂಟ್ ಲೀಬೆ (ಒಳಸಂಚು ಮತ್ತು ಪ್ರೇಮ 1784), ಮುಂತಾದವುಗಳಲ್ಲಿ ಕಾಣಬಹುದು. ಆದರೆ ಇಂಥ ಪ್ರತಿಭಟನೆ ದುರಂತದಲ್ಲಿ ಪರ್ಯವಸಾನವಾಗಿ–ಲೆಂಟ್ಸ್‌ನಂಥ ಹಲವು ಸಾಹಿತಿಗಳು ತಮ್ಮ ವೈಯಕ್ತಿಕ ಜೀವನದಲ್ಲಿ ಸೋಲನ್ನು ಅನುಭವಿಸಬೇಕಾಯಿತು. ಸ್ಟುರ್ಮ್ ಉಂಟ್ ಡ್ರಾಂಗ್ ಚಳವಳಿ ಬಹುಬೇಗ ಹೊತ್ತಿ ಉರಿದು ತಣ್ಣಗಾದಾಗ, ವ್ಯಕ್ತಿಸ್ವಾತಂತ್ರ್ಯ, ಕರ್ತವ್ಯ ಮತ್ತು ಅಂತರಂಗದ ಪ್ರವೃತ್ತಿಗಳ ನಡುವಣ ಸಂಘರ್ಷ ಮುಂತಾದ

ಸಮಸ್ಯೆಗಳಿಗೆ ಕ್ಲಾಸಿಸಮ್ ಚಳವಳಿ ಒಂದು ಹೊಸ ಪರಿಹಾರವನ್ನೂ ನೂತನ ಆದರ್ಶವನ್ನೂ ನೀಡಿತು. 1780ರಲ್ಲಿ ಗಯಟೆ ಇಟಲಿಗೆ ಪ್ರವಾಸ ಕೈಕೊಂಡ ಮೇಲೆ 11 ವರ್ಷಗಳ ಕಾಲ ವೈಮರ್ ಆಸ್ಥಾನದಲ್ಲಿ ಹಲವಾರು ಹೊಣೆಗಾರಿಕೆಗಳನ್ನು ಹೊತ್ತು ವೈವಿಧ್ಯಮಯವಾದ ಅನುಭವಗಳನ್ನು ರೂಢಿಸಿಕೊಳ್ಳುತ್ತಿದ್ದ. ಅದೇ ಸಮಯದಲ್ಲಿ, 1787ರಲ್ಲಿ ಷಿಲರ್‌ನ ಡಾನ್ ಕಾರ್ಲೋಸ್ ಪ್ರಕಟವಾದಾಗ ಜರ್ಮನ್ ಸಾಹಿತ್ಯದ ಕ್ಲಾಸಿಕಲ್ ಯುಗ ಪ್ರಾರಂಭವಾಯಿತೆನ್ನಬೇಕು. ಆಗ ಪ್ರಾರಂಭವಾದ ಹೊಸ ಯುಗದ (1794 ರಿಂದ 1850ರವರೆಗಿನ) ಅವಧಿಯಲ್ಲಿ ವೈಮರ್‌ನಲ್ಲಿಯ ಗಯಟೆ ಮತ್ತು ಷಿಲರ್ ಇಬ್ಬರ ಸ್ನೇಹ ಪರಿಪಕ್ವವಾಗಿ, ಕ್ಲಾಸಿಕಲ್ ಚಳವಳಿ ಶಿಖರಕ್ಕೇರಿತೆನ್ನಬಹುದು. ಮಾನವೀಯತೆ ಈ ಹೊಸ ಚಳವಳಿಯ ಮುಖ್ಯ ಸೂತ್ರ. ಅಂತರಂಗದಲ್ಲಿ ಬುದ್ಧಿ ಭಾವಗಳೆರಡೂ ಸಮುಚಿತವಾಗಿ ಬೆಳೆದು ಸಮತೋಲನ ಸಾಧಿಸಿಕೊಂಡಾಗ ಸಂಪೂರ್ಣ ವ್ಯಕ್ತಿತ್ವದ ಆವಿರ್ಭಾವವಾಗುತ್ತದೆಂಬುದು ಕ್ಲಾಸಿಸಿಸಮ್ ಚಳವಳಿಯ ಒಂದು ಮುಖ್ಯ ಆದರ್ಶ. ಸಾಮಾಜಿಕ ವ್ಯವಸ್ಥೆ, ಬಹಿರಂಗದ ರೂಪ, ಸೌಮ್ಯತ್ವ ಇವನ್ನು ಪ್ರತ್ಯೇಕವಾಗಿ ಪರಿಶೀಲಿಸಿದರೂ ಅವು ಉತ್ತಮ ಮೌಲ್ಯಗಳೇ ಆಗಿವೆ. ಫ್ರೆಂಚ್ ಮಹಾಕ್ರಾಂತಿ, ಅದರಿಂದ ಉದ್ಭವಿಸಿದ ಯುದ್ಧಪರಂಪರೆಗಳು, ನೆಪೋಲಿಯನನ ಉದಯವಾಗಿ ಅವನ ಸೇನೆಗಳು ವಿಜಯದುಂದುಭಿ ಮೊಳಗಿಸುತ್ತ ಜರ್ಮನ್ ಪ್ರಾಂತ್ಯಗಳ ಮೂಲಕ ಹಾದುಹೋದದ್ದು ಮುಂತಾದ ರಾಜಕೀಯ ಘಟನಾವಳಿಗಳಿಂದ ಪ್ರಭಾವಿತರಾಗಿ ಗಯಟೆ, ಷಿಲರರು ಕ್ರಿಯಾತ್ಮಕವಾಗಿ ತಮ್ಮ ಸೂಕ್ಷ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಅವರ ದೃಷ್ಟಿಗೆ ಮನುಷ್ಯನ ಅಂತರಂಗದ ಸಂಸ್ಕೃತಿ, ನೈತಿಕ ಶಿಕ್ಷಣ ಹಾಗೂ ವಿಶ್ವಮಾನವೀಯತೆ ಇವು ಪ್ರಾದೇಶಿಕ, ರಾಜಕೀಯ ಘಟನೆಗಳಿಗಿಂತ

18ನೆಯ ಶತಮಾನದ ಮೂವರು ಪ್ರಮುಖ ಕವಿಗಳು. ಎಡದಿಂದ : ಫ್ರೀಡ್‌ರಿಕ್ ಗಾಟ್ಲೀಪ್ ಕ್ಲಾಪ್‌ಸ್ಟಾಕ್, ಗಾಟ್‌ಹೋಲ್ಟ್ ಲೆಸಿಂಗ್, ಗಯಟೆ

ಹೆಚ್ಚು ಮುಖ್ಯವೆಂದು ತೋರಿದವು. ಜರ್ಮನ್ ಸಾಹಿತ್ಯದ ಹಲವು ಉದ್ದಾಮ ಕೃತಿಗಳು ಆ ಕಾಲದಲ್ಲಿ ಪೂರ್ಣಗೊಳಿಸಲ್ಪಟ್ಟವು–ಗಯಟೆಯ ಕಾವ್ಯನಾಟಕ ಟ್ಯಾಸೋ 1790ರಲ್ಲಿ ರಚಿತವಾದರೂ ಇಟಲಿಯ ಪ್ರವಾಸ ಕಾಲದಲ್ಲಿ ಆತ ಅದನ್ನು ಪುನಃ ಪರಿಷ್ಕರಿಸಿದ. ಪುರಾಣಕಾವ್ಯದ ಶೈಲಿಯಲ್ಲಿ ರಚಿತವಾದ ಗ್ರಾಮೀಣ ಕಾವ್ಯ ಹರ್ಮನ್ ಉಂಟ್ ಡೊರೋತಿಯವನ್ನು (1797) ಬರೆದ. ಗಯಟೆಯ ವಿಲ್‌ಹೆಲ್ಮ್ ಮೈಸ್ಟರ್ಸ್ ಲೆರ್‌ಯಾರೆ (ವಿಲ್ಹ್‌ಹೆಲ್ಮ್ ಮೈಸ್ಟರನ ಕಲಿಕೆಯ ದಿನಗಳು) ಎನ್ನುವ ಕಾದಂಬರಿಯಲ್ಲಿ ಮನುಷ್ಯ ಕ್ರಿಯಾತ್ಮಕವಾದ ನಡವಳಿಕೆಯ ಮೂಲಕ ತನ್ನ ಬದುಕನ್ನು ಹೇಗೆ ಸಾರ್ಥಕಗೊಳಿಸಿಕೊಳ್ಳಬಹುದೆಂಬ ವಸ್ತುವಿದೆ. ಗಯಟೆಯ ಈ ಕಾದಂಬರಿ ಬಿಲ್ಡುಂಗ್ಸ್ ರೊಮನ್ ಅಥವಾ ಶೈಕ್ಷಣಿಕ ಕಾದಂಬರಿ ಎಂಬ ಹೊಸ ಕಾದಂಬರೀ ಪ್ರಕಾರವನ್ನೇ ಸೃಷ್ಟಿಸಿತು. ಷಿಲರ್ ಸೌಂದರ್ಯಮೀಮಾಂಸೆ ಹಾಗೂ ದರ್ಶನಶಾಸ್ತ್ರಗಳಿಗೆ ಸಂಬಂಧಿಸಿದಂತೆ ಹಲವು ಪ್ರಬಂಧಗಳನ್ನು ಬರೆದು ಕಲೆಯ ಶೈಕ್ಷಣಿಕ ಉದ್ದೇಶವನ್ನು ಒತ್ತಿ ಹೇಳಿದ. ಇವಲ್ಲದೆ, ಅವನ ಪ್ರಸಿದ್ಧ ಲಾವಣಿಗಳೂ ವ್ಯಾಲೆನ್‌ಸ್ಟೈನ್ ನಾಟಕದಿಂದ (1799) ಹಿಡಿದು ವಿಲ್‌ಹೆಲ್ಮ್ ಟೆಲ್ (1804) ವರೆಗಿನ ಅವನ ಅಸಂಖ್ಯಾತ ನಾಟಕಗಳೂ ಆಗ ಬೆಳಕಿಗೆ ಬಂದವು. 1781, 1788 ಮತ್ತು 1790ರಲ್ಲಿ ಕಾಂಟ್‌ನ ಜಗದ್ವಿಖ್ಯಾತ ಕ್ರಿಟಿಕೆನ್ (ಕ್ರಿಟೀಕ್ಸ್) ಪ್ರಕಟವಾಯಿತು. ಆದರೆ ಜರ್ಮನಿ ವಿಶ್ವಸಾಹಿತ್ಯಕ್ಕೆ ಕೊಡುಗೆಯಾಗಿ ಕೊಟ್ಟ ಸರ್ವ ಶ್ರೇಷ್ಠ ಕೃತಿಯೆಂದರೆ ಗಯಟೆಯ ಫೌಸ್ಟ್ ನಾಟಕ. ಇದರ ಮೊದಲ ಭಾಗ ಪ್ರಕಟವಾದದ್ದು 1808ರಲ್ಲಿ. ಇದರಲ್ಲಿ ಫೌಸ್ಟ್‌ನ ಅದಮ್ಯ ಎಳಸಿಕೆಗಳ, ಹತಾಶೆ, ಮೆಫಿಸ್ಟೋಫೆಲೀಸನೊಡನೆ ಮಾಡಿಕೊಂಡ ಒಡಂಬಡಿಕೆ, ಗ್ರೆಟ್ಚನ್‌ಳ ಮೇಲಿನ ಪ್ರೇಮ–ಇವು ಮುಖ್ಯ ಎಳೆಗಳಾಗಿ ಬರುತ್ತವೆ. 1832ರಲ್ಲಿ ಪೂರ್ಣಗೊಳಿಸಲ್ಪಟ್ಟ ಫೌಸ್ಟ್ ನಾಟಕದ ಎರಡನೆಯ ಭಾಗದಲ್ಲಿ ರಾಜಾಸ್ಥಾನದಲ್ಲಿ ಮಾಂತ್ರಿಕ ಫೌಸ್ಟ್‌ನ ಜೀವನ, ಟ್ರಾಯ್ ದೇಶದ ಹೆಲೆನ್ನಳನ್ನು ಆತ ಗೆಲ್ಲುವುದು, ಫೌಸ್ಟ್‌ನ ಪ್ರಾಯಶ್ಚಿತ್ತ, ವಿಮೋಚನೆ–ಇವುಗಳು ರೂಪುಗೊಂಡಿವೆ. ಪ್ರಯತ್ನ, ಅಸ್ವಾರ್ಥಪರ ಕಾರ್ಯಪಟುತ್ವ ಇವುಗಳ ಮೂಲಕ ಬದುಕನ್ನು ಸಾರ್ಥಕಗೊಳಿಸಬೇಕೆನ್ನುವುದು ಗಯಟೆಯ ಪರಿಪಕ್ವ ವಿವೇಚನೆಗೆ ಮೂಲಾಧಾರವಾಗಿತ್ತು. ಗಯಟೆಯ ಬಹುಮುಖ ಪ್ರತಿಭೆ ಅವನ ಕವನಗಳು, ನಾಟಕಗಳು, ಕಾದಂಬರಿಗಳು ಇವುಗಳಲ್ಲಿ ಮಾತ್ರವಲ್ಲದೆ (ಗಯಟೆ ಕವನಗಳು ಅವನ ಶ್ರೇಷ್ಠ ಸಾಹಿತ್ಯ ಸಾಧನೆಗಳೆಂದು ಕೆಲವು ವಿಮರ್ಶಕರು ಅಭಿಪ್ರಾಯಪಡುತ್ತಾರೆ) ಅವನ ವೈಜ್ಞಾನಿಕ ಬರೆಹಗಳು, ಪತ್ರಗಳು, ದಿನಚರಿಗಳು ಹಾಗೂ ಸಂವಾದಗಳಲ್ಲಿ ಪೂರ್ಣಾಭಿವ್ಯಕ್ತಿ ಪಡೆದಿವೆ. ವೈಮರ್‌ನಲ್ಲಿನ ಅವನ ನಿವಾಸ ಒಂದು ಯಾತ್ರಾಸ್ಥಳದಂತಾಗಿ ಅವನ ಖ್ಯಾತಿ ಕೇವಲ ಜರ್ಮನಿಯಲ್ಲಿ ಮಾತ್ರವಲ್ಲದೆ ದೇಶವಿದೇಶಗಳಲ್ಲೂ ಹರಡಿತು.

ಏತನ್ಮಧ್ಯೆ ಬೇರೆ ಇಬ್ಬರು ಗಣ್ಯಸಾಹಿತಿಗಳು ಸಾಹಿತ್ಯದಲ್ಲಿ ಹೊಸ ಹೊಸ ಬೆಳವಣಿಗೆಗೆ ಪ್ರೇರಕವಾದರು. ಎಫ್. ಹೆಲ್ಡರ‍್ಲಿನ್‌ನ (1770–1843) ಪ್ರತಿಭೆ ಅವನ ಭಾವಗೀತೆಗಳಲ್ಲಿ ಸಮುಚಿತವಾಗಿ ಪ್ರಕಾಶಿತವಾಯಿತು. (ಜೀನ್ ಪಾಲ್ ಎಂಬ ಕಾವ್ಯನಾಮದ) ಜೆ.ಪಿ.ಎಫ್. ರಿಕ್ಟರ್ (1763–1825) ಅನೇಕ ಕಾದಂಬರಿಗಳನ್ನು ರಚಿಸಿ ಜರ್ಮನ್ ಕಾದಂಬರೀ ಪ್ರಕಾರವನ್ನು ಶ್ರೀಮಂತಗೊಳಿಸಿದ. ಅವನ ಕೃತಿಗಳ ರಚನೆಯಲ್ಲಿ ಶಿಥಿಲತೆ ಕಾಣಿಸಿದರೂ ಅವುಗಳಲ್ಲಿಯ ಹಾಸ್ಯ, ಭಾವುಕತೆಗಳು ಉಳಿದೆಲ್ಲ ಕೊರತೆಗಳನ್ನೂ ತುಂಬಿಕೊಡುತ್ತವೆ. ಆ ಶತಮಾನದ ಕೊನೆಯ ದಶಕದಲ್ಲಿ ವೈಮರ್ ಅಭಿಜಾತ ಚಳವಳಿ ಆದರ್ಶಗಳ, ಅಭಿವ್ಯಕ್ತಿರೂಪಗಳ ವಿರುದ್ಧವಾಗಿ ಒಂದು ವಿಶಿಷ್ಟ ಪ್ರತಿಕ್ರಿಯೆ ಪ್ರಾರಂಭವಾಯಿತು. ಟೀಕ್ ವ್ಯಾಕನ್‌ರೋಡರ್ ಮತ್ತು ನೊವಾಲೆಸ್ ಮೊದಲಾದವರ ವಿಭಾವನಾಯುತ ಕೃತಿಗಳು, ಎ. ಡಬ್ಲ್ಯು. ಷ್ಲೆಗೆಲ್ ಸೋದರರ ವಿಮರ್ಶಾತ್ಮಕ ಲೇಖನಗಳು, ಎ. ಡಬ್ಲ್ಯು. ಷ್ಲೆಗೆಲ್ ಮತ್ತು ಟೀಕ್ ರಚಿಸಿದ ಷೇಕ್ಸ್‌ಪಿಯರ್ ಕೃತಿಗಳ ಭಾಷಾಂತರಗಳು–ಇವುಗಳ ಮೂಲಕ ಜರ್ಮನ್ ರೊಮ್ಯಾಂಟಿಕ್ ಯುಗ ಪ್ರಾರಂಭವಾಯಿತು. ರೊಮ್ಯಾಂಟಿಕ್ ಸಾಹಿತಿಗಳು, ಜೀವನದಲ್ಲಿ ಮತ್ತು ಸಾಹಿತ್ಯದಲ್ಲಿ ತರ್ಕಾತೀತವಾದ ಅಂಶಗಳೂ ಇವೆಯೆಂಬ ಮಾತನ್ನು ಒತ್ತಿ ಹೇಳಿ, ಕಲೆ ಎನ್ನುವುದು ಒಂದು ತೆರನಾದ ದಾರ್ಶನಿಕ ಅನುಭೂತಿ ಎಂದು ಭಾವಿಸಿದರು. ವಿಭಿನ್ನ ಕಲಾಪ್ರಕಾರಗಳ ನಡುವೆ ಸಮನ್ವಯ ಸಾಧಿಸಬಹುದೆಂಬ ವಿಚಾರದಿಂದ ಪ್ರೇರಿತರಾದ ಅವರು ವಿವಿಧ ಕಾವ್ಯಪ್ರಕಾರಗಳಲ್ಲಿ ಹಾಗೂ ಛಂದೋರೂಪಗಳಲ್ಲಿ ಪ್ರತಿಮೆ ಸಂಕೇತಗಳನ್ನು ಬಳಸುವುದರಲ್ಲಿ ಪ್ರಯೋಗಗಳನ್ನು ನಡೆಸಿದರು. ಉದಾಹರಣೆಗೆ ಹೈನ್ರಿಕ್ ಫಾನ್ ಓಪ್ಟರ್ ಡಿಂಗನ್ (1802) ಕೃತಿಯಲ್ಲಿ ಕವಿ ನೋವಾಲಿಸ್ ಸ್ವಪ್ನಸಂಕೇತಗಳನ್ನೂ ನೀಲಿ ಹೂ ಮುಂತಾದ ಪ್ರತೀಕಗಳನ್ನೂ ಬಳಸಿದ. ಒಂದು ವಿಶೇಷ ಸಂಗತಿಯೆಂದರೆ ಆ ಯುಗದ ಸಾಹಿತಿಗಳ ಹಲವು ಕೃತಿಗಳು ಅಪೂರ್ಣವಾಗಿಯೇ ಉಳಿದವು. ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಿಗಿಂತ ಹೆಚ್ಚಾಗಿ, (ನೋವೆಲ್ಲೆ) ಸಣ್ಣ ಕಥೆಯ ರೂಪವೇ ಅವರಿಗೆ ಹೆಚ್ಚಾಗಿ ಒಗ್ಗಿತು–ಅದರಲ್ಲೂ ಅವರು ರಚಿಸಿದ ಕಿನ್ನರಕಥೆಯ (ಮೆರ್ಖೆನ್) ಪ್ರಭೇದ ಜರ್ಮನ್ ಸಾಹಿತ್ಯಕ್ಕೊಂದು ವಿಶೇಷ ಕಾಣಿಕೆ. ಟೀಕ್, ನೋವಾಲಿಸ್ ಬ್ರೆಂಟಾನೋ, ಐಷನ್‌ಡೋರ್ಫ್, ಫೌಕೆ, ಇ.ಟಿ.ಎ. ಹಾಫ್‌ಮನ್ ಎಲ್ಲರೂ ಕಿನ್ನರ ಕಥೆಗಳನ್ನು ಬರೆದರು. ಭಾವಗೀತೆಯ ಪ್ರಕಾರವನ್ನು ವಿಶೇಷವಾಗಿ ಬಳಸಲಾಯಿತು. ಪ್ರಕೃತಿಯನ್ನು ಕುರಿತು ಬರೆದ ಭಾವಗೀತೆಗಳು ರೊಮ್ಯಾಂಟಿಕ್ ಕಾವ್ಯದ ಅತ್ಯಂತ ಮುಖ್ಯ ಸಾಧನೆಯಾದುವು. ಬ್ರೆಂಟಾನೋ, ಕ್ಯಾಮಿಸೋ, ಐಷನ್‌ಡೋರ್ಫ್ ಮತ್ತು ಇತರ ಹಲವು ಕವಿಗಳು ಪ್ರಕೃತಿಗೀತೆಗಳನ್ನು ರಚಿಸಿದರು. ಜರ್ಮನಿಯ ಉತ್ತರದಲ್ಲಿ ಹೈನ್ರಿಕ್ ಫಾನ್ ಕ್ಲೈಸ್ಟ್ (1771–1811) ಅತ್ಯಂತ ಉನ್ನತ ಕಾವ್ಯಾಂಶವುಳ್ಳ ರೊಮ್ಯಾಂಟಿಕ್ ನಾಟಕಗಳನ್ನೂ ಸಣ್ಣಕತೆಗಳನ್ನೂ ಬರೆದ. ನೆಪೋಲಿಯನ್ನನ ವಿರುದ್ಧ ನಡೆದ ರಾಷ್ಟ್ರೀಯ ಚಳವಳಿಯಲ್ಲಿ ಮುಖ್ಯ ಪಾತ್ರವಹಿಸಿದ ಸಾಹಿತಿ ಆತ. ಅವನ ಆಂಫಿಟ್ರಿಯಾನ್ (1807), ಪೆಂಥೆಸೀಲಿಯ (1808), ಡೆರ್ ಪ್ರಿನ್ಸ್ ಫಾನ್ ಹೋಂಬರ್ಗ್ (1811) ಮುಂತಾದ ನಾಟಕಗಳಲ್ಲಿ, ಮನುಷ್ಯನ ನೈಸರ್ಗಿಕ ಭಾವನೆಗಳು ಮತ್ತು ಸಹಜಪ್ರವೃತ್ತಿಗಳೇ ಬದುಕಿಗೆ ಸುಭದ್ರತೆಯನ್ನು ಒದಗಿಸುವ ಸಾಧನಗಳು ಎಂಬ ನಂಬಿಕೆ ಇದೆ. ವಿಚಿತ್ರ, ಅದ್ಭುತ, ರಮ್ಯ ಕಾದಂಬರಿಗಳನ್ನು ಬರೆಯುವುದರಲ್ಲಿ ನಿಷ್ಣಾತನೆನಿಸಿಕೊಂಡ ಇ.ಟಿ.ಎ. ಹಾಫ್‌ಮನ್ ಅನೇಕ ಐರೋಪ್ಯ ಸಾಹಿತಿಗಳ ಮೇಲೆ ತನ್ನ ವರ್ಚಸ್ಸು ಬೀರಿದ.

**7. ಹತ್ತೊಂಬತ್ತನೆಯ ಶತಮಾನ :** 19ನೆಯ ಶತಮಾನದಲ್ಲಿ ಜರ್ಮನ್ ಅಭಿಜಾತ ಚಳವಳಿಯ ಸಾಂಸ್ಕೃತಿಕ ಹಾಗೂ ರಾಜಕೀಯ ಆದರ್ಶಗಳು ಕೈಗೂಡಲಿಲ್ಲ. ಆಸ್ಟ್ರಿಯದ ಮೆಟರ್‌ನಿಕ್ಕನ ನಾಯಕತ್ವದ ಸಂಪ್ರದಾಯಶೀಲ ಸರ್ಕಾರಗಳು ವಿಚಾರಸ್ವಾತಂತ್ರ್ಯವನ್ನು ಹತ್ತಿಕ್ಕಿದ್ದರ ಫಲವಾಗಿ ಜರ್ಮನ್ ಬುದ್ಧಿಜೀವಿಗಳ ಕ್ಷೇತ್ರದಲ್ಲಿ ಕಡುತರವಾದ ಆಶಾಭಂಗವುಂಟಾಯಿತು. ಒಂದು ಕಾಲದಲ್ಲಿ ಹರ್ಷೋತ್ಕರ್ಷದಿಂದ ಕೂಡಿದ್ದು ಕ್ರಿಯಾಶೀಲಪ್ರವೃತ್ತಿಯಿಂದ ತುಂಬಿದ್ದ ಸಾಹಿತಿಗಳ ಮನೋಧರ್ಮದಲ್ಲಿ ತೀವ್ರ ಬದಲಾವಣೆಗಳುಂಟಾದವು. ಔದ್ಯೋಗಿಕ ಕ್ರಾಂತಿಯ ಪ್ರಾರಂಭ ಕಾಲದಲ್ಲಿ ಉಂಟಾದ ಸಾಮಾಜಿಕ ಹಾಗೂ ರಾಜಕೀಯ ಅಶಾಂತಿಯಿಂದಾಗಿ ಸಾಹಿತ್ಯದಲ್ಲಿ ನಿರಾಶೆಯ ಧ್ವನಿ ಕೇಳಿಸಿತು. ಪ್ರಮುಖವಾಗಿ ಅದು ನಾಟಕಕಾರರ ಯುಗವಾಗಿದ್ದು ಅಂದಿನ ಕೃತಿಗಳಲ್ಲಿ ಕಾಲಸಹಜವಾದ ಭ್ರಮನಿರಸನ ಸ್ಪಷ್ಟವಾಗಿ ಒಡೆದು ಮೂಡಿರುವುದನ್ನು ಕಾಣಬಹುದು.

ಫ್ರಾನ್ಸ್ ಗ್ರಿಲ್‌ಪಾರ್ಸರ್‌ನ (1791–1872) ನಾಟಕಗಳಲ್ಲಿಯ ನಾಯಕರು ಆ ಯುಗದ ನಿರಾಶೆ ದುಗುಡಗಳನ್ನು ಪ್ರತಿಪಾದಿಸುವಂತಿದ್ದಾರೆ. ಪ್ರತಿಕೂಲ ಸನ್ನಿವೇಶದ ಒತ್ತಡಕ್ಕೆ ಸಿಕ್ಕಾಗ, ವ್ಯಕ್ತಿಯ ಶಕ್ತಿ ಸಾಹಸಗಳೆಲ್ಲವೂ ಹೇಗೆ ನಿಷ್ಫಲಗೊಳ್ಳುತ್ತವೆಂದು ಗ್ರಿಲ್‌ಪಾರ್ಸರ್ ತೋರಿಸಿದ್ದಾನೆ. ವ್ಯಕ್ತಿಯ ಬಾಳಿನಲ್ಲಿ ತೃಪ್ತಿಯೆಂಬುದು ತೀರಾ ದುರ್ಲಭವಾದುದರಿಂದ ಅವನು ತನ್ನ ಅಂತಃಶಕ್ತಿಗಳನ್ನು ಸಾರ್ಥಕವಾಗಿ ದುಡಿಸಿಕೊಂಡು ಆತ್ಮಪರಿತ್ಯಾಗದ ಮೂಲಕವೇ ಅಂತರಂಗದ ಚಿರಶಾಂತಿ ಸಾಧಿಸಬೇಕೆನ್ನುವುದು ಗ್ರಿಲ್‌ಪಾರ್ಸರನ ಅಭಿಮತ. ಅದನ್ನು ಅವನ ಡಾಸ್ ಗೋಲ್ಡನೆ ಫ್ಲೀಸ್–(ಚಿನ್ನದ ತುಪ್ಪಟ 1822) ಎನ್ನುವ ತ್ರಿನಾಟಕ ಚಕ್ರ, ಡೆರ್ ಟ್ರೌಮ್ ಐನ್ ಲೀಬೆನ್ (ಕನಸು–ಜೀವನ–1834), ಡೆಸ್ ಮಿಯರೆಸ್ ಉಂಟ್ ಡೆರ್ ಲೀಬೆವೆಲನ್ (ಪ್ರೀತಿಯ ಸಾಗರದ ಅಲೆಗಳು–1819) ನಾಟಕಗಳು ಸ್ಪಷ್ಟವಾಗಿ ರೂಪಿಸುತ್ತವೆ. ಆ ಕಾಲದ ಇನ್ನೊಬ್ಬ ನಾಟಕಕಾರನಾದ ಫ್ರೀಡ್ರಿಕ್ ಹೆಬೆಲ್ (1813–1863) ಇತಿಹಾಸದ ನಿರ್ಧಾರಕ ಶಕ್ತಿಗಳೆದುರಿಗೆ ವ್ಯಕ್ತಿಯ ಹೋರಾಟ ನಿರರ್ಥಕ, ಅದರಿಂದ ಅವನ ಬದುಕು ದುರಂತ ಎಂದು ತೋರಿಸುತ್ತಾನೆ. 1840ರಿಂದ ಹಿಡಿದು 1856ರ ಅವಧಿಯಲ್ಲಿ ಬರೆಯಲಾದ ಅವನ ಜ್ಯೂಡಿತ್ ಹೆರಾಡಿಸ್ ಉಂಟ್ ವೇರಿಯಾನೆ, ಗೈಗಸ್ ಉಂಟ್ ಸೈನ್ ರಿಂಗ್ (ಗೈಗಸ್ ಮತ್ತು ಅವನ ಉಂಗುರ) ಮುಂತಾದ ನಾಟಕಗಳಲ್ಲಿ ಬರುವ ನಾಯಕರು ತಮ್ಮ ವ್ಯಕ್ತಿತ್ವ ಕಳಂಕಕ್ಕೆ ಗುರಿಯಾದಾಗ ಯಾವ ಸಮನ್ವಯಕ್ಕೂ ಮಣಿಯದೆ ಹೋರಾಡುವುದರಿಂದ ದುರಂತಕ್ಕೆ ಪಕ್ಕಾಗುತ್ತಾರೆ. ಸಿ.ಡಿ.ಗ್ರಾಬೆಯ (1801–1836) ನಾಟಕಗಳಲ್ಲಿನ ದುರಂತ ನಾಯಕರು ಇತಿಹಾಸದ ಪ್ರೇರಕ ಶಕ್ತಿಗಳನ್ನು ತಾವು ನಿಯಂತ್ರಿಸಬಲ್ಲೆವೆಂಬ ಭ್ರಮೆಗೆ ಸಿಕ್ಕಿ ಸೋಲನ್ನು ಅನುಭವಿಸುತ್ತಾರೆ. ಸಮುದಾಯದ ಶಕ್ತಿಗಳು ಎಷ್ಟೇ ಜಡವಾಗಿರುವಂತೆ ಕಂಡರೂ ಅವುಗಳೆದುರಿಗೆ ಹ್ಯಾನಿಬಲ್, ಮೇರಿಯಸ್, ಹೋಯನ್ ಸ್ಟೌಫೆನ್ ಚಕ್ರವರ್ತಿಗಳೂ, ನೆಪೋಲಿಯನ್ ಮುಂತಾದ ಮಹಾವ್ಯಕ್ತಿಗಳೂ ನಿರ್ವೀರ್ಯರಾಗುತ್ತಾರೆಂಬ ತತ್ತ್ವವನ್ನು ಗ್ರಾಬೆ ತನ್ನ ಡಾನ್ ಜುವಾನ್ ಉಂಟ್ ಫೌಸ್ಟ್– (1820), ನೆಪೋಲಿಯನ್–(1831) ಮುಂತಾದ ನಾಟಕಗಳಲ್ಲಿ ಚಿತ್ರಿಸಿದ್ದಾನೆ. ಈ ನಾಟಕಕಾರರಲ್ಲಿ ಅತ್ಯಂತ ಆಧುನಿಕನೆನ್ನಬಹುದಾದವನೆಂದರೆ ಜಾರ್ಜ್ ಬ್ಯೂಹ್ನರ್ (1813–1837). ಅವನ ನಾಟಕಗಳಲ್ಲಿ ಬರುವ ಚಿಟಿಕೆ ಛಾಯಾಚಿತ್ರದಂಥ ತುಣುಕು ದೃಶ್ಯಾವಳಿಗಳು ಆಧುನಿಕ ನಾಟಕಗಳ ಪೂರ್ವಸೂಚಿಯಂತಿವೆ. ಡ್ಯಾಂಟನ್ಸ್ ಟೋಟ್ (ಡ್ಯಾಂಟನ್ನನ ಮರಣ), ಲಯೋನ್ಸೆ ಉಂಟ್ ಲೀನಾ, ವಾಯಿಟ್ಜೆಕ್ ಮುಂತಾದ (ಕೇವಲ 23 ವರ್ಷವಾಗಿದ್ದಾಗಲೇ ತೀರಿಹೋದ ಬ್ಯೂಹ್ನರನ ನಾಟಕಗಳು ಪ್ರದರ್ಶಿತವಾದ್ದು ಅವನ ಮರಣಾನಂತರವೇ) ಅವನ ನಾಟಕಗಳಲ್ಲಿ ವ್ಯಕ್ತಿಯೊಬ್ಬ ವಿರೋಧಿ ಸಾಮಾಜಿಕ ಶಕ್ತಿಗಳ ಜಾಲದಲ್ಲಿ ಸಿಕ್ಕಿ ನಾಶವಾಗುವ ಚಿತ್ರವಿದೆ. ಆ ಕಾಲದ ನಿರರ್ಥಕ ಪೊಳ್ಳು ಆದರ್ಶಗಳನ್ನು ಕುರಿತ ಗಂಭೀರ ಚಿಂತನೆಯೂ ಅಲ್ಲಿದೆ. ಗ್ರಿಲ್ ಪಾರ್ಸರ್ ಮತ್ತು ಹೆಬೆಲ್ ಜರ್ಮನ್ ಕ್ಲಾಸಿಕಲ್ ನಾಟಕದ ಪರಂಪರೆಯನ್ನು ಅನುಸರಿಸಿ ಬರೆದರೆ, ಗ್ರಾಬೆ ಮತ್ತು ಬ್ಯೂಹ್ನರ್ ಅಭಿವ್ಯಕ್ತಿಯ ರಚನೆಯ ಬಾಹ್ಯಾಲಂಕರಣಕ್ಕೆ ಹೆಚ್ಚು ಗಮನ ಕೊಡದೆ ಬದುಕಿನ ವಿಚ್ಛಿದ್ರತೆಯನ್ನೂ ಅರ್ಥಶೂನ್ಯತೆಯನ್ನೂ ಎತ್ತಿ ತೋರಿಸುವುದರಲ್ಲೇ ಹೆಚ್ಚು ಆಸಕ್ತರಾದರು. ಬದುಕನ್ನು ಹೆಚ್ಚು ಯಥಾರ್ಥವಾಗಿ ಚಿತ್ರಿಸಬೇಕೆಂಬ ಮನೋವೃತ್ತಿ 19ನೆಯ ಶತಮಾನದ ಕೊನೆಯಲ್ಲಿ ನ್ಯಾಚುರಲಿಸಂ (ವಾಸ್ತವತಾವಾದ) ಪಂಥಕ್ಕೆ ಎಡೆಮಾಡಿತು. ಅದರಿಂದಾಗಿ ಬದುಕಿನ ಅತ್ಯಲ್ಪ ಸಂಗತಿಗಳೂ ಕ್ಷುದ್ರ ವಿವರಗಳೂ ಹೆಚ್ಚು ಮಹತ್ತ್ವ ಪಡೆಯುವಂತಾದುವು. ರೋಗಲಕ್ಷಣಗಳಾದ ಮನೋವಿಕಾರ, ವೈಕಲ್ಯಗಳ ನಿರೂಪಣೆಗೆ ಸಾಹಿತ್ಯದಲ್ಲಿ ಎಂದೂ ಇಲ್ಲದ ಪ್ರಾಮುಖ್ಯ ಸಿಕ್ಕಂತಾಯಿತು. ನ್ಯಾಚುರಲಿಸಂ ತತ್ತ್ವದ ಪೂರ್ಣ ಫಲಗಳೆಂದರೆ ಗೆರ್‌ಹಾರ್ಟ್ ಹಾಪ್ಟ್‌ಮನ್ನನ (1862–1946) ನಾಟಕಗಳು. ಅವನ ಮೊಟ್ಟಮೊದಲನೆಯ ಕೃತಿ ಫೋರ್ ಸೋನೆನ್ ಔಫ್‌ಗಾಂಗ್ (ಬೆಳಗಾಗುವ ಮುನ್ನ–1889) ನಾಟಕದಲ್ಲಿ ನಾಯಕನೆಂದು ಹೇಳಬಹುದಾದ ಪಾತ್ರವೇ ಇಲ್ಲ ; ಸಮಂಜಸವಾದ ವಸ್ತುವೂ ಇಲ್ಲ. ಡೀ ವೀಬರ್ (ನೇಯ್ಗೆಯವರು–1892) ಮುಂತಾದ ಅವನ ನಾಟಕದಲ್ಲಿ ಬೇಕಾದಷ್ಟು ಕಟುವಾದ ಸಾಮಾಜಿಕ ಟೀಕೆ ಇದೆ. ನೇಯ್ಗೆಯವರ ದಾರುಣವಾದ ಬಾಳನ್ನು ಚಿತ್ರಿಸುವ ಈ ನಾಟಕದಲ್ಲಿ ವಾಸ್ತವತಾ ತತ್ತ್ವದ ಪರಾಕಾಷ್ಠೆಯನ್ನು ಕಾಣಬಹುದು. ಹತ್ತೊಂಬತ್ತನೆಯ ಶತಮಾನದಲ್ಲಿ ಅತ್ಯಂತ ಹೆಚ್ಚು ಪ್ರಭಾವ ಬೀರಿದ್ದೂ ಹಲವೊಮ್ಮೆ ಪ್ರಾದೇಶಿಕವಾದ ಪ್ರೇರಣೆಗಳಿಂದ ಆವಿಷ್ಟಗೊಂಡ, ವಾಸ್ತವತಾತತ್ತ್ವ ಕಾದಂಬರಿ ಪ್ರಕಾರವನ್ನು ಚೆನ್ನಾಗಿ ದುಡಿಸಿಕೊಂಡಿತು. ಬದುಕಿನಲ್ಲಿ ಆಧ್ಯಾತ್ಮಿಕತೆಯ ಸಂಕರವಿಲ್ಲದ, ಸಾರ್ಥಕ ಮೌಲ್ಯಗಳ ಅನ್ವೇಷಣೆಯಲ್ಲಿ ತೊಡಗಬೇಕು–ಎನ್ನುವುದು ವಾಸ್ತವತಾ ಸಾಹಿತಿಯ ಮುಖ್ಯ ಕಾಳಜಿಯಾಗಿತ್ತು.

ಕ್ಷುದ್ರ ವಿಚಾರ ವೈಕಲ್ಯಗಳ ಯಥಾರ್ಥ ಚಿತ್ರಣವೇ ಸಾಹಿತ್ಯಯೋಗ್ಯವಾದ ಯಥೋಚಿತ ವಸ್ತು ಎಂದು ವಾದಿಸಿದ ನ್ಯಾಚುರಲಿಸಂ ತತ್ತ್ವವನ್ನು ಅವರು ವಿರೋಧಿಸಿದರು. ಹಲವರು ತಮ್ಮ ಜೀವನಕ್ಕೆ ತೀರ ಹತ್ತಿರವಾದ ಗ್ರಾಮೀಣ ಜೀವನವನ್ನು ಚಿತ್ರಿಸುವುದರಲ್ಲಿ ಯಶಸ್ವಿಯಾದರು. ಗಾಟ್‌ಫ್ರೀಡ್ ಕೆಲರ್ (1819–1890) ತನ್ನ ಡೆರ್ ಗ್ರ್ಯೂನೆ ಹೈನ್ರಿಕ್ (ಗ್ರೀನ್ ಹೆನ್ರಿ 1854–74) ಎನ್ನುವ ಕೃತಿಯಲ್ಲಿ ಸ್ವಿಸ್ ಚಿತ್ರಕಾರನೊಬ್ಬ ಚೈತನ್ಯಪೂರ್ಣ ಬದುಕನ್ನೂ ವ್ಯಕ್ತಿವಿಕಸನವನ್ನೂ ಮೂಡಿಸಿದ್ದಾನೆ. ಈ ಕೃತಿ ಭಾಗಶಃ ಆತ್ಮಕಥೆಯಾಗಿದೆಯೆನ್ನಲಾಗಿದೆ. ಕಲಾವಿದನ ಬದುಕಿನ ಕಾಣ್ಕೆ ಯಾವ ರೀತಿ ಪ್ರತಿದಿನದ ಬಾಳಿನ ಆವಶ್ಯಕತೆಗಳಿಗನುಸಾರವಾಗಿ ಮಾರ್ಪಾಡಾಗಬೇಕೆಂಬುದನ್ನು ಇಲ್ಲಿ ಕೆಲರ್ ಚಿತ್ರಿಸಿದ್ದಾನೆ. ಸಿ.ಎಫ್. ಮೇಯರ್ ಎಂಬ ಇನ್ನೊಬ್ಬ ಸ್ವಿಸ್ ಸಾಹಿತಿ ತನ್ನ ನಾವೆಲೆನ್‌ಗಳಲ್ಲಿ (ಗದ್ಯಕಥಾನಕ) ಅಧಿಕಾರದ ದುರ್ಮೋಹಕ್ಕೆ ಸಿಕ್ಕಿ ಪತನಕ್ಕೆ ಗುರಿಯಾಗುವ ಮಹಾಪುರುಷರನ್ನು ಚಿತ್ರಿಸಿದ್ದಾನೆ. ಆಸ್ಟ್ರಿಯದವನಾದ ಎ. ಸ್ಟಿಫ್ಟರ್ ತನ್ನ ನೀತಿಬೋಧಕ ಕಾದಂಬರಿ ನಾಕ್ ಸೋಮರ್ (ಲೇಟ್ ಸಮರ್–1857) ಎಂಬ ಗ್ರಂಥದಲ್ಲಿ ಮನುಷ್ಯ ನಿಸರ್ಗಕ್ಕನುಸಾರವಾಗಿ ಹೇಗೆ ಮಾದರಿ ಜೀವನವನ್ನು ಬಾಳಬಹುದೆಂಬುದನ್ನು ಚಿತ್ರಿಸಿದ್ದಾನೆ. ಇನ್ನೊಬ್ಬ ಪ್ರಮುಖ ವಾಸ್ತವತಾವಾದಿಯೆಂದರೆ ತಿಯೋಡೋರ್ ಸ್ಟಾರ್ಮ್ (1817–88). ಇವನ ಸಣ್ಣ ಕಥೆಗಳ ಮೇಲೆ ಉತ್ತರ ಜರ್ಮನಿಯ ಇವನ ಹುಟ್ಟೂರಾದ ಪ್ಲೆಸ್‌ವಿಗ್ ಕರಾವಳಿಯ ಪ್ರಾದೇಶಿಕತೆ ತನ್ನ ಪ್ರಭಾವವನ್ನು ಅಚ್ಚೊತ್ತಿದೆ. ಹಾಸ್ಯಪ್ರಧಾನವಾದ ಅನೇಕ ಕಥೆ ಕಾದಂಬರಿಗಳನ್ನೂ ಬರೆದ ವಿಲ್‌ಹೆಲ್ಮ್ ರಾಬೆಯ (1831–1910) ಡೆರ್ ಹಂಗರ್ ಪ್ಯಾಸ್ಟರ್ (ಹೊಟ್ಟೆಗಿಲ್ಲದ ಪಾದ್ರಿ–1864), ಸ್ಟಾಪ್ಫ್ ಕೂಷನ್ (1891) ಮುಂತಾದ ಕೃತಿಗಳು ಹೆಚ್ಚು ಸಂಕೀರ್ಣವಾಗಿರುವಂತೆ ತೋರುತ್ತವೆ. ಕಥೆಯ ಕಡೆ ಓದುಗರ ಗಮನ ಸೆಳೆಯುವುದರ ಜೊತೆಗೆ ನಿರೂಪಣೆಯ ತಂತ್ರದ ಬಗ್ಗೆ ವಿಶೇಷ ಆಸಕ್ತಿ ವಹಿಸುವ ಈತ 20ನೆಯ ಶತಮಾನದ ಆಧುನಿಕ ಸಂಪ್ರದಾಯದ ಪೂರ್ವಸೂಚಿಯಾಗಿದ್ದಾನೆ. ತಿಯೋಡೋರ್ ಫಾಂಟೇನ್ (1819–1898) ತನ್ನ ಇರುಂಗೆನ್, ವಿರುಂಗನ್ (ತಪ್ಪುಗಳು, ತೊಂದರೆಗಳು 1888) ಮತ್ತು ಎಫಿ ಬ್ರೀಸ್ಟ್ (1895) ಮುಂತಾದ ಕಾದಂಬರಿಗಳಲ್ಲಿ ಜರ್ಮನ್ ಆಳರಸರ ದೌರ್ಬಲ್ಯಗಳನ್ನು ವಸ್ತುನಿಷ್ಠ ವ್ಯಂಗ್ಯಶೈಲಿಯಲ್ಲಿ ಬಹು ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಭಾವಗೀತೆಗಳ ವಿಷಯ ಹೇಳುವುದಾದರೆ, ಕ್ಲಾಸಿಕಲ್ ಹಾಗೂ ರೊಮ್ಯಾಂಟಿಕ್ ತತ್ತ್ವಗಳಿಗನುಸಾರವಾಗಿ ಬರೆದ ಕೃತಿಗಳು 19ನೆಯ ಶತಮಾನದ ಕವಿಗಳ ಮೇಲೆ ಪ್ರಬಲ ಪ್ರಭಾವ ಬೀರಿದವು. ಇಂಥ ಕವಿಗಳಲ್ಲಿ ಅಗ್ರಗಣ್ಯರಾದ ರ್‍ಯೂಕರ್ಟ್ (1788–1866) ಮತ್ತು ಪ್ಲಾಟೆನ್ (1796–1835) ಅಸದೃಶ ಪರಿಪೂರ್ಣ ಅಭಿವ್ಯಕ್ತಿಯನ್ನು ಸಾಧಿಸಿದರೂ ಇವರ ಕಾವ್ಯದಲ್ಲಿ ಸ್ವೋಪಜ್ಞತೆಯ ಮಿಡಿತ ಕೇಳಿಬರುವುದಿಲ್ಲ. ಇ. ಮ್ಯೋರಿಕೆ (1804–1875) ಮತ್ತು ಎ. ಫಾನ್ ಡ್ರಾಸ್ಟೆ–ಹ್ಯೂಲ್‌ಷೋಫ್ (1797–1848) ಈ ಇಬ್ಬರ ಕಾವ್ಯಕ್ಕೆ ಮುಖ್ಯವಾಗಿ ನಿಸರ್ಗವೇ ಪ್ರೇರಣೆ. ಮ್ಯೋರಿಕೆ ಪ್ರಾಚೀನ ಜನಪದ ಕಾವ್ಯರೀತಿಯಲ್ಲಿ ಸರಳ ಭಾವಗೀತೆಗಳನ್ನು ರಚಿಸುವುದರಲ್ಲಿ ಅಗ್ರಮಾನ್ಯತೆ ಪಡೆದ. ಆ ಕಾಲದ ಹೆಸರಾಂತ ಶ್ರೇಷ್ಠಕವಿ ಹೈನ್ರಿಕ್ ಹೈನೆ (1799–1856) ರೊಮ್ಯಾಂಟಿಕ್ ಪ್ರಭಾವದಿಂದ ಪ್ರೇರಿತನಾಗಿದ್ದರೂ ರೊಮ್ಯಾಂಟಿಕ್ ತತ್ತ್ವವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ. ಅವನ ಬುಕ್ ಡೆರ್ ಲೀಡೆರ್ (ಗೀತೆಗಳ ಪುಸ್ತಕ 1827) ಪ್ರೇಮ ಕವನಗಳನ್ನೊಳಗೊಂಡ ಪ್ರಖ್ಯಾತ ಗೀತಸಂಗ್ರಹಗಳಲ್ಲೊಂದಾಗಿದೆ. ಇಂಪಾದ ಕಾವ್ಯ ರಚಿಸುವುದರಲ್ಲಿ, ನಾಟಕೀಯವಾದ ಪರಿಣಾಮ ಸಾಧಿಸುವುದರಲ್ಲಿ, ಪ್ರಭುತ್ವ ಗಳಿಸಿದ್ದ ಈತ ವ್ಯಂಗದಿಂದ ತುಂಬಿದ ಗದ್ಯರಚನೆಗಳನ್ನೂ ಪರಿಣಾಮಕಾರಿಯಾದ ರಾಜಕೀಯ ವಿಡಂಬನೆಗಳನ್ನೂ ಬರೆದ. ಡಾಯಿಟ್ಸ್‌ಲಾಂಡ್ ಐನ್ ವಿಂಟರ್ ಮೆರ್ಖನ್ (ಜರ್ಮನಿ–ಒಂದು ಹಿಮಗಾಲದ ಕಥೆ–1814) ಎನ್ನುವ ವಿಸ್ತಾರವಾದ ವಿಡಂಬನ ಕಾವ್ಯದಲ್ಲಿ ಆತ ತನ್ನ ವೈಯಕ್ತಿಕ ಜೀವನದಲ್ಲಿನ ಶತ್ರುಗಳನ್ನೂ ಜರ್ಮನಿಯ ರಾಜಕೀಯ ಸ್ಥಿತಿಗಳನ್ನೂ ತುಂಬ ಉಗ್ರವಾಗಿ ಟೀಕಿಸಿದ್ದಾನೆ.

ವ್ಯಾಗ್ನರ್ ಮತ್ತು ನೀಟ್‌ಷೆ 19ನೆಯ ಶತಮಾನದ ಉತ್ತರಾರ್ಧದ ಪ್ರಮುಖ ಸಾಹಿತಿಗಳು; ಅವರು ಮುಂದಿನ ಪೀಳಿಗೆಯ ಮೇಲೆ ಗಾಢವಾಗಿ ಪ್ರಭಾವಬೀರಿದವರು. ರಿಚರ್ಡ್ ವ್ಯಾಗ್ನರ್ (1813–1883) ತನ್ನ ಆಪೆರಗಳಿಗೆ ತಾನೇ ಸಾಹಿತ್ಯಪಾಠವನ್ನು ರಚಿಸಿ ಜರ್ಮನಿಯ ಪುರಾಣಕಥೆಗಳನ್ನು ಆಖ್ಯಾಯಿಕೆಗಳನ್ನು ಜನಪ್ರಿಯಗೊಳಿಸಿದ. ಪ್ರಾರಂಭದಲ್ಲಿ ನಿರಾಶಾವಾದಿಯಾಗಿದ್ದ ಆತ ಕ್ರಮೇಣ ಪಾರಮಾರ್ಥಿಕ ಶಕ್ತಿಗಳ ವಿಷಯವಾಗಿ ಸ್ಪಷ್ಟ ನಂಬಿಕೆ ತಳೆದ.

ನೀಟ್‌ಷೆ (1844–1900) ಮೊಟ್ಟ ಮೊದಲು ವ್ಯಾಗ್ನರ್‌ನ ನಿಕಟ ಗೆಳೆಯನಾಗಿದ್ದವನು ಸ್ವಲ್ಪಕಾಲದ ನಂತರ ಅವನ ವಿರೋಧಿಯಾಗಿ ಕ್ರೈಸ್ತ ನೀತಿತತ್ತ್ವಗಳ ಸಂಕೋಲೆಯಿಲ್ಲದ ಉಗ್ರವ್ಯಕ್ತಿವಾದವನ್ನು ಪ್ರಬಲವಾಗಿ ಸಮರ್ಥಿಸಿದ. ಆತ ಆಲ್ಸೊಷ್ಪ್ರಾಖ್ ಜರತುಷ್ಟ್ರ (ದಸ್ ಸ್ಪೋಕ್ ಜರತುಷ್ಟ್ರ 1883–91) ಗ್ರಂಥದಲ್ಲಿ ವಿಭೂತಿಪುರುಷನ ಅವತಾರ ಎನ್ನುವ ಒಂದು ವಿನೂತನ ವೈಚಾರಿಕ ಕಲ್ಪನೆಯನ್ನು ಪ್ರತಿಪಾದಿಸಿದ.

**8. ಇಪ್ಪತ್ತನೆಯ ಶತಮಾನ :** ನ್ಯಾಚುರಲಿಸಂ ಪಂಥ ಹತ್ತೊಂಬತ್ತನೆಯ ಶತಮಾನದ ತಿರುವಿನಲ್ಲಿ ಇಂಪ್ರೆಷನಿಸಂ (ಸಮಷ್ಟಿ ಪರಿಣಾಮ ಪದ್ಧತಿ) ಎನ್ನುವ ಹೊಸ ಪ್ರವೃತ್ತಿಗೆ ಎಡೆಮಾಡಿಕೊಟ್ಟಿತು. ಅದನ್ನು ವಿರೋಧಿಸಿದವರೂ ಇದ್ದರು. ಅವರಲ್ಲಿ ಸ್ಟೀಫನ್ ಜಾರ್ಜ್‌ನ (1868–1933) ಗುಂಪಿಗೆ ಸೇರಿದ ಕವಿಗಳು ಉಕ್ತಿಯ ಚೆಲುವನ್ನೂ ಕೇವಲ ಭಾಷೆಯ ಕಲಾತ್ಮಕತೆಯನ್ನೂ ಸಾಧಿಸಲು ಪ್ರಯತ್ನಿಸಿದರು. ಜಾರ್ಜ್ ಕಾವ್ಯವನ್ನು ಒಂದು ಪವಿತ್ರ

ಮುಡಿಪೆಂದು ಭಾವಿಸುವ ಪ್ರವಾದಿಯಂತೆ ಕಾಣಿಸಿಕೊಂಡ. ಫ್ರೆಂಚ್ ಸಾಂಕೇತಿಕ ಚಳವಳಿಯ (ಸಿಂಬಾಲಿಸಂ) ನೇರ ಪ್ರಭಾವಕ್ಕೆ ಸಿಕ್ಕಿದ ಆತ ಅಚ್ಚುಕಟ್ಟಾದ ಅಭಿವ್ಯಕ್ತಿ ಹಾಗೂ ರೂಪರಚನೆಗೆ ಹೆಚ್ಚು ಗಮನವಿತ್ತು ಭವ್ಯವಾದ ಕವನಗಳನ್ನು ಬರೆದ. ಆರ್. ಡೇಮಡಲ್‌ನ (1863–1920) ಕಾವ್ಯಶೈಲಿ ಇಂಪ್ರೆಷನಿಸ್ಟಿಕ್ ಮಾದರಿಯದು. ಶಬ್ದವಿನ್ಯಾಸದ ಮೂಲಕವೇ ಮನಸ್ಸಿನ ಹಲವು ವಿನ್ಯಾಸಗಳನ್ನು ಧ್ವನಿಸುವುದು, ಮುಚ್ಚುಮರೆಯಿಲ್ಲದ ಲೈಂಗಿಕ ಜೀವನದ ಚಿತ್ರಣ, ಆಧುನಿಕ ನಾಗರಿಕ ಜೀವನದ ಸಾಮಾಜಿಕ ಕ್ಲೇಶಗಳ ವರ್ಣನೆ–ಮುಂತಾದ ನ್ಯಾಚುರಲಿಸ್ಟ್ ಪಂಥದ ವಸ್ತುಗಳನ್ನೇ ಆತ ಆರಿಸಿಕೊಳ್ಳುತ್ತಾನೆ. ಜಾರ್ಜ್‌ನ ಗುಂಪಿಗೆ ಸೇರಲು ನಿರಾಕರಿಸಿದ ಹ್ಯೂಗೋ ಫಾನ್ ಹಾಫ್‌ಮನ್‌ಸ್ಥಾಲ್ (1874–1929) ರೊಮ್ಯಾಂಟಿಕ್ ಪಂಥವನ್ನು ಅನುಸರಿಸಿ ಅತ್ಯಂತ ಮಾಧುರ್ಯ ಪೂರ್ಣವಾದ ಕಾವ್ಯಶೈಲಿಯನ್ನು ರೂಪಿಸಿದ. ಮನುಷ್ಯನ ಭಾವನೆಗಳನ್ನು ಸೂಕ್ಷ್ಮವಾಗಿ ವಿವೇಚಿಸಿದ. ಆದರೆ ಭಾವನೆಗಳನ್ನು ಸೂಕ್ಷ್ಮವಾಗಿ ಬಳಸುವುದು ಭಾಷೆಯಿಂದ ಸಾಧ್ಯವಾಗದ ಕೆಲಸ ಎಂಬ ಚಿಂತೆ ಅವನನ್ನು ಸದಾಕಾಲವೂ ಕಾಡಿತು. ಆತ ಬರೆದ ಗ್ರಂಥಗಳು ಇವು : ಪ್ರಬಂಧಗಳು : ಏನ್ ಬ್ರೀಫ್ ಫಾನ್ ಲಾರ್ಡ್ ಚಾಂಡೋಸ್ (ಲಾರ್ಡ್ ಚಾಂಡೋಸನ ಪತ್ರ–1901). ಈತನ ಮೊಟ್ಟಮೊದಲಿನ ನಾಟಕಗಳೆಂದರೆ (1800ರ ಸುಮಾರಿನಲ್ಲಿ ಬರೆದವು)–ಗೆಸ್ಟರ್ನ್ (ನೆನ್ನೆ ದಿನ), ಡೆರ್ ಟೋರ್ ಉಂಟ್ ಡೆರ್ ಟೋಟ್ (ಮೂಢ ಮತ್ತು ಮರಣ), ಡೆರ್ ಟೋಟ್ ಡೆಸ್ ಟಿಟ್ಸಿಯನ್ (ಟಿಟ್ಸಿಯನ್ನನ ಮರಣ). ಸೌಂದರ್ಯಾನ್ವೇಷಿಯೊಬ್ಬ ಬದುಕಿನ ಜಟಿಲತೆಯನ್ನು ಗ್ರಹಿಸುವುದು ತನ್ನಿಂದ ಸಾಧ್ಯವಿಲ್ಲವೆಂದು ಮನಗಾಣುವ ಸಮಸ್ಯೆಯನ್ನು ಈ ನಾಟಕಗಳಲ್ಲಿ ಚಿತ್ರಿಸಲಾಗಿದೆ. ಆಮೇಲಿನ ನಾಟಕಗಳಲ್ಲಿ ನೈತಿಕ ಸಮಸ್ಯೆಗಳ ಅರಿವು ನಿಚ್ಚಳವಾಗಿ ಕಾಣಿಸಿಕೊಂಡಿದೆ. ಅತ್ಯಂತ ನವಿರಾದ ಪಾತ್ರವಿಶ್ಲೇಷಣೆಯ ಮೂಲ ಅವು ಮನಮುಟ್ಟುವಂತಿವೆ. ಅವುಗಳಲ್ಲಿ ನಾವು ಮುಖ್ಯವಾಗಿ ಏಡರ್‌ಮನ್ (1911), ಮತ್ತು ಡೆರ್ ಷ್ವಿರಿಗೆ (1921) ನಾಟಕಗಳನ್ನು ಹೆಸರಿಸಬಹುದು. ಈತ ರಿಚರ್ಡ್ ಸ್ಟ್ರೌಸ್‌ನ ಆಪೆರಗಳಿಗಾಗಿ ಹಲವಾರು ಸಾಹಿತ್ಯಪಾಠಗಳನ್ನು ಬರೆದಿದ್ದಾನೆ.



ಕಾದಂಬರಿಕಾರ ಹೈನ್ರಿಕ್ ಬ್ಯೋಲ್

ಈ ಶತಮಾನದ ಜರ್ಮನ್ ಸಾಹಿತ್ಯದ ಪೂರ್ವಾರ್ಧದ ಚರಿತ್ರೆಯಲ್ಲಿ ಅತ್ಯಂತ ವ್ಯಾಪಕ ಪ್ರಭಾವ ಬೀರಿದ ಚಳವಳಿಯೆಂದರೆ ಎಕ್ಸ್‌ಪ್ರೆಷನಿಸಂ (ಅಭಿವ್ಯಕ್ತಿವಾದ). ಇದರಲ್ಲಿ ಬಾಹ್ಯಲೋಕದ ಚಿತ್ರಣಕ್ಕಿಂತ ಹೆಚ್ಚಾಗಿ ಬದುಕಿನ ಅಂತರಂಗದ ಚಿತ್ರಣದ ಮೇಲೆ ಒತ್ತುಹಾಕಲಾಯಿತು. ವಾಸ್ತವಲೋಕದಲ್ಲಿರುವುದನ್ನು ಇದ್ದಹಾಗೆ ಚಿತ್ರಿಸುವುದರ ಬದಲು ಮನಸ್ಸಿನ ಸ್ಥಿತಿಗತಿಗಳನ್ನು ಭಾವೋದ್ರೇಕವನ್ನುಂಟು ಮಾಡುವಂಥ ಧ್ವನಿಪೂರ್ಣ ಭಾಷೆಯಲ್ಲಿ ರೂಪಿಸಬೇಕು. ಯಾವೊಬ್ಬ ವ್ಯಕ್ತಿಯ ಮನೋವಿಶ್ಲೇಷಣೆಗಿಂತ ಹೆಚ್ಚಾಗಿ ಸಾಂಕೇತಿಕ, ಪ್ರಾತಿನಿಧಿಕ ಮಾದರಿಗಳಂತಿರುವ ವ್ಯಕ್ತಿವಿಶೇಷಗಳ ಸಂದರ್ಭವನ್ನು ತಳಸ್ಪರ್ಶಿಯಾಗಿ ಅನ್ವೇಷಿಸಬೇಕು. ಇದು ಎಕ್ಸ್‌ಪ್ರೆಷನಿಸಂ ಉದ್ದೇಶಿಸಿದ ಅಂಶಗಳು. ಎಕ್ಸ್‌ಪ್ರೆಷನಿಸ್ಟ್ ಕಾವ್ಯದ ಅಗ್ರಪ್ರವರ್ತಕರಾದ ಹೈಮ್ (1887–1912), ಟ್ರಾಕ್ಲ್ (1887–1914) ಮತ್ತು ಸ್ಟ್ಯಾಡ್ಲರ್ (1883–1914) ಚಿಕ್ಕ ವಯಸ್ಸಿನಲ್ಲೇ ಕಣ್ಮರೆಯಾದರೂ ಎಕ್ಸ್‌ಪ್ರೆಷನಿಸ್ಟ್ ತತ್ತ್ವಗಳು ಇಪ್ಪತ್ತನೆಯ ಶತಮಾನದ ಅನೇಕ ಜರ್ಮನ್ ಸಾಹಿತಿಗಳ ಮೇಲೆ ಗಣನೀಯ ಪ್ರಭಾವ ಬೀರಿದವು. ಅವರಲ್ಲಿ ಮುಖ್ಯರೆಂದರೆ ಬ್ರೆಕ್ಟ್, ಕಾಫ್ಕ, ಬೆನ್, ಕೈಸರ್, ವೆರ್ಫೆಲ್. ಬರ್ಟೋಲ್ಟ್ ಬ್ರೆಕ್ಟ್ (1898–1956) ಕಲೆ ಮತ್ತು ವಾಸ್ತವತೆಗಳೆರಡನ್ನೂ ಪರಸ್ಪರ ದೂರವಿಟ್ಟಿರಬೇಕೆಂದು ವಾದಿಸಿದ. ಅತ್ಯಂತ ಭಾವೋದ್ರಿಕ್ತ ರೀತಿಯ ಬರೆವಣಿಗೆ ಅವನದು. ಆ ಮಟ್ಟಿಗೆ ಅವನದೂ ಎಕ್ಸ್‌ಪ್ರೆಷನಿಸ್ಟರ ರೀತಿಯೇ; ಆದರೆ ಮಾರ್ಕ್ಸ್‌ವಾದದಿಂದ ಹೊಮ್ಮುವ ಹರಿತವಾದ ಅವನ ಸಾಮಾಜಿಕ ವಿಮರ್ಶೆಯಿಂದಾಗಿ ಅವನ ಕೃತಿಗಳು ವಿಶಿಷ್ಟ ಗುಣಗಳನ್ನು ಪಡೆದಿವೆ. ಮುಟ್ಟರ್ ಕರೇಜ್ ಉಂಟ್ ಈಯರೆ ಕಿಂಡರ್ (ಮದರ್ ಕರೇಜ್ ಮತ್ತು ಅವಳಿಮಕ್ಕಳು–1941), ಡೆರ್ ಗೂಟೆ ಮೆನ್ಷ್ ಫಾನ್ ಸೆಟ್ಸುವಾನ್ (1943), ಡೆರ್ ಕಾಕಸಿಷೆ ಕ್ರೈಡೆಕ್ರೈಸ್ (ಕರೇಷಿಯದಲ್ಲಿನ ಸೀಮೆಸುಣ್ಣದ ವೃತ್ತ–1947) ಮುಂತಾದ ಅವನ ನಾಟಕಗಳು, ಮನುಷ್ಯನ ಭ್ರಷ್ಟಾಚಾರವನ್ನು ಚಿತ್ರಿಸಿ ಬದುಕು ಉತ್ತಮವಾಗಿ ವ್ಯವಸ್ಥೆಗೊಳ್ಳಬೇಕೆಂಬ ಆದರ್ಶದ ಹಂಬಲವನ್ನು ವ್ಯಕ್ತಪಡಿಸುವ ದೃಷ್ಟಾಂತಕಥೆಗಳಂತಿವೆ.

ಫ್ರಾನ್ಸ್ ಕಾಫ್ಕ (1883–1924) ವಿಖ್ಯಾತನಾದದ್ದು ಅವನ ಮರಣಾನಂತರವೇ. ಅವನ ಕೃತಿಗಳಲ್ಲಿ, ವ್ಯಗ್ರವ್ಯಾಕುಲತೆಗಳಿಂದ ತಲ್ಲಣಿಸುವ ವೈಯಕ್ತಿಕ ಪ್ರಪಂಚದ ಚಿತ್ರಣವಿದೆ. ಅದರಲ್ಲಿ ವ್ಯಕ್ತಿ ಅಗಾಧಶಕ್ತಿಗಳ ಕೈಗೆ ಸಿಕ್ಕಿ ನುಚ್ಚು ನೂರಾಗುವಂತೆ ಕಾಣುತ್ತದೆ. ಅವನ ಡೆರ್ ಪ್ರೊಟ್ಸೆಸ್ (ದಿ ಟ್ರಯಲ್ 1925) ಮತ್ತು ಡಾಸ್ ಷ್ಲೋಸ್ (ದಿ ಕ್ಯಾಸಲ್ 1926)–ಈ ಎರಡು ಮಹತ್ತ್ವಪೂರ್ಣ ಕಾದಂಬರಿಗಳಲ್ಲಿನ ಹಾಗೂ ಅವನ ಕಥೆಗಳಲ್ಲಿನ ಕಥಾನಾಯಕರು ನ್ಯಾಯ ನೆಮ್ಮದಿಗಳಿಗಾಗಿ ನಿರಂತರವಾಗಿ ಶೋಧಿಸುತ್ತ ತಡಕಾಡುತ್ತಾರೆ; ಕೊನೆಗೂ ಅವು ಅವರ ಕೈಗೆ ಎಟುಕದೆ ನುಸುಳಿ ಹೋಗುತ್ತವೆ. ಗಾಟ್‌ಫ್ರೀಡ್ ಬೆನ್‌ನ (1886–1956) ಕಾವ್ಯದಲ್ಲಿ ಬರುವ ಒರಟು ಒರಟಾದ ವಾಸ್ತವಿಕ ವರ್ಣನೆಗಳು ಕಾವ್ಯಾತ್ಮಕತೆಯಿಂದ ತುಂಬಿವೆ. ಅನಂತರ ಬರೆದ ಅವನ ಕವನಗಳಲ್ಲಿ ಶೂನ್ಯವಾದಗಳು(ನಿಹಿಲಿಸಮ್) ಅಸ್ಪಷ್ಟವಾದ ಅಭಿವ್ಯಕ್ತಿ ಪಡೆದಿವೆ. ಜಾರ್ಜ್ ಕೈಸರ್ (1878–1945) ಸ್ವಲ್ಪಕಾಲದವರೆಗೆ ಎಕ್ಸ್‌ಪ್ರೆಷನಿಸ್ಟ್ ಚಳವಳಿಯ ಪ್ರಮುಖ ನಾಟಕಕಾರನಾಗಿದ್ದ. ಒಂದನೆಯ ಮಹಾಯುದ್ಧದ ಕಾಲದಲ್ಲಿ ಹಾಗೂ ಯುದ್ಧಾನಂತರ ಬರೆದ ಅವನ ನಾಟಕಗಳಲ್ಲಿ ಸಮಕಾಲೀನ ಸಾಮಾಜಿಕ ವ್ಯವಸ್ಥೆಯನ್ನು ಕುರಿತ ಉಗ್ರಖಂಡನೆ ಇದೆ. ಕವಿ ಫ್ರಾನ್ಸ್ ವೆರ್ಫೆಲ್ (1890–1945) ಮೊಟ್ಟಮೊದಲು ಎಕ್ಸ್‌ಪ್ರೆಷನಿಸ್ಟ್ ತತ್ತ್ವಗಳನ್ನು ಅಳವಡಿಸಿಕೊಂಡು ಆಮೇಲಿನ ಕವನಗಳಲ್ಲಿ ಗಾಢವಾದ ತನ್ನ ಧಾರ್ಮಿಕ ನಂಬಿಕೆಗಳನ್ನು ವ್ಯಕ್ತಪಡಿಸಿದ್ದಾನೆ.

ಆಸ್ಟ್ರಿಯದ ಎರಡು ಮುಖ್ಯ ಸಾಂಸ್ಕೃತಿಕ ಕೇಂದ್ರಗಳಾದ ವಿಯೆನ್ನ ಹಾಗೂ ಪ್ರಾಗ್ ಇಪ್ಪತ್ತನೆಯ ಶತಮಾನದ ಮೊದಲಿನ ಎರಡು ದಶಕಗಳ ಅವಧಿಯಲ್ಲಿ, ಸಾಹಿತ್ಯಕ ಚಟುವಟಿಕೆಗಳಿಗೂ ತವರಾದುವು. ಕಾಫ್ಕ, ವೆರ್ಫೆಲ್, ಹಾಗೂ 20ನೆಯ ಶತಮಾನದ ಅತ್ಯಂತ ಮಹತ್ತ್ವಪೂರ್ಣ ಕವಿಯಾದ ರೈನರ್ ಮರೀಯಾ ರಿಲ್ಕೆ (1875–1926) ಈ ಮೂವರೂ ಪ್ರಾಗ್‌ನಿಂದ ಬಂದವರು.

ರಿಲ್ಕೆ ತನ್ನ ಡಾಸ್ ಸ್ಟುಂಡೆನ್‌ಬುಕ್ (ದಿ ಬುಕ್ ಆಫ್ ಅವರ್ಸ್–1905) ಎಂಬ ಭಾವಗೀತೆಗಳ ಸಂಗ್ರಹದಲ್ಲಿ ಆಧ್ಯಾತ್ಮಿಕವಾದ ಬದುಕನ್ನು ಕಾಣಲು ತಾನು ನಡೆಸಿದ ಅನ್ವೇಷಣೆಯನ್ನು ಚಿತ್ರಿಸಿದ್ದಾನೆ. ನೋಯೆ ಗೆಡಿಕ್ಟೆಯಲ್ಲಿ (1907–08 ಹೊಸ ಕವನಗಳು) ವಸ್ತುಪ್ರಧಾನವಾದ ಬಾಹ್ಯಪ್ರಪಂಚದ ಅಂತರಾರ್ಥವನ್ನು ಶೋಧಿಸುತ್ತಾನೆ. ಸತ್ತ್ವಪೂರ್ಣವಾದ ಪ್ರತೀಕಗಳ ಮೂಲಕ ಕವಿ ಡೂಯಿನೆಸರ್ ಎಲಿಗಿಯೆನ್ (1923), ಜೊನೆಟೆ ಅನ್ ಆರ್ಫಿಯಸ್ (1923)–ಎಂದು ಮುಂತಾದ ತನ್ನ ಕವಿತೆಗಳಲ್ಲಿ ತನ್ನ ಏಕಾಕಿತನದ ಯಾತನೆಯನ್ನು, ಕಾವ್ಯರಚನೆಯಿಂದ ಲಭಿಸುವ ಸಂತೃಪ್ತಿಯನ್ನು ನಿವೇದಿಸುತ್ತಾನೆ. ಆರ್ಥರ್ ಷ್ನಿಟ್ಸ್‌ಲರ್‌ನ (1862–1931) ಕಥೆಗಳಲ್ಲಿ ವಿಯೆನ್ನ ಹಾಗೂ ಆಸ್ಟ್ರಿಯದ ಸಂಸ್ಕೃತಿಯ ವಿಶ್ಲೇಷಣೆ ಇದೆ. ಇವನ ಲ್ಯೂಟ್‌ನಂಟ್ ಗುಸ್ಟ್‌ಲ್ ಎಂಬ ಕಥೆಯ ರಚನೆ ಜೇಮ್ಸ್ ಜಾಯ್ಸ್‌ನ ಪ್ರಜ್ಞಾವಾಹಿ ತಂತ್ರದ ಪೂರ್ವಸೂಚಿಯಾಗಿದೆ. ಕಾದಂಬರಿಕಾರ ರಾಬರ್ಟ್ ಮ್ಯುಸಿಲ್ (1880–1952) ತನ್ನ ಚಿರಂತನ ಕೃತಿಯಾದ ಡೆರ್ ಮನ್ ಓನೆ ಏಗೆನ್‌ಷ್ಯಾಫ್ಟನ್ ದಿ ಮ್ಯಾನ್ ವಿದೌಟ್ ಕ್ವಾಲಿಟೀಸ್ (1930–32) ಎಂಬ ಕಾದಂಬರಿಯಲ್ಲಿ ಆಧುನಿಕ ಯುಗದ ಮಾನಸಿಕ ಅನಿಶ್ಚಿತತೆಯನ್ನು ವಿವೇಚಿಸುತ್ತಾನೆ. ಹುಸಿ ಮೌಲ್ಯಗಳನ್ನು ವ್ಯಂಗ್ಯವಾಗಿ ಗೇಲಿ ಮಾಡುತ್ತಾನೆ. ನೊಬೆಲ್ ಪ್ರಶಸ್ತಿ ವಿಜೇತ ತಾಮಸ್ ಮನ್ (1875–1955) ಈ ಯುಗದ ಸರ್ವಶ್ರೇಷ್ಠ ಕಾದಂಬರಿಕಾರ. ಸಮಾಜದಲ್ಲಿ ಕಲಾವಿದನ ಸ್ಥಾನಮಾನಗಳೇನು ಎಂಬ ಪ್ರಶ್ನೆ ಅವನನ್ನು ನಿರಂತರವಾಗಿ ಕಾಡುತ್ತಿದೆಯೆಂದು ಅವನ ಕೃತಿಗಳುದ್ದಕ್ಕೂ ಕಾಣಬಹುದು. ಅವನ ಮೊಟ್ಟಮೊದಲಿನ ಕೃತಿಗಳಲ್ಲಿ ಅತಿ ಪರಿಷ್ಕಾರದ ಫಲವಾಗಿ ಸೃಷ್ಟಿಯಾಗುವ ಕಲೆ ಇಳಿಗತಿಯ ಪ್ರತೀಕವೆಂದು ಅವನು ಭಾವಿಸಿದ್ದನೆಂಬುದು ವ್ಯಕ್ತವಾಗುತ್ತದೆ. ಅವನು ಅತಿ ಪರಿಷ್ಕಾರ ರೋಗಚಿಹ್ನೆ ಎನ್ನುತ್ತಾನೆ. ಆದರೆ ಡೆರ್ ಟ್ಸೌಬರ್‌ಬರ್ಗ್ (ದಿ ಮ್ಯಾಜಿಕ್ ಮೌಂಟನ್–1924) ಮತ್ತು ಆಮೇಲಿನ ಕೃತಿಗಳಲ್ಲಿಯೂ ಅವನು ಕಲೆಯ ಕ್ರಿಯಾತ್ಮಕ ಶಕ್ತಿ ಹಾಗೂ ಮಾನವತಾವಾದಗಳ ಮೇಲೆ ಒತ್ತು ಹಾಕುತ್ತಾನೆ. ಅವನ ಪ್ರಪ್ರಥಮ

ಪಾಲ್ ಸೆಲಾನ್

ಕೃತಿ ಬಂಡೆನ್ ಬ್ರೂಕ್ಸ್ (1901) ಕಾದಂಬರಿಯಲ್ಲಿ ಹತ್ತೊಂಬತ್ತನೆಯ ಶತಮಾನದ ಬೂರ್ಜ್ವಾ ಸಮಾಜದ ಚಿತ್ರಣವಿದೆ. ಜೋಸೆಫ್ ಉಂಟ್ ಸೈನೆ ಬ್ರ್ಯೂಡರ್ (ಜೋಸೆಫ್ ಅಂಡ್ ಹಿಸ್ ಬ್ರದರ್ಸ್ 1933–45) ಎಂಬ ನಾಲ್ಕು ಭಾಗದ ಕಾದಂಬರಿಯಲ್ಲಿ ಸಾಹಿತ್ಯಕ್ಕೆ ಪುರಾಣ ಪರಂಪರೆಯ ಬುನಾದಿ ಒದಗಿಸುವ ಪ್ರಯತ್ನ ಮಾಡಿದ್ದಾನೆ. ಡಾ. ಫೌಸ್ಟಸ್ (1947) ಕಾದಂಬರಿಯಲ್ಲಿ ಜರ್ಮನರ ಸ್ವಭಾವವನ್ನೂ ಮನೋಧರ್ಮವನ್ನೂ ಕುರಿತ ವಿಶ್ಲೇಷಣೆ ಇದೆ. ನಾಟ್ಸಿ ತತ್ತ್ವದ ಉತ್ಕರ್ಷೆ, ಪ್ರತಿಭೆ ಹಾಗೂ ಮನೋವಿಕಾರಗಳಿಗಿರುವ ಸಂಬಂಧ–ಇವುಗಳ ಪ್ರಸ್ತಾಪ ಕಾದಂಬರಿಯಲ್ಲಿ ಬರುತ್ತದೆ. ಬೆಕೆನ್ಟ್ ನಿಸೆ ಡೆಸ್ ಹೋಕ್‌ಸ್ಟಾಪ್ಲರ್ಸ್ ಫೆಲಿಕ್ಸ್ ಕ್ರುಲ್ (ಕನ್‌ಫೆಷನ್ಸ್ ಆಫ್ ಕ್ರುಲ್–ದಿ ಕಾನ್‌ಫಿಡೆನ್ಸ್ ಮ್ಯಾನ್ 1922–54) ಎಂಬುದು ಅರ್ಧ ಕಲಾವಿದನೂ ಅರ್ಧ ದುರುಳನೂ ಆದ ಅಲೆಮಾರಿ ಕಥಾನಾಯಕನೊಬ್ಬನಿಗೆ ಸಂಬಂಧಿಸಿದ ಸಾಹಸದ ಕಥೆ. ತಾಮಸ್ ಮನ್ನನ ಸೋದರ ಹೈನ್ರಿಕ್ (1871–1950) ಉಗ್ರತರ ರಾಜಕೀಯ ತತ್ತ್ವಗಳಲ್ಲಿ ನಂಬಿಕೆಯಿಟ್ಟವ. ಅವನ ಕಾದಂಬರಿಗಳಲ್ಲಿ ಒಂದನೆಯ ಮಹಾಯುದ್ಧ ಪೂರ್ವದ ಜರ್ಮನಿಯ ರಾಜಕೀಯ, ಸಾಮಾಜಿಕ ವ್ಯವಸ್ಥೆಗಳನ್ನು ಕುರಿತ ಕಟುವಾದ ಖಂಡನೆ ಇದೆ. ಅವುಗಳಲ್ಲಿ ಮುಖ್ಯವಾಗಿ ಪ್ರೊಫೆಸರ್ ಉನ್‌ರಾಟ್ (1905), ಡೆರ್ ಉಂಟರ್ ಟಾನ್ (ದಿ ಸಬ್ಜೆಕ್ಟ್ 1918) ಇವನ್ನು ಹೆಸರಿಸಬಹುದು. ನೊಬೆಲ್ ಪ್ರಶಸ್ತಿ ವಿಜೇತನಾದ ಇನ್ನೊಬ್ಬ ಹೆಸರಾಂತ ಕಾದಂಬರಿಕಾರ ಹರ್ಮನ್ ಹೆಸ್‌ನ (1877–1962) ವೈಶಿಷ್ಟ್ಯವೆಂದರೆ ಆತ ಕೊಡುವ ಅಂತರಂಗ ಚಿತ್ರಣ. ಮನಸ್ಸಿನ ಒಳಪದರಗಳಲ್ಲಿನ ಆಗುಹೋಗುಗಳನ್ನು ಕುರಿತು ಬರೆಯುವುದರಲ್ಲಿ ಆತ ಹೆಚ್ಚು ಆಸಕ್ತಿ ತೋರಿಸುತ್ತಾನೆ. ಅತಿ ಸೂಕ್ಷ್ಮ ಹೃದಯಿಗಳಾದ ಅವನ ಕಥಾನಾಯಕರು, ತಾವು ಎದುರಿಸಬೇಕಾದ ನಿಷ್ಕರುಣ ಪರಿಸರದಲ್ಲಿ ದಾರಿಕಾಣದೆ ತೊಳಲುತ್ತ ಹೋರಾಡುತ್ತಾರೆ. ಡೆರ್ ಸ್ಟೆಪೆನ್ ವುಲ್ಫ್ (1927), ಡಾಸ್ ಗ್ಲಾಸ್ಪರ್‌ಲೆನ್‌ಷ್ಪೀಲ್ (ದಿ ಗೇಮ್ ಆಫ್ ಗ್ಲಾಸ್ ಪರ್ಲ್ಸ್ 1943) ಅವನ ಮುಖ್ಯ ಕೃತಿಗಳು. ಜರ್ಮನಿಯ ಮೂರನೆಯ ರೈಕ್ ಆಡಳಿತ ಕಾಲದಲ್ಲಿ ಹಲವಾರು ಪ್ರಖ್ಯಾತ ಸಾಹಿತಿಗಳು ದೇಶಬಿಟ್ಟು ಹೋಗಬೇಕಾಯಿತು. ಹಾಗೆ ಮಾಡದೆ ದೇಶದಲ್ಲೇ ಉಳಿದುಕೊಂಡವರ ಕೃತಿಗಳ ಪ್ರಕಟಣೆ ಕಷ್ಟಸಾಧ್ಯವಾಯಿತು. ಅವರಲ್ಲಿ ಕೆಲವರು ತಮ್ಮ ಪ್ರಾಣವನ್ನೇ ತೆರಬೇಕಾಯಿತು. ಎರಡನೆಯ ಮಹಾಯುದ್ಧಾನಂತರ ನಾಟ್ಸಿ ಆಳ್ವಿಕೆಯ ಕಾಲದಲ್ಲಿ ಪ್ರತಿಬಂಧಕಾಜ್ಞೆಗೆ ಗುರಿಯಾಗಿದ್ದ ಹಲವು ಸಾಹಿತ್ಯಕೃತಿಗಳು ಲೇಖಕರ ಮರಣಾನಂತರ ಪ್ರಕಟವಾದವು. ಕೊರೆಬಿದ್ದು ಹೋಗಿದ್ದ ಜರ್ಮನ್ ಸಾಹಿತ್ಯವನ್ನು ಅವು ಶ್ರೀಮಂತಗೊಳಿಸಿದವು. ಸುಮಾರು 40 ವರ್ಷದಿಂದೀಚೆಗೆ ಸಾಹಿತ್ಯಕ್ಷೇತ್ರದಲ್ಲಿ ಹಲವು ಹೊಸ ಹೆಸರುಗಳು ಕಣ್ಣು ಸೆಳೆದಿವೆ. ಇನ್ನಷ್ಟು ಕಾಲದ ಮೇಲೆ, ಹೆಚ್ಚು ವಸ್ತುನಿಷ್ಠವಾಗಿ ನೋಡಲು ಸಾಧ್ಯವಾದಾಗ ಮಾತ್ರ ಈ ಸಾಹಿತಿಗಳನ್ನು ಕುರಿತ ನ್ಯಾಯವಾದ ವಿಮರ್ಶೆ ಸಾಧ್ಯವಾದೀತು. ಇಲ್ಲಿ ಹೊಸ ಕಾಲದ ಕೆಲವು ಪ್ರವೃತ್ತಿಗಳನ್ನು ಮಾತ್ರ ಸೂಚಿಸಬಹುದು. 1947ರಲ್ಲಿ ಅಸ್ತಿತ್ವಕ್ಕೆ ಬಂದ 'ನಲವತ್ತೇಳರ ಗುಂಪು' ಯುದ್ಧಾನಂತರದ ಜರ್ಮನಿಯ ಸಾಹಿತ್ಯವನ್ನು ಪ್ರತಿನಿಧಿಸುವ ವಿಶಿಷ್ಟ ಸಮುದಾಯವಾಯಿತು. ಇವರಲ್ಲಿ ಬ್ಯೋಲ್, ಪಿ. ಸಿಲಾನ್, ಐ. ಬಕ್‌ಮನ್, ಜಿ. ಗ್ರಾಸ್, ಲೆಂಟ್ಸ್, ಡಬ್ಲ್ಯು. ವಾಲ್ಸರ್ ಮುಂತಾದವರು ಸೇರಿದ್ದಾರೆ. ಈ ಸಾಹಿತಿಗಳು ಏನೊಂದೂ ಸಂಕೋಚವಿಲ್ಲದೆ ಯುದ್ಧ, ಹಿಂಸೆ, ಮುಂತಾದ ಅನಿಷ್ಟಗಳನ್ನು ಖಂಡಿಸುತ್ತಾರೆ. ಅವರಿಗೆ ಬದುಕಿನ ಅತ್ಯಂತ ತುರ್ತಿನ ಸಾಮಾಜಿಕ, ತಾತ್ವಿಕ ಸಮಸ್ಯೆಗಳನ್ನು ಕುರಿತು ವಿಶೇಷ ಕಾಳಜಿ ಇದೆ. ಈ ಗುಂಪಿನ ಶ್ರೇಷ್ಠ ಸಾಧನೆಯೆಂದರೆ ಗ್ಯುಂತರ್ ಗ್ರಾಸ್ ರಚಿಸಿದ ಡೀ ಬ್ಲೆಕ್ಟ್ ರೋಮೆಲ್ (ದಿ ಟಿನ್ ಡ್ರಮ್–1959). ಇದು ಅಲೆಮಾರಿ ಕಥಾನಾಯಕನ ಸುತ್ತ ತಿರುಗುವ (ಪಿಕಾರೆಸ್ಕ್ ಮಾದರಿಯ) ಕಾದಂಬರಿ. ಪ್ರಬಲ ವಿಡಂಬನೆಯಿಂದ ಕೂಡಿದ್ದು, ಮನಸ್ಸನ್ನು ಚುಚ್ಚಿ ಕೆರಳಿಸುವ ಈ ಕೃತಿ ಒಂದು ಅಪೂರ್ವ ವಿಲಕ್ಷಣ ಗ್ರಂಥ. ಪೂರ್ವ ಜರ್ಮನಿಯಲ್ಲಿ ಸಾಹಿತ್ಯ ಈಗಲೂ ಸಾಂಪ್ರದಾಯಿಕ ಮಾರ್ಗದಲ್ಲೇ ಬೆಳೆಯುತ್ತಿದ್ದು ತನ್ನ ಪ್ರತ್ಯೇಕತೆಯನ್ನು ಇನ್ನೂ ಕಾಪಾಡಿಕೊಂಡಿದೆ. ನಿರಂಕುಶ ಪ್ರಭುತ್ವದ ಆಳ್ವಿಕೆಗೆ ತಕ್ಕಂತೆ ಸಾಹಿತ್ಯ ಸರ್ಕಾರದ ಪ್ರಚಾರಸಾಧನವಾಗಿದೆ. ಹೊಸ ಕಾರ್ಖಾನೆಗಳ ರಸ್ತೆಗಳ ಉದ್ಘಾಟನೆ, ಉತ್ಪತ್ತಿ ಹೆಚ್ಚಿಸುವ ಹೊಸ ಯೋಜನೆಗಳು–ಇವನ್ನು ಕುರಿತು ಕವನಗಳ ರಚನೆಯಾಗುತ್ತಿವೆ. ಗದ್ಯಸಾಹಿತ್ಯ ಸಮಾಜವಾದಕ್ಕನುಗುಣವಾದ ವಾಸ್ತವಿಕ ಚಿತ್ರಣಗಳನ್ನು ನೀಡುತ್ತಿದೆ. ಯುದ್ಧಾನಂತರದ ನಾಟಕಕ್ಷೇತ್ರಕ್ಕೆ ವಿಶೇಷ ಕೊಡುಗೆ ಸ್ವಿಟ್ಜರ್‌ಲೆಂಡಿನಿಂದ ಬಂತು. ಮ್ಯಾಕ್ಸ್ ಫ್ರಿಷ್ (1911) ಹಾಗೂ ಫ್ರೀಡ್ರಿಕ್ ಡ್ಯೂರೆನ್‌ಮ್ಯಾಟ್ (1921)–ಆಧುನಿಕ ನೀತಿನಾಟಕಗಳನ್ನು (ಮೋರಾಲಿಟಿ ಪ್ಲೇಸ್) ಬರೆದು, ಸಮಕಾಲೀನ ಜೀವನದ ಭಾವದಾರಿದ್ರ್ಯವನ್ನು ಟೀಕಿಸಿದ್ದಾರೆ. (ಕೆ.ಎಸ್.ಟಿ.)



ಪ್ರಸಿದ್ಧ ಲೇಖಕ ಗ್ಯುಂತರ್ ಗ್ರಾಸ್

**ಜರ್ಮನಿ:** ಎರಡನೆಯ ಮಹಾಯುದ್ಧದಲ್ಲಿ ಸೋತ ಜರ್ಮನಿಯನ್ನು ಹಾಗೂ ಅದರ ರಾಜಧಾನಿ ಬರ್ಲಿನನ್ನು ಪೂರ್ವ ಜರ್ಮನಿ, ಪೂರ್ವ ಬರ್ಲಿನ್ ಹಾಗೇ ಪಶ್ಚಿಮ ಜರ್ಮನಿ ಪಶ್ಚಿಮ ಬರ್ಲಿನ್ ಎಂಬುದಾಗಿ ಎರಡು ಭಾಗವಾಗಿ ವಿಂಗಡಿಸಲಾಗಿತ್ತು. ಮುಂದೆ 1990 ಅಕ್ಟೋಬರ್ 3 ರಂದು ಎರಡೂ ದೇಶಗಳು ಒಂದಾಗಿ ಜರ್ಮನಿ ರಾಷ್ಟ್ರ ಹೊರಹೊಮ್ಮಿತು. ಒಂದಾಗಿ ಈಗಿನ ಜರ್ಮನ್ ದೇಶದ ವಿವರಗಳೊಡನೆ ಇಲ್ಲಿನ ಲೇಖನವಿದ್ದು ಉಳಿದದ್ದೆಲ್ಲ ಜರ್ಮನಿಯ ಇತಿಹಾಸದಲ್ಲಿ ಸೇರಿದೆ.

ಜರ್ಮನಿ ಮಧ್ಯ ಯುರೋಪಿನಲ್ಲಿರುವ ಒಂದು ಸ್ವತಂತ್ರ ರಾಷ್ಟ್ರ. ಉತ್ತರದಲ್ಲಿ ಡೆನ್ಮಾರ್ಕ್, ಉತ್ತರ ಸಮುದ್ರ (ನಾರ್ತ್ ಸೀ) ಮತ್ತು ಬಾಲ್ಟಿಕ್ ಸಮುದ್ರ, ದಕ್ಷಿಣದಲ್ಲಿ ಸ್ವಿಟ್ಜರ್ಲೆಂಡ್ ಆಸ್ಟ್ರಿಯ, ಪೂರ್ವದಲ್ಲಿ ಪೋಲೆಂಡ್, ಚೆಕೊಸ್ಲೊವಾಕಿಯ ಪಶ್ಚಿಮದಲ್ಲಿ ನೆದರ್ಲೆಂಡ್ಸ್, ಲಕ್ಸಂಬರ್ಗ್, ಬೆಲ್ಜಿಯಮ್ ಮತ್ತು ಫ್ರಾನ್ಸ್ ಸುತ್ತುವರೆದಿವೆ. ಉತ್ತರ ದಕ್ಷಿಣವಾಗಿ 869 ಚ.ಕಿ.ಮೀ. ಪೂರ್ವಪಶ್ಚಿಮವಾಗಿ 628 ಚ. ಕಿ.ಮೀ ಇದ್ದು 2389 ಕಿಮೀ ಸಮುದ್ರ ತೀರಹೊಂದಿದೆ. ಇದರ ಒಟ್ಟು ವಿಸ್ತೀರ್ಣ 357021 ಚ.ಕಿಮೀ ಜನಸಂಖ್ಯೆ 81,799,600(2010) ಇದರಲ್ಲಿ ಸೇ 85 ರಷ್ಟು ಮಂದಿ ನಗರ ವಾಸಿಗಳು ಸೇ. 15 ಗ್ರಾಮವಾಸಿಗಳಾಗಿದ್ದಾರೆ.

- I ಪ್ರಾಕೃತಿಕ ಭೂಗೋಳ
  - i ಭೂವಿಜ್ಞಾನ
  - ii ಮೇಲ್ಮೈಯ ಲಕ್ಷಣ
  - iii ನದಿಗಳು, ಬಂದರುಗಳು
  - iv ವಾಯುಗುಣ
  - v ಸಸ್ಯಗಳು
  - vi ಪ್ರಾಣಿಸಂಪತ್ತು
- II ಜನಜೀವನ
  - i ಪ್ರಾಚೀನ ವಲಸೆ ನೆಲಸುಗಳು
  - ii ಬುಡಕಟ್ಟು ಲಕ್ಷಣಗಳು
  - iii ಪದ್ಧತಿಗಳು
  - iv ಮತ
- III ಇತಿಹಾಸ
  - i ಪ್ರಾಗಿತಿಹಾಸ
  - ii ಇತಿಹಾಸ
- IV ಸಂವಿಧಾನ ಮತ್ತು ಆಡಳಿತ
- V ಆರ್ಥಿಕತೆ

## I ಪ್ರಾಕೃತಿಕ ಭೂಗೋಳ

**i ಭೂವಿಜ್ಞಾನ:** ಪೇಲಿಯೋಜ಼ೋಯಿಕ್ ಶಿಲೆಗಳಿಂದ ಜರ್ಮನಿಯ ನೆಲ ರಚಿತವಾಗಿದೆ. ಅದರ ಮೇಲೆ ಅನನುರೂಪ್ಯತೆಯಿಂದ ಸಾಧಾರಣವಾಗಿ ಅತಿ ಸ್ವಲ್ಪ ಕ್ಷೋಭೆಗೊಳಗಾದ ಮೀಸೋಜ಼ೋಯಿಕ್ ಸ್ತರಗಳಿವೆ. ಆದರೆ ಹಿಮನದಿ ನಿಕ್ಷೇಪಗಳಿಂದ ಮುಚ್ಚಿರುವ ಉತ್ತರ ಜರ್ಮನಿಯ ಈ ಬಯಲು ಪ್ರದೇಶದಲ್ಲಿ ಹಿಂದಿನ ಸ್ತರಗಳು ಗೋಚರಿಸದೆ ಕೆಲವು ಕಡೆಗಳಲ್ಲಿ ಮಾತ್ರ ಚದರಿದಂತೆ ಕ್ರಿಟೇಷಸ್ ಸಮುದಾಯದ ಮತ್ತು ತೃತೀಯ ಭೂಕಾಲದ ಸ್ತರಗಳ ಹೊರಶಿಲೆಗಳು ಕಾಣುತ್ತವೆ. ಪೂರ್ವಕಾಲದ ನೆಲಮಟ್ಟವನ್ನು ಸೂಚಿಸುವ ಶಿಲೆಗಳು ಮಡಿಕೆಗಳಾಗಿ ಪರಿವರ್ತನೆಗೊಂಡು ಜರ್ಮನಿಯ ಪಶ್ಚಿಮಾರ್ಧ ಭಾಗದಲ್ಲಿ ಪಶ್ಚಿಮಕ್ಕೂ ನೈಋತ್ಯಕ್ಕೂ ನಡುವಣ ದಿಕ್ಕಿನಿಂದ ಪೂರ್ವ ಈಶಾನ್ಯದ ನಡುವಣ ದಿಕ್ಕಿಗೆ ಬಹುಮಟ್ಟಿಗೆ ಹಬ್ಬಿವೆ. ಇವು ಒಂದು ಕಡೆ ರೈನಿನ ಸುತ್ತ ಮುತ್ತಲೂ ಮತ್ತೊಂದು ಕಡೆ ಬೊಹೀಮಿಯನ್ ಪರ್ವತಶ್ರೇಣಿ, ಫ್ರಾಂಕನ್ ವಾಲ್ಡ್, ಟ್ಯುರಿಂಗರ್ ವಾಲ್ಡ್ ಮತ್ತು ಹಾರ್ಟ್ಸ್‌ನಲ್ಲೂ ಕಾಣಿಸುತ್ತವೆ. ಆರ್ಕೀಯನ್ ಕಲ್ಪಕ್ಕೆ ಸೇರಿದ ಪ್ರಾಚೀನ ಶಿಲೆಗಳು ದಕ್ಷಿಣ ಜರ್ಮನಿಯ ಪಶ್ಚಿಮದಲ್ಲೇ ಓಡ್ಜ್ ಮತ್ತು ಷ್ವಾರ್ಟ್ಸ್‌ವಾಲ್ಡ್‌ನಲ್ಲಿ ಮತ್ತು ಪೂರ್ವದಲ್ಲಿ ಎರ್ಟ್ಸ್ ಪರ್ವತದಿಂದ ಕೂಡಿದ ಬೊಹೀಮಿಯನ್ ಪರ್ವತಶ್ರೇಣಿಯ ಬಹುಭಾಗದಲ್ಲಿ ಇವೆ. ಆರ್ಕೀಯನ್ ಶಿಲೆಗಳಲ್ಲಿ ಮುಖ್ಯವಾಗಿ ನೈಸ್ ಮತ್ತು ಪದರಶಿಲೆ ಮತ್ತು ಇವುಗಳ ಜೊತೆಯಲ್ಲಿ ಗ್ರಾನೈಟ್ ಮತ್ತು ಇತರ ಹೊರಹೊಮ್ಮಿದ ಶಿಲೆಗಳಿವೆ. ಇದಕ್ಕೆ ಉತ್ತರದಲ್ಲಿರುವ ಹನ್ಸ್‌ರೂಕ್, ಟೌನಸ್, ಐಫಲ್, ವೆಸ್ಟರ್‌ವಾಲ್ಡ್, ಹಾರ್ಟ್ಸ್ ಮತ್ತು ಫ್ರಾಂಕನ್‌ವಾಲ್ಡ್‌ನಲ್ಲಿ ಮುಖ್ಯವಾಗಿ ಡಿವೊನಿಯನ್ ಸ್ತರಗಳೇ ಪೂರ್ವಕಾಲದ ನೆಲವಾಗಿದೆ. ಮಿಕ್ಕ

ಪೇಲಿಯೋಝೋಯಿಕ್ ಸ್ತರಗಳು ಮಡಿಕೆಗಳಲ್ಲಿ ಸೇರಿಕೊಂಡಿವೆ. ಮಡಿಕೆಗಳ ವಲಯದ ಉತ್ತರಭಾಗದ ಅಂಚಿನಲ್ಲಿ ವೆಸ್ಟ್‌ಫೇಲಿಯದ ರೂರ್ ಕಲ್ಲಿದ್ದಲಿನ ಪ್ರದೇಶ ಉಂಟು. ಇದು ಬೆಲ್ಜಿಯನ್ ಕಲ್ಲಿದ್ದಲಿನ ಪ್ರದೇಶದ ಮುಂದುವರಿದ ಭಾಗ. ಪರ್ಮಿಯನ್ ಸಮುದಾಯದ ಸ್ತರಗಳು ಮಡಿಕೆಗಳಾಗಿರದೆ ಸಾಮಾನ್ಯವಾಗಿ ಹಿಂದಿನ ಸ್ತರಗಳು ಮೇಲೆ ಅನನುರೂಪ್ಯತೆಯಿಂದಿವೆ. ಇದು ಮುಖ್ಯವಾಗಿ ಮೇಲೆ ತಿಳಿಸಿದ ಹಾಗೆ ಅತಿ ಹಿಂದಿನ ಶಿಲೆಗಳ ಸುತ್ತಮುತ್ತಲೂ ಇದೆ. ಹಾಗೆ ಇರುವ ಒಂದು ದೊಡ್ಡ ದೇಶವೇ ಸ್ಸಾರ್.

ಪಶ್ಚಿಮದಲ್ಲಿ ಅತಿಹಿಂದಿನ ಶಿಲೆಗಳಿಂದಾದ ರೈನಿನ ಎತ್ತರದ ದಿಬ್ಬಗಳಿಗೂ ಪೂರ್ವದಲ್ಲಿ ಪುರಾತನ ಬೊಹೀಮಿಯನ್ ಪರ್ವತಶ್ರೇಣಿಯ ಮಧ್ಯೆ ಇರುವ ವಿಸ್ತಾರವಾದ ಪ್ರದೇಶದಲ್ಲಿರುವ ಟ್ರಯಾಸಿಕ್ ಸ್ತರಗಳು ಹ್ಯಾನೋವರಿನಿಂದ ಬಾಸಲಿನವರೆಗೂ ಮೆಟ್ಸ್‌ನಿಂದ ಬೇರೂತಿನವರೆಗೂ ಹರಡಿವೆ. ಈ ಸ್ತರಗಳನ್ನು ಅವು ಇರುವ ಸ್ಥಳದ ಹೆಸರಿನ ಮೇಲೆ ಮೂರು ಶ್ರೇಣಿಯಾಗಿ ವಿಭಜಿಸಲಾಗಿದೆ: ತಳಭಾಗದ ಬುಂಟೆಮರಳು ಶಿಲೆಗಳು, ಮಧ್ಯಭಾಗದ ಚಿಪ್ಪಿನಿಂದ ಕೂಡಿದ ಸುಣ್ಣ ಶಿಲೆಗಳು (ಮುಷಲ್‌ಕಾಕ್) ಮತ್ತು ಮೇಲ್ಭಾಗದ ಕ್ಯೂಪರ್ ಮಾರ್ಲ್ಸ್ ಮತ್ತು ಮರಳುಶಿಲೆಗಳು. ಮಧ್ಯ ಜರ್ಮನಿಯ ಬಹುಭಾಗದಲ್ಲಿ ಟ್ರಯಾಸಿಕ್ ಸ್ತರಗಳು ಮಡಿಕೆಗಳಿಲ್ಲದೆ ಬಹುಮಟ್ಟಿಗೆ ಸಮತಲತೆಯನ್ನು ಪ್ರದರ್ಶಿಸುತ್ತವೆ. ಟ್ರಯಾಸಿಕ್ ಸ್ತರಗಳು ಹಿಂದಿನ ಶಿಲಾಸಮೂಹದ ಬಹುಭಾಗವನ್ನು ಆವರಿಸಿದ್ದಿರಬೇಕು; ಆದರೆ ಈಗ ಅವು ಸ್ತರಭಂಗಗಳ ತಗ್ಗಿನಲ್ಲಿ ಸುರಕ್ಷಿತವಾಗಿದ್ದು ಕಾಣಿಸಿಕೊಳ್ಳುತ್ತಿವೆ. ಟ್ರಯಾಸಿಕ್ ಸ್ತರಗಳ ದಕ್ಷಿಣದ ಅಂಚಿನಲ್ಲಿ ಜುರಾಸಿಕ್ ಸ್ತರಗಳ ಒಂದು ಉದ್ದವಾದ ಸಮೂಹದ ಇಳಿವು ಡ್ಯಾನ್ಯೂಬ್ ನದಿಯ ಕಡೆಗಿದೆ. ಅದರ ಪೂರ್ವದ ತುತ್ತತುದಿಯಲ್ಲಿ ಈ ಸಮೂಹ ಜುರಾಸಿಕ್ ಸ್ತರಗಳ ಸಮುಖಾವನತ ಮಡಿಕೆಯ ಜೊತೆಯಲ್ಲಿ ಮುಂದುವರಿದು ಬೊಹೀಮಿಯನ್

ಎಲ್ಬ್ ನದಿಯ ದಂಡೆಯ ಸೆಕ್ಸೀಷೆಶ್ವೈಟ್ಸ್ ಪ್ರದೇಶದ ಒಂದು ದೃಶ್ಯ

ಪರ್ವತಶ್ರೇಣಿಯ ಪಶ್ಚಿಮ ಅಂಚಿಗೆ ಸಮವಾಗಿ ಆವರಿಸಿದರೂ ಈ ಎರಡು ಶಿಲಾಸಮೂಹಗಳನ್ನು ಒಂದು ಕಿರಿದಾದ ಟ್ರಯಾಸಿಕ್ ಸ್ತರಗಳು ಬೇರ್ಪಡಿಸಿವೆ. ಉತ್ತರದಲ್ಲಿ ಸ್ಯಾಕ್ಸನಿ ಮತ್ತು ರೈನ್-ವೆಸ್ಟ್‌ಫೇಲಿಯದಲ್ಲಿ ಟ್ರಯಾಸಿಕ್ ಸ್ತರಗಳ ಮೇಲೆ ಜುರಾಸಿಕ್ ಮತ್ತು ಕ್ರಿಟೇಷಸ್ ನಿಕ್ಷೇಪಗಳು ಸಂಚಯನಗೊಂಡಿವೆ. ಆದರೆ ಇಲ್ಲಿ ಕ್ರಿಟೇಷಸ್ ನಿಕ್ಷೇಪಗಳಿರುವುದು ಮುಖ್ಯ ವಿಷಯವಾಗಿದೆ. ಇಂಗ್ಲೆಂಡಿನ ದಕ್ಷಿಣಭಾಗದಲ್ಲಿರುವ ಹಾಗೆ ಕ್ರಿಟೇಷಸಿನ ತಳಭಾಗದ ಸ್ತರಗಳು ನದಿಯ ಕಾರ್ಯಾಚರಣೆಯಿಂದ ಉತ್ಪನ್ನವಾದವುಗಳು. ಕ್ರಿಟೇಷಸಿನ ಮೇಲ್ಭಾಗದ ಸ್ತರಗಳು ಅದೇ ಸಮುದಾಯದ ಕೆಳಗಿನ ಸ್ತರಗಳ ಮೇಲೆ ಸೀಮಾತೀತವಾಗಿ ಇರುವುವಲ್ಲದೆ, ರೂರ್ ಕಣಿವೆಯಲ್ಲಿ ಪೇಲಿಯೊಝೋಯಿಕ್ ಸ್ತರಗಳ ಮೇಲೆ ಹರಡಿವೆ. ಸ್ಯಾಕ್ಸನಿಯಲ್ಲಿ ಸಹ ಕ್ರಿಟೇಷಸ್ ಮೇಲ್ಭಾಗದ ಸ್ತರಗಳು ಪೇಲಿಯೊಝೋಯಿಕ್ ಅಥವಾ ಆರ್ಕೀಯನ್ ಶಿಲೆಗಳ ಮೇಲೆ ಹರಡಿವೆ. ಆಲ್ಪ್ಸ್ ಪರ್ವತದ ತಪ್ಪಲನ್ನು ಬಿಟ್ಟರೆ ಜರ್ಮನಿಯಲ್ಲಿ ಬೇರೆಲ್ಲಿಯೂ ಇಯೋಸೀನ್ ಸಮುದಾಯವಿಲ್ಲ. ಆದರೆ ಆಲಿಗೊಸೀನ್ ಮತ್ತು ಮಯೋಸೀನ್ ಕಾಲದ ಸ್ತರಗಳು ಬಹಳ ಕಡೆ ಇವೆ. ಅದರಲ್ಲೂ ಮುಖ್ಯವಾಗಿ ಉತ್ತರದ ಬಯಲಿನಲ್ಲಿ ಮತ್ತು ಡ್ಯಾನ್ಯೂಬಿನ ತಗ್ಗಿನಲ್ಲಿ ಹರಡಿವೆ. ಆಲಿಗೋಸೀನ್ ಸ್ತರಗಳು ಸಾಮಾನ್ಯವಾಗಿ ಸಾಗರಜನಿತವಾದವು. ಸಾಗರಜನಿತ ಮಯೋಸೀನ್ ಸ್ತರಗಳು ಜರ್ಮನಿಯ ವಾಯವ್ಯದಲ್ಲಿವೆ. ಡ್ಯಾನ್ಯೂಬ್ ಕಣಿವೆಯಲ್ಲಿರುವ ಮಯೋಸೀನಿನ ಒಂದು ಭಾಗ ಸಾಗರಜನಿತವಾದವುಗಳೆಂದರೆ ಮಧ್ಯಜರ್ಮನಿಯಲ್ಲಿರುವ ಈ ಸ್ತರಗಳು ನದಿಯಿಂದ ಅಥವಾ ಸರೋವರದಿಂದ ಜನಿಸಿದವು.

ಹಿಂದಿನ ಮಹಾಸಮಭೂಮಿಯ ಮೇಲಿರುವ ಮೀಸೊಝೋಯಿಕ್ ಕಾಲದ ಸಮತಲದ ಗರಸುಗಳು ತೃತೀಯಕಾಲದ ಭೂಚಲನೆಯಿಂದ ಮೃದುವಾದ ಮಡಿಕೆಗಳು ಅಥವಾ ತರಂಗಗಳಾಗಿ ಮಾರ್ಪಾಡುಹೊಂದಿವೆ. ಟ್ರಯಾಸಿಕ್ ಶ್ರೇಣಿಯ ಮೂರು ಭಾಗವಾಗಿ ವಿಭಜಿತವಾದ ಸ್ತರಗಳು ಶಿಥಿಲೀಕರಣಕ್ಕೆ ಒಳಗಾಗಿ ಮೊನಚಾದ ದಿಬ್ಬ ಮತ್ತು ಪ್ರಸ್ಥಭೂಮಿಯಾಗಿದೆ. ಜರ್ಮನಿಯ ಭೂಚಲನೆಯ ಮಡಿಕೆಗಳಲ್ಲಿ ಮುಖ್ಯವಾದವು ಸ್ಯಾಕ್ಸೋನಿಯನ್ ಮಡಿಕೆಗಳು. ಇವು ರೈನ್ ಪ್ರಸ್ಥಭೂಮಿಯಲ್ಲಿ ಮತ್ತು ಹಾರ್ಟ್ಸ್‌ಪರ್ವತದ ಮಧ್ಯೆ ಇರುವ ಹರ್ಸಿನಿಯನ್ ಭೂಪ್ರದೇಶದ ಉತ್ತರದ ಅಂಚಿನಲ್ಲಿರುವ ಮೀಸೊಝೋಯಿಕ್ ಕಲ್ಪದ, ಅದರಲ್ಲೂ ಮುಖ್ಯವಾಗಿ ಕ್ರಿಟೇಷಸ್ ಸ್ತರಗಳನ್ನು ಮಾರ್ಪಾಡುಮಾಡಿವೆ. ಈ ಮಡಿಕೆಗಳ ಚಟುವಟಿಕೆಗಳು ಜುರಾಸಿಕ್ ಮೇಲ್ಭಾಗದ ಕಾಲದಿಂದ ಪ್ರಾರಂಭವಾಗಿ ಮಯೋಸೀನ್ ಕಾಲದವರೆಗೂ ನಡೆದಿವೆ. ವಿಮುಖಾವನತ ಮತ್ತು ಸಮುಖಾವನತ ಮಡಿಕೆಗಳ ಸವೆತದಿಂದ



ರಾಜ್ಯ ವಸ್ತುಸಂಗ್ರಹಾಲಯಗಳ ರಾಷ್ಟ್ರೀಯ ಗ್ಯಾಲರಿ, ಬರ್ಲಿನ್

ಏಣು, ಕೂಡುಗೆರೆ, ಕಣಿವೆ ಮತ್ತು ಕಂದರಗಳು ಉತ್ಪನ್ನವಾಗಿ ಅವುಗಳಲ್ಲಿ ಕೆಲವು ವಿಪರ್ಯಯ ಸ್ಫುಟತ್ವ ಪಡೆದು ಹೊರಭಾಗದಲ್ಲಿ ಕೂಡುಗೆರೆಗಳು ಇಳಿಜಾರನ್ನು ತೋರಿಸುತ್ತವೆ. ಈ ಮಡಿಕೆಗಳು ವಾಯವ್ಯದಿಂದ ಆಗ್ನೇಯದ ಕಡೆ ಮುಂದುವರಿದಿರುವುವಲ್ಲದೆ ತ್ಯುರಿಂಜಿಯದ ಸ್ತರಭಂಗದಿಂದ ಉತ್ಪನ್ನವಾದ ದಿಬ್ಬಗಳು ಇರುವ ದಿಕ್ಕಿಗೆ ಸಮವಾಗಿವೆ. ವೆಸ್ಟ್ ಫೇಲಿಯದ ದಿಬ್ಬಗಳು ವಿಮುಖಾವನತ ಮಡಿಕೆಗಳ ಸವೆತದಿಂದ ಉತ್ಪನ್ನವಾಗಿವೆ. ವಾಯವ್ಯದಿಂದ ಆಗ್ನೇಯದ ಕಡೆ ಮುಂದುವರಿದ ಅನೇಕ ವಿಧವಾದ ಏಣುಗಳಲ್ಲಿ ಕೆಲವು ವಿಪರ್ಯಯ ಸ್ಫುಟತ್ವ ತೋರಿಸುವುವಲ್ಲದೆ ಲೀನ್, ವೀಸರ್ ಮತ್ತು ಹಾರ್ಟ್ಸ್‌ನ ಉತ್ತರ ಗಡಿಯಲ್ಲಿರುವ ಬಂಕೆಮಣ್ಣಿನ ಬಯಲು ಪ್ರದೇಶದಿಂದ ಹೊರಹೊಮ್ಮಿವೆ.

ಆಲ್ಬರ್ಟಿನಮ್ ಚಿತ್ರಶಾಲೆ, ಡ್ರೆಸ್‌ಡೆನ್

ಜ್ವಾಲಾಮುಖಿತ್ವ ತೃತೀಯ ಕಾಲದ ಭೂಚಲನೆಯಿಂದ ತೊಡಗಿ ಹಿಮಕಾಲದವರೆಗೂ ಮುಂದುವರಿದಿವೆ. ಲಾವಾದಿಂದ ಜನಿಸಿದ ಬೆಸಾಲ್ಟ್ ಮಧ್ಯ ಫ್ರಾನ್ಸಿನಲ್ಲಿರುವ ಹಾಗೂ ಮಧ್ಯ ಜರ್ಮನಿ ರೋನ್ ಮತ್ತು ಪೋಗೆಲ್ಸ್ ಬರ್ಗ್ ಪ್ರದೇಶದಲ್ಲಿವೆ. ಮಧ್ಯ ಪ್ರಸ್ಥಭೂಮಿಯ ಅನೇಕ ಭಾಗಗಳಲ್ಲಿ ಇತ್ತೀಚಿನ ಕಾಲದ ಕ್ರೇಟರ್ ಸರೋವರಗಳು ಮತ್ತು ಜ್ವಾಲಾಮುಖಿಯ ಶಂಕು ಹಾಗೂ ಬೆಣೆಯ ಆಕಾರದ ಶಿಲಾರೂಪಗಳು ಇವೆ. ಸೀಬೆನ್‌ಗೆಬಿರ್ಗೆಗಳ ಟ್ರಾಕೈಟ್ ಶಿಲೆಗಳು ಆದರ್ಶಸ್ವರೂಪದವು. ಐಫಲ್ ಬೆಟ್ಟಗಳ ಜ್ವಾಲಾಮುಖಿಗಳಲ್ಲಿ ಅನೇಕ ಸುರಕ್ಷಿತಸ್ಥಿತಿಯಲ್ಲಿವೆ. ಅವುಗಳ ಸರಿಯಾದ ಕಾಲ ಗೊತ್ತಿಲ್ಲದಿದ್ದರೂ ಅವು ಖಂಡಿತವಾಗಿಯೂ ತೃತೀಯ ಕಾಲಾನಂತರದವು ಎಂದು ಹೇಳಬಹುದು.

ಉತ್ತರ ಜರ್ಮನಿಯ ಬಹುಭಾಗ ಚತುರ್ಥ ಭೂಯುಗದ ನಿಕ್ಷೇಪಗಳಿಂದ ಮುಚ್ಚಿದೆ. ಈ ನಿಕ್ಷೇಪಗಳಲ್ಲಿ ಕೆಲವು ಹಿಮನದಿಯಿಂದ ಜನಿಸಿ ಸ್ಕ್ಯಾಂಡಿನೇವಿಯದ ಗುಂಡುಗಳಿಂದ ಕೂಡಿದೆ; ಮತ್ತೆ ಕೆಲವು ನದಿ ಮತ್ತು ವಾಯುನಿಕ್ಷೇಪಗಳು. ಮೇಲೆ ತಿಳಿಸಿದ ಬಂಕೆಮಣ್ಣು ಎಂದು ಕರೆಯಲಾದ ವಾಯುನಿಕ್ಷೇಪಗಳು ಮಧ್ಯ ಪ್ರಸ್ಥಭೂಮಿಯ ಉತ್ತರಗಡಿ, ರಕ್ಷಣೆಹೊಂದಿರುವ ತಗ್ಗುಪ್ರದೇಶ, ಪ್ರಸ್ಥಭೂಮಿಯಲ್ಲಿರುವ ನದಿಗಳ ದಂಡೆಗಳು ಮತ್ತು ದಕ್ಷಿಣ ಜರ್ಮನಿಗಳಲ್ಲಿ ಕಂಡುಬರುತ್ತವೆ. ಚತುರ್ಥ ಭೂಯುಗದ ಸ್ತರಗಳು ತಿರುವುಮುರುವಾಗಿ ಬಾಸಲಿನಿಂದ ಮೈಂಟ್ಸ್‌ನವರೆಗೆ ಹರಿಯುವ ರೈನ್ ನದಿಯ ವಿಸ್ತಾರವಾದ ತಗ್ಗಿನ ನೆಲವಾಗಿದೆ; ಮತ್ತು ಡ್ಯಾನ್ಯೂಬಿನ ಬಯಲಿನ ಬಹುಭಾಗವನ್ನು ಆಕ್ರಮಿಸಿದೆ. ರೈನ್ ನದಿಯ ತಗ್ಗು ಎರಡು ಸ್ತರಭಂಗಗಳಿಂದಾದ ತೊಟ್ಟಿ. ಡ್ಯಾನ್ಯೂಬಿನ ವಿಸ್ತಾರವಾದ ತಗ್ಗು ಆಲ್ಪ್ಸ್ ರೂಪುಗೊಳ್ಳುವುದರಲ್ಲಿ ಸೇರಿ ಮಯೋಸೀನ್ ಕಾಲದ ವಿಭಾಗದಲ್ಲಿ ಸಮುದ್ರದಿಂದ ಆಕ್ರಮಿತವಾಗಿತ್ತು.

ಜರ್ಮನಿಯಲ್ಲಿ ಅನೇಕ ವಿಧದ ಖನಿಜನಿಕ್ಷೇಪಗಳು ದೊರೆಯುತ್ತವೆ. ರೂರ್ ಕಲ್ಲಿದ್ದಲಿನ ಉತ್ಪಾದನೆಯ ಮುಖ್ಯ ಪ್ರದೇಶ. ಕಲೋನಿಗೆ ನೈಋತ್ಯದಲ್ಲಿರುವ ವಿಲೆಯಲ್ಲಿ ಲಿಗ್ನೈಟಿನ ನಿಕ್ಷೇಪಗಳಿವೆ. ಲೊರೈನನ್ನು ಫ್ರಾನ್ಸಿಗೆ ಸೇರಿಸಿದ ಮೇಲೆ ಜರ್ಮನಿಯಲ್ಲಿ ಕಬ್ಬಿಣದ ಅದಿರು ಇರುವ ಪ್ರದೇಶವೆಂದರೆ ಸಾಲ್ಟ್ ಗಿಟ್ಟರ್ ಮಾತ್ರ ಪ್ರಪಂಚದ ಮುಖ್ಯ ಉಪ್ಪಿನ ನಿಕ್ಷೇಪಗಳಿಗಿರುವ ಪ್ರದೇಶಗಳಲ್ಲಿ ಒಂದಾದ ಸ್ಟಾಸ್‌ಫರ್ಟ್ ಜರ್ಮನಿಯಲ್ಲಿದೆ. ಇಲ್ಲಿ ಸೋಡಿಯಮ್ ಮತ್ತು ಪೊಟ್ಯಾಸಿಯಮಿನ ಉಪ್ಪಿನ ನಿಕ್ಷೇಪಗಳಿವೆ. ತೈಲದ ನಿಕ್ಷೇಪಗಳು ಮತ್ತು ಗಣಿಗಳು ಹ್ಯಾನೋವರ್, ಬ್ರನ್ಸ್‌ವಿಕ್ ಮತ್ತು ಮೈಂಟ್ಸ್‌ನ ಹತ್ತಿರ ಇವೆ. ಸೀಸ ಮತ್ತು ಸತುವಿನ ಸಣ್ಣ ನಿಕ್ಷೇಪಗಳು ಅಲ್ಲಲ್ಲೇ ಜರ್ಮನಿಯಲ್ಲಿವೆ.

**ii ಮೇಲ್ಮೈಯ ಲಕ್ಷಣ :** ಜರ್ಮನಿಯನ್ನು ಸ್ಥೂಲವಾಗಿ ನಾಲ್ಕು ಪ್ರಮುಖ ಭೌಗೋಳಿಕ ವಲಯಗಳಾಗಿ ವಿಂಗಡಿಸಲಾಗಿದೆ: 1 ಉತ್ತರ ಜರ್ಮನ್ ಮೈದಾನ, 2 ಮಧ್ಯ ಜರ್ಮನ್ ಪರ್ವತ ಸೀಮೆ, 3 ದಕ್ಷಿಣ ಜರ್ಮನ್ ಇಳಿಜಾರು ಪ್ರದೇಶ ಹಾಗೂ ಮೈದಾನ, 4 ಬವೇರಿಯನ್ ಆಲ್ಪ್ಸ್ ವಲಯ ಹಾಗೂ ಪ್ರಸ್ಥಭೂಮಿ.

1. ಉತ್ತರ ಜರ್ಮನ್ ಮೈದಾನ : ಬರ್ಲಿನ್ ಪ್ರದೇಶಕ್ಕೆ ಪಶ್ಚಿಮದಲ್ಲಿರುವ ಪ್ರದೇಶ ಚಪ್ಪಟೆಯಾಗಿದೆ. ಆದರೆ ಪೂರ್ವದಲ್ಲಿ ಬಾಲ್ಟಿಕ್ ತೀರಕ್ಕೆ ಸಮಾಂತರದಲ್ಲಿ 102ಮೀ. ಗಿಂತ ಎತ್ತರವಾಗಿಲ್ಲದ ಬೆಟ್ಟಗಳಿವೆ. ಇವು ಹಿಮಪ್ರವಾಹ ತಂದು ಒಟ್ಟಿದ ಮುರುಕುಲು ಗುಪ್ಪೆಗಳಿಂದ (ಹಿಮೋಢ) ಸಂಭವಿಸಿದವು. ಪಶ್ಚಿಮ ಭಾಗದಲ್ಲಿ ನೆಲ ತಗ್ಗು. ಕರಾವಳಿಯ ಜವುಗು ಪ್ರದೇಶವಾಗಿದ್ದ ಭಾಗ ದನಕ್ಕೆ ಒಳ್ಳೆಯ ಮೇವು ಒದಗಿಸುತ್ತದೆ. ಅದರಾಚೆಗೆ ಉಸುಬು ನೆಲ, ಇಲ್ಲವೇ ಮರಳು ತುಂಬಿದ ಬಂಜರು ನೆಲ. ಪೂರ್ವ ಭಾಗದಲ್ಲಿ ಹಿಮೋಢಗಳ ಎರಡು ಸಾಲುಗಳಿವೆ. ಉತ್ತರದಲ್ಲಿ ಬಾಲ್ಟಿಕ್ ಕರಾವಳಿಯ ಹಿಮೋಢ ಸಾಲಿನ ಪ್ರದೇಶದಲ್ಲಿ ಅನೇಕ ಸರೋವರಗಳೂ ಅಲ್ಲಲ್ಲಿ ಉಸುಬೂ ಇವೆ. ಉತ್ತರದ ಈ ಎತ್ತರ ಪ್ರದೇಶ ಷ್ಲೆಸ್‌ವಿಗ್‌ನಿಂದ ಪೂರ್ವ ಪ್ರಷ್ಯದವರೆಗೂ ಹಬ್ಬಿದೆ. ದಕ್ಷಿಣದ ಹಿಮೋಢ ಸಾಲಿನ ನೆಲವೂ ಬಂಜರು. ಈ ಎರಡು ಸಾಲುಗಳ ನಡುವೆ ಜವುಗಿನ ಕಣಿವೆಗಳೂ ಹಳೆಯ ಹಿಮಾನಿ ನದಿಗಳಿಂದಾದ ದಿಣ್ಣೆಗಳೂ ಇವೆ. ಮೈದಾನದ ದಕ್ಷಿಣದ ಅಂಚಿನ ನೆಲ ಅಲೆಯಲೆಯಾಗಿ ಹಬ್ಬಿದೆ. ಈ ಪ್ರದೇಶ ಫಲವತ್ತಾದ್ದು. ಪ್ರಾಗಿತಿಹಾಸಕಾಲದಿಂದಲೂ ಇಲ್ಲಿ ಜನ ವಾಸಿಸುತ್ತಿದ್ದಾರೆ.

ಉತ್ತರ ಸಮುದ್ರದ ಕರಾವಳಿಗೂ ಬಾಲ್ಟಿಕ್ ಸಮುದ್ರದ ಕರಾವಳಿಗೂ ಹಲವು ವ್ಯತ್ಯಾಸಗಳುಂಟು. ಉತ್ತರ ಸಮುದ್ರದ ಕರಾವಳಿಯಲ್ಲಿ ಕಡಲು ಸತತವಾಗಿ ನೆಲದ ಮೇಲೆ ದಾಳಿ ಮಾಡುತ್ತಲೇ ಬಂದಿದೆ. ಕಾಲಾನುಕ್ರಮದಲ್ಲಿ ಕಡಲ ದಂಡೆ ಛಿದ್ರವಾಗಿ ನೀರು ನೆಲದೊಳಕ್ಕೆ ನುಗ್ಗಿ ಹಲವು ದ್ವೀಪಗಳಾಗಿವೆ. ಹಲವು ದ್ವೀಪಗಳು ಕರಗಿಯೂ ಹೋಗಿವೆ. ಸಮುದ್ರದ ನೀರು ನೆಲದೊಳಕ್ಕೆ ನುಗ್ಗಿ ಹಲವು ಖಾರಿಗಳಾಗಿವೆ. ಡಾಲಾರ್ಟ್ ಖಾರಿ 1276ರಿಂದ ಈಚೆಗೆ ಸಂಭವಿಸಿದ್ದು. ಉತ್ತರ ಸಮುದ್ರತೀರವನ್ನು ಮರಳು ಎಷ್ಟೊಂದು ಆಕ್ರಮಿಸಿದೆಯೆಂದರೆ, ಅಲ್ಲಿಯ ಬಂದರುಗಳಿಗೆ ಚಾಲಕರ ನೆರವಿಲ್ಲದೆ ಪ್ರವೇಶ ಸುಲಭವಿಲ್ಲ. ಸಮುದ್ರದ ದಾಳಿಯಿಂದ ಮುಖ್ಯ ಭೂಭಾಗವನ್ನು ರಕ್ಷಿಸಲು ದಿಂಡುಗಳನ್ನು ಕಟ್ಟಲಾಗಿದೆ. ಬಾಲ್ಟಿಕ್ ಕಡಲ ತೀರದಲ್ಲಿ ಹಲವು ದ್ವೀಪಗಳಿಲ್ಲ. ಅಲ್ಲಿ ವ್ಯಾಪಕವಾಗಿ ಮರಳೂ ಹಬ್ಬಿಲ್ಲ. ಅಲ್ಲಿ ಕಡಲಕರೆಯ ಬಹುಭಾಗ ಚಳಿಗಾಲದಲ್ಲಿ ಹಿಮಾವೃತವಾಗಿರುತ್ತದೆ. ಆದ್ದರಿಂದ ಹಡಗು ಸಂಚಾರಕ್ಕೆ ಅಡಚಣೆಯಾಗುತ್ತದೆ.

ಉತ್ತರದ ಮೈದಾನದ ನದಿಗಳಾದ ಎಮ್ಸ್ ವೇಸರ್, ಎಲ್ಬ್, ಓಡರ್ ಇವು ನೌಕಾಸಂಚಾರಕ್ಕೆ ಅನುಕೂಲಕರ. ಪ್ಲೀಸ್ಟೋಸೀನ್ ಯುಗಾನಂತರ ನೆಲ ಕುಸಿದಿರುವುದರಿಂದ ನದೀಮುಖಗಳಿಗಿಂತ ಎತ್ತರದಲ್ಲಿ ಸಮುದ್ರವಿದೆ. ಆದ್ದರಿಂದ ಜರ್ಮನಿಯ ಹಲವು ಬಂದರುಗಳು ನದೀ ಬಂದರುಗಳು. ಇವಕ್ಕೆ ಹೊರ ಬಂದರುಗಳಿವೆ. ಬ್ರೇಮನ್, ಹ್ಯಾಂಬರ್ಗ್, ರಾಸ್ಟಾಕ್ ಉದಾಹರಣೆಗಳು. ಈ ಪ್ರದೇಶದ ನದಿಗಳನ್ನು ಕೂಡಿಸುವ ಹಲವಾರು ಕಾಲುವೆಗಳಿವೆ. ಜರ್ಮನಿಯ ಪೂರ್ವ ತುದಿಯಿಂದ ಪಶ್ಚಿಮ ತುದಿಯವರೆಗೆ ಇರುವ ನದೀ–ಕಾಲುವೆ ವ್ಯವಸ್ಥೆಯಿಂದಾಗಿ ಒಳ್ಳೆಯ ಸಂಚಾರ ಸಂಪರ್ಕ ಸಾಧ್ಯವಾಗಿದೆ. ಈ ಮಾರ್ಗಗಳು ಬರ್ಲಿನ್ ಬಳಿ ಸಂಧಿಸುವುದೇ ಆ ನಗರ 17ನೆಯ ಶತಮಾನದಿಂದ ಈಚೆಗೆ ಬಹುವಾಗಿ ಬೆಳೆದಿರುವುದಕ್ಕೆ ಮುಖ್ಯ ಕಾರಣ.

2. ಮಧ್ಯ ಜರ್ಮನಿ ಪರ್ವತ ಸೀಮೆ: ಇಲ್ಲಿ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಬೆಟ್ಟಗಳ ಸಾಲುಗಳನ್ನು ದಕ್ಷಿಣೋತ್ತರವಾಗಿ ಹರಿಯುವ ನದಿಗಳು ಅಲ್ಲಲ್ಲಿ ಕತ್ತರಿಸಿವೆ. ಇದರ ಪಶ್ಚಿಮ ಭಾಗ ರೈನ್ ಪ್ರಸ್ಥಭೂಮಿ. ಇದನ್ನು ಸೀಳಿ ಹರಿಯುವ ಮುಖ್ಯ ನದಿ ರೈನ್. ಇದರ ಉಪನದಿಗಳಲ್ಲಿ ಮುಖ್ಯವಾದ್ದು ಮೋಸಲ್. ರೈನ್ ಪ್ರಸ್ಥಭೂಮಿಗೂ ಟ್ಯುರಿಂಗರ್ ವಾಲ್ಟ್‌ಗೂ ನಡುವೆ ವೇಸರ್ ಮತ್ತು ಲೈನ ನದಿಗಳು ಹರಿಯುತ್ತವೆ. ಈ ವಿಶಾಲ ಕಣಿವೆಯ ದಕ್ಷಿಣದ ತುದಿಯಲ್ಲಿ ರನ್ 1085ಮೀ. ಮತ್ತು ಫೋಗೆಲ್ಸ್‌ಬರ್ಗ್ 884ಮೀ. ಪರ್ವತ ಶಿಖರಗಳಿವೆ. ಇವು ಜ್ವಾಲಾಮುಖೀಯ ಗಿರಿಗ್ರಂಥಿಗಳು. ವೇಸರ್ ನದೀಕಣಿವೆಗೆ ಪೂರ್ವದಲ್ಲಿರುವ ಟ್ಯುರಿಂಗರ್ ವಾಲ್ಟ್ ವಾಯವ್ಯದಿಂದ ಆಗ್ನೇಯಕ್ಕೆ ಹಬ್ಬಿದೆ. ಇದರಿಂದಾಚೆಗೆ ಹಾರ್ಟ್ಸ್ ಪರ್ವತಗಳಿವೆ.

ಟ್ಯುರಿಂಗರ್ ವಾಲ್ಟ್‌ನ ಆಗ್ನೇಯ ತುದಿಯೂ ಫ್ರಾಂಕೋನಿಯನ್ ಜುರದ ಈಶಾನ್ಯ ತುದಿಯೂ ಪೂರ್ವದ ಉನ್ನತ ಪ್ರದೇಶವೂ ಫಿಕ್ಟಲ್‌ಗೆಬಿರ್ಗೆ 1057ಮೀ. ಶ್ರೇಣಿಯಲ್ಲಿ ಸಂಧಿಸುತ್ತವೆ. ಇದು ಹಲವು ನದಿಗಳ ಉಗಮಸ್ಥಾನ. ಇಲ್ಲಿಂದ ದಕ್ಷಿಣಾಭಿಮುಖವಾಗಿ ಹರಿದು ಡ್ಯಾನ್ಯೂಬನ್ನು ಸೇರುವ ನದಿ ನಾಪ್. ಮೇನ್ ನದಿ ಪಶ್ಚಿಮಾಭಿಮುಖವಾಗಿ ಹರಿದು ರೈನನ್ನು ಕೂಡುತ್ತದೆ. ಸಾಲ್ಲ ಮತ್ತು ಅದರ ಉಪನದಿಗಳು ಹರಿಯುವುದು ಉತ್ತರದಿಕ್ಕಿಗೆ. ಎಗರ್ ನದಿ ಬೊಹೀಮಿಯದಲ್ಲಿ ಪೂರ್ವಕ್ಕೆ ಹರಿಯುತ್ತದೆ. ಈ ಪರ್ವತಸೀಮೆ ಈಶಾನ್ಯದ ಕಡೆಗೆ ಏರುತ್ತ ನಡೆದು ಬೊಹೀಮಿಯನ್ ಶ್ರೇಣಿಯ ಉತ್ತರ ತುದಿಯಾದ ಎರ್ಟ್ಸ್‌ಬರ್ಗನ್ನು 1244ಮೀ. ಮುಟ್ಟುತ್ತದೆ. ಅಲ್ಲಿಯ ಕಣಿವೆಯ ಮೂಲಕ ಎಲ್ಬ್ ನದಿ ಚೆಕೊಸ್ಲೊವಾಕಿಯದಿಂದ ಜರ್ಮನಿಯನ್ನು ಪ್ರವೇಶಿಸುತ್ತದೆ. ಅಲ್ಲಿಂದಾಚೆಗೆ ಪರ್ವತಶ್ರೇಣಿ ಆಗ್ನೇಯಾಭಿಮುಖವಾಗಿ ಮುಂದುವರಿಯುತ್ತದೆ. ಇದು ಬೊಹೀಮಿಯನ್ ಶ್ರೇಣಿಯ ಆಗ್ನೇಯ ಭಾಗ.

3. ದಕ್ಷಿಣ ಜರ್ಮನಿ : ವೋಷ್‌ನಿಂದ ಬೊಹೀಮಿಯನ್ ಅರಣ್ಯದವರೆಗೆ ಮಧ್ಯ ಜರ್ಮನ್ ಪರ್ವತಸೀಮೆಯಿಂದ ದಕ್ಷಿಣದಲ್ಲಿ ಆಲ್ಪ್ಸ್ ವರೆಗೆ ಹಬ್ಬಿರುವ ಪ್ರದೇಶ. ರೈನ್ ನದಿಯೂ ಬಲಭಾಗದ ಉಪನದಿಗಳಾದ ಮೈನ್ ಮತ್ತು ನೆಕರ್‌ಗಳೂ ಇಲ್ಲಿ ಹರಿಯುತ್ತವೆ. ಈ ನದಿಗಳ ಜಲಾನಯನ ಪ್ರದೇಶದ ಆಗ್ನೇಯ ಮತ್ತು ಪೂರ್ವದ ಅಂಚುಗಳಲ್ಲಿ ಸ್ವೇಬಿಯನ್ ಜುರ ಮತ್ತು ಫ್ರಾಂಕೋನಿಯನ್ ಜುರಗಳೂ ಪಶ್ಚಿಮದಲ್ಲಿ ಷ್ವಾರ್ಟ್ಸ್‌ವಾಲ್ಟ್ ಪರ್ವತವೂ ಉತ್ತರದಲ್ಲಿ ಮಧ್ಯ ಜರ್ಮನ್ ಪರ್ವತಸೀಮೆಯೂ ಇವೆ. ಇದು ಜರ್ಮನಿಯ ಅತ್ಯಂತ ಫಲವತ್ತಾದ ಪ್ರದೇಶ.4 ಬವೇರಿಯನ್ ಆಲ್ಪ್ಸ್ ಮತ್ತು ಪ್ರಸ್ಥಭೂಮಿ ಪ್ರದೇಶ : ಈ ಪ್ರದೇಶದ ದಕ್ಷಿಣದ ಅಂಚಿನಲ್ಲಿ ಕಾನ್‌ಸ್ಟನ್ಸ್ ಸರೋವರ ಮತ್ತು ಬವೇರಿಯನ್ ಆಲ್ಪ್ಸ್ ಪರ್ವತವೂ ಉತ್ತರದಲ್ಲಿ ಸ್ವೇಬಿಯನ್ ಮತ್ತು ಫ್ರಾಂಕೋನಿಯನ್ ಜುರಗಳೂ ಬೋಹೀಮಿಯನ್ ಗ್ರಂಥಿಯ ನೈಋತ್ಯ ಅಂಚೂ ಇವೆ. ಡ್ಯಾನ್ಯೂಬ್ ನದಿ ಷ್ವಾರ್ಟ್ಸ್‌ವಾಲ್ಟ್ ಪರ್ವತದಲ್ಲಿ ಹುಟ್ಟಿ ಈ ಪ್ರಸ್ಥಭೂಮಿಯ ಉತ್ತರದ ಅಂಚಿನಲ್ಲಿ ಹರಿಯುತ್ತದೆ. ಇದರ ಬಲಬಂಡೆಯ ಮುಖ್ಯ ಉಪನದಿಗಳು ಇಲರ್, ಈಸಾರ್ ಮತ್ತು ಇನ್. ಡ್ಯಾನ್ಯೂಬ್ ನದಿಯ ದಕ್ಷಿಣದಲ್ಲಿರುವ ಪ್ರದೇಶ ಅಷ್ಟೇನೂ ಫಲವತ್ತಾದ್ದಲ್ಲ. ಅದು ಅರಣ್ಯಾವೃತ. ಆ ಪ್ರದೇಶದ ನಡು ಮತ್ತು ಪೂರ್ವ ಭಾಗದ ಕೆಲವು ಪ್ರದೇಶಗಳು ಫಲವತ್ತಾಗಿವೆ. ಕಾನ್‌ಸ್ಟನ್ಸ್ ಸರೋವರದಿಂದ ಹಾಲ್ಸೈನ್ ಬಳಿಯವರೆಗೆ ಆಲ್ಪ್ಸ್ ಪರ್ವತದ ಉತ್ತರ ಭಾಗ ಜರ್ಮನಿಗೆ ಸೇರಿದೆ. ಜರ್ಮನಿಯ ಈ ಪರ್ವತದ ಅತ್ಯುನ್ನತ ಶಿಖರ ಟ್ಸುಗ್‌ಸ್ಪಿಟ್ಸೆ 2963ಮೀ.. ಇದು ಟರೋಲಿನ ಎಲ್ಲೆಯ ಮೇಲೆ ಇದೆ. ಬವೇರಿಯನ್ ಆಲ್ಪ್ಸ್ ಬಲು ಸುಂದರ. ಅಲ್ಲಿ ಕೆಲವು ರಮ್ಯವಾದ ಸರೋವರಗಳುಂಟು.

**iii ನದಿಗಳು, ಬಂದರುಗಳು :** ಜರ್ಮನಿಯ ನದಿಗಳಲ್ಲಿ ಬಹುಪಾಲು ಒಳನಾಡಿನ ಜಲಮಾರ್ಗಕ್ಕೆ ಅನುಕೂಲಕರವಾಗಿವೆ. ಉತ್ತರದಿಕ್ಕಿನಲ್ಲಿ ಹರಿಯುವ ನದಿಗಳು ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಸಮುದ್ರವನ್ನು ಸೇರುತ್ತವೆ. ಮುಖ್ಯವಾಗಿ ರೈನ್, ವೇಸರ್, ಎಲ್ಬ್, ಓಡರ್, ವಿಶ್ಚಲ ಹಾಗೂ ಇವುಗಳ ಉಪನದಿಗಳನ್ನೊಳಗೊಂಡ ಜರ್ಮನಿಯ ನದೀಜಾಲ ಅದರ ಇಂದಿನ ಆರ್ಥಿಕಾಭಿವೃದ್ಧಿಗೆ ಒಂದು ಮುಖ್ಯ ಕಾರಣ. ಪೂರ್ವದಿಕ್ಕಿಗೆ ಹರಿಯುವ ನದಿಗಳಲ್ಲಿ ಅತ್ಯಂತ ಮುಖ್ಯವಾದ್ದು ಡ್ಯಾನ್ಯೂಬ್. ಷ್ವಾರ್ಟ್ಸ್‌ವಾಲ್ಟ್‌ನಲ್ಲಿ ಹುಟ್ಟುವ ಈ ನದಿ ಬವೇರಿಯದ ಬಹುಭಾಗಕ್ಕೆ ನೀರಾವರಿ ಸೌಲಭ್ಯಗಳನ್ನೊದಗಿಸಿದೆ. ಎರಡನೆಯ ಮಹಾಯುದ್ಧದ ತರುವಾಯ ಜರ್ಮನಿ ವಿಶ್ಚಲ ನದೀ ಪ್ರದೇಶವನ್ನು ಕಳೆದುಕೊಂಡಿತು. ಸೈನಿಕ ವ್ಯೂಹರಚನೆಯ ದೃಷ್ಟಿಯಿಂದಲೂ ಜರ್ಮನಿಯ ನದಿಗಳಿಗೆ ಎಂಥ ಮಹತ್ತ್ವ ಇತ್ತೆಂದರೆ, 1945ರ ವಸಂತದಲ್ಲಿ, ಓಡರ್ ನದಿಯ ದಂಡೆಯ ಬಳಿ, ಮುನ್ನುಗ್ಗಿ ಬರುತ್ತಿದ್ದ

ಸೋವಿಯೆತ್ ಸೇನೆಯನ್ನು ತಡೆದು ನಿಲ್ಲಿಸಬಹುದೆಂದು ಹಿಟ್ಲರ್ ದೃಢವಾಗಿ ನಂಬಿದ್ದ. ಯುದ್ಧಾನಂತರದಲ್ಲಿ ಈ ಪ್ರದೇಶ ಪೋಲೆಂಡ್ ಮತ್ತು ಸೋವಿಯೆತ್ ದೇಶಗಳ ಅಧೀನದಲ್ಲಿತ್ತು. ಜರ್ಮನಿಯ ಕರಾವಳಿಯ ಉದ್ದಕ್ಕೂ ಹರಿದು ಉತ್ತರ ಸಮುದ್ರವನ್ನು ಸೇರುವ ನದಿಗಳಲ್ಲಿ ಮುಖ್ಯವಾದವು ಎಮ್ಸ್, ವೇಸರ್ ಮತ್ತು ಎಲ್ಬ್. ರೈನ್‌ನ ಉಪನದಿಗಳು ಮೇನ್ ಮತ್ತು ಮೋರ್‌ಸಲ್ ಎಲ್ಬ್‌ನ ಉಪನದಿ ಸಾಲ. ಜರ್ಮನ್ ಭೂಪ್ರದೇಶದಲ್ಲಿ

ಸಮುದ್ರವನ್ನು ಸೇರುವ ಎರಡು ನದಿಗಳು ವೇಸರ್ ಮತ್ತು ವೆಲ್ಬ್. ರೈನ್ ನದಿ ಡಚ್ ಬಂದರಾದ ರಾಟರ್‌ಡ್ಯಾಮ್‌ನಲ್ಲಿ ಸಮುದ್ರ ಸೇರುತ್ತದೆ. ಈ ಮೂರು ನದಿಗಳೂ ಮಧ್ಯ ಜರ್ಮನಿಯ ಮೇಲುನಾಡಿನಿಂದ ವಾಯವ್ಯ ದಿಕ್ಕಿಗೆ ಹರಿದು ಉತ್ತರ ಸಮುದ್ರ ಸೇರುತ್ತವೆ. ಮಧ್ಯ ಯೂರೋಪಿನಲ್ಲಿ ಸಾಕಷ್ಟು ಮಳೆಯಾಗುವುದರಿಂದಲೂ ಮಧ್ಯ ಜರ್ಮನಿಯ ಹಿಮಪಾತದಿಂದಲೂ ಈ ನದಿಗಳು ತುಂಬಿ ಹರಿಯುತ್ತವೆ. ವಾಣಿಜ್ಯ ದೃಷ್ಟಿಯಿಂದ ಇವು ಉಪಯುಕ್ತವಾದ ನದಿಗಳಾಗಿ ಪರಿಣಮಿಸಿವೆ; ಜೊತೆಗೆ ಕೆಲವು ಉಪನದಿಗಳೂ ಇವಕ್ಕೆ ಬಂದು ಸೇರುತ್ತವೆ. ಹಿಂದಿನ ಖಂಡಾಂತರ ಹಿಮನದಿಗಳ ಪಾತ್ರಗಳಲ್ಲೇ ಈ ನದಿಗಳು ಪ್ರವಹಿಸುತ್ತಿರುವುದರಿಂದ ಇವುಗಳಿಂದ ಕಾಲುವೆಗಳನ್ನು ನಿರ್ಮಿಸುವುದು ಸಾಪೇಕ್ಷವಾಗಿ ಹೆಚ್ಚು ಸುಲಭ. ಜರ್ಮನಿಯ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ–ಅಂದರೆ ರೈನ್‌ನಿಂದ ಎಲ್ಬ್ ವರೆಗೆ–ಜಲಯಾನ ಸಾಧ್ಯವಾಗಿದೆ.

ರೈನ್ ನದಿ ಜರ್ಮನಿಯ ಪ್ರಮುಖ ವಾಣಿಜ್ಯ ನದಿ. ಇದು ಸುಮಾರು 1287ಕಿಮೀ ಉದ್ದವಾಗಿದೆ. ಇದರ ಪಾತ್ರ ಹೆಚ್ಚು ಆಳವಾಗಿಲ್ಲ. ಆಗಿಂದಾಗ್ಗೆ ಇದರ ಹೂಳೆತ್ತಿ ನದಿಯ ಪಾತ್ರವನ್ನು ಉಳಿಸಿಕೊಂಡು ಬರಲಾಗಿದೆ. ಒಳನಾಡಿನ ಬಂದರುಗಳಲ್ಲಿ ಎಲ್ಲ ಪರಿವಹನ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಇಪ್ಪತ್ತು ಪ್ರಮುಖ ನಗರಗಳು–ಕಲೋನ್, ಡ್ಯೂಸಲ್‌ಡಾರ್ಫ್, ಎಸನ್, ಹೈಡೆಲ್‌ಬರ್ಗ್ ಮೊದಲಾದವು–ಈ ನದಿಯ ತೀರದಲ್ಲಿ ನೆಲೆಗೊಂಡಿರುವುದು ಇದರ ಮಹತ್ತ್ವಕ್ಕೆ ಸಾಕ್ಷಿ. ಯುರೋಪಿನ ಕೆಲವು ಕಬ್ಬಿಣ ಅದುರಿನ ಹಾಗೂ ಕಲ್ಲಿದ್ದಲ ಗಣಿಗಳು ಈ ನದಿಯ ತೀರದ ಬಳಿಯೇ ಇವೆ. ಈ ಕಾರಣಗಳಿಂದ ಇದನ್ನು ಯೂರೋಪ್ ಖಂಡದ ವಾಣಿಜ್ಯ ಆಸ್ತಿ ಎಂದು ಕರೆಯಲಾಗಿದೆ. ಜರ್ಮನರಂತೂ ಇದನ್ನು ಅತ್ಯುತ್ಕೃಷ್ಟ ರಾಷ್ಟ್ರೀಯ ನದಿಯೆಂದು ಭಾವಿಸುತ್ತಾರೆ.

ದಕ್ಷಿಣದ ಗುಡ್ಡಗಾಡುಗಳಲ್ಲಿ ಮತ್ತು ಪರ್ವತಗಳಲ್ಲಿ ಅತ್ಯಂತ ಸುಂದರವಾದ ಸರೋವರಗಳುಂಟು. ಪ್ರಾಚೀನ ಕಾಲದ ಹಿಮನದಿಗಳು ಬಂಡೆಗಳಲ್ಲಿ ಕೊರೆದಿದ್ದ ಅವಕಾಶಗಳಲ್ಲಿ ಸ್ವಚ್ಛವಾದ ಹಾಗೂ ತಂಪಾದ ನೀರಿನ ಸರೋವರಗಳು ರೂಪುಗೊಂಡಿವೆ. ಪರ್ವತಾಗ್ರಗಳಿಂದ ಧುಮುಕಿ ಹರಿಯುವ ನದಿಗಳು ಕಿರುಪಾತ್ರದಲ್ಲಿ ನೂರೆಗಟ್ಟಿ ಹರಿದು ಕೊನೆಗೆ, ಈ ವಿಶಾಲ ಸರೋವರಗಳಲ್ಲಿ ಕಣ್ಮರೆಯಾಗುತ್ತವೆ. ಬವೇರಿಯದಲ್ಲಿಯ ಕೋನಿಗ್ ಸೇ ಸರೋವರಗಳ ಬಳಿಯ ದೃಶ್ಯ ಚೇತೋಹಾರಿ; ಸುಂದರ. ಉತ್ತರ ಜರ್ಮನಿಯ ಮೈದಾನದಲ್ಲಿ ಹೆಚ್ಚು ಆಳವಿಲ್ಲದ ಹಲವಾರು ಸರೋವರಗಳುಂಟು. ಉತ್ತರ ಕರಾವಳಿಯಲ್ಲಿ ಕೆಲವೊಂದು ಖಾರಿಗಳೂ ಇವೆ.

**ಕೋಗಿಲೆ ಗಡಿಯಾರ. ಪಶ್ಚಿಮ ಜರ್ಮನಿಯ ಬ್ಲ್ಯಾಕ್ ಫ್ವಾರ್ಟ್ಸ್‌ವಾಲ್ಟ್ ಪ್ರದೇಶದಲ್ಲಿ ತಯಾರಾಗುತ್ತದೆ**

ಜರ್ಮನಿಯ ಪ್ರಮುಖ ಬಂದರುಗಳಲ್ಲಿ ಹ್ಯಾಂಬರ್ಗ್ ಒಂದು. ಇದು ಎಲ್ಬ್ ನದೀಮುಖದಲ್ಲಿ ನೆಲೆಗೊಂಡಿದೆ. ಮತ್ತೊಂದು ಪ್ರಮುಖ ಬಂದರಾದ ಬ್ರೆಮೆನ್ ವೇಸರ್ ನದೀಮುಖದಲ್ಲಿ ನೆಲೆಗೊಂಡಿದೆ. ಇವು ಅಂತಾರಾಷ್ಟ್ರೀಯ ಪ್ರಾಮುಖ್ಯವುಳ್ಳ ಬಂದರುಗಳು. ಜರ್ಮನಿಯ ಹಿನ್ನಾಡಿಗೆ ಎಲ್ಬ್ ಹಾಗೂ ಹ್ಯಾಂಬರ್ಗ್ ಜೀವನಾಡಿಗಳು. ವೇಸರ್‌ಗಿಂತ ಎಲ್ಬ್‌ನಲ್ಲಿ ಸಾಗಣೆ–ಸಂಚಾರ ಹೆಚ್ಚು. ಇದು ಹಲವು ರಾಷ್ಟ್ರಗಳಲ್ಲಿ ಹರಿಯುತ್ತಿರುವುದು ಇದರ ಪ್ರಾಮುಖ್ಯಕ್ಕೆ ಇನ್ನೊಂದು ಕಾರಣ. ಚೆಕೊಸ್ಲೊವಾಕಿಯದಲ್ಲಿ ಹುಟ್ಟುವ ಈ ನದಿ ಜರ್ಮನಿಯ ಮೂಲಕ ಹರಿಯುತ್ತದೆ. ಒಮ್ಮೆ ಜರ್ಮನಿಯ ಒಂದು ಭಾಗವಾಗಿದ್ದ ಬೋಹೀಮೀಯ ಮತ್ತು ಆಸ್ಟ್ರಿಯಗಳಿಗೂ ಉತ್ತರ ಸಮುದ್ರಕ್ಕೂ ಸಂಪರ್ಕ ಕಲ್ಪಿಸುವ ಸಾಧನ ಇದು.

**iv ವಾಯುಗುಣ** : ಸಮಶೀತೋಷ್ಣ ವಲಯದಲ್ಲಿರುವ ಜರ್ಮನಿಯ ವಾಯುಗುಣ ಸಾಗರೀಯ ಹಾಗೂ ಖಂಡಾಂತರ ವಾಯುಗುಣಗಳ ನಡುವಣದ್ದು. ದಕ್ಷಿಣದಲ್ಲಿ ಎತ್ತರದ ಪ್ರಸ್ಥಭೂಮಿಗಳು ಮತ್ತು ಪರ್ವತಗಳೂ ಉತ್ತರದಲ್ಲಿ ಮೈದಾನಗಳೂ ಇರುವ ಜರ್ಮನಿಯ ಉಷ್ಣತೆ ಪ್ರಾದೇಶಿಕವಾಗಿ ವ್ಯತ್ಯಾಸವಾಗುತ್ತದೆ. ಅಟ್ಲಾಂಟಿಕ್‌ನಿಂದ ಬೀಸುವ ಬೆಚ್ಚನೆಯ ತೇವಪೂರಿತ ಮಾರುತವನ್ನು ತಡೆಯಬಲ್ಲ ಎತ್ತರದ ಪರ್ವತಗಳು ವಾಯವ್ಯದಲ್ಲಿ ಇಲ್ಲವಾದ್ದರಿಂದ ಆ ಭಾಗ ಅದರ ಪ್ರಭಾವಕ್ಕೆ ಒಳಗಾಗಿದೆ. ಒಮ್ಮೊಮ್ಮೆ ಪೂರ್ವ ಭಾಗಗಳೂ ಅದಕ್ಕೆ ಒಳಗಾಗುವುದುಂಟು. ಚಳಿಗಾಲ ಅಷ್ಟು ತೀವ್ರವಾಗಿಯಾಗಲಿ ಬೇಸಗೆ ಉಗ್ರವಾಗಿಯಾಗಲಿ ಇರುವುದಿಲ್ಲ. ಬೆಳೆಯ ಅವಧಿ ಸಾಕಷ್ಟು ದೀರ್ಘ. ಮೇಘಾವೃತ ಆಕಾಶ, ಕಾವಳ ಕವಿದಿರುವುದು, ಅತಿಯಾದ ಆರ್ದ್ರತೆ ಕಂಡುಬಂದರೂ ಒಟ್ಟಿನಲ್ಲಿ ಮಾನವನ ಚಟುವಟಿಕೆಗಳಿಗೆ ಬಾಧಕವಾಗಿಲ್ಲ. ಮಧ್ಯ ಯೂರೋಪೀಯವೆಂದು ಹೇಳಬಹುದಾದ ವಾಯುಗುಣವೇ ಜರ್ಮನಿಯ ಬಹುಭಾಗದಲ್ಲಿ ಕಾಣದೊರೆಯುತ್ತದೆ. ಅತಿಯಿಲ್ಲದ ಉಷ್ಣತೆ, ಸಾಕಷ್ಟು ಮಳೆ–ಇವು ಮುಖ್ಯ ಲಕ್ಷಣಗಳು.

ನೈಋತ್ಯ ಜರ್ಮನಿಯಲ್ಲಿ ಮಧ್ಯ ವಾರ್ಷಿಕ ಉಷ್ಣತೆ ಸುಮಾರು $12^{0}$ C.($53^{0}$F) ಆಗಿದ್ದರೆ, ಮಧ್ಯ ಜರ್ಮನಿಯಲ್ಲಿ $9^{0}$ C.(49 F.). ನೈಋತ್ಯ ಮತ್ತು ವಾಯವ್ಯ ಜರ್ಮನಿಯ ಮಾಧ್ಯವಾರ್ಷಿಕ ಉಷ್ಣತೆಗಳ ವ್ಯತ್ಯಾಸ ಸುಮಾರು $2^{0}$ C.($3^{0}$ F.). ಮೇಲುಭಾಗದಲ್ಲಿರುವ ರೈನ್ ಕಣಿವೆಯಲ್ಲಿ ಚಳಿಗಾಲ ಅತ್ಯಂತ ಸೌಮ್ಯ; ಬೇಸಿಗೆ ಪ್ರಖರ. ವಸಂತಕಾಲದ ಅತ್ಯಂತ ಕಡಿಮೆ ಉಷ್ಣತೆಯ ಪ್ರದೇಶವೆಂದರೆ ಬಾಲ್ಟಿಕ್ ಬಳಿಯದು. ಮಧ್ಯ ಜರ್ಮನಿಯ ಎರ್ಟ್ಸ್‌ಗೆಬರ್ಜಗೆ ಮತ್ತು ಫಿಕ್ಟಲ್ ಗೆಬರ್ಜ ಪ್ರಸ್ಥಭೂಮಿಗಳು ಅತ್ಯಂತ ತಣ್ಣನೆಯ ಪ್ರದೇಶಗಳು. ದಕ್ಷಿಣ ಜರ್ಮನಿಯ ಬವೇರಿಯನ್ ಪ್ರಸ್ಥಭೂಮಿಯಲ್ಲಿ ಚಳಿಗಾಲ ತೀವ್ರವಾಗಿರುತ್ತದೆ. ಬೇಸಗೆ ತಂಪು; ಕಾರ್ಲ್ಸ್‌ರೂಯದಿಂದ ಉತ್ತರಕ್ಕೆ ರೈನ್ ಕಣಿವೆಯ ಪ್ರದೇಶದಲ್ಲೇ ಅತಿ ಹೆಚ್ಚಿನ ಉಷ್ಣತೆ. ನೆಕರ್, ಮೈನ್ ಮತ್ತು ಮೋಸಲ್ ಕಣಿವೆಗಳಲ್ಲೂ ಹೀಗೆಯೇ. ಬೇಸಗೆಯ ಸರಾಸರಿ ಉಷ್ಣತೆ $19^{0}$ C. ($66^{0}$ F.) ಜನವರಿಯದು $0^{0}$

C.(32° F) ಗಿಂತ ಅಧಿಕ. ಇದು ದ್ರಾಕ್ಷಿಯ ಬೆಳೆಗೆ ಅನುಕೂಲಕರ. ವಾಯವ್ಯ ಜರ್ಮನಿಯದು ಸಾಗರೀಯ ವಾಯುಗುಣ–ತಂಪಾದ ಬೇಸಗೆ, ಬೇಸಗೆಯ ಸರಾಸರಿ ಉಷ್ಣತೆ 16° C. (61° F.) ಚಳಿಗಾಲದಲ್ಲಿ ನೆಲವನ್ನು ಹಿಮಕವಿದಿರುವುದು ಸ್ವಲ್ಪಕಾಲ ಮಾತ್ರ. ವೇಸರ್‌ಗೆ ಪಶ್ಚಿಮಕ್ಕಿರುವ ಪ್ರದೇಶದಲ್ಲಿ ಜನವರಿಯ ಸರಾಸರಿ ಉಷ್ಣತೆ 0° C (32° F.) ಗಿಂತ ಹೆಚ್ಚು. ಪೂರ್ವಕ್ಕೆ ಸರಿದರೆ ಇದು–2° C.ಗೆ ಇಳಿಯುತ್ತದೆ. ವರ್ಷದಲ್ಲಿ ಹಲವು ತಿಂಗಳುಗಳ ಕಾಲ ಎಲ್ಬ್ ಮತ್ತು ಅದರ ಉಪನದಿಗಳು ಹೆಪ್ಪುಗಟ್ಟಿರುತ್ತವೆ. ಪೂರ್ವಕ್ಕೆ ಸಾಗಿದಂತೆ ಚಳಿಗಾಲ ಮತ್ತು ಬೇಸಗೆಗಳ ನಡುವಣ ವ್ಯತ್ಯಾಸ ಹೆಚ್ಚುತ್ತ ಹೋಗುತ್ತದೆ.



ಮೇನ್ ನದಿಯ ದಡದ ಮೇಲಿರುವ ವರ್ಟ್ಸ್‌ಬರ್ಗ್–ಮರೀಯನ್‌ಬರ್ಗ್ ಕೋಟೆ

ಜರ್ಮನಿಯಲ್ಲಿ ಎಲ್ಲ ಋತುಗಳಲ್ಲೂ ಮಳೆಯಾಗುತ್ತದೆಯಾದರೂ ಬೇಸಗೆಯಲ್ಲಿ ಅದು ಗರಿಷ್ಠ. ಪಶ್ಚಿಮ ಜರ್ಮನಿಯ ಪ್ರಸ್ಥಭೂಮಿಗಳಲ್ಲಿ ಮಳೆ ಅತ್ಯಂತ ಹೆಚ್ಚು. ಐಫಲ್, ಸಾರ್ಲಂಡ್, ಹಾರ್ಟ್ಸ್, ಟ್ಯುರಿಂಗರ್ ವಾಲ್ಟ್, ರನ್ ಫೋಗಲ್ಸ್ ಬರ್ಗ್, ಸ್ಪಸಾರ್ಟ್, ಷ್ವಾರ್ಟ್ಸ್‌ವಾಲ್ಟ್ ಪ್ರದೇಶಗಳಲ್ಲಿ ವಾರ್ಷಿಕ ಸರಾಸರಿ ಮಳೆ 34" ಅಥವಾ ಇನ್ನೂ ಅಧಿಕ. ಆದರೆ ದಕ್ಷಿಣ ಜರ್ಮನಿಯ ಮಧ್ಯಸ್ಥ ಎತ್ತರ ಪ್ರದೇಶಗಳಲ್ಲಿ 20"–30" ಮಳೆಯಾಗುತ್ತದೆ. ಜರ್ಮನಿಯ ವಾಯವ್ಯ ಮೈದಾನದಲ್ಲೂ ಬ್ರೆಮನ್ ಮತ್ತು ಹ್ಯಾಂಬರ್ಗ್‌ವರೆಗೆ ಇದೇ

ಹ್ಯಾಂಬರ್ಗ್ ಹಡಗುಕಟ್ಟೆ

ಸರಾಸರಿ. ಪಶ್ಚಿಮ ಜರ್ಮನಿಯಲ್ಲಿ ಪರ್ವತದ ಮಗ್ಗುಲಿನ ತಗ್ಗಿನ ಪ್ರದೇಶದಲ್ಲಿ 25"ಗಿಂತ ಕಡಿಮೆ ಮಳೆಯಾಗುತ್ತದೆ. ಮ್ಯಾನ್‌ಹೈಮ್ ಕೆಳಗಿನ ರೈನ್ ಕಣಿವೆಯ ಮತ್ತು ಮೇನ್ ಕಣಿವೆಯ ದ್ರಾಕ್ಷಿ ಜಿಲ್ಲೆಗಳಲ್ಲಿ 16"–20"ಗಿಂತ ಹೆಚ್ಚು ಮಳೆಯಾಗುವುದಿಲ್ಲ. ಪೂರ್ವ ಜರ್ಮನಿಯಲ್ಲಿ ಟ್ಯುರಿಂಗರ್‌ನಷ್ಟು ದಕ್ಷಿಣದವರೆಗೆ ವಾರ್ಷಿಕ ಮಳೆ 16"–20".

**v ಸಸ್ಯಗಳು :** ಜರ್ಮನಿಯ ಕಾಲು ಭಾಗಕ್ಕಿಂತ ಹೆಚ್ಚಿನ ಪ್ರದೇಶ ಅರಣ್ಯಗಳಿಂದ ಆವೃತವಾಗಿದೆ. ಇದರ ಶೇ.45ರಷ್ಟು ಭಾಗ ಪೈನ್ ವೃಕ್ಷಗಳಿಂದಲೂ ಶೇ.4ರಷ್ಟು ಭಾಗ ಬೀಚ್ ವೃಕ್ಷಗಳಿಂದಲೂ ಶೇ.8ರಷ್ಟು ಓಕ್ ವೃಕ್ಷಗಳಿಂದಲೂ ಕೂಡಿದೆ. ಸಂವರ್ಧಿತ ಅರಣ್ಯವೇ ಹೆಚ್ಚು. ನೈಸರ್ಗಿಕ ಅರಣ್ಯಗಳೂ ತಕ್ಕಮಟ್ಟಿಗೆ ಉಳಿದುಕೊಂಡು ಬಂದಿದೆ.

ಜಲೋತ್ಸಾರಣ ಚೆನ್ನಾಗಿರುವ ಸಮಶೀತೋಷ್ಣವಲಯದ ಹಾರ್ಟ್ಸ್ ಪರ್ವತಪ್ರದೇಶದಲ್ಲಿ ಸಮುದ್ರಮಟ್ಟದಿಂದ 610ಮೀ. ಎತ್ತರದವರೆಗೆ, ಬವೇರಿಯನ್ ಆಲ್ಪ್ಸ್‌ನಲ್ಲಿ 1370ಮೀ. ವರೆಗೆ ಬೀಚ್ ಬೆಳೆಯುತ್ತದೆ. ಸಿಲ್ವರ್ ಫರ್, ಸ್ಪ್ರೂಸ್, ಪೈನ್, ಓಕ್ ಇತರ ಮರಗಳು. ಬಿಸಿಲು ಚೆನ್ನಾಗಿದ್ದು ನೆಲ ಫಲವತ್ತಾಗಿರುವಲ್ಲಿ ಡಾಗ್ಸ್ ಮರ್ಕ್ಯುರಿ ಸ್ವೀಟ್ ವುಡ್ರಫ್, ವೈಯೊಲೆಟ್ಸ್ ಮುಂತಾದ ಗಿಡಗಳು ಬೆಳೆಯುತ್ತವೆ. ತೇವ ಹೆಚ್ಚಾಗಿರುವ ಎತ್ತರ ಪ್ರದೇಶದಲ್ಲಿ ಬೆಳೆಯುವ ಗಿಡಗಳು ಬಾಲ್ಸಮ್, ವಿಲೊ ಹರ್ಬ್, ಮಾಂಕ್ಸ್‌ಹೂಡ್, ಆಮ್ಲಯುಕ್ತ ಮಣ್ಣಿನಲ್ಲಿ ಬಿಲ್‌ಬೆರಿ, ಫಾಕ್ಸ್‌ಗ್ಲೋವ್ಸ್, ವೇವಿ ಹೇರ್, ಹುಲ್ಲು ಬೆಳೆಯುತ್ತವೆ. ಹೆಚ್ಚು ಸಾರಯುಕ್ತವಲ್ಲದ ಹಗುರ ಮಣ್ಣಿನ ನೆಲದಲ್ಲಿ–ಮುಖ್ಯವಾಗಿ ಈಶಾನ್ಯ ಭಾಗದಲ್ಲಿ ಮತ್ತು

ಮೇನ್ ನದಿಯ ದಡದ ಮೇಲಿರುವ ಸಂತ ಪಾಲನ ಚರ್ಚು. ಫ್ರ್ಯಾಂಕ್‌ಫರ್ಟ್ ನಗರ

ಪಲ್ಯಾಟ್‌ನೇಟ್‌ನಲ್ಲಿ–ಸ್ಕಾಟ್ಸ್‌ಪೈನ್ ಅರಣ್ಯಗಳಿವೆ. ಷ್ವಾರ್ಟ್ಸ್‌ವಾಲ್ಟ್ ಪರ್ವತಗಳಲ್ಲಿ 1220ಮೀ. ಎತ್ತರದ ವರೆಗೂ ಬವೇರಿಯನ್ ಆಲ್ಪ್ಸ್‌ನಲ್ಲಿ 1525ಮೀ. ಎತ್ತರದವರೆಗೂ ಇವನ್ನು ಕಾಣಬಹುದು. ಇವುಗಳಲ್ಲಿ ನೆಟ್ಟು ಬೆಳೆಸಿದ ಮರಗಳೇ ಹೆಚ್ಚು. ಇಲ್ಲಿ ಆಸ್ಟ್ರಿಯನ್ ಪೈನ್ ಮರಗಳನ್ನೂ ನೆಡಲಾಗಿದೆ. ಒಳನಾಡಿನ ಮರಳ ಗುಡ್ಡೆಗಳ ಪ್ರದೇಶದಲ್ಲಿ ಕಾಡುಗಳನ್ನು ಬೆಳೆಸಲಾಗಿದೆ.

ಪ್ರಾಚೀನ ಕಾಲದಿಂದಲೂ ಜರ್ಮನಿ ಅರಣ್ಯಗಳಿಂದ ತುಂಬಿತ್ತು. ಜರ್ಮನಿಯ ಅನೇಕ ಪ್ರಾಚೀನ ಜಾನಪದ ಕಥೆಗಳು ಮತ್ತು ನಂಬಿಕೆಗಳು ಈ ಅರಣ್ಯಗಳಿಗೆ ಸಂಬಂಧಿಸಿದಂಥವು. ಜರ್ಮನಿ ಆರ್ಥಿಕ ಪ್ರಗತಿಯೊಂದಿಗೆ ನಿಸರ್ಗ ಸಂಪತ್ತನ್ನು ಬಲಿಗೊಟ್ಟಿಲ್ಲ. ಅರಣ್ಯಪಾಲನೆ ಹಾಗೂ ಸಂವರ್ಧನೆಗೆ ಜರ್ಮನರು ತೀವ್ರಗಮನ ಕೊಟ್ಟಿದ್ದಾರೆ. ಭೌತಿಕ ಸಾಧನೆಗೂ ನಿಸರ್ಗಕ್ಕೂ ಸಮತೋಲ ಉಳಿದುಕೊಂಡು ಬಂದಿದೆ.

**vi ಪ್ರಾಣಿಸಂಪತ್ತು :** ಯುರೋಪಿನ ಇತರ ಭಾಗಗಳಲ್ಲಿ ಕಾಣದೊರೆಯುವ ಪ್ರಾಣಿಸಂಪತ್ತು ಖಂಡದ ಕೇಂದ್ರಭಾಗವಾಗಿರುವ ಜರ್ಮನಿಯಲ್ಲೂ ಕಾಣ ದೊರೆಯುತ್ತವೆ. ಖಂಡದ ಎಲ್ಲ ದಿಕ್ಕುಗಳಿಂದಲೂ ಪ್ರಾಣಿ ಹಾಗೂ ಪಕ್ಷಿವರ್ಗಗಳು ಇಲ್ಲಿಗೆ ಆಗಮಿಸಿವೆ ಯೆನ್ನುವುದಕ್ಕೆ ಪಕ್ಷಿಗಳು ಉತ್ತಮ ನಿದರ್ಶನಗಳು. ಪೂರ್ವ ಯುರೋಪಿನ ಕೊನೆಯಲ್ಲಿ

ಬವೇರಿಯನ್ ಆಲ್ಪ್ಸ್‌ನಲ್ಲಿಯ ಒಂದು ಹಳ್ಳಿ

ಅಥವಾ ಬಾಲ್ಕನ್ ರಾಷ್ಟ್ರಗಳಲ್ಲಿ ಕಾಣಬರುವ ಪಕ್ಷಿವರ್ಗಗಳೂ ಇಲ್ಲಿ ಕಾಣಸಿಗುತ್ತವೆ. ಅನೇಕ ಸ್ತನಿಗಳ ವಿಚಾರದಲ್ಲಿ ಕೂಡ ಈ ಮಾತು ನಿಜ. ಅರಣ್ಯವಲಯ ಸಮೃದ್ಧವಾಗಿರುವುದರಿಂದ ಬ್ರಿಟನ್ ಅಥವಾ ಯುರೋಪಿನ ಇತರ ಎಡೆಗಳಲ್ಲಿ ಇರುವುದಕ್ಕಿಂತ ಹೆಚ್ಚಾಗಿ ವನ್ಯಜೀವಿಗಳು ಇಲ್ಲಿ ಕಾಣದೊರೆಯುತ್ತವೆ. ಜಿಂಕೆ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳ ಜೊತೆಗೆ ಇತರ ಜೀವಿಗಳ ಸಂವರ್ಧನೆಗೂ ಇಲ್ಲಿಯ ಅರಣ್ಯಗಳು ಅನುವುಮಾಡಿಕೊಟ್ಟಿವೆ. ಗಂಧ–ಮೂಷಕವನ್ನು ಯಶಸ್ವಿಯಾಗಿ ಸಂವರ್ಧಿಸಿಕೊಂಡಿರುವ ಯೂರೋಪಿಯನ್ ರಾಷ್ಟ್ರಗಳಲ್ಲಿ ಜರ್ಮನಿಯೂ ಒಂದು. ನಾಡಿನ ವಿಶಿಷ್ಟ ಸಸ್ಯ ಹಾಗೂ ಪ್ರಾಣಿಸಂಪತ್ತು ಸಂರಕ್ಷಿಸುವ ಸಲುವಾಗಿ ಜರ್ಮನಿಯಲ್ಲಿ ರಾಷ್ಟ್ರೀಯ ಉದ್ಯಾನ, ಮೃಗಾಲಯ ಹಾಗೂ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಲಾಗಿದೆ.

## II ಜನಜೀವನ

ಪ್ರಮುಖ ಜರ್ಮ್ಯಾನಿಕ್ ಜನಾಂಗಗಳಿಗೆ 8ನೆಯ ಶತಮಾನದಿಂದ ಜರ್ಮನ್ ಎಂಬ ಹೆಸರಿತ್ತು. ಅನಂತರ ಷಾರ್ಲ್‌ಮೇನನ ಆಡಳಿತ ಕಾಲದಲ್ಲಿ ಈ ಜನಾಂಗಗಳ ಏಕೀಕರಣಕ್ಕೆ ಭಾಷೆ ಒಂದು ಪ್ರಮುಖ ಶಕ್ತಿಯಾಯಿತು. 9ನೆಯ ಶತಮಾನದ ವೇಳೆಗೆ ಏಕತೆಯ ಮನೋಭಾವ ಸದೃಢವಾಗಿ ಬೆಳೆಯಿತು. ಪೂರ್ವ ಫ್ರ್ಯಾಂಕಿಷ್ ಪ್ರದೇಶದ ಸ್ಲಾವಿಕ್ ಜನಾಂಗಗಳಿಗಿಂತ ಭಿನ್ನವಾಗಿ ವಿಶಿಷ್ಟವಾಗಿ ರೂಪು ತಳೆಯಿತು. 10ನೆಯ ಶತಮಾನದಿಂದ ಫ್ರ್ಯಾಂಕರು, ಸ್ಯಾಕ್ಸನರು, ಬವೇರಿಯನರು, ಸೈಬೀರಿಯನರು, ಟ್ಯೂರಿಂಜಿಯನರು ಮತ್ತು ಫ್ರಿಸಿಯನರು ಎನಿಸಿಕೊಳ್ಳತೊಡಗಿದರು. ಜರ್ಮನ್ ಎಂಬ ಹೆಸರಾಗಲಿ ಪರಿಕಲ್ಪನೆಯಾಗಲಿ ಬಂದದ್ದು ಹಳೆಯ ಯಾವ ಪಂಗಡ ಅಥವಾ ಪ್ರದೇಶದಿಂದ ಅಲ್ಲ, ಅಲ್ಲಿಯ ಜನರ ತಾಯಿನುಡಿಯಿಂದ. ಇದು ಯುರೋಪಿನಲ್ಲಿ ಜರ್ಮನಿಯ ವೈಶಿಷ್ಟ್ಯ. ಅಲ್ಲಿಯ ಭಾಷೆ ನಾಗರಿಕತೆಗಳ ಮೇಲೆ ಈ ಅಂಶ ವಿಶೇಷವಾಗಿ ಪರಿಣಾಮ ಬೀರಿದೆ.

**i ಪ್ರಾಚೀನ ವಲಸೆ ನೆಲಸುಗಳು :** ಪ್ರಶ.ಪೂ. 6–4ನೆಯ ಶತಮಾನಗಳಲ್ಲೂ ಕ್ರಿಸ್ತಶಕೆಯಲ್ಲೂ ಜರ್ಮನಿಯ ಪ್ರದೇಶಕ್ಕೆ ಸಹ ಜನರು ಅಧಿಕ ಸಂಖ್ಯೆಯಲ್ಲಿ ವಲಸೆ ಬರುತ್ತಲೇ ಇದ್ದರು. ಈ ಕಾಲದಲ್ಲಿ ಇಲ್ಲಿಯ ಜನರ ಭಾಷೆಯಲ್ಲೂ ತೀವ್ರ ಪರಿವರ್ತನೆಗಳಾದುವು. ಇದೇ ಅವಧಿಯ ನಾನಾ ವಲಸೆಗಳ ಪರಿಣಾಮವಾಗಿ ಜರ್ಮನ್ ರಾಷ್ಟ್ರ ರೂಪುಗೊಂಡಿತು. ಫ್ರ್ಯಾಂಕಿಷ್ ದೊರೆಗಳ–ಮುಖ್ಯವಾಗಿ ಷಾರ್ಲ್‌ಮೇನನ–ಮತ್ತು ಸ್ಯಾಕ್ಸನ್ ಚಕ್ರವರ್ತಿಗಳ ರಾಜಕೀಯ ಸಾಧನೆಗಳು ರಾಷ್ಟ್ರತ್ವಕ್ಕೆ ಇಂಬುಗೊಟ್ಟುವು.



ಐಫಲ್ ಬೆಟ್ಟಪ್ರದೇಶದಲ್ಲಿರುವ ರೇಡಿಯೋ ಟೆಲಿಸ್ಕೋಪು–ಪ್ರಪಂಚದಲ್ಲೇ ಅತ್ಯಂತ ದೊಡ್ಡದೆನ್ನಲಾಗಿದೆ

ಕ್ಯಾರೊಲಿಂಜಿಯನ್ ಕಾಲದಲ್ಲಿ ಜರ್ಮನರ ಸಂಖ್ಯೆ ವಿಶೇಷವಾಗಿ ಬೆಳೆಯುತ್ತಿತ್ತು. ಅದುವರೆಗೂ ಜನವಸತಿಯಿಂದ ದೂರವಾಗಿದ್ದ ನೆಲಗಳಲ್ಲಿ ಅವರು ವಸತಿ ಸ್ಥಾಪಿಸಿದರು. ದೂರದ ಕಾಡುಗಳನ್ನು ಕಡಿದರು. ಕ್ರಮೇಣ ಫ್ರ್ಯಾಂಕಿಷ್ ಆಡಳಿತದಿಂದ ಹೊರಗಣ ಜಿಲ್ಲೆಗಳನ್ನು ಇವರು ಆಕ್ರಮಿಸಿಕೊಳ್ಳತೊಡಗಿದರು. 8ನೆಯ ಶತಮಾನದಿಂದ 13ನೆಯ ಶತಮಾನದವರೆಗೆ ಹಲವು ಅಲೆಗಳಲ್ಲಿ ಈ ಕಾರ್ಯ ಮುಂದುವರಿಯಿತು. ವಸಾಹತು ನಿರ್ಮಾಣದ ಜೊತೆಜೊತೆಗೆ ಹಲವು ಜನಾಂಗಗಳ ಸಂಮಿಶ್ರಣವಾಯಿತು. ಫ್ರಿಸಿಯನರು ಉತ್ತರ ಸಮುದ್ರತೀರದ ಮತ್ತು ಅದರಾಚೆಗಿನ ನೆಲದ ಸ್ವಾಮ್ಯ ಪಡೆದರು. ಎಲ್ಬ್ ಮತ್ತು ಕೆಳ ರೈನ್ ನದಿಗಳ ನಡುವಣ ಪ್ರದೇಶದಲ್ಲಿ ಸ್ಯಾಕ್ಸನರು ಪ್ರಬಲರಾದರು. ಪೂರ್ವ ಜರ್ಮನಿಯ ಪ್ರದೇಶದಿಂದ ಸ್ಲಾವರನ್ನು ಅವರು ಓಡಿಸಿದರು. ಮಧ್ಯ ಜರ್ಮನಿಯಲ್ಲಿ ಫ್ರ್ಯಾಂಕರು ನೆಲೆಸಿದರು. ನೈಋತ್ಯಾಭಿಮುಖವಾಗಿ ವಿಸ್ತರಿಸಿದರು. 5ನೆಯ ಶತಮಾನದಲ್ಲಿ ಆಲಮನ್ನಿಗಳೂ ಅನಂತರ ಬವೇರಿಯನರೂ ರೋಮನ್ ಪ್ರದೇಶಗಳತ್ತ ಮುನ್ನುಗ್ಗಿದರು. ಆಲಮನ್ನಿಗಳು ಆಲ್ಸೇಸ್ ಮತ್ತು ಆಲ್ಪ್ಸ್ ಪ್ರದೇಶದಲ್ಲಿ ಹರಡಿಕೊಂಡರು. 6ನೆಯ ಶತಮಾನದಲ್ಲಿ ಬವೇರಿಯನರು ಬೋಹೀಮಿಯದಿಂದ ಡ್ಯಾನ್ಯೂಬಿನವರೆಗಿನ ಪ್ರದೇಶವನ್ನು ಆಕ್ರಮಿಸಿಕೊಂಡರು; ಆಸ್ಟ್ರಿಯವನ್ನೂ ಪ್ರವೇಶಿಸಿದರು. ಈ ಬುಡಕಟ್ಟುಗಳ ಜನರು ಫ್ರ್ಯಾಂಕಿಷ್ ಕಾಲದಲ್ಲಿ ಆಕ್ರಮಿಸಿಕೊಂಡ ಪ್ರದೇಶಗಳಲ್ಲಿ ಮುಂದುವರಿದರಾದರೂ ಇವರು ಪ್ರತ್ಯೇಕ ರಾಜಕೀಯ ಘಟಕಗಳಾಗಿರಲಿಲ್ಲ. ಆಧುನಿಕ ಜರ್ಮನ್ ರಾಜ್ಯಗಳಲ್ಲಿ (ಲಾಂಡರ್) ಇವರ ಪ್ರತ್ಯೇಕತೆ ಉಳಿದಿಲ್ಲ. ಹಲವು ಎಡೆಗಳಲ್ಲಿ ನಾನಾ ಜನರ ಮಿಶ್ರಣವನ್ನು ಕಾಣಬಹುದು. 1350ರ ಸುಮಾರಿಗೆ ಸಂಭವಿಸಿದ ಪ್ಲೇಗಿನಿಂದ ಅನೇಕರು ಸತ್ತದ್ದರಿಂದ ಪೂರ್ವಾಭಿಮುಖವಾದ ವಲಸೆ ನಿಂತಿತು.

ಬವೇರಿಯನ್ ಆಲ್ಪ್ಸ್ ಪ್ರದೇಶದ ಜನರು–ಹಬ್ಬದ ಉಡುಗೆಯಲ್ಲಿ

**ii ಜನಾಂಗ ಲಕ್ಷಣಗಳು:** ಜರ್ಮನರದು ಅಮಿಶ್ರ ಜನಾಂಗವಲ್ಲ. ಇತಿಹಾಸ ಕಾಲದಲ್ಲಿ ಅವರು ನಾನಾ ಜನಾಂಗಗಳೊಂದಿಗೆ ಧಾರಾಳವಾಗಿ ಬೆರೆತಿದ್ದಾರೆ. ಕ್ರಿಸ್ತಪೂರ್ವ ಕಾಲದಲ್ಲಿ ನೆಲೆಸಿದ ಕೆಲ್ಟರೊಂದಿಗೆ, ಸ್ಲಾವರೊಂದಿಗೆ, ಹೀಗೆ ಹಲವು ಜನಾಂಗಗಳೊಂದಿಗೆ ಇಲ್ಲಿಯವರು ಸಂಕರ ಹೊಂದಿದರು. ಕನಿಷ್ಠ ಸಾಂಕರ್ಯಕ್ಕೆ ಒಳಗಾದವರು ಕೆಳ ಸ್ಯಾಕ್ಸನಿಯ ಜರ್ಮನರು.

ವಿವಿಧ ಜರ್ಮ್ಯಾನಿಕ್ ಜನಾಂಗಗಳಿಂದ ಜರ್ಮನರ ಭೌತ ಲಕ್ಷಣಗಳು ರೂಪುಗೊಂಡಿವೆ. ನಸುಗೂದಲು, ಬಿಳಿಮೈ, ತೆಳು ಬಣ್ಣದ ಕಣ್ಣುಗಳು–ಇವು ಅಪ್ಪಟ ಜರ್ಮ್ಯಾನಿಕ್ ಜನರನ್ನು ರೊಮಾನ್ಸ್ಕ ಭಾಷಾಜನರಿಂದ ಪ್ರತ್ಯೇಕಿಸುವ ಲಕ್ಷಣಗಳು. ಮಧ್ಯ ಜರ್ಮನಿಯಲ್ಲಿ ನಸುಹೊಂಗೂದಲ ಜನರದೇ ಅಧಿಕ ಸಂಖ್ಯೆ (54%). ಇಡೀ ಜರ್ಮನಿಯಲ್ಲಿ ಇವರು ಶೇ.31.8 ರಷ್ಟಿದ್ದಾರೆ. ಕಂದುಕೂದಲ ಜನರು ಜರ್ಮನಿಯ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಅಧಿಕ. ಮಧ್ಯ ಜರ್ಮನಿಯ ಜನರು ಸುತ್ತಣ ಜನಾಂಗಗಳಿಂದ ಸದಾ ಪ್ರಭಾವಿತರಾಗುತ್ತಿದ್ದಾರೆ. ಇವರು ಮುಖ್ಯವಾಗಿ ರೈತ ಜನ. ಇವರು ಅತ್ಯಂತ ಅಭಿಮಾನದಿಂದ ತಮ್ಮತನವನ್ನು ಉಳಿಸಿಕೊಂಡಿದ್ದಾರೆ. 19ನೆಯ ಶತಮಾನದಿಂದ ಈಚೆಗೆ–ಕೈಗಾರಿಕೀಕರಣದ ಫಲವಾಗಿ–ಜರ್ಮನಿಯ ಜನರ ರಾಷ್ಟ್ರೀಯ ಗುಣಧರ್ಮಗಳು ಪ್ರಬಲ ಮಾರ್ಪಾಡುಗಳಿಗೆ ಒಳಗಾಗಿವೆ.

**iii ಪದ್ಧತಿಗಳು:** ಜರ್ಮ್ಯಾನಿಕ್ ಕಾಲದ ಉಡುಗೆ ತೊಡುಗೆಗಳು ಈಗ ಹೆಚ್ಚಾಗಿ ಪ್ರಚಾರದಲ್ಲಿಲ್ಲ. 18, 19ನೆಯ ಶತಮಾನಗಳಿಂದ ಈಚೆಗೆ ಆಧುನಿಕ ವೇಷಭೂಷಣಗಳು ಬಂದಿವೆ. ಹೆಸ್ಸ್ ಸ್ಕೌನ್ ಜಿಲ್ಲೆ, ಬೂಕಬರ್ಗ್ ಪ್ರದೇಶ, ಷ್ಪಾರ್ಟ್ಸ್‌ವಾಲ್ಡ್ ಕಣಿವೆಗಳು, ಜರ್ಮನ್ ಆಲ್ಪೈನ್ ಜಿಲ್ಲೆ–ಈ ಪ್ರದೇಶಗಳ ರೈತಜನರಲ್ಲಿ ಹಳೆಯ ಕಾಲದ ಉಡುಪುಗಳನ್ನು ಕಾಣಬಹುದು.

ಜರ್ಮ್ಯಾನಿಕ್ ಕಾಲದಿಂದ ಬಂದ ಅನೇಕ ಪದ್ಧತಿಗಳು ಇಂದಿಗೂ ಉಳಿದಿವೆ; ಸ್ವೇಬಿಯ, ವೆಸ್ಟ್‌ಫೇಲಿಯ, ರೈನ್‌ಲ್ಯಾಂಡ್‌ಗಳಲ್ಲಿ ಬಹುಮಟ್ಟಿಗೆ ಅಚ್ಚಳಿಯದಿವೆ. ಹಳೆಯ ಜರ್ಮ್ಯಾನಿಕ್ ಸಂಪ್ರದಾಯವನ್ನು ಮದುವೆಗಳಲ್ಲಿ ಕಾಣಬಹುದು. ಮದುವಣಗಿತ್ತಿಯ ಸರಕುಗಳನ್ನು ಗಾಡಿಯೊಂದರಲ್ಲಿ ಸಾಗಿಸಿ ತರುವುದು, ದಾರಿ ತಡೆಯುವುದು, ಬಂದೂಕ ಹಾರಿಸುವುದು, ರಾವುತ ಪರಿಚರರು ಮತ್ತು ಸಂಗೀತಗಾರರೊಂದಿಗೆ ಮದುವಣಗಿತ್ತಿಯ ಮೆರವಣಿಗೆ, ನೃತ್ಯ, ವಧುವಿನ ಕಳವು, ವಿವಾಹಭೋಜನ–ಇವೆಲ್ಲ ಹಳೆಯ ಕಾಲದ ನೆನಪು ತರುತ್ತವೆ. ಹುಟ್ಟು, ಸಾವುಗಳ ಸಂದರ್ಭಗಳಲ್ಲಿ ಅನೇಕ ಹಳೆಯ ಪದ್ಧತಿಗಳು ಇಂದಿಗೂ ಆಚರಣೆಯಲ್ಲಿವೆ. ಕ್ರಿಸ್ತಪೂರ್ವ ಕಾಲದ ನಿಸರ್ಗದ ಹಬ್ಬಗಳು ಕ್ರೈಸ್ತ ಹಬ್ಬಗಳೊಂದಿಗೆ

ಮಿಳಿತವಾಗಿವೆ. ಕ್ರಿಸ್‌ಮಸ್ ಕುಟುಂಬದ ಹಬ್ಬ. ಕ್ರಿಸ್ತಪೂರ್ವದ ಹಲವು ಸಂಪ್ರದಾಯಗಳು ಪರಿವರ್ತನೆಗೊಂಡಿವೆ. ಸುಗ್ಗಿಯ ಹಬ್ಬ ವರ್ಣಮಯ. ಸುಗ್ಗಿಯ ಹಾರ, ಭೋಜನ, ಪರ್ವತಗಾವಲಿನಿಂದ ದನಗಳ ಮೆರವಣಿಗೆ–ಎಲ್ಲವೂ ವಿಶಿಷ್ಟ.

ಹಬ್ಬದ ಒಂದು ಮೆರವಣಿಗೆ. ಮಾರ್ಕ್ ಗ್ರೋನಿಂಗನ್

**iv ಮತ:** ಪಶ್ಚಿಮ ಜರ್ಮನಿಯಲ್ಲಿ ಸಂವಿಧಾನದ ಪ್ರಕಾರ ಧರ್ಮಸ್ವಾತಂತ್ರ್ಯವುಂಟು. ಅಲ್ಲಿ ಶೇ.51.1 ಜನ ಪ್ರಾಟೆಸ್ಟಂಟರು; ಶೇ.41.1 ರೋಮನ್ ಕೆಥೊಲಿಕರು. ಉತ್ತರ ಜರ್ಮನಿಯಲ್ಲೂ ಪಶ್ಚಿಮ ಬರ್ಲಿನಿನಲ್ಲೂ ಪ್ರಾಟೆಸ್ಟಂಟರು ಬಹುಸಂಖ್ಯಾತರು. ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೆಥೊಲಿಕರು ಅಧಿಕ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಶೇ.82 ಜನ ಪ್ರಾಟೆಸ್ಟಂಟರೆಂದೂ ಶೇ.12 ರೋಮನ್ ಕೆಥೊಲಿಕರೆಂದೂ ಹೇಳಲಾಗಿದೆ.

## III ಇತಿಹಾಸ

**i ಪ್ರಾಗಿತಿಹಾಸ:** ಇಡೀ ಯುರೋಪ್ ಖಂಡದಲ್ಲೇ ಅತ್ಯಂತ ಪುರಾತನವಾದ ಮಾನವನ ದವಡೆಯ ಉಳಿಕೆ ಜರ್ಮನಿಯ ಹೈಡಲ್‌ಬರ್ಗಿನಲ್ಲಿ ದೊರೆಯಿತು (1907). ಇದು ಸುಮಾರು 3,60,000 ವರ್ಷಗಳಷ್ಟು ಪುರಾತನವಾದ್ದು. ಈ ಮಾನವ ಚೀನೀ ಮಾನವನ ಕಾಲದಲ್ಲೇ ಇದ್ದಿರಬಹುದೆಂದು ಊಹಿಸಲಾಗಿದೆ. ಎರಡೂವರೆ ಲಕ್ಷ ವರ್ಷಗಳ

ಕಾಲ್ಡರ್ ನಿರ್ಮಿತ ಆಧುನಿಕ ಶಿಲ್ಪ. ಬರ್ಲಿನಿನ ರಾಷ್ಟ್ರೀಯ ಗ್ಯಾಲರಿಯ ಎದುರಿಗೆ ಇದೆ

ಹಿಂದೆ ಇದ್ದ ಮಾನವನ ಅವಶೇಷ 1933ರಲ್ಲಿ ಸ್ಟೈನ್‌ಹೀಮಿನಲ್ಲಿ ದೊರಕಿತು. ಇದು ಆಧುನಿಕ ಮಾನವನ ಅವಶೇಷ ಎಂದು ನಂಬಲಾಗಿದೆ. ಇದೇ ತರಹದ ಮಾನವ 75 ಸಾವಿರ ವರ್ಷಗಳ ಹಿಂದಿನವರೆಗೂ ಯುರೋಪ್ ಖಂಡದಲ್ಲಿ ವಾಸವಾಗಿದ್ದನೆಂದು ಹೇಳಲಾಗಿದೆ. ಪಶ್ಚಿಮ ಜರ್ಮನಿಯ ರೈನ್ ನದೀ ಕಣಿವೆಯ ಡ್ಯೂಸಲ್ ಡಾರ್ಫ್ ಹತ್ತಿರ ನೇಯಾಂಡರ್ ಎಂಬಲ್ಲಿ ಸಾವಿರ ವರ್ಷಗಳ ಹಿಂದೆ ವಾಸಿಸುತ್ತಿದ್ದ ಮಾನವನ ತಲೆಬುರುಡೆ 1856ರಲ್ಲಿ ದೊರಕಿತು. ನೇಯಾಂಡರ್‌ಟಾಲ್ ಮಾನವ ಉತ್ತಮ ಬೇಟೆಗಾರ ಆಗಿದ್ದುದಲ್ಲದೆ ಹೆಣಗಳನ್ನು ಹೂಳುತ್ತಿದ್ದನೆಂದೂ ನಂಬಲಾಗಿದೆ. ಅವನು ಕಲ್ಲುಗಳಿಂದ ಆಯುಧಗಳನ್ನೂ ಮಾಡುತ್ತಿದ್ದ.

ಜರ್ಮನಿಯಲ್ಲಿ ಹಳೆಯ ಶಿಲಾಯುಗದಿಂದ ಕಬ್ಬಿಣದ ಯುಗದವರೆಗೆ ಎಲ್ಲ ಸಂಸ್ಕೃತಿಗಳನ್ನೂ ಕಾಣಬಹುದು. ಜರ್ಮನಿಯ ಪ್ರಾಕ್‌ಯುಗದ ಮಾನವ ಬೆಂಕಿಯಲ್ಲಿ ಹದ ಮಾಡಿದ ಸುಮಾರು 2.5 ಮೀ. ಉದ್ದದ ಮರದ ಈಟಿಗಳನ್ನು ಉಪಯೋಗಿಸುತ್ತಿದ್ದ. ಲೇಬೆನ್‌ಸ್ಟೆಟ್‌ನಲ್ಲಿ ಪ್ರಶ.ಪೂ. 53,290ರ ವೇಳೆಯಲ್ಲಿ ಮೌಸ್ಟೀರಿಯನ್ ಸಂಸ್ಕೃತಿ ಇತ್ತೆಂದು ಕಾರ್ಬನ್–14 ವಿಧಾನದಿಂದ ಗೊತ್ತಾಗಿದೆ.

ಅತ್ಯಂತ ಖಚಿತವಾಗಿ ನಿರ್ಧರಿಸಲ್ಪಟ್ಟ ಮಾನವ ಗುಂಪುಗಳು ಎಂದರೆ ದಕ್ಷಿಣ ಮತ್ತು ಮಧ್ಯ ಜರ್ಮನಿಯಲ್ಲಿ 10,000–15,000 ವರ್ಷಗಳ ಹಿಂದೆ ವಾಸಿಸುತ್ತಿದ್ದ ಮ್ಯಾಗ್ಡಲೀನಿಯನ್, ಉತ್ತರ ಜರ್ಮನಿಯ ಹ್ಯಾಂಬರ್ಗಿಯನ್ ಮತ್ತು ಆರೆನ್ಸ್‌ಬರ್ಗಿಯನರು. ಅವರು ಹಿಮಸಾರಂಗಗಳೇ ಮುಂತಾದ ವನ್ಯಮೃಗಗಳನ್ನು ಬೇಟೆ ಮಾಡಿ ಜೀವನ ನಡೆಸುತ್ತಿದ್ದರು. ಕವಲ್ಕೊಂಬು, ಮೂಳೆ, ಇತ್ಯಾದಿಗಳಿಂದ ಆಯುಧ ತಯಾರಿಸುತ್ತಿದ್ದರು. ಪೀಟರ್ಸ್ ಫೆಲ್ಸ್ ಬೈ ಎಂಜೆನ್ ಎಂಬಲ್ಲಿ ಶೀತವಲಯದ ಮೊಲಗಳನ್ನು ಹಿಡಿಯುತ್ತಿದ್ದರೆಂಬುದಕ್ಕೆ ಆಧಾರಗಳಿವೆ. ಆದರೆ ಸ್ತನಿ ಪ್ರಾಣಿಗಳೇ ಇವರ ಮುಖ್ಯ ಆಹಾರ (70%). ಇವರು ಕಾಡುಕುದುರೆ ಮತ್ತು ಕಾಡುಕೋಣಗಳನ್ನು ತಿನ್ನುತ್ತಿದ್ದರು. ಹ್ಯಾಂಬರ್ಗಿಯನ್, ಹಾರೆನ್ಸ್‌ಬರ್ಗಿಯನ್, ಇವು ಷ್ಲೆಸ್‌ವಿಗ್–ಹೋಲ್‌ಸ್ಟೈನ್ ಕಣಿವೆಯಲ್ಲಿದ್ದ ಬೇಸಗೆ ನೆಲೆಗಳು. ಈ ಕಣಿವೆ ಬೇಸಗೆಯಲ್ಲಿ ಹಿಮಸಾರಂಗದ ಮೇವಿಗೆ ಉತ್ತಮ ಸ್ಥಳ. ಇಲ್ಲಿ ಕೆರೆ, ಸರೋವರಗಳಿವೆ. ಹುಲ್ಲು, ಗೇಕು, ಗಿಡ್ಡಭೂರ್ಜ ಮತ್ತು ವಿಲೋಗಳು ಬೆಳೆಯುತ್ತವೆ. ನೀರಿನ ಮೇಲೆ ಬೆಳೆಯುವಂಥ ಕಳೆಗಳು ಹಿಮಸಾರಂಗಕ್ಕೆ ಉತ್ತಮ ಆಹಾರ.

ಮೈಕೇಲ್‌ಸ್ಟ್ರೆಪೆ ಬಳಿ ಇರುವ ಬಯಲುರಂಗಭೂಮಿ–ಸ್ವೇಬಿಷ್ ಹಾಲ್

ಜರ್ಮನಿಯ ಷ್ಪಿಟ್ಸರ್‌ಬಿಲ್ಫ್, ಸರ್‌ಜೆನ್‌ಸ್ಟೈನ್ ಮತ್ತು ವಿಲ್‌ಶೇವುರ್‌ಗಳಲ್ಲಿರುವ ಮ್ಯಾಗ್ಡಲೀನಿಯನ್ ಸಂಸ್ಕೃತಿಗೆ ಸಂಬಂಧಪಟ್ಟ ಗುಹೆಗಳ ನಿಕ್ಷೇಪಗಳಲ್ಲಿ ಶೀತವಲಯದ ವಿಲೋ ಮತ್ತು ಬಿಳಿಹಕ್ಕಿಗಳು ಇದ್ದುವೆನ್ನಲು ಆಧಾರಗಳಿವೆ.

ಪ್ರಾಕ್‌ಯುಗದ ಮ್ಯಾಗ್ಡಲೀನಿಯನರ ಇಡೀ ಸಂಸ್ಕೃತಿ ಹಿಮಸಾರಂಗವನ್ನು ಹೊಂದಿಕೊಂಡಿತ್ತು. ಹಿಮಸಾರಂಗವನ್ನು ಹಿಡಿಯಲು ಆ ಮಾನವರು ಒಂದು ಅಥವಾ ಎರಡೂ ಕೊನೆಗಳಲ್ಲಿ ತಳ ಉಬ್ಬಿದ ಮುಳ್ಳುಗಳಿಂದ ಕೂಡಿದ ಈಟಿಗಳನ್ನು ಬಳಸುತ್ತಿದ್ದರು. ಹಾಕಿನ್ಸ್‌ಬರ್ಗಿಯನರು (ಬಿಲ್ಲನ್ನು ಬೇಟೆಗಾಗಿ ಉಪಯೋಗಿಸುತ್ತಿದ್ದರೆನ್ನುವುದಕ್ಕೆ ಸ್ಟೆಲ್‌ಮೂರ್)ಎಂಬಲ್ಲಿ ಆಧಾರಗಳು ದೊರಕಿವೆ. ಮ್ಯಾಗ್ಡಲೀನಿಯನ್ ಗುಹಾವಾಸಿಗಳು ಹಿಮಸಾರಂಗದ ಸ್ನಾಯುವಿನಿಂದ ಹಗ್ಗಗಳನ್ನು ತಯಾರಿಸಿ ಬೇಟೆಗೆ ಉಪಯೋಗಿಸುತ್ತಿದ್ದರು. ಅವರ ಆರ್ಥಿಕ ವ್ಯವಸ್ಥೆ ಮೀನುಗಾರಿಕೆಯನ್ನೂ ಅವಲಂಬಿಸಿತ್ತು ಎಂಬುದು ಅವರ ಗುಹಾಕಲೆಗಳಲ್ಲಿ ಕಂಡುಬರುವ ಪೈಕ್, ಟ್ರೌಟ್, ಸ್ಯಾಮನ್ ಇತ್ಯಾದಿ ಮೀನುಗಳ ಚಿತ್ರಗಳಿಂದ ವ್ಯಕ್ತವಾಗುತ್ತದೆ.

ಮೆಯಿನ್‌ಡಾರ್ಫ್ ಮತ್ತು ಸ್ಟೆಲ್‌ಮೂರ್‌ನ ಹಿಮಸಾರಂಗ ಬೇಟೆಗಾರರು ಕವಲ್ಕೊಂಬಿನಿಂದ ತಮ್ಮ ತಮ್ಮ ಸಾಮಗ್ರಿಗಳನ್ನು ತಯಾರಿಸುತ್ತಿದ್ದರು. ಹ್ಯಾಂಬರ್ಗಿಯನರು ತಮ್ಮ ಈಟಿಗಾಳಗಳನ್ನು ಮತ್ತು ಬಾಣಗಳನ್ನು ಚೂಪಾಗಿ ಮಾಡಿ ಆಕಾರ ಕೊಡುತ್ತಿದ್ದರು. ಹಾರೆನ್ಸ್‌ಬರ್ಗಿಯನರು ಕವಲ್ಕೊಂಬಿನಿಂದ ಕೊಡಲಿ ಅಥವಾ ಕೈಬಾಚಿಗಳನ್ನು ಮಾಡುತ್ತಿದ್ದರು. ಇವುಗಳಲ್ಲದೆ ಚಕಮಕಿ ಕಲ್ಲುಗಳಿಂದಲೂ ಸಾಧಾರಣ ಕಲ್ಲುಗಳಿಂದಲೂ ಅಲಗುಗಳನ್ನು ಮಾಡುತ್ತಿದ್ದರು. ಚಕಮಕಿ ಕಲ್ಲಿನ ಅಲಗುಗಳನ್ನು ಕವಲ್ಕೊಂಬಿನ ಹಿಡಿಗಳಲ್ಲಿ ಸಿಕ್ಕಿಸುತ್ತಿದ್ದರು. ಮ್ಯಾಗ್ಡಲೀನಿಯನರು ವಾಸಿಸುತ್ತಿದ್ದ ಗುಹೆಗಳನ್ನು ಅವರ ಬಳಿಕ ಟಾರ್ಡೆನಾಯಿಸಿಯನ್ಸ್

ಎಂಬ ಮಾನವ ಗುಂಪುಗಳು ತಮ್ಮ ವಾಸಕ್ಕೆ ಉಪಯೋಗಿಸಿಕೊಂಡವು. ಕಡೆಯ ಹಿಮಯುಗಕ್ಕೆ ಸಂಬಂಧಪಟ್ಟ ಕಲ್ಲಿನ ವೃತ್ತಗಳು ಷ್ಲೆಸ್‌ವಿಗ್–ಹೋಲ್‌ಸ್ಟೈನ್ ಕಣಿವೆಯಲ್ಲಿ ಕಂಡುಬಂದಿವೆ. ಹಿಮಸಾರಂಗಗಳ ಚರ್ಮದಿಂದ ಡೇರೆಗಳನ್ನು ಕಟ್ಟಲು ಈ ವರ್ತುಲಗಳನ್ನು ನಿರ್ಮಿಸುತ್ತಿದ್ದರು. ಭೂಮಿಯ ಮೇಲಿನ ಮಣ್ಣನ್ನು ತೆಗೆದು ನೆಲವನ್ನು ತಯಾರಿಸುತ್ತಿದ್ದರು. ವೃತ್ತಾಕಾರದ ಅಥವಾ ಶಂಕುವಿನಾಕಾರದ ಚಾವಣಿಗಳನ್ನು ಹೊದಿಸುತ್ತಿದ್ದರು. ಡೇರೆಯ ಅಂಚನ್ನು ನೆಲದಲ್ಲಿ ಭದ್ರಪಡಿಸಲು ಮತ್ತು ಡೇರೆಯನ್ನು ಬಿಗಿಯಾಗಿ ಹಿಡಿಯಲು ಕಲ್ಲುಗುಂಡುಗಳನ್ನು ಬಳಸಲಾಗುತ್ತಿತ್ತು. ಬೇಸಗೆಯಲ್ಲಿ ವಲಸೆ ಹೋದಾಗ ಅವರು ಈ ಡೇರೆಗಳಲ್ಲಿ ವಾಸಿಸುತ್ತಿದ್ದರು.

**ಸ್ವೇಬಿಷ್ ಹಾಲ್ ಬಳಿ ಇರುವ ಪ್ರಾಚೀನ ಪಟ್ಟಣ–ವೆಲ್‌ಬರ್ಗ್**

ಹಿಮಯುಗೋತ್ತರ ಕಾಲದ ಮಧ್ಯ ಶಿಲಾಯುಗದ ಮಾನವ ಸೂಕ್ಷ್ಮ ಕಲ್ಲುಗಳಿಂದ ಮಾಡಿದ ಆಯುಧಗಳಾದ ಮೊನಚುಗಳು, ತ್ರಿಕೋನಗಳು ಮತ್ತು ತ್ರಾಪಿಜ್ಯಗಳನ್ನು ಬೇಟೆಗಾಗಿ ಉಪಯೋಗಿಸುತ್ತಿದ್ದ. ಇವನು ಬಳಸುತ್ತಿದ್ದ ಬಾಣಗಳ ತುದಿಗಳು ಹಲವು ದೊರಕಿವೆ. ಮೀನುಗಳನ್ನು ಹಿಡಿಯಲು ಗಾಳಗಳನ್ನು ಉಪಯೋಗಿಸುತ್ತಿದ್ದ. ವ್ಯವಸಾಯ ಪ್ರಾರಂಭವಾದ ಬಳಿಕವೂ ಮೀನುಗಾರಿಕೆ ಮತ್ತು ಬೇಟೆ ರೂಢಿಯಲ್ಲಿದ್ದುವು. ಇವನು ಬೇಸಾಯ ಮಾಡುತ್ತಿದ್ದಾಗಲೂ ಕಾಡಿನ ಗೆಡ್ಡೆ ಗೆಣಸುಗಳು ಆಹಾರವಾಗಿದ್ದುವು. ಜರ್ಮನಿಯ ಸಿಪ್ಲಿಂಜೆನ್ ಎಂಬ ಸ್ಥಳದಲ್ಲಿ ಕಂಡುಬಂದ 193 ಬಗೆಯ ಧಾನ್ಯಗಳಲ್ಲಿ ಕೃಷಿಯಾಗುತ್ತಿದ್ದವು 29 ಮಾತ್ರ. ನೇಯಾಂಡರ್ಟಾಲ್ ಮನುಷ್ಯ ಚಿಪ್ಪುಮೀನುಗಳನ್ನೂ ತಿನ್ನುತ್ತಿದ್ದ.

**ಬೈರಾಯ್ಟ್‌ನಲ್ಲಿಯ 3ನೆಯ ಅಪೆರ ಹೌಸ್**

ನೂತನ ಶಿಲಾಯುಗದ ಡ್ಯಾನ್ಯೂಬಿಯನರು ಮರಳುರಾಶಿಯ ಪ್ರದೇಶಗಳನ್ನು ಬಿಟ್ಟು ಮೆಕ್ಕಲುಮಣ್ಣಿನ ಪ್ರದೇಶದಲ್ಲಿ ನೆಲೆಸಿದ್ದರು. ಸರದಿ ಬೇಸಾಯ ರೂಢಿಗೆ ಬಂತು. ಇವರು ದಿನ್ನೆಗಳ ಮೇಲೆ ಹೆಣಗಳನ್ನು ಹೂಳುತ್ತಿದ್ದರು. ನೂತನ ಶಿಲಾಯುಗದ ಅಂತ್ಯಕಾಲದಲ್ಲಿ ಡ್ಯಾನ್ಯೂಬಿಯನರು ಯುದ್ಧವೀರರಾಗಿ ಪರಿವರ್ತನೆ ಹೊಂದಿದರು. ಇವರ ಬಳಿ ಕೊಡಲಿ ಮತ್ತು ಬಿಲ್ಲುಬಾಣಗಳಿದ್ದುವು. ನೂತನ ಶಿಲಾಯುಗದಲ್ಲಿ ಇಡೀ ಜರ್ಮನಿಯಲ್ಲಿ ಗಾಳ ಮತ್ತು ದಬ್ಬಳವನ್ನು ಸಾಮಾನ್ಯವಾಗಿ ಮೂಳೆಯಿಂದ ತಯಾರಿಸುತ್ತಿದ್ದರು. ಬಟ್ಟೆ ಹೆಣೆಯುವುದೂ ಇವರಲ್ಲಿ ರೂಢಿಯಲ್ಲಿತ್ತು ಎಂಬುದಕ್ಕೆ ದಕ್ಷಿಣ ಜರ್ಮನಿಯ ಕೆಲವು ಕಡೆಗಳಲ್ಲಿ ಆಧಾರಗಳು ಸಿಕ್ಕಿವೆ. ಇವರು ಅಗಸೆ ಗಿಡವನ್ನು ನಾರಿಗಾಗಿ ಬೆಳೆಸುತ್ತಿದ್ದುದಕ್ಕೆ ಕೋಲ್ನ್ ಲಿಂಡನ್‌ತಾಲ್‌ನಲ್ಲಿ ಸಿಕ್ಕಿದ ಬೀಜಗಳು ಸಾಕ್ಷಿ. ಇವರು ಬೆಲ್ಜಿಯಮ್ ಮತ್ತು ಇತರ ಪ್ರದೇಶಗಳ ಜನರೊಡನೆ ಮಣ್ಣಿನ ಪಾತ್ರೆಗಳ ವ್ಯಾಪಾರ ಮಾಡುತ್ತಿದ್ದರು. ನೂತನ ಶಿಲಾಯುಗದ ಜನರು ಪ್ರಧಾನವಾಗಿ ಧಾನ್ಯಗಳನ್ನು ಬೆಳೆಸುತ್ತಿದ್ದರು. ಇವುಗಳಲ್ಲಿ ಗೋಧಿ ಮತ್ತು ಬಾರ್ಲಿ ಪ್ರಧಾನ. ಮುಂದೆ ಧಾನ್ಯದ ವ್ಯವಸಾಯ ಉತ್ತರ ಜರ್ಮನಿಯಿಂದ ಡೆನ್ಮಾರ್ಕಿಗೆ ಹರಡಿತು.

ದಕ್ಷಿಣ ಜರ್ಮನಿಯ ನೂತನ ಶಿಲಾಯುಗದ ಮಾನವರು ಭೂರ್ಜಮರದ ತೊಗಟೆಯ ನಾರನ್ನು ಬತ್ತಿಯಾಗಿಯೂ ಪಂಜಾಗಿಯೂ ಉಪಯೋಗಿಸುತ್ತಿದ್ದರು. ಮನೆಕಟ್ಟುವುದಕ್ಕೂ ಭೂರ್ಜದ ನಾರನ್ನು ಬಳಸುತ್ತಿದ್ದರು. ಒಲೆಗೆ ಶೀತವೇರದಂತೆ ತಡೆಯಲು ಇದರ ಪದರಗಳನ್ನು ಮಣ್ಣಿನ ಒಲೆಯ ಕೆಳಗಡೆ ಇಡುತ್ತಿದ್ದರು. ಚಾಪೆಯನ್ನು ಹೆಣೆಯಲು ಇದರ ನಾರು ಉಪಯುಕ್ತವಾಗಿತ್ತು. ಅವರು ಹಲವು ಬಗೆಯ ಚಿತ್ರಿತ ಸಮಾಂತರ ರೇಖೆಗಳಿಂದ ಕೂಡಿದ, ವರ್ಣಮಯ ಆಲೇಖ್ಯಗಳಿದ್ದ ಮಣ್ಣಿನ ಪಾತ್ರೆಗಳನ್ನು ಮಾಡುತ್ತಿದ್ದರು; ಬುದ್ದಲಿಗಳೂ ಬೋಗುಣಿಗಳೂ ಮುಖ್ಯವಾದವು.

ಕಂಚಿನ ಯುಗದ ಜರ್ಮನರು ಉಳುವುದಕ್ಕೆ ನೆಟ್ಟಗಿನ ಮತ್ತು ಡೊಂಕಾದ ಗುದ್ದಲಿಯಾಕಾರದ ಉಪಕರಣಗಳನ್ನು ಉಪಯೋಗಿಸುತ್ತಿದ್ದರು. ಇವಕ್ಕೆ ಮರದ ಗುಳಗಳನ್ನು ಬಳಸುತ್ತಿದ್ದರು. ಇವು ಕಬ್ಬಿಣ ಯುಗದವರೆಗೂ ಬಳಕೆಯಲ್ಲಿದ್ದವು. ಆಗ ಪ್ರಧಾನವಾಗಿ ಬೆಳೆಸುತ್ತಿದ್ದ ಧಾನ್ಯ ಸ್ಪೆಲ್ಟ್ ಎಂಬ ಗೋಧಿ. ಉತ್ತರ ಜರ್ಮನಿಯ ವೈಪೆನ್‌ಕಾಥೆನ್ ಮತ್ತು ಹ್ಯಾನೋವರ್‌ನಲ್ಲಿ ಉಣ್ಣೆಬಟ್ಟೆ ಸಿಕ್ಕಿದೆ. ಇದನ್ನು ಕಲ್ಲಿನ ಚೂರಿ ಇಡುವ ಕವಚಕ್ಕೆ ಬಳಸಲಾಗಿತ್ತು. ಇದು ಶಿಲಾ ಮತ್ತು ಕಂಚಿನ ಯುಗದ ನಡುವಣ ಕಾಲಕ್ಕೆ ಸಂಬಂಧಿಸಿದ್ದು ಎಂಬುದಾಗಿ ಊಹಿಸಲಾಗಿದೆ. ಶಿಲಾಯುಗ ಮತ್ತು ಕಂಚಿನ ಯುಗಗಳಲ್ಲೂ ಬಟ್ಟೆ ರೂಢಿಯಲ್ಲಿತ್ತು. ಮೈ ಮುಚ್ಚಿಕೊಳ್ಳಲು ಚಿತ್ರಕಲೆಗೂ ಬಟ್ಟೆಯನ್ನು ಉಪಯೋಗಿಸಲಾಗುತ್ತಿತ್ತು.

**ಲೈಪ್‌ಸಿಗ್‌ನಲ್ಲಿಯ ವಸಂತ ಜಾತ್ರೆಯ ಒಂದು ದೃಶ್ಯ**

ಯುರೋಪ್ ಖಂಡದ ಆರ್ಥಿಕ ವ್ಯವಸ್ಥೆಯಲ್ಲಿ ಮಧ್ಯ ಜರ್ಮನಿಯ ತಾಮ್ರದ ಅದುರು ಪ್ರಮುಖ ಪಾತ್ರ ವಹಿಸಿತು. ಕಂಚಿನ ಯುಗದ ಪ್ರಥಮ ಭಾಗದಲ್ಲಿ ದಕ್ಷಿಣ ಜರ್ಮನಿಯಲ್ಲಿ ಲೋಹದ ಇಟ್ಟಿಗೆಗಳು ಬಳಕೆಯಲ್ಲಿದ್ದುವು. ಮಧ್ಯ ಜರ್ಮನಿಯ ಅದಿರಿನ ಪ್ರದೇಶದಿಂದ ಯುರೋಪಿನ ಅನೇಕ ಪ್ರದೇಶಗಳಲ್ಲಿ ತಾಮ್ರದ ಅದಿರನ್ನು ರಫ್ತುಮಾಡುತ್ತಿದ್ದರು. ಆಂಟಿಮೊನಿ ಮತ್ತು ಉತ್ತಮ ಸೀಸದ ನಿಕ್ಷೇಪಗಳಿದ್ದರೂ ಅಂತಿಮ ತಾಮ್ರಯುಗದಲ್ಲಿ ಮಾತ್ರ ಅವುಗಳ ಪ್ರಯೋಜನವನ್ನು ಪಡೆಯಲು ಕಲಿತುಕೊಂಡರು. ರೋಮನರಿಗೆ ಬೇಕಾದ ಲೋಹದ ಇಟ್ಟಿಗೆಗಳನ್ನು ಜರ್ಮನರೇ ಪೂರೈಸುತ್ತಿದ್ದರು. ಅಂತಿಮ ಕಂಚಿನ ಯುಗದ ಜರ್ಮನರು ವನ್ಯಮೃಗಗಳ ಚರ್ಮದಿಂದ ಅಂಗಿಯನ್ನು ತಯಾರಿಸಿ ಉಡುತ್ತಿದ್ದರು. ಚೂರಿ ಮತ್ತು ಖಡ್ಗಗಳನ್ನಿಡುವ ಒರೆಗಳನ್ನು ತಯಾರಿಸಲು ಚರ್ಮ ಬಳಕೆಯಲ್ಲಿತ್ತು. ಮಣ್ಣಿನ ಪಾತ್ರೆಗಳನ್ನು ತಿರುಗುವ ಚಕ್ರದ ಸಹಾಯದಿಂದ ಬಹಳ ಅಂದವಾಗಿ ಮಾಡುತ್ತಿದ್ದರು.

ಮಧ್ಯ ಕಂಚಿನ ಯುಗದಲ್ಲಿದ್ದ ಜರ್ಮನಿಯ ಟ್ಯುಮ್ಯುಲಸ್ ಸಂಸ್ಕೃತಿಯಲ್ಲಿ ಅಲಂಕರಣದಿಂದ ಕೂಡಿದ ಮಣ್ಣಿನ ಪಾತ್ರೆಗಳು ದೊರಕಿವೆ. ವಿಧವಿಧದ ಹಿಡಿಗಳುಳ್ಳ ಪಾನಪಾತ್ರೆಗಳನ್ನು ಅವರು ತಯಾರುಮಾಡುತ್ತಿದ್ದರು. ಅಂತಿಮ ಕಂಚಿನ ಯುಗದ ಮನೆಗಳು 10 ಮೀ. ಉದ್ದ ಮತ್ತು 5 ಮೀ. ಅಗಲ ಇದ್ದುವು. ಇಂಥ ಮನೆಗಳು ಬರ್ಲಿನ್

ಪಕ್ಕದಲ್ಲಿರುವ ಬುಚ್ಚ್ ಮತ್ತು ವಾಸ್ಸರ್‌ಬರ್ಗ್ ಬುಚ್ಚಾವ್ ಎಂಬಲ್ಲಿ ಸಿಕ್ಕಿವೆ. ಸಾಧಾರಣವಾಗಿ ಮನೆಗಳು ಒಂದು, ಎರಡು ಅಥವಾ ಮೂರು ಕೋಣೆಗಳುಳ್ಳವಾಗಿದ್ದುವು. ಇಲ್ಲಿಯ ಅನೇಕ ನೆಲೆಗಳು ಭದ್ರವಾದ ಬೇಲಿಗಳಿಂದ ರಕ್ಷಿಸಲ್ಪಟ್ಟಿದ್ದುವು. ಮನೆಗಳಲ್ಲಿ ಒಲೆಯೂ ಆಯಾಕಾರದ ಚಿಕ್ಕ ಕಣಜಗಳೂ ಇದ್ದುವು.

ಕಂಚಿನ ಯುಗದಲ್ಲಿ ಮಧ್ಯ ಜರ್ಮನಿಯ ಜನರು ಅನೇಕ ಬಗೆಯ ಲೋಹದ ಸಾಮಾನುಗಳನ್ನು ಯುರೋಪಿಗೂ ಇತರ ಪ್ರದೇಶಗಳಿಗೂ ರಫ್ತು ಮಾಡುತ್ತಿದ್ದರು. ಡೆನ್ಮಾರ್ಕ್ ಪ್ರದೇಶದಿಂದ ಕಾರೂಬಾ ಮಣಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಸಣ್ಣ ತಾಮ್ರ ಪಟ್ಟಿಗಳು ಸ್ವೀಡನ್ ಪ್ರದೇಶಕ್ಕೆ ರಫ್ತಾಗುತ್ತಿದ್ದುವು. ಟ್ಯುಮ್ಯುಲಸ್ ಸಂಸ್ಕೃತಿಯ ಕಾಲದಲ್ಲಿ ಮಧ್ಯ ಮತ್ತು ಪಶ್ಚಿಮ ಜರ್ಮನಿಯ ಜನರು ಶಿಲಾರಾಳದ ವ್ಯಾಪಾರವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಅವರ ವ್ಯಾಪಾರ ವ್ಯವಸ್ಥೆ ಚೆನ್ನಾಗಿತ್ತು.

ಮರದಿಂದ ಕಟ್ಟಿದ ಚರ್ಚು, ಹಾಯೆನ್‌ಕ್ಲೇ

ಭಾರವಾದ ವಸ್ತುಗಳನ್ನು ಸಾಗಿಸಲು ಕುದುರೆಗಳು ಬಳಕೆಯಲ್ಲಿದ್ದುವು. ಕವಲ್ಗೊಂಬುಗಳಿಂದ ತಯಾರಿಸಿದ ಕಡಿವಾಣಗಳ ಸಣ್ಣ ಚೂರುಗಳು ದೊರಕಿವೆ. ಚಕ್ರ ಉಳ್ಳ ವಾಹನಗಳನ್ನು ಜವುಗು ಪ್ರದೇಶಗಳಲ್ಲಿ ಮರದ ಹಲಗೆಗಳನ್ನು ಹಾಕಿ ದಾಟಿಸಲಾಗುತ್ತಿತ್ತು.

ಕಬ್ಬಿಣಯುಗದ ಹಾಲ್‌ಸ್ಟಾಟ್ ಕಾಲದಲ್ಲಿ ಉತ್ತರ ಜರ್ಮನಿಯಲ್ಲಿ ಪ್ರಥಮವಾಗಿ ರೈ ವ್ಯವಸಾಯ ಪ್ರಾರಂಭವಾಯಿತು. ತರುವಾಯ ಇದು ಎಲ್ಲ ಕಡೆಯೂ ಸಾಮಾನ್ಯವಾಯಿತು. ಬೆಂದ ಕಾಳುಗಳು ಬೀಸುವ ಕಲ್ಲುಗಳ ಮೇಲೆ ಕಂಡುಬಂದಿವೆ. ಅವರೆಕಾಯಿ, ಚನ್ನಂಗಿ ಮುಂತಾದವೂ ಬೆಳೆಯುತ್ತಿದ್ದುವು. ಎಣ್ಣೆ ಬೀಜಗಳಿಗಾಗಿ ಬೆಳೆಸುತ್ತಿದ್ದ ಮರಗಳು ಅಗಸೆ ಮತ್ತು ಕ್ಯಾಮಲಿನ್. ದನ, ಆಡು, ಕುರಿ, ಕುದುರೆ, ಹಂದಿ ಮುಂತಾದ ಪ್ರಾಣಿಗಳನ್ನು ಸಾಕಲಾಗುತ್ತಿತ್ತು. ಹಾಲೂ ಒಂದು ಮುಖ್ಯ ಆಹಾರವಾಗಿತ್ತು. ಹಸು ಮತ್ತು ಕುರಿಗಳಿಂದ ಹಾಲನ್ನು ಪಡೆಯುತ್ತಿದ್ದರು. ಹಾಲ್‌ಸ್ಟಾಟ್ ಹತ್ತಿರವಿರುವ ಉಪ್ಪುನೀರಿನ ಬುಗ್ಗೆಗಳಿಂದ ಉಪ್ಪನ್ನು ತಯಾರಿಸುತ್ತಿದ್ದರು.

**ii ಇತಿಹಾಸ :** ಪ್ರಾಚೀನ ಗ್ರೀಕ್ ತತ್ತ್ವಜ್ಞಾನಿ ತೇಲ್ಸನ (ಪ್ರಶ.ಪೂ.ಸು. 640–546) ಕಾಲದಿಂದಲೂ ಅಭಿಜಾತ ಲೇಖಕರಿಗೆ ಉತ್ತರ ಜರ್ಮನಿಯ ಸಮುದ್ರತೀರದ ಅಂಬರ್‌ನ ಪರಿಚಯವಿತ್ತು. ಗ್ರೀಕ್ ಸಮುದ್ರಯಾತ್ರಿ ಮತ್ತು ಭೂಗೋಳಶಾಸ್ತ್ರಜ್ಞ ಪಿತಿಯಸ್ (ಪ್ರಶ.ಪೂ. 4ನೆಯ ಶತಮಾನ) ಜರ್ಮನಿಗೆ ಭೇಟಿ ಕೊಟ್ಟಿದ್ದ. ಆದರೆ ಜರ್ಮ್ಯಾನಿಕ್ ಜಗತ್ತಿಗೂ ಹೊರಜಗತ್ತಿಗೂ ನಡುವೆ ಪ್ರಶ.ಪೂ ಒಂದನೆಯ ಶತಮಾನದವರೆಗೂ ಹೆಚ್ಚಿನ ಸಂಪರ್ಕ ಬಹುಶಃ ಇರಲಿಲ್ಲ. ಈ ಪ್ರದೇಶದಲ್ಲಿ ಪ್ರಬಲರಾಗಿದ್ದ ಜರ್ಮ್ಯಾನಿಕ್ ಜನರು ರೈನ್ ನದಿಯ ಪೂರ್ವ ದಂಡೆಯ ಮೇಲಿಂದ ಕೆಲ್ಟ್ ಜನರನ್ನು ಓಡಿಸಿ ಆ ಸುತ್ತಮುತ್ತ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದರು. ಅವರ ಈ ಆಕ್ರಮಣ ಪ್ರವೃತ್ತಿಗೆ ಪ್ರಶ.ಪೂ.58–51ರಲ್ಲಿ ತಡೆ ಬಿತ್ತು. ಜ್ಯೂಲಿಯಸ್ ಸೀಸರ್ ಆಗ ಆ ಪ್ರದೇಶದ ಮೇಲೆ ದಂಡೆತ್ತಿ ರೈನ್ ನದಿಯವರೆಗೂ ಮುಂದುವರಿದ. ಗಾಲ್ ಪ್ರಾಂತ್ಯ ತನ್ನ ಸಾಮ್ರಾಜ್ಯದ ಎಲ್ಲೆಯ ಪ್ರದೇಶವೆಂದು ಅವನು ಪರಿಗಣಿಸಿದ್ದ. ಅವನು ತನ್ನ ದಂಡಯಾತ್ರೆಯನ್ನು ಈ ದಿಕ್ಕಿನಲ್ಲಿ ಹೆಚ್ಚು ವಿಸ್ತರಿಸಲಿಲ್ಲ. ಅನಂತರ ಬಂದ ಅಗಸ್ಟಸನೂ ಮೊದಮೊದಲು ಸೀಸರನಂತೆಯೇ ಭಾವಿಸಿದ್ದನಾದರೂ ಪ್ರಶ.ಪೂ. 12ರಲ್ಲಿ ಅವನ ಮಲಮಗ ನೀರೋ ಕ್ಲಾಡಿಯಸ್ ಡ್ರೂಸಸ್ ಎಂಬುವನು ಗಾಲರು ಮತ್ತು ರೋಮನರಿಗೆ ಶತ್ರುಗಳಾಗಿದ್ದವರನ್ನು ಎದುರಿಸಿ ಯುದ್ಧ ಮಾಡಿದ. ಆದರೆ ಈ ಪ್ರದೇಶವನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳಬೇಕೆಂಬ ಅಭಿಲಾಷೆ ಅಗಸ್ಟಸನಿಗೆ ಇತ್ತೆಂದು ಹೇಳವುದಕ್ಕಾಗುವುದಿಲ್ಲ. ಎಲ್ಬ್ ನದಿಯನ್ನು ತಲುಪಿದ ಮೇಲೆ ಡ್ರೂಸಸನೇ ತೀರಿಕೊಂಡ (ಪ್ರಶ.ಪೂ. 9). ಆದರೆ ಡ್ರೂಸಸ್ ಬಿಟ್ಟಲ್ಲಿಂದ ಅವನ ತಮ್ಮ–ಭಾವೀ ಚಕ್ರವರ್ತಿ ಟೈಬೀರಿಯಸ್–ಮರುವರ್ಷ ಮುಂದುವರಿದ. ಈ ನಡುವೆ ಮಾರೊಬಾಡ್ಯುಲಸ್ ಎಂಬವನ ನಾಯಕತ್ವದಲ್ಲಿ ಬೋಯಿ ಎಂಬಲ್ಲಿ ಜರ್ಮನ್ ಸಾಮ್ರಾಜ್ಯವೊಂದು ಬೆಳೆಯುತ್ತಿತ್ತು. ಪ್ರಶ.ಪೂ. 7–4ರಲ್ಲಿ ರೋಮನರು ಇವನ ವಿರುದ್ಧ ಹಲವು ಸಲ ದಂಡಯಾತ್ರೆ ಮಾಡಿ ಡ್ಯಾನ್ಯೂಬ್ ನದಿಯನ್ನು ದಾಟಿ ಹೋದರು. ಪ್ರ.ಶ. 5ರಲ್ಲಿ ಟೈಬೀರಿಯಸ್ ಡೆನ್ಮಾರ್ಕ್ ಪ್ರದೇಶದವರೆಗೂ ಹೋಗಿದ್ದ. ಜರ್ಮನಿಯನ್ನು ಗೆಲ್ಲುವುದು ಕಷ್ಟವೆಂಬುದನ್ನರಿತ ಆತ ರೈನ್ ಮತ್ತು ಡ್ಯಾನ್ಯೂಬ್ ನದಿಗಳನ್ನು ತನ್ನ ಸಾಮ್ರಾಜ್ಯದ ಗಡಿಗಳೆಂದು ಪರಿಗಣಿಸಿದ. ಅವನ ಸಂತತಿಯವರು ಅವನ ಸೂತ್ರವನ್ನೇ ಅನುಸರಿಸಿದರು. ಫ್ಲೇವಿಯಸ್ ಸಂತತಿಯ ಚಕ್ರವರ್ತಿಗಳು ರೋಮನ್ ಚಕ್ರಾಧಿಪತ್ಯದ ಗಡಿಗಳನ್ನು ಮಧ್ಯ ಜರ್ಮನಿಯವರೆಗೂ ವಿಸ್ತರಿಸಿದರು. ತಮಗೆ ಸೇರಿದ್ದ ಭಾಗಗಳನ್ನು ಎರಡು ಪ್ರಾಂತ್ಯಗಳಾಗಿ ವಿಂಗಡಿಸಿ ಅಲ್ಲಿ ಸೈನ್ಯದ ತುಕಡಿಗಳನ್ನು ಸ್ಥಾಪಿಸಿದರು. ಕ್ರಮೇಣ ರೋಮನ್ ನಾಗರಿಕತೆ ಆ ಪ್ರದೇಶದಲ್ಲಿ ಪ್ರಸಾರವಾಯಿತು. ಟ್ಯಾಸಟಸ್ ಎಂಬ ರೋಮನ್ ಇತಿಹಾಸಕಾರ 98ರಲ್ಲಿ ಜರ್ಮನಿಯನ್ನು ಕುರಿತಾದ ಕೃತಿಯೊಂದನ್ನು ಪ್ರಕಟಿಸಿದ. ಅವನು ಜರ್ಮನ್ ಪ್ರದೇಶದಲ್ಲಿ ವಾಸಿಸುತ್ತಿದ್ದ ಅನೇಕ ಬಣಗಳನ್ನೂ ರಾಜಕೀಯ ವಲಯಗಳನ್ನೂ ತನ್ನ ಗ್ರಂಥದಲ್ಲಿ ವರ್ಣಿಸಿದ್ದಾನೆ. ಕಾಲಕ್ರಮದಲ್ಲಿ ಸಣ್ಣ ಪುಟ್ಟ ಬಣಗಳು ಕೂಡಿ ಸ್ಯಾಕ್ಸನ್, ಫ್ರ್ಯಾಂಕ್ ಮೊದಲಾದ ಗುಂಪುಗಳೂ ವಿಸ್ತಾರವಾದ ರಾಜಕೀಯ ವಲಯಗಳೂ ಅಲ್ಲಿ ಸ್ಥಾಪನೆಯಾದುವು. ಪ್ರಶ. 3ನೆಯ ಶತಮಾನದ ವೇಳೆಗೆ ಈ ಗುಂಪುಗಳು ಪ್ರಬಲವಾದುವು. ಸ್ಯಾಕ್ಸನ್ನರು ಬ್ರಿಟನ್ನಿನ ಮೇಲೂ ಫ್ರ್ಯಾಂಕರು ಗಾಲ್ ಪ್ರದೇಶದ ಮೇಲೂ ಆಕ್ರಮಣ ನಡೆಸಿದರು. ಅನಂತರದ ಚಕ್ರವರ್ತಿಗಳ ಕಾಲದಲ್ಲಿ ಜರ್ಮ್ಯಾನಿಕ್ ಜನರಲ್ಲಿ ಹಲವರು ರೋಮನ್ ಸೈನ್ಯದಲ್ಲಿ ಸೇರಿದರು. ಮತ್ತೆ ಹಲವರು ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇಸಾಯಗಾರರಾಗಿ ನೆಲೆಸಿದರು.

5ನೆಯ ಶತಮಾನದಲ್ಲಿ ಪೂರ್ವ ಮತ್ತು ಪಶ್ಚಿಮ ಭಾಗಗಳ ಸಾಮ್ರಾಜ್ಯಗಳ ಚಕ್ರವರ್ತಿಗಳಿಗೂ ಸೈನ್ಯಾಧಿಕಾರಿಗಳಿಗೂ ನಡುವೆ ಘರ್ಷಣೆಗಳು ಪ್ರಾರಂಭವಾದುವು. ಹೂಣರ ಗುಂಪುಗಳು ಗಾಲ್ ಮತ್ತು ಜರ್ಮನಿ ಪ್ರದೇಶಗಳನ್ನು ವಶಪಡಿಸಿಕೊಂಡವು. ಹೂಣರ ನಾಯಕನಾದ ಆಟಿಲನ ಸಾಮ್ರಾಜ್ಯ ಇಡೀ ಜರ್ಮನಿಯನ್ನು ಒಳಗೊಂಡಿತ್ತು. ಆದರೆ 454ರ ವೇಳೆಗೆ ಹೂಣರ ಪ್ರಾಬಲ್ಯ ಕುಂದಿತು. ಜರ್ಮನಿಯಲ್ಲಿ ಫ್ರ್ಯಾಂಕ್ ಮತ್ತು ಬರ್ಗಂಡಿಯನ್ ಗುಂಪುಗಳು ಪ್ರಬಲವಾದುವು. ಅವುಗಳ ಪ್ರಭಾವ ಗಾಲ್ ಪ್ರದೇಶದಲ್ಲಿ ವಿಸ್ತರಿಸಿತು. ಪೂರ್ವ ರೋಮನ್ ಚಕ್ರವರ್ತಿಗಳು ರಾಜಧಾನಿಯನ್ನು ಕಾನ್‌ಸ್ಟ್ಯಾಂಟಿನೋಪಲಿಗೆ ಬದಲಾಯಿಸಿದ್ದರಿಂದ ಡ್ಯಾನ್ಯೂಬ್ ಪ್ರದೇಶದಲ್ಲಿ ರಾಜಕೀಯ ಹತೋಟಿಯಿಲ್ಲದಂತಾಯಿತು. ಜರ್ಮನಿಯಲ್ಲಿ ಸ್ಯಾಕ್ಸನ್ ಮತ್ತು ಆಲಮನ್ನಿ ಗುಂಪುಗಳ ಜನರು ಷಾರ್ಲ್‌ಮೇನ್ ಚಕ್ರವರ್ತಿಯ ಸಾಮ್ರಾಜ್ಯದ ಪ್ರಜೆಗಳಾಗಿ ಮುಂದುವರಿದರು. ರೋಮನ್ ಸಾಮಾಜಿಕ ಪದ್ಧತಿಯೂ ವ್ಯವಸಾಯ ವಿಧಾನವೂ ಜರ್ಮನಿಯಲ್ಲಿ ಆ ವೇಳೆಗೆ ಪ್ರಚಲಿತವಾಗಿದ್ದುವು. ಕ್ರಮೇಣ ಕ್ರೈಸ್ತಮತ ಅಲ್ಲಿ ಪ್ರಚಾರಕ್ಕೆ ಬಂತು.

ರೋಮನ್ ಪದ್ಧತಿಯನ್ನು ಅನುಸರಿಸುತ್ತಿದ್ದ ಫ್ರ್ಯಾಂಕರು 7ನೆಯ ಶತಮಾನದಲ್ಲಿ ಗಾಲ್ ಪ್ರದೇಶದಲ್ಲಿ ಪ್ರಬಲರಾದರು. ರೈನ್ ಪ್ರದೇಶದಲ್ಲಿ ಮೆರೊವಿಂಜಿಯಸ್ ಸಂತತಿಯ ಆಡಳಿತ ಆರಂಭವಾಯಿತು. ಆ ವೇಳೆಗೆ ಮಧ್ಯ ಜರ್ಮನಿಯಲ್ಲಿ ತ್ಯುರಿಂಜಿಯನರೂ ದಕ್ಷಿಣ ಜರ್ಮನಿಯಲ್ಲಿ ಬವೇರಿಯನರೂ ತಮ್ಮ ತಮ್ಮ ಪ್ರಾಬಲ್ಯವನ್ನು ವಿಸ್ತರಿಸಲು ಹೋರಾಡುತ್ತಿದ್ದರು. ಸ್ಲಾವರು ಜರ್ಮನಿಯ ಪೂರ್ವದ ಗಡಿಗಳನ್ನು ದಾಟಿ ಮುಂದುವರಿಯುತ್ತಿದ್ದರು. 751ರ ವೇಳೆಗೆ ಮೆರೊವಿಂಜಿಯನ್ ಸಂತತಿಯನ್ನು ಕ್ಯಾರೊಲಿಂಜಿಯನ್ ಸಂತತಿ ಮೂಲೆಗೊತ್ತಿತ್ತು. ಕ್ಯಾರೊಲಿಂಜಿಯನರ ಆಳ್ವಿಕೆಯ ಕಾಲದಲ್ಲಿ ಕ್ರೈಸ್ತಮತ ಐರಿಷ್ ಮತ್ತು ರೋಮನ್ ಪ್ರಚಾರಕರಿಂದ ಜರ್ಮನಿಯಲ್ಲಿ ಹಬ್ಬಿತು. ಸೇಂಟ್ ಬಾನಿಫೇಸನಿಂದ ಜರ್ಮನಿಯ ಪ್ರಪ್ರಥಮ ಇಗರ್ಜಿ ಸ್ಥಾಪನೆಯಾಯಿತು.

ಪವಿತ್ರ ರೋಮನ್ ಚಕ್ರವರ್ತಿ ಷಾರ್ಲ್‌ಮೇನ್ ಚಕ್ರವರ್ತಿ ಪ್ರಷ್ಯ ಮತ್ತು ರೈನ್‌ಲ್ಯಾಂಡ್ ಪ್ರದೇಶಗಳ ಮೇಲಿನ ಆಕ್ರಮಣ ನೀತಿಯನ್ನು ಹಾಗೂ ಕ್ರೈಸ್ತಧರ್ಮ ವಿಸ್ತರಣ ಕಾರ್ಯವನ್ನು ಮುಂದುವರಿಸಿದ. ಜರ್ಮ್ಯಾನಿಕ್ ಜನರಲ್ಲಿ ರಾಜಕೀಯ ಒಗ್ಗಟ್ಟಿಲ್ಲದಿದ್ದರೂ ಅವರು ತಮ್ಮ ಪ್ರತಿಭಟನೆಯ ನೀತಿಯನ್ನು ನಾನಾ ಪ್ರಕಾರವಾಗಿ ಮುಂದುವರಿಸಿದರು. ಇದರಿಂದಾಗಿ ಸ್ಯಾಕ್ಸನರು ಒಂದಾದರು, ಸ್ಯಾಕ್ಸನಿ ಕ್ರಮೇಣ ಇತರ ಜರ್ಮನ್ ಪ್ರದೇಶಗಳೊಡನೆ ಕೂಡಿ, ಡೇನಿಷ್, ಸ್ಲಾವ್ ಮತ್ತು ಇತರ ಗುಂಪುಗಳ ಆಕ್ರಮಣವನ್ನು ತಡೆಯಲು ಫ್ರ್ಯಾಂಕರೊಂದಿಗೆ ಸಹಕರಿಸಿತು. ಜರ್ಮನ್ ಪ್ರದೇಶದ ಜನರು ಆತ್ಮರಕ್ಷಣೆಗಾಗಿ ಒಂದುಗೂಡಲು ಕಾರಣವಾದ ಅಂಶಗಳೆಂದರೆ ಕ್ರೈಸ್ತಧರ್ಮ ಪ್ರಚಾರ, ಫ್ರ್ಯಾಂಕರ ಆಡಳಿತ.

ಷಾರ್ಲ್‌ಮೇನನ ಉತ್ತರಾಧಿಕಾರಿಯಾದ 1ನೆಯ ಲೂಯಿ ಪಯಸ್ ಪ್ರಶ. 825ರಲ್ಲಿ ತನ್ನ ಮಗನಾದ ಲೂಯಿ ದ ಜರ್ಮನ್ ಎಂಬುವನಿಗೆ ಬವೇರಿಯದ ಆಡಳಿತದ ಹೊಣೆ ವಹಿಸಿದ. ಲೂಯಿ ಕ್ರಮೇಣ ಇಡೀ ಜರ್ಮನಿಯ ಮೇಲೆ ತನ್ನ ಅಧಿಕಾರ ಸ್ಥಾಪಿಸಿದ. ಇದರಿಂದ ಜರ್ಮ್ಯಾನಿಕ್ ಜನಾಂಗಗಳೆಲ್ಲ ಪ್ರಪ್ರಥಮವಾಗಿ ಒಂದೇ ಆಡಳಿತ ಚೌಕಟ್ಟಿನಲ್ಲಿ ಸೇರಿದಂತಾಯಿತು. ಕ್ರಮೇಣ ಜರ್ಮನಿಯು ಡ್ಯ ಅಥವಾ ಮಂಡಲಗಳಾಗಿ ಮಾರ್ಪಟ್ಟು ಪ್ರತಿ ವಲಯದಲ್ಲೂ ಆಡಳಿತ ವ್ಯವಸ್ಥೆಗಾಗಿ ಸರ್ಕಾರದಿಂದ ಶ್ರೀಮಂತ ಮನೆತನಗಳ ಮುಖಂಡರು ನಿಯಮಿತರಾದರು. ಅವರು ಕಾಲಕ್ರಮದಲ್ಲಿ ಪ್ರಬಲರಾದರು. ಹೆಸರಿಗೆ ಮಾಂಡಲಿಕರಾಗಿದ್ದರೂ ಸ್ವತಂತ್ರವಾಗಿ ಆಡಳಿತ ನಡೆಸುತ್ತಿದ್ದರು. ಊಳಿಗಮಾನ್ಯ ಪದ್ಧತಿ ಆಚರಣೆಯಲ್ಲಿತ್ತು.

ಪೂರ್ವ ಫ್ರ್ಯಾಂಕಿಷ್ ಕ್ಯಾರೊಲಿಂಜಿಯನರ ಕೊನೆಯ ದೊರೆ ಲೂಯಿ ದಿ ಚೈಲ್ಡ್ 911ರಲ್ಲಿ ತೀರಿಕೊಂಡ. ಅವನಿಗೆ ಗಂಡು ಸಂತಾನ ಇರಲಿಲ್ಲ. ಫ್ರ್ಯಾಂಕಿಷರ ಡ್ಯೂಕನಾಗಿದ್ದ ಕಾನ್ರಾಡನನ್ನು ದೊರೆಯೆಂದು ಸ್ಯಾಕ್ಸನರೂ ಫ್ರ್ಯಾಂಕರೂ ಚುನಾಯಿಸಿದರು. 1ನೆಯ ಕಾನ್ರಾಡನ ಅನಂತರ ಸ್ಯಾಕ್ಸನಿಯ ನಾಯಕನಾದ ಹೆನ್ರಿ ದೊರೆಯಾದ. ಸ್ಯಾಕ್ಸನರ ಆಳ್ವಿಕೆ 1024ರವರೆಗೆ ಮುಂದುವರಿಯಿತು. 1ನೆಯ ಹೆನ್ರಿಯ ಅನಂತರ ಅವನ ಮಗ 1ನೆಯ ಆಟೋ ದೊರೆಯಾದ. ಇವನು ಹಲವು ಪ್ರದೇಶಗಳನ್ನು ಗೆದ್ದು, 962ರಲ್ಲಿ ಪವಿತ್ರ ರೋಮನ್ ಸಮ್ರಾಟ ಪದವಿ ಪಡೆದ. ಸ್ಯಾಕ್ಸನ್ ಸಂತತಿಯ ಅನಂತರ ಪ್ರಶ.1024ರಲ್ಲಿ ರೈನ್ ಫ್ರ್ಯಾಂಕಿಷ್ ಮನೆತನದ 2ನೆಯ ಕಾನ್ರಾಡನ ಆಳ್ವಿಕೆ ಪ್ರಾರಂಭವಾಯಿತು. ಈ ಸಂತತಿಯ ಮೂರನೆಯ ಹೆನ್ರಿ ಸಮ್ರಾಟನಾಗಿದ್ದಾಗ ಚರ್ಚ್ ಮತ್ತು ಚಕ್ರವರ್ತಿಯ ಮಧ್ಯೆ ಅಧಿಕಾರದ ಪೈಪೋಟಿ ಪ್ರಾರಂಭವಾಗಿ 4ನೆಯ ಹೆನ್ರಿಯ ಕಾಲದಲ್ಲಿ ಉತ್ಕಟವಾಯಿತು. 4ನೆಯ ಹೆನ್ರಿಯ ಕಾಲದಲ್ಲಿ ಆರಂಭದಲ್ಲಿ ಆಳ್ವಿಕೆ ಸಡಿಲಗೊಂಡು ಅನೇಕ ಜಮೀನ್ದಾರರು ಸ್ವತಂತ್ರರಂತೆ ವರ್ತಿಸತೊಡಗಿದರು. ಪೇಪಲ್ ಪ್ರತಿರೋಧ ಪ್ರಬಲವಾಗಿತ್ತು. ಆದರೆ ಅವನು ಸಾಕಷ್ಟು ವಯಸ್ಕನಾದ ಅನಂತರ ದಕ್ಷಿಣ ಜರ್ಮನಿ ಪ್ರದೇಶದ ನೋಬಲುಗಳ ಸಹಕಾರದಿಂದ ಕ್ರಮೇಣ ತನ್ನ ಆಡಳಿತವನ್ನು ಭದ್ರಪಡಿಸಲು ಉಪಕ್ರಮಿಸಿದ.

ಷಾರ್ಲ್‌ಮೇನ್ ಮಹಾಶಯ (742–814) ಒಂದು ಹಳೆಯ ತೈಲಚಿತ್ರ

1073ರ ವೇಳೆಗೆ ಸ್ಯಾಕ್ಸನ್ ನೋಬಲುಗಳು ಅಸಂತುಷ್ಟರಾಗಿ ದಂಗೆಯೆದ್ದರು. ಹೆನ್ರಿಯು ದಕ್ಷಿಣ ಜರ್ಮನಿ ಪ್ರದೇಶದ ಮುಖಂಡರ ನಾಯಕತ್ವದಿಂದ ದಂಗೆಯನ್ನಡಗಿಸಲು ಕಾರ್ಯೋನ್ಮುಖನಾದ. 1075ರ ವೇಳೆಗೆ ಅದನ್ನಡಗಿಸಿದ. ಅನಂತರ ಸ್ವಲ್ಪ ಕಾಲದಲ್ಲಿ ಪೋಪ್ 7ನೆಯ ಗ್ರಿಗರಿಗೂ ಹೆನ್ರಿಗೂ ಹಗೆತನ ಪ್ರಾರಂಭವಾಗಿ ಗ್ರಿಗರಿಯ ಅಪ್ಪಣೆಯ ಮೇರೆಗೆ ಹೆನ್ರಿಗೆ ದಕ್ಷಿಣ ಜರ್ಮನಿಯ ನೋಬಲಿನ ಸಹಕಾರ ತಪ್ಪಿತು. ಹೆನ್ರಿಯ ಮೇಲೆ ಪೋಪ್ ಬಹಿಷ್ಕಾರ ಘೋಷಿಸಿದನಲ್ಲದೆ ರೈನ್‌ಫೀಲ್ಡನ್ನಿನ ರೂಡಾಲ್ಫನನ್ನು ರಾಜನೆಂಬುದಾಗಿ ಘೋಷಿಸಿದ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸ್ಯಾಕ್ಸನ್ ಮತ್ತು ಜರ್ಮನ್ ನೋಬಲ್‌ಗಳು ಪರಸ್ಪರ ವಿರೋಧಿಸುವಂತೆ ಹೆನ್ರಿ ಹಂಚಿಕೆ ಹೂಡಿದ. ಹೆನ್ರಿ ಮತ್ತು ಪೋಪ್ ಇವರ ಹಿಂಬಾಲಕರ ಮಧ್ಯ ಸುಮಾರು 20 ವರ್ಷಗಳ ಕಾಲ ಘರ್ಷಣೆ ಮುಂದುವರಿಯಿತು. ಈ ಮಧ್ಯೆ 1080ರಲ್ಲಿ ರೂಡಾಲ್ಫ್ ಮರಣ ಹೊಂದಿದ. ಜರ್ಮನರು ಈ ಘರ್ಷಣೆಗಳಿಂದ ಬೇಸತ್ತು ಹೆನ್ರಿಯ ಪಕ್ಷವನ್ನೇ ವಹಿಸಿದರು. ಕಾಲಕ್ರಮದಲ್ಲಿ ಜರ್ಮನಿಯ ಮಂಡಲೇಶ್ವರರು ಪ್ರಬಲರಾಗಿ ಚಕ್ರವರ್ತಿ ಮತ್ತು ಪೋಪನ ಮಧ್ಯವರ್ತಿಗಳಾದರು. ಹೆನ್ರಿ ಮತ್ತು ಪೋಪನ ಮಧ್ಯೆ ತಲೆದೋರಿದ್ದ ವೈಮನಸ್ಯ ಪರಸ್ಪರ ಒಡಂಬಡಿಕೆಯಿಂದ ಕೊನೆಗೊಂಡಿತು. ನಾಲ್ಕನೆಯ ಹೆನ್ರಿಯ ಉತ್ತರಾಧಿಕಾರಿಯಾದ 5ನೆಯ ಹೆನ್ರಿ ಮಕ್ಕಳಿಲ್ಲದೆ ಮರಣ ಹೊಂದಿದ. ಅನಂತರ ಪೋಪ್ ಮತ್ತು ಚಕ್ರವರ್ತಿಯ ಮಧ್ಯೆ ನಡೆಯುತ್ತಿದ್ದ ವಿವಾದ ಪೂರ್ಣವಾಗಿ ಕೊನೆಗೊಂಡಿತು. ಹೆನ್ರಿಯ ರಕ್ತಸಂಬಂಧಿಯಾದ ಹೋಯೆನ್ ಷ್ಟೌಫಿನ್ ಮನೆತನ ಅಧಿಕಾರಕ್ಕೆ ಬಂತು.

4ನೆಯ ಹೆನ್ರಿ (1050–1106)

ಎರಡನೆಯ ಹೆನ್ರಿಯ ಸಹೋದರಿಯಾಗಿದ್ದ ಆಗ್ನೆಸಳ ಮಗನೂ ಸ್ವೇಬಿಯದ ಡ್ಯೂಕನೂ ಆದ ಫ್ರೆಡರಿಕ್ ಹೋಯೆನಾಷ್ಟೌಫಿನ್ ಸಂತತಿಯ ಮೊಟ್ಟಮೊದಲನೆಯ ರಾಜ. ಈ ಸಂತತಿ 1138ರಿಂದ 1254ರವರೆಗೆ ಆಳಿತು. ಈ ಸಂತತಿಯ ಅರಸರಲ್ಲಿ ಒಂದನೆಯ ಬಾರ್ಬರಾಸ ಮುಖ್ಯ. ಇವನು 1152ರಿಂದ 1190ರವರೆಗೆ ಆಳ್ವಿಕೆ ನಡೆಸಿದ. 12–13ನೆಯ ಶತಮಾನಗಳಲ್ಲಿ ಜರ್ಮನ್ ಗಡಿಗಳ ವಿಸ್ತರಣೆ ಮತ್ತು ವಸಾಹತು ಸ್ಥಾಪನೆಯ ಕಾರ್ಯದಲ್ಲಿ ಬಾರ್ಬರಾಸ ದೊರೆಗಳೂ ಡ್ಯೂಕರೂ ತೊಡಗಿದ್ದರು. ಹೋಯೆನ್‌ಷ್ಟೌಫಿನ್ ಸಂತತಿಯ ಕೊನೆಯ ವೇಳೆಗೆ ಆಡಳಿತ ದುರ್ಬಲಗೊಂಡಿತು. ನಾಲ್ಕನೆಯ ಕಾನ್ರಾಡ್ ಈ ಸಂತತಿಯ ಕೊನೆಯ ದೊರೆ. 1250ರ ವೇಳೆಗೆ ಜರ್ಮನಿಯ ಆಡಳಿತ ವಲಯಗಳು ಅಸ್ತಿತ್ವಕ್ಕೆ ಬಂದುವು. ಕಾನ್ರಾಡನ ಮರಣಾನಂತರ 1273ರವರೆಗೂ ಈ ಪರಿಸ್ಥಿತಿ ಮುಂದುವರಿಯಿತು. ಆ ಸಮಯದಲ್ಲಿ ಹ್ಯಾನ್ಸಿಯಾಟಿಕ್ ಮತ್ತು ರೆನಿಷ್ ಲೀಗುಗಳು ಸ್ಥಾಪನೆಯಾದುವು. ಅನೂಚಾನವಾಗಿ ಬಂದಿದ್ದ ಪದ್ಧತಿಯ ಪ್ರಕಾರ ಏಳು ಮಂದಿ ಚುನಾಯಕರು ಕೂಡಿ ಚಕ್ರವರ್ತಿಯನ್ನು ಆರಿಸಬೇಕಾಗಿತ್ತು. ಜರ್ಮನಿಯಲ್ಲಿ ತಲೆದೋರಿದ್ದ ರಾಜಕೀಯ ಹಾಗೂ ಧಾರ್ಮಿಕ ಅರಾಜಕತೆಯನ್ನು ಕೊನೆಗಾಣಿಸಲು ಪೋಪ್ 10ನೆಯ ಗ್ರಿಗರಿ 1273ರಲ್ಲಿ ನಿರ್ಧರಿಸಿದ. ಪೋಪನ ಆದೇಶದ ಮೇರೆಗೆ ಚುನಾಯಕರು ಹ್ಯಾಬ್ಸ್ ಬರ್ಗಿನ ಕೌಂಟ್ ರೂಡಾಲ್ಫನನ್ನು ಚಕ್ರವರ್ತಿಯಾಗಿ ಆರಿಸಿದರು.

ಹ್ಯಾಬ್ಸ್‌ಬರ್ಗ್ ಸಂತತಿಯ ಅನೇಕ ಚಕ್ರವರ್ತಿಗಳು ಸಮರ್ಥರಾಗಿ ಆಳ್ವಿಕೆ ನಡೆಸಿದರು. ಒಂದನೆಯ ರೂಡಾಲ್ಫ್ ಅರಾಜಕತೆಯನ್ನು ಹೋಗಲಾಡಿಸಿ ಆಡಳಿತವನ್ನು ಭದ್ರಗೊಳಿಸಿದ. ಅವನು ಅನೇಕ ಸಣ್ಣಪುಟ್ಟ ಯುದ್ಧಗಳಲ್ಲೂ ಜಯಗಳಿಸಿ ತನ್ನ ಅಧಿಕಾರ ವಿಸ್ತರಿಸಿಕೊಂಡ. ತನ್ನ ಮಕ್ಕಳಾದ ಆಲ್ಬರ್ಟ್ ಮತ್ತು ರೂಡಾಲ್ಫರನ್ನು ಬೇರೆ ಬೇರೆ ಪ್ರದೇಶಗಳ ಡ್ಯೂಕರನ್ನಾಗಿ ನೇಮಿಸಿದ. ಅನಂತರ ಅಧಿಕಾರಾರೂಢನಾದ ಆಲ್ಬರ್ಟ್ ರೂಡಾಲ್ಫನ ನೀತಿಯನ್ನೇ ಮುಂದುವರಿಸಿದ. ಅನುಕ್ರಮವಾಗಿ ಅನೇಕರು ಆಳ್ವಿಕೆ ನಡೆಸಿದ ಮೇಲೆ 1437ರಲ್ಲಿ ಆಸ್ಟ್ರಿಯದ 2ನೆಯ ಆಲ್ಬರ್ಟನನ್ನು ಚಕ್ರವರ್ತಿಯಾಗಿ ಚುನಾಯಕರು ಆರಿಸಿದರು. 1493ರಲ್ಲಿ ಒಂದನೆಯ ಮಾಕ್ಸಿಮಿಲಿಯನ್ ಚಕ್ರವರ್ತಿಯಾದ. ಅವನ ಅಧಿಕಾರ ಹಿಂದಿನ ಚಕ್ರವರ್ತಿಗಳ ಅಧಿಕಾರಕ್ಕಿಂತ ವಿಶೇಷವಾಗಿ ವ್ಯಾಪಕವಾಗಿತ್ತು. ಮಾಕ್ಸಿಮಿಲಿಯನ್ ದಕ್ಷನೂ ಆಡಳಿತಚತುರನೂ ಆಗಿದ್ದ. ಅವನ ಕಾಲದಲ್ಲಿ ಸಂವಿಧಾನಕ್ಕೆ ಸಂಬಂಧಿಸಿದ ಸುಧಾರಣೆಗಳೂ ಆಚರಣೆಗೆ ಬಂದುವು. ಆಧುನಿಕ ಜರ್ಮನಿಯ ಚರಿತ್ರೆ ಪ್ರಾರಂಭವಾಯಿತು. ಫ್ರಾನ್ಸಿನೊಡನೆ ನಡೆದ ಗಡಿ ಘರ್ಷಣೆಯಲ್ಲಿ

ಮ್ಯಾಕ್ಸಿಮಿಲಿಯನ್ ವಿಜಯಿಯಾದ. ಊಳಿಗಮಾನ್ಯ ಪ್ರಭುಗಳು ಮತ್ತು ಕೇಂದ್ರದ ಅಧಿಕಾರಕ್ಕೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳಾದುವು. ವ್ಯವಸಾಯ, ವ್ಯಾಪಾರ ಅಭಿವೃದ್ಧಿ ಹೊಂದಿದುವು. ಪಟ್ಟಣಗಳು ಬೆಳೆದುವು. ಕೇಂದ್ರದ ಅಧಿಕಾರವನ್ನು ಯಶಸ್ವಿಯಾಗಿ ಚಲಾಯಿಸುವುದು ಸುಲಭವಾಗುವಂತೆ ಸಾಮ್ರಾಜ್ಯವನ್ನು ಹತ್ತು ವಲಯಗಳಾಗಿ ವಿಂಗಡಿಸಲಾಯಿತು. ಮಿಗಿಲಾಗಿ ಮಧ್ಯಯುಗ ಕೊನೆಗೊಂಡು ಆಧುನಿಕ ಯುಗವನ್ನು ಬರಮಾಡಿಕೊಳ್ಳಲು ಸಿದ್ಧತೆ ಎಂಬಂತೆ ಧಾರ್ಮಿಕ ಸುಧಾರಣಾ ಚಳವಳಿ ಪ್ರಾರಂಭವಾಗಿತ್ತು. 1519ರಲ್ಲಿ 1ನೆಯ ಮ್ಯಾಕ್ಸಿಮಿಲಿಯನ್ ಮರಣ ಹೊಂದಿ ಚಾರ್ಲ್ಸ್ ಅಧಿಕಾರಕ್ಕೆ ಬಂದ.

ಐದನೆಯ ಚಾರ್ಲ್ಸ್ ಪವಿತ್ರ ರೋಮನ್ ಚಕ್ರವರ್ತಿಯಾದ ವೇಳೆಗೆ ಜರ್ಮನಿಯಲ್ಲಿ ಮತ ಸುಧಾರಣಾ ಚಳವಳಿ ಪ್ರಾರಂಭವಾಗಿತ್ತು. ಜರ್ಮನಿಯ ಚುನಾಯಕರು ಮಾರ್ಟಿನ್ ಲೂಥರನ ಪರವಾಗಿದ್ದರು. 1520ರ ವೇಳೆಗೆ ಪೋಪ್ 10ನೆಯ ಲಿಯೋ ಲೂಥರನ ಮೇಲೆ ವಿಧಿಸಿದ್ದ ಬಹಿಷ್ಕಾರದ ಆದೇಶ ಜರ್ಮನಿಯಲ್ಲಿ ಪ್ರಸಾರವಾಯಿತು. ಆದರೆ ಚಾರ್ಲ್ಸ್‌ನ ರಾಜಕೀಯ ನೀತಿ ಅವನು ಪೋಪನನ್ನು ವಿರೋಧಿಸಲು ಸಹಕಾರಿಯಾಗಿರಲಿಲ್ಲ. ಚಾರ್ಲ್ಸ್ ಸ್ಪೇನ್, ನೇಪಲ್ಸ್, ಸಿಸಿಲಿ ಮತ್ತು ಸಾರ್ಡಿನಿಯದ ರಾಜನೂ ನೆದರ್‌ಲೆಂಡ್ಸ್‌ನ ಪ್ರಭುವೂ ಬರ್ಗಂಡಿ ಮತ್ತು ಆಸ್ಟ್ರಿಯ ಹಾಲೆಂಡುಗಳ ಕೌಂಟನೂ ಆಗಿದ್ದ. ಅವನ ವಿಶಾಲ ಸಾಮ್ರಾಜ್ಯದ ಪ್ರಜೆಗಳು ರೋಮನ್ ಕೆಥೊಲಿಕ್ ಪಂಥದ ಒಲವಿನಿಂದ ಕೂಡಿದ್ದರು. ಮಿಗಿಲಾಗಿ ಚಾರ್ಲ್ಸ್ ಇಟಲಿಯನ್ನೂ ತನ್ನ ಅಧಿಕಾರಕ್ಕೊಳಪಡಿಸಿಕೊಳ್ಳಲು ಕಾತರನಾಗಿದ್ದ. ಈ ಕಾರಣಗಳಿಂದ ಪೋಪನ ವಿರೋಧ ಕಟ್ಟಿಕೊಳ್ಳಲು ಅವನು ಸಿದ್ಧನಿರಲಿಲ್ಲ. ಚಾರ್ಲ್ಸ್ 1521ರಲ್ಲಿ ಮತೀಯ ಒಡಕನ್ನು ಸರಿಪಡಿಸಲು ವಾರ್ಮ್ಸ್ ಎಂಬಲ್ಲಿ ಮುಖಂಡರ ಸಭೆ ಸೇರಿಸಿದ. ಚುನಾಯಕರೂ ಬಹುಮಂದಿ ಜರ್ಮನ್ ಮುಖಂಡರೂ ಕೆಥೊಲಿಕ್ ಚರ್ಚಿನ ನೀತಿಯನ್ನು ಉಗ್ರವಾಗಿ ಟೀಕಿಸಿ ವಿರೋಧ ವ್ಯಕ್ತಪಡಿಸಿದರು. ಅಂದಿನಿಂದ ಪ್ರಾಟೆಸ್ಟಂಟ್ ಪಂಥವೆಂದು ಹೆಸರಾದ ಸುಧಾರಣಾ ಚಳವಳಿ ತೀವ್ರವಾಗಿ ವ್ಯಾಪಿಸಿತು. ಜರ್ಮನಿಯಲ್ಲಿ ಚಳವಳಿ ಉಗ್ರರೂಪ ತಾಳಿತು. ಜರ್ಮನ್ ಚರ್ಚಿನವರು ಪೋಪನ ಹಾಗೂ ರೋಮಿನ ಸಂಬಂಧವನ್ನು ತ್ಯಜಿಸಿದರು. ಸ್ಯಾಕ್ಸನಿಯ ಚುನಾಯಕ ಲೂಥರನಿಗೆ ರಕ್ಷಣೆಯೊದಗಿಸಿದ. ಚಾರ್ಲ್ಸ್ ವಿವಾದವನ್ನು ಬಗೆಹರಿಸಲು ಸಾಧ್ಯವಾಗಲಿಲ್ಲ. ಈ ಮಧ್ಯೆ ಅವನು ಫ್ರಾನ್ಸಿನೊಡನೆ ಯುದ್ಧದಲ್ಲಿ ತೊಡಗಬೇಕಾಯಿತು.

1574ರಲ್ಲಿ ಜರ್ಮನಿಯಲ್ಲಿ ರೈತರು ಬಂಡೆದ್ದರು. ಈ ಬಂಡಾಯ ಹಿಂಸಾತ್ಮಕವಾಯಿತು. ಆದ್ದರಿಂದ ದಂಗೆಕೋರರನ್ನು ಜರ್ಮನಿಯ ರಾಜರು ಕ್ರೂರ ರೀತಿಯಿಂದ ಅಡಗಿಸಿದರು. ಪ್ರಾಟೆಸ್ಟಂಟರನ್ನು ದಮನ ಮಾಡುವ ನೀತಿಯನ್ನು ಚಾರ್ಲ್ಸ್ ಮುಂದುವರಿಸಿದ. 1546ರಿಂದ 1555ರವರೆಗೆ ಅಂತರ್ಯುದ್ಧ ನಡೆಯಿತು. ಚಾರ್ಲ್ಸ್‌ನ ಮೇಲಿನ ಹಗೆತನವನ್ನು ತೀರಿಸಿಕೊಳ್ಳಲು ಫ್ರಾನ್ಸಿನ ರಾಜ ಜರ್ಮನಿಯ ಪ್ರಾಟೆಸ್ಟಂಟರಿಗೆ ಸಹಾಯ ಮಾಡಿದ. ಪ್ರಾಟೆಸ್ಟಂಟರ ಪ್ರಬಲ ವಿರೋಧವನ್ನು ಚಾರ್ಲ್ಸ್ ದಮನ ಮಾಡಲಾಗಲಿಲ್ಲ. ಕೊನೆಗೆ 1555ರಲ್ಲಿ ನಡೆದ ಆಗ್ಸ್‌ಬರ್ಗ್ ಸಭೆಯಲ್ಲಿ ಚಾರ್ಲ್ಸ್ ಜರ್ಮನಿಯ ಪ್ರಾಟೆಸ್ಟಂಟರಿಗೆ ಹಲವಾರು ಸವಲತ್ತುಗಳನ್ನು ನೀಡಬೇಕಾಯಿತು. ಜರ್ಮನಿಯ ರಾಜರ ಮತೀಯ ಸ್ವಾತಂತ್ರ್ಯವನ್ನು ಅವನು ಒಪ್ಪಿಕೊಂಡ. ಅವರು ತಮ್ಮ ತಮ್ಮ ಪಂಥವನ್ನು ಪ್ರಜೆಗಳ ಮೇಲೆ ಹೇರಬಹುದೆಂದೂ ವಿರೋಧಿಸಿದವರನ್ನು ತಮ್ಮ ರಾಜ್ಯಗಳಿಂದ ಹೊರದೂಡಬಹುದೆಂದೂ ಒಪ್ಪಂದವಾಯಿತು. ಜರ್ಮನಿ ಪೂರ್ಣವಾಗಿ ಪ್ರಾಟೆಸ್ಟಂಟ್ ಪಂಥವನ್ನು ಅವಲಂಬಿಸಿತು.

**5ನೆಯ ಚಾರ್ಲ್ಸ್ (ಆಳ್ವಿಕೆ 1519–1556)**

ಐದನೆಯ ಚಾರ್ಲ್ಸ್‌ನ ಮರಣಾನಂತರ ಅನುಕ್ರಮವಾಗಿ ಆಸ್ಟ್ರಿಯದ ಸಾಮ್ರಾಟರಾದ 1ನೆಯ ಫರ್ಡಿನೆಂಡ್ ಮತ್ತು 2ನೆಯ ಮಾಕ್ಸಿಮಿಲಿಯನ್ ಚಕ್ರವರ್ತಿಗಳು ಸಂಯಮದಿಂದ ಕೂಡಿದ ಮತನೀತಿ ಮುಂದುವರಿಸಿದರು. ಅನಂತರ ಚಕ್ರವರ್ತಿಯಾದ ಎರಡನೆಯ ರೂಡಾಲ್ಫ್ (1576–1612) ವಿಶೇಷವಾಗಿ ಕ್ಯಾತೊಲಿಕ್ ಪಂಥದ ಪರವಾಗಿದ್ದ. ರೂಡಾಲ್ಫ್‌ನ ಪ್ರಾಟೆಸ್ಟಂಟ್ ದಮನ ನೀತಿಯಿಂದ ಜರ್ಮನಿಯ ಪ್ರಾಟೆಸ್ಟಂಟ್ ರಾಜ್ಯಗಳೆಲ್ಲ ಒಂದಾಗಿ ಇವಾಂಜಲಿಕಲ್ ಯೂನಿಯನ್ ಎಂಬ ಒಕ್ಕೂಟ ರಚಿಸಿಕೊಂಡುವು. ಈ ಒಕ್ಕೂಟಕ್ಕೆ ಪ್ರತಿಯಾಗಿ ಸಾಮ್ರಾಜ್ಯದ ಕ್ಯಾತೊಲಿಕ್ ರಾಜ್ಯಗಳು ಬವೇರಿಯದ ಮ್ಯಾಕ್ಸಿಮಿಲಿಯನನ ನಾಯಕತ್ವದಲ್ಲಿ ಹೋಲಿ ಲೀಗ್ ಎಂಬ ಒಕ್ಕೂಟವನ್ನು 1609ರಲ್ಲಿ ಸ್ಥಾಪಿಸಿಕೊಂಡುವು.

**ಫ್ರೆಡರಿಕ್ ಬಾರ್ಬರೋಸ (1123–1190)**

ಈ ಎರಡು ಬಣಗಳು ಪರಸ್ಪರ ಸೆಣಸಾಟದಲ್ಲಿ ತೊಡಗಲು ಬಹುಕಾಲ ಹಿಡಿಯಲಿಲ್ಲ. ಒಂದು ಸಣ್ಣ ಘಟನೆಯಿಂದಾಗಿ ಎರಡು ಬಣಗಳೂ ಯುದ್ಧದಲ್ಲಿ ತೊಡಗಿದುವು. 1618ರಲ್ಲಿ ಮೂವತ್ತು ವರ್ಷಗಳ ಯುದ್ಧ, ಆಸ್ಟ್ರಿಯ ಮತ್ತು ಫ್ರಾನ್ಸುಗಳು ಯುರೋಪು ಖಂಡದಲ್ಲಿ ತಮ್ಮ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳುವುದಕ್ಕಾಗಿ ನಡೆದ ಯುದ್ಧವಾಗಿ ಪರ್ಯವಸಾನಗೊಂಡಿತು. ಫ್ರಾನ್ಸ್ ಮತ್ತು ಸ್ವೀಡನುಗಳ ಸೈನ್ಯಗಳಿಂದ ಆಸ್ಟ್ರಿಯದ ಸೈನ್ಯ ಪರಾಭವಗೊಂಡಿತು. ಆಸ್ಟ್ರಿಯದ ಚಕ್ರವರ್ತಿ ಎರಡನೆಯ ಫರ್ಡಿನೆಂಡಿನ ಮರಣಾನಂತರ 1637ರಲ್ಲಿ 3ನೆಯ ಫರ್ಡಿನೆಂಡ್ ಸಿಂಹಾಸನಕ್ಕೆ ಬಂದ. ಪರಾಭವದ ಮೇಲೆ ಪರಾಭವವನ್ನು ಅನುಭವಿಸಿದ. 3ನೆಯ ಫರ್ಡಿನೆಂಡ್ ಕೊನೆಗೆ 1648ರಲ್ಲಿ ಸಂಧಾನಕ್ಕೆ ಒಡಂಬಡಬೇಕಾಯಿತು. ವೆಸ್ಟ್‌ಫೇಲಿಯ ಕೌಲಿನಿಂದ ಯುದ್ಧ ಕೊನೆಗೊಂಡಿತು. ಯುರೋಪಿನಲ್ಲಿ ಆಸ್ಟ್ರಿಯದ ಪ್ರಭಾವ ಅವನತಿ ಹೊಂದಿತು. ಆಸ್ಟ್ರಿಯದ ಚಕ್ರವರ್ತಿಗಳು ಜರ್ಮನಿಯ ಪ್ರಾಟೆಸ್ಟಂಟ್ ರಾಜರನ್ನು ದಮನ ಮಾಡಲಾಗಲಿಲ್ಲ. ಮತದ ಹೆಸರಿನಲ್ಲಿ ನೂರಾರು ವರ್ಷಗಳ ಕಾಲ ಕಚ್ಚಾಟ ಕೊನೆಗೊಂಡಿತು. ಈ ಯುದ್ಧಗಳ ದೆಸೆಯಿಂದ ಜರ್ಮನಿ ವಿಶೇಷ ಹಾನಿಗೊಳಗಾಯಿತು. ವೆಸ್ಟ್‌ಫೇಲಿಯ ಕೌಲಿನ ಅನೇಕ ರಾಜ್ಯಗಳನ್ನೊಳಗೊಂಡ ಭೌಗೋಳಿಕ ಪ್ರದೇಶವಾಯಿತು. ಬವೇರಿಯದ ಡ್ಯೂಕನನ್ನು ಚುನಾಯಕ ಪದವಿಗೇರಿಸಲಾಯಿತು. ಬ್ರ್ಯಾಂಡೆನ್‌ಬರ್ಗ್ ಗಡಿಗಳನ್ನು ವಿಸ್ತಾರಗೊಳಿಸಲಾಯಿತು. ಬ್ರ್ಯಾಂಡೆನ್‌ಬರ್ಗ್ ಪ್ರಷ್ಯ ರಾಜ್ಯವಾಗಿ ಜರ್ಮನಿಯ ಏಕತೆಯನ್ನು ಸಾಧಿಸಲು ಸಹಕಾರಿಯಾಯಿತು.

1640ರಿಂದ 1688ರವರೆಗೆ ಬ್ರ್ಯಾಂಡೆನ್‌ಬರ್ಗ್‌ನ ಚುನಾಯಕನಾಗಿದ್ದ ಫ್ರೆಡರಿಕ್ ವಿಲಿಯಮ್, ಬ್ರ್ಯಾಂಡೆನ್‌ಬರ್ಗ್‌ನ್ನು ಪ್ರಬಲವಾದ ಪ್ರಷ್ಯ ರಾಜ್ಯವಾಗಿ ಮಾರ್ಪಡಿಸಿದ. ಅದುವರೆಗೂ ಮೂರು ಬೇರೆ ಬೇರೆ ವಲಯಗಳಾಗಿದ್ದ ಬ್ರ್ಯಾಂಡೆನ್‌ಬರ್ಗ್, ಕ್ಲೆವ್ಸ್ ಮತ್ತು ಪ್ರಷ್ಯಗಳನ್ನು ಅವನು ಐಕ್ಯಗೊಳಿಸಿ ಬಲವಾದ ಸೈನ್ಯ ಕಟ್ಟಿ ಈ ರಾಜ್ಯ ನಿರ್ಮಿಸಿದ. ಅವನ ಉತ್ತರಾಧಿಕಾರಿಯಾದ ಚುನಾಯಕ 3ನೆಯ ಫ್ರೆಡರಿಕನ (1688–1713) ಕಾಲದಲ್ಲಿ ಪ್ರಷ್ಯ ಸ್ವತಂತ್ರ ರಾಜ್ಯದ ಸ್ಥಾನಮಾನ ಪಡೆಯಿತು. ಅವನ ಮಗನೂ ಪ್ರಷ್ಯದ ರಾಜನೂ ಆದ 1ನೆಯ ಫ್ರೆಡರಿಕ್ ವಿಲಿಯಮ್ ಆಡಳಿತವನ್ನೂ ಹಣಕಾಸಿನ ಸ್ಥಿತಿಯನ್ನೂ ರಕ್ಷಣಾಪಡೆಯನ್ನೂ

ಮತ್ತಷ್ಟು ಸುಧಾರಿಸಿ ಪ್ರಷ್ಯವನ್ನು ಸಂಘಟಿತ ಪ್ರಬಲ ರಾಜ್ಯವನ್ನಾಗಿ ಮಾರ್ಪಡಿಸಿದ. ಫ್ರೆಡರಿಕ್ ವಿಲಿಯಮನ ಮರಣಾನಂತರ ಅವನ ಮಗ 2ನೆಯ ಫ್ರೆಡರಿಕ್ ಪ್ರಷ್ಯದ ರಾಜನಾಗಿ 1740 ರಿಂದ 1786ರವರೆಗೆ ಆಳಿದ. ಇವನು ಫ್ರೆಡರಿಕ್ ಮಹಾಶಯ ಎಂಬುದಾಗಿ ಇತಿಹಾಸದಲ್ಲಿ ಪ್ರಸಿದ್ಧನಾಗಿದ್ದಾನೆ.

ಪ್ರಷ್ಯದ ಫ್ರೆಡರಿಕನೂ ಆಸ್ಟ್ರಿಯದ ಮರಿಯ ತೆರೇಸಳೂ ಸಮಕಾಲೀನರು. ಅವರಿಬ್ಬರೂ ತಮ್ಮ ತಮ್ಮ ರಾಷ್ಟ್ರಗಳ ಪ್ರಜೆಗಳನ್ನು ಸಮಾನವಾಗಿ ಪ್ರೀತಿಸುತ್ತಿದ್ದರು. ಇಬ್ಬರೂ ಸಮರ್ಥರು. ಇಬ್ಬರಲ್ಲೂ ಪರಸ್ಪರ ಹಗೆತನ. ಫ್ರೆಡರಿಕ್ ತನ್ನ ಪೂರ್ವಿಕರ ಹಕ್ಕನ್ನು ಎತ್ತಿ ಹಿಡಿದು ಸೈಲೇಷಿಯ ತನಗೆ ಸೇರಬೇಕೆಂದು ವಾದಿಸಿ ಆಸ್ಟ್ರಿಯದ ಮೇಲೆ ಯುದ್ಧ ಹೂಡಿ ಸೈಲೇಷಿಯವನ್ನು ಆಕ್ರಮಿಸಿದ. ಆಸ್ಟ್ರಿಯನ್ ಉತ್ತರಾಧಿಕಾರ ಯುದ್ಧ ಪ್ರಾರಂಭವಾಯಿತು. ಪ್ರಷ್ಯ, ಫ್ರಾನ್ಸ್, ಸ್ಪೇನ್ ಮತ್ತು ಬವೇರಿಯಗಳು ಒಂದು ಪಕ್ಷವಾಗಿಯೂ ಆಸ್ಟ್ರಿಯ, ಗ್ರೇಟ್ ಬ್ರಿಟನ್ ಮತ್ತು ಹಾಲೆಂಡುಗಳು ಮತ್ತೊಂದು ಪಕ್ಷವಾಗಿಯೂ ನಿಂತು ಹೋರಾಡಿದವು. ಆಸ್ಟ್ರಿಯದ ಸೈನ್ಯಗಳನ್ನು ಅನೇಕ ಯುದ್ಧಗಳಲ್ಲಿ ಫ್ರೆಡರಿಕ್ ಸೋಲಿಸಿದ. ಮರಿಯ ತೆರೇಸ ಸೈಲೇಷಿಯವನ್ನು ಫ್ರೆಡರಿಕನಿಗೆ ಒಪ್ಪಿಸಬೇಕಾಯಿತು. ಮರಿಯ ತೆರೇಸ ಆಸ್ಟ್ರಿಯ ಸಿಂಹಾಸನದ ಹಕ್ಕುದಾರಳೆಂದು ತೀರ್ಮಾನವಾಯಿತು. ಅನಂತರವೂ ಪ್ರಷ್ಯ ಮತ್ತು ಆಸ್ಟ್ರಿಯಗಳ ಹಗೆತನ ಮುಂದುವರಿಯಿತು. ಆ ವೇಳೆಗೆ ಏಳು ವರ್ಷಗಳ (1756–63) ಯುದ್ಧ ಪ್ರಾರಂಭವಾಯಿತು. ಆಸ್ಟ್ರಿಯ, ಫ್ರಾನ್ಸ್, ರಷ್ಯ, ಸ್ಯಾಕ್ಸನಿ, ಸ್ವೀಡನ್ ಮತ್ತು ಪೋಲಂಡುಗಳು ಒಂದಾಗಿ ಪ್ರಷ್ಯದ ಪ್ರಭಾವವನ್ನು ಮುರಿಯಲು ಮುಂದಾದುವು. ಇಂಗ್ಲೆಂಡ್ ಮಾತ್ರ ಫ್ರೆಡರಿಕನಿಗೆ ಸಹಾಯ ಮಾಡಿತು. ಅನೇಕ ಯುದ್ಧಗಳಲ್ಲಿ ಫ್ರೆಡರಿಕ್ ಸೋಲನ್ನನುಭವಿಸಿದರೂ ಅವನು ಸ್ಥೈರ್ಯಗೆಡದೆ ಛಲದಿಂದ ಯುದ್ಧಗಳನ್ನು ಮುಂದುವರಿಸಿದ. ಅವನು ಕಷ್ಟದ ಪರಿಸ್ಥಿತಿಯಲ್ಲಿದ್ದಾಗ ಪ್ರಷ್ಯದ ಪ್ರಬಲ ವೈರಿ ರಷ್ಯದ ಸ್ಸಾರಿನ ಎಲಿಜಬೆತ್ ಮರಣ ಹೊಂದಿದಳು. ಅಲ್ಲಿ ಪೀಟರ್ ಅಧಿಕಾರಕ್ಕೆ ಬಂದ (1762). ರಷ್ಯದ ವಿರೋಧ ನಿಂತಿತು. ಕ್ರಮೇಣ ಫ್ರೆಡರಿಕ್ ಚೇತರಿಸಿಕೊಂಡು ಆಸ್ಟ್ರಿಯದ ಸೈನ್ಯಗಳನ್ನು ಹಿಮ್ಮೆಟ್ಟಿಸಲು ಸಮರ್ಥನಾದ. 1763ರ ಪ್ಯಾರಿಸ್ ಕೌಲಿನಿಂದ ಏಳು ವರ್ಷಗಳ ಯುದ್ಧ ಕೊನೆಗೊಂಡಿತು. ಈ ಯುದ್ಧದಲ್ಲೂ ಆಸ್ಟ್ರಿಯದ ಮುಖಭಂಗವಾಯಿತು. ಪ್ರಷ್ಯ ಆಸ್ಟ್ರಿಯದ ಜೊತೆ ಸರಿಸಮಾನವಾಗಿ ನಿಂತಿತು. ಯುರೋಪ್ ಖಂಡದಲ್ಲಿ ಪ್ರಷ್ಯದ ಸ್ಥಾನಮಾನಗಳು ಹೆಚ್ಚಿದುವು.

ಮರಿಯ ತೆರೇಸಳ ಮರಣಾನಂತರ 1780ರಲ್ಲಿ 2ನೆಯ ಜೋಸೆಫ್ ಆಸ್ಟ್ರಿಯದ ಸಾಮ್ರಾಟನಾದ. ಅವನು ಅನೇಕ ಆಂತರಿಕ ಸುಧಾರಣೆಗಳನ್ನು ಜಾರಿಗೆ ತಂದು ಆಸ್ಟ್ರಿಯದ ಸ್ಥಾನಮಾನಗಳನ್ನು ಹೆಚ್ಚಿಸಲು ಜರ್ಮನಿಯ ಹಲವು ಭಾಗಗಳ ಮೇಲೆ ಪುನಃ ಹತೋಟಿ ಸ್ಥಾಪಿಸಲು ಹವಣಿಸಿದ. ಜರ್ಮನಿಯ ರಾಜರು ಇದನ್ನು ವಿರೋಧಿಸಿದರು. ಫ್ರೆಡರಿಕ್ ಈ ಅವಕಾಶವನ್ನು ಉಪಯೋಗಿಸಿಕೊಂಡು 1785ರಲ್ಲಿ ಜರ್ಮನ್ ರಾಜರ ಲೀಗನ್ನು ಸ್ಥಾಪಿಸಿದ. ಪ್ರಷ್ಯ, ಸ್ಯಾಕ್ಸನಿ, ಹ್ಯಾನೋವರ್, ಸ್ಯಾಕ್ಸ್–ವೈಮಾರ್, ಬ್ರನ್ಸ್‌ವಿಕ್, ಬಾಡೆನ್, ಹೆಸ್–ಕ್ಯಾಸಲ್, ಮೆಕ್ಲೆನ್‌ಬರ್ಗ್, ಮೈಂಟ್ಸ್ ಮತ್ತು ಹಲವು ಸಣ್ಣಪುಟ್ಟ ರಾಜ್ಯಗಳು ಜರ್ಮನ್ ಲೀಗಿನ ಸದಸ್ಯ ರಾಜ್ಯಗಳಾದುವು. ಲೀಗಿನ ಸ್ಥಾಪನೆಯಿಂದ ಆಸ್ಟ್ರಿಯದ ಚಾರ್ಲ್ಸ್ ಜರ್ಮನಿಯ ಮೇಲೆ ತನ್ನ ಹತೋಟಿ ಸ್ಥಾಪಿಸುವ ಗುರಿಯನ್ನು ಕೈಬಿಡಬೇಕಾಯಿತು. ಈ ಲೀಗು ಮುಂಬರಲಿದ್ದ ಘಟನೆಗಳಿಗೆ ನಾಂದಿಯಾಯಿತು. ಈ ಲೀಗಿಗೆ ಸಂವಿಧಾನಾತ್ಮಕ ರೂಪವನ್ನು ಕೊಟ್ಟು ಇಡೀ ಜರ್ಮನಿಗೆ ಅನ್ವಯಿಸುವ ಕಾನೂನು, ಆರ್ಥಿಕನೀತಿ ಮತ್ತು ರಕ್ಷಣಾ ಬಲದ ಸ್ಥಾಪನೆಯನ್ನು ವೈಮಾರ್ ರಾಜ್ಯದ ಪ್ರಮುಖ ಆ ವೇಳೆಗಾಗಲೇ ಸೂಚಿಸಿದ. ಆದರೆ ಈ ಸೂಚನೆ ಆಗ ಅನುಮೋದಿತವಾಗಲಿಲ್ಲ. ಜರ್ಮನ್ ರಾಜರ ಲೀಗ್ ಸ್ಥಾಪನೆಯೇ ಫ್ರೆಡರಿಕನ ಕೊನೆಯ ಸಾಧನೆ. ಅವನು 1786ರಲ್ಲಿ ಮರಣ ಹೊಂದಿದ.

ಏಳು ವರ್ಷಗಳ ಯುದ್ಧಾನಂತರ ಫ್ರೆಡರಿಕ್ ಪ್ರಷ್ಯದ ಸರ್ವಾಂಗೀಣ ಪ್ರಗತಿಗೆ ತನ್ನ ಆಳ್ವಿಕೆಯ ಕಾಲವನ್ನು ಮೀಸಲಾಗಿಟ್ಟಿದ್ದ. ಜೌಗುಪ್ರದೇಶವನ್ನೂ ಅರಣ್ಯ ಪ್ರದೇಶವನ್ನೂ ವ್ಯವಸಾಯಯೋಗ್ಯ ಭೂಮಿಯಾಗಿ ಪರಿವರ್ತಿಸಿದ. ಕೈಗಾರಿಕೆಗಳನ್ನೂ ಬ್ಯಾಂಕುಗಳನ್ನೂ ಸ್ಥಾಪಿಸಿದ. ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ. ಕಾನೂನುಗಳನ್ನೂ ಸ್ಥಳೀಯ ಆಡಳಿತವನ್ನೂ ಸುಧಾರಿಸಿದ. ರಾಷ್ಟ್ರದ ಹುಟ್ಟುವಳಿಯನ್ನು ದ್ವಿಗುಣಗೊಳಿಸಿದ. ಮತವಿಚಾರಗಳಲ್ಲಿ ಉದಾರನೀತಿ ಜಾರಿಗೆ ಬಂತು. ಸಂಗೀತ, ಸಾಹಿತ್ಯಗಳ ಅನುರಾಗಿಯಾದ ಫ್ರೆಡರಿಕ್ ಯುರೋಪಿನ 18ನೆಯ ಶತಮಾನದ ಪ್ರತಿಭಾವಂತರಲ್ಲಿ ಅಗ್ರಗಣ್ಯನಾಗಿದ್ದ ವಾಲ್ಟೇರನನ್ನು ತನ್ನ ಆಸ್ಥಾನದಲ್ಲಿ ಸನ್ಮಾನಿಸಿದ. ಫ್ರೆಡರಿಕನ ಸಾಹಸ, ದೂರದೃಷ್ಟಿ, ಮತ್ತು ಸಾಧನೆಗಳಿಂದ ಜರ್ಮನಿಯಲ್ಲಿ ಆಸ್ಟ್ರಿಯದ ಪ್ರಭಾವ ಕೊನೆಗೊಂಡಿತು. ಜರ್ಮನರ ಮನಸ್ಸಿನ ಮೇಲೆ ಲೂತರನಂತೆ ಫ್ರೆಡರಿಕನೂ ಅಚ್ಚಳಿಯದ ಮುದ್ರೆಯನ್ನೊತ್ತಿದ.

ಆಸ್ಟ್ರಿಯದ ಚಕ್ರವರ್ತಿ ಎರಡನೆಯ ಜೋಸೆಫ್ 1790ರಲ್ಲಿ ಮರಣ ಹೊಂದಿದ. ಅನಂತರ ಅವನ ಸಹೋದರನಾದ 2ನೆಯ ಲೀಯೊಪೋಲ್ಡ್ ಚಕ್ರವರ್ತಿಯಾದ. ದೂರದೃಷ್ಟಿಯವನಾದ ಲೀಯೊಪೋಲ್ಡ್ ಜರ್ಮನ್ ರಾಜನೊಡನೆ ಘರ್ಷಣೆಯನ್ನು ಕೊನೆಗಾಣಿಸಲು ನಿರ್ಧರಿಸಿದ. ಅವನು ಜರ್ಮನರೊಡನೆ ಬಾಂಧವ್ಯ ಸುಧಾರಣೆಯಲ್ಲಿ ತೊಡಗುವ ವೇಳೆಗೆ ಫ್ರಾನ್ಸಿನ ಕ್ರಾಂತಿ ಪ್ರಾರಂಭವಾಯಿತು. ಫ್ರಾನ್ಸಿಗೂ ಜರ್ಮನ್ ಗಡಿ ಪ್ರದೇಶಗಳ ರಾಜರಿಗೂ ಸಣ್ಣಪುಟ್ಟ ಯುದ್ಧಗಳು ಪ್ರಾರಂಭವಾದುವು. ಕ್ರಾಂತಿಯಿಂದ ತೊಂದರೆಗೀಡಾದ ಅನೇಕ ಫ್ರೆಂಚ್ ಪ್ರಜೆಗಳು ಜರ್ಮನಿಯನ್ನು ಪ್ರವೇಶಿಸಿದರು. ಅವರಲ್ಲಿ ಬಹುಮಂದಿ ರಾಜಪಕ್ಷದವರು. ಅವರು ಜರ್ಮನಿಯ ರಾಜರನ್ನು ಫ್ರಾನ್ಸಿನ ಮೇಲೆ ಎತ್ತಿಕಟ್ಟಬಹುದೆಂಬ ಶಂಕೆಯಿಂದ ಕ್ರಾಂತಿಪಕ್ಷದವರು ಜರ್ಮನ್ ರಾಜರ ವಿರುದ್ಧ ರಕ್ಷಣಾಕ್ರಮ

**2ನೆಯ ಕೈಸರ್ ವಿಲಿಯಂ ಒಂದನೆಯ ಮಹಾಯುದ್ಧದಲ್ಲಿ ಜನರಲ್ ಹಿಂಡೆನ್‌ಬರ್ಗ್ ಮತ್ತು ಜನರಲ್ ಲೂಡೆನ್‌ಡಾರ್ಫರೊಂದಿಗೆ ಸಮಾಲೋಚಿಸುತ್ತಿರುವುದು**

ಕೈಗೊಂಡರು. 1791ರಲ್ಲಿ 16ನೆಯ ಲೂಯಿ ಮತ್ತು ಅವನ ಕುಟುಂಬದವರು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಸಿಕ್ಕಿಬಿದ್ದ ಅನಂತರ ಪರಿಸ್ಥಿತಿ ವಿಷಮಿಸಿತು. ಅದುವರೆಗೂ ಫ್ರಾನ್ಸಿನ ಕ್ರಾಂತಿಯಿಂದ ಆದಷ್ಟು ದೂರವಿರಬೇಕೆಂದು ಸಂಕಲ್ಪ ಮಾಡಿದ್ದ ಆಸ್ಟ್ರಿಯನ್ ಚಕ್ರವರ್ತಿ ಒಂದಲ್ಲ ಒಂದು ರೀತಿಯಿಂದ ಸ್ವತಃ ಭಾಗಿಯಾಗಬೇಕಾಯಿತು. 16ನೆಯ ಲೂಯಿಯ ರಾಣಿ ಮೇರಿ ಆಂಟ್ವಾನೆಟಳೂ, ಲೀಯೊಪೋಲ್ಡನ ರಾಣಿಯೂ ಸಹೋದರಿಯಾಗಿದ್ದರು. ಲೀಯೊಪೋಲ್ಡ್ ತನ್ನ ರಾಣಿಯ ಒತ್ತಡ ಮತ್ತು ಇತರ ಕಾರಣಗಳಿಂದ ಫ್ರಾನ್ಸಿನ ಕ್ರಾಂತಿಕಾರರ ವಿರುದ್ಧ ಸೆಣಸಬೇಕಾಯಿತು. ಅವನು ಅತಿಬುದ್ಧಿವಂತಿಕೆಯಿಂದ ಈ ಕಾರ್ಯದಲ್ಲಿ ಯುರೋಪಿನ ಇತರ ರಾಜರ ಸಹಾಯ ದೊರೆಯುವಂತೆ ಏರ್ಪಡಿಸಿಕೊಂಡ. ಪ್ರಷ್ಯದ 2ನೆಯ ಫ್ರೆಡರಿಕ್ ವಿಲಿಯಮನೂ ಆಸ್ಟ್ರಿಯ ಚಕ್ರವರ್ತಿಯ ಅಭಿಪ್ರಾಯವನ್ನು ಅನುಮೋದಿಸಿದ. ಈ ಮಧ್ಯೆ 1792 ರಲ್ಲಿ ಲೀಯೊಪೋಲ್ಡ್ ತೀರಿಕೊಂಡ. ಅವನ ಮಗ 2ನೆಯ ಫ್ರಾನ್ಸಿಸ್ ಉತ್ತರಾಧಿಕಾರಿಯಾದ.

ಫ್ರಾನ್ಸ್ ದೇಶ ಆಸ್ಟ್ರಿಯ ಮತ್ತು ಪ್ರಷ್ಯದ ಮೇಲೆ ಯುದ್ಧ ಹೂಡಿತು. ಜರ್ಮನ್ ಸೈನ್ಯಗಳು ಫ್ರಾನ್ಸನ್ನು ವಡ್ಮ್ ಎಂಬಲ್ಲಿ ಸೋಲಿಸಿದುವು. ಆದರೆ ರಷ್ಯ ಪೋಲಂಡಿನ ಮೇಲೆ ಆಕ್ರಮಣ ನಡೆಸಿದ್ದರಿಂದ ಜರ್ಮನ್ ಸೈನ್ಯಗಳು ಹಿಂದಿರುಗಬೇಕಾಯಿತು. ಫ್ರೆಂಚ್ ಸೈನ್ಯಗಳು ಈ ಅವಕಾಶವನ್ನು ಉಪಯೋಗಿಸಿಕೊಂಡು ಜರ್ಮನ್ ಗಡಿಪ್ರದೇಶಗಳನ್ನು ಆಕ್ರಮಿಸಿದುವು. 1793ರಲ್ಲಿ ಜರ್ಮನ್ ಸೈನ್ಯಗಳು ಫ್ರೆಂಚರ ಸೈನ್ಯವನ್ನು ಸೋಲಿಸಿ ಆಲ್ಸೇಸ್ ಮತ್ತು ರೈನ್ ಕೆಳದಂಡೆಯವರೆಗೂ ಮುಂದುವರಿದುವು. ಆದರೆ ರಷ್ಯದ ಧೋರಣೆಯಿಂದಾಗಿ ಜರ್ಮನ್ ಸೈನ್ಯಗಳು ಮುನ್ನಡೆಯಾಗಲಿಲ್ಲ. ಪ್ರಷ್ಯ ಮತ್ತು ರಷ್ಯಗಳ ಮಧ್ಯೆ 1793ರಲ್ಲಿ ಆದ ಒಪ್ಪಂದದ ಪ್ರಕಾರ ಪೋಲಂಡಿನ ವಿಭಜನೆಯಾಯಿತು. ಇದು ಪ್ರಷ್ಯಕ್ಕೆ ಅನುಕೂಲಕರವೂ ಆಸ್ಟ್ರಿಯಕ್ಕೆ ಪ್ರತಿಕೂಲಕರವೂ ಆಗಿತ್ತು. ಆದ್ದರಿಂದ ಎರಡು ರಾಷ್ಟ್ರಗಳ ಮಧ್ಯೆ ಏರ್ಪಟ್ಟಿದ್ದ ಮೈತ್ರಿ ಕೊನೆಗೊಂಡು ಪರಸ್ಪರ ವೈಮನಸ್ಯ ಪ್ರಾರಂಭವಾಯಿತು. 1795ರಲ್ಲಿ ಫ್ರೆಡರಿಕ್ ವಿಲಿಯಮ್ ಫ್ರಾನ್ಸಿನೊಡನೆ ಗಡಿ ಹೊಂದಾಣಿಕೆಗೆ ಒಡಂಬಟ್ಟು ಬಾಸಲ್ ಒಪ್ಪಂದ ಮಾಡಿಕೊಂಡ. ಪ್ರಷ್ಯ ಮತ್ತು ಆಸ್ಟ್ರಿಯಗಳ ಬಾಂಧವ್ಯ ಹದಗೆಟ್ಟಿತು. ಆಸ್ಟ್ರಿಯವು ಇಂಗ್ಲೆಂಡಿನ ನೆರವಿನೊಂದಿಗೆ ಫ್ರಾನ್ಸಿನ ಮೇಲೆ ಯುದ್ಧ ಮುಂದುವರಿಸಿತು. ನೆಪೋಲಿಯನ್ ಇಟಲಿಯನ್ನು ಆಕ್ರಮಿಸಿದ್ದರಿಂದ 1796ರಲ್ಲಿ ಆಸ್ಟ್ರಿಯವು ಫ್ರಾನ್ಸಿನೊಡನೆ ಒಪ್ಪಂದಕ್ಕೆ ಬರಬೇಕಾಯಿತು. ಕ್ಯಾಂಪೋಫಾರ್ಮಿಡೋ ಒಪ್ಪಂದದ ಪ್ರಕಾರ ಲಾಂಬಾರ್ಡೀ ಮತ್ತು ಬೆಲ್ಜಿಯಂ ಪ್ರದೇಶಗಳನ್ನು ಫ್ರಾನ್ಸಿಗೆ ಬಿಟ್ಟುಕೊಡಬೇಕಾಯಿತು. ಇದರಿಂದ ಆ ಪ್ರದೇಶದ ಜರ್ಮನ್ ರಾಜರು ಕುಪಿತರಾದರು. ಕ್ಯಾಂಪೋಫಾರ್ಮಿಡೋ ಒಪ್ಪಂದ ಸ್ವಲ್ಪಕಾಲದಲ್ಲೇ ಕೊನೆಗೊಂಡಿತು. ನೆಪೋಲಿಯನ್ ಈಜಿಪ್ಟ್ ದಂಡಯಾತ್ರೆಗೆ ಹೋದ. ಈ ಅವಕಾಶವನ್ನು ಉಪಯೋಗಿಸಿಕೊಂಡು ಆಸ್ಟ್ರಿಯ, ರಷ್ಯ ಮತ್ತು ಇಂಗ್ಲೆಂಡ್‌ಗಳು ಫ್ರಾನ್ಸಿನ ಮೇಲೆ ಯುದ್ಧ ಹೂಡಿದುವು. 1799ರಲ್ಲಿ ಆಸ್ಟ್ರಿಯವು ಇಟಲಿಯ ಮೇಲೆ ಪುನಃ ತನ್ನ ಅಧಿಕಾರ ಸ್ಥಾಪಿಸಿತು. ಅದೇ ವರ್ಷ ನೆಪೋಲಿಯನ್

ಹಿಂದಿರುಗಿ ಫ್ರೆಂಚ್ ಗಣರಾಜ್ಯದ ಪ್ರಥಮ ಕಾನ್ಸಲ್ ಆಗಿ 1800ರಲ್ಲಿ ಆಸ್ಟ್ರಿಯವನ್ನು ಸೋಲಿಸಿದ, ಇಟಲಿಯನ್ನು ವಶಪಡಿಸಿಕೊಂಡ. ಅವನು ಜರ್ಮನಿಯ ದಕ್ಷಿಣ ಭಾಗಗಳನ್ನೂ ಆಕ್ರಮಿಸಿದ. 1802ರ ಆಸ್ಟರ್‌ಲಿಟ್ಸ್ ಕದನದ ಅನಂತರ ಆಸ್ಟ್ರಿಯದ ಪ್ರಭಾವ ಪತನಗೊಂಡಿತು. 1806ರಲ್ಲಿ ನೆಪೋಲಿಯನ್ ಜರ್ಮನಿಗೆ ಸಂಬಂಧಿಸಿದಂತೆ ಕಾನ್‌ಫೆಡರೇಷನ್ ಆಫ್ ದಿ ರೈನ್ ಎಂಬ ರಾಜಕೀಯ ವ್ಯವಸ್ಥೆ ಮಾಡಿದ. ಪ್ರಷ್ಯದ ಮೂರನೆಯ ಫ್ರೆಡರಿಕ್ ವಿಲಿಯಮನೂ ಜೇನ ಕದನದಲ್ಲಿ ನೆಪೋಲಿಯನ್ನನಿಗೆ ಸೋತುಹೋದ. ನೆಪೋಲಿಯನ್ ಪ್ರಷ್ಯ ರಾಜ್ಯವನ್ನು ಪುನರ್ವಿಂಗಡಣೆ ಮಾಡಿ ವೆಸ್ಟ್‌ಫೇಲಿಯ ಎಂಬ ರಾಜ್ಯ ನಿರ್ಮಿಸಿ ತನ್ನ ತಮ್ಮನಾದ ಜೆರೋಮನನ್ನು ಅದರ ರಾಜನಾಗಿ ನೇಮಿಸಿದ. ನೆಪೋಲಿಯನನ ಪತನಾನಂತರ 1815ರ ವಿಯೆನ್ನ ಕಾಂಗ್ರೆಸ್ ಸಭೆಯ ಒಪ್ಪಂದದವರೆಗೂ ಈ ವ್ಯವಸ್ಥೆ ಮುಂದುವರಿಯಿತು.

ವಿಯೆನ್ನ ಸಭೆಯಲ್ಲಿ ಆಸ್ಟ್ರಿಯ ಮತ್ತು ಜರ್ಮನಿಗೆ ಸಂಬಂಧಿಸಿದಂತೆ ಮೆಟರ್ನಿಕನ ಪಾತ್ರ ಪ್ರಮುಖವಾಗಿತ್ತು. ಜರ್ಮನ್ ಸಮಸ್ಯೆ ಅತ್ಯಂತ ಕಷ್ಟಕರವಾದ ಸಮಸ್ಯೆಯಾಗಿತ್ತು. ಜರ್ಮನಿಯ ರಾಜ್ಯಗಳು ಮಾರ್ಪಾಟಾಗಿ ಒಟ್ಟಿನಲ್ಲಿ 39 ರಾಜ್ಯಗಳನ್ನು ನಿರ್ಮಿಸಲಾಯಿತು. ಈ ರಾಜ್ಯಗಳು ಹೆಸರಿಗೆ ಮಾತ್ರ ಆಸ್ಟ್ರಿಯ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟಿದ್ದವು. 39 ರಾಜ್ಯಗಳೂ ಸೇರಿ ಒಂದು ಒಕ್ಕೂಟವನ್ನೂ, ಸಂವಿಧಾನವನ್ನೂ ರಚಿಸಿಕೊಂಡವು. ಜರ್ಮನಿಯ ಏಕತೆಗೆ ವಿಯೆನ್ನ ಸಭೆಯಲ್ಲಿ ಪೂರ್ಣವಾದ ಮನ್ನಣೆ ದೊರೆಯಲಿಲ್ಲ. ಹೇಗಾದರೂ ಆಸ್ಟ್ರಿಯದ ಪರಮಾಧಿಕಾರವನ್ನು ಜರ್ಮನ್ ರಾಜ್ಯಗಳ ಮೇಲೆ ಸ್ಥಾಪಿಸಬೇಕೆಂದು ಮೆಟರ್ನಿಕನ ಹವಣಿಕೆಯಾಗಿತ್ತು. 1830ರ ಫ್ರಾನ್ಸ್ ಕ್ರಾಂತಿಗೆ ಸಂಬಂಧಿಸಿದಂತೆ ಜರ್ಮನ್ ರಾಜ್ಯಗಳು ಸಹಾನುಭೂತಿಯ ಮನೋಭಾವ ತಳೆದಿದ್ದುವು. 1848ರ ಕ್ರಾಂತಿಯ ಸಮಯದಲ್ಲಿ ಜರ್ಮನಿಯಲ್ಲೂ ತೀವ್ರ ಚಳವಳಿ ಆಯಿತು. 1848 ರ ಕ್ರಾಂತಿಯಿಂದ ಮೆಟರ್ನಿಕನ ಪ್ರಭಾವ ಅಳಿಯಿತು. ಜರ್ಮನ್ ಏಕೀಕರಣ ಚಳವಳಿಗೆ ಹೆಚ್ಚು ಸಹಕಾರ ದೊರಕಿತು. ಪ್ರಷ್ಯದ 4ನೆಯ ವಿಲಿಯಮ್ ಚಳವಳಿಯನ್ನು ಬೆಂಬಲಿಸಿ ಪ್ರಷ್ಯದ ಪ್ರತ್ಯೇಕತೆಯನ್ನು ತೊರೆದು ಜರ್ಮನ್ ಒಕ್ಕೂಟ ಸೇರಿದ. ರಾಷ್ಟ್ರೀಯ ಸಭೆಗೆ ಚುನಾವಣೆ ನಡೆದು ಮುಖಂಡರು ಇಡೀ ಜರ್ಮನಿಗೆ ಅನ್ವಯಿಸುವ ಸಂವಿಧಾನವನ್ನು ರಚಿಸಲು ಪ್ರ್ಯಾಂಕ್‌ಫರ್ಟಿನಲ್ಲಿ ಸಭೆ ಸೇರಿದರು. ಆದರೆ ಪ್ರ್ಯಾಂಕ್‌ಫರ್ಟ್ ಸಭೆಯ ಉದ್ದೇಶ ಸಫಲವಾಗಲಿಲ್ಲ. ಈ ಮಧ್ಯೆ ಜರ್ಮನಿಯ ರಾಜ್ಯಗಳು ವಾಣಿಜ್ಯ ಒಕ್ಕೂಟ ರಚಿಸಿಕೊಂಡವು. ಆಸ್ಟ್ರಿಯ ಈ ಒಕ್ಕೂಟದಿಂದ ಹೊರಗುಳಿಯಿತು. ಜರ್ಮನಿಯ ರಾಜ್ಯಗಳ ನಡುವೆ ಆವರೆಗೂ ಇದ್ದ ವಾಣಿಜ್ಯ ನಿರ್ಬಂಧಗಳನ್ನೂ ಅಡೆತಡೆಗಳನ್ನೂ ತೆಗೆದುಹಾಕಲಾಯಿತು. ಈ ಒಪ್ಪಂದ ಸುಂಕ ಒಕ್ಕೂಟ ಅಥವಾ ಜ್ಹಾಲ್ವೆರೀನ್ ಎಂದು ಪ್ರಸಿದ್ಧವಾಗಿದೆ. ಇದರಲ್ಲಿ ಪ್ರಷ್ಯದ್ದು ಮುಖಂಡತ್ವ.

19ನೆಯ ಶತಮಾನದ ಯುರೋಪ್ ಖಂಡದಲ್ಲಿ ರಾಷ್ಟ್ರೀಯತೆ ವಿಕಾಸಗೊಂಡು ಬೆಳೆಯಿತು. 1861ರಲ್ಲಿ 1ನೆಯ ವಿಲಿಯಮ್ ಪ್ರಷ್ಯದ ರಾಜನಾದ. ಆ ವೇಳೆಗೆ ಜರ್ಮನಿಯಲ್ಲಿ ಏಕೀಕರಣ ಚಳವಳಿ ರೂಪುಗೊಂಡಿತ್ತು. ವಿಲಿಯಮ್ ತನ್ನ ರಾಜ್ಯದ ಅನೇಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಸಭೆಯ ವಿರೋಧವನ್ನು ಎದುರಿಸಬೇಕಾಗಿ ಬಂತು. ಆಡಳಿತದಲ್ಲಿ ಅನೇಕ ತೊಡರುಗಳುಂಟಾಗಿದ್ದುವು. ಈ ಪರಿಸ್ಥಿತಿಯಿಂದ ಪಾರಾಗಲು ಆಟೊ ಫಾನ್ ಬಿಸ್ಮಾರ್ಕನನ್ನು ಅವನು ಸಚಿವಸಭೆಯ ಅಧ್ಯಕ್ಷನನ್ನಾಗಿ ನೇಮಿಸಿದ. ಆ ಮೊದಲು ಪ್ರಷ್ಯದ ರಾಜದೂತನಾಗಿದ್ದು ಫ್ರಾನ್ಸ್ ಮತ್ತು ಇತರ ರಾಜ್ಯಗಳಲ್ಲಿ ಸೇವೆ ಸಲ್ಲಿಸಿ, ಅನುಭವಿಯೂ, ಮೇಧಾವಿಯೂ ಆಗಿದ್ದ ಬಿಸ್ಮಾರ್ಕ್ ಜರ್ಮನಿಯ ಏಕೀಕರಣದ ಗುರಿ ಸಾಧಿಸಲು ಪಣತೊಟ್ಟ. ತನ್ನ ಚಾಣಾಕ್ಷ ನೀತಿಯಿಂದ ಅವನು ಪಾರ್ಲಿಮೆಂಟಿನ ಅಧಿಕಾರವನ್ನು ಕ್ಷೀಣಗೊಳಿಸಿ ರಾಜನ ಅಧಿಕಾರವನ್ನು ಬಲಗೊಳಿಸಿದ. ಜರ್ಮನಿಯ ಸಮಸ್ಯೆಯನ್ನು ಶಾಸನಸಭೆಗಳ ಭಾಷಣ ಮತ್ತು ಬಹುಮತ ನಿರ್ಣಯದಿಂದ ಬಗೆಹರಿಸ ಲಾಗುವುದಿಲ್ಲವೆಂದೂ ಬಲಪ್ರಯೋಗದಿಂದ ಮಾತ್ರ ಅದು ಸಾಧ್ಯವೆಂದೂ ಖಚಿತವಾಗಿ ನಂಬಿದ್ದ. ಪ್ರಷ್ಯದ ಸೈನ್ಯವನ್ನು ಆಧುನಿಕಗೊಳಿಸಿ ಸಜ್ಜುಗೊಳಿಸಿದ. ಬಿಸ್ಮಾರ್ಕ್ ಎಚ್ಚರದ ವಿದೇಶಾಂಗ ನೀತಿ ಅನುಸರಿಸಿದ. ಡೆನ್ಮಾರ್ಕ್ ಆಸ್ಟ್ರಿಯ ಮತ್ತು ಫ್ರಾನ್ಸಿನೊಡನೆ ಸಕಾಲದಲ್ಲಿ ಯುದ್ಧ ಹೂಡಿ ವಿಜಯ ಗಳಿಸಿದ. ಜರ್ಮನಿಯ ಏಕೀಕರಣ ಸಾಧಿಸಿದ. ಪ್ರಷ್ಯ ಶತ್ರುಗಳೊಡನೆ ಯುದ್ಧ ಹೂಡುವ ಮೊದಲು ಸಂದರ್ಭಕ್ಕನುಗುಣವಾಗಿ ಇತರ ರಾಷ್ಟ್ರಗಳೊಡನೆ ಮೈತ್ರಿ ಸಾಧಿಸಲು ಬಿಸ್ಮಾರ್ಕ್ ಕ್ರಮಕೈಗೊಳ್ಳುತ್ತಿದ್ದ. ಡೆನ್ಮಾರ್ಕಿನೊಡನೆ ಯುದ್ಧ ಹೂಡುವ ಮೊದಲು, ಆಂತರಿಕ ತೊಂದರೆಗೆ ಒಳಗಾಗಿದ್ದ ರಷ್ಯದ ಮೈತ್ರಿಯನ್ನು ಬಿಸ್ಮಾರ್ಕ್ ಗಳಿಸಿದ. ಅನಂತರ ಆಸ್ಟ್ರಿಯದ ಸಹಕಾರದೊಡನೆ ಯುದ್ಧ ಹೂಡಿ 1864ರಲ್ಲಿ ಡೆನ್ಮಾರ್ಕನ್ನು ಸೋಲಿಸಿ ಷ್ಲೆಸ್‌ವಿಗ್–ಹೋಲ್‌ಸ್ಟೈನನ್ನೂ ಪ್ರಷ್ಯಕ್ಕೆ ಸೇರಿಸಿಕೊಂಡ. ಈ ಪ್ರದೇಶದ ಒಡೆತನ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಷ್ಯ ಮತ್ತು ಆಸ್ಟ್ರಿಯಗಳ ಮಧ್ಯೆ ಹಗೆತನ ಪ್ರಾರಂಭವಾಯಿತು. ಆಸ್ಟ್ರಿಯವನ್ನು ಜರ್ಮನ್ ಪ್ರದೇಶದಿಂದ ಹೊರಹಾಕಲು ಬಿಸ್ಮಾರ್ಕ್ ಸಮಯ ಕಾಯುತ್ತಿದ್ದ. 1866ರಲ್ಲಿ ಆಸ್ಟ್ರಿಯದೊಡನೆ ಯುದ್ಧಕ್ಕೆ ಸುಸಂಧಿಯೊದಗಿತ್ತು. ಇಟಲಿ ಮತ್ತು ಆಸ್ಟ್ರಿಯಗಳು ಪರಸ್ಪರ ಯುದ್ಧಗಳಲ್ಲಿ ತೊಡಗಿದ್ದವು. ಆ ಸಮಯವನ್ನು ಉಪಯೋಗಿಸಿಕೊಂಡು ಪ್ರಷ್ಯವು ಆಸ್ಟ್ರಿಯದ ಮೇಲೆ ಯುದ್ಧ ಘೋಷಿಸಿತು. ಯುದ್ಧ ಪ್ರಾರಂಭವಾದ ಕೇವಲ ಏಳು ವಾರಗಳಲ್ಲಿ ಆಸ್ಟ್ರಿಯ ಸೋತುಹೋಯಿತು. ಪ್ರಷ್ಯದ ಸೈನ್ಯಗಳು ಹ್ಯಾನೋವರ್, ಸಾಕ್ಸನಿ, ಹೆಸ್, ಕ್ಯಾಸಲ್ ಪ್ರದೇಶಗಳನ್ನು ಗೆದ್ದು ಮೇನ್ ನದಿಯನ್ನು ದಾಟಿ ಬವೇರಿಯವನ್ನು ಪ್ರವೇಶಿಸಿ ಆಸ್ಟ್ರಿಯದ ಸೈನ್ಯಗಳನ್ನು ಸಂಪೂರ್ಣವಾಗಿ ಸೋಲಿಸಿದುವು. ಆಸ್ಟ್ರಿಯ ಪ್ರಷ್ಯದೊಡನೆ ಒಪ್ಪಂದಕ್ಕೆ ಮುಂದೆ ಬಂತು. ಯುದ್ಧ ಕೊನೆಗೊಂಡಿತು. ಷ್ಲೆಸ್‌ವಿಗ್–ಹೋಲ್‌ಸ್ಟೈನ್ ಪ್ರಷ್ಯಾದ್ದಾಯಿತು. ಆಸ್ಟ್ರಿಯವು ಜರ್ಮನಿಯಿಂದ ನಿರ್ಗಮನ ಹೊಂದಿತು. 1867ರಲ್ಲಿ ಪ್ರಷ್ಯದ ನಾಯಕತ್ವದಲ್ಲಿ ಉತ್ತರ ಜರ್ಮನ್ ಒಕ್ಕೂಟ ಸ್ಥಾಪಿತವಾಯಿತು. ದಕ್ಷಿಣದ ಕೆಥೊಲಿಕ್ ಸಂಸ್ಥಾನಗಳಾದ ಬವೇರಿಯ, ಬಾಡೆನ್ ಮತ್ತು ವರ್ಟೆಂಬರ್ಗ್‌ಗಳು ಒಕ್ಕೂಟದಿಂದ ಇನ್ನೂ ಹೊರಗೆ ಉಳಿದಿದ್ದುವು. ಅವನ್ನು ಜರ್ಮನ್ ಆಧಿಪತ್ಯಕ್ಕೆ ಸೇರಿಸಲು ಪ್ರಷ್ಯ ಸಮಯ ಕಾಯುತ್ತಿತ್ತು.

ಫ್ರ್ಯಾಂಕೋ–ಪ್ರಷ್ಯನ್ ಯುದ್ಧದಲ್ಲಿ ಪ್ರಷ್ಯದ ವಿಜಯದೊಡನೆ ಜರ್ಮನಿಯ ಏಕೀಕರಣ ಪೂರ್ಣವಾಯಿತು. 1870ರಲ್ಲಿ ಸ್ಪೇನಿನ ಉತ್ತರಾಧಿಕಾರದ ಸಮಸ್ಯೆ ಫ್ರ್ಯಾಂಕೋ ಪ್ರಷ್ಯನ್ ಯುದ್ಧಕ್ಕೆ ಎಡೆ ಮಾಡಿಕೊಟ್ಟಿತು. ಪ್ರಷ್ಯದ ರಾಜನ ಸಂಬಂಧಿಯಾದ ಲೀಯೊಪೋಲ್ಡ್ ಸ್ಪೇನಿನ ರಾಜನಾಗಲು ಬಿಸ್ಮಾರ್ಕ್ ಸಹಕರಿಸಿದ. ಇದರಿಂದ ಫ್ರಾನ್ಸಿನ 3ನೆಯ ನೆಪೋಲಿಯನ್ನನಿಗೆ ಕೋಪಬಂತು. 1870ರಲ್ಲಿ ಫ್ರಾನ್ಸಿಗೂ ಪ್ರಷ್ಯಕ್ಕೆ ಯುದ್ಧ ಪ್ರಾರಂಭವಾಗಿ ಫ್ರಾನ್ಸ್ ಸೋಲನ್ನನುಭವಿಸಿತು. ಪ್ರಷ್ಯದ ಸೇನೆಗಳು ಪ್ಯಾರಿಸ್ಸನ್ನು ಮುತ್ತಿದುವು. ಫ್ರೆಂಚ್ ಸರ್ಕಾರದ ಕೋರಿಕೆಯ ಮೇರೆಗೆ 1871ರ ಮೇ 10 ರಂದು ಫ್ರಾಂಕ್‌ಫರ್ಟ್ ಒಪ್ಪಂದದ ಮೂಲಕ ಯುದ್ಧ ಕೊನೆಗೊಂಡಿತು. ಆಲ್ಸೇಸ್ ಮತ್ತು ಲೊರೇನ್‌ಗಳ ಬಹುಭಾಗ ವನ್ನು ಫ್ರಾನ್ಸ್ ಜರ್ಮನಿಗೆ ಬಿಟ್ಟು ಕೊಡಬೇಕಾಗಿ ಬಂತು. ಪ್ರಷ್ಯದ ವಿಲಿಯಮ್ ಜರ್ಮನಿಯ ಏಕೀಕರಣ ಪೂರ್ಣವಾಯಿತು. ಉತ್ತರ ಜರ್ಮನ್ ಒಕ್ಕೂಟಕ್ಕೆ ಬದಲಾಗಿ ಜರ್ಮನ್ ಸಾಮ್ರಾಜ್ಯ ಸ್ಥಾಪನೆಯಾಗಿ ಜರ್ಮನಿಯ ರಾಷ್ಟ್ರೀಯ ಸಭೆಯಾದ ರೈಕ್‌ಸ್ಟಾಕ್‌ಗೆ ಚುನಾವಣೆ ನಡೆಯಿತು. ಬಿಸ್ಮಾರ್ಕ್‌ನು ಜರ್ಮನ್ ರಾಷ್ಟ್ರದ ಪ್ರಪ್ರಥಮ ಚಾನ್ಸಲರ್ ಆಗಿ ಅಧಿಕಾರ ವಹಿಸಿದ.



ಆಟೋ ಫಾನ್ ಬಿಸ್ಮಾರ್ಕ್ (1815–1898) ಜರ್ಮನ್ ಸಾಮ್ರಾಜ್ಯದ ಮೊದಲ ಚಾನ್ಸಲರ್

ಬಿಸ್ಮಾರ್ಕ್ 1871ರಿಂದ 1890ರವರೆಗೆ ಈ ಅಧಿಕಾರದಲ್ಲಿದ್ದ. ಜರ್ಮನಿಯ ಆಂತರಿಕ ಆಡಳಿತ ಮತ್ತು ವಿದೇಶಾಂಗ ನೀತಿಯಲ್ಲಿ ತನ್ನದೇ ಆದ ಧೋರಣೆ ಅನುಸರಿಸಿ ಬಲವಾದ ಭೂ ಮತ್ತು ನೌಕಾಪಡೆಗಳನ್ನು ಸ್ಥಾಪಿಸಿದ. ಜರ್ಮನಿಯನ್ನು ಪ್ರಬಲ ರಾಷ್ಟ್ರವನ್ನಾಗಿ ಮಾಡುವುದು ಮತ್ತು ಚಕ್ರವರ್ತಿಯ ಅಧಿಕಾರವನ್ನು ಬಲಪಡಿಸುವುದು ಈ ಎರಡೂ ಬಿಸ್ಮಾರ್ಕನ ಮುಖ್ಯ ಧೋರಣೆಗಳಾಗಿದ್ದುವು. ಜರ್ಮನ್ ಸಾಮ್ರಾಜ್ಯ 1918ರವರೆಗೂ ಮುಂದುವರಿಯಿತು. 1ನೆಯ ವಿಲಿಯಂ (1871–1888), ಮೂರನೆಯ ಫ್ರೆಡರಿಕ್ (1888), 2ನೆಯ ವಿಲಿಯಂ (1888–1918)–ಇವರು ಜರ್ಮನ್ ಚಕ್ರವರ್ತಿಗಳಾಗಿದ್ದರು.

1870ರ ಅನಂತರ ಧರ್ಮಕ್ಕೆ ಸಂಬಂಧಿಸಿದಂತೆ ಪೋಪನ ಅಧಿಕಾರ ಜರ್ಮನಿಯಲ್ಲಿ ಕೊನೆಗೊಂಡಿತ್ತು. ರಾಷ್ಟ್ರದ ಚರ್ಚಿಗೆ ಸಂಬಂಧಪಟ್ಟಂತೆ ರಾಜನದೇ ಪರಮಾಧಿಕಾರವೆಂದು ಬಿಸ್ಮಾರ್ಕ್ ಘೋಷಿಸಿದ. ಇದರಿಂದ ಕೆಥೊಲಿಕರ ಚಳವಳಿ ಪ್ರಾರಂಭವಾಯಿತು. ಇದನ್ನು ಅಡಗಿಸಲು ಅನೇಕ ಕ್ರಮಗಳನ್ನು ಕೈಗೊಂಡ. 1878ರ ಅನಂತರ ಪೋಪ್ ಗದ್ದುಗೆಗೆ ಬಂದ 13ನೆಯ ಲಿಯೋನ ಕಾಲದಲ್ಲಿ ಒಡಂಬಡಿಕೆ ಏರ್ಪಟ್ಟು ಬಿಸ್ಮಾರ್ಕ್‌ನು ಜರ್ಮನ್ ಕ್ಯಾತೊಲಿಕರಿಗೆ ಹಲವು ಸವಲತ್ತುಗಳನ್ನು ನೀಡಿದ.

ಜರ್ಮನ್ ಏಕೀಕರಣದ ವೇಳೆಗೆ ಸೋಷಿಯಲಿಸ್ಟ್ ಪಕ್ಷ ಸ್ಥಾಪಿತವಾಗಿತ್ತು. ಜರ್ಮನ್ ಸಮಾಜವಾದಿಗಳು ಬಿಸ್ಮಾರ್ಕನ ನೀತಿಯನ್ನು ವಿರೋಧಿಸುತ್ತಿದ್ದರು. ಸಮಾಜವಾದಿಗಳು ಸಾಮ್ರಾಜ್ಯದ ವಿರೋಧಿಗಳೆಂದು ಬಗೆದು ಬಿಸ್ಮಾರ್ಕ್ ಅವರ ಚಳವಳಿಯನ್ನು ಹತ್ತಿಕ್ಕುವ ನೀತಿಯನ್ನು ಪ್ರಾರಂಭದಲ್ಲಿ ಮುಂದುವರಿಸಿದ. ಆದರೂ ಅವರ ಚಳವಳಿ ಪ್ರಬಲವಾಗುತ್ತ ಬಂದಿದ್ದರಿಂದ ಅವನು ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ಅದನ್ನು ದುರ್ಬಲ ಗೊಳಿಸಲು ಯತ್ನಿಸಿದ. 1883ರಲ್ಲಿ ಸಮಾಜವಿಮೆ, ವೃದ್ಧಾಪ್ಯವೇತನ ಮೊದಲಾದವನ್ನು ಕುರಿತ ಕಾಯಿದೆಗಳನ್ನು ಬಿಸ್ಮಾರ್ಕ್ ಪ್ರಪ್ರಥಮವಾಗಿ ಜಾರಿಗೆ ತಂದ. ಈ ಕ್ರಮಗಳು ಇತರ

ರಾಷ್ಟ್ರಗಳಿಗೆ ಮಾದರಿಗಳಾದುವು. ಬಿಸ್ಮಾರ್ಕ್ ಜರ್ಮನಿಯನ್ನು ಬಲಯುತವಾದ ರಾಷ್ಟ್ರವನ್ನಾಗಿ ಮಾಡಲು ಕೈಗಾರಿಕೆಗಳನ್ನೂ ತಾಂತ್ರಿಕ ವಿದ್ಯಾಭ್ಯಾಸವನ್ನೂ ಬ್ಯಾಂಕುಗಳನ್ನೂ ಸ್ಥಾಪಿಸಿ ರೈಲ್ವೆ ಮಾರ್ಗಗಳನ್ನು ನಿರ್ಮಿಸಿದ. ಆರ್ಥಿಕ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಜರ್ಮನಿ ವಿಶೇಷ ಪ್ರಗತಿ ಸಾಧಿಸಿತು.

ಬಿಸ್ಮಾರ್ಕ್ 1879ರಲ್ಲಿ ಫ್ರಾನ್ಸ್ ಮತ್ತು ರಷ್ಯಗಳ ವಿರುದ್ಧ ಆಸ್ಟ್ರಿಯ ಮತ್ತು ಇಟಲಿಗಳೊಡನೆ ರಕ್ಷಣಾ ಒಪ್ಪಂದ ಮಾಡಿಕೊಂಡ. ಕೈಗಾರಿಕೆಯಲ್ಲಿ ಜರ್ಮನಿ ಮುಂದುವರಿದುದರಿಂದ 1884ರ ಅನಂತರ ವಸಾಹತುಗಳನ್ನು ಸ್ಥಾಪಿಸುವ ಯತ್ನ ಕೈಗೊಳ್ಳಲಾಯಿತು. ಫ್ರಾಂಕ್‌ಫರ್ಟ್‌ನಲ್ಲಿ ಜರ್ಮನ್ ವಸಾಹತು ಸಂಘವನ್ನು ಸ್ಥಾಪಿಸಲಾಯಿತು. ಆಫ್ರಿಕ ಖಂಡದಲ್ಲೂ ಪೆಸಿಫಿಕ್ ಸಾಗರ ದ್ವೀಪಗಳಲ್ಲೂ ಜರ್ಮನ್ ವಸಾಹತುಗಳು ಸ್ಥಾಪನೆಯಾದುವು. ಜರ್ಮನಿಯ ನೌಕಾಬಲ ಬೆಳೆಯಿತು. 1890ರಲ್ಲಿ ಚಕ್ರವರ್ತಿಗೂ ಬಿಸ್ಮಾರ್ಕನಿಗೂ ಹಲವು ಭಿನ್ನಾಭಿಪ್ರಾಯಗಳುಂಟಾಗಿ ಬಿಸ್ಮಾರ್ಕ್ ರಾಜಿನಾಮೆ ನೀಡಿದ.

ಈ ಕಾಲದಲ್ಲಿ ಕೈಗಾರಿಕಾ ಕ್ರಾಂತಿ ಯೂರೋಪಿನಲ್ಲೆಲ್ಲ ಹಬ್ಬಿತು. ವ್ಯಾಪಾರ ಮತ್ತು ವಸಾಹತುಗಳಿಗಾಗಿ ರಾಷ್ಟ್ರಗಳಲ್ಲಿ ಸ್ಪರ್ಧೆ ಏರ್ಪಟ್ಟಿತು. ಯೂರೋಪು ಮದ್ದುಗುಂಡುಗಳ ಮತ್ತು ಸೈನ್ಯಶಕ್ತಿಯ ಆಗರವಾಗಿ ಮಾರ್ಪಟ್ಟಿತು. ಜರ್ಮನಿ ಮತ್ತು ಫ್ರಾನ್ಸ್ ಹಾಗೂ ಆಸ್ಟ್ರಿಯ ಮತ್ತು ರಷ್ಯಗಳ ಮಧ್ಯೆ ಹಗೆತನ ಏರ್ಪಟ್ಟಿತ್ತು. ಜರ್ಮನ್ ಚಕ್ರವರ್ತಿ ಕೈಸರ್ ವಿಲಿಯಮನ ಉದ್ರೇಕಪೂರ್ಣ ಭಾಷಣಗಳೂ ನೌಕಾಬಲ ವಿಸ್ತರಣೆಯೂ ವಸಾಹತು ಸ್ಥಾಪನೆಯ ಸ್ಪರ್ಧೆಯೂ ಗ್ರೇಟ್ ಬ್ರಿಟನ್ನಿಗೆ ಸವಾಲಾದುವು. ಬ್ರಿಟನ್ 1904ರ ಅನಂತರ ಫ್ರಾನ್ಸ್ ಮತ್ತು ರಷ್ಯಗಳೊಂದಿಗೆ ಮೈತ್ರಿ ಬೆಳೆಸಿಕೊಂಡಿತು. ವಸಾಹತುಗಳಿಗಾಗಿ ಫ್ರೆಂಚರಿಗೂ ಜರ್ಮನಿಗೂ ಪೈಪೋಟಿ ನಡೆಯಿತು. ಸಣ್ಣಪುಟ್ಟ ಯುದ್ಧಗಳಾಗುತ್ತಿದ್ದುವು.




ಒಂದನೆಯ ಮಹಾಯುದ್ಧಕ್ಕೆ ಮುಂಚೆ ಜರ್ಮನಿ (1871–1914)

ಆ ವೇಳೆಗೆ ಮುಂಬರಲಿದ್ದ ಯುದ್ಧದ ಕಾರ್ಮೋಡಗಳು ಯುರೋಪಿನಲ್ಲಿ ದಟ್ಟೈಸಿದುವು. ಆಡಳಿತಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸಭೆ ಮತ್ತು ರಕ್ಷಣಾ ಪಡೆಗಳಲ್ಲಿ ಮೇಲುಗೈಗಾಗಿ ಜರ್ಮನಿಯಲ್ಲಿ ಪೈಪೋಟಿ ಪ್ರಾರಂಭವಾಗಿತ್ತು. ರಕ್ಷಣಾಪಡೆಗಳ ಮುಖಂಡರೂ ವಿಲ್ಹೆಲ್ಮ್ ಕೈಸರನೂ ಯುದ್ಧಾಸಕ್ತರಾಗಿದ್ದರು. ಯುರೋಪಿನ ರಾಷ್ಟ್ರಗಳಲ್ಲಿ ಎರಡು ವಿರೋಧಿ ಬಣಗಳು ಏರ್ಪಟ್ಟಿದ್ದುವು. 1914ರ ಜೂನ್ 28ರಂದು ಆಸ್ಟ್ರಿಯನ್ ರಾಜಕುಮಾರ ಫ್ರಾನ್ಸಿಸ್ ಫರ್ಡಿನೆಂಡ್ ಸರ್ಬಿಯದ ಸರಾಜೆವೋ ಪಟ್ಟಣದಲ್ಲಿ ಕೊಲೆಯಾದ. ಆಸ್ಟ್ರಿಯ–ಹಂಗರಿ ಸರ್ಕಾರ ಸರ್ಬಿಯಕ್ಕೆ ಪ್ರತಿಭಟನೆ ಸಲ್ಲಿಸಿ ಕೊಲೆಗೆ ವಿಶೇಷ ಪರಿಹಾರದ ಷರತ್ತುಗಳನ್ನು ಹಾಕಿತು. ರಷ್ಯದ ಆದೇಶದ ಮೇರೆಗೆ ಸರ್ಬಿಯ ಎರಡನ್ನು ಹೊರತು ಉಳಿದ ಎಲ್ಲ ಷರತ್ತುಗಳನ್ನೂ ಅನುಮೋದಿಸಿತು. ಆಸ್ಟ್ರಿಯಕ್ಕೆ ಇದರಿಂದ ತೃಪ್ತಿಯಾಗದೆ ಸರ್ಬಿಯದ ಮೇಲೆ ಯುದ್ಧ ಹೂಡಿತು. ರಷ್ಯ ಮತ್ತು ಫ್ರಾನ್ಸ್‌ಗಳು ಸರ್ಬಿಯದ ಪಕ್ಷವನ್ನೂ ಜರ್ಮನಿ ಆಸ್ಟ್ರಿಯದ ಪಕ್ಷವನ್ನೂ ವಹಿಸಿದುವು. ಒಂದನೆಯ ಮಹಾಯುದ್ಧ ಪ್ರಾರಂಭವಾಯಿತು.

ಕ್ರಮೇಣ ಇಟಲಿ, ಪೋರ್ಚುಗಲ್, ಗ್ರೀಸ್, ಥೈಲೆಂಡ್, ಚೀನ, ಬ್ರಜಿಲ್ ಕೊನೆಗೆ ಅಮೆರಿಕ ಮೊದಲಾದ 23 ರಾಷ್ಟ್ರಗಳು ಜರ್ಮನಿಯ ವಿರುದ್ಧವಾದ ಮಿತ್ರಪಕ್ಷವನ್ನು ಸೇರಿದುವು. ಯುದ್ಧವು ಪ್ರಪಂಚದ ಹೆಚ್ಚು ಭಾಗಗಳಿಗೆ ವ್ಯಾಪಿಸಿತು. ಭೂ ವಾಯು ಮತ್ತು ಜಲಯುದ್ಧಗಳು ನಡೆದವು.

ದೀರ್ಘಯುದ್ಧದಿಂದಾಗಿ ಜರ್ಮನಿ ಅನೇಕ ಆಂತರಿಕ ಸಮಸ್ಯೆಗಳನ್ನೆದುರಿಸಬೇಕಾಯಿತು. 1918ರ ಪ್ರಾರಂಭದಲ್ಲಿ ಅನೇಕ ಮುಷ್ಕರಗಳು ನಡೆದುವು. 1917ರಲ್ಲಿ ರಷ್ಯದಲ್ಲಿ ಕ್ರಾಂತಿ ಸಂಭವಿಸಿ ರಷ್ಯನರು ಜರ್ಮನಿಯೊಡನೆ ಶಾಂತಿ ಒಪ್ಪಂದ ಮಾಡಿಕೊಂಡರು. ಆ ವೇಳೆಗೆ ಬಲ್ಗೇರಿಯ ಮತ್ತು ಆಸ್ಟ್ರಿಯಗಳು ಸೋಲನ್ನನುಭವಿಸಿದುವು. ತುರ್ಕಿ ಪರಾಭವ ಹೊಂದಿತ್ತು. ಜರ್ಮನ್ ಸೈನ್ಯಾಧಿಕಾರಿಗಳಲ್ಲಿ ನಿರಾಶೆ ಮೂಡಿತು. ಜರ್ಮನಿಯ ಸೈನಿಕವ್ಯವಸ್ಥೆ ಮತ್ತು ಒಳಾಡಳಿತ ಕುಸಿದುವು. ನವೆಂಬರ್ 4ರಂದು ಕೀಲ್ ಕಾಲುವೆಯ ನೌಕಾಂಗಣದಲ್ಲಿ ಸಂಪು ಪ್ರಾರಂಭವಾಯಿತು. 1918ರ ನವೆಂಬರ್ 5ರಂದು ಚಾನ್ಸಲರ್ ಮ್ಯಾಕ್ಸ್ ಯುದ್ಧ ಮುಕ್ತಾಯಮಾಡಲು ಒಪ್ಪಿ ಸಹಿ ಹಾಕಿದ. ನವೆಂಬರ್ 9ರಂದು ಕೈಸರ್ ಸಿಂಹಾಸನತ್ಯಾಗ ಮಾಡಿ ನೆದರಲೆಂಡಿಗೆ ಧಾವಿಸಿದ. ಏಬರ್ಟ್ ಎಂಬ ಸಮಾಜವಾದಿ ಪ್ರಜಾಪ್ರಭುತ್ವವಾದಿಯ ನಾಯಕತ್ವದಲ್ಲಿ ಸರ್ಕಾರ ರಚಿತವಾಯಿತು.

1919ರ ಫೆಬ್ರವರಿಯಲ್ಲಿ ಚುನಾವಣೆಗಳು ನಡೆದುವು. ವೈಮಾರ್‌ನಲ್ಲಿ ರಾಷ್ಟ್ರೀಯ ಸಭೆ ಸೇರಿ ಸಂವಿಧಾನವನ್ನು ರಚಿಸಿತು. ಸಮ್ಮಿಶ್ರ ಮಂತ್ರಿಮಂಡಲದ ರಚನೆಯಾಯಿತು. ಶಾಂತಿ ಒಪ್ಪಂದದ ಷರತ್ತುಗಳು ಬಹು ತೀವ್ರವಾಗಿದ್ದುವು. ಜರ್ಮನಿ ಅನೇಕ ಪ್ರದೇಶಗಳನ್ನೂ




ಯುದ್ಧಗಳ ನಡುವೆ ಜರ್ಮನಿ (1919–1937)

ಯುದ್ಧ ಪರಿಹಾರವಾಗಿ ಅಪಾರ ಹಣವನ್ನೂ ಕೊಡಬೇಕಾಯಿತಲ್ಲದೆ ರಕ್ಷಣಾ ಪಡೆಗಳನ್ನೂ ಮದ್ದುಗುಂಡುಗಳ ಕಾರ್ಖಾನೆಯನ್ನೂ ಸಂಪೂರ್ಣವಾಗಿ ತ್ಯಜಿಸಬೇಕಾಯಿತು. ಷರತ್ತುಗಳಲ್ಲಿ ಅನೇಕ ವಿನಾಯಿತಿಗಳನ್ನು ಪಡೆಯಲು ಜರ್ಮನಿ ಪ್ರಯತ್ನಿಸಿತು. ಮಿತ್ರರಾಷ್ಟ್ರಗಳು ಒಪ್ಪಲಿಲ್ಲ. ಆದ್ದರಿಂದ ವಿಧಿಯಿಲ್ಲದೆ ಜರ್ಮನ್ ಸರ್ಕಾರ 1920ರಲ್ಲಿ ಎಲ್ಲ ಷರತ್ತುಗಳನ್ನೂ ಒಪ್ಪಲೇ ಬೇಕಾಯಿತು. ಷರತ್ತುಗಳು ಬಹಳ ಅಪಮಾನಕಾರಿಯೆಂದು ಕ್ಷಿಪ್ರಾಕ್ರಮಣವೊಂದು ನಡೆದು ಮಂತ್ರಿಮಂಡಲದ ಬದಲಾವಣೆಯಾದರೂ ಷರತ್ತುಗಳಲ್ಲಿ ವಿನಾಯಿತಿ ದೊರೆಯಲಿಲ್ಲ. ಮುಂದಿನ ಹತ್ತು ವರ್ಷಗಳ ಕಾಲ ಜರ್ಮನಿ ಷರತ್ತುಗಳ ವಿನಾಯಿತಿಗಾಗಿ ಅನೇಕ ಪ್ರಯತ್ನಗಳನ್ನು ಮುಂದುವರಿಸಿತು. ಮಂತ್ರಿಮಂಡಲಗಳು ಉರುಳುವುದೂ ಹೊಸದಾಗಿ ರಚನೆಯಾಗುವುದೂ ಸಾಮಾನ್ಯವಾದುವು. ರಾಷ್ಟ್ರ ಅನೇಕ ಸಮಸ್ಯೆಗಳನ್ನೆದುರಿಸಬೇಕಾಯಿತು. ಫ್ರಾನ್ಸಿನೊಡನೆ ಬಾಂಧವ್ಯ ಹದಗೆಟ್ಟಿತ್ತು. 1923ರಲ್ಲಿ ಜರ್ಮನಿ ಷರತ್ತುಗಳನ್ನು ಸರಿಯಾಗಿ ಪಾಲಿಸಲಿಲ್ಲವೆಂದು ಫ್ರಾನ್ಸ್ ರೂರ್ ಪ್ರದೇಶವನ್ನು ಆಕ್ರಮಿಸಿಕೊಂಡಿತು.

ಗ್ರೇಟ್ ಬ್ರಿಟನ್ ಮತ್ತು ಅಮೆರಿಕನರು ಜರ್ಮನಿಯೊಡನೆ ಸಂಧಾನದಲ್ಲಿ ತೊಡಗಿ ಜರ್ಮನ್ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು 1924ರಲ್ಲಿ ಒಂದು ಸಮಿತಿಯನ್ನು ನೇಮಿಸಿದುವು. 1924ರಲ್ಲಿ ಲಂಡನಿನಲ್ಲಿ ನಡೆದ ಸಭೆಯಲ್ಲಿ ಡಾವೆಸ್ ಸಮಿತಿಯ ಶಿಫಾರಸುಗಳನ್ನು ಒಪ್ಪಲಾಯಿತು. ರೂರ್ ಪ್ರದೇಶದಿಂದ ಫ್ರೆಂಚರು ನಿರ್ಗಮಿಸಬೇಕಾಯಿತು. ಹಣಪಾವತಿಯ ಬಗ್ಗೆ ಇದ್ದ ತೊಡಕುಗಳನ್ನು ನಿವಾರಿಸಲಾಯಿತು. 1925ರ ಫೆಬ್ರವರಿಯಲ್ಲಿ ಅಧ್ಯಕ್ಷ ಏಬರ್ಟ್ ಮರಣ ಹೊಂದಿ, ಹಿಂಡನ್‌ಬರ್ಗ್ ನೂತನ ಅಧ್ಯಕ್ಷನಾಗಿ ಚುನಾಯಿತನಾದ. ಕ್ರಮೇಣ ಆರ್ಥಿಕ ಮುಗ್ಗಟ್ಟೂ ಬಿಕ್ಕಟ್ಟುಗಳೂ ಕಡಿಮೆಯಾಗತೊಡಗಿದುವು. 1925ರ ಅಕ್ಟೋಬರಿನಲ್ಲಿ ಜರ್ಮನಿ ಮತ್ತು ಮಿತ್ರರಾಷ್ಟ್ರಗಳ ಮಧ್ಯೆ ಲುಕಾರ್ನೋ ಒಪ್ಪಂದ ಆಯಿತು. ರೈನ್ ಪ್ರದೇಶವನ್ನು ಮಿತ್ರರಾಷ್ಟ್ರಗಳು ತೆರವು ಮಾಡಿದವು. 1926ರ ಸೆಪ್ಟಂಬರ್‌ನಲ್ಲಿ ಜರ್ಮನಿ ರಾಷ್ಟ್ರಗಳ ಕೂಟದ ಸದಸ್ಯ ರಾಷ್ಟ್ರವಾಯಿತು. ಅದೇ ವರ್ಷ ಜರ್ಮನಿ ಮತ್ತು

ರಷ್ಯಗಳ ಮಧ್ಯೆ ಪರಸ್ಪರ ಮೈತ್ರಿಗೆ ಸಂಬಂಧಿಸಿದಂತೆ ಬರ್ಲಿನ್‌ನಲ್ಲಿ ಒಪ್ಪಂದವಾಯಿತು. ಅದೇ ಸುಮಾರಿನಲ್ಲಿ ಜರ್ಮನಿ ಇತರ ದೇಶಗಳೊಡನೆ ಏರ್ಪಡಿಸಿಕೊಂಡ ಅನೇಕ ವಾಣಿಜ್ಯ ಒಪ್ಪಂದಗಳಿಂದ ಜರ್ಮನಿಯ ಆರ್ಥಿಕ ಸ್ಥಿತಿ ಸುಧಾರಿಸುತ್ತ ಬಂತು.

1927ರ ಜನವರಿಯ ವೇಳೆಗೆ ಮಿತ್ರರಾಷ್ಟ್ರಗಳು ವಿಧಿಸಿದ್ದ ಸೈನಿಕ ನಿಯಂತ್ರಣ ಆಯೋಗ ರದ್ದಾಯಿತು. ಜರ್ಮನಿಯ ಆರ್ಥಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ಸುಧಾರಣೆಗಾಗಿ ಲುಕಾರ್ನೋ ಒಪ್ಪಂದದ ಅನಂತರ ಅಪರಿಮಿತವಾದ ವಿದೇಶಿ ಬಂಡವಾಳ ಸಾಲದ ರೂಪದಲ್ಲಿ ಲಭ್ಯವಾಯಿತು. ಸಾರ್ವಜನಿಕ ಮತ್ತು ಇತರ ಸಂಘ ಸಂಸ್ಥೆಗಳು ಸಾಲದ ಸೌಲಭ್ಯವನ್ನು ಉಪಯೋಗಿಸಿಕೊಂಡು ಜರ್ಮನಿಯ ಕೈಗಾರಿಕೆಗಳನ್ನು ಬೆಳೆಸಿದುವು. ಸ್ಥಗಿತಗೊಂಡಿದ್ದ ಕೈಗಾರಿಕೆಗಳೂ ಕಾರ್ಖಾನೆಗಳೂ ಪುನರ್ ನಿರ್ಮಾಣಗೊಂಡು ನಿರುದ್ಯೋಗ ಕೊನೆಗೊಂಡಿತು. ಉತ್ಪಾದನೆ ಹೆಚ್ಚಿತು. ಜರ್ಮನಿ ಯುದ್ಧಪರಿಹಾರದ ಹಣವನ್ನು ತೊಂದರೆಯಿಲ್ಲದಂತೆ ಸಲ್ಲಿಸುವಂತಾಯಿತು. ಒಂದನೆಯ ಮಹಾಯುದ್ಧದ ಅಪಾರ ನಷ್ಟಗಳಿಂದ ಯೂರೋಪಿನ ಇತರ ರಾಷ್ಟ್ರಗಳಿಗಿಂತಲೂ ಹೆಚ್ಚಾಗಿ ಚೇತರಿಸಿಕೊಂಡಿತು.

1924ರಿಂದ 1928ರವರೆಗೆ ಜರ್ಮನಿಯ ಪ್ರಮುಖ ರಾಜಕೀಯ ಪಕ್ಷಗಳಾದ ಸೆಂಟರ್, ಸೋಷಿಯಲ್ ಡೆಮೋಕ್ರಾಟ್ ಮತ್ತು ಪೀಪಲ್ಸ್ ಪಕ್ಷಗಳು ಸಮ್ಮಿಶ್ರ ಮಂತ್ರಿಮಂಡಲ ರಚಿಸಿ ಆಡಳಿತ ನಡೆಸಿದುವು. 1928ರಲ್ಲಿ ಸೋಷಿಯಲ್ ಡೆಮೋಕ್ರಾಟ್ ಪಕ್ಷ ಬಹುಮತ ಗಳಿಸಿ ಪೀಪಲ್ಸ್ ಪಕ್ಷದ ಸಹಕಾರದೊಡನೆ ಸರ್ಕಾರ ರಚಿಸಿತು. ಚುನಾವಣೆಯಲ್ಲಿ ಜರ್ಮನ್ ನ್ಯಾಷನಲಿಸ್ಟ್ (ನಾಟ್ಸಿ) ಪಕ್ಷ ಅಲ್ಪ ಮತಗಳಿಸಿತ್ತು. ಜರ್ಮನಿ ಇನ್ನೂ ಸಲ್ಲಿಸಬೇಕಾಗಿದ್ದ ಪರಿಹಾರಧನ ಕುರಿತು 1930ರಲ್ಲಿ ಮಾಡಿಕೊಳ್ಳಲಾಗದ ಒಪ್ಪಂದವನ್ನು ನಾಟ್ಸಿ ಪಕ್ಷ ವಿರೋಧಿಸಿ ಉಗ್ರ ಚಳವಳಿ ಹೂಡಿತು. ಕ್ರಮೇಣ ಅದು ಪ್ರಬಲವಾಯಿತು. ಕಾರ್ಖಾನೆಗಳ ಮಾಲೀಕರೂ ಉಗ್ರ ರಾಷ್ಟ್ರಾಭಿಮಾನಿಗಳೂ ನಾಟ್ಸಿ ಪಕ್ಷಕ್ಕೆ ಧನಸಹಾಯವನ್ನೊದಗಿಸಿದರು. ಆದರೆ ಈ ಚಳವಳಿಯಿಂದ ಸರ್ಕಾರ ಅಲುಗಲಿಲ್ಲ.

1930ರ ಜಗತ್ತಿನ ಆರ್ಥಿಕ ಮುಗ್ಗಟ್ಟು ಜರ್ಮನಿಯನ್ನೂ ಆವರಿಸಿತು. ವಿದೇಶೀ ಸಾಲಸೌಲಭ್ಯ ನಿಂತಿತು. ನಿರುದ್ಯೋಗ ಹೆಚ್ಚಿತು. ನಾಟ್ಸಿ ಪಕ್ಷ ಪ್ರಬಲವಾಯಿತು. ಆಡಳಿತಕ್ಕೆ ಅಡ್ಡಿ ಆತಂಕಗಳುಂಟಾದುವು. ಸರ್ಕಾರ ಅಸ್ಥಿರವಾಯಿತು. 1930ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಸೋಷಿಯಲ್ ಡೆಮೊಕ್ರಾಟರ ಪಕ್ಷಕ್ಕೆ ಅಲ್ಪಬಹುಮತ ಲಭಿಸಿತು. ಹಿಟ್ಲರ್ ಮತ್ತು ಅವನ ಹಿಂಬಾಲಕರ ವ್ಯಾಪಕವಾದ ಹಾಗೂ ಉಗ್ರರಾಷ್ಟ್ರೀಯ ಪ್ರಚಾರದಿಂದ ನಾಟ್ಸಿ ಪಕ್ಷ ಎರಡನೆಯ ಸ್ಥಾನ ಗಳಿಸಿತು. ಸೋಷಿಯಲ್ ಡೆಮೊಕ್ರಾಟ್ ಪಕ್ಷದ ಸರ್ಕಾರ ಹೆಜ್ಜೆ ಹೆಜ್ಜೆಗೂ ನಾಟ್ಸಿ ಪಕ್ಷದ ವಿರೋಧವನ್ನು ಎದುರಿಸಬೇಕಾಯಿತು. ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಕಷ್ಟಕರವಾಗಿತ್ತು. ನಿರುದ್ಯೋಗಿಗಳ ಸಂಖ್ಯೆ ಅಪರಿಮಿತವಾಗಿ ಬೆಳೆಯಿತು. 1932ರ ಸೆಪ್ಟೆಂಬರ್‌ನಲ್ಲಿ ನಾಟ್ಸಿ ಬಹುಮತದಿಂದ ರೈಷ್‌ಸ್ಟಾಕ್‌ನಲ್ಲಿ ಸರ್ಕಾರಕ್ಕೆ ಸೋಲಾಯಿತು. ರಾಷ್ಟ್ರೀಯ ಸಭೆಯನ್ನು ವಿಸರ್ಜಿಸಿ ಪುನಃ ನವೆಂಬರ್‌ನಲ್ಲಿ ಚುನಾವಣೆ ನಡೆಸಲಾಯಿತು. ನಾಟ್ಸಿ ಪಕ್ಷ ಪ್ರಬಲವಾಯಿತು. 1933ರ ಜನವರಿ 30ರಂದು ಅಡಾಲ್ಫ್ ಹಿಟ್ಲರ್ ಚಾನ್ಸಲರ್ ಆಗಿ ಅಧಿಕಾರ ವಹಿಸಿಕೊಂಡು ಸಂಮಿಶ್ರ ಸರ್ಕಾರ ರಚಿಸಿದ.

ಈ ಮಧ್ಯೆ ನಾಟ್ಸಿ ಪಾರ್ಟಿಯ ಪ್ರಚಾರ ಬಿರುಸಾಯಿತು. ಯೆಹೂದಿಗಳು, ಕಮ್ಯೂನಿಸ್ಟರು, ವರ್ಸೇಲ್ಸ್ ಒಪ್ಪಂದದಿಂದ ಜರ್ಮನಿಗೆ ಆದ ಅನ್ಯಾಯಗಳು-ಇವು ನಾಟ್ಸಿಗಳ ಪ್ರಚಾರದ ಮುಖ್ಯಾಂಶಗಳು ತನ್ನ ಪಕ್ಷ ಬಹುಮತ ಗಳಿಸುವಂತೆ ಮಾಡಲು ರೈಕ್‌ಸ್ಟಾಗ್‌ಗೆ 1933ರಲ್ಲಿ ಪುನಃ ಚುನಾವಣೆ ನಡೆಯುವಂತೆ ಹಿಟ್ಲರ್ ಏರ್ಪಡಿಸಿದ. ನಾಟ್ಸಿ ಪಕ್ಷ ರಭಸದ ಪ್ರಚಾರದಲ್ಲಿ ತೊಡಗಿತ್ತು. ಫೆಬ್ರುವರಿ 27ರಂದು ರಾತ್ರಿ ರೈಕ್‌ಸ್ಟಾಗ್ ಕಟ್ಟಡ ಬೆಂಕಿಯಿಂದ ಭಸ್ಮವಾಯಿತು. ಈ ಘಟನೆಗೆ ಕಮ್ಯೂನಿಸ್ಟರೇ ಕಾರಣವೆಂದು ಹಿಟ್ಲರ್ ವಾದಿಸಿ ಆ ಪಕ್ಷವನ್ನು ಹತ್ತಿಕ್ಕಲು ಪ್ರಯತ್ನಿಸಿದ. ಅನಂತರ ಚುನಾವಣೆಗಳು ನಡೆದುವು. ಹಿಟ್ಲರನ ಪಕ್ಷಕ್ಕೆ ಪುನಃ ಅಲ್ಪ ಬಹುಮತ ಮಾತ್ರ ಲಭ್ಯವಾಯಿತು. ಹಿಟ್ಲರ್ ಕಮ್ಯೂನಿಸ್ಟ್ ಮತ್ತು ತನ್ನ ಇತರ ವಿರೋಧಿ ಪಕ್ಷಗಳನ್ನು ಬಹಿಷ್ಕರಿಸಿ ಸೋಷಿಯಲ್ ಡೆಮೊಕ್ರಾಟ್ ಮತ್ತು ಸೆಂಟರ್ ಪಕ್ಷಗಳ ಸಹಾನುಭೂತಿಯಿಂದ ಒಂದು ಹೊಸ ವಿಧೇಯಕಕ್ಕೆ ಅನುಮೋದನೆ ಪಡೆದ. ರೈಕ್‌ಸ್ಟಾಕ್ ಮತ್ತು ಅಧ್ಯಕ್ಷನ ಅನುಮತಿ ಪಡೆಯದೆಯೇ ಚಾನ್ಸಲರ್ ಹಲವು ಕಾನೂನುಗಳನ್ನು ಜಾರಿಗೆ ತರಲು ಇದರಿಂದ ಅವಕಾಶವಾಯಿತು. ಹಿಟ್ಲರ್ ಜರ್ಮನಿಯ ಸರ್ವಾಧಿಕಾರಿಯಾಗಿ ಆಡಳಿತ ನಡೆಸುವಂತಾಯಿತು. ಎಲ್ಲ ವಿರೋಧಪಕ್ಷಗಳನ್ನೂ ಅವನು ದಮನ ಮಾಡಿದ. ರಹಸ್ಯ ಪಡೆಗಳು ಹಾಗೂ ರಕ್ಷಣಾ ಪಡೆಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳತೊಡಗಿದ. ನಾಟ್ಸಿ ಪಕ್ಷದ ವಿರೋಧಿಗಳನ್ನು ಬಂಧಿಸಿ 1933ರಲ್ಲಿ ಕೊಲ್ಲಿಸಿದ. 1934ರ ಆಗಸ್ಟ್ ತಿಂಗಳಲ್ಲಿ ಅಧ್ಯಕ್ಷ ಮತ್ತು ಚಾನ್ಸಲರ್ ಪದವಿಗಳನ್ನು ವಹಿಸಿಕೊಂಡ.

ವೈಮಾರ್ ಗಣರಾಜ್ಯ ಸಂವಿಧಾನವನ್ನು ಅಧಿಕೃತವಾಗಿ ಅಂತ್ಯಗೊಳಿಸದಿದ್ದರೂ ಹಿಟ್ಲರ್ ತಂದ ಕಾಯಿದೆಗಳಿಂದ ಅದು ನಾಮಾವಶೇಷವಾಯಿತು. ತನ್ನ ಆಜ್ಞಾನುವರ್ತಿಗಳಾಗಿದ್ದ ಗಬೆಲ್ಸ್ ಮತ್ತು ಗೋರಿಂಗರನ್ನು ಅವನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡ. ಆಡಳಿತ ಯಂತ್ರದಲ್ಲೂ ತನ್ನ ಅನುಯಾಯಿಗಳನ್ನೇ ತುಂಬಿದ. 1933ರಿಂದ ಎರಡನೆಯ ಮಹಾಯುದ್ಧದ ಪ್ರಾರಂಭದವರೆಗೂ ನಾಟ್ಸಿ ಕ್ರಾಂತಿ ಒಂದೇ ಸಮನಾಗಿ ಮುಂದುವರಿಯಿತು. ಹಿಟ್ಲರ್ ತನ್ನ ಆತ್ಮಕಥೆಯಾದ ಮೈನ್ ಕಾಂಫ್‌ನಲ್ಲಿ ಜರ್ಮನಿಯ ಗತವೈಭವವನ್ನೂ ಸಮಕಾಲೀನ ದುಃಸ್ಥಿತಿಯನ್ನೂ ಮನಮುಟ್ಟುವಂತೆ ವರ್ಣಿಸಿದ. ಜರ್ಮನರು ಆರ್ಯನ್

ಎರಡನೆಯ ಮಹಾಯುದ್ಧಾನಂತರದ ಒಂದು ದೃಶ್ಯ, 1945. ಬೂಕನ್‌ವಾಲ್ಟ್‌ನಲ್ಲಿ ಇಂಥ ದೃಶ್ಯಗಳನ್ನು ಸಾರ್ವಜನಿಕರಿಗೆ ಬಲವಂತವಾಗಿ ತೋರಿಸಲಾಯಿತು

ಕುಲದವರೆಂದೂ ಸರ್ವಶ್ರೇಷ್ಠರೆಂದೂ ಹುರಿದುಂಬಿಸಿದ. ವರ್ಸೇಲ್ಸ್ ಒಪ್ಪಂದದ ಅನ್ಯಾಯಗಳನ್ನು ಉತ್ಪ್ರೇಕ್ಷೆಗೊಳಿಸಿ ಮಿತ್ರರಾಷ್ಟ್ರಗಳ ವಿರುದ್ಧ ಜರ್ಮನರನ್ನು ಉದ್ರೇಕಗೊಳಿಸಿದ. ರಕ್ಷಣಾ ಶಕ್ತಿಯನ್ನು ಬಲಗೊಳಿಸಿದ. ವಿರೋಧ ಪಕ್ಷಗಳನ್ನು ಹತ್ತಿಕ್ಕಿದ. 1933ರ ಜುಲೈ 14ರಂದು ಎಲ್ಲ ರಾಜಕೀಯ ಪಕ್ಷಗಳನ್ನೂ ಬಹಿಷ್ಕರಿಸಿ, ನಾಟ್ಸಿ ಪಕ್ಷವೊಂದೇ ಜರ್ಮನಿಯ ಮೇಲೆ ವಿಧಿಸಿದ ನಿಶ್ಶಸ್ತ್ರೀಕರಣ ಅನ್ಯಾಯವೆಂದು ಪ್ರತಿಭಟನೆ ಸೂಚಿಸಿ ರಾಷ್ಟ್ರಗಳ ಕೂಟದಿಂದ ಜರ್ಮನಿ ಹೊರಬಂತು. ಶಾಲಾ ಕಾಲೇಜು ಮತ್ತು ವೃತ್ತಪತ್ರಿಕೆಗಳು ಮತ್ತು ರೇಡಿಯೋಗಳ ಮೂಲಕ ನಾಟ್ಸಿತತ್ತ್ವವನ್ನು ಅವನು ದೇಶದಲ್ಲಿ ಪ್ರಚಾರಮಾಡಿದ. ನಾಟ್ಸಿ ತತ್ತ್ವವನ್ನು ವಿರೋಧಿಸಿದವರನ್ನು ಉಗ್ರವಾಗಿ ಶಿಕ್ಷಿಸಿದ. ಯೆಹೂದಿಗಳು ಚಿತ್ರಹಿಂಸೆಗೆ ಒಳಗಾದರು. ಅವರ ಆಸ್ತಿಗಳನ್ನು ಸರ್ಕಾರ ವಶಪಡಿಸಿಕೊಂಡಿತು. 1938ರ ವೇಳೆಗೆ ಆರು ಲಕ್ಷ ಮಂದಿ ಯೆಹೂದಿಗಳು ಕೊಲೆಯಾದರು.

ಜರ್ಮನಿಗೆ ರಾಜ್ಯದಾಹವಿಲ್ಲವೆಂದು ಹೇಳುತ್ತ, ಯುರೋಪಿನ ಬಲಿಷ್ಠ ರಾಷ್ಟ್ರಗಳು ಅಡ್ಡಿ ಬರದಂತೆ ಎಚ್ಚರ ವಹಿಸಿ, ಹಿಟ್ಲರ್ ತನ್ನ ಆಕ್ರಮಣಶೀಲ ಪ್ರವೃತ್ತಿ ಬೆಳೆಸಿಕೊಂಡ. 1935ರಲ್ಲಿ ಜನಮತ ಸಂಗ್ರಹದ ಮೂಲಕ ಸ್ಟಾರ್ ಜಿಲ್ಲೆಯನ್ನು ಜರ್ಮನಿಗೆ ಸೇರಿಸಿಕೊಂಡ. ವರ್ಸೇಲ್ಸ್ ಒಪ್ಪಂದವನ್ನು ಮುರಿದು ಜರ್ಮನಿಯಲ್ಲಿ ಕಡ್ಡಾಯ ಸೈನಿಕ ಶಿಕ್ಷಣವನ್ನು ಜಾರಿಗೆ ತಂದ. 1935ರಲ್ಲಿ ಆಂಗ್ಲೋ-ಜರ್ಮನ್ ಒಪ್ಪಂದವನ್ನು ಮಾಡಿಕೊಂಡು ಜರ್ಮನಿಯ ನೌಕಾಬಲವನ್ನು ವಿಸ್ತರಿಸಿದ. ಲೊಕಾರ್ನೊ ಒಪ್ಪಂದವನ್ನು ಮುರಿದು ರೈನ್‌ಲ್ಯಾಂಡ್‌ನಲ್ಲಿ ಜರ್ಮನ್ ಸೇನೆಯನ್ನು ಸ್ಥಾಪಿಸಿದ. 1936ರಲ್ಲಿ ಇಟಲಿಯ ಸರ್ವಾಧಿಕಾರಿ ಮುಸೋಲಿನಿಯೂ ಹಿಟ್ಲರನೂ ಬರ್ಲಿನ್-ರೋಮ್ ಸಖ್ಯದ ಒಪ್ಪಂದ ಮಾಡಿಕೊಂಡರು. ಅದೇ ವರ್ಷ ಕಮ್ಯೂನಿಸಂ ವಿಸ್ತರಣೆಯನ್ನು ತಡೆಯುವ ನೆಪದಲ್ಲಿ ಜಪಾನಿನೊಡನೆಯೂ ಮೈತ್ರಿಯ ಒಪ್ಪಂದವಾಯಿತು. 1937ರಲ್ಲಿ ಜರ್ಮನ್ ಬಲ ಸಾಕಷ್ಟು ವಿಸ್ತರಣೆಗೊಂಡಿತ್ತು. 1938ರಲ್ಲಿ ಜರ್ಮನಿಯ ಸೈನ್ಯ ಆಸ್ಟ್ರಿಯವನ್ನು ಆಕ್ರಮಿಸಿಕೊಂಡಿತು. ಜರ್ಮನಿ-ಆಸ್ಟ್ರಿಯ ಒಕ್ಕೂಟವನ್ನು ಘೋಷಿಸಲಾಯಿತು. 1938ರಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಉಂಟು ಮಾಡಿ, ಚೆಕೊಸ್ಲೊವಾಕಿಯವನ್ನೂ ಅವನು ಜರ್ಮನಿಗೆ ಸೇರಿಸಿಕೊಂಡ. 1938ರಲ್ಲಿ ಹಿಟ್ಲರನು ಜರ್ಮನಿ ಮತ್ತು ಪೋಲೆಂಡುಗಳ ಮಧ್ಯೆ ಏರ್ಪಟ್ಟಿದ್ದ ಪರಸ್ಪರ ರಕ್ಷಣಾ ಕೌಲನ್ನು ಮುರಿದು ಡ್ಯಾನ್ಸಿಗ್ ಪ್ರದೇಶವನ್ನು ಬಿಟ್ಟುಕೊಡುವಂತೆ ಪೋಲೆಂಡನ್ನು ಬಲಾತ್ಕರಿಸಿದ. ಪೋಲೆಂಡಿಗೆ ಬ್ರಿಟನ್ನಿನ ಸಹಾಯ ದೂರವಾಗುವುದೆಂದು ನಂಬಿ ಸೋವಿಯೆತ್ ದೇಶದೊಡನೆ ಒಪ್ಪಂದ ಮಾಡಿಕೊಂಡು ಪೋಲೆಂಡನ್ನು ಹಂಚಿಕೊಳ್ಳುವ ವ್ಯವಸ್ಥೆ ಮಾಡಿಕೊಂಡ. ಆದರೆ ಪೋಲೆಂಡಿನ ಆಕ್ರಮಣವೇನಾದರೂ ಸಂಭವಿಸಿದರೆ ಬ್ರಿಟನ್ನು ಪೋಲೆಂಡಿನ ಸಹಾಯಕ್ಕೆ ಬರುವುದಾಗಿ ಒಪ್ಪಂದ ಮಾಡಿಕೊಂಡಿತ್ತು. 1938ರ ಸೆಪ್ಟೆಂಬರ್

ಒಂದರಂದು ಜರ್ಮನ್ ಸೇನೆ ಪೋಲೆಂಡಿನ ಆಕ್ರಮಣವನ್ನಾರಂಭಿಸಿತು. ಸೆಪ್ಟೆಂಬರ್ 3ರಂದು ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿದುವು. ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. **(ನೋಡಿ– ಎರಡನೆಯ–ಮಹಾಯುದ್ಧ)**

1940ರ ಜುಲೈ ವೇಳೆಗೆ ಜರ್ಮನ್ ಸೇನೆಗಳು ನಾರ್ವೆ, ನೆದರ್‌ಲೆಂಡ್ಸ್, ಬೆಲ್ಜಿಯಂ, ಲುಕ್ಸೆಂಬರ್ಗ್‌ಗಳನ್ನು ಆಕ್ರಮಿಸಿಕೊಂಡುವು. ಇಂಗ್ಲೆಂಡನ್ನು ಆಕ್ರಮಿಸಲು ಜರ್ಮನಿ ಪ್ರಯತ್ನಿಸಿತು. ಹಂಗರಿ, ರೂಮೇನಿಯ, ಚೆಕೊಸ್ಲೊವಾಕಿಯ, ಬಲ್ಗೇರಿಯಗಳು ಜರ್ಮನಿಯ ನಿಯಂತ್ರಣಕ್ಕೊಳಗಾದುವು. 1942ರ ವೇಳೆಗೆ ಫ್ರಾನ್ಸು ಜರ್ಮನಿಯ ವಶವಾಯಿತು. ಜರ್ಮನಿಯ ಬಾಂಬ್ ದಾಳಿಯಿಂದ ಇಂಗ್ಲೆಂಡ್ ಹೆಚ್ಚು ಅನಾಹುತಕ್ಕೊಳಗಾಯಿತು. ಕ್ರಮೇಣ ಪ್ರಪಂಚದ ಅನೇಕ ಭಾಗಗಳಿಗೆ ಯುದ್ಧ ವ್ಯಾಪಿಸಿತು. ಹಿಟ್ಲರ್ ಸೋವಿಯೆತ್




**ಆಕ್ರಮಿತ ಜರ್ಮನಿ (1945–1949)**

ದೇಶದ ಆಕ್ರಮಣ ಪ್ರಾರಂಭಿಸಿದ. 1941ರ ಡಿಸೆಂಬರ್‌ನಲ್ಲಿ ಜಪಾನ್ ಅಮೆರಿಕದ ಪರ್ಲ್ ಹಾರ್ಬರ್‌ನ್ನು ದಾಳಿಮಾಡಿದ ಮೇಲೆ ಅಮೆರಿಕವೂ ಯುದ್ಧಕ್ಕೆ ಸೇರಬೇಕಾಯಿತು. 1943ರವರೆಗೆ ಜರ್ಮನಿ ಜಯದ ಹಾದಿಯಲ್ಲಿ ಮುಂದುವರಿಯಿತು. ಅನಂತರ ಕ್ರಮೇಣ ಸೋಲನ್ನನುಭವಿಸಲು ಪ್ರಾರಂಭಿಸಿತು. ಇಂಗ್ಲೆಂಡ್ ಅಮೆರಿಕಗಳು ಇಟಲಿಯ ಆಕ್ರಮಣವನ್ನು ಮುಂದುವರಿಸಿದುವು. 1943ರಲ್ಲಿ ಮುಸೊಲೀನಿ ಪದಚ್ಯುತನಾಗಿ ಹತನಾದ. ರಷ್ಯದ ಆಕ್ರಮಣದಲ್ಲಿ ಜರ್ಮನ್ ಸೇನೆಗಳು ಯಶಸ್ವಿಯಾಗಲಿಲ್ಲ. ಹಿಮ್ಮೆಟ್ಟುತ್ತಿದ್ದ ಸೋವಿಯೆತ್

**ಬರ್ಲಿನ್ ಗೋಡೆಯ ಒಂದು ಭಾಗ**

ಪಡೆಗಳು ಸ್ಟಾಲಿನ್‌ಗ್ರಾಡಿನಲ್ಲಿ ಜರ್ಮನ್ ಸೈನ್ಯವನ್ನು ಎದುರಿಸಿ ನಿಂತು ಹೋರಾಡಿ ಅಲ್ಲಿಂದ ಯುದ್ಧದ ದಿಕ್ಕನ್ನೇ ಬದಲಿಸಿದವು. 1944ರ ಕೊನೆಯ ವೇಳೆಗೆ ಜರ್ಮನಿಯನ್ನು ಪೂರ್ವಭಾಗದಲ್ಲಿ ಸೋವಿಯೆತ್ ಸೇನೆಯೂ ಪಶ್ಚಿಮದಿಂದ ಅಮೆರಿಕನ್ ಬ್ರಿಟಿಷ್ ಸೇನೆಗಳೂ ಆಕ್ರಮಿಸತೊಡಗಿದುವು. ಸೋವಿಯೆತ್ ದೇಶದ ಕೆಂಪು ಸೇನೆ 1945ರ ಪ್ರಾರಂಭದಲ್ಲಿ ಬರ್ಲಿನ್‌ವರೆಗೂ ಮುಂದುವರಿದುವು. ಬರ್ಲಿನ್ ಪತನ ಸನ್ನಿಹಿತವಾಯಿತು. ಹಿಟ್ಲರನೂ ಅವನ ಅನುಯಾಯಿಗಳನೇಕರೂ ಆತ್ಮಹತ್ಯೆ ಮಾಡಿಕೊಂಡರು. ಉಳಿದವರು ಮಿತ್ರರಾಷ್ಟ್ರ ಸೇನೆಗಳ ಕೈಗೆ ಸಿಕ್ಕಿಬಿದ್ದು ಅವರಲ್ಲಿ ಹಲವರು ಅನಂತರದ ವಿಚಾರಣೆಯಲ್ಲಿ ಮರಣದಂಡನೆಗೊಳಗಾದರು. 1945ರ ಮೇ 7 ರಂದು ಜರ್ಮನಿ ಮಿತ್ರರಾಷ್ಟ್ರಗಳಾದ ಅಮೆರಿಕ, ಗ್ರೇಟ್ ಬ್ರಿಟನ್, ಸೋವಿಯೆತ್ ದೇಶ ಮತ್ತು ಫ್ರಾನ್ಸ್‌ಗಳಿಗೆ ಷರತ್ತಿಲ್ಲದೆ ಶರಣಾಗತವಾಯಿತು.

ಜೂನ್ 5 ರಂದು ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ಸೋವಿಯೆತ್ ದೇಶ ನೇಮಿಸಿದ ಸೇನಾಧಿಕಾರಿಗಳೂ ಆಡಳಿತಾಧಿಕಾರಿಗಳೂ ಸೇರಿ ಬರ್ಲಿನ್‌ನಿಂದ ಜರ್ಮನಿಯ ಆಡಳಿತವನ್ನು ನಿರ್ವಹಿಸತಕ್ಕದ್ದೆಂದು ಘೋಷಿಸಿದವು. ಎರಡನೆಯ ಮಹಾಯುದ್ಧದ ಒಂದು ಪ್ರಮುಖ ಪರಿಣಾಮವೆಂದರೆ ಸೋವಿಯೆತ್ ಪ್ರಭುತ್ವ ಮತ್ತು ಪಾಶ್ಚಾತ್ಯ ಪ್ರಭುತ್ವಗಳು ಎರಡು ಪ್ರಬಲ ಬಣಗಳಾಗಿ ಪರಿವರ್ತನೆಯಾದ್ದು. 1946ರಲ್ಲಿ ಅಗ್ರರಾಷ್ಟ್ರಗಳ ಮುಖ್ಯರು ಸಭೆ ಸೇರಿ ಜರ್ಮನಿಯ ಆಡಳಿತಕ್ಕೆ ಸಂಬಂಧಿಸಿದ ಸೂತ್ರಗಳನ್ನು ರಚಿಸಿದರು. ಜರ್ಮನಿಯ ರಾಜಕೀಯ ಮತ್ತು ಆರ್ಥಿಕ ಆಡಳಿತವನ್ನು ಕೇಂದ್ರೀಕರಿಸಬೇಕೆಂದು ನಾಟ್ಸಿ ಆಳ್ವಿಕೆಯಲ್ಲಿ ಜಾರಿಗೆ ತಂದ ಕಾನೂನುಗಳನ್ನು ರದ್ದು ಗೊಳಿಸತಕ್ಕದ್ದೆಂದೂ ನ್ಯಾಯಾಂಗ ಮತ್ತು

**ಎಡ : ಚಕ್ರವರ್ತಿ ಮ್ಯಾಕ್ಸಿಮಿಲಿಯನ್ I (1459–1519)**
**ಬಲ : ಫ್ರೆಡರಿಕ್ ಮಹಾಶಯ II (1740–1786)**

ಶಿಕ್ಷಣ ಸುಧಾರಣೆ ವಿದ್ಯಾಭ್ಯಾಸ ಮಾಡತಕ್ಕದ್ದೆಂದೂ ಒಡಂಬಡಿಕೆಯಾಯಿತು. ಮಿತ್ರರಾಷ್ಟ್ರಗಳಿಗೆ ಸೇರಿದಂತೆ ಆಡಳಿತವಲಯಗಳೂ ವಿಂಗಡಣೆಯಾದವು. ರೂರ್, ರೈನ್‌ಲ್ಯಾಂಡ್ ಉತ್ತರಭಾಗ, ವೆಸ್ಟ್‌ಫೇಲಿಯ, ಹ್ಯಾನೋವರ್, ಓಲ್ಡೆನ್‌ಬರ್ಗ್, ಶ್ಲೆಸ್‌ವಿಗ್–ಹೋಲ್‌ಸ್ಟೈನ್, ಹ್ಯಾಂಬರ್ಗ್, ಬ್ರನ್ಸ್‌ವಿಕ್, ಹೆಲಿಗೋಲ್ಯಾಂಡ್ ಮತ್ತು ಫ್ರಿಸಿಯನ್ ದ್ವೀಪಗಳು ಬ್ರಿಟಿಷ್ ವಲಯಕ್ಕೂ, ಬವೇರಿಯ, ವರ್ಟೆಂಬರ್ಗ್‌ನ ಹಲವು ಭಾಗಗಳು, ಬ್ರೆಮೇನ್, ವಾಲ್ಡಿಕ್, ಹೆಸ್ ಪ್ರದೇಶಗಳು ಅಮೆರಿಕನ್ ವಲಯಕ್ಕೂ ರೈನ್‌ಲೆಂಡಿನ ದಕ್ಷಿಣಭಾಗ, ಸಾರ್ ಕಣಿವೆ, ಬಾಡೆನ್ ಪ್ರದೇಶಗಳು ಫ್ರೆಂಚ್ ವಲಯಕ್ಕೂ ಮೆಕ್ಲನ್‌ಬರ್ಗ್, ಬ್ರ್ಯಾಂಡೆನ್‌ಬರ್ಗ್, ಓಡರ್ ನದಿಯ ಪಶ್ಚಿಮಭಾಗ, ಟ್ಯುರಿಂಜಿಯ ಮತ್ತು ಸ್ಯಾಕ್ಸನಿಗಳು ಸೋವಿಯೆತ್ ವಲಯಕ್ಕೂ ಸೇರತಕ್ಕದ್ದೆಂದು ತೀರ್ಮಾನವಾಯಿತು. ಬರ್ಲಿನ್ ನಗರ 5ನೆಯ ವಲಯವಾಗಿದ್ದು ಹಿಂದೆ ಹೇಳಿದ ನಾಲ್ಕು ವಲಯಗಳಲ್ಲಿ ವಿಂಗಡಣೆಯಾಯಿತು.

ಆದರೆ 1946ರ ವೇಳೆಗೆ ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕದ ಹತೋಟಿಗೆ ಒಳಪಟ್ಟ ಪಶ್ಚಿಮದ ಪ್ರದೇಶಗಳು ಪಶ್ಚಿಮ ಜರ್ಮನಿಯೆಂದೂ ಸೋವಿಯೆತ್ ಹತೋಟಿಗೆ ಒಳಪಟ್ಟ ಪೂರ್ವಭಾಗ ಪೂರ್ವ–ಜರ್ಮನಿ ಎಂದೂ ಎರಡು ವಲಯಗಳಾಗಿ ಖಚಿತಗೊಂಡುವು. ಯುದ್ಧಾನಂತರ ಅಮೆರಿಕ ಮತ್ತು ಸೋವಿಯೆತ್ ದೇಶಗಳ ಮಧ್ಯೆ ಬೆಳೆದ ಶೀತಲಯುದ್ಧ ಇದಕ್ಕೆ ಕಾರಣ. ಎರಡು ಬಣಗಳ ಮಧ್ಯೆ ಒಪ್ಪಂದದ ಪ್ರಯತ್ನಗಳು ಮುರಿದುಬಿದ್ದುದರಿಂದ ಜರ್ಮನಿ ಎರಡು ಭಾಗವಾಯಿತು. ಪಶ್ಚಿಮ ಜರ್ಮನಿಯಲ್ಲಿ ಪಾಶ್ಚಾತ್ಯ ರಾಜಕೀಯ ಆರ್ಥಿಕ ವ್ಯವಸ್ಥೆಯೂ ಪೂರ್ವ ಜರ್ಮನಿಯಲ್ಲಿ ಕಮ್ಯೂನಿಸ್ಟ್ ವ್ಯವಸ್ಥೆಯೂ ಸ್ಥಿರವಾದುವು. ಇಡೀ ಜರ್ಮನಿಗೆ ಅನ್ವಯಿಸುವ ಆಡಳಿತ, ಆರ್ಥಿಕ ಮತ್ತು ಕಾನೂನುಗಳ ರಚನೆಗೆ ಸಂಬಂಧಿಸಿದಂತೆ 1947ರಲ್ಲಿ ಲಂಡನ್ ಮತ್ತು 1948ರಲ್ಲಿ ಪ್ಯಾರಿಸ್ಸಿನಲ್ಲಿ ನಾಲ್ಕು ರಾಷ್ಟ್ರಗಳ ಮಧ್ಯೆ ನಡೆದ ಮಾತುಕತೆಗಳು ಫಲಕಾರಿಯಾಗಲಿಲ್ಲ. ಆದ್ದರಿಂದ ಜರ್ಮನಿ ಇಬ್ಭಾಗವಾಗಿ ಮುಂದುವರಿಯುವುದೆಂದು ನಿರ್ಧಾರವಾಯಿತು. ಬರ್ಲಿನ್ ನಗರ ಪೂರ್ವಭಾಗ ಪೂರ್ವ ಜರ್ಮನಿಯ ರಾಜಧಾನಿ. ಪಶ್ಚಿಮ ಬರ್ಲಿನ್ ಪಶ್ಚಿಮ ಜರ್ಮನಿಗೆ ಸೇರಿದ್ದರೂ ಬಾನ್ ಅದರ ರಾಜಧಾನಿಯಾಯಿತು.

1948ರಲ್ಲಿ ಫ್ರಾನ್ಸ್, ಬ್ರಿಟನ್, ಅಮೆರಿಕ ಸರ್ಕಾರಗಳು ಸಂವಿಧಾನ ರಚಿಸಿಕೊಳ್ಳಲು ಕರೆ ನೀಡಿದುವು. ಸೆಪ್ಟೆಂಬರ್ 1, 1948ರಲ್ಲಿ ಸಂವಿಧಾನವನ್ನು ರಚಿಸಿದರು. ಬಾನ್ ಸಂವಿಧಾನ ಅನುಮೋದಿಸಲ್ಪಟ್ಟಿತು. 1949ರ ಮೇ ತಿಂಗಳಲ್ಲಿ ಪಶ್ಚಿಮ ಜರ್ಮನಿ ಸಂಯುಕ್ತ ಗಣರಾಜ್ಯವಾಗಿ ಘೋಷಿಸಲ್ಪಟ್ಟಿತು. ಸಂವಿಧಾನದ ಪ್ರಕಾರ ಒಬ್ಬ ಅಧ್ಯಕ್ಷ ಮತ್ತು ಎರಡು ಪ್ರತಿನಿಧಿ ಸಭೆಗಳನ್ನೊಳಗೊಂಡ ಶಾಸಕಾಂಗ ಸ್ಥಾಪಿತವಾಯಿತು. ಆಗಸ್ಟ್ ತಿಂಗಳಲ್ಲಿ ಚುನಾವಣೆಗಳು ನಡೆದುವು. ಅಲ್ಲಿಂದ ಮುಂದಕ್ಕೆ ಜರ್ಮನ್ ಪ್ರಜಾಪ್ರಭುತ್ವ ವ್ಯವಸ್ಥೆ ನಡೆದುಕೊಂಡು ಬಂದಿದೆ.

ಸೋವಿಯೆತ್ ಹತೋಟಿಯಲ್ಲುಳಿದ ಪೂರ್ವ ಜರ್ಮನಿಯಲ್ಲಿ ಸೋಷಿಯಲಿಸ್ಟ್ ಯೂನಿಟಿ ಪಕ್ಷ ಸ್ಥಾಪನೆಯಾಗಿ 1949ರ ಅಕ್ಟೋಬರ್ 7ರಂದು ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯ ಸ್ಥಾಪನೆಯಾಯಿತು. ಪೂರ್ವ ಜರ್ಮನಿ ಯುದ್ಧ ಪರಿಹಾರವಾಗಿ ಕೊಡಬೇಕಾಗಿದ್ದ ಹಣವನ್ನು ಸೋವಿಯೆತ್ ದೇಶ 1954ರಲ್ಲಿ ಮನ್ನಾ ಮಾಡಿತು. ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯ ಸ್ವತಂತ್ರ ರಾಷ್ಟ್ರವೆಂದು 1954ರ ಮಾರ್ಚ್ 25 ರಂದು ಅದು ಘೋಷಿಸಿತು.

(ಜಿ.ಆರ್.ಆರ್)

### iv ಸಂವಿಧಾನ ಮತ್ತು ಆಡಳಿತ

ಪೂರ್ವಪಶ್ಚಿಮ ಜರ್ಮನಿಯೆಂದು ವಿಭಾಗಿಸಿ ಅವುಗಳ ಆಡಳಿತ ಯುದ್ಧ ವಿಜೇತ ರಾಷ್ಟ್ರಗಳು ತಮ್ಮ ದೇಶದಲ್ಲಿನ ಆರ್ಥಿಕತೆ, ಸಾಮಾಜಿಕ, ರಾಜಕೀಯ ಇತ್ಯಾದಿಗನುಗುಣವಾಗಿ ನಿರೂಪಿಸಿದವು. ಆಗಿನ ಆಡಳಿತವನ್ನು ಮೊದಲು ಗಮನಿಸಿ ಅನಂತರ ಏಕೀಕೃತ ಜರ್ಮನಿಯ ಸಂವಿಧಾನ ಮತ್ತು ಆಡಳಿತವನ್ನು ಗಮನಿಸೋಣ.

ಹ್ಯಾನ್-ಸಾಕ್ಸ್ ಬಯಲು ನಾಟಕ, ನ್ಯೂರೆನ್ ಬರ್ಗ್

ಪಶ್ಚಿಮ ಜರ್ಮನಿ : ಎರಡನೆಯ ಮಹಾಯುದ್ಧದ ಅನಂತರ ಬ್ರಿಟಿಷ್, ಅಮೆರಿಕ ಮತ್ತು ಫ್ರೆಂಚ್ ಆಧಿಪತ್ಯಕ್ಕೆ ಒಳಪಟ್ಟಿದ್ದ ಜರ್ಮನ್ ಭೂಪ್ರದೇಶಗಳು ಸೇರಿ ಪಶ್ಚಿಮ ಜರ್ಮನಿ ಆಗಿದೆ. ಜರ್ಮನಿ ಸಂಯುಕ್ತ ಗಣರಾಜ್ಯ ಎಂಬುದು ಅಧಿಕೃತ ಹೆಸರು. ಇದರ ಸಂವಿಧಾನಕ್ಕೆ ಮೂಲ ನ್ಯಾಯ (ಬೇಸಿಕ್ ಲಾ) ಎಂದು ಹೆಸರು. ಇದು ತಾತ್ಕಾಲಿಕ. ಇಡೀ ಜರ್ಮನಿಗೆ ಖಾಯಂ ಸಂವಿಧಾನವೊಂದು ರಚಿತವಾಗುವವರೆಗೂ ಇದು ಜಾರಿಯಲ್ಲಿತ್ತು. ಇದು ಬಹುಮಟ್ಟಿಗೆ ವೈಮಾರ್ ಸಂವಿಧಾನವನ್ನೇ ಹೋಲುತ್ತದೆ. ಇದು ಸಂಯುಕ್ತ, ಸಾಮಾಜಿಕ ಗಣರಾಜ್ಯ ಪ್ರರೂಪಿ ಸಂವಿಧಾನ. ಕೇಂದ್ರಾಧಿಕಾರಕ್ಕೆ ಹೆಚ್ಚಿನ ಪ್ರಾಮುಖ್ಯವಿತ್ತು.

ಬಾನ್ ಪುರಭವನದ ಎದುರಿನ ಮಾರುಕಟ್ಟೆ

ರಾಷ್ಟ್ರದ ಸಂವಿಧಾನಕ್ಕೆ ಅನುರೂಪವೂ ಅವಿರುದ್ಧವೂ ಆದಂಥ ನ್ಯಾಯಬದ್ಧ ಸಂವಿಧಾನಗಳನ್ನು ಹೊಂದಲು ರಾಜ್ಯಗಳಿಗೆ (ಲೆಂಡರ್) ಸ್ವಾತಂತ್ರ್ಯವುಂಟು. ಗ್ರಾಮ, ಜಿಲ್ಲೆ ಹಾಗೂ ರಾಜ್ಯಮಟ್ಟಗಳಲ್ಲಿ ಪ್ರತಿನಿಧಿಸಭೆಗಳಿದ್ದವು. ಗಣತಂತ್ರಾತ್ಮಕ ಚುನಾವಣೆಗಳ ಮೂಲಕ ಆಯ್ಕೆಯಾದ ವ್ಯಕ್ತಿಗಳು ಈ ಶಾಸನಸಭೆಗಳಲ್ಲಿ ಜನತೆಯನ್ನು ಪ್ರತಿನಿಧಿಸುತ್ತಾರೆ. ರಾಜ್ಯ ನಿಯಮಗಳು ಸಮಸ್ಯಾತ್ಮಕವಾದಂಥ ಸಂದರ್ಭಗಳಲ್ಲಿ ಕೇಂದ್ರನಿಯಮವೇ ಗ್ರಾಹ್ಯವೂ ಅಂಗೀಕಾರಾರ್ಹವೂ ಆಗಿರುತ್ತದೆ. ರಾಜಕೀಯ ಪಕ್ಷಗಳನ್ನು ಸ್ಥಾಪಿಸುವ ಹಕ್ಕು ಜನತೆಗೆ ಇದೆಯಾದರೂ ಅವುಗಳ ವ್ಯವಸ್ಥೆ ಗಣತಂತ್ರಾತ್ಮಕವಾಗಿರಲೇಬೇಕು. ರಾಷ್ಟ್ರದ ಭದ್ರತೆ ಹಾಗೂ ಏಕತೆಗೆ ಭಂಗ ತರುವಂಥ ಪಕ್ಷಗಳನ್ನು ಅಸಂವಿಧಾನಾತ್ಮಕವೆಂದು ಪರಿಗಣಿಸಲಾಗುತ್ತದೆ. ರಾಷ್ಟ್ರದ ಹಿತದೃಷ್ಟಿಯಿಂದ ಅಗತ್ಯವೆನಿಸಿದಲ್ಲಿ, ಪರಸ್ಪರ ಭದ್ರತೆಯ ಆಧಾರದ ಮೇಲೆ, ರಾಷ್ಟ್ರ ಯಾವುದೇ ಕೂಟವನ್ನಾದರೂ ಸೇರಬಹುದು. ಪ್ರಾದೇಶಿಕ ಏಕತೆ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಸಂಪರ್ಕಗಳು, ಆರ್ಥಿಕ ಹಾಗೂ ಸಾಮಾಜಿಕ ಸಂಗತಿಗಳು-ಇವನ್ನು ದೃಷ್ಟಿಯಲ್ಲಿರಿಸಿಕೊಂಡು ಪಶ್ಚಿಮ ಜರ್ಮನಿಯನ್ನು ರಾಜ್ಯಗಳಾಗಿ ವಿಂಗಡಿಸಲಾಗಿದೆ. 21 ವರ್ಷ ವಯಸ್ಸಿನ ಎಲ್ಲ ಪೌರರಿಗೂ ಮತಾಧಿಕಾರವುಂಟು. 25 ವರ್ಷ ವಯಸ್ಸನ್ನು ಮೀರಿದ ಯಾವುದೇ ವ್ಯಕ್ತಿ ಚುನಾವಣೆಗಳಲ್ಲಿ ಸ್ಪರ್ಧಿಸಬಹುದು.

ಸಂವಿಧಾನ ಎಲ್ಲ ಪೌರರಿಗೂ ಸಮಾನ ಹಕ್ಕುಗಳನ್ನೂ ಸಮಾನ ಕರ್ತವ್ಯಗಳನ್ನೂ ವಿಧಿಸಿದೆ. ನ್ಯಾಯದತ್ತವಾದ ಹಕ್ಕುಗಳಿಂದ ಯಾರೂ ಯಾರನ್ನೂ ವಂಚಿಸುವಂತಿಲ್ಲ. ಸಂಯುಕ್ತ ಸಂವಿಧಾನಾತ್ಮಕ ನ್ಯಾಯಾಲಯ (ಫೆಡರಲ್ ಕಾನ್ಸ್ಟಿಟ್ಯೂಷನ್ ಕೋರ್ಟ್) ಮತ್ತು ಸರ್ವೋಚ್ಚ ಸಂಯುಕ್ತ ನ್ಯಾಯಾಲಯ (ಸುಪ್ರೀಮ್ ಫೆಡರಲ್ ಕೋರ್ಟ್)-ಇವೇ ಪ್ರಧಾನ ನ್ಯಾಯಾಲಯಗಳು. ಸಂವಿಧಾನದ ಬಗ್ಗೆ ಏನಾದರೂ ಸಂದೇಹ ಉದ್ಭವಿಸಿದಾಗ, ರಾಜ್ಯ ಮತ್ತು ಸಂಯುಕ್ತ ಸರ್ಕಾರಗಳ ಅಥವಾ ರಾಜ್ಯ ರಾಜ್ಯಗಳ ನಡುವೆ ವಿವಾದ ಉಂಟಾದಾಗ ಸಂಯುಕ್ತ ಸಂವಿಧಾನಾತ್ಮಕ ನ್ಯಾಯಾಲಯದ ತೀರ್ಪು ಸರ್ವಮಾನ್ಯವಾಗುತ್ತದೆ. ಆಡಳಿತ ಮತ್ತು ಕಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ ಸಾಮಾಜಿಕ, ಆರ್ಥಿಕ ಮತ್ತಿತರ ಸಾಮಾನ್ಯ ವ್ಯವಹಾರಗಳ ಇತ್ಯರ್ಥದ ಹೊಣೆ ಸರ್ವೋಚ್ಚ ಸಂಯುಕ್ತ ನ್ಯಾಯಾಲಯಕ್ಕೆ ಸಂಬಂಧಿಸಿದ್ದು. ಮರಣದಂಡನೆಯನ್ನು ರದ್ದುಪಡಿಸಲಾಗಿದೆ.

ಪಶ್ಚಿಮ ಜರ್ಮನಿಯ ಶಾಸಕಾಂಗ ಈ ಪ್ರಕಾರವಾಗಿದೆ : 1 ಬುಂಡೆಸ್ಟಾಕ್ : ಇದು ಕೆಳಸದನ, ಇದಕ್ಕೆ ಸದಸ್ಯರನ್ನು (ಡೆಪ್ಯೂಟಿ) ಸಾರ್ವತ್ರಿಕ ಸ್ವತಂತ್ರ ಸಮಾನ ನೇರ ಮತ್ತು ರಹಸ್ಯ ಮತದಾನದ ಮೂಲಕ ಆರಿಸಲಾಗುತ್ತದೆ. ಸದಸ್ಯತ್ವದ ಅವಧಿ ನಾಲ್ಕು ವರ್ಷ. 2 ಬುಂಡೆಸ್ರಾಟ್ : ಇದು ಮೇಲಣ ಸದನ, ಸಂಯುಕ್ತ ಪರಿಷತ್ತು. ಸಂಯುಕ್ತರಾಜ್ಯದ ವಿಧಾನ, ಕಾರ್ಯ ಮತ್ತು ಆಡಳಿತಗಳಲ್ಲಿ ರಾಜ್ಯಗಳು ಪಾಲ್ಗೊಳ್ಳುವುದು ಈ ಸದನದ ಮೂಲಕ. ಇದು ರಾಜ್ಯಸರ್ಕಾರಗಳ ಸದಸ್ಯರಿಂದ ಕೂಡಿರುತ್ತದೆ. ಅವರನ್ನು ರಾಜ್ಯಸರ್ಕಾರಗಳು ನೇಮಕ ಮಾಡುವ, ಪ್ರತ್ಯಾಹ್ವಾನಿಸುವ ಅಧಿಕಾರ ಹೊಂದಿತ್ತು. ಪ್ರತಿಯೊಂದು ರಾಜ್ಯಕ್ಕೂ ಕನಿಷ್ಠ ಮೂರು ಮತಗಳಿರುತ್ತವೆ. ಇಪ್ಪತ್ತು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ರಾಜ್ಯ ನಾಲ್ಕು ಮತಗಳನ್ನೂ ಅರವತ್ತು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ರಾಜ್ಯ ಐದು ಮತಗಳನ್ನೂ ಹೊಂದಿರುತ್ತದೆ. ಪ್ರತಿಯೊಂದು ರಾಜ್ಯ ಮತಗಳನ್ನೂ ಇಡಿಯಾಗಿಯೇ

ಚಲಾಯಿಸಬೇಕು. ಬುಂಡೆಸ್ಟಾಕ್‌ನ ಸದಸ್ಯರಿಂದ ಮತ್ತು ರಾಜ್ಯ ಸಂಸತ್ತುಗಳು ಆಯ್ಕೆ ಮಾಡಿದ ಅಷ್ಟೇ ಸಂಖ್ಯೆಯ ಸದಸ್ಯರಿಂದ ಕೂಡಿದ (ಬುಂಡೆಸ್‌ಫರ್‌ಸಾಮ್ಲುಂಗ್) ಸಂಯುಕ್ತ ಸಭೆ ಅಧ್ಯಕ್ಷನನ್ನು ಆಯ್ಕೆ ಮಾಡುತ್ತದೆ. ಅವನ ಅಧಿಕಾರಾವಧಿ ಐದು ವರ್ಷವಿತ್ತು.

ಸಂಯುಕ್ತ ರಾಜ್ಯ ಸರ್ಕಾರದಲ್ಲಿ ಸಂಯುಕ್ತ ರಾಜ್ಯದ ಚಾನ್ಸಲರ್ ಹಾಗೂ ಮಂತ್ರಿಗಳು ಇರುತ್ತಾರೆ. ಅಧ್ಯಕ್ಷನ ಸೂಚನೆಯಂತೆ ಚಾನ್ಸಲರ್ ಬುಂಡೆಸ್ಟಾಕ್‌ನಿಂದ ಬಹುಮತದ ಆಧಾರದ ಮೇಲೆ ಆಯ್ಕೆಯಾಗುತ್ತಾನೆ. ಚಾನ್ಸಲರನ ಸೂಚನೆಯ ಮೇರೆಗೆ ರಾಷ್ಟ್ರದ ಅಧ್ಯಕ್ಷ ಮಂತ್ರಿಗಳನ್ನು ನೇಮಿಸುತ್ತಾನೆ.

ಬುಂಡೆಸ್ಟಾಕ್‌ನಲ್ಲಿ ಅಂಗೀಕೃತವಾದ, ಬುಂಡೆಸ್ರಾಟ್‌ನಿಂದ ಅನುಮೋದಿತವಾದ ವಿಧೇಯಕಗಳು ಸಂಯುಕ್ತರಾಜ್ಯದ ಅಧಿನಿಯಮಗಳೆನ್ನಿಸುತ್ತವೆ. ಬುಂಡೆಸ್ರಾಟ್‌ಗೆ ಸೀಮಿತವಾದ ವೀಟೋ ಅಧಿಕಾರ ವುಂಟು. ಮೂಲನ್ಯಾಯವನ್ನು ತಿದ್ದುಪಡಿ ಮಾಡಲು ಬುಂಡೆಸ್ಟಾಕ್ ಹಾಗೂ ಬುಂಡೆಸ್ರಾಟ್‌ನ 2/3ರಷ್ಟು ಬಹುಮತ ಅವಶ್ಯ. ವಿದೇಶಾಂಗ ವ್ಯವಹಾರ, ನಾಣ್ಯ ವ್ಯವಸ್ಥೆ, ತೂಕ–ಅಳತೆ ಮುಂತಾದ ವ್ಯವಸ್ಥೆಗಳ ನಿಯಂತ್ರಣ; ಪೌರತ್ವ, ವಲಸೆ, ತೆರಿಗೆ, ಗಡಿರಕ್ಷಣೆ, ನೌಕಾವ್ಯವಸ್ಥೆ, ರೈಲು ಹಾಗೂ ವಿಮಾನಯಾನ ವ್ಯವಸ್ಥೆ, ಅಂಚೆ ಮತ್ತು ದೂರಸಂಪರ್ಕ ವ್ಯವಸ್ಥೆ, ವ್ಯಾಪಾರಚಿಹ್ನೆ ಹಕ್ಕು, ಪ್ರಕಟಣೆಯ ಹಕ್ಕು, ಪೋಲೀಸ್, ಅಂತಾರಾಷ್ಟ್ರೀಯ ಅಪರಾಧ ಶೋಧನ ವ್ಯವಸ್ಥೆ ಮುಂತಾದುವುಗಳ ಮೇಲ್ವಿಚಾರಣೆ; ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವಣ ಸಂವಿಧಾನಾತ್ಮಕ ಸಮಸ್ಯೆಗಳು; ರಾಷ್ಟ್ರೀಯ ಅಂಕಿ–ಅಂಶಗಳ ಸಂಕಲನ ಹಾಗೂ ಪ್ರಕಟಣೆ–ಇವೇ ಮೊದಲಾದ ವಿಚಾರಗಳಿಗೆ ಸಂಬಂಧಿಸಿದಂತೆ ಸೂಕ್ತ ನಿಯಮಗಳನ್ನು ರೂಪಿಸುವ ಅಧಿಕಾರ ಬುಂಡೆಸ್ಟಾಕ್‌ಗೆ ಸೇರಿದ್ದು.

ಆಧುನಿಕ ಆಭರಣ, ಷ್ಮುಕ್ ಮ್ಯೂಸಿಯಮ್, ಫಾರ್ಟ್ಸ್‌ಹೈಮ್

ಸೋಷಿಯಲ್ ಡೆಮೊಕ್ರಾಟಿಕ್ ಪಾರ್ಟಿ, ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಯೂನಿಯನ್, ಫ್ರೀ ಡೆಮೊಕ್ರಾಟಿಕ್ ಪಾರ್ಟಿ ಮತ್ತು ಕ್ರಿಶ್ಚಿಯನ್ ಸೋಷಿಯಲ್ ಯೂನಿಯನ್–ಇವು ಪಶ್ಚಿಮ ಜರ್ಮನಿಯ ರಾಜಕೀಯ ಕ್ಷೇತ್ರದಲ್ಲಿ ಗಮನಾರ್ಹ ಪಾತ್ರ ವಹಿಸುತ್ತಿರುವ ರಾಜಕೀಯ ಪಕ್ಷಗಳು.

**ಪೂರ್ವ ಜರ್ಮನಿ :** ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಕರೆಯಲಾಗಿತ್ತು. 1949ರಲ್ಲಿ, ಜರ್ಮನಿ ಸಂಯುಕ್ತ ಗಣರಾಜ್ಯ ಸ್ಥಾಪನೆಯಾದ ಮೇಲೆ, ಸೋವಿಯೆತ್ ಆಡಳಿತಕ್ಕೆ ಒಳಪಟ್ಟಿದ್ದ ಪೂರ್ವ ಜರ್ಮನಿ ತನ್ನದೇ ಆದ ಒಂದು ಸಂವಿಧಾನ ರಚಿಸಿಕೊಂಡಿತು. ಇದರ ರಾಜಧಾನಿ ಬರ್ಲಿನ್. ಇಲ್ಲಿಯ ಸರ್ಕಾರ ಸೋವಿಯೆತ್ ಮಾದರಿಯದು. ವಯಸ್ಸು 18 ತುಂಬಿದ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಎಲ್ಲ ಪ್ರಜೆಗಳಿಗೂ ಫೋಕ್ಸ್‌ಕಾಮರ್‌ಗೆ (ಜನಸಭೆ) ಪ್ರತಿನಿಧಿಗಳ ಆಯ್ಕೆಗೆ ಮತ ನೀಡುವ ಹಕ್ಕು ಇದ್ದಿತು. ಈ ಪ್ರತಿನಿಧಿಗಳು ಪ್ರಿಸಿಡಿಯಂ ಮತ್ತು ಷ್ಟಾಟ್ಸ್‌ರಾಟ್‌ಗಳನ್ನೂ (ರಾಜ್ಯ ಪರಿಷತ್ತು) ರಾಷ್ಟ್ರಾಧ್ಯಕ್ಷನನ್ನೂ ಆಯ್ಕೆ ಮಾಡುತ್ತಿದ್ದರು. ಮಂತ್ರಿ ಪರಿಷತ್ತಿನ ಅಧ್ಯಕ್ಷನನ್ನು ಆಯ್ಕೆ ಮಾಡುವುದೂ ಫೋಕ್ಸ್‌ಕಾಮರ್ ಆಗಿತ್ತು.

ಫೋಕ್ಸ್‌ಕಾಮರ್ ಪೂರ್ವ ಜರ್ಮನಿಯ ರಾಜ್ಯಾಧಿಕಾರದ ಪರಮೋಚ್ಚ ಅಂಗವಾಗಿ ಇದರಲ್ಲಿ 500 ಡೆಪ್ಯೂಟಿಗಳಿರುತ್ತಿದ್ದರು. ಸ್ವತಂತ್ರ ಹಾಗೂ ರಹಸ್ಯ ಮತದಾನದಿಂದ ಇದಕ್ಕೆ ಆಯ್ಕೆ ನಡೆಯುತಿತ್ತು. ಸಂಪೂರ್ಣ ಅಧಿವೇಶನವನ್ನು ನಡೆಸಲು ಈ ಸಭೆ ಪ್ರಿಸಿಡಿಯಮನ್ನು ಚುನಾಯಿಸುತ್ತದೆ. ಷ್ಟಾಟ್ಸ್‌ರಾಟ್ ಎಂಬದು ಫೋಕ್ಸ್‌ಕಾಮರ್‌ನ ಅಂಗ. ಫೋಕ್ಸ್‌ಕಾಮರ್‌ನ ಅಧಿವೇಶನ ಇಲ್ಲದಾಗ ಇದು ಕಾರ್ಯನಿರತವಾಗಿರುತ್ತದೆ. ಫೋಕ್ಸ್‌ಕಾಮರ್‌ನಿಂದ ಇದಕ್ಕೆ ಆಯ್ಕೆ ಆಗುತ್ತದೆ. ಫೋಕ್ಸ್‌ಕಾಮರ್‌ಗೆ ಒಪ್ಪಿಸಬೇಕಾದ ವಿಧೇಯಕಗಳನ್ನು ಇದು ಪರಿಶೀಲಿಸುತ್ತಿತ್ತು. ಅದರ ಕಾನೂನುಗಳು ಮತ್ತು ತೀರ್ಮಾನಗಳಿಂದ ಉದ್ಭವಿಸುವ ಎಲ್ಲ ಕಲಾಪಗಳನ್ನೂ ನಡೆಸುತ್ತಿತ್ತು. ಫೋಕ್ಸ್‌ಕಾಮರ್‌ನ ಪರವಾಗಿ ರಾಜ್ಯದ ಆಡಳಿತ ನಡೆಸುವುದು ಮಂತ್ರಿಗಳ ಪರಿಷತ್ತಿನ ಕಾರ್ಯಭಾರ. ಮಂತ್ರಿ ಪರಿಷತ್ತು ಫೋಕ್ಸ್‌ಕಾಮರ್‌ಗೆ ಹೊಣೆ. ಜಿಲ್ಲೆ, ನಗರ, ಪ್ರದೇಶ, ಮುನಿಸಿಪಲ್ ಬರೋ ಮತ್ತು ಸ್ಥಳೀಯ ಸಮುದಾಯಗಳಿಗೆ ಸಂಬಂಧಿಸಿದ, ಸ್ಥಳೀಯ ವಿಚಾರಗಳ ಇತ್ಯರ್ಥ, ಯೋಜನೆ, ಆಯವ್ಯಯಇವುಗಳ ನಿರ್ವಹಣೆಗೆ ಪ್ರತ್ಯೇಕ ಚುನಾಯಿತ ಅಂಗಗಳು. ಈ ಅಂಗಗಳಿಗೆ ಅವುಗಳದೇ ಆದ ಪರಿಷತ್ತುಗಳೂ ಸಮಿತಿಗಳೂ ಇದ್ದವು.

ಪಾದಚಾರಿಗಳ ಸೇತುವೆ, ಲೈಪ್ಸಿಗ್

ನ್ಯಾಯ ವಿತರಣೆಗೆ ಪರಮೋಚ್ಚ ನ್ಯಾಯಾಲಯವೂ ಜಿಲ್ಲಾ ನ್ಯಾಯಾಲಯಗಳೂ ಪ್ರಾದೇಶಿಕ ಹಾಗೂ ಸಾಮಾಜಿಕ ನ್ಯಾಯಾಲಯಗಳೂ ಇವೆ. ಎಲ್ಲ ನ್ಯಾಯಮೂರ್ತಿಗಳೂ ಜನಪ್ರತಿನಿಧಿ ಸಂಸ್ಥೆಗಳಿಂದ ಅಥವಾ ಪ್ರಜೆಗಳಿಂದ ಆಯ್ಕೆ ಹೊಂದುತ್ತಿದ್ದರು. ಅವರು ಪ್ರಾಜ್ಞರೂ ಅನುಭವಿಗಳೂ ಆಗಿರಬೇಕು. ಸಮಾಜವಾದಿ ರಾಜ್ಯಕ್ಕೆ ವಿಧೇಯರಾಗಿರಬೇಕು.

## V ಆರ್ಥಿಕತೆ

ಪೂರ್ವ ಪಶ್ಚಿಮ ಜರ್ಮನಿಯೆಂದು ಆಗ ವಿಂಗಡಿಸಿದ್ದು ಆರ್ಥಿಕತೆಯನ್ನು ಬೇರೆ ಬೇರೆಯಾಗಿ ಪರಿಗಣಿಸಲಾಗಿತ್ತು. ಆದರೆ ಇಡೀ ಜರ್ಮನಿಯ ಪ್ರಕೃತಿದತ್ತ ಭೂ ಜಲ ಅರಣ್ಯ ಸಂಪತ್ತು ಸೌಲಭ್ಯಗಳು ಒಂದೇ ಆಗಿದ್ದು ಸಾಮಾನ್ಯವಾಗಿ ಆರ್ಥಿಕತೆಯೂ ಇವುಗಳನ್ನೇ ಅವಲಂಬಿಸಿ ಒಂದೇ ಬಗೆಯಾಗಿತ್ತೆಂದು ಹೇಳಬಹುದು. ಪಶ್ಚಿಮ ಜರ್ಮನಿಯ ಆರ್ಥಿಕತೆಯಲ್ಲಿ ವ್ಯವಸಾಯ ಪ್ರಮುಖ ಪಾತ್ರ ವಹಿಸುತ್ತಿದೆ. ಸರ್ಕಾರವೂ ವ್ಯವಸಾಯಕ್ಕೆ ಬೆಂಬಲವಾಗಿ ನಿಂತು ವ್ಯವಸಾಯದ ವೈಜ್ಞಾನಿಕ ವಿಧಾನಗಳನ್ನು ಅನುಸರಿಸುವಂತೆ ಹಾಗೂ ಸ್ಥಳೀಯವಾಗಿ ಉತ್ಪಾದಿಸದ ರಾಸಾಯನಿಕ ಗೊಬ್ಬರಗಳನ್ನು ವ್ಯಾಪಕವಾಗಿ ಬಳಸುವಂತೆ ರೈತರಿಗೆ ಪ್ರೋತ್ಸಾಹ ಕೊಡುತ್ತಿದೆ. ಉತ್ತರದಲ್ಲಿ ಭೂಮಿ ಅಷ್ಟು ಫಲವತ್ತಾಗಿಲ್ಲ; ವಾಯುಗುಣ ಹಿತಕರವಾಗಿಲ್ಲ. ಅಲ್ಲಿ ರೈ, ಓಟ್ಸ್ ಮುಖ್ಯ ಬೆಳೆಗಳು. ನಡುವಣ ಭಾಗದಲ್ಲಿ ಅಗಸೆನಾರು, ಆಲೂಗೆಡ್ಡೆ, ಬೀಟ್ ಬೆಳೆಯುತ್ತವೆ. ಶುಷ್ಕವಾಗಿ ಮರ ಹಾಗೂ ಹೆಚ್ಚು ಕಾಲ ಬಿಸಿಲು ಇರುವ ರೈನ್ ಕಣಿವೆಯ ಇಳಿಜಾರು ಪ್ರದೇಶಗಳಲ್ಲಿ ದ್ರಾಕ್ಷಿ ತೋಟಗಳಿವೆ. ಮೋಸೆಲ್ ನದಿಯ ತೀರದಲ್ಲೂ ಇನ್ನೂ ಕೆಲವು ಉಪನದಿಗಳ ಸನಿಹದಲ್ಲೂ ದ್ರಾಕ್ಷಿತೋಟಗಳನ್ನು ಬೆಳೆಸಲಾಗಿದೆ. ನೈರುತ್ಯ ದಿಕ್ಕಿನ ಆವೃತ ಕಣಿವೆಗಳಲ್ಲಿ ಫಲವತ್ತಾದ ಮೆಕ್ಕಲುಮಣ್ಣಿನ ನೆಲವುಂಟು. ಅದು ಹೊಗೆಸೊಪ್ಪು, ಹಿಪ್ಪುನೇರಳೆ ಮುಂತಾದವನ್ನು ಬೆಳೆಯಲು ಅನುಕೂಲಕರ. ಪೂರ್ವ ಜರ್ಮನಿಯ ಭಾಗದ ಜಮೀನು ಹೆಚ್ಚಾಗಿ ಸಾಮೂಹಿಕ ಅಥವಾ ಸರ್ಕಾರಿ ಕೃಷಿ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿತ್ತು. ಈ ವಿಭಾಗದ ಒಟ್ಟು ವಿಸ್ತೀರ್ಣ ಸೇ.33ರಷ್ಟು ಭಾಗ ಕೃಷಿಗೆ ಒಳಪಟ್ಟು ಗೋಧಿ, ಬಾರ್ಲಿ, ರೈ, ಓಟ್ಸ್, ಆಲೂಗಡ್ಡೆ, ಸಕ್ಕರೆ, ಬೀಟ್ ಇವು ಹೆಚ್ಚಾಗಿ ಬೆಳೆಯುತ್ತಿದ್ದರು. ಈ ಭಾಗದಲ್ಲಿ ಹೆಚ್ಚಾಗಿ ಲಿಗ್ನೈಟ್ ಖನಿಜ ದೊರೆತು ಅದೇ ಪ್ರಮುಖ ಲೋಹವಾಗಿತ್ತು ಮತ್ತು ಪ್ರಪಂಚದಲ್ಲೇ ಪ್ರಥಮ ಉತ್ಪಾದಕ ದೇಶವಾಗಿತ್ತು. ಇವಲ್ಲದೆ ಕಲ್ಲಿದ್ದಲು, ತಾಮ್ರ, ಕಬ್ಬಿಣ, ಪೊಟ್ಯಾಷ್, ಕೋಬಾಲ್ಟ್, ಬೆಳ್ಳಿ, ಆ್ಯಂಟಿಮನಿ, ರಬ್ಬರ್, ಸಿಮೆಂಟ್ ಮುಂತಾದವುಗಳ ಉತ್ಪಾದನೆಯೂ ಇದ್ದಿತು.

ಪ್ರಮುಖ ಕಲ್ಲಿದ್ದಲು ಮತ್ತು ಲಿಗ್ನೈಟ್ ಗಣಿಗಳು ಉತ್ತರ ರೈನ್–ವೆಸ್ಟ್‌ಫೇಲಿಯದ ಬಳಿ ಇವೆ. ರೂರ್ ತಪ್ಪಲಿನಲ್ಲಿ ಅತ್ಯಂತ ಪ್ರಸಿದ್ಧವಾದ ಉಕ್ಕು ಉತ್ಪಾದನ ಕೇಂದ್ರ ಸ್ಥಾಪಿತವಾಗಲು ಸಾಧ್ಯವಾಗಿರುವುದೂ ಈ ಕಾರಣದಿಂದಲೇ. ಸಾರ್‌ಲೆಂಡಿನಲ್ಲೂ ಕೆಳ ಸ್ಯಾಕ್ಸನಿಯಲ್ಲೂ ಕಲ್ಲಿದ್ದಲ ಗಣಿಗಳಿವೆ. ಅಂತೆಯೇ ಆಲ್ಪೈನ್ ಪರ್ವತ ವಲಯದ ಬುಡದಲ್ಲಿ ಲಿಗ್ನೈಟ್ ಗಣಿಗಳಿವೆ. ವೆಸ್ಟರ್‌ವಾಲ್ಡ್, ಕೆಳ ಸ್ಯಾಕ್ಸನಿ ಹಾಗೂ ಹಾರ್ಟ್ಸ್ ಪರ್ವತ ಪ್ರದೇಶಗಳಲ್ಲಿ ಕಬ್ಬಿಣದ ಗಣಿಗಳುಂಟು. ಈ ವಲಯದಲ್ಲಿ ಖನಿಜ ಲವಣದ ನಿಕ್ಷೇಪಗಳೂ ವ್ಯಾಪಕವಾಗಿ

ಕಾಣಸಿಗುತ್ತವೆ. ಅನೇಕ ಪ್ರಸಿದ್ಧ ಲವಣ ಜಲದ ಚಿಲುಮೆಗಳು ಇಲ್ಲಿ ನೆಲೆಗೊಂಡಿವೆ. ಎಮ್ಸ್‌ಲೆಂಡ್ ಮತ್ತು ಕೆಳ ಸ್ಯಾಕ್ಸನಿಯಲ್ಲಿ ತೈಲನಿಕ್ಷೇಪಗಳಿವೆ.ಜರ್ಮನಿಯಲ್ಲಿ ಹಲವಾರು ಬಗೆಯ ಕೈಗಾರಿಕೆಗಳು ಬೆಳೆದಿವೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದ್ದು ಜವಳಿ ಕೈಗಾರಿಕೆ. ಕ್ರೆಫೆಲ್ಡ್, ಮ್ಯೂನಿಕ್–ಗ್ಲಾಟ್‌ಬೆಕ್ ಮತ್ತು ವುಸರ್‌ಟಾಲ್ ಇವು ಜವಳಿ ಕೈಗಾರಿಕೆಯ ಪ್ರಮುಖ ಕೇಂದ್ರಗಳು. ರೂರ್ ಜಿಲ್ಲೆಯಲ್ಲಿ ಉಕ್ಕಿನ ಕೈಗಾರಿಕೆ ಬೆಳೆದಿದೆ. ಡಾರ್ಟ್ ಮಂಟ್, ಎಸೆನ್



ಪಶ್ಚಿಮ ಜರ್ಮನಿಯ ನಾಣ್ಯಗಳು ಮತ್ತು ನೋಟುಗಳು

ಮತ್ತು ಡ್ಯೂಸ್‌ಬರ್ಗ್, ಹಾಂಬಾರ್ನ್ ಕಬ್ಬಿಣ ಮತ್ತು ಉಕ್ಕಿನ ಉದ್ಯಮದ ಜಗದ್ವಿಖ್ಯಾತ ಕೇಂದ್ರಗಳು. ರಾಸಾಯನಿಕ ಕೈಗಾರಿಕೆಗಳಲ್ಲೂ ಇದು ತುಂಬ ಮುನ್ನಡೆದಿದೆ. ಪ್ರಮುಖ ರಾಸಾಯನಿಕ ಕೈಗಾರಿಕಾ ಕೇಂದ್ರಗಳು ಮ್ಯಾನ್‌ಹೈಮ್, ಆಫೆನ್‌ಬಾಕ್, ಡಾರ್ಮ್‌ಷ್ಟ್ಯಾಟ್ ಮತ್ತು ಲೂಡ್‌ವಿಗ್ಸ್ ಹ್ಯಾಫೆನ್ ನೇತ್ರೋಪಕರಣಗಳ ಹಾಗೂ ಇತರ ಸೂಕ್ಷ್ಮ ಉಪಕರಣಗಳ ತಯಾರಿಕೆಯಲ್ಲಿ ಜರ್ಮನಿಗೆ ವಿಶಿಷ್ಟ ಸ್ಥಾನ ದೊರಕಿಸಿಕೊಟ್ಟಿರುವ ಪ್ರಮುಖ ಕೇಂದ್ರ ವೆಟ್ಸ್‌ಲರ್. ಆಭರಣಗಳು, ಅಲಂಕರಣ ವಸ್ತುಗಳು ಹಾಗೂ ಆಟದ ಬೊಂಬೆಗಳ ಉತ್ಪಾದನೆಗೂ ಈ ನಾಡು ಹೆಸರಾಗಿದೆ. ಮೋಟಾರು ಕಾರುಗಳು, ರೈಲ್ವೆ ಎಂಜಿನ್ನುಗಳು, ವ್ಯಾಗನ್ನುಗಳು, ಚರ್ಮದ ಹಾಗೂ ಮರದ ಉಪಕರಣಗಳು, ಮುದ್ರಣಕಾಗದ, ತಂಬಾಕು ಹಾಗೂ ಬಿಯರ್–ಇವುಗಳ ಉತ್ಪಾದನೆಯೂ ಜರ್ಮನಿಯ ಆರ್ಥಿಕತೆಯಲ್ಲಿ ಮುಖ್ಯ ಪಾತ್ರವಹಿಸಿದೆ. ಮ್ಯೂನಿಕ್ ಜರ್ಮನಿಯ ಆರ್ಥಿಕತೆಗೆ ಸುಭದ್ರ ತಳಹದಿಯನ್ನು ಕಲ್ಪಿಸುವಲ್ಲಿ ಹಾಗೂ ಜಾಗತಿಕ ಔದ್ಯಮಿಕ ನಕ್ಷೆಯಲ್ಲಿ ಅದಕ್ಕೊಂದು ಮಹತ್ತ್ವದ ಸ್ಥಾನ ಕಲ್ಪಿಸುವಲ್ಲಿ ಈ ಉದ್ಯಮಗಳು ತುಂಬ ಮಹತ್ತ್ವದ ಪಾತ್ರ ವಹಿಸಿವೆ.

ಸಂಪರ್ಕಸಾಧನಗಳು : ಜರ್ಮನಿಯ ಸಂಪರ್ಕಸಾಧನಗಳನ್ನು ಗಮನಿಸಿದಾಗಿ ಮೊಟ್ಟಮೊದಲಿಗೆ ಎದ್ದು ಕಾಣುವ ಸಂಗತಿಯೆಂದರೆ ಅಲ್ಲಿಯ ಒಳನಾಡು ಜಲಮಾರ್ಗಗಳು. ಇವುಗಳಲ್ಲಿ ಕೆಲವು ಹೊರನಾಡುಗಳಿಗೂ ಸಂಪರ್ಕ ಕಲ್ಪಿಸುತ್ತವೆ. ಕೀಲ್ ಅಥವಾ ಕೈಸರ್



ಹ್ಯಾನ್ಸ್ ಬೈಮರ್ ಬೀದಿ, ಬರ್ಲಿನ್

ವಿಲ್‌ಹೆಲ್ಮ್ ಕಾಲುವೆ ಉತ್ತರ ಸಮುದ್ರ ಹಾಗೂ ಬಾಲ್ಟಿಕ್ ಸಮುದ್ರಗಳಿಗೆ ಸಂಪರ್ಕ ಕಲ್ಪಿಸುತ್ತವೆ. ರೈನ್, ವೇಸರ್, ಎಲ್ಬ್ ಮತ್ತು ಓಡರ್ ನದಿಗಳಿಗೆ ಮಿಟ್ಲ್‌ಲ್ಯಾಂಡ್ ಕಾಲುವೆಯೇ ಸಂಪರ್ಕ ಮಾಧ್ಯಮ. ಡಾರ್ಟ್‌ಮಂಟ್–ಎಮ್ಸ್ ಕಾಲುವೆ ರೂರ್ ಉದ್ಯಮ ಕೇಂದ್ರಗಳಿಗೂ ಉತ್ತರ ಸಮುದ್ರಕ್ಕೂ ಸಂಪರ್ಕ ಕಲ್ಪಿಸುತ್ತದೆ. ಫ್ರಾನ್ಸ್, ಲುಕ್ಸೆಂಬರ್ಗ್ ಹಾಗೂ ಜರ್ಮನಿಯ ಜಲಮಾರ್ಗಗಳಿಗೆ ಸಂಪರ್ಕವನ್ನು ಕಲ್ಪಿಸಿರುವ ಜಲಮಾರ್ಗವೆಂದರೆ ಮೋಸಲ್ ಕಾಲುವೆ.

'ವಾಲ್‌ಪುರ್ಗಿಗಳ ರಾತ್ರಿ'–ಬಾಡ್ ಹಾರ್ಟ್ಸ್‌ಬರ್ಗಿನ ಒಂದು ಹಬ್ಬ

ಮೇನ್ ಮುಖಾಂತರ ರೈನ್ ಮತ್ತು ಡ್ಯಾನ್ಯೂಬ್ ನದಿಗಳಿಗೆ ಸಂಪರ್ಕ ಒದಗಿಸಿರುವ ಮತ್ತೊಂದು ಕಾಲುವೆ ಈಚೆಗೆ ನಿರ್ಮಾಣಗೊಂಡಿದೆ. ಒಟ್ಟಿನಲ್ಲಿ ಜರ್ಮನಿಯಲ್ಲಿ ಸುಮಾರು 7300 ಕಿಮೀ (2004) ಜಲಮಾರ್ಗಗಳಿವೆ. ಇವು ಹೆಚ್ಚು ವಸ್ತುಗಳನ್ನು ಸಾಗಿಸಲು ನೆರವಾಗುತ್ತವೆ. ಈ ಜಲಮಾರ್ಗವೇ ಅಲ್ಲದೆ ರಸ್ತೆ ಹಾಗೂ ರೈಲುಮಾರ್ಗಗಳೂ ವಾಯುಮಾರ್ಗಗಳೂ ಜರ್ಮನಿಯ ಆರ್ಥಿಕತೆಯಲ್ಲಿ ಪ್ರಧಾನಪಾತ್ರ ವಹಿಸುತ್ತಿವೆ. ರಾಷ್ಟ್ರೀಯ ಹೆದ್ದಾರಿಗಳ ಉದ್ದ ಸು.230735 ಕಿಮೀ ಪ್ರಯಾಣಯೋಗ್ಯವಾಗಿರುವ ರಸ್ತೆಗಳ ಉದ್ದ ರೈಲುಮಾರ್ಗಗಳುಂಟು. ಒಟ್ಟು 41315 ಕಿಮೀ. ಇದರಲ್ಲಿ 19857 ಕಿಮೀ ವಿದ್ಯುತ್ ರೈಲುಮಾರ್ಗವಿದೆ (2005) ಇವಲ್ಲದೆ ತಾಂತ್ರಿಕವಾಗಿ ಮುಂದುವರೆದ ದೂರವಾಣಿ, ದೂರದರ್ಶನಗಳ ಸಂಪರ್ಕ ಸಾಧನಗಳಿವೆ. ಇಂದು ಜರ್ಮನಿ ಪ್ರಪಂಚದ ಮುಂದುವರೆದ ದೇಶಗಳಲ್ಲಿ ಒಂದಾಗಿದೆ. ಅನೇಕ ಹಡಗುಕಟ್ಟೆಗಳು ನವೀನ ಬಂದರುಗಳು ಸುಮಾರು 332 ಹಡಗುಗಳು (2005) ಇವೆ. 34 ಹೆಲಿಪ್ಯಾಡ್‌ಗಳೂ (2004) 550 ವಿಮಾನ ನಿಲ್ದಾಣಗಳೂ (2004) ಇವೆ. ಜರ್ಮನಿಯ ಅತ್ಯಂತ ದೊಡ್ಡ ವಿಮಾನನಿಲ್ದಾಣಗಳೆಂದರೆ ಫ್ರ್ಯಾಂಕ್‌ಫರ್ಟ್ ವಿಮಾನ ನಿಲ್ದಾಣ ಮತ್ತು ಮ್ಯೂನಿಕ್ ವಿಮಾನ ನಿಲ್ದಾಣ. (ಪಿ.ಜಿ.ಡಿ.)

**ಜರ್ಮೇನಿಯಮ್ :** ಆವರ್ತ ಕೋಷ್ಟಕದ (ಪೀರಿಯಾಡಿಕ್ ಟೇಬಲ್) ನಾಲ್ಕನೆಯ ಗುಂಪಿನಲ್ಲಿ ಸಿಲಿಕನ್ನಿನ ಕೆಳಗಿನ ಸ್ಥಾನದಲ್ಲಿರುವ ಧಾತು. ರಾಸಾಯನಿಕ ಪ್ರತೀಕ ಉಜ. ಪರಮಾಣು ಸಂಖ್ಯೆ 32. ಪರಮಾಣು ತೂಕ 72.60. ಎಲೆಕ್ಟ್ರಾನ್ ವಿನ್ಯಾಸ 2, 8, 18,

4. ಆವರ್ತ ಕೋಷ್ಟಕದ ನಿರ್ಮಾತೃ ಮೆಂಡಲೀಫ್, ಸಿಲಿಕನ್ ಕೆಳಗಿನ ಸ್ಥಾನವನ್ನು ಖಾಲಿ ಬಿಟ್ಟು, ಪರಮಾಣು ತೂಕದ ಅನುಕ್ರಮದಲ್ಲಿ ಆ ಸ್ಥಾನಕ್ಕೆ ಹೊಂದಿಕೊಳ್ಳುವ ಒಂದು ಧಾತು ಪತ್ತೆಯಾಗುವುದೆಂದು, 1871ರಲ್ಲಿ ಭವಿಷ್ಯ ನುಡಿದಿದ್ದ. ಅಲ್ಲದೆ ಆ ಧಾತುವಿನ ಪರಮಾಣು ತೂಕ ಸುಮಾರು ಇಷ್ಟೇ ಇರುವುದೆಂದೂ ಅದರ ಮತ್ತು ಅದರ ಸಂಯುಕ್ತಗಳ ಗುಣಲಕ್ಷಣಗಳು ಹೆಚ್ಚು ಕಡಿಮೆ ಇಂತಿಂಥವೇ ಎಂದೂ ಊಹೆ ಮಾಡಿ ಹೇಳಿ, ಆ ಧಾತುವನ್ನು ಏಕಸಿಲಿಕನ್ ಎಂದು ಕೂಡ ಹೆಸರಿಸಿದ್ದ. 15 ವರ್ಷಗಳ ಬಳಿಕ (1886) ಅವನ ಭವಿಷ್ಯ ನಿಜವಾಯಿತು. ಆ ವರ್ಷ ಜರ್ಮನಿಯ ಕ್ಲೆಮೆನ್ಸ್ ಅಲೆಕ್ಸಾಂಡರ್ ವಿಂಕ್ಲರ್ (1838–1904) ಎಂಬ ವಿಜ್ಞಾನಿ ಈ ಧಾತುವನ್ನು ಆವಿಷ್ಕರಿಸಿ ತನ್ನ ಪಿತೃಭೂಮಿಯ ಗೌರವಾರ್ಥವಾಗಿ ಅದಕ್ಕೆ ಜರ್ಮೇನಿಯಮ್ ಎಂದು ಹೆಸರಿಟ್ಟ.

ಭೂಮಿಯಲ್ಲಿ ಅತ್ಯಂತ ವಿರಳವಾಗಿ ಹಂಚಿಕೊಂಡಿರುವ ಧಾತುಗಳಲ್ಲಿ ಜರ್ಮೇನಿಯಮ್ ಒಂದು. ಭೂಮಿಯ ಹೊರಚಿಪ್ಪಿನಲ್ಲಿ, ತೂಕದ ಪ್ರಕಾರ, ಒಂದು ಮಿಲಿಯನ್ನಿನಲ್ಲಿ ನಾಲ್ಕು ಭಾಗ ಮಾತ್ರ ಜರ್ಮೇನಿಯಮ್ ಇದೆ, ಅಷ್ಟೆ. ಗಣನೀಯ ಪರಿಣಾಮದಲ್ಲಿ ಈ ಧಾತು ಕಂಡುಬರುವ ಖನಿಜಗಳೇ ಅಪರೂಪ. ಆರ್ಜಿರೊಡೈಟ್ ($4Ag_2S.GeS_2$) ಮತ್ತು ಜರ್ಮನೈಟ್ ($6CuS.GeS_2$) ಅವುಗಳಲ್ಲಿ ಮುಖ್ಯವಾದುವು. ಜರ್ಮೇನಿಯಮನ್ನು ತಯಾರಿಸುವುದು, ಸಾಮಾನ್ಯವಾಗಿ ಬಿಟುಮಿನಸ್ ಕಂದು ಕಲ್ಲಿದ್ದಲಿನ ಬೂದಿಯಿಂದ ಹಾಗೂ ಸತುವಿನ ಅದುರಿನಿಂದ ಸತುವನ್ನು ತೆಗೆದ ಬಳಿಕ ಉಳಿಯುವ ನಿರುಪಯುಕ್ತ ಪದಾರ್ಥಗಳಿಂದ. ಆಕರ ಪದಾರ್ಥದಲ್ಲಿನ ಜರ್ಮೇನಿಯಮನ್ನು ಆವಿಶೀಲವಾದ ಅದರ ಟೆಟ್ರಕ್ಲೋರೈಡಾಗಿ ಪರಿವರ್ತಿಸಿ, ಅದನ್ನು ಆಸವಿಸುವ ಮೂಲಕ ಇತರ ಧಾತುಗಳಿಂದ ಅದನ್ನು ಪ್ರತ್ಯೇಕಿಸುತ್ತಾರೆ. ತರುವಾಯ ಅದನ್ನು ಡೈಆಕ್ಸೈಡಾಗಿ ಪರಿವರ್ತಿಸಿ, ಹೈಡ್ರೊಜನ್ ಅಥವಾ ಕಾರ್ಬನ್ನಿನಿಂದ ಅಪಕರ್ಷಿಸಿ ಧಾತುವನ್ನು ತಯಾರಿಸುತ್ತಾರೆ. ಜರ್ಮೇನಿಯಮ್, ಬೆಳ್ಳಿಯಂತೆ ಬೆಳ್ಳನೆಯ ಹೊಳಪಿರುವ ಗಡುಸಾದ ಭಿದುರಲೋಹ. ಸಾಂದ್ರತೆ 5.46. ದ್ರವನ ಬಿಂದು 958.5$^{o}$ C. ನೈಸರ್ಗಿಕ ಜರ್ಮೇನಿಯಮಿನಲ್ಲಿ 74, 72 ಮತ್ತು 70 ತೂಕಗಳ ಐಸೊಟೋಪುಗಳು ಪ್ರಧಾನವಾದವು. ಇವು ಒಟ್ಟು ಶೇ.85 ರಷ್ಟಾಗುತ್ತದೆ. ಉಳಿದ ಶೇ.15 ಭಾಗ 73 ಮತ್ತು 76 ತೂಕಗಳ ಐಸೊಟೋಪುಗಳು. ಹೈಡ್ರೊಕ್ಲೋರಿಕ್ ಮತ್ತು ಸಾರರಿಕ್ತ ಸಲ್ಫ್ಯೂರಿಕ್ ಆಮ್ಲಗಳು ಜರ್ಮೇನಿಯಮ್ಮಿನ ಮೇಲೆ ವರ್ತಿಸುವುದಿಲ್ಲ. ಉತ್ಕರ್ಷಕ ಆಮ್ಲಗಳು, ಅಂದರೆ ಡೈಆಕ್ಸೈಡಾಗಿ ಪರಿವರ್ತಿಸುತ್ತವೆ. ಆಲ್ಕಲಿ ಲೋಹಗಳ ಹೈಡ್ರಾಕ್ಸೈಡುಗಳಲ್ಲಿ ಜರ್ಮೇನಿಯಮ್ ನಿಧಾನವಾಗಿ ಕರಗುವುದು. ಸುಮಾರು 200$^{o}$ C. ಅಥವಾ 250$^{o}$ C. ಉಷ್ಣತೆಯಲ್ಲಿ ಅದು ಕ್ಲೋರೀನಿನೊಂದಿಗೆ ಮತ್ತು ಗಂಧಕದೊಂದಿಗೆ ನೇರವಾಗಿ ಸಂಯೋಗಗೊಳ್ಳುತ್ತದೆ.

ಆವರ್ತಕೋಷ್ಟಕದಲ್ಲಿ ಅದರ ಕೆಳಗಿರುವ ತವರ ಮತ್ತು ಸೀಸಗಳಂತೆ ಜರ್ಮೇನಿಯಮ್ ಕೂಡ ದ್ವಿವೇಲೆನ್ಸಿಯ ಹಾಗೂ ಚತುರ್ವೇಲೆನ್ಸೀಯ ಸಂಯುಕ್ತಗಳನ್ನು ನೀಡುವುದಾದರೂ ದ್ವಿವೇಲೆನ್ಸಿಯ ಸಂಯುಕ್ತಗಳು ಬಹುಮಟ್ಟಿಗೆ ಅಸ್ಥಿರ. ಅವು ಸುಲಭವಾಗಿ ಚತುರ್ವೇಲೆನ್ಸೀಯ ಸಂಯುಕ್ತಗಳಾಗಿ ಪರಿವರ್ತಿತವಾಗುವುದರಿಂದ ಅವು ಅಪಕರ್ಷಣಕಾರಿಗಳಾಗಿ ವರ್ತಿಸುತ್ತವೆ. ಅಸ್ಥಿರವಾದ ಜರ್ಮನಸ್ ಆಕ್ಸೈಡು ($Ge_O$) ಕಪ್ಪು ಬಣ್ಣದ ಪುಡಿ. ರಾಸಾಯನಿಕವಾಗಿ ಅದು ಉಭಯವರ್ತಿ (ಆಂಫೊಟೆರಿಕ್). ಹೈಡ್ರೊಹ್ಯಾಲಿಕ್ ಆಮ್ಲಗಳಲ್ಲಿ ಕರಗಿ ಜರ್ಮನಸ್ ಹ್ಯಾಲೈಡುಗಳನ್ನು ($GeX_2$) ಉತ್ಪತ್ತಿ ಮಾಡುತ್ತದೆ. ಜರ್ಮೇನಿಯಮ್ ಡೈಆಕ್ಸೈಡ್ ($GeO_2$) ಬಿಳಿಯ ಪುಡಿ. ಅದೂ ಉಭಯವರ್ತಿಯೇ ಆದರೂ ಪ್ರಧಾನವಾಗಿ ಆಮ್ಲೀಯ. ದೃಗ್ವೈಜ್ಞಾನಿಕ ಉಪಕರಣದಲ್ಲಿ ಬೇಕಾಗುವ ವಿಶೇಷ ಗಾಜಿನ ತಯಾರಿಕೆಯಲ್ಲಿ ಇದರ ಉಪಯೋಗ ಉಂಟು. ಜರ್ಮೇನಿಯಮ್ ಟೆಟ್ರಕ್ಲೋರೈಡ್ ಬಹುಮಟ್ಟಿಗೆ ಸಿಲಿಕನ್ ಟೆಟ್ರಕ್ಲೋರೈಡಿನಂತೆ ವರ್ತಿಸುತ್ತದೆ. ಜರ್ಮೇನಿಯಮಿನ ಹೈಡ್ರೈಡುಗಳಲ್ಲಿ ಮೀಥೇನಿಗೆ ಸದೃಶವಾದ $GeH_4$ ಮಾತ್ರವಲ್ಲದೆ ಈಥೇನ್ ಮತ್ತು ಪ್ರೊಪೇನುಗಳಿಗೆ ಸದೃಶವಾದ $GeH_6$ ಮತ್ತು $Ge_3H_8$ ಸಹ ಇವೆ ಎಂಬುದು ಗಮನಾರ್ಹ. ಇತ್ತೀಚಿನವರೆಗೂ ಜರ್ಮೇನಿಯಮಿಗೆ ಹೆಚ್ಚಿನ ಉಪಯೋಗಗಳೇ ಇರಲಿಲ್ಲ. ಅದು ಅರ್ಧವಾಹಕವಾಗಿ ವರ್ತಿಸುವುದು ತಿಳಿದು ಬಂದ ಬಳಿಕ ಈಗ ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಅದಕ್ಕೆ ವಿಶೇಷ ಪ್ರಾಶಸ್ತ್ಯ ಬಂದಿದೆ. ವಾಹಕವೂ ಅಲ್ಲದ, ಅವಾಹಕವೂ ಅಲ್ಲದೆ ಎರಡಕ್ಕೂ ಮಧ್ಯವರ್ತಿ ಗುಣಗಳಿರುವ ಪದಾರ್ಥಗಳಿಗೆ ಅರ್ಧವಾಹಕಗಳೆಂದು ಹೆಸರು. ಜರ್ಮೇನಿಯಮಿಗೆ ಈ ಗುಣವಿರುವುದು ತಿಳಿದುಬಂದುದರ ಪರಿಣಾಮವಾಗಿ ಟ್ರಾನ್ಸಿಸ್ಟರುಗಳ ತಯಾರಿಕೆ ಸಾಧ್ಯವಾಯಿತು. ಅಷ್ಟು ಸುರಕ್ಷಿತವಲ್ಲದ ಮತ್ತು ಹೆಚ್ಚಿಗೆ ಸ್ಥಳ ಆಕ್ರಮಿಸುವ ರೇಡಿಯೋ ಕವಾಟಗಳ ಬದಲು ಅತ್ಯಲ್ಪ ಗಾತ್ರದ ಈ ಟ್ರಾನ್ಸಿಸ್ಟರುಗಳನ್ನು ಬಳಸಬಹುದಾದ್ದರಿಂದ ರೇಡಿಯೋ ಕ್ಷೇತ್ರದಲ್ಲಿ ಮತ್ತು ಕಂಪ್ಯೂಟರ್ ಕ್ಷೇತ್ರದಲ್ಲಿ ಅಸಾಧಾರಣ ಪ್ರಗತಿ ಸಾಧ್ಯವಾಗಿದೆ. ಅರ್ಧವಾಹಕ ಉಪಕರಣಗಳಲ್ಲಿ ಬಳಸುವ ಜರ್ಮೇನಿಯಮ್ ಅತ್ಯಂತ ಶುದ್ಧವಾಗಿರಬೇಕು. ಹತ್ತು ಮಿಲಿಯನ್ ಜರ್ಮೇನಿಯಮ್ ಪರಮಾಣುಗಳಲ್ಲಿ ಯಾವುದೇ ಅಶುದ್ಧತೆಯ ಒಂದು ಪರಮಾಣ ವಿದ್ದರೂ ಅದರ ವಾಹಕತೆ ಹೆಚ್ಚುವ ಸಂಭವವಿರುವುದರಿಂದ ಅದು ಉಪಯೋಗಕ್ಕೆ ಬರುವುದಿಲ್ಲ. ಅಷ್ಟು ಪರಿಶುದ್ಧವಾದ ಜರ್ಮೇನಿಯಮನ್ನು ವಲಯ ದ್ರವನ ವಿಧಾನದಿಂದ (ಸ್ಟೋನ್ ಮೆಲ್ಟಿಂಗ್) ತಯಾರಿಸುತ್ತಾರೆ. (ಜಿ.ಆರ್.ಎಲ್.)

**ಜರ್ಮ್ಯಾನಿಕ್ ಜನಾಂಗ :** ಈ ಜನಾಂಗದವರು ಇಂಡೊ-ಯುರೋಪಿಯನ್ ಬುಡಕಟ್ಟಿನವರು; ಇವರ ಭಾಷೆ ಸಹ ಇಂಡೊ–ಯುರೋಪಿಯನ್ ಗುಂಪಿನ ಭಾಷೆ. ಇವರನ್ನು ಟ್ಯೂಟಾನಿಕ್ ಜನಾಂಗವೆಂದೂ ಕರೆವುದಿದೆ. ಇವರ ಉಗಮ ಚರ್ಚಾಸ್ಪದವಾದದ್ದು. ಕಂಚಿನ ಯುಗದ (ಪ್ರಶ.ಪೂ. ಸು. 500–400) ಕೊನೆಯಿಂದ ಪ್ರಶ. ಪೂ. 2ನೆಯ ಶತಮಾನದ ಮಧ್ಯಭಾಗಕ್ಕೆ ಸಂಬಂಧಪಟ್ಟಂತೆ ನಡೆದಿರುವ ಪುರಾವಸ್ತು ಸಂಶೋಧನೆಗಳಲ್ಲಿ ಈ ಜನಾಂಗಕ್ಕೆ ಸಂಬಂಧಿಸಿದ ಸಾಕಷ್ಟು ಆಧಾರಗಳು ಉತ್ತರ ಜರ್ಮನಿ ಮತ್ತು ದಕ್ಷಿಣ ಸ್ವೀಡನ್‌ಗಳಲ್ಲಿ ಸಿಕ್ಕಿಲ್ಲವಾಗಿ ಇವರ ಬಗ್ಗೆ ಖಚಿತ ಅಭಿಪ್ರಾಯಗಳಿಗೆ ಅವಕಾಶವಾಗಿಲ್ಲ. ಕಂಚಿನ ಯುಗದ ಕೊನೆಯಲ್ಲಿ ಇವರು ಆ ಪ್ರದೇಶಗಳನ್ನು ಮತ್ತು ಹಾರ್ಟ್ಸ್ ಪರ್ವತ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದರೆಂದು ಊಹಿಸಬಹುದು.

ಜರ್ಮ್ಯಾನಿಕ್ ಜನಾಂಗದ ಬಣಗಳು ಅನೇಕವಿವೆ. ವಾಂಡಲರು, ಗೆಪಿಡೆ, ಮತ್ತು ಗಾತ್ ಜನ ಕ್ರಿಸ್ತಪೂರ್ವದ ಕೊನೆಕೊನೆಯ ವರ್ಷಗಳಲ್ಲಿ ದಕ್ಷಿಣ ಸ್ವೀಡನ್ನಿನಿಂದ ವಲಸೆ ಬಂದು ಓಡರ್ ಮತ್ತು ವಿಸ್ಚಲ ನದಿಗಳ ದಕ್ಷಿಣ ಬಾಲ್ಟಿಕ್ ತೀರ ಮತ್ತು ಪಸಾರ್ಜ್ (ಪಾಸ್ಲೆಕ್) ನದಿಯಾಚೆಯ ಭಾಗಗಳನ್ನು ಆಕ್ರಮಿಸಿಕೊಂಡರು. ಇದಕ್ಕೆ ಹಿಂದೆಯೇ ಕೆಲ್ಟಿಕ್ ಬಣಗಳಿಗೆ ಅಡಚಣೆಯಾಗುವಂತೆ ದಕ್ಷಿಣ ಮತ್ತು ಪಶ್ಚಿಮ ಭಾಗಗಳತ್ತ ವಲಸೆಗಳು ಸಾಗಿದ್ದುವು. ಕೆಲ್ಟಿಕ್ ಜನ ಆಗ ಪಶ್ಚಿಮ ಜರ್ಮನಿಯ ಬಹುಭಾಗಗಳಲ್ಲಿ ವಾಸಿಸುತ್ತಿದ್ದರು. ಉದಾಹರಣೆಗೆ, ಹೆಲ್ವೀಷೀ ಬಣದ ಜನ ಪ್ರಶ.ಪೂ. 1ನೆಯ ಶತಮಾನದಲ್ಲಿ ಸ್ವಿಟ್ಜರ್ಲೆಂಡ್ ಭಾಗದಲ್ಲಿದ್ದವರು ಒಂದು ಸಮಯದಲ್ಲಿ ಮೇನ್ ನದಿಯವರೆಗೂ ಹರಡಿಕೊಂಡಿದ್ದರು.

ಜರ್ಮ್ಯಾನಿಕ್ ಜನ ರೋಮನರೊಡನೆ ಪ್ರಥಮ ಬಾರಿ ಸಮರಕ್ಕೆ ನಿಂತಿದ್ದು ಪ್ರಶ. ಪೂ. 2ನೆಯ ಶತಮಾನದಲ್ಲಿ. ಆಗ ಸಿಂಬ್ರಿ ಮತ್ತು ಟ್ಯೂಟಾನಿಕ್ ಜನ ದಕ್ಷಿಣ ಗಾಲ್ ಮತ್ತು ಉತ್ತರ ಇಟಲಿ ಪ್ರದೇಶಗಳ ಮೇಲೆ ದಾಳಿ ನಡೆಸಿದ ಕಾರಣ, ಪ್ರಶ.ಪೂ. 102 ಮತ್ತು 101ರಲ್ಲಿ ರೋಮ್ ದಂಡನಾಯಕ ಮರೀಯಸ್ ಅವರನ್ನು ಅಡಗಿಸಿದ. ಜೂಲಿಯಸ್ ಸೀಜರನ ಕಾಲದ ಹೊತ್ತಿಗೆ (ಪ್ರಶ.ಪೂ. 1ನೆಯ ಶತಮಾನ) ಜರ್ಮನರು ರೈನ್ ನದಿಯ ಪಶ್ಚಿಮ ಭಾಗದಲ್ಲಿ ನೆಲೆಸಿದ್ದವರು ದಕ್ಷಿಣದಲ್ಲಿ ಡ್ಯಾನ್ಯೂಬ್ ನದಿಯವರೆಗೆ ವ್ಯಾಪಿಸಿಕೊಂಡಿದ್ದರು.

ಗ್ರೀಕ್ ನಾವಿಕ ಪಿತಿಯಾಸನ (ಪ್ರಶ.ಪೂ. 4ನೆಯ ಶತಮಾನ) ಕಾಲದಿಂದ ಪ್ರವಾಸಿಗರು ಉತ್ತರದ ಟ್ಯೂಟಾನಿಕ್ ದೇಶಗಳಿಗೆ ಹೋಗಿ ಬರುತ್ತಿದ್ದರು. ಆದಾಗ್ಯೂ ಜರ್ಮ್ಯಾನಿಕ್ ಜನ ಮತ್ತು ಕೆಲ್ಟ್ ಜನ ಪ್ರತ್ಯೇಕ ಜನಾಂಗದವರೆಂಬುದು ಪ್ರಶ.ಪೂ. 1ನೆಯ ಶತಮಾನದವರೆಗೆ ರೋಮನರಿಗೆ ತಿಳಿದಿರಲಿಲ್ಲ. ಅವರು ಪ್ರತ್ಯೇಕ ಜನರೆಂದು ಜೂಲಿಯಸ್ ಸೀಜರ್ ತಿಳಿಸುತ್ತಾನೆ. ರೈನ್ ನದಿಯ ಪಶ್ಚಿಮಕ್ಕೆ ನುಗ್ಗಿದ ಜರ್ಮನರನ್ನು ರೋಮ್ ಚಕ್ರಾಧಿಪತ್ಯದ ಗಡಿಗಳಲ್ಲಿ ಸಂಘಟಿಸಿದವ ಸೀಜರ್. ಜರ್ಮನರ ಸಂಸ್ಕೃತಿಯ ಬಗ್ಗೆ ಆತ ಕೊಟ್ಟಿರುವ ಮಾಹಿತಿ ದೊರಕಿರುವ ವಿವರಣೆಗಳಲ್ಲೆಲ್ಲ ಅತಿ ಪ್ರಾಚೀನವಾದದ್ದು. ಪ್ರಶ.ಪೂ. 9ರಲ್ಲಿ ರೋಮನರು ರೈನ್ ನದಿಯ ಬಳಿಯ ತಮ್ಮ ಪೂರ್ವಗಡಿಯನ್ನು ಎಲ್ಬ್ ನದಿಯವರೆಗೆ ವಿಸ್ತರಿಸಿದರು. ಅವರ ಅಧೀನರಾಗಿ ಹೋಗಿದ್ದ ಜರ್ಮ್ಯಾನಿಕ್ ಜನ ಪ್ರ.ಶ. 9ರಲ್ಲಿ ಆರ್ಮಿನಿಯಸ್ (ಪ್ರಶ.ಪೂ. 17ರಿಂದ ಪ್ರ.ಶ. 21) ಎಂಬಾತನ ನಾಯಕತ್ವದಲ್ಲಿ ದಂಗೆಯೆದ್ದು ರೋಮ್ ಸಾಮ್ರಾಜ್ಯದ ಆಕ್ರಮಣ ಸೈನ್ಯಗಳನ್ನು ಟ್ಯೂಟೊಬರ್ಗ್ ಅರಣ್ಯದಲ್ಲಿ ಸಂಪೂರ್ಣವಾಗಿ ಸೋಲಿಸಿ ಅಟ್ಟಿದರು. ರೋಮನರ ಸೈನ್ಯ ರೈನ್ ನದಿಯ ಕಡೆ ಹಿಂದೆಗೆಯಬೇಕಾಯಿತು. ಈ ಯುದ್ಧಕಾಲದಲ್ಲಿ ಜರ್ಮನರ ಬಗೆಗಿನ ಅಪಾರ ವಿವರಗಳು ರೋಮ್ ನಗರವನ್ನು ಮುಟ್ಟಿದುವು. ಕಾರ್ನೀಲಿಯಸ್ ಟ್ಯಾಸಿಟಸ್ (ಪ್ರ.ಶ. ಸು. 55–120) ಈ ವಿಷಯಗಳನ್ನು ಸಂಗ್ರಹಿಸಿ ಪ್ರಶ. 98ರಲ್ಲಿ ಜರ್ಮ್ಯಾನಿಯ ಎಂಬ ಗ್ರಂಥವನ್ನು ಪ್ರಕಟಿಸಿದ. ಮಾನವಕುಲಶಾಸ್ತ್ರದ ದೃಷ್ಟಿಯಿಂದ ಇದು ಅಮೂಲ್ಯ ಗ್ರಂಥ. ಇದರಲ್ಲಿರುವ ವಿಷಯಗಳಿಗೆ ಪುರಾತತ್ತ್ವ ಸಂಶೋಧನೆಗಳಿಗೆ ದೊರಕಿರುವ ಸಂಗತಿಗಳು ಪೂರಕವಾಗಿವೆ.

ಟ್ಯಾಸಿಟಸ್ ತಿಳಿಸುವಂತೆ, ಜರ್ಮನರ ಪ್ರಾಚೀನ ಗೀತೆಗಳ ಪ್ರಕಾರ ಮನಸ್ ಎಂಬಾತ ಟುಯಿಸ್ಟೊ ಭೂದೇವತೆಯ ಮಗ. ಮನಸ್ಸಿನ ಮೂವರು ಮಕ್ಕಳ ವಂಶಜರೇ ಜರ್ಮನರು. ಸೃಷ್ಟಿಯಲ್ಲಿ ಜರ್ಮನರ ಮನಸ್ ಹಿಂದೂ ಪುರಾಣ ಪುರುಷ ಮನುವನ್ನು ಹೋಲುತ್ತಾನೆ. ಮನಸ್ಸನ ಮೂವರು ಮಕ್ಕಳ ಸಂತತಿಯವರು ಇಂಗೆವೋನೆಸ್, ಹರ್ಮಿನೋನೆಸ್ ಮತ್ತು ಇಸ್ತವೋನೆಸ್ ಎಂಬ ಮೂರು ಮಾನವಸಮೂಹಗಳಾಗಿ ವಿಭಾಗಗೊಂಡರು. ಇಂಗೆವೋನೆಸ್ ಬಣ ವಾಯವ್ಯ ಭಾಗದ ಜನರನ್ನೊಳಗೊಂಡಿದೆ ; ಮಧ್ಯ ಜರ್ಮನಿಯ ಜನ ಹರ್ಮಿನೋನೆಸ್ ಬಣಕ್ಕೆ ಸೇರಿದವರು; ಇಸ್ತವೋನೆಸ್ ಬಣದವರು ರೈನ್ ನದಿಯ ಭಾಗದ ಜನ. ಈ ಮೂರು ಬಣಗಳ ಹೆಸರುಗಳನ್ನು ಇತಿಹಾಸಕಾರ ಹಿರಿಯ ಪ್ಲಿನೀ ತಿಳಿಸುವುದಿಲ್ಲ. ಅವರ ಬಗ್ಗೆ 6ನೆಯ ಶತಮಾನದ ಫ್ರಾಂಕ್ ಜನಾಂಗದ ದಾಖಲೆಗಳಲ್ಲಿಯೂ

ವಿವರಗಳಿಲ್ಲ. ಜರ್ಮ್ಯಾನಿಕ್ ಜನಾಂಗದ ಈ ವರ್ಗೀಕರಣ ಏಕಾಯಿತು, ಯಾವ ಆಧಾರದ ಮೇಲಾಯಿತು ಎಂಬುದನ್ನು ಟ್ಯಾಸಟಸ್ ತನ್ನ ಜರ್ಮ್ಯಾನಿಯ ಗ್ರಂಥದಲ್ಲಿ ಸೂಚಿಸಿಲ್ಲ. ಆದಾಗ್ಯೂ ಈ ಚರಿತ್ರಕಾರ ವಿವಿಧ ವಂಶಾವಳಿಗಳನ್ನು ಸಂಗ್ರಹಿಸಿದ್ದಾನೆ. ಅವುಗಳ ಪ್ರಕಾರ ಮನಸ್ ಮೂಲಪುರುಷನಿಗೆ ಅನೇಕ ಗಂಡುಮಕ್ಕಳಿದ್ದರು. ಅವರು ಸುಯಿಬಿ, ವಾಂಡಲರು ಮತ್ತು ಇತರ ಬಣಗಳ ಜನ ಪೂರ್ವಜರಾಗಿದ್ದರು. ಟ್ಯಾಸಟಸ್‌ನ ಕಾಲದಲ್ಲಿ ವಿವಿಧ ಜರ್ಮ್ಯಾನಿಕ್ ಬಣಗಳ ಜನ ತಮಗಿದ್ದ ಪರಸ್ಪರ ಸಂಬಂಧವನ್ನು ತಿಳಿದಿದ್ದರೆಂಬುದು ಆತ ಸಂಗ್ರಹಿಸಿದ ಕವನಗಳಿಂದ ವ್ಯಕ್ತವಾಗುವುದು. ರೋಮ್ ಸಾಮ್ರಾಜ್ಯ ಸೇವೆಯಲ್ಲಿದ್ದ ಜರ್ಮ್ಯಾನಿಕ್ ಜನ ತಾವು ಜರ್ಮನಿ ಜನ ಎಂದು ಹೇಳಿಕೊಳ್ಳುತ್ತಿದ್ದರೂ ರೈನ್ ನದಿಯಾಚೆ ಇದ್ದ ಮುಕ್ತ ಜರ್ಮನರಿಗೆ ಪ್ರ.ಶ. 11ನೆಯ ಶತಮಾನದವರೆಗೆ ಸಮೂಹಸೂಚಕವಾದ ಯಾವ ಹೆಸರೂ ಇರಲಿಲ್ಲ. ಜರ್ಮನಿ ಶಬ್ದಕ್ಕೆ ಮೂಲವನ್ನು ಕಂಡುಹಿಡಿಯಲು ಟ್ಯಾಸಟಸ್ ಪ್ರಯತ್ನಿಸಿದ್ದಾನೆ. ಮೂಲತಃ ಜರ್ಮನಿ ಎಂಬ ಪದ ಒಂದೇ ಜರ್ಮ್ಯಾನಿಕ್ ಬುಡಕಟ್ಟಿನ ಜನರ ಹೆಸರಾಗಿತ್ತು; ಅವರಿಗೆ ಕಾಲಕ್ರಮದಲ್ಲಿ ತುಂಗ್ರಿ ಎಂಬ ಹೆಸರಾಯಿತು–ಎಂದು ಆತ ಹೇಳುತ್ತಾನೆ. ಇತಿಹಾಸಕಾರರಿಗೆ ನಿಲುಕದ ಯಾವುದೋ ಹಿಂದಿನ ಕಾಲದಲ್ಲಿ ಈ ತುಂಗ್ರಿ ಜನ ತಮ್ಮ ಉಗಮಾವಸ್ಥೆಯಲ್ಲಿ ರೈನ್ ನದಿಯನ್ನು ದಾಟಿ ಮೆನ್ಸ್ ಕಣಿವೆಗೆ ಬಂದರು; ಅಲ್ಲಿದ್ದ ಗಾಲ್ ಜನರನ್ನು ಓಡಿಸಿದರು. ಆಗ ಅವರಿಗೆ ಜರ್ಮನಿ ಎಂಬ ಹೆಸರಿತ್ತು; ಆ ಹೆಸರು ಅವರ ದೇಶದವರಿಗೆಲ್ಲ ಅನ್ವಯವಾಯಿತು. ಇಷ್ಟಾದರೂ ಜರ್ಮನಿ ಎಂದರೇನು, ಅದು ಯಾವ ಭಾಷೆಯ ಪದ ಎಂಬುದು ಈವರೆಗೆ ಇತ್ಯರ್ಥವಾಗಿಲ್ಲ.

ಜರ್ಮ್ಯಾನಿಕ್ ಜನಾಂಗದ ಹಂಚಿಕೆ : ಟ್ಯಾಸಟಸ್ಸನ ಕಾಲದಲ್ಲಿ ಜರ್ಮನಿ ಜನ ಈ ರೀತಿ ಬಣಗಳಾಗಿ ಹಂಚಿಹೋಗಿದ್ದರು: ಅವರಲ್ಲಿ ಚಟ್ಟಿ ಬಣದವರು ಈಗಿನ ಹೆಸ್ ಎಂಬಲ್ಲಿ ವಾಸವಾಗಿದ್ದರು. ಫ್ರಿಸ್ಸಿ ಬಣದವರು ಸಮುದ್ರ ತೀರಗಳಲ್ಲಿ ನೆಲೆಸಿದ್ದರು. ಚೌಸಿ ಜನ ವೇಸರ್ ನದೀಮುಖಜಭೂಮಿಯ ಪ್ರದೇಶದಲ್ಲಿದ್ದರು. ಅವರಿಗೆ ದಕ್ಷಿಣದಲ್ಲಿ ಚೆರುಸಿ ಬಣದ ಜನರಿದ್ದರು. ಸುಯಿಬಿ ಬಣದವರು ಮೆಕ್ಲೆನ್ ಬರ್ಗ್, ಬ್ರ್ಯಾಂಡೆನ್‌ಬರ್ಗ್, ಸ್ಯಾಕ್ಸನಿ ಮತ್ತು ತ್ಯುರಿಂಜಿಯ ಪ್ರದೇಶಗಳಲ್ಲಿದ್ದ ಜನ. ಹಾವೆಲ್ ಮತ್ತು ಷ್ರೇ ನದಿಗಳ ಜಲಾನಯನ ಭೂಮಿಯ ಪ್ರದೇಶದ ಸೆಂನೋನ್ ಜನ ಮತ್ತು ಲ್ಯಾಂಗಬಾರ್ಡಿ ಬಣದ ಜನ ಸಹ ಸುಯಿಬಿ ಬಣಕ್ಕೆ ಸೇರಿದವರೇ. ನೆರ್ತಸ್ ಸ್ತ್ರೀದೇವತೆಯನ್ನು ಆರಾಧಿಸುತ್ತಿದ್ದ ಏಳು ಬಣಗಳ ಪೈಕಿ ಆಂಗ್ಲಿ (ಆಂಗಲ್ಸ್) ಬಣ ಆಂಗ್ಲೆನ್ ಪರ್ಯಾಯದ್ವೀಪದಲ್ಲಿ ನೆಲೆಸಿತ್ತು. ರೋಮ್ ಸಾಮ್ರಾಜ್ಯದ ಡ್ಯಾನ್ಯೂಬ್ ನದಿಯ ಗಡಿಯಲ್ಲಿ ಹೆರ್‌ಮುಂಡುರಿ ಜನ ರೀಗೆನ್ಸ್ ಬರ್ಗ್ ಭಾಗದಿಂದ ತ್ಯುರಿಂಜಿಯದವರೆಗೆ ವ್ಯಾಪಿಸಿಕೊಂಡಿದ್ದರು. ಹಿಂದೆ ಮೇನ್ ಕಣಿವೆಯಲ್ಲಿ ವಾಸಿಸುತ್ತಿದ್ದ ಮಾರ್ಕೊಮನ್ನಿ ಬಣದ ಜನ ಪ್ರಶ.ಪೂ.ದ ಕೊನೆಯ ದಶಕದಲ್ಲಿ ಬೊಹೀಮಿಯಕ್ಕೆ ವಲಸೆ ಬಂದರು. ಬೊಹೀಮಿಯಕ್ಕೆ ಪೂರ್ವ ಭಾಗದಲ್ಲಿ ಮೊರೇವಿಯದ ಖ್ವಾದಿ ಜನರಿದ್ದರು. ಡ್ಯಾನ್ಯೂಬ್ ನದಿಯ ಕೆಳ ಪ್ರದೇಶದಲ್ಲಿದ್ದ ಬ್ಯಾಸ್ಟರ್ನೆ ಬಣದವರು ಸಹ ಜರ್ಮ್ಯಾನಿಕ್ ಜನಾಂಗದವರೆ ಎಂದು ತಿಳಿಯಲಾಗಿತ್ತು ; ಸ್ಯುಯೋನಿ ಮತ್ತು ಸಿಟೋನಿ ಜರ್ಮ್ಯಾನಿಕ್ ಬಣಗಳು ಸ್ವೀಡನ್ ಭಾಗದಲ್ಲಿದ್ದುವೆಂದು ಟ್ಯಾಸಟಸ್ ತಿಳಿಸುತ್ತಾನೆ. ಐತಿಹಾಸಿಕ ದೃಷ್ಟಿಯಲ್ಲಿ ಅಷ್ಟು ಪ್ರಮುಖವಲ್ಲದ ಬಣಗಳ ವಿವರಣೆಗಳನ್ನು ನೀಡಿದರೂ ಆತ ಸ್ಯಾಕ್ಸನ್ ಮತ್ತು ಬರ್ಗಂಡಿ ಜನರ ಬಗ್ಗೆ ಯಾವ ವಿವರಗಳನ್ನೂ ಕೊಟ್ಟಿಲ್ಲ.

ಪ್ರ.ಶ. 3ನೆಯ ಶತಮಾನದ ಹೊತ್ತಿಗೆ ಜರ್ಮ್ಯಾನಿಕ್ ಜನಾಂಗದವರಲ್ಲಿ ಮುಖ್ಯ ಬದಲಾವಣೆಗಳು ತಲೆದೋರಿದವು. ಈ ಹೊತ್ತಿಗೆ ಟ್ಯಾಸಟಸನಿಗೆ ತಿಳಿಯದೆ ಹೋಗಿದ್ದ ಮೂರು ಬಲಯುತವಾದ ಬಣಗಳು ರೈನ್ ನದಿಯ ಪೂರ್ವ ಭಾಗದಲ್ಲಿದ್ದವು. ಈ ಬಣಗಳ ಪೈಕಿ ಫ್ರ್ಯಾಂಕ್ ಬಣದ ಜನ ರೈನ್ ನದಿಯ ಕೆಳಭಾಗದ ರೋಮನ್ ಗಡಿಯ ಬಳಿ ನೆಲೆಯಾಗಿದ್ದರು ; ಪ್ರ.ಶ.ಸು. 260ರಿಂದ ಮೇನ್ ಕಣಿವೆಯ ಭಾಗವನ್ನು ಬರ್ಗಂಡಿ ಜನ ಆಕ್ರಮಿಸಿಕೊಂಡಿದ್ದರು ; ಅಲಮನ್ನಿ ಬಣದವರು ಅಗ್ರಿ ಡೆಕುಮಾಟೆಸ್ ಪ್ರದೇಶದ ಒಡೆಯರಾಗಿದ್ದರು. ಟ್ಯಾಸಟಸ್ ಬಾಲ್ಟಿಕ್ ತೀರದವರೆಂದು ಹೇಳಿರುವ ಜನ 2ನೆಯ ಶತಮಾನದ ಹೊತ್ತಿಗೆ ದಕ್ಷಿಣದ ಕಡೆ ಹೊರಟುಹೋಗಿದ್ದರು. ಆಗ ಗಾತ್ ಜನ ಯುಕ್ರೇನ್ ಮತ್ತು ಈಗಿನ ಆಧುನಿಕ ರೂಮೇನಿಯ ಭಾಗಗಳ ಮೇಲೆ ನಿಯಂತ್ರಣ ಹೊಂದಿದ್ದರು. ಗೆಪಿಡೆ ಬಣದ ಜನ ಟ್ರಾನ್ಸಿಲ್‌ವೇನಿಯಕ್ಕೆ ಉತ್ತರದ ಪರ್ವತಭಾಗಗಳಲ್ಲಿದ್ದರು. ಅವರ ಪಶ್ಚಿಮದ ನೆರೆಯವರು ವಾಂಡಲರು.

ಪ್ರ. ಶ. 500ರ ಹೊತ್ತಿಗೆ ಜರ್ಮನಿ ಬಣಗಳಲ್ಲಿ ಮತ್ತಷ್ಟು ಬದಲಾವಣೆಗಳಾಗಿದ್ದುವು. ಆಂಗ್ಲೆಸ್ ಮತ್ತು ಸ್ಯಾಕ್ಸನ್ ಜನ ಇಂಗ್ಲೆಂಡಿಗೆ ಕಾಲಿಟ್ಟಿದ್ದರು. ಸ್ಯಾಕ್ಸನರಲ್ಲಿ ಹಳೆಯ ಸ್ಯಾಕ್ಸನರೆಂಬ ಜನ ಜರ್ಮನಿಯಲ್ಲೇ ಉಳಿದರು. ಫ್ರ್ಯಾಂಕ್ ಜನ ಈಶಾನ್ಯ ಗಾಲ್ ಭಾಗದ ಒಡೆಯ ರಾಗಿದ್ದರು. ಬರ್ಗಂಡಿ ಜನ ರೋನ್ ಕಣಿವೆಯಲ್ಲಿದ್ದರು. ಅವರ ಪಶ್ಚಿಮದ ನೆರೆಯಲ್ಲಿ ವಿಸಿಗಾತ್ ಬಣದ ಜನರಿದ್ದರು. ಇಟಲಿಯಲ್ಲಿ ಆಸ್ಟ್ರೋಗಾತರು ಮತ್ತು ಆಫ್ರಿಕದಲ್ಲಿ ವಾಂಡಲರು ನೆಲೆಸಿದ್ದರು. ಗಾಲ್ ದೇಶದಲ್ಲಿದ್ದ ವಿಸಿಗಾತರನ್ನು ಫ್ರ್ಯಾಂಕ್ ಜನ ಪ್ರ.ಶ. 507ರಲ್ಲಿ ಓಡಿಸಿ ಅವರ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ಆ ತರುವಾಯ ವಿಸಿಗಾತರು ಸ್ಪೇನ್ ದೇಶದಲ್ಲಿ ವಾಸವಾಗಿದ್ದು ಕೊನೆಗೆ 711ರಲ್ಲಿ ಮಹಮದೀಯರಿಂದ ನಾಶಗೊಂಡರು. ಲಾಂಬಾರ್ಡಿ ಜನ 568ರಲ್ಲಿ ಇಟಲಿ ದೇಶವನ್ನು ಹೊಕ್ಕು ಅಲ್ಲಿ ಸ್ವತಂತ್ರ ರಾಜ್ಯವನ್ನು ಕಟ್ಟಿಕೊಂಡು ಕೊನೆಗೆ ಫ್ರ್ಯಾಂಕರ ದೊರೆ ಷಾರ್ಲಮೇನ್‌ನಿಂದ ವಿನಾಶಗೊಂಡರು. ಗಾತ್ ಮತ್ತು ಇತರ ಬಣಗಳು ಬಿಟ್ಟುಹೋದ ಪೂರ್ವ ಜರ್ಮನಿಯನ್ನು ಸ್ಲಾವ್ ಜನ ವಶಪಡಿಸಿಕೊಂಡು ಪಶ್ಚಿಮಕ್ಕೆ ಬೊಹೀಮಿಯ ಮತ್ತು ಎಲ್ಬ್ ನದಿಯವರೆಗೆ ಹರಡಿದ್ದರು. 8ನೆಯ ಶತಮಾನದ ತರುವಾಯ ಜರ್ಮನರು ಪೂರ್ವ ಜರ್ಮನಿ, ಆಸ್ಟ್ರಿಯದ ದಕ್ಷಿಣ ಭಾಗ, ಸ್ಟಿರೀಯ ಮತ್ತು ಕರಿಂತೀಯಗಳನ್ನು ಸ್ಲಾವರಿಂದ ಗೆದ್ದುಕೊಂಡರು.

ನಾಗರಿಕತೆ : ಜರ್ಮನಿ ಜನಾಂಗದ ಪ್ರಾಚೀನ ನಾಗರಿಕತೆ ಮತ್ತು ಸಂಸ್ಕೃತಿಗಳ ಬಗ್ಗೆ ಜೂಲಿಯಸ್ ಸೀಜ಼ರನ ಮತ್ತು ಟ್ಯಾಸಟಸ್ಸನ ದಾಖಲೆಗಳೇ ಮುಖ್ಯ ಆಧಾರ. ಸೀಜ಼ರ್ ತಿಳಿಸುವಂತೆ ಜರ್ಮನರು ಪ್ರಾರಂಭದಲ್ಲಿ ವ್ಯವಸಾಯಗಾರರಾಗಿರಲಿಲ್ಲ. ಪಶುಸಂಗೋಪನೆಯೇ ಅವರ ಕಸುಬು. ಹಾಲು, ಬೆಣ್ಣೆ, ಮಾಂಸ ಅವರ ಮುಖ್ಯ ಆಹಾರ. ಪ್ರಶ ಪೂ. 1ನೆಯ ಶತಮಾನದವರೆಗೆ ಅವರಲ್ಲಿ ಭೂಮಿ ಖಾಸಗಿ ಆಸ್ತಿಯ ರೂಪದಲ್ಲಿರಲಿಲ್ಲ. ಅದು ಇಡೀ ಸಮುದಾಯದ ಆಸ್ತಿಯಾಗಿತ್ತು. ಸೀಜ಼ರ್ ರೈನ್ ನದಿಯ ಪ್ರದೇಶಕ್ಕೆ ಬಂದುಹೋದ 100 ವರ್ಷಗಳ ತರುವಾಯದ ಭೂ ಹಿಡುವಳಿ ಪದ್ಧತಿಯನ್ನು ಟ್ಯಾಸಟಸ್ ವಿವರಿಸುತ್ತಾನೆ. ಅವನ ಹೇಳಿಕೆಯ ಪ್ರಕಾರ, ರೈತರ ಸಂಖ್ಯೆಗೆ ಅನುಗುಣವಾದ ಭೂಮಿಯನ್ನು ಇಡೀ ಬಣ ಒಟ್ಟಿಗೆ ಹೊಂದಿತ್ತು ; ಅವರವರ ಸಾಮಾಜಿಕ ಅಂತಸ್ತಿಗೆ ತಕ್ಕಂತೆ ಭೂಮಿ ಸಾಗುವಳಿಗೆ ಹಂಚಿಕೆಯಾಗುತ್ತಿತ್ತು. ಭೂಮಿ ಹೇರಳವಾಗಿದ್ದ ಕಾರಣ ವಿಭಜನೆ ಸುಲಭವಾಗಿತ್ತು. ಒಂದು ವರ್ಷ ಬೇಸಾಯ ಮಾಡಿದ ಭೂಮಿಯನ್ನು ಉಳುತ್ತಿದ್ದರು. ಕಾಲಕ್ರಮದಲ್ಲಿ ಭೂಮಿಯನ್ನು ಸ್ವಂತ ಆಸ್ತಿಯನ್ನಾಗಿಟ್ಟುಕೊಳ್ಳುವ ಪದ್ಧತಿ ಜರ್ಮನಿಯಲ್ಲಿ ಆಚರಣೆಗೆ ಬಂತು. ಪ್ರಾಚೀನ ಜರ್ಮನರು ಧಾನ್ಯಗಳನ್ನು ಮಾತ್ರವಲ್ಲದೆ ತರಕಾರಿ ಮತ್ತು ಗೆಡ್ಡೆಗಳನ್ನು ಬೆಳೆಯುತ್ತಿದ್ದರು. ರೋಮನರ ಸಂಪರ್ಕವಿದ್ದ ಕಾಲದಲ್ಲಿ ಸೇಬುಕೃಷಿ ಹೆಚ್ಚಾಗಿತ್ತು. ವ್ಯವಸಾಯ ಪದ್ಧತಿ ಹೇಗಿದ್ದಿತೆಂಬುದನ್ನು ಸೀಜ಼ರನಾಗಲಿ ಟ್ಯಾಸಟಸ್ ಆಗಲಿ ತಿಳಿಸುವುದಿಲ್ಲ. ಬೊಹುಸ್ಲನ್ ಬಳಿಯ ಕಂಚಿನ ಯುಗದ ಬಂಡೆಯ ಕೆತ್ತನೆಗಳಲ್ಲಿ ಎತ್ತುಗಳು ಎಳೆಯುವ ನೇಗಿಲ ಚಿತ್ರವಿದೆ. ಜರ್ಮ್ಯಾನಿಕ್ ಜನಾಂಗಕ್ಕೆ ಜಾನುವಾರುಗಳೇ ಮುಖ್ಯ ಆಸ್ತಿ. ವ್ಯಕ್ತಿಯ ಸ್ಥಾನಮಾನವು ವ್ಯಕ್ತಿ ಹೊಂದಿದ್ದ ದನಕರುಗಳನ್ನು ಅವಲಂಬಿಸಿತ್ತು. ರೋಮನರ ದೃಷ್ಟಿಯಲ್ಲಿ ಜರ್ಮನರ ರಾಸುಗಳು ಮತ್ತು ಅಶ್ವಗಳು ಸಾಮಾನ್ಯ ದರ್ಜೆಯವು. ಸೀಜ಼ರನ ಕಾಲಕ್ಕೆ ನಾಲ್ಕು ಶತಮಾನಗಳ ಹಿಂದೆ ಪಾತ್ರೆಗಳು, ಅಗತ್ಯ ಬಳಕೆ ವಸ್ತುಗಳು ಮತ್ತು ಸಮರಾಸ್ತ್ರಗಳನ್ನು ತಯಾರಿಸಿಕೊಳ್ಳುವಷ್ಟು ಲೋಹ ಸಿಗುತ್ತಿರಲಿಲ್ಲ. ತರುವಾಯ ಕಂಚಿನ ವಸ್ತುಗಳ ತಯಾರಿಕೆಯಲ್ಲಿ ಜರ್ಮನರು ಪ್ರಸಿದ್ಧರಾದರು. ಪ್ರಾರಂಭಕಾಲದಲ್ಲಿ ಮಡಕೆಗಳನ್ನು ಕೈಯಿಂದ ಇಲ್ಲವೆ ಕುಂಬಾರ ಚಕ್ರದಿಂದ ತಯಾರಿಸುತ್ತಿದ್ದರು.

ಪ್ರ.ಶ. ಸುಮಾರು 3ನೆಯ ಶತಮಾನದಲ್ಲಿ ರೂನ್ ವರ್ಣಮಾಲೆಯ ಮೇಲೆ ಆಧಾರಿತವಾದ ಲಿಖಿತಭಾಷೆ ಜರ್ಮನಿಯಲ್ಲಿ ಪ್ರಚಲಿತವಾಗಿತ್ತು. ಈ ವರ್ಣಮಾಲೆ ಗ್ರೀಕ್ ಮತ್ತು ರೋಮನ್ ಲಿಪಿಗಳಿಂದ ರೂಪಿತವಾದದ್ದು.

ಪ್ರಶ.ಪೂ. 1ನೆಯ ಶತಮಾನದಲ್ಲಿ ಗುಲಾಮರ ವ್ಯಾಪಾರ ಜರ್ಮನಿಯಲ್ಲಿ ನಡೆಯುತ್ತಿತ್ತು. ಗುಲಾಮರನ್ನು ಕೊಂಡು ರೋಮನರು ರೋಮ್ ನಗರಕ್ಕೆ ಸಾಗಿಸುತ್ತಿದ್ದರು. ಇಟಲಿಯವರು ಮತ್ತು ಕೆಲ್ಟಿಕ್ ಜನ ತಯಾರಿಸಿದ ಸಾಮಾನುಗಳು ಜರ್ಮನಿಯಲ್ಲಿ ವ್ಯಾಪಾರವಾಗುತ್ತಿದ್ದವು. ವಿದೇಶಿ ವ್ಯಾಪಾರಿಗಳಿಂದ ಶ್ರೀಮಂತ ಯೋಧರು ಉತ್ತಮ ಮದ್ಯ, ಕಂಚಿನ ಪಾತ್ರೆಗಳು ಮೊದಲಾದುವನ್ನು ಕೊಳ್ಳುತ್ತಿದ್ದರು. ಅಗಸ್ಟಸ್ ಸಾಮ್ರಾಟನ ಕಾಲದಿಂದ ರೋಮ್ ನಗರದ ಸರಕುಗಳು ಜರ್ಮನಿಗೆ ಹೇರಳವಾಗಿ ಬರತೊಡಗಿದವು. ಆಗ ಜರ್ಮನಿಯ ಶ್ರೀಮಂತರು ಗಾಜಿನ ಪಾತ್ರೆ, ಊಟದ ಪಾತ್ರೆ, ಹಾಗೂ ತಟ್ಟೆಗಳು, ರೋಮ್ ದೇಶದ ಆಯುಧಗಳು, ಆಭರಣಗಳು, ಪ್ರತಿಮೆಗಳು ಮೊದಲಾದ ವಸ್ತುಗಳನ್ನು ಬಹು ಮೆಚ್ಚಿನವೆಂದು ಕೊಳ್ಳುತ್ತಿದ್ದರು. ಪ್ರಶ.ಪೂ. 1ನೆಯ ಶತಮಾನದ ಉತ್ತರಾರ್ಧದಲ್ಲಿ ಆಂಬರ್ ವ್ಯಾಪಾರ ಮುಖ್ಯವಾಗಿತ್ತು.

ಆಡಳಿತವ್ಯವಸ್ಥೆ : ಸೀಜರ್ ವರ್ಣಿಸುವ ಜರ್ಮನಿಯಲ್ಲಿ ನಿರಂಕುಶಪ್ರಭುತ್ವ ಕಂಡುಬರುವುದಿಲ್ಲ. ಪ್ರತಿಯೊಂದು ಬಣವೂ ಆಂತರಿಕ ವಿವಾದಗಳನ್ನು ತಾನೇ ತೀರ್ಮಾನಿಸುತ್ತಿತ್ತು. ಬಣಗಳ ನಡುವಣ ವಿವಾದಗಳನ್ನು ಇತ್ಯರ್ಥ ಮಾಡಲು ಆಗ ಯಾವ ಮಧ್ಯಸ್ಥಿಕೆ ವ್ಯವಸ್ಥೆಯಾಗಲೀ ಕೇಂದ್ರೀಯ ನಿಯಂತ್ರಣವಾಗಲೀ ಇರಲಿಲ್ಲ. ಹೀಗೆ ಬಣಗಳು ಸ್ವತಂತ್ರವಾಗಿಯೇ ಒಳಾಡಳಿತ ನಡೆಸುತ್ತಿದ್ದವು. ಯುದ್ಧಕಾಲದಲ್ಲಿ ಜರ್ಮನರು ಏರ್ಪಡಿಸಿಕೊಳ್ಳುತ್ತಿದ್ದ ಒಕ್ಕೂಟಕ್ಕೆ ಬಣಗಳು ನಾಯಕರನ್ನು ಚುನಾಯಿಸುತ್ತಿದ್ದುವು. ಅವರಲ್ಲಿ ಯಾರಿಗೂ ಮತ್ತೊಬ್ಬರಿಗಿಂತ ಹೆಚ್ಚಿನ ಅಧಿಕಾರವಿರಲಿಲ್ಲ; ಸಮಾನಾಧಿಕಾರ ಹೊಂದಿ ಯುದ್ಧದಲ್ಲಿ ಎಲ್ಲರೂ ಸಹಕರಿಸುತ್ತಿದ್ದರು. ಪ್ರ.ಶ. 4ನೆಯ ಶತಮಾನದಲ್ಲಿ ಸಹ ಇದೇ ಪರಿಸ್ಥಿತಿ ಇತ್ತು. ಶಾಂತಿ ಕಾಲದಲ್ಲಿ ಜರ್ಮನಿ ಬಣಗಳಿಗೆ ಅರಸನಿರುತ್ತಿರಲಿಲ್ಲ.

ಟ್ಯಾಸಟಸನ ಕಾಲದಲ್ಲಿ ಹೊಸ ಮಾದರಿಯ ಸೈನಿಕ ನಾಯಕತ್ವ ಜರ್ಮನಿಯಲ್ಲಿತ್ತು. ಬಣಕ್ಕೆ ನಾಯಕ ಆಗ ಚುನಾಯಿತನಾಗುತ್ತಿದ್ದ. ಆದರೆ ಎಲ್ಲ ಯೋಧರೂ ಚುನಾವಣೆಗೆ ನಿಲ್ಲಲು ಅರ್ಹರಾಗಿರಲಿಲ್ಲ. ಒಮ್ಮತದಿಂದ ಅಂಗೀಕೃತವಾದ ಅರಸುಕುಲಕ್ಕೆ ನಾಯಕನ ಅಧಿಕಾರವನ್ನು ವಹಿಸಲಾಗುತ್ತಿತ್ತು. ಈ ಪದ್ಧತಿ 1ನೆಯ ಶತಮಾನದಲ್ಲಿ ಚೆರುಸಿ ಮತ್ತು ಬಟೇವಿಯ ಬಣಗಳಲ್ಲಿ ಮತ್ತು 6ನೆಯ ಶತಮಾನದಲ್ಲಿ ಹೆರೂಲಿ ಬಣದಲ್ಲಿ ಕಂಡುಬರುತ್ತದೆ. ನಾಯಕತ್ವ ಆನುವಂಶಿಕವಲ್ಲ. 1ನೆಯ ಶತಮಾನದಲ್ಲಿ ಬಣದ ನಾಯಕನ ಮರಣಾನಂತರ ಅವನ ಮಗ ನಾಯಕನಾಗಿ ಬಂದ ನಿದರ್ಶನಗಳಿಲ್ಲ. ಬಣನಾಯಕ ಧಾರ್ಮಿಕ ಹಾಗೂ ಸೈನಿಕ ಕರ್ತವ್ಯಗಳನ್ನು ವಹಿಸುತ್ತಿದ್ದ; ನಿರಂಕುಶ ಪ್ರಭುವಾಗಿರಲಿಲ್ಲ. ಬಣದ ಪ್ರಮುಖರು ಸದಸ್ಯರಾಗಿದ್ದ ಪರಿಷತ್ತು ಅವನನ್ನು ನಿಯಂತ್ರಿಸಬಹುದಾಗಿತ್ತು. ನಾಯಕ ಮಂಡಿಸಿದ ಸಲಹೆಗಳನ್ನು ಯೋಧರ ಸಾರ್ವತ್ರಿಕ ಸಭೆ ನಿರಾಕರಿಸಬಹುದಾಗಿತ್ತು ; ರಣರಂಗದಲ್ಲಿ ತನ್ನ ಆಜ್ಞೆಗಳನ್ನು ಪಾಲಿಸುವಂತೆ ಯೋಧರನ್ನು ಒತ್ತಾಯಪಡಿಸುವ ಅಧಿಕಾರವನ್ನು ಸಹ ಆತ ಹೊಂದಿರಲಿಲ್ಲ. ಅವನ ಸ್ವಂತ ಗುಣಗಳ ಮೇಲೆ ಅವನ ವ್ಯಕ್ತಿತ್ವ ಮತ್ತು ಪ್ರಭಾವ ನಿರ್ಧಾರವಾಗುತ್ತಿತ್ತು. ಸೀಜ಼ರ್ ವರ್ಣಿಸುವ ಜರ್ಮನಿಯ ಬಣಗಳಲ್ಲಿ ಇಬ್ಬರು ನಾಯಕರು ನೇಮಕವಾಗುತ್ತಿದ್ದರು. ಆದರೆ ಸೀಜ಼ರನ ತರುವಾಯ ಬಂದ ಟ್ಯಾಸಟಸನ ಕಾಲಕ್ಕೆ ಬಣಕ್ಕೆ ಒಬ್ಬನೇ ನಾಯಕನಿರುತ್ತಿದ್ದನೆಂದು ತಿಳಿದುಬರುತ್ತದೆ.

ಬಣದ ಪ್ರಮುಖರ ಪರಿಷತ್ತು (ಪ್ರಿನ್ಸೆಪ್ಸ್) ಸಣ್ಣಪುಟ್ಟ ವ್ಯವಹಾರಗಳನ್ನೂ ಯೋಧರ ಸಾರ್ವತ್ರಿಕ ಸಭೆ ಜನತೆಗೆ ಸಂಬಂಧಪಟ್ಟ ಪ್ರಮುಖ ವಿಷಯಗಳನ್ನೂ ನಿರ್ಣಯಿಸುತ್ತಿದ್ದುವು. ಆ ವಿಷಯಗಳು ಪರಿಷತ್ತಿನ ಗಮನಕ್ಕೆ ಬಾರದೆ ಹೋಗುತ್ತಿರಲಿಲ್ಲ. ಎಲ್ಲ ಯೋಧರಿಗೂ ಸಾರ್ವತ್ರಿಕ ಸಭೆಯಲ್ಲಿ ಭಾಗವಹಿಸುವ ಹಕ್ಕಿತ್ತು ; ಆದರೆ ರಣರಂಗದಲ್ಲಿ ಹಿಮ್ಮೆಟ್ಟಿದ ಯೋಧರಿಗೆ ಈ ಅವಕಾಶವಿರಲಿಲ್ಲ. ಯೋಧರ ಸಭೆಯ ತೀರ್ಮಾನಗಳೇ ಅಂತಿಮ. ದ್ರೋಹ, ಹೇಡಿತನ, ಅತ್ಯಾಚಾರ ಮೊದಲಾದ ಅಪರಾಧಗಳಿಗೆ ಈ ಸಭೆ ಮರಣದಂಡನೆ ವಿಧಿಸುತ್ತಿತ್ತು.

ಟ್ಯಾಸಟಸನ ಕಾಲದಲ್ಲಿ ಯೋಧರ ಸಾರ್ವತ್ರಿಕ ಸಭೆ ಬಣದ ಹಲವು ಪ್ರಮುಖರನ್ನು ನ್ಯಾಯಾಧೀಶರನ್ನಾಗಿ ಚುನಾಯಿಸುತ್ತಿತ್ತು. ಈ ನ್ಯಾಯಾಧೀಶರು ಹಳ್ಳಿ ಹಳ್ಳಿಗಳಲ್ಲಿ ತಿರುಗಿ ಜನರ ಖಾಸಗಿ ವ್ಯಾಜ್ಯಗಳನ್ನು ತೀರ್ಮಾನಿಸುತ್ತಿದ್ದರು. ಪ್ರತಿ ನ್ಯಾಯಾಧೀಶನೂ ತನ್ನ ತೀರ್ಮಾನಗಳನ್ನು ಜಾರಿಗೆ ತರಲು 100 ಮಂದಿ ಪರಿವಾರದೊಡನೆ ಹೋಗುತ್ತಿದ್ದ. ಶಿಕ್ಷೆಗೆ ಗುರಿಯಾದವರು ಅಪರಾಧದ ತೀವ್ರತೆಗನುಸಾರವಾಗಿ ಕುದುರೆಗಳನ್ನು ಅಥವಾ ದನಗಳನ್ನು ದಂಡವಾಗಿ ತೆರಬೇಕಾಗಿತ್ತು. ಖೂನಿ, ಕಳ್ಳತನ ಮೊದಲಾದ ಅಪರಾಧಗಳ ಬಗ್ಗೆ ಸಂಬಂಧಪಟ್ಟ ಪಕ್ಷಗಳೇ ಕ್ರಮಕೈಗೊಳ್ಳುತ್ತಿದ್ದುವು. ರಕ್ತಪಾತದಿಂದ ಕೂಡಿದ ಕುಲದ ವ್ಯಾಜ್ಯಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿಹೋಗುತ್ತಿದ್ದುದುಂಟು. ಕ್ರೈಸ್ತಧರ್ಮ ಪ್ರಚಾರವಾದ ಮೇಲೂ ಇಂಥ ರಕ್ತಪಾತದ ಕುಲವ್ಯಾಜ್ಯಗಳನ್ನು ಕೊನೆಗಾಣಿಸುವುದು ಜರ್ಮನಿ ಅರಸರಿಗೆ ಸುಲಭವಾದ ಕೆಲಸವೇನಾಗಲಿಲ್ಲ.

ಸೀಜ಼ರನ ಕಾಲದಿಂದ ಟ್ಯಾಸಟಸ್‌ನ ಕಾಲದವರೆಗೆ ಜರ್ಮನ್ ಸಮಾಜ ಹೇಗೆ ಅಭಿವೃದ್ಧಿ ಹೊಂದಿತೆಂದು ಹೇಳಲು ಸಾಧ್ಯ: ಸೀಜ಼ರನ ಕಾಲದಲ್ಲಿದ್ದುದಕ್ಕಿಂತ ಜರ್ಮನ್ ಜನ ಪ್ರಶ.ಪೂ. 1ನೆಯ ಶತಮಾನದಲ್ಲಿ ಅಷ್ಟು ಅನಾಗರಿಕರಾಗಿರಲಿಲ್ಲ. ರಾಜ್ಯಾಡಳಿತ ರೂಪರೇಷೆಗಳು ಆಗತಾನೆ ರೂಪುಗೊಳ್ಳುತ್ತಿದ್ದುವು. ಅಧಿಕಾರ ಅರಸನಲ್ಲಿ ನೆಲೆಸಬೇಕೆಂಬ ಸೂತ್ರಕ್ಕೆ ಮನ್ನಣೆ ಸಿಗಲಾರಂಭವಾಗಿತ್ತು. ಖಾಸಗಿ ಜನರಲ್ಲಿ ಸಂಪತ್ತು ಶೇಖರಣೆಯಾಗಿತ್ತು. ಪರಿವಾರ ಪದ್ಧತಿ ಜರ್ಮನಿಯಲ್ಲಿ ರೂಢಿಯಲ್ಲಿದ್ದುದನ್ನು ಸೀಜ಼ರ್ ಕಂಡಿದ್ದಾನೆ. ಈ ಪದ್ಧತಿಯ ಪ್ರಕಾರ ಸಾಹಸಿ ಯೋಧ ತನ್ನ ಪರಿವಾರದೊಂದಿಗೆ ಶತ್ರುಗಳ ಮೇಲೆ ದಾಳಿ ನಡೆಸುವ ತನ್ನ ಉದ್ದೇಶವನ್ನು ಸಾರ್ವತ್ರಿಕ ಸಭೆಯಲ್ಲಿ ಘೋಷಿಸುತ್ತಿದ್ದ. ಅವನ ಪರಿವಾರಕ್ಕೆ ಸೇರಲು ಒಪ್ಪಿದವರು ಅವನ ತಂಡವನ್ನು ಬಿಡಲಾಗುತ್ತಿರಲಿಲ್ಲ. ದಾಳಿ ಮತ್ತು ಯುದ್ಧ ಕಾಲಗಳಲ್ಲಿ ಪರಿವಾರದ ಮುಖಂಡನ ಮತ್ತು ಅವನ ಅನುಯಾಯಿಗಳ ಸಂಬಂಧ ಹಂಗಾಮಿಯಾಗಿರುತ್ತಿತ್ತು. ಯೋಧರು ಆರ್ಥಿಕ ಪ್ರತಿಫಲಕ್ಕಾಗಿ ಮುಖಂಡರನ್ನು ಅನುಸರಿಸಿಹೋಗುತ್ತಿರಲಿಲ್ಲ. ಟ್ಯಾಸಟಸ್‌ನ ಕಾಲದಲ್ಲಿ ಪರಿವಾರದ ನಾಯಕನ ಮತ್ತು ಅವನ ಯೋಧರ ಸಂಬಂಧ ಶಾಶ್ವತ ರೂಪದ್ದಾಗಿತ್ತು. ಮುಖಂಡ ಯೋಧರನ್ನು ತನ್ನ ಸೇವೆಯಲ್ಲಿರಿಸಿಕೊಂಡು ಅವರ ಪೋಷಣೆಯ ಹೊಣೆಯನ್ನು ಹೊತ್ತಿದ್ದ; ಅವರಿಗೆ ಸಮರಾಯುಧಗಳನ್ನು ಮತ್ತು ಕುದುರೆಗಳನ್ನು ಒದಗಿಸುವುದಲ್ಲದೆ ಸೂರೆಗೊಂಡ ವಸ್ತುಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದ. ಆಗ ಯೋಧರಿಗೆ ಭೂಮಿಯನ್ನು ಹಂಚಿಕೊಡುವ ಊಳಿಗಮಾನ್ಯ ಪದ್ಧತಿ ಇರಲಿಲ್ಲ ; ಖಾಸಗಿ ಭೂಮಾಲೀಕತ್ವವೂ ಇರಲಿಲ್ಲ. ಮುಖಂಡ ಸತ್ತಮೇಲೆ ಬದುಕಿರುವುದು ಅಪಮಾನಕರವೆಂದು ಯೋಧರು ಭಾವಿಸಿದ್ದರು.

ಟ್ಯಾಸಟಸನ ಕಾಲದ ಹೊತ್ತಿಗೆ ಜರ್ಮನಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿ ಹೋಗಿ ವಿವಿಧ ಬಣಗಳಲ್ಲಿ ರಾಜ್ಯಾಧಿಕರ ಸ್ಥಾಪಿತವಾಯಿತು. ಪ್ರಶ. 100ಕ್ಕೆ ಹಿಂದೆ ಮರೊಬಾಡಸ್ ಎಂಬೊಬ್ಬ ಜರ್ಮನಿ ಬಣನಾಯಕ ಮಾತ್ರವೇ ನಿರಂಕುಶ ಪ್ರಭುವಾಗಿದ್ದು ತನ್ನ ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸಿದ. ಈತ ಮಾರ್ಕಮನ್ನಿ ಜನಾಂಗವನ್ನು ಪ್ರಶ.ಪೂ. ಸು. 98ರಲ್ಲಿ ಬೊಹೀಮಿಯ ಪ್ರದೇಶಕ್ಕೆ ತಂದು ನೆಲೆನಿಲ್ಲಿಸಿದ. ಅದಕ್ಕೆ ಹಿಂದೆ ಈ ಜನಾಂಗದವರು ಅವರ ಜನ್ಮಭೂಮಿಯಾದ ಮೇನ್ ಕಣಿವೆಯಲ್ಲಿದ್ದರು. ಅವನು ಎಲ್ಬ್ ಮತ್ತು ವಿಸ್ಚಲ ನದಿಗಳ ನಡುವಣ ಜರ್ಮನರನ್ನು ತನ್ನ ಅಧೀನ ಮಾಡಿಕೊಂಡ. ಅವರಲ್ಲಿ ಸಮ್ನೋನೆಸ್, ಲಾಂಬಾರ್ಡರು, ಮತ್ತು ಲುಗಿ ಬಣದ ಜನ ಸೇರಿದ್ದರು. ಚೆರುಸಿ ಬಣದವರು ಅರಸರ ಕೆಲವು ಪ್ರಜೆಗಳೊಂದಿಗೆ ಸೇರಿಕೊಂಡು ಪ್ರ.ಶ. 17ರಲ್ಲಿ ಅವನನ್ನು ಪದಚ್ಯುತಿಗೊಳಿಸಿ ರೋಮ್ ಸಾಮ್ರಾಜ್ಯಕ್ಕೆ ಅಟ್ಟಿದರು.

ಟ್ಯಾಸಟಸ್‌ನ ಕಾಲದಲ್ಲಿ ಪಶ್ಚಿಮ ಜರ್ಮನಿಯಲ್ಲಿ ಪ್ರಸಿದ್ಧವಾಗಿದ್ದ ಅನೇಕ ಜರ್ಮನ್ ಬಣಗಳು ಪ್ರಶ. 2ನೆಯ ಶತಮಾನದಲ್ಲಿ ಕಾಣದಂತಾಗಿದ್ದವು. ಅವುಗಳ ಬದಲಿಗೆ ಅಲ್ಲಿ ನಾವು ಕಾಣುವುದು ಫ್ರಾಂಕ್, ಬರ್ಗಂಡಿ, ಆಲಮನಿ ಮೊದಲಾದ ಬಣಗಳನ್ನು. 3ನೆಯ ಹಾಗೂ ಅನಂತರದ ಶತಮಾನಗಳಲ್ಲಿ ಈ ಬಣಗಳ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಮಾಹಿತಿಗಳು ಸಾಕಷ್ಟಿಲ್ಲ. ಜರ್ಮನ್ ಬಣದಲ್ಲಿದ್ದ ಯೋಧರ ಸಾರ್ವತ್ರಿಕ ಸಭೆ ಈ ಕಾಲದಲ್ಲಿ ಕಂಡುಬರುವುದಿಲ್ಲ. 300 ವರ್ಷಗಳ ಹಿಂದೆ ಪ್ರಜೆಗಳಿಗೆ ಸ್ವಂತ ವ್ಯವಹಾರಗಳ ಬಗ್ಗೆ ಇದ್ದ ಸ್ವಾತಂತ್ರ್ಯ 4ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಇಲ್ಲದಂತಾಗಿತ್ತು. ಪ್ರಜಾತಂತ್ರ ಸಂಸ್ಥೆಗಳು ನಿರ್ಮೂಲನಗೊಂಡು ರಾಜ್ಯಗಳು ಸ್ಥಾಪಿತವಾದ ಬಗ್ಗೆ ಸಹ ಮಾಹಿತಿಗಳಿಲ್ಲ. 4ನೆಯ ಶತಮಾನದಲ್ಲಿ ಎರ್ಮನರಿಕ್ ಎಂಬಾತ ಯುಕ್ರೇನ್ ಪ್ರಾಂತ್ಯದಲ್ಲಿ ಆಸ್ಟ್ರೋಗಾತ್ ಜನಾಂಗವನ್ನು ಆಳುತ್ತಿದ್ದನೆಂದು ಮಾತ್ರ ತಿಳಿದುಬರುತ್ತದೆ. ಜರ್ಮನ್ ಬಣನಾಯಕರು ರೋಮ್ ಸಾಮ್ರಾಜ್ಯದ ಸಾಮಂತರಾಗಿ ನೆಲೆಸುವವರೆಗೆ ಜರ್ಮನಿಯಲ್ಲಿ ರಾಜಪ್ರಭುತ್ವ ಪೂರ್ಣವಾಗಿ ಸ್ಥಾಪನೆಯಾಗಲಿಲ್ಲ. ಇಟಲಿಯ ಆಸ್ಟ್ರೋಗಾತರ ನಾಯಕರು, ಗಾಲ್ ಮತ್ತು ಸ್ಪೇನ್ ದೇಶಗಳ ವಿಸಿಗಾತರ ನಾಯಕರು, ಆಫ್ರಿಕದ ವಾಂಡಲರ ನಾಯಕರು ಮೊದಲಾದವರೇ ಪ್ರಪ್ರಥಮವಾಗಿ ರಾಜ್ಯವಾಳತೊಡಗಿದ ಜರ್ಮನ್ ಬುಡಕಟ್ಟಿನ ಅರಸರು.

ಯುದ್ಧಕಲೆ : ಸೀಜ಼ರನ ದಂಡು ಜರ್ಮನಿಯನ್ನು ಪ್ರವೇಶಿಸಿದಾಗ, ಲೋಹದ ಅಭಾವದಿಂದ ಜರ್ಮನಿಯಲ್ಲಿ ಯುದ್ಧಾಸ್ತ್ರಗಳು ಮತ್ತು ಇನ್ನಿತರ ಉಪಕರಣಗಳು ಹೆಚ್ಚು ಬಳಕೆಯಲ್ಲಿರಲಿಲ್ಲ. ಅಶ್ವಯೋಧರು ಮತ್ತು ಕಾಲಾಳುಗಳು ಬೆಂಕಿಯಿಂದ ಚೂಪುಗೊಳಿಸಿದ ಇಲ್ಲವೆ ಲೋಹದ ಮೊನೆಯುಳ್ಳ ಈಟಿಯನ್ನು ಉಪಯೋಗಿಸುತ್ತಿದ್ದರು. ಖಡ್ಗಧಾರಿ ಯೋಧರು ಕೆಲವೇ ಮಂದಿ. ಯೋಧರು ಧರಿಸುವ ಕಬ್ಬಿಣದ ಶಿರಸ್ತ್ರಾಣ ಮತ್ತು ಕಬ್ಬಿಣದ ಕವಚ ಆಗಿನ ಜನರಿಗೆ ತಿಳಿಯದು. ಮರದ ಗುರಾಣಿ ಮಾತ್ರ ಯೋಧನ ರಕ್ಷೆಯಾಗಿತ್ತು ; ಅದಕ್ಕೆ ಚಕ್ಕಳ ಹೊದಿಸಿ ಬಲಗೊಳಿಸುತ್ತಿದ್ದರು. ಆಯುಧಗಳ ಅಭಾವದಿಂದ ಜರ್ಮನ್ ಸೈನಿಕರು ಒಂದೇ ಏಟಿಗೆ ರೋಮನ್ ಸೈನ್ಯದ ಮೇಲೆ ಬಿದ್ದು ಆದಷ್ಟು ಜನರನ್ನು ನಾಶಮಾಡುವ ಯುದ್ಧ ವಿಧಾನವನ್ನು ಕಲಿತಿದ್ದರು. ಮರಗಳಿಂದ ಸುತ್ತುಗಟ್ಟಲ್ಪಟ್ಟ ಬಯಲಿನಲ್ಲಿ ಶತ್ರುಗಳನ್ನು ಎದುರಿಸಿ ಮರಗಳ ರಕ್ಷಣೆಯಲ್ಲಿಯೇ ಎಲ್ಲ ಕಡೆಗಳಿಂದಲೂ ನುಗ್ಗಿ ಬಂದು ಯುದ್ಧ ಮಾಡುವುದರಲ್ಲಿ ಆ ಜನ ಪಳಗಿದ್ದರು.

ರೋಮ್ ಚಕ್ರಾಧಿಪತ್ಯದ ಉತ್ತರಾರ್ಧದಲ್ಲಿ ಸಹ ಜರ್ಮನ್ ಯೋಧರ ಆಯುಧಗಳು ಉತ್ತಮಗೊಂಡಂತೆ ಕಾಣುವುದಿಲ್ಲ. ಪ್ರಶ. 3ನೆಯ ಶತಮಾನದಲ್ಲಿ ಅವರು ಬಿಲ್ಲುಬಾಣಗಳನ್ನು ಉಪಯೋಗಿಸುತ್ತಿದ್ದರು ; ಬಣದ ನಾಯಕರು ಮಾತ್ರ ಕುದುರೆಗಳ ಮೇಲೆ ಕುಳಿತು ಸೈನ್ಯದ ಮುಂದೆ ಬರುತ್ತಿದ್ದರು. 6ನೆಯ ಶತಮಾನದಲ್ಲಿ ಸಹ ಜರ್ಮನ್ ಯೋಧರಿಗೆ ಕಬ್ಬಿಣದ ಕವಚ ಮತ್ತು ಶಿರಸ್ತ್ರಾಣ ಅಪರೂಪವಾದ ವಸ್ತುಗಳಾಗಿದ್ದವು. ಬೆಲಿಸಾರಿಯಸ್‌ನನ್ನು ಎದುರಿಸಿ ಯುದ್ಧ ಮಾಡಿದ ಆಸ್ಟ್ರೋಗಾತರ ಸೈನ್ಯದಲ್ಲಿ ಬಿಲ್ಲಾಳುಗಳೇ ಇದ್ದರು : 6ನೆಯ ಶತಮಾನದಲ್ಲಿ ಆಫ್ರಿಕದ ವಾಂಡಲರ ದಂಡು ಸಹ ಅದೇ ರೀತಿ ಸಜ್ಜಿತವಾಗಿತ್ತು. ಈ ಜನರಲ್ಲಿ ಚರಿತ್ರಕಾರ ಟ್ಯಾಸಟಸ್‌ನ ಕಾಲಕ್ಕಿಂತ ಹೆಚ್ಚು ಅಶ್ವಸವಾರರಿದ್ದಂತೆ ಕಾಣುತ್ತದೆ. ಫ್ರ್ಯಾಂಕ್ ಜನರ ದಂಡಿನಲ್ಲಿ ಅಶ್ವಸವಾರರೇ ಹೆಚ್ಚು. ಕಾಲಾಳುಗಳು ಗಂಡುಗೊಡಲಿಗಳನ್ನು ಉಪಯೋಗಿಸುತ್ತಿದ್ದರು. 1ನೆಯ ಜಸ್ಟೀನಿಯನ್ ಚಕ್ರವರ್ತಿಯ ಶ್ರೇಷ್ಠ ಸಮರಾಯುಧಗಳನ್ನು ಹೊತ್ತ ಬಲವಾದ ಸೈನ್ಯವನ್ನು ಎದುರಿಸಲು ಜರ್ಮನಿಯ ಯಾವ ಬಣದ ಸೈನ್ಯವೂ ಯುಕ್ತ ಆಯುಧಗಳಿಂದ ಸಜ್ಜುಗೊಂಡಿರಲಿಲ್ಲ. ಅವರಿಗೆ ಮುತ್ತಿಗೆ ಹಾಕುವ ಕಲೆ ಸಹ ತಿಳಿಯದು. ಕ್ರಿಸ್ತಶಕೆಯ ಮೊದಲ ಆರು ಶತಮಾನಗಳಲ್ಲಿ ಜರ್ಮನರು ರೋಮ್ ಸಾಮ್ರಾಜ್ಯದ ನಗರಗಳನ್ನು ಯಶಸ್ವಿಯಾಗಿ ಮುತ್ತಿಗೆ ಹಾಕುವ ಬಗ್ಗೆ ದಾಖಲೆಗಳಿಲ್ಲ. ಪ್ರಶ. 250–251ರಲ್ಲಿ ಫಿಲಿಪಾಪಲಸ್ ನಗರ ಜರ್ಮನರ ವಶವಾದುದು ಅಲ್ಲಿಯ ನಗರಪಾಲಕನ ಕೃತ್ರಿಮದಿಂದ.

ಕ್ರೈಸ್ತಧರ್ಮಾವಲಂಬನೆ : 3ನೆಯ ಶತಮಾನದ ಮಧ್ಯಭಾಗದಲ್ಲಿ ವಿಸಿಗಾತರು ಸೆರೆಹಿಡಿದ ಏಷ್ಯ ಮೈನರ್ ಭಾಗದ ಯುದ್ಧಖೈದಿಗಳಿಂದ ಕ್ರೈಸ್ತಧರ್ಮ ಜರ್ಮನಿಯಲ್ಲಿ ಪ್ರಚಾರಗೊಂಡಿತು. ಆದರೆ, ವಿಸಿಗಾತರು ಪ್ರಶ. 382–395ರಲ್ಲಿ ಡ್ಯಾನ್ಯೂಬ್ ನದಿಯ ದಕ್ಷಿಣ ಭಾಗದ ಮೀಷ್ಯ ಪ್ರಾಂತ್ಯದಲ್ಲಿ ರೋಮ್ ಚಕ್ರಾಧಿಪತ್ಯದ ಪ್ರಜೆಗಳಾಗಿ ಜೀವಿಸುತ್ತಿದ್ದ

ಕಾಲಕ್ಕೆ ಹಿಂದೆ ಕ್ರೈಸ್ತಧರ್ಮವನ್ನು ಅವಲಂಬಿಸಿರಲಿಲ್ಲವೆಂದು ಕಾಣುತ್ತದೆ. ಪಶ್ಚಿಮ ರೋಮನ್ ಚಕ್ರಾಧಿಪತ್ಯ ಪ್ರ.ಶ. 476ರಲ್ಲಿ ಪತನ ಹೊಂದುವುದಕ್ಕೆ ಹಿಂದೆ ಪ್ರಮುಖ ಜರ್ಮನ್ ಬಣಗಳು ಕ್ರೈಸ್ತ ಧರ್ಮವನ್ನು ಸ್ವೀಕರಿಸಿರಲಿಲ್ಲವೆಂದು ಕಾಣುತ್ತದೆ. ಆ ಕಾಲದಲ್ಲಿ ರೋಮ್ ಪ್ರಾಂತ್ಯಗಳಲ್ಲಿ ನೆಲೆಸಿದ ಜರ್ಮನ್ ಜನ ಒಂದು ಪೀಳಿಗೆಯೊಳಗೆ ಕ್ರೈಸ್ತಧರ್ಮವನ್ನವಲಂಬಿಸಿದರು. ವಾಂಡಲರು 409–429ರಲ್ಲಿ ಸ್ಪೇನ್ ದೇಶದಲ್ಲಿದ್ದಾಗ, ಬರ್ಗಂಡಿ ಬಣ 412–439ರಲ್ಲಿ ಪೂರ್ವ ಗಾಲ್ ಪ್ರಾಂತ್ಯದಲ್ಲಿದ್ದಾಗ, ಆಸ್ಟ್ರೋಗತರು 456–472ರಲ್ಲಿ ಪನೋನೀಯ ಪ್ರಾಂತ್ಯದಲ್ಲಿದ್ದಾಗ ಕ್ರೈಸ್ತಧರ್ಮವನ್ನು ಸ್ವೀಕರಿಸಿದರು. ರೂಗಿ ಬಣದವರು 482ಕ್ಕೆ ಹಿಂದೆ ಆಸ್ಟ್ರಿಯದಲ್ಲಿ ನೆಲೆಸಿದ್ದಾಗ ಕ್ರೈಸ್ತಧರ್ಮವನ್ನು ಅವಲಂಬಿಸಿದರು. ಈ ಎಲ್ಲ ಸಂದರ್ಭಗಳಲ್ಲಿ ಜರ್ಮನ್ ಭಾಷೆಯನ್ನಾಡುವ ಮತಪ್ರಚಾರಕರಿಂದ ಕ್ರೈಸ್ತಧರ್ಮ ಪ್ರಸಾರವಾಯಿತೇ ಹೊರತು ರೋಮ್ ಸಾಮ್ರಾಜ್ಯದಿಂದ ಬಂದ ಮತಪ್ರಚಾರಕರಿಂದಲ್ಲ. ವಿಸಿಗಾತ್ ಪಾದ್ರಿಗಳು ಈ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದರು.

ಪ್ರಾರಂಭದಲ್ಲಿ ಎಲ್ಲ ಜರ್ಮನ್ ಬಣಗಳೂ ಕ್ರೈಸ್ತಧರ್ಮದ ಏರಿಯನ್ ಪಂಥವನ್ನು ಅನುಸರಿಸಿದುವು. ಕ್ಲೋವಿಸ್ ಅರಸನ ನಾಯಕತ್ವದಲ್ಲಿ ಫ್ರ್ಯಾಂಕರು 496ರಲ್ಲಿ ಮತ್ತು ಸಿಗಿಸ್‌ಮಂಡ್ ಅರಸನ ಕಾಲದಲ್ಲಿ ಬರ್ಗಂಡಿ ಜನ ಕೆಥೊಲಿಕ್ ಧರ್ಮವನ್ನು ಸ್ವೀಕರಿಸುವವರೆಗೆ ಪ್ರಮುಖ ಜರ್ಮನ್ ಬಣಗಳು ಯಾವುವೂ ಕೆಥೊಲಿಕ್ ಧರ್ಮಪಂಥವನ್ನು ಅವಲಂಬಿಸಿರಲಿಲ್ಲ. ಕೆಥೊಲಿಕ್ ಧರ್ಮಕ್ಕೆ ಬದಲಾಗಿ ಆರಿಡ್ ಪಂಥವನ್ನು ಜರ್ಮನರು ಏಕೆ ಅನುಸರಿಸಿದರೆಂಬುದಕ್ಕೆ ಕಾರಣಗಳು ತಿಳಿದುಬಂದಿಲ್ಲ. ಏರಿಯನ್ ಪಂಥದ ಜರ್ಮನರು ರಚಿಸಿದ ಧರ್ಮಗ್ರಂಥಗಳೆಲ್ಲ ದುರದೃಷ್ಟವಶಾತ್ ಕಾಣದಂತಾಗಿವೆ. ಬಿಷಪ್ ಯುಲ್‌ಫಿಲಾಸ್ ಭಾಷಾಂತರಿಸಿದ ಬೈಬಲ್‌ಗ್ರಂಥದ ಅವಶೇಷ ಭಾಗಗಳು, ಸೇಂಟ್ ಜಾನನ ಧರ್ಮಬೋಧೆಯ ಬಗ್ಗೆ ಗಾತಿಕ್ ಭಾಷೆಯಲ್ಲಿ ಅನಾಮಿಕ ಗ್ರಂಥಕರ್ತನೊಬ್ಬ ಬರೆದ ವ್ಯಾಖ್ಯಾನ ಮತ್ತು ಅದೇ ಭಾಷೆಯಲ್ಲಿ ರಚಿತವಾದ ಚರ್ಚ್ ಕ್ಯಾಲೆಂಡರಿನ (ಪಂಚಾಗದ) ಚೂರುಪಾರುಗಳ ಹೊರತು ಮತ್ತಾವ ದಾಖಲೆಗಳೂ ಸಿಕ್ಕಿಲ್ಲ. ಜರ್ಮನರ ಮತಧರ್ಮಶಾಸ್ತ್ರ ಬೈಬಲ್ ಗ್ರಂಥದ ಅಕ್ಷರಶಃ ಅರ್ಥ ವಿವರಣೆಗಳಿಂದ ಕೂಡಿದ್ದು ನೀತಿಬೋಧೆಯತ್ತ ಗಮನ ಹರಿಸಿಲ್ಲ. ಏನೇ ಆಗಲಿ, ರೋಮ್ ಸಾಮ್ರಾಜ್ಯದ ಗಡಿಯ ಹೊರಗಣ ಅನಾಗರಿಕ ಜರ್ಮನರು ತಮ್ಮ ನಡುವೆ ಜೀವಿಸುತ್ತಿದ್ದ ಕ್ರೈಸ್ತರಿಗೆ ಕಿರುಕುಳ ಕೊಟ್ಟರೂ ಏರಿಯನ್ ಪಂಥದ ಜರ್ಮನ್ ಅರಸರು ಕೆಥೊಲಿಕ್ ಜನ ಮತ್ತು ಯಹೂದ್ಯರ ಬಗ್ಗೆ ಸಹನೆಯನ್ನು ವ್ಯಕ್ತಪಡಿಸಿದ್ದಾರೆ. ಕಾಲಕ್ರಮದಲ್ಲಿ ಕ್ರೈಸ್ತಧರ್ಮವನ್ನು ಸ್ವೀಕರಿಸಿದ ಉಳಿದ ಜರ್ಮನ್ ಜನಾಂಗಗಳಿವು : 8ನೆಯ ಶತಮಾನದ ಉತ್ತರಾರ್ಧದಲ್ಲಿ ಹಳೆಯ ಸ್ಯಾಕ್ಸನ್ ಜನ ; 10ನೆಯ ಶತಮಾನದಲ್ಲಿ ಸ್ಕ್ಯಾಂಡಿನೇವಿಯ ಜನ; 7ನೆಯ ಶತಮಾನದಲ್ಲಿ ಇಂಗ್ಲೆಂಡಿನ ಸ್ಯಾಕ್ಸನ್ ಜನ. ಐಸ್‌ಲೆಂಡಿನಲ್ಲಿ ಪ್ರ.ಶ. 1,000ರಲ್ಲಿ ಕ್ರೈಸ್ತಧರ್ಮ ಪ್ರಚಾರವಾಯಿತು. (ವಿ.ಜಿ.ಕೆ.)

**ಜರ್ಮ್ಯಾನಿಕ್ ಪುರಾಣ :** ಆ್ಯಂಗ್ಲೊ ಸ್ಯಾಕ್ಸನ್, ಜರ್ಮನ್ ಮತ್ತು ಸ್ಕ್ಯಾಂಡಿನೇವಿಯನ್ ಈ ಮೂರೂ ಜನಾಂಗಗಳ ಒಂದೇ ಮೂಲವುಳ್ಳಂತೆ ಕಾಣುವ ಪುರಾಣ ಮತ್ತು ವೀರೋಚಿತ ಸಾಹಿತ್ಯಗಳನ್ನಿಲ್ಲಿ ಜರ್ಮ್ಯಾನಿಕ್ ಪುರಾಣ ಎಂದು ಪರಿಗಣಿಸಲಾಗಿದೆ.

ಜರ್ಮನ್ ದೇವರುಗಳ ಚರಿತ್ರೆ ಮತ್ತು ವಿಶ್ವರಚನಾಕ್ರಮಗಳು ಇಂಡೊ–ಯುರೋಪಿಯನ್ನರ ಪುರಾಣಗಳ ಆಧಾರದಿಂದ ಬೆಳೆದುಬಂದಿವೆ. ಭಾರತೀಯ ಹಾಗೂ ಗ್ರೀಕ್ ಪುರಾಣಗಳಲ್ಲಿ ಕಂಡುಬರುವ ಅನೇಕ ವಿಷಯಗಳಿಗೂ ಜರ್ಮನ್ ಪುರಾಣದಲ್ಲಿ ಬರುವ ವಿಷಯ ಘಟನೆಗಳಿಗೂ ಹೋಲಿಕೆ ಇದೆ. ಈ ಪುರಾಣಕ್ಕೆ ಐಸ್‌ಲ್ಯಾಂಡಿನ ಪುರಾತನ ಪದ್ಯಗಳು ಮತ್ತು ಸ್ಕ್ಯಾಂಡಿನೇವಿಯ ಪುರಾಣ ಕಥೆಗಳು ಆಧಾರವಾಗಿವೆ.

ವಿಶ್ವನಿಯಮ : ರೋಮ್ ಚರಿತ್ರೆಕಾರ ಟ್ಯಾಸಟಸ್ ಹೇಳುವಂತೆ ಜರ್ಮನರು ಟುಯಿಸ್ಟೊ ಎಂಬ ಭೂದೇವತೆಯನ್ನು ಆರಾಧಿಸುತ್ತಾರೆ. ಮಾನವ ಜನಾಂಗಕ್ಕೆ ಮೂಲಪುರುಷನೆಂದು ಕರೆಯುವ ಮನಸ್ ಈತನ ಮಗ. ನಾರ್ವೆಯ ಪುರಾಣದ ಪ್ರಕಾರ ವಿಶ್ವದ ಹುಟ್ಟಿಗೆ ಮೊದಲು ಈಮಿರ್ ಎಂಬ ದೈತ್ಯನ ಜನನವಾಗುತ್ತದೆ. ಈತನ ಬಗಲಿನಿಂದ ಒಬ್ಬ ಮಗನೂ ಒಬ್ಬ ಮಗಳೂ ಹುಟ್ಟುತ್ತಾರೆ. ಈತ ತನ್ನ ಪಾದಗಳನ್ನು ಪರಸ್ಪರ ಉಜ್ಜಿದಾಗ ಆರು ತಲೆಯುಳ್ಳ ಒಬ್ಬ ದೈತ್ಯ ಹುಟ್ಟುತ್ತಾನೆ. ಅನಂತರ ಹಸು ಒಂದರಿಂದ ಇಬ್ಬರು ಸಹೋದರರೊಂದಿಗೆ ಓಡನ್ ದೇವತೆ ಹುಟ್ಟಿಬರುತ್ತಾನೆ. ಇವರು ಮೂವರೂ ಈಮಿರ್ ದೈತ್ಯನನ್ನು ಕೊಂದು ಅವನ ದೇಹದ ಮಾಂಸದಿಂದ ಭೂಮಿಯನ್ನು ಮೂಳೆಗಳಿಂದ ಪರ್ವತಗಳನ್ನೂ ತಲೆಬುರುಡೆಯಿಂದ ಆಕಾಶವನ್ನೂ ಅವನ ರಕ್ತದಿಂದ ಸಮುದ್ರವನ್ನೂ ಸೃಷ್ಟಿಸಿದರಂತೆ. ಈಮಿರನ ರಕ್ತ ಇಡೀ ವಿಶ್ವವನ್ನೇ ನುಂಗಿ ಪ್ರಳಯವನ್ನುಂಟುಮಾಡಿದಾಗ ಎಲ್ಲ ದೈತ್ಯರೂ ಮಡಿದು ಒಬ್ಬ ಮಾತ್ರ ಉಳಿದುಕೊಂಡ ಎಂಬ ಐಸ್‌ಲ್ಯಾಂಡಿನ ಪುರಾತನ ಕವನಕಥೆ ಬೈಬಲ್ಲಿನ ಪ್ರಳಯಕಥೆಯನ್ನು ಹೋಲುತ್ತದೆ. ಓಡನ್ ಮತ್ತು ಅವನ ಸಹೋದರರು ಪ್ರಳಯದಲ್ಲಿ ಕೊಚ್ಚಿಬಂದ ಮರದ ಎರಡು ತುಂಡುಗಳಿಗೆ ಜೀವವಿತ್ತು ಮಾನವಕುಲದ ಪ್ರಥಮ ಪುರುಷ ಮತ್ತು ಸ್ತ್ರೀಯನ್ನು ಸೃಷ್ಟಿಸಿದರು.

ಮಾನವ ಜೀವಿಸುತ್ತಿರುವ ಭೂಮಿಯನ್ನು ಸಮುದ್ರ ಸುತ್ತುವರಿದಿದೆ. ಈ ಸಮುದ್ರದಲ್ಲಿ ವಿಶ್ವಸರ್ಪ ತನ್ನ ಬಾಲವನ್ನು ತಾನೇ ಕಚ್ಚಿಕೊಂಡು ಮಲಗಿದೆ. ಈ ಸರ್ಪ ಆವರಿಸಿರುವ ಭಾಗವೇ ದೇವರಾಜ್ಯ. ಇಲ್ಲಿಗೂ ಸ್ವರ್ಗಕ್ಕೂ ಸಂಬಂಧ ಕಲ್ಪಿಸಿರುವ ಕಾಮನಬಿಲ್ಲಿನ ಮುಖಾಂತರ ದೇವತೆಗಳು ಇಲ್ಲಿಗೆ ಇಳಿದು ಬರುತ್ತಾರೆ. ಪೂರ್ವದ ಬಹುದೂರದಲ್ಲಿ ದೈತ್ಯರ ವಾಸಸ್ಥಾನವಿದೆ. ಸತ್ತವರ ಆತ್ಮಗಳು ತಂಗುವ ನಗರದ ಉತ್ತರದಲ್ಲಿ ಈ ದೈತ್ಯನಿವಾಸ ಇದೆಯೆಂದೂ ಒಂದು ಕಥೆ ಹೇಳುತ್ತದೆ. ಈ ದೈತ್ಯರು ಜಯದೇವತೆಯನ್ನು ಹಿಡಿಯಲು ಸದಾ ಪ್ರಯತ್ನಿಸುವ ಕಥೆ ಗ್ರೀಕ್ ಪುರಾಣ ಕಥೆಯಲ್ಲಿ ಬರುವ ಹೇಡೀಸ್ ಪರ್ಸೆಫೋನೆಯನ್ನು ಹಿಡಿಯುವ ಸಂಗತಿಯನ್ನು ಹೋಲುತ್ತದೆ. ಫುಲ್ಡಾದ ರುಡಾಲ್ಫ್‌ನ ಪ್ರಕಾರ (9ನೆಯ ಶತಮಾನ) ಸ್ಯಾಕ್ಸನ್ನರಿಗೆ ಪವಿತ್ರವಾದ, ಎಲ್ಲವನ್ನೂ ಭರಿಸುವ, ವಿಶ್ವಸ್ತಂಭ ಈ ಜಗತ್ತನ್ನು ಹೊತ್ತಿದೆ. ಸ್ವರ್ಗ ಧ್ರುವ ನಕ್ಷತ್ರದ ಆಧಾರದ ಮೇಲೆ ಚಲಿಸುತ್ತದೆ. ಜಗತ್ತಿಗೆ ಆಧಾರವಾಗಿರುವ ಮರದ ಕೆಳಗಡೆಯೇ ಮಾನವರ ಹಣೆಬರಹ (ವಿಧಿ) ನಿರ್ಧರಿತವಾಗುತ್ತಿದೆ. ಈ ಮಹಾವೃಕ್ಷದಿಂದ ಜೀವಧಾರಕ ಜೇನುಮಂಜು ಭೂಮಿಯ ಮೇಲೆ ಬೀಳುತ್ತದೆ. ಈ ಮರದ ಎಲೆಗಳನ್ನು ತಿನ್ನುವ ಆಡು ದೇವತೆಗಳಿಗೆ ಕುಡಿಯಲು ಜೇನಿನಂಥ ಮಧುರ ಹಾಲನ್ನು ಕೊಡುತ್ತದೆ. ರೆಕ್ಕೆಯುಳ್ಳ ಒಂದು ಭೂತಸರ್ಪ (ಡ್ರ್ಯಾಗನ್) ಬಂದು ಮರದ ಬೇರನ್ನು ಕಚ್ಚಿಹಾಕುತ್ತದೆ. ಈ ಮರದ ಮೇಲೆ ಕುಳಿತಿರುವ ಒಂದು ಹದ್ದಿಗೂ ಕೆಳಗಿರುವ ಭೂತಸರ್ಪಕ್ಕೂ ಮಧ್ಯೆ ಒಂದು ಅಳಿಲು ಓಡಾಡುತ್ತ ಅವುಗಳ ದ್ವೇಷ ಹೆಚ್ಚುವಂತೆ ಮಾಡುತ್ತದೆ.

ನಾರ್ವೆಯ ಪುರಾಣಕಥೆಗಳ ಪ್ರಕಾರ–ಇಡೀ ಜೀವಜಗತ್ತು ದೈತ್ಯ ಚಳಿಗೆ ಸಿಕ್ಕಿ ಸಾಯುವುದು. ಒಬ್ಬ ಗಂಡಸು, ಒಬ್ಬ ಹೆಂಗಸು ಮಾತ್ರ ಒಂದು ಮರದ ಒಳಗೆ ಆಶ್ರಯ ಪಡೆದು ಬದುಕಿ ಉಳಿದು ಮುಂದಿನ ಮಾನವಜನಾಂಗದ ಮೂಲವಾಗುವರು. ದೇವತೆಗಳ ಅಂತ್ಯದೊಡನೆ ಜಗತ್ತಿನ ಅಂತ್ಯವಾಗುವುದು. ದುಷ್ಟಶಕ್ತಿಗಳ ಪ್ರತೀಕವಾಗಿ ಸರ್ಪ ಮತ್ತು ತೋಳ ಸೂರ್ಯನನ್ನು ನುಂಗುವುವು. ದುಷ್ಟಶಕ್ತಿಗಳು ದೇವತೆಗಳನ್ನೂ ಮಾನವರನ್ನೂ ಆಕ್ರಮಿಸುವುವು. ನಕ್ಷತ್ರಗಳು ಉದುರಿ ಹೋಗುವುವು. ಭೂಮಿ ಸಮುದ್ರದಲ್ಲಿ ಮುಳುಗಿ ಹೋಗುವುದು. ಬೆಂಕಿಯ ಜ್ವಾಲೆ ಆಕಾಶವನ್ನು ಮುಚ್ಚುವುದು. ಈ ಪ್ರಳಯದ ಅನಂತರ ಹೊಸಭೂಮಿ ಹುಟ್ಟುವುದು, ದೇವತೆಗಳು ಮರಳಿ ಬರುವರು. ಸುಖಸಂತೃಪ್ತಿ ನೆಲೆಸುವುದು. ಜಗತ್ತಿನ ಪ್ರಳಯ ಮತ್ತು ಅದರ ಮರುಹುಟ್ಟಿನ ಕಲ್ಪನೆ ದೇವರಲ್ಲಿ ನಂಬಿಕೆ ಇಡದ ಅನಾಗರಿಕ ಜರ್ಮನರಿಗೂ ತಿಳಿದಿತ್ತು. ಕ್ರೈಸ್ತಕವಿಗಳು ತಮ್ಮ ಕವನಗಳ ಮೂಲಕ ಅವುಗಳಲ್ಲಿ ನೈತಿಕತೆ ಮತ್ತು ಧಾರ್ಮಿಕತೆಯನ್ನು ತುಂಬಿದರು. ಉದಾಹರಣೆಗೆ ಒಂದು ಹಳೆಯ ಇಂಗ್ಲಿಷ್ ಮತ್ತು ಜರ್ಮನ್ ಕಾವ್ಯ ಮುಸ್‌ಪಿಲಿಯಲ್ಲಿ ಜಗತ್ತಿನ ಅಂತ್ಯದಲ್ಲಿ ಸಂತ ಏಲಿಯಾಸನನ್ನು ಒಬ್ಬ ಕ್ರೈಸ್ತವಿರೋಧಿ ಕೊಂದಾಗ ಜಗತ್ತು ಸಿಡಿದು ಬೆಂಕಿಯ ಪಾಲಾಗುವುದು–ಎಂದಿದೆ.

ದೇವತೆಗಳು : ಓಡಿನ್, ಟಿರ್, ಥೋರ್ ಮತ್ತು ಫ್ರಿಗ ಜರ್ಮ್ಯಾನಿಕ್ ಪುರಾಣಗಳಲ್ಲಿ ಕಾಣಬರುವ ನಾಲ್ಕು ಪ್ರಮುಖ ದೇವತೆಗಳು. ಟ್ಯಾಸಟಸ್ ಇವರನ್ನು ಕ್ರಮವಾಗಿ ಮರ್ಕ್ಯುರಿ, ಮಾರ್ಸ್, ಹರ್‌ಕ್ಯುಲಿಸ್ ಮತ್ತು ವೀನಸ್ ದೇವತೆಗಳಿಗೆ ಹೋಲಿಸುತ್ತಾನೆ.

ಓಡಿನ್ ಪ್ರಮುಖ ದೈವ. ತನ್ನ ಒಂದೇ ಕಣ್ಣಿಂದ ಕುಳಿತಲ್ಲಿಂದಲೇ ಎಲ್ಲವನ್ನೂ ನೋಡುವಾತ. ವಿದ್ಯೆ ಮತ್ತು ಜ್ಞಾನಕ್ಕೆ ಅಧಿದೈವ. ಈತ ಮೃತರಿಗೆ ಮತ್ತೆ ಜೀವದಾನ ಮಾಡಬಲ್ಲ. ಯುದ್ಧದೇವನಾದ ಈತ ಕೋಪಗೊಂಡಾಗ ಮಾನವ ಉದ್ರಿಕ್ತನಾಗಿ ಕ್ರೂರನಾಗಿ, ವಚನತಪ್ಪಿ, ನೀತಿನಿಯಮವನ್ನು ಉಲ್ಲಂಘಿಸಿ ನಡೆಯುವಂತೆ ಪ್ರಚೋದನೆ ಮಾಡುವುದೂ ಉಂಟು.

ಟಿರ್ ದೇವನ ಬಗ್ಗೆ ಹೆಚ್ಚು ತಿಳಿದುಬಂದಿಲ್ಲವಾದರೂ ಈತ ಯುದ್ಧ ಮತ್ತು ನ್ಯಾಯಪಾಲನೆಗೆ ಸಂಬಂಧಿಸಿದ ಶಾಂತಿ ಸಂಧಾನಗಳ ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದ. ನ್ಯಾಯಾಧಿಪತಿಯ ಗುರುತಾಗಿ ಈತನ ಕೈಯಲ್ಲಿ ಈಟಿ ಇರುತ್ತದೆ. ದೇವತೆಗಳು ದುಷ್ಟತೋಳವನ್ನು ಕಟ್ಟಿಹಾಕಲು ಸಹಾಯ ಮಾಡುವುದಕ್ಕಾಗಿ ತನ್ನ ಒಂದು ಕೈಯನ್ನು ತೋಳದ ತೆರೆದ ಬಾಯಿಗೆ ತುರುಕಿದುದರಿಂದ ಈ ದೇವತೆಗೆ ಒಂದೇ ಕೈಯಿದೆ.

ಥೋರ್ ನಿಜಕ್ಕೂ ಸ್ಕ್ಯಾಂಡಿನೇವಿಯ ರೈತರ ಅಚ್ಚುಮೆಚ್ಚಿನ ದೇವರು. ಹರ್‌ಕ್ಯುಲಿಸ್ ಕೈಯಲ್ಲಿ ಸದಾ ಇರುವ ಬಡಿಗೆಯಂಥ ಆಯುಧ ಈ ದೇವನ ಕೈಯಲ್ಲೂ ಇದೆ. ಗಡ್ಡ ಕೆಂಪು. ಗುರುವಾರ ಈ ದೇವರ ವಾರ. ಶಕ್ತಿಯುತವಾದ ಈತ ಭೂಮಿಯನ್ನು ದೈತ್ಯರಿಂದ ಕಾಪಾಡಲು ಅವರೊಡನೆ ಕಾದಾಡುತ್ತಾನೆ. ದೈತ್ಯರಿಗೆ ಈತ ಸೋತಂದು ವಿಶ್ವಪ್ರಳಯವಾಗುತ್ತದೆ.

ಫ್ರಿಗ ಓಡನ್ ದೇವನ ಹೆಂಡತಿ. ಆಸಿರ್ ಮತ್ತು ಬಾಲ್ಡರ್ ಮಕ್ಕಳು. ಈ ದೇವತೆಯ ಆರಾಧನೆಯ ಬಗ್ಗೆ ಹೆಚ್ಚು ತಿಳಿದುಬಂದಿಲ್ಲ. ತನ್ನ ಮಗನ ಪ್ರಾಣರಕ್ಷಣೆಗೆ ಈಕೆ ಎಲ್ಲ ಜೀವಿಗಳಿಂದ ವಾಗ್ದಾನ ಪಡೆದಳು. ಈ ದೇವತೆಯ ದಿನ ಶುಕ್ರವಾರ. ಈ ದಿನವನ್ನು ವಿವಾಹಕ್ಕೆ ಶುಭವೆಂದು ಭಾವಿಸುತ್ತಾರೆ.

ವ್ಯಾನಿರ್ ಎಂಬುವವರು ದೇವತೆಗಳ ಎರಡನೇ ಸಂತತಿಗೆ ಸೇರಿದ್ದಾರೆ. ಇವರು ಸಮೃದ್ಧಿ ಶಾಂತಿ ಮತ್ತು ಐಶ್ವರ್ಯಗಳ ಅಧಿದೇವತೆಗಳು. ಈ ಗುಂಪಿಗೆ ಸೇರಿದ ನರತುಸ್ ದೇವರನ್ನು ದಕ್ಷಿಣ ಬಾಲ್ಟಿಕ್ ತೀರದ ಜನ ಆರಾಧಿಸುತ್ತಾರೆ. ಫ್ರೇಯ ಜಗತ್ತಿನ ದೇವ. ಅಂದರೆ ನಾವೆಯ ಒಂದು ಪದ್ಯದ ಪ್ರಕಾರ ಈತ ಜಗತ್ತಿಗೆ ಸುಖದಾಯಕ, ಶಾಂತಿದಾಯಕ.

ಓಡನ್–ಪ್ರಧಾನ ದೇವತೆ. ಈ ಶಿಲ್ಪ ಸ್ಟಾಕ್‍ಹೋಮಿನ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿದೆ.

ಹಂದಿ ಈತನ ಮೆಚ್ಚಿನ ಪ್ರಾಣಿ. ಸೌಂದರ್ಯದೇವತೆ ಫ್ರಾಜ಼ ಇವನ ತಂಗಿ. ಈ ದೇವತೆ ಈಜಿಪ್ಟಿನ ಐಸಿಸ್ ಮತ್ತು ಗ್ರೀಕನ ಆಫ್ರೊಡೈಟಿಯಂತೆ ತೀರಿಹೋದ ತನ್ನ ಪತಿಗಾಗಿ ದುಃಖಿಸುತ್ತ ಜಗತ್ತನ್ನೆಲ್ಲ ಸುತ್ತುವಳು. ಇವಳ ಕಣ್ಣಹನಿಗಳೇ ಸ್ವರ್ಣವಾಗಿ ಮಾರ್ಪಟ್ಟವು ಎನ್ನಲಾಗಿದೆ.

ವ್ಯಾನಿರ್ ಮತ್ತು ಆಸಿರ್ ದೇವತೆಗಳ ಮಧ್ಯೆ ಯುದ್ಧವಾಗಿ ಕೊನೆಗೆ ಶಾಂತಿ ಸಂಧಾನದಿಂದ ಪರಸ್ಪರ ಒಟ್ಟುಗೂಡುವರು. ಓಡಿನ್, ಟಿರ್, ಪೋರ್ ಇವರು ಕ್ರಮವಾಗಿ ಪೂಜಾರಿ, ರಾಜ ಮತ್ತು ಯೋಧ ಇವರನ್ನು ಪ್ರತಿನಿಧಿಸುವಂತೆ ವ್ಯಾನಿರ್ ದೇವರುಗಳು ಸುಖ, ಶಾಂತಿಯನ್ನು ಪ್ರತಿನಿಧಿಸುವರು. ಇವರು ಒಟ್ಟುಗೂಡಿ ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿವಂತನಾದ ಮಾನವನನ್ನು ಸೃಷ್ಟಿಸಿದರು. ದಕ್ಷಿಣ ಜರ್ಮ್ಯಾನಿಕ್ ಮತ್ತು ನಾರ್ವೆ ಪುರಾಣಗಳಲ್ಲಿ ಪರಸ್ಪರ ವ್ಯತ್ಯಾಸ ಉಂಟು. ಉದಾಹರಣೆಗೆ ದೇವತೆಗಳು ತಮ್ಮ ಯೌವನವನ್ನು ಕಾಪಾಡಿಕೊಳ್ಳಲು ತಿನ್ನುತ್ತಿದ್ದ ಸೇಬನ್ನು ರಕ್ಷಿಸುತ್ತಿದ್ದ ಇಡುನ್ ದೇವತೆ, ಓಡನ್ ದೇವನ ಸಹೋದರ ಲೊಕಿ, ಇವನ ಮಕ್ಕಳಾದ ವಿಶ್ವಸರ್ಪ, ಫೆನ್‍ರಿರ್ ತೋಳ ಮತ್ತು ಕೆಳಲೋಕದ ದೇವತೆ–ಇವೆಲ್ಲ ಜರ್ಮ್ಯಾನಿಕ್ ಪುರಾಣದಲ್ಲಿ ಕಾಣಬರದೆ ನಾರ್ವೆಯ ಕೃತಿಗಳಲ್ಲಿ ಮಾತ್ರ ಕಂಡುಬರುತ್ತವೆ.

ಐಡನ್–ಚಿರಯೌವನದ ಅಧಿದೇವತೆ

ವೀರೋಚಿತ ಪುರಾಣ ಕಥೆಗಳು : ಈ ಬಗೆಯ ಪುರಾಣ ಕಥೆಗಳು ಹಿಂದೆ ಕೆಲವರು ಹೇಳಿದ ಕಥೆಗಳೇ ಆಗಿದ್ದು ಕಾಲಕ್ಕೆ ತಕ್ಕಂತೆ ಬದಲಾಗುತ್ತ ಸಾಹಿತ್ಯದ ನಾನಾರೂಪಗಳಲ್ಲಿ ಕಾಣಿಸಿಕೊಂಡವು. ಇವು ಕಥೆ ಹೇಳುವ ವಿವಿಧ ಜನರ ಅಭಿರುಚಿ, ಅವರ ಸಂಸ್ಕೃತಿ ಮುಂತಾದವುಗಳಿಂದ ಪ್ರಭಾವಿತವಾಗಿ ಯೂರೋಪಿಯನ್ನರ ಪಿತ್ರಾರ್ಜಿತ ಆಸ್ತಿಯಂತೆ. 9 ಅಥವಾ 10ನೆಯ ಶತಮಾನದ ಜರ್ಮನ್ ಮತ್ತು 13ನೆಯ ಶತಮಾನದ ಲ್ಯಾಟಿನ್ ಪುರಾಣ, ಕವಿತೆ ಮತ್ತು ಶಾಸನಗಳ ರೂಪದಲ್ಲೂ ಮತ್ತು ಐಸ್‍ಲಂಡ್ ಮತ್ತು ನಾರ್ವೆಗಳಲ್ಲಿ ಗದ್ಯರೂಪದಲ್ಲೂ ಅನಂತರ ಜನಪದಗಳಲ್ಲೂ ಉಳಿದು ಬೆಳೆದು ಬಂದವು.

ಪ್ರಮುಖ ಪುರಾಣಗಳಲ್ಲಿ ಎರಡು ವಿಧ. ಒಂದು ಐತಿಹಾಸಿಕ ವ್ಯಕ್ತಿ ಮತ್ತು ಘಟನೆಗಳಿಂದ ಕೂಡಿರುತ್ತದೆ. ಉದಾ. ಆಸ್ಟ್ರೋಗಾತನ ಎರ್ಮನ್‍ರಿಕ್, ಹೂಣರ ಅಟಿಲ ಮತ್ತು ಚಕ್ರವರ್ತಿ ತಿಯೋಡೋರಿಕ್. ಎರಡನೆಯದು ಕಾಲ್ಪನಿಕ ಪುರಾಣ ಮತ್ತು ಜನಪದ ಕತೆಗಳಿಂದ ಕೂಡಿದ್ದು. ಇದರಲ್ಲಿ ಅಮಾನುಷ ಶಕ್ತಿವಂತರು, ದೈತ್ಯಸಂಹಾರಕರು, ದುಷ್ಟರನ್ನು ಶಿಷ್ಟರನ್ನಾಗಿ ಮಾಡಿದವರು ಮೊದಲಾದವರ ಸುತ್ತ ಹೆಣೆದ ಕಥೆಗಳಿರುತ್ತವೆ.

ಐತಿಹಾಸಿಕ ವ್ಯಕ್ತಿಗಳುಳ್ಳ ಜರ್ಮ್ಯಾನಿಕ್ ವೀರರ ಕತೆಗಳು ಪ್ರ.ಶ. 4–6ನೆಯ ಶತಮಾನಗಳಲ್ಲಿ ಆದಂಥ ಜರ್ಮ್ಯಾನಿಕ್ ವಲಸೆಯ ಕಾಲದ್ದು. ಜನರ ನೆನಪಿನಲ್ಲಿ ಉಳಿದ ಈ ಕಾಲದ ಘಟನೆಗಳು ಜರ್ಮ್ಯಾನಿಕ್ ಕವಿಗಳಿಗೆ ಮುಖ್ಯ ವಿಷಯಗಳಾದವು. ಇಲ್ಲಿ ಬರುವ ವೀರರು ತಮ್ಮ ನಾಡಿನಲ್ಲಿ ಅಲ್ಲದೆ ಜರ್ಮ್ಯಾನಿಕ್ ಭಾಷೆಯನ್ನಾಡುವ ಇತರ ವೀರರು ತಮ್ಮ ನಾಡಿನಲ್ಲಿ ಅಲ್ಲದೆ ಜರ್ಮ್ಯಾನಿಕ್ ಭಾಷೆಯನ್ನಾಡುವ ಇತರ ದೇಶಗಳಲ್ಲೂ ಪರಿಚಿತರಾದರು. ಕ್ರೈಸ್ತಧರ್ಮ ಹರಡಿ ಬರೆಹ ಪ್ರಚಲಿತವಾಗುವವರೆಗೂ ಈ ಪುರಾಣಕಥೆಗಳೆಲ್ಲ ನೆನಪಿನಲ್ಲಿಟ್ಟುಕೊಳ್ಳಲು ಸುಲಭವಾದ ಪದ್ಯರೂಪದಲ್ಲಿದ್ದು, ಬಾಯಿಂದ ಬಾಯಿಗೆ ಪ್ರಸರವಾಗುತ್ತಿದ್ದುವು. ಜನ ಹಾರ್ಪ್‍ವಾದ್ಯದೊಡನೆ ಇವನ್ನು ಹಾಡಿ ದೇಶ ದೇಶಗಳಲ್ಲಿ ಪ್ರಚಾರಕ್ಕೆ ತಂದರು. ಕವಿಗಳಿಗೆ, ಪುರಾಣ ಕಥೆಗಳನ್ನು ಹಾಡುವವರಿಗೆ ರಾಜರೂ ಸಾಮಂತರೂ ತಮ್ಮ ಆಶ್ರಯ ನೀಡಿ ಪ್ರೋತ್ಸಾಹಿಸುತ್ತಿದ್ದರು. ಪ್ರಭಾವಿತರಾದ ವಿದೇಶೀಯರು ತಮ್ಮ ದೇಶಗಳಿಗೂ ಈ ಕಥೆಗಳನ್ನು ಒಯ್ದರು. ಕೆಲವು ಕವಿಗಳು ತಮ್ಮ ಕೃತಿಗಳಿಗೆ ಈ ಪುರಾಣಕಥೆಗಳನ್ನು ಮೂಲವಾಗಿ ಬಳಸಿಕೊಂಡರು. ನಾರ್ವೆ, ಐಸ್‍ಲ್ಯಾಂಡ್ ಮತ್ತು ಗ್ರೀನ್‍ಲ್ಯಾಂಡ್ ದೇಶಗಳ ಕವಿಗಳು ದಕ್ಷಿಣ ಜರ್ಮನಿಯ ಕಥೆಗಳನ್ನೇ ಮತ್ತೆ ಮತ್ತೆ ಬಳಸಿಕೊಂಡು ಹಾಡಿದರು. 13ನೆಯ ಶತಮಾನದಲ್ಲಿ ಈ ಕಥೆಗಳನ್ನು ಐಸ್‍ಲಂಡಿನಲ್ಲಿ ಬರೆದಿಡಲಾಯಿತು. ಈ ಕಥೆಗಳು ಕೆಲವು ವೇಳೆ ಕಥೆ ಹೇಳುವವರ ಸಹಾನುಭೂತಿಯ ಮೇಲೆ ವ್ಯತ್ಯಾಸವಾಗುತ್ತಿದ್ದವು. ಉದಾ: ಪೂರ್ವ ಜರ್ಮನಿಯಲ್ಲಿ ಅಟಿಲನನ್ನು ಪರಾಕ್ರಮಿ ಮತ್ತು ದಯಾಪೂರ್ಣ ಆಡಳಿತಗಾರನನ್ನಾಗಿ ಪರಿಗಣಿಸಿದರೆ ಪಶ್ಚಿಮದಲ್ಲಿ ಅವನೊಬ್ಬ ಧೂರ್ತ ಮತ್ತು ದಯಾಹೀನನೆಂದು ಬಣ್ಣಿಸಲಾಗಿದೆ.

ಒಂದು ಐತಿಹಾಸಿಕ ಘಟನೆ ಯಾವ ರೀತಿ ಪುರಾಣಕಥೆಯಾಗಿ ಪದ್ಯರೂಪ ತಳೆಯಿತು ಎಂಬುದನ್ನು ನಿಖರವಾಗಿ ಹೇಳುವಂತಿಲ್ಲ. ಘಟನೆಗಳು ಕೆಲವು ತಲೆಮಾರುಗಳಲ್ಲಿ ಬದಲಾಗುತ್ತ ಒಬ್ಬರಿಂದ ಇನ್ನೊಬ್ಬರಿಗೆ ಸಾಗಿಬಂದವು. ಕೆಲವೊಂದು ವಿಷಯಗಳು

ಬದಲಾಗದೆ ಉಳಿದರೂ ಗುಣ, ಉದ್ದೇಶ, ಸಂಭಾಷಣೆ ಮುಂತಾದವು ಕಥೆ ಹೇಳುವವನನ್ನು ಅವಲಂಬಿಸಿ ಬದಲಾಗುತ್ತ ಹೋದವು. ಕತೆ ಹೇಳುವವರು ಕತೆಗಳಲ್ಲಿ ಜರ್ಮ್ಯಾನಿಕ್ ಸಮಾಜದ ನ್ಯಾಯಪರತೆ, ಗೌರವ ಮತ್ತು ಅದರ ಹಿರಿಮೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತ ಬಂದರು.

ಬಾಲ್ಡರ್ ದೇವತೆ

ಇದರಿಂದ ಈ ಪುರಾಣಕಥೆಗಳು ಐತಿಹಾಸಿಕ ಘಟನೆಗಳಿಗಿಂತಲೂ ಹೆಚ್ಚಾಗಿ ಕಥನಕಲೆಯನ್ನವಲಂಬಿಸಿ ವಿವಿಧವಾಗಿ ಬೆಳೆದುಬಂದವು. ಉದಾ: 4ನೆಯ ಶತಮಾನದ ಚರಿತ್ರಕಾರರ ಪ್ರಕಾರ ಎರ್ಮನ್‌ರಿಕ್ ಹೂಣರಿಂದ ಸೋಲದೆ ತಾನೇ ಆತ್ಮಹತ್ಯೆ ಮಾಡಿಕೊಂಡ ಎಂದೂ 6ನೆಯ ಶತಮಾನದ ಚರಿತ್ರಕಾರರ ಪ್ರಕಾರ ಸುನಿಲ್ಡಳ ಗಂಡ ಎರ್ಮನ್‌ರಿಕ್‌ನನ್ನು ತೊರೆದುದರಿಂದ ಕೋಪಗೊಂಡ ಈತ ಸುನಿಲ್ಡಳನ್ನು ಕಾಡು ಕುದುರೆಗಳ ಕಾಲಿಗೆ ಕಟ್ಟಿ ಕೊಲ್ಲುತ್ತಾನೆ. ಇದರಿಂದ ಕುಪಿತರಾದ ಸುನಿಲ್ಡಳ ಸಹೋದರರು ಎರ್ಮನ್‌ರಿಕ್‌ನ ಮೇಲೆ ಕಾದಾಡಿ ಅವನನ್ನು ತೀವ್ರವಾಗಿ ಘಾಸಿಗೊಳಿಸುತ್ತಾರೆ. ಇದರಿಂದಲೂ ಹೂಣರು ರಾಜ್ಯಕ್ಕೆ ನುಗ್ಗಿಬಂದದ್ದರಿಂದಲೂ ಎರ್ಮನ್‌ರಿಕ್ ಸತ್ತನೆಂದು ಹೇಳುತ್ತಾರೆ. ನಾರ್ವೆಯ ಕಾವ್ಯದಲ್ಲಿ ಎರ್ಮನ್‌ರಿಕ್‌ನ ದುರಂತ ಜೀವನವನ್ನು ಕಾಣಬಹುದು. ಇದರಂತೆ ಬರ್ಗಂಡಿಯ ಗುಂಡಿಕೇರಿಯಸ್ 437ರಲ್ಲಿ ಹೂಣರೊಂದಿಗೆ ಹೋರಾಡುತ್ತ ಮಡಿದ. ಅಟಿಲ 453ರಲ್ಲಿ ಹೆಚ್ಚು ಕುಡಿದು ಮೂಗಿನ ರಕ್ತಸ್ರಾವದಿಂದ ಸತ್ತ. ಇವರಿಬ್ಬರ ಸಾವನ್ನೂ ವೀರೋಚಿತವಾಗಿ ದುರಂತವಾಗಿ ಎಡ ಪುರಾಣ ಕಾವ್ಯದಲ್ಲಿ ಚಿತ್ರಿಸಿದೆ. ಅದರಂತೆ ಮುಚ್ಚಿಟ್ಟ ಸಂಪತ್ತನ್ನು ಗುನ್ನರ್ ತೋರಿಸಲಿಲ್ಲವೆಂದು ಅಟಿಲ ಕುಪಿತನಾಗಿ ಅವನನ್ನು ಸರ್ಪಗಳ ಗುಂಡಿಗೆ ನೂಕಿ ಸಾಯಿಸುತ್ತಾನೆ. ಅಟಿಲನ ಹೆಂಡತಿ ಗುನ್ನರ್‌ನ ಸಹೋದರಿ ತನ್ನ ಸಹೋದರನ ಸಾವಿನ ಸೇಡಿಗಾಗಿ ಅಟಿಲನ ಮಕ್ಕಳನ್ನು ಕೊಂದು ಅವನಿಗೇ ಉಣಬಡಿಸಿ, ಅಟಿಲ ಮಲಗಿದ್ದಾಗ ಅವನನ್ನು ಕೊಂದು ಮನೆಗೆ ಬೆಂಕಿ ಹಚ್ಚಿ ಸುಟ್ಟು ಹಾಕುತ್ತಾಳೆ. ಮತ್ತೊಂದೆಡೆ ಗುನ್ನರ್‌ನ ಸಹೋದರಿ ಗುಡ್ರನ್ ತಾಯಿಯಾಗಿ, ಸಹೋದರಿಯಾಗಿ ಮತ್ತು ಪತ್ನಿಯಾಗಿ ನಾನಾ ಕಷ್ಟಗಳನ್ನು ಎದುರಿಸುವ ನಾಯಕಿಯಾಗಿ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ ಕಥೆಗಳಲ್ಲಿ ವಿವಾಹ ಮತ್ತು ರಕ್ತಸಂಬಂಧಗಳನ್ನು ಉಲ್ಲಂಘಿಸಿ ಮಿತಿಮೀರಿ ವರ್ತಿಸಿದರಿಂದಾದ ಘರ್ಷಣೆ ಮತ್ತು ದುರಂತ ಫಲಗಳನ್ನು ಚಿತ್ರಿಸಲಾಗಿದೆ. ಉದ್ದಕ್ಕೂ ಈ ಪುರಾಣಕಥೆಗಳು ಬೆಳೆದುಕೊಂಡು ಹೋಗುವಂತೆ ಸಂಬಂಧ ಕಲ್ಪಿಸಲಾಗಿದೆ. ಒಟ್ಟಿನಲ್ಲಿ ಈ ಪುರಾಣಕಥೆಗಳಲ್ಲಿ ಕೆಟ್ಟದ್ದರಿಂದ ಒಳ್ಳೆಯದು ಸಿಗದು ಎಂಬ ನೀತಿಯ ಪ್ರತಿಪಾದನೆ ಇದೆ. *

**ಜರ್ಮ್ಯಾನಿಕ್ ಭಾಷೆಗಳು :** ಜರ್ಮ್ಯಾನಿಕ್ ಭಾಷೆಗಳು ಇಂಡೋ–ಯುರೋಪಿಯನ್ ಭಾಷಾ ಪರಿವಾರದ ಒಂದು ಶಾಖೆಗೆ ಸೇರಿವೆ. ಈ ಶಾಖೆಯಲ್ಲಿ ಗಣನೆಯಾಗಿರುವ ಮುಖ್ಯವಾದ ಭಾಷೆಗಳು 2011ರ ಗಣತಿಯನ್ನನುಸರಿಸಿ ಈ ಭಾಷೆಗಳನ್ನಾಡುವ ಜನರ ಸಂಖ್ಯೆ ಹೀಗಿವೆ: ಉತ್ತರ ಜರ್ಮ್ಯಾನಿಕ್ ಅಂದರೆ ಐಸ್‌ಲ್ಯಾಂಡಿಕ್ (3,20,000), ನಾರ್ವೀಜಿಯನ್ (5 ಮಿಲಿಯನ್), ಡೇನಿಷ್ (5.6 ಮಿಲಿಯನ್ 1707) ಮತ್ತು ಸ್ವೀಡಿಷ್ 8.5 ಮಿಲಿಯನ್ (2007), ಪೂರ್ವ ಜರ್ಮ್ಯಾನಿಕ್ ಅಂದರೆ ಇಂಗ್ಲಿಷ್ (25 ಕೋಟಿ), ಫ್ರಿಸಿಯನ್ (ಉತ್ತರ ಹಾಲೆಂಡಿನ ಕೆಲವು ಭಾಗಗಳಲ್ಲಿ ಮತ್ತು ಜರ್ಮನಿಯ ವಾಯವ್ಯ ಭಾಗದಲ್ಲಿ ವ್ಯವಹಾರದಲ್ಲಿದೆ. 460,000), ನೆದರ್‌ಲ್ಯಾಂಡಿಕ್ (ಹಾಲೆಂಡಿನಲ್ಲಿ ಇದನ್ನೇ ಡಚ್ ಎಂದೂ ಉತ್ತರ ಬೆಲ್ಜಿಯಂನಲ್ಲಿ ಫ್ಲೆಮಿಷ್ ಎಂದೂ ಕರೆಯುತ್ತಾರೆ. – 23 ಮಿಲಿಯನ್ (2006), ಆಫ್ರಿಕಾನ್ಸ್ (ನೆದರ್‌ಲ್ಯಾಂಡಿಕ್‌ನಿಂದ ಹುಟ್ಟಿ ದಕ್ಷಿಣ ಆಫ್ರಿಕದಲ್ಲಿ ಉಪಯೋಗದಲ್ಲಿದೆ–7.1 ಮಿಲಿಯನ್ (2011), ಮತ್ತು ಜರ್ಮನ್ (ಜರ್ಮನಿ, ಆಸ್ಟ್ರಿಯ ಮತ್ತು ಸ್ವಿಟ್ಜರ್ಲೆಂಡಿನ ಕೆಲವು ಭಾಗಗಳಲ್ಲಿ ಬಳಕೆಯಲ್ಲಿದೆ–90 ಮಿಲಿಯನ್ (2010). ಮೂರನೆಯ ವಿಭಾಗವಾದ ಪೂರ್ವ ಜರ್ಮ್ಯಾನಿಕ್ ಇಂದು ಉಳಿದು ಬಂದಿಲ್ಲ. ಗಾತಿಕ್ ಭಾಷೆಯಿಂದ ಈ ವಿಭಾಗವಿದ್ದಿತೆಂದು ತಿಳಿದುಬರುತ್ತದೆ.

ಇತರ ಇಂಡೋಯುರೋಪಿಯನ್ ಭಾಷೆಗಳಲ್ಲಿ ಕಾಣಬರದ, ಜರ್ಮ್ಯಾನಿಕ್ ಭಾಷೆಗಳಲ್ಲಿ ಕಂಡುಬರುವ ವಿಶೇಷ ಲಕ್ಷಣಗಳು ಹೀಗಿವೆ: (1) ಮೂಲಭಾಷೆಯ ಅಘೋಷ ಸ್ಪರ್ಶಗಳು ಇಲ್ಲಿ ಸಂಘರ್ಷಿಗಳಾಗಿವೆ. ಸಂಸ್ಕೃತ ಭಾಷೆಯಲ್ಲುಳಿದು ಬಂದಿರುವ ಮೂಲಭಾಷೆಯ ಪ್, ತ್, ಕ್, ಕ್ವ್ ಗಳ ಸ್ಥಾನದಲ್ಲಿ ಇಂಗ್ಲಿಷ್‌ನ ಫ್, ಥ್, ಹ್, ಹ್ವ್ ಗಳು ಕಂಡುಬರುತ್ತವೆ. ಉದಾ : ಪಿತಾ=ಫಾದರ್, ತ್ರಯಃ=ತ್ರೀ, ಶತ=ಹಂಡ್ರೆಡ್, ಕದ್ (ವೇದದಲ್ಲಿ) ವಾಟ್. (2) ಮೂಲಭಾಷೆಯಾದ ಇಂಡೋಯೂರೋಪಿಯನ್ನಿನ ಘೋಷಧ್ವನಿಗಳು ಕ್ರಮವಾಗಿ ಅಘೋಷ ರೂಪಗಳಲ್ಲಿ ಕಂಡುಬರುತ್ತವೆ. ಉದಾ : ಲಿತುವೇನಿಯನ್ನಿನ ದುಬಸ್‌ನಲ್ಲಿರುವ ಬ್, ಸಂಸ್ಕೃತದ ದಶ, ಜನಃ ಜೀವಃಗಳಲ್ಲಿ ಕಂಡುಬರುವ ದ್, ಗ್, ಗ್ವ್, ಜರ್ಮ್ಯಾನಿಕ್ ಭಾಷೆಯಲ್ಲಿ ಪ್, ತ್, ಕ್, ಕ್ವ್ ಆಗಿವೆ. ಇಂಗ್ಲಿಷಿನ ಡೀಪ್, ಟೆನ್, ಕಿನ್, ಕ್ವಿಕ್ ಕ್ರಮವಾಗಿ ಉದಾಹರಣೆಗಳು. (3) ಮೂಲಭಾಷೆಯ ಘೋಷ ಮಹಾಪ್ರಾಣಗಳು ಅಲ್ಪಪ್ರಾಣಗಳಾಗಿ ಅಥವಾ ಸಂಘರ್ಷಿ ಧ್ವನಿಗಳಾಗಿ ಮಾರ್ಪಟ್ಟಿವೆ. ಉದಾ : ಸಂಸ್ಕೃತದ ಭರತಿ, ಧರ್ಷತಿ, ಹಂಸಃ, ಘರ್ಮಃ, ಇವುಗಳಿಗೆ ಇಂಗ್ಲಿಷಿನಲ್ಲಿ ಬೇರ್, ಡೇರ್, ಗೂಸ್ ಮತ್ತು ವಾರ್ಮ್ ಎಂದಿದೆ.

ಪ್ರ.ಶ.ದ ಪ್ರಾರಂಭದ ವೇಳೆಗೆ ಗ್ರೀಕ್ ಮತ್ತು ಲ್ಯಾಟಿನ್ ಬರೆಹಗಾರರ ಲೇಖನಗಳಲ್ಲಿ ಕಂಡುಬರುವ ಪದಗಳು, ಹೆಸರುಗಳು, ಜರ್ಮ್ಯಾನಿಕ್ ಭಾಷೆಯ ಅತಿ ಮೊದಲಿನ ಗ್ರಂಥಸ್ಥ ರೂಪವೆನ್ನಬಹುದು. ಈ ಕಾಲದ ವೇಳೆಗೆ ಜರ್ಮ್ಯಾನಿಕ್ ಭಾಷೆಯನ್ನಾಡುವವರು ದಕ್ಷಿಣ ಸ್ಕ್ಯಾಂಡಿನೇವಿಯ, ಉತ್ತರ ಮತ್ತು ಮಧ್ಯ ಯೂರೋಪಿನ ಹೆಚ್ಚು ಭಾಗಗಳಲ್ಲಿ, ಪಶ್ಚಿಮದಲ್ಲಿ ರೈನ್ ನದಿಯಿಂದ ಪ್ರಾರಂಭಿಸಿ ಪೂರ್ವದಲ್ಲಿ ವಿಸ್ಚಲರವರೆಗಿನ ಭೂಭಾಗದಲ್ಲಿ ವಾಸಿಸುತ್ತಿದ್ದರು. ಕಪ್ಪು ಸಮುದ್ರದ ದಕ್ಷಿಣಕ್ಕೆ ಗಾತ್ ಜನ ವಲಸೆ ಹೋದಮೇಲೆ ಪ್ರ.ಶ. 350ರ ಸುಮಾರಿನಲ್ಲಿ ಬರೆಯಲ್ಪಟ್ಟ ಬೈಬಲ್ಲಿನ ಗಾತಿಕ್ ಭಾಷೆಯ ಅನುವಾದವೇ ಜರ್ಮ್ಯಾನಿಕ್ ಭಾಷೆಗಳಲ್ಲಿ ಲಬ್ಧವಾಗಿರುವ ವಿಸ್ತೃತ ಮತ್ತು ಪ್ರಾಚೀನ ಗ್ರಂಥವೆನ್ನಬಹುದು. ಈ ಶತಮಾನದ ಅಂತ್ಯದ ವೇಳೆಗೆ ಈ ಜನರ ಮಹಾವಲಸೆ ಪ್ರಾರಂಭವಾಗಿ ಜರ್ಮ್ಯಾನಿಕ್ ಭಾಷೆಯನ್ನಾಡುವ ಆಂಗ್ಲ, ಸ್ಯಾಕ್ಸನ್ ಜೂಟ್ ಮೊದಲಾದವರು ಇಂಗ್ಲೆಂಡ್ ದೇಶವನ್ನೂ ಫ್ರ್ಯಾಂಕರು ಉತ್ತರ ಫ್ರಾನ್ಸನ್ನೂ ಅಲೆಮಾನಿಯನ್ನರು, ಬವೇರಿಯನ್ನರು, ಲಾಂಗೋಬಾರ್ಡರು, ದಕ್ಷಿಣ ಜರ್ಮನಿ, ಸ್ವಿಟ್ಜರ್ಲೆಂಡ್, ಆಸ್ಟ್ರಿಯ ಮತ್ತು ಉತ್ತರ ಇಟಲಿಯನ್ನೂ ಗಾತರು ಮತ್ತು ವಾಂಡಲರು ಉತ್ತರ ಆಫ್ರಿಕ ಮತ್ತು ಸ್ಪೇನನ್ನೂ ಆಕ್ರಮಿಸಿಕೊಂಡರು. ಏಳನೆಯ ಶತಮಾನದ ಆದಿಭಾಗದ ಹಾಗು ಎಂಟನೆಯ ಶತಮಾನದ ಮಧ್ಯಭಾಗದ ಗ್ರಂಥಗಳೇ ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿನ ಅತಿ ಪ್ರಾಚೀನ ಗ್ರಂಥಗಳೆನ್ನಬಹುದು. ಜರ್ಮ್ಯಾನಿಕ್ ಶಾಖೆಯ ಇತರ ಭಾಷೆಗಳಲ್ಲಿನ ಗ್ರಂಥಗಳು ಇನ್ನೂ ಈಚಿನವು.

ಹೆಚ್ಚು ಸಂಖ್ಯೆಯಲ್ಲಿ ಇಂದು ಮಾತನಾಡಲ್ಪಡುತ್ತಿರುವ ಜರ್ಮ್ಯಾನಿಕ್ ಭಾಷೆಗಳೆಂದರೆ ಇಂಗ್ಲಿಷ್ (**ನೋಡಿ– ಇಂಗ್ಲಿಷ್–ಭಾಷೆ**) ಮತ್ತು ಜರ್ಮನ್ (**ನೋಡಿ– ಜರ್ಮನ್–ಭಾಷೆ**). ಅದರಲ್ಲೂ ಮುಖ್ಯವಾಗಿ ಇಂಗ್ಲಿಷ್, ಪ್ರಪಂಚದ ಹಲವು ಭಾಗಗಳಿಗೆ ಹರಡಿದೆ. ಅದು ಇಂದು ಇಂಗ್ಲೆಂಡಿನ ಆಡಳಿತ ಭಾಷೆಯಾಗಿರುವುದಲ್ಲದೆ ಅಮೆರಿಕ ಸಂಯುಕ್ತ

ಸಂಸ್ಥಾನಗಳಲ್ಲಿ, (ಫ್ರೆಂಚ್ ಜೊತೆಗೆ) ಕೆನಡದಲ್ಲಿ, ಆಸ್ಟ್ರೇಲಿಯ, ನ್ಯೂಜೀಲೆಂಡ್‌ಗಳಲ್ಲಿ (ಆಫ್ರಿಕಾನ್ಸ್ ಜೊತೆಗೆ) ದಕ್ಷಿಣ ಆಫ್ರಿಕದಲ್ಲಿ ಕೂಡ ವ್ಯವಹಾರ ಭಾಷೆಯಾಗಿ ಬಳಕೆಯಲ್ಲಿದೆ. (ಡಬ್ಲ್ಯೂ.ಜಿ.ಎಂ.)

**ಜಲಂಧರ್ :** ಪಂಜಾಬ್ ರಾಜ್ಯದ ಒಂದು ನಗರ ಹಾಗೂ ಜಿಲ್ಲೆ : ಆಡಳಿತ ವಿಭಾಗ. ಜಲಂಧರ್ ಪಟ್ಟಣ ಉ. ಅ. $30^{\circ}$ 20' ಮತ್ತು ಪೂ. ರೇ. $75^{0}$ 35' ಮೇಲೆ ದೆಹಲಿಗೆ ಉತ್ತರ–ವಾಯವ್ಯಕ್ಕೆ ರೈಲುಮಾರ್ಗದಲ್ಲಿ 368 ಕಿಮೀ ದೂರದಲ್ಲೂ ಚಂಡೀಗಢದ ವಾಯವ್ಯಕ್ಕೆ ರಸ್ತೆಯಲ್ಲಿ 150ಕಿಮೀ.. ದೂರದಲ್ಲೂ ಇದೆ. ಜಲಂಧರ್ ನಗರದ ಜನಸಂಖ್ಯೆ 903,491 (2010). ಜಲಂಧರ್ ನಗರದ ಸುತ್ತಲೂ ಬಸ್ತಿಗಳೆಂಬ ಅನೇಕ ಉಪನಗರಗಳುಂಟು. ಜಲಂಧರ್ ದಂಡಿನ ಪ್ರದೇಶ ಇರುವುದು ನಗರದ ದಕ್ಷಿಣಕ್ಕೆ 5 ಕಿ.ಮೀ. ದೂರದಲ್ಲಿ. ಪಂಜಾಬ್ ವಿಶ್ವವಿದ್ಯಾಲಯಕ್ಕೆ ಸೇರಿದ ಹಲವು ಕಾಲೇಜುಗಳೂ ಪಂಜಾಬ್ ಸರ್ಕಾರದ ಅನೇಕ ಕಚೇರಿಗಳೂ ಇಲ್ಲುಂಟು. ಇದು ಜಿಲ್ಲೆಯ ಮತ್ತು ವಿಭಾಗದ ಆಡಳಿತ ಕೇಂದ್ರ. ಕ್ರೀಡಾ ಉಪಕರಣಗಳ ತಯಾರಿಕೆ ಇಲ್ಲಿಯ ಒಂದು ಮುಖ್ಯ ಕೈಗಾರಿಕೆ. ಇದೊಂದು ರೈಲ್ವೆ ಸಂಧಿ ಸ್ಥಳ. ಹಲವು ರಸ್ತೆಗಳೂ ಇಲ್ಲಿ ಕೂಡುತ್ತವೆ. ನಗರದ ಪೂರ್ವಕ್ಕೆ 14ಕಿಮೀ ದೂರದಲ್ಲಿ ವಿಮಾನ ನಿಲ್ದಾಣವುಂಟು. ಚಂಡೀಘಡವನ್ನು ನಿರ್ಮಿಸುವವರೆಗೆ ಜಲಂಧರ್ ಪಂಜಾಬಿನ ರಾಜಧಾನಿಯಾಗಿತ್ತು.

ಜಲಂಧರ ಎಂಬ ದೈತ್ಯ ಇಲ್ಲಿ ವಾಸವಾಗಿದ್ದನೆಂದೂ ಈ ರಾಕ್ಷಸನ ಉಪಟಳ ಅತಿಯಾದಾಗ ಶ್ರೀವಿಷ್ಣು ಈತನನ್ನು ಕೊಂದನೆಂದೂ ಪದ್ಮಪುರಾಣದಲ್ಲಿ ಹೇಳಿದೆ. 7ನೆಯ ಶತಮಾನದ ಪೂರ್ವಾರ್ಧದಲ್ಲಿ ಇಲ್ಲಿಗೆ ಭೇಟಿ ಕೊಟ್ಟ ಚೀನೀ ಯಾತ್ರಿಕ ಹ್ಯೂಯೆನ್‌ತ್ಸಾಂಗ್‌ನ ಯಾತ್ರಾವೃತ್ತದಲ್ಲಿ ಜಲಂಧರದ ಉಲ್ಲೇಖವಿದೆ. ಈ ಸುಂದರ ನಗರದ ಸುತ್ತಳತೆ 3ಕಿಮೀ. ಇತ್ತೆಂದೂ ಇಲ್ಲಿ ನಗರಧನ್ ಎಂಬ ಪ್ರಸಿದ್ಧ ಬೌದ್ಧ ವಿಹಾರವಿತ್ತೆಂದೂ ತಾನು ಅಲ್ಲಿ ಚಂದ್ರವರ್ಮನೆಂಬ ವಿದ್ವಾಂಸನ ಕೈಕೆಳಗೆ ಬೌದ್ಧ ಗ್ರಂಥಗಳನ್ನು ಅಧ್ಯಯನ ಮಾಡಿದುದಾಗಿಯೂ ಅವನು ಹೇಳಿದ್ದಾನೆ. ಯೋಗಿನೀ ತಂತ್ರದಲ್ಲಿ ಜಲಂಧರ–ದೋಅಬ್ ಪ್ರದೇಶವನ್ನು ತ್ರಿಗರ್ತ ಎಂದು ಹೇಳಲಾಗಿದೆ. ಇಲ್ಲಿ ವಿಶ್ವಮುಖಿ ದೇವಿಯ ಒಂದು ದೇವಾಲಯವುಂಟು. ಐವತ್ತೊಂದು ಶಕ್ತಿಪೀಠಗಳಲ್ಲಿ ಇದೂ ಒಂದು.

ಜಲಂಧರ್ ರಜಪೂತ ದೊರೆಗಳ ರಾಜಧಾನಿಯಾಗಿತ್ತು. 1088ರಲ್ಲಿ ಇದು ಘೋರಿ ಇಬ್ರಾಹಿಮ್ ಷಹನ ವಶವಾಯಿತು. ಮೊಘಲ್ ಅರಸರ ಆಳ್ವಿಕೆಯಲ್ಲಿ ಈ ಪಟ್ಟಣ ಒಬ್ಬ ಸರದಾರನ ಆಡಳಿತ ಕೇಂದ್ರವಾಗಿತ್ತು. 1757ರಲ್ಲಿ ಸಿಕ್ಕರು ಈ ನಗರವನ್ನು ಸುಟ್ಟರು. ಅನಂತರ ಇದು ಫೈಜುಲ್ಲಾ ಪುರಿಯ ಸಂಘದ ಖುಶಾಲಸಿಂಗನ ವಶಕ್ಕೆ ಬಂದು 1766ರಲ್ಲಿ ಹೊಸ ರೂಪ ಪಡೆಯಿತು. ಆತನ ಮಗ ಬುದ್ಧಸಿಂಗ್ ಈ ಪಟ್ಟಣವನ್ನು ವಶಪಡಿಸಿಕೊಂಡ. ಮುಂದೆ ಬ್ರಿಟಿಷರ ಕಾಲದಲ್ಲಿ ಇದು ಜಲಂಧರ್ ಆಡಳಿತ ವಿಭಾಗದ ಮುಖ್ಯ ಕೇಂದ್ರವಾಯಿತು. 1846ರಲ್ಲಿ ಇಲ್ಲಿಂದ ಮೂರು ಮೈಲಿಗಳ ದೂರದಲ್ಲಿ ಸೇನಾ ಕೇಂದ್ರವೊಂದು ಸ್ಥಾಪಿತವಾಯಿತು.

ಜಲಂಧರ್ ಜಿಲ್ಲೆ ಉ. ಅ. $30^{\circ}$ 56'-$30^{\circ}$ 37' ಮತ್ತು ಪೂ. ರೇ, $75^{\circ}$ 5'-$76^{\circ}$ 16' ಮಧ್ಯೆ ಇದೆ. ಜಿಲ್ಲೆಯ ವಿಸ್ತೀರ್ಣ 3,399 ಚ. ಕಿಮೀ. ಬಿಯಾಸ್ ಮತ್ತು ಸತಲಜ್ ನದಿಗಳ ನಡುವೆ ಇರುವ ಈ ಜಿಲ್ಲೆ ತ್ರಿಕೋನಾಕಾರವಾಗಿ ವಿಸ್ತರಿಸಿದೆ. ಫಲವತ್ತಾದ ರೇವೆ ಮಣ್ಣಿನ ಈ ಸೀಮೆಯನ್ನು ಪಂಜಾಬಿನ ಉದ್ಯಾನವೆಂದು ಸಿಖ್ಖರು ಕರೆಯುತ್ತಿದ್ದರು. ಇದು ಮಟ್ಟಸವಾದ, ಫಲವತ್ತಾದ ಪ್ರದೇಶ. ಜೂನ್ ಮತ್ತು ಜುಲೈ ಅತಿ ಉಷ್ಣತೆಯ ತಿಂಗಳುಗಳು. ಜನವರಿ–ಫೆಬ್ರವರಿ ತಿಂಗಳುಗಳಲ್ಲಿ ಚಳಿ ಹೆಚ್ಚು ; ಮಂಜು ಬೀಳುತ್ತದೆ. ವಾರ್ಷಿಕ ಸರಾಸರಿ ಮಳೆ 25.02". ಜಿಲ್ಲೆಯ ಸೇ.80ರಷ್ಟು ನೆಲ ಸಾಗುವಳಿಯಾಗುತ್ತದೆ. ಇದರಲ್ಲಿ ಶೇ.56 ನೆಲಕ್ಕೆ ಬಿಸ್ಟ್ ಮತ್ತು ದೋಅಬ್ ವ್ಯವಸ್ಥೆಯಿಂದಲೂ ಬಾವಿಗಳಿಂದಲೂ ನೀರಾವರಿ ಸೌಲಭ್ಯ ಉಂಟು. ಮುಖ್ಯ ಬೆಳೆಗಳು ಗೋದಿ, ದ್ವಿದಳ ಧಾನ್ಯ, ಕಬ್ಬು, ರೇಷ್ಮೆ ಉತ್ಪಾದನೆ ಇಲ್ಲಿಯ ಒಂದು ಮುಖ್ಯ ಕಸುಬು.

ಜಲಂಧರವು ಪಂಜಾಬಿನ ಅತ್ಯಂತ ನಿರ್ಮಲವಾದ, ಜನಸಂಖ್ಯೆ ಹೆಚ್ಚಾಗಿಲ್ಲದ ನಗರ. ಇದು ರಾಜ್ಯದ ಅತ್ಯಂತ ಬೃಹತ್ತಾದ ನಗರವೂ ಹೌದು. ಇಲ್ಲಿ ಅನೇಕಾನೇಕ ಆಸ್ಪತ್ರೆಗಳಿವೆ. ದೇಶದಲ್ಲೇ ಅತಿ ಹೆಚ್ಚು ವಾಹನಗಳು ತಯಾರಾಗುವ ನಗರವಿದು. ಅಂತಾರಾಷ್ಟ್ರೀಯ ಆಟೋಟದ ವಸ್ತುಗಳ ತಯಾರಿಕೆ ಹಾಗೂ ಮಾರುಕಟ್ಟೆಯ ಕೇಂದ್ರ. ದೇವೀ ತಲಾಬ್ ಮಂದಿರ್, ಶಿವ ಮಂದಿರ್, ತುಲಸೀ ಮಂದಿರ್‌ಗಳು ಗುರುದ್ವಾರಗಳು ಇಲ್ಲಿವೆ. (ಬಿ.ಎ.ಎಸ್.)

**ಜಲಂಧರ :** ಒಬ್ಬ ರಾಕ್ಷಸ. ವೃತ್ರಾಸುರನ ಮಗನೆಂದೂ ಶಿವನ ಕೋಪವೇ ಸಮುದ್ರದಲ್ಲಿ ಘನೀಭೂತವಾಗಿ ಬಿದ್ದುದರಿಂದ ಈತ ಹುಟ್ಟಿದನೆಂದೂ, ದೇವೇಂದ್ರ ತನಗೊಬ್ಬ ವೈರಿ ಬೇಕೆಂದು ಶಿವನನ್ನು ಬೇಡಿದ್ದರಿಂದ ಜನಿಸಿದನೆಂದೂ ಪುರಾಣಗಳು ಬಗೆಬಗೆಯಾಗಿ ಹೇಳಿವೆ. ಹುಟ್ಟಿದೊಡನೆ ಬ್ರಹ್ಮಾಂಡ ಒಡೆಯುವಂತಾಗಿ, ನೋಡಬಂದ ಬ್ರಹ್ಮನ ಕಣ್ಣಲ್ಲಿ ನೀರಿಳಿಯಿತಂತೆ. ಆದ್ದರಿಂದ ಜಲಂಧರನೆಂದು ಈತನಿಗೆ ಹೆಸರಾಯಿತಂತೆ.

ಜಲಂಧರ ತನ್ನ ತಪಸ್ಸಿನಿಂದ ಶಿವನನ್ನು ಮೆಚ್ಚಿಸಿ, ಶಸ್ತ್ರದಿಂದ ಸಾಯದ ವರವನ್ನು ಪಡೆದು ತನ್ನ ಸತಿಯಾದ ಬೃಂದೆಯೊಡನೆ ಹರಿವಿರಿಂಚಿಗಳಿಂದಲೂ ಸೇವೆ ಪಡೆಯುತ್ತಿದ್ದನಲ್ಲದೆ ಸುರಲೋಕಕ್ಕೆ ದಾಳಿಯಿಟ್ಟು ಇಂದ್ರನನ್ನು ಸೋಲಿಸಿ ಓಡಿಸಿದ್ದ. ಇಂದ್ರನನ್ನು ರಕ್ಷಿಸಲು ಬಂದ ವಿಷ್ಣುವೂ ಜಲಂಧರನ ಬಂದಿಯಾದನಂತೆ. ದೇವತೆಗಳೆಲ್ಲ ಶಿವನ ಮರೆಹೊಗಲು ಆತ ಜಲಂಧರನನ್ನು ಸಂಹರಿಸಲು ಬೃಂದೆಯ ಪಾತಿವ್ರತ್ಯ ಭಂಗವೊಂದೇ ದಾರಿಯೆಂದಾಗ ವಿಷ್ಣು ಜಲಂಧರನ ವೇಷದಲ್ಲಿ ಹೋಗಿ ಅವಳನ್ನು ಭೋಗಿಸಿದನಂತೆ. ಅತ್ತ ಶಿವ ಜಲಂಧರನನ್ನು ಕೊಂದ. ನಿಜವರಿತ ಬೃಂದೆ ಕಿಚ್ಚು ಹಾಯಲು ಆಕೆಯ ಚಿತಾಭಸ್ಮದ ಮೇಲೆ ಕುಳಿತು ಬುದ್ಧಿಭ್ರಮಣೆಗೊಳಗಾದ ವಿಷ್ಣುವಿಗೆ ತುಳಸಿಯ ಮಾಲೆಯನ್ನು ಧರಿಸಿದ ಮೇಲೆ ಭ್ರಮೆಯಿಳಿಯಿತಂತೆ.

ಈ ಕಥೆಯ ರೂಪಾಂತರಗಳು ಭೈರವೇಶ್ವರ ಕಥಾಸೂತ್ರರತ್ನಾಕರ, ಕಥಾಸಾಗರ ಮುಂತಾದ ಶಿವಶರಣರ ಕಥಾಕೋಶಗಳಲ್ಲೆಲ್ಲ ಬರುತ್ತವೆ.

ನವನಾಥಸಿದ್ಧರಲ್ಲಿ ಒಬ್ಬ ಜಲಂಧರನಿದ್ದಾನೆ. ಇವನ ಹೆಸರೇ ಪಂಜಾಬಿನ ಒಂದು ಜಿಲ್ಲೆಗೆ ಬಂದಿದೆ.

ಮರೀಚಿ ಮತ್ತು ಕಶ್ಯಪ ಮಹರ್ಷಿಗಳ ವಂಶದಲ್ಲಿ ಜನಿಸಿದ ಒಬ್ಬ ಗೋತ್ರ ಪ್ರವರ್ತಕ ಋಷಿಗೂ ಜಲಂಧರನೆಂಬ ಹೆಸರಿದೆ. (ಕೆ.ಕೆ.)

**ಜಲಕೃಷಿ :** ಸಸ್ಯಗಳನ್ನುಖಮುಖ್ಯವಾಗಿ ತರಕಾರಿ, ಹಣ್ಣು ಹಂಪಲು ಮುಂತಾದ ಬೆಳೆಗಳನ್ನು–ಮಣ್ಣಿನ ಆವಶ್ಯಕತೆ ಇಲ್ಲದೆಯೇ ಕಾಂಕ್ರೀಟ್ ಇಲ್ಲವೆ ಇತರ ಬಗೆಯ ತೊಟ್ಟಿಗಳಲ್ಲಿ ತುಂಬಿರುವ ಇನಾರ್ಗ್ಯಾನಿಕ್ ಲವಣ ದ್ರಾವಣಗಳಲ್ಲಿ ಬೆಳೆಸುವ ವಿಧಾನ (ಹೈಡ್ರಪಾನಿಕ್ಸ್). ಸಸ್ಯಗಳ ಬೆಳವಣಿಗೆ ಮತ್ತು ಪರಿವರ್ಧನೆಗೆ ಅಗತ್ಯವಾದ ಖನಿಜ ಪೋಷಕಾಂಶಗಳ ಅಧ್ಯಯನಕ್ಕಾಗಿ 19ನೆಯ ಶತಮಾನದ ಮಧ್ಯಭಾಗದಲ್ಲಿ ಈ ಪ್ರಯೋಗತಂತ್ರವನ್ನು ಬಳಸಲಾಯಿತು. ಹಲವಾರು ವರ್ಷಗಳ ಕಾಲ ಇದು ಪ್ರಯೋಗಾಲಯ ವಿಧಾನವಾಗಿ ಮಾತ್ರ ರೂಢಿಯಲ್ಲಿತ್ತು. ಅನಂತರ ಇದರ ಉಪಯುಕ್ತತೆಯ ಅರಿವಾದ ಮೇಲೆ ದೊಡ್ಡ ಮೊತ್ತದಲ್ಲಿ ಸಸ್ಯಗಳನ್ನು ಬೆಳೆಸುವುದಕ್ಕೂ ಈ ವಿಧಾನವನ್ನು ಬಳಸತೊಡಗಿದರು.

ಈ ವಿಧಾನದಿಂದ ಸಸ್ಯಗಳನ್ನು ಬೆಳೆಸಲು ಉಪಯೋಗಿಸುವ ಉಪಕರಣಗಳು ಹಲವಾರು ಬಗೆಯವು. ಕೆಲವು ಉಪಕರಣಗಳು ಬೇಕರಿಗಳಲ್ಲಿ ಬ್ರೆಡ್ಡು, ಬಿಸ್ಕತ್ತು ಮುಂತಾದವನ್ನು ತಯಾರಿಸಲು ಬಳಸುವ ಟ್ರೇ ಅಥವಾ ತಟ್ಟೆಗಳಂತಿದ್ದು ಇವನ್ನು ಬಡುಗಳಲ್ಲಿ ಒಳಸರಿಸಿ ಇಡುವಂತೆ, ಇನ್ನು ಕೆಲವು ಬಗೆಯವು ಕಾಂಕ್ರೀಟು ಇಲ್ಲವೆ ಕಬ್ಬಿಣದಿಂದ ತಯಾರಿಸಿದ ತೆಪ್ಪೆ ತೊಟ್ಟಿಗಳಂತಿದ್ದು ಇವುಗಳ ಮೇಲೆ ಸಸ್ಯಗಳು ನಿಲ್ಲಲು ಅನುಕೂಲಿಸುವಂತೆ ತಂತಿಯ ಬಲೆ ಹಾಸಿರಬಹುದು. ಇಂಥ ತೊಟ್ಟಿಗಳ ತಳದಲ್ಲಿ ಪೈನಮರದ ಹತ್ತರಿಸಿಪ್ಪೆ, ಬತ್ತದಹೊಟ್ಟು, ಪೀಟ್ ಹಾವಸೆ ಇಲ್ಲವೆ ಜಲ್ಲಿಕಲ್ಲು, ಮರಳು ಮುಂತಾದ ಜಡವಸ್ತುಗಳನ್ನು ಹರಡಲಾಗುತ್ತದೆ. ಇದರಿಂದ ಗಿಡಗಳು ಭದ್ರವಾಗಿ ನಿಲ್ಲಲು ಆಸರೆ ದೊರೆಯುತ್ತದೆ. ಬಳಸುವ ತೊಟ್ಟಿ ಯಾವುದೇ ಬಗೆಯಾಗಿರಲಿ ಸಸ್ಯಬೆಳವಣಿಗೆಗೆ ಅವಶ್ಯವಾದ ವಾಯು, ಉಷ್ಣತೆ, ನೀರು ಹಾಗೂ ಖನಿಜ ಪೋಷಕಾಂಶಗಳನ್ನು ಪೂರೈಸಲು ಸೂಕ್ತವಾದ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಬೆಳೆಸಬೇಕೆನ್ನುವ ಗಿಡಗಳ ಬೀಜಗಳನ್ನು ಮೇಲೆ ಹೇಳಿದ ತಟ್ಟೆಗಳೊಳಗೆ ಇಲ್ಲವೆ ತೊಟ್ಟಿಗಳಲ್ಲಿ ತೆಳುವಾಗಿ ಹರಡಿ ವ್ಯವಸ್ಥಿತ ಕೊಳವೆಗಳ ಮೂಲಕ ಸಸ್ಯಗಳ ಬೆಳವಣಿಗೆಗೆ ಆವಶ್ಯಕವಾದ ನೀರು, ಅಮೋನಿಯಮ್ ಸಲ್ಫೇಟ್, ಪೊಟ್ಯಾಸಿಯಮ್ ಸಲ್ಫೇಟ್, ಮೆಗ್ನೀಷಿಯಮ್ ಸಲ್ಫೇಟ್, ಕಬ್ಬಿಣದ ಸಲ್ಫೇಟ್ ಮುಂತಾದ ಲವಣಾಂಶಗಳನ್ನೊಳಗೊಂಡಿರುವ ದ್ರವರೂಪದ ಪೋಷಣಮಾಧ್ಯಮಗಳನ್ನು ಹಾಯಿಸಬೇಕು. ಅಲ್ಲದೆ ಬೆಳಕು, ಆಕ್ಸಿಜನ್ ಮತ್ತು ಉಷ್ಣತೆಯನ್ನು ಬೇಕಾದ ಪ್ರಮಾಣದಲ್ಲಿಟ್ಟಿರಬೇಕು.

ಜಲಕೃಷಿಯಿಂದ ಅನೇಕ ಅನುಕೂಲತೆಗಳಿವೆ. ಹೊರಗಿನ ವಾತಾವರಣವೇನೇ ಇರಲಿ, ಶೀತಪ್ರದೇಶವಾಗಲಿ, ಬಂಜರುಭೂಮಿಯಾಗಲಿ, ಈ ವಿಧಾನದ ಸಹಾಯದಿಂದ ಬೇಕಾದ ಆಹಾರ ಸಸ್ಯಗಳನ್ನು ಮನೆಯಲ್ಲಿಯೇ ಬೆಳೆಸಿಕೊಳ್ಳಬಹುದು. ಭೂಮಿಯ ಮೇಲೆ ಮಾಡುವ ವ್ಯವಸಾಯದಲ್ಲಿ ಮಣ್ಣಿನ ಸಾರಾಂಶಗಳು ಜರಿದು ನಷ್ಟವಾಗುವ ಸಂಭಾವ್ಯತೆ ಉಂಟು. ಆದರೆ ಜಲಕೃಷಿಯಲ್ಲಿ ಈ ಪ್ರಮೇಯ ಇಲ್ಲ. ಅಲ್ಲದೆ ಇಲ್ಲಿ ಅಲ್ಪಪ್ರಮಾಣದ ಗೊಬ್ಬರ ಮಿಶ್ರಣವೇ ಸಾಕಾಗುತ್ತದೆ. ಅದೇ ರೀತಿಯಲ್ಲಿ ಈ ತಂತ್ರದಲ್ಲಿ ನೀರಿನ ಆವಶ್ಯಕತೆಯೂ ಕಡಿಮೆ. ಏಕೆಂದರೆ ಭೂವ್ಯವಸಾಯದಲ್ಲಿಯಂತೆ ನೀರು ಆವಿಯಾಗಿ ಹೋಗುವ ಸಂಭವವಿರದು. ಜಲಕೃಷಿಯಲ್ಲಿ ಕೃತಕ ಬೆಳಕನ್ನು ಬಳಸುವುದರಿಂದ ಮೋಡಭರಿತ ವಾತಾವರಣದಲ್ಲಿ, ಸೂರ್ಯನ ಬೆಳಕೇ ಕಾಣದಂಥ ಪ್ರದೇಶಗಳಲ್ಲಿ ಗಿಡಗಳನ್ನು ಬೆಳೆಸಲು ಬಹಳ ಅನುಕೂಲ. ಗಿಡದ ಬೆಳವಣಿಗೆಯನ್ನು ಇಮ್ಮಡಿಗೊಳಿಸಲು ಬೇಕಾಗುವ ಕೆಂಪು ಮತ್ತು ನೀಲಿ ರಶ್ಮಿಗಳನ್ನು ಹೆಚ್ಚಾಗಿ ಸೂಸುವ ಕೃತಕ ಬಲ್ಬುಗಳನ್ನು ಬಳಸಲಾಗುತ್ತದೆ. ಜೊತೆಗೆ ವರ್ಷದಲ್ಲಿ ಸೂರ್ಯನ ಬೆಳಕು ಒಂದೇ ತರಹ ಇರುವುದಿಲ್ಲವಾದ್ದರಿಂದ

ಭೂವ್ಯವಸಾಯದಲ್ಲಿ ಕೆಲವು ನಿರ್ದಿಷ್ಟ ಕಾಲದಲ್ಲಿ ಮಾತ್ರ ಬೆಳೆ ತೆಗೆಯಬಹುದು. ಆದರೆ ಜಲಕೃಷಿಯಲ್ಲಿ ಬೆಳಕಿನ ತೀಕ್ಷ್ಣತೆಯನ್ನು ಹತೋಟಿಯಲ್ಲಿಡುವುದರ ಮೂಲಕ ಬೇಕಾದ ಬೆಳೆಯನ್ನು ವರ್ಷದಲ್ಲಿ ಯಾವಾಗಲೂ ಪಡೆಯುವ ಸಾಧ್ಯತೆ ಇದೆ. ಈ ಕ್ರಮದಲ್ಲಿ ಕೆಲವು ಗಿಡಗಳ ಹೂ ಬಿಡುವ ಮತ್ತು ಅರಳುವ ಹೊತ್ತನ್ನು ಗೊತ್ತುಪಡಿಸಬಹುದಲ್ಲದೆ ನಿಯಂತ್ರಿಸಬಹುದು. ಜಲಕೃಷಿಯ ಮತ್ತೊಂದು ಮುಖ್ಯ ಪ್ರಯೋಜನವೆಂದರೆ ಬೆಳೆಯನ್ನು ಕ್ರಿಮಿಕೀಟಾದಿಗಳಿಂದ ದೂರವಿಟ್ಟು ರೋಗಗಳ ಸೋಂಕಿಲ್ಲದಂತೆ ಸಂರಕ್ಷಿಸುವುದು. ಜಲಕೃಷಿಯ ವಿಧಾನದಿಂದ ದಿನಬಳಕೆಗೆ ಬೇಕಾಗುವಷ್ಟು ತರಕಾರಿ ಹಣ್ಣುಹಂಪಲುಗಳನ್ನು ಬೇಕೆನಿಸಿದಾಗ ಬೆಳೆಸಿ ಉಪಯೋಗಿಸಬಹುದು. ದಿವಸಕ್ಕೊಂದರಂತೆ ಒಂದೊಂದು ತೆಟ್ಟೆಗೆ ಬೀಜಗಳನ್ನು ಹರಡುತ್ತ ಬಂದರೆ ಒಂದು ಫಸಲು ಮುಗಿಯುತ್ತಿದ್ದಂತೆಯೇ ಮತ್ತೊಂದು ಸಿದ್ಧವಾಗಿರುವಂತೆ ನೋಡಿಕೊಳ್ಳಬಹುದು.

ಜಲಕೃಷಿಗೆ ವ್ಯವಸ್ಥೆಗೊಳಿಸಿದ ಕೋಣೆಯಲ್ಲಿ ಹೂವಿನ ಗಿಡಗಳನ್ನೂ ಸಣ್ಣ ಸಣ್ಣ ಹಣ್ಣಿನ ಗಿಡಗಳನ್ನೂ ಟೊಮ್ಯಾಟೊ, ಕೊತ್ತಂಬರಿ, ಹಲವಾರು ಬಗೆಯ ಸೊಪ್ಪು, ಬೀಟ್‍ರೂಟ್, ಮೂಲಂಗಿ, ಗೆಣಸು, ಆಲೂಗೆಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ಕುಂಬಳ ಇತ್ಯಾದಿ ತರಕಾರಿಗಳನ್ನೂ ಬತ್ತ, ಗೋದಿ, ನವಣೆ, ಓಟ್ಸ್, ಬಾರ್ಲಿಗಳನ್ನೂ ಬೆಳೆಸಬಹುದಾಗಿದೆ. ಅನಾನಾಸ್, ಟೊಮ್ಯಾಟೊ ಮುಂತಾದವನ್ನು ಈ ವಿಧಾನದಿಂದ ಬೆಳೆಸಿದಾಗ ಅವು ಹೆಚ್ಚು ರಸವತ್ತಾಗಿರುತ್ತವೆಂದು ಕಂಡುಬಂದಿದೆ. ಹೀಗೆ ಬೆಳೆದ ತರಕಾರಿ ಮತ್ತು ಹಣ್ಣುಗಳು ಭೂಮಿಯಲ್ಲಿ ಬೆಳೆದವುಗಳಿಗಿಂತ ಎರಡರಷ್ಟು ಹೆಚ್ಚಿನ ವಿಟಮಿನ್‍ಗಳನ್ನೂ ಲವಣಗಳನ್ನೂ ಪಡೆದಿರುತ್ತವೆ. ಈ ಕ್ರಮದಲ್ಲಿ ಬೆಳೆದ ಒಂದೊಂದು ಟೊಮ್ಯಾಟೊ ಗಿಡವು 15ಕೆಜಿ.ಗಳಷ್ಟು ಹಣ್ಣು ಬಿಡುತ್ತದೆ. ಅಂದರೆ ಒಂದು ಎಕರೆಗೆ 300 ಟನ್ ಟೊಮ್ಯಾಟೊ ಸಿಗುತ್ತದೆ. ಜಲಕೃಷಿ ಕ್ರಮದಲ್ಲಿ ಬೆಳೆದ ಹುಲ್ಲು ಕೂಡ ಹೆಚ್ಚು ಪುಷ್ಟಿಕರವಾಗಿರುತ್ತದೆ ಎಂದು ಹೇಳಲಾಗಿದೆ.

ಜಲಕೃಷಿ ಭಾರತದಲ್ಲಿ 1944ರಲ್ಲಿಯೇ ಪಶ್ಚಿಮ ಬಂಗಾಳದಲ್ಲಿ ಪ್ರಾರಂಭವಾಗಿತ್ತು. ಈಗ ಇದು ಪ್ರಪಂಚದ ಅನೇಕ ಭಾಗಗಳಲ್ಲಿ ಬಳಕೆಯಲ್ಲಿದ್ದು ಅಮೆರಿಕ, ಯೂರೋಪ್, ಆಫ್ರಿಕ, ಆಸ್ಟ್ರೇಲಿಯ, ಜಪಾನ್, ಇಸ್ರೇಲ್ ಮತ್ತು ಭಾರತಗಳಲ್ಲಿ ಹೆಚ್ಚು ಪ್ರಚಲಿತವಾಗಿದೆ. ಅಮೆರಿಕ ಒಂದರಲ್ಲೇ ಸುಮಾರು 5 ಲಕ್ಷ ಮನೆಗಳಲ್ಲಿ ಭೂವ್ಯವಸಾಯ ಮತ್ತಿತರ ಕಸುಬುಗಳ ಜೊತೆಗೆ ಜಲಕೃಷಿಯನ್ನೂ ಮಾಡಲಾಗುತ್ತಿದೆ. ಗಣಿಗಳಲ್ಲಿ ಕೆಲಸ ಮಾಡುವವರಿಗೆ, ಯೋಧರಿಗೆ ಮತ್ತಿತರ ಕಷ್ಟಜೀವಿಗಳಿಗೆ ಅಲ್ಲೇ ಹೊಸತಾಗಿ ಬೆಳೆ ಬೆಳೆದು ಆಹಾರ ಒದಗಿಸಲು ಜಲಕೃಷಿ ಬಹಳ ಸಹಕಾರಿಯಾಗಿದೆ. (ವಿ.ಬಿ.)

**ಜಲಕ್ಲೇದಿತ ವಸ್ತು :** ಯಾವುದಾದರೂ ರಚನೆ ಅಥವಾ ಸಿದ್ಧವಸ್ತುವಿನೊಳಕ್ಕೆ ನೀರು ಇಳಿಯುವುದನ್ನು ತಡೆಗಟ್ಟುವ ಪದಾರ್ಥ. ಅಲ್ಯೂಮಿನಮ್ ಅಸಿಟೇಟ್ $Al(C_2H_3O_2)_3$ [ಸಾಮಾನ್ಯ ಮತ್ತು ಕ್ಷಾರ $Al(C_2H_3O_2)_2OH$] ಉಪಯೋಗಿಸಿ ಜಲಕ್ಲೇದಿತ ಬಟ್ಟೆಗಳನ್ನು ತಯಾರಿಸುತ್ತಾರೆ. ರಚನೆಗಳಲ್ಲಿ ಉಪಯೋಗಿಸುವ ಜಲಕ್ಲೇದಿತ ವಸ್ತುಗಳಲ್ಲಿ ಡಾಂಬರು (ಆಸ್ಫಾಲ್ಟ್), ಟಾರೆಣ್ಣೆ ಕಪ್ಪುರಾಳ ಮುಂತಾದವನ್ನು ಹೆಸರಿಸಬಹುದು. ಪೆಟ್ರೋಲಿಯಮ್ ಡಾಂಬರಿನೊಂದಿಗೆ ಸಂತೃಪ್ತಗೊಳಿಸಿದ ಚಾವಣಿ ಫೆಲ್ಟಿನಿಂದ ಪೆರ್ಗಮೈನ್ ಎಂಬ ಜಲಕ್ಲೇದಿತ ವಸ್ತುವನ್ನು ತಯಾರಿಸುತ್ತಾರೆ. ಹೈಡ್ರೊಸಾಲ್ ಎಂಬುದು ಒಂದು ಉತ್ತಮ ಜಲಕ್ಲೇದಿತ ವಸ್ತು. ಆಕ್ಸಿಡೈಸ್ಡ್ ಪೆಟ್ರೋಲಿಯಮ್ ಡಾಂಬರಿನೊಂದಿಗೆ ಕಲ್ನಾರಿನ ಫೆಲ್ಟನ್ನು ಸಂತೃಪ್ತಗೊಳಿಸಿ ಇದನ್ನು ತಯಾರಿಸುತ್ತಾರೆ. ಭೂಗರ್ಭ ಮತ್ತಿತರ ರಚನೆಗಳಲ್ಲಿ ಜಲಕ್ಲೇದಿತ ಪದರಗಳಾಗಿ ಇದರ ಉಪಯೋಗ ಉಂಟು. ಮೆಟಲಿಸಾಲ್ ಎರಡು ಕಡೆಯೂ ಡಾಂಬರನ್ನು ಲೇಪಿಸಿರುವ ಸುಮಾರು 0.2ಮಿಮೀ. ದಪ್ಪದ ಅಲ್ಯೂಮಿನಿಯಮ್ ಪಟ್ಟಿ. ಜಲ ಅಥವಾ ಭೂಗರ್ಭ ರಚನೆಗಳ ಜಲಕ್ಲೇದನೆಗೆ ಇತರ ನಿರೋಧಕಗಳೊಂದಿಗೆ ಮೆಟಲಿಸಾಲನ್ನು ಬಳಸುವರು. ಕಾಲುವೆ, ಕೊಳವೆ ಮುಂತಾದವುಗಳಲ್ಲಿ ಜಲಕ್ಲೇದಿತ ಲೇಪನಕ್ಕಾಗಿ ಜಲಕ್ಲೇದಿತ ಗಾರೆಯ ಉಪಯೋಗವಿದೆ. ಪೋರ್ಟ್‍ಲ್ಯಾಂಡ್ ಸಿಮೆಂಟ್ ಮತ್ತು ಮರಳನ್ನು 1:2 ಪ್ರಮಾಣದಲ್ಲಿ ಬೆರೆಸಿ ಬಳಸಲಾಗುವುದು. ಇದಕ್ಕೆ ಜಲವಿಕರ್ಷಣೆಯ ವಸ್ತುಗಳನ್ನು ಸೇರಿಸಿ ಜಲಕ್ಲೇದನ ಸಾಮರ್ಥ್ಯವನ್ನು ಹೆಚ್ಚಿಸಬಹುದು.

ಕಾಂಕ್ರೀಟನ್ನು ಜಲಕ್ಲೇದಿತಗೊಳಿಸುವಲ್ಲಿ ಎರಡು ವಿಧ : ನೀರಿನ ಒಳಹರಡುವ ಪ್ರಮಾಣವನ್ನು ತಗ್ಗಿಸುವಂತೆ ಯಾವುದಾದರೂ ವಸ್ತುವನ್ನು ಕಾಂಕ್ರೀಟಿಗೆ ಬೆರೆಸುವುದು ಒಂದು ವಿಧ; ತೇವ ಒಳಕ್ಕೆ ಹೋಗದಂತೆ ಕಾಂಕ್ರೀಟಿಗೆ ಲೇಪನ ಮಾಡುವುದು ಇನ್ನೊಂದು ವಿಧ.

ಕ್ಯಾಲ್ಸಿಯಮ್ ಕ್ಲೋರೈಡ್, ಅಮೋನಿಯಮ್ ಸ್ಟಿಯರೇಟ್ ಮುಂತಾದ ರಾಸಾಯನಿಕವಾಗಿ ಶಕ್ತವಾದ ವಸ್ತುಗಳನ್ನಾಗಲಿ, ಕ್ಯಾಲ್ಸಿಯಮ್ ಕಾರ್ಬೊನೇಟ್, ಜೇಡಿಮಣ್ಣು ಮುಂತಾದ ಜಡವಸ್ತುಗಳನ್ನಾಗಲಿ, ಸುಣ್ಣದಕಲ್ಲು, ಸಿಲಿಕ ಮುಂತಾದವನ್ನಾಗಲಿ ಉಪಯೋಗಿಸಿದರೆ ಇವು ರಂಧ್ರಗಳನ್ನು ತಗ್ಗಿಸಿ ಜಲಕ್ಲೇದನವನ್ನು ಉಂಟುಮಾಡುತ್ತವೆ.

ಮೇಲ್ಮೈ ಲೇಪನಗಳಾಗಿ ಉಪಯೋಗಿಸುವ ವಸ್ತುಗಳು ನೀರಿನ ದ್ರಾವಣಗಳು, ನೀರಿನ ನಿಲಂಬನಗಳು (ಸಸ್ಪೆನ್‍ಷನ್ಸ್) ಸಾಬೂನುಗಳು ಮುಂತಾದವುಗಳಾಗಿರಬಹುದು. ಮೆಗ್ನೀಸಿಯಮ್, ಸತು, ಸೀಸ ಮುಂತಾದವು ಕ್ಯಾಲ್ಸಿಯಮ್ ಹೈಡ್ರಾಕ್ಸೈಡ್ ಮತ್ತು ಕಾರ್ಬೊನೇಟುಗಳೊಂದಿಗೆ ರಾಸಾಯನಿಕವಾಗಿ ಕೂಡಿ ಅದ್ರಾವ್ಯ ಸಂಯುಕ್ತಗಳಾಗುತ್ತವೆ. ಇವು ಲೇಪನ ವಸ್ತುಗಳಾಗಬಹುದು. ಕಬ್ಬಿಣ ಚೂರುಗಳು, ಅಮೋನಿಯಮ್ ಕ್ಲೋರೈಡ್, ಅಮೋನಿಯ ದ್ರಾವಣದಲ್ಲಿ ಕೆಸೀನ್ ದ್ರಾವಣ ಮುಂತಾದವು ಪದಾರ್ಥಗಳ ಜಲ ನಿಲಂಬಕಗಳು.

ಓಲಿಯಿಕ್ ಮತ್ತು ಸ್ಟಿಯರಿಕ್ ಆಮ್ಲಗಳ ಸೋಡಿಯಮ್, ಪೊಟ್ಯಾಸಿಯಮ್ ಅಥವಾ ಅಮೋನಿಯಮ್ ಲವಣಗಳು ಕಾಂಕ್ರೀಟಿನ ಕ್ಯಾಲ್ಸಿಯಮ್ ಹೈಡ್ರಾಕ್ಸೈಡಿನೊಂದಿಗೆ ಸಂಯೋಗ ಹೊಂದಿದಾಗ ಅದ್ರಾವ್ಯ ಕ್ಯಾಲ್ಸಿಯಮ್ ಸಾಬೂನುಗಳು ಸೃಷ್ಟಿಯಾಗುತ್ತವೆ. ಇವು ಜಲವಿಕರ್ಷಕಗಳು. (ಕೆ.ಆರ್.ಎಂ.)

**ಜಲಗಡಿಯಾರ :** ಹರಿದು ಹೋದ ನೀರಿನ ಗಾತ್ರವನ್ನು ಅಳೆದು ಕಾಲಮಾಪನೆ ಮಾಡಲು ಬಳಸುವ ಸಾಧನ (ವಾಟರ್–ಕ್ಲಾಕ್; ಕ್ಲೆಪ್ಸಿಡ್ರ). ತಳದಲ್ಲಿ ಕಿರುರಂಧ್ರವಿರುವ ಒಂದು ಪಾತ್ರೆಗೆ ನೀರು ತುಂಬಿಸಿಡಬೇಕು; ರಂಧ್ರದ ಮೂಲಕ ಕ್ರಮೇಣ ಹರಿದ ನೀರನ್ನು



ಗ್ರೀಕರ ಜಲಗಡಿಯಾರ. ಮೇಲಿನ ಜಾಡಿಯಲ್ಲಿರುವ ನೀರು ರಂಧ್ರದ ಮೂಲಕ ಕೆಳಗಿನ ಜಾಡಿಗೆ ಹರಿದುಹೋಗಿ ಕೆಳಗಿನ ಜಾಡಿ ತುಂಬುತ್ತದೆ. ಜಾಡಿಗಳ ಒಳ ಮೇಲ್ಮೈಯನ್ನು ಕ್ರಮಾಂಕಿಸಲಾಗಿತ್ತು. ನೀರಿನ ಮಟ್ಟದಲ್ಲಿ ಆಗುವ ಬದಲಾವಣೆಗಳೇ ಸಂದ ಕಾಲದ ಸೂಚಿಗಳು

ಸಂಗ್ರಹಿಸಲು ಅಡಿಯಲ್ಲಿ ಇನ್ನೊಂದು ಪಾತ್ರೆ ಇಡಬೇಕು. ಮೇಲಿನ ಇಲ್ಲವೇ ಕೆಳಗಿನ ಪಾತ್ರೆಯ ನೀರಿನ ಮಟ್ಟವನ್ನು ಅಥವಾ ನೀರಿನ ಗಾತ್ರವನ್ನು ಅಳೆದು ಸಂದಕಾಲವನ್ನು ಗಣಿಸುವುದು ಇಲ್ಲಿನ ತಂತ್ರ. ಪ್ರಶ.ಪೂ. 1400ರಷ್ಟು ಹಿಂದೆಯೇ ಜಲಗಡಿಯಾರ ಬಳಕೆ ಇದ್ದುದಕ್ಕೆ ಆಧಾರ ದೊರೆತಿದೆ. ಸೂರ್ಯನನ್ನಾಗಲೀ ಆಕಾಶದ ಇತರ ಯಾವುದೇ ವಿದ್ಯಮಾನವನ್ನಾಗಲಿ ಅವಲಂಬಿಸದೆ ಕಾಲವನ್ನು ಸ್ವತಂತ್ರವಾಗಿ ಅಳೆಯುವ ದಿಶೆಯಲ್ಲಿ ಇಟ್ಟ ಮೊದಲ ಹೆಜ್ಜೆ ಜಲಗಡಿಯಾರ. ವೇದಾಂಗ ಜ್ಯೋತಿಷ್ಯದಲ್ಲಿ (ಪ್ರಶ.ಪೂ.ಸು. 400) ಜಲಗಡಿಯಾರದ ಉಲ್ಲೇಖ ಉಂಟು. ಸೂರ್ಯಸಿದ್ಧಾಂತದಲ್ಲಿ (ಪ್ರಶ.ಸು. 6ನೆಯ ಶತಮಾನ) ಜಲಗಡಿಯಾರದ ವರ್ಣನೆ ಹೀಗಿದೆ: ಅರ್ಧ ಗೋಳಾಕಾರದ ತಾಮ್ರದ ಪಾತ್ರೆ ; ಅದರ ತಳದಲ್ಲಿ ಒಂದು ರಂಧ್ರ; ಈ ಖಾಲಿ ಪಾತ್ರೆಯನ್ನು ಶುದ್ಧ ನೀರು ತುಂಬಿರುವ ಒಂದು ದೊಡ್ಡ ಬೋಗುಣಿಯೊಳಗೆ ಇಡಬೇಕು; ರಂಧ್ರದ ಮೂಲಕ ನೀರು ಪಾತ್ರೆಯೊಳಗೆ ತುಂಬಿ ಅದು ಮುಳುಗುತ್ತದೆ; ಒಂದು ಹಗಲು ಒಂದು ರಾತ್ರಿಯ ಅವಧಿಯಲ್ಲಿ ಈ ಪಾತ್ರೆ ಹೀಗೆ 60 ಸಲ ಮುಳುಗಿರುತ್ತದೆ. (ಎಂಯು.)

**ಜಲಗಾಜು :** ರಾಸಾಯನಿಕವಾಗಿ ಸೋಡಿಯಮ್ ಸಿಲಿಕೇಟ್ ; ಇದು ಸಿಲಿಕದೊಡನೆ $SiO_2$ ಕೂಡಿರಬಹುದು (ವಾಟರ್ ಗ್ಲಾಸ್). ಇದರ ರಾಸಾಯನಿಕ ಪ್ರತೀಕ. $Na_2SiO_3$. $SiO_2$–$Na_2SiO_3.3SiO_2$. ಮರಳು ಮತ್ತು ವಾಷಿಂಗ್ ಸೋಡಗಳನ್ನು ಕುಲುಮೆಯಲ್ಲಿ

ಕಾಸಿ ಜಲಗಾಜನ್ನು ತಯಾರಿಸುತ್ತಾರೆ. ಅದರೊಳಗೆ ಕರಗಿದ ವಸ್ತು ಘನೀಭವಿಸಿ ಗಾಜಿನಂತಾಗುತ್ತದೆ. ಇದಕ್ಕೆ ದ್ರಾವ್ಯ ಗಾಜು (ಸಾಲ್ಯುಬಲ್ ಗ್ಲಾಸ್) ಎಂದೂ ಹೆಸರುಂಟು. ಇದನ್ನು ಪುಡಿಮಾಡಿ ಒತ್ತಡದಲ್ಲಿ ನೀರಿನೊಳಗೆ ಕರಗಿಸಿದರೆ ಒಂದು ಸ್ನಿಗ್ಧವಾದ ಪದಾರ್ಥ ಬರುತ್ತದೆ. ಜಲಗಾಜು ನೀರಿನಲ್ಲಿ ದ್ರಾವ್ಯ. ಈ ದ್ರಾವಣದಲ್ಲಿ (ಸಾಪೇಕ್ಷ ಸಾಂದ್ರತೆ 1.1) ನಾನಾ ಲವಣಗಳ ಹರಳುಗಳನ್ನಿಟ್ಟಾಗ ಸಸ್ಯಗಳನ್ನು ಹೋಲುವ ಮನೋಹರವಾದ ಬೆಳಸು ಕಂಡುಬರುತ್ತದೆ. ಇದಕ್ಕೆ ಸಿಲಿಕ ಗಾರ್ಡನ್ ಎಂದು ಹೆಸರು. ಸಾಬೂನಿನೊಡನೆ ಬೆರೆಸಲು, ಬಟ್ಟೆ ಮತ್ತು ಮರಗಳನ್ನು ಬೆಂಕಿಯಿಂದ ಸುಡದಂತೆ ಮಾಡಲು ಜಲಗಾಜನ್ನು ಉಪಯೋಗಿಸುತ್ತಾರೆ. ಕೋಳಿಮೊಟ್ಟೆಯನ್ನು ಇದರ ದ್ರಾವಣದಲ್ಲಿ ಅದ್ದಿದರೆ ಅದರ ರಂಧ್ರಗಳು ಮುಚ್ಚಿ ವಾಯು ಮತ್ತು ಬ್ಯಾಕ್ಟೀರಿಯ ಒಳಕ್ಕೆ ಹೋಗುವುದಿಲ್ಲ. ಹೀಗೆ ಮೊಟ್ಟೆಗಳ ಸಂರಕ್ಷಣೆಯಲ್ಲಿ ಜಲಗಾಜಿನ ಬಳಕೆಯುಂಟು. (ಎನ್.ಎಸ್.ಕೆ.)

**ಜಲಚಿಕಿತ್ಸೆ :** ಕೇವಲ ನೀರಿನ ಉಪಯೋಗದಿಂದಲೇ ಸಕಲ ವ್ಯಾಧಿಗಳನ್ನೂ ಗುಣಪಡಿಸಬಹುದೆಂದು ಪರಿಗಣಿಸಿ ಆಚರಿಸುವ ಚಿಕಿತ್ಸಾವಿಧಾನ (ಹೈಡ್ರೋಥೆರಪಿ). ಪ್ರಕೃತಿಯಲ್ಲಿ ದೊರೆಯುವ ನೀರನ್ನು ಸೇವಿಸುವುದೂ ಸ್ನಾನ, ಮುಳುಗಡೆ (ಇಮ್ಮರ್ಷನ್) ಮುಂತಾದ ವಿಧಾನಗಳಿಂದ ಅಲ್ಪಕಾಲಿಕವಾಗಿ ಇಲ್ಲವೇ ದೀರ್ಘಕಾಲಿಕವಾಗಿ ನೀರಿನೊಡನೆ ಸಂಪರ್ಕಗೊಳಿಸಿಕೊಳ್ಳುವುದೂ ಈ ವಿಧಾನದಲ್ಲಿ ಆಚರಿಸುವ ಮಾರ್ಗಗಳು. ಬಹು ಹಿಂದಿನಿಂದಲೂ ಪ್ರಪಂಚದ ನಾನಾಕಾಲಗಳಲ್ಲಿ ಜಲಚಿಕಿತ್ಸೆ ಪ್ರಮುಖವಾಗಿ ಜನಪ್ರಿಯವಾಗಿ ಇದ್ದುದೂ, ಇರುವುದೂ ಕಂಡುಬಂದಿದೆ. ದೇಹದಲ್ಲಿ ನೀರಿನಿಂದಾಗುವ ಪರಿಣಾಮಗಳನ್ನು ಅರಿತು ಜ್ವರ ನೋವುಗಳ ಶಮನಕ್ಕೆ ತಣ್ಣೀರಿನ ಉಪಯೋಗವನ್ನು ಹಿಪಾಕ್ರಟೀಸ್ (ಪ್ರಶ.ಪೂ.ಸು. 460–377) ಸೂಚಿಸಿದ್ದ. ಪ್ರಾಚೀನ ಗ್ರೀಕರೂ ರೋಮನ್ನರೂ ವಿವಿಧ ಚಿಲುಮೆ ನೀರುಗಳ ಹಾಗೂ ಬಿಸಿನೀರು ತಣ್ಣೀರು ಸ್ನಾನಗಳ ಪ್ರಯೋಜನಗಳನ್ನು ತಿಳಿದಿದ್ದರು. ರೋಮನ್ನರಂತೂ ಚಿಲುಮೆಗಳು ಕಂಡಲ್ಲೆಲ್ಲ ಚಿಕಿತ್ಸಾ ಸ್ಥಳಗಳನ್ನು ಸ್ಥಾಪಿಸುತ್ತಿದ್ದರು. ಇಂಗ್ಲೆಂಡಿನ ಬಾತ್, ಯೂರೋಪಿನಲ್ಲಿ ಬೇಡೆನ್‌ಬೇಡೆನ್, ಸೇಂಟ್ ಮಾರಿಟ್ಸ್, ಯೈಕ್ಸ್ ಮುಂತಾದ ಕಡೆ ರೋಮನ್ನರು ಸ್ಥಾಪಿಸಿದ್ದ ಚಿಕಿತ್ಸಾಸ್ಥಳಗಳು ಇಂದಿಗೂ ಇವೆ. ಗೇಲೆನ್ನನು (ಪ್ರ.ಶ. ಸುಮಾರು 130–200) ಅನೇಕ ರೋಗಗಳಿಗೆ ನೀರಿನ ಸೇವನೆ, ನೀರಿನೊಳಗೆ ಅಂಗಮರ್ದನಗಳನ್ನು (ಮಸಾಜ್) ವಿಧಿಸಿದ್ದ. ಆದರೆ ಈ ವಿಧಾನಗಳನ್ನು ಚಿಕಿತ್ಸಾಕ್ರಮಗಳೆಂದೇ ಪರಿಗಣಿಸಿ ಪ್ರಥಮವಾಗಿ ಲೇಖಿಸಿದ್ದು ಸುಮಾರು ಕ್ರಿಸ್ತಶಕೆಯ ಪ್ರಾರಂಭಕಾಲದಲ್ಲಿದ್ದ ಸೆಲ್ಸಸ್ ಎಂಬಾತನೆಂದು ತಿಳಿದುಬಂದಿದೆ. ಇಲ್ಲಿಂದ ಮುಂದಕ್ಕೆ ಜಲಚಿಕಿತ್ಸೆ ಉಪೇಕ್ಷಿಸಲ್ಪಟ್ಟಿತಾದರೂ ನವೋದಯ (ರಿನೇಸಾನ್ಸ್) ಕಾಲದಲ್ಲಿ (ಪ್ರ.ಶ.ಸು. 1420) ಸವಾನರೋಲ, ಬಾರ್ಸಿಸಿಯೋ ಮುಂತಾದವರಿಂದ ಅದು ಇಟಲಿಯಲ್ಲಿ ಪುನಃ ಆಚರಣೆಗೆ ತರಲ್ಪಟ್ಟು ಯೂರೋಪಿನಲ್ಲೆಲ್ಲ ವ್ಯಾಪಿಸಿತು. ಎಲ್ಲೆಲ್ಲೂ ಜಲಚಿಕಿತ್ಸೆಗಾಗಿ ಸ್ನಾನಗೃಹಗಳು ಏರ್ಪಟ್ಟವು. ಆದರೆ ಚಿಕಿತ್ಸೆಯ ನೆಪದಲ್ಲಿ ಈ ಸ್ನಾನಗೃಹಗಳು, ಲೈಂಗಿಕ ಲಂಪಟರಿಂದ ದುರುಪಯೋಗಿಸಲ್ಪಡಲು ಪ್ರಾರಂಭವಾಗಿ ಅವುಗಳನ್ನೆಲ್ಲ ಮುಚ್ಚಿಬಿಡ ಬೇಕಾಯಿತು. ಜಳಕ ಒಂದು ಚಿಕಿತ್ಸಾಕ್ರಮವಾಗಿ ಇಂಗ್ಲೆಂಡಿನಲ್ಲಿ ಬಳಕೆಗೆ ಬಂದದ್ದು ಇನ್ನೂ ಸುಮಾರು 250 ವರ್ಷಗಳ ತರುವಾಯ. ಸ್ನಾನದಿಂದ ಸರ್ವಥಾ ತೊಂದರೆ ಏನೂ ಇಲ್ಲವೆಂದು ಸಾರಿದ ಸರ್ ಜಾನ್ ಫ್ಲೋಯರ್ (1649–1734) ಎಂಬಾತ ಇಂಗ್ಲೆಂಡಿನಲ್ಲಿ ತಣ್ಣೀರು ಬಿಸಿನೀರಿನ ಸ್ನಾನದ ಯೋಗ್ಯ ವಿಧಾನ ಎಂಬ ಗ್ರಂಥವನ್ನು ಬರೆದ. ಅದು 1697ರಿಂದ 1722ರವರೆಗಿನ ಅಂತರದಲ್ಲಿ ಎಂಟು ಸಲ ಮರುಮುದ್ರಣ ಗೊಳ್ಳುವಷ್ಟು ಜನಾದರಣೀಯವಾಯಿತು. ಸುಮಾರು ಇದೇ ಕಾಲದಲ್ಲಿ ಜರ್ಮನಿಯಲ್ಲಿ ಜಾನ್ ಸಿಸ್ಮಂಡ್ ಹಾಹ್ನ್ (1664–1742) ಎಂಬಾತ ಸೈಕ್ರೋಲುಪೋಸಿಯ ಎಂಬ ಗ್ರಂಥವನ್ನು ಬರೆದು ಅದರಲ್ಲಿ ಜಲಚಿಕಿತ್ಸೆಯ ವಿವಿಧ ವಿಧಾನಗಳನ್ನು ವಿಸ್ತಾರವಾಗಿ ವಿವರಿಸಿದ. ಮುಂದೆ ವಿಲಿಯಮ್ ರೈಟ್ (1735–1819) ಎಂಬ ವೈದ್ಯನೂ ಅವನ ಉಪದೇಶದಂತೆ ಜೇಮ್ಸ್ ಕರಿ (1756–1805) ಎಂಬ ವೈದ್ಯನೂ ಇಂಗ್ಲೆಂಡಿನಲ್ಲಿ ಜ್ವರದ ಚಿಕಿತ್ಸೆಗೆ ತಣ್ಣೀರಿನ ಸ್ನಾನವನ್ನೇ ವಿಧಿಸುತ್ತಿದ್ದರು. ಅಮೆರಿಕದ ಫಿಲಡೆಲ್ಫಿಯದಲ್ಲಿ ಬೆಂಜಮಿನ್ ರಷ್ (1745–1813) ಎಂಬ ವೈದ್ಯ ಜ್ವರಚಿಕಿತ್ಸೆಗೆ ತಣ್ಣೀರಿನ ಸ್ನಾನ ವಿಧಾನವನ್ನು ಮಾತ್ರವಲ್ಲದೆ ತಲೆಗೆ ಬರ್ಫ ಕಟ್ಟುವುದನ್ನು ಕೂಡ ಆಚರಣೆಗೆ ತಂದ. ಆದರೆ ಜಲಚಿಕಿತ್ಸೆಯ ಪ್ರಮುಖ ಪ್ರತಿಪಾದಕನೆಂದರೆ 19ನೆಯ ಶತಮಾನದ ಪ್ರಥಮಾರ್ಧದಲ್ಲಿ ಬದುಕಿದ್ದ ಸೈಲೇಷಿಯದ ಬೇಸಾಯಗಾರನಾದ ವಿನ್ಸೆನ್ಸ್ ಪ್ರಿಯೆಸ್‌ನಿಟ್ಸ್ (1799–1851). ತನ್ನ ಜೀವಮಾನವನ್ನೇ ಜಲಚಿಕಿತ್ಸೆಯ ಪ್ರಚಾರಕ್ಕಾಗಿ ಮುಡುಪಾಗಿಟ್ಟ ಇವನನ್ನು ಆಧುನಿಕ ಜಲಚಿಕಿತ್ಸಾ ಜನಕನೆಂದು ಅನೇಕರು ಗಣಿಸುತ್ತಾರೆ. ಸಕ್ರಮ ಸ್ನಾನವೇ ಆರೋಗ್ಯಕ್ಕೆ ನೇರಮಾರ್ಗ ಮತ್ತು ಜಳಕ ಮಾಡಿಕೊಂಡೇ ಸರ್ವರೋಗಗಳನ್ನೂ ಪರಿಹರಿಸಿಕೊಳ್ಳಬಹುದು ಎಂಬುದಾಗಿ ಅತಿ ಸರಳವಾಗಿಯೂ ಮನನಾಟುವಂತೆಯೂ ಈತ ಸಾರಿದ. 1829ರಲ್ಲಿ ಇವನು ಸೈಲೇಷಿಯದ ವನಾಂತರ ಪ್ರದೇಶದಲ್ಲಿ ಸ್ನಾನಗೃಹಗಳನ್ನು ಸ್ಥಾಪಿಸಿ, ಇವುಗಳ ಉಪಯೋಗ ಪಡೆಯುವಷ್ಟು ಖರ್ಚು ಮಾಡಬಲ್ಲ ಧನಾಢ್ಯ ಗಿರಾಕಿಗಳಿಗೆ ಕ್ಲುಪ್ತವಾಗಿ ತಣ್ಣೀರಿನ ಸ್ನಾನ, ಮೈಕೈ ನೀವುವಿಕೆ, ಮರ ಕಡಿಯುವಂಥ ಶ್ರಮಸಾಧ್ಯ ವ್ಯಾಯಾಮ ಮುಂತಾದುವನ್ನು ಏರ್ಪಡಿಸಿದ. ಪ್ರಾರಂಭದಲ್ಲಿ ಕೇವಲ 45 ಜನ ಈ ಚಿಕಿತ್ಸಾಕ್ರಮದ ಲಾಭ ಪಡೆಯಲು ಬಂದರು. ಆದರೆ 1843 ರಷ್ಟರ ಹೊತ್ತಿಗೆ ವರ್ಷಕ್ಕೆ 1500 ಜನ ನಾ ಮುಂದು ತಾ ಮುಂದು ಎಂದು ಬರುವಂತಾಯಿತು. ಪ್ರಿಯೆಸ್‌ನಿಟ್ಸ್‌ನು ಉಳುಕು, ಮೂಕನೋವು ಮುಂತಾದವಕ್ಕೆ ತಣ್ಣೀರಿನಲ್ಲಿ ಅದ್ದಿದ ಬಟ್ಟೆಯನ್ನು ಬಿಗಿಯಾಗಿ ಕಟ್ಟುವುದು (ಕೋಲ್ಡ್ ಪ್ಯಾಕ್), ಬಿಸಿನೀರಿನಲ್ಲಿ ಅದ್ದಿ ಹಿಂಡಿದ ಬಟ್ಟೆಯಿಂದ ಮೈಕೈ ಒರೆಸಿಕೊಳ್ಳುವುದು (ಸ್ಪಂಜ್‌ಬಾತ್), ನೀರಿನಲ್ಲಿ ಕಾಲನ್ನು ಅದ್ದಿ ಇಟ್ಟುಕೊಳ್ಳುವುದು (ಫುಟ್ ಬಾತ್) ಪಿಚಕಾರಿ ಪ್ರಯೋಗ (ಡೂಷ್) ಮುಂತಾದ, ಇಂದಿಗೂ ಅನುಸರಿಸುವ, ಜಲಚಿಕಿತ್ಸಾವಿಧಾನಗಳನ್ನು ಕಂಡುಹಿಡಿದು ಜನಾದರಣೀಯವನ್ನಾಗಿ ಮಾಡಿದ. ಆಸ್ಟ್ರಿಯ, ಜರ್ಮನಿಗಳಲ್ಲಿ ಮಾತ್ರವೇ ಅಲ್ಲದೆ ವಿಲ್‌ಹೆಲ್ಮ್ ವಿಂಟರ್‌ನಿಟ್ಸ್ (1834–1917) ಎಂಬಾತನ ಪ್ರಯತ್ನದಿಂದ ವಿಯೆನ್ನದಲ್ಲೂ ಸೈಮನ್ ಬರೂಕ್ (1840–1924) ಎಂಬಾತನ ಪ್ರಯತ್ನದಿಂದ ಅಮೆರಿಕದ ನ್ಯೂಯಾರ್ಕಿನಲ್ಲೂ ಜಲಚಿಕಿತ್ಸಾಕ್ರಮಗಳು ಜನಪ್ರಿಯವಾದುವು. ಇಂಗ್ಲೆಂಡಿನಲ್ಲಿ ಆ ವರೆಗೆ ಅಲಕ್ಷಿಸಲ್ಪಟ್ಟ ಸ್ನಾನಗೃಹಗಳೂ ಚಿಲುಮೆಗಳೂ ಪುನಃ ಪ್ರಸಿದ್ಧಿಗೆ ಬಂದವು.

1493ರಿಂದ 1541ರವರೆಗೆ ಬದುಕಿದ್ದ ಪರಾಸೆಲ್ಸಸ್ ಎಂಬ ವಿಜ್ಞಾನಿ ಆ ಕಾಲದಲ್ಲಿ ಯೂರೋಪಿನ ಸೇಂಟ್ ಮಾರಿಟ್ಸ್‌ನ ಚಿಲುಮೆ ನೀರಿನ ಸಂಶ್ಲೇಷಣೆಯನ್ನು ಮಾಡಿ ಅದರಲ್ಲಿ ವಿಲೀನವಾಗಿರುವ ಲವಣ ವಸ್ತುಗಳನ್ನು ಶೋಧಿಸಿದ್ದ. ಆದರೂ ಚಿಲುಮೆ ನೀರಿನಲ್ಲಿ ವಿಲೀನವಾದ ಲವಣ ಅನಿಲಗಳ ಹಾಗೂ ನೀರಿನ ಉಷ್ಣತೆಯ ವಿಷಯವಾಗಿ ವೈದ್ಯರು 19ನೆಯ ಶತಮಾನದ ಪ್ರಾರಂಭದವರೆಗೂ ಯೋಚಿಸಿರಲಿಲ್ಲ. ಇಂಗ್ಲೆಂಡಿನಲ್ಲಿ ಥಾಮಸ್ ಗಾರ್ನೆಟ್ ಎಂಬಾತ ಮೊದಲಿಗೆ ಬೇರೆ ಬೇರೆ ಚಿಲುಮೆಗಳ ನೀರಿನ ಉಷ್ಣತೆಯನ್ನು ಮಾಪಿಸಿ ಬಿಸಿನೀರಿನಲ್ಲಿ ಸಂಪರ್ಕಗೊಳ್ಳಬೇಕಾದ ಕಾಲವನ್ನು ನಿಗದಿಗೊಳಿಸಿದ. ಜಲಚಿಕಿತ್ಸೆ ಹೆಚ್ಚು ಜನಾದರಣೀಯವಾಗಿ ಹೊಸ ಹೊಸ ಚಿಲುಮೆಗಳು ಕಂಡುಹಿಡಿಯಲ್ಪಟ್ಟೊಡನೆಯೇ ಅವುಗಳ ನೀರಿನ ಉಷ್ಣಮಾಪನ ಮತ್ತು ಸಂಶ್ಲೇಷಣೆಯನ್ನು ಮಾಡುವುದಕ್ಕೆ ವೈದ್ಯರು ಪ್ರಾರಂಭಿಸಿ, ಆಯಾ ಚಿಲುಮೆಯ ನೀರು ಅದರಲ್ಲಿ ವಿಲೀನವಾಗಿರುವ ಯಾವುದೋ ಲವಣ ಅಥವಾ ಅನಿಲದಿಂದ ಇಲ್ಲವೆ ಅದರ ವಿಶಿಷ್ಟ ಉಷ್ಣತೆಯಿಂದ ತನ್ನ ಪ್ರಭಾವವನ್ನು ಬೀರುತ್ತದೆ ಎಂದು ಸಾರುವುದಕ್ಕೆ ಪ್ರಾರಂಭಿಸಿದರು. ಸೋಡಿಯಂ, ಪೊಟ್ಯಾಸಿಯಂ, ಲಿಥಿಯಂ, ಕ್ಯಾಲ್ಸಿಯಂ, ಮೆಗ್ನೀಸಿಯಂ, ಮ್ಯಾಂಗನೀಸ್, ಕಬ್ಬಿಣ, ಗಂಧಕ, ಬ್ರೋಮೀನ್ ಹಾಗೂ ಅಪರೂಪವಾಗಿ ಅಯೋಡೀನ್ ಇವುಗಳ ಲವಣಗಳು ಮತ್ತು ಇಂಗಾಲದ ಡೈಆಕ್ಸೈಡ್, ಹೈಡ್ರೋಜನ್ ಸಲ್ಫೈಡ್ ಇತ್ಯಾದಿ ಅನಿಲಗಳು ವಿವಿಧ ಚಿಲುಮೆ ನೀರುಗಳ ಚಿಕಿತ್ಸಾಗುಣಕ್ಕೆ ಕಾರಣಗಳು ಎಂದು ವೈದ್ಯರಲ್ಲೂ ಜನತೆಯಲ್ಲೂ ಸಾರ್ವತ್ರಿಕವಾದ ನಂಬಿಕೆಯಾಯಿತು. ಚಿಲುಮೆ ನೀರನ್ನು ಗಾಜಿನ ಸೀಸೆಗಳಲ್ಲಿ ತುಂಬಿ ದೂರಪ್ರದೇಶಗಳಿಗೆ ರವಾನೆ ಮಾಡಲು ಪ್ರಾರಂಭವಾಯಿತು. ಇದರಿಂದ ಚಿಲುಮೆ ಇರುವ ಸ್ಥಳಕ್ಕೆ ಬಂದು ನಿರೀಕ್ಷಿತವಾಗಿಯೇ ದುಬಾರಿಯಾಗಿ ವೆಚ್ಚ ಮಾಡುವಷ್ಟು ಧನಿಕರಲ್ಲದವರೂ ಇನ್ನಿತರ ರೀತಿಯ ಅನಾನುಕೂಲತೆ ಇದ್ದವರೂ ಜಲಚಿಕಿತ್ಸೆಯನ್ನು ಪಡೆಯಲು ಸಹಾಯಕವಾಯಿತು. ಚಿಲುಮೆ ನೀರನ್ನೇ ಅಲ್ಲದೆ ಅದರ ವಿಶಿಷ್ಟ ಲವಣ ಅಥವಾ ಅನಿಲಗಳನ್ನು ಹೊಂದಿದ ಕೃತಕವಾಗಿ ತಯಾರಿಸಿದ ನೀರನ್ನೂ ಶೀಶೆಗಳಲ್ಲಿ ತುಂಬಿ ಮಾರಾಟಕ್ಕೆ ಇಡಲಾಯಿತು. ಕ್ರಮೇಣ 20ನೇ ಶತಮಾನದ ಪ್ರಾರಂಭದ ಹತ್ತಿಪ್ಪತ್ತು ವರ್ಷಗಳ ಹೊತ್ತಿಗೆ ಚಿಲುಮೆ ನೀರು ಮತ್ತು ಜಲಚಿಕಿತ್ಸೆಯಲ್ಲಿ ನಂಬಿಕೆ ಕಡಿಮೆಯಾಯಿತಾದರೂ ಇಂದಿಗೂ ಸ್ನಾನಗೃಹಗಳು, ಚಿಲುಮೆ ನೀರಿನ ಮಾರಾಟ ಇತ್ಯಾದಿಗಳು ಇಂಗ್ಲೆಂಡಿನಲ್ಲಿಯೂ ಯೂರೋಪಿನಲ್ಲೂ ಕಂಡುಬಂದು, ಮುಖ್ಯವಾಗಿ ವಾಯುನೋವು, ಚರ್ಮರೋಗಗಳ ಚಿಕಿತ್ಸೆಗೆ ಸೀಮಿತವಾಗಿವೆ.

ವಾಸ್ತವವಾಗಿ ತಣ್ಣೀರಿನ ಸ್ನಾನ ಆ ಕೂಡಲೇ ಚರ್ಮದ ರಕ್ತನಾಳಗಳನ್ನು ಸಂಕುಚಿಸಿ ಚಳಿಯಾಗುವಂತೆಯೂ ಚರ್ಮ ಬಿಳಿಚಿಕೊಳ್ಳುವಂತೆಯೂ ಮಾಡುತ್ತದೆ. ಅನಂತರ ಸುಮಾರು 15–20 ಮಿನಿಟುಗಳು ಬೆವರುವುದು ಕಡಿಮೆ ಆಗಿ ದೇಹಶಾಖ ನಷ್ಟವೂ ಕಡಿಮೆ ಆಗಿ ದೇಹೋಷ್ಣತೆ ಹಾಗೂ ಗುಂಡಿಗೆಮಿಡಿತ ಮತ್ತು ಉಸಿರಾಟಗಳ ದರಗಳು ಹೆಚ್ಚುವುವು. ಚರ್ಮದ ರಕ್ತನಾಳಗಳು ಪುನಃ ಆಕುಂಚಿಸಿ ಅಧಿಕ ರಕ್ತಪರಿಚಲನೆಯಿಂದ ಚರ್ಮ ಕೆಂಪಗೂ ಬೆಚ್ಚಗೂ ಆಗುತ್ತದೆ. ಇದರ ಪರಿಣಾಮ ಹಾಯೆನಿಸುವ ಒಂದು ವಿಧವಾದ ಹಿತಕರ ಅನುಭವ. ಅನಂತರ ಯಥಾಸ್ಥಿತಿ. ಇದೇ ರೀತಿ ಹದವಾದ ಬಿಸಿನೀರಿನ ಸ್ನಾನದಿಂದಲೂ, ಆ ಕೂಡಲೇ ಚರ್ಮದ ರಕ್ತನಾಳಗಳು ಆಕುಂಚಿಸಿ ಸುಖಾನುಭವ ಉಂಟಾಗುತ್ತದೆ. ಆದರೆ ಬಹು ಬಿಸಿಯಾದ (ಸುಮಾರು 50° ಸೆಂ. ಮೀರಿ) ನೀರಿನ ಜಳಕಮಾಡಿದರೆ ಮೈಕಾವು ಜ್ವರದಂತೆ ಏರಿ ನಾಡಿ, ಉಸಿರಾಟಗಳ ದರ ಹೆಚ್ಚಿ ಸುಮಾರು 1 ಗಂಟೆ ಕಾಲ ಮೈಯೆಲ್ಲ ಬೆವರುತ್ತದೆ. ರಕ್ತಕಣಗಳ ಸಂಖ್ಯೆ ವೃದ್ಧಿಸುವುದಲ್ಲದೆ ಹೀಮೋಗ್ಲೊಬಿನ್ನಿನ ಪ್ರಮಾಣವೂ ಹೆಚ್ಚುವುದುಂಟು. ಮೂತ್ರೋತ್ಪತ್ತಿ ವಿಸರ್ಜನೆಗಳು ಕಡಿಮೆ ಆಗುವುದರಿಂದ ರಕ್ತದಲ್ಲಿ ಯೂರಿಯ, ಯೂರಿಕ್ ಆಮ್ಲ, ಕ್ರಿಯಾಟಿನೀನ್ ಮುಂತಾದ

ತ್ಯಾಜ್ಯ ವಸ್ತುಗಳೂ ಹೆಚ್ಚಾಗುವುದೂ ಉಂಟು. ದೇಹೋಷ್ಣತೆ ಕಡಿಮೆ ಆಗುತ್ತ ಮಾಮೂಲು ಮಟ್ಟವನ್ನು ಮುಟ್ಟುವ ವೇಳೆಗೆ ಈ ಬದಲಾವಣೆಗಳೂ ಕಡಿಮೆ ಆಗಿ ಮೊದಲಿನ ಸ್ಥಿತಿ ಪ್ರಾಪ್ತವಾಗುತ್ತದೆ.

ಕೀಲುನೋವು, ವಾತರೋಗ, ಕೈಕಾಲುಸೆಳವು ಇವುಗಳಿಂದ ನರಳುವ ವ್ಯಕ್ತಿಗಳನ್ನು ಹದವಾದ ಬಿಸಿನೀರಿನಲ್ಲಿ ಕುತ್ತಿಗೆಯ ತನಕ ಮುಳುಗಿಸಿ ಅವರ ಕೈಕಾಲುದೇಹಗಳ ಚಲನವನ್ನು ಪ್ರೋತ್ಸಾಹಿಸುವುದು ಜಲಚಿಕಿತ್ಸೆಯಲ್ಲಿ ಒಂದು ವಿಶೇಷ ವಿಧ. ಚಲನೆಗೆ ಬೇಕಾಗುವ ಪ್ರಯತ್ನ ನೀರಿನೊಳಗೆ ಕಡಿಮೆಯಾಗಿ ಚಲನೆ ಸುಲಭಸಾಧ್ಯವಾಗುವುದರಿಂದ ಈ ರೋಗಿಗಳು ಉಪಯುಕ್ತ ಅಂಗಚಲನೆಯ ಮರುಪ್ರಾಪ್ತಿಗಾಗಿ ಇಂಥ ಪ್ರಯತ್ನವನ್ನು ಮಾಡಲಾಗುತ್ತದೆ. ದೇಹೋತ್ಪನ್ನ ವಿಷವಸ್ತುಗಳ ವಿಸರ್ಜನೆಗೂ ಬಿಸಿನೀರಿನ ಮುಳುಗಡೆ ಸಹಾಯಕವೆಂದು ಭಾವಿಸಲಾಗಿದೆ. ಅವ್ಯಕ್ತನೋವು, ಅಗೋಚರ ಸೋಂಕು ಇವುಗಳಿಗೂ ಬಿಸಿನೀರಿನ ಮುಳುಗಡೆಯನ್ನು ವಿಧಿಸಿದ್ದಾರೆ. ಬಿಸಿನೀರಿನ ಸ್ನಾನವಾದ ಬಳಿಕ ತಣ್ಣೀರಿನ ಸ್ನಾನವನ್ನು (ಅಥವಾ ತಿರುಗು ಮುರುಗಾಗಿ) ಮಾನಸಿಕ ಅಸ್ವಸ್ಥತೆಗೆ ವಿಧಿಸುವುದುಂಟು. ಸಿಟ್ಸ್‌ಬಾತ್ (ತಣ್ಣೀರಿನಲ್ಲಿ ಅಥವಾ ಬಿಸಿನೀರಿನಲ್ಲಿ ಪೃಷ್ಠಭಾಗವನ್ನು ಅದ್ದಿ ಕೆಲಕಾಲ ಕುಳಿತುಕೊಳ್ಳುವುದು) ಎಂಬ ವಿಧಾನವನ್ನು ಪ್ರಿಯೆಸ್‌ನಿಟ್ಸನೇ ಆಚರಣೆಗೆ ತಂದಿದ್ದ. ಇದರಲ್ಲಿ ಬಿಸಿ ನೀರನ್ನು ಮೂತ್ರಕಟ್ಟು, ಮುಟ್ಟುನೋವು ಇತ್ಯಾದಿಗಳ ಶಮನಕ್ಕೂ ತಣ್ಣೀರನ್ನೂ ಮಲಬದ್ಧತೆ, ಪಿತ್ತಕೋಶದ ನಿತ್ರಾಣ, ಷಂಡತನ ಇವುಗಳ ಚಿಕಿತ್ಸೆಗೂ ಉಪಯೋಗಿಸುವುದು ರೂಢಿ.

ವ್ಯಕ್ತಿಯ ದೇಹಭಾಗವನ್ನೋ ಕತ್ತಿನ ತನಕ ಇಡೀ ವ್ಯಕ್ತಿಯನ್ನೋ ನೀರಿನಲ್ಲಿ ಮುಳುಗಿಸಿ ನೀರನ್ನು ಯಾಂತ್ರಿಕವಾಗಿ ರಭಸದಿಂದ ಕದಡಿ ಸುಳಿಸುತ್ತುವಂತೆ ಮಾಡುವುದು ಸುಮಾರು 1915ರಲ್ಲಿ ಆಚರಣೆಗೆ ಬಂತು. ಬಹುಕಾಲಿಕವಾದ ಕ್ಷಯರೋಗ, ಪರಂಗಿರೋಗ ಸಂಬಂಧ ವಾದ ವ್ರಣಗಳು ಮುರಿದ ಮೂಳೆಗಂಟುಗಳು, ವಿಕಾರವಾದ ಸುರುಟಿಕೊಂಡ ಗಾಯಕಲೆಗಳು-ಇವುಗಳಿಗೆ ಈ ರೀತಿಯ ಜಲಚಿಕಿತ್ಸೆ ಮಾಡಲಾಗುತ್ತದೆ. ನೀರಿನೊಳಗೆ ಅದ್ದಿ ನೀವುವುದಕ್ಕೆ ಮೊದಲೂ ಅಂಗಗಳನ್ನು ಚಲಿಸುವುದಕ್ಕೆ ಮೊದಲೂ ಸ್ವಲ್ಪಕಾಲ ನೀರನ್ನು ಹೀಗೆ ಸುಳಿಸುತ್ತಿ ಚಿಕಿತ್ಸಿಸುವುದು ಆ ಕಾರ್ಯಕ್ರಮಗಳ ಉಪಯುಕ್ತತೆಯನ್ನು ಹೆಚ್ಚಿಸುತ್ತದೆ ಎಂಬ ನಂಬಿಕೆ ಉಂಟು. ನೀರನ್ನು ಟೊಳ್ಳುಸೂಜಿಯ ಮೂಲಕ ಇಲ್ಲವೆ ಕೊಳವೆಗಳ ಮೂಲಕ ಅಗಾಧ ಒತ್ತಡದಿಂದ ಚುರುಕಿಯಾಗಿ ಬೆನ್ನುಹುರಿಯ ಉದ್ದಕ್ಕೂ ಬಿಡುವ ವಿಧಾನಕ್ಕೆ ಸ್ಕಾಚ್ ಡೂಷ್ ಎಂದು ಹೆಸರು. ಸಾಮಾನ್ಯ ಚೇತನಕಾರಕವಾಗಿ ಇದನ್ನು ಉಪಯೋಗಿಸುತ್ತಾರೆ. ನೀರಿನೊಡನೆ ಸಂಪರ್ಕ ಒಂದು ಗಂಟೆಗಿಂತಲೂ ಹೆಚ್ಚಾಗಿದ್ದರೆ ಅದಕ್ಕೆ ನಿರಂತರ ಜಳಕವೆಂದು ಹೆಸರು. ಇಂಥ ಜಳಕದಲ್ಲಿ ನೀರಿನ ಉಷ್ಣತೆ ದೇಹೋಷ್ಣತೆಯಷ್ಟೇ ಇದ್ದರೆ ಬಾಧಕವಿಲ್ಲ. ಆದರೆ ನೀರಿನ ಉಷ್ಣತೆ ಹೆಚ್ಚಾಗಿದ್ದರೆ ದೇಹ ಕಾವೇರುವುದೂ, ನೀರಿನ ಉಷ್ಣತೆ ಕಡಿಮೆ ಆಗಿದ್ದರೆ ದೇಹೋಷ್ಣತೆ ಕಡಿಮೆ ಆಗುವುದೂ ನಿರೀಕ್ಷಿತ. ಇಂಥ ಪರಿಣಾಮವನ್ನು ಉಂಟುಮಾಡಲೆಂದೇ ಅನುಗುಣವಾದ ನಿರಂತರ ಜಳಕವನ್ನು ಆಚರಿಸಲಾಗುತ್ತದೆ.

ವಿಸ್ತಾರವಾದ ಎರಡು ಮೂರು ಹಚ್ಚಡಗಳನ್ನು ಜೋಡಿಸಿ ತಣ್ಣೀರಿನಲ್ಲಿ (10 °C–20°C) ಅದ್ದಿ ಹಿಂಡಿ ಸುಕ್ಕಿಲ್ಲದಂತೆ ಮಾಡಿ ಮಲಗಿದ ವ್ಯಕ್ತಿಯ ಮೇಲೆ ಹರಡಿ ಕಂಬಳಿಯನ್ನು ಹೊದ್ದಿಸಿ ಸುಮಾರು 1 ಗಂಟೆ ಹಾಗೇ ಬಿಟ್ಟಿದ್ದು ಅನಂತರ ಮೈಯನ್ನು ಉಜ್ಜಿ ಒರೆಸುವುದು ಇನ್ನೊಂದು ವಿಧಾನ. ಈ ರೀತಿ ಮಾಡಿದ ಮೇಲೆ ಮೈ ಉಷ್ಣತೆ ಕಡಿಮೆ ಆಗಿ ಮನಸ್ಸಿಗೆ ಆರಾಮವಾಗಿ ಕೆಲಗಂಟೆಗಳು ನಿದ್ರೆ ಬಂದು ವ್ಯಕ್ತಿಗೆ ಸುಖವಾಗುತ್ತದೆ. ನೋವು ಶಮನ ಮಾಡಲು ಬಟ್ಟೆಯನ್ನು ಬಿಸಿನೀರಿನಲ್ಲಿ ಅದ್ದಿ ಹಿಂಡಿ ಶಾಖ ಕೊಡುವುದು ಎಲ್ಲರಿಗೂ ತಿಳಿದಿರುವ ವಿಷಯ. ವಿಶೇಷ ಕಟ್ಟಡ ಉಳ್ಳ ಕೋಣೆಯೊಳಗೆ ನೀರಿನ ಹಬೆಯೊಳಗೆ ಕೆಲಕಾಲ ಕಳೆಯುವ ವಿಧಾನವೂ ಉಂಟು. ಇದಕ್ಕೆ ಫಿನ್ನಿಷ್ ಸ್ನಾನ ಎಂದು ಹೆಸರು. ಹೆಚ್ಚಾಗಿ ಬೆವರುಸುರಿಸಿ ಅನಂತರ ಆಪ್ಯಾಯಮಾನವಾದ ಆರಾಮ ಅನುಭವ ಪಡೆಯಲು ಈ ವಿಧಾನವನ್ನು ಆಚರಿಸುತ್ತಾರೆ. ಆದರೆ ವೃದ್ಧರೂ ನಿಶ್ಶಕ್ತರೂ ಗುಂಡಿಗೆ ರೋಗ ಉಳ್ಳವರೂ ಈ ವಿಧಾನವನ್ನು ಆಚರಿಸುವುದು ಅಪಾಯಕರ.

ಕ್ಷಾರಸ್ವಭಾವದ ಲವಣಗಳುಳ್ಳ ಚಿಲುಮೆ ನೀರಿನ ಸೇವನೆ ಸ್ನಾನಗಳನ್ನು ಸಣ್ಣಪುಟ್ಟ ಚರ್ಮವ್ಯಾಧಿಗಳಿಗೂ ಗಂಧಕ ಸಂಯುಕ್ತಗಳುಳ್ಳ ಚಿಲುಮೆ ನೀರನ್ನು ಸರ್‍ಯಯಸಿಸ್ ಮುಂತಾದ ಕಟುತರವಾದ ಚರ್ಮವ್ಯಾಧಿಗಳಿಗೂ ಉಪಯೋಗಿಸುವುದುಂಟು. ಇಂಗಾಲದ ಡೈಆಕ್ಸೈಡ್ ಉಳ್ಳ ಚಿಲುಮೆ ನೀರನ್ನು ಗುಂಡಿಗೆ ರೋಗಗಳಲ್ಲೂ ಸಾಮಾನ್ಯ ಟಾನಿಕ್ ಆಗಿಯೂ ಉಪಯೋಗಿಸುತ್ತಾರೆ.

ನೀರಿನಲ್ಲಿ ಮುಳುಗಡೆ, ಜಳಕ ಇವು ಅನೇಕ ಸಂದರ್ಭಗಳಲ್ಲಿ ತರ್ಕಸಮ್ಮತವಾದ ಮಾರ್ಗಗಳಾಗಿದ್ದು ನಿರೀಕ್ಷಿಸಿದ ಫಲವನ್ನು ಕೊಡುತ್ತವೆ. ಚಿಲುಮೆ ನೀರಿನ ಸೇವನೆ, ಸ್ನಾನಗಳು ಇಂಗ್ಲೆಂಡ್ ಯೂರೋಪುಗಳಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳಿಗಿಂತ ಹೆಚ್ಚು ಪ್ರಚಾರದಲ್ಲಿವೆ. ಸಂಯುಕ್ತಸಂಸ್ಥಾನಗಳ ವೈದ್ಯರು, ಚಿಲುಮೆ ನೀರಿನ ಉಪಯೋಗದಿಂದ ಕಂಡುಬರುವ ಸತ್ಪರಿಣಾಮಗಳು ನೇರಫಲಗಳಲ್ಲದೆ ಪರೋಕ್ಷವಾದುವೆಂದೂ ಇಂಥ ಸ್ಥಳಗಳಲ್ಲಿಯ ಹವೆ, ಆವರಣ, ಕ್ಲುಪ್ತ ಆಹಾರ, ವ್ಯಾಯಾಮ ನಡೆವಳಿಕೆಗಳು, ದೇಹ ಹಾಗೂ ಮನಸ್ಸಿಗೆ ನೆಮ್ಮದಿ ಉಂಟುಮಾಡಿ ಫಲಕೊಡುತ್ತವೆಂದೂ ನಂಬಿರುತ್ತಾರೆ. ವಾಸ್ತವವಾಗಿ ಚಿಲುಮೆ ನೀರಿನಲ್ಲಿ ಕರಗಿ ಅವುಗಳ ವಿಶೇಷ ಚಿಕಿತ್ಸಾ ಗುಣವೆಂದು ಕಾರಣಭೂತವಾಗಿವೆ ಅನ್ನುವ ಲವಣ ಅನಿಲಗಳು ಜಳಕಮಾರ್ಗದಿಂದ ದೇಹದೊಳಹೊಗಲಾರವು. ಅಲ್ಲದೆ ಇಂಥ ಲವಣ ಅನಿಲಗಳಿಂದ ಉಂಟಾಗುವುದೆಂದು ಪ್ರತಿಪಾದಿಸಲ್ಪಟ್ಟ ಫಲಗಳು ನಿಜವಾಗಿಯೂ ಲಭಿಸುತ್ತವೆ ಎನ್ನುವುದು ಪ್ರಾಯೋಗಿಕವಾಗಿ ಸಮರ್ಥಿಸಲ್ಪಟ್ಟಿಲ್ಲ. ಆದರೂ ಜನತೆಯ ಹಾಗೂ ಕೆಲವು ವಯಸ್ಕರ ನಂಬಿಕೆ ಹೋಗಿಲ್ಲ. ಜಲಚಿಕಿತ್ಸೆಯಿಂದ ಒದಗುವ ಅನುಕೂಲ ಸೀಮಿತವಾದರೂ ನಿಜವೆನ್ನುವುದನ್ನು ಮರೆಯುವಂತಿಲ್ಲ. (ಎಸ್.ಆರ್.ಆರ್.)

**ಜಲಜಶಿಲೆಗಳು :** ಭೂತೊಗಟೆಯನ್ನು ರಚಿಸಿರುವ ಮೂರು ಪ್ರಧಾನ ಶಿಲಾವರ್ಗಗಳ ಪೈಕಿ ಒಂದು (ಸೆಡಿಮೆಂಟರಿ ರಾಕ್ಸ್). ಉಳಿದ ಎರಡು ಪ್ರಧಾನ ವರ್ಗಗಳು ಅಗ್ನಿಶಿಲೆಗಳು ಮತ್ತು ರೂಪಾಂತರಿತ ಶಿಲೆಗಳು. ಜಲಜಶಿಲೆಗಳನ್ನು ಅವಸಾದನ ಶಿಲೆ, ಪ್ರಸ್ತರ ಶಿಲೆ ಎಂಬುದಾಗಿಯೂ ಕರೆಯುವುದುಂಟು. ಹೆಚ್ಚಿನ ಜಲಜಶಿಲೆಗಳು ಪದರ ಪದರವಾಗಿವೆ. ವಾಸ್ತವವಾಗಿ ಪದರಗಳು (ಇಲ್ಲವೇ ಪ್ರಸ್ತರೀಕರಣ) ಜಲಜಶಿಲೆಗಳ ಒಂದು ಮುಖ್ಯಲಕ್ಷಣ. ಭೂತೊಗಟೆಯ ಸರಾಸರಿ ದಪ್ಪ ಸುಮಾರು 16 ಕಿಮೀಗಳು. ಇದರಲ್ಲಿ ಜಲಜಶಿಲೆಗಳು ಕೇವಲ ಶೇ.5 ಮಾತ್ರ ಇವೆಯಷ್ಟೆ. ಆದರೆ ಮೇಲ್ಮೈಯ ತೆರೆದುಕೊಂಡಿರುವ ಪ್ರದೇಶದಲ್ಲಿನ ಶಿಲೆಗಳ ಪೈಕಿ ಶೇ.75 ಕೂಡ ಜಲಜಶಿಲೆಗಳೇ. ಅಲ್ಲಿಗೆ ಭೂತೊಗಟೆಯ ತೀರ ಹೊರಕವಚದಲ್ಲಿ ಒಂದು ತೆಳು ಪದರವಾಗಿ ಜಲಜಶಿಲೆಗಳು ವ್ಯಾಪಿಸಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಪದರದ ವಿತರಣೆ ಏಕರೀತಿ ಆಗಿದೆ ಎಂದೇನೂ ಭಾವಿಸಬೇಕಾಗಿಲ್ಲ. ಭೂಇತಿಹಾಸದ ಬೇರೆ ಬೇರೆ ಪ್ರಮುಖ ದಾಖಲೆಗಳನ್ನು ಸೆರೆಹಿಡಿದಿಟ್ಟಿರುವ (ಹೆಚ್ಚಾಗಿ ಫಾಸಿಲುಗಳ ರೂಪದಲ್ಲಿ) ಜಲಜಶಿಲೆಗಳು ವಿಜ್ಞಾನಿಗಳಿಗೆ ಅತ್ಯಂತ ಕುತೂಹಲಭರಿತ ಭೂಗ್ರಂಥಗಳಾಗಿವೆ. ಪ್ರಸ್ತರಗಳ ರಚನಾಯುಗವನ್ನು ನಿರ್ಣಯಿಸುವುದು ಸಾಧ್ಯ. ಆದ್ದರಿಂದ ಅವುಗಳಲ್ಲಿ ಲಿಖಿತವಾಗಿರುವ ಫಾಸಿಲುಗಳ ವಯಸ್ಸು ವೇದ್ಯವಾಗುವುದು: ಹೀಗಾಗಿ ಯಾವ ಯಾವ ಯುಗಗಳಲ್ಲಿ ಏನೇನು ಘಟನೆಗಳು ಸಂಭವಿಸಿದುವು ಎಂಬುದನ್ನು ಓದುವುದು ಸುಲಭ.

ಶಿಲೆಗಳು ಸಾಮಾನ್ಯವಾಗಿ ನಿರಂತರ ಶಿಥಿಲೀಕರಣಕ್ಕೆ ಒಳಗಾಗುತ್ತಿರುತ್ತವೆ. ಇದರಲ್ಲಿ ಎರಡು ವಿಧ–ಭೌತ ಮತ್ತು ರಾಸಾಯನಿಕ ಶಿಥಿಲೀಕರಣಗಳು. ಭೌತ ಶಿಥಿಲೀಕರಣದಿಂದ ಶಿಲೆಗಳು ಒಡೆದು ಪುಡಿಯಾದರೆ, ರಾಸಾಯನಿಕ ಶಿಥಿಲೀಕರಣದಿಂದ ಅವುಗಳಲ್ಲಿನ ಕೆಲವು ವಸ್ತುಗಳು ನೀರಿನಲ್ಲಿ ಕರಗಿ ವಿಲೀನವಾಗುವುವು. ಶಿಥಿಲೀಕರಿಸಿದ ಪ್ರದೇಶಗಳಿಂದ ಈ ವಸ್ತುಗಳು ಗಾಳಿ, ನದಿ ಮುಂತಾದವುಗಳ ಮೂಲಕ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಣೆಯಾಗುತ್ತವೆ. ಹೀಗೆ ಸಾಗುತ್ತಿರುವಾಗ ನಡುವೆ ಒದಗಬಹುದಾದಂಥ ತಗ್ಗುಗಳಲ್ಲಿ, ಅಂದರೆ ಸರೋವರ ಸಮುದ್ರಗಳ ತಳದಲ್ಲಿ ಅವು ಶೇಖರವಾಗುತ್ತವೆ. ನೀರಿನಲ್ಲಿ ವಿಲೀನಗೊಂಡ ವಸ್ತುಗಳು ಸಹ ಸೂಕ್ತ ವಾತಾವರಣಗಳಲ್ಲಿ ಘನರೂಪದಲ್ಲಿ ಬೇರ್ಪಟ್ಟು ತಳದಲ್ಲಿ ಶೇಖರಗೊಳ್ಳುವುವು. ಇಂಥ ಶಿಲಾವಸ್ತುಗಳು ಕ್ರಮೇಣ ಒಟ್ಟುಗೂಡಿ ಗಟ್ಟಿಯಾಗಿ ಹೊಸ ಶಿಲೆಗಳಾಗುತ್ತವೆ. ಇವೇ ಜಲಜಶಿಲೆಗಳು. ಇವನ್ನು ದ್ವಿತೀಯತೆ ಶಿಲೆಗಳು ಎಂದೂ ಕರೆಯುವುದುಂಟು. ಸಾಗಣೆಯ ಮಾಧ್ಯಮ ಮತ್ತು ಸಾಗಣೆಯ ಅವಧಿ–ಇವು ಶಿಲಾವಸ್ತುಗಳ ಮೇಲೆ ಪರಿಣಾಮಗಳನ್ನು ಉಂಟುಮಾಡುತ್ತವೆ. ದೀರ್ಘಾವಧಿಯ ಸಾಗಣೆಯಿಂದ ಶಿಲಾವಸ್ತುಗಳು ಗಾತ್ರವಾರು ಮತ್ತು ಸಾಂದ್ರತೆಗಳಿಗೆ ಅನುಗುಣವಾಗಿ ವಿಂಗಡಣೆಯಾಗ ಬಹುದು. ಸಾಗಣೆಯ ಅವಧಿ ಹೆಚ್ಚಿದಂತೆಲ್ಲ ಕಣಗಳು ಹೆಚ್ಚು ಸವೆದು ಅವುಗಳ ಗಾತ್ರ ಕಡಿಮೆಯಾಗುವುದು. ಈ ಶಿಲಾವಸ್ತುಗಳಿಗೆ ಅವುಗಳ ಗಾತ್ರಾನುಸಾರವಾಗಿ, ಗುಂಡುಗಳು (200ಮಿಮೀ.ಗಿಂತ ಹೆಚ್ಚಿನ ವ್ಯಾಸ), ನೊರಜುಗಳು (50 ರಿಂದ 200ಮಿಮೀ), ಉರುಟುಕಲ್ಲುಗಳು (10 ರಿಂದ 50ಮಿಮೀ), ಉಂಡೆಕಲ್ಲುಗಳು (2ರಿಂದ 10ಮಿಮೀ), ಮರಳು (0.25 ನಿಂದ 2ಮಿಮೀ), ಮೆಕ್ಕಲು (0.01ರಿಂದ 0.1ಮಿಮೀ.), ದೂಳು, ಮಣ್ಣು, ಜೇಡು (0.01ಮಿಮೀ. ಗಿಂತ ಹೆಚ್ಚಿನ ವ್ಯಾಸ) ಎಂದು ಮುಂತಾಗಿ ಹೆಸರಿಡಲಾಗಿದೆ. ಈ ಶಿಲಾವಸ್ತುಗಳು ಶೇಖರವಾದಾಗ ಕಣಗಳು ಬಿಡಿಯಾಗಿರುತ್ತವೆ. ಕಾಲಾನುಕ್ರಮದಲ್ಲಿ ಅವು ಸಂಘಟಿಸಿ ಗಟ್ಟಿಯಾಗುತ್ತವೆ. ಕಣಗಳ ಗಾತ್ರ ದಪ್ಪವಿದ್ದರೆ ಅವುಗಳ ಮಧ್ಯೆ ಬೇರೆ ವಸ್ತು ನಿಕ್ಷೇಪಿಸಿ, ಅವನ್ನೆಲ್ಲ ಬಂಧಿಸುತ್ತದೆ. ಶಿಲಾವಸ್ತುವು ನೀರಿನಲ್ಲಿ ವಿಲೀನವಾಗಿರುವ ಸಿಲಿಕ, ಸುಣ್ಣವಸ್ತು, ಮೆಗ್ನೀಸಿಯಮ್ ಮತ್ತು ಕೆಲವು ವೇಳೆ ಕಬ್ಬಿಣ ವಸ್ತು ಆಗಿರಬಹುದು. ಈ ರೀತಿ ರೂಪುಗೊಂಡ ಶಿಲೆಗಳಿಗೆ ಭೌತಜಲಜಶಿಲೆಗಳು ಎಂದು ಹೆಸರು. ಇವುಗಳಲ್ಲಿ ಪದರುರಚನೆ, ಪ್ರವಾಹ ಪದರು ರಚನೆ, ಅಲೆಗಳ ಗುರುತುಗಳು, ಒಣಗು ಬಿರುಕುಗಳು, ಪ್ರಾಣಿಗಳ ಜಾಡುಗಳು–ಈ ಮುಂತಾದ ಲಕ್ಷಣಗಳನ್ನು ಗುರುತಿಸಲಾಗಿದೆ.

ಕಣಗಾತ್ರವನ್ನು ಆಧಾರವಾಗಿಟ್ಟುಕೊಂಡು ಭೌತಜಲಜಶಿಲೆಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು:

1 ರುಡೇಸಿಯಸ್ : ಗುಂಡುಗಳು, ನೊರಜು, ಉರಟು ಮತ್ತು ಉಂಡೆ ಕಲ್ಲುಗಳು ಪ್ರಧಾನವಾಗಿರುವ ಶಿಲೆಗಳು. ಇವು ಸಿಲಿಕ, ಜೇಡು, ಸುಣ್ಣ ಅಥವಾ ಕಬ್ಬಿಣ ವಸ್ತುಗಳಿಂದ ಬಂಧಿತವಾಗಿ ಪೆಂಟೆಶಿಲೆಗಳು ಮತ್ತು ನೊರಜು ಶಿಲೆಗಳಾಗುತ್ತವೆ.

2 ಅರೆನೇಸಿಯಸ್ : ಮರಳು ಯಾವುದಾದರೊಂದು ವಸ್ತುವಿನಿಂದ ಬಂಧಿತವಾಗಿ ಆಗುವ ಶಿಲೆಗಳು, ಮರಳು ಶಿಲೆಗಳು, ಗ್ರೀಟ್, ಅರ್ಕೋಸ್ ಮತ್ತು ಗ್ರೆವೇಕ್‌ಗಳು ಈ ವರ್ಗದ ಶಿಲೆಗಳು. ಮರಳುಶಿಲೆಯ ಕಣಗಳು ದಪ್ಪವಿದ್ದು, ಚೂಪಾದ ಮೂಲೆಗಳಿದ್ದರೆ, ಆ ಶಿಲೆಗೆ ಗ್ರಿಟ್ ಎಂದು ಹೆಸರು. ಕಪ್ಪು ಮರಳುಶಿಲೆಗೆ ಗ್ರೆಮೆಕ್ ಎಂದು ಹೆಸರು.

3 ಮೆಕ್ಕಲು ಶಿಲೆಗಳು : ಒಂಡು, ಮೆಕ್ಕಲು ಮುಂತಾದ ಶಿಲೆಗಳು ಈ ವರ್ಗಕ್ಕೆ ಸೇರಿದವು. ಇವು ಅರೆನೇಸಿಯಸ್ ಮತ್ತು ಆರ್ಜಿಲೇಸಿಯಸ್ ವರ್ಗಗಳ ಮಧ್ಯಂತರ ಶಿಲೆಗಳು.

4 ಆರ್ಜಿಲೇಸಿಯಸ್ ಅಥವ ಜೇಡುಶಿಲೆಗಳು : ಶಿಲಾಪುಡಿಯಿಂದ ಈ ಶಿಲೆಗಳಾಗುತ್ತವೆ. ದೂಳು, ಮಣ್ಣು ಮತ್ತು ಜೇಡು–ಈ ವಸ್ತುಗಳು ಗಟ್ಟಿಂಯಾದಾಗ ಜೇಡುಶಿಲೆಗಳಾಗುತ್ತವೆ.

ಶಿಲೆಗಳ ಶಿಥಿಲೀಕರಣದಿಂದಾದ ಕೆಲವು ವಸ್ತುಗಳು ನೀರಿನಲ್ಲಿ ಕರಗಿ ನದಿಗಳ ಮೂಲಕ ಸರೋವರ, ಸಮುದ್ರ ಮತ್ತು ಸಾಗರಗಳನ್ನು ಸೇರುವುವು. ಆ ಜಲಾಶಯಗಳಲ್ಲಿ, ಅಂದರೆ ಅಲ್ಲಿನ ಭೌತ–ರಾಸಾಯನಿಕ ವಾತಾವರಣದಲ್ಲಿ ಅನುಕೂಲ ವ್ಯತ್ಯಾಸವಾದಾಗ, ವಿಲೀನ ವಸ್ತುಗಳಲ್ಲಿ ಕೆಲವು ಘನರೂಪದಲ್ಲಿ ಪ್ರಕ್ಷೇಪಗೊಳ್ಳುತ್ತವೆ. ಕೆಲವು ವೇಳೆ ನೀರು ಅಧಿಕ ಪ್ರಮಾಣದಲ್ಲಿ ಆವಿಯಾಗುವುದರಿಂದ ನೀರಿನ ಸಾಂದ್ರತೆ ಹೆಚ್ಚಿ ಈ ವಸ್ತುಗಳು ನಿಕ್ಷೇಪವಾಗುವುದೂ ಉಂಟು. ದ್ರಾವಣದಿಂದ ಘನರೂಪದಲ್ಲಿ ಪ್ರಕ್ಷೇಪಿಸುವ ಈ ವಸ್ತುಗಳು ಚಿಕ್ಕ ಕಣಗಳಾಗಿ ರೂಪುಗೊಳ್ಳುತ್ತವೆ. ಆವಿಯಾಗುವುದರ ಮೂಲಕ ನಿಕ್ಷೇಪವಾಗುವ ವಸ್ತುಗಳು ಕೆಲವು ವೇಳೆ ದೊಡ್ಡ ಹರಳುಗಳಾಗುವುದೂ ಉಂಟು. ರಾಸಾಯನಿಕ ನಿಕ್ಷೇಪಗಳೆಂದು ಇವುಗಳ ಹೆಸರು. ಇವುಗಳ ರೂಪ ಹಲವು ಬಗೆ. ವಿವಿಧ ಬಗೆಯ ಸಂಯೋಜನೆಗಳಿಂದ ಮತ್ತು ಆಕಾರಗಳಿಂದ ಕೂಡಿರುವ ನಿಕ್ಷೇಪಗಳಿಗೆ ಶಿಲಾಮುದ್ದೆಗಳು (ಕಾನ್‌ಕ್ರಿಷನ್ಸ್) ಎಂದು ಹೆಸರು. ಇವು ಸಾಮಾನ್ಯವಾಗಿ ಗುಂಡು ಅಥವಾ ಗಂಟು ರೂಪದಲ್ಲಿರುವುವು. ಚಾಕಿಯಲ್ಲಿರುವ ಫ್ಲಿಂಟುಗಳು, ಸುಣ್ಣಶಿಲೆಗಳಲ್ಲಿರುವ ಚರ್ಟ್. ಜೇಡುಶಿಲೆಗಳಲ್ಲಿರುವ ಸುಣ್ಣ ಅಥವಾ ಕಬ್ಬಿಣದ ಸಲ್ಫೈಡ್ ಉಂಡೆಗಳು, ಮರಳುಶಿಲೆಗಳಲ್ಲಿನ ಕಬ್ಬಿಣದ ಆಕ್ಸೈಡ್ ಉಂಡೆಗಳು ಈ ಮಾದರಿಯಲ್ಲಿ ರೂಪುಗೊಂಡಂಥವು. ಶಿಲೆಗಳಲ್ಲಿ ಟೊಳ್ಳು ಅಥವಾ ಪೊಟರೆಗಳಿರುವುದುಂಟು. ಇವುಗಳ ಒಳಮೈಗೆ ಖನಿಜ ದ್ರಾವಣ ಸಮಾಂತರವಾಗಿ ಸ್ರವಿಸಿ ನಿಕ್ಷೇಪವಾಗುತ್ತದೆ. ಜ್ವಾಲಾಮುಖಿಜ ಶಿಲೆಗಳಲ್ಲಿರುವ ಖನಿಜಗ್ರಂಥಿಗಳು ಸ್ರಾವವಸ್ತುಗಳಿಂದಾದವು. ಟೊಳ್ಳೆಯೊಳಗಿನ ಸ್ರಾವಖನಿಜಗಳು ಧಾರಕ ಶಿಲೆಗಳಿಗೆ ಸಂಬಂಧಿಸಿದವಾದರೆ ಅವಕ್ಕೆ ಡ್ರೂಸ್ ಎಂದು ಹೆಸರು. ಸ್ರಾವವಸ್ತುಗಳು ಸುಲಭವಾಗಿ ಬೇರ್ಪಡುವಂತಿದ್ದರೆ ಅವಕ್ಕೆ ಜಿಯೋಡ್ಸ್ ಎಂದು ಹೆಸರು. ಇವು ಸ್ರವಣಗಳು (ಸೆಕ್ರೀಷನ್ಸ್). ಸೂಕ್ಷ್ಮಕಣ ಶಿಲೆಗಳ ಬಿರುಕುಗಳು ಮತ್ತು ಜಾರು ಸೀಳುಗಳನ್ನು ಕಬ್ಬಿಣ ಮತ್ತು ಮ್ಯಾಂಗನೀಸ್ ಆಕ್ಸೈಡುಗಳು ತುಂಬುತ್ತವೆ. ಅವು ಕವಲೊಡೆದ ರೆಂಬೆಗಳಂತೆ ಸಂಚಯಿಸಿ ಪಾಚಿ ಅಥವಾ ಮರಗಳನ್ನು ಹೋಲುತ್ತವೆ. ಇದಕ್ಕೆ ವೃಕ್ಷಾಕಾರ ಸ್ರಾವ ಎಂದು ಹೆಸರು. ಇಂಥ ಸ್ರಾವಗಳಿಂದ ಕೂಡಿದ ಅಮೃತಶಿಲೆಯನ್ನು ಉಜ್ಜಿ ನಯಗೊಳಿಸಿದರೆ ಭೂದೃಶ್ಯಗಳನ್ನು ಹೋಲುವ ಚಿತ್ರಲೇಖಗಳುಂಟಾಗುವುವು. ಈ ಮಾದರಿಯ ಅಮೃತಶಿಲೆಗೆ ಭೂದೃಶ್ಯ ಅಮೃತಶಿಲೆ ಎಂದು ಹೆಸರು.

ರಾಸಾಯನಿಕ ನಿಕ್ಷೇಪಗಳನ್ನು ಸಂಯೋಜಿಸುವ ಆಧಾರದ ಮೇಲೆ ಈ ಕೆಳಗಿನಂತೆ ವಿಭಜಿಸಲಾಗಿದೆ:

1 ಸಿಲಿಕ ನಿಕ್ಷೇಪಗಳು : ಸೈಲೀಸಿಯಸ್ ಸಿಂಟರ್, ಫ್ಲಿಂಟ್ಸ್ ಮತ್ತು ಚೆರ್ಟ್‌ಗಳು. ಚಾಕ್ ನಿಕ್ಷೇಪದಲ್ಲಿ ಬೆಣಚುವಸ್ತು ಚಿಕ್ಕ ಕಣಗಳ ರೂಪದಲ್ಲಿ ಹರಡಿರುತ್ತದೆ. ಇವೆಲ್ಲ ಒಟ್ಟುಗೂಡಿ ಮುದ್ದೆಯಾಕಾರದಲ್ಲಿ ಪುನರ್ ನಿಕ್ಷೇಪಗೊಳ್ಳುತ್ತವೆ. ಇವಕ್ಕೆ ಫ್ಲಿಂಟ್ ಎಂದು ಹೆಸರು. ಸುಣ್ಣಶಿಲೆಗಳಲ್ಲಿರುವ ಸುಣ್ಣವಸ್ತುವನ್ನು ಬೆಣಚು ಪಲ್ಲಟಿಸಿ ನಿಕ್ಷೇಪವಾಗುವುದರಿಂದ ಚೆರ್ಟ್ ಆಗುತ್ತದೆ.

2 ಕಾರ್ಬೊನೇಟ್ ನಿಕ್ಷೇಪಗಳು : ತೂಗುತೊಂಗಲುಗಳು (ಸ್ಟ್ಯಾಲ್ಯಾಕ್ ಟೈಟ್ಸ್) ಮತ್ತು ನೆಲತೊಂಗಲುಗಳು (ಸ್ಟ್ಯಾಲಾಗ್‌ಮೈಟ್ಸ್), ಟ್ರಾವರ್ಟೈನ್, ಕಂಕರ್, ಊಲಿಟಿಕ್ ಸುಣ್ಣಶಿಲೆಗಳು ಮತ್ತು ಡಾಲೊಮೈಟುಗಳು ಈ ಗುಂಪಿನ ನಿಕ್ಷೇಪಗಳು. ಉಷ್ಣವಲಯದ ದೇಶಗಳಲ್ಲಿ ಮಳೆಗಾಲವಾದ ಮೇಲೆ ಬರುವ ದೀರ್ಘಾವಧಿಯ ಬೇಸಿಗೆಯ ಕಾಲದಲ್ಲಿ ಅಂತರ್ಜಲದಲ್ಲಿ ವಿಲೀನವಾಗಿರುವ ಸುಣ್ಣವಸ್ತು ಸೂಕ್ಷ್ಮರಂಧ್ರಗಳ ಮೂಲಕ ಮೇಲಕ್ಕೆ ಸಾಗಿ ಮಣ್ಣು ಪದರದ ಕೆಳಗೆ ನಿಕ್ಷೇಪವಾಗುತ್ತದೆ. ಇದಕ್ಕೆ ಭಾರತದಲ್ಲಿ ಕಂಕರ್‌ನೋಡಿ ಎಂಬ ಹೆಸರುಂಟು. ಕೆಲವು ಸುಣ್ಣಶಿಲೆಗಳಲ್ಲಿ ಗೋಳಾಕಾರದ ಚಿಕ್ಕ ಕಣಗಳು ಇರುವುವು. ಇವು ಮೀನಿನ ಮೊಟ್ಟೆಗಳ ಗೊಂಚಲನ್ನು ಹೋಲುವುದರಿಂದ ಇವಕ್ಕೆ ಊಲಿತ್ಸ್ ಎಂದೂ ಇವುಗಳಿಂದ ಕೂಡಿರುವ ಶಿಲೆಗಳಿಗೆ ಊಲೈಟ್ ಎಂದೂ ಹೆಸರಿದೆ. ಊಲಿತ್‌ಗಳಲ್ಲಿ ಏಕಕೇಂದ್ರಿಕ ವೃತ್ತರಚನೆ ಕಂಡುಬರುವುದು. ಇವನ್ನೇ ಹೋಲುವ, ಆದರೆ ಗಾತ್ರದಲ್ಲಿ ದೊಡ್ಡದಾಗಿರುವವುಗಳಿಗೆ ಪಿಸೊಲಿತುಗಳೆಂದು ಹೆಸರು. ಕ್ಯಾಲ್ಸಿಯಮ್ ಮತ್ತು ಮೆಗ್ನೀಸಿಯಮ್ ಕಾರ್ಬೊನೇಟ್ ನಿಕ್ಷೇಪಕ್ಕೆ ಡಾಲೊಮೈಟ್ ಶಿಲೆ ಎಂದು ಹೆಸರು.

3 ಕಬ್ಬಿಣ ನಿಕ್ಷೇಪಗಳು : ಇವು ಎಲ್ಲ ಬಗೆಯ ನೀರಿನಲ್ಲಿಯೂ ವಿಲೀನವಾಗಿರುತ್ತವೆ. ಅನುಕೂಲ ವಾತಾವರಣದಲ್ಲಿ ಆಕ್ಸೈಡ್, ಹೈಡ್ರಾಕ್ಸೈಡ್, ಕಾರ್ಬೊನೇಟ್ ಮತ್ತು ಸಿಲಿಕೇಟುಗಳಾಗಿ ನಿಕ್ಷೇಪವಾಗುತ್ತವೆ. ವಿಲೀನಸ್ಥಿತಿಯಲ್ಲಿ ಕಬ್ಬಿಣ ಬೈಕಾರ್ಬೊನೇಟ್ ರೂಪದಲ್ಲಿರುವುದು ಸಾಮಾನ್ಯ. ನೀರಿನಲ್ಲಿ ಇಂಗಾಲದ ಡೈ ಆಕ್ಸೈಡಿನ ಪ್ರಮಾಣ ಕಡಿಮೆಯಾದಾಗ ಈ ನಿಕ್ಷೇಪಗಳು ಕಬ್ಬಿಣದ ಕಾರ್ಬೊನೇಟಾಗಿ ಪರಿವರ್ತಿಸುತ್ತವೆ. ವಾಯುಸಂಪರ್ಕದಿಂದ ಇವು ಕಬ್ಬಿಣದ ಹೈಡ್ರಾಕ್ಸೈಡಾಗಿ ಪರಿವರ್ತಿತವಾಗಿ ನದಿ ಮತ್ತು ಸರೋವರಗಳ ಅಂಚಿನಲ್ಲಿ ಮೃದುವಾದ, ಸರಂಧ್ರತೆಯ ಕಬ್ಬಿಣದ ಅದುರಾಗಿ ನಿಕ್ಷೇಪ ಗೊಳ್ಳುವುವು. ಇವಕ್ಕೆ ಜೌಗು ಕಬ್ಬಿಣದ ಅದಿರು ಎಂದು ಹೆಸರು. ಸಾಕಷ್ಟು ಆಮ್ಲಜನಕ ಒದಗದ ವಾತಾವರಣದಲ್ಲಿ ಇವು ನೇರವಾಗಿ ಕಬ್ಬಿಣದ ಕಾರ್ಬೊನೇಟ್ ರೂಪದಲ್ಲಿ ನಿಕ್ಷೇಪವಾಗುತ್ತವೆ.

4 ಲವಣ ನಿಕ್ಷೇಪಗಳು: ಈ ವಿಭಾಗದಲ್ಲಿ ಕ್ಲೋರೈಡುಗಳು, ಸಲ್ಫೇಟುಗಳು, ಕಾರ್ಬೊನೇಟುಗಳು, ನೈಟ್ರೇಟುಗಳು, ಸೋಡಿಯಮ್ ಪೊಟ್ಯಾಸಿಯಮ್ ಬೋರೇಟುಗಳು ಮತ್ತು ಕ್ಯಾಲ್ಸಿಯಮ್–ಮೆಗ್ನೀಸಿಯಮ್ ಸಲ್ಫೇಟುಗಳು ಸೇರಿವೆ. ಉಪ್ಪುನೀರಿನ ಸರೋವರಗಳು ಮತ್ತು ಭೂಭಾಗಗಳೊಳಗೆ ಚಾಚಿರುವ ಸಮುದ್ರಗಳಲ್ಲಿ ಲಾಭದಾಯಕವಾದ ಕ್ಲೋರೈಡ್ ಮತ್ತು ಸಲ್ಫೈಟ್ ಲವಣಗಳು ನಿಕ್ಷೇಪವಾಗುತ್ತವೆ. ಇವು ನಿಕ್ಷೇಪವಾಗಬೇಕಾದರೆ ಸಮುದ್ರದ ನೀರು ಈ ಲವಣಾಂಶಗಳಿಂದ ಕೂಡಿರಬೇಕು. ಜೊತೆಗೆ ಯುಕ್ತ ಸನ್ನಿವೇಶವೂ ಒದಗಬೇಕು. ಸಮುದ್ರದ ಒಂದು ಭಾಗ ಬೇರ್ಪಟ್ಟು ಇಲ್ಲವೆ ಈ ಭಾಗ ತೆಟ್ಟೆ ಪ್ರದೇಶವಾಗಿ ಮಾರ್ಪಟ್ಟಾಗ ಇದು ಸಾಧ್ಯವಾಗುತ್ತದೆ. ಎರಡನೆಯದಾಗಿ ಈ ಲವಣಗಳು ನಿಕ್ಷೇಪವಾಗಲು ಸಹಕಾರಿಯಾದ ವಾಯುಗುಣವಿರಬೇಕು. ಕ್ಯಾಸ್ಪಿಯನ್ ಸಮುದ್ರದ ಒಂದು ಭಾಗವಾದ ಕರಬುಗ ಖಾರಿಯಲ್ಲಿ ಇಂಥ ಸನ್ನಿವೇಶವಿರುವುದು ಗೊತ್ತಾಗಿದೆ. ಮೊದಲು ಕ್ಯಾಲ್ಸಿಯಮ್ ಲವಣಗಳು, ಅನಂತರ ಸೋಡಿಯಮ್ ಲವಣಗಳು, ಕೊನೆಗೆ ಪೊಟ್ಯಾಸಿಯಮ್ ಲವಣಗಳು ನಿಕ್ಷೇಪವಾಗುತ್ತವೆ. ಭೂ ಇತಿಹಾಸದಲ್ಲಿ ಇಂಥ ಅನೇಕ ಪ್ರಸಂಗಗಳನ್ನು ಗುರುತಿಸಲಾಗಿದೆ. ಪಂಜಾಬಿನ ಸಾಲ್ಟ್‌ರೇಂಜ್ ಪ್ರದೇಶದ ಕೇಂಬ್ರಿಯನ್ ಕಾಲದ ಲವಣ ಶಿಲಾಶ್ರೇಣಿ ಮತ್ತು ಕೋಹಟ್ ಜಿಲ್ಲೆಯ ಇಯೋಸೀನ್ ಕಾಲದ ಲವಣ ಶಿಲಾಶ್ರೇಣಿಗಳು ಇಂಥ ನಿಕ್ಷೇಪಗಳಿಗೆ ಉತ್ತಮ ಉದಾಹರಣೆಗಳು.

ಕೆಲವು ಸಸ್ಯಗಳು ಮತ್ತು ಪ್ರಾಣಿಗಳ ಚಟುವಟಿಕೆಗಳಿಂದ ಕೂಡ ಸರೋವರ ಮತ್ತು ಸಮುದ್ರಗಳಲ್ಲಿ ವಿಲೀನವಾಗಿರುವ ಲವಣಗಳು ನಿಕ್ಷೇಪಗೊಳ್ಳುತ್ತವೆ. ಕೆಲವು ಪ್ರಾಣಿಗಳು ಈ ಲವಣಗಳನ್ನು ಬೇರ್ಪಡಿಸಿಕೊಂಡು ತಮ್ಮ ಗೂಡುಗಳನ್ನು ಕಟ್ಟಲು ಉಪಯೋಗಿಸುತ್ತವೆ. ಇವು ಸತ್ತ ಬಳಿಕ ಇವುಗಳ ಗೂಡು ಅಥವಾ ಚಿಪ್ಪುಗಳು ಸಮುದ್ರದ ತಳದಲ್ಲಿ ಶೇಖರವಾಗಿ ನಿಕ್ಷೇಪಗಳಾಗುತ್ತವೆ. ಇವಕ್ಕೆ ಜೀವಜನಿತ ನಿಕ್ಷೇಪಗಳು ಎಂದು ಹೆಸರು.

ಭೂಇತಿಹಾಸ ನಿರೂಪಣೆಯಲ್ಲಿ ಜಲಜಶಿಲೆಗಳ ಪಾತ್ರ : ಜಲಜಶಿಲೆಗಳಲ್ಲಿ ಸಾಮಾನ್ಯವಾಗಿ ತಳಪದರ ವಯಸ್ಸಿನಲ್ಲಿ ಹಿರಿದು; ಅಲ್ಲದೆ ಪ್ರತಿ ಪದರವೂ ಮೇಲಣ ಪದರಕ್ಕಿಂತ ಹಿರಿದಾಗಿಯೂ ಕೆಳಗಣ ಪದರಕ್ಕಿಂತ ಕಿರಿದಾಗಿಯೂ ಉಂಟು. ಭೂಇತಿಹಾಸದ ಪ್ರಮುಖ ನಿಯಮಗಳಲ್ಲೊಂದಾದ ಶಿಲಾಪೇರಿಕೆಯ ಕ್ರಮ ಇದರ ಆಧಾರದ ಮೇಲೆ ನಿರೂಪಿತವಾಗಿದೆ. ಭೂಇತಿಹಾಸದ ಸಂಶೋಧನೆಯಲ್ಲಿ ಶಿಲಾಪರಂಪರೆಯ ಮೂಲ ಪೇರಿಕೆಯ ಕ್ರಮವನ್ನು ಸ್ಥಾಪಿಸುವುದು ಮೊದಲ ಕೆಲಸ. ಒಂದು ಶಿಲಾಪರಂಪರೆಯ ಪದರಗಳು ಒಂದೇ ದಿಕ್ಕಿನಲ್ಲಿ ವಾಲಿಕೊಂಡಿದ್ದರೆ ಶಿಲಾ ಓರೆಯ ಕಡೆಗೆ ಹೋದಂತೆ ಪದರುಗಳು ಕಿರಿದಾಗುತ್ತಲೂ ಅದಕ್ಕೆ ವಿರುದ್ಧ ಹೋದಂತೆ ಹಿರಿದಾಗುತ್ತಲೂ ಇರುವುವು. ಅವು ಮಡಿಕೆಗಳಾಗಿದ್ದರೆ ಶಿಲಾಪರಂಪರೆ ತಲೆಕೆಳಗಾಗಿರುತ್ತದೆ. ಬೇರೆ ಕುರುಹುಗಳ ಸಹಾಯದಿಂದಲೂ ಈ ಪದರುಗಳ ವಯೋಕ್ರಮವನ್ನು ನಿರ್ಧರಿಸುವುದು ಸಾಧ್ಯ. ಒಂದು ಪ್ರದೇಶದ ಶಿಲಾಪರಂಪರೆಗೆ ಹಸ್ತಕ್ಷೇಪವಾಗಿಲ್ಲದಿದ್ದ ಪಕ್ಷಕ್ಕೆ ಆ ಶಿಲಾಪೇರಿಕೆಯ ಕ್ರಮವನ್ನು ಇತರ ಪ್ರದೇಶಗಳ ಶಿಲಾಪರಂಪರೆಯ ವಯೋನಿರ್ಧಾರದಲ್ಲಿ ಬಳಸಬಹುದು. ಹೀಗೆ ಮಾಡುವಾಗ ಆ ಪ್ರದೇಶಗಳ ಶಿಲಾಪರಂಪರೆಯಲ್ಲಿ ಸಂಯೋಜನಾ ಸಾಮ್ಯವಿರಬೇಕು. ಅವುಗಳಲ್ಲಿ ಕಣಗಾತ್ರಾನುಕ್ರಮಣ ಸಂಚಯನ ಮತ್ತು ಸಂಚಯನ ಚಕ್ರಗಳೇ ಮೊದಲಾದ ಲಕ್ಷಣಗಳಿದ್ದಲ್ಲಿ, ಆ ಪೇರಿಕೆಯ ಕ್ರಮ ಮತ್ತು ಬೆರೆತಿರುವ ರೀತಿಯನ್ನು ಗುರುತುಹಚ್ಚಬಹುದು. ಗಾತ್ರಾನುಕ್ರಮದ ದಿಕ್ಕಿನಲ್ಲಿ ಕಿರಿಯ ಪದರಗಳಿರುತ್ತವೆ. ಪ್ರವಾಹ ಪದರಗಳಲ್ಲಿ ಮಧ್ಯಪದರಗಳು

ಮೇಲ್ಪದರಗಳನ್ನು ಸಂಧಿಸುವ ಕೋನ ಅವು ಕೆಳಪದರಗಳನ್ನು ಸಂಧಿಸುವ ಕೋನಕ್ಕಿಂತ ಕಡಿಮೆ ಇರುವುದಲ್ಲದೆ ಮಧ್ಯಪದರಗಳ ಮೇಲ್ಭಾಗ ತಗ್ಗಾಗಿರುತ್ತದೆ. ಅಲೆಗಳ ಗುರುತುಗಳು ಗುಂಡಾದ ತಗ್ಗುಗಳಿಂದಲೂ ಮೊನಚಾದ ಉಬ್ಬುಗಳಿಂದಲೂ ಕೂಡಿರುವುವು. ಈ ಲಕ್ಷಣಗಳು ತದ್ವಿರುದ್ಧವಾಗಿದ್ದಲ್ಲಿ ಪದರಗಳು ತಲೆಕೆಳಗಾಗಿವೆಯೆಂದು ಭಾವಿಸಬಹುದು. ಬಿಸಿಲು ಬಿರುಕುಗಳು, ಜ್ವಾಲಾಮುಖಿಜಶಿಲಾಪದರಗಳಲ್ಲಿನ ಅನಿಲರಂಧ್ರಗಳು ಮತ್ತು ದಿಂಬು ರಚನೆಗಳು ಶಿಲಾಪೇರಿಕೆಯ ಕ್ರಮನಿರ್ಧಾರದಲ್ಲಿ ಸಹಾಯಕವಾಗಿವೆ. ಜ್ವಾಲಾಮುಖಿಜ ಬೂದಿ ಪದರಗಳ ಕೆಳಗಡೆ ರೂಪಾಂತರಿಸಿರುವ ಬೆಣಚುಕಲ್ಲು ಪದರಗಳು, ಹವಳ ಮುಂತಾದ ಸ್ಥಾವರಜೀವಿಗಳು ಬೆಳೆದ ಅವಸ್ಥೆಯಲ್ಲಿಯೇ ಇರುವಿಕೆ ಮತ್ತು ಹುಳುಗಳ ಜಾಡುಗಳು–ಇವು ಪೇರಿಕೆ ಕ್ರಮವನ್ನು ನಿರ್ಧರಿಸಲು ಸಹಾಯಕವಾಗಿವೆ. ಪದರಗಳ ತಳದಲ್ಲಿರುವ ಸೊರಜು, ಬಿರುಕುಗಳು ಮುಂತಾದ ಇತರ ಅನನುರೂಪತೆಗಳು ಸಹ ಶಿಲಾಪೇರಿಕೆಯ ಕ್ರಮಸೂಚಿಗಳಾಗಿವೆ. ಎರಡು ಅಂತಸ್ಸರಣಗಳು ಅಥವಾ ಎರಡು ಸ್ತರಭಂಗಗಳು ಛೇದಿಸಿದ್ದರೆ, ಅವುಗಳಲ್ಲಿ ಕಿರಿಯದು ನೇರವಾಗಿ ಮುಂದುವರಿದಿರುವುದು, ಹಿರಿಯದು ಎರಡು ಭಾಗಗಳಾಗಿ ಬೇರ್ಪಟ್ಟಿರುತ್ತದೆ. ಜಲಜಶಿಲೆಗಳಲ್ಲಿ ಕೆಲವು ಪದರಗಳ ನಿರ್ದಿಷ್ಟ ಬಣ್ಣವನ್ನು ಹೊಂದಿ ವಿಶಾಲಪ್ರದೇಶದಲ್ಲಿ ಸಂಚಯನವಾಗಿರುತ್ತವೆ. ಇಂಥ ವಿಶಿಷ್ಟಪದರಗಳು ಪೇರಿಕೆಯ ಕ್ರಮನಿರ್ಧಾರದಲ್ಲಿ ಸಹಾಯವಾಗಬಲ್ಲವು. ಸ್ಲೇಟಿನ ಬೇರ್ಪಡುವ ಮೈಗಳು ಮತ್ತು ಡ್ರ್ಯಾಗ್ ಮಡಿಕೆಗಳ ಅಕ್ಷಗಳು ಮುಖ್ಯ ಮಡಿಕೆಗಳ ಅಕ್ಷಕ್ಕೆ ಸಮಾಂತರ ವಾಗಿರುವುವು. ಇವು ತಲೆಕೆಳಗಾಗಿದ್ದರೆ, ಶಿಲಾಪದರಗಳೂ ತಲೆಕೆಳಗಾಗಿರುವು ದೆಂದು ಭಾವಿಸಬಹುದು.

ಕರ್ನಾಟಕದ ಜಲಜಶಿಲಾ ಹಂಚಿಕೆ : ಧಾರವಾಡ ಪದರ ಶಿಲೆಗಳು ಕರ್ನಾಟಕದಲ್ಲಿ ಅತ್ಯಂತ ಹಿಂದಿನ ಅಂದರೆ ಆರ್ಷೇಯ ಕಲ್ಪದ ಜಲಜಶಿಲೆಗಳು. ಇವು ಹನ್ನೊಂದು ವಲಯಗಳಲ್ಲಿ ರೂಪುಗೊಂಡಿವೆ: 1 ಕ್ಯಾಸಲ್ ರಾಕ್; 2 ಧಾರವಾಡ–ಶಿವಮೊಗ್ಗ ; 3 ಗದಗ–ಡಂಬಾಲ್ ಅಥವಾ ಚಿತ್ರದುರ್ಗ–ಚಿಕ್ಕನಾಯಕನಹಳ್ಳಿ ನಾಗಮಂಗಲ ; 4 ಸಂಡೂರು; 5 ಬಳ್ಳಾರಿ ಕುಪ್ಪಗಿ ; 6 ಪೆನ್ನೇರ್–ಹಗ್ಗರಿ ; 7 ಮಸ್ಕಿ–ಹಟ್ಟಿ; 8 ಬೊಮ್ಮನಾಳ್; 9 ಕೋಲಾರ; 10 ರಾಯಚೂರು ಮತ್ತು 11 ಗದ್ವಾಲ್. ಆದಿಜೀವಕಲ್ಪದ ಶಿಲೆಗಳು ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿ ನಗರಕ್ಕೂ ಕಾಲಡ್ಗಿಗೂ ಮಧ್ಯೆ ಹೊರಕಂಡಿವೆ. ಇವಕ್ಕೆ ಕಾಲಡ್ಗಿ ಶಿಲಾಶ್ರೇಣಿ ಎಂದು ಹೆಸರು. ಈ ಕಲ್ಪದ ಉತ್ತರಾರ್ಧಕಾಲದ ಶಿಲೆಗಳು ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಭೀಮಾನದಿಯ ಪಾತ್ರದಲ್ಲಿ ಸುಮಾರು 7770ಚ.ಕಿಮೀ ಪ್ರದೇಶದಲ್ಲಿ ಹೊರಕಂಡಿವೆ. ಇವಕ್ಕೆ ಭೀಮಾ ಶಿಲಾಶ್ರೇಣಿ ಎಂದು ಹೆಸರು. ಇದರಲ್ಲಿರುವ ಸುಣ್ಣಶಿಲೆಗಳನ್ನು ಷಾಹಬಾದ್ ಸಿಮೆಂಟ್ ಕಾರ್ಖಾನೆಯಲ್ಲಿ ಉಪಯೋಗಿಸಲಾಗುತ್ತಿದೆ.

ಭಾರತ ಪರ್ಯಾಯದ್ವೀಪದ ಜಲಜಶಿಲೆಗಳ ಹಂಚಿಕೆ : ಈ ಪರ್ಯಾಯ ದ್ವೀಪ ಆರ್ಷೇಯ ಕಲ್ಪದ ಅನಂತರ ಸ್ಥಿರಭೂಭಾಗವಾಯಿತು. ಆದಿಜೀವಕಲ್ಪದ ಪೂರ್ವಾರ್ಧದಲ್ಲಿ ಆಂಧ್ರಪ್ರದೇಶದ ಕಡಪ ಮತ್ತು ಕರ್ನೂಲ್ ಜಿಲ್ಲೆಗಳ ಪ್ರದೇಶ, ಒರಿಸ್ಸದ ಛತ್ತೀಸಗಢ ಪ್ರದೇಶ, ಕರ್ನಾಟಕದ ಬೆಳಗಾವಿ ಜಿಲ್ಲೆಯ ಕಾಲಡ್ಗಿ ಪ್ರದೇಶ ಮತ್ತು ದೆಹಲಿ ಪ್ರದೇಶಗಳನ್ನು ಸಮುದ್ರಗಳು ಆಕ್ರಮಿಸಿದ್ದುವು. ಈ ಪ್ರದೇಶಗಳಿಂದ ಸಮುದ್ರಗಳು ಹಿಂಜರಿದು ಉತ್ತರಾರ್ಧದಲ್ಲಿ ವಿಂಧ್ಯಪರ್ವತ ಪ್ರದೇಶ, ಕರ್ನೂಲ್ ಜಿಲ್ಲೆ ಮತ್ತು ಭೀಮಾ ನದಿಯ ಕಣಿವೆ ಪ್ರದೇಶಗಳನ್ನು ಪುನಃ ಆಕ್ರಮಿಸಿದುವು. ಈ ಪ್ರದೇಶಗಳಲ್ಲೆಲ್ಲ ಫಾಸಿಲ್‌ರಹಿತ ಜಲಜಶಿಲೆಗಳಿವೆ. ಪ್ರಾಚೀನ ಜೀವಕಲ್ಪವನ್ನು ಪ್ರತಿನಿಧಿಸುವ ಜಲಜಶಿಲೆಗಳು ಎಲ್ಲೂ ಸಂಚಯಿಸಿಲ್ಲ. ಮಧ್ಯ ಜೀವಕಲ್ಪದ ಜುರಾಸಿಕ್ ಯುಗದಲ್ಲಿ ಕಚ್ ಮುಂತಾದ ಪ್ರದೇಶಗಳು ಸಮುದ್ರಾಕ್ರಮಣಕ್ಕೊಳಗಾಗಿ ಅಲ್ಲಿ ಫಾಸಿಲ್‌ಯುಕ್ತ ಜಲಜಶಿಲೆಗಳು ರೂಪುಗೊಂಡಿವೆ. ಕ್ರಿಟೇಷಸ್ ಯುಗದ ಮಧ್ಯಭಾಗದಲ್ಲಿ ಟೆತಿಸ್ ಸಾಗರ ನರ್ಮದಾ ಕಣಿವೆ ಪ್ರದೇಶದಲ್ಲೂ ದಕ್ಷಿಣ ಸಮುದ್ರ ತಿರುಚನಾಪಳ್ಳಿ, ವೃದ್ಧಾಚಲಮ್, ಪಾಂಡಿಚೆರಿ, ರಾಜಮಹೇಂದ್ರಿ ಮತ್ತು ಅಸ್ಸಾಮ್ ಪ್ರದೇಶಗಳಲ್ಲಿ ಆಕ್ರಮಣ ನಡೆಸಿದುವು. ಆಗ ಸಂಚಯಿಸಿದ ಶಿಲೆಗಳು ಆ ಪ್ರದೇಶಗಳಲ್ಲಿ ಕಂಡುಬರುತ್ತವೆ. ನವಜೀವಕಲ್ಪದ ಮಯೋಸೀನ್ ಯುಗದಲ್ಲಿ ಭಾರತ ಪರ್ಯಾಯದ್ವೀಪದ ಪೂರ್ವ ಮತ್ತು ಪಶ್ಚಿಮತೀರಗಳಲ್ಲಿ ಸಮುದ್ರಾಕ್ರಮಣವಾಗಿ ಮರಳುಶಿಲೆಗಳು ನಿಕ್ಷೇಪವಾಗಿವೆ. ಇವುಗಳಲ್ಲಿ ಕಡಲೂರು ಮರಳುಶಿಲೆಗಳು ಗಮನಾರ್ಹ. ಕಾರ್ಬಾನಿಫೆರಸ್ ಯುಗದ ಅಂತ್ಯದಿಂದ ಜುರಾಸಿಕ್ ಯುಗದ ಅಂತ್ಯದವರೆಗೆ ಸೋನ್‌ದಾಮೋದರ್ ಮಹಾನದಿ ಮತ್ತು ಗೋದಾವರಿ ನದಿ ಕಣಿವೆಗಳಲ್ಲೂ ಪೂರ್ವ ಮತ್ತು ಪಶ್ಚಿಮ ತೀರದ ಕೆಲವು ಸ್ಥಳಗಳಲ್ಲೂ ಸಿಹಿನೀರು ನಿಕ್ಷೇಪಗಳು ಸಂಚಯಿಸಿವೆ. ಇವಕ್ಕೆ ಗೊಂಡ್ವಾನ ಶಿಲಾಸಮುದಾಯ ಎಂದು ಹೆಸರು.

ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಜಲಜಶಿಲೆಗಳ ಹಂಚಿಕೆ: ಈ ಪ್ರದೇಶ ಇಯೊಸೀನ್ ಯುಗದ ಅಂತ್ಯದವರೆಗೆ ಟೆತಿಸ್ ಸಾಗರದ ಆಕ್ರಮಣಕ್ಕೊಳಗಾಗಿತ್ತು. ಆದ್ದರಿಂದ ಇಲ್ಲಿ ಶಿಲಾಪರಂಪರೆ ಸರಿಸುಮಾರು ಅಖಂಡವಾಗಿದೆ ಎಂದೇ ಹೇಳಬಹುದು. ಸಿಂದ್–ಬಲೂಚಿಸ್ಥಾನ್ ಪ್ರದೇಶ ಮತ್ತು ಅಸ್ಸಾಮ್ ಪ್ರದೇಶಗಳಲ್ಲಿ ಟೆತಿಸ್ ಸಾಗರ ಆಲಿಗೋಸೀನ್ ಯುಗದ ಅಂತ್ಯದವರೆಗೂ ಇತ್ತಾದ ಕಾರಣ ಅಲ್ಲಿನ ಶಿಲಾಪರಂಪರೆ ಆಲಿಗೋಸೀನ್ ಯುಗವನ್ನೂ ಪ್ರತಿನಿಧಿಸುತ್ತದೆ. ಮಯೋಸೀನ್ ಯುಗದಿಂದ ವರ್ತಮಾನ ಕಾಲದವರೆಗೆ ಇಲ್ಲಿ ಸಿಹಿನೀರು ನಿಕ್ಷೇಪಗಳು ಸಂಚಯಿಸಿವೆ. ಶಿವಾಲಿಕ್ ಶಿಲಾಸಮುದಾಯ ಮತ್ತು ಸಿಂಧೂ–ಗಂಗಾ ಮೆಕ್ಕಲು–ಇವೇ ಈ ನಿಕ್ಷೇಪಗಳು. (ಡಿ.ಆರ್.;ಸಿ.ಜಿ.)

**ಜಲತಲ ಪ್ರಾಣಿವರ್ಗ :** ಸಾಗರವನ್ನು ಆಳದ ಆಧಾರದ ಮೇಲೆ ಮೂರು ಮುಖ್ಯ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ: ಬ್ಯಾತೀಯಲ್ (2000 ಮೀ. ಗಿಂತ ಕಡಿಮೆ ಆಳದ ಪ್ರದೇಶ). ಜಲತಲ (ಅಬಿಸಲ್, 2000–6000 ಮೀ. ಆಳದ ಪ್ರದೇಶ) ಮತ್ತು ಹೇಡಲ್ (6000 ಮೀ. ಗಿಂತ ಹೆಚ್ಚು ಆಳದ ಪ್ರದೇಶ). ಬ್ಯಾತೀಯಲ್ ಭಾಗ ಸಾಗರಗಳ ಒಟ್ಟು ವಿಸ್ತೀರ್ಣದ ಶೇ.14.8 ರಷ್ಟೂ, ಜಲತಲ ಭಾಗ ಶೇ.84 ರಷ್ಟೂ, ಹೇಡಲ್ ಭಾಗ ಶೇ.1.2 ರಷ್ಟೂ ಇವೆ. ಜಲತಲ ಪ್ರದೇಶದ ವಿಸ್ತೀರ್ಣ ಭೂಮಿಯ ಸುಮಾರು ಎರಡರಷ್ಟು ಇದೆ. ಈ ಪ್ರದೇಶದಲ್ಲಿ ವಾಸಿಸುವ ಪ್ರಾಣಿಸಮೂಹವೇ ಜಲತಲ ಜೀವಿಗಳು (ಅಬಿಸಲ್ ಫಾನ).

ಜಲತಲ ಪ್ರದೇಶ ತನ್ನ ಭೌತಲಕ್ಷಣಗಳ ವೈಪರೀತ್ಯಗಳಿಗೆ ಹೆಸರಾಗಿದೆ. ಇದು ಸಾಗರದ ಉಳಿದ ಭಾಗಗಳಿಗಿಂತ ವಿಭಿನ್ನವಾಗಿದೆ. ಇಲ್ಲಿಯ ಪರಿಸ್ಥಿತಿಗಳಲ್ಲಿ ಹೆಚ್ಚು ಬದಲಾವಣೆ ಸಾಧ್ಯವಿಲ್ಲ. ಸೂರ್ಯನ ಬೆಳಕು ಜಲತಲ ಪ್ರದೇಶದ ಆಳಕ್ಕೆ ಇಳಿಯುವುದಿಲ್ಲವಾದ್ದರಿಂದ ಇಲ್ಲಿ ಸದಾ ಕಗ್ಗತ್ತಲು ತುಂಬಿರುತ್ತದೆ; ಅಂತೆಯೇ ಉಷ್ಣತೆ ಕೂಡ $0^{0}$Cಯಆಸುಪಾಸಿನಲ್ಲಿ ಇದೆ. ನೀರಿನ ಒತ್ತಡವೂ ಇಲ್ಲಿ ಅತ್ಯಧಿಕ (ಪ್ರತಿ 10 ಮೀ. ಆಳಕ್ಕೆ ಒಂದು ವಾಯುಮಾನ ಚದರ ಅಂಗುಲಕ್ಕೆ 14.7ಪೌಂಡ್ ದರದಲ್ಲಿ ಒತ್ತಡ ಹೆಚ್ಚುತ್ತಾ ಹೋಗುತ್ತದೆ.) ನೀರು ಸಹ ಹೆಚ್ಚು ಕಡಿಮೆ ಚಲಿಸದೆ ಸ್ತಬ್ಧವಾಗಿರುತ್ತದೆಯಾದರೂ ಅಲ್ಲಲ್ಲಿ ಅತ್ಯಂತ ಮಂದಗತಿಯಲ್ಲಿ ಚಲಿಸುವ ಪ್ರವಾಹಗಳಿರುವುದರಿಂದ ಈ ಪ್ರದೇಶದಲ್ಲಿ ಜೀವಿಸುವ ಪ್ರಾಣಿಗಳಿಗೆ ಅಗತ್ಯವಾದ ಆಕ್ಸಿಜನ್ ಪೂರೈಕೆಯಾಗುತ್ತದೆ. ಈ ಪ್ರದೇಶದ ನೆಲ ಬಹುವಾಗಿ ಮೈದಾನ ರೀತಿಯಿದ್ದು; ಅಲ್ಲಲ್ಲಿ ಸಣ್ಣಪುಟ್ಟ ದಿಣ್ಣೆಗಳಿವೆ, ಅಷ್ಟೇ. ಕೆಲವೆಡೆ ಆಳ ಕಣಿವೆಗಳೂ ಬೆಟ್ಟದಂಥ ದಿಬ್ಬಗಳೂ ಇರುವುದುಂಟು. ತಳದ ಮೇಲೆಲ್ಲ ಮೆತುವಾದ ಮಣ್ಣು (ಉಸುಬು) ಹರಡಿದೆ. ಇದರಲ್ಲಿ ಅಗ್ನಿಪರ್ವತಗಳಿಂದ ಉಂಟಾಗುವ ಕೆಂಪು ಜೇಡಿಮಣ್ಣು, ಸಾಗರತಳದಲ್ಲಿನ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗುವ ಖನಿಜಯುಕ್ತ ಮಣ್ಣು ಹಾಗೂ ಸತ್ತುಹೋದ ಪ್ಲಾವಕ, ಪ್ರೋಟೋಜೋವ, ಮತ್ತು ಮೃದ್ವಂಗಿಗಳ ದೇಹಾವಶೇಷಗಳು ಅರ್ಧಂಬರ್ಧ ಕೊಳೆತಿರುವ ಚಿಪ್ಪು ಮತ್ತು ಹಂದರಗಳು ಶೇಖರವಾಗಿರಬಹುದು. ರೇಡಿಯಮ್, ಯುರೇನಿಯಮ್ ಮುಂತಾದ ವಿಕಿರಣಪಟು ವಸ್ತುಗಳೂ ಇರಬಹುದು. ಈ ಉಸುಬಿನಲ್ಲಿ ಇರುವ ವಿಶೇಷ ದೇಹಾವಶೇಷಗಳ ಆಧಾರದ ಮೇಲೆ ಇದನ್ನು ಫೊರ್ಯಾಮಿನಿಫೆರನ್, ರೇಡಿಯೊಲೇರಿಯನ್, ಟೀರೋಪಾಡ್ ಹಾಗೂ ಡಯಾಟಮ್ ಉಸುಬುಗಳೆಂದು ವಿಭಾಗಿಸಲಾಗಿದೆ.

ಜಲತಲ ಪ್ರದೇಶದ ಸ್ಥಿತಿ–ಗತಿಗಳು ಅನೇಕ ಅನ್ವೇಷಣೆಗಳಿಂದ ತಿಳಿದುಬಂದಿದೆ. ಪ್ರಪ್ರಥಮವಾಗಿ ಬ್ರಿಟಿಷ್ ಚಾಲೆಂಜರ್ ಹಡಗು 1873–76ರ ಅವಧಿಯಲ್ಲಿ ಯಾನ ಕೈಗೊಂಡು ಸಮುದ್ರ ಜೀವಿಗಳ ಮತ್ತು ಅವುಗಳ ಪರಿಸರದ ವಿಚಾರವನ್ನು ವೈಜ್ಞಾನಿಕವಾಗಿ ತಿಳಿಸಿ ಕಡಲ ಪರಿಸರದ ಅಧ್ಯಯನಕ್ಕೆ ತಳಹದಿಯನ್ನು ಹಾಕಿತು. ಆಮೇಲೆ ಮಾಡಿದ ಸಮುದ್ರಯಾನಗಳು ಮುಖ್ಯವಾಗಿ ನೀರಿನ ಪರಿಸರದ ಸಂಶೋಧನೆಯನ್ನು ಕೈಗೊಂಡವು. ಇವುಗಳಲ್ಲಿ ಸ್ವೀಡನ್ನಿನ ಆಲ್ಬಟ್ರಾಸ್ (1947–48), ರಷ್ಯದ ವಿಟಿಯಾಜ್ (1949), ಡೆನ್ಮಾರ್ಕಿನ ಗಲಾತಿಯ (1951), ಅಮೆರಿಕದ ವೆಮ (1958) ಮತ್ತು ಎಲ್ಟಾ ಸಮುದ್ರಯಾನಗಳು ಕೆಲವು. ಇವು ಅನೇಕ ನವೀನ ಯಂತ್ರೋಪಕರಣಗಳ ಸಹಾಯದಿಂದ ಕಡಲಿನ ಬಗ್ಗೆ ಮಾಹಿತಿಗಳನ್ನೂ ಸಂಪಾದಿಸಿವೆ. ಉದಾಹರಣೆಗೆ ಗಲಾತಿಯ ಸಮುದ್ರಯಾನದಲ್ಲಿ ಫಿಲಿಪೀನ್ಸ್ ಬಳಿ ಸಮುದ್ರದಲ್ಲಿನ 1019 ಮೀ. ಆಳದ ಕಣಿವೆಯಿಂದ ಅನೇಕ ಪ್ರಾಣಿಗಳನ್ನೂ ಕಲ್ಲು ಮಣ್ಣನ್ನೂ ಮೇಲಕ್ಕೆ ತರಲಾಯಿತು.

**ಪ್ರಾಣಿವರ್ಗ :** ಜಲತಲ ಪ್ರದೇಶದ ವೈಪರೀತ್ಯ ಲಕ್ಷಣಗಳಿಗೆ ಹೊಂದಿಕೊಂಡಿರುವ ಜೀವಿಗಳೇ ಇಲ್ಲಿನ ಪ್ರಮುಖ ಪ್ರಾಣಿಗಳು. ಆಹಾರದ ಅಭಾವ ಮತ್ತು ಪರಿಸರದ ಪ್ರತಿಕೂಲ ಪರಿಸ್ಥಿಗಳಿಂದ ಸಂಖ್ಯಾಕ್ಷೀಣತೆ ಇದ್ದರೂ ಕೆಲವು ಅಪೂರ್ವ ಬಗೆಯ ಪ್ರಾಣಿಗಳನ್ನು ಗುರುತಿಸಬಹುದು. ನೀರಿನಲ್ಲಿ ಉಸಿರಾಡುವ ಎಲ್ಲ ಗುಂಪಿನ ಪ್ರಾಣಿಗಳ ಪ್ರತಿನಿಧಿಗಳೂ, ಅಂದರೆ ಪ್ರೋಟೋಜೋವ ಗುಂಪಿನಿಂದ ಕಶೇರುಕಗಳವರೆಗೆ, ಇಲ್ಲಿವೆ. ಆದರೆ ಮೀನಿಗಿಂತ ಹೆಚ್ಚು ವಿಕಾಸಗೊಂಡ, ಶ್ವಾಸಕೋಶಿ ಕಶೇರುಕಗಳಾವುವೂ ಇಲ್ಲಿಲ್ಲ.

ಜಲತಲ ಪ್ರದೇಶ ಜೀವಿಗಳನ್ನು ಮುಂದೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**I ಅಕಶೇರುಕಗಳು:** 1 ಪ್ರೋಟೋಜೋವ: ಬಹು ಹೆಚ್ಚಾಗಿ ಕಾಣಬರುವ ಗುಂಪು. ಇದರಲ್ಲಿ ಪೆಲಾಜಿಕ್ ರೇಡಿಯೊಲೇರಿಯನ್‌ಗಳು ಹೆಚ್ಚಾಗಿವೆ.




**ಜಲತಲ ಪ್ರದೇಶದ ಕೆಲವು ಪ್ರಾಣಿಗಳು : 1. ವೈಪರ್ ಮೀನು, 2. ಅಷ್ಟಪಾದಿ, 3. ಗಲ್ಪರ್, 4. ಗಾಳದ ಮೀನು, 5. ಆಳಕಡಲಿನ ಸ್ಕ್ವಿಡ್, 6. ಪೆಡಸು ನಕ್ಷತ್ರಗಳು, 7. ಕುರುಡು ಲಾಬ್‌ಸ್ಟರ್, 8. ಕಡಲ ಲಿಲಿ**

2 ಸ್ಪಂಜುಗಳು : ಮುಖ್ಯವಾಗಿ ಹೆಕ್ಸಾಕ್ಟಿನೆಲಿಡ ಗುಂಪಿನ ಪ್ರಭೇದಗಳಿಂದ ಕೂಡಿವೆ.

3 ಕುಟುಕು ಕಣವಂತಗಳು : ಇವುಗಳಲ್ಲಿ ಸಾಮಾನ್ಯ ಬಗೆಯ ಬಟ್ಟಲು ಹವಳಗಳೂ (ಉದಾಹರಣೆಗೆ ಫ್ಲ್ಯಾಬೆಲಮ್) ಕಡಲ ಲೇಖಣಿಗಳೂ (ಉದಾಹರಣೆಗೆ ಅಂಬೆಲುಲ) ಕಡಲ ಹೂಗಳೂ ಇವೆ. 12000 ಮೀ. ಆಳದಲ್ಲಿ ಕಡಲ ಬೀಸಣಿಗೆಗಳೂ, ಅಪರೂಪದ ಕಡಲ ಹೂಗಳೂ ಸಿಕ್ಕಿವೆ.

4 ನೆಮರ್ಟೀನಿಯ : ಈ ಪ್ರಾಣಿಗಳು ಬಲು ಕಡಿಮೆ.

5 ವಲಯವಂತಗಳು : ವಿವಿಧ ರೀತಿಯ ಪಾಲಿಕೀಟ್ ಹುಳುಗಳು ಹೆಚ್ಚು ಸಂಖ್ಯೆಯಲ್ಲಿವೆ. ಇವುಗಳಲ್ಲಿ ಕೊಳವೆಗಳ ಹುಳುಗಳೇ ಹೆಚ್ಚು. 12000 ಮೀ. ಆಳದಲ್ಲಿ ಸಾಮಾನ್ಯರೀತಿಯ ಪಾಲಿಕೀಟ್ ಹುಳುಗಳು ಸಿಕ್ಕಿವೆ.

6 ಸಂಧಿಪದಿಗಳು : ಕಠಿಣಚರ್ಮಿ ವರ್ಗದ ಅನೇಕ ಪ್ರಭೇದಗಳು 4000–12000 ಮೀ. ಆಳದಲ್ಲಿರುವುದು ಕಂಡುಬಂದಿದೆ. ಆಸ್ಟ್ರಕೋಡ (4000 ಮೀ.) ದಶಪಾದಿ ಮತ್ತು ಸೀಗಡಿಗಳು (5000 ಮೀ.), ಬಾರ್‍ನಕಲ್ (6000 ಮೀ.), ಐಸೊಪಾಡ್ ಮತ್ತು ಆ್ಯಂಫಿಪಾಡ್ ಪ್ರಾಣಿಗಳು ವಿವಿಧ ಆಳಗಳಲ್ಲಿ ವಾಸಿಸುವುದು ಗೋಚರವಾಗಿದೆ. ದಶಪಾದಿಗಳಲ್ಲಿ ಎರಿಯೊನಿಡೀ ಜಾತಿಯ ಪ್ರಭೇದಗಳಿವೆ. ನಿಜವಾದ ಏಡಿಗಳು ಇಲ್ಲ. ಆಂಫಿಪಾಡ್ ಪ್ರಾಣಿಗಳು 12000 ಮೀ. ಆಳದಲ್ಲಿಯೂ ಜೀವಿಸುವುವು. ಐಸೊಪಾಡ್ ಜೀವಿಗಳು 4500–12000 ಮೀ. ಆಳದಲ್ಲಿಯೂ ಇವೆ. ಈ ಗುಂಪಿನ ಬೇತಿನೋಮಸ್ ಜೈಗ್ಯಾಂಟಿಯಸ್ ಎಂಬ ಪ್ರಭೇದ 27.5 ಸೆಂ.ಮೀ. X 12 ಸೆಂ.ಮೀ. ನಷ್ಟು ದೊಡ್ಡದಾಗಿದೆ. ಆಳನೀರಿನ ಐಸೊಪಾಡುಗಳಲ್ಲಿ ಸುಮಾರು 58 ಪ್ರಭೇದಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 8 ಪ್ರಭೇದಗಳು ಸಾಮಾನ್ಯವಾಗಿ ಎಲ್ಲ ಜಲತಲ ಪ್ರದೇಶಗಳಲ್ಲಿ ಕಂಡುಬಂದಿವೆ. ಹ್ಯಾಪ್ಲೊಸಿಸ್ಕಸ್ ಜಾತಿಯ ಪ್ರಾಣಿಗಳು ಅನೇಕ ಕಡೆ ಸಿಕ್ಕಿವೆ. ಮಿಕ್ಕವು ಕೆಲವು ಪ್ರದೇಶಗಳಲ್ಲಿ ಮಾತ್ರ ಸೀಮಿತವಾಗಿವೆ (ಉದಾಹರಣೆಗೆ ಮೆಸಿಡೊತಿ ಜಾತಿ ಆರ್ಕ್‌ಟಿಕ್ ಸಮುದ್ರದಲ್ಲೂ, ಸೆರೊಲಿಸ್ ಜಾತಿ ಅಂಟಾರ್ಕ್‌ಟಿಕ್ ಸಮುದ್ರದಲ್ಲೂ ವಾಸಿಸುವುವು) ಆಳನೀರಿನ ಕಡಲ ಜೇಡಗಳು ಬಹು ದೊಡ್ಡ ಗಾತ್ರದವು.

**7 ಮೃದ್ವಂಗಿಗಳು :** ಮನೊಪ್ಲಕಾಫೊರ ಗುಂಪಿನ ನಿಯೋಪಿಲಿನ ಗಲಾತಿಯ ಮುಖ್ಯವಾದವು. 350 ಮಿಲಿಯನ್ ವರ್ಷಗಳ ಹಿಂದೆ ಜೀವಿಸಿದ್ದ ಪಿಲಿನ ಜಾತಿಯ ಪ್ರಾಣಿಗಳ ಗುಣಗಳಿರುವ ಇದನ್ನು ಜೀವಂತ ಫಾಸಿಲ್ ಎಂದು ಕರೆಯುವರು. ಸ್ಕಾಫೊಪೊಡ ಮೃದ್ವಂಗಿಗಳು ಅಪರೂಪವಾಗಿ ಹೆಚ್ಚಾಗಿ ಪ್ರತಿನಿಧಿಸಿವೆ. ಜೋಡಿಚಿಪ್ಪಿನ ಮೃದ್ವಂಗಿಗಳು 6000–12000 ಮೀ. ಆಳದಲ್ಲಿ ಸಿಕ್ಕಿವೆ. ಆಳ ಸಮುದ್ರದಲ್ಲಿ ಇವುಗಳ ಪ್ರಭೇದಗಳು ಮತ್ತು ಸಂಖ್ಯೆ ಬಲುಕಡಿಮೆ. 6000 ಮೀ. ಆಳದಲ್ಲಿ ಮೈಟಲಿಸ್ ಪ್ಯಾಸ್ಕೊಲೈನಸ್ ಪ್ರಭೇದ ಸಿಕ್ಕಿದೆ. ಗ್ಯಾಸ್ಟ್ರಾಪೊಡ ಪ್ರಾಣಿಗಳೂ ಕಡಿಮೆ ಸಂಖ್ಯೆಯಲ್ಲಿವೆ. ಇವು 2000–4000 ಮೀ. ಆಳದಲ್ಲಿ ಸಿಕ್ಕಿವೆ. ಸ್ಕ್ವಿಡ್ಡುಗಳು ಮತ್ತು ಅಷ್ಟಪಾದಿಗಳು (ಶಿರೋಪಾದಿಗಳು) ಹೆಚ್ಚಾಗಿ ಆಳಸಮುದ್ರದಲ್ಲಿ ವಾಸಿಸುತ್ತವೆ.

**8 ಕಂಟಕಚರ್ಮಿಗಳು :** ಈ ಗುಂಪಿನ ಎಲ್ಲ ವರ್ಗಗಳ ಪ್ರಾಣಿಗಳೂ ಬಹು ಹೆಚ್ಚಾಗಿ ಸಿಕ್ಕಿವೆ. ನಕ್ಷತ್ರಮೀನಿನ ವರ್ಗದಲ್ಲಿ ಪೊರ್ಸೆಲ್ಲನ್ ಆಸ್ಟರಿಡೀ ಗುಂಪಿನವು 6035 ಮೀ. ಆಳದವರೆಗೂ ವ್ಯಾಪಿಸಿವೆ. ಈ ಆಳದಲ್ಲಿ ಆಲ್ಬಟ್ರೊಸ್ಸಾಸ್ಟರ್ ರಿಚಾರ್ಡಿ ಪ್ರಭೇದ ಸಿಕ್ಕಿತು. ಬೆಂತೊಪೆಕ್ಟಿನಿಡೀ, ಆಸ್ಟ್ರೊಪೆಕ್ಟಿನಿಡೀ ಮತ್ತು ಗೊನಿಯಾಸ್ಟರಿಡೀ ಗುಂಪಿನ ಪ್ರಾಣಿಗಳೂ ಅಬಿಸಲ್ ಪ್ರದೇಶದಲ್ಲಿವೆ. ಬ್ರಿಟಲ್ ಸ್ಟಾರ್ ವರ್ಗದ ಓಫಿಯೊಮೂಸಿಯಮ್, ಓಫಿಯೂರ ಜಾತಿಯವು 5000 ಮೀ. ಆಳದವರೆಗೂ ಪ್ರಸರಿಸಿವೆ. ಕಡಲಪೋರ ಗುಂಪಿನ ಅನೇಕ ಜಾತಿಯ ಪ್ರಾಣಿಗಳು 1000–4950 ಮೀ. ಆಳದಲ್ಲಿ ವಾಸಿಸುವುವು. ಎಕೈನೊತ್ಯೂರಿಡೀ, ಸಲೆನಿಡೀ, ಆಸ್ಪಿಡೊಡಯಾಡೆಮಾಟಿಡೀ, ಯೂರೆನಿಡೀ ಕುಟುಂಬದ ಪ್ರಾಣಿಗಳು ಮುಖ್ಯವಾಗಿ ಸೇರಿವೆ. ಕ್ರೈನಾಯ್ಡಿಯ ವರ್ಗದಲ್ಲಿ ತೊಟ್ಟಿರುವ ಮತ್ತು ಇಲ್ಲದಿರುವ ಪ್ರಾಣಿಗಳು 5000 ಮೀ. ಆಳದವರೆಗೂ ಪ್ರಸರಿಸಿವೆ. ಸಾಧಾರಣವಾಗಿ ಹಯೊಕ್ರೈನಿಡೀ ಮತ್ತು ಮಿಲೇರಿಕ್ರೈನಿಡೀ ಗುಂಪಿನ ಪ್ರಾಣಿಗಳು ಆಳ ಸಮುದ್ರದ ವಾಸಿಗಳು. ಕಡಲ ಸೌತೆ ಗುಂಪಿನಲ್ಲಿ ಅನೇಕ ಜಾತಿಯವು ಆಳ ಸಮುದ್ರವಾಸಿಗಳು, ಎಲ್ಯಾಸಿಪೊಡ ಜಾತಿಯವು 2000 ಮೀ. ಕೆಳಗಿನ

ನೀರಿನಲ್ಲೂ ಸಿವಲಾಕ್ಟಿಡ ಜಾತಿಯವು 1000–5000 ಮೀ. ಆಳದಲ್ಲೂ ಜೀವಿಸಿವೆ. ಕೆಲವು 12000 ಮೀ. ಆಳದಲ್ಲೂ ಸಿಕ್ಕಿವೆ. ಇವಲ್ಲದೆ ಕೆಲವು ಸಣ್ಣ ಸಣ್ಣ ಗುಂಪುಗಳೂ ಆಳಸಮುದ್ರದಲ್ಲಿ ವಾಸಿಸುವುವು.

9 ಬ್ರಯೋಜೋವ ಜೀವಿಗಳು: 3000–5720 ಮೀ. ಆಳನೀರಿನಲ್ಲಿ ವಾಸಿಸುವುವು.

10 ಬ್ರ್ಯಾಕಿಯೊಪೊಡ ಪ್ರಾಣಿಗಳು : 1800–5500 ಮೀ. ಆಳದವರೆಗೂ ವ್ಯಾಪಿಸಿವೆ.

11 ಕೀಟೊನ್ಯಾತ : ಈ ಪ್ರಾಣಿಗಳು ಸಾಮಾನ್ಯವಾಗಿ 2000–3600 ಮೀ. ಆಳದಲ್ಲಿ ಸಿಕ್ಕಿವೆ. ಹೆಟರೊಕ್ರೋನಿಯ ಮಿರ್ಯಾಬಿಲಿಸ್ ಪ್ರಭೇದ 5000 ಮೀ. ಆಳದಲ್ಲಿ ಕಂಡುಬಂದಿತು. ಸೈಪಂಕ್ಯುಲಾಯ್ಡಿಯ ಜೀವಿಗಳ ವ್ಯಾಪ್ತಿ 1900–8210 ಮೀ. ಆಳದವರೆಗೂ ಹೋಗುತ್ತದೆ. ಅನೇಕ ಪ್ರಭೇದಗಳು ನ್ಯೂಜ಼ೀಲೆಂಡ್ ಹತ್ತಿರದ ಕಾರ್ಮಡೆಕ್ ದ್ವೀಪಸಮುದ್ರ ಕಣಿವೆಯಲ್ಲಿ ಕಂಡುಬಂದಿವೆ.

**II ಪ್ರೋಟೊಕಾರ್ಡೇಟ :** ಈ ಗುಂಪಿನ ಟ್ಯೂನಿಕೇಟುಗಳಲ್ಲಿ ಅನೇಕ ಅಸಿಡಿಯನ್ ಪ್ರಾಣಿಗಳು ಜಲತಲ ಪ್ರದೇಶದಲ್ಲಿ ಸಿಕ್ಕಿವೆ.

**III ಕಶೇರುಕಗಳು :** ವಿವಿಧ ರೀತಿಯ ಮೀನುಗಳು ಈ ಪ್ರದೇಶದಲ್ಲಿವೆ. ಕೆಲವು ಪ್ರಭೇದಗಳಲ್ಲಿ ಬಹು ವಿಶಿಷ್ಟ ಲಕ್ಷಣಗಳಿವೆ.

ಮೃದ್ವಸ್ಥಿ ಮೀನುಗಳು ಕೆಲವು ಮಾತ್ರ. ಕೆಲವು ಷಾರ್ಕ್ ಮೀನುಗಳು 1500–3000 ಮೀ. ಆಳದಲ್ಲಿ ವಾಸಿಸುವುವು. ಕೈಮೀರ ಮೀನುಗಳು 2000 ಮೀ. ಆಳದಲ್ಲಿ ಕಂಡುಬಂದಿವೆ.

ಎಲುಬುಮೀನುಗಳ ಗುಂಪಿನಲ್ಲಿ ಅನೇಕ ಜಾತಿಯ ಟೀಲಿಯಾಸ್ಟಿಯೈ ಮೀನುಗಳು ಜಲತಲ ಪ್ರದೇಶದಲ್ಲಿ ವಾಸಿಸುವುವು. ಕೆಲವು ಪ್ರಭೇದಗಳು 8200ಮೀ. ಆಳದವರೆಗೂ ಪ್ರಸರಿಸಿವೆ.

ಗಲಾತಿಯ ಸಮುದ್ರಯಾನ ತಂಡದವರು ನ್ಯೂಜ಼ೀಲ್ಯಾಂಡ್ ಬಳಿಯ ಕಾರ್ನಡೆಕ್ ದ್ವೀಪಸಮುದ್ರದ 8200 ಮೀ. ಆಳದ ಕಣಿವೆಯೊಂದರಿಂದ 18 ಬಗೆಯ ಮೀನು ಪ್ರಭೇದಗಳನ್ನು ಗುರುತಿಸಿದರು. ಅದೇ ಸಮುದ್ರಯಾನದಲ್ಲಿ 3590 ಮೀ. ಆಳದಲ್ಲಿ ಗಲಾತಿಯ ತಾಮ ಆಕ್ಸೆಲಿ ಎಂಬ ವಿಚಿತ್ರವಾದ ದೀಪ್ತಿ ಸೂಸುವ ಗಾಳದ ಮೀನು, 1090 ಮೀ. ಆಳದಲ್ಲಿ ತನ್ನ ಬಾಯನ್ನು ಸಲಿಕೆ ರೀತಿ ಮುಂಚಾಚುವ ಟಿಪ್ಲೊನಸ್ ಎಂಬ ಕುರುಡು ಮೀನೂ 7130 ಮೀ. ಆಳದಲ್ಲಿ ಬಾಸೊಜೈಗ್ಯಾಸ್ ಮೀನುಗಳೂ ಸಿಕ್ಕಿದವು.

ಸಾಮಾನ್ಯವಾಗಿ 6000 ಮೀ. ಆಳಕ್ಕಿಂತ ಕೆಳಗೆ ಮೀನುಗಳು ವಾಸಿಸುವುದಿಲ್ಲ ಎಂದು ತಿಳಿದುಬಂದಿದೆ. 1951ರವರೆಗೆ ಸುಮಾರು 8 ಪ್ರಭೇದಗಳು ಮಾತ್ರ ಈ ಆಳದಲ್ಲಿ ಸಿಕ್ಕಿವೆ. ಆದ್ದರಿಂದ ಆಳಸಮುದ್ರದಲ್ಲಿ ಹಿಂಸ್ರ ಮೀನುಗಳ ಹಾವಳಿ ಕಡಿಮೆಯಾಗಿ ಸಮುದ್ರತಳದಲ್ಲಿ ವಾಸಿಸುವ ಮಿಕ್ಕ ಜೀವಿಗಳಿಗೆ ಹೆಚ್ಚು ನೆಮ್ಮದಿಯುಂಟು.

ಜಲತಲ ಪ್ರದೇಶದ ಪ್ರಾಣಿಗಳ ಹೊಂದಾಣಿಕೆಗಳು : ಜಲತಲ ಪ್ರದೇಶದ ಪ್ರತಿಕೂಲ ಪರಿಸರದಲ್ಲಿ ಜೀವಿಸಲು ಅನುಕೂಲಿಸುವಂತೆ ಇಲ್ಲಿಯ ಪ್ರಾಣಿಗಳಲ್ಲಿ ಅನೇಕ ಹೊಂದಾಣಿಕೆಗಳನ್ನು ಕಾಣಬಹುದು.

ಆಸರೆಯನ್ನು ಹಿಡಿದುಕೊಳ್ಳಲು ಅನುಕೂಲವಾದ ನೀಳವಾದ ಸ್ಪಿಕ್ಯೂಲುಗಳು ಅಥವಾ ತೊಟ್ಟುಗಳು ಹೆಕ್ಸಾಕ್ಟಿನೆಲ್ಲಿಡ ಸ್ಪಂಜುಗಳಲ್ಲಿಯೂ ಕಡಲ ಲೇಖಣಿ, ಕಡಲ ಬೀಸಣಿಗೆ (ಗಾರ್ಗೊನಿಯ) ಮತ್ತು ಕ್ರೈನಾಯ್ಡ್‌ಗಳಲ್ಲಿಯೂ ಇವೆ. ತೆಳ್ಳಗೆ ನೀಳವಾಗಿರುವ ಅಂಗಾಂಗಗಳು ಕಠಿಣಚರ್ಮಿಗಳಲ್ಲಿಯೂ (ಉದಾಹರಣೆಗೆ ಕೊಲೊಸೆಂಡೀಸ್ ಆರ್ಕ್‌ಟಸ್) ಇವೆ. ಈ ರೀತಿಯ ಅಂಗಗಳು ಮೃದುವಾದ ಉಸುಬಿನ ಮೇಲೆ ನಡೆಯಲು ಅನುಕೂಲವಾಗಿವೆ.

ಆಳನೀರಿನ ಮೀನುಗಳ ದೇಹ ಸಾಮಾನ್ಯವಾಗಿ ನೀಳವಾಗಿಯೂ ಚಪ್ಪಟೆಯಾಗಿಯೂ ಇರುತ್ತದೆ. ಬಾಲ ಚಾಟಿಯಂತಿರುವುದು. ಈ ಪ್ರದೇಶದಲ್ಲಿ ಉಷ್ಣತೆ ಕಡಿಮೆಯಾಗಿರುವುದರಿಂದ ಕ್ಯಾಲ್ಸಿಯಮ್ ಚಯಾಪಚಯ ಕ್ರಿಯೆ ಬಲು ಮಂದಗತಿಯದಾಗಿದೆ. ಇದರಿಂದ ಬಾರ್ನಕಲ್ ಪ್ರಾಣಿಗಳಲ್ಲಿ, ಕಠಿಣಚರ್ಮಿ ಮತ್ತು ಮೃದ್ವಂಗಿಗಳಲ್ಲಿ ಕ್ಯಾಲ್ಸಿಯಮ್ ಅತ್ಯಲ್ಪ ಮೊತ್ತದಲ್ಲಿದೆ. ಅನೇಕ ಮೀನುಗಳ ಕಂಕಾಲದಲ್ಲೂ ಕ್ಯಾಲ್ಸಿಯಮ್ ಅಂಶ ಬಹು ಕಡಿಮೆ. ಆದ್ದರಿಂದ ಇಲ್ಲಿನ ಪ್ರಾಣಿಗಳ ದೇಹದ ಹೊದಿಕೆ, ಚಿಪ್ಪುಗಳು ಮತ್ತು ಕಂಕಾಲ ಬಹು ಬಿಧುರವಾಗಿಯೂ ದುರ್ಬಲವಾಗಿಯೂ ಇವೆ. ಎಲುಬುಗಳು ಸಣ್ಣವಾಗಿಯೂ ಹಗುರವಾಗಿಯೂ ಇವೆಯಲ್ಲದೆ ಸ್ನಾಯುಗಳು ಕೃಶವಾಗಿವೆ. ದೇಹದ ಬೆಳವಣಿಗೆ ಕುಂಠಿತವಾಗಿರುವುದು. ಈ ರೀತಿಯ ದೇಹದ ರಚನೆ ಈ ಪ್ರಾಣಿಗಳಿಗೆ ಈಜಲು ಅನುಕೂಲವಾಗಿದೆ. ಅಂದರೆ ಪ್ಲವನತೆ, ಈ ಪರಿಸರದ ಪ್ರಾಣಿಗಳ ಒಂದು ಮುಖ್ಯ ಗುಣ. ಇಲ್ಲಿನ ಪ್ರಾಣಿಗಳು ಸಾಮಾನ್ಯ ಗಾತ್ರದವು. ಗಾತ್ರ ಅನುವಂಶೀಯವಾಗಿರಬಹುದಾದರೂ ಇಲ್ಲಿ ದೊರೆಯುವ ಕನಿಷ್ಠ ಆಹಾರದ ಅಂಶದ ಮೇಲೂ ಇದು ಅವಲಂಬಿತವಾಗಿದೆ.

ಈ ಪ್ರದೇಶದ ಪ್ರಾಣಿಗಳು ಸಾಮಾನ್ಯವಾಗಿ ಪೇಲವ ಬಣ್ಣದವು. ಅಕಶೇರುಕಗಳಲ್ಲಿ ಕೆಂಪು ಬಣ್ಣವೂ, ಮೀನುಗಳಲ್ಲಿ ಕಪ್ಪು ಅಥವಾ ನೇರಳೆ ಬಣ್ಣಗಳೂ ಪ್ರಧಾನವಾಗಿದೆ. ಮೀನುಗಳ ಮೈಮೇಲೆ ಕೆಲವು ವೇಳೆ ಬೆಳ್ಳಿ ಬಣ್ಣದ ಗುರುತುಗಳಿರುವುವು.

ಜಲತಲ ಪ್ರದೇಶದ ಕಾರ್ಗತ್ತಲೆ ಇಲ್ಲಿನ ಪ್ರಾಣಿಗಳ ಕಣ್ಣುಗಳ ಮೇಲೆ ಪ್ರಭಾವ ಬೀರಿದೆ. ಅನೇಕ ಅಕಶೇರುಕಗಳಲ್ಲಿ ಕಣ್ಣುಗಳು ಕ್ಷೀಣಿಸಿವೆ. ಕೆಲವಲ್ಲಿ ಕಣ್ಣುಗಳೇ ಇಲ್ಲ. ಶಿರೋಪಾದಿಗಳಲ್ಲಿ ಕೆಲವು ಕುರುಡಾಗಿದ್ದರೆ (ಉದಾಹರಣೆಗೆ ಸಿರೋತೌಮ ಮುರ್ರೆಯಿ), ಕೆಲವಲ್ಲಿ ಬಹು ದೊಡ್ಡ ಕಣ್ಣುಗಳಿವೆ. ಮತ್ತೆ ಕೆಲವಲ್ಲಿ ದೂರದರ್ಶಕ ರೀತಿಯ ಕಣ್ಣುಗಳಿವೆ. ಈ ರೀತಿಯ ಮಾರ್ಪಾಡುಗಳನ್ನು ಮೀನುಗಳಲ್ಲೂ ಕಾಣಬಹುದು. ಕೆಲವು ಮೀನುಗಳಲ್ಲಿ ಕಣ್ಣುಗಳಿದ್ದರೂ ಅವಕ್ಕೆ ದೃಷ್ಟಿಮಾಂದ್ಯವಿರಬಹುದೆಂದು ಕೆಲವರ ಅಭಿಪ್ರಾಯ. ಜಲತಲ ಪ್ರದೇಶದ ಎಲ್ಲ ಮೀನುಗಳಲ್ಲಿ ರೆಟಿನ ರಾಡ್‌ಗಳಿಂದ ಮಾತ್ರ ರೂಪುಗೊಂಡಿದೆ. ಕುರುಡು ಅಥವಾ ಕ್ಷೀಣಗೊಂಡ ಕಣ್ಣುಳ್ಳ ಮೀನುಗಳಲ್ಲಿ ಬೆನ್ನಿನ ರೆಕ್ಕೆ, ಹೊಟ್ಟೆ ಅಥವಾ ಬಾಲಗಳಲ್ಲಿರುವ ಉದ್ದವಾದ ತಂತುಗಳು ಸ್ಪರ್ಶೇಂದ್ರಿಯಗಳಾಗಿ ಮಾರ್ಪಾಡಾಗಿವೆ. ಬೇತಿಟೀರಾಯಿಸ್ ಮೀನಿನ ಎದೆಯ ಜೋಡಿರೆಕ್ಕೆಗಳಲ್ಲಿ ಅದರ ದೇಹದಷ್ಟೇ ಉದ್ದವಾದ ತಂತುಗಳುಂಟು. ಆಲ್ಟಿಮೊಸ್ಟೊಮಿಯಾಸ್ ಮೀನಿನ ಮೂತಿಯ ಮೇಲಿನ ಮೀಸೆಗಳು ದೇಹದ ಹತ್ತು ಪಟ್ಟು ಉದ್ದವಾಗಿದೆ. ಸೀಗಡಿ ಮುಂತಾದ ಅಕಶೇರುಕಗಳಲ್ಲಿ ಉದ್ದವಾದ ಮೀಸೆಗಳೇ ಅವುಗಳ ಸ್ಪರ್ಶೇಂದ್ರಿಯಗಳು (ಉದಾಹರಣೆಗೆ ನೆಮಟೋಕಾರ್ಸಿನಸ್ ಸೀಗಡಿ).

ಬಹುತೇಕ ಅಕಶೇರುಕಗಳು ಉಸುಬನ್ನು ತಿಂದು ಅದರ ಜೈವಿಕ ಭಾಗಗಳನ್ನು ಜೀರ್ಣಿಸಿಕೊಳ್ಳುವುವು. ಶಿರೋಪಾದಿಗಳು ಹಾಗೂ ಅನೇಕ ಮೀನುಗಳು ಮಾಂಸಾಹಾರಿಗಳು. ಕೊಳೆತ ಉಸುಬನ್ನು ತಿನ್ನುವ ಪ್ರಾಣಿಗಳಲ್ಲಿ ವದನಾಂಗಗಳು ಬಲು ಕ್ಷೀಣವಾಗಿವೆ. ಆದರೆ ಮಾಂಸಾಹಾರಿ ಮೀನುಗಳಲ್ಲಿ ಬಲಯುತ ಹಲ್ಲುಗಳುಂಟು. ಕೆಲವು ಮೀನುಗಳು ತಮ್ಮಷ್ಟೇ ದೊಡ್ಡ ಪ್ರಾಣಿಗಳನ್ನೂ ನುಂಗಬಲ್ಲವು (ಉದಾಹರಣೆಗೆ ಬಿಯಾಸ್ಮೊಡಾನ್, ಯೂರಿಫ್ಯಾರಿಂಕ್ಸ್). ಇವುಗಳಲ್ಲಿ ಚೀಲದಂಥ ದೊಡ್ಡ ಹೊಟ್ಟೆಯಿದೆ.

ಇಲ್ಲಿನ ಮೀನುಗಳಲ್ಲಿ ಪಾರ್ಶ್ವಪಂಕ್ತಿ ಅಂಗಗಳು ಚೆನ್ನಾಗಿ ರೂಪುಗೊಂಡಿದ್ದು ಶಬ್ದದ ಅಲೆಗಳನ್ನು ಸ್ವಲ್ಪ ದೂರದಿಂದಲೇ ಕಂಡುಹಿಡಿಯಬಲ್ಲವಾಗಿವೆ. ಇದರಿಂದ ಶತ್ರು ಅಥವಾ ಬೇಟೆಯ ಇರುವಿಕೆಯನ್ನು ಇವು ತಿಳಿಯುವುವು. ಘ್ರಾಣೇಂದ್ರಿಯಗಳು ಈ ಪರಿಸರದಲ್ಲಿ ಬಹುಮುಖ್ಯ. ಗಂಡು ಮತ್ತು ಹೆಣ್ಣುಗಳು ಸಂತಾನೋತ್ಪತ್ತಿಯ ಸಮಯದಲ್ಲಿ ಹತ್ತಿರ ಬರಲು ಇವು ಸಹಾಯಕವಾಗಿವೆ. ಅನೇಕ ಗಾಳದ ಮೀನುಗಳಲ್ಲಿ ಗಂಡಿನಲ್ಲಿರುವ ಘ್ರಾಣೇಂದ್ರಿಯಗಳು ಮಿಕ್ಕ ಕಶೇರುಕಗಳ ಇಂದ್ರಿಯಗಳಿಗಿಂತ ದೊಡ್ಡವು. ಬರ್ಟೆಲ್‌ಸನ್ ಎಂಬಾತನ ಊಹೆಯ ಪ್ರಕಾರ ನಿಧಾನವಾಗಿ ಚಲಿಸುವ ಹೆಣ್ಣು ತನ್ನ ಹಿಂದೆ ಒಂದು ರೀತಿಯ ವಾಸನೆಯ ಜಾಡನ್ನು ಬಿಡುತ್ತದೆ. ಈ ವಾಸನೆ ಹರಡುತ್ತಿರುವಾಗ ಗಂಡುಗಳು ಇದನ್ನು ಪತ್ತೆ ಹಚ್ಚಿ ಜಾಡನ್ನು ಹಿಂಬಾಲಿಸುತ್ತವೆ.

ಸಂದೀಪ್ತಿ (ಲೂಮಿನಿಸೆನ್ಸ್) ಜಲತಲ ಪ್ರದೇಶದ ಪ್ರಾಣಿಗಳ ಒಂದು ವಿಶೇಷ ಲಕ್ಷಣ. ಆಳಸಮುದ್ರದಲ್ಲಿ ಸಂದೀಪ್ತಶೀಲ ಜೀವಿಗಳು ಹೆಚ್ಚಾಗಿವೆ. ಕೆಲವು ಸ್ವತಃ ಪ್ರಕಾಶವನ್ನು ಹೊರಗೆಡಹಿದರೆ ಮಿಕ್ಕವು ಸಂದೀಪ್ತಶೀಲ ಬ್ಯಾಕ್ಟೀರಿಯಗಳ ಸಹಾಯದಿಂದ ಬೆಳಕನ್ನು ಚೆಲ್ಲುತ್ತವೆ. ಸುಮಾರು 50 ಬಗೆಯ ಮೀನುಗಳು ಸಂದೀಪ್ತಶೀಲ ಅಂಟನ್ನು ಸ್ರವಿಸುತ್ತವೆ ಅಥವಾ ಸಂದೀಪ್ತಶೀಲ ವಿಶೇಷಾಂಗವನ್ನು ಪಡೆದಿವೆ. ಸಂದೀಪ್ತಶೀಲ ಅಂಗಗಳು ದೇಹದ ವಿವಿಧ ಭಾಗಗಳಲ್ಲಿರಬಹುದು. ಫೋಟೋಸ್ಟೋಮಿಯಾಸ್ ಮತ್ತು ಗ್ಯಾಸ್ಟ್ರೊಸ್ಟೊಮಸ್ ಪ್ರಭೇದಗಳಲ್ಲಿ ಈ ಅಂಗಗಳು ಕ್ರಮವಾಗಿ ಪಾರ್ಶ್ವ ಪಂಕ್ತಿಗಳ ಕೆಳಗೂ ಮೇಲೂ ಪ್ರಸರಿಸಿವೆ. ಅನೇಕ ಗಾಳದ ಮೀನುಗಳಲ್ಲಿಯೂ ಈ ಅಂಗಗಳು ಕಂಡುಬರುವುವು. ಕೆಲವಲ್ಲಿ ಬೆನ್ನುರೆಕ್ಕೆಯಲ್ಲಿರುವುದು. ಗಲಾತಿಯತೌಮ ಆಕ್ಸೆಲಿ ಮೀನಿನಲ್ಲಿ ಇದು ಬಾಯಲ್ಲಿದೆ. ಕುರುಡುಮೀನುಗಳಲ್ಲಿಯೂ ಸಂದೀಪ್ತಶೀಲ ಅಂಗಗಳು ಉಂಟು (ಉದಾಹರಣೆಗೆ ಇಪ್ನಾಪ್ಸ್). ಬೆಳಕು ಉತ್ಪತ್ತಿ ಮಾಡುವ ವಿಶೇಷಾಂಗಗಳಿಗೆ ಫೋಟೊಫೋರುಗಳೆಂದು ಹೆಸರು. ಇವುಗಳ ಗ್ರಂಥಿಕೋಶಗಳಲ್ಲಿ ಸಂದೀಪ್ತಶೀಲ ಬ್ಯಾಕ್ಟೀರಿಯಗಳಿವೆ. ಫೋಟೊಫೋರುಗಳಲ್ಲಿ ಎರಡು ವಿಧ: ಸರಳ ರೀತಿಯವು ಮತ್ತು ಸಂಕೀರ್ಣ ರೀತಿಯವು. ಸಂಕೀರ್ಣ ರೀತಿಯವುಗಳಲ್ಲಿ ಮಸೂರ ಇದೆ. ಕೆಲವು ಮೀನುಗಳಲ್ಲಿ ಫೋಟೊಫೋರುಗಳು ಕಣ್ಣಿನ ಮುಂಭಾಗದಲ್ಲಿಯೂ ಕೆಲವಲ್ಲಿ ಕಣ್ಣಿನ ಕೆಳಭಾಗದಲ್ಲಿಯೂ ಇರುವುದುಂಟು. ಡಯಫಸ್ ಮೀನಿನಲ್ಲಿ ಸಂದೀಪ್ತಶೀಲ ಅಂಗ ತಲೆಯ ಮುಂಭಾಗದಲ್ಲಿ ಗಣಿಕೆಲಸಗಾರರ ತಲೆಯ ದೀಪದ ಹಾಗಿರುವುದು. ಅಕಶೇರುಕಗಳಲ್ಲಿಯೂ ಸಂದೀಪ್ತಶೀಲ ಅಂಗಗಳಿವೆ. ಸೀಗಡಿಯಲ್ಲೂ (ನೆಮಟೋಕಾರ್ಸಿನಸ್) ಶಿರೋಪಾದಿಗಳಲ್ಲೂ (ಹೆಟರೊಟ್ಯೂರಿಸ್ ಡಿಸ್‌ಪಾರ್) ಬಾಯಿಯ ಹತ್ತಿರ ಇರುವ ಕೆಲವು ವಿಶೇಷ ಗ್ರಂಥಿಗಳು ಒಂದು ರೀತಿಯ ಜಿಗುಟು ದ್ರವವನ್ನು ಸ್ರವಿಸುತ್ತವೆ. ಈ ದ್ರವ ಗ್ರಂಥಿಯಿಂದ ಹೊರಬಂದು ನೀರನ್ನು ತಾಗಿದೊಡನೆ ಬೆಳಕಿನ ಕಿಡಿಗಳು ಉತ್ಪತ್ತಿಯಾಗುವುವು. ಶತ್ರುಗಳಿಂದ ತಪ್ಪಿಸಿಕೊಳ್ಳಲು ಇದು ಒಳ್ಳೆಯ ಸಾಧನ. ಲ್ಯೂಸಿಫರಿನ್ ಎಂಬ ರಾಸಾಯನಿಕ ಹಾಗೂ ಲ್ಯೂಸಿಫರೇಸ್ ಕಿಣ್ವಗಳು ಆಕ್ಸಿಜನ್ ಸಮ್ಮುಖದಲ್ಲಿ ಪರಸ್ಪರ ಕಲೆತಾಗ ನಡೆಯುವ ಪ್ರಕ್ರಿಯೆಯಿಂದ ಸಂದೀಪ್ತಿ ಉಂಟಾಗುತ್ತದೆ. ಸಂದೀಪ್ತಶೀಲ ಅಂಗಗಳು ಬೇಟೆಯನ್ನು ಆಕರ್ಷಿಸುವುದಕ್ಕೂ ರಕ್ಷಣೆಗೂ ಒಂದು ಪ್ರಭೇದದ ಗಂಡು ಹೆಣ್ಣುಗಳು ಪರಸ್ಪರ ಆಕರ್ಷಣೆಗೂ ಸಹಾಯಕ ಎಂದೂ ತಿಳಿಯಲಾಗಿದೆ.

ಸಂತಾನೋತ್ಪತ್ತಿ : ಈ ಪ್ರಭೇದಗಳಲ್ಲಿ ಬೆಳವಣಿಗೆ ಸಾಮಾನ್ಯವಾಗಿ ಡಿಂಬಗಳಿಲ್ಲದೆ ಆಗುವುದು. ಈ ಪ್ರಾಣಿಗಳ ಮೊಟ್ಟೆಗಳು ಬಹು ದೊಡ್ಡ ಗಾತ್ರವಾದ್ದರಿಂದ ಭ್ರೂಣ ಪ್ರೌಢಾವಸ್ಥೆಯ ರೂಪ ತಳೆಯುವವರೆಗೂ ಮೊಟ್ಟೆಯಲ್ಲಿಯೇ ಬೆಳವಣಿಗೆ ಮುಂದುವರಿಯುವುದು. ಈ ಪ್ರದೇಶಗಳಲ್ಲಿ ಪ್ರಾಣಿಗಳು ಬಲು ಕಡಿಮೆ ಸಂಖ್ಯೆಯಲ್ಲಿರುವುದರಿಂದ ಗಂಡು ಹೆಣ್ಣುಗಳ ಭೇಟಿ, ಮಿಲನಗಳ ಅವಕಾಶ ಮತ್ತು ಗರ್ಭಾಂಕುರತೆ–ಇವು ಬಲು ಕಷ್ಟಸಾಧ್ಯ. ಈ ಸಮಸ್ಯೆಗಳನ್ನು ಕೆಲವು ಮೀನುಗಳು ಸುಲಭವಾಗಿ ಪರಿಹರಿಸಿಕೊಂಡಿವೆ. ಉದಾಹರಣೆಗೆ ಗಾಳದ ಮೀನುಗಳಲ್ಲಿ ದೊಡ್ಡ ಘ್ರಾಣೇಂದ್ರಿಯಗಳಿರುವ ಕುಬ್ಜ ಗಂಡು ಮೀನುಗಳು ಹೆಣ್ಣು ಮೀನುಗಳ ದೇಹವನ್ನು ತಮ್ಮ ಬಲವಾದ ಹಲ್ಲುಗಳಿಂದ ಹಿಡಿದುಕೊಂಡು ಪರಾವಲಂಬಿಗಳಾಗಿ ಬಿಡುತ್ತವೆ. ಈ ರೀತಿ ಹೆಣ್ಣಿನ ಜೊತೆಯಲ್ಲಿ ಜೀವನದ ಅಂತ್ಯದವರೆಗೂ ಇರುವುದರಿಂದ ಹೆಣ್ಣುಗಳು ಗಂಡುಗಳ ಅನ್ವೇಷಣೆಗೆ ಹೋಗಬೇಕಾಗಿಯೇ ಇಲ್ಲ.

ಈವರೆಗೆ ಅನೇಕ ವೈಜ್ಞಾನಿಕ ಸಮುದ್ರಯಾನಗಳಾಗಿದ್ದರೂ ಕಡಲಜೀವಿ ಪ್ರಭೇದಗಳ ಮಾಹಿತಿ ಇನ್ನೂ ಬಹಳವಾಗಿ ಆಗಬೇಕಾಗಿದೆ. ಹೀಗಿರುವಲ್ಲಿ ಜಲತಲ ಪ್ರದೇಶದ ಪ್ರಭೇದಗಳ ವಿಕಾಸದ ವಿಚಾರವಾಗಿ ಖಚಿತವಾಗಿ ಏನೂ ಹೇಳುವಂತಿಲ್ಲ. ರೇಡಿಯೋಲೇರಿಯನ್ ಊಸುಬುಗಳು ಮತ್ತು ಕೆಂಪು ಜೇಡಿ ಮಣ್ಣಿನಲ್ಲಿ ರೇಡಿಯಮ್ ಹೆಚ್ಚು ಮೊತ್ತದಲ್ಲಿ ಇರುವುದರಿಂದ ಇದರ ಪ್ರಭಾವ ಇಲ್ಲಿನ ಪ್ರಾಣಿಗಳ ಮೇಲೆ ಇರಲೇಬೇಕು. ಆದ್ದರಿಂದ ಇಲ್ಲಿನ ಪ್ರಭೇದೀಕರಣ ಮಿಕ್ಕ ಸಾಗರ ಪ್ರದೇಶಗಳಿಗಿಂತ ತೀವ್ರಗತಿಯಲ್ಲಿ ಆಗಿರಬಹುದು. ಅದರಲ್ಲೂ ತಳಭಾಗದಲ್ಲಿ ವಿಕೃತಿಗಳ (ಮ್ಯುಟೇಷನ್ಸ್) ಪ್ರಮಾಣ, ವಿಕಿರಣ ಪ್ರಭಾವದಿಂದ ಹೆಚ್ಚಾಗಿರಬೇಕು. ಈ ವಿಚಾರಗಳನ್ನು ತಿಳಿಯಲು ಮೂಲಭೂತ ಅಂಶಗಳು ಬಹು ಆವಶ್ಯಕ. ಈ ದಿಸೆಯಲ್ಲಿ ಸಂಶೋಧನೆಗಳಾಗುತ್ತಿದ್ದು, ಅನೇಕ ಮಾಹಿತಿಗಳು ಸಂಗ್ರಹವಾಗುತ್ತಿವೆ. ( ಎಸ್.ವಿ.)

**ಜಲದೇವತೆಗಳು :** ಜಲದ ಅಧಿದೇವತೆ ಅಥವಾ ಜಲದಲ್ಲಿ ವಾಸಮಾಡುತ್ತದೆಂದು ಮಾನವ ವಿಶ್ವಾಸವಿಟ್ಟುಕೊಂಡಿರುವ ದೇವತೆ. ಜಲಕ್ಕೆ, ವೃಷ್ಟಿಗೆ ತನ್ಮೂಲಕ ಹಳ್ಳ, ಕೆರೆ, ಕುಂಟೆ, ಸರೋವರ, ತೊರೆ, ನದಿ, ಸಮುದ್ರ ಇವುಗಳ ಅಸ್ತಿತ್ವಕ್ಕೆ ಕಾರಣಭೂತವಾದ ಶಕ್ತಿಯ ಪ್ರತೀಕ.

ಮಾನವನ ನೀರಿನ ಅಗತ್ಯ ಅನಾದಿಯಾದುದು, ಅಸಾಧಾರಣವಾದುದು. ಜಲಮಾನವನ ಅಸ್ತಿತ್ವದ ಅವಿಭಾಜ್ಯ ಅಂಗ. ನೀರಿನಿಂದಲೇ ಜೀವದ ವಿಕಾಸ ಮೊದಲಾಯಿತೆನ್ನುವುದು ಇಂದು ವೈಜ್ಞಾನಿಕ ಸತ್ಯ. ಭಾರತೀಯರ ಋಗ್ವೇದದ ಸೂಕ್ತವೊಂದು ಈ ವಿಶ್ವದ ಆದಿಯಲ್ಲಿ ವ್ಯಕ್ತ ಜೀವಗಳು ಗೋಚರವಾಗುವ ಮೊದಲು ಗಹನವಾದ ಗಭೀರವಾದ ನೀರಿತ್ತೆ ಎಂದು ಪ್ರಶ್ನಿಸುತ್ತದೆ. ಭೂಮಂಡಲದ ಬಹುಭಾಗ ಜಲಾವೃತವಾಗಿದ್ದು ಉಳಿದ ಭಾಗವೂ ಹಿಮಾವೃತವಾಗಿತ್ತೆಂದು ಇತ್ತೀಚಿನ ಭೂ ಮತ್ತು ಪುರಾತತ್ವ ಶೋಧನೆಗಳಿಂದ ವ್ಯಕ್ತವಾಗಿದೆ. ಉಪನಿಷತ್ತುಗಳಲ್ಲಿ ಬರುವ ಸೃಷ್ಟ್ಯಾತ್ಮಕ ಊಹೆಗಳೂ ಅಪ ಏವ ಆದೌ ಅಗ್ರ ಆಸೀತ್–ಇಲ್ಲಿದ್ದುದು ಮೊದಲು ನೀರೇ ಎಂದು ಪುಷ್ಟೀಕರಿಸುತ್ತದೆ. ಪುರಾಣಗಳ ದಶಾವತಾರಗಳಲ್ಲಿ ಮೊದಲನೆಯದಾದ ಮತ್ಸ್ಯಾವತಾರ ವೈಜ್ಞಾನಿಕವಾಗಿ ವಿಮರ್ಶಿಸಿದಾಗ ಜೀವದ ಉಗಮಸ್ಥಳ ಜಲವೆಂಬುದನ್ನು ಸಮರ್ಥಿಸುತ್ತದೆ. ಇಂಥ ಅನಾದಿಯಾದ ಜಲ ಒಂದು ದೇವತೆ ಎನಿಸಿಕೊಂಡಿದ್ದರೆ, ಅಪೋ ದೇವೀ–ಎಂಬುದಾಗಿ ಪೂಜೆಗೊಂಡಿದ್ದರೆ ಅದರಲ್ಲಿ ಅನೌಚಿತ್ಯವೇನೂ ಇಲ್ಲ.

ವೇದಗಳಲ್ಲಿ ಅಪಾಂ ನಪಾತ್–ನೀರಿನ ಮಗ–ಜಲದೇವತೆ. ಅಗ್ನಿಯೂ ಅಂಶತಃ ಜಲದಲ್ಲಿ ವಾಸಿಸುವ ದೇವತೆ. ಬಡಬಾಗ್ನಿ ನೀರಿನಲ್ಲಿರುತ್ತದೆ. ವರುಣ ನೀರಿಗೆ ಅಧಿದೇವತೆ. ಪುರಾಣಗಳಲ್ಲಿ ಈ ಭಾವನೆ ಪಕ್ವವಾಗಿದೆ. ಪರ್ಜನ್ಯ ವೃಷ್ಟಿಯ ಅಧಿದೇವತೆ. ಗೋವುಗಳಿಗೆ ಒಳ್ಳೆಯ ನೀರಿನ ತಾಣಗಳನ್ನು ಅವನು ಮಾಡುತ್ತಾನೆ. ಸರಸ್ವತೀ, ಗಂಗಾ, ಯಮುನಾ, ಗೋದಾವರಿ–ಈ ನದಿಗಳೂ ದೇವತೆಗಳು. ಅಪ್ಸರೆಯರು ಹೆಸರೇ ಸೂಚಿಸುವಂತೆ ಜಲದೇವತೆಗಳು. ಇಂದ್ರ, ಮಳೆರಾಯ–ಜಲದೇವತೆ.

ಜಲದ ಶಕ್ತಿ ಅದ್ಭುತವಾದುದು. ಅನಾಗರಿಕ ಜನಾಂಗಗಳು ಅದರಲ್ಲಿ ಮನ–ಎಂಬ ಅದ್ಭುತ ಶಕ್ತಿದೇವತೆ ಅಡಗಿದೆಯೆಂದು ನಂಬಿದ್ದರು. ಮಂತ್ರಮಾಟಗಳಿಗೆ ತಾಂತ್ರಿಕ ಪೂಜಾದಿಗಳಿಗೆ ಜಲ ಬೇಕು. ಜಲ ಶುದ್ಧವಸ್ತು. ಶುದ್ಧೀಕರಣಶಕ್ತಿ ಅಲ್ಲಡಗಿದೆ. (ಮೇಧ್ಯಾ ವಾ ಆಪಃ–ಶತಪಥಬ್ರಾಹ್ಮಣ). ಆದ್ದರಿಂದಲೇ ಚಿತಾಭಸ್ಮ, ಅಸ್ಥಿಗಳು, ಇತರ ಕಾಣಿಕೆಗಳು ಅದಕ್ಕೆ ತರ್ಪಣವಾಗುತ್ತವೆ. ದೇವತಾವಿಗ್ರಹಗಳಿಗೆ ರಾಜ ಮಹಾರಾಜರುಗಳಿಗೆ ಅದರಿಂದ ಮಸ್ತಕಾಭಿಷೇಕವಾಗಬೇಕು. ಪವಿತ್ರ ಕಾರ್ಯಮಾಡುವಾಗ, ಪುಣ್ಯ ಅಥವಾ ಶುಭಕಾರ್ಯ ಮಾಡುವಾಗ ಜಲಸ್ನಾನವಾಗಬೇಕು. ಪೂಜಾದಿಗಳು ಜಲಸನ್ನಿಧಿಯಲ್ಲಿ ನಡೆಯಬೇಕು. ವಿಗ್ರಹಾದಿಗಳ (ಭಗ್ನಮೂರ್ತಿಗಳೂ ಸೇರಿ) ಪಿತೃತರ್ಪಣಾದಿಗಳ ಬಲಿಗಳು ಜಲದಲ್ಲಿ ಲೀನವಾಗಬೇಕು. ಕಾಶಿ, ರಾಮೇಶ್ವರ, ಪುರಿ, ದ್ವಾರಕೆ, ಸೋಮನಾಥ, ಗೋಕರ್ಣ, ಹರಿದ್ವಾರ, ಬದರಿ, ಕೇದಾರನಾಥ್ ಮುಂತಾದ ಸ್ಥಳಗಳಲ್ಲಿ ಸ್ನಾನ ಮತ್ತೂ ಪವಿತ್ರವಾದುದು. ಇಲ್ಲಿ ಸ್ನಾನಮಾಡಿ ಇಲ್ಲಿರುವ ವೈಷ್ಣವ, ಶೈವ ದೇವತೆಗಳ ದರ್ಶನಮಾಡಿದರೆ ಪುಣ್ಯಪ್ರದ ವಾದುದು. ಈ ಎಲ್ಲ ಭಾವನೆಗಳೂ ಜಲದ ದೈವತ್ವವನ್ನು ಜಲದೇವತೆಗಳಲ್ಲಿ ನಂಬುಗೆಯನ್ನು ಪುಷ್ಟೀಕರಿಸುತ್ತವೆ. (ಸಿ.ಜಿ.ವಿ)

ಯಾವುದಾದರೊಂದು ಧಾರ್ಮಿಕ ಕಾರ್ಯ ಮಾಡುವಾಗ ಸ್ಥಳಶುದ್ಧಿ ಮಾಡಿಕೊಳ್ಳ ಬೇಕಾದರೆ ಪುಣ್ಯಾಹವಾಚನವೆಂಬ ಕ್ರಿಯೆಯನ್ನು ನಡೆಸಲಾಗುತ್ತದೆ. ಎರಡು ಕಲಶಗಳಲ್ಲಿ ನೀರು ತುಂಬಿ ವರುಣಾದಿ ದೇವತೆಗಳನ್ನು ಆವಾಹಿಸಿ ಪೂಜಿಸಲಾಗುತ್ತದೆ. ಯಾವುದೇ ಪೂಜೆಯ ಆರಂಭದಲ್ಲಿ ಪಾದ್ಯಾದಿಗಳಿಗೆ ಉಪಯೋಗಿಸಲು ಕಲಶದಲ್ಲಿ ಇಟ್ಟುಕೊಂಡಿರುವ ನೀರಿಗೆ (ಅಗ್ರೋದಕ) ಪೂಜೆ ಮಾಡುತ್ತಾರೆ. ಸ್ವರ್ಣಗೌರೀವ್ರತದಲ್ಲಿ ನದೀ ತೀರದಿಂದ ಮರಳು ತರಬೇಕೆಂಬ ನಿಯಮವಿದೆ. ಆಗ ಗಂಗಾಪೂಜೆ ವಿಹಿತವಾಗಿದೆ. ಋಷಿಪಂಚಮಿ ಮತ್ತು ಅನಂತಪದ್ಮನಾಭ ವ್ರತಗಳ ಅಂಗವಾಗಿ ಪ್ರಾರಂಭದಲ್ಲಿ ಯಮುನಾ ಪೂಜೆಯನ್ನು ಮಾಡಬೇಕೆಂಬ ವಿಧಿಯಿದೆ. ವೈಶಾಖ ಮಾಸದ ಶುದ್ಧ ಸಪ್ತಮೀ ದಿನವನ್ನು ಗಂಗಾಸಪ್ತಮೀ ಎಂದು ಕರೆಯಲಾಗಿದೆ. ಅದೊಂದು ವ್ರತ. ವರ್ಷದ ಇನ್ನೂ ಕೆಲವು ದಿನಗಳಲ್ಲಿ ಗಂಗಾಪೂಜೆ ನಡೆಯಬೇಕೆಂಬ ನಿಯಮ ಕಂಡುಬರುತ್ತದೆ. ತುಲಾಸಂಕ್ರಮಣದ ದಿನ ತಲಕಾವೇರಿಯಲ್ಲಿ ಕಾವೇರಿ ನದಿಯು ಉಕ್ಕಿಬರುವ ಅದ್ಭುತ ಸನ್ನಿವೇಶವಿದೆ. ಅಂದು ಕೊಡಗಿನ ಜನರಿಗೆ ಹಬ್ಬ. ಆ ದಿನ ಅಲ್ಲಿಂದ ನೀರು ತುಂಬಿ ತರುತ್ತಾರೆ. ಮುಂದಿನ ವರ್ಷದವರೆಗೂ ಅದನ್ನಿಟ್ಟುಕೊಂಡು ಪೂಜೆ ಮಾಡುತ್ತಾರೆ. (ಆರ್.ಎಸ್.ಎಸ್.)

ಪುರಾತನ ಬ್ಯಾಬಿಲಾನಿನ ಜನರು ಗಹನ ಜಲರಾಶಿಯಲ್ಲಿ ಇಯಾ (ಅಪ್ಪು) ಎಂಬ ಜಲದೇವತೆ ವಾಸಿಸುತ್ತದೆಂದು ನಂಬಿದ್ದರು. ಯೂಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳು ಅಕೂಪಾರ (ಸಂಸ್ಕೃತದಲ್ಲೂ ಇದೇ ಶಬ್ದ–ಅರ್ಥ) ಸಮುದ್ರದ ಮಕ್ಕಳು. ಮರ್ದಾಕ್ ದೇವತೆ ವರುಣನಿಗೆ ಪ್ರತಿವಾದಿ. ಆತ ನದೀನಿಯಂತ್ರಣದ ದೇವತೆ. ತಾಮೂಜ಼್ ದಿಟದ ಜಲಕುವರ, ವೇದದ ಅಪಾಂ ನಪಾತ್ (ನೀರಿನ ಮಗ) ಇದ್ದಂತೆ. ಅದಾದ್ ರಮನ್ ಸುಮೇರಿಯನರ ದುಷ್ಟ ವೃಷ್ಟಿದೇವತೆ.

ಪ್ರಾಚೀನ ಈಜಿಪ್ಟಿನಲ್ಲೂ ನಿಸ್ಸೀಮ ಜಲರಾಶಿ ಸ್ವರ್ಗ ಮರ್ತ್ಯಗಳ ಸಕಲ ಚರಾಚರ ವಸ್ತುಗಳ ಉಗಮಸ್ಥಾನ ಎನಿದಿದೆ. ಭಾರತೀಯರ ಗಂಗೆ ಹೇಗೆ ತ್ರಿಪಥಗೆಯೋ ಅಂತೆಯೇ ನೀಲನದಿ ಭೂವ್ಯೋಮವ್ಯಾಪಕವಾದುದು. ಮತ್ಸ್ಯ ಭಾರತೀಯರಿಗೆ ಹೇಗೊ ಹಾಗೆ, ಮೊದಲ ಪೂಜನೀಯ ವಸ್ತು, ಪಾವನವಾದುದು. ಹಾಪೀ ಎಂಬುದು ಜಲದೇವತೆ. ಗಂಡುರೂಪಿನ ಆ ದೇವತೆಗೆ ಎರಡು ಮೊಲೆಗಳು. ಕೈಯಲ್ಲಿ ಕಮಲ. ಇಲ್ಲಿನ ಸೂಕ್ತವೊಂದು ವರುಣದೇವತಾ ಸೂಕ್ತವೋ ಎಂಬಂತಿದೆ. ಆ ದೇವತಾಪ್ರಾರ್ಥನೆಗಾಗಿ ನೀಲನದಿ ಉಗಮಕ್ಕೆ ಹಾಥಾರ್ ಎಂಬ 'ಗೌ' ದೇವತೆ ಕಾರಣ. ಈ ನದಿಯ ಇಕ್ಕೆಲಗಳೂ ಪವಿತ್ರ ಸ್ಥಳಗಳು. ಗೂಳಿಗಳು ಕುದುರೆ ಕೋಳಿಗಳು ಇದಕ್ಕೆ ತರ್ಪಣ ವಸ್ತುಗಳು. ಅಪೇಪ್ ಸಮುದ್ರರಾಕ್ಷಸದೇವತೆ. 'ನು' ಎಂಬುದು ಮತ್ತೊಂದು ಜಲದೇವತೆ. ಖ್ನೇಮು, ಸತೇತ್, ಅಂಕೇತ್ ಇವು ಮೂರು ಪ್ರಧಾನ ಜಲದೇವತೆಗಳು. ರಾ, ಗೇಬ್, ನುತ್ ನೀತ್, ಮೆರತ್, ಮುತ್, ಮೆಹ್ತ್‌ವರ್ತ್ ಇವು ಇತರ ಜಲದೇವತೆಗಳು. ಓಸಿರಿಸ್ ಮೊದಲು ನೀರಿನಲ್ಲಿ ಮುಳುಗಿದ ಪಾತಾಳ ದೇವತೆ. ಅದು ಸರ್ವದೇವತಾ ಸಮನ್ವಯಶಕ್ತ. ಹೀಗೆಯೇ ಟಗರಿನ ನಾಲ್ಕು ತಲೆಗಳನ್ನು ಮೊಸಳೆಯನ್ನು ಚೇಳನ್ನು ಪ್ರತಿನಿಧಿಸುವ ದೇವತೆಗಳಿವೆ. ಕೆಲವು ದೇವತೆಗಳ ಕೈಯಲ್ಲಿ ಜಲಪಾತ್ರೆ ಅಥವಾ ಸಸ್ಯ ಇರುತ್ತದೆ.

ಗ್ರೀಕ್ ಜನಾಂಗದಲ್ಲೂ ಜಲವೇ ಸರ್ವದ ಮೂಲವೆಂಬ ಭಾವನೆಯಿತ್ತು. ಹೀಸೀಯಡ್ ತನ್ನ ತಿಯೋಗನಿ ಎಂಬ ಗ್ರಂಥದಲ್ಲಿ ವಿಕ್ಯಾಮು ಮತ್ತು ತೀತಿಸ್ ಎರಡೂ ದ್ಯಾವಾಪೃಥಿವಿಯ ಮಕ್ಕಳ–ಮೂಲ ಜಲದೇವತೆಗಳು ಎಂದು ಬರೆದಿದ್ದಾನೆ. ದೇವತ್ವಾರೋಪ ಮಾಡಲ್ಪಟ್ಟ ಜಲದೇವತೆಗಳೆಂದರೆ ಟ್ರೈತಾನ್, ಪ್ರೋತಿಯಸ್, ಗ್ಲಾಮೆ, ನೀರಿಯಸ್ ಮುಂತಾದುವು. ಪಸೈಡನ್ ಸಮುದ್ರಾಧಿದೇವತೆ; ಅಯೋನಿಯನ್ ಮತ್ತು ಮಿನೀಯನ್ ಜನಾಂಗಗಳ ಆದಿಪುರುಷ. ಬಿರುಗಾಳಿ ಏಳುವುದು ಭೂಕಂಪಗಳಾಗಿ ಬೆಟ್ಟಗಳೇ ಸೀಳಿ ಹೋಳುಹೋಳು ಗಳಾಗುವುದು, ದ್ವೀಪಗಳು ಜಲಮಯವಾಗುವುದು ಈ ದೇವತೆಯ ಕೈವಾಡ. ಒಡಿಸಿ ಕಾವ್ಯದಲ್ಲಿ ಮಾತ್ರ ಇದೊಂದು ದುಷ್ಟ ಸಮುದ್ರದೇವತೆ. ಗ್ರೀಕರ ಮತ್ತೊಂದು ಜಲದೇವತೆ ನೆಪ್ಚೂನ್ ಕೈಯಲ್ಲಿ ತ್ರಿಶೂಲ ಹಿಡಿದು ಸಮುದ್ರಕುದುರೆಯೇರಿರುವ ಇದು ಸಮುದ್ರಾಧಿದೇವತೆ ವರುಣನ ಪ್ರತಿವಾದಿ. ನೀರೀಯಿಡ್‌ಗಳೆಂಬ ಜಲಕನ್ಯೆಯರಲ್ಲಿ ಗ್ರೀಕ್ ಜನಪದರು ನಂಬುಗೆಯಿಟ್ಟಿದ್ದರು.

ಇದೇ ರೀತಿ ಪ್ರಾಚೀನ ಹೀಬ್ರೂ ಮತ್ತು ಯೆಹೂದಿ ಜನಾಂಗಗಳಲ್ಲೂ ಜಲದಲ್ಲಿ ದೈವೀಶಕ್ತಿ ಅಡಗಿದೆ, ಅದು ಪವಿತ್ರತಮ, ಸಕಲ ಚರಾಚರ ವಸ್ತುಗಳಿಗೆ ಆದಿಯ ಆಕರ ಎಂಬ ಭಾವನೆಯಿತ್ತು. ಸಮುದ್ರವಾಸಿಯಾದ ಸಸ್ತನಿ ಪ್ರಾಣಿ–ಜರಾಯುಜವನ್ನು (ಮರ್‌ಮೇಡ್) ಅದರ ರೂಪು ನೋಡಿ ಜಲಕನ್ಯೆಯೆಂದು ಭ್ರಮಿಸಿ ಹೆಸರಿಟ್ಟವರು ಯಾರೋ ಅಂಬಿಗರೆಂಬ ನಂಬಿಕೆಯಿದೆ. (ಸಿ.ಜಿ.ಪಿ)

**ಜಲಧರಗಳು :** ತಮ್ಮ ಮೂಲಕ ಪ್ರವಹಿಸುವ ಭೂಜಲವನ್ನು ತಮ್ಮಲ್ಲಿ ಹುದುಗಿಸಿಟ್ಟುಕೊಂಡು ಮುಂದೆ ಚಿಲುಮೆಯ ಮೂಲಕ ಇಲ್ಲವೇ (ಬಾವಿಗಳನ್ನು ತೋಡಿದಾಗ) ಒರತೆಯ ಮೂಲಕ ನೀರನ್ನು ಒದಗಿಸುವವು (ಆಕ್ವಿಫೈಯರ್ಸ್). ಈ ಬಗೆಯ ಶಿಲಾನಿಕ್ಷೇಪ ಅಥವಾ ಸ್ತರಗಳ ಮಂದ ಮತ್ತು ವಿಸ್ತಾರವನ್ನು ಅನುಸರಿಸಿ ಅವುಗಳಲ್ಲಿ ದೊರೆಯುವ ಭೂಜಲದ ಮೊತ್ತವನ್ನು ನಿರ್ಧರಿಸಬಹುದು. ನೆಲದ ಮೇಲೆ ಬಿದ್ದ ಮಳೆಯ ನೀರಿನ ಬಹುಭಾಗ ಇಳಿಜಾರಿನ ಕಡೆ ಹರಿದು ಹತ್ತಿರದ ನದಿಯನ್ನೋ ಸಮುದ್ರವನ್ನೋ ಸೇರುತ್ತದೆ. ಉಳಿದ ನೀರು ನೆಲಭಾಗದದಲ್ಲಿರುವ ವಿವಿಧ ಶಿಲೆಗಳ ಮೂಲಕ ಹಾದು ಆಳಕ್ಕೆ ಜಿನುಗುತ್ತದೆ. ಜಿನುಗುವಿಕೆಗೆ ಶಿಲೆಯ ರಚನೆಯೇ ಅಲ್ಲದೆ ಭೂಗುರುತ್ವವೂ ಸಹಾಯಕ. ಶಿಲೆಗಳಲ್ಲಿ ಮೂರು ಮುಖ್ಯ ವರ್ಗಗಳಿವೆ–ಅಗ್ನಿಶಿಲೆಗಳು, ಜಲಜ ಶಿಲೆಗಳು ಹಾಗೂ ರೂಪಾಂತರ ಶಿಲೆಗಳು. ಪ್ರತಿ ಮುಖ್ಯವರ್ಗದಲ್ಲೂ ಹಲವಾರು ಬಗೆಗಳನ್ನು ಗುರುತಿಸಲಾಗಿದೆ. ಅವು ತಮ್ಮ ಒಳರಚನೆ ಮತ್ತು ಖನಿಜ ಸಂಯೋಜನೆಯಲ್ಲಿ ಏಕರೀತಿಯಾಗಿರುವುದಿಲ್ಲ. ಕೆಲವು ಅಡಕವಾದ ರಚನೆಯನ್ನೂ ಮತ್ತೆ ಕೆಲವು ಅಳ್ಳಕವಾದ ಒಳರಚನೆಯನ್ನೂ ತಳೆದಿರುತ್ತವೆ. ಮೊದಲ ರೀತಿಯ ರಚನೆಯಲ್ಲಿ ಶಿಲೆಯ ಖನಿಜ ಕಣಗಳು ದಟ್ಟೈಸಿ ಬಹು ಒತ್ತಾಗಿರುತ್ತವೆ. ಅವುಗಳ ನಡುವೆ ಹೊರವಸ್ತುವಿನ ಪ್ರಸರಣೆ ಬಹು ಕಷ್ಟಕರ. ಅನೇಕ ಅಗ್ನಿಶಿಲೆಗಳು ಹಾಗೂ ಕೆಲವು ರೂಪಾಂತರ ಶಿಲೆಗಳ ಒಳರಚನೆ ಈ ತೆರನಾಗಿದ್ದು ಮಳೆಯ ನೀರು ಇವುಗಳ ಮೂಲಕ ಸುಲಭವಾಗಿ ಜಿನುಗಲಾರದು. ಇವೇ ಅವ್ಯಾಪ್ಯಶಿಲೆಗಳು. ಇವುಗಳ ಸರಂಧ್ರತ್ವ ಸಹ ಬಹು ಅಲ್ಪ. ಆದರೆ ಇವು ಬೀಳು ಬಿದ್ದು ಶಿಥಿಲಗೊಂಡಾಗ ರಚನೆಯೂ ಸಡಿಲಗೊಂಡು ಹಲವಾರು ಸೀಳುಗಳೂ ಬಿರುಕುಗಳೂ ಉಂಟಾಗುವುದರ ಜೊತೆಗೆ ಅಡಕವಾದ ರಚನೆಯೂ ಅಳ್ಳಕವಾಗಿ ಮೇಲೆ ಬಿದ್ದ ನೀರು ಸುಲಭವಾಗಿ ಜಿನುಗಲು ಸಾಧ್ಯವಾದೀತು. ಆದರೆ ಜಲಜಶಿಲೆಗಳು ದ್ವಿತೀಯಕ ಶಿಲೆಗಳಾಗಿ ಶಿಲಾಛಿದ್ರಗಳ ಒಟ್ಟುಗೂಡುವಿಕೆಯಿಂದ ರೂಪುಗೊಳ್ಳುತ್ತವೆ. ಹೀಗಾಗಿ ರಚನೆಯಲ್ಲಿ ಅಳ್ಳಕವಾಗಿದ್ದು, ಇವುಗಳ ಸರಂಧ್ರತೆಯೂ ಹೆಚ್ಚು. ಅದರಲ್ಲೂ ಶಿಲಾಛಿದ್ರಗಳು ಗಾತ್ರದಲ್ಲಿ ದಪ್ಪವಾಗಿದ್ದರಂತೂ ಆ ಕಣಗಳ ನಡುವೆ ಸಾಕಷ್ಟು ಸ್ಥಳವೂ ಇರುತ್ತದೆ. ಈ ಕಾರಣ ಇಮರಿದ ನೀರು ಸುಲಭವಾಗಿ ಇವುಗಳ ಮೂಲಕ ಪ್ರವಹಿಸಬಲ್ಲುದು. ಈ ರೀತಿ ಖನಿಜಕಣಗಳ ನಡುವೆ ನೀರು ನುಗ್ಗಿ ಹೆಚ್ಚು ಹೆಚ್ಚು ಆಳಕ್ಕೆ–ಭೂಗುರುತ್ವದ ಕಾರಣ–ಹೋಗುತ್ತಿರುತ್ತದೆ. ಇವನ್ನು ವ್ಯಾಪ್ಯ (ಪರ್ಮಿಯಬಲ್) ಶಿಲೆಗಳೆಂದು ಸಹ ಕರೆಯುತ್ತಾರೆ. ಪೆಂಟೆಕಲ್ಲು, ಮರಳುಗಲ್ಲು, ದಪ್ಪ ಮರಳುಗಲ್ಲು ಮುಂತಾದವು ಇವಕ್ಕೆ ಅತ್ಯುತ್ತಮ ಉದಾಹರಣೆಗಳು. ಆದರೆ ಇದೇ ವರ್ಗದ ಜೇಡುಶಿಲೆ ಮತ್ತು ಸುಣ್ಣಶಿಲೆಗಳಲ್ಲಿ ಈ ಬಗೆಯ ಅಳ್ಳಕವಾದ ರಚನೆ ಇರುವುದಿಲ್ಲ. ಇವು ಬಹು ಸೂಕ್ಷ್ಮಕಣಗಳ ದಟ್ಟೈಸುವಿಕೆಯಿಂದ ಶಿಲೆಗಳು ಹೀಗಾಗಿ ಇವು ನೀರು ಜಿನುಗಲು ಅಷ್ಟು ಉತ್ತಮವಲ್ಲ. ಮರಳುಗಲ್ಲಿನ ಸರಂಧ್ರತ್ವ ಶೇ.10–ಶೇ.30 ರಷ್ಟಾದರೆ, ಜೇಡು ಮತ್ತು ಸುಣ್ಣಶಿಲೆಗಳ ಸರಂಧ್ರತ್ವ ಕೇವಲ 0%–10% ರಷ್ಟು ಮಾತ್ರ ಎಂಬ ಅಂಶವನ್ನು ನೆನಪಿನಲ್ಲಿಡಬಹುದು.

ಸುಣ್ಣಶಿಲೆ ಒಳರಚನೆ ನೀರಿನ ಇಮರುವಿಕೆಗೆ ಅಷ್ಟು ಸಹಾಯಕವಲ್ಲದಿದ್ದರೂ ಅವುಗಳ ಬಿರುಕು ಹಾಗೂ ಸೀಳುಗಳಲ್ಲಿ ನೀರು ಪ್ರವಹಿಸುವಾಗ ಸುಣ್ಣಾಂಶ ನೀರಿನಲ್ಲಿ ಕ್ರಮೇಣ ಕರಗುತ್ತ ಬಿರುಕು ದೊಡ್ಡದಾಗುತ್ತಲೂ ಅಗಲವಾಗುತ್ತಲೂ ಹೋಗುತ್ತದೆ. ಒಮ್ಮೊಮ್ಮೆ ಹೀಗಾದಾಗ ಕುಳಿಗಳು ಕಾಲಕ್ರಮೇಣ ಸಣ್ಣ ಹೊಂಡಗಳಾಗುವುದೂ ಸಾಧ್ಯ. ಅಲ್ಲದೆ ಕಾಲುವೆಗಳೂ ಹೊಂಡಗಳೂ ಒಮ್ಮೊಮ್ಮೆ ಆಳದಲ್ಲಿ ಹುದುಗಿದ್ದು ಮೇಲ್ಭಾಗದಲ್ಲಿ ಸುಣ್ಣ ಶಿಲಾಪ್ರಸ್ತರದಿಂದ ಮುಚ್ಚಿಹೋಗಿರುವುದೂ ಉಂಟು. ಅಗೋಚರವಾದ ಹಲವಾರು ನದಿಗಳನ್ನೂ ಗುರುತಿಸಲಾಗಿದೆ. ಹೀಗೆ ಸುಣ್ಣಶಿಲೆಯೂ ಉತ್ತಮ ಜಲಧರವೆನಿಸಿದೆ.

ಅಗ್ನಿಶಿಲೆಗಳು ಜ್ವಾಲಾಮುಖಿಯ ಶಿಲೆಗಳಾದ ಬೆಸಾಲ್ಟ್ ಲಾವಾಸ್ತರಗಳು, ಅದರಲ್ಲೂ ಪ್ರವಾಹದ ತುಯ್ತಕ್ಕೆ ಸಿಕ್ಕಿ ನುಚ್ಚು ನೂರಾಗಿರುವ ಸ್ತರಗಳು ಮತ್ತು ಅನಿಲರಂಧ್ರ ರಚನೆಯ ಅಗ್ನಿಶಿಲೆಗಳು ಉತ್ತಮಜಲಧರಗಳೆಂದು ಪರಿಗಣಿತವಾಗಿವೆ. ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಅನೇಕ ನೀರ ಚಿಲುಮೆಗಳು ಬೆಸಾಲ್ಟ್ ಶಿಲಾಸ್ತರಗಳಲ್ಲಿವೆ. ಮಹಾರಾಷ್ಟ್ರದ ಪಶ್ಚಿಮ ಕರಾವಳಿಯ ಅನೇಕ ಚಿಲುಮೆಗಳು ದಖಿನ್ ಬೆಸಾಲ್ಟ್‌ನ ಸ್ತರಗಳಲ್ಲಿರುವುದನ್ನೂ ಕಾಣಬಹುದು.

ಜಲಧರಗಳು ವಿಸ್ತಾರವಾಗಿ ಹರಡಿರುವ ಪ್ರದೇಶವನ್ನು ಉತ್ತಮ ಭೂಜಲ ನಿಕ್ಷೇಪಗಳೆನ್ನಬಹುದು. ಸಾಮಾನ್ಯವಾಗಿ ಇವು ಇಳುಕಲು ಪ್ರದೇಶದಲ್ಲಿರುವ ಕಾರಣ ನೀರಿನ ಸರಬರಾಜು ಸತತವಾಗಿದ್ದು ವಾರ್ಷಿಕ ಬಳಕೆಯನ್ನೂ ಮೀರಿ ನೀರು ಅಧಿಕ ಪ್ರಮಾಣದಲ್ಲಿ ಸದಾಕಾಲವೂ ದೊರೆಯುತ್ತವೆ. ಇವು ಪ್ರಕೃತಿ ನಮಗಾಗಿ ಜೋಪಾನವಾಗಿ ಕಾಯ್ದಿರಿಸಿರುವ ಅತ್ಯುತ್ತಮ ನಿಕ್ಷೇಪಗಳು. (ಬಿ.ವಿ.ಜಿ.)

**ಜಲಪಾತ :** ನದೀಪಾತ್ರ ಬಲು ಕಡಿದೂ ಆಳವೂ ಆಗಿರುವೆಡೆಯಲ್ಲಿ ನೀರಿನ ದುಮುಕಾಟ (ವಾಟರ್ ಫಾಲ್). ಬರೆಯ ಅಂಚು ಬಲು ಕಡಿದಾಗಿದ್ದರೆ ಅಲ್ಲಿ ನೀರು ಅತಿ ರಭಸದಿಂದ ನೆಗೆಯುವಾಗ, ನೆಲಸಂಪರ್ಕವೇ ಇಲ್ಲದೆ, ಹಲವಾರು ಅಡಿಗಳ ಆಳದಲ್ಲಿನ ತಳಕ್ಕೆ ಕೆಡೆಯಬಹುದು. ಬರೆ ಅಷ್ಟೊಂದು ಕಡಿದಾಗಿರದಿದ್ದರೆ ನೀರು ಅದರ ಮೈಯನ್ನು ತೊಳೆದುಕೊಂಡೇ ವೇಗದಿಂದ ಕೆಳಕ್ಕೆ ಬೀಳುತ್ತದೆ.

ಒಂದು ನದಿಯ ಉಗಮದಿಂದ ಅದು ಕೊನೆಯಾಗುವ ಮುಖದ ವರೆಗಿನ ಅದರ ಪ್ರವಾಹ ಮಾರ್ಗವನ್ನು ಮೇಲ್ಕಣಿವೆ (ಪರ್ವತಭಾಗ), ನಡುಕಣಿವೆ (ಮಧ್ಯಭಾಗ) ಮತ್ತು ಕೆಳಭಾಗ (ಬಯಲು ಭಾಗ) ಎಂಬುದಾಗಿ ವಿಭಾಗಿಸಬಹುದು. ಈ ಮೂರು ವಿಭಾಗಗಳಲ್ಲೂ ನದಿಯ ಚಲನಾತ್ಮಕ ಕ್ರಿಯೆಗಳಾದ ಕೊರೆಯುವಿಕೆ, ಸ್ಥಾನಾಂತರೀಕರಣ ಸಂಚಯನಗಳು ಆಯಾ ಭಾಗದ ಇಳಿಜಾರು ಮತ್ತು ಶಿಲಾಪ್ರಸ್ತರಗಳ ಲಕ್ಷಣ, ಹವೆ ಮತ್ತು ಇತರ ವೈಶಿಷ್ಟ್ಯಗಳಿಗೆ ಅನುಸಾರವಾಗಿ ಸಾಗುತ್ತವೆ. ನದಿಯ ಮೇಲ್ಕಣಿವೆ ಎತ್ತರವಾದ ಪರ್ವತದಲ್ಲಿರುತ್ತದೆ. ಈ ಭಾಗದಲ್ಲಿ ಕಡಿದಾದ ಇಳಿಜಾರುಗಳು ಸ್ವಾಭಾವಿಕ. ಅಲ್ಲಿ ನದಿ

ಆಗ್ನೇಯ ವೆನಿಜ್ವೆಲದ ಏಂಜಲ್ ಜಲಪಾತ 3,213 ಅಡಿ ಆಳಕ್ಕೆ ಧುಮುಕುವ ಈ ಜಲಪಾತ ಪ್ರಪಂಚದಲ್ಲೇ ಅತಿ ಎತ್ತರದ್ದು ಹಾಗೂ ನಿರರ್ಗಳ ಎಂದು ಹೇಳಲಾಗಿದೆ

ಅತಿ ವೇಗದಿಂದ ಪ್ರವಹಿಸುವುದರಿಂದ ಅದರ ಪಾತ್ರದ ಕೊರೆತ ಅತ್ಯಧಿಕವಾಗಿಯೂ ತೀವ್ರವಾಗಿಯೂ ನಡೆಯುತ್ತದೆ. ಪ್ರವಾಹದ ಕೊರೆವ ಸಾಮರ್ಥ್ಯ ನೀರಿನ ಮತ್ತು ಅದರಲ್ಲಿರುವ ಇತರ ವಸ್ತುಗಳ ಪರಿಮಾಣ, ಶಿಲಾಪ್ರಸ್ತರಗಳ ಲಕ್ಷಣ ಮತ್ತು ಎತ್ತರಗಳನ್ನು ಅವಲಂಬಿಸಿದೆ. ನದಿಯ ಪ್ರವಾಹಮಾರ್ಗದಲ್ಲಿ ಕಠಿಣ ಮತ್ತು ಮೃದು ಶಿಲಾ ಪ್ರಸ್ತರಗಳು ಪರ್ಯಾಯ ಕ್ರಮದಲ್ಲಿ ಬೆರೆತಿರುವುದುಂಟು. ಕಠಿಣ ಶಿಲೆಗಳ ಕೊರೆತ ಬಲು ನಿಧಾನ; ಮೃದು ಶಿಲೆಗಳಾದರೋ ಬಲು ಬೇಗನೆ ಶಿಥಿಲಗೊಳ್ಳುತ್ತವೆ. ಆಗ ಕಡಿದಾದ ಇಳಿತವುಂಟಾಗಿ ಮೇಲಿನ ಕಠಿಣಶಿಲೆಯ ಅಡಿಯಲ್ಲಿ ಹಳ್ಳವೊಂದು ನಿರ್ಮಾಣವಾಗುತ್ತದೆ. ಕೊರೆತ ಇನ್ನಷ್ಟು ಮುಂದೊತ್ತಿದಂತೆ ಕಠಿಣ ಶಿಲಾಮುಖ ಲಂಬವಾಗಿ ನಿಂತಂತೆ ಕಾಣುವುದು. ಆಗ ನದಿಯ ನೀರು ಅದರ ಮೇಲಿಂದ ಹರಿಯುತ್ತ ಒಮ್ಮೆಲೇ ಕೆಳಕ್ಕೆ ಹಾರಿಬೀಳುವುದು. ಇದೇ ಜಲಪಾತ. ಮೇಲಿನ ಕಠಿಣ ಶಿಲೆಗೆ ಜಲಪಾತಕಾರಿ ಎಂದು ಹೆಸರು. ಕಾಲಕ್ರಮದಲ್ಲಿ ಅದು ಶಿಥಿಲವಾಗುತ್ತ ಹೋದಂತೆ ಜಲಪಾತ ಹಿಮ್ಮೆಟ್ಟುವುದು. ಜಲಪಾತಗಳು ಹಲವು ಅಡಿಗಳಿಂದ ನೂರಾರು ಅಡಿಗಳಷ್ಟು ಆಳದವರೆಗೆ ಧುಮುಕುವವು. ಅವುಗಳ ಶೀವಿ, ಸಿಡಿಯುವ ತುಷಾರಗಳ ಚೆಲುವು, ಬಿಸಿಲಿನಲ್ಲಿ ಚೆಲ್ಲಾಡುವ ಬಣ್ಣಗಳ ಬೆಡಗು, ಭೋರ್ಗರೆಯುವ ಶಬ್ದಗಾಂಭೀರ್ಯ ಮತ್ತು ಪರಿಸರದ ಸೃಷ್ಟಿಸೌಂದರ್ಯ ವೀಕ್ಷಕರ ಕವಿ ಕಣ್ಮನಗಳನ್ನು ಸೂರೆಗೊಳ್ಳುತ್ತವೆ. ಜಲಪಾತಗಳ ಚಲನಶಕ್ತಿಯನ್ನು ಉಪಯುಕ್ತವಾಗಿ ಪರಿವರ್ತಿಸಿಕೊಳ್ಳುವುದು ಕೂಡ ಸಾಧ್ಯ.

ಪ್ರಪಂಚದ ಕೆಲವು ಸುಪ್ರಸಿದ್ಧ ಜಲಪಾತಗಳು : 1 ಉತ್ತರ ಅಮೆರಿಕದ ಅತ್ಯದ್ಭುತ ಹಾಗೂ ಚೇತೋಹಾರಿ ದೃಶ್ಯಗಳಲ್ಲೊಂದೆನಿಸಿದ ವಿಶಾಲವಾದ ನಯಾಗರ ಜಲಪಾತ. ಇದು ಕೆನಡ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಗಡಿಯಲ್ಲಿದೆ. ನಡುವಣ ದ್ವೀಪ ಈ ಜಲಪಾತವನ್ನು ಕೆನಡ ಮತ್ತು ಅಮೆರಿಕದ ವಿಭಾಗಗಳನ್ನಾಗಿ ವಿಂಗಡಿಸುತ್ತದೆ. ಪಂಚ ಮಹಾಸರೋವರಗಳ ಪಂಕ್ತಿಗೆ ಸೇರಿದ ಈರಿ ಸರೋವರದಿಂದ ಆಂಟೇರಿಯೋ ಸರೋವರಕ್ಕೆ ಹರಿಯುವ 160ಕಿಮೀ. ಉದ್ದದ ನಯಾಗರ ನದಿಯಿಂದ ಈ ಜಲಪಾತ ಉಂಟಾಗಿದೆ. ಕೆನಡ ಭಾಗದ ಜಲಪಾತದ ಆಕಾರ ದೊಡ್ಡ ಲಾಳದಂತೆ. 762ಮೀ. ಅಗಲ

ಮತ್ತು 47ಮೀ. ಎತ್ತರ. ಅಮೆರಿಕದ ಭಾಗ 305ಮೀ. ಅಗಲ ಮತ್ತು 50ಮೀ. ಎತ್ತರವಾಗಿದೆ. ಈ ಜಲಪಾತ ನಿರ್ಮಾಣ ಕಾಲದಿಂದ ಇದುವರೆಗೆ 1974ರವೇಳೆಗೆ ಇದರ ಮೇಲಿನ ಶಿಲಾಮುಖ ಮೂರು ಮೈಲಿಗಳಷ್ಟು ಹಿಂದೊತ್ತಿದೆ. ಅದು ವರ್ಷಕ್ಕೆ 1ಮೀ.ನಂತೆ ಹಿಮ್ಮೆಟ್ಟುತ್ತಿದೆ ಎಂದು ಅಂದಾಜು ಮಾಡಲಾಗಿದೆ. ಮೇಲಿನ ಎರಡು ರಾಷ್ಟ್ರಗಳಿಗೆ ಸೇರಿರುವ ಈ

ವಿಕ್ಟೋರಿಯ ಜಲಪಾತ. ಜಾಂಬಿಯ ಮತ್ತು ರೊಡೀಷಿಯ

ಜಲಪಾತದ ಅಗಾಧ ಜಲಸಾಮರ್ಥ್ಯವನ್ನು ಆ ರಾಷ್ಟ್ರಗಳು ಜಲವಿದ್ಯುದುತ್ಪಾದನೆಗಾಗಿ ಬಳಸುತ್ತಲಿವೆ. ಈ ಕಾರಣದಿಂದಲೂ ಹೊಸದಾಗಿ ನಿರ್ಮಿಸಲ್ಪಟ್ಟ ಸೇಂಟ್ ಲಾರೆನ್ಸ್ ಸಮುದ್ರಮಾರ್ಗದಿಂದಲೂ ನಯಾಗರ ಜಲಪಾತದಿಂದ ಇಳಿಯುವ ನೀರಿನ ಗಾತ್ರ ಕುಗ್ಗುತ್ತಲಿದೆ. ಅಮೆರಿಕ ವಿಭಾಗದ ಜಲಪಾತಕ್ಕೆ ಕಾಮನಬಿಲ್ಲು ಸೇತುವೆಯನ್ನು (ರೇನ್‌ಬೊ ಬ್ರಿಜ್) ರಚಿಸಿರುತ್ತಾರೆ.



ಕಾವೇರಿಯ ಒಂದು ಜಲಪಾತ, ಶಿವನಸಮುದ್ರ

2 ಆಫ್ರಿಕ ಖಂಡದ ಉತ್ತರ ಮತ್ತು ದಕ್ಷಿಣ ರೊಡಿಷಿಯಗಳ ಗಡಿಯಾಗಿ ಹರಿಯುವ ಜಾಂಬೆಸೀ ನದಿಯ ಮೇಲಿರುವ ಭವ್ಯವಾದ ವಿಕ್ಟೋರಿಯ ಜಲಪಾತ. 1.6ಕಿಮೀ. ಅಗಲ 104ಮೀ. ಎತ್ತರವಿರುವ ಈ ಜಲಪಾತವನ್ನು ಆ ಖಂಡದ ಶೋಧಕರಲ್ಲಿ ಒಬ್ಬನಾದ ಲಿವಿಂಗ್‌ಸ್ಟನ್ ಎಂಬಾತ 1855ರಲ್ಲಿ ಮೊದಲಬಾರಿಗೆ ಆವಿಷ್ಕರಿಸಿದ. ಇದರ ನಾಲ್ಕು ವಿಭಾಗಗಳ ಒಂದಕ್ಕೆ ಇಂದ್ರಚಾಪ ಜಲಪಾತವೆಂಬ ಹೆಸರುಂಟು. ಈ ಜಲಪಾತದಿಂದ ಧುಮುಕುವ ನೀರಿನ ಭೋರ್ಗರೆತ ಅಸಾಧಾರಣವಾಗಿದೆ. ಆ ನೀರಿನಿಂದೇಳುವ ತುಷಾರ ರಾಶಿ 48ಕಿಮೀ. ದೂರಕ್ಕೂ ಕಾಣಿಸುತ್ತದೆ. ಮಳೆಗಾಲದಲ್ಲಿ ನೀರು ತುಂಬಿ ಹರಿಯುವಾಗ ಈ ಅಗಾಧ ತುಷಾರ ಸಮೂಹವೇ ಸರ್ವತ್ರ ವ್ಯಾಪಿಸಿ ಜಲಪಾತವನ್ನೇ ಮುಚ್ಚಿಬಿಡುವುದು. ಅಷ್ಟು ದೊಡ್ಡ ಗಾತ್ರದಿಂದ ಕೆಳಕ್ಕಿಳಿವ ಅಪಾರ ಜಲರಾಶಿ ಕೇವಲ 30ಮೀ. ಅಗಲದ ತೊರೆಯ ರೂಪದಲ್ಲಿ ಹಲವಾರು ಎಡಬಲ ತಿರುವುಗಳಿಂದ ಪ್ರವಹಿಸಿ ಮುಂದೆ ಸಾಗುತ್ತಿರುವುದು ಇಲ್ಲಿಯ ಇನ್ನೊಂದು ವೈಚಿತ್ರ್ಯ.

3 ಭಾರತದ ಪ್ರಸಿದ್ಧ ಜಲಪಾತಗಳಲ್ಲಿ ಕರ್ನಾಟಕದ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಗಡಿಯಲ್ಲಿ ಹರಿಯುವ ಶರಾವತಿ ನದಿಯ ಜಲಪಾತ (ಗೇರುಸೊಪ್ಪೆ ; ಜೋಗ್) ಅತ್ಯಂತ ರಮಣೀಯವಾದುದು. ಶರಾವತಿ ಇಲ್ಲಿ ರಾಜಾ, ರೋರರ್, ರಾಕೆಟ್ ಮತ್ತು ಲೇಡಿ (ರಾಣಿ) ಎಂಬ ನಾಲ್ಕು ಭಾಗಗಳಾಗಿ 250ಮೀ. ಎತ್ತರದಿಂದ ಆಕಾಶಗಂಗೆಯಂತೆ ಭೋರ್ಗರೆಯುತ್ತ ಕೆಳಕ್ಕೆ ರಭಸವಾಗಿ ಧುಮುಕುತ್ತದೆ. ಹಾಲಿನ ರಾಶಿಯಂತೆ ನೊರೆಗೂಡಿದ ನೀರಿನ ಪ್ರವಾಹವೂ ಅಂತರಾಳದಲ್ಲಿ ಶೋಭಿಸುವ ವಿವಿಧ ವರ್ಣಗಳ ಸಾವಿರಾರು ಕಾಮನಬಿಲ್ಲುಗಳ ದೃಶ್ಯವೂ ಉಪಮಾತೀತವಾಗಿವೆ. ಇಲ್ಲಿನ ಜಲಸಾಮರ್ಥ್ಯದ ಸಹಾಯದಿಂದ ಜೋಗ್ (ಮಹಾತ್ಮಾ ಗಾಂಧಿ ಜಲವಿದ್ಯುತ್ ಉತ್ಪಾದನಾಕೇಂದ್ರ) ಮತ್ತು ಶರಾವತಿ ಕಣಿವೆಯ ಹೊಸ ಜಲವಿದ್ಯುಚ್ಛಕ್ತಿ ಯಂತ್ರಾಗಾರಗಳು ನಡೆಯುತ್ತಿವೆ. ಇಲ್ಲಿ ವಿಷ್ಯದಲ್ಲೇ ಅತಿ ಕಡಿಮೆ ವೆಚ್ಚದಲ್ಲಿ ಜಲವಿದ್ಯುಚ್ಛಕ್ತಿ ನಿರ್ಮಾಣವಾಗುತ್ತಿದೆ ಎಂಬ ಪ್ರತೀತಿ ಉಂಟು.

ಪ್ರಪಂಚದ ವಿವಿಧ ದೇಶಗಳಲ್ಲಿ ಇನ್ನೂ ಅನೇಕ ನಿಸರ್ಗರಮಣೀಯವೂ ಆಕರ್ಷಣೀಯವೂ ಆದ ಜಲಪಾತಗಳಿವೆ. ದಕ್ಷಿಣ ಅಮೆರಿಕದ ವೆನಿಜ್ವೇಲದ ಆಗ್ನೇಯ ಭಾಗದಲ್ಲಿ 979ಮೀ. ಎತ್ತರದಿಂದ ಸುಮನೋಹರವಾಗಿ ನರ್ತಿಸುತ್ತ ಧುಮುಕುವ ಏಂಜೆಲ್ ಜಲಪಾತ ಉನ್ನತತಮ ಜಲಪಾತ. (ಎಂ.ವಿ.)

**ಜಲಪಾರಗಮ್ಯತೆ :** ವಸ್ತುವಿನಲ್ಲಿ ಜಲ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸ್ರವಿಸಬಲ್ಲ ಸಾಮರ್ಥ್ಯ. ಇದು ಆ ಎರಡು ಸ್ಥಳಗಳ ನಡುವಿನ ಒತ್ತಡ ವ್ಯತ್ಯಾಸ ಮತ್ತು ಪ್ರಶಾಂತ ಪ್ರವಹನ (ನಾನ್‌ಟರ್‌ಬ್ಯುಲೆಂಟ್ ಫ್ಲೋ) ವೇಗಕ್ಕೆ ತಕ್ಕಂತಿರುತ್ತದೆ. ಸರಂಧ್ರ ವಸ್ತುಗಳ ಮೂಲಕ ಜಲಚಲನೆಯ ಮೂಲ ನಿಯಮವನ್ನು ಫ್ರಾನ್ಸಿನ ಹೆನ್ರಿ ಡಾರ್ಸಿ ಎಂಬಾತ ಸ್ಥಾಪಿಸಿದ : ಮರಳಿನ ಮೂಲಕ ನೀರಿನಚಲನೆಯ ವೇಗ ಅಲ್ಲಿನ ದ್ರವಚಾಲಿತ ಓಟಕ್ಕೆ (ಹೈಡ್ರಾಲಿಕ್ ಗ್ರೇಡಿಯೆಂಟ್) ಅನುಪಾತೀಯವಾಗಿದೆ ಎಂಬುದೇ ಆ ನಿಯಮ. ಪ್ರತೀಕಗಳಲ್ಲಿ ಇದು

$$Q = ki\,A$$

ಇಲ್ಲಿ $Q$ ನಿರ್ದಿಷ್ಟಕಾಲದಲ್ಲಿ ಸ್ರವಿಸುವ ಜಲಪ್ರಮಾಣ ; $A$ ಜಲ ಸ್ರವಿಸಬೇಕಾದ ಅಡ್ಡಕೊಯ್ತದ ಒಟ್ಟು ಸಲೆ; $i$ ದ್ರವಚಾಲಿತ ಓಟ ಅಥವಾ ಜಲಸಾಮರ್ಥ್ಯದ ಏರಿಳಿತ. (ಜಲ ಪ್ರವೇಶಿಸುವ ಮತ್ತು ನಿರ್ಗಮಿಸುವ ಬಿಂದುಗಳ ನಡುವಿನಲ್ಲಿರುವ ಒತ್ತಡವ್ಯತ್ಯಾಸವನ್ನು ಅದೇ ಬಿಂದುಗಳ ನಡುವಿನ ಅಂತರದಿಂದ ಭಾಗಿಸಿದಾಗ ಸಿಕ್ಕುವ ಅಂಶ) ಮತ್ತು $k$ ವಸ್ತುವಿನ ಜಲಪಾರಗಮ್ಯ ಗುಣಾಂಕ.

ಜಲಪಾರಗಮ್ಯತೆಯ ಗುಣಾಂಕವನ್ನು ಪ್ರಯೋಗಶಾಲೆಯಲ್ಲಿ ಕಾನ್‌ಸ್ಟಂಟ್ ಹೆಡ್ ಪರ್ಮಾಮೀಟರ್ ಅಥವಾ ವೇರಿಯಬಲ್ ಹೆಡ್ ಪರ್ಮಾಮೀಟರಿನಿಂದ ಅಳೆಯಬಹುದು. ಇದು ಮುಖ್ಯವಾಗಿ ವಸ್ತುವಿನ ಸರಂಧ್ರತೆ ಹಾಗೂ ಸರಂಧ್ರತೆಗೆ ಕಾರಣವಾಗುವ ಕಣಗಳ ಗಾತ್ರ, ಓರಣ, ಹಂಚಿಕೆ ಮತ್ತು ರಂಧ್ರಗಳ ಪರಸ್ಪರ ಸಂಪರ್ಕಗಳನ್ನು ಅವಲಂಬಿಸಿದೆ. ವಸ್ತುವಿನಲ್ಲಿನ ತೆರಪುಗಳ ಒಟ್ಟು ಗಾತ್ರಕ್ಕೆ ವಸ್ತುವಿನ ಕಣಗಳ ಒಟ್ಟು ಗಾತ್ರದ ಅನುಪಾತವೇ ಸರಂಧ್ರತೆ. ಇದನ್ನು ಸಾಮಾನ್ಯವಾಗಿ ಸೇಕಡವಾರು ಚರ್ಚಿಸಲಾಗುತ್ತದೆ. ಕಣಗಳ ಗಾತ್ರ, ಓರಣ ಹಾಗೂ ಹಂಚಿಕೆ ಅವುಗಳ ನಿರ್ಮಾಣಕ್ರಮಕ್ಕೆ ತಕ್ಕಂತಿರುವುವು.

ಶಿಲೆಗಳ ಭೌತ ಮತ್ತು ರಾಸಾಯನಿಕ ಶಿಥಿಲೀಕರಣಗಳಿಂದಾಗಿ ಮಣ್ಣು ಉಂಟಾಗುವುದು. ಇದರ ಗುಣ, ಮೂಲ, ಶಿಲೆ ಹಾಗೂ ಶಿಥಿಲೀಕರಣಕ್ಕೆ ಸಂಬಂಧಿಸಿದೆ. ಮಣ್ಣನ್ನು ಗರಸು, ಮರಳು, ಸಿಲ್ಟ್ ಮತ್ತು ಜೇಡಿ ಎಂದು ವಿಂಗಡಿಸಬಹುದು. ಗರಸು ಮರಳನ್ನು ಕಣಗಾತ್ರಾನುಸಾರವಾಗಿ ಉರುಟು, ನುಣುಪು ಮತ್ತು ಅತಿನುಣುಪು ಮುಂತಾಗಿ ಕೂಡ ವಿಭಾಗಿಸುವುದು ಸಾಧ್ಯ. ಇಂಥ ಭಿನ್ನ ಬಗೆಯ ಮಣ್ಣುಗಳು ನದಿ, ಸರೋವರ ಹಾಗೂ ಸಾಗರ ಪ್ರವಾಹಗಳಿಂದ ಸಾಗಿಸಲ್ಪಟ್ಟು ಸಂಚಿತವಾಗಿರುತ್ತವೆ. ಗಾಳಿಯಿಂದ ಸಾಗಿಸಲ್ಪಟ್ಟ ಶಿಥಿಲ ಶಿಲಾಕಣಗಳು ಲೋಯೆಸ್ ಮತ್ತು ಇಯೋಲಿನ್ ಎಂಬ ಸಂಚಯನಗಳಾಗುತ್ತವೆ. ಮರಳು ಜೇಡಿ, ಸಿಲ್ಟ್ ಮತ್ತು ಸಾವಯವ ವಸ್ತುಗಳ ಮಿಶ್ರಣಕ್ಕೆ ಲೋಮ್ ಎಂದು ಹೆಸರು.

ಜಲಚಲನೆಗೆ ಗರಸು ಅತ್ಯುತ್ತಮ. ಚೊಕ್ಕವಾಗಿರುವ ಗರಸು ಪದರದಲ್ಲಿ ಸರಂಧ್ರತೆ ಮತ್ತು ಜಲಪಾರಗಮ್ಯತೆ ಇರುವುದು. ಆದರೆ ಗರಸಿನೊಡನೆ ನುಣುಪು ಮಣ್ಣು ಬೆರೆತಿರುವುದು ಹೆಚ್ಚು. ಇದು ತೆರಪುಗಳಲ್ಲಿ ಸೇರಿಕೊಂಡು ಜಲಚಲನೆಯನ್ನು ಸ್ಥಗಿತಗೊಳಿಸುತ್ತದೆ. ಮರಳಿಗೆ ಉತ್ತಮ ಸರಂಧ್ರತೆ ಉಂಟು. ಅಲ್ಲದೆ ಇದರಲ್ಲಿ ಕಣಗಾತ್ರ ಹಾಗೂ ಓರಣ

ಒಂದೇ ರೀತಿ ಇವೆ. ಇದರಿಂದಾಗಿ ಮರಳಿನಲ್ಲಿ ಜಲಚಲನೆ ಸರಾಗ. ಇದು ಕೆಲವೊಮ್ಮೆ ಗರಸಿಗಿಂತಲೂ ಹೆಚ್ಚು ಜಲಪಾರಗಮ್ಯವಾಗಿರುತ್ತದೆ. ಸಿಲ್ಟ್ ಮತ್ತು ಜೇಡಿಮಣ್ಣುಗಳ ಕಣಗಾತ್ರ ಬಲು ಸೂಕ್ಷ್ಮ. ಇದರಿಂದಾಗಿ ಇವುಗಳ ನಡುವಿನ ತೆರಪುಗಳು ಇನ್ನೂ ಸೂಕ್ಷ್ಮ, ಜಲಪಾರಗಮ್ಯತೆ ಅಗಣ್ಯ. ಇವು ನೀರನ್ನು ಹೀರಿ ಭದ್ರವಾಗಿ ಹಿಡಿದುಕೊಂಡು ನಿಧಾನವಾಗಿ ಹೊರಬಿಡುತ್ತವೆ. (ವೈ.ಎಲ್.)

**ಜಲಬಡಿಗೆ :** ಉದ್ದವಾದ ನಳಿಕೆಯಲ್ಲಿ ರಭಸದಿಂದ ನೀರು ಹರಿಯುತ್ತಿರುವಾಗ ಅದನ್ನು ಫಕ್ಕನೆ ಪ್ರತಿಬಂಧಿಸಿದರೆ ಆಗ ತಲೆದೋರುವ ತರಂಗಗಳ ಹೊಡೆತದಿಂದ ಉಂಟಾಗುವ ಸದ್ದು (ವಾಟರ್ ಹ್ಯಾಮರ್). ಸುತ್ತಿಗೆ ಹೊಡೆತ (ಹ್ಯಾಮರ್ ಬ್ಲೋ) ಎಂದೂ ಕರೆಯುವುದುಂಟು. ನೀರಿನ ಹರಿವಿಗೆ ಒಂದು ಕವಾಟದ ನೆರವಿನಿಂದ ಫಕ್ಕನೆ ತಡೆಯೊಡ್ಡಿದಾಗ ಅದರ ಸಂವೇಗ ಕ್ಷಿಪ್ರವಾಗಿ ನಾಶವಾಗುತ್ತದೆ. ಇದರಿಂದ ನಳಿಕೆಯಲ್ಲಿಯ ಒತ್ತಡ ತೀವ್ರವಾಗಿ ವರ್ಧಿಸುವುದು. ಕವಾಟದ ಸಮೀಪದಲ್ಲಿ ಮೊದಲು ಉದ್ಭವಿಸುವ ಈ ಒತ್ತಡದ ಹೆಚ್ಚಳ ಒಂದು ಸಂಮರ್ದ ತರಂಗವಾಗಿ ಮಾರ್ಪಟ್ಟು ನಳಿಗೆಯ ಉದ್ದಕ್ಕೂ ಪ್ರಸರಿಸುವುದು. ಇದು ನಳಿಗೆಯ ಇನ್ನೊಂದು ಕೊನೆಯನ್ನು ತಲುಪಿದಾಗ ಅಲ್ಲಿಂದ ಪ್ರತಿಫಲನಗೊಂಡು ತಿರುಗಿ ಕವಾಟದ ಕಡೆ ಪ್ರಸರಿಸುತ್ತದೆ. ಹೀಗೆ ಈ ಸಂಮರ್ದತರಂಗ ಅನೇಕ ಬಾರಿ ಪ್ರತಿಫಲನಗೊಳ್ಳುತ್ತ ಅದರ ಪಾರ (ಆಂಪ್ಲಿಟ್ಯೂಡ್) ಕ್ರಮೇಣ ಕ್ಷೀಣಿಸುತ್ತ ಬಂದು ಕೊನೆಗೆ ಲಯ ಹೊಂದುತ್ತದೆ. ಈ ತರಂಗ ಉದ್ಭವವಾದಾಗ ನಳಿಗೆಯೊಳಗೆ ಬಡಿದಂತೆ ಶಬ್ದವಾಗುತ್ತದೆ. ಇದೇ ಜಲಬಡಿಗೆ. ನಮ್ಮ ಮನೆಗಳಲ್ಲಿಯೂ ಹರಿಯುತ್ತಿರುವ ನಲ್ಲಿಯ ನೀರನ್ನು ಫಕ್ಕನೆ ನಿಲ್ಲಿಸಿಬಿಟ್ಟಾಗಲೂ ಈ ಬಡಿತವನ್ನು ಕೇಳಬಹುದು.

ಕವಾಟವನ್ನು ಮುಚ್ಚುವುದಕ್ಕೆ ತೆಗೆದುಕೊಳ್ಳುವ ಕಾಲ ಮತ್ತು ನಳಿಕೆಯ ಉದ್ದ ಇವನ್ನು ಅವಲಂಬಿಸಿ ವರ್ಧಿಸಿದ ಒತ್ತಡದ ಪ್ರಮಾಣ ಉಂಟು. ನಳಿಗೆಯ ಉದ್ದ $l$ ಅಡಿ ಅಡ್ಡಕೊಯ್ತದ ಸಲೆ $A$ ಚದರ ಅಡಿ ಮತ್ತು ನೀರಿನ ವೇಗ $v$ ಅಡಿ/ಸೆ. ಆಗಿರಲಿ. ಕವಾಟವನ್ನು ಮುಚ್ಚುವ ಕಾಲ $t$ ಸೆಂ ಆಗಿರಲಿ. $g$ ಗುರುತ್ವ ಮತ್ತು $\rho$ ನೀರಿನ ಸಾಂದ್ರತೆ ಆಗಿರಲಿ. ಆಗ

$$\text{ವರ್ಧಿಸಿದ ಒತ್ತಡ,}\quad p = \frac{\rho l v}{g t}\quad \text{ಪೌಂಡು/ಚ.ಅ.}$$

ಎಂಬ ಸಮೀಕರಣದ $p$ ಯನ್ನು ಅಳೆಯುತ್ತದೆ. (ಬಿ.ಬಿ.ಜಿ.) ಪರಿಷ್ಕರಣೆ:ಎಂ. ಜಿ. ಶ್ರೀನಿವಾಸನ್

**ಜಲಭೂವಿಜ್ಞಾನ :** ಅಂತರ್ಜಲದ ಆಕರಗಳು, ಹಂಚಿಕೆ, ಚಲನೆ ಮತ್ತು ಗುಣಗಳ ಬಗೆಗಿನ ಅಧ್ಯಯನ (ಹೈಡ್ರಾಲಜಿ). ಅಂತರ್ಜಲ ಮತ್ತು ಮೇಲ್ಮೈ ಜಲಗಳು ಚಿಲುಮೆ, ನದಿ, ಸರೋವರ ಮತ್ತು ಸಾಗರಗಳ ಮೂಲಕ ಸೌರಶಕ್ತಿಯ ಸಹಾಯದಿಂದ ಉಂಟಾಗುವ ಬಾಷ್ಪೀಭವನ ಮತ್ತು ಸಸ್ಯಗಳ ಬಾಷ್ಪವಿಸರ್ಜನೆಯಿಂದ ಆವಿಯ ರೂಪದಲ್ಲಿ ಆಕಾಶ ಸೇರುತ್ತವೆ. ಅಲ್ಲಿ ಮೋಡಗಳಾಗಿ ಮಳೆಗರೆದಾಗ ಈ ನೀರು ಪುನಃ ಭೂಮಿಯನ್ನು ತಲುಪುವುದು. ಹೀಗೆ ಜಲ ಭೂಮಿ–ಆಕಾಶ ನಡುವೆ ಸದಾ ಚಕ್ರೀಯವಾಗಿ ಸುತ್ತುತ್ತ ಇರುವುದು. ಇದಕ್ಕೆ ಜಲಚಕ್ರ ಎಂದು ಹೆಸರು. ಇದನ್ನು ಮುಖ್ಯವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಬಹುದು: ಪ್ರಕ್ಷೇಪನ, ಬಾಷ್ಪೀಭವನ ಹಾಗೂ ಸಸ್ಯಗಳ ಬಾಷ್ಪವಿಸರ್ಜನ, ಜಲಪ್ರವಹನ, ಅಂತರ್ಜಲ ಸಂಗ್ರಹ. ಭೂಮಿಯ ಬೇರೆ ಬೇರೆ ಪ್ರದೇಶಗಳ ಅಂತರ್ಜಲ ಸಂಚಯನದ ಅಂದಾಜು ಮಾಡಲು ಮತ್ತು ಬಳಕೆಗೆ ಸೂಕ್ತ ನಿವೇಶನಗಳನ್ನು ಅರಿಯಲು ಜಲಚಕ್ರದ ಎಲ್ಲ ಹಂತಗಳ ವಿವರವನ್ನೂ ಆ ಪ್ರದೇಶದ ಶಿಲಾಸ್ತೋಮಗಳ ಜಲಧಾರಣ ಯೋಗ್ಯತೆ ಹಾಗೂ ಸ್ವರೂಪವನ್ನೂ ಅರಿಯಬೇಕು. ಇದರ ನೈಜ ಅರಿವು 17ನೆಯ ಶತಮಾನದ ಕೊನೆಯ ಹೊತ್ತಿಗೆ ಮೂಡಲಾರಂಭಿಸಿತು. ಆಗ ಮೊದಲ ಬಾರಿಗೆ ಪ್ರತ್ಯಕ್ಷ ಅವಲೋಕನವನ್ನು ಅವಲಂಬಿಸಿದ ಸಿದ್ಧಾಂತಗಳು ಮತ್ತು ಪ್ರಮಾಣಭೂತ ವಿವರಣೆಗಳ ಆಧಾರಗಳು ಗೃಹೀತವಾದುವು. ಪಿರೆ ಪಿಲಾಲ್ಟನು (1608–80) ಮೂರು ವರ್ಷಗಳ ಮಳೆಯ ಪ್ರಮಾಣವನ್ನು ಅಳೆದು ಆ ಪ್ರದೇಶದ ಪ್ರವಹನಕ್ಕೆ ಹೋಲಿಸಿದಾಗ ಅವನಿಗೆ ಪ್ರಕ್ಷೇಪನಗೊಂಡಿರುವ ಜಲದ ಆರನೆಯ ಒಂದು ಭಾಗ ಮಾತ್ರ ಭೂಮಿಯ ಮೇಲೆ ಪ್ರವಹಿಸುತ್ತದೆ ಎಂದು ತಿಳಿಯಿತು. 18ನೆಯ ಶತಮಾನದ ಪ್ರಥಮಾರ್ಧದಲ್ಲಿ ಆರ್ಟೀಸಿಯನ್ ಬಾವಿಗಳನ್ನು (ಬುಗ್ಗೆಯ ಬಾವಿಗಳು) ಕೊರೆದು ಪರಿಶೀಲಿಸಲಾಯಿತು. ಫ್ರಾನ್ಸಿನ ಜಲಚಲನಶಾಸ್ತ್ರಜ್ಞ ಹೆನ್ರಿ ಡಾರ್ಸಿ ಮರಳಿನ ಮೂಲಕ ಜಲದ ಚಲನೆಯ ಬಗ್ಗೆ ಅಧ್ಯಯನ ನಡೆಸಿ ಡಾರ್ಸಿಯ ನಿಯಮ ಎಂಬ ಒಂದು ಅಂತರ್ಜಲ ಚಲನೆಯನ್ನು ವಿವರಿಸುವ ನಿಯಮವನ್ನೇ ನೀಡಿದ.

ಜಲಚಕ್ರ : ವೈಜ್ಞಾನಿಕ ಅಂದಾಜಿನ ಪ್ರಕಾರ ಪ್ರತಿ ವರ್ಷವೂ ಭೂಗೋಳದ 36 ಮಿಲಿಯನ್ ಎಕರೆ ನೆಲದ ಮೇಲೆ ಸುಮಾರು 24,000 ಘನ ಮೈಲಿಗಳಷ್ಟು ಮಳೆ ಸುರಿಯುತ್ತದೆ. ಈ ಭಾರೀ ಪ್ರಮಾಣದ ನೀರು ಮೇಲೆ ಹೇಳಿದಂತೆ ವಿವಿಧ ಹಂತಗಳ ಮೂಲಕ ಹಾಯುತ್ತಿರುತ್ತದೆ. ಯಾವುದೇ ಹಂತದಲ್ಲಿ ಅದರ ಪ್ರಮಾಣವನ್ನು ಅರಿಯಲು ಇತರ ಹಂತಗಳ ವಿವರವನ್ನು ಚೆನ್ನಾಗಿ ಅರಿಯಬೇಕು.

ಜಲಪ್ರಕ್ಷೇಪನ : ಬೀಸುವ ಗಾಳಿಯಲ್ಲಿ ಉಂಟಾಗುವ ಒತ್ತಡ ಹಾಗೂ ಉಷ್ಣತೆಯ ಬದಲಾವಣೆಗಳು ಗಾಳಿಯನ್ನು ತೇವಭರಿತವಾಗಿಸುತ್ತವೆ. ಗಾಳಿಯಲ್ಲಿ ತೇಲುವ ಸಣ್ಣ ಸಣ್ಣ ದೂಳಿನ ಕಣಗಳ, ಹೂವಿನ ಪರಾಗ ರೇಕುಗಳ ಮತ್ತು ಸಮುದ್ರದಿಂದ ಆವಿಯಾಗಿ ಮೇಲೆರುತ್ತ ಉಂಟಾದ ಉಪ್ಪಿನ ಸೂಕ್ಷ್ಮಕಣಗಳ ಸುತ್ತಲೂ ಈ ತೇವಾಂಶ ಆವರಿಸಿ ಮೋಡಗಳು ಮೈದಳೆಯುತ್ತವೆ. ತೇವಾಂಶ 0.04ಮಿಮೀ. ವ್ಯಾಸದ ಹನಿಗಳಾಗಿ ಮಾರ್ಪಾಡಾದಾಗ ಈ ಸೂಕ್ಷ್ಮತುಂತುರು ಭೂಮಿಯೆಡೆಗೆ ಸಾಗುವ ವೇಗ ಅತಿ ಕಡಿಮೆ. ಇವುಗಳ ಗುಂಪೇ ಮೋಡ. ಮೋಡಗಳ ಸ್ಥಿರತೆ ಗಾಳಿಯಲ್ಲಿನ ಉಷ್ಣತೆ, ಮೋಡಗಳ ಬೇರೆ ಬೇರೆ ಭಾಗಗಳ ಸಾಪೇಕ್ಷ ಚಲನೆ ಮತ್ತು ಹನಿ ಅಂಕುರಿಸಲು ಕಾರಣೀಭೂತವಾದ ಬೀಜಾಣುಗಳನ್ನು ಅವಲಂಬಿಸಿದೆ. ಮೋಡಗಳಲ್ಲಿ ಘನೀಭವನ ಉಷ್ಣತೆಗೂ ಕಡಿಮೆ ಉಷ್ಣತೆಯ ನೀರು ಇರುವುದು. ತೇವಾಂಶಭರಿತ ಗಾಳಿ ಮೇಲೇರಿದಂತೆ ಅದರ ಒತ್ತಡ ಕಡಿಮೆಯಾಗಿ ಉಷ್ಣತೆ ಮತ್ತೂ ಕಡಿಮೆಯಾಗುತ್ತದೆ. ಗಾಳಿಯಲ್ಲಿನ ಸಾಪೇಕ್ಷ ತೇವಾಂಶ ಕ್ರಮೇಣ ಹೆಚ್ಚಿ ದ್ರವರೂಪದಲ್ಲಿರುವ ನೀರಿನ ಸೇಕಡ 100ರಷ್ಟು ಹೆಚ್ಚುತ್ತದೆ. ಆ ಸ್ಥಿತಿಯಲ್ಲಿ ಉಷ್ಣತೆ–$10^{o}$ C-$20^{o}$ C ವರೆಗಿದ್ದು ಬರ್ಫದ ಸ್ಫಟಿಕಗಳು ಹುಟ್ಟಿಕೊಳ್ಳುತ್ತವೆ. ಈ ಎರಡು ಉಷ್ಣತೆಗಳ ನಡುವೆ ನೀರಿನ ತುಂತುರು ಮತ್ತು ಬರ್ಫದ ಸ್ಫಟಿಕಗಳು ಒಟ್ಟಿಗೆ ಇದ್ದು ಬರ್ಫದ ಮೇಲಿನ ಸಂತೃಪ್ತ ಬಾಷ್ಪ ಒತ್ತಡ ನೀರಿನ ಮೇಲಿನದಕ್ಕಿಂತ ಕಡಿಮೆ ಇರುತ್ತದೆ. ಉಷ್ಣತೆ–$11.5^{o}$ C ತಲುಪಿದಾಗ ಈ ಒತ್ತಡದ ವ್ಯತ್ಯಾಸ ಗರಿಷ್ಠ ಆಗುತ್ತದೆ. ಆಗ ಬರ್ಫದ ಮೇಲೆ ತೇವದ ಆವರಣ ಬಹುಬೇಗ ಹೆಚ್ಚಿ ಅವುಗಳ ಬೆಳವಣಿಗೆ ಶೀಘ್ರಗೊಳ್ಳುತ್ತದೆ. ಬೀಜಾಣುವಿನ ಸುತ್ತಲೂ ಉಂಟಾದ ತೇವಾವರಣ ಅದರ ಸುತ್ತಲಿನ ಗಾಳಿಯ ತೇವವನ್ನು ಕಡಿಮೆಗೊಳಿಸಿ ಕ್ರಮೇಣ ಅದರ ತೇವಾಂಶ ಸಂತೃಪ್ತತೆಯನ್ನು ಇಲ್ಲವಾಗಿಸುತ್ತದೆ. ಆಗ ಗಾಳಿಯಲ್ಲಿ ಇನ್ನೂ ಉಳಿದಿರಬಹುದಾದ ನೀರಿನ ತುಂತುರುಗಳೆಲ್ಲವೂ ಬಾಷ್ಪೀಭವಿಸಿ ಬರ್ಫದ ಸ್ಫಟಿಕಗಳ ಮೇಲೆ ಕೂರುವುವು. ಇದರಿಂದಾಗಿ ಸ್ಫಟಿಕಗಳ ಗಾತ್ರ ಮತ್ತಷ್ಟು ಹೆಚ್ಚಿ ತನ್ನ ಭಾರದಿಂದಾಗಿ ಉದುರಲಾರಂಭಿಸುತ್ತದೆ. ಆಗ ಕೆಳವಾತಾವರಣದ ಗಾಳಿಯಲ್ಲಿನ ಉಷ್ಣತೆಯಿಂದಾಗಿ ಬರ್ಫ ಕರಗಿ ನೀರಾಗಿ ನೆಲಕ್ಕೆ ಬೀಳುತ್ತದೆ. ಇದೇ ಮಳೆ ಅಥವಾ ಜಲಪ್ರಕ್ಷೇಪನ.

ಬಾಷ್ಪೀಭವನ ಮತ್ತು ಸಸ್ಯಗಳ ಬಾಷ್ಪವಿಸರ್ಜನೆ: ಸೌರಶಕ್ತಿಗೆ ಹೊರಸೂಸಲ್ಪಟ್ಟ ಜಲ ಅನಿಲರೂಪಕ್ಕೆ ತಿರುಗುವ ಕ್ರಿಯೆ ಬಾಷ್ಪೀಭವನ. ಸಸ್ಯಗಳು ಉಪಯೋಗಿಸಿದ ತರುವಾಯ ಹೊರಬಿಡಲ್ಪಟ್ಟ ನೀರು ಬಾಷ್ಪೀಭವಿಸಿದಾಗ ಅದು ಬಾಷ್ಪವಿಸರ್ಜನೆ ಎನ್ನಿಸಿಕೊಳ್ಳುತ್ತದೆ. ಬಾಷ್ಪೀಭವನ ಮತ್ತು ವಿಸರ್ಜನೆಗಳಿಗೆ ಮುಖ್ಯ ಕಾರಣಗಳು ಸೌರ ಉಷ್ಣ, ಗಾಳಿಯ ಬೀಸುವಿಕೆ, ನೀರಿನ ಉಷ್ಣತೆ, ಗಾಳಿಯ ತೇವಾಂಶ, ತೇವಾಂಶದ ಒತ್ತಡ, ಪ್ರದೇಶದ ಔನ್ನತ್ಯ ಮತ್ತು ನೀರಿನ ರಾಸಾಯನಿಕ ಗುಣಗಳು. ಇವೆಲ್ಲವೂ ಪ್ರತಿಯೊಂದು ಕ್ರಿಯೆಯ ಮೇಲೆಯೂ ತಮ್ಮದೇ ಆದ ಪರಿಣಾಮಗಳನ್ನು ಬೀರುತ್ತವೆ. ಕೆಲವೊಮ್ಮೆ ಅವು ಒಂದನ್ನೊಂದು ಅವಲಂಬಿಸಿಕೊಂಡಿರುವುದುಂಟು. ನೀರಿನ ಮೇಲ್ಮೈ ಹಾಗೂ ಸುತ್ತಲಿನ ವಾತಾವರಣ ಸೌರಶಕ್ತಿಯನ್ನು ಹೀರಿಕೊಂಡಾಗ ಅವುಗಳ ಉಷ್ಣತೆ ಏರುತ್ತದೆ; ಮತ್ತು ಉಷ್ಣದ ಸ್ವಲ್ಪ ಭಾಗ ಮೇಲಿನ ಗಾಳಿಗೆ ಏರುತ್ತದೆ. ಹಾಗೆಯೇ ನೀರಿನ ಆಳಕ್ಕೂ ಇಳಿಯುತ್ತದೆ. ಮೇಲಿನ ಗಾಳಿಗೆ ಏರುವ ಉಷ್ಣದೊಡನೆ ನೀರಿನ ಮೇಲ್ಭಾಗದ ಅಣುಗಳು ಎಲೆಗಳ ವೈಶಾಲ್ಯವನ್ನು ಅವಲಂಬಿಸಿದೆ. ಈ ಎಲ್ಲಕ್ಕೂ ಮತ್ತೊಮ್ಮೆ ಆಯಾ ಪ್ರದೇಶದ ಹವಾಗುಣವೇ ಮುಖ್ಯ.

ಜಲಪ್ರವಹನ : ನೆಲದ ಮೇಲೆ ಹರಿದು ಸಾಗರದತ್ತ ಸಾಗುವ ನೀರು ಜಲಚಕ್ರದ ಎಲ್ಲ ಭಾಗಗಳಿಗೂ ಹಂಚಿ ಉಳಿದ ನೀರಿನ ಭಾಗ ಎನ್ನಬಹುದು. ಈ ಹಂತದ ನೀರು ಮಾನವನ ಉಪಯೋಗಕ್ಕೆ ನೇರವಾಗಿ ದೊರಕಬಲ್ಲುದು. ಆದರೆ ಅದರ ಹಂಚಿಕೆ ಬೇರೆ ಬೇರೆ ಪ್ರದೇಶಗಳಲ್ಲಿ ಅನಿರ್ದಿಷ್ಟವಾದ್ದರಿಂದ ಅದು ದೊರೆಯಬಹುದಾದ ಪ್ರಮಾಣ ಅನಿಶ್ಚಿತ ಮತ್ತು ಈ ನೀರಿನ ಗುಣ ಅದು ಹರಿಯುತ್ತಿರುವ ಪರಿಸರಕ್ಕೆ ತಕ್ಕಂತಿರುತ್ತದೆ. ಹೊನಲುಗಳಲ್ಲಿ ಕೆಲವಕ್ಕೆ ಅಂತರ್ಜಲದ ಆಧಾರ ಇರಬಹುದು. ಕೆಲವು ಅಂತರ್ಜಲದ ಹೆಚ್ಚಳಕ್ಕೆ ಕಾರಣವಾಗುವುದೂ ಉಂಟು. ಇವುಗಳ ಹರಿಯುವಿಕೆಯನ್ನು ನಿಯತ ಸ್ಥಳಗಳಲ್ಲಿ ಹೊನಲುಮಾನಗಳಿಂದ ಅಳೆದು ಆಯಾ ಪ್ರದೇಶದ ಅಂತರ್ಜಲ ಪಾತ್ರಗಳಲ್ಲಿರುವ ಅಂತರ್ಜಲ ಪ್ರಮಾಣವನ್ನು ಅರಿಯಲು ಅನುಸರಿಸುವ ಸಮೀಕರಣಕ್ಕೆ ಅಳವಡಿಸಿಕೊಳ್ಳಬಹುದು.

ಅಂತರ್ಜಲ ಸಂಗ್ರಹ: ಆಕಾಶದಿಂದ ಪ್ರಕ್ಷೇಪಗೊಂಡ ಜಲ, ಹಿಮ ಅಥವಾ ಆಲಿಕಲ್ಲು ಹೊನಲುಗಳಲ್ಲಿ ಪ್ರವಹಿಸುತ್ತ ಆಯಾ ಪ್ರದೇಶದ ಶಿಲಾಕಣಗಳಿಗೆ ಅನುಗುಣವಾಗಿ ನೆಲದೊಳಕ್ಕೆ ಜಿನುಗುತ್ತ ಅಂತರ್ಜಲ ಹಂತವನ್ನು ಪ್ರವೇಶಿಸುತ್ತದೆ. ಭೂಮಿಯ ಹೊರಪದರದ ಶಿಲೆಗಳ ತೆರಪುಗಳ ಮಧ್ಯೆ ಜಿನುಗುವ ಈ ಜಲವನ್ನು ಭೂಜಲವೆಂದು ಕರೆಯಬಹುದು. ಇಂಥ ಜಲ ಜಿನುಗುವ ವಲಯಗಳನ್ನು ಅವುಗಳ ಸ್ಥಾನಕ್ಕೆ ತಕ್ಕಂತೆ ವಾಯುಭರಿತವಲಯ ಮತ್ತು ಸಂತೃಪ್ತವಲಯವೆಂದು ವಿಂಗಡಿಸಬಹುದು. ವಾಯುಭರಿತ ವಲಯ ನೆಲಮಟ್ಟದಿಂದ ಅಂತರ್ಜಲ ಮಟ್ಟದವರೆಗೂ ವಿಸ್ತರಿಸಿಕೊಂಡಿದ್ದು ಈ ಮಟ್ಟದ ಕೆಳಗಿನ ವಲಯವೇ

ಸಂತೃಪ್ತವಲಯ. ಇಲ್ಲಿ ಶೇಖರಣಗೊಳ್ಳುವ ಜಲವೇ ಅಂತರ್ಜಲ. ವಾಯುಭರಿತ ವಲಯದ ತೆರಪುಗಳಲ್ಲಿ ಜಲದ ಜೊತೆಗೆ ಅಲ್ಲಲ್ಲಿಯೇ ವಾಯುವೂ ತುಂಬಿಕೊಂಡಿರುತ್ತವೆ. ಈ ವಲಯದ ಮೇಲುಹಂತದಲ್ಲಿ ಸಸ್ಯಗಳು ತಮ್ಮ ಬೆಳವಣಿಗೆಗೆ ಬೇಕಾದ ನೀರನ್ನು ಹೀರಿಕೊಳ್ಳಲೋಸುಗ ತಮ್ಮ ಬೇರುಗಳನ್ನು ಹರಡಿಕೊಂಡಿರುತ್ತವೆ. ಈ ಹಂತದ ವೈಶಾಲ್ಯ ಆಯಾ ಪ್ರದೇಶದ ಮಣ್ಣು ಮತ್ತು ಸಸ್ಯವರ್ಗಕ್ಕೆ ತಕ್ಕಂತೆ ಇರುವುದು. ಇದಕ್ಕೆ ಮಣ್ಣುಮಿಶ್ರಿತ ಜಲಹಂತವೆಂದು ಹೆಸರು. ಇದು ಹುಲ್ಲುಗಾವಲುಗಳ ಪ್ರದೇಶಗಳಲ್ಲಿ ಕೇವಲ ಕೆಲವಾರು ಅಡಿಗಳವರೆಗೆ ಮಾತ್ರ ಇದ್ದು ಅರಣ್ಯ ಪ್ರದೇಶಗಳಲ್ಲಿ ಬಹಳ ಆಳದವರೆಗೂ ಇರುತ್ತದೆ. ವಾಯುಭರಿತ ವಲಯದ ಕೆಳಭಾಗದಲ್ಲಿ ಸಂತೃಪ್ತ ವಲಯದ ನೀರು ಮೇಲಕ್ಕೇರಿರುವುದು. ಇದು ಲೋಮನಾಳಾಕರ್ಷಣ ಹಂತ ಮಣ್ಣು ಮಿಶ್ರಿತ ಜಲ ಹಂತ ಮತ್ತು ಲೋಮನಾಳಾಕರ್ಷಣ ಹಂತಗಳ ಮಧ್ಯೆ ಇರುವ ಭಾಗದಲ್ಲಿ ನೀರು ಗುರುತ್ವದಿಂದ ಕೆಳಕ್ಕಿಳಿಯುತ್ತಿರುತ್ತದೆ. ಈ ಹಂತಕ್ಕೆ ಮಧ್ಯಮ ಹಂತ ಎಂದು ಹೆಸರು. ಮಳೆಯ ನೀರು ನೆಲಮಟ್ಟದ ಮಣ್ಣಿನಲ್ಲಿ ಮಿಶ್ರವಾಗಿ ಗುರುತ್ವದಿಂದ ಕೆಳಕ್ಕೆ ಜಿನುಗುತ್ತ ಲೋಮನಾಳಾಕರ್ಷಣ ಹಂತದ ಮೂಲಕ ಸಂತೃಪ್ತ ವಲಯವನ್ನು ಸೇರುವುದು. ಸಂತೃಪ್ತ ವಲಯದ ನಿಶ್ಚಲ ದ್ರವದ ಒತ್ತಡ ವಾತಾವರಣದ ಒತ್ತಡಕ್ಕೆ ಸಮ ಅಥವಾ ಹೆಚ್ಚು ಇರುತ್ತದೆ. ಈ ಎರಡು ಮಟ್ಟಗಳನ್ನು ಬೇರ್ಪಡಿಸುವ ಮಟ್ಟವೇ ಅಂತರ್ಜಲ ಮಟ್ಟ.

ಅಂತರ್ಜಲದ ಆಕರಗಳು : ಅಂತರ್ಜಲ ಸಂಚಯನದ ಯಥೇಚ್ಛತೆ ಆಯಾ ಪ್ರದೇಶದ ಶಿಲಾಸ್ತೋಮಗಳ ಜಲಧಾರಣ ಯೋಗ್ಯತೆಯನ್ನು ಅವಲಂಬಿಸಿದೆ. ಭೂವಿಜ್ಞಾನಿಗಳು ಅಧ್ಯಯನದ ಅನುಕೂಲಕ್ಕಾಗಿ ಅಸಂಘಟಿತ ಮಣ್ಣು, ಜೇಡು ಮರಳು ಹಾಗೂ ಸುಸಂಘಟಿತ ಗ್ರ್ಯಾನೈಟ್, ಕ್ವಾರ್ಟ್‌ಸೈಟ್ ಇತ್ಯಾದಿಗಳೆಲ್ಲನ್ನೂ ಶಿಲೆಗಳೆಂದೇ ಕರೆಯುತ್ತಾರೆ. ಈ ಕೆಲವು ಶಿಲೆಗಳಲ್ಲಿ ಸಾಕಷ್ಟು ರಂಧ್ರಗಳಿದ್ದು ಅವು ಒಂದನ್ನೊಂದು ಸೇರಿಕೊಂಡು ಸ್ರಾವ್ಯಶೀಲತೆಯನ್ನು ಪಡೆದುಕೊಂಡಿರುತ್ತವೆ. ಮತ್ತೆ ಕೆಲವು ಶಿಲೆಗಳಲ್ಲಿ ಬಿರುಕುಗಳು, ಸೀಳು ಹಾಗು ಗವಿಯಂಥ ಕೊರಕಲುಗಳು ಇದ್ದು ಅಂತರ್ಜಲದ ಚಲನೆ ಮತ್ತು ಶೇಖರಣೆಗೆ ಸ್ಥಳಾವಕಾಶ ಮಾಡಿಕೊಡುತ್ತವೆ. ಸರಂಧ್ರ ಮತ್ತು ಸ್ರಾವ್ಯಶೀಲ ಶಿಲೆಗಳನ್ನು ಜಲಭರಿತ ಶಿಲೆಗಳೆಂದೂ ಕರೆಯಬಹುದು. ಏಕೆಂದರೆ ಈ ಶಿಲೆಗಳು ನೀರನ್ನು ತಮ್ಮಲ್ಲಿರುವ ರಂಧ್ರಗಳಲ್ಲಿ ಹಿಡಿದಿಟ್ಟುಕೊಳ್ಳಬಲ್ಲವೇ ವಿನಾ ಅದರ ಚಲನೆಗೆ ಅವಕಾಶವಿಲ್ಲದೇ ಇದ್ದು ಜಲವ್ಯಾಪ್ಯವಾಗಲಾರವು. ಕೆಲವು ಶಿಲೆಗಳಲ್ಲಿ ಸರಂಧ್ರತೆ ಮತ್ತು ಸ್ರಾವ್ಯಶೀಲತೆ ಎರಡೂ ಇಲ್ಲದಿದ್ದು ಜಲರಹಿತ ಶಿಲೆಗಳೆನಿಸಿಕೊಳ್ಳುತ್ತವೆ. ಜಲಗ್ರಾಹಿ ಮತ್ತು ಜಲಭರಿತ ಶಿಲೆಗಳಿರುವ ಭೂಭಾಗಗಳು ಅಂತರ್ಜಲಾಶಯಗಳಾಗಲು ಯೋಗ್ಯ.

ಭೂಮಿಯ ಎಲ್ಲ ಶಿಲೆಗಳನ್ನೂ ಅವುಗಳ ಉಗಮಕ್ಕೆ ತಕ್ಕಂತೆ ಮೂರು ವಿಧಗಳನ್ನಾಗಿ ವಿಂಗಡಿಸಬಹುದು. ಅವೇ ಅಗ್ನಿಶಿಲೆ, ಅವಸಾದನ (ಜಲಜ) ಶಿಲೆ ಮತ್ತು ರೂಪಾಂತರ ಶಿಲೆ. ಅಗ್ನಿಶಿಲೆಗಳು ನಿರ್ಮಾಣಗೊಳ್ಳುವಾಗ ಬಿಸಿ ದ್ರವ ರೂಪದ ಮ್ಯಾಗ್ಮಾ ತಣ್ಣಗಾಗುತ್ತ ಆಳದಲ್ಲಿ ಘನೀಭವಿಸಿದ್ದಲ್ಲಿ ಅದಕ್ಕೆ ಅಂತಸ್ಸರಣ ಶಿಲೆಯೆಂದೂ ಭೂಗರ್ಭದಿಂದ ಹೊರನುಗ್ಗುತ್ತ ತಣ್ಣಗಾದರೆ ಅದಕ್ಕೆ ಬಹಿಸ್ಸರಣ ಶಿಲೆಯೆಂದೂ ಹೆಸರು. ಬಹಿಸ್ಸರಣ ಶಿಲೆಗಳಲ್ಲಿ ಖನಿಜಗಳು ಬಹು ಸೂಕ್ಷ್ಮವಾಗಿ ಸ್ಫಟಿಕೀಕರಣಗೊಂಡು ಒಡನಿದ್ದ ಅನಿಲಗಳು ಬಿಡುಗಡೆ ಹೊಂದುವಾಗ ಅಲ್ಲಲ್ಲಿ ಕುಳಿಗಳನ್ನು ಉಂಟು ಮಾಡಿರುತ್ತವೆ. ಹೀಗೆ ಉಂಟಾದ ಬೆಸಾಲ್ಟ್ ಶಿಲೆಗಳಲ್ಲಿ ಈ ಕುಳಿಗಳೇ ಅಂತರ್ಜಲದ ಚಲನೆಗೆ ಅವಕಾಶ ನೀಡುತ್ತವೆ; ಮತ್ತು ಈ ಶಿಲೆ ನಿರ್ಮಾಣಗೊಳ್ಳುವಾಗ ಉಂಟಾಗುವ ಪಂಚಭುಜಾಕೃತಿಯ ಬಿರುಕುಗಳು ಹಾದಿಯಂತೆ ವರ್ತಿಸುತ್ತವೆ. ಇತರ ಶಿಲೆಗಳ ಶಿಥಿಲೀಕರಣದಿಂದ ಉಂಟಾದ ಕಣಗಳು ನದಿಗಳಿಂದ ಸಾಗಿಸಲ್ಪಟ್ಟು ಸಾಗರ, ಸರೋವರ ಪಾತ್ರಗಳಲ್ಲಿ ಅಥವಾ ಗಾಳಿಯಿಂದ ಸಾಗಿಸಲ್ಪಟ್ಟು ಬಯಲುಗಳಲ್ಲಿ ಸಂಚಯನಗೊಂಡು ಅವಸಾದನ ಶಿಲೆಗಳು ನಿರ್ಮಾಣವಾಗುತ್ತವೆ. ಈ ಶಿಲೆಗಳು ಹೆಚ್ಚಾಗಿ ಸರೋವರ ಸಾಗರಪಾತ್ರಗಳಲ್ಲಿ ಸಂಚಿತವಾಗುವುದರಿಂದ ಇವಕ್ಕೆ ಜಲಜಶಿಲೆಗಳೆಂದೂ ಹೆಸರುಂಟು. ಇವು ವಿಶೇಷವಾಗಿ ಸರಂಧ್ರವಾಗಿರುವುದರಿಂದ ಒಳ್ಳೆಯ ಅಂತರ್ಜಲಾಕರಗಳಾಗಿರಬಲ್ಲವು. ಭೂಮಿಯ ಹೊರಪದರಗಳಲ್ಲಿ ಅವಸಾದನ ಶಿಲೆಗಳು ಕೇವಲ ಶೇ.5 ರಷ್ಟಿದ್ದರೂ ಇವು ಅಂತರ್ಜಲದ ಶೇ.95 ಭಾಗವನ್ನು ಅಳವಡಿಸಿಕೊಂಡಿರುತ್ತವೆ. ಭೂಮಿಯ ಅಸಾಧಾರಣ ಉಷ್ಣ ಮತ್ತು ಒತ್ತಡಗಳಿಗೊಳಗಾದಾಗ ಶಿಲೆಗಳು ತಮ್ಮ ಸ್ವರೂಪ ಹಾಗೂ ಖನಿಜ ಸಂಯೋಜನೆಯಲ್ಲಿ ವ್ಯತ್ಯಾಸಗೊಂಡು ರೂಪಾಂತರಗೊಳ್ಳುತ್ತವೆ. ಇವೇ ರೂಪಾಂತರ ಶಿಲೆಗಳು. ಸಾಮಾನ್ಯವಾಗಿ ಈ ಶಿಲೆಗಳು ಜಲಭರಿತ ಶಿಲೆಗಳಾಗಲು ಯೋಗ್ಯವಲ್ಲ. ಆದರೂ ಅವುಗಳಲ್ಲಿ ಉಂಟಾಗುವ ಬಿರುಕು ಮತ್ತು ಸೀಳುಗಳು ಅಂತರ್ಜಲದ ಚಲನೆಗೆ ಎಡೆಮಾಡಿಕೊಡುತ್ತವೆ. ಅಮೃತಶಿಲೆಯಂಥ ರಾಸಾಯನಿಕ ಶಿಥಿಲೀಕರಣಕ್ಕೆ ಬಹುವಾಗಿ ಒಳಗೊಳ್ಳುವ ಶಿಲೆಗಳಾದರೆ ಅವುಗಳ ಬಿರುಕಿನಲ್ಲಿ ನುಗ್ಗಿದ ನೀರು ಶಿಲೆಯನ್ನು ಕರಗಿಸಿ ದೊಡ್ಡ ದೊಡ್ಡ ಗವಿಯಂಥ ಕೊರಕಲುಗಳನ್ನು ಉಂಟುಮಾಡುವುವು. ಕೆಲವೊಮ್ಮೆ ಹೀಗೆ ಕರಗಿ ಉಂಟಾದ ದ್ರಾವಣಗಳು ಅಲ್ಲಲ್ಲಿಯೇ ತೊಂಗಲುಗಳನ್ನುಂಟುಮಾಡಿ ನಯನಮನೋಹರ ದೃಶ್ಯವನ್ನು ನೀಡುವುದುಂಟು. ಶಿಲೆಗಳಲ್ಲಿ ಅಲ್ಲಲ್ಲೇ ಖನಿಜಗಳಿಂದ ಭರ್ತಿ ಆಗದ ಸ್ಥಳಗಳನ್ನು ನೀರು ಆಕ್ರಮಿಸಲ್ಲುದು. ಈ ಸ್ಥಳಗಳಿಗೆ ತೆರಪು ಅಥವಾ ರಂಧ್ರಗಳೆಂದು ಹೆಸರು. ತೆರಪುಗಳು ಅಂತರ್ಜಲದ ಚಲನೆಗೆ ಕೊಳವೆಗಳಂತೆ ಸಹಕರಿಸುತ್ತವೆ. ಇವುಗಳ ಆಕಾರ, ಗಾತ್ರ ಮತ್ತು ಹಂಚಿಕೆಗಳಿಗೆ ತಕ್ಕಂತೆ ಇವುಗಳ ಪ್ರಾಮುಖ್ಯವು ಹೆಚ್ಚುತ್ತದೆ. ಕೆಲವು ತೆರಪುಗಳು ಮತ್ತು ಬಿರುಕುಗಳು ಶಿಲೆಯ ಉಗಮಕಾಲದಲ್ಲಿಯೇ ಉಂಟಾಗಿರುತ್ತವೆ. ಇದಕ್ಕೆ ಒಳ್ಳೆಯ ಉದಾಹರಣೆ ಮರಳು ಶಿಲೆ ಮತ್ತು ಬೆಸಾಲ್ಟ್ ಇತ್ಯಾದಿಗಳು. ಮತ್ತೆ ಕೆಲವು ತೆರಪುಗಳು ಶಿಲೆಯ ನಿರ್ಮಾಣದ ಅನಂತರ ಶಿಥಿಲೀಕರಣದಿಂದಾಗಿ ಅಥವಾ ಸ್ತರಪಲ್ಲಟದಿಂದಾಗಿ ಅಥವಾ ದ್ರಾವಣಗಳಿಂದಾಗುವ ತೆರಪುಗಳು.

ಅಂತರ್ಜಲ ಪಾತ್ರಗಳು : ಒಂದು ಬೃಹತ್ ಜಲಭರಿತ ಶಿಲಾಸ್ತೋಮವುಳ್ಳ ಅಥವಾ ಹಲವಾರು ಜಲಭರಿತ ಶಿಲಾಸ್ತೋಮಗಳನ್ನು ಒಳಗೊಂಡ ಒಂದು ಭೌಗೋಳಿಕ ಪ್ರದೇಶ ಅಂತರ್ಜಲ ಪಾತ್ರವಾಗುತ್ತದೆ. ಎರಡು ಗಿರಿಶ್ರೇಣಿಗಳ ನಡುವಿನ ಕಣಿವೆ ಪ್ರದೇಶದಲ್ಲಿನ ಹೊನಲಿನ ಓರಣದ ಪಾತ್ರವನ್ನು ಅಂದರೆ ಜಲಾನಯನ ಭೂಮಿಯನ್ನು ಅಂತರ್ಜಲ ಪಾತ್ರ ಬಹುವಾಗಿ ಹೊಂದಿಕೊಂಡಿರುತ್ತದೆ. ಆದ್ದರಿಂದ ಅಲ್ಲಿನ ಅಂತರ್ಜಲದ ಬಗೆಗಿನ ಅಧ್ಯಯನ ಆ ಪ್ರದೇಶದ ಸಂಪೂರ್ಣ ಮಾಹಿತಿಯನ್ನು ಅವಲಂಬಿಸಿದೆ. ಅಂತರ್ಜಲ ಪಾತ್ರವನ್ನು ಒಂದು ದೊಡ್ಡ ಭೂಗತ ಜಲಾಶಯವೆಂದು ಮನಗಂಡು ಆಯಾ ಪ್ರದೇಶದ ರೈತರ ಜಮೀನುಗಳ ಮಧ್ಯೆ ಇರುವ ಅಂತರ್ಜಲ ಸಂಬಂಧವನ್ನು ತಿಳಿಯಬಹುದು. ಪ್ರತಿ ಅಂತರ್ಜಲ ಪಾತ್ರಕ್ಕೂ ವಿಶಿಷ್ಟವಾದ ತುಲನಾತ್ಮಕ ಆರ್ಜನೆ, ಶೇಖರಣೆ ಮತ್ತು ವಿಸರ್ಜನೆ ಇವೆ. ಒಂದು ಪ್ರದೇಶದ ಅಂತರ್ಜಲ ಮೊತ್ತದ ಅಂದಾಜು ಮಾಡಲು

$$I = R - E + S$$

ಎಂಬ ಅಂತರ್ಜಲ ಸಮೀಕರಣವನ್ನು ಬಳಸಬೇಕು. ಇಲ್ಲಿ $I$ ಅಂತರ್ಜಲ ಹೆಚ್ಚಳ, $R$ ಮಳೆಯ ಒಟ್ಟು ಪ್ರಮಾಣ, $E$ ಆ ಪ್ರದೇಶದಲ್ಲಿ ಉಂಟಾಗುವ ಬಾಷ್ಪೀಭವನ ಮತ್ತು $S$ ಸಸ್ಯಗಳ ಬಾಷ್ಪವಿಸರ್ಜನೆ.

ಚಲನೆ: ಭೂಮಿಯೊಳಗೆ ಅಂತರ್ಜಲ ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಜಲ ಶಾಸ್ತ್ರೀಯ ತತ್ತ್ವಗಳ ಅನುಸಾರ ಚಲಿಸುತ್ತಿರುವುದು. ಅಂತರ್ಜಲಾಶಯಗಳನ್ನು ಅವುಗಳ ಸ್ಥಾನಕ್ಕೆ ತಕ್ಕಂತೆ ಅಂತರ್ಜಲ ಮಟ್ಟದ ಅಂತರ್ಜಲಾಶಯಗಳು ಮತ್ತು ಆರ್ಟೀಸಿಯನ್ ಜಲಾಶಯಗಳೆಂದು ವಿಂಗಡಿಸಲಾಗಿದೆ. ಅಂತರ್ಜಲ ಮಟ್ಟದ ಅಂತರ್ಜಲಾಶಯಗಳಲ್ಲಿ ಜಲ ವಾಸ್ತವವಾಗಿ ವಾತಾವರಣದ ಒತ್ತಡವನ್ನು ಪಡೆದಿರುವುದು. ಇದರ ಮೇಲ್ಮಟ್ಟ ಬಾವಿಗಳಲ್ಲಿ ಏರಬಹುದಾದ ಮಹತ್ತಮ ಮಟ್ಟವನ್ನು ಸೂಚಿಸುತ್ತದೆ. ಆರ್ಟೀಸಿಯನ್ ಅಂತರ್ಜಲಾಶಯಗಳಲ್ಲಿ ಜಲ ವಾತಾವರಣದ ಒತ್ತಡಕ್ಕಿಂತ ಬಲು ಹೆಚ್ಚಿನ ಒತ್ತಡಕ್ಕೆ ಒಳಗಾಗಿರುವುದು. ಅದು ಯಾವುದಾದರೂ ಒಂದು ಜಲರಹಿತ ಶಿಲಾವರಣದಿಂದ ಹೇರಲ್ಪಟ್ಟಿರುವುದೇ ಇದಕ್ಕೆ ಕಾರಣ. ಆರ್ಟೀಸಿಯನ್ ಅಂತರ್ಜಲಾಶಯಗಳ ಮೂಲಕ ಏರಬಹುದಾದ ಒಂದು ಊಹ್ಯ ಮಟ್ಟಕ್ಕೆ ಪೀಡನಮಾಪ್ಯ ಮಟ್ಟವೆಂದು ಹೆಸರು. ಈ ಮಟ್ಟ ಒಂದೇ ಜಲಾಶಯದ ಬೇರೆ ಬೇರೆ ಭಾಗಗಳೆಡೆ ನೆಲಮಟ್ಟಕ್ಕೆ ಕೆಳಗೆ ಅಥವಾ ಮೇಲೆ ಇರುವುದು. ಇದು ಮೇಲಿದ್ದಾಗ ಬಾವಿಗಳು ಪ್ರವಾಹೀ ಆರ್ಟೀಸಿಯನುಗಳಾಗುತ್ತವೆ. ಜಲಭರಿತ ಶಿಲಾವರಣದಲ್ಲಿನ ರಂಧ್ರ ಮತ್ತು ತೆರಪುಗಳು ಒಂದಕ್ಕೊಂದು ಹೆಣೆಯಲ್ಪಟ್ಟು ಸಣ್ಣ ಕೊಳವೆಗಳಂತೆ ವರ್ತಿಸುತ್ತವೆ. ಇವುಗಳಲ್ಲಿ ಅರ್ಜಿತ ಪ್ರದೇಶಗಳಿಂದ ವಿಸರ್ಜನ ಪ್ರದೇಶಗಳೆಡೆಗೆ ನೀರಿನ ಚಲನೆ ಬಹು ನಿಧಾನ–ದಿನಕ್ಕೆ ಕೆಲವು ಅಡಿಗಳನ್ನು ಮೀರಲಾರದು. ಆದಕಾರಣ ಈ ರಂಧ್ರ ಮತ್ತು ತೆರಪುಗಳು ಕೇವಲ ನೀರಿನ ಚಲನೆಗೇ ಅಲ್ಲದೆ ಶೇಖರಣೆಗೂ ಅವಕಾಶ ನೀಡುತ್ತವೆ.

ಜಲಭರಿತ ಶಿಲೆಯಲ್ಲಿ ನೀರು ಸೂಕ್ಷ್ಮ ಕೊಳವೆಯಂಥ ರಂಧ್ರಗಳಲ್ಲಿ ವ್ಯಾಪಿಸುವ ವೇಗಕ್ಕೆ ಆ ಶಿಲೆಯ ವ್ಯಾಪ್ಯಶೀಲತೆ ಎಂದು ಹೆಸರು. ಫ್ರಾನ್ಸಿನ ಹೆನ್ರಿ ಡಾರ್ಸಿ ಎಂಬ ಜಲಶಾಸ್ತ್ರಜ್ಞ ಜಲಭರಿತ ಶಿಲೆಯಲ್ಲಿ ವ್ಯಾಪ್ಯಶೀಲತೆ ನೀರಿನ ಚಲನಸಾಮರ್ಥ್ಯವೆಂದೂ ಇದು ಆ ಶಿಲೆಯಲ್ಲಿ ಎರಡು ಕೇಂದ್ರಗಳ ನಡುವೆ ಇರುವ ಒತ್ತಡದ ವ್ಯತ್ಯಾಸ ಮತ್ತು ಅವೆರಡರ ನಡುವೆ ತೆಳು ಅಥವಾ ಪ್ರಶಾಂತ ಪ್ರವಾಹದ ವೇಗಕ್ಕೆ ತಕ್ಕಂತೆ ಇರುವುದು ಎಂದೂ ಹೇಳಿದ್ದಾನೆ. ಇದನ್ನು ಕೆಳಗಿನ ಸಮೀಕರಣದಿಂದ ವಿವರಿಸಿದ :

$$V = \frac{\mathrm{P}(h_1 - h_2)}{l}$$

ಇಲ್ಲಿ $V$ ಒಂದು ದಿನಕ್ಕೆ ಅಡಿಗಳಲ್ಲಿ ಪ್ರವಹನದ ವೇಗ ; $h_1$ ಚಲಿಸಬೇಕಾದ ಶಿಲೆಯಲ್ಲಿ ನೀರು ಪ್ರವೇಶಿಸುವ ಶಿಲಾಛೇದ ಭಾಗದಲ್ಲಿನ ರಂಧ್ರಗಳ ಬಿಂದುವಿನಲ್ಲಿರುವ ಒತ್ತಡ : $h_2$ ಜಲ ನಿರ್ಗಮಿಸುವ ಶಿಲೆಯ ಛೇದಭಾಗದಲ್ಲಿನ ರಂಧ್ರಗಳ ಬಿಂದುವಿನಲ್ಲಿ ಒತ್ತಡ ; $l$ ಜಲ ಚಲಿಸುವ ಅಂತರ ; ಮತ್ತು $P$ ಜಲವ್ಯಾಪ್ಯಶೀಲತೆ. ಒಂದು ಗೊತ್ತಾದ ಕಾಲಮಾನದಲ್ಲಿ ನಿರ್ದಿಷ್ಟ ಶಿಲಾಛೇದ ವಿಸ್ತೀರ್ಣದ ಮೂಲಕ ಹರಿಯಬಹುದಾದ ನೀರಿನ ಪ್ರಮಾಣವನ್ನು ವೇಗ ಮತ್ತು ಶಿಲಾಛೇದ ಸೆಲೆಯ ಗುಣಲಬ್ಧದಿಂದ ತಿಳಿಯಬಹುದು.

ಅಂತರ್ಜಲಾನ್ವೇಷಣೆ : ವ್ಯವಸಾಯೋದ್ಯಮಗಳಿಗಾಗಿ ಅಂತರ್ಜಲದ ಬೇಡಿಕೆ ಹೆಚ್ಚುತ್ತಲಿದ್ದು ಅದರ ಅನ್ವೇಷಣೆಯ ಆವಶ್ಯಕತೆಯೂ ಹೆಚ್ಚುತ್ತಿದೆ. ಅನ್ವೇಷಣೆಗಳಲ್ಲಿ ಬಳಕೆಯಲ್ಲಿರುವುದು ಮುಖ್ಯವಾಗಿ ಎರಡು ಕ್ರಮ. ಮೊದಲನೆಯದು ಭೂವೈಜ್ಞಾನಿಕ ಕ್ರಮ, ಎರಡನೆಯದು ಭೂಭೌತ ಕ್ರಮ. ಅನ್ವೇಷಿಸಬೇಕಾದ ಪ್ರದೇಶದ ಭೂವೈಜ್ಞಾನಿಕ ನಕ್ಷೆಯನ್ನು ತಯಾರಿಸಿ ಇಚ್ಛಿತ ಸ್ಥಳದ ಛೇದಚಿತ್ರವನ್ನು ತಯಾರಿಸಿಕೊಂಡು ಮುಂದುವರಿಯುವುದು ಭೂವೈಜ್ಞಾನಿಕ ಕ್ರಮ. ಆಗ ಯಾವ ಯಾವ ಶಿಲಾಸ್ತೋಮಗಳು ಯಾವ ಯಾವ ದಿಕ್ಕಿನಲ್ಲಿ ಓಡುತ್ತವೆ, ಅವುಗಳ ಸ್ವರೂಪ ಎಂತಹುದು ಎಂದು ತಿಳಿಯಬಹುದು ಮತ್ತು ಆಯಾ ಪ್ರದೇಶಗಳ ಸುತ್ತಮುತ್ತಲಿನ ಬಾವಿಗಳಲ್ಲಿ ರೇಚನಾಪರೀಕ್ಷೆಗಳನ್ನು ನಡೆಸಿದಾಗ ಆ ಶಿಲೆಗಳು ಶೇಖರಿಸಿ ನೀಡಬಹುದಾದ ಜಲಪ್ರಮಾಣವನ್ನು ತಿಳಿಯಬಹುದು. ಭೂಭೌತ ಕ್ರಮದಲ್ಲಿ ಅನೇಕ ವಿಧವಾದ ಸಲಕರಣೆಗಳು ಬಳಕೆಯಲ್ಲಿವೆ. ಅವುಗಳಲ್ಲಿ ಮುಖ್ಯವಾದುವು ವಿದ್ಯುನ್ನಿರೋಧಮಾಪಕ ಮತ್ತು ಭೂಕಂಪಮಾಪಕ. ವಿದ್ಯುನ್ನಿರೋಧಮಾಪಕ ಆಯಾ ಪ್ರದೇಶದ ನೆಲದಲ್ಲಿ ಎಲೆಕ್ಟ್ರೋಡುಗಳನ್ನು ನೆಟ್ಟು ವಿದ್ಯುತ್ತನ್ನು ಪ್ರವಹಿಸಿದಾಗ ಅಲ್ಲಿನ ಶಿಲೆಗಳ ವಿದ್ಯುನ್ನಿರೋಧತೆಯನ್ನು ತಿಳಿಸುತ್ತದೆ. ಜಲಭರಿತ ಶಿಲೆಗಳು ಮತ್ತು ಜಲರಹಿತಶಿಲೆಗಳು ಅವಕ್ಕೆ ತಕ್ಕ ನಿರೋಧತೆಯನ್ನು ಸೂಚಿಸುವುದರಿಂದ ನಿವೇಶನದ ಗುರುತಿಸುವಿಕೆ ಸುಲಭವಾಗುತ್ತದೆ. ಭೂಕಂಪಮಾಪಕದಲ್ಲಿ ಅಪೇಕ್ಷಿತ ಸ್ಥಳದ ನೆಲದಾಳದಲ್ಲಿ ಕೃತಕವಾಗಿ ಸ್ಫೋಟ ಉಂಟು ಮಾಡಿದಾಗ ಶಬ್ದದ ಅಲೆಗಳು ಆಯಾ ಶಿಲಾಸ್ತೋಮಗಳಲ್ಲಿ ಅವುಗಳ ಭೌತಿಕ ಗುಣಕ್ಕೆ ತಕ್ಕಂತೆ ವೇಗ ವ್ಯತ್ಯಾಸಗೊಂಡು ಪ್ರವಹಿಸುತ್ತವೆ. ಇಲ್ಲಿ ಉಂಟಾಗುವ ವ್ಯತ್ಯಾಸ ವೈಪರೀತ್ಯಗಳು ಅಪೇಕ್ಷಿತ ನಿವೇಶನವನ್ನು ಸೂಚಿಸುತ್ತವೆ. (ವೈ.ಎಲ್.)

**ಜಲಮಟ್ಟ :** ಬಾವಿ ತೋಡಿದಾಗ ನೀರು ದೊರೆಯುವ ಆಳ. ಭೂಮಿಯ ಹೊರ ಚಿಪ್ಪಿನಲ್ಲಿರುವ ಸರಂಧ್ರ ಹಾಗೂ ವ್ಯಾಪ್ಯ ಶಿಲೆಗಳ ಮೂಲಕ ನೀರು ಪ್ರವಹಿಸಿ ಅನುಕೂಲಕರವಾದ ಸನ್ನಿವೇಶವಿರುವ ಆಳದಲ್ಲಿ ಶೇಖರಗೊಳ್ಳುತ್ತ ಹೋಗುತ್ತದೆ. ಈ ಆಳವನ್ನು ಮುಟ್ಟದ ಹೊರತು ಭೂಜಲ ನಮಗೆ ದಕ್ಕದೆ ತೋಡಿದ ಬಾವಿಯಲ್ಲಿ ನೀರು ಸಿಗಲಾರದು. ಜಲಮಟ್ಟದ ಆಳ ಸಾಮಾನ್ಯವಾಗಿ ಏಕರೀತಿಯಾಗಿ ಇರುವುದಿಲ್ಲ. ಹಾಗಿರಲು ಸಾಧ್ಯವೂ ಇಲ್ಲ. ಭೂಭಾಗದ ಒಳರಚನೆ, ಅಲ್ಲಿಯ ಶಿಲೆಗಳ ಲಕ್ಷಣ ಹಾಗೂ ಆ ಪ್ರದೇಶದ ಮಳೆಯ ವಾರ್ಷಿಕ ಪ್ರಮಾಣ ಇವನ್ನು ಅನುಸರಿಸಿ ಜಲಮಟ್ಟವೂ ವ್ಯತ್ಯಾಸಗೊಳ್ಳುತ್ತದೆ. ಉತ್ತಮ ಜಲಧರಗಳು ಅತಿ ಆಳದಲ್ಲಿರದೆ ನದಿ, ಕೆರೆ, ಕಣಿವೆ ಮುಂತಾದ ಜಲಾಶಯಗಳಿಗೆ ಸಮೀಪವಾಗಿದ್ದಲ್ಲಿ ಅಲ್ಲಿ ತೋಡುವ ಬಾವಿಗಳು ಆಳವಾಗಿರದೆ ಮೇಲುಗಡೆಯೇ ನೀರು ಸಮೃದ್ಧವಾಗಿ ದೊರೆಯುತ್ತದೆ. ಅಂದರೆ ಆ ಪ್ರದೇಶದಲ್ಲಿ ಜಲಮಟ್ಟ ಮೇಲ್ಭಾಗದಲ್ಲೇ ಇದೆ ಎನ್ನಬಹುದು. ಇದೇ ರೀತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲೂ ಅದು ಹೆಚ್ಚು ಆಳದಲ್ಲಿರಲು ಸಾಧ್ಯವಿಲ್ಲ. ಮಳೆ ಅಪರೂಪದ ಬೆಂಗಾಡು ಪ್ರದೇಶಗಳ ಬಾವಿಗಳು ಈ ಕಾರಣದಿಂದಲೇ ಬಹು ಆಳವಾಗಿರುತ್ತವೆ.

ಜಲಮಟ್ಟ ಒಂದು ಪ್ರದೇಶದ ಭೂರಚನೆಗೆ ಅನುಗುಣವಾಗಿ ಮಟ್ಟಸವಾಗಿರಬಹುದು ಇಲ್ಲವೇ ಮಡಿಕೆಬಿದ್ದ ಭೂರಚನೆಗೆ ಅನುಗುಣವಾಗಿ ಏರುಪೇರುಗಳನ್ನು ತೋರಿಸಬಹುದು. ಈ ಬಗೆಯ ಜಲಮಟ್ಟವನ್ನು ಸ್ತರಭಂಗಗಳು ಛೇದಿಸಿದಾಗ ಜಲಮಟ್ಟವೂ ವ್ಯತ್ಯಾಸಗೊಂಡು ಭಂಗಕ್ಕೆ ಒಳಗಾದ ಜಾಡಿನಲ್ಲಿ ನೀರು ಚಿಲುಮೆಯಂತೆ ಹೊರಚಿಮ್ಮುತ್ತದೆ.

ಋತುಮಾನಕ್ಕೆ ಅನುಗುಣವಾಗಿಯೂ ಜಲಮಟ್ಟ ಏರುಪೇರುಗಳನ್ನು ತಳೆಯುವುದು. ಮಳೆಗಾಲದಲ್ಲಿ ಮೇಲಕ್ಕೇರಿ, ಬೇಸಿಗೆಯಲ್ಲಿ ಆಳಕ್ಕೆ ಕುಗ್ಗಿಹೋಗುತ್ತದೆ. ಈ ಕಾರಣದಿಂದಲೇ ಬಾವಿಗಳಲ್ಲಿ ನೀರಿನಮಟ್ಟ ಬೇಸಗೆಯಲ್ಲಿ ಬಹುಮಟ್ಟಿಗೆ ಕುಗ್ಗಿ ನಡುಬೇಸಗೆಯಲ್ಲಿ ನೀರೇ ಮಾಯವಾಗುವ ಸಂಭಾವ್ಯತೆಗಳೂ ಉಂಟು. ಆದರೆ ಮಳೆಗಾಲದಲ್ಲಿ ಯಥೇಚ್ಛವಾಗಿ ನೀರು ಜಿನುಗುವ ಕಾರಣ ಅದು ಮೇಲಕ್ಕೆ ಬರುತ್ತದೆ. ನೀರಿನ ಬಳಕೆ ಹೆಚ್ಚಾದಾಗ ಅಷ್ಟೇ ಶೀಘ್ರಗತಿಯಲ್ಲಿ ಭೂಜಲ ಒದಗದೆ ಜಲಮಟ್ಟ ಕುಗ್ಗುವುದೂ ವಾಡಿಕೆ. ಕೊಂಚ ಕಾಲಾವಕಾಶವನ್ನು ಕೊಟ್ಟಲ್ಲಿ ಮತ್ತೆ ನೀರು ತುಂಬಿ ಜಲಮಟ್ಟ ಯಥಾಸ್ಥಿತಿಗೆ ಬರುತ್ತದೆ. ಈ ವ್ಯತ್ಯಾಸಗಳನ್ನು ಅನೇಕ ಏತದ ಬಾವಿಗಳಲ್ಲಿ ವೀಕ್ಷಿಸಬಹುದು.

ಇವೇ ಅಲ್ಲದೆ ವಾಯುಮಂಡಲದಲ್ಲಿ ತಲೆದೋರುವ ಒತ್ತಡ, ವ್ಯತ್ಯಾಸಗಳು, ಸೂರ್ಯ ಚಂದ್ರರ ಆಕರ್ಷಣಬಲ, ಭೂಕಂಪನಗಳ ಹಾವಳಿ–ಇವುಗಳಿಂದಲೂ ಜಲಮಟ್ಟದಲ್ಲಿ ಸಾಕಷ್ಟು ವ್ಯತ್ಯಾಸಗಳು ತಲೆದೋರುತ್ತವೆ. (ಬಿ.ವಿ.ಜಿ)

**ಜಲಮಾರ್ಗಗಳು :** ನೌಕಾಯಾನಕ್ಕೆ ಬಳಸುವ ನೈಸರ್ಗಿಕ ಕಾಲುವೆಗಳು ಮತ್ತು ನೀರಾವರಿ, ಕುಡಿವ ನೀರಿನ ಪೂರೈಕೆ, ಕಚರಾ ವಿಲೇವಾರಿ ಮುಂತಾದವುಗಳಿಗಾಗಿ ಬಳಸುವ ನಾಲೆಗಳು. ರೈಲ್ವೆ ಇನ್ನೂ ತಿಳಿಯದೇ ಇದ್ದಾಗ ಮತ್ತು ನೆಲ ದಾರಿಗಳು ಸಾಕಷ್ಟು ವೃದ್ಧಿಗೊಂಡಿಲ್ಲದಿದ್ದಾಗ ಒಳನಾಡಿನ ಕಾಲುವೆಗಳೂ ನಾಲೆಗಳೂ ಬಳಕೆಯಲ್ಲಿದ್ದುವು. ಈ ತರಹದ ಸಂಪರ್ಕವ್ಯವಸ್ಥೆ ಭಾರತದಲ್ಲಿ ಬಲು ಪ್ರಾಚೀನ ಕಾಲದಿಂದಲೂ ಇತ್ತೆನ್ನುವುದಕ್ಕೆ ಋಗ್ವೇದದಲ್ಲಿ ಉಲ್ಲೇಖಗಳಿವೆ. ನೈಲ್ ನದಿಯನ್ನೂ ಕೆಂಪು ಸಮುದ್ರವನ್ನೂ ಪ್ರಶ.ಪೂ. 500ರಷ್ಟು ಹಿಂದೆಯೇ ಕಾಲುವೆಯ ಮೂಲಕ ಜೋಡಿಸಲಾಗಿತ್ತು. ಚೀನದಲ್ಲಿ ಪ್ರಶ. ಪೂ. 200ರಲ್ಲಿ ಒಂದು ಕಾಲುವೆಯನ್ನು ಅಗೆಯಲಾಗಿತ್ತು. ತರುವಾಯದ ಶತಮಾನಗಳಲ್ಲಿ, ನಾಗರಿಕತೆ ಬೆಳೆದಂತೆ ಒಳನಾಡಿನ ಜಲಮಾರ್ಗಗಳು ವ್ಯವಸ್ಥಿತವಾಗಿ ರೂಪಗೊಂಡವು.

ಜಲಮಾರ್ಗಗಳಲ್ಲಿ ಎರಡು ವಿಧ : ನೌಕಾಸಂಚಾರಯೋಗ್ಯ ಕಾಲುವೆಗಳು ಮತ್ತು ಕಾಲುವೆಗೊಳಿಸಿದ (ಕ್ಯಾನಲೈಸ್ಡ್) ನದಿಗಳು. ದೋಣಿ, ಹರಿಗೋಲು ಮತ್ತು ಹಡಗುಗಳ ಸಂಚಾರಕ್ಕೆ ಸಿದ್ಧವಾದ ಅಂತರ್ದೇಶೀಯ ಕೃತಕ ಜಲಮಾರ್ಗಗಳೇ ನೌಕಾಸಂಚಾರಯೋಗ್ಯ ಕಾಲುವೆಗಳು. ಎರಡನೆಯ ಪ್ರಕಾರವಾದ ಕಾಲುವೆಗೊಳಿಸಿದ ನದಿಗಳಲ್ಲಿ ಜಲಪ್ರವಾಹವನ್ನು ಶೇಖರಿಸಲು ಒಂದು ಅಥವಾ ಹೆಚ್ಚು ವಿಯರುಗಳನ್ನು (ಉತ್‌ಪ್ರವಾಹಿ ಅಣೆಕಟ್ಟು) ಕಟ್ಟಿ ಆ ನದಿಗಳನ್ನು ನೌಕಾಸಂಚಾರಯೋಗ್ಯವನ್ನಾಗಿ ಮಾಡಲಾಗುತ್ತದೆ. ಪ್ರವಾಹದ ಉಚ್ಚ ಅಥವಾ ಆಲವಿ ಸ್ತರಗಳಲ್ಲೇ ನೌಕೆಗಳು ಚಲಿಸಲು ಅನುಕೂಲವಾಗುವಂತೆ ಜಲಪಾತಗಳನ್ನು ಕಟ್ಟಲಾಗುತ್ತದೆ. ಜಲಪಾತಗಳು ಎರಡೂ ಪ್ರಕಾರದ ಜಲಮಾರ್ಗಗಳಲ್ಲಿ ಇರಬಹುದು, ನೌಕಾಸಂಚಾರಯೋಗ್ಯ ಕಾಲುವೆಗಳು ಕಾಲುವೆಗೊಳಿಸಿದ ಎರಡು ನದಿಗಳನ್ನು ಜೋಡಿಸಬಹುದು. ಅಥವಾ ಅಂಥ ನದಿಗಳುದ್ದಕ್ಕೂ ಕೆಲ ದೂರದವರೆಗೆ ನಿರ್ಮಾಣ ಗೊಂಡಿರಬಹುದು. ಅವನ್ನು ಕ್ಷೇತ್ರಸ್ವರೂಪದೊಂದಿಗೆ (ಟೋಪೋಗ್ರಫಿ) ಹೊಂದಾಣಿಕೆ ಮಾಡಲು ಜಲಪಾತಗಳಿಂದ ಜೋಡಿಸಲ್ಪಟ್ಟ ಸ್ತರವಿಸ್ತಾರಗಳ (ಆವೆಲ್ ರೀಚಸ್) ಸರಣಿಯನ್ನು ಉಪಯೋಗಿಸಲಾಗುತ್ತದೆ.

ನೌಕಾಸಂಚಾರಯೋಗ್ಯ ಕಾಲುವೆಯ ಆಯಾಮಗಳ ನಿರ್ಧರಣೆ ಮುಖ್ಯವಾಗಿ ಸಂಚಾರವೇಗವನ್ನು ಅವಲಂಬಿಸಿದೆ. ಜಲಯಾನದ ಎಲ್ಲ ಪರಿಕರ್ಮಗಳಲ್ಲೂ (ಆಪರೇಷನ್ಸ್) ತಲದ ನಿರ್ಬಾಧಿತೆ (ಕ್ಲಿಯರೆನ್ಸ್) ನಿರ್ದಿಷ್ಟವಾಗಿರುವಷ್ಟು ಕಾಲುವೆ ಆಳವಾಗಿರಬೇಕು. ಅದರ ಅಗಲ ಸಾಮಾನ್ಯವಾಗಿ ನೌಕೆಗಳು ಒಂದಕ್ಕೊಂದು ಎದುರು ಬದುರು ಹಾಯುವಷ್ಟು ಇರುತ್ತದೆ. ಕಾಲುವೆಯ ಅಡ್ಡಕೊಯ್ತ ರೂಢಿಯಲ್ಲಿ ವಿಷಮಚತುರಸ್ರಾಕಾರ (ಟ್ರಾಪಿಸಾಯ್ಡಲ್) ಇರುತ್ತದೆ. ಪಕ್ಕಗಳ ಓಟ (ಸ್ಲೋಪ್) 3:2 ರಿಂದ 3:1ರ ವರೆಗೆ ವ್ಯತ್ಯಾಸವಾಗುತ್ತದೆ. ಹಲವು ಸಲ ಕೊರೆತದ ವಸ್ತುವನ್ನು ಅವಲಂಬಿಸಿ ಓಟ ಇನ್ನೂ ಚಪ್ಪಟೆಯಾಗುವುದು. ಬಂಡೆಗಲ್ಲುಗಳಲ್ಲಿಯ ಕಡಿತಕ್ಕೆ (ಕಟ್) ಲಂಬ ಅಥವಾ ಲಂಬಕ್ಕೆ ಹತ್ತಿರವಾದ ಪಕ್ಕಗಳು ಇರುತ್ತವೆ.

ಜಲಪಾಶ (ಲಾಕ್): ಜಲಪಾಶವೆಂದರೆ ಕೆಳಪ್ರವಾಹ ಮತ್ತು ಮೇಲುಪ್ರವಾಹ ಎರಡರಲ್ಲಿಯೂ ಗೇಟುಗಳನ್ನು ಅಳವಡಿಸಿಕೊಂಡ ಒಂದು ಕೋಷ್ಠ (ಚೇಂಬರ್). ನೌಕೆಗಳನ್ನು ಒಂದು ಉನ್ನತಿಯಿಂದ ಇನ್ನೊಂದಕ್ಕೆ ಇಳಿಸಲು ಅಥವಾ ಎತ್ತರಿಸಲು ಈ ಕೋಷ್ಠದಲ್ಲಿ ತಡೆಹಿಡಿಯಲ್ಪಟ್ಟ ನೀರನ್ನು ಉಪಯೋಗಿಸಲಾಗುತ್ತದೆ. ಕೋಷ್ಠದಲ್ಲಿ ನೀರನ್ನು ತುಂಬಲು ಮತ್ತು ಬರಿದುಮಾಡಲು ಚಿಕ್ಕ ಸಹಾಯಕ ಗೇಟುಗಳಿರುತ್ತವೆ. ನೌಕೆ ಜಲಪಾಶದ ಕೋಷ್ಠದಲ್ಲಿ ಪ್ರವೇಶಿಸಿದ ಬಳಿಕ ಗೇಟುಗಳನ್ನು ಮುಚ್ಚಲಾಗುತ್ತದೆ. ಜಲಯಾನ ಕೆಳಪ್ರವಾಹಮುಖಿಯಾಗಿದ್ದರೆ ನೀರಿನ ಸ್ತರವನ್ನು ಇಳಿಸಲಾಗುತ್ತದೆ. ಹಾಗಲ್ಲದೆ ಅದು ಮೇಲು ಪ್ರವಾಹಮುಖಿಯಾಗಿದ್ದರೆ ನೀರಿನ ಮಟ್ಟವನ್ನು ಎತ್ತರಿಸಲಾಗುತ್ತದೆ. ಜಲಪಾಶದಲ್ಲಿಯ ನೀರಿನ ಮಟ್ಟ ನೌಕೆಯ ಸಮ್ಮುಖದಲ್ಲಿರುವ ನೀರಿನ ಮಟ್ಟವನ್ನು ತಲುಪಿದಾಗ ಮುಂಭಾಗದ ಗೇಟುಗಳ ಕೂಟವನ್ನು ತೆರೆಯಲಾಗುತ್ತದೆ. ಆಗ ನೌಕೆ ಜಲಪಾಶದಿಂದ ಹೊರಗೆ ಚಲಿಸುತ್ತದೆ. ಅನೇಕ ಕಾಲುವೆಗೊಳಿಸಿದ ನದಿಗಳಲ್ಲಿ ಜಲಪಾಶಗಳನ್ನು ಅಲ್ಪಪ್ರವಾಹದ ಅವಧಿಯಲ್ಲಿ ಉಪಯೋಗಿಸಲಾಗುತ್ತದೆ. ಅಣೆಕಟ್ಟುಗಳಲ್ಲಿ ಚಲನಶೀಲ ಖಂಡಗಳು (ಮೂವಬಲ್ ಸೆಕ್ಷನ್ಸ್) ಇರುತ್ತವೆ. ಸಾಧಾರಣ ಅಥವಾ ಉಚ್ಚ ಪ್ರವಾಹದ ಅವಧಿಗಳಲ್ಲಿ ಅಣೆಕಟ್ಟಿನ ಮೇಲಿನಿಂದ ನೌಕೆಗಳ ಅನಿರ್ಬಂಧ ಸಾಗಣೆಗೆ ಅನುಕೂಲವಾಗುವ ಹಾಗೆ ಅವನ್ನು ಅಳವಡಿಸಲಾಗಿರುತ್ತದೆ.

ಭಾರತದಲ್ಲಿ ನೌಕಾಸಂಚಾರಯೋಗ್ಯ ಜಲಮಾರ್ಗ ಸುಮಾರು 14,000ಕಿ.ಮೀ. ಉಂಟು. ಇದರಲ್ಲೇ 3,500ಕಿ.ಮೀ. ಉಗಿಹಡಗುಗಳ (ಸ್ಟೀಮರ್ಸ್) ಸಂಚಾರಕ್ಕೆ ಯೋಗ್ಯವಾಗಿದೆ. ಅವುಗಳಲ್ಲಿ ಪ್ರಮುಖವಾದವು ಗಂಗಾ, ಬ್ರಹ್ಮಪುತ್ರ ಮತ್ತು ಅವುಗಳ ಉಪನದಿಗಳು, ಗೋದಾವರಿ, ಕೃಷ್ಣ ಮತ್ತು ಅವುಗಳ ಕಾಲುವೆಗಳು, ಕೇರಳದ ಪಶ್ಚಿಮ ಕರಾವಳಿಯಲ್ಲಿರುವ ಕಾಲುವೆಗಳು, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿಯ ಬಕಿಂಗ್‌ಹ್ಯಾಮ್ ಕಾಲುವೆ, ಒರಿಸ್ಸ ಮತ್ತು ಗೊಮವಗಳಲ್ಲಿಯ ಡೆಲ್ಟಾ ಕಾಲುವೆಗಳು. ಅಲ್ಲದೆ ದಾಮೋದರ ಕಣಿವೆ ಯೋಜನೆಯಲ್ಲಿ ದುರ್ಗಾಪುರದಿಂದ ತ್ರಿವೇಣಿಯವರೆಗಿನ 137ಕಿ.ಮೀ. ಎಡದಂಡೆಯ ಕಾಲುವೆ ನೀರಾವರಿಸಹಿತ ನೌಕಾಸಂಚಾರಯೋಗ್ಯ ಕಾಲುವೆಯಾಗಿದೆ. ಫರಕ್ಕ ಬರಾಜ್ ಯೋಜನೆ 1975 ರಲ್ಲಿ ಪೂರ್ಣಗೊಂಡು ಗಂಗಾ ಮತ್ತು ಹೂಗ್ಲಿಗಳ ನಡುವೆ ನೌಕಾಸಂಚಾರ ಬೆಳೆದಿದೆ. ಜಲಮಾರ್ಗಗಳ ಅಭಿವೃದ್ಧಿಗೆಂದು ಸ್ಥಾಪಿತವಾಗಿರುವ ಕೇಂದ್ರೀಯ ಅಂತರ್ದೇಶೀಯ ಜಲಸಂಚಾರ ಕಾರ್ಪೊರೇಷನ್ (ಭಾರತ ಸರ್ಕಾರದ ಉಪಕ್ರಮ) ಅಸ್ಸಾಮ್ ಮತ್ತು ಕಲ್ಕತ್ತೆಗಳಲ್ಲಿ 1967ರಿಂದ ಕಾರ್ಯ ನಡೆಸಿದೆ.

ಜಲಸಾರಿಗೆ : ನೀರಿನ ಮೇಲೆ ಅಥವಾ ನೀರಿನ ಒಳಗೆ ಸರಕು, ಪ್ರಯಾಣಿಕರು, ಅಂಚೆ ಇತ್ಯಾದಿಗಳನ್ನು ಸಾಗಿಸುವ ವ್ಯವಸ್ಥೆ. ಇದು ನೆಲಸಾರಿಗೆ ಮತ್ತು ವಾಯುಸಾರಿಗೆಗಳಿಗಿಂತ ಅಗ್ಗವಾದದ್ದು. ಅಂತಾರಾಷ್ಟ್ರೀಯ ಸಾರಿಗೆ ಹಾಗೂ ಅಂತಾರಾಷ್ಟ್ರೀಯ ವ್ಯಾಪಾರಗಳಲ್ಲಿ ಜಲಸಾರಿಗೆಯ ಪ್ರಮುಖ ಪಾತ್ರ ಉಂಟು. ನೆಲ ಮತ್ತು ವಾಯುಸಾರಿಗೆಗಳು ಊಹೆಗೂ ನಿಲುಕದಷ್ಟು ಪ್ರಗತಿ ಹೊಂದಿದ್ದರೂ ಜಲಸಾರಿಗೆಯ ಪ್ರಾಮುಖ್ಯ ಕಡಿಮೆ ಏನೂ ಆಗಿಲ್ಲ. ಮಾನವ ಪ್ರಾಣಿಗಳನ್ನು ಪಳಗಿಸುವ ಮುಂಚೆಯಿಂದಲೂ ದೋಣಿಗಳನ್ನು ಬಳಸುತ್ತಿದ್ದುದಾಗಿ ಪ್ರಾಚೀನ ನಾಗರಿಕತೆಗಳ ಇತಿಹಾಸದಿಂದ ತಿಳಿದುಬರುತ್ತದೆ. ಹುಲ್ಲು ಜೊಂಡು ದಿಮ್ಮಿ ಬುರುಡೆ ಇತ್ಯಾದಿ ತೇಲುವ ವಸ್ತುಗಳನ್ನು ಬಳಸಿ ಅಥವಾ ಗಟ್ಟಿವಸ್ತುಗಳಲ್ಲೇ ತೇಲುವ ಸಾಧನಗಳನ್ನು ನಿರ್ಮಿಸಿ ಸಾವಿರಾರು ವರ್ಷಗಳಿಂದ ಮಾನವ ಜಲಸಾರಿಗೆ ನಡೆಸಿದ್ದಾನೆ. ಪ್ರಾಚೀನ ಭಾರತೀಯರೂ ಈಜಿಪ್ಷಿಯನ್ನರೂ ಅಂಡಮಾನ್ ನಿವಾಸಿಗಳೂ ಬೊಂಬುಗಳಿಂದ ತೆಪ್ಪ ನಿರ್ಮಿಸುತ್ತಿದ್ದರು. ಆಫ್ರಿಕ, ಮೆಕ್ಸಿಕೋ, ಪೆರುಗಳಲ್ಲಿ ದೊಡ್ಡಬುರುಡೆಗಳ ನೆರವಿನಿಂದ ನದಿಗಳನ್ನು ದಾಟುತ್ತಾರೆ. ಬುರುಡೆಗಳ ಮೇಲೆ ಜೋಳದ ದಂಟುಗಳನ್ನು ಜೋಡಿಸಿ ಕಟ್ಟಿ ತೆಪ್ಪಮಾಡುತ್ತಾರೆ. ಪಶುಪಾಲನಾ ಜನಾಂಗದವರು ಬುರುಡೆಗಳಿಗೆ ಬದಲಾಗಿ ವಾಯು ತುಂಬಿದ ಚರ್ಮದ ಚೀಲಗಳನ್ನು ಬಳಸುತ್ತಾರೆ. ಬೋರಲು ಹಾಕಿದ ಗಡಿಗೆಗಳನ್ನೂ ತೇಲುವ ಉದ್ದೇಶಕ್ಕಾಗಿ ಬಳಸುವುದುಂಟು. ಭಾರತದಲ್ಲಿ ಬೊಂಬಿನ ತೆಪ್ಪಗಳೂ ಕೊಪ್ಪರಿಗೆಯಾಕಾರದ ಬುಟ್ಟಿ ತಯಾರಿಸಿ, ಚರ್ಮಹೊದಿಸಿ ಮಾಡಿದ ಹರಿಗೋಲುಗಳೂ ನದಿ ದಾಟಲು ಬಳಕೆಯಾಗುತ್ತವೆ.

ಹರಿಗೋಲುಗಳಲ್ಲಿ ಎಸ್ಕಿಮೋಗಳ ಉಮಿಯಕ್ ಮತ್ತು ಕಯಕ್ ವಿಶಿಷ್ಟವಾದವು. ಉಮಿಯಕ್ ಹೆಂಗಸಿನ ದೋಣಿಯೆಂದು ಕರೆದರೂ ಗ್ರೀನ್‍ಲೆಂಡಿನ ಹೊರತು ಇತರೆಡೆಗಳಲ್ಲಿ ಇದನ್ನು ಗಂಡಸರೇ ಹೆಚ್ಚು ಬಳಸುತ್ತಾರೆ. ಇದನ್ನು ದೊಡ್ಡ ಪ್ರಾಣಿಗಳ ಬೇಟೆಗೆ ಉಪಯೋಗಿಸುವರು. ಇದರ ಉದ್ದ 3–4.5ಮೀ. ಇದರ ತಟ್ಟೆ ಚಪ್ಪಟೆ. ದೋಣಿಯ ಹಿಂತುದಿಗೂ ಮುಂತುದಿಗೂ ವ್ಯತ್ಯಾಸವಿಲ್ಲ. ಹೊರಹೊದಿಕೆಗೂ ಅಡ್ಡಪಟ್ಟಿಗಳಿಗೂ ಸೀಲ್ ಚರ್ಮವನ್ನು ಬಳಸುತ್ತಾರೆ. ಹೊದಿಕೆಯ ಚರ್ಮ ತೇವಗೊಂಡು ಹಿಗ್ಗಿ ಸಡಿಲಾದಾಗ ಅದನ್ನು ಬಿಗಿಪಡಿಸಲು ವ್ಯವಸ್ಥೆ ಉಂಟು. ಕಯಕ್ ಬೇಟೆಯ ದೋಣಿ. ಇದನ್ನು ಉಮಿಯಕಿನಂತೆಯೇ ನಿರ್ಮಿಸಲಾಗುವುದಾದರೂ ಇದರಲ್ಲಿ ಒಬ್ಬ ವ್ಯಕ್ತಿಯ ಸೊಂಟದಳತೆಯಷ್ಟು ದುಂಡನೆಯ ರಂಧ್ರದ ಹೊರತು ಮೇಲುವಿಭಾಗವನ್ನೆಲ್ಲ ಚರ್ಮದಿಂದ ಮುಚ್ಚಿಬಿಟ್ಟಿರುತ್ತಾರೆ. ನೀರಿಳಿಯದ ಚರ್ಮದ ವಸ್ತ್ರ ಧರಿಸಿದ ವ್ಯಕ್ತಿ ಈ ರಂಧ್ರದಲ್ಲಿ ತೂರಿ ಕುಳಿತುಕೊಂಡು ತನ್ನ ಅಂಗಿಯ ದಾರಗಳಿಂದ ದೋಣಿಯ ಕಂಠಕ್ಕೆ ಕಟ್ಟಿ ಬಿಗಿಸಿಕೊಳ್ಳುತ್ತಾನೆ. ಈ ದೋಣಿ ವೇಗವಾಗಿ ಚಲಿಸಬಲ್ಲದು. ಸಾಗರದ ಅಲೆಗಳ ರಭಸವನ್ನೂ ತಾಳಿಕೊಳ್ಳಬಲ್ಲದು. ಧರ್ಮ ಹೊದೆಸಿದ ಇಂಥ ದೋಣಿಗಳನ್ನು ಬಲು ದೀರ್ಘಕಾಲ ನಿರಂತರವಾಗಿ ಬಳಸಲು ಬರುವುದಿಲ್ಲ. ಉಪಯೋಗಿಸದಿರುವಾಗ ಇವನ್ನು ತೇವವಿಲ್ಲದೆಡೆಯಲ್ಲಿ ಒಣಗಿಸಿಡಬೇಕು. ನೀರಿನಲ್ಲೇ ಇರಗೊಟ್ಟರೆ ಚರ್ಮ ಕೊಳೆಯುತ್ತದೆ.

ಕೆಲವು ಮರಗಳ ತೊಗಟೆಯನ್ನು ಸಾಕಷ್ಟು ಉದ್ದವಾಗಿ ಉಪಾಯದಿಂದ ಸುಲಿದು ಆ ತೊಗಟೆಯಿಂದ ದೋಣಿ ನಿರ್ಮಿಸುತ್ತಾರೆ. ತೊಗಟೆಯನ್ನು ಹಲಗೆಯ ಚೌಕಟ್ಟಿಗೆ ಬಿಗಿದು ಕಟ್ಟಿ, ಸಂದು ರಂಧ್ರಗಳನ್ನು ಪಾಚಿ ಅಂಟುಗಳಿಂದ ಮುಚ್ಚುತ್ತಾರೆ. ಮರದ ದಿಮ್ಮಿಗಳನ್ನು ನದಿಯ ನೀರಿನ ಗುಂಟ ತೇಲಿಬಿಟ್ಟು ಸಾಗಿಸುವ ವಿಧಾನ ಈಗಲೂ ಅನೇಕ ದೇಶಗಳಲ್ಲಿ ಬಳಕೆಯಲ್ಲಿದೆ. ತೆಂಗಿನಕಾಯಿಗಳನ್ನು ಅವುಗಳದೇ ತೆಪ್ಪಮಾಡಿ ಫಿಲಿಪೀನ್ಸ್‌ನ ನದಿಗಳ ಮೇಲೆ ತೇಲಿಬಿಡುವುದೊಂದು ರಮ್ಯನೋಟ. ತೆಂಗಿನಕಾಯಿಗಳ ಮಟ್ಟೆಯ ನಾರನ್ನು ತುಸು ಸಿಗಿದು ಅದರಿಂದ ಒಂದಕ್ಕೊಂದು ಕಾಯಿಗಳನ್ನು ಕಟ್ಟಿ ಒಂದು ದೊಡ್ಡವೃತ್ತವನ್ನು ರಚಿಸಲಾಗುವುದು. ಈ ಕಾಯ ಸರವನ್ನು ನದಿಯಲ್ಲಿ ತೇಲಿಬಿಟ್ಟು ಅದರ ನಡುವೆ ಹಿಡಿಯುವಷ್ಟು ಕಾಯಿಗಳನ್ನು ತುಂಬಿ ರಾಶಿ ಹಾಕಲಾಗುವುದು. ಇಷ್ಟಾದ ಬಳಿಕ ತೆಂಗಿನಕಾಯ ತೆಪ್ಪ ಗಂಭೀರವಾಗಿ ನದಿಯ ಗುಂಟ ಸಾಗುತ್ತದೆ. ಇದೇ ಬಗೆಯಲ್ಲಿ ಭಾರತ ಮಲೇಷ್ಯಗಳಲ್ಲಿ ಬೊಂಬಿನ ತೆಪ್ಪಗಳಲ್ಲಿ ಪ್ರವಾಹದ ಅಭಿಮುಖವಾಗಿ ಸರಕುಗಳನ್ನು ಸುಲಭವಾಗಿ ಸಾಗಿಸಲಾಗುವುದು. ಈ ವಿಧಾನವನ್ನು ಪ್ರವಾಹದ ಎದುರು ದಿಕ್ಕಿನ ಯಾನಕ್ಕೆ ಬಳಸಲಾಗುವುದಿಲ್ಲ. ಕೆಲಸಂದರ್ಭಗಳಲ್ಲಿ ಸದರಿ ತೆಪ್ಪವನ್ನು ಭೂಸಾರಿಗೆಯ ಮೂಲಕ ವಾಪಸು ತರಬೇಕಾಗಬಹುದು. ದೊಡ್ಡದಿಮ್ಮಿಯನ್ನು ಕಲ್ಲು, ಚಿಪ್ಪು, ಕೈಬಾಚಿ ಇತ್ಯಾದಿ ಉಪಕರಣಗಳಿಂದಲೋ ಬೆಂಕಿಯಿಂದಲೋ ಕೊರೆದು ತೋಡುದೋಣಿಗಳನ್ನು ರಚಿಸಲಾಗುವುದು. ಹೀಗೆ ತೇಲುವ ಅತಿ ಸರಳ ಸಾಧನಗಳಿಂದ ಹಿಡಿದು ತೋಡುದೋಣಿ, ತೆಪ್ಪ, ನಾಡದೋಣಿ, ಓಡ, ಹಾಯ್ಗಡ, ದೋಣಿಬುಟ್ಟಿ, ಹಾಯಿದೋಣಿ, ಉಕ್ಕಿನ ನೌಕೆ, ನೀರಿನಲ್ಲಿ ಮುಳುಗಿಯೋ ಸಾಗುವ ಜಲಾಂತರ್ಗಾಮಿಯವರೆಗೆ ಅನೇಕ ಬಗೆಯ ಜಲವಾಹನಗಳು ಜಲಸಾರಿಗೆಯಲ್ಲಿ ಬಳಕೆಯಾಗುತ್ತವೆ.

ಜಲಸಾರಿಗೆಯಲ್ಲಿ ಬಳಸುವ ಚಾಲಕ ಸಾಮರ್ಥ್ಯ ಅನೇಕ ಬಗೆಯದಾಗಿರಬಹುದು. ಹರಿಯುವ ನೀರಿನ ಸೆಳೆತವೇ ಕೆಲವು ಸಂದರ್ಭಗಳಲ್ಲಿ ಚಾಲಕ ಸಾಮರ್ಥ್ಯವಾಗುತ್ತದೆ. ಬೀಸುಗಾಳಿ, ಮಾನವಸಾಮರ್ಥ್ಯ, ಕಲ್ಲಿದ್ದಲು, ಕಲ್ಲೆಣ್ಣೆ ಪರಮಾಣು ಶಕ್ತಿ ಮುಂತಾದವು ಚಾಲಕ ಶಕ್ತಿಯಾಗಬಹುದು.

ಜಲಸಾರಿಗೆಯಲ್ಲಿ ಚಾಲಕ ಶಕ್ತಿ ಉಳಿತಾಯವಾಗುತ್ತದೆ. ನೀರಿಗೆ ಪ್ಲವನತೆ (ಬಾಯೆನ್ಸಿ) ಇರುವುದೂ ನೀರಿನ ಮೇಲೆ ವಸ್ತು ಚಲಿಸುವಾಗ ಘರ್ಷಣೆ ಕಡಿಮೆಯಿರುವುದೂ ಇದಕ್ಕೆ ಮುಖ್ಯ ಕಾರಣಗಳು. ಒಂದು ಉದಾಹರಣೆ ಕೊಡುವುದಾದರೆ ಒಂದು ಅಶ್ವಸಾಮರ್ಥ್ಯದ ಬಳಕೆಯಿಂದ ಸೆಕೆಂಡಿಗೆ 1ಮೀ. ವೇಗದಲ್ಲಿ ರಸ್ತೆಯ ವಾಹನವೊಂದರಲ್ಲಿ 1360ಕಿಲೋ. ಭಾರವನ್ನೂ ರೈಲುಗಾಡಿಯಲ್ಲಿ 13600ಕಿಲೋ. ಭಾರವನ್ನೂ ಸಾಗಿಸಬಹುದಾದರೆ ಜಲವಾಹನದಲ್ಲಿ 90,000ಕಿಲೋ. ಭಾರವನ್ನು ಸಾಗಿಸಬಹುದಾಗಿದೆ. ಆದರೆ ಜಲಸಾರಿಗೆಯಲ್ಲಿ ವೇಗವನ್ನು ಏರಿಸಲು ತಗಲುವ ವೆಚ್ಚ ಇತರ ಸಾರಿಗೆಗಳಲ್ಲಿಗಿಂತ ಹೆಚ್ಚಿನದಾಗಿರುತ್ತದೆ.

ನೌಕೆಗಳ, ಅದರಲ್ಲೂ ಸಮುದ್ರಯಾನ ಮಾಡುವ ನೌಕೆಗಳ ಗಾತ್ರಕ್ಕೆ ಮಿತಿಯೇ ಇಲ್ಲವೆನ್ನಬಹುದು. ಅವಕ್ಕೆ ಮಿತಿಯೊಡ್ಡುವ ಅಂಶಗಳೆಂದರೆ ಬಂದರುಗಳ ಸ್ಥಳಮಿತಿ ಮತ್ತು ಕಾಲುವೆಗಳ ಗಾತ್ರ ಮಿತಿ ಮಾತ್ರ. ನೌಕೆ ದೊಡ್ಡದಾದಷ್ಟೂ ನೌಕಾಯಾನ ಸುರಕ್ಷಿತವಾಗುವುದಷ್ಟೇ ಅಲ್ಲದೆ ಅದರಲ್ಲಿ ಸಾಗಿಸುವ ಸರಕಿಗೆ ತಗಲುವ ಸಾರಿಗೆ ವೆಚ್ಚ ಕಡಿಮೆಯೂ ಆಗುತ್ತದೆ. ಸಾಗರ ಸಮುದ್ರಗಳು ಎಲ್ಲ ರಾಷ್ಟ್ರಗಳಿಗೂ ಮುಕ್ತವಾದ ಹೆದ್ದಾರಿಗಳಾಗಿವೆ. ಅವುಗಳ ಬಳಕೆಗೆ ಯಾವ ಬಗೆಯ ತೆರಿಗೆ, ಸುಂಕವನ್ನೂ ಕೊಡಬೇಕಾಗಿಲ್ಲ. ಸಮುದ್ರಯಾನಕ್ಕೆ ಯಾವ ಬಗೆಯ ಮಾರ್ಗ ನಿರ್ಮಾಣ–ನಿರ್ವಹಣೆಗಳ ಅಗತ್ಯವಿಲ್ಲವಾದ್ದರಿಂದ ವೆಚ್ಚ ಕಡಿಮೆಯಾಗುತ್ತದೆ. ಬಂದರುಗಳ ಮತ್ತು ಕಾಲುವೆಗಳ ನಿರ್ಮಾಣಕ್ಕೂ ನಿರ್ವಹಣೆಗೂ ಹೇರಳ ಧನವ್ಯಯವಾಗುವುದಾದರೂ ನೌಕೆಗಳು ಸಾಗಿಸುವ ಸರಕಿನ ಗಾತ್ರಕ್ಕೆ ಹೋಲಿಸಿದಾಗ ಈ ವೆಚ್ಚ ಹೆಚ್ಚಿನದಲ್ಲವೆನಿಸುವುದು.

ಸಾರಿಗೆಯಲ್ಲಿ ಅತಿಮುಖ್ಯಪಾತ್ರ ವಹಿಸಿರುವ ಚಕ್ರ ಮತ್ತು ದೋಣಿ–ಇವುಗಳ ಮೂಲದ ಬಗ್ಗೆ ಏನೂ ತಿಳಿದುಬಂದಿಲ್ಲ. ಪ್ರಶ.ಪೂ.ಸು.3,000ದಲ್ಲಿ ಈಜಿಪ್ಷಿಯನ್ನರು ದೊಡ್ಡ ಸರಕಿನ ದೋಣಿಗಳನ್ನು ಬಳಸುತ್ತಿದ್ದರೆಂಬುದೂ ಪ್ರಶ.ಪೂ. ಸು. 2,300 ಸಿಂಧೂ ನಾಗರಿಕತೆಯ ಕಾಲದಲ್ಲಿ ಭಾರತೀಯರು ಸಮುದ್ರದ ಮೂಲಕ ವ್ಯಾಪಾರಮಾಡುತ್ತಿದ್ದರೆಂಬುದೂ ತಿಳಿದು ಬಂದಿದೆ.

ಅತಿಪ್ರಾಚೀನವಾದ ತೇಲುವಾಹನ ಒಂದು ದಿಮ್ಮಿಯಾಗಿರಬಹುದು. ಮಾನವ ಅದರ ಮೇಲೆ ಕುಳಿತೋ ಅದನ್ನು ತಬ್ಬಿಕೊಂಡೋ ಜಲದೂರವನ್ನು ಕ್ರಮಿಸಲು ಯತ್ನಿಸಿರಬೇಕು. ಮೊದಲಿಗೆ ಅವನ ಕೈಗಳೇ ಹುಟ್ಟುಗಳ ಕೆಲಸವನ್ನು ಮಾಡಿರಬೇಕು. ಕೆಲವು ದಿಮ್ಮಿಗಳನ್ನು ಜೋಡಿಸಿ ಕಟ್ಟುವುದರಿಂದ ಹೆಚ್ಚಿನ ಸುರಕ್ಷತೆಯೂ ಹೆಚ್ಚಿನ ಹೊರೆಯನ್ನು ಸಾಗಿಸುವ ಸಾಧ್ಯತೆಯೂ ಇರುವುದು ತಿಳಿದುಬಂದಿತು. ಮಧ್ಯಪ್ರಾಚ್ಯ ದೇಶಗಳಲ್ಲಿ ಇಂಥ ಮರದ ದಿಮ್ಮಿಗಳ ತೆಪ್ಪದ ತಳಕ್ಕೆ ವಾಯುತುಂಬಿದ ಕುರಿಚರ್ಮ, ಆಡಿನಚರ್ಮ ಮುಂತಾದವನ್ನು ಹೊಂದಿಸಿ ತೇಲುವಿಕೆಗೆ ಸಹಾಯ ಮಾಡುತ್ತಿದ್ದರು. ದೊಡ್ಡದಿಮ್ಮಿಯನ್ನು ಕೊರೆದು ತೋಡುದೋಣಿ, ನಾಡದೋಣಿ ಇವನ್ನು ಉದ್ದವಾದ ಮೀಟುಗೋಲಿನಿಂದಲೋ ಹುಟ್ಟುಗಳಿಂದಲೋ ಚಾಲನಗೊಳಿಸಲಾಗುತ್ತಿತ್ತು. ಮೇಲೆ ಹೇಳಿದ ಎಲ್ಲ ಬಗೆಯ ಜಲ ಸಾರಿಗೆಯ ಸಾಧನಗಳು ಇಂದಿಗೂ ಪ್ರಂಪಚದ ಒಂದಿಲ್ಲೊಂದು ಭಾಗದಲ್ಲಿ ಬಳಕೆಯಲ್ಲಿವೆ.

ಬೀಸುಗಾಳಿಯನ್ನು ದೋಣಿಯ ಚಾಲನೆಗೆ ಬಳಸಬಹುದು ಎಂಬುದನ್ನು ಮಾನವ ಕಂಡುಕೊಂಡ. ಇದಕ್ಕಾಗಿ ವಿವಿಧಬಗೆಯ ಹಾಯಿಗಳನ್ನು ಬಳಸಲಾಯಿತು. ಇವನ್ನು ಹುಲ್ಲಿನ ಚಾಪೆ, ಪ್ರಾಣಿಗಳ ಚರ್ಮ, ಬಟ್ಟೆ ಮೇಣಗಪಟ–ಇಂಥವುಗಳಿಂದ ನಿರ್ಮಿಸಲಾಗುತ್ತಿತ್ತು.

ಸಮುದ್ರಯಾನದಲ್ಲಿ ಅತ್ಯಗತ್ಯವಾದ ಉತ್ತರಮುಖಿ ಮೊಟ್ಟಮೊದಲು ಚೀನೀಯರಿಗೆ ತಿಳಿದಿತ್ತು. ಪ್ರ.ಶ. ಸು.1,200ರ ವೇಳೆಗೆ ಯೂರೋಪಿಯನ್ನರು ಇದನ್ನು ಬಳಸ ಲಾರಂಭಿಸಿದರು. ಇದನ್ನೂ, ಸ್ಥೂಲ ನಕ್ಷೆಗಳನ್ನೂ ಬಳಸಿ ನಾವಿಕರು ದಿಕ್ಕನ್ನೂ ಅಕ್ಷಾಂಶ ಗಳನ್ನೂ ತಿಳಿಯುತ್ತಿದ್ದರು. 19ನೆಯ ಶತಮಾನದ ಆದಿ ಭಾಗದಲ್ಲಿ ಅಟ್ಲಾಂಟಿಕ್ ಸಾಗರದ ಮೇಲೆ ಯೂರೋಪಿನಿಂದ ಅಮೆರಿಕದ ನಡುವೆ ಜನರನ್ನೂ ಅಂಚೆಯನ್ನೂ ಸಾಗಿಸುವ ನೌಕೆಗಳು ಪ್ರಾಮುಖ್ಯ ಗಳಿಸಿದುವು. ಆ ಶತಮಾನದ ಕೊನೆಯವರೆಗೂ ಹಡಗಿನ ಚಾಲನೆ ಮಾರುತಗಳನ್ನೂ ಮಾನವ ಸಾಮರ್ಥ್ಯವನ್ನೂ ಅವಲಂಬಿಸಿತ್ತು. ನೌಕೆಗಳಲ್ಲಿ ಹುಟ್ಟುಹಾಕಲೆಂದು ಗುಲಾಮರನ್ನೂ ಕೈದಿಗಳನ್ನೂ ಬಳಸುತ್ತಿದ್ದರು.

1787ರಲ್ಲಿ ಅಮೆರಿಕದ ಜಾನ್ ಫಿಚ್ ಟ್ರೆನ್‍ಟನ್ ಚಲಿಸುವ ಮೊದಲ ಉಗಿ ದೋಣಿಯನ್ನು ನಿರ್ಮಿಸಿದ. ಮೂರು ವರ್ಷಗಳ ಬಳಿಕ ಫಿಲಿಡೆಲ್ಫಿಯದಿಂದ ಟ್ರೆನ್‍ಟನ್‍ಗೆ ಅವನದೇ ಉಗಿದೋಣಿಯ ಸೇವೆ ಆರಂಭವಾಯಿತು. ಪ್ರತಿಯೊಂದು ಯಾನದಲ್ಲೂ ಅವನಿಗೆ ನಷ್ಟವುಂಟಾಗುತ್ತಿದ್ದುದರಿಂದ ಅವನು ಜನರ ಕರುಣೆಗೂ ಹಾಸ್ಯಕ್ಕೂ ಪಾತ್ರನಾದ. 1867ರಲ್ಲಿ ರಾಬರ್ಟ್ ಫುಲ್ಟನ್ ಪ್ರಪಂಚದ ಪ್ರಥಮ ಲಾಭದಾಯಕ ಉಗಿದೋಣಿಯನ್ನು ಆರಂಭಿಸಿದ.

ನೌಕೆಯ ನಿರ್ಮಾಣದಲ್ಲಿ ಮರದ ಸ್ಥಾನವನ್ನು ಕ್ರಮೇಣ ಕಬ್ಬಿಣ ಆಕ್ರಮಿಸಿತು. 1880ರ ವೇಳೆಗೆ ಉಕ್ಕು ಇವೆರಡರ ಸ್ಥಾನವನ್ನೂ ಆಕ್ರಮಿಸಲಾರಂಭಿಸಿತು. ಕಲ್ಲಿದ್ದಲು ನೌಕೆಯ ಚಾಲನಶಕ್ತಿಯಾಗಿ ಅನೇಕ ಕಾಲ ಬಳಕೆಯಲ್ಲಿತ್ತು. ಕಲ್ಲೆಣ್ಣೆಯ ಬಳಕೆಯಾರಂಭವಾದ ಬಳಿಕ ಕಲ್ಲಿದ್ದಲ ಬಳಕೆ ಕಡಿಮೆಯಾಯಿತು. ಇತ್ತೀಚೆಗೆ ಯುದ್ಧನೌಕೆಗಳೂ ಜಲಾಂತರ್ಗಾಮಿಗಳೂ ಮಾತ್ರವಲ್ಲದೆ ನಾಗರಿಕಯಾನ ನೌಕೆಗಳೂ ಪರಮಾಣು ಶಕ್ತಿಯನ್ನು ಚಾಲನ ಸಾಮರ್ಥ್ಯವಾಗಿ ಬಳಸುತ್ತಿವೆ. ಎನ್. ಎಸ್. ಸವನ್ನಾ ಪ್ರಥಮ ಪರಮಾಣು ಶಕ್ತಿಚಾಲಿತ ನಾಗರಿಕ ಯಾನ ನೌಕೆಯಾಗಿದೆ. ಸ್ವಯಂಚಾಲಿತ ನೌಕೆಗಳ ಬಳಕೆಯೂ ಆರಂಭವಾಗಿದೆ. ಇಂಥ ನೌಕೆಗಳಲ್ಲಿ ಎಲ್ಲ ಕೆಲಸಗಳನ್ನೂ ಯಂತ್ರಗಳೇ ಮಾಡುತ್ತವೆ. ನೌಕೆಯ ನಾವಿಕರೆಂದರೆ ಈ ಯಂತ್ರಗಳ ಉಸ್ತುವಾರಿ ನಡೆಸುವ ತಜ್ಞರೇ. ನೀರಿಗೆ ಸೋಕಿಯೂ ಸೋಕದಂತೆ ಚಿಮ್ಮಿಕೊಂಡು ಹೋಗುವ ಹೈಡ್ರೋಫಾಯಿಲ್ ದೋಣಿಗಳೂ ಬಳಕೆಗೆ ಬರುತ್ತಿವೆ. ಇವು ಕಡಿಮೆ ದೂರದ ಶೀಘ್ರಯಾನಗಳಿಗೂ ಪ್ರಯಾಣಿಕರ ಸಾಗಾಣಿಕೆಗೂ ಉಪಯುಕ್ತವಾಗಿವೆ. ಹಾರುವಾಹನಗಳ (ಹೋವರ್ ಕ್ರ್ಯಾಫ್ಟ್ಸ್) ಬಳಕೆಯ ಬಗ್ಗೆಯೂ ಪ್ರಯೋಗಗಳು ಯಶಸ್ವಿಯಾಗಿವೆ. ಈ ವಾಹನಗಳು ಭೂಮಿಯ ಅಥವಾ ನೀರಿನ ಮೇಲ್ಮೈಯಿಂದ 1–2ಮೀ. ಎತ್ತರದಲ್ಲಿ ಶಕ್ತಿಶಾಲೀ ಪಂಖದಿಂದ ನಿರ್ಮಿತವಾದ ಗಾಳಿಯ ಮೆತ್ತೆಯ ಮೇಲೆ ಚಲಿಸುತ್ತವೆ.

ದೈತ್ಯಾಕಾರದ ಜಲಾಂತರ್ಗಾಮಿಗಳನ್ನು ಟ್ಯಾಂಕರ್ ಮತ್ತು ಸರಕು ನೌಕೆಗಳನ್ನಾಗಿ ಬಳಸಲು ಯತ್ನಗಳು ನಡೆಯುತ್ತಿವೆ. ಇವು ಸಮುದ್ರದ ಆಳದಲ್ಲಿ ಅಲೆಗಳ ಚಂಡಮಾರುತಗಳ ಭಯವಿಲ್ಲದೆಡೆ ಅತಿವೇಗದಲ್ಲಿ ಚಲಿಸಬಲ್ಲವಾಗಿವೆ.

ನೌಕಾನಿರ್ಮಾಣದಲ್ಲಿನ ಇನ್ನೊಂದು ಬೆಳೆವಣಿಗೆಯೆಂದರೆ ಒಂದೇ ಸರಕಿನ ಸಾಗಾಣಿಕೆಗಾಗಿ ಇಡೀ ನೌಕೆಯನ್ನು ವಿಶೇಷವಾಗಿ ನಿರ್ಮಿಸುವುದು. ಕಲ್ಲಿದ್ದಲು, ಮರದ ದಿಮ್ಮಿ, ಬಾಳೆಹಣ್ಣು, ಗೋಮಾಂಸ, ಇವೆಲ್ಲಕ್ಕಿಂತ ಮಿಗಿಲಾಗಿ ತೈಲ ಇಂಥ ಸರಕನ್ನು ಸಾಗಿಸಲು ವಿಶಿಷ್ಟ ನೌಕೆಗಳಿವೆ. ತೈಲವನ್ನು ಸಾಗಿಸುವ ಟ್ಯಾಂಕರುಗಳ ಗಾತ್ರ ಬೇರಾವ ನೌಕೆಯ ಗಾತ್ರಕ್ಕಿಂತ ಶೀಘ್ರವಾಗಿ, ದೈತ್ಯಾಕಾರವಾಗಿ ಬೆಳೆಯುತ್ತಿದೆ. ಖಾದ್ಯ ತೈಲ, ಕಾಕಂಬಿ, ತಿಮಿಂಗಿಲದೆಣ್ಣೆ ಇತ್ಯಾದಿಗಳ ಸಾಗಾಣಿಕೆಗೂ ಟ್ಯಾಂಕರುಗಳ ನಿರ್ಮಾಣವಾಗಿದೆ.

ಜಲಸಾರಿಗೆಯನ್ನು ಒಳನಾಡಿನ ಜಲಸಾರಿಗೆ ಮತ್ತು ಸಮುದ್ರಸಾರಿಗೆ ಎಂದು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ನದಿ, ಸರೋವರ, ಕಾಲುವೆಗಳು, ಜಲಾಶಯ ಇಂಥವುಗಳ ಮೇಲೆ ಸಾಗಾಣಿಕೆ ನಡೆಸಿದರೆ ಅದು ಒಳನಾಡಿನ ಜಲಸಾರಿಗೆ; ಸಮುದ್ರ, ಸಾಗರ ಕಡಲುಗಾಲುವೆಗಳ ಮೇಲಿನ ಸಾಗಾಣಿಕೆ ಸಮುದ್ರಸಾರಿಗೆ.

ಸಾರಿಗೆ ನೌಕೆಗಳನ್ನು ಲೈನರ್ ಮತ್ತು ಟ್ರಾಂಪುಗಳೆಂದು ವಿಂಗಡಿಸುವುದು ರೂಢಿ. ಲೈನರುಗಳು ತಮ್ಮ ಯಾನಗಳನ್ನು, ಮೊದಲೇ ನಿಗದಿಪಡಿಸಿ ಪ್ರಚುರಪಡಿಸಿದ ವೇಳಾಪಟ್ಟಿಯ ಮೇರೆಗೆ, ಕೈಗೊಳ್ಳುತ್ತವೆ. ಅವು ಕ್ಲುಪ್ತಕಾಲದಲ್ಲಿ ನಿರ್ದಿಷ್ಟ ಬಂದರುಗಳನ್ನು ತಲಪುವ ಮತ್ತು ಬಿಡುವ ಗೊತ್ತಾದ ಮಾರ್ಗವನ್ನನುಸರಿಸಿಯೋ ಗಮ್ಯಸ್ಥಾನವನ್ನು ಸೇರುವ ನೌಕೆಗಳಾಗಿವೆ. ಇವನ್ನೆಲ್ಲ ಕಟ್ಟುನಿಟ್ಟಾಗಿ ಪಾಲಿಸಲು ಒಂದು ನೌಕಾಕಂಪನಿ ನೌಕಾಸಮೂಹವನ್ನೇ ಇಟ್ಟುಕೊಳ್ಳಬೇಕಾಗುತ್ತದೆ.

ಬೇಕಾದಾಗ ಬೇಕಾದಲ್ಲಿಗೆ ಯಾವ ಸರಕನ್ನಾದರೂ ಒಯ್ಯಲು ಸಿದ್ಧವಿರುವ ನೌಕೆ ಟ್ರಾಂಪ್. ಇತರ ಯಾನಗಳಿಗೆ ನಿರ್ದಿಷ್ಟ ವೇಳಾಪಟ್ಟಿಯಾಗಲಿ ಮಾರ್ಗವಾಗಲಿ ಇರುವುದಿಲ್ಲ. ಯಾರು ಬೇಕಾದರೂ ಈ ನೌಕೆಯನ್ನು ತಮ್ಮದೇ ಉಪಯೋಗಕ್ಕೆಂದು ಬಾಡಿಗೆಗೆ ಹಿಡಿಯಬಹುದು.

ಸಮುದ್ರಯಾನದಲ್ಲಿ ಮೊದಲು ಕಡಲುಗಳ್ಳರ ಭಯವಿತ್ತು. ಈಸ್ಟ್ ಇಂಡಿಯಾ ಕಂಪನಿ 1601 ರಿಂದ 1621ರ ವರೆಗಿನ ಅವಧಿಯಲ್ಲಿ ಪೂರ್ವದೇಶಗಳಿಗೆ ಕಳಿಸಿದ 86 ನೌಕೆಗಳಲ್ಲಿ ಕೇವಲ 36 ಸರಕಿನೊಂದಿಗೆ ವಾಪಸಾದವು. ಉಳಿದವು ಕಳ್ಳರಪಾಲೋ ಆಘಾತಕ್ಕೊಳಗಾಗಿ ಚೂರುಚೂರೋ ಆದವು. ಈಗ ಕಳ್ಳರ ಹಾಗೂ ಆಘಾತಗಳ ಭಯ ಕಡಿಮೆಯಾಗಿದೆ. ದೈತ್ಯಗಾತ್ರದ ಮತ್ತು ಹೆಚ್ಚು ಸಂಖ್ಯೆಯ ನೌಕೆಗಳ ಓಡಾಟದಿಂದ ಕಡಲುಗಳ್ಳರ ಭೀತಿ ಇಲ್ಲವಾಗಿದೆ. ಸಮುದ್ರಯಾನ ವಿಮೆ ಬೆಳೆದು ಬಂದು ನಷ್ಟಭರ್ತಿಯ ಸೌಲಭ್ಯವೂ ಒದಗಿ ಬಂದಿದೆ. (ಡಿ.ಎನ್.ಎಸ್.ಎಂ.; ಸಿ.ಸಿ.ಪಿ.)

**ಜಲಯಂತ್ರ :** **ನೋಡಿ– ತಿರುಬಾನಿ**

**ಜಲವಿಚ್ಛೇದನೆ :** ನೀರಿನಿಂದ ಯಾವುದೇ ವಸ್ತುವಿನ ನಾಶ, ವಿಘಟನೆ ಇಲ್ಲವೇ ಪರಿವರ್ತನೆ (ಹೈಡ್ರಾಲಿಸಿಸ್). ರಸಾಯನ ವಿಜ್ಞಾನದ ದೃಷ್ಟಿಯಿಂದ ಈ ಪದದ ಅರ್ಥವಿಷ್ಟು: ಒಂದು ವಸ್ತು ನೀರಿನೊಡನೆ ವರ್ತಿಸಿದಾಗ ಇಬ್ಭಾಗವಾಗಿ ಒಂದು ಭಾಗ ನೀರಿನ ಹೈಡ್ರೊಜನ್ ಭಾಗವನ್ನೂ ಮತ್ತೊಂದು ಭಾಗ ನೀರಿನ ಹೈಡ್ರಾಕ್ಸೈಡ್ ಭಾಗವನ್ನೂ ತೆಗೆದುಕೊಂಡು ಬೇರೆ ಬೇರೆ ವಸ್ತುಗಳಾಗಿ ಮಾರ್ಪಡುವ ಕ್ರಿಯೆ. ಉದಾಹರಣೆಗೆ AB ವಸ್ತು ನೀರಿನೊಡನೆ ವರ್ತಿಸಿದಾಗ A ಮತ್ತು B ಭಾಗಗಳಾಗಿ ಮಾರ್ಪಟ್ಟು A ಭಾಗ ನೀರಿನ H ಭಾಗವನ್ನೂ B ಭಾಗ ನೀರಿನ OH ಭಾಗವನ್ನೂ ತೆಗೆದುಕೊಂಡು ಎರಡು ಬೇರೆ ವಸ್ತುಗಳು ಉತ್ಪನ್ನವಾಗುತ್ತವೆ. ಪ್ರತೀಕಾತ್ಮವಾಗಿ ಈ ಕ್ರಿಯೆ ಹೀಗಿದೆ :

$$AB + H.OH \rightarrow A.H + B.OH$$

ಲವಣಗಳು ಸಾಮಾನ್ಯವಾಗಿ ಜಲವಿಚ್ಛೇದನೆ ಹೊಂದುತ್ತವೆ. ಲವಣ ನೀರಿನೊಡನೆ ದ್ವಿವಿಭಜನೆಗೊಂಡು ಘಟಕ ಆಮ್ಲ, ಪ್ರತ್ಯಾಮ್ಲಗಳನ್ನು ಕೊಡುವುದು. ಇದರಲ್ಲಿಯೂ ಮೂರು ಬಗೆಯುಂಟು : 1 ಸಾರ ಆಮ್ಲ, ಸಾರರಿಕ್ತ ಪ್ರತ್ಯಾಮ್ಲಗಳ ತಟಸ್ಥೀಕರಣದಿಂದಾದ ಲವಣದ ಜಲವಿಚ್ಛೇದನೆ, 2 ಸಾರರಿಕ್ತ ಆಮ್ಲ, ಸಾರ ಪ್ರತ್ಯಾಮ್ಲಗಳ ತಟಸ್ಥೀಕರಣದಿಂದುಂಟಾದ ಲವಣದ ಜಲವಿಚ್ಛೇದನೆ, 3 ಸಾರರಿಕ್ತ ಆಮ್ಲ. ಸಾರರಿಕ್ತ ಪ್ರತ್ಯಾಮ್ಲಗಳು ತಟಸ್ಥೀಕರಣ ಉಂಟಾದ ಲವಣದ ಜಲವಿಚ್ಛೇದನೆ ಸಾರ ಆಮ್ಲ ಮತ್ತು ಸಾರ ಪ್ರತ್ಯಾಮ್ಲಗಳ ತಟಸ್ಥೀಕರಣದಿಂದಾದ ಲವಣ ಜಲವಿಚ್ಛೇದನೆ ಹೊಂದುವುದಿಲ್ಲ.

ಜಲವಿಚ್ಛೇದನೆ ಹೊಂದಿದ ಲವಣಗಳು ಆಮ್ಲೀಯ, ಕ್ಷಾರೀಯ ಅಥವಾ ತಾಟಸ್ಥ್ಯಗುಣಗಳನ್ನು ಹೊಂದಿರಬಹುದು. ಉದಾಹರಣೆಗೆ ಫೆರಿಕ್ ಕ್ಲೋರೈಡ್ ಲವಣ ಸಾರರಿಕ್ತ ಪ್ರತ್ಯಾಮ್ಲವಾದ ಫೆರಿಕ್ ಹೈಡ್ರಾಕ್ಸೈಡ್ ಮತ್ತು ಸಾರ ಆಮ್ಲವಾದ ಹೈಡ್ರೋಕ್ಲೋರಿಕ್ ಆಮ್ಲಗಳ ತಟಸ್ಥೀಕರಣದಿಂದಾದ ಲವಣ. ಆದ್ದರಿಂದ ಲವಣದ ದ್ರಾವಣ ಆಮ್ಲೀಯವಾಗಿರುವುದು :

$$Fe^{+++} + 3H.OH \leftrightarrows Fe(OH)_3\downarrow + 3H+$$

ಹಾಗೆಯೇ ಸಾರರಿಕ್ತ ಆಮ್ಲವಾದ ಕಾರ್ಬಾನಿಕ್ ಆಮ್ಲ ಮತ್ತು ಸಾರ ಪ್ರತ್ಯಾಮ್ಲವಾದ ಸೋಡಿಯಮ್ ಹೈಡ್ರಾಕ್ಸೈಡುಗಳ ತಟಸ್ಥೀಕರಣದಿಂದಾದ ಲವಣ ಸೋಡಿಯಮ್ ಕಾರ್ಬೊನೇಟ್. ಆದ್ದರಿಂದಲೇ ಅದರ ದ್ರಾವಣಕ್ಕೆ ಕ್ಷಾರೀಯ ಗುಣ ಉಂಟು:

$$CO_3'' + 2H.OH \leftrightarrows H_2CO_3 + 20H'$$

ಆದರೆ ಆಮ್ಲ ಪ್ರತ್ಯಾಮ್ಲಗಳೆರಡೂ ಸಾರರಿಕ್ತವಾಗಿದ್ದಲ್ಲಿ ಅವುಗಳ ತಟಸ್ಥೀಕರಣದಿಂದ ಉಂಟಾದ ಲವಣದ ದ್ರಾವಣದ ಆಮ್ಲೀಯ ಅಥವಾ ಪ್ರತ್ಯಾಮ್ಲೀಯ ಗುಣ ತಾಟಸ್ಥ್ಯ ಹೊಂದಿದ ಆಮ್ಲ ಪ್ರತ್ಯಾಮ್ಲಗಳ ಸಾರತೆಯನ್ನು ಅವಲಂಬಿಸುತ್ತದೆ. ಉದಾಹರಣೆಗೆ.

$$NH_4{+} + CH_3COO' + H.OH \leftrightarrows NH_4OH + CH_3COOH$$

ಅಮೋನಿಯಮ್ ಅಸಿಟೇಟ್ ದ್ರಾವಣಕ್ಕೆ ತಾಟಸ್ಥ್ಯಗುಣ ಉಂಟು.

ಜಲವಿಚ್ಛೇದನೆ ತಟಸ್ಥೀಕರಣದ ವಿಪರ್ಯಯ ಕ್ರಿಯೆ. ಆದ್ದರಿಂದ ಕ್ರಿಯಾವಸ್ತುಗಳಿಗೂ ಕ್ರಿಯಾಫಲಗಳಿಗೂ ಒಂದು ರಾಸಾಯನಿಕ ಸಮತೆ ಏರ್ಪಡುತ್ತದೆ. ರಾಶಿ ಕ್ರಿಯಾನಿಯಮವನ್ನು (ಮಾಸ್ ಆ್ಯಕ್ಷನ್ ಲಾ) ಈ ರಾಸಾಯನಿಕ ಸಮತಾ ಪ್ರತಿಕ್ರಿಯೆಗೆ ಪ್ರಯೋಗಿಸಿ, ಜಲವಿಚ್ಛೇದನ ಸ್ಥಿರಾಂಕವನ್ನು ಪಡೆಯಬಹುದು. ಇದರಿಂದ ಬೇರೆ ಬೇರೆ ವಸ್ತುಗಳ ಜಲವಿಚ್ಛೇದನೆ ಮಟ್ಟಗಳನ್ನು ಹೋಲಿಸಬಹುದು. ಅಲ್ಲದೆ ಒಂದು ಲವಣದ ಜಲವಿಚ್ಛೇದನ ಸ್ಥಿರಾಂಕಕ್ಕೂ ಲವಣದ ಘಟಕ ಸಾರರಿಕ್ತ ಆಮ್ಲ ಅಥವಾ ಘಟಕ ಸಾರರಿಕ್ತ ಪ್ರತ್ಯಾಮ್ಲದ ವಿಯೋಜನ ಸ್ಥಿರಾಂಕಕ್ಕೂ (ಡಿಸೋಸಿಯೇಷನ್ ಕಾನ್ಸ್‌ಟೆಂಟ್) ಸಂಬಂಧಿಸಿದ ಸಮೀಕರಣವನ್ನು ಪಡೆಯಬಹುದು. ಉದಾಹರಣೆಗೆ $K_h = K_w / K_a$, $K_h = K_w / K_b$; $K_h = K_w / (K_a \times K_b)$. ಇಲ್ಲಿ $K_h$ ಜಲವಿಚ್ಛೇದನ ಸ್ಥಿರಾಂಕ, $K_a$ ಸಾರರಿಕ್ತ ಆಮ್ಲದ ವಿಯೋಜಿತ ಸ್ಥಿರಾಂಕ, $K_b$ ಸಾರರಿಕ್ತ ಕ್ಷಾರದ ವಿಯೋಜನ ಸ್ಥಿರಾಂಕ, $K_w$ ನೀರಿನ ಅಯಾನಿಕ್ ಗುಣಲಬ್ಧ.

ಜಲವಿಚ್ಛೇದನೆಯಲ್ಲಿ ಮೇಲೆ ಉದಾಹರಿಸಿದ ಲವಣ ಜಲವಿಚ್ಛೇದನೆ ಅಲ್ಲದೆ, ಬೇರೆ ಹಲವು ವಿಧಗಳುಂಟು :

1 ಎಸ್ಟರ್ ಜಲವಿಚ್ಛೇದನೆ : ಎಸ್ಟರುಗಳು ನೀರಿನೊಡನೆ ರಾಸಾಯನಿಕ ಕ್ರಿಯೆ ನಡೆಸಿದಾಗ ಎಸ್ಟರಿನ ಘಟಕಗಳಾದ ಆಲ್ಕೊಹಾಲ್ ಮತ್ತು ಆಮ್ಲಗಳ ಉತ್ಪಾದನೆಯಾಗುವುದು. ಉದಾಹರಣೆಗೆ,

ಈಥೈಲ್ ಅಸಿಟೇಟ್ + ನೀರು ⇆ ಈಥೈಲ್ ಆಲ್ಕೊಹಾಲ್ + ಅಸಿಟಿಕ್ ಆಮ್ಲ

2 ಎನ್‌ಜೈಮ್ ಜಲವಿಚ್ಛೇದನೆ : ಪಿಷ್ಟಪದಾರ್ಥಗಳು ಮತ್ತು ಸಕ್ಕರೆಗಳು ಕೆಲವು ನೈಸರ್ಗಿಕ ಪದಾರ್ಥಗಳಿಂದ ಎನ್‌ಜೈಮುಗಳೆಂಬ ವೇಗವರ್ಧಕಗಳ ಪ್ರಭಾವದಿಂದ ನೀರಿನೊಡನೆ ವರ್ತಿಸಿ ಹೊಸ ವಸ್ತುಗಳನ್ನು ನಿರ್ಮಿಸುವುವು. ಉದಾಹರಣೆಗೆ

$$\text{ಸಕ್ಕರೆ + ನೀರು} \xrightarrow[\text{ಎನ್‌ಜೈಮ್}]{\text{ಇನ್‌ವರ್ಟೇಸ್}} \text{ಗ್ಲೂಕೋಸ್ + ಫ್ರಕ್ಟೋಸ್}$$

$$\text{ಯೂರಿಯ + ನೀರು} \xrightarrow[\text{ಎನ್‌ಜೈಮ್}]{\text{ಯೂರಿಯೇಸ್}} \text{ಇಂಗಾಲಾಮ್ಲ + ಅಮೋನಿಯ}$$

3 ಕೊಬ್ಬು ಮತ್ತು ತೈಲಗಳು ನೀರಿನ ಆವಿಯೊಡನೆ ವರ್ತಿಸಿ ಗ್ಲಿಸರಾಲ್ ಮತ್ತು ಕೊಬ್ಬಿನ ಆಮ್ಲಗಳನ್ನು ಕೊಡುತ್ತವೆ. ಈ ಜಲವಿಚ್ಛೇದನೆಯನ್ನು ಆಮ್ಲ ಅಥವಾ ಕ್ಷಾರಗಳನ್ನು ವೇಗವರ್ಧಕಗಳಾಗಿ ಉಪಯೋಗಿಸಿ ತ್ವರಿತಗೊಳಿಸಬಹುದು. ಕ್ಷಾರವನ್ನು ಉಪಯೋಗಿಸಿದಾಗ ಕೊಬ್ಬಿನ ಆಮ್ಲಗಳು ಕ್ಷಾರದೊಡನೆ ವರ್ತಿಸಿ ಸಾಬೂನಿನ ಉತ್ಪಾದನೆ ಆಗುವುದು.

ಜೀವಕಣಗಳಲ್ಲಿ ಲಿಪೇಸ್ ಎಂಬ ನೈಸರ್ಗಿಕ ವೇಗವರ್ಧಕ ವಸ್ತುವಿನ ಪ್ರಭಾವದಿಂದ ಜಲವಿಚ್ಛೇದನೆ ಆಗುವುದು. (ಡಿ.ಎಸ್.ಬಿ.)

**ಜಲವಿದ್ಯುಚ್ಛಕ್ತಿ :** ಔನ್ನತ್ಯದಲ್ಲಿ ಶೇಖರಗೊಂಡಿರುವ ನೀರಿನ ವಿಭವಶಕ್ತಿಯನ್ನು ಚಲನಶಕ್ತಿಯಾಗಿ ಮಾರ್ಪಡಿಸಿ ಅದರ ನೆರವಿನಿಂದ ಉತ್ಪಾದಿಸಲಾದ ವಿದ್ಯುಚ್ಛಕ್ತಿ (ಹೈಡ್ರೋಎಲೆಕ್ಟ್ರಿಕ್ ಪವರ್). ಉತ್ಪಾದಿಸಲು ಬಳಸುವ ಮೂರು ಮುಖ್ಯ ವಿಧಾನಗಳ ಪೈಕಿ ಇದು ಒಂದು. ಉಳಿದ ಎರಡು ವಿಧಾನಗಳೆಂದರೆ ಫಾಸಿಲ್ ಇಂಧನ ಜನಿತ ವಿದ್ಯುಚ್ಛಕ್ತಿ, ಮತ್ತು ನ್ಯೂಕ್ಲಿಯರ್ ಇಂಧನ ಜನಿತ ವಿದ್ಯುಚ್ಛಕ್ತಿ. ಜಲವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ವಿಧಾನವನ್ನು ಇಲ್ಲಿ ವಿವರಿಸಿದೆ. (ಎನ್.ಎಸ್.ಜಿ)

ಎತ್ತರ ಪ್ರದೇಶದಲ್ಲಿ ಹರಿಯುತ್ತಿರುವ ನದಿಗೆ ಯೋಗ್ಯ ಸ್ಥಳದಲ್ಲಿ ಅಣೆಕಟ್ಟು ಕಟ್ಟಿ ಜಲಾಶಯವನ್ನು ನಿರ್ಮಿಸಿ ಅದರಲ್ಲಿ ಸಂಗ್ರಹವಾದ ನೀರನ್ನು ಕಾಲುವೆ ಅಥವಾ ಸುರಂಗದ ಮೂಲಕ ಒಂದು ಪ್ರವಾಹದ ಶಿಖರಕ್ಕೆ ಕೊಂಡೊಯ್ಯಲಾಗುವುದು. ಇದು ವಿಭವ




**ಜಲವಿದ್ಯುದುತ್ಪಾದನೆಯ ವ್ಯವಸ್ಥೆಯ ಸಾಂಕೇತಿಕ ಚಿತ್ರ : 1. ಫೋರ್ ಬೇ, 2. ಅಕ್ಷೋಭಕ ತೊಟ್ಟಿ, 3. ಕವಾಟದ ಮನೆ, 4. ಪೆನ್‌ಸ್ಟಾಕ್ ಕೊಳವೆ, 5. ವಿದ್ಯುದಾಗಾರ, 6. ವಿದ್ಯುಜ್ಜನಕ, 7. ತಿರುಬಾನಿ, 8. ಕೊನೆಸೆಳವು**

ಶಕ್ತಿಯುತ ರಾಶಿ. ಪ್ರಪಾತದ ತಳದಲ್ಲಿ ಕಟ್ಟಿರುವ ವಿದ್ಯುದಾಗರದಲ್ಲಿ ತಿರುಬಾನಿಗಳೂ **(ನೋಡಿ)** ವಿದ್ಯುಜ್ಜನಕಗಳೂ ಇರುತ್ತವೆ. ಈಗ, ಪ್ರಪಾತದ ಮೇಲಿನಿಂದ ನೀರು ದೊಡ್ಡ ಕೊಳವೆಗಳ(ಪೆನ್‌ಸ್ಟಾಕ್ ಪೈಪ್ಸ್) ಮೂಲಕ ಕೆಳಗೆ ಧಾವಿಸಿ ವಿದ್ಯುದಾಗರದಲ್ಲಿರುವ ತಿರುಬಾನಿಗಳನ್ನು ಪ್ರವೇಶಿಸುತ್ತದೆ. ಅಂದರೆ ಈಗ ನೀರಿನ ವಿಭವಶಕ್ತಿ ಚಲನಶಕ್ತಿ ಆದಂತಾಯಿತು. ಇದನ್ನು ತಿರುಬಾನಿಗಳು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತವೆ. ತಿರುಬಾನಿಗಳಿಗೆ ಜೋಡಿಸಿರುವ ವಿದ್ಯುಜ್ಜನಕಗಳಿಂದ ಆಗ ವಿದ್ಯುತ್ ಪ್ರವಹಿಸುವುದು. ನೀರು ಮಂದಗತಿಯಿಂದ ಮುಂದಕ್ಕೆ ಹರಿದುಹೋಗುತ್ತದೆ. ವಿದ್ಯುತ್ತನ್ನು ಉತ್ಪಾದಿಸುವ ಈ ವಿಧಾನಕ್ಕೆ ಜಲಸಂಗ್ರಹ ವಿಧಾನ ಎಂದೂ ಹೆಸರು. ಈ ವಿಧಾನದ ಜಲವಿದ್ಯುತ್ಪಾದನೆಯ ವ್ಯವಸ್ಥೆಯನ್ನು ಚಿತ್ರದಲ್ಲಿ ಕಾಣಿಸಿದೆ. ನೀರನ್ನು ವಿನಿಯೋಗಿಸಿ ವಿದ್ಯುತ್ತನ್ನು ಉತ್ಪಾದಿಸುವ ಇನ್ನೊಂದು ಕ್ರಮವುಂಟು. ಅದು ನದಿಯ ಓಟವನ್ನು ಅವಲಂಬಿಸಿದೆ. ಅದರಲ್ಲಿ ಅಣೆಕಟ್ಟೆಗೆ ಬಹಳ ಸಮೀಪದಲ್ಲಿಯೇ ಇಲ್ಲವೆ ಅದಕ್ಕೆ ಹೊಂದಿಕೊಂಡಿರುವಂತೆಯೇ ವಿದ್ಯುದಾಗಾರಗಳು ನಿರ್ಮಿತವಾಗುವುವು. ಅಂಥ ಯೋಜನೆಗಳಲ್ಲಿ ವಿದ್ಯುದುತ್ಪಾದನೆಗೆ ಸಿಗುವ ನೀರಿನ ಎತ್ತರ ಅಣೆಕಟ್ಟಿನ ತೂಬುಗಳ ಮೇಲಿನ ಎತ್ತರಕ್ಕೆ ಸೀಮಿತವಾಗಿರುತ್ತದೆ.

ತಾತ್ತ್ವಿಕವಾಗಿ ನೀರಿನಿಂದ ದೊರೆಯುವ ಶಕ್ತಿ (9.81xQxh) ಕಿಲೋವಾಟುಗಳು. ಇಲ್ಲಿ Q ಎಂಬುದು ಘನಮೀಟರುಗಳಲ್ಲಿ ಒಂದು ಸೆಕೆಂಡಿಗೆ ನೀರಿನ ಹರಿವ ಪ್ರಮಾಣವನ್ನೂ, h ಎಂಬುದು ಮೀಟರುಗಳಲ್ಲಿ ನೀರಿನ ಎತ್ತರವನ್ನೂ ಸೂಚಿಸುತ್ತವೆ. ಒಟ್ಟು ಜಲಶಕ್ತಿ ಸ್ಥಾವರದ ಸಮಗ್ರ ದಕ್ಷತೆಯನ್ನು 75% ಎಂದು ಭಾವಿಸಿದರೆ ಉತ್ಪಾದಿತ ವಿದ್ಯುಚ್ಛಕ್ತಿ 7.4Qh ಕಿಲೋವಾಟುಗಳು ಎಂದಾಗುವುದು.

ಜಲವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿನ ವಿವಿಧ ಹಂತಗಳ ಸೂಕ್ಷ್ಮ ಪರಿಚಯವನ್ನು ಕೆಳಗೆ ಕೊಟ್ಟಿದೆ.

ಅಣೆಕಟ್ಟು: ವಿದ್ಯುದುತ್ಪಾದನೆಗೆ ಬೇಕಾಗುವಷ್ಟು ನೀರನ್ನು ಸಂಗ್ರಹಿಸುವುದಕ್ಕೋಸ್ಕರ ನದಿಗೆ ಅಣೆಕಟ್ಟು ಕಟ್ಟಬೇಕಾಗುತ್ತದೆ. ಮೊದಲು ನದಿಯ ಪ್ರವಾಹ ಜಲಾಶಯದೊಳಗೆ ಎಷ್ಟು ನೀರನ್ನು ತರುತ್ತದೆ ಎಂಬುದನ್ನೂ ಅಳತೆಗಳ ಮೂಲಕ ಕಂಡುಕೊಂಡು ವಿದ್ಯುಚ್ಛಕ್ತಿಯ ಬೇಡಿಕೆಗೆ ಅನುಸಾರವಾಗಿ ತಿರುಬಾನಿಗಳಿಗೆ ಜಲಾಶಯದಿಂದ ಎಷ್ಟು ನೀರು ಒದಗಿಸಬೇಕೆಂಬುದನ್ನೂ ನಿರ್ಧರಿಸಿ, ಜಲಲೇಖ (ಹೈಡ್ರೋಗ್ರಾಫ್), ರಾಶಿವಕ್ರ (ಮಾಸ್‌ಕರ್ವ್) ಎಂಬ ರೇಖಾನಕ್ಷೆಗಳನ್ನು ಸಿದ್ಧಪಡಿಸಿ ಇವುಗಳ ಸಹಾಯದಿಂದ ಜಲಾಶಯದ ನೀರಿನ ದಾಸ್ತಾನಿನ ಸಾಮರ್ಥ್ಯವನ್ನು ನಿರ್ಣಯಿಸುವರು. ಇದನ್ನು ಪಡೆಯುವುದಕ್ಕೆ ಬೇಕಾದ ಅಣೆಕಟ್ಟಿನ ಉದ್ದ ಮತ್ತು ಎತ್ತರಗಳನ್ನೂ ಗೊತ್ತುಪಡಿಸುವರು.

ಶಕ್ತಿಕಾಲುವೆ ಅಥವಾ ಸುರಂಗ: ಜಲಾಶಯ ಪ್ರಪಾತಕ್ಕೆ ಬಹಳ ಸಮೀಪವಾಗಿದ್ದ ನಡುವಣ ಪ್ರದೇಶ ಸಮತಟ್ಟಾಗಿದ್ದರೆ, ನೀರನ್ನು ಕಾಲುವೆ ಅಥವಾ ಕೊಳವೆಗಳ ಮೂಲಕ ಪ್ರಪಾತದ ಶಿರಕ್ಕೆ ಕೊಂಡೊಯ್ಯಬಹುದು. ನಡುವಣ ಪ್ರದೇಶ ಬೆಟ್ಟಗುಡ್ಡಗಳಿಂದ ಆವೃತವಾಗಿದ್ದರೆ ಸುರಂಗವನ್ನು ಕೊರೆದು ನೀರನ್ನು ಒದಗಿಸಬೇಕಾಗುವುದು.

ಫೋರ್‌ಬೇ ಮತ್ತು ಪ್ರವೇಶದ್ವಾರ: ಪ್ರಪಾತದ ಶಿರದಲ್ಲಿ ಫೋರ್‌ಬೇ (ಅಗ್ರ ತಟಾಕ) ಎಂಬ ಒಂದು ಸಣ್ಣ ತಟಾಕವಿರುತ್ತದೆ. ಜಲಾಶಯದ ನೀರು ಕಾಲುವೆ ಅಥವಾ ಸುರಂಗದ ಮೂಲಕ ಹರಿದು ಬಂದು, ಅಗ್ರತಟಾಕದೊಳಗೆ ಮೊದಲು ತುಂಬಿಕೊಳ್ಳುವಂತೆ ಏರ್ಪಾಡು ಉಂಟು. ತಿರುಬಾನಿಗಳ ಮೇಲಿನ ಹೊರೆ ತ್ವರಿತಗತಿಯಲ್ಲಿ ಏರುಪೇರಾದಾಗ ಸಹ ಅವು ಕೆಲಸ ಮಾಡಲು ಅನುಕೂಲವಾಗುವಂತೆ ಅವುಗಳಿಗೆ ತತ್‌ಕ್ಷಣ ಬೇಕಾಗುವಷ್ಟು ನೀರನ್ನು ಅಗ್ರತಟಾಕ ಒದಗಿಸಬಲ್ಲುದು. ಇದರಲ್ಲಿನ ನೀರು, ಪ್ರವೇಶದ್ವಾರಗಳ ಮೂಲಕ ನೀರನ್ನು ಕೊಂಡೊಯ್ಯುವ ತೂಬುಕೊಳವೆಗಳ ಮೂಲಕ ತಿರುಬಾನಿಯನ್ನು ಪ್ರವೇಶಿಸುತ್ತದೆ. ಪ್ರವೇಶದ್ವಾರಗಳಲ್ಲಿರುವ ಜರಡಿಗಳು ನೀರಿನಲ್ಲಿರಬಹುದಾದ ಕಸಕಡ್ಡಿ, ಕಲ್ಲುಚೂರು ಮುಂತಾದ ವಸ್ತುಗಳು ತಿರುಬಾನಿಯನ್ನು ಹೊಗದಂತೆ ತಡೆಯುತ್ತವೆ.

ತೂಬು ಕೊಳವೆಗಳು (ಪೆನ್‌ಸ್ಟಾಕ್ ಪೈಪ್ಸ್): ತಿರುಬಾನಿಗಳಿಗೆ ನೀರನ್ನು ಕೊಂಡೊಯ್ಯುವ ಪ್ರಪಾತದ ಇಳಿಜಾರಿನಮೇಲೆ ಹಾಕಿರುವ ದೊಡ್ಡ ಕೊಳವೆಗಳಿವು. ಇವುಗಳ ಮೂಲಕ ಹರಿಯುವ ನೀರಿನ ಒತ್ತಡ ಬಹಳ ಹೆಚ್ಚಾಗಿರುವುದರಿಂದ, ಕೊಳವೆಗಳು ಒಡೆದುಹೋಗದ ಹಾಗೆ ಇವನ್ನು ಉಕ್ಕಿನಿಂದಲೋ ಸಬಲಗೊಳಿಸಿದ ಕಾಂಕ್ರೀಟಿನಿಂದಲೋ ಮಾಡಿರುತ್ತಾರೆ. ಕೊಳವೆಗಳು ಭೂಮಿಯ ಮೇಲಿದ್ದು ಕಾಂಕ್ರೀಟ್ ಅಥವಾ ಮರದ ದೊಡ್ಡ ಹಲ್ಲಣಗಳಿಗೆ ಬಂಧಿಸಲ್ಪಟ್ಟಿರುತ್ತವೆ. ವಾತಾವರಣದ ಉಷ್ಣತೆಯಲ್ಲಿನ ವ್ಯತ್ಯಾಸಗಳಿಗೆ ಅನುಗುಣವಾಗಿ ಕೊಳವೆಗಳು ಸರಾಗವಾಗಿ ಆಕುಂಚನ ಇಲ್ಲವೆ ಸಂಕುಚನಗೊಳ್ಳುವಂತೆ ವಿಶಿಷ್ಟ ರೀತಿಯ ವಿಸ್ತರಣ ಜಾಯಿಂಟುಗಳ ಏರ್ಪಾಡು ಇರುತ್ತದೆ. ಜಲಬಡಿತದಿಂದ ಆಗುವ ಅನಾಹುತಗಳನ್ನು ತಪ್ಪಿಸುವುದಕ್ಕೆ ಅಕ್ಷೋಭಕ ತೊಟ್ಟಿಗಳನ್ನು ಕೊಳವೆಗೆ ಹೊಂದಿಸಿರುವುದುಂಟು. ಕೊಳವೆಗಳು ಬಾಗಿರುವ ಕಡೆ ವಾಯುಕವಾಟಗಳಿರುತ್ತವೆ. ಕೊಳವೆಗಳ ಸುರಕ್ಷತೆಗೆ ಹೆಚ್ಚು ಒತ್ತಡವನ್ನು ಬಿಡುಗಡೆ ಮಾಡುವ ಕವಾಟಗಳು (ರಿಲೀಫ್ ವಾಲ್ವ್ಸ್) ಅಗತ್ಯ.

ತಿರುಬಾನಿಗಳು: ವಿದ್ಯುಜ್ಜನಕಗಳಿಗೆ ಚಲನಶಕ್ತಿಯನ್ನು ಒದಗಿಸುವ ಮೂಲಯಂತ್ರಗಳಿವು. ನೀರಿನ ಎತ್ತರ 50 ಮೀಟರಿಗಿಂತ ಕಡಿಮೆ ಇದ್ದಲ್ಲಿ, ಲಂಬಚಾಲಕದಂಡವಿರುವ ಪ್ರತಿಕ್ರಿಯಾ ಮಾದರಿಯ ಫ್ರಾನ್ಸಿಸ್ ತಿರುಬಾನಿಗಳನ್ನು ಬಳಸುವುದಿದೆ. ನೀರಿನ ಎತ್ತರ 50 ಮೀಟರಿಗಿಂತ ಹೆಚ್ಚು ಇರುವ ಮಧ್ಯಮ ಎತ್ತರದ ಯೋಜನೆಗಳಲ್ಲಿ ಮಟ್ಟಚಾಲಕದಂಡವಿರುವ ಫ್ರಾನ್ಸಿಸ್ ತಿರುಬಾನಿಗಳ ಬಳಕೆ ಉಂಟು. 200 ಮೀಟರುಗಳಿಗಿಂತಲೂ ಹೆಚ್ಚಾದ ನೀರಿನ ಎತ್ತರವಿರುವ, ಯೋಜನೆಗಳಲ್ಲಿ ಪೆಲ್ಟನ್ ತಿರುಬಾನಿಗಳನ್ನು ಬಳಸುತ್ತಾರೆ. ಈ ತಿರುಬಾನಿಗಳ ಭ್ರಮಣವೇಗದಲ್ಲಿ ಬದಲಾವಣೆಯಾದರೆ ವಿದ್ಯುಜ್ಜನಕಗಳು ಉತ್ಪಾದಿಸುವ ಪರ್ಯಾಯ ವಿದ್ಯುತ್ತಿನ ಆವರ್ತಾಂಕ ಬದಲಾಗುತ್ತದೆ. ಆದ್ದರಿಂದ ತಿರುಬಾನಿಗಳ ಭ್ರಮಣವೇಗದಲ್ಲಿ ಸ್ಥಿರತೆಯನ್ನು ರಕ್ಷಿಸುವುದಕ್ಕೆ ನಿಯಾಮಕಗಳಿರುತ್ತವೆ (ಗವರ್ನರ್ಸ್). ಎಣ್ಣೆಯ ಒತ್ತಡದಿಂದ ಕೆಲಸ ಮಾಡುವ ಸರ್ವೋ ಮೋಟಾರುಗಳ ಮೂಲಕ, ಜಲಯಂತ್ರಗಳಿಗೆ ನೀರನ್ನು ಒದಗಿಸುವ ಕವಾಟಗಳನ್ನು ಇವು ಮುಚ್ಚಿ ಅಥವಾ ತೆರೆದು, ಭ್ರಮಣವೇಗದಲ್ಲಾಗುವ ವ್ಯತ್ಯಾಸ ಬಹಳ ಸೂಕ್ಷ್ಮವಾಗಿ ಒಂದು ಪೂರ್ವ ನಿರ್ಧಾರಿತ ಮಿತಿಯಲ್ಲಿರುವಂತೆ ನಿಯಂತ್ರಿಸುತ್ತವೆ. ನೀರಿನ ಎತ್ತರ ಎರಡು ಮೂರು ಮೀಟರುಗಳಷ್ಟು ಕಡಿಮೆ ಇದ್ದರೂ ವಿಶೇಷ ದಕ್ಷತೆಯಿಂದ ಕೆಲಸ ಮಾಡಬಲ್ಲ ಕಪ್ಲಾನ್ ತಿರುಬಾನಿಯನ್ನು ಅಂಥ ಸಂದರ್ಭಗಳಲ್ಲಿ ಉಪಯೋಗಿಸಬಹುದು. ಕಡಿಮೆ

ಎತ್ತರದ ಒಂದು ಉತ್ಪಾದನ ಕೇಂದ್ರದಲ್ಲಿ 14000 ಅಶ್ವ ಸಾಮರ್ಥ್ಯವುಳ್ಳ 5 ಮೀಟರು ಎತ್ತರದ ಕಪ್ಲಾನ್ ತಿರುಬಾನಿಯನ್ನು ಬಳಸಿರುವ ಸಂದರ್ಭವೂ ಉಂಟು. ತಿರುಬಾನಿಗಳಿಂದ ಹೊರಟುಬರುವ ಕಡಿಮೆ ಒತ್ತಡದ ಮಂದಗತಿಯ ನೀರು ಕೊನೆಯ ಸೆಳವು(ಟೇಲ್ ರೇಸ್) ಎಂಬ ಕಾಲುವೆ ಅಥವಾ ಸಣ್ಣ ಕೊಳದೊಳಗೆ ಬೀಳುತ್ತದೆ.

ವಿದ್ಯುದಾಗಾರ: ಪ್ರಪಾತದ ಕೆಳಗೆ ನಿರ್ಮಿಸಲಾಗಿರುವ ವಿದ್ಯುದಾಗಾರಗಳಲ್ಲಿ ತಿರುಬಾನಿಗಳಿಗೆ ನೇರವಾಗಿ ಜೋಡಿಸಿರುವ ವಿದ್ಯುಜ್ಜನಕಗಳನ್ನು(ಜನರೇಟರ್ಸ್) ಸ್ಥಾಪಿಸುತ್ತಾರೆ. ದೂರ ಪ್ರದೇಶಗಳಿಗೆ ಸಾಗಿಸಲು ಅನುಕೂಲಿಸುವ ಪರ್ಯಾಯ ವಿದ್ಯುತ್ತನ್ನು ಇವು ಉತ್ಪಾದಿಸುತ್ತವೆ. ವಿದ್ಯುತ್ತಿನ ಸಂಚರಣ ವ್ಯವಸ್ಥೆಗೆ ಬೇಕಾಗುವ ಟ್ರಾನ್ಸ್‌ಫಾರ್ಮರುಗಳು, ಸ್ವಿಚ್ಚುಗಳು, ವಿದ್ಯುನ್ಮಾಪಕಗಳು, ಭಾರವಾದ ಯಂತ್ರಭಾಗಗಳನ್ನು ಎತ್ತಬಲ್ಲ ಕ್ರೇನುಗಳು ಮುಂತಾದ ಸಲಕರಣೆಗಳು ಈ ವಿದ್ಯುದಾಗಾರದಲ್ಲಿರುವುವು.

**ಭಾರತದ ಪ್ರಮುಖ ಜಲವಿದ್ಯುದುತ್ಪಾದನಾ ಕೇಂದ್ರಗಳು ಮತ್ತು ಅವುಗಳ ಸಾಮರ್ಥ್ಯ**

| ಕೇಂದ್ರಗಳು | ಪಾಲ್ಗೊಂಡಿರುವ ರಾಜ್ಯ | ಉತ್ಪಾದನಾ ಸಾಮರ್ಥ್ಯ |
|---|---|---|
| ಮುಚಕುಂದ | ಆಂಧ್ರಪ್ರದೇಶ, ಒರಿಸ್ಸ | 115 ಮೆವಾ |
| ಶ್ರೀಶೈಲಂ | ಆಂಧ್ರಪ್ರದೇಶ | 900 ಮೆವಾ |
| ಕೆಳಗಿನ ಸಿಲೇರು | ಆಂಧ್ರಪ್ರದೇಶ | 460 ಮೆವಾ |
| ಮೇಲಿನ ಸಿಲೇರು | ಆಂಧ್ರಪ್ರದೇಶ | 240 ಮೆವಾ |
| ಉಕೈ | ಗುಜರಾತ್ | 300 ಮೆವಾ |
| ಬೈರಾ-ಸಿಯಾಲ್ | ಹಿಮಾಚಲ ಪ್ರದೇಶ | 180 ಮೆವಾ |
| ಸಲಾಲ್ | ಜಮ್ಮು ಮತ್ತು ಕಾಶ್ಮೀರ | 630 ಮೆವಾ |
| ಶರಾವತಿ | ಕರ್ನಾಟಕ | 891 ಮೆವಾ |
| ಕಾಳಿನದಿ | ಕರ್ನಾಟಕ | 810 ಮೆವಾ |
| ಕಾಳಿನದಿ ಸೂಪ | ಕರ್ನಾಟಕ | 160 ಮೆವಾ |
| ಇಡಿಕ್ಕಿ | ಕೇರಳ | 780 ಮೆವಾ |
| ಶಬರಗಿರಿ | ಕೇರಳ | 300 ಮೆವಾ |
| ಕೊಯ್ನಾ | ಮಹಾರಾಷ್ಟ್ರ | 1920 ಮೆವಾ |
| ಲೋಕ್‌ಟಾಕ್ | ಮಣಿಪುರ | 70 ಮೆವಾ |
| ಹಿರಾಕುಡ್ | ಒರಿಸ್ಸ | 307 ಮೆವಾ |
| ಮೆಟ್ಟೂರು | ತಮಿಳುನಾಡು | 200 ಮೆವಾ |
| ಕುಂದಾ | ತಮಿಳುನಾಡು | 555 ಮೆವಾ |
| ರಿಹಾಂದ್ | ಉತ್ತರಪ್ರದೇಶ | 300 ಮೆವಾ |
| ಶಿವಸಮುದ್ರ | ಕರ್ನಾಟಕ | 42 ಮೆವಾ |
| ಶಿಂಷಾ | ಕರ್ನಾಟಕ | 17 ಮೆವಾ |
| ನಾಗಾರ್ಜುನಸಾಗರ | ಆಂಧ್ರಪ್ರದೇಶ | 810 ಮೆವಾ |
| ವರಾಹಿ | ಕರ್ನಾಟಕ | 230 ಮೆವಾ |
| ಗೇರುಸೊಪ್ಪ | ಕರ್ನಾಟಕ | 240 ಮೆವಾ |
| ಇಂದ್ರಾವತಿ | ಒರಿಸ್ಸ | 600 ಮೆವಾ |
| ರುಂಗಾಲಿ | ಒರಿಸ್ಸ | 250 ಮೆವಾ |
| ಮೇಲಿನ ಕೊಲಾಬ್ | ಒರಿಸ್ಸ | 320 ಮೆವಾ |
| ರಾಣಾ ಪ್ರತಾಪಸಾಗರ್ | ರಾಜಾಸ್ಥಾನ | 172 ಮೆವಾ |
| ಮಹಿ ಬಜಾಜ್ | ರಾಜಾಸ್ಥಾನ | 140 ಮೆವಾ |
| ಮುಖೇರಿಯಾನ್ | ಪಂಜಾಬ್ | 207 ಮೆವಾ |
| ಆನಂದಪುರಸಾಹಿಬ್ | ಪಂಜಾಬ್ | 134 ಮೆವಾ |
| ರಾಮಗಂಗಾ | ಉತ್ತರಾಂಚಲ | 198 ಮೆವಾ |
| ಚಿಬ್ರೋ | ಉತ್ತರಾಂಚಲ | 240 ಮೆವಾ |

2008 ರಲ್ಲಿ ಭಾರತ ಏಳನೆಯ ಅತಿ ದೊಡ್ಡ ಜಲವಿದ್ಯುದುತ್ಪಾದಕ ರಾಷ್ಟ್ರ. ಭಾರತ 114 TWH ಜಲವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ ಮತ್ತು ಇದು ಪ್ರಪಂಚದ ಶೇ. 3.5 ರಷ್ಟು (2008). ಸಾರ್ವಜನಿಕ ವಲಯದ ಭಾಗವೇ ಶೇ. 97. ನ್ಯಾಷನಲ್ ಹೈಡ್ರೊಎಲೆಕ್ಟ್ರಿಕ್ ಪವರ್ ಕಾರ್ಪೋರೇಷನ್ (NHPC), ನಾರ್ತ್ ಈಸ್ಟರ್ನ್ ಎಲೆಕ್ಟ್ರಿಕ್ ಪವರ್ ಕಂ.(NEEPCO), ಸಟ್ಲಜ್ ಜಲವಿದ್ಯುತ್ ನಿಗಮ (SJVNL), ತೆಹ್ರಿ ಹೈಡ್ರೊಡೆವಲಪ್‌ಮೆಂಟ್ ಕಾರ್ಪೋರೇಷನ್-ಇವು ಕೆಲವು ಸಾರ್ವಜನಿಕ ವಲಯದ ಜಲವಿದ್ಯುದುತ್ಪಾದನಾ ಕಂಪನಿಗಳು.

| | | |
|---|---|---|
| 1) | ಬಬೇಲ್(ಉತ್ತರ ಪ್ರದೇಶ) (ಉತ್ತರ ಪ್ರದೇಶ್ ಜಲವಿದ್ಯುತ್ ನಿಗಮ) ಉತ್ಪಾದನಾ ಸಾಮರ್ಥ್ಯ | 1X1.5ಮೆ.ವಾ |
| 2) | ಭಂದರದರ (ಮಹಾರಾಷ್ಟ್ರ) (ಡಾಡ್ಸನ್ ಲಿಂಡ್ ಬ್ಲ್ಯಾಮ್ ಹೈಡ್ರೊ ಪವರ್) | 1X14.4ಮೆ.ವಾ |
| 3) | ಬೆಲ್ಕ(ಉತ್ತರಪ್ರದೇಶ) (ಉತ್ತರಪ್ರದೇಶ್ ಜಲವಿದ್ಯುತ್ ನಿಗಮ) | 2X1.5ಮೆ.ವಾ |
| 4) | ಚೆನಾನಿ-1(ಜಮ್ಮು & ಕಾಶ್ಮೀರ) (ಜಮ್ಮು & ಕಾಶ್ಮೀರ್ ಪವರ್ ಡೆವಲಪ್‌ಮೆಂಟ್ ಕಾರ್ಪೋರೇಷನ್) | 5X4.66ಮೆ.ವಾ |
| 5) | ಭಟ್ಗರ್ (ಮಹಾರಾಷ್ಟ್ರ) (ಜಾರಾಷ್ಟ್ರ ಸ್ಟೇಟ್ ಪವರ್ ಜನರೇಷನ್ ಕಂ.) | 1X16ಮೆ.ವಾ |
| 6) | ಇಂದಿರಾಸಾಗರ್(ಮಧ್ಯಪ್ರದೇಶ್) (ನರ್ಮದ ಹೈಡ್ರೊಎಲೆಕ್ಟ್ರಿಕ್ ಡೆವಲಪ್‌ಮೆಂಟ್ ಕಾರ್ಪೊ.ಲಿ) | 8X125 ಮೆ.ವಾ |
| 7) | ಲಿಟ್ಲ್ ರಣಜಿತ್ (ಪಶ್ಚಿಮ ಬಂಗಾಲ) (ಪಶ್ಚಿಮ ಬಂಗಾಲ ರಾಜ್ಯ ಇಲೆಕ್ಟ್ರಿಸಿಟಿ ಡಿಸ್ಟ್ರಿಬ್ಯುಷನ್ ಕಂ.ಲಿ.) | 2X.1ಮೆ.ವಾ |
| 8) | ಜಮ್ಮು ಕೆನಾರ್ (ಜಮ್ಮು & ಕಾಶ್ಮೀರ) (ಜಮ್ಮು & ಕಾಶ್ಮೀರ್‌ಪವರ್ ಡೆವಲಪ್‌ಮೆಂಟ್ ಕಾರ್ಪೋರೇಷನ್) | 2X500ಮೆ.ವಾ |
| 9) | ಮಟಟಿಲ (ಉತ್ತರಪ್ರದೇಶ) (ಉತ್ತರ ಪ್ರದೇಶ್ ಜಲವಿದ್ಯುತ್ ನಿಗಮ್) | 3X10ಮೆ.ವಾ |
| 10) | ಸಲಾಲ್ (ಜಮ್ಮು & ಕಾಶ್ಮೀರ) (ನ್ಯಾಷನಲ್ ಹೈಡ್ರೊಎಲೆಕ್ಟ್ರಿಕ್ ಡೆವಲಪ್‌ಮೆಂಟ್ ಕಾರ್ಪೊ.ಲಿ) | 6X115ಮೆ.ವಾ |
| 11) | ಓಂಕಾರೇಶ್ವರ್(ಮಧ್ಯಪ್ರದೇಶ್) ನರ್ಮದಾ ಹೈಡ್ರೊಎಲೆಕ್ಟ್ರಿಕ್ ಡೆವಲಪ್‌ಮೆಂಟ್ ಕಾರ್ಪೊ.ಲಿ) | 8X65ಮೆ.ವಾ |
| 12) | ಸಮಾಲ್ (ಒರಿಸ್ಸ) ಒರಿಸ್ಸ ಪವರ್ ಕನ್ಸಾರ್ಷಿಯಂ,ಲಿ. | 5X4ಮೆ.ವಾ |

(ಪರಿಷ್ಕರಣೆ: ಎನ್.ಎಸ್.ಸುಬ್ಬಣ್ಣ)

**ಜಲಸಸ್ಯಗಳು :** ಸಸ್ಯಗಳನ್ನು ಅವು ಬೆಳೆಯುವ ನೆಲೆಗಳ ಆಧಾರದ ಮೇಲೆ ಶುಷ್ಕಸಸ್ಯಗಳು (ಸೀರೋಫೈಟ್ಸ್), ಮೀಸೋಫೈಟ್ಸ್ ಮತ್ತು ಜಲಸಸ್ಯಗಳು (ಹೈಡ್ರೊಫೈಟ್ಸ್) ಎಂಬ ಮೂರು ವರ್ಗಗಳನ್ನಾಗಿ ವಿಂಗಡಿಸಲಾಗಿದೆ. ಸುತ್ತಲ ಸನ್ನಿವೇಶವನ್ನೂ ಬೆಳೆಯುವ ಮಣ್ಣನ್ನೂ ಸಸ್ಯಗಳಿಗೂ ನೀರಿಗೂ ಇರುವ ಸಂಬಂಧವನ್ನೂ ಈ ವರ್ಗೀಕರಣದಲ್ಲಿ ಪರಿಗಣಿಸಲಾಗುತ್ತದೆ. ಅವುಗಳ ಹೆಸರೇ ಸೂಚಿಸುವಂತೆ ಜಲಸಸ್ಯಗಳು ಸಾಮಾನ್ಯವಾಗಿ ನೀರಿನಲ್ಲಿ ಬೆಳೆಯುವ ಸಸ್ಯಗಳು. ಕೆಲವು ಜೌಗು ಪ್ರದೇಶಗಳಲ್ಲೂ ಬೆಳೆಯುವುದುಂಟು. ನೆಲದ ಮೇಲಿನ ಸಸ್ಯಗಳಂತೆ ಉಷ್ಣತೆಯ ವೈಪರೀತ್ಯಗಳನ್ನು ಇವು ಸಹಿಸಲಾರವು. ಇವುಗಳ ಪರಿಸರ ನೀರು ಆಗಿರುವುದರಿಂದ ಇವಕ್ಕೆ ಕೆಲವು ವಿಶಿಷ್ಟ ಸಮಸ್ಯೆಗಳುಂಟು.

ಗಾಳಿಯ ಪೂರೈಕೆ, ಅದರಲ್ಲೂ ಉಸಿರಾಟಕ್ಕೆ ಬೇಕಾಗುವ ಆಕ್ಸಿಜನ್ ಹಾಗೂ ದ್ಯುತಿಸಂಶ್ಲೇಷಣೆಗೆ ಬೇಕಾಗುವ ಕಾರ್ಬನ್ ಡೈ ಆಕ್ಸೈಡ್ ಅನಿಲಗಳ ಪೂರೈಕೆ, ಇವುಗಳ ಸಮಸ್ಯೆಗಳಲ್ಲೊಂದು. ವಿವಿಧ ರೀತಿಯ ಜಲಸಸ್ಯಗಳು ಈ ಸಮಸ್ಯೆಯನ್ನು ವಿವಿಧ ಬಗೆಯಲ್ಲಿ ಬಗೆಹರಿಸಿಕೊಂಡಿವೆ. ನೀರಿನಲ್ಲಿ ಆಕ್ಸಿಜನ್ ಅತ್ಯಲ್ಪ ಮೊತ್ತದಲ್ಲಿ ಕರಗಿದ್ದರೂ ಕೆಲವು ನಾಳಮಯ ಜಲಸಸ್ಯಗಳು ಇಷ್ಟನ್ನೇ ಬಳಸಿಕೊಳ್ಳಲು ಸಮರ್ಥವಾಗಿದ್ದು ಬೇರೆ ಗಿಡಗಳಂಥ ಬೇರು ಇತ್ಯಾದಿ ಅಂಗಗಳನ್ನು ಪಡೆದಿವೆ. ನಿಂತ ನೀರಿನಲ್ಲಿ ಇಲ್ಲವೆ ಜೌಗುಭೂಮಿಗಳಲ್ಲಿ ಬೆಳೆಯುವ ಹಲವು ಜಲಸಸ್ಯಗಳು ಆಕ್ಸಿಜನ್ ಇಲ್ಲದೆಯೇ ಉಸಿರಾಡಬಲ್ಲವು. ಇನ್ನು ಕೆಲವು ತಮ್ಮ ದೇಹದಲ್ಲಿ ಗಾಳಿ ಓಡಾಡಲು ಅನುಕೂಲಿಸುವಂತೆ ವಿಸ್ತಾರವಾದ ಸಂಪರ್ಕ ವ್ಯವಸ್ಥೆಯನ್ನೂ ವಾಯುಸಂಗ್ರಹಣಾ ವ್ಯವಸ್ಥೆಯನ್ನೂ ರೂಪಿಸಿಕೊಂಡಿವೆ. ಕೆಲವು ಅಂಗಾಂಶಗಳಲ್ಲಿ ಜೀವಕೋಶಗಳು ಶಿಥಿಲವಾಗುವುದರಿಂದ ಅಲ್ಲಲ್ಲಿ ವಾಯುಕುಳಿಗಳು ಕಂಡುಬರುತ್ತವೆ. ಆದರೆ ಪೋಡಾಸ್ಟಮೇಸೀ ಎಂಬ ಕುಟುಂಬಕ್ಕೆ

ಸೇರಿದ ಜಲಸಸ್ಯಗಳಲ್ಲಿ ವಾಯುಕುಳಿಗಳಿಲ್ಲ. ಬಹುಶಃ ಇವು ವಿಕಾಸವಾಗುತ್ತಿರುವಾಗ ಕುಳಿಗಳನ್ನು ಕಳೆದುಕೊಂಡಿರಬಹುದು. ಹೀಗಿದ್ದರೂ ಈ ಗಿಡಗಳು ತ್ವರಿತಗತಿಯಲ್ಲಿ ಸಾಗುವ ಹಾಗೂ ಆಕ್ಸಿಜನ್ ತುಂಬಿರುವ ಪ್ರವಾಹಗಳಲ್ಲಿ ಬೆಳೆಯುವುದರಿಂದ ಅನಿಲ ವಿನಿಮಯ ಇವುಗಳಲ್ಲಿ ಸಮಸ್ಯೆ ಅಲ್ಲ. ಎಲ್ಲ ಜಲಸಸ್ಯಗಳಲ್ಲಿ ಏರೆಂಕಿಮ ಎಂಬ ಅಂಗಾಂಶ ಅಧಿಕ ಮೊತ್ತದಲ್ಲಿ ರೂಪುಗೊಂಡಿದೆ. ವಿಸ್ತಾರವಾಗಿ ಹರಡಿರುವ ಇದರ ಜೀವಕೋಶಗಳ ನಡುವೆ ಅವಕಾಶಗಳಿವೆ. ಈ ಅವಕಾಶಗಳಲ್ಲಿ ಗಾಳಿ ಶೇಖರವಾಗಿರುವುದರಿಂದ ಸಸ್ಯಗಳಿಗೆ ಪ್ಲವನಶಕ್ತಿ ದೊರೆಯುತ್ತದೆ. ಐಕಾರ್ನಿಯ ಎಂಬ ಗಿಡದ ಎಲೆಗಳ ತೊಟ್ಟುಗಳಲ್ಲಿ ಏರೆಂಕಿಮ ಅಧಿಕ ಪ್ರಮಾಣದಲ್ಲಿ ಇರುವುದರಿಂದ ತೊಟ್ಟುಗಳು ಉಬ್ಬಿಕೊಂಡಿರುತ್ತವೆ. ಇವೇ ಸಸ್ಯಗಳು ನೀರಿನಲ್ಲಿ ಬೆಳೆಯದೆ ಸ್ವಲ್ಪ ಒದ್ದೆಯಾದ ಮಣ್ಣಿನಲ್ಲಿ ಬೆಳೆದರೆ ಏರೆಂಕಿಮ ಅಂಗಾಂಶ ಇಷ್ಟು ಪ್ರಮಾಣದಲ್ಲಿರುವುದಿಲ್ಲ. ಆದ್ದರಿಂದ ಏರೆಂಕಿಮ ಅಂಗಾಂಶ ಸಸ್ಯ ನೀರಿನಲ್ಲಿ ತೇಲಾಡುವಂತೆ ಸಹಾಯ ಮಾಡುವ ರಚನೆಯೆಂದು ಖಚಿತವಾಗುತ್ತದೆ. ತಾವರೆಯ ಕಾಯಿಗಳಲ್ಲಿ ಕೂಡ ಏರೆಂಕಿಮ ಅಂಗಾಂಶ ಇದ್ದು ಫಲಪ್ರಸಾರಕ್ಕೆ ನೆರವಾಗುತ್ತದೆ. ಅಜ್ಹೊಲ ಎಂಬ ಜಲಸಸ್ಯದಲ್ಲಿ ಎಲೆಗಳ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಕೂದಲುಗಳು ಇವೆ. ಗಾಳಿಯನ್ನು ಹಿಡಿದಿಡಲು ಇವು ಸಹಾಯಕ. ಜಸ್ಸಿಯ ಎಂಬ ಗಿಡದಲ್ಲೂ ಏರೆಂಕಿಮ ಅಧಿಕ ಮೊತ್ತದಲ್ಲಿದೆ. ಆದರೆ ಈ ಜಾತಿಯ ಸಸ್ಯದ ಒಂದು ಪ್ರಭೇದವನ್ನು ಭೂಮಿಯ ಮೇಲೆ ಬೆಳೆಸಬಹುದು. ಇದರಲ್ಲಿ ಏರೆಂಕಿಮ ಅಂಗಾಂಶ ಇಲ್ಲವೇ ಇಲ್ಲ.

ಸಮುದ್ರದಲ್ಲಿ ಬೆಳೆಯುವ ಫ್ಯೂಕಸ್ ಎಂಬ ಗಿಡದಲ್ಲಿ ಬ್ಲಾಡರ್‌ಗಳೆಂಬ ರಚನೆಗಳಿವೆ. ಸಸ್ಯ ನೀರಿನಲ್ಲಿ ನೇರವಾಗಿ ನಿಲ್ಲಲು ಇವು ಸಹಾಯಕವಾಗಿವೆ. ವಾಟರ್ ಲಿಲಿ ಗಿಡದಲ್ಲಿ ಸಸ್ಯದ ಸ್ವಲ್ಪ ಭಾಗ ನೀರಿನಲ್ಲಿ ಮುಳುಗಿ ಇನ್ನುಳಿದ ಭಾಗ ನೀರಿನಿಂದ ಹೊರಗಿದ್ದು ವಾಯುವಿನ ಸಂಪರ್ಕ ಪಡೆದಿರುವುದರಿಂದ ಸಸ್ಯದೇಹದಾದ್ಯಂತ ಅವಿಚ್ಛಿನ್ನವಾಗಿ ವಾಯುವನ್ನು ಒಯ್ಯುವ ವ್ಯವಸ್ಥೆ ಉಂಟು. ಇನ್ನು ಕೆಲವು ಜಲಸಸ್ಯಗಳಾದ ಟ್ರಾಪ, ಪಿಸ್ಟಿಯ, ಹೈಡ್ರೋಕ್ಯಾರಿಸ್ ಮೊದಲಾದವುಗಳಲ್ಲಿ ಏರೆಂಕಿಮ ಅಂಗಾಂಶ ಎಷ್ಟರಮಟ್ಟಿಗೆ ವೃದ್ಧಿಯಾಗಿದೆಯೆಂದರೆ ಇವು ಈಜುಬುರುಡೆಗಳಂತೆ ದಪ್ಪವಾಗಿ ಊದಿಕೊಂಡಿದ್ದು ಮುಟ್ಟಿದರೆ ಸ್ಪಂಜಿನಂತಿವೆ.

ಕೆಲವು ಜಲಸಸ್ಯಗಳಲ್ಲಿ ಏರೆಂಕಿಮ ಅಂಗಾಂಶ ಅಲ್ಪ ಮೊತ್ತದಲ್ಲಿರುವುದರಿಂದ ಇದನ್ನು ಸರಿತೂಗಿಸಲು ತೆಳುವಾದ ಕೋಶಭಿತ್ತಿಗಳಿಂದ ರಚಿತವಾದ ವಪೆಗಳೆಂಬ ರಚನೆಗಳಿವೆ (ಉದಾ: ಪಾಂಟಿಡೇರಿಯ, ಪೊಟಮೊಜೆಟಾನ್, ಸ್ಯಾಜಿಟೇರಿಯ). ಇವು ವಾಯುಕುಳಿಗಳನ್ನು ಛೇದಿಸಿ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುತ್ತವೆ. ವಪೆಗಳು ಸಾಮಾನ್ಯವಾಗಿ ನೀರಿನಲ್ಲಿ ಮುಳುಗಿರುವ ಸಸ್ಯಭಾಗದ ಗಿಣ್ಣುಗಳಲ್ಲಿ ಹಾಗೂ ಎಲೆಗಳ ತೊಟ್ಟುಗಳಲ್ಲೂ ಇತರ ಜಲವಾಸಿ ಏಕದಳ ಸಸ್ಯಗಳಲ್ಲೂ ನೋಡಬಹುದು.

ಜಲಸಸ್ಯಗಳು ನಿರಂತರವಾಗಿ ನೀರಿನ ಸಂಪರ್ಕದಲ್ಲಿರುವುದರಿಂದ ನೀರನ್ನು ಹೀರುವ ಅಂಗಗಳಾದ ಬೇರುಗಳು ಚೆನ್ನಾಗಿ ರೂಪುಗೊಂಡಿಲ್ಲ. ಬೇರು ಸಾಮಾನ್ಯವಾಗಿ ಚಿಕ್ಕವಾಗಿದ್ದು ಅಲ್ಪಪ್ರಮಾಣದಲ್ಲಿ ಕವಲೊಡೆದಿರುತ್ತವೆ. ಕೆಲವು ವೇಳೆ ಇರುವುದೇ ಇಲ್ಲ. ಸೆರಟೊಫಿಲಂ ಎಂಬ ಸಸ್ಯದಲ್ಲಿ ಬೇರು ರೋಮಗಳು ಸಂಪೂರ್ಣವಾಗಿ ನಶಿಸಿಹೋಗಿವೆ. ಜಸ್ಸಿಯದಲ್ಲಿ ಸಾಮಾನ್ಯವಾಗಿ ಬೆಳೆಯುವ ಬೇರುಗಳಲ್ಲದೆ ಗಿಣ್ಣುಗಳಿಂದ ಸ್ಪಂಜಿನಂಥ ಬೇರುಗಳು ಮೇಲ್ಮುಖವಾಗಿ ಬೆಳೆಯುವುದನ್ನು ಕಾಣಬಹುದು. ಜಲಸಸ್ಯಗಳಲ್ಲಿ ದೇಹದ ಒಂದಿಲ್ಲೊಂದು ಭಾಗದಲ್ಲಿ ಕಾಣಬರುವ ವಾಯುಕುಳಿಗಳ ರೂಪುಗೊಳ್ಳುವಿಕೆ ಆನುವಂಶಿಕ ನಿಯಂತ್ರಣ ಕ್ಕೊಳಗಾಗಿದೆ ಎಂದು ಭಾವಿಸಲಾಗಿದೆ. ವಾಯುಕುಳಿಗಳು ನಿರ್ದಿಷ್ಟ ಸಂಖ್ಯೆಯಲ್ಲಿರುವುದರಿಂದ ಈ ಗುಣವನ್ನು ಒಂದೇ ಜಾತಿಯ ಸಸ್ಯಗಳ ಪ್ರಭೇದಗಳನ್ನು ಗುರುತಿಸಲು ಬಳಸಿ ಕೊಳ್ಳಲಾಗಿದೆ.ಸೈಪರಸ್, ಟೈಫ ಮೊದಲಾದ ಸಸ್ಯಗಳಲ್ಲಿ ನಿರ್ದಿಷ್ಟ ಋತುಗಳಲ್ಲಿ ಪ್ರಕಂದಗಳು ವಿಶಾಲವಾಗಿ ಹರಡಿಕೊಂಡು ಬೆಳೆಯುತ್ತವೆ. ವ್ಯಾಲಿಸ್ನೇರಿಯ, ಐಸೋಯಿಟೇಸ್ ಮತ್ತು ಅಪೊನೊಜೆಟಾನ್‌ಗಳಲ್ಲಿ ಬೇರಿನ ಬುಡ ದಪ್ಪವಾಗಿದೆ. ಐಕಾರ್ನಿಯ, ಪಿಸ್ಟಿಯ ಮೊದಲಾದ ತೇಲುವ ಜಲಸಸ್ಯಗಳಲ್ಲಿ ತಂತು ಬೇರುಗಳು ವಿಪುಲವಾಗಿ ಬೆಳೆದಿವೆ. ಗಿಡಗಳು ಭೂಮಿಯಲ್ಲಿ ಗಟ್ಟಿಯಾಗಿ ನಿಲ್ಲಲು ಇವು ಉಪಯೋಗವಾಗದಿದ್ದರೂ ಮೇಲ್ಭಾಗದಲ್ಲಿ ಗುಂಪಾಗಿ ಬೆಳೆದಿರುವ ಎಲೆಗಳಿಗೆ ಸ್ಥಿತಿಸ್ಥಾಪಕತೆಯನ್ನು ಕೊಡುತ್ತವೆ. ಈ ಬೇರುಗಳ ಎಪಿಡರ್ಮಿಸಿನಲ್ಲಿ ಕೆಲವೊಮ್ಮೆ ಕ್ಲೋರೋಫಿಲ್ ಇರುವುದರಿಂದ ಅಲ್ಪ ಮೊತ್ತದಲ್ಲಿ ಆಹಾರವೂ ತಯಾರಾಗುತ್ತದೆ. ಸೆರಟಾಪ್ಟರಿಸ್ ಗಿಡದಲ್ಲಿ ಬೇರುಗಳು ಬಹುವಾಗಿ ಕವಲೊಡೆದಿವೆ. ಮತ್ತೆ ಕೆಲವು ಜಲಸಸ್ಯಗಳಲ್ಲಿ ಬೇರುರೋಮಗಳು ಸಮೃದ್ಧವಾಗಿ ಬೆಳೆದಿರುವುದುಂಟು.

ಜಲಸಸ್ಯಗಳಲ್ಲಿ ನೀರನ್ನು ಸಸ್ಯದ ಬೇರೆ ಬೇರೆ ಭಾಗಗಳಿಗೆ ಒಯ್ಯುವ ಅಂಗಾಂಶಗಳಾದ ಸೈಲಮ್ ನಾಳಗಳು ಸಮರ್ಪಕವಾಗಿ ಬೆಳೆದಿರುವುದಿಲ್ಲ. ಕೆಲವು ಜಲಸಸ್ಯಗಳನ್ನುಳಿದು ಇತರ ಸಸ್ಯಗಳ ಬೇರಿನಲ್ಲಿ ನೀರನ್ನು ಸಾಗಿಸುವ ಎಂಡೋಡರ್ಮಿಸ್ ಮತ್ತು ಕ್ಯಾಸ್ಪೇರಿಯನ್ ಪಟ್ಟಿಗಳು ತಕ್ಕಮಟ್ಟಿಗೆ ಬೆಳೆದಿವೆ. ಕೆಲವು ನಾಳೀಯ ಜಲಸಸ್ಯಗಳಲ್ಲಿ ಬೇರು ಟೋಪಿಯ ಬದಲಾಗಿ ಬೇರು ಕವಚ ಉಂಟು. ಬೇರಿನ ಜೀವಕೋಶಗಳ ಕೋಶಭಿತ್ತಿ ತೆಳುವಾಗಿದೆ. ಅಲ್ಲದೆ ಈ ಸಸ್ಯಗಳ ಎಪಿಡರ್ಮಿಸಿನಲ್ಲಿ ಕ್ಯೂಟಿಕಲ್‌ನ ಲೇಪನವಿರುವುದಿಲ್ಲ.

ನೀರಿನಲ್ಲಿ ಮುಳುಗಿರುವ ಸಸ್ಯಭಾಗಗಳಲ್ಲಿ ಬಾಷ್ಪವಿಸರ್ಜನೆಯ ಸಮಸ್ಯೆಯೇ ಇಲ್ಲವಾದ್ದರಿಂದ ಸ್ಟೋಮರಂಧ್ರಗಳಿರುವುದಿಲ್ಲ. ಇದ್ದರೂ ಇವು ನಿಷ್ಪ್ರಯೋಜಕವಾಗಿವೆ. ತೇಲುವ ಜಲಸಸ್ಯಗಳಲ್ಲಿ ಮತ್ತು ತೇಲಾಡುವ ಎಲೆಗಳುಳ್ಳ ಜಲಸಸ್ಯಗಳಲ್ಲಿ ಮಾತ್ರ ಎಲೆಗಳ ಮೇಲ್ಭಾಗದಲ್ಲಿ ಸ್ಟೋಮಗಳುಂಟು. ಇವೂ ಸಹ ಬಹುತೇಕ ಅನುಪಯುಕ್ತವೇ. ನೀರಿನ ಮೇಲೆ ಹರಡಿ ಕೊಂಡಿರುವ ತಟ್ಟೆಯಾಕಾರದ ಎಲೆಗಳ ಮೇಲ್ಭಾಗದಲ್ಲಿ ಮೇಣದಂಥ ಲೇಪವಿರುವುದರಿಂದ ಬಾಷ್ಪವಿಸರ್ಜನೆ ಕುಂಠಿತಗೊಂಡಿದೆ. ಎಲೆಗಳ ಮೇಲೆ ನೀರಿನ ಹನಿ ಬಿದ್ದರೂ ಜಾರಿಹೋಗುತ್ತದೆ. ಸಾಲ್ವೀನಿಯದ ಎಲೆಗಳ ಮೇಲೆ ಒತ್ತಾದ ರೋಮಗಳಿರುವುದರಿಂದ ಬಾಷ್ಪವಿಸರ್ಜನೆಗೆ ಅವಕಾಶವೇ ಇಲ್ಲ. ಅಲ್ಲದೆ ಕೆಲವು ಜಲಸಸ್ಯಗಳ ಎಲೆಗಳು ಚರ್ಮದಂತೆ ಒರಟಾಗಿರುವುದುಂಟು. ನೀರಿನಿಂದ ಮೇಲಕ್ಕೆ ಚಾಚಿರುವ ಸಸ್ಯಭಾಗಗಳಲ್ಲಿ ಲೋಳೆಯಂಥ ಪದಾರ್ಥವಿರುವುದು ಇದೇ ಉದ್ದೇಶಕ್ಕಾಗಿ. ಬೇರು ಮತ್ತು ಕಾಂಡಗಳಲ್ಲಿ ಆನುಷಂಗಿಕ ಬೆಳವಣಿಗೆ ಇಲ್ಲದಿರುವುದು ಜಲಸಸ್ಯಗಳ ಇನ್ನೊಂದು ವೈಶಿಷ್ಟ್ಯ. ಏರೆಂಕಿಮ ಅಂಗಾಂಶ ಮತ್ತು ವಪೆಗಳು ಹೆಚ್ಚಾಗಿ ಇರುವುದರಿಂದ ಆಧಾರ ಅಂಗಾಂಶಗಳು ಅತ್ಯಲ್ಪ ಮೊತ್ತದಲ್ಲಿ ರೂಪುಗೊಂಡಿವೆ.

ಹೆಚ್ಚು ಆಳವಿಲ್ಲದ ನೀರಿನಲ್ಲಿ ಬೆಳೆಯುವ ಜಲಸಸ್ಯಗಳ ಎಲೆಗಳಲ್ಲಿ ದ್ವಿರೂಪತೆ ಕಂಡುಬರುತ್ತದೆ. ಅಂದರೆ ನೀರಿನಲ್ಲಿ ಮುಳುಗಿರುವ ಎಲೆಗಳು ನೀರಿನ ಮೇಲೆ ಬೆಳೆಯುವ ಎಲೆಗಳಿಗಿಂತ ಭಿನ್ನವಾಗಿರುತ್ತವೆ. ಲಿಮ್ನೊಫಿಲ ಹೆಟರೋಫಿಲ್ಲ, ಸ್ಯಾಜಿಟೇರಿಯ ಮೊದಲಾದ ಸಸ್ಯಗಳಲ್ಲಿ ಈ ರೀತಿಯ ಎಲೆಗಳನ್ನು ಕಾಣಬಹುದು. ನೀರಿನಲ್ಲಿ ಮುಳುಗಿರುವ ಎಲೆಗಳು ಅತಿ ಸೂಕ್ಷ್ಮವಾಗಿ ವಿಚ್ಛೇದಿಸಲ್ಪಟ್ಟಿದ್ದು ನೀರಿನ ಮೇಲ್ಭಾಗದ ಎಲೆಗಳು ಅಖಂಡವಾಗಿರುತ್ತವೆ. ಈ ಲಕ್ಷಣಕ್ಕೆ ಅಸಮಪತ್ರ ರೂಪತೆ (ಹೆಟರೊಫಿಲಿ) ಎಂದು ಹೆಸರು. ಇದು ಸುತ್ತಲ ಪರಿಸರ, ವಾತಾವರಣದ ಉಷ್ಣತೆ ಮತ್ತು ಆರ್ದ್ರತೆಗಳನ್ನು ಅವಲಂಬಿಸಿರುತ್ತದೆ.

ಕೆಲವು ಜಲಸಸ್ಯಗಳಲ್ಲಿ ಪ್ರಾರಂಭದಲ್ಲಿ ಮೂಡುವ ಎಲೆಗಳು ನಂತರ ಹುಟ್ಟುವ ಎಲೆಗಳಿಗಿಂತ ತೀರ ಭಿನ್ನವಾಗಿರುತ್ತವೆ. ಇದರಲ್ಲಿ ಸುತ್ತಲ ಪರಿಸರ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಈ ಗುಣಕ್ಕೆ ಹೆಟಿರೊಬ್ಲಾಸ್ಟಿಕ್ ಎಂದು ಹೆಸರು. ಉದಾಹರಣೆಗಾಗಿ ಸ್ಯಾಜಿಟೇರಿಯ ಸ್ಯಾಜಿಟಿಫೋಲಿಯ ಪ್ರಭೇದದಲ್ಲಿ ಆರಂಭದ ಎಳಸಾದ ಎಲೆಗಳು ಛಿದ್ರವಾಗಿ ಇಲ್ಲವೇ ನೀಳವಾಗಿದ್ದು ನೀರಿನಲ್ಲಿ ಮುಳುಗಿರುತ್ತವೆ. ಆದರೆ ಅನಂತರ ಹುಟ್ಟಿದ ಎಲೆಗಳು ನೀರಿನ ಮೇಲ್ಮೈ ಮೇಲೆ ತೇಲಾಡುವುವು ಇಲ್ಲವೇ ನೀರಿನಿಂದ ಮೇಲಕ್ಕೆ ಚಾಚಿ ಬೆಳೆಯುವುವು. ನೀರಿನಲ್ಲಿ ಮುಳುಗಿರುವ ಕಿರಿದಾದ ಛಿದ್ರವಾಗಿರುವ ಎಲೆಗಳು ನೀರಿನ ಪ್ರವಾಹವನ್ನು ಸಮರ್ಥವಾಗಿ ಎದುರಿಸಬಲ್ಲವು. ಅಖಂಡವಾದ ಹಾಗೂ ಅಗಲವಾದ ಎಲೆಗಳಿದ್ದರೆ ನೀರಿನ ಸೆಳೆತ ಮತ್ತು ಒತ್ತಡಗಳಿಗೆ ಗುರಿಯಾಗಿ ಇಡೀ ಸಸ್ಯವೇ ಅಪಾಯಕ್ಕೊಳಗಾಗುತ್ತಿತ್ತು. ಇದೇ ರೀತಿಯ ಕಾರಣಕ್ಕಾಗಿ ಐಕಾರ್ನಿಯದ ಎಲೆಗಳ ಅಂಚುಗಳಲ್ಲಿ ಆಧಾರ ಅಂಗಾಂಶಗಳುಂಟು. ತಾವರೆ ಗಿಡದಲ್ಲಿ ಎಲೆಗಳು ನೀರಿನ ಮೇಲೆ ತೇಲುವಂತೆ ಮಾಡಲು ಅವುಗಳ ತೊಟ್ಟುಗಳು ಬಹಳ ಉದ್ದ ಇವೆ.

ನೀರಿನಲ್ಲಿ ತೇಲಾಡುವ ಜಲಸಸ್ಯಗಳಲ್ಲಿ ವಂಶಾಭಿವೃದ್ಧಿ ಅಲಿಂಗ ಸಂತಾನೋತ್ಪತ್ತಿಯ ವಿಧಾನದಿಂದ ನಡೆಯುತ್ತದೆ. ಇವು ಹೂ ಬಿಡುವುದು ಕಡಿಮೆ. ಹೂ ಬಿಟ್ಟರೂ ಪರಾಗಸ್ಪರ್ಶ ಮತ್ತು ಗರ್ಭಧಾರಣೆಗಳು ನೀರಿನ ಮೇಲ್ಭಾಗದಲ್ಲೇ ನಡೆಯುತ್ತವೆ. ಅಲಿಂಗ ಪುನರುತ್ಪತ್ತಿಯ ಸಮಯದಲ್ಲಿ ಪ್ರತಿಯೊಂದು ಸಸ್ಯವೂ ಚಿಕ್ಕ ಚಿಕ್ಕ ತುಂಡುಗಳಾಗಿ ಬೇರ್ಪಡುತ್ತದೆ. ಅನಂತರ ಪ್ರತಿಯೊಂದು ತುಂಡೂ ಸ್ವತಂತ್ರ ಸಸ್ಯವಾಗಿ ಬೆಳೆಯುತ್ತದೆ. ಹೈಡ್ರೋಕ್ಯಾರಿಸ್, ಮಿರಿಯೋಫಿಲ್ಲಂ ಮತ್ತು ಯುಟ್ರಿಕ್ಯುಲೇರಿಯ ಗಿಡಗಳಲ್ಲಿ ವಿಶಿಷ್ಟ ರೀತಿಯ ಚಿಕ್ಕ ರೆಂಬೆಗಳು ಬೆಳೆಯುತ್ತವೆ. ಇಲೋಡಿಯ ಕ್ಯಾನಡೆನ್ಸಿಸ್ ಮತ್ತು ಬಜೆ ಗಿಡಗಳಲ್ಲಿ ಅಲಿಂಗ ಸಂತಾನೋತ್ಪತ್ತಿಯೇ ವಂಶಾಭಿವೃದ್ಧಿಯ ಏಕಮಾತ್ರ ವಿಧಾನ.

ಅಪೊನೊಜೆಟಾನ್ ಮತ್ತು ಅಲಿಸ್ಮೇಸೀ ಕುಟುಂಬದ ಸಸ್ಯಗಳಲ್ಲಿ ಮಿಥ್ಯಾ ವೈವಿ ಪರಿ ಕಂಡುಬರುತ್ತದೆ. ಇವುಗಳ ಹೂಗೊಂಚಲಿನಲ್ಲಿ ಹೂಗಳ ಬದಲಾಗಿ ಪತ್ರ ಕಂದಗಳು (ಬಲ್ಬಿಲ್ಸ್) ಎಂಬ ರಚನೆಗಳು ಉತ್ಪತ್ತಿಯಾಗುತ್ತವೆ. ಅಮೆರಿಕದ ಕೆಲವು ಐಕಾರ್ನಿಯ ಗಿಡಗಳ ಹೂಗೊಂಚಲಿನಲ್ಲಿ ಹೂಗಳ ಸ್ಥಾನದಲ್ಲಿ ಚಿಕ್ಕ ಚಿಕ್ಕ ಗಿಡಗಳು ರೂಪುಗೊಳ್ಳುತ್ತವೆ. ಕಾಲಾನಂತರದಲ್ಲಿ ಇವು ಗಿಡಗಳಿಂದ ಬೇರ್ಪಟ್ಟು ಸ್ವತಂತ್ರ ಗಿಡಗಳಾಗಿ ಬೆಳೆಯುತ್ತವೆ. ಹಲವು ಜಲಸಸ್ಯಗಳ ಎಲೆಗಳಲ್ಲಿ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ವರ್ಧನ ಅಂಗಾಂಶದ ಚಟುವಟಿಕೆಯಿಂದ ಜೆಮ ಎಂಬ ವಿಶೇಷ ರೀತಿಯ ಮೊಗ್ಗುಗಳು ರೂಪುಗೊಳ್ಳುತ್ತವೆ. ಇವು ಕೂಡ ಗಿಡಗಳಿಂದ ಬೇರೆಯಾಗಿ ಸ್ವತಂತ್ರ ಸಸ್ಯಗಳಾಗಿ ಬೆಳೆಯತೊಡಗುತ್ತವೆ. ಜಲಸಸ್ಯಗಳು ಸಾಮಾನ್ಯವಾಗಿ ಬಹುವಾರ್ಷಿಕ ಬಗೆಯವು. ಇವುಗಳಲ್ಲಿ ದ್ಯುತಿಸಂಶ್ಲೇಷಣ

ಕ್ರಿಯೆ ಸರಾಗವಾಗಿ ನಡೆಯುವುದರಿಂದ ಗಿಡಗಳು ಸೊಂಪಾಗಿ ಬೆಳೆಯುತ್ತವೆ. ಕೆಲವು ಜಲಸಸ್ಯಗಳಲ್ಲಿ ಪ್ರಕಂದ (ರೈಜ಼ೋಮ್) ಭೂಸ್ತಾರಿ (ರನರ್), ವಿರೋಹಕ (ಸ್ಟೋಲಾನ್) ಮತ್ತು ಆಕಂದಗಳು (ಟ್ಯೂಬರ್ಸ್) ರೂಪುಗೊಂಡು ಆಹಾರವಸ್ತುಗಳನ್ನು ಶೇಖರಿಸುವುದರಿಂದ ಪ್ರತಿಕೂಲ ಸಂದರ್ಭಗಳಲ್ಲಿ ಉಪಯೋಗವಾಗುತ್ತವೆ.

ಐಕಾರ್ನಿಯದಲ್ಲಿ ಹೂಬಿಡುವುದು ಪ್ರಕಾಶಾವಧಿ ಪ್ರಭಾವ ಮತ್ತು ಉಷ್ಣತಾ ಪ್ರಭಾವಗಳನ್ನು ಅವಲಂಬಿಸಿದೆ. ಲೆಮ್ನ ಜಾತಿಯ ಸಸ್ಯಗಳ ಪ್ರಭೇದಗಳಲ್ಲಿ ಕೆಲವಕ್ಕೆ ಕಡಿಮೆ ಸೂರ್ಯನ ಬೆಳಕು ಸಾಕಾದರೆ ಇನ್ನು ಕೆಲವಕ್ಕೆ ಹೆಚ್ಚು ಬೆಳಕು ಬೇಕಾಗುತ್ತದೆ. ಅಲ್ಲದೆ ಹೂಬಿಡುವಿಕೆಯ ಮೇಲೆ ಕಾರ್ಬನ್ ಡೈ ಆಕ್ಸೈಡ್ ಮತ್ತು ಪೋಷಕ ಆಹಾರಗಳ ಪೂರೈಕೆಗಳೂ ಪರಿಣಾಮ ಬೀರುತ್ತವೆ. ವ್ಯಾಲಿಸ್ನೇರಿಯದಲ್ಲಿ ಪರಾಗಸ್ಪರ್ಶವಾಗುವ ಸಂದರ್ಭಗಳಲ್ಲಿ ಗಂಡುಹೂಗಳು ಹೂಗೊಂಚಲಿನಿಂದ ಬೇರ್ಪಟ್ಟು ನೀರಿನ ಮೇಲಕ್ಕೆ ಬಂದು ತೇಲತೊಡಗುತ್ತವೆ. ಹೆಣ್ಣು ಹೂಗಳ ತೊಟ್ಟುಗಳು ಮಾತ್ರ ನೀಳವಾಗಿ ಬೆಳೆದು ಹೂಗಳನ್ನು ನೀರಿನ ಮೇಲ್ಮೈಗೆ ತರುತ್ತವೆ. ನೀರಿನ ಮೇಲೆ ತೇಲುತ್ತ ಸಾಗುತ್ತಿರುವ ಗಂಡು ಹೂಗಳು ಹೆಣ್ಣು ಹೂಗಳನ್ನು ಸಮೀಪಿಸುವುದುಂಟು. ಆಗ ಪರಾಗರೇಣುಗಳು ಹೆಣ್ಣು ಹೂಗಳ ಶಲಾಕಾಗ್ರದ ಮೇಲೆ ಬಿದ್ದು ಪರಾಗಸ್ಪರ್ಶ ಕ್ರಿಯೆ ನಡೆಯುತ್ತದೆ. ನಿಷೇಚನವಾದ ಅನಂತರ ಹೆಣ್ಣು ಹೂಗಳ ತೊಟ್ಟು ಸುರುಳಿ ಸುತ್ತುವುದರಿಂದ ಹೂ ನೀರಿನೊಳಕ್ಕೆ ಪುನಃ ಮುಳುಗುತ್ತದೆ. ಆದರೆ ಮಿರಿಯೋಫಿಲಂ ಗಿಡದಲ್ಲಿ ಪುಷ್ಪಗುಚ್ಛಗಳು ಸದಾ ನೀರಿನ ಮೇಲ್ಭಾಗದಲ್ಲಿರುವುದರಿಂದ ಪರಾಗಸ್ಪರ್ಶ ಗಾಳಿಯ ಮೂಲಕ ನಡೆಯುತ್ತದೆ.

ಜಲಸಸ್ಯಗಳಲ್ಲಿ ಫಲ ಮತ್ತು ಬೀಜಗಳ ಪ್ರಸಾರ ನೀರಿನ ಸಹಾಯದಿಂದ ನಡೆಯುತ್ತದೆ. ನೀರಿನ ಪ್ರವಾಹದಲ್ಲಿ ಸಸ್ಯಗಳ ಬೀಜಕಗಳು ಮಾತ್ರವಲ್ಲದೆ ತೆಂಗು ಮೊದಲಾದವುಗಳ ಫಲಗಳೂ ಕೊಚ್ಚಿಕೊಂಡು ಬೇರೊಂದು ಪ್ರದೇಶಕ್ಕೆ ಸಾಗಿಸಲ್ಪಡುತ್ತವೆ. ಲೆಮ್ನ, ಸಾಲ್ವೀನಿಯ ಮೊದಲಾದವುಗಳಲ್ಲಿ ಇಡೀ ಸಸ್ಯಗಳೇ ಹರಿಯುವ ನೀರಿನೊಂದಿಗೆ ಒಯ್ಯಲ್ಪಡುತ್ತವೆ. ಹೆಚ್ಚಿನ ಹೂಬಿಡುವ ನಾಳೀಯ ಜಲಸಸ್ಯಗಳಲ್ಲಿ ಬೀಜಗಳು ಸುಪ್ತಾವಸ್ಥೆಯಲ್ಲಿರಬಲ್ಲವು. ಇವುಗಳಲ್ಲಿನ ಭ್ರೂಣ ಬಲಿಷ್ಠವಾದ ಅಂಗಾಂಶಗಳ ಬಂಧನದಲ್ಲಿರುವುದರಿಂದ ಇವು ನಾಲ್ಕೈದು ವರ್ಷಗಳ ಅನಂತರವೂ ಮೊಳೆಯಬಲ್ಲವು. ವಾಯುಮಂಡಲದ ಉಷ್ಣಾಂಶ ಮತ್ತು ಆರ್ದ್ರತೆಗಳು ಯಾವ ಪರಿಣಾಮವನ್ನೂ ಬೀರಲಾರವು.

ಜಲಸಸ್ಯಗಳ ವರ್ಗೀಕರಣ: ಆರ್ಬರ್ ಎಂಬಾಕೆ ಹೂಬಿಡುವ ಜಲಸಸ್ಯಗಳನ್ನು ಮುಖ್ಯವಾಗಿ ಬೇರು ಇದೆ ಅಥವಾ ಇಲ್ಲ ಎಂಬ ಆಧಾರದ ಮೇಲೆ ಎರಡು ವರ್ಗಗಳನ್ನಾಗಿ ವಿಂಗಡಿಸಿದ್ದಾರೆ. ಈ ವರ್ಗಗಳನ್ನು ಎಲೆ ಮತ್ತು ಹೂ ಗೊಂಚಲಿನ ಮಾದರಿ, ನೀರಿನ ಮಟ್ಟಕ್ಕನುಸಾರವಾಗಿ ಅವುಗಳ ಸ್ಥಾನ ಮುಂತಾದ ಗುಣಗಳ ಆಧಾರದ ಮೇಲೆ ಉಪವರ್ಗಗಳಾಗಿ ಪುನಃ ವಿಭಾಗಿಸಿದ್ದಾರೆ. ಹೆಜ್ನಿ ಎಂಬವನ ಪ್ರಕಾರ ಜಲಸಸ್ಯಗಳಲ್ಲಿ 3 ಗುಂಪುಗಳಿವೆ: 1. ಯೂಹೈಡ್ರೊಫೈಟ್ಸ್ : ಇದರಲ್ಲಿ ಎಲೆಗಳುಳ್ಳ ಭಾಗಗಳು ನೀರಿನಲ್ಲಿ ಪೂರ್ತಿಯಾಗಿ ಮುಳುಗಿವೆ. ಆದರೆ ಹೂಬಿಡುವ ಭಾಗಗಳು ನೀರಿನಲ್ಲಿ ಮುಳುಗಿರಬಹುದು ಅಥವಾ ನೀರಿನ ಮೇಲ್ಭಾಗದಲ್ಲಿರಬಹುದು. 2 ಹೈಡ್ರಟೋ ಏರೋಫೈಟ್ಸ್ : ಈ ಗುಂಪಿನ ಸಸ್ಯಗಳಲ್ಲಿ ಹೂಗೊಂಚಲಿನ ಭಾಗಗಳು ಸಂಪೂರ್ಣವಾಗಿ ನೀರಿನ ಮೇಲಿರುತ್ತವೆ. ಇನ್ನುಳಿದ ಅಂಗಗಳು ಅರ್ಧಭಾಗ ನೀರಿನ ಕೆಳಕ್ಕೂ ಇನ್ನರ್ಧ ಭಾಗ ನೀರಿನ ಮೇಲಕ್ಕೂ ಇರುತ್ತದೆ. 3 ಟೆನಗೋಫೈಟ್ಸ್: ಇವು ಜಲ, ನೆಲ ಎರಡರ ಮೇಲೂ ವಾಸಿಸಬಲ್ಲವಾದ್ದರಿಂದ ನೀರಿನ ಮಟ್ಟದಲ್ಲಿ ವ್ಯತ್ಯಾಸವಾದರೂ ಬದುಕಬಲ್ಲವು. ಲೂತರ್ ಎಂಬಾತ ಕೊಳ ಕೆರೆಗಳ ತಳದಲ್ಲಿ ಬೇರೂರಿರುವ ಜಲಸಸ್ಯಗಳನ್ನು ರೈಜೋಫೈಟ್ಸ್ ಎಂದೂ, ನಿರ್ಬಂಧಿತವಾಗಿ ತೇಲಾಡುವ ಸಸ್ಯಗಳನ್ನು ಪ್ಲೇನೋಫೈಟ್ಸ್ ಎಂದೂ ಕರೆದರು. ಬ್ರಿಟನ್ನಿನ ಪರಿಸರಶಾಸ್ತ್ರಜ್ಞನಾದ ಟ್ಯಾನ್ಸ್ಲೀ, ಸ್ಪೆನ್ಸ್ ಮೊದಲಾದವರು ಅವುಗಳ ಜೀವನ ಮತ್ತು ಬೆಳವಣಿಗೆಯ ಕ್ರಮವನ್ನನುಸರಿಸಿ ಜಲಸಸ್ಯಗಳನ್ನು ಈ ರೀತಿಯಾಗಿ ವಿಂಗಡಿಸಿರುವರು : (ಅ) ಕೆರೆಕೊಳಗಳ ತಳಭಾಗದಲ್ಲಿ ಬೇರೂರಿರುವ ಜಲಸಸ್ಯಗಳು: ಇವುಗಳಲ್ಲಿ ಮೂರು ವಿಧ : 1. ನೀರಿನಿಂದ ಹೊರಕ್ಕೆ ಬಂದಿರುವ ಜಲಸಸ್ಯಗಳು, 2. ನೀರಿನಲ್ಲಿ ತೇಲಾಡುವ ಸಸ್ಯಗಳು, 3 ಸಂಪೂರ್ಣವಾಗಿ ಮುಳುಗಿರುವ ಸಸ್ಯಗಳು. ಇವುಗಳಲ್ಲಿ ಕಾಂಡದ ತಳಭಾಗ ಪ್ರಕಂದ ಮತ್ತು ಇನ್ನಿತರ ಗೆಡ್ಡೆಗಳ ರೂಪದಲ್ಲಿದೆ.

(ಆ) ಸ್ವತಂತ್ರವಾಗಿ ತೇಲಾಡುವ ಜಲಸಸ್ಯಗಳು : ಇವು ಮಂದಗತಿಯಲ್ಲಿ ಹರಿಯುವ ನೀರಿನಲ್ಲಿ ಬೆಳೆಯುತ್ತವೆ. ಕೆಲವೊಮ್ಮೆ ಬೇರುಗಳು ಹೆಚ್ಚು ಆಳವಿಲ್ಲದ ನೀರಿನಲ್ಲಿ ಬೆಳೆಯಬಲ್ಲವು. ಇವುಗಳ ಸ್ವಾಭಾವಿಕ ನೆಲೆ ಮತ್ತು ದೇಹರಚನೆ ಭಿನ್ನವಾಗಿರುತ್ತವೆ. ಹೂಗೊಂಚಲುಗಳು ಹೆಚ್ಚಾಗಿ ತೇಲುತ್ತಿರುತ್ತವೆ. ಅಥವಾ ನೀರಿನ ಮಟ್ಟಕ್ಕಿಂತ ಮೇಲಕ್ಕೇರುತ್ತವೆ. ಯುಟ್ರಿಕ್ಯುಲೇರಿಯ ಮೊದಲಾದ ಗಿಡಗಳು ಹೂಬಿಡುವ ಕಾಲದಲ್ಲಿ ನೀರಿನ ಮೇಲ್ಮಟ್ಟಕ್ಕೆ ಬಂದು ಅನಂತರ ತಳಭಾಗಕ್ಕೆ ಮುಳುಗುವುದುಂಟು. ಇವುಗಳಲ್ಲಿ ಐದು ವಿಧಗಳಿವೆ: 1. ತೇಲಾಡುವ ಜಲಸಸ್ಯಗಳು: ಇವು ನೀರಿನಲ್ಲಿ ತೇಲಾಡುವ ಇಲ್ಲವೆ ನೀರಿನೊಳಗಿದ್ದರೂ ಸ್ವಲ್ಪಭಾಗ ಹೊರ ವಾತಾವರಣದ ಸಂಪರ್ಕದಲ್ಲಿರುವ ಎಲ್ಲ ಸಸ್ಯಗಳನ್ನೂ ಒಳಗೊಂಡಿವೆ. ಆದರೆ ಇವು ಬೇರುಗಳಿಂದ ಆಧರಿಸಲ್ಪಟ್ಟಿರುವುದಿಲ್ಲ. ಪಿಸ್ಟಿಯ, ಲೆಮ್ನ, ಐಕಾರ್ನಿಯ, ಸಾಲ್ವೀನಿಯ ಮೊದಲಾದವು ಈ ಗುಂಪಿಗೆ ಸೇರಿವೆ. 2. ತೂಗಾಡುತ್ತಿರುವ ಜಲಸಸ್ಯಗಳು: ಇವು ವಾತಾವರಣದ ಸಂಪರ್ಕದಲ್ಲಿಲ್ಲದಿದ್ದರೂ ನೀರಿನ ಮಟ್ಟಕ್ಕೆ ಸರಿಯಾಗಿ ಮುಳುಗುತ್ತವೆ. ಬಾಷ್ಪವಿಸರ್ಜನೆಯ ಅಗತ್ಯವಿಲ್ಲದಿದ್ದರೂ ಇವು ಗಾಳಿ ಬೆಳಕು ಸರಿಯಾಗಿ ದೊರೆಯುವ ನೀರಿನಲ್ಲಿ ಬೆಳೆಯುತ್ತವೆ. 3. ತಳಭಾಗಕ್ಕೆ ಬಂಧಿಸಲ್ಪಟ್ಟಿದ್ದರೂ ತೇಲಾಡುವ ಸಸ್ಯಗಳು : ಇವು ನೀರಿನ ಮೇಲೆ ತೇಲಾಡುತ್ತಿದ್ದರೂ ತಳಭಾಗದ ಕೆಸರು ಮಣ್ಣಿನಲ್ಲಿ ಬೇರುಬಿಟ್ಟಿರುತ್ತವೆ. ಉದಾ : ತಾವರೆ, ಪೊಟಮೊಜೆಟಾನ್ ಮತ್ತು ನೆಪ್ಚೂನಿಯ. 4. ನೀರಿನಲ್ಲಿ ಪೂರ್ತಿ ಮುಳುಗಿ ಬೇರುಬಿಟ್ಟಿರುವ ಜಲಸಸ್ಯಗಳು: ಈ ವಿಭಾಗಕ್ಕೆ ಸೇರಿದ ಜಲಸಸ್ಯಗಳ ಮುಖ್ಯ ಲಕ್ಷಣಗಳೆಂದರೆ ಅಂತರ ಗಿಣ್ಣುಗಳ ವ್ಯಾಪ್ತಿ, ಪ್ಯಾಲಿಸೇಡ್ ಪರೆಂಕಿಮದ ಕೊರತೆ ಮತ್ತು ಎಪಿಡರ್ಮಿಸ್‌ನಲ್ಲಿ ಕ್ಲೋರೋಫಿಲ್ ಇರುವಿಕೆ. ಉದಾಹರಣೆಗೆ : ವ್ಯಾಲಿಸ್ನೇರಿಯ, ಹೈಡ್ರಿಲ, ಮಿರಿಯೋಫಿಲಂ ಮತ್ತು ಯುಟ್ರಿಕ್ಯುಲೇರಿಯ. 5. ಬೇರು ಬಿಟ್ಟಿರುವ ಉಭಯವಾಸಿಗಳು. ಈ ಗುಂಪಿನ ಸಸ್ಯಗಳು ಹೆಚ್ಚು ಆಳವಿಲ್ಲದ ನೀರಿನಲ್ಲಿ ಬೆಳೆಯುತ್ತವೆ. ಗಿಡದ ತಳಭಾಗ ನೀರಿನಲ್ಲಿ ಅಥವಾ ಕೆಸರುಮಣ್ಣಿನಲ್ಲಿಯೂ ಗಿಡದ ಮೇಲ್ಭಾಗ ನೀರಿನ ಮಟ್ಟಕ್ಕಿಂತ ಬಹಳ ಎತ್ತರದಲ್ಲಿಯೂ ಇರುತ್ತದೆ. ಇವಕ್ಕೆ ಹ್ಯಾಲೋಫೈಟ್ಸ್ ಎಂಬ ಹೆಸರೂ ಇದೆ. ಇವು ಜಲ ಹಾಗೂ ಭೂಮಿಯ ವಾತಾವರಣಗಳಿಗೆ ಹೊಂದಿಕೊಳ್ಳುವಂತೆ ರಚಿಸಲ್ಪಟ್ಟಿವೆ. ಜೌಗು ಪ್ರದೇಶಗಳಲ್ಲಿ ಬೆಳೆಯುವ ಸಸ್ಯಗಳಾದ ರೈಜ಼ೋಫೊರ, ಅವಿಸೀನಿಯ ಮೊದಲಾದವುಗಳಲ್ಲಿ ವಿಶೇಷ ರೀತಿಯ ಬೇರುಗಳು ಮಣ್ಣಿನಿಂದ ಮೇಲಕ್ಕೆ ಬೆಳೆಯುವುವು. ಇವಕ್ಕೆ ನ್ಯೂಮಟೋಫೋರ್ಸ್ ಎಂದು ಹೆಸರು. ಈ ಬೇರುಗಳಲ್ಲಿ ಆಕ್ಸಿಜನ್ ಸರಬರಾಜಿಗೆ ಅನುಕೂಲವಾಗುವಂತೆ ಸಣ್ಣ ಸಣ್ಣ ರಂಧ್ರಗಳುಂಟು.

ಅನೇಕ ಜಲಸಸ್ಯಗಳಲ್ಲಿ ಒಂದು ಬಗೆಯ ಸಹವಾಸವನ್ನು ಪ್ರದರ್ಶಿಸುತ್ತವೆ. ಉದಾಹರಣೆಗೆ ಐಕಾರ್ನಿಯ–ಪೊಟಮೊಜೆಟಾನ್, ಹೈಡ್ರಿಲ್ಲ–ವ್ಯಾಲಿಸ್ನೇರಿಯ, ಎರಿಯೋಕಾಲಾನ್–ಡ್ರಾಸಿರ ಮುಂತಾದವು ಒಟ್ಟೊಟ್ಟಿಗೆ ಒಂದೇ ಜಾಗದಲ್ಲಿ ಬೆಳೆಯುವುದು ಕಂಡುಬರುತ್ತದೆ. ಜಲಸಸ್ಯಗಳಲ್ಲಿ ಶೇ. 25–30 ಸ್ಥಳೀಯ(ಎಂಡೆಮಿಕ್) ಪ್ರಭೇದಗಳುಂಟು. ಪ್ರಾಯಶಃ ಅವು ಬೆಳೆಯುವ ಮಣ್ಣಿನ ಕೆಲವು ವಿಶೇಷ ಗುಣಗಳೇ ಇದಕ್ಕೆ ಕಾರಣವಿರಬಹುದು. ಉದಾಹರಣೆಗೆ ಕೆಲವು ಸ್ಥಳಿಕ ಜಲಸಸ್ಯಗಳಾದ ಪೋಡಾಸ್ಟಮೇಸೀ ಕುಟುಂಬದ ಗಿಡಗಳು ಹೆಚ್ಚಾಗಿ ಉಷ್ಣ ಪ್ರದೇಶಗಳಲ್ಲಿ ಮಾತ್ರ ಸೀಮಿತವಾಗಿವೆ. ಈ ಕುಟುಂಬಕ್ಕೆ ಸೇರಿದ ಎಲ್ಲ ಸಸ್ಯಗಳು ಬೇರು, ಕಾಂಡ ಇತ್ಯಾದಿ ಭಾಗಗಳಿಲ್ಲದ ಥ್ಯಾಲಾಯ್ಡ್ ರೀತಿಯ ರಚನೆಯನ್ನು ಪಡೆದಿವೆ. ಇವುಗಳು ನೀಳವಾಗಿದ್ದು ಅಥವಾ ಅಗಲವಾಗಿದ್ದು ನೀರಿನಲ್ಲಿ ತೇಲಾಡುತ್ತಿರುತ್ತವೆ. ಭಾರತ ಮತ್ತು ಶ್ರೀಲಂಕಾಗಳಲ್ಲಿ ಸ್ಥಳಿಕ ಜಲಸಸ್ಯಗಳ ವ್ಯಾಪ್ತಿ ಅಧಿಕವಾಗಿರುವುದಕ್ಕೆ ಕಾರಣ ಅಲ್ಲಿನ ಉಷ್ಣ ವಲಯದ ಮಳೆಯ ಕಾಡುಗಳು ಮತ್ತು ಕರಾವಳಿಯ ತಗ್ಗುಪ್ರದೇಶಗಳು. (ಎಸ್.ಡಿ.ಕೆ.)

ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಷಯ ವಿಶ್ವಕೋಶ

# ಕರ್ನಾಟಕ

## ಅ

**ಅಂಕೋಲ :** ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಶಿರಸಿ, ದಕ್ಷಿಣದಲ್ಲಿ ಕುಮಟ, ಉತ್ತರದಲ್ಲಿ ಕಾರವಾರ ಮತ್ತು ಯಲ್ಲಾಪುರ ತಾಲ್ಲೂಕುಗಳು ಈ ತಾಲ್ಲೂಕನ್ನು ಸುತ್ತುವರೆದಿವೆ. ಬೇಲೆಕೇರಿ, ಬಾಳಲೆ ಮತ್ತು ಭಾಸಗೋಡ ಇದರ ಹೋಬಳಿಗಳು. ತಾಲ್ಲೂಕಿನಲ್ಲಿ 86 ಗ್ರಾಮಗಳಿವೆ. ವಿಸ್ತೀರ್ಣ 971 ಚ.ಕಿಮೀ. ಜನಸಂಖ್ಯೆ 1,01,540.

ತಾಲ್ಲೂಕಿನ ತೀರಪ್ರದೇಶ ಮರಳು ಭೂಮಿ. ಉಳಿದ ಭೂಭಾಗ ಕೆಂಪು ಜಂಬುಮಣ್ಣಿನಿಂದ ಕೂಡಿದೆ. ಮಳೆ ಹೆಚ್ಚು. ವಾರ್ಷಿಕ ಸರಾಸರಿ 3,405ಮಿಮೀ. ಬೇಡ್ತಿ ಅಥವಾ ಗಂಗಾವಳಿ ನದಿ ಈ ತಾಲ್ಲೂಕಿನ ಮಧ್ಯದಲ್ಲಿ ಈಶಾನ್ಯದಿಂದ ನೈಋತ್ಯಕ್ಕೆ ಹರಿದು ಅಂಕೋಲದ ದಕ್ಷಿಣದಲ್ಲಿ ಅರಬ್ಬಿ ಸಮುದ್ರಕ್ಕೆ ಸೇರುವುದು. ಅಂಕೋಲದ ಬಳಿ ಅಂಕೋಲ ನದಿ ಇದೆ. ಇದರ ಪೂರ್ವ ಭಾಗವನ್ನು ಶಂಕದ ಹೊಳೆ ಎಂದು ಕರೆಯುತ್ತಾರೆ. ಇದರ ಉತ್ತರದಲ್ಲಿ ಬೇಲೆಕೇರಿ ನದಿ ಹರಿಯುವುದು. ಈ ನದಿಗಳು ತಾಲ್ಲೂಕಿನ ಬಹುತೇಕ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಹರಿಯುವುದರಿಂದ ನೀರಾವರಿಗೆ ಹೆಚ್ಚು ಉಪಯುಕ್ತವಾಗಿಲ್ಲ. ಮಳೆನೀರಿನಿಂದ ಆಬಾದಾಗುವ ಅನೇಕ ತೋಟ ಗದ್ದೆಗಳಿವೆ. ಇಲ್ಲಿರುವ ಕೆಲವು ಬಾವಿಗಳಿಂದಲೂ ವ್ಯವಸಾಯಕ್ಕೆ ನೀರು ಒದಗುತ್ತದೆ. ಬತ್ತ, ಅಡಕೆ ಇಲ್ಲಿಯ ಮುಖ್ಯ ಬೆಳೆಗಳು. ತಾಲ್ಲೂಕಿನ ತೀರ ಪ್ರದೇಶ ಬಿಟ್ಟು ಅದರ ಪಕ್ಕದಲ್ಲೆ ಸಾಗುವ ಸುಮಾರು 5ರಿಂದ 8ಕಿಮೀ ಅಗಲದ ಒಳನಾಡ ಪ್ರದೇಶ ಬತ್ತದ ಗದ್ದೆಗಳಿಂದ, ಮಾವಿನ ತೋಪುಗಳಿಂದ ಗೇರು ಹಲಸು ಮತ್ತು ಇತರ ಫಲವೃಕ್ಷಗಳಿಂದ ಕೂಡಿದೆ. ಇದರ ಪಕ್ಕದ ಸಣ್ಣ ಗುಡ್ಡಪ್ರದೇಶದಲ್ಲಿ ಹುಲ್ಲು ಬೆಳೆಯುತ್ತದೆ. ಇವುಗಳ ಪೂರ್ವಕ್ಕೆ ಎತ್ತರವಾದ ದಟ್ಟ ಕಾಡುಗಳಿಂದ ಕೂಡಿದ ಬೆಟ್ಟ ಪ್ರದೇಶವಿದೆ. ಒಟ್ಟು 75,374 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಇಲ್ಲಿನ ಕಾಡುಗಳಲ್ಲಿ ಬೆಲೆಬಾಳುವ ಮತ್ತಿ, ಹೊನ್ನೆ, ನಂದಿ ಮುಂತಾದ ಮರಗಳು ಬೆಳೆಯುತ್ತವೆ. ತೀರಪ್ರದೇಶದಲ್ಲಿ ತೆಂಗಿನ ಮರಗಳಿವೆ. ಇಲ್ಲಿನ ಕೆಲವು ಗ್ರಾಮಗಳು ಆರೋಗ್ಯದಾಯಕವೆಂದು ಪರಿಗಣಿತವಾಗಿವೆ. ಗಂಗಾವಳಿ ನದಿಯಲ್ಲಿ ಕೆಲವು ಕಿಮೀ ದೂರ ಸಣ್ಣ ದೋಣಿಗಳ ಸಂಚಾರ ಉಂಟು.

ಮಹಾಮಾಯ ದೇವಾಲಯ

ಕಾರವಾರ, ಹೊನ್ನಾವರ, ಮಂಗಳೂರುಗಳೊಡನೆ ಈ ತಾಲ್ಲೂಕು ಸಂಪರ್ಕ ಹೊಂದಿದೆ. ಅಂಕೋಲ ಪಟ್ಟಣದ ಉತ್ತರಕ್ಕೆ 8ಕಿಮೀ ದೂರದಲ್ಲಿರುವ ಅವರ್ಸೆ ಗ್ರಾಮದಲ್ಲಿ ಕಾತ್ಯಾಯಿನಿ ದೇವಾಲಯವಿದೆ. ಇಲ್ಲಿಯ ವಿಗ್ರಹ ಸಮುದ್ರದಲ್ಲಿ ದೊರೆತದ್ದೆಂದು ಪ್ರತೀತಿಯುಂಟು. ನವರಾತ್ರಿಯ ಒಂಬತ್ತು ದಿನಗಳೂ ಇಲ್ಲಿ ಜಾತ್ರೆ ನಡೆಯುವುದು. ಅಂಕೋಲದ ಉತ್ತರಕ್ಕೆ ಸುಮಾರು 6ಕಿಮೀ ದೂರದಲ್ಲಿ ಬೇಲೆಕೇರಿ ನದಿಯ ದಡದಲ್ಲಿರುವ ಬಂದರು, ಬೇಲೆಕೇರಿ ಗ್ರಾಮ. ಇದೊಂದು ಆರೋಗ್ಯಧಾಮವೆಂದು ಪ್ರಸಿದ್ಧವಾಗಿದೆ. ಅಂಕೋಲದ ದಕ್ಷಿಣಕ್ಕೆ 8ಕಿಮೀ

ದೂರದಲ್ಲಿರುವ ಗಂಗಾವಳಿಗ್ರಾಮ ಗಂಗಾವಳಿ ನದಿಯ ದಡದಲ್ಲಿದೆ. ಇಲ್ಲಿರುವ ಗಂಗೆ ದೇವಾಲಯ ಪ್ರಸಿದ್ಧ. ಗಂಗಾಷ್ಟಮಿಯಂದು ಇಲ್ಲಿ ಜಾತ್ರೆ ನಡೆಯುವುದು. ಗಂಗಾವಳಿ ಗ್ರಾಮಕ್ಕೆದುರಾಗಿ ನದಿಯ ಉತ್ತರ ದಂಡೆಯ ಮೇಲೆ ಪ್ರಕೃತಿ ಸೌಂದರ್ಯದಿಂದ ಕೂಡಿದ ಮಂಜುಗುಣಿ ಗ್ರಾಮವಿದೆ.

ಈ ತಾಲ್ಲೂಕಿನ ಆಡಳಿತ ಕೇಂದ್ರ ಅಂಕೋಲ. ಜನಸಂಖ್ಯೆ 14,306. ಕಾರವಾರಕ್ಕೆ ಆಗ್ನೇಯದಲ್ಲಿ 24ಕಿಮೀ. ದೂರದಲ್ಲಿ ಸಮುದ್ರತೀರದಿಂದ ಸುಮಾರು 3ಕಿಮೀ ಅಂತರದಲ್ಲಿದೆ. ಇಲ್ಲಿಯ ಜನರ ಮುಖ್ಯ ಉದ್ಯೋಗ ವ್ಯವಸಾಯ, ವ್ಯಾಪಾರ ಮತ್ತು ಕೂಲಿಯ ದುಡಿಮೆ. ಅಂಕೋಲಪಟ್ಟಣ ಮುಂಬಯಿ ಮತ್ತು ಹುಬ್ಬಳ್ಳಿಯಿಂದ ಬರುವ ವಸ್ತುಗಳ ಮಾರುಕಟ್ಟೆ. ಅಕ್ಕಿ, ತೆಂಗು, ಅಡಕೆ, ಹೊಗೆಸೊಪ್ಪು ಮುಂತಾದವುಗಳ ವ್ಯಾಪಾರವೂ ನಡೆಯುವುದು.

ಅಂಕೋಲ ಒಂದು ಐತಿಹಾಸಿಕ ಸ್ಥಳ. ಪಟ್ಟಣದ ಪೂರ್ವಕ್ಕೆ ಸ್ವಲ್ಪ ಎತ್ತರದಲ್ಲಿ ವೃತ್ತಾಕಾರವಾದ ಶಿಥಿಲ ಕೋಟೆಯಿದೆ. ಸುಮಾರು 548ಮೀ ಸುತ್ತಳತೆಯುಳ್ಳ ಈ ಕೋಟೆಯ ಸುತ್ತ 4ಮೀ ಅಗಲ 4ಮೀ ಆಳದ ಕಂದಕವಿದೆ. ಇದನ್ನು ಬಳಸಿ ಮಾವು, ಗೋಡಂಬಿ, ಹಲಸು ಮುಂತಾದ ಫಲವೃಕ್ಷಗಳನ್ನು ಬೆಳೆಸಲಾಗಿದೆ. ಈ ಕೋಟೆಯನ್ನು ಸೋದೆಯ ದೊರೆ ಅಂಕೋಲದಲ್ಲಿ ವಾಸವಾಗಿದ್ದ ತನ್ನ ಪ್ರೇಯಸಿಗಾಗಿ ಕಟ್ಟಿಸಿದನೆಂದು ಪ್ರತೀತಿ. ಇಲ್ಲಿ ಮಹಾಮಾಯ, ಆರ್ಯದುರ್ಗಾ, ಕುಂಡೋದರಿ, ಶಾಂತಾದುರ್ಗಾ, ಕಾಳಮ್ಮ, ದತ್ತಾತ್ರೇಯ ಮೊದಲಾದ ದೇವಾಲಯಗಳಿವೆ. ಮಹಾಮಾಯ ಮತ್ತು ಕುಂಡೋದರಿ ದೇವಾಲಯಗಳು 16ನೆಯ ಶತಮಾನದಲ್ಲಿ ನಿರ್ಮಾಣಗೊಂಡವು. ಇಲ್ಲಿಯ ಕೋಟೇಶ್ವರ ಅಥವಾ ರುದ್ರೇಶ್ವರ ದೇವಾಲಯದ ಹತ್ತಿರ ಒಂದು ಕೊಳವೂ ಒಂದು ರೋಮನ್ ಕ್ಯಾತೊಲಿಕ್ ಇಗರ್ಜಿಯೂ ಇವೆ. 1540ರ ಸುಮಾರಿನಲ್ಲಿ ಈ ಊರು ಪೋರ್ಚುಗೀಸರ ವಶದಲ್ಲಿತ್ತು. ಆ ಕಾಲದಲ್ಲಿ ಅಂಕೋಲದ ಮೂಲಕ ಖನಿಜ ಮತ್ತು ಬಟ್ಟೆಗಳ ವ್ಯಾಪಾರ ನಡೆಯುತ್ತಿತ್ತು. 1567ರಲ್ಲಿ ವೆನಿಸ್ಸಿನ ಪ್ರಸಿದ್ಧ ವ್ಯಾಪಾರಿಯಾದ ಸೀಸರ್ ಫ್ರೆಡರಿಕ್ ಅಂಕೋಲಕ್ಕೆ ಭೇಟಿಕೊಟ್ಟಿದ್ದ.ಬಿಜಾಪುರದ ರಾಜಪ್ರತಿನಿಧಿಯಾಗಿದ್ದ ಷರೀಫ್-ಉಚಲ್-ಮುಲ್ಕ್ 16ನೆಯ ಶತಮಾನದ ಕೊನೆಯಲ್ಲಿ ಅಂಕೋಲವನ್ನು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದ. 1676ರಲ್ಲಿ ಶಿವಾಜಿಯ ಸೇನೆ ಅಂಕೋಲದ ಅರ್ಧಭಾಗವನ್ನು ನಾಶಗೊಳಿಸಿತು. 1730ರಲ್ಲಿ ಅಂಕೋಲ ಸೋದೆ ರಾಜ್ಯದ ಬಂದರಾಗಿತ್ತೆಂದು ಹ್ಯಾಮಿಲ್ಟನ್ನನ ಬರೆವಣಿಗೆಯಲ್ಲಿ ಉಲ್ಲೇಖವಿದೆ. ಅಂಕೋಲ ಮೊದಲು ಕುಮಟ ತಾಲ್ಲೂಕಿನ ಭಾಗವಾಗಿತ್ತು. 1880ರಲ್ಲಿ ಇದನ್ನು ಪ್ರತ್ಯೇಕ ತಾಲ್ಲೂಕನ್ನಾಗಿ ಮಾಡಲಾಯಿತು. *

**ಅಂಗಡಿ :** ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಒಂದು ಹಳ್ಳಿ. ಘಟ್ಟದಿಂದ ಕರಾವಳಿಗೆ ಹೋಗುವ ಮಾರ್ಗದ ಮಧ್ಯದಲ್ಲಿರುವ ಈ ಸ್ಥಳದಲ್ಲಿದ್ದ ಅಂಗಡಿಗಳಿಂದಾಗಿ ಇದಕ್ಕೆ ಈ ಹೆಸರು ಬಂದಿದೆಯೆಂದು ಊಹಿಸಲಾಗಿದೆ. 11-12ನೆಯ ಶತಮಾನದ ಶಾಸನಗಳಲ್ಲಿ ಇದನ್ನು ಸೊಸವೂರು ಎಂದು ಕರೆದಿದೆ. ಬುಕ್ಕರಾಯನ ಕಾಲದಲ್ಲೂ (1359) ಇದೇ ಹೆಸರಿತ್ತು. ಆದರೆ ಅಚ್ಯುತರಾಯನ ಕಾಲದ ಹೊತ್ತಿಗೆ (1539) ಅಂಗಡಿ ಎಂಬ ಹೆಸರು ಪ್ರಚಾರಕ್ಕೆ ಬಂದಿತ್ತು. ವಿಷ್ಣುವರ್ಧನನ ಕಾಲದ ಶಶಪುರ, ಶಶಕಪುರ ಎಂಬ ಹೆಸರುಗಳೂ ಈ ಊರನ್ನೇ ನಿರ್ದೇಶಿಸುತ್ತವೆ.

ಈ ಸೊಸವೂರು ಹೊಯ್ಸಳರ ಮೂಲಸ್ಥಾನವಾಗಿತ್ತು. ಸಳ ಇಲ್ಲಿ ಹುಲಿಯನ್ನು ಕೊಂದು ಹೊಯ್ಸಳ ವಂಶದ ಹೆಸರಿಗೆ ಕಾರಣನಾದ ಎಂದು ಅನೇಕ ಶಾಸನಗಳು ತಿಳಿಸುತ್ತವೆ (ನೋಡಿ:ಸಳ). ನೃಪಕಾಮ ಸೊಸವೂರಿನಿಂದ ಆಳುತ್ತಿದ್ದ. ಇವನ ಮಗ ವಿನಯಾದಿತ್ಯ ತನ್ನ ರಾಜಧಾನಿಯನ್ನು ದೋರಸಮುದ್ರಕ್ಕೆ ಬದಲಾಯಿಸಿದಂತೆ ತೋರುತ್ತದೆ. ಮುಂದೆ ಬಂದ ಹಲವು ಹೊಯ್ಸಳ ಅರಸರು ತಮ್ಮ ಪೂರ್ವಜರ ಹುಟ್ಟೂರಾದ ಅಂಗಡಿಗೆ ಹೋಗಿ ಬರುತ್ತಿದ್ದರೆಂದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಹೊಯ್ಸಳರ ಕುಲದೇವತೆಯಾದ ವಾಸಂತಿಕಾ ದೇವಿಯೇ ಇಲ್ಲಿನ ಮುಖ್ಯ ದೇವತೆಯಾದ ವಸಂತಮ್ಮ ಎಂದು ಹೇಳಲಾಗಿದೆ. ಅನೇಕ ಜೈನಯತಿಗಳು ಇಲ್ಲಿದ್ದು ಬಸದಿಗಳನ್ನು ಕಟ್ಟಿಸಿದ್ದರೆಂಬುದಕ್ಕೂ ಶಾಸನಾಧಾರಗಳಿವೆ. ಅಂಗಡಿಯ ಪಕ್ಕದಲ್ಲಿರುವ ಉಗ್ಗೇಹಳ್ಳಿಯಲ್ಲಿ ಕೋಟೆಹರವೆಂಬ ಪ್ರದೇಶವಿದೆ. ಇಲ್ಲಿರುವ ಒಂದು ಶಾಸನ ರಾಚಮಲ್ಲಪೆರ್ಮಾನಡಿಕಾಮ ಹೊಯ್ಸಳನ ಕಾಲದ್ದು.

ಇಲ್ಲಿರುವ ವಾಸಂತಿಕಾ ಗುಡಿ ಹೆಂಚು ಹೊದಿಸಿರುವ ಈಚಿನ ಕಟ್ಟಡ. ಒಳಗೆ ಐದು ದೇವಿಯರ ಮೃಣ್ಮೂರ್ತಿಗಳಿವೆ. ಅವಕ್ಕೆ ಪಂಚಮುಖ ಅಥವಾ ತ್ರಿಮುಖಗಳಿವೆ. ಅವು ಶಕ್ತಿದೇವತೆಗಳಿಗೆ ವಿಶಿಷ್ಟವಾದ ಆಯುಧಗಳನ್ನು ಹಿಡಿದಿವೆ. ಇಲ್ಲಿ ಸು.10-11ನೆಯ ಶತಮಾನದ ಎರಡು

ಪಾಳು ದೇವಾಲಯಗಳು

ಜೈನಬಸದಿಗಳ ಅವಶೇಷಗಳುಂಟು. ಇಲ್ಲಿರುವ ಕೇಶವ, ವೀರಭದ್ರ ಮತ್ತು ಶಿವ ದೇವಾಲಯಗಳೂ ಶಿಥಿಲವಾಗಿವೆ. ಕೇಶವ ದೇವಾಲಯದ ಮೂರ್ತಿ ಒಂದು ಉತ್ತಮ ಹೊಯ್ಸಳ ಶಿಲ್ಪ. (ಎಂ.ಎಚ್.)

**ಅಂಚನ್, ಎಲ್.ಪಿ:** 1927-97. ಸುಪ್ರಸಿದ್ಧ ಲೋಹಶಿಲ್ಪಿ. ಲಿಂಗಪ್ಪ ಅಂಚನ್ ಇವರ ಪೂರ್ಣ ಹೆಸರು. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಲ್ಲಿ ಬಡ ಕುಟುಂಬವೊಂದರಲ್ಲಿ ಜನಿಸಿದರು. ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಚಿತ್ರಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡರು. ಎಸ್.ಎಸ್.ಎಲ್.ಸಿ. ಓದುತ್ತಿರುವಾಗ ತಾವೊಬ್ಬ ಕಲಾವಿದನಾಗಬೇಕೆಂದು ಬಯಸಿದರು. ಇದಕ್ಕೆ ಮನೆಯವರ ವಿರೋಧ ವ್ಯಕ್ತವಾದಾಗ ಓದನ್ನು ಬಿಟ್ಟು ಮುಂಬಯಿಗೆ ಹೋದರು.

ಮುಂಬಯಿಯಲ್ಲಿ ಹೆಸರಾಂತ ಕಲಾವಿದ ಜೆ.ಎಸ್. ದಂಡಾವತಿ ಅವರ ನೂತನ ಕಲಾಮಂದಿರ ಸೇರಿದರು (1945). ಅನಂತರ ಜೆ.ಜೆ. ಕಲಾ ಶಾಲೆಯಲ್ಲಿ ಅಭ್ಯಾಸ ಮಾಡಿ ಡಿಪ್ಲೊಮಾ ಪಡೆದರು (1957). ಕೆಲಕಾಲ ಮುಂಬಯಿಯಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ



ಮುಂಬಯಿಯಿಂದ ಬೆಂಗಳೂರಿಗೆ ಬಂದರು. ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಲೇ ಔಟ್ ಕಲಾವಿದರಾಗಿ ಕೆಲಸಕ್ಕೆ ಸೇರಿದರು. ಈ ವೃತ್ತಿ ಜೀವನ ಇವರಿಗೆ ತೃಪ್ತಿ ನೀಡಲಿಲ್ಲ. ಅನಂತರ ವಿಶ್ವೇಶ್ವರಯ್ಯ ತಾಂತ್ರಿಕ ವಸ್ತು ಸಂಗ್ರಹಾಲಯದಲ್ಲಿ ನೇಮಕಗೊಂಡರು. ಅಲ್ಲಿ ವಸ್ತು ವಿನ್ಯಾಸ ರಚನೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡರು. 1985ರಲ್ಲಿ ಈ ಹುದ್ದೆಯಿಂದ ನಿವೃತ್ತರಾದರು. ಲೋಹದ ತಗಡುಗಳಿಂದ ಶಿಲ್ಪರಚನೆ ಇವರ ಕಲಾವೈಶಿಷ್ಟ್ಯ. ಇವರು ರಚಿಸಿದ ಕಲಾಕೃತಿಗಳಲ್ಲಿ ಬಹುಪಾಲು ಮೂರ್ತಿಶಿಲ್ಪಗಳಾಗಿವೆ. ಇವರ ಕಲಾಕೃತಿಗಳು

ಕ್ಯೂಬಿಸಂನಿಂದ ಹೆಚ್ಚು ಪ್ರಭಾವಿತವಾಗಿವೆ. ಮುಖವಾಡದ ಕಲಾಕೃತಿಗಳನ್ನೂ ಇವರು ರಚಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಲಾ ಪ್ರದರ್ಶನಗಳಲ್ಲಿ ಇವರ ಶಿಲ್ಪಗಳು ಪ್ರದರ್ಶನಗೊಂಡಿವೆ.

ಇವರಿಗೆ ಅನೇಕ ಪ್ರಶಸ್ತಿ - ಗೌರವಗಳು ಲಭಿಸಿವೆ. ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಎರಡು ಬಾರಿ ಪಡೆದ ಹೆಗ್ಗಳಿಕೆ ಇವರದು (1969 ಮತ್ತು 1981). ಮೈಸೂರು ದಸರ ಕಲಾ ಪ್ರದರ್ಶನ ಬಹುಮಾನ (1981), ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1984) - ಇವು ಇವರಿಗೆ ದೊರೆತ ಪ್ರಶಸ್ತಿಗಳಲ್ಲಿ ಮುಖ್ಯವಾದವು. ಇವರ ಕಲಾಕೃತಿಗಳು ದೇಶ ವಿದೇಶಗಳ ಕಲಾ ಗ್ಯಾಲರಿಗಳಲ್ಲಿ ಪ್ರದರ್ಶಿಸಲ್ಪಟ್ಟಿವೆ. ಇವರು 1997ರಲ್ಲಿ ನಿಧನರಾದರು. *

**ಅಂಟಿಕೆ ಪಂಟಿಕೆ :** ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರಚಾರದಲ್ಲಿರುವ ಒಂದು ಜನಪದ ಸಂಪ್ರದಾಯ. ಇದಕ್ಕೆ ಹಬ್ಬ ಹಾಡುವುದು, ದೀಪ ನೀಡುವುದು ಎಂಬ ಹೆಸರುಗಳೂ ಇವೆ.

ದೀಪದಕುಡಿ ವಿನಿಮಯ

ತೀರ್ಥಹಳ್ಳಿಯ ಸುತ್ತಮುತ್ತ ಮಾತ್ರ ಇದಕ್ಕೆ ಅಂಟಿಕೆಪಂಟಿಕೆ ಎನ್ನುತ್ತಾರೆ. ದೀಪಾವಳಿಯ ಬಲಿಪಾಡ್ಯಮಿ ದಿನದಿಂದ ಹಿಡಿದು ಮೂರು ದಿನಗಳವರೆಗೆ ಹಳ್ಳಿಯ ರೈತರು (ಒಕ್ಕಲಿಗರು, ದೀವರು, ಹಸಲರು ಮುಂತಾದ ವರ್ಗಗಳವರು) ಮನೆಮನೆಗೂ ದೀಪಾವಳಿಯ ಬೆಳಕಿನ ದಿವ್ಯ ಸಂದೇಶವನ್ನು ಒಯ್ಯುತ್ತ ಜ್ಯೋತಿ ಹಚ್ಚಿ ಹೀಗೆ ಹಾಡುತ್ತಾರೆ: 'ಮಣ್ಣಿಲಿ ಹುಟ್ಟಿದೆ, ಮಣ್ಣಿಲಿ ಬೆಳೆದೆ, ಎಣ್ಣೇಲಿ ಕಣ್ಣಬಿಟ್ಟಽದೆ- ಎಣ್ಣೇಲಿ ಕಣ್ಣಬಿಟ್ಟಽದೆ ಜಗಜ್ಯೋತಿ ನಾ ಸತ್ಯದಿಂದುರಿಯೆ ಜಗಜ್ಯೋತಿ.' ಒಂದೊಂದು ಸೀಮೆಯಲ್ಲೂ (3-4 ಹಳ್ಳಿಗಳ ಗುಂಪು) 4ರಿಂದ 6 ಜನರಿರುವ ಹಲವು ತಂಡಗಳು ಹಬ್ಬಹಾಡಲು ಹೋಗುವುದುಂಟು. ಆ ದಿನ ರಾತ್ರಿ ಆ ಸೀಮೆಯ ದೇವಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ಹಣತೆ ಹಚ್ಚಿಕೊಂಡು ಹಾದಿಯುದ್ದಕ್ಕೂ ಹಾಡುತ್ತಲೇ ಮನೆಮನೆಗೂ ಹೋಗುತ್ತಾರೆ. ಒಂದೊಂದು ಮನೆಯ ಮುಂದೂ 'ಬಾಗಿಲತೆಗಿರವ್ವಾ ಭಾಗ್ಯದ ಲಕ್ಷ್ಮಮ್ಮ ಜ್ಯೋತ್ಯಮ್ಮನೊಳಗೆ ಕರಕೊಳ್ಳಿ' ಎಂದೂ 'ಮುಳ್ಳಾಗೆ ಕಲ್ಲಾಗೆ ಬಂದೇವಯ್ಯಾ, ತಂದೀವಿ ದೀಪಾನ ಕೊಳ್ಳೀರಯ್ಯಾ' ಮುಂತಾಗಿ ಹಾಡಿ ಬಾಗಿಲ ತೆಗೆಸಿ 'ಜ್ಯೋತಿಗೆಣ್ಣೆಯನೆರೆಯ ಬನ್ನಿ' ಎಂಬಂಥ ಹಾಡು ಹೇಳಿ ತಮ್ಮ ಹಣತೆಯಿಂದ ಅವರಿಗೆ ದೀಪದ ಕುಡಿ ಕೊಡುತ್ತಾರೆ. ಅನಂತರ ಮನೆಯ ಜಗಲಿಯನ್ನೇರಿ ಅರ್ಜುನಜೋಗಿ ಹಾಡು, ಉತ್ತರದೇವಿ ಹಾಡು, ತೆರೆಅಳಿಯುವ ಹಾಡು, ಕರು ಅಗಚುವ ಹಾಡು ಇತ್ಯಾದಿ ದೀರ್ಘ ಗೀತೆಗಳನ್ನು ಒಕ್ಕೊರಲಿನಿಂದ ಹಾಡುತ್ತಾರೆ. ಕೊನೆಯಲ್ಲಿ ಮಂಗಳಗೀತೆ ಹೇಳುತ್ತಾರೆ. ಹಾಡುಗಳಲ್ಲಿ ಹೆಚ್ಚಿನವು ತ್ರಿಪದಿ, ಉಳಿದವು ದ್ವಿಪದಿ, ಚೌಪದಿ ಮುಂತಾದ ಸರಳ ರಚನೆಗಳು. ಅಪರೂಪವಾಗಿ ಲಾವಣಿ ಅಥವಾ ಕೋಲಾಟದ ಮಟ್ಟುಗಳೂ ಇರುತ್ತವೆ. ಹಾಡುವಾಗ ಜೊತೆಗೆ ಯಾವುದೇ ವಾದ್ಯ ಇರುವುದಿಲ್ಲ. ಕಥನಗೀತೆಗಳಲ್ಲಿ ಸಾಮಾನ್ಯವಾಗಿ ಶಿವನ, ಶಿವಭಕ್ತರ, ಅಪರೂಪವಾಗಿ ಐತಿಹಾಸಿಕ, ಕೌಟುಂಬಿಕ ಕಥೆಗಳೂ ಸೇರಿರುತ್ತವೆ. ಹಾಡುವವರಿಗೆ ಮನೆಮನೆಯಲ್ಲೂ ದೀಪಕ್ಕೆ ಎಣ್ಣೆ, ಬಟ್ಟೆ, ಅಕ್ಕಿ, ಹಣ್ಣು, ತೆಂಗಿನಕಾಯಿ, ಹಬ್ಬದತಿಂಡಿ, ಚಿಲ್ಲರೆ ಹಣ ಕೊಡುತ್ತಾರೆ. ಹೀಗೆ ಮೂರು ರಾತ್ರಿಯ ಪರ್ಯಂತ ದೀಪ ನೀಡುವುದು ನಡೆಯುತ್ತದೆ. ಮೂರು ದಿನವಾದಮೇಲೆ ಬತ್ತಿಯನ್ನು ಹಣತೆಯಿಂದ ತೆಗೆದು ಹಲಸಿನ ಮರದ ಕೊಂಬೆಯ ಮೇಲಿಟ್ಟು ಅದಕ್ಕೆ ಕೈ ಮುಗಿಯುತ್ತಾರೆ. ವಸೂಲಿಯಿಂದ ಬಂದ ಹಣದಿಂದ ಊರಿನವರನ್ನೂ ಆಹ್ವಾನಿಸಿ ಅಂಟಿಕೆ ಪಂಟಿಕೆ ಔತಣ ಮಾಡಿಕೊಂಡು ವನಭೋಜನ ಮಾಡುತ್ತಾರೆ. **(ಕೆ.ವಿ.ಎಸ್.)**

**ಅಂದಾನಪ್ಪ ದೊಡ್ಡಮೇಟಿ :** 1908-72. ಕರ್ನಾಟಕ ಏಕೀಕರಣಕ್ಕಾಗಿ ದುಡಿದ ರಾಜಕಾರಣಿ. ಇಂದಿನ ಗದಗ ಜಿಲ್ಲೆಯ ಗದಗ ತಾಲ್ಲೂಕಿನ ಜಕ್ಕಲಿ ಗ್ರಾಮದಲ್ಲಿ 1908 ಮಾರ್ಚ್ 8ರಂದು ಜನಿಸಿದರು. ಚಿಕ್ಕಂದಿನಲ್ಲಿ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು. 22ನೆಯ ವಯಸ್ಸಿನಲ್ಲಿ ಅಸಹಕಾರ ಆಂದೋಲನ ಮತ್ತು ಸತ್ಯಾಗ್ರಹಗಳಲ್ಲಿ ಭಾಗವಹಿಸಿದರು. 1933ರ ಕಾಯಿದೆ ಭಂಗ ಚಳವಳಿಯಲ್ಲಿ ಪಾಲ್ಗೊಂಡು ಸರ್ಕಾರದ ಆಗ್ರಹಕ್ಕೆ ಒಳಗಾಗಿ ಬಂಧಿಸಲ್ಪಟ್ಟರು. ಇವರು ಅನೇಕ ಬಾರಿ ಕಾರಾಗೃಹ ವಾಸ ಅನುಭವಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ದುಡಿದರು.

ಶ್ರೀಮಂತ ಜಮೀನುದಾರರಾಗಿದ್ದ ಅಂದಾನಪ್ಪನವರು ಒಮ್ಮೆ ಊರಿಗೆ ಬರ ಬಂದಾಗ ತಮ್ಮಲ್ಲಿದ್ದ ಧಾನ್ಯವನ್ನು ಜನರಿಗೆ ಹಂಚಿದರಲ್ಲದೆ ನಿರುದ್ಯೋಗ ನಿವಾರಣೆಗಾಗಿ ಜನರಿಗೆ ಕೆಲಸ ಒದಗಿಸಿದರು. ಹಾವು ಸಾಕುವುದು ಇವರ ಒಂದು ಹವ್ಯಾಸವಾಗಿತ್ತು. ತಮ್ಮ ಪ್ರೀತಿ ಪಾತ್ರ ಹಾವೊಂದು ಸತ್ತಾಗ ಇವರು ಉಪವಾಸ ಮಾಡಿದರಂತೆ.

ಅಂದಾನಪ್ಪನವರು ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ್ದರು. ಕನ್ನಡ ಭುವನೇಶ್ವರಿಯನ್ನು ಸ್ತುತಿಸುವ ಕರ್ನಾಟಕ ಮಹಿಮಾಸ್ತೋತ್ರ ಎಂಬುದು ಇವರ ಕವನಸಂಗ್ರಹ. ಇವರು ಪತ್ರಿಕೋದ್ಯಮಿಯಾಗಿದ್ದರು. ಕಲ್ಕಿ ಎಂಬ ಮಾಸಪತ್ರಿಕೆಯನ್ನು ಇವರು ಕೆಲವುಕಾಲ ಗದಗಿನಿಂದ ಪ್ರಕಟಿಸುತ್ತಿದ್ದರು. ಮುಂಬಯಿಯ ವಿಧಾನಸಭೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಕನ್ನಡದಲ್ಲಿ ಮಾತನಾಡಿದರು. ಕರ್ನಾಟಕ ಏಕೀಕರಣ ಪ್ರಯತ್ನವನ್ನು ಬಲಪಡಿಸಿ, ಹೆಚ್ಚು ಕಾಲವನ್ನು ಅದಕ್ಕಾಗಿ ಮೀಸಲಿಟ್ಟು ಮುಂಬಯಿ ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಏಕೀಕರಣಗೊಂಡ ವಿಶಾಲ ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ವಿಧಾನ ಸಭೆಯಲ್ಲಿ ಪದೇಪದೇ ವಾದಿಸುತ್ತಿದ್ದರು. 1970-71ರಲ್ಲಿ ದೊಡ್ಡಮೇಟಿಯವರು ರಾಜ್ಯದ ನೀರಾವರಿ ಖಾತೆಯ ಸಹಾಯಕ ಮಂತ್ರಿಗಳಾಗಿದ್ದರು. 1972 ಫೆಬ್ರವರಿ 21ರಂದು, ನಿಧನರಾದರು. *



**ಅಂದಾನಿ, ವಿ.ಜಿ. :** 1947- ಹೆಸರಾಂತ ಚಿತ್ರಕಲಾವಿದ. ಗುಲ್ಬರ್ಗ ಜಿಲ್ಲೆ ಕೀರಣಗಿ ಗ್ರಾಮದಲ್ಲಿ ಜನಿಸಿದರು (1947). ಗುಲ್ಬರ್ಗದ ಆದರ್ಶ ಕಲಾಮಂದಿರದಿಂದ ಚಿತ್ರಕಲೆಯಲ್ಲಿ ಡಿಪ್ಲೊಮಾ ಶಿಕ್ಷಣ ಪಡೆದರು (1969). ಬನಸ್ಥಲಿ ವಿದ್ಯಾಪೀಠದಲ್ಲಿ ಭಿತ್ತಿಚಿತ್ರರಚನೆಯನ್ನು ಕುರಿತು ಅಧ್ಯಯನ ನಡೆಸಿದರು (1970). ಗುಲ್ಬರ್ಗದ ಐಡಿಯಲ್ ಕಾಲೇಜ್ ಆಫ್ ವಿಷುಯಲ್ ಆರ್ಟ್ಸ್‌ನ ಸ್ನಾತಕೋತ್ತರ ಕೇಂದ್ರದ ಪ್ರಾಚಾರ್ಯರಾಗಿ ಈಗ ಸೇವೆಸಲ್ಲಿಸುತ್ತಿದ್ದಾರೆ.

ಭಾರತದ ಪ್ರಮುಖ ನಗರಗಳಲ್ಲಿ ಹಾಗೂ ವಿದೇಶಗಳಲ್ಲಿ ಇವರು ಕಲಾಪ್ರದರ್ಶನ ನಡೆಸಿದ್ದಾರೆ. ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಪಾಲ್ಗೊಂಡಿದ್ದಾರೆ.

ಇವರಿಗೆ ಅನೇಕ ಪ್ರಶಸ್ತಿ, ಗೌರವಗಳು ಸಂದಿವೆ. ಅವುಗಳಲ್ಲಿ ಮುಖ್ಯವಾದವು: ಇಲಸ್ಟ್ರೇಟೆಡ್ ವೀಕ್ಲಿ ಪ್ರದರ್ಶನ ಪ್ರಶಸ್ತಿ (1963), ಕರ್ನಾಟಕ

ಚಿತ್ರಕಲಾ ಪರಿಷತ್ತಿನ ಅಖಿಲ ಭಾರತ ಪ್ರದರ್ಶನ ಬಹುಮಾನ (1969), ಕರ್ನಾಟಕ ವಿಶ್ವ ವಿದ್ಯಾನಿಲಯದ ಪ್ರದರ್ಶನ ಪ್ರಶಸ್ತಿ (1971), ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರದರ್ಶನ ಬಹುಮಾನ (1992), ಹೈದರಾಬಾದ್ ಆರ್ಟ್ ಸೊಸೈಟಿ ಪ್ರಶಸ್ತಿ (1985), ಕೇಂದ್ರ ಸರ್ಕಾರದ ಫೆಲೋಶಿಪ್ (1989), ರಾಷ್ಟ್ರೀಯ ಪ್ರಶಸ್ತಿ (1991), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1992), ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1993).

ಕಲೆಗೆ ಸಂಬಂಧಿಸಿದ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿಯೂ ಇವರು ಸೇವೆಸಲ್ಲಿಸಿದ್ದಾರೆ.ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ,ಅನಂತರ ಅದರ ಅಧ್ಯಕ್ಷರಾಗಿ (1998-2001). ಕೇಂದ್ರ ಲಲಿತ ಕಲಾ ಅಕಾಡಮಿಯ ಸದಸ್ಯರೂ ತೀರ್ಪುಗಾರರೂ ಆಗಿದ್ದರು (1988-92). ಸರ್ಕಾರದ ಹಾಗೂ ವಿಶ್ವವಿದ್ಯಾನಿಲಯಗಳ ಅನೇಕ ಕಲಾ ಶೈಕ್ಷಣಿಕ ಮಂಡಳಿಗಳಲ್ಲಿಯೂ ಸದಸ್ಯರಾಗಿ, ಕಾರ್ಯದರ್ಶಿಗಳಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಕಲಾಕೃತಿಗಳು ಭಾರತದ ಅನೇಕ ಪ್ರದರ್ಶನ ಭವನಗಳಲ್ಲಿ, ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳಲ್ಲಿ, ಕಲಾ ಪ್ರೇಮಿಗಳ ಮನೆಗಳಲ್ಲಿ ಮತ್ತು ವಿದೇಶಗಳಲ್ಲಿ ಸಂಗ್ರಹಗೊಂಡಿವೆ. **(ಡಿ.ಎ.ಯು.)**

**ಅಂಬರೀಶ್ :** 1952-. ರೆಬಲ್ ಸ್ಟಾರ್, ಎಂದೇ ಖ್ಯಾತರಾದ ಕನ್ನಡ ಚಲನಚಿತ್ರ ನಟ, ಲೋಕಸಭಾ ಸದಸ್ಯ. ಮಂಡ್ಯ ಜಿಲ್ಲೆ ದೊಡ್ಡರಸನ ಕೆರೆ ಗ್ರಾಮದಲ್ಲಿ 1952 ಮೇ 29ರಂದು ಜನಿಸಿದರು. ತಂದೆ ಹುಚ್ಚೇಗೌಡ, ತಾಯಿ ಪದ್ಮಮ್ಮ. ನಾಗರಹಾವು ಚಲನಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಇವರನ್ನು ಚಿತ್ರರಂಗಕ್ಕೆ ಪರಿಚಯಿಸಿದವರು

ಹೆಸರಾಂತ ನಿರ್ದೇಶಕರ ಕಣಗಾಲ್‌ಪುಟ್ಟಣ್ಣ (ನೋಡಿ). ನಾಗರಹಾವು ಚಿತ್ರದಲ್ಲಿ ಜಲೀಲ್‌ಎಂಬ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡರು. ಎಸ್.ವಿ.ರಾಜೇಂದ್ರಸಿಂಗ್ ಬಾಬು ನಿರ್ದೇಶಿಸಿದ ಎಚ್.ಕೆ.ಅನಂತರಾವ್ ಅವರ ಕಾದಂಬರಿ ಆಧಾರಿತ 'ಅಂತ'ಚಿತ್ರದ ನಾಯಕನಾಗಿ ಅಭಿನಯಿಸಿದ್ದು ಇವರ ವೃತ್ತಿ ಜೀವನಕ್ಕೆ ಒಂದು ಹೊಸ ಆಯಾಮ ನೀಡಿತು. ಈ ಚಿತ್ರದಲ್ಲಿ ಅನ್ಯಾಯದ ವಿರುದ್ಧ ಸಿಡಿದೇಳುವ ಕನ್ವರ್‌ಲಾಲ್‌ನ ಪಾತ್ರ ಇವರಿಗೆ ರೆಬಲ್‌ಸ್ಟಾರ್ ಎಂಬ ಇಮೇಜು ನೀಡಿತು. ಅನಂತರ ಇವರು ನಾಯಕ, ಖಳನಾಯಕ ಪಾತ್ರಗಳಲ್ಲಿ ನಟಿಸಿದರು. ರಂಗನಾಯಕಿ, ಪಡುವಾರಹಳ್ಳಿ ಪಾಂಡವರು, ಮಸಣದ ಹೂವು, ಚಕ್ರವ್ಯೂಹ, ಏಳುಸುತ್ತಿನ ಕೋಟೆ, ಹೃದಯಹಾಡಿತು, ಸ್ನೇಹಸಂಬಂಧ, ಬ್ರಹ್ಮಾಸ್ತ್ರ, ಅಮರಜ್ಯೋತಿ ಮೊದಲಾದ ಅನೇಕ ಚಿತ್ರಗಳಲ್ಲಿ ಇವರು ನಟಿಸಿದ್ದಾರೆ. ಮಸಣದಹೂವು ಚಿತ್ರದಲ್ಲಿನ ಇವರ ಪಾತ್ರದ ಅಭಿನಯ ಅವಿಸ್ಮರಣೀಯವಾದದ್ದು. ಹೃದಯ ಹಾಡಿತು ಚಿತ್ರ ಇವರ ಚಿತ್ರರಂಗದ ಇಮೇಜನ್ನು ಬದಲಾಯಿಸಿತು. ಚಕ್ರವ್ಯೂಹ ಹಾಗೂ ಮೌನರಾಗ ಚಿತ್ರಗಳು ಇವರಿಗೆ ಜನಪ್ರಿಯತೆ ತಂದುಕೊಟ್ಟವು.

ಇವರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ ಸಂದರ್ಭದಲ್ಲಿ ಮೊದಲಿಗೆ ಜನತಾದಳದಲ್ಲಿದ್ದರು. ಅನಂತರ ಕಾಂಗ್ರೆಸ್‌ಪಕ್ಷ ಸೇರಿದರು. ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾದರು. ಅನಂತರ ಕಾವೇರಿ ಚಳವಳಿಯ ಹಿನ್ನೆಲೆಯಲ್ಲಿ ಜನತೆಯ ಅಭಿಪ್ರಾಯಕ್ಕೆ ಮನ್ನಣೆ ನೀಡಿ ತಮ್ಮ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದರು (2002).

ಅಂಬರೀಶ್ ತಮ್ಮ ಉದಾರ ಸ್ವಭಾವದಿಂದಾಗಿ ದಾನಶೂರ ಕರ್ಣ ಎಂದೇ ಹೆಸರಾಗಿದ್ದಾರೆ. ಸಮಾಜದ ದುರ್ಬಲ ವರ್ಗದವರ ಬಗ್ಗೆ ಇವರಿಗೆ ವಿಶೇಷ ಕಳಕಳಿ. ಖ್ಯಾತ ಪಿಟೀಲು ವಿದ್ವಾನ್ ಟಿ.ಚೌಡಯ್ಯ ಇವರ ಅಜ್ಜ. ನಟಿ ಸುಮಲತಾ ಇವರ ಪತ್ನಿ.

*

**ಅಂಬಲಿ ಚನ್ನಬಸಪ್ಪ :** 1895-1962. ಸ್ವಾತಂತ್ರ್ಯಯೋಧರು ಮತ್ತು ಕರ್ನಾಟಕ ಏಕೀಕರಣದ ನೇತಾರರು. ಬಿಜಾಪುರ ತಾಲ್ಲೂಕಿನ ಅರ್ಜುಣಗಿ ಗ್ರಾಮದಲ್ಲಿ ಒಕ್ಕಲುತನದ ಮನೆತನದಲ್ಲಿ ಜನಿಸಿದರು. ತಂದೆ ಜಗದೇವಪ್ಪ. ಶಿಕ್ಷಣ ಕನ್ನಡ ನಾಲ್ಕನೆಯ ತರಗತಿಯವರೆಗೆ. 1914ರಲ್ಲಿ ಒಂದನೆಯ ಮಹಾಯುದ್ಧ ನಿಧಿಗಾಗಿ ಗ್ರಾಮಕ್ಕೆ ಬಂದ ಮಾಮಲೆದಾರರನ್ನು ವಿರೋಧಿಸಿ ಮೂರುದಿನ ಉಪವಾಸಮಾಡಿ ಬಂಧನದ ಶಿಕ್ಷೆ ಅನುಭವಿಸುವುದರೊಂದಿಗೆ ಇವರ ಸ್ವಾತಂತ್ರ್ಯಹೋರಾಟ ಪ್ರಾರಂಭವಾಯಿತೆನ್ನಬಹುದು. ಗಾಂಧಿಯವರ ಅನುಯಾಯಿಯಾಗಿ ಬಿಜಾಪುರದಲ್ಲಿ ಒಂದು ಸಂಘಟಿಸಿ ಭೂಕಂದಾಯ ವಸೂಲಿಯನ್ನು ವಿರೋಧಿಸಿದರು. 1919ರ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಇವರನ್ನು ಸಂಪೂರ್ಣವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಎಳೆದು ತಂದಿತು. ಚಳವಳಿಯಲ್ಲಿ ಭಾಗವಹಿಸಿ ಮೊದಲು 1919ರಲ್ಲಿ ಕಾರಾಗೃಹ ಶಿಕ್ಷೆ ಅನುಭವಿಸಿದರು. ಅನಂತರ ಕಾಯದೆಭಂಗ ಚಳವಳಿಯಲ್ಲಿ ಜೈಲು (1931) ಸೇರಿ ಬಿಜಾಪುರ ಹಾಗೂ ವಿಸಾಪುರಗಳಲ್ಲಿ ಬಂಧನದಲ್ಲಿದ್ದರು.

ಸರ್ಕಾರದ ಕಿರುಕುಳ ಹೆಚ್ಚಾದಾಗ ಇವರು ಬಿಜಾಪುರ ಬಿಟ್ಟು ಸಂಸಾರಸಮೇತ ಸೊಲ್ಲಾಪುರಕ್ಕೆ ಹೋಗಬೇಕಾಯಿತು. ಅಲ್ಲಿ ಜೀವನವನ್ನು ಸಾಗಿಸಲು ನೌಕರಿ ಹಿಡಿದರೂ ಕಾಯದೆಭಂಗ ಚಳವಳಿಯಲ್ಲಿ ಮತ್ತೆ ಸೇರಿ ಲಷ್ಕರಿ ಕಾನೂನಿನ ಕಾಲದಲ್ಲಿ ಸರ್ಕಾರದ ಕಣ್ಣುತಪ್ಪಿಸಿ ಸೊಲ್ಲಾಪುರದಿಂದ ಮತ್ತೆ ಬಿಜಾಪುರಕ್ಕೆ ಬಂದರು. 1930-33ರ ಸಾರ್ವತ್ರಿಕ ಕಾಯದೆಭಂಗ ಚಳವಳಿಯಲ್ಲಿ ಮುಖ್ಯಪಾತ್ರ ವಹಿಸಿದ್ದಕ್ಕಾಗಿ ಸರ್ಕಾರ ಇವರಿಗೆ ಕಠಿಣಶಿಕ್ಷೆ ವಿಧಿಸಿತು. ಜೈಲುವಾಸದ ಕಾಲದಲ್ಲಿ ಇವರು ಕನ್ನಡ, ಹಿಂದಿ ಮತ್ತು ಮರಾಠಿ ಭಾಷೆಗಳನ್ನು ಕಲಿತರು.

1940ರಲ್ಲಿ ಇವರು ಕೆ.ಪಿ.ಸಿ.ಸಿ. ಕಾರ್ಯದರ್ಶಿಯಾಗಿ ಹುಬ್ಬಳ್ಳಿ ಧಾರವಾಡಗಳಲ್ಲಿ ವಾಸಮಾಡತೊಡಗಿದರು. 1942ರಲ್ಲಿ ಕಾರ್ಯಕರ್ತರಾಗಿ, ಚಲೇಜಾವ್ ಸಮಿತಿಯ ಅಧ್ಯಕ್ಷರಾಗಿ ದುಡಿದರು. ಟಪಾಲು ಲೂಟಿ ಮಾಡುವುದು, ಸರ್ಕಾರಿ ಮಹತ್ತ್ವದ ಕಾಗದಪತ್ರಗಳನ್ನು ಸುಡುವುದು ಮುಂತಾದ ವಿಧ್ವಂಸಕ ಕೃತ್ಯಗಳನ್ನು ಕೈಗೊಂಡರು. ಇವರ ನೇತೃತ್ವದಲ್ಲಿ ಮಿಂಚನಾಳ ಮತ್ತು ಜುಮನಾಳ ಸ್ಟೇಷನ್‌ಗಳು ಅಗ್ನಿಗೆ ಆಹುತಿಯಾದವು. ಮುಂಬಯಿಯಿಂದ ಇಂಗ್ಲೆಂಡಿಗೆ ಬಂಗಾರ, ಸಾಮಾನುಸರಂಜಾಮು ತುಂಬಿಕೊಂಡು ಹೊರಟ ಹಡಗೊಂದರ ಜಲಸಮಾಧಿ ಮಾಡಿದ ಕೀರ್ತಿ ಇವರದು. ಆ ಕಾಲದಲ್ಲಿ ಇವರನ್ನು ಹಿಡಿದುಕೊಟ್ಟರೆ ರೂ.5,000 ಬಹುಮಾನ ಕೊಡುವುದಾಗಿ ಸರ್ಕಾರ ಸಾರಿತು. 1955ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, 1952 ಮತ್ತು 1957ರಲ್ಲಿ ಶಾಸನಸಭಾ ಸದಸ್ಯರಾಗಿ ಇವರು ಆಯ್ಕೆಹೊಂದಿದರು. ಕರ್ನಾಟಕ ಏಕೀಕರಣಕ್ಕಾಗಿ ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ದುಡಿದರು. ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂಬುದು ಇವರ ಹಟವಾಗಿತ್ತು. ಪಾರ್ಶ್ವವಾಯುಪೀಡಿತರಾಗಿ 1962 ಮಾರ್ಚ್ 1ರಂದು ನಿಧನರಾದರು. ಅರ್ಜುಣಗಿಯಲ್ಲಿ ಇವರ ಸಮಾಧಿ ಇದೆ.

*

**ಅಂಬಳೆ :** ಚಿಕ್ಕಮಗಳೂರು ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಚಿಕ್ಕಮಗಳೂರು - ಬೇಳವಾಡಿ ಮಾರ್ಗದಲ್ಲಿ ಚಿಕ್ಕಮಗಳೂರಿನಿಂದ 8ಕಿಮೀ ದೂರದಲ್ಲಿದೆ. ಪುರಾತನ ಕಾಲದಲ್ಲಿ ಯಮುಳಾಪುರಿ ಎಂಬ ಅಭಿಧಾನವನ್ನು ಹೊಂದಿದ್ದು ಸೋಮರಾಜನೆಂಬಾತ ಈ ಗ್ರಾಮವನ್ನು ನಿರ್ಮಿಸಿದನೆಂದು ಪ್ರತೀತಿ. 959ರ ಶಾಸನದಲ್ಲಿ ಅಮ್ಮಲೆ ಎಂಬ ಉಲ್ಲೇಖವಿದೆ. ಕಾಲಕ್ರಮೇಣ ಅಮ್ಮಲೆಯೇ ಅಂಬಳೆ ಎಂದಾಗಿದೆ. 12 ಮತ್ತು 13ನೆಯ ಶತಮಾನದಲ್ಲಿ ಹೊಯ್ಸಳರ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿ ಈ ಊರು ಧಾರ್ಮಿಕಮಹತ್ವ ಪಡೆದಿತ್ತು.

ಇಲ್ಲಿರುವ ಚನ್ನಿಗರಾಯ, ವೀರಭದ್ರ, ಲೋಕೇಶ್ವರ ಹಾಗೂ ಗೋಪಾಲಕೃಷ್ಣ ದೇವಾಲಯಗಳು ಪ್ರಸಿದ್ಧವಾಗಿವೆ. ವಾಸ್ತುಶಿಲ್ಪದ ದೃಷ್ಟಿಯಿಂದ ವಿಶೇಷ ಮಹತ್ತ್ವವನ್ನು ಈ ದೇಗುಲಗಳು ಹೊಂದಿಲ್ಲ ವಾದರೂ ಐತಿಹಾಸಿಕ ಕುರುಹುಗಳಾಗಿವೆ. ಚನ್ನಿಗರಾಯ ದೇವಾಲಯವನ್ನು ಹೊಯ್ಸಳ ದೊರೆ ಎರಡನೆಯ ಬಲ್ಲಾಳ (1178) ನಿರ್ಮಿಸಿದ್ದು ಇದನ್ನು ವೀರಬಲ್ಲಾಳ ಕೇಶವ ದೇವರೆಂದು ಕರೆಯಲಾಗಿದೆ. ಗುಡಿಯು ಚೌಕಾಕಾರದ ಗರ್ಭಗೃಹ, ನವರಂಗ ಹಾಗೂ ಸುಕನಾಸಿಯನ್ನು ಒಳಗೊಂಡಿದೆ. ಮಂಟಪದಂತಿರುವ ನಾಲ್ಕುಕಂಬಗಳು ಚಕ್ರಾಕಾರದ ಕೋಳವೆಯ ಹಿಡಿಕೆಗಳಿಂದ ಕೂಡಿವೆ. ಗರ್ಭಗೃಹದಲ್ಲಿರುವ ಗರುಡವಾಹನ ಚನ್ನಿಗರಾಯಮೂರ್ತಿ ಪೀಠದಿಂದ 1.5 ಮೀ ಎತ್ತರವಾಗಿದೆ. ಶಂಖ, ಚಕ್ರ, ಗದಾಧಾರಿಯಾದ ಚನ್ನಿಗರಾಯನ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರಿದ್ದಾರೆ. ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಸುಂದರ ಚಿತ್ರಣವಿದೆ. ಮೂರ್ತಿಯ ನಾಲ್ಕನೆಯ ಹಸ್ತ ಭಿನ್ನವಾಗಿರುವುದರಿಂದ ಪೂಜೆ ನಡೆಯುತ್ತಿಲ್ಲ. ಲೋಕೇಶ್ವರ ದೇವಾಲಯವೂ ಹೊಯ್ಸಳ ಶಿಲ್ಪ ಮಾದರಿಯದು. ಗುಡಿಯ ನವರಂಗದಲ್ಲಿ ಗಣಪತಿ, ನಂದಿವಾಹನಾರೂಢ ಶಿವಪಾರ್ವತಿ, ಷಣ್ಮುಖ, ಸೂರ್ಯನ ವಿಗ್ರಹಗಳನ್ನು ಕೆತ್ತಲಾಗಿದೆ. ಗೋಪಾಲಕೃಷ್ಣದೇವಾಲಯ ಸುಂದರವಾಗಿ ನಿರ್ಮಿತವಾಗಿದೆ. ವೀರಭದ್ರ ದೇವಾಲಯ ಈಗ ಆಧುನಿಕ ರೂಪವನ್ನು ಪಡೆದಿದೆ. ಇಲ್ಲಿ ಶಂಕರಲಿಂಗೇಶ್ವರ, ವೀರಭದ್ರೇಶ್ವರ, ಚಂದ್ರಮೌಳೇಶ್ವರ, ಗಂಗಾವಿಶ್ವೇಶ್ವರ ಓಂಕಾರೇಶ್ವರ ಎಂಬ ಪಂಚಶಿವಾಲಯಗಳಿವೆ. ದೇವೀರಮ್ಮ ದೇವಾಲಯವಿದೆ. ಚೈತ್ರಮಾಸದಲ್ಲಿ ಇಲ್ಲಿನ ಬೀರಲಿಂಗೇಶ್ವರ ದೇವರ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ.

ಕನ್ನಡದ ಉತ್ತಮ ಗದ್ಯ ಲೇಖಕರೆಂದೂ ಕನ್ನಡ ಅಶ್ವಿನಿ ದೇವತೆಗಳಲ್ಲಿ ಒಬ್ಬರೆಂದು ಪ್ರಸಿದ್ಧರಾದ ಎ.ಆರ್.ಕೃಷ್ಣಶಾಸ್ತ್ರೀ (ನೋಡಿ) ಈ ಊರಿನವರು. ಇವರ ಹೆಸರಿನಲ್ಲಿ ಇಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. (ಬಿ.ಎಂಐ.)

**ಅಂಬಾಜಿದುರ್ಗ :** ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಒಂದು ಊರು ಹಾಗೂ ಬೆಟ್ಟ. ಚಿಂತಾಮಣಿಯಿಂದ 5ಕಿಮೀ ದೂರದಲ್ಲಿದೆ. 1873ರ ವರೆಗೆ ಈ ಊರು ತಾಲ್ಲೂಕಿನಲ್ಲೇ ಅತಿ ಮುಖ್ಯ ಸ್ಥಳವಾಗಿತ್ತು. ಈಗ ಹೋಬಳಿ ಕೇಂದ್ರವಾಗಿದೆ.

ಆಂಧ್ರಪ್ರದೇಶದ ಕಡೆಯಿಂದ ಹಬ್ಬಿ ಬಂದಿರುವ ಬೆಟ್ಟಸಾಲಿನಲ್ಲಿ ಒಂಟಿ ಬೆಟ್ಟವಾಗಿ ಎದ್ದು ನಿಂತಿರುವ ಈ ದುರ್ಗದ ಮೇಲೆ ಟಿಪ್ಪುಸುಲ್ತಾನ ಕಟ್ಟಿಸಿದ ಒಂದು ಕೋಟೆ ಇದೆ. ಸಮುದ್ರ ಮಟ್ಟದಿಂದ ನಾಲ್ಕುಸಾವಿರ ಅಡಿಗಳ ಎತ್ತರದಲ್ಲಿರುವ ಈ ಬೆಟ್ಟದ ಮೇಲಿನಿಂದ ನಯನಮನೋಹರ ದೃಶ್ಯಗಳನ್ನು ಕಾಣಬಹುದಾಗಿದೆ. ಶಿಲಾ ತೋರಣದಂತೆ ಕಾಣುವ ಇಲ್ಲಿನ ಶಿಖರಗಳು, ಬೇಸಿಗೆಯಲ್ಲಿ ತಂಪೆರೆಯುವ ನೀರಿನ ದೋಣೆಗಳು ಪ್ರವಾಸಿಗರ ಆಯಾಸವನ್ನು ತಣಿಸುತ್ತವೆ. ಕೋಟೆಯೊಳಗೆ ಐತಿಹಾಸಿಕ ಅವಶೇಷಗಳಿವೆ. ಇಲ್ಲಿರುವ ಕಾಳಿನಕಣಜವನ್ನು ಎಣ್ಣೆಕಣಜ ಎಂದು ಕರೆಯಲಾಗುತ್ತದೆ. ಕಮಾನಿನಾಕಾರದ ಪ್ರವೇಶವಿರುವ ಬಾವಿಗೆ ಖಜಾನೆ ಎನ್ನುವರು. ಗವಿಗಂಗಾಧರೇಶ್ವರನ ದೇವಾಲಯ ಕೂಡ ಇಲ್ಲಿದೆ. ಇಲ್ಲಿನ ಕೋಟೆ 1791ರಲ್ಲಿ ಬ್ರಿಟಿಷರ ವಶವಾಯಿತು. ಬೆಟ್ಟದ ಬುಡದಲ್ಲಿ ಉಪ್ಪರಪೇಟೆ ಎಂಬ ಸಣ್ಣ ಊರಿದೆ. ಒಂದು ಉತ್ತಮ ಗಿರಿಧಾಮವಾಗುವ ಎಲ್ಲ ಸಾಧ್ಯತೆಗಳನ್ನು ಅಂಬಾಜಿದುರ್ಗ ಪಡೆದುಕೊಂಡಿದೆ. (ಆರ್.ಆರ್‌ಐ.)

**ಅಂಬಿಕಾನಗರ :** ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ನಿರ್ಮಿತವಾದ ಒಂದು ಪಟ್ಟಣ. ಕರ್ನಾಟಕ ವಿದ್ಯುತ್ ನಿಗಮದಿಂದಲೇ ಮೊದಲಿಗೆ ಅಮಗಾ ಜಮಗಾ ಹಳ್ಳಿಗಳ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಈ ಸ್ಥಳ ಇಂದು ಬೆಳೆಯುತ್ತಿರುವ ಒಂದು ಪಟ್ಟಣವಾಗಿದೆ. ಇಲ್ಲಿನ ಕಾಳಿನದಿ ಜಲವಿದ್ಯುತ್ ಯೋಜನೆಯು ರಾಜ್ಯದಲ್ಲಿಯೇ ಅತಿ ದೊಡ್ಡದಾದ ವಿದ್ಯುತ್ ಉತ್ಪಾದನಾ ಸ್ಥಾವರ. ಕವಳೆಗುಹೆ, ಸೈಕ್ಸ್‌ಪಾಯಿಂಟ್ ಮತ್ತು ದಾಂಡೇಲಿ ಮೃಗಧಾಮಗಳಿಗೆ ಹೋಗುವ ಪ್ರವಾಸಿಗಳಿಗೆ ಇದು ಕೇಂದ್ರವಾಗಿದೆ. ಇಲ್ಲಿ ಕರ್ನಾಟಕ ವಿದ್ಯುತ್ ನಿಗಮದ ಸುಂದರ ಪ್ರವಾಸಿಮಂದಿರವಿದೆ. (ಬಿ.ಎಸ್.ಎಂ.)

ಸೈಕ್ಸ್ ಪಾಯಿಂಟ್

**ಅಂಬಿಗರ ಚೌಡಯ್ಯ :** 12ನೆಯ ಶತಮಾನದ ವಚನಕಾರರಲ್ಲಿ ಅತ್ಯಂತ ವಿಶಿಷ್ಟನಾದವ. ವೃತ್ತಿಯಿಂದ ಅಂಬಿಗ; ಪ್ರವೃತ್ತಿಯಲ್ಲಿ ಅನುಭವಿ. ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾನಭೂಮಿಕೆಯ ಸಮ್ಮೇಳನದಲ್ಲಿ ಸೇರಿಕೊಂಡವ. ತನ್ನ ಕಾಯಕ ಅಥವಾ ವ್ಯಕ್ತಿನಾಮವಾದ ಅಂಬಿಗರ ಚೌಡಯ್ಯ ಎಂಬುದೇ ಈತನ ವಚನಗಳ ಅಂಕಿತವಾಗಿದೆ. ತಾನು ಕೇವಲ ತುಂಬಿದ ಹೊಳೆಯಲ್ಲಿ ದೋಣಿಗೆ ಹುಟ್ಟುಹಾಕುವ ಅಂಬಿಗ ಮಾತ್ರವಲ್ಲ, ಭವಸಾಗರದಲ್ಲೂ ಹುಟ್ಟುಹಾಕುವ ಕೌಶಲವುಳ್ಳವ ಎಂದು ಹೇಳಿಕೊಳ್ಳುವುದರಲ್ಲಿ ತನ್ನ ಅನುಭಾವ ದೃಷ್ಟಿಯನ್ನು ಪ್ರಕಟಿಸಿದ್ದಾನೆ.

ಉಳಿದ ವಚನಕಾರರ ವಚನಗಳಲ್ಲಿರುವಂತೆ ಇವನಲ್ಲಿಯೂ ಶಿವಾನುಭವಪರವಾದ ವಚನಗಳಿದ್ದರೂ ಇವುಗಳಲ್ಲಿ ಕಂಡುಬರುವ ಸಮಕಾಲೀನ ಸಮಾಜ ವಿಡಂಬನೆಯ ವ್ಯಗ್ರದೃಷ್ಟಿ ಬೇರೆಯವರಲ್ಲಿ ವಿರಳವೆಂದೇ ಹೇಳಬೇಕು. ಇವನ ವಚನಗಳ ವಸ್ತು, ಭಾಷೆ, ಶೈಲಿಗಳನ್ನು ಗಮನಿಸಿದರೆ ಇವನೊಬ್ಬ ಕೆಚ್ಚೆದೆಯ, ನಿಷ್ಠುರ ಪ್ರಕೃತಿಯ, ಗ್ರಾಮ್ಯ ಮನೋಧರ್ಮದ ಒರಟು ವಚನಕಾರ ಎಂಬುದು ಸ್ಪಷ್ಟವಾಗುತ್ತದೆ. ಈತ ನ್ಯಾಯನಿಷ್ಠುರ, ದಯಾದಾಕ್ಷಿಣ್ಯಪರನಲ್ಲ. ಯಾರನ್ನೇ ಆಗಲಿ ಯಾವುದನ್ನೇ ಆಗಲಿ ಈತ ಟೀಕಿಸದೆ ಬಿಡುತ್ತಿರಲಿಲ್ಲ. ಮೃದುವಾಗಿ ಮಾತನಾಡುವುದು ಅಪೂರ್ವ, ಮಾತಿನ ಬಹುಭಾಗ ಹರಿತವಾದದ್ದು. 'ಕೇಳಿರಯ್ಯಾ ಮಾನವರೇ, ಶೀಲದಲ್ಲಿ ಸಂಪನ್ನರಾದವರು ನೀವು ಕೇಳಿರೋ, ನನಗೊಬ್ಬರೆಂಜಲು ಸೇರದೆಂದು ಶುಚಿತನದಲ್ಲಿ ಬದುಕುವ ಬರಿಯ ಮಾತಿನ ಭಂಜಕರು ನೀವು ಕೇಳಿರೋ', 'ಪರಪುರುಷಾರ್ಥವನ್ನರಿಯದೆ ಕೆಟ್ಟ ನರ ಕುರಿಗಳು ನೀವು ಕೇಳಿರೋ' ಎಂದು ಆರಂಭವಾಗಿ 'ಮೆಟ್ಟಿದ ದೊಡ್ಡಪಾದರಕ್ಷೆಯ ತಕ್ಕೊಂಡು ಲಟಲಟನೆ ಹೊಡೆಯೆಂದ, ಪಡಿಹಾರ ಉತ್ತಣ್ಣನ ಎಡಪಾದರಕ್ಷೆಯಿಂದ ಪಟಪಟನೆ ಹೊಡೆಯೆಂದ'. 'ಮೂಗ ಕೊಯ್ದು ಇಟ್ಟಂಗಿಯ ಕಲ್ಲಿಲೆ ಸಾಸಿವೆಯ ತಿಕ್ಕಿ ಹಿಟ್ಟಿನ ತಳಿದ ಮೇಲೆ ನಿಂಬೆಯ ಹುಳಿಯನೆ ಹಿಂಡಿ ಪಡುವಲ ಗಾಳಿಗೆ ಹಿಡಿ'- ಹೀಗೆ ಮುಕ್ತಾಯವಾಗುತ್ತದೆ ಇವನ ವಚನಗಳ ಶೈಲಿ. ಹಳೆಯ ಮತ್ತು ಹೊಸ ನಂಬಿಕೆಗಳ ಅವಸ್ಥಾಂತರದ ಅವ್ಯವಸ್ಥೆಯಲ್ಲಿದ್ದ ಅಂದಿನ ವೀರಶೈವ ಸಮಾಜದ ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸುವ ಈ ವಚನಗಳು ಬಹುಶಃ ಅಂದಿನ ಸಾಮಾಜಿಕ ಆವಶ್ಯಕತೆಯ ಪರಿಣಾಮಗಳೆಂದು ಭಾವಿಸಬಹುದು. ಈತನ ವಚನಗಳಿಂದ ನಮಗೆ ಕಂಡುಬರುವ ಸಮಾಜದ

ಅವ್ಯವಸ್ಥೆಯ ಚಿತ್ರ, ಬೇರೆಯವರಲ್ಲಿ ನಮಗೆ ಇಷ್ಟುರಮಟ್ಟಿಗೆ ಕಾಣದು. ಇವನ ವಚನಗಳಲ್ಲಿ ನಿಜಶರಣನ ಮೊರೆತದ ಜೊತೆಗೆ ಸುಧಾರಕನ ಕಟುಟೀಕೆಯೂ ಕೇಳಿಬರುತ್ತದೆ. ಈತನ ವಚನಗಳು ಅನರ್ಥಸಾಧಕವಾದ ಕೋಪದಿಂದ ಹೊಮ್ಮಿದುವಲ್ಲ; ಸದರ್ಥಸಾಧಕವಾದ ಸತ್ಕೋಪದಿಂದ ಹೊಮ್ಮಿದುವು. ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ದಿಟ್ಟತನ, ವ್ಯಗ್ರತೆ ಕಂಡುಬರುವುದು ಬಹುಶಃ ಇಬ್ಬರಲ್ಲೇ ಎಂದು ತೋರುತ್ತದೆ. ಒಬ್ಬ ಸಿಡಿಲು ನುಡಿಯ ಸರ್ವಜ್ಞ; ಇನ್ನೊಬ್ಬ ಕೆಚ್ಚೆದೆಯ ವಚನಕಾರ ಅಂಬಿಗರ ಚೌಡಯ್ಯ. **(ಜಿ.ಎಸ್.ಎಸ್.)**

**ಅಂಬುಲಿಗೆ ಚೆನ್ನಮಲ್ಲೇಶ :** ಸು.1700. ವೀರಶೈವ ಕವಿ. ದೀಪದ ಕಲಿಯರ ಕಾವ್ಯದ ಕರ್ತೃ, ಗುಲ್ಬರ್ಗ ಜಿಲ್ಲೆ ಅಂಬುಲಿಗೆ ಈತನ ಜನ್ಮಸ್ಥಳ. ಗುರು ಚೆನ್ನಮಲ್ಲಿಕಾರ್ಜುನ ಕೊಟ್ಟ ಮತಿಯಿಂದ ಕಾವ್ಯವನ್ನು ರಚಿಸಿದಂತೆ ಹೇಳಿಕೊಂಡಿದ್ದಾನೆ. ಶಿಬಿರಾಯನ ಸ್ತುತಿ, ವೀರಸಂಗಯ್ಯನ ಚೌಪದ, ಗಂಗೆಗೌರಿ ಚೌಪದ, ಶ್ವೇತನ ವಾರ್ಧಕ, ಸಿರಿಯಾಳಸೆಟ್ಟಿ ವಾರ್ಧಕ, ನೀಲಕಂಠಯ್ಯನ ಭಾಮಿನೀ- ಇವು ಈತನ ಇತರ ಕೃತಿಗಳು. ವೀರಸಂಗಯ್ಯನ ಚೌಪದದ ಕೊನೆಯಲ್ಲಿ 'ಕಲಬರಿಗೆ ದೇಶವೆಂಬಲ್ಲಿ ಓದಿಸುವ ಸಲೆ ಭಕ್ತ ಚೆನ್ನಮಲ್ಲಯ್ಯ' ಎಂದು ಹೇಳಿರುವುದರಿಂದ ಈತ ಉಪಾಧ್ಯಾಯನಾಗಿದ್ದಿರಬಹುದು. ಪೂರ್ವ ಕವಿಗಳಲ್ಲಿ ಕೆರೆಯಪದ್ಮರಸ, ಹರೀಶ್ವರ, ರಾಘವಾಂಕ, ಭೀಮಕವಿ, ಚಾಮರಸ, ಪಾಲ್ಕುರಿಕೆ ಸೋಮನಾಥ ಮೊದಲಾದವರನ್ನು ಸ್ಮರಿಸಿದ್ದಾನೆ.

ದೀಪದ ಕಲಿಯರ ಕಾವ್ಯ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 9 ಸಂಧಿಗಳೂ 1046 ಪದ್ಯಗಳೂ ಇವೆ. ಭೀಮಕವಿಯ ಬಸವ ಪುರಾಣದಲ್ಲಿ ಬರುವ ದೀಪದ ಕಲಿಯರನ ಕಥೆ ಈ ಗ್ರಂಥಕ್ಕೆ ಆಕರ. ದೀಪವನ್ನು ದೇವರಿಗೆ ಬೆಳಗಿಸುವುದರಲ್ಲಿ ಅಸಾಧಾರಣ ಪರಾಕ್ರಮವನ್ನು ಪ್ರದರ್ಶಿಸಿದ ಒಬ್ಬ ವೀರಭಕ್ತನ ಕಥೆ ಕಾವ್ಯದ ವಸ್ತು. ದೀಪದ ಕಲಿ (ಕಣಂಬುಲ್ಲ ನಾಯನಾರ) ತಮಿಳುನಾಡಿನ ಅರವತ್ಮೂರು ಪುರಾತನರಲ್ಲೊಬ್ಬ. ಈತ ಕೈದೀವಿಗೆಗಳಿಗೆ ಎಣ್ಣೆ ಇಲ್ಲದಂತಾದಾಗ ತನ್ನ ಜಡೆಗೂದಲಿಗೆ ಬೆಂಕಿ ಹತ್ತಿಸಿ ದೀಪವನ್ನಾಗಿ ಮಾಡಿ ದೇವರಿಗೆ ಪೂಜೆ ಸಲ್ಲಿಸಿದ ವ್ಯಕ್ತಿ-ಎಂಬ ಪ್ರತೀತಿ ಇದೆ.

ಕವಿ ತನ್ನ ಕೃತಿಯನ್ನು ಅಂಗನೆಯರಿಗೆ ಇರುವ ಒಡವೆಗಳಲ್ಲಿ ಮಾಂಗಲ್ಯ ಹೇಗೊ ಹಾಗೆ ಶ್ರೇಷ್ಠವಾದುದು, ಅಮೂಲ್ಯವಾದುದು ಎಂದು ಹೊಗಳಿಕೊಂಡಿದ್ದಾನೆ. ಕಥಾವಸ್ತು ಚಿಕ್ಕದಾಗಿರುವುದರಿಂದ ಅದನ್ನು ಬೆಳೆಸಲು ಸುಮಾರು 25 ಉಪಕಥೆಗಳನ್ನು ತಂದು ಸೇರಿಸಿದ್ದಾನೆ. ಕೆಲವೊಮ್ಮೆ ಈ ಕಥೆಗಳು ಔಚಿತ್ಯವರಿಯದೆ ಸೇರಿರುವುದರಿಂದ ಕಥಾಬಂಧ ಶಿಥಿಲವಾಗಿದೆ. ವರ್ಣನಾಂಶಗಳು ಕಡಿಮೆ. ಶೃಂಗಾರವರ್ಣನೆಗಳು ಮನೋಹರವಾಗಿವೆ. ಕಥೆಗಾರಿಕೆಯ ಶೈಲಿ ಚೆನ್ನಾಗಿದೆ. ಆಡುಭಾಷೆಯನ್ನು ಹೆಚ್ಚು ಬಳಸುವುದರಿಂದ ಶೈಲಿ ಸತ್ವಯುತವಾಗಿದೆ, ಸಹಜವಾಗಿದೆ. ಈ ದೃಷ್ಟಿಯಿಂದ ಇದು ಜನಪದಕಾವ್ಯ ಎನ್ನುವಂತಿದೆ.

'ಶಿಬಿರಾಯನ ಸ್ತುತಿ' ಸಾಂಗತ್ಯದಲ್ಲಿದ್ದು ಇದರಲ್ಲಿ 9 ಸಂಧಿಗಳೂ 955 ಪದ್ಯಗಳೂ ಇವೆ. 'ವೀರಸಂಗಯ್ಯನ ಚೌಪದ' 192 ಚೌಪದಗಳನ್ನುಳ್ಳ ಕೃತಿ. ಗಂಗೆಗೌರಿ ಚೌಪದದಲ್ಲಿ 98 ಚೌಪದಗಳಿವೆ. ಶ್ವೇತನವಾರ್ಧಕದಲ್ಲಿ 97 ವಾರ್ಧಕಷಟ್ಪದಿಗಳಿವೆ. ನೀಲಕಂಠಯ್ಯನ ಭಾಮಿನಿಯಲ್ಲಿ 43 ಭಾಮಿನಿ ಷಟ್ಪದಿಗಳಿವೆ. ಸಿರಿಯಾಳಸೆಟ್ಟಿವಾರ್ಧಕದಲ್ಲಿ 33 ವಾರ್ಧಕಷಟ್ಪದಿಗಳಿವೆ. ಈ ಕೃತಿಗಳ ಭಾಷೆ, ವರ್ಣನೆ ಸರಳವೂ ಮನೋಹರವೂ ಆಗಿದೆ. *

**ಅಕದಾಸ ಗಣಪತಿ ಭಟ್ಟ :** 1891-1944. ಸಮಾಜ ಸುಧಾರಕರು. ತಮ್ಮ ಇಡೀ ಜೀವನವನ್ನೇ ಬಾಲವಿಧವಾವಿವಾಹ ಮಾಡಿಸುವುದಕ್ಕೆ ಮುಡುಪಾಗಿಟ್ಟಿದ್ದವರು.

ಅಡಕೆ ವ್ಯಾಪಾರಸ್ಥರಾಗಿದ್ದ ನಾರಾಯಣ ಭಟ್ಟ ಅಕದಾಸರ ಪ್ರಥಮ ಪುತ್ರನಾಗಿ ಉತ್ತರ ಕನ್ನಡ ಜಿಲ್ಲೆ ಶಿರಸಿಯಲ್ಲಿ 1891 ಡಿಸೆಂಬರ್ 31ರಂದು ಜನಿಸಿದರು. ಇವರು ಸಿರಿವಂತಿಕೆಯಲ್ಲೇ ಬೆಳೆದರು, ಮಾಧ್ಯಮಿಕ ಶಿಕ್ಷಣ ಮುಗಿಸಿದರು. ಅನಂತರ ಸ್ವಾತಂತ್ರ್ಯ ಸಂಗ್ರಾಮದ ಕರೆಗೆ ಓಗೊಟ್ಟರು. ವಿಶಾಲ ಕೋಟೆಯಂತೆ ಇದ್ದ ಇವರ ಮನೆಯೇ ಸ್ವಾತಂತ್ರ್ಯ ಚಳವಳಿಯ ಗುಪ್ತಸಭೆಗಳಿಗೆ ಮತ್ತು ಸ್ವಾತಂತ್ರ್ಯ ಚಳವಳಿಯ ಮುಂದಾಳುಗಳಿಗೆ ಆಶ್ರಯವಾಯಿತು. ಕರಪತ್ರಗಳ ತಯಾರಿಕೆಗೆ ಗುಪ್ತಕೇಂದ್ರವಾಯಿತು. ಬಿಟ್ಟಿಸೇವೆಗಾಗಿ ಎತ್ತಿನಗಾಡಿಗಳನ್ನು ಒತ್ತಾಯಿಸುತ್ತಿದ್ದ ಸರ್ಕಾರದ ರೀತಿಯನ್ನು ಪ್ರತಿಭಟಿಸಿದರು. ಗುಂಡು ಹಾರಿಸಲು ಬಂದ ಆಂಗ್ಲ ಅಧಿಕಾರಿಯ ಮುಂದೆ ಎದೆಸೆಟೆದು ನಿಂತರು.

ಬಾಲವಿಧವೆಯರ ಚಿಂತಾಜನಕ ಪರಿಸ್ಥಿತಿಯನ್ನು ಕಂಡು ಕ್ರಮೇಣ ಗಣಪತಿ ಭಟ್ಟರ ಮನಸ್ಸು ಅವರ ಉದ್ಧಾರಕಾರ್ಯದ ಕಡೆ ಹರಿಯಿತು. ವಿಧವಾವಿವಾಹ ಪ್ರಚಾರಕಾರ್ಯ ಪ್ರಾರಂಭಿಸಿದರು. ಈ ಕಾರ್ಯವನ್ನು ಅನೇಕ ಸಂಪ್ರದಾಯವಾದಿಗಳೂ ಸ್ವತಃ ಬಾಲವಿಧವೆಯರೂ ಪ್ರತಿಭಟಿಸಿದರು, ಸಾಮಾಜಿಕ ಬಹಿಷ್ಕಾರ ಹಾಕಿದರು. ಗಣಪತಿ ಭಟ್ಟರು ವಿರೋಧವನ್ನು ಲೆಕ್ಕಿಸದೆ ತೊಂದರೆಗಳನ್ನು ಎದುರಿಸಿ, ಧೈರ್ಯದಿಂದ ತಮ್ಮ ಕಾರ್ಯವನ್ನು ಮುಂದುವರಿಸಿದರು. ಸಮಾಜ ಬಹಿಷ್ಕರಿಸಿದಾಗ ಇವರ ಮನೆಯೇ ವಿಧವಾವಿವಾಹದ ಕಲ್ಯಾಣ ಮಂದಿರವಾಯಿತು. ತಮ್ಮ ನೇತೃತ್ವದಲ್ಲಿ ನೂರಾಮೂರು ಬಾಲವಿಧವೆಯರ ಲಗ್ನಮಾಡಿಸಿ ಅವರ ಜೀವನವನ್ನು ಸುಗಮಗೊಳಿಸಿದರು.

ಗಣಪತಿ ಭಟ್ಟರು ತರುಣರಿದ್ದಾಗಲೇ 1929ರಲ್ಲಿ, ಇವರ ಪತ್ನಿ ತೀರಿಕೊಂಡರು. ಬಾಲವಿಧವೆಯಾದ ಸಾಗರದ ಮಂಕಾಳಮ್ಮ ಎಂಬುವರನ್ನು 1932ರಲ್ಲಿ ವಿವಾಹ ಮಾಡಿಕೊಂಡು ತಾವು ಪ್ರತಿಪಾದಿಸುತ್ತಿದ್ದ ತತ್ವಕ್ಕೆ ಮಾದರಿಯಾದರು. ಮುಂದೆ ಇಬ್ಬರೂ ಕೂಡಿ ಬಾಲವಿಧವೆಯರ ಕಲ್ಯಾಣಕಾರ್ಯದಲ್ಲಿ ಮಗ್ನರಾದರು.

ಬಾಲವಿಧವಾವಿವಾಹದ ಬಗ್ಗೆ ಇವರು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದರು. ಅನೇಕ ಕಡೆ ಉಪನ್ಯಾಸ ಮಾಡಿದರು. ವಿಧವಾ

ವಿವಾಹದ ಬಗ್ಗೆ ಅನೇಕ ಇಂಗ್ಲಿಷ್ ಪತ್ರಿಕೆಗಳಲ್ಲಿ ಬಂದ ಲೇಖನಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿ ಹಂಚಿದರು. ಕುಬೇರರಾವು ಗೌರೀಶರ "ಹಿಂದು ದೇಶದ ವಿಧವೆಯರು" ಎಂಬ ಗ್ರಂಥವನ್ನು ಕನ್ನಡಿಸಿ ಪ್ರಕಟಿಸಿದರು. ಬೆಂಗಳೂರಿನ ಸಿವಿಕ್ ಮತ್ತು ಸೋಷಿಯಲ್ ಪ್ರೋಗ್ರೆಸ್ ಅಸೋಸಿಯೇಷನ್ನಿನವರು 1936ರಲ್ಲಿ ಇವರ ಉಪನ್ಯಾಸಗಳನ್ನೆಲ್ಲ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಕಾವ್ಯಕಂಠವಾಸಿಷ್ಠ ಗಣಪತಿಮುನಿಗಳ ಸಮ್ಮುಖದಲ್ಲಿ ಶಿರಸಿ ತಾಲ್ಲೂಕಿನ ಮುಂಡಗೇಸರದಲ್ಲಿ 1933ರಲ್ಲಿ ಸೇರಿದ ಹವ್ಯಕಮಹಾಸಭೆಯಲ್ಲಿ ವಿಧವಾವಿವಾಹದ ಚರ್ಚೆ ನಡೆಯಿತು. ಆ ಸಭೆ ಗಣಪತಿಭಟ್ಟರ ಕಾರ್ಯವನ್ನು ಪ್ರಶಂಸಿಸಿತು.

ಇವರದು ಆಕರ್ಷಕ ವ್ಯಕ್ತಿತ್ವ, ಎತ್ತರದ ಸದೃಢ ನಿಲುವು. ಶುದ್ಧಖಾದಿಧಾರಿಗಳೂ ಸಂಘಟನಾಚತುರರೂ ಆಗಿದ್ದ ಇವರು ಹಳ್ಳಿ ಹಳ್ಳಿ ತಿರುಗುತ್ತ, ಕೊನೆಯುಸಿರಿರುವ ತನಕ ಮಹಿಳೋದ್ಧಾರಕ ಕಾರ್ಯಕರ್ತರಾಗಿ ನಿಷ್ಠೆಯಿಂದ ದುಡಿದರು. 1944 ಜೂನ್ 26ರಂದು ನಿಧನ ಹೊಂದಿದರು. **(ಆರ್.ಜಿ.ಆರ್.)**

**ಅಕಾಡೆಮಿಗಳು :** ಕನ್ನಡಸಾಹಿತ್ಯ, ಸಂಗೀತ, ನೃತ್ಯ, ಲಲಿತಕಲೆ, ಜಾನಪದ, ನಾಟಕ ಮೊದಲಾದ ಕ್ಷೇತ್ರಗಳ ಬೆಳವಣಿಗೆ ಮತ್ತು ಕಲಾವಿದರಿಗೆ ಪ್ರೋತ್ಸಾಹ ಈ ಉದ್ದೇಶಗಳಿಂದ ಕರ್ನಾಟಕ ಸರ್ಕಾರ ವಿವಿಧ ಅಕಾಡೆಮಿಗಳನ್ನು ಕಾಲಕಾಲಕ್ಕೆ ರಚಿಸಿದೆ. ಈ ಅಕಾಡೆಮಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿದ್ದರೂ

ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದಲ್ಲಿ ಒಟ್ಟು 10 ಅಕಾಡೆಮಿಗಳನ್ನು ರಚಿಸಲಾಗಿದೆ. ಕನ್ನಡಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗಾಗಿ ರಚಿಸಲಾಗಿರುವ ಅಕಾಡೆಮಿಗಳಲ್ಲದೆ ಕನ್ನಡದ ಉಪಭಾಷೆಗಳಾದ ತುಳು, ಕೊಡವಭಾಷೆ ಸಾಹಿತ್ಯ ಇವುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕೊಡವ ಮತ್ತು ತುಳು ಸಾಹಿತ್ಯ ಅಕಾಡೆಮಿಗಳನ್ನು ರಚಿಸಲಾಗಿದೆ. ಇದಲ್ಲದೆ ಉರ್ದು ಮತ್ತು ಕೊಂಕಣಿ ಅಕಾಡೆಮಿಗಳು ಕೂಡ ಅಸ್ತಿತ್ವದಲ್ಲಿವೆ. ಆಯಾ ಭಾಷೆಗಳ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ಈ ಅಕಾಡೆಮಿಗಳು ಹಮ್ಮಿಕೊಂಡಿವೆ. ಕರ್ನಾಟಕ ನಾಟಕ ಅಕಾಡಮಿ, ತುಳು, ಕೊಂಕಣಿ ಮತ್ತು ಪತ್ರಿಕ ಅಕಾಡೆಮಿಗಳನ್ನುಳಗೊಂಡ ಅಕಾಡೆಮಿಗಳು ಬೆಂಗಳೂರಿನ ಕನ್ನಡ ಭವನದಲ್ಲಿ ತಮ್ಮ ಕಚೇರಿಗಳನ್ನು ಹೊಂದಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ವಿವಿಧ ಅಕಾಡೆಮಿಗಳ ಕಾರ್ಯಯೋಜನೆಯನ್ನು ಕುರಿತು ಸ್ಥೂಲವಾದ ಮಾಹಿತಿ ನೀಡಲಾಗಿದೆ.

**ಕರ್ನಾಟಕ ಸಾಹಿತ್ಯ ಅಕಾಡೆಮಿ :** ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಸರ್ಕಾರ ಈ ಅಕಾಡೆಮಿಯನ್ನು ಸ್ಥಾಪಿಸಿತು (1961). ಇದರ ಕೇಂದ್ರ ಕಚೇರಿ ಬೆಂಗಳೂರು. ಸಾಹಿತ್ಯ ಕ್ಷೇತ್ರದಲ್ಲಿ ಅಧ್ಯಯನ ಹಾಗೂ ಸಂಶೋಧನೆಗೆ ಪ್ರೋತ್ಸಾಹ, ಶ್ರೇಷ್ಠ ಸಾಹಿತ್ಯ ಕೃತಿಗಳಿಗೆ ಬಹುಮಾನ ಮತ್ತು ಸಾಹಿತಿಗಳಿಗೆ ಪ್ರಶಸ್ತಿ ಪ್ರದಾನ, ಸಾಹಿತ್ಯಸಂಕಿರಣ, ಅಶಕ್ತ ಹಿರಿಯ ಲೇಖಕರ ಆರ್ಥಿಕ ಸಹಾಯಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಮುಂತಾದವು ಈ ಅಕಾಡೆಮಿಯ ಉದ್ದೇಶ. ಆರಂಭದಲ್ಲಿ ರಾಜ್ಯ ಸರ್ಕಾರದ ಶಿಕ್ಷಣ ಸಚಿವರು ಅಕಾಡೆಮಿಯ ಅಧ್ಯಕ್ಷರಾಗಿ

ಕನ್ನಡ ಭವನ, ಬೆಂಗಳೂರು

ಕಾರ್ಯನಿರ್ವಹಿಸುತ್ತಿದ್ದರು. 1978ರ ಅನಂತರ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದವರನ್ನು ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸುವ ವ್ಯವಸ್ಥೆ ಜಾರಿಗೆ ಬಂತು. ಅಕಾಡೆಮಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಂದು ಭಾಗವಾಗಿದ್ದರೂ ತನ್ನ ಕಾರ್ಯಚಟುವಟಿಕೆಗಳಿಗೆ ಆಂತರಿಕ ಸ್ವಾಯತ್ತತೆ ಪಡೆದಿದೆ.

ಅಕಾಡೆಮಿಯ ಅಧ್ಯಕ್ಷರ ಕಾಲಾವಧಿ ಮೂರು ವರ್ಷಗಳು. ಇವರೊಡನೆ 19ಮಂದಿ ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಿರುತ್ತಾರೆ. ಹೀಗೆ ನಾಮಕರಣಗೊಂಡ ಸದಸ್ಯರು 5ಜನ ಸಹ ಸದಸ್ಯರನ್ನು ಆಯ್ದುಕೊಳ್ಳಲು ಅವಕಾಶವಿದೆ. ಅಕಾಡೆಮಿಯ ಕಾರ್ಯ ನಿರ್ವಹಣೆಗೆ ಒಂದು ಕಾರ್ಯನಿರ್ವಾಹಕ ಸಮಿತಿ ಮತ್ತು ಇತರ ಕಾರ್ಯ ಚಟುವಟಿಕೆಗಳಿಗೆ ಅಗತ್ಯಕ್ಕೆ ತಕ್ಕಂತೆ ಉಪಸಮಿತಿಗಳನ್ನು ರಚಿಸಿಕೊಳ್ಳುವ ಅಧಿಕಾರ ಅಕಾಡೆಮಿಗೆ ಇದೆ. ಇದಲ್ಲದೆ ಒಬ್ಬರು ರಿಜಿಸ್ಟ್ರಾರ್ ಹಾಗೂ ಅರ್ಥ ಸದಸ್ಯರನ್ನು ಸರ್ಕಾರ ನಿಯೋಜಿಸುತ್ತದೆ. ರಿಜಿಸ್ಟ್ರಾರರು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಇದುವರೆಗೆ ಅಕಾಡೆಮಿಯ ಅಧ್ಯಕ್ಷರಾಗಿ 15 ಗಣ್ಯರು ಕಾರ್ಯನಿರ್ವಹಿಸಿದ್ದಾರೆ: ಎಸ್.ಆರ್. ಕಂಠಿ (1961-66), ಕೆ.ವಿ. ಶಂಕರೇಗೌಡ (1968-70), ಅ.ನ.ಕೃಷ್ಣರಾಯ (1971), ಆದ್ಯರಂಗಾಚಾರ್ಯ (1971-72), ಎ.ಆರ್.ಬದ್ರಿನಾರಾಯಣ್ (1973-74), ಎಂ.ಮಲ್ಲಿಕಾರ್ಜುನಸ್ವಾಮಿ (1974-76), ಆರ್.ಗುಂಡೂರಾವ್ (1976), ಕೆ.ಎಚ್.ಶ್ರೀನಿವಾಸ್ (1976), ಎಂ.ಶಿವರಾಂ (1978-80), ಹಾ.ಮಾ.ನಾಯಕ (1980-84), ಕೆ.ಎಸ್.ನಿಸಾರ್ ಅಹಮದ್ (1984-87), ಜಿ.ಎಸ್.ಶಿವರುದ್ರಪ್ಪ (1987-90), ಬರಗೂರು ರಾಮಚಂದ್ರಪ್ಪ (1991-95), ಶಾಂತರಸ(1995-98), ಗಿರಡ್ಡಿಗೋವಿಂದರಾಜ (1998-2001). ಹಾಗೂ ಗುರುಲಿಂಗ ಕಾಪಸೆ (2001-2004).

ಸಾಹಿತ್ಯಅಕಾಡೆಮಿ ಇಲ್ಲಿಯವರೆಗೆ ನೂರಾರು ವಿಚಾರ ಸಂಕಿರಣಗಳು, ಸಾಹಿತ್ಯಸಂವಾದಗಳು, ಕವಿಗೋಷ್ಠಿಗಳು ಮತ್ತು ಕವಿಸಮ್ಮೇಳನಗಳನ್ನು ನಡೆಸಿದೆ. ಯುವ ಲೇಖಕರಿಗಾಗಿ ಕಾವ್ಯರಚನಾ ಕಮ್ಮಟ, ಮಕ್ಕಳಸಾಹಿತ್ಯ ರಚನಾ ಕಮ್ಮಟ, ಹಿರಿಯಸಾಹಿತಿಗಳ ಜನ್ಮಶತಮಾನೋತ್ಸವ ನಿಮಿತ್ತ ಸಾಹಿತ್ಯಗೋಷ್ಠಿಗಳನ್ನೂ ನಡೆಸಲಾಗಿದೆ. ರಾಜ್ಯಾದ್ಯಂತ ವಿವಿಧ ಸಂಘ ಸಂಸ್ಥೆಗಳು ಹಮ್ಮಿಕೊಳ್ಳುವ ಸಾಹಿತ್ಯಕ ಚಟುವಟಿಕೆಗಳಿಗೆ ಸಹಯೋಗದ ಆರ್ಥಿಕನೆರವು ಒದಗಿಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಮೊದಲಾದ ಸಂಸ್ಥೆಗಳೊಂದಿಗೆ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ನಡೆಸಿದೆ.

ಅಕಾಡೆಮಿ ಇದುವರೆಗೆ 475ಕ್ಕೂ ಹೆಚ್ಚು ವೈವಿಧ್ಯಮಯ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಮುಖ್ಯವಾದವು: ವಾರ್ಷಿಕ ಸಂಕಲನಗಳು, ವಿಚಾರ ಸಂಕಿರಣಮಾಲೆ, ಸಾಮಾಜಿಕ ಚಿಂತನಮಾಲೆ, ಜ್ಞಾನಪೀಠ ಪ್ರಶಸ್ತಿ ವಿಜೇತ ಲೇಖಕರಮಾಲೆ, ಉಪಸಂಸ್ಕೃತಿ ಅಧ್ಯಯನ, ಕನ್ನಡ ಸಾಹಿತ್ಯ: ಕಾಲುಶತಮಾನ, ಮುತ್ತಿನಹಾರಮಾಲಿಕೆ, ಮರೆಯಲಾಗದ ಬರೆಹಗಾರರು, ಕನ್ನಡಸಾಹಿತ್ಯ ಪುನರ್ಮೌಲ್ಯೀಕರಣಮಾಲೆ, ದಶವಾರ್ಷಿಕ ಸಂಕಲನಗಳು, ಶತಮಾನದ ಸಂಪುಟಗಳು, ಕವಿ ಕೃತಿ, ಆಧುನಿಕ ಚಿಂತನಮಾಲೆ ಇದಲ್ಲದೆ ಕಾಲಕಾಲಕ್ಕೆ ಕನ್ನಡದಲ್ಲಿ ಬರುವ ಮಹತ್ವದ ಕತೆ, ಕವನ, ಪ್ರಬಂಧ, ವಿಮರ್ಶೆ, ವಿಚಾರ ಸಾಹಿತ್ಯಗಳನ್ನು ಜನತೆಗೆ ತಲಪಿಸುವ ದೃಷ್ಟಿಯಿಂದ ಅನಿಕೇತನ ತ್ರೈಮಾಸಿಕವನ್ನು ಪ್ರಕಟಿಸುತ್ತಿದೆ. ಕನ್ನಡದಿಂದ ಕಾಲಕಾಲಕ್ಕೆ ಬೇರೆ ಭಾಷೆಗೆ ಅನುವಾದಗೊಳ್ಳುವ ಬರವಣಿಗೆ ಕುರಿತು ಇಂಗ್ಲಿಷ್ ತ್ರೈಮಾಸಿಕವನ್ನೂ ಪ್ರಕಟಿಸಲಾಗುತ್ತಿದೆ. ಪ್ರತಿ ಎರಡು ತಿಂಗಳಿಗೊಮ್ಮೆ ಅಕಾಡೆಮಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ವಾರ್ತಾಪತ್ರ ಪ್ರಕಟವಾಗುತ್ತದೆ.

ಪ್ರತಿವರ್ಷ ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಕೃತಿಗಳನ್ನು ಪರಿಶೀಲಿಸಿ ಕತೆ, ಕಾವ್ಯ, ಕಾದಂಬರಿ, ನಾಟಕ, ಪ್ರವಾಸ ಸಾಹಿತ್ಯ, ಲಲಿತ ಪ್ರಬಂಧ, ಮಕ್ಕಳಸಾಹಿತ್ಯ, ವಿಜ್ಞಾನಸಾಹಿತ್ಯ ಮೊದಲಾದ 18 ಪ್ರಕಾರ ಗಳಲ್ಲಿನ ಒಂದೊಂದು ಮಹತ್ವದ ಕೃತಿಗೆ ಐದು ಸಾವಿರ ರೂಪಾಯಿ ನಗದು ಬಹುಮಾನ ಹಾಗೂ ಪ್ರಶಸ್ತಿಪತ್ರ ನೀಡಲಾಗುತ್ತದೆ. ಇಲ್ಲಿಯವರೆಗೆ ಸು.448 ಕೃತಿಗಳಿಗೆ ಬಹುಮಾನ ನೀಡಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಅನುಪಮ ಸೇವೆ ಸಲ್ಲಿಸಿದ ಸಾಹಿತಿಗಳ ಸಾಧನೆಯನ್ನು ಪರಿಗಣಿಸಿ ಪ್ರತಿವರ್ಷ ಐದು ಜನರಿಗೆ ಅಕಾಡೆಮಿಯ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತಿದೆ. ಈ ಪ್ರಶಸ್ತಿಯ ಮೌಲ್ಯ 10 ಸಾವಿರ ರೂಪಾಯಿಗಳು. ಇದರೊಂದಿಗೆ ಪ್ರಶಸ್ತಿಪತ್ರ ಹಾಗೂ ಸ್ಮರಣ ಫಲಕವನ್ನು ನೀಡಲಾಗುತ್ತಿದೆ.

**ಜಾನಪದ ಮತ್ತು ಯಕ್ಷಗಾನ ಅಕಾಡೆಮಿ:** ಕರ್ನಾಟಕದ ಸಮೃದ್ಧ ಜಾನಪದವನ್ನೂ ಕರಾವಳಿಯ ಯಕ್ಷಗಾನ ಕಲೆಯನ್ನೂ ಪ್ರೋತ್ಸಾಹಿಸುವ ಮತ್ತು ಅವುಗಳನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ಈ ಅಕಾಡೆಮಿ ಅಸ್ತಿತ್ವಕ್ಕೆ ಬಂತು (1980). ಇದರ ಕೇಂದ್ರಕಚೇರಿ ಬೆಂಗಳೂರು. ಜಾನಪದ ಮತ್ತು ಯಕ್ಷಗಾನ ಕಲೆಗಳಿಗೆ ಸಂಬಂಧಿಸಿದಂತೆ ವಿವಿಧ ಪ್ರದೇಶಗಳ ನಡುವೆ ವಿಚಾರವಿನಿಮಯ, ಜನಪದಸಾಹಿತ್ಯ ಸಂಗ್ರಹಣೆ, ಪ್ರಕಟಣೆ, ಗ್ರಂಥಭಂಡಾರದ ಸ್ಥಾಪನೆ, ಕಲೆ ಕಲಾವಿದರನ್ನು ಗುರುತಿಸಿ ಗೌರವಿಸುವುದು, ಜಾನಪದಕ್ಕೆ ಅಗತ್ಯ ಪ್ರಚಾರ ಹಾಗೂ ಸೌಲಭ್ಯ ನೀಡುವುದು ಮುಂತಾದವು ಈ ಅಕಾಡೆಮಿಯ ಉದ್ದೇಶಗಳು.

ಅಧ್ಯಕ್ಷರು ಅಕಾಡೆಮಿಯ ಮುಖ್ಯಸ್ಥರು. ಇವರ ಕಾಲಾವಧಿ ಮೂರು ವರ್ಷಗಳು. ಇವರೊಡನೆ 20 ನಾಮಕರಣಗೊಂಡ ಸದಸ್ಯರಿರುತ್ತಾರೆ. ಇವರ ಕಾಲಾವಧಿ ಮೂರು ವರ್ಷಗಳು. ಸದಸ್ಯರನ್ನು

ಸರ್ಕಾರ ನಾಮಕರಣ ಮಾಡುತ್ತದೆ. ಹೀಗೆ ನಾಮಕರಣಗೊಂಡ ಸದಸ್ಯರು ಮತ್ತೆ ನಾಲ್ಕುಜನ ಸಹ ಸದಸ್ಯರನ್ನು ಆಯ್ದುಕೊಳ್ಳಲು (ಕೋಆಪ್ಟ್) ಅವಕಾಶವಿದೆ. ಆಡಳಿತದಲ್ಲಿ ನೆರವು ನೀಡಲು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಒಬ್ಬರು ರಿಜಿಸ್ಟ್ರಾರ್ ಮತ್ತು ಲೆಕ್ಕಪತ್ರಗಳನ್ನು ನೋಡಿಕೊಳ್ಳಲು ಒಬ್ಬರು ವಿತ್ತಾಧಿಕಾರಿಗಳನ್ನೂ ಸರ್ಕಾರ ನಿಯೋಜಿಸುವುದು. ಕಾರ್ಯಕ್ರಮಗಳನ್ನು ರೂಪಿಸಲು, ಯೋಜನೆಗಳನ್ನು ತಯಾರಿಸಲು ಅಧ್ಯಕ್ಷರು, ಅಧಿಕಾರಿಗಳ ಜೊತೆ ಸ್ಥಾಯೀಸಮಿತಿಗಳೂ ಉಪಸಮಿತಿಗಳೂ ಇರುತ್ತವೆ. ಯೋಜನೇತರ ಕಾರ್ಯಕ್ರಮಗಳನ್ನು ಪ್ರಜಾಪ್ರಭುತ್ವದ ನೆಲೆಯಲ್ಲಿ ಜಾರಿಗೊಳಿಸಲಾಗುತ್ತದೆ.

ಇದುವರೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಆರು ಜನರು ಕಾರ್ಯನಿರ್ವಹಿಸಿದ್ದಾರೆ. ಎಚ್.ಎಲ್.ನಾಗೇಗೌಡ ಮೊದಲನೆಯ ಅಧ್ಯಕ್ಷರಾಗಿ ಎರಡು ಅವಧಿಗೆ ಕೆಲಸ ನಿರ್ವಹಿಸಿದ್ದಾರೆ (1980-1987). ಅನಂತರ ಎಸ್.ಕೆ.ಕರೀಂಖಾನ್ (1987-90), ಜೀ.ಶಂ.ಪರಮಶಿವಯ್ಯ (1991-95), ಎಚ್.ಜೆ.ಲಕ್ಕಪ್ಪಗೌಡ (1995-98) ಕಾಳೇಗೌಡ ನಾಗವಾರ (1998-2001). ಹಿ.ಶಿ.ರಾಮಚಂದ್ರೇಗೌಡ (2001-2004) ಅಧ್ಯಕ್ಷರಾಗಿದ್ದರು.

ಅಕಾಡೆಮಿ ಜಾನಪದ ಕೃತಿಗಳ ಪ್ರಕಟಣೆ, ಸಂಗ್ರಹಣೆ, ಸಂಪಾದನೆಗೆ ವಿಶೇಷ ಮಹತ್ವ ನೀಡಿದೆ. ಜಾನಪದ ಗಂಗೋತ್ರಿ ಎಂಬ ತ್ರೈಮಾಸಿಕ ಪತ್ರಿಕೆ ಪ್ರಕಟಿಸುತ್ತಿದೆ. ಕರ್ನಾಟಕದ ವಿವಿಧೆಡೆ ನಡೆವ ಜಾತ್ರೆಗಳ ಬಗ್ಗೆ ವಿವರ ನೀಡುವ ಜಾತ್ರೆಯ ಮಾಲಿಕೆ ಪ್ರಕಟಿಸಿದೆ. ಶಿಷ್ಟಸಾಹಿತ್ಯಕ್ಕೂ ಜಾನಪದ ಸಾಹಿತ್ಯಕ್ಕೂ ಇರುವ ನಿಕಟ ಸಂಬಂಧ ಹಾಗೂ ಸಂವೇದನೆಗಳನ್ನು ತೆರೆದು ತೋರಿಸುವ ಮಾಲಿಕೆಯನ್ನು ಹೊರತಂದಿದೆ. ಇವಲ್ಲದೆ ಜಾನಪದಕ್ಕಾಗಿ ದುಡಿದ ಮಹನೀಯರ ಬಗ್ಗೆ, ರಾಷ್ಟ್ರೀಯ ಅಂತಾರಾಷ್ಟ್ರೀಯ ಜಾನಪದದ ಬಗ್ಗೆ ಮಾಹಿತಿಗಳನ್ನು ನೀಡುವ ಹತ್ತು ಹಲವು ಕೃತಿಗಳನ್ನು ಕೂಡ ಪ್ರಕಟಿಸಿದೆ. ಜಾನಪದ ಸಂಬಂಧವಾದ ವಸ್ತುವಿಷಯ, ಸಂಕಿರಣ, ಕಮ್ಮಟ, ಕಾರ್ಯಾಗಾರ ಇತ್ಯಾದಿಗಳ ವಿವರ ನೀಡುವ ಜಾನಪದ ಸಮಾಚಾರ ಎಂಬ ಪತ್ರಿಕೆಯನ್ನು 1995ರಿಂದ ಅನಿಯತಕಾಲಿಕವಾಗಿ ಪ್ರಕಟಿಸುತ್ತಿದೆ.

ಪುಸ್ತಕ ಪ್ರಕಟಣೆಯ ಜೊತೆಗೆ ಜನಪದ ಸಂಸ್ಕೃತಿಯ ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ ಕೆಲಸಗಳನ್ನೂ ಅಕಾಡೆಮಿ ನಡೆಸಿಕೊಂಡು ಬರುತ್ತಿದೆ. ಇವುಗಳಲ್ಲಿ ಕರ್ನಾಟಕದ ಬುಡಕಟ್ಟುಗಳು, ದೊಡ್ಡಾಟ, ಯಕ್ಷಗಾನ, ಜಾತ್ರೆ - ಆಚರಣೆಗಳು ಇವುಗಳಿಗೆ ಸಂಬಂಧಿಸಿದಂತೆ ವಿಡಿಯೋ ದಾಖಲಾತಿಗಳ ಬೃಹತ್ ಭಂಡಾರವೇ ಇದೆ.

ಕಾಲಕಾಲಕ್ಕೆ ಜಾನಪದಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣ, ಕಮ್ಮಟ, ಕಾರ್ಯಾಗಾರಗಳನ್ನೂ ಅಕಾಡೆಮಿ ನಡೆಸುತ್ತಿದೆ. ಇವುಗಳಲ್ಲಿ ಸಮೂಹ ಮಾಧ್ಯಮಗಳು ಮತ್ತು ಜಾನಪದ, ಜನಪದ ಆಟಗಳು, ಜಾನಪದ ವೈಜ್ಞಾನಿಕ ನೆಲೆಗಳು, ವೃತ್ತಿಗಾಯಕರಮೇಳ, ವಾದ್ಯಸಮ್ಮೇಳನ, ಸ್ವಾತಂತ್ರ್ಯ ಸಂಗ್ರಾಮದ ಲಾವಣಿ ಸಮ್ಮೇಳನ, ನವರಾತ್ರಿ ಜಾನಪದ ರಂಗೋತ್ಸವ, ಆದಿವಾಸಿ ಜಾನಪದ ಕಲಾಮಹೋತ್ಸವ, ರೈತಜಾನಪದೀಯ ಅಧ್ಯಯನ, ಜಾನಪದ ಮತ್ತು ಜಾಗತೀಕರಣ, ಜನಪದ ಮಹಾಕಾವ್ಯಗಳು, ಗೀಗೀಸಂಭ್ರಮ, ಮೂಡಲವೈಭವ, ಹೊಯ್ಸಳವೈಭವ, ಸ್ವಾತಂತ್ರ್ಯಸಂಗ್ರಾಮ ಹಾಗೂ ಜಾನಪದ, ವೀರ ಜಾನಪದ, ಮಹಿಳಾ ಜಾನಪದ, ಪರಿಸರ ಜಾನಪದ - ಇವು ವಿಶಿಷ್ಟ ಕಾರ್ಯಕ್ರಮಗಳೆನಿಸಿವೆ.

ಕರ್ನಾಟಕವನ್ನು ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡ ಅಕಾಡೆಮಿ ಕೇಂದ್ರ ಮಾನವಸಂಪನ್ಮೂಲ ಇಲಾಖೆ, ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರಗಳಿಂದ (ತಂಜಾವೂರು, ನಾಗಪುರ) ನೆರವು ಪಡೆದು ಅನೇಕ ಕಾರ್ಯಕ್ರಮಗಳನ್ನು ನಡೆಸಿದೆ. ಅಕಾಡೆಮಿ ಜಾನಪದಕ್ಕಾಗಿ ದುಡಿಯುತ್ತಿರುವವರನ್ನು ಗುರುತಿಸಿ, ಗೌರವಿಸಿದೆ. ಜಾನಪದ ಸಂಬಂಧಿಯಾದ ಕೃತಿಗಳಿಗೆ ಪ್ರಶಸ್ತಿ ನೀಡುವುದು, ವಿದ್ವಾಂಸರಿಗೆ ಜಾನಪದತಜ್ಞ ಎಂಬ ಪ್ರಶಸ್ತಿ ನೀಡುವುದು. ಇಂಥ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ಇಪ್ಪತ್ತೊಂದನೆಯ ಶತಮಾನ ಆಗಮಿಸಿದ ಸಂಕ್ರಮಣ ಕಾಲದಲ್ಲಿ ಸಹಸ್ರಮಾನ ಜಾನಪದ ಸಂಪುಟಗಳ ಮಾಲಿಕೆಯಲ್ಲಿ ವೃತ್ತಿಗಾಯಕರು, ಯಕ್ಷಗಾನ, ಬುಡಕಟ್ಟು, ಗಿರಿಜನಕಾವ್ಯ, ಸಂಸ್ಕೃತಿ, ಜನಪದತತ್ತ್ವ ಪದಗಳು, ತಜ್ಞರ ಅಧ್ಯಯನ ಟಿಪ್ಪಣಿಗಳು, ಕಲಾವಿದರ ಒಡನಾಟದ ಟಿಪ್ಪಣಿಗಳು, ಎಳೆಯರಿಗಾಗಿ ಜಾನಪದ ಸಂಪುಟಗಳನ್ನು ಕೂಡ ಅಕಾಡೆಮಿ ಹೊರತಂದಿದೆ. ಅಕಾಡೆಮಿ ಇದುವರೆಗೆ 83 ಪುಸ್ತಕಗಳನ್ನು ಪ್ರಕಟಿಸಿದೆ (2003).

**ನಾಟಕ ಅಕಾಡೆಮಿ :** ಕನ್ನಡ ರಂಗಭೂಮಿಯ ಬೆಳವಣಿಗೆ, ಅಧ್ಯಯನ, ಸಂಶೋಧನಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರ 1978 ರಲ್ಲಿ ಸ್ಥಾಪಿಸಿದ ಅಕಾಡೆಮಿ. ಮೂರು ವರ್ಷದ ಅವಧಿಗೆ ಒಬ್ಬ ಅಧ್ಯಕ್ಷರು ಹಾಗೂ 19ಜನ ಸದಸ್ಯರನ್ನು ಸರ್ಕಾರ ನಾಮಕರಣ ಮಾಡುತ್ತದೆ. ಅನಂತರ ಇನ್ನೂ ಐದುಜನ ಸಹಸದಸ್ಯರನ್ನು ಆಯ್ಕೆ (ಕೋಆಪ್ಟ್) ಮಾಡಿಕೊಳ್ಳಲಾಗುತ್ತದೆ. ಕರ್ನಾಟಕದಲ್ಲಿ ನಾಟಕ ಕ್ಷೇತ್ರದಲ್ಲಿನ ಅರ್ಹ ಸಂಸ್ಥೆಗಳಿಗೆ ಮನ್ನಣೆ ನೀಡುವುದಲ್ಲದೆ ಇತರ ರೀತಿಯಲ್ಲಿ ಸಹಾಯ ನೀಡುತ್ತಿದೆ. ರಂಗಭೂಮಿಗೆ ಸಂಬಂಧಿಸಿದಂತೆ ವಿವಿಧ ಪ್ರದೇಶಗಳ ವಿಚಾರ ಹಾಗೂ ತಂತ್ರಗಳ ವಿನಿಮಯ ಮಾಡಿಕೊಳ್ಳುವ ಮೂಲಕ ಈ ಕಲೆಗೆ ಉತ್ತೇಜನ ನೀಡುತ್ತದೆ.

ರಾಜ್ಯದ ವಿವಿಧ ಪ್ರದೇಶಗಳಲ್ಲಿರುವ ನಾಟಕದ ವಿವಿಧ ಪ್ರಕಾರಗಳನ್ನು ಪುನರವಲೋಕಿಸುವುದು ಮತ್ತು ಅವುಗಳನ್ನು ಉಳಿಸಿಕೊಂಡು ಬರುವುದು ಮತ್ತು ಸಮುದಾಯ ನಾಟಕ ಮತ್ತು ವಸ್ತುನಿಷ್ಠ ನಾಟಕ ಮತ್ತು ಅದೇ ಬಗೆಯ ನಾಟಕಕ್ಕೆ ಉತ್ತೇಜನ ನೀಡುವುದು ಮತ್ತು ಅಭಿವೃದ್ಧಿಗೊಳಿಸುವುದು ಅಕಾಡೆಮಿಯ ಉದ್ದೇಶವಾಗಿದೆ.

ರಂಗಭೂಮಿಯ ಸರ್ವಾಂಗೀಣ ಅಭಿವೃದ್ಧಿಗೆ ದುಡಿದ ಮಹನೀಯರನ್ನು ಗೌರವಿಸುವ ಸಾಂಸ್ಕೃತಿಕ ಜವಾಬ್ದಾರಿಯನ್ನು ಈ ಅಕಾಡೆಮಿ ಮೊದಲಿನಿಂದಲೂ ನಿರ್ವಹಿಸುತ್ತ ಬಂದಿದೆ. ಇದುವರೆಗೆ ಈ ಅಕಾಡೆಮಿ 42 ಜನರಿಗೆ ಗೌರವ ಫೆಲೋಷಿಪ್, 385 ಜನರಿಗೆ ಗೌರವ ಪ್ರಶಸ್ತಿ, 51 ಜನರಿಗೆ ಪುರಸ್ಕಾರ ಪ್ರಶಸ್ತಿ, ಪದ್ದಣ್ಣ ಹೆಸರಿನಲ್ಲಿ 31 ಜನರಿಗೆ ಪದ್ದಣ್ಣಶ್ರಮಪ್ರಶಸ್ತಿ, ವರ್ಷದ ಕಂಪನಿ ಪ್ರಶಸ್ತಿ ಹಾಗೂ ಕಲಾಕೌಸ್ತುಭ ಬಿರುದು ಪ್ರಶಸ್ತಿ ನೀಡಿ ಒಟ್ಟು 511 ಮಹನೀಯರನ್ನು ಗೌರವಿಸಲಾಗಿದೆ. 2001ರಿಂದ ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ಎನ್ನುವ ಒಂದೇ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡುತ್ತಿದೆ.

ಅಕಾಡೆಮಿಗೆ ಇಲ್ಲಿಯವರೆಗೆ ಗಿರೀಶ್‌ಕಾರ್ನಾಡ್ (1977-80), ಬಿ.ವಿ.ಕಾರಂತ (1980-82), ಚಂದ್ರಶೇಖರ ಕಂಬಾರ (1982-87), ಬಿ.ವಿ. ವೈಕುಂಠರಾಜು (1987-89), ಪರ್ವತವಾಣಿ (1989-90), ಚಿಂದೋಡಿ ಲೀಲಾ (1991-95), ಕೆ.ಮರುಳಸಿದ್ದಪ್ಪ (1995-98), ಸಿ.ಜಿ.ಕೃಷ್ಣಸ್ವಾಮಿ (1998-2001) ಆರ್.ನಾಗೇಶ್ (2001-2004) ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ತನ್ನ ಕಾರ್ಯವ್ಯಾಪ್ತಿಗೆ ಒಳಪಡುವ ಕಲಾಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯಮಟ್ಟದಲ್ಲಿ (ಹೊರ ರಾಜ್ಯವೂ ಸೇರಿದಂತೆ) ಜಿಲ್ಲಾಮಟ್ಟ, ವಿಭಾಗ ಮಟ್ಟ, ತಾಲ್ಲೂಕುಮಟ್ಟ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆದ್ಯತೆಯ ಮೇಲೆ ವೃತ್ತಿ, ಹವ್ಯಾಸಿ, ಜಾನಪದ, ಮಕ್ಕಳ, ಕಾಲೇಜು ವಿದ್ಯಾರ್ಥಿಗಳ, ಕಾರ್ಮಿಕರ, ಗಿರಿಜನರ, ಪರಿಶಿಷ್ಟ ಜಾತಿ ವರ್ಗದವರ ನಾಟಕೋತ್ಸವಗಳನ್ನು ಏರ್ಪಡಿಸುತ್ತದೆ. ರಂಗಭೂಮಿಗೆ ಸಂಬಂಧಿಸಿದಂತೆ ವಿವಿಧ ಗಣ್ಯವ್ಯಕ್ತಿಗಳನ್ನು ಕುರಿತು ವಿಚಾರಸಂಕಿರಣಗಳನ್ನು ಏರ್ಪಡಿಸಲಾಗುತ್ತದೆ. ರಾಜ್ಯದ ಹಿರಿಯ, ಕಿರಿಯ, ಯುವ ಹಾಗೂ ಉದಯೋನ್ಮುಖ ರಂಗಾಸಕ್ತರಿಗಾಗಿ ರಂಗ ಸಂವಾದ, ರಂಗಸಮಾಗಮ, ನಾಟಕರಚನಾಕಮ್ಮಟ, ಕಾರ್ಯಾಗಾರ, ರಂಗ ಸಂಗೀತಕಮ್ಮಟ, ವಿವಿಧ ರಂಗಸಂಸ್ಕೃತಿಯ ಮುಖಾಮುಖಿ, ರಂಗ ತಂತ್ರಗಳ ವಿನಿಮಯ ಕಾರ್ಯಕ್ರಮಗಳನ್ನು ನಡೆಸಿದೆ.

ರಾಷ್ಟ್ರೀಯ ನಾಟಕಗಳ ಉತ್ಸವ, ರಂಗಯುಗಾದಿ, ಸಂಕ್ರಾಂತಿ, ಗ್ರಾಮೀಣ ಮಟ್ಟದಲ್ಲಿ ನಾಟಕಸ್ಪರ್ಧೆ, ಹೊರರಾಜ್ಯಗಳಲ್ಲಿ ನಾಟಕೋತ್ಸವ, ಅನುವಾದ ಕಮ್ಮಟ, ವಿವಿಧ ಭಾಷಾ ನಾಟಕೋತ್ಸವ, ಸಂವಾದ- ಹೀಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಕಲಾವಿದರ ಪರಿಚಯ ಪುಸ್ತಕ, ವಿಚಾರಸಂಕಿರಣ ಪುಸ್ತಕಗಳು, ನಾಟಕ ಪ್ರಕಟಣೆ, ವ್ಯಕ್ತಿ ಪರಿಚಯ, ರಂಗಭೂಮಿ ಸಮೀಕ್ಷೆ, ಅಕಾಡೆಮಿಯ ವಾರ್ತಾಪತ್ರ ಇವು ಅಕಾಡೆಮಿಯ ಪ್ರಕಟಣೆಗಳಲ್ಲಿ ಸೇರಿವೆ.

**ಸಂಗೀತ ನೃತ್ಯ ಅಕಾಡೆಮಿ :** ಲಲಿತಕಲೆಗಳ ಪುನರುಜ್ಜೀವನದ ಉದ್ದೇಶದಿಂದ ಕರ್ನಾಟಕ ಸರ್ಕಾರ ಸ್ಥಾಪಿಸಿದ (1964)

ಅಕಾಡೆಮಿಗಳಲ್ಲೊಂದು. ಪ್ರಾರಂಭದಲ್ಲಿ ಶಿಕ್ಷಣಸಚಿವರು ಇದರ ಅಧ್ಯಕ್ಷರಾಗಿದ್ದರು. 1978ರ ಬಳಿಕ ಅಕಾಡೆಮಿ ಸ್ವಾಯತ್ತತೆ ಪಡೆದುಕೊಂಡಿತು. ಸಂಗೀತ ನೃತ್ಯ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು. ಸರ್ಕಾರ ಅಧ್ಯಕ್ಷರನ್ನಾಗಿ ನೇಮಕಮಾಡುತ್ತಿದೆ. ಪ್ರತಿ ಮೂರು ವರ್ಷಗಳಿಗೊಮ್ಮೆ ಅಕಾಡೆಮಿಯನ್ನು ಪುನಾ ರಚಿಸಲಾಗುತ್ತಿದ್ದು ಅಧ್ಯಕ್ಷರು ಹಾಗೂ 17 ಜನ ಸದಸ್ಯರನ್ನು ಸರ್ಕಾರ ನಾಮನಿರ್ದೇಶನ ಮಾಡುತ್ತದೆ. 5 ಜನ ಸದಸ್ಯರನ್ನು ಅಕಾಡೆಮಿ ಸಹ ಸದಸ್ಯರಾಗಿ ಆಯ್ಕೆ (ಕೋಆಪ್ಟ್) ಮಾಡಿಕೊಳ್ಳುತ್ತದೆ. ರಿಜಿಸ್ಟ್ರಾರ್ ಮತ್ತು ಅರ್ಥ ಸದಸ್ಯರನ್ನೊಳಗೊಂಡಂತೆ ಅಕಾಡೆಮಿಯ ಸದಸ್ಯರ ಸಂಖ್ಯೆ 27.

ಕರ್ನಾಟಕಸಂಗೀತ, ಹಿಂದುಸ್ತಾನಿಸಂಗೀತ, ಸುಗಮಸಂಗೀತ, ನೃತ್ಯ, ಗಮಕ, ಕಥಾಕೀರ್ತನ - ಈ ಆರು ಪ್ರಕಾರಗಳ ವಿಕಾಸಕ್ಕಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಕಲೆ ಹಾಗೂ ಕಲಾವಿದರ ಏಳ್ಗೆಗಾಗಿ ಅಕಾಡೆಮಿ ಶ್ರಮಿಸುತ್ತಿದೆ. ಸಂಗೀತ, ನೃತ್ಯ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ವಿಚಾರಸಂಕಿರಣ, ಕಲಾಶಿಬಿರ ವ್ಯವಸ್ಥೆ ಮಾಡುವುದು, ವಿಶಿಷ್ಟ ಕಲಾಪ್ರಕಾರಗಳನ್ನು ದಾಖಲಿಸುವುದು, ಕಲಾಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆ, ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ಸಂಗೀತ ನೃತ್ಯ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಕಲಾವಿದರಿಗೆ ವೇದಿಕೆಯನ್ನು ಏರ್ಪಡಿಸಿ ಪ್ರೋತ್ಸಾಹಿಸುವುದು, ಸಂಗೀತ ನೃತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆಸಲ್ಲಿಸಿದ ಹಿರಿಯ ಕಲಾವಿದರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸುವುದು ಮೊದಲಾದವು ಅಕಾಡೆಮಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ.

ಇಲ್ಲಿಯವರೆಗೆ ಅಕಾಡೆಮಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು: ಕೋಮಲಾ ವರದನ್ (1978-81), ಗಂಗೂಬಾಯಿ ಹಾನಗಲ್ (1981-84), ವಿ.ದೊರೆಸ್ವಾಮಿ ಅಯ್ಯಂಗಾರ್ (1984-87), ಮಾಯಾರಾವ್ (1987-90), ಆರ್.ವಿ.ಶೇಷಾದ್ರಿಗವಾಯಿ (1992-95), ಚಂದ್ರಭಾಗಾದೇವಿ (1995-97), ಶ್ಯಾಮಲಾ ಜಿ ಭಾವೆ (1998-2001). ಎಚ್.ಆರ್.ಲೀಲಾವತಿ (2002-2004).

ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಪ್ರಧಾನವಾದದ್ದು ಪ್ರಶಸ್ತಿ ಪ್ರದಾನ. ಸಂಗೀತ ನೃತ್ಯ ಕ್ಷೇತ್ರಗಳಲ್ಲಿ ಸ್ಮರಣೀಯ ಸೇವೆ ಸಲ್ಲಿಸಿದವರಿಗೆ ಪ್ರತಿವರ್ಷ ಪ್ರಶಸ್ತಿನೀಡಿ ಗೌರವಿಸಲಾಗುತ್ತಿದೆ. ಇಲ್ಲಿಯವರೆಗೆ 449 ಕಲಾವಿದರಿಗೆ ಗೌರವಪ್ರಶಸ್ತಿ ನೀಡಲಾಗಿದೆ (1959-2002). ಮೈಸೂರು ಟಿ.ಚೌಡಯ್ಯ, ಮೈಸೂರು ವಾಸುದೇವಾಚಾರ್ಯ, ಚಿಂತನಪಲ್ಲಿ ವೆಂಕಟರಾಯ, ಮಲ್ಲಿಕಾರ್ಜುನ ಮನ್ಸೂರ, ಕಾಟ್ಟರಾಜಗವಾಯಿ, ಕೆ.ವೆಂಕಟಲಕ್ಷ್ಮಮ್ಮ, ಗಂಗೂಬಾಯಿ ಹಾನಗಲ್, ಬಿ.ದೇವೇಂದ್ರಪ್ಪ, ಮೈಸೂರು ಎಸ್. ಸುಂದರಮ್ಮ, ಮೈಸೂರು ಎಂ. ಜೇಜಮ್ಮ, ತಿಟ್ಟೆಕೃಷ್ಣ, ಅಯ್ಯಂಗಾರ್, ಮಾಯಾರಾವ್, ಪಿ.ಕಾಳಿಂಗರಾವ್, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಬಾಳಪ್ಪ ಹುಕ್ಕೇರಿ, ವಿ. ದೊರೆಸ್ವಾಮಿ ಅಯ್ಯಂಗಾರ್, ಬಸವರಾಜ ರಾಜಗುರು, ಭೀಮಸೇನ ಜೋಶಿ, ಸಿ.ಹೊನ್ನಪ್ಪಭಾಗವತರ್, ಮೈಸೂರು ಅನಂತಸ್ವಾಮಿ, ಸಿದ್ದರಾಮ ಜಂಬಲದಿನ್ನಿ, ಆರ್.ವಿ. ಶೇಷಾದ್ರಿ ಗವಾಯಿ, ಭದ್ರಗಿರಿ ಅಚ್ಯುತದಾಸ ಮುಂತಾದವರು ಗೌರವ ಪ್ರಶಸ್ತಿ ಪಡೆದವರಲ್ಲಿ ಪ್ರಮುಖರು.

ಹಿರಿಯ ಹಾಗೂ ಹೆಸರಾಂತ ಕಲಾವಿದರ ಜೀವನ ಮತ್ತು ಸಾಧನೆಗಳನ್ನು ಕುರಿತಂತೆ ವಿಡಿಯೋ ಚಿತ್ರೀಕರಣವನ್ನು ಅಕಾಡೆಮಿ ಮಾಡುತ್ತಿದೆ. ಇಲ್ಲಿಯವರೆಗೆ 66 ಕಲಾವಿದರ ವಿಡಿಯೋ ಚಿತ್ರೀಕರಣ ಮಾಡಲಾಗಿದೆ. ಸಂಗೀತ, ನೃತ್ಯ, ಕಲೆಗಳು ಹಾಗೂ ಕಲಾವಿದರನ್ನು ಕುರಿತಂತೆ 62 ಪುಸ್ತಕಗಳನ್ನು ಅಕಾಡೆಮಿ ಪ್ರಕಟಿಸಿದೆ. ಇದಲ್ಲದೆ ನೃತ್ಯನಾದ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರತರುತ್ತಿದ್ದು, ಇದರಲ್ಲಿ ಅಕಾಡೆಮಿಯ ಕಾರ್ಯಚಟುವಟಿಕೆಗಳು ಮತ್ತು ಸಂಗೀತ ನೃತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ.

**ಲಲಿತಕಲಾ ಅಕಾಡೆಮಿ :** ಕನ್ನಡ ನಾಡಿನ ಕಲಾವಿದರಿಗೆ ಪ್ರೋತ್ಸಾಹ, ಕಲಾಕೃತಿಗಳ ಪ್ರದರ್ಶನಗಳಿಗಾಗಿ ಸ್ಥಾಪನೆಗೊಂಡ ಅಕಾಡೆಮಿ (1964). ಅಂದಿನ ಶಿಕ್ಷಣಸಚಿವರು ಇದರ ಅಧ್ಯಕ್ಷರಾಗಿದ್ದರು. 1978ರಿಂದ ಲಲಿತಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿದೆ. ಅಕಾಡೆಮಿಯು ಅಧ್ಯಕ್ಷರು ಹಾಗೂ 24 ಜನ ಸದಸ್ಯರನ್ನು ಒಳಗೊಂಡಿದೆ. ಪ್ರತಿ ಮೂರು ವರ್ಷಗಳಿಗೊಮ್ಮೆ ಅಕಾಡೆಮಿಯನ್ನು ಪುನಾರಚಿಸಲಾಗುತ್ತದೆ. ಚಿತ್ರಕಲೆಗೆ ಪೂರಕವಾದ ಹಾಗೂ ಪ್ರೇರಕವಾದ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಅಕಾಡೆಮಿ ಅವುಗಳನ್ನು ಕಾರ್ಯಗತಗೊಳಿಸುತ್ತಿದೆ.

ಪ್ರತಿವರ್ಷ ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಐವರು ಕಲಾವಿದರಿಗೆ ನಗದು ಪ್ರಶಸ್ತಿ ಕಾಣಿಕೆ ಮತ್ತು ಸನ್ಮಾನ ಪತ್ರ ನೀಡಿ ಗೌರವಿಸಲಾಗುತ್ತಿದೆ.

ಪ್ರತಿವರ್ಷ ಚಿತ್ರ ಕಲಾವಿದರಿಂದ ಅರ್ಜಿಯ ಮೂಲಕ ಕಲಾಕೃತಿಗಳನ್ನು ತರಿಸಿಕೊಂಡು, ತೀರ್ಪುಗಾರರ ಮೂಲಕ ಐದು ಉತ್ತಮ ಕಲಾಕೃತಿಗಳನ್ನು ಆಯ್ಕೆ ಮಾಡಿ ಆಯ್ಕೆಯಾದ ಕಲಾಕೃತಿಗಳನ್ನು ಒಂದು ವಾರಕಾಲ ಪ್ರದರ್ಶಿಸಲಾಗುವುದು. ಇವುಗಳಲ್ಲಿ ಅತ್ಯುತ್ತಮವಾದ ಐದು ಕಲಾಕೃತಿಗಳಿಗೆ ರೂ.5,000 ಬಹುಮಾನ ನೀಡಿ ಕಲಾವಿದರನ್ನು ಗೌರವಿಸಲಾಗುತ್ತದೆ. ಈಗ ಆರು ಜನ ಕಲಾವಿದರಿಗೆ ರೂ.10,000 ಬಹುಮಾನ ನೀಡಲಾಗುತ್ತಿದೆ.

ಚಿತ್ರಕಲೆಯ ವ್ಯಾಸಂಗಕ್ಕೆ ಉತ್ತೇಜನ ಮತ್ತು ನೆರವು ನೀಡುವ ದೃಷ್ಟಿಯಿಂದ ಕಲಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಪ್ರತಿವರ್ಷ ನೀಡಲಾಗುತ್ತಿದೆ. ರಾಜ್ಯದ ಕಲಾಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆಯ್ದ 4 ಮತ್ತು 5ನೆಯ ವರ್ಷದ ಡಿಪ್ಲೊಮಾ ಹಾಗೂ ಬಿ.ಎಫ್.ಎ. ವಿದ್ಯಾರ್ಥಿಗಳಿಗೆ, ರಾಜ್ಯದ ಎಂ.ಎಫ್.ಎ. ವಿದ್ಯಾರ್ಥಿಗಳಿಗೆ, ಹೊರ ರಾಜ್ಯದ ಎಂ.ಎಫ್.ಎ. ಪೋಸ್ಟ್ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಕಲಾಪ್ರದರ್ಶನವನ್ನು ಏರ್ಪಡಿಸುವ ಮೂಲಕ ಕಲಾವಿದರ ಕಲಾ ನೈಪುಣ್ಯತೆಯನ್ನು ಕಲಾಸಕ್ತರಿಗೆ ಪರಿಚಯಿಸುವುದರೊಂದಿಗೆ ಕಲಾವಿದರಿಗೆ ಉತ್ತೇಜನ ನೀಡುವುದು ಅಕಾಡೆಮಿಯ ಉದ್ದೇಶಗಳಲ್ಲೊಂದು. ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಏಕವ್ಯಕ್ತಿ ಮತ್ತು ಸಮೂಹ ಕಲಾ ಪ್ರದರ್ಶನ ಏರ್ಪಡಿಸಲು ಆರ್ಥಿಕ ನೆರವು ನೀಡಲಾಗುತ್ತಿದೆ.

ಹಿರಿಯ ಕಲಾವಿದರು ಹಾಗೂ ಯುವ ಕಲಾವಿದರಿಗೆ ಪ್ರತಿವರ್ಷ ಕಲಾಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಈ ಶಿಬಿರದಲ್ಲಿ ಭಾಗವಹಿಸಿದ ಕಲಾವಿದರಿಗೆ ಚಿತ್ರರಚನೆಯ ಸಾಮಗ್ರಿಗಳು ಹಾಗೂ ಗೌರವ ಸಂಭಾವನೆಯನ್ನು ನೀಡಲಾಗುತ್ತಿದೆ.

ಅಕಾಡೆಮಿಯ ಸಂಗ್ರಹದಲ್ಲಿರುವ ಆಯ್ದ ಕಲಾಕೃತಿಗಳನ್ನು ಮತ್ತು ತೀರ್ಪುಗಾರರು ಆಯ್ಕೆ ಮಾಡಿದ ಕಲಾವಿದರ ಕಲಾಕೃತಿಗಳನ್ನು ಆಗಿಂದಾಗ್ಗೆ ವಿವಿಧ ಸ್ಥಳಗಳಲ್ಲಿ ಪ್ರದರ್ಶನ ಮಾಡಲಾಗುವುದು. ಇದಲ್ಲದೆ ಅಕಾಡೆಮಿ ಒಂದು ಸಂಚಾರಿ ವಾಹನವನ್ನು ಹೊಂದಿದ್ದು, ಅದರ ಮೂಲಕ ಕಲಾಕೃತಿಗಳ ಸಂಚಾರಿ ಪ್ರದರ್ಶನವನ್ನು ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಮಾಡುತ್ತಿದೆ.

ಅಕಾಡೆಮಿ ದತ್ತಿ ನಿಧಿಯೊಂದನ್ನು ಸಂಗ್ರಹಿಸಿದ್ದು, ಈ ನಿಧಿಯಿಂದ ಕಲೆ ಮತ್ತು ಕಲಾವಿದರ ಕುರಿತು ವಿಚಾರಸಂಕಿರಣಗಳನ್ನು ಏರ್ಪಡಿಸುತ್ತಿದೆ. ಹಿರಿಯ ಕಲಾವಿದರನ್ನು ಗೌರವಿಸುವ ದೃಷ್ಟಿಯಿಂದ ರಾಜ್ಯದ ಹಿರಿಯ ಕಲಾವಿದರೊಬ್ಬರಿಗೆ ಎರಡು ವರ್ಷಗಳಿಗೊಮ್ಮೆ ಉತ್ತಮ ಕಲಾಕೃತಿಗಳನ್ನು ರಚಿಸಲು ಸೀನಿಯರ್ ಫೆಲೋಷಿಪ್ ನೀಡಲಾಗುತ್ತಿದೆ. ಗ್ರಾಫಿಕ್ ಕಲೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಪ್ರತಿವರ್ಷ ಒಬ್ಬರಿಗೆ ಜ್ಯೂನಿಯರ್ ಫೆಲೋಷಿಪ್ ನೀಡಲಾಗುತ್ತಿದೆ. ಈ ಅವಧಿಯಲ್ಲಿ ಚಿತ್ರಕಲೆ ಮತ್ತು ಕಲಾವಿದರ ಬಗ್ಗೆ ಅಕಾಡೆಮಿ ಇದುವರೆಗೆ 107 ಪುಸ್ತಕಗಳನ್ನು ಪ್ರಕಟಿಸಿದೆ.

ಉತ್ತಮ ಕಲಾಪುಸ್ತಕಗಳನ್ನು ರಚಿಸಿದ ಲೇಖಕರಿಗೆ ವರ್ಷದಲ್ಲಿ ಒಂದು ಪುಸ್ತಕಕ್ಕೆ ಬಹುಮಾನವನ್ನೂ ನೀಡಲಾಗುತ್ತಿದೆ. ಇದಲ್ಲದೆ ಅಕಾಡೆಮಿಯ ಕಾರ್ಯಚಟುವಟಿಕೆ ಕುರಿತಂತೆ ಕರ್ನಾಟಕ ಕಲಾವಾರ್ತೆ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ. ಈ ಪತ್ರಿಕೆ ಕಲಾಸಂಘ ಸಂಸ್ಥೆಗಳ ಚಟುವಟಿಕೆಗಳು, ಕಲಾಲೇಖನಗಳು, ಅಕಾಡೆಮಿಯ ಪುಸ್ತಕ ಪ್ರಕಟಣೆಯ ಮಾಹಿತಿಗಳನ್ನೊಳಗೊಂಡಿದೆ.

ಇದುವರೆಗೆ ಅಕಾಡೆಮಿಯ ಅಧ್ಯಕ್ಷರಾಗಿ ಎಸ್.ಆರ್.ಕಂಠಿ (1964-67), ಕೆ.ವಿ.ಶಂಕರಗೌಡ (1967-70), ಸುಧಾ ವಿ.ರೆಡ್ಡಿ (1970-74), ಕೆ.ಕೆ.ಹೆಬ್ಬಾರ್ (1978-81), ಟಿ.ಪಿ.ಅಕ್ಕಿ (1981-84), ಸೋಮಶೇಖರ ಎಂ.ಸಾಲಿ (1984-87), ಆರ್.ಎಂ.ಹಡಪದ (1987-90), ಪಿ.ಆರ್.ತಿಪ್ಪೇಸ್ವಾಮಿ (1990-95), ಸಿ.ಚಂದ್ರಶೇಖರ (1995-98), ವಿ.ಜಿ.ಅಂದಾನಿ (1998-01) ಪೀಟರ್ ಎ.ಲೂಯಿಸ್ (2001-2004) ಇವರು ಸೇವೆ ಸಲ್ಲಿಸಿದ್ದಾರೆ.

**ಶಿಲ್ಪಕಲಾ ಅಕಾಡೆಮಿ :** ಶಿಲ್ಪಕಲಾ ಅಧ್ಯಯನ ಮತ್ತು ಸಂಶೋಧನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿರುವ ಅಕಾಡೆಮಿ (1994). ಶಿಲ್ಪಕಲಾ ಅಭಿವೃದ್ಧಿಗಾಗಿ ಬೇರೆ ಕಡೆಗಳಲ್ಲಿರುವ ಇದೇ ಮಾದರಿಯ ಅಕಾಡೆಮಿಗಳೊಂದಿಗೆ ಮತ್ತು ಕರ್ನಾಟಕದಲ್ಲಿರುವ ಇತರ ಸಂಸ್ಥೆಗಳ ಮತ್ತು ಸಂಘಟನೆಗಳೊಡನೆ ಇದು ಸಹಕರಿಸುತ್ತದೆ. ಶಿಲ್ಪಕಲೆಗೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಉದ್ದೇಶಗಳನ್ನು ಹಾಗೂ ಅದೇ ರೀತಿಯ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ವಿವಿಧ ಪ್ರದೇಶಗಳ ನಡುವಣ ವಿಚಾರಗಳ ಮತ್ತು ತಂತ್ರಗಳ ವಿನಿಮಯಕ್ಕೆ ಉತ್ತೇಜನ ನೀಡುತ್ತದೆ. ಶಿಲ್ಪಕಲಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕದಲ್ಲಿನ ಅರ್ಹ ಸಂಸ್ಥೆಗಳಿಗೆ ಮನ್ನಣೆ ನೀಡುವುದರೊಂದಿಗೆ ಆರ್ಥಿಕ ನೆರವನ್ನೂ ನೀಡುತ್ತದೆ. ನಾಡಿನ ಶಿಲ್ಪಕಲೆಗಳನ್ನು ಸಂರಕ್ಷಿಸಿಕೊಂಡು ಬರುವುದು ಕೂಡ ಇದರ ಉದ್ದೇಶಗಳಲ್ಲಿ ಒಂದಾಗಿದೆ. ಇದು ಶಿಲ್ಪಕಲಾ ಉತ್ಸವಗಳನ್ನು ಏರ್ಪಡಿಸುವುದರೊಂದಿಗೆ ಶಿಲ್ಪಕಲೆಯಲ್ಲಿ ಮಹತ್ ಸಾಧನೆಗಳನ್ನು ಮಾಡಿದ ಸಾಂಪ್ರದಾಯಿಕ ಶಿಲ್ಪಿಗಳಿಗೆ ಪ್ರಶಸ್ತಿಪತ್ರ ರೂ.ಹತ್ತುಸಾವಿರ ನಗದು ನೀಡಿ ಸನ್ಮಾನಿಸುತ್ತದೆ. ಶಿಲ್ಪಕಲೆಯ ಉನ್ನತ ವ್ಯಾಸಂಗಕ್ಕಾಗಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲು ಕೂಡ ಶಿಫಾರಸ್ಸು ಮಾಡುತ್ತದೆ. ಶಿಲ್ಪಕಲಾ ಕ್ಷೇತ್ರದಲ್ಲಿ ಸ್ತುತ್ಯಸೇವೆ ಸಲ್ಲಿಸಿ ಕರ್ನಾಟಕದಲ್ಲಿ ವಾಸಿಸುವ ವಯೋವೃದ್ಧ ಹಾಗೂ ಬಡಕಲಾವಿದರಿಗೆ ಧನ ಸಹಾಯಕ್ಕೆ ಶಿಫಾರಸ್ಸು ಮಾಡುವ ಮೂಲಕ ಅವರಿಗೆ ನೆರವು ಒದಗಿಸುತ್ತದೆ.

ರಾಜ್ಯಸರ್ಕಾರ ಅಧ್ಯಕ್ಷರನ್ನು ನಾಮ ನಿರ್ದೇಶಿಸುತ್ತದೆ. ಇವರ ಅಧಿಕಾರಾವಧಿ ಮೂರುವರ್ಷ. ಇವರು ಅಕಾಡೆಮಿಯ ಮುಖ್ಯಸ್ಥರು. ಇದಲ್ಲದೆ ಆಡಳಿತ ನೋಡಿಕೊಳ್ಳಲು ಒಬ್ಬ ರಿಜಿಸ್ಟ್ರಾರ್ ಇರುತ್ತಾರೆ. 12 ಸದಸ್ಯರನ್ನು ಹೊಂದಿದೆ. ಇವರ ಅವಧಿ ಮೂರುವರ್ಷ. ಅಕಾಡೆಮಿ ಶಿಲ್ಪಕಲೆಗೆ ಅಪಾರ ಸೇವೆ ಸಲ್ಲಿಸಿದವರನ್ನು ಕುರಿತು ಹಾಗೂ ಶಿಲ್ಪಕಲೆಯನ್ನು ಕುರಿತಂತೆ ಹಲವು ಪುಸ್ತಕಗಳನ್ನೂ ಪ್ರಕಟಿಸಿದೆ. ಇದಲ್ಲದೆ ಹೊಯ್ಸಳಶೈಲಿ, ಶಿಲ್ಪ ಶಿಬಿರ, ಮರಕೆತ್ತನೆ ಶಿಬಿರ, ಸಿಮೆಂಟ್ ಶಿಲ್ಪ ಕಾರ್ಯಾಗಾರಗಳನ್ನು ನಡೆಸಿದೆ. ಇದುವರೆಗೆ ಅಕಾಡೆಮಿಯ ಅಧ್ಯಕ್ಷರಾಗಿ ಕೆ. ಶಾಮರಾಯ ಆಚಾರ್ಯ (1995-98). ಸಿ.ಪರಮೇಶ್ವರಾಚಾರ್ (1998-2001) ಎನ್.ಜಿ.ನೀಲಕಂಠಾಚಾರ್ (2002-2004) ಸೇವೆ ಸಲ್ಲಿಸಿದ್ದಾರೆ.

**ಪತ್ರಿಕಾ ಅಕಾಡೆಮಿ :** ಕನ್ನಡ ಪತ್ರಿಕೋದ್ಯಮ 150 ವರ್ಷಗಳಿಗೂ ದೀರ್ಘವಾದ ವಿಶಿಷ್ಟ ಇತಿಹಾಸ ಹೊಂದಿದೆ. ಸ್ವಾತಂತ್ರ್ಯೋತ್ತರ ಕಾಲದಿಂದಲೂ ಅದು ತನ್ನ ಜನಪರ ಒಲವಿನಿಂದ, ಸಾಮಾಜಿಕ ಬದ್ಧತೆಯಿಂದ ಗಳಿಸಿದ ನಿಲವು, ಬೆಳೆದ ಬಗೆ ಕುತೂಹಲಕಾರಿ. ಕನ್ನಡ ಪತ್ರಿಕೋದ್ಯಮದ ಬೆಳೆವಣಿಗೆಯ ಈ ಹರವು ವಿಸ್ತಾರವಾಗಿದ್ದರೂ ಅದಕ್ಕೊಂದು ನಿರ್ದಿಷ್ಟ ವೃತ್ತಿಪರ ಆಯಾಮವನ್ನೊದಗಿಸುವ, ಅದರ ಬೆಳೆವಣಿಗೆಗೆ ಉತ್ಕೃಷ್ಟತೆಯನ್ನು ಇತರ ಭಾಷಾ ಪತ್ರಿಕೋದ್ಯಮಗಳ ಸಮಸಮಕ್ಕೆ ಸಾಗಬಲ್ಲ ಛಾತಿಯನ್ನು ತಂದುಕೊಡಲೆತ್ನಿಸುವ ಪ್ರಯತ್ನದ ಆವಶ್ಯಕತೆ ಇದ್ದೇಇತ್ತು. ಈ ಅಗತ್ಯತೆಯ ಹಿನ್ನೆಲೆಯಲ್ಲಿ ಪತ್ರಿಕಾ ಅಕಾಡೆಮಿ ಜನ್ಮತಳೆಯಿತು. ಕೇರಳದ ಪತ್ರಿಕಾ ಅಕಾಡೆಮಿ ಈ ಅಕಾಡೆಮಿಗೆ ಮಾದರಿ.

ಪತ್ರಿಕಾ ಅಕಾಡೆಮಿ 1982ರಲ್ಲಿ ಅಸ್ತಿತ್ವಕ್ಕೆ ಬಂತು. ಆಗ ಆರ್.ಗುಂಡೂರಾವ್ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು. ಕೇರಳವನ್ನು ಬಿಟ್ಟರೆ ಇಡೀ ಭಾರತದಲ್ಲಿ ಪತ್ರಿಕಾ ಅಕಾಡೆಮಿಯನ್ನು ಸ್ಥಾಪಿಸಿದ ಎರಡನೆಯ ರಾಜ್ಯವೆಂದರೆ ಕರ್ನಾಟಕ. ನಾಡಿಗ ಕೃಷ್ಣಮೂರ್ತಿಯವರು ಈ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿದ್ದರು (1982-83). ಅನಂತರ ಖಾದ್ರಿ ಶಾಮಣ್ಣ (1983-86), ಜಿ.ನಾರಾಯಣ (1987-90), ಕೆ.ಎನ್.ಹರಿಕುಮಾರ್ (1990-92), ಎಸ್.ಜಿ.ಮೈಸೂರ್‌ಮಠ (1993-95), ಕೆ.ಶ್ರೀಧರ್‌ಆಚಾರ್ (1995-98), ಗರುಡನಗಿರಿ ನಾಗರಾಜ (1998-2001). ಎನ್.ಅರ್ಜುನದೇವ (2001-2004) ಅಧ್ಯಕ್ಷರಾಗಿದ್ದರು.

ಪತ್ರಕರ್ತರಲ್ಲಿ ವೃತ್ತಿನೈಪುಣ್ಯ ಹೆಚ್ಚಿಸುವುದು ಮತ್ತು ಪತ್ರಿಕೋದ್ಯಮದ ಗುಣಮಟ್ಟವನ್ನು ಸುಧಾರಿಸಲು ಯತ್ನಿಸುವುದು ಪತ್ರಿಕಾ ಅಕಾಡೆಮಿ ಸ್ಥಾಪನೆಯ ಮೂಲ ಉದ್ದೇಶ. ಪತ್ರಕರ್ತರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು, ಕಾರ್ಯಸುಧಾರಣಾ ಶಿಬಿರಗಳ ಸಂಘಟನೆ, ಸಲಹಾ ಸೇವೆಯನ್ನೊದಗಿಸುವುದರ ಜೊತೆಗೆ ಪುಸ್ತಕಗಳನ್ನೂ ನಿಯತಕಾಲಿಕಗಳನ್ನೂ ಸಂಶೋಧನ ಪ್ರಬಂಧಗಳನ್ನೂ ಪ್ರಕಟಿಸಲಾಗುತ್ತದೆ. ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಬಳಕೆಯಲ್ಲಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಪತ್ರಿಕೋದ್ಯಮ ಕಲಿಕೆಗೆ ಸೂಕ್ತವಾದ ಪಠ್ಯಕ್ರಮವನ್ನು ರೂಪಿಸುವಲ್ಲಿ ಸಕ್ರಿಯ ಪಾತ್ರವಹಿಸುತ್ತದೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ ಈ ಕ್ಷೇತ್ರಕ್ಕೆ ಘನತೆಯನ್ನು ತಂದುಕೊಟ್ಟಂತಹ ವ್ಯಕ್ತಿಗಳನ್ನು, ಸಂಸ್ಥೆಗಳನ್ನು ಗುರುತಿಸಿ ಅವರಿಗೆ ಪ್ರಶಸ್ತಿಗಳನ್ನು ನೀಡುವ ಮೂಲಕ ಅವರ ಸೇವೆಯನ್ನು ಗೌರವಿಸಲಾಗುತ್ತದೆ ಮತ್ತು ಈ ಕ್ಷೇತ್ರದಲ್ಲಿನ ಪ್ರೌಢ ಅಭ್ಯಾಸ ಮತ್ತು ಸಂಶೋಧನೆಗೆ ಫೆಲೋಶಿಪ್‌ಗಳ ಮೂಲಕ ಅವಕಾಶ ಒದಗಿಸಲಾಗುತ್ತದೆ. ಓದುಗರ ಅಭಿರುಚಿಯನ್ನು ಮೇಲ್ಮಟ್ಟಕ್ಕೇರಿಸಿ, ಪತ್ರಿಕೋದ್ಯಮದ ಅಭಿವೃದ್ಧಿಪರವಾದ ಒಂದು ಆರೋಗ್ಯಕರ ವಾತಾವರಣ ನಿರ್ಮಾಣಕ್ಕಾಗಿ ಶ್ರಮಿಸುವುದು ಇದರ ಉದ್ದೇಶಗಳಲ್ಲೊಂದು.

ಸಂವಹನ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿಕಾರಿ ವೈಜ್ಞಾನಿಕ ಬೆಳೆವಣಿಗೆಗಳನ್ನೂ ಈಗಿನ ಎಲೆಕ್ಟ್ರಾನಿಕ್ ಯುಗ ಸಂವಹನ ಕ್ಷೇತ್ರಕ್ಕೆ ತಂದುಕೊಟ್ಟಿರುವ ಅಗಾಧ ಸಾಧ್ಯತೆಗಳನ್ನೂ ಸಾಧ್ಯವಾದ ಮಟ್ಟಿಗೂ ಕನ್ನಡ ಪತ್ರಿಕೋದ್ಯಮದ ಬಾಗಿಲಿಗೆ ತಂದು, ಅದು ಇನ್ನಾವುದೇ ಭಾಷಾ ಪತ್ರಿಕೋದ್ಯಮಕ್ಕೆ ಸಾಟಿಯಾಗಿ ನಿಲ್ಲಬಲ್ಲಂತಹ ಸಾಮರ್ಥ್ಯ ಗಳಿಸುವಂತೆ ಮಾಡುವುದು, ಸಮಕಾಲೀನ ಸಂಶೋಧನೆಗಳ ಪ್ರಯೋಜನ ಕನ್ನಡ ಪತ್ರಿಕೋದ್ಯಮಕ್ಕೂ ಲಭಿಸುವಂತಾಗಿ, ಅದು ಹೆಚ್ಚು ಪ್ರಸ್ತುತವಾಗುವಂತೆ ಯತ್ನಿಸಲಾಗುತ್ತಿದೆ.

ಅಧ್ಯಕ್ಷರು ಅಕಾಡೆಮಿಯ ಮುಖ್ಯಸ್ಥರು. ಇವರೊಡನೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಸೂಚಿಸಿದ ಪಟ್ಟಿಯಿಂದ ಸರ್ಕಾರ ನಾಮನಿರ್ದೇಶನ ಮಾಡಿದ ಐವರು ಸದಸ್ಯರು, ಅಖಿಲಭಾರತ ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನ ಸೂಚಿಸಿದ ಪಟ್ಟಿಯಿಂದ ಸರ್ಕಾರ ನಾಮನಿರ್ದೇಶನ ಮಾಡಿದ ಐವರುಸದಸ್ಯರು, ಭಾರತೀಯ ವೃತ್ತಪತ್ರಿಕಾ ಸಂಸ್ಥೆ ಸೂಚಿಸಿದ ಪಟ್ಟಿಯಿಂದ ಸರ್ಕಾರ ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು, ಪತ್ರಿಕೋದ್ಯಮ ಕ್ಷೇತ್ರದಿಂದ ಸರ್ಕಾರ ನಾಮಕರಣ ಮಾಡಿದ ಐವರು ಸದಸ್ಯರು, ಮೈಸೂರು, ಬೆಂಗಳೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರು (ಮೂವರು), ಬೆಂಗಳೂರು ಆಕಾಶವಾಣಿ ಕೇಂದ್ರದ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರು ಹೀಗೆ ಒಟ್ಟು 23 ಸದಸ್ಯರಿರುತ್ತಾರೆ. ವಾರ್ತಾ ಮತ್ತು ಪ್ರಚಾರ ಇಲಾಖೆ ಅಧಿಕಾರಿಯೊಬ್ಬರನ್ನು ಸರ್ಕಾರ ಅಕಾಡೆಮಿಯ ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡುತ್ತದೆ.

ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ ಈ ಕ್ಷೇತ್ರಕ್ಕೆ ಘನತೆ ತಂದುಕೊಟ್ಟ 123 ಜನರನ್ನು, ಇದುವರೆಗೆ (1987-98) ಪುರಸ್ಕರಿಸಿ ಗೌರವಿಸಿದೆ. ಇದರೊಡನೆ ನಾಲ್ಕು ಪತ್ರಿಕಾ ಸಂಸ್ಥೆಗಳು ಗ್ರಾಮಾಂತರ ಪತ್ರಿಕೆಯೂ ಸೇರಿರುವುದೊಂದು ವೈಶಿಷ್ಟ್ಯ. ಅಕಾಡೆಮಿ ಇದುವರೆಗೆ ಅನೇಕ ಕಾರ್ಯಕ್ರಮಗಳನ್ನು ನಡೆಸಿದೆ. ಜಿಲ್ಲಾಮಟ್ಟ ಮತ್ತು ವಿಭಾಗಮಟ್ಟದಲ್ಲಿ ಪತ್ರಕರ್ತರಿಗಾಗಿ ಅನೇಕ ತರಬೇತಿ ಶಿಬಿರಗಳನ್ನು ಏರ್ಪಡಿಸಿದೆ. ಕನ್ನಡ ಪತ್ರಿಕೋದ್ಯಮದ ವಿವಿಧ ಮಜಲುಗಳನ್ನು ಗುರುತಿಸುವ 20 ಪುಸ್ತಕಗಳನ್ನು ಪ್ರಕಟಿಸಿದೆ. ಪತ್ರಿಕೆಯಲ್ಲಿ ಬಳಸಬಹುದಾದ 50 ಸಾವಿರ ಪದಗಳುಳ್ಳ ಪತ್ರಿಕಾ ಪದಕೋಶ ಪ್ರಕಟಿಸಿರುವುದು ಅಕಾಡೆಮಿಯ ಹೆಗ್ಗಳಿಕೆ. ಕಂಪ್ಯೂಟರ್‌ನಿಂದ ಹಿಡಿದು ಸುದ್ದಿ ಛಾಯಾಗ್ರಹಣದವರೆಗೆ ಅನೇಕ ವಿಷಯಗಳಲ್ಲಿ ಪತ್ರಕರ್ತರಿಗೆ ತರಬೇತಿ ನೀಡಲಾಗುತ್ತಿದೆ. ಅನೇಕ ರಾಜ್ಯ-ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಮತ್ತು

ಸಂವಾದಗಳನ್ನು ಏರ್ಪಡಿಸಿದೆ. ಸ್ವಾತಂತ್ರ್ಯಪೂರ್ವದಿಂದ ಲಭ್ಯವಿರುವ ಎಲ್ಲಾ ಕನ್ನಡ ಪತ್ರಿಕೆಗಳನ್ನು ಮೈಕ್ರೋಫಿಲಂನಲ್ಲಿ ರಕ್ಷಿಸಿಡುವ ಕಾರ್ಯವನ್ನು ಮಾಡಿದೆ. ಕನ್ನಡ ಪತ್ರಿಕೋದ್ಯಮ ಬೆಳೆದುಬಂದ ದಾರಿ ಕುರಿತು ಸಾಕ್ಷ್ಯಚಿತ್ರವನ್ನು ನಿರ್ಮಿಸಿದೆ. ರಾಜ್ಯದ ಹಿರಿಯ ಅನುಭವಿ ಪತ್ರಕರ್ತರ ಧ್ವನಿಗಳನ್ನೂ ಅವರ ಅನಿಸಿಕೆಗಳನ್ನೂ ದಾಖಲಿಸಿದೆ.

ಕನ್ನಡ ಮೊದಲ ಪತ್ರಿಕೆ ಮಂಗಳೂರ ಸಮಾಚಾರ ಪ್ರಕಟವಾದ (1843 ಜುಲೈ 1) ಸವಿ ನೆನಪಿಗಾಗಿ ಪ್ರತಿ ವರ್ಷ ಜುಲೈ 1ನ್ನು ಪತ್ರಿಕಾ ದಿನವೆಂದು ಆಚರಿಸಲಾಗುತ್ತಿದೆ.

ಜಿಲ್ಲಾವಾರು ಪತ್ರಿಕೋದ್ಯಮ ಇತಿಹಾಸದ ಪ್ರಕಟಣೆ ಅಕಾಡೆಮಿ ಕೈಗೆತ್ತಿಕೊಂಡಿರುವ ಮಹತ್ವದ ಯೋಜನೆಗಳಲ್ಲೊಂದು. ಸಂವಾದ, ರಸಗ್ರಹಣ, ಕರ್ನಾಟಕದರ್ಶನ, ದತ್ತಿ ಉಪನ್ಯಾಸ, ಕನ್ನಡ ಪತ್ರಕರ್ತರಿಗೆ ವಿದೇಶದಲ್ಲಿ ತರಬೇತಿ, ಕಾನೂನುಶಿಬಿರ, ಪತ್ರಿಕೆ-ಕನ್ನಡ ಇತ್ಯಾದಿ ಯೋಜನೆಗಳನ್ನು ರೂಪಿಸಲಾಗಿದೆ.

ಮೈಸೂರಿನ ಆಂದೋಲನ ದಿನಪತ್ರಿಕೆ ಪ್ರತಿವರ್ಷ ಕನ್ನಡದ ಅತ್ಯುತ್ತಮ ಗ್ರಾಮೀಣ ದಿನಪತ್ರಿಕೆಗೆ ಬಹುಮಾನ ನೀಡಲೆಂದು ಒಂದು ಲಕ್ಷ ರೂ.ಗಳ ಇಡುಗಂಟನ್ನು ಅಕಾಡೆಮಿಗೆ ನೀಡಿದೆ (1997). ಈ ಇಡುಗಂಟಿನ ಬಡ್ಡಿಯಲ್ಲಿ 10 ಸಾವಿರ ರೂ. ನಗದು ಬಹುಮಾನವನ್ನು ಪ್ರತಿವರ್ಷ ನೀಡಲಾಗುತ್ತಿದೆ. ಈ ಪ್ರಶಸ್ತಿಯ ಗೌರವಕ್ಕೆ ಪಾತ್ರವಾದ ಮೊದಲಪತ್ರಿಕೆ ಕೋಲಾರದ 'ಕೋಲಾರಪತ್ರಿಕೆ'. ಅಕಾಡೆಮಿಯಲ್ಲಿ ಅನೇಕ ದತ್ತಿನಿಧಿ ಸ್ಥಾಪಿಸಲಾಗಿದೆ. ಹಿರಿಯ ಪತ್ರಕರ್ತರಾದ ಸಿದ್ದವನಹಳ್ಳಿಕೃಷ್ಣ ಶರ್ಮ, ಸಿ.ಜಿ.ಕೆ.ರೆಡ್ಡಿ, ವಿ.ಬಿ.ನಾಯಕ, ಫ.ಗು.ಹಳಕಟ್ಟಿ ಇವರ ಹೆಸರಿನಲ್ಲಿ ಪ್ರತಿವರ್ಷ ಪತ್ರಿಕೋದ್ಯಮದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ. ಈಗ ಪತ್ರಿಕಾ ಅಕಾಡೆಮಿಯನ್ನು ಮಾಧ್ಯಮ ಅಕಾಡೆಮಿ ಎಂಬ ಹೆಸರಿನಿಂದ ಕರೆಯಲಾಗುತ್ತದೆ (2003).

**ತುಳು ಸಾಹಿತ್ಯ ಅಕಾಡೆಮಿ:** ತುಳುಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಜಾನಪದ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ಈ ಅಕಾಡೆಮಿಯನ್ನು ಸ್ಥಾಪಿಸಿತು (1994). ಈ ಅಕಾಡೆಮಿಯ ಕಾರ್ಯಾಲಯ ಮಂಗಳೂರಿನಲ್ಲಿದೆ. ಅಕಾಡೆಮಿಗೆ ಅಧ್ಯಕ್ಷರನ್ನೊಳಗೊಂಡಂತೆ 12 ಸದಸ್ಯರನ್ನು ಸರ್ಕಾರ ನಾಮನಿರ್ದೇಶನ ಮಾಡುತ್ತದೆ. ಆಡಳಿತದಲ್ಲಿ ನೆರವು ನೀಡಲು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಒಬ್ಬ ರಿಜಿಸ್ಟ್ರಾರ್‌ರಿರುತ್ತಾರೆ. ಜಾನಪದತಜ್ಞ ಬಿ.ಎ.ವಿವೇಕ ರೈ ಈ ಅಕಾಡೆಮಿಯ ಪ್ರಥಮ ಅಧ್ಯಕ್ಷರು (1994-95). ಎರಡನೆಯ ಅವಧಿಗೂ ಇವರೇ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ (1995-98). ಅನಂತರ ಅ.ಬಾಲಕೃಷ್ಣಶೆಟ್ಟಿ(1998-2001) ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ವಾಮನ ನಂದಾವರ (2001-) ಈಗಿನ ಅಧ್ಯಕ್ಷರು.

ತುಳು ಸಾಹಿತ್ಯ ಕ್ಷೇತ್ರದಲ್ಲಿ ಅಧ್ಯಯನ, ಸಂಶೋಧನೆಗೆ ಉತ್ತೇಜನ ನೀಡುವುದು ಮತ್ತು ಈ ಉದ್ದೇಶಕ್ಕಾಗಿ ಮಾಹಿತಿ ಕೇಂದ್ರ, ಗ್ರಂಥಾಲಯವನ್ನು ಸ್ಥಾಪಿಸುವುದು ಅಕಾಡೆಮಿಯ ಉದ್ದೇಶ. ಅಕಾಡೆಮಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಗ್ರಂಥ ಪ್ರಕಟಣೆ ಮುಖ್ಯವಾದುದು. ಅಕಾಡೆಮಿ ಇಲ್ಲಿಯವರೆಗೆ 86 ಪುಸ್ತಕಗಳನ್ನು ಪ್ರಕಟಿಸಿದೆ (2003). ಮರೆಯಬಾರದ ತುಳುವರು ಮಾಲಿಕೆಯಲ್ಲಿ ತುಳುಸಾಹಿತ್ಯ ಸಂಸ್ಕೃತಿಯ ಏಳ್ಗೆಗಾಗಿ ದುಡಿದ ಮಹನೀಯರ ಬಗ್ಗೆ 22 ಪುಸ್ತಕಗಳನ್ನು ಪ್ರಕಟಿಸಲಾಗಿದೆ. 'ಚಾವಡಿ' ಈ ಅಕಾಡೆಮಿಯ ವಿಶಿಷ್ಟ ಕಾರ್ಯಕ್ರಮ. ಜನಸಾಮಾನ್ಯರೊಂದಿಗೆ ಸಂಪರ್ಕ ಏರ್ಪಡಿಸುವುದು ಈ ಕಾರ್ಯಕ್ರಮದ ಉದ್ದೇಶ. ಅನ್ಯಭಾಷಿಕರಿಗೆ ತುಳು ಕಲಿಸುವ ಕಾರ್ಯಕ್ರಮವನ್ನು ಅಕಾಡೆಮಿ ಹಮ್ಮಿಕೊಂಡಿದೆ.

ತುಳು ಸಾಹಿತ್ಯ ಮತ್ತು ಸಂಸ್ಕೃತಿಗೆ ಅನುಪಮ ಸೇವೆ ಸಲ್ಲಿಸಿದ ಗಣ್ಯರಿಗೆ ಅಕಾಡೆಮಿ ಗೌರವ ಪ್ರಶಸ್ತಿ ನೀಡುತ್ತಿದೆ. ಅಮೃತ ಸೋಮೇಶ್ವರ ಯು.ಪಿ.ಉಪಾಧ್ಯಾಯ, ಕೆದಂಬಾಡಿ ಜತ್ತಪ್ಪ ರೈ, ಕು.ಶಿ.ಹರಿದಾಸಭಟ್ಟ, ಸೂರ್ಯನಾಥ ಕಾಮತ್, ಬಿ.ಎ. ವಿವೇಕ ರೈ ಮೊದಲಾದವರು ಪ್ರಶಸ್ತಿ ಗಳಿಸಿದ್ದಾರೆ. ತುಳುವಿನಲ್ಲಿ ರಚಿಸಿದ ಗ್ರಂಥಗಳಿಗೆ ಬಹುಮಾನವನ್ನು ನೀಡಲಾಗುತ್ತಿದೆ. ತುಳು ವರ್ತಮಾನವೆಂಬ ತ್ರೈಮಾಸಿಕ ಪತ್ರಿಕೆಯನ್ನು ಅಕಾಡೆಮಿಯ ವತಿಯಿಂದ ಪ್ರಕಟಿಸಲಾಗುತ್ತಿದೆ. ಕಾಲಕಾಲಕ್ಕೆ ಕಮ್ಮಟ, ವಿಚಾರಗೋಷ್ಠಿ, ಕವಿಗೋಷ್ಠಿ, ತುಳು ಉತ್ಸವ ಮೊದಲಾದ ವಿಶಿಷ್ಟ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

**ಕೊಡವ ಸಾಹಿತ್ಯ ಅಕಾಡೆಮಿ :** ಕೊಡವ ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಮಡಿಕೇರಿಯಲ್ಲಿ ಈ ಅಕಾಡೆಮಿಯನ್ನು ಪ್ರಾರಂಭಿಸಲಾಯಿತು (1994). ಇದು ಕೊಡವ ಸಾಹಿತ್ಯ, ಜಾನಪದ, ಸಂಸ್ಕೃತಿಗಳ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕೊಡಗಿನ ಮೂಲ ನಿವಾಸಿಗಳ ಅಧ್ಯಯನ ಮತ್ತು ಕೊಡವ ವಿಶ್ವಕೋಶ ಪ್ರಕಟಣೆ ಇಂತಹ ಕಾರ್ಯಕ್ರಮಗಳಲ್ಲಿ ಪ್ರಮುಖವಾದುವು. ಇತರ ಭಾಷೆಗಳೊಂದಿಗೆ ಕೊಡವ ಭಾಷೆಯ ಸಾಮರಸ್ಯ ಕಾರ್ಯಕ್ರಮಗಳನ್ನೂ ನಡೆಸಲಾಗಿದೆ. ಕೊಡವ ಭಾಷೆಯನ್ನು ಭಾರತ ಸಂವಿಧಾನದ 8ನೆಯ ಪರಿಚ್ಛೇದದಲ್ಲಿ ಸೇರಿಸುವ ಪ್ರಯತ್ನಗಳೂ ಅಕಾಡೆಮಿಯ ಮೂಲಕ ನಡೆದಿವೆ. ಪಟ್ಟೋಲೆ ಪಳಮೆ ಎನ್ನುವದು ಸೈನಿಕರಾಗಿದ್ದು ಹೋರಾಡಿದವರ ಯುದ್ಧಭೂಮಿಯ ಅನುಭವಗಳ ಸಂಗ್ರಹವಾಗಿದೆ. ಕೊಡವ ಸಾಹಿತ್ಯಅಕಾಡೆಮಿ ಇಲ್ಲಿಯವರೆಗೆ 72 ಪುಸ್ತಕಗಳನ್ನು ಪ್ರಕಟಿಸಿದೆ. ಇತರ ಅಕಾಡೆಮಿಗಳಂತೆ ಕೊಡವಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭಿವೃದ್ಧಿಗಾಗಿ ಅನುಪಮ ಸೇವೆ ಸಲ್ಲಿಸಿದ ಗಣ್ಯರಿಗೆ ಪ್ರತಿವರ್ಷ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಇಲ್ಲಿಯವರೆಗೆ ಈ ಪ್ರಶಸ್ತಿಯನ್ನು 53 ಗಣ್ಯರು ಪಡೆದಿದ್ದಾರೆ.

ಅಕಾಡೆಮಿಯ ಮೊದಲ ಅಧ್ಯಕ್ಷರಾಗಿದ್ದ ಉಳ್ಳಿಯಡ ಎಂ. ಪೂವಯ್ಯ ಅವರು ಎರಡು ಅವಧಿಗೆ ಕೆಲಸ ನಿರ್ವಹಿಸಿದ್ದಾರೆ (1994 -98). ಅನಂತರ ಮೇಕೇರಿರ ಕೆ. ಕಾರ್ಯಪ್ಪ (1998-2001). ಬಾಚರಣೆಯಂಡ ಪಿ. ಅಪ್ಪಣ್ಣ (2001-02) ಅಧ್ಯಕ್ಷರಾಗಿದ್ದರು. ಅಕಾಡೆಮಿಯ ಈಗಿನ ಅಧ್ಯಕ್ಷರು ಚೆರಿಯಪಂಡ ಎಂ. ರಾಜಾನಂಜಪ್ಪ (2002ರಿಂದ).

**ಕೊಂಕಣಿ ಸಾಹಿತ್ಯ ಅಕಾಡೆಮಿ :** ಕರ್ನಾಟಕದಲ್ಲಿ ನೆಲೆಸಿರುವ ಕೊಂಕಣಿಗರ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಜನಪದ ಕಲೆಗಳ ಅಭಿವೃದ್ಧಿಗಾಗಿ ಸರ್ಕಾರ ಈ ಅಕಾಡೆಮಿಯನ್ನು ಸ್ಥಾಪಿಸಿತು (1994). ಅಕಾಡೆಮಿ ಅಧಿಕೃತವಾಗಿ ತನ್ನ ಕಾರ್ಯವನ್ನು ಮಂಗಳೂರಿನಲ್ಲಿ 1996ರಲ್ಲಿ ಪ್ರಾರಂಭಿಸಿತು. ಪ್ರತಿವರ್ಷ ಕೊಂಕಣಿಯಲ್ಲಿ ಪ್ರಕಟವಾದ ಉತ್ತಮ ಪುಸ್ತಕಗಳಿಗೆ ಬಹುಮಾನ ನೀಡುತ್ತಿದೆ. ಕನ್ನಡ, ಇಂಗ್ಲಿಷ್ ಮತ್ತು ಹಿಂದಿಯೊಂದಿಗೆ ಕೂಡಿದ ಕೊಂಕಣಿ ಸಮಾಂತರ ಶಬ್ದಕೋಶವನ್ನು ಪ್ರಕಟಿಸಲಾಗಿದೆ. ಇದೊಂದು ಆಕರ ಗ್ರಂಥವಾಗಿದೆ. ಸಾಹಿತ್ಯ, ನಾಟಕ ಕಾರ್ಯಾಗಾರ, ಕವಿಗೋಷ್ಠಿ, ಜಾನಪದ ಕಲಾ ಉತ್ಸವಗಳನ್ನು ನಡೆಸಿದೆ. ಇದುವರೆಗೆ 94 ಗ್ರಂಥಗಳನ್ನು ಪ್ರಕಟಿಸಿದೆ. ಅಕಾಡೆಮಿ ಪ್ರತಿ ವರ್ಷ ಕೊಂಕಣಿ ಸಾಹಿತ್ಯ, ಸಂಗೀತ, ನಾಟಕ, ಜಾನಪದ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಇಲ್ಲಿಯವರೆಗೆ 50 ಗಣ್ಯರು ಈ ಪ್ರಶಸ್ತಿ ಪಡೆದಿದ್ದಾರೆ. ಪ್ರಥಮ ಬಾರಿಗೆ ಗೌರವ ಫೆಲೋಶಿಪ್ ಪ್ರಶಸ್ತಿಯನ್ನು ಪ್ರಾರಂಭಿಸಲಾಗಿದೆ (2003). ಈ ಪ್ರಶಸ್ತಿಯನ್ನು ಮಣಿಪಾಲದ ಕೆ.ಕೆ.ಪೈ ಪಡೆದಿದ್ದಾರೆ. ಅಕಾಡೆಮಿಯ ಪ್ರಶಸ್ತಿ ಗಳಿಸಿದವರಲ್ಲಿ ಭದ್ರಗಿರಿ ಅಚ್ಯುತದಾಸ, ಫಾದರ್ ಸಿ.ಸಿ.ಎ.ಪೈ, ಅನುರಾಧ ಧಾರೇಶ್ವರ, ವಿ.ಜೆ.ಪಿ.ಸಾಲ್ಡಾನಾ, ಹೊಸಾಡ ಬಾಬು ಬಿ. ನಾಯಕ್ ಮೊದಲಾದವರು ಪ್ರಮುಖರು. ಕರ್ನಾಟಕದಲ್ಲಿರುವ ಕೊಂಕಣಿ ಸಾಹಿತಿಗಳು ಮತ್ತು ಕಲಾವಿದರ ಮಾಹಿತಿಕೋಶ ತಯಾರಿಸುವ ಯೋಜನೆಯನ್ನು ಅಕಾಡೆಮಿ ಹಮ್ಮಿಕೊಂಡಿದೆ. ಅಕಾಡೆಮಿಗೆ ಇಲ್ಲಿಯವರೆಗೆ ಸೇವೆ ಸಲ್ಲಿಸಿದ ಅಧ್ಯಕ್ಷರು ವಿ.ಜೆ.ಪಿ.ಸಾಲ್ಡಾನಾ (1994-95), ಬಿ.ವಿ.ಬಾಳಿಗಾ (1995-97), ಬಸ್ತಿ ವಾಮನ ಶೆಣೈ (1997-2001). ಅಲೆಗ್ಸಾಂಡರ್ ಎಫ್.ಡಿಸೋಜ ಅಕಾಡೆಮಿಯ ಇಂದಿನ ಅಧ್ಯಕ್ಷರು.

**ಉರ್ದು ಅಕಾಡೆಮಿ :** ಕರ್ನಾಟಕ ಸರ್ಕಾರ 1977ರಲ್ಲಿ ಈ ಅಕಾಡೆಮಿಯನ್ನು ಸ್ಥಾಪಿಸಿತು. ಉರ್ದು ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಈ ಅಕಾಡೆಮಿ ಹಲವು ಯೋಜನೆಗಳನ್ನು ರೂಪಿಸಿದೆ. ದೆಹಲಿಯ ಪ್ರಸಿದ್ಧ ಲೇಖಕ, ನಾಟಕಕಾರ ಹಬೀಬ್‌ತನ್ವೀರ್ ಇದರ ಪ್ರಥಮ ಅಧ್ಯಕ್ಷರಾಗಿದ್ದರು (1977).

ಉರ್ದುಭಾಷೆ ಮತ್ತು ಸಾಹಿತ್ಯವನ್ನು ಕರ್ನಾಟಕದಲ್ಲಿ ಅಭಿವೃದ್ಧಿಪಡಿಸುವುದು ಮತ್ತು ಪ್ರೋತ್ಸಾಹಿಸುವುದು, ಕನ್ನಡದ ಹೆಸರಾಂತ

ಸಾಹಿತ್ಯ ಕೃತಿಗಳನ್ನು ಉರ್ದುವಿಗೆ ಭಾಷಾಂತರಿಸುವದು, ಪತ್ರಿಕೆ ಮತ್ತು ಪುಸ್ತಕಗಳನ್ನು ಪ್ರಕಟಿಸುವುದು ಇದರ ಗುರಿ. ಅಕಾಡೆಮಿ ಪ್ರತಿವರ್ಷ ಸಾಹಿತ್ಯಕ್ಷೇತ್ರದಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಮೂವರು ವಿದ್ವಾಂಸರಿಗೆ ಪ್ರಶಸ್ತಿ ನೀಡುತ್ತದೆ. ಉರ್ದು ಭಾಷೆಯಲ್ಲಿ ಪಿ.ಯು.ಸಿ.ಯಿಂದ ಸ್ನಾತಕೋತ್ತರ ಪದವಿವರೆಗೂ ಸೇಕಡ 80ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತದೆ. ಅಕಾಡೆಮಿ ಹಮ್ಮಿಕೊಂಡ ಮಹತ್ತರ ಯೋಜನೆಗಳಲ್ಲಿ ಕನ್ನಡ-ಉರ್ದು ಮತ್ತು ಉರ್ದು-ಕನ್ನಡ ನಿಘಂಟು ಪ್ರಮುಖವಾದದ್ದು. ಇದಲ್ಲದೆ ಇಂಗ್ಲಿಷ್-ಕನ್ನಡ-ಉರ್ದು ತ್ರಿಭಾಷಾ ನಿಘಂಟನ್ನೂ ಪ್ರಕಟಿಸಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರನ್ನು ಕುರಿತ ಪುಸ್ತಕ, ಟಿಪ್ಪುಸುಲ್ತಾನ್ ಕುರಿತ ನಾಟಕ-ಇವು ಅಕಾಡೆಮಿಯ ಕೆಲವು ಪುಸ್ತಕಗಳು. ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ, ಚರ್ಚೆ ಮತ್ತು ಪ್ರಬಂಧ ಸ್ಪರ್ಧೆಯನ್ನೂ ಪ್ರತಿವರ್ಷ ಏರ್ಪಡಿಸಲಾಗುತ್ತಿದೆ. ಕನ್ನಡ ಮತ್ತು ಉರ್ದು ಕವಿಗಳ ಗೋಷ್ಠಿ, ಕಾರ್ಯಾಗಾರ, ಚರ್ಚಾಗೋಷ್ಠಿ ಇವು ಇತರ ಚಟುವಟಿಕೆಗಳು.

ಅಕಾಡೆಮಿಗೆ ಇಲ್ಲಿಯವರೆಗೆ ಹೆಸರಾಂತ ಲೇಖಕರು, ವಿದ್ವಾಂಸರು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹಬೀಬ್‌ತನ್ವೀರ್ (1977), ಮಹಮ್ಮದ್ ಅಯಾಜ್ (1979-80), ಇವರು ಈ ಹುದ್ದೆಯನ್ನು ಮೂರು ಬಾರಿ ಅಲಂಕರಿಸಿದ್ದಾರೆ. ಅನಂತರ ಫಮೀದಾಬೇಗಂ (1987-90), ಅಬ್ದುಲ್ ಗಫಾರ್‌ಶಕೀಲ್ (1995-2001) ಎಂ.ಎ.ವಹಾಬ್ (2001-2004) ಅಧ್ಯಕ್ಷರಾಗಿದ್ದರು. *

**ಅಕ್ಕನಾಗಮ್ಮ :** 12ನೆಯ ಶತಮಾನದ ಕನ್ನಡ ನಾಡಿನ ಶಿವಶರಣೆಯರಲ್ಲಿ ಅಗ್ರಗಣ್ಯಳು. ಬಾಗೇವಾಡಿ ಈಕೆಯ ಜನ್ಮಸ್ಥಳ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಮಗ ಚನ್ನಬಸವೇಶ್ವರ, ಸಹೋದರ ಬಸವೇಶ್ವರ, ಗುರು ಕಪ್ಪಡಿ ಸಂಗಮದ ಜಾತವೇದಸ್ವಾಮಿ. ಮಹಾಯೋಗಿನಿಯಾದ ಈಕೆಯ ಸ್ಮಾರಕಗಳು ಬಿಜಾಪುರ ಜಿಲ್ಲೆಯ ಇಂಗಳೇಶ್ವರ, ಬೀದರ್ ಜಿಲ್ಲೆಯ ಕಲ್ಯಾಣ, ಉತ್ತರಕನ್ನಡ ಜಿಲ್ಲೆಯ ಉಳವಿಯಲ್ಲಿವೆ. ಬಸವೇಶ್ವರರು ಕೈಗೊಂಡ ಎಲ್ಲ ಚಟುವಟಿಕೆಗಳಲ್ಲೂ ಈಕೆ ಬೆಂಬಲಿಗಳಾಗಿದ್ದಳು. ಕರ್ನಾಟಕದ ಶಿವಶರಣರು ಈಕೆಯ ಬಗ್ಗೆ ಹೆಚ್ಚಿನ ಭಕ್ತಿಗೌರವಗಳನ್ನು ತಾಳಿದ್ದಾರೆ. ಚೆನ್ನಬಸವಪುರಾಣ, ಪುರಾತನ ದೇವಿಯರ ತ್ರಿಪದಿ, ಬಸವಪುರಾಣ ಈ ಗ್ರಂಥಗಳಲ್ಲಿ ಈಕೆಯ ಹೆಸರು ನಿರೂಪಿತವಾಗಿದೆ. **(ಬಿ.ಎಸ್.)**

**ಅಕ್ಕಮಹಾದೇವಿ :** 12ನೆಯ ಶತಮಾನದ ಪ್ರಸಿದ್ಧ ಶಿವಶರಣೆ. ಕನ್ನಡದ ಮೊದಲ ಕವಯಿತ್ರಿ ಎಂಬ ಬಿರುದಿಗೆ ಪಾತ್ರಳಾಗಿದ್ದಾಳೆ. ಇವಳು ಉಡುತಡಿಯವಳು ಎಂದು ಹರಿಹರ ಮುಂತಾದವರು ಹೇಳಿದ್ದಾರೆ. ಉಡುತಡಿ ಈಗಿನ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಉಡುಗಣಿ ಮತ್ತು ತಡುಗಣಿಗಳೇ ಆಗಿವೆ ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಇವಳ ತಂದೆತಾಯಿಗಳ ಹೆಸರುಗಳನ್ನು ಬೇರೆ ಬೇರೆ ಕವಿಗಳು ಬೇರೆ ಬೇರೆ ರೀತಿಗಳಲ್ಲಿ ಹೇಳಿದ್ದಾರೆ. ಹರಿಹರ ಅವರನ್ನು ಶಿವಭಕ್ತರೆಂದು ಸಾಮಾನ್ಯ ರೂಪದಲ್ಲಿ ಹೆಸರಿಸಿದ್ದರೆ, ಚಾಮರಸ ಅವರ ಹೆಸರನ್ನು ನಿರ್ಮಲ, ಸುಮತಿ ಎಂಬುದಾಗಿ ಹೇಳುತ್ತಾನೆ. ರಾಚಕವಿ ಓಂಕಾರಶೆಟ್ಟಿ, ಲಿಂಗಮ್ಮ ಎಂದು ಹೇಳುತ್ತಾನೆ. ಚಾಮರಸನ ಹೆಸರುಗಳು ಅವನ ಕಾವ್ಯದಲ್ಲಿ ಬರುವ ಇತರ ಹೆಸರುಗಳಂತೆ ಸಾಂಕೇತಿಕ ಎಂದು ಭಾವಿಸಬಹುದು. ರಾಚಕವಿ ಬಹಳ ಈಚಿನವನು. ಆದ್ದರಿಂದ ಆ ಬಗ್ಗೆ ಏನನ್ನೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಈಕೆ ಶಿವನಲ್ಲಿ ಅಪಾರವಾದ ಭಕ್ತಿಯನ್ನಿಟ್ಟಿದ್ದಲ್ಲದೆ, ಅವನನ್ನೇ ತನ್ನ ಗಂಡನೆಂದು ಭಾವಿಸಿದ್ದಳು. ಊರಿನ ರಾಜ ಕೌಶಿಕನ ದೃಷ್ಟಿ ಈ ಯುವತಿಯ ಮೇಲೆ ಬಿತ್ತು. ಮದುವೆಯಾಗಬಯಸಿದ. ಇವಳಿಗಾದರೋ ಅವನ ಕೈಹಿಡಿಯಲು ಸ್ವಲ್ಪವೂ ಇಷ್ಟವಿರಲಿಲ್ಲ. ರಾಜನಿಂದ ತನ್ನ ತಂದೆ ತಾಯಿಗಳಿಗೆ ಉಂಟಾಗಬಹುದಾದ ತೊಂದರೆಗಳನ್ನು ನೆನೆದು ಮೂರು ಷರತ್ತುಗಳೊಂದಿಗೆ ಮದುವೆಯಾಗಲು ಒಪ್ಪಿದಳು. ಮದುವೆಗೆ ಇದಕ್ಕಿಂತಲೂ ಇದ್ದ ದೊಡ್ಡ ಅಡ್ಡಿಯೆಂದರೆ ಕೌಶಿಕ ಜೈನ, ಅಷ್ಟೇ ಅಲ್ಲ, ಭವಿ. ಆತ ಸಂಸಾರದಲ್ಲಿ ಆಸಕ್ತ, ರಾಗಿ; ಇವಳು ಸಂಸಾರದಲ್ಲಿ ನಿರಾಸಕ್ತೆ, ವಿರಾಗಿ. ಕೌಶಿಕ ಲೌಕಿಕವ್ಯಕ್ತಿ; ಮಹಾದೇವಿ ಅಲೌಕಿಕವ್ಯಕ್ತಿ. ಅವನ ವ್ಯವಹಾರವೆಲ್ಲ ಪ್ರಾಪಂಚಿಕ, ಇವಳದೋ ಆಧ್ಯಾತ್ಮಿಕ. ಮದುವೆಯಾದರೂ ಆ ದಾಂಪತ್ಯ ಹೆಚ್ಚುಕಾಲ ಉಳಿಯಲಿಲ್ಲ. ಕೌಶಿಕ ತನ್ನ ಮೂರು ಷರತ್ತುಗಳನ್ನೂ ಮುರಿದಾಗ, ಇವಳು ಅವನನ್ನು ತ್ಯಜಿಸಿ ಕೇಶಾಂಬರಿಯಾಗಿ, ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಹೊರಟು ದಾರಿಯಲ್ಲಿ ಹಲವಾರು ರೀತಿಯ ಕೋಟಲೆಗಳನ್ನು ಅನುಭವಿಸಿದಳು. ಈ ಎಲ್ಲ ಅಸಹನೀಯವಾದ ನೋವನ್ನೂ ನುಂಗಿ ಸಹಿಸಿಕೊಳ್ಳಲು ಧೈರ್ಯ ಕೊಟ್ಟದ್ದು ಇವಳ ಶಿವನಿಷ್ಠೆ. ತಾನು ಶಿವನ ವಧುವಾದ್ದರಿಂದ ಯಾರಿಗೂ ಅಳುಕಬೇಕಾಗಿಲ್ಲವೆಂಬ ಕೆಚ್ಚು ಇವಳದು. ಶ್ರೀಶೈಲಕ್ಕೆ ಹೋಗುವ ಮಾರ್ಗದಲ್ಲಿ ಈಕೆ ಕಲ್ಯಾಣಕ್ಕೂ ಬಂದಳು. ಕಲ್ಯಾಣ ಆಗ ವೀರಶೈವ ಧಾರ್ಮಿಕ ಚಟುವಟಿಕೆಗಳಿಂದ ತುಂಬಿ ತುಳುಕುತ್ತಿದ್ದಿತು. ಬಸವ, ಅಲ್ಲಮ ಮುಂತಾದವರ ನೇತೃತ್ವದಲ್ಲಿ ಸಾಮಾಜಿಕ ಕ್ರಾಂತಿಯೊಂದು ರೂಪುಗೊಳ್ಳುತ್ತಿದ್ದಿತು. ಆ ಶರಣರ ಕಿವಿಗಾಗಲೇ ಅಕ್ಕನ ನಿಷ್ಠೆ ಭಕ್ತಿಗಳು ಕೇಳಿ ಬಂದಿದ್ದವು. ಕಲ್ಯಾಣದಲ್ಲಿ ಕೆಲವು ಕಾಲ ನಿಂತು ಅನುಭಾವಿಗಳ ಸಂಗದಲ್ಲಿ ಸುಖ ಶಾಂತಿಗಳನ್ನು ಕಂಡಳು. ಬಸವಣ್ಣ, ಅಲ್ಲಮಪ್ರಭು-ಮುಂತಾದ ಅನುಭಾವಿಗಳಿಂದ ಮಹಾಶಿವಶರಣೆ ಎಂಬ ಹೊಗಳಿಕೆಗೆ ಪಾತ್ರಳಾದಳು. ಅಲ್ಲಿಂದ ಈಕೆ ಎಲ್ಲರ ಹರಕೆಯನ್ನೂ ಹೊತ್ತು, ತನ್ನ ಗಂಡ ಶ್ರೀಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಶ್ರೀ ಶೈಲಕ್ಕೆ ಬಂದು, ಕದಳಿವನ ಪ್ರವೇಶಿಸಿ, ತನ್ನ ಆರಾಧ್ಯದೈವದ ಸಾನ್ನಿಧ್ಯದಲ್ಲಿ ಕೊನೆಯುಸಿರೆಳೆದಳು. ಹೀಗೆ ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು ಇವಳು ಮಾಡಿದ ಉಗ್ರಸಾಧನೆ, ಪಡೆದ ಸಿದ್ಧಿ ಅಪೂರ್ವವಾದುದು.

ಅಕ್ಕಮಹಾದೇವಿ ಶ್ರೇಷ್ಠ ಅನುಭಾವಿಯಾಗಿರುವಂತೆ ಶ್ರೇಷ್ಠ ವಚನ ಕಾರ್ತಿಯೂ ಆಗಿದ್ದಾಳೆ. ಚೆನ್ನಮಲ್ಲಿಕಾರ್ಜುನ ಎಂಬುದು ಇವಳ ವಚನಗಳ ಅಂಕಿತ. ಇವಳ ವಚನಗಳಲ್ಲಿ ಇವಳ ಅಂತರಂಗದ ಎಲ್ಲ ತುಮುಲಗಳೂ ಆಸೆ-ನಿರಾಸೆಗಳೂ ಸಂದೇಹ-ನಂಬಿಕೆಗಳೂ ವ್ಯಕ್ತವಾಗಿವೆ. ಅವು ಇವಳ ತೀವ್ರ ಅನುಭವದ ಅಗಳಾಗಿ ಹೊಮ್ಮುವುದರಿಂದ ಅನೇಕ ಕಡೆ ಶುದ್ಧ ಭಾವ ಗೀತೆಯ ಲಕ್ಷಣಗಳನ್ನು ಪಡೆದಿವೆ. ಸೃಷ್ಟಿಯಲ್ಲಿ ಒಂದಾಗಿಯೂ ಸೃಷ್ಟಿಯಿಂದ ಬೇರೆಯಾಗಿಯೂ ಇರುವ ಭಗವಂತನ ನಿಲುವನ್ನು ಬಹು ಪರಿಣಾಮ ಕಾರಿಯಾದ ರೀತಿಯಲ್ಲಿ ಚಿತ್ರಿಸುವ ಅಕ್ಕನ ವಚನವೊಂದು ಹೀಗಿದೆ:

ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿನೀರನೆರೆದವರಾರಯ್ಯ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿನೀರನೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ ಓಗರದ ಉದಕವನೆರೆದವರಾರಯ್ಯ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯ?
ಇಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೆ
ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನ? ತನ್ನ ಪರಿ ಬೇರೆ

ಚೆನ್ನಮಲ್ಲಿಕಾರ್ಜುನನಿಗಾಗಿ ಕಾತರಿಸಿ ಕಳವಳಪಟ್ಟ ಇವಳ ಅಂತರಂಗದ ವೇದನೆಯನ್ನು ಕೆಳಗಿನ ವಚನ ಚೆನ್ನಾಗಿ ಚಿತ್ರಿಸುತ್ತದೆ:

ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು,
ಕನಸಿನಲ್ಲಿ ಕಳವಳಿಸಿ ಆನು ಬೆರಗಾದೆ,
ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ,
ಆಪತ್ತಿಗೆ ಸಖಿಯರನಾರನೂ ಕಾಣೆ,
ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ,
ಎನಗೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ

ತೆರಣಿಯ ಹುಳು ತನ್ನ ಸ್ನೇಹಕ್ಕೆ ಮನೆಯ ಮಾಡಿ ತನ್ನ ನೂಲ ತಾನು ಸುತ್ತಿ ಸಾವ ತೆರನಂತೆ; ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪಬಿಟ್ಟಿತ್ತೆ; ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದೊಡೆಂತಯ್ಯ, ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದೊಡೆಂತಯ್ಯ; ಚಿಲಿಪಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ ನೀವು ಕಾಣಿರೆ-ಈ ಮುಂತಾದ ವಚನಗಳಲ್ಲಿ ಸಹಜ ಅನುಭವದ ತೀವ್ರತೆಯುಳ್ಳ ಭಾವಗೀತೆಯ ಲಕ್ಷಣಗಳನ್ನು ಕಾಣಬಹುದಾಗಿದೆ. ಸಾಹಿತ್ಯಗುಣ ಇಂಥ ಹಲವಾರು ವಚನಗಳಲ್ಲಿ ಘನೀಭೂತವಾಗಿದೆ. ಸಮಾಜ ವಿಮರ್ಶೆಯ, ಬೋಧನೆಯ ವಚನಗಳು ಅಕ್ಕನಲ್ಲಿ ಬಹಳ ಕಡಿಮೆ. ಈಕೆ ವಚನಗಳನ್ನಲ್ಲದೆ ಯೋಗಾಂಗ ತ್ರಿವಿಧಿ ಎಂಬ 67 ತ್ರಿಪದಿಗಳನ್ನೊಳಗೊಂಡ ತಾತ್ತ್ವಿಕ ವಿಷಯನಿರೂಪಣೆಯುಳ್ಳ ಒಂದು ಗ್ರಂಥವನ್ನು ಬರೆದಿದ್ದಾಳೆ. ಇದರಲ್ಲಿ ತಾತ್ತ್ವಿಕ

ವಿಷಯಗಳು ಕೆಲವು ಸಲ ಸರಳವಾಗಿಯೂ ಹಲವು ಸಲ ಬೆಡಗಿನ ವಚನಗಳ ಮಾದರಿಯಲ್ಲಿಯೂ ನಿರೂಪಿತವಾಗಿವೆ. ಈ ಕೃತಿ ಚಿಕ್ಕದಾದರೂ ಅಕ್ಕನ ಅನುಭಾವಸಂಪತ್ತಿಗೆ ಸಾಕ್ಷಿಯಾಗಿದೆ. ಇಡೀ ವಚನಸಾಹಿತ್ಯದಲ್ಲಿ ಗುಣದ ದೃಷ್ಟಿಯಿಂದ ನಾಲ್ಕಾರು ಕೃತಿಕಾರರ ಹೆಸರುಗಳನ್ನು ಹೇಳಬೇಕಾದಾಗ ಅದರಲ್ಲಿ ಅಕ್ಕಮಹಾದೇವಿಯ ಹೆಸರು ಖಂಡಿತ ಸೇರುತ್ತದೆ. **(ಎಂ.ಸಿ.)**

**ಅಕ್ಕಿ, ಟಿ.ಪಿ. :** 1908 -. ಹೆಸರಾಂತ ಕಲಾವಿದರು. ಇಂದಿನ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ 1908 ಡಿಸೆಂಬರ್ 31ರಂದು ಜನಿಸಿದರು. ಉತ್ತಮ ಕಲಾಸಂಸ್ಕಾರದ ಪರಿಸರದಲ್ಲಿ ಬೆಳೆದ ಇವರು ವಿದ್ಯಾರ್ಥಿದೆಸೆಯಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ತಳೆದರು. ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನಲ್ಲಿ ಮಾಸ್ಟರ್ ಪದವಿ ಗಳಿಸಿದರು. ಮುಂಬಯಿ, ನವಸಾರಿ, ಫಟಿಯಾಳ, ಬೆಂಗಳೂರು ಮೊದಲಾದ ನಗರಗಳಲ್ಲಿ ನಡೆದ ಚಿತ್ರಕಲಾ ಪ್ರದರ್ಶನಗಳಲ್ಲಿ ಪಾಲ್ಗೊಂಡು ಜನಮೆಚ್ಚುಗೆ ಗಳಿಸಿದರು. ವಿಜಯನಾಟ್ಯ ಸಂಸ್ಥೆ ಮತ್ತು ವಿಜಯ ಕಲಾ ಮಂದಿರವನ್ನೂ ಸ್ಥಾಪಿಸಿ (1947) ಪ್ರತಿವರ್ಷ ನೂರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಹಲವಾರು ಕಲಾಸಂಸ್ಥೆಗಳಲ್ಲಿ ಸಲಹಾ ಸಮಿತಿ ಸದಸ್ಯರಾಗಿ, ಅಧ್ಯಕ್ಷರಾಗಿ, ಉಚ್ಚಕಲಾಪರೀಕ್ಷೆಗಳ ಪರೀಕ್ಷಕರಾಗಿ, ನಿಯಂತ್ರಕರಾಗಿ, ಸಲಹೆಗಾರರಾಗಿ, ರಾಜ್ಯ ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ (1967). ನವದೆಹಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಮಕ್ಕಳ ಕಲಾ ಪ್ರದರ್ಶನದಲ್ಲಿ ಮತ್ತು ಕೋಲ್ಕತದಲ್ಲಿ ನಡೆದ ಅಖಿಲಭಾರತ ಕಲಾವಿದರ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು (1967). ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ (1981-84). **(ಜಿ.ಆರ್.ಟಿ.)**

**ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ :** ಕರ್ನಾಟಕ ರಾಜ್ಯದ ಮೈಸೂರು ನಗರದಲ್ಲಿ ನೆಲೆಗೊಂಡಿರುವ ವಾಕ್ ಮತ್ತು ಶ್ರವಣ ದೋಷಗಳ ಅಖಿಲ ಭಾರತ ಮಟ್ಟದ ಚಿಕಿತ್ಸಾ ಕೇಂದ್ರ (ಆಯಿಶ್). ಮಾತಿನ ತೊಂದರೆ, ಕಿವುಡತನ ಇತ್ಯಾದಿ ನ್ಯೂನತೆಗಳನ್ನು ಸರಿಪಡಿಸುವುದು ಹಾಗೂ ಆ ಬಗ್ಗೆ ಶಿಕ್ಷಣ ನೀಡುವುದು, ಸಂಶೋಧನೆ ನಡೆಸುವುದು ಈ ಸಂಸ್ಥೆಯ ಮುಖ್ಯ ಕಾರ್ಯಗಳು. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಕೆಲಸ ಮಾಡುತ್ತಿರುವ ಈ ಸಂಸ್ಥೆ 1966ರ ಅಕ್ಟೋಬರ್ ತಿಂಗಳಿನಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿತು. ಮೊದಲಿಗೆ ಮೈಸೂರು ನಗರದ ಝಾನ್ಸಿಲಕ್ಷ್ಮೀಬಾಯಿ ರಸ್ತೆಯಲ್ಲಿರುವ ರಾಮುಮಂದಿರ ಹಾಗೂ ಅನಂತರ

ಆಡಳಿತ ಕಚೇರಿ ಆವರಣ

ಮಹಾರಾಜಕಾಲೇಜು ಶತಮಾನೋತ್ಸವ ಭವನದಲ್ಲಿ ಕೆಲಸ ಮಾಡುತ್ತಿದ್ದ ಈ ಸಂಸ್ಥೆ 1970ರಲ್ಲಿ ಮಾನಸಗಂಗೋತ್ರಿ ಆವರಣಕ್ಕೆ ವರ್ಗಾವಣೆಗೊಂಡಿತು. ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂದಿನ ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಈ ಸಂಸ್ಥೆಗೆ ನೀಡಿದ್ದ 32 ಎಕರೆ ಜಮೀನಿಗೆ ಬದಲಾಗಿ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯಲ್ಲಿ 32 ಎಕರೆ ಜಮೀನು ನೀಡಿದ್ದರ ಫಲವಾಗಿ ಈ ಸಂಸ್ಥೆ ಇಲ್ಲಿ ರೂಪುಗೊಂಡಿತು. ವಾಕ್-ಶ್ರವಣ ದೋಷಗಳ ತಪಾಸಣೆ ಚಿಕಿತ್ಸೆಗಳ ಜೊತೆಗೆ ಈ ಸಂಸ್ಥೆ ಅಧ್ಯಯನ ಹಾಗೂ ಸಂಶೋಧನೆಗೆ ಸಹ ಹೆಚ್ಚಿನ ಒತ್ತು ನೀಡುತ್ತಿದೆ. ಹಾಗಾಗಿ ಈ ಸಂಸ್ಥೆಯಿಂದ ಇದುವರೆಗೆ ಎಂಟುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಾಕ್-ಶ್ರವಣ ವಿಜ್ಞಾನದಲ್ಲಿ ಪದವಿ ಪಡೆದಿದ್ದಾರಲ್ಲದೆ ದೇಶ ವಿದೇಶಗಳಲ್ಲಿ ಸೇವೆಸಲ್ಲಿಸುತ್ತಿದ್ದಾರೆ (2003).

ಭಾರತದಲ್ಲಿ ಬಹಳಷ್ಟು ಮಂದಿಯನ್ನು ಕಾಡುತ್ತಿರುವ ವಾಕ್-ಶ್ರವಣ ಸಮಸ್ಯೆಯ ಅಧ್ಯಯನ ಹಾಗೂ ಚಿಕಿತ್ಸೆ ನಡೆಸಲು ಅನುಕೂಲಿಸುವಂತಹ ಕೇಂದ್ರವೊಂದನ್ನು ಸ್ಥಾಪಿಸಲು 1963ರಲ್ಲಿ ಭಾರತ ಸರ್ಕಾರ ನಿರ್ಧರಿಸಿತು. ಸರ್ಕಾರದ ಕೋರಿಕೆಯ ಮೇರೆಗೆ ಅಮೆರಿಕದ ಪ್ರಖ್ಯಾತ ವಾಕ್ ಶ್ರವಣ ತಜ್ಞ ಡಾ.ಮಾರ್ಟಿನ್ ಎಫ್.ಪಾಮರ್ ಅವರು ಭಾರತಾದ್ಯಂತ ಪ್ರವಾಸ ಮಾಡಿ ವಾಕ್-ಶ್ರವಣ ಸಂಸ್ಥೆಯ ಸ್ಥಾಪನೆಗೆ ಮೈಸೂರು ನಗರ ಸೂಕ್ತವಾದ ಸ್ಥಳವೆಂದು ವರದಿ ಮಾಡಿದರು. ಹಾಗಾಗಿ ಈ ಸಂಸ್ಥೆ ಮೈಸೂರು ನಗರದಲ್ಲಿ ಸ್ಥಾಪನೆಯಾಗಲು ಕಾರಣವಾಯಿತು.

**ಕಾರ್ಯ ವ್ಯಾಪ್ತಿ :** ಈ ಸಂಸ್ಥೆ ಈಗ ವಾಕ್-ಶ್ರವಣ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯ ವರೆಗಿನ ಶಿಕ್ಷಣವನ್ನು ನೀಡುತ್ತಿದ್ದು ಇಲ್ಲಿ ಒಟ್ಟು ಆರು ವಿಭಾಗಗಳಿವೆ: ಶ್ರವಣ ವಿಜ್ಞಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಆಡಿಯಾಲಜಿ), ಮನೋವಿಜ್ಞಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಸೈಕಾಲಜಿ), ವಿದ್ಯುನ್ಮಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್), ಕಿವಿ-ಮೂಗು-ಗಂಟಲು ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಇಎನ್‌ಟಿ), ವಾಕ್-ಭಾಷಾ ವಿಜ್ಞಾನವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಸ್ಪೀಚ್ ಲಾಂಗ್ವೇಜ್ ಸೈನ್ಸ್), ವಾಕ್-ದೋಷನಿದಾನ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಸ್ಪೀಚ್ ಪೆಥಾಲಜಿ) ಹಾಗೂ ಚಿಕಿತ್ಸಾ ಕೇಂದ್ರ (ಥೆರಪಿ ಕ್ಲಿನಿಕ್). ಸದ್ಯದಲ್ಲಿಯೇ ಸಲಕರಣೆ ಅಭಿವೃದ್ಧಿ ವಿಭಾಗವನ್ನು (ಡಿಪಾರ್ಟ್‌ಮೆಂಟ್ ಆಫ್ ಮೆಟೀರಿಯಲ್ ಡೆವಲಪ್‌ಮೆಂಟ್) ತೆರೆಯಲಾಗುವುದು.

**ಶ್ರವಣ ವಿಜ್ಞಾನ ವಿಭಾಗ :** ಈ ವಿಭಾಗದಲ್ಲಿ ವ್ಯಕ್ತಿಯೊಬ್ಬನ ಶ್ರವಣ ಶಕ್ತಿಯನ್ನೂ ಸಂಬಂಧಿಸಿದ ನ್ಯೂನತೆಯನ್ನೂ ಶಬ್ದರಹಿತ ಪರಿಸರದಲ್ಲಿ ಶ್ರವಣಶಕ್ತಿ ಮಾಪಕ ಯಂತ್ರದ ಸಹಾಯದಿಂದ ಅಳೆದು ಪತ್ತೆ ಹಚ್ಚಲಾಗುತ್ತದೆ. ಅನಂತರ ಸೂಕ್ತ ಚಿಕಿತ್ಸೆಯನ್ನು ಸೂಚಿಸಲಾಗುತ್ತದೆ.

ಇತ್ತೀಚೆಗೆ 70ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ವಿಭಾಗ ಸಂಪೂರ್ಣ ಹವಾನಿಯಂತ್ರಿತ ಸೌಲಭ್ಯವುಳ್ಳ 16 ಕೊಠಡಿಗಳನ್ನೊಳಗೊಂಡಿದೆ. ಮಕ್ಕಳ ಪರೀಕ್ಷೆಗಾಗಿ ಪ್ರತ್ಯೇಕ ಕೊಠಡಿಗಳನ್ನು ಮೀಸಲಿಡಲಾಗಿದೆ.

**ಕಿವಿಯಚ್ಚು ವಿಭಾಗ :** ಈ ವಿಭಾಗ ಶ್ರವಣವಿಜ್ಞಾನ ವಿಭಾಗದ ಒಂದು ಅಂಗ. ಶ್ರವಣೋಪಕರಣವನ್ನು ಪಡೆದ ವ್ಯಕ್ತಿ ಆ ಯಂತ್ರವನ್ನು ಬಳಸಬೇಕಾದರೆ, ಆ ವ್ಯಕ್ತಿಯ ಕಿವಿಗೆ ಸರಿಹೊಂದುವಂತಹ ಕಿವಿಯಚ್ಚು ಬೇಕೇಬೇಕು. ಎಲ್ಲರೂ ಬಳಸಬಹುದಾದ ಸಾಮಾನ್ಯ ಸಿದ್ಧ ಅಚ್ಚನ್ನು ತಯಾರಿಸಲು ಸಾಧ್ಯವಿಲ್ಲ. ಹಾಗಾಗಿ ಪ್ರತಿ ವ್ಯಕ್ತಿಯ ಕಿವಿಯ ಅಳತೆಯನ್ನು ತೆಗೆದುಕೊಂಡು ಆ ಅಳತೆಗೆ ತಕ್ಕಂತಹ ಅಚ್ಚನ್ನು ಈ ವಿಭಾಗದಲ್ಲಿ ತಯಾರಿಸಿಕೊಡಲಾಗುತ್ತದೆ.

ಈಜುಗಾರರ ಕಿವಿಯೊಳಗೆ ನೀರು ಹೋಗದಂತೆ ತಡೆಯಲು ಕಿವಿಯ ಪ್ಲಗ್‌ಗಳನ್ನು ಇಲ್ಲಿ ತಯಾರಿಸಿಕೊಡಲಾಗುತ್ತದೆ. ಈ ಸಂಬಂಧವಾಗಿ ಕಿವಿಯಚ್ಚು ತಂತ್ರಜ್ಞಾನ (ಡಿಪ್ಲೊಮಾ ಇನ್ ಹಿಯರಿಂಗ್ ಏಡ್ ಅಂಡ್ ಇಯರ್‌ಮೋಲ್ಡ್ ಟೆಕ್ನಾಲಜಿ) ಎಂಬ ಒಂದು ವರ್ಷದ ಅವಧಿಯ ನೂತನ ಡಿಪ್ಲೊಮಾ ಶಿಕ್ಷಣವನ್ನು ಸಂಸ್ಥೆ ಪ್ರಾರಂಭಿಸಿದೆ (2002).

**ವಿದ್ಯುನ್ಮಾನ ವಿಭಾಗ :** ಈ ವಿಭಾಗ ವಿದ್ಯುತ್ ಹಾಗೂ ಎಲೆಕ್ಟ್ರಾನಿಕ್ಸ್‌ಗೆ ಸಂಬಂಧಿಸಿದ ವೈದ್ಯಕೀಯ ಚಿಕಿತ್ಸೋಪಕರಣಗಳ ದುರಸ್ತಿ ಹಾಗೂ ನಿರ್ವಹಣೆಯ ಕೆಲಸಗಳನ್ನು ನಿರ್ವಹಿಸುತ್ತವೆ. ಶ್ರವಣ ವಿಜ್ಞಾನ ವಿಭಾಗವು ನೀಡುವ ಮಾಹಿತಿಯನ್ನು ಅನುಸರಿಸಿ ಶ್ರವಣ ದೋಷವುಳ್ಳವರಿಗೆ ಶ್ರವಣೋಪಕರಣಗಳನ್ನು ಸಹ ಈ ವಿಭಾಗ ನೀಡುತ್ತದೆ. ಅಷ್ಟೇ ಅಲ್ಲ, ಅತ್ಯಂತ ಕಡಿಮೆ ವೆಚ್ಚದಲ್ಲಿ ಶ್ರವಣೋಪಕರಣಗಳ ದುರಸ್ತಿಯನ್ನೂ ಇಲ್ಲಿ ಮಾಡಲಾಗುತ್ತದೆ. ರೋಟರಿ, ಲಯನ್ಸ್ ಇತ್ಯಾದಿ ಸ್ವಯಂ ಸೇವಾ

ಸಂಸ್ಥೆಗಳ ನೆರವಿನೊಂದಿಗೆ ಶ್ರವಣೋಪಕರಣಗಳ ದುರಸ್ತಿಯ ಉಚಿತ ಶಿಬಿರ ಮತ್ತು ಶ್ರವಣೋಪಕರಣಗಳನ್ನು ಬಳಸುವವರಿಗಾಗಿ ಅದನ್ನು ಸಮರ್ಥವಾಗಿ ಬಳಸುವ ಹಾಗೂ ಸುಸ್ಥಿತಿಯಲ್ಲಿಟ್ಟುಕೊಳ್ಳಲು ಅನುಸರಿಸಬೇಕಾದ ಕ್ರಮಗಳ

ಗ್ರಂಥಾಲಯ

ಬಗೆಗೂ ಆಗಾಗ್ಗೆ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಸಂಸ್ಥೆಯ ಈ ವಿಭಾಗ ಕೆಳಕಂಡ ಉಪಕರಣಗಳನ್ನು ಸಂಪೂರ್ಣ ಸ್ವದೇಶಿ ವಸ್ತುಗಳನ್ನು ಬಳಸಿ ಅಭಿವೃದ್ಧಿಪಡಿಸಿದೆ. (1) ಕಮ್ಯುನಿಕೇಟರ್ - ಮಾತೂ ಬಾರದ, ಕಿವಿಯೂ ಕೇಳದ ಹಾಗೂ ನಡೆದಾಡಲೂ ಆಗದಂತಹವರಿಗಾಗಿ ಈ ಉಪಕರಣಗಳನ್ನು ಸಿದ್ಧಪಡಿಸಲಾಗಿದೆ. ವ್ಯಕ್ತಿಯು ಈ ಯಂತ್ರದ ಸೂಚಿಗುಂಡಿಗಳನ್ನು ಒತ್ತುವುದರ ಮೂಲಕ ತನಗೆ ಏನು ಬೇಕು ಎಂಬುದನ್ನು ಇನ್ನೊಬ್ಬರಿಗೆ ತಿಳಿಸಬಹುದು. (2) ಕಂಪನ ತರಂಗೋಪಕರಣ - ಕಿವಿ ಕೇಳಿಸದವರಿಗಾಗಿ ರೂಪಿಸಿರುವ ಒಂದು ಅಲಾರಾಂ ವ್ಯವಸ್ಥೆ. ಮಲಗುವಾಗ ದಿಂಬಿನ ಅಡಿಯಲ್ಲಿ ಈ ಉಪಕರಣವನ್ನಿಟ್ಟುಕೊಳ್ಳಬೇಕು. ಇದರ ಕಂಪನದ ಮೂಲಕ ವ್ಯಕ್ತಿಯು ನಿಗದಿತ ಸಮಯಕ್ಕೆ ಸರಿಯಾಗಿ ನಿದ್ದೆಯಿಂದ ಎದ್ದೇಳಲು ಸಾಧ್ಯವಾಗುತ್ತದೆ. (3) ಧ್ವನಿಸೂಚನಾ ದೀಪ -ಉಗ್ಗುವಿಕೆಯುಳ್ಳವರಿಗೆ ಚಿಕಿತ್ಸೆ ನೀಡುವ ಸಲುವಾಗಿ ಇದನ್ನು ಬಳಸಲಾಗುತ್ತದೆ. (4) ಅನುನಾಸಿಕ ಸೂಚಕ - ಒಬ್ಬ ವ್ಯಕ್ತಿ ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳ ಪ್ರಮಾಣ ಎಷ್ಟು ಎಂಬುದನ್ನು ತೋರುವ ಉಪಕರಣವಿದು. (5) ಲೂಪ್ ಸಿಸ್ಟಂ - ಕಿವುಡು ದೋಷವುಳ್ಳ ಹಲವಾರು ಮಕ್ಕಳಿಗೆ ಒಮ್ಮೆಗೆ ಚಿಕಿತ್ಸಾತರಬೇತಿ ನೀಡಲು ಹಾಗೂ ಮಕ್ಕಳಿಗೆ ಶಾಲಾಪೂರ್ವ ತರಬೇತಿ ನೀಡಲು ಈ ಉಪಕರಣವನ್ನು ಬಳಸಲಾಗುತ್ತದೆ. (6) ಎಫ್.ಎಂ.ವ್ಯವಸ್ಥೆ - ಇದೊಂದು ಬಗೆಯ ಶ್ರವಣೋಪಕರಣ. ಶ್ರವಣ ದೋಷವಿರುವ ಮಕ್ಕಳ ತರಗತಿಗಳಲ್ಲಿ ಈ ಉಪಕರಣ ಬಹಳ ಉಪಯುಕ್ತ. ಈ ಶ್ರವಣೋಪಕರಣದ ವೈಶಿಷ್ಟ್ಯವೇನೆಂದರೆ ಹೊರಗಿನ ಅನಗತ್ಯ ಶಬ್ದಗಳು ಇದರಲ್ಲಿ ಕೇಳಿಸುವುದಿಲ್ಲ.

**ವಾಕ್-ಭಾಷಾ ವಿಜ್ಞಾನ ವಿಭಾಗ :** ಈ ವಿಭಾಗದಲ್ಲಿ ನಿರರ್ಗಳ ಮಾತುಗಾರಿಕೆ, ಉಚ್ಚಾರಣೆ, ಧ್ವನಿಯ ಪ್ರಮಾಣ ಇತ್ಯಾದಿಗಳನ್ನು ಅಭ್ಯಸಿಸಲಾಗುತ್ತದೆ. ಭಾಷೆಯನ್ನು ಮಕ್ಕಳು ಹೇಗೆ ಕಲಿಯುತ್ತಾರೆ, ಸಾಮಾನ್ಯ ಮಕ್ಕಳು ಮಾತನಾಡಲು ಕಲಿಯುವ ರೀತಿ ನೀತಿಗಳೇನು ಎಂಬಿತ್ಯಾದಿಗಳಲ್ಲದೆ ಇತರ ಯಾವುದೇ ರೀತಿಯ ವಾಕ್-ಶ್ರವಣ ದೋಷಕ್ಕೆ ಒಳಗಾದ ಮಕ್ಕಳು ಮಾತು ಕಲಿಯುವ ಬಗೆಗೆ ಅಭ್ಯಸಿಸಿ ಅದಕ್ಕೆ ಪೂರಕ ಚಿಕಿತ್ಸೆ ನೀಡುವ ಮೂಲಕ ತೊಂದರೆಗಳನ್ನು ನಿವಾರಿಸಲಾಗುತ್ತದೆ. ಬಾಲ್ಯದಿಂದ ವೃದ್ಧಾಪ್ಯದವರೆಗೂ ಮನುಷ್ಯನೊಬ್ಬನಲ್ಲಿ ಉಂಟಾಗುವ ಧ್ವನಿಯ ಬದಲಾವಣೆಗಳ ಬಗೆಗೆ ಈ ವಿಭಾಗದಲ್ಲಿ ಸಂಶೋಧನೆ ನಡೆಸಲಾಗುತ್ತಿದೆ. ಸಂಗೀತಗಾರರು, ಭಾಷಣಕಾರರು, ನಟರು, ಪತ್ರಕರ್ತರು, ಉಪನ್ಯಾಸಕರು ಮೊದಲಾದವರು ಧ್ವನಿಯನ್ನು ಹೆಚ್ಚಾಗಿ ಬಳಸುವ ಜನ. ಇಂಥವರ ಧ್ವನಿಪೆಟ್ಟಿಗೆ ಹಾನಿಗೊಳಗಾಗುವ ಸಂಭವವಿರುತ್ತದೆ. ಇಂತಹ ದೋಷಗಳಿಗೂ ಈ ವಿಭಾಗದಲ್ಲಿ ಚಿಕಿತ್ಸೆ ಲಭ್ಯ. ವ್ಯಕ್ತಿಯೊಬ್ಬನ ಧ್ವನಿಯನ್ನು ವಿಶ್ಲೇಷಿಸಿ ಪತ್ತೆಹಚ್ಚುವ ಅಪರಾಧಪತ್ತೆ ಕೆಲಸದಲ್ಲಿಯೂ ಈ ವಿಭಾಗ ಪೊಲೀಸರಿಗೆ ನೆರವಾಗುತ್ತದೆ.

**ವಾಕ್ ದೋಷ ನಿದಾನ ವಿಭಾಗ :** ಇದು ಸಂಸ್ಥೆಯ ಮೊದಲ ಹಾಗೂ ಅತಿ ಮುಖ್ಯವಾದ ವಿಭಾಗವಾಗಿದೆ. ಶಿಕ್ಷಣ (ಪದವಿ ಹಾಗೂ ಸ್ನಾತಕೋತ್ತರ ಪದವಿ) ರೋಗತಪಾಸಣೆ ಹಾಗೂ ಚಿಕಿತ್ಸೆ, ವಾಕ್ ದೋಷಕ್ಕೆ ಸಂಬಂಧಿಸಿದ ಸಂಶೋಧನ ಕಾರ್ಯಗಳು, ಪೋಷಕರಿಗೆ ಸಲಹೆ ಸೂಚನೆಗಳು, ಸಾರ್ವಜನಿಕರಲ್ಲಿ ಅರಿವುಂಟುಮಾಡುವ ಕಾರ್ಯಕ್ರಮಗಳು ಇತ್ಯಾದಿಗಳನ್ನು ಈ ವಿಭಾಗ ಹಮ್ಮಿಕೊಂಡಿದೆ. ಜೊತೆಗೆ, ಮಕ್ಕಳಲ್ಲಿ ಮತ್ತು ವಯಸ್ಕರಲ್ಲಿ ಬರುವ ಅನೇಕ ವಿಧದ ಮಾತಿನ ತೊಂದರೆಗಳನ್ನು ಪರೀಕ್ಷಿಸಿ ಚಿಕಿತ್ಸೆ ನೀಡುತ್ತದೆ.

ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡುಬರುವ ಕುಂಠಿತಗೊಂಡ ಮಾತಿನ ಬೆಳವಣಿಗೆ, ಬುದ್ಧಿಮಾಂದ್ಯತೆ, ಮೆದುಳಿನ ತೊಂದರೆಗಳು, ಹಗಲುಕನಸು ಕಾಣುವಿಕೆ (ಆಟಿಸಂ), ಶ್ರವಣ ದೋಷ, ಮಾತಿನ ಅಂಗಗಳಾದ ಅಂಗುಳು, ನಾಲಗೆ, ಹಲ್ಲು ಇತ್ಯಾದಿಗಳಲ್ಲಿನ ನ್ಯೂನತೆಯಿಂದ ಧ್ವನಿತೊಂದರೆಗಳುಂಟಾಗ ಬಹುದು. ಉಗ್ಗುವಿಕೆ, ಅರ್ಥಮಾಡಿಕೊಳ್ಳುವುದರಲ್ಲಿ ತೊಂದರೆ, ಶಾಲಾಮಕ್ಕಳಲ್ಲಿ ಕಲಿಕೆಯ ತೊಂದರೆ ಇತ್ಯಾದಿಗಳಿಗೆ ಈ ವಿಭಾಗದಲ್ಲಿ ಚಿಕಿತ್ಸೆ ದೊರೆಯುತ್ತದೆ. ವಯಸ್ಕರಲ್ಲಿ ಪಾರ್ಶ್ವವಾಯುವಿನಿಂದ ಉಂಟಾಗುವ ವಾಕ್ ಸ್ತಂಭನ (ಮಾತು ನಿಲ್ಲುವಿಕೆ), ನರರೋಗ ಸಂಬಂಧದಿಂದುಂಟಾಗುವ ಧ್ವನಿ ಹಾಗೂ ಉಚ್ಚಾರಣಾ ದೋಷಗಳು, ಧ್ವನಿಯ ತೊಂದರೆ, ಉಗ್ಗು, (ತೊದಲು) ಇತ್ಯಾದಿಗಳಿಗೂ ಇಲ್ಲಿ ಚಿಕಿತ್ಸೆಯುಂಟು.

**ಮನೋವಿಜ್ಞಾನ ವಿಭಾಗ :** ವಾಕ್-ಶ್ರವಣ ದೋಷಗಳಲ್ಲಿ ಮಾನಸಿಕ ತೊಂದರೆಯೂ ತಳುಕು ಹಾಕಿಕೊಂಡಿರುವ ಸಾಧ್ಯತೆ ಉಂಟು. ಉದಾ: ತೀವ್ರ ಮಾನಸಿಕ ಆಘಾತದಿಂದ ಮಾತು ನಿಲ್ಲುವುದು. ಇಂತಹ ಸಂದರ್ಭಗಳಲ್ಲಿ ವಾಕ್ ಶ್ರವಣ ದೋಷಗಳುಳ್ಳ ವ್ಯಕ್ತಿಗಳಲ್ಲಿರಬಹುದಾದ ಮಾನಸಿಕ ತೊದರೆಗಳನ್ನು ಪತ್ತೆ ಹಚ್ಚಿ ತಕ್ಕ ಚಿಕಿತ್ಸೆಯನ್ನು ಈ ವಿಭಾಗದಲ್ಲಿ ನೀಡಲಾಗುತ್ತದೆ. ತರಗತಿಯಲ್ಲಿ ಹಿಂದೆ ಬಿದ್ದಿರುವ ವಿದ್ಯಾರ್ಥಿ, ವಯಸ್ಸಿಗೆ ಮೀರಿದ ಬುದ್ಧಿಯಿಂದಾಗುವ ತೊಂದರೆ, ಒಂದು ವಯಸ್ಸಿನಲ್ಲಿರಬೇಕಾದ ಬುದ್ಧಿಮಟ್ಟ ಇಲ್ಲದಿರುವಿಕೆ, ಬುದ್ಧಿಮಾಂದ್ಯತೆ ಇಂತಹ ತೊಂದರೆಗಳನ್ನು ಪರೀಕ್ಷಿಸಿ ಇಲ್ಲಿ ಪರಿಹಾರವನ್ನು ಸೂಚಿಸಲಾಗುವುದು.

ಶ್ರವಣೋಪಕರಣ ಜೋಡಣೆ

**ಕಿವಿ ಮೂಗು ಗಂಟಲು ವಿಭಾಗ :** ಈ ವಿಭಾಗದಲ್ಲಿ ಕಿವಿ-ಮೂಗು ಹಾಗೂ ಗಂಟಲುಗಳಿಗೆ ಸಂಬಂಧಿಸಿದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನೀಡಲಾಗುತ್ತದೆ. ಕಿವಿಯೊಳಗೆ ಗುಯ್ ಎಂದು ಸದ್ದಾಗುವುದು, ಕಿವಿನೋವು, ಗುಗ್ಗೆಕಟ್ಟುವುದು ಇತ್ಯಾದಿ ತೊಂದರೆಗಳನ್ನು ಇಲ್ಲಿ ನಿವಾರಿಸಲಾಗುವುದು. ಸಂಸ್ಥೆಯ ಈ ವಿಭಾಗ ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತನ್ನದೇ ಆದ ಹೊರರೋಗಿಗಳ ವಿಭಾಗವನ್ನು ಹೊಂದಿದ್ದು ಅಲ್ಲಿಯೂ ರೋಗಿಗಳನ್ನು ಪರೀಕ್ಷಿಸಲಾಗುತ್ತದೆ. ಕಿವಿಗೆ ಸಂಬಂಧಿಸಿದಂತೆ ಶಸ್ತ್ರ ಚಿಕಿತ್ಸೆಯ ಅಗತ್ಯ ಕಂಡುಬಂದಲ್ಲಿ ಅದನ್ನೂ ನೆರವೇರಿಸಲಾಗುತ್ತದೆ.

**ಚಿಕಿತ್ಸಾ ಕೇಂದ್ರ :** ಸಂಸ್ಥೆಯ ಆವರಣದಲ್ಲಿ ವಿವಿಧೋದ್ದೇಶ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇಲ್ಲಿ ಒಂದೇ ಸೂರಿನಡಿಯಲ್ಲಿ ರೋಗ ನಿರ್ಣಯ ಘಟಕ ಹಾಗೂ ಪುನರ್ವಸತಿ ಘಟಕಗಳ ಸೌಲಭ್ಯ ಲಭ್ಯವಿದೆ. ದಿನವೊಂದಕ್ಕೆ 600ಕ್ಕೂ ಹೆಚ್ಚು ರೋಗಿಗಳು ಬರುವ ಸಾಧ್ಯತೆಯಿದ್ದು ನರ

ಸಂಬಂಧ ನ್ಯೂನತೆಗಳನ್ನು ಸರಿಪಡಿಸುವ ಘಟಕವನ್ನೂ ಇಲ್ಲಿ ಸ್ಥಾಪಿಸಲಾಗಿದೆ. ಇದುವರೆಗೆ ಸು.2 ಲಕ್ಷ ಜನರಿಗೆ ಚಿಕಿತ್ಸೆ ನೀಡಲಾಗಿದೆ. ಈ ಕಟ್ಟಡದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ 189 ಕೊಠಡಿಗಳಿವೆ. ವಾಕ್ ಧ್ವನಿ ಮತ್ತು ಭಾಷಾ ನ್ಯೂನತೆಗಳಿಗೆ ವಿವಿಧ ರೀತಿಯ ಪರೀಕ್ಷೆಗಳನ್ನು ನಡೆಸಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ. ಅಗತ್ಯವಿದ್ದಾಗಲೆಲ್ಲ ಹೊರಗಿನ ತಜ್ಞವೈದ್ಯರ ನೆರವನ್ನು ಸಹ ಪಡೆಯಲಾಗುತ್ತದೆ. ಪಿಡಿಯಾಟ್ರಿಷಿಯನ್, ಪ್ಲಾಸ್ಟಿಕ್‌ಸರ್ಜನ್, ಪ್ರೋಸ್ತೋಡೆಂಟಿಸ್ಟ್, ನ್ಯೂರಾಲಜಿಸ್ಟ್, ಫೋನೋಸರ್ಜನ್, ಆಕ್ಯುಪೇಷನಲ್ ಥೆರಪಿಸ್ಟ್, ಫಿಜಿಯೋಥೆರಪಿಸ್ಟ್ ಇತ್ಯಾದಿ ತಜ್ಞರು ನಿಯಮಿತ ದಿನಗಳ ನಿಗದಿತ ವೇಳೆಗಳಲ್ಲಿ ಸಂಸ್ಥೆಗೆ ಭೇಟಿ ನೀಡುತ್ತಾರೆ.

**ಪಿಓಡಿ ಮತ್ತು ಸಿಡಿ :** ಶ್ರವಣ ದೋಷ ಹಾಗೂ ವಾಕ್ ಭಾಷಾ ದೋಷಗಳನ್ನು ತಡೆಗಟ್ಟುವ ಯೋಜನೆಯೊಂದು ಸಂಸ್ಥೆಯಲ್ಲಿದೆ. ಇದಕ್ಕೆ ಪ್ರಿವೆನ್ಷನ್ ಆಫ್ ಡೆಫ್‌ನೆಸ್ ಅಂಡ್ ಕಮ್ಯುನಿಕೇಷನ್ ಡಿಸಾರ್ಡರ್ಸ್ ಎಂದು ಹೆಸರು. ಇದರಲ್ಲಿ ಮೂರು ಹಂತಗಳಿವೆ (1) ಹೆಚ್ಚು ಅಪಾಯಕರವಾದ ಆರೋಗ್ಯದ ತೊಂದರೆಯೊದಗುವ ಶ್ರವಣ ಹಾಗೂ ವಾಕ್ ಭಾಷಾ ದೋಷಗಳನ್ನು ತಡೆಗಟ್ಟುವುದು (2)ಆರಂಭದಲ್ಲಿಯೇ ದೋಷಗಳನ್ನು ಗುರುತಿಸಿ ಸಲಹೆ ಸೂಚನೆಗಳನ್ನು ಕೊಡುವುದು, (3) ಪುನರ್ವಸತಿ ಕಲ್ಪಿಸುವುದು. ಈ ಯೋಜನೆಯನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕೂಡ ಹಮ್ಮಿಕೊಳ್ಳಲಾಗಿದೆ.

**ಆಲ್ಟರ್ನೇಟ್ ಅಂಡ್ ಆಗ್ಮೆಂಟೇಟಿವ್ ಕಮ್ಯೂನಿಕೇಷನ್ ಡಿವೈಸಸ್ (ಎ.ಎ.ಸಿ):** ಕೆಲವೊಮ್ಮೆ ಕೆಲವರಿಗೆ ಕಾರಣಾಂತರಗಳಿಂದ ಮಾತು ಕಲಿಯಲು ಸಾಧ್ಯವಾಗುವುದಿಲ್ಲ. ಅಂತಹವರು ತಮ್ಮ ಅಭಿಪ್ರಾಯವನ್ನು ಇತರರಿಗೆ ತಿಳಿಸುವುದು ಹೇಗೆ? ಅದಕ್ಕೆ ಹಲವಾರು ಬಗೆಯ ಉಪಕರಣಗಳಿವೆ. ಇವಕ್ಕೆ ಆಲ್ಟರ್ನೇಟ್ ಅಂಡ್ ಆಗ್ಮೆಂಟೇಟಿವ್ ಕಮ್ಯೂನಿಕೇಷನ್ ಡಿವೈಸಸ್ (ಸಂಕ್ಷಿಪ್ತವಾಗಿ ಎ.ಎ.ಸಿ) ಎಂದು ಕರೆಯಲಾಗುತ್ತದೆ. ಈ ಉಪಕರಣಗಳಲ್ಲಿ ಗುಂಡಿಯನ್ನೊತ್ತಿಯೋ ಅಥವಾ ಇನ್ನಾವುದೇ ವಿಧಾನದಿಂದಲೋ ವ್ಯಕ್ತಿಯೊಬ್ಬ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯ.

**ಡಿಜಿಟಲ್ ಗ್ರಂಥಾಲಯ :** 12 ಸಾವಿರ ಗ್ರಂಥಗಳು, ಅಸಂಖ್ಯಾತ ಪತ್ರಿಕೆಗಳು, 78 ಸಾವಿರಕ್ಕೂ ಹೆಚ್ಚು ಪಠ್ಯಪುಸ್ತಕಗಳು, ಸಂಶೋಧನ ಪತ್ರಿಕೆಗಳು, ಸಿಡಿ ಮತ್ತು ವೀಡಿಯೋ ಕೆಸೆಟ್‌ಗಳನ್ನೂಳಗೊಂಡ ಪೂರ್ಣ ಪ್ರಮಾಣದಲ್ಲಿ ಗಣಕೀಕೃತಗೊಂಡಿರುವ ಅತ್ಯಮೂಲ್ಯ ಗ್ರಂಥಭಂಡಾರ ಸಂಸ್ಥೆಯ ಆವರಣದ ಸುಂದರ ಕಟ್ಟಡದಲ್ಲಿದೆ. ಕೇಂಬ್ರಿಜ್ ವಿಶ್ವ ವಿದ್ಯಾಲಯದ ಗ್ರಂಥಾಲಯದ ಮಾದರಿಯಲ್ಲಿ ನಿರ್ಮಿಸಲಾಗಿರುವ ಈ ಗ್ರಂಥಾಲಯದಲ್ಲಿ ಸೂಕ್ಷ್ಮತರಂಗ ಅಂತರ್ಜಾಲ ವ್ಯವಸ್ಥೆಯಿಂದಾಗಿ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದಲ್ಲಿ ಕುಳಿತೇ ಗ್ರಂಥಾಲಯದಿಂದ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆಯಿದೆ.

**ಮೌನವನ್ನು ಮಾತಾಗಿಸುವ ತರಬೇತಿ:** ಶಬ್ದ ಮಾಲಿನ್ಯದ ಹೆಚ್ಚಳದಿಂದಾಗಿ ನಗರ ಪ್ರದೇಶಗಳಲ್ಲಿ ಶ್ರವಣದೋಷವುಳ್ಳವರ ಸಂಖ್ಯೆ ಹೆಚ್ಚುತ್ತಿದೆ. ಅನಕ್ಷರತೆಯಿಂದಾಗಿ ಹಳ್ಳಿಗಳಲ್ಲಿ ವಾಕ್-ಶ್ರವಣ ದೋಷಗಳ ಬಗೆಗೆ ಅರಿವು ಕಡಿಮೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯು ಹಲವು ಸಂಸ್ಥೆಗಳ ಸಹಯೋಗದೊಡನೆ ಗ್ರಾಮೀಣ ಪ್ರದೇಶಗಳಲ್ಲಿ ಶಿಬಿರಗಳನ್ನೇರ್ಪಡಿಸಿ ಈ ವಿಚಾರದಲ್ಲಿ ಅರಿವು ಹಾಗೂ ಚಿಕಿತ್ಸೆ ನೀಡುತ್ತಿದೆ. ಭಾರತೀಯ ಪುನರ್ವಸತಿ ಮಂಡಲಿಯ ಸಹಕಾರದೊಂದಿಗೆ ಅರಿವು ಹಾಗೂ ತರಬೇತಿಯ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಮತ್ತು ಮುಖ್ಯೋಪಾಧ್ಯಾಯರುಗಳಿಗೆ, ಅಲ್ಲದೆ ಪ್ರಾಥಮಿಕ ಆರೋಗ್ಯಕೇಂದ್ರಗಳ ವೈದ್ಯಾಧಿಕಾರಿಗಳಿಗೆ ಆಗಾಗ ಕಾರ್ಯಕ್ರಮಗಳನ್ನು ನಡೆಸಿ, ವಾಕ್ ದೋಷ, ಬುದ್ಧಿಮಾಂದ್ಯತೆಗಳನ್ನು ಪ್ರಾಥಮಿಕ ಹಂತದಲ್ಲೇ ಗುರುತಿಸುವಿಕೆ, ರಕ್ತಸಂಬಂಧದಲ್ಲಿ ಮದುವೆಯಾದಾಗ ಹುಟ್ಟುವ ಮಕ್ಕಳಲ್ಲಿ ಉಂಟಾಗುವ ಅಂಗವೈಕಲ್ಯ ಇತ್ಯಾದಿ ವಿಚಾರಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. ವಾಕ್ ಶ್ರವಣಕ್ಕೆ ಸಂಬಂಧಿಸಿದಂತೆ ಯಾರು ಯಾವ ವಿಚಾರದಲ್ಲಿ ತಿಳಿಯಬೇಕೆಂದು ಅಪೇಕ್ಷಿಸುತ್ತಾರೋ ಆ ವಿಷಯದಲ್ಲಿ ಅವರಿಗೆ ತರಬೇತಿ ಕೊಡುವ ಕಾರ್ಯಕ್ರಮವನ್ನೂ ಸಂಸ್ಥೆ ಹಮ್ಮಿಕೊಂಡಿದೆ. ಈ ತರಬೇತಿ ಕಾರ್ಯಕ್ರಮಗಳಲ್ಲಿ ಕನಿಷ್ಠ 5 ಜನ, ಗರಿಷ್ಠ 15 ಜನ ಭಾಗವಹಿಸಬಹುದು. ಸಂಸ್ಥೆಯು ಆಗಿಂದಾಗ್ಗೆ ಅನೇಕ ಬಗೆಯ ಕಾರ್ಯಾಗಾರಗಳನ್ನು ನಡೆಸುತ್ತಿದೆ.

**ಶೈಕ್ಷಣಿಕ ವಿಭಾಗ :** ಪದವಿ ಪರೀಕ್ಷೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆಯೊಂದಿಗೆ ನಡೆಸಲಾಗುತ್ತಿದೆ. ಉಳಿದಂತೆ ಈ ಸಂಸ್ಥೆ ಸ್ವಾಯತ್ತತೆ ಪಡೆದಿದೆ. ವಾಕ್-ಶ್ರವಣ ವಿಜ್ಞಾನದ ಅಧ್ಯಯನಕ್ಕಾಗಿ ಬಿ.ಎಸ್ಸಿ., ಪದವಿ ಹಾಗೂ ಎಂ.ಎಸ್ಸಿ. ಸ್ನಾತಕೋತ್ತರ ಪದವಿ ಶಿಕ್ಷಣಗಳು ನಡೆಯುತ್ತಿದೆ. ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಡೆಯುವ ಅವಕಾಶವಿದೆ. ಪಿಎಚ್.ಡಿ. ಪದವಿಗೆ ಸಂಶೋಧನೆ ನಡೆಸುವವರಿಗೂ ವಿದ್ಯಾರ್ಥಿ ವೇತನ ಸೌಲಭ್ಯ ಕಲ್ಪಿಸಿದೆ. 2003ನೆಯ ವರ್ಷದಿಂದ ಶ್ರವಣದೋಷ ವಿಷಯದ ಬಗ್ಗೆ ಬಿ.ಎಸ್ಸಿ.ಇಡಿ. ಎಂಬ ಪದವಿ ಶಿಕ್ಷಣವನ್ನು ಸಂಸ್ಥೆ ಆರಂಭಿಸಲಿದೆ. ಈಗ ಈ ಸಂಸ್ಥೆಯಲ್ಲಿ ದೇಶೀಯ ವಿದ್ಯಾರ್ಥಿಗಳ ಜೊತೆಗೆ ಮಲೇಷಿಯ, ಮಾರಿಷಸ್, ನೇಪಾಳ, ಮಯನ್ಮಾರ್, ಕುವೈತ್, ಯು.ಎ.ಇ. ಆಫ್‌ಘಾನಿಸ್ತಾನ ಮೊದಲಾದ ದೇಶಗಳ ವಿದೇಶೀಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಲಿಯುತ್ತಿದ್ದಾರೆ.

**ಸಂಶೋಧನೆ :** ಇತ್ತೀಚಿನ ದಿನಗಳಲ್ಲಿ ಈ ಸಂಸ್ಥೆ ಸಂಶೋಧನೆಗೆ ಹೆಚ್ಚಿನ ಪ್ರಾಮುಖ್ಯ ನೀಡುತ್ತಿದೆ. ದಿನ ಕಳೆದಂತೆ ವಾಕ್-ಶ್ರವಣ ಚಿಕಿತ್ಸೆಯಲ್ಲಿ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕೆಂಬ ಹೆಬ್ಬಯಕೆಯಿಂದ ಇತರ ಸಂಸ್ಥೆಗಳು ಮತ್ತು ಸರ್ಕಾರದ ನೆರವಿನಿಂದ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಶಬ್ದಮಾಲಿನ್ಯದಿಂದ ಹೆಚ್ಚುತ್ತಿರುವ ಶ್ರವಣ ದೋಷಗಳ ನಿವಾರಣೆಯೇ ಈ ಸಂಶೋಧನೆಗಳ ಗುರಿಯಾಗಿದೆ. ಸಂಶೋಧನೆಗಳಿಗಾಗಿಯೇ ಸಂಸ್ಥೆಯಲ್ಲಿ ಒಂದು ಸಂಶೋಧನ ಸಹಾಯ ನಿಧಿಯನ್ನು (ಆಯಿಷ್ ರಿಸರ್ಚ್ ಫಂಡ್) ಸ್ಥಾಪಿಸಿದೆ. ಸಂಸ್ಥೆಯು ಜರ್ನಲ್ ಆಫ್ ದಿ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಎಂಬ ವಾರ್ಷಿಕವನ್ನು ಪ್ರಕಟಿಸುತ್ತಿದೆ. ಇದರಲ್ಲಿ ಮಾತು, ಭಾಷೆ ಹಾಗೂ ಶ್ರವಣ ವಿಚಾರಗಳಿಗೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳಿಗೆ ಆದ್ಯತೆ ನೀಡಲಾಗುತ್ತದೆ. ಜನ ಸಾಮಾನ್ಯರಿಗೆ ಈ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ತಿಳಿವಳಿಕೆ ನೀಡುವ ಸಲುವಾಗಿ ಅನೇಕ ಭಾರತೀಯ ಭಾಷೆಗಳಲ್ಲಿ ಹಲವಾರು ಕರಪತ್ರ, ಮಾಹಿತಿ ಪುಸ್ತಕಗಳನ್ನೂ ಪ್ರಕಟಿಸಲಾಗುತ್ತಿದೆ.

**ಶಾಲಾಪೂರ್ವ ತರಬೇತಿ :** ಮಗುವೊಂದರ ಬೌದ್ಧಿಕ ಬೆಳವಣಿಗೆ 2ರಿಂದ 6 ವರ್ಷಗಳೊಳಗೆ ಆರಂಭವಾಗುವುದೆಂದು ಸಂಶೋಧನ ವರದಿ ಹೇಳುತ್ತದೆ. ಈ ಕಾರಣದಿಂದ ಸಂವಹನ ಸಮಸ್ಯೆಯಿಂದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಶಾಲಾ ಪೂರ್ವ ತರಬೇತಿ ಯೋಜನೆಯನ್ನು ಈ ಸಂಸ್ಥೆ ಆರಂಭಿಸಿದೆ. ಇಂಗ್ಲಿಷ್, ಮಲೆಯಾಳಂ, ಹಿಂದಿಯೂ ಸೇರಿ ಒಟ್ಟು ಆರು ಭಾಷೆಗಳಲ್ಲಿ ಇಲ್ಲಿ ತರಬೇತಿ ನೀಡಲಾಗುತ್ತದೆ.

ಭಾರತದಲ್ಲಿ ಪ್ರತಿಶತ ಮೂವರಿಗೆ ಮಾತಿನ ಅಥವಾ ಶ್ರವಣ ದೋಷವಿದೆ. ಇವರಲ್ಲಿ ಹೆಚ್ಚಿನ ಜನರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಅವರಿಗೆ ಹೊಸ ಜೀವನವನ್ನು ಕಲ್ಪಿಸಲು ಪಣತೊಟ್ಟಿರುವ ಈ ಸಂಸ್ಥೆ ರಾಜ್ಯದ ಹೊರಗೂ ಶಿಬಿರಗಳನ್ನು ಏರ್ಪಡಿಸಿ, ಗ್ರಾಮೀಣ ಜನರಿಗೂ ಈ ಸೌಲಭ್ಯ ಒದಗುವಂತೆ ಮಾಡಿದೆ. ಅಗತ್ಯವಿದ್ದವರಿಗೆ ಶಿಬಿರಗಳಲ್ಲಿ ಶ್ರವಣೋಪಕರಣಗಳನ್ನು ಉಚಿತವಾಗಿ ಸ್ಥಳದಲ್ಲೇ ವಿತರಿಸಲಾಗುತ್ತಿದೆ.

**ವಸತಿ ಸೌಕರ್ಯ :** ಹೊರ ಊರು, ಹೊರ ರಾಜ್ಯಗಳಿಂದ ಚಿಕಿತ್ಸೆಗಾಗಿ ಬರುವ ರೋಗಿಗಳು ಉಳಿದುಕೊಳ್ಳಲು ಸೂಕ್ತ ವಸತಿ ಸೌಕರ್ಯವೂ ಸಂಸ್ಥೆಯಲ್ಲಿದೆ. ಇತ್ತೀಚೆಗೆ ದೇಶದ ಬೇರೆ ಬೇರೆ ಸ್ಥಳಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ತೆರೆಯುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಸಂಸ್ಥೆಯ ಆಡಳಿತವು ನಿರ್ದೇಶಕರ ನೇರ ಉಸ್ತುವಾರಿಯಲ್ಲಿ ನಡೆಯುತ್ತಿದ್ದು ಅಧ್ಯಯನ ಮಂಡಳಿ ಹಾಗೂ ವಿವಿಧ ಸಮಿತಿಗಳು ಈ ಆಡಳಿತಕ್ಕೆ ಸಹಕಾರಿಯಾಗಿ ಸ್ಥಾಪಿತವಾಗಿವೆ.

**(ಎಂ.ಜಿಎ.)**

**ಅಗರ :** ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಕೊಳ್ಳೇಗಾಲ ರಸ್ತೆಯಲ್ಲಿ ಸು.12ಕಿಮೀ. ದೂರದಲ್ಲಿರುವ ಗ್ರಾಮ. ಇಲ್ಲಿ ಚೋಳರ ಮತ್ತು ಅನಂತರದ ಕಾಲದ ನೂರಕ್ಕೂ ಹೆಚ್ಚು ಶಾಸನಗಳು ದೊರಕಿವೆ. ಅವುಗಳಲ್ಲಿ ಈ ಊರಿನ ಹೆಸರು ದುರ್ಗೆಯಾರ್-ಅಗರಂ ಅಥವಾ ದುರ್ಗಾಗ್ರಹಾರ ಎಂದು ಇದೆ.

ವಿಷ್ಣುಶರ್ಮ ದೊರೆ ಈ ಊರಿಗೆ ಬಂದಿದ್ದಾಗ ಅವನಿಗೆ ಹಾವು ಕಡಿಯಿತೆಂದೂ ಇಲ್ಲಿಯ ರಾಮೇಶ್ವರ ಮತ್ತು ನರಸಿಂಹ ದೇವರ ಅನುಗ್ರಹದಿಂದ ವಿಷಾಪಹಾರವಾಯಿತೆಂದೂ ಅದರಿಂದಾಗಿ ಈ ಸ್ಥಳಕ್ಕೆ ಅಗರ ಎಂದು ಹೆಸರಾಯಿತೆಂದೂ ಐತಿಹ್ಯವಿದೆ. ಆದರೆ ಅಗರ ಎಂಬ ಹೆಸರು ಅಗ್ರಹಾರ ಎಂಬ ಪದದ ಸಂಕ್ಷಿಪ್ತ ರೂಪವಾಗಿರಬಹುದು.



ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಅಗರ

ಇಲ್ಲಿಯ ದುರ್ಗಾ ದೇವಾಲಯ ಚೋಳ ದೊರೆ ಒಂದನೆಯ ರಾಜರಾಜನ ಕಾಲದ್ದು. ಚೋಳ ಶೈಲಿಯಲ್ಲಿರುವ ಈ ಗುಡಿಯಲ್ಲಿ ಸಮಭಂಗಿಯಲ್ಲಿ ನಿಂತಿರುವ ವೈಷ್ಣವೀರೂಪದ ಸುಂದರ ದುರ್ಗಾ ವಿಗ್ರಹವಿದೆ. ನರಸಿಂಹ ದೇವಾಲಯ ಊರಿನ ಪ್ರಮುಖ ಗುಡಿ. ಇದೂ ಚೋಳರ ಕಾಲದ್ದು. ಈ ದೇವಾಲಯದಲ್ಲಿ ವೃತ್ತಾಕಾರದ ಗರ್ಭಗೃಹವಿದೆ. ಅದರ ಮುಂದೆ ಆಯಾಕಾರದ ಅಂತರಾಳ ಮತ್ತು ಮುಂದೆ ಚೌಕವಾದ ನವರಂಗ ಇವೆ. ದೇವಾಲಯ ಪಶ್ಚಿಮಾಭಿಮುಖವಾಗಿದೆ. ಉತ್ತರ ಮತ್ತು ಪಶ್ಚಿಮದ ಕಡೆಗಳಲ್ಲಿ ದ್ವಾರಗಳಿವೆ. ಇಲ್ಲಿಯ ನರಸಿಂಹ ವಿಗ್ರಹ ಉತ್ತಮ ಶಿಲ್ಪ ಇದು ವಿಚಿತ್ರವಾಗಿಯೂ ಇದೆ. ಇದು ಯೋಗ, ಲಕ್ಷ್ಮೀ, ಉಗ್ರ, ಜ್ವಾಲಾ ಮತ್ತು ಪ್ರಹ್ಲಾದ ನರಸಿಂಹರ ಸಂಯುಕ್ತರೂಪ ಎನ್ನಲಾಗಿದೆ. ರಾಮೇಶ್ವರ ದೇವಾಲಯವೂ ಮೂಲತಃ ಚೋಳ ಕಾಲದ್ದಾದರೂ ಇದರಲ್ಲಿ ಹೊಯ್ಸಳರ ಕಾಲದ ಸೇರ್ಪಡೆಗಳಿವೆ. ಅಗರದಲ್ಲಿರುವ ಇನ್ನೊಂದು ದೇವಾಲಯ ವರದರಾಜನದು. *

**ಅಗ'ರ'ಖೇಡ :** ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ 22ಕಿಮೀ ದೂರದಲ್ಲಿರುವ ಒಂದು ಗ್ರಾಮ. ಭೀಮಾನದಿಯ ಬಲದಂಡೆಯ ಮೇಲಿದೆ. ಹುಬ್ಬಳ್ಳಿ-ಸೊಲ್ಲಾಪುರ ರೈಲುಮಾರ್ಗದಲ್ಲಿ ಲಚ್ಯಾಣ ರೈಲುನಿಲ್ದಾಣಕ್ಕೆ 11ಕಿಮೀ ಅಂತರದಲ್ಲಿದೆ. ಮೊದಲು ಈ ಗ್ರಾಮ ಅಗ್ರಖೇಟ ಎಂದು ಪ್ರಸಿದ್ಧವಾಗಿತ್ತು. ಇದು ಸಂಸ್ಕೃತ ಪಂಡಿತರ ಮತ್ತು ವಿದ್ಯಾರ್ಥಿಗಳ ಬೀಡಾಗಿತ್ತು. ಪೇಶ್ವೆಯೊಬ್ಬ ಈ ಗ್ರಾಮವನ್ನು ಕೃಷ್ಣದ್ವೈಪಾಯನರಿಗೆ ದಾನಕೊಟ್ಟಿದ್ದ. ಗ್ರಾಮದ ದಕ್ಷಿಣಕ್ಕೆ ಪುರಾತನ ಶಂಕರಲಿಂಗ ದೇವಾಲಯವಿದೆ. ಈ ದೇವಾಲಯದಲ್ಲಿ 1880ರಲ್ಲಿ ನಿರ್ಮಿಸಿದ ಬಿಳಿಯ ಅಮೃತಶಿಲೆಯ ಲಿಂಗವಿದೆ. ಗ್ರಾಮದಲ್ಲಿ ಸುಮಾರು 1109-1351ರ ಕಾಲದ 5 ಶಾಸನಗಳು ಸಿಕ್ಕಿವೆ. ಇಲ್ಲಿ ಭೈರಪ್ಪ ಮತ್ತು ಹನುಮಂತ ದೇವರ ಗುಡಿಗಳಿವೆ. ಭೀಮಾನದಿ ಇಲ್ಲಿ ದಕ್ಷಿಣವಾಹಿನಿಯಾಗಿದ್ದು 108 ಲಿಂಗಗಳೂ ಇಲ್ಲಿರುವುದರಿಂದ ಇದೊಂದು ಪುಣ್ಯಕ್ಷೇತ್ರವೆನಿಸಿಕೊಂಡಿದೆ. ಸಾಹಿತಿ ಶ್ರೀರಂಗರು ಈ ಗ್ರಾಮದವರು. *

**ಅಗ್ಗಳ :** 12ನೆಯ ಶತಮಾನದ ಜೈನಕವಿ. ಚಂದ್ರಪ್ರಭಪುರಾಣ ಎಂಬ ಕಾವ್ಯದ ಕರ್ತೃ. ಬಿಜಾಪುರ ಜಿಲ್ಲೆಯ ಇಂಗಳೇಶ್ವರ ಇವನ ಜನ್ಮಸ್ಥಳ. ತಂದೆ ಶಾಂತೀಶ, ತಾಯಿ ಪೋಚಾಂಬಿಕೆ, ತ್ರೈವಿದ್ಯಶ್ರುತಕೀರ್ತಿದೇವ ಗುರು. ಕವಿಗೆ ಭಾರತೀಭಾಳನೇತ್ರ, ಸಾಹಿತ್ಯವಿದ್ಯಾವಿನೋದ ಎಂಬ ಬಿರುದುಗಳು ಇವೆ. ಪೂರ್ವಕವಿಗಳಲ್ಲಿ ಪಂಪ, ಪೊನ್ನ, ರನ್ನ-ಇವರುಗಳನ್ನು ಸ್ತುತಿಸಿದ್ದಾನೆ. ಕಳೆಗಳೆನಿತನಿತಜೊಳಮಗ್ಗಳಗಣ್ಣಂ ತೋರ್ಪನಗ್ಗಳಂ ನೃಪಸಭೆಯೊಳ್-ಎಂದು ಹೇಳಿಕೊಂಡಿರುವುದರಿಂದ ಪ್ರಸಿದ್ಧ ಕವಿಯಾಗಿದ್ದಂತೆ ತೋರುತ್ತದೆ. ನಾನಾರಸ ಪೊಪ್ಪೆ ವಸ್ತುಕೃತಿಯಂ ಪೇಳ್ದಗ್ಗಳಂ ಎಂದು ತನ್ನ ಕಾವ್ಯ ನವರಸಭರಿತವಾಗಿದೆ ಎಂದೂ ಹೇಳಿಕೊಂಡಿದ್ದಾನೆ. ಈತ ರೂಪ ಸ್ತವನಮಣಿಪ್ರವಾಳ, ಜಿನಾಸ್ಥಾನಸ್ತವನ ಎಂಬ ಗ್ರಂಥಗಳನ್ನು ರಚಿಸಿರುವನೆಂದು ಪಾರ್ಶ್ವಕವಿಯ (ಸು.1205) ಹೇಳಿಕೆ. ಆದರೆ ಈ ಕೃತಿಗಳು ಉಪಲಬ್ಧವಿಲ್ಲ. ಇವು ಸಂಸ್ಕೃತ ರಚನೆಗಳಾಗಿದ್ದಿರಬಹುದು.

ಚಂದ್ರಪ್ರಭಪುರಾಣ ಹದಿನಾರು ಆಶ್ವಾಸಗಳುಳ್ಳ ಚಂಪೂ ಗ್ರಂಥ. ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತ್ರೆ ಕಾವ್ಯದ ವಸ್ತು. ಈ ಗ್ರಂಥ' ಹನ್ನೆರಡನೆಯ ಶತಮಾನದ ಇತರ ಚಂಪೂ ಗ್ರಂಥ'ಗಳಂತೆ ಸಂಸ್ಕೃತಭೂಯಿಷ್ಠವಾಗಿ, ಬಿಗಿಯಾದ ಬಂಧದಿಂದ ಕೂಡಿ ಪ್ರೌಢವಾಗಿದೆ. ಗ್ರಂಥಾವತಾರದಲ್ಲಿ ಚಂದ್ರಪ್ರಭನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನು, ಪಂಚಗುರುಗಳನ್ನು, ಜಿನಧರ್ಮವನ್ನು, ಯಕ್ಷಯಕ್ಷಿಯರನ್ನು, ಸರಸ್ವತಿಯನ್ನು ಸ್ತುತಿಸಿ ಅನಂತರ ಅನುಬದ್ಧಕೇವಲಿಗಳಿಂದ ಶ್ರುತಕೀರ್ತಿಯ ತನಕ ತನ್ನ ಗುರುಪರಂಪರೆಯನ್ನು ಹೇಳಿಕೊಂಡಿದ್ದಾನೆ. ಗ್ರಂಥಾಂತ್ಯದಲ್ಲಿ ಸಂಸ್ಕೃತದಲ್ಲಿ ರಚಿತವಾದ 24 ತೀರ್ಥಂಕರರ ಸ್ತುತಿಸಂಗ್ರಹವಿದೆ. ಈ ಕೃತಿಯ ರಚನೆಯಲ್ಲಿ ಕವಿ ವೀರನಂದಿಯ ಸಂಸ್ಕೃತ ಚಂದ್ರಪ್ರಭ ಚರಿತ್ರೆಗೆ ಬಹಳಷ್ಟು ಋಣಿಯಾಗಿಯಾಗಿರುವಂತೆಯೂ ಅನೇಕ ಸುಂದರ ಸನ್ನಿವೇಶಗಳ ನಿರ್ಮಾಣದಲ್ಲಿ ಹಾಗೂ ಮನೋಜ್ಞವಾದ ವರ್ಣನಾಪದ್ಯಗಳಿಗೆ ಪಂಪನ ಆದಿಪುರಾಣ ಪ್ರೇರಣೆ ಒದಗಿಸಿರುವಂತೆಯೂ ತಿಳಿಯುತ್ತದೆ. ಚಂದ್ರಪ್ರಭನ ಚರಿತ್ರೆ ಸಾಂಪ್ರದಾಯಿಕ ಕಥೆಯಾದುದರಿಂದ ಕವಿಯ ಸಹಜ ಶಕ್ತಿಯ ಪ್ರಕಟಣೆಗೆ ಇಲ್ಲಿ ಅವಕಾಶವಿಲ್ಲ. ವರ್ಣನೆಗಳಲ್ಲಿ ಕಲ್ಪನಾವಿಲಾಸವಿದೆ. ಅಗ್ಗಳ ಪಂಡಿತಕವಿ ಆದರೂ ಕವಿಹೃದಯವಿದೆ. ಸಂಸ್ಕೃತ-ಕನ್ನಡ ಎರಡರಲ್ಲೂ ಈತನಿಗೆ ಉದ್ದಾಮ ಪಾಂಡಿತ್ಯವಿದೆ. ಈ ಕವಿಯ ಕಾವ್ಯಶಕ್ತಿಯನ್ನು ಕುರಿತು ದೇವಕವಿ, ಆಂಡಯ್ಯ, ಕಮಲಭವ, ಬಾಹುಬಲಿ, ಪಾರ್ಶ್ವ ಮೊದಲಾದ ಕವಿಗಳು ಹೊಗಳಿದ್ದಾರೆ. ಚಂದ್ರಪ್ರಭ ಸಾಂಗತ್ಯವನ್ನು ಬರೆದ ದೊಡ್ಡಯ್ಯ, ಚಂದ್ರಪ್ರಭ ಷಟ್ಪದಿಯನ್ನು ಬರೆದ ದೊಡ್ಡಣಾಂಕ ಇವನ ಗ್ರಂಥದಿಂದ ಉಪಕೃತರಾದಂತೆ ಕಂಡುಬರುತ್ತದೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ ಮತ್ತು ಅಭಿನವವಾದಿವಿದ್ಯಾನಂದನ ಕಾವ್ಯಸಾರಗಳಲ್ಲಿ ಇವನ ಕಾವ್ಯದ ಪದ್ಯಗಳು ಸಂಕಲನಗೊಂಡಿವೆ. ಸಾಳ್ವ ಮತ್ತು ಭಟ್ಟಾಕಳಂಕ ಇವರು ತಮ್ಮ ಗ್ರಂಥಗಳಲ್ಲಿ ಇವನ ರಚನೆಗಳನ್ನು ಲಕ್ಷ್ಯಗಳಾಗಿ ಉದಾಹರಿಸಿದ್ದಾರೆ. ಈತನ ಪ್ರಭಾವ ಮುಂದಿನ ಕನ್ನಡ ಸಾಹಿತ್ಯದ ಮೇಲೆ ಸ್ಪಷ್ಟವಾಗಿ ಆಗಿರುವುದು ಕಂಡುಬರುತ್ತದೆ. ಜೈನಪುರಾಣ ಗ್ರಂಥ'ಗಳ ಸಾಲಿನಲ್ಲಿ ಈ ಕವಿಯ ಚಂದ್ರಪ್ರಭಪುರಾಣ ಒಂದು ಮಧ್ಯಮ ಗುಣದ ಕಾವ್ಯ ಎಂದು ಹೇಳಬಹುದು. (ಪಿ.ವಿ.ಸಿ.;ಎಂ.ವಿ.ಎಸ್.)

**ಅಗ್ರಹಾರ :** ವಿಶೇಷವಾಗಿ ಬ್ರಾಹ್ಮಣರಿಗೆ ಜೀವನಾಧಾರವಾಗಿ ಬಿಟ್ಟು ಕೊಟ್ಟ ಗ್ರಾಮ. ಇದನ್ನು ಚತುರ್ವೇದಿ ಮಂಗಲ, ಶ್ರೋತ್ರೀಯ ಗ್ರಾಮ ಎಂದೂ ಶಾಸನಗಳಲ್ಲಿ ಕರೆಯಲಾಗಿದೆ.

ವೇದವೇದಾಂಗಪಾರಂಗತರಾದ, ಷಟ್ಕರ್ಮನಿರತರಾದ ಬ್ರಾಹ್ಮಣೋತ್ತಮರಿಗೆ ಆಳರಸರು ನೆಲಹೊಲಗಳನ್ನು ಬ್ರಹ್ಮದೇಯ ಅಥವಾ ಬ್ರಹ್ಮದಾಯವಾಗಿ ದಾನಕೊಡುವ ಪದ್ಧತಿ ಕರ್ನಾಟಕವೂ ಸೇರಿದಂತೆ ಭಾರತದ ಎಲ್ಲೆಡೆಗಳಲ್ಲಿಯೂ ಹಿಂದಿನಿಂದಲೂ ವಾಡಿಕೆಯಲ್ಲಿತ್ತು. ನಾನಾ ಗೋತ್ರಗಳಿಗೆ, ಪ್ರವರಗಳಿಗೆ, ಶಾಖೆಗಳಿಗೆ ಸೇರಿದ ನಿರ್ದಿಷ್ಟ ಸಂಖ್ಯೆಯ ಬ್ರಾಹ್ಮಣರಿಗೆ, ಅವರು ಗೃಹಸ್ಥಾಶ್ರಮ ನೀತಿನಿಯಮಗಳನ್ನೂ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಈ ಸ್ಮೃತಿಸಿದ್ಧವಾದ ಕಾರ್ಯಗಳನ್ನೂ ನೆರವೇರಿಸಿಕೊಂಡು ಹೋಗಲೆಂದು ಒಂದು ಗ್ರಾಮದ ನೆಲಹೊಲಗಳನ್ನೂ ಮನೆಯ ನಿವೇಶನಗಳನ್ನೂ ವೃತ್ತಿಗಳಾಗಿ ವಿಂಗಡಿಸಿ ಸಾಮೂಹಿಕವಾಗಿ ದಾನ ಕೊಟ್ಟಲ್ಲಿ ಅಗ್ರಹಾರವೊಂದರ ಸೃಷ್ಟಿಯಾಯಿತಂತೆ. ಕೆಲವು ಶಾಸನಗಳಲ್ಲಿ ಈ ಪಾರಿಭಾಷಿಕ ಪದವನ್ನು 'ಅಗ್ರಾಹಾರ' ಎಂದೂ ಬರೆಯಲಾಗಿದೆ. ಅಗ್ರಹಾರದ ಮೂಲರೂಪ 'ಅಗ್ರಾಹಾರ' (ಅಗ್ರ+ಆಹಾರ) ಎಂದೇ ಇದ್ದಿರಬೇಕೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ.

ಕರ್ನಾಟಕದಲ್ಲಿ ಗೌತಮಸಗೋತ್ರದ ಶುಕ್ಲಯಜುರ್ವೇದದಲ್ಲಿ ಪಾರಂಗತನಾದ ಬದಿರಕುಲದ ಬ್ರಾಹ್ಮಣನೊಬ್ಬನಿಗೆ ಮಹಿಷ ವಿಷಯದ

ಪೆರ್ಬ್ಬಟ ಗ್ರಾಮವನ್ನು 'ಬ್ರಹ್ಮದೇಯನ್ಯಾಯ'ದ ರೀತ್ಯ ಅಗ್ರಹಾರವಾಗಿ ಕೊಡಲಾಯಿತೆಂದು ಕ್ರಿ.ಶ.5ನೆಯ ಶತಮಾನದ ಉತ್ತರಾರ್ಧದ್ದೆನ್ನಬಹುದಾದ ಕದಂಬ ಕೃಷ್ಣವರ್ಮನ ಹೆಬ್ಬಟ ತಾಮ್ರಶಾಸನದಲ್ಲಿ ಹೇಳಲಾಗಿದೆ. 10-11ನೆಯ ಶತಮಾನಗಳ ಶಾಸನಗಳಿಂದ ತಿಳಿದುಬರುವಂತೆ ಸ್ಥಾನಕುಂದೂರ (ಇಂದಿನ ತಾಳಗುಂದ) ನಿಷ್ಠಾವಂತ ವೈದಿಕ ಬ್ರಾಹ್ಮಣರ ವಾಸಸ್ಥಾನವಾಗಿತ್ತು. ವಾತಾಪಿ (ಇಂದಿನ ಬಾದಾಮಿ) ಎರಡುನೂರು ಸದಸ್ಯರನ್ನೊಳಗೊಂಡ ಮಹಾಚಾತುರ್ವಿದ್ಯ ಸಮುದಾಯದ (ವೈದಿಕ ಬ್ರಾಹ್ಮಣರ ಸಂಘ) ನೇರ ಆಡಳಿತಕ್ಕೊಳಗಾಗಿದ್ದು, 'ಚತುರ್ದಶ ವಿದ್ಯಾಸ್ಥಾನ' ಎಂದು ಅದು ಹೆಸರುವಾಸಿಯಾಗಿತ್ತು. ಅದರಂತೆಯೇ ಆರ್ಯಪುರ (ಇಂದಿನ ಐಹೊಳೆ) ಐದುನೂರು ಸದಸ್ಯರನ್ನೊಳಗೊಂಡ 'ಮಹಾಚಾತುರ್ವಿದ್ಯ ಸಮುದಾಯ'ದ ಆಡಳಿತಕ್ಕೊಳಗಾಗಿತ್ತು. ಇವು ಅಗ್ರಹಾರಗಳೆಂದು ಶಾಸನಗಳಲ್ಲಿ ಸ್ಪಷ್ಟವಾಗಿ ಹೇಳಿಲ್ಲವಾದರೂ ಈ ಮೂರೂ ಪ್ರಸಿದ್ಧ ಕೇಂದ್ರಗಳೂ ಅಗ್ರಹಾರಗಳೇ ಆಗಿರಬೇಕು. ಕಾಲ ಕಳೆದಂತೆ ಇಂಥ ಪ್ರಾಚೀನ ಅಗ್ರಹಾರಗಳ ನಿಜವಾದ ಇತಿಹಾಸ ಮಾಸಿಹೋಗಿ, ಮಧ್ಯಯುಗದ ಶಾಸನಗಳಲ್ಲಿ ಇವನ್ನು 'ಅನಾದಿ ಅಗ್ರಹಾರ', 'ಜನಮೇಜಯ ದತ್ತಿಯ ಮಹಾಗ್ರಹಾರ', 'ಶ್ರೀ ರಾಮದತ್ತಿ ಮಹಾಗ್ರಹಾರ' ಎಂದು ಮುಂತಾಗಿ ಕರೆಯಲಾಗಿದೆ.

ಕರ್ನಾಟಕದ ಇತಿಹಾಸದ ಮಧ್ಯಯುಗದಲ್ಲಿ ಅನೇಕಾನೇಕ ಅಗ್ರಹಾರಗಳು ಅಸ್ತಿತ್ವಕ್ಕೆ ಬಂದವು. ಆ ಕಾಲದ ಹಲವು ಶಾಸನಗಳು ಅಗ್ರಹಾರಗಳ ದೀರ್ಘ ವರ್ಣನೆಗಳನ್ನು ನೀಡಿವೆ. ಶಿವಮೊಗ್ಗ ಜಿಲ್ಲೆಯ 'ಸರ್ವನಮಸ್ಯದನಾದಿ ಅಗ್ರಹಾರ' ಕುಪ್ಪಟೂರನ್ನು ಶಾಸನವೊಂದರಲ್ಲಿ 'ವಿಪ್ರಸುರ ಚಿತ್ರನಿಕೇತನ ಮಾಳೆಯಿಂದೆ ಕಣ್ಗೊಳಿಪುದು ಕುಪ್ಪಟೂರ್ ಸಕಳವಿದ್ಯೆಗೆ ತಾನೆನೆ ಜನ್ಮ ಭೂತಳಂ' ಎಂದು ಪ್ರಶಂಸಿಸಲಾಗಿದೆ.

ಕಲ್ಯಾಣದ ಚಾಳುಕ್ಯ ಚಕ್ರವರ್ತಿ 6ನೆಯ ವಿಕ್ರಮಾದಿತ್ಯ ನಾನಾ ಗೋತ್ರಗಳಿಗೆ ಸೇರಿದ ಸಕಲಶಾಸ್ತ್ರವೇತ್ತರಾದ ಹಲವು ಬ್ರಾಹ್ಮಣರನ್ನು ದ್ರಾವಿಡ ದೇಶದಿಂದ ಬರಮಾಡಿಕೊಂಡು, ಕೋಗಳಿ-500ರ ನೀರಗುಂದ ಗ್ರಾಮವನ್ನು ಅಗ್ರಹಾರವೆಂದು ಘೋಷಿಸಿ (ಅಗ್ರಹಾರೀಕೃತ್ಯ) ಅವರಿಗೆ ದಾನ ಮಾಡಿದನೆಂಬ ವಿಷಯ ಅವನ 1087ರ ನೀಲಗುಂದ ತಾಮ್ರಶಾಸನದಿಂದ ತಿಳಿದುಬರುತ್ತದೆ. ಅಗ್ರಹಾರಗಳನ್ನು ನಿರ್ಮಿಸುವ ಪದ್ಧತಿ ಇತ್ತೀಚಿನವರೆಗೂ ರೂಢಿಯಲ್ಲಿತ್ತು.

ರಾಜಕೀಯ ರಂಗದಲ್ಲಿ ಅಸ್ತವ್ಯಸ್ತತೆ ಉಂಟಾದಾಗಲೆಲ್ಲ ಹಿಂದೆ ಸೃಷ್ಟಿಸಲಾದ ಅಗ್ರಹಾರಗಳು ದುರ್ಜನರ ಕೈಗೆ ಸಿಕ್ಕಿ ದುರುಪಯೋಗಕ್ಕೆ ತುತ್ತಾಗುತ್ತಿದ್ದವು ಎಂಬುದಕ್ಕೆ ಶಾಸನಗಳಲ್ಲಿ ಸೂಚನೆಗಳಿವೆ. 2ನೆಯ ಪುಲಕೇಶಿಯ ಆಳ್ವಿಕೆ ಕೊನೆಗೊಂಡು, ಕರ್ನಾಟಕ ಪಲ್ಲವರ ಆಕ್ರಮಣಕ್ಕೆ ಒಳಗಾದಾಗ ವಿನಷ್ಟವಾದ ಬ್ರಹ್ಮಾದೇಯಗಳನ್ನು ಪುಲಕೇಶಿಯ ಮಗನಾದ 1ನೆಯ ವಿಕ್ರಮಾದಿತ್ಯ ತಾನು ಪುನಃ ಅಗ್ರಹಾರಗಳನ್ನಾಗಿ ಸೃಷ್ಟಿಸಿದನಂತೆ. ವಿಜಯನಗರದ ಸಾಮ್ರಾಟರು ಸ್ವತಃ ಅನೇಕ ಹೊಸ ಅಗ್ರಹಾರಗಳನ್ನು ಸೃಷ್ಟಿಸಿದರಲ್ಲದೆ, ಪ್ರಾಯಶಃ ಮುಸಲ್ಮಾನರ ದಾಳಿಗಳಿಂದಾಗಿ ವಿನಷ್ಟವಾಗುತ್ತಿದ್ದ ಹಲವು ಅಗ್ರಹಾರಗಳನ್ನು ಪುನಃ ಸ್ಥಾಪಿಸಿದರೆಂದು ಅಂದಿನ ಶಾಸನಗಳಿಂದ ತಿಳಿದುಬರುತ್ತದೆ.

'ಅಗ್ರಹಾರ' ಎಂಬುದು ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿದ್ದ ಗ್ರಾಮವನ್ನು ಸೂಚಿಸುತ್ತವೆಯಾದರೆ, ಬ್ರಹ್ಮಪುರಿ ಎಂಬುದು ನಗರ ಪಟ್ಟಣಗಳಲ್ಲಿ ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿದ್ದ ಕೇರಿಗಳನ್ನು ಸೂಚಿಸುತ್ತದೆ. ಅಲ್ಲದೆ ಶೈವಧರ್ಮಾವಲಂಬಿಗಳ, ಅದರಲ್ಲೂ ಮುಖ್ಯವಾಗಿ ವೀರಶೈವರ ವಾಸಕ್ಕೆಂದು ಸೃಷ್ಟಿಸಲಾದ ಅಗ್ರಹಾರಗಳನ್ನು 'ಶಿವಪುರ' ಗಳೆಂದು ಶಾಸನಗಳಲ್ಲಿ ಹೆಸರಿಸಲಾಗಿದೆ.

ಅಗ್ರಹಾರಗಳಲ್ಲಿ ಬ್ರಾಹ್ಮಣೇತರರೂ ಮುಖ್ಯವಾಗಿ ಪಾರಂಪರ್ಯ ಕಸಬುದಾರರೂ ತಮ್ಮ ತಮ್ಮ ಕೇರಿಗಳಲ್ಲಿ ವಾಸಿಸುತ್ತಿದ್ದರಾದರೂ ಅಲ್ಲಿಯ ನೆಲಹೊಲಗಳ ಮೇಲಿನ ಸರ್ವಸ್ವಾಮ್ಯವೂ ಬ್ರಾಹ್ಮಣರದೇ ಆಗಿತ್ತು. ಅಗ್ರಹಾರದ ಆಡಳಿತಸೂತ್ರ ಅಲ್ಲಿಯ ಬ್ರಾಹ್ಮಣ ಗೃಹಪತಿಗಳನ್ನೊಳಗೊಂಡ 'ಮಹಾಜನ'ರ ಕೈಯಲ್ಲಿತ್ತು. ಕರ್ನಾಟಕದ ಅಗ್ರಹಾರಗಳ ಮಹಾಜನರ ಗುಣಗಾನಗಳು ಅನೇಕ ಶಾಸನಗಳಲ್ಲಿ ಕಾಣಸಿಗುತ್ತವೆ. ಉದಾಹರಣೆಗೆ ಸವಸಿಯ (ಧಾರವಾಡ ಜಿಲ್ಲೆಯ ಸಂಶಿ) 400 ಮಹಾಜನರನ್ನು 1148ರ ಒಂದು ಶಾಸನದಲ್ಲಿ ಇದನ್ನು ಯಮನಿಯಮಸ್ವಾಧ್ಯಾಯ ಧ್ಯಾನಧಾರಣ ಮೌನಾನುಷ್ಠಾನ ಪರಾಯಣರು ಋಗ್ಯಜುಸ್ಸಾಮಾಥರ್ವವೇದಪಾರಗರು ಅಶೇಷವೈಶೇಷಿಕ ನೈಯಾಯಿಕ ಲೋಕಾಯತ ಸಾಂಖ್ಯ ಬೌದ್ಧ ಮೀಮಾಂಸಾದ್ಯನೇಕ ತರ್ಕಶಾಸ್ತ್ರಪರಿಣತರು ಮನ್ವಾದ್ಯಷ್ಟಾದಶ ಧರ್ಮಕುಶಳರು ಅಗ್ನಿಷ್ಟೋಮಾದಿ ಸಪ್ತಸೋಮ ಸಂಸ್ಥಾವಭೃಥಾವಗಾಹನ ಪವಿತ್ರೀಕೃತಗಾತ್ರರು ಸರ್ವಾತಿಥ್ಯಾಭ್ಯಾಗತವಿಶೇಷಾಷ್ಟ ವಿದ್ವಜ್ಜನಪೂಜಿತರು ಸ್ವಧರ್ಮ ಪ್ರತಿಪಾಲಕರು ವಿಚಾರಸಂಪನ್ನರು ಶಾಪಾನುಗ್ರಹ ಸಮರ್ಥರು ಶ್ರೀಮನ್ಮಹಾವಡ್ಡಗ್ರಾಮ ಅಗ್ರಹಾರಂ ಸವಸಿಯ ಅಶೇಷ ಮಹಾಜನಂ ನಾಲ್ನೂರ್ವರು ಎಂದು ವರ್ಣಿಸಲಾಗಿದೆ. ಕುಪ್ಪಟೂರಿನ ಮಹಾಜನರು ಋಗ್ಯಜುಸ್ಸಾಮಾಥರ್ವಣ ವೇದಾರ್ಥ ತತ್ತ್ವಜ್ಞರೂ ನಾಟಕ ಇತಿಹಾಸ ಮೀಮಾಂಸಾ ವಾತ್ಸ್ಯಾಯನ ಭರತ ಗಣಿತ ಇತ್ಯಾದಿ ಶಾಸ್ತ್ರಗಳಲ್ಲಿ ಪ್ರವೀಣರೂ ಆಗಿದ್ದರು.

ಮಹಾಜನರು ಮಾಡಬೇಕಾಗಿದ್ದ ಷಟ್ಕರ್ಮಗಳಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳೂ ಮುಖ್ಯವಾಗಿದ್ದುದರಿಂದ ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯಾಕೇಂದ್ರಗಳನ್ನೇ ಸ್ಥಾಪಿಸಿದಂತಾಗಿ, ವಿದ್ಯಾಪ್ರಸಾರಕಾರ್ಯ ಸತತ ಹಾಗೂ ಸುಗಮವಾಗಿ ನಡೆಯುತ್ತಿತ್ತು.

ಮಹಾಜನರ ಸಂಸ್ಥೆ ಸಾಕಷ್ಟು ಸ್ಥಿರವಾಗಿ ಸ್ಥಾಪಿತವಾಗಿತ್ತು. ಆದರೆ 10ನೆಯ ಶತಮಾನದ ಉತ್ತರ ಮೇರೂರಿನ ಶಾಸನ ಇತ್ಯಾದಿಗಳಿಂದ ತಿಳಿದುಬರುವ ರೀತಿಯ ಚುನಾವಣೆಗಳು ಮತ್ತು ಸಮಿತಿಗಳನ್ನೊಳಗೊಂಡಿದ್ದ ತಮಿಳುನಾಡಿನ ಸಭಾ ರೀತಿಯ ಆಡಳಿತ ವ್ಯವಸ್ಥೆಯನ್ನು ಕರ್ನಾಟಕದ ಮಹಾಜನರೂ ರಚಿಸಿಕೊಳ್ಳುತ್ತಿದ್ದುದು ಬೆಳಕಿಗೆ ಬಂದಿಲ್ಲ. ಅವರೇ ಸಾಮೂಹಿಕವಾಗಿ ಗ್ರಾಮಾಡಳಿತವನ್ನು ನಿರ್ವಹಿಸುತ್ತಿದ್ದರೆಂದು ಕಾಣುತ್ತದೆ. ಇನ್ನೂರು, ಐನೂರು ಎಂದು ಮುಂತಾದ ಈ ಮಹಾಜನರ ಸಂಖ್ಯೆಗಳೂ ಇದನ್ನೇ ಸೂಚಿಸುತ್ತವೆ. ಇಷ್ಟು ಸಂಖ್ಯೆಯಲ್ಲಿ ಸದಸ್ಯರನ್ನು ಆರಿಸುವುದಾಗಲಿ ಚುನಾಯಿಸುವುದಾಗಲೀ ವ್ಯಾವಹಾರ್ಯವೆನಿಸಿರಲಾರದು. ಇವು ಬಹುಶಃವಯಸ್ಕ ಬ್ರಾಹ್ಮಣರ, ಇಲ್ಲವೇ ಬ್ರಾಹ್ಮಣ ಗೃಹಸ್ಥರ ಸಂಖ್ಯೆಯನ್ನು ಸೂಚಿಸುವಂತಿವೆ. ಈ ಮಹಾಜನರು ಒಂದು ದೇವಸ್ಥಾನದಲ್ಲೋ ಮಂಟಪದಲ್ಲೋ ಸಭೆ ಸೇರಿ, ಗ್ರಾಮಾಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತಿದ್ದರು. ಸಾಮಾನ್ಯವಾಗಿ, ಎಲ್ಲ ಮುಖ್ಯಗ್ರಾಮಕಾರ್ಯಗಳೂ ನಡೆಯುತ್ತಿದ್ದುದು ಅವರ ಸನ್ನಿಧಿಯಲ್ಲೇ. ಕೆರೆ ಕಾಲುವೆಗಳನ್ನು ನಿರ್ಮಾಣ ಮಾಡುವುದರ ಮೂಲಕ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದು, ಮಠ ದೇವಸ್ಥಾನಗಳ ಆಡಳಿತವನ್ನು ನಿರ್ವಹಿಸುವುದು, ದಾನಿಗಳು ಭೂಮಿಯನ್ನೋ ಹಣವನ್ನೋ ದಾನ ಮಾಡಿದರೆ ಅದನ್ನು ರಕ್ಷಿಸಿ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸುವುದು - ಇವು ಈ ಅಗ್ರಹಾರದ ಮಹಾಜನಗಳ ಕರ್ತವ್ಯಗಳಾಗಿದ್ದುವು.

ಊರಿನಲ್ಲಿ ಯಾವುದಾದರೂ ವಿವಾದ ತಲೆದೋರಿದಾಗ ಅದು ಮಹಾಜನರ ಸಮಕ್ಷಮದಲ್ಲಿ ಇತ್ಯರ್ಥವಾಗುತ್ತಿತ್ತು. ಕೆಲವು ಅಗ್ರಹಾರಗಳಲ್ಲಿ ಸುಶಿಕ್ಷಿತ ರಕ್ಷಣಾಪಡೆಗಳಿದ್ದುದೂ ಕೋಟೆಕಂದಕಗಳಿದ್ದುದೂ ಹಲವು ಬಾರಿ ಮಹಾಜನರು ಶಾಸ್ತ್ರಗಳಲ್ಲಿ ಮಾತ್ರವಲ್ಲದೆ ಶಸ್ತ್ರಗಳಲ್ಲಿಯೂ ಪರಿಣತ ರಾಗಿದ್ದರೆಂಬುದೂ ಶಾಸನಗಳಿಂದ ತಿಳಿಯುತ್ತದೆ. ಕೆಲವು ಸಂದರ್ಭಗಳಲ್ಲಿ ಮಹಾಜನರೇ ಶೌರ್ಯಪ್ರದರ್ಶನ ಮಾಡಿದ ಉದಾಹರಣೆಗಳೂ ಇವೆ. ಅಗ್ರಹಾರಗಳು ಉನ್ನತ ವಿದ್ಯಾಕೇಂದ್ರಗಳಾಗಿದ್ದುವಷ್ಟೇ ಅಲ್ಲದೆ, ಸ್ವಯಂ ಆಡಳಿತ ಪದ್ಧತಿಯ ಮಾದರಿಗಳೂ ಆಗಿದ್ದುವು. ಪ್ರಾಚೀನ ಸಂಪ್ರದಾಯ ಮತ್ತು ವಿದ್ವತ್‍ಧಾರೆ ಅವಿಚ್ಛಿನ್ನವಾಗಿ ಹರಿದು ಬರಲು ಈ ಅಗ್ರಹಾರಗಳು ಬಹು ಸಹಾಯಕವಾಗಿದ್ದುವು. **(ಕೆ.ವಿ.ಆರ್.;ಎಸ್.ಜಿ.)**

**ಅಗ್ರಹಾರ ಬಾಚಹಳ್ಳಿ :** ಮಂಡ್ಯಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಸು.5ಕಿಮೀ ದೂರದಲ್ಲಿರುವ ಗ್ರಾಮ.

13ನೆಯ ಶತಮಾನದಲ್ಲಿ ಹೊಯ್ಸಳ ಸೋಮೇಶ್ವರ ವಿಜಯಮಹೋತ್ಸವವನ್ನು ಆಚರಿಸುವಾಗ ಈ ಗ್ರಾಮ ಸ್ಥಾಪಿತವಾದಂತೆ ತೋರುತ್ತದೆ. ಇಲ್ಲಿ ಹುಣಸೇಶ್ವರ ದೇವಾಲಯವಿದೆ. ದೇವಾಲಯದ ಆಗ್ನೇಯಕ್ಕೆ ಇರುವ ಮೂರು ಗರುಡಗಂಬಗಳು ಕುತೂಹಲಕಾರಿಯಾದವು. ಅವುಗಳ ಎತ್ತರ 12'. ಪತ್ರಿಯೊಂದು ಕಂಬದ ಮೇಲೂ ಮುಚ್ಚಿಸ ಚಪ್ಪಡಿಗಳಿವೆ. ಅವುಗಳ ಮೇಲೆ ಸು.2' ಎತ್ತರದ ಆನೆಯ ಶಿಲ್ಪಗಳಿವೆ.

ಮಧ್ಯದ ಕಂಬದ ಆನೆಯ ಮೇಲೆ ಒಬ್ಬ ಪುರುಷ ಮತ್ತು ಅವನ ಹಿಂದೆ ಒಬ್ಬ ಸ್ತ್ರೀ, ಉಳಿದೆರಡು ಕಂಬಗಳ ಮೇಲೆ ಒಬ್ಬರ ಹಿಂದೆ ಒಬ್ಬರಂತೆ ಮೂವರು ಪುರುಷರು ಕುಳಿತಿರುವಂತೆ, ಅಲ್ಲದೆ ಪ್ರತಿಯೊಂದರಲ್ಲೂ ಮುಂದುಗಡೆ ಇರುವ ಗಂಡಾನೆಯ ಗಂಡಸ್ಥಳದ ಮೇಲೆ ಕುಳಿತಿರುವ ಗರುಡನೊಡನೆ ಹೋರಾಡುತ್ತಿರುವಂತೆ ತೋರಿಸಲಾಗಿದೆ. ಈ ಕಂಬಗಳ ಕೆಳಭಾಗದಲ್ಲಿ ಕಂಡರಿಸಲಾಗಿರುವ ಶಾಸನಗಳು ಮೇಲಿನ ಶಿಲ್ಪಗಳಿಗೆ ಮತ್ತು ಹೊಯ್ಸಳರ ಕಾಲದಲ್ಲಿ ಪ್ರಚಲಿತವಾಗಿದ್ದ ಗರುಡ ಸಂಪ್ರದಾಯದ ಬಗ್ಗೆ ವಿವರಗಳನ್ನು ಒದಗಿಸುತ್ತವೆ. ಗರುಡರು ತಮ್ಮ ಅರಸ ಮೃತರಾದರೆ ತಾವು ಸಾಯುವೆವು ಎಂದು ಪ್ರತಿಜ್ಞೆ ಕೈಗೊಳ್ಳುತ್ತಿದ್ದರು. 2ನೆಯ ಬಲ್ಲಾಳನೊಡನೆ ಸಿವನೆಯ ನಾಯಕ ಎಂಬುವನು ತನ್ನ ಐವರು ಲೆಂಕರೊಂದಿಗೆ ಭಾಷೆಯನ್ನು ಪೂರೈಸಿದ, 2ನೆಯ ನರಸಿಂಹನೊಡನೆ ಲಖ್ಖೆಯ ನಾಯಕ ಎಂಬುವನು ತನ್ನ ಹೆಂಡತಿ ಗಂಗಾದೇವಿ ಮತ್ತು ಮೂವರು ಲೆಂಕರೊಂದಿಗೆಯೂ ಸೋಮೇಶ್ವರನೊಡನೆ (1253) ಕಂನೆಯ ನಾಯಕ ಎಂಬುವನು ತನ್ನ ಮೂವರು ಹೆಂಡಿರು, ಹತ್ತು ಜನ ಲೆಂಕಿತಿಯರು ಮತ್ತು 21ಜನ ಲೆಂಕರ ಜೊತೆಯಲ್ಲಿ ಗರುಡನನ್ನು ಅಪ್ಪಿ ಭಾಷೆಯನ್ನು ಪೂರೈಸಿದರು; 3ನೆಯ ನರಸಿಂಹನೊಡನೆ (1292) ಸಿಂಗಯನಾಯಕ ತನ್ನ ಮೂವರು ಹೆಂಡಿರು, ಅಷ್ಟು ಜನ ಲೆಂಕಿತಿಯರು ಮತ್ತು ಇಪ್ಪತ್ತು ಲೆಂಕರೊಡನೆ ಭಾಷೆಯನ್ನು ಪೂರೈಸಿದ ಎಂದು ಈ ಶಾಸನಗಳು ತಿಳಿಸುತ್ತವೆ. ಈ ವ್ಯಕ್ತಿಗಳು ವಂಶಪಾರಂಪರ್ಯವಾಗಿ ಅರಸರ ಸೇವೆಯಲ್ಲಿರುತ್ತಿದ್ದಂತೆ ತೋರುತ್ತದೆ. ಸ್ವಾಮಿನಿಷ್ಠೆಯಲ್ಲಿ ಗರುಡರು ವಿಷ್ಣುವಿನ ಗರುಡನಿಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲ ಎಂಬ ಮನೋಭಾವವನ್ನು ಗರುಡನೊಂದಿಗೆ ಹೋರಾಡುತ್ತಿರುವ ಹುಣಸೇಶ್ವರ ದೇವಾಲಯದ ಗರುಡಗಂಬದ ಶಿಲ್ಪರಚನೆಗಳು ಸೂಚಿಸುತ್ತವೆ. **(ಕೆ.)**

**ಅಗ್ರಹಾರ ಬೆಳಗುಲಿ :** ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಚನ್ನರಾಯಪಟ್ಟಣದಿಂದ ಈಶಾನ್ಯಕ್ಕೆ 27ಕಿಮೀ ದೂರದಲ್ಲಿದೆ.

ಬೆಟ್ಟೇಶ್ವರ ದೇವಾಲಯ

ಈ ಗ್ರಾಮದ ಪ್ರಾಚೀನ ಹೆಸರು ಬೆಳ್ಗುಲಿ ಅಥವಾ ಪನಜಾಡಿಯ ಬೆಳ್ಗುಲಿ. 1210ರಲ್ಲಿ 2ನೆಯ ಬಲ್ಲಾಳನ ಅಧಿಕಾರಿ ಕೇಶಿರಾಜ ಈ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ಕೇಶವಪುರ ಎಂಬ ಹೆಸರಿಟ್ಟು ಅಲ್ಲಿ ಕೇಶವಸಮುದ್ರ ಮತ್ತು ಲಕ್ಷ್ಮೀಸಮುದ್ರವೆಂಬ ಕೆರೆಗಳನ್ನು ಕಟ್ಟಿಸಿ ಕೇಶವ ಮತ್ತು ಈಶ್ವರ ದೇವರನ್ನು ಪ್ರತಿಷ್ಠಾಪಿಸಿದ. ಗ್ರಾಮದ ಈಶಾನ್ಯ ದಿಕ್ಕಿನಲ್ಲಿ ಕೇಶವಸಮುದ್ರವಿದೆ. ಈ ಕೆರೆಯ ಬಳಿ ಬೆಟ್ಟೇಶ್ವರ ಅಥವಾ ಕೇಶವೇಶ್ವರ ದೇವಾಲಯ ಇದೆ. ಈ ದೇವಾಲಯದ ದ್ವಾರ ದಕ್ಷಿಣ ಮುಖವಾಗಿದೆ. ದೇವಾಲಯ ಪೂರ್ವದಿಂದ ಪಶ್ಚಿಮಕ್ಕೆ ವಿಶಾಲ ಜಗತಿಯ ಮೇಲೆ ಹರಡಿಕೊಂಡಿದೆ. ಇದರಲ್ಲಿ ಒಂದು ನವರಂಗ, ದಕ್ಷಿಣದ ಮುಖಮಂಟಪಯುತ ಪ್ರವೇಶದ್ವಾರ, ಪಶ್ಚಿಮದ ಕಡೆ ಶಿವಲಿಂಗವಿರುವ ಅಂತರಾಳಯುತ ಗರ್ಭಗೃಹ ಮತ್ತು ಉತ್ತರದ ಕಡೆ ಕೇಶವ ವಿಗ್ರಹವಿರುವ ಗರ್ಭಗುಡಿ ಇವೆ. ಪೂರ್ವದಲ್ಲಿ ಹಲವು ಕಂಬಗಳ ಮೇಲೆ ಎತ್ತಿದ, ಸುತ್ತಲೂ ಕಕ್ಷಾಸನವಿರುವ, ತೆರೆದ ಮಹಾಮಂಟಪವಿದೆ. ಹೊರಮೈ ಕೇವಲ ಅರೆಗಂಬಗಳಿಂದ ಅಲಂಕೃತವಾಗಿದೆ. ಈಗಿರುವ ಗೋಪುರಗಳು ಇತ್ತೀಚಿನವು. ಒಳಗಿನ ಕಂಬಗಳನ್ನು ತಿರುಗಣೆಯಿಂದ ಮಾಡಲಾಗಿದೆ. ಒಳಗಿರುವ ಬೃಹತ್ ನಂದಿ, ಷಣ್ಮುಖ, ಭೈರವ, ದುರ್ಗ, ಸರಸ್ವತಿ, ವಿನಾಯಕ ವಿಗ್ರಹಗಳು ಉತ್ತಮ ಶಿಲ್ಪಗಳು.

ಈಗ ಶಿಥಿಲವಾಗಿರುವ ಸೋಮೇಶ್ವರ (1154) ಮತ್ತು ಅಮೃತೇಶ್ವರ (1134) ದೇವಾಲಯಗಳೂ ಇಲ್ಲಿವೆ. **(ಕೆ.)**

**ಅಘನಾಶಿನಿ:** ಉತ್ತರ ಕನ್ನಡ ಜಿಲ್ಲೆಯ ಒಂದು ನದಿ. ಶಿರಸಿ, ಸಿದ್ದಾಪುರ ಮತ್ತು ಕುಮಟ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಈ ನದಿಗೆ ತದಡಿ ಮತ್ತು ದೋಣಿಹಳ್ಳ ಎಂಬ ಹೆಸರುಗಳೂ ಉಂಟು. ಶಿರಸಿಯ ಹತ್ತಿರದ ಶಂಕರಹೊಂಡದಿಂದ ಉಗಮಿಸಿ ಪಶ್ಚಿಮಾಭಿಮುಖವಾಗಿ ಸುಮಾರು 72ಕಿಮೀ. ದೂರ ಹರಿದು ಗಂಗಾವಳಿ ನದಿಯಿಂದ 10ಕಿಮೀ. ದಕ್ಷಿಣದಲ್ಲಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಶಿರಸಿಯ ಪಶ್ಚಿಮದಲ್ಲಿ ಸುಮಾರು 24ಕಿಮೀ. ದೂರದಲ್ಲಿರುವ ಮಂಜಗುಣಿ ಬಳಿಯ ಹೊಂಡದಿಂದ ಹುಟ್ಟುವ ಬಾಕುರ್ ಹೊಳೆ ಮತ್ತು ಶಿರಸಿ ಹತ್ತಿರ ಉದ್ಭವಿಸುವ ದೋಣಿಹಳ್ಳ ಇವು ಅಘನಾಶಿನಿ ನದಿಯ ಮೂಲಗಳು. ಈ ಎರಡೂ ತೊರೆಗಳು ಶಿರಸಿಯ ದಕ್ಷಿಣಕ್ಕೆ 16ಕಿಮೀ ದೂರದಲ್ಲಿ ಮುಟ್ಟಳ್ಳಿ ಎಂಬಲ್ಲಿ ಸೇರುತ್ತವೆ. ಮುಂದೆ ದೋಣಿಹಳ್ಳ ಎಂಬ ಹೆಸರಿನಿಂದ ಪಶ್ಚಿಮಕ್ಕೆ ಸುಮಾರು 24ಕಿಮೀ ಹರಿದು ಬಿಳಗಿಯ ಉತ್ತರಕ್ಕೆ ಸು.13ಕಿಮೀ ದೂರದಲ್ಲಿ ನದಿ ಕೆಳಗೆ ಧುಮುಕಿ ಉಂಚಳ್ಳಿ ಜಲಪಾತವನ್ನು (ನೋಡಿ: ಲುಷಿಂಗ್‍ಟನ್, ಕೆಪ್ಪಜೋಗ) ನಿರ್ಮಿಸಿದೆ. ಜಲಪಾತದ ಪಶ್ಚಿಮಕ್ಕೆ 16ಕಿಮೀ ದೂರದಲ್ಲಿ ಉಪ್ಪಿನ ಪಟ್ಟಣ ಎಂಬಲ್ಲಿ ಇದು ಸಮುದ್ರಭರತವನ್ನು ಮುಟ್ಟುವುದು. ನದಿಯ ದಂಡೆಯ ಮೇಲಿರುವ ತದಡಿ ಮತ್ತು ಅಘನಾಶಿನಿ ಗ್ರಾಮಗಳ ಹೆಸರಿನಿಂದ ಈ ಭಾಗದಲ್ಲಿ ನದಿ ಪ್ರಸಿದ್ಧವಾಗಿದೆ. ಉಪ್ಪಿನಪಟ್ಟಣದಿಂದ ಮುಂದೆ, ಈ ನದಿ ಹಿಂದೆ ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದ ಮಿರ್ಜಾನ್‍ಗೆ 13ಕಿಮೀ ದೂರದಲ್ಲಿ ನೈಋತ್ಯಕ್ಕೆ, ಅನಂತರ ವಾಯವ್ಯಕ್ಕೆ ಹರಿದು ತದಡಿ ಖಾರಿ ಮುಟ್ಟುವುದು. ಖಾರಿ ಸುಮಾರು 5ಕಿಮೀ ಗಳಷ್ಟು ಉದ್ದವಿದ್ದು ಉತ್ತರ ದಕ್ಷಿಣ ದಡಗಳಲ್ಲಿ 100-140ಮೀ ಎತ್ತರದ ಬೆಟ್ಟಗಳ ನಡುವೆ ಇದೆ. ಅಘನಾಶಿನಿಯ ಕೊನೆಯ 24ಕಿಮೀ ಗಳಷ್ಟು ಭಾಗ 4 ರಿಂದ 9 ಟನ್ ತೂಕದ ದೋಣಿಗಳ ಪ್ರಯಾಣಕ್ಕೆ ಅನುಕೂಲವಾಗಿದೆ. ಆದರೆ ಸಮುದ್ರದ ಬಳಿ ಇದರ ಮುಖದಲ್ಲಿ ಸುಮಾರು ಒಂದೂವರೆ ಕಿಮೀ ಉದ್ದದ ಭೂಮಿಯ ಅಡ್ಡ ಚಾಚಣಿಕೆ ಇರುವುದರಿಂದ ಮಳೆಗಾಲದಲ್ಲಿ ಈ ಭಾಗದ ಪ್ರಯಾಣ ಅಪಾಯಕಾರಿ ಎನ್ನಲಾಗಿದೆ.

ಅಘನಾಶಿನಿ ಊರಿನ ಹತ್ತಿರ ಸಾಣೆಕಟ್ಟೆ ಎಂಬಲ್ಲಿ ಈ ನದಿಯ ಕೋಡಿಗೆ ಒಡ್ಡುಕಟ್ಟಿ ದೊಡ್ಡ ಪ್ರಮಾಣದಲ್ಲಿ ಉಪ್ಪನ್ನು ತಯಾರಿಸುತ್ತಾರೆ. ಈ ನದಿಯ ಎರಡೂ ಕಡೆಯ ಪ್ರದೇಶದಲ್ಲಿ ಬತ್ತ ತೆಂಗು ಬಾಳೆ ಅಡಕೆ ಮುಂತಾದವನ್ನು ಬೆಳೆಯುತ್ತಾರೆ. ಕುಮಟ ತಾಲ್ಲೂಕಿನಲ್ಲಿ ಈ ನದಿಯಿಂದ ಮೀನು ಹಿಡಿಯುವುದು ಒಂದು ಉದ್ಯಮವಾಗಿದೆ. ಅಘನಾಶಿನಿ ನದಿಯಿಂದ ವಿದ್ಯುತ್ ಉತ್ಪಾದನೆಯನ್ನು ಕೈಗೊಳ್ಳುವ ಸಾಧ್ಯತೆಯಿದೆ.

ಅಘನಾಶಿನಿ ಎಂದರೆ ಪಾಪವನ್ನು ನಾಶಮಾಡತಕ್ಕ ಪವಿತ್ರ ನದಿಯೆಂದು ಅರ್ಥ. ಈ ನದಿಯ ಸಂಗಮದ ಉತ್ತರಕ್ಕೆ ಗೋಕರ್ಣ ಕ್ಷೇತ್ರವಿದೆ. **(ಟಿ.ಪಿ.ಎಸ್.ಆರ್.)**

**ಅಘಲಯ :** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಹಳ್ಳಿ. ಶ್ರವಣಬೆಳಗೊಳದ ಆಗ್ನೇಯಕ್ಕೆ 8ಕಿಮೀ ದೂರದಲ್ಲಿದೆ.

ಇಲ್ಲಿರುವ ಮಲ್ಲೇಶ್ವರ ದೇವಾಲಯ ಹೊಯ್ಸಳ ಶೈಲಿಯದು. ಸು.1260ರ ರಚನೆ. ಇದು ತ್ರಿಕೂಟಾಚಲ. 30 ಕಂಬಗಳುಳ್ಳ ನವರಂಗ 100' ಉದ್ದ 75' ಅಗಲವಿದೆ. ಇಲ್ಲಿರುವ ಒಂದೇ ರೀತಿಯ ಮೂರು ಗರ್ಭಗುಡಿಗಳ ಬಾಗಿಲುವಾಡಗಳಲ್ಲೂ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿ ಏಳು ಗೂಡುಗಳಿದ್ದು ಅವುಗಳಲ್ಲಿ ನಾಗ, ಸೂರ್ಯ, ಸಪ್ತಮಾತೃಕೆಯರು, ವೀರಭದ್ರ, ಮಹಿಷಾಸುರಮರ್ದಿನಿ, ಷಣ್ಮುಖ ಮುಂತಾದ ದೇವರುಗಳಿವೆ. ನವರಂಗದ ಮುಂದೆ ಮಂಟಪವಿದ್ದು, ಪೂರ್ವದಲ್ಲಿ ಮಾತ್ರ ಒಂದು ದ್ವಾರವಿದೆ. ದೇವಾಲಯದ ಗೋಡೆಯ ಹೊರಮೈಯಲ್ಲಿ ಮತ್ಸ್ಯ, ಕೂರ್ಮ, ವರಾಹ, ಬುದ್ಧ, ಬಲರಾಮ, ಶ್ರೀರಾಮ, ಕೃಷ್ಣ, ವಿಷ್ಣು, ಪಾರ್ವತಿ, ಭೈರವ

ಮುಂತಾದ ಶಿಲ್ಪಗಳಿವೆ. ವಿನ್ಯಾಸ, ಅಲಂಕರಣ ಇತ್ಯಾದಿಗಳಲ್ಲಿ ಈ ದೇವಾಲಯ ಇದೇ ತಾಲ್ಲೂಕಿನ ಗೋವಿಂದನಹಳ್ಳಿಯ ದೇವಾಲಯವನ್ನು ಹೋಲುತ್ತದೆ. ಇಲ್ಲಿಯ ಲಕ್ಷ್ಮೀನಾರಾಯಣ ದೇವಸ್ಥಾನ ಸು.17ನೆಯ ಶತಮಾನದಲ್ಲಿ ನಿರ್ಮಿತವಾದ ಸಾಮಾನ್ಯ ಕಟ್ಟಡ. (ಎ.ವಿ.ಎನ್.)

**ಅಚಲಾನಂದದಾಸ** : ಸು.15ನೆಯ ಶತಮಾನದಲ್ಲಿದ್ದ ಹರಿದಾಸರು. ದಾಸಸಾಹಿತ್ಯದ ಮೊದಲಿಗರೆಂದೂ ಕಾಲ 9ನೆಯ ಶತಮಾನವೆಂದೂ ಪ್ರತೀತಿ ಇತ್ತು. ಇವರ ಒಂದು ಉಗಾಭೋಗದ 'ಕೇಳೂ ಜೀವವೆ ನೀ ಮಧ್ವಮತವನನುಸರಿಸಿ, ಶ್ರೀಲೋಲನಂಘ್ರಿಗಳ ನೆನೆದು ಸುಖಿಸೋ' ಎಂಬ ಒಂದು ಪಾದದಲ್ಲಿ ಮಧ್ವಮತದ ಉಲ್ಲೇಖವಿದೆ. 13ನೆಯ ಶತಮಾನದಲ್ಲಿ ಪ್ರಚಾರಕ್ಕೆ ಬಂದ ಮಧ್ವಮತವನ್ನು 9ನೆಯ ಶತಮಾನದಲ್ಲಿ ಉಗಾಭೋಗಗಳಿದ್ದ ಕುರುಹುಗಳಿಲ್ಲವಾದ್ದರಿಂದಲೂ ಇವರ ಕಾಲ 15ನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವರು ಅಚಲಾನಂದವಿಠಲ ಎಂಬ ಅಂಕಿತವನ್ನಿಟ್ಟುಕೊಂಡು ಪದಗಳನ್ನು ರಚಿಸಿದ್ದಾರೆ. 'ಪಾತಕರೊಳಗೆಲ್ಲ ನಾನೆವೆಗ್ಗಳನಯ್ಯ, ಪ್ರಾಯಶ್ಚಿತಕ್ಕೆ ನಿನ್ನ ನಾಮವೇ ಘನವಯ್ಯ, ಪಾತಕವನು ಮಾಡಿದ್ದು ನಾನು, ಪಾತಕ ಪಾವನ ಎರಡೂ ನಿನ್ನಾಧೀನ, ಪಾತಕವೆನಗಿಲ್ಲ ಪ್ರಾಯಶ್ಚಿತ್ತವೆನಗಿಲ್ಲ, ಕೇಳಯ್ಯ ದೇವ ಅಚಲಾನಂದವಿಠಲ' ಎಂಬ ಒಂದು ಉಗಾಭೋಗ, ವಚನಗಳ ಶೈಲಿಯನ್ನು ನೆನಪಿಗೆ ತರುತ್ತದೆ. (ಎಚ್.ಆರ್.ಡಿ.)

**ಅಚ್ಯುತರಾಯ** : ವಿಜಯನಗರದ ತುಳುವ ವಂಶದ ರಾಜ (1520-42) ತುಳುವ ನರಸನಾಯಕನ ಮಗ. ಕೃಷ್ಣದೇವರಾಯನ ಬಲತಮ್ಮ. ನಾಗಲಾದೇವಿ ಈತನ ತಾಯಿ.

ಅರಮನೆಯಲ್ಲಿ ಪಿತೂರಿಗಳನ್ನು ತಪ್ಪಿಸಲು ಕೃಷ್ಣದೇವರಾಯ ಇವನನ್ನು ಚಂದ್ರಗಿರಿಯಲ್ಲಿ ಸ್ವಲ್ಪಕಾಲ ಬಂಧನದಲ್ಲಿಟ್ಟಿದ್ದ. ಆದರೆ ಕೊನೆಗೆ ಇವನನ್ನೇ ಸಿಂಹಾಸನಕ್ಕೆ ಉತ್ತರಾಧಿಕಾರಿಯೆಂದು ನೇಮಿಸಿದ್ದರಿಂದ ಅವನ ಆಳ್ವಿಕೆಯ ಕೊನೆಯಲ್ಲಿ ಇವನೂ ಆಡಳಿತದಲ್ಲಿ ಸಹಕರಿಸುತ್ತಿದ್ದನೆಂದು ಕಾಣುತ್ತದೆ. 1528ರ ಒಂದು ಶಾಸನದಿಂದ ಇವನು ಚಕ್ರವರ್ತಿ ಬಿರುದನ್ನು ಹೊಂದಿ ರಾಜ್ಯವನ್ನಾಳುತ್ತಿದ್ದನೆಂದು ತಿಳಿದುಬರುತ್ತದೆ.

ಕೃಷ್ಣದೇವರಾಯ ಮೃತನಾದಾಗ ಅಚ್ಯುತರಾಯ ಚಂದ್ರಗಿರಿಯಲ್ಲಿದ್ದ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅಳಿಯ ರಾಮರಾಯ ತನ್ನ ಮೈದುನನನ್ನು (ಕೃಷ್ಣದೇವರಾಯನ ಕಿರಿಯ ಮಗ) ರಾಜನನ್ನಾಗಿ ಮಾಡಲು ಪ್ರಯತ್ನಿಸಿದ. ಅವನನ್ನು ರಾಜನೆಂದು ಘೋಷಿಸಿ ರಾಜ್ಯವನ್ನು ಕಸಿದುಕೊಳ್ಳಲು ಪ್ರಯತ್ನಿಸಿದ. ಇದರಲ್ಲಿ ರಾಮರಾಯನಿಗೆ ಹಲವು ಅಧಿಕಾರಿಗಳ ಬೆಂಬಲವೂ ಇತ್ತು. ಆದರೆ ಮೂವತ್ತು ಸಾವಿರ ಕಾಲಾಳುಗಳು, ಮೂರು ಸಾವಿರ ಆನೆಗಳ ಅಶ್ವ ಸೈನಿಕರು ಮತ್ತು ಮೂವತ್ತು ಸಾವಿರ ಪ್ರಬಲ ಸೈನ್ಯವಿದ್ದ ಚೋಳ ಪ್ರಾಂತ್ಯಾಧಿಕಾರಿ ನರಸಿಂಗರಾಯ ದಂಡನಾಯಕ ಇವನ ಬೆಂಬಲಿಗನಾಗಿದ್ದ. ಅಚ್ಯುತರಾಯ ಚಂದ್ರಗಿರಿಯಿಂದ ಬರುವವರೆಗೆ ಇವನ ಪರವಾಗಿ ರಾಜ್ಯವನ್ನು ನರಸಿಂಗರಾಯನೇ ವಹಿಸಿಕೊಂಡ. ಕೃಷ್ಣದೇವರಾಯನ ಮರಣದ ಸುದ್ದಿ ತಿಳಿದ ಕೂಡಲೆ ರಾಮರಾಯನ ಪಿತೂರಿಯನ್ನು ತಿಳಿದಿದ್ದ ಅಚ್ಯುತರಾಯ ಚಂದ್ರಗಿರಿಯಿಂದ ಮೊದಲು ತಿರುಪತಿಗೆ ಹೋಗಿ ಅಲ್ಲಿ ರಾಜ್ಯಪಟ್ಟಾಭಿಷೇಕ ಮಾಡಿಕೊಂಡ. ಅಲ್ಲಿಂದ ಕಾಳಹಸ್ತಿಗೆ ಹೋಗಿ ಅಲ್ಲಿ ಎರಡನೆಯ ಸಲ ರಾಜ್ಯಾಭಿಷೇಕ ಮಾಡಿಕೊಂಡ. ಅನಂತರ ತನ್ನ ಬೆಂಬಲಿಗರು ರಾಮರಾಯನ ಬಲವನ್ನು ಮುರಿದಿದ್ದನ್ನು ತಿಳಿದು 1530ರ ಪೂರ್ವಾರ್ಧದಲ್ಲಿ ವಿಜಯನಗರಕ್ಕೆ ಬಂದ. ರಾಮರಾಯನೊಡನೆ ಒಪ್ಪಂದ ಮಾಡಿಕೊಂಡು, ಕೃಷ್ಣದೇವರಾಯನ ಮಗನ ಪರವಾಗಿ ತಾವಿಬ್ಬರೂ ಆಳ್ವಿಕೆಯಲ್ಲಿ ಸಹಭಾಗಿಗಳಾಗಿರುವಂತೆ ಒಪ್ಪಿದ. ಇದಾದ ಅನಂತರ ಮೂರನೆಯ ಸಲ ಇವನ ಪಟ್ಟಾಭಿಷೇಕ ವಿಜಯನಗರದಲ್ಲಿ ನಡೆಯಿತು. ಈ ಏರ್ಪಾಡು 1535ವರೆಗೆ ಸಮರ್ಪಕವಾಗಿ ಮುಂದುವರಿಯಿತು. ಆ ಹೊತ್ತಿಗೆ ಕೃಷ್ಣದೇವರಾಯನ ಕಿರಿಯ ಮಗ ಮೃತನಾದ್ದರಿಂದ ರಾಮರಾಯನ ಬಲಕುಗ್ಗಿತು. ಇದರಿಂದ ಅಚ್ಯುತರಾಯನ ಧೋರಣೆ ಬದಲಾಯಿತು, ಅಂತರ್ಯುದ್ಧ ಪ್ರಾರಂಭವಾಯಿತು. ಕೊನೆಗೆ ರಾಮರಾಯ ಅಚ್ಯುತರಾಯನನ್ನೇ ಸೆರೆಹಿಡಿದು ತಾನೇ ರಾಜನೆಂದು ಘೋಷಿಸಿಕೊಂಡ. ಆದರೆ ಇದಕ್ಕೆ ಶ್ರೀಮಂತರ ವಿರೋಧವಿದ್ದುದರಿಂದ ಅಚ್ಯುತರಾಯನ ತಮ್ಮನ ಮಗನಾದ ಸದಾಶಿವರಾಯನ ಹೆಸರಿನಲ್ಲಿ ಆಡಳಿತವನ್ನು ನಡೆಸಲಾರಂಭಿಸಿದ. ಅದೇ ವೇಳೆಗೆ ರಾಜ್ಯದ ದಕ್ಷಿಣ ಭಾಗದಲ್ಲಿ ಉದ್ಭವವಾದ ದಂಗೆಗಳನ್ನು ಅಡಗಿಸಲು ರಾಮರಾಯ ರಾಜಧಾನಿಯನ್ನು ಬಿಡಬೇಕಾಯಿತು. ಆ ಸಂದರ್ಭದಲ್ಲಿ ಅಚ್ಯುತರಾಯ ಬಿಡುಗಡೆ ಹೊಂದಿದ. ಕೂಡಲೇ ರಾಮರಾಯ ಹಿಂದಿರುಗಿ ಅಚ್ಯುತರಾಯನೊಡನೆ ಒಪ್ಪಂದ ಮಾಡಿಕೊಂಡ. ಈ ಒಪ್ಪಂದದ ಪ್ರಕಾರ ಅಚ್ಯುತರಾಯನ ರಾಜತ್ವ ಭದ್ರವಾಯಿತು.

ಈ ಅಂತಃಕಲಹಗಳ ಜೊತೆಗೆ ಕೃಷ್ಣದೇವರಾಯನ ಮರಣದ ತರುಣದಲ್ಲೇ 1530-31ರಲ್ಲಿ ಬಿಜಾಪುರದ ಸುಲ್ತಾನನಾಗಿದ್ದ ಆದಿಲ್‌ಷಾ ವಿಜಯನಗರದ ಮೇಲೆ ದಂಡೆತ್ತಿ ಬಂದು, ರಾಯಚೂರು ಮತ್ತು ಮುದ್ಗಲ್ ಪ್ರದೇಶವನ್ನು ಆಕ್ರಮಿಸಿಕೊಂಡ. ಮತ್ತೆ ಎರಡನೆಯ ಬಾರಿ ನಾಗಲಾಪುರದವರೆಗೆ ದಂಡೆತ್ತಿ ಬಂದು ಅದನ್ನು ಹಾಳುಮಾಡಿದ. ಆದರೆ ಅಚ್ಯುತರಾಯ ಅವನ್ನು ಪುನಃ ಸ್ವಾಧೀನಪಡಿಸಿಕೊಂಡ. 1531-32ರಲ್ಲಿ ತಿರುವಡಿ (ಈಗಿನ ತಿರುವನಂತಪುರ ಮತ್ತು ತಿನ್ನವೆಲ್ಲಿ ಜಿಲ್ಲೆಯ ಭಾಗಗಳು) ರಾಜನ ಮೇಲೆ ದಂಡೆತ್ತಿ ಹೋದ. ಇದರ ಫಲವಾಗಿ ತಿರುವಡಿ ರಾಜ ಅಧೀನನಾಗಿ ಕಪ್ಪ ಕೊಡಲು ಒಪ್ಪಿದ. ಆಗ ದಂಗೆ ಎದ್ದಿದ್ದ ಉಮ್ಮತ್ತೂರು ಪಾಳೆಯಗಾರರನ್ನೂ ಅಡಗಿಸಿದ. ಸ್ವಲ್ಪ ಕಾಲಾನಂತರ ತಿರುವಡಿ ರಾಜ ಪಾಂಡ್ಯ ರಾಜ್ಯದ ದೊರೆ ಜಟಾವರ್ಮನ್ ತ್ರಿಭುವನ ಚಕ್ರವರ್ತಿ ವಲ್ಲಭ ದೇವನನ್ನು ಸೋಲಿಸಿ ಅವನನ್ನು ಪದಚ್ಯುತಗೊಳಿಸಿದ. ಅಚ್ಯುತರಾಯ ಪಾಂಡ್ಯ ರಾಜನಿಗೆ ಅವನ ರಾಜ್ಯವನ್ನು ಪುನಃ ಕೊಟ್ಟು ಅವನ ಮಗಳಾದ ವರದಾಂಬಳನ್ನು ವಿವಾಹವಾದ. 1531ರಲ್ಲಿ ಒರಿಸ್ಸಾ ರಾಜನಾಗಿದ್ದ ಪ್ರತಾಪರುದ್ರ ಹಿಂದೆ ಕೃಷ್ಣದೇವರಾಯನಿಗೆ ಒಪ್ಪಿಸಿದ್ದ ಕೃಷ್ಣಾನದಿಯ ದಕ್ಷಿಣಭಾಗದ ಪ್ರದೇಶಗಳನ್ನು ಸುಲ್ತಾನ ಕುತ್ಬ್‌ಷಾನ ಬೆಂಬಲದೊಡನೆ ಆಕ್ರಮಿಸಿದ. ಅಚ್ಯುತರಾಯ ಅವನನ್ನು ಸೋಲಿಸಿ, ಒರಿಸ್ಸಾದವರೆಗೆ ಹೋಗಿ ಅಲ್ಲಿ ತನ್ನ ವಿಜಯಸ್ತಂಭವನ್ನು ನೆಟ್ಟ. ಶಾಸನದ ಹೇಳಿಕೆಗಳ ಪ್ರಕಾರ ಸಿಂಹಳ ಅಚ್ಯುತರಾಯನ ಅಧೀನರಾಜ್ಯವಾಗಿತ್ತು. 1534ರಲ್ಲಿ ಇಸ್ಮಾಯಿಲ್ ಆದಿಲ್ ಷಾನ ಮರಣಾನಂತರ ಅಚ್ಯುತರಾಯ ರಾಯಚೂರು ಪ್ರದೇಶವನ್ನು ಆಕ್ರಮಿಸಿಕೊಂಡ. ಕೃಷ್ಣದೇವರಾಯನ ಕಾಲದಲ್ಲಿ ಸ್ನೇಹಿತರಾಗಿದ್ದ ಪೋರ್ಚುಗೀಸರು ಇವನ ಕಾಲದಲ್ಲಿ ವಿರೋಧಿಗಳಾದರು, ತೀರಪ್ರದೇಶದಲ್ಲಿ ವಸಾಹತುಗಳನ್ನು ಸ್ಥಾಪಿಸಿದರು, ದೇವಸ್ಥಾನಗಳನ್ನು ಕೊಳ್ಳೆ ಹೊಡೆದರು, ಜನರ ಕಗ್ಗೊಲೆ ಮಾಡಿದರು. ಇವನು ಅವರೊಡನೆ ಸ್ನೇಹಕ್ಕೆ ಪ್ರಯತ್ನಿಸಿದ. 1536-37ರಲ್ಲಿ ಗುತ್ತಿಯ ದಂಗೆಯನ್ನು ಅಡಗಿಸಿದ.

ತನ್ನ ಆಳ್ವಿಕೆಯ ಉದ್ದಕ್ಕೂ ಇವನು ರಾಜಕೀಯ ಪ್ರಕ್ಷುಬ್ಧತೆಯ ಮಧ್ಯೆ ತೊಳಲಾಡಬೇಕಾಗಿ ಬಂದರೂ ಈ ರಾಜ್ಯದ ಒಟ್ಟು ಕ್ಷೇಮಕ್ಕೆ ಭಂಗಬರದಂತೆ ಧೈರ್ಯ ಹಾಗೂ ಉಪಾಯದಿಂದ ಆಡಳಿತ ನಿರ್ವಹಿಸಿದನೆಂದೇ ಹೇಳಬಹುದು.

ಅಚ್ಯುತರಾಯ ದೇವಸ್ಥಾನಗಳಿಗೆ ಮತ್ತು ಬ್ರಾಹ್ಮಣರಿಗೆ ಅನೇಕ ದಾನವನ್ನು ಮಾಡಿದ್ದಾನೆ. ವೈಷ್ಣವಮತಾವಲಂಬಿಯಾಗಿದ್ದ ಈತ ಕಂಚಿಯ ವರದರಾಜ ದೇವಸ್ಥಾನಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟ. ಅಲ್ಲಿ ಲಕ್ಷ ಹೋಮವನ್ನು ಮಾಡಿದ ಅನೇಕ ತೆರಿಗೆಗಳಿಗೆ ವಿನಾಯತಿ ನೀಡಿದ. ವಿಜಯನಗರದ ವಿಠಲ ಸ್ವಾಮಿ ದೇವಸ್ಥಾನದಲ್ಲಿ ಹನ್ನೆರಡು ಶ್ರೀವೈಷ್ಣವ ಆಳ್ವಾರರ ಪ್ರತಿಮೆಗಳನ್ನು ಸ್ಥಾಪಿಸಿದ. ಆನಂದನಿಧಿ ಎಂಬ ಪುದುವಟ್ಟನ್ನು ಸ್ಥಾಪಿಸಿದ. ಕಂಚಿಯಲ್ಲಿ ತುಲಾಭಾರವನ್ನು ಮಾಡಿಕೊಂಡು ಒಂದು ಸಾವಿರ ಗೋವುಗಳನ್ನು ದಾನಮಾಡಿದ.

ಅಚ್ಯುತರಾಯಾಭ್ಯುದಯಮ್ ಮತ್ತು ಭಾಗವತ ಚಂಪೂಗಳನ್ನು ಬರೆದ ರಾಜನಾಥ ಡಿಂಡಿಮ, ವರದಾಂಬಿಕಾಪರಿಣಯದ ಕರ್ತೃ ತಿರುಮಲಾಂಬಾ ಇವನ ಪೋಷಣೆಯಲ್ಲಿದ್ದ ಮುಖ್ಯ ಕವಿಗಳು.

ಅಚ್ಯುತರಾಯನಿಗೆ ವರದಾಂಬಿಕಾ ಅಲ್ಲದೆ ಇನ್ನಿಬ್ಬರು ಪತ್ನಿಯರೂ ಇದ್ದರು. ಈತನಿಗೆ ವೆಂಕಟಾದ್ರಿ ಎಂಬ ಮಗನಿದ್ದ. ಅವನಿಗೆ 1530ರಲ್ಲಿ ಯುವರಾಜಪಟ್ಟವೂ ಆಗಿತ್ತು. ಅಚ್ಯುತರಾಯ 1542ರಲ್ಲಿ ಮೃತನಾದ. (ಎ.ವಿ.)

**ಅಜಿತಸೇನಾಚಾರ್ಯ :** 10ನೆಯ ಶತಮಾನದಲ್ಲಿದ್ದ ಕನ್ನಡ ನಾಡಿನಲ್ಲಿ ಅತ್ಯಂತ ಪ್ರತಿಷ್ಠೆಪಡೆದ ಜೈನಗುರು. ಇವರಿಗೆ ಭುವನಗುರುವೆಂಬ ಬಿರುದೂ ಇತ್ತು. ಇವರ ವಿದ್ಯಾಮಂಡಲ ಅನೇಕ ಕವಿಗಳಿಂದ ಮತ್ತು ಹಿರಿಯರಿಂದ ಕೂಡಿತ್ತಲ್ಲದೆ ಇವರ ಶಿಷ್ಯಪರಿವಾರ ಬಹು ದೊಡ್ಡದಾಗಿತ್ತು. ಶ್ರವಣಬೆಳಗೊಳದ ಗೊಮ್ಮಟೇಶ್ವರ ವಿಗ್ರಹವನ್ನು ಕೆತ್ತಿಸಿದ ಮಹಾಮಾತ್ಯ ಚಾವುಂಡರಾಯ ಮತ್ತು ಗಂಗವಂಶದ ಮಾರಸಿಂಹ ಇವರ ಶಿಷ್ಯರಾಗಿದ್ದರು. ಕನಕಸೇನ ಮತ್ತು ಮಲ್ಲಿಷೇಣರೂ ಇವರ ಶಿಷ್ಯವರ್ಗಕ್ಕೆ ಸೇರಿದವರು. ಅಜಿತಸೇನಾಚಾರ್ಯರು ತನಗೆ ಗುರುವಾಗಿದ್ದ ವಿಷಯವನ್ನು ಕನ್ನಡ ಕವಿ ರನ್ನ ತನ್ನ ಅಜಿತಪುರಾಣದಲ್ಲಿ ಹೇಳಿಕೊಂಡಿದ್ದಾನೆ. **(ಎ.ಎಸ್.ಯು.)**

**ಅಜಿಲರು :** ವಿಜಯನಗರ ಸಾಮ್ರಾಜ್ಯದೊಂದಿಗೆ ತುಳುನಾಡು ವಿಲೀನಗೊಂಡ ಅನಂತರ ಅಲ್ಲಿ ತಲೆಯೆತ್ತಿದ ಹಲವು ಸ್ಥಳೀಕ ಮನೆತನಗಳಲ್ಲಿ ಒಂದು. ಮೊದಲು ವೇಣೂರಿನಿಂದ ಮತ್ತು ಅನಂತರ ಆಲದಂಗಡಿಯಿಂದ ಇವರು ಆಳಿದ ಸಂಸ್ಥಾನಕ್ಕೆ ಪೂಂಜಳಿ ಅಥವಾ ಪುಂಜಳಿಕೆಯ ರಾಜ್ಯ ಮತ್ತು ಅಜುವ ರಾಜ್ಯ ಎಂಬ ಹೆಸರುಗಳಿದ್ದುವು. ಇವರು ತಮ್ಮನ್ನು ಸಾಳುವ ವಂಶದವರೆಂದು ಕರೆದುಕೊಳ್ಳುತ್ತಿದ್ದರು. ವೇಣೂರಿನ ಮಹಾಲಿಂಗೇಶ್ವರ ಇವರ ಕುಲದೇವತೆಯಾದರೂ ಇವರು ಜೈನಧರ್ಮಾವಲಂಬಿಗಳಾಗಿದ್ದರು.

1408ರ ವಿಜಯನಗರದ ಶಾಸನವೊಂದರಲ್ಲಿ ಅಜಿಲರು ಬಂಗ ಮತ್ತು ಚೌಟ ಮನೆತನಗಳ ಅರಸುಗಳೊಂದಿಗೆ ಆಡಳಿತ ಕ್ಷೇತ್ರದಲ್ಲಿ ವಿಜಯನಗರ ರಾಜ್ಯಪಾಲನ ಸಹಾಯಕರಾಗಿ 1405ರಲ್ಲಿ ಕಾಣಿಸಿಕೊಳ್ಳುತ್ತಾರೆ. ಅಜಿಲ ಅರಸುಗಳ ಪೈಕಿ ಮುಖ್ಯನಾದವನು 4ನೆಯ ವೀರತಿಮ್ಮರಾಜ ಒಡೆಯ. ರಾಜಕುಮಾರನ ಅಳಿಯನೂ ಪಾಂಡ್ಯಕದೇವಿಯ ಮಗನೂ ಜೈನಗುರು ಚಾರುಕೀರ್ತಿದೇವರ ಪ್ರಿಯಾಗ್ರಶಿಷ್ಯನೂ ಆಗಿದ್ದ ಈ ತಿಮ್ಮರಾಜನೇ ವೇಣೂರಿನ ಗೊಮ್ಮಟಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸಿದ. ಇವನ ರಾಣಿ ಪಾಂಡ್ಯಕದೇವಿ ಅಥವಾ ವರ್ಧಮಾನಕ್ಕ ಗೊಮ್ಮಟನ ಎಡಭಾಗದಲ್ಲಿ ಚಂದ್ರನಾಥ ಚೈತ್ಯಾಲಯವನ್ನೂ ಇವನ ಮತ್ತೊಬ್ಬ ರಾಣಿ ಪಾರ್ಶ್ವದೇವಿ ಅಥವಾ ಬಿನ್ನಾಣಿ ಗೊಮ್ಮಟನ ಬಲ ಭಾಗದಲ್ಲಿ ಶಾಂತೀಶ್ವರ ಚೈತ್ಯಾಲಯವನ್ನೂ ಕಟ್ಟಿಸಿದರು. ಅಜಿಲರ ರಾಣಿ ಮದುರಕದೇವಿಯನ್ನು 1622ರ ಒಂದು ಶಾಸನದಲ್ಲಿ ಜೈನಗುರು ಲಲಿತಕೀರ್ತಿ ಭಟ್ಟಾರಕದೇವರ ಪ್ರಿಯಾಗ್ರಶಿಷ್ಯೆಯೆಂದು ವರ್ಣಿಸಲಾಗಿದೆ. ಇವಳು ತನ್ನ ರಾಜಧಾನಿ ಆಲದಂಗಡಿಯಲ್ಲಿ ಒಂದು ಅರಮನೆಯನ್ನೂ ಒಂದು ಜೈನಬಸದಿಯನ್ನೂ ಅರ್ಧನಾರೀಶ್ವರ ಮತ್ತು ಸೋಮನಾಥ ದೇವಾಲಯಗಳನ್ನೂ ಕಟ್ಟಿಸಿದಳು.

ವೇಣೂರಿನಲ್ಲಿ ಅಜಿಲರು ಕಟ್ಟಿಸಿಕೊಂಡಿದ್ದ ಅರಮನೆಗೆ ಏಳುಪ್ಪರಿಗೆಗಳಿದ್ದವೆಂಬ ಪ್ರತೀತಿಯಿದ್ದು, ಇಂದು ಆ ಅರಮನೆಯ ನಿವೇಶನದಲ್ಲಿ ತಳಪಾಯದ ಕುರುಹುಗಳೂ ಕಲ್ಲಿನ ಎರಡು ಆನೆಗಳೂ ಕಾಣಸಿಗುತ್ತವೆ. ಅಜಿಲಮೊಗರು ಎಂಬ ಸಣ್ಣ ಗ್ರಾಮದಲ್ಲಿರುವ ಮಸೀದಿಯ ನಿರ್ಮಾಪಕ ಒಬ್ಬ ಅಜಿಲ ಅರಸು ಎಂಬ ಐತಿಹ್ಯವಿದೆ. ಆ ಅರಸ ಯಾವುದೋ ರೋಗದಿಂದ ಬಳಲುತ್ತಿದ್ದಾಗ ಸೈಯದ್ ಬಾಬಾ ಫಕ್ರುದ್ದಿನ್ ಎಂಬ ಪರ್ಷಿಯಾ ದೇಶದ ಗುರು ಆ ರೋಗವನ್ನು ಗುಣಪಡಿಸಿದ ಕಾರಣ ಅಜಿಲ ಆ ಮಸೀದಿಯನ್ನು ಕಟ್ಟಿಸಿದನಂತೆ.

ಹೈದರನ ಕಾಲದಲ್ಲಿ ಅಜಿಲರ ಆಳ್ವಿಕೆ ಕೊನೆಗಂಡಿತು. ಆಲದಂಗಡಿ ಮತ್ತು ಬಂಗಾಡಿ ಎಂಬೀ ಸ್ಥಳಗಳಲ್ಲಿ ಅಜಿಲ ವಂಶದವರು ಇಂದಿಗೂ ವಾಸಿಸುತ್ತಿದ್ದಾರೆ. **(ಕೆ.ವಿ.ಆರ್.)**

**ಅಜ್ಜಂಪುರ :** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಒಂದು ದೊಡ್ಡ ಊರು. ಬೆಂಗಳೂರು ಪುಣೆ ರೈಲುಮಾರ್ಗದಲ್ಲಿನ ಒಂದು ನಿಲ್ದಾಣ. ತರೀಕೆರೆ ಹೊಸದುರ್ಗ ರಸ್ತೆಯಲ್ಲಿ ತರೀಕೆರೆಗೆ 22ಕಿಮೀ ದೂರದಲ್ಲಿರುವ ಈ ಊರು ಹೋಬಳಿಯ ಕೇಂದ್ರಸ್ಥಳವಾಗಿದ್ದು, ಪುರಸಭೆಯನ್ನು ಹೊಂದಿದೆ.

ಹಿಂದೆ ಈ ಊರಿನ ಸ್ಥಳದಲ್ಲಿ ಕೆರಾಲವೆಂಬ ಹಳ್ಳಿಯಿತ್ತು. 17ನೆಯ ಶತಮಾನದಲ್ಲಿ ಶಿರಾ ರಾಜ್ಯದ ಮುಗಲ್ ಪ್ರತಿನಿಧಿಯ ಅಧಿಕಾರಿಯಾದ ಅಜೀಂಖಾನ್ ಎಂಬುವನು ಇಲ್ಲಿಗೆ ಬೇಟೆಗಾಗಿ ಬಂದಾಗ ಅವನ ಬೇಟೆನಾಯಿಗಳನ್ನು ಇಲ್ಲಿನ ಮೊಲವೊಂದು ಪ್ರತಿಭಟಿಸಿ ಅಟ್ಟಿಸಿಕೊಂಡು ಬಂದಿತಂತೆ. ಅದನ್ನು ಕಂಡು ಚಕಿತನಾದ ಖಾನ್ ಅದೊಂದು ಗಂಡು ಮೆಟ್ಟಿನ ಭೂಮಿಯೆಂದು ಬಗೆದು ಅಲ್ಲಿ ಕೋಟೆ ಕಟ್ಟಿಸಿ, ಆ ಊರಿಗೆ ಅಜೀಂಪುರವೆಂದು ಹೆಸರಿಟ್ಟ. ಕಾಲಕ್ರಮದಲ್ಲಿ ಅದು ಅಜ್ಜಂಪುರವೆಂದು ಪ್ರಚಾರಕ್ಕೆ ಬಂತು ಎಂದು ಸ್ಥಳ ಪ್ರತೀತಿ. ಮುಂದೆ ತರೀಕೆರೆಯ ಪಾಳೆಯಗಾರ ಹನುಮಪ್ಪ ನಾಯಕ ಇಲ್ಲಿ ಶಿಥಿಲವಾಗಿದ್ದ ಅಜೀಂಖಾನನ ಕೋಟೆಯನ್ನು ದುರಸ್ತು ಮಾಡಿಸಿ ವಿಜಯನಗರದ ಬುಕ್ಕರಾಯ ಕಟ್ಟಿಸಿದ್ದ ದೇವಾಲಯವನ್ನೂ ಜೀರ್ಣೋದ್ಧಾರ ಮಾಡಿಸಿದ. 1766ರಲ್ಲಿ ಹೈದರ್ ಈ ನಗರವನ್ನು ವಶಪಡಿಸಿಕೊಂಡ. ಅಂದಿನಿಂದ ಇದು ಮೈಸೂರು ರಾಜ್ಯದ ಆಡಳಿತಕ್ಕೆ ಸೇರಿತು.

ಅಜ್ಜಂಪುರದಲ್ಲಿ ನೇಯ್ಗೆ ಚೆನ್ನಾಗಿಬೆಳೆದಿದೆ. ಸುತ್ತಿನ ಪ್ರದೇಶಕ್ಕೆ ಈ ಊರು ಮುಖ್ಯ ವ್ಯಾಪಾರಸ್ಥಳ. ಪ್ರತಿ ಮಂಗಳವಾರ ಇಲ್ಲಿ ದೊಡ್ಡ ಸಂತೆ ನಡೆಯುತ್ತದೆ. ಊರಿನ ಸುತ್ತಲೂ ಫಲವತ್ತಾದ ಎರೆಮಣ್ಣಿನ ಜಮೀನಿನಲ್ಲಿ ಹತ್ತಿ ಬೆಳೆಯುತ್ತದೆ. ಹಿಂದೆ ಈ ಊರಿನ ಹತ್ತಿರ ಚಿನ್ನ ತೆಗೆಯುತ್ತಿದ್ದ ಕ್ಷೇತ್ರಗಳಿದ್ದುವು. 1897ರಲ್ಲಿ ಯೂರೋಪಿನ ಸಂಸ್ಥೆಯೊಂದು ಚಿನ್ನದ ಗಣಿ ಉದ್ಯಮವನ್ನು ಇಲ್ಲಿ ಆರಂಭಿಸಿತು. ಆದರೆ ಕೆಲವು ವರ್ಷಗಳ ಅನಂತರ ಆರ್ಥಿಕ ತೊಂದರೆಯಿಂದಾಗಿ ಅದು ಕೆಲಸವನ್ನು ನಿಲ್ಲಿಸಿಬಿಟ್ಟಿತು. **(ಎಸ್.ವಿ.ಎಸ್.)**

**ಅಡಕೆ :** ಕರ್ನಾಟಕದ ಅತಿ ಮುಖ್ಯ ತೋಟದ ಬೆಳೆ. ಅಡಕೆಗೆ ಜನರ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಅಮೂಲ್ಯ ಸ್ಥಾನ ಉಂಟು. ಅಡಕೆಮರದ ಪ್ರತಿಯೊಂದು ಭಾಗವೂ ಹಲವು ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ. ಕಾಯಿ ಎಳೆಯದಾಗಿದ್ದಾಗ, ಬಲಿತ ಮೇಲೆ ಅಥವಾ ಹದಗೊಳಿಸಿದ ಅನಂತರ ವೀಳೆಯದೆಲೆಯೊಡನೆ ತಿನ್ನುವುದಕ್ಕೂ ಕೆಲವು ಔಷಧೋಪಚಾರಗಳಿಗೂ ಉಪಯುಕ್ತವೆನಿಸಿದೆ. ಅಡಕೆಯ ಮರ, ಮನೆ ಕಟ್ಟುವುದಕ್ಕೂ ನೀರು ಹಾಯಿಸುವ ಕೊಳವೆಗೂ ಉಪಯೋಗಕ್ಕೆ ಬರುತ್ತದೆ. ಒಣಗಿದ ಸೋಗೆಯನ್ನು ಮನೆ ಛಾವಣಿಗೆ ಹೊದಿಸಲು ಬಳಸುವುದುಂಟು. ಇದರ ಹಾಳೆಯಿಂದ ಟೋಪಿ, ಬೀಸಣಿಗೆ, ಬುಟ್ಟಿ ಇತ್ಯಾದಿ ವ್ಯವಸಾಯದ ಸಲಕರಣೆಗಳನ್ನು ಮಾಡುತ್ತಾರೆ. ಅಡಕೆ ಹೂವನ್ನು ದೇವರ ಪೂಜೆಗೂ ಮುಡಿಯುವುದಕ್ಕೂ ಉಪಯೋಗಿಸುತ್ತಾರೆ. ಅಡಕೆ ತೆಂಗಿನಮರದಂತೆ ಅನೇಕ ಬಗೆಯಾಗಿ ಉಪಯುಕ್ತವೆನಿಸಿದೆ. ಕರ್ನಾಟಕದಲ್ಲಿ ಅಡಕೆಯ ಬೇಸಾಯ, ಕೊಯ್ಲು, ಹದಗೊಳಿಸುವುದು, ವರ್ಗೀಕರಣ, ವ್ಯಾಪಾರ ಮತ್ತು ಕೈಗಾರಿಕೆಯಿಂದ ಲಕ್ಷಾಂತರ ಜನರು ಜೀವಿಸುತ್ತಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಮಳೆಬೀಳುವ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡಗಳಲ್ಲೂ ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು ಪ್ರದೇಶಗಳಲ್ಲೂ ಒಟ್ಟು ಅಡಕೆಯ ಸೇಕಡ 75 ಭಾಗದಷ್ಟನ್ನು ಬೆಳೆಯಲಾಗುವುದು. ಮೈದಾನ ಪ್ರದೇಶದ ತುಮಕೂರು, ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ನೀರಾವರಿ ಅನುಕೂಲವಿರುವ ಕಡೆಗಳಲ್ಲಿಯೂ ಇದರ ಬೇಸಾಯ ಉಂಟು. ಮೈಸೂರು, ಮಂಡ್ಯ, ಬೆಂಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಬಹಳ ಸ್ವಲ್ಪ ಭಾಗದಲ್ಲಿ ಅಡಕೆಯನ್ನು ಬೆಳೆಯಲಾಗುತ್ತಿದೆ. ಮಲೆನಾಡಿನ ತೋಟಗಳಲ್ಲಿ ಹೆಚ್ಚಾಗಿ ಅಡಕೆಯನ್ನು ಶುದ್ಧಬೆಳೆಯಾಗಿ ಮಾತ್ರ ಬೆಳೆದರೆ ಮೈದಾನ ಸೀಮೆಗಳಲ್ಲಿ ತೆಂಗು, ಹಣ್ಣಿನಗಿಡ ಮೊದಲಾದುವುಗಳೊಂದಿಗೆ ಇದನ್ನು ಮಿಶ್ರಬೆಳೆಯಾಗಿ ಬೆಳೆಯುವರು.

ಭಾರತದ ರಾಜ್ಯಗಳಲ್ಲಿ ಕರ್ನಾಟಕ ಅಡಕೆ ತೋಟಗಳ ವಿಸ್ತೀರ್ಣದಲ್ಲಿ ಎರಡನೆಯ ಸ್ಥಾನವನ್ನೂ ಮತ್ತು ಉತ್ಪತ್ತಿಯಲ್ಲಿ ಮೊದಲನೆಯ ಸ್ಥಾನವನ್ನೂ ಪಡೆದಿದೆ.

ರಾಜ್ಯದಲ್ಲಿ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕಮಗಳೂರು, ಜಿಲ್ಲೆಗಳಲ್ಲಿ ಸಾಂದ್ರವಾಗಿಯೂ ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ಮಂಡ್ಯ, ಕೊಡಗು, ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಅಲ್ಲಲ್ಲಿ ಅಡಕೆ ಬೆಳೆಯನ್ನು ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಅಡಕೆಯನ್ನು ಒಟ್ಟು 1,28,042 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದ್ದು ವಾರ್ಷಿಕ ಉತ್ಪನ್ನ 1,93,562 ಟನ್ನುಗಳು (1999-2000).

**ಬಿತ್ತನೆ :** ಅಡಕೆ ಬಹುವಾರ್ಷಿಕ ಪೈರಾದುದರಿಂದ ಉತ್ತಮ ತಳಿಯ ಬೀಜ ಆರಿಸುವುದು ಬಹಳ ಮುಖ್ಯ. ಜಾಗ್ರತೆ ಫಸಲು ಕೊಡುವ,

ಪ್ರತಿವರ್ಷವೂ ಒಳ್ಳೆಯ ಫಸಲನ್ನು ನೀಡುವ, ಆರೋಗ್ಯವಾದ ತಾಯಿಮರಗಳಿಂದ ಒಳ್ಳೆಯ ಆಕಾರ ಗಾತ್ರ ಹಾಗೂ ತೆಳುಸಿಪ್ಪೆಯಿದ್ದು ಹೆಚ್ಚಿನ ಸಂಖ್ಯೆ ಕಾಯಿಗಳಿಂದ ಕೂಡಿದ ಗೊನೆಗಳನ್ನು ಆರಿಸಲಾಗುವುದು. ಕಾಯಿಗಳು ಚೆನ್ನಾಗಿ ಬಲಿತು ಹಣ್ಣಾಗಿ ಉದುರಲು ಪ್ರಾರಂಭವಾದ ಅನಂತರ ಗೊನೆಗಳನ್ನು ಕೊಯ್ಲುಮಾಡಿ ಎಚ್ಚರಿಕೆಯಿಂದ ಇಳಿಸಿ ಕಾಯಿಗಳನ್ನು ಬಿಡಿಸಿ ಅವುಗಳಲ್ಲಿ ಹೆಚ್ಚು ತೂಕ, ಒಳ್ಳೆಯ ಆಕಾರ ಹಾಗೂ ಗಾತ್ರವುಳ್ಳ ಕಾಯಿಗಳನ್ನು ಆರಿಸಿ ಮರಳು ಮಣ್ಣು ಮಿಶ್ರಮಾಡಿದ ಪಾತಿಗಳಲ್ಲಿ ಪ್ರತಿಕಾಯಿಗೂ 6ಸೆಂಮೀ ಅಂತರವಿರುವಂತೆ ಹಾಗೂ ತೊಟ್ಟು ಮೇಲಕ್ಕೆ ಬರುವಂತೆ ಸ್ವಲ್ಪ ಓರೆಯಾಗಿ 2.5ಸೆಂಮೀ ಆಳದಲ್ಲಿ ನೆಟ್ಟು ಮರಳಿನಿಂದ ಮುಚ್ಚಲಾಗುತ್ತದೆ. ಪಾತಿಗಳಿಗೆ ಸ್ವಲ್ಪ ನೆರಳು ಬೀಳುವಂತೆ ಮಾಡಿ ಕ್ರಮವಾಗಿ ನೀರು ಕೊಡಲಾಗುತ್ತದೆ. ಅಡಕೆ ಬೀಜಗಳು 40 ದಿನಗಳಲ್ಲಿ ಮೊಳೆಯಲು ಆರಂಭಿಸುವುವು. 3 ತಿಂಗಳಲ್ಲಿ 2 ರಿಂದ 3 ಎಲೆ ಹೊರಡುತ್ತವೆ. ಸಸಿಗಳನ್ನು 150ಸೆಂಮೀ ಅಗಲ ಮತ್ತು ಉದ್ದದ ಪಾತಿಗಳಲ್ಲಿ 30ಸೆಂಮೀ ಅಂತರವಿರುವಂತೆ ನಾಟಿ ಮಾಡಲಾಗುತ್ತದೆ. ಬಾಳೆ ಅಥವಾ ಹಸಿರೆಲೆಗೊಬ್ಬರದ ಗಿಡಗಳನ್ನು ಬೆಳೆಸಿ ಸಸಿಗಳಿಗೆ ನೆರಳು ಕೊಡುವುದುಂಟು. ಚಪ್ಪರ ಹಾಕಿ ಅದರ ಮೇಲೆ ತೊಂಡೆ ಅಥವಾ ಸೀಮೆಬದನೆಬಳ್ಳಿ ಹಬ್ಬಿಸುವುದೂ ಉಂಟು. ಸಸಿಪಾತಿಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಲಾಗುತ್ತದೆ.

ಅಡಕೆ ತೋಟ ಮಾಡಲು ಕೆಂಪು ಮಣ್ಣು, ಮರಳುಮಿಶ್ರಿತ ಗೋಡು, ಜಂಬಿಟ್ಟಿಗೆ, ಕೆಂಪುಗೋಡು ಮೊದಲಾದ ಮಣ್ಣುಗಳುಳ್ಳ ಭೂಮಿ ಯೋಗ್ಯ. ಭೂಮಿಯಲ್ಲಿ ಜೌಗು ನಿಲ್ಲಬಾರದು. ಅಡಕೆಯನ್ನು ಸಮುದ್ರಮಟ್ಟದಿಂದ ಹಿಡಿದು ಒಂದು ಸಾವಿರ ಮೀಟರ್ ಎತ್ತರವರೆಗಿನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಬಹುದು. ಅಡಕೆ ತೋಟ ಮಾಡುವ ಸ್ಥಳದಲ್ಲಿ ನೀರಾವರಿ ಅನುಕೂಲ ಇರುವುದು ಅಪೇಕ್ಷಣೀಯ. ನೈರುತ್ಯ ದಿಕ್ಕಿನಿಂದ ಮಧ್ಯಾಹ್ನದ ಬಿಸಿಲು ಬೀಳದಂತೆ ನೆರಳು ಕೊಡುವ ಮರಗಳನ್ನು ಬೆಳೆಸುವರು. ಭೂಮಿಯನ್ನು ಹದಗೊಳಿಸಿ ಬಸಿಕಾಲುವೆಗಳನ್ನು ತೋಡಿದ ಅನಂತರ 2.7ಮೀ ಅಂತರದಲ್ಲಿ ಭೂಗುಣಕ್ಕನುಸಾರವಾಗಿ 60ಸೆಂಮೀ x 60ಸೆಂಮೀ x 60ಸೆಂಮೀ ಅಥವಾ 90ಸೆಂಮೀ x 90ಸೆಂಮೀ x 90ಸೆಂಮೀ ಆಳತೆಯ ಗುಣಿಗಳಲ್ಲಿ ಆರಿಸಿದ ಸಸಿಗಳನ್ನು ನೆಡಲಾಗುತ್ತದೆ. ಮಳೆ ಹೆಚ್ಚಾಗಿ ಬೀಳುವ ಪ್ರದೇಶಗಳಲ್ಲಿ ಸೆಪ್ಟೆಂಬರ್-ಅಕ್ಟೋಬರ್‌ಗಳಲ್ಲೂ ಉಳಿದ ಪ್ರದೇಶಗಳಲ್ಲಿ ಮೇ-ಜೂನ್ ತಿಂಗಳಲ್ಲೂ ಅಡಕೆ ಗಿಡಗಳನ್ನು ನೆಡುವುದು ರೂಢಿಯಲ್ಲಿದೆ.

**ಅಡಕೆ ತೋಟದ ಕೃಷಿ :** ಅಡಕೆ ಸಮಾರು 80-100 ವರ್ಷಗಳವರೆಗೂ ಬದುಕಿದ್ದು ನೆಟ್ಟ 5-6 ವರ್ಷಗಳಿಂದ ಜೀವನಪರ್ಯಂತ ಫಸಲು ಕೊಡುತ್ತದೆ. ಆದ್ದರಿಂದ ಮರ ಆರೋಗ್ಯವಾಗಿ ಚೆನ್ನಾಗಿ ಬೆಳೆದು ಉತ್ತಮ ಫಲ ಕೊಡುವಂತೆ ಮಾಡಲು ಪ್ರತಿವರ್ಷವೂ ನಿರ್ದಿಷ್ಟ ಪ್ರಮಾಣದಲ್ಲಿ ಕಾಲಕ್ಕೆ ಸರಿಯಾಗಿ ರಸಗೊಬ್ಬರ, ಹಸಿರೆಲೆಗೊಬ್ಬರ, ಕೊಟ್ಟಿಗೆಗೊಬ್ಬರ ಕೊಡುವುದುಂಟು.

ಮರ ಒಂದಕ್ಕೆ 100ಗ್ರಾಂ ನೈಟ್ರೊಜನ್, 40ಗ್ರಾಂ ಫಾಸ್ಫರಸ್ ಮತ್ತು 140ಗ್ರಾಂ ಪೊಟ್ಯಾಷನ್ನು ಎರಡು ಪಾಲು ಮಾಡಿ ವರ್ಷದಲ್ಲಿ ಎರಡು ಸಲ ಕೊಡುವರು. ಇದರೊಂದಿಗೆ ಪ್ರತಿವರ್ಷವೂ 12ಕಿಗ್ರಾಂ ಹಸಿರೆಲೆಗೊಬ್ಬರ ಮತ್ತು 12ಕಿಗ್ರಾಂ ಕೊಟ್ಟಿಗೆಗೊಬ್ಬರವನ್ನು ಎಲ್ಲ ವಯಸ್ಸಿನ ಮರಗಳಿಗೂ ಕೊಡುವುದುಂಟು. ಮೊದಲನೆಯ ವರ್ಷ ದೊಡ್ಡಮರಗಳಿಗೆ ಕೊಡುವ ಮೊತ್ತದ 1/3 ಭಾಗ ರಸಗೊಬ್ಬರವನ್ನೂ ಎರಡನೆಯ ವರ್ಷ 2/3 ಭಾಗವನ್ನೂ ಮೂರನೆಯ ವರ್ಷದಿಂದ ಪೂರ್ತಿ ಪ್ರಮಾಣದಲ್ಲೂ ಕೊಡುವರು. ಗೊಬ್ಬರವನ್ನು ಮಲೆನಾಡಿನಲ್ಲಿ ಸೆಪ್ಟೆಂಬರ್-ಅಕ್ಟೋಬರಿನಲ್ಲೂ ಉಳಿದ ಕಡೆ ಮೇ-ಜೂನ್ ತಿಂಗಳಲ್ಲೂ ಕೊಡುವುದುಂಟು. ಗೊಬ್ಬರವನ್ನು ಅಡಕೆ ಮರದ ಸುತ್ತ 50ಸೆಂಮೀ ಅಂತರದಲ್ಲಿ ಮಾಡಲಾಗುವ 1ಮೀ ಅಗಲ 15-20ಸೆಂಮೀ ಆಳದ ತೋಡುಗಳಲ್ಲಿ ಸೇರಿಸಲಾಗುತ್ತದೆ. ಎರಡನೆಯ ಸಲ ಕೊಡುವಾಗ ಮರದ ಸುತ್ತ ಕಳೆ ಕಿತ್ತು ಬುಡ ಕೆದಕಿ ಗೊಬ್ಬರ ಸೇರಿಸುವುದುಂಟು. ಪ್ರತಿಯೊಂದು ತೋಟದ ಮಣ್ಣನ್ನು ಪರೀಕ್ಷಿಸಿ ಗೊಬ್ಬರದ ಪ್ರಮಾಣವನ್ನು ನಿಗದಿ ಮಾಡಲಾಗುತ್ತದೆ. ಅಡಕೆಗೆ ಕೊಳೆರೋಗ, ಸುಳಿಕೊರೆವರೋಗ, ಹಿಡಿಮುಂಡಿಗೆರೋಗ, ಅಣಬೆರೋಗ ಮೊದಲಾದ ರೋಗಗಳೂ ಬೇರುಹುಳು, ತಿಗಣೆ, ಹೇನು, ಹೂವಿಗೆ ತಗಲುವ ಕಂಬಳಿಹುಳು ಮೊದಲಾದ ಕೀಟಗಳ ಬಾಧೆಯೂ ತಲೆದೋರುವುದುಂಟು.

ಕರ್ನಾಟಕದಲ್ಲಿ ಅಡಕೆಯನ್ನು ಆಗಸ್ಟ್‌ನಿಂದ ಜನವರಿವರೆಗಿನ ಅವಧಿಯಲ್ಲಿ ಕೊಯ್ಯುತ್ತಾರೆ. ಪ್ರತಿಯೊಂದು ಮರವೂ ವರ್ಷಕ್ಕೆ 2 ಅಥವಾ 3 ಗೊನೆ ಬಿಡುತ್ತದೆ. ಪ್ರತಿ ಗೊನೆಯಲ್ಲೂ 200-250 ಕಾಯಿಗಳಿರುತ್ತವೆ. ಅಡಕೆ ಕೊಯ್ಲನ್ನು ವಿವಿಧ ಪ್ರದೇಶಗಳ ಅಭಿರುಚಿಗೆ ಅನುಕೂಲಗಳಿಗೆ ತಕ್ಕಂತೆ ವಿವಿಧ ಹಂತಗಳಲ್ಲಿ ಬೇರೆ ಬೇರೆ ರೀತಿ ಹದಗೊಳಿಸುತ್ತಾರೆ. ಕಾಯಿ ಎಳೆಯದಾಗಿದ್ದಾಗಲೇ ಕೊಯ್ಲು ಮಾಡಿ ಸಿಪ್ಪೆ ತೆಗೆದು ತಿರುಳನ್ನು ಇಡಿ ಇಡಿಯಾಗಿ ಅಥವಾ ಎರಡು ಇಲ್ಲವೆ ಅನೇಕ ಚೂರುಗಳಾಗಿ ಮಾಡಿ ಬಣ್ಣದಲ್ಲಿ ಬೇಯಿಸಿ ಒಣಗಿಸಿ ಹದ ಮಾಡಿ ವಿಂಗಡಿಸಿ ಪೇಟೆಗೆ ಸಿದ್ಧಗೊಳಿಸುತ್ತಾರೆ. ಕೆಲವು ಕಡೆಗಳಲ್ಲಿ ಕಾಯಿಗಳನ್ನು ಪೂರ್ತಿ ಹಣ್ಣಾಗುವವರೆಗೂ ಮರದಲ್ಲಿಯೇ ಬಿಟ್ಟು ಅನಂತರ ಕೊಯ್ಲು ಮಾಡಿ ಸುಮಾರು 40ದಿನ ಬಿಸಿಲಿನಲ್ಲಿ ಒಣಗಿಸಿ ಸಿಪ್ಪೆ ಬಿಡಿಸಿ ಬಣ್ಣ ಕಟ್ಟುವುದುಂಟು.

**ಇಳುವರಿ :** ಒಂದು ಎಕರೆಗೆ ಸುಮಾರು 400 ಮರಗಳಿದ್ದು 1½ ಲಕ್ಷದಿಂದ 3½ ಲಕ್ಷದವರೆಗೂ ಕಾಯಿ ಬಿಡುತ್ತವೆ. ಸಂಸ್ಕರಿಸಿದ ಮೇಲೆ ಇವುಗಳ ಒಟ್ಟು ತೂಕ 300-500 ಕೆಜಿ. ಒಂದು ಎಕರೆಗೆ ಒಂದು ವರ್ಷಕ್ಕೆ ಸರಾಸರಿ 350 ಕೆಜಿ. ಸಂಸ್ಕರಿಸಿದ ಅಡಕೆ ಉತ್ಪತ್ತಿಯಾಗುತ್ತದೆ.

ಅಡಕೆಯನ್ನು ಚಾಲಿ, ಕೋಕ, ಸರಕು, ಹಸ, ಬೆಟ್ಟೆ, ಗೊರಬಲು, ಬಿಳಿಗೋಟು, ರಾಶಿ, ತಟ್ಟಿಬೆಟ್ಟೆ, ಕೆಂಪುಗೋಟು, ಚೂರು ಮೊದಲಾದ ಹಲವು ವಿಧಗಳಾಗಿ ಮಾರುಕಟ್ಟೆಗೆ ಸಿದ್ಧಗೊಳಿಸಲಾಗುವುದು. ಕರ್ನಾಟಕದ ಅಡಕೆ ಭಾರತದ ಇತರ ಪ್ರದೇಶಗಳಲ್ಲಿ ಬೆಳೆಯುವ ಅಡಕೆಗಿಂತ ಗುಣದಲ್ಲಿ ಮೇಲಾದುದು.

ಅಡಕೆಯೊಂದಿಗೆ ವೀಳೆಯದೆಲೆ, ಮೆಣಸು, ಬಾಳೆ, ಸಿಹಿಗೆಣಸು, ಮರಗೆಣಸು, ಕೋಕೋ, ಶುಂಠಿ ಮುಂತಾದ ಉಪಬೆಳೆಗಳನ್ನು ಸಹ ಲಾಭದಾಯಕವಾಗಿ ಬೆಳೆಯಬಹುದು. ಇತ್ತೀಚೆಗೆ ಮಂಗಳ ಎಂಬ ಸುಧಾರಿಸಿದ ಅಡಕೆ ತಳಿಯನ್ನು ಬಿಡುಗಡೆ ಮಾಡಲಾಗಿದೆ. **(ಕೆ.ಟಿ.ಕೆ.)**

**ಅಡಕೆ ಬೆಳೆಯ ಆರ್ಥಿಕ ಪರಿಸ್ಥಿತಿ ಮತ್ತು ತಾಂತ್ರಿಕತೆ :** ಆರ್ಥಿಕ ಉದಾರೀಕರಣದ ಬಳಿಕ ಅಡಕೆ ಕೃಷಿಕರಿಗೆ ಕೆಲವು ಸಮಸ್ಯೆಗಳು ತಲೆದೋರಿದವು. ಇದಕ್ಕೆ ಕಾರಣ ಬೆಲೆಗಳ ಕುಸಿತ ಮತ್ತು ಅಡಕೆಯ ಮೇಲೆ ವಿಧಿಸಲಾಗಿರುವ ವ್ಯವಸಾಯ ತೆರಿಗೆ.

ಅಡಕೆ ಬೆಲೆ ಇಳಿಮುಖವಾದಾಗ, ಕರ್ನಾಟಕ ರಾಜ್ಯಸರ್ಕಾರ ಕೃಷಿಕರ ಕುಂದುಕೊರತೆಗಳನ್ನು ನಿವಾರಿಸಲು ಮತ್ತು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಒಂದು ಸಮಿತಿಯನ್ನು ರಚಿಸಿತು (1971). ಈ ಸಮಿತಿ ಬೆಳೆಯ ಇಳಿತಕ್ಕೆ ಅಧಿಕ ಉತ್ಪಾದನೆ, ಅಡಕೆಯ ಆಮದು, ರಫ್ತಿಗೆ ಸಾಕಷ್ಟು ಅವಕಾಶವಿಲ್ಲದೆ ಇರುವುದು, ಅಡಕೆಯ ಬಳಕೆ ಕಡಿಮೆಯಾಗಿರುವುದು, ಮಾರುಕಟ್ಟೆಯ ವೈಪರೀತ್ಯಗಳು, ರೈತರ ಸಣ್ಣ ಹಿಡುವಳಿ, ಮಾರುಕಟ್ಟೆಯಲ್ಲಿ ದಳ್ಳಾಳಿಗಳ ಕಾಟ ಮುಂತಾದ ಕಾರಣಗಳನ್ನು ನೀಡಿತು. ಈ ಸಮಿತಿಯ ನಿರ್ಧಾರದ ಮೇರೆಗೆ ಸಂಘಟಿತ ಸಂಸ್ಥೆಯೊಂದು ಮಂಗಳೂರಿನಲ್ಲಿ ಸ್ಥಾಪಿತವಾಯಿತು (ದಿ ಸೆಂಟ್ರಲ್ ಅರೆಕನಟ್ ಮಾರ್ಕೆಟಿಂಗ್ ಅಂಡ್ ಪ್ರೋಸೆಸಿಂಗ್ ಕೋ-ಆಪರೇಟಿವ್ ಸೊಸೈಟಿ). ಇದರ ಮೂಲ ಧನ 1 ಕೋಟಿ ರೂ. ಇದರಲ್ಲಿ ತಲಾ 37.5 ಲಕ್ಷವನ್ನು ಕರ್ನಾಟಕ ಮತ್ತು ಕೇರಳ ಸರ್ಕಾರ ನೀಡಿವೆ. ಉಳಿದ 30 ಲಕ್ಷವನ್ನು ಕೆಲವರು ವೈಯಕ್ತಿಕವಾಗಿಯೂ ಮತ್ತು ಇತರ ಸಹಕಾರ ಸಂಘಗಳೂ ನೀಡಿವೆ. ಇದರ ಮುಖ್ಯ ಉದ್ದೇಶ ಅಡಕೆ ಕೃಷಿಕರಿಗೆ ನ್ಯಾಯಬೆಲೆ ದೊರಕಿಸುವುದು. ಕಳೆದ ಅಡಕೆ ಬೆಲೆಗಳ ಏರುಪೇರುಗಳನ್ನು ನೋಡಿದರೆ, ಈ ಸಂಘದ ಉದ್ದೇಶ ಸಫಲವಾಯಿತೆನ್ನಬಹುದು. ಆದರೆ ಗುಟ್ಕ ನಿಷೇಧ ವಿದೇಶಗಳಲ್ಲಿ ಅಡಕೆಗೆ ಕುಸಿದ ಬೇಡಿಕೆಯಿಂದಾಗಿ ಸದ್ಯ ಅದರ ಬೆಲೆ ಕುಸಿದಿದೆ. ಕೆಲವು ವರ್ಗದ ಅಡಕೆ ಬೆಲೆಗಳು ಕುಸಿಯುವುದನ್ನು ತಡೆಯಲು ರಾಜ್ಯ ಸರ್ಕಾರ ಮಾರುಕಟ್ಟೆ ಪ್ರವೇಶಿಸುವುದೂ ಉಂಟು. ಇದಲ್ಲದೆ ಶಿವಮೊಗ್ಗದಲ್ಲಿ ಅಡಕೆ ಮಾರಾಟ ಸಹಕಾರಸಂಘ ಕಳೆದ 20-25 ವರ್ಷಗಳಿಂದ ಕೆಲಸಮಾಡುತ್ತ ಇದೆ. ಬೆಳೆಗಾರರೇ ಇದರ ಸದಸ್ಯರು.

**ಅಡಕೆಯ ತಾಂತ್ರಿಕತೆ :** ಅಡಕೆ ಮರದಲ್ಲಿ ಅಡಕೆಯ ಜೊತೆಗೆ, ಅಡಕೆ ಮೇಲಿರುವ ಸಿಪ್ಪೆ ಸಿಗುತ್ತದೆ. ಸಿಪ್ಪೆಯಲ್ಲಿ ಸೆಲ್ಯುಲೋಸ್,

ಹೆಮಿಸೆಲ್ಯುಲೋಸ್ ಅಂಶ ಜಾಸ್ತಿ ಇರುವುದರಿಂದ ಇವುಗಳ ವಿಸರ್ಜನೆ ಒಂದು ಸಮಸ್ಯೆ. ಇವು ಭೂಮಿಯಲ್ಲಿ ಸಹ ಬೇಗನೆ ಕೊಳೆಯುವುದಿಲ್ಲ. ಆದುದರಿಂದ ಇವುಗಳ ಉಪಯೋಗ ಕಡಿಮೆ.

ಕೇಂದ್ರ ಸರ್ಕಾರದ ಅಡಕೆ ಸಂಸ್ಥೆ 1959ರಲ್ಲಿ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಅಡಕೆಯ ತಾಂತ್ರಿಕತೆಯ ಬಗ್ಗೆ ಕೆಲವು ಪರಿಶೋಧನೆಗಳನ್ನು ಕೈಗೊಂಡಿತ್ತು ಮತ್ತು ಮದರಾಸಿನ ಅರಣ್ಯ ಸಂಶೋಧನೆಯ ಕೇಂದ್ರದ ಕೆಲವು ಪರಿಶೋಧನೆಗಳಿಗೆ ಧನಸಹಾಯ ಮಾಡಿತು. ಈ ಸಂಸ್ಥೆಗಳ ಮುಖ್ಯ ಉದ್ದೇಶ (1) ಅಡಕೆಯ ಇತರೆ ಉಪಯೋಗ (2) ಬೇರೆ ಬೇರೆ ಅಡಕೆ ತಳಿಗಳಲ್ಲಿರುವ ಪದಾರ್ಥಗಳು (3) ಅವು ಕಟಾವಿಗೆ ಬರಬೇಕಾದ ಕಾಲಾವಧಿ-ಇವುಗಳನ್ನು ಕಂಡುಹಿಡಿಯುವುದು.

ಡೆಹರಾಡೂನಿನಲ್ಲಿರುವ ಅರಣ್ಯವಿಜ್ಞಾನ ಕೇಂದ್ರದಲ್ಲಿ ಅಡಕೆ ಸಿಪ್ಪೆಯನ್ನು ಕಾಗದದ ತಯಾರಿಕೆಯಲ್ಲಿ ಉಪಯೋಗಿಸುವ ಬಗ್ಗೆ ಪರಿಶೀಲಿಸುತ್ತಿದ್ದಾರೆ. ಅಡಕೆ ಸಿಪ್ಪೆಯನ್ನು ಬಾಳೆಯ ದಿಂಡಿನೊಂದಿಗೆ ಸರಿಯಾದ ಪ್ರಮಾಣದಲ್ಲಿ ಮಿಶ್ರಮಾಡಿದರೆ ಕ್ರಾಫ್ಟ್ ಮಾದರಿಯ ಕಾಗದವನ್ನು ತಯಾರಿಸಬಹುದೆಂದು ತಿಳಿದುಬಂದಿದೆ.

ಅಡಕೆ ಎಲೆಗಳನ್ನು ಸಣ್ಣ ತುಂಡುಗಳಾಗಿ ಮಾಡಿ ದನಗಳ ಮೇವಾಗಿ ಉಪಯೋಗಿಸಬಹುದು. ಅಡಕೆ ಹಾಳೆಯನ್ನು ವಿವಿಧ ಮಾದರಿಯ ಹಲಗೆಗಳಾಗಿಯೂ ಚಪ್ಪಲಿಗಳಿಗೆ ಹಾಕುವ ಅಟ್ಟೆಯನ್ನಾಗಿಯೂ ಸಾಮಾನು ಸುತ್ತುವ ಕಾಗದವನ್ನಾಗಿಯೂ ಉಪಯೋಗಿಸುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ.

ಅಡಕೆ ಬೆಲೆ ಇಳಿಮುಖವಾದಾಗಿನಿಂದ ಅಡಕೆಯನ್ನು ಎಣ್ಣೆ, ಪ್ರೊಟೀನ್, ರೆಸಿನ್, ಆಲ್ಕಾಲಾಯ್ಡ್‌ಗಳ ಉತ್ಪಾದನೆಗೆ ಉಪಯೋಗಿಸುವ ಬಗ್ಗೆ ಪರಿಶೋಧನೆ ನಡೆಸಲಾಗುತ್ತಿದೆ. ಅಡಕೆ ತೋಟಗಳಲ್ಲಿ ವಾಣಿಜ್ಯ ಬೆಳೆ ವೆನಿಲಾವನ್ನೂ ಇತ್ತೀಚೆಗೆ ಬೆಳೆಯಲಾಗುತ್ತಿದೆ. **(ಬಿ.ವಿ.ವಿ.)**

**ಅಡಹಳ್ಳಿ :** ಬೆಳಗಾಂವಿ ಜಿಲ್ಲೆ ಅಥಣಿ ತಾಲ್ಲೂಕಿನ ಒಂದು ಗ್ರಾಮ. ಅಥಣಿಯಿಂದ 18ಕಿಮೀ ದೂರದಲ್ಲಿದೆ. ಇಲ್ಲಿ ಹನುಮಂತ ಮತ್ತು ಶಂಕರಲಿಂಗ ದೇವಾಲಯಗಳಿವೆ. ಹನುಮಂತ ದೇವಾಲಯವನ್ನು ಇತ್ತೀಚೆಗೆ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯದ ಹೊರಗೋಡೆಯ ಮೇಲೆ ಸಪ್ತ ಮಾತೃಕೆಯರ ಸಾಲನ್ನು ಕೆತ್ತಲಾಗಿದೆ. ದೇವಾಲಯದ ಎಡಭಾಗದಲ್ಲಿ ಕೊನೆಯ ಚಾಳುಕ್ಯ ಶೈಲಿಯ ಶಕವರ್ಷ 1119ರ ಶಿಲಾಶಾಸನ ಹಾಸುಗಲ್ಲು ಗೋಡೆಯಲ್ಲಿದೆ. ಮುಖ್ಯ ಪ್ರವೇಶ ದ್ವಾರದ ಎಡಮೂಲೆಯಲ್ಲಿ ಒಂದು ವೀರಗಲ್ಲಿದೆ. ಇದರಿಂದ ಈ ದೇವಾಲಯ ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಶಂಕರಲಿಂಗ ದೇವಾಲಯ ಹೆಂಚು ಹೊದಿಕೆಯ ದೇವಾಲಯ. ಇದರ ಸುತ್ತ ಭಗ್ನ ಪ್ರಾಚೀನ ಅವಶೇಷಗಳಿವೆ. ಅಲ್ಲಿರುವ ಹಳ್ಳಿಯ ಸಮೀಪ ಆಗ್ನೇಯ ದಿಕ್ಕಿನ ಕಡೆಯಲ್ಲಿ ಒಂದು ಸಣ್ಣ ಗುಡ್ಡದ ಮೇಲೆ, ಮಣ್ಣಿನಲ್ಲಿ ಹೂತುಹೋಗಿರುವ ಶಿವದೇವಾಲಯವಿದೆ. ಈ ದೇವಾಲಯಕ್ಕೆ ಸ್ವಲ್ಪ ದೂರದಲ್ಲಿ ಒಂದು ದರ್ಗಾ ಇದೆ. ಈ ಗ್ರಾಮಕ್ಕೆ ಸಮೀಪದ ಕೋಹಳ್ಳಿಯಲ್ಲಿ ಸ್ಥಳೀಯವಾಗಿ ಸಂಗಮೇಶ್ವರ ಎಂದು ಕರೆಯಲಾಗುವ ಕೂಡಲ ಸಂಗಮವೆಂದು ಹೇಳುವ ಹಿರೇಹಳ್ಳ ಮತ್ತು ಸಿಂಧೂರಹಳ್ಳಗಳ ಸಂಗಮದ ತಟದಲ್ಲಿ ಒಂದು ಪ್ರಾಚೀನ ದೇವಾಲಯವಿದೆ. ತ್ರಿಕೂಟಾಚಲವಿರುವ ಈ ದೇವಾಲಯ ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿದೆ. ಬೀರಪ್ಪ, ದುರ್ಗಪ್ಪ ಮತ್ತು ಬಸವಣ್ಣ ಇಲ್ಲಿರುವ ಇತರ ದೇವಾಲಾಯಗಳು. ಇಲ್ಲೊಂದು ಮಠವಿದ್ದು ಇದನ್ನು ಅಪ್ಪಯ್ಯಸ್ವಾಮಿ ಎಂದು ಕರೆಯುವರು. ಸಂಗಮೇಶ್ವರ ಜಾತ್ರೆ ಮತ್ತು ಉತ್ಸವ ಪ್ರತಿವರ್ಷ ದೀಪಾವಳಿಯಲ್ಲಿ ನಡೆಯುವುದು. **(ಆರ್.ಐ.)**

**ಅಣ್ಣಾಜಿ :** ಸು.17ನೆಯ ಶತಮಾನದ ಅಂತ್ಯಭಾಗದಲ್ಲಿದ್ದ ವೀರಶೈವ ಕವಿ. ಸೌಂದರವಿಳಾಸಂ ಎಂಬ ಕಾವ್ಯದ ಕರ್ತೃ. ಈತನ ಅಜ್ಜ ವೀರೇಂದ್ರ, ತಂದೆ ಅಯ್ಯಣ್ಣಭೂಪ. ಪೂರ್ವಕವಿಗಳಲ್ಲಿ ಕೆರೆಯ ಪದ್ಮರಸ, ಹಂಪೆಯ ಹರಿಶ್ವರ, ಪಾಲ್ಕುರಿಕೆ ಸೋಮನಾಥ, ಮಲುಹಣ, ರುದ್ರಭಟ್ಟ, ಆಗ್ಗಳ, ನೇಮಿಚಂದ್ರ, ಕವಿಯಿತ್ರಿ ಕಂತಿ ಮೊದಲಾದ ಕನ್ನಡ ಕವಿಗಳನ್ನೂ ಬಾಣ, ಮಯೂರ, ಭವಭೂತಿ, ಶ್ರೀಹರ್ಷ, ಧನಂಜಯ, ದಂಡಿ, ಕಾಳಿದಾಸ ಮೊದಲಾದ ಸಂಸ್ಕೃತ ಕವಿಗಳನ್ನೂ ಸ್ಮರಿಸಿದ್ದಾನೆ. ಇದಲ್ಲದೆ ಶಿವನ ಆಸ್ಥಾನ ವರ್ಣನೆಯ ಸಂದರ್ಭದಲ್ಲಿ ಬಸವ, ಮಡಿವಾಳಯ್ಯ, ಮರುಳಶಂಕರ, ಓಹಿಲಯ್ಯ, ಮಾದಾರಚನ್ನ, ಕಿನ್ನರಬ್ರಹ್ಮ, ಹಡಪದ ಅಪ್ಪಣ್ಣ, ಚೆನ್ನಬಸವಣ್ಣ, ಸಿದ್ಧರಾಮ ಘಟ್ಟಿವಾಳಯ್ಯ, ಅಲ್ಲಮಪ್ರಭು ಅನಿಮಿಷಯ್ಯ ಮೊದಲಾದ ವಚನಕಾರರನ್ನೂ ಸ್ಮರಿಸಿರುವುದು ಕಂಡುಬರುತ್ತದೆ. ಕವಿ ತನ್ನನ್ನು ಅಯ್ಯಣಭೂಪನ ಸುಕುಮಾರ, ಅಣ್ಣಾಜಿ ರಾಜೇಂದ್ರ, ರಸಿಕ ರಾಜೇಂದ್ರನಣ್ಣಾಜಿ ಎಂದು ವಿಶ್ಲೇಷಿಸಿಕೊಂಡಿರುವುದರಿಂದ ಈತ ರಾಜವಂಶಕ್ಕೆ ಸೇರಿದವನಾಗಿರಬಹುದು. ಯಾವ ಊರಿನವನು ಎನ್ನುವುದು ತಿಳಿಯದು. ಶಂಕರನ ಆದೇಶದಂತೆ ಅಲಂಕಾರಭಾವ ರಸಪೂರಿತವಾದ ಸೌಂದರವಿಳಾಸ ಕಾವ್ಯವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ.

ಸೌಂದರವಿಳಾಸಂ ವಾರ್ಧಕ ಷಟ್ಪದಿಯಲ್ಲಿದೆ. ಅಲ್ಲಲ್ಲಿ ಕೆಲವು ಭಾಮಿನೀಷಟ್ಪದಿಗಳೂ ಕಂಡುಬರುತ್ತವೆ. ಸುಮಾರು 600 ಪದ್ಯಗಳಿವೆ. ಅರವತ್ತುಮೂರು ಪುರಾತನರಲ್ಲಿ ಒಬ್ಬನಾದ ಸೌಂದರೇಶ ಅಥವಾ ನಂಬಿಯಣ್ಣ ಎಂಬ ಶಿವಭಕ್ತನ ಚರಿತ್ರೆ ಕಾವ್ಯದ ವಸ್ತು. ಇದೊಂದು ಶೃಂಗಾರಕಾವ್ಯ. ಶೃಂಗಾರ ಮೊದಲಾದ ನವರಸಗಳನ್ನು ಸಾರತರವಾದ ಮಧುರೋಕ್ತಿ ಮೃದುಪದದ ಗಂಭೀರವಚನಾರಚನೆಯಿಂದ ಕಾವ್ಯವನ್ನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ವರ್ಣನೆಗಳು ಮನೋಹರವಾಗಿವೆ. ಆದರೆ ಒಮ್ಮೊಮ್ಮೆ ಈ ವರ್ಣನೆಗಳು ಕೇವಲ ಪಾಂಡಿತ್ಯ ಪ್ರದರ್ಶನ ಕ್ಕಾಗಿಯೂ ಬರುವುದುಂಟು. ಕಾವ್ಯಬಂಧ ಸಾಮಾನ್ಯವಾಗಿದೆ. *

**ಅಣ್ಣಿಗೇರಿ :** ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ಮುಖ್ಯ ಊರು. ಹುಬ್ಬಳ್ಳಿ-ಗುಂತಕಲ್ಲು ರೈಲುಮಾರ್ಗದ ಮೇಲೆ ಹುಬ್ಬಳ್ಳಿಯಿಂದ 35ಕಿಮೀ ದೂರದಲ್ಲಿದೆ. ಗದಗ-ಹುಬ್ಬಳ್ಳಿ ಹೆದ್ದಾರಿ ಈ ಊರ ಮೇಲಿಂದ ಹಾದುಹೋಗುತ್ತದೆ. ಕೃತಪುರಮಹಾತ್ಮೆ ಎಂಬ ಸ್ಥಳಪುರಾಣದ ಪ್ರಕಾರ ಈ ಊರಿಗೆ ಅನ್ನಗಿರಿ, ಅನ್ಯತಟಾಕ ಎಂಬ ಹೆಸರುಗಳಿದ್ದುವು. ಪಾಂಡವರು ಅಣ್ಣಿಗೇರಿಗೆ ಬಂದಿದ್ದರೆಂಬ ನಂಬಿಕೆಯಿದೆ. 2ನೆಯ ಪುಲಕೇಶಿಯಿಂದ ಹಿಡಿದು ಬಿಜಾಪುರದ ಮಹಮ್ಮದ್‌ಷಾನ ಕಾಲದ ವರೆಗೆ ಆಳಿದ ರಾಜಮನೆತನಗಳವರ 28 ಶಾಸನಗಳು ಇಲ್ಲಿ ದೊರಕಿವೆ. ಅಣ್ಣಿಗೇರಿ ಪ್ರಾಚೀನ ಕಾಲದಲ್ಲಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಮಹತ್ತ್ವ ಪಡೆದಿತ್ತೆಂದು ಆ ಶಾಸನಗಳಿಂದ ತಿಳಿದುಬರುತ್ತದೆ. ಇದು ಬೆಳ್ವೊಲ 300ರ ನಾಡಿನ ರಾಜಧಾನಿಯಾಗಿತ್ತು. ದಕ್ಷಿಣ ವಾರಾಣಸಿ ತೀರ್ಥವೆಂದೂ ಕರೆಯುತ್ತಿದ್ದ ಈ ಊರಲ್ಲಿ ಐದು ಬ್ರಹ್ಮಪುರಿಗಳೂ ತ್ರಿವರ್ಗದವರೂ ಸಾವಿರ ದೇವಪುತ್ರರೂ ಇದ್ದರು. ಪಂಪನ ಮಾತಾಮಹಜೋಯಿಸ ಸಿಂಗ ಇಲ್ಲಿಯವನು.

ಚಾಳುಕ್ಯ 4ನೆಯ ಸೋಮೇಶ್ವರನಿಗೆ ಪುನಃ ರಾಜ್ಯವನ್ನು ಸಂಪಾದಿಸಲು ಸಹಾಯ ಮಾಡಿದ ದಂಡನಾಯಕ ಬಮ್ಮಿದೇವ ಮತ್ತು ಕಳಚುರಿ ರಾಯಮುರಾರಿ ಸೋವಿದೇವನ ದಂಡನಾಯಕ ಧನ್ನುಗಿ ಅಣ್ಣಿಗೇರಿಯಲ್ಲಿದ್ದವರು. ಕಳಚುರಿ ಬಿಜ್ಜಳನಿಗೆ ಹೆದರಿ ಚಾಳುಕ್ಯ 3ನೆಯ ತೈಲ ಅಣ್ಣಿಗೇರಿಗೆ ಓಡಿಬಂದಿದ್ದ. ಬ್ರಿಟಿಷರ ಆಳ್ವಿಕೆಯ ಪ್ರಾರಂಭದಲ್ಲಿ ಇದು ನಿಪ್ಪಾಣಿ ಜಹಗೀರಿಯಲ್ಲಿತ್ತು. 1839ರಲ್ಲಿ ಇದು ಕಂಪನಿಯ ನೇರ ಆಳ್ವಿಕೆಗೆ ಸೇರಿತು.

ಅಮೃತೇಶ್ವರ ದೇವಾಲಯ

ಅಣ್ಣಿಗೇರಿಯಲ್ಲಿ ಬನಶಂಕರಿ, ಬಸಪ್ಪ, ಗರ್ಚ್ಚಿಬಸಪ್ಪ, ಕೋಳಿವಾಡ ಹನುಮಪ್ಪ, ಮೈಲಾರ, ಪುರದ ವೀರಪ್ಪ ಮೊದಲಾದ ಗುಡಿಗಳಿವೆ. ಇಲ್ಲಿರುವ ಅಮೃತೇಶ್ವರ ಗುಡಿ ಎಲ್ಲಕ್ಕೂ ದೊಡ್ಡದು ಮತ್ತು ಊರಿನ ಮುಖ್ಯ ದೇವಾಲಯ. ಹಸುರು ಮೋಡಿಯ ಕರಿಯ ಕಲ್ಲಿನಲ್ಲಿ

ಕಲ್ಯಾಣ ಚಾಳುಕ್ಯರ ಕಾಲದ ಶಿಲ್ಪಶೈಲಿಯಲ್ಲಿ ಇದನ್ನು ಕಟ್ಟಿದೆ. ಈ ಗುಡಿಯಲ್ಲಿ ಸ್ವಯಂಭು ಅಮೃತೇಶ್ವರ ಲಿಂಗವುಳ್ಳ ಗರ್ಭಗುಡಿ, ಅದರ ಮುಂದೆ ಸುಕನಾಸಿ, ಅದರ ಮುಂದೆ ನಾಲ್ಕು ದಪ್ಪ ಮತ್ತು ದುಂಡಾದ ಕಂಬಗಳುಳ್ಳ ಒಳಮಂಟಪ, ಮುಖಮಂಟಪ ಮತ್ತು ಮಹಾಮಂಟಪಗಳಿವೆ. ಮುಖಮಂಟಪದ ಛತ್ತನ್ನು ಎತ್ತಿಹಿಡಿದ ಕಂಬಗಳು ಬೇರೆ ಬೇರೆ ಆಕಾರವಾಗಿವೆ. ಅವು ಇಟ್ಟಗಿಯ ಪ್ರಾಚೀನ ಗುಡಿಯಲ್ಲಿಯ ಕಂಬಗಳನ್ನೂ ಸ್ವಲ್ಪಮಟ್ಟಿಗೆ ಡಂಬಳದ ದೊಡ್ಡ ಬಸಪ್ಪನ ಗುಡಿಯ ಮುಖಮಂಟಪದ ಕಂಬಗಳನ್ನೂ ಹೋಲುವವು. ಮಹಾಮಂಟಪದೊಳಗಿಂದ ಒಳಮಂಟಪದೊಳಗೆ ಪ್ರವೇಶಿಸುವಲ್ಲಿ ಇರುವ ಶಿಲಾದ್ವಾರ ನಾಗ-ನಾಗಿಣಿ ಮುಂತಾದ ಕೆತ್ತನೆಗಳಿಂದ ಸುಂದರವಾಗಿ ಅಲಂಕೃತವಾಗಿದೆ. ಇಲ್ಲಿ ಚಿತ್ರಗಳನ್ನು ಪೊಳ್ಳುಮಾಡಿ ಅವು ಪ್ರತ್ಯೇಕವಾಗಿ ನಿಂತಂತೆ ಭಾಸವಾಗುವ ಹಾಗೆ ಕೆತ್ತಿದೆ. ಇಲ್ಲಿಯ ಕಲಾಕುಸುರಿನ ಕೆಲಸ ಅತ್ಯಂತ ಪ್ರೇಕ್ಷಣೀಯ. ವಿಮಾನ ಮತ್ತು ಒಳಮಂಟಪದ ಹೊರಗೋಡೆಗಳ ಮೇಲೆ ಕಲಶ, ದೇವತೆಗಳು, ಮಂಗಗಳು, ನೃತ್ಯಗಣಪತಿ, ಮಕರದ ಹರನಾಳಿಗೆ ಮೊದಲಾದವೂ ಶಿವನ ಹಲವು ರೂಪುಗಳೂ ಇವೆ.

ಕೆಲವು ಕಂಬಗಳ ಮೇಲೆ ಮಹಾಮಂಟಪ ನಿಂತಿದೆ. ಅಲ್ಲಿ ನಂದಿಯ ಮೂರ್ತಿ ಇದೆ. ದೇವಾಲಯದ ಸುತ್ತ ಪ್ರಾಕಾರವೂ ಸಣ್ಣ ಗುಡಿಗಳೂ ಇವೆ.

ಈ ಊರ ಜೈನ ಬಸ್ತಿಯೂ ದೊಡ್ಡದು. ಅದರ ಮುಂದೆ ಕಲ್ಲಿನ ಮಹಾದ್ವಾರವಿದೆ. ಊರ ಹೊರಗೆ ಪೂರ್ವಭಾಗದಲ್ಲಿದ್ದ ಪ್ರಾಚೀನ ಗುಡಿಯ ಹೊರಗೋಡೆಗಳ ಮೇಲೆ ವಿಜಯನಗರ ಕಾಲದ ಶಿಲ್ಪವನ್ನು ನೋಡಬಹುದು. (ಎ.ಎಂ.ಎ.)

**ಅತ್ತಿಮಬ್ಬೆ :** 10ನೆಯ ಶತಮಾನದ ಉತ್ತರಾರ್ಧ ಮತ್ತು 11ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಜೈನ ಶ್ರಾವಕಿ. ಪ್ರಾಚೀನ ಕರ್ನಾಟಕದ ಸ್ತ್ರೀಯರಲ್ಲಿ ಅಗ್ರಗಣ್ಯಳು. ಇವಳ ಬಗ್ಗೆ ಅನೇಕ ಸಂಗತಿಗಳು ರನ್ನನ ಅಜಿತಪುರಾಣದಿಂದಲೂ ಅವನೇ ಬರೆದಿರಬಹುದಾದ ಲಕ್ಕುಂಡಿಯ ಶಾಸನದಿಂದಲೂ ಇವಳ ತೌರುಮನೆಯ ಹಲವು ಸಂಗತಿಗಳು ಪೊನ್ನನ ಶಾಂತಿಪುರಾಣದಿಂದಲೂ ತಿಳಿದುಬರುತ್ತವೆ.

ಅತ್ತಿಮಬ್ಬೆಯ ಅಜ್ಜ ನಾಗಮಯ್ಯ, ಈಗ ಆಂಧ್ರ ಪ್ರದೇಶಕ್ಕೆ ಸೇರಿರುವ ವೆಂಗಿಮಂಡಲದ ಕಮ್ಮೆನಾಡಿನ ಪುಂಗನೂರಿನ ಜೈನಬ್ರಾಹ್ಮಣ. ಇವನ ಮಕ್ಕಳು ಮಲ್ಲಪಯ್ಯ ಮತ್ತು ಪೊನ್ನಮಯ್ಯ. ಇವರಲ್ಲಿ ಮಲ್ಲಪಯ್ಯ ಮತ್ತು ಅಪ್ಪಕಬ್ಬೆಯರ ಮಗಳೇ ಅತ್ತಿಮಬ್ಬೆ. ಮಲ್ಲಪಯ್ಯ ಪಂಡಿತ ಮಂಡಳಿಗಂ ಕವಿಮಂಡಳಿಗಂ ತನ್ನ ಮನೆ ತವರ್ಮನೆಯೆನೆ ಬಾಳಿದವನು. ಈ ಸೋದರರಿಬ್ಬರ ಆಶ್ರಯದಲ್ಲಿ ಪೊನ್ನ ಶಾಂತಿಪುರಾಣವನ್ನು ಬರೆದ. ಪೊನ್ನಮಯ್ಯ ತನ್ನ ದೊರೆ ತೈಲಪನಿಗಾಗಿ ಕಾವೇರೀತೀರದ ಯುದ್ಧದಲ್ಲಿ ಪ್ರಾಣವನ್ನು ಒಪ್ಪಿಸಿದ.

ಅತ್ತಿಮಬ್ಬೆಯನ್ನು ಇವಳ ತಂಗಿ ಗುಂಡಮಬ್ಬೆಯ ಜೊತೆಯಲ್ಲಿ ಚಾಳುಕ್ಯ ಚಕ್ರವರ್ತಿ ಅಹವಮಲ್ಲನ ಭುಜಾದಂಡದಂತಿದ್ದ ನಾಗದೇವನಿಗೆ ಕೊಟ್ಟಿದ್ದರು (ಈ ನಾಗದೇವ, ಚಾಳುಕ್ಯ ಚಕ್ರವರ್ತಿಯ ಮಹಾಮಂತ್ರಿ ಧಲ್ಲಪನ ಹಿರಿಯ ಮಗ). ಅತ್ತಿಮಬ್ಬೆಗೆ ಅಣ್ಣಿಗದೇವನೆಂಬ ಕಿರಿವಯಸ್ಸಿನ ಮಗನೂ ಇದ್ದ. ಇವಳು ಇನ್ನೂ ಯೌವನದಲ್ಲಿರುವಾಗಲೇ ಗಂಡ ನಾಗದೇವ ಸ್ವರ್ಗಸ್ಥನಾದ. ಆಗ ಇವಳ ತಂಗಿ ಗುಂಡಮಬ್ಬೆ ಅಕ್ಕನನ್ನು ಕಷ್ಟದಿಂದ ಒಪ್ಪಿಸಿ, ತಾನು ಗಂಡನೊಡನೆ ಸಹಗಮನ ಮಾಡಿದಳು. ಪತಿಯ ಅಗಲಿಕೆಯಿಂದನೊಂದ ಅತ್ತಿಮಬ್ಬೆ ಮಗನ ಲಾಲನೆಪಾಲನೆಗಾಗಿ ಕಷ್ಟದಿಂದ ಉಳಿದು ಉಗ್ರ ವ್ರತನೇಮಾದಿಗಳಲ್ಲಿ ಜೀವನ ಸಾಗಿಸಿದಳು. ತನ್ನ ಬಳಿಯಿದ್ದ ಐಶ್ವರ್ಯವನ್ನು ಉದಾರವಾಗಿ ಜೈನಧರ್ಮಕ್ಕಾಗಿ ವ್ಯಯಿಸಿದಳು. ಇವಳು ಮಾಡಿದ ಧಾರ್ಮಿಕ ಕಾರ್ಯಗಳಲ್ಲಿ ಕೆಲವು ಇಂತಿವೆ. ಮಣಿಖಚಿತವಾದ 1500 ಜಿನಪ್ರತಿಮೆಗಳನ್ನು ಮಾಡಿಸಿ ದಾನ ಮಾಡಿದಳು. ಲಕ್ಕುಂಡಿಯಲ್ಲಿ ದೊಡ್ಡ ಬಸದಿಯನ್ನು ಕಟ್ಟಿಸಿ (1007) ಅದಕ್ಕೆ ದತ್ತಿಗಳನ್ನು ಬಿಡಿಸಿದಳು. ರನ್ನನಿಂದ ಅಜಿತಪುರಾಣವನ್ನು ಹೇಳಿಸಿದ್ದಲ್ಲದೆ. ತನ್ನ ತಂದೆ ಪೊನ್ನನಿಂದ ಹೇಳಿಸಿದ್ದ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿ ಹಂಚಿಸಿದಳು. ತನ್ನ ತಪಸ್ಸು ನಿಷ್ಠೆ ಔದಾರ್ಯ ತ್ಯಾಗ ಧರ್ಮಾನುರಾಗ ಕಾವ್ಯಪ್ರೇಮ ಇತ್ಯಾದಿಗಳಿಂದ ತನ್ನ ಕಾಲದ ಜನರ ಕಣ್ಣಲ್ಲಿ ಮಹಾವ್ಯಕ್ತಿಯಾದಳು. ಇವಳು ಮೆರೆದ ಪವಾಡಗಳನ್ನು ಇವಳ ಆಶ್ರಯದಲ್ಲಿದ್ದ ರನ್ನನೂ ಇವಳ ಶಾಸನವೂ ಕೊಂಡಾಡಿವೆ.

ಇವಳಾದ ಮೇಲೆ ಹುಟ್ಟಿದ ಅನೇಕ ಶಾಸನಗಳಲ್ಲಿಯೂ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿಯೂ ಇವಳನ್ನು ಮನಸಾರೆ ಹೊಗಳಲಾಗಿದೆ. ಕನ್ನಡ ನಾಡಿನಲ್ಲಿ ಶೀಲ ಅನುಪಮಗುಣ ಔದಾರ್ಯ ಅಭಿಮಾನಗಳಿಗೆ ಸಂಕೇತವಾಗಿ ಬಾಳಿದ ಮಹಾವ್ಯಕ್ತಿ ಅತ್ತಿಮಬ್ಬೆ ಮುಂದಿನ ಜನಾಂಗದ ಮೇಲೆಯೂ ತನ್ನ ಪ್ರಭಾವವನ್ನು ಬೀರಿದಳು. (ಎಂ.ಸಿ)

**ಅಥಣಿ :** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ತಾಲ್ಲೂಕಿನ ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ರಾಜ್ಯ, ದಕ್ಷಿಣದಲ್ಲಿ ರಾಯಬಾಗ ತಾಲ್ಲೂಕು, ಪೂರ್ವ ಮತ್ತು ಆಗ್ನೇಯಕ್ಕೆ ಬಿಜಾಪುರ ಮತ್ತು ಜಮಖಂಡಿ ತಾಲ್ಲೂಕುಗಳಿವೆ. ತಾಲ್ಲೂಕಿನಲ್ಲಿ ಅಥಣಿ ಪಟ್ಟಣ ಮತ್ತು 89 ಗ್ರಾಮಗಳಿವೆ. ಜನಸಂಖ್ಯೆ 4,61,362.

ತಾಲ್ಲೂಕಿನ ಬಹುಭಾಗ ಒರಟಾದ, ಸಮತಟ್ಟಿಲ್ಲದ ಭೂಮಿಯಿಂದ ಕೂಡಿದೆ. ದೂರದೂರದಲ್ಲಿ ಹಂತಹಂತವಾಗಿ ಏರುವ, ಮರಗಿಡಗಳಿಲ್ಲದ ಸಣ್ಣ ಬೆಟ್ಟಗುಡ್ಡಗಳು ಹರಡಿವೆ. ಇಲ್ಲಿನ ಮೈದಾನ ಪ್ರದೇಶದ ಸಣ್ಣ ಕೊರಕಲುಗಳಲ್ಲಿ ಮಳೆಗಾಲದಲ್ಲಿ ತೊರೆಗಳು ಕಾಣಿಸಿಕೊಳ್ಳುವುದುಂಟು. ದಿಣ್ಣೆ ಮತ್ತು ಇಳಿಜಾರು ಪ್ರದೇಶಗಳು ಕಲ್ಲುಗಳಿರುವ ಒರಟು ಮೇಲ್ಮೈಯಿಂದ ಕೂಡಿದೆ. ಮಣ್ಣಿನ ಪದರ ಒಂದು ಅಥವಾ ಎರಡು ಅಂಗುಲಕ್ಕಿಂತ ಹೆಚ್ಚು ದಪ್ಪವಿರುವುದಿಲ್ಲ. ಕೃಷ್ಣಾ ನದಿಗೆ ಹತ್ತಿರದ ಪ್ರದೇಶಗಳಲ್ಲಿರುವ ಕಪ್ಪು ಮಣ್ಣಿನ ಭೂಮಿ ಫಲವತ್ತಾಗಿದೆ. ಮಹಾರಾಷ್ಟ್ರದೆಡೆಯಿಂದ ಬರುವ ಕೃಷ್ಣಾನಾಲೆಯೊಂದು ಇಲ್ಲಿ ಹರಿಯುವುದರಿಂದ ನೀರಾವರಿ ಸೌಕರ್ಯ ಸಹ ಇದೆ. ಕೃಷ್ಣಾನದಿ ಹೆಚ್ಚು ಮಟ್ಟಿಗೆ ಅಥಣಿಯ ದಕ್ಷಿಣದ ಗಡಿಯಾಗಿದ್ದು ಸ್ವಲ್ಪದೂರ ಮಾತ್ರ ತಾಲ್ಲೂಕಿನ ಒಳಗೆ ಹರಿಯುತ್ತದೆ. ಅಗರಣಿ ನದಿ ತಾಲ್ಲೂಕಿನ ಮಧ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿದು ಕೃಷ್ಣಾನದಿಯನ್ನು ಸೇರುತ್ತದೆ. ಡೋಣಿ ನದಿ ತಾಲ್ಲೂಕಿನ ಈಶಾನ್ಯದಲ್ಲಿ ಸ್ವಲ್ಪ ದೂರ ಹರಿದು ಮುಂದೆ ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮಳೆ ಸಾಮಾನ್ಯವಾಗಿ 600-700ಮಿಮೀ. ಬೇಸಗೆಯಲ್ಲಿ 310ಸೆಲ್ಸಿಯಸ್‌ವರೆಗೂ ಉಷ್ಣತೆ ಇರುತ್ತದೆ. ಕೃಷ್ಣಾ ನದಿ ದಂಡೆಯ ಮೆಕ್ಕಲು ಮಣ್ಣಿನ ಪ್ರದೇಶದಲ್ಲಿ ಹೊಗೆಸೊಪ್ಪಿನ ಬೆಳೆ ವಿಶೇಷ. ಹತ್ತಿ, ಸೇಂಗ, ಜೋಳ, ಗೋದಿ, ದ್ವಿದಳಧಾನ್ಯಗಳು, ಸಜ್ಜೆ, ಕಬ್ಬು ಮತ್ತು ಮೆಣಸಿನಕಾಯಿ ಇವುಗಳನ್ನೂ ಬೆಳೆಯುತ್ತಾರೆ.

ಅಮೃತಲಿಂಗೇಶ್ವರ ದೇವಾಲಯ

ಈ ತಾಲ್ಲೂಕಿನಲ್ಲಿ ಅಥಣಿಯಿಂದ ಸು.10ಕಿಮೀ ವಾಯವ್ಯಕ್ಕಿರುವ ಬೆಳವಂಕಿ ಅಥವಾ ಹಳೆಯ ಪಣ್ಣಾಳದ ಬೆಟ್ಟದ ಮೇಲೆ ಸಿದ್ದೇಶ್ವರ ಗುಹೆ ಇದೆ. ಮಿರಜ-ಚಿಕ್ಕೋಡಿ ಹಾದಿಯಲ್ಲಿರುವ ಕಾಗವಾಡ ಗ್ರಾಮದಲ್ಲಿರುವ ಬ್ರಹ್ಮನಾಥ (ಕಗ್ಗದ ರಾಯ) ಮತ್ತು ಸತವಾಯಿ ಗುಡಿಗಳು ಬಹುಜನರನ್ನು ಆಕರ್ಷಿಸುತ್ತವೆ. ಇಲ್ಲಿಂದ 14ಕಿಮೀ ಪೂರ್ವಕ್ಕೆ ಅಥಣಿಯ ಹಾದಿಯಲ್ಲಿರುವ ಮಂಗಸುಳಿಯಲ್ಲಿ ಮೇ ತಿಂಗಳಲ್ಲಿ ಮಲ್ಲೇಶ್ವರ ದೇವರ

ಜಾತ್ರೆ ನಡೆಯುತ್ತದೆ. ಅಥಣಿಯಿಂದ 16ಕಿಮೀ ಆಗ್ನೇಯಕ್ಕಿರುವ ಕೊಕಟನೂರು ಐತಿಹಾಸಿಕ ಸ್ಥಳ. ಇಲ್ಲಿನ ಎಲ್ಲಮ್ಮನ ಜಾತ್ರೆ ಬಹು ಜನರನ್ನು ಆಕರ್ಷಿಸುತ್ತದೆ. ಕೃಷ್ಣಾನದಿಯ ಬಲದಂಡೆಯಲ್ಲಿ ಸಪ್ತಸಾಗರ ತೀರ್ಥಕ್ಷೇತ್ರವಿದೆ. ಸಪ್ತಋಷಿಗಳು ಏಳು ಸಮುದ್ರಗಳ ನೀರನ್ನು ಇಲ್ಲಿಗೆ ತಂದು ಬೆರೆಸಿದರೆಂಬುದು ಒಂದು ಐತಿಹ್ಯ. ಅಥಣಿಯಿಂದ ಸು.24ಕಿಮೀ ಈಶಾನ್ಯಕ್ಕಿರುವ ರಾಮತೀರ್ಥದಲ್ಲಿ ಆನಂದಪರ್ವತವೆಂಬ ಬೆಟ್ಟವಿದೆ. ಅದರಲ್ಲಿ ಆನಂದನಾಯಕಿ ದೇವಿಯ ಗುಹಾದೇವಾಲಯವೂ ಸಮೀಪದಲ್ಲಿ ಒಂದು ಸುಂದರ ರಾಮೇಶ್ವರ ದೇವಾಲಯವೂ ಇವೆ. ಇಲ್ಲಿ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ರಾಮೇಶ್ವರ ದೇವರ ವಾರ್ಷಿಕ ಜಾತ್ರೆ ನಡೆಯುತ್ತದೆ. ತಾಲ್ಲೂಕಿನ ಪಶ್ಚಿಮದಂಚಿನಲ್ಲಿ ಕೃಷ್ಣಾನದಿಯ ಎಡದಂಡೆಯ ಮೇಲಿರುವ ಜುಗಲ ಗ್ರಾಮದಲ್ಲಿ ಮಸಬತಿ ಎಂಬ ಮುಸ್ಲಿಂ ಸಂತರ ಸಮಾಧಿ ಇದ್ದು ಇಲ್ಲಿ ಪ್ರತಿ ರಜ್ಜಬ್ ತಿಂಗಳಲ್ಲಿ ಉರುಸ್ ನಡೆಯುತ್ತದೆ. ಅಥಣಿಯಿಂದ ಸು.20ಕಿಮೀ ನೈಋತ್ಯದಲ್ಲಿರುವ ಐನಾಪುರದಲ್ಲಿ ಪೀರ್‌ಕಾಜಿಯವರ ಸಮಾಧಿ ಇದೆ. ಅಥಣಿಯಿಂದ ಆಗ್ನೇಯಕ್ಕೆ ಕೃಷ್ಣಾನದಿಯ ಎಡದಂಡೆಯ ಮೇಲಿರುವ ಸವದಿ ಗ್ರಾಮದಲ್ಲಿ ಪ್ರಸಿದ್ಧ ಮುಸಲ್ಮಾನ ಸಂತರೊಬ್ಬರ ಸಮಾಧಿ ಇದೆ. ಶೇಡಬಾಳ (ನೋಡಿ) ತಾಲ್ಲೂಕಿನ ಮುಖ್ಯಸ್ಥಳಗಳಲ್ಲೊಂದು.

ತಾಲ್ಲೂಕಿನ ಮುಖ್ಯ ಪಟ್ಟಣ ಅಥಣಿ. ಸಮುದ್ರಮಟ್ಟದಿಂದ 650ಮೀ ಎತ್ತರದಲ್ಲಿದೆ. ಬೆಳಗಾಂವಿಯಿಂದ ಸು.148ಕಿಮೀ ಈಶಾನ್ಯಕ್ಕಿದೆ. ಜನಸಂಖ್ಯೆ 39,200.

ಅಥಣಿ ಈ ಸುತ್ತಿನ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿಂದ ಬಿಜಾಪುರ, ಗೋಕಾಕ, ಚಿಕ್ಕೋಡಿ ಮೊದಲಾದ ಊರುಗಳಿಗೆ ಉತ್ತಮ ರಸ್ತೆ ಸಂಪರ್ಕವಿದೆ. ಪ್ರತಿ ಭಾನುವಾರ ಸಂತೆ ಸೇರುತ್ತದೆ. ಸಿದ್ದೇಶ್ವರ ಮತ್ತು ಅಮೃತೇಶ್ವರ ದೇವಾಲಯಗಳಿವೆ. ಪ್ರಸಿದ್ಧ ಮುರುಘೇಂದ್ರ ಸ್ವಾಮಿಗಳ ಮಠವಿದೆ. ಅಥಣಿಯನ್ನು 1679ರಲ್ಲಿ ಶಿವಾಜಿಯ ಮಗ ಸಾಂಬಾಜಿಯಿಂದ ಮುಗಲರು ಕಿತ್ತುಕೊಂಡರು. 1720ರಲ್ಲಿ ನಿಜಾಮ್-ಉಲ್-ಮುಲ್ಕ್ ಅಥಣಿಯನ್ನು ಗೆದ್ದು ಕೊಲ್ಹಾಪುರದ ಅರಸನಿಗೆ ಕೊಟ್ಟ. ಬಳಿಕ ಅಥಣಿ ಸಾತಾರಾದ ಶಾಹೂ ರಾಜನಿಗೆ ಸೇರಿತು. ರಾಜನಿಗೆ ಮಕ್ಕಳಿಲ್ಲದ್ದರಿಂದ ಆತ ಸತ್ತ ಮೇಲೆ 1839ರಲ್ಲಿ ಆಂಗ್ಲರ ವಶವಾಯಿತು. **(ಡಿ.ಕೆ.;ಎಸ್.ಜಿ.ಕೆ.)**

**ಅಥಣಿ ಶಿವಯೋಗಿ :** 1836-1921. ಪ್ರಸಿದ್ಧ ಸಂತರು. ಜನ್ಮಸ್ಥಳ ಕೃಷ್ಣಾನದಿಯ ತೀರದಲ್ಲಿರುವ ಇಂಗಳಗಾವಿಯೆಂಬ ಗ್ರಾಮ. ತಂದೆ ಮಠದ ರಾಚಯ್ಯ, ತಾಯಿ ನೀಲಮ್ಮ. ಇವರ ಹುಟ್ಟು ಹೆಸರು ಗುರುಲಿಂಗಯ್ಯ. ಐದನೆಯ ವಯಸ್ಸಿನಲ್ಲೆ ಅಥಣಿಯ ಗಚ್ಚಿನಮಠದ ಮರುಳಶಂಕರ ಸ್ವಾಮಿಗಳ ಶಿಷ್ಯರಾದರು. ಬಾಲ್ಯದಿಂದಲೂ ಧ್ಯಾನಾಸಕ್ತರಾಗಿ ತುಂಬ ವಿರಕ್ತಮನೋವೃತ್ತಿಯಿಂದ ಗುರುಸೇವೆಯಲ್ಲಿ ನಿರತರಾಗಿದ್ದ ಇವರು ಇಪ್ಪತ್ತನೆಯ ವಯಸ್ಸಿನಲ್ಲಿ ತೀರ್ಥಯಾತ್ರೆ ಹೊರಟು ಅನೇಕ ಶಿವ ಕ್ಷೇತ್ರಗಳನ್ನು ಸಂದರ್ಶಿಸಿ ಧರ್ಮೋಪದೇಶ ಮಾಡಿದರು. ಅನಂತರ ಅಥಣಿಯ ಗಚ್ಚಿನಮಠದಲ್ಲಿ ಶಿವಯೋಗನಿಷ್ಠರಾಗಿ ವೈರಾಗ್ಯಸಂಪನ್ನರಾದರು. ಬೇಕು ಎಂಬುದು ಭೋಗ, ಬೇಡ ಎಂಬುದು ವೈರಾಗ್ಯ ಎಂಬ ತತ್ತ್ವವನ್ನು ಅರಿತು ಆಚರಿಸುತ್ತಿದ್ದ ಇವರು ಅಥಣಿಯ ಮಠದಲ್ಲಿ 63 ಪುರಾತನರ ಪೂಜೆಯನ್ನು ವೈಭವದಿಂದ ನಡೆಸಿದರು. ತಮ್ಮ ಭಕ್ತಿಜ್ಞಾನ ವೈರಾಗ್ಯಗಳಿಂದ ಲೋಕದ ಗೌರವಕ್ಕೆ ಪಾತ್ರರಾದರು. **(ಓ.ಎಸ್.ಎಲ್.)**

**ಅದೃಶ್ಯ ಕವಿ :** ಸು.1580. ವೀರಶೈವ ಕವಿ. ಪ್ರೌಢರಾಯಕಾವ್ಯ ಎಂಬ ಗ್ರಂಥದ ಕರ್ತೃ. ಈತನಿಗೆ ಅದ್ರೀಶ ಎಂಬ ಹೆಸರೂ ಇದ್ದಂತೆ ತಿಳಿದುಬರುತ್ತದೆ. ಕವಿ ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ. ಮಳೆಯ ಮಲ್ಲೇಶ್ವರನ ಶಿಷ್ಯ ಶಂಕರ. ಇವನ ಮಗ ಅಣ್ಣೇಂದ್ರ. ಈ ಅಣ್ಣೇಂದ್ರನ ಮಗನೇ ಅದೃಶ್ಯ ಕವಿ. ವಿಜಯನಗರದ ಪ್ರೌಢರಾಯನಿಗೆ (1424-46) ಆತನ ಮಂತ್ರಿ ಜಕ್ಕಣಾಚಾರ್ಯ (ಜಕ್ಕಣಾರ್ಯ) ಹೇಳಿದ ಅನೇಕ ಶಿವಶರಣರ ಕಥೆಗಳ ಸಾರವನ್ನು ಕವಿ ಕಾವ್ಯರೂಪವಾಗಿ ತನ್ನ ಪ್ರೌಢರಾಯ ಕಾವ್ಯದಲ್ಲಿ ಹೇಳಿದ್ದಾನೆ. ವಾರ್ಧಕಷಟ್ಪದಿಯಲ್ಲಿರುವ ಈ ಕಾವ್ಯದಲ್ಲಿ 21 ಸಂಧಿಗಳೂ 1113 ಪದ್ಯಗಳೂ ಇವೆ. ಗ್ರಂಥಾವತಾರದಲ್ಲಿ ಅಲ್ಲಮಪ್ರಭುವಿನಿಂದ ಸತ್ಯಣ್ಣನವರೆಗೆ ಪುರಾತನ ವಚನಕಾರರನ್ನು ಸ್ಮರಿಸಿದ್ದಾನೆ. ಈ ಕಾವ್ಯ ತೋರಿಕೆಗೆ ಐತಿಹಾಸಿಕ ಕಾವ್ಯದಂತೆ ಕಂಡುಬಂದರೂ ನಿಜವಾಗಿ ಧಾರ್ಮಿಕವಾಗಿದೆ. ಇಲ್ಲಿ ಶಿವಶರಣರ ಕಥೆ ಬಹು ಮುಖ್ಯ. ಈ ಕಾವ್ಯಕ್ಕೆ ಪ್ರಾಧಾನ್ಯ ಬಂದಿರುವುದು ಕಾವ್ಯಗುಣದಿಂದಲ್ಲ, ಕಾವ್ಯದಲ್ಲಿರುವ ವೀರಶೈವ ಶರಣರ ಕಥೆಗಳ ಆಕರದಿಂದ. ಪ್ರೌಢರಾಯನ ಕಾಲದ ಸಾಹಿತ್ಯೇತಿಹಾಸದ ಮೇಲೂ ಈ ಕಾವ್ಯ ಸ್ವಲ್ಪ ಬೆಳಕು ಚೆಲ್ಲುತ್ತದೆ. **(ಹಿ.ವಿ.ಸಿ.)**

**ಅನಂತಕವಿ:** ಸು.1780. ಜೈನಕವಿ. ಗೊಮ್ಮಟೇಶ್ವರಚರಿತ್ರೆ ಎಂಬ ಸಾಂಗತ್ಯಗ್ರಂಥದ ಕರ್ತೃ. ಇದರಲ್ಲಿ ಶ್ರವಣಬೆಳಗೊಳಕ್ಕೆ ಸಂಬಂಧಿಸಿದಂತೆ ಅನೇಕ ಐತಿಹಾಸಿಕ ಅಂಶಗಳನ್ನು ವಿವರಿಸಿದ್ದಾನೆ. 1673ರಲ್ಲಿ ಕಟ್ಟಿದ ಚೆನ್ನಣ್ಣನ ಬಸದಿ, 1677ರಲ್ಲಿ ಚಿಕ್ಕದೇವರಾಜನ ಮಂತ್ರಿ ವಿಶಾಲಾಕ್ಷಪಂಡಿತ ಗೊಮ್ಮಟೇಶ್ವರನಿಗೆ ಮಾಡಿಸಿದ ಮಸ್ತಕಾಭಿಷೇಕ, ಬೆಳಗೊಳದ ಕಲ್ಯಾಣಿ ನಿರ್ಮಾಣ, ಚಂದ್ರಗಿರಿಯ ಪ್ರಾಕಾರ, ಮಾನಸ್ತಂಭ-ಇವುಗಳ ಇತಿಹಾಸ ಹೇಳಿರುವುದಲ್ಲದೆ ಅನೇಕ ಜೈನಯತಿಗಳಿಗೂ ಶ್ರವಣಬೆಳಗೊಳಕ್ಕೂ ಇರುವ ಸಂಬಂಧವನ್ನು ಗುರುತಿಸಿದ್ದಾನೆ. ಚಾವುಂಡರಾಯನಿಗಿಂತ ಪೂರ್ವದಲ್ಲಿಯೇ ಗೊಮ್ಮಟಮೂರ್ತಿಯಿದ್ದು ಅದನ್ನು ಚಾವುಂಡರಾಯ ಪ್ರತಿಷ್ಠಿಸಿದನೆಂದು ಹೇಳಿ ಸಂಶೋಧಕರ ದೃಷ್ಟಿ ಅತ್ತ ಹರಿವಂತೆ ಮಾಡಿದ್ದಾನೆ. ನ್ಯಾಯಕುಮುದ ಚಂದ್ರೋದಯ ಮುಂತಾದ ಗ್ರಂಥಗಳನ್ನು ಬರೆದ ಪ್ರಭಾಚಂದ್ರ ಶ್ರವಣಬೆಳಗೊಳದಲ್ಲಿ ಯತಿಯಾಗಿದ್ದಂತೆಯೂ ಅಭಯ ಚಂದ್ರ ಶಶಕಪುರದಲ್ಲಿ ಸಳನಿಗೆ ಗುರುವಾಗಿದ್ದಂತೆಯೂ ಕವಿ ತನ್ನ ಕಾವ್ಯದಲ್ಲಿ ಹೇಳಿರುವುದು ಕಂಡುಬರುತ್ತದೆ.

ಗೊಮ್ಮಟಚರಿತ್ರೆ ಅಸಮಗ್ರವಾಗಿದೆ. ಶೈಲಿ ಸರಳ ಸುಂದರವಾಗಿದೆ. ಅನೇಕ ಐತಿಹಾಸಿಕ ಅಂಶಗಳನ್ನು ಹೇಳಿರುವುದರಿಂದ ಈ ಗ್ರಂಥಕ್ಕೆ ಪ್ರಾಮುಖ್ಯ ಸಂದಿದೆ. *

**ಅನಂತ ಕೃಷ್ಣಶರ್ಮ, ರಾಳ್ಳಪಲ್ಲಿ :** 1893-1979. ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಗಳ ಪಂಡಿತರು. ಪ್ರಸಿದ್ಧ ವಿದ್ವಾಂಸರು, ಸಂಗೀತಜ್ಞರು ಮತ್ತು ಶಾಸ್ತ್ರಕಾರರು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಳ್ಳಪಲ್ಲಿಯಲ್ಲಿ 1893 ಜನವರಿ 23ರಂದು ಜನಿಸಿದರು. ತಂದೆ ಕೃಷ್ಣಾಮಾಚಾರ್ಯರು ಸಂಸ್ಕೃತ ಪಂಡಿತರು, ಜೊತೆಗೆ ಸಂಗೀತಪ್ರೇಮಿಗಳು. ಶರ್ಮರ ಪ್ರಾರಂಭದ ವಿದ್ಯಾಭ್ಯಾಸ ತಂದೆಯವರ ಬಳಿಯಲ್ಲಿಯೇ ನಡೆಯಿತು. ಅನಂತರ ಮೈಸೂರು ಚಾಮರಾಜ ಸಂಸ್ಕೃತ ಪಾಠಶಾಲೆಯಲ್ಲಿ ಹಾಗೂ ಪರಕಾಲ ಮಠದ ಶ್ರೀಕೃಷ್ಣ ಬ್ರಹ್ಮ ತಂತ್ರ ಯತೀಂದ್ರರಲ್ಲಿ ವ್ಯಾಕರಣ ಮತ್ತು

...ಸಂಗಮಾಡಿದರು. ಸಂಗೀತವನ್ನು ...ರು, ಚಿಕ್ಕರಾಮರಾಯರು ಮತ್ತು ...ತ ಗುರುಗಳು.

... ಕಾಲೇಜಿನ ತೆಲುಗು ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ (1912) ಶರ್ಮರು ಸು.38 ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದು 1949ರಲ್ಲಿ ನಿವೃತ್ತರಾದರು. ಅನಂತರ ತಿರುಪತಿಯ ಪ್ರಾಚ್ಯ ಸಂಶೋಧನಾಲಯದಲ್ಲಿ ರೀಡರ್ ಹುದ್ದೆಯನ್ನು ವಹಿಸಿಕೊಂಡು, ತಾಳ್ಳಪಾಕ ಕವಿಗಳ ಗೇಯ ರಚನೆಗಳನ್ನು ಕುರಿತು ಸಂಶೋಧನೆ ನಡೆಸಿ, ತಾಳ್ಳಪಾಕಪಾಟಲು ಗ್ರಂಥವನ್ನು ಪ್ರಕಟಿಸಿದರು (1952). ಕವಿ ವೇಮನ ಮತ್ತು ಅವನ ಪದ್ಯಗಳನ್ನು ಕುರಿತು ಮಾಡಿರುವ ಸಂಶೋಧನೆ, ಆಂಧ್ರ ವಿಶ್ವಕಲಾ ಪರಿಷತ್ತಿನ ಆಶ್ರಯದಲ್ಲಿ ಮಾಡಿದ ಉಪನ್ಯಾಸಗಳು, ಶ್ರೀಕೃಷ್ಣದೇವರಾಯವರ್ಧಂತಿ ಸಮಾರಂಭದ ಭಾಷಣಗಳು, ಪ್ರಸಿದ್ಧ ವಾಗ್ಗೇಯಕಾರರು ಹಾಗೂ ಗಾನಕಲೆಯನ್ನು ಕುರಿತಾದ ಬರೆಹ-

ಭಾಷಣಗಳು ಇವರ ಪಾಂಡಿತ್ಯ ಪ್ರತಿಭೆಗಳಿಗೆ ಸಾಕ್ಷಿಯಾಗಿವೆ. ಇವರ ಕೆಲವು ಬರೆಹ-ಭಾಷಣಗಳು ಪುಸ್ತಕ ರೂಪದಲ್ಲೂ ಪ್ರಕಟವಾಗಿವೆ. ಅವುಗಳಲ್ಲಿ ಗಾನಕಲೆ (1952), ಸಾಹಿತ್ಯ ಮತ್ತು ಜೀವನ ಕಲೆ (1954) ಎಂಬ ಕನ್ನಡ ಗ್ರಂಥಗಳು ಮತ್ತು ವೇಮನಸಾರಸ್ವತೋಪನ್ಯಾಸಮುಲು (1935) ಎಂಬ ತೆಲುಗು ಗ್ರಂಥ ಮುಖ್ಯವಾದವು. ಆಂಧ್ರ ಪ್ರದೇಶ ಸಾಹಿತ್ಯ ಅಕಾಡೆಮಿ ಮತ್ತು ಸಂಗೀತ ಅಕಾಡೆಮಿಗಳ ಕೆಲಸಕಾರ್ಯಗಳಲ್ಲೂ ಇವರು ಸಹಕರಿಸಿದ್ದಾರೆ. ಶಂಕರಾಭರಣ ಮತ್ತು ಕಾನಡಾ ರಾಗಗಳಲ್ಲಿ ಸ್ವರಜತಿಗಳನ್ನೂ ಹಮೀರ ಕಲ್ಯಾಣಿ ರಾಗದಲ್ಲಿ ವರ್ಣವನ್ನೂ ಬೇಗಡೆಯಲ್ಲಿ ತಿಲ್ಲಾನವನ್ನೂ ಹಾಗೂ ಸುಮಾರು ಇಪ್ಪತ್ತೈದು ಕೀರ್ತನೆಗಳನ್ನೂ ರಚಿಸಿರುವ ಅನಂತ ಕೃಷ್ಣಶರ್ಮರು ಹಾಡಿಕೆ ಮತ್ತು ಪಿಟೀಲುವಾದನ-ಎರಡರಲ್ಲೂ ಅತಿಶಯವಾದ ಸಿದ್ಧಿ ಪಡೆದವರು. ಕ್ಷೇತ್ರಯ್ಯನ ಪದಗಳ ಗಾಯನದಲ್ಲಿ ಇವರು ಪಡೆದ ಯಶಸ್ಸು ಮೇಲ್ಮಟ್ಟದ್ದು.

ನೆಲ್ಲೂರಿನ ಆಂಧ್ರಕಲಾ ನಾಟಕ ಪರಿಷತ್ತು (1938), ಕಾಕಿನಾಡದ ಸರಸ್ವತೀ ಗಾನಸಭೆ (1954), ಮೈಸೂರು ಬಿಡಾರಂಕೃಷ್ಣಪ್ಪನವರ ಸೀತಾರಾಮಮಂದಿರದ ಚತುರ್ಥ ಸಂಗೀತ ಸಮ್ಮೇಳನ (1961), ಬೆಂಗಳೂರು ಗಾಯನ ಸಮಾಜದ ದ್ವಿತೀಯ ಸಂಗೀತ ಸಮ್ಮೇಳನ (1970), ಮದರಾಸು ಸಂಗೀತ ಅಕಾಡೆಮಿಯ 48ನೆಯ ವಾರ್ಷಿಕ ಅಧಿವೇಶನ (1974) ಮುಂತಾದ ಹತ್ತಾರು ಪಂಡಿತ ಪರಿಷತ್ತುಗಳು ರಾಳ್ಳಪಲ್ಲಿಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿ ಗೌರವಿಸಿವೆ.

ಇವರಿಗೆ ಕರ್ನಾಟಕ ರಾಜ್ಯ ಸಂಗೀತ ನಾಟಕ ಅಕಾಡೆಮಿ ವಿಶೇಷ ಪ್ರಶಸ್ತಿ ನೀಡಿದೆ (1969). ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಗೌರವ ಸದಸ್ಯತ್ವ (ಫೆಲೋಷಿಪ್-1973), ತಿರುಪತಿಯ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ (ಡಿ.ಲಿಟ್-1974) ಪ್ರಶಸ್ತಿಗಳೂ ಇವರಿಗೆ ಲಭಿಸಿವೆ. ಗಾನಕಲಾಪ್ರಪೂರ್ಣ, ಗಾನಕಲಾಸಿಂಧು ಮುಂತಾದ ಗೌರವ ಬಿರುದುಗಳೂ ಬಂದಿವೆ. 'ನಮ್ಮ ದೇಶ ಬಲಿಷ್ಠವಾಗಬೇಕಾದರೆ, ಪ್ರತಿಷ್ಠಾರ್ಹವಾಗ ಬೇಕಾದರೆ, ನೀತಿವಂತವಾಗಬೇಕಾದರೆ ನಿಷ್ಕಲ್ಮತೆ ತೊಲಗಬೇಕು. ನಡೆಯುವ ನಡೆ, ಆಡುವ ಆಟ, ನುಡಿಯವ ಮಾತು, ನೆನೆಯುವ ಭಾವ-ಇವುಗಳೆಲ್ಲಾ ಕಲಾದೃಷ್ಟಿಯ ಅಧಿಕಾರಕ್ಕೆ ಒಳಪಡಬೇಕು. ಜೀವನವೇ ಲಯಬದ್ಧವಾಗಿ ಒಟ್ಟಂದದಿಂದ ಶೋಭಿಸಬೇಕು. ಅದೇ ಸಂಸ್ಕೃತಿಯ ಕುರುಹು. ಸರಸ್ವತಿ ದೇವಿಯ ಆರಾಧನೆ'- ಎಂಬ ಶರ್ಮರ ಮಾತುಗಳು ಅರ್ಥಸಂಪನ್ನವಾಗಿದ್ದು, ಇವರ ಜೀವಿತ ಸಾಧನೆಯ ಮೇಲಣ ವ್ಯಾಖ್ಯೆಯಂತಿವೆ. 1979ರಲ್ಲಿ ರಾಳ್ಳಪಲ್ಲಿಯವರು ಬೆಂಗಳೂರಿನಲ್ಲಿ ನಿಧನರಾದರು. ತಿರುಪತಿ-ತಿರುಮಲ ದೇವಸ್ಥಾನದ ಆಡಳಿತ ಮಂಡಳಿ ಇವರು ತೀರಿಕೊಳ್ಳುವ ಕೆಲದಿನಗಳ ಮೊದಲು ಆಸ್ಥಾನ ವಿದ್ವಾಂಸರೆಂಬ ಪ್ರಶಸ್ತಿ ನೀಡಿ ಗೌರವಿಸಿತ್ತು.
(ಎಸ್.ಆರ್.ಆರ್.)

**ಅನಂತನಾಗ್ :** ಪ್ರಸಿದ್ಧ ಚಲನಚಿತ್ರ ನಟ, ನಿರ್ಮಾಪಕ, ಕರ್ನಾಟಕ ರಾಜ್ಯದ ಮಾಜಿ ಸಚಿವ. ತಂದೆ ಸದಾನಂದ ನಾಗರಕಟ್ಟೆ, ತಾಯಿ ಆನಂದಿ. ತಂದೆ ಉತ್ತರ ಕನ್ನಡ ಜಿಲ್ಲೆಯ ಶಿರಾಲಿಯವರು. ಇವರು ಕಾಸರಗೋಡಿನ ಆನಂದಾಶ್ರಮದಲ್ಲಿ ಪ್ರಬಂಧಕರಾಗಿದ್ದರು. ಅನಂತನಾಗ್ ಅವರು ಚಿತ್ರಾಪುರ ಮತ್ತು ಶಿರಾಲಿಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪಡೆದರು. ಅನಂತರ ಮುಂಬಯಿಯ ಸೇಂಟ್ ಜೇವಿಯರ್ ಶಾಲೆ ಸೇರಿ (1961) ಎಸ್.ಎಸ್.ಎಲ್.ಸಿ. ಪಾಸು ಮಾಡಿದರು (1964-65). ಸಂಕಲ್ಪ ಚಿತ್ರದ ಮೂಲಕ ಇವರು ಕನ್ನಡ ಚಿತ್ರರಂಗ ಪ್ರವೇಶಿಸಿದರು. ಇದಕ್ಕೂ ಮುನ್ನ ಐವತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಭಾಗವಹಿಸಿದ್ದರು. ಇವರ ತಂದೆ-ತಾಯಿ ಬೆಂಗಳೂರಿಗೆ ಬಂದಾಗ (1969) ಇವರೂ ಬೆಂಗಳೂರಿನಲ್ಲೇ ನೆಲೆ ನಿಂತರು. ಸಹೋದರ ಶಂಕರನಾಗ್ (ನೋಡಿ) ಅವರೊಂದಿಗೆ ಸಂಕೇತ್ ಲಾಂಛನದಡಿ ಮಿಂಚಿನ ಓಟ ಚಿತ್ರ ನಿರ್ಮಿಸಿದರು (1980). ಅನಂತರ ಜನ್ಮ ಜನ್ಮದ ಅನುಬಂಧ (1981), ನೋಡಿ ಸ್ವಾಮಿ ನಾವಿರೋದೇ ಹೀಗೆ (1983), ಆಕ್ಸಿಡೆಂಟ್ (1984) ಮೊದಲಾದ ಯಶಸ್ವಿ ಚಿತ್ರಗಳ ನಿರ್ಮಾಪಕರಾದರು. ಕರ್ನಾಟಕದಲ್ಲಿ ಜನತಾಪಕ್ಷದ ಪರವಾಗಿ ಚುನಾವಣೆಯ ಪ್ರಚಾರ ಕೈಗೊಂಡರು. 'ಬರ' ಚಿತ್ರದ ಹಿಂದಿ ಡಬ್ಬಿಂಗಿಗೆ ಮುಂಬಯಿಗೆ ತೆರಳಿದಾಗ ಅಲ್ಲಿಯ ರೆಕಾರ್ಡಿಂಗ್ ವ್ಯವಸ್ಥೆಗಳಿಗೆ ಮಾರುಹೋಗಿ ಸಹೋದರ ಶಂಕರನಾಗ್‌ರವರೊಂದಿಗೆ ಬೆಂಗಳೂರಿನಲ್ಲಿ ಸಂಕೇತ್ ಎಲೆಕ್ಟ್ರಾನಿಕ್ಸ್ ಸ್ಟುಡಿಯೋ ಸ್ಥಾಪಿಸಿದರು (1985). ಎಂ.ಎಸ್.ಸತ್ಯು ನಿರ್ದೇಶಿದ, ಸ್ವತಃ ಅಭಿನಯಿಸಿದ 'ಬರ' ಚಿತ್ರವನ್ನು ವಿತರಿಸಿದರು.

ಹಾಸ್ಯ ಲೇಪನವಿರುವ ನಾಯಕ ನಟನಾಗಿ ಅನಂತನಾಗ್ ಜನಪ್ರಿಯತೆ ಗಳಿಸಿದ್ದಾರೆ. ಇಬ್ಬನಿ ಕರಗಿತು, ಮುದುಡಿದ ತಾವರೆ ಅರಳಿತು, ಹಂಸಗೀತೆ, ನಾರದವಿಜಯ, ಬೆಳದಿಂಗಳಬಾಲೆ, ತೆನಾಲಿರಾಮಕೃಷ್ಣ, ಬಯಲುದಾರಿ, ಕಾಮನಬಿಲ್ಲು, ನಾ ನಿನ್ನ ಬಿಡಲಾರೆ, ಹೆಂಡ್ತಿಗೆ ಹೇಳ್ಬೇಡಿ, ಸುಖ ಸಂಸಾರಕ್ಕೆ ಹನ್ನೆರಡು ಸೂತ್ರಗಳು, ಉಂಡೂ ಹೋದ ಕೊಂಡೂ ಹೋದ, ಗೋಲ್‌ಮಾಲ್ ರಾಧಾಕೃಷ್ಣ, ಗೌರಿಗಣೇಶ, ಗಣೇಶನ ಮದುವೆ, ಕನ್ನೇಶ್ವರ ರಾಮ, ಮತದಾನ ಮುಂತಾದವು ಇವರು ಅಭಿನಯಿಸಿದ ಕೆಲವು ಮುಖ್ಯ ಚಿತ್ರಗಳು. ಮಿಂಚಿನಓಟ ಇವರಿಗೆ ಶ್ರೇಷ್ಠ ನಟ ರಾಜ್ಯಪ್ರಶಸ್ತಿ ತಂದುಕೊಟ್ಟಿದೆ. ಹಿಂದಿಯ ಹೊಸ ಅಲೆಯ ಚಲನ ಚಿತ್ರಗಳಲ್ಲಿಯೂ ಇವರು ಅಭಿನಯಿಸಿದ್ದಾರೆ. ಅಂಕುರ್, ನಿಶಾಂತ್ ಇವರು ಅಭಿನಯಿಸಿರುವ ಚಿತ್ರಗಳು. ಇವರು ಅನೇಕ ಯಶಸ್ವಿ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ.

ಬ್ಯಾರಿಸ್ಟರ್ ನಾಟಕದ ಇವರ ಅಭಿನಯ ಸ್ಮರಣೀಯ. ಇವರು ಅಭಿನಯಿಸಿದ 'ನೋಡಿಸ್ವಾಮಿ ನಾವಿರೋದೇ ಹೀಗೆ' ನೂರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡ ಜನಪ್ರಿಯ ನಾಟಕ. ಶಂಕರನಾಗ್ ನಿರ್ದೇಶಿಸಿದ, ಆರ್.ಕೆ. ನಾರಾಯಣರ ಕಾದಂಬರಿ ಆಧಾರಿತ ಮಾಲ್ಗುಡಿಡೇಸ್ ಕಿರುತೆರೆಯ ಹಿಂದಿ ಧಾರಾವಾಹಿಯಲ್ಲೂ ಇವರು ಅಭಿನಯಿಸಿದ್ದಾರೆ. 1988ರಲ್ಲಿ ಚುನಾವಣೆಗೆ ನಿಂತು ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲರ ಆಪ್ತವಲಯದಲ್ಲಿ ಇವರೂ ಒಬ್ಬರಾಗಿದ್ದರು. ರಾಜಕೀಯ ಹಿನ್ನೆಲೆಯ ಚಿತ್ರಗಳಲ್ಲಿ ಇವರಿಗೆ ವಿಶೇಷ ಆಸಕ್ತಿ. ಓದುವ ಹವ್ಯಾಸ ಬೆಳೆಸಿಕೊಂಡಿರುವ ಇವರೊಬ್ಬ ವಿಚಾರವಂತ ನಟ. ಕೆಲವು ವರ್ಷಗಳ ರಾಜಕೀಯ ಜೀವನದ ಬಳಿಕ ಇವರು ಪುನಃ ಚಿತ್ರಗಳಲ್ಲಿ ಹಾಗೂ ಕಿರುತೆರೆಯಲ್ಲಿ ನಟಿಸಲಾರಂಭಿಸಿದ್ದಾರೆ. ಲಂಕೇಶ್‌ಪತ್ರಿಕೆ, ಪ್ರೀತಿ ಪ್ರೇಮ ಪ್ರಣಯ - ಇವರ ಇತ್ತೀಚಿನ ಚಿತ್ರಗಳು (2003). ಈ ಚಿತ್ರಗಳು ಇವರ ಅಭಿನಯ ವೃತ್ತಿಗೆ ಹೊಸ ಆಯಾಮ ನೀಡಿವೆ. ಇವರು ತಮ್ಮ ಸಹೋದರ ಶಂಕರನಾಗ್‌ರವರ ಜೀವನ ಕಥನವನ್ನು ಬರೆದಿದ್ದು 'ನನ್ನ ತಮ್ಮ ಶಂಕರ' ಎಂಬ ಹೆಸರಿನಲ್ಲಿ ಇದು ಪ್ರಕಟವಾಗಿದೆ (2001). ಈ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹೆಸರಾಂತ ನಟಿ ಗಾಯತ್ರಿ ಇವರ ಪತ್ನಿ.
*

**ಅನಂತಮೂರ್ತಿ, ಯು.ಆರ್. :** 1932-. ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರಸಿದ್ಧ ಲೇಖಕ, ವಿಮರ್ಶಕ, ಸಮಾಜವಾದಿ ಚಿಂತಕರು. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಇವರ ಪೂರ್ಣ ಹೆಸರು. ಶಿವಮೊಗ್ಗ ಜಿಲ್ಲೆಯ ಮೇಳಿಗೆಯಲ್ಲಿ 1932 ಡಿಸೆಂಬರ್ 21ರಂದು ಜನಿಸಿದರು. ಇವರ ಪೂರ್ವಿಕರು ಉಡುಪಿಯ ಶಿವಳ್ಳಿಯವರು. ತಂದೆ ರಾಜಗೋಪಾಲಾಚಾರ್ಯ, ತಾಯಿ ಸತ್ಯಭಾಮಾ. ಈ ದಂಪತಿಗಳ ಐವರು ಮಕ್ಕಳಲ್ಲಿ ಅನಂತಮೂರ್ತಿ ಹಿರಿಯ ಮಗ. ಇವರ ಬಾಲ್ಯದ ಜೀವನ ಕಡುಬಡತನದಲ್ಲಿ ಕಳೆಯಿತು. ಪ್ರಾಥಮಿಕ ವಿದ್ಯಾಭ್ಯಾಸ ಮೇಳಿಗೆ, ಬೇಗವಳ್ಳಿ, ಕೋಣಂದೂರು ತೀರ್ಥಹಳ್ಳಿಗಳಲ್ಲಿ ನಡೆಯಿತು. ಆಗ ಯೋಗಾನರಸಿಂಹ ಎಂಬ ಮುಖ್ಯೋಪಾಧ್ಯಯರೂ ವಿದ್ವಾಂಸರಾದ ಕಮಕೋಡು ನರಸಿಂಹಶಾಸ್ತ್ರಿಯವರೂ ಇವರಿಗೆ ತುಂಬ ಪ್ರೋತ್ಸಾಹ ನೀಡಿದರು. ಸಂಸ್ಕೃತ ಕಲಿಸಿದ ಸದಾಶಿವ ಭಟ್ಟರು ಇವರ ಬಾಲ್ಯ ಜೀವನದ ಮೇಲೆ ದಟ್ಟ ಪ್ರಭಾವ ಬೀರಿದ ವ್ಯಕ್ತಿಗಳಲ್ಲೊಬ್ಬರು. ಅನಂತರದಲ್ಲಿ ರಾಮಮನೋಹರ ಲೋಹಿಯಾ, ಶಾಂತವೇರಿ

ಗೋಪಾಲಗೌಡ, ಗೋಪಾಲಕೃಷ್ಣ ಅಡಿಗ ಅತ್ಯಂತ ಪ್ರಭಾವ ಬೀರಿದ ವ್ಯಕ್ತಿಗಳು. ಲೋಯರ್ ಸೆಕೆಂಡರಿ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಅನಂತರ ಶಿವಮೊಗ್ಗದ ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿದರು. ಆಗ ಕೆ.ವಿ.ಸುಬ್ಬಣ್ಣ ಇವರ ಸೀನಿಯರ್, ಹಾ.ಮಾ.ನಾಯಕರು ಇವರ ಜೂನಿಯರ್ ಆಗಿದ್ದರು. ಅನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್‌ಗೆ ಸೇರಿ (1950) ಪ್ರಥಮ ಸ್ಥಾನ ಪಡೆದು ಶಿವಮೊಗ್ಗದಲ್ಲಿ ಇಂಗ್ಲಿಷ್ ಉಪನ್ಯಾಸಕರಾದರು (1954-55). ಮೈಸೂರಿನಲ್ಲಿ ಮತ್ತೆ ಓದನ್ನು ಮುಂದುವರಿಸಿ ಚಿನ್ನದ ಪದಕದೊಂದಿಗೆ ಇಂಗ್ಲಿಷ್ ಎಂ.ಎ. ಪದವಿ ಪಡೆದರು. ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ಸಮಾಜವಾದಿ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ್ದರು. ಶಿವಮೊಗ್ಗದಲ್ಲಿ ಓದುವಾಗ ಸಮಾಜವಾದಿ ರಾಜಕೀಯ ಚಟುವಟಿಕೆಗಳು ಮೈಸೂರಿನಲ್ಲಿಯೂ ಮುಂದುವರಿದಿದ್ದವು. ಹಾಸನದ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಸಂದರ್ಭದಲ್ಲಿ ಇವರು ತಮ್ಮ ವಿದ್ಯಾರ್ಥಿನಿ ಎಸ್ತರ್ ಎಂಬುವರನ್ನು ಪ್ರೇಮಿಸಿ ವಿವಾಹವಾದರು. ಮತ್ತೆ ಮೈಸೂರಿನ ಮಹಾರಾಜ ಕಾಲೇಜಿಗೆ ಅಧ್ಯಾಪಕರಾಗಿ ಬಂದರು (1957-63). ಅನಂತರ ಕಾಮನ್‌ವೆಲ್ತ್ ಫೆಲೋಶಿಪ್ ಪಡೆದು ಇಂಗ್ಲೆಂಡಿನ ಬರ್ಮಿಂಗ್‌ಹೆಮ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪಡೆದರು (1963-66). 1930ರ 'ದಶಕದ ರಾಜಕೀಯ ಮತ್ತು ಕಾದಂಬರಿ' ಇವರ ಸಂಪ್ರಬಂಧದ ವಿಷಯ.



ಇಂಗ್ಲೆಂಡ್‌ನಿಂದ ಬಂದ ಮೇಲೆ ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಶನ್‌ನಲ್ಲಿ ರೀಡರ್ ಆಗಿ ಕೆಲಸ ಮಾಡಿದರು (1967-70). ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗವನ್ನು ಸೇರಿ, ರೀಡರ್ ಆಗಿ (1970-80), ಪ್ರಾಧ್ಯಾಪಕರಾಗಿ (1980-87) ಸೇವೆ ಸಲ್ಲಿಸಿದರು. ಸಂದರ್ಶಕ ಪ್ರಾಧ್ಯಾಪಕರಾಗಿ ಅಮೆರಿಕದ ಅಯೋವ ವಿಶ್ವವಿದ್ಯಾಲಯ (1975 ಮತ್ತು 1985), ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯ (1982) ಗಳಲ್ಲಿ ಕೆಲಸ ಮಾಡಿದರು. ಅಯೋವ ವಿಶ್ವವಿದ್ಯಾನಿಲಯದ ಏಷ್ಯನ್ ಭಾಷೆಗಳ ವಿಭಾಗದಲ್ಲಿ ಫುಲ್‌ಬ್ರೈಟ್ ಪ್ರೊಫೆಸರ್ ಆಗಿದ್ದರು (1986-87). ಅನಂತರ ಕೇರಳದ ಕೊಟ್ಟಾಯಂನ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾದರು (1987-91). ಆಗ ಅನೇಕ ಶೈಕ್ಷಣಿಕ ಸುಧಾರಣೆಗಳನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿದರು.

ಇವರು ಅನಂತರದ ತಮ್ಮ ಜೀವನದಲ್ಲಿ ಅನೇಕ ಸಂಸ್ಥೆಗಳಲ್ಲಿ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿದರು. ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರಾಗಿ (1992-93), ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿ (1993) ದುಡಿದರು. ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದರು (1993-98). ವಿ.ಕೃ.ಗೋಕಾಕರ ಅನಂತರ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎರಡನೆಯ ಕನ್ನಡದ ವ್ಯಕ್ತಿ ಇವರು. ಆಗ ಸಾಕಷ್ಟು ಹೊಸತನವನ್ನು ಅಕಾಡೆಮಿಯ ಚಟುವಟಿಕೆಗಳಲ್ಲಿ ತುಂಬಿದರು. ಕೆಲಕಾಲ ಇವರು ಮಣಿಪಾಲದ ಮಾಹೆ ವಿಶ್ವವಿದ್ಯಾನಿಲಯದ ಮಾನವಿಕ ವಿಭಾಗದ ಗೌರವ ನಿರ್ದೇಶಕರೂ ಆಗಿದ್ದರು (1995-98).

ಕನ್ನಡದ ಸೃಜನಶೀಲ ಬರೆಹಗಾರರಾಗಿ ಅನಂತಮೂರ್ತಿಯವರ ಸಾಧನೆ ಅನನ್ಯವಾದದ್ದು. ಕವಿಯಾಗಿ, ಕಾದಂಬರಿಕಾರರಾಗಿ, ಸಣ್ಣಕತೆಗಾರರಾಗಿ, ವಿಮರ್ಶಕರಾಗಿ, ಚಿಂತಕರಾಗಿ, ಉತ್ತಮ ವಾಗ್ಮಿಯಾಗಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅರ್ಥಪೂರ್ಣ ಚರ್ಚೆ, ಸಂವಾದ, ವಾಗ್ವಾದ ಹಾಗೂ ಕೆಲವೊಮ್ಮೆ ವಿವಾದಗಳಿಗೂ ಕಾರಣರಾದರು. ವೈಚಾರಿಕತೆ ಹಾಗೂ ಸಾಮಾಜಿಕ ಚಿಂತನೆ ಇವರ ಒಟ್ಟು ಸೃಜನ ಹಾಗೂ ಸೃಜನೇತರ ಸಾಹಿತ್ಯದ ಪ್ರಧಾನ ಎಳೆಗಳಾಗಿವೆ. ಸಮಾಜವಾದ, ಗಾಂಧೀವಾದ, ಮಾರ್ಕ್ಸ್‌ವಾದಗಳ ಒಳಿತಿನ ಆಯ್ಕೆ ಅನಂತಮೂರ್ತಿಯವರ ವಿಚಾರಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಶಿವರಾಮ ಕಾರಂತ, ಗೋಪಾಕೃಷ್ಣಅಡಿಗ, ಬೇಂದ್ರೆ, ಕುವೆಂಪು ಇವರ ಸಾಹಿತ್ಯದ ಮೇಲೆ ಹೆಚ್ಚಿನ ಪ್ರಭಾವ ಬೀರಿದವರು. ಸಾಹಿತ್ಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ (1967) ಎಂಬ ಪರಿಕಲ್ಪನೆ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಹೊಸ ಚರ್ಚೆಯನ್ನು ಹುಟ್ಟುಹಾಕಿತು. ಇಂಗ್ಲಿಷ್ ಬ್ರಾಹ್ಮಣ, ಕನ್ನಡ ಶೂದ್ರ, ದಲಿತರಲ್ಲಿ ಅರಿವಿನ ಸ್ಫೋಟ, ಬೂಸಾ ಪ್ರಕರಣ (1974), ಕುವೆಂಪು ಅವರ ಪುರೋಹಿತಶಾಹಿ ಟೀಕೆಗೆ ಪ್ರತಿಕ್ರಿಯೆ (1986), ಪೇಜಾವರ ಶ್ರೀಗಳ ಹರಿಜನ ಕಾಲೋನಿ ಪಾದಯಾತ್ರೆ (1970), ತುರ್ತು ಪರಿಸ್ಥಿತಿ (1975-77) ಮೊದಲಾದ ಸಂದರ್ಭಗಳಲ್ಲಿ ಇವರ ವಿಚಾರಗಳು ವೈಚಾರಿಕ ವಿವಾದಗಳನ್ನು ಸೃಷ್ಟಿಸಿದ್ದೂ ಉಂಟು.

1955-95ರ ವರೆಗೆ ನಾಲ್ಕು ದಶಕಗಳಲ್ಲಿ ಇಪ್ಪತ್ತಾರು ಕಥೆಗಳನ್ನು ಇವರು ಬರೆದಿದ್ದಾರೆ. ಎಂದೆಂದೂ ಮುಗಿಯದ ಕತೆ (1955), ಪ್ರಶ್ನೆ (1962), ಮೌನಿ (1967), ಆಕಾಶ ಮತ್ತು ಬೆಕ್ಕು (1983), ಸೂರ್ಯನ ಕುದುರೆ (1995) - ಇವು ಕಥಾಸಂಕಲನಗಳು. ಸಂಸ್ಕಾರ (1965), ಭಾರತೀಪುರ (1974), ಅವಸ್ಥೆ (1978), ಭವ (1994), ದಿವ್ಯ (2000) - ಇವು ಕಾದಂಬರಿಗಳು. ಹದಿನೈದು ಪದ್ಯಗಳು (1967), ಅಜ್ಜನ ಹೆಗಲ ಸುಕ್ಕುಗಳು (1989), ಮಿಥುನ (1992) - ಇವು ಕವನ ಸಂಕಲನಗಳು. ಪ್ರಜ್ಞೆ ಮತ್ತು ಪರಿಸರ (1974), ಸಮಕ್ಷಮ (1982),ಪೂರ್ವಾಪರ (1990), ಸಂಸ್ಕೃತಿ ಮತ್ತು ಅಡಿಗ (1996), ಬೆತ್ತಲೆ ಪೂಜೆ ಯಾಕೆ ಕೂಡದು (1996), ನವ್ಯಾಲೋಕ (ಮುನ್ನುಡಿಗಳು, 1997) - ಇವು ವಿಮರ್ಶಾ ಕೃತಿಗಳು. ಆವಾಹನೆ (1968) ಇವರ ಒಂದು ನಾಟಕ. ದಾವ್‌ದ ಜಿಂಗ್ (1994) ಲಾವೊತ್ಸೆಯ ಕವನಗಳ ಭಾಷಾಂತರ. ಮೂರು ದಶಕದ ಕತೆಗಳು (1989) ಇವರ ಸಮಗ್ರ ಕತೆಗಳ ಸಂಕಲನ.

ಅನಂತಮೂರ್ತಿಯವರು ವಿದ್ಯಾರ್ಥಿ ದೆಸೆಯಲ್ಲಿಯೇ ಸಾಹಿತ್ಯ ರಚನೆಗೆ ತೊಡಗಿದರು. ಇಂಟರ್ ವಿದ್ಯಾರ್ಥಿಯಾಗಿದ್ದಾಗ ಶಿವಮೊಗ್ಗದ 'ಮಿತ್ರ' ಎಂಬ ಪತ್ರಿಕೆಯಲ್ಲಿ ಇವರ ಕೆಲವು ಕವನಗಳು, ಕತೆಗಳು ಪ್ರಕಟವಾಗಿದ್ದವು. ಅನಂತರ ಮೈಸೂರಿಗೆ ಬಂದಮೇಲೆ ಚಿತ್ರಗುಪ್ತ, ಜನಪ್ರಗತಿ ಪತ್ರಿಕೆಗಳಲ್ಲಿ ಕೆಲವು ಕತೆಗಳನ್ನು ಪ್ರಕಟಿಸಿದರು. ಇವರಿಗೆ ಸಣ್ಣ ಕತೆಗಾರರೆಂಬ ಹೆಸರು ತಂದುಕೊಟ್ಟ ಕತೆ 'ಎಂದೆಂದೂ ಮುಗಿಯದ ಕತೆ'. ಇದು ಮೊದಲಿಗೆ ಮೈಸೂರಿನ 'ವಾರ್ಸಿಟಿ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾಯಿತು. 'ಎಂದೆಂದೂ ಮುಗಿಯದ ಕತೆ' ಇವರ ಮೊದಲ ಕಥಾಸಂಕಲನ. ಅನಂತಮೂರ್ತಿ ಪ್ರಮುಖವಾಗಿ ಕತೆಗಾರರಾಗಿ ಓದುಗರಿಗೆ ಹೆಚ್ಚು ಅರ್ಥಪೂರ್ಣವಾಗುತ್ತಾರೆ. ಇವರ ಕಾದಂಬರಿಗಳಿಗಿಂತ ಕತೆಗಳಲ್ಲಿ ವೈಚಾರಿಕತೆ ಹಾಗೂ ಕಲಾತ್ಮಕತೆಗಳು ಒಂದಕ್ಕೊಂದು ಪೂರಕವಾಗಿವೆ. ಘಟಶ್ರಾದ್ಧ, ಕಾರ್ತೀಕ, ಪ್ರಶ್ನೆ, ಮೌನಿ, ನವಿಲುಗಳು, ಕ್ಲಿಪ್‌ಜಾಯಿಂಟ್, ಸೂರ್ಯನ ಕುದುರೆ ಇವು ಇವರ ಕೆಲವು ಪ್ರಾತಿನಿಧಿಕ ಕತೆಗಳು. ಕಾದಂಬರಿಗಳಲ್ಲಿ ಸಂಸ್ಕಾರ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ, ಹೆಚ್ಚು ಚರ್ಚೆಗೆ, ವಿವಾದಕ್ಕೆ ಗುರಿಯಾಗಿರುವ ಕೃತಿ. ಸ್ವೀಡಿಷ್ ಚಿತ್ರ ನಿರ್ದೇಶಕ ಇಂಗ್‌ಮರ್ ಬರ್ಗಮನ್‌ನ ಸೆವೆಂತ್ ಸೀಲ್ (1956) ಚಲನಚಿತ್ರ, ಈ ಕಾದಂಬರಿಯ ರಚನೆಗೆ ಪ್ರೇರಣೆ ನೀಡಿದ ಸಂಗತಿಯನ್ನು ಲೇಖಕರೇ ಹೇಳಿಕೊಂಡಿದ್ದಾರೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿವಾದ, ವಾಗ್ವಾದದ ಅಲೆಯನ್ನು ಸೃಷ್ಟಿಸಿದ ಕೃತಿಯಿದು. ಇವರ ಅತ್ಯುತ್ತಮ ಕತೆಗಳಲ್ಲಿ ಒಂದಾದ ಮೌನಿ ಕತೆಗೆ ಪ್ರೇರಣೆ, ಅಮೆರಿಕನ್ ಲೇಖಕ ಬರ್ನಾರ್ಡ್ ಮಲಮೂಡನ ಮೌರ್ನರ್ಸ್ ಎಂಬ ಕತೆ. ಆದರೆ ಕನ್ನಡ ಸತ್ವವನ್ನು ಮೈಗೂಡಿಸಿಕೊಂಡು ಇದು ಸ್ವತಂತ್ರ ಕಥೆಯಾಗಿದೆ. ಸಾಮಾನ್ಯವಾಗಿ ಅನಂತಮೂರ್ತಿಯವರನ್ನು

ನವ್ಯ ಸಾಹಿತ್ಯದ ಮುಂಚೂಣಿಯ ಲೇಖಕರಾಗಿ ಗುರುತಿಸುವುದು ವಾಡಿಕೆ. ಆದರೆ ಪರಂಪರೆಯ ಎಲ್ಲ ಪ್ರಭಾವಗಳನ್ನೂ ಪಾಶ್ಚಾತ್ಯ ಚಿಂತನಧಾರೆಯನ್ನೂ ಅರಗಿಸಿಕೊಂಡಿರುವ ಇವರು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಲೇಖಕರಾಗಿ ಕಂಡುಬರುತ್ತಾರೆ. ಮಾಸ್ತಿ ಅವರ ಅನಂತರ ಸಣ್ಣ ಕಥಾ ಕ್ಷೇತ್ರದ ಕ್ಷಿತಿಜವನ್ನು ವಿಸ್ತರಿಸಿದವರು ಎಂಬ ಪ್ರಶಂಸೆಗೂ ಇವರು ಪಾತ್ರರಾಗಿದ್ದಾರೆ. ಇವರ ಸಾಹಿತ್ಯ ಕುರಿತು ಕನ್ನಡದಲ್ಲಿ ವಿಪುಲವಾಗಿ ಚರ್ಚೆ, ಸಂವಾದಗಳು ನಡೆದಿವೆ.

ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂವಾದಗಳಿಗೆ ಮೀಸಲಾಗಿದ್ದ ತ್ರೈಮಾಸಿಕ ಪತ್ರಿಕೆ ರುಜುವಾತು (1981) ಇವರ ಸಂಪಾದಕತ್ವದಲ್ಲಿ ಮೈಸೂರಿನಿಂದ ಪ್ರಕಟವಾಗುತ್ತಿತ್ತು. ಅನಂತರ ಹೆಗ್ಗೋಡಿನ ಕವಿ-ಕಾವ್ಯ ಟ್ರಸ್ಟ್ ಮೂಲಕ ಕೆಲಕಾಲ ಪ್ರಕಟವಾಯಿತು.

ಇವರ 'ಸಂಸ್ಕಾರ' ವನ್ನು ಎ.ಕೆ. ರಾಮಾನುಜನ್ (1976), 'ಅವಸ್ಥೆ'ಯನ್ನು ಶಾಂತಿನಾಥ ದೇಸಾಯಿ (1986), 'ಭಾರತೀಪುರ'ವನ್ನು ಪಿ.ಶ್ರೀನಿವಾಸರಾವ್ (1996), 'ಭವ'ವನ್ನು ಜುಡಿತ್‌ಕ್ರೋಲ್ ಮತ್ತು ಅನಂತಮೂರ್ತಿ (1998) ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಸಂಸ್ಕಾರ ಕಾದಂಬರಿ ರಷ್ಯನ್, ಫ್ರೆಂಚ್, ಹಂಗೇರಿಯನ್, ಜರ್ಮನ್, ಹಿಂದಿ, ಬಂಗಾಲಿ, ಮಲಯಾಳಂ, ಮರಾಠಿ, ಉರ್ದು, ಗುಜರಾತಿ ಭಾಷೆಗಳಿಗೆ ಅನುವಾದಗೊಂಡಿದೆ. 'ಅವಸ್ಥೆ' ತಮಿಳಿಗೆ ಭಾಷಾಂತರವಾಗಿದೆ (ಕಾರ್ಲೋಸ್, 1997). ಸಾಹಿತ್ಯ ಕಾರಣಕ್ಕಾಗಿ ಅನಂತಮೂರ್ತಿಯವರಷ್ಟು ವಿಶ್ವಸಂಚಾರ ಮಾಡಿದವರು ಕನ್ನಡದಲ್ಲಿ ಬಹಳ ವಿರಳ. ಕರ್ನಾಟಕ, ಭಾರತ ಹಾಗೂ ಹೊರ ದೇಶಗಳಲ್ಲಿ ಸಾಹಿತ್ಯ ಹಾಗೂ ಸಂಸ್ಕೃತಿ ವಿಚಾರವಾಗಿ ಅನೇಕ ಉಪನ್ಯಾಸಗಳನ್ನು ಇವರು ನೀಡಿದ್ದಾರೆ.

ಇವರ ಸಂಸ್ಕಾರ (ನಿರ್ದೇಶನ: ಪಟ್ಟಾಭಿರಾಮರೆಡ್ಡಿ,1970), ಅವಸ್ಥೆ (ನಿರ್ದೇಶನ: ಕೃಷ್ಣಮಾಸಡಿ,1987) ಕಾದಂಬರಿಗಳೂ ಘಟಶ್ರಾದ್ಧ (ನಿರ್ದೇಶನ: ಗಿರೀಶ್‌ಕಾಸರವಳ್ಳಿ,1978), ಬರ (ನಿರ್ದೇಶನ: ಎಂ.ಎಸ್.ಸತ್ಯು, 1982), ಮೌನಿ (ನಿರ್ದೇಶನ: ಲಿಂಗದೇವರು,2002) ಸಣ್ಣಕತೆಗಳೂ ಚಲನಚಿತ್ರಗಳಾಗಿವೆ. ಸಂಸ್ಕಾರ ಹಾಗೂ ಘಟಶ್ರಾದ್ಧ ಚಿತ್ರಗಳು ರಾಷ್ಟ್ರಪತಿಯವರ ಚಿನ್ನದ ಪದಕ ಪ್ರಶಸ್ತಿ ಪಡೆದಿವೆ.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರಕಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1983), ಕರ್ನಾಟಕ ಸರ್ಕಾರದ ಪ್ರಶಸ್ತಿ (1984), ಮಾಸ್ತಿ ಪ್ರಶಸ್ತಿ (1994), ಹಿಮಾಚಲಪ್ರದೇಶ ಸರ್ಕಾರದ ಶಿಖರ್‌ಸಮ್ಮಾನ್ (1995), ಪದ್ಮಭೂಷಣ (1998) - ಇವು ಕೆಲವು ಮುಖ್ಯ ಪ್ರಶಸ್ತಿಗಳು. ಇವರ ಅದ್ವಿತೀಯ ಸಾಹಿತ್ಯಕ ಸಾಧನೆಗಾಗಿ 1994ರಲ್ಲಿ ಇವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಇದು ಕನ್ನಡಕ್ಕೆ ದೊರೆತ ಆರನೆಯ ಜ್ಞಾನಪೀಠ ಪ್ರಶಸ್ತಿ. ಕೋಲ್ಕತದ ರವೀಂದ್ರಭಾರತಿ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್. ಪ್ರಶಸ್ತಿ ನೀಡಿದೆ (1995). ಇವರು ತುಮಕೂರಿನಲ್ಲಿ ಜರುಗಿದ 69ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (2002). ನೊಬೆಲ್ ಪ್ರಶಸ್ತಿಗೂ ಇವರ ಹೆಸರು ಶಿಫಾರಸ್ಸಾಗಿತ್ತು. *

**ಅನಂತಾಚಾರಿ, ಅತ್ತಾವರದ :** ಕನ್ನಡದ ಅಚ್ಚುಮೊಳೆಗಳನ್ನು ಎರಕ ಹಾಕುವ ಕ್ರಮವನ್ನು ಮೊದಲು ಕಂಡುಹಿಡಿದ ಕೀರ್ತಿಶಾಲಿ. ಹುಟ್ಟೂರಾದ ಮಂಗಳೂರಿನಲ್ಲಿ ಅಚ್ಚಿನ ಕೆಲಸದ ಮೊದಲ ಅನುಭವ ಪಡೆದು ಆಮೇಲೆ ಮುಂಬಯಿಯ ಹೆಸರಾಂತ ನಿರ್ಣಯಸಾಗರ ಮುದ್ರಣಾಲಯದಲ್ಲಿ ಶಿಕ್ಷಣ ಗಳಿಸಿದರಲ್ಲದೆ ಅಲ್ಲಿಯೆ ಗುಜರಾತಿ ಮೊಳೆಗಳನ್ನು ಸಿದ್ಧಮಾಡುವ ಕಾರ್ಖಾನೆಯಲ್ಲಿ ಸೇರಿ ದೇವನಾಗರಿ ಲಿಪಿಯನ್ನು ಕೆತ್ತಿ ಎರಕ ಹಾಕುವ ಕೆಲಸದಲ್ಲಿ ಸಹಾಯಕರಾದರು. ಅನಂತರ ಧಾರವಾಡಕ್ಕೆ ಬಂದು ಕರ್ನಾಟಕ ಮುದ್ರಣಾಲಯದಲ್ಲಿ ಕೆಲಸಕ್ಕೆ ಸೇರಿ ಅಲ್ಲಿ ಕನ್ನಡ ಅಚ್ಚುಮೊಳೆ ತಯಾರಿಸಿದರು. ಕೆಲವು ಕಾಲದ ಮೇಲೆ ಧಾರವಾಡದಿಂದ ಮಂಗಳೂರಿಗೆ ಬಂದರು. ಇವರು ಸಿದ್ಧಪಡಿಸಿದ ಕನ್ನಡ ಅಚ್ಚುಮೊಳೆಗಳನ್ನು ಅಂದಿನ ದೊಡ್ಡ ಮುದ್ರಣಾಲಯಗಳಾದ ಕೆನರಾ ಪ್ರೆಸ್, ಶಾರದಾ ಪ್ರೆಸ್, ಬಾಸೆಲ್ ಮಿಶನ್ ಪ್ರೆಸ್, ಧರ್ಮಪ್ರಕಾಶ ಪ್ರೆಸ್‌ಗಳಲ್ಲಿ ಬಳಸಲಾಯಿತು. ಪ್ರಾರಂಭದಲ್ಲಿ ಇವರಿಂದ ಕೆತ್ತಲ್ಪಟ್ಟ ದೇವನಾಗರಿ ಲಿಪಿಯ ವರ್ಣಮಾಲೆ ಅನಂತಷೇಡ್ ಎಂದೇ ಪ್ರಸಿದ್ಧವಾಗಿದೆ. **(ಎಚ್.ಪಿ.ಎನ್.)**

**ಅನಿಲ್ ಕುಂಬ್ಳೆ :** 1970-. ಪ್ರಸಿದ್ಧ ಕ್ರಿಕೆಟ್ ಆಟಗಾರ. 1970 ಅಕ್ಟೋಬರ್ 17ರಂದು ಬೆಂಗಳೂರಿನಲ್ಲಿ ಜನಿಸಿದರು. ಬೆಂಗಳೂರಿನ ಆರ್.ವಿ.ಶಿಕ್ಷಣ ಸಂಸ್ಥೆಯಲ್ಲಿ ಓದಿ ಬಿ.ಇ. ಪದವಿ ಪಡೆದರು. ಎತ್ತರದ ನಿಲುವುಳ್ಳ ಇವರು ಸಾಂಪ್ರದಾಯಿಕ ಶೈಲಿಯಲ್ಲಿ ಸ್ಪಿನ್, ಗೂಗ್ಲಿ, ಮಧ್ಯಮ



ವೇಗದ ಬೌಲರ್ ಆಗಿ ಪರಿಣಿತರು. ಬ್ಯಾಟಿಂಗ್‌ನಲ್ಲಿ ಪರಿಶ್ರಮವುಳ್ಳವರು. ಆರಂಭದಲ್ಲಿ ಇವರು ಬ್ಯಾಟ್ಸ್‌ಮನ್ ಆಗಿಯೇ ಭರವಸೆ ಮೂಡಿಸಿದ್ದರು. 19 ವರ್ಷದ ಒಳಗಿನ ಆಟಗಾರರಾಗಿ ಭಾರತವನ್ನು ಪ್ರತಿನಿಧಿಸಿ ಪಾಕಿಸ್ತಾನದ ವಿರುದ್ಧ 1990ರಲ್ಲಿ ನಡೆದ ಪಂದ್ಯವೊಂದರಲ್ಲಿ 113 ರನ್ ಬಾರಿಸಿದ್ದರು. ಇದೇ ವರ್ಷ ಆಸ್ಟ್ರೇಲಿಯ ಕಪ್‌ಗಾಗಿ ಷಾರ್ಜದಲ್ಲಿ ನಡೆದ ಶ್ರೀಲಂಕ ವಿರುದ್ಧದ ಪಂದ್ಯದಲ್ಲಿ ಭಾರತದ ಪರ ಆಡಿದರು. ಇದು ಇವರು ಆಡಿದ ಮೊದಲ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯ. ಇವರು ಭಾರತ ತಂಡದ ಉಪನಾಯಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

1999 ಫೆಬ್ರವರಿ 4ರಂದು ಪಾಕಿಸ್ತಾನದ ವಿರುದ್ಧ ದೆಹಲಿಯ ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ ನಡೆದ ಟೆಸ್ಟ್ ಮ್ಯಾಚ್‌ನ 2ನೆಯ ಇನ್ನಿಂಗ್ಸ್‌ನಲ್ಲಿ 23.3 ಓವರ್‌ಗಳಲ್ಲಿ 74 ರನ್‌ಗಳನ್ನಿತ್ತು 10 ವಿಕೆಟ್‌ಗಳನ್ನು ಪಡೆದು ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದರು. ವಿಶ್ವ ಕ್ರಿಕೆಟ್ ರಂಗದಲ್ಲಿ ಇಂಥ ಸಾಧನೆಮಾಡಿದ ಎರಡನೆಯ ವ್ಯಕ್ತಿಯಾಗಿ ವಿಶ್ವಕ್ಕೆ ಪರಿಚಯಗೊಂಡರು. ಈ ಹಿಂದೆ ಇಂಗ್ಲೆಂಡ್ ತಂಡದ ಆಫ್ ಸ್ಪಿನ್ನರ್ ಜಿಮ್‌ಲೇಕರ್ ಇಂಥ ಸಾಧನೆಮಾಡಿದ ಮೊದಲ ವ್ಯಕ್ತಿಯಾಗಿದ್ದರು (1956). ಕುಂಬ್ಳೆಯವರು ಈ ದಾಖಲೆಯನ್ನು ಸರಿಗಟ್ಟಿದ ಏಕೈಕ ಭಾರತೀಯ. ಭಾರತದಲ್ಲಿ 200 ವಿಕೆಟ್ ಪಡೆದವರಲ್ಲಿ ಕುಂಬ್ಳೆ ಎರಡನೆಯವರು. ಕ್ರಿಕೆಟ್ ಇತಿಹಾಸದಲ್ಲಿ ಟೆಸ್ಟ್ ಹಾಗೂ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯಗಳು ಸೇರಿದಂತೆ 300 ವಿಕೆಟ್ ಪಡೆದ ಶ್ರೇಷ್ಠರಲ್ಲಿ ಕುಂಬ್ಳೆಯೂ ಒಬ್ಬರು. ಉಳಿದ ಇಬ್ಬರು ಪಾಕಿಸ್ತಾನದ ವಾಕರ್‌ಯೂನಿಸ್ ಹಾಗೂ ವಾಸಿಂ ಅಕ್ರಮ್. ಕೋಲ್ಕತ್ತದಲಿ 1993-94ರಲ್ಲಿ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯದಲ್ಲಿ 12 ರನ್ ನೀಡಿ 6 ವಿಕೆಟ್ ಪಡೆದಿದ್ದು ಇವರ ಇನ್ನೊಂದು ಸಾಧನೆ.

ಇವರು ಹಲವಾರು ಅಂತಾರಾಷ್ಟ್ರೀಯ ಟೆಸ್ಟ್ ಹಾಗೂ ಒಂದು ದಿನ ಪಂದ್ಯಗಳಲ್ಲಿ ಆಡಿದ್ದಾರೆ. ತಮ್ಮ ಮಾಂತ್ರಿಕ ಬೌಲಿಂಗ್ ಮೂಲಕ ಭಾರತಕ್ಕೆ ಅನೇಕ ಸಂದರ್ಭಗಳಲ್ಲಿ ಗೆಲುವು ತಂದಿತ್ತಿದ್ದಾರೆ. ಅತ್ಯಂತ ಕಡಿಮೆ ಅವಧಿಯಲ್ಲಿ (21 ಟೆಸ್ಟ್) 100 ವಿಕೆಟ್‌ಗಳನ್ನು ಪಡೆದ ಭಾರತದ ಕೆಲವೇ ಬೌಲರ್‌ಗಳಲ್ಲಿ ಇವರೂ ಒಬ್ಬರು. ಅನೇಕ ಸಂದರ್ಭಗಳಲ್ಲಿ ಬೌಲಿಂಗ್‌ನಲ್ಲಿ ತಮ್ಮ ಅಮೋಘ ಕೈಚಳಕವನ್ನು ಪ್ರದರ್ಶಿಸಿದ್ದಾರೆ. 1994ರ ಹೀರೋ ಕಪ್ ಅಂತಾರಾಷ್ಟ್ರೀಯ ಪಂದ್ಯವೊಂದರಲ್ಲಿ ಅದ್ವಿತೀಯ ಸಾಧನೆಗೈದದ್ದು ಇಂದಿಗೂ ದಾಖಲೆಯೇ. ಆಗ ನ್ಯೂಜಿಲೆಂಡ್ ತಂಡಕ್ಕೆ 10 ಓವರ್‌ಗಳಲ್ಲಿ 33 ರನ್ ನೀಡಿ 5 ವಿಕೆಟ್ ಪಡೆದರು. ವಿಲ್ಸ್‌ವರ್ಲ್ಡ್ ಕಪ್‌ನಲ್ಲಿನ ಇವರ ಸಾಧನೆ ಇಂದಿಗೂ ಕ್ರಿಕೆಟ್ ರಂಗದಲ್ಲಿ ಅಚ್ಚಳಿಯದೆ ಉಳಿದಿದೆ.

ಇವರಿಗೆ ಸಂದ ಗೌರವ, ಪ್ರಶಸ್ತಿಗಳು ಅನೇಕ. ಇವರ ಸಾಧನೆಯನ್ನು ಗಮನಿಸಿ ಕರ್ನಾಟಕ ಸರ್ಕಾರ ರಾಜ್ಯ ಪ್ರಶಸ್ತಿಯನ್ನಿತ್ತು ಗೌರವಿಸಿದೆ. 1995ರಲ್ಲಿ ಭಾರತ ಸರ್ಕಾರ ಪ್ರತಿಷ್ಠಿತ ಅರ್ಜುನ ಪ್ರಶಸ್ತಿಯನ್ನಿತ್ತು ಇವರನ್ನು ಗೌರವಿಸಿದೆ. **(ಎಸ್.ಆರ್.ಯು.)**

**ಅನುಪಮಾ, ನಿರಂಜನ :** 1934-91. ಕನ್ನಡದ ಪ್ರಸಿದ್ಧ ಲೇಖಕಿ, ವೈದ್ಯೆ. ಇವರ ಹುಟ್ಟು ಹೆಸರು ವೆಂಕಟಲಕ್ಷ್ಮಿ. ಅನಂತರ ಪತಿ ನಿರಂಜನರು ಇಟ್ಟ ಹೆಸರು ಅನುಪಮಾ. ಹಾಗಾಗಿ ಅನುಪಮಾ ನಿರಂಜನ ಎಂಬ ಹೆಸರಿನಲ್ಲಿಯೇ ಸಾಹಿತ್ಯ ಲೋಕದಲ್ಲಿ ಜನಪ್ರಿಯರಾದರು. ಇವರು ಜನಿಸಿದ್ದು 1934 ಮೇ 17ರಂದು, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿ, ತಂದೆ ಶಿವರಾಮಯ್ಯ, ತಾಯಿ ಲಕ್ಷ್ಮೀದೇವಮ್ಮ. ತಂದೆ ವಿದ್ಯಾಇಲಾಖೆಯಲ್ಲಿದ್ದುದರಿಂದ ಊರೂರಿಗೆ ವರ್ಗವಾಗುತ್ತಿತ್ತು. ಇದರಿಂದಾಗಿ

ಇವರ ಬಾಲ್ಯದ ವಿದ್ಯಾಭ್ಯಾಸ ಬೇರೆ ಬೇರೆ ಊರುಗಳಲ್ಲಿ ನಡೆಯಿತು. ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿ ಇಂಟರ್ ಮೀಡಿಯಟ್‌ನಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆ ಹೊಂದಿದರು (1951). ಅನಂತರ ಮೈಸೂರಿನ ಮೆಡಿಕಲ್ ಕಾಲೇಜು ಸೇರಿ ವೈದ್ಯಕೀಯ ಪದವಿ ಪಡೆದರು (1956). ಆ ದಿನಗಳಲ್ಲಿಯೇ ಪ್ರಗತಿಶೀಲ ಲೇಖಕರೂ ಪತ್ರಕರ್ತರೂ ಎಂಬ ಪ್ರಸಿದ್ಧಿ ಹೊಂದಿದ್ದ ನಿರಂಜನರನ್ನು (ನೋಡಿ) ವಿವಾಹವಾದರು. ಇವರದು ಅಂತರ್ಜಾತೀಯ ವಿವಾಹ.

ಇವರು ವೈದ್ಯಕೀಯ ಪದವಿ ಪಡೆದ ಅನಂತರ ಧಾರವಾಡದಲ್ಲಿ ಅನುಪಮಾ ಚಿಕಿತ್ಸಾಲಯವನ್ನು ಆರಂಭಿಸಿ (1958) ಮುಂದೆ ಬೆಂಗಳೂರಿಗೆ ಸ್ಥಳಾಂತರಿಸಿದರು (1961). ಇವರಿಗೆ ತೇಜಸ್ವಿನಿ (1958), ಸೀಮಂತಿನಿ (1963) ಎಂಬ ಇಬ್ಬರು ಹೆಣ್ಣುಮಕ್ಕಳು. ತೇಜಸ್ವಿನಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

ಅನುಪಮಾರ ಸಾಹಿತ್ಯ ರಚನೆ ವಿದ್ಯಾರ್ಥಿದೆಸೆಯಲ್ಲಿಯೇ ಆರಂಭವಾಯಿತು. ಆಗ ಅನೇಕ ಕಥೆಗಳನ್ನು ಬರೆದರು. ಇವರ ಕಣ್ಮಣಿ ಎಂಬ ಕಥಾಸಂಕಲನ 1952ರಲ್ಲಿ ಪ್ರಕಟವಾಯಿತು. ಅನಂತರ ಅನಂತ ಗೀತ, ಸಂಕೋಲೆಯೊಳಗಿಂದ ಎಂಬ ಕಾದಂಬರಿಗಳು ಪ್ರಕಟವಾದವು (1954). ಇವರು ಬರೆದ ಸ್ನೇಹಪಲ್ಲವಿ ಎಂಬ ಕಾದಂಬರಿ ಸುಧಾ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು ಓದುಗರ ಮೆಚ್ಚುಗೆಯೊಡನೆ ಜನಪ್ರಿಯತೆಯನ್ನೂ ತಂದುಕೊಟ್ಟಿತು (1967). ಇವರು ಇಪ್ಪತ್ತನಾಲ್ಕಕ್ಕೂ ಹೆಚ್ಚು ಕಾದಂಬರಿಗಳನ್ನೂ ಒಂಬತ್ತು ಕಥಾಸಂಕಲನಗಳನ್ನೂ ಪ್ರಕಟಿಸಿದ್ದಾರೆ. ರೂವಾರಿಯ ಲಕ್ಷ್ಮಿ (1960), ನೀರಿಗೆ ನೈದಿಲೆ ಶೃಂಗಾರ (1960), ಏಳು ಸುತ್ತಿನ ಮಲ್ಲಿಗೆ (1966), ಒಂದು ಗಿಣಿಯ ಕಥೆ (1983) - ಇವು ಕಥಾಸಂಕಲನಗಳು. ಇವರ ಬಹುತೇಕ ಕಥೆಗಳು ವಾಸ್ತವತೆಯ ಕ್ರೂರ ಮುಖಕ್ಕೆ ಎದುರಾಗಿ ನಿಲ್ಲುವ, ಭವಿಷ್ಯವನ್ನು ಒಳಿತಾಗಿಸಿಕೊಳ್ಳುವ ಹಂಬಲದವಾಗಿದ್ದು ವರ್ಗಮೂಲವಾದ ಸಂಘರ್ಷ, ಲಿಂಗಭೇದನೀತಿ ಮತ್ತು ಮಾನಸಿಕ ತೊಳಲಾಟಗಳ ಸುತ್ತ ಬೆಳೆದು ನಿಲ್ಲುತ್ತವೆ.

ಸ್ನೇಹಪಲ್ಲವಿ, ಆಕಾಶಗಂಗೆ, ಋಣ, ಮಾಧವಿ, ಶ್ವೇತಾಂಬರಿ, ಹೃದಯವಲ್ಲಭ, ಎಳೆ, ಮೂಡಣ ಪಡುವಣ - ಇವು ಇವರ ಕೆಲವು ಮುಖ್ಯ ಕಾದಂಬರಿಗಳು. ಮಧ್ಯಮವರ್ಗದ ಜನರ ಬದುಕಿನ ಸಂಕೀರ್ಣತೆಯನ್ನು ಎಳೆಎಳೆಯಾಗಿ ಬಿಡಿಸಿ ನೋಡುವುದು ಇವರ ಬಹುಪಾಲು ಕಾದಂಬರಿಗಳ ಆಶಯ. ಶ್ವೇತಾಂಬರಿಯಲ್ಲಿ ವೃತ್ತಿವಲಯದಲ್ಲಿ ಬೆಳೆಯುತ್ತಿರುವ ಪ್ರೇಮ ವಿವಾಹದ ಬಹುಮುಖಗಳು ಚರ್ಚಿತವಾಗಿದ್ದರೆ, ಹೃದಯವಲ್ಲಭದಲ್ಲಿ ಸಾಂಪ್ರದಾಯಿಕ ವಿವಾಹದಲ್ಲಿ ಕಂಡುಬರುವ ಅರೆಕೊರೆಗಳು ಹಾಗೂ ಪ್ರೇಮ ವಿವಾಹದಲ್ಲಿ ಕಂಡುಬರುವ ಪ್ರೀತಿಯ ನೆಲೆ ಚಿತ್ರಿತವಾಗಿದೆ. ಎಳೆ ಕಾದಂಬರಿಯಲ್ಲಿ ವಿಧವಾ ವಿವಾಹದ ಬಗೆಗಿನ ವಿಚಾರಗಳಿವೆ. ಮೂಡಣ ಪಡುವಣ ಕಾದಂಬರಿಯಲ್ಲಿ ಭಿನ್ನದೇಶಗಳ ಸಂಸ್ಕೃತಿ, ದಾಂಪತ್ಯ ಜೀವನದ ಏರುಪೇರುಗಳೊಂದಿಗೆ ಹೋರಾಟದ ಬದುಕು ಬಿಚ್ಚಿಕೊಳ್ಳುತ್ತದೆ. 'ಮಾಧವಿ' ವಿಶೇಷವಾಗಿ ಗಮನ ಸೆಳೆಯುವ ಕಾದಂಬರಿ. ಪುರಾಣದ ವ್ಯಕ್ತಿಗಳನ್ನೂ ಆಗಿನ ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಈ ಕಾದಂಬರಿಯಲ್ಲಿ ಮಾಡಲಾಗಿದೆ. ಇರಾವತಿ ಕರ್ವೆಯವರ ಮರಾಠಿ ಕೃತಿ 'ಯುಗಾಂತ'ದಿಂದ ಪ್ರೇರಣೆಗೊಂಡು ರಚಿತವಾದ ಕಾದಂಬರಿಯಿದು. ಮಹಾಭಾರತದಲ್ಲಿ ಬರುವ ಉಪ ಕಥೆಯೊಂದನ್ನು ಇಲ್ಲಿ ಮರುಚಿಂತನೆಗೊಡ್ಡಲಾಗಿದೆ. ಇವರ ಅನೇಕ ಕೃತಿಗಳು ತೆಲುಗು, ಮಲಯಾಳಂ ಮೊದಲಾದ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ಕಲ್ಲೋಲ ಎಂಬುದು ಇವರ ಒಂದು ನಾಟಕ. 'ನೆನಪು: ಸಿಹಿ-ಕಹಿ' ಇವರ ಆತ್ಮಕಥೆ (1985).

ಸ್ನೇಹಯಾತ್ರೆ ಮತ್ತು ಅಂಗೈಯಲ್ಲಿ ಯುರೋ-ಅಮೆರಿಕ ಇವರ ಪ್ರವಾಸ ಕಥನಗಳು. 1975ರಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ಗೆ ಬೆಂಗಳೂರಿನ ಪ್ರತಿನಿಧಿಯಾಗಿ ಹೋಗಿ ಪೂರ್ವಜರ್ಮನಿ, ರಷ್ಯ, ಪೋಲೆಂಡ್‌ಗಳಲ್ಲಿ ಪ್ರವಾಸ ಮಾಡಿದಾಗಿನ ಅನುಭವಗಳು ಸ್ನೇಹಯಾತ್ರೆಯಲ್ಲಿವೆ. ಇವರ ಯುರೋಪ್-ಅಮೆರಿಕ ಪ್ರವಾಸಾನುಭವಗಳು ಅಂಗೈಯಲ್ಲಿ ಯುರೋ-ಅಮೆರಿಕ (1981) ಎಂಬ ಕೃತಿಯಲ್ಲಿ ಸೊಗಸಾಗಿ ಮೂಡಿಬಂದಿವೆ.

ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆ ಅಪಾರವಾದುದು. ಇವರು ಮಕ್ಕಳಿಗಾಗಿ ದಿನಕ್ಕೊಂದು ಕಥೆ ಎಂಬ ಹೆಸರಿನಲ್ಲಿ ಚೈತ್ರದಿಂದ ಫಾಲ್ಗುಣದವರೆಗೆ 12 ಸಂಪುಟಗಳಲ್ಲಿ 365 ಕಥೆಗಳನ್ನು ಕೊಟ್ಟಿದ್ದಾರೆ. ಇತಿಹಾಸ, ಪುರಾಣ, ವಿಜ್ಞಾನ, ಸಾಹಸ, ಹಾಸ್ಯ, ಅತಿಮಾನುಷ ಮೊದಲಾದ ವಿಷಯಕ್ಕೆ ಸಂಬಂಧಿಸಿದ ಕಥೆಗಳು ಈ ಸಂಪುಟಗಳಲ್ಲಿದ್ದು, ಮಕ್ಕಳ ಮನಸ್ಸನ್ನು ಸೂರೆಗೊಂಡು ತಿಳಿವಳಿಕೆ ಮೂಡಿಸುವಲ್ಲಿ ನೆರವಾಗುತ್ತವೆ.

ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಇವರು ಅನೇಕ ಉಪಯುಕ್ತ ಹಾಗೂ ಜನಪ್ರಿಯ ಕೃತಿಗಳನ್ನು ರಚಿಸಿದ್ದಾರೆ. ವಧುವಿಗೆ ಕಿವಿಮಾತು, ದಾಂಪತ್ಯ ದೀಪಿಕೆ -ಇವು ವಿವಾಹದಲ್ಲಿ, ದಾಂಪತ್ಯದಲ್ಲಿ ಲೈಂಗಿಕತೆಯ ಅರಿವನ್ನು ಮೂಡಿಸುವ ಕೃತಿಗಳು. 'ಕೇಳುಕಿಶೋರಿ' ಹದಿಹರೆಯದ ಹೆಣ್ಣು ಮಕ್ಕಳ ದೈಹಿಕಾರೋಗ್ಯದ ಬಗ್ಗೆ ತಿಳಿವಳಿಕೆ ನೀಡುವ ಕೃತಿ. ಆರೋಗ್ಯ ದರ್ಶನ, ಶಿಶುವೈದ್ಯದೀಪಿಕೆ, ಆಹಾರದಿಂದ ಆರೋಗ್ಯ, ಸ್ತ್ರೀ ಸ್ವಾಸ್ಥ್ಯಸಂಹಿತೆ ಕ್ಯಾನ್ಸರ್ ಜಗತ್ತು - ಇವು ಇವರ ಉಪಯುಕ್ತ ವೈದ್ಯಕೀಯ ಕೃತಿಗಳು.

ವಯಸ್ಕರ ಶಿಕ್ಷಣ ಪಡೆದವರಿಗಾಗಿ ಇವರು ರಚಿಸಿದ ಕೆಂಪಮ್ಮನ ಮಗು (1964) ಎಂಬ ಕೃತಿಯಲ್ಲಿ ಹಳ್ಳಿಗರಲ್ಲಿ ಗರ್ಭಿಣಿಯರ ಆರೈಕೆ ಮತ್ತು ಮಗುವಿನ ಯೋಗಕ್ಷೇಮದ ಬಗ್ಗೆ ಮಾಹಿತಿಗಳಿವೆ. ಈ ಕೃತಿಗೆ ವಯಸ್ಕರ ಶಿಕ್ಷಣದ ರಾಷ್ಟ್ರೀಯ ಪುರಸ್ಕಾರ ದೊರೆತಿದೆ (1965). ತಾಯಿ-ಮಗು ಮಹಿಳೆಯರಿಗಾಗಿಯೇ ಬರೆದ ಮಾತೃವಾತ್ಸಲ್ಯದ ಅರಿವು ಮೂಡಿಸುವ ಕೃತಿ.

ಅನುಪಮಾ ಅವರಿಗೆ ಅನೇಕ ಗೌರವ ಪುರಸ್ಕಾರಗಳು ದೊರಕಿವೆ. ಕಾಸರಗೋಡು ಮಹಿಳಾ ಸಮ್ಮೇಳನದ ಅಧ್ಯಕ್ಷತೆ (1977), ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ (1978),ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (1981), ಕನ್ನಡ ರಾಜ್ಯೋತ್ಸವ ಬೆಳ್ಳಿ ಹಬ್ಬದ ಪ್ರಶಸ್ತಿ (1983), ನಂಜನಗೂಡು ತಿರುಮಲಾಂಬ ಪ್ರಶಸ್ತಿ (1987) -ಇವು ಇವರಿಗೆ ಸಂದ ಕೆಲವು ಗೌರವಗಳು. ಅನುಪಮಾ ಅಭಿನಂದನ (1988) ಇವರಿಗೆ ಸಲ್ಲಿಸಿದ ಅಭಿನಂದನ ಗ್ರಂಥ. ಇವರು 1991 ಫೆಬ್ರವರಿ 14ರಂದು ನಿಧನರಾದರು. **(ಎಂ.ಎಲ್.ಎನ್.)**

**ಅನುಭವ ಮಂಟಪ :** ಬೀದರ್ ಜಿಲ್ಲೆಯ ಕಲ್ಯಾಣಪಟ್ಟಣದಲ್ಲಿ ಕಳಚುರಿ ಅರಸ ಬಿಜ್ಜಳನ ಆಳ್ವಿಕೆಯಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವೇಶ್ವರರು ಸ್ಥಾಪಿಸಿದ ಒಂದು ತತ್ತ್ವಜಿಜ್ಞಾಸಾ ಸಂಸ್ಥೆ. ಪ್ರಾಯಶಃ ಇದು 1160ರಲ್ಲಿ ಕಲ್ಯಾಣ ಪಟ್ಟಣದ ತ್ರಿಪುರಾಂತಕ ಕೆರೆಯ ಮೇಲಿನ ತ್ರಿಪುರಾಂತಕಗುಡ್ಡದಲ್ಲಿ ಸ್ಥಾಪಿಸಲ್ಪಟ್ಟಿತೆಂದು ಹೇಳುತ್ತಾರೆ. ಇದರ ಅಧ್ಯಕ್ಷ ಪ್ರಭುದೇವ. ಕಾರ್ಯದರ್ಶಿ ಚನ್ನಬಸವಣ್ಣ. ಸದಸ್ಯರು ಅಖಿಲಭಾರತದ ಶಿವಶರಣರು. ಇದು ನಾಲ್ಕು ಮಹಾದ್ವಾರ, 36 ಕಂಬಗಳಿಂದ ಕೂಡಿತ್ತೆಂದು ತಿಳಿದುಬಂದಿದೆ. ಇದರ ಅಧ್ಯಕ್ಷಪೀಠವೇ ಶೂನ್ಯಸಿಂಹಾಸನ, ಅನುಭವ ಮಂಟಪದ ಹೆಸರು ವಿಶೇಷವಾಗಿ ಕಾಲಜ್ಞಾನವಚನಗಳಲ್ಲಿ ಕಂಡುಬಂದಿದೆ. ಇದನ್ನು ವೀರಶೈವರ ಹೃದಯವೆಂದು ಹಲವು ವಿದ್ವಾಂಸರು ಕರೆದಿದ್ದಾರೆ. ಈ ಮಂಟಪ ಕನ್ನಡ ಸಾಹಿತ್ಯಾಭಿವೃದ್ಧಿಗೆ ಬಹಳವಾಗಿ ಸಹಾಯ ಮಾಡಿತೆಂದು ಹೇಳಬಹುದು.

*

**ಅನುರಾಧಾ, ಧಾರೇಶ್ವರ :** 1938-. ಕನ್ನಡ ಸುಗಮ ಸಂಗೀತ ಕಲಾವಿದೆ. ಇವರ ಮೊದಲ ಹೆಸರು ಶಾಂತಮತಿ. 1938 ನವೆಂಬರ್ 24ರಂದು ಜನಿಸಿದರು. ತಂದೆ ನಾಗೇಶರಾವ್, ತಾಯಿ ಉಮಾಬಾಯಿ. ರಾಮಚಂದ್ರಜಂತ್ಲಿ ಅವರಿಂದ ಸಂಗೀತಪಾಠ ಕಲಿತ ಇವರು ಹದಿನಾಲ್ಕನೆಯ ವಯಸ್ಸಿನಲ್ಲಿ ಆಕಾಶವಾಣಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಸಂಗೀತ ಶಾಸ್ತ್ರದಲ್ಲಿ ಪದವಿ ಪಡೆದು ಧಾರವಾಡದ ಬಾಸೆಲ್ ಮಿಶನ್ ಹೆಣ್ಣು ಮಕ್ಕಳ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ನೇಮಕಗೊಂಡರು. ಅನಂತರ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಮೂರು ದಶಕಗಳ ಕಾಲ ಉದ್ಘೋಷಕಿಯಾಗಿ ಕಾರ್ಯನಿರ್ವಹಿಸಿದರು. ಭಾರತ ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ (1965) "ಏ ಮೇರೆ ವತನಕೆ ಲೋಗೋ" ಹಿಂದಿ ಗೀತೆಯನ್ನು ರಾಘುವೇಂದ್ರ ಇಟಗಿಯವರು "ಓ ನನ್ನ ದೇಶ ಬಾಂಧವರೆ!ಕಂಬನಿಗಳೆರಡಾ ಚಿಮ್ಮಿ! ಪ್ರಾಣಾಹುತಿ ನೀಡಿದ ಅವರ! ಸಂಸ್ಮರಿಸಿರಿ ಬಲಿದಾನ" ಎಂದು ಕನ್ನಡದಲ್ಲಿ ಅನುವಾದಿಸಿದ್ದನ್ನು ಮಧುರ ಕಂಠದಿಂದ ಹಾಡಿ ಜನಪ್ರಿಯರಾದರು. ಕನ್ನಡದ ಪ್ರಮುಖ ಭಾವಗೀತಕಾರರಾದ ಕುವೆಂಪು, ಬೇಂದ್ರೆ, ಆನಂದಕಂದ, ಚನ್ನವೀರಕಣವಿ, ಡಿ.ಎಸ್.ಕರ್ಕಿ ಮೊದಲಾದವರ ಭಾವಗೀತೆಗಳನ್ನು ಮನದುಂಬಿ ಹಾಡಿದರು. ಸುಗಮಸಂಗೀತ ಕಲಾವಿದೆಯಾಗಿ ಜನಪ್ರಿಯತೆ ಗಳಿಸಿದರು.

ರಂಗಭೂಮಿ, ನಾಟಕಗಳಲ್ಲೂ ಅಭಿನಯಿಸಿದ ಅನುಭವ ಇವರಿಗಿದೆ. ಶರಣರ ವಚನಗಳು, ದಾಸರ ಕೀರ್ತನೆಗಳು, ಉತ್ತರ ಕರ್ನಾಟಕದ ರಂಗಗೀತೆಗಳು, ಜನಪದ ಗೀತೆಗಳು ಇವರ ಮಧುರ ಕಂಠದಿಂದ ಕೇಳುಗರನ್ನು ಆಕರ್ಷಿಸಿವೆ. ಪ್ರಸಾರ ಕಾರ್ಯಕ್ರಮ, ಪುಸ್ತಕ ಬಿಡುಗಡೆ, ಸುಗಮ ಸಂಗೀತೋತ್ಸವ, ವಿಶ್ವಕೊಂಕಣಿ ಸಮ್ಮೇಳನ, ಬೇಲೂರು, ಸೋಮನಾಥಪುರಗಳ ಭಾವಗೀತೋತ್ಸವಗಳಲ್ಲಿ ಹಾಡಿದ್ದಾರೆ. ಮರಾಠಿ, ಕೊಂಕಣಿ, ಹಿಂದಿ, ಬಂಗಾಲಿ, ತೆಲುಗು ಗೀತೆಗಳನ್ನೂ ಇವರು ಹಾಡಿದ್ದಾರೆ. ನಾಡಿನಾದ್ಯಂತ ಅಸಂಖ್ಯ ಕಾರ್ಯಕ್ರಮ ನೀಡಿದ್ದಾರೆ. ಆಕಾಶವಾಣಿಯ ಹಿರಿಯ ಕಲಾವಿದೆಯಾಗಿ ಇವರು ಈಗಲೂ ಕಾರ್ಯಕ್ರಮ ನೀಡುತ್ತಿದ್ದಾರೆ.

ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ದೊರಕಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ (1988), ಗೌಡಸಾರಸ್ವತ ಸಮಾಜದ ಪ್ರಶಸ್ತಿ (1991), ಬೆಂಗಳೂರಿನ ಸುಗಮಸಂಗೀತ ಅಕಾಡೆಮಿ ಹಾಗೂ ಸಾಧನಾ ಸಂಗೀತಶಾಲೆಯ ಸನ್ಮಾನ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1995), ಕೊಂಕಣಿ ಸುಗಮಸಂಗೀತ ಪ್ರಶಸ್ತಿ (1997) ಹಾಗೂ ಕರ್ನಾಟಕ ಸರ್ಕಾರ ನೀಡುವ ಪ್ರತಿಷ್ಠಿತ ಸಂತ ಶಿಶುನಾಳ ಷರೀಫ್ ಪ್ರಶಸ್ತಿ (1998) ಲಭಿಸಿವೆ. **(ಜಿ.ಎಂ.ಎಚ್.)**

**ಅಪರಂಪರಸ್ವಾಮಿ :** ಬ್ರಿಟಿಷರ ವಿರುದ್ಧ ಹೋರಾಡಿದ ವೀರ. 1834ರಲ್ಲಿ ಇಂಗ್ಲಿಷರು ಚಿಕ್ಕವೀರರಾಜೇಂದ್ರನನ್ನು ರಾಜ್ಯಭ್ರಷ್ಟನನ್ನಾಗಿಸಿ ಕೊಡಗನ್ನು ತಮ್ಮ ವಶಪಡಿಸಿಕೊಂಡಾಗ, ಕೊಡಗಿನ ದಾಸ್ಯವಿಮೋಚನೆಗಾಗಿ ಒಂದು ಬಂಡಾಯ ಮೊದಲಾಯಿತು. ಅದನ್ನು ಈತ ಆರಂಭಿಸಿದ.

ಇವನು ತುಮಕೂರು ಜಿಲ್ಲೆಯ ಮಾಯಸಂದ್ರ ಬಳಿಯ ಕಡಗನೂರು ಗ್ರಾಮದ ಹನುಮಂತರಾಯ ಮತ್ತು ಗೋಪಮ್ಮ ಎಂಬ ದಂಪತಿಗಳ ಮಗ. 1807ರಲ್ಲಿಯೇ ಸನ್ಯಾಸಿಯಾಗಿ ಊರು ಬಿಟ್ಟು ಹೋದವನು ಇಪ್ಪತ್ತು ವರ್ಷಗಳ ಅನಂತರ ದೊಡ್ಡ ಜಂಗಮನಂತೆ ಊರಿಗೆ ಹಿಂದಿರುಗಿದ. ಕೂಡಲೇ ಇವನಿಗೆ ಅನೇಕ ಮಂದಿ ಶಿಷ್ಯರಾದರು. 1833ರಲ್ಲಿ ಅಪರಂಪರಸ್ವಾಮಿ ಮಂಜರಾಬಾದು ತಾಲ್ಲೂಕಿನಲ್ಲಿ ಸಂಚರಿಸುತ್ತಿದ್ದ. ಇವನು ಅನೇಕ ಅದ್ಭುತ ಪವಾಡಗಳನ್ನು ನಡೆಸಬಲ್ಲನೆಂಬುದು ಜನರ ತಿಳಿವಳಿಕೆಯಾಗಿತ್ತು. ಅನೇಕ ರೋಗಗಳನ್ನು ವಾಸಿಮಾಡಲು ಔಷಧವನ್ನು ಸಹ ಕೊಡುತ್ತಿದ್ದ. ಇವನ ಖ್ಯಾತಿಯನ್ನು ಕೇಳಿದ ಚಿಕ್ಕವೀರರಾಜ ಇವನನ್ನು ಮಡಿಕೇರಿಯ ಅರಮನೆಗೆ ಒಮ್ಮೆ ಕರೆಯಿಸಿದ್ದ. 1837ರ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ದಂಗೆಯ ಬಗೆಗೆ ದೀರ್ಘ ವಿಚಾರಣೆ ನಡೆಸಿದ ಕಮಿಷನರ್ ಕಾಟನ್‌ರವರ ಪ್ರಕಾರ ಅಪರಂಪರ ಬ್ರಿಟಿಷರ ವಿರುದ್ಧ ಚಿಕ್ಕವೀರರಾಜೇಂದ್ರ ಮತ್ತು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಸೇರಿ ನಡೆಸುತ್ತಿದ್ದ ರಹಸ್ಯಾಲೋಚನೆಗಳಲ್ಲಿ ಭಾಗಿಯಾಗಿದ್ದ.

1834ರ ಕೊಡಗಿನ ಯುದ್ಧ ನಡೆಯುವ ಮೊದಲೇ ಅಪರಂಪರ ಕೊಡಗನ್ನು ತ್ಯಜಿಸಿ ದಕ್ಷಿಣ ಕನ್ನಡ ಜಿಲ್ಲೆಯ ಕಾಜಗೋಡಿನ ಮಲ್ಲಪ್ಪಗೌಡನಲ್ಲಿ ಆಶ್ರಯ ಪಡೆದ. ಈ ಮಲ್ಲಪ್ಪಗೌಡ ಆ ಪ್ರದೇಶದ ಮುಖಂಡನಾಗಿದ್ದ. 1835 ಮೇ ತಿಂಗಳಲ್ಲಿ ಕೆಲವು ಜನ ಅಪರಂಪರನನ್ನು ಕೊಡಗಿನ ಅಪ್ಪಾಜಿ ಅರಸನ ಮಗ ವೀರಪ್ಪ (ವೀರರಾಜ ಅರಸು) ಎಂದೂ ಕೊಡಗಿನ ಸಿಂಹಾಸನಕ್ಕೆ ನ್ಯಾಯವಾದ ಹಕ್ಕುದಾರನೆಂದೂ ಪ್ರಕಟಣೆ ಹೊರಡಿಸಿದರು. ಇಲ್ಲಿಂದಲೇ ಕೊಡಗಿನ ದಂಗೆ ಆರಂಭವಾಯಿತೆಂದು ಭಾವಿಸಬಹುದು. ಅನಂತರ ಅಪರಂಪರ ಸೂರ್ಲಬ್ಬಿನಾಡು ಏಳುಸಾವಿರ ಸೀಮೆ, ಎಡೆನಾಡು ಮುಂತಾದ ಕಡೆ ಸಂಚರಿಸಿದ. ದಿನೇದಿನೇ ಅವನ ಹಿಂಬಾಲಕರ ಸಂಖ್ಯೆ ಬೆಳೆಯತೊಡಗಿತು. ಚತುರನಾದ ಅಪರಂಪರ ಸಾಮಾನ್ಯಜನರ ಮೂಢನಂಬಿಕೆ, ಧಾರ್ಮಿಕ ಭಾವನೆ ಮತ್ತು ರಾಜನಿಷ್ಠೆಗಳ ಪ್ರಯೋಜನ ಪಡೆದು ಅವರನ್ನು ಇಂಗ್ಲಿಷರ ವಿರುದ್ಧ ಹೋರಾಡಲು ಪ್ರೇರೇಪಿಸಿದ. ಚಿಕ್ಕವೀರರಾಜೇಂದ್ರ ಪಟ್ಟಕ್ಕೆ ಬಂದ ಕೂಡಲೇ ತನ್ನ ಸಂಬಂಧಿಗಳಲ್ಲಿ ಬಹಳ ಜನರನ್ನು ಕೊಲ್ಲಿಸಿದನೆಂದೂ ಅವರಲ್ಲಿ ಅಪ್ಪಾಜಿ ಅರಸನ ಮಕ್ಕಳೂ ಸೇರಿದ್ದರೆಂದೂ ಕೊಡಗಿನ ಜನರು ದೃಢವಾಗಿ ನಂಬಿದ್ದರಿಂದ ಕೊಡಗಿನ ಮುಖ್ಯರು ಅವನನ್ನು ರಾಜನೆಂದು ಒಪ್ಪಿಕೊಳ್ಳುವುದಾಗಲಿ ಬ್ರಿಟಿಷರ ವಿರುದ್ಧ ಹೋರಾಡುವುದಾಗಲಿ ತಮಗೆ ಸಾಧ್ಯವಾಗದೆಂದು ಅವನಿಗೆ ಮನವರಿಕೆ ಮಾಡಿಕೊಟ್ಟರು. ಏನು ಮಾಡಲೂ ತೋರದೆ ಅಪರಂಪರ ದಕ್ಷಿಣ ಕನ್ನಡದ ಕಡಬಕ್ಕೆ ಹೊರಟುಹೋದ. ಇಷ್ಟರಲ್ಲಿ ಕೊಡಗಿನ ಸೂಪರಿಂಟೆಂಡೆಂಟ್ ಆಗಿದ್ದ ಕ್ಯಾಪ್ಟನ್ ಲೀ ಹಾರ್ಡಿ ಅಪರಂಪರನ ಚಟುವಟಿಕೆಗಳನ್ನು ಹತ್ತಿಕ್ಕಲು ಕೆಲವು ಸೈನಿಕರನ್ನು ಕಳುಹಿಸಿದ. ಗಾಬರಿಗೊಂಡ ದಂಗೆಕೋರರಲ್ಲಿ ಅನೇಕರು ವೇಷ ಮರೆಸಿಕೊಂಡು ತಮ್ಮ ತಮ್ಮ ಊರುಗಳಿಗೆ ಓಡಿಹೋದರು. ದುರದೃಷ್ಟವಶಾತ್ ಅಪರಂಪರಸ್ವಾಮಿ ಶಿವಮೊಗ್ಗದ ನಗರಸೀಮೆಗೆ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಸಿಕ್ಕುಬಿದ್ದ. ಇವನನ್ನು ಇಂಗ್ಲಿಷರು ತಿರುಚಿನಾಪಳ್ಳಿಯಲ್ಲಿ ರಾಜಕೀಯ ಕೈದಿಯೆಂದು ಬಂಧಿಸಿಟ್ಟರು. 1869ರಲ್ಲಿ ಬಿಡುಗಡೆ ಮಾಡಲ್ಪಟ್ಟ ಅಪರಂಪರ ಮರುವರ್ಷ ಶ್ರೀರಂಗಪಟ್ಟಣದಲ್ಲಿ ಕಾಲವಶನಾದ.

ಕೊಡಗಿನ ಸ್ವಾತಂತ್ರ್ಯಕ್ಕಾಗಿ ಅಪರಂಪರಸ್ವಾಮಿ ನಡೆಸಿದ ಪ್ರಯತ್ನ ಈ ರೀತಿಯಾಗಿ ಆರಂಭದಲ್ಲೇ ವಿಫಲವಾಯಿತು. ಆದರೆ ಇವನ ಕೆಲವು ನಿಷ್ಠಾವಂತ ಹಿಂಬಾಲಕರು ಹೋರಾಟವನ್ನು ಮುಂದುವರಿಸಿದರು. ಆ ಪೈಕಿ ಕಲ್ಯಾಣಸ್ವಾಮಿ (ನೋಡಿ) ಎಂಬಾತ ಖ್ಯಾತನಾದವ. 1835ರ 'ವಿದ್ರೋಹಿ'ಗಳ ಉದ್ದೇಶ ಮತ್ತು ಆಶೋತ್ತರಗಳು ಅಂಥಾ ವಿಶೇಷ ಮಹತ್ತ್ವವನ್ನೇನೂ ಪಡೆದಿರಲಿಲ್ಲ. ಆದರೆ 1831ರಲ್ಲಿ ಸ್ಥಾನಭ್ರಷ್ಟರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೈಸೂರನ್ನೂ 1834ರಲ್ಲಿ ರಾಜ್ಯಭ್ರಷ್ಟನಾದ ಚಿಕ್ಕವೀರ ರಾಜೇಂದ್ರನಿಗೆ ಕೊಡಗಿನ ಸಿಂಹಾಸನವನ್ನೂ ಮರಳಿ ದೊರಕಿಸಿಕೊಳ್ಳುವುದೇ ಅವನ ಮುಖ್ಯ ಉದ್ದೇಶವಾಗಿತ್ತೆಂದು ಅನೇಕ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. **(ಎಚ್.ಪಿ.ಎಸ್.)**

**ಅಪರಾಜಿತ :** 10-11ನೆಯ ಶತಮಾನದಲ್ಲಿ ಉತ್ತರ ಕೊಂಕಣದಲ್ಲಿ ಆಳಿದ ಶಿಲಾಹಾರ ಮನೆತನಕ್ಕೆ ಸೇರಿದ ಮಾಂಡಲಿಕ. ಮೃಗಾಂಕ ಎಂಬುದು ಈತನ ಬಿರುದು. ತಂದೆಯ ಹೆಸರು ವಜ್ಜಡ. ಇವನ ಪೂರ್ವಜರು ರಾಷ್ಟ್ರಕೂಟರ ಸಾಮಂತರಾಗಿದ್ದರು. ರಾಷ್ಟ್ರಕೂಟರು ರಾಜ್ಯಭ್ರಷ್ಟರಾದಾಗ ಏರ್ಪಟ್ಟ ಅರಾಜಕ ಪರಿಸ್ಥಿತಿಯನ್ನುಪಯೋಗಿಸಿಕೊಂಡು ಈತ ಸ್ವತಂತ್ರವಾಗಿ ಆಳಲು ಹವಣಿಸಿದ. ಅದಕ್ಕಾಗಿ ಪರಮಾರರೊಡನೆ ಸೌಹಾರ್ದಸಂಬಂಧವನ್ನು ಏರ್ಪಡಿಸಿಕೊಂಡು ಕೊಂಕಣವನ್ನೆಲ್ಲಾ ಆಕ್ರಮಿಸಿದ. ಈತನನ್ನು ಕಲ್ಯಾಣದ ಇಮ್ಮಡಿ ತೈಲಪ ಸೋಲಿಸಿದನೆಂದು ಅಭಿಪ್ರಾಯಪಟ್ಟಿದ್ದಾರೆ. ಡಾ.ಫ್ಲೀಟ್ 997ನೆಯ ವರ್ಷದ ಭದಾನ ತಾಮ್ರಶಾಸನದಲ್ಲಿ ಈತನನ್ನು ಮಹಾಮಂಡಲೇಶ್ವರನೆಂದು ಕರೆದಿರುವುದು ಇದಕ್ಕೊಂದು ಕಾರಣ. ರನ್ನನ ಗದಾಯುದ್ಧದಲ್ಲಿನ ಪದ್ಯವೊಂದನ್ನು ಆಧರಿಸಿ ಈತನನ್ನು ತಂದೆಯ ಅಪೇಕ್ಷೆಯಂತೆ ಇಜಿವಬೆಡಂಗ ಸು.980ರಲ್ಲಿ ಸೋಲಿಸಿದನೆನ್ನಲಾಗಿದೆ. ಆದರೆ ಭದಾನ ಶಾಸನದಿಂದಾಗಲಿ 993-94ರ ಬರೋಡದ ಇನ್ನೆರಡು ತಾಮ್ರಶಾಸನ ಗಳಿಂದಾಗಲಿ ಈ ವಾದಕ್ಕೆ ಪುಷ್ಟಿ ದೊರಕುವುದಿಲ್ಲ. ಭದಾನ ತಾಮ್ರಶಾಸನದಲ್ಲಿ ರಾಷ್ಟ್ರಕೂಟ ಕಕ್ಕಲನನ್ನು ತೈಲಪ ಸೋಲಿಸಿದ ಪ್ರಸ್ತಾಪವಿದೆ. ಪ್ರಚಂಡ ಬಿರುಗಾಳಿಯ ಹೊಡೆತಕ್ಕೆ ನಂದಿಹೋದ

ದೀಪದಂತೆ ರಾಷ್ಟ್ರಕೂಟ ಮನೆತನ ನಂದಿತೆಂದೂ ಉಳಿದಿರುವುದೆಲ್ಲ ಕೇವಲ ಅದರ ನೆನಪೆಂದೂ ಹೇಳಿರುವ ಕಳಕಳಿಯ ಮಾತುಗಳು ಈತ ತೈಲನ ಮಾಂಡಲಿಕನಾಗಿದ್ದನೆಂಬುದನ್ನು ಸೂಚಿಸುವುದಿಲ್ಲ.

ರನ್ನನ ಗದಾಯುದ್ಧದಲ್ಲಿ ಒಂದು ಕಡೆ ಸಮುದ್ರ, ಮತ್ತೊಂದು ಕಡೆ ಇರಿವಬೆಡಂಗನ ಸೇನಾಸಾಗರಗಳ ನಡುವೆ ಸಿಲುಕಿದ ಅಪರಾಜಿತ ಎರಡೂ ಕಡೆ ಬೆಂಕಿ ಹೊತ್ತಿರುವ ಕಡ್ಡಿಯ ಮೇಲಿನ ಹುಳುವಿನಂತೆ ಕಂಪಿಸಿದ ಎಂದಿದ್ದಾನೆ. ಅಪರಾಜಿತನನ್ನು ಸೋಲಿಸಿ ಅಂಶುನಗರವನ್ನು ಸುಟ್ಟು ಆತನಿಂದ 21 ಆನೆಗಳನ್ನು ಕಪ್ಪವಾಗಿ ಸತ್ಯಾಶ್ರಯ ಪಡೆದನೆಂದಿದ್ದಾನೆ. ಲಭ್ಯವಿರುವ ಆಧಾರಗಳಿಂದ ಅಪರಾಜಿತ ತೈಲನ ಮಾಂಡಲಿಕನಾಗಿರದೆ, ಸೇವುಣ ವಂಶದ 2ನೆಯ ಭಿಲ್ಲಮ ಸಹ ತೈಲನ ಅಧೀನತೆಯನ್ನು ನಿರಾಕರಿಸಲು ಅವನಿಗೆ ಸಹಾಯ ಮಾಡಿದ. ಆದರೆ ಭಿಲ್ಲಮ ಸೋತುದಲ್ಲದೆ ಪರಮಾರ ಮುಂಜನನ್ನು ಸೋಲಿಸಲು ತೈಲನಿಗೆ ನೆರವು ನೀಡಿದ. ಚಾಳುಕ್ಯರು ಒಂದು ಕಡೆ ಚೋಳರೊಂದಿಗೆ, ಇನ್ನೊಂದು ಕಡೆ ಪರಮಾರರೊಂದಿಗೆ ನಡೆಸುತ್ತಿದ್ದ ಕದನಗಳಿಂದಾಗಿ ತೀರಪ್ರದೇಶದಲ್ಲಿದ್ದ ಅಪರಾಜಿತ ಸುಮಾರು ಮೂರು ದಶಕಗಳ ಕಾಲ ಸ್ವತಂತ್ರವಾಗಿರಲು ಸಾಧ್ಯವಾಯಿತು. ಆದರೆ ಆ ಬಳಿಕ ಅಪರಾಜಿತನ ವಿರುದ್ಧ ಸತ್ಯಾಶ್ರಯ ದಂಡೆತ್ತಿ ಆತನನ್ನು ಸೋಲಿಸಿದ. ರನ್ನ ಈ ಘಟನೆಯನ್ನು ವಿಸ್ತರಿಸಿದ್ದಾನೆ. ಇದು ಸು.1005ರಲ್ಲಿ ನಡೆದ ಘಟನೆ. **(ಬಿ.ಆರ್.ಜಿ.)**

**ಅಪರಾಳ ತಮ್ಮಣ್ಣ :** ಸು.1800. ಶ್ರೀಕೃಷ್ಣಪಾರಿಜಾತ ಎಂಬ ಯಕ್ಷಗಾನ ಕೃತಿಯ ಕರ್ತೃ. ರಾಯಚೂರಿನಿಂದ 20-25ಕಿಮೀ ದೂರದಲ್ಲಿರುವ ಅಪರಾಳವೆಂಬ ಗ್ರಾಮದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಈತ ಕನ್ನಡ ಸಂಸ್ಕೃತಗಳೆರಡರಲ್ಲಿಯೂ ವಿದ್ವಾಂಸನಾಗಿದ್ದ ಎನ್ನಲಾಗಿದೆ. ಭಾಗವತ ಕವಿಗಳ, ದಾಸಸಾಹಿತ್ಯದ ಅಭ್ಯಾಸ ಮಾಡಿದ್ದ ಇವನು ಸಂಗೀತ ನೃತ್ಯ ಕಲೆಗಳಲ್ಲಿಯೂ ಪ್ರಾವೀಣ್ಯ ಪಡೆದವನಾಗಿದ್ದ. ತನ್ನ ನಾಟಕದಲ್ಲಿ ಜನಪದ ಹಾಗೂ ಸಾಹಿತ್ಯಿಕ ಶೈಲಿಗಳನ್ನು ಅಳವಡಿಸಿಕೊಂಡಿದ್ದಾನೆ. ಅಂದು ನಡೆಯುತ್ತಿದ್ದ ನಾಟಕ ಮತ್ತು ನೃತ್ಯಕಲೆಗಳ ಮಾಸ್ತರನಾಗಿದ್ದಿರ ಬಹುದೆಂದೂ ಸಂದರ್ಭ ಒದಗಿಬಂದಾಗ ಈತ ಅಭಿನಯಿಸಿರಬಹುದೆಂದೂ ಕೆಲ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. **(ಬಿ.ಎಸ್.ಎಸ್.)**

**ಅಪ್ಪಾಚಿವಾಡಿ :** ಬೆಳಗಾಂವಿ ಜಿಲ್ಲೆ ಚಿಕ್ಕೋಡಿ ತಾಲೂಕಿನಲ್ಲಿರುವ ಒಂದು ಗ್ರಾಮ. ನಿಪ್ಪಾಣಿಯಿಂದ 16ಕಿಮೀ ದೂರದಲ್ಲಿದೆ. ಇದು ನಾಥಪಂಥೀಯರ ಪ್ರಸಿದ್ಧ ಯಾತ್ರಾಸ್ಥಳ. ನಾಥಪಂಥದ ಹಾಲಸಿದ್ಧನಾಥ 1812ರಲ್ಲಿ ಇಲ್ಲಿ ಸಮಾಧಿ ಸ್ವೀಕರಿಸಿದ. ಈತನ ನೆನಪಿನಲ್ಲಿ ನಿರ್ಮಿಸಿರುವ ಸಮಾಧಿ ಕಟ್ಟಡ ಇಂಡೋ ಇಸ್ಲಾಮಿಕ್ ಶೈಲಿಯಲ್ಲಿದೆ. ಹಾಲಸಿದ್ಧನಾಥನ ಆರಾಧಕಿ ಭೀಮಾಬಾಯಿ ಶಿಂತ್ರೆಯ ಸಮಾಧಿ ಕೂಡ ಇಲ್ಲಿದೆ. ಪ್ರತಿವರ್ಷ ದಸರ ಹಬ್ಬ ಕಳೆದ ಐದು ದಿವಸಗಳ ಮೇಲೆ ಸೀಗೆಹುಣ್ಣಿಮೆಯಂದು ಜಾತ್ರೆ ನಡೆಯುತ್ತದೆ. ಈ ಸಂದರ್ಭದಲ್ಲಿ ಲಕ್ಷಾಂತರ ಭಕ್ತರು ಇಲ್ಲಿ ಸೇರುವರು. ಈ ಜಾತ್ರೆ ಐದು ದಿನಗಳವರೆಗೆ ಜರುಗುವುದು. ಜಾತ್ರೆಯಲ್ಲಿ ವರ್ಷ ಭವಿಷ್ಯದ ನುಡಿಗಳಾಗುತ್ತವೆ. ಈ ಪ್ರದೇಶದ ಜನರಿಗೆ ಹಾಲಸಿದ್ಧನಾಥನ ನುಡಿಗಳ ಮೇಲೆ ಅಪಾರ ನಂಬಿಕೆ. ಮಹಾವೀರ ಜಿನಾಲಯವೊಂದು ಈ ಊರಿನಲ್ಲಿದೆ. ಇದಲ್ಲದೆ ಮಹಾದೇವ, ಲಕ್ಷ್ಮಿ, ನರಸೋಬ, ಮಾಸೋಬ, ಮಾರುತಿ, ದತ್ತ, ಎಲ್ಲಮ್ಮ ದೇವರ ಗುಡಿಗಳಿವೆ. **(ವಿ.ಎಸ್.ಎಂ.)**

**ಅಪ್ಸರಕೊಂಡ :** ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಒಂದು ಪ್ರೇಕ್ಷಣೀಯ ಸ್ಥಳ. ಹೊನ್ನಾವರದಿಂದ 6ಕಿಮೀ ದೂರದಲ್ಲಿದೆ. ಇದೊಂದು ಪ್ರಕೃತಿ ಸುಂದರ ತಾಣವಾಗಿದ್ದು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಇಲ್ಲಿ ಸು.10ಮೀ ಎತ್ತರದಿಂದ ಧುಮುಕುವ ತೊರೆಯೊಂದರಿಂದ ಒಂದು ನೀರಿನ ಕೊಂಡ ಸೃಷ್ಟಿಯಾಗಿದೆ. ಇದರ ಪರಿಸರದಲ್ಲೇ ರಾಮಚಂದ್ರಪುರ ಮಠದ ಒಂದು ಶಾಖೆ ಇದೆ. ಸ್ಥಳೀಯರು ಈ ಮಠವನ್ನು ಅಪ್ಸರಕೊಂಡ ಮಠ ಎಂದೂ ಕರೆಯುತ್ತಾರೆ.

ಇಲ್ಲಿ ನರಸಿಂಹ ಮತ್ತು ದುರ್ಗಾದೇವಿಯ ಎರಡು ದೇವಸ್ಥಾನಗಳಿವೆ. ದುರ್ಗಾದೇವಿಯ ಮಂದಿರ ಕಲ್ಲಿನದು. ಮಠದ ಸಮೀಪವೇ ಏಳು ಸಾಧುಗಳ ಸಮಾಧಿಗಳಿವೆ. ಸಮಾಧಿಯ ಹತ್ತಿರ ಕದಂಬರ ಕಾಲದ ಒಂದು ಮಹಿಷಮರ್ದಿನಿ ಮೂರ್ತಿ ಇದೆ. ಮಠದ ಬಳಿ ನಿಂತು ಸಮುದ್ರದ ಸುಂದರ ದೃಶ್ಯವನ್ನು ವೀಕ್ಷಿಸಬಹುದು. ಇದರ ಹತ್ತಿರವಿರುವ ಬೆಟ್ಟದ ತುದಿಯಲ್ಲಿ ಒಂದು ದೊಡ್ಡ ನೈಸರ್ಗಿಕ ಗುಹೆ ಇದೆ. ಇಲ್ಲಿನ ಪ್ರಕೃತಿ ಪರಿಸರ ಚಿತ್ತಾಕರ್ಷಕವಾಗಿದೆ. **(ಎಸ್.ಎಚ್.ಇ.)**

**ಅಫ಼ಜಲಪುರ :** ಗುಲ್ಬರ್ಗ ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ಒಂದು ತಾಲ್ಲೂಕು ಹಾಗೂ ಆಡಳಿತ ಕೇಂದ್ರ. ಉತ್ತರ ದಿಕ್ಕಿಗೆ ಆಳಂದ್ ತಾಲ್ಲೂಕು ಮತ್ತು ಸೊಲ್ಲಾಪುರ ಜಿಲ್ಲೆ. ಪೂರ್ವದಲ್ಲಿ ಗುಲ್ಬರ್ಗ ತಾಲ್ಲೂಕು ಮತ್ತು ದಕ್ಷಿಣದಲ್ಲಿ ಜೇವರಗಿ ತಾಲ್ಲೂಕು ಮತ್ತು ಬಿಜಾಪುರ ಜಿಲ್ಲೆ. ಇವು ಈ ತಾಲ್ಲೂಕನ್ನು ಸುತ್ತುವರಿದಿವೆ. ನಿಜಾಮರ ಆಳ್ವಿಕೆಯ ಕಾಲದಲ್ಲಿ ಅಫ಼ಜಲಪುರ ಪೈಗಾ ತಾಲ್ಲೂಕು ಆಗಿತ್ತು. ಈಗ ಇದು ಗುಲ್ಬರ್ಗ ಉಪವಿಭಾಗದಲ್ಲಿದೆ. ತಾಲ್ಲೂಕಿನಲ್ಲಿರುವ ಗ್ರಾಮಗಳು 90. ಸರ್ಕಲ್ (ಹೋಬಳಿ)ಗಳು ಮೂರು-ಅಫ಼ಜಲಪುರ, ಅತ್ನೂರು ಮತ್ತು ಕರಜಗಿ. ತಾಲ್ಲೂಕಿನ ವಿಸ್ತೀರ್ಣ 1305ಚ.ಕಿಮೀ. ಜನಸಂಖ್ಯೆ 1,79,816.

ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಗಡಿಗುಂಟ ಭೀಮಾನದಿ ಹರಿಯುತ್ತದೆ. ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಅಮರಜ ನದಿ ತಾಲ್ಲೂಕಿನ ಮಧ್ಯದಲ್ಲಿ ಹಾದು ಗಾಣಗಾಪುರದ ಬಳಿ ಭೀಮಾ ನದಿಯನ್ನು ಕೂಡುತ್ತದೆ. ಬೋರಿ ಎಂಬ ಚಿಕ್ಕ ನದಿ ಸಹ ಉತ್ತರ-ದಕ್ಷಿಣವಾಗಿ ಹರಿದು ಅಫ಼ಜಲಪುರಕ್ಕೆ ಸ್ವಲ್ಪ ಪಶ್ಚಿಮದಲ್ಲಿ ಭೀಮಾನದಿಯನ್ನು ಸೇರುತ್ತದೆ. ಭೀಮಾನದಿಗೆ ಅಫ಼ಜಲಪುರದ ಬಳಿ ಒಂದು ಅಣೆಕಟ್ಟನ್ನು ಕಟ್ಟಲಾಗಿದೆ. ದಖನ್ ಟ್ರ್ಯಾಪ್ ಹರಡಿರುವ ಈ ತಾಲ್ಲೂಕಿನ ಕರಿಎರೆ ಮತ್ತು ಮರಳುಮಿಶ್ರಿತ ಕೆಂಪುಮಣ್ಣಿನ ಭೂಮಿ ಇದೆ. ಬಾವಿಗಳ ನೀರಾವರಿ ಸೌಕರ್ಯದಲ್ಲಿ ಅಫ಼ಜಲಪುರ ತಾಲ್ಲೂಕು ಗುಲ್ಬರ್ಗ ಜಿಲ್ಲೆಯಲ್ಲಿ 3ನೆಯ ಸ್ಥಾನ ಪಡೆದಿದೆ. ಭತ್ತ, ಜೋಳ, ಹತ್ತಿ, ಕಡಲೆ, ತೊಗರಿ, ಕಡಲೆಕಾಯಿ ಇಲ್ಲಿನ ಮುಖ್ಯ ಬೆಳೆಗಳು. ಗೋಧಿ, ಜವೆ (ಬಾರ್ಲಿ) ಬಾಳೆಹಣ್ಣು, ಕಾಯಿಪಲ್ಯೆ ಮತ್ತು ಮೆಣಸಿನಕಾಯಿ ಸಹ ಬೆಳೆಯಲಾಗುತ್ತದೆ.

ಖಿಲ್ಲರ್ ಜಾತಿಯ ದನದ ಸಾಕಣೆ ಇಲ್ಲಿ ವಿಶೇಷ. ಭೀಮಾನದಿಯ ದಂಡೆಯುದ್ದಕ್ಕೂ ಮೀನುಗಾರಿಕೆ ಒಂದು ಮುಖ್ಯ ಉದ್ಯೋಗ. ಗಾಣಗಾಪುರದಲ್ಲಿ ಭೀಮಾನದಿಯ ದಂಡೆಯ ಮೇಲೆ ಮೀನುಗಳ ಬೆಳವಣಿಗೆ ಮತ್ತು ಸಂಗ್ರಹಕ್ಕಾಗಿ ಕಾರ್ಯಕ್ರಮವೊಂದಿದೆ.

ಈ ತಾಲ್ಲೂಕಿನಲ್ಲಿರುವ ಗಾಣಗಾಪುರ (ನೋಡಿ) ಪವಿತ್ರ ಯಾತ್ರಾಸ್ಥಳವೆಂದು ಪರಿಗಣಿತವಾಗಿದೆ. ಭಗವತಿ ದೇವಾಲಯವಿರುವ ಘಟ್ಟರ್ಗ, ಸಿದ್ಧರಾಮೇಶ್ವರ ದೇವಾಲಯವಿರುವ ಹವಲ್ಗ, ಬಸವೇಶ್ವರ ದೇವಾಲಯವಿರುವ ಅತ್ನೂರು, ಮಹಂತೇಶ್ವರ ಗುಡ್ಡ ಮಠ ಇರುವ ಚಿನಮಗೇರ, ಶಹಾಬುದ್ದೀನ್ ಎಂಬ ಸಂತರ ದರ್ಗಾ ಇರುವ ಕರಜಗಿ ಈ ಗ್ರಾಮಗಳು ಈ ಸುತ್ತಿನ ಜನರಿಗೆ ಪವಿತ್ರವೆನಿಸಿವೆ.

ತಾಲ್ಲೂಕಿನ ಮುಖ್ಯಸ್ಥಳ ಅಫ಼ಜಲಪುರ. ಜನಸಂಖ್ಯೆ 19,114. ಈ ಊರಿನಿಂದ ಚೌಡಾಪುರಕ್ಕೆ ಮತ್ತು ಮಣ್ಣೂರಿನ ಮೂಲಕ ಗುಲ್ಬರ್ಗಕ್ಕೆ ಒಳ್ಳೆಯ ರಸ್ತೆ ಸಂಪರ್ಕ ಇದೆ. ಬಿಜಾಪುರದ 2ನೆಯ ಆದಿಲ್‌ಷಾನ ಸರದಾರನಾಗಿದ್ದು ಶಿವಾಜಿಯಿಂದ ಪ್ರತಾಪಗಡದಲ್ಲಿ ಹತನಾದ ಅಫ್ಜಲಖಾನನಿಂದ ಊರಿಗೆ ಈ ಹೆಸರು ಬಂದಿದೆ. **(ಬಿ.)**

**ಅಬ್ದುಲ್ ರಜಾಕ್ :** ಇಮ್ಮಡಿ ದೇವರಾಯನ ಆಳ್ವಿಕೆಯಲ್ಲಿ ಈತ ಪರ್ಷಿಯ ದೇಶದಿಂದ ರಾಯಭಾರಿಯಾಗಿ ವಿಜಯನಗರಕ್ಕೆ ಬಂದು (1443) ಅಲ್ಲಿ ಏಳು ತಿಂಗಳು ಇದ್ದು ವೈಭವಪೂರ್ಣವಾಗಿದ್ದ ವಿಜಯನಗರ ಸಾಮ್ರಾಜ್ಯದ ಬಗ್ಗೆ ಕಣ್ಣಾರೆ ಕಂಡು ಕಿವಿಯಾರೆ ಕೇಳಿದ ಸಂಗತಿಗಳನ್ನು ಬರೆದಿಟ್ಟಿದ್ದಾನೆ. ಚಾರಿತ್ರಿಕ ದೃಷ್ಟಿಯಿಂದ ಅವನ ಬರೆವಣಿಗೆ ಬಹು ಉಪಯುಕ್ತವಾಗಿದೆ. ವಿಜಯನಗರ ಪಟ್ಟಣ ಅತಿ ವಿಸ್ತಾರವೂ ಸುಭದ್ರವೂ ಸೇನಾಬಲದಿಂದ ಸುಸಜ್ಜಿತವೂ ಸುಖಸೌಲಭ್ಯಗಳಿಂದ ಕೂಡಿದುದೂ ಆಗಿದ್ದು, ಅಲ್ಲಿಯ ವಿಶಾಲವಾದ ಅಂಗಡಿಬೀದಿಗಳಲ್ಲಿ ಮುತ್ತು ರತ್ನಗಳ ಮುಕ್ತವ್ಯಾಪಾರ ನಡೆಯುತ್ತಿತ್ತೆಂದು ಆತ ವರ್ಣಿಸಿದ್ದಾನೆ. *

**ಅಬ್ಬಕ್ಕ :** 16ನೆಯ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳುತ್ತಿದ್ದ ವೀರರಾಣಿ. ಪುತ್ತಿಗೆಯ ಚೌಟ ಮನೆತನದವಳಾದ, ಉಲ್ಲಾಳದಿಂದ ಆಳುತ್ತಿದ್ದ ಈಕೆಗೆ 'ಬುಕಾದೇವಿ' (ಬುಕ್ಕಾದೇವಿ) ಎಂದೂ ಹೆಸರಿದ್ದಂತೆ ಪೋರ್ಚುಗೀಸರ ದಾಖಲೆಗಳಿಂದ ತಿಳಿಯುತ್ತದೆ. ಚಿಕ್ಕರಾಜ್ಯವೊಂದರ ಅಧಿಪತಿಯಾಗಿದ್ದರೂ ಪೋರ್ಚುಗೀಸರ ಬೃಹದ್ಬಲದೆದುರು ನಿಂತು ಹೋರಾಡಿದ ಸಾಹಸಿ ಎಂದು ಈಕೆ ಪ್ರಸಿದ್ಧಳಾಗಿದ್ದಾಳೆ.

ಅಬ್ಬಕ್ಕ ಬಂಗರಾಜನೊಬ್ಬನನ್ನು ಮದುವೆಯಾಗಿದ್ದಳು. ಆತ ಪೋರ್ಚುಗೀಸರ ಪಕ್ಷ ವಹಿಸಿದ್ದ ಕಾರಣ ಈಕೆ ಮಲಬಾರಿನ ಹಲವು ಅರಸುಗಳೊಡನೆ ಸ್ನೇಹ ಬೆಳೆಸಿ ಪೋರ್ಚುಗೀಸರ ವಿರುದ್ಧ ನಿಂತಳು. ಪೋರ್ಚುಗೀಸರು ಇವಳ ಸಹಾಯಕನಾಗಿದ್ದ ಕಣ್ಣಾನೂರಿನ ಅರಸನ ವಿರುದ್ಧ ಸೆಣಸಿದಾಗ ಈಕೆ ಪೋರ್ಚುಗೀಸರಿಗೆ ಕೊಡಬೇಕಾಗಿದ್ದ ಕಪ್ಪವನ್ನು ತಡೆಹಿಡಿದಳು. 1555ರಲ್ಲಿ ಪೋರ್ಚುಗೀಸ ನೌಕಾಧಿಕಾರಿ ದೋಮ್ ಆಳ್ವಾರೆಸ್ ದ ಸಿಲ್ವೀರಾ ಮಂಗಳೂರನ್ನು ಆಕ್ರಮಿಸಿಕೊಳ್ಳಲು 21 ಹಡಗುಗಳ ಭಾರಿ ಪಡೆಯೊಡನೆ ಬಂದಾಗ ರಾಣಿ ವೀರಾವೇಶದಿಂದ ಹೋರಾಡಿದಳು. ಕೊನೆಗೆ ಕಲ್ಲಿಕೋಟೆಯ ಜಾಮೋರಿನ್ ಪ್ರವೇಶಿಸಿ, ಅವರ ನಡುವೆ ರಾಜಿ ಮಾಡಿಸಿದ. 3 ವರ್ಷಗಳ ಅನಂತರ ಅವಳು ಮತ್ತೊಮ್ಮೆ ಕಣ್ಣಾನೂರಿನ ರಾಜನ ಪಕ್ಷ ವಹಿಸಿ ಪೋರ್ಚುಗೀಸರೊಡನೆ ನೌಕಾಯುದ್ಧ ಹೂಡಿದಳು. ಆಗ ರಾಣಿ ನಷ್ಟವನ್ನನುಭವಿಸಿದರೂ (1555) ಮತ್ತೊಮ್ಮೆ 1566ರಲ್ಲಿ ನಡೆದ ಯುದ್ಧದಲ್ಲಿ ರಾಣಿಯದೇ ಮೇಲ್ಗೈಯಾಯಿತು. ಪೋರ್ಚುಗೀಸ್ ಗವರ್ನರನಾಗಿದ್ದ ಪೀಕ್ಸೋಟ್ ಈ ಯುದ್ಧದಲ್ಲಿ ಜೀವತೆತ್ತ. ಪುನಃ 1567ರಲ್ಲಿ ಪೋರ್ಚುಗಿಸರು ಅಗಾಧ ಸೈನ್ಯದೊಡನೆ ಬಂದರು. ಮೊದಲು ಅರಬ್ಬರ ಅನಿರೀಕ್ಷಿತ ದಾಳಿಗಳಿಂದ ಪೋರ್ಚುಗೀಸರು ಅಲುಗಿದರೂ ಕೊನೆಗೆ ಮಂಗಳೂರು, ಉಲ್ಲಾಳ ಅವರ ಕೈವಶವಾದವು. ಅತಿಭಯಂಕರಳಾಗಿದ್ದ ರಾಣಿ ತಲೆಮರೆಸಿಕೊಂಡಳು ಎಂಬುದು ಪೋರ್ಚುಗೀಸ ನೊಬ್ಬನ ಹೇಳಿಕೆ.

ಪ್ರಾಯಶಃ ಈಕೆಯ ಮಗಳಾದ, ಇನ್ನೊಬ್ಬ ಅಬ್ಬಕ್ಕದೇವಿ ಸಹ ಸಾಹಸಿಯಾಗಿದ್ದಳು. ಈಕೆ ಬಂಗದೊರೆ ವೀರನರಸಿಂಹಲಕ್ಷ್ಮಪ್ಪರಸನ ಹೆಂಡತಿಯಾಗಿದ್ದಳು. ಇವಳೂ ಬಂಗರ ವಿರುದ್ಧ ನಿಂತುದಲ್ಲದೆ, ಬಿದನೂರಿನ ವೆಂಕಟಪ್ಪನಾಯಕನ ಸಹಾಯ ಪಡೆದು ಪೋರ್ಚುಗೀಸರನ್ನು ಸೋಲಿಸಿದ್ದಂತೆ ತಿಳಿಯುತ್ತದೆ. ಈ ಘಟನೆ ನಡೆದದ್ದು 1618ರಲ್ಲಿ. 1623ರಲ್ಲಿ ಮಂಗಳೂರಿಗೆ ಬಂದಿದ್ದ ಇಟಲಿಯ ಪ್ರವಾಸಿ ಪೆತ್ರೊ ದ ಲ ವಲ್ಲೆ ಈಕೆಯ ಅಸಾಧಾರಣ ಧೈರ್ಯವನ್ನು ಮನಃಪೂರ್ವಕವಾಗಿ ಹೊಗಳಿದ್ದಾನೆ. **(ವಿ.ಜಿ.ಕೆ.)**

**ಅಬ್ಬಲೂರು :** (ಅಬಲೂರು) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಹಿರೇಕೆರೂರಿಗೆ 10ಕಿಮೀ ಉತ್ತರದಲ್ಲಿರುವ ಒಂದು ಹಳ್ಳಿ.

ಇದು ಒಂದು ಕಾಲಕ್ಕೆ ದೊಡ್ಡ ನಗರವಾಗಿತ್ತೆಂಬ ಪ್ರತೀತಿ ಇದೆ. ಆಗ ಸುತ್ತ ಮುತ್ತಲ ಚೋಗಾವಿ, ಸುತ್ಕೋಟಿ, ನೂಲ್ಗೇರಿ, ದೂಪದಹಳ್ಳಿ ಮತ್ತು ಯತ್ತಿನ ಹಳ್ಳಿಗಳನ್ನೂ ಒಳಗೊಂಡಿದ್ದಿರಬಹುದು. ಇಲ್ಲಿರುವ ಅನೇಕ ಅವಶೇಷಗಳಲ್ಲಿ ಈಗ ದೊರೆತಿರುವ 20 ಶಾಸನಗಳು ಚಾರಿತ್ರಿಕವಾಗಿ ಮುಖ್ಯವಾದುವು. ಇವುಗಳಿಂದ 12ನೆಯ ಶತಮಾನದಲ್ಲಿ ಈ ಊರಿನಲ್ಲಿ ಜೈನರ ವಸತಿ ಹೆಚ್ಚಾಗಿತ್ತೆಂದೂ ಜೈನರ ಬಸದಿಯೊಂದಿತ್ತೆಂದೂ ತಿಳಿಯುತ್ತದೆ. ಶಾಸನಗಳಲ್ಲಿ ಏಕಾಂತದ ರಾಮಯ್ಯನ (ನೋಡಿ) ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದವು ಮುಖ್ಯವಾದವು.

ಇಲ್ಲಿರುವ ಬ್ರಹ್ಮೇಶ್ವರ ಮತ್ತು ಸೋಮೇಶ್ವರ ದೇವಾಲಯಗಳು ವಾಸ್ತು ಮತ್ತು ಶಿಲ್ಪದೃಷ್ಟಿಯಿಂದ ಅಷ್ಟೇನೂ ಮಹತ್ವದವಲ್ಲವಾದರೂ ಏಕಾಂತದ ರಾಮಯ್ಯ ಇಲ್ಲಿ ನಡೆಸಿದನೆನ್ನಲಾದ ಪವಾಡಗಳಿಂದ ಅವು ಪ್ರಸಿದ್ಧವಾಗಿವೆ.

ಬ್ರಹ್ಮೇಶ್ವರ ದೇವಾಲಯ ಚಾಳುಕ್ಯ ರೀತಿಯಲ್ಲಿ ಕಟ್ಟಿದ ಒಂದು ಸರಳವಾದ ಕಟ್ಟಡ. ಚೌಕನಾದ ಇದರ ಗರ್ಭಗೃಹದ ಗೋಡೆಗಳು ಸರಳವಾಗಿದ್ದು ಮೇಲೆ ಮೂರಂತಸ್ತಿನ ವಿಮಾನವಿದೆ. ಸೋಮೇಶ್ವರ ದೇವಾಲಯ ತ್ರಿಕೂಟಾಚಲವಾಗಿದ್ದು ಇದರ ಮುಂದೆ ದೊಡ್ಡದಾದ ತೆರೆದ ಮುಖಮಂಟಪವಿದೆ. ಇದನ್ನು ಏಕಾಂತದ ರಾಮಯ್ಯ ಕಟ್ಟಿಸಿದನೆಂದು ಶಾಸನದಲ್ಲಿ ಹೇಳಿದ್ದರೂ ಬಹುಶಃ ಮೂಲ ದೇವಾಲಯ ಮಾತ್ರ ಆತನ ಕಾಲದಲ್ಲಿ ನಿರ್ಮಿತವಾಗಿದ್ದು, ಉಳಿದೆರಡು ಗರ್ಭಗುಡಿಗಳನ್ನೂ ಮುಂದಿನ ವಿಸ್ತರಣೆಯನ್ನೂ ಅನಂತರ ಕಟ್ಟಿರಬೇಕು. ಏಕೆಂದರೆ ಆ ಗರ್ಭಗುಡಿಗಳಲ್ಲಿ ಏಕಾಂತದ ರಾಮಯ್ಯ ಮತ್ತು ಅಗ್ಗಹೊನ್ನಯ್ಯರ ಹೆಸರಿನಲ್ಲಿ ಲಿಂಗಗಳನ್ನು ಸ್ಥಾಪಿಸಿದೆ.



ಸೋಮೇಶ್ವರ ದೇವಾಲಯ

ಸೋಮೇಶ್ವರ ದೇವಾಲಯದ ಗೋಡೆಗಳ ಮೇಲೆ ಈತನ ಹಲವು ಪವಾಡಗಳನ್ನು ಶಿಲ್ಪಿಸಿರುವುದಲ್ಲದೆ ಅವುಗಳ ಕೆಳಗೆ ವಿವರಗಳನ್ನೂ ಕೊಡುವ ಶಾಸನಗಳಿವೆ. ಏಕಾಂತದ ರಾಮಯ್ಯ ಜೈನರನ್ನು ಸೋಲಿಸಿದ ವಿವರಗಳನ್ನು ದೊಡ್ಡದೊಂದು ಶಾಸನ ತಿಳಿಸುತ್ತದೆ. ಏಕಾಂತದ ರಾಮಯ್ಯ ಬ್ರಹ್ಮೇಶ್ವರ ದೇವಸ್ಥಾನದ ಬಳಿ ಜಿನಬಿಂಬಕ್ಕೆ ಪ್ರತಿಯಾಗಿ ತನ್ನ ತಲೆಯನ್ನು ಪಣವಾಗಿಟ್ಟು ತಲೆಯನ್ನು ಕತ್ತರಿಸಿಕೊಂಡು ಮತ್ತೆ ಪಡೆದಾಗ ಸಂಕಗಾವುಂಡ ಬಸದಿಯನ್ನು ಒಡೆಯಲು ಬಿಡದೆ ಸೈನ್ಯವನ್ನೊಡ್ಡಿದಾಗ ಕಾದಿ ಗೆದ್ದು ಲಿಂಗ ಪ್ರತಿಷ್ಠೆ ಮಾಡಿದುದನ್ನು ವಿವರವಾಗಿ ತೋರಿಸುವ ಶಿಲ್ಪ ಪ್ರಮುಖ ವಾದುದು. ಇದಲ್ಲದೆ ಸಂಕಗಾವುಂಡ ಏಕಾಂತದ ರಾಮಯ್ಯನಿಗೆ ಓಲೆಯನ್ನು ಕೊಡುತ್ತಿರುವ ಶಿಲ್ಪ ಸೋಮೇಶ್ವರ ದೇವಾಲಯದ ಬಾಗಿಲಿನ ಎಡಕ್ಕೂ ಏಕಾಂತದ ರಾಮಯ್ಯ ಜಿನಬಿಂಬವನ್ನೊಡೆದು ಲಿಂಗಪ್ರತಿಷ್ಠೆ ಮಾಡುತ್ತಿರುವ ಶಿಲ್ಪ ಬಲಕ್ಕೂ ಇವೆ. ಇವುಗಳೊಂದಿಗೆ ಶಿವನಿಗೆ ಜೇಡರ ದಾಸಿಮಯ್ಯ ವಸ್ತ್ರವನ್ನು ಕೊಡುತ್ತಿರುವ ಶಿಲ್ಪವು, ಶಿವ ಕುಂಬಾರ ಗುಂಡಯ್ಯನ ಮುಂದೆ ನಾಟ್ಯವಾಡಿದ ಶಿಲ್ಪವೂ ಇವೆ. ಇವು ಶಿವಶರಣರ ವಿಷಯವಾಗಿ ದೊರೆತ ಅತ್ಯಂತ ಪ್ರಾಚೀನ ಶಿಲ್ಪ ಮತ್ತು ಶಾಸನಾಧಾರಗಳಾಗಿವೆ. **(ಎಂ.ಎಚ್.)**

**ಅಭಯಾರಣ್ಯಗಳು :** ಸ್ವಾಭಾವಿಕ ಸಸ್ಯ ಮತ್ತು ಪ್ರಾಣಿಸಂಪತ್ತನ್ನು ಉಳಿಸಿಕೊಂಡು ದೇಶದ ಸೌಂದರ್ಯವನ್ನು ಕಾಪಾಡಿಕೊಳ್ಳುವುದೇ ಅಲ್ಲದೆ, ನಿಸರ್ಗದ ಸಮತೋಲ ಕದಡದಂತೆ ಇರಿಸುವ ಸಲುವಾಗಿ ಕರ್ನಾಟಕದಲ್ಲಿ ಅಭಯಾರಣ್ಯಗಳನ್ನು, ರಾಷ್ಟ್ರೀಯ ಉದ್ಯಾನಗಳನ್ನು ಸ್ಥಾಪಿಸಲಾಗಿದೆ. ಇವು ಬಹುವಾಗಿ ಅಂತಾರಾಷ್ಟ್ರೀಯ ನಿಯಮಗಳನ್ನೇ ಅನುಸರಿಸುತ್ತವೆ. ಆದರೆ ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಅಲ್ಪಸ್ವಲ್ಪ ಮಾರ್ಪಾಟುಗಳನ್ನು ಇವುಗಳಲ್ಲಿ ಕಾಣಬಹುದು. ಇವೆಲ್ಲವೂ ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಟ್ಟಿವೆ. ಕೆಲವು ಅಭಯಾರಣ್ಯಗಳಲ್ಲಿ ಸಸ್ಯ ಹಾಗೂ ಪ್ರಾಣಿಗಳೆರಡಕ್ಕೂ ಸಂರಕ್ಷಣೆ ಒದಗಿದೆಯಾದರೆ ಇನ್ನು ಕೆಲವಲ್ಲಿ ಬರಿಯ ಪ್ರಾಣಿಗಳನ್ನು ಮಾತ್ರ ರಕ್ಷಿತಜೀವಿಗಳಾಗಿ ನೋಡಿಕೊಳ್ಳಲಾಗುತ್ತಿದೆ.

ಅಭಯಾರಣ್ಯಗಳ ಕಲ್ಪನೆ ಇತ್ತೀಚಿನದಲ್ಲ. ಪ್ರಾಚೀನ ಕಾಲದ ಋಷ್ಯಾಶ್ರಮಗಳು ವನ್ಯಜೀವಿಗಳಿಗೆ ಅಭಯಾರಣ್ಯಗಳಾಗಿದ್ದುವು. ಇಂಥ ಅರಣ್ಯಗಳಲ್ಲಿ ಮೃಗಪಕ್ಷಿಗಳನ್ನು ಕೊಲ್ಲುವುದು ಅಪರಾಧವೆಂದು ಪರಿಗಣಿಸಲ್ಪಡುತ್ತಿತ್ತು. ಅಭಯಾರಣ್ಯದಲ್ಲಿ ವನ್ಯಮೃಗಗಳು ಭಯವಿಲ್ಲದೆ ತಿರುಗಾಡುವುದನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಲಾಗಿದೆ. ನಮ್ಮ ಹಿರಿಯರು ಪ್ರಾಣಿಗಳ ಜೀವನವನ್ನು ಅಧ್ಯಯನ ಮಾಡಿ ಅದನ್ನು

ಮಾನವನ ಬುದ್ಧಿವಿಕಾಸಕ್ಕಾಗಿ ಅಳವಡಿಸಿ ಕತೆಯ ರೂಪದಲ್ಲಿ ನಿರೂಪಿಸಿದ್ದಾರೆ ಎನ್ನುವುದಕ್ಕೆ ಪಂಚತಂತ್ರ ಮತ್ತು ಹಿತೋಪದೇಶದ ಕತೆಗಳು ಸಾಕ್ಷಿಯಾಗಿವೆ. ವೇದಕಾಲದ ಅನಂತರ ವನ್ಯಪ್ರಾಣಿಗಳ ಬಾಳು ಹದಗೆಡುತ್ತ ಬಂತು. ಅರಣ್ಯ ಪ್ರದೇಶವನ್ನು ವ್ಯವಸಾಯಕ್ಕೆ ತೆರವು ಮಾಡತೊಡಗಿದುದರ ಪರಿಣಾಮವಾಗಿ ವನ್ಯಮೃಗಗಳ ಸಂಖ್ಯೆ ಕಡಿಮೆಯಾಯಿತು. ಕ್ರಿ.ಪೂ. 3ನೆಯ ಶತಮಾನದಲ್ಲಿ ಈ ನಾಶವನ್ನು ತಡೆಯಲು ಅಶೋಕ ಚಕ್ರವರ್ತಿ ಹೊರಡಿಸಿದ ಒಂದು ಕಾಯಿದೆ ನಶಿಸುತ್ತಿದ್ದ ಅನೇಕ ಮೃಗಪಕ್ಷಿಗಳಿಗೆ ರಕ್ಷಣೆಯನ್ನು ಕೊಟ್ಟಿರಬೇಕು. ಅಶೋಕ ಚಕ್ರವರ್ತಿಯ ಈ ಕಾಯಿದೆ ಜಗತ್ತಿನಲ್ಲೇ ವನ್ಯಜೀವಿಗಳ ಸಂರಕ್ಷಣೆಗಾಗಿ ಮಾಡಿದ ಪ್ರಪ್ರಥಮ ಕಾಯಿದೆಯಾಗಿದೆ. ಜನಸಂಖ್ಯೆ ಬೆಳೆದಂತೆ ಉಳುವುದಕ್ಕಾಗಿ ಭೂಮಿ, ನೆಲೆಸುವುದಕ್ಕಾಗಿ ಹಳ್ಳಿಪಟ್ಟಣಗಳು, ವಾಹನಗಳ ಸಂಚಾರಕ್ಕಾಗಿ ಹೆದ್ದಾರಿ, ನೀರಾವರಿ-ವಿದ್ಯುಚ್ಛಕ್ತಿಗಾಗಿ ವಿಶಾಲವಾದ ಜಲಾಶಯಗಳು, ಅರಣ್ಯ ಕೈಗಾರಿಕೆಗಳಿಗೆ ನೆಲ ಇತ್ಯಾದಿಗಳ ಪೂರೈಕೆಗಾಗಿ ಮಿತಿಮೀರಿದ ಪ್ರಮಾಣದಲ್ಲಿ ಅರಣ್ಯ ನಾಶವಾಗಿ ಅವುಗಳಲ್ಲಿ ನೆಲೆಸಿದ್ದ ವನ್ಯಜೀವಿಗಳು ದಿನೇ ದಿನೇ ನಶಿಸುತ್ತಿವೆ. ಅಳಿಯುತ್ತಿರುವ ಈ ನಿಸರ್ಗ ಸಂಪತ್ತನ್ನು ಉಳಿಸಲು ಅನೇಕ ಪ್ರಯತ್ನಗಳು ನಡೆಯುತ್ತಿವೆ. 1948ರಲ್ಲಿ ಯುನೆಸ್ಕೊ ಆಶ್ರಯದಲ್ಲಿ ಫಾಂಟನ್ ಬ್ಲೂ ಎಂಬಲ್ಲಿ ಪ್ರಕೃತಿಸಂಪತ್ತನ್ನು ರಕ್ಷಿಸುವ ಅಂತಾರಾಷ್ಟ್ರೀಯ ಸಂಘ ಸ್ಥಾಪನೆಯಾಯಿತು. ಈ ಸಂಘದ ಪ್ರೇರಣೆಯಂತೆ ಭಾರತ ಸರ್ಕಾರ ಒಂದು ಪೂರ್ವಾಧಿಕಾರಿಯುಕ್ತ (ಅಡ್‍ಹಾಕ್) ಸಮಿತಿಯನ್ನು ನೇಮಿಸಿ, ಭಾರತದಲ್ಲಿ ವನ್ಯಜೀವಿಗಳ ರಕ್ಷಣೆಯ ಬಗ್ಗೆ ಯೋಜನೆಗಳನ್ನು ರೂಪಿಸಲು ಆದೇಶ ನೀಡಿತು. ಈ ಸಮಿತಿಯ ಶಿಫಾರಸುಗಳ ಮೇಲೆ 1952ರಲ್ಲಿ ಭಾರತೀಯ ವನ್ಯಪ್ರಾಣಿ ಸಂರಕ್ಷಣಾ ಸಂಸ್ಥೆ ರಚಿಸಲ್ಪಟ್ಟಿತು. ವನ್ಯಪ್ರಾಣಿ ರಕ್ಷಣೆಗೆ ತಕ್ಕ ವ್ಯವಸ್ಥೆ, ಕಾನೂನು ತಿದ್ದುಪಡಿ, ಮೃಗಬೇಟೆಗೆ ಹಲವಾರು ಆವಶ್ಯಕ ನಿಬಂಧನೆಗಳು, ಮೃಗಪಕ್ಷಿಗಳ ಚರ್ಮಕೊಂಬು ತುಪ್ಪಟ ಗರಿ ಇವುಗಳ ರಫ್ತಿಗೆ ನಿಬಂಧನೆಗಳು, ಅಭಯಾರಣ್ಯ ಹಾಗೂ ರಾಷ್ಟ್ರೀಯ ವನ್ಯಪ್ರಾಣಿ ಕ್ಷೇತ್ರ ನಿರ್ಮಾಣ ಇತ್ಯಾದಿ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ ರಾಜ್ಯ ಸರ್ಕಾರಗಳಿಗೆ ರಾಜ್ಯ ವನ್ಯಪ್ರಾಣಿ ಸಂಸ್ಥೆಗಳ ಮೂಲಕ ಸಲಹೆಗಳನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಅಭಯಾರಣ್ಯಗಳ ಮತ್ತು ರಾಷ್ಟ್ರೀಯ ವನ್ಯಪ್ರಾಣಿ ಕ್ಷೇತ್ರಗಳ ಉಪಯುಕ್ತತೆ ಪಂಚಮುಖದ್ದಾಗಿರುತ್ತದೆ.

1. ವನ್ಯಪ್ರಾಣಿಗಳಿಗೆ ಮುಡಿಪಾಗಿಟ್ಟ ಪ್ರದೇಶಗಳ ನೈಸರ್ಗಿಕ ಸಂಪತ್ತನ್ನು ಕಾಪಾಡುವುದು.

2. ಅಲ್ಲಿನ ಸಸ್ಯ ಹಾಗೂ ಪ್ರಾಣಿವರ್ಗದ ರಕ್ಷಣೆ ಹಾಗೂ ಅಭಿವೃದ್ಧಿ.

3. ಅತ್ಯಮೂಲ್ಯವಾದ ಮೃಗಪಕ್ಷಿಗಳು ನಿರ್ನಾಮವಾಗುವುದನ್ನು ತಡೆಗಟ್ಟುವುದು.

4. ಪ್ರಕೃತಿ ವಿಜ್ಞಾನ ಹಾಗೂ ಮೃಗಪಕ್ಷಿಗಳ ಜೀವನ ಇತ್ಯಾದಿಗಳ ಸಂಶೋಧನೆಗೆ ಈ ಕ್ಷೇತ್ರಗಳು ಕಾರ್ಯರಂಗವಾಗುವುದು.

5. ವನ್ಯಪ್ರಾಣಿ ಕ್ಷೇತ್ರಗಳು ವಿದೇಶಿ ಹಾಗೂ ಒಳನಾಡಿನ ಪ್ರವಾಸಿಗರನ್ನು ಆಕರ್ಷಿಸಿ ನಾಡಿನ ಆರ್ಥಿಕ ಸ್ಥಿತಿ ಸುಧಾರಿಸಲು ವಿಶೇಷ ರೀತಿಯಲ್ಲಿ ಸಹಾಯವಾಗುವುದು.

ಕರ್ನಾಟಕದಲ್ಲಿ ಅನೇಕ ಅಭಯಾರಣ್ಯಗಳನ್ನೂ ರಾಷ್ಟ್ರೀಯ ವನ್ಯಪ್ರಾಣಿ ಕ್ಷೇತ್ರ ಮತ್ತು ಪಕ್ಷಿಧಾಮಗಳನ್ನೂ ಸ್ಥಾಪಿಸಲಾಗಿದೆ. ಇತ್ತೀಚಿನ ಮಾಹಿತಿಯ ಪ್ರಕಾರ (2000) ಕರ್ನಾಟಕದಲ್ಲಿ ಒಟ್ಟು 5 ರಾಷ್ಟ್ರೀಯ ಉದ್ಯಾನಗಳೂ 21 ವನ್ಯಧಾಮಗಳೂ ಇವೆ. ಇವುಗಳಲ್ಲಿ 5 ಪಕ್ಷಿಧಾಮಗಳೂ ಸೇರಿವೆ. ಅಣಶಿ, ಬಂಡೀಪುರ, ಬನ್ನೇರುಘಟ್ಟ ಕುದುರೆಮುಖ ಮತ್ತು ನಾಗರಹೊಳೆ (ರಾಜೀವ್‍ಗಾಂಧಿ) - ಇವು ರಾಷ್ಟ್ರೀಯ ಉದ್ಯಾನಗಳು. ಅಭಯಾರಣ್ಯಗಳು (ವನ್ಯಧಾಮಗಳು) ಇಂತಿವೆ. ಆದಿಚುಂಚನಗಿರಿ, ಅತ್ತಿವೇರಿ, ಅರಬಿತಿಟ್ಟು, ಭದ್ರಾ, ಬಿಳಿಗಿರಿರಂಗನಬೆಟ್ಟ, ಬ್ರಹ್ಮಗಿರಿ, ಕಾವೇರಿ, ದಾಂಡೇಲಿ, ದರೋಜಿ, ಘಟಪ್ರಭಾ, ಗುಡವಿ, ಮೂಕಾಂಬಿಕ, ಮೇಲುಕೋಟೆ, ಪುಷ್ಪಗಿರಿ, ರಾಣೆಬೆನ್ನೂರು, ಶರಾವತಿ, ಶೆಟ್ಟಿಹಳ್ಳಿ, ಸೋಮೇಶ್ವರ ಮತ್ತು ತಲಕಾವೇರಿ.

### ರಾಷ್ಟ್ರೀಯ ಉದ್ಯಾನಗಳು

**1. ಅಣಶಿ :** ಉತ್ತರಕನ್ನಡ ಜಿಲ್ಲೆ ದಾಂಡೇಲಿಯಿಂದ 38ಕಿಮೀ ಮತ್ತು ಕಾರವಾರದಿಂದ 55ಕಿಮೀ ದೂರದಲ್ಲಿದೆ. ವಿಸ್ತೀರ್ಣ 250ಚ.ಕಿಮೀ. ದಾಂಡೇಲಿ ಅಭಯಾರಣ್ಯದ ಭಾಗವಾಗಿದ್ದ ಇದನ್ನು ರಾಷ್ಟ್ರೀಯ ಉದ್ಯಾನವನ್ನಾಗಿ ಮಾಡಬೇಕೆಂಬ ಪ್ರಸ್ತಾಪ 1987ರಲ್ಲಿ ಆಗಿದೆ. ಪ್ರವಾಸಿಗರ ಸೌಲಭ್ಯ ಇನ್ನೂ ಇಲ್ಲ. ಉಳವಿ ತೀರ್ಥಕ್ಷೇತ್ರ ಇದಕ್ಕೆ ಅಂಟಿಕೊಂಡಂತಿದೆ. ಅರೆನಿತ್ಯ ಹಸುರಿನ ಮತ್ತು ನಿತ್ಯಹಸುರಿನ ಅರಣ್ಯದಿಂದ ಕೂಡಿರುವ ಈ ಉದ್ಯಾನದಲ್ಲಿ ಆನೆ, ಕಾಟಿ, ಕೆಮ್ಮ, ಜಿಂಕೆ, ಕಡವೆ, ಮುಸುವ, ಕಾಡುಪಾಪ, ಹುಲಿ, ಕಪ್ಪುಚಿರತೆ, ಪುನುಗುಬೆಕ್ಕು, ಕಾಡುನಾಯಿ, ಕೇಶಳಿಲು-ಇವು ವಿಶಿಷ್ಟ ವನ್ಯಪ್ರಾಣಿಗಳು. ಮಂತಳಿ, ವಾಟೆಹುಳಿ, ಗುಳುಮಾವು, ಹೆಬ್ಬಲಸು, ಚಕ್ಕೆ ಮುಂತಾದವು ಇಲ್ಲಿನ ಕೆಲವು ವೃಕ್ಷಗಳು.

**2. ಬಂಡೀಪುರ :** (ಚಾಮರಾಜನಗರ ಜಿಲ್ಲೆ) ಗುಂಡ್ಲುಪೇಟೆಯಿಂದ 15 ಕಿಮೀ ಮೈಸೂರಿನಿಂದ 80 ಕಿಮೀ ದೂರದಲ್ಲಿದೆ. ಕೇರಳದ ವೈನಾಡು, ತಮಿಳುನಾಡಿನ ಮುದುಮಲೈ ಅಭಯಾರಣ್ಯಗಳೂ ರಾಜೀವಗಾಂಧಿ (ನಾಗರಹೊಳೆ) ರಾಷ್ಟ್ರೀಯ ಉದ್ಯಾನವನಗಳೊಂದಿಗೆ ಹೊಂದಿಕೊಂಡಂತಿದೆ. ಭಾರತದ ಪ್ರಸಿದ್ಧ ಉದ್ಯಾನಗಳ ಪೈಕಿ ಇದೂ ಒಂದು. ಹುಲಿ ಯೋಜನೆಯ ಪ್ರಮುಖ ತಾಣವೂ ಹೌದು. ವಿಸ್ತೀರ್ಣ 874 ಚಕಿಮೀ.

ಬಂಡೀಪುರದ ಹುಲಿ

1898ರಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮೀಸಲು ಅರಣ್ಯವಾಗಿದ್ದ ಇದು 1941ರಲ್ಲಿ ವನ್ಯಪ್ರಾಣಿ ಮೀಸಲು ಕ್ಷೇತ್ರವಾಯಿತು. 1974ರಲ್ಲಿ ರಾಷ್ಟ್ರೀಯ ಉದ್ಯಾನವಾಗಿ ಪರಿವರ್ತಿತವಾಯಿತು. ಇಲ್ಲಿನ ಅರಣ್ಯ ಮುಖ್ಯವಾಗಿ ಶುಷ್ಕಪರ್ಣಪಾತಿ ಬಗೆಯದು. ತೇಗ, ಮತ್ತಿ, ಹೊನ್ನೆ, ದಿಂಡಿಲು, ತಾರೆ, ಅಳಲೆ, ಬೆಟ್ಟದನೆಲ್ಲಿ, ಮುತ್ತಗ, ಕಾಡುಬೆಂಡೆ ಮುಂತಾದವು ಶುಷ್ಕ ಪ್ರದೇಶದಲ್ಲಿ ಬೆಳೆದರೆ, ತೇವಾಂಶ ಹೆಚ್ಚಿರುವ ಕಡೆ ಬೀಟೆ, ಅರಿಶಿಣತೇಗ, ಮಗ್ಗಾರೆ, ಕೋಣನಕೊಂಬು, ನವಿಲಾದಿ, ಗಂಟೆ ಮುಂತಾದವು ಕಾಣಸಿಗುತ್ತವೆ. ಬಿದಿರು, ನೇರಳೆ, ಬೂರುಗ ಇನ್ನಿತರೆ ಸಸ್ಯಗಳು. ಹುಲಿ, ಚಿರತೆ, ಕಾಡುನಾಯಿ, ಕಾಡುಬೆಕ್ಕು, ಚಿರತೆಬೆಕ್ಕು, ಮೂರು ಬಗೆಯ ಮುಂಗುಸಿ, ಕಿರುಬ ಇಲ್ಲಿನ ಮುಖ್ಯ ಮಾಂಸಾಹಾರಿ ಪ್ರಾಣಿಗಳು. ಆನೆ, ಜಿಂಕೆ, ಕಡವೆ, ಕೊಂಡಕುರಿ, ಕೆಮ್ಮ ಸಸ್ಯಾಹಾರಿ ಮೃಗಗಳು ಕರಡಿ, ಮುಸುವ, ಮಂಗ ಮೊಲ, ಕಾಡುಹಂದಿ, ಮುಳ್ಳು ಹಂದಿ, ಕೇಶಳಿಲು, ನೀರುನಾಯಿಗಳು ಹೇರಳವಾಗಿವೆ. 230ಕ್ಕೂ ಹೆಚ್ಚು ಬಗೆಯ ಪಕ್ಷಿಗಳು ಇಲ್ಲಿವೆ. ನವಿಲು, ಕಾಡುಕೋಳಿ, ಹಸುರುಪಾರಿವಾಳ, ಮರಕುಟಿಗ ಬಲುಸಾಮಾನ್ಯ. ಪ್ರವಾಸಿಗರಿಗೆ ವಸತಿಸೌಕರ್ಯ, ಪ್ರಾಣಿವೀಕ್ಷಣೆಗೆ ವಾಹನ ಸೌಲಭ್ಯ ಚೆನ್ನಾಗಿದೆ (ನೋಡಿ: ಬಂಡೀಪುರ).

**3. ಬನ್ನೇರುಘಟ್ಟ :** (ಬೆಂಗಳೂರು ಜಿಲ್ಲೆ) ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ 22ಕಿಮೀ ದೂರದಲ್ಲಿದೆ. 1974ರಲ್ಲೇ ರಾಷ್ಟ್ರೀಯ ಉದ್ಯಾನವನವಾಗಿ ಮಾರ್ಪಡಿಸಲಾಗಿದೆ. ವಿಸ್ತೀರ್ಣ 104ಚಕಿಮೀ. ಇಲ್ಲಿನ ಅರಣ್ಯ ಕುರುಚಲು ಮತ್ತು ಶುಷ್ಕಪರ್ಣಪಾತಿ ಬಗೆಯದು. ಇಲ್ಲಿನ ಪ್ರಾಣಿಗಳ ಪೈಕಿ ಮುಖ್ಯವಾದವು ಆನೆ, ಕಾಟಿ, ಚಿರತೆ, ಕಾಡುಹಂದಿ, ಕರಡಿ, ಕಡವೆ, ಜಿಂಕೆ, ಮುಸುವ, ಮೊಲ, ಮಂಗ ಮತ್ತು ಕಣೆಹಂದಿ.

ಇಲ್ಲಿ ಉತ್ತಮವಾದ ಸಿಂಹ ಮತ್ತು ಹುಲಿ ಸಫಾರಿ ಸೌಲಭ್ಯ, ಸಣ್ಣದೊಂದು ಮೃಗಾಲಯ, ಉರಗೋದ್ಯಾನ, ಪ್ರಾಣಿ ಸಂಗ್ರಹಾಲಯಗಳೂ ಇವೆ (ನೋಡಿ: ಬನ್ನೇರಘಟ್ಟ).

**4. ಕುದುರೆಮುಖ :** (ದಕ್ಷಿಣಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳು) ಕರ್ನಾಟಕದ ಇತ್ತೀಚಿನ ರಾಷ್ಟ್ರೀಯ ಉದ್ಯಾನ. ಇದನ್ನು ಉದ್ಯಾನವನ್ನಾಗಿ ರೂಪಿಸಬೇಕೆಂಬ ನಿರ್ಧಾರವನ್ನು 1987ರಲ್ಲಿ ಕೈಗೊಳ್ಳಲಾಯಿತು. ಇದರ ವಿಸ್ತೀರ್ಣ 600ಚಕಿಮೀ. ಪಶ್ಚಿಮ ಘಟ್ಟಗಳಲ್ಲಿ ಸ್ಥಿತವಾಗಿರುವ ಈ ಪ್ರದೇಶದಲ್ಲಿ ನಿತ್ಯಹಸುರಿನ, ಅರೆನಿತ್ಯಹಸುರಿನ ಹಾಗೂ ಶೋಲಾ ಅರಣ್ಯವಿದೆ. ಸುತ್ತ ಕಾಫಿ, ಟೀ ತೋಟಗಳಿವೆಯಾದರೂ ನಿಸರ್ಗ ಸೌಂದರ್ಯಕ್ಕೆ ಹೆಸರಾಗಿದೆ. ಹತ್ತಿರದ ಗಂಗಾಮೂಲದಲ್ಲಿ ನೇತ್ರಾವತಿ, ತುಂಗಾ, ಭದ್ರಾ ನದಿಗಳು ಉಗಮಿಸುತ್ತವೆ.

ಆನೆಗಳ ಹಿಂಡು

ಹಲಸು, ಸುರಹೊನ್ನೆ, ಸಪ್ತಪರ್ಣಿ, ನೇರಳೆ, ನಾಗಸಂಪಿಗೆ, ಹೊಲಿಗೇರು, ಬಲಗಿ, ಕಿರಿಬೋಗಿ, ಹಾಲುಮಡ್ಡಿ ಮುಂತಾದವು ಇಲ್ಲಿನ ಮುಖ್ಯ ವೃಕ್ಷಜಾತಿಗಳು. ಇಲ್ಲಿನ ಪ್ರಾಣಿಸಂಪತ್ತು ಹುಲಿ, ಚಿರತೆ, ಕಾಡುನಾಯಿ, ನರಿ, ಸಿಂಗಳೀಕ, ಮುಸುವ, ಕರಡಿ, ಕಾಟಿ, ಕಡವೆ, ಜಿಂಕೆ, ಕೆಮ್ಮ, ಕೊಂಡಕುರಿ, ಕೇಶಳಿಲು, ಹಾರುವ ಓತಿ, ಹಾರುವ ಅಳಿಲು, ಕಣೆಹಂದಿ ಮುಂತಾದವನ್ನೂ ಹಲವಾರು ಬಗೆಯ ಹಾವುಗಳನ್ನೂ ಒಳಗೊಂಡಿದೆ. ಹಕ್ಕಿಗಳ ಪೈಕಿ ಮಲಬಾರ್ ಟ್ರೋಗನ್, ಓಂಗಿಲೆ, ಕಗ್ಗಿಲು, ಮಲಬಾರ್ ಸಿಳ್ಳೆತ್ರಷ್ ಮುಖ್ಯವೆನಿಸಿವೆ.

ಈ ಉದ್ಯಾನವನ ಹಾಸನದಿಂದ 108ಕಿಮೀ ದೂರದಲ್ಲೂ ಮಂಗಳೂರಿನಿಂದ 78ಕಿಮೀ ದೂರದಲ್ಲೂ ಇದೆ. ಶೃಂಗೇರಿ, ಆಗುಂಬೆಗಳಿಂದಲೂ ಇಲ್ಲಿಗೆ ರಸ್ತೆ ಸೌಕರ್ಯ ಇದೆ (ನೋಡಿ: ಕುದುರೆಮುಖ).

**5. ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನವನ :** (ನಾಗರಹೊಳೆ) ಕೊಡಗು ಜಿಲ್ಲೆಯ ಕೆಲವು ಅರಣ್ಯಗಳು, ಮೈಸೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಒಳಗೊಂಡ ಈ ಉದ್ಯಾನ 1955ರಲ್ಲಿ ವನ್ಯಪ್ರಾಣಿ ಮೀಸಲು ಅರಣ್ಯವಾಗಿ ಪ್ರಾರಂಭವಾಯಿತು. 1975, 1983 ಮತ್ತು 1988ರಲ್ಲಿ ಹೆಚ್ಚುವರಿ ಪ್ರದೇಶ ಸೇರ್ಪಡೆಯಾಗಿ 1992ರಲ್ಲಿ ಈಗಿನ ಹೆಸರು ಪಡೆಯಿತು. ಇದರ ಈಗಿನ ವಿಸ್ತೀರ್ಣ 644ಚಕಿಮೀ.

ಇಲ್ಲಿನ ಕಾಡು ಆರ್ದ್ರ ಹಾಗೂ ಶುಷ್ಕಪರ್ಣಪಾತಿ ಬಗೆಯದು. ಕೆಲವೆಡೆ ನಿತ್ಯ ಹಸುರಿನ ಅರಣ್ಯವೂ ಇದೆ. ಆನೆ, ಕಾಟಿ, ಜಿಂಕೆ, ಕೊಂಡಕುರಿ, ಕಡವೆ, ಕೆಮ್ಮ ಇಲ್ಲಿನ ಮುಖ್ಯ ಸಸ್ಯಾಹಾರಿ ಪ್ರಾಣಿಗಳು. ಹುಲಿ, ಚಿರತೆ, ಕರಡಿ, ಕಾಡುನಾಯಿ, ಕಿರುಬ, ಚಿರತೆಬೆಕ್ಕು, ಕಾಡುಬೆಕ್ಕು, ಮುಂಗುಸಿ, ಮಾಂಸಾಹಾರಿಗಳು. ನೀರುನಾಯಿ, ಕಾಡುಪಾಪ, ಕಣೆಹಂದಿ, ಚಿಪ್ಪುಹಂದಿ, ಪುನುಗುಬೆಕ್ಕು ಸಾಕಷ್ಟಿವೆ. 250ಕ್ಕೂ ಹೆಚ್ಚು ಬಗೆಯ ಪಕ್ಷಿಜಾತಿಗಳಿವೆ. ಈ ಉದ್ಯಾನವನ ಮೈಸೂರಿನಿಂದ 90ಕಿಮೀ ದೂರದಲ್ಲಿದೆ. ಪ್ರಾಣಿವೀಕ್ಷಣೆಗೆ ವಾಹನ ಸೌಲಭ್ಯ ಇದೆ. ವಸತಿ ಸೌಕರ್ಯ ಸು.10ಕಿಮೀ ದೂರದ ಮೂರ್ಕಲ್ಲಿನಲ್ಲಿದೆ (ನೋಡಿ: ನಾಗರಹೊಳೆ).

**ಅಭಯಾರಣ್ಯಗಳು (ವನ್ಯಧಾಮಗಳು ಹಾಗೂ ಪಕ್ಷಿಧಾಮಗಳು)**

**1. ಆದಿಚುಂಚನಗಿರಿ ಮಯೂರ ಅಭಯಾರಣ್ಯ :** (ಮಂಡ್ಯ ಜಿಲ್ಲೆ) ನವಿಲು ಸಂರಕ್ಷಣೆಗೆಂದು ಮೀಸಲಾಗಿರುವ ಪಕ್ಷಿಧಾಮ. 1981 ಅಕ್ಟೋಬರಿನಲ್ಲಿ ಅಸ್ತಿತ್ವಕ್ಕೆ ಬಂತು. ವಿಸ್ತೀರ್ಣ 0.88ಚಕಿಮೀ. ಇಲ್ಲಿನದು ಪ್ರಧಾನವಾಗಿ ಕುರುಚಲು ಕಾಡು. ಗೊಬ್ಬಳಿ, ಕಳ್ಳಿ, ಎಕ್ಕ, ಬೇವು ಇಲ್ಲಿನ ಮುಖ್ಯ ಸಸ್ಯಜಾತಿಗಳು.

ನವಿಲು ಮಾತ್ರವಲ್ಲದೆ ಹಳದಿಕೊರಳಿನ ಪಿಕಳಾರವೂ ಇಲ್ಲಿ ಕಾಣದೊರೆಯುತ್ತದೆ. ಮಂಗ, ಬಾವಲಿ, ಕಾಡುಬೆಕ್ಕು, ಮುಂಗುಸಿ ಮತ್ತು ಮೊಲ ಇಲ್ಲಿ ಸಿಗುವ ಸಸ್ತನಿಗಳು (ನೋಡಿ: ಆದಿಚುಂಚನಗಿರಿ).

**2. ಅತ್ತಿವೇರಿ ಪಕ್ಷಿಧಾಮ :** (ಉತ್ತರಕನ್ನಡ ಜಿಲ್ಲೆ) ಮುಂಡಗೋಡಿನಿಂದ 17ಕಿಮೀ ದೂರದಲ್ಲೂ ಹುಬ್ಬಳ್ಳಿಯಿಂದ 43ಕಿಮೀ ದೂರದಲ್ಲೂ ಇದೆ. ವಿಸ್ತೀರ್ಣ 2.23ಚಕಿಮೀ. 1994ರ ಅಕ್ಟೋಬರಿನಲ್ಲಿ ಅಸ್ತಿತ್ವಕ್ಕೆ ಬಂತು. ಅತ್ತಿವೇರಿ ಗ್ರಾಮದ ಬಳಿ ಹರಿಯುವ ತಾಯವ್ವನ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಲಾದ ಅಣೆಕಟ್ಟಿನಿಂದಾಗಿ ಅತ್ತಿವೇರಿ ಜಲಾಶಯ ರೂಪುಗೊಂಡು ಪಕ್ಷಿಗಳ ಮೆಚ್ಚಿನ ತಾಣವಾಯಿತು. ಸುತ್ತ ಪರ್ಣಪಾತಿ ಕಾಡಿದೆ. ಬಾಗೆ, ಬೂರುಗ, ತಾಟಿನುಂಗು, ಹಲಸು, ಬಿಳಿಜಾಲಿ, ನೇರಳೆ, ತೇಗ, ಬೀಟೆ, ಜಾಲಿ, ಬಿದಿರು ಇಲ್ಲಿನ ಮುಖ್ಯ ಸಸ್ಯಜಾತಿಗಳು.

ಇಲ್ಲಿನ ಪಕ್ಷಿಗಳಲ್ಲಿ ಮುಖ್ಯವಾಗಿ ಬಿಳಿಬೂಸ, ನೀರುಕಾಗೆ, ಚಮಚಕೊಕ್ಕು, ಬೆಳ್ಳಕ್ಕಿ, ಮೀಂಚುಳ್ಳಿ, ಓಂಗಿಲೆ ಮತ್ತು ಕವಲುತೋಕೆಗಳನ್ನು ಹೆಸರಿಸಬಹುದು.

**3. ಅರಬಿತಿಟ್ಟು ವನ್ಯಧಾಮ :** (ಮೈಸೂರು ಜಿಲ್ಲೆ) ಮೈಸೂರಿನಿಂದ ಪಶ್ಚಿಮಕ್ಕೆ 30ಕಿಮೀ ದೂರದಲ್ಲಿ ಮೈಸೂರು ಮಂಗಳೂರು ಹೆದ್ದಾರಿಯಲ್ಲಿದೆ. ವಿಸ್ತೀರ್ಣ 13.5ಚಕಿಮೀ. 1985 ಏಪ್ರಿಲ್‌ನಲ್ಲಿ ಅಸ್ತಿತ್ವಕ್ಕೆ ಬಂತು. ಇಲ್ಲಿನ ಪ್ರಧಾನ ಸಸ್ಯವರ್ಗ ಕುರುಚಲು ಬಗೆಯದಾಗಿದ್ದು ದಿಂಡಲು, ಬೆಟ್ಟದನೆಲ್ಲಿ, ಮುಗುಳಿ, ಶ್ರೀಗಂಧವನ್ನು ಒಳಗೊಂಡಿದೆ. ಚಿರತೆ, ನರಿ, ಜಿಂಕೆ, ಕಾಡುಹಂದಿ, ಕಣೆಹಂದಿ, ಮೊಲ ಮತ್ತು ಮುಂಗುಸಿ ಇಲ್ಲಿನ ಮುಖ್ಯ ಪ್ರಾಣಿಜಾತಿಗಳು. ಪ್ರವಾಸಿಗರಿಗೆ ಇನ್ನೂ ಪ್ರವೇಶ ಕಲ್ಪಿಸಲಾಗಿಲ್ಲ.

**4. ಭದ್ರಾ ವನ್ಯಧಾಮ :** (ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆ) ಚಿಕ್ಕಮಗಳೂರಿನಿಂದ 30ಕಿಮೀ ದೂರದಲ್ಲಿ ಇದರ ದಕ್ಷಿಣ ಭಾಗವಾದ ಮುತ್ತೋಡಿಯೂ ತರೀಕೆರೆಯಿಂದ 22ಕಿಮೀ ದೂರದಲ್ಲಿ ಇದರ ಉತ್ತರ ಭಾಗವಾದ ಲಕ್ಕವಳ್ಳಿಯೂ ಇವೆ. 1974ರ ಸೆಪ್ಟೆಂಬರಿನಲ್ಲಿ ಅಭಯಾರಣ್ಯವಾಗಿ ಅಸ್ತಿತ್ವಕ್ಕೆ ಬಂತು. 1998ರ ನವೆಂಬರ್‌ನಲ್ಲಿ ಹುಲಿ ಮೀಸಲು ಅರಣ್ಯವಾಗಿ ಮೇಲ್ದರ್ಜೆಗೆ ಏರಿತು. ಇದರ ವಿಸ್ತೀರ್ಣ 493ಚಕಿಮೀ. ಇದರಲ್ಲಿ ಲಕ್ಕವಳ್ಳಿ, ಮುತ್ತೋಡಿ ಮತ್ತಿತರ ರಾಜ್ಯ ಅರಣ್ಯಗಳನ್ನು ಒಳಗೊಂಡ ಒಂದು ಕ್ಷೇತ್ರವೂ ಬಾಬಾಬುಡನ್‌ಗಿರಿ ಅರಣ್ಯವನ್ನು ಒಳಗೊಂಡ ಎರಡನೆಯ ಕ್ಷೇತ್ರವೂ ಇದೆ. ಉತ್ತರದಲ್ಲಿ ಭದ್ರಾ ಜಲಾಶಯ ಇದೆ. ಈ ಅಭಯಾರಣ್ಯದ ದಕ್ಷಿಣಭಾಗದಲ್ಲಿ ಆರ್ದ್ರಪರ್ಣಪಾತಿ ಬಗೆಯ ಅರಣ್ಯವೂ ಉತ್ತರಭಾಗದಲ್ಲಿ ಶುಷ್ಕಪರ್ಣಪಾತಿ ಬಗೆಯ ಅರಣ್ಯವೂ ಬಾಬಾಬುಡನ್‌ಗಿರಿ ವಲಯದಲ್ಲಿ ಶೋಲಾ ಬಗೆಯ ಅರಣ್ಯವೂ ಇವೆ.

ಇಲ್ಲಿನ ಮುಖ್ಯ ಸಸ್ಯಜಾತಿಗಳೆಂದರೆ ಹೋಲೆದಾಸವಾಳ, ಅರಿಶಿಣತೇಗ, ತಡಸಲು, ಕಲ್ತೇಗ, ತೇಗ, ಹುನಗಲು, ತಾರೆ, ಮತ್ತಿ, ಬೀಟೆ, ಹೊನ್ನೆ, ಕೂಲಿ, ಅತ್ತಿ, ನಾಯಿಬೆಂಡೆ, ಚಿಪ್ಪಾಲೆ, ಜಾಲಾರಿ, ಸಗಡೆ, ದಿಂಡಲು, ದೊಳ್ಳಿ, ಜಂಬೆ, ಬಗನಿ ಮತ್ತು ಗಂಡುಬಿದಿರು ಹಾಗೂ ಹೆಬ್ಬಿದಿರು.

ಹುಲಿ, ಚಿರತೆ, ಕಾಡುಬೆಕ್ಕು, ಕಾಡುನಾಯಿ, ನರಿ, ಬೆಕ್ಕು, ಕರಡಿ, ಆನೆ, ಕಾಟಿ, ಕಡವೆ, ಜಿಂಕೆ, ಕೆಮ್ಮ, ಕೊಂಡಕುರಿ, ಕಾಡುಹಂದಿ, ಮುಸುವ, ಮಂಗ, ಕಾಡುಪಾಪ, ಪುನುಗುಬೆಕ್ಕು, ತಾಳೆಬೆಕ್ಕು, ಮುಂಗುಸಿ, ಚಿಪ್ಪುಹಂದಿ, ಕೇಶಳಿಲು, ಕಣೆಹಂದಿ, ನೀರುನಾಯಿ, ಹಾರುವ ಓತಿ - ಇವು ಪ್ರಧಾನ ಪ್ರಾಣಿಜಾತಿಗಳು.

ಕಾಡುನಾಯಿಗಳು

250ಕ್ಕೂ ಹೆಚ್ಚು ಬಗೆಯ ಹಕ್ಕಿಗಳಿವೆ. ಬ್ಲ್ಯಾಕ್‌ಡ್ರ್ಗ, ಶಾಮ, ಕೆಂಪೆದೆ ಪಿಕಳಾರ, ಕಾಜಾಣ, ಕಗ್ಗಿಲು, ಓಂಗಿಲೆಗಳು ಇಲ್ಲಿ ಕಾಣಸಿಗುವ ಪಕ್ಷಿ ಪ್ರಭೇದಗಳು. ಪ್ರವಾಸಿಗರಿಗೆ ವಸತಿ ಹಾಗೂ ವೀಕ್ಷಣೆಗೆ ವಾಹನ ಸೌಕರ್ಯ ಇವೆ.

**5. ಬಿಳಿಗಿರಿರಂಗಸ್ವಾಮಿ ದೇವಸ್ಥಾನದ ಅಭಯಾರಣ್ಯ :** (ಚಾಮರಾಜನಗರ ಜಿಲ್ಲೆ) ಚಾಮರಾಜನಗರದಿಂದ 48ಕಿಮೀ ದೂರದಲ್ಲಿ ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಸಂಧಿಸುವ ಪ್ರದೇಶದಲ್ಲಿ ಇದೆ. 1974 ಜೂನ್‌ನಲ್ಲಿ ಸ್ಥಾಪನೆಯಾದ ಇದು 1987 ಜನವರಿಯಲ್ಲಿ ವಿಸ್ತಾರಗೊಂಡಿತು. ಇದರ ವಿಸ್ತೀರ್ಣ 540ಚಕಿಮೀ ದಕ್ಷಿಣದಲ್ಲಿ ತಮಿಳುನಾಡಿಗೆ ಸೇರಿಕೊಂಡಿದೆ. ಬಿಳಿಗಿರಿರಂಗನ ಬೆಟ್ಟವನ್ನೆಲ್ಲ ಹೆಚ್ಚುಕಡಿಮೆ ಆಕ್ರಮಿಸಿರುವ ಈ ಅಭಯಾರಣ್ಯ ತಪ್ಪಲಿನಲ್ಲಿ ಕುರುಚಲು ಕಾಡನ್ನೂ ಎತ್ತರದ ಪ್ರದೇಶಗಳಲ್ಲಿ ಆರ್ದ್ರಪರ್ಣಪಾತಿ, ನಿತ್ಯಹಸುರಿನ ಅರಣ್ಯಗಳನ್ನೂ ಇನ್ನೂ ಉನ್ನತ ಪ್ರದೇಶಗಳಲ್ಲಿ ಶೋಲಾ ಅರಣ್ಯವನ್ನೂ ಪಡೆದಿದೆ.

ಪರ್ಣಪಾತಿ ಅರಣ್ಯ ಪ್ರದೇಶದಲ್ಲಿ ಬೀಟೆ, ತಡಸಲು, ತಾರೆ, ಹುನಗಲು, ಪಾದರಿ, ಆನೆಬ್ಯಾಲ, ಕೊಂಡಮಾವು, ಹೊನ್ನೆ, ದಿಂಡಲು, ಕೆಂಪುದಾಳೆ, ಕೊಲಮಾವು, ನಾಯಿಬೆಂಡೆ, ಕಕ್ಕೆ, ಬೆಟ್ಟದನೆಲ್ಲಿ, ದೊಳ್ಳಿ, ಎಣ್ಣೆಮರ, ಸಗಡೆ, ಕೈತಾಳೆ, ಉಡಿ ಮುಂತಾದ ವೃಕ್ಷಗಳೂ ನಿತ್ಯಹಸುರಿನ ಪ್ರದೇಶಗಳಲ್ಲಿ ಸಟಗ, ನೀರಂಜಿ, ನೇರಳೆ ಜಾತಿಯವು, ಎಲೆಸಾಂಡೆ ಮುಂತಾದವೂ ಇವೆ. ಶೋಲಾ ಪ್ರದೇಶಗಳಲ್ಲಿ ಮಸ್ಸಿವಾರ, ಮರುಳಿ, ಲೊಡ್ಡಿ, ಕಂಪಾಲೆ ಮರಗಳೂ ಹುಲ್ಲುಪಸಲೆಗಳಲ್ಲಿ ನಿಂಬೆಹುಲ್ಲು, ಕಾಮಾಜಿಹುಲ್ಲು, ಶುಂಠಿಹುಲ್ಲು, ಗುಂಡುನಾಲೆಹುಲ್ಲು, ಕಾಚಿಹುಲ್ಲು ಮುಂತಾದವು ಹೇರಳ.

ಪ್ರಾಣಿಗಳಲ್ಲಿ ಆನೆ, ಕಾಟಿ, ಕಡವೆ, ಜಿಂಕೆ, ಕೆಮ್ಮ, ನಾಲ್ಕುಕೊಂಬಿನ ಜಿಂಕೆಗಳೂ ಹುಲಿ, ಚಿರತೆ, ಕರಡಿ, ಕಾಡುನಾಯಿ, ಪುನುಗು ಬೆಕ್ಕುಗಳೂ ಮುಂಗುಸಿ, ಕಾಡುಬೆಕ್ಕು, ಕೇಶಳಿಲು, ಮುಸುವ, ಮಂಗ, ಕಾಡುಹಂದಿ, ಕಣೆಹಂದಿ, ನೀರುನಾಯಿ ಮುಂತಾದವೂ ಸಾಕಷ್ಟಿವೆ. 215ಕ್ಕೂ ಹೆಚ್ಚು ಬಗೆಯ ಪಕ್ಷಿಗಳೂ ಇಲ್ಲಿ ಕಾಣದೊರೆಯುತ್ತವೆ. ಇತ್ತಲೆ ಮಂಡಲ ಇಲ್ಲಿನ ಉಭಯಚರಿ ಪ್ರಾಣಿಗಳ ಪೈಕಿ ವಿಶೇಷವಾದ್ದು.

ಇಲ್ಲಿನ ಸುಪ್ರಸಿದ್ಧ ದೊಡ್ಡಸಂಪಿಗೆ ಮರ ಸೋಲಿಗರಿಗೆ ಪೂಜ್ಯವೆನಿಸಿದ್ದು, ಪ್ರೇಕ್ಷಣೀಯ ತಾಣವೂ ಆಗಿದೆ. ಪ್ರವಾಸಿಗರಿಗೆ ವಸತಿ ಸೌಕರ್ಯ ಇದೆ (ನೋಡಿ : ಬಿಳಿಗಿರಿರಂಗನ ಬೆಟ್ಟ).

**6. ಬ್ರಹ್ಮಗಿರಿ ಅಭಯಾರಣ್ಯ :** (ಕೊಡಗು ಜಿಲ್ಲೆ) ಹುಣಸೂರಿನಿಂದ 58ಕಿಮೀ ದೂರದಲ್ಲೂ ಮಡಿಕೇರಿಯಿಂದ ವಿರಾಜಪೇಟೆ ಮಾರ್ಗವಾಗಿ 37ಕಿಮೀ ದೂರದಲ್ಲೂ ಇದೆ. ವಿಸ್ತೀರ್ಣ 181ಚಕಿಮೀ. ಪಶ್ಚಿಮಘಟ್ಟಗಳಲ್ಲಿ ಸ್ಥಿತವಾಗಿರುವ ಈ ವನ್ಯಧಾಮ ನಿತ್ಯಹಸುರಿನ ಹಾಗೂ ಅರೆನಿತ್ಯ ಹಸುರಿನ ಕಾಡಿನಿಂದ ಕೂಡಿದೆ. ಶೋಲ್ ಹುಲ್ಲುಗಾವಲು ಪ್ರದೇಶವೂ ಇದೆ.

ಹಲಸು, ಹೆಬ್ಬಲಸು, ಚಕ್ಕೆ, ಗಂಧಗರಿಗೆ, ಕಲ್ಲುಹೊನ್ನೆ, ಸಪ್ತಪರ್ಣಿ, ಲಿಡಗ, ತೊರತಿ, ಮೈಲಾಡಿ, ಜಿಮ್ಮಿ ಮುಂತಾದವು ನಿತ್ಯ ಹಸುರಿನ ಪ್ರದೇಶದಲ್ಲಿ ಕಾಣದೊರೆತರೆ ಕೊರೆಮತ್ತಿ, ಮತ್ತಿ, ನಂದಿ, ತಾರೆ, ತೂಪ್ರ, ಆಲ, ಅತ್ತಿ, ಕಡವಳ, ಕುಂಕುಮ, ಮಗ್ಗಾರೆ, ಹೊಲೆಗಾರ, ದೂಳ್ಳಿ, ಹನಿಚೆ ಮುಂತಾದವು ಅರೆನಿತ್ಯ ಹಸುರಿನ ಪ್ರದೇಶದಲ್ಲೂ ಬೆಳೆಯುತ್ತವೆ. ಹೆಬ್ಬಿದಿರು, ಬೆತ್ತ, ಗಣಪೆಬಳ್ಳಿ, ಮರಸುತ್ತುಬಳ್ಳಿ, ಸೀಗೆ, ಕುರಿಯಾಡಿಬಳ್ಳಿ ಇತ್ಯಾದಿ ಸಸ್ಯ ಜಾತಿಗಳೂ ಇಲ್ಲಿವೆ.

ಇಲ್ಲಿನ ವನ್ಯಪ್ರಾಣಿಗಳಲ್ಲಿ ಆನೆ, ಕಾಟಿ, ಕಡವೆ, ಜಿಂಕೆ, ಕೆಮ್ಮ, ಕೊಂಡಕುರಿ, ಹುಲಿ, ಚಿರತೆ, ಕಾಡುಬೆಕ್ಕು, ಪುನುಗುಬೆಕ್ಕು, ತಾಳೆಬೆಕ್ಕು, ಕರಡಿ, ಕಾಡುಹಂದಿ, ಸಿಂಗಳೀಕ, ಮುಸುವ, ಕಾಡುಪಾಪ, ಕೇಶಳಿಲು, ನೀರುನಾಯಿ, ಮಾರ್ಟಿನ್ ಮುಂಗುಸಿ, ಚಿಪ್ಪುಹಂದಿ ಮತ್ತು ಕಣೆಹಂದಿ ಮುಖ್ಯವಾದವು.

ಹಾವುಗಳ ಪೈಕಿ ಕಾಳಿಂಗಸರ್ಪವೂ ಹೆಬ್ಬಾವು ಮತ್ತು ನಾಗರ ಹಾವುಗಳೂ ಇಲ್ಲಿ ವಾಸಿಸುತ್ತವೆ. ಪ್ರಕೃತಿ ಅಧ್ಯಯನಕ್ಕೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ (ನೋಡಿ: ಬ್ರಹ್ಮಗಿರಿ).

**7. ಕಾವೇರಿ ಅಭಯಾರಣ್ಯ :** (ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆ) ಬೆಂಗಳೂರಿನಿಂದ ಕನಕಪುರ- ಹಲಗೂರು ಮಾರ್ಗವಾಗಿ 100ಕಿಮೀ ದೂರದಲ್ಲಿದೆ. ವಿಸ್ತೀರ್ಣ 527ಚಕಿಮೀ. 1987 ಜನವರಿಯಲ್ಲಿ ಸ್ಥಾಪಿತವಾಯಿತು. ಇದರ ಬಹುಭಾಗ ಕಾವೇರಿ ನದಿಯಿಂದ ಆವೃತವಾಗಿದೆ. ಈಶಾನ್ಯಕ್ಕೆ ತಮಿಳುನಾಡು ಗಡಿಯಿದೆ.

ಇಲ್ಲಿನ ಅರಣ್ಯ ಶುಷ್ಕಪರ್ಣಪಾತಿ ಮತ್ತು ಕುರುಚಲು ಬಗೆಯದು. ನದಿಯ ದಂಡೆಗುಂಟ ಹೊಳೆಮತ್ತಿ ಮತ್ತು ನೇರಳೆ ಮರಗಳಿದ್ದರೆ, ಉಳಿದೆಡೆ ಹುಣಿಸೆ, ಆಸಿನಮರ, ಚುಜ್ಜಲು, ಬೇಲ, ಗೊಬ್ಬಳಿ, ಬಾಗೆ ಮುಂತಾದವು ಬೆಳೆಯುತ್ತವೆ.



ಚುಕ್ಕಿ ಜಿಂಕೆಗಳು

ಆನೆ, ಚಿರತೆ, ಕಾಡುಹಂದಿ, ಕಡವೆ, ಜಿಂಕೆ, ಕೆಮ್ಮ, ನಾಲ್ಕುಕೊಂಬಿನ ಜಿಂಕೆ, ಕೇಶಳಿಲು, ನೀರುನಾಯಿ, ಮೊಲ ಮುಂತಾದವು ಇಲ್ಲಿನ ವನ್ಯಪ್ರಾಣಿಗಳ ಪೈಕಿ ಕೆಲವು. ಪಕ್ಷಿಗಳಲ್ಲಿ ಸಿರ್‌ಕೀರ್ ಕುಕೂ, ಮಾಲ್‌ಕೋಹ, ಬಿಳಿಹುಬ್ಬಿನ ಪಿಕಳಾರ, ಕುಬ್ಜ, ಮರಕುಟಿಗ ಮುಖ್ಯವೆನಿಸಿವೆ. ಕಾವೇರಿ ನದಿಯಲ್ಲಿ ಸಿಕ್ಕುವ ಬಿಳಿಮೀನು (ಮಹಸೀರ್) ಈ ಅಭಯಾರಣ್ಯದ ಪ್ರಮುಖ ಆಕರ್ಷಣೆ. ಅಭಯಾರಣ್ಯಕ್ಕೆ ಬಲುಸಮೀಪದಲ್ಲಿ ಪ್ರೇಕ್ಷಣೀಯ ಸ್ಥಳಗಳಾದ ಹೊಗೇನಕಲ್ ಜಲಪಾತ, ಮೇಕೆದಾಟು ಮತ್ತು ಸಂಗಮಗಳಿವೆ. ಜಂಗಲ್ ಲಾಡ್ಜುಗಳು ಮತ್ತು ರಿಸಾರ್ಟ್ಸ್‌ನವರ ವಸತಿ ಸೌಕರ್ಯ ಉಂಟು.

**8. ದಾಂಡೇಲಿ ಅಭಯಾರಣ್ಯ :** (ಉತ್ತರ ಕನ್ನಡ ಜಿಲ್ಲೆ). 1956 ಮೇ ತಿಂಗಳಿನಲ್ಲಿ ಸ್ಥಾಪನೆಗೊಂಡಿತು. ಧಾರವಾಡದಿಂದ ದಾಂಡೇಲಿ ಪಟ್ಟಣ

ಮಾರ್ಗವಾಗಿ 68ಕಿಮೀ ದೂರದಲ್ಲಿದೆ. ವಿಸ್ತೀರ್ಣ 204ಚಕಿಮೀ. ಈ ವನ್ಯಧಾಮ 1994ರ ಏಪ್ರಿಲ್‌ನಲ್ಲಿ ವಿಸ್ತಾರಗೊಂಡು ಪ್ರಸಕ್ತ 475ಚಕಿಮೀ ಅರಣ್ಯವನ್ನು ಒಳಗೊಂಡಿದೆ.

ಆರ್ದ್ರಪರ್ಣಪಾತಿ ಮತ್ತು ಅರೆನಿತ್ಯಹಸುರಿನ ಅರಣ್ಯದಿಂದ ಕೂಡಿದೆ. ಬೀಟೆ, ಮತ್ತಿ, ತಾರೆ, ನಂದಿ, ಹೊನ್ನೆ, ಅರಿಷಿಣತೇಗ, ತಡಸಲು, ನಾಯಿಬೆಂಡೆ, ನವಿಲಾದಿ ಇಲ್ಲಿನ ಮುಖ್ಯ ವೃಕ್ಷಜಾತಿಗಳು. ಬಿದಿರು ಕೂಡ ಹೇರಳವಾಗಿದೆ. ಉಳಿದ ಪ್ರಮುಖ ವನ್ಯಧಾಮಗಳಲ್ಲಿ ಕಾಣಸಿಕ್ಕುವ ಪ್ರಾಣಿಗಳೇ ಇಲ್ಲೂ ಉಂಟು. 200 ಬಗೆಯ ಹಕ್ಕಿಗಳಿವೆ. ಪ್ರವಾಸಿಗರಿಗೆ ವಾಹನ, ವಸತಿ ಸೌಕರ್ಯಗಳಿವೆ. 10ಕಿಮೀ ದೂರದಲ್ಲಿ ಹರಿಯುವ ಕಾಳಿನದಿಯಲ್ಲಿ ದೋಣಿವಿಹಾರ ಮತ್ತು ಕೆಲವು ಸಾಹಸಮಯ ಕ್ರೀಡೆಗಳಿಗೆ ಅವಕಾಶವಿದೆ. ಸನಿಹದಲ್ಲೇ ಉಳವಿ ಕ್ಷೇತ್ರ, ಕವಲ ಗುಹೆಗಳು, ಸೈಕ್ಸ್ ಪಾಯಿಂಟ್, ನಾಗಝರಿ ಕಣಿವೆ ವೀಕ್ಷಣ ತಾಣ ಇವೆ (ನೋಡಿ: ದಾಂಡೇಲಿ).

**9. ದರೋಜಿ ವನ್ಯಧಾಮ :** (ಬಳ್ಳಾರಿ ಜಿಲ್ಲೆ) ಪ್ರಧಾನವಾಗಿ ಕರಡಿಗಳನ್ನು ಸಂರಕ್ಷಿಸಲೆಂದು ಸ್ಥಾಪಿಸಲಾದ ಅಭಯಾರಣ್ಯ. 1994 ಅಕ್ಟೋಬರ್ ತಿಂಗಳಿನಲ್ಲಿ ಅಸ್ತಿತ್ವಕ್ಕೆ ಬಂತು. ಇದೊಂದು ಚಿಕ್ಕ ಅಭಯಾರಣ್ಯ. ವಿಸ್ತೀರ್ಣ 56ಚಕಿಮೀ. ಹೊಸಪೇಟೆಯಿಂದ ಕಮಲಾಪುರ ಮಾರ್ಗವಾಗಿ 30ಕಿಮೀ ದೂರದಲ್ಲಿದೆ. ಹರಿಹರದಿಂದ 132ಕಿಮೀ ದೂರದಲ್ಲಿದೆ.

ಇಲ್ಲಿನ ಅರಣ್ಯ ಕುರುಚಲು ಬಗೆಯದು, ಜೊತೆಗೆ ಕಲ್ಲುಬಂಡೆಗಳಿಂದ ಕೂಡಿದ ಗುಡ್ಡಬೆಟ್ಟ, ಗುಹೆಗಳು ಇರುವುದರಿಂದ ಕರಡಿಗಳಿಗೆ ಅನುಕೂಲವಾಗಿದೆ. ಮುಳ್ಳು ಕಂಟಿಗಳಾದ ಕಬಳಿ, ಎಲಚಿ, ಪರಗಿ, ಚುಜ್ಜಲು, ಕರೀಜಾಲ್ ಮುಂತಾದವೂ ಅಲ್ಲಲ್ಲಿ ತಡಸಲು, ಆಲ, ಕುಳ್ಳುಗಾತ್ರದ ನೇರಳೆ ಇತ್ಯಾದಿ ಮರಗಳು ಬೆಳೆಯುತ್ತವೆ. ಕರಡಿ ಮಾತ್ರವಲ್ಲದೆ, ಚಿರತೆ, ತೋಳ, ನರಿ, ಕತ್ತೆಕಿರುಬ, ಮುಂಗುಸಿ, ಮಂಗ, ನವಿಲು, ಮುಂತಾದವೂ ಕಾಣದೊರೆಯುತ್ತವೆ. ಕಮಲಾಪುರದಲ್ಲಿ ಅರಣ್ಯ ವಸತಿ ಸೌಕರ್ಯ ಉಂಟು.

**10. ಘಟಪ್ರಭಾ ಪಕ್ಷಿಧಾಮ :** (ಬೆಳಗಾಂವಿ ಜಿಲ್ಲೆ) ಘಟಪ್ರಭಾ ನದಿಗೆ ಧೂಪಧಾಳದ ಬಳಿ ಕಟ್ಟಲಾಗಿರುವ ಜಲಾಶಯವನ್ನೂ ಒಳಗೊಂಡಂತೆ ಸು.20 ದ್ವೀಪಗಳಿಂದ ಕೂಡಿದ ಪಕ್ಷಿಧಾಮ. 1974 ಜೂನಿನಲ್ಲಿ ಅಸ್ತಿತ್ವಕ್ಕೆ ಬಂತು. ಧಾರವಾಡದಿಂದ 95ಕಿಮೀ ದೂರದಲ್ಲಿದೆ. ವಿಸ್ತೀರ್ಣ 30ಚಕಿಮೀ. ಬೆಳಗಾಂವಿ ಜಿಲ್ಲೆಯ ಗೋಕಾಕದಿಂದ ನಾಲ್ಕು ಫರ್ಲಾಂಗ್ ದೂರದಲ್ಲಿದೆ.

ದೊಡ್ಡಗಾತ್ರದ ದ್ವೀಪಗಳಲ್ಲಿ ಮಾತ್ರ ಕೊಂಚ ವನರಾಶಿ ಇದೆ. ಗೊಬ್ಬಳಿ, ಬಾಗೆ, ಹಲಸು, ಕಾರಾಚ, ಎಲಚಿ, ಬಿದಿರು, ಆನೆಹುಲ್ಲು ಇಂಪರೇಟ ಮುಂತಾದವು ಇಲ್ಲಿನ ಮುಖ್ಯ ಸಸ್ಯಗಳು. ಹಕ್ಕಿಗಳಿಗೆ ಆಶ್ರಯ ಒದಗಿಸುತ್ತವೆ. ಡೆಮಾಯ್‌ಸೆಲ್ ಕೊಕ್ಕರೆ, ಬಿಳಿಬಕ, ನೀರುಕಾಗೆ, ಗೋವಕ್ಕಿ, ಬೆಳ್ಳಕ್ಕಿ ಪ್ರಭೇದಗಳು, ಚಮಚಕೊಕ್ಕು, ಬಿಳಿಬೂಸ, ನೀರುನವಿಲು, ನಾರಾಯಣೆ, ಮೀಂಚುಳ್ಳಿ ಮತ್ತು ಟಿಟ್ಟಿಭಗಳು ಇಲ್ಲಿ ಕಾಣಸಿಗುತ್ತವೆ.

ಗೋಕಾಕ ಧಬಧಬೆ (ನೋಡಿ) ಇಲ್ಲಿನ ಇನ್ನೊಂದು ಆಕರ್ಷಣೆ.

**11. ಗುಡವಿ ಪಕ್ಷಿಧಾಮ :** (ಶಿವಮೊಗ್ಗ ಜಿಲ್ಲೆ) ಶಿವಮೊಗ್ಗದಿಂದ ಸಾಗರ ಸೊರಬ ಮಾರ್ಗವಾಗಿ 112ಕಿಮೀ ದೂರದಲ್ಲಿದೆ. 1989 ಜುಲೈನಲ್ಲಿ ಸ್ಥಾಪಿತವಾಯಿತು. 30 ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯ ಮತ್ತು ಅದಕ್ಕೆ ಸೇರಿಕೊಂಡಂತಿರುವ ದಟ್ಟ ಆರ್ದ್ರಪರ್ಣಪಾತಿ ಅರಣ್ಯವನ್ನು ಒಳಗೊಂಡ ತಾಣ. ವಿಸ್ತೀರ್ಣ 0.74ಚಕಿಮೀ. ತೊರೆಮತ್ತಿ, ತಾರೆ, ಅಳಲೆ, ನಂದಿ, ಬೀಟೆ, ಅರಿಷಿಣತೇಗ, ಜಂಬೆ, ಬಗನಿ, ಆಲ, ಅರಳಿ, ಮುತ್ತುಗ, ಶ್ರೀಗಂಧ, ಇಪ್ಪೆ ಮರಗಳು ಇಲ್ಲಿನ ಮುಖ್ಯ ಸಸ್ಯ ಜಾತಿಗಳು. 191 ಬಗೆಯ ಹಕ್ಕಿಗಳು ಇಲ್ಲಿ ಕಾಣದೊರೆಯುತ್ತವೆ. ಇವುಗಳ ಪೈಕಿ 63 ನೀರಹಕ್ಕಿಗಳು. ಹಲವು ಬಗೆಯ ಬೆಳ್ಳಕ್ಕಿ, ನೀರುಕಾಗೆ ಜಾತಿಗಳು, ಬಕಗಳು, ಕೊಕ್ಕರೆಗಳು, ಬಿಳಿಬೂಸಾ, ಕಪ್ಪುಬೂಸಾ, ನಾಮದಕೋಳಿ, ಮೀಂಚುಳ್ಳಿ ಬಗೆಗಳು, ಮದಗದ ಕೋಳಿ, ಬಾತುಗಳು ಹೇರಳವಾಗಿವೆ.

**12. ಮೂಕಾಂಬಿಕಾ ವನ್ಯಧಾಮ :** (ಉಡುಪಿ ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿ ಸ್ಥಾಪಿತವಾಗಿರುವ ಇನ್ನೊಂದು ಉತ್ತಮ ಅಭಯಾರಣ್ಯ; ಶರಾವತಿ ಕಣಿವೆ ವನ್ಯಧಾಮಕ್ಕೆ ಸೇರಿಕೊಂಡಂತಿದೆ. ಈಶಾನ್ಯದಲ್ಲಿ ಕೊಡಚಾದ್ರಿ, ಮಧ್ಯದಲ್ಲಿ ಕೊಲ್ಲೂರು ಇವೆ. ಸಾಗರದಿಂದ 75ಕಿಮೀ ದೂರದಲ್ಲೂ ಮಂಗಳೂರಿನಿಂದ 132ಕಿಮೀ ದೂರದಲ್ಲೂ ಇದೆ. 1974ರ ಜೂನ್ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಒಟ್ಟು ವಿಸ್ತೀರ್ಣ 247ಚಕಿಮೀ. ಕೊಲ್ಲೂರಿನ ಮೂಕಾಂಬಿಕೆಯ ಹೆಸರನ್ನೇ ಈ ವನ್ಯಧಾಮಕ್ಕೆ ಕೊಡಲಾಗಿದೆ.

ನಿತ್ಯಹಸಿರು, ಅರೆ ನಿತ್ಯಹಸಿರು ಹಾಗೂ ಆರ್ದ್ರಪರ್ಣಪಾತಿ ಅರಣ್ಯದಿಂದ ಕೂಡಿರುವ ಈ ವನ್ಯಧಾಮದಲ್ಲಿ ಪ್ರಧಾನವಾಗಿ ಎಣ್ಣೆಮರ, ಗುಳುಮಾವು, ಕಿರಿಭೋಗಿ, ಬಲಗಿ, ಸುರಹೊನ್ನೆ, ರುದ್ರಾಕ್ಷಿ, ಸತಗ, ಗುಡ್ಡರಂಜೆ ಮರಗಳೂ ಹಂಡಿಬೆತ್ತ, ಹಾಲುಬೆತ್ತದ ಮೆಳೆಗಳೂ ಹಲಸು, ಬರಣಿಗೆ, ನೇರಳೆ, ದಾಲ್ಚಿನ್ನಿ ಜಾಕಾಯಿ, ಮರಗಳೂ ಕೆಳಸ್ತರದಲ್ಲಿ ಬೂರುಗ, ಮಾವು, ಬೀಟೆ, ಬೆಟ್ಟಗಣಗಿಲೆ, ಅರಿಷಿಣ, ತೇಗ ಮುಂತಾದ ಮರಗಳೂ ಇವೆ.

ಅರಿಷಿಣ ಬಳ್ಳಿ ಅಥವಾ ಮರದ ಅರಿಷಿಣ ಎಂಬ ತುಂಬ ಅಪರೂಪದ ಬಳ್ಳಿ ಇಲ್ಲಿ ಕಾಣದೊರೆಯುತ್ತದೆ. ಔಷಧೀಯ ಮಹತ್ವವುಳ್ಳ ಈ ಸಸ್ಯ ಅಳಿವಿನ ಅಪಾಯದ ಅಂಚಿನಲ್ಲಿದೆ.

ಬೇರೆ ದೊಡ್ಡ ವನ್ಯಧಾಮಗಳಲ್ಲಿ ಕಂಡುಬರುವ ಎಲ್ಲ ಮಾಂಸಾಹಾರಿ, ಸಸ್ಯಾಹಾರಿ ಪ್ರಾಣಿಗಳು ಇಲ್ಲಿಯೂ ಇವೆ. ಅಪರೂಪದ ಸಿಂಗಳೀಕ ಇಲ್ಲಿ ವಾಸಿಸುತ್ತದೆ.



ಅಂಗೈಗಾತ್ರದ ಅಪರೂಪದ ಜೇಡ

**13. ಮೇಲುಕೋಟೆ ವನ್ಯಧಾಮ :** (ಮಂಡ್ಯ ಜಿಲ್ಲೆ) ಮುಖ್ಯವಾಗಿ ತೋಳದ ಸಂರಕ್ಷಣೆಗೆಂದು ಸ್ಥಾಪಿತವಾದ ವನ್ಯಧಾಮ. ಮೈಸೂರಿನಿಂದ ಶ್ರೀರಂಗಪಟ್ಟಣ - ಪಾಂಡವಪುರ ಮಾರ್ಗವಾಗಿ 50ಕಿಮೀ ದೂರದಲ್ಲಿದೆ. 1974 ಜೂನಿನಲ್ಲಿ ಅಸ್ತಿತ್ವಕ್ಕೆ ಬಂತು. ವಿಸ್ತೀರ್ಣ 50ಚಕಿಮೀ. ಇಲ್ಲಿ ಅರಣ್ಯ ಪ್ರಧಾನವಾಗಿ ಒಣಪರ್ಣಪಾತಿ ಮತ್ತು ಕುರುಚಲು ಬಗೆಯದು.

ಜಾಲಾರಿ ಮತ್ತು ಮುಂಡೀಚಲು (ಒಂದು ಬಗೆಯ ಅನಾವೃತ ಬೀಜ ಸಸ್ಯ, ವಿನಾಶದ ಅಂಚಿನಲ್ಲಿದೆ) ಇಲ್ಲಿನ ಮುಖ್ಯ ಬಗೆಯ ಮರಗಳು. ಕಾಡುಬೆಕ್ಕು, ತೋಳ, ಚಿರತೆ, ನರಿ ಇಲ್ಲಿನ ಮಾಂಸಾಹಾರಿಗಳಾದರೆ; ಜಿಂಕೆ, ಕೃಷ್ಣಮೃಗ, ಹಂದಿ, ಕೋತಿ ಇಲ್ಲಿನ ಸಸ್ಯಾಹಾರಿಗಳು.

**14. ನುಗು ವನ್ಯಧಾಮ :** (ಮೈಸೂರು ಜಿಲ್ಲೆ) ನುಗು ಹೊಳೆಗೆ ಅಡ್ಡಲಾಗಿ ಕಟ್ಟಿದ ಜಲಾಶಯವನ್ನು ಒಳಗೊಂಡ ಒಂದು ಚಿಕ್ಕ ಅಭಯಾರಣ್ಯ. ಮೈಸೂರಿನಿಂದ ಸರಗೂರು ಮಾರ್ಗವಾಗಿ 76ಕಿಮೀ ದೂರದಲ್ಲಿದೆ. 1974 ಜೂನಿನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 30ಚ.ಕಿಮೀ.

ಇಲ್ಲಿನ ಬಹುಪಾಲು ಅರಣ್ಯ ಕುರುಚಲು ಕಂಟಿಗಳಿಂದ ಕೂಡಿದೆ. ದಿಂಡಿಲು, ಬೆಟ್ಟದನೆಲ್ಲಿ, ಶ್ರೀಗಂಧ, ಬಾಗೆ, ಚುಜ್ಜಲು, ಗಂಡುಬಿದಿರು ಇಲ್ಲಿನ ಮುಖ್ಯ ಸಸ್ಯವರ್ಗ. ಆನೆ, ಚಿರತೆ, ಕಾಡುಬೆಕ್ಕು, ಜಿಂಕೆ, ಕೆಮ್ಮ, ಕಾಡುಹಂದಿ, ಮುಂಗುಸಿ, ಕಡವೆ, ಪುನುಗುಬೆಕ್ಕು, ಮರಬೆಕ್ಕು ಮತ್ತಿತರ ಪ್ರಾಣಿಗಳಿವೆ.

**15. ಪುಷ್ಪಗಿರಿ ವನ್ಯಧಾಮ :** (ಕೊಡಗು ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿರುವ ಇನ್ನೊಂದು ಅಭಯಾರಣ್ಯ. 1987 ಸೆಪ್ಟೆಂಬರಿನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 103ಚಕಿಮೀ. ಅನೇಕ ಝರಿಗಳಿಂದ ಕಿರುಅಬ್ಬಿಗಳಿಂದ ಕೂಡಿರುವ ಈ ವನ್ಯಧಾಮದಲ್ಲಿ ನಿತ್ಯ ಹಸುರಿನ, ಅರೆನಿತ್ಯಹಸುರಿನ ಮತ್ತು ಶೋಲಾ ಬಗೆಯ ಅರಣ್ಯವನ್ನು ಕಾಣಬಹುದು.

ಎಣ್ಣೆಮರ, ಅಗಿಲು, ಕಿರಿಭೋಗಿ, ನಾಗಸಂಪಿಗೆ, ಧೂಪ, ತತ್ತಲೆಮರ, ಹೆಬ್ಬಲಸು, ಹಲಸು, ತೊರಟ್ಟಿ, ಹಾಲುಸಳ್ಳಿ ಮತ್ತಿತರ ನಿತ್ಯಹಸುರಿನ ಮರಗಳಲ್ಲದೆ, ವಂಟೇಮರ, ಸತಗ, ದಾಲ್ಚಿನ್ನಿ, ಗೌರಿ, ಬಾಗೆ, ಹುನಗಲು, ಮತ್ತಿ, ಅಂಡಿಪುನಾರ ಇತ್ಯಾದಿ ಅರೆನಿತ್ಯಹಸುರಿನ ಮರಗಳೂ ಬೆತ್ತ, ಬಿದಿರು, ವಾಟೆಬಿದಿರು, ಕುರಿಂಜಿ ಗಿಡಗಳೂ ಇಲ್ಲಿ ಕಾಣದೊರೆಯುತ್ತವೆ. ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಎಲ್ಲ ಬಗೆಯ ಪ್ರಾಣಿಗಳೂ ಇಲ್ಲುಂಟು.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ ಮತ್ತು ಹಾರಂಗಿ ಅಣೆಕಟ್ಟು ಇಲ್ಲಿಗೆ ಸಮೀಪ.

**16. ರಾಣೆಬೆನ್ನೂರು ಕೃಷ್ಣಮೃಗ ಅಭಯಾರಣ್ಯ :** (ಧಾರವಾಡ ಜಿಲ್ಲೆ) ರಾಣೆಬೆನ್ನೂರಿಗೆ 8ಕಿಮೀ ದೂರದಲ್ಲಿದೆ. ಈ ವನ್ಯಧಾಮ ಮುಖ್ಯವಾಗಿ ಕೃಷ್ಣಮೃಗ ಮತ್ತು ಬಸ್ಟರ್ಡ್ ಹಕ್ಕಿಗಳ ಸಂರಕ್ಷಣೆಗೆಂದು 1974 ಜೂನ್‌ನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 119ಚಕಿಮೀ. ಕುರುಚಲು ಕಾಡು - ಇಲ್ಲಿನ ಮುಖ್ಯ ಸಸ್ಯವರ್ಗ, ಬಳ್ಳಾರಿಜಾಲಿ, ಕಗ್ಗಲ್ಲಿ, ಹಂಗರಿಕೆ, ಕವಳಿ ಮುಂತಾದವು ಸಹಜವಾಗಿ ಬೆಳೆದರೆ, ಈಚೆಗೆ ನೀಲಗಿರಿ ಮರಗಳನ್ನೂ ವಿಪುಲವಾಗಿ ಬೆಳೆಸಲಾಗಿದೆ. ಜೊತೆಗೆ ಎಲಚಿ, ತಂಗಡಿ, ಕಕ್ಕೆ, ಬೇವು, ತಪಸಿ, ಇಪ್ಪೆ ಮರಗಳನ್ನೂ ಕಾಣಬಹುದು.

ಕೃಷ್ಣಮೃಗ, ತೋಳಗಳಲ್ಲದೆ, ಕಾಡುಹಂದಿ, ನರಿ, ಮುಳ್ಳುಹಂದಿ, ಮುಂಗುಸಿ, ಮೊಲ, ಚಿಪ್ಪುಹಂದಿ ಹಾಗೂ ಕತ್ತೆಕಿರುಬಗಳೂ ಇಲ್ಲಿ ಕಾಣದೊರೆಯುತ್ತವೆ.

**17. ರಂಗನತಿಟ್ಟು ಪಕ್ಷಿಧಾಮ :** (ಮಂಡ್ಯ ಜಿಲ್ಲೆ) ಕರ್ನಾಟಕದ ಸುಪ್ರಸಿದ್ಧ ಪಕ್ಷಿಧಾಮ. 1940 ಜುಲೈ ತಿಂಗಳಿನಲ್ಲಿ ಅಸ್ತಿತ್ವಕ್ಕೆ ಬಂತು. ಮೈಸೂರಿನಿಂದ 20ಕಿಮೀ ದೂರದಲ್ಲಿ, ಶ್ರೀರಂಗಪಟ್ಟಣಕ್ಕೆ 3ಕಿಮೀ ದೂರದಲ್ಲಿ ಕಾವೇರಿ ನದಿಯ ದಂಡೆಯಲ್ಲಿದೆ. ಈ ಪಕ್ಷಿಧಾಮ 6 ದೊಡ್ಡ ದ್ವೀಪಗಳನ್ನೂ 2-3 ಸಣ್ಣ ದ್ವೀಪಗಳನ್ನೂ ಹೊಂದಿದೆ. ವಿಸ್ತೀರ್ಣ 0.67ಚಮೀ. ಈ ದ್ವೀಪಗಳಲ್ಲಿ ಸ್ವಾಭಾವಿಕ ಕುರುಚಲು ಸಸ್ಯವರ್ಗ ಹಾಗೂ ಮರಗಳಿವೆ. ನದೀತೀರದ ಆಚೀಚೆ ಕೃಷಿ ಭೂಮಿಯಿದ್ದು ಸಾಕಷ್ಟು ಆಹಾರ, ಹುಳು ಹುಪ್ಪಟೆಗಳು ಸಿಗುವುದರಿಂದ ಹಕ್ಕಿಗಳಿಗೆ ಮೆಚ್ಚಿನ ತಾಣವಾಗಿದೆ. ಇಲ್ಲಿ ಸುಮಾರು 16 ಬಗೆಯ ನೀರಹಕ್ಕಿಗಳೂ ನೂರಾರು ಬಗೆಯ ವೃಕ್ಷವಾಸಿ ಹಾಗೂ ಭೂವಾಸಿ ಹಕ್ಕಿಗಳೂ ಇವೆ. ವೀಕ್ಷಕರಿಗೆ ದೋಣಿ ಸೌಲಭ್ಯವನ್ನು ಕಲ್ಪಿಸಲಾಗಿದೆ (ನೋಡಿ : ರಂಗನತಿಟ್ಟು).

ರಂಗನತಿಟ್ಟು ಪಕ್ಷಿಧಾಮ

**18. ಶರಾವತಿ ಕಣಿವೆ ವನ್ಯಧಾಮ :** (ಶಿವಮೊಗ್ಗ ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿ ಸ್ಥಿತವಾಗಿರುವ ಇನ್ನೊಂದು ಅಭಯಾರಣ್ಯ. 1972 ಏಪ್ರಿಲ್ ತಿಂಗಳಿನಲ್ಲಿ ಸ್ಥಾಪನೆಗೊಂಡಿತು. ಸಾಗರದಿಂದ 7ಕಿಮೀ ದೂರದಲ್ಲಿದೆ. ಪೂರ್ವಭಾಗದಲ್ಲಿ ಲಿಂಗನಮಕ್ಕಿ ಜಲಾಶಯವೂ ನೈಋತ್ಯದಲ್ಲಿ ಮೂಕಾಂಬಿಕಾ ವನ್ಯಧಾಮವೂ ಇವೆ. ಜಲಾಶಯವೂ ಸಣ್ಣಪುಟ್ಟ ದ್ವೀಪಗಳೂ ಸೇರಿ ಒಟ್ಟು ವಿಸ್ತೀರ್ಣ 431ಚಕಿಮೀ. ಇಲ್ಲಿನ ಅರಣ್ಯ ನಿತ್ಯಹಸುರಿನ ಹಾಗೂ ಅರೆನಿತ್ಯಹಸುರಿನ ಸಸ್ಯ ಸಂಕುಲದಿಂದ ಕೂಡಿದೆ.

ಸುರಹೊನ್ನೆ, ಗುಳಮಾವು, ಬಗನಿ, ಸಳ್ಳೆ, ಎಣ್ಣೆಮರ, ಮಗ್ಗಾರೆ ಮುಂತಾದ ಮರಗಳೂ ಸೀಗೆ, ನೀಟಮ, ಗಣಪೆಬಳ್ಳಿ ಮುಂತಾದ ಬಳ್ಳಿಗಳೂ ನಂದಿ, ಬೀಟೆ, ದೊಳ್ಳಿ, ಬೆಟ್ಟದನೆಲ್ಲಿ, ಮತ್ತಿ, ನವಿಲಾದಿ ಇತ್ಯಾದಿ ಆರ್ಥಿಕ ಮಹತ್ತ್ವವುಳ್ಳ ಮರಗಳೂ ಇವೆ. ಹುಲಿ, ಚಿರತೆಗಳಲ್ಲದೆ, ಹಾರುವ ಅಳಿಲು, ಸಿಂಗಳೀಕ, ಕಾಳಿಂಗಸರ್ಪ ಮುಂತಾದ ಅಪರೂಪದ ಪ್ರಾಣಿಗಳೂ ಇಲ್ಲಿ ಕಾಣದೊರೆಯುತ್ತವೆ.

ಜೋಗ ಜಲಪಾತ ಇಲ್ಲಿಗೆ ತುಂಬ ಸಮೀಪದಲ್ಲಿದೆ. ಜೋಗದಲ್ಲಿ ಹಾಗೂ ನಾಗವಳ್ಳಿಯಲ್ಲಿ ವಸತಿ ಸೌಲಭ್ಯ ಇದೆ.

**19. ಶೆಟ್ಟಿಹಳ್ಳಿ ಅಭಯಾರಣ್ಯ :** (ಶಿವಮೊಗ್ಗ ಜಿಲ್ಲೆ) ಶಿವಮೊಗ್ಗ ನಗರಕ್ಕೆ ಹೊಂದಿಕೊಂಡಂತಿರುವ ಈ ವನ್ಯಧಾಮ 1974 ನವೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂತು. ವಿಸ್ತೀರ್ಣ 396ಚಕಿಮೀ.

ಅರೆನಿತ್ಯಹಸುರು ಬಗೆಯ ಮತ್ತು ಶುಷ್ಕಪರ್ಣಪಾತಿ ಅರಣ್ಯದಿಂದ ಕೂಡಿದೆ. ಮತ್ತಿ, ತಾರೆ, ತೇಗ, ದಿಂಡಿಲು, ನಂದಿ, ಬೆಪ್ಪಾಲೆ, ಕಕ್ಕೆ ಮತ್ತು ಬೆಟ್ಟದನೆಲ್ಲಿ ಮರಗಳೂ ಹೆಬ್ಬಿದಿರು, ಗಂಡು ಬಿದಿರು, ತಡಸಲು, ಅರಿಶಿಣತೇಗ, ಕಾಡುಬೆಂಡೆ, ಸಂಪಿಗೆ, ಗಂಟೆ ಮುಂತಾದ ವೃಕ್ಷಗಳೂ ಇಲ್ಲಿ ಹೇರಳ. ಇತರ ಅಭಯಾರಣ್ಯಗಳಲ್ಲಿ ಕಾಣಸಿಕ್ಕುವ ಎಲ್ಲ ರೀತಿಯ ಮಾಂಸಾಹಾರಿ ಸಸ್ಯಾಹಾರಿ ಪ್ರಾಣಿಗಳೂ ಉರಗಗಳೂ ಹಕ್ಕಿಗಳೂ ಇಲ್ಲಿವೆ.

ಶಿವಮೊಗ್ಗ ನಗರಕ್ಕೆ 10ಕಿಮೀ ದೂರದಲ್ಲಿ ತ್ಯಾವರೆಕೊಪ್ಪ ಎಂಬಲ್ಲಿ ಸಿಂಹಧಾಮವೂ ಸಕ್ರೆಬೈಲು ಬಳಿ ಸಾಕಿದ ಆನೆಗಳ ಶಿಬಿರವೂ ಮಂಡಗದ್ದೆಯ ಪಕ್ಷಿಧಾಮವೂ ಇಲ್ಲಿನ ಪ್ರಮುಖ ಆಕರ್ಷಣೆಗಳು.

**20. ಸೋಮೇಶ್ವರ ಅಭಯಾರಣ್ಯ :** (ಉಡುಪಿ ಜಿಲ್ಲೆ) ಪಶ್ಚಿಮ ಘಟ್ಟಗಳಲ್ಲಿ ನಿತ್ಯಹಸುರಿನ ಮತ್ತು ಅರೆನಿತ್ಯಹಸುರಿನ ಅರಣ್ಯದಿಂದ ಕೂಡಿದ ಮತ್ತೊಂದು ಪಕ್ಷಿಧಾಮ. 1974 ಜೂನ್ ತಿಂಗಳಿನಲ್ಲಿ ಸ್ಥಾಪನೆಗೊಂಡ ಈ ವನ್ಯಧಾಮದ ವಿಸ್ತೀರ್ಣ 88ಚಕಿಮೀ. ಇದರ ಪಕ್ಕದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ಇದೆ.

ಹುನಗಲು, ಗುಳುಮಾವು, ಮಾವು, ಹೆಬ್ಬಲಸು, ದಾಲ್ಚಿನ್ನಿ, ಸಟಗ, ಬೀಟೆ, ಮತ್ತಿ, ನಂದಿ, ಬೆಟ್ಟಗಣಗಿಲೆ, ದೂಳ್ಳಿ ಇತ್ಯಾದಿ ವೃಕ್ಷಗಳಿವೆ. ಪ್ರಾಣಿಗಳಲ್ಲಿ ಹುಲಿ, ಚಿರತೆ, ಕಾಡುನಾಯಿ, ಜಿಂಕೆ, ಕಡವೆ, ಸಿಂಗಳೀಕ, ಮುಸುವ, ಕೋತಿ, ಕಾಟಿ ಮುಖ್ಯವೆನಿಸಿವೆ.

ಶಿವಮೊಗ್ಗದಿಂದ ತೀರ್ಥಹಳ್ಳಿ - ಆಗುಂಬೆ ಮಾರ್ಗವಾಗಿ ಇಲ್ಲಿಗೆ 95ಕಿಮೀ. ಮಂಗಳೂರಿನಿಂದ ಮೂಡಬಿದ್ರಿ - ಕಾರ್ಕಳ - ಹೆಬ್ರಿ ಮಾರ್ಗವಾಗಿ ಇಲ್ಲಿಗೆ 86ಕಿಮೀ. ಆಗುಂಬೆಯ ಸೂರ್ಯಾಸ್ತ ವೀಕ್ಷಣೆ, ಒನಕೆಅಬ್ಬಿ, ಜಂಬುತೀರ್ಥ ಇಲ್ಲಿನ ಇನ್ನಿತರ ಮುಖ್ಯ ಆಕರ್ಷಣೆಗಳು.

**21. ತಲಕಾವೇರಿ ಅಭಯಾರಣ್ಯ :** (ಕೊಡಗು ಜಿಲ್ಲೆ) ಇದು ಕೂಡ ಪಶ್ಚಿಮಘಟ್ಟಗಳಲ್ಲಿರುವ ವನ್ಯಧಾಮ. ಕಾವೇರಿ ನದಿಯ ಉಗಮಸ್ಥಾನವಾದ ತಲಕಾವೇರಿಯನ್ನು ಇದು ಒಳಗೊಂಡಿರುವುದರಿಂದ ಇದಕ್ಕೆ ಈ ಹೆಸರು. 1987 ಸೆಪ್ಟೆಂಬರಿನಲ್ಲಿ ಸ್ಥಾಪಿತವಾಯಿತು. ವಿಸ್ತೀರ್ಣ 105ಚಕಿಮೀ. ಮಡಿಕೇರಿಯಿಂದ 45ಕಿಮೀ ದೂರದಲ್ಲಿದೆ. ಇಲ್ಲಿನ ಅರಣ್ಯ ನಿತ್ಯಹಸುರಿನ ಬಗೆಯದು. (ಬಿ.ಬಿ.)

**ಅಭಿಜಿತ್ :** 1979-. ಅರ್ಜುನ ಪ್ರಶಸ್ತಿ ವಿಜೇತ, ಈಜುಗಾರ. 1979 ಏಪ್ರಿಲ್ 14ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಜಯತೀರ್ಥರಾವ್. ಚಿಕ್ಕಂದಿನಿಂದಲೂ ತಂದೆಯವರ ಪ್ರೋತ್ಸಾಹದೊಂದಿಗೆ ಈಜಿಗೆ ಆಕರ್ಷಿತರಾಗಿ ಏಳನೆಯ ವರ್ಷದಲ್ಲೇ ಈಜಿಗೆ ಇಳಿದರು. ಬೆಂಗಳೂರಿನ ಜೈನ್ ವಿದ್ಯಾಲಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು, ಅನಂತರ ಬೆಂಗಳೂರು ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದ ಅಡಿಯಲ್ಲಿ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಪ್ರಾರಂಭದ ದಿನಗಳಲ್ಲಿ ವಾಟರ್ ಪೋಲೋ ತಂಡದ ಸದಸ್ಯರಾಗಿ ನೀರಿಗಿಳಿದ ಇವರು ಅನಂತರ ಈಜನ್ನೇ ಕ್ರೀಡೆಯನ್ನಾಗಿಸಿಕೊಂಡರು. 1993-94ರ ಅಂತರಶಾಲಾ ಪಂದ್ಯಾವಳಿಯಲ್ಲಿ 5 ಪದಕಗಳನ್ನು ಪಡೆದರು. ತರಬೇತುದಾರರ ಸಹಾಯದೊಂದಿಗೆ ಅದೇವರ್ಷ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದರು. ಇವರು ಒಟ್ಟು 12 ಬಾರಿ ಅಂತಾರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ 12 ನೂತನ ದಾಖಲೆಗಳೊಂದಿಗೆ 27 ಚಿನ್ನ, 10 ಬೆಳ್ಳಿ, 7 ಕಂಚಿನ ಪದಕಗಳನ್ನು ಪಡೆದಿದ್ದಾರೆ. ಶಾಲಾ ರಾಷ್ಟ್ರೀಯ ಪಂದ್ಯಾವಳಿ, ಕಿರಿಯ ರಾಷ್ಟ್ರೀಯ ಪಂದ್ಯಾವಳಿ, ರಾಷ್ಟ್ರೀಯ ಪಂದ್ಯಾವಳಿಗಳು ಮುಂತಾದ 50ಕ್ಕೂ ಹೆಚ್ಚು ಪಂದ್ಯಾವಳಿಗಳಲ್ಲಿ ಭಾಗವಹಿಸಿ 260 ಚಿನ್ನದ ಪದಕಗಳನ್ನೂ 80ಕ್ಕೂ ಹೆಚ್ಚು ಬೆಳ್ಳಿಯ ಪದಕಗಳನ್ನೂ 70ಕ್ಕೂ ಹೆಚ್ಚು ಕಂಚಿನ ಪದಕಗಳನ್ನೂ ಗಳಿಸಿದ್ದಾರೆ.

ಇವರು ಭಾಗವಹಿಸಿ ವಿಜೇತರಾಗಿ ಪದಕ ಪಡೆದ ಅಂತಾರಾಷ್ಟ್ರೀಯ ಕ್ರೀಡಾಕೂಟಗಳೆಂದರೆ ನವದೆಹಲಿಯಲ್ಲಿ 1994ರಲ್ಲಿ ನಡೆದ ಏಷ್ಯ ಪೆಸಿಫಿಕ್ ಏಜ್ ಗ್ರೂಪ್ ಈಜುಗಾರರ ಚಾಂಪಿಯನ್‌ಷಿಪ್ (3 ಬೆಳ್ಳಿ ಪದಕಗಳು) 1995ರಲ್ಲಿ ಢಾಕಾದಲ್ಲಿ ನಡೆದ 11ನೆಯ ದಕ್ಷಿಣ ಏಷ್ಯನ್ ಫೆಡರೇಷನ್ ಈಜುಗಾರಿಕೆ ಚಾಂಪಿಯನ್‌ಷಿಪ್ (4 ಚಿನ್ನ, 2 ಬೆಳ್ಳಿ ಪದಕಗಳು), 1995ರಲ್ಲಿ ಶ್ರೀಲಂಕಾದಲ್ಲಿ ನಡೆದ ಏಷ್ಯಾ ಪೆಸಿಫಿಕ್ ಈಜುಗಾರಿಕೆ ಚಾಂಪಿಯನ್‌ಷಿಪ್ (1 ಚಿನ್ನ ಹಾಗೂ 1 ಬೆಳ್ಳಿ ಪದಕ), 1995ರಲ್ಲಿ ಚೆನ್ನೈನಲ್ಲಿ ನಡೆದ 7ನೆಯ ಸೌತ್ ಏಷ್ಯನ್ ಫೆಡರೇಷನ್ ಕ್ರೀಡೆಗಳಲ್ಲಿ 7 ಚಿನ್ನದ ಪದಕಗಳೊಂದಿಗೆ 6 ನೂತನ ದಾಖಲೆಗಳನ್ನು ಮಾಡಿದ್ದು ಇವರ ಅತ್ಯುತ್ತಮ ಸಾಧನೆ. 1990ರಲ್ಲಿ ಟೆಹರಾನ್‌ನಲ್ಲಿ ನಡೆದ 13ನೆಯ ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ 10 ಚಿನ್ನ ಹಾಗೂ 7 ಬೆಳ್ಳಿ ಪದಕಗಳನ್ನೂ 1999ರಲ್ಲಿ ಸ್ವೀಡನ್‌ನಲ್ಲಿ ನಡೆದ ವಿಶ್ವಪೊಲೀಸ್ ಪಂದ್ಯವೊಂದರಲ್ಲಿ 2 ಚಿನ್ನ ಹಾಗೂ 3 ಕಂಚಿನ ಪದಕಗಳನ್ನೂ ಸಂಪಾದಿಸಿದರು.

1994ರಲ್ಲಿ ಗಡಿಭದ್ರತಾ ಪಡೆಯ ನಿರೀಕ್ಷಕರಾಗಿ (ಇನ್‌ಸ್ಪೆಕ್ಟರ್) ನೇಮಕಗೊಂಡ ಇವರು 2002ರಿಂದ ಬೆಂಗಳೂರಿನ ಇನ್‌ಫೋಸಿಸ್ ಸಂಸ್ಥೆಯಲ್ಲಿ ಈಜು ತರಬೇತುದಾರರಾಗಿ ಅನೇಕ ಯುವ ಪ್ರತಿಭೆಗಳನ್ನು ರಾಷ್ಟ್ರಕ್ಕೆ ಪರಿಚಯಿಸಿದ್ದಾರೆ.

ಇವರಿಗೆ ಕರ್ನಾಟಕ ರಾಜ್ಯದ ಏಕಲವ್ಯ ಪ್ರಶಸ್ತಿ (1994), ಕರ್ನಾಟಕ ರಾಜ್ಯ ಪ್ರಶಸ್ತಿ (2000), ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೆಂಪೇಗೌಡ ಪ್ರಶಸ್ತಿ ದೊರೆತಿವೆ. ಭಾರತ ಸರ್ಕಾರ ಇವರಿಗೆ ಅರ್ಜುನ ಪ್ರಶಸ್ತಿ (2000) ನೀಡಿ ಗೌರವಿಸಿದೆ. (ಎಸ್.ಆರ್.ಯು.)

**ಅಭಿನವಚಂದ್ರ :** ಸು.1400. ಬ್ರಾಹ್ಮಣ ಕವಿ. ಅಶ್ವಶಾಸ್ತ್ರ ಎಂಬ ಗ್ರಂಥವನ್ನು ಬರೆದಿದ್ದಾನೆ. ಈತನ ತಂದೆ ಕಾಳಪಯ್ಯ, ತಾಯಿ ಅತ್ತಿಮಬ್ಬೆ, ಅಣ್ಣ ಸೋಮದೇವ. ಬಾಗೇವಾಡಿ ಕವಿಯ ಸ್ಥಳ. ಇವನಿಗೆ ಸುಕರವಿಳಾಸ, ಬುಧಬಂಧು, ಗುಣರತ್ನ ಮುಂತಾದ ಬಿರುದುಗಳಿದ್ದಂತೆ ತಿಳಿದುಬರುತ್ತದೆ.

ಅಶ್ವಶಾಸ್ತ್ರಕ್ಕೆ ತುರಗಾಗಮ, ಅಶ್ವಾಗಮ ಎಂಬ ಹೆಸರುಗಳೂ ಇವೆ. 'ಚಂದ್ರಕವೀಂದ್ರ ವಾಗ್ವಿಲಾಸಂ ನೆಗಳಲ್ ವಾಜಿಶಾಸ್ತ್ರಮಂ ವಿರಚಿಸುವೆಂ' ಎಂಬುದರಿಂದ ಹಿಂದೆ ವಾಜಿಶಾಸ್ತ್ರವನ್ನು ಬರೆದ ಚಂದ್ರಕವಿಯನ್ನು ಅನುಸರಿಸಿ ಈ ಗ್ರಂಥ ರಚಿಸಿದಂತೆ ತೋರುತ್ತದೆ. ಸಿಂಹದತ್ತ, ರೇವಂತ ಮೊದಲಾದವರ ಸಂಸ್ಕೃತ ಹಯಶಾಸ್ತ್ರವನ್ನನುಸರಿಸಿ ತಾನು ಹೊಸಗನ್ನಡದಲ್ಲಿ ಈ ಗ್ರಂಥವನ್ನು ಬರೆದಂತೆ ಈತ ಹೇಳಿಕೊಂಡಿದ್ದಾನೆ.

ಅಶ್ವಶಾಸ್ತ್ರದಲ್ಲಿ 16 ಅಧ್ಯಾಯಗಳೂ 888 ಪದ್ಯಗಳೂ ಇವೆ. ಹೆಚ್ಚಿನವು ಕಂದ ಪದ್ಯಗಳು. ಈ ಗ್ರಂಥದಲ್ಲಿ ಅಶ್ವಗಳ ಸರ್ವಾಂಗಪರೀಕ್ಷೆ, ವರ್ಣ, ಸುಳಿ, ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ಪೋಷಣ ವಿಧಾನ, ರೋಗಗಳು. ಅವುಗಳಿಗೆ ಚಿಕಿತ್ಸೆ, ಅಶ್ವಗಳ ಉಪಯೋಗ ಮೊದಲಾದ ವಿಷಯಗಳ ನಿರೂಪಣೆಯಿದೆ. ತೆರೆಯಿಲ್ಲದೆ ಸೆರೆಯಿಲ್ಲದೆ ಕಿರಿಯವಾಗಿ ತೆಳ್ಪನೆ ಮೊನೆಯಾಗಿರೆ ಕಿವಿಗಳೊಳಗೆ ನುಣ್ಪಾಗಿರೆ ಕಟಮುಂ ವಿಕಟಮಾಗದಿರೆ ಹರಿ ಶುಭದಂ-ಎಂದು ಕುದುರೆಯ ಶುಭಲಕ್ಷಣವನ್ನು ಹೇಳಿ, ಅನಂತರ ವಾಜಿಯೆ ಮೊದಲಾವಿಜಯಕ್ಕಾಜಿಯೊಳರಸಂಗೆ ಬುದ್ಧಿವಂತಂಗದರಿಂ ವಾಜಿಗಳನೆಯ್ದೆ ಪೊರೆವುದು ಪೂಜಿಸುವುದು ವಿಜಯ ಲಕ್ಷ್ಮಿಯುಂ ಬಯಸುವವಂ ಎಂದು ಕುದುರೆಯ ಪ್ರಾಮುಖ್ಯತೆಯನ್ನು ವಿವರಿಸಿರುವನು. ಕ್ಲಿಷ್ಟವಾದ ಶಾಸ್ತ್ರಗ್ರಂಥಗಳನ್ನೂ ಅಚ್ಚಕನ್ನಡದಲ್ಲಿ ಸರಳವಾಗಿ ಬರೆಯಬಹುದು ಎಂಬುದಕ್ಕೆ ಈ ಗ್ರಂಥ ನಿದರ್ಶನವಾಗಿದೆ. (ಜಿ.ಬಿ.)

**ಅಭಿನವವಾದಿ ವಿದ್ಯಾನಂದ :** ಸು.1533. ಜೈನಕವಿ. ಕಾವ್ಯಸಾರ ಎಂಬ ಗ್ರಂಥದ ಸಂಕಲನಕಾರ. ಕಾವ್ಯಸಾರದ ಅಂತ್ಯದಲ್ಲಿ ವಿಜಯ ಸಂವತ್ಸರದ ಭಾದ್ರಪದ ಬಹುಳ 3ರಲ್ಲೂ ಶ್ರೀಮದಭಿನವವಾದಿ ವಿದ್ಯಾನಂದಸ್ವಾಮಿಗಳು ಭಲ್ಲಾತಕೀಪುರವರಾಧೀಶ್ವರ ಬೈರಾಗಿಗೆ ಬರೆಸಿಕೊಟ್ಟ ಕಾವ್ಯಸಾರಕ್ಕೆ ಮಂಗಳಂ ಮಹಾಶ್ರೀ- ಎಂದಿರುವುದರಿಂದ ಈತ ಭಲ್ಲಾತಕೀಪುರದವನೆಂದು (ಗೇರುಸೊಪ್ಪೆ) ಊಹಿಸಬಹುದು. ಕಾವ್ಯಸಾರದಲ್ಲಿ ಚಂದ್ರಶೇಖರನ (ಸು.1430) ಗುರುಮೂರ್ತಿ ಶಂಕರ ಶತಕದಿಂದ ಪದ್ಯಗಳನ್ನು ಉದ್ಧರಿಸಿರುವುದರಿಂದ ಈತ 1430ಕ್ಕಿಂತ ಈಚಿನವನಾಗಿರಬೇಕು. ಆದ್ದರಿಂದ ಬಹುಶಃ 1533ರಲ್ಲಿ ಬಂದ ವಿಜಯ ಸಂವತ್ಸರ ಈ ಗ್ರಂಥದ ಕಾಲ ಇರಬಹುದು. ನಗರ ತಾಲ್ಲೂಕಿನ 46ನೆಯ ಶಾಸನದಲ್ಲಿ ಉಲ್ಲೇಖವಾಗಿರುವ ವಾದಿವಿದ್ಯಾನಂದ ಈ ಕವಿಯೇ ಆಗಿದ್ದರೆ ವಿಜಯನಗರದ ಕೃಷ್ಣದೇವರಾಯ ಇವರ ಆಶ್ರಯದಾತನಾಗಿದ್ದಿರಬಹುದು ಎಂದು ಊಹಿಸಬಹುದಾಗಿದೆ.

ಕಾವ್ಯಸಾರ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದ ಮಾದರಿಯ ಗ್ರಂಥ. ಈ ಸಂಕಲನದಲ್ಲಿ 45 ಅಧ್ಯಾಯಗಳೂ 1143 ಪದ್ಯಗಳೂ ಇವೆ. ಮಲ್ಲಿಕಾರ್ಜುನ ತನ್ನ ಗ್ರಂಥದಲ್ಲಿ ಹೇಳದ ಕವಿಗಳ ಮತ್ತು ಅವರ ಕಾವ್ಯಗಳ ಹೆಸರುಗಳನ್ನು ಈತ ಕಾವ್ಯಸಾರದಲ್ಲಿ ಹೇಳಿರುವುದರಿಂದ ಸಾಹಿತ್ಯ ಚರಿತ್ರೆಯ ರಚನೆಗೆ ಅಪರಿಮಿತ ಪ್ರಯೋಜನವಾಗುತ್ತದೆ. ಈತನ ಕಾಲಕ್ಕೆ ಬಳಕೆ ತಪ್ಪಿ ಹೋಗಿದ್ದ ಚಂಪೂ ಮಾರ್ಗದ ಕೃತಿಗಳ ಆದರ್ಶವನ್ನು ಎತ್ತಿತೋರಿಸುವುದಕ್ಕಾಗಿ ಎಂಬಂತೆ ಚಂಪೂ ಕಾವ್ಯಗಳ ವರ್ಣನೆಗಳಿಗೆ ಇಲ್ಲಿ ವಿಶೇಷ ಪ್ರಾಶಸ್ತ್ಯ ಕೊಡಲಾಗಿದೆ. ಆದಿಕಾಲದಿಂದ ಮಧುರನ ಕಾಲದವರೆಗಿನ ಗ್ರಂಥಗಳಿಂದ, ಗುರು ಮೂರ್ತಿಶಂಕರ ಶತಕದಿಂದ ಪದ್ಯಗಳು ಸಂಕಲಿತವಾಗಿವೆ. ಕೆಲವು ಮುಕ್ತಕಗಳೂ ಚಾಟುಪದ್ಯಗಳೂ ಸೇರಿವೆ. ಕೆಲವು ಆಕರ ಸಿಕ್ಕದ ಪದ್ಯಗಳೂ ಇವೆ. ಒಂದನೆಯ ಗುಣವರ್ಮನಿಂದ ರಚಿತವಾದ ಹರಿವಂಶ ಮತ್ತು ಶೂದ್ರಕ ಎಂಬ ಚಂಪೂಕಾವ್ಯಗಳ ವಿವರಗಳನ್ನು ಕಾವ್ಯಸಾರದಿಂದ ಮಾತ್ರ ತಿಳಿಯಬಹುದಾಗಿದೆ. ಕಾವ್ಯ ಸಾರದಲ್ಲಿರುವ ಹದಿನೆಂಟು ವರ್ಣನೆಗಳಲ್ಲಿ ಒಂದೊಂದಕ್ಕೂ ಬೇರೆಬೇರೆಯ

ಕಾವ್ಯಗಳಿಂದ ನಿದರ್ಶನ ಪದ್ಯಗಳನ್ನು ಉದ್ಧರಿಸಿದ್ದಾನೆ. ಇಂಥ ಪದ್ಯಗಳನ್ನು ಆಯುವಲ್ಲಿ ವಿದ್ಯಾನಂದನ ಪಾಂಡಿತ್ಯ, ಉತ್ತಮ ಅಭಿರುಚಿ, ರಸಿಕತೆ ವ್ಯಕ್ತವಾಗುತ್ತದೆ. ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಈ ಸಂಕಲನ ನಿರ್ದೇಶಿಸುತ್ತದೆ. (ಪಿ.ಒ.;ಎನ್.ಎಆರ್.)

**ಅಮರಜ** : ಭೀಮಾ ನದಿಯ ಉಪನದಿಗಳಲ್ಲೊಂದು. ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್ ಜಿಲ್ಲೆಯ ಉಮರ್ಗಾ ತಾಲ್ಲೂಕಿನಲ್ಲಿ ಆಲೂರ ಗ್ರಾಮದ ಹತ್ತಿರ ಹುಟ್ಟಿ, ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕನ್ನು ನೀರ್ಗುಡಿ ಗ್ರಾಮದ ಹತ್ತಿರ ಪ್ರವೇಶಿಸುತ್ತದೆ. ಆ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣಕ್ಕೆ ಹರಿದು ಅಫಜಲಪುರ ತಾಲ್ಲೂಕಿನ ಗಾಣಗಾಪುರದ ಬಳಿ ಭೀಮಾನದಿಗೆ ಕೂಡುತ್ತದೆ. ನದಿಯ ಉದ್ದ ಸು.100ಕಿಮೀ. ಉಮರ್ಗಾ ತಾಲ್ಲೂಕಿನಲ್ಲಿನ 8-10ಕಿಮೀ ಬಿಟ್ಟರೆ ಮಿಕ್ಕ ಹರಿವು ಗುಲ್ಬರ್ಗ ಜಿಲ್ಲೆಯಲ್ಲಿ. ಅಮರಜ ನದಿಯ ಒಟ್ಟು ಜಲಾನಯನ ಕ್ಷೇತ್ರ ಸು.1528ಚಕಿಮೀ.

ಆಳಂದ ಮತ್ತು ಅಫಜಲಪುರ ತಾಲ್ಲೂಕುಗಳಲ್ಲಿ ಈ ನದಿಯ ಬಯಲು ವ್ಯವಸಾಯಕ್ಕೆ ಅನುಕೂಲವಾಗಿದೆ. ಆಳಂದ ತಾಲ್ಲೂಕಿನಲ್ಲಿ ಶಾಖಾಪುರ ಗ್ರಾಮದ ಹತ್ತಿರ ಆಳಂದ ಹಿರೋಳಿ ರಸ್ತೆಗಾಗಿ ಈ ನದಿಗೆ ಸೇತುವೆ ಕಟ್ಟಲಾಗಿದೆ. ಮುಂಬಯಿ-ಚೆನ್ನೈ ರೈಲುಮಾರ್ಗ ಮಡಿಹಾಳ ಬಳಿ ಈ ನದಿಯನ್ನು ದಾಟುತ್ತದೆ.

ಅಮರಜ ನದಿಯ ದಂಡೆಗುಂಟ ನೀರ್ಗುಡಿ, ಕೊಲ್ಲಾರಿ, ಭೂಸನೂರ, ಜವಳಿ ಮೊದಲಾದ ಗ್ರಾಮಗಳಿವೆ. ಈ ನದಿ ಭೀಮಾನದಿಯನ್ನು ಸಂಗಮಿಸುವ ಮುಖದ ಹತ್ತಿರ ಗಾಣಗಾಪುರ (ನೋಡಿ) ಪುಣ್ಯಕ್ಷೇತ್ರವಿದೆ. (ಎಸ್.ಎಸ್.ಎನ್.)

**ಅಮುಗಿದೇವ** : 12ನೆಯ ಶತಮಾನದ ವಚನಕಾರ. ಮೊದಲು ಸಿದ್ಧರಾಮನ ಸೊನ್ನಲಿಗೆಯಲ್ಲಿದ್ದು, ಅನಂತರ ಕಲ್ಯಾಣಕ್ಕೆ ಬಂದು ಬಸವಣ್ಣನವರ ಮಹಾಮಣೆಹದಲ್ಲಿ ಭಾಗವಹಿಸಿದ ಇತಿಹಾಸಪ್ರಸಿದ್ಧ ವ್ಯಕ್ತಿ. ಪಂಡರಾಪುರಕ್ಕೆ ಸಮೀಪದಲ್ಲಿರುವ ಪುಳುಜ ಗ್ರಾಮದ ಸೋಮನಾಥ ಈತನ ಇಷ್ಟದೈವ. ಇವನ ಸತಿ ರಾಯಮ್ಮ. ನೇಯ್ಗೆ ಈತನ ಕಾಯಕ. ಪುಳುಜ ಅಥವಾ ಪುಳುಂಜ (ಈಗ ಪುಳುಜ, ಹೊಳಜ) ಎಂಬ ಗ್ರಾಮದಲ್ಲಿ ದೊರೆತಿರುವ ಒಂದು ಶಾಸನ (1200) ಅಮುಗಿದೇವನ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಯಾದವರಾಜ ಸಿಂಘಣ ಈತನಿಗೆ ಭಕ್ತಿಯಿಂದ ದಾನಕೊಟ್ಟ ವಿಷಯ, ಸಿಂಘಣನ ಕಾಲದವರೆಗೂ ಅಂದರೆ ಕಲ್ಯಾಣದ ಕ್ರಾಂತಿಯಾದ ಮೇಲೆ ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಈತ ಜೀವಿಸಿದ್ದ ವಿಷಯ ಹಾಗೂ ಈತ ತನ್ನ ವ್ಯಕ್ತಿತ್ವದ ಪ್ರಭಾವವನ್ನು ಸುತ್ತಲೂ ಬೀರಿ ರಾಜಗೌರವವನ್ನು ಪಡೆದ ವಿಷಯ ಇವುಗಳನ್ನು ಈ ಶಾಸನ ತಿಳಿಸುತ್ತದೆ.

ರಾಘವಾಂಕಚಾರಿತ್ರವನ್ನು ಬರೆದ ಸಿದ್ಧನಂಜೇಶ, ರಾಘವಾಂಕನ ಸಿದ್ಧರಾಮ ಚಾರಿತ್ರದ ಕಥೆಯನ್ನು ಸಂಗ್ರಹಿಸಿ ಕೊಡುವಾಗ ಅಮುಗಿದೇವನ ಒಂದು ಕಥೆಯನ್ನೂ ಹೇಳುತ್ತಾನೆ. ಆದರೆ ಈಗ ಸಿಕ್ಕ ಸಿದ್ಧರಾಮ ಚಾರಿತ್ರದಲ್ಲಿ ಈ ಕಥೆ ಇಲ್ಲ. ಹಲಗೆದೇವರ ಶೂನ್ಯ ಸಂಪಾದನೆ ಯಲ್ಲಿಯೂ ಅಮುಗಿದೇವನನ್ನು ಕುರಿತ ಈ ಬಗೆಯ ಕಥೆ ಬರುತ್ತದೆ. ಈತನ ಕಥೆಯನ್ನೇ ಪ್ರಮುಖ ಆಧಾರವಾಗಿಟ್ಟುಕೊಂಡು ಸು.17ನೆಯ ಶತಮಾನದ ಶಿವಲಿಂಗಕವಿ ಅಮುಗಿದೇವಯ್ಯಗಳ ಸಾಂಗತ್ಯ ಎಂಬ ಒಂದು ಸ್ವತಂತ್ರ ಕೃತಿಯನ್ನೇ ರಚಿಸಿದ್ದಾನೆ. ಶಂಕರಲಿಂಗಕವಿ ಅಮುಗಿದೇವನ ಮೇಲೆ ಒಂದು ರಗಳೆಯನ್ನು ಬರೆದಿದ್ದಾನೆ.

ಅಮುಗಿದೇವ ಸಿದ್ಧಸೋಮನಾಥ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ರಚಿಸಿದ್ದಾನೆ. ಇದುವರೆಗೆ ಸಿಕ್ಕಿರುವ ಈತನ ಕೆಲವೇ ವಚನಗಳು ಈತ ಒಳ್ಳೆಯ ವಚನಕಾರ ಎಂಬುದಕ್ಕೆ ಸಾಕ್ಷಿಯಾಗಿವೆ. ಈತನ ಪತ್ನಿ ರಾಯಮ್ಮ ಕೂಡ ಅಮುಗೇಶ್ವರಲಿಂಗ ಎಂಬ ಅಂಕಿತದಿಂದ ವಚನಗಳನ್ನು ಬರೆದಿರುವಂತೆ ಕಂಡುಬರುತ್ತದೆ.

ಸ್ವಲ್ಪ ಹೆಚ್ಚುಕಡಿಮೆ ಇದೇ ಕಾಲದಲ್ಲಿ ಅಮುಗಿದೇವ ಎಂಬ ಇನ್ನೊಬ್ಬ ವಚನಕಾರ ಕಮಳೇಶ್ವರಲಿಂಗ ಎಂಬ ಅಂಕಿತದಿಂದ ವಚನಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ. (ಎಚ್.ಟಿ.ಎಸ್.)

**ಅಮೃತನಂದಿ** : ಕರ್ನಾಟಕದಲ್ಲಿ ಅಮೃತನಂದಿ ಎಂಬ ಹೆಸರಿನ ಇಬ್ಬರು ವ್ಯಕ್ತಿಗಳು ಕಂಡುಬರುತ್ತಾರೆ. ಒಬ್ಬ ಜೈನಕವಿ. ಅಕಾರಾದಿ ವೈದ್ಯ ನಿಘಂಟುವಿನ ಕರ್ತೃ. ಇವನ ಕಾಲ ಸು.1300. ಇವನ ನಿಘಂಟುವಿನಲ್ಲಿ ಸಂಸ್ಕೃತ ಪದಗಳಿಗೆ ಕನ್ನಡದ ಪರ್ಯಾಯ ಶಬ್ದಗಳನ್ನು ಹೇಳಿದೆ.

ಇನ್ನೊಬ್ಬನು ಅಮೃತಾನಂದಿ, ಅಮೃತಾನಂದ, ಅಮೃತಾನಂದಯೋಗಿ ಎಂಬ ಹೆಸರುಗಳಿಂದ ಸಾಳ್ವನ ರಸರತ್ನಾಕರದಲ್ಲಿ ಕೀರ್ತಿತನಾಗಿರುವ ಸಂಸ್ಕೃತ ಲಾಕ್ಷಣಿಕ. ಕಾಲ ಸು.1440. ಇವನ ಗ್ರಂಥ ಅಲಂಕಾರ ಸಂಗ್ರಹ. ಇವನು ವೆಂಗಿಯ ಭಕ್ತಿ ಭೂಪಾಲನ ಮಗ. ಮನ್ವರಾಜನ ಆಸ್ಥಾನ ಪಂಡಿತನಾಗಿದ್ದ. ವರದರಾಜನ ತಾರ್ಕಿಕರಕ್ಷಾ ಗ್ರಂಥವನ್ನಲ್ಲದೆ 13ನೆಯ ಶತಮಾನಕ್ಕೆ ಹಿಂದಿನ ಅನೇಕ ಕಾವ್ಯ ನಾಟಕಗಳನ್ನು ಉಲ್ಲೇಖಿಸಿದ್ದಾನೆ. ಅಲಂಕಾರ ಸಂಗ್ರಹದಲ್ಲಿ ಅಲಂಕಾರಶಾಸ್ತ್ರದ ಎಲ್ಲ ಪ್ರಕ್ರಿಯೆಗಳೂ ಚರ್ಚಿತ ವಾಗಿವೆ. ಗ್ರಂಥದ ಹೆಸರು ಸಂಗ್ರಹವಾದರೂ ಪ್ರತಿಪಾದನೆ ವಿವರವಾಗಿದೆ. ಕಾವ್ಯತತ್ತ್ವವನ್ನು ದಂಡಿ ಮಮ್ಮಟರ ಮಾದರಿಯಲ್ಲಿಯೂ ನಾಟಕ ತತ್ತ್ವವನ್ನು ಭರತನಾಟ್ಯಶಾಸ್ತ್ರ, ಭಾವಪ್ರಕಾಶಗಳ ಆಧಾರದಿಂದಲೂ ನಿರೂಪಿಸಿದ್ದಾನೆ. ಉದಾಹರಣೆಗಳಲ್ಲಿ ಸ್ವಕೃತ ಹಾಗೂ ಪರಕೃತ ರಚನೆಗಳಿವೆ. (ಕೆ.ಕೆ.)

**ಅಮೃತಾಪುರ** : ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಸು.10ಕಿಮೀ ದೂರದಲ್ಲಿರುವ ಒಂದು ಹಳ್ಳಿ.

ಇಮ್ಮಡಿ ವೀರಬಲ್ಲಾಳನ ದಂಡನಾಯಕ ಅಮಿತಯ್ಯನ (ಅಮೃತಯ್ಯ) ಹೆಸರಿನ ಮೇಲೆ ಊರಿಗೆ ಈ ಹೆಸರು ಬಂತೆಂದು 1210ರ ಒಂದು ಶಾಸನದಿಂದ ಗೊತ್ತಾಗುತ್ತದೆ. ಅಮಿತಯ್ಯ ದಂಡನಾಯಕ ಇಲ್ಲಿನ ಅಮೃತೇಶ್ವರ ದೇವಾಲಯವನ್ನು ಕಟ್ಟಿಸಿದನೆಂದೂ ಸು.1547ರ ವರೆಗೆ ಅನೇಕ ಧರ್ಮದತ್ತಿಗಳು ಈ ದೇವಾಲಯಕ್ಕೆ ಒದಗಿಬಂದುವೆಂದು ಇತರ ಶಾಸನಗಳಿಂದ ತಿಳಿಯುತ್ತದೆ. ಇಲ್ಲಿಯ ಸುಮಾರು 20 ಶಾಸನಗಳಲ್ಲಿ 1196ರ ಒಂದು ಶಾಸನ ಕನ್ನಡದ ಪ್ರಸಿದ್ಧ ಕವಿ ಜನ್ನನಿಂದ ರಚಿತವಾದುದು. (ಎಚ್.ವಿ.ಎಸ್.)

ಅಮೃತೇಶ್ವರ ದೇವಾಲಯ ಉತ್ತಮ ಹೊಯ್ಸಳ ವಾಸ್ತು ಕೃತಿಗಳಲ್ಲೊಂದು. ಇದರಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಹಾಮಂಟಪ ಇವೆ. ನವರಂಗದಿಂದ ದಕ್ಷಿಣದ ಕಡೆಗೆ ತೆರೆದಂತಿರುವ ಮುಖಮಂಟಪವೂ ಇದೆ.



ಅಮೃತೇಶ್ವರ ದೇವಾಲಯದ ಅಲಂಕೃತ ಗೋಪುರಗಳು

ಸುತ್ತಲೂ ಎತ್ತರದ ಪ್ರಾಕಾರವಿದೆ. ಮಹಾಮಂಟಪದ ತಳವಿನ್ಯಾಸ ಚೌಕ ಶಿಲುಬೆ. ಉಳಿದ ಭಾಗಗಳೂ ಚೌಕಗಳೇ ಆದರೂ ಪರಿಘದ ಹಿನ್‌ಸರಿತ ಮತ್ತು ಮುನ್‌ಸರಿತಗಳಿಂದ ಗರ್ಭಗುಡಿಯ ಭಾಗ ಸ್ವಲ್ಪಮಟ್ಟಿಗೆ ನಕ್ಷತ್ರಾಕಾರ ಅಥವಾ ಕುಂಡಾಕಾರವಾಗಿದೆ. ಈ ಭಾಗ 1196ರ ರಚನೆಯಾದರೆ, ಮುಂದಿನ ಮಹಾಮಂಟಪವನ್ನು ಸು.1206ರಲ್ಲಿ ಕಟ್ಟಿದಂತೆ ತೋರುತ್ತದೆ. ಗರ್ಭಗೃಹದಲ್ಲಿ ಅಮೃತೇಶ್ವರ ಲಿಂಗವಿದೆ. ಗರ್ಭಗುಡಿಯ ದ್ವಾರಬಂಧ ಉತ್ತಮ ಕೆತ್ತನೆಯಿಂದ ಕೂಡಿದೆ. ಸುಕನಾಸಿಯ ದ್ವಾರವೂ ಅಷ್ಟೇ ಚೆನ್ನಾಗಿದೆ. ಇದರಲ್ಲಿ ರತಿಮನ್ಮಥರ ವಿಗ್ರಹಗಳಿರುವುದು ವಿಶೇಷ. ಈ

ದ್ವಾರದ ಪಕ್ಕಗಳಲ್ಲಿ ಕುಸುರಿ ಕೆಲಸದ ಜಾಲಂಧ್ರಗಳಿವೆ. ನಾಲ್ಕು ಕಂಬಗಳಿರುವ ನವರಂಗದ ಭುವನೇಶ್ವರಿಗಳು ಸುಮಾರು 2 ಅಡಿಗಳಿಗಿಂತ ಹೆಚ್ಚು ಆಳವಾಗಿದ್ದು ಇಳಿಬಿದ್ದ ಪದ್ಮ, ಮೋತೆ ಇತ್ಯಾದಿಗಳಿಂದ ಸೂಕ್ಷ್ಮ ಕೆತ್ತನೆಗಳೊಡನೆ ಭವ್ಯವಾಗಿ ಅಲಂಕೃತವಾಗಿವೆ. ನವರಂಗದ ಒಳಗೆ ಗಣಪತಿ, ಸಪ್ತಮಾತೃಕೆಯರು, ಸರಸ್ವತಿ, ನಾಗದಂಪತಿಗಳು ಇತ್ಯಾದಿ ವಿಗ್ರಹಗಳಿವೆ. ಮಹಾಮಂಟಪ ಹೊಯ್ಸಳ ಮಾದರಿಯ ಹೊಳಪುಳ್ಳ 36 ಕಂಬಗಳಿಂದ ಕೂಡಿದೆ. ನಾಲ್ಕು ಕಡೆಯ ಚಾಚುಗಳಲ್ಲೂ ಇನ್ನೂ ಎರಡೆರಡು ಕಂಬಗಳಿವೆ. ಇಲ್ಲಿಯ ಎಲ್ಲಾ ಭುವನೇಶ್ವರಿಗಳೂ ಸುಂದರ ನಿರೂಪಣೆಗಳು. ಹಲವುಗಳ ಮೇಲೆ ಅವನ್ನು ರೂಪಿಸಿದ ಮಲ್ಲಿತಮ್ಮ, ಪದುಮಣ್ಣ, ಬಲುಗ, ಮಲಯ ಮೊದಲಾದ ಶಿಲ್ಪಿಗಳ ಹೆಸರುಗಳಿವೆ. ಮಹಾಮಂಟಪದ ಸುತ್ತಲಿನ ತಳಗೋಡೆಯ ಹೊರಮೈ ಅನೇಕ ಪುರಾಣಕಥೆಗಳು ಮತ್ತು ಇತರ ಶಿಲ್ಪಗಳಿಂದ ಅಲಂಕೃತವಾಗಿದೆ. ಅವುಗಳ ಮೇಲೆ ಜಾಲಂಧ್ರಗಳಿವೆ. ಗರ್ಭಗೃಹ ಹಾಗೂ ನವರಂಗದ ಹೊರಮೈಯಲ್ಲಿ ಅರೆಕಂಬಗಳು ಹಾಗೂ ದ್ರಾವಿಡ ಮತ್ತು ನಾಗರ ರೀತಿಯ ಶಿಖರಾಲಂಕಾರಗಳಿವೆ. ದೇವಾಲಯದ ಸುತ್ತಲೂ ಹಬ್ಬಿರುವ ಇಳಿ ಕಪೋತಗಳ ಮೇಲೆ ಅನೇಕ ಸೂಕ್ಷ್ಮ ಕೆತ್ತನೆಗಳಿರುವ ಹಾರಪಂಕ್ತಿ ಇದೆ. ಗರ್ಭ ಗೃಹದ ಮೇಲಿನ ಶಿಖರ ಸಹ ವೈಶಿಷ್ಟ್ಯಪೂರ್ಣವಾಗಿದೆ. ಸುಮಾರು ನಕ್ಷತ್ರಾಕಾರದ ವಿನ್ಯಾಸವಿದ್ದು ಅನೇಕ ಶಿಲ್ಪಗಳಿಂದ ಅಲಂಕೃತವಾಗಿದೆ. ಮುಂಭಾಗ ಬಿಟ್ಟು ಇತರ ಮೂರೆಡೆಗಳಲ್ಲಿ ಮೇಲೆದ್ದು ನಿಂತಂತಿರುವ ಶಿಲ್ಪಗಳು ಒಂದರ ಮೇಲೊಂದರಂತೆ ಹಲವು ಸಾಲುಗಳಲ್ಲಿವೆ. ಸುಕನಾಸಿಯ ಮೇಲೆ ಶಿಖರದ ಚಾಚಣಿಕೆ ಇದ್ದು ಅದರ ಮೇಲೆ ಹೊಯ್ಸಳ ಲಾಂಛನದ ಶಿಲ್ಪವಿದೆ.



ಅಮೃತೇಶ್ವರ ದೇವಾಲಯದ ಹೊರನೋಟ

ಮಹಾಮಂಟಪದ ಉತ್ತರದ ದ್ವಾರಮಂಟಪದ ಎದುರು ಸುಮಾರು ಇದೇ ಕಾಲದ ಒಂದು ಮಂಟಪ (ಸೂಳೆಮಂಟಪ) ಇದೆ. ದೇವಾಲಯದ ಆಗ್ನೇಯಕ್ಕೆ ಇನ್ನೊಂದು ಗುಡಿ ಇದ್ದು ಅದೀಗ ಶಿಥಿಲವಾಗಿದೆ. ಗರ್ಭಗೃಹ, ನವರಂಗ ಮತ್ತು ಮುಖಮಂಟಪವಿದ್ದ ಈ ಗುಡಿ ಸರಸ್ವತಿಯದೆಂದು ಊಹೆ.

ಇವೆಲ್ಲವನ್ನೂ ಒಳಗೊಂಡಿರುವ ಸುತ್ತಲ ಪ್ರಾಕಾರ ಈಗ ಶಿಥಿಲವಾಗಿದ್ದರೂ ಒಮ್ಮೆ ಅದರ ತಲೆಯಂಚಿನಲ್ಲಿ ಸುತ್ತಲೂ ಅನೇಕ ವೃತ್ತಾಕಾರದ ಶಿಲ್ಪಾಲಂಕೃತ ಹೆನ್ನಾಲಗೆಗಳು ಸಾಲಾಗಿದ್ದು ದೇವಾಲಯದ ಭವ್ಯತೆಯನ್ನು ಹೆಚ್ಚಿಸಿದ್ದುವು. ವಿನ್ಯಾಸದಲ್ಲಿ ಹಾಗೂ ಶಿಲ್ಪಕೆತ್ತನೆಯಲ್ಲಿ ಅಮೃತೇಶ್ವರ ದೇವಾಲಯ ಹೊಯ್ಸಳ ಕಾಲದ ಒಂದು ವಿಶಿಷ್ಟ ಸಾಧನೆ. *

**ಅಮೃತೂರು** : ತುಮಕೂರು ಜಿಲ್ಲೆಯ ಕುಣಿಗಲು ತಾಲ್ಲೂಕಿನಲ್ಲಿ ಕುಣಿಗಲಿನ ನೈಋತ್ಯಕ್ಕೆ ಸು.22ಕಿಮೀ ದೂರದಲ್ಲಿರುವ ಗ್ರಾಮ; ಇದೇ ಹೆಸರಿನ ಹೋಬಳಿಯ ಕೇಂದ್ರ. ಮೊದಲು ಇದಕ್ಕೆ ಆತಕೂರು, ವೀರನರಸಿಂಹಪುರ ಎಂಬ ಹೆಸರುಗಳಿದ್ದು ಒಂದು ಅಗ್ರಹಾರವಾಗಿತ್ತೆಂದು ಕಾಣುತ್ತದೆ. 16ನೆಯ ಶತಮಾನದಲ್ಲಿ, ದ್ರಾವಿಡ ಶೈಲಿಯಲ್ಲಿ ನಿರ್ಮಿತವಾದ ಇಲ್ಲಿನ ಚನ್ನಕೇಶವ ದೇವಾಲಯ ಶಿಲ್ಪಗಳಿರುವ ಕಂಬಗಳನ್ನೊಳಗೊಂಡು ಸುಂದರವಾಗಿದೆ. ಕೆರೆಯ ಹತ್ತಿರವಿರುವ ಸೋಮೇಶ್ವರ ಅಥವಾ ಚಂದ್ರಮೌಳೇಶ್ವರ ದೇವಾಲಯದಲ್ಲಿ (16ನೆಯ ಶತಮಾನ) ಉದ್ಭವಲಿಂಗ ಇದೆ. ದೇವಾಲಯದ ಹತ್ತಿರ 45' ಎತ್ತರವಿರುವ ಸಣ್ಣ ದೀಪ ಸ್ತಂಭವೊಂದಿದೆ. ದೇವಾಲಯದ ಹಿಂಭಾಗದಲ್ಲಿ 20' ಎತ್ತರವಿರುವ ಉಯ್ಯಾಲೆ ಕಂಬವಿದೆ.

ಅಮೃತೂರಿನ ಹತ್ತಿರದ ಮಾರ್ಕೋನಹಳ್ಳಿಯಲ್ಲಿ ಶಿಂಷಾಕ್ಕೆ ಅಡ್ಡಲಾಗಿ ಕಟ್ಟಿರುವ (1939) ಅಣೆಕಟ್ಟು ತುಮಕೂರು ಜಿಲ್ಲೆಯಲ್ಲೇ ಅತಿ ದೊಡ್ಡದು. ನೀರು ಹಿಡಿಯುವ ಪ್ರಮಾಣ 8,890 ಯೂನಿಟ್‌ಗಳು; ಅಚ್ಚುಕಟ್ಟು 11,000 ಎಕರೆಗಳು. 8' ವ್ಯಾಸದ 2,000 ಕ್ಯುಸೆಕ್ಸಿನಷ್ಟು ನೀರನ್ನು ಹೊರಹಾಕುವ ಇಳಿಗೊಳವೆಗಳನ್ನಳವಡಿಸಿರುವ ಈ ಕಟ್ಟೆ ವಿಶಿಷ್ಟ ತಾಂತ್ರಿಕ ರಚನೆ. (ಎಸ್.ಜಿ.)

**ಅಮೋಘವರ್ಷ I** (ನೃಪತುಂಗ) : ರಾಷ್ಟ್ರಕೂಟ ವಂಶದ ರಾಜ (ಸು.814-78). 3ನೆಯ ಗೋವಿಂದನ ಮಗ. ಇವನ ಮೊದಲ ಹೆಸರು ಶರ್ವ. ಅಮೋಘವರ್ಷ ಎಂಬುದು ಇವನು ಪಟ್ಟಾಭಿಷಿಕ್ತನಾದ ಮೇಲೆ ಇಟ್ಟುಕೊಂಡ ಹೆಸರು. ಈತನಿಗೆ ನೃಪತುಂಗ, ರಟ್ಟಮಾರ್ತಂಡ, ವೀರನಾರಾಯಣ, ಅತಿಶಯ ಧವಳ ಎಂಬ ಬಿರುದುಗಳು ಇದ್ದವು.

ಗೋವಿಂದ ವಿಂಧ್ಯಪರ್ವತದ ತಪ್ಪಲಲ್ಲಿದ್ದ ಶ್ರೀಭವನದಲ್ಲಿ ಬೀಡು ಬಿಟ್ಟಿದ್ದಾಗ ಶರ್ವ- ಅಮೋಘವರ್ಷ ಹುಟ್ಟಿದನೆಂದು ಸಂಜಾನ ಶಾಸನದಲ್ಲಿ ಹೇಳಿದೆ. 803ರ ಮಣ್ಣೆಯ ಶಾಸನದಲ್ಲಿ ಗೋವಿಂದ ಶ್ರೀಭವನದಲ್ಲಿದ್ದ ಸಂಗತಿ ಉಕ್ತವಾಗಿದೆಯಾದ ಕಾರಣ ಅಮೋಘವರ್ಷ ಸು.800ರಲ್ಲಿ ಹುಟ್ಟಿರಬಹುದು. 814ರಲ್ಲಿ ಗೋವಿಂದ ಮೃತನಾದ. ಆಗ ಪಟ್ಟಕ್ಕೆ ಬಂದ ಅಮೋಘವರ್ಷ 14 ವರ್ಷದ ಬಾಲಕ. ಆದರೆ ಗೋವಿಂದ ತೀರಿಕೊಳ್ಳುವ ಮೊದಲು ಗುಜರಾತಿನಲ್ಲಿದ್ದ ತನ್ನ ತಮ್ಮನ ಮಗ ಕರ್ಕನನ್ನು ರಾಜಧಾನಿಗೆ ಕರೆಸಿ, ಅಮೋಘವರ್ಷ ವಯಸ್ಸಿಗೆ ಬರುವವರೆಗೂ ರಾಜ್ಯಸೂತ್ರಗಳನ್ನು ನಿರ್ವಹಿಸುವಂತೆ ವ್ಯವಸ್ಥೆ ಮಾಡಿದ್ದ.

ಅಮೋಘವರ್ಷನ ಆಳ್ವಿಕೆಯ ಮೊದಲ ಮೂರು ವರ್ಷಗಳಲ್ಲಿ ಯಾವ ಘಟನೆಗಳೂ ಆಗಲಿಲ್ಲ. ಅನಂತರ ಈತ ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ಸಾಮ್ರಾಟ ಇನ್ನೂ ಹದಿವಯಸ್ಸಿನವನಾದ್ದರಿಂದ, ರಾಷ್ಟ್ರಕೂಟ ಮತ್ತು ಚಾಳುಕ್ಯ ಕುಲದ ಹಲವರು ಬಂಡೆದ್ದು ರಾಜ್ಯಾಕ್ರಮಣ ಮಾಡುವ ಸನ್ನಾಹದಲ್ಲಿದ್ದರು (ಸು.817). ಇವರಲ್ಲಿ ಪ್ರಾಯಶಃ ಸ್ತಂಭನ ಮಗ ಶಂಕರಗಣ ಮತ್ತು ಹಿಂದೆ ಗೋವಿಂದನಿಂದ ಪರಾಜಿತನಾಗಿದ್ದ ಪೂರ್ವಚಾಳುಕ್ಯ ರಾಜ ಇಮ್ಮಡಿ ವಿಜಯಾದಿತ್ಯ ಮುಖ್ಯ ಪಾತ್ರ ವಹಿಸಿರಬೇಕು. ಇವರ ಕಾರ್ಯಾಚರಣೆಗಳಿಂದ ಅಮೋಘವರ್ಷ ಕೆಲಕಾಲ ರಾಜ್ಯವನ್ನು ತ್ಯಜಿಸಿಹೋಗಬೇಕಾದ ಪರಿಸ್ಥಿತಿಯೂ ಒದಗಿದಂತೆ ತೋರುತ್ತದೆ. ಆದರೆ, ಬಡೋದ ತಾಮ್ರಶಾಸನದಲ್ಲಿ ಹೇಳಿರುವಂತೆ, ಗುಜರಾತಿನ ರಾಜ ಕರ್ಕ ಬಂಡುಗಾರರನ್ನು ಗೆದ್ದು ಅಮೋಘವರ್ಷನನ್ನು ಸಿಂಹಾಸನದ ಮೇಲೆ ಸ್ಥಿರಪಡಿಸಿದ (ಸು.821). ಈ ಕಾಲದಲ್ಲಿ ಪಾತಾಲಮಲ್ಲ (ಈತನೇ ಕರ್ಕನಿರಬಹುದು) ಶತ್ರುಗಳನ್ನು ನಿಗ್ರಹಿಸಿ, ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ ಅಮೋಘವರ್ಷನನ್ನು ಅವನ ವಂಶಾನುಗತ ಸಿಂಹಾಸನದ ಮೇಲೆ ಸ್ಥಿರವಾಗಿ ಕೂಡಿಸಿದನೆಂದು ಸಂಜಾನ ತಾಮ್ರಶಾಸನ ತಿಳಿಸುತ್ತದೆ.

ಅಮೋಘವರ್ಷನ ಆಳ್ವಿಕೆಯ ಮೊದಲ ವರ್ಷಗಳಲ್ಲಿ ರಾಜ್ಯದೊಳಗಲ್ಲದೆ ಹೊರಗೂ ಶತ್ರುವರ್ಧನೆಯಾಗುತ್ತಿತ್ತು. ಗಂಗ ಶಿವಮಾರ ಸಾಮ್ರಾಟನ ಮೇಲೆ ದಂಗೆಯೆದ್ದ (ಸು.816). ಪೂರ್ವಚಾಳುಕ್ಯವಂಶದ ಇಮ್ಮಡಿ ವಿಜಯಾದಿತ್ಯ ಸಹ ಸ್ವತಂತ್ರನಾಗಿದ್ದ. ಆದರೆ ಅಮೋಘವರ್ಷ ಕರ್ಕ ಮತ್ತು ದಂಡನಾಯಕರ ಸಹಾಯದಿಂದ ಶಿವಮಾರನನ್ನು ಸೋಲಿಸಿದ ಈತ ಕಾಗಿಮೊಗೆಯೂರು ಎಂಬಲ್ಲಿ ನಡೆದ ಯುದ್ಧದಲ್ಲಿ ಮಡಿದನೆಂದೂ ತೋರುತ್ತದೆ. ಇವನ ಮಗ ರಾಚಮಲ್ಲ ಪುನಃ ತನ್ನ ರಾಜ್ಯದ ದಕ್ಷಿಣ ಭಾಗಗಳನ್ನು ರಾಷ್ಟ್ರಕೂಟರಿಂದ ಗಳಿಸಿಕೊಂಡ. ಅತ್ತ ವಿಜಯಾದಿತ್ಯನಾದರೂ ಸುಮಾರು 15 ವರ್ಷಗಳ ಕಾಲ ನಿರ್ಬಾಧಿತನಾಗಿಯೇ ಉಳಿದ. ಸು.830ರಲ್ಲಿ ಅಮೋಘವರ್ಷ ವೆಂಗಿಯ ಮೇಲೆ ನಡೆದ ವಿಂಗವಲ್ಲೀ ಕದನದಲ್ಲಿ ಚಾಳುಕ್ಯರನ್ನು ಸದೆಬಡಿದು ರಾಜ್ಯಾಕ್ರಮಣ ಮಾಡಿದ. ಅಮೋಘವರ್ಷನ ದಂಡನಾಯಕ ಬಂಕೆಯ ಅವನನ್ನು ಕಾವೇರಿಯಿಂದ ದಕ್ಷಿಣಕ್ಕೆ ಓಡಿಸಿದ (ಸು.830). ಇತ್ತ ಗಂಗ-ಚಾಳುಕ್ಯರ ತೊಂದರೆಗಳನ್ನು ನಿವಾರಿಸಿಕೊಳ್ಳುತ್ತಿದ್ದಂತೆಯೇ ಗುಜರಾತಿನ ರಾಷ್ಟ್ರಕೂಟ ಮನೆತನದ ಅರಸ 1ನೆಯ ಧ್ರುವ ಇವನ ಮೇಲೆ ಯುದ್ಧ ಸಾರಿದ. ಹಿಂದೆ ಈ ಮನೆತನದವರು ನಿಷ್ಠಾವಂತ ಸಾಮಂತರಾಗಿದ್ದರೂ ಈ ಕಲಹವೇಕೆ ಉಂಟಾಯಿತೆಂದು ತಿಳಿಯುವುದಿಲ್ಲ. ಅಮೋಘವರ್ಷ ಧ್ರುವನನ್ನು ಸೋಲಿಸಿದರೂ ಅವನ ಮಗ ಅಕಾಲವರ್ಷ ಪುನಃ ಪ್ರಬಲನಾದ. ಆಗ ಅಮೋಘವರ್ಷ ದಕ್ಷಿಣದಲ್ಲಿ ಕಾರ್ಯನಿರತನಾಗಿದ್ದ ತನ್ನ ನೆಚ್ಚಿನ ದಂಡ

ನಾಯಕ ಬಂಕೆಯುನನ್ನು ಗುಜರಾತಿಗೆ ಕಳುಹಿಸಿದ. ಈ ಹೊತ್ತಿಗೆ ಗುಜರಾತದ ರಾಷ್ಟ್ರಕೂಟ ಸಿಂಹಾಸನವನ್ನೇರಿದ್ದ 2ನೆಯ ಧ್ರುವನನ್ನು ಬಂಕೆಯ ಸೋಲಿಸಿದ. ಆದರೆ ದಕ್ಷಿಣದಲ್ಲಿ ಬಂಕೇಶನಂಥ ನಾಯಕರಿಲ್ಲದ ಸಂದರ್ಭದಲ್ಲಿ ಗಂಗ ರಾಚಮಲ್ಲ ಮತ್ತೆ ಗಂಗವಾಡಿಯ ಬಹುಭಾಗವನ್ನು ಆಕ್ರಮಿಸಿದ. ಪೂರ್ವದಲ್ಲಿ ವೆಂಗಿಯ 3ನೆಯ ವಿಜಯಾದ್ಯಿತನ ಸೇನಾನಿ ಪಾಂಡುರಂಗ ರಾಷ್ಟ್ರಕೂಟರನ್ನು ಹಿಮ್ಮೆಟ್ಟಿಸಿ ವಿಜಯಾದಿತ್ಯನಿಗೆ ವೆಂಗಿ ರಾಜ್ಯವನ್ನು ಸಾಧಿಸಿಕೊಟ್ಟ. ಪೂರ್ವ ಚಾಳುಕ್ಯರು ರಾಷ್ಟ್ರಕೂಟ ರಾಜ್ಯಕ್ಕೆ ಮತ್ತೆ ಮುನ್ನುಗ್ಗಲಿಲ್ಲವಾಗಿ, ಅಮೋಘವರ್ಷನೂ ತೆಪ್ಪಗಾದ.

ಹಲವು ಕಡೆಗಳಿಂದ ತೊಂದರೆಗಳನ್ನು ಸತತವಾಗಿ ಎದುರಿಸಬೇಕಾಗಿ ಬಂದ ಅಮೋಘವರ್ಷ ಯುದ್ಧಕ್ಕಿಂತಲೂ ಸಂಧಾನ ಹೆಚ್ಚು ಅಪೇಕ್ಷಿತವೆಂದು ಅರಿತಿರಬೇಕು. ಸು.860ರಲ್ಲಿ ತನ್ನ ಮಗಳು ಚಂದೊಬ್ಬಲಬ್ಬಾಳನ್ನು ಗಂಗ ರಾಜಕುಮಾರ ಬೂತುಗನಿಗೆ ಮದುವೆ ಮಾಡಿಕೊಟ್ಟು ಗಂಗರೊಡನೆ ಶಾಂತಿ ಸಾಧಿಸಿಕೊಂಡ. ಹಾಗೆಯೇ ಚೇದಿ ರಾಜಕುಮಾರಿಯನ್ನು ತನ್ನ ಮಗನಿಗೆ ತಂದುಕೊಂಡು ಅತ್ತಲೂ ಸುಸಂಬಂಧವನ್ನು ಬೆಳೆಸಿದ. ಮಾನ್ಯಖೇಟದ ಹಾಗೂ ಗುಜರಾತಿನ ರಾಷ್ಟ್ರಕೂಟ ವಂಶದವರಿಗೆ, ಉತ್ತರದಲ್ಲಿ ಸಾಮಾನ್ಯ ವೈರಿಗಳಾಗಿದ್ದ ಗೂರ್ಜರ ಪ್ರತೀಹಾರರು ಇವರ ಮೇಲೆ ಬೀಳುವ ಸನ್ನಾಹವನ್ನು ನಡೆಸುತ್ತಿದ್ದ ಸಂದರ್ಭ ಅಮೋಘವರ್ಷ ಮತ್ತು ಗುಜರಾತಿನ ರಾಷ್ಟ್ರಕೂಟ 2ನೆಯ ಧ್ರುವ ಒಂದುಗೂಡಿದರು ಜ್ಞಾತಿಕಲಹ ಕೊನೆಗೊಂಡಿತು (ಸು.860).

ಕ್ಷಾತ್ರಸಾಧನೆಗಳ ದೃಷ್ಟಿಯಿಂದ ಅಮೋಘವರ್ಷನ ಆಳ್ವಿಕೆ ಇವನ ಪಿತೃ ಪಿತಾಮಹರ ಹಿರಿಮೆಯನ್ನು ಮುಟ್ಟಲಾರದಾದರೂ ಇತರ ರಂಗಗಳಲ್ಲಿ ಈತನ ಕಾಣಿಕೆ ಗಮನಾರ್ಹವಾದುವು. ತನ್ನ 64 ವರ್ಷದ ದೀರ್ಘ ಆಳ್ವಿಕೆಯ ಕಾಲದಲ್ಲಿ ಸತತವಾಗಿ ಶತ್ರುಬಾಧೆಯನ್ನು ಈತ ಅನುಭವಿಸಿದರೂ ಪ್ರಜಾಕ್ಷೇಮಕ್ಕಾಗಿ, ಧರ್ಮೋದ್ಧಾರಕ್ಕಾಗಿ ಬಹಳ ಆಸಕ್ತಿಯನ್ನು ವಹಿಸಿದ್ದಂತೆ ತೋರುತ್ತದೆ. ಲೋಕೋಪದ್ರವ ಶಾಂತಿಗೆಂದು ತನ್ನ ಎಡಗೈ ಬೆರಳನ್ನೇ ಮಹಾಲಕ್ಷ್ಮಿಗೆ ಬಲಿಯಾಗಿ ಕೊಟ್ಟನೆಂದು ಇವನ ಸಂಜಾನ ತಾಮ್ರ ಶಾಸನದಲ್ಲಿ ಹೇಳಿದೆ. ಇವನ ತ್ಯಾಗದ ವಿಷಯ ಹಲವು ಕಾಲದವರೆಗೆ ಜನರ ನೆನಪಿನಲ್ಲಿದ್ದು, 17ನೆಯ ಶತಮಾನದ ಭಟ್ಟಾಕಳಂಕ ಈತನನ್ನು ಶಿಬಿ ದಧೀಚಿಯರಿಗೆ ಹೋಲಿಸಿದ್ದಾನೆ. ಈತನ ಧರ್ಮನಿಷ್ಠೆ ಘನತರವಾಗಿದ್ದು, ಹಲವು ಬಾರಿ ಈತ ಲೋಕವ್ಯವಹಾರದಲ್ಲಿ ಆಸಕ್ತಿಯನ್ನು ಕಳೆದುಕೊಂಡು ರಾಜ್ಯತ್ಯಾಗ ಮಾಡಿದಂತೆ ಕಾಣುತ್ತದೆ. ಅಮೋಘವರ್ಷ ಜೈನಮತಾವಲಂಬಿ. ಜಿನಸೇನಾಚಾರ್ಯ ಈತನ ಗುರು ಎಂಬ ವಿಷಯ ಗುಣಭದ್ರಾಚಾರ್ಯರ ಉತ್ತರ ಪುರಾಣದಿಂದ ತಿಳಿಯುತ್ತದೆ. ಇವನ ಮಗನಿಗೆ ಗುರುವಾಗಿದ್ದ ಗುಣಭದ್ರಾಚಾರ್ಯರೂ ಇವನ ಭಕ್ತಿಗೌರವಗಳಿಗೆ ಪಾತ್ರರಾಗಿದ್ದರು.

ಅಮೋಘವರ್ಷ ಸಾಹಿತ್ಯಪೋಷಕನೂ ಆಗಿದ್ದ. ಪ್ರಶ್ನೋತ್ತರ ಮಾಲಿಕಾ ಎಂಬ ಸಂಸ್ಕೃತ ಗ್ರಂಥವನ್ನೂ ಪ್ರಸಿದ್ಧ ಕವಿರಾಜಮಾರ್ಗವನ್ನೂ ಈತನೇ ಬರೆದನೆಂಬ ಹೇಳಿಕೆಗಳಿದ್ದರೂ ಇವು ವಿವಾದಾಸ್ಪದ. ಈತನ ಆಶ್ರಯದಲ್ಲಿ ಶ್ರೀವಿಜಯ ಮೊದಲಾದ ಕವಿಗಳು ಕೃತಿರಚನೆ ಮಾಡಿದರು (ನೋಡಿ: ಕವಿರಾಜಮಾರ್ಗ). ಶಾಕಟಾಯನನೆಂಬ ಜೈನ ವೈಯಾಕರಣಿ ಅಮೋಘವೃತ್ತಿಯನ್ನೂ ಮಹಾವೀರಾಚಾರ್ಯ ಗಣಿತಸಾರ ಸಂಗ್ರಹವನ್ನೂ ಇವನ ಕಾಲದಲ್ಲಿ ರಚಿಸಿದರು. ಇವನ ಗುರುಗಳಾದ ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಪೂರ್ವಪುರಾಣ ಮತ್ತು ಪಾರ್ಶ್ವಾಭ್ಯುದಯ ಗ್ರಂಥಗಳನ್ನೂ ಜಯಧವಲಾ ಟೀಕೆಯನ್ನೂ ರಚಿಸಿದ್ದಾರೆ. ಇವರ ಶಿಷ್ಯ ಗುಣಭದ್ರಾಚಾರ್ಯರು ಪೂರ್ವಪುರಾಣವನ್ನು ಪೂರ್ಣಗೊಳಿಸಿದರಲ್ಲದೆ ಉತ್ತರ ಪುರಾಣವನ್ನೂ ರಚಿಸಿದ್ದಾರೆ.

ಅಮೋಘವರ್ಷನ ಮಗ ಕೃಷ್ಣ. ಚಂದೊಬ್ಬಲಬ್ಬಾ ಮತ್ತು ರೇವಕನಿಮ್ಮಡಿ ಹೆಣ್ಣು ಮಕ್ಕಳು. ಇವರಲ್ಲಿ ಪ್ರಾಯಶಃ ಹಿರಿಯವಳಾದ ರೇವಕನಿಮ್ಮಡಿ ಗಂಗರಾಜಕುಮಾರನೊಬ್ಬನನ್ನು ಮದುವೆಯಾಗಿ ರಾಯಚೂರು ಪ್ರದೇಶದಲ್ಲಿ ಆಳುತ್ತಿದ್ದಳು (ಸು.837). *

**ಅಮೋಘವರ್ಷ II:** ರಾಷ್ಟ್ರಕೂಟ ವಂಶದ ಅರಸ (ಸು.929-30). 3ನೆಯ ಇಂದ್ರನ ಹಿರಿಯ ಮಗ. ಇವನ ತಮ್ಮ 4ನೆಯ ಗೋವಿಂದನ ಕುತಂತ್ರ ಮತ್ತು ಅನೀತಿಯುತ ವರ್ತನೆಯಿಂದ ಈತ ಪಟ್ಟಕ್ಕೆ ಬಂದ ಅನತಿಕಾಲದಲ್ಲಿಯೇ ಸತ್ತನೆಂದು ತೋರುತ್ತದೆ. ಪ್ರಾಯಶಃ ಕೊಲೆಗೀಡಾಗಿರ ಬಹುದು. ಶಿಲಾಹಾರರ ಶಾಸನವೊಂದು ಇವನು ಒಂದು ವರ್ಷ ರಾಜ್ಯವಾಳಿದನೆಂದು ತಿಳಿಸುತ್ತದೆ. *

**ಅಮೋಘವರ್ಷ III :** ರಾಷ್ಟ್ರಕೂಟ ವಂಶದ ದೊರೆ ಸು.(935-39). ಬದ್ದೆಗ ಇವನ ಅಭಿಷೇಕಪೂರ್ವನಾಮ. ಇವನು 3ನೆಯ ಇಂದ್ರನ ತಮ್ಮ. 3ನೆಯ ಇಂದ್ರನ ಹಿರಿಯ ಮಗನಾದ 2ನೆಯ ಅಮೋಘವರ್ಷನನ್ನು ಅವನ ತಮ್ಮ 4ನೆಯ ಗೋವಿಂದ ಬಹುಶಃ ಕೊಂದು ರಾಜ್ಯಾಕ್ರಮಣ ಮಾಡಿ, ತನ್ನ ದುರಾಡಳಿತದಿಂದಾಗಿ ಸಾಮಂತರಾದ ಗಂಗ ಬೂತುಗ ಮತ್ತು ವೇಮುಲವಾಡ ಚಾಳುಕ್ಯ ವಂಶದ ಅರಿಕೇಸರಿ (ನೋಡಿ: ಅರಿಕೇಸರಿ II) ಮುಂತಾದವರಿಂದ ನಿಗ್ರಹಿಸಲ್ಪಟ್ಟ ಮೇಲೆ, ಈ ಸಾಮಂತರು ತ್ರಿಪುರಿಯಲ್ಲಿ ನೆಲೆಸಿದ್ದ 3ನೆಯ ಅಮೋಘವರ್ಷನಿಗೆ ರಾಷ್ಟ್ರಕೂಟ ಸಿಂಹಾಸನವನ್ನು ಒಪ್ಪಿಸಿದರು. ಈತ ಸಾತ್ವಿಕನೂ ಧರ್ಮನಿಷ್ಠನೂ ಆಗಿದ್ದು ರಾಜ್ಯಾಡಳಿತಕ್ಕಿಂತ ಹೆಚ್ಚಾಗಿ, ದಾನಧರ್ಮ ಇತ್ಯಾದಿಗಳಲ್ಲೇ ತನ್ನ ಕಾಲವನ್ನು ಕಳೆದ. ಪಟ್ಟಕ್ಕೆ ಬರುವ ಹೊತ್ತಿಗೆ ಇವನಿಗೆ ಸಾಕಷ್ಟು ವಯಸ್ಸಾಗಿದ್ದು, ಹಲವು ವಯಸ್ಕ ಮಕ್ಕಳೂ ಇದ್ದರು. ರಾಜ್ಯದ ಭಾರವನ್ನು ಅವರುಗಳೆ ವಹಿಸಿದ್ದರು. ಅದರಲ್ಲೂ ಹಿರಿಯ ಮಗ ಕೃಷ್ಣIII ಪ್ರತಾಪಶಾಲಿಯಾಗಿದ್ದು, ಅನೇಕ ವಿಜಯಗಳನ್ನು ಸಾಧಿಸಿದ (ನೋಡಿ: ಕೃಷ್ಣ III).

ಅಮೋಘವರ್ಷನಿಗೆ ಕಡೆಯ ಪಕ್ಷ ಇಬ್ಬರು ಹೆಂಡತಿಯರಿದ್ದರು. ಅವರಲ್ಲಿ ಚೇದಿಯ 1ನೆಯ ಯುವರಾಜನ ಮಗಳಾದ ಕುಂಡಕದೇವಿ ಒಬ್ಬಳು. ಕೃಷ್ಣನಲ್ಲದೆ, ಜಗತ್ತುಂಗ, ನಿರುಪಮ, ಖೊಟ್ಟಿಗ ಈತನ ಇತರ ಮಕ್ಕಳು. ಇವನ ಮಗಳು ರೇವಕನಿಮ್ಮಡಿ ತಲಕಾಡಿನ ಗಂಗಬೂತುಗನನ್ನು ಮದುವೆಯಾಗಿದ್ದಳು. ಅಮೋಘವರ್ಷ 939ರಲ್ಲಿ ಮೃತನಾದ. *

**ಅಮ್ಮಣಗಿ :** ಬೆಳಗಾಂವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಒಂದು ಗ್ರಾಮ. ಹುಕ್ಕೇರಿಯ ಉತ್ತರಕ್ಕೆ 10ಕಿಮೀ ದೂರದಲ್ಲಿದೆ. ಕದಂಬ ಶಾಂತಿವರ್ಮನ ಭೋಜ ತಾಮ್ರ ಫಲಕದಲ್ಲಿ ಈ ಊರಿನ ಹೆಸರನ್ನು ಅಮ್ಮಣಿಕಾ ಎಂದು ಉಲ್ಲೇಖಿಸಲಾಗಿದೆ. ಈ ಊರಿನ ಮಧ್ಯದಲ್ಲಿರುವ ಪಾರ್ಶ್ವನಾಥ ಬಸದಿ ಒಂದು ಸುಂದರ ಸ್ಮಾರಕ. ಗರ್ಭಗೃಹ ಮತ್ತು ತೆರೆದ ಮಂಟಪವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಪಾರ್ಶ್ವನಾಥನ ಮೂರ್ತಿಯಿದೆ. ಆದರೆ, ಇದರ



ಮಲ್ಲಿಕಾರ್ಜುನ ದೇವಸ್ಥಾನ

ಪಾದಪೀಠದಲ್ಲಿರುವ ಸಿಂಹ ಮೂಲತಃ ಇದು ಆದಿನಾಥನ ಮೂರ್ತಿ ಇದ್ದಿರಬೇಕೆಂಬುದನ್ನು ಸೂಚಿಸುತ್ತದೆ. ಗರ್ಭಗೃಹದ ಮೇಲಿರುವ ಶಿಖರ ಕದಂಬ ನಾಗರ ಶೈಲಿಯಲ್ಲಿದೆ. ಈ ಬಸದಿಯ ಒಳಗಿರುವ ಶಾಸನ ಕಾಲ ಸು.1257. ಗ್ರಾಮದೇವತೆಯಾದ ಪದ್ಮಾವತಿಗೆ ಈಗಿನ ಅಂಬಾಬಾಯಿಗೆ ಭೂಮಿಯನ್ನು ದಾನವಾಗಿ ಕೊಟ್ಟದ್ದನ್ನು ದಾಖಲಿಸುತ್ತದೆ. ಇಲ್ಲಿಯ ಮಾದರ ಓಣಿಯಲ್ಲಿ ಈಶ್ವರ ದೇವಾಲಯವಿದ್ದು ಸ್ಥಳೀಯರು ಇದನ್ನು ಜೋನಿಂಗಪ್ಪ ದೇವಾಲಯವೆಂದು ಕರೆಯುವರು. ಈ ದೇವಾಲಯ ಸಂಪೂರ್ಣ ಶಿಥಿಲವಾಗಿದೆ. ಊರ ಹೊರಗೆ ಮಲ್ಲಿಕಾರ್ಜುನನ ದೇವಾಲಯವಿದೆ. ಈ ದೇವಾಲಯದ ಆವರಣದಲ್ಲಿ ವೀರಭದ್ರ ಮತ್ತು ಭ್ರಮರಾಂಬ ದೇವರ ಗುಡಿಗಳಿವೆ. ಇಲ್ಲಿ ಮಕರ ಸಂಕ್ರಾಂತಿಯಂದು ಐದು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಈ ಊರಲ್ಲಿ ಒಂದು ಮಸೀದಿ ಮತ್ತು ಮುಸ್ಲಿಂ ಸಂತ ಬಾವಸಾಬರಿಗೆ ಸಂಬಂಧಿಸಿದ ಒಂದು ಮದರಸಾ ಇದೆ. ಇವರ ನೆನಪಿನಲ್ಲಿ ಪ್ರತಿ ವರ್ಷ ಉರುಸ್ ನಡೆಯುತ್ತದೆ. (ಆರ್.ಐ.)

**ಅಮ್ಮಸಂದ್ರ :** ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ತುಮಕೂರಿಗೆ ಸು.50ಕಿಮೀ ದೂರದಲ್ಲಿರುವ ಸ್ಥಳ. ಬೆಂಗಳೂರು ಅರಿಸೀಕೆರೆ ರೈಲುಮಾರ್ಗ ಮತ್ತು ಬೆಂಗಳೂರು ಪುಣೆ ಹೆದ್ದಾರಿ ಇದರ ಬಳಿಯೇ ಹಾದುಹೋಗುತ್ತವೆ. ಗ್ರಾಮದ ಹತ್ತಿರದಲ್ಲಿರುವ ನರಸಿಂಹಸ್ವಾಮಿ ಬೆಟ್ಟದ ಉದ್ದಕ್ಕೂ ಮ್ಯಾಂಗನೀಸ್, ಸುಣ್ಣಕಲ್ಲು ಹೇರಳವಾಗಿ ದೊರೆಯುತ್ತವೆ. ಕಚ್ಚಾ ವಸ್ತುಗಳು ಸುಲಭವಾಗಿ ದೊರೆಯುವುದರಿಂದಲೂ ಸಂಚಾರಸೌಲಭ್ಯ ಚೆನ್ನಾಗಿರುವುದರಿಂದಲೂ ಬಿರ್ಲಾ ಸಂಸ್ಥೆ ಇಲ್ಲೊಂದು ಸಿಮೆಂಟ್ ಕಾರ್ಖಾನೆಯನ್ನು ನಡೆಸುತ್ತಿದೆ. *

**ಅಯ್ಯಂಗಾರ್ ಎಚ್.ವಿ.ಆರ್. :** 1902- ನಿವೃತ್ತ ಐ.ಸಿ.ಎಸ್. ಅಧಿಕಾರಿ, ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಗವರ್ನರ್, ಬ್ರಿಟಿಷ್ ಭಾರತದಲ್ಲೂ ಸ್ವತಂತ್ರ ಭಾರತದಲ್ಲೂ ಉನ್ನತ ಅಧಿಕಾರಗಳಲ್ಲಿದ್ದು ಸೇವೆ ಸಲ್ಲಿಸಿದ ಕನ್ನಡಿಗ. ಹರವು ವರದರಾಜ ಅಯ್ಯಂಗಾರ್ ಇವರ ಪೂರ್ತಿಹೆಸರು. ಇವರು 1902ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ಮೊದಲ ವಿದ್ಯಾಭ್ಯಾಸ ಮೈಸೂರಿನಲ್ಲೇ ನಡೆಯಿತು. ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ವಿಜ್ಞಾನ ಪದವಿ ಗಳಿಸಿದರು. ಅನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದು, ಭಾರತೀಯ ಪ್ರಶಾಸನ ಸೇವಾ (ಸಿವಿಲ್ ಸರ್ವಿಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ (1924) ಭಾರತ ಸರ್ಕಾರದ ಸೇವೆಯನ್ನು ಪ್ರವೇಶಿಸಿದರು. ಇವರ ಉದ್ಯೋಗದ ಮೊದಮೊದಲ ವರ್ಷಗಳಲ್ಲಿ ಇವರು ಅನೇಕ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದರಿಂದ ಭಾರತದ ಜನಜೀವನದ ಪರಿಚಯ ಇವರಿಗೆ ಆಯಿತು. ಅಯ್ಯಂಗಾರರು ಮುಂಬಯಿಯ ಸಚಿವಾಲಯವನ್ನು (ಸೆಕ್ರೆಟೇರಿಯಟ್) 1931ರಲ್ಲಿ ಪ್ರವೇಶಿಸಿ, ಹಣಕಾಸು ಇಲಾಖೆಯ ಉಪಕಾರ್ಯದರ್ಶಿಯಾದರು. ಅನಂತರ ಇವರಿಗೆ ಕಾರ್ಯದರ್ಶಿಯ ಹುದ್ದೆಗೆ ಬಡ್ತಿ ಸಿಕ್ಕಿತು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯ ಸಮಯದಲ್ಲಿ ಇವರು ಮುಂಬಯಿ ಪ್ರಾಂತ್ಯದ ಗೃಹ ಕಾರ್ಯದರ್ಶಿಯಾಗಿ ಆಗಿನ ಸೂಕ್ಷ್ಮಪರಿಸ್ಥಿತಿಯನ್ನು ಕೌಶಲದಿಂದ ನಿರ್ವಹಿಸಿದರು. ಇವರು ನವದೆಹಲಿಗೆ ವರ್ಗವಾದದ್ದು 1944ರಲ್ಲಿ. ಯೋಜನೆ ಮತ್ತು ಅಭಿವೃದ್ಧಿ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ನೇಮಕಗೊಂಡ ಇವರು ದೇಶದ ಅಭಿವೃದ್ಧಿ ಯೋಜನಾ ಕಾರ್ಯಕ್ಕೆ ಭದ್ರವಾದ ಅಸ್ತಿಭಾರ ನಿರ್ಮಿಸಲು ನೆರವಾದರು. ಅನಂತರ ಇವರು ಭಾರತ ಸಂವಿಧಾನ ಸಭೆಯ ಕಾರ್ಯದರ್ಶಿಯಾಗಿಯೂ ಪ್ರಧಾನಿಯ ಪ್ರಮುಖ ಆಪ್ತಕಾರ್ಯದರ್ಶಿಯಾಗಿಯೂ ಗೃಹ ಕಾರ್ಯದರ್ಶಿಯಾಗಿಯೂ (1948) ಕೆಲಸ ಮಾಡಿ ಭಾರತದ ಆಡಳಿತ ಹಾಗೂ ಆರ್ಥಿಕ ವಿಚಾರಗಳಲ್ಲಿ ಬಹುಮುಖವಾದ ಅನುಭವ ಗಳಿಸಿದರಲ್ಲದೆ, ಸ್ವತಂತ್ರ ಭಾರತದ ಆರಂಭದ ವರ್ಷಗಳಲ್ಲಿ ದೇಶದ ಭವಿಷ್ಯವನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದರು. 1952ರಲ್ಲಿ ಇವರು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಕಾರ್ಯದರ್ಶಿಯಾದರು.

1956ರಲ್ಲಿ ಭಾರತದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಒಂದು ಮಹತ್ತ್ವದ ಬದಲಾವಣೆಯಾಯಿತು. ಭಾರತದ ಅತ್ಯಂತ ದೊಡ್ಡ ವಾಣಿಜ್ಯ ಬ್ಯಾಂಕ್ ಆಗಿದ್ದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವಾಗಿ (ಭಾರತೀಯ ಸ್ಟೇಟ್ ಬ್ಯಾಂಕ್) ಪರಿವರ್ತಿಸಲಾಯಿತು. ಸರ್ಕಾರಿ ವಲಯದ ದೊಡ್ಡ ವಾಣಿಜ್ಯ ಬ್ಯಾಂಕ್ ಆಗಿ, ಹಲವು ರಾಜ್ಯ ಬ್ಯಾಂಕುಗಳನ್ನು ಅಂಗ ಸಂಸ್ಥೆಗಳಾಗಿ ಒಳಗೊಂಡು ಭಾರತದ ಆರ್ಥಿಕತೆಯಲ್ಲಿ ಮಹತ್ತ್ವದ ಪಾತ್ರ ವಹಿಸುವ ಕರ್ತವ್ಯವನ್ನು ನಿರ್ವಹಿಸಲು ರೂಪಿತವಾದ ಈ ಬ್ಯಾಂಕಿನ ಆರಂಭದ ವರ್ಷದಲ್ಲಿ ಅಯ್ಯಂಗಾರರು ಇದರ ಅಧ್ಯಕ್ಷರಾಗಿ ಬ್ಯಾಂಕಿಗೆ ಒಂದು ಒಳ್ಳೆಯ ಪರಂಪರೆಯನ್ನು ನಿರ್ಮಿಸಿದರು. ಮರುವರ್ಷ (1957) ಇವರು ರಾಷ್ಟ್ರದ ಕೇಂದ್ರೀಯ ಬ್ಯಾಂಕೂ ಬ್ಯಾಂಕುಗಳ ಬ್ಯಾಂಕೂ ಆದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯದ (ಭಾರತೀಯ ರಿಸರ್ವ್ ಬ್ಯಾಂಕ್) ಗವರ್ನರ್ ಆಗಿ, ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದುವವರೆಗೂ (1962) ಆ ಹುದ್ದೆಯಲ್ಲಿದ್ದು, ದೇಶದ ಎರಡನೆಯ ಪಂಚವಾರ್ಷಿಕ ಯೋಜನೆಯ ಕಷ್ಟದ ದಿನಗಳಲ್ಲಿ ದೇಶದ ಆರ್ಥಿಕ ಹಾಗೂ ಹಣ ನೀತಿ ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಇವರ ಬಹುಮುಖ ಸೇವೆಯನ್ನು ಗಮನಿಸಿ ಭಾರತ ಸರ್ಕಾರ ಇವರಿಗೆ 'ಪದ್ಮವಿಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಿತು (1962).

ನಿವೃತ್ತಿಯ ಅನಂತರವೂ ಇವರು ತಮ್ಮ ಕಾರ್ಯಶೀಲ ಜೀವನವನ್ನು ಮುಂದುವರಿಸಿದರು. ಇವರು ಅನೇಕ ಕಂಪನಿಗಳ ಮತ್ತು ಚನ್ನೈನ ಭಾರತೀಯ ತಂತ್ರ ಶಾಸ್ತ್ರ ಸಂಸ್ಥೆಯ ಉಸ್ತುವಾರಿ ಮಂಡಳಿಯ (ಗವರ್ನಿಂಗ್ ಬೋರ್ಡ್) ಅಧ್ಯಕ್ಷರಾಗಿಯೂ ಅನ್ವಯ ಅರ್ಥಶಾಸ್ತ್ರ ಸಂಶೋಧನೆಯ ರಾಷ್ಟ್ರೀಯ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ಮದರಾಸಿನ ಪ್ರಮುಖ ಉದ್ಯಮ ಸಂಸ್ಥೆಯೊಂದರಲ್ಲಿ ಹುದ್ದೆ ಪಡೆದ ಅಯ್ಯಂಗಾರರು ಮದರಾಸಿನಲ್ಲಿ ನೆಲಸಿದರು. (ಎಚ್.ಎಸ್.ಕೆ.)

**ಅಯ್ಯನಕೆರೆ :** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಒಂದು ಕೆರೆ. ಚಿಕ್ಕಮಗಳೂರು- ಕಡೂರು ಮುಖ್ಯ ರಸ್ತೆಯಲ್ಲಿ ಸಖರಾಯ ಪಟ್ಟಣದಿಂದ 6ಕಿಮೀ ದೂರದಲ್ಲಿದೆ. ಇದು ಜಿಲ್ಲೆಯ 2ನೆಯ ದೊಡ್ಡ ಕೆರೆ. ಎತ್ತರವಾದ ಬಾಬಾಬುಡನಗಿರಿ ಶ್ರೇಣಿ ಹಾಗೂ ಶಕುನಗಿರಿಗೆ ಹೊಂದಿಕೊಂಡು ಗೌರಿ ಹೊಳೆಗೆ ಅಡ್ಡಲಾಗಿ ಈ ಕೆರೆಯನ್ನು ಕಟ್ಟಲಾಗಿದೆ. ನಿಸರ್ಗದತ್ತವಾದ ಪರಿಸರ ಈ ಕೆರೆಯನ್ನು ನಿರ್ಮಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ಈ ಕೆರೆಯ ನೀರಿನ ಚದರಳತೆ 118.54 ಹೆಕ್ಟೇರುಗಳು. ಈ ಕೆರೆಯ ಏರಿಯ ಉದ್ದ 46ಮೀ, ಕೋಡಿಯ ಎತ್ತರ 6.3ಮೀ, ಕೆರೆಯ ಏರಿಯ ಎತ್ತರ 14ಮೀ. ಸು.420 ಎಂ.ಸಿ.ಎಫ್.ಟಿ. ನೀರು ಸಂಗ್ರಹಿಸುವ ಸಾಮರ್ಥ್ಯವುಳ್ಳ ಈ ಕೆರೆಯಿಂದ ಐದು ಮುಖ್ಯ ಕಾಲುವೆಗಳ ಮೂಲಕ ಕಡೂರು ತಾಲ್ಲೂಕಿನ 1574 ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ದೊರೆತಿದೆ. ಈ ಕೆರೆಯ ಕೋಡಿಯಿಂದ ಹೊರಬೀಳುವ ಹೆಚ್ಚುವರಿ ನೀರು ವೇದಾಹೊಳೆಯಾಗಿ ಮುಂದೆ ಅವತಿ ಹೊಳೆಯೊಂದಿಗೆ ಸೇರಿ ವೇದಾವತಿ ನದಿಯಾಗಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಮುಖ್ಯವಾಗಿ ಅಡಕೆ, ತೆಂಗು, ಬತ್ತ, ಕಬ್ಬು ಬೆಳೆಗಳನ್ನೂ ತರಕಾರಿಗಳನ್ನು ಬೆಳೆಯುತ್ತಾರೆ.



ಈ ಕೆರೆಗೆ ರಕ್ಷಣೆಯಾಗಿ ಪರಿಣಮಿಸಿರುವ ಶಕುನಗಿರಿಯಿಂದ ಆಂಜನೇಯನು ಲಂಕೆಗೆ ಸಂಜೀವಿನಿಯನ್ನು ತೆಗೆದುಕೊಂಡು ಹೋಗಿದ್ದನೆಂದು ಪ್ರತೀತಿ. ಪೌರಾಣಿಕವಾಗಿ ಈ ಕೆರೆಯನ್ನು ಸಖರಾಯಪಟ್ಟಣವನ್ನು

ಆಳುತ್ತಿದ್ದ ರುಕ್ಮಾಂಗದರಾಯ ಕಟ್ಟಿಸಿದನಂತೆ. ಚಾರಿತ್ರಿಕವಾಗಿ ಈ ಕೆರೆಯನ್ನು 1156ರಲ್ಲಿ ಹೊಯ್ಸಳ ವಿಷ್ಣುವರ್ಧನನ ಮಗ ಒಂದನೆಯ ನರಸಿಂಹ ಸ್ಥಳೀಯ ಮುಖ್ಯಸ್ಥರ ಸಹಕಾರದಿಂದ ದುರಸ್ತಿಗೊಳಿಸಿದನೆಂದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಕೆರೆಯ ಸಮೀಪದ ಗುಡ್ಡದ ಮೇಲಿರುವ ಪ್ರಸನ್ನ ಬಲ್ಲಾಳೇಶ್ವರ ದೇವಾಲಯ ಅಲ್ಲಿಯ ಶಿವಲಿಂಗ, ಕೇಶವ, ಗಣಪತಿ ಮೊದಲಾದ ಹೊಯ್ಸಳ ಶಿಲ್ಪಗಳನ್ನು ಇಂದಿಗೂ ನೋಡಬಹುದು. ಜೊತೆಗೆ ಬಲ್ಲಾಳೇಶ್ವರ ಗುಡಿಯ ಮುಂದಿರುವ 1159ರ ಶಾಸನ ಹೊಯ್ಸಳ ನರಸಿಂಹನ ಸಾಹಸವನ್ನು ವರ್ಣಿಸುತ್ತದೆ. ಕೆರೆಯ ಏರಿ ಪದೇ ಪದೇ ಒಡೆದು ಹೋಗುತ್ತಿದ್ದು ಸಖರಾಯಪಟ್ಟಣದ ಮುಖ್ಯಸ್ಥರು ಅಲ್ಲಿಗೆ ಆಗಮಿಸಿದ ಸನ್ಯಾಸಿ ನಿರ್ವಾಣಸ್ವಾಮಿಗಳಿಗೆ ತನ್ನ ಕಷ್ಟವನ್ನು ಹೇಳಿಕೊಂಡರೆಂದೂ ಸ್ವಾಮಿಗಳು ಸ್ಥಳೀಯ ಜನರ ಕಷ್ಟವನ್ನು ದೂರಮಾಡುವ ಮಾರ್ಗೋಪಾಯ ಸೂಚಿಸಿದ್ದರಿಂದ ಈ ಕೆರೆಗೆ ಅಯ್ಯನ ಕೆರೆ ಎಂದು ಹೆಸರು ಬಂದಿತೆಂದೂ ಪ್ರತೀತಿ.

ಹುಣ್ಣಿಮೆಯ ರಾತ್ರಿಯಲ್ಲಿ ಸುರಿದ ಧಾರಾಕಾರ ಮಳೆಯಿಂದ ತುಂಬಿದ ಕೆರೆಗೆ ಅಪಾಯ ಎದುರಾಯಿತು. ಆಗ ಅಶರೀರ ವಾಣಿಯೊಂದು ಕೆರೆಯ ಹತ್ತಿರ ದನ ಮೇಯಿಸುತ್ತಿದ್ದ ಹೊನ್ನಬಿಲ್ಲ- ಚೆನ್ನಬಿಲ್ಲರಿಗೆ ನಾನು ಒಡೆದುಹೊಗುತ್ತಿದ್ದೇನೆ, ಈ ವಿಷಯವನ್ನು ಊರ ಮುಖ್ಯಸ್ಥರಿಗೆ ತಕ್ಷಣವೇ ತಿಳಿಸಿರಿ. ನೀವು ಬರುವವರೆಗೂ ನಾನು ಕಾಯುತ್ತಿರುತ್ತೇನೆ ಎಂದಿತಂತೆ. ಆ ಹುಡುಗರು ಊರ ಮುಖ್ಯಸ್ಥರಿಗೆ ವಿಷಯ ತಿಳಿಸಿ ಊರ ಸಂರಕ್ಷಣೆಗಾಗಿ ಸಖರಾಯಪಟ್ಟಣದ ಹೆಬ್ಬಾಗಿಲಿನಲ್ಲಿ ಆತ್ಮಾರ್ಪಣೆ ಮಾಡಿಕೊಂಡರಂತೆ. ಆಗ ಊರ ಮುಖ್ಯಸ್ಥರು ಗ್ರಾಮವನ್ನು ಅಪಾಯದಿಂದ ತಪ್ಪಿಸಿದ ಆ ಹುಡುಗರ ಪ್ರತಿಮೆಗಳನ್ನು ಮಾಡಿಸಿ ಗಣೇಶನ ಗುಡಿಯ ಹತ್ತಿರ ಮಂಟಪದಲ್ಲಿ ಸ್ಥಾಪಿಸಿದರೆಂದು ಜನಪದ ನಂಬಿಕೆಯೊಂದು ಹೇಳಿದರೆ, ನೀರಗಂಟಿಯಾದ ಹೊನ್ನಬಿಲ್ಲನನ್ನು ಊರ ದೇವಿಗೆ ವಚನ ಕೊಟ್ಟಂತೆ ಬಲಿ ಕೊಡುವುದರ ಮೂಲಕ ಗ್ರಾಮವನ್ನು ರಕ್ಷಿಸಿದನೆಂದು ಮತ್ತೊಂದು ನಂಬಿಕೆ ಹೇಳುತ್ತದೆ. ಇಂದು ಕೂಡ ಕೆರೆ ತುಂಬಿದಾಗ ಹೊನ್ನಬಿಲ್ಲೋ ಚೆನ್ನಬಿಲ್ಲೋ ಎಂದು ಕೂಗಿಕೊಳ್ಳುತ್ತದೆಂದು ಜನರ ನಂಬಿಕೆ.

ಇತ್ತೀಚೆಗೆ ಅಯ್ಯನಕೆರೆ ದುರಸ್ತಿಗೊಂಡಿದ್ದು ಮೀನು ಸಾಕಾಣೆ ಕೇಂದ್ರವಾಗಿದೆ. ಈ ಕೆರೆಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಗೊಳಿಸಲು ಹೆಚ್ಚಿನ ಅವಕಾಶಗಳಿವೆ. (ಕೆ.ಓ.)

**ಅಯ್ಯರ್, ಕೆ.ವಿ. :** 1898-1980. ಪ್ರಸಿದ್ಧ ಕಾದಂಬರಿಕಾರ, ವ್ಯಾಯಾಮ ಪಟು, ವ್ಯಾಯಾಮ ಶಿಕ್ಷಕ, ಲೇಖಕ. ಪೂರ್ತಿ ಹೆಸರು ಕೋಲಾರ ವೆಂಕಟೇಶ ಅಯ್ಯರ್. ಕೋಲಾರ ಜಿಲ್ಲೆಯ ದೇವರಾಯನ



ಸಮುದ್ರದಲ್ಲಿ 1898ರಲ್ಲಿ ಜನಿಸಿದರು. ತಂದೆ ರಾಮಸ್ವಾಮಯ್ಯ. ಬಡತನದಿಂದಾಗಿ ಅಯ್ಯರ್ ಎಸ್.ಎಸ್.ಎಲ್.ಸಿ.ಯಿಂದ ಮುಂದೆ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗಲಿಲ್ಲ. ಅಂಗ ಸಾಧನೆಯಲ್ಲಿ ಆಸಕ್ತಿವಹಿಸಿ, ವಿಶ್ವಖ್ಯಾತಿ ಗಳಿಸಿ, ಸ್ವಂತ ವ್ಯಾಯಾಮ ಶಾಲೆಯನ್ನು ಬೆಂಗಳೂರಿನಲ್ಲಿ ತೆರೆದು ಅನೇಕ ಅಂಗಸಾಧಕರನ್ನು ತಯಾರಿಸಿದರು. ವಿಶ್ವದ ಮಹಾನ್ ಅಂಗಸಾಧಕ ಸ್ಯಾಂಡೋಬಿನಂತೆ ತಾವೂ ಆಗಬೇಕೆಂಬುದು ಇವರ ಬಯಕೆಯಾಗಿತ್ತು. ಇವರಿಗೆ ನಾಟಕದಲ್ಲಿ ವಿಶೇಷ ಅಭಿರುಚಿಯಿತ್ತು. ಇದರಿಂದಾಗಿ ಟಿ.ಪಿ. ಕೈಲಾಸಂ ಅವರು ಪರಿಚಿತರಾದರು. ಕೈಲಾಸಂ ಕೆಲಕಾಲ ಅಯ್ಯರ್ ಮನೆಯಲ್ಲೇ ಇರುತ್ತಿದ್ದರು. ಇವರ ಸ್ನೇಹ ಗಾಢವಾಯಿತು. ಅಂಗಸಾಧನೆಯಲ್ಲಿ ಅಯ್ಯರ್ ಅವರಿಗಿದ್ದ ಆಸಕ್ತಿಯನ್ನು ಗಮನಿಸಿದ ಕೈಲಾಸಂ ಬರೀ ದೇಹವನ್ನು ಮಾಂಸಖಂಡವನ್ನು ಗಟ್ಟಿಗೊಳಿಸುವುದರಿಂದ ಪ್ರಯೋಜನವಿಲ್ಲ 'ಬುದ್ಧಿಯನ್ನು, ಮಿದುಳನ್ನು ಗಟ್ಟಿಗೊಳಿಸಬೇಕು' ಎಂದು ಹೇಳಿದ ಮಾತನ್ನು ಇವರು ಸವಾಲಾಗಿ ಸ್ವೀಕರಿಸಿ ಓದು ಬರೆಹಗಳಲ್ಲಿ ಹೆಚ್ಚು ಆಸಕ್ತಿವಹಿಸತೊಡಗಿದರು. ದಯ್ಯದ ಮನೆ ಅಥವಾ ಆಷಾಢ ಬಹುಳ ಅಮಾವಾಸ್ಯೆ (1949) ಎಂಬ ಕಥಾರೂಪವನ್ನು ಬರೆದರು. ಇದರಿಂದ ತೃಪ್ತರಾಗದೆ ಜಿ.ಪಿ.ರಾಜರತ್ನಂ ಅವರಿಂದ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಪಡೆಯತೊಡಗಿದರು. ರೀಡರ್ಸ್ ಡೈಜೆಸ್ಟ್ ಮಾಸಿಕದಲ್ಲಿ ಪ್ರಕಟವಾದ ಪ್ರಖ್ಯಾತ ಕಲಾವಿದ ಮೈಕೇಲ್ ಏಂಜಲೋವಿನ ಕುರಿತಾದ ಕಲ್ಪಿತ ಕಥೆಯೊಂದನ್ನು ಆಧರಿಸಿ ಕಾದಂಬರಿಯೊಂದನ್ನು ಬರೆಯುವ ಯೋಚನೆಯನ್ನು ರಾಜರತ್ನಂ ಅವರ ಮುಂದೆ ಇಟ್ಟರು. ರಾಜರತ್ನಂ ಅವರು ಅಯ್ಯರ್ ಅವರ ಅಸ್ಪಷ್ಟ ಯೋಚನೆಗಳಿಗೆ ಖಚಿತ ರೂಪ ನೀಡಿದರು. ರೂಪದರ್ಶಿ (1952) ಕಾದಂಬರಿ ಅಯ್ಯರ್ ಅವರಿಗೆ ಖ್ಯಾತಿಯನ್ನು ತಂದುಕೊಟ್ಟಿತು.

ಕ್ರಮೇಣ ಅಯ್ಯರ್ ಅವರ ಬರೆಹಕ್ಕೆ ಒಂದು ಸ್ಪಷ್ಟರೂಪ ದೊರಕಿತು. ಅನಂತರ ಹೊಯ್ಸಳ ರಾಜವಂಶದ ಮಹಾರಾಣಿ ನಾಟ್ಯರಾಣಿ ಶಾಂತಲೆಯನ್ನು ಕುರಿತ ಚಾರಿತ್ರಿಕ ವಸ್ತುವುಳ್ಳ ಶಾಂತಲಾ ಎಂಬ ಹೃದಯಸ್ಪರ್ಶಿ ಕಾದಂಬರಿಯನ್ನು ಬರೆದರು (1954). ಪತಿ-ಪತ್ನಿ, ತಂದೆ-ಮಗಳು, ಅಣ್ಣ-ತಂಗಿ, ರಾಜ-ರಾಣಿ ಹಾಗೂ ಪ್ರಜೆಗಳ ಸಂಬಂಧವನ್ನು ಮನಮುಟ್ಟುವಂತೆ ಚಿತ್ರಿಸುವ ಈ ಕಾದಂಬರಿ ಅಯ್ಯರ್ ಅವರಿಗೆ ಅಪಾರ ಖ್ಯಾತಿಯನ್ನೂ ಯಶಸ್ಸನ್ನೂ ತಂದುಕೊಟ್ಟಿತು. ಈ ಎರಡೂ ಕಾದಂಬರಿಗಳು ಅನೇಕ ಮುದ್ರಣಗಳನ್ನು ಕಂಡಿವೆಯಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳೂ ಆಗಿದ್ದವು.

ಬಾನುಲಿಗಾಗಿ ಅನೇಕ ಪ್ರಸಾರ ನಾಟಕಗಳನ್ನು ಬರೆದ ಅಯ್ಯರ್ ಅವರು ಸ್ನೇಹಿತ ಕೈಲಾಸಂ ಕುರಿತು ಕೈಲಾಸಂರವರ ಸ್ಮರಣೆ ಎಂಬ ಆತ್ಮೀಯ ಒಡನಾಟದ ಚಿತ್ರಣವನ್ನು ನೀಡಿದ್ದಾರೆ (1973). ಲೀನಾ ಎಂಬುದು ರೂಪದರ್ಶಿ ಕಾದಂಬರಿಯ ಎರಡನೆಯ (ಮುಂದುವರೆದ) ಭಾಗ (1971). ಸಮುದತಾ (1968) ಇವರ ಮತ್ತೊಂದು ಕೃತಿ. ಇತರ ಸ್ನೇಹಿತರೊಂದಿಗೆ ಸೇರಿ ಹೊಸಕ್ಷಿತಿಜ (1965) ಎಂಬ ಸಂದರ್ಶನ ಪ್ರಬಂಧಗಳ ಸ್ವರೂಪವುಳ್ಳ ಕೃತಿಯನ್ನು ಇವರು ಹೊರತಂದಿದ್ದಾರೆ. ತಮ್ಮ ಆಸಕ್ತಿಯ ಕ್ಷೇತ್ರವಾದ ಅಂಗಸಾಧನೆ ಕುರಿತು ಇಂಗ್ಲಿಷಿನಲ್ಲಿ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ನಾಟಕ ಕ್ಷೇತ್ರವೂ ಇವರಿಗೆ ಪ್ರಿಯವಾಗಿತ್ತು. ರವಿ ಕಲಾವಿದರು ಎಂಬ ನಾಟಕ ಸಂಘವೊಂದನ್ನು ಕಟ್ಟಿ ಇವರು ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಅಯ್ಯರ್ ಅವರ ಸಾಹಿತ್ಯ ಸೃಷ್ಟಿ ಸಂಖ್ಯೆಯ ದೃಷ್ಟಿಯಿಂದ ದೊಡ್ಡದಲ್ಲ. ಆದರೆ ಗುಣದಲ್ಲಿ ಹಿರಿಮೆ ಉಳ್ಳದ್ದು. ಇವರ ಸಾಹಿತ್ಯಕ ಕೊಡುಗೆಯನ್ನು ಗಮನಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಯನ್ನು ನೀಡಿದೆ (1979). ಇವರು 1980ರಲ್ಲಿ ನಿಧನಹೊಂದಿದರು. *

**ಅಯ್ಯರ್, ಜಿ.ವಿ. :** 1917-2003 ಕನ್ನಡ ಚಲನಚಿತ್ರ ನಟ, ನಿರ್ದೇಶಕ ಹಾಗೂ ಸಾಹಿತಿ. ಗಣಪತಿ ವೆಂಕಟರಮಣ ಅಯ್ಯರ್ ಇವರ ಪೂರ್ತಿ ಹೆಸರು. ಇವರು ಮೂಲತಃ ಮೈಸೂರು ಜಿಲ್ಲೆ ನಂಜನಗೂಡಿನವರು. ಕಡುಬಡತನದಲ್ಲೇ ಬಾಲ್ಯ ಕಳೆದ ಇವರು ಮೂಕಿ ಚಿತ್ರಗಳಿಂದ ಆಕರ್ಷಿತರಾದರು. ತಮ್ಮ 10ನೆಯ ವಯಸ್ಸಿನಲ್ಲಿ ಗುಬ್ಬಿ ಕಂಪನಿ ಸೇರಿದರು. ಚಲನಚಿತ್ರ ನಟನಾಗಬೇಕೆಂಬ ಹಂಬಲದಿಂದ ಪುಣೆಗೆ ತೆರಳಿ ಪ್ರಭಾತ್ ಸ್ಟುಡಿಯೋ ಬಾಗಿಲು ತಟ್ಟಿದರು. ಆದರೆ ನಿರಾಶರಾಗಿ ಹಿಂದಿರುಗಿದರು. 15ನೆಯ ವಯಸ್ಸಿನಲ್ಲಿ ಪುನಃ ಬಾಲಕೃಷ್ಣರ ಜೊತೆ ಗುಬ್ಬಿ ಕಂಪನಿ ಸೇರಿದರು. ಈ ಅವಧಿಯಲ್ಲಿ ಹೆಸರಾಂತ ನಾಟಕಕಾರ ಟಿ.ಪಿ.ಕೈಲಾಸಂ ಅವರಿಂದ ಸ್ಫೂರ್ತಿ ಪಡೆದರು. ಅನಂತರ ರಂಗಭೂಮಿಯ ಗಂಭೀರ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಇವರು ರಾಧಾರಮಣ ಚಿತ್ರದ ಮೂಲಕ ತಮ್ಮ ನಟನಾ ವೃತ್ತಿಯನ್ನು ಆರಂಭಿಸಿದರು (1943). ಮೊದಲ ಹಂತದಲ್ಲಿ ಹಾಸ್ಯ ನಟರಾಗಿ ಕಾಣಿಸಿಕೊಂಡರು. ಬೇಡರಕಣ್ಣಪ್ಪ(1954) ಚಿತ್ರ ಇವರ ಜನಪ್ರಿಯತೆಯನ್ನು ಹೆಚ್ಚಿಸಿತು. ವಿಕ್ರಮ್ ಪ್ರೊಡಕ್ಷನ್‌ರವರ ದಶಾವತಾರ ಚಿತ್ರವನ್ನು ನಿರ್ದೇಶಿಸಿದರು. 1960ರ ದಶಕದಲ್ಲಿ ಕನ್ನಡ ಚಲನಚಿತ್ರಗಳ ತಯಾರಿಕೆ ಇಳಿಮುಖವಾಗಲಾರಂಭಿಸಿದಾಗ ರಾಜ್‌ಕುಮಾರ್, ನರಸಿಂಹರಾಜು

ಮತ್ತು ಟಿ.ಎನ್. ಬಾಲಕೃಷ್ಣರವರ ಜೊತೆಗೂಡಿ ಕನ್ನಡ ಕಲಾವಿದರ ವೇದಿಕೆ ರಚಿಸಿಕೊಂಡರು. ಕನ್ನಡಿಗರನ್ನು ಸಂಘಟಿಸುವುದು ಹಾಗೂ



ಚಲನಚಿತ್ರದ ಬಗ್ಗೆ ಆಸಕ್ತಿ ಮೂಡಿಸುವುದು ಈ ವೇದಿಕೆಯು ಉದ್ದೇಶವಾಗಿತ್ತು. ಈ ಕಲಾವಿದರೆಲ್ಲಾ ಸೇರಿಕೊಂಡು ಕನ್ನಡದ 100ನೆಯ ವಾಕ್ ಚಿತ್ರವಾಗಿ ರಣಧೀರ ಕಂಠೀರವ ಎಂಬ ಐತಿಹಾಸಿಕ ಚಿತ್ರ ನಿರ್ಮಿಸಿದರು (1960). ಈ ಚಿತ್ರ ಜಯಭೇರಿ ಬಾರಿಸಿತು. ಅನಂತರ ಅಯ್ಯರ್ ಅವರು ಚಿತ್ರಕಥೆ, ಸಂಭಾಷಣೆ ಮತ್ತು ಗೀತೆಗಳನ್ನು ರಚಿಸುವ ಮೂಲಕ ತಮ್ಮ ಪ್ರತಿಭೆಯನ್ನು ಮೆರೆದರು. ಕಿತ್ತೂರು ಚನ್ನಮ್ಮ ಇವರು ಸಂಭಾಷಣೆ ರಚಿಸಿದ ಹೆಸರಾಂತ ಚಿತ್ರಗಳಲ್ಲೊಂದು. ಬಿ.ವಿ.ಕಾರಂತ ಮತ್ತು ಗಿರೀಶ್ ಕಾರ್ನಾಡ್ ಅವರ ನಿರ್ದೇಶನದಲ್ಲಿ ವಂಶವೃಕ್ಷ ಚಿತ್ರ ತಯಾರಿಸಿದರು (1972). ಇದು ಅಯ್ಯರ್ ಅವರ ವೃತ್ತಿ ಜೀವನಕ್ಕೊಂದು ತಿರುವು ನೀಡಿತು. ಇವರು ನಿರ್ದೇಶಿಸಿದ ಹಂಸಗೀತೆ (1975) ಇವರ ನಿರ್ದೇಶನ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ಅಯ್ಯರ್ ಅವರದು ಸದಾ ಪ್ರಯೋಗಶೀಲ ಮನಸ್ಸು. ಚಿತ್ರರಂಗದಲ್ಲಿ ಹಲವು ಸಾಹಸಕಾರ್ಯಗಳನ್ನು ಇವರು ಕೈಗೊಂಡರು. ಸಂಸ್ಕೃತ ಭಾಷೆಯಲ್ಲೂ ಚಿತ್ರ ನಿರ್ಮಾಣಕ್ಕೆ ತೊಡಗಿದ ಇವರು ಆದಿ ಶಂಕರಾಚಾರ್ಯ ಎಂಬ ಪ್ರಥಮ ಸಂಸ್ಕೃತ ಚಿತ್ರವನ್ನು ನಿರ್ದೇಶಿಸಿದರು. ಈ ಚಿತ್ರ ಅತ್ಯುತ್ತಮ ಚಿತ್ರವೆಂದು ಸ್ವರ್ಣ ಕಮಲ ಪ್ರಶಸ್ತಿ ಗಳಿಸಿತು (1983). ಅನಂತರ ಮಧ್ವಾಚಾರ್ಯ, ಭಗವದ್ಗೀತೆ, ಸ್ವಾಮಿ ವಿವೇಕಾನಂದ ಮೊದಲಾದ ಚಿತ್ರಗಳನ್ನು ನಿರ್ಮಿಸಿ ಪ್ರಯೋಗಶೀಲ ನಿರ್ದೇಶಕರೆನಿಸಿಕೊಂಡರು. ಸಾಹಿತ್ಯ, ಮತ್ತು ತತ್ತ್ವಜ್ಞಾನ ಇವರ ಇತರ ಪ್ರಿಯ ಆಸಕ್ತಿಯ ವಿಷಯಗಳು. ಇವರು ಉತ್ತಮ ವಾಗ್ಮಿಗಳೂ ಚಿಂತಕರೂ ಆಗಿದ್ದರು. ಕನ್ನಡ ಚಿತ್ರರಂಗದ ಆಚಾರ್ಯರೆಂದೇ ಹೆಸರಾದ ಅಯ್ಯರ್ 2003 ಡಿಸೆಂಬರ್ 21ರಂದು ಮುಂಬಯಿಯಲ್ಲಿ ನಿಧನರಾದರು. (ಜಿ.ಎಂ.ಯು.)

**ಅಯ್ಯಾವೊಳೆ ಐನೂರ್ವರು :** ಮಧ್ಯಕಾಲೀನ ಕರ್ನಾಟಕದಲ್ಲಿ ಅತ್ಯಂತ ಪ್ರಭಾವಿಯಾಗಿದ್ದ ವಾಣಿಜ್ಯಸಂಘ. ಇದು ಮೊದಲು ಅಯ್ಯಾವೊಳೆಯಲ್ಲಿ (ಈಗಿನ ಐಹೊಳೆ) ಬಾದಾಮಿ ಚಾಳುಕ್ಯರ ಆಡಳಿತ ಕಾಲದಲ್ಲಿ ಸ್ಥಾಪನೆಯಾಗಿರಬೇಕೆಂದು ಊಹಿಸಲಾಗಿದೆ. ಕಲ್ಯಾಣ, ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಕಾಲದ ಅನೇಕ ಶಾಸನಗಳಲ್ಲಿ ಅಯ್ಯಾವೊಳೆ ಐನೂರ್ವರ ಸಂಘಕ್ಕೆ ಸಂಬಂಧಿಸಿದ ಮಾಹಿತಿ ದೊರೆಯುತ್ತದೆ. ಈ ಸಂಘವನ್ನು ನಾನಾದೇಶಿ ಎಂದೂ ಸಂಬೋಧಿಸಲಾಗಿದೆ. ಕನ್ನಡನಾಡಿನ ಪ್ರಸಿದ್ಧ ವಣಿಕರ ಜೊತೆಗೆ ತಮಿಳುನಾಡು ಮತ್ತು ಕೇರಳದ ವರ್ತಕರೂ ಈ ಸಂಘದ ಸದಸ್ಯತ್ವ ಹೊಂದಿದ್ದರು. ಎಂಟನಾಡ ಪದಿನರ್ವರು, ಗವರೆಗಳು, ಗಾತ್ರಿಗಳು, ಸೆಟ್ಟಿಯರು ಸೆಟ್ಟಿ ಗುತ್ತರು, ಅಂಕಕಾರರು, ಬೀರರು, ಬೀರವಣಿಗರು, ಗಂದಿಗರು, ಗಾವುಂಡರು ಇವರೆಲ್ಲಾ ಈ ಸಂಘದ ಸದಸ್ಯರಾಗಿದ್ದರು. 1150ರ ಬಳ್ಳಿಗಾಮೆಯ ಶಾಸನವೊಂದರಲ್ಲಿ ಅಯ್ಯಾವೊಳೆ ಐನೂರ್ವರು ಸಂಘದ ಸದಸ್ಯರು ವೀರಬಣಂಜು ಧರ್ಮ ಪ್ರತಿಪಾಳರು ಭಗವತೀಲಬ್ಧವರಪ್ರಸಾದರು, ಬ್ರಹ್ಮ ವಿಷ್ಣು ಮಹೇಶ್ವರಪಾದಾರಾಧಕರು ಎಂಬುದಾಗಿ ಕರೆದುಕೊಂಡಿದ್ದಾರೆ. ಇವರು ಹಸುಂಬೆಯಲ್ಲಿ ಅಮೂಲ್ಯ ವಸ್ತುಗಳನ್ನು ತುಂಬಿಕೊಂಡು ಚೇರ ಚೋಳ ಮಲಯ ಮಗಧ ಕೌಶಲ ಸೌರಾಷ್ಟ್ರ ಕಾಂಭೋಜ ಗೌಳ ಲಾಳ ಪಾರಸ ನೇಪಾಳ ಎಂಬ ನಾನಾದೇಶಗಳಲ್ಲಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖ ಸಂವಾಹನವೆಂಬ ದಿಗುದಂತಿ ಪಟ್ಟಣಗಳನ್ನು ಸಂಚರಿಸಿ ಸರಕುಗಳನ್ನು ಕೊಳ್ಳುವ ಮತ್ತು ಮಾರುವ ಕಾರ್ಯದಲ್ಲಿ ತೊಡಗಿದ್ದರು. ಪಾದಮಾರ್ಗ ಜಲಮಾರ್ಗವಾಗಿ ಷಟ್ಖಂಡ ಮಂಡಲಗಳಿಗೆ ಹೋಗಿಬರುತ್ತಿದ್ದರು. ಅಂತರ್ದೇಶೀಯ ಸಾಗಾಣಿಕೆಗೆ ಕುದುರೆ, ಎತ್ತು, ಕತ್ತೆ, ಕೋಣ, ಒಂಟೆ, ಆನೆಗಳನ್ನು ಉಪಯೋಗಿಸುತ್ತಿದ್ದರು. ದ್ವೀಪಾಂತರಗಳಿಗೆ ಹಡಗುಗಳ ಮುಖಾಂತರ ಹೋಗಿಬರುತ್ತಿದ್ದರು. ಈ ವರ್ತಕರು ಬಟ್ಟೆ, ಬತ್ತ, ಹತ್ತಿ, ಸಕ್ಕರೆ, ಗೋದಿ, ಅಡಕೆ, ಸಾಸುವೆ, ಜೀರಿಗೆ, ಮೆಣಸು, ಅರಿಶಿನ, ಇಂದ್ರನೀಲ, ಚಂದ್ರಕಾಂತ ಮತ್ತು ಮಾಣಿಕ್ಯ ವಜ್ರ ವೈಡೂರ್ಯ ಗೋಮೇದಿಕ ಪುಷ್ಯರಾಗ ಪದ್ಮರಾಳ ಪವಳ ಮರಕತ ಕರ್ಕೇತನ ಚಂದನ ಕಸ್ತೂರಿ ಕುಂಕುಮ ಮೊದಲಾದ ವಸ್ತುಗಳನ್ನು ಅವು ದೊರೆಯುವ ಪ್ರದೇಶಗಳಲ್ಲಿ ಕೊಂಡು ಬೇಡಿಕೆಯಿದ್ದ ಪ್ರದೇಶಗಳಿಗೆ ಸಾಗಿಸಿ ಮಾರುತ್ತಿದ್ದರು. ಕನ್ನಡನಾಡಿನ ಅನೇಕ ಪಟ್ಟಣಗಳಲ್ಲಿ ಈ ಸಂಘದ ವರ್ತಕರು ದೇವಾಲಯಗಳು, ಅನ್ನಸತ್ರಗಳು ಮತ್ತು ಕೆರೆಗಳನ್ನು ಕಟ್ಟಿಸಿರುವರಲ್ಲದೆ, ದೇವಾಲಯಗಳಿಗೂ ಮಠಗಳಿಗೂ ಉದಾರವಾಗಿ ದಾನದತ್ತಿಗಳನ್ನು ನೀಡಿರುವರು. ಮುಖ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ಬಡಬಗ್ಗರಿಗೂ ಯಾತ್ರಾರ್ಥಿಗಳಿಗೂ ಉಚಿತ ಅನ್ನಸತ್ರಗಳು ಹಾಗೂ ರೋಗಿಗಳ ಶುಶ್ರೂಷೆಗೆ ಔಷಧಾಲಯಗಳನ್ನು ತೆರೆಯಲು ಉದಾರ ಕಾಣಿಕೆ ನೀಡಿರುವರು. ಅಯ್ಯಾವೊಳೆ ಐನೂರ್ವರ ಸದಸ್ಯರು ಪ್ರಾಮಾಣಿಕತೆ ಉದಾರನೀತಿ ಕಾರ್ಯತತ್ಪರತೆಗೆ ಪ್ರಸಿದ್ಧರಾಗಿದ್ದರು. ಈ ಸಂಘದ ಹಲವು ದೊಡ್ಡ ವ್ಯವಹಾರಿಗಳು ಆಗಿನ ಕಾಲದ ಪ್ರಭುಗಳ ಮನ್ನಣೆಗೂ ಪಾತ್ರರಾಗಿದ್ದರು. ಈ ಸಂಘವು ಸಾಕಷ್ಟುಕಾಲ ಅಸ್ತಿತ್ವದಲ್ಲಿದ್ದು ಯಲಹಂಕ ಪ್ರಭುಗಳ ಕಾಲಕ್ಕೆ ಸೇರಿದ ಬೆಂಗಳೂರಿನ ಶಾಸನವೊಂದರಲ್ಲಿ ಅದರ ಉಲ್ಲೇಖವಿದೆ. (ಜಿ.ಆರ್.ಆರ್.)

**ಅಯ್ಯಾಶಾಸ್ತ್ರಿ, ಸೋಸಲೆ :** 1854-1934 ಕನ್ನಡ ಸಾಹಿತ್ಯ ಆಧುನಿಕ ಯುಗವನ್ನು ಪ್ರವೇಶಮಾಡುತ್ತಿದ್ದ ಸಂಧಿಕಾಲದಲ್ಲಿ ಸಾಂಪ್ರದಾಯಿಕ ಕಾವ್ಯರಚನೆ ಮಾಡಿದ ಹೆಸರಾಂತ ಕವಿಗಳಲ್ಲೊಬ್ಬರು. ಬಸವಪ್ಪಶಾಸ್ತ್ರೀ, ಅಳಿಯ ಲಿಂಗರಾಜ, ಮುದ್ದಣ ಇವರ ಸಮಕಾಲೀನರು. ಆಗತಾನೆ ರೂಪುಗೊಳ್ಳುತ್ತಿದ್ದ ರಂಗಭೂಮಿಗೂ ನಾಟಕ ಸಾಹಿತ್ಯಕ್ಕೂ ಸೇವೆಸಲ್ಲಿಸಿದವರಲ್ಲಿ ಮೊದಲಿಗರು.

ಮೈಸೂರು ಜಿಲ್ಲೆ ಸೋಸಲೆಯಲ್ಲಿ 1854 ಮಾರ್ಚ್ 20ರಂದು ಇವರು ಜನಿಸಿದರು. ತಂದೆ ಗರಳಪುರಿ ಶಾಸ್ತ್ರಿಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಮಹಾ ವಿದ್ವಾಂಸರಾಗಿದ್ದರಲ್ಲದೆ ಸಂಸ್ಕೃತದಲ್ಲಿ ಗ್ರಂಥರಚನೆಯನ್ನು ಮಾಡಿದ್ದರು. ಇಂಥ ಪರಿಸರದಲ್ಲಿ ಬೆಳೆದ ಶಾಸ್ತ್ರಿಗಳು ಸಂಸ್ಕೃತದ ಜೊತೆಗೆ, ಪೆರಿಯಸ್ವಾಮಿ ತಿರುಮಲಾಚಾರ್ಯರ ಬಳಿ ಕಾವ್ಯ, ತರ್ಕ, ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳನ್ನು ವ್ಯಾಸಂಗ ಮಾಡಿದರು. ಸ್ವಂತ ವ್ಯಾಸಂಗದಿಂದ ಕನ್ನಡದಲ್ಲೂ ಪಾಂಡಿತ್ಯ ಗಳಿಸಿಕೊಂಡರು.

ಚಿಕ್ಕಂದಿನಿಂದಲೂ ಸಂಸ್ಕೃತದಲ್ಲಿ ಕವನಗಳನ್ನು ಬರೆಯುವುದರಲ್ಲಿ ಆಸಕ್ತಿ ವಹಿಸಿದ್ದ ಇವರು ಬಸವಪ್ಪ ಶಾಸ್ತ್ರೀ, ಅಳಿಯ ಲಿಂಗರಾಜ - ಇವರುಗಳ ಪ್ರೋತ್ಸಾಹದಿಂದ ಕನ್ನಡದಲ್ಲೂ ಕಾವ್ಯರಚನೆಯನ್ನು ಮಾಡಿದರು.

ಶಾಸ್ತ್ರಿಗಳು ಮೈಸೂರು ಸದ್ವಿದ್ಯಾ ಪಾಠಶಾಲೆ, ಭಾಷೋಜ್ಜೀವಿನೀ ಪಾಠಶಾಲೆಗಳಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷಾ ಬೋಧಕರಾಗಿ ಹಲವಾರು ವರ್ಷಗಳ ಕಾಲ ಕೆಲಸ ಮಾಡಿದರಲ್ಲದೆ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ಸಂಸ್ಕೃತ-ಕನ್ನಡ ಗ್ರಂಥಗಳ ಪರಿಶೋಧಕ ಪಂಡಿತರಾಗಿಯೂ ಕೆಲಸಮಾಡಿದರು. ಇವರು ಪರಿಶೋಧಿಸಿದ ಗ್ರಂಥಗಳಿವು: ಕರ್ನಾಟಕ ಶಬ್ದಾನುಶಾಸನಂ ಕರ್ನಾಟಕ ಕಾದಂಬರಿ, ಕರ್ನಾಟಕ ವಚನಭಾರತ, ಕರ್ನಾಟಕ ಭಗವದ್ಗೀತೆ.

ಚಾಮರಾಜ ಒಡೆಯರ ಕಾಲದಲ್ಲಿ ಅರಮನೆಯಲ್ಲಿ ನಾಟಕ ಸಂಘವೊಂದಿದ್ದು, ವಿದ್ವಾಂಸರಿಂದ ನಾಟಕಗಳನ್ನು ಬರೆಸಿ ಆಡಿಸುವ ವ್ಯವಸ್ಥೆ ಇತ್ತು. ಶಾಸ್ತ್ರಿಗಳು ಹಲವು ನಾಟಕಗಳನ್ನು ಬರೆದರು. ಕಾಳಿದಾಸನ ವಿಕ್ರಮೋರ್ವಶೀಯವನ್ನು ಓದುವವರಿಗೂ ನಾಟಕ ಆಡುವವರಿಗೂ ಅನುಕೂಲವಾಗುವಂತೆ ಅನುವಾದ ಮಾಡಿದರು (1891). ಹಿಂದೂಸ್ಥಾನಿ ಭಾಷೆಯಲ್ಲಿದ್ದ ಪ್ರತಾಪಸಿಂಹ ಚರಿತ್ರೆ ನಾಟಕವನ್ನು ಕನ್ನಡಕ್ಕೆತಂದರು. ಶ್ರೀರಾಮಾಯಣ ನಾಟಕಂ (1904) ಇವರ ಸ್ವಂತ ರಚನೆ. ಇದರಲ್ಲಿ ರಾಮಾಯಣದ ಸಂಪೂರ್ಣ ಕಥೆಯನ್ನು ನಾಟಕ ರೂಪದಲ್ಲಿ ಹೇಳಿದ್ದಾರೆ.

ಶಾಸ್ತ್ರಿಗಳ ಕೆಲವು ಪ್ರಮುಖ ಕಾವ್ಯಗಳಿವು: ಶೇಷರಾಮಾಯಣಂ (1901), ಮೈಸೂರು ಮಹಾರಾಜ ಚರಿತ್ರಂ (1916), ದಮಯಂತೀ ಚರಿತ್ರೆ (1927). ಶೇಷರಾಮಾಯಣಂ ಒಂದು ಒಳ್ಳೆಯ ಕೃತಿ. ಉತ್ತರ ರಾಮಾಯಣದ ರಾಮಾಶ್ವಮೇಧದ ಕಥಾಭಾಗವನ್ನು ಪದ್ಮಪುರಾಣೋಕ್ತ ರೀತಿಯಿಂದ ಕನ್ನಡಿಗರಿಗೆ ಸುಲಭವಾಗಿ ತಿಳಿಯುವಂತೆ ಹೇಳುವುದೇ ಕಾವ್ಯದ ಉದ್ದೇಶ. ಕಥೆಯ ವಿವರಗಳಲ್ಲಿ ಇದು ಮುದ್ದಣನ ರಾಮಾಶ್ವಮೇಧವನ್ನು ಹೋಲುತ್ತದೆ. ಶೈಲಿಯಲ್ಲಿ ಲಕ್ಷ್ಮೀಶನ ಜೈಮಿನಿ ಭಾರತದ ಪ್ರಭಾವ ಕಾಣಸಿಗುತ್ತದೆ.

ಅಯ್ಯಾಶಾಸ್ತ್ರಿಗಳು ಮೈಸೂರು ಬಾಲಬೋಧಿನಿ ಪಾಠಶಾಲೆಯ ಸಂಸ್ಥಾಪಕರಾಗಿ (1894), ಸಂಸ್ಕೃತ ಮಹಾಪಾಠಶಾಲಾ ಸಮಿತಿ ಮತ್ತು ಸಂಸ್ಕೃತ ವಿದ್ಯಾಭಿವೃದ್ಧಿ ಸಮಿತಿಯ ಸದಸ್ಯರಾಗಿ (1913-16) ಮೈಸೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಸಮಿತಿಯ ಸದಸ್ಯರಾಗಿ ಸೇವೆಸಲ್ಲಿಸಿದರು. ಇವರಿಗೆ ಅರಮನೆಯಿಂದ ಮಹಾವಿದ್ವಾನ್ (1905), ಕವಿತಿಲಕ (1912) ಎಂಬ ಪ್ರಶಸ್ತಿಗಳು ಲಭ್ಯವಾಗಿದ್ದವು. 1934ರಲ್ಲಿ ನಿಧನರಾದರು. (ಎಂ.ವಿ.ಎಸ್.)

**ಅರಕಲಗೂಡು :** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ತಾಲ್ಲೂಕಿನ ಕೇಂದ್ರ. ಹಾಸನ, ಆಲೂರು, ಕೊಡಗು ಜಿಲ್ಲೆಯ ಸೋಮವಾರಪೇಟೆ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕುಗಳು ಇದನ್ನು ಸುತ್ತುವರಿದಿವೆ. ವಿಸ್ತೀರ್ಣ 674ಚಕಿಮೀ. ಜನಸಂಖ್ಯೆ 1,99,243. ಈ ತಾಲ್ಲೂಕಿನಲ್ಲಿ ಅರಕಲಗೂಡು, ಕೊಣನೂರು ಪಟ್ಟಣಗಳೂ 300 ಗ್ರಾಮಗಳೂ ಇವೆ. ಹೋಬಳಿಗಳು ಐದು- ಅರಕಲಗೂಡು, ಮಗ್ಗೆ, ಮಲ್ಲಿಪಟ್ಟಣ, ರಾಮನಾಥಪುರ ಮತ್ತು ಕೊಣನೂರು.

ತಾಲ್ಲೂಕಿನ ಉತ್ತರ ಗಡಿಯಲ್ಲಿ ಹೇಮಾವತಿ ಮತ್ತು ದಕ್ಷಿಣ ಭಾಗದಲ್ಲಿ ಸ್ವಲ್ಪ ದೂರ ಕಾವೇರಿ ಹರಿಯುತ್ತವೆ. ಪಶ್ಚಿಮದಲ್ಲಿ ಕಾಡುಗಳಿಂದ ಕೂಡಿದ ಅನೇಕ ಬೆಟ್ಟಗಳಿವೆ. ಅಲ್ಲಲ್ಲಿ ವಿಶಾಲವಾದ ಕುರುಚಲು, ಹುಲ್ಲು ಮತ್ತು ಮರಗಳುಳ್ಳ ಕಾವಲುಗಳಿವೆ. ವರ್ಷಕ್ಕೆ ಸು.824ಮಿಮೀ ಮಳೆಯಾಗುತ್ತದೆ. ರಾಗಿ ಮುಖ್ಯ ಬೆಳೆ. ಜೋಳ, ದ್ವಿದಳ ಧಾನ್ಯಗಳು, ಈರುಳ್ಳಿ, ಕಡಲೆಕಾಯಿ, ಹೊಗೆಸೊಪ್ಪು, ಮೆಣಸಿನಕಾಯಿ ಇವನ್ನು ಹೆಚ್ಚಾಗಿ ಬೆಳೆಯುತ್ತಾರೆ. ತಾಲ್ಲೂಕಿನಲ್ಲಿ ಅನೇಕ ಕೆರೆಗಳು ಇವೆ. ತಾಲ್ಲೂಕಿನಲ್ಲಿ ಕಾಲುವೆಗಳಿಂದ 8996, ಕೆರೆಗಳಿಂದ 4032, ಬಾವಿಗಳು ಮತ್ತು ಕೊಳವೆಬಾವಿಗಳಿಂದ 505 ಹೆ.ಗಳ ಜಮೀನು ನೀರಾವರಿಗೆ ಒಳಪಟ್ಟಿದೆ. ಕಾವೇರಿ ನದಿಗೆ ಕೃಷ್ಣರಾಜಕಟ್ಟೆ ಎಂಬ ಚಿಕ್ಕ ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ರಾಮನಾಥಪುರ ಮತ್ತು ಕಟ್ಟೇಪುರ ಎಂಬ ಕಾಲುವೆಗಳನ್ನು ನಿರ್ಮಿಸಲಾಗಿದೆ. ಇದರಿಂದ ಬತ್ತ, ಕಬ್ಬು, ತೋಟದ ಬೆಳೆಗಳು, ಅಡಕೆ, ತೆಂಗು ಮುಂತಾದವನ್ನು ಬೆಳೆಯುತ್ತಾರೆ. ಪಶ್ಚಿಮದ ಬೆಟ್ಟಗಳ ಮೇಲೆ ಅಲ್ಲಲ್ಲಿ ಚಿಕ್ಕ ಕಾಫಿ ತೋಟಗಳೂ ಇವೆ.

ಈ ತಾಲ್ಲೂಕಿನಲ್ಲಿರುವ ರಾಮನಾಥಪುರ (ನೋಡಿ) ಪುಣ್ಯಕ್ಷೇತ್ರ. ಕೊಣನೂರು (ನೋಡಿ) ಸಹ ಮುಖ್ಯಸ್ಥಳ. ಸೋಮಪುರ ಗ್ರಾಮದ ಬಳಿ ಬೃಹತ್ ಶಿಲಾಸಮಾಧಿಗಳಿವೆ. ಶಂಭುನಾಥಪುರದಲ್ಲಿ 13ನೆಯ ಶತಮಾನದಲ್ಲಿ ಕಟ್ಟಿದ ಮತ್ತು ಪಾಳೆಯಗಾರ ಕಾಲದ ಗೋಪುರ ಇತ್ಯಾದಿಗಳನ್ನೊಳಗೊಂಡ ದೇವಾಲಯವಿದೆ. ಕಾಶೀಪುರ ವಿಜಯನಗರ ಕಾಲದಲ್ಲಿ ಪ್ರಸಿದ್ಧವಾಗಿದ್ದ ಸ್ಥಳ. ಬಸವಾಪಟ್ಟಣದಲ್ಲಿ ಹೊಯ್ಸಳ ದೇವಾಲಯಗಳು ಮತ್ತು ಕೋಟೆಯ ಅವಶೇಷಗಳಿವೆ. ಹಿಂದೆ ಇದೊಂದು ಅಗ್ರಹಾರವಾಗಿತ್ತು.

ಅರಕಲಗೂಡು ಈ ತಾಲ್ಲೂಕಿನ ಆಡಳಿತ ಕೇಂದ್ರ, ದೊಡ್ಡ ಊರು. ಜಿಲ್ಲಾ ಕೇಂದ್ರ ಹಾಸನದಿಂದ 32ಕಿಮೀ ದಕ್ಷಿಣಕ್ಕಿದೆ. ಹಾಸನ ಪಿರಿಯಾಪಟ್ಟಣ ಮತ್ತು ಹೊಳೆನರಸೀಪುರ ಕೊಡ್ಲಿಪೇಟೆ ರಸ್ತೆಗಳು ಈ ಊರಿನ ಮೂಲಕ ಹಾದು ಹೋಗುತ್ತವೆ. ಜನಸಂಖ್ಯೆ 15,184. ಊರು ನಗರಸಭೆಯ ಆಡಳಿತಕ್ಕೆ ಒಳಪಟ್ಟಿದೆ.

ಗೌತಮ ಋಷಿ ಸೂರ್ಯನನ್ನು ಕುರಿತು ಇಲ್ಲಿ ತಪಸ್ಸು ಮಾಡಿದ್ದರಿಂದ ಈ ಊರಿಗೆ ಅರ್ಕಪುರಿ ಎಂಬ ಹೆಸರಿತ್ತು ಎಂದು ಐತಿಹ್ಯ. ಐಗೂರು ಪಾಳೆಯಗಾರ ಕೃಷ್ಣಪ್ಪನಾಯಕ ಈ ಊರನ್ನು ಸ್ಥಾಪಿಸಿದ (1560). ಕಂಠೀರವ ನರಸರಾಜ 1647ರಲ್ಲಿ ಇದನ್ನು ಆಕ್ರಮಿಸಿಕೊಂಡ. ಅನಂತರ ಇದು ಕೆಳದಿಯ ಶಿವಪ್ಪ ನಾಯಕನ ವಶವಾಯಿತು. ಮುಂದೆ ಚಿಕ್ಕದೇವರಾಜನಿಂದ ಮೈಸೂರು ಸಂಸ್ಥಾನಕ್ಕೆ ಸೇರಿತು.

ಊರಿನಲ್ಲಿ ಶಿಥಿಲವಾದ ಕೋಟೆ ಇದೆ. ಕೋಟೆಯ ಒಳಗೆ ಲಕ್ಷ್ಮೀನರಸಿಂಹ, ಅಮೃತೇಶ್ವರ ಮತ್ತು ವೀರಭದ್ರ ದೇವಾಲಯಗಳಿವೆ. ಮೊದಲೆರಡು ದೇವಾಲಯಗಳು ಪ್ರಾಯಶಃ ಹೊಯ್ಸಳ ಕಾಲದವು. ಆದರೆ ಇವುಗಳಲ್ಲಿ ಹೆಚ್ಚಿನ ಕಲೆಗಾರಿಕೆಯೇನೂ ಕಂಡುಬರುವುದಿಲ್ಲ. *

**ಅರಣ್ಯಸಂಪತ್ತು :** ಕರ್ನಾಟಕದ ಅರಣ್ಯ ಸಂಪತ್ತು ಹೇರಳವಾದುದು. ಪುರಾತನ ಕಾಲದಲ್ಲಿ ಕರ್ನಾಟಕ ರಾಜ್ಯ ದಂಡಕಾರಣ್ಯದ ಒಂದು ಮುಖ್ಯ ಪ್ರದೇಶವಾಗಿದ್ದು ಮೃಗಗಳ ಬೇಟೆಯಲ್ಲಿ ಆಸಕ್ತಿಯಿದ್ದ ಅಂದಿನ ಅರಸರಿಂದ ಅನೇಕ ರೀತಿಯಲ್ಲಿ ಪೋಷಿತವಾಗಿದ್ದಿತು. ಪ್ರಸಿದ್ಧ ವೆನಿಶಿಯನ್ ಪ್ರವಾಸಿ ಮಾರ್ಕೋಪೋಲೋ ಕರ್ನಾಟಕದ ಅರಣ್ಯ ಸಂಪತ್ತನ್ನು ಸಾಕಷ್ಟು ಪ್ರಶಂಸಿಸಿದ್ದಾನೆ. ವಿಜಯನಗರಕ್ಕೆ ಭೇಟಿ ನೀಡಿದ ಅನೇಕ ವಿದೇಶಿ ಪ್ರವಾಸಿಗಳೂ ಇಲ್ಲಿನ ಕಾಡಿನ ದಟ್ಟತೆ ಮತ್ತು ಸಮೃದ್ಧತೆಯ ಬಗ್ಗೆ ವರ್ಣಿಸಿದ್ದಾರೆ. ವಿಜಯನಗರ ಸಾಮ್ರಾಜ್ಯದಲ್ಲಿ ಅರಣ್ಯಗಳಿಗೆ ತುಂಬಾ ಪ್ರಾಮುಖ್ಯ ನೀಡಲಾಗಿತ್ತು. ಅಂದು ವಿಜಯನಗರವನ್ನು ಸಂದರ್ಶಿಸಿದ ಅರೇಬಿಯದ ವ್ಯಾಪಾರಿ ಅಬ್ದುಲ್ ರಜಾಕ್ ಎಂಬಾತ ಕರ್ನಾಟಕದ ಅರಣ್ಯ ಸಂಪತ್ತು ಹಾಗೂ ಅದರ ವಾಣಿಜ್ಯ ಪ್ರಾಮುಖ್ಯತೆಯ ಬಗ್ಗೆ ಬಹುವಾಗಿ ಪ್ರಂಶಸಿಸಿದ್ದಾನೆ. ವಿಜಯನಗರ ಸಾಮ್ರಾಜ್ಯ ಇರುವವರೆಗೂ ದಕ್ಷರೀತಿಯಿಂದ ನಡೆಯುತ್ತಿದ್ದ ಅರಣ್ಯಗಳ ಆಡಳಿತ 1565ರ ತಾಳೀಕೋಟೆಯ ಕದನದ ಅನಂತರ ಕುಸಿಯಿತು. ಸಾಗುವಳಿಗೆ ಸಾಕಷ್ಟು ಜಮೀನಿಲ್ಲದೆ ಜನ ಅರಣ್ಯ ಒತ್ತುವರಿ ಮಾಡಿ ವ್ಯವಸಾಯ ಮಾಡಲು ಪ್ರಾರಂಭಿಸಿದರು. ತರುವಾಯ ಹೈದರ್ ಹಾಗೂ ಟಿಪ್ಪುಸುಲ್ತಾನರ ಕಾಲದಲ್ಲಿ ಶ್ರೀಗಂಧದ ಮರವನ್ನು ರಾಜವೃಕ್ಷ ಎಂದು ಪರಿಗಣಿಸಲಾಯಿತು. ಜೊತೆಗೆ ಬಹುಮುಖ್ಯ ಪ್ರಯೋಜನಕಾರಿ ಸಾಗುವಾನಿ ತೇಗದ ಮರಕ್ಕೂ ಸರ್ಕಾರದ ರಕ್ಷಣೆ ದೊರೆಯಿತು.

ಕಾಡುಗಳ ಆಡಳಿತ ಹಾಗೂ ಸಂರಕ್ಷಣೆಯಲ್ಲಿ ಬ್ರಿಟಿಷರ ಕೊಡುಗೆ ಅಪಾರ. ವೈಜ್ಞಾನಿಕ ವಿಧಾನದಲ್ಲಿ ಕಾಡುಗಳ ವಿಂಗಡನೆ ಹಾಗೂ ಸಂರಕ್ಷಣೆಯನ್ನು ಇಡೀ ಭಾರತದಲ್ಲಿ ಪ್ರಾರಂಭಿಸಿದವರೂ ಬ್ರಿಟಿಷರೇ. ಕರ್ನಾಟಕದ ಸ್ಥಿತಿಯೂ ಬೇರೆಯಲ್ಲ. 1799ರ ಅನಂತರ ಬ್ರಿಟಿಷರ ಅಧೀನಕ್ಕೊಳಪಟ್ಟ ಕರ್ನಾಟಕದ ಭಾಗದಲ್ಲಿ ಮೊದಲು ಶ್ರೀಗಂಧ ಹಾಗೂ ತೇಗದ ಮರಗಳಿಗೆ ಮಾತ್ರ ಪ್ರಾಮುಖ್ಯವಿತ್ತು. ಗವರ್ನರ್ ಜನರಲ್ ಡಾಲ್ ಹೌಸಿಯ 1850ರ ಆದೇಶ, ಕರ್ನಾಟಕದ ಅರಣ್ಯ ರಕ್ಷಣೆ, ಅಭಿವೃದ್ಧಿ, ಮಾರ್ಪಾಡು ಎಲ್ಲವೂ ಕಾನೂನು ಕಟ್ಟಳೆಗಳಿಗೆ ಒಳಪಟ್ಟು ವೈಜ್ಞಾನಿಕ ರೀತಿಯಲ್ಲಿ ಬೆಳೆದುಬರುವಂತೆ ಮಾಡಿತು.

ಹಿಂದೆ ಅರಬ್ಬರು, ಆಫ್ರಿಕನ್ನರು ಅನಂತರ ಭಾರತಕ್ಕೆ ಬಂದ ಬ್ರಿಟಿಷರು ಹಡಗುಗಳ ನಿರ್ಮಾಣಕ್ಕೆ ಸಾಗುವಾನಿ ಮತ್ತು ಸುರಹೊನ್ನೆ ಮರಗಳನ್ನು ಕಡಿದು ಉಪಯೋಗಿಸುತ್ತಿದ್ದರು. ಇಂಗ್ಲೆಂಡಿನ ಓಕ್ ಮರ ನಶಿಸುತ್ತ ಬಂದಂತೆಲ್ಲ ಕರ್ನಾಟಕದ ಸಾಗುವಾನಿ ಮರಗಳಿಗೆ ಬೇಡಿಕೆ ಹೆಚ್ಚುತ್ತ ಬಂದಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಇಡೀ ಭಾರತದಲ್ಲಿ ಸಾಕಷ್ಟು ಪ್ರಮಾಣದ ಮರ - ಮುಂಡಿಗೆ, ದಿಮ್ಮಿ, ಕಂಬಗಳಿಗಾಗಿ ಅರಣ್ಯ ನಾಶ ಮುಂದುವರಿಯಿತು. ಜೊತೆ ಜೊತೆಯಲ್ಲೇ ಅರಣ್ಯದ ಮರಮುಟ್ಟುಗಳ ವಿಚಾರವಾಗಿ ವೈಜ್ಞಾನಿಕ ಸಂಶೋಧನೆ ಪ್ರಾರಂಭವಾಯಿತು. ನೆಡುತೋಪುಗಳು, ಸಾಲುಮರಗಳು, ಗುಂಡು ತೋಪುಗಳನ್ನು ಅಲ್ಲಲ್ಲಿ ಬೆಳೆಸಿದರು. ಆದರೂ ಜನಸಂಖ್ಯೆಯ

ಹೆಚ್ಚಳದಿಂದಾಗಿಯೂ ಹೆಚ್ಚು ಬೆಳೆ ಬೆಳೆಯುವ ಆಂದೋಲನದಿಂದಾಗಿಯೂ ಯೋಗ್ಯವಾದ ಕಾಡುಗಳು ನಾಶವಾಗುತ್ತ ಬಂದವು. ಕೈಗಾರಿಕೆಗಳಿಗೆ ಬೇಕಾದ ಮರಮುಟ್ಟು, ಸೌದೆ, ಇದ್ದಿಲುಗಳಿಗಾಗಿ ಪ್ರತಿವರ್ಷ ಸು.1,00,000 ಹೆಕ್ಟೇರು ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ ಎಂದು 1970ರ ದಶಕದ ಅಂಕಿ ಸಂಖ್ಯೆಗಳು ತಿಳಿಸುತ್ತವೆ. ಆದರೆ ಇತ್ತೀಚೆಗೆ ನೆಡುತೋಪುಗಳನ್ನು ಹೆಚ್ಚಿಸುವ, ಸಸ್ಯಗಳನ್ನು ನೆಟ್ಟು ಅರಣ್ಯಗಳನ್ನು ಅಭಿವೃದ್ಧಿಪಡಿಸುವ ಹಾಗೂ ಸಾಮಾಜಿಕ ಅರಣ್ಯ ಕಾರ್ಯಕ್ರಮಗಳಿಂದಾಗಿ ಕರ್ನಾಟಕದ ಅರಣ್ಯ ಕ್ಷೇತ್ರ ಗಣನೀಯವಾಗಿಯಲ್ಲದಿದ್ದರೂ ನಿಧಾನವಾಗಿ ವೃದ್ಧಿಯಾಗುತ್ತಿದೆ.

1960ರ ದಶಕದಲ್ಲಿ ಕರ್ನಾಟಕದಲ್ಲಿ 35,21,000 ಹೆಕ್ಟೇರು ಅರಣ್ಯವಿದ್ದು, ಇದು ಕರ್ನಾಟಕದ ಭೂಭಾಗದ ಸೇ. 23 ಭಾಗ ದಷ್ಟಾಗುತ್ತಿತ್ತೆಂದು ದಾಖಲೆಗಳು ತಿಳಿಸುತ್ತವೆ. 1985ರ ವೇಳೆಗೆ ಕರ್ನಾಟಕದ ಅರಣ್ಯ ಪ್ರದೇಶದ ವಿಸ್ತೀರ್ಣ ಸುಮಾರು ಸೇ.19.5ಕ್ಕೆ ಕುಸಿಯಿತು. ಅಂಕಿ ಅಂಶಗಳ ಪ್ರಕಾರ 1985ರಲ್ಲಿ ಕರ್ನಾಟಕದ ಅರಣ್ಯ ಪ್ರದೇಶದ ವಿಸ್ತೀರ್ಣ 30,16,000 ಹೆಕ್ಟೇರು. ವಿವಿಧ ಸಂರಕ್ಷಣಾ ತಂತ್ರಗಳಿಂದಾಗಿ ಈಗ ಕರ್ನಾಟಕದ ಭೂಭಾಗ ಸೇಕಡ 20.19 ಭಾಗ ಅರಣ್ಯದಿಂದ ಆವೃತವಾಗಿದೆ.

ಕರ್ನಾಟಕದಲ್ಲಿ ಇಷ್ಟು ಅರಣ್ಯ ಪ್ರದೇಶವಿದ್ದರೂ ಇದಷ್ಟೂ ಮಾನವನ ಪ್ರಯೋಜನಕ್ಕೆ ಅರ್ಹವಾದುದೆಂದು ಹೇಳಲು ಸಾಧ್ಯವಿಲ್ಲ. ಕಾರಣಾಂತರಗಳಿಂದ ಒಟ್ಟು ಅರಣ್ಯದ ಸೇ.25ರಷ್ಟು ಭಾಗ ಕ್ಷೀಣದೆಶೆಯಲ್ಲಿದೆ. ಇಂಥ ಅಪ್ರಯೋಜಕ ಪ್ರದೇಶವನ್ನು ವೈಜ್ಞಾನಿಕ ಪ್ರಯೋಗಗಳ ಮೂಲಕ ಮೇಲುದರ್ಜೆಗೆ ಏರಿಸುವುದು ಸರ್ಕಾರದ ಉದ್ದೇಶ. ಈ ದಿಶೆಯಲ್ಲಿ ಅರಣ್ಯ ಇಲಾಖೆಯ ಅನೇಕ ವರ್ಷಗಳ ಫಲವಾಗಿ ಇಂದು ಮಾನವ ನಿರ್ಮಿತ ನೆಡುತೋಪುಗಳ ವಿಸ್ತೀರ್ಣ ಸು.1,500ಚ.ಕಿಮೀ. ಈ ನೆಡುತೋಪುಗಳಲ್ಲಿ ಆಧುನಿಕ ಕೈಗಾರಿಕೆಗೆ ಬೇಕಾಗುವ ಯೂಕಲಿಪ್ಟಸ್, ನೀಲಗಿರಿ, ತೇಗ, ರಬ್ಬರ್, ಕೋಕೋ, ಸಂಬಾರ, ಶ್ರೀಗಂಧ, ಗೇರು, ಎಣ್ಣೆ ಗಿಡಗಳು ಮುಂತಾದವು ಹೇರಳವಾಗಿವೆ. ಇತ್ತೀಚೆಗೆ ಜಾರಿಗೆ ಬಂದಿರುವ ಅರಣ್ಯವಿಭಾಗ ಬಿಡುಗಡೆ ಕಾನೂನು ಕಾಡಿನ ನಾಶವನ್ನು ಸಾಕಷ್ಟು ಪ್ರಮಾಣದಲ್ಲಿ ತಡೆಗಟ್ಟಿದೆ. ಜನತೆಗೆ ಬೇಕಾದ ಮರಮುಟ್ಟು, ಸೌದೆ, ಹಸಿಗೊಬ್ಬರ, ವ್ಯವಸಾಯದ ಉಪಕರಣಗಳು ಮುಂತಾದವುಗಳನ್ನು ಅರಣ್ಯ ಕೃಷಿಯ ಮೂಲಕ ಸರಿತೂಗಿಸಿಕೊಳ್ಳ ಬೇಕಾದುದು ಅನಿವಾರ್ಯ.

**ಅರಣ್ಯದ ಪ್ರಾಮುಖ್ಯ :** ಅತಿವೇಗದಿಂದ ಬೀಸುವ ಗಾಳಿ ಮತ್ತು ಬಿರುಸಾಗಿ ಬೀಳುವ ಮಳೆ ವ್ಯವಸಾಯ ಪ್ರದೇಶದ ಮೇಲ್ಮಣ್ಣನ್ನು ಕೊಚ್ಚುತ್ತದೆ. ಇದರ ಕೊಚ್ಚುವಿಕೆಯಿಂದ ಭೂಮಿ ವ್ಯವಸಾಯಕ್ಕೆ ಅನುಪಯುಕ್ತವಾಗುತ್ತದೆ. 2.5ಸೆಂಮೀ. ದಪ್ಪದ ಮಣ್ಣು ಭೂಮಿಯ ಮೇಲೆ ರೂಪುಗೊಳ್ಳಲು ಸು.600 ವರ್ಷ ಬೇಕು. ಆದರೆ ಅದನ್ನು ಗಾಳಿ ಹಾಗೂ ಮಳೆಗಳು ಕೇವಲ ಒಂದು ವರ್ಷದಲ್ಲಿ ಕೊಚ್ಚಿಹಾಕಬಲ್ಲವು. ಅರಣ್ಯ ಅತಿವೇಗದ ಗಾಳಿಯ ಒತ್ತಡವನ್ನು ತಡೆದು ಅದರ ಹಾವಳಿಯನ್ನು ಕುಗ್ಗಿಸುತ್ತದೆ. ಅಂತೆಯೇ ಬಿರುಸಾಗಿ ಬೀಳುವ ಮಳೆಯ ಹನಿ ನೇರವಾಗಿ ನೆಲಕ್ಕೆ ಬೀಳದಂತೆ ಮರಗಳ ನೆತ್ತಿ, ಎಲೆ, ಕೊಂಬೆಗಳು ತಡೆದು ಮಳೆಯ ರಭಸವನ್ನು ಕುಗ್ಗಿಸುತ್ತದೆ. ಜೊತೆಗೆ ನೆಲದ ಮೇಲೆ ಬೀಳುವ ಎಲೆಗಳು ಮೆಕ್ಕಲು ಮಣ್ಣು ಮಳೆಯ ನೀರನ್ನು ಹಿಡಿದಿಟ್ಟುಕೊಂಡು ಅದನ್ನು ಭೂಮಿ ನಿಧಾನವಾಗಿ ಹೀರಲು ಸಹಕಾರಿಯಾಗುತ್ತವೆ. ಇದರಿಂದ ಭೂಮಿಯ ಒಳಗೆ ನೀರಿನ ಮಟ್ಟ ಏರಲು ಅನುಕೂಲವಾಗುತ್ತದೆ. ಇದಲ್ಲದೆ ಅರಣ್ಯಕ್ಕೆ ಮಳೆಯನ್ನು ಆಕರ್ಷಿಸುವ ಶಕ್ತಿಯೂ ಉಂಟು. ಜೊತೆಗೆ ದಟ್ಟವಾದ ಅರಣ್ಯ, ಅತಿವೃಷ್ಟಿ ಅನಾವೃಷ್ಟಿಗಳನ್ನು ಸಮತೋಲನೆಗೊಳಿಸಿ ಅತಿವೃಷ್ಟಿ ಹಾಗೂ ಅನಾವೃಷ್ಟಿಯ ಹಾವಳಿಯನ್ನು ತಡೆಗಟ್ಟುತ್ತದೆ.

ಮನೆಕಟ್ಟಲು, ಮರ, ಬಟ್ಟೆ, ಸೌದೆ, ಬೆರಣಿ, ಇದ್ದಿಲು, ಕಾಗದ, ಪೆನ್ಸಿಲ್, ರೈಲು, ಬಸ್ಸು, ಲಾರಿ, ಹಡಗು, ವಿಮಾನಗಳ ಬಿಡಿಭಾಗಗಳು, ಕೃಷಿ ಉಪಕರಣ, ಹಸುರೆಲೆ ಗೊಬ್ಬರ ಮೊದಲಾದವುಗಳಿಗೆ ಅರಣ್ಯ ಸಂಪತ್ತು ಉಪಯುಕ್ತವಾಗುತ್ತದೆ.

ಕರ್ನಾಟಕದಲ್ಲಿ ವರ್ಷಂಪ್ರತಿ ಸು.7,00,000 ಟನ್ ಹಸುರೆಲೆ ಗೊಬ್ಬರವನ್ನು 1,80,000 ಹೆಕ್ಟೇರು ಭೂಮಿಗೆ ಉಪಯೋಗಿಸಲಾಗುತ್ತದೆ. ಪ್ಲೈವುಡ್, ವಿನೀರ್, ರೆಯಾನ್, ಗಂಧ, ನೀಲಗಿರಿ ಎಣ್ಣೆ, ಪೀಠೋಪಕರಣ ಮುಂತಾದ ಹಲವಾರು ಕೈಗಾರಿಕೆಗಳಿಗೆ ಅರಣ್ಯದ ಆಸರೆ ಅನಿವಾರ್ಯ. ಮಿಗಿಲಾಗಿ ಅರಣ್ಯ ಕೈಗಾರಿಕೆಗಳು ಲಕ್ಷಾಂತರ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿದೆ. ಜೊತೆಗೆ ಅರಣ್ಯ ಸಂಪತ್ತಿನ ಹಲವಾರು ಬಾಬುಗಳು ವಿದೇಶಿ ವಿನಿಮಯವನ್ನು ಗಳಿಸಲು ಸಹಾಯಕವಾಗಿವೆ. ಬೀಟೆಮರ, ಸಾಗುವಾನಿ, ಬಲ್ಲಿ, ಗಂಧದಮರ, ಏಲಕ್ಕಿ, ಸಂಬಾರ, ರಬ್ಬರ್ ಮುಂತಾದ ಹಲವಾರು ಅರಣ್ಯ ಉತ್ಪನ್ನಗಳಿಗೆ ವಿದೇಶಗಳಿಂದ ವಿಶೇಷ ಬೇಡಿಕೆ ಇದೆ.

ಅರಣ್ಯದಲ್ಲಿ ವಾಸಿಸುವ ವನ್ಯಮೃಗಗಳಿಂದಲೂ ನಮಗೆ ಅನೇಕ ರೀತಿಯ ಉಪಯೋಗಗಳಿವೆ. ಅನೇಕ ವನ್ಯಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿ ಬಳಸಲಾಗುತ್ತದೆ. ಸಂರಕ್ಷಣೆ ದೃಷ್ಟಿಯಿಂದ ಪ್ರಾಣಿಗಳನ್ನು ಕೊಲ್ಲುವುದನ್ನು ನಿಷೇಧಿಸಲಾಗಿದೆ. ಆದರೆ ಕೆಲವು ಮೂಲನಿವಾಸಿಗಳಿಗೆ ವನ್ಯಪ್ರಾಣಿಗಳ ಮಾಂಸವಲ್ಲದೆ ಬೇರೆ ಆಹಾರವಿಲ್ಲ. ಜೇನಂತೂ ಆಹಾರ ಹಾಗೂ ಔಷಧಿಗುಣವುಳ್ಳ ಪ್ರಾಣಿಜನ್ಯ ವಸ್ತು. ವನ್ಯಪ್ರಾಣಿಗಳ ಚರ್ಮ ಪಾದರಕ್ಷೆ ಹಾಗೂ ಇನ್ನಿತರ ಚರ್ಮದ ಪರಿಕರಗಳಿಗೆ ಉಪಯೋಗ ವಾಗುತ್ತವೆ. ಕೊಂಬು, ದಂತಗಳನ್ನು ಅಲಂಕರಣ ವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಅರಗು, ಅಂಟು ಹಾಗೂ ಕೆಲವು ಸುವಾಸನಾಯುಕ್ತ ವಸ್ತುಗಳು ವನ್ಯ ಪ್ರಾಣಿಗಳಿಂದ ದೊರೆಯುತ್ತವೆ.

ಬಂಡಿಪುರದ ಕಾಡುಹಾದಿ

ಅರಣ್ಯದಲ್ಲಿರುವ ನಮ್ಮ ವನ್ಯಮೃಗ ಪಕ್ಷಿಗಳನ್ನು ನೋಡಲು ವರ್ಷಂಪ್ರತಿ ಸಾವಿರಾರು ವಿದೇಶೀಯರು ಬರುವುದರಿಂದ ಪ್ರವಾಸೋದ್ಯಮ ಬೆಳೆದು ವಿದೇಶಿ ವಿನಿಮಯ ಗಳಿಸಲು ಸಹಾಯಕವಾಗುತ್ತದೆ. ಅರಣ್ಯವಸ್ತುಗಳ ಮಾರಾಟದಿಂದ ಕೂಡ ಸರ್ಕಾರಕ್ಕೆ ಹೇರಳವಾದ ಆದಾಯವಿದೆ.

**ಪ್ರಕೃತಿ ಸಂಪತ್ತು :** ಕರ್ನಾಟಕ ರಾಜ್ಯದ ವಿಸ್ತೀರ್ಣ 1,91,773 ಚ.ಕಿಮೀ. ಇದರಲ್ಲಿ 38,723.56ಚಕಿಮೀ ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟ ಅರಣ್ಯ ಪ್ರದೇಶವಾಗಿದೆ. ಖಾಸಗಿ ಆಡಳಿತಕ್ಕೆ ಒಳಪಟ್ಟ ಕಾಡು ಪ್ರದೇಶವಿದ್ದರೂ ಅದು ಅತ್ಯಲ್ಪ ಪ್ರಮಾಣದ್ದು. ಒಟ್ಟು ಭೂವಿಸ್ತೀರ್ಣದಲ್ಲಿ ಸೇ. 20.19 ಭಾಗ ಮಾತ್ರ ಅರಣ್ಯ ಪ್ರದೇಶವಾಗಿದೆ. ಪ್ರಪಂಚದ ಅನೇಕ ದೇಶಗಳ ಅರಣ್ಯ ಸಂಪತ್ತಿನೊಡನೆ ಹೋಲಿಸಿದಲ್ಲಿ ಕರ್ನಾಟಕದ್ದು ಬಹಳ ಕಡಿಮೆ. ಉದಾಹರಣೆಗೆ ಪ್ರಪಂಚದ ವಿವಿಧ ದೇಶಗಳ ಭೂಭಾಗದ ಸೇಕಡಾವಾರು ಅರಣ್ಯ ಪ್ರದೇಶ ಈ ರೀತಿ ಇದೆ. ರಷ್ಯ 40.6, ಕೆನಡ 44.5, ಅಮೆರಿಕ 31.6, ಬರ್ಮಾ (ಮ್ಯಾನ್ಮರ್) 66.8, ಭಾರತದ ಒಟ್ಟು ವಿಸ್ತೀರ್ಣದ ಶೇಕಡವಾರು ಅರಣ್ಯ ಪ್ರದೇಶ 22.9.

ನೆಡುತೋಪು

ಒಂದು ದೇಶದ ಸಮಗ್ರ ಅಭಿವೃದ್ಧಿಗೆ ಆ ದೇಶದ ಒಟ್ಟು ಭೂ ವಿಸ್ತೀರ್ಣದ ಮೂರನೆಯ ಒಂದು ಭಾಗವಾದರೂ ಅರಣ್ಯ ಪ್ರದೇಶವಾಗಿರಬೇಕೆಂಬುದು ತಜ್ಞರ ಅಭಿಪ್ರಾಯ, ಕರ್ನಾಟಕದ ಅರಣ್ಯ ಪ್ರಮಾಣ ಕೇವಲ ಸೇ.20.19 ಇದ್ದು, ಅದು ರಾಷ್ಟ್ರದ ಅರಣ್ಯ ಪ್ರದೇಶದ ಪ್ರಮಾಣಕ್ಕಿಂತ ಕಡಿಮೆ ಇದೆ ಎಂಬುದು ಗಮನಿಸಬೇಕಾದ ಅಂಶ.

**ಅರಣ್ಯಗಳ ವರ್ಗೀಕರಣ :** ಹವಾಗುಣ, ಮಣ್ಣು, ಉಷ್ಣತೆ, ಗಾಳಿ, ಮಳೆ, ಸಮುದ್ರಮಟ್ಟದಿಂದ ಇರುವ ದೂರ ಮತ್ತು ಎತ್ತರ ಮತ್ತು ಆ ಪ್ರದೇಶದ ಸಸ್ಯ ಸಮುದಾಯಕ್ಕೆ ಹಿಂದೆ ಸಿಕ್ಕಿರುವ ಉಪಚಾರ ಇವೇ ಮೊದಲಾದ ಅಂಶಗಳ ಆಧಾರದ ಮೇಲೆ ಕರ್ನಾಟಕದ ಅರಣ್ಯಗಳನ್ನು ವಿವಿಧ ಬಗೆಗಳಾಗಿ ವಿಂಗಡಿಸಲಾಗಿದೆ.

ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಜಾತಿಯ ಮಣ್ಣಿದೆ. ವರ್ಷಕ್ಕೆ 250-800ಮೀಮೀ ಮಳೆ ಬಿದ್ದು ಉಷ್ಣತೆ 15-40 ಸೆಲ್ಸಿಯಸ್ ವರೆಗೆ ವ್ಯತ್ಯಾಸವಾಗುತ್ತದೆ. ನೆಲದ ಎತ್ತರ ಸಮುದ್ರ ಮಟ್ಟದಿಂದ 1700ಮೀ ವರೆಗೆ ವಿವಿಧ ಜಾತಿಯ ಸಸ್ಯಗಳನ್ನೊಳಗೊಂಡ ವಿವಿಧ ನೈಜ ಅರಣ್ಯಗಳಿಗೆ ಎಡೆ ಮಾಡಿ ಕೊಟ್ಟಿದೆ.

ವಿವಿಧ ಗಿಡಜಾತಿ ಸಮೂಹ ಮತ್ತು ವಿಸ್ತರಣೆಗಳ ಆಧಾರದ ಮೇಲೆ ಕರ್ನಾಟಕದ ಅರಣ್ಯ ಪ್ರದೇಶವನ್ನು ಈ ಕೆಳಕಂಡಂತೆ ವಿಂಗಡಿಸಬಹುದು (ಚಾಂಪಿಯನ್ ಮತ್ತು ಸೇತ್ ಎಂಬ ತಜ್ಞರ ವರ್ಗೀಕರಣದ ಪ್ರಕಾರ)

1. ದಕ್ಷಿಣಾರ್ಧದ ಉಷ್ಣವಲಯದ ತೇವಪೂರಿತ ನಿತ್ಯ ಹರಿದ್ವರ್ಣದ ಅರಣ್ಯ
2. ದಕ್ಷಿಣಾರ್ಧದ ಉಷ್ಣವಲಯದ ಆಂಶಿಕ ನಿತ್ಯ ಹರಿದ್ವರ್ಣದ ಅರಣ್ಯ
3. ದಕ್ಷಿಣ ಭಾರತದ ತೇವ ಮಿಶ್ರಿತ ಪರ್ಣಪಾತಿ ಅರಣ್ಯ
4. ದಕ್ಷಿಣಾರ್ಧದ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯ
5. ದಕ್ಷಿಣಾರ್ಧದ ಉಷ್ಣವಲಯದ ಕುರುಚಲು ಅರಣ್ಯ

ಇದರ ಜೊತೆಗೆ ಆಯಾ ಸ್ಥಳದ ಸೂಕ್ಷ್ಮ ಹವಾಗುಣವನ್ನು ಅವಲಂಬಿಸಿ ಮಾರ್ಪಾಡಾಗಿರುವ ಸಣ್ಣ ಪುಟ್ಟ ಬಗೆಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಇನ್ನೊಂದು ಮುಖ್ಯವಾದ ಅಂಶವೆಂದರೆ ಮೇಲೆ ನಮೂದಿಸಿರುವ ವರ್ಗಗಳು ಒಂದರೊಡನೊಂದು ಸೇರಿಕೊಳ್ಳುವುದು ಅಥವಾ ಒಂದು ಜಾತಿಯ ಗಿಡಮರಗಳ ಗುಂಪಿನಲ್ಲಿ ಮತ್ತೊಂದು ಬಗೆಯವು ಅಡಕವಾಗಿರುವುದು. ಜೊತೆಗೆ ದಟ್ಟ ಅರಣ್ಯದ ನಡುವೆ ಗಿಡಮರಗಳಿಲ್ಲದೆ ಕೇವಲ ಹುಲ್ಲು ಮಾತ್ರ ಬೆಳೆದಿದ್ದು ಕೆಲವು ಸಸ್ಯಾಹಾರಿ ಪ್ರಾಣಿಗಳಿಗೆ ಮೇವು ನೀಡುವ ಹುಲ್ಲುಗಾವಲುಗಳೂ ಕಂಡುಬರುತ್ತವೆ.

ಜೌಗಿನಿಂದ ಕೂಡಿದ ಪ್ರದೇಶಗಳನ್ನು 'ಹಡ್ಲು' ಎಂದು ಕರೆಯುತ್ತಾರೆ. ಇಳಿಜಾರಿನ ಪ್ರದೇಶಗಳಲ್ಲಿ ಗಾಳಿಯ ಒತ್ತಡದಿಂದ ಗಿಡಮರಗಳು ಬೆಳೆಯದೆ ಕೇವಲ ಕಲ್ಲುಮಣ್ಣುಗಳಿಂದಾವೃತವಾದ ನಿರುಪಯುಕ್ತ ಸ್ಥಳಗಳೂ ಅರಣ್ಯದ ಮಧ್ಯದಲ್ಲಿವೆ. ಈ ಸ್ಥಳಗಳನ್ನು ಶೋಲಾಗಳೆನ್ನುತ್ತಾರೆ.

**1. ದಕ್ಷಿಣಾರ್ಧದ ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣ ಅರಣ್ಯ :** ಪಶ್ಚಿಮ ಕರಾವಳಿಯ ಉದ್ದಕ್ಕೂ ಬೆಳಗಾಂವಿಯಿಂದ ಕೊಡಗಿನವರೆಗೂ ಈ ಬಗೆಯ ಅರಣ್ಯವನ್ನು ಕಾಣಬಹುದು. ಇಲ್ಲಿ ವಾರ್ಷಿಕವಾಗಿ ಸು.2500-8000 ಮಿಮೀ ಮಳೆಯಾಗುತ್ತದೆ. ಸಮುದ್ರ ಮಟ್ಟದಿಂದ 500-1000ಮೀ ಎತ್ತರದವರೆಗೂ ಈ ಅರಣ್ಯ ವಿಸ್ತರಿಸಿದೆ.

ದಟ್ಟವಾಗಿ ಬೆಳೆಯುವ ಇವುಗಳಲ್ಲಿ ವಿವಿಧ ಜಾತಿಯ ಮರಗಳನ್ನು ಕಾಣಬಹುದು. ಈ ಗುಂಪಿನ ಅರಣ್ಯಗಳ ಅತಿಮುಖ್ಯ ಲಕ್ಷಣವೆಂದರೆ ಮೇಲ್ಛಾವಣಿಯಲ್ಲಿರುವ ಮರಗಳು ನೀಳವಾಗಿ ಬೆಳೆದಿರುತ್ತವೆ. ಮೊದಲನೆಯ ಕೊಂಬೆಗೂ ನೆಲಕ್ಕೂ ಸು.30ಮೀ ಅಂತರವಿರುತ್ತದೆ. ಮರಗಳ ಸುತ್ತಳತೆ ಸು.5ಮೀ ಇರುತ್ತದೆ.

ನಿತ್ಯ ಹರಿದ್ವರ್ಣದ ಅರಣ್ಯ ಸಾಮಾನ್ಯವಾಗಿ ಮೂರು ಶ್ರೇಣಿಯ ಸಸ್ಯಜಾತಿಗಳನ್ನೊಳಗೊಂಡಿವೆ. ಈ ಗುಂಪಿನ ಕಾಡುಗಳಲ್ಲಿ ಧೂಮ, ಸುರಹೊನ್ನೆ, ಕಿರಾಳಭೋಗಿ, ಮಾವು, ಗುಳಮಾವು, ಬೆನ್ನಾಟೆ, ಹೊಳೆಗಾರ, ಹೊಳೆಹೊನ್ನೆ, ಬಿಲ್ಲಿ, ನಾಗಸಂಪಿಗೆ, ಬಿಳಿದೇವದಾರು, ಪಾಲಿ, ಸಂಪಿಗೆ, ಸಾಲುಧೂಪ, ಹೆಬ್ಬಲಸು, ನೊಗ, ಬಲಂಜೆ, ಸಟ್ಟಗ, ದಾಲ್ಚಿನ್ನಿ, ಹೈಗ, ಕಾಯಿಧೂಪ, ನೀಲಿ, ಬಗನಿ, ನೇರಳೆ, ಸಾಗಡೆ, ರಂಚ, ಅರಿಶಿನಗುರಿಗೆ, ತೊರತ್ತಿ, ರಾಮನಡಿಕೆ, ಬೊಂಬು, ವಾಟೆ, ಗುರಿಗೆ, ಕೇದಗೆ, ಬೆತ್ತ ಮೊದಲಾದ ಗಿಡ ಮರಬಳ್ಳಿಗಳು ಕಂಡುಬರುತ್ತವೆ.

ಕೊಡಗಿನ ದೇವರಕಾಡು

ಈ ಅರಣ್ಯಗಳ ಪಾತ್ರ ದೇಶದ ಹಿತದೃಷ್ಟಿಯಿಂದ ಬಹುಮುಖ್ಯವಾದುದು. ನೇರವಾಗಿ ಬೆಳೆಯುವ ಮರಗಳಿಂದ ವಿದ್ಯುಚ್ಛಕ್ತಿ ಕಂಬಗಳು, ರೈಲುಕಂಬಿಗಳ ಆಸರೆಯ ದಿಮ್ಮಿಗಳು, ಕಾಗದದ ಉತ್ಪತ್ತಿಗೆ ಬೇಕಾದ ನಾರು ತಿರುಳು, ತೆಳುಹೊದಿಕೆ ಮರದ ಹಾಳೆಗಳು ಮುಂತಾದವು ದೊರಕುವವು.

**2. ದಕ್ಷಿಣಾರ್ಧದ ಉಷ್ಣವಲಯದ ಆಂಶಿಕ ನಿತ್ಯಹರಿದ್ವರ್ಣದ ಅರಣ್ಯ :** ಈ ಗುಂಪಿನ ಕಾಡುಗಳು ಪಶ್ಚಿಮ ಕರಾವಳಿಯಲ್ಲಿ ನಿತ್ಯಹರಿದ್ವರ್ಣ ಅರಣ್ಯ ಮತ್ತು ತಾತ್ಕಾಲಿಕ ಪರ್ಣಪಾತಿ ಅರಣ್ಯಗಳ ಮಧ್ಯ ಹರಡಿವೆ. ಇಲ್ಲಿ

ನಿತ್ಯಹರಿದ್ವರ್ಣ ವೃಕ್ಷ ಮತ್ತು ಬೇಸಗೆಯಲ್ಲಿ ಎಲೆಯುದುರುವ ವೃಕ್ಷಗಳ ಸಮ್ಮಿಶ್ರಣವನ್ನು ಕಾಣಬಹುದು. ಜಂಬೆಮರಗಳು ಅತಿಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಆಸರೆಯ ಕಾಂಡಗಳುಳ್ಳ ಮರಗಳೂ ಇಲ್ಲಿ ಇವೆ. ಸಟ್ಟುಗ, ಬೂರುಗ ಮುಂತಾದವು ಈ ಗುಂಪಿಗೆ ಸೇರುತ್ತವೆ. ಸಾಮಾನ್ಯವಾಗಿ ಮರಗಳ ತೊಗಟೆ ಸ್ವಲ್ಪ ದಪ್ಪವಾಗಿಯೂ ಗಡುಸಾಗಿಯೂ ಇರುವುದು. ಈ ಬಗೆಯ ಅರಣ್ಯವಿರುವ ಪ್ರದೇಶಗಳಲ್ಲಿ 2000-2500ಮಿಮೀ ಮಳೆಯಾಗುತ್ತದೆ. ಸಾಮಾನ್ಯವಾಗಿ ಈ ಕಾಡಿನಲ್ಲಿ ಹನಾಲು, ಕರಿಮರ, ನಂದಿ, ಹೊಳೆಗಾರ ಹೈಗ, ಬೆನ್ನಾಟೆ, ಸಂಪಿಗೆ, ದಾಲ್ಚಿನ್ನಿ, ಕಿರಾಳಭೋಗಿ, ಹೆಬ್ಬಲಸು, ಸಟ್ಟುಗ, ರಂಗುಮಾಲೆ, ಗರಿಗೆ, ಹೆಬ್ಬಿದಿರು ಮೊದಲಾದವು ವಿಶೇಷವಾಗಿ ಬೆಳೆಯುವುವು.

**3. ದಕ್ಷಿಣ ಭಾರತದ ತೇವ ಮಿಶ್ರಿತ ಪರ್ಣಪಾತಿ ಅರಣ್ಯ :** ಪಶ್ಚಿಮ ಕರಾವಳಿಯ ಪೂರ್ವಪಾರ್ಶ್ವದ ಉದ್ದಕ್ಕೂ ಈ ಬಗೆಯ ಅರಣ್ಯವನ್ನು ಕಾಣಬಹುದು. ಇಲ್ಲಿನ ಮಳೆಯ ಪರಿಮಾಣ 1500-2000 ಮಿಮೀ. ತೇಗ ಮತ್ತಿ, ನಂದಿ, ಹೊನ್ನೆ, ಹೇತ್ತೇಗ, ಬೀಟೆ, ಬಿಳಿಮತ್ತಿ, ತಾರೆ, ಜಂಬೆ, ಸಾಗಡೆ, ಕೌಲು, ತಡಸಲು, ಬೂರುಗ, ನೆಲ್ಲಿ ಮುಂತಾದವು ಇಲ್ಲಿನ ಮುಖ್ಯ ಸಸ್ಯಜಾತಿಗಳು. ಜೊತೆಗೆ ನೀರಿನ ಆಸರೆಯಿರುವ ಕಡೆಗಳಲ್ಲೆಲ್ಲ ಹೆಬ್ಬಿದಿರು ಬಲು ಸಾಮಾನ್ಯವಾಗಿ ಕಂಡುಬರುತ್ತದೆ. ಕಿರಿಬಿದಿರಾದರೂ ಶುಷ್ಕ ಹವೆ ಪ್ರದೇಶಗಳಲ್ಲೆಲ್ಲಾ ಕಂಡುಬರುತ್ತದೆ. ಇಲ್ಲಿನ ಮರಗಳಿಗೆ ಒಣಹವೆಯನ್ನು ತಡೆದುಕೊಳ್ಳುವ ಶಕ್ತಿ ಇದೆ. ಈ ಕಾಡುಗಳ ಕೆಳಗಿನ ಶ್ರೇಣಿಯಲ್ಲಿ ಕೆಲವು ಸಣ್ಣ ನಿತ್ಯಹರಿದ್ವರ್ಣ ವೃಕ್ಷಗಳು ಕೂಡಾ ಕಂಡುಬರುತ್ತವೆ.



ಚಿರತೆ ಜೋಡಿ

4. **ದಕ್ಷಿಣಾರ್ಧದ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯ :** 850 ರಿಂದ 1500ಮಿಮೀ ಮಳೆ ಬೀಳುವ ಪ್ರದೇಶದಲ್ಲಿ ಈ ಬಗೆಯ ಅರಣ್ಯ ಕಂಡುಬರುತ್ತದೆ. ಕೆಲವು ಸಲ ಶೀಘ್ರವಾಗಿ ಆರುವ ಒಣಮಣ್ಣು ಇರುವ ಹಾಗೂ 1900ಮಿಮೀ ಮಳೆ ಬೀಳುವ ಪ್ರದೇಶದಲ್ಲೂ ಕಾಣಬಹುದು. ಯಾವ ಪ್ರದೇಶದಲ್ಲಿ ಮಳೆ 750ಮಿಮೀಗಿಂತ ಕಡಿಮೆ ಬೀಳುತ್ತದೊ ಅಲ್ಲಿ ಕುರುಚಲು ಅರಣ್ಯಕ್ಕೆ ಎಡೆಮಾಡಿಕೊಡುತ್ತದೆ. ಈ ಅರಣ್ಯಗಳು 450-600ಮೀ ಎತ್ತರದಲ್ಲಿದ್ದು ಸಣ್ಣಪುಟ್ಟ ಗುಡ್ಡಗಳನ್ನು ಆಕ್ರಮಿಸಿಕೊಂಡಿವೆ. ಬಹುಶಃ ಮೈದಾನ ಪ್ರದೇಶವನ್ನೆಲ್ಲಾ ವ್ಯವಸಾಯಕ್ಕೆ ಉಪಯೋಗಿಸಿರುವುದು ಇದಕ್ಕೆ ಕಾರಣವಿರಬೇಕು.

ಪರಾಕಾಷ್ಠೆಯನ್ನು ತಲಪಿರುವ ಈ ಅರಣ್ಯಗಳಲ್ಲಿ ಮೇಲಿನ ಮರಶ್ರೇಣಿ ಇಕ್ಕಟ್ಟಾಗಿರುತ್ತದೆಯಾದರೂ ದಟ್ಟವಾಗಿರುವುದಿಲ್ಲ. ಇಲ್ಲಿ ಕಂಡುಬರುವ ಬಹುಪಾಲು ವೃಕ್ಷಗಳೆಲ್ಲವೂ ಬೇಸಿಗೆಯಲ್ಲಿ ಎಲೆಯುದುರುವಂಥವು. ಇವುಗಳ ಎತ್ತರ 12-20ಮೀ. ಮರಗಳ ಕೆಳಗೆ ಕಿರುಬಿದಿರುಗಳು, ಅನೇಕ ಜಾತಿಯ ಹುಲ್ಲುಗಳು, ಅದರು ಬಳ್ಳಿಗಳು ಬೆಳೆದಿರುತ್ತವೆ. ಬೆತ್ತ ಮತ್ತು ತಾಳವೃಕ್ಷಗಳು ಈ ಅರಣ್ಯಗಳಲ್ಲಿ ಕಂಡುಬರುವುದಿಲ್ಲ.

ಈ ಅರಣ್ಯಗಳಲ್ಲಿ ಕೆಲವೆಡೆ ಸಾಗುವಾನಿ ಜಾತಿಯ ಮರಗಳು ಹಾಗೂ ದಿಂಡಿಲು ಮತ್ತು ಮತ್ತಿ ಜಾತಿಯ ಮರಗಳು ಬೆಳೆಯುತ್ತವೆ. ಸಾಗುವಾನಿ ಜಾತಿಯ ಮರಗಳು ಕಂಡುಬರದ ಪ್ರದೇಶಗಳಲ್ಲಿ ದಿಂಡಿಗ, ಮತ್ತಿ, ಬೆಂಡೆ, ನಂದಿ, ಹೆತ್ತೇಗ, ಕಣಗಲು, ಹಿಪ್ಪೆ, ಬೂರುಗ, ತಡಸಲು, ಹೊನ್ನೆ, ಗಂಧ, ಹುರುಗಲು, ತಾರೆ, ಕಮರ, ಕಗ್ಗಲು, ನೂನಲು, ಬಿಲ್ವಪತ್ರೆ, ಬೇಲ, ನೆಲ್ಲಿ, ಎಲಚಿ, ಬಿಕ್ಕೆ, ಬಾಗೆ, ಬಂದರಿಕೆ, ಲಂಟಾನ, ಎಡಮುರಿ, ಮುತ್ತುಗ, ಜಗಳಗಂಟಿ, ಸಾಗಡೆ, ಕೂಳಿ, ದೊಡ್ಡ ತೊಪ್ಪೆ ಹಾಗೂ ಅನೇಕ ಜಾತಿಯ ಮುಳ್ಳಿನ ಗಿಡಗಳು ಕಂಡುಬರುತ್ತವೆ.

ತೇವಮಿಶ್ರಿತ ಪರ್ಣಪಾತಿ ಅರಣ್ಯ ಹಾಗೂ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯಗಳು ತಾತ್ಕಾಲಿಕವಾಗಿ ಎಲೆ ಉದುರುವ ಅರಣ್ಯಗಳು. ಈ ಅರಣ್ಯಗಳಲ್ಲಿ ವನ್ಯಮೃಗದ ಸಂಪತ್ತು ಹೇರಳವಾಗಿದೆ. ಇವುಗಳಲ್ಲಿ ಪ್ರಮುಖವಾದ ಪ್ರಾಣಿಗಳು ಆನೆ, ಹುಲಿ, ಕಾಡುಕೋಣ, ಚಿರತೆ, ಕಡವೆ, ಚುಕ್ಕಿ ಜಿಗರೆ, ಕಾಡುಹಂದಿ, ಕರಡಿ, ಸೀಳುನಾಯಿ ಮುಂತಾದವು. ವರ್ಣರಂಜಿತ ಪಕ್ಷಿಗಳಾದ ನವಿಲು, ಕಾಡುಕೋಳಿ, ಕೆಂಬೂತ ಇವು ಮುಖ್ಯವಾದ ಪಕ್ಷಿಗಳು.

**5. ದಕ್ಷಿಣಾರ್ಧದ ಉಷ್ಣವಲಯದ ಕುರುಚಲು ಕಾಡುಗಳು :** ಇವುಗಳಲ್ಲಿ ಮರಗಿಡಗಳ ಎಲೆಗಳು ಸಾಮಾನ್ಯವಾಗಿ ಬೇಸಗೆಯಲ್ಲಿ ಉದುರುತ್ತವೆ. ಇಲ್ಲಿನ ಮಳೆಯ ಪ್ರಮಾಣ ಸು.250-1000ಮಿಮೀ. ಈ ಅರಣ್ಯಗಳಲ್ಲಿ ಮುಳ್ಳಿನ ಗಿಡಗಳ ಪ್ರಮಾಣ ಹೆಚ್ಚು. ಈ ಗುಂಪಿನ ಕಾಡುಗಳು ದೇಶದ ಆದಾಯದ ದೃಷ್ಟಿಯಿಂದ ಹೆಚ್ಚು ಉಪಯುಕ್ತವಲ್ಲ. ಪ್ರಕೃತಿಯ ವಿಕೋಪಕ್ಕಿಂತ ಹೆಚ್ಚಾಗಿ ಮಾನವ ಚಟುವಟಿಕೆಯಿಂದಾಗಿ ಈ ಬಗೆಯ ಕಾಡು ನಶಿಸಿ ಹೋಗುತ್ತಿದೆ.

ಈ ಅರಣ್ಯಗಳಲ್ಲಿ ದಿಂಡಿಗ, ಗೊಬ್ಬಳಿ, ಬಿಳಿಜಾಲಿ, ಕತ್ತಾಳೆ, ಬನ್ನಿ, ಬಬ್ಬಿಲಿ, ಬಿಲ್ವಾರ, ಬಾಗೆ, ಮತ್ತಿ, ತಾರೆ, ಅಳಲೆ, ಬಿಲ್ವಪತ್ರ, ಬೇಲ, ಸಾಂಬ್ರಾಣಿ, ನವಿಲಾಡಿ, ಗಂಧ, ಹುರುಗಲು, ಬೇವು, ಕಗ್ಗಲಿ, ದೇವದಾರು, ಹಂಗರು ಮುಂತಾದ ಗಿಡಮರಗಳನ್ನು ಕಾಣಬಹುದು. ಜೊತೆಗೆ ಎಲಚಿ, ಸೀತಾಫಲ, ಈಚಲು, ಎಕ್ಕ, ಕಾರೆಗಿಡ, ಪಾಪಾಸುಕಳ್ಳಿ, ಚಂಡರಿಕೆ, ಲಂಟಾನ ಮುಂತಾದವುಗಳೂ ಕಂಡುಬರುತ್ತವೆ.

ಕರ್ನಾಟಕದಲ್ಲಿ ಈ ಎಲ್ಲ ಐದು ಬಗೆಯ ಅರಣ್ಯಗಳಿದ್ದರೂ ರಾಜ್ಯದ ಹಾಗೂ ದೇಶದ ಅಭಿವೃದ್ಧಿಗೆ ಮೊದಲ ಮೂರು ವಿಧದ ಅರಣ್ಯಗಳ ಕೊಡುಗೆ ಮಹತ್ವದ್ದು. ಈ ಬಗೆಯ ಅರಣ್ಯಗಳಲ್ಲಿ ಬೆಲೆಬಾಳುವ ಮರಗಳು ಹೆಚ್ಚು. ಅವು ಸಮೃದ್ಧವಾಗಿಯೂ ಬೆಳೆಯುತ್ತವೆ. ಆದರೆ ಈ ಬಗೆಯ ಅರಣ್ಯಗಳ ಪ್ರಮಾಣ ಕುರುಚಲು ಅರಣ್ಯಗಳಿಗಿಂತ ಕಡಿಮೆ ಇದೆ ಎಂಬುದು ಗಮನಿಸಬೇಕಾದ ಅಂಶ. ಕರ್ನಾಟಕದಲ್ಲಿರುವ ವಿವಿಧ ಬಗೆಯ ಅರಣ್ಯಗಳು, ಅವುಗಳ ಸೇಕಡಾವಾರು ಪ್ರಮಾಣ, ವಿಸ್ತೀರ್ಣ ಮುಂತಾದ ಅಂಕಿ ಸಂಖ್ಯೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

| ಅ ಸಂ. | ಅರಣ್ಯ ವಿಧ | ವಿಸ್ತೀರ್ಣ (1000 ಹೆಕ್ಟೇರುಗಳಲ್ಲಿ) | ಒಟ್ಟುಅರಣ್ಯದ ಸೇಕಡಾವಾರು |
|---|---|---|---|
| 1. | ದಕ್ಷಿಣಾರ್ಧದ ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣದ ಅರಣ್ಯ | 580 | 15.11 |
| 2. | ದಕ್ಷಿಣಾರ್ಧದ ಉಷ್ಣವಲಯದ ಆಂಶಿಕ ನಿತ್ಯಹರಿದ್ವರ್ಣದ ಅರಣ್ಯ | 578 | 14.96 |
| 3. | ದಕ್ಷಿಣ ಭಾರತದ ತೇವಮಿಶ್ರಿತ ಪರ್ಣಪಾತಿ ಅರಣ್ಯ | 727 | 18.64 |
| 4. | ದಕ್ಷಿಣಾರ್ಧದ ಉಷ್ಣವಲಯದ ಒಣ ಪರ್ಣಪಾತಿ ಅರಣ್ಯ | 818 | 21.11 |
| 5. | ದಕ್ಷಿಣಾರ್ಧದ ಉಷ್ಣವಲಯದ ಕುರುಚಲು ಅರಣ್ಯ | 1161 | 30.18 |
| | **ಒಟ್ಟು** | **3864** | **100.00** |

**ಅರಣ್ಯ ಇಲಾಖೆಯ ಆಡಳಿತ :** ಭಾರತದ ಸಂವಿಧಾನದ ವಿಧಿಗನುಗುಣವಾಗಿ ಅರಣ್ಯ ಇಲಾಖೆಯ ಆಡಳಿತ ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ. ಅರಣ್ಯ ಇಲಾಖೆಯ ಆಡಳಿತದ ಉನ್ನತ ಹುದ್ದೆಗಳಿಗೆ ಆಯ್ಕೆ, ಅರಣ್ಯ ವಿದ್ಯಾಭ್ಯಾಸ ಹಾಗೂ ವೈಜ್ಞಾನಿಕ ಸಂಶೋಧನೆಗಳ ಮೇಲ್ವಿಚಾರಣೆ ಭಾರತ ಸರ್ಕಾರಕ್ಕೆ ಸೇರಿದೆ. ಅರಣ್ಯ ಹುಟ್ಟುವಳಿಗಳ ರಫ್ತು ಆಮದುಗಳು ಕೂಡಾ ಕೇಂದ್ರ ಮೇಲ್ವಿಚಾರಣೆಯಲ್ಲಿಯೇ ನಡೆಯುತ್ತವೆ.

ಕರ್ನಾಟಕದ ಅರಣ್ಯ ಇಲಾಖೆಯ ಎಲ್ಲಾ ಕಾರ್ಯ ಚಟುವಟಿಕೆಗಳೂ ಅರಣ್ಯಖಾತೆ ಮಂತ್ರಿಗಳ ನೇತೃತ್ವದಲ್ಲಿ ಅರಣ್ಯ ಕಾರ್ಯದರ್ಶಿಗಳ ಮುಖಾಂತರ ಸಾಗುತ್ತವೆ. ಅರಣ್ಯ ಇಲಾಖೆಗೆ ಸಂಬಂಧಿಸಿದ ಎಲ್ಲ ನಿಯಮಾವಳಿಗಳು ಅವುಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಗಳಿಗೆ ಸೇರಿದೆ. ಇವರ ಅಧೀನದಲ್ಲಿ ಅರಣ್ಯವಿಭಾಗ, ವನ್ಯಜೀವಿವಿಭಾಗ ಹಾಗೂ ಅರಣ್ಯ ಕಾರ್ಪೊರೇಶನ್ ಎಂಬ ಮೂರು ಮುಖ್ಯ ಘಟಕಗಳಿವೆ. ಮುಖ್ಯ ಸಂರಕ್ಷಣಾಧಿಕಾರಿಗಳು ಈ ಘಟಕಗಳ ಮುಖ್ಯಸ್ಥರು. ಇವರ ಅಧೀನದಲ್ಲಿ ವೃತ್ತ ಸಂರಕ್ಷಣಾಧಿಕಾರಿಗಳು, ವಿಭಾಗ ಸಂರಕ್ಷಣಾಧಿಕಾರಿಗಳು, ವಲಯ ಅರಣ್ಯಾಧಿಕಾರಿಗಳು, ವನಾಧಿಕಾರಿಗಳು, ಅರಣ್ಯ ರಕ್ಷಕರು ಮುಂತಾದವರಿರುತ್ತಾರೆ. ಕರ್ನಾಟಕದಲ್ಲಿ ಒಟ್ಟು 14 ವೃತ್ತಗಳು, 58 ವಿಭಾಗಗಳು, 198 ವಲಯಗಳೂ ಇವೆ. ಇದರೊಂದಿಗೆ ಅಭಿವೃದ್ಧಿ ಮುಖ್ಯ ಸಂರಕ್ಷಣಾಧಿಕಾರಿ, ಅರಣ್ಯ ಕೈಗಾರಿಕೆಗಳ ಮುಖ್ಯ ಅಧಿಕಾರಿ, ಮುಖ್ಯ ವನ್ಯಪ್ರಾಣಿ ಸಂರಕ್ಷಣಾಧಿಕಾರಿ ಮುಂತಾದ ಹುದ್ದೆಗಳಿವೆ. ಬೆಂಗಳೂರಿನಲ್ಲಿ ಒಂದು ಅರಣ್ಯ ವೈಜ್ಞಾನಿಕ ಸಂಶೋಧನ ಕೇಂದ್ರವೂ ಇದೆ. ಅರಣ್ಯ ಉಸ್ತುವಾರಿಗಾಗಿ ಗ್ರಾಮ ಅರಣ್ಯ ಸಮಿತಿಗಳನ್ನು ಅನೇಕ ಕಡೆ ಅಸ್ತಿತ್ವಕ್ಕೆ ತರಲಾಗಿದೆ.

ಅರಣ್ಯ ರಕ್ಷಕರಿಗೆ ತರಬೇತಿ ನೀಡಲು ಕುಶಾಲನಗರ, ಯಲ್ಲಾಪುರ, ಹನುಮನಹಟ್ಟಿ ಮತ್ತು ಬೀದರಗಳಲ್ಲಿ ತರಬೇತಿ ಶಾಲೆಗಳಿವೆ. ವನಾಧಿಕಾರಿಗಳು ಮತ್ತು ಮೋಜಣಿದಾರರ (ಸರ್ವೇಯರ್) ತರಬೇತಿಗೆಂದು ಅಂಬಿಕಾನಗರದ ಸಮೀಪ ತರಬೇತಿಶಾಲೆ ಇದೆ. ವಲಯಾಧಿಕಾರಿಗಳಿಗೆ ತರಬೇತಿ ನೀಡಲು ಕೊಯಮತ್ತೂರಿನಲ್ಲಿಯೂ ಭಾರತೀಯ ಅರಣ್ಯ ಸೇವಾ ಅಧಿಕಾರಿಗಳಿಗೆ ತರಬೇತಿ ನೀಡಲು ಡೆಹರಾಡೂನಿನಲ್ಲಿಯೂ ಅರಣ್ಯ ಕಾಲೇಜುಗಳಿವೆ. ಅರಣ್ಯಗಳ ಬಗ್ಗೆ ಹೆಚ್ಚಿನ ವ್ಯಾಸಂಗ, ಮಾಹಿತಿ ಪಡೆಯಲು, ಮೇಲ್ದರ್ಜೆಯ ಅಧಿಕಾರಿಗಳಿಗೆ ವಿದೇಶಗಳಿಗೆ ಭೇಟಿ ನೀಡುವ ಅವಕಾಶಗಳೂ ಇವೆ.

ಸಾಮಾಜಿಕ ಅರಣ್ಯ

ಕರ್ನಾಟಕದಲ್ಲಿ ಅತ್ಯಂತ ಸಂಪದ್ಭರಿತ ಅರಣ್ಯಗಳಿದ್ದರೂ ಅನೇಕ ಕಾರಣಗಳಿಂದಾಗಿ ಅರಣ್ಯಪ್ರದೇಶ ದಿನೇ ದಿನೇ ಕ್ಷೀಣಿಸುತ್ತಿದೆ. ಅರಣ್ಯವನ್ನು ವ್ಯವಸಾಯೋದ್ದೇಶಕ್ಕಾಗಿ ಬಳಸುತ್ತಿರುವುದು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಉದ್ದೇಶಗಳಿಗಾಗಿ ಜಲಾಶಯಗಳನ್ನು ನಿರ್ಮಿಸುತ್ತಿರುವುದು, ನಿರ್ವಸಿತರಿಗೆ ಮರುವಸತಿ ಕಲ್ಪಿಸಲು ಕಾಡುಗಳನ್ನು ಕಡಿಯುವುದು- ಇವು ಅರಣ್ಯನಾಶಕ್ಕೆ ಮುಖ್ಯ ಕಾರಣಗಳು. ಕಳೆದ ಕೆಲವು ವರ್ಷಗಳಿಂದ ಅರಣ್ಯಾಭಿವೃದ್ಧಿಗೆ, ವನ್ಯಪ್ರಾಣಿ ಸಂರಕ್ಷಣೆಗೆ ಸಾಕಷ್ಟು ಗಮನ ಹರಿಸಲಾಗಿದೆ. ಅರಣ್ಯದ ಇಳುವರಿಯನ್ನು ಹೆಚ್ಚಿಸುವುದು, ಭೂ ಸವಕಳಿಯನ್ನು ತಪ್ಪಿಸುವುದು, ಶಿಥಿಲಗೊಂಡ ಅರಣ್ಯಗಳಲ್ಲಿ ಪುನಃ ಮರಗಳನ್ನು ಬೆಳೆಸುವುದು, ಸಣ್ಣ ಪ್ರಮಾಣದ ಅರಣ್ಯೋತ್ಪನ್ನಗಳ ಅಭಿವೃದ್ಧಿ, ಅರಣ್ಯ ಸಂಪರ್ಕ ಮಾರ್ಗಗಳ ಅಭಿವೃದ್ಧಿ, ಮೃದು ಮರಗಳನ್ನು, ಬೆಂಕಿಕಡ್ಡಿ ಮರಗಳನ್ನು ಬೆಳೆಸುವುದು, ಪರರಾಷ್ಟ್ರಗಳಿಂದ ಬಂದ ಭಾರತೀಯ ನಿರಾಶ್ರಿತರ ಪುನರ್ ವಸತಿಗಾಗಿ ರಬ್ಬರ್ ತೋಟ ಬೆಳೆಸುವುದು, ಸೌದೆಗಾಗಿ ಮರಗಳನ್ನು ವೃದ್ಧಿಸುವುದು, ಕೋಕೋ ಗಿಡಗಳನ್ನು ಬೆಳೆಸುವುದು ಮುಂತಾದ ಅನೇಕ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಈಗ ಪ್ರತ್ಯೇಕವಾದ ಸಾಮಾಜಿಕ ಅರಣ್ಯ ವಿಭಾಗವನ್ನೇ ಪ್ರಾರಂಭಿಸಲಾಗಿದೆ. ಕರ್ನಾಟಕ ಅರಣ್ಯ ಕೈಗಾರಿಕಾ ಮಂಡಳಿಯನ್ನು ಕೂಡಾ ಸ್ಥಾಪಿಸಲಾಗಿದೆ. ಅರಣ್ಯ ರಕ್ಷಣೆಗಾಗಿ ಬಂದೋಬಸ್ತ್ ನೋಡಿಕೊಳ್ಳಲು ಮತ್ತು ಅರಣ್ಯ ಉತ್ಪನ್ನಗಳನ್ನು ಸಾಗಿಸಲು ಅರಣ್ಯ ಇಲಾಖೆ ಅರಣ್ಯ ಪ್ರದೇಶದಲ್ಲಿ 2938ಕಿಮೀ ರಸ್ತೆ ನಿರ್ಮಾಣ ಮಾಡಿದೆ (1995).

**ಅರಣ್ಯ ಉದ್ಯಮಗಳು :** ಕರ್ನಾಟಕದ ಅರಣ್ಯ ಪ್ರದೇಶ ವಿವಿಧ ಸಸ್ಯವರ್ಗಗಳ ತವರೂರು. ಶ್ರೀಗಂಧ, ಹೊನ್ನೆ, ನಂದಿ, ಮತ್ತಿ, ಹನಾಲು, ಕರಡಿ, ಸಾಗುವಾನಿ, ಬೀಟೆ, ಹೆತ್ತೇಗ, ತಡಸಲು, ಭೋಗಿ, ನೊಗ, ಬೂರುಗ, ಮಾಕಾಳಿ, ದೊಡ್ಡತೊಪ್ಪೆ, ಸಟ್ಟುಗ, ಬಿಲ್ವಾರ, ಗೊದ್ದ, ತಾರೆ, ದಿಂಡಿಗ, ಬೆಂಡೆ, ಜಂಬೆ, ನೇರಳೆ, ಬಲ್ಲಿ, ಹೆಬ್ಬಲಸು, ಗುಳಮಾವು, ನಾಗ ಸಂಪಿಗೆ, ಕಿರಾಳ ಭೋಗಿ, ಬಿಳಿದೇವದಾರು, ಬೆನ್ನಾಟೆ, ಬಲಂಜಿ, ಹೊಳೆಗಾರ, ನೀಲಿ ಸಂಪಿಗೆ, ಹಾಲುಮಡ್ಡಿ, ಮದ್ದಾಲೆ, ಚುಂಗ, ಧೂಮ, ಸಾಲ್‌ಧೂಪ, ಕಾಯಿಧೂಪ, ಸುರಹೊನ್ನೆ, ಪಾಲಿ, ಕೊಟ್ಟೆ, ಮಾವು ಮುಂತಾದ ಪ್ರಮುಖ ವೃಕ್ಷಗಳು ಬೆಳೆಯುತ್ತವೆ. ಜೊತೆಗೆ ಬಿದಿರು, ವಾಟೆ ಮತ್ತು ಬೆತ್ತ ಅರಣ್ಯದಲ್ಲಿ ವಿಪುಲವಾಗಿವೆ. ಅರಣ್ಯ ವೈವಿಧ್ಯಮಯ ವಾಗಿರುವಂತೆ ಕರ್ನಾಟಕದ ಅರಣ್ಯ ಉದ್ಯಮಗಳೂ ವೈವಿಧ್ಯಪೂರ್ಣವಾಗಿವೆ.

ಅನಾದಿಕಾಲದಿಂದಲೂ ಮಾನವನ ಜೀವನ ಅರಣ್ಯದೊಡನೆ ಬೆರೆತುಹೋಗಿದೆ. ಆದಿಮಾನವ ದಿನಬಳಕೆಯ ಆಹಾರವಸ್ತುಗಳಾದ ಗಿಡಮೂಲಿಕೆ, ಹಣ್ಣು ಹಂಪಲು, ಮೊಟ್ಟೆ, ಮಾಂಸಗಳನ್ನು, ಮನೆಕಟ್ಟಲು ಬಳಸುವ ಸಾಮಗ್ರಿಯನ್ನೂ ಮೈ ಮುಚ್ಚುವ ಉಡುಪನ್ನೂ ಬೆಂಕಿಯನ್ನೂ ಆಯುಧ ಉಪಕರಣಗಳನ್ನೂ ಅರಣ್ಯದಿಂದಲೇ ಪಡೆಯುತ್ತಿದ್ದ. ಒಂದು ದೇಶದಲ್ಲಿ ಸೌದೆ ಮತ್ತು ಕೈಗಾರಿಕೆಗೆ ಉಪಯೋಗಿಸುತ್ತಿರುವ ಅರಣ್ಯ ಉತ್ಪನ್ನಗಳ ಬಳಕೆಯ ಮೇಲೆ ಅಲ್ಲಿನ ಕೈಗಾರಿಕಾ ಪ್ರಗತಿಯನ್ನು ನಿರ್ಧರಿಸಲಾಗುತ್ತದೆ. ಕೈಗಾರಿಕಾ ಪ್ರಗತಿಯುಳ್ಳ ದೇಶದಲ್ಲಿ ಅರಣ್ಯದ ಕಚ್ಚಾವಸ್ತುಗಳು ಕೈಗಾರಿಕೆಗಳಿಗೆ ಬಳಕೆಯಾಗುತ್ತವೆ. ಅಲ್ಪಭಾಗ ಮಾತ್ರ ಸೌದೆಗೆ ಉಪಯೋಗವಾಗುತ್ತದೆ. ಈ ಮುಂದೆ ತಿಳಿಸಿರುವಂತೆ ಸಸ್ಯಗಳನ್ನು ವಿಶ್ವವ್ಯಾಪ್ತಿಯುಳ್ಳ ಕಚ್ಚಾವಸ್ತುಗಳನ್ನಾಗಿ ಪರಿಗಣಿಸಬಹುದು. ಏಕೆಂದರೆ ಅವನ್ನು ಮಣ್ಣು, ಲೋಹ, ಗಾಜು, ನೇಯ್ದ ವಸ್ತುಗಳ ಬದಲಾಗಿ ಬಳಸಬಹುದು.

ಕರ್ನಾಟಕದಲ್ಲಿ ವ್ಯವಸಾಯವೇ ಪ್ರಧಾನವಾದ ಕಸುಬು. ವ್ಯವಸಾಯಕ್ಕೆ ಅರಣ್ಯದ ಅಗತ್ಯ ಬಹಳ ಇದೆ. ಹೆಚ್ಚು ಯಾಂತ್ರಿಕತೆ ಇಲ್ಲದ ಬೇಸಾಯಕ್ಕೆ ಅಗತ್ಯವಾದ ನೇಗಿಲು, ಕೊರಡು, ಕುಂಟೆ, ರೆಂಟೆ ಮುಂತಾದ ಉಪಕರಣಗಳನ್ನು ತಯಾರಿಸಲು ಮರದ ಅಗತ್ಯವಿದೆ. ಎಲೆಗೊಬ್ಬರವಂತೂ ವ್ಯವಸಾಯಕ್ಕೆ ಪೌಷ್ಟಿಕವೆಂದು ಪರಿಗಣಿಸಲಾಗುತ್ತದೆ. ಹಸುರೆಲೆಗಳನ್ನು ಬಳಸಿ ಕಾಂಪೋಸ್ಟ್ ಗೊಬ್ಬರವನ್ನೂ ತಯಾರಿಸಲಾಗುತ್ತದೆ. ದನದ ಮೇವು, ಮರದ ಸಕ್ಕರೆ, ಮಾದಕ ಪಾನೀಯ, ಶ್ರೀಗಂಧ, ನೀಲಗಿರಿ, ನಿಂಬೆಹುಲ್ಲಿನ ಎಣ್ಣೆ, ರೆಯಾನ್, ಪಾಲಿಫೈಬರ್, ಸೌದೆ, ಇದ್ದಿಲು, ಬೆಂಕಿಕಡ್ಡಿ, ವಿದ್ಯುಚ್ಛಕ್ತಿ, ಮನೆಗೆ ಮರಮುಟ್ಟು, ಪೀಠೋಪಕರಣ, ಪ್ಲೈವುಡ್ ಮತ್ತು ವಿನೀರ್, ಸ್ಲೀಪರ್‌ಗಳು, ರೈಲ್ವೆಬೋಗಿ, ರೈಲು ಹಾಗೂ ಬಸ್ಸಿನ ಚೌಕಟ್ಟು, ದೋಣಿ, ಹಡಗು ಮಾಡಲು, ಟೀ ಪೆಟ್ಟಿಗೆಗಳು, ಸಾಮಾನು ಸಾಗಣೆ ಪೆಟ್ಟಿಗೆಗಳು, ಕಾಗದ, ಪೆನ್ಸಿಲ್, ಚಿತ್ರೋದ್ಯಮದ ಕಾಗದ, ಪಾರದರ್ಶಕ ಅಂಟು ಮುಂತಾದವುಗಳಿಗೆಲ್ಲ ಅರಣ್ಯಗಳ ಕೊಡುಗೆ ಅಪಾರವಾದುದು. ಕಳೆದ ಎರಡು ಶತಮಾನಗಳಿಂದ ಕರ್ನಾಟಕದಲ್ಲಿ ಅರಣ್ಯ ಆಧಾರಿತವಾದ ಹಲವಾರು ಉದ್ಯಮಗಳು ಸ್ಥಾಪಿತವಾಗಿವೆ.

**ಶ್ರೀಗಂಧದ ಉದ್ಯಮ :** ಶ್ರೀಗಂಧದ ಮರ ಕರ್ನಾಟಕಕ್ಕೆ ಪ್ರಕೃತಿದತ್ತ ವರ. ರಾಷ್ಟ್ರದ ಒಟ್ಟು ಉತ್ಪತ್ತಿಯ ಸೇಕಡಾ 80 ಭಾಗ ಕರ್ನಾಟಕದಲ್ಲಿಯೇ ದೊರೆಯುತ್ತದೆ. ಶ್ರೀಗಂಧದ ತೈಲ ಅತಿ ಪರಿಮಳಯುಕ್ತ ಸುಗಂಧ ದ್ರವ್ಯಗಳಲ್ಲಿ ಒಂದು. ಇದು ಪ್ರಾಚೀನ ಕಾಲದಿಂದ ಇಂದಿನವರೆಗೂ ಪ್ರಪಂಚದಾದ್ಯಂತ ಜನಪ್ರಿಯವಾಗಿದೆ. ಮಧ್ಯಯುಗದಲ್ಲಿ ವರ್ತಕರು ಈ ಸುಗಂಧವನ್ನು ಪರ್ಷಿಯ, ಅರೇಬಿಯ, ಏಷ್ಯಮೈನರ್, ಈಜಿಪ್ಟ್, ಗ್ರೀಸ್ ಮತ್ತು ರೋಮ್‌ಗಳಿಗೆ ಸಾಗಿಸುತ್ತಿದ್ದುದರ ಬಗ್ಗೆ ಉಲ್ಲೇಖವಿದೆ.



ಹಾರುವ ಓತಿ

ಕರ್ನಾಟಕದ ಶ್ರೀಗಂಧ ಸ್ಯಾಂಟಲಮ್ ಆಲ್ಬಮ್ (Santalum Album) ಪ್ರಭೇದಕ್ಕೆ ಸೇರುತ್ತದೆ. ಇದರಿಂದ ಗಂಧದೆಣ್ಣೆಯನ್ನು ತೆಗೆಯುತ್ತಾರೆ. ಆಸ್ಟ್ರೇಲಿಯದಲ್ಲಿ ಬೆಳೆಯುವ ಗಂಧದಮರ ಸ್ಯಾಂಟಲಮ್ ಸ್ಪೈಕೇಟಮ್‌ದಿಂದ ತೆಗೆಯುವ ತೈಲದೊಡನೆ ತೀವ್ರ ಪೈಪೋಟಿ ಇದೆಯಾದರೂ ಅದು ಕರ್ನಾಟಕದ ಎಣ್ಣೆಯಷ್ಟು ಉತ್ತಮ ದರ್ಜೆಯದಲ್ಲ. ಆದರೂ ಸುಧಾರಿತ ಭಟ್ಟಿ ಇಳಿಸುವ ವಿಧಾನ, ಸಂಯೋಜಿಸುವ ಮತ್ತು ಮಿಶ್ರಣಮಾಡುವ ವಿಧಾನ, ಉತ್ತಮ ದರ್ಜೆಯ ನಿರ್ವಹಣೆ ಮುಂತಾದವುಗಳಿಂದಾಗಿ ಆಸ್ಟ್ರೇಲಿಯದ ಗಂಧದೆಣ್ಣೆ ಕರ್ನಾಟಕದ ತೈಲದೊಡನೆ ಪೈಪೋಟಿ ನಡೆಸಲು ಸಾಧ್ಯವಾಗಿದೆ. ಇಂಡೋನೇಷ್ಯದಲ್ಲಿ ತಯಾರಿಸುವ ಗಂಧದೆಣ್ಣೆಯೂ ಸ್ವಲ್ಪಮಟ್ಟಿಗೆ ನಮ್ಮ ಎಣ್ಣೆಯೊಂದಿಗೆ ಸ್ಪರ್ಧಿಸುತ್ತಿದೆ.

1912ರ ವರೆಗೂ ಕರ್ನಾಟಕದಿಂದ ಶ್ರೀಗಂಧದ ಚಕ್ಕೆ ಬೇರೆ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಜರ್ಮನಿಗೆ ರಫ್ತಾಗುತ್ತಿತ್ತು. ಅಲ್ಲಿ ಚಕ್ಕೆಯಿಂದ ತೈಲವನ್ನು ತೆಗೆದು ವಿವಿಧ ದೇಶಗಳಿಗೆ ಮಾರುತ್ತಿದ್ದರು. ಒಂದನೆಯ ಮಹಾಯುದ್ಧದ ಪ್ರಯುಕ್ತ ಇದರ ಮಾರಾಟ ನಿಂತುಹೋಯಿತು. ಆಗ ಮೈಸೂರಿನ ದಿವಾನರಾಗಿದ್ದ ಎಂ. ವಿಶ್ವೇಶ್ವರಯ್ಯನವರು ಮರದಿಂದ ಗಂಧದ ಎಣ್ಣೆಯನ್ನು ಹೊರತೆಗೆಯುವ ಯೋಜನೆಯನ್ನು ರೂಪಿಸಿ 1916ರಲ್ಲಿ ಬೆಂಗಳೂರಿನಲ್ಲಿ ಗಂಧದ ಎಣ್ಣೆಯ ಕಾರ್ಖಾನೆಯನ್ನು ಸ್ಥಾಪಿಸಿದರು. 1917ರಲ್ಲಿ ಈ ಕಾರ್ಖಾನೆಯನ್ನು ಮೈಸೂರಿಗೆ ಸ್ಥಳಾಂತರಿಸಲಾಯಿತು. ಮಲೆನಾಡು ಪ್ರದೇಶದಲ್ಲಿ ಮರದಿಂದ ಗಂಧವನ್ನು ಕೆತ್ತಿ ಸಾಗಿಸಿದ ಮೇಲೆ ಉಳಿದ ಚಿಲ್ಟಾ ಗಂಧದ ಚಕ್ಕೆಯನ್ನು ವಿಕ್ರಯಿಸುವುದು ಸಮಸ್ಯೆಯಾಯಿತಾದ್ದರಿಂದ ಅದನ್ನು ಉಪಯೋಗಿಸಲು ಶಿವಮೊಗ್ಗದಲ್ಲಿ ಒಂದು ಪರಿವರ್ತನ ಕಾರ್ಖಾನೆಯನ್ನು ಪ್ರಾರಂಭಿಸಲಾಯಿತು. ಇದು 1963ರಲ್ಲಿ ಪೂರ್ಣ ಗಂಧದ ಎಣ್ಣೆ ಕಾರ್ಖಾನೆಯಾಗಿ ಪರಿವರ್ತಿತವಾಯಿತು. ವರ್ಷಂಪ್ರತಿ 2000 ಟನ್ ಶ್ರೀಗಂಧದ ಮರವನ್ನು ಇವೆರಡು ಕಾರ್ಖಾನೆಗಳು ಉಪಯೋಗಿಸುತ್ತಿವೆ. 1916ರಿಂದ ಇಲ್ಲಿಯವರೆಗೂ ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ ಉತ್ತಮ ಪ್ರಗತಿಯನ್ನು ಸಾಧಿಸಿದೆ.

ಗಂಧದ ಎಣ್ಣೆಗೆ ಯುರೋಪ್, ಅಮೆರಿಕ ಮತ್ತು ಅರಬ್ ದೇಶಗಳಿಂದ ಹೆಚ್ಚು ಬೇಡಿಕೆ ಉಂಟು. ಗಂಧದ ಎಣ್ಣೆಯನ್ನು ಸುಗಂಧ ದ್ರವ್ಯಗಳ ಹಾಗೂ ಮೈ ಸಾಬೂನು ತಯಾರಿಕೆಯಲ್ಲಿ ಬಳಸಲಾಗುತ್ತದೆ. ಗಂಧದ ಪರಿಮಳ ಮನಮೆಚ್ಚುವಂಥದು. ಜೊತೆಗೆ ಗಂಧದಿಂದ ಎಣ್ಣೆಯನ್ನು ತೆಗೆದ ಮೇಲೆ ಬರುವ ಗಂಧದ ಪುಡಿಯಿಂದ ಊದಿನ ಕಡ್ಡಿಯನ್ನು ತಯಾರುಮಾಡುತ್ತಾರೆ. ಈಗ 80 ದೇಶಗಳಿಗೆ ಊದಿನಕಡ್ಡಿ ನಿರ್ಯಾತವಾಗುತ್ತಿದ್ದು ಇದರಿಂದ ಪ್ರತಿವರ್ಷ ಸು.10 ಕೋಟಿ ವಿದೇಶಿ ವಿನಿಮಯ ಬರುತ್ತಿದೆ. ಗಂಧದ ಮರವನ್ನು ಕೆತ್ತನೆ ಕೆಲಸಕ್ಕೂ ಉಪಯೋಗಿಸುತ್ತಾರೆ. ಮೈಸೂರು, ಬೆಂಗಳೂರು, ಸಾಗರ, ಸೊರಬ, ಕುಮಟ, ಕಾರವಾರಗಳಲ್ಲಿ ಗಂಧದ ಮರದಿಂದ ಕೆತ್ತನೆ ಕೆಲಸ ಮಾಡುವ ಗುಡಿಗಾರಿಕೆಯ ಕುಶಲ ಕೆಲಸಗಾರರಿದ್ದಾರೆ.

**ಕಾಗದದ ಕಾರ್ಖಾನೆಗಳು :** ಬೊಂಬಿನಿಂದ ಕಾಗದವನ್ನು ತಯಾರುಮಾಡುವ ಕಾರ್ಖಾನೆಗಳಾದ ಭದ್ರಾವತಿಯ ಮೈಸೂರು ಕಾಗದದ ಕಾರ್ಖಾನೆ, ದಾಂಡೇಲಿಯ ಪಶ್ಚಿಮ ಕರಾವಳಿಯ ಕಾಗದದ ಕಾರ್ಖಾನೆ (ವೆಸ್ಟ್‌ಕೋಸ್ಟ್ ಪೇಪರ್ ಮಿಲ್) ಇವು ಮುಖ್ಯವಾದವು. ಮೈಸೂರು ಕಾಗದದ ಕಾರ್ಖಾನೆ ವರ್ಷಂಪ್ರತಿ ಸು.30,000 ಟನ್ ಕಾಗದವನ್ನು ತಯಾರಿಸುತ್ತದೆ. ದಾಂಡೇಲಿಯಲ್ಲಿರುವ ಪಶ್ಚಿಮ ಕರಾವಳಿಯ ಕಾಗದ ಕಾರ್ಖಾನೆ 1958ರಲ್ಲಿ ಕಾರ್ಯಾರಂಭ ಮಾಡಿತು. ಈ ಕಾರ್ಖಾನೆ ಪ್ರತಿವರ್ಷ ಸು.45,000 ಟನ್ ಕಾಗದವನ್ನು ತಯಾರಿಸುತ್ತದೆ. ಇವುಗಳ ಜೊತೆಗೆ ಬೆಳಗೊಳದ ಮಂಡ್ಯ ನ್ಯಾಷನಲ್ ಕಾಗದ ಕಾರ್ಖಾನೆ ಮತ್ತು ಮುನಿರಾಬಾದ್‌ನ ತುಂಗಭದ್ರಾ ಕಾಗದ ಹಾಗೂ ಸ್ಟ್ರಾಬೋರ್ಡ್ ಕಾರ್ಖಾನೆಗಳು ಕಬ್ಬಿನ ಸಿಪ್ಪೆ ಹಾಗೂ ಹುಲ್ಲನ್ನು ಕಚ್ಚಾವಸ್ತುವನ್ನಾಗಿ ಉಪಯೋಗಿಸಿ ಕಾಗದ ತಯಾರಿಸುತ್ತಿದ್ದ ಕಾರ್ಖಾನೆಗಳು. ಈ ಪೈಕಿ ಮೈಸೂರಿನ ಬಳಿ ಬೆಳಗೊಳದ ಕಾರ್ಖಾನೆಯಲ್ಲಿ ಬೊಂಬನ್ನು ಕಚ್ಚಾವಸ್ತುವನ್ನಾಗಿ ಉಪಯೋಗಿಸಿ ಕಾಗದ ತಯಾರಿಕೆಯನ್ನು ಹೆಚ್ಚಿಸುವ ಪ್ರಯತ್ನ ನಡೆಯಿತಾದರು ಈ ಯೋಜನೆ ಕಾರ್ಯಗತವಾಗುವ ಮೊದಲೇ ಅನಿವಾರ್ಯವಾಗಿ ಈ ಕಾರ್ಖಾನೆಯನ್ನು ಮುಚ್ಚಲಾಯಿತು. ಇವುಗಳೊಂದಿಗೆ ಕಾರವಾರ ಹಾಗೂ ನಂಜನಗೂಡಿನಲ್ಲಿ ಖಾಸಗಿ ಸ್ವಾಮ್ಯದಲ್ಲಿರುವ ಕಾಗದದ ಕಾರ್ಖಾನೆಗಳೂ ಇವೆ.

**ರಬ್ಬರ್ ಉದ್ಯಮ :** ರಬ್ಬರ್ ಉದ್ಯಮಕ್ಕೆ ಕೇರಳ ಹೆಚ್ಚು ಪ್ರಸಿದ್ಧಿಯಾಗಿದೆ. ಆದರೆ 1961ರಿಂದ ಈಚೆಗೆ ಕರ್ನಾಟಕದಲ್ಲಿ ಸು.8,500 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ರಬ್ಬರ್ ನೆಡುತೋಪುಗಳನ್ನು ಬೆಳೆಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ, ಬೆಳ್ತಂಗಡಿ, ಮೂಡುಬಿದರೆ ತಾಲ್ಲೂಕುಗಳಲ್ಲಿ ಹಾಗೂ ಕೊಡಗು ಜಿಲ್ಲೆಯ ಪಶ್ಚಿಮ ಇಳಿಜಾರು ಪ್ರದೇಶಗಳಲ್ಲಿ ಇಂಥ ನೆಡುತೋಪುಗಳಿವೆ. ಈಗ ವರ್ಷಕ್ಕೆ ಸು.2000 ಟನ್ ರಬ್ಬರ್ ಉತ್ಪಾದನೆಯಾಗುತ್ತಿದೆ. ರಬ್ಬರ್ ನೆಡುತೋಪುಗಳ ಕಾರ್ಯಕ್ರಮದೊಂದಿಗೆ ಶ್ರೀಲಂಕಾದಿಂದ ಬಂದ ನಿರಾಶ್ರಿತರಿಗೆ ಪುನರ್ವಸತಿಕಲ್ಪಿಸುವ ಕಾರ್ಯಕ್ರಮವನ್ನು ಜೋಡಿಸಲಾಗಿದ್ದು, ಈ

ಕಾರ್ಯಕ್ರಮದ ಅಡಿಯಲ್ಲಿ ಸು.10,000 ಮಂದಿಗೆ ಪುನರ್ವಸತಿ ದೊರೆತಿದೆ. ರಬ್ಬರ್ ತಯಾರಿಕೆಯನ್ನು ಆಧರಿಸಿದ, ವಾಹನಗಳ ಚಕ್ರದ ಟ್ಯೂಬು ಹಾಗೂ ಟೈರುಗಳನ್ನೂ ತಯಾರಿಸುವ ಕಾರ್ಖಾನೆಗಳೂ ಈಗ ಕರ್ನಾಟಕದಲ್ಲಿ ಸ್ಥಾಪಿತವಾಗಿವೆ. ಈಗ ಪ್ರತ್ಯೇಕವಾದ ರಬ್ಬರ್ ಉದ್ಯಮ ನಿಗಮವನ್ನೂ ಕೂಡಾ ಪ್ರಾರಂಭಿಸಲಾಗಿದೆ.

**ಸ್ಲೇಟು ಮತ್ತು ಫೋಟೋ ಚೌಕಟ್ಟಿನ ಉದ್ಯಮಗಳು :** ಚಿಕ್ಕಮಗಳೂರು, ಸಾಗರ, ಕುಶಾಲನಗರ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಸ್ಲೇಟು ಹಾಗೂ ಫೋಟೋ ಚೌಕಟ್ಟಿನ ಅನೇಕ ಉದ್ಯಮಗಳಿವೆ. ಈ ಉದ್ಯಮಗಳು ಸಿಲ್ವರ್ ಓಕ್ ಮತ್ತು ಬೆನ್ನಾಟೆ ಮರಗಳನ್ನು ಉಪಯೋಗಿಸಿಕೊಳ್ಳುತ್ತವೆ. ಜೊತೆಗೆ ಆಂಧ್ರಪ್ರದೇಶದಲ್ಲಿರುವ ಕೆಲವು ಕಾರ್ಖಾನೆಗಳು ಆವಶ್ಯಕತೆಯ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಕರ್ನಾಟಕದ ಅರಣ್ಯಗಳು ಪೂರೈಸುತ್ತಿವೆ.

**ಮರ ಕುಯ್ಯುವ ಕಾರ್ಖಾನೆಗಳು :** ಕರ್ನಾಟಕದಲ್ಲಿ ಸರ್ಕಾರದ ಮತ್ತು ಖಾಸಗಿ ಆಡಳಿತಕ್ಕೊಳಪಟ್ಟಿರುವ 500ಕ್ಕೂ ಹೆಚ್ಚು ಮರ ಕೊಯ್ಯುವ ಕಾರ್ಖಾನೆಗಳು ಕರ್ನಾಟಕದ ಪ್ರಮುಖ ಉದ್ಯಮವರ್ಗಗಳಲ್ಲಿ ಒಂದು ಎನಿಸಿಕೊಂಡಿದೆ.

ಮಿಂಚುಳ್ಳಿ

**ಕುಶಲ ಕಲೆಗಳು :** ಕರ್ನಾಟಕ ಅನಾದಿ ಕಾಲದಿಂದಲೂ ತನ್ನ ಕರಕುಶಲ ಕಲೆಗಳಿಗೆ ಪ್ರಸಿದ್ಧಿಯಾಗಿದೆ. ಕರ್ನಾಟಕದಾದ್ಯಂತ ಕುಶಲ ಕಲೆಗಾರರಿದ್ದಾರೆ. ಮೈಸೂರು, ಚನ್ನಪಟ್ಟಣ, ಬೆಂಗಳೂರು, ಶಿವಮೊಗ್ಗ, ಸಾಗರ, ಸೊರಬ, ಶಿರಸಿ, ಹೊನ್ನಾವರ, ಕುಮಟದ ಕುಶಲಕಲೆಗಾರರು ವಿಶೇಷ ಮನ್ನಣೆಯನ್ನು ಪಡೆದಿದ್ದಾರೆ. ಕೆತ್ತನೆಯ ಕೆಲಸಕ್ಕೆ ಶ್ರೀಗಂಧ, ಆನೆಯ ದಂತ, ಬೀಟೆ, ಹೆತ್ತೇಗ, ಕೂಳ, ಹಲಸು, ಕರಿಮರ ಮುಂತಾದ ಹಲವಾರು ವಸ್ತುಗಳು ಬಳಕೆಯಾಗುತ್ತವೆ.

**ಪ್ರಾಣಿ ಪಕ್ಷಿಗಳ ಚರ್ಮ ಪ್ರಸಾಧನ ಉದ್ಯಮಗಳು :** ಕರ್ನಾಟಕದ ಅರಣ್ಯಗಳು ವನ್ಯಪ್ರಾಣಿಗಳ ತವರುಗಳಾಗಿವೆ. ಇತ್ತೀಚಿನವರೆಗೂ ಬೇಟೆಗಾರರಿಗೆ ಅವಕಾಶವಿದ್ದುದರಿಂದ ಬೇಟೆಯಾದ ಪ್ರಾಣಿಪಕ್ಷಿಗಳ ಚರ್ಮವನ್ನು ಹದಗೊಳಿಸುವ ಹಾಗೂ ಆ ಪ್ರಾಣಿಗಳ ಸ್ಥಿರ ಆಕಾರ ನೀಡುವ ಉದ್ಯಮ ಬಹಳ ಹೆಸರುವಾಸಿಯಾಗಿತ್ತು. ಜೊತೆಗೆ ಪಾದರಕ್ಷೆಗಳು ಹಾಗೂ ಇನ್ನಿತರ ಚರ್ಮದ ವಸ್ತುಗಳನ್ನು ತಯಾರಿಸುವ ಉದ್ಯಮವೂ ಸಾಗುತ್ತಿತ್ತು. ಈಗ ಬೇಟೆಯಾಡುವುದು ನಿಷಿದ್ಧವಾದ್ದರಿಂದ ಇಂಥ' ಉದ್ಯಮಗಳು ಕಡಿಮೆಯಾಗಿವೆ. ಚರ್ಮದ ಬದಲು ಪ್ಲಾಸ್ಟಿಕ್ ಅಥವಾ ಕೃತಕವಾಗಿ ತಯಾರಿಸಿದ ವಸ್ತುಗಳನ್ನು ಈ ಉದ್ಯಮಗಳಿಗೆ ಬಳಸಲಾಗುತ್ತಿದೆ.

**ಪೆಟ್ಟಿಗೆ ಉದ್ಯಮಗಳು :** ಬೆಂಗಳೂರು, ಮೈಸೂರು, ಹಾಸನ, ಮಂಡ್ಯ, ಬೆಳಗಾಂವಿ, ಸುಳ್ಯ, ಚಾಮರಾಜನಗರ ಮುಂತಾದೆಡೆಗಳಲ್ಲಿ ಮರದ ಪೆಟ್ಟಿಗೆ ತಯಾರಿಕೆಯಲ್ಲಿ ನಿರತವಾದ ಅನೇಕ ಕಾರ್ಖಾನೆಗಳಿವೆ.

**ಪ್ಲೈವುಡ್ ಮತ್ತು ವಿನೀರ್ ಉದ್ಯಮಗಳು :** ಧಾರವಾಡ, ದಾಂಡೇಲಿ, ತಾಳಗುಪ್ಪ, ಸಿದ್ದಾಪುರ, ಸುಬ್ರಹ್ಮಣ್ಯ, ಮೈಸೂರು, ಬೆಂಗಳೂರು, ಬಂಟ್ವಾಳ ಮತ್ತು ಹುಬ್ಬಳ್ಳಿಗಳಲ್ಲಿ ಪ್ಲೈವುಡ್ ಮತ್ತು ವಿನೀರ್ ಕಾರ್ಖಾನೆಗಳಿವೆ. ಬಲಂಜಿ, ಅರಶಿನ, ತೇಗ, ಬಿಲ್ವಾರ, ಮದ್ದಾಲೆ, ಕದಂಬ, ಹೆಬ್ಬಲಸು, ಹಲಸು, ಸುರಹೊನ್ನೆ, ಕಾಯಿಧೂಪ, ಗಂಧಗರಿಗೆ, ಬೀಟೆ, ಧೂಮ, ಬಿಳಿದೇವದಾರು, ಪಟ್ಟಗ, ನೇರಳೆ, ಕೂರಿ, ಗೊದ್ದ, ಸಿಲ್ವರ್ ಓಕ್, ದೊಡ್ಡತೊಪ್ಪಾ, ಬೆಂಡೆ, ನಂದಿ, ಬೆನ್ನಾಟೆ, ಗುಳಮಾವು, ಸಂಪಿಗೆ, ಪಾಲಿ ಬೂರುಗ, ಸಾಗುವಾನಿ, ಮತ್ತಿ ಜಾತಿಯ ಮರಗಳು, ಸಾಲುಧೂಪ ಮುಂತಾದ ವೃಕ್ಷಗಳು ಪ್ಲೈವುಡ್ ಮಾಡಲು ಬಳಕೆಯಾಗುತ್ತವೆ.

ಕರ್ನಾಟಕದ ಪ್ಲೈವುಡ್ಡಿಗೆ ಇರಾನ್, ಇರಾಕ್, ಕುವೈತ್, ಅರೇಬಿಯ, ಶ್ರೀಲಂಕಾ, ಸಿಂಗಪುರ, ಇಂಗ್ಲೆಂಡ್, ಕೆನಡ, ಅಮೆರಿಕ, ಜಪಾನ್, ಜರ್ಮನಿ ಮುಂತಾದ ದೇಶಗಳಿಂದ ಅಧಿಕ ಬೇಡಿಕೆಯಿದೆ. ಈ ಕಾರ್ಖಾನೆ ಅತ್ಯಂತ ಹೆಚ್ಚಿನ ಜನರಿಗೆ ಉದ್ಯೋಗವನ್ನು ಕಲ್ಪಿಸುವ ಮತ್ತು ವಿದೇಶಿ ವಿನಿಮಯವನ್ನು ಒದಗಿಸುವ ಒಂದು ಉದ್ಯಮವಾಗಿದೆ.

**ಬೆಂಕಿಕಡ್ಡಿ ಕಾರ್ಖಾನೆಗಳು :** ಇವು ಮುಖ್ಯವಾಗಿ ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿವೆ. ಈ ಎರಡು ಜಿಲ್ಲೆಗಳಲ್ಲಿ 20 ಕಾರ್ಖಾನೆಗಳಿವೆ. ಅಲ್ಲದೆ ಧಾರವಾಡ, ಚಾಮರಾಜನಗರ, ಸಾಗರ, ಪುತ್ತೂರುಗಳಲ್ಲಿಯೂ ಸಣ್ಣ ಸಣ್ಣ ಕಾರ್ಖಾನೆಗಳಿವೆ. ಆದರೆ ಇವು ಯಾವುವೂ ಪೂರ್ಣ ಪ್ರಮಾಣದ ಕಾರ್ಖಾನೆಗಳಲ್ಲ. ಆದ್ದರಿಂದ ಈ ಕಾರ್ಖಾನೆಗಳು ಕಡ್ಡಿಗಳನ್ನು ಶಿವಕಾಶಿಯಲ್ಲಿರುವ ಕಾರ್ಖಾನೆಗಳಿಗೂ ವಿಮ್ಕೋ ಕಂಪನಿಗೂ ಮಾರುತ್ತವೆ. ವಿಮ್ಕೋ ಕಂಪನಿ ಚೆನ್ನೈ, ಅಂಬರನಾಥ, ಚೂಟರ್ ಬುಕ್‌ಗಂಜ್, ಕಲ್ಲಿಕೋಟೆ ಹಾಗೂ ಪೋರ್ಟ್‌ಬ್ಲೆರ್‌ಗಳಲ್ಲಿರುವ ತನ್ನ ಕಾರ್ಖಾನೆಗಳಿಗೆ ಬೆಂಕಿಕಡ್ಡಿಗಳನ್ನು ಕಳುಹಿಸಿ ಪೊಟ್ಟಣಗಳನ್ನು ತಯಾರಿಸುತ್ತದೆ. ಶಿವಮೊಗ್ಗದಲ್ಲಿ ಬೆಂಕಿ ಪೊಟ್ಟಣಗಳನ್ನು ತಯಾರಿಸುವ ಕಾರ್ಖಾನೆ ಇದೆ. ಇತ್ತೀಚೆಗೆ ಕೆಲವು ಅದ್ಭುವ ಕಾರ್ಖಾನೆಗಳು ಪ್ರಾರಂಭವಾಗಿವೆ. ಮರದ ಕಡ್ಡಿಯ ಬದಲು ಎಣ್ಣೆ ಕಾಗದದ ಕಡ್ಡಿಗಳನ್ನು ತಯಾರಿಸಲಾಗುತ್ತದೆ.

**ಹರಿಹರ ಪಾಲಿಫೈಬರ್ ಕಾರ್ಖಾನೆ :** ಇದು 1970ರಲ್ಲಿ ಕಾರ್ಯಾರಂಭ ಮಾಡಿತು. ಈ ಕಾರ್ಖಾನೆಗೆ ದಿನವಹಿ 1200 ಟನ್ನು ನೀಲಗಿರಿ ಮರ ಕಚ್ಚಾವಸ್ತುವಾಗಿ ಬೇಕಾಗುತ್ತದೆ. ಈ ಕಾರ್ಖಾನೆ ಸಾವಿರಾರು ಮಂದಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಿದೆಯಲ್ಲದೆ ಪರೋಕ್ಷವಾಗಿ 10,000 ಮಂದಿಗೆ ಉದ್ಯೋಗ ದೊರಕುವಂತೆ ಮಾಡಿದೆ. ಇದರೊಂದಿಗೆ ಕೇರಳದ ಮಾವೂರಿನಲ್ಲಿರುವ ಗ್ವಾಲಿಯರ್ ರೇಯಾನ್ ಕಾರ್ಖಾನೆಗೆ ಇತ್ತೀಚಿನವರೆಗೂ ಕರ್ನಾಟಕದ ಅರಣ್ಯಗಳಿಂದ ಬೊಂಬು ಮತ್ತು ಸೌದೆ ಸರಬರಾಜಾಗುತ್ತಿದ್ದವು.

**ಮರ ಸಂರಕ್ಷಣ ಕಾರ್ಯಾಗಾರ :** ಎರಡನೆಯ ಮಹಾಯುದ್ಧದ ಅನಂತರ ಸಾಗುವಾನಿ ಮರ ನಶಿಸುತ್ತ ಬಂದಿದ್ದರಿಂದ ಕೆಳದರ್ಜೆಯ ಜಾತಿಯ ಮರಗಳನ್ನು ಸಾಗುವಾನಿ ಮರದ ಬದಲು ಉಪಯೋಗಿಸುವ ಸಾಧ್ಯತೆಯನ್ನು ಕುರಿತು ಅಧ್ಯಯನ ನಡೆಸಲಾಗಿದೆ. ರಕ್ಷಕ ರಾಸಾಯನಿಕ ಪದಾರ್ಥವನ್ನು

ಉಪಯೋಗಿಸಿ ಮರಗಳನ್ನು ಅಧಿಕ ಕಾಲಾವಧಿಯವರೆಗೂ ಉಪಯೋಗಕ್ಕೆ ಬರುವಂತೆ ಮಾಡುವ ತಂತ್ರವನ್ನು ಕಂಡುಹಿಡಿಯಲಾಗಿದೆ. ಈಗ ಸರ್ಕಾರದ ಅಧೀನದಲ್ಲಿ ಮಂಗಳೂರು ಮತ್ತು ಶಿವಮೊಗ್ಗದಲ್ಲಿ ಮರ ಸಂರಕ್ಷಕ ಕಾರ್ಯಾಗಾರಗಳಿವೆ. ಮುಖ್ಯವಾಗಿ ವಿದ್ಯುಚ್ಛಕ್ತಿ ಕಂಬಗಳಿಗೆ ಹಾಗೂ ರೈಲ್ವೆ ಹಳಿಗಳ ಕೆಳಗೆ ಉಪಯೋಗಿಸುವ ಅಡಿಮರಗಳನ್ನು ಇಲ್ಲಿ ಸಂಸ್ಕರಿಸಲಾಗುವುದು. ಖಾಸಗಿ ಆಡಳಿತಕ್ಕೊಳಪಟ್ಟ ಇನ್ನೊಂದು ಕಾರ್ಯಾಗಾರ ಹುಬ್ಬಳ್ಳಿಯಲ್ಲಿದೆ. ಇತ್ತೀಚೆಗೆ ವಿದ್ಯುತ್ ಕಂಬಗಳಿಗೆ ಹಾಗೂ ರೈಲ್ವೆ ಹಳಿಗಳ ಅಡಿಪಟ್ಟಿಗಳಿಗೆ ಮರದ ಬದಲು ಕಾಂಕ್ರೀಟ್ ಕಂಬಗಳನ್ನು ಬಳಸುವುದರ ಮೂಲಕ ಮರಗಳನ್ನು ಕಡಿದು ಉಪಯೋಗಿಸುವುದನ್ನು ಕಡಿಮೆ ಮಾಡಲಾಗುತ್ತಿದೆ.

**ಪೀಠೋಪಕರಣಗಳ ಉದ್ಯಮ :** ಈ ಉದ್ಯಮಕ್ಕೆ ಬೆತ್ತ, ಮರ ಮತ್ತು ಪ್ಲೈವುಡ್‌ಗಳನ್ನು ಉಪಯೋಗಿಸುತ್ತಾರೆ. ಕೊಡಗಿನ ಮೂರ್‌ಕಲ್ ಮತ್ತು ಶಿವಮೊಗ್ಗದಲ್ಲಿ ಸರ್ಕಾರದ ಅಧೀನಕ್ಕೊಳಪಟ್ಟ ಪೀಠೋಪಕರಣ ತಯಾರಿಕೆಯ ಎರಡು ಘಟಕಗಳಿವೆ. ಇವುಗಳ ಜೊತೆಗೆ ಖಾಸಗಿ ಕ್ಷೇತ್ರದಲ್ಲಿ ಸಾವಿರಾರು ಘಟಕಗಳು ಕೆಲಸಮಾಡುತ್ತಿವೆ. ಇದಲ್ಲದೆ ವಿವಿಧ ಜಿಲ್ಲೆಗಳಲ್ಲಿರುವ ಬಂದೀಖಾನೆಗಳಲ್ಲಿ ಕೂಡಾ ಪೀಠೋಪಕರಣಗಳ ತಯಾರಿಕೆಯ ಕೆಲಸ ನಡೆಯುತ್ತದೆ.

**ಚಿಪ್ ಬೋರ್ಡ್ ಉದ್ಯಮ :** ಯಾವ ಕೈಗಾರಿಕೆಗಳಿಗೂ ಬಾರದ ವಿವಿಧ ಜಾತಿಯ ಸಣ್ಣಮರದ ತುಂಡುಗಳಿಂದ ಚಿಪ್ ಬೋರ್ಡ್‌ನ್ನು ತಯಾರಿಸಬಹುದು. ಅರಣ್ಯ ಉದ್ಯಮದಲ್ಲಿ ಇದೊಂದು ಬಹುಮುಖ್ಯ ಪ್ರಗತಿಪರ ಹೆಜ್ಜೆ. ಚಿಪ್ ಬೋರ್ಡ್‌ಗಳನ್ನು ಶಕ್ತಿ ಪ್ರಾಧನ್ಯವಿಲ್ಲದ ಭಾಗಗಳಲ್ಲಿ ಹಲಗೆಗಳ ಬದಲಾಗಿ ಉಪಯೋಗಿಸಬಹುದು.



ಹಾರುವ ಕಪ್ಪೆ

1973ರಲ್ಲಿ ಕರ್ನಾಟಕ ಸರ್ಕಾರ ಅರಣ್ಯ ಕೈಗಾರಿಕಾ ನಿಗಮವನ್ನು ರಚಿಸಿತು. ನಿರ್ದೇಶಕರೊಬ್ಬರ ನೇತೃತ್ವದಲ್ಲಿ ಈ ನಿಗಮ ಅರಣ್ಯೋತ್ಪನ್ನಗಳನ್ನು ಅವಲಂಬಿಸಿದ ಉದ್ಯಮಗಳ ಉಸ್ತುವಾರಿ ನಡೆಸುತ್ತದೆ. ಈ ನಿಗಮ ಉತ್ತರ ಕನ್ನಡದಲ್ಲಿ ಕಾಗದದ ಕಾರ್ಖಾನೆ, ಧಾರವಾಡ ಮತ್ತು ದಕ್ಷಿಣ ಕನ್ನಡದಲ್ಲಿ ವಿನೀರ್ ಉದ್ಯಮ, ಅನೇಕ ಜಿಲ್ಲೆಗಳಲ್ಲಿ ಹುಲ್ಲಿನ ಪೆಲ್ಲಟೈಸೇಶನ್ ಉದ್ಯಮ, ಶಿವಮೊಗ್ಗದಲ್ಲಿ ಬೆಂಕಿಕಡ್ಡಿ ಕಾರ್ಖಾನೆಗಳನ್ನು ಸ್ಥಾಪಿಸಿದೆ. ಮೈಸೂರಿನಲ್ಲಿರುವ ಖಾಸಗಿ ಸ್ವಾಮ್ಯದ ರಬ್ಬರ್ ಚಕ್ರದ ಉದ್ಯಮಗಳ ಮೇಲುಸ್ತುವಾರಿಯನ್ನೂ ಮಾಡುತ್ತಿದೆ. 1971ರಲ್ಲಿ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಕರ್ನಾಟಕದ ಅರಣ್ಯ ಅಭಿವೃದ್ಧಿ ನಿಗಮ ರಾಜ್ಯದಲ್ಲಿ ವಿವಿಧ ಪ್ರಕಾರದ ನೆಡುತೋಪುಗಳನ್ನು ಬೆಳೆಸಿ ಅರಣ್ಯಪ್ರದೇಶವನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಗೇರು ನೆಡುತೋಪುಗಳನ್ನು ಬೆಳೆಸಲು 1978ರಲ್ಲಿ ಗೇರು ಅಭಿವೃದ್ಧಿ ನಿಗಮ ರಚಿತವಾಗಿದೆ. ಇದಲ್ಲದೆ ಅರಣ್ಯ ಪ್ರವಾಸಿ ವಸತಿ ಗೃಹಗಳು ಮತ್ತು ಪ್ರವಾಸಿ ತಾಣಗಳ ನಿಗಮವೂ ಇದೆ. ಇದಕ್ಕೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳೇ ವ್ಯವಸ್ಥಾಪಕ ನಿರ್ದೇಶಕರು. ಇಷ್ಟೆಲ್ಲ ಬೃಹತ್ ವ್ಯವಸ್ಥೆಯೊಂದಿಗೆ ಅರಣ್ಯವನ್ನು ಉಳಿಸಿ, ಬೆಳೆಸಿ, ಬಳಸಿಕೊಳ್ಳುವ ಏರ್ಪಾಡು ನಡೆದಿದೆ. (ಬಿ.ಬಿ.)

**ಅರದೇಶಹಳ್ಳಿ :** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ದೇವನಹಳ್ಳಿಗೆ 16ಕಿಮೀ ದೂರದಲ್ಲಿದೆ.

ಇಲ್ಲಿ ಆಂಜನೇಯ, ಗೋಪಾಲಸ್ವಾಮಿ, ಮುನೇಶ್ವರ, ಮಹೇಶ್ವರ ಮತ್ತು ಈಶ್ವರ ದೇವಾಲಯಗಳಿವೆ. ಇವೆಲ್ಲವನ್ನೂ ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಇಲ್ಲಿಯ ಈಶ್ವರ ದೇವಾಲಯದ ಮುಂಭಾಗದಲ್ಲಿ ವಿಸ್ತಾರವಾದ ಬೂದಿ ದಿಣ್ಣೆಯಿದ್ದು ಇದನ್ನು ಪ್ರಾಗೈತಿಹಾಸಿಕ ಸ್ಥಳವೆಂದು ಗುರುತಿಸಲಾಗಿದೆ. ಗೋಪಾಲಸ್ವಾಮಿ ದೇವಾಲಯಕ್ಕೆ ಸಮೀಪದಲ್ಲಿ ಸುರಕ್ಷಿತವಾಗಿಟ್ಟಿರುವ, ರಾಷ್ಟ್ರಕೂಟರ ಕಾಲದ ಮೂರು ಸುಂದರ ವೀರಗಲ್ಲುಗಳಿವೆ. ಒಂದು ವೀರಗಲ್ಲಿನಲ್ಲಿ ರಾಷ್ಟ್ರಕೂಟ ಅಕಾಲವರ್ಷ ಶ್ರೀಪೃಥಿವೀವಲ್ಲಭನ ಆಳ್ವಿಕೆಯ ಕಾಲದಲ್ಲಿ ಗಂಗವಾಸನ ಮಗ ಗೋವಿಂದ ಸಳ್ಳೆ ಮುನ್ನೂರು ಮತ್ತು ಕುಣುಂಗಿ ಅಯ್ನೂರನ್ನು ಆಳುತ್ತಿದ್ದ ಕಾಲದಲ್ಲಿ ನಂದಿಗುಂದದ ಗಣಿಗಾವುಂಡನೊಂದಿಗೆ ನಂದಿಯ ಸ್ವಾನದ ಮುಮ್ಮೆನ್ನಯನು ತುರುಗಾಳಗದಲ್ಲಿ ಕಾದಾಡಿ ಹಸುಗಳನ್ನು ರಕ್ಷಿಸಿ ಸತ್ತನೆಂದು ಹೇಳಿದೆ. ಇನ್ನೊಂದು ಶಾಸನ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲಕ್ಕೆ ಸೇರಿದ್ದು ಇದರಲ್ಲಿ ಯಲಹಂಕನಾಡ ಪ್ರಭು ಬೆಟ್ಟರಸ ದಣ್ಣಾಯಕನು ಹಿರಿಯಕೆರೆ ಎಂದು ಕರೆಯುವ ಸ್ಥಳೀಯ ಕೆರೆಯೊಂದನ್ನು ಜೀರ್ಣೋದ್ಧಾರ ಮಾಡಲು ದತ್ತಿಯನ್ನು ಕೊಟ್ಟನೆಂದು ಹೇಳಿದೆ. (ಕೆ.ಎಂ.ಎಸ್.)

**ಅರಭಾವಿ :** ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಒಂದು ಹಳ್ಳಿ. ಇಲ್ಲಿ 1910ರಲ್ಲಿ ಪ್ರಾರಂಭವಾದ ಸರ್ಕಾರಿ ಒಕ್ಕಲುತನದ ಫಾರ್ಮ್ ಇದೆ. ಇದು ಕೃಷಿ ಸಂಶೋಧನ ಕೇಂದ್ರವಾಗಿದೆ. ವಿಶ್ವವಿದ್ಯಾಲಯ ಪ್ರಾರಂಭಿಸಿದ ಒಕ್ಕಲುತನ ತರಬೇತಿ ಶಾಲೆಯೂ ಇದೆ. ಗ್ರಾಮೀಣ ಜನರ ಸಲುವಾಗಿ ಆಗಾಗ್ಗೆ ಚಿಕ್ಕ ಚಿಕ್ಕ ತರಬೇತಿ ಶಿಬಿರಗಳನ್ನೂ ಏರ್ಪಡಿಸಲಾಗುತ್ತಿದೆ. ರೈತರಿಗೆ ಎಲ್ಲ ವಿಧದ ಕೃಷಿ ಶಿಕ್ಷಣದ ಮಾಹಿತಿಯನ್ನೂ ಮಹಿಳೆಯರಿಗೆ ಪಾಕಶಾಸ್ತ್ರ ತರಬೇತಿಯನ್ನು ನೀಡುತ್ತಿದೆ.

ಅರಭಾವಿಗೆ ಸಮೀಪದಲ್ಲಿ ಇರುವ ದುರದುಂಡಿ ಹಳ್ಳಿಯಲ್ಲಿ ಒಂದು ಪ್ರಾಚೀನ ಮಠವಿದೆ. ಇದಕ್ಕೆ ಅರಭಾವಿ ಮಠ, ದುರದುಂಡೀಶ್ವರ ಮಠ ಎಂಬ ಹೆಸರುಗಳು ಇವೆ. ಇದರ ಸ್ಥಾಪಕರಾದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಹಿಮಾಲಯದ ಕಡೆಯಿಂದ ಆಗಮಿಸಿದವರು, ಅನೇಕ ದೇಶಗಳಲ್ಲಿ ಸಂಚರಿಸುತ್ತ ಜನೋದ್ಧಾರ ಮಾಡುತ್ತ ಕರ್ನಾಟಕವನ್ನು ಪ್ರವೇಶಿಸಿ ಅರಭಾವಿಗೆ ಬಂದರು. ತಮ್ಮ ಪವಾಡಗಳಿಂದ ಈ ಭಾಗದ ಜನರನ್ನು ಉದ್ಧರಿಸಿದರೆನ್ನಲಾಗಿದೆ. ಅನಂತರ ಇವರು ದುರದುಂಡಿಯಲ್ಲಿ ನೆಲಸಿದ್ದರಿಂದ ದುರದುಂಡೀಶ್ವರರೆಂದು ಹೆಸರಾದರು ಎಂದು ಪ್ರತೀತಿ. ಈ ಮಠ ಕಲ್ಲಿನ ಭವ್ಯಮಠವೆಂದು ಪ್ರಸಿದ್ಧಿಪಡೆದಿದೆ. ಮಠದಲ್ಲಿ ಕೋರಿ ಕಾಗದದ ಮತ್ತು ತಾಡವಲಿ ಗ್ರಂಥಗಳ ಸಂಗ್ರಹವಿದೆ. ಹಿಂದೂ ಸಂದೇಶ, ಪುಣ್ಯಾರಣ್ಯ ಪತ್ರಿಕೆಗಳನ್ನು ಮಠದ ವತಿಯಿಂದ ಹೊರಡಿಸುತ್ತಿದ್ದರು. ಗೋಕಾಕದಲ್ಲಿ ಶ್ರೀ ದುರದುಂಡೀಶ್ವರ ಉಚಿತ ಪ್ರಸಾದ ನಿಲಯವಿದೆ. (ಎಂ.ಎ.)

**ಅರವಿಂದ್, ಜಿ. ಸವುರ್ :** 1941-. ಬಿಲಿಯರ್ಡ್ಸ್ ಮತ್ತು ಸ್ನೂಕರ್ ಆಟಗಾರ. 1941 ಡಿಸೆಂಬರ್ 17ರಂದು ಮುಂಬಯಿಯಲ್ಲಿ ಜನಿಸಿದರು. ಬೆಂಗಳೂರಿನ ಸೇಂಟ್‌ಜೋಸೆಫ್ ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಕ್ರೀಡೆಯಲ್ಲಿ ಆಸಕ್ತಿ ತಳೆದು 1957ರಲ್ಲಿ

ಟೇಬಲ್ ಟೆನ್ನಿಸ್ ಆಟದಲ್ಲಿ ಕಿರಿಯರ ರಾಷ್ಟ್ರೀಯ ಟೇಬಲ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಅನಂತರ ಇವರು ಬಿಲಿಯರ್ಡ್ಸ್‌ಗೆ ಒಲಿದರು. ಆ ಕ್ರೀಡೆಯ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಸೆಣಸಿದರು. ರಾಷ್ಟ್ರೀಯ ಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯವನ್ನು 1960ರಲ್ಲಿ ಪ್ರತಿನಿಧಿಸಿದರು. ಅನಂತರ ನಿರಂತರವಾಗಿ 1966ರ ತನಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ರಾಜ್ಯದ ಪ್ರತಿನಿಧಿಯಾಗಿದ್ದರು. 1975-87ರ ತನಕ ಕರ್ನಾಟಕ ರಾಜ್ಯ ತಂಡದ ನಾಯಕರಾಗಿದ್ದರು.

ಸವುರ್ ಅವರ ದೇಹದ ತೂಕ ಹಾಗೂ ನಿಲುವು ಬಿಲಿಯರ್ಡ್ಸ್ ಆಟಗಾರರಿಗೆ ಆಶ್ಚರ್ಯವನ್ನುಂಟು ಮಾಡಿತು. ಏಕೆಂದರೆ ಬಿಲಿಯರ್ಡ್ಸ್ ಆಟಕ್ಕೆ ಸರಿ ತೂಗದ ಆಕೃತಿ ಇವರದು. ಇವರನ್ನು 1967ರಲ್ಲಿ ರಾಷ್ಟ್ರೀಯ ಚಾಂಪಿಯನ್ ಎಂದು ಘೋಷಿಸಿದಾಗ ಎಲ್ಲರಿಗೂ ಆಶ್ಚರ್ಯವಾಯಿತು. 1976ರ ತನಕ ಇವರು ಸ್ನೂಕರ್ ಆಟದಲ್ಲಿ ಪ್ರಮುಖ ಸ್ಥಾನ ಗಳಿಸಿದ್ದೊಂದು ವೈಶಿಷ್ಟ್ಯ. 1976ರಲ್ಲಿ ಇವರು ರಾಷ್ಟ್ರೀಯ ಸ್ನೂಕರ್ ಚಾಂಪಿಯನ್ ಎನಿಸಿಕೊಂಡರು. 1972ರಲ್ಲಿ ಇಂಗ್ಲೆಂಡಿನ ವೇಲ್ಸ್‌ನಲ್ಲಿ ನಡೆದ ಪ್ರಥಮ ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದರು. 1980ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟ ಫೈನಲ್ ಹಂತವನ್ನು ತಲಪಿದರು. ಇದಲ್ಲದೆ 1974 ಹಾಗೂ 78ರಲ್ಲಿ ಐರ್ಲೆಂಡ್ ಹಾಗೂ ಮಾಲ್ಟದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ ಪಂದ್ಯಗಳಲ್ಲೂ ಇವರು ಕ್ವಾರ್ಟರ್ ಫೈನಲ್ ಹಂತ ಪ್ರವೇಶಿಸಿದರು.

ಇವರು ಭಾರತೀಯ ರೈಲ್ವೆ ವಿಭಾಗದ ಕ್ರೀಡಾಪಟುವಾಗಿ 1968ರಲ್ಲಿ ಅತ್ಯುತ್ತಮ ರೈಲ್ವೆ ಕ್ರೀಡಾಪಟು ಎನಿಸಿಕೊಂಡರು. ಇವರು ಆಟಗಾರರಷ್ಟೇ ಅಲ್ಲದೆ ಭಾರತದ ಮುಖ್ಯ ತರಬೇತುದಾರರಾಗಿ ಮಾಧ್ಯಮದ ನಿರ್ವಾಹಕರಾಗಿ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಅಖಿಲ ಭಾರತ ವೃತ್ತಿನಿರತ ಬಿಲಿಯರ್ಡ್ಸ್ ಹಾಗೂ ಸ್ನೂಕರ್ ಸಂಘದ ಕಾರ್ಯದರ್ಶಿಯಾಗಿಯೂ ಕರ್ನಾಟಕ ರಾಜ್ಯ ಸಂಘದ ಅಧ್ಯಕ್ಷರಾಗಿಯೂ ಇದ್ದರು. 1998ರ ಬ್ಯಾಂಕಾಕ್ ಏಷ್ಯನ್ ಕ್ರೀಡೆಗಳಲ್ಲಿ ಭಾಗವಹಿಸಿದ ಬಿಲಿಯರ್ಡ್ಸ್ ಮತ್ತು ಸ್ನೂಕರ್ ತಂಡದ ಮುಖ್ಯ ತರಬೇತುದಾರರಾಗಿ 1 ಚಿನ್ನ, 1 ಬೆಳ್ಳಿ ಹಾಗೂ 4 ಕಂಚಿನ ಪದಕವನ್ನು ಭಾರತ ತಂಡ ಪಡೆಯಲು ನೆರವಾಗಿದ್ದಾರೆ. ವಿಶ್ವ ಬಿಲಿಯರ್ಡ್ಸ್ ಕ್ರೀಡಾಗಾರರ ಬೆಳೆವಣಿಗೆಗೆ ಸ್ಫೂರ್ತಿ ದೊರಕಿಸಿಕೊಟ್ಟಿದ್ದಾರೆ. ಇವರು ಉತ್ತಮ ಬರೆಹಗಾರರೂ ಕ್ರೀಡಾ ವಿಮರ್ಶಕರೂ ಆಗಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1982) ಏಕಲವ್ಯ ಪ್ರಶಸ್ತಿ (1993) ಲಭಿಸಿವೆ. ಭಾರತ ಸರ್ಕಾರ ಇವರಿಗೆ ಅರ್ಜುನ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ (1978-79). (ಎಸ್.ಆರ್.ಯು.)

**ಅರ್ಸೀಕೆರೆ :** ಹಾಸನ ಜಿಲ್ಲೆಯ ಒಂದು ತಾಲ್ಲೂಕು, ಆ ತಾಲ್ಲೂಕಿನ ಮುಖ್ಯ ಸ್ಥಳ. ತಾಲ್ಲೂಕನ್ನು ಕಡೂರು, ಚಿಕ್ಕನಾಯಕನಹಳ್ಳಿ, ತಿಪಟೂರು, ಚನ್ನರಾಯಪಟ್ಟಣ, ಹಾಸನ, ಬೇಲೂರು ಮತ್ತು ಚಿಕ್ಕಮಗಳೂರು ತಾಲ್ಲೂಕುಗಳು ಸುತ್ತುವರಿದಿವೆ. ಕಸಬ, ಕಣಕಟ್ಟೆ, ಬಾಣಾವರ, ಜಾವಗಲ್ಲು, ಗಂಡಸಿ ಹೋಬಳಿಗಳಿವೆ. ಒಟ್ಟು 370 ಗ್ರಾಮಗಳೂ ಅರಸೀಕೆರೆ ಮತ್ತು ಬಾಣಾವರ ಪಟ್ಟಣಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 1278ಚ.ಕಿಮೀ. ಜನಸಂಖ್ಯೆ 3,03,000. ಮೊದಲು ಹಾರ್‍ನಹಳ್ಳಿ ತಾಲ್ಲೂಕ್ಕಾಗಿದ್ದು 1882ರಲ್ಲಿ ಅರಸೀಕೆರೆ ತಾಲ್ಲೂಕಾಯಿತು.

ಇದು ಬೆಟ್ಟಗುಡ್ಡಗಳ ಪ್ರದೇಶ. ಹಿರೇಕಲ್ಲುಬೆಟ್ಟ ಎಂಬುದು ಎತ್ತರವಾದ ಬೆಟ್ಟಗಳಲ್ಲೊಂದು. ಈ ತಾಲ್ಲೂಕಿನ ದಕ್ಷಿಣಭಾಗದಲ್ಲಿ ಸಾಧಾರಣವಾದ ಅನೇಕ ಕುರುಚಲು ಕಾಡುಗಳೂ ಹುಲ್ಲು ಬೆಳೆಯುವ ಪ್ರದೇಶಗಳೂ ಇವೆ. ಇಲ್ಲೆಲ್ಲ ಸಾಧಾರಣ ಫಲವತ್ತಾದ, ಗಡುಸಾದ ಕೆಂಪು ಮತ್ತು ಬೂದುಬಣ್ಣದ ಮಣ್ಣಿದೆ. ಭೂಮಿ ದಕ್ಷಿಣದಿಂದ ಉತ್ತರದ ಕಡೆಗೆ ಇಳಿಜಾರಾಗಿದೆ. ಮಳೆ ಕಡಿಮೆ, ವಾರ್ಷಿಕ ಸರಾಸರಿ 671ಮಿಮೀ. ರಾಗಿ, ತೆಂಗು, ಮೆಣಸಿನಕಾಯಿ, ಎಣ್ಣೆಕಾಳುಗಳು, ಜೋಳ ಮುಖ್ಯ ಬೆಳೆಗಳು. ಕೆರೆಗಳಿಂದ 1770, ಬಾವಿಗಳಿಂದ 820 ಮತ್ತು ಕೊಳವೆ ಬಾವಿಗಳಿಂದ 2800ಹೆ.ಗಳ ಜಮೀನು ನೀರಾವರಿಗೆ ಒಳಪಟ್ಟಿದೆ. ದಕ್ಷಿಣಕ್ಕೆ ಅಮೃತಮಹಲ್ ಕಾವಲುಗಳು ಅನೇಕವಿದ್ದು ಇಲ್ಲಿ ಒಳ್ಳೆಯ ದನಕರುಗಳನ್ನು ಸಾಕುತ್ತಾರೆ. ಕುರಿ ಸಾಕಣೆಯೂ ಹೆಚ್ಚು.

ಬಾಣಾವರ, ಗರುಡನಗಿರಿ, ಹಾರನಹಳ್ಳಿ, ಹುಲ್ಲೆಕೆರೆ ಮತ್ತು ಜಾವಗಲ್ಲು ಈ ತಾಲ್ಲೂಕಿನ ಪ್ರಸಿದ್ಧ ಸ್ಥಳಗಳು (ಆಯಾ ಲೇಖನಗಳನ್ನು ನೋಡಿ). ಅರಕೆರೆ ಎಂಬ ಗ್ರಾಮದಲ್ಲಿ ಚನ್ನಕೇಶವ ಮತ್ತು ರಾಮೇಶ್ವರ ದೇವಾಲಯಗಳಿವೆ. ಇಲ್ಲಿ ಗಂಗದೊರೆ ಎಱೆಯಪ್ಪನ ಕಾಲಕ್ಕೆ ಸಂಬಂಧಿಸಿದ ಶಾಸನವಿರುವ ಒಂದು ದೊಡ್ಡ ವೀರಗಲ್ಲಿದೆ. ಕಂಚಿನಕೋವಿ ಮರತಿ ಎಂಬುದು ಅರಸೀಕೆರೆ ಪಟ್ಟಣಕ್ಕೆ 4ಕಿಮೀ ದೂರದಲ್ಲಿರುವ ಒಂದು ಸಣ್ಣ ಬೆಟ್ಟ. ಇಲ್ಲಿ ದೇವಾಲಯಗಳ ಅವಶೇಷಗಳಿವೆ. ಹಿಂದೆ ಇಲ್ಲೊಂದು ಊರಿದ್ದಿರಬಹುದೆಂದು ಹೇಳುತ್ತಾರೆ. ಮಾಲೆಕಲ್ಲುತಿರುಪತಿ ಅರಸೀಕೆರೆಗೆ 3ಕಿಮೀ ದೂರದಲ್ಲಿರುವ ಒಂದು ಯಾತ್ರಾಸ್ಥಳ. ಇಲ್ಲಿನ ಹಿರೇಕಲ್ಲು ಬೆಟ್ಟದ ಮೇಲಿರುವ ವೆಂಕಟರಮಣಸ್ವಾಮಿ ಮತ್ತು ಬೆಟ್ಟದ ಬುಡದಲ್ಲಿರುವ ಗೋವಿಂದರಾಜಸ್ವಾಮಿ ದೇವಾಲಯಗಳು ಪ್ರಸಿದ್ಧವಾದವು. ಮಾವತ್ತನಹಳ್ಳಿಯಲ್ಲಿ ಹೊಯ್ಸಳ ಶೈಲಿಯ ಮಹಾಲಿಂಗೇಶ್ವರ ದೇವಾಲಯವಿದೆ. ಅಗ್ಗುಂದದಲ್ಲಿ ಶಿಥಿಲವಾದ ಎರಡು ಹೊಯ್ಸಳ ದೇವಾಲಯಗಳಿವೆ. ಅರಸೀಕೆರೆಗೆ ಉತ್ತರದಲ್ಲಿ 11ಕಿಮೀ ದೂರದಲ್ಲಿರುವ ನಾಗಪುರಿ ಕೋಟೆಯಲ್ಲಿ ಹೈದರ್ ಅಲಿ ಕಟ್ಟಿದ ಕೋಟೆಯ ಅವಶೇಷವಿದೆ. ಅರಸೀಕೆರೆಗೆ 28ಕಿಮೀ ದೂರದಲ್ಲಿ ತಿಮ್ಮನಹಳ್ಳಿಯ ಹತ್ತಿರ ವೇದಾವತಿ ನದಿಗೆ ಹಿರೆಕಟ್ಟೆವಡ್ಡು ಎನ್ನುವ ಕಟ್ಟೆ ಕಟ್ಟಲಾಗಿದೆ.

ಈಶ್ವರ ದೇವಸ್ಥಾನ

ತಾಲ್ಲೂಕಿನ ಕೇಂದ್ರ ಅರಸೀಕೆರೆಯ ಜನಸಂಖ್ಯೆ 45,160. ಮೈಸೂರು ಮತ್ತು ಬೆಂಗಳೂರು ಕಡೆಗಳಿಂದ ಅರಸೀಕೆರೆಗೂ ಮುಂದಕ್ಕೂ ರೈಲು ಮಾರ್ಗಗಳಿವೆ. ಇದೊಂದು ವ್ಯಾಪಾರ ಕೇಂದ್ರ. ಪ್ರತಿ ಶುಕ್ರವಾರ ಇಲ್ಲಿ ನಡೆಯುವ ದೊಡ್ಡ ಸಂತೆ ತೆಂಗಿನಕಾಯಿ ಮತ್ತು ಕೊಬ್ಬರಿ ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ. 1882ರಷ್ಟು ಹಿಂದೆಯೇ ಅಸ್ತಿತ್ವಕ್ಕೆ ಬಂದ ಇಲ್ಲಿನ ಪುರಸಭೆ ಹಳೆಯ ಪುರಸಭೆಗಳಲ್ಲೊಂದು. ಈ ಊರಿಗೆ ಸಮೀಪವಾಗಿ ಕಸ್ತೂರಬಾ ಗ್ರಾಮವೆಂಬ ಒಂದು ಮಾದರಿ ಗ್ರಾಮ ಸ್ಥಾಪಿತವಾಗಿದೆ. ಇದನ್ನು ಶ್ರೀಮತಿ ಯಶೋಧರಾ ದಾಸಪ್ಪ ಅವರು ಸ್ಥಾಪಿಸಿದರು.

ಈ ಊರು ಹೊಯ್ಸಳರ ಆರಂಭಕಾಲದಲ್ಲಿಯೆ ಹುಟ್ಟುಕೊಂಡಿತು. ಹನ್ನೊಂದನೆಯ ಶತಮಾನದ ಕಡೆಯಲ್ಲಿ ಎರೆಯಂಗನ ಪಟ್ಟದರಸಿ ಮಹಾದೇವಿ ಕೆರೆಯನ್ನು ಕಟ್ಟಿಸಿದಂತೆ ಒಂದು ಶಾಸನದಿಂದ ತಿಳಿದುಬರುವುದರಿಂದ ಈ ಅರಸಿಯ ಹೆಸರಿನಿಂದಲೇ ಅರಸೀಕೆರೆ ಎಂಬ ಹೆಸರು ಈ ಊರಿಗೆ ಬಂದಿರಬಹುದು. ಮುಂದೆ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಈ ಊರು ಅಭ್ಯುದಯದ ಪರಾಕಾಷ್ಠೆಯನ್ನು ಕಂಡಿತು. ಬಲ್ಲಾಳನ ಪಿರಿಯರಸಿ ಉಮಾದೇವಿಯ ತವರಾಗಿದ್ದ ಈ ಊರು ಅವನ ಕಾಲದಲ್ಲಿ ಹೊಯ್ಸಳ ರಾಜ್ಯದ 'ಭಂಡಾರವಾಡ' ವಾಯಿತು. ಇದಕ್ಕೆ ಜಯಗೊಂಡ ಬಲ್ಲಾಳಪುರ, ವೀರವಿಜಯ ಬಲ್ಲಾಳಪುರ ಎಂಬ ಹೆಸರುಗಳೂ ಇದ್ದು ಶಾಸನಗಳಲ್ಲಿ ರಾಜಧಾನಿ ಅರಸಿಯಕೆರೆ ಎನ್ನಿಸಿಕೊಂಡಿದೆ.

ವೇದವಿದರಾದ ವಿಪ್ರರು, ವೀರರಾದ ಕಾಯ್ವಾಳುಗಳು, ಆಢ್ಯರಾದ ಪರದರು, ಅಲಕಾಧೀಶ ಕುಬೇರನನ್ನೂ ಧಿಕ್ಕರಿಸುವ ವಾಣಿಜ್ಯರು,

ಅಚಲವಾಕ್ಯರಾದ ಜನ, ವಿನೂತಾಕಾರರಾದ ಕಾಂತಾಜನ, ಇಳೆಗೆ ಮಂಡನಪ್ರಾಯವಾದ ದೇವಾಗಾರ ಸಂದೋಹ, ಸಾಗರತೀರದಂತೆ ಶೋಭಿಸುವ ತುಂಬುಕೆರೆಗಳು, ಫಲಭರಿತ ವನಗಳು, ಪುಷ್ಪಭರಿತ ತೋಟಗಳು, ಸುರವೃಕ್ಷದಂತಿರುವ ಮಾವು, ಸುರಲತೆಯಂತಿರುವ ತಾಂಬೂಲ, ತೆಂಗು, ಕೌಂಗುಗಳು, ಗಂಧಶಾಲೀಪರಿಮಳಗಳಿಂದ ಕೂಡಿ ಉದ್ಯತ್ ಪ್ರಜಾಪೂರಿತವಾದ ಈ ನಗರಿಯು ಸುತ್ತಲೂ ಬಳಸಿದ್ದ ಕೋಟೆಯಿಂದ ಉರ್ವೀಮಂಡನ ವಾಯಿತೆಂದು ಇಲ್ಲಿನ ಹಲವಾರು ಶಾಸನಗಳನ್ನು ರಚಿಸಿರುವ ದೇವಪಾರ್ಯ, ತ್ರಿವಿಕ್ರಮಪಂಡಿತ, ಶಾಂತಿನಾಥ ಮೊದಲಾದ ಕವಿಗಳು ಹಾಡಿ ಹೊಗಳಿದ್ದಾರೆ.

ಪ್ರಸನ್ನ ಚೆನ್ನಕೇಶವ, ನಖರ ಜಿನಾಲಯ, ಸಹಸ್ರಕೂಟ ಚೈತ್ಯಾಲಯ, ಕೊಯ್ಸಾಳೇಶ್ವರ, ಜಗತೇಶ್ವರ, ಮೇಳೇಶ್ವರ, ಬ್ರಹ್ಮ, ಕತ್ತಮೇಶ್ವರ, ಬಲ್ಲೇಶ್ವರ, ಅರೆಯಶಂಕರದೇವ ಮುಂತಾದ ಹಲವು ಗುಡಿಗೋಪುರಗಳನ್ನು ಅನೇಕ ರಾಜ್ಯಾಧಿಕಾರಿಗಳು ಹಾಗೂ ವಣಿಕ್ ಮತ್ತು ವೃತ್ತಿಶ್ರೇಣಿಗಳು, ಸರಸ್ವತಿ ಗಣದಾಸಿ ಕೇತೋಜ, ಪುಲಿಗೆಯ ವಿಟೋಜ, ಸಿಂಗೋಜ ಮುಂತಾದ ಬಿರುದ ರೂವಾರಿಗಳನ್ನು ನಿಯೋಜಿಸಿ ಕಟ್ಟಿಸಿದರೆಂದು ಹೊಯ್ಸಳ ಶಾಸನಗಳಿಂದ ತಿಳಿಯುತ್ತದೆ. ವಿದ್ಯೆಗೆ, ಕಲೆಗೆ, ಐಶ್ವರ್ಯಕ್ಕೆ ಹೆಸರಾಗಿದ್ದ ಈ ಊರು ತೆಂಕಣ ಅಯ್ಯಾವೊಳೆಯಾಯಿತು. ಅಭಿನವ ದ್ವಾರಾವತಿಯಾಯಿತು. ಇಲ್ಲಿನ ಧರ್ಮಪ್ರತಿಪಾಲಕ ಶಕ್ತಿಯನ್ನು ಕೇಳಿದ ಕಳಚೂರ್ಯರ ಸಚಿವ ರೇಚರಸ ಬಲ್ಲಾಳನನ್ನಾಶ್ರಯಿಸಿ ಸಹಸ್ರಕೂಟ ಚೈತ್ಯಾಲಯಕ್ಕೆ ಸಹಸ್ರಕೂಟ ಜಿನಬಿಂಬವನ್ನು ಮಾಡಿಸಿಕೊಟ್ಟ.

ಆದರೆ ಇಷ್ಟು ಉನ್ನತಿಗೇರಿದ ಈ ಊರು ಹೊಯ್ಸಳ ರಾಜ್ಯದ ಅವನತಿಯೊಂದಿಗೆ ಇಳಿಮುಖವಾಯಿತು. ಮುಂದೆ ಕ್ರಮವಾಗಿ ಚನ್ನಪಟ್ಟಣದ ಜಗದೇವರಾಯ, ತರೀಕೆರೆಯ ತಿಮ್ಮಪ್ಪನಾಯಕ, ಇಕ್ಕೇರಿಯ ಶಿವಪ್ಪನಾಯಕ ಇವರ ಅಧೀನದಲ್ಲಿ ಒಂದು ಸಾಮಾನ್ಯ ಊರಾಗಿದ್ದು ಕಡೆಯಲ್ಲಿ ಮೈಸೂರರಸರಿಗೆ ಸೇರಿತು. ಆದರೆ ಮರಾಠಿಗರ ದಾಳಿಗೆ ಬೆದರಿ ಕಪ್ಪ ತೆತ್ತು ಸಾಕಾಗಿದ್ದ ಮೈಸೂರು ಕಪ್ಪದ ಹೊರೆ ತೀರುವವರೆಗೆ ಒತ್ತೆ ಇಟ್ಟ ಮೈಸೂರು ರಾಜ್ಯದ ಭಾಗಗಳಲ್ಲಿ ಈ ಊರು ಸೇರಿತು. ಆಗ ಇದು ಸುಲಿಗೆಗೊಳಗಾಗಿ ಹಾಳುಹಳ್ಳಿಯಾಗಿ ದಾರಿಹೋಕರನ್ನು ಸುಲಿಯುವ ದರೋಡೆಕೋರರಿಗೆ ಆಶ್ರಯಸ್ಥಾನವಾಯಿತು. 19ನೆಯ ಶತಮಾನದ ಕೊನೆಯಲ್ಲಿ ಬೆಂಗಳೂರು-ಪುಣೆ ರೈಲುಮಾರ್ಗ ಹಾಕಿದಮೇಲೆ ಈ ಊರು ಪುನಃ ಬೆಳೆಯಲಾರಂಭಿಸಿತು.

ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳು ಈಗ ಬಹುಮಟ್ಟಿಗೆ ನಾಶವಾಗಿವೆ. ಆದರೆ ಬಹುಶಃ 2ನೆಯ ಬಲ್ಲಾಳ ಕಟ್ಟಿಸಿರಬಹುದಾದ ಈಶ್ವರದೇವಾಲಯ ಉಳಿದಿದೆ. ಪುಟ್ಟಪುಟ್ಟ ಗರ್ಭಗೃಹ ಸುಕನಾಸಿ, ನವರಂಗ, ಮುಖಮಂಟಪಗಳು, ನಕ್ಷತ್ರಾಕಾರದಲ್ಲಿ ವೈವಿಧ್ಯಮಯವಾಗಿ ಸುಂದರವಾಗಿರುವ ಹೊರವಿನ್ಯಾಸ, ಅದೇ ವಿನ್ಯಾಸದಲ್ಲಿಯೇ ನೀಳವಾಗಿ ಗರ್ಭಗೃಹದ ಮೇಲೆದ್ದಿರುವ ಲಾವಣ್ಯಮಯವಾದ ಗೋಪುರ, ಹೊರಗೂ ಒಳಗೂ ಯಾವ ಭಾಗವನ್ನೂ ಬಿಡದಂತೆ ಚಾತುರ್ಯದಿಂದ ಕಡೆದು ತುಂಬಿಸಿದ್ದರೂ ಅತಿಯಾಯಿತು ಎನ್ನಿಸದ ಶಿಲ್ಪಜಾಣ್ಮೆಯಿಂದ ಕೂಡಿರುವ ಈ ದೇವಾಲಯದ ಹೊರಗೋಡೆಯ ಮೇಲೆ ಒಂದು ಸಾಲು ಮಾತ್ರ ಮೂರ್ತಿಶಿಲ್ಪವಿದೆ. ಹಲವಾರು ಮೂಲೆಗಳುಳ್ಳ ನಕ್ಷತ್ರಾಕಾರದ ಮುಖಮಂಟಪಕ್ಕೆ ದೊಡ್ಡದಾದ ಒಂದೇ ಭುವನೇಶ್ವರಿಯಿದ್ದು ಅಪರೂಪವಾದ ರೀತಿಯಲ್ಲಿದೆ. ನವರಂಗದ ಒಳಗೋಡೆಯ ಕಲಾತ್ಮಕವಾದ ಗೂಡುಗಳು, ಸುಂದರವಾಗಿ ಲಲಿತವಾಗಿ ಕಡೆದಿರುವ ಕಂಬಗಳು, ಕುಸುರಿ ಕೆಲಸದ ಪರಾಕಾಷ್ಠೆಯನ್ನು ಮುಟ್ಟಿರುವ ಗರ್ಭಗೃಹದ ಬಾಗಿಲು ಎಲ್ಲವೂ ಆಕರ್ಷಕವಾಗಿವೆ. ಈ ದೇವಾಲಯದ ಪಕ್ಕದಲ್ಲಿಯೇ ಇರುವ ಜೋಡಿ ಗರ್ಭಗೃಹಗಳುಳ್ಳ ಸಾಮಾನ್ಯ ಶಿವಾಲಯವೊಂದು, ಸಹಸ್ರಕೂಟ ಬಸದಿಯೊಂದು ಈಗ ಉಳಿದು ಬಂದಿರುವ ಆ ಕಾಲದ ಕಟ್ಟಡಗಳು. (ಎಂ.ಎಚ್.)

**ಅರಳಗುಪ್ಪೆ :** ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿ ಬಾಣಸಂದ್ರ ರೈಲ್ವೆ ನಿಲ್ದಾಣದಿಂದ ಪಶ್ಚಿಮಕ್ಕೆ ಸು.7ಕಿಮೀ ದೂರದಲ್ಲಿರುವ ಪ್ರಾಚೀನ ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾದ ಒಂದು ಹಳ್ಳಿ.

ಇಲ್ಲಿ ಚೆನ್ನಕೇಶವ, ಕಲ್ಲೇಶ್ವರ ಎಂಬ ಎರಡು ಸುಂದರ ದೇವಾಲಯಗಳಿವೆ. ಚೆನ್ನಕೇಶವ ದೇವಾಲಯ ಹೊಯ್ಸಳ ವಾಸ್ತುಶೈಲಿಯಲ್ಲಿ ಬಳಪದ ಕಲ್ಲಿನಿಂದ ಕಟ್ಟಲಾದ ಗರ್ಭಗೃಹ, ಸುಕನಾಸಿ, ನವರಂಗಗಳಿಂದ ಕೂಡಿದ ಸುಂದರ ದೇವಾಲಯ. ಚೆನ್ನಕೇಶವ ದೇವಾಲಯ ಪೂರ್ವಾಭಿಮುಖವಾಗಿದ್ದು ಪ್ರವೇಶದ್ವಾರದ ಒಳಗೆ ಆಚೀಚೆ ಸುಂದರ ಸ್ತಂಭಗಳಿಂದ ಕೂಡಿದ ಜಗಲಿಗಳಿವೆ. ಇದನ್ನು ಹೋನೋಜನೆಂಬ ಶಿಲ್ಪಿ 13ನೆಯ ಶತಮಾನದ ಮಧ್ಯಭಾಗದಲ್ಲಿ ಕಟ್ಟಿರಬೇಕು. ಹೊರಪ್ರಾಕಾರದಲ್ಲಿ



ಚೆನ್ನಕೇಶವ ದೇವಾಲಯ

ಆನೆ, ಕುದುರೆ, ಹಂಸ, ವ್ಯಾಳಿ, ಲತೆ, ಮೂರ್ತಿಗಳ ಮೆರವಣಿಗೆಯ ಶಿಲ್ಪಪಂಕ್ತಿಗಳಿವೆ. ನವರಂಗದ ಕಂಬಗಳು ಬೇಲೂರು ಹಳೇಬೀಡುಗಳಲ್ಲಿಯ ಕಂಬಗಳಿಗಿಂತ ವಿಶಿಷ್ಟಶಿಲ್ಪಕಲಾ ವಿನ್ಯಾಸದಿಂದ ಕೂಡಿವೆ. ಒಟ್ಟಿಗೆ ಹತ್ತು ಭುವನೇಶ್ವರಿಗಳಿವೆ. ಒಂದೊಂದರಲ್ಲೂ ಸ್ವಸ್ತಿಕ, ಬಾಳೆಯ ಮೋತೆಯಂಥ ರಚನೆಗಳು ಚೇತೋಹಾರಿಯಾಗಿವೆ. ಗರ್ಭಗೃಹದ ಪ್ರವೇಶದ್ವಾರದ ಬಲಕ್ಕೆ ಇರುವ ಗಣಪತಿವಿಗ್ರಹ ಮತ್ತು ಎಡಭಾಗದಲ್ಲಿರುವ ಮಹಿಷಾಸುರಮರ್ದಿನಿ ತುಂಬ ಮೋಹಕಭಂಗಿಯಲ್ಲಿ ನಿಂತಿದೆ. ದೇವಾಲಯದ ದಕ್ಷಿಣದ ಗೋಡೆಗೆ ತಾಗಿದಂತೆ ಸ್ವಲ್ಪ ಇತ್ತೀಚಿನ ಉಗ್ರನರಸಿಂಹನ ವಿಗ್ರಹವಿದೆ.

ಕಲ್ಲೇಶ್ವರ ದೇವಾಲಯದ ನವರಂಗದ ಚಾವಣಿಯಲ್ಲಿರುವ ನಟರಾಜ

ಊರಿನ ಈಶಾನ್ಯಭಾಗದಲ್ಲಿ ಸು.10ನೆಯ ಶತಮಾನದ ಕಲ್ಲೇಶ್ವರ ದೇವಾಲಯವಿದೆ. ಸುತ್ತಮುತ್ತಲೂ ಪಂಚಲಿಂಗ ಗುಡಿಗಳಿವೆ. ನವರಂಗದ ಮೇಲ್ಚಾವಣಿಯಲ್ಲಿರುವ ಭುವನೇಶ್ವರಿ ಒಂದು ಅದ್ಭುತರಮ್ಯ ಶಿಲ್ಪಕಲಾಸೃಷ್ಟಿ.

ಕೇವಲ 6' ಚಚ್ಚೌಕದ ಕಪ್ಪುಕಲ್ಲಿನಲ್ಲಿ ಅಷ್ಟದಿಕ್ಪಾಲಕರು ತಮ್ಮ ತಮ್ಮ ವಾಹನಾರೂಢರಾಗಿದ್ದು ಮಧ್ಯದಲ್ಲಿ ತಾಂಡವೇಶ್ವರ ಮೆರೆಯುತ್ತಿದ್ದಾನೆ. ಅಷ್ಟದಿಕ್ಪಾಲಕರ ಮೂರ್ತಿಯಲ್ಲಿ ಮೂಡಿದ ಬಗೆಬಗೆಯ ಭಾವಗಳನ್ನೂ ತಾಂಡವೇಶ್ವರನ ಪ್ರಳಯ ಕಾಲದ ರುದ್ರನೃತ್ಯಭಂಗಿಯನ್ನೂ ಆ ಶಿಲಾಫಲಕದಲ್ಲಿ ಶಿಲ್ಪಿ ಸೆರೆಹಿಡಿದಿಟ್ಟಿದ್ದಾನೆ. ಎಂಟು ದಿಕ್ಕುಗಳಲ್ಲಿ ಅಷ್ಟದಿಕ್ಪಾಲಕರು ತಮ್ಮ ಅಂಗನೆಯರನ್ನು ಅಪ್ಪಿ, ವಾಹನಗಳನ್ನೇರಿದ್ದಾರೆ. ತಾಂಡವೇಶ್ವರ ತಾಂಡವ ನೃತ್ಯದಲ್ಲಿ ಮಗ್ನನಾಗಿದ್ದಾನೆ. ಶಿವನ ನಡುವೆ ಸುತ್ತಲೂ ನಾಲ್ಕು ಮೂಲೆಗಳಲ್ಲಿ ಹಗ್ಗದಲ್ಲಿ ಜೋಲಾಡುತ್ತಿರುವ ಭಂಗಿಯಲ್ಲಿರುವ ನಾಲ್ಕು ಗಣಗಳ ಮೂರ್ತಿಗಳಿವೆ. ಇದೊಂದು ಭುವನಮೋಹಕ ಶಿಲ್ಪಸೃಷ್ಟಿ. ಕಲ್ಲೇಶ್ವರನಿಗೆ ಅಭಿಮುಖವಾಗಿ ಸುಮಾರು 10' ಉದ್ದ 6' ಎತ್ತರದ ಕರಿಯ ಕಲ್ಲಿನ ಬಸವವಿಗ್ರಹ ಮುದ್ದಾಗಿದೆ. ಅರಳಗುಪ್ಪೆಯಲ್ಲಿ ಪಾಳೆಯಗಾರರ ಚಾವಡಿ ಎಂಬ ಒಂದು ಮಂಟಪವಿದೆ. (ಜಿ.ಸಿ.ಎ.)

**ಅರಿಕೇಸರಿII :** 10ನೆಯ ಶತಮಾನದ ಪೂರ್ವಭಾಗದಲ್ಲಿ ಆಳುತ್ತಿದ್ದ ವೇಮುಲವಾಡದ ಚಾಳುಕ್ಯ ಶಾಖೆಯ ಪರಾಕ್ರಮಿ ಅರಸು. ಮಹಾಕವಿ ಪಂಪನ ಆಶ್ರಯದಾತ.

ವೇಮುಲವಾಡ ಶಾಖೆಯ ಅರಸರು 7-8ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಇಂದಿನ ಆಂಧ್ರಪ್ರದೇಶದ ನಿಜಾಮಾಬಾದ್, ಕರೀಂನಗರ, ನಲ್ಗೊಂಡ ಮತ್ತು ಕರ್ನಾಟಕದ ರಾಯಚೂರು ಜಿಲ್ಲೆಗಳ ಭಾಗಗಳನ್ನು ಒಳಗೊಂಡ ಪ್ರದೇಶದಲ್ಲಿ ರಾಷ್ಟ್ರಕೂಟರ ಅಧೀನತೆಯಲ್ಲಿ ರಾಜ್ಯವಾಳುತ್ತಿದ್ದರು. ಕರೀಂನಗರ ಜಿಲ್ಲೆಯ ವೇಮುಲವಾಡ (ಲೇಮುಲವಾಡ, ಲೆಂಬುಳವಾಟಕ, ವೆಂಬುಳವಾಟಕಪತ್ತನ, ವೆಂಬುಳವಾಟ) ಅವರ ರಾಜಧಾನಿಯಾಗಿತ್ತು. ಅವರ ವಂಶಾನುಕ್ರಮಣಿಕೆ ಹೀಗಿದೆ: ಯುದ್ಧಮಲ್ಲ ವಿನಯಾದಿತ್ಯ-I, ಅರಿಕೇಸರಿ-II, ನರಸಿಂಹ-I ಮತ್ತು ಭದ್ರದೇವ-I (ನರಸಿಂಹನ ಜ್ಯೇಷ್ಠಪುತ್ರ) ಯುದ್ಧಮಲ್ಲ-II, ಭದ್ರದೇವ-II (ಬದ್ದೆಗ), ಯುದ್ಧಮಲ್ಲ-III, ನರಸಿಂಹ-II, ಅರಿಕೇಸರಿ-I, ಭದ್ರದೇವ-III, ಅರಿಕೇಸರಿ-III.

ಈ ಪರಂಪರೆಯಲ್ಲಿನ ಇಮ್ಮಡಿ ಅರಿಕೇಸರಿಯ ವಿಚಾರಗಳು ವೇಮುಲವಾಡ ಮತ್ತು ಪರಭಣಿ ಶಾಸನಗಳಲ್ಲಿ ಮತ್ತು ಪಂಪನ ವಿಕ್ರಮಾರ್ಜುನವಿಜಯದಲ್ಲಿ ದೊರಕುತ್ತವೆ. ಅರಿಕೇಸರಿ ಇಮ್ಮಡಿ ನರಸಿಂಹನಿಗೆ ಜಾಕವ್ವೆಯಲ್ಲಿ ಮಗನಾಗಿ ಜನಿಸಿದ. ಜಾಕವ್ವೆ ರಾಷ್ಟ್ರಕೂಟ ಚಕ್ರವರ್ತಿ 3ನೆಯ ಇಂದ್ರನ ಸೋದರಿಯಿರಬಹುದೆಂದು ಕೆಲವರ ಊಹೆ. 'ಇಂದ್ರೇಂದ್ರನ ತೋಳೆತೊಟ್ಟಿಲಾಗಿರೆ ಬಳೆದಂ' ಎಂಬುದಾಗಿ ಅರಿಕೇಸರಿಯ ಬಾಲ್ಯವನ್ನು ವರ್ಣಿಸಿರುವುದರಿಂದ, ಅರಿಕೇಸರಿ ಮುಮ್ಮಡಿ ಇಂದ್ರನ ಪ್ರೀತ್ಯಾದರಗಳಿಗೆ ಪಾತ್ರನಾಗಿದ್ದನೆಂದು ತಿಳಿದುಬರುತ್ತದೆ. ಆತ ಇಂದ್ರನ ಪುತ್ರಿ ರೇವಕನಿಮ್ಮಡಿಯನ್ನು ವರಿಸಿದ್ದನೆಂಬುದಾಗಿ ವೇಮುಲವಾಡದ ಶಾಸನದಲ್ಲಿ ಹೇಳಿದೆ. ಆದರೆ ರಾಷ್ಟ್ರಕೂಟ ಕುಲದ ಲೋಕಾಂಬಿಕೆ ಎಂಬುವಳು ಪತ್ನಿ ಎಂಬುದಾಗಿ ಪರಭಮಿ ತಾಮ್ರಪಟಗಳಲ್ಲಿದೆ. ಲೋಕಾಂಬಿಕೆ ಎಂಬುದು ರೇವಕನಿಮ್ಮಡಿಯ ಬಿರುದೇ, ಪ್ರತಿನಾಮವೇ ಅಥವಾ ಇನ್ನೊಬ್ಬ ಹೆಂಡತಿಯ ಹೆಸರೇ ಎಂಬುದು ಸ್ಪಷ್ಟವಿಲ್ಲ. ಅರಿಕೇಸರಿಗೆ ಸಾಮಂತಚೂಡಾಮಣಿ, ಉದಾತ್ತನಾರಾಯಣ, ಆರೂಢಸರ್ವಜ್ಞ, ಕದನತ್ರಿಣೇತ್ರ, ಸಹಜಮನೋಜ, ಶರಣಾಗತಜಳನಿಧಿ, ಗುಣಾರ್ಣವ, ಪ್ರಿಯಗಳ್ಪ ಮೊದಲಾದ ಹಲವು ಬಿರುದುಗಳಿದ್ದುವೆಂಬುದಾಗಿ ವೇಮುಲವಾಡದ ಶಾಸನದಿಂದಲೂ ಪಂಪನ ವಿಕ್ರಮಾರ್ಜುನ ವಿಜಯದಿಂದಲೂ ತಿಳಿದುಬರುತ್ತದೆ.

ರಾಷ್ಟ್ರಕೂಟ ಚಕ್ರವರ್ತಿ 4ನೆಯ ಗೋವಿಂದ (ಗೊಜ್ಜಿಗ 930-35) ಚಾಳುಕ್ಯ ವಂಶದ ವಿಜಯಾದಿತ್ಯನ (ಬಿಜ್ಜ) ಮೇಲೆ ಮುಳಿಯಲು ಈ ಚಾಳುಕ್ಯರಾಜ ಅರಿಕೇಸರಿಗೆ ಶರಣುಹೋದನೆಂದೂ ಅರಿಕೇಸರಿ ಆತನಿಗೆ ರಕ್ಷಣೆ ನೀಡಿದನೆಂದೂ ವೇಮುಲವಾಡದ ಶಾಸನದಿಂದಲೂ ವಿಕ್ರಮಾರ್ಜುನವಿಜಯದಿಂದಲೂ ತಿಳಿದುಬರುತ್ತದೆ. ವೆಂಗಿಯ ಚಾಳುಕ್ಯರಲ್ಲಿ ಅರಸೊತ್ತಿಗೆಯ ಕಲಹಗಳು ತಲೆದೋರತೊಡಗಿದ್ದಾಗ ಅರಿಕೇಸರಿ ಬಿಜ್ಜನಿಗೆ (ವಿಜಯಾದಿತ್ಯ) ಸಹಾಯ ಮಾಡಿ ಅವನ ವಿರುದ್ಧ ಪಕ್ಷವನ್ನು ವಹಿಸಿದ್ದ ರಾಷ್ಟ್ರಕೂಟ 4ನೆಯ ಗೋವಿಂದನ ಸೈನ್ಯವನ್ನು ಸೋಲಿಸಿ ಓಡಿಸಿ, ಶರಣಾಗತಜಳನಿಧಿ, ಸಾಮಂತಚೂಡಾಮಣಿ ಎಂಬ ಬಿರುದನ್ನು ಗಳಿಸಿದಂತೆ ತೋರುತ್ತದೆ.

ಮಿತಿಮೀರಿ ನಡೆಯುತ್ತಿದ್ದ ಚಕ್ರವರ್ತಿ ಗೋವಿಂದನನ್ನು ಕೆಡಿಸಿ ತನ್ನನ್ನು ನಂಬಿಬಂದ ಬದ್ದೆಗದೇವನಿಗೆ ಸಾಮ್ರಾಜ್ಯಪದವನ್ನು ಅರಿಕೇಸರಿ ಕೈಗೂಡಿಸಿದನೆಂದು ಪಂಪಭಾರತದಲ್ಲಿ ಹೇಳಿದೆ. ಇದರ ಬಗೆಗೆ ಚರಿತ್ರಕಾರರ ವಿವರಣೆಯಿದು: ರಾಷ್ಟ್ರಕೂಟ ಚಕ್ರವರ್ತಿ 4ನೆಯ ಗೋವಿಂದ ತನ್ನ ಅಣ್ಣ ಇಮ್ಮಡಿ ಅಮೋಘವರ್ಷನನ್ನು ಪದಚ್ಯುತಗೊಳಿಸಿ, ಸಿಂಹಾಸನವನ್ನು ಹಿಡಿದಿದ್ದನಲ್ಲದೆ ಪ್ರಜಾನುರಾಗಗಳಿಸದೆ ಆತ ವ್ಯಸನಾಸಕ್ತನಾಗಿದ್ದ. ಅರಿಕೇಸರಿ ಪ್ರಜಾಭಿಪ್ರಾಯವನ್ನು ಲಕ್ಷಿಸಿ ಪ್ರಜೆಗಳ ಗೌರವಾದರಗಳನ್ನು ಗಳಿಸಿದ ಬದ್ದೆಗನ ಪಕ್ಷವಹಿಸಿದ. ಬಿಜ್ಜನ ವ್ಯವಹಾರದಲ್ಲಿ ಗೋವಿಂದನ ಸೈನ್ಯ ಅರಿಕೇಸರಿಯಿಂದ ಸೋಲನ್ನು ಅನುಭವಿಸಿತು. ಆಗ ತ್ರಿಪುರಿಗೆ ಓಡಿಹೋಗಿದ್ದ ಬದ್ದೆಗ ಮುಮ್ಮಡಿ ಅಮೋಘವರ್ಷನನ್ನು ಕರೆಸಿ ವೇಮುಲವಾಡದಲ್ಲಿಯೆ ಆತನನ್ನು ರಾಷ್ಟ್ರಕೂಟ ಚಕ್ರವರ್ತಿಯೆಂದು ಘೋಷಿಸಿ ಗೋವಿಂದನನ್ನು ಪದಚ್ಯುತಿಗೊಳಿಸಿ ಆತನ ಸ್ಥಾನದಲ್ಲಿ ನಿಲ್ಲಿಸಿದ. ಇದು ಪ್ರಾಯಶಃ ನಡೆದದ್ದು 934-35ರಲ್ಲಿ.

ಅರಿಕೇಸರಿ, ಮದ್ದಾನೆಯ ಸೈನ್ಯದೊಡನೆ ಆಟೋಪದಿಂದ ಬಂದು ತನ್ನನ್ನಿದಿರಿಸಿದ ಕಕ್ಕನಲ ತಮ್ಮ ಶೂರನಾದ ಬಪ್ಪುವನೆಂಬುವನನ್ನು, ತಾನು ಒಂದೇ ಆನೆಯ ಮೇಲಿದ್ದುಕೊಂಡು ಓಡಿಸಿದನೆಂಬುದಾಗಿ ಪಂಪಭಾರತದಲ್ಲಿ ಹೇಳಿದೆ. ಈ ಪ್ರಕರಣವನ್ನು ಹೆಚ್ಚು ಸಮರ್ಪಕವಾಗಿ ವಿವರಿಸುವುದು ಅಶಕ್ಯವೆಂದು ಚರಿತ್ರಕಾರರ ಅಭಿಪ್ರಾಯ. ಕಕ್ಕಲನೆಂಬುವನು ಅಚಳಪುರದ ಅರಸ, ಆತ ಬದ್ದೆಗನ ಮರಣಾನಂತರ ಗಂಗ ಬೂತುಗನಿಂದ ಹತನಾದ ಮುಂತಾಗಿ ಕೊಡಲೂರಿನ ಒಂದು ಶಾಸನದಲ್ಲಿದೆ. ಬದ್ದೆಗ ಆಳುತ್ತಿದ್ದಾಗಲೆ ದಂತಿಗ ಮತ್ತು ಬಪ್ಪುಗ ಎಂಬ ದುಷ್ಟರಿಬ್ಬರು ಆತನಿಗೆ ಎದುರುಬಿದ್ದು 3ನೆಯ ಕೃಷ್ಣನಿಂದ ನಾಶವಾದರೆಂದು ದೇವ್ರೋಳಿಯ ಒಂದು ಶಾಸನದಲ್ಲಿ (940) ಹೇಳಿದೆ. ಈ ಬಪ್ಪುಗನೇ ಕಕ್ಕಲನ ತಮ್ಮನಾದ ಬಪ್ಪುವನಿರಬೇಕೆಂದು ಕೆಲವರು ಹೇಳುತ್ತಾರೆ. ಅಂತೂ ಈತ 940ರ ಮೊದಲಲ್ಲಿ ಎಂದೋ ಒಮ್ಮೆ ಅರಿಕೇಸರಿಗೆ ಎದುರಬಿದ್ದು ಆತನಿಂದ ಪರಾಜಿತನಾಗಿ ಓಡಿಹೋಗಿರಬೇಕು ಎಂದು ತಿಳಿಯುತ್ತದೆ.

ರಾಜಧಾನಿಯಾದ ವೇಮುಲವಾಡದಲ್ಲಿ ಸೂರ್ಯದೇವಾಲಯ ವೊಂದನ್ನು ಕಟ್ಟಿಸಿದ. ಪೂಜೆಗಾಗಿ ಬರುವವರ ಅಶನಾರ್ಥ'ವಾಗಿ ಛತ್ರವೊಂದನ್ನು ಕಟ್ಟಿಸಲು ಪೆದ್ದಣಾರ್ಯನೆಂಬುವನ ಕೋರಿಕೆಯಂತೆ 100 ನಿವರ್ತನಗಳ ಭೂಮಿಯನ್ನು ದತ್ತಿಯಾಗಿ ಕೊಟ್ಟ, ಕೊಳವೊಂದನ್ನು ಕಟ್ಟಿಸಲು ನಿವರ್ತನಗಳ ಭೂಮಿಯನ್ನು ದತ್ತಿಬಿಟ್ಟ ಎಂದು ವೇಮುಲವಾಡದ ಶಾಸನದಲ್ಲಿ ಹೇಳಿದೆ. ಅರಿಕೇಸರಿಯ ಆಸ್ಥಾನ ಕವಿಯೂ ಆತ್ಮೀಯ ಸ್ನೇಹಿತನೂ ಆಗಿದ್ದ ಪಂಪ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ ಎಂಬ ಎರಡು ಮಹಾಕಾವ್ಯಗಳನ್ನು ರಚಿಸಿದ್ದಾನೆ (ನೋಡಿ: ಪಂಪ). (ಟಿ.ವಿ.ವಿ.)

**ಅರಿವಿನ ಮಾರಿತಂದೆ :** 12ನೆಯ ಶತಮಾನದಲ್ಲಿದ್ದ ಹಿರಿಯ ಶರಣ ಹಾಗೂ ವಚನಕಾರ. ಬಸವೇಶ್ವರರಿಗಿಂತಲೂ ಈಚಿನವನಿರಬೇಕೆಂದು ಹಲವು ವಿದ್ವಾಂಸರ ಅಭಿಪ್ರಾಯ. ಕಿಕ್ಕೇರಿಯಾರಾಧ್ಯ ನಂಜುಂಡನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿಯಾಗಲಿ, ಉತ್ತರದೇಶದ ಬಸವಲಿಂಗದೇವ ಮತ್ತು ಶಾಂತಲಿಂಗದೇಶಿಕರು ಶಿವಶರಣ ಶರಣೆಯರ ಚರಿತೆಯನ್ನು ಹೇಳುವ ಗ್ರಂಥಗಳಲ್ಲಿಯಾಗಲಿ ಈತನ ಹೆಸರನ್ನು ಕಾಣಲಾಗುವುದಿಲ್ಲ. ಗುಬ್ಬಿಯ ಮಲ್ಲಣ್ಣನ (ಸು. 1415) ಗಣಭಾಷಿತ ರತ್ನಮಾಲೆಯಲ್ಲಿ ಈತನ ಮೂರು ವಚನಗಳನ್ನು ಉದ್ಧರಿಸಲಾಗಿದೆ. ಪುರಾತನ ವಚನಕಾರರ ಜೊತೆಯಲ್ಲಿ ಈತನ ಹೆಸರು ಸೇರಿರುವುದರಿಂದ ಈತ ಮಹತ್ತ್ವದ ವಚನಕಾರರಲ್ಲಿ ಒಬ್ಬನೆಂದು ಭಾವಿಸಲಾಗಿದೆ.

ಇದುವರೆಗೆ ಮಾರಿತಂದೆಯ ಮುನ್ನೂರ ಎರಡು ವಚನಗಳು ದೊರೆತಿವೆ. ಇವುಗಳಲ್ಲಿ ಬೆಡಗಿನ ವಚನಗಳೂ ಸೇರಿವೆ. ಸದಾಶಿವಮೂರ್ತಿ, ಸದಾಶಿವಮೂರ್ತಿಲಿಂಗ, ಸದಾಶಿವಲಿಂಗಮೂರ್ತಿ, ಸದಾಶಿವಮೂರ್ತಿ ನಿಃಕಲಲಿಂಗ ಮುಂತಾದವು ಈತನ ವಚನಗಳ ಅಂಕಿತ. ಮಾರಿತಂದೆ ತನ್ನ ತತ್ತ್ವನಿರೂಪಣೆಗೆ ಲೌಕಿಕ ದೃಷ್ಟಾಂತಗಳನ್ನು ಬಳಸಿಕೊಂಡಿದ್ದಾನೆ. (ಬಿ.ಎಸ್.ಎಸ್.)

**ಅರುಂಧತಿ ನಾಗ್ :** ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆ. ಪ್ರಸಿದ್ಧ ನಟ ಹಾಗೂ ನಿರ್ದೇಶಕ ಶಂಕರ್‌ನಾಗ್ (ನೋಡಿ) ಅವರ ಪತ್ನಿ. ಇವರ ಆರಂಭದ ಜೀವನ ಮುಂಬಯಿಯಲ್ಲಿ ಕಳೆಯಿತು.

ಅಲ್ಲಿರುವಾಗ ಮುಂಬಯಿನ ಹವ್ಯಾಸಿ ರಂಗಭೂಮಿಯ ಸಕ್ರಿಯ ವ್ಯಕ್ತಿಯಾಗಿದ್ದರು. ಮರಾಠಿ, ಗುಜರಾತಿ, ಹಿಂದಿ, ಇಂಗ್ಲಿಷ್ ಮೊದಲಾದ ಭಾಷೆಗಳಲ್ಲೂ ಅಭಿನಯಿಸುತ್ತಿದ್ದರು. ಇವರು ಕೆಲವೊಮ್ಮೆ ತಿಂಗಳಲ್ಲಿ 42 ಪ್ರದರ್ಶನಗಳನ್ನು ಕೊಟ್ಟದ್ದೂ ಇದೆ. ಈ ದಿನಗಳಲ್ಲೇ ಸಹ ರಂಗನಟ ಶಂಕರನಾಗ್ ಅವರ ಪರಿಚಯವಾಯಿತು. ಪರಿಚಯ ಪ್ರೇಮವಾಗಿ ವಿವಾಹವಾದರು. ಅನಂತರ ಇಬ್ಬರೂ ಬೆಂಗಳೂರಿನಲ್ಲಿ ನೆಲೆಸಿ ರಂಗಭೂಮಿ ಹಾಗೂ ಚಲನಚಿತ್ರ - ಈ ಎರಡೂ ಕ್ಷೇತ್ರಗಳಲ್ಲಿ ಇಬ್ಬರೂ ಕೆಲಸ ಮಾಡತೊಡಗಿದರು. ಈ ಎಲ್ಲ ಸಂದರ್ಭಗಳಲ್ಲಿ ಪತಿ ಶಂಕರನಾಗ್‌ಗೆ ನೆರವಾದರು. ಕೆಲವು ಸಂದರ್ಭಗಳಲ್ಲಿ ಶಂಕರನಾಗ್ ಅವರಿಗೆ ಸಹಾಯಕ ನಿರ್ದೇಶಕರಾಗಿಯೂ ಕೆಲಸ ಮಾಡಿದರು. ಶಂಕರನಾಗ್ ಹಿಂದಿಯ ಕಿರುತೆರೆಗಾಗಿ ಸಿದ್ಧಪಡಿಸಿದ ಆರ್.ಕೆ.ನಾರಾಯಣ್ ಅವರ 'ಮಾಲ್ಗುಡಿ ಡೇಸ್' ಇವರಿಬ್ಬರಿಗೂ ಅಪಾರ ಖ್ಯಾತಿಯನ್ನು ತಂದುಕೊಟ್ಟಿತು. ಅರುಂಧತಿಯವರು ಅನೇಕ ನಾಟಕ ಹಾಗೂ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ನೋಡಿ ಸ್ವಾಮಿ ನಾವಿರೋದು ಹೀಗೆ' ಎಂಬ ನಾಟಕ ಇವರ ಅಭಿನಯದ ಅತ್ಯಂತ ಜನಪ್ರಿಯ ನಾಟಕ. ಇದು ಚಲನಚಿತ್ರವಾಗಿಯೂ ಅಪಾರ ಯಶಸ್ವಿಯಾಯಿತು. ಆಕ್ಸಿಡೆಂಟ್, ಗೋಲಿಬಾರ್, ಪರಮೇಶಿಯ ಪ್ರೇಮ ಪ್ರಸಂಗ ಇವರ ಅಭಿನಯದ ಇತರ ಚಿತ್ರಗಳು. ಮಣಿರತ್ನಂ ಅವರ 'ದಿಲ್‌ಸೆ' ಎಂಬ ಹಿಂದಿ ಚಿತ್ರದಲ್ಲಿ ಒಂದು ಚಿಕ್ಕ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಶಂಕರ್‌ನಾಗ್ ನಿರ್ದೇಶನದ 'ಒಂದು ಮುತ್ತಿನ ಕಥೆ' ಚಿತ್ರಕ್ಕೆ ವಸ್ತ್ರ ವಿನ್ಯಾಸಕಿಯಾಗಿ ದುಡಿದಿದ್ದಾರೆ. ಕಾರು ಅಪಘಾತವೊಂದರಲ್ಲಿ ಶಂಕರನಾಗ್ ನಿಧನರಾದಾಗ ಅದೇ ಕಾರಿನಲ್ಲಿದ್ದ ಅರುಂಧತಿ ಪ್ರಾಣಾಪಾಯದಿಂದ ಪಾರಾದರು. ಪತಿಯನ್ನು ಕಳೆದುಕೊಂಡು ಕೆಲಕಾಲ ಎಲ್ಲ ಚಟುವಟಿಕೆಗಳಿಂದ ದೂರವಿದ್ದ ಇವರು ಅನಂತರ ಶಂಕರನಾಗ್ ಅವರ ಕನಸಿನ ಕಲ್ಪನೆಯ ರಂಗಶಂಕರ ಎಂಬ ಸಮಗ್ರ ನಾಟಕ ಚಟುವಟಿಕೆಯ ಕೇಂದ್ರವೊಂದರ ನಿರ್ಮಾಣದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಸುಮಾರು ಮೂರು ಕೋಟಿ ರೂಪಾಯಿ ವೆಚ್ಚದ ಈ ರಂಗಭೂಮಿ ಸಂಕೀರ್ಣ ಯೋಜನೆ ಈಗ ಪೂರ್ಣಗೊಂಡಿದ್ದು ಕಾರ್ಯ ಚಟುವಟಿಕೆಯನ್ನು ಆರಂಭಿಸಿದೆ (2004). ಸಂಕೇತ್ ಟ್ರಸ್ಟ್ 'ರಂಗಶಂಕರ'ದ ಚಟುವಟಿಕೆಗಳನ್ನು ನೋಡಿಕೊಳ್ಳುತ್ತದೆ. ಗಿರೀಶ್ ಕಾರ್ನಾಡ್ ರಂಗಶಂಕರದ ಅಧ್ಯಕ್ಷರು. ಅರುಂಧತಿ ಅದರ ಕಾರ್ಯನಿರ್ವಾಹಕ ಸದಸ್ಯರು. *

**ಅರುಣಾಚಲಪ್ಪ :** 1899-1966. ಪ್ರಸಿದ್ಧ ಹಾರ್ಮೋನಿಯಂ ವಿದ್ವಾಂಸರು. ಬೆಂಗಳೂರಿನಲ್ಲಿ ಜನನ. ತಂದೆ ವೀರಭದ್ರಪ್ಪ, ತಾಯಿ ಗೌರಮ್ಮ. ಬೆಂಗಳೂರು ಅರಳೇಪೇಟೆಯಲ್ಲಿನ ಭಜನೆ ಮಂದಿರಗಳ ಸಂಪರ್ಕದಿಂದ ಬಾಲ್ಯದಲ್ಲೇ ಸಂಗೀತಕ್ಕೆ ಮನಸೋತ ಇವರು ನಾರಾಯಣಸ್ವಾಮಿ ಮತ್ತು ಪಿಟೀಲು ಪುಟ್ಟಪ್ಪನವರಲ್ಲಿ ಸಂಗೀತಾಭ್ಯಾಸ ಮಾಡಿದರು. ಹರಿಕಥೆ, ನಾಟಕ ಮತ್ತು ಭಜನೆ ಮಂಡಳಿಗಳಿಗೆ ಮಾತ್ರ ಮೀಸಲಾಗಿದ್ದ ಹಾರ್ಮೋನಿಯಂ ವಾದ್ಯವನ್ನು ಕರ್ನಾಟಕ ಸಂಗೀತಕ್ಕೆ ಪಕ್ಕವಾದ್ಯವಾಗಿಯೂ ತನಿಯಾಗಿಯೂ ನುಡಿಸುವ ಸಾಮರ್ಥ್ಯವನ್ನು ಸಂಪಾದಿಸಿಕೊಂಡು ವೇದಿಕೆಗಳ ಮೇಲೆ ಯಶಸ್ಸು ಗಳಿಸಿ ಹಾರ್ಮೋನಿಯಂ ಅರುಣಾಚಲಪ್ಪ ಎಂದು ಪ್ರಸಿದ್ಧರಾದರು. ಗಮಕವನ್ನು ನುಡಿಸಲು ಸಾಧ್ಯವಲ್ಲದ ಈ ವಾದ್ಯದಲ್ಲಿ ಅನುಸ್ವರಗಳ ಜೋಡಣೆ ಮತ್ತು ನಾದ ತುಂಬುವ ಚತುರತೆಯಿಂದ ಗಮಕದ ಛಾಯೆಗಳನ್ನೂ ತರುತ್ತಿದ್ದರು. ಇವರು ಪಿಟೀಲು ವಾದ್ಯವನ್ನು ಸಹ ನುಡಿಸುತ್ತಿದ್ದರು. ಇವರು ನುಡಿಸಿದ ಕೆಲವು ಹಾಡುಗಳು ಗ್ರಾಮಫೋನ್ ರಿಕಾರ್ಡ್ ಆಗಿವೆ. ವಿದ್ವಾನ್ ಬಿ.ಎಸ್.ರಾಜಯ್ಯಂಗಾರ್ಯರ ಜೊತೆಯಲ್ಲಿ ಭಾರತದ ಪ್ರವಾಸ ಮಾಡಿದರು. ಪಿಟೀಲು ವಿದ್ವಾನ್ ಟಿ.ಚೌಡಯ್ಯನವರೊಡನೆ ಅನೇಕ ಕಛೇರಿಗಳಲ್ಲಿ ಹಾರ್ಮೋನಿಯಂ ನುಡಿಸಿದ್ದಾರೆ. ಬೆಂಗಳೂರು ಬಳೇಪೇಟೆಯಲ್ಲಿ ಇವರು ಸ್ಥಾಪಿಸಿದ ಅರುಣಾ ಮ್ಯೂಸಿಕಲ್ಸ್ ಎಂಬ ಸಂಗೀತ ವಾದ್ಯಗಳ ಅಂಗಡಿ ಇಂದೂ ನಡೆದುಕೊಂಡು ಬರುತ್ತಿದೆ. ಅರುಣಾಚಲಪ್ಪನವರು ಹೃದಯಾ ಘಾತದಿಂದ 1966 ಫೆಬ್ರವರಿ 4ರಂದು ನಿಧನರಾದರು. (ಟಿ.ಎಸ್.ಟಿ.)

**ಅರುಳಾಳು :** ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕಿನ ಒಂದು ಗ್ರಾಮ. ಕನಕಪುರಕ್ಕೆ 3ಕಿಮೀ ದೂರದಲ್ಲಿ ಅರ್ಕಾವತಿ ನದಿಯ ದಡದಲ್ಲಿದೆ. ಇದು ಐತಿಹಾಸಿಕ ಮಹತ್ವವುಳ್ಳ ಪುರಾತನ ಸ್ಥಳ. ಇಲ್ಲಿರುವ ಬಹಳಷ್ಟು ವೀರಗಲ್ಲುಗಳಿಂದ ಇದು ವಿಜಯನಗರ ಅರಸರ ಪ್ರಾರಂಭದ ಕಾಲದಲ್ಲಿ ರಾಜಕೀಯವಾಗಿ ಬಹಳಷ್ಟು ಮಹತ್ತ್ವವಾದ ಸ್ಥಾನವನ್ನು ಪಡೆದ ಊರಾಗಿತ್ತೆಂದು ತಿಳಿದುಬರುತ್ತದೆ. ಶಾಸನಗಳಲ್ಲಿ ಈ ಊರನ್ನು ಅರುಳಹಳ್ಳಿ, ಅರುಳಹಾಳು ಎಂದು ಕರೆದಿದೆ. ಇದು ಸಿಗಲನಾಡ ಪ್ರಭುಗಳ ಮುಖ್ಯ ಠಾಣ್ಯವಾಗಿತ್ತು. ಹೊಯ್ಸಳದೊರೆ ಮೂರನೆಯ ಬಲ್ಲಾಳನ ಆಳ್ವಿಕೆಗೆ ಸೇರಿದ 1295ರ ನಾಯಕನಹಳ್ಳಿಯ ಶಾಸನದಲ್ಲಿ ಅರುಳಹಳ್ಳಿಯ ಮಾರದೇವನನ್ನು (ಮೂರಪ್ಪನನ್ನು) ಸಿಗಲನಾಡಿನ ಮಹಾಪ್ರಭು ಎಂದು ಕರೆದಿದೆ. ಇನ್ನೊಂದು ಶಾಸನದಲ್ಲಿ ಅರುಳಹಾಳು ರಾಜ್ಯ ಎಂಬ ಉಲ್ಲೇಖವಿದೆ.

ಇಲ್ಲಿನ ನಾರಾಯಣಸ್ವಾಮಿಯ ದೇವಾಲಯ ದೊಡ್ಡದಾಗಿದ್ದು, ಇದರ ವಿಜಯನಗರ ಶೈಲಿಯ ಹೊರಮಂಟಪವು ಕೆತ್ತನೆಯ ಕೆಲಸವಿರುವ ಸುಂದರವಾದ ಕಂಬಗಳಿಂದ ಕೂಡಿದೆ. ನಾರಾಯಣಸ್ವಾಮಿಯ ಕೊಡುಗೆ ಜಮೀನು ಎನ್ನುವ ಮೈದಾನದಲ್ಲಿರುವ 1393ರ ಶಾಸನದಲ್ಲಿ ಶಂಗ ಅಪ್ಪನ ಅಧಿಕಾರದಲ್ಲಿ ಸಿಗಲನಾಡ ಮಹಾಪ್ರಭು ಅರುಳಹಾಳ ಮಾರಗುಡನ ಮಗ ಚಿಕ್ಕ ಅಯಿವಣ್ಣನು ಶ್ರೀನಾರಾಯಣ ದೇವರ ಅಮೃತಪಡಿಗೆ ಗದ್ದೆಯನ್ನು ಕೊಟ್ಟನೆಂದು ಹೇಳಿದೆ. ಇಲ್ಲಿ ಫಾಲ್ಗುಣಮಾಸದಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿರುವ ವೆಂಕಟಸ್ವಾಮಿ ದೇವಸ್ಥಾನ ದೊಡ್ಡದಾಗಿದ್ದು ಬಹಳ ಪುರಾತನವಾಗಿದೆ. ಇಲ್ಲೂ ಜಾತ್ರೆ ನಡೆಯುತ್ತದೆ. ಬಸವೇಶ್ವರ, ಮಾರಮ್ಮ, ಕೊಲ್ಲಾಪುರಮ್ಮ ಇವು ಇಲ್ಲಿನ ಇತರ ಗುಡಿಗಳು. ಇಲ್ಲಿಯ 1390ರ ಶಾಸನದಲ್ಲಿ ಕುಮಾರ ನಾರಸಿವೊಡೆಯರ ಪ್ರಧಾನ ಸಿದ್ದಯ ಹಾಗೂ ಸಿಗಲನಾಡಿನ ಅರುಳಹಾಳುವಿನ ಉಲ್ಲೇಖಗಳಿವೆ. ಅರುಳಹಾಳಿನ ಸಿದ್ದಯನ ಮಗ ಮಾರಪ್ಪನು ಹೆಗಬೆಟ್ಟದಲ್ಲಿ ನಡೆದ ಹೊಡೆದಾಟದಲ್ಲಿ ಗಾಯಗೊಂಡ ವಿಷಯವೂ ಇದರಲ್ಲಿದೆ. ಗ್ರಾಮದ ಈಶಾನ್ಯಕ್ಕೆ ಅಗ್ರಹಾರದ ಬಯಲಿನಲ್ಲಿರುವ 1400ರ ಶಾಸನ ವಿಜಯನಗರದ ಎರಡನೆಯ ಹರಿಹರನ ಕಾಲದ್ದಾಗಿದ್ದು ಅದರಲ್ಲಿ ಮಲ್ಲರಾಯನ ಮಗ ನಾರಾಯಣದೇವನು ಅರುಳಹಾಳನ್ನು ಆಳುತ್ತಿದ್ದುದಾಗಿಯೂ ಚೆನ್ನ ವೊಡೆಯರ್ ಎಂಬ ಮಂತ್ರಿಯು ಮಾರಸಮುದ್ರ ಕೆರೆಯ ತೂಬನ್ನು ಬಲಪಡಿಸಿದುದಾಗಿಯೂ ತೂಬನ್ನು ರಿಪೇರಿಮಾಡಿದ ಗೂಳಿಯೋಜನಿಗೆ ದತ್ತಿಯನ್ನು ಕೊಟ್ಟುದುದಾಗಿಯೂ ಹೇಳಿದೆ. ನಾರಾಯಣ ದೇವಾಲಯದ ಉತ್ತರಕ್ಕೆ ದೊರೆತಿರುವ ತ್ರುಟಿತ ಶಾಸನದಲ್ಲಿ ಸುಂಕದ ಸೋಮೆಯನು ನಾರಾಯಣದೇವರ ನಂದಾದೀಪಕ್ಕೆ ಕೊಟ್ಟ ದತ್ತಿಯ ಪ್ರಸ್ತಾಪವಿದೆ. ಈ ಊರಿನಲ್ಲಿ ಮಂಟೇಸ್ವಾಮಿಯ ಗದ್ದುಗೆಯೂ ಇದೆ. (ಕೆ.ಎಂ.ಎಸ್.)

**ಅರೇಅಂಗಡಿ :** ಉತ್ತರಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನಲ್ಲಿರುವ ಒಂದು ಪ್ರವಾಸಿ ತಾಣ. ಹೊನ್ನಾವರದಿಂದ 15ಕಿಮೀ ದೂರದಲ್ಲಿದೆ. ಸಹ್ಯಾದ್ರಿ ಶ್ರೇಣಿಯಲ್ಲಿರುವ ಈ ಸ್ಥಳ ರಮಣೀಯ ಪ್ರಕೃತಿ ದೃಶ್ಯಗಳಿಂದ ಕೂಡಿದೆ. ಇಲ್ಲಿ ಕರಿಕಾನಮ್ಮನ ಗುಡ್ಡವಿದ್ದು ಅದರ ಮೇಲೆ ಪ್ರಾಚೀನ ದುರ್ಗಾಪರಮೇಶ್ವರಿ ದೇವಾಲಯವಿದೆ.

ಕರಿಕಾನ ಪರಮೇಶ್ವರಿ ಇಲ್ಲಿನ ಪರ್ವತದ ತಪ್ಪಲಲ್ಲಿದ್ದ ಮಲ್ಲಾಸುರ ಮತ್ತು ಬಂಡಾಸುರರೆಂಬ ರಾಕ್ಷಸರನ್ನು ಕೊಂದು ನೆಲೆಸಿದಳೆಂಬ

ಪೌರಾಣಿಕ ಕಥೆ ಇದೆ. ಇಲ್ಲಿ ನವರಾತ್ರಿ ಕಾಲದಲ್ಲಿ ನಾಲ್ಕು ದಿವಸಗಳ ಕಾಲ ಉತ್ಸವ ನಡೆಯುತ್ತದೆ. ಬೆಟ್ಟದ ಇನ್ನೊಂದು ಮಗ್ಗುಲಲ್ಲಿ ಒಂದಡಿಕೆ ಶಂಭುಲಿಂಗ ದೇವಾಲಯವಿದೆ. ಇಲ್ಲಿನ ಶಿವಲಿಂಗದ ಸಮೀಪವಿರುವ ಅಡಿಕೆ ಮರದಲ್ಲಿ ಒಂದೇ ಒಂದು ಅಡಿಕೆ ಬಿಡುವುದರಿಂದ ಈ ಹೆಸರು ಬಂದಿದೆ

ಕರಿಕಾನ ಪರಮೇಶ್ವರಿ

ಎಂದು ಪ್ರತೀತಿ. ಇಲ್ಲಿಗೆ ಸಮೀಪದ ಬಿಲ್ವಪತ್ರ ಕಾನು ಎಂಬ ಸ್ಥಳದಲ್ಲಿ ಮಾಧವಾಚಾರ್ಯರು ನೆಲೆಸಿದ್ದರೆಂದು ತಿಳಿದುಬರುತ್ತದೆ. (ಎಸ್.ಎಚ್.ಇ.)

**ಅರ್ಕಾವತಿ :** ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿದುರ್ಗದಲ್ಲಿ ಹುಟ್ಟಿ ಬೆಂಗಳೂರು ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿದು ಕಾವೇರಿಯನ್ನು ಸೇರುವ ನದಿ. ಉದ್ದ ಸು.195ಕಿಮೀ. ನೆಲಮಂಗಲದ ದಕ್ಷಿಣದ ಕಡೆಯಿಂದ ಬರುವ ಕುಮುದ್ವತಿ, ಬೆಂಗಳೂರಿನ ಕಡೆಯಿಂದ ಬರುವ ವೃಷಭಾವತಿ ಇದರ ಉಪನದಿಗಳು. ಸಾವನದುರ್ಗ, ರಾಮಗಿರಿ, ಶಿವಗಿರಿ ಮೊದಲಾದ ಬೆಟ್ಟಗುಡ್ಡ ಪ್ರದೇಶ ಮತ್ತು ಸಾಧಾರಣ ಕಾಡು ಪ್ರದೇಶಗಳ ಮೂಲಕ ದಕ್ಷಿಣಕ್ಕೆ ಹರಿಯುವುದರಿಂದ ನೀರಾವರಿಗೆ ಹೆಚ್ಚು ಪ್ರಯೋಜನಕಾರಿಯಾಗಿಲ್ಲ. ಆದರೂ ಮೇಲ್ಕಣಿವೆಯಲ್ಲಿ ಹೆಸರುಘಟ್ಟ ಮೊದಲಾದ ದೊಡ್ಡ ಕೆರೆಗಳಿಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೊಡ್ಡಬಳ್ಳಾಪುರ, ಕಾಕೋಳು ಮುಂತಾದೆಡೆಯ ಕೆರೆಗಳಿಗೂ ನೀರನ್ನೊದಗಿಸುತ್ತದೆ. ಮುಂದುವರಿದು ನೆಲಮಂಗಲ, ಮಾಗಡಿ, ರಾಮನಗರ ಮತ್ತು ಕನಕಪುರ ತಾಲ್ಲೂಕುಗಳ ಮೂಲಕ ಹರಿದು ಆ ತಾಲ್ಲೂಕಿನ ಅಂಚಿನಲ್ಲಿ ಸಂಗಮದ ಬಳಿ ಕಾವೇರಿಯನ್ನು ಸೇರುತ್ತದೆ. ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿರುವುದರಿಂದ ಬೇಸಗೆಯಲ್ಲಿ ಬಹುಮಟ್ಟಿಗೆ ಇದರ ಪಾತ್ರ ಒಣಮರಳಿನಿಂದ ತುಂಬಿರುತ್ತದೆಯಾದರೂ ಸಂಪೂರ್ಣವಾಗಿ ಬತ್ತಿಹೋಗದೆ ಮರಳು ಬಗೆದಾಗ ನೀರು ದೊರಕುತ್ತದೆ. ಮಳೆಗಾಲದಲ್ಲಿ ಅನೇಕ ಉಪನದಿಗಳ ನೀರು ಒದಗುವುದರಿಂದ ತುಂಬಿ ಹರಿಯುತ್ತದೆ. ಒಮ್ಮೊಮ್ಮೆ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆ ಆದಾಗ ದಿಢೀರನೆ ಪ್ರವಾಹ ಬರುವುದುಂಟು. ಪ್ರವಾಹದ ಚಲನೆ 3,500ರಿಂದ 50,000 ಕ್ಯೂಸೆಕ್ಸ್‌ವರೆಗಿರುವುದು. ನೆಲಮಂಗಲ, ಮಾಗಡಿ ಮತ್ತು ರಾಮನಗರಗಳಿಂದ ಬೆಂಗಳೂರಿಗೆ ಹೋಗುವ ಮಾರ್ಗಗಳಲ್ಲಿ ನದಿಗೆ ಅಡ್ಡವಾಗಿ ದೊಡ್ಡ ಸೇತುವೆಗಳನ್ನು ನಿರ್ಮಿಸಲಾಗಿದೆ. *

**ಅರ್ಚಕ ಬಿ. ರಂಗಸ್ವಾಮಿ :** 1895-1991. ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಆದ್ಯ ವಿದ್ವಾಂಸರು. ಇವರ ಪೂರ್ಣ ಹೆಸರು ಬಿ. ರಂಗಸ್ವಾಮಿ ಭಟ್ಟ. ಕೃಷ್ಣರಾಜಪೇಟೆ ತಾಲ್ಲೂಕಿನ ಬಂಡಿಹೊಳೆ ಇವರ ಹುಟ್ಟೂರು. ತಂದೆ ನಾರಾಯಣ ಭಟ್ಟ, ತಾಯಿ ಶೇಷಮ್ಮ. ನಾಲ್ಕನೆಯ ತರಗತಿಯವರೆಗೆ ಬಂಡಿಹೊಳೆಯಲ್ಲಿ ವಿದ್ಯಾಭ್ಯಾಸಮಾಡಿ ಹೆಚ್ಚಿನ ವಿದ್ಯಾಭ್ಯಾಸಕ್ಕೂ ಸಂಸ್ಕೃತ ವಿದ್ಯಾಭ್ಯಾಸಕ್ಕೂ ಮೈಸೂರನ್ನು ಆಶ್ರಯಿಸಿದ ಇವರು ರಾಮಾನುಜ ಕೂಟ ಎಂಬ ಉಚಿತ ವಿದ್ಯಾರ್ಥಿನಿಲಯದಲ್ಲಿ ಹನ್ನೆರಡು ವರ್ಷ ವಾರಾನ್ನ ಉಂಡು, ನಾಲ್ಕು ವರ್ಷ ಸ್ವಯಂಪಾಕ - ಹೀಗೆ ಇಪ್ಪತ್ತು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದರು. ಆ ಅವಧಿಯಲ್ಲಿ ಯಜುರ್ವೇದದ ಪೂರ್ಣ ಅಧ್ಯಯನ, ಆಗಮದಲ್ಲಿ ವಿದ್ವತ್ತು ಸಾಧಿಸಿದರು. 1930ರಲ್ಲಿ ಇವರ ಸಂಸ್ಕೃತ ಆಗಮ ಗ್ರಂಥಶ್ರೀ ವೈಖಾನಸ ಆಲಯಾರಾಧನಾ ಪದ್ಧತಿ : ಪ್ರಕಟವಾಯಿತು. ಇವರು ಬರೆದ ಸನಾತನ ಧರ್ಮ ಎಂಬ ಕೃತಿ ಇನ್ನೂ ಹಸ್ತಪ್ರತಿಯ ಹಂತದಲ್ಲೇ ಇದೆ.

ಬಂಡಿಹೊಳೆಯ ದೊಡ್ಡಮ್ಮನ ಹಬ್ಬದ ಸಂದರ್ಭದಲ್ಲಿ ಕೋಲಾಟದ ಪದಗಳು, ರಂಗದ ಕುಣಿತದ ಹಾಡುಗಳು, ಸುಗ್ಗಿಯ ಕಾಲದಲ್ಲಿ ಊರಿಗೆ ಬಂದು ಮನೆಮನೆಯ ಮುಂದೆ ನಿಂತು ಹಾಡುತ್ತಿದ್ದ ದೊಂಬಿದಾಸರು, ತೊಗಲು ಗೊಂಬೆಯಾಟದವರು, ಊರಿನೊಳಗೆ ಸದಾ ಕೇಳಿಸುತ್ತಿದ್ದ ಬೀಸುವ ಪದಗಳು, ಕುಟ್ಟುವ ಪದಗಳು, ಸೋಬಾನೆ, ಪದಗಳು, ದೇವರ ಪದಗಳು ಮುಂತಾದುವೆಲ್ಲ ರಂಗಸ್ವಾಮಿಯವರಿಗೆ ಬಾಲ್ಯದಿಂದಲೇ ಪ್ರಭಾವ ಬೀರಿದ್ದುವು. ಜೊತೆಗೆ ಆಲೂರು ವೆಂಕಟರಾಯ, ಪ್ರೊಫೆಸರ್ ಹಿರಿಯಣ್ಣ, ವೆಂಕಟಕೃಷ್ಣಯ್ಯ (ತಾತಯ್ಯ), ಮುದವೀಡು ಕೃಷ್ಣರಾಯ ಮುಂತಾದ ವಿದ್ವಾಂಸರು ಮಾಡುತ್ತಿದ್ದ ಭಾಷಣಗಳು ಇವರ ಮೇಲೆ ಜನಪದ ಸಂಸ್ಕೃತಿಯ ಗಾಢ ಪ್ರಭಾವ ಬೀರಿದುವು. ಪರಿಣಾಮವಾಗಿ ಬಂಡಿಹೊಳೆಯಲ್ಲಿ ಅರ್ಚಕರು ಒಂದು ಆಶ್ರಮ ಸ್ಥಾಪಿಸಿ ಹಲವಾರು ವರ್ಷ ನಡೆಸಿದರು. ಸ್ವಯಂ ಉದ್ಯೋಗವನ್ನು ಉದ್ದೇಶವಾಗಿರಿಸಿಕೊಂಡು ಆ ಆಶ್ರಮದಲ್ಲಿ ಅರ್ಚಕರು ನೂಲುವುದು, ಬಟ್ಟೆ ಹೊಲಿಯುವುದು, ಚಾಪೆ ಹೆಣೆಯುವುದು, ಬೆತ್ತದ ಕೆಲಸ ಕಲಿಸಿಕೊಟ್ಟು ಹಳ್ಳಿಗರ ಸ್ವಾವಲಂಬನೆಯಲ್ಲಿ ಪ್ರಮುಖ ಸಾಧನೆ ಮಾಡಿದರು. ಜೊತೆಗೆ ರಾಮಾಯಣ, ಮಹಾಭಾರತಗಳ ನಿತ್ಯ ಪಾರಾಯಣದಿಂದ ಜನಪದರನ್ನು ಸನ್ಮಾರ್ಗದಲ್ಲಿ ನಡೆಯಲು ಪ್ರಚೋದಿಸಿದರು. ಇವರ ಜನಪರ ಕಾರ್ಯವನ್ನು ನೋಡಲು ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾಇಸ್ಮಾಯಿಲ್ ಎರಡು ಬಾರಿ ಈ ಆಶ್ರಮಕ್ಕೆ



ಭೇಟಿ ನೀಡಿದ್ದರು. ಮೈಸೂರಿನಲ್ಲಿದ್ದಾಗ ಒಮ್ಮೆ ಓದಿದ್ದ 'ಪಾಮರರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂಬ ಲೇಖನವೂ ಪ್ರಭಾವ ಬೀರಿತು. ಪರಿಣಾಮವಾಗಿ ಅಂಥ ಸಾಹಿತ್ಯವನ್ನು ಸಂಗ್ರಹಿಸಬೇಕೆಂಬ ಆಸಕ್ತಿ ಮೂಡಿತು. ಹಲವಾರು ಅಡಚಣೆಗಳ ನಡುವೆಯೂ ಸಂಗ್ರಹಕಾರ್ಯ ಕೈಗೊಂಡು 1933ರಲ್ಲಿ ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು ಎಂಬ ಗ್ರಂಥವನ್ನು ಪ್ರಕಟಿಸಿದರು. ಈ ಕೃತಿ ಹುಟ್ಟಿದ ಹಳ್ಳಿ ಎಂಬ ಹೆಸರಿನಲ್ಲಿ ಪುನರ್ಮುದ್ರಣಗೊಂಡಿದೆ (1971). ಬಂಡಿಹೊಳೆಯನ್ನು ಕೇಂದ್ರವಾಗಿಟ್ಟು ಕೊಂಡು ಈ ಗ್ರಂಥವನ್ನು ರಚಿಸಿದ್ದರೂ ಸಮಗ್ರ ಬಯಲುಸೀಮೆಯ ಹಳ್ಳಿಗಳ ಜೀವನಾಡಿಯನ್ನು ಇದರಲ್ಲಿ ಕಾಣಬಹುದು. ಬಯಲುಸೀಮೆಯ ಗ್ರಾಮಾಂತರ ಸಂಸ್ಕೃತಿಯನ್ನು ಇಲ್ಲಿ ಕ್ರೋಡೀಕರಿಸಲಾಗಿದೆ. ಜನಪದ ಸಾಹಿತ್ಯದ ದೃಷ್ಟಿಯಿಂದಲೂ ವೈಜ್ಞಾನಿಕ

ಸಂಗ್ರಹ ದೃಷ್ಟಿಯಿಂದಲೂ ಈ ಕೃತಿಗೆ ಅಗ್ರಸ್ಥಾನ ಅಭ್ಯವಾಗುತ್ತದೆ. ಹಾಡಿನ ಸಂಪ್ರದಾಯಗಳು, ಆ ಸಂಪ್ರದಾಯಗಳ ವಿವರಗಳು, ಹಾಡುಗಳು, ಹಾಡಿದವರ ವಿವರಗಳು ಇಲ್ಲಿವೆ. ಕೋಲಾಟ, ಮದುವೆ ಹಾಗೂ ದೇವರ ಪದಗಳು ಹೀಗೆ ಸಾಕಷ್ಟು ಹಾಡುಗಳ ವೈವಿಧ್ಯವಿದೆ. ಹಲವು ಪ್ರಸಿದ್ಧ ಲಾವಣಿಗಳು ಇಲ್ಲಿ ಮೊದಲ ಸಲ ಕಾಣಿಸಿಕೊಂಡಿವೆ. 500ಕ್ಕೂ ಹೆಚ್ಚು ಗಾದೆಗಳಿವೆ. ನೇರವಾದ ಸಂಭಾಷಣೆಗಳನ್ನು ಹಿಡಿದಿಡುವ ಮೂಲಕ ಜನಪದ ಭಾಷೆಯ ಸೊಗಸನ್ನು ಪರಿಚಯಿಸಲಾಗಿದೆ. ಮಕ್ಕಳ ಪದಗಳು ಹಾಗೂ ಮಕ್ಕಳ ಆಟಗಳ ಹಿನ್ನೆಲೆಯನ್ನುಳ್ಳ ಚರ್ಚೆಯಿದೆ. ಹಳ್ಳಿಯ ನ್ಯಾಯ ತೀರ್ಮಾನದ ವೈಖರಿ, ಅಲ್ಲಿನ ಮೇಳಗಳ ಸೊಗಸು, ಉತ್ಸವಗಳ, ಹಬ್ಬಗಳ ವೈಭವ, ವರ್ಷದ ಪ್ರತಿಯೊಂದು ತಿಂಗಳಿನಲ್ಲಿಯೂ ನಿಸರ್ಗದ ಬದಲಾವಣೆಯೊಡನೆ ಕಾಣಬರುವ ಬದುಕಿನ ರೀತಿನೀತಿಗಳು ಮುಂತಾದ ಹಳ್ಳಿಯ ಬದುಕಿನ ಸಮಸ್ತ ಮುಖಗಳನ್ನೂ ಏಕಸೂತ್ರದಲ್ಲಿ ಕೊಂಡೊಯ್ಯಲಾಗಿದೆ. ಕಲಾತ್ಮಕ ನಿರೂಪಣೆಯಿದೆ. ಕಲಾದೃಷ್ಟಿ ಹಾಗೂ ಶಾಸ್ತ್ರದೃಷ್ಟಿಗಳಿಂದ ಇದೊಂದು ಸಮಗ್ರ ಜಾನಪದ ದೃಷ್ಟಿಯುಳ್ಳ ಪ್ರಮುಖ ಗ್ರಂಥವೆನಿಸಿದೆ. ಇವರು 1991 ಸೆಪ್ಟೆಂಬರ್ 29ರಂದು ನಿಧನಹೊಂದಿದರು (ಕೆ.ಆರ್.)

**ಅರ್ಜುನಜೋಗಿ ಹಾಡು** : ಜೋಗಿಗಳು ಎಂಬ ವೃತ್ತಿಗಾಯಕರು ಕಿನ್ನರಿ ವಾದ್ಯದೊಂದಿಗೆ ಹಾಡುವ ಪ್ರಧಾನ ಕಥೆ (ಹಾಡು). ಈ ಕಥೆಯಲ್ಲಿ ಪಂಚವರ್ಣದ ಎರಡು ಗಿಣಿಗಳು ಸಂಭಾಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಇದನ್ನು ಗಿಳಿಹಾಡು ಎಂದೂ ಕರೆಯುತ್ತಾರೆ. ಈ ಹಾಡಿನ ಕಥೆಯನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು.

ಒಂದು ದಿನ ಅರ್ಜುನ ಬೇಟೆಯಾಡಬೇಕೆಂದು ಶಸ್ತ್ರಗಳನ್ನು ತರಲು ಮಲಗುವ ಮನೆಗೆ ಹೋದಾಗ ಅಲ್ಲಿ ಧರ್ಮರಾಯನೂ ದ್ರೌಪದಿಯೂ ಮಲಗಿರುವ ದೃಶ್ಯವನ್ನು ನೋಡಿ ಅದರ ದೋಷವನ್ನು ಪರಿಹರಿಸಿಕೊಳ್ಳಲು ತೀರ್ಥಯಾತ್ರೆಯನ್ನು ಕೈಗೊಂಡ. ಹೀಗೆ ಭೂಪ್ರದಕ್ಷಿಣೆ ಮಾಡುವಾಗ ಆದಿಶೇಷನ ಮಕ್ಕಳಾದ ಉಲೂಪಿ, ಚಿತ್ರಾಂಗದೆಯರನ್ನು ಮದುವೆಯಾಗಿ ಕೆಲವು ದಿನ ಅವರೊಡನೆ ಸುಖಾನುಭವ ಪಡೆದು ಹಸ್ತಿನಾವತಿಗೆ ಹಿಂತಿರುಗಿದ. ಹಸ್ತಿನಾವತಿಗೆ ಬಂದವನು ದ್ರೌಪದಿಯಲ್ಲಿ ಆಸಕ್ತನಾಗಿ ಅವರಿಬ್ಬರನ್ನೂ ಮರೆತ. ಹೀಗೆ ಹನ್ನೆರಡು ವರ್ಷ ಕಳೆದವು.

ಹೀಗಿರಲು ಒಮ್ಮೆ ನಾರದ ಕೈಲಾಸಕ್ಕೆ ಬಂದು ಶಿವಪಾರ್ವತಿಯರ ಸಮ್ಮುಖದಲ್ಲಿ ಶಿವಭಕ್ತೆಯರಾದ ಉಲೂಪಿ, ಚಿತ್ರಾಂಗದೆಯರ ವಿರಹದ ಪರಿಸ್ಥಿತಿಯನ್ನು ವಿವರಿಸಿದ. ಆಗ ಶಿವಪಾರ್ವತಿಯರು ಎರಡು ಗಿಳಿಗಳನ್ನು ಸೃಷ್ಟಿಸಿ ಆ ಗಿಳಿಗಳಿಗೆ ಭೂಲೋಕಕ್ಕೆ ಹೋಗಿ ಉಲೂಪಿ, ಚಿತ್ರಾಂಗದೆಯರ ದುಃಸ್ಥಿತಿಯನ್ನು ದ್ರೌಪದಿಗೆ ತಿಳಿಸಿಬರಲು ಆಜ್ಞಾಪಿಸಿದರು. ದ್ರೌಪದಿಯೊಂದಿಗೆ ಪಗಡೆಯಾಟದಲ್ಲಿ ಸೋತ ಅರ್ಜುನ ಅವಳ ಅಪೇಕ್ಷೆಯಂತೆ ಜೋಗಿಯ ವೇಷ ಧರಿಸಿ ಉಲೂಪಿ, ಚಿತ್ರಾಂಗದೆಯರಲ್ಲಿಗೆ ಬಂದು ಕೆಲವು ಕಾಲ ಅವರೊಡನೆ ಸುಖವಾಗಿದ್ದು ಅವರಿಬ್ಬರನ್ನೂ ಹಸ್ತಿನಾವತಿಗೆ ಕರೆತಂದ. ಕಡೆಗೆ ದ್ರೌಪದಿ, ಸುಭದ್ರೆ, ಉಲೂಪಿ, ಚಿತ್ರಾಂಗದೆಯರೊಡನೆ ಅರ್ಜುನ ಸುಖವಾಗಿ ಬಾಳಿದ.

ಈ ಹಾಡಿನ ಒಂದೊಂದು ಪರ್ವವೂ ಒಂದೊಂದು ರಾತ್ರಿ ಹಾಡುವಷ್ಟು ವಿಸ್ತಾರವಾಗಿರುತ್ತದೆ. ಕಥೆಯಲ್ಲಿ ಅರ್ಜುನ ಜೋಗಿಯಾದರೂ ಅವನ ವೇಷ ಭೂಷಣಗಳು ಶ್ರೀಮಂತವಾಗಿವೆ. ತಲೆಗೆ ವಜ್ರದ ಕಿರೀಟ,ಕೈಯಲ್ಲಿ ಚಿನ್ನದ ಭಿಕ್ಷಾಪಾತ್ರೆ, ಕಿವಿಗೆ ಮುತ್ತಿನಾಭರಣ, ಮೈಗೆ ಕಾವಿಬಟ್ಟೆಯ ಮೇಲೆ ಜರತಾರಿ ಶಾಲುಗಳು, ಹಾಡಲು ಸ್ವರ್ಣಖಚಿತವಾದ ಕಿನ್ನರಿ, ಯೌವನದ ಹೆಣ್ಣುಗಳೆಲ್ಲ ಮಾರು ಹೋಗುವಷ್ಟು ಪರಿಣಾಮ ಬೀರುವ ಮನ್ಮಥನಂತೆ ಜೋಗಿ ವೇಷ. ಇವೆಲ್ಲ ತೀರ ಅವಾಸ್ತವಗಳೆನ್ನಿಸಿದರೂ ಹಾಡುಗಾರರ ಭಕ್ತಿಭಾವದ ಉತ್ಕಟತೆ ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶ. ಜೋಗಿಯಾದರೂ ತೇಜಸ್ವಿಯಾಗಿದ್ದ, ಭೋಗಿಯಾಗಿದ್ದ ಎಂದು ಹೇಳುವಲ್ಲಿ ತಾವು ಕುರಿತು ಹಾಡುವ ದೈವದ ಔನ್ನತ್ಯವನ್ನು ಸಾರುವದೇ ಇವರ ಉದ್ದೇಶವೆಂಬುದು ಸ್ಪಷ್ಟವಾಗಿದೆ. ಇದೊಂದು ಬಗೆಯ ನಿಂದಾಸ್ತುತಿ ಗೀತೆ ಎನ್ನಬಹುದು. (ನೋಡಿ: ಕಿನ್ನರಜೋಗಿ). (ಕೆ.ಆರ್.)

**ಅವರಾದಿ**[1]: ಬೆಳಗಾಂವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಒಂದು ಗ್ರಾಮ. ರಾಮದುರ್ಗದಿಂದ ಪೂರ್ವಕ್ಕೆ 12ಕಿಮೀ ದೂರದಲ್ಲಿ ಮಲಪ್ರಭಾ ನದಿಯ ದಡದಲ್ಲಿದೆ. ಫಲಾಹಾರೇಶ್ವರ ಶ್ರೀಗಳ (1780-1835) ಪುಣ್ಯಕ್ಷೇತ್ರವಿದು. ಫಲಾಹಾರೇಶ್ವರ ಮಠಕ್ಕೆ ಇನ್ನೂರು ವರ್ಷಗಳ ಇತಿಹಾಸವಿದೆ. ಧಾರವಾಡ ಜಿಲ್ಲೆ ಶ್ರೀಗಳು ರೋಣ ತಾಲ್ಲೂಕಿನ ಅಸೂಟಿಯವರು. ಇವರ ಪೂರ್ವಾಶ್ರಮದ ಹೆಸರು ಶಿವಮೂರ್ತಿ ಸ್ವಾಮಿ. ನರಗುಂದದ ದೊರೆ ಅಪ್ಪಾಸಾಹೇಬ ಹಾಗೂ ರಾಮದುರ್ಗ ಸಂಸ್ಥಾನಿಕರು ಇವರಿಗೆ ಅವರಾದಿಯಲ್ಲಿ ಮಠ ಕಟ್ಟಿಸಿಕೊಟ್ಟರು. ಅರಳಿಕಟ್ಟೆಯಲ್ಲಿರುವ ಮಠಕ್ಕೆ ನರಗುಂದದ ಅರಸು ಅಪ್ಪಾಸಾಹೇಬ 32 ಎಕರೆ ಜಮೀನು ದಾನ ನೀಡಿದ ಸನ್ನದನ್ನು 25-1-1892ರಂದು ವಿಕ್ಟೋರಿಯಾ ರಾಣಿಯ ಪರವಾಗಿ ಸರ್ ಜಾರ್ಜ್ ರಸೆಲ್ ಕ್ಲಾರ್ಕ್ ಎಂಬಾತ ಸ್ಥಿರಪಡಿಸಿದ್ದಕ್ಕೆ ದಾಖಲೆಯಿದೆ. ತೋರಗಲ್ಲದ ಅರಸು ಲಕ್ಷ್ಮಣರಾವ್ ಶಿಂಧೆ, ಉದಪುದಿಯ ಮಹಾರಾಣಿ ಅಹಲ್ಯಾಬಾಯಿ ಶಿಂಧೆ ಹಾಗೂ ರಾಮದುರ್ಗದ ಅರಸರು ಈ ಮಠಕ್ಕೆ ಜಮೀನು ಇನಾಂ ನೀಡಿರುವ ಬಗ್ಗೆ ದಾನಪತ್ರಗಳು ಮಠದಲ್ಲಿವೆ.

ಫಲಾಹಾರೇಶ್ವರರ ಸಮಾಧಿ ಇಲ್ಲಿದೆ. ಇವರ ಅನಂತರ ಶಿವಮೂರ್ತಿ, ಅಡವಿಸ್ವಾಮಿ, ಶಿವಸ್ವಾಮಿ, ಸಂಗಮೇಶ್ವರ ಮತ್ತು ಶಿವಮೂರ್ತಿ ಸ್ವಾಮಿ ಈ ಪೀಠ ಪರಂಪರೆಯನ್ನು ಮುಂದುವರೆಸಿದರು. ಈಗ ಮೃತ್ಯುಂಜಯ ಸ್ವಾಮಿಯವರು ಪೀಠದ ಹೊಣೆ ಹೊತ್ತಿರುವರು. ಈ ಮಠ ಹಲವು ಶಾಲಾ - ಕಾಲೇಜು ಹಾಗೂ ಉಚಿತ ಪ್ರಸಾದ ನಿಲಯಗಳನ್ನು ನಡೆಸುತ್ತಿದೆ.

ಹಿಂದೆ ಈ ಊರು ರಾಮದುರ್ಗ ಸಂಸ್ಥಾನಕ್ಕೆ ಸೇರಿತ್ತು. ಇದನ್ನು ಅವರವಾದಿ ಎಂದು ಕರೆಯುತ್ತಿದ್ದರು. ಊರ ಹೊರಗೆ ಕಲ್ಯಾಣದ ಚಾಳುಕ್ಯರ ಕಾಲದ ರಾಮಲಿಂಗೇಶ್ವರ ದೇವಾಲಯವಿದೆ. ಊರಿನೊಳಗೆ ಕಲ್ಮೇಶ್ವರ ಮತ್ತು ಬಸವಣ್ಣ ದೇವಾಲಯಗಳಿವೆ. ಇಲ್ಲಿಂದ ಸು. 6 ಕಿಮೀ ಅಂತರದಲ್ಲಿ ಶಬರಿಕೊಳ್ಳ ಎಂಬ ಸ್ಥಳವಿದೆ. ರಾಮನಿಗೆ ಶಬರಿ ಬೋರೆಹಣ್ಣು ನೀಡಿ, ಸ್ವರ್ಗ ಪಡೆದ ಸ್ಥಳವಿದೆಂದು ಐತಿಹ್ಯ. ಸಮೀಪದ ಕಲ್ಲೂರು ಬೆಟ್ಟದ ಮೇಲೆ ಸಿದ್ದೇಶ್ವರ ಪುಣ್ಯಕ್ಷೇತ್ರವಿದೆ. (ವಿ.ಎಸ್.ಎಂ.)

**ಅವರಾದಿ**[2]: ಬೆಳಗಾಂವಿ ಜಿಲ್ಲೆ ಸಂಪಗಾಂವ ತಾಲ್ಲೂಕಿನ ಒಂದು ಗ್ರಾಮ; ಐತಿಹಾಸಿಕ ಸ್ಥಳ. ಇದು ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರ ಗೋವೆಯ ಕದಂಬದೊರೆ ಜಯಕೇಶಿದೇವನ ಅರಸಿ ಮೈಳಲದೇವಿಯ ಒಡೆತನಕ್ಕೆ ಒಳಪಟ್ಟಿತ್ತು. ಇಲ್ಲಿಯ 1123ರ ಶಾಸನದಲ್ಲಿ ಗ್ರಾಮದ ಹೆಸರು ಅವರವಾದಿ ಎಂದು ಉಲ್ಲೇಖಿತವಾಗಿದೆ. ಇದು ಕಾಳಾಮುಖ ಲಕುಲೇಶಪಾಶುಪತ ಮತದ ಪ್ರಮುಖ ಕೇಂದ್ರವಾಗಿತ್ತು.

ಊರ ಹೊರಗಿನ ಕೆರೆಯ ದಂಡೆಯ ಮೇಲೆ ಕಲ್ಯಾಣ ಚಾಳುಕ್ಯ ಶೈಲಿಯ ಪ್ರಾಚೀನ ದೇವಾಲಯವಿದೆ. ಸ್ಥಳೀಯರು ಇದನ್ನು ಕಲ್ಮೇಶ್ವರ ದೇವಾಲಯವೆಂದು ಕರೆಯುವರು. ಆದರೆ ಮೂಲತಃ ಇದು ಚಟ್ಟೇಶ್ವರ ದೇವಾಲಯವಾಗಿತ್ತು. ಇದರಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ನಂದಿ ಮಂಟಪಗಳಿವೆ. ಈ ದೇವಾಲಯ ವಾಸ್ತುಶಿಲ್ಪ ದೃಷ್ಟಿಯಿಂದ ಗಮನಾರ್ಹವಾಗಿದೆ. ಕದಂಬರಾಣಿ ಮೈಳಲದೇವಿಯ ದಂಡನಾಯಕ ಸಿಂಗರಸನ ಆಜ್ಞೆಯ ಮೇರೆಗೆ 1123ರಲ್ಲಿ ದೇವಾಲಯಕ್ಕೆ ಹಲವರು ನೀಡಿದ ದಾನವನ್ನು 1150ರಲ್ಲಿ ಅವದಿಯ ಅರಸಿ, ಎರಡನೆಯ ಜಗದೇಕಮಲ್ಲ ಚಾಳುಕ್ಯನ ಪಟ್ಟಮಹಾದೇವಿ ಮಾಚಲದೇವಿ ಮತ್ತೆ ಊರ್ಜಿತಗೊಳಿಸಿದ ವಿಷಯವನ್ನು ವಿವರಿಸುವ ಶಾಸನವಿದೆ. ಈಗ ಇದು ಕಿತ್ತೂರು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಚಾಲುಕ್ಯ ಎರಡನೆಯ ಜಗದೇಕಮಲ್ಲನ ರಾಣಿ ಮಾಚಲದೇವಿಯನ್ನು ಉಲ್ಲೇಖಿಸಿರುವ ಮೊದಲ ಶಾಸನವಿದು. ಈ ದೇವಾಲಯದ ಅರ್ಧ ಮಂಟಪದೊಳಗೆ ಎರಡು ಪ್ರತ್ಯೇಕ ಗೂಡುಗಳಲ್ಲಿ ಸರಸ್ವತಿ ಮತ್ತು ದುರ್ಗೆಯ ವಿಗ್ರಹಗಳಿವೆ. ನವರಂಗದ ಒಳಗೆ ದಕ್ಷಬ್ರಹ್ಮ, ಭೈರವ, ಸರಸ್ವತಿ ಮತ್ತು ಸಪ್ತಮಾತೃಕೆಯರ ಬಿಡಿ ವಿಗ್ರಹಗಳನ್ನು ಇಡಲಾಗಿದೆ. ಇವು ನಾಶವಾದ ಪ್ರಾಚೀನ ದೇವಾಲಯದ ಅವಶೇಷಗಳಿರಬಹುದು. ಗರ್ಭಗೃಹಕ್ಕೆ ಮುಖ ಮಾಡಿರುವ ನಂದಿ ವಿಗ್ರಹವು 1.3ಮೀ ಎತ್ತರವಿದೆ.

ಕಿತ್ತೂರು ಚೆನ್ನಮ್ಮನ ವೀರ ಬಂಟನಾಗಿದ್ದ ಅವರಾದಿ ವೀರಪ್ಪ ಇಲ್ಲಿಯವನು. ಅವರಾದಿ ಗ್ರಾಮದೇವತೆ ದ್ಯಾಮವ್ವನಿಗೆ ಹರಕೆ ಹೊತ್ತು, ಕಿತ್ತೂರನ್ನು ಮುತ್ತಿದ ಆಂಗ್ಲ ಸೈನ್ಯವನ್ನು ಯುದ್ಧದಲ್ಲಿ ಹಿಮ್ಮೆಟ್ಟಿಸಿದನಂತೆ. ಯುದ್ಧದಲ್ಲಿ ಥ್ಯಾಕರೆ ಸತ್ತಾಗ ವೀರಪ್ಪ ಗ್ರಾಮದೇವತೆಗೆ ಪೀತಾಂಬರವನ್ನು ಕಾಣಿಕೆಯಾಗಿ ನೀಡಿದ. (ವಿ.ಎಸ್.ಎಂ.)

**ಅರ್ಹದ್ದಾಸ :** ಸು.1300 ಜೈನಕವಿ. ರಟ್ಟಮತ ಎಂಬ ಕೃತಿಯ ಕರ್ತೃ. ಈತನಿಗೆ ರಟ್ಟಕವಿ, ನಯಬಂಧು, ರಟ್ಟಪೆಡಂಗ, ಜಿನದಾಸ, ಸಮ್ಯಕ್ತ್ವ ರತ್ನಾಕರ, ರಟ್ಟಕಂದರ್ಪ, ಕವಿಗಳಾಭರಣ, ಕವಿಕಂಜಸಂಭವ, ಸಹಜಕವೀಶ್ವರ, ಜಿನಧರ್ಮವತ್ಸಲ ಎಂಬ ಅನೇಕ ಹೆಸರು ಬಿರುದುಗಳು ಇದ್ದಂತೆ ತೋರುತ್ತದೆ. ಗಂಗರಸ 7ನೆಯ ಮಾರಸಿಂಹನ ಚಮೂಪತಿ ಕಾಡಮರಸ, ಕಾಡಮರಸನ ವಂಶದ ಹದಿನಾಲ್ಕನೆಯ ತಲೆ ನಾಗಕುಮಾರ. ಇವನನ್ನು ಬೂತುಗ ಎಂದೂ ಕರೆಯುತ್ತಿದ್ದರು. ಈ ನಾಗಕುಮಾರನ ಮಗನೇ ಅರ್ಹದ್ದಾಸ. ಕಾಡಮರಸ ವಂಶದ ಜನರು ಒಕ್ಕಲು ಕುಲಕ್ಕೆಲ್ಲ ತಿಲಕಪ್ರಾಯರಾಗಿದ್ದುದು ಅರ್ಹದ್ದಾಸನ ವಂಶಪರಂಪರೆಯ ನಿರೂಪಣೆಯಲ್ಲಿ ಉಕ್ತವಾಗಿದೆ.

ರಟ್ಟಮತ ಶಾಸ್ತ್ರೀಯ ವಿಷಯ ವಿವೇಚನೆಯನ್ನು ಒಳಗೊಂಡ ಗ್ರಂಥ. ಈ ಗ್ರಂಥದಲ್ಲಿ 12 ಅಧ್ಯಾಯಗಳಿವೆ. ಸಾವಿರಕ್ಕೂ ಮೇಲ್ಪಟ್ಟು ಪದ್ಯಗಳಿವೆ. ಕೃತಿವೃತ್ತ, ಕಂದ, ರಗಳೆ, ಅಕ್ಕರ, ತ್ರಿಪದಿ ಮೊದಲಾದ ವಿವಿಧ ಛಂದೋಬಂಧಗಳಲ್ಲಿ ರಚಿತವಾಗಿದೆ. ಕಾವ್ಯಾಂಶ ಕಡಿಮೆ. ಮಳೆ, ಮಿಂಚು, ಇಂದ್ರಧನು, ವಾಯುಚಕ್ರ, ರಾಹುಚಕ್ರ, ಭೂಕಂಪ, ಉತ್ಪಾತ, ಮೇಘ, ಮಾಸ, ನಕ್ಷತ್ರ, ಸಂಕ್ರಾಂತಿ, ಬಿತ್ತುವುದು ಮೊದಲಾದ ವಿವಿಧ ವಿಷಯ ವಸ್ತುಗಳನ್ನು ಕುರಿತ ಜ್ಯೋತೀಷ್ಯಲಕ್ಷಣಗಳನ್ನು ಈ ಗ್ರಂಥದಲ್ಲಿ ನಿರೂಪಿಸಿದೆ.

ರಟ್ಟಮತಕ್ಕೆ ರಟ್ಟಸೂತ್ರ, ಮೇಘಾಡಂಬರ ಎಂಬ ಹೆಸರುಗಳೂ ಇದ್ದಂತೆ ತಿಳಿದು ಬರುತ್ತದೆ. ಇದರಲ್ಲಿ ತನಗಿಂತ ಪೂರ್ವದಲ್ಲಿದ್ದ ಚಂದಿರಭಟ್ಟ, ಗರ್ಗಾಚಾರ್ಯ, ಕೀರ್ತಿನಾರಾಯಣ, ನಂದಾಚಾರ್ಯ ಮೊದಲಾದ ಶಾಸ್ತ್ರಗ್ರಂಥಕರ್ತೃಗಳನ್ನು ಉಲ್ಲೇಖಿಸಿದ್ದಾನೆ. ವರಾಹಮಿಹಿರ ಮತ್ತು ಗರ್ಗಾಚಾರ್ಯರ ಸಂಹಿತೆಗಳು, ಧನಕೀರ್ತಿ ಸಂಹಿತೆ ರತ್ನೋಜ್ವಲಸಂಹಿತೆ- ರಟ್ಟಮತಕ್ಕೆ ಆಧಾರಗ್ರಂಥಗಳು ಎಂಬುದನ್ನೂ ಹೇಳುತ್ತಾನೆ.

14ನೆಯ ಶತಮಾನದಲ್ಲಿ ಆಂಧ್ರಕವಿ ಭಾಸ್ಕರ ಈ ರಟ್ಟಮತವನ್ನು ತೆಲುಗಿಗೆ ಭಾಷಾಂತರಿಸಿದ್ದಾನೆ. (ಡಿ.ಎಸ್.ಎಚ್.)

**ಅಲಾಉದ್ದೀನ್ I :** ಬಹಮನೀ ರಾಜ್ಯದ ಸ್ಥಾಪಕ (1347-58). ಮೊದಲ ಹೆಸರು ಜಾಫರ್‌ಖಾನ್ ಅಥವಾ ಹಸನ್. ಇವನು ಆಫ್ಘನ್ ಅಥವಾ ತುರ್ಕಿ ಮೂಲದವನಾಗಿದ್ದು ದೆಹಲಿಯ ಸುಲ್ತಾನ ಮಹಮ್ಮದ್ ಬಿನ್ ತುಗಲಕನ ಸೇವೆಯಲ್ಲಿ ದಖನ್ನಿನಲ್ಲಿ ಅಧಿಕಾರಿಯಾಗಿದ್ದ. ಇವನು ಗಂಗು ಎಂಬ ಬ್ರಾಹ್ಮಣ ಜ್ಯೋತಿಷಿಯ ಆಶ್ರಯದಲ್ಲಿದ್ದು ರಾಜನಾದ ಮೇಲೆ ಅವನ ಗೌರವದ ಮೇಲೆ ತನ್ನ ಹೆಸರನ್ನು ಹಸನ್‌ಗಂಗು ಎಂದೂ ವಂಶವನ್ನು ಬಹಮನೀ ಎಂದೂ ಕರೆದುಕೊಂಡನೆಂಬ ಒಂದು ಕಥೆ ಇದೆ. ಇದಕ್ಕೆ ಆಧಾರವಿಲ್ಲ. ಇವನು ಇರಾನಿನ ಬಹಮನ್ ಷಾನ ವಂಶಸ್ಥನಿರಬೇಕು ಎಂದು ಚರಿತ್ರಕಾರರ ಅಭಿಪ್ರಾಯ. ಮಹಮದ್ ಬಿನ್ ತುಗಲಕನ ದುರಾಡಳಿತವನ್ನು ಸಹಿಸದ ದಖನ್ನಿನ ಅಮೀರರು ದಂಗೆ ಎದ್ದು ದೌಲತಾಬಾದನ್ನು ತಮ್ಮ ಕೇಂದ್ರ ಕಾರ್ಯಸ್ಥಾನವನ್ನಾಗಿ ಮಾಡಿಕೊಂಡು ಇಸ್ಮಾಯಿಲ್ ಮುಖ್‌ನನ್ನು ತಮ್ಮ ಸುಲ್ತಾನನೆಂದು ಘೋಷಿಸಿದರು. ಆದರೆ ಇಸ್ಮಾಯಿಲ್ ಅನೇಕ ಕಾರಣಗಳಿಂದಾಗಿ ಒಂದು ವರ್ಷದೊಳಗೆ ರಾಜೀನಾಮೆ ನೀಡಿದ. ಅನಂತರ ಅಮೀರರು ಹಸನನನ್ನು (ಜಾಫರ್ ಖಾನ್) 1347ರಲ್ಲಿ ಸುಲ್ತಾನನೆಂದು ಘೋಷಿಸಿದರು. ಹಸನ್ ರಾಜನಾದ ಮೇಲೆ ಅಲಾಉದ್ದೀನ್ ಹಸನ್ ಷಾ ಅಲ್‌ವಲಿ ಅಲ್ ಬಹಮನೀ ಎಂಬ ಬಿರುದು ಸಹಿತವಾದ ಹೆಸರನ್ನು ಧರಿಸಿ ಗುಲ್ಬರ್ಗದಲ್ಲಿ ತನ್ನ ವಂಶದ ಆಳ್ವಿಕೆಯನ್ನು ಪ್ರಾರಂಭಿಸಿದ. ಅನಂತರ ಸುಭದ್ರ ಸರ್ಕಾರವನ್ನು ರಚಿಸುವುದರ ಕಡೆ ಗಮನ ಹರಿಸಿ ರಾಜ್ಯವನ್ನು ಗುಲ್ಬರ್ಗ, ದೌಲತಾಬಾದ್, ಬೇರಾರ್, ಬಿದರೆ ವಿಭಾಗಗಳನ್ನಾಗಿ ವಿಂಗಡಿಸಿ ಅವುಗಳ ಆಡಳಿತವನ್ನು ಆಶ್ರಿತ ಅಮೀರರಿಗೆ ವಹಿಸಿದ. ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದಮೇಲೆ ಸುತ್ತಲ ಪ್ರದೇಶಗಳ ಮೇಲೆ ದಾಳಿ ಮಾಡಿ ಅವನ್ನು ಗೆದ್ದುಕೊಂಡ. ಖಂದಹಾರ್ ಕೋಟೆಯಿಂದ ಮಹಮ್ಮದ್ ಬಿನ್ ತುಗಲಕನ ಸೈನ್ಯವನ್ನು ಹೊಡೆದೋಡಿಸಿ ಅದನ್ನು ಗೆದ್ದುಕೊಂಡ. ಇವನ ದಂಡನಾಯಕ ಸಿಕಂದರ್ ಖಾನ್ ತೆಲಂಗಾಣದ ಮೇಲೆ ದಂಡೆತ್ತಿಹೋಗಿ ಅದರ ರಾಜನಾದ. ಕಾಪಯ ನಾಯಕನನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ವಸೂಲು ಮಾಡಿದ. ಮಳಖೇಡ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳ ಮೇಲೆ ದಾಳಿಮಾಡಿ ಅವು ಮಹಮ್ಮದೀಯರ ಅಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದ. ಬುರ್ಹಾನ್ -ಇ-ಮಾಸಿರ್ ಎಂಬ ಚಾರಿತ್ರಿಕ ಗ್ರಂಥ ಈತ ನ್ಯಾಯನಿಷ್ಠ ದೊರೆಯೆಂದೂ ಇಸ್ಲಾಮ್ ಧರ್ಮಪ್ರಸಾರಕ್ಕೆ ಶ್ರಮಿಸಿದನೆಂದೂ ತಿಳಿಸುತ್ತದೆ. ಗೋವ, ದಾಬೋಲ್, ಕೊಲ್ಲಾಪುರ ಮುಂತಾದ ಪ್ರದೇಶಗಳನ್ನೂ ಗೆದ್ದುಕೊಂಡ. 1358ರಲ್ಲಿ ಮೃತನಾದ. ಸಾಯುವ ವೇಳೆಗೆ ಬಹಮನೀ ರಾಜ್ಯ ಉತ್ತರದಲ್ಲಿ ವೈನಗಂಗಾದಿಂದ ದಕ್ಷಿಣದಲ್ಲಿ ಕೃಷ್ಣಾನದಿಯವರೆಗೆ ವಿಸ್ತರಿಸಿತ್ತು. ಇವನ ಹಿರಿಯ ಮಗ 1ನೆಯ ಮಹಮ್ಮದ್ ರಾಜ್ಯದ ಉತ್ತರಾಧಿಕಾರಿಯಾದ. (ಎಸ್.)

**ಅಲಾಉದ್ದೀನ್ ಅಹ್ಮದ್ II :** ಬಹಮನೀ ರಾಜ್ಯದ ಹತ್ತನೆಯ ಸುಲ್ತಾನ 1436-58. ಪಟ್ಟಕ್ಕೆ ಬಂದ ಅನಂತರ ವಿಜಯನಗರ ಮತ್ತು ಖಾನ್‌ದೇಶಗಳ ವಿರುದ್ಧ ಅನೇಕ ಯುದ್ಧಗಳನ್ನು ಕೈಗೊಂಡ. ವಿಜಯನಗರದಿಂದ ಸಲ್ಲಬೇಕಾಗಿದ್ದ ಪೊಗದಿಯ ವಸೂಲಿಗೋಸ್ಕರ ತನ್ನ ಸೋದರ ಮಹಮ್ಮದನನ್ನು ಕಳುಹಿಸಿಕೊಟ್ಟ. ಪೊಗದಿಯನ್ನು ವಸೂಲಿ ಮಾಡುವುದರಲ್ಲಿ ಯಶಸ್ವಿಯಾದರೂ ಮಹಮ್ಮದ್ ತನ್ನ ಹಿಂಬಾಲಕರಿಂದ ಮತ್ತು ವಿಜಯನಗರದ ಇಮ್ಮಡಿ ದೇವರಾಯನಿಂದ ಪ್ರೇರಿತನಾಗಿ ರಾಜ್ಯದಲ್ಲಿ ಅರ್ಧಭಾಗವನ್ನು ತನಗೆ ಕೊಡಬೇಕೆಂದು ಅಲಾಉದ್ದೀನನ ವಿರುದ್ಧ ದಂಗೆ ಎದ್ದ. ರಾಯಚೂರು, ಮುದ್ಗಲ್, ನಲ್ದುರ್ಗಗಳನ್ನು ಆಕ್ರಮಿಸಿದ. ಸುಲ್ತಾನ ಮಹಮ್ಮದನನ್ನು ಯುದ್ಧದಲ್ಲಿ ಸೋಲಿಸಿದ. ಅಲಾಉದ್ದೀನ್ ಅನಂತರ ಅವನನ್ನು ಕ್ಷಮಿಸಿ ರಾಯಚೂರಿನ ಜಹಗೀರುದಾರನನ್ನಾಗಿ ನೇಮಿಸಿದ. ಸುಲ್ತಾನನ ಪ್ರಧಾನಮಂತ್ರಿಯಾಗಿದ್ದ ದಿಲಾವರ್ ಖಾನ್ ಕೊಂಕಣದಮೇಲೆ ದಂಡೆತ್ತಿ ಹೋಗಿ ಸಂಗಮೇಶ್ವರದ ರಾಜನನ್ನು ಸೋಲಿಸಿದ. ಸಂಗಮೇಶ್ವರದ ರಾಜ ತನ್ನ ಮಗಳನ್ನು ಅಲಾಉದ್ದೀನನಿಗೆ ಕೊಟ್ಟು ವಿವಾಹಮಾಡಿದ. ಈ ವಿವಾಹದಿಂದಾಗಿ ಸುಲ್ತಾನನ ಹಿರಿಯ ರಾಣಿಯ ತಂದೆ ಖಾನ್ ದೇಶದ ಸುಲ್ತಾನ ನಾಸಿರ್ ಖಾನ್ ಕುಪಿತನಾಗಿ ಗುಜರಾತಿನ ಸುಲ್ತಾನನ ಸಹಾಯ ಪಡೆದು ಅಲಾಉದ್ದೀನನ ರಾಜ್ಯವನ್ನು ಮುತ್ತಿ ಕೆಲವು ಪ್ರಾಂತ್ಯಗಳನ್ನು ಗೆದ್ದುಕೊಂಡನಾದರೂ ಸುಲ್ತಾನನ ಸೈನ್ಯ ಅವನನ್ನು ಸೋಲಿಸಿ ಹಿಮ್ಮೆಟ್ಟಿಸಿತು. ಇತ್ತ ಇಮ್ಮಡಿ ದೇವರಾಯ ಅನೇಕ ಮಹಮ್ಮದೀಯರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡು ಬಲಯುತನಾಗಿ ಬಹಮನೀ ರಾಜ್ಯವನ್ನು ಮುತ್ತಿ ಮುದ್ಗಲನ್ನು ಗೆದ್ದು ಬಿಜಾಪುರ ಮತ್ತು ಅದರ ಸುತ್ತ ಮುತ್ತಣ ಪ್ರದೇಶಗಳನ್ನು ಕೊಳ್ಳೆಹೊಡೆದ. ಇಬ್ಬರಲ್ಲಿ ಭೀಕರ ಹೋರಾಟವಾಗಿ ದೇವರಾಯ ಸೋತ. ಅವನು ಬಾಕಿ ಇದ್ದ ಕಪ್ಪಕಾಣಿಕೆಗಳನ್ನೆಲ್ಲಾ ಸಲ್ಲಿಸಿ ತುಂಗಭದ್ರಾನದಿಯನ್ನು ತನ್ನ ರಾಜ್ಯದ ಗಡಿಯಾಗಿ ಒಪ್ಪಿಕೊಂಡ.

ಅಲಾಉದ್ದೀನನ ಕಾಲದಲ್ಲಿ ಸುನ್ನಿ ಪಂಗಡದ ದಖನ್ನಿನ ಅಮೀರರಿಗೂ ಷಿಯಾಪಂಥದ ಅರಬ್, ತುರ್ಕಿ, ಪರ್ಷಿಯ ಮತ್ತು ಮುಗಲ್ - ಈ ವಿದೇಶಿ ಅಮೀರರಿಗೂ ಒಳಜಗಳಗಳು ಸರ್ವೇ ಸಾಮಾನ್ಯವಾಗಿದ್ದುವು. ದಖನ್ನಿನ ಅಮೀರರು ಒಳಸಂಚು ನಡೆಸಿ ಚಾಕಣದಲ್ಲಿ ಸು.2,000 ವಿದೇಶಿ ಅಮೀರರನ್ನು ಕೊಲೆಮಾಡಿದರು. ಬಹಮನೀ ರಾಜ್ಯದ ಇತಿಹಾಸದಲ್ಲಿ ಈ ಘಟನೆ ಚಾಕಣ ಘಟನೆ ಎಂದು ಪ್ರಸಿದ್ಧಿಯಾಗಿದೆ. ಅಲಾಉದ್ದೀನನ ಆಳ್ವಿಕೆಯ ಕೊನೆಗಾಲದಲ್ಲಿ ಸುಲ್ತಾನನ ಸಂಬಂಧಿ ಜಲಾಲ್ ಖಾನ್ ದಂಗೆ ಎದ್ದು ನಲಗೊಂಡಾದಲ್ಲಿ ಸುಲ್ತಾನನೆಂದು ಘೋಷಿಸಿಕೊಂಡಾಗ ಸುಲ್ತಾನನ ಮಂತ್ರಿ ಮಹ್ಮೂದ್ ಗಾವಾನನು ಜಲಾಲ್ ಮತ್ತು ಅವನ ಮಗ ಸಿಕಂದರ್ ಇವರನ್ನು ಬಂಧಿಸಿದ. ಆದರೆ ಗವಾನನ ಮಾತಿನಂತೆ ಸುಲ್ತಾನ್ ಅವರನ್ನು ಕ್ಷಮಿಸಿ ಪುನಃ ನಲಗೊಂಡಾದ ಜಹಗೀರನ್ನು ವಹಿಸಿಕೊಟ್ಟ. ಅಲಾಉದ್ದೀನ್ ಅನೇಕ ಮಸೀದಿ, ಶಾಲೆ ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಿದ. ಬಿದರೆಯಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಿ ನುರಿತ ವೈದ್ಯರನ್ನು ನೇಮಿಸಿದ. ದರೋಡೆಕೋರರನ್ನೂ ಕಳ್ಳಕಾಕರನ್ನೂ ಕ್ರೂರವಾಗಿ ಶಿಕ್ಷಿಸಿ ಶಾಂತಿ ನೆಲಸುವಂತೆ ಮಾಡಿದ. ಈತ 1458ರಲ್ಲಿ ಮೃತನಾದ. ಅನಂತರ ಇವನ ಮಗ ಹುಮಾಯೂನ್ ಪಟ್ಟಕ್ಕೆ ಬಂದ. (ಎಸ್.)

**ಅಲಿ ಆದಿಲ್ ಷಾ I :** ಬಿಜಾಪುರದ 5ನೆಯ ಸುಲ್ತಾನ (1558-80). ಇಬ್ರಾಹೀಮನ ಮಗ ಮತ್ತು ಉತ್ತರಾಧಿಕಾರಿ. ಷಿಯಾ ಪಂಥದ ಅನುಯಾಯಿ. ಈತ ಆ ಪಂಥಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದರಿಂದ ಸುನ್ನಿ ಪಂಗಡದವರಿಗೆ ಅಸಮಾಧಾನವುಂಟಾಯಿತಾಗಿ ಇವನು ತನ್ನ ಆಳ್ವಿಕೆಯ ಮೊದಲಲ್ಲಿಯೇ ಅನೇಕ ಎಡರುಗಳನ್ನು ಎದುರಿಸಬೇಕಾಯಿತು. ಪಟ್ಟಕ್ಕೆ ಬರುತ್ತಿದ್ದಂತೆಯೇ 1558ರಲ್ಲಿ ವಿಜಯನಗರದ ರಾಜನೊಡನೆ ಒಪ್ಪಂದವನ್ನು ಮಾಡಿಕೊಂಡು ಅಹಮದ್‌ನಗರದ ಮೇಲೆ ದಾಳಿ ಮಾಡಿದ. ಆದರೆ ಈ

ಸಂದರ್ಭದಲ್ಲಿ ರಾಮರಾಯ ಮಹಮ್ಮದೀಯರ ಮೇಲೆ ಎಸಗಿದ ಕೃತ್ಯಗಳು ಬೇರೆ ರಾಜ್ಯಗಳ ಮಹಮ್ಮದೀಯರ ಮನನೋಯಿಸಿ ರೊಚ್ಚಿಗೇಳುವಂತೆ ಮಾಡಿದ್ದರಿಂದ ಅಲಿ ಮತ್ತು ರಾಮರಾಯನ ಮೈತ್ರಿ ಕಡಿಯಿತು. ಅನಂತರ ಮಹಮ್ಮದೀಯ ರಾಜ್ಯಗಳಾದ ಬಿಜಾಪುರ, ಅಹಮದ್‌ನಗರ, ಬಿದರೆ ಮತ್ತು ಗೋಲ್ಕೊಂಡದ ಸುಲ್ತಾನರು ಒಂದು ಒಕ್ಕೂಟವನ್ನು ಮಾಡಿಕೊಂಡು ವಿಜಯನಗರದ ಮೇಲೆ ಯುದ್ಧ ಸಾರಿದರು. ತಾಳೀಕೋಟೆಯಲ್ಲಿ 1565ರಲ್ಲಿ ನಡೆದ ಯುದ್ಧದಲ್ಲಿ ರಾಮರಾಯ ಸೋತು ಕೊಲೆಗೀಡಾದ. ಈ ಯುದ್ಧದಲ್ಲಿ ಹಾಗೂ ಅನಂತರ ವಿಜಯನಗರವನ್ನು ಸೂರೆಗೊಳ್ಳುವಲ್ಲಿ ಅಲಿ ಪ್ರಮುಖ ಪಾತ್ರ ವಹಿಸಿದ್ದ. ತಾಳೀಕೋಟೆಯ ಯುದ್ಧಾನಂತರ ಅಹಮದ್‌ನಗರದ ಸುಲ್ತಾನನೊಡನೆ ಒಪ್ಪಂದ ಮಾಡಿಕೊಂಡು ಪಶ್ಚಿಮ ಕರಾವಳಿಯಲ್ಲಿದ್ದ ಪೋರ್ಚುಗೀಸರ ವಿರುದ್ಧ ದಂಡೆತ್ತಿಹೋಗಿ ಗೋವೆಯನ್ನು ಮುತ್ತಿದ. ಆದರೆ ಪೋರ್ಚುಗೀಸರು ಇವನನ್ನು ಹಿಮ್ಮೆಟ್ಟಿಸಿದರು. ರಾಜ್ಯಕ್ಕೆ ಹಿಂದಿರುಗುವ ಮೊದಲು ಇವನು ಆದವಾನಿ ಕೋಟೆಯನ್ನು ಗೆದ್ದುಕೊಂಡ. 1573ರಲ್ಲಿ ತುರ್ಕಲನ್ನು ಗೆದ್ದ. ತರುವಾಯ, ವಿಜಯನಗರದ ಅಧೀನದಲ್ಲಿದ್ದು, ತಾಳೀಕೋಟೆಯ ಯುದ್ಧದ ಅನಂತರ ಸ್ವತಂತ್ರನಾಗಿ ಬಂಕಾಪುರದಲ್ಲಿ ಆಳುತ್ತಿದ್ದ ವೇಲಪರಾಯನ ಮೇಲೆ ದಂಡೆತ್ತಿಹೋದ. 15 ತಿಂಗಳ ಸತತ ಹೋರಾಟದಿಂದ ಬಂಕಾಪುರವನ್ನು ವಶಪಡಿಸಿಕೊಂಡ. ಅನಂತರ ಇವನ ದಂಡನಾಯಕ ಮುಸ್ತಫ ಖಾನ್ ಚಂದ್ರಗುತ್ತಿಯನ್ನು ಸಾಧಿಸಿಕೊಂಡನಲ್ಲದೆ ಕರ್ನಾಟಕದ ಕೆಲವು ಸಣ್ಣಪುಟ್ಟ ನಾಯಕರುಗಳಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡುವುದರಲ್ಲೂ ಯಶಸ್ವಿಯಾದ. ಅಲಿ ಆದಿಲ್ ಷಾ ಅನೇಕ ಬಾರಿ ಪೆನುಕೊಂಡವನ್ನು ಗಳಿಸಲು ಪ್ರಯತ್ನ ಪಟ್ಟು ವಿಫಲನಾದ. 1580ರಲ್ಲಿ ತನ್ನ ಅರಮನೆಯಲ್ಲಿಯೇ ಕೊಲೆಯಾದ. ಅನಂತರ ಇವನ ಸೋದರನ ಮಗ ಇಬ್ರಾಹೀಂ ಪಟ್ಟಕ್ಕೆ ಬಂದ. ಪ್ರಸಿದ್ಧ ಚಾಂದಬೀಬಿ (ನೋಡಿ) ಅಲಿಯ ಹೆಂಡತಿ. (ಎಸ್.)

**ಅಲಿ ಆದಿಲ್ ಷಾ II :** ಬಿಜಾಪುರದ 8ನೆಯ ಸುಲ್ತಾನ (1656-72). ಮಹಮ್ಮದನ ಮಗ. ತಂದೆಯ ಮರಣಾನಂತರ ಈತ ಕೇವಲ 18 ವರ್ಷದವನಾಗಿದ್ದಾಗ ಪಟ್ಟಕ್ಕೆ ಬಂದ. ಈ ಸಂದರ್ಭದ ಲಾಭ ಪಡೆಯಲು ದಖನ್ನಿನಲ್ಲಿ ವೈಸ್‌ರಾಯಿಯಾಗಿದ್ದ ಔರಂಗ್‌ಜೇಬ್ ಬಿಜಾಪುರ ರಾಜ್ಯದ ಮೇಲೆ ದಂಡೆತ್ತಿ ಬಂದ. ಪೆರೆಂಡ ಕೋಟೆ ಮತ್ತು ಆದರ ಸುತ್ತಮುತ್ತಣ ಪ್ರದೇಶಗಳನ್ನೂ ಅನಂತರ ಕಲ್ಯಾಣಿ ಮತ್ತು ಬಿದರೆಯನ್ನೂ ಮುತ್ತಿ ಗೆದ್ದುಕೊಂಡ. ಬಿಜಾಪುರಕ್ಕೆ ನುಗ್ಗಿ ಅಲಿಯನ್ನು ಸೋಲಿಸಿದ. ಅಲಿ ಒಪ್ಪಂದಕ್ಕೆ ಒಡಂಬಟ್ಟು ಔರಂಗ್‌ಜೇಬ್ ಗೆದ್ದುಕೊಂಡಿದ್ದ ಬಿದರೆ, ಕಲ್ಯಾಣಿ ಮತ್ತು ಪೆರೆಂಡವನ್ನು ಮುಗಲರಿಗೆ ಬಿಟ್ಟುಕೊಟ್ಟ (1657).

ಈ ಮಧ್ಯದಲ್ಲಿ ಶಿವಾಜಿ ಬಿಜಾಪುರಕ್ಕೆ ಸೇರಿದ ಕೆಲವು ಪ್ರದೇಶಗಳನ್ನು ಹಿಡಿದಿದ್ದರಿಂದ ಅಲಿ ಶಿವಾಜಿಯ ವಿರುದ್ಧ ಅಫಜಲಖಾನನನ್ನು ಕಳುಹಿಸಿದ. ಆದರೆ ಅಫಜಲಖಾನ್ ಹತನಾದ. ಶಿವಾಜಿ ಪಣ್ಹಾಳವನ್ನೂ ಗೆದ್ದುಕೊಂಡ. ಆಗ ಅಲಿಯಿಂದ ನಿಯೋಜಿತನಾದ ಸಿದ್ದಿ ಜೌಹಾರ್ ಶಿವಾಜಿಯ ಮೇಲೆ ಜಯ ಗಳಿಸುವ ಹಂತ ತಲುಪಿದ್ದಾಗ ಶಿವಾಜಿ ಪಣ್ಹಾಳದಿಂದ ತಪ್ಪಿಸಿಕೊಂಡು ಪಾರಾದ. ಅಲಿ ಆದಿಲ್ ಷಾ ಪಣ್ಹಾಳವನ್ನು ವಶಪಡಿಸಿಕೊಂಡ. ಶಿವಾಜಿ ದಾಳಿಗಳನ್ನು ಮುಂದುವರಿಸಿ ಕೊಂಕಣದ ಹಲವು ಪ್ರದೇಶಗಳನ್ನು ಅಲಿಯಿಂದ ಗೆದ್ದುಕೊಂಡ. ಅಲ್ಲಿಂದಲೂ ಶಿವಾಜಿ ಹಿಮ್ಮೆಟ್ಟುವಂತೆ ಅಲಿ ಆದಿಲ್ ಷಾ ಕ್ರಮ ಕೈಗೊಂಡ. ಔರಂಗಜೇಬ್ ದೆಹಲಿಯ ಸುಲ್ತಾನನಾದಮೇಲೆ ಬಿಜಾಪುರದ ವಿರುದ್ಧ ಯುದ್ಧವನ್ನು ಮುಂದುವರಿಸಲು ದಂಡನಾಯಕ ಜಯಸಿಂಗನನ್ನು ಕಳುಹಿಸಿ ಕೊಟ್ಟ (1665). ಜಯಸಿಂಗ್ ಶಿವಾಜಿಯ ಮೇಲೆ ಯುದ್ಧ ಮಾಡಿ ಪುರಂದರ ಒಪ್ಪಂದವನ್ನು ಮಾಡಿಕೊಂಡ. ಅನಂತರ ಜಯಸಿಂಗ್ ಶಿವಾಜಿಯ ಸಹಾಯ ಪಡೆದು ಬಿಜಾಪುರದ ಮೇಲೆ ದಂಡೆತ್ತಿಬಂದ. ಆದರೆ ಬಿಜಾಪುರವನ್ನು ಅಲಿ ಆದಿಲ್ ಷಾನಿಂದ ಗೆದ್ದುಕೊಳ್ಳಲು ಸಾಧ್ಯವಾಗಲಿಲ್ಲ. ಒಟ್ಟಿನಲ್ಲಿ ಅಲಿ ಆದಿಲ್ ಷಾ ಮುಗಲರ ಮತ್ತು ಮರಾಠರ ವಿರುದ್ಧ ಹೋರಾಡಿ ಬಿಜಾಪುರ ರಾಜ್ಯವನ್ನು ರಕ್ಷಿಸಿದ. ಆದರೆ ತನ್ನ ಆಳ್ವಿಕೆಯ ಕೊನೆಯ ಆರು ವರ್ಷಗಳನ್ನು ಸುಖಲೋಲುಪನಾಗಿ ಕಳೆದು 1672ರಲ್ಲಿ ಮೃತನಾದ.

(ಎಸ್.)

**ಅಲ್ಲಮಪ್ರಭು :** 12ನೆಯ ಶತಮಾನದ ಧಾರ್ಮಿಕ ಕ್ರಾಂತಿಯ ಮಹತ್ಸಾಧನೆಯ ಇತಿಹಾಸದಲ್ಲಿ ಬಹಳ ಪ್ರಮುಖನಾದ ವ್ಯಕ್ತಿ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಈತನ ಜನ್ಮಸ್ಥಳ. ತಂದೆ ನಿರಹಂಕಾರ, ತಾಯಿ ಸುಜ್ಞಾನಿ. ಅನಿಮಿಷಯೋಗಿ ಈತನ ಗುರು. ಇವನ ಬಾಲ್ಯಜೀವನದ ಪರಿಸರಗಳಾಗಲಿ ಮನೋವಿಕಾಸದ ಚಿತ್ರವಾಗಲಿ ದೊರೆಯದು. ಆದರೆ ಈತನ ಜೀವನದಲ್ಲೊಂದು ಪರಿವರ್ತನೆಯ ಘಟ್ಟ ತಾರುಣ್ಯದಲ್ಲಿ ಪ್ರಾಪ್ತವಾದಂತೆ ತೋರುತ್ತದೆ. ಅದು ಚಾಮರಸ ಹೇಳುವಂತೆ ಬನವಾಸಿಯ ಮಾಯಾದೇವಿಯಿಂದ ಆಗಿರಲಿ ಅಥವಾ ಹರಿಹರ ಹೇಳುವಂತೆ ಬಳ್ಳಿಗಾವೆಯ ಕಾಮಲತೆಯಿಂದ ಆಗಿರಲಿ ಅಂತೂ ಸಂಸಾರವನ್ನು ಮೆಟ್ಟಿ ಮೇಲೆರುವ ಸಾಧನೆಗೆ ಪ್ರಭುವನ್ನು ಪ್ರಚೋದಿಸಿದ ಒಂದು ಘಟನೆ ನಡೆದಿರಬೇಕು. ಆದರಿಂದ ಪ್ರಭುವಿಗೆ ತನ್ನ ಅಂತರಂಗದಲ್ಲಿ ಅಡಗಿದ್ದ ಅತೀವವಾದ ಆಕಾಂಕ್ಷೆಯ ಅರಿವು ಆದಂತೆ ತೋರುತ್ತದೆ. ಮೊದಲಿನಿಂದಲೂ ಜ್ಞಾನ ವೈರಾಗ್ಯಗಳು ಈತನಲ್ಲಿ ಜೀವದ ಉಸಿರಾಟದಂತೆ ಸಹಜವಾಗಿದ್ದುವು. ಮನದ ಮುಂದಣ ಆಸೆಯನ್ನು ಕಿತ್ತು ಬಿಸಾಟು ಬಾಲ್ಯದಲ್ಲಿಯೇ ಮಾಯೆಯನ್ನು ಗೆದ್ದ. ಮಹಾಶಿವಯೋಗಿಯಾಗಿ ಭಾರತದಾದ್ಯಂತ ಸಂಚರಿಸಿ, ನೂರಾರು ಸಾಧಕರನ್ನು ಸಂಧಿಸಿ ಅನೇಕ ಬಗೆಯ ಅನುಭವಗಳ ಗಣಿಯಾದ. ಮುಕ್ತಾಯಕ್ಕ, ಗೊಗ್ಗಯ್ಯ, ಸಿದ್ಧರಾಮ, ಗೋರಕ್ಷ, ಬಸವ, ಚೆನ್ನಬಸವ, ಅಕ್ಕಮಹಾದೇವಿ ಮುಂತಾದ ನೂರಾರು ಶಿವಶರಣಶರಣೆಯರಿಗೆ ಜ್ಞಾನ, ವೈರಾಗ್ಯ, ಭಕ್ತಿಗಳ ನೆಲೆಯನ್ನು ತೋರಿಸಿದ. ವೀರಶೈವ ಸಿದ್ಧಾಂತದ ಸಾರವನ್ನೇ ತನ್ನ ಇರವಿನಲ್ಲಿ ನಿರಿಸಿ ಶರಣಮಾರ್ಗಕ್ಕೆ ಗುರುವಾದ. ಅನುಭವ ಮಂಟಪದ ಅಧ್ಯಕ್ಷನಾದ. ಶೂನ್ಯಸಿಂಹಾಸನದ ದೊರೆಯಾದ. ಈತ ಡಾಂಭಿಕತೆ, ಅಂಧಶ್ರದ್ಧೆ, ಅಹಂಮನ್ಯತೆ, ಬಾಹ್ಯಾಡಂಬರ, ಅಜ್ಞಾನ, ಅಲ್ಪಜ್ಞಾನ, ಅಸತ್ಯ, ಅಸಹನೆ, ವಿಷಮತೆ, ವಿಕಾರತೆಗಳ ಪರಮ ವೈರಿ. ನಿಷ್ಠುರವಾದಿ, ಸತ್ಯವಾದಿ. ಮಹಾಪ್ರವಾದಿ. ಬಸವಣ್ಣನವರ ವಿಚಾರಕ್ರಾಂತಿಗೆ ತನ್ನ ಜ್ಞಾನ ವೈರಾಗ್ಯಗಳ ಕಾಂತಿಯನ್ನಿತ್ತು ಅದನ್ನು ಮುನ್ನಡೆಸಿದ. ಕಲ್ಯಾಣದ ಧಾರ್ಮಿಕ ಕ್ರಾಂತಿಗೆ ಬೆನ್ನೆಲುಬಾದ. ಕಲ್ಯಾಣದಲ್ಲಿ ಕೆಲವು ಕಾಲ ಇದ್ದು ಎಲ್ಲ ಶಿವಶರಣರಿಗೂ ಕೇಂದ್ರ ವ್ಯಕ್ತಿಯಾಗಿ ಬಾಳಿ, ಅನಂತರ ತನ್ನ ಕರ್ತವ್ಯ ಮುಗಿಯುತ್ತ ಬಂದದ್ದನ್ನು ತಿಳಿದು ಶ್ರೀಶೈಲದತ್ತ ಹೊರಟು ಲಿಂಗಾಂಗಸಾಮರಸ್ಯದ ಕೊನೆಯ ನಿಲುವಿನಲ್ಲಿ ಕದಳಿಯಲ್ಲಿ ಲೀನವಾದ.

ಈತನ ಜೀವನಚರಿತ್ರೆ ಅನೇಕ ಕಡೆ ಅಸ್ಪಷ್ಟವಾಗಿದ್ದರೂ ಈತನ ವಚನಗಳಲ್ಲಿ ಮೂಡಿ ನಿಂತಿರುವ ಅನುಭವದ ಚಿತ್ರ ಅತ್ಯುಜ್ವಲವಾಗಿದೆ. ಗುಹೇಶ್ವರ ಎಂಬ ಅಂಕಿತವನ್ನಿಟ್ಟುಕೊಂಡು ನೂರಾರು ವಚನಗಳನ್ನು ರಚಿಸಿದ್ದಾನೆ. ಇವನ ಮಾತುಗಳು ನೇರ, ನಿಷ್ಠುರ ಭಾಷೆಯ ಅನಂತ ಸಾಧ್ಯತೆಗಳನ್ನು ಇವನ ವಚನಗಳಲ್ಲಿ ಕಾಣಬಹುದಾಗಿದೆ. ಕನ್ನಡ ಭಾಷೆ ಒಂದು ವಿಶೇಷ ಶಕ್ತಿಯನ್ನು ಈತನಿಂದ ಪಡೆಯಿತು. ಈತನ ಬೆಡಗಿನ ವಚನಗಳು ಕ್ಲಿಷ್ಟವಾಗಿದ್ದರೂ ಅನುಭವದ ಸಂಪತ್ತಿಯಿಂದಲೂ ಅಲಂಕಾರ, ಉಪಮಾನ, ಹೋಲಿಕೆ, ಗಾದೆಯಂಥ ಸೂತ್ರರೂಪದ ಮಾತಗಳಿಂದಲೂ ಉಜ್ವಲವಾಗಿದ್ದು ಪರಿಣಾಮಕಾರಿಯಾಗಿವೆ.

'ಹೊನ್ನು ಮಾಯೆಯೆಂಬರು ಹೆಣ್ಣು ಮಾಯೆಯೆಂಬರು ಮಣ್ಣು ಮಾಯೆಯೆಂಬರು ಹೊನ್ನು ಮಣ್ಣು ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಶೆಯೇ ಮಾಯೆ ಕಾಣ ಗುಹೇಶ್ವರ; ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ; ಬೆಟ್ಟಕ್ಕೆ ಚಳಿಯಾದೊಡೆ ಏನ ಹೊದಿಸುವರಯ್ಯ; ಕೆಂಡದ ಗಿರಿಯ ಮೇಲೊಂದು ಅರಗಿನ ಕಂಭವಿದ್ದುದ ಕಂಡೆ ಅರಗಿನ ಕಂಭದ ಮೇಲೆ ಒಂದು ಹಂಸವಿದ್ದುದ ಕಂಡೆ ಕಂಭ ಬೆಂದು ಹಂಸೆ ಹಾರಿತ್ತು; ಊರದ ಚೇಳಿನ ಏರದ ಬೇನೆಯಲ್ಲಿ ಮೂರುಲೋಕವೆಲ್ಲಾ ನರಳಿತ್ತು'-ಮುಂತಾದ ವಚನಗಳು ಅನುಭವದ ತೀವ್ರತೆಯನ್ನು ಮಾತಿನಲ್ಲಿ ಸಾಧಿಸುವ ಶಕ್ತಿಗೆ ಉಜ್ವಲ ಸಾಕ್ಷಿಗಳಾಗಿವೆ. ಸಾಧಕನಾಗಿ ಸಿದ್ಧನಾಗಿ ಅನುಭಾವಿಯಾಗಿ ಕವಿಯಾಗಿ ಕಾವ್ಯದ ಮಟ್ಟವನ್ನು ಮೀರಿನಿಂತ ಪ್ರವಾದಿಯಾಗಿ ಸಮಾಜಸುಧಾರಕನಾಗಿ ಸಮಾಜವನ್ನು ವ್ಯಾಪಿಸಿ ಆಚೆನಿಂತ ಜಂಗಮನಾಗಿ-ಸಂಕೀರ್ಣ ವ್ಯಕ್ತಿತ್ವವನ್ನು ಪಡೆದು ಬಾಳಿದ ಮಹಾಯೋಗಿಯಾಗಿ ಅಲ್ಲಮ ಕಂಡುಬರುತ್ತಾನೆ. ಈತನ ವಚನರಚನೆ ಕನ್ನಡ ವಾಙ್ಮಯಕ್ಕೆ ಅಸಾಧಾರಣ ತೇಜಸ್ಸುಳ್ಳ ಕಾಣಿಕೆಗಳಾಗಿವೆ. ಈತನನ್ನು ಕುರಿತಾದ ಗ್ರಂಥಗಳು ಕನ್ನಡ, ತೆಲುಗು, ತಮಿಳು, ಸಂಸ್ಕೃತ ಮತ್ತು ಮರಾಠಿ ಭಾಷೆಗಳಲ್ಲಿ ರಚಿತವಾಗಿರುವುದು ಈತನ ಮಹಾವ್ಯಕ್ತಿತ್ವಕ್ಕೆ

ನಿದರ್ಶನಗಳಾಗಿವೆ. (ಜಿ.ಎಸ್.ಪಿ.ಎವ್.)

**ಅವಿನೀತ** : ತಲಕಾಡಿನ ಗಂಗ ಅರಸ (ಸು.469-529). 3ನೆಯ ಮಾಧವ ಇವನ ತಂದೆ, ತಾಯಿ ಕದಂಬಕುಲದ 1ನೆಯ ಕೃಷ್ಣವರ್ಮನ ಸೋದರಿ. ಇನ್ನೂ ಹಸುಳೆಯಾಗಿ ತಾಯಿಯ ತೊಡೆಯಲ್ಲಿದ್ದಾಗಲೇ ಇವನಿಗೆ ರಾಜ್ಯಾಭಿಷೇಕವಾಯಿತು ಎಂದು (ಜನನೀದೇವತಾಂಗಪರ್ಯ್ಯಂಕತಲ ಸಮಧಿಗತರಾಜ್ಯವಿಭವವಿಲಾಸ) ಈತನ ನೊಣಮಂಗಲ ಶಾಸನದಲ್ಲಿ ಹೇಳಿದೆ. ಈ ಶಾಸನದ ಕಾಲ ಈತನ ಆಳ್ವಿಕೆಯ ಒಂದನೆಯ ವರ್ಷವೆಂದು ಹೇಳಿದೆ. ಶಾಸನದಲ್ಲಿ ಈತನನ್ನು ಲಲನೆಯರನ್ನು ಆಕರ್ಷಿಸುತ್ತಿದ್ದ. ಶೌರ್ಯಸಾಹಸಗಳಲ್ಲಿ ಇಂದ್ರಸಮಾನ. ಹಯ ಗಜಗಳನ್ನು ನಿರ್ದೇಶಿಸುವಲ್ಲಿ, ಬಿಲ್ಲನ್ನುಪಯೋಗಿಸುವುದರಲ್ಲಿ ಅದ್ವಿತೀಯ ಎಂದೆಲ್ಲಾ ವರ್ಣಿಸಿದೆ. ಬಾಲ್ಯದಲ್ಲಿಯೇ ಪಟ್ಟಾಭಿಷಿಕ್ತನಾದರೂ ವರ್ಷಗಳನಂತರವೇ ಈತನ ಆಳ್ವಿಕಯೆ ಕಾಲವನ್ನು ಗಣನೆಗೆ ತಂದುಕೊಳ್ಳಬೇಕಾಗಬಹುದು. ಆದ್ದರಿಂದ ಇವನ ರಾಜ್ಯಾಭೀಷೇಕ 495ರಲ್ಲಿ ಆಯಿತೆಂದು ಒಂದು ಅಭಿಪ್ರಾಯ. ಇದು 469ರಲ್ಲಿ ಆಗಿರಬಹುದೆಂದು, ಈತನ ಆಳ್ವಿಕೆಯ ಕಾಲ 469-529 ಎಂದು ಪರಿಗಣಿಸಬಹುದು. ಆದರೆ ಇವನು ರಾಜ್ಯದ ಆಡಳಿತ ಸೂತ್ರಗಳನ್ನು ಹಿಡಿದುದು ಬಹುಶಃ ಈತನ 20ನೆಯ ವಯಸ್ಸಿನಲ್ಲಿ (489) ಎನ್ನಬಹುದು.

ರಾಜ್ಯಾಭಿಷೇಕ ಸಮಯದಲ್ಲಿ ಇನ್ನೂ ಈತ ಶೈಶವಾವಸ್ಥೆಯಲ್ಲಿದ್ದದ್ದನ್ನು ಗಮನಿಸಿ ಗಂಗರ ಸಾಮಂತರು ಕೆಲವರು ಸ್ವತಂತ್ರರಾಗಲು ಹವಣಿಸಿದಂತೆ ತೋರುತ್ತದೆ. ಆದರೆ ಈತನ ಸಹಾಯಕರು ಅವರನ್ನು ಯಶಸ್ವಿಯಾಗಿ ಸೋಲಿಸಿದರು. ತಾನು ಪ್ರೌಢಾವಸ್ಥೆಗೆ ಬಂದ ಮೇಲೆ ಶಕ್ತಿ ಸಾಮರ್ಥ್ಯಗಳಿಂದ ರಾಜ್ಯಾಭಿವೃದ್ಧಿಗೆ ಕಾರಣನಾಗಿ ಪ್ರಜಾನುರಾಗವನ್ನು ಗಳಿಸಿ ದುಷ್ಟಶಿಕ್ಷಕ ಶಿಷ್ಟರಕ್ಷಕನಾಗಿ ಅಪರಾಧಿಗಳನ್ನು ಯಥಾರ್ಹವಾಗಿ ದಂಡಿಸಿ ಕಲಿಯುಗ ಯುಧಿಷ್ಠಿರನೆಂದು ಹೆಸರು ಗಳಿಸಿದ. ಶಾಸನವೊಂದರಲ್ಲಿ ಈತನ ಬೃಹದ್ದೇವಿಯ ಪ್ರಸ್ತಾಪವಿದೆ. ಬಹುಶಃ ಈಕೆ ಅಗ್ರಮಹಿಷಿಯಾಗಿದ್ದು, ಇನ್ನೂ ಇತರ ಪತ್ನಿಯರು ಈತನಿಗಿದ್ದಿರಬೇಕು. ಈತನ ಮಗ ದುರ್ವಿನೀತ ಪುನ್ನಾಟ ರಾಜಪುತ್ರಿ ಜೇಷ್ಠಾದೇವಿಯ ಮಗ. ಈಕೆಯೇ ಅವಿನೀತನ ಅಗ್ರಮಹಿಷಿ ಎಂದು ಊಹಿಸಲಾಗಿದೆ. ಆದರೆ ಅವಿನೀತ ಇನ್ನೊಬ್ಬ ಮಗನಿಗೆ ಪಟ್ಟಕಟ್ಟಲು ಯತ್ನಿಸಿದಾಗ ರಾಜ್ಯಲಕ್ಷ್ಮಿ ಸ್ವತಃ ದುರ್ವಿನೀತನನ್ನು ವರಿಸಿದಳೆಂಬ ಮತ್ತು ವೈಮಾತ್ರೇಯಾನುಜ (ಮಲಸೋದರ)ನಿಗೆ ಹೋಗಿದ್ದ ರಾಜ್ಯವನ್ನು ದುರ್ವಿನೀತ ಕಸಿದುಕೊಂಡನೆಂಬ ಶಾಸನೋಕ್ತ ಹೇಳಿಕೆಗಳನ್ನಾಧರಿಸಿ ಅವಿನೀತ ದುರ್ವಿನೀತನನ್ನು ಕಾರಣಾಂತರಗಳಿಂದ ತನ್ನ ಉತ್ತರಾಧಿಕಾರಿಯಾಗಿ ನೇಮಿಸಲು ಒಪ್ಪಿರಲ್ಲಿಲ್ಲವೆಂದು ಹೇಳಬಹುದು. (ಬಿ.ಆರ್.ಜಿ.)

**ಅಶೋಕ** : ಪಾಟಲಿಪುತ್ರದ ಮೌರ್ಯ ರಾಜವಂಶದಲ್ಲಿ ಮೂರನೆಯವನಾದ ಈತ ಕರ್ನಾಟಕದ ಇತಿಹಾಸದಲ್ಲಿ ಖಚಿತವಾಗಿ ಕಾಣಿಸಿಕೊಳ್ಳುವ ಮೊದಲ ದೊರೆ (ಕ್ರಿ.ಪೂ.272-32). ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಕೊಪ್ಪಳ, ಗುಲ್ಬರ್ಗ ಜಿಲ್ಲೆಯ ಸನ್ನತಿ, ಬಳ್ಳಾರಿ

ಮಸ್ಕಿ ಶಾಸನ

ಜಿಲ್ಲೆಯ ನಿಟ್ಟೂರು ಮತ್ತು ಉದೆಗೊಳಂ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರ - ಈ ಸ್ಥಳಗಳಲ್ಲಿ ಇವನ ಶಾಸನಗಳು ದೊರಕಿರುವುದರಿಂದ ಕರ್ನಾಟಕದ ಉತ್ತರದ ಭಾಗ ಇವನ ರಾಜ್ಯಕ್ಕೆ ಸೇರಿತ್ತೆಂಬುದು ಸ್ಪಷ್ಟ. ಕರ್ನಾಟಕದ ಇತರ ಭಾಗಗಳೂ ಇವನ ರಾಜ್ಯದಲ್ಲಿದ್ದುವೇ ಎಂಬುದು ಸರಿಯಾಗಿ ತಿಳಿದಿಲ್ಲ. ಚೋಳ, ಪಾಂಡ್ಯ, ಕೇರಳಪುತ, ಸತಿಯಪುತ - ಇವರ ರಾಜ್ಯಗಳು, ಇವನ ರಾಜ್ಯದ ಹೊರಗಿದ್ದುವೆಂದು ಇವನ 13ನೆಯ ಪ್ರಸ್ತರ ಶಾಸನದಿಂದ ತಿಳಿಯುವುದರಿಂದ ಹಾಗೂ ಆ ರಾಜ್ಯಗಳು ಅನೂಚಾನವಾಗಿ ತಮಿಳುನಾಡು, ಕೇರಳದ ಭಾಗಗಳಿಗೆ ಸೀಮಿತವಾಗಿದ್ದರಿಂದ, ದಕ್ಷಿಣಕರ್ನಾಟಕ ಸಹ ಅಶೋಕನ ಸಾಮ್ರಾಜ್ಯದಲ್ಲಿಯೇ ಇತ್ತೆಂದು ಊಹಿಸಲು ಅವಕಾಶವಿದೆ. ಸತಿಯಪುತರು ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿದ್ದವರು ಎಂದೂ ಕೇರಳಪುತರ ರಾಜ್ಯ ಕೊಡಗು ಮೈಸೂರು ಜಿಲ್ಲೆಗಳ ಪ್ರದೇಶಗಳನ್ನು ಒಳಗೊಂಡಿತ್ತು ಎಂದೂ ಕೆಲವು ವಿದ್ವಾಂಸರು ಊಹಿಸಿರುವುದರಿಂದ ವಿಷಯ ಸ್ವಲ್ಪ ಕ್ಲಿಷ್ಟವಾಗಿದೆ. ಸಂಘಂ ಸಾಹಿತ್ಯದಲ್ಲಿ ಒಂದೆಡೆ ಮೌರ್ಯರ ಸೈನ್ಯ ಬೇರೊಬ್ಬ ರಾಜನ ಆಕ್ರಮಣಕ್ಕಾಗಿ ಘಟ್ಟವನ್ನು ಇಳಿದುಹೋಗುತ್ತಿದ್ದ ಸಂದರ್ಭವೊಂದರ ಉಲ್ಲೇಖವಿರುವುದರಿಂದ ಪ್ರಾಯಶಃ ಕರ್ನಾಟಕದ ಪಶ್ಚಿಮ ಮತ್ತು ದಕ್ಷಿಣ ಬೆಟ್ಟ ಶ್ರೇಣಿಗಳವರೆಗೆ ಅಂದರೆ ಕರ್ನಾಟಕದ ಬಹುಭಾಗದಲ್ಲಿ ಅಶೋಕನ ಆಳ್ವಿಕೆ ಹಬ್ಬಿತ್ತೆಂದು ತರ್ಕಿಸಬಹುದು. ಈ ಭಾಗವನ್ನು ಅಶೋಕ ಸ್ವಶ್ರಮದಿಂದ ಸಾಧಿಸದೆ ತನ್ನ ಹಿರಿಯರಿಂದ ಪಡೆದಿರಬೇಕು.

**ಶಾಸನಗಳು** : ಕರ್ನಾಟಕದಲ್ಲಿ ದೊರೆತಿರುವ ಅಶೋಕನ ಎಲ್ಲ ಶಾಸನಗಳೂ ಲಘುಪ್ರಸ್ತರ ಲೇಖಗಳು. ಈ ಶಾಸನಗಳನ್ನು ಅಶೋಕ ತನ್ನ ಆಳ್ವಿಕೆಯ 11-12ನೆಯ ವರ್ಷದಲ್ಲಿ ಹೊರಡಿಸಿದನೆಂದು ಕೆಲವು ಆಧಾರಗಳಿಂದ ತಿಳಿದು ಬರುತ್ತದೆ. ಆದ್ದರಿಂದ ಇವುಗಳ ಕಾಲ ಕ್ರಿ.ಪೂ. 261-60. ಇವುಗಳಲ್ಲಿ ಉಪಯೋಗಿಸಿರುವ ಭಾಷೆ ಪ್ರಾಕೃತ, ಪ್ರಾಯಶಃ ಅಂದು ಮಗಧ ದೇಶದಲ್ಲಿ ರೂಢಿತವಾಗಿದ್ದ ರೀತಿಯದು. ಲಿಪಿ ಬ್ರಾಹ್ಮೀ. ಬ್ರಹ್ಮಗಿರಿ ಶಾಸನದ ಕೊನೆಯ ಸಾಲು ಮಾತ್ರ ಖರೋಷ್ಠೀ ಲಿಪಿಯಲ್ಲಿದೆ. ಕರ್ನಾಟಕದಲ್ಲಿ ದೊರೆತಿರುವ ಎಲ್ಲ ಶಾಸನಗಳ ವಸ್ತು ಒಂದೇ ಆದರೂ ಪಾಠದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ.

ಕೊಪ್ಪಳದ ಬಳಿಯ ಗವಿಮಠದ ಶಾಸನ ಚೆನ್ನಾಗಿ ಉಳಿದಿರುವ ಶಾಸನಗಳಲ್ಲೊಂದು. ಇದು 'ದೇವಾನಾಂಪ್ರಿಯ ಹೇಳುತ್ತಾನೆ' ಎಂದು ಆರಂಭವಾಗುತ್ತದೆ.

ಮುಂದಿನ ಭಾಗ ಹೀಗಿದೆ: "ಎರಡೂವರೆ ವರ್ಷಗಳಿಂದ ನಾನು ಉಪಾಸಕನಾಗಿದ್ದೆ, ಆದರೆ ನಾನು (ಧರ್ಮಕ್ಕಾಗಿ) ಅಷ್ಟಾಗಿ ಶ್ರಮಿಸಲಿಲ್ಲ. (ಆದರೆ ಈಗ) ಒಂದು ವರ್ಷಕ್ಕಿಂತ ಹೆಚ್ಚು ಕಾಲದಿಂದ ನಾನು ಸಂಘದ ಜೊತೆ ಸೇರಿದ ಮೇಲೆ ಹೆಚ್ಚು ಶ್ರಮಿಸಿದ್ದೇನೆ. ಆದ್ದರಿಂದ ಇದುವರೆಗೆ ಯಾವ ಜಂಬುದ್ವೀಪದ ಜನರು ದೇವರೊಡನೆ ಬೆರೆಯುತ್ತಿಲ್ಲವೋ ಈಗ ಅವರು ಬೆರೆಯುವಂತೆ ಮಾಡಿದ್ದೇನೆ. ಇದು ಶ್ರಮದ ಫಲ. ಈ ಫಲವನ್ನು ಕೇವಲ ಉತ್ತಮ ಸ್ಥಿತಿಯಲ್ಲಿರುವವರಷ್ಟೆ (ಮಹತೇನ) ಗಳಿಸಬಲ್ಲರೆಂಬುದಿಲ್ಲ. ಕೆಳಸ್ಥಿತಿಯಲ್ಲಿರುವವರೂ (ಖುದಕೇನ) ಸಹ (ಧರ್ಮಶ್ರದ್ಧೆಯಿಂದ) ಶ್ರಮಿಸಿದರೆ ಸ್ವರ್ಗವನ್ನು ಗಳಿಸಬಹುದು. ಇದಕ್ಕಾಗಿ ಈ (ಹೇಳಿಕೆ); ಕೆಳಗಿನವರು ಮೇಲಿನವರು ಎಲ್ಲಾ ಉತ್ಸಾಹದಿಂದ ಶ್ರಮಿಸಲಿ. ಶ್ರಮಿಸುವುದು ಬಹುಕಾಲ ಉಳಿಯುವಂಥದೆಂದು ಅಂತರು (ರಾಜ್ಯದ ಹೊರಗಿನವರು) ಸಹ ತಿಳಿಯಲಿ, ಈ ವಿಷಯ (ಧರ್ಮಶ್ರದ್ಧೆ) ಬೆಳೆಯಲಿ, ವಿಸ್ತಾರವಾಗಲಿ (ಈಗಿಗಿಂತ) ಒಂದೂವರೆಯಷ್ಟಾಗಲಿ". ಕೊಪ್ಪಳದ ಪಾಲ್ಕಿಗುಂಡು ಬಂಡೆಯ ಮೇಲಿದ್ದ ಇನ್ನೊಂದು ಶಾಸನದಲ್ಲೂ ಇದೇ ಪಾಠವಿದ್ದಂತೆ ತೋರುತ್ತದೆ. ಆದರೆ ಇದು ಬಹು ಸವೆದಿದೆ.

ಮಸ್ಕಿಯ ಶಾಸನದಲ್ಲಿ ಇದೇ ವಿಷಯವನ್ನು ಮತ್ತಷ್ಟು ಸಂಗ್ರಹವಾಗಿ ಹೇಳಲಾಗಿದೆ. ಇದರ ಆರಂಭದಲ್ಲಿ ದೇವಾನಾಂಪ್ರಿಯ ಅಶೋಕ ಹೀಗೆ ಹೇಳುತ್ತಾನೆ ಎಂದು ಇದೆ. ಅಶೋಕನ ಶಾಸನಗಳಲ್ಲೆಲ್ಲ ಅವನನ್ನು ದೇವಾನಾಂಪ್ರಿಯ ಎಂದೇ ಹೆಸರಿಸುವುದು ಸಾಮಾನ್ಯವಾದರೆ, ಅವನ ಸ್ವಂತ ಹೆಸರನ್ನೂ ಜೊತೆಗೆ ಉಲ್ಲೇಖಿಸಿರುವ ಕೆಲವೇ ಶಾಸನಗಳಲ್ಲಿ ಇದೂ ಒಂದು. ಬೌದ್ಧನೆಲೆಯಾಗಿದ್ದ ಸನ್ನತಿಯಲ್ಲಿ ಅನ್ವೇಷಿತವಾದ ಪ್ರಧಾನ ಪ್ರಸ್ತರಶಾಸನಗಳು (12 ಮತ್ತು 14) ಹಾಗೂ ವಿಶೇಷ ಪ್ರಸ್ತರಶಾಸನಗಳು (1 ಮತ್ತು 2) ಗ್ರಾನೈಟ್ ಶಿಲೆಯ ಫಲಕದ ಮೇಲೆ ಕಂಡರಿಸಲ್ಪಟ್ಟಿರುವುದು ಇತಿಹಾಸ ವಿದ್ವಾಂಸರಲ್ಲಿ ಕುತೂಹಲ ಕೆರಳಿಸಿದೆ. ಈ

ಶಾಸನಗಳು ಇದುವರೆಗೆ ಸುಪರಿಚಿತವಾದ ಅಶೋಕನ ಶಾಸನಗಳ ವರ್ಗೀಕರಣಕ್ಕೆ ಹೊಂದುವುದಿಲ್ಲ. ತಮ್ಮದೇ ವರ್ಗವೊಂದನ್ನು ಸೃಜಿಸಿವೆ.

ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರದ ಶಾಸನಗಳು ಕೇವಲ ಮೂರು ಕಿಮೀ ಫಾಸಲೆಯೊಳಗೇ ಇವೆ. ಬ್ರಹ್ಮಗಿರಿಯ ಶಾಸನ ಚೆನ್ನಾಗಿದೆ. ಜಟಿಂಗರಾಮೇಶ್ವರದ್ದು ಸವೆದಿದೆ. ನಿಟ್ಟೂರು, ಉದೇಗೊಳಂ ಹಾಗೂ ಸಿದ್ಧಾಪುರದವು ಸುಮಾರಾಗಿವೆ. ಸನ್ನತಿಯ ಶಾಸನಗಳ ಹೆಚ್ಚಿನ ಭಾಗ ನಾಶವಾಗಿವೆ. ಇವೆಲ್ಲವುಗಳಲ್ಲೂ ಕಾಣುವ ಪಾಠ ಸುಮಾರು ಒಂದೇ ರೀತಿಯದು. ಬ್ರಹ್ಮಗಿರಿಯ ಶಾಸನ ಸುವರ್ಣಗಿರಿಯ ಆಯಪುತ ಮತ್ತು ಮಹಾಮಾತರು ಇಸಿಲದ ಮಹಾಮಾತರ ಕುಶಲವನ್ನು ವಿಚಾರಿಸುತ್ತಾರೆ ಎಂದು ಆರಂಭವಾಗುತ್ತದೆ. ಮುಂದಿನ ಭಾಗದಲ್ಲಿರುವುದು ಗವಿಮಠ ಶಾಸನದಲ್ಲಿರುವುದೇ. ಆದರೆ ಬ್ರಹ್ಮಗಿರಿ ಗುಂಪಿನ ಶಾಸನಗಳಲ್ಲಿ ಒಂದೆರಡೆಡೆ ಸ್ವಲ್ಪ ವಿವರಗಳಿವೆ. ಉದಾಹರಣೆಗೆ, ಎರಡೂವರೆ ವರ್ಷಗಳಿಂದ ಉಪಾಸಕನಾಗಿದ್ದೆ ಎಂದು ಹೇಳುವ ಮೊದಲ ಭಾಗದ ಜೊತೆಯಲ್ಲಿ 'ಆದರೆ ಒಂದು ವರ್ಷ (ಧರ್ಮಕ್ಕಾಗಿ) ಅಷ್ಟು ಶ್ರಮಿಸಲಿಲ್ಲ' ಎಂದಿದೆ. ನನ್ನ ರಾಜ್ಯದ ಹೊರಗಿನವರೂ ಶ್ರಮಿಸಲಿ ಎಂದು ಹೇಳಿದಮೇಲೆ "ಇದು (ಶಾಸನ) ನಾನು 256 ರಾತ್ರಿಗಳನ್ನು ಪ್ರವಾಸದಲ್ಲಿ ಕಳೆದಿದ್ದಾಗ ಹೊರಡಿಸಲಾಯಿತು" ಎಂಬ ವಿಷಯವಿದೆ. ಅಲ್ಲದೆ ಇದೇ ವಿಷಯದ ಮುಂದುವರಿಕೆಯಾಗಿ ಮತ್ತಷ್ಟು ವಿಷಯ ಸಹ ಶಾಸನದಲ್ಲಿ ಕಂಡುಬರುತ್ತದೆ. ಆ ಭಾಗ ಹೀಗಿದೆ" ಈ ಬಗ್ಗೆ (ಮೇಲೆ ಹೇಳಿದ ವಿಷಯದಲ್ಲಿ) ದೇವನಾಂಪ್ರಿಯನು ಹೀಗೆ ಹೇಳುತ್ತಾನೆ. ಪ್ರತಿಯೊಬ್ಬನೂ ತನ್ನ ತಂದೆತಾಯಿಗಳನ್ನೂ ಹಿರಿಯರನ್ನೂ ಗೌರವಿಸಬೇಕು. ಇತರ ಜೀವಿಗಳ ಬಗ್ಗೆ ನಿಷ್ಠೆಯಿಂದ ಕರುಣೆ ತೋರಬೇಕು. ಸತ್ಯವನ್ನು ನುಡಿಯಬೇಕು. ಈ ರೀತಿಯಲ್ಲಿ ಧರ್ಮದ ಗುಣವನ್ನು ಪ್ರತಿಪಾದಿಸಬೇಕು. ಇದೇ ರೀತಿಯಲ್ಲಿ ಶಿಷ್ಯರು ಗುರುಗಳನ್ನು ಗೌರವಿಸಬೇಕು. ಬಂಧುಗಳೊಡನೆ ಸಹ ಇದೇ ನಡೆವಳಿಕೆ ಸರಿಯಾದ ರೀತಿಯಲ್ಲಿ ಇರಬೇಕು. ಇದು ಪ್ರಾಚೀನ ಕಾಲದಿಂದ ಇದ್ದ ಸೂಕ್ತಿ. ಈ ನೀತಿ ಬಹುಕಾಲ ಉಳಿಯುವಂಥದು. ಪ್ರತಿಯೊಬ್ಬನೂ ಈ ರೀತಿಯೇ ವರ್ತಿಸಬೇಕು. ಶಾಸನದ ಕೊನೆಯಲ್ಲಿ 'ಚಪಡನೆಂಬ ಲೇಖಕ ಇದನ್ನು ಬರೆದ' ಎಂದು ಹೇಳಿದೆ.

ಗವಿಮಠ, ಪಾಲ್ಕಿಗುಂಡು, ಮಸ್ಕಿಯ ಶಾಸನಗಳು ಮತ್ತು ಅದೇ ವಿಷಯವಿರುವ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ ಶಾಸನಗಳ ಮೊದಲ ಭಾಗವನ್ನು ಒಂದನೆಯ ಲಘುಪ್ರಸ್ತರ ಶಾಸನ ಎಂದೂ ಬ್ರಹ್ಮಗಿರಿ ಗುಂಪಿನ ಶಾಸನಗಳಲ್ಲಿ ಮುಂದೆ ಇರುವ ಹೆಚ್ಚಿನ ಭಾಗವನ್ನು ಎರಡನೆಯ ಲಘುಪ್ರಸ್ತರ ಶಾಸನ ಎಂದು ನಿರ್ದೇಶಿಸುವ ರೂಢಿ ಇದೆ. ನಿಟ್ಟೂರು ಮತ್ತು ಉದೆಗೊಳಂಗಳಲ್ಲಿ ದೊರೆತಿರುವುದು ಲಘುಪ್ರಸ್ತರ ಶಾಸನಗಳೇ.

**ಆಡಳಿತ :** ಅಶೋಕನ ಶಾಸನಗಳಲ್ಲಿ ಹೇಳಿರುವ ವಿಷಯಗಳು ಭಾರತದ ಇತರೆಡೆಗಳಲ್ಲೂ ಕಂಡುಬರುವಂಥವಾಗಿದ್ದು ಅವುಗಳಿಂದ ಇಲ್ಲಿದ್ದ ಸಮಕಾಲೀನ ಸ್ಥಿತಿಗತಿಗಳ ಬಗ್ಗೆ ಹೆಚ್ಚಿನ ವಿಷಯಗಳೇನೂ ದೊರಕುವುದಿಲ್ಲ.

ಬ್ರಹ್ಮಗಿರಿ ಶಾಸನ

ಸುವರ್ಣಗಿರಿ ಬಹುಶಃ ಕರ್ನೂಲು ಜಿಲ್ಲೆಯ ಎರ್ರಗುಡಿ ಮಗಧ ಸಾಮ್ರಾಜ್ಯದ ದಕ್ಷಿಣದ ಆಡಳಿತ ಕೇಂದ್ರವಾಗಿದ್ದು ಅಲ್ಲಿ ಆರ್ಯಪುತ್ರ ಬಹುಶಃ ರಾಜವಂಶದ ಒಬ್ಬ ವ್ಯಕ್ತಿ ಮತ್ತು ಮಹಾಮಾತ್ರರು ಅಧಿಕಾರ ನಡೆಸಿತ್ತಿದ್ದರು, ಇಸಿಲವೆಂದು ಹೆಸರಿದ್ದ ಬ್ರಹ್ಮಗಿರಿ ಪರಿಸರದಲ್ಲಿದ್ದ ಊರು ಆ ಕಾಲದ ಮುಖ್ಯಪಟ್ಟಣಗಳಲ್ಲೊಂದಾಗಿತ್ತು. ಅಲ್ಲಿಯೂ ಮಹಾಮಾತ್ರರೆಂಬ ಅಧಿಕಾರಿಗಳು ಇರುತ್ತಿದ್ದರೆಂದು ಊಹಿಸಬಹುದಾಗಿದೆ.

**ಧರ್ಮ :** ಬೌದ್ಧಧರ್ಮ ಕರ್ನಾಟಕದಲ್ಲಿ ಹರಡಲು ಅಶೋಕ ಮುಖ್ಯ ಕಾರಣನಾಗಿರಬೇಕು. ಇವನ ಕಾಲದಲ್ಲಿ ಇವನು ವ್ಯವಸ್ಥೆ ಮಾಡಿದ್ದ ಬೌದ್ಧ ಮಹಾಸಭೆಯ ಅಧ್ಯಕ್ಷನಾಗಿದ್ದ ಮೊಗ್ಗಲಿಪುತ್ತ ತಿಸ್ಸ ಎಂಬುವನನ್ನು ಬೌದ್ಧಧರ್ಮ ಪ್ರಸಾರಕ್ಕಾಗಿ ಥೇರರಕ್ಖಿತ ಎಂಬುವನನ್ನು ವನವಾಸಿಗೆ

ಸನ್ನತಿ ಶಾಸನ

(ಇಂದಿನ ಬನವಾಸಿ) ಮತ್ತು ಥೇರ ಮಹದೇವ ಎಂಬುವನನ್ನು ಮಹಿಷಮಂಡಲಕ್ಕೆ (ದಕ್ಷಿಣ ಕರ್ನಾಟಕದ ಭಾಗ) ಕಳುಹಿಸಿದನೆಂದು ಮಹಾವಂಶ ಮತ್ತು ದೀಪವಂಶ ಎಂಬ ಸಿಂಹಳದ ಪ್ರಾಚೀನ ಬೌದ್ಧ ಗ್ರಂಥ'ಗಳು ಹೇಳಿವೆ. ಇದೇ ವಿಷಯ ಮಿಳಿಂದಪಞ್ಞ, ಧೂಪವಂಶ, ಸದ್ಧರ್ಮಸಂಗ್ರಹ ಮತ್ತು ಸಮಂತಪಾಸಾದಿಕಾ ಮುಂತಾದ ಗ್ರಂಥಗಳಿಂದಲೂ ತಿಳಿಯುತ್ತದೆ. 7ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಬಂದಿದ್ದ ಹ್ಯೂಯೆನ್ ತ್ಸಾಂಗ್ ಕೊಂಕಣಪುರದಲ್ಲಿ (ಈಗಿನ ಬನವಾಸಿ ಎಂದು ಊಹೆ) ಅಶೋಕ ಕಟ್ಟಿದ ಸ್ತೂಪಗಳು ಇವೆ ಎಂದು ಹೇಳಿದ್ದಾನೆ. *

**ಅಶೋಕ ಪೈ, ಕೆ.ಎ. :** 1946-. ಪ್ರಸಿದ್ಧ ಚಿಕಿತ್ಸಕ ಮನೋವಿಜ್ಞಾನಿ, ಲೇಖಕ, ಸಮಾಜಸೇವಕ ಹಾಗೂ ಚಲನಚಿತ್ರ ಸಾಹಿತಿ, ನಿರ್ಮಾಪಕ. 1946 ಡಿಸೆಂಬರ್ 30ರಂದು ಶಿವಮೊಗ್ಗದಲ್ಲಿ ಜನಿಸಿದರು. ತಂದೆ ಕಟೀಲು ಅಪ್ಪುಪೈ, ತಾಯಿ ವಿನೋದಾಬಾಯಿ. ಅಶೋಕ ಪೈ ಅವರ ಆರಂಭಿಕ ಶಿಕ್ಷಣ ಶಿವಮೊಗ್ಗದ ಮೇರಿ ಇಮ್ಯಾಕ್ಯುಲೇಟ್ ಕಾನ್ವೆಂಟ್, ದೇಶೀಯ ವಿದ್ಯಾಶಾಲೆ ಮತ್ತು ಸಹ್ಯಾದ್ರಿ ಕಾಲೇಜುಗಳಲ್ಲಿ ನಡೆಯಿತು. ವೈದ್ಯಕೀಯ ಶಿಕ್ಷಣವನ್ನು ಬೆಳಗಾಂವಿಯ ಜವಾಹರಲಾಲ ನೆಹರು ವೈದ್ಯಕೀಯ ವಿದ್ಯಾಲಯದಲ್ಲಿ ಮುಗಿಸಿದರು. ಚಿಕಿತ್ಸಕ ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ನಿಮ್ಹಾನ್ಸ್‌ನಿಂದ ಪಡೆದರು. ಅನಂತರ ವರ್ತನಾ ವೈದ್ಯಕೀಯ ಸಲಹೆ ಮತ್ತು ಮಾನಸಿಕ ಚಿಕಿತ್ಸೆಯಲ್ಲಿ ಫೆಲೋಶಿಪ್ ಮತ್ತು ಡಿಪ್ಲೊಮೊಗಳನ್ನು ಅಮೆರಿಕದ ಪ್ರತಿಷ್ಠಿತ ಅಂತಾರಾಷ್ಟ್ರೀಯ ಅಕಾಡೆಮಿ ಆಫ್ ಬಿಹೆವಿಯರಲ್ ಮೆಡಿಸನ್ (ಡಲ್ಲಾಸ್) ಸಂಸ್ಥೆಯಿಂದ ಪಡೆದರು. ಜವಾಹರಲಾಲ ನೆಹರು ವೈದ್ಯಕೀಯ ಕಾಲೇಜಿನಲ್ಲಿ ಸೈಕೋ ಫಾರ್ಮಾಕಾಲಜಿ ಅಧ್ಯಾಪಕರಾಗಿ ಕೆಲಕಾಲ ಸೇವೆಸಲ್ಲಿಸಿದರು. ಮಣಿಪಾಲಿನ ಕಸ್ತೂರ ಬಾ ವೈದ್ಯಕೀಯ ವಿದ್ಯಾಲಯದ ಮನೋವೈದ್ಯಕೀಯ ವಿಭಾಗದಲ್ಲಿ ಸಹಪ್ರಾಧ್ಯಾಪಕರಾಗಿ ನೇಮಕಗೊಂಡರು (1974-75). ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಮನೋವೈದ್ಯರಾಗಿ ದುಡಿದರು (1975-79). ಅನಂತರ

ಸರ್ಕಾರಿ ಕೆಲಸವನ್ನು ತ್ಯಜಿಸಿ ತಮ್ಮದೇ ಆದ ಮಾನಸ ನರ್ಸಿಂಗ್ ಹೋಂ ಶಿವಮೊಗ್ಗದಲ್ಲಿಯೇ ಪ್ರಾರಂಭಿಸಿದರು. ಇಂದು ಈ ನರ್ಸಿಂಗ್ ಹೋಂ ದಕ್ಷಿಣ ಭಾರತದ ಅತಿ ದೊಡ್ಡ ಮನೋರೋಗ ಚಿಕಿತ್ಸಾ ಕೇಂದ್ರವೆನಿಸಿದ್ದು ಅಂತಾರಾಷ್ಟ್ರೀಯ ಸಲಹಾ ಕೇಂದ್ರವಾಗಿಯೂ ಆಯ್ಕೆಗೊಂಡಿದೆ. ಪೈ ಅವರು ಅಮೆರಿಕದ ಕೊಲರಾಡೋ ವಿಶ್ವವಿದ್ಯಾಲಯದ ಅಂಗಸಂಸ್ಥೆ ಇಂಟರ್ ನ್ಯಾಷನಲ್ ಅಕಾಡೆಮಿ ಆಫ್ ಬಿಹೆವಿಯರಲ್ ಮೆಡಿಸಿನ್ ಕೌನ್ಸಿಲಿಂಗ್ ಅಂಡ್ ಸೈಕೋಥೆರಪಿ ಸಂಸ್ಥೆಯ ಅಂತಾರಾಷ್ಟ್ರೀಯ ಪ್ರಾಂತೀಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಇವರು ಕನ್ನಡದಲ್ಲಿ ಮನೋವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ವೈಚಾರಿಕ ಹಾಗೂ ಸೃಜನಶೀಲ ಕೃತಿಗಳನ್ನು ರಚಿಸಿದ್ದಾರೆ. ಮಾನಸ, ನಿಮ್ಮದು ಸಮಸ್ಯೆಯ ಮಗುವೇ, ಉಷಾಕಿರಣ, ಹಾಸ್ಯರಶ್ಮಿ, ಚಿತ್ತ ವಿಚಿತ್ರ, ಮನೋವೈಜ್ಞಾನಿಕ ಸತ್ಯ ಕಥೆಗಳು, ಆಶಾಕಿರಣ, ಮನೋಲೋಕ, ಮಕ್ಕಳ ಮನಸ್ಸು, ಆಘಾತ, ಚಿತ್ತಚೇತನ - ಇವು ಕೆಲವು ಮುಖ್ಯ ಕೃತಿಗಳು.

ಮಾನಸ ಚಿತ್ರ ನಿರ್ಮಾಣ ಸಂಸ್ಥೆಯ ಹೆಸರಿನಲ್ಲಿ ಇವರು ಕನ್ನಡ



ಚಲನಚಿತ್ರಗಳನ್ನೂ ನಿರ್ಮಿಸಿದ್ದಾರೆ. ಮಾನಸಿಕ ಸಮಸ್ಯೆ ಕುರಿತಂತೆ ವೈಜ್ಞಾನಿಕವಾದ ಬೆಳಕು ಚೆಲ್ಲಿ ಸಮಾಜಕ್ಕೆ ಸಕಾರಾತ್ಮ ಸಂದೇಶ ನೀಡುವುದು ಇವರ ಉದ್ದೇಶ. ಇವರು ನಿರ್ಮಿಸಿದ ಕಾಡಿನ ಬೆಂಕಿ ಮನೋ ಲೈಂಗಿಕ ಸಮಸ್ಯೆಯನ್ನು ಕುರಿತದ್ದು. ಈ ಚಿತ್ರಕ್ಕೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಲಭಿಸಿದೆ (1988-89). ಮಕ್ಕಳ ಮಾನಸಿಕ ಸಮಸ್ಯೆ ಕುರಿತಂತೆ ನಿರ್ಮಿಸಲಾದ ಉಷಾಕಿರಣ ರಾಜ್ಯ ಪ್ರಶಸ್ತಿಯನ್ನೂ ಪ್ರತಿಷ್ಠಿತ ಫಿಲ್ಮ್‌ಫೇರ್ ಪ್ರಶಸ್ತಿಯನ್ನೂ ಗಳಿಸಿದೆ. ಈ ಚಿತ್ರ ಲಂಡನ್ ಮತ್ತು ಅಮೆರಿಕದಲ್ಲಿ ಜರುಗಿದ ಅಂತಾರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲೂ ಪ್ರದರ್ಶನಗೊಂಡಿತು (1995). ಆಘಾತ ಇವರ ಇನ್ನೊಂದು ಚಿತ್ರ. ಇದಕ್ಕೆ ವಿಶೇಷ ರಾಜ್ಯ ಪ್ರಶಸ್ತಿ ಲಭಿಸಿದೆ. ಇವರು ದೂರದರ್ಶನಕ್ಕಾಗಿ ಹಿಂದಿಯಲ್ಲಿ ಅಂತರಾಳ ಎಂಬ ಧಾರಾವಾಹಿಯನ್ನು ನಿರ್ಮಿಸಿದ್ದಾರೆ.

ವೈದ್ಯಕೀಯ ರಂಗದಲ್ಲಿನ ಇವರ ಸಾಧನೆಗಾಗಿ ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರಕಿವೆ. ಇವುಗಳಲ್ಲಿ ಮುಖ್ಯವಾದವು: ಬೀಚೀ ಪ್ರಶಸ್ತಿ (1988), ಎಸ್.ಜಯರಾಂ ಪ್ರಶಸ್ತಿ (1989-90), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1991), ವಿಶ್ವೇಶ್ವರಯ್ಯ ನವರತ್ನ ಪ್ರಶಸ್ತಿ ಹಾಗೂ ಸಂದೇಶ ಮಾಧ್ಯಮ ಪ್ರಶಸ್ತಿ (1994), ಆರ್ಯಭಟ ಪ್ರಶಸ್ತಿ (1995-97-98), ಅತಿ ವಿಶಿಷ್ಟ ಚಿಕಿತ್ಸಾ ರಾಷ್ಟ್ರೀಯ ಪದಕ (1995), ಡಾ. ಎಚ್. ನರಸಿಂಹಯ್ಯ ಪ್ರಶಸ್ತಿ (1996), ಮುಂಬೈ ಕರ್ನಾಟಕ ಸಂಘದ ಹೊರನಾಡು ಕನ್ನಡಿಗ ಪ್ರಶಸ್ತಿ (1998), ಭಾರತ ಗೌರವ ಸನ್ಮಾನ (1998-99), ವಿದ್ಯಾರತ್ನ ಪ್ರಶಸ್ತಿ (1999), ಪ್ರಕೃತಿ ಪ್ರಶಸ್ತಿ (1999), ಲಂಡನ್ನಿನ ಅಂತಾರಾಷ್ಟ್ರೀಯ ಗೋಲ್ಡ್ ಸ್ಟಾರ್ ಪ್ರಶಸ್ತಿ (1999), ಮುಂಬೈ ಕನ್ನಡ ಪತ್ರಕರ್ತರ ಸಂಘದ ಹೃದಯವಂತ ಪ್ರಶಸ್ತಿ (2002), ಭಾರತೀಯ ಮನೋವೈದ್ಯಕೀಯ ಸಂಘದ ಸುವರ್ಣಮಹೋತ್ಸವ ಪದಕ, 1999ರಲ್ಲಿ ಡಾ.ಬಿ.ಸಿ.ರಾಯ್ ಪ್ರಶಸ್ತಿ ಲಭ್ಯವಾಯಿತು (2002).

ಅಶೋಕ ಪೈ ಅವರು ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯರೂ ಆಗಿದ್ದಾರೆ. ರಜನಿ ಪೈ ಇವರ ಪತ್ನಿ. ಇವರಿಗೆ ಪ್ರೀತಿ ಎಂಬ ಓರ್ವ ಪುತ್ರಿ ಇದ್ದು ಅವರೂ ವೈದ್ಯರಾಗಿದ್ದಾರೆ.

*

**ಅಶ್ವತ್ಥ** : 1912-94. ಪ್ರಸಿದ್ಧ ಕಥೆಗಾರರು. ಕೂಡೂಳು ಅಶ್ವತ್ಥ ನಾರಾಯಣರಾಯ ಇವರ ನಿಜನಾಮ. ಅಶ್ವತ್ಥ ಎಂಬ ಕಾವ್ಯನಾಮದಿಂದ ಸಾಹಿತ್ಯಲೋಕದಲ್ಲಿ ಜನಪ್ರಿಯರಾಗಿದ್ದಾರೆ. ಶಿವಮೊಗ್ಗ ಜಿಲ್ಲೆ ಕೂಡೂಳಿನಲ್ಲಿ 1912 ಜೂನ್ 16ರಂದು ಜನಿಸಿದರು. ತಂದೆ ಸೋಮಶೇಖರರಾವ್, ತಾಯಿ ಲಕ್ಷ್ಮೀದೇವಿ. ಈ ದಂಪತಿಗಳಿಗೆ ಅಶ್ವತ್ಥ ಮೂರನೆಯ ಮಗು. ಚಿಕ್ಕಂದಿನಲ್ಲಿಯೆ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆರೈಕೆಯಲ್ಲಿ ಬೆಳೆದರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ತಾಯಿಯ ತವರೂರಾದ ಚಿಕ್ಕಮಗಳೂರು ಜಿಲ್ಲೆಯ ಕೆರೆಗೋಡಿನಲ್ಲಿ ನಡೆಯಿತು. ಪ್ರೌಢಶಾಲಾ ವಿದ್ಯಾಭ್ಯಾಸ ಮೈಸೂರಿನ ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ನಡೆಯಿತು. ಶಾಲೆಯಲ್ಲಿ ಅತ್ಯಂತ ಬುದ್ಧಿವಂತ ಮತ್ತು ಚುರುಕಿನ ವಿದ್ಯಾರ್ಥಿಯಾಗಿದ್ದ ಇವರು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಪ್ರಥಮದರ್ಜೆಯಲ್ಲಿ ಪಾಸುಮಾಡಿದರು (1928). ಅನಂತರ ಆರ್ಥಿಕ ಸಂಕಷ್ಟದ ಕಾರಣದಿಂದ ಒಂದು ವರ್ಷ ಓದು ಮುಂದುವರಿಸಲಾಗಲಿಲ್ಲ. ಅನಂತರ ಪರಿಚಯದವರೊಬ್ಬರ ನೆರವಿನಿಂದ ಕಾಲೇಜು ಸೇರಿ ಎಂಜಿನಿಯರಿಂಗ್ ಪದವಿಯನ್ನು ಪ್ರಥಮ ರ್‍ಯಾಂಕಿನೊಂದಿಗೆ ಪಡೆದರು (1933). ಲಲಿತಮ್ಮ ಎಂಬುವವರನ್ನು ವಿವಾಹವಾದರು (1935). ಮೊದಲಿಗೆ ಚಿಕ್ಕಮಗಳೂರಿನಲ್ಲಿ ಸರ್ವೇಯರ್ ಆಗಿ ಉದ್ಯೋಗಕ್ಕೆ ಸೇರಿದರು. ಆಗ ಇವರ ಸಂಬಳ ಕೇವಲ ಐವತ್ತು ರೂಪಾಯಿ. ಅನಂತರ ಎಂಜಿನಿಯರ್ ಹುದ್ದೆ ದೊರೆತು ಸಿಮ್ಲಾಕ್ಕೆ ಹೋದರು (1936). ಕೆಲಸದ ಪರಿಸರ ಇಷ್ಟವಾಗದೆ ಕೆಲವು ಸಮಯದ ಅನಂತರ ಆ ಹುದ್ದೆಗೆ ರಾಜೀನಾಮೆ ನೀಡಿದರು. ಮುಂದೆ ಬನಾರಸ್‌ನಲ್ಲಿ ಮಿಲಿಟರಿ ಎಕ್ಸ್‌ಟೆನ್‌ಷನ್ ಆಫೀಸರ್ ಆಗಿ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕೋಲ್ಕೊತ್ತದ ಮದನಮೋಹನ ಮಾಳವೀಯರ ವಿದ್ಯಾಸಂಸ್ಥೆ ಇವರ ಕರ್ತವ್ಯನಿಷ್ಠೆಯನ್ನು ಕಂಡು ಇವರನ್ನು ಆಹ್ವಾನಿಸಿತು. ಅಲ್ಲಿ ಎಂಜಿನಿಯರಿಂಗ್ ಅಧ್ಯಾಪಕರಾಗಿ ಹೆಸರು ಗಳಿಸಿದರು. ಇವರ ಶಿಸ್ತುಬದ್ಧ ನಡೆವಳಿಕೆ ಹಾಗೂ ಕರ್ತವ್ಯನಿಷ್ಠೆಗಳನ್ನು ಮದನಮೋಹನ ಮಾಳವೀಯರೂ ಮೆಚ್ಚಿಕೊಂಡಿದ್ದರು. ಸ್ವಯಂ ನಿವೃತ್ತಿಯ ಅನಂತರ ಮೈಸೂರಿನಲ್ಲಿ ನೆಲಸಿ ಸಾಹಿತ್ಯ ಕೃಷಿಯಲ್ಲಿ ತೊಡಗಿದರು. ಒಮ್ಮೆ ವಾಯುಸೇವನೆಗೆ ಹೋಗುವ ಸಂದರ್ಭದಲ್ಲಿ ವಾಹನ ಅಪಘಾತಕ್ಕೊಳಗಾಗಿ ಕಾಲುಮುರಿದುಕೊಂಡು ಗುಣಮುಖವಾಗದೆ 1994 ಜೂನ್ 12ರಂದು ನಿಧನಹೊಂದಿದರು. ಇವರಿಗಿದ್ದ ಒಬ್ಬ ಮಗ ಮುಂಬಯಿಯಲ್ಲಿ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾದಲ್ಲಿ ಉನ್ನತಾಧಿಕಾರಿಯಾಗಿದ್ದು, ಈಗ ನಿವೃತ್ತಿ ಹೊಂದಿದ್ದಾರೆ.

ಅಶ್ವತ್ಥರದು ಒಂದು ವಿಶಿಷ್ಟ ವ್ಯಕ್ತಿತ್ವ. ಅದರಲ್ಲಿ ನಿರೀಶ್ವರ ವಾದಿತನದ, ವಾಸ್ತವತೆಯಲ್ಲಿ ಮಾತ್ರ ನಂಬಿಕೆಯುಳ್ಳ ಛಲದಭಾವ ಕಂಡು ಬರುತ್ತಿತ್ತು. ಪ್ರಚಾರ, ಸಭೆ-ಸಮಾರಂಭ, ಸನ್ಮಾನ ಮೊದಲಾದ ಸಂಗತಿಗಳನ್ನು ಅವರು ನಿರಾಕರಿಸುತ್ತಿದ್ದರು.

ಅಶ್ವತ್ಥರು ತಾವು ಸತ್ತ ಅನಂತರ ತಮ್ಮ ಮನೆಯನ್ನು ರಾಮಕೃಷ್ಣ ಆಶ್ರಮ ವಹಿಸಿಕೊಳ್ಳಬೇಕು ಮಗನಿಗೇನಾದರು ಮನೆ ಬೇಕಾದರೆ ಅದರ ಬೆಲೆಯನ್ನು ಕೊಟ್ಟು ಬಿಡಿಸಿಕೊಳ್ಳತಕ್ಕದ್ದು ಎಂದು ಉಯಿಲು ಬರೆದು ತೀರಿಕೊಂಡಿದ್ದರು. ಅದರಂತೆ ಇವರ ಮಗ ಅನಂತರ ಆ ಮನೆಯನ್ನು ಬೆಲೆಕೊಟ್ಟು ಬಿಡಿಸಿಕೊಂಡರು.

ಅಶ್ವತ್ಥರ ಸಾಹಿತ್ಯ ಸೃಷ್ಟಿ ಅಪಾರವಾದುದು. ಇವರು ಸುಮಾರು 180 ಕಥೆಗಳನ್ನು ಬರೆದಿದ್ದಾರೆ. ಈ ಎಲ್ಲ ಕಥೆಗಳು ಹದಿಮೂರು ಕಥಾ ಸಂಕಲನಗಳಲ್ಲಿ ಪ್ರಕಟಗೊಂಡಿವೆ. ದೂರದ ಕಾಳಿಯಲ್ಲಿ (1968), ಅಭಿನಯ ಜಗತ್ತು (1969), ದೀಪಾವಳಿಗೆ (1972), ಅಗ್ನಿಸಾಕ್ಷಿ (1973), ಮಹಾವಿಜಯ (1989), ಯದಾಯದಾಹಿ ಧರ್ಮಸ್ಯಃ (1990) - ಇವು ಕೆಲವು ಕಥಾಸಂಕಲನಗಳು. ಸಣ್ಣಕಥೆಗಳನ್ನಲ್ಲದೆ ಆರು ಕಾದಂಬರಿ, ಹದಿನೆಂಟು ನಾಟಕ, ಒಂದು ಪ್ರಬಂಧ ಸಂಕಲನ, ಒಂದು ಖಂಡ ಕಾವ್ಯವನ್ನೂ ಇವರು ರಚಿಸಿದ್ದಾರೆ. ಮುನಿಯನ ಮಾದರಿ (1949), ಮರ್ಯಾದೆ ಮಹಲು (1951), ಬರದ ಸಿರಿ (1965), ಹಂಬಲ (1968), ಅಜ್ಞಾತನ ನಂಜುಂಡಾಯಣ (1983), ರಂಗನಾಯಕಿ (1988) - ಇವು ಕೆಲವು ಕಾದಂಬರಿಗಳು. ಬಲಿ (1955), ನ್ಯಾಯಾಧೀಶ (1965), ಕ್ರಾಂತಿಕಾರಿ (1989), ಹುಚ್ಚ (1989), ಹೆಣ್ಣು (1989) - ಇವು ಇವರ

ಕೆಲವು ನಾಟಕಗಳು. ಮಹಾಯುದ್ಧ (1962) ಒಂದು ಖಂಡಕಾವ್ಯ. ಇವರ ಈ ಎಲ್ಲ ಕೃತಿಗಳ ಹಿನ್ನೆಲೆಯಲ್ಲಿ ಬದುಕಿನ ಮೌಲ್ಯಗಳ ಹುಡುಕಾಟವಿದೆ.

ಅಶ್ವತ್ಥರು ಸಮಾಜದಲ್ಲಿ ಕಂಡುಬರುತ್ತಿದ್ದ ಕ್ರೌರ್ಯ, ಅನ್ಯಾಯ, ಅಧರ್ಮ, ದೌರ್ಜನ್ಯಗಳನ್ನು ಖಂಡಿಸುವ ಸಲುವಾಗಿ ತಮ್ಮ ಕಥಾ ಮಾಧ್ಯಮವನ್ನು ಬಳಸಿಕೊಂಡರು. ಸಮಾಜದ ದೀನ ದಲಿತರ, ಶೋಷಣೆಗೊಳಗಾದ ಸ್ತ್ರೀಯರ ಬಗೆಗೆ ಇವರಿಗಿದ್ದ ಪ್ರೀತಿ, ಅನುಕಂಪ ಈ ಕತೆಗಳ ಮೂಲಕ ಅಭಿವ್ಯಕ್ತಗೊಂಡಿದೆ. ಸಮಾಜಮುಖಿಯಾದ ಚಿಂತನೆ ಇವರ ಸಾಹಿತ್ಯದ ಕೇಂದ್ರ ಆಶಯವಾಗಿ ಅರಳಿರುವುದನ್ನು ಕಾದಂಬರಿಗಳಲ್ಲಿ ನಾವು ಗುರುತಿಸಬಹುದು. ಹಂಬಲ ಇವರ ಮಹತ್ತ್ವಾಕಾಂಕ್ಷೆಯ ಕಾದಂಬರಿ. ಗಾಂಧೀಜಿಯವರ ಗ್ರಾಮ ಸಂಸ್ಕೃತಿಯ ನೆಲೆಯಿಂದ ಬರೆದಂಥದು. ವಾಸ್ತವ ಆದರ್ಶಗಳ ಸಂಘರ್ಷವನ್ನು ಇಲ್ಲಿ ಅತ್ಯಂತ ಆಪ್ತವಾಗಿ ಚಿತ್ರಿಸಲಾಗಿದೆ. (ಜೆ.ಎಸ್.)

**ಅಶ್ವತ್ಥ, ಕೆ.ಎಸ್. :** 1925-. ಚಲನಚಿತ್ರ ನಟ. ಪೂರ್ಣ ಹೆಸರು ಕರಗನಹಳ್ಳಿ ಸುಬ್ಬರಾಯ ಅಶ್ವತ್ಥನಾರಾಯಣ. ತಂದೆ ಸುಬ್ಬರಾಯರು ಹೊಳೆನರಸೀಪುರ ತಾಲ್ಲೂಕಿನ ಕರಗನಹಳ್ಳಿಯಲ್ಲಿ ಪುರೋಹಿತರಾಗಿದ್ದರು. ತಾಯಿ ಸಾಕಮ್ಮ. ಅಶ್ವತ್ಥರು ಹುಟ್ಟಿದ್ದು ಮೈಸೂರಿನಲ್ಲಿ. ಇವರನ್ನು

ಸಾಕಿದವರು ಸೋದರತ್ತೆ ತಿಪ್ಪಮ್ಮನವರು. ಶಿಕ್ಷಣ ಇಂಟರ್‌ಮೀಡಿಯೆಟ್‌ವರೆಗೆ. ಇವರು 1942ರ ಚಳವಳಿಯಲ್ಲಿ ಭಾಗವಹಿಸಿದ್ದರಿಂದ ಹಾಗೂ ಅದೇಕಾಲಕ್ಕೆ ಸೋದರತ್ತೆ ತಿಪ್ಪಮ್ಮ ತೀರಿ ಕೊಂಡಿದ್ದರಿಂದ ಇವರ ವಿದ್ಯಾಭ್ಯಾಸ ಅಷ್ಟಕ್ಕೇ ನಿಂತಿತು. ಆರ್ಥಿಕ ಅಡಚಣೆಗಳಿಂದಾಗಿ ಪುನಃ ಕಾಲೇಜು ಸೇರಲಾಗಲಿಲ್ಲ. ಪಡಿತರ ಕಾರ್ಯಾಲಯದಲ್ಲಿ ಗುಮಾಸ್ತರೆಂದು ಸೇರಿ (1944) ಅನಂತರ ಫುಡ್ ಇನ್ಸ್‌ಸ್ಪೆಕ್ಟರ್ ಕೆಲಸಕ್ಕೆ ಸೇರಿದರು (1947). ಜಿಲ್ಲಾಧಿಕಾರಿಗಳ ಕಚೇರಿ ಯಲ್ಲಿ ಶೀಘ್ರಲಿಪಿಕಾರ ರಾಗಿಯೂ ಇದ್ದರು. ಸರ್ಕಾರಿ ನೌಕರಿಯಲ್ಲಿ ಇವರು ಇದ್ದುದು ಹತ್ತು ವರ್ಷ. ಇವರು ಬಣ್ಣದ ಜಗತ್ತನ್ನು ಪ್ರವೇಶಿಸಿದ್ದು ಆಕಸ್ಮಿಕ. ಮೈಸೂರು ಆಕಾಶವಾಣಿಯ ಕಲಾವಿದ ಎನ್.ಎಸ್.ವಾಮನರ ಪ್ರೋತ್ಸಾಹದಿಂದ ರೇಡಿಯೋ ಮತ್ತು ರಂಗಭೂಮಿ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಅದೇ ಸಮಯದಲ್ಲಿ ನಾಟಕದಲ್ಲಿ ಆಸಕ್ತಿ ಇರುವ ಸ್ನೇಹಿತರ ಬಳಗ ದೊರಕಿತು. ಹೀಗಾಗಿ ಹವ್ಯಾಸಿ ಕಲಾವಿದರಾದರು. ಇವರು ಅಭಿನಯಿಸಿದ ಮೊದಲ ನಾಟಕ ಆಷಾಢಭೂತಿ. ಮೈಸೂರಿನ ಶಾರದಾವಿಲಾಸ ಕಾಲೇಜಿನ ಡ್ರಿಲ್ ಉಪಾಧ್ಯಾಯರೊಬ್ಬರು ನಿಧನರಾದಾಗ ಅವರ ಕುಟುಂಬದ ಸಹಾಯಾರ್ಥ ಅಭಿನಯಿಸಲಾದ ಪರ್ವತವಾಣಿಯವರ ವಾರ್ಷಿಕೋತ್ಸವ ಎಂಬ ನಾಟಕದಲ್ಲಿ (1954) ಅಶ್ವತ್ಥರ ರಂಗಣ್ಣನ ಪಾತ್ರದ ಅಭಿನಯ ತುಂಬ ಮೆಚ್ಚುಗೆ ಗಳಿಸಿತು. ಈ ನಾಟಕ ವೀಕ್ಷಿಸಿದ ಚಲನಚಿತ್ರ ನಿರ್ದೇಶಕ ಕೆ.ಸುಬ್ರಹ್ಮಣ್ಯ ಅವರು ತಮ್ಮ ಸ್ತ್ರೀರತ್ನ ಚಿತ್ರಕ್ಕೆ ಇವರನ್ನು ಆಯ್ಕೆಮಾಡಿದರು. ಇವರು ಚಿತ್ರರಂಗ ಪ್ರವೇಶಿಸಿದ್ದಕ್ಕೆ ಮನೆಯವರಿಂದ ಪ್ರಬಲ ವಿರೋಧ ಬಂತು. ಆಗ ಕನ್ನಡ ಚಿತ್ರರಂಗ ಆರ್ಥಿಕ ಮುಗ್ಗಟ್ಟನ್ನೆದುರಿಸುತ್ತಿತ್ತು. ಇದರಿಂದ ಇವರನ್ನು ನಂಬಿದ ಸಂಸಾರ ಪ್ರಾರಂಭದ 5-6 ವರ್ಷ ಕಷ್ಟದ ದಾರಿ ತುಳಿಯಬೇಕಾಯಿತು. ಆದ್ದರಿಂದ ಇವರು ಚಲನಚಿತ್ರರಂಗವನ್ನೇ ನಂಬಿಕೊಳ್ಳದೆ ಸಹಕಲಾವಿದರಾದ ರಾಜಕುಮಾರ್, ಜಿ.ವಿ. ಅಯ್ಯರ್, ನರಸಿಂಹರಾಜು ಅವರೊಂದಿಗೆ ಸೇರಿಕೊಂಡು ಕರ್ನಾಟಕದ ಹಲವು ಊರುಗಳಲ್ಲಿ ನಾಟಕಗಳನ್ನಾಡಿದರು.

ಅಶ್ವತ್ಥರು ಇದುವರೆಗೆ ಸುಮಾರು 360ಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಕಿತ್ತೂರುಚೆನ್ನಮ್ಮ, ಗಾಳಿಗೋಪುರ, ನಂದಾದೀಪ, ಮಿಸ್‌ಲೀಲಾವತಿ, ರಾಮಾಂಜನೇಯಯುದ್ಧ, ಬೆಳ್ಳಿಮೋಡ, ಗೃಹಲಕ್ಷ್ಮಿ, ಜೇನುಗೂಡು, ಗೆಜ್ಜೆಪೂಜೆ, ಶರಪಂಜರ, ಒಂದೇ ಬಳ್ಳಿಯ ಹೂಗಳು, ನಾಗರಹಾವು, ಬಂಗಾರದಪಂಜರ, ಉಪಾಸನೆ, ಮಗ ಮೊಮ್ಮಗ, ದೇವರಗುಡಿ, ಒಡಹುಟ್ಟಿದವರು, ದಳವಾಯಿ, ನಕ್ಸಲೈಟ್, ಲಾ ಅಂಡ್ ಆರ್ಡರ್, ಶಬ್ದವೇಧಿ, ಕಿಚ್ಚ. ರಾಜಕುಮಾರ್ ಅವರೊಂದಿಗೆ 90 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನವಜೀವನ ಚಿತ್ರದಲ್ಲಿ ಪಾದ್ರಿ, ಮಿಸ್ ಲೀಲಾವತಿಯಲ್ಲಿ ತಂದೆ, ನಾಗರಹಾವಿನಲ್ಲಿ ಚಾಮಯ್ಯ ಮೇಸ್ಟ್ರು, ಮಂಗಳ ಮುಹೂರ್ತದಲ್ಲಿ ಸೋದರಮಾವ - ಈ ಪಾತ್ರಗಳಲ್ಲಿ ಇವರ ಅಭಿನಯ ಬಹಳ ಮೆಚ್ಚುಗೆ ಗಳಿಸಿದೆ. ಇವರು ದೂರದರ್ಶನದ ಸ್ವೀಕಾರ, ಸಾಕ್ಷಾತ್ಕಾರ, ಸ್ವಾತಿ ಮುತ್ತು ಮತ್ತು ದುರ್ಗಾ ಧಾರಾವಾಹಿಗಳಲ್ಲಿ ನಟಿಸಿದ್ದಾರೆ.

ಮಂಗಳ ಮುಹೂರ್ತ, ನವಜೀವನ, ಮಿಸ್ ಲೀಲಾವತಿ - ಈ ಚಿತ್ರಗಳಲ್ಲಿನ ಇವರ ಅಭಿನಯಕ್ಕಾಗಿ ರಾಷ್ಟ್ರಪತಿಗಳಿಂದ ಬಹುಮಾನವೂ ನಮ್ಮಮಕ್ಕಳು, ಬೆಳ್ಳಿಮೋಡ, ಗೆಜ್ಜೆಪೂಜೆ, ಶರಪಂಜರ, ನಾಗರಹಾವು, ಸಿಪಾಯಿರಾಮು, ಮುತ್ತಿನಹಾರ -ಇವುಗಳಲ್ಲಿನ ಅಭಿನಯಕ್ಕಾಗಿ ರಾಜ್ಯಪ್ರಶಸ್ತಿಯೂ ಲಭಿಸಿದೆ. ಕರುಣೆಯೇ ಕುಟುಂಬದ ಕಣ್ಣು, ಮಾವನ ಮಗಳು, ನಂದಾದೀಪ, ಮನೆಅಳಿಯ, ಒಂದೇ ಬಳ್ಳಿಯ ಹೂಗಳು, ಮನಶ್ಶಾಂತಿ ಮುಂತಾದ ಚಿತ್ರಗಳಲ್ಲಿ ಇವರು ನೀಡಿದ ಅಭಿನಯವನ್ನು ಮೆಚ್ಚಿ ಮದರಾಸಿನ ಚಿತ್ರಪ್ರೇಮಿಗಳ ಸಂಘ ಇವರನ್ನು ಆರು ಬಾರಿ ಗೌರವಿಸಿದೆ. ಕರುಣೆಯೇ ಕುಟುಂಬದ ಕಣ್ಣು ಮತ್ತು ಮಿಸ್ ಲೀಲಾವತಿ ಚಿತ್ರಗಳಲ್ಲಿ ಅಶ್ವತ್ಥರು ನಿರ್ವಹಿಸಿದ ಪಾತ್ರಕ್ಕಾಗಿ ಬೆಂಗಳೂರಿನ ಚಿತ್ರ ಪ್ರೇಮಿಗಳ ಸಂಘ ಇವರನ್ನು ಸನ್ಮಾನಿಸಿದೆ. ಇವರಿಗೆ ರಾಜಕುಮಾರ್ ಪ್ರಶಸ್ತಿ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

ಚಿತ್ರರಂಗ ಪ್ರವೇಶಿಸಿದಂದಿನಿಂದಲೂ ಇಂದಿನವರೆಗೂ ಕನ್ನಡ ಚಿತ್ರಗಳಲ್ಲಿಯೇ ಇವರು ಅಭಿನಯಿಸಿದ್ದಾರೆ. ಶಾಂತಾ ಇವರ ಪತ್ನಿ. ಇವರಿಗೆ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು. ಮಗ ಶಂಕರ ಅಶ್ವತ್ಥ ಚಲನಚಿತ್ರ ಮತ್ತು ದೂರದರ್ಶನ ಧಾರಾವಾಹಿಗಳಲ್ಲಿ ನಟಿಸುತ್ತಿದ್ದಾರೆ. *

**ಅಶ್ವತ್ಥನಾರಾಯಣರಾವ್, ಸಿ. :** ಮಕ್ಕಳ ಪುಸ್ತಕವೆಂಬ ಸಚಿತ್ರ ಮಾಸಪತ್ರಿಕೆಯನ್ನು ಮಕ್ಕಳಿಗಾಗಿಯೆ ಪ್ರಕಟಿಸಿದ ಪ್ರಥಮರು. ಸುಮಾರು 40 ವರ್ಷಗಳವರೆಗೆ ನಡೆದ ಈ ಪತ್ರಿಕೆಯಲ್ಲಿ ನಗೆಬರೆಹಗಳು, ಸಣ್ಣ ಕಥೆಗಳು, ಸುದ್ದಿ ಸಂಗ್ರಹಗಳನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸಿರುತ್ತಿತ್ತು. ಮಕ್ಕಳಿಗಾಗಿ ಶಿಶುವಿಹಾರವೊಂದನ್ನು ತೆರೆದು, ತಮ್ಮ ಪ್ರಯೋಗಗಳ ಫಲವಾಗಿ ಅನುಭವಿಸಿದ ರಸಾನುಭವಗಳನ್ನೂ ಮಕ್ಕಳ ಪುಸ್ತಕದಲ್ಲಿ ಪ್ರಕಟಿಸುತ್ತಿದ್ದರು. ಅಶ್ವತ್ಥನಾರಾಯಣರಾಯರು ನವಜೀವನ ಎಂಬ ಕನ್ನಡ ದಿನಪತ್ರಿಕೆಯ ಸಂಪಾದಕರೂ ಆಗಿದ್ದರು. *

**ಅಶ್ವಥ್, ಸಿ. :** 1939-. ಸುಗಮ ಸಂಗೀತ ಗಾಯಕ, ಚಲನಚಿತ್ರ ಹಿನ್ನೆಲೆಗಾಯಕ. 1939 ಡಿಸೆಂಬರ್ 29ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಶ್ರೀಧರರಾಮರಾಯ, ತಾಯಿ ಶಾರದಮ್ಮ. ತಂದೆ ತಾಯಿಗಳಿಗೆ ಇವರು ಮೂರನೆಯ ಮಗ. ಇವರ ಸೋದರತ್ತೆಗೆ ವೀಣೆ ನುಡಿಸುವುದರಲ್ಲಿ ಪರಿಶ್ರಮವಿತ್ತು. ಅಣ್ಣಂದಿರಾದ ವಿಶ್ವನಾಥರಾವ್ ಹಾಗೂ ನಾಗರಾಜರಾವ್ ಇವರಿಬ್ಬರಿಗೂ ನಾಟಕ ಹಾಗೂ ಸಂಗೀತದಲ್ಲಿ ಪ್ರವೇಶವಿತ್ತು. ಮನೆಯ ಇಂಥ ವಾತಾವರಣವೇ ಅಶ್ವಥ್ ಅವರು ಕಲಾದೇಗುಲವನ್ನು ಪ್ರವೇಶಿಸಲು ಪ್ರೇರಕಶಕ್ತಿಯಾಗಿ ಕೆಲಸ ಮಾಡಿತು.

ಬಾಲಕನಾಗಿದ್ದಾಗ ಪಿ.ಕಾಳಿಂಗರಾವ್, ಕೆ.ಎಲ್.ಸೈಗಲ್ ಹಾಗೂ ಮಹಮ್ಮದ್ ರಫಿಯವರ ಗಾಯನದಿಂದ ಪ್ರಭಾವಿತರಾದರು. ಮಾಧ್ಯಮಿಕ ಶಾಲೆ, ಪ್ರೌಢಶಾಲೆ ದಿನಗಳಲ್ಲಿ ರಾಮಕೃಷ್ಣಾಶ್ರಮದ ಭಜನೆಗಳಲ್ಲಿ ಭಾಗವಹಿಸುತ್ತಿದ್ದರು. ಕಾಲೇಜು ದಿನಗಳಲ್ಲೇ ಇವರಿಗೆ ಕನ್ನಡ ಕವನಗಳಿಗೆ ಸ್ವರಸಂಯೋಜಿಸುವ ಆಸಕ್ತಿ ಬೆಳೆದಿತ್ತು. ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. ಪದವಿ ಪಡೆದ ಅನಂತರ ಇವರು ಬೆಂಗಳೂರಿನ ಐ.ಟಿ.ಐ.

ನಲ್ಲಿ 27 ವರ್ಷಗಳ ಕಾಲ ಕೆಲಸಮಾಡಿ ಎಕ್ಸಿಕ್ಯೂಟಿವ್ ಎಂಜಿನಿಯರ್ ಆಗಿ ನಿವೃತ್ತಿ ಪಡೆದರು. ಇವರಿಗೆ ಸಂಗೀತದಲ್ಲಿ ವಿಶೇಷ ಆಸಕ್ತಿ ಇದ್ದುದರಿಂದ ಏಳು ವರ್ಷಗಳ ಕಾಲ ದೇವಗಿರಿ ಶಂಕರರಾವ್ ಜೋಶಿಯವರ ಬಳಿ ಹಿಂದುಸ್ಥಾನಿ ಸಂಗೀತವನ್ನು ಅಭ್ಯಾಸ ಮಾಡಿದರು.

ಸಂಗೀತ ಸಂಯೋಜಕರಾಗಿ ನಾಟಕ, ಚಲನಚಿತ್ರ, ಸುಗಮಸಂಗೀತ ಈ ಮೂರೂ ಕ್ಷೇತ್ರಗಳಿಗೆ ಅಶ್ವತ್ಥ್ ಅವರು ಮಹತ್ತರ ಕೊಡುಗೆ ನೀಡಿದ್ದಾರೆ. ಇವರು ಸಂಯೋಜಕರಾಗಿ ಮೊದಲು ಪರಿಚಯವಾದದ್ದು ನಾಟಕ ಕ್ಷೇತ್ರದ ಮೂಲಕ. ನಟರಂಗ ಹವ್ಯಾಸಿ ನಾಟಕ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ, ಅಲ್ಲಿನ ಎಲ್ಲ ನಾಟಕಗಳಿಗೂ ಇವರು ಸಂಗೀತ ನೀಡಿದರು. ಕುವೆಂಪು ವಿರಚಿತ ಶ್ಮಶಾನಕುರುಕ್ಷೇತ್ರ ನಾಟಕದ ಸಂಗೀತ ಸಂಯೋಜನೆಯ ನಾಂದಿಯೊಂದಿಗೆ ಅಶ್ವತ್ಥ್ ಅವರ ಸಂಗೀತ ಸಂಯೋಜನೆಯ ಕೈಂಕರ್ಯ ಆರಂಭವಾಯಿತು. ಲಂಕೇಶರ ಬಿರುಕು ಹಾಗೂ ಗಿರೀಶ್ ಕಾರ್ನಾಡರ ಹಯವದನ ನಾಟಕಗಳ ಸಂಗೀತವೂ ಇವರಿಗೆ ಯಶಸ್ಸನ್ನು ತಂದುಕೊಟ್ಟಿತು. ಮಾಸ್ತಿಯವರ ಕಾಕನಕೋಟೆ ನಾಟಕದ ಹಾಡುಗಳಂತೂ ಅಶ್ವತ್ಥ್ ಅವರ ಹೆಸರನ್ನು ಕನ್ನಡಿಗರ ಮನೆಮನೆಗೂ ಮುಟ್ಟಿಸಿತು. ಈ ಚಿತ್ರದ ಹಾಡಿನ ಧಾಟಿಯನ್ನು ಎಲ್ಲರೂ ಮೆಲಕು ಹಾಕುವಂತೆ ಮಾಡಿತು. ತುಘಲಕ್, ತಲೆದಂಡ, ನಾಗಮಂಡಲ, ರಕ್ತಾಕ್ಷಿ, ಬಿರುಗಾಳಿ, ಒಥೆಲೋ, ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್, ಊರುಭಂಗ, ಭೈರವಿ, ಮೃಚ್ಛಕಟಿಕ, ಕಕೇಶಿಯನ್ ಚಾಕ್ ಸರ್ಕಲ್ - ಇವು ಅವರು ಸಂಗೀತ ನೀಡಿದ ಕೆಲವು ಪ್ರಮುಖ ನಾಟಕಗಳು.



ಚಲನಚಿತ್ರಕ್ಷೇತ್ರದಲ್ಲೂ ಇವರ ಕೊಡುಗೆ ಅನುಪಮವಾದುದು. ಕಾಕನಕೋಟೆ ಚಲನಚಿತ್ರಕ್ಕೆ ಇವರು ಸಂಗೀತ ನೀಡಿದರು. ಶಿಶುನಾಳ ಶರೀಫ್, ಮೈಸೂರುಮಲ್ಲಿಗೆ, ಚಿನ್ನಾರಿಮುತ್ತ, ಕೊಟ್ರೇಶಿಕನಸು, ನಾಗಮಂಡಲ ಚಿತ್ರಗಳ ಚಿತ್ರಕಥೆಯಲ್ಲೂ ಪಾಲ್ಗೊಂಡಿದ್ದೊಂದು ವಿಶೇಷ. ಮೊದಮೊದಲು ಎಲ್. ವೈದ್ಯನಾಥನ್ ಹಾಗೂ ಗುಣಸಿಂಗ್ ಅವರ ಜೊತೆ ಸೇರಿ ಸಂಗೀತ ನೀಡುತ್ತಿದ್ದವರು 1986ರ ಅನಂತರ ಸಂಗೀತದ ಸಂಪೂರ್ಣ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡು ಅನೇಕ ಕಲಾವಿದರಿಗೆ ಪ್ರೋತ್ಸಾಹ ನೀಡಿದರು.

ಅಶ್ವತ್ಥ್ ಇಲ್ಲಿಯವರೆಗೂ 65ಕ್ಕೂ ಹೆಚ್ಚು ಧ್ವನಿಸುರುಳಿಗಳಿಗೆ ಸ್ವರಸಂಯೋಜಿಸಿ ಹಾಡಿದ್ದಾರೆ ಹಾಗೂ ಹಾಡಿಸಿದ್ದಾರೆ. ದೂರದರ್ಶನಗಳಲ್ಲೂ ಪಾಲ್ಗೊಂಡಿದ್ದಾರೆ. ಕಿರುತೆರೆಯಲ್ಲೂ ಇವರು ಸಂಗೀತದ ಛಾಪನ್ನು ಒತ್ತಿದ್ದಾರೆ. ಮಾಯಾಮೃಗ, ಮನ್ವಂತರ, ಗೃಹಭಂಗ, ಮುಕ್ತ ಇತ್ಯಾದಿ. ಕಿರುತೆರೆಯ ಧಾರಾವಾಹಿಗಳ ಶೀರ್ಷಿಕೆಗೆ ಇವರು ಹಾಡಿದ್ದು ಮನೆಮಾತಾಗಿದೆ. ಸುಗಮ ಸಂಗೀತ ಮತ್ತು ಸ್ವರ ಮಾಧುರಿ ಕುರಿತು ಇವರು ಎರಡು ಗ್ರಂಥಗಳನ್ನು ರಚಿಸಿದ್ದಾರೆ.

ಇವರಿಗೆ ಅನೇಕ ಗೌರವಗಳೂ ಪ್ರಶಸ್ತಿಗಳೂ ದೊರಕಿವೆ. ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಇವರು ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದರು (1998). 1995 ಹಾಗೂ 2000ರದಲ್ಲಿ ಅಮೆರಿಕ ಪ್ರವಾಸ ಮಾಡಿ ಸುಗಮ ಸಂಗೀತ ಪ್ರಚಾರ ಕೈಗೊಂಡರು. ಸ್ಪಂದನ ಹಾಗೂ ಚಿನ್ನಾರಿಮುತ್ತ ಚಿತ್ರಸಂಗೀತಕ್ಕಾಗಿ, ವರ್ಷಋತು ಚಿತ್ರದ ಹಿನ್ನೆಲೆಗಾಯನಕ್ಕಾಗಿ ಇವರಿಗೆ ರಾಜ್ಯಪ್ರಶಸ್ತಿ ದೊರೆಕಿದೆ. ಮೈಸೂರುಮಲ್ಲಿಗೆ ಚಿತ್ರಕ್ಕೆ ಇವರಿಗೆ ಫಿಲ್ಮ್‌ಫೇರ್ ಪ್ರಶಸ್ತಿ ದೊರೆಕಿದೆ.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ (1985), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1986), ಸಂತ ಶಿಶುನಾಳ ಷರೀಫ್ ಪ್ರಶಸ್ತಿ (1998) - ಇವು ಇವರಿಗೆ ದೊರಕಿದ ಕೆಲವು ಮುಖ್ಯ ಪ್ರಶಸ್ತಿಗಳು.

(ಎಚ್.ಆರ್.ಎಲ್.)

**ಅಶ್ವಿನಿ ನಾಚಪ್ಪ** : 1967-. ಪ್ರಸಿದ್ಧ ಓಟಗಾರ್ತಿ. 1967 ಅಕ್ಟೋಬರ್ 21ರಂದು ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಜನಿಸಿದರು. ತಂದೆ-ತಾಯಿ ಮೊದಲು ಮೈಸೂರು ಮತ್ತು ಕೋಲ್ಕತ್ತದಲ್ಲಿದ್ದು ಅನಂತರ ಬೆಂಗಳೂರಿನಲ್ಲಿ ನೆಲಸಿದರು. ಅಶ್ವಿನಿ ಮತ್ತು ಈಕೆಯ ಸಹೋದರಿ ಪುಷ್ಪ ಬಾಲ್ಯದಿಂದಲೂ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸಾಧನೆಯಲ್ಲಿ ತೊಡಗಿದರು. ಓಟಗಾರ್ತಿಯರಾದರು. ಕಠ್ಮಂಡುವಿನ ದಕ್ಷಿಣ ಏಷ್ಯ ಫೆಡರೇಷನ್ (ಎಸ್‌ಎಎಫ್) ಆಟೋಟಗಳ ಸ್ಪರ್ಧೆಯಲ್ಲಿ ಭಾಗವಹಿಸಿದರು. ಇದು ಇವರು ಭಾಗವಹಿಸಿದ ಮೊದಲನೆಯ ಅಂತಾರಾಷ್ಟ್ರೀಯ ಕ್ರೀಡಾಕೂಟ. ಇದರಲ್ಲಿ ಪುಷ್ಪ 4x400 ಮೀ ರಿಲೇ ಓಟದಲ್ಲಿ ಚಿನ್ನದ ಪದಕವನ್ನೂ ಅಶ್ವಿನಿ 4x100ಮೀ ರಿಲೆಯಲ್ಲಿ ಕಂಚಿನ ಪದಕವನ್ನೂ ಪಡೆದರು. ಅಶ್ವಿನಿ ಅವರ ಭವಿಷ್ಯದ ಬಗ್ಗೆ ಕ್ರೀಡಾಭಿಮಾನಿಗಳಲ್ಲಿ ಅಪಾರ ಭರವಸೆ ಮೂಡಿತು. ಇವರ ಓಟದ ತೀವ್ರತೆ ಹಾಗೂ ಶೈಲಿ ಅಪೂರ್ವವೆನಿಸಿತ್ತು. ಇದಕ್ಕೆ ಮುನ್ನ 1985ರ ಏಷ್ಯನ್ ಟ್ರ್ಯಾಕ್ ಅಂಡ್ ಫೀಲ್ಡ್ ಮೀಟ್‌ನಲ್ಲಿ 400ಮೀ ಕಂಚಿನ ಪದಕ ಪಡೆದರು. 1986ರ ಅಖಿಲ ಭಾರತ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಇವರು ಪಾಲ್ಗೊಂಡು, 200ಮೀ ಹಾಗೂ 1987ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 100ಮೀ ಓಟಗಳಲ್ಲಿ ಚಿನ್ನದ ಪದಕಗಳನ್ನು ಗಳಿಸಿದರು.

1987ರಲ್ಲಿ ಸಿಂಗಪುರದಲ್ಲಿ ನಡೆದ ಏಷ್ಯನ್ ಟ್ರ್ಯಾಕ್ ಅಂಡ್ ಫೀಲ್ಡ್ ಮೀಟ್‌ನಲ್ಲಿ 100ಮೀ ಓಟದಲ್ಲಿ ಚಿನ್ನದ ಪದಕವನ್ನೂ 200ಮೀ ಓಟದಲ್ಲಿ ಬೆಳ್ಳಿಯ ಪದಕವನ್ನೂ ಗಳಿಸಿ ಭಾರತದ ವೇಗದ ಓಟಗಾರ್ತಿಯರ ಗುಂಪಿಗೆ ಸೇರ್ಪಡೆಗೊಂಡರು. 1989ರ ಎಸ್.ಎ.ಟಿ. ಗೇಮ್ಸ್‌ನಲ್ಲಿ ಇವರು ಇಸ್ಲಾಮಾಬಾದಿನಲ್ಲಿ 2 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡು ಪಿ.ಟಿ.ಉಷಾರವರಿಗೆ ಸರಿಸಾಟಿಯಾದ ಓಟಗಾರ್ತಿ ಎನಿಸಿಕೊಂಡರು.

1991ರಲ್ಲಿ ಕೋಲ್ಕತ್ತದ ಸಾಲ್ಟ್‌ಲೇಕ್ ಸ್ಟೇಡಿಯಮ್‌ನಲ್ಲಿ ಇವರ ಸಾಧನೆ ಅಮೋಘವಾದದ್ದು. ಇವರು ಭಾಗವಹಿಸಿದ ಎಲ್ಲ ಓಟಗಳಲ್ಲಿಯೂ ಚಿನ್ನದ ಪದಕ ಗಳಿಸಿ ತಮ್ಮ ಸಾಧನೆಯನ್ನು ಗಟ್ಟಿಗೊಳಿಸಿಕೊಂಡರು. 100ಮೀ (11.8ಸೆ), 200ಮೀ (24ಸೆ.), 400ಮೀ (53.4ಸೆ.) ಮತ್ತು 4x400ಮೀ ರಿಲೇ ಇದು ಭಾರತದಲ್ಲಿ ಇವರ ದಾಖಲೆ.

ಅಶ್ವಿನಿ ಅವರು ಚಿತ್ರರಂಗವನ್ನೂ ಪ್ರವೇಶಿಸಿದರು. ಓಟಗಾರ್ತಿಯ ಬದುಕನ್ನಾಧರಿಸಿದ ಅಶ್ವಿನಿ ಎಂಬ ತೆಲುಗು ಚಿತ್ರದಲ್ಲಿ ಇವರು ನಾಯಕಿಯ ಪಾತ್ರದಲ್ಲೂ ಅಭಿನಯಿಸಿದರು. ಪ್ರಸ್ತುತ ಇವರು ವಿಜಯಾ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತ ಸರ್ಕಾರ ಇವರಿಗೆ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ (1988). (ಎಸ್.ಆರ್.ಯು.)

**ಅಸಗ** : ಸು.853. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಅನೇಕ ಕಾವ್ಯಗಳನ್ನು ರಚಿಸಿರುವ ಜೈನ ಕವಿ. ಈವರೆಗೆ ಇವನ ವರ್ಧಮಾನಚರಿತ, ಶಾಂತಿಪುರಾಣ ಮಾತ್ರ ದೊರಕಿವೆ. ಇವೆರಡೂ ಸಂಸ್ಕೃತದಲ್ಲಿವೆ. ತನ್ನ ಸಂಸ್ಕೃತ ಕೃತಿಗಳಲ್ಲಿ ಕವಿ ಕೆಲವು ಸ್ವಂತ ಸಂಗತಿಗಳನ್ನು ಹೇಳಿಕೊಂಡಿದ್ದಾನೆ. ತಂದೆ ಪಟುಮತಿ, ತಾಯಿ ವೈರೇತಿ, ಬಹುದೊಡ್ಡ ವಿದ್ವಾಂಸ ನಾಗಣಂದ್ಯಾಚಾರ್ಯ ಇವನ ಗುರು. ಭಾವಕೀರ್ತಿ ಮುನಿಯ ಸಾನ್ನಿಧ್ಯದಲ್ಲಿ ವರ್ಧಮಾನಚರಿತವನ್ನು ಕವಿ ಬರೆದು ಮುಗಿಸಿದ. ಈ ಕೃತಿಯನ್ನು ಬರೆಯಲು ಮೌದ್ಗಲ್ಯ ಪರ್ವತದ ತುದಿಯಲ್ಲಿ ವಾಸವಾಗಿದ್ದ ಸಂಪತ್ ಎಂಬ ಶ್ರಾವಕಿ ಕಾರಣಳಂತೆ. ಇವನ ವರ್ಧಮಾನಚರಿತವನ್ನು ಧವಲನೆಂಬ

ಅಪಭ್ರಂಶ ಕವಿ ತನ್ನ ಹರಿವಂಶ ಪುರಾಣದಲ್ಲಿ ಪ್ರಶಂಸಿದ್ದಾನೆ. ವರ್ಧಮಾನಚರಿತಕ್ಕೆ ಹದಿನೇಳನೆಯ ಶತಮಾನಕ್ಕೆ ಸೇರಿದ ಒಂದು ಕನ್ನಡ ಟೀಕೆಯಿದೆ. ಜಿನಾಪ ಎಂಬ ಮಿತ್ರನ ಪ್ರೋತ್ಸಾಹದಿಂದ ಇವನು ಶಾಂತಿಪುರಾಣವನ್ನು ರಚಿಸಿದನಂತೆ.

ಮೇಲೆ ಹೇಳಿದ ಎರಡು ಸಂಸ್ಕೃತ ಕೃತಿಗಳಲ್ಲದೆ. ಇನ್ನೂ ಎಂಟು ಕೃತಿಗಳನ್ನು ರಚಿಸಿದ್ದಾನೆ. ಅವುಗಳ ವಿಷಯ ಸರಿಯಾಗಿ ತಿಳಿಯದು.

ವರ್ಧಮಾನಚರಿತವನ್ನು ತಾನು ಸಂವತ್ಸರ 910ರಲ್ಲಿ ಬರೆದಂತೆ ಹೇಳಿಕೊಂಡಿದ್ದಾನೆ. ಸು.950ರಲ್ಲಿದ್ದ ಬಿಪೊನ್ನ ಇವನ ಹೆಸರನ್ನು ಹೇಳುವುದರಿಂದ ಅಸಗ ಅವನಿಗಿಂತ ಹಿಂದಿನವನೆಂಬುದು ಸ್ಪಷ್ಟ. ಆದುದರಿಂದ ಸಂವತ್ಸರ ಎಂಬುದು ಶಾಲಿವಾಹನಶಕ ಅಲ್ಲವೆಂದೂ ವಿಕ್ರಮಶಕವೆಂದೂ ಆ.ನೇ.ಉಪಾಧ್ಯೆಯವರು ಸೂಚಿಸಿದ್ದಾರೆ. ಆದ್ದರಿಂದ ಇದು ಕ್ರಿ.ಶ.853 ಎಂದಾಗುತ್ತದೆ. ಎಂದರೆ ಅಸಗ ಒಂಬತ್ತನೆಯ ಶತಮಾನದ ಮಧ್ಯಕಾಲದ, ಕವಿರಾಜಮಾರ್ಗಕಾರನಿಗೆ ಸಮಕಾಲೀನನಾದ ಕವಿಯಾಗುತ್ತಾನೆ. ಆದರೆ ದಕ್ಷಿಣ ಭಾರತದ, ಕರ್ನಾಟಕದ ಒಬ್ಬ ಕವಿ ವಿಕ್ರಮ ಸಂವತ್ಸರದಲ್ಲಿ ಕಾಲವನ್ನು ಹೇಳಿಕೊಂಡಿರುವುದು ಬಹಳ ವಿಲಕ್ಷಣವಾಗಿದೆ. ಆದ್ದರಿಂದ ಕಾಲದ ಬಗ್ಗೆ ಇನ್ನೂ ಸ್ವಲ್ಪ ಸಂದೇಹವಿದ್ದೇ ಇದೆ.

ಇವರ ಕವಿತೆಯನ್ನು ಪೊನ್ನನಿಂದ ಆರಂಭಿಸಿ ಮುಂದಿನ ಹಲವಾರು ಕವಿಗಳು ಮುಕ್ತಕಂಠದಿಂದ ಹೊಗಳಿದ್ದಾರೆ. ಪೊನ್ನ ತನ್ನ ಶಾಂತಿಪುರಾಣದಲ್ಲಿ ತಾನು ಕನ್ನಡ ಕವಿತೆಯಲ್ಲಿ ಅಸಗನಿಗಿಂತ ನೂರ್ಮಡಿ ಎಂದು ಹೇಳಿಕೊಂಡಿದ್ದಾನೆ. ಕೇಶಿರಾಜ ತನ್ನ ಶಬ್ದಮಣಿದರ್ಪಣಕ್ಕೆ ಲಕ್ಷ್ಯಗಳನ್ನು ಅಸಗನಿಂದಲೂ ತೆಗೆದುಕೊಂಡಿರುವುದಾಗಿ ಹೇಳಿಕೊಂಡಿದ್ದಾನೆ. ದುರ್ಗಸಿಂಹ ಮತ್ತು ನಯಸೇನರು ಅಸಗನ ದೇಸಿ ಮುಂತಾದ ಗುಣಗಳನ್ನು ಕೊಂಡಾಡಿದ್ದಾರೆ. ವರ್ಧಮಾನಪುರಾಣದ ಕರ್ತೃ ಆಚಣ್ಣ ಇವನನ್ನು ಸ್ಮರಿಸಿದ್ದಾನೆ. ಸಮಯ ಪರೀಕ್ಷೆಯ ಕರ್ತೃ ಬ್ರಹ್ಮಶಿವನಿಂದ ಪೊನ್ನ ಪಂಪರ ಸಾಲಿನಲ್ಲಿ ಉಲ್ಲೇಖಿತವಾಗಿರುವ ರಜಕನು ಅಸಗನೇ ಇರಬೇಕು. ಇಷ್ಟಾದರೂ ಅಸಗ ಕನ್ನಡದಲ್ಲಿ ಬರದದ್ದೇನು ಎಂಬುದು ಮಾತ್ರ ಸ್ಪಷ್ಟವಿಲ್ಲ. ಜಯಕೀರ್ತಿ ತನ್ನ ಛಂದೋನುಶಾಸನದ ಏಳನೆಯ ಅಧಿಕಾರದಲ್ಲಿ ಕನ್ನಡದ ಬೇರೆ ಬೇರೆ ದೇಸೀ ವೃತ್ತಗಳನ್ನು ವಿವರಿಸುತ್ತ, ಸಮಾನಾಕ್ಷರ (ದೊರೆಯಕ್ಕರ) ಎಂಬುದು ಅಸಗನ ಕರ್ಣಾಟಕುಮಾರಸಂಭವ ಕಾವ್ಯದಲ್ಲಿ ಪ್ರಯೋಗವಾಗಿದೆ ಎಂದಿದ್ದಾನೆ (ಅಸಗಾಖ್ಯ ಕವಿನಾ ಪ್ರತಿಪಾದಿತಂ ನನು ಕರ್ಣಾಟಕುಮಾರಸಂಭವ ಕಾವ್ಯೇ). ಛಂದೋವತಂಸ ಎಂಬ ಇನ್ನೊಂದು ಅಚ್ಚಗನ್ನಡ ವೃತ್ತ ಕುಮಾರಸಂಭವಾದಿ ಕಾವ್ಯಗಳಲ್ಲಿ ಬಳಕೆಯಾಗಿದೆ ಎನ್ನುತ್ತಾನೆ. ಇದರಿಂದ ಕರ್ಣಾಟಕುಮಾರಸಂಭವ ಕಾವ್ಯ ಕೆಲವು ಅಪೂರ್ವ ಅಚ್ಚಗನ್ನಡ ವೃತ್ತಗಳುಳ್ಳ ಕೃತಿ ಎಂದಾಯಿತು (ಛಂದೋವತಂಸಕ್ಕೆ ಇಲ್ಲಿಯವರೆಗೆ ಲಕ್ಷ್ಯಪದ್ಯವೊಂದೂ ದೊರೆತಿಲ್ಲ). ಅಸಗನ ಕನ್ನಡ ಕೃತಿ ದೊರೆಕಿರದಿದ್ದರೂ ಕೃತಿಯ ಹೆಸರು ಮಾತ್ರ ನಮಗೆ ಜಯಕೀರ್ತಿಯಿಂದ ಲಭ್ಯವಾಗಿದೆ.

ಕರ್ಣಾಟಕುಮಾರಸಂಭವ ಹೆಸರೇ ಹೇಳುವಂತೆ ಶಿವಪಾರ್ವತಿಯರ ವಿವಾಹಕ್ಕೆ ಸಂಬಂಧಿಸಿದ ಕಥೆಯಾಗಿರಬಹುದು. ಬಹುಶಃ ಅದು ಕಾಳಿದಾಸನ ಕೃತಿಯ ಅನುವಾದವಾಗಿರದೆ ಅದರ ರೂಪಾಂತರವಾಗಿರಬಹುದು. ಏಕೆಂದರೆ ಇದುವರೆಗೆ ತಿಳಿದಮಟ್ಟಿಗೆ ಯಾವ ಕನ್ನಡ ಕವಿಯೂ ಸಂಸ್ಕೃತ ಕೃತಿಯೊಂದನ್ನು ಅದು ಇರುವಂತೆಯೇ ಅನುವಾದಿಸಿಲ್ಲ.

ಕನ್ನಡದ ಅನೇಕ ಸಂಗ್ರಹ ಗ್ರಂಥಗಳಲ್ಲಿ ಹಾಗೂ ವ್ಯಾಕರಣಗಳಲ್ಲಿ ಶಿವ, ಶಿವೆಯರ ವಿವಾಹಕ್ಕೆ ಸಂಬಂಧಿಸಿದ ಪದಗಳು, ಪದ್ಯಭಾಗಗಳು ದೊರೆಯುತ್ತವೆ (ಉದಾ: ಸೂಕ್ತಿ ಸುಧಾರ್ಣವ, ಕಾವ್ಯಾವಲೋಕನ, ಶಬ್ದಮಣಿದರ್ಪಣ). ಇವುಗಳಲ್ಲಿ ಎಲ್ಲವೂ ಅಲ್ಲದಿದ್ದರೂ ಕೆಲವಾದರೂ ಅಸಗನ ಕುಮಾರಸಂಭವಕ್ಕೆ ಸಂಬಂಧಿಸಿದ ಪದ್ಯಗಳಿರಬೇಕೆಂದು ಊಹಿಸಬಹುದಾಗಿದೆ. ಅವೆಲ್ಲವೂ ಶಿವನಲ್ಲಿ ಭಕ್ತಿಯಿದ್ದ ವ್ಯಕ್ತಿಯೊಬ್ಬ ಬರೆದ ಪದ್ಯಗಳಂತೆ ತೋರುತ್ತವೆ. ಜೈನನಾದ ಅಸಗ ಈ ಪದ್ಯಗಳನ್ನು ಬರೆದನೇ ಎಂಬ ಸಂದೇಹವೂ ಮೂಡದಿರದು. ಇಷ್ಟಾದರೂ ಕುಮಾರ ಸಂಭವಕ್ಕೆ ಸಂಬಂಧಿಸಿದ ಯಾವುದೇ ಪದ್ಯ ಹಾಗೂ ಪದ್ಯಭಾಗಗಳಲ್ಲಿ ಜೈನಧರ್ಮದ ಛಾಯೆಯಾಗಲಿ, ಶೈವಧರ್ಮದ ವಿಡಂಬನೆಯಾಗಲಿ ಕಂಡುಬರುವುದಿಲ್ಲ. ಅಸಗ ಜೈನನಾಗಿದ್ದರೂ ಹಿಂದುಗಳಿಗೆ ಬಹುಪ್ರಿಯವಾದ ಕಥೆಯೊಂದನ್ನು ಅಷ್ಟೇ ಭಕ್ತಿಯಿಂದ ರಚಿಸಿ ತನ್ನ ಸರ್ವಧರ್ಮಸಮನ್ವಯ ದೃಷ್ಟಿಯನ್ನು ತೋರಿಸಿದ್ದಾನೆ ಎಂದು ಹೇಳಬಹುದು. ಒಟ್ಟಿನಲ್ಲಿ ಈತನ ಕನ್ನಡಕೃತಿಗಳು ದೊರೆಯುವವರೆವಿಗೂ ಇವನ ವಿಷಯವಾಗಿ ಹೆಚ್ಚೇನನ್ನೂ ಹೇಳಲು ಅವಕಾಶವಿಲ್ಲ. **(ಎಂ.ಪಿ.)**

**ಅಹ್ಮದ್ III :** ಬಹಮನೀ ರಾಜ್ಯದ 12ನೆಯ ಸುಲ್ತಾನ (1461-63). ಹುಮಾಯೂನನ ಮಗ. ತಂದೆಯ ಮರಣಾನಂತರ ಇವನು ನಿಜಾಮುದ್ದೀನ್ ಆಹ್ಮದ್ ಎಂಬ ಬಿರುದನ್ನು ಧರಿಸಿ ಸುಲ್ತಾನನಾದ. ಆಗ ಈತ ಕೇವಲ ಎಂಟು ವರ್ಷದ ಬಾಲಕ. ಹುಮಾಯೂನ್ ಬದುಕಿರುವಾಗಲೆ ಆಡಳಿತ ನಿರ್ವಹಣೆಗಾಗಿ ಖ್ವಾಜಾ-ಎ-ಜಹಾನ್ ತುರ್ಕ್, ಮಹ್ಮೂದ್ ಗಾವಾನ್ ಮತ್ತು ರಾಣಿ ನರ್ಗಿಸ್ ಬೇಗಂ ಇವರಿಂದ ಕೂಡಿದ ರಾಜಪ್ರತಿನಿಧಿಮಂಡಳಿಯನ್ನು ನೇಮಿಸಿದ್ದ. ನರ್ಗಿಸ್ ಬೇಗಂ ಮಂಡಳಿಯ ಮುಖ್ಯಳಾಗಿದ್ದಳು. ಅಹ್ಮದನ ಕಾಲದಲ್ಲಿ ಬಹಮನೀ ರಾಜ್ಯದ ಆಡಳಿತವನ್ನು ಸಂಪೂರ್ಣವಾಗಿ ನರ್ಗಿಸ್ ಬೇಗಂ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಳು. ಅಹ್ಮದನ ಆಳ್ವಿಕೆ ಹಿಂದಿನ ರಾಜಕೀಯ ಅಪರಾಧಿಗಳಿಗೆ ಕ್ಷಮಾದಾನ ನೀಡುವುದರ ಮೂಲಕ ಪ್ರಾರಂಭವಾಯಿತು. ಬಹಮನೀ ರಾಜ್ಯದಲ್ಲಿ ಒಬ್ಬ ಬಾಲಕ ಸುಲ್ತಾನನಾಗಿರುವ ಸಮಯವನ್ನು ಉಪಯೋಗಿಸಿಕೊಂಡು ಒರಿಸ್ಸಾದ ಕಪಿಲೇಶ್ವರ ಆ ರಾಜ್ಯವನ್ನು ಮುತ್ತಿ ಕೆಲವು ಪ್ರದೇಶಗಳನ್ನು ಗೆದ್ದುಕೊಂಡ. ಆಗ ರಾಣಿ ಕಳುಹಿಸಿದ ಮುಹಿಬುಲ್ಲಾನ ನಾಯಕತ್ವದ ಬಹಮನೀ ಸೈನ್ಯ ಕಪಿಲೇಶ್ವರನ ಸೈನ್ಯವನ್ನು ಹಿಮ್ಮೆಟ್ಟಿಸಿತು. ಅನಂತರ ಮಾಳವದ ಮಹಮ್ಮದ್ ಖಿಲ್ಜಿ ಬಹಮನೀ ರಾಜ್ಯವನ್ನು ಮುತ್ತಿದ. ರಾಜಧಾನಿಯಿಂದ ಸು. 32 ಮೈಲಿ ದೂರದಲ್ಲಿ ತನ್ನ ಬಿಡಾರವನ್ನು ಹೂಡಿದ. ಆಗ ಅಹ್ಮದ್ ಶತ್ರುವಿನ ವಿರುದ್ಧ ದಂಡೆತ್ತಿಹೋದ. ಆದರೆ ಸೋತು ಬಿದರೆಗೆ ಓಡಿಬಂದ. ಮಹಮುದ್ ಖಿಲ್ಜಿ ಹಲವು ಪ್ರದೇಶಗಳನ್ನು ಗೆದ್ದುಕೊಂಡು ಬಿದರೆಯನ್ನೂ ಮುತ್ತಿದ. ಆ ವೇಳೆಗೆ ಬಿದರೆಯಿಂದ ರಾಜಧಾನಿಯನ್ನು ತಾತ್ಕಾಲಿಕವಾಗಿ ಗುಲ್ಬರ್ಗದ ಹತ್ತಿರವಿದ್ದ ಫಿರೋಜಾಬಾದ್‌ಗೆ ಬದಲಾಯಿಸಲಾಗಿತ್ತು. ರಾಣಿ ಮತ್ತು ಮಹ್ಮೂದ್ ಗಾವಾನ್ ಗುಜರಾತಿನ ಸುಲ್ತಾನ ಮಹಮ್ಮದನ ಸಹಾಯವನ್ನು ಕೋರಿದರು. ಗುಜರಾತಿನ ಸುಲ್ತಾನ ದೊಡ್ಡ ಸೈನ್ಯದೊಡನೆ ಧಾವಿಸಿ ಬಂದ. ಈ ಸುದ್ದಿಯನ್ನು ತಿಳಿದ ತಕ್ಷಣವೇ ಮಹಮ್ಮದ್ ಖಿಲ್ಜಿ ತನ್ನ ರಾಜ್ಯಕ್ಕೆ ಹಿಂದಿರುಗಿದ. ಪುನಃ 1463ರಲ್ಲಿ ಮಹಮ್ಮದ್ ಖಿಲ್ಜಿ ದಂಡೆತ್ತಿ ಬಂದರೂ ಹಿಂದಿರುಗ ಬೇಕಾಯಿತು. ಅನತಿಕಾಲದಲ್ಲಿ 1463ರಲ್ಲೇ ಮೂರನೆಯ ಅಹ್ಮದ್ ತನ್ನ ವಿವಾಹದ ರಾತ್ರಿಯೇ ವಿಚಿತ್ರ ಸನ್ನಿವೇಶದಲ್ಲಿ ಮೃತನಾದ. **(ಎಸ್.)**

**ಅಳಂದ :** ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಊರು. ಈ ತಾಲ್ಲೂಕನ್ನು ಪೂರ್ವದಲ್ಲಿ ಗುಲ್ಬರ್ಗ, ದಕ್ಷಿಣದಲ್ಲಿ ಅಫ಼ಜಲಪುರ ತಾಲ್ಲೂಕುಗಳೂ ಉತ್ತರ ಮತ್ತು ಪಶ್ಚಿಮದಲ್ಲಿ ಮಹಾರಾಷ್ಟ್ರ ರಾಜ್ಯವೂ ಸುತ್ತವರೆದಿವೆ. ವಿಸ್ತೀರ್ಣ 1733ಚ.ಕಿಮೀ. ಜನಸಂಖ್ಯೆ 2,94,838. ಗುಲ್ಬರ್ಗ ಸಬ್ ಡಿವಿಜನ್‌ಗೆ ಅಳಂದ ಸೇರಿದೆ. ತಾಲ್ಲೂಕಿನಲ್ಲಿ ಒಂದು ಪಟ್ಟಣ ಮತ್ತು 129 ಗ್ರಾಮಗಳಿವೆ. ಸರ್ಕಲ್‌ಗಳು 3 ಕಸಬೆ, ನಿಂಬರ್ಗ ಮತ್ತು ನರೋಣ.

ಈ ತಾಲ್ಲೂಕಿನ ಭೂಮಿ ಸಮತಟ್ಟಿಲ್ಲದೆ ತಗ್ಗುದಿಣ್ಣೆಗಳಿಂದ ಕೂಡಿದೆ. ತಳಶಿಲೆಯೆಲ್ಲ ಹೆಚ್ಚುಮಟ್ಟಿಗೆ ಟ್ರಾಪ್ ಕರಿಕಲ್ಲು. ಮಣ್ಣು ಕಪ್ಪು ಮತ್ತು ಕಂದುಗೆಂಪು. ನೈಋತ್ಯದ ಮಾರುತಗಳಿಂದ ಸ್ವಲ್ಪ ಮಳೆಯಾಗುತ್ತದೆ. ವಾರ್ಷಿಕ ಸರಾಸರಿ ಮಳೆ 807ಮಿಮೀ. ತಾಲ್ಲೂಕಿನ ಮಧ್ಯದಲ್ಲಿ ಅಮರಜ ನದಿ (ನೋಡಿ) ಉತ್ತರ-ದಕ್ಷಿಣವಾಗಿ ಹರಿಯುತ್ತದೆ. ಅಳಂದ ತಾಲ್ಲೂಕಿನಲ್ಲಿ 4326 (1964-65) ಎಕರೆ ಕುರುಚಲು ಮಿಶ್ರಿತ ಸಣ್ಣ ಮರಗಳ ಕಾಡು ಇದೆ.

ಸಜ್ಜೆ, ಗೋದಿ, ನೆಲಗಡಲೆ, ತೊಗರಿ, ಕಡಲೆ, ಮೆಣಸಿನಕಾಯಿ, ಹತ್ತಿ ಪ್ರಧಾನ ಬೆಳೆಗಳು. ಇದರ ಜೊತೆಗೆ ಜೋಳ, ಇತರ ದ್ವಿದಳಧಾನ್ಯಗಳು ಮತ್ತು ಹಣ್ಣುಗಳ ಬೆಳೆಗಳೂ ಇವೆ. ಕೆರೆ ಹಾಗೂ ಬಾವಿಯ ನೀರಾವರಿಯಿದೆ.

ಈ ತಾಲ್ಲೂಕಿನ ಕೆಲವು ಮುಖ್ಯ ಸ್ಥಳಗಳಲ್ಲಿ ಪಡಸಾವಳಿ, ಹೊನ್ನಹಳ್ಳಿ, ಕುಣಿಸಂಗವಿ, ಖಜೂರಿ, ಮಟಕಿ ಖಂಡಾಲ, ರುದ್ರವಾಡಿ, ನರೋಣಗಳನ್ನು ಹೆಸರಿಸಬಹುದು. ಅಳಂದದಿಂದ ಸು.19ಕಿಮೀ ವಾಯುವ್ಯದಲ್ಲಿರುವ ಪಡಸಾವಳಿ ಗ್ರಾಮದಲ್ಲಿ 12ನೆಯ ಶತಮಾನದ ಕೆಲವು ದೇವಾಲಯಗಳಿವೆ. ಇಲ್ಲಿ ಭೂಮಟ್ಟದ ಕೆಳಗಿರುವ ಒಂದು ದೇವಾಲಯ ದಲ್ಲಿರುವ ಚೆನ್ನಕೇಶವ ವಿಗ್ರಹ ಬಹುಸುಂದರವಾಗಿದೆ. ಅಳಂದದಿಂದ ಸು.16ಕಿಮೀ ಈಶಾನ್ಯದಲ್ಲಿರುವ ರುದ್ರವಾಡಿ ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಒಂದು ಶಿವದೇವಾಲಯ ಮತ್ತು ಕೆಲವು ಶಾಸನಗಳಿವೆ. ಅಳಂದದಿಂದ ಸು.18ಕಿಮೀ ಪೂರ್ವಕ್ಕಿರುವ ನರೋಣ ಪ್ರಸಿದ್ಧವಾದ ತೀರ್ಥಕ್ಷೇತ್ರ. ರಾವಣನ ವಧೆಯ ಬಳಿಕ ಅಯೋಧ್ಯೆಗೆ ತೆರಳುವ ಮುನ್ನ ಶ್ರೀರಾಮ ತನ್ನ ಪಾಪ ಪರಿಹಾರಾರ್ಥ ಕೆಲಕಾಲ ಇಲ್ಲಿ ತಂಗಿದ್ದನಂತೆ. ಮಹಾಋಷಿ ಅಗಸ್ತ್ಯ ಇಲ್ಲಿ ವಾಸಿಸುತ್ತಿದ್ದನೆಂದೂ ಹೇಳಲಾಗಿದೆ. ಇಲ್ಲಿ ಕಾರ್ತಿಕೇಯ ಸ್ವಾಮಿ ದೇವಾಲಯವೂ 8 ತೀರ್ಥಗಳೂ ಇವೆ. ಹಾಗೆಯೇ ಹೊನ್ನಹಳ್ಳಿಯ ಎಲ್ಲಮ್ಮ ದೇವಾಲಯ, ಕುಣಿ ಸಂಗವಿಯ ಬಸವೇಶ್ವರ ದೇವಾಲಯ, ಖಜೂರಿಯ ವೆಂಕಟೇಶ್ವರ ದೇವಾಲಯ, ಮಟಕಿಯ ಜಲಂಧರನಾಥ ಮತ್ತು ಹನುಮಾನ್ ದೇವಾಲಯಗಳು ಈ ಸುತ್ತಿನಲ್ಲಿ ಪ್ರಸಿದ್ಧವಾಗಿವೆ.

ಅಳಂದ ಪಟ್ಟಣ ಗುಲ್ಬರ್ಗಕ್ಕೆ ಸು.46ಕಿಮೀ ವಾಯುವ್ಯದಲ್ಲಿದೆ. ಅಳಂದ ನಗರಸಭಾಡಳಿತಕ್ಕೆ ಸೇರಿದೆ. ಜನಸಂಖ್ಯೆ 35,308. ಇಲ್ಲಿಗೆ ಗುಲ್ಬರ್ಗ, ಉಮರ್ಗ, ವಾಗ್ದರಿಗಳಿಂದ ಉತ್ತಮ ರಸ್ತೆಗಳಿವೆ. ಇಲ್ಲಿನ ಕೈಮಗ್ಗದ ಸೀರೆಗಳನ್ನು ಅಕ್ಕಪಕ್ಕದ ಜಿಲ್ಲೆಗಳಿಗೂ ರಾಜ್ಯಗಳಿಗೂ ಕಳಿಸುವುದುಂಟು.



ಲಾಡ್ಲೆ ಮುಷಾಯಿಕ್ ದರ್ಗಾ

ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಊರು ಅಳಂದೆ ಸಾಸಿರ ಎಂಬ ಪ್ರಾಂತ್ಯವೊಂದರ ಮುಖ್ಯಪಟ್ಟಣವಾಗಿತ್ತೆಂದು ಅನೇಕ ಶಾಸನಗಳಿಂದ ತಿಳಿಯುತ್ತದೆ. ಇಲ್ಲಿ 6ನೆಯ ವಿಕ್ರಮಾದಿತ್ಯನ ಕಾಲದ ಒಂದು ಶಾಸನವೂ ದೊರಕಿದೆ. ಆ ಕಾಲದ ಹಲವು ಭಗ್ನಾವಶೇಷಗಳಲ್ಲದೆ ಸು.15ನೆಯ ಶತಮಾನದ ಲಾಡ್ಲೆ ಮುಷಾಯಿಕ್ ದರ್ಗಾ ಇದೆ. ದರ್ಗಾದ ಸಮೀಪದಲ್ಲೇ ರಾಘವಚೈತನ್ಯರ ಸಮಾಧಿ ಇದೆ. ಈ ಊರಿನಲ್ಲಿ ಶಂಕರಾಚಾರ್ಯರ ಸಚ್ಛಿಷ್ಯರಾದ ಹಸ್ತಾಮಲಕರು ನೆಲೆಸಿದ್ದರೆಂದು ಪ್ರತೀತಿ. ಸಮೀಪದಲ್ಲಿ ಇವರ ಹೆಸರಿನ ಕ್ಷೇತ್ರವೊಂದಿದೆ. 15ನೆಯ ಶತಮಾನದಲ್ಲಿ ರಷ್ಯ ಪ್ರವಾಸಿಯೊಬ್ಬ ಈ ಊರನ್ನು ಸಂದರ್ಶಿಸಿದ್ದ. ಈ ಊರನ್ನು ಅಳಂದ ಸಾಸಿರ ಎಂದು ಕರೆಯಲ್ಪಡುತ್ತಿದ್ದುದನ್ನು ಆತ ಉಲ್ಲೇಖಿಸಿದ್ದಾನೆ. (ಎ.ಎಂ.ಎ.)

**ಅಳಣಾವರ :** ಧಾರವಾಡ ಜಿಲ್ಲೆ ಧಾರವಾಡ ತಾಲ್ಲೂಕಿನ ಒಂದು ಪಟ್ಟಣ. ಜನಸಂಖ್ಯೆ 16,286. ಧಾರವಾಡ, ಬೆಳಗಾಂವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗಡಿಯಲ್ಲಿದ್ದು ಧಾರವಾಡ ನಗರಕ್ಕೆ ಪಶ್ಚಿಮದಲ್ಲಿ 34 ಕಿಮೀ ದೂರದಲ್ಲಿದೆ. ಸಮುದ್ರಮಟ್ಟಕ್ಕೆ 569ಮೀ ಎತ್ತರದಲ್ಲಿದೆ. ಪುಣೆ ಬೆಂಗಳೂರು ರೈಲುಮಾರ್ಗದಲ್ಲಿ ಧಾರವಾಡ ಮತ್ತು ಲೋಂಡಾಗಳ ಮಧ್ಯೆ ಇರುವ ಒಂದು ರೈಲು ಜಂಕ್ಷನ್ ಸ್ಥಳವಾಗಿದೆ. ಇಲ್ಲಿಂದ ದಾಂಡೇಲಿಗೆ ರೈಲುಮಾರ್ಗವಿದೆ. ಗೋವಾ, ಬೆಳಗಾಂವಿ ಮುಂತಾದೆಡೆಗೆ ರೈಲುಮಾರ್ಗದ ಜೊತೆಗೆ ರಸ್ತೆಗಳೂ ಇದ್ದು ಉತ್ತಮ ಸಾರಿಗೆ ಸಂಪರ್ಕ ಉಂಟು. ಅಳಣಾವರ 1973ರಿಂದ ನಗರಸಭಾಡಳಿತಕ್ಕೆ ಒಳಪಟ್ಟಿದೆ. ಇಲ್ಲಿ ಮರಕೊಯ್ಯುವ ಕಾರ್ಖಾನೆಗಳೂ ಬತ್ತದ ಗಿರಣಿಗಳೂ ಇವೆ. ಸುತ್ತಲ ಗ್ರಾಮಗಳಿಗೆ ಅಳಣಾವರ ಒಂದು ವ್ಯಾಪಾರಕೇಂದ್ರ. ಪ್ರತಿ ಮಂಗಳವಾರ ಸಂತೆ ಸೇರುತ್ತದೆ. ಸುತ್ತಲೂ ಕಾಡುಗಳಿರುವುದರಿಂದ ಮರ ಕೊಯ್ದು ಸಾಗಿಸುವ ಉದ್ಯಮವಿದೆ.

ಅಳಣಾವರದ ಮೂಲ ಹೆಸರು ಅನಿಲಪುರ. ಇಲ್ಲಿ ನಾಲ್ಕು ಶಾಸನಗಳು ದೊರೆತಿವೆ. ಅವುಗಳಲ್ಲಿ 1081ರ ಶಾಸನ ಗೋವ - ಕದಂಬ ವಂಶದ ಗೂವಲ್ಲ ದೇವನದು. ಅಳಣಾವರ ಚಾಳುಕ್ಯ, ರಾಷ್ಟ್ರಕೂಟ, ವಿಜಯನಗರ, ಆದಿಲ್‍ಶಾಹಿ ಮತ್ತು ಕಿತ್ತೂರು ಇವುಗಳ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಇದು 1010ರಲ್ಲಿ ಕದಂಬ ರಾಜ್ಯಪಾಲ ಜಯಕೇಶಿಯ ರಾಜಧಾನಿಯಾಗಿತ್ತು. (ಎಸ್.ಎಸ್.ಎನ್.)

**ಅಳಸಿಂಗರಾಚಾರ್ಯ ದೇವಶಿಖಾಮಣಿ :** 1877-1940. ಕಳೆದ ತಲೆಮಾರಿನ ಪ್ರಸಿದ್ಧ ಲೇಖಕರು. ಮೇಲುಕೋಟೆಯಲ್ಲಿ ಜನನ. ತಂದೆ ತಿರುಮಲೈ ಅಯ್ಯಂಗಾರ್ಯರು ಅಲ್ಲಿಯ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಹುಟ್ಟೂರಿನಲ್ಲಿದ್ದ ವೇದಾಂತಬೋಧಿನೀ ಪಾಠಶಾಲೆಯಲ್ಲಿ ಅಳಸಿಂಗರಾಚಾರ್ಯರು ವ್ಯಾಸಂಗ ಮಾಡಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದರು. ಮೈಸೂರು ಮರಿಮಲ್ಲಪ್ಪ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಇವರು ಮುಂದೆ ಮದರಾಸಿನ ಕ್ರಿಶ್ಚಿಯನ್ ಕಾಲೇಜು ಮತ್ತು ಪ್ರೆಸಿಡೆನ್ಸಿ ಕಾಲೇಜುಗಳಲ್ಲೂ ಶಿಕ್ಷಕರಾಗಿದ್ದರು. ಮದರಾಸು ವಿಶ್ವವಿದ್ಯಾಲಯದ ಕನ್ನಡವ್ಯಾಸಂಗ ಸಮಿತಿಯ ಸದಸ್ಯರಾಗಿಯೂ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು (1932).

ಅಳಸಿಂಗರಾಚಾರ್ಯರು ಚಿಕ್ಕ ವಯಸ್ಸಿನಲ್ಲಿಯೇ ಕಾವ್ಯರಚನೆಯನ್ನು ಪ್ರಾರಂಭಿಸಿದ್ದರು. ಇವರ ಪ್ರಥಮ ಕೃತಿ ಚೆಲ್ವನಾರಾಯಣ ಶತಕಂ ಒಂದು ಪದ್ಯಗ್ರಂಥ. ಇದರ ಶೈಲಿ ವಿಶಿಷ್ಟವಾದುದು. ಶ್ರೀಮದ್ರಾಮಾಯಣ, ಶ್ರೀಮನ್ಮಹಾಭಾರತ, ಶ್ರೀಮದ್ಭಾಗವತ - ಈ ಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಗದ್ಯರೂಪವಾಗಿ ಭಾಷಾಂತರಿಸಿದ್ದಾರೆ. ಸ್ವಪ್ನವಾಸವದತ್ತ, ಪಂಚರಾತ್ರಗಳು ಇವರು ಮಾಡಿರುವ ಇತರ ಅನುವಾದಗಳು. ಘೋರ ಯೂರೋಪು ಯುದ್ಧದ ಚರಿತ್ರೆ, ಪೌರನೀತಿ, ಪಂಚಭಾಷಾ ಪ್ರಹಸನ, ಯುದ್ಧದ ಅನುಭವಗಳು - ಇವರ ಇತರ ಕೃತಿಗಳು. ಇವರ ಗದ್ಯಶೈಲಿ ಸರಳವಾಗಿದ್ದು ಆಕರ್ಷಕವಾಗಿದೆ.

ಸರಳಜೀವಿಗಳೂ ವಿನಯಶೀಲರೂ ಆಗಿದ್ದು, ತಮ್ಮ ಪಾಂಡಿತ್ಯ ಮತ್ತು ಪ್ರತಿಭೆಗಳಿಂದ ಸಮಕಾಲೀನರ ಗೌರವಕ್ಕೆ ಪಾತ್ರರಾಗಿದ್ದ ಇವರು 1940 ಡಿಸೆಂಬರ್ 12ರಂದು ನಿಧನರಾದರು. (ಎನ್.ಎ.ಆರ್.)

**ಅಳಿಯ ಲಿಂಗರಾಜ :** 1823-74. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಚಂಪೂ, ಸಾಂಗತ್ಯ, ಷಟ್ಪದಿ, ಯಕ್ಷಗಾನ, ಶತಕ, ಹಾಡು, ಲಾವಣಿ ಮೊದಲಾಗಿ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಗ್ರಂಥಗಳನ್ನು ರಚಿಸಿದ ಕವಿ. ಮೈಸೂರು ರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಪೋಷಣೆಯಲ್ಲಿ ವಿದ್ಯಾವಂತನಾದವ. ರಾಜರು ದೊಡ್ಡಪುಟ್ಟತಾಯಮ್ಮಣ್ಣಿ, ಚಿಕ್ಕಪುಟ್ಟತಾಯಮ್ಮಣ್ಣಿ ಎಂಬಿಬ್ಬರನ್ನು ಇವನಿಗೆ ಕೊಟ್ಟು ಮದುವೆ ಮಾಡಿದ್ದುದರಿಂದ ಅಳಿಯ ಲಿಂಗರಾಜ ಎಂಬ ಹೆಸರು ಬಂತು. ಈತನ ತಂದೆ ಲಿಂಗರಾಜ, ತಾಯಿ ಕೆಂಪದೇವಾಂಬಿಕೆ. ಉಭಯಕವಿತಾವಿಶಾರದ ಎಂಬುದು ಈತನ ಬಿರುದು. ಈತ ಹರಿಹರ, ರಾಘವಾಂಕ, ದೇವೇಶ್ವರ ನಾಗವರ್ಮ ಮೊದಲಾದ ಪೂರ್ವಕವಿಗಳನ್ನು ಸ್ತುತಿಸಿದ್ದಾನೆ.

ಅಂಗದಸಂಧಾನ, ಇಂದ್ರಕೀಲ, ಕುಶಲವರ ಕಥೆ, ಕೃಷ್ಣಬಾಲಲೀಲೆ, ಕೃಷ್ಣಾರ್ಜುನರ ಕಾಳಗ, ಗಯಚರಿತ್ರ, ಗಿರಿಜಾಕಲ್ಯಾಣ, ಚಂದ್ರಾವಳಿ ಕಥೆ, ಚಂದ್ರಾವಳಿಯ ಜೋಗಿ ಹಾಡು, ಚಿಕ್ಕ ಪಟ್ಟಾಭಿಷೇಕ, ಚೂಡಾಮಣಿ, ಜಲಂಧರ ಕಾಳಗ, ತಾರಕವಧೆ, ದ್ರೌಪದೀ ಸ್ವಯಂವರ, ನರಪತಿಚರಿತೆ, ನಳಕೂಬರವಿಲಾಸ, ನಳಚರಿತ್ರೆ, ಪಂಚವಿಂಶತಿಲೀಲೆ,

ಪಾರಿಜಾತಾಪಹರಣ, ಪುತ್ರಕಾಮೇಷ್ಟಿ, ಪ್ರಭಾವತೀ ಪರಿಣಯ, ಬಭ್ರುವಾಹನ ಕಾಳಗ, ಬಾಲಲೀಲೆ, ಮಕರಾಂಕಸೇನಕಥೆ, ಮದಾಲಸಾಪರಿಣಯ, ಮಹಾಲಿಂಗಶತಕ, ಮೈರಾವಣ ಕಥೆ, ಮೋಡಿನಾಟಕ, ರಾಮೋದಯಕಥೆ, ರುಕ್ಮಾಂಗದಚರಿತ್ರೆ, ಲಾವಣಿಗಳು, ವನವಾಸರಾಮಾಯಣ, ವಾಲಿ ಸುಗ್ರೀವರ ಕಾಳಗ, ವಿರಾಟಪರ್ವ, ವೀರಭದ್ರಶತಕ, ಶೃಂಗಾರಸೂತ್ರೋದಾಹರಣಪದ, ಸೀತಾಕಲ್ಯಾಣ, ಸೀತಾಪಹಾರ, ಸೀತಾಸ್ವಯಂವರ, ಸುಧನ್ವನ ಕಾಳಗ, ಸೇತುಬಂಧ, ಸ್ಯಮಂತಕೋಪಾಖ್ಯಾನ - ಇವು ಈತನ ಕೃತಿಗಳು. ಇವಲ್ಲದೆ ಶಿವಭಕ್ತಿರತ್ನಾಕರ, ಮಹಾಲಿಂಗನಕ್ಷತ್ರಮಾಲಿಕೆ, ಶ್ರೀಕಂಠನಕ್ಷತ್ರಮಾಲಿಕೆ, ವೀರೇಶ ತಾರಾವಳಿ, ಲಂಕಾದಹನ ಎಂಬ ಗ್ರಂಥಗಳನ್ನು ರಚಿಸಿರುವನೆಂದು ಕೆಲವು ವಿದ್ವಾಂಸರ ಅಭಿಪ್ರಾಯ.

ಗಯಚರಿತೆ ಮತ್ತು ನಳಕೂಬರ ವಿಳಾಸಗಳು ಚಂಪೂ ಹಾಗೂ ಯಕ್ಷಗಾನ ರೂಪಗಳಲ್ಲಿ ರಚಿತವಾಗಿವೆ. ನರಪತಿಚರಿತವೆಂಬ ಚಂಪೂ ಒಂದು ಅಲಂಕಾರ ಗ್ರಂಥ. ಪ್ರಭಾವತೀಪರಿಣಯ ವಾರ್ಧಕ ಷಟ್ಪದಿಯಲ್ಲೂ ವೀರಭದ್ರಶತಕ ವೃತ್ತರೂಪದಲ್ಲೂ ಮಹಾಲಿಂಗಶತಕ ಕಂದರೂಪದಲ್ಲೂ ಇವೆ. ಉಳಿದವುಗಳಲ್ಲಿ ಹಾಡುಗಳನ್ನೂ ಲಾವಣಿಗಳನ್ನೂ ಬಿಟ್ಟರೆ ಮಿಕ್ಕೆಲ್ಲವೂ ಯಕ್ಷಗಾನ ರೂಪವಾಗಿವೆ. ಈತನ ಕಾವ್ಯರಚನೆ ಬಹುಮುಖವಾಗಿದ್ದರೂ ಅವುಗಳಲ್ಲಿನ ಕಾವ್ಯಮೌಲ್ಯ ಅಷ್ಟೇನೂ ಹಿರಿದಲ್ಲ. **(ಬಿ.ಎಸ್.ಎಸ್.)**

**ಅಳಿಯಸಂತಾನ :** ಸ್ತ್ರೀಗೆ ಪ್ರಾಧಾನ್ಯತೆ ನೀಡುವ ಒಂದು ಕಟ್ಟು ಪಾಡು; ಸಾಮಾಜಿಕ ವ್ಯವಸ್ಥೆ. ಇದರ ಪ್ರಕಾರ ಆಸ್ತಿಪಾಸ್ತಿಗಳು ಹೆಣ್ಣುಸಂತಾನದ ಮೂಲಕ ಅನುಭವಿಸುವುದು, ಎಂದರೆ ತಂದೆಯ ಸಂಪತ್ತಿನ ಮೇಲೆ ಹಕ್ಕನ್ನು ಮಕ್ಕಳು ಹೊಂದದೆ ಸೋದರ ಅಳಿಯಂದಿರು (ಸೋದರಿಯರ ಮಕ್ಕಳು) ಅನುಭವಿಸುವುದು ರೂಢಿ. ಈ ಪದ್ಧತಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಗಸ, ಅಂಡೆಕೊರಗ, ಕರಿನ್ಯಾರಕ, ಕುಂಬಾರ, ಕ್ಷೌರಿಕ, ದೇವಡಿಗ, ಹಳೆಪೈಕ, ಹರಿಚೆಟ್ಟಿ,ಹೊಲೆಯ, ಪರಯಾ, ಜೈನ, ಮಲೆಕುಡಿಯ, ಮಲವ, ಮಾಸಾಟಕ, ಬಂಟ, ಮುಂಡಾಲ, ನಾಯರ, ಪೆಂಜಾಲ, ಸಾಲಿಯ, ತುಳುವ ಈ ಜಾತಿಗಳಲ್ಲಿ ಪ್ರಚಲಿತವಾಗಿದೆ.

ಅಳಿಯಸಂತಾನ ಪದ್ಧತಿಗೆ ಸಂಬಂಧಿಸಿದ ಸಾಹಿತ್ಯ ಮೊದಲ ಬಾರಿಗೆ 1843ರಲ್ಲಿ ಮದರಾಸು ಹೈಕೋರ್ಟಿನಲ್ಲಿ ದಾಖಲಾದ ಒಂದು ವ್ಯವಹರಣೆಯಲ್ಲಿ ಪ್ರಕಾಶಕ್ಕೆ ಬಂತು. ಇದರಲ್ಲಿ ಅಳಿಯಸಂತಾನ ಪದ್ಧತಿಗೆ ಸೇರಿದ ಜಾತಿಗಳು ಅವಲಂಬಿಸಬೇಕಾದ 14 ಕಟ್ಟುಗಳೂ 16 ಕಟ್ಟಳೆಗಳೂ ಅಡಕವಾಗಿವೆ. ಈ ಪದ್ಧತಿಯ ಮೂಲ ಅಸ್ಪಷ್ಟ. ಬಾರಕೂರಿನಲ್ಲಿ ಆಳುತ್ತಿದ್ದ ದೇವಪಾಂಡ್ಯನೆಂಬ ಅರಸ ತಾನು ನಿರ್ಮಿಸಿದ ಹಡಗಿಗೆ ತುಂಡೋದರನೆಂಬ ದೈವದ ಕೇಳಿಕೆಯಂತೆ ತನ್ನ ಮಗನನ್ನು ನರಬಲಿ ಕೊಡಲು ಹೆಂಡತಿಯನ್ನು ಕೇಳಲಾಗಿ ಅವಳು ಒಪ್ಪದ ಕಾರಣ, ಅವನ ತಂಗಿ ತನ್ನ ಮಗ ಜಯಪಾಂಡ್ಯನನ್ನು ಬಲಿಕೊಡಲು ಒಪ್ಪಿದಳು. ಆದರೆ ತುಂಡೋದರ ಇದಕ್ಕೆ ಒಪ್ಪದೆ ತನಗೆ ಬಲಿಯ ಅಗತ್ಯವಿಲ್ಲವೆಂದ. ಇನ್ನೊಂದು ಸಂದರ್ಭದಲ್ಲೂ ಹೀಗಾಗಲು ದೇವಪಾಂಡ್ಯ ಜಯಪಾಂಡ್ಯನಿಗೆ, ಎಂದರೆ ಅಳಿಯನಾದ ಭೂತಾಳ ಪಾಂಡ್ಯನಿಗೆ ರಾಜ್ಯವನ್ನೆಲ್ಲ ಬಿಟ್ಟುಕೊಟ್ಟು ತನ್ನ ರಾಜ್ಯದಲ್ಲಿ ಮುಂದಕ್ಕೆ ಅಳಿಯ ಸಂತಾನಕ್ರಮವೇ ಅನುಷ್ಠಾನದಲ್ಲಿರಬೇಕೆಂದು ಆಜ್ಞಾಪಿಸಿದ. ಈ ಪದ್ಧತಿ ಶಾಲಿವಾಹನ ಶಕ ಪ್ರಥಮ ವರ್ಷ ಈಶ್ವರ ಸಂವತ್ಸರದ ಮಾಘ ಶುದ್ಧ 3ರಲ್ಲಿ (ಸು. ಕ್ರಿ.ಶ. 77) ಜಾರಿಗೆ ಬಂತೆಂದು ಐತಿಹ್ಯದಿಂದ ತಿಳಿದುಬರುವ ಸಂಗತಿ. ಭೂತಾಳಪಾಂಡ್ಯನೆಂಬ ಅರಸ ತುಳುನಾಡಿನಲ್ಲಿ ಆಳಿಕೊಂಡಿದ್ದನೆಂಬುದಕ್ಕೆ ಯಾವ ಐತಿಹಾಸಿಕ ಆಧಾರವೂ ದೊರಕಿಲ್ಲ (ಭೂತಪ್ಪಾಂಡ್ಯನೆಂಬ ಹೆಸರು 15ನೆಯ ಶತಮಾನದ ಒಂದೆರಡು ಶಾಸನಗಳಲ್ಲಿವೆ). ದಂತಕಥೆ ಏನೇ ಇದ್ದರೂ 13ನೆಯ ಶತಮಾನದ ಮಧ್ಯಭಾಗದ ವರೆಗೆ ಹೆಣ್ಣುಮೂಲಪದ್ಧತಿ ಈ ನಾಡಿನಲ್ಲಿ ಅನುಷ್ಠಾನದಲ್ಲಿದ್ದ ಬಗ್ಗೆ ಆಧಾರಗಳಿಲ್ಲ. ಅನಂತರ ಇಲ್ಲಿ ಆಳಿದ ಅನೇಕ ಜೈನ ರಾಜಮನೆತನಗಳವರು ಇವನ್ನು ಅನುಸರಿಸುತ್ತಿದ್ದರಾಗಿ, ಇತರ ಸಾಮಾನ್ಯ ಜನರಲ್ಲೂ ಬಳಕೆಗೆ ಬಂದಿರಬಹುದು. 15ನೆಯ ಶತಮಾನದಲ್ಲಿ 16 ಕಟ್ಟಳೆಗಳು ಪ್ರಚಾರದಲ್ಲಿದ್ದುವೆಂಬುದಕ್ಕೆ ಕಾರ್ಕಳ ತಾಲ್ಲೂಕಿನ ಕಾಂತಾವರದಲ್ಲಿ ಶಾಸನಸಾಕ್ಷ್ಯವಿದೆ. **(ಪಿ.ಜಿ.ಬಿ.)**

ಅಳಿಯಸಂತಾನ ಪದ್ಧತಿ ಕೇರಳದ ಮರುಮಕ್ಕತ್ತಾಯಮ್ ಪದ್ಧತಿಯನ್ನು ಹೋಲುತ್ತದೆ. ಆದರೆ ವ್ಯತ್ಯಾಸಗಳೂ ಇವೆ. ಮರುಮಕ್ಕತ್ತಾಯಮ್ ಪದ್ಧತಿಯಲ್ಲಿ ಕುಟುಂಬದಲ್ಲಿ ಸ್ತ್ರೀಯೇ ಒಡತಿ. ಅಳಿಯಸಂತಾನದಲ್ಲಿ ಸ್ತ್ರೀಯ ಹಿರಿಯ ಅಣ್ಣನೇ ಕುಟುಂಬದ ಯಜಮಾನ. ಆಸ್ತಿ ಇವನ ಸೋದರಿಯ ಮಕ್ಕಳಿಗೆ ಸೇರುತ್ತದೆ. ಸಾಂಪ್ರದಾಯಿಕವಾಗಿ ಈ ಅಳಿಯಸಂತಾನ ಪದ್ಧತಿ ಅವಿಭಾಜ್ಯ ಕುಟುಂಬ ಪದ್ಧತಿಯಾಗಿತ್ತು. ವಂಶದಲ್ಲಿ ವಯಸ್ಸಿಗೆ ಬಂದ ಎಲ್ಲಾ ವ್ಯಕ್ತಿಗಳ ಒಪ್ಪಿಗೆಯಿಂದ ಮಾತ್ರ ಆಸ್ತಿವಿಭಜನೆ ಸಾಧ್ಯವಿತ್ತು. ಆದರೆ 1949ರ ಮದರಾಸು ಅಳಿಯ ಸಂತಾನ ಕಾನೂನು, 1961ರಲ್ಲಿ ಜಾರಿಗೆ ಬಂದ ಮೈಸೂರು ಕಾನೂನು, ಜೊತೆಗೆ ಹಿಂದು ಉತ್ತರಾಧಿಕಾರತ್ವ ಕಾನೂನು, ಇವುಗಳಿಂದ ಈ ಪದ್ಧತಿಯಲ್ಲಿ ಹಲವು ಬದಲಾವಣೆಗಳಾಗಿವೆ. ಪ್ರಸಕ್ತ ಸ್ಥಿತಿಯಲ್ಲಿ ಒಂದು ಕುಟುಂಬದ ಆಸ್ತಿಗೆ ಆ ಕುಟುಂಬ ಯಾ ತವರಿನ ಗಂಡು ಹಾಗೂ ಹೆಣ್ಣುಮಕ್ಕಳಿಗೂ ಸಮಾನ ಹಕ್ಕು ಲಭಿಸಿದ್ದು ಗಂಡು ಮಕ್ಕಳೂ ತಮ್ಮ ಹೆಂಡತಿ ಮಕ್ಕಳಿಗೆ ಅವರ ಪಾಲಿನ ಆಸ್ತಿಹಂಚುವ ಹಕ್ಕು ಬಂದಿದ್ದು ಆಸ್ತಿಯ ಉತ್ತರಾಧಿಕಾರತ್ವ ಇತರೆಡೆಗಳಲ್ಲಿರುವಂತೆಯೇ ಪಾಲಿತವಾಗುತ್ತಿದೆ. *

# ಆ

**ಆಂಡಯ್ಯ :** ಜೈನಕವಿ. ಕಬ್ಬಿಗರ ಕಾವಂ ಎಂಬ ಕಾವ್ಯದ ಕರ್ತೃ, ಬನವಾಸಿ ಪ್ರಾಂತ್ಯದಲ್ಲಿ ಸು.1180-1217ರ ಅವಧಿಯಲ್ಲಿ ಆಳಿದ ಹಾನುಗಲ್ಲು ಕದಂಬ ಶಾಖೆಯ ಕಾಮದೇವನ ಆಶ್ರಯದಲ್ಲಿ ಇವನು ಇದ್ದನೆಂಬ ಊಹೆ ಇದೆ. ಲೆಕ್ಕಿಗರ ಪಿರಿಯನೂ ಪರಮಜಿನಭಕ್ತನೂ ಆದ ಆಂಡಯ್ಯ ಇವನ ಅಜ್ಜ. ತಂದೆ ಶಾಂತ, ತಾಯಿ ಬಲ್ಲವ್ವೆ. ಧರ್ಮಶ್ರದ್ಧೆ, ನೀತಿನಿಷ್ಠೆ, ದೈವಭಕ್ತಿ, ಕಾವ್ಯಶಾಸ್ತ್ರವಿನೋದಾದಿ ಗುಣಗಳಿಗೆ ಕವಿಯ ಮನೆತನ ಹೆಸರಾದದ್ದು. ಇವನಲ್ಲಿ ಈ ಸದ್ಗುಣಗಳೆಲ್ಲವೂ ರಕ್ತಗತವಾಗಿ ಬೆಳೆದು ಬಂದಿದ್ದುವು. ತವರುನೆಲ, ತಾಯ್ನುಡಿ, ಬಳಿಯದೈವ ಈ ಮೂರನ್ನೂ ಕುರಿತು ಕವಿಯ ಒಲವು ಅಭಿಮಾನ ಅಪಾರ. ಪೂರ್ವಕವಿಗಳಲ್ಲಿ ಕರ್ಣಪಾರ್ಯ, ರನ್ನ, ಗಜಗ, ಅಗ್ಗಳ, ಜನ್ನ ಮುಂತಾದವರನ್ನು ಸ್ತುತಿಸಿದ್ದಾನೆ.

ಕಬ್ಬಿಗರ ಕಾವಂ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಕೃತಿ. ಚಂಪೂ ಶೈಲಿಯಲ್ಲಿದ್ದು ಇದರಲ್ಲಿ ಗದ್ಯಖಂಡಗಳೂ ವೃತ್ತಕಂದಗಳೂ ಕೂಡಿ ಒಟ್ಟು 272 ಪದ್ಯಗಳಿವೆ. ಸಂಸ್ಕೃತವನ್ನು ತೊರೆದು ಕನ್ನಡ ಬದುಕಲಾರದೆಂಬ ವಿದ್ವಾಂಸರ ಮತವನ್ನು ಖಂಡಿಸಿ ಅಚ್ಚಕನ್ನಡದಲ್ಲಿ ಕೇವಲ ತದ್ಭವ ಪದಗಳನ್ನೂ ದೇಸೀ ನುಡಿಗಳನ್ನೂ ಬಳಸಿ ಕವಿ ಈ ಕೃತಿಯನ್ನು ರಚಿಸಿದ್ದಾನೆ. ಸೊಗಯಿಪ ಸಕ್ಕದಂ ಬೆರೆಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇಳಲಾರರನಿತುಂ ಸಲೆ ಮುನ್ನಿನ ಪೆಂಪನಾಳ್ದ ಕಬ್ಬಿಗರದು ಮಾತನಾಡಿದವೊಲಂದವನಾಳ್ದಿರೆ ಬಲ್ಪು ನೆಟ್ಟಗೆ ದೊರೆಕೊಂಡು ದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಪದಾರೊಳಂ ಎಂದು ತಮತಮಗೆ ಬಲ್ಲವರೆಂದೊಡೆ ನಾನವರ ಬಯಕೆಯುಂ ಸಲಿಸುವೆನಿನ್ನೊಂದಚ್ಚ ಕನ್ನಡಂ ಬಿಗಿವೊಂದಿರೆ ಕಬ್ಬಿಗರ ಕಾವ ನೊಲವಿಂದೊರೆದೆಂ - ಎಂದು ಹೇಳಿ ತನ್ನ ಕಾವ್ಯಕ್ಕೆ ಪ್ರೇರಣೆ ಹೇಗೆ ಬಂತೆಂಬುದನ್ನು ತಿಳಿಸಿದ್ದಾನೆ. ಪುರುಳು, ಕೊಂಕು, ಮೆಯ್ಸಿರಿ, ಬದುರ್ಕನುಡಿ - ಇವುಗಳಿಂದ ಕೂಡಿದ ಕಾವ್ಯವನ್ನು ಬರೆವುದಾಗಿ ಹೇಳಿದ್ದಾನೆ. ಆಂಡಯ್ಯ ತನ್ನ ಕೃತಿಗೆ ಕಾವನಗೆಲ್ಲಂ ಎಂದು ನಾಮಕರಣ ಮಾಡಿದ್ದಾನೆ. ವಿದ್ವಾಂಸರು ಸೊಬಗಿನ ಸುಗ್ಗಿ ಎಂದೂ ಸಂಸ್ಕೃತ ಪಂಡಿತರು ಮದನವಿಜಯ ಎಂದೂ ಇದನ್ನು ಕರೆದಿದ್ದಾರೆ. ಕಬ್ಬಿಗರ ಕಾವಂ ಎಂಬ

ಹೆಸರು (ಸಂಸ್ಕೃತದ ಸಹಾಯವಿಲ್ಲದೆ ಅಚ್ಚಗನ್ನಡದಲ್ಲಿ ಬರೆದು ಕವಿಗಳನ್ನು ಕಾಪಾಡಿದವನು ಎಂಬ ಅರ್ಥದಲ್ಲಿ) ಕಾರಣಾಂತರಗಳಿಂದ ಜನಪ್ರಿಯವಾಯಿತು.

ಕರ್ವುವಿಲ್ಲ ಕಂಪಿನ ಪೊಳಲನ್ನು ಆಳುತ್ತಿದ್ದ. ಇವನ ಮಡದಿ ಇಚ್ಛೆಗಾರ್ತಿ. ಇವನ ಪರಿವಾರಕ್ಕೆ ಸೇರಿದ ಚಂದ್ರನನ್ನು ಶಿವ ಅಪಹರಿಸಿದ. ಇದನ್ನು ಕೇಳಿ ಕುಪಿತನಾದ ಕರ್ವುವಿಲ್ಲ ಶಿವನ ಮೇಲೆ ಯುದ್ಧಕ್ಕೆ ಹೊರಟು ಮಾರ್ಗಮಧ್ಯದಲ್ಲಿ ಸಿಕ್ಕಿದ ಜಿನಮುನಿಗೆ ಭಕ್ತಿಯಿಂದ ನಮಸ್ಕರಿಸಿ ಮುಂದೆ ಸಾಗಿ ಪುಷ್ಪಬಾಣಗಳಿಂದ ಶಿವನನ್ನು ಮುತ್ತಿ ಸೋಲಿಸಿದ. ಆಗ ಅರೆವೆಣ್ಣಾದ ಶಿವ ಕರ್ವುವಿಲ್ಲನನ್ನು ಶಪಿಸಿದ. ಅನಂತರ ಕರ್ವುವಿಲ್ಲ ಸ್ಮರಣೆಯನ್ನು ಕಳೆದುಕೊಂಡು ಇಚ್ಛೆಗಾರ್ತಿಯನ್ನು ಅಗಲಿ ಬಹುಕಾಲ ಪೂವಿನ ಪೊಳಲಲ್ಲಿ ನನೆಯಂಬನಾಗಿ ಆಳುತ್ತಿರುವಾಗ ಒಮ್ಮೆ ಅಪ್ಸರೆಯಿಂದ ತನ್ನ ಪೂರ್ವ ವೃತ್ತಾಂತವನ್ನು ಕೇಳಿದಮೇಲೆ ಶಾಪ ವಿಮೋಚನೆ ಹೊಂದಿ ಇಚ್ಛೆಗಾರ್ತಿಯೊಡನೆ ಮತ್ತೆ ಸಮಾಗಮಗೊಂಡ. ಇದು ಕಥೆಯ ಚೌಕಟ್ಟು.

ಈ ಕಾವ್ಯದಲ್ಲಿ ಬರುವ ಶಿವ ಮನ್ಮಥರ ಕಥೆಯ ಎಳೆ ನಮ್ಮ ಪುರಾಣದಲ್ಲಿ ದೊರೆಯುವಂಥದ್ದೆ. ಆದರೆ ಕವಿ ಮಾಡಿಕೊಂಡ ಮಾರ್ಪಾಟು ಬೇರ್ಪಾಟುಗಳಿಂದ ಒಂದು ರೀತಿಯ ನವ್ಯತೆ ಇದಕ್ಕೆ ಒದಗಿದೆ. ಕೃತಿಯನ್ನು ಸೂಕ್ಷ್ಮವಾಗಿ ಒಳ ಹೊಕ್ಕು ನೋಡಿದರೆ ಕದಂಬ ಕಾಮದೇವನನ್ನು ಪುರಾಣ ಕಥೆಯ ಕಾಮದೇವನೊಡನೆ ಏಕೀಭವಿಸಿ ಸಮಕಾಲೀನ ಚರಿತ್ರೆಯ ಘಟನೆಗಳನ್ನು ಸೂಚಿಸಿರುವುದು ತಿಳಿಯುತ್ತದೆ. ಸ್ಮರತತ್ತ್ವ, ಶಿವತತ್ತ್ವ, ಜಿನತತ್ತ್ವಗಳು ಒಂದಕ್ಕಿಂತ ಒಂದು ಮಿಗಿಲು ಎಂಬ ದರ್ಶನಧ್ವನಿ ಈ ಕಾವ್ಯದ ಅಂತರಂಗದಲ್ಲಿ ಇದೆ ಎಂದೂ ಅಭಿಪ್ರಾಯವಿದೆ.

ಕಬ್ಬಿಗರ ಕಾವ ಒಂದು ಶೃಂಗಾರಮಯ ಖಂಡಕಾವ್ಯ. ಕವಿ ಹೇಳಿಕೊಳ್ಳುವಂಥ ಪ್ರತಿಭಾವನಂತನೇನೂ ಅಲ್ಲ. ವರ್ಣನೆಗಳನ್ನು ಮಿತವಾಗಿ ಬಳಸಿದ್ದಾನೆ. ಅಷ್ಟಾದಶವರ್ಣನೆಗಳನ್ನು ಕವಿ ತಂದಿದ್ದರೂ ಕಥೆಗೆ ಯಾವ ಭಂಗ ಬಂದಿಲ್ಲ. ಒಮ್ಮೊಮ್ಮೆ ವರ್ಣನೆಗಳು ಅತಿಯಾಯಿತೇನೋ ಅನಿಸುತ್ತದೆಯಾದರೂ ಅವು ಕಾವ್ಯದ ಪರಿಧಿಯಲ್ಲಿಯೇ ಬರುವುದರಿಂದ ಅರ್ಥಪೂರ್ಣವಾಗಿವೆ. ಶೈಲಿ ಸರಳ, ಸಹಜಸುಂದರ, ಸುಲಲಿತ. ಇದಕ್ಕೆ ಕವಿ ಆರಿಸಿಕೊಂಡ ಕಾವ್ಯವಸ್ತುವೂ ಕಾರಣ. ಶೃಂಗಾರವರ್ಣನೆಗಳಲ್ಲಿ ಕವಿಯ ಕಲ್ಪನೆ ಸೊಗಸಾಗಿದೆ. ಎಲ್ಲಿಯೂ ಅಶ್ಲೀಲಕ್ಕೆ ಎಡೆಗೊಡುವುದಿಲ್ಲ. ಲಲಿತಭಾವಗಳನ್ನು ಸಹಜವಾಗಿ ವ್ಯಕ್ತಪಡಿಸುವಂತೆಯೆ ಉಗ್ರಭಾವಗಳನ್ನೂ ಕೆಲವೊಮ್ಮೆ ಸಮರ್ಥವಾಗಿ ವ್ಯಕ್ತಪಡಿಸುತ್ತಾನೆಂಬುದಕ್ಕೆ 'ತಡಿಮೀರಿ ಬಂದ ತೆಂಕಣ ಬಡಗಣ ಕಡಲೊಂದನೊಂದು ತಾಗುವ ತೆರದಿಂ ಬಿಡೆಗಜಿರಿಮಿಕ್ಕುತಕ್ಕಿಂ ಪಡೆಯೆರಡುಂ ದೆಸೆಗೆ ಮುಸಗಿ ತಾಗಿದುದೆತ್ತಂ' ಎಂಬ ಪದ್ಯ ಸಾಕ್ಷಿಯಾಗುತ್ತದೆ. ಮನ್ಮಥ ಶಿವನ ಮೇಲೆ ಪುಷ್ಪಬಾಣಗಳನ್ನು ಪ್ರಯೋಗಿಸಿದಾಗ ತೊರೆಗಳುಂ ಬೆಟ್ಟಗಳುಂ ಪೊಲನುಂ ಬಾನುಂ ದೆಸೆಯುಂ ಜಲಕ್ಕನಲರಿಂದೆ ಸಮೆದ ಮೋಲಾಯ್ತೆತ್ತಂ ಎಂಬಲ್ಲಿ ವರ್ಣನೆ ನವೀನವಾಗಿದೆ. ಸಂಸ್ಕೃತದ ಹೆಸರುಗಳನ್ನು ಕನ್ನಡಕ್ಕೆ ಭಾಷಾಂತರಿಸಿಕೊಡುವಾಗ ಧ್ವನಿ, ಮಾರ್ಮಿಕತೆ, ಶಬ್ದಶಿಲ್ಪಸಾಮರ್ಥ್ಯ ಕಂಡುಬರುತ್ತದೆ. ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಾಲ್ಕಾರನ್ ಆ ನೆಲನಂ ಮತ್ತಿನ ಮಾನಿಸರ್ ಪೊಗಲಲ್ ಏನಂ ಬಲ್ಲರ್ .......... ಕನ್ನಡಮನಿಪ್ಪಾ ನಾಡು ಚೆಲ್ವಾಯ್ತು ಮೆಲ್ಲೆಲರಿಂ ಪೂತಕೊಳಂಗಳಿಂ ಕಾಲೂರ್ಗಳಿಂ ಕೆಯ್ಗಳಿಂ ಎಂದು ಕನ್ನಡನಾಡನ್ನು ಬಾಯ್ತುಂಬ ಹೊಗಳಿ ತನ್ನ ಕನ್ನಡಾಭಿಮಾನವನ್ನು ಕೆಚ್ಚಿನಿಂದ ಹಿಡಿದು ಮುನ್ನುಗ್ಗಿದ ಆಂಡಯ್ಯ ಮಹಾಕವಿಯಲ್ಲದಿದ್ದರೂ ಸತ್ಕವಿ. **(ಜಿ.ಬಿ.)**

**ಆಂದೋಲ :** ಗುಲ್ಬರ್ಗ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಒಂದು ಪ್ರಮುಖ ಗ್ರಾಮ. ಗುಲ್ಬರ್ಗ-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಶಾಹಪುರ ಜೇವರ್ಗಿಗಳ ಮಧ್ಯದಲ್ಲಿ ಇದೆ. ನಿಜಾಮರ ಆಳ್ವಿಕೆಯ ಕಾಲದಲ್ಲಿ ಇದೇ ತಾಲ್ಲೂಕಿನ ಕೇಂದ್ರವಾಗಿತ್ತು. ಈಗ ಗ್ರಾಮಪಂಚಾಯಿತಿ ಇದೆ.

ಆಂದೋಲ ಗ್ರಾಮಕ್ಕೆ ಆಂದೇಲಿ, ಅಂದೇಲಿ ಎಂಬ ಹೆಸರುಗಳು ರೂಢಿಯಲ್ಲಿವೆ. ಸು.18ನೆಯ ಶತಮಾನದ ಶಿವಯೋಗೀಶ್ವರ ಪುರಾಣದಲ್ಲಿ ಆಂದೋಲನವನ್ನು ಆಂದೆಲಿ (ಆನೆಯ ತೆಲಿ) ಎಂದು ಗಜದ ತಲೆ ಎಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆ. ಆ ಪುರಾಣದ ಉಲ್ಲೇಖದ ಪ್ರಕಾರ ಆ ಊರಿನಲ್ಲಿ ಬಹು ಹಿಂದೆ ಆನೆಯ ತಲೆ ಎಂಬ ರಾಕ್ಷಸ ಊರ ಹೊರಗಿನ ಹಾಳುಮಠದಲ್ಲಿ ವಾಸವಾಗಿದ್ದು ಅಲ್ಲಿಗೆ ಬಂದವರನ್ನೆಲ್ಲ ತಿನ್ನುತ್ತಿದ್ದ. ಕೆಲವು ಕಾಲದನಂತರ ಈ ಶಿವಯೋಗೀಶ್ವರ ಅಲ್ಲಿಗೆ ಬಂದು ಅವನನ್ನು ಕೊಂದ. ಆಗ ಒಬ್ಬ ಸುಂದರ ಗಂಧರ್ವ ಒಡಮೂಡಿದ. ಆಂದಿನಿಂದ ಈ ಊರಿಗೆ ಆನೆದಲೆ, ಅಂದಲೆ ಎಂಬ ಹೆಸರು ಬಂತು ಎಂದು ಹೇಳಿದೆ.

ಸು.300 ವರ್ಷಗಳ ಹಿಂದೆ ಇಲ್ಲಿದ್ದ ಶ್ರೀ ಕರಣೇಶ್ವರ ಸ್ವಾಮಿಗಳು (2ನೆಯ ಕರಣಪ್ಪಯ್ಯ) ತಮ್ಮ ಸದಾಚಾರದ ಮಹಿಮೆಗಳಿಂದ ಪ್ರಸಿದ್ಧರಾಗಿದ್ದರು. ಲೋಕಕಲ್ಯಾಣಕ್ಕಾಗಿ ಶ್ರಮಿಸಿದ ಈ ಮಹಾಪುರುಷರ ರಥೋತ್ಸವ ಪ್ರತಿವರ್ಷ ಕಾರ್ತೀಕ ಬಹುಳ ಪಂಚಮಿಯ ದಿವಸ ಇಲ್ಲಿ ನಡೆಯುತ್ತದೆ.

ಈ ಊರಿನಲ್ಲಿ ಎಂಟು ಶಿವಾಲಯಗಳಿವೆ. ಅವುಗಳಲ್ಲಿ ಸಂಗಮೇಶ್ವರ, ಶಾಂತಲಿಂಗೇಶ್ವರ, ಅಟಕೇಶ್ವರ ಪ್ರಮುಖವಾದವು. ಇವುಗಳಲ್ಲದೆ ಕೆಲವು ಮಸೀದಿ, ಗುಮ್ಮಟಗಳೂ ಆದಿಲ್‌ಶಾಹೀ ಕಾಲದ ಅವಶೇಷಗಳೂ ಇವೆ. ಎರಡು ಶಾಸನಗಳು ಸಹ ಇವೆ. ಒಂದು ಶಾಸನದಲ್ಲಿ ಸನ್ನತಿಯ ಚಂತಲಾಂಬೆಯ ಉಲ್ಲೇಖವಿದೆ. ಸುರಪುರದ ರಾಜಾ ವೆಂಕಟಪ್ಪ ಇಲ್ಲಿಯ ಗೌಡರಿಗೆ ಹಗಲುದೀವಟಿಗಿ, ಮಾಯಿಮರ್ತಪ, ಆಪ್ತಗಿರಿ, ಅಡ್ಡಪಲ್ಲಕ್ಕಿ ಮೊದಲಾದ ಮರ್ಯಾದೆಗಳನ್ನು ನೀಡಿದ್ದ. **(ಎ.ಕೆ.)**

**ಆಗುಂಬೆ :** ಶಿವಮೊಗ್ಗದಿಂದ ಸು.80ಕಿಮೀ ಪಶ್ಚಿಮಕ್ಕೂ ಅರಬ್ಬೀ ಸಮುದ್ರದ ದಕ್ಷಿಣ ಕನ್ನಡ ಜಿಲ್ಲೆಯ ದಡದಿಂದ ಸು.48 ಕಿಮೀ ಪೂರ್ವಕ್ಕೂ ಇರುವ ಸಹ್ಯಾದ್ರಿಯ ಅತ್ಯುನ್ನತ ಶ್ರೇಣಿಗಳಲ್ಲೊಂದು. ಸಮುದ್ರ ಮಟ್ಟದಿಂದ 605ಮೀ ಎತ್ತರವಿದೆ. ಪಶ್ಚಿಮದ ತಳದಲ್ಲಿ ಸೋಮೇಶ್ವರ ಎಂಬ ಊರಿದೆ. ಪೂರ್ವದಲ್ಲಿ ಆಗುಂಬೆಯ ಪೇಟೆ ಇದೆ. ಸುತ್ತಮುತ್ತ ದಟ್ಟವಾದ ಅರಣ್ಯವಿದೆ. ಅರಣ್ಯದಲ್ಲಿ ಕಡವೆ, ಕಾಡುಕೋಣ ಇತರ ಜಾತಿಯ ಪ್ರಾಣಿಗಳು ಹೇರಳವಾಗಿವೆ. ಸರಾಸರಿ ವಾರ್ಷಿಕ ಮಳೆ 7600 ಮಿಮೀಗೂ ಹೆಚ್ಚು. ಭಾರತದಲ್ಲಿ ಅಧಿಕ ಮಳೆಬೀಳುವ ಪ್ರದೇಶಗಳಲ್ಲಿ ಇದೂ ಒಂದು. ಮಳೆಗಾಲದ ಮೂರು ತಿಂಗಳು ಇಲ್ಲಿ ಬಿಸಿಲು ಬೀಳುವದು ತುಂಬ ಅಪರೂಪ; ಅಷ್ಟೊಂದು ದಟ್ಟಮೋಡಗಳು ಆಕಾಶವನ್ನು ಸದಾ ವ್ಯಾಪಿಸಿರುತ್ತವೆ. ಸಹ್ಯಾದ್ರಿ ಶ್ರೇಣಿಗಳಿಂದ ಮೇಲಿಂದ ಕೆಳಕ್ಕೆ ದುಮುಕುವ ಚಿಕ್ಕ ಪ್ರಪಾತಗಳಿಗೆ ಇಲ್ಲಿ ಲೆಕ್ಕವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗೂ ಘಟ್ಟದ ಮೇಗಣ ಜಿಲ್ಲೆಗಳಿಗೂ ಸಂಪರ್ಕ ಕಲ್ಪಿಸುವ ಆಗುಂಬೆ ಬೆಟ್ಟವನ್ನು (ಘಾಟಿ) ಏರುವ ರಸ್ತೆ ಹತ್ತಾರು ಇಕ್ಕಟ್ಟಾದ ತಿರುವುಗಳಿಂದ (ಹೇರ್‌ಪಿನ್ ಕರ್ವ್ಸ್) ಕೂಡಿದೆ. ದಟ್ಟವಾದ ಕಾಡುಗಳಲ್ಲಿ ಸು.35 ರಿಂದ 70ಮೀ ಎತ್ತರದ ಬಗೆಬಗೆಯ ದೈತ್ಯವೃಕ್ಷಗಳು ಬೆಳೆಯುತ್ತವೆ. ಉಪಯುಕ್ತ ಗಿಡಮರಗಳಲ್ಲದೆ ಬಿದಿರು ಹೆಚ್ಚಾಗಿದೆ. ಈ ಪ್ರದೇಶದ ಸುತ್ತಮುತ್ತ ಸ್ವಲ್ಪ ಏಲಕ್ಕಿ ಬೆಳೆಯೂ ಇದೆ.

ಸೂರ್ಯಾಸ್ತಮಾನದ ಸುಂದರ ನೋಟ

ಆಗುಂಬೆ ಪೇಟೆಯಿಂದ ಸುಮಾರು ಒಂದೂವರೆ ಕಿಮೀ ಪಶ್ಚಿಮದಲ್ಲಿ ಆಗುಂಬೆಯ ಜಗತ್ಪ್ರಸಿದ್ಧ ಸೂರ್ಯಾಸ್ತಮಾನ ದೃಶ್ಯವನ್ನು ಕಾಣಲು ಬೆಟ್ಟದ ನೆತ್ತಿಯಲ್ಲಿ ಒಂದು ರಂಗಸ್ಥಳವನ್ನು ಮಾಡಿದ್ದಾರೆ. ಪ್ರಕೃತಿಯ ಸುಂದರ ದೃಶ್ಯಗಳಲ್ಲಿ ಒಂದಾದ ಈ ಸೂರ್ಯಾಸ್ತಮಾನ ಭಾರತದಲ್ಲಿ ಮತ್ತೆಲ್ಲಿಯೂ ಇಷ್ಟು ಚೆಲುವಾಗಿ

ಕಾಣಿಸುವುದಿಲ್ಲ ಎಂದು ಹೇಳುವವರಿದ್ದಾರೆ. ವರ್ಷವಿಡೀ ಮಳೆಗಾಲ ಹೊರತು ಈ ಅಪೂರ್ವ ದೃಶ್ಯವನ್ನು ನೋಡಲು ದೇಶೀಯ, ವಿದೇಶೀಯ ಪ್ರವಾಸಿಗಳು ಇಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಈ ರಂಗಸ್ಥಳದಿಂದ ಇದ್ದಕ್ಕಿದ್ದಂತೆ ಇಳಿದಿರುವ ಸುಮಾರು 1000ಮೀ ಕೆಳಗಿನ ಭೂಪ್ರದೇಶದ ದರ್ಶನ ಮೈನವಿರೇಳಿಸುವಂಥದು. ಅಲ್ಲಿ ನಿಂತು ನೋಡಿದರೆ ಪಡುಗಡಲ ತಡಿಯವರೆಗಿನ, ಅಲ್ಲಿಂದ ದಿಗಂತದ ಅಂಚಿನವರೆಗಿನ ಸು.50ಕಿಮೀ ವಿಸ್ತಾರದ ಮನೋಹರ ದೃಶ್ಯ ಕಣ್ಣಿಗೆ ಕಟ್ಟಿ, ಮನಸ್ಸಿಗೆ ಆಪ್ಯಾಯಮಾನವಾಗುತ್ತದೆ. ಆ ಕ್ಷಣದಲ್ಲಿ ಆಗುವ ಅನುಭವ ಮಾತಿಗೆ ಮೀರಿದುದು.

ಸೂರ್ಯಾಸ್ತಮಾನದ ಸುಂದರ ದೃಶ್ಯವನ್ನು ನೋಡುವ ರಂಗಸ್ಥಳದಲ್ಲಿ ಸಂಜೆಯ ಹೊತ್ತು ಕುಳಿತು ಪ್ರಕೃತಿ ತೊಡುವ ವಿವಿಧ ವೇಷಗಳನ್ನು ಕಾಣಬೇಕು. ಆ ಹೊತ್ತು ಸೌಂದರ್ಯವಾರಿಧಿಯೇ ನಮ್ಮೆದುರು ಬಂದು ನಿಂತಂತೆನಿಸುತ್ತದೆ. ಸೂರ್ಯ ಮುಳುಗುವ ಕೊನೆಯ ಒಂದು ಕ್ಷಣ, ಅದೊಂದು ಅಪೂರ್ವ ರಸಗಳಿಗೆ, ಮೈಮನಸ್ಸು ಆ ಸುಂದರ ಸಂಜೆಯ ರಮಣೀಯ ದೃಶ್ಯದಲ್ಲಿ ಲೀನವಾಗಿರುತ್ತದೆ. ಸಂಜೆಯ ರಂಗಿನ ಹೊಂಬಣ್ಣದ ವೈವಿಧ್ಯ, ಪ್ರಕೃತಿಯ ಪ್ರಶಾಂತ ಹಿನ್ನೆಲೆ, ವೈಭವದ ದೃಶ್ಯ ಇವು ಎಂಥವರ ಮನಸ್ಸನ್ನೂ ಸೆಳೆಯುತ್ತದೆ. ಪ್ರಕೃತಿದತ್ತ ಸುಂದರ ಸ್ಥಳಗಳಲ್ಲಿ ಆಗುಂಬೆಯೂ ಒಂದು.

ಆಗುಂಬೆ, ಜಮದಗ್ನಿ - ರೇಣುಕಾದೇವಿಯರ ಮಗನಾದ ಪರುಶುರಾಮನ ಊರು. ಕ್ಷತ್ರಿಯ ಹತ್ಯೆಯ ಪಾಪವನ್ನು ಕಳೆದುಕೊಳ್ಳಲು ಅಶ್ವಮೇಧಯಾಗವನ್ನು ಮಾಡಿ ಸಮಸ್ತ ಭೂಮಿಯನ್ನು ಕಶ್ಯಪ ಋಷಿಗೆ ಧಾರೆಯೆರೆದು ದಾನಕೊಟ್ಟಾಗ ತನಗೆ ಇರಲು ಸ್ಥಳವಿಲ್ಲದೆ ಆಗುಂಬೆಯ ಸಹ್ಯಾದ್ರಿ ಶಿಖರದಲ್ಲಿ ನಿಂತು ಎದುರುಗಡೆಯ ಸಮುದ್ರಕ್ಕೆ ಪರಶು ಹೋದಷ್ಟು ದೂರ ತನಗೆ ಸ್ಥಳ ಕೊಡು ಎಂದು ಪ್ರಾರ್ಥಿಸಿ ತನ್ನ ಕೊಡಲಿಯನ್ನು ಎಸೆದ. ಸಮುದ್ರ ಸಹ್ಯಾದ್ರಿಯಿಂದ ಹಿಂದಕ್ಕೆ ಉರುಳಿತು. ಅಂದಿನಿಂದ ಆ ಭಾಗದ ಪಶ್ಚಿಮ ಕರಾವಳಿಯೆಲ್ಲ ಪರಶುರಾಮ ಕ್ಷೇತ್ರವೆಂದು ಹೆಸರಾಯಿತು ಎಂದು ಸ್ಥಳಪುರಾಣದ ಹೇಳಿಕೆ.

ಆಗುಂಬೆಯಲ್ಲಿ ಸು.14ನೆಯ ಶತಮಾನದ ಒಂದು ಗೋಪಾಲಕೃಷ್ಣ ದೇವಾಲಯವಿದೆ. ಇಲ್ಲಿರುವ ಮೂಲವಿಗ್ರಹ ಹೊಯ್ಸಳ ಶೈಲಿಯ ಅನುಕರಣೆ. ದೇವಾಲಯ ರಚನೆಯಲ್ಲಿ ವಿಜಯನಗರದ ವಾಸ್ತುಶೈಲಿಯನ್ನು ಕಾಣಬಹುದು. *

**ಆಚಣ್ಣ :** ಜೈನಕವಿ. ವರ್ಧಮಾನ ಪುರಾಣದ ಕರ್ತೃ. ಹನ್ನೆರಡನೆಯ ಶತಮಾನದ ಕೊನೆಯಲ್ಲಿ ಹಾಗೂ ಹದಿಮೂರನೆಯ ಶತಮಾನದ ಪ್ರಾರಂಭದಲ್ಲಿ ಪುಲಿಗೆರೆಯಲ್ಲಿ ಇದ್ದನೆಂದು ವಿದ್ವಾಂಸರ ಅಭಿಮತ. ಈತ ಭಾರದ್ವಾಜ ಗೋತ್ರೋದ್ಭವ. ಇವನ ತಂದೆ ಕೇಶಿರಾಜ, ತಾಯಿ ಮಲ್ಲಾಂಬಿಕೆ. ಗುರು ನಂದಿಯೋಗೀಶ್ವರ. ಕವಿ ಶಿಕಾರಿಪುರ ಮತ್ತು ಅರಸೀಕೆರೆ ಶಾಸನಗಳಲ್ಲಿ ಉಕ್ತನಾಗಿರುವ ವಸುಧೈಕಬಾಂಧವ ಎಂಬ ಬಿರುದುಳ್ಳ ರೇಚರಸ ದಂಡನಾಥನ ಆಶ್ರಯದಲ್ಲಿದ್ದ.

ವರ್ಧಮಾನಪುರಾಣ 24ನೆಯ ತೀರ್ಥಂಕರ ವರ್ಧಮಾನ ಮಹಾವೀರನ ಚರಿತ್ರೆಯುಳ್ಳ ಚಂಪೂಕಾವ್ಯ. ಇದರಲ್ಲಿ 16 ಆಶ್ವಾಸಗಳಿವೆ. ಗ್ರಂಥಾರಂಭದಲ್ಲಿ ವರ್ಧಮಾನ, ಸಿದ್ಧಾದಿಗಳು, ಸರಸ್ವತಿ, ಯಕ್ಷ ಯಕ್ಷಿಯರು ಮುಂತಾದವರ ಸ್ತುತಿಯಿದೆ. ಬಂಧ ಪ್ರೌಢವಾಗಿಯೂ ಸಂಸ್ಕೃತಭೂಯಿಷ್ಠವಾಗಿಯೂ ಇದೆ. ಪ್ರಾಸಯಮಕಾದಿ ಶಬ್ದಾಲಂಕಾರಗಳನ್ನು ಯಥೇಚ್ಛವಾಗಿ ಬಳಸಿದ್ದಾನೆ. ಶೈಲಿ ಪಾಂಡಿತ್ಯಪೂರ್ಣವಾಗಿದೆ. ತನ್ನ ಕಾವ್ಯ ಸದಲಂಕಾರದಾಗರಮುದ್ಧರಸಭಾವಾನೀಕದೋಕಂ ಸದರ್ಥದ ಸಾರ್ಥಂ ವರಶಬ್ದವೃಂದದ ವಿರಾಜನ್ಮಂದಿರಂ ನಾಡೆಯುಂ ಮೃದುಸಂದರ್ಭದ ಗರ್ಭಂ - ಈ ಗುಣಗಳಿಂದ ಕೂಡಿದೆ ಎಂದು ಹೇಳಿಕೊಳ್ಳುತ್ತಾನೆ. ರಸಭಾವಗಳನ್ನು ಮನಮುಟ್ಟುವಂತೆ ವರ್ಣಿಸುವ ಕವಿತಾಸಾಮರ್ಥ್ಯ, ಅದಕ್ಕನುಕೂಲವಾದ ಶಬ್ದ ಸಂಪತ್ತಿ, ಸುಂದರ ನುಡಿಗಟ್ಟುಗಳು, ಸಂದರ್ಭೋಚಿತ ಗಾದೆಗಳು ಈತನ ಶೈಲಿಗೆ ಮೆರಗುಕೊಟ್ಟಿವೆ. ಈ ಪುರಾಣದಲ್ಲಿ ಬರುವ ಭವಾವಳಿಯ ಕಥೆಗಳು ಬಹಳ ತೊಡಕಿನವಾದ್ದರಿಂದ ಕಾವ್ಯರಸಾಸ್ವಾದನೆಗೆ ಸ್ವಲ್ಪ ಕಷ್ಟವುಂಟಾಗುತ್ತದೆ. ವರ್ಣನೆ ಹಾಗೂ ಪಾತ್ರರಚನೆಯಲ್ಲಿ ಕವಿ ಅಷ್ಟೊಂದು ಯಶಸ್ವಿಯಾಗಿಲ್ಲ ಎಂದೇ ಹೇಳಬಹುದು. ಈ ಕಾವ್ಯ ಶಾಂತ ರಸಪ್ರಧಾನವಾಗಿದೆ. ವರ್ಧಮಾನ ಜಿನನನ್ನು ಕುರಿತು ಕನ್ನಡದ ಮೊಟ್ಟಮೊದಲ ಗ್ರಂಥ ಎಂಬ ದೃಷ್ಟಿಯಿಂದ ಈ ಕೃತಿಗೆ ಪ್ರಾಶಸ್ತ್ಯವಿದೆ.

ಈತ ವರ್ಧಮಾನಪುರಾಣವನ್ನಲ್ಲದೆ ಶ್ರೀಪದಾಶೀತಿ ಎಂಬ ಸು.94 ಕಂದಗಳಿರುವ ಮತ್ತೊಂದು ಪುಟ್ಟಗ್ರಂಥವನ್ನೂ ರಚಿಸಿದ್ದಾನೆ. ಇದು ಜೈನ ಮತದೊಳಗಣ ಪಂಚಪದಗಳ ಮಹಿಮೆಯನ್ನು ತಿಳಿಸುವ ಕೃತಿ. ಇದರಲ್ಲಿ ಅರ್ಹಂತ, ಸಿದ್ಧ, ಸಾಧು, ಉಪಾಧ್ಯಾಯ, ಆಚಾರ್ಯ ಇವರ ಮಹಿಮೆಯನ್ನು ಹೊಗಳಿದ್ದಾನೆ. ಜಿನಮುನಿಯಾಚಣ್ಣ, ವಾಣೀವಲ್ಲಭ ಎಂದು ತನ್ನನ್ನು ಕರೆದುಕೊಂಡು ತನ್ನ ಜಿನನಿಷ್ಠೆಯನ್ನು ಪ್ರಕಟಿಸಿದ್ದಾನೆ. ಪಾರ್ಶ್ವಕವಿ ಇವನನ್ನು ಜೈನಾಗಮ ಗರ್ಭ, ಪ್ರಸನ್ನಗುಣ ಎಂದು ಹೊಗಳಿರುವುದರಿಂದ ಈತ ಜಿನಮತದಲ್ಲಿ ಬಹುಶ್ರದ್ಧೆಯುಳ್ಳವನೆಂದೂ ಪರಿಶುದ್ಧವಾದ ಆಚಾರವಂತನೆಂದೂ ಗೊತ್ತಾಗುತ್ತದೆ. **(ಬಿ.ಬಿ.ಎಚ್.)**

**ಆಚಾರ್ಯ, ಎಂ.ಟಿ.ವಿ. :** 1920-92. ಜಲವರ್ಣ ಚಿತ್ರಕಲಾವಿದ. ಚಂದಮಾಮದ ಆಚಾರ್ಯ ಎಂದೇ ಪ್ರಸಿದ್ಧರಾಗಿದ್ದವರು. 1920 ಜುಲೈ 28ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಎಂ.ಟಿ. ನಾರಾಯಣಯ್ಯಂಗಾರ್, ತಾಯಿ ಸಿಂಗಮ್ಮಾಳ್. ತಂದೆ ಶಿರಸ್ತೇದಾರರಾಗಿದ್ದರು. ಇದರಿಂದಾಗಿ ಆಚಾರ್ಯರು ಬಾಲ್ಯದಲ್ಲೇ ಹಲವಾರು ಊರು, ಅಲ್ಲಿಯ ಸುಂದರ ಪರಿಸರಗಳನ್ನು ನೋಡಲು ಸಾಧ್ಯವಾಯಿತು. ಇವರ ಕಲಾಕೃತಿಗಳಿಗೆ ಮೂಲ ಚೇತನ ಪ್ರಕೃತಿ. ಪ್ರಕೃತಿ ಪರಿಸರಗಳೇ ಇವರಲ್ಲಿ ಸುಪ್ತವಾಗಿದ್ದ ಕಲೆಗೆ ಪ್ರೇರಣೆ ನೀಡಿದವು. ಎಸ್.ಎಸ್.ಎಲ್.ಸಿ. ಪಾಸಾಗಿ ಮೈಸೂರಿನ ಶ್ರೀ ಚಾಮರಾಜೇಂದ್ರ ಕಲಾ ಶಾಲೆಯಲ್ಲಿ ಡಿಪ್ಲೊಮಾದಲ್ಲಿ ತೇರ್ಗಡೆಯಾದರು (1940). ಅನಂತರ ಸ್ವತಂತ್ರ ಕಲಾವಿದರಾಗಿ ಜೀವನ ನಿರ್ವಹಣೆ ಪ್ರಾರಂಭಿಸಿದರು. ಜಯಚಾಮರಾಜ ಒಡೆಯರ್ ಆಪ್ತ ಕಾರ್ಯದರ್ಶಿ ಸರ್ ಚಾರಲ್ಸ್ ಟಾಡ್ ಹಂಟ್‌ರವರು ಇವರನ್ನು ಕರೆಯಿಸಿ ಮಹಾರಾಜರ ಗ್ರೀಟಿಂಗ್ ಕಾರ್ಡ್ ರಚಿಸಲು ನೇಮಿಸಿದ್ದು ಇವರ ಪ್ರತಿಭೆಗೆ ನಿದರ್ಶನ.

ಇವರು ಬೆಂಗಳೂರಿನ ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಟ್ರೇಸರ್ ಆಗಿ ನೇಮಕಗೊಂಡಿದ್ದು 1942ರಲ್ಲಿ. ಆಗ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಅಮೆರಿಕನ್ ಅಧಿಕಾರಿಗಳು ಇವರ ಕಲಾಕೃತಿಗಳಿಗೆ ಮಾರು ಹೋಗಿ ಹಲವು ಚಿತ್ರಗಳನ್ನು ಖರೀದಿಸಿದರು. ದಕ್ಷಿಣ ಭಾರತದ ಪ್ರಕೃತಿ ರಮ್ಯ ದೃಶ್ಯಗಳನ್ನು ತಮ್ಮ ಕುಂಚದಿಂದ ಸೆರೆಹಿಡಿದುಕೊಡುವಂತೆ ಆಚಾರ್ಯರನ್ನು ಕೇಳಿಕೊಂಡರು. ಸ್ವತಂತ್ರಜೀವನ ನಡೆಸಬೇಕೆಂಬುದು ಇವರ ಆಸೆಯಾಗಿತ್ತು. ಕೆಲಸಕ್ಕೆ ರಾಜೀನಾಮೆ ನೀಡಿ ಕಲಾಕೃತಿಗಳನ್ನು ರಚಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1945ರಲ್ಲಿ ಖ್ಯಾತ ವಕೀಲ ಹಾಗೂ ನಿವೃತ್ತ

ನ್ಯಾಯಾಧೀಶರಾಗಿದ್ದ ಶ್ರೀನಿವಾಸ ಅಯ್ಯಂಗಾರರ ಆಹ್ವಾನದ ಮೇರೆಗೆ ಮದರಾಸು ಸೇರಿದ ಇವರು ಅಲ್ಲಿ ಸ್ವಪ್ರಯತ್ನದಿಂದ ಪ್ರಬುದ್ಧ ಕಲಾವಿದರಾಗಿ ರೂಪುಗೊಂಡರು. ಮದರಾಸಿನಲ್ಲಿದ್ದಾಗ ಚಿತ್ರರಂಗದ ಸಂಪರ್ಕವೂ ಬಂತು. ಕಾರ್ಟೂನ್ ಚಿತ್ರಗಳ ತಯಾರಿಕೆಯಲ್ಲಿ ಸಹಾಯಕರಾಗಿಯೂ ಕೆಲಸ ಮಾಡಿದರು. ಆರು ಭಾಷೆಗಳಲ್ಲಿ ಪ್ರಕಟ ಗೊಳ್ಳುತ್ತಿದ್ದ ಚಂದಮಾಮ ಪತ್ರಿಕೆಯ ಕಲಾ ಸಂಪಾದಕರಾಗಿ ಅದಕ್ಕೊಂದು ರೂಪಕೊಟ್ಟರು (1947). ಚಂದಮಾಮ ಪತ್ರಿಕೆಯ ಮುಖಪುಟಗಳನ್ನು ಮಹಾಭಾರತಮಾಲೆಯ ಚಿತ್ರಗಳು ಅಲಂಕರಿಸಿದುವು (1947-53). ಆಚಾರ್ಯರು ರಚಿಸಿದ ಈ ಚಿತ್ರಗಳು ಜನಮನವನ್ನು ಸೂರೆಗೊಂಡವು. ಕೆಲ ಕಾಲದ ಬಳಿಕ ಇವರು ಚಂದಮಾಮ ತ್ಯಜಿಸಿ ಬೆಂಗಳೂರಿಗೆ ಮರಳಿ ಸ್ವತಂತ್ರ ಸ್ಟುಡಿಯೋ ಪ್ರಾರಂಭಿಸಿದರು. ಅನಂತರ ಮದನಪಲ್ಲಿ ಸಮೀಪ ಋಷಿವ್ಯಾಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಕಲಾಶಿಕ್ಷಕರಾಗಿ ನೇಮಕಗೊಂಡರು.

ಚಂದಮಾಮ ಮಾಲೀಕರಿಂದ ಪುನಃ ಕರೆ ಬಂದಾಗ (1957) ಮದರಾಸಿಗೆ ತೆರಳಿದರು. ಅಲ್ಲಿ 1963ರವರೆಗೂ ಕಾರ್ಯನಿರ್ವಹಿಸಿ ಮಹಾಭಾರತ ಸರಣಿಯ 80 ಕಲಾಕೃತಿಗಳನ್ನು ಪೂರೈಸಿದರು. ಅನಂತರ ತಾಯಿನಾಡು ಪತ್ರಿಕೆ ಬಳಗದ ಪ್ರಧಾನ ಕಲಾವಿದರಾದರು. ಈ ಪತ್ರಿಕಾ ಬಳಗ ಪ್ರಕಟಿಸುತ್ತಿದ್ದ ಗೋಕುಲ, ಕೈಲಾಸ ಪತ್ರಿಕೆಗಳಲ್ಲಿ ಇವರ ಬಹುತೇಕ ಚಿತ್ರಗಳು ಪ್ರಕಟವಾದವು. ವೃತ್ತಿಯಿಂದ ನಿವೃತ್ತರಾದ ಬಳಿಕ (1965) ಬೆಂಗಳೂರಿನಲ್ಲಿ ವಾಣಿಜ್ಯ ಕಲೆಯ ಸ್ಟುಡಿಯೋ ಆರಂಭಿಸಿದರು. ತಾವು ರಚಿಸಿದ ಮಹಾಭಾರತ ಸರಣಿ ಚಿತ್ರಗಳನ್ನು ಪ್ರದರ್ಶಿಸಿದರು. ಆಚಾರ್ಯ ಚಿತ್ರಕಲಾಭವನ ಮತ್ತು ಅಂಚೆ ಶಿಕ್ಷಣ ಆರಂಭಿಸಿದರು. ಭಾರತೀಯ ಕಲೆಯ ಏಕೈಕ ಅಂಚೆ ಶಿಕ್ಷಣ ಪದ್ಧತಿ ಪ್ರಾರಂಭಿಸಿ ಇತಿಹಾಸ ನಿರ್ಮಿಸಿದರು. ಇವರು ರಚಿಸಿದ ಪ್ರಮುಖ ಕಲಾಕೃತಿಗಳಿವು; ಹಳ್ಳಿಯ ಬಡ ಉಪಾಧ್ಯಾಯ, ಸಮುದ್ರ ಗುಪ್ತನ ಆಸ್ಥಾನ, ವಸಂತ ಋತು, ಗದಾಯುದ್ಧ, ಗೃಹಲಕ್ಷ್ಮೀ, ದೀಪಾವಳಿಯ ಅಳಿಯ, ಗೀತೋಪದೇಶ, ಅಂದಿನ ಕೂಳು, ದುಶ್ಯಾಸನ ವಧೆ, ಅಶ್ವತ್ಥಾಮ ಶಿವನಿಂದ ಅಜೇಯ ಖಡ್ಗ ಪಡೆದುದು, ಮುಗ್ಧ ಪ್ರೇಮಿಗಳು, ಬಾಳಿನ ಸಂಜೆ, ಮರಕುಟುಕ, ಭಿಕ್ಷುಕಿ. ಇವರು ಜಲವರ್ಣದಲ್ಲಿಯಷ್ಟೇ ಅಲ್ಲ ನವ್ಯಶೈಲಿಯ ಕಲಾಕೃತಿಗಳನ್ನೂ ರಚಿಸಿದರು. ಅವುಗಳಲ್ಲಿ ಮುಖ್ಯವಾದವು ಮೀನುಗಳು, ಸಂಕೇತಗಳು, ಪ್ರಕೃತಿ ಮತ್ತು ಸೃಷ್ಟಿ.



ಭೀಮ - ದುರ್ಯೋಧನರ ಗದಾಯುದ್ಧ

ಆಚಾರ್ಯರ ಕಲಾಕೃತಿಗಳು ಮೈಸೂರು ಸಂಪ್ರದಾಯಕ್ಕೆ ಅಸ್ತಿತ್ವವನ್ನು ಕಲ್ಪಿಸಿಕೊಟ್ಟವು. ಸಂಯೋಗ ಚಿತ್ರರಚನೆಯಲ್ಲಿ ಒಂದು ಪ್ರಮುಖವಾದ ಸ್ಥಾನವನ್ನು ಇವರು ಗಳಿಸಿಕೊಂಡಿದ್ದರು. ದೇಶ ವಿದೇಶಗಳಲ್ಲಿ ಇವರ ಕಲಾ ಕೃತಿಗಳು ಅನೇಕ ಕಲಾರಸಿಕರ ಕೈಸೇರಿದವು. ಇವರ ಏಕವ್ಯಕ್ತಿ ಚಿತ್ರ ಪ್ರದರ್ಶನ ಕರ್ನಾಟಕದ ಪ್ರಮುಖ ನಗರಗಳಲ್ಲಿ ನಡೆದು ಜನತೆಯ ಪ್ರಶಂಸೆ ಗಳಿಸಿತು. ಕರ್ನಾಟಕದ ಸಾಂಸ್ಕೃತಿಕ ನಿಯೋಗದ ಪ್ರಮುಖರಾಗಿ ಇವರು ರಷ್ಯಕ್ಕೆ ಭೇಟಿ ನೀಡಿದರು (1974). ಇವರ ಕಲಾಸಾಧನೆಗೆ ಹಲವು ಗೌರವ ಪ್ರಶಸ್ತಿಗಳು ದೊರಕಿವೆ. ಇವುಗಳಲ್ಲಿ ಮುಖ್ಯವಾದವು ಮೈಸೂರು ದಸರಾ ಪ್ರದರ್ಶನದ ಸುವರ್ಣ ಪದಕ (1954), ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1980) ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1989). ಕಲೆ ಮತ್ತು ನಾನು (1985) ಎಂಬ ಪುಸ್ತಕ ಆಚಾರ್ಯರ ಆತ್ಮಕಥಾ ರೂಪದ ಬರೆವಣಿಗೆ. ಇವರು 1992ರಲ್ಲಿ ನಿಧನರಾದರು. **(ಆರ್.ಜಿ.ಆರ್.)**

**ಆಚಾರ್ಯ, ಪಾ.ವೆಂ. :** (1915-92). ಗೋಯೆಂಕಾ ಪ್ರಶಸ್ತಿ ಪಡೆದ ಕನ್ನಡದ ಪ್ರಸಿದ್ಧ ಪತ್ರಿಕೋದ್ಯಮಿ, ಸಾಹಿತಿ. ಪಾಡಿಗಾರು ವೆಂಕಟರಮಣ ಆಚಾರ್ಯ ಇವರ ಪೂರ್ಣ ಹೆಸರು. ಇವರು ಉಡುಪಿಯ ಬಡ ಕುಟುಂಬವೊಂದರಲ್ಲಿ 1915 ಫೆಬ್ರವರಿ 6ರಂದು ಜನಿಸಿದರು. ಆಗಿನ ಮೆಟ್ರಿಕ್‌ವರೆಗೆ ಕಲಿತರು. ಆದರೆ ಸಂಸ್ಕೃತವೂ ಸೇರಿದಂತೆ ಅನೇಕ ವಿಷಯಗಳಲ್ಲಿ ಆಸಕ್ತಿ ತಾಳಿ ಓದುವ ಅಭಿರುಚಿ ಬೆಳೆಸಿಕೊಂಡರು. ಪತ್ರಿಕೋದ್ಯಮ ರಂಗ ಇವರನ್ನು ತರುಣ ವಯಸ್ಸಿನಲ್ಲಿಯೆ ಆಕರ್ಷಿಸಿತು. ಉಡುಪಿಯ ಅಂತರಂಗ ಪತ್ರಿಕೆಯಲ್ಲಿ ಧಾರವಾಡದ ಜಯಕರ್ನಾಟಕದಲ್ಲಿ ಕತೆ ಕವಿತೆಗಳನ್ನು ಬರೆಯತೊಡಗಿದರು. ಆರಂಭದ ಈ ಪತ್ರಿಕಾ ವ್ಯವಸಾಯಕ್ಕೆ ತುಳು ಸಾಹಿತ್ಯದ ಅಧ್ವರ್ಯು ಪಣಿಯಾಡಿಯವರ ಮಾರ್ಗದರ್ಶನ ದೊರಕಿತು.

ನೌಕರಿಯನ್ನು ಅರಸಿಕೊಂಡು ಇವರು 1942ರಲ್ಲಿ ಹುಬ್ಬಳ್ಳಿಗೆ ಬಂದರು. ಲೋಕಶಿಕ್ಷಣ ಟ್ರಸ್ಟಿನವರ ಕರ್ಮವೀರ ಸಾಪ್ತಾಹಿಕದಲ್ಲಿ ಸಹಸಂಪಾದಕರಾಗಿ ವೃತ್ತಿಜೀವನ ಆರಂಭಿಸಿದರು. ಲಾಂಗೂಲಾಚಾರ್ಯ ಎಂಬ

ಹೆಸರಿನಿಂದ ಪ್ರತಿವಾರವೂ ಓದುಗರೊಡನೆ ಹರಟೆ ಕಾಯಂಕಾಲಂ ಬರೆಯ ತೊಡಗಿದರು. ಈ ಕಾವ್ಯನಾಮ ಕರ್ನಾಟಕದಲ್ಲಿ ಮನೆಮಾತಾಯಿತು. ಇದೇ ಲೋಕಶಿಕ್ಷಣ ಟ್ರಸ್ಟ್‌ನವರು ರೀಡರ್ಸ್ ಡೈಜೆಸ್ಟ್ ಮಾದರಿಯ ಕಸ್ತೂರಿ ಮಾಸಪತ್ರಿಕೆಯನ್ನು ಆರಂಭಿಸಿದಾಗ (1965) ಇವರು ಅದರ ಸಂಪಾದಕರಾದರು. ಸುಮಾರು 18 ವರ್ಷಗಳ ಕಾಲ ಆ ಪತ್ರಿಕೆಯನ್ನು ವಿಶಿಷ್ಟ ರೀತಿಯಿಂದ ನಡೆಸಿಕೊಂಡು ಬಂದರು. ನೂರಾರು ಲೇಖನಗಳನ್ನು ಬರೆದರು. ಸಂಪಾದಕರಾಗಿ ನಿವೃತ್ತರಾದ (1972) ಮೇಲೆ ವೈಚಾರಿಕ ಲೇಖನಗಳನ್ನು ಬರೆಯುವತ್ತ ಮನಗೊಟ್ಟರು. ರಾಜಕೀಯ ವಿಶ್ಲೇಷಣೆಯಲ್ಲಿಯೂ ಇವರು ಪಳಗಿದ್ದರೆನ್ನುವುದಕ್ಕೆ ಸ್ವತಂತ್ರ ಭಾರತ ಎಂಬ ಇವರ ಗ್ರಂಥ ಸಾಕ್ಷಿಯಾಗಿದೆ.

ಇವರು ಪ್ರಥಮತಃ ಖ್ಯಾತನಾಮ ಹರಟೆಗಾರರೆಂದೆ ಪ್ರಸಿದ್ಧರು. ಇವರಷ್ಟು ಹರಟೆಗಳನ್ನು ಬರೆದವರು ಕನ್ನಡದಲ್ಲಿ ಕಡಿಮೆ. ಸುಮಾರು 600 ಹರಟೆಗಳನ್ನು, ವಿಡಂಬನೆಗಳನ್ನು ಇವರು ಬರೆದಿದ್ದಾರೆ. ಯಾರದೆ ಮನನೋಯಿಸದಂಥ ವಿಡಂಬನೆಯ ಮೊನಚುಳ್ಳ, ಜೊತೆಗೆ ಇವರ ವಿಸ್ತಾರಿತವಾದ ವಾಚನದ ಹಿನ್ನೆಲೆಯುಳ್ಳ ಹರಟೆಗಳು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯೆನಿಸಿದೆ.

ಆಚಾರ್ಯರು 1992 ಏಪ್ರಿಲ್ 8ರಂದು ನಿಧನನಾರಾದರು. ಇವರ ನಿಧನಾನಂತರ ವಿಶ್ವಸ್ಥ ಸಮಿತಿ ಇವರ ಸಮಗ್ರ ಬರೆವಣಿಗೆಯನ್ನು ಪ್ರಕಟಿಸುವ ಯೋಜನೆಯನ್ನೆತ್ತಿಕೊಂಡು ಶ್ರೀನಿವಾಸ ಹಾವನೂರರ ಸಂಪಾದಕತ್ವದಲ್ಲಿ ಉಡುಪಿಯ ಪರಿಸರದಲ್ಲಿ ಆಯ್ದ ಲಲಿತ ಪ್ರಬಂಧಗಳು, ಇವರೇ ಲಾಂಗೂಲಾಚಾರ್ಯರು, ಬ್ರಾಹ್ಮಣರೇನು ಮಾಡಬೇಕು, ಮತ್ತಿತರ ಚಿಂತನ ಪ್ರಬಂಧಗಳು ಚಿತ್ರ-ವಿಚಿತ್ರ ಈ ಜಗತ್ತು, ಹಿಂದೂ-ಮುಸ್ಲಿಮ್ ಹಾಗೂ ಇತರ ಕತೆಗಳು, ಪಾವೆಂ ಸಮಗ್ರ ಕವನಗಳು, ಲೋಕವಿಖ್ಯಾತರು ತುಳು ಬಯ್ಯ ಮಲ್ಲಿಗೆ -ಈ ಮೊದಲಾದ ಕೃತಿಗಳನ್ನು ಹೊರತರಲಾಗಿದೆ (1999-2002). **(ಎಸ್.ಎಚ್.)**

**ಆಟಿಕಡೆಂಜ :** ತುಳುನಾಡಿನ ಒಂದು ಜನಪದ ಕಲೆ. ತುಳು ಆಟಿ ತಿಂಗಳಲ್ಲಿ (ಕರ್ಕಾಟಕ ಮಾಸ) ಹರಿಜನ ವರ್ಗಕ್ಕೆ ಸೇರಿದ ನಲ್ಕೆ ಎಂಬ ಪಂಗಡದವರು ಸಣ್ಣ ಹುಡುಗನೊಬ್ಬನ ತಲೆಗೆ ಕಂಗಿನ ಹಾಳೆಯ ಟೊಪ್ಪಿಗೆ ಇಟ್ಟು, ಮುಖಕ್ಕೆ ಬಿಳಿಯ ಬಣ್ಣ ಬಳಿದು, ದಡ್ಡಿಯ (ಒಂದು ತರದ ಕಳ್ಳಿ) ನಾರಿನ ಗಡ್ಡ ಮೀಸೆ ಬಿಗಿದು, ಮೈಗೆ ಕೆಂಪು ಅರಿವೆಯ ಅಂಗಿ, ಮೊಣಕಾಲವರೆಗೆ ಕೆಂಪುಬಣ್ಣದ ಚಲ್ಲಣ ತೊಡಿಸಿ, ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲಿ ಓಲೆಗರಿಯ ತತ್ರ (ಛತ್ರ) ಕೊಟ್ಟು ಆಟಿಕಡೆಂಜನ ವೇಷ ಹಾಕಿಸುತ್ತಾರೆ. ಈ ವೇಷಧಾರಿಯ ಜೊತೆಗಿರುವ ಮತ್ತೊಬ್ಬ ತೆಂಬರೆ ಎಂಬ ಚರ್ಮವಾದ್ಯವನ್ನು ಬಾರಿಸಿ ಆಟಿಕಡೆಂಜನಿಗೆ ಸಂಬಂಧಪಟ್ಟ ಪಾಡ್ದನವನ್ನು ಹಾಡುತ್ತಿರುವಂತೆಯೇ ವೇಷಧಾರಿ ಮೆಲ್ಲನೆ ಕಾಲನ್ನಾಡಿಸುತ್ತ, ಕೈಯಲ್ಲಿ ಹಿಡಿದಿರುವ ತತ್ರವನ್ನು ತಿರುಗಿಸುತ್ತ, ವೃತ್ತಾಕಾರದಲ್ಲಿ ಹಿಂದುಮುಂದು ಹೋಗುತ್ತಿರುತ್ತಾನೆ.

ತುಳುವರ ಸಂಪ್ರದಾಯದಂತೆ ಆಟಿ ತಿಂಗಳು ಶುಭಶೋಭನಾದಿಗಳು ನಡೆಯದ ಅಶುಭತಿಂಗಳು. ಆಗ ಮನೆಯ ಅಂಗಳಕ್ಕೆ ಬಂದು ಕುಣಿದ ಆಟಿಕಡೆಂಜನಿಗೆ ತಡ್ಪೆಯಲ್ಲಿ 'ಬತ್ತಗೇರುವ ಅಗಲವಾದ ಒಂದು ಸಾಧನ' ಸ್ವಲ್ಪ ಬತ್ತ, ಅಕ್ಕಿ, ಹುಳಿ, ಮೆಣಸು, ಉಪ್ಪು, ಒಂದು ತುಂಡು ಇದ್ದಲು, ಅಡಿಗೆ ಅಟ್ಟಿದ ಮಸಿ ಇಷ್ಟನ್ನೂ ಇಟ್ಟು ಕೊಡುತ್ತಾರೆ. ಅಲ್ಲದೆ ಆತ

ಆಟಿಕಡೆಂಜ ವೇಷಧಾರಿ ಹಾಗೂ ತೆಂಬೆರೆ ವಾದ್ಯ ನುಡಿಸುವಾತ

ಅಂಗಳ ಇಳಿದು ಹೋಗುವಾಗ ಕುರಿನೀರನ್ನು (ಅರಿಸಿನ ಹಾಕಿದ ಬಣ್ಣದ ನೀರು) ಅವನ ಮೇಲೆ ಸಿಂಪಡಿಸುತ್ತಾರೆ. ಹೀಗೆ ಮಾಡಿದರೆ ಮನೆಯ ಅಮಂಗಳ ಪರಿಹಾರವಾಗುತ್ತದೆ ಎಂಬುದು ಅವರ ನಂಬಿಕೆ. **(ಎ.ಎಲ್.ಎ.)**

**ಆಡಳಿತ ವ್ಯವಸ್ಥೆ:** ಭಾರತ ಒಕ್ಕೂಟದಲ್ಲಿರುವ ಕರ್ನಾಟಕ ರಾಜ್ಯದ ಆಡಳಿತ ವ್ಯವಸ್ಥೆ ಭಾರತದ ಇತರ ರಾಜ್ಯಗಳ ಮಾದರಿಯಲ್ಲೇ ಇದೆ. ಭಾರತ ಒಕ್ಕೂಟದಲ್ಲಿ ಕೇಂದ್ರ ಮತ್ತು ರಾಜ್ಯಗಳ ವ್ಯವಸ್ಥೆಗಳನ್ನು ನಿರ್ದೇಶಿಸಲು ಒಂದೇ ಸಂವಿಧಾನವಿದೆ. ಇದರಲ್ಲಿ ನಿರ್ದೇಶಿಸಿರುವ ವ್ಯವಸ್ಥೆಯ ಪ್ರಕಾರ ಕೇಂದ್ರ ಪ್ರಬಲ. ಅಧಿಕಾರ ವಿತರಣೆಯಲ್ಲಿ ಕೇಂದ್ರಕ್ಕೆ ಪ್ರಾಧಾನ್ಯ. ಸಂವಿಧಾನದಲ್ಲಿ ಆಡಳಿತದ ವಿವಿಧ ವಿಷಯಗಳನ್ನು ಮೂರು ಬಗೆಯಾಗಿ ವಿಂಗಡಿಸಿದೆ. ಅದರಂತೆ (1) 97 ವಿಷಯಗಳ ಕೇಂದ್ರ ಪಟ್ಟಿ (2) 66 ವಿಷಯಗಳ ರಾಜ್ಯಪಟ್ಟಿ (3) ಕೇಂದ್ರ ಮತ್ತು ರಾಜ್ಯ ಎರಡಕ್ಕೂ ಅನ್ವಯಿಸುವ 47 ವಿಷಯಗಳ ಸಾಮಾನ್ಯ ಪಟ್ಟಿ. ಈ ಅಧಿಕಾರ ವ್ಯಾಪ್ತಿಯ ವಿಷಯಗಳ ವಿಭಜನೆ ಇದ್ದರೂ ಈ ಮೂರು ಪಟ್ಟಿಗಳಿಗೆ ಸಂಬಂಧಿಸಿದಂತೆಯೂ ಕೇಂದ್ರದ ಅಧಿಕಾರ ಹೆಚ್ಚು. ಈ ಚೌಕಟ್ಟನ್ನು ಅನುಸರಿಸಿದಂತೆ ಕರ್ನಾಟಕ ರಾಜ್ಯದಲ್ಲಿ ನಿಯಮಿತವಾದ ಒಂದು ಸ್ವಯಂ ಆಡಳಿತ ವ್ಯವಸ್ಥೆ ಇದೆ.

ಸಂಸದೀಯ ಮಾದರಿಯ ಪ್ರಜಾಸತ್ತಾತ್ಮಕ ಗಣರಾಜ್ಯ ತತ್ತ್ವ ಮತ್ತು ಪದ್ಧತಿಗಳ ಆಧಾರದ ಮೇಲೆ ರಚಿತವಾಗಿರುವ ಭಾರತ ಸಂವಿಧಾನ ಕೇಂದ್ರ ಮತ್ತು ರಾಜ್ಯಗಳೆರಡಕ್ಕೂ ಒಂದೇ ಮಾದರಿಯ ಆಡಳಿತ ವ್ಯವಸ್ಥೆಯನ್ನು ರೂಪಿಸಿದೆ. ಅದರಂತೆ ಕೇಂದ್ರದಲ್ಲಿ ಅಧ್ಯಕ್ಷರಿದ್ದ ಹಾಗೆ ರಾಜ್ಯದಲ್ಲಿ ರಾಜ್ಯಪಾಲರಿರುತ್ತಾರೆ. ಕೇಂದ್ರದಲ್ಲಿ ಪ್ರಧಾನಮಂತ್ರಿ ಇರುವಂತೆ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳು ಇರುತ್ತಾರೆ. ಕೇಂದ್ರದ ಸಂಸತ್ತಿಗೆ ಸಮನಾಗಿ ರಾಜ್ಯದಲ್ಲಿ ವಿಧಾನಮಂಡಲ, ಕೇಂದ್ರದ ಉಚ್ಚತಮ ನ್ಯಾಯಾಲಯದ ರೀತಿಯಲ್ಲೇ ರಾಜ್ಯಮಟ್ಟದ ಉಚ್ಚನ್ಯಾಯಾಲಯ ಇದ್ದು, ಆಡಳಿತ ಅನುಭವಗಳ ವಿನಿಮಯ, ಆಡಳಿತೋಪಾಯ ಮತ್ತು ಪದ್ಧತಿಗಳ ಅನುಕರಣೆ ಇವು ಸಾಧ್ಯವಾಗಿ, ಎರಡು ಹಂತಗಳಲ್ಲೂ ಸುಮಾರು ಒಂದೇ ರೀತಿಯ ಆಡಳಿತವ್ಯವಸ್ಥೆ ಸಾಗುವುದು. ಅಲ್ಲದೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಆಡಳಿತ ಸೌಹಾರ್ದತೆಯನ್ನು ಏರ್ಪಡಿಸಲು ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ, ಅಂತರರಾಜ್ಯ ಸಮಿತಿಗಳು, ಪ್ರಾದೇಶಿಕ ಸಮಿತಿಗಳು, ಅಖಿಲ ಭಾರತ ರಾಜ್ಯಪಾಲರ ಸಮ್ಮೇಳನ, ಅಖಿಲ ಭಾರತ ಮುಖ್ಯಮಂತ್ರಿಗಳ ಸಮ್ಮೇಳನ ಮತ್ತು ಅಖಿಲಭಾರತ ಆಡಳಿತ ಸೇವೆ ಮುಂತಾದ ವ್ಯವಸ್ಥೆಗಳು ಸಹಾಯಕವಾಗಿವೆ.

ಕರ್ನಾಟಕ ರಾಜ್ಯವ್ಯವಸ್ಥೆಯೂ ಸಂಸದೀಯ ಪ್ರಜಾಪ್ರಭುತ್ವ ನೀತಿಯನ್ನು ಆಧರಿಸಿದೆ. ಇಲ್ಲಿ ಪ್ರಮುಖ ಶಾಸಕಾಂಗ, ಕಾರ್ಯಾಂಗ ಮತ್ತು ಸ್ವತಂತ್ರವಾದ ನ್ಯಾಯಾಂಗ ಕೆಲಸ ಮಾಡುತ್ತವೆ. ಅವುಗಳ ಸೂಕ್ಷ್ಮವಿವರಣೆ ಕೆಳಕಂಡಂತೆ ಇದೆ.

**ಶಾಸಕಾಂಗ:** ಕರ್ನಾಟಕ ಶಾಸಕಾಂಗ ಒಂದು ದ್ವಿಸದನ ಮಂಡಲ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳೇ ಈ ಸದನಗಳು. ಮೇಲ್ಮನೆಯಾದ ವಿಧಾನ ಪರಿಷತ್ತಿನಲ್ಲಿ 63 ಜನ ಸದಸ್ಯರಿದ್ದಾರೆ. ಇವರೆಲ್ಲರೂ ಅಪರೋಕ್ಷವಾಗಿ ಚುನಾಯಿಸಲ್ಪಟ್ಟ ಅಥವಾ ನೇಮಿಸಲ್ಪಟ್ಟ ಸದಸ್ಯರು. ಇವರಲ್ಲಿ $^1/_3$ ಭಾಗದಷ್ಟು ಜನ ಸದಸ್ಯರು ರಾಜ್ಯದ ವಿಧಾನಸಭೆಯಿಂದ ಚುನಾಯಿಸಲ್ಪಟ್ಟಿರುತ್ತಾರೆ. ಇನ್ನೊಂದು $^1/_3$ ಭಾಗದಷ್ಟು ಸದಸ್ಯರು ನಗರಸಭೆ, ತಾಲ್ಲೂಕು ಮಂಡಳಿ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರನ್ನೊಳಗೊಂಡ ಸ್ಥಳೀಯ ಸಂಸ್ಥಾ ಕ್ಷೇತ್ರಗಳಿಂದ ಆರಿಸಲ್ಪಟ್ಟಿದ್ದಾರೆ. ಮಿಕ್ಕವರಲ್ಲಿ $^1/_{12}$ ಭಾಗದಷ್ಟು ಸದಸ್ಯರು ಸೆಕೆಂಡರಿ ಮತ್ತು ಮೇಲ್ಪಟ್ಟ ವಿದ್ಯಾಸಂಸ್ಥೆಗಳ ನೋಂದಾಯಿತ ಅಧ್ಯಾಪಕರಗಳ ಕ್ಷೇತ್ರದಿಂದಲೂ ಇನ್ನೊಂದು $^1/_{12}$ ಭಾಗದಷ್ಟು ಸದಸ್ಯರು ನೋಂದಾಯಿತ ಪದವೀಧರರ ಕ್ಷೇತ್ರದಿಂದಲೂ ಆಯ್ಕೆಯಾಗಿ ಬಂದಿರುತ್ತಾರೆ. ಮಿಕ್ಕವರು ರಾಜ್ಯಪಾಲರಿಂದ ನೇಮಕಗೊಂಡವರು. ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ ಅಥವಾ ಸಮಾಜಸೇವಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ವಿಧಾನ ಪರಿಷತ್ತಿಗೆ ನೇಮಿಸುವ ಹಕ್ಕು ರಾಜ್ಯಪಾಲರಿಗಿದೆ. ವಿಧಾನ ಪರಿಷತ್ತಿಗೆ ಕಾಲದ ಅವಧಿಯಿಲ್ಲ. ಇದು ನಿರಂತರವಾದ ಸಂಸ್ಥೆ, ವಿಧಾನ ಪರಿಷತ್ತಿನ $^1/_3$ ಭಾಗದಷ್ಟು ಸದಸ್ಯರು ಪ್ರತಿ ಎರಡು ವರ್ಷಕ್ಕೊಂದು ಸಾರಿ ನಿವೃತ್ತಿಗೊಳ್ಳುವರು. ಆ ಸ್ಥಾನಗಳನ್ನು ಮತ್ತೆ ಮೇಲೆ ಹೇಳಿದಂತೆ ತುಂಬಲಾಗುವುದು.

ವಿಧಾನ ಸಭೆಯಲ್ಲಿ ಆಂಗ್ಲೋ-ಇಂಡಿಯನ್ನರನ್ನು ಪ್ರತಿನಿಧಿಸಲು ರಾಜ್ಯಪಾಲರಿಂದ ನೇಮಕಗೊಂಡ ಒಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ನೇರವಾಗಿ ಜನರಿಂದ ಚುನಾಯಿಸಲ್ಪಟ್ಟ ಸದಸ್ಯರು. ವಿಧಾನ ಸಭೆಯ ಸದಸ್ಯರ ಸಂಖ್ಯೆ ರಾಜ್ಯದ ಜನಸಂಖ್ಯೆಯನ್ನು ಅವಲಂಬಿಸುತ್ತದೆ. ರಾಜ್ಯ ಹಲವು ಪ್ರಾದೇಶಿಕ ನಿರ್ವಾಚನ ಕ್ಷೇತ್ರಗಳಾಗಿ ವಿಂಗಡಿತವಾಗಿದ್ದು ಪ್ರತಿ ಕ್ಷೇತ್ರವೂ ವಿಧಾನ ಸಭೆಯಲ್ಲಿ ಪ್ರತಿನಿಧಿತವಾಗುವಂತೆ ವ್ಯವಸ್ಥೆ ಇದೆ. ಈ ಪ್ರಾದೇಶಿಕ ನಿರ್ವಚನ ಕ್ಷೇತ್ರಗಳ ವಿಂಗಡನೆಯನ್ನು ಮಾಡುವಲ್ಲಿ ಹಿಂದಿನ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಒಂದೊಂದು ನಿರ್ವಾಚನ

ಕ್ಷೇತ್ರವೂ ಸುಮಾರು 75,000 ಜನಸಂಖ್ಯೆಯಿರುವ ರೀತಿಯಲ್ಲಿ ವ್ಯವಸ್ಥಿತವಾಗಿರುತ್ತದೆ. ಪ್ರಸ್ತುತ ವಿಧಾನಸಭೆಯಲ್ಲಿ 224 ಸದಸ್ಯರಿದ್ದಾರೆ. ವಿಧಾನಸಭಾ ಕ್ಷೇತ್ರಗಳ ಪುನರ್ವಿಂಗಡನೆ ಮತ್ತು ವಿಧಾನ ಸಭಾ ಸದಸ್ಯರ ಸಂಖ್ಯೆಯ ಪರಿಷ್ಕರಣ 10 ವರ್ಷಕ್ಕೊಮ್ಮೆ ಜನಗಣತಿಯ ಆಧಾರದ ಮೇಲೆ ಮಾಡಲಾಗುತ್ತದೆ. ಈ ಸಭೆಯ ಕಾಲಾವಧಿ 5 ವರ್ಷ.

ವಿಧಾನ ಪರಿಷತ್ತು ಮತ್ತು ವಿಧಾನ ಸಭೆಗಳು ಸಭಾಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ತಾವೇ ಚುನಾಯಿಸಿಕೊಳ್ಳುತ್ತವೆ. ಸಭಾಕಲಾಪಗಳಲ್ಲಿ ನೆರವು ನೀಡಲು ಸಾರ್ವಜನಿಕ ಹಣಕಾಸು ಸಮಿತಿ, ಸಾರ್ವಜನಿಕ ಅಂದಾಜು ಸಮಿತಿ ಮುಂತಾದ ಜಂಟಿ ಸಮಿತಿಗಳೂ ಮತ್ತು ಇತರ ಸಮಿತಿಗಳೂ ಇರುತ್ತವೆ. ಅಲ್ಲದೆ ಶಾಸಕಾಂಗದ ಕಾರ್ಯದರ್ಶಿ ಮತ್ತು ಕಾರ್ಯಾಲಯಗಳು ಇವುಗಳಿಗೆ ನೆರವು ನೀಡುತ್ತವೆ. ಶಾಸನಗಳನ್ನು ಮಾಡುವುದು, ಸರ್ಕಾರದ ಆಯ-ವ್ಯಯಗಳನ್ನು ಮತ್ತು ಆಡಳಿತದ ರೀತಿಗಳನ್ನು ಹತೋಟಿಯಲ್ಲಿಡುವುದು ಶಾಸಕಾಂಗದ ಪ್ರಮುಖ ಕೆಲಸ. ಯಾವುದೇ ಮಸೂದೆ ಶಾಸನವಾಗಲು ಎರಡೂ ಸದನಗಳ ಒಪ್ಪಿಗೆ ಬೇಕು. ಎರಡೂ ಸದನಗಳ ಮಧ್ಯೆ ಒಡಂಬಡಿಕೆ ಇಲ್ಲದಿದ್ದರೆ ಎರಡನೆಯ ಸಾರಿ ವ್ಯಕ್ತಪಡಿಸಿದ ವಿಧಾನಸಭೆಯ ಅಭಿಪ್ರಾಯವೇ ಕೊನೆಗೆ ನಿರ್ಣಾಯಕವಾಗಿರುತ್ತದೆ. ಸಂಸತ್ತಿನ ಸದನಗಳ ನಡುವೆ ಜಂಟಿಸಮಾವೇಶಕ್ಕೆ ಅವಕಾಶವಿರುವಂತೆ ಇಲ್ಲಿ ಇಲ್ಲ. ರಾಜ್ಯದ ಆಡಳಿತ ರೀತಿನೀತಿಗಳನ್ನು ಈ ಸಭೆಗಳು ನಿರ್ಧರಿಸುತ್ತವೆ. ಎರಡು ಸಭೆಗಳಲ್ಲೂ ಸಾಮಾನ್ಯವಾಗಿ ಬಹುಮತ ಪಡೆದ ಆಡಳಿತ ಪಕ್ಷದ್ದೇ ಮೇಲುಗೈಯಾಗಿರುತ್ತದೆ. ಆ ಪಕ್ಷ ಮಂತ್ರಿಮಂಡಲವನ್ನು ರಚಿಸಿಕೊಂಡು ಸಂವಿಧಾನಬದ್ಧವಾಗಿ ರಾಜ್ಯದ ಆಡಳಿತವನ್ನು ನಿರ್ವಹಿಸುತ್ತದೆ. ಉಳಿದ ವಿರೋಧಪಕ್ಷದ ಸದಸ್ಯರೂ ಸಭೆಗಳ ಕಾರ್ಯಕಲಾಪಗಳಲ್ಲಿ ಗಮನಾರ್ಹವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸುತ್ತಾರೆ.

**ಕಾರ್ಯಾಂಗ:** ರಾಷ್ಟ್ರಾಧ್ಯಕ್ಷರು ಸಾಮಾನ್ಯವಾಗಿ ರಾಜ್ಯದ ಮಂತ್ರಿ ಮಂಡಳದೊಡನೆ ಸಮಾಲೋಚಿಸಿ 5 ವರ್ಷಗಳ ಅವಧಿಗೆ ರಾಜ್ಯಪಾಲರನ್ನು ನೇಮಿಸುತ್ತಾರೆ. ರಾಜ್ಯಪಾಲರೇ ಕಾರ್ಯಾಂಗದ ಪ್ರಮುಖರು. ರಾಜ್ಯಪಾಲರ ಸ್ಥಾನದಲ್ಲಿ ಶಾಸನಾಧಿಕಾರ, ಕಾರ್ಯಾಧಿಕಾರ ಮತ್ತು ಕೆಲವು ನ್ಯಾಯಾಂಗಾಧಿಕಾರಗಳು ಕೇಂದ್ರೀಕೃತವಾಗಿದ್ದರೂ ಇದು ಒಂದು ಅಲಂಕಾರಸ್ಥಾನ ಮಾತ್ರ. ಇವರ ಹೆಸರಿನಲ್ಲೇ ಎಲ್ಲ ಕೆಲಸಗಳು ನಡೆದರೂ ತೀರ್ಮಾನ ಮಾಡುವ ಹಕ್ಕೆಲ್ಲ ಸಚಿವಸಂಪುಟಕ್ಕೆ ಸೇರಿದ್ದು. ಸಚಿವಸಂಪುಟ ಭದ್ರವಾಗಿದ್ದಲ್ಲಿ ಮತ್ತು ವಿಧಾನಸಭೆಯಲ್ಲಿ ಪಕ್ಷವ್ಯವಸ್ಥೆ ಸ್ಪಷ್ಟವಾಗಿದ್ದಲ್ಲಿ ರಾಜ್ಯಪಾಲರ ಕೆಲಸ ಕೇವಲ ವಿಷಯ ತಿಳಿದುಕೊಳ್ಳುವ, ಬುದ್ಧಿವಾದ ಹೇಳುವ ಮತ್ತು ಮಾರ್ಗದರ್ಶನ ನೀಡುವ ಹಿರಿಯ ರಾಜನೀತಿಜ್ಞನ ಹಾಗೆ. ವಿಧಾನಸಭೆಯಲ್ಲಿ ಯಾವ ಪಕ್ಷಕ್ಕೂ ಬಹುಮತವಿಲ್ಲದೆ ಅಥವಾ ಇತರ ಕಾರಣಗಳಿಂದ ರಾಜ್ಯದ ರಾಜಕೀಯ ಪರಿಸ್ಥಿತಿ ಉಲ್ಬಣಗೊಂಡಾಗ ರಾಜ್ಯಪಾಲರು ರಾಷ್ಟ್ರಾಧ್ಯಕ್ಷರಿಗೆ ರಾಜಕೀಯ ಪರಿಸ್ಥಿತಿ ಬಗ್ಗೆ ವರದಿ ಸಲ್ಲಿಸಿ ರಾಷ್ಟ್ರಾಧ್ಯಕ್ಷರ ಆಡಳಿತ ಜಾರಿಗೆ ಬರುವ ಸಲಹೆ ಮಾಡಬಹುದು. ಹಾಗೆ ರಾಷ್ಟ್ರಾಧ್ಯಕ್ಷರ ಆಡಳಿತ ಜಾರಿಗೆ ಬಂದ ಸಂದರ್ಭದಲ್ಲಿ ಶಾಸನಾಧಿಕಾರವೆಲ್ಲವೂ ಕೇಂದ್ರದ ಸಂಸತ್ತಿಗೂ ಮತ್ತು ಕಾರ್ಯಾಂಗಾಧಿಕಾರವೆಲ್ಲ ನಾಮಮಾತ್ರಕ್ಕೆ ರಾಷ್ಟ್ರಾಧ್ಯಕ್ಷರಿಗೂ ಮತ್ತು ವಾಸ್ತವಿಕವಾಗಿ ರಾಜ್ಯಪಾಲರಿಗೂ ಸೇರಿ, ರಾಜ್ಯಪಾಲರೇ ಆಡಳಿತ ಸಲಹೆಗಾರರ ಸಹಾಯದಿಂದ ರಾಜ್ಯಾಡಳಿತ ನಡೆಸುತ್ತಾರೆ.

ಸಂವಿಧಾನದ 163ನೆಯ ಅನುಚ್ಛೇಧದ ಪ್ರಕಾರ ರಾಜ್ಯದಲ್ಲಿ ಒಂದು ಮಂತ್ರಿ ಮಂಡಲವಿರುತ್ತದೆ. ಸಂವಿಧಾನದ ಪ್ರಕಾರ ಇದು ರಾಜ್ಯಪಾಲರಿಗೆ ಆಡಳಿತದಲ್ಲಿ ಸಲಹೆ ಮತ್ತು ಸಹಾಯ ನೀಡುವುದು. ಆದರೆ ವಾಸ್ತವವಾಗಿ ಸಂಸದೀಯ ಸಂಪ್ರದಾಯದ ಪ್ರಕಾರದಲ್ಲಿ ರಾಜ್ಯದ ಕಾರ್ಯ ನಿರ್ವಹಣಾಧಿಕಾರವೆಲ್ಲ ಈ ಮಂತ್ರಿಮಂಡಲಕ್ಕೆ ಸೇರಿದ್ದಾಗಿರುತ್ತದೆ. ಸಂಸದೀಯ ಪದ್ಧತಿಗೆ ಅನುಗುಣವಾಗಿ ರಾಜ್ಯಪಾಲರು ವಿಧಾನಸಭೆಯ ಬಹುಮತಪಕ್ಷದ ನಾಯಕನನ್ನು ಮುಖ್ಯಮಂತ್ರಿಯಾಗಿ ನೇಮಿಸಿ ಆತನ ಸಲಹೆಯ ಮೇಲೆ ಮಂತ್ರಿಮಂಡಲದ ಇತರ ಸದಸ್ಯರನ್ನು ನೇಮಿಸುತ್ತಾರೆ. ಮಂತ್ರಿ ಮಂಡಲದಲ್ಲಿ ಮುಖ್ಯಮಂತ್ರಿಯಲ್ಲದೆ ಸಂಪುಟ ಸಚಿವರು, ರಾಜ್ಯ ಸಚಿವರು ಮತ್ತು ಉಪಸಚಿವರು ಸಾಮಾನ್ಯವಾಗಿ ಇರುತ್ತಾರೆ. ಸಂಪುಟ ಸಚಿವರು, ವಿವಿಧ ಖಾತೆಗಳ ಮುಖ್ಯಸ್ಥರಾಗಿರುವುದೇ ಅಲ್ಲದೆ ಸಚಿವರ ಸಂಪುಟದ ಸದಸ್ಯರಾಗಿರುತ್ತಾರೆ. ರಾಜ್ಯಸಚಿವರು ಸ್ವತಂತ್ರವಾಗಿ ಅಥವಾ ಸಂಪುಟ ಸಚಿವ ಸಹಾಯಕರಾಗಿ ಇಲಾಖೆಗಳ ಮುಖ್ಯಸ್ಥರಾಗಿರುತ್ತಾರೆ. ಉಪಸಚಿವರು ಯಾವಾಗಲೂ ಸಚಿವರ ಅಥವಾ ರಾಜ್ಯಸಚಿವರ ಅಧೀನದಲ್ಲಿ ಸಹಾಯಕ ಸಚಿವರಾಗಿ ಕೆಲಸ ಮಾಡುತ್ತಾರೆ. ರಾಜ್ಯಸಚಿವರು ಮತ್ತು ಉಪಸಚಿವರು ಮಂತ್ರಿಮಂಡಲದ ಸದಸ್ಯರಾದರೂ ಸಂಪುಟದ ಸದಸ್ಯರಲ್ಲ.

ಸರ್ಕಾರದ ನೀತಿನಿಲವುಗಳೆಲ್ಲ ತೀರ್ಮಾನವಾಗುವುದು ಈ ಮಂತ್ರಿಮಂಡಲದಲ್ಲಿ, ಮುಖ್ಯವಾಗಿ ಸಚಿವ ಸಂಪುಟದಲ್ಲಿ. ಆದ್ದರಿಂದ ಅಗತ್ಯ ಬಿದ್ದಾಗಲೆಲ್ಲ ಸಚಿವಸಂಪುಟ ಸಭೆಸೇರಿ ಕಾರ್ಯನಿರ್ವಹಿಸುತ್ತದೆ. ಪ್ರತಿ ಸಚಿವರು ಬೇರೆ ಬೇರೆಯಾದ ಖಾತೆಗಳ ಜವಾಬ್ದಾರಿಯನ್ನು ಹೊಂದಿದ್ದರೂ ಸರ್ಕಾರದ ಎಲ್ಲ ಕೆಲಸಗಳಿಗೂ ಅವರ ವೈಯಕ್ತಿಕ ಮತ್ತು ಜಂಟಿ ಜವಾಬ್ದಾರಿ ಇರುತ್ತದೆ. ತನ್ನ ಕೆಲಸದಲ್ಲಿ ಸಹಾಯಕವಾಗಲು ಸಚಿವ ಸಂಪುಟ ಸಚಿವರ ಸಮಿತಿಗಳನ್ನು ಹೊಂದಿರುತ್ತದೆ. ಅತ್ಯಂತ ಹಿರಿಯ ಆಡಳಿತಗಾರರಾದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ರಾಜ್ಯದ ಸಂಪುಟದ ಕಾರ್ಯದರ್ಶಿಯಾಗಿಯೂ ಮತ್ತು ಮುಖ್ಯ ಸಲಹೆಗಾರರಾಗಿಯೂ ಸಂಪುಟಕ್ಕೆ ಮತ್ತು ಅದರ ಸಮಿತಿಗಳಿಗೆ ಸಹಾಯ ಮಾಡುತ್ತಾರೆ. ಮುಖ್ಯ ಮಂತ್ರಿ ಸಚಿವಸಂಪುಟದ ಅಧ್ಯಕ್ಷರಾಗಿ ಮಂತ್ರಿಮಂಡಲದ ಮುಖ್ಯಸ್ಥರಾಗಿ ಶಾಸನಸಭೆಯ ನಾಯಕರಾಗಿ ಮತ್ತು ಇಡೀ ಸರ್ಕಾರದ ಆಡಳಿತ ವ್ಯವಸ್ಥೆಯ ಮುಖ್ಯಸ್ತಂಭವಾಗಿ ಮತ್ತು ರಾಜಕೀಯ ನೇತಾರರಾಗಿ ಇರುತ್ತಾರೆ.

ಆಡಳಿತ ಶೃಂಗದಲ್ಲಿ ಮತ್ತು ಕೇಂದ್ರದಲ್ಲಿ ಕರ್ನಾಟಕ ಸರ್ಕಾರದ ಕಾರ್ಯಾಲಯುವಿದೆ. ಬೆಂಗಳೂರಿನಲ್ಲಿರುವ ವಿಧಾನಸೌಧದಲ್ಲಿ ಕೆಲಸ ಮಾಡುತ್ತಿರುವ ಈ ಕಾರ್ಯಾಲಯ ಸರ್ಕಾರದ ಸರ್ವಕಾರ್ಯಗಳ ಕೇಂದ್ರವಾಗಿದೆ. ಮಂತ್ರಿಮಂಡಲ ತೀರ್ಮಾನ ಕೈಗೊಳ್ಳಲು ಅಗತ್ಯವಾದ ಎಲ್ಲಾ ವಿಚಾರ ಸಾಮಗ್ರಿಗಳನ್ನು ಒದಗಿಸಿ ಸಲಹೆ ನೀಡಿ ಮಾರ್ಗದರ್ಶನ ಮಾಡುವುದು ಇದರ ಒಂದು ಕೆಲಸವಾದರೆ ಮಂತ್ರಿಮಂಡಲದ ತೀರ್ಮಾನವನ್ನು ನಿರ್ವಾಹಕ ಸಂಸ್ಥೆಗಳಿಗೆ ತಿಳಿಯಹೇಳಿ ಹೊಂದಾಣಿಕೆಯನ್ನುಂಟು ಮಾಡಿ ಮಾರ್ಗದರ್ಶನ ನೀಡಿ, ನಿರ್ವಹಣೆಯನ್ನು ಹತೋಟಿಯಲ್ಲಿಡುವುದು ಇನ್ನೊಂದು ಕೆಲಸ. ಹೀಗೆ ಈ ಕಾರ್ಯಾಲಯ ಮಂತ್ರಿಮಂಡಲ ಮತ್ತು ನಿರ್ವಾಹಕ ಸಿಬ್ಬಂದಿಗಳ ನಡುವೆ ಸೇತುವೆಯಾಗಿ ಮಾರ್ಗದರ್ಶಿಯಾಗಿ ಮತ್ತು ಮುಖ್ಯ ಕಡತಗಳ ಉಗ್ರಾಣವಾಗಿ ಇರುತ್ತದೆ. ಕಾರ್ಯಾಲಯದಲ್ಲಿ ಸಚಿವಖಾತೆಗಳು ಮತ್ತು ಇಲಾಖೆಗಳು ಎಂಬ ಎರಡು ಮುಖ್ಯ ವಿಭಾಗಗಳನ್ನು ಕಾಣಬಹುದು. ಪ್ರತಿಯೊಂದು ಸಚಿವ ಖಾತೆಗೂ ಒಂದಕ್ಕಿಂತ ಹೆಚ್ಚಾಗಿ ಕಾರ್ಯಾಲಯ ಇಲಾಖೆಗಳಿರುತ್ತವೆ. ಹಾಗಾಯೇ ಪ್ರತಿಯೊಂದು ಕಾರ್ಯಾಲಯ ಇಲಾಖೆಯಲ್ಲೂ ಅನೇಕ ಕಾರ್ಯನಿರ್ವಾಹಕ ಇಲಾಖೆಗಳೂ ಮತ್ತು ಇತರ ಸಂಸ್ಥೆಗಳೂ ಸೇರಿರುತ್ತವೆ.

ಪ್ರತಿಯೊಂದು ಸಚಿವಖಾತೆಯಲ್ಲೂ ಒಬ್ಬ ಕಾರ್ಯದರ್ಶಿ (ಅವಶ್ಯವಿದ್ದಲ್ಲಿ ವಿಶೇಷ ಕಾರ್ಯದರ್ಶಿಗಳು ಮತ್ತು ಹೆಚ್ಚಿನ ಕಾರ್ಯದರ್ಶಿಗಳು), ಸಹಾಯಕ ಕಾರ್ಯದರ್ಶಿಗಳು, ಉಪಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳು ಇರುತ್ತಾರೆ. ಇವರಲ್ಲಿ ಕಾರ್ಯದರ್ಶಿ ಖಾತೆಯ ಮುಖ್ಯಾಧಿಕಾರಿ, ಕಾರ್ಯದರ್ಶಿ ಸಚಿವರ ಕಾರ್ಯದರ್ಶಿಯಾಗಿರದೆ ಇಡೀ ಸರ್ಕಾರಕ್ಕೆ ತಮ್ಮ ಖಾತೆಗಳ ವಿಷಯದಲ್ಲಿ ಕಾರ್ಯದರ್ಶಿಯಾಗಿದ್ದು ಸಚಿವರು ಮತ್ತು ಸರ್ಕಾರಗಳೆರಡಕ್ಕೂ ಸಲಹೆ ಮತ್ತು ಸಹಾಯ ನೀಡುತ್ತಾರೆ. ಆದ್ದರಿಂದ ಒಬ್ಬ ಮಂತ್ರಿಯೇ ಅನೇಕ ಖಾತೆಗಳನ್ನು ಹೊಂದಿರುವಂತೆ ಅನೇಕ ಕಾರ್ಯದರ್ಶಿಗಳು ಒಂದಕ್ಕಿಂತ ಹೆಚ್ಚಿನ ಸಚಿವಖಾತೆಗಳಲ್ಲಿ ಒಂದೇ ಸಮಯದಲ್ಲಿ ಕಾರ್ಯದರ್ಶಿಗಳಾಗಿರುವುದು ಉಂಟು. ಕಾರ್ಯದರ್ಶಿಗಳು ವೈಯಕ್ತಿಕವಾಗಿಯೂ ಅಲ್ಲದೆ ವಿಧಾನ ಸೌಧದಲ್ಲಿರುವ ಕಾರ್ಯದರ್ಶಿಗಳ ಸಮಿತಿಯ ಮೂಲಕವೂ ಸರ್ಕಾರಕ್ಕೆ ಸಲಹೆ ಮತ್ತು ಸಹಾಯಗಳನ್ನು ನೀಡುವರು.

ಇಡೀ ಕಾರ್ಯಾಲಯದ ಮತ್ತು ಕಾರ್ಯದರ್ಶಿಗಳ ಮುಖ್ಯಸ್ಥರಾಗಿ ಸಚಿವ ಸಂಪುಟದ ಕಾರ್ಯದರ್ಶಿಯಾಗಿ ಹಾಗೂ ಸರ್ಕಾರದ ಮುಖ್ಯ ಸಲಹೆಗಾರರಾಗಿ ಮುಖ್ಯ ಕಾರ್ಯದರ್ಶಿಯವರು ಕಾರ್ಯನಿರ್ವಹಿಸುತ್ತಾರೆ. ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯದರ್ಶಿಗಳ ಸ್ಥಾನಗಳೆಲ್ಲ ಸಾಮಾನ್ಯವಾಗಿ ಐ.ಎ.ಎಸ್. ಅಧಿಕಾರಿಗಳಿಗೆ ಮೀಸಲು. ಅದರಲ್ಲೂ ಮುಖ್ಯ ಕಾರ್ಯದರ್ಶಿಯ ಸ್ಥಾನ ರಾಜ್ಯದ ಹುದ್ದೆಗಳಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿರುವ ಅತ್ಯಂತ ದಕ್ಷ ಐ.ಎ.ಎಸ್. ಅಧಿಕಾರಿಗಳಿಗೆ

ಸಾಮಾನ್ಯವಾಗಿ ಸೇವೆಯ ಅಂತ್ಯದಲ್ಲಿ ದೊರೆಯುವುದು. ಮುಖ್ಯ ಕಾರ್ಯದರ್ಶಿಯವರು ಸಾಮಾನ್ಯವಾಗಿ ಆಡಳಿತ ಇಲಾಖೆಯ ಕಾರ್ಯದರ್ಶಿಯಾಗಿ ರಾಜ್ಯದ ಡೆಪ್ಯುಟಿ ಕಾರ್ಯದರ್ಶಿಗಳಿಗೆ ಮೇಲ್ಪಟ್ಟ ಎಲ್ಲಾ ಅಧಿಕಾರಿಗಳ ನೇಮಕ, ವರ್ಗಾವಣೆ, ದಕ್ಷತೆ ಮಾಪನ, ಬಡ್ತಿ, ವ್ಯವಸ್ಥೆ ಮತ್ತು ನಿರ್ವಹಣೆ ಮುಂತಾದ ಎಲ್ಲಾ ಸಿಬ್ಬಂದಿ ನಿರ್ವಹಣಾ ವಿಚಾರದಲ್ಲಿ ವಿಶೇಷ ಅಧಿಕಾರ ಹೊಂದಿರುತ್ತಾರೆ.

ಆಡಳಿತದಲ್ಲಿ ಸಲಹೆ ಮತ್ತು ಸಹಾಯ ನೀಡಲು ಕಾರ್ಯಾಲಯವಲ್ಲದೆ ಕೆಲವು ಉನ್ನತ ಮತ್ತು ತಜ್ಞ ಸಂಸ್ಥೆಗಳು ಇವೆ. ಇವುಗಳಲ್ಲಿ ಪ್ರಮುಖವಾದುವೆಂದರೆ ರಾಜ್ಯದ ಲೋಕಸೇವಾ ಆಯೋಗ. ರಾಜ್ಯಕ್ಕೆ ಬೇಕಾದ ಸಿಬ್ಬಂದಿಗಳ ನೇಮಕ ಮಾಡುವುದರಲ್ಲಿ ಮತ್ತು ಸಿಬ್ಬಂದಿಗಳ ನಿರ್ವಹಣೆಯಲ್ಲಿ ಸರ್ಕಾರಕ್ಕೆ ಇದು ಸಲಹೆ ನೀಡುತ್ತದೆ. ರಾಜ್ಯಾಂಗದ 315-165ನೆಯ ಅನುಚ್ಛೇದಗಳ ಪ್ರಕಾರ ಅಸ್ತಿತ್ವಕ್ಕೆ ಬಂದಿರುವ ಈ ಆಯೋಗ ಕರ್ನಾಟಕದಲ್ಲಿ ಒಬ್ಬ ಅಧ್ಯಕ್ಷರನ್ನೂ ಐದು ಜನ ಸದಸ್ಯರನ್ನೂ ಹೊಂದಿರುತ್ತದೆ. ಸ್ವತಂತ್ರವಾಗಿ ಕೆಲಸ ಮಾಡಲು ಅಧಿಕಾರ ಹೊಂದಿರುವ ಈ ಸಂಸ್ಥೆ ವಾರ್ಷಿಕವಾಗಿ ಶಾಸನಸಭೆಗೆ ತನ್ನ ವರದಿಯನ್ನು ರಾಜ್ಯಪಾಲರ ಮೂಲಕ ಒಪ್ಪಿಸುತ್ತದೆ.

ಕಾನೂನು ವಿಚಾರದಲ್ಲಿ ಸರ್ಕಾರಕ್ಕೆ ಸಲಹೆ ನೀಡಲು ಮತ್ತು ರಾಜ್ಯಪಾಲರ ಇಚ್ಛೆಯಂತೆ ಇತರ ಕಾನೂನಿಗೆ ಸಂಬಂಧಪಟ್ಟ ಸಹಾಯವನ್ನು ಸರ್ಕಾರಕ್ಕೆ ನೀಡಲು ರಾಜ್ಯದ ಅಡ್ವೊಕೇಟ್ ಜನರಲ್‌ರವರನ್ನೂ ರಾಜ್ಯಪಾಲರು ಸಂವಿಧಾನದ 165ನೆಯ ಅನುಚ್ಛೇದದ ಪ್ರಕಾರ ನೇಮಿಸಿದ್ದಾರೆ. ಇವರು ಉಚ್ಚತಮ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ರಾಜ್ಯದ ಪರ ವಕಾಲತ್ತು ವಹಿಸುತ್ತಾರೆ.

ರಾಜ್ಯದ ಅಭಿವೃದ್ಧಿಯನ್ನು ಯೋಜಿಸಲು ತಜ್ಞ ಯೋಜನಾ ಸಂಸ್ಥೆಯೊಂದನ್ನು ರಚಿಸಲಾಗಿದೆ. ಅಲ್ಲದೆ ಅಭಿವೃದ್ಧಿ ಕಾರ್ಯಗಳಿಗೆ ಉನ್ನತಮಟ್ಟದ ರಾಜಕೀಯ ಮತ್ತು ಆಡಳಿತ ಮಾರ್ಗದರ್ಶನ ನೀಡಲು ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ ಎಂಬ ಸಂಸ್ಥೆಯನ್ನೂ ರಚಿಸಲಾಗಿದೆ. ಇದಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದು ಅಭಿವೃದ್ಧಿಗೆ ಸಂಬಂಧಪಟ್ಟ ಖಾತೆಗಳ ಸಚಿವರು ಸದಸ್ಯರಾಗಿ ಮತ್ತು ರಾಜ್ಯದ ಅಭಿವೃದ್ಧಿ ಕಮಿಶನರ್ ಕಾರ್ಯದರ್ಶಿಯಾಗಿದ್ದಾರೆ.

ರಾಜ್ಯದ ಆಡಳಿತದ ಲೆಕ್ಕಾಚಾರಗಳನ್ನು ಹತೋಟಿಯಲ್ಲಿಡಲು ಮತ್ತು ಪರಿಶೀಲಿಸಲು ರಾಷ್ಟ್ರಾಧ್ಯಕ್ಷರಿಂದ ಇಡೀ ರಾಷ್ಟ್ರದ ಲೆಕ್ಕಾಚಾರ ಹತೋಟಿ ಮತ್ತು ಪರಿಷ್ಕರಣ ಮಾಡಲು ನೇಮಕಗೊಂಡಿರುವ ಭಾರತದ ನಿಯಂತ್ರಕ ಮಹಾಲೇಖಾಪರೀಕ್ಷಕರು ರಾಜ್ಯದಲ್ಲಿ ತಮ್ಮ ಸಹಾಯಾಧಿಕಾರಿಯಾದ ಅಕೌಂಟೆಂಟ್ ಜನರಲ್ ಅವರ ಸಹಾಯದಿಂದ ಕೆಲಸ ಮಾಡುತ್ತಾರೆ.

ರಾಜ್ಯದಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ಕೇಂದ್ರ ಸರ್ಕಾರದ ಶಾಸನದ ಮೇರೆಗೆ ಲೋಕಾಯುಕ್ತವನ್ನು ರಚಿಸಲಾಗಿದೆ. ಉಚ್ಚನ್ಯಾಯಾಲಯದ ನ್ಯಾಯಾಧೀಶರೊಬ್ಬರನ್ನು ಲೋಕಾಯುಕ್ತರನ್ನಾಗಿ ನೇಮಕ ಮಾಡುತ್ತಾರೆ. ಈ ಆಯೋಗ ಪ್ರತಿವರ್ಷ ಸಾವಿರಾರು ದೂರುಗಳನ್ನು ಪರಿಶೀಲಿಸುತ್ತದೆ.

**ಕಾರ್ಯನಿರ್ವಾಹಕ ಸಂಸ್ಥೆಗಳು**: ಈ ಮೇಲ್ಕಂಡ ಸಲಹೆ ಮತ್ತು ಸಹಾಯ ಸಂಸ್ಥೆಗಳ ಸಹಾಯದಿಂದ ಮಂತ್ರಿಮಂಡಲ ಮತ್ತು ಸರ್ಕಾರದ ಕಾರ್ಯಾಲಯಗಳು ಕೈಗೊಂಡ ತೀರ್ಮಾನಗಳನ್ನು, ನೀತಿಗಳನ್ನು ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸಲು ಅನೇಕ ವಿಧವಾದ ಕಾರ್ಯನಿರ್ವಾಹಕ ಸಂಸ್ಥೆಗಳು ಇವೆ. ಈ ಸಂಸ್ಥೆಗಳಲ್ಲಿ ಇಲಾಖೆಗಳು, ಮಂಡಲಿಗಳು ಮತ್ತು ಕಾನೂನಾಧಾರಿತ ನಿಗಮಗಳು ಮತ್ತು ಕಂಪನಿಗಳು ಸೇರಿವೆ.

ಸರ್ಕಾರಿ ಇಲಾಖೆಗಳು ಯಾರಾದರೊಬ್ಬ ಮಂತ್ರಿಯ ಹತೋಟಿಯಲ್ಲಿರುತ್ತವೆ. ಆದರೆ ಇಲಾಖೆಯ ಮುಖ್ಯಾಧಿಕಾರಿಯಾಗಿ ಆಡಳಿತಗಾರರು ಇರುತ್ತಾರೆ. ಕೆಲವು ಇಲಾಖೆಗಳಲ್ಲಿ ಆ ಇಲಾಖೆಗಳ ಸಂಬಂಧಪಟ್ಟ ಸಚಿವಾಲಯದ ಕಾರ್ಯದರ್ಶಿಗಳೇ ಇಲಾಖೆಯ ಮುಖ್ಯಸ್ಥರೂ ಆಗಿ ಕಾರ್ಯನಿರ್ವಹಿಸುತ್ತಾರೆ. ಆದರೆ ಕಾರ್ಯದರ್ಶಿಗಿಂತ ಬೇರೆ ಅಧಿಕಾರಿಗಳೇ ಮುಖ್ಯಸ್ಥರಾಗಿರುವುದು ವಾಡಿಕೆ. ಮೊದಲನೆಯದಕ್ಕೆ ಉದಾಹರಣೆಯಾಗಿ ವಿದ್ಯಾಖಾತೆಯ ವ್ಯವಸ್ಥೆಯನ್ನು ಮತ್ತು ಕಂದಾಯ ಇಲಾಖೆಯನ್ನು ಸೂಚಿಸಬಹುದು. ವಿದ್ಯಾಖಾತೆಯಲ್ಲಿ ವಿದ್ಯಾಕಾರ್ಯದರ್ಶಿಗಳೇ ವಿದ್ಯಾಕಮಿಷನರ್ ಆಗಿ ವಿದ್ಯಾಇಲಾಖೆಗಳ ಆಡಳಿತದ ಮುಖ್ಯಾಧಿಕಾರಿಗಳಾಗಿಯೂ ಕೆಲಸ ಮಾಡುತ್ತಾರೆ. ಹಾಗೆಯೇ ಕಂದಾಯ ಕಾರ್ಯದರ್ಶಿಗಳೂ ಕಂದಾಯ ಕಮಿಷನರ್ ಆಗಿಯೂ ಕಾರ್ಯ ನಿರ್ವಹಿಸುತ್ತಾರೆ. ಎರಡನೆಯ ಪದ್ಧತಿಗೆ ಉದಾಹರಣೆಯಾಗಿ ಪೊಲೀಸ್ ಮತ್ತು ಸಹಕಾರ ಇಲಾಖೆಗಳನ್ನು ಸೂಚಿಸಬಹುದು. ಪೊಲೀಸ್ ಇಲಾಖೆಯ ಮುಖ್ಯಾಧಿಕಾರಿ ಇನ್ಸ್‌ಪೆಕ್ಟರ್ ಜನರಲ್ ಅವರಾದರೆ ಗೃಹಖಾತೆಯ ಕಾರ್ಯದರ್ಶಿ ಬೇರೆಯವರಾಗಿರುತ್ತಾರೆ. ಹಾಗೆಯೇ ಸಹಕಾರ ಖಾತೆಯ ಮುಖ್ಯಸ್ಥರು ಕಾರ್ಯದರ್ಶಿಯಾದರೆ ಸಹಕಾರ ಇಲಾಖೆಯ ಮುಖ್ಯಸ್ಥರಾಗಿ ಸಹಕಾರ ರಿಜಿಸ್ಟ್ರಾರ್‌ರವರು ಇರುತ್ತಾರೆ. ಕೆಲವು ಇಲಾಖೆಗಳ ಮುಖ್ಯಸ್ಥರನ್ನು ನಿರ್ದೇಶಕರೆಂದೂ ಕರೆಯುತ್ತಾರೆ. ಉದಾಹರಣೆಗೆ ವ್ಯವಸಾಯ ಇಲಾಖೆ ನಿರ್ದೇಶಕರು, ಕೈಗಾರಿಕೆ ಇಲಾಖೆ ನಿರ್ದೇಶಕರು.

ಇಲಾಖೆಗಳು ಕೇಂದ್ರ ಕಚೇರಿಗಳಲ್ಲದೆ ಅನೇಕ ಕ್ಷೇತ್ರ ಕಚೇರಿಗಳನ್ನು ರಾಜ್ಯದ ವಿವಿಧ ಮಟ್ಟದಲ್ಲಿ ಹೊಂದಿದ್ದು ತಮ್ಮದೇ ಆದ ಕೇಂದ್ರ ಮತ್ತು ಕ್ಷೇತ್ರ ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ನಿಯಮಕ್ಕೆ ಕಾನೂನು ಇಲಾಖೆ, ಭಾಷಾಂತರ ಇಲಾಖೆ ಮುಂತಾದ ಕೆಲವೇ ಇಲಾಖೆಗಳು ಹೊರತಾಗಿವೆ. ಇತರ ಇಲಾಖೆಗಳು ವಿಸ್ತಾರವಾದ ವ್ಯವಸ್ಥೆಯನ್ನು ಹೊಂದಿವೆ. ಉದಾಹರಣೆಗೆ ಪ್ರಮುಖವಾದ ಕಂದಾಯ ಇಲಾಖೆಯ ವ್ಯವಸ್ಥೆಯನ್ನು ಗಮನಿಸಬಹುದು. ಇಲಾಖೆಯ ಆಡಳಿತದ ಉದ್ದೇಶಕ್ಕಾಗಿ ರಾಜ್ಯವನ್ನು 4 ವಿಭಾಗಗಳನ್ನಾಗಿಯೂ 27 ಜಿಲ್ಲೆಗಳಾಗಿಯೂ ಜಿಲ್ಲೆಗಳನ್ನು 4 ಉಪವಿಭಾಗಗಳಾಗಿಯೂ ಮತ್ತು 175 ತಾಲ್ಲೂಕುಗಳಾಗಿಯೂ, 7 ಹೋಬಳಿಗಳಾಗಿಯೂ ಪ್ರತಿ ಹೋಬಳಿಯಲ್ಲಿರುವ ಹಳ್ಳಿಗಳನ್ನೂ ಅನೇಕ ಕಂದಾಯ ಗ್ರಾಮಗಳನ್ನಾಗಿಯೂ ವಿಂಗಡಿಸಲಾಗಿದೆ. ರಾಜ್ಯದಲ್ಲಿ ಒಟ್ಟು 27,066 ವಾಸಿತ ಹಳ್ಳಿಗಳಿವೆ. ವಿಭಾಗದ ಮಟ್ಟದಲ್ಲಿ ವಿಭಾಗಾಧಿಕಾರಿಗಳು, ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಉಪ ವಿಭಾಗ ಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್, ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರ್, ಹೋಬಳಿಗಳ ಮಟ್ಟದಲ್ಲಿ ಶೇಖ್‌ದಾರ್ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರ್, ಗ್ರಾಮಗಳ ಮಟ್ಟದಲ್ಲಿ ಗ್ರಾಮಲೆಕ್ಕಿಗರು ಮುಂತಾದ ಗ್ರಾಮಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ. ಈ ವ್ಯವಸ್ಥೆಯಲ್ಲಿ ಜಿಲ್ಲಾಮಟ್ಟದ ಆಡಳಿತವೇ ಪ್ರಮುಖವಾದುದು. ಇಡೀ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಜಿಲ್ಲೆ ಆಡಳಿತದ ಒಂದು ಪ್ರಮುಖ ಘಟಕವಾಗಿರುವಂತೆ ಇಲ್ಲೂ ಇದೆ. ಜಿಲ್ಲಾಧಿಕಾರಿಗಳು ಕಂದಾಯ ವಸೂಲಿ ಮತ್ತು ಭೂಮಿ ಆಡಳಿತಗಳನ್ನು, ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಕಾನೂನು ಶಿಸ್ತುಪಾಲನೆಗಳನ್ನು, ಅಲ್ಲದೆ ಈಚೆಗೆ ಜಿಲ್ಲಾಭಿವೃದ್ಧಿ, ಜಿಲ್ಲೆಯ ಯೋಜನೆ ಮತ್ತು ಅನೇಕ ಕಾರ್ಯಗಳನ್ನೂ ನಿರ್ವಹಿಸುತ್ತಾರೆ. ಅವರಿಗೆ ಸಹಾಯ ಮಾಡಲು ಅಸಿಸ್ಟೆಂಟ್ ಕಮಿಷನರುಗಳು, ಜಿಲ್ಲಾ ಅಭಿವೃದ್ಧಿ ಸಹಾಯಕ, ಯುವ ಕಲ್ಯಾಣ ಅಧಿಕಾರಿ, ಜಿಲ್ಲಾ ಆಹಾರ ಸಹಾಯಾಧಿಕಾರಿ ಮುಂತಾದವರು ಇದ್ದಾರೆ. ಕಾನೂನು ಶಿಸ್ತುಪಾಲನೆಯಲ್ಲಿ ಜಿಲ್ಲಾ ಪೊಲೀಸ್ ನಿರ್ವಹಣಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಜಿಲ್ಲಾ ಆಡಳಿತದ ಸಮನ್ವಯವೂ ಇವರ ಮುಖ್ಯ ಜವಾಬ್ದಾರಿ. ಇತ್ತೀಚಿನ ದಿನಗಳಲ್ಲಿ ಇವರ ಕಾರ್ಯಭಾರ ಹೆಚ್ಚಾಗಿ ಕೆಲವು ಜಿಲ್ಲೆಗಳಲ್ಲಿ ವಿಶೇಷ ಜಿಲ್ಲಾಧಿಕಾರಿಗಳನ್ನು ನೇಮಿಸಲಾಗುತ್ತಿದೆ. 1985ರಿಂದ ಜಿಲ್ಲಾಪರಿಷತ್ ಮತ್ತು ಮಂಡಳ ಪಂಚಾಯಿತಿ ಅಧಿನಿಯಮ ಜಾರಿಗೆ ಬಂದ ಮೇಲೆ ಆಯಾ ಜಿಲ್ಲೆಯ ಅಭಿವೃದ್ಧಿ ಕಾರ್ಯದಲ್ಲಿ ಜನಪ್ರತಿನಿಧಿಗಳುಳ್ಳ ಜಿಲ್ಲಾಪರಿಷತ್ ಕಾರ್ಯ ಚಟುವಟಿಕೆಗಳು ಮಹತ್ವ ಪಡೆದವು. ಇದರ ಆಡಳಿತಾತ್ಮಕ ಮುಖ್ಯರಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿರುತ್ತಾರೆ. ಚುನಾಯಿತ ಪ್ರತಿನಿಧಿಗಳಲ್ಲೊಬ್ಬರು ಅಧ್ಯಕ್ಷರಾಗಿರುತ್ತಾರೆ. ಈಗ ಜಿಲ್ಲಾ ಪರಿಷತ್ತನ್ನು ಜಿಲ್ಲಾ ಪಂಚಾಯಿತಿ ಎಂದು ಕರೆಯಲಾಗುತ್ತಿದೆ. ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು ಇದರ ಅಧೀನದಲ್ಲಿ ಕೆಲಸ ಮಾಡುತ್ತಿವೆ.

ಹಾಗೆಯೆ ಇತರ ಇಲಾಖೆಗಳೂ ತಮ್ಮದೇ ಆದ ಕ್ಷೇತ್ರಕಚೇರಿಗಳನ್ನು ಆಡಳಿತ ಘಟಕಗಳನ್ನು ಹೊಂದಿವೆ. ಕ್ಷೇತ್ರಕಚೇರಿಗಳನ್ನೊಳಗೊಂಡ ಎಲ್ಲ ಇಲಾಖೆಗಳು ಜಿಲ್ಲಾ ಮಟ್ಟದಲ್ಲಿ ತಮ್ಮ ಆಡಳಿತ ಘಟಕಗಳನ್ನು ಹೊಂದಿವೆ. ಇತರ ಮಟ್ಟಗಳಲ್ಲಿ ಇವುಗಳ ಆಡಳಿತ ಘಟಕಗಳು ಕಂದಾಯ ಆಡಳಿತ ಘಟಕಗಳಿಗೆ ಹೊಂದಿಕೊಂಡು ಅಥವಾ ಬೇರೆ ಬೇರೆಯಾಗಿ ಇರುತ್ತವೆ.

ನಾನಾಮಟ್ಟದಲ್ಲಿ ಪ್ರತ್ಯೇಕ ಕಚೇರಿಗಳನ್ನು ಹೊಂದಿರುವ ಕರ್ನಾಟಕ ಸರ್ಕಾರದ ಕೆಲವು ಇಲಾಖೆಗಳು ಇಂತಿವೆ: ವ್ಯವಸಾಯ, ಪ್ರಾಣಿ ಮತ್ತು ಪಶುವೈದ್ಯ, ಅರ್ಥ ಮತ್ತು ಅಂಕಿ ಅಂಶ, ವಾಣಿಜ್ಯ ತೆರಿಗೆ,

ಸಹಕಾರ, ಪಶುಸಂಗೋಪನೆ, ಔಷಧ ನಿಯಂತ್ರಣ, ವಿದ್ಯಾಭ್ಯಾಸ, ಕನ್ನಡ ಮತ್ತು ಸಂಸ್ಕೃತಿ, ಗ್ರಂಥಾಲಯ, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ, ಉದ್ಯೋಗ ಮತ್ತು ತರಬೇತಿ, ಅಬ್ಕಾರಿ, ಅಗ್ನಿಶಾಮಕ, ಮತ್ಸ್ಯೋದ್ಯಮ, ಆಹಾರ ಮತ್ತು ನಾಗರಿಕ ಸರಬರಾಜು, ಅರಣ್ಯ, ಆರೋಗ್ಯ ಮತ್ತು ಕುಟುಂಬಯೋಜನೆ, ಗೃಹರಕ್ಷಕದಳ ಮತ್ತು ನಾಗರಿಕ ರಕ್ಷಣೆ, ತೋಟಗಾರಿಕೆ, ಕೈಗಾರಿಕೆ ಮತ್ತು ವಾಣಿಜ್ಯ, ವಾರ್ತಾ ಮತ್ತು ಪ್ರವಾಸೋದ್ಯಮ, ಜೀವವಿಮೆ, ನ್ಯಾಯಾಂಗ, ಕಾರ್ಮಿಕ, ಮಾರುಕಟ್ಟೆ, ಗಣಿ ಮತ್ತು ಭೂ ವಿಜ್ಞಾನ, ಸಾರಿಗೆ, ಪೊಲೀಸ್, ಜೈಲು, ಲೋಕೋಪಯೋಗಿ, ಧಾರ್ಮಿಕದತ್ತಿದಾನ, ಕಂದಾಯ, ಸಮಾಜಕಲ್ಯಾಣ, ರೇಷ್ಮೆ, ಸ್ಟ್ಯಾಂಪ್, ನೋಂದಾಣಿಕೆ, ನಗರಯೋಜನೆ, ಭಂಡಾರ, ಅಳತೆ ಮತ್ತು ತೂಕ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ, ದಾಸ್ತಾನು- ಇವುಗಳ ಜೊತೆಗೆ ಏಕ ಕಚೇರಿಗಳಿರುವ ಜನಗಣತಿ, ಚುನಾವಣೆ, ಭಾಷಾಂತರ ಮತ್ತು ಮಾಹಿತಿ ತಂತ್ರಜ್ಞಾನ ಇತ್ಯಾದಿ ಇಲಾಖೆಗಳೂ ಇವೆ.

ರಾಜ್ಯ ಆಡಳಿತ ಕೇಂದ್ರದಲ್ಲಿ ಅಂದರೆ, ಸಚಿವಾಲಯದಲ್ಲಿ (ಸೆಕ್ರೆಟೇರಿಯಟ್) ಆಡಳಿತದ ಅನುಕೂಲಕ್ಕಾಗಿ ಈ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಸಾಮಾನ್ಯ ಆಡಳಿತ ವಿಭಾಗ, ವ್ಯವಸಾಯ ಮತ್ತು ಅರಣ್ಯ, ವಾಣಿಜ್ಯ ಮತ್ತು ಕೈಗಾರಿಕೆಗಳು, ಪಂಚಾಯಿತಿ ರಾಜ್ಯ ಮತ್ತು ಸಹಕಾರಾಭಿವೃದ್ಧಿ, ವಿದ್ಯಾಭ್ಯಾಸ ಮತ್ತು ಯುವಜನ ಸೇವಾ ವಿಭಾಗ, ಹಣಕಾಸು, ಆಹಾರ ಮತ್ತು ನಾಗರಿಕ ಸರಬರಾಜು, ಗೃಹ, ಆರೋಗ್ಯ ಮತ್ತು ನಗರಾಡಳಿತ ವಿಭಾಗ, ಕಾನೂನು ಮತ್ತು ಶಾಸನಸಭಾ ಕಾರ್ಯಾಡಳಿತ ವಿಭಾಗ, ಯೋಜನೆ, ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ, ಕಂದಾಯ ಮತ್ತು ಸಮಾಜ ಕಲ್ಯಾಣ ವಿಭಾಗ ಇತ್ಯಾದಿ.

ಮೇಲ್ಕಂಡ ರಾಜ್ಯ ಇಲಾಖೆ ಮತ್ತು ಆಡಳಿತ ವಿಭಾಗಗಳ ಜೊತೆಗೆ ಈ ಕೆಳಕಂಡ ಕೇಂದ್ರ ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟ ಇಲಾಖೆಗಳೂ ರಾಜ್ಯದಲ್ಲಿ ಕಾರ್ಯನಿರತವಾಗಿವೆ. ಜನಗಣತಿ ಇಲಾಖೆ, ಪುರಾತತ್ತ್ವ ಇಲಾಖೆ, ತನಿಖಾ ಇಲಾಖೆ, ಅಬ್ಕಾರಿ ಇಲಾಖೆ, ನಾಗರಿಕ ವಿಮಾನ ಸಾರಿಗೆ ಇಲಾಖೆ, ವರಮಾನ ತೆರಿಗೆ ಇಲಾಖೆ, ವಾರ್ತಾ ಮತ್ತು ಪ್ರಸಾರ ಇಲಾಖೆ, ರೈಲ್ವೆ, ಅಂಚೆ ಮತ್ತು ತಂತಿ ಇಲಾಖೆ. ಇವುಗಳಲ್ಲದೆ ವಿಜ್ಞಾನ, ಕೈಗಾರಿಕೆ ಮತ್ತು ರಕ್ಷಣಾ ಇಲಾಖೆಯ ಕೆಲವು ಕಚೇರಿಗಳು ಕರ್ನಾಟಕ ರಾಜ್ಯದಲ್ಲಿವೆ.

ವಿವಿಧ ಮಟ್ಟಗಳಲ್ಲಿ ಆಡಳಿತ ನಿರ್ವಹಿಸಲು ಸರ್ಕಾರ ನಿಯಮಿಸಿಕೊಂಡಿರುವ ಸಿಬ್ಬಂದಿ ವರ್ಗದಲ್ಲಿ 1967ರಲ್ಲಿ ನಡೆದ ಸರ್ಕಾರಿ ಗಣತಿ ಪ್ರಕಾರ, ಆ ವರ್ಷದ ಮಾರ್ಚ್ 31ರಂದು ಕರ್ನಾಟಕ ಸರ್ಕಾರದಲ್ಲಿ 59 ಇಲಾಖೆಗಳು 7690 ಕಚೇರಿಗಳಿದ್ದು ಗಣತಿಯ ವ್ಯಾಪ್ತಿಯೊಳಗೆ ಬಂದ 6715 ಕಚೇರಿಗಳಲ್ಲಿ, 2,11,839 ಹುದ್ದೆಗಳು ಇದ್ದವು. ಈಗ ಸರ್ಕಾರಿ ನೌಕರರ ಸಂಖ್ಯೆ 6,00,000 ದಾಟಿದೆ. ಈ ಸಿಬ್ಬಂದಿ ವರ್ಗವನ್ನು ಆಡಳಿತಾನುಕೂಲಕ್ಕಾಗಿ ಹುದ್ದೆ ಮತ್ತು ಸಂಬಳದ ಆಧಾರದ ಮೇಲೆ ಒಂದು, ಎರಡು, ಮೂರು ಮತ್ತು ನಾಲ್ಕನೆಯ ವರ್ಗಗಳಾಗಿ ವಿಂಗಡಿಸಲಾಗಿದೆ. ಒಂದನೆಯ ಮತ್ತು ಎರಡನೆಯ ವರ್ಗಗಳನ್ನು ಗೆಜೆಟೆಡ್ ಅಧಿಕಾರಿಗಳೆಂದೂ ವಿಂಗಡಿಸಲಾಗಿದೆ. ಗೆಜೆಟೆಡ್ ಅಧಿಕಾರಿಗಳನ್ನು ರಾಜ್ಯಮಟ್ಟದಲ್ಲಿ ರಾಷ್ಟ್ರದ ಐ.ಎ.ಎಸ್.ಗೆ ಸಮನಾದ ಕರ್ನಾಟಕ ಆಡಳಿತ ಸೇವೆ, ಐಪಿಎಸ್‌ಗೆ ಸಮಾನಾದ ಕರ್ನಾಟಕ ರಾಜ್ಯ ಪೊಲೀಸು ಸೇವೆ, ಕರ್ನಾಟಕ ರಾಜ್ಯ ವಾಣಿಜ್ಯತೆರಿಗೆ ಸೇವೆ, ಕರ್ನಾಟಕ ರಾಜ್ಯ ವಿವಿಧ ಸೇವೆ ಮತ್ತು ಕರ್ನಾಟಕ ರಾಜ್ಯ ಸ್ಥಳೀಯ ಸಂಸ್ಥೆಗಳ ಸೇವೆ ವರ್ಗಗಳಾಗಿ ವಿಂಗಡಿಸಿದೆ. ಕರ್ನಾಟಕ ರಾಜ್ಯದ ಆಡಳಿತದಲ್ಲಿ ಮೇಲೆ ಹೇಳಿದ ರಾಜ್ಯಸೇವೆಗಳೇ ಅಲ್ಲದೆ ಅಖಿಲಭಾರತ ಸೇವೆಗಳಾದ ಐ.ಎ.ಎಸ್ ಮತ್ತು ಐ.ಪಿ.ಎಸ್ ಗಳ ಅಧಿಕಾರಿಗಳೂ ಸೇವೆ ಸಲ್ಲಿಸುತ್ತಿದ್ದಾರೆ. ಕೇಂದ್ರದ ಆಡಳಿತದಲ್ಲಿರುವ ಈ ಎರಡು ಸೇವೆಗಳ ಅಧಿಕಾರಿಗಳನ್ನು ರಾಜ್ಯಕ್ಕೆ ಎರವು ನೀಡಲಾಗಿದೆ. ಈ ಸೇವೆಗಳ ಅಧಿಕಾರಿಗಳನ್ನು ರಾಜ್ಯದ ಆಡಳಿತದ ಉನ್ನತ ಸ್ಥಾನಗಳಲ್ಲಿ ನೇಮಿಸಲಾಗುವುದು. ಕರ್ನಾಟಕದಲ್ಲಿ ಅನೇಕ ಐ.ಎ.ಎಸ್ ಅಧಿಕಾರಿಗಳು ರಾಜ್ಯದ ಮುಖ್ಯ ಕಾರ್ಯದರ್ಶಿ ಸ್ಥಾನದಿಂದ, ಕಾರ್ಯದರ್ಶಿಗಳು, ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಮುಂತಾದ ಮತ್ತು ಅವಕ್ಕೆ ಸಮನಾದ ಎಲ್ಲಾ ಸ್ಥಾನಗಳಲ್ಲೂ ಕಂಡುಬರುತ್ತಾರೆ.

ಮೇಲ್ಕಂಡ ಇಲಾಖಾ ವ್ಯವಸ್ಥೆ ಅಲ್ಲದೆ ಕೆಲವು ಕಾರ್ಯನಿರ್ವಾಹಕ ಸಂಸ್ಥೆಗಳನ್ನು ಮಂಡಳಿಗಳೆಂದು ರಚಿಸಲಾಗಿದೆ. ಈ ವ್ಯವಸ್ಥೆಯಲ್ಲಿ ಮಂಡಳಿಯ ಶೃಂಗದಲ್ಲಿ ಒಬ್ಬ ಅಧಿಕಾರಿಯ ಬದಲು ಹಲವು ಸದಸ್ಯರು ಇರುವ ಆಡಳಿತ ಮಂಡಳಿ ಇರುತ್ತದೆ. ತಾಂತ್ರಿಕ ಇಲಾಖೆಗಳ ಅಥವಾ ಭಾಗಶಃ ನ್ಯಾಯತೀರ್ಮಾನ ಜವಾಬ್ದಾರಿಯುಳ್ಳ ಸಂಸ್ಥೆಗಳಲ್ಲಿ 'ಇಂಥ' ಮಂಡಳಿ ವ್ಯವಸ್ಥೆಯನ್ನು ಅನುಸರಿಸಲಾಗಿದೆ. ಉದಾಹರಣೆಗೆ ಗೃಹನಿರ್ಮಾಣ ಮಂಡಳಿ, ಕರಕುಶಲ ಕೈಗಾರಿಕಾ ಮಂಡಳಿ, ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ಮುಂತಾದವು.

ಸಮಾಜವಾದದ ನೀತಿ ವಿಧಾನವನ್ನು ಆಧರಿಸಿ ರಾಜ್ಯದ ಆರ್ಥಿಕ ಮತ್ತು ವಾಣಿಜ್ಯ ರಂಗದಲ್ಲಿ ಗಮನಾರ್ಹವಾಗಿ ಪ್ರವೇಶಿಸಿರುವ ಸರ್ಕಾರದ ಉದ್ದೇಶವನ್ನು ಕಾರ್ಯಗತಗೊಳಿಸಲು ಸರ್ಕಾರಿ ಉದ್ಯಮ ರಂಗದಲ್ಲಿ ಇಲಾಖಾ ಆಡಳಿತ ವ್ಯವಸ್ಥೆ ಅಲ್ಲದೆ ಕಾನೂನು ಆಧಾರಿತ ನಿಗಮಗಳು ಮತ್ತು ಕಂಪನಿ ವ್ಯವಸ್ಥೆಗಳುಂಟು. ನಿಗಮಗಳಿಗೆ ಉದಾಹರಣೆಯಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸೂಚಿಸಬಹುದು. ಶಾಸನಬದ್ಧವಾಗಿ ರಚಿಸಲ್ಪಟ್ಟಿರುವ ಇಂಥ ಸಂಸ್ಥೆಗಳು ಇಲಾಖಾ ವ್ಯವಸ್ಥೆಗಿಂತ ಹೆಚ್ಚಿನ ಆಡಳಿತ, ಹಣಕಾಸು ಮತ್ತು ಸಿಬ್ಬಂದಿ ನಿರ್ವಹಣೆಯ ಸ್ವಾತಂತ್ರ್ಯ ಹೊಂದಿದ್ದು ಕೈಗಾರಿಕಾ ವಾಣಿಜ್ಯ ಮತ್ತು ಸಾರಿಗೆ ಮುಂತಾದ ಸರ್ಕಾರಿ ಉದ್ಯಮಗಳಿಗೆ ಸೂಕ್ತವಾದ ವ್ಯವಸ್ಥೆಯಾಗಿದೆ. ಆದರೆ ಪ್ರತಿಸಾರಿಯೂ ವಿಧಾನಮಂಡಲದ ಕಾಲಾವಕಾಶಗಳ ಮೇಲೆ ಸಂಸ್ಥೆಗಳ ಸ್ಥಾಪನೆ ಅವಲಂಬಿಸಿರಬೇಕಾಗಿರುವುದನ್ನು ತಪ್ಪಿಸಲು ಮತ್ತು ಉದ್ಯಮಗಳನ್ನು ಸುಲಭ ಮತ್ತು ಶೀಘ್ರರೀತಿಯಿಂದ ಸ್ಥಾಪಿಸಲು ಕಂಪನಿ ವ್ಯವಸ್ಥೆಯನ್ನು ಅನುಸರಿಸಲಾಗಿದೆ. ಉದಾಹರಣೆಗೆ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್, ಮೈಸೂರು ಮಿನರಲ್ಸ್ ಲಿಮಿಟೆಡ್ ಮುಂತಾದವು.

ಮೇಲೆ ಹೇಳಿದ ವಿವಿಧ ಸಂಸ್ಥೆಗಳ ಮತ್ತು ಲಕ್ಷಾಂತರ ಸಿಬ್ಬಂದಿ ವರ್ಗದ ಕಾರ್ಯಾಚರಣೆಯನ್ನು ನಿರ್ದೇಶಿಸಿ ಹತೋಟಿಯಲ್ಲಿಡಲು ವಾರ್ಷಿಕ ಆಯ-ವ್ಯಯ ಅಂದಾಜುಪಟ್ಟಿ ಬಹಳ ಅನುಕೂಲಕಾರಿಯಾಗಿದೆ. ರಾಜ್ಯದ ಆರ್ಥಿಕ ಸಂಪತ್ತನ್ನು ಯೋಜಿಸಿ ಉಪಯೋಗಿಸುವ ಮೂಲ ಉದ್ದೇಶದಿಂದ ವಾರ್ಷಿಕ ಆಯ-ವ್ಯಯ ಪಟ್ಟಿಯನ್ನು ತಯಾರಿಸಿದರೂ ಅದು ಆಡಳಿತದ ಕಾರ್ಯ ಪಥವನ್ನು ನಿಯಂತ್ರಿಸಲೂ ಸಹಾಯಕವಾಗಿದೆ. ರಾಜ್ಯದಲ್ಲಿ ಆರ್ಥಿಕ ವರ್ಷ ಪ್ರತಿವರ್ಷದ ಏಪ್ರಿಲ್ 1ರಂದು ಪ್ರಾರಂಭವಾಗಿ ಮರುವರ್ಷದ ಮಾರ್ಚ್ 31ರಂದು ಅಂತ್ಯಗೊಳ್ಳುತ್ತದೆ. ಈ ಅವಧಿಗಾಗಿ ಆಯ-ವ್ಯಯ ಪಟ್ಟಿಯನ್ನು ತಯಾರಿಸುವ ಕೆಲಸ ಪ್ರತಿ ಇಲಾಖೆಯ ವಿವಿಧ ಮಟ್ಟಗಳಲ್ಲಿ ತಿಂಗಳುಗಳ ಹಿಂದೆಯೇ ಪ್ರಾರಂಭವಾಗುತ್ತದೆ. ಅನಂತರ ಫೆಬ್ರವರಿ ತಿಂಗಳ ಕೊನೆಯ ಒಳಗೆ ರಾಜ್ಯದ ಅರ್ಥಸಚಿವಾಲಯದಲ್ಲಿ ಸಮಗ್ರ ಆಯ-ವ್ಯಯ ಅಂದಾಜುಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಅನಂತರ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ವಿಧಾನ ಮಂಡಲದ ಸಭೆಗಳನ್ನು ಕರೆದು ಅವುಗಳ ಮುಂದೆ ಈ ಅಂದಾಜುಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಸಂಸದೀಯ ಸರ್ಕಾರಿಪದ್ಧತಿಯಲ್ಲಿ ಹಣಕಾಸು ಆಯವ್ಯಯದ ಪೂರ್ಣ ನಿಯಂತ್ರಣದ ಹಕ್ಕು ಪ್ರಜಾಪ್ರತಿನಿಧಿಗಳಿಂದ ಕೂಡಿರುವ ವಿಧಾನಮಂಡಲಕ್ಕೆ ಇರುವುದರಿಂದ ವಿಧಾನ ಮಂಡಲದ ಒಪ್ಪಿಗೆ ಪಡೆಯದೆ ಸರ್ಕಾರ ಯಾವ ಆಯವ್ಯಯವನ್ನೂ ಮಾಡುವಂತಿಲ್ಲ. ಆದ್ದರಿಂದ ಅಂದಾಜುಪಟ್ಟಿಯನ್ನು ಸರ್ಕಾರ ವಿಧಾನಮಂಡಲದ ಮುಂದೆ ಮಂಡಿಸಿ ಅದರ ಒಪ್ಪಿಗೆಯನ್ನು ಬೇಡುತ್ತದೆ. ವಿಧಾನಮಂಡಲದಲ್ಲಿ ಈ ಅಂದಾಜು ಪಟ್ಟಿಯನ್ನು ಸಾಮಾನ್ಯ ಚರ್ಚೆ, ಇಲಾಖಾವಾರು ಬೇಡಿಕೆಗಳ ಚರ್ಚೆ ಮತ್ತು ಹಣಕಾಸು ಮಸೂದೆಗಳ ಮೇಲಿನ ಚರ್ಚೆ ಮುಂತಾದ ಅವಕಾಶಗಳ ಮೂಲಕ ಸಮಗ್ರವಾಗಿ ಚರ್ಚಿಸಲಾಗುತ್ತದೆ. ಈ ಸಂದರ್ಭದಲ್ಲಿ ಇಡೀ ಆಡಳಿತದ ಹಿಂದಿನ ಮತ್ತು ಮುಂದಿನ ವರ್ಷಗಳ ಗತ ಮತ್ತು ನಿಯೋಜಿತ ತತ್ತ್ವ, ರೀತಿ, ನೀತಿ, ಸೋಲು ಮತ್ತು ಸಾಧನೆಗಳೆಲ್ಲವನ್ನೂ ವಿಶ್ಲೇಷಿಸಲಾಗುತ್ತದೆ. ಅನಂತರದಲ್ಲಿ ಹಣಕಾಸು ವಿತರಣಾ ಮಸೂದೆ ಮತ್ತು ಹಣಕಾಸು ಮಸೂದೆ ಎಂಬ ಎರಡು ಮಸೂದೆಗಳನ್ನು ಮಂಡಿಸಿ, ಪರಿಶೀಲಿಸಿ ಅನುಮೋದಿಸಿದ ಮೇಲೆ ಹಣಕಾಸು ಆಡಳಿತ ವಿಧಾನ ಮಂಡಲದ ನಿರ್ವಹಣಾ ಹಂತಕ್ಕೆ ಬರುತ್ತದೆ.

ಆಯವ್ಯಯದ ನಿರ್ವಹಣೆಯ ಮತ್ತು ನಿಯಂತ್ರಣದ ಕಾರ್ಯದಲ್ಲಿ ಅರ್ಥ ಸಚಿವಾಲಯ, ಕಂದಾಯ ಇಲಾಖೆಗಳು, ರಾಜ್ಯ ಕೋಶ ಇಲಾಖೆ, ರಾಜ್ಯ ಲೆಕ್ಕಾಚಾರ ಮತ್ತು ತನಿಖಾ ಇಲಾಖೆ, ಅಕೌಂಟೆಂಟ್ ಜನರಲ್‌ರವರ ಕಚೇರಿ, ರಾಜ್ಯ ವಿಧಾನಮಂಡಲದ

ಸಾರ್ವಜನಿಕ ಹಣಕಾಸು ಸಮಿತಿಗಳು ಭಾಗವಹಿಸುತ್ತವೆ. ಅರ್ಥಸಚಿವಾಲಯ ಆಯ-ವ್ಯಯದ ನಿರ್ವಹಣೆ ಮತ್ತು ನಿಯಂತ್ರಣದ ಮೇಲೆ ಸಮಗ್ರವಾದ ಹತೋಟಿಯನ್ನು ಹೊಂದಿರುತ್ತದೆ. ಕಂದಾಯ ಇಲಾಖೆಗಳು ಕಂದಾಯವನ್ನು ವಸೂಲಿ ಮಾಡುತ್ತವೆ. ಸರ್ಕಾರಕ್ಕೆ ಸಲ್ಲಬೇಕಾದ ಮತ್ತು ಸರ್ಕಾರದಿಂದ ಸಲ್ಲಬೇಕಾದ ಎಲ್ಲ ಹಣದ ವ್ಯವಹಾರ ರಾಜ್ಯ ಭಂಡಾರಗಳ ಮೂಲಕವೇ ನಡೆಯುತ್ತದೆ. ಲೆಕ್ಕಾಚಾರ ಮತ್ತು ತನಿಖಾ ಇಲಾಖೆ ರಾಜ್ಯದ ಆಯವ್ಯಯದ ಲೆಕ್ಕಾಚಾರವನ್ನು ಇಡಲು ಮತ್ತು ತನಿಖೆ ನಡೆಸಲು ಸಹಾಯ ಮಾಡುತ್ತದೆ. ಅಕೌಂಟೆಂಟ್ ಜನರಲ್ ಅವರ ಕಚೇರಿಯು ಲೆಕ್ಕಾಚಾರವಿಡುವ ಸೂತ್ರಗಳನ್ನು ಮತ್ತು ಆಯ-ವ್ಯಯ ಲೆಕ್ಕಗಳನ್ನು ರಾಜ್ಯ ಸರ್ಕಾರಕ್ಕೆ ನೀಡಿ ಲೆಕ್ಕಾಚಾರ ವ್ಯವಸ್ಥೆಯನ್ನು ನಿರ್ದೇಶಿಸುವುದೇ ಅಲ್ಲದೆ ವರ್ಷಕ್ಕೊಂದು ಸಾರಿ ರಾಜ್ಯದ ಎಲ್ಲ ಇಲಾಖೆಗಳು ಮತ್ತು ಕಚೇರಿಗಳ ತನಿಖೆ ನಡೆಸಿ ರಾಜ್ಯಪಾಲರಿಗೆ ವರದಿಯನ್ನು ಸಲ್ಲಿಸುತ್ತದೆ. ರಾಜ್ಯವಿಧಾನ ಮಂಡಲದ ಸಾರ್ವಜನಿಕ ಲೆಕ್ಕಾಚಾರ ಸಮಿತಿ ಅಕೌಂಟೆಂಟ್ ಜನರಲ್‌ರವರ ತನಿಖಾ ವರದಿಯನ್ನು ವಿಧಾನಮಂಡಲದ ಪರವಾಗಿ ಪರಿಶೀಲಿಸುವುದರ ಜೊತೆಗೆ ಅನುಮಾನಕ್ಕೆ ಆಸ್ಪದವಾಗಿರುವ ಇಲಾಖೆಗಳ ವ್ಯವಹಾರಗಳನ್ನು ವಿಶದವಾಗಿ ತನಿಖೆ ನಡೆಸಿ ವಿಧಾನಮಂಡಲಕ್ಕೆ ವರದಿ ಮಾಡುತ್ತದೆ.

ರಾಜ್ಯದ ಸ್ಥಳೀಯ ಆಡಳಿತ ವಿಶಾಲ ಮತ್ತು ಸಂಮಿಶ್ರಿತ ವ್ಯವಸ್ಥೆ ಹೊಂದಿದೆ. ಸ್ಥಳೀಯ ಸಮುದಾಯಗಳ ಆಡಳಿತವನ್ನು ಗ್ರಾಮಾಂತರ ಸಮುದಾಯಗಳ ಆಡಳಿತ ವ್ಯವಸ್ಥೆ ಮತ್ತು ನಗರ ಸಮುದಾಯಗಳ ಆಡಳಿತ ವ್ಯವಸ್ಥೆ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಇವೆಲ್ಲ ಸರ್ಕಾರದ ಕೆಲವೊಂದು ನಿಬಂಧನಗಳಿಗೆ ಅನುಸಾರವಾಗಿ ರಚಿತವಾಗಿದ್ದು, ಕೆಲವು ಕಾರ್ಯರಂಗಗಳಲ್ಲಿ ಸ್ವತಂತ್ರವಾಗಿರುತ್ತವೆ. ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಇದರ ಆಡಳಿತವನ್ನು ನಿರ್ವಹಿಸುತ್ತಾರೆ (ನೋಡಿ: ಸ್ಥಳೀಯ ಸಂಸ್ಥೆಗಳು).

**ನ್ಯಾಯಾಂಗ:** ಸಂಸದೀಯ ಪ್ರಜಾಸತ್ತೆಗೆ ಅನುಗುಣವಾಗಿ ಸಂವಿಧಾನದ 214ನೆಯ ಅನುಚ್ಛೇದದ ಪ್ರಕಾರ ರಾಜ್ಯದಲ್ಲಿ ಒಂದು ಉಚ್ಚ ನ್ಯಾಯಾಲಯವಿದೆ. ಇಡೀ ರಾಜ್ಯ ವ್ಯಾಪ್ತಿಯುಳ್ಳ ಈ ನ್ಯಾಯಾಲಯ ಬೆಂಗಳೂರಿನಲ್ಲಿದೆ. ಭಾರತ ಒಕ್ಕೂಟದಲ್ಲಿ ಏಕಾತ್ಮಕ ನ್ಯಾಯಾಂಗ ವ್ಯವಸ್ಥೆ ಇರುವುದರಿಂದ ಈ ನ್ಯಾಯಾಲಯ ಭಾರತದ ಅಧ್ಯಕ್ಷರ ಮತ್ತು ಉಚ್ಚತಮ ನ್ಯಾಯಾಲಯದ ಹತೋಟಿಯಲ್ಲಿ ಕೆಲಸ ಮಾಡುತ್ತದೆ. ಜಿಲ್ಲೆಯ ಮಟ್ಟದಲ್ಲಿ ಜಿಲ್ಲಾ ನ್ಯಾಯಾಲಯಗಳ ಜೊತೆಗೆ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿರುತ್ತವೆ. ಸಿವಿಲ್ ವಿಭಾಗದಲ್ಲಿ ಜಿಲ್ಲಾ ಮಟ್ಟದಲ್ಲಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ತಾಲ್ಲೂಕು ಮಟ್ಟದಲ್ಲಿ ಮುನ್ಸೀಫರ ನ್ಯಾಯಾಲಯವೂ ಇವೆ. ಈ ನ್ಯಾಯಾಲಯಗಳ ಕಾರ್ಯವ್ಯಾಪ್ತಿಯನ್ನು ರಾಜ್ಯದ ಉಚ್ಚ ನ್ಯಾಯಾಲಯ ನಿರ್ಧರಿಸುತ್ತದೆ (ನೋಡಿ: ನ್ಯಾಯಾಲಯಗಳು). (ಎಂ.ಯು.)

**ಆಡಳಿತ ವ್ಯವಸ್ಥೆಯ ಇತಿಹಾಸ:** ಕರ್ನಾಟಕದಲ್ಲಿ ಆಡಳಿತ ಪರಂಪರೆಯ ಇತಿಹಾಸ ಕಿ.ಪೂ.ಸು.4-3ನೆಯ ಶತಮಾನಗಳ ಹೊತ್ತಿಗೆ ಪ್ರಾರಂಭವಾಯಿತೆಂದು ಹೇಳಬಹುದು. ಭಾರತದ ಪ್ರಾಚೀನ ಶಾಸ್ತ್ರಜ್ಞರು ಅರ್ಥಶಾಸ್ತ್ರ, ಮಹಾಭಾರತ, ಮನುಸ್ಮೃತಿಯಂಥ ಗ್ರಂಥಗಳಲ್ಲಿ ನಿರೂಪಿಸಿದ ತತ್ತ್ವ ಹಾಗೂ ಸಿದ್ಧಾಂತಗಳೇ ಕರ್ನಾಟಕದಲ್ಲಿ ರೂಪುಗೊಂಡಿದ್ದ ರಾಜಕೀಯ ಸಂಸ್ಥೆಗಳಿಗೆ ಮತ್ತು ಸರ್ಕಾರಗಳಿಗೆ ಆಧಾರವಾಗಿದ್ದುವು.

ಇತ್ತೀಚೆಗೆ ಪ್ರಜಾಪ್ರಭುತ್ವ ಸಿದ್ಧಾಂತ ಪಸರಿಸುವವರೆಗೂ ಸರ್ಕಾರಕ್ಕೆ ಸಂಬಂಧಿಸಿದಂತೆ ಈ ದೇಶದಲ್ಲಿದ್ದುದು ಏಕರಾಜಪ್ರಭುತ್ವ. ರಾಜನೇ ದೇಶದ ಸಾರ್ವಭೌಮ. ಆದರೆ ಭಾರತೀಯ ಪರಂಪರೆಯಲ್ಲಿ ರಾಜರು ನಿರಂಕುಶ ಪ್ರಭುಗಳಾಗಲು ಸಾಧ್ಯವಾಗುತ್ತಿರಲಿಲ್ಲ. ರಾಜರಾಗಲಿ ಇತರ ಯಾರೇ ವ್ಯಕ್ತಿಗಳಾಗಲಿ ಧರ್ಮದ ಚೌಕಟ್ಟಿನಲ್ಲಷ್ಟೇ ತಮ್ಮ ಅಧಿಕಾರವನ್ನು ಚಲಾಯಿಸುವ ಹಕ್ಕಿರುತ್ತಿತ್ತು. ಶ್ರುತಿ, ಸ್ಮೃತಿಗಳಲ್ಲಿ ಉಕ್ತವಾದ ಧರ್ಮ ರೀತಿಗಳು ಮತ್ತು ಅನೂಚಾನವಾಗಿ ನಡೆದು ಬರುತ್ತಿದ್ದ ಪದ್ಧತಿಗಳು ರಾಜನೂ ಒಳಗೊಂಡಂತೆ ಎಲ್ಲರ ವ್ಯವಹಾರಗಳ ನಿರ್ದೇಶಕ ಸೂತ್ರಗಳಾಗಿದ್ದುವು. ರಾಜ ದೇವನಿಗೆ ಸಮಾನ ಅಥವಾ ದೇವಾಂಶ ಅವನಲ್ಲಿದೆ ಎಂಬ ಭಾವನೆಗಳು ಅಲ್ಲಲ್ಲಿ ವ್ಯಕ್ತಗಿದ್ದರೂ ಅವನು ಧರ್ಮಭ್ರಷ್ಟ ಅಥವಾ ನೀತಿಭ್ರಷ್ಟನಾದಾಗ ಅವನ ಪಾವಿತ್ರ್ಯಕ್ಕೆ ಕುಂದು ಬರುತ್ತಿತ್ತು. ಅವನನ್ನು ಅಧಿಕಾರಚ್ಯುತನಾಗಿ ಮಾಡಬಹುದೆಂಬುದಕ್ಕೆ ಕಾರಣವಾಗುತ್ತಿತ್ತು. ರಾಜತ್ವ ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಹಿರಿಯಮಗನ ಮೂಲಕ ಮುಂದುವರಿಯುತ್ತಿತ್ತು. ಆದರೆ ಮೇಲಿನ ಧಾರ್ಮಿಕನೀತಿಯ ಕಾರಣದಿಂದ ಅಥವಾ ಅಬಲತೆಯಿಂದ ಹಿರಿಯಮಗ ರಾಜ್ಯವನ್ನು ಕಳೆದುಕೊಂಡು ವಂಶದ ಬೇರೆಯವರು ಅಧಿಕಾರ ವಹಿಸಿಕೊಂಡಿರುವ ಹಲವು ಉದಾಹರಣೆಗಳು ಇತಿಹಾಸದಲ್ಲಿ ದೊರಕುತ್ತವೆ. ರಾಜರು ತಮ್ಮ ಹಿಡಿತದಲ್ಲಿದ್ದ ಪ್ರದೇಶಕ್ಕಷ್ಟೇ ಒಡೆಯರಾಗಿರುತ್ತಿದ್ದರು. ಈ ರಾಜರಲ್ಲಿದ್ದ ಸ್ವಸಾಧನಾಕಾಂಕ್ಷೆ, ಅವರ ಬಲಸಂವೃದ್ಧಿ ಮುಂತಾದ ಕಾರಣಗಳಿಂದ ರಾಜರಲ್ಲೆ ಆಗಾಗ್ಗೆ ಪರಸ್ಪರ ಸಂಘರ್ಷಗಳೂ ನಡೆಯುತ್ತಿದ್ದು ಅವರ ಆಡಳಿತಕ್ಕೆ ಒಳಪಡುವ ಪ್ರದೇಶಗಳ ಹಿಗ್ಗಾಣಿಕೆ ಕುಗ್ಗಾಣಿಕೆಗಳು ರಾಜ್ಯದ ಹಸ್ತಾಂತರಗಳೂ ಆಗಾಗ್ಗೆ ಸಂಭವಿಸುತ್ತಿದ್ದುವು.

ರಾಜ ರಾಜ್ಯದ ಮುಖ್ಯ ಸೂತ್ರಧಾರಿ. ಧರ್ಮಶಾಸ್ತ್ರಗಳು ನಿರೂಪಿಸುವಂತೆ ಅವನ ಕರ್ತವ್ಯಗಳು ನಾಲ್ಕು. ದುಷ್ಟನಿಗ್ರಹ, ಶಿಷ್ಟಪಾಲನ, ಆತ್ಮರಕ್ಷಣ ಮತ್ತು ಧರ್ಮಯತ್ನ. ಒಟ್ಟಿನಲ್ಲಿ ಸಮ್ಯಕ್ಪ್ರಜಾಪರಿಪಾಲನ. ಈ ಕರ್ತವ್ಯ ಸಾಧನೆಗಾಗಿ ರಾಜ್ಯದ ಆಡಳಿತ ವ್ಯವಸ್ಥಿತವಾಗಿರುತ್ತಿತ್ತು. ರಾಜ ಆತ್ಮರಕ್ಷಣೆಗೆ ಹಾಗೂ ದೇಶರಕ್ಷಣೆಗಾಗಿ ಸೈನ್ಯವನ್ನು ಮೊದಲಾಗಿ ರೂಢಿಸಿಕೊಳ್ಳಬೇಕಾಗಿತ್ತು. ಸೈನ್ಯಕ್ಕೆ ಸಂಬಂಧಿಸಿದಂತೆ ವಿವಿಧಮಟ್ಟಗಳ ಅಧಿಕಾರಿಗಳಿರುತ್ತಿದ್ದರು. ದುಷ್ಟನಿಗ್ರಹ, ಶಿಷ್ಟಪಾಲನವನ್ನು ನಿರ್ವಹಿಸಲು ದೇಶದ ವಿವಿಧ ಭಾಗಗಳಲ್ಲಿ ವಿವಿಧ ಅಂತಸ್ತುಗಳಲ್ಲಿ ರಾಜನ ಪ್ರತಿನಿಧಿಗಳು ಅಥವಾ ಅಧಿಕಾರಿಗಳು ಇರುತ್ತಿದ್ದರು. ಸಮ್ಯಕ್ ಪ್ರಜಾಪಾಲನೆಯಲ್ಲಿ ರಾಜ್ಯದ ಆರ್ಥಿಕ ಅಭಿವೃದ್ಧಿ ಹಾಗೂ ನ್ಯಾಯನಿಷ್ಠ ಜೀವನಕ್ರಮಗಳನ್ನು ನಿರೂಪಿಸುವುದು, ಪಾಲಿಸುವುದು, ಧರ್ಮರಕ್ಷಣೆಯಲ್ಲಿ ವಿವಿಧ ಜನವರ್ಗಗಳು ತಮ್ಮ ತಮ್ಮ ಧರ್ಮಮಾರ್ಗಗಳನ್ನು ಆಚರಿಸಿಕೊಂಡು ಬರುವಂತೆ ನೋಡಿಕೊಳ್ಳುವುದು, ಅದನ್ನು ಪ್ರೋತ್ಸಾಹಿಸುವುದು ಮೊದಲಾದ ಕಾರ್ಯಕ್ರಮಗಳಿಗಾಗಿಯೂ ಅನೇಕ ಅಧಿಕಾರಿಗಳು ನಿಯಮಿತರಾಗಿರುತ್ತಿದ್ದರು. ಸೈನ್ಯ ಮತ್ತು ಆಡಳಿತಸಿಬ್ಬಂದಿಯ ಖರ್ಚಿಗಾಗಿ ರಾಜರು ಹಲವು ಆದಾಯ ಮೂಲಗಳನ್ನು ಅವಲಂಬಿಸುತ್ತಿದ್ದರು. ರಾಜ್ಯವೆಲ್ಲ ರಾಜನಿಗೆ ಸೇರಿದ್ದೆಂಬ ಭಾವನೆಯಿದ್ದರೂ ಪ್ರಜೆಗಳಿಗೂ ಸ್ವಂತ ಆಸ್ತಿ, ಹಕ್ಕುಗಳು ಇರುತ್ತಿದ್ದುವು. ಇದನ್ನು ರಕ್ಷಿಸುವುದೂ ರಾಜನ ಮುಖ್ಯಕರ್ತವ್ಯಗಳಲ್ಲೊಂದಾಗಿತ್ತು. ತನ್ನ ಸ್ವಂತ ಭೂಮಿ, ಅರಣ್ಯ, ಖನಿಜ ಉತ್ಪನ್ನಗಳಿಂದ ಬರುವ ಆದಾಯ, ಜನರ ಭೂಮಿ ಮತ್ತು ಉತ್ಪನ್ನಗಳ ಮೇಲೆ ಮತ್ತು ವ್ಯಾಪಾರ ವಹಿವಾಟಿನ ಮೇಲೆ ಹೇರುವ ತೆರಿಗೆ ಮತ್ತು ಸ್ವಲ್ಪಮಟ್ಟಿಗೆ ದಂಡಯಾತ್ರೆ ಇತ್ಯಾದಿಗಳಿಂದ ಸಂಗ್ರಹಿಸಿದ ಧನ ಇವುಗಳು ಮಾತ್ರ ರಾಜನ ಆದಾಯ ಮೂಲಗಳಾಗಿದ್ದವು. ಈ ಮಾರ್ಗಗಳಿಂದ ಆದಾಯವನ್ನು ರೂಢಿಸಿಕೊಳ್ಳುವಾಗ ಸಹ ರಾಜನಿಗೆ ಕೆಲವು ಮಿತಿಗಳಿರುತ್ತಿದ್ದವು. ಉದಾಹರಣೆಗೆ ದೇವಸ್ವ, ಬ್ರಹ್ಮಸ್ವಗಳು ತೆರಿಗೆಗಳಿಂದ ಹೊರತಾಗಿರುತ್ತಿದ್ದುವು. ಪ್ರಜೆಗಳಿಂದ ಕರವನ್ನು ವಸೂಲಿ ಮಾಡುವಾಗಲೂ ಆತ 'ಮಾಲಾಕಾರನಂತಿರಬೇಕು, ಇಂಧನ ಕಾರನಂತಿರಬಾರದು' ಎಂದು ಶಾಸ್ತ್ರಗಳು ವಿಧಿಸುತ್ತವೆ. ಅಂದರೆ ಹೂವಾಡಿಗನಂತೆ ಗಿಡಗಳಿಗೆ ತೊಂದರೆಯಾಗದ ರೀತಿಯಲ್ಲಿ ಹೂಗಳನ್ನು ಸಂಗ್ರಹಿಸಿ ಸಂಪಾದಿಸಬೇಕೇ ಹೊರತು ಮರಗಳನ್ನು ತಂದು ಸುಟ್ಟು ಇದ್ದಲು ಮಾಡಿ ಸಂಪಾದಿಸಬಾರದು ಎಂಬುದು ದೃಷ್ಟಿ. ಬಹು ಕಾಲದವರೆಗೆ ಈ ರೀತಿಯ ನೀತಿಗಳು ಪರಿಪಾಲಿತವಾಗುತ್ತಿದ್ದವು. ಹೀಗೆ ಸಂಗ್ರಹಿತವಾದ ರಾಜ್ಯಕೋಶವನ್ನು ಮೇಲೆ ಹೇಳಿದ ಚತುರ್ವಿಧ ರಾಜಕರ್ತವ್ಯಗಳಿಗಲ್ಲದೆ, ದೀನಾನಾಥರ ಉದ್ಧಾರ, ವಿದ್ಯೆ, ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹ, ದೇವಾಲಯ ಕೆರೆ ಹಾದಿಗಳ ನಿರ್ಮಾಣ ಮೊದಲಾದ ಲೋಕೋಪಕಾರ ಉದ್ದಿಶ್ಯಗಳಿಗಾಗಿ ವಿನಿಯೋಗಿಸಬೇಕೆಂಬ ಭಾವನೆ ಇತ್ತು.

ಹೀಗೆ ಬಹುಮುಖ ಕಾರ್ಯಗಳನ್ನು ನೆರವೇರಿಸಲು ರಾಜ್ಯಕ್ಕೆ ಉತ್ತಮ ಆಡಳಿತವ್ಯವಸ್ಥೆಯ ಆವಶ್ಯಕತೆ ಇದ್ದು, ಅಂಥ ವ್ಯವಸ್ಥೆ ದೇಶ-ಕಾಲಕ್ಕೆ ಅನುಗುಣವಾಗಿ ರೂಪಿತವಾಗಿರುತ್ತಿದ್ದಿತು. ಆಡಳಿತಾಂಗದ ಗಾತ್ರ ರಾಜ್ಯವಿಸ್ತಾರವನ್ನು ಅವಲಂಬಿಸುತ್ತಿದ್ದಿತು. ಆಡಳಿತ ಸಾಮಾನ್ಯವಾಗಿ ಕೇಂದ್ರ, ಪ್ರಾದೇಶಿಕ ಮತ್ತು ಸ್ಥಳೀಯ- ಈ ಮೂರು ಘಟ್ಟಗಳಲ್ಲಿ ವ್ಯವಸ್ಥಿತವಾಗಿದ್ದಿತು. ಕೇಂದ್ರದಲ್ಲಿ ರಾಜನ ಜೊತೆಗೆ ಸಾಮಾನ್ಯವಾಗಿ ರಾಜ ಕುಟುಂಬದ ಇತರರೂ ಆಡಳಿತದಲ್ಲಿ ಭಾಗವಹಿಸುತ್ತಿದ್ದರು. ಬುದ್ಧಿವಂತರೂ ಪ್ರಾಮಾಣಿಕರೂ ಆದ ಮಂತ್ರಿಗಳು ಮತ್ತು ಇತರರು ರಾಜನಿಗೆ ಸಲಹೆ

ನೀಡುತ್ತಿದ್ದರು. ಸೈನ್ಯ, ಕಂದಾಯ, ಧರ್ಮ, ನ್ಯಾಯಪಾಲನೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅನೇಕ ಅಧಿಕಾರಿಗಳು ಇರುತ್ತಿದ್ದರು. ರಾಜ್ಯದ ಕೋಶ, ದಾಖಲೆಗಳು, ನಾಣ್ಯಮುದ್ರಣ ಅರಮನೆಯ ವ್ಯವಹಾರ ಇವಕ್ಕೂ ಬೇರೆ ಬೇರೆ ಅಧಿಕಾರಿಗಳು ಇರುತ್ತಿದ್ದರು.

ಪ್ರಾಂತ್ಯವಿಭಾಗಗಳಲ್ಲಿ ಸಾಮಾನ್ಯವಾಗಿ ರಾಜಪ್ರತಿನಿಧಿಗಳು ಇದ್ದು ಅವರು ಸಹ ಕೇಂದ್ರಾಡಳಿತ ವ್ಯವಸ್ಥೆಯಂತೆಯೇ ತಮ್ಮ ಆಡಳಿತವ್ಯವಸ್ಥೆಯನ್ನೂ ರೂಪಿಸಿಕೊಂಡಿರುತ್ತಿದ್ದರು. ಈ ಪ್ರಾಂತ್ಯಾಧಿಕಾರಿಗಳು ಸ್ವಂತ ಸೈನ್ಯವನ್ನು ಇಟ್ಟುಕೊಂಡಿರುತ್ತಿದ್ದರು. ಇವರಲ್ಲೂ ಮಂತ್ರಿ ಮತ್ತು ಇತರ ಅಧಿಕಾರಿಗಳ ಸಿಬ್ಬಂದಿ ಇರುತ್ತಿತ್ತು. ರಾಣಿಯರು, ರಾಜಕುಮಾರರು ಮತ್ತು ಇತರ ರಾಜ ಬಂಧುಗಳೂ ರಾಜನಿಗೆ ನಿಷ್ಠಾವಂತರಾಗಿದ್ದ ಸಮರ್ಥ ದಂಡನಾಯಕರೂ ಪ್ರಾಂತ್ಯದ ಅಧಿಕಾರಗಳನ್ನು ವಹಿಸಿಕೊಂಡಿರುತ್ತಿದ್ದರು. ಕೆಲವೆಡೆಗಳಲ್ಲಿ ಕೆಲವು ಮನೆತನಗಳವರು ವಂಶಪಾರಂಪರ್ಯವಾಗಿ ಅಧಿಕಾರವನ್ನು ಹೊಂದಿದ್ದು ಸಾರ್ವಭೌಮನ ಮಾಂಡಲೀಕರಾಗಿ ಆಡಳಿತ ನಿರ್ವಹಿಸುತ್ತಿದ್ದರು. ಇನ್ನೂ ಕೆಳದರ್ಜೆಯಲ್ಲಿ ಗ್ರಾಮ ಕೂಟಗಳಿದ್ದು ಅವುಗಳಿಗೂ ಪ್ರಾಂತ್ಯಾಧಿಕಾರಿಗಳ ಅಧೀನದಲ್ಲಿ ಇತರ ಅಧಿಕಾಗಳಿರುತ್ತಿದ್ದರು. ಈ ಅಧಿಕಾರಿಗಳು ಸ್ಥಳೀಯ ಜನರ ಯೋಗಕ್ಷೇಮವನ್ನೂ ಪ್ರಾಂತ್ಯ ವ್ಯವಹಾರಗಳನ್ನೂ ನೋಡಿಕೊಳ್ಳಬೇಕಾಗಿತ್ತಲ್ಲದೆ, ಕಾಲಕಾಲಕ್ಕೆ ತಮ್ಮ ಮೇಲಣ ಪ್ರಾಂತ್ಯಾಧಿಕಾರಿಗೆ ವಸೂಲಿ ಮಾಡಿದ ತೆರಿಗೆ ಒಪ್ಪಿಸಬೇಕಾಗಿತ್ತು. ಪ್ರಾಂತ್ಯಾಧಿಕಾರಿಗಳೂ ರಾಜನಿಗೆ ಕಪ್ಪ ಸಲ್ಲಿಸುತ್ತಿದ್ದರು. ಗ್ರಾಮ ನಗರಗಳಲ್ಲಿ ಪಟ್ಟಣಸ್ವಾಮಿ, ಗೌಡ ಇವರು ಮುಖ್ಯಾಧಿಕಾರಿಗಳಾಗಿರುತ್ತಿದ್ದರು. ಅಗ್ರಹಾರ ಗ್ರಾಮಗಳಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಪ್ರಜಾಪ್ರತಿನಿಧಿ ವ್ಯವಸ್ಥೆ ಮತ್ತು ಆಡಳಿತ ಇರುತ್ತಿತ್ತು (ನೋಡಿ: ಅಗ್ರಹಾರ).

ಮೇಲಿನವು ಆಡಳಿತ ವ್ಯವಸ್ಥೆಯ ಮೂಲಭೂತ ಅಂಶಗಳು ಮಾತ್ರ. ವಸ್ತುತಃ ಈ ವ್ಯವಸ್ಥೆಯೇ ಮುಂದುವರೆದುಕೊಂಡುಬಂದಿದ್ದರೂ ಪ್ರಾಂತ್ಯ ವಿಭಾಗಗಳ ರಚನೆ, ಅಧಿಕಾರಿಗಳ ನೇಮಕ, ಅವರ ಹಕ್ಕು, ಕರ್ತವ್ಯ ಇತ್ಯಾದಿಗಳು, ಹುದ್ದೆಗಳ ಸ್ಥಳಾಂತರಗಳು, ಆದಾಯ ಮೂಲಗಳು, ಕರಗಳ ರೀತಿಗಳು, ಸೈನ್ಯದ ವ್ಯವಸ್ಥೆ ಮೊದಲಾದ ಹಲವಾರು ವಿಷಯಗಳಲ್ಲಿ ಕಾಲಕಾಲಕ್ಕೆ ವ್ಯತ್ಯಾಸಗಳು ಆಗಿರುವುದು ಕಂಡುಬರುತ್ತದೆ. *

ಸ್ಥೂಲವಾಗಿ ಹೇಳುವುದಾದರೆ ಮೌರ್ಯರ ಕಾಲದಲ್ಲಿ ಪಾಟಲಿಪುತ್ರದಿಂದ ಆಳುತ್ತಿದ್ದ ರಾಜನ ಅಧೀನದಲ್ಲಿದ್ದ ಕರ್ನಾಟಕದ ಭಾಗವನ್ನು ಮೌರ್ಯರಾಜ್ಯದ ದಕ್ಷಿಣವಿಭಾಗದಲ್ಲಿದ್ದ ಒಬ್ಬ ರಾಜಪ್ರತಿನಿಧಿ ನೋಡಿಕೊಳ್ಳುತ್ತಿದ್ದನೆಂದು ತೋರುತ್ತದೆ. ಪ್ರಾಯಶಃ ಮಹಾಮಾತ್ರರೆಂಬ ಅಧಿಕಾರಿಗಳು, ಇಲ್ಲಿಯ ಅನೇಕ ಸ್ಥಳಗಳಲ್ಲಿದ್ದರು. ಸಾತವಾಹನರ ಕಾಲದಲ್ಲಿ ರಾಜ್ಯ ಆರ್ಥಿಕವಾಗಿ ಅಭಿವೃದ್ಧಿ ಸಾಧಿಸುತ್ತಿದ್ದುದರಿಂದ, ಆಡಳಿತಕ್ಕೆ ಆಹರಗಳೆಂಬ ಪ್ರಾಂತ್ಯಗಳಲ್ಲಿ ಮಹಾರಠಿ, ಮಹಾಭೋಜ ಮೊದಲಾದ ಪ್ರಾಂತ್ಯಾಧಿಕಾರಿಗಳು ಇರುತ್ತಿದ್ದರು. ಅಲ್ಲದೆ, ಮಹಾತಳವಾರ, ಭಾಂಡಾಗಾರಿಕ ಮೊದಲಾದ ಇತರ ಅಧಿಕಾರಿಗಳೂ ಇದ್ದರು. ಕದಂಬರ ಕಾಲದಲ್ಲಿ ಕರ್ನಾಟಕದಲ್ಲೇ ನೆಲೆಯುಳ್ಳ ರಾಜ್ಯ ಸ್ಥಾಪನೆಯಾಯಿತು. ನಾಡಿನಲ್ಲಿ ಅಂದು ಆಗುತ್ತಿದ್ದ ಆರ್ಥಿಕ ಪ್ರಗತಿಯಿಂದ ಹಾಗೂ ರಾಜ್ಯವಿಸ್ತಾರದಿಂದ ಆಡಳಿತ ಭಾರವೂ ಹೆಚ್ಚಾಗಿ ಹಲವಾರು ಪ್ರಾಂತ್ಯವಿಭಾಗಗಳು ರೂಪಿತವಾದುವು. ಇವು ರಾಷ್ಟ್ರ, ವಿಷಯ, ನಾಡುಗಳೆಂದು ವಿವಿಧರೀತಿಯವಾಗಿದ್ದವು. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಅಧಿಕಾರಿಗಳು ವಿವಿಧ ದರ್ಜೆಗಳಲ್ಲಿರುತ್ತಿದ್ದರು. ಬಾದಾಮಿಯ ಚಳುಕ್ಯ, ಗಂಗ ಮತ್ತು ರಾಷ್ಟ್ರಕೂಟ ಅರಸರ ಕಾಲದಲ್ಲಿ ಈ ರೀತಿಯ ಪ್ರಾಂತ್ಯ ವಿಭಾಗಗಳ ಹಾಗೂ ಅಲ್ಲಿದ್ದ ಅಧಿಕಾರಿಗಳ ಸಂಖ್ಯೆ ಇಮ್ಮಡಿ ಮೂರ್ಮಡಿಯಾದುವು. ದೊಡ್ಡಪ್ರಾಂತ್ಯವಿಭಾಗಗಳಿಗೆ ರಾಜಬಂಧುಗಳನ್ನು ಮುಖ್ಯಾಧಿಕಾರಿಗಳಾಗಿ ನೇಮಿಸುವ ಪರಿಪಾಠ ವಿಶೇಷವಾಗಿ ಬೆಳೆಯಿತು. ಸಣ್ಣ ವಿಭಾಗಗಳಲ್ಲಿ ಪ್ರಾಂತ್ಯಾಧಿಕಾರಿಗಳ ಅಧೀನದಲ್ಲಿ ಇತರರಿರುತ್ತಿದ್ದರು. ಈ ಕಾಲದಲ್ಲಿ ರಾಜ್ಯವಿಸ್ತರಣಾಕಾರ್ಯವೂ ಬಹುವಾಗಿ ನಡೆಯುತ್ತಿದ್ದುದರಿಂದ ಸೈನ್ಯದ ಗಾತ್ರವೂ ಬೆಳೆಯಬೇಕಾದುದರಿಂದ ಸಕಾಲದಲ್ಲಿ ಸೈನ್ಯ ಸಹಾಯವನ್ನು ಒದಗಿಸಬಲ್ಲ ಹಾಗೂ ಯುದ್ಧಗಳಲ್ಲಿ ಪಾಲ್ಗೊಳ್ಳಬಲ್ಲ ದಂಡನಾಯಕರ ಆವಶ್ಯಕತೆಯೂ ಬೆಳೆಯಿತು. ಹಿಂದಿನಿಂದ ಕೆಲವು ಸಣ್ಣ ವಿಭಾಗಗಳನ್ನು ವಂಶಪಾರಂಪರ್ಯವಾಗಿ ಆಳಿಕೊಂಡು ಬರುತ್ತಿದ್ದ ಸಾಮಂತ ವಂಶದವರಲ್ಲದೆ, ಇತರ ಸಮರ್ಥ ವ್ಯಕ್ತಿಗಳಿಗೂ ಅವಕಾಶ ಒದಗುತ್ತಿದ್ದಿತು. ಇಂಥವರು ಸಹ ವಿವಿಧ ಪ್ರಾಂತ್ಯಗಳ ಮೇಲೆ ಅಧಿಕಾರವನ್ನು ಹೊಂದುವ ಪರಿಪಾಠ ಬೆಳೆಯಿತು. ಅವರವರ ಪ್ರಾಂತ್ಯಾದಾಯವೇ ಸಾಮಂತರ, ದಂಡನಾಯಕರ ಜೀವನಾದಾಯವಾಗುವ ವ್ಯವಸ್ಥೆ ಬೆಳೆದು ಬಂದಿತು. ಕಲ್ಯಾಣದ ಚಾಳುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ಸಹ ಇದೇ ವ್ಯವಸ್ಥೆ ಮುಂದುವರಿದರೂ ಈ ಕಾಲದಲ್ಲಿ ಇಂಥ ಸಾಮಂತರ ಮತ್ತು ಅಧಿಕಾರಿಗಳ ಸಂಖ್ಯೆ ಮತ್ತಷ್ಟು ಹೆಚ್ಚಿತು. ಪ್ರಾಂತ್ಯವಿಭಾಗಗಳಲ್ಲದೆ ಕೆಲವು ದೊಡ್ಡ ಊರುಗಳಲ್ಲೂ ಇಂಥ ಅಧಿಕಾರಿಗಳನ್ನು ನಿಯಮಿಸುವುದೂ ರೂಢಿಯಲ್ಲಿತ್ತು.

14ನೆಯ ಶತಮಾನದ ಆದಿಭಾಗದಲ್ಲಿ ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳು ಕಾಣಿಸಿಕೊಂಡವು. ಆ ಕಾಲದಲ್ಲಿ ಮುಸಲ್ಮಾನರ ದಾಳಿಗಳಿಂದ ದೇಶ ಅನುಭವಿಸುತ್ತಿದ್ದ ತೊಂದರೆಯನ್ನು ನಿವಾರಿಸಿಕೊಳ್ಳುವ ಮತ್ತು ಅವರ ಅಗಾಧ ಬಲಕ್ಕೆ ಸರಿಸಮವಾಗಿ ಈ ರಾಜ್ಯದ ಕೋಶ ಮತ್ತು ಸೈನ್ಯವನ್ನು ಬಲಪಡಿಸುವ ಆವಶ್ಯಕತೆ ಒದಗಿದ್ದು ಇದಕ್ಕೆ ಮುಖ್ಯ ಕಾರಣ. ಆ ಸಂದರ್ಭದಲ್ಲಿ ವಂಶಪಾರಂಪರ್ಯವಾಗಿ ಆಳಿಕೊಂಡುಬರುತ್ತಿದ್ದ ಹಲವು ಸಾಮಂತ ಮನೆತನಗಳವರ ಸ್ವಾತಂತ್ರ್ಯ ಹಾಗೂ ರಾಜಕೀಯ ಶಕ್ತಿ ಹೆಚ್ಚಿದ್ದು ಸಾರ್ವಭೌಮನ ಅಧಿಕಾರವನ್ನೇ ಕುಂಠಿತಗೊಳಿಸುವ ಪರಿಸ್ಥಿತಿಯೂ ಆಗಾಗ್ಗೆ ಸಂಭವಿಸುತ್ತಿತ್ತು. ಹೊರಗಿನಿಂದ ಹೆಚ್ಚಿನ ತೊಂದರೆಗಳಿಲ್ಲದಿದ್ದ ಹಿಂದಿನ ಕಾಲದಲ್ಲಿ ಅಂಥವರನ್ನು ಬಗ್ಗುಬಡಿಯುವ ಕಾರ್ಯವನ್ನು ಸಾರ್ವಭೌಮರು ಸಾಧಿಸಿಕೊಳ್ಳಬಹುದಾಗಿತ್ತು. ಆದರೆ ಈ ಹೊಸ ಪರಿಸ್ಥಿತಿಯಲ್ಲಿ ಸಾರ್ವಭೌಮನ ಶಕ್ತಿಯನ್ನು ಇದಕ್ಕೆ ವ್ಯಯಮಾಡುವುದು ಆತ್ಮಘಾತಕ ವಾಗುತ್ತಿದ್ದುದರಿಂದಲೋ ಏನೋ ಹೊಯ್ಸಳ 3ನೆಯ ಬಲ್ಲಾಳನ ಕಾಲದಲ್ಲಿ ಹಿಂದಿನ ಸಾಮಂತರಾಜವಂಶಗಳ ಅಧಿಕಾರ ಕ್ರಮೇಣ ಕುಂಠಿತವಾಯಿತು. ಹೆಚ್ಚಿನ ಹಳೆಯ ಸಾಮಂತ ಕುಲಗಳು ಪದಚ್ಯುತವಾದವು. ಅದರ ಬದಲು ರಾಜನೇ ಅನೇಕ ವಿಭಾಗಗಳಿಗೆ ಸಮರ್ಥ ದಂಡನಾಯಕರನ್ನು ತನ್ನ ಪ್ರತಿನಿಧಿಯಾಗಿ ನೇಮಿಸುವುದೂ ಅಧಿಕಾರಿಗಳನ್ನು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ವರ್ಗಾಯಿಸುವುದೂ ಸಾಮಾನ್ಯವಾಯಿತು. ವಿಜಯನಗರದ ಅರಸರು ಸುಮಾರು ಇದೇ ಪದ್ಧತಿಯನ್ನೇ ಮುಂದುವರಿಸಿದರು. ಈ ಕಾಲದಲ್ಲಿ ರಾಜ್ಯವೂ ಬಹುವಿಸ್ತಾರವಾದ್ದರಿಂದ ಪ್ರಾಂತ್ಯಗಳು ಬಹುಮಟ್ಟಿಗೆ ಪುನರ್ವಿಂಗಡಿತವಾದುವು. ಆಡಳಿತ ವಿಭಾಗಗಳಲ್ಲಿ ರಾಜ್ಯ, ಮಂಡಳ, ಸೀಮೆ- ಈ ರೀತಿಯ ಹೊಸ ಹೊಸ ಹೆಸರುಗಳು ಕಾಣಿಸಿಕೊಂಡವು. ವಿಜಯನಗರದ ಅರಸರು ತಮ್ಮ ಆಳ್ವಿಕೆಯ ಒಂದು ಘಟ್ಟದಲ್ಲಿ ಕೆಲವು ವಿಭಾಗಗಳಲ್ಲಿ ಒಂದೊಂದು ವಂಶದವರನ್ನೇ ಪ್ರತಿಷ್ಠಾಪಿಸುವ ಕ್ರಮವನ್ನು ಕೈಗೊಂಡರು. ಹೀಗೆ ಸ್ಥಾಪಿಸಿದವರೇ ಮುಂದೆ ಅನೇಕ ಪಾಳೆಯಗಾರ ಮನೆತನಗಳಾಗಿ ಚಿಕ್ಕಚಿಕ್ಕ ರಾಜ್ಯಘಟಕಗಳ ನಾಯಕರಾಗಿ ರೂಪುಗೊಂಡರು.

ಅತ್ತ ಉತ್ತರ ಕರ್ನಾಟಕದ ಭಾಗದಲ್ಲಿ ಬಹಮನೀ ಆಳ್ವಿಕೆ ಪ್ರಾರಂಭವಾದಾರಭ್ಯ ಅಲ್ಲಿನ ಆಡಳಿತ ವ್ಯವಸ್ಥೆಯೂ ಮಾರ್ಪಾಡಾಯಿತು. ಹಿಂದಿನ ಯಾವ ಆನುವಂಶಿಕ ಸಾಮಂತರೂ ಮುಂದುವರೆಯಲಿಲ್ಲ. ಅಷ್ಟೇ ಅಲ್ಲದೆ ಪರಗಣೆ, ಸಮ್ಮತ್, ತರಫ್, ಮೌಜೆ, ಮಜರೆ ಇತ್ಯಾದಿ ಹೊಸ ಪ್ರಾಂತ್ಯ ವಿಭಾಗಗಳು ರಚಿತವಾಗಿ ಅವುಗಳಿಗೆ ಮುಖ್ಯಾಧಿಕಾರಿಗಳಾಗಿ ಹೆಚ್ಚಿನಮಟ್ಟಿಗೆ ರಾಜಬಂಧುಗಳನ್ನೋ ಇತರ ಮುಸಲ್ಮಾನ ಪ್ರಮುಖರನ್ನೋ ನಿಯಮಿಸುವುದು ರೂಢಿಯಾಯಿತು. ಅವರ ಆಡಳಿತ ಚೌಕಟ್ಟು ದೆಹಲಿಯ ಸುಲ್ತಾನರ ಮಾದರಿಯಲ್ಲಿ ರೂಪಿತವಾಗಿತ್ತು. ಮುಂದೆ ಆಳಿದ ಆದಿಲ್ ಶಾಹೀ ಅರಸರೂ ಬಹಮನೀ ವ್ಯವಸ್ಥೆಯನ್ನೇ ಅಳವಡಿಸಿಕೊಂಡಿದ್ದರು.

ಈ ರೀತಿಯ ಹಲವು ಬದಲಾವಣೆಗಳ ಪರಿಣಾಮ ಹೆಚ್ಚಿನ ಮಟ್ಟಿಗೆ ಪ್ರಾಂತ್ಯಾಡಳಿತ ವ್ಯವಸ್ಥೆಗಷ್ಟೇ ಸೀಮಿತವಾಗಿದ್ದಂತೆ ತೋರುತ್ತದೆ. ಏಕರಾಜಪ್ರಭುತ್ವದ ರೂಪರೇಷೆಗಳು ಮತ್ತು ಅದಕ್ಕೆ ಸಂಬಂಧಿಸಿದ ಕೇಂದ್ರ ಆಡಳಿತ ರೀತಿಗಳು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿದ್ದುವು. ಸ್ಥಳೀಯ ಆಡಳಿತ ಸಹ ಹೆಚ್ಚಿನ ಬದಲಾವಣೆಗೆ ಒಳಗಾಗಲಿಲ್ಲ. ಆದರೆ ಹಳೆಯ ಅಗ್ರಹಾರಗಳಲ್ಲಿದ್ದ ಪ್ರಜಾಪ್ರತಿನಿಧಿ ರೀತಿಯ ಆಡಳಿತವೂ ಸು.14ನೆಯ ಶತಮಾನದ ಅನಂತರ ಮರೆಯಾಗಿ ಅಂಥ ಊರುಗಳಲ್ಲೂ ಒಬ್ಬ ಆಡಳಿತಾಧಿಕಾರಿಯೇ ಮುಖ್ಯಸ್ಥನಾಗಿ ನೇಮಕವಾಗುತ್ತಿದ್ದಂತೆ ತೋರುತ್ತದೆ.

17ನೆಯ ಶತಮಾನದವರೆಗಿನ ಆಡಳಿತ ವ್ಯವಸ್ಥೆಯಲ್ಲಿ ಇದ್ದ ವಿವಿಧ ಸಿಬ್ಬಂದಿಯವರ ಅಧಿಕಾರ ವ್ಯಾಪ್ತಿ ಮತ್ತು ಕರ್ತವ್ಯಗಳು ಏನು

ಎಂಬುದು ಖಚಿತವಾಗಿ ತಿಳಿಯುವುದು ಕಷ್ಟ. ಹೆಸರುಗಳ ಆಧಾರದಿಂದ ಮಾತ್ರ ಸ್ವಲ್ಪಮಟ್ಟಿಗೆ ಊಹಿಸಬಹುದು. ಕದಂಬರ ಕಾಲದಲ್ಲಿ ಸೇನಾಪತಿ, ದೇಶ ಮತ್ತು ಗ್ರಾಮಗಳ ಭೋಜ, ಭೋಜಕ, ಆಯುಕ್ತಕ ಈ ಅಧಿಕಾರಿಗಳಿದ್ದ ಬಗ್ಗೆ ಶಾಸನೋಲ್ಲೇಖಗಳಿವೆ. ಬಾದಾಮಿಯ ಚಳುಕ್ಯರ ಕಾಲದಲ್ಲಿ ವಿಷಯಪತಿ, ವಿಷಯಾಧಿಪತಿ, ಸಾಮಂತ, ಗ್ರಾಮಭೋಗಿಕ, ಮಹತ್ತರ, ದೇಶಾಧಿಪತಿ, ನಗರ ಮಹಲ್ಲಕ, ರಾಜಪುರುಷ, ಮಹಾಸಂಧಿವಿಗ್ರಹಿ, ಮಹಾಕ್ಷಪಟಲಾಧಿಕೃತ, ಗಾವುಂಡ, ಕರಣ ಮೊದಲಾದವರಿದ್ದರು. ವಿಷಯಪತಿ, ಭೋಗಪತಿ, ರಾಷ್ಟ್ರಪತಿ, ದಂಡನಾಯಕ, ಮಹಾಸಂಧಿ ವಿಗ್ರಹಿಕ, ನಾಳ್ಗಾವುಂಡ, ಗಾವುಂಡ ಮೊದಲಾದವರು ರಾಷ್ಟ್ರಕೂಟರ ಕಾಲದಲ್ಲಿದ್ದರು. ಚಾಳುಕ್ಯ, ಹೊಯ್ಸಳರ ಕಾಲದಲ್ಲಿ ಪ್ರಧಾನ, ಮನೆವೆರ್ಗ್ಗಡೆ, ತಂತ್ರಪಾಲ, ತಂತ್ರಸೇನಬೋವ, ಹಡಪದ, ತಂತ್ರಪಾಳದಧಿಷ್ಠಾಯಕ, ಹೇರಿಲಾಳ, ಕನ್ನಡ ಸಂಧಿವಿಗ್ರಹಿ, ಸಂಧಿವಿಗ್ರಹಿ, ವಡ್ಡರಾವುಳದಧಿಕಾರಿ, ಭಂಡಾರಿ, ಅಧ್ಯಕ್ಷ, ಸರ್ವಾಧ್ಯಕ್ಷ, ಅಂತಃಪುರವೆರ್ಗ್ಗಡೆ, ಬಾಹತ್ತರ ನಿಯೋಗಾಧಿಪತಿ, ಪಟ್ಟಸಾಹಣಿ, ಪಟ್ಟಸಾಹಣಾದಿಷ್ಠಾಯಕ, ಅಚ್ಚುಪನ್ನಾಯದಧಿಷ್ಠಾಯಕ, ಪಡಿಹಾರ, ಚೋಳಾಯ್ತ, ಶ್ರೀಕರಣಾಧಿಕಾರಿ, ಹೆಗ್ಗಡೆ, ಗಾವುಂಡ, ಮಹಾಪಸಾಯಿತ, ಸೇನಬೋವ, ಸಾಹಣಿ, ಮಾವಂತ ಮೊದಲಾದವರಿದ್ದರು. ದಂಡನಾಯಕ, ದಳವಾಯಿ, ಮಾಗಣೆಗಾರ, ಮಹಾನಾಯಕಾಚಾರ್ಯ, ಪ್ರಧಾನಿ, ಗ್ರಾಮಹೆಬ್ಬಾರುವ, ಪ್ರಭು, ಒಡೆಯ, ಮೂಲಿಗ ಮೊದಲಾದ ಅಧಿಕಾರಿಗಳು ವಿಜಯನಗರ ರಾಜ್ಯದಲ್ಲಿದ್ದರು. ಬಹಮನೀ ಆದಿಲ್‌ಶಾಹೀ ಅರಸರ ಕಾಲದಲ್ಲಿ ಮಜ್ಲಿಸ್-ಇ-ಖಿಲ್ವಾತ್ ಎಂಬ ಕೇಂದ್ರ ಸಲಹೆಗಾರಮಂಡಳಿ, ವಕೀಲ್-ಇ-ಸುಲ್ತಾನ್, ಅಮೀರ್-ಇ-ಜುಮ್ಲಾ, ಮಸ್ತಾಫಿ-ಅಲ್-ಮುಲ್ಕ್, ಪೇಶ್ವ, ತರಫ್‌ದಾರ್, ಜಾಗೀರ್‌ದಾರ್, ಸುಬೇದಾರ್, ಸರ್‌ಹವಾಲ್ದಾರ್, ಹವಾಲ್ದಾರ್, ಖಾಜಿ, ಕೊತ್ವಾಲ, ದೇಶಮುಖ್, ದೇಸಾಯಿ, ಪಾಟೀಲ, ಕುಲಕರ್ಣಿ ಮುಂತಾದ ವಿವಿಧ ದರ್ಜೆಯ ಅಧಿಕಾರಿಗಳಿದ್ದರು. ಕೆಳದಿಯ ಅರಸರು ವಿಜಯನಗರದ ಆಡಳಿತ ವ್ಯವಸ್ಥೆಯನ್ನು ರೂಢಿಸಿಕೊಂಡಿದ್ದರು. ಆದರೆ ಈ ವಂಶದ ಶಿವಪ್ಪ ನಾಯಕ ರಾಜ್ಯದಲ್ಲಿದ್ದ ಭೂಮಿಯನ್ನೆಲ್ಲಾ ಹೊಸದಾಗಿ ಅಳತೆಮಾಡಿಸಿ, ಭೂಮಿಯ ವೈವಿಧ್ಯವನ್ನು ಶಾಸ್ತ್ರೀಯವಾಗಿ ಗುರುತಿಸಿ ಅವುಗಳಿಂದ ಬರುವ ಉತ್ಪನ್ನಗಳ ಮೌಲ್ಯವನ್ನು ನಿರ್ಧರಿಸಿ ಅವಕ್ಕೆ ಸೂಕ್ತವಾದ ಕಂದಾಯ ನಿಷ್ಕರ್ಷೆ ಮಾಡಿದ. ಶಿವಪ್ಪನಾಯಕನ ಶಿಸ್ತು ಎಂದು ಪ್ರಸಿದ್ಧವಾದ ವ್ಯವಸ್ಥೆ ಬ್ರಿಟಿಷರ ಕಾಲದವರೆಗೂ ಮುಂದುವರಿಯಿತು. **(ಜಿ.ಆರ್.ಪಿ.)**

17ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಮೊಗಲರ ಸಂಪರ್ಕ ಒದಗಿ ಬಂದಾಗಿನಿಂದ ಈ ನಾಡಿನ ಅರಸರು ಮೊಗಲ್ ರಾಜ್ಯಭಾರಕ್ರಮವನ್ನು ಅನುಸರಿಸುವ ಪ್ರವೃತ್ತಿಯನ್ನು ತೋರಿದರು. ಉತ್ತರ ಕರ್ನಾಟಕದ ಭಾಗದಲ್ಲಿ ಆಳ್ವಿಕೆ ನಡೆಸಿದ ಆಸಫ್‌ಜ್ಞಾಹೀಗಳು ಸಾದತ್-ಉಲ್-ಮಹಾಂ ಎಂಬ ನಾಲ್ಕು ಇಲಾಖೆಗಳುಳ್ಳ ಆಡಳಿತ ವ್ಯವಸ್ಥೆಯನ್ನು ರೂಪಿಸಿದರು. ಅವು ಕಂದಾಯ, ಪೊಲೀಸು, ನ್ಯಾಯ ಮತ್ತು ಸಂಕೀರ್ಣ ಇಲಾಖೆಗಳು. ಒಬ್ಬೊಬ್ಬ ವಜೀರ ಇವಕ್ಕೆ ಮುಖ್ಯಸ್ಥ. ದೇಶ ಸುಬಾಗಳಾಗಿ ವಿಭಾಗಿತವಾಗಿ ಸುಬೇದಾರರ ಅಧೀನದಲ್ಲಿದ್ದುವು. ಅದರ ಉಪವಿಭಾಗಗಳಾದ ತಾಲ್ಲೂಕುಗಳಲ್ಲಿ (ತಹಸೀಲ್) ತಾಲ್ಲೂಕುದಾರರು (ತಹಸೀಲ್ದಾರ್) ಇರುತ್ತಿದ್ದರು. ಪೇಷ್ಕಾರ್, ಗಿರ್ದಾವಾರ್, ಪಾಟೀಲ, ಪಟವಾರಿ, ಕುಲಕರ್ಣಿ ಎಂಬುವರು ಇತರ ದರ್ಜೆಯ ಅಧಿಕಾರಿಗಳು. ನಾಜಿಂ-ಇ-ದಿವಾನಿ, ನಾಜಿಂ-ಇ-ಸುಬಾ ಮೊದಲಾದವರು ನ್ಯಾಯಾಧಿಕಾರಿಗಳು. ಹಿಂದೆ ಅಧಿಕಾರಿಗಳಿಗೆ ಇನಾಂಗಳನ್ನು ನೀಡುತ್ತಿದ್ದ ಪದ್ಧತಿಯನ್ನು ತಪ್ಪಿಸಿ ಅದರ ಬದಲು ಸಂಬಳವನ್ನು ನಿಷ್ಕರ್ಷೆ ಮಾಡಿದ್ದು ಈ ಕಾಲದಲ್ಲಾದ ಮುಖ್ಯ ಬದಲಾವಣೆ. ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿ ಈ ವ್ಯವಸ್ಥೆ ಆ ರಾಜ್ಯ ಭಾರತ ಒಕ್ಕೂಟದಲ್ಲಿ ವಿಲೀನವಾಗುವವರೆಗೂ ಮುಂದುವರೆದು ಕೊಂಡು ಬಂತು. ಈ ವ್ಯವಸ್ಥೆಯ ತುಣುಕುಗಳು ಇಂದಿಗೂ ಈ ಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಕಾಣಿಸಿಕೊಳ್ಳುತ್ತವೆ.

ಮೈಸೂರು ಒಡೆಯರ ಕಾಲದ ಪ್ರಾರಂಭದಲ್ಲಿ ವಿಜಯನಗರದ ವ್ಯವಸ್ಥೆಯೇ ಮುಂದುವರಿದಿತ್ತು. ಆದರೆ ಚಿಕ್ಕದೇವರಾಜನ ಆಳ್ವಿಕೆಯಲ್ಲಿ ಸ್ಥಳೀಯ ಆವಶ್ಯಕತೆಗಳಿಗೆ ಅನುಗುಣವಾಗಿ ಸ್ವಲ್ಪಮಟ್ಟಿನ ವ್ಯತ್ಯಾಸಗಳೊಡನೆ ಮೊಗಲ ರೀತಿಯ ವ್ಯವಸ್ಥೆ ರೂಢಿಗೆ ಬಂತು. ಕೇಂದ್ರಾಡಳಿತದಲ್ಲಿ ನಿರೂಪಚಾವಡಿ, ಆಯಕಟ್ಟುಚಾವಡಿ, ಸುಂಕದಚಾವಡಿ ಮುಂತಾದ ಹದಿನೆಂಟು ಇಲಾಖೆಗಳು ಸ್ಥಾಪಿತವಾದುವು. ಪ್ರತಿಯೊಂದು ಚಾವಡಿಗೂ ಭಕ್ಷಿ, ದರೋಗ, ದಫ್ತರಗಳಿರುತ್ತಿದ್ದರು. ರಾಜ್ಯ ಹೋಬಳಿಗಳಾಗಿ ವಿಭಾಗಿತವಾಗಿತ್ತು. ಅವುಗಳಿಗೆ ದಿವಾನ ಮತ್ತು ದಫ್ತರಗಳು ಇರುತ್ತಿದ್ದರು. ಸೈನ್ಯದಲ್ಲಿ ದಳವಾಯಿಗಳಿರುತ್ತಿದ್ದರು. ಮುಂದೆ ಈ ದಳವಾಯಿಗಳೇ ಸರ್ವಾಧಿಕಾರಿಗಳಾಗಿ ರಾಜ್ಯವ್ಯವಹಾರಗಳ ಮುಖ್ಯಾಧಿಕಾರಿಗಳಾಗಿ ರೂಪುಗೊಂಡರು. ಹೈದರ್‌ಅಲಿ ಹಿಂದೆ ಜಾರಿಯಲ್ಲಿದ್ದ ರೀತಿಗಳನ್ನೇ ಮುಂದುವರಿಸಿದ. ಟಿಪ್ಪುಸುಲ್ತಾನನ ಕಾಲದಲ್ಲಿ ಹಲವು ಬದಲಾವಣೆಗಳಾಗಿ ಕೇಂದ್ರದಲ್ಲಿದ್ದ ಇಲಾಖೆಗಳ ಸಂಖ್ಯೆ 7ಕ್ಕೆ ಇಳಿಯಿತು. ಅವನ ಕಾಲದಲ್ಲಿ ಆಸೀಫ್‌ಗಳೆಂಬ ಪ್ರಾಂತ್ಯಾಧಿಕಾರಿಗಳಿದ್ದರು. ರಾಜ್ಯ ನಾಲ್ಕು ಸುಬಾಗಳಾಗಿ, ಪ್ರತಿ ಸುಬಾಕ್ಕೂ ಸುಬೇದಾರರು ಮುಖ್ಯಸ್ಥರಾಗಿ ನೇಮಿತರಾದರು. ತಾಲ್ಲೂಕುಗಳು ಉಪವಿಭಾಗಗಳಾಗಿದ್ದವು. ಅಮಲ್ದಾರರು ಅವುಗಳ ಮುಖ್ಯಾಧಿಕಾರಿಗಳು. ಹಿಂದಿನ ವ್ಯವಸ್ಥೆಯಲ್ಲಿದ್ದ ಹಲವಾರು ಹುದ್ದೆಗಳಿಗೆ ಪಾರಸೀ ಹೆಸರುಗಳು ಬಂದವು.

1799ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯ ಬಂದ ಸಂದರ್ಭದಲ್ಲಿ ಬ್ರಿಟಿಷ್ ಮುತ್ಸದ್ದಿಗಳ ನೆರವಿನಿಂದ ಹೊಸರೀತಿಯ ವ್ಯವಸ್ಥೆಗಳು ಬಂದುವು. ರಾಜ್ಯದ ಆಂತರಿಕ ಆಡಳಿತವನ್ನು ನೋಡಿಕೊಳ್ಳಲು ವ್ಯವಸ್ಥೆಯ ಮುಖ್ಯಸ್ಥನಾಗಿ ದಿವಾನಹುದ್ದೆ ರಚಿತವಾಯಿತು. ಬಾಹ್ಯವ್ಯವಹಾರಗಳು ಹೆಚ್ಚುಮಟ್ಟಿಗೆ ಬ್ರಿಟಿಷ್ ರೆಸಿಡೆಂಟನ ವಶದಲ್ಲಿದ್ದುವು. ಪ್ರಾಂತ್ಯಾಡಳಿತ ಇತ್ಯಾದಿಗಳಲ್ಲಿ ಹಿಂದಿದ್ದ ರೀತಿಯೇ ಅನುಷ್ಠಾನದಲ್ಲಿತ್ತು. ಆದರೆ 1831ರಲ್ಲಿ ಬ್ರಿಟಿಷರು ಮೈಸೂರು ಸಂಸ್ಥಾನದ ಆಳ್ವಿಕೆಯನ್ನು ನೇರವಾಗಿ ವಹಿಸಿಕೊಂಡಾಗ ಆಡಳಿತದಲ್ಲಿ ಮಹತ್ತರ ಬದಲಾವಣೆಗಳಾದುವು. ದಿವಾನರ ಅಧಿಕಾರವೂ ಕುಂಠಿತವಾಗಿ ಬ್ರಿಟಿಷ್ ಕಮಿಷನರ್ ವಸ್ತುತಃ ಸರ್ವಾಧಿಕಾರಿಯಾದ. ಆಡಳಿತದಲ್ಲಿ ಬ್ರಿಟಿಷ್ ಪದ್ಧತಿಯನ್ನು ಕ್ರಮೇಣರೂಢಿಗೆ ತರಲಾಯಿತು. 1832 ಜೂನ್ 1ರಿಂದ ಸರ್ಕಾರದ ಎಲ್ಲಾ ಲೆಕ್ಕಾಚಾರಗಳೂ ವ್ಯವಹಾರಗಳೂ ಈಗಿರುವ ಇಂಗ್ಲಿಷ್ ಪಂಚಾಂಗದ (ಗ್ರೆಗೋರಿಯನ್) ರೀತ್ಯಾ ನಡೆಯುವ ಏರ್ಪಾಡಾಯಿತು. 1833ರಲ್ಲಿ ಮೈಸೂರು ಸಂಸ್ಥಾನ 5 ವಿಭಾಗಗಳಾಗಿ ವಿಂಗಡವಾಗಿ ಪ್ರತಿವಿಭಾಗವೂ ಒಬ್ಬ ಯೂರೋಪಿಯನ್ ಸೂಪರಿಂಟೆಂಡೆಂಟನ ಆಡಳಿತಕ್ಕೊಳಪಟ್ಟಿತು. ಸಿವಿಲ್, ಕ್ರಿಮಿನಲ್ ಎಂದು ಕಾರ್ಯ ವ್ಯಾಪ್ತಿಯನ್ನು ನಿಷ್ಕರ್ಷಿಸಲಾಯಿತು. 1843ರಲ್ಲಿ ಹಲವಾರು ಇಲಾಖೆಗಳು ಸ್ಥಾಪಿತವಾದುವು. ತಾಲ್ಲೂಕುಗಳು ಪುನರ್ವಿಭಾಗಿತವಾದುವು. 1862-70ರಲ್ಲಿ ಕಮಿಷನರ್ ಆಗಿದ್ದ ಬೌರಿಂಗ್‌ನ ಕಾಲದಲ್ಲಿ ಆದ ಸುಧಾರಣೆಗಳು ಸರ್ಕಾರಕ್ಕೆ ಆಧುನಿಕ ಬಣ್ಣವನ್ನು ಕೊಟ್ಟವು. 8 ಜಿಲ್ಲೆಗಳ ಸೃಷ್ಟಿಯಾಯಿತು. ಡೆಪ್ಯುಟಿ ಕಮಿಷನರ್‌ಗಳು ಮುಖ್ಯಾಧಿಕಾರಿಗಳಾದರು. ಪೊಲೀಸ್, ಕಂದಾಯ, ದಾಖಲಾತಿ (ರಿಜಿಸ್ಟ್ರೇಷನ್), ಮೋಜಣಿ (ಸರ್ವೆ ಸೆಟ್ಲಮೆಂಟ್) ಮೊದಲಾದ ಇಲಾಖೆಗಳು ಸ್ಥಾಪಿತವಾಗಿ ಪ್ರತಿ ಇಲಾಖೆಯೂ ಒಬ್ಬ ಕಮಿಷನರ್‌ನ ಅಧೀನಕ್ಕೆ ಬಂತು. ಪ್ರಪ್ರಥಮವಾಗಿ 1862ರಲ್ಲಿ ಪ್ರಜಾಪ್ರತಿನಿಧಿಗಳನ್ನೊಳಗೊಂಡ ಬೆಂಗಳೂರು ಮತ್ತು ಮೈಸೂರು ಪೌರಸಮಿತಿಗಳ ರಚನೆಯಾಯಿತು. 1871ರಲ್ಲಿ ಹಲವು ತಾಲ್ಲೂಕುಗಳನ್ನೊಳಗೊಂಡ ಸಬ್‌ಡಿವಿಷನ್‌ಗಳು ರೂಪಿತವಾಗಿ ಅವಕ್ಕೆ ಅಸಿಸ್ಟೆಂಟ್ ಕಮಿಷನರ್‌ಗಳು ನೇಮಕವಾದರು. ಸುಮಾರು ಅಂದಿನಿಂದ ಇಂದಿನವರೆಗೂ ಇದೇ ವ್ಯವಸ್ಥೆ ಮುಂದುವರಿದುಕೊಂಡು ಬಂದಿದೆ.

ಬಹುಮಟ್ಟಿಗೆ ಬ್ರಿಟಿಷರಿಂದ ರೂಪಿತವಾದ ಈ ಆಡಳಿತ ವ್ಯವಸ್ಥೆ ಅವರು ನೇರವಾಗಿ ಆಡಳಿತ ನಡೆಸುತ್ತಿದ್ದ ಮದರಾಸು ಮತ್ತು ಮುಂಬಯಿ ಪ್ರಾಂತ್ಯಗಳಲ್ಲೂ 19ನೆಯ ಶತಮಾನದಲ್ಲಿ ಜಾರಿಗೆ ತರಲ್ಪಟ್ಟಿದ್ದು ಆ ಪ್ರಾಂತ್ಯಗಳಿಗೆ ಸೇರಿದ್ದ ಕರ್ನಾಟಕದ ಭಾಗಗಳಲ್ಲೂ ಪ್ರಚಲಿತವಾಗಿದ್ದವು. **(ಎ.ವಿ.ವಿ.)**

1881ರಲ್ಲಿ ಮೈಸೂರು ಸಂಸ್ಥಾನದ ಆಡಳಿತ ಪುನಃ ಇಲ್ಲಿನ ರಾಜವಂಶದವರ ಕೈಗೆ ಬಂದಮೇಲೆ ಮತ್ತೆ ಪ್ರಬಲವಾದ ದಿವಾನರ ಹುದ್ದೆ ರಚಿತವಾಯಿತು. ದಿವಾನರು ಆಡಳಿತದ ಮುಖ್ಯ ಸೂತ್ರಧಾರರಾಗಿದ್ದ ಈ ಕಾಲದಲ್ಲಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳು ಆಡಳಿತ ವ್ಯವಸ್ಥೆಯಲ್ಲಿ ಆಗಾಗ್ಗೆ ಕಾಣಿಸಿಕೊಂಡವು. ಆದರೆ ಈ ಕಾಲದಲ್ಲಾದ ಒಂದು ಬಹುಮುಖ್ಯ ಚಟುವಟಿಕೆಯೆಂದರೆ ಆಡಳಿತದ ಹಲವು ಹಂತಗಳಲ್ಲಿ ಪ್ರಜಾಪ್ರಭುತ್ವ ತತ್ತ್ವಗಳ ಅಳವಡಿಕೆ. ಇಡೀ ಭಾರತದಲ್ಲಿಯೇ ಪ್ರಥಮವಾದ, ಪ್ರಜಾಪ್ರತಿನಿಧಿ ಸಭೆ 1881ರಲ್ಲಿ ಮೈಸೂರಿನಲ್ಲಿ ಅಸ್ತಿತ್ವಕ್ಕೆ ಬಂತು. ಈ ಸಭೆಗೆ ಶಾಸನಗಳನ್ನು ಮಾಡುವ ಮತ್ತು ನಿರ್ಣಾಯಕ ತೀರ್ಮಾನಗಳನ್ನು ಕೈಕೊಳ್ಳುವ ಅಧಿಕಾರವಿಲ್ಲದಿದ್ದರೂ ಆಡಳಿತವನ್ನು ವಿಮರ್ಶಿಸುವ ಮತ್ತು ಸಲಹೆಗಳನ್ನು

ನೀಡುವ ಕರ್ತವ್ಯವಿತ್ತು. ಪ್ರಜೆಗಳ ಧ್ವನಿಗೆ ಒಂದು ರಂಗ ರೂಪಿತವಾದುದು ಅಂದಿನ ಸ್ಥಿತಿಯಲ್ಲಿ ಮಹತ್ತರ ವಿಷಯ. 1907ರಲ್ಲಿ ಮೈಸೂರು ನ್ಯಾಯ ವಿಧಾಯಕ ಸಭೆ ರೂಪಿತವಾಯಿತು. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ ಪ್ರತಿನಿಧಿಸಭೆ ವ್ಯವಸ್ಥೆಯ ರೂಢಿಯ ನಾಂದಿಯಾಗಿ ಪುರಸಭೆ, ತಾಲ್ಲೂಕುಮಂಡಳಿ, ಜಿಲ್ಲಾಮಂಡಳಿ ಇವುಗಳಲ್ಲಿ ಚುನಾಯಿತ ಸದಸ್ಯರುಗಳೇ ಹೆಚ್ಚು ಸಂಖ್ಯೆಯಲ್ಲಿರುವಂತೆ ಮಾಡಲಾಯಿತು. 1921ರ ಹೊತ್ತಿಗೆ ಜವಾಬ್ದಾರಿ ಸರ್ಕಾರದ ರಚನೆಯ ವಿಚಾರಗಳು ಕಾಣಿಸಿಕೊಂಡವು. 1923ರಲ್ಲಿ ಪ್ರಜಾಪ್ರತಿನಿಧಿ ಸಭೆ ಶಾಸನಬದ್ಧ ಸಂಸ್ಥೆಯಾಯಿತು. ಸಾರ್ವಜನಿಕ ಆಡಳಿತ, ಆಯ-ವ್ಯಯ ಈ ವಿಷಯಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಹಕ್ಕನ್ನು ಇವಕ್ಕೆ ನೀಡಲಾಯಿತು. ನ್ಯಾಯವಿಧಾಯಕ ಸಭೆ ಸಹಿತ ಸುಧಾರಣೆ ಹೊಂದಿತು. ದಿವಾನರ ಮತ್ತು ಮಹಾರಾಜರ ಆಡಳಿತದೊಳಗೆ ಈ ವ್ಯವಸ್ಥೆಗಳು ಕೆಲಸ ಮಾಡಬೇಕಾಗಿತ್ತು.

1947 ಆಗಸ್ಟ್ 9ರಂದು ಮೈಸೂರು ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನವಾಯಿತು. ಅದೇ ವರ್ಷ ಅಕ್ಟೋಬರ್ 24ರಂದು ಮೈಸೂರಿನಲ್ಲಿ ಮೊದಲನೆಯ ಪ್ರಜಾಸರ್ಕಾರ ಸ್ಥಾಪಿತವಾಯಿತು. 1948 ಮಾರ್ಚ್‌ನಲ್ಲಿ ಮೊದಲ ಚುನಾವಣೆ ನಡೆಯಿತು. ಕೆಲವು ದಿನಗಳ ಕಾಲ ಈ ಪ್ರಜಾಸರ್ಕಾರ ಮತ್ತು ದಿವಾನರ ಜಂಟಿ ಆಡಳಿತವಿದ್ದರೂ 1949ರಲ್ಲಿ ದಿವಾನರ ಹುದ್ದೆ ರದ್ದಾಯಿತು. ಮೈಸೂರು ಸಂಸ್ಥಾನ 'ಬಿ' ಗುಂಪಿನ ರಾಜ್ಯಗಳಲ್ಲಿ ಸೇರ್ಪಡೆಯಾಗಿ, ಮಹಾರಾಜರ ಪದವಿಗೆ ರಾಜಪ್ರಮುಖ ಎಂಬ ಹೊಸ ಹೆಸರು ಜಾರಿಗೆ ಬಂತು. 1950 ಜನವರಿ 26ರಂದು ಭಾರತ ಸಂವಿಧಾನ ರೂಪುಗೊಂಡು ಕರ್ನಾಟಕದ ಎಲ್ಲ ಭಾಗಗಳಲ್ಲೂ ಭಾರತದಲ್ಲಿ ಈಗ ಇರುವ ರೀತಿಯ ಆಡಳಿತ ವ್ಯವಸ್ಥೆ ಜಾರಿಗೆ ಬಂತು. ವಿವಿಧ ಕಾಲಘಟ್ಟಗಳಲ್ಲಿದ್ದ ಆಡಳಿತ ವ್ಯವಸ್ಥೆಯನ್ನು ಆಯಾ ರಾಜವಂಶಗಳ ಶೀರ್ಷಿಕೆಗಳಲ್ಲೂ ಕೊಡಲಾಗಿದೆ. ಮತ್ತಷ್ಟು ವಿವರಗಳಿಗೆ ನೋಡಿ: ಅಗ್ರಹಾರ ಗ್ರಾಮಗಳು, ನಗರಗಳು, ಸ್ಥಳೀಯಸಂಸ್ಥೆಗಳು (ಎ.ವಿ.ವಿ;ಎಸ್.ಜೆ.)

**ಆಡುಗೋಡಿ ಕ್ಷೀರೋದ್ಯಮ ಸಂಶೋಧನ ಕೇಂದ್ರ :** ಬೆಂಗಳೂರು ನಗರದ ಆಗ್ನೇಯ ಬಡಾವಣೆಯ ಆಡುಗೋಡಿಯಲ್ಲಿ ಭಾರತೀಯ ಕೃಷಿ ಸಂಶೋಧನ ಮಂಡಳಿ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ಐ.ಸಿ.ಎ.ಆರ್.)- ಕ್ಷೀರೋದ್ಯಮದ ಪ್ರಗತಿಗಾಗಿ ಏರ್ಪಡಿಸಿರುವ ಅಧ್ಯಯನ ಮತ್ತು ಸಂಶೋಧನ ಕೇಂದ್ರ. ಈ ಮಂಡಳಿ ಭಾರತದಲ್ಲಿ ಈ ರೀತಿಯಲ್ಲಿ ಏರ್ಪಡಿಸಿರುವ ಮೂರು ಪ್ರಾದೇಶಿಕ ಕೇಂದ್ರಗಳಲ್ಲೊಂದು (ಇನ್ನೆರಡು ಕೇಂದ್ರಗಳು ಪಶ್ಚಿಮ ಬಂಗಾಳದ ಕಲ್ಯಾಣಿಯಲ್ಲೂ ಮುಂಬಯಿ ನಗರದ ಆರೆ ಹಾಲಿನ ಕೇಂದ್ರದಲ್ಲೂ ಇವೆ). ಭಾರತದ ದಕ್ಷಿಣ ಪ್ರಾದೇಶಿಕ ಕೇಂದ್ರವಾದ ಆಡುಗೋಡಿಯಲ್ಲಿ ಕ್ಷೀರೋದ್ಯಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸಲು ಅವಕಾಶ ಕಲ್ಪಿಸಿದೆ. ಜೊತೆಗೆ ಕ್ಷೀರೋದ್ಯಮದಲ್ಲಿ ಬಿ.ಎಸ್‌ಸಿ., ಎಂ.ಎಸ್‌ಸಿ., ಮುಂತಾದ ಪದವಿ ತರಗತಿಗಳಿಗೆ ಪಿಎಚ್.ಡಿ. ಗೆ ಪ್ರಾದೇಶಿಕ ಆಧಾರದ ಮೇಲೆ ನಿಯತ ಸಂಖ್ಯೆಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಶಿಕ್ಷಣ ನೀಡಲಾಗುವುದು. ಈ ಕೇಂದ್ರದಲ್ಲಿಯೇ ಪರೀಕ್ಷೆಗಳು ನಡೆಯುವುವು. ಪರಿಗಣಿತ ವಿಶ್ವವಿದ್ಯಾಲಯದ ಅಂತಸ್ತನ್ನು ಹೊಂದಿರುವ ಐ.ಸಿ.ಎ.ಆರ್. ತನ್ನದೇ ಆದ ಪದವಿಗಳನ್ನು ನೀಡುವುದು.

ಕ್ಷೀರೋದ್ಯಮ ಪ್ರಗತಿಗಾಗಿ ಹರಿಯಾಣದ ಕರ್ನಾಲ್‌ನಲ್ಲಿ ಸ್ಥಾಪನೆಯಾಗಿರುವ ಕ್ಷೀರೋದ್ಯಮ ಸಂಶೋಧನೆ ಸಂಸ್ಥೆಯ ಅಂಗ ಸಂಸ್ಥೆಯಾಗಿ ಇರುವ ಬೆಂಗಳೂರಿನ ಈ ಪ್ರಾದೇಶಿಕ ಕೇಂದ್ರ ವಿದ್ಯಾರ್ಥಿಗಳನ್ನು ಅಧಿಕ ಸಂಖ್ಯೆಯಲ್ಲಿ ಆಕರ್ಷಿಸುತ್ತಿದೆ. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದೆ. ಕ್ಷೀರೋದ್ಯಮದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಫಲದಾಯಕವಾದ ಸಂಶೋಧನೆಗಳನ್ನು ತಜ್ಞರಿಂದ ಇಲ್ಲಿ ನಡೆಸಲಾಗುತ್ತಿದೆ. (ಎಸ್.ವಿ.ಎಸ್.)

**ಆತಕೂರು :** ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ದಂತಕಥೆಗಳ ಪ್ರಕಾರ ಇದು ಪ್ರಾಚೀನ ತ್ರಿಪುರಾಪುರಿ. ಇಲ್ಲಿರುವ 949-50ರ ಶಾಸನ ಪ್ರಸಿದ್ಧವಾದುದು. ಚೋಳರ ವಿರುದ್ಧ ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣ ತಕ್ಕೋಲಂ ಎಂಬಲ್ಲಿ ಯುದ್ಧ ನಡೆಸುತ್ತಿದ್ದಾಗ ಅವನ ಜೊತೆಗೆ ಗಂಗ ಬೂತುಗ ಪಾಲ್ಗೊಂಡಿದ್ದ. ಸಗರವಂಶದ ಮಣಲೇರ ಗಂಗ ದೊರೆಯ ಅನುಯಾಯಿ. ಅವನ ಪರಾಕ್ರಮಕ್ಕಾಗಿ ಗಂಗ ಬೂತುಗ ಬಾಳ್ಗಳ್ಚಾಗಿ ಆತಕೂರು ಪ್ರದೇಶವನ್ನು ದಾನವಿತ್ತ. ರಾಷ್ಟ್ರಕೂಟ ದೊರೆಯೂ ಸುಪ್ರೀತನಾಗಿ, ಮಣಲೇರ ಬಯಸಿದ ಕಾಳಿ ಎಂಬ ಹೆಸರಿನ ಬೇಟೆ ನಾಯೊಂದನ್ನು ಕೊಟ್ಟ. ಮುಂದೊಮ್ಮೆ ಬೇಟೆಯ ಸಮಯದಲ್ಲಿ ಈ ನಾಯಿ ದೊಡ್ಡ ಹಂದಿಯೊಡನೆ ಹೋರಾಡಿ ಸತ್ತಿತ್ತು. ಆ ನಾಯಿಗೆ ಸಮಾಧಿಕಟ್ಟಿ, ಶಾಸನ ಹಾಕಿಸಿ ಪ್ರತಿದಿನ ಸಮಾಧಿಯ ಪೂಜೆಗೆ ಗೊರವನೊಬ್ಬನನ್ನು ನೇಮಿಸಲಾಯಿತು. ಒಡೆಯ ಮತ್ತು ನಾಯಿಯ ಗಾಢ ಸಂಬಂಧವನ್ನು ಈ ವೀರಗಲ್ಲಿನ ಶಾಸನ ತಿಳಿಸುತ್ತದೆ. ಈಗ ಈ ವೀರಗಲ್ಲು ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿದೆ.

ಈ ಊರಿನಲ್ಲಿ ಚೆಲ್ಲೇಶ್ವರ, ವೀರಭದ್ರ ದೇಗುಲಗಳು ಉಳಿದಿವೆ. ಹತ್ತಾರು ಗುಡಿಗಳು ನಾಶದ ಅಂಚಿನಲ್ಲಿವೆ. ಗ್ರಾಮದ ಎಲ್ಲೆಯಲ್ಲಿ ತಿರುಮಲ, ಅಟ್ಟಮ್ಮ, ಹಾಲಮ್ಮ, ಪಟ್ಟದಲಮ್ಮ, ಮಾರಮ್ಮ, ಯಲ್ಲಮ್ಮ, ಮಂಟೇಸ್ವಾಮಿ ಮತ್ತು ಬೋರೆದೇವರ ಗುಡಿಗಳಿವೆ. ಚಲ್ಲೇಜನಮ್ಮನ ಸಮಾಧಿ, ಹಲವು ಮಾಸ್ತಿಕಲ್ಲುಗಳೂ ಇಲ್ಲಿವೆ. (ಎಚ್.ಎಂ.ಎನ್.ಆರ್.)

**ಆದಯ್ಯ :** ಬಸವಣ್ಣನವರ ಕಾಲದ ವಚನಕಾರ. ಗುಜರಾತಿನ ದ್ವಾರಕಾನಗರ ಈತನ ಜನ್ಮಸ್ಥಳ. ಇವನ ತಂದೆ ಘೋರದತ್ತ, ತಾಯಿ ಪುಣ್ಯವತಿ. ವಂಶವೃತ್ತಿ ವ್ಯಾಪಾರ. ಬಾಲ್ಯದಲ್ಲೇ ವ್ಯವಹಾರಕುಶಲನಾಗಿ ಬಹುಭಾಷಾ ವಿಶಾರದನಾದ ಯುವಕನಾದ ಮೇಲೆ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಕರ್ನಾಟಕದ ಪ್ರಸಿದ್ಧ ಜೈನರ ನಗರಿಯಾದ ಪುಲಿಗೆರೆಗೆ (ಈಗಿನ ಲಕ್ಷ್ಮೇಶ್ವರ) ಬಂದು ಅಲ್ಲಿನ ಜೈನ ಧರ್ಮಾವಲಂಬಿಯಾದ ಪಾರಿಶೆಟ್ಟಿಯ ಏಕೈಕ ಪುತ್ರಿ ಪದ್ಮಾವತಿಯನ್ನು ಮದುವೆಯಾಗಿ ಸೌರಾಷ್ಟ್ರದ ಸೋಮನಾಥನನ್ನು ತಂದು ಪುಲಿಗೆರೆಯಲ್ಲಿ ಪ್ರತಿಷ್ಠಾಪಿಸಿ ವೀರಶೈವಧರ್ಮವನ್ನು ಮೆರೆದ.

ಈತ ಸೌರಾಷ್ಟ್ರ ಸೋಮೇಶ್ವರ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ದೊರೆತಿರುವ ಈತನ 307 ವಚನಗಳಲ್ಲಿ ಹೆಚ್ಚಿನವು ತತ್ತ್ವ ನಿರೂಪಣೆಗೆ ಸಂಬಂಧಿಸಿವೆ. ಬೆಡಗಿನ ವಚನಗಳನ್ನು ಬಿಟ್ಟರೆ ಉಳಿದ ವಚನಗಳ ಶೈಲಿ ನೇರವಾಗಿದೆ, ಸರಳವಾಗಿದೆ. ಹೊರನಾಡಿನಿಂದ ಬಂದು ಕನ್ನಡವನ್ನು ಕಲಿತು ಕನ್ನಡದಲ್ಲಿ ಹಾಡಿದ ಆದಯ್ಯನ ಹೆಸರು ಕನ್ನಡನಾಡಿನ ಜನಮನದಲ್ಲಿ, ವೀರಶೈವ ಇತಿಹಾಸ, ತತ್ತ್ವನಿರೂಪಣೆ ಮತ್ತು ಶಿವಾನುಭವ ಮಾರ್ಗಗಳಲ್ಲಿ ಚಿರಂತನವಾಗಿರುತ್ತದೆ. ಆದಯ್ಯನನ್ನು ಕುರಿತು ರಚಿತವಾದ ಕಾವ್ಯಗಳಲ್ಲಿ ಈತ ಪರ ವಸ್ತುವಿನ ಅಸ್ತಿತ್ವವನ್ನು ಪ್ರಸ್ಥಾಪಿಸುವ ಕಟುತರ ನಿಷ್ಠೆಯುಳ್ಳ ಕಲಿಯಾಗಿ ಕಾಣುತ್ತಿದ್ದರೆ ವಚನಗಳಲ್ಲಿ ಶ್ರೇಷ್ಠ ಪಂಡಿತನಾಗಿ ಮಹಾನುಭಾವಿಯಾಗಿ ಕಂಡುಬರುತ್ತಾನೆ. (ಬಿ.ಎನ್.ಸಿ.)

**ಆದಿಚುಂಚನಗಿರಿ :** ಮಂಡ್ಯಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ. ನಾಗಮಂಗಲ ತಾಲ್ಲೂಕಿನಲ್ಲಿ ಬೆಳ್ಳೂರಿನ ಉತ್ತರಕ್ಕೆ ಮಾಯಸಂದ್ರ ಹಾದಿಯಲ್ಲಿ 10ಕಿಮೀ ದೂರದಲ್ಲಿದೆ. ತ್ರೇತಾಯುಗದಲ್ಲಿ ಸೀತಾನ್ವೇಷಿಗಳಾಗಿ ಬಂದ ರಾಮಲಕ್ಷ್ಮಣರಿಗೆ ಗಜಾರಣ್ಯದ ಕಾವೇರೀತೀರದ ಚುಂಚನಕಟ್ಟೆ ಕ್ಷೇತ್ರವನ್ನು ಬಿಟ್ಟುಕೊಟ್ಟು ಪರಮೇಶ್ವರ ಇಲ್ಲಿ ಬಂದು ನೆಲೆಸಿ ಚುಂಚ ಎಂಬ ರಾಕ್ಷಸನನ್ನು ಕೊಂದನಂತೆ. ಅಲ್ಲಿಂದ ಮುಂದೆ ಈ ಸ್ಥಳಕ್ಕೆ ಚುಂಚನಗಿರಿ ಎಂಬ ಹೆಸರು ಬಂತೆಂದು ಪ್ರತೀತಿ. ಪರಮೇಶ್ವರನಿಂದ ಸ್ಥಾಪಿತವಾದ ಗುರುಪೀಠಗಳಲ್ಲಿ ಆದಿಪೀಠ ಈ ಕ್ಷೇತ್ರದಲ್ಲಿರುವುದರಿಂದ ಇದು ಆದಿಚುಂಚನಗಿರಿಯಾಗಿದೆ.

ಇಲ್ಲಿನ ಐತಿಹ್ಯ ಹೀಗಿದೆ: ನಿಸರ್ಗಸೌಂದರ್ಯಕ್ಕೆ ಹೆಸರಾಗಿರುವ ಚುಂಚನಗಿರಿಯಲ್ಲಿ ಮೊದಲಿಗೆ ದಟ್ಟವಾಗಿ ಬಿದಿರು ಬೆಳೆದಿತ್ತು. ಬೆಳ್ಳೂರಿನ ಪಾಳೆಯಗಾರನ ಮಗುವಿಗೆ ಗಿಣ್ಣಿಲ್ಲದ ಬಿದಿರಿನ ತೊಟ್ಟಿಲು ಬೇಕಾಯಿತು. ಬಿದಿರನ್ನು ಅರಿಸಿಕೊಂಡು ಮೂವರು ಮೇದರು ಈ ಗಿರಿಗೆ ಬಂದರು. ನಡುಬೆಟ್ಟಕ್ಕೆ ಬಂದು ಗಿಣ್ಣಿಲ್ಲದ ಬಿದಿರೊಂದನ್ನು ಹುಡುಕಿ ಅದನ್ನು ಕಡಿಯಲು ಮಚ್ಚನ್ನು ಬೀಸಿದಾಗ ಚಿಲ್ಲನೆ ರಕ್ತ ಚಿಮ್ಮಿತು. ಹಿಂದಿರುಗಿ ನೋಡದೆ ಹೊರಟು ಹೋಗುವಂತೆ ಅಶರೀರವಾಣಿಯಾಯಿತು. ಭಯಗೊಂಡ

ಮೇದರು ತುಸು ದೂರ ಹೋಗಿ ಕೌತುಕವನ್ನು ತಾಳಲಾರದೆ ಹಿಂದಿರುಗಿ ನೋಡಿ ರಕ್ತಕಾರಿ ಅಲ್ಲಿಯೇ ಸತ್ತುಬಿದ್ದರು. ಅವರು ಸತ್ತುಬಿದ್ದ ಮೇದರ ಗುಡ್ಡ ಬೆಳ್ಳೂರಿನ ಸಮೀಪದ ಅಂಬಲಜೀರ ಹಳ್ಳಿಯ ಪಕ್ಕದಲ್ಲಿದೆ. ಮೇದರ ತಲೆಗಳೆನ್ನಲಾದ ಮೂರು ಕಲ್ಲಿನ ಮುಂಡಗಳು ಚುಂಚನಗಿರಿಯಲ್ಲಿ ಈಗಲೂ ನೋಡಸಿಗುತ್ತವೆ. ಗಿಣ್ಣಿಲ್ಲದ ಬಿದಿರು, ಮೇದರ ಹೊಡೆತದಿಂದ ಕಚ್ಚಾದ ಶಿವಲಿಂಗವನ್ನು ಪ್ರವಾಸಿಗಳು ಈಗಲೂ ಕಾಣಬಹುದು.

ಈ ಐತಿಹ್ಯಗಳ ಜೊತೆಗೆ ಸ್ಥಳಪುರಾಣವೂ ಈ ಕ್ಷೇತ್ರಕ್ಕಿದೆ. ಈಶ್ವರ ಕಪಾಲದಿಂದ ಅವತರಿಸಿದ ಸಿದ್ಧಯೋಗಿಯೊಬ್ಬ ತೀರ್ಥಯಾತ್ರೆ ಮಾಡುತ್ತ ಪಾರ್ವತಿ ಪರಮೇಶ್ವರರು ತಪಸ್ಸು ಮಾಡುತ್ತಿದ್ದ ಚುಂಚನಗಿರಿಗೆ ಬಂದು, ಅಲ್ಲಿ ಶಿವ ಆ ಯೋಗಿಗೆ ದರ್ಶನವನ್ನು ನೀಡಿ ತನ್ನ ಅಂಶಯುಕ್ತವಾದ ಪೀಠವೊಂದನ್ನು ಸ್ಥಾಪಿಸಿ ತನ್ನ ಪ್ರತಿನಿಧಿಯಾಗಿ ಆ ಸಿದ್ಧಯೋಗಿಯನ್ನು ಅಲ್ಲಿಬಿಟ್ಟ. ತಾನು ಪಂಚಪ್ರಾಣಗಳಿಂದ ಆದಿ ಗಂಗಾಧರೇಶ್ವರ, ಈಶ್ವರ, ಸೋಮೇಶ್ವರ, ಮಲ್ಲೇಶ್ವರ, ಗವಿ ಸಿದ್ಧೇಶ್ವರ ಹೀಗೆ ಪಂಚಲಿಂಗಾಕೃತಿಯಾಗಿ ಸ್ವಯಂ ಉದ್ಭವಿಸಿದ.

ಕ್ಷೇತ್ರರಕ್ಷಣೆಗಾಗಿ ಆದಿಶಕ್ತಿರೂಪಳಾದ ಸ್ತಂಭದೇವತೆಯನ್ನೂ ಪರಶಿವನೇ ಸ್ಥಾಪಿಸಿದನೆಂದು ಸ್ಥಳಪುರಾಣ ನಿರೂಪಿಸುತ್ತದೆ. ವಿಸ್ತಾರವಾದ ಓಲಗದ ಅರೆಯ ಮೇಲೆ ನಿಂತಿರುವ ಕಂಬದಮ್ಮ ಭಕ್ತರ ಅಚ್ಚುಮೆಚ್ಚಿನ ದೇವತೆ. ಬಿಂದು ಸರೋವರದ ಪ್ರಸ್ತಾಪವೂ ಸ್ಥಳಪುರಾಣದಲ್ಲಿಯೇ ಬಂದಿದೆ. ನಡುಬೆಟ್ಟದಲ್ಲಿರುವ ಈ ಆಳವಾದ ಸರೋವರ ಶಿವಜಟೆಯಿಂದ ಚಿಮ್ಮಿದ ಬಿಂದುವೊಂದರಿಂದ ಉಂಟಾದುದು. ಇಲ್ಲಿಂದ ಎಷ್ಟೋ ಅಡಿಗಳ ಎತ್ತರದಲ್ಲಿರುವ ಶ್ರೀಗಂಗಾಧರೇಶ್ವರ ದೇವಾಲಯದ ಗರ್ಭಗುಡಿಯ ಲಿಂಗದ ಬಟ್ಟಲಿನಿಂದ ಅಭಿಷೇಕ ಜಲ ಯಾವುದೋ ಗುಪ್ತಮಾರ್ಗವಾಗಿ ಈ ಸರೋವರಕ್ಕೆ ಇಳಿದು ಬರುವುದೆಂಬ ನಂಬಿಕೆಯೂ ಇದೆ. ಸಮುದ್ರಮಟ್ಟದಿಂದ 1060ಮೀ ಎತ್ತರದಲ್ಲಿರುವ ಗಿರಿ ಪ್ರಕೃತಿಸೌಂದರ್ಯಕ್ಕೆ ಹೆಸರಾಗಿದೆ. ದಟ್ಟವಾಗಿ ಹಬ್ಬಿ ನಿಂತಿರುವ ಕಾನನವನ್ನು ಹಾದು ಬೆಟ್ಟವನ್ನು ಏರಿದರೆ ಅನ್ನದಾನಿ ಮಠ ಸಿಕ್ಕುತ್ತದೆ. ಕರ್ನಾಟಕದ ಪ್ರಾಚೀನ ಮಠಗಳಲ್ಲೊಂದಾದ ಅಯ್ಯನಮಠ ಅನ್ನದಾನಕ್ಕೆ ಹೆಸರಾದುದು. ಅರುವತ್ತೊಂಬತ್ತಕ್ಕೂ ಹೆಚ್ಚು ಸಂಖ್ಯೆಯ ಗುರುಪರಂಪರೆಯನ್ನು ಪಡೆದ ಈ ಪ್ರಸಿದ್ಧ ಮಠಕ್ಕೆ ನಾಡಿನ ನಾನಾ ಕಡೆಯ ಭಕ್ತರು ನಡೆದುಕೊಳ್ಳುತ್ತಾರೆ. ಈ ಕ್ಷೇತ್ರವನ್ನು ಕುರಿತ ಜನಪದ ಸಾಹಿತ್ಯವೂ ವಿಪುಲವಾಗಿದೆ.



ಬೆಟ್ಟ ಹಾಗೂ ದೇವಾಲಯ

ಚುಂಚನಗಿರಿ ಒಂದು ಉತ್ತಮ ಪ್ರವಾಸಿ ಕ್ಷೇತ್ರ.ಗಿರಿಯ ಒಂದೊಂದು ಮೂಲೆಯಲ್ಲೂ ಅನೇಕ ಅದ್ಭುತಗಳು ನಮಗೆ ಎದುರಾಗುತ್ತವೆ. ಇಲ್ಲಿನ ಗವಿ ಸಿದ್ಧೇಶ್ವರ ದೇವಾಲಯಕ್ಕೆ ಬಂಡೆಗಳನ್ನೇರಿ ಹೋಗುವುದೊಂದು ಸಾಹಸ. ಇದಕ್ಕಿಂತ ಕಷ್ಟ ಸಾಧ್ಯವಾದ ಗಿರಿಯ ಎರಡು ಶಿಖರಗಳನ್ನು ಚೋಳೂರ ಕಂಬಗಳಿಗೆ ಗಲ್ಲು ಎಂದು ಕರೆಯಲಾಗಿದೆ. ಚೋಳರು ಕಟ್ಟಿದ ಗಂಗಾಧರನ ಗುಡಿಯಿಂದ ಕಡಿದಾದ ಬಂಡೆಗಳನ್ನೇರಿ ಬೆಟ್ಟದ ದಕ್ಷಿಣ ತುದಿಯನ್ನು ಮುಟ್ಟಿದರೆ ಚೋಳೂರ ಕಂಬ ಸಿಕ್ಕುತ್ತದೆ. ಜಾತ್ರೆಯ ಸಂದರ್ಭದಲ್ಲಿ ಇಲ್ಲಿ ಹಚ್ಚಿದ ದೀಪ ಸು.64ಕಿಮೀ ದೂರದ ಚೋಳೂರಿನ ಕೊಳದಲ್ಲಿ ಕಾಣುವುದಾಗಿ ಹೇಳುತ್ತಾರೆ. ಇನ್ನೊಂದು ಶಿಖರ ಗಳಿಗೆಗಲ್ಲು. ಭೀಕರವಾದ ಕಂದಕಗಳಿಂದ ಸುತ್ತುವರಿದ ಕಡಿದಾದ ಕೋಡುಗಲ್ಲಿಗೆ ಸರಪಣಿಯನ್ನು ಹಿಡಿದು ಹತ್ತುವ ಸಾಹಸ ರೋಮಾಂಚನವನ್ನು ತರುತ್ತದೆ. ಮಕ್ಕಳಾಗದ ಹೆಂಗಸರು ಹರಕೆ ಹೊತ್ತು ಮುಂದೆ ಮಕ್ಕಳಾದರೆ ಬೆನ್ನಿಗೆ ಶಿಶುವನ್ನು ಕಟ್ಟಿಕೊಂಡು ಈ ಶಿಖರವನ್ನು ಹತ್ತುತ್ತಾರೆ.

ಶ್ರೀ ಕಾಲಭೈರವ

ಗಿರಿಯ ಮಧ್ಯಶಿಖರದ ಕತ್ತಲು ಕವಿದಿರುವ ಗವಿಯಲ್ಲಿ ಸೋಮೇಶ್ವರ ಲಿಂಗವಿದೆ. ಬೆಟ್ಟದ ದಕ್ಷಿಣಕ್ಕಿರುವ ನಾಗರಕಲ್ಲು, ಹೆಡೆಬಿಚ್ಚಿದ ಘೋರಸರ್ಪದಂತೆ ಮರದ ಎತ್ತರಕ್ಕೆ ಬೆಳೆದು ನಿಂತಿದೆ. ಅಲ್ಲಿಗೆ ಸಮೀಪದ ಕೂಡುಬಂಡೆ ಕೂಗಿದರೆ ಮೂರುಬಾರಿ ಓಗೊಡುತ್ತದೆ. ಮೇದರಗುಡ್ಡದ ಬಳಿಯಲ್ಲಿ ಹಾಕಿದ ಕೂಗು ಸ್ವಚ್ಛವಾಗಿ ಬೆಟ್ಟದ ನೆತ್ತಿಯಿಂದಲೆಲ್ಲೋ ಕೇಳಿಬರುತ್ತದೆ. ಉತ್ತರ ಭಾಗದ ಹನುಮಾನ ಕಣಿವೆಯು ಗಿರಿಯ ಮತ್ತೊಂದು ಪಾರ್ಶ್ವದ ರಮ್ಯನೋಟವನ್ನು ಒದಗಿಸುತ್ತದೆ. ಚುಂಚನಗಿರಿ ಪವಿತ್ರ ಕ್ಷೇತ್ರವಾಗಿರುವಂತೆ ಮಠ, ದೇವಾಲಯ, ನಾಗಚಾವಡಿ, ಭೈರವನ ಗುಡಿ ಮತ್ತು ನಾನಾರೀತಿಯ ನಿಸರ್ಗದ ಅದ್ಭುತಗಳಿಂದ ಕೂಡಿ ಪ್ರೇಕ್ಷಣೀಯ ಸ್ಥಳವೂ ಆಗಿದೆ. ಹೊಸದಾಗಿ ಬೃಹತ್ ಕಾಲಭೈರವ ದೇವಾಲಯ ನಿರ್ಮಿತವಾಗುತ್ತಿದ್ದು, ಈ ಕ್ಷೇತ್ರಕ್ಕೆಬರುವ ಯಾತ್ರಾರ್ಥಿಗಳಿಗೆ ಹತ್ತುಹಲವು ಸೌಲಭ್ಯಗಳನ್ನು ಒದಗಿಸಲಾಗಿದೆ.

ಇಲ್ಲಿಯ ಮಠದ ಪೀಠಾಧಿಪತಿಗಳಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಮತ್ತು ಬಹುಸಂಖ್ಯಾತ ಅನುಯಾಯಿಗಳ ಉತ್ಸಾಹದಿಂದ ಈ ಕ್ಷೇತ್ರ ದಿನೇದಿನೇ ಅಭಿವೃದ್ಧಿಯಾಗುತ್ತಿದೆ. ಇಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಇದೆ.

*

**ಆದಿಯಪ್ಪ :** ಸು.1650 ಜೈನಕವಿ. ಧನ್ಯಕುಮಾರಚರಿತ್ರೆ ಎಂಬ ಕಾವ್ಯದ ಕರ್ತೃ. ಶ್ರುತಿಯತಿಯ ಶಿಷ್ಯನಾದ ಮುನಿಯಣ್ಣ ಇವನ ತಂದೆ, ತಾಯಿ ದೇವರಸಿ. ಸರಸಿಜಸಂಭವ (ಬ್ರಹ್ಮ), ಸರಸಿಜರಿಪು (ಚಂದ್ರ), ವಿಜಯಪ್ಪ ಈ ಮೂವರೂ ಈತನ ಅಣ್ಣಂದಿರು. ಚಂದ್ರಕೀರ್ತಿಯ

ಮಗನಾದ ಪ್ರಭೇಂದುಮುನಿ ಕವಿಯ ಗುರುವಾಗಿದ್ದಂತೆ ತೋರುತ್ತದೆ. ಗೇರುಸೊಪ್ಪೆಯ ರಾಜ ಭೈರವರಾಯನ ಗುರುವಾದ ವೀರಸೇನ ಮುನಿಶ್ರೇಷ್ಠನ ಆದೇಶದಂತೆ ಕವಿ ಕೃತಿರಚನೆ ಮಾಡಿದ್ದಾನೆ.

ಧನ್ಯಕುಮಾರಚರಿತ್ರೆ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ ಸು.410 ಪದ್ಯಗಳಿವೆ, ಮಧ್ಯದಲ್ಲಿ ಕೆಲವು ಕಂದಪದ್ಯಗಳೂ ವೃತ್ತಗಳೂ ಇವೆ. ರಾಜನ ಮಗನಾಗಿ ಹುಟ್ಟಿದ ಅಕೃತಪುಣ್ಯ ಎಂಬ ವ್ಯಕ್ತಿ, ಬಲಭದ್ರನೆಂಬ ವೈಶ್ಯನ ಮನೆಯಲ್ಲಿ ಸೇವಕನಾಗಿದ್ದು, ಅವನ ಮಕ್ಕಳ ಕಿರುಕುಳ ತಡೆಯಲಾರದೆ ಋಷ್ಯಾಶ್ರಮದಲ್ಲಿ ಮುನಿಸೇವಾನಿರತನಾಗಿ, ಸತ್ತಬಳಿಕ ಧನಪಾಲನೆಂಬ ವೈಶ್ಯನಿಗೆ ಮಗನಾಗಿ ಹುಟ್ಟಿ ಅಸಾಧಾರಣ ಐಶ್ವರ್ಯವನ್ನೂ ಖ್ಯಾತಿಯನ್ನೂ ಪಡೆದು ತನ್ನ ವಂಶೋದ್ಧಾರ ಮಾಡಿದುದರ ವಿಷಯ ಈ ಕಾವ್ಯದಲ್ಲಿ ವರ್ಣಿತವಾಗಿದೆ. ವರ್ಣನೆಗಿಂತ ಕಥೆಯ ನಿರೂಪಣೆಯಲ್ಲೇ ಕವಿಯ ಒಲವು ಅಧಿಕವಾಗಿ ಕಂಡುಬರುತ್ತದೆ.

ಆದಿಯಪ್ಪ ಎಂಬ ಹೆಸರಿನ ಇನ್ನೊಬ್ಬ ಬ್ರಾಹ್ಮಣಕವಿ (ಸು.1700) ಪಟ ಹಸ್ತನ ಚರಿತ್ರೆ ಎಂಬ ಸಾಂಗತ್ಯಗ್ರಥವನ್ನು ಬರೆದಿರುವಂತೆ ತಿಳಿದುಬರುತ್ತದೆ. *

**ಆದಿಲ್‌ಶಾಹೀ ವಂಶ :** 1490-1686ರ ಅವಧಿಯಲ್ಲಿ ಉತ್ತರ ಕರ್ನಾಟಕದ ಬಹುಭಾಗ ಹಾಗೂ ದಖನ್ನಿನ ಇತರ ಪ್ರದೇಶಗಳ ಮೇಲೆ ಒಡೆತನ ನಡೆಸಿದ ರಾಜವಂಶ. ಆದಿಲ್‌ಶಾಹೀಗಳ ರಾಜಧಾನಿ ಬಿಜಾಪುರ. ಬಹಮನೀ ರಾಜ್ಯ ಒಡೆದುಹೋದಮೇಲೆ ಹುಟ್ಟಿಕೊಂಡ ಐದು ಶಾಹೀ ರಾಜ್ಯಗಳಲ್ಲಿ ಇವರದು ಅತ್ಯಂತ ಪ್ರಸಿದ್ಧವಾದುದು. ಆದಿಲ್‌ಶಾಹೀ ಹೆಸರು ಈ ವಂಶದ ಆಳ್ವಿಕೆಯ ಸ್ಥಾಪಕನಾದ ಯೂಸುಫ್ ಆದಿಲ್‌ಖಾನ್‌ನ ಹೆಸರಿನಮೇಲೆ ರೂಢಿತವಾಗಿದೆ. ಈತ ತಾನು ಆಟ್ಟೊಮನ್ ಸಾಮ್ರಾಜ್ಯದ ಸುಲ್ತಾನ 2ನೆಯ ಮುರಾದ್‌ನ ವಂಶಸ್ಥನೆಂದು ಹೇಳಿಕೊಂಡಿದ್ದಾನೆ. ಆದರೆ ಇದು ಸ್ವಕಲ್ಪಿತ. ಈತ ಷೇಕ್ ಸಫಿಯ ಯುವಕ ಗುಲಾಮರಲ್ಲಿ ಒಬ್ಬನಾಗಿ ನೇಮಕವಾಗಿದ್ದ. ಈತನ ವಂಶಸ್ಥರಲ್ಲಿ ಮುಂದಿನವರು ಸಫವಿದ್ ಮನೆತನಕ್ಕೆ ನಿಷ್ಠೆ ತೋರಿಸುತ್ತಿದ್ದರು. ಈ ಮಾಹಿತಿಗಳು ಇವನು ಅಜರ್‌ಬೈಜಾನ್ ಪ್ರದೇಶದ ಮೂಲ ಪಂಗಡಗಳಿಗೆ ಸೇರಿದವನು ಎಂದು ತೋರಿಸುತ್ತವೆ.

**ರಾಜಕೀಯ ಇತಿಹಾಸ:** ದಖನ್ ಹಾಗೂ ದಕ್ಷಿಣ ಭಾರತದ ರಾಜಕೀಯದಲ್ಲಿ ಬಹು ಪರಿಣಾಮಕಾರಿ ಪಾತ್ರವಹಿಸಿದ್ದ ಈ ವಂಶದಲ್ಲಿ ಒಂಬತ್ತು ಸುಲ್ತಾನರು ಆಳಿದರು. ಅವರಲ್ಲಿ ಯೂಸುಫ್, ಅಲಿ, 2ನೆಯ ಇಬ್ರಾಹೀಂ ಮತ್ತು ಮಹಮ್ಮದ್ ಪ್ರಮುಖರು. ಇತರರು ಇವರಷ್ಟು ಬಲಶಾಲಿಗಳಲ್ಲದಿದ್ದರೂ ತಮ್ಮ ವಂಶದ ದಕ್ಷ ಪರಂಪರೆಯಲ್ಲೇ ಕರ್ತವ್ಯ ನಿರ್ವಹಿಸಿ ರಾಜ್ಯದ ಪ್ರಾದೇಶಿಕ ಸಮಗ್ರತೆಯನ್ನು ಉಳಿಸಿಕೊಂಡು ಬಂದರು. ಅಲ್ಲದೆ ಕಲೆ, ವಾಸ್ತುಶಿಲ್ಪ ಹಾಗೂ ಸಾಹಿತ್ಯ ರಂಗಗಳಲ್ಲಿನ ಹಲವು ಸಾಧನೆಗಳಿಗೂ ಕಾರಣರಾದರು.

ಮೊದಲ ದೊರೆ ಯೂಸುಫ್ ಆದಿಲ್ ಷಾ (1490-1510). ಮೊದಲು ಬಹಮನೀ ಅರಸರ ಅಧೀನದಲ್ಲಿ ಬಿಜಾಪುರದ ಪ್ರಾಂತ್ಯಾಧಿಕಾರಿಯಾಗಿದ್ದ. ಬಹಮನೀ ಸಾರ್ವಭೌಮ ಮಹಮ್ಮದ್ ನಿರ್ಬಲನಾಗಿ ರಾಜ್ಯದ ವ್ಯವಹಾರ ಖಾಸಿಮ್ ಬರೀದ್‌ನ ಕೈಸೇರಿದಾಗ, ಈತ ಬಿಜಾಪುರದಲ್ಲಿ ಸ್ವತಂತ್ರನಾಗಿ ಆಳಲಾರಂಭಿಸಿದ. ಅಸೀಮ ವೀರನೂ ರಾಜಕೀಯಪಟುವೂ ಆಗಿದ್ದ ಈತನ ಆಳ್ವಿಕೆಯಲ್ಲಿ ರಾಜ್ಯ ವ್ಯವಸ್ಥಿತವಾಯಿತು. ಆದರೆ ಇವನ ಮರಣದ ವೇಳೆಗೆ ಪಕ್ಕದ ರಾಜ್ಯಗಳಿಂದ ಬಿಜಾಪುರಕ್ಕೆ ಅಪಾಯ ತಲೆದೋರಲಾರಂಭಿಸಿತು. ಇವನ ಮಗ ಇಸ್ಮಾಯಿಲ್ (1510-34) ಸಿಂಹಾಸನವೇರುವಾಗ ಕೇವಲ 13 ವರ್ಷದ ಬಾಲಕ. ಆ ಕಾಲದಲ್ಲಿ ರಾಜ ಪ್ರತಿನಿಧಿಯಾಗಿದ್ದ ಕಮಾಲ್ ಖಾನ್ ರಾಜ್ಯಾಧಿಕಾರವನ್ನು ತಾನೇ ವಶಮಾಡಿಕೊಳ್ಳಲು ಪ್ರಯತ್ನಿಸಿದ. ಆದರೆ ಇಸ್ಮಾಯಿಲನ ತಾಯಿ ಈ ಪ್ರಯತ್ನವನ್ನು ವಿಫಲಗೊಳಿಸಿದಳು. ಪರ್ಷಿಯ ಮೊದಲಾದೆಡೆಗಳಿಂದ ಬಂದು ದಖನ್ನಿನಲ್ಲಿ ನೆಲಸಿದ್ದ ಹೆಚ್ಚಿನ ಮಟ್ಟಿಗೆ ಷಿಯಾ ಪಂಥೀಯರಾಗಿದ್ದವರು ಮತ್ತು ಬಹುಮಟ್ಟಿಗೆ ಸ್ಥಳೀಯರೇ ಆಗಿದ್ದ ಸುನ್ನಿ ಪಂಥದವರು ಈ ಎರಡು ಪ್ರಭಾವೀ ಗುಂಪುಗಳೂ ಅಂದಿನ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದವು. ಆಗಾಗ್ಗೆ ತಲೆ ದೋರುತ್ತಿದ್ದ ಇವರ ವೈಮನಸ್ಯಗಳು ರಾಜ್ಯಗಳ ಮೇಲೆ ಅನೇಕ ರೀತಿಯ ಪರಿಣಾಮವನ್ನು ಬೀರುತ್ತಿದ್ದುವು. ಇಸ್ಮಾಯಿಲ್ ಪ್ರಬುದ್ಧನಾದ ಮೇಲೆ ದಖನೀ ಪಕ್ಷವನ್ನು ಸದೆಬಡಿದ. ಅಹಮದ್‌ನಗರ, ಬೀರಾರ್ ಮತ್ತು ಬಿದರೆಯ ಸುಲ್ತಾನರ ಸಂಯುಕ್ತ ವಿರೋಧವನ್ನು ಯಶಸ್ವಿಯಾಗಿ ಎದುರಿಸಿದ. 1534ರಲ್ಲಿ ಇವನು ಮೃತನಾದಾಗ ರಾಜ್ಯದ ಸ್ಥಿತಿ ಪುನಃ ಅಸ್ತವ್ಯಸ್ತವಾಯಿತು.

ಇಸ್ಮಾಯಿಲ್‌ನ ಉತ್ತರಾಧಿಕಾರಿಗಳಾದ ಮಲ್ಲು ಮತ್ತು ಅಲೂಫ್‌ಖಾನರು ಅಸಮರ್ಥರಾಗಿದ್ದರು. ಆಗ ರಾಜಮಾತೆ ಬೀಬೀಜಿ ಖಾನಂ ಬಲಿಷ್ಠ ಮಂತ್ರಿ ಅಸದ್ ಖಾನನ ಸಹಕಾರದಿಂದ ಇಸ್ಮಾಯಿಲ್‌ನ ಮೂರನೆಯ ಮಗ ಇಬ್ರಾಹೀಂನನ್ನು ಸುಲ್ತಾನನೆಂದು ಘೋಷಿಸಿದಳು. ಇವನ 24 ವರ್ಷಗಳ (1535-58) ಆಡಳಿತದಲ್ಲಿ ರಾಜ್ಯದಲ್ಲಿ ಹಲವು ಮುಖ್ಯ ಬದಲಾವಣೆಗಳಾದವು. ಇವನು ಅಫಕ್ವೀಗಳನ್ನು (ವಿದೇಶೀಯರು) ಹಿಂದಿಟ್ಟು ದಖನೀಯರಿಗೆ ಪ್ರೋತ್ಸಾಹವಿತ್ತ. ಪಾರಸೀ ಬದಲು ಮರಾಠಿಯನ್ನು ಅಧಿಕೃತ ಭಾಷೆಯಾಗಿ ಹೆಚ್ಚು ಬಳಕೆಗೆ ತಂದ. ಇವನ ರಾಜನೀತಿಯಿಂದಾಗಿ ಸ್ವಂತ ಸಹೋದರ ಅಬ್ದುಲ್ಲನೂ ಸೇರಿದಂತೆ ಹಲವರು ದಂಗೆ ಎದ್ದರು. ಈ ದಂಗೆಯನ್ನು ಅಡಗಿಸಿದರೂ ರಾಜ್ಯದ ಏಳ್ಗೆ ಕುಂಠಿತವಾಯಿತು. ಇಬ್ರಾಹೀಂ 1558ರಲ್ಲಿ ನಿಧನನಾದ. ಉತ್ತರಾಧಿಕಾರಿಯಾದ ಇವನ ಮಗ ಅಲಿಆದಿಲ್ ಷಾ (1558-80) ಶಾಹೀ ವಂಶದ ಅತ್ಯಂತ ಬಲಿಷ್ಠ ಹಾಗೂ ದಕ್ಷ ಸುಲ್ತಾನರಲ್ಲಿ ಒಬ್ಬ. ತನ್ನ ತಂದೆಯ ಕಾಲದಲ್ಲಿ ಹೆಚ್ಚು ತೊಂದರೆಗೊಳಗಾಗಿದ್ದ ಈತ ಕೆಲವು ಶ್ರೀಮಂತರ ನೆರವಿನಿಂದ ಸಿಂಹಾಸನವನ್ನೇರಿದ. ತನ್ನ ತಂದೆಯ ನೀತಿಯನ್ನು ಅನುಸರಿಸದೆ ಅಫಕ್ವೀಗಳನ್ನು ಪ್ರೋತ್ಸಾಹಿಸಿದ. ವಿಜಯನಗರದ ವಿರುದ್ಧ ಉಳಿದ ಶಾಹೀ ರಾಜರುಗಳ ಒಕ್ಕೂಟವನ್ನು ರಚಿಸಲು ಈತನೇ ಕಾರಣ. ಇವನ ಈ ಸಾಧನೆಯಿಂದಾಗಿ 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾಯಿತು. ಅಹಮದ್‌ನಗರದ ರಾಜವಂಶದೊಂದಿಗೆ ಪರಸ್ಪರ ರಕ್ತಸಂಬಂಧ ಬೆಳೆಸಿದ. ಶಿಥಿಲಗೊಂಡ ವಿಜಯನಗರ ಸಾಮ್ರಾಜ್ಯದತ್ತ ನಡೆದು ದಕ್ಷಿಣದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ರಾಜ್ಯ ವಿಸ್ತರಿಸಿದ. ಅಪಾರ ಐಶ್ವರ್ಯವನ್ನು ಸಂಪಾದಿಸಿದ. ಇವನ 23 ವರ್ಷಗಳ ಆಡಳಿತಕಾಲ ತೀವ್ರ ಚಟುವಟಿಕೆಗಳಿಂದ ಕೂಡಿತ್ತು. 1580ರಲ್ಲಿ ತನ್ನ ಸೇವಕನೊಬ್ಬನಿಂದ ಕೊಲೆಗೀಡಾದ.

ಅಲಿ ಆದಿಲ್ ಷಾನಿಗೆ ಸಂತಾನವಿಲ್ಲದಿದ್ದುದರಿಂದ ಇವನ ಸೋದರನ ಮಗ ಎರಡನೆಯ ಇಬ್ರಾಹೀಂ ಆದಿಲ್ ಷಾ (1580-1627) ಇನ್ನೂ ಒಂಬತ್ತು ವರ್ಷದ ಬಾಲಕನಾಗಿದ್ದಾಗಲೇ ಪಟ್ಟಕ್ಕೆ ಬಂದ. ಆದ್ದರಿಂದ ಮುಂದೆ 11 ವರ್ಷಗಳ ಕಾಲ ರಾಜ್ಯವನ್ನು ನಾಲ್ವರು ರಾಜಪ್ರತಿನಿಧಿಗಳು ಒಬ್ಬರ ಅನಂತರ ಒಬ್ಬರು ಆಳಿ ಪರಸ್ಪರ ಕುಟಿಲನೀತಿಗಳಿಂದ ಆಡಳಿತವನ್ನು ಸಾಕಷ್ಟು ಹದಗೆಡಿಸಿದರು. ಈ ಅವ್ಯವಸ್ಥೆಯ ಲಾಭ ಪಡೆದು ನೆರೆ ರಾಷ್ಟ್ರಗಳವರು ಬಿಜಾಪುರದ ಆಂತರಿಕ ವಿಷಯಗಳಲ್ಲಿ ಕೈಹಾಕಲಾರಂಭಿಸಿದರು. ಇದೇ ಕಾಲದಲ್ಲಿ ದಖನ್ನಿನ ರಾಜಕೀಯದಲ್ಲಿ ಮುಗಲರು ಪ್ರವೇಶಿಸಿದ್ದರಿಂದ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು. ಇಬ್ರಾಹೀಂ ವಯಸ್ಸಿಗೆ ಬರುತ್ತಿದ್ದಂತೆ ಈ ಎಲ್ಲ ಸಮಸ್ಯೆಗಳನ್ನೂ ಎದುರಿಸಬೇಕಾಯಿತು. ಈ ಕಾರ್ಯಕ್ಕೆ ಇವನಿಗೆ ಸಹಾಯಕರೂ ಇರಲಿಲ್ಲ. ರಾಜಪ್ರತಿನಿಧಿ ದಿಲಾವರ್ ಖಾನನನ್ನು ಕಿತ್ತೊಗೆದು ತನ್ನ ಸಹೋದರ ಇಸ್ಮಾಯಿಲ್‌ನ ದಂಗೆಯನ್ನು ಅಡಗಿಸಿದ್ದು ಇಬ್ರಾಹೀಂನ ಮೊದಲ ಸಾಧನೆ. ಅಹಮದ್‌ನಗರದವರು ಬಿಜಾಪುರದ ತೊಂದರೆಗಳಿಗೆ ಮುಖ್ಯಕಾರಣರಾದ್ದರಿಂದ ಈತ ಮುಗಲರ ಜೊತೆ ಸ್ನೇಹ ಬೆಳೆಸಿ ಅಹಮದ್ ನಗರವನ್ನು ತುಳಿದ. ಬಿದರೆಯನ್ನು ವಶಪಡಿಸಿಕೊಂಡು ಅದನ್ನು ತನ್ನ ರಾಜ್ಯದೊಳಗೆ ಸೇರಿಸಿಕೊಂಡ (1619). ಇಬ್ರಾಹೀಂ ಸಾಕಷ್ಟು ದೀರ್ಘಕಾಲ ಆಳಿ ತನ್ನ ಕಲ್ಯಾಣ ಕಾರ್ಯಗಳಿಂದ ಜಗತ್‌ಗುರು ಎಂದು ಪ್ರಸಿದ್ಧನಾಗಿದ್ದ.

ಅನಂತರ ಪಟ್ಟಕ್ಕೆ ಬಂದ ಇವನ ಎರಡನೆಯ ಮಗ ಮಹಮ್ಮದ್ ಆದಿಲ್ ಷಾ (1627-56) ತನ್ನ ವಿರೋಧಿ ಸೋದರರನ್ನು ಹತ್ತಿಕ್ಕಿ, ಉತ್ತಮ ರಾಜಕೀಯ ಪಟುವಾಗಿ ಬೆಳೆದ. ಮುಗಲ್ ಸಾಮ್ರಾಜ್ಯ ಶಾಹಿಯ ವಿಸ್ತರಣೆಯನ್ನು 1636ರ ವರೆಗೂ ಯಶಸ್ವಿಯಾಗಿ ತಡೆದ. ಆದರೆ ಅದೇ ವರ್ಷ ಅನಿವಾರ್ಯವಾಗಿ ಮುಗಲರೊಂದಿಗೆ ಅಧೀನತ್ವದ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಉತ್ತರದಲ್ಲಿ ತನಗಾದ ನಷ್ಟವನ್ನು ಭರಿಸಲು ದಕ್ಷಿಣದ ಕಡೆ ತಿರುಗಿ ಕರ್ನಾಟಕದ ಬಹುಭಾಗದ ಮೇಲೆ ಪ್ರಭುತ್ವ

ಸ್ಥಾಪಿಸಿದ. ಇವನ ದಂಡನಾಯಕರುಗಳಾದ ರಣದುಲ್ಲಾಖಾನ್ ಮತ್ತು ಶಹಾಜೀ ಬೋನ್ಸ್ಲೆ ಅಪಾರ ಐಶ್ವರ್ಯವನ್ನೂ ಹೆಚ್ಚು ಪ್ರದೇಶಗಳನ್ನೂ ಗೆದ್ದುಕೊಟ್ಟರು. ಇವನ ಕಾಲದಲ್ಲಿ ಬಿಜಾಪುರ ವೈಭವದ ಉತ್ತುಂಗವನ್ನು ಕಂಡಿತು. ಇವನ ಕೊನೆಯ ಕಾಲದ ವೇಳೆಗೆ ಮರಾಠರು ಪ್ರಬಲಿಸಿದರು. ಇವನು ನಿಧನನಾಗುತ್ತಿದ್ದಂತೆಯೇ (1656) ಬಿಜಾಪುರ ಅವನತಿಯ ಹಾದಿ ಹಿಡಿಯಿತು. ಇವನ ಮಗ ಎರಡನೆಯ ಅಲಿ ಆದಿಲ್ ಷಾ (1656 - 72) ಅಧಿಕಾರಕ್ಕೆ ಬರುವಾಗ ಕೇವಲ 15 ವರ್ಷಗಳ ಬಾಲಕ. ಒಂದು ಕಡೆಯಿಂದ ಮುಗಲರೂ ಇನ್ನೊಂದು ಕಡೆಯಿಂದ ಮರಾಠರೂ ರಾಜ್ಯವನ್ನು ಒತ್ತುತ್ತಿದ್ದರು. ಅಲಿ ಸುಮಾರು ಒಂದು ದಶಕದ ಕಾಲ ಸ್ಥೈರ್ಯದಿಂದ ವರ್ತಿಸಿದರೂ ಒಂದೇ ಸಮನೆ ಅನುಭವಿಸಿದ ಹೊರಗಿನ ಸೋಲುಗಳು ಮತ್ತು ಒಳಗಿನ ಸಂಚುಗಳಿಂದ ಶಕ್ತಿಗುಂದಿ ಅನತಿಕಾಲದಲ್ಲಿ ಮೃತನಾದ (1672). ಅನಂತರ ಇವನ ಮಗ ಕೇವಲ ನಾಲ್ಕು ವರ್ಷದ ಬಾಲಕ ಸಿಕಂದರ ಅಧಿಕಾರಕ್ಕೆ ಬಂದ. ಮುಗಲರ ರಾಜ್ಯವಿಸ್ತರಣಾ ಪ್ರವಾಹ ಬಹು ರಭಸದಿಂದ ಹರಡುತ್ತಿದ್ದು 1686ರಲ್ಲಿ ಬಿಜಾಪುರವನ್ನೂ ಮುಳುಗಿಸಿತು. ಆ ಹೊತ್ತಿಗೆ ವಯಸ್ಸಿಗೆ ಬಂದಿದ್ದ ಸಿಕಂದರ್ ಶೌರ್ಯದಿಂದ ಹೋರಾಡಿದರೂ ಮುಗಲರ ಯುದ್ಧ ಯಂತ್ರಕ್ಕೆ ಇವನು ಸಾಟಿಯಾಗಿ ನಿಲ್ಲಲು ಸಾಧ್ಯವಾಗಲಿಲ್ಲ. ಆದಿಲ್ ಶಾಹೀ ಸಾಮ್ರಾಜ್ಯ ಕಣ್ಮರೆಯಾಯಿತು. ಸಿಕಂದರ್ ಔರಂಗಜೇಬನ ಬಂದಿಯಾಗಿ 1700ರಲ್ಲಿ ನಿಧನನಾದ. (ಬಿ.ಎಸ್.ಎ.)

**ಆಡಳಿತ ವ್ಯವಸ್ಥೆ :** ಆದಿಲ್ ಶಾಹೀಗಳು ತಮ್ಮ ಆಳ್ವಿಕೆಯ ಉತ್ತುಂಗ ಕಾಲದಲ್ಲಿ ಭಾರತ ಪರ್ಯಾಯ ದ್ವೀಪದ ಬಹುಭಾಗದ ಮೇಲೆ ಹತೋಟಿ ಹೊಂದಿದ್ದರು. ಅರಬ್ಬೀ ಸಮುದ್ರದಿಂದ ಹಿಡಿದು ಬಂಗಾಳ ಕೊಲ್ಲಿಯ ವರೆಗೂ ಇವರ ನಿಯಂತ್ರಣ ವ್ಯಾಪಿಸಿತ್ತು. ಇವರು ತಮ್ಮ ಆಡಳಿತ ಪದ್ಧತಿಯಲ್ಲಿ ಬಹಮನೀ ಆಡಳಿತ ಸಂಪ್ರದಾಯಗಳನ್ನೂ ವ್ಯವಸ್ಥೆಯನ್ನೂ ಅಳವಡಿಸಿಕೊಂಡರು. ಇವರ ಸರ್ಕಾರ ವ್ಯವಸ್ಥೆ, ಧಾರ್ಮಿಕ ಅಥವಾ ಸೈನಿಕ ಪ್ರಧಾನವಾಗದೆ ಪ್ರಬಲ ಪ್ರಭುತ್ವ ವರ್ಗ ಮತ್ತು ಪ್ರಭಾವೀ ಅಧಿಕಾರಿವರ್ಗಗಳಿಂದ ಬೆಂಬಲಿತವಾದ ರಾಜತ್ವವಾಗಿತ್ತು. ಸುಲ್ತಾನ ನಿರಂಕುಶ ಅಧಿಕಾರ ಪಡೆದಿದ್ದರೂ ಮಜ್ಲಿಸ್-ಇ-ಖಲ್ವಾತ್ ಎಂಬ ಸಲಹೆಗಾರರ ಮಂಡಲಿಯನ್ನು ಇಟ್ಟುಕೊಂಡಿರುತ್ತಿದ್ದ. ವಕೀಲ್-ಇ-ಸುಲ್ತನತ್ (ಪ್ರಧಾನಮಂತ್ರಿ), ಅಮೀರ್-ಇ-ಜುಮ್ಲಾ (ಅರ್ಥಮಂತ್ರಿ), ಮಸ್ತಾಫಿ-ಅಲ್-ಮುಲ್ಕ್ (ಉಪ ಅರ್ಥಮಂತ್ರಿ), ಪೇಶ್ವ, ಅರಮನೆ ಮೇಲ್ವಿಚಾರಕ, ಗೂಢಚರ್ಯೆಯ ಅಧಿಕಾರಿಗಳು ಮೊದಲಾದವರಿಂದ ಕೂಡಿದ ಮಂತ್ರಿಮಂಡಲ ಸಹ ಇರುತ್ತಿತ್ತು. ಕೆಲವೊಂದು ವ್ಯತ್ಯಾಸಗಳನ್ನು ಬಿಟ್ಟರೆ ಮತ್ತೆಲ್ಲ ರೀತಿಯಿಂದಲೂ ಆದಿಲ್ ಶಾಹೀಗಳ ಆಡಳಿತ ಪದ್ಧತಿ ಬಹಮನೀ ಪದ್ಧತಿಯನ್ನೇ ಹೋಲುತ್ತಿತ್ತು. ಬಹಮನೀ ರಾಜ್ಯಾಡಳಿತದಲ್ಲಿ ಬಿಜಾಪುರ ಒಂದು ತರಫ್ (ಪ್ರಾಂತ್ಯ) ಮಾತ್ರ ಆಗಿತ್ತು. ಅದು ಸ್ವತಂತ್ರ ರಾಜ್ಯವಾದ ಮೇಲೆ ಅದರೊಳಗೆ ಮತ್ತಷ್ಟು ತರಫ್ ವಿಭಾಗಗಳನ್ನು ಮಾಡಲಾಗದಷ್ಟು ಚಿಕ್ಕದಾಗಿತ್ತು. ಆದ್ದರಿಂದ ತರಫ್ ಮತ್ತು ತರಫ್‌ದಾರ್ ಎಂಬ ಪದಗಳ ಬದಲಾಗಿ ಜಾಗೀರ್ ಮತ್ತು ಜಾಗೀರ್‌ದಾರ್ ಎಂಬ ಪದಗಳನ್ನು ಬಳಸಲಾಯಿತು. ಹೊಸದಾಗಿ ಸಾಧಿಸಿಕೊಂಡ ವಿಜಯನಗರ ಸಾಮ್ರಾಜ್ಯದ ಭಾಗಗಳನ್ನು ತಮ್ಮ ರಾಜ್ಯದ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ತರಲು ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲವಾದ್ದರಿಂದ ಆ ಭಾಗದಲ್ಲಿ ಅಧಿಕಾರ ಹೊಂದಿದ್ದ ಸ್ಥಳೀಯ ಪಾಳೆಯಗಾರರಿಗೆ ಆಡಳಿತವನ್ನು ಬಿಟ್ಟುಕೊಟ್ಟು, ಅವರು ನಿಗದಿಯಾದ ಕಪ್ಪವನ್ನು ಒಪ್ಪಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಕೆಲವು ಸಂದರ್ಭಗಳಲ್ಲಿ ಆ ಭಾಗಗಳನ್ನೂ ವಶಪಡಿಸಿಕೊಂಡು ರಾಜ್ಯದ ಅಧಿಕಾರಿಗಳಿಗೆ ಜಹಗೀರಾಗಿ ನೀಡಲಾಗುತ್ತಿತ್ತು. ಪ್ರಭುತ್ವದ ನಾಡುಗಳನ್ನು ಸರ್ಕಾರ್, ಪರಗಣ ಮತ್ತು ಮಂಡಾಗಳೆಂದು ವಿಭಾಗಿಸಲಾಗಿತ್ತು. ಪ್ರತಿಯೊಂದು ಸರ್ಕಾರದಲ್ಲಿಯೂ ನಾಲ್ವರು ಅಧಿಕಾರಿಗಳಿರುತ್ತಿದ್ದರು. ಅದರಲ್ಲಿ ಇಬ್ಬರು ಹಿಂದುಗಳು, ಒಬ್ಬ ಕಂದಾಯ ವಸೂಲಿ ಮಾಡುವವನು, ಇನ್ನೊಬ್ಬ ಲೆಕ್ಕಪತ್ರಗಳನ್ನಿಡುವವನು, ಸರ್ಕಾರದ ಮುಖ್ಯನಿಗೆ ಸುಬೇದಾರ ಅಥವಾ ಸರ್ ಹವಾಲ್ದಾರ್ ಎಂದು ಕರೆಯಲಾಗುತ್ತಿತ್ತು. ನಾಲ್ಕನೆಯ ಅಧಿಕಾರಿ ಖಾಜಿ. ಪರಗಣದಲ್ಲಿ ಕೊತ್ವಾಲ ದೇಶಮುಖ್ ಮತ್ತು ದೇಸಾಯಿಗಳೆಂಬ ಮೂವರು ಅಧಿಕಾರಿಗಳಿರುತ್ತಿದ್ದರು. ಇವರು ಪೊಲೀಸ್ ಮತ್ತು ಕಂದಾಯದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಸಾಮಾನ್ಯವಾಗಿ ಕಂದಾಯದ ಅಧಿಕಾರಿಗಳು ಹಿಂದುಗಳಾಗಿರುತ್ತಿದ್ದರು. ಕಂದಾಯಕ್ಕೆ ಸಂಬಂಧಿಸಿದ ಪರಗಣದ ಆಡಳಿತವ್ಯವಸ್ಥೆಯೆಲ್ಲಾ ಇವರ ಜವಾಬ್ದಾರಿಯಲ್ಲಿರುತ್ತಿತ್ತು. ಹಳ್ಳಿಗಳು ಆಡಳಿತದ ಅತ್ಯಂತ ಚಿಕ್ಕ ಘಟಕಗಳಾಗಿದ್ದು ಅವುಗಳ ಆಡಳಿತಕ್ಕೆ ಪಂಚಾಯಿತಿಗಳು ಇರುತ್ತಿದ್ದುವು. ಇವುಗಳ ಆಡಳಿತದಲ್ಲಿ ಅಧಿಕಾರಿಗಳು ಸಾಮಾನ್ಯವಾಗಿ ತಲೆಹಾಕುತ್ತಿರಲಿಲ್ಲ. ಗ್ರಾಮದ ಮುಖ್ಯಸ್ಥ ಪಾಟೀಲ. ಅವನು ಪೊಲೀಸ್, ನ್ಯಾಯ ಮತ್ತು ಕಂದಾಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ. ಅವನಿಗೆ ಕುಲಕರ್ಣಿ (ಲೆಕ್ಕಾಧಿಕಾರಿ) ಎಂಬ ಸಹಾಯಕನಿರುತ್ತಿದ್ದ. ಜೊತೆಗೆ ಚೌಕಿದಾರ ಅಥವಾ ಕಾವಲುಗಾರನಿರುತ್ತಿದ್ದ. ಇವರ ಸೇವೆಗಾಗಿ ಇವರಿಗೆ ಸ್ವಲ್ಪ ಭೂಮಿಗಳನ್ನು ದತ್ತಿಯಾಗಿ (ಇನಾಂ) ನೀಡಲಾಗುತ್ತಿತ್ತು. ಪ್ರಭುತ್ವದ ಜಮೀನುಗಳಲ್ಲಿ ರೈತವಾರಿ ಪದ್ಧತಿ ಜಾರಿಯಲ್ಲಿತ್ತು. ಸರ್ಕಾರ ತನಾಬ್ ಅಥ‌ವಾ ಸರಪಳಿಯಿಂದ ಜಮೀನನ್ನು ಅಳೆದು ಕಂದಾಯ ನಿಗದಿಪಡಿಸುತ್ತಿತ್ತು. ಈ ಕಂದಾಯ ಆಯಾ ಪ್ರದೇಶ ಅಥವಾ ಫಲವತಿಗನುಗುಣವಾಗಿ ಒಟ್ಟು ಉತ್ಪನ್ನದ $^{1}/_{10}$ ರಿಂದ $^{1}/_{2}$ ಭಾಗದ ವರೆಗೂ ಇರುತ್ತಿತ್ತು. ಇದಲ್ಲದೆ ಜಹಗೀರಿ, ಇನಾಂ, ಅಗ್ರಹಾರ ಮತ್ತು ವಕ್ಫ್‌ಗಳಂಥ ಪದ್ಧತಿಗಳೂ ಇದ್ದವು.

ಸರ್ಕಾರಕ್ಕೆ ಯುದ್ಧದಲ್ಲಿ ಗೆದ್ದುತಂದ ಐಶ್ವರ್ಯ, ವಾರ್ಷಿಕ ಕಪ್ಪ, ವಸ್ತುಗಳ ಮೇಲಿನ ತೆರಿಗೆ, ವಾಣಿಜ್ಯ ಸುಂಕ, ವಿಶೇಷ ಸಂದರ್ಭಗಳಲ್ಲಿ ರಾಜನಿಗೆ ಬರುವ ಕಾಣಿಕೆಗಳು -ಇವು ಆದಾಯ ಮೂಲಗಳು. ರಾಯಚೂರು ಪ್ರದೇಶದ ವಜ್ರದ ಗಣಿಗಳಿಂದಲೂ ಉತ್ತಮ ಆದಾಯ ಬರುತ್ತಿತ್ತು.

**ಆರ್ಥಿಕ ಸಾಮಾಜಿಕ ಸ್ಥಿತಿ :** ಆದಿಲ್‌ಶಾಹೀ ರಾಜರು ಹೊರಗಿನಿಂದ ಬಂದವರಾದರೂ ಬಹುಬೇಗನೆ ಸ್ಥಳೀಯ ಜನರೊಂದಿಗೆ ಬೆರೆತು ಆ ಜನರ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಿದರು. ವ್ಯವಸಾಯ ಜನರ ಮುಖ್ಯ ಕಸಬಾಗಿತ್ತು. ಬತ್ತ, ಮುಸುಕಿನ ಜೋಳ, ಜೋಳ, ಸಜ್ಜೆ ಮತ್ತು ಕೆಲವೆಡೆ ಗೋದಿ ಮುಖ್ಯ ಆಹಾರಬೆಳೆಗಳಾಗಿದ್ದುವು. ತೊಗರಿ ಮುಖ್ಯವಾದ ದ್ವಿದಳಧಾನ್ಯ. ಕಾರವಾರ, ಕೊಂಕಣ ಭಾಗದಲ್ಲಿ ಬೆಳೆಯುತ್ತಿದ್ದ ಮೆಣಸು, ಏಲಕ್ಕಿ, ತೆಂಗು, ಗೇರುಬೀಜ ಮತ್ತು ವೀಳ್ಯದ ಎಲೆ ಇವು ಮುಖ್ಯ ವಾಣಿಜ್ಯ ಬೆಳೆಗಳಾಗಿದ್ದವು. ಪೂರ್ವಭಾಗದಲ್ಲಿರುವ ಕಪ್ಪುಮಣ್ಣಿನಲ್ಲಿ ಹತ್ತಿ ಸಾಗುವಳಿ ವ್ಯಾಪಕವಾಗಿತ್ತು. ಕಬ್ಬನ್ನು ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಹೊಗೆಸೊಪ್ಪನ್ನು ಪೋರ್ಚುಗೀಸರು ಭಾರತಕ್ಕೆ ತಂದರು. 17ನೆಯ ಶತಮಾನದ ಹೊತ್ತಿಗೆ ಅದರ ಸಾಗುವಳಿ ದಖನ್ ಪ್ರದೇಶದಲ್ಲಿ ದೃಢವಾಗಿ ಬೇರೂರಿತು. ಆರ್ಥಿಕ ದೃಷ್ಟಿಯಿಂದ ಈ ಬೆಳೆಗೆ ಹೆಚ್ಚು ಮಹತ್ತ್ವವಿತ್ತು. ವಿವಿಧ ಬಗೆಯ ಹಣ್ಣುಗಳು ಮತ್ತು ಹೂವುಗಳನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ ಮಾವು, ಬಾಳೆಹಣ್ಣು, ಕಿತ್ತಲೆ, ನಿಂಬೆ, ಕಲ್ಲಂಗಡಿ ಮುಖ್ಯವಾದವು. ದ್ರಾಕ್ಷಿ ಸಹ ದಖನ್ನಿನ ಎತ್ತರ ಪ್ರದೇಶದಲ್ಲಿ ಬೆಳೆಯುತ್ತಿತ್ತು. ಕೊಂಕಣ ಪ್ರದೇಶದಲ್ಲಿ ಹಲಸು, ಅನಾನಸು ಮತ್ತು ಪರಂಗಿ ಹಣ್ಣಗಳು ಬೆಳೆಯುತ್ತಿದ್ದವು. ಹುಣಿಸೆಮರಗಳು ಇದ್ದವು. ಶುಂಠಿಯನ್ನೂ ಬೆಳೆಯಲಾಗುತ್ತಿತ್ತು. ಸ್ವಲ್ಪಮಟ್ಟಿಗೆ ಗಸಗಸೆ ಸಹ ಬೆಳೆಯುತ್ತಿದ್ದು, ಅದರಿಂದ ತಯಾರಿಸಿದ ಅಫೀಮು ಔಷಧವಾಗಿಯೂ ಬಂಗಿ ಸೇದಲೂ ಉಪಯೋಗವಾಗುತ್ತಿತ್ತು.

ಸಕ್ಕರೆಯನ್ನು ಕರ್ನಾಟಕ ಭಾಗದಲ್ಲಿ ಉತ್ಪಾದಿಸಿ ಪರ್ಷಿಯ ಮತ್ತು ಅರೇಬಿಯ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಬಿಜಾಪುರದಲ್ಲಿ ಹತ್ತಿ ಮತ್ತು ರೇಷ್ಮೆ ಕೈಗಾರಿಕೆಗಳು ಸುಸ್ಥಿತವಾಗಿದ್ದುವು. ಈ ಹಲವಾರು ಕೈಗಾರಿಕೆಗಳು ಕೊಂಕಣದ ಬಂದರುಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ಥಾಪಿತವಾಗಿದ್ದವು. ಬಿಜಾಪುರದ ಹತ್ತಿ ವಸ್ತುಗಳಿಗೆ ಪರ್ಷಿಯ, ಅರೇಬಿಯ ಮತ್ತು ಪೂರ್ವ ಆಫ್ರಿಕ ಭಾಗಗಳಲ್ಲಿ ಹೆಚ್ಚು ಬೇಡಿಕೆ ಇತ್ತು. ನೇಯ್ಗೆಯವರಿಗೆ ಹಲವು ತೆರಿಗೆಗಳ ರಿಯಾಯಿತಿ ನೀಡಿ ನೇಯ್ಗೆ ಕೈಗಾರಿಕೆಗೆ ಉತ್ತೇಜನ ನೀಡಲಾಗುತ್ತಿತ್ತು. ಹುಬ್ಬಳ್ಳಿ, ಲಕ್ಷ್ಮೇಶ್ವರ ಮತ್ತು ಕಾರವಾರಗಳಲ್ಲಿ ಹತ್ತಿ ಕೈಗಾರಿಕೆ ಸಮೃದ್ಧವಾಗಿದ್ದುದನ್ನು ಇಂಗ್ಲಿಷರು ಕಂಡಿದ್ದಾರೆ. ದಖನ್ನಿನಲ್ಲಿ ತಯಾರಾಗುತ್ತಿದ್ದ ಹತ್ತಿಬಟ್ಟೆಗಳಲ್ಲಿ ಕ್ಯಾಲಿಕೋ ಮತ್ತು ಮಸ್ಲಿನ್ ಮುಖ್ಯ ಬಗೆಗಳು. ಬಿಜಾಪುರ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ ರತ್ನಗಂಬಳಿಯನ್ನು ನೇಯುವುದು ವಿಶೇಷವಾಗಿತ್ತು. ಧಾರವಾಡ ಸೀರೆಗಳಿಗೆ ಪ್ರಸಿದ್ಧವಾಗಿತ್ತು. ರಾಜ್ಯದ ವಿವಿಧ ಭಾಗಗಳಲ್ಲಿ ಕಲ್ಲುಪ್ಪನ್ನು ತಯಾರಿಸಲಾಗುತ್ತಿತ್ತು. ಸ್ವಲ್ಪಮಟ್ಟಿಗೆ ಕಬ್ಬಿಣದ ಅದುರನ್ನು

**ಆದಿಲ್ ಶಾಹೀ ವಂಶಾವಳಿ**

- (1) ಯೂಸುಫ್ ಆದಿಲ್ (1490-1510) (ಹೆಂ. ಮರಾಠ ಮುಕುಂದರಾವ್‌ನ ಮಗಳು)
  - (2) ಇಸ್ಮಾಯಿಲ್ ಆದಿಲ್ ಖಾನ್ (1510-34)
    - (3) ಮಲ್ಲು ಆದಿಲ್ ಖಾನ್ (1534-35)
    - ಆಲಿಂಖಾನ್
    - (4) ಇಬ್ರಾಹಿಂ ಆದಿಲ್ ಷಾ 1 (1535-58) (ಹೆಂ. ಬೆಳಗಾಂವಿಯ ಅಸದ್‌ಖಾನ್‌ನ ಮಗಳು)
      - ಇಸ್ಮಾಯಿಲ್
      - (5) ಅಲಿ ಆದಿಲ್ ಷಾ 1 (1558-80) (ಹೆಂ. ಅಹಮದ್‌ನಗರದ ಚಾಂದ್‌ಬೀಬೀ)
      - ತಹ್‌ಮಾಸಪ್
        - ಇಸ್ಮಾಯಿಲ್
        - (6) ಇಬ್ರಾಹಿಂ ಆದಿಲ್ ಷಾ (1580-1627) (ಹೆಂ. ಗೋಲ್ಕೊಂಡದ ಚಾಂದ್‌ಸುಲ್ತಾನಾ, ಮಲಿಕಾ ಎ ಜಹಾನ್, ತಾಜ್ ಸುಲ್ತಾನಾ, ಕಮಾಲ್ ಖಾತೂನ್, ಸುಂದರ್ ಮಹಲ್)
          - ದರ್ವೇಶ್
          - ಸುಲೈಮಾನ್
          - (7) ಮುಹಮ್ಮದ್ ಆದಿಲ್ ಷಾ (1627-56) (ಹೆಂ. ತಾಜ್ ಜಹಾನ್ ಬೇಗಂ, ಗೋಲ್ಕೊಂಡದ ಖದೀಜಾ ಸುಲ್ತಾನಾ, ಉರೂಸ್ ಬೇಗಂ)
            - (8) ಅಲಿ ಆದಿಲ್ ಷಾ II (1656-72) (ಹೆಂ. ಖುರ್ಷಿದ್ ಖಾನಂ)
              - ಪಾದ್ ಷಾ ಬೀಬೀ ಶಹರ್ ಬಾನು ಬೇಗಂ (ಗಂ. ಮಹಮ್ಮದ್ ಆಜಂ)
              - ಹುಸೇನ್
              - (9) ಸಿಕಂದರ್ ಆದಿಲ್ ಷಾ (1672-86)
          - ಖಿಜರ್ ಷಾ
          - ಜೊಹ್ರಾ ಸುಲ್ತಾನ್
          - ಬುರ್ಹಾನ್
          - ಸುಲ್ತಾನಾ ಬೇಗಂ (ಗಂ. ಮುಗಲ್ ರಾಜಕುಮಾರ್ ದನಿಯಾಲ್)
          - ಫಾತಿಮಾ ಸುಲ್ತಾನಾ (ಗಂ. ಹಬೀಬುಲ್ಲಾ ಹುಸೇನ್)
      - ಅಹ್ಮದ್
      - ತಾನೀಬೀಬೀ (ಗಂ. ಅಲಿ ಬರೀದ್)
      - ಹದಿಯಾ ಸುಲ್ತಾನಾ (ಗಂ. ಮುರ್ಕುಜಾ ನಿಜಾಮ್ ಉಲ್-ಮುಲ್ಕ್)
    - ಅಬ್ದುಲ್ಲಾ
  - ಮರ್ಯಂ ಸುಲ್ತಾನಾ (ಗಂ. ಬುರ್ಹಾನ್ ನಿಜಾಮ್ ಷಾ 1)
  - ಬೀಬೀ ಸಿತ್ತೀ (ಗಂ. ಅಹ್ಮದ್ ಷಾ ಬಹಮನೀ ಅಮೀರ್ ಬರೀದ್)
  - ಖದೀಜಾ ಸುಲ್ತಾನಾ (ಗಂ. ಅಲಾಉದ್ದೀನ್ ಇಮಾದ್ ಉಲ್-ಮುಲ್ಕ್)

ತೆಗೆಯಲಾಗುತ್ತಿತ್ತು. ಇವುಗಳ ಜೊತೆಗೆ ಈ ರಾಜ್ಯದಲ್ಲಿ ನೀಲಮಣಿ, ಪದ್ಮರಾಗ, ಪಚ್ಚೆ ಮೊದಲಾದ ಅಮೂಲ್ಯ ಕಲ್ಲುಗಳು ದೊರೆಯುತ್ತಿದ್ದವು. ಇವುಗಳಲ್ಲಿ ವಜ್ರ ಬಹು ಮುಖ್ಯವಾದುದು. 16 ಮತ್ತು 17ನೆಯ ಶತಮಾನಗಳಲ್ಲಿ ಬಿಜಾಪುರಕ್ಕೆ ಭೇಟಿನೀಡಿದ ಬಹುತೇಕ ಪ್ರವಾಸಿಗಳೆಲ್ಲ ಈ ರಾಜ್ಯದಲ್ಲಿದ್ದ ವಜ್ರದ ಗಣಿಗಳ ಬಗ್ಗೆ ಹೇಳಿದ್ದಾರೆ. ಇಲ್ಲಿ ಸು.15 ವಜ್ರದ ಗಣಿಗಳಿದ್ದವು. ಇಲ್ಲಿನ ವಜ್ರಗಳು ಉತ್ತಮ ದರ್ಜೆಯವಾಗಿದ್ದುವು. ಆದರೆ ಗಾತ್ರದಲ್ಲಿ ಗೋಲ್ಕೊಂಡದ್ದಕ್ಕಿಂತ ಚಿಕ್ಕದಾಗಿರುತ್ತಿದ್ದವು. ವಜ್ರವನ್ನು ಕತ್ತರಿಸುವ ಮತ್ತು ಸಾಣೆಹಿಡಿಯುವ ಅನೇಕ ಕೆಲಸಗಾರರು ಈ ಗಣಿಗಳ ಬಳಿ ಇರುತ್ತಿದ್ದರು. ಈ ಉದ್ಯಮ ಗುಜರಾತಿ ವ್ಯಾಪಾರಿಗಳ ಕೈಯಲ್ಲಿತ್ತು. ಗಣಿಗಳು ರಾಜನ ಆಸ್ತಿಯಾಗಿದ್ದುವು. ಉತ್ಪಾದಕರಿಗೆ ಗೇಣಿಯ ಮೇಲೆ ಕೊಡಲಾಗುತ್ತಿತ್ತು. ಇಲ್ಲಿಂದ ವಜ್ರಗಳು ಸೂರತ್, ಗೋವ, ಆಗ್ರಾ, ದೆಹಲಿ ಮತ್ತಿತರ ಸ್ಥಳಗಳಿಗೆ ಹೋಗುತ್ತಿದ್ದವು.

ಆದಿಲ್‌ಶಾಹೀ ರಾಜ್ಯದಲ್ಲಿ ಹಿಂದುಗಳೇ ಅಧಿಕಸಂಖ್ಯೆಯಲ್ಲಿದ್ದರು. ಅವರಲ್ಲಿ ಈಗಿನಂತೆಯೇ ಜಾತಿಪದ್ಧತಿ ಇತ್ತು. ಬ್ರಾಹ್ಮಣರು ಸಮಾಜದಲ್ಲಿ ಉತ್ತಮ ವರ್ಗಕ್ಕೆ ಸೇರಿದ್ದು ಹೆಚ್ಚಿನ ಅಧಿಕಾರ ಪಡೆದಿದ್ದರು. ಹಿಂದುಗಳ ಎಲ್ಲ ಧಾರ್ಮಿಕ ವಿಧಿಗಳಿಗೂ ಅವರ ಆವಶ್ಯಕತೆಯಿತ್ತು. ಅವರಲ್ಲಿ ಕೆಲವರು ವೈದ್ಯಕೀಯ ವೃತ್ತಿಯನ್ನು ಕೈಗೊಂಡಿದ್ದರು. ಪ್ರತಿಯೊಂದು ಕುಟುಂಬವೂ ಸಾಮಾನ್ಯ ಕಾಯಿಲೆಗೆ ಬೇಕಾಗುವ ಗಿಡಮೂಲಿಕೆಗಳನ್ನು ಇಟ್ಟುಕೊಂಡಿರುತ್ತಿತ್ತು,.

ಜನರ ಮನರಂಜನೆಗಳು ಸುಲಭರೀತಿಯವಾಗಿರುತ್ತಿದ್ದವು. ಹಳ್ಳಿಯಿಂದ ಹಳ್ಳಿಗೆ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸಿ ಮನರಂಜನೆ ನೀಡುವ ವಿವಿಧ ಬಗೆಯ ವಲಸೆಗಾರರ ಗುಂಪುಗಳಿದ್ದವು. ಅವರಲ್ಲಿ ಹಾವಾಡಿಗರು, ದೊಂಬರು, ಹರಿಕಥೆ ಮಾಡುವವರು ಇದ್ದರು.

ವಿನೋದಕ್ಕಾಗಿ ಕೋಳಿ ಜೂಜು ಸಾಮಾನ್ಯವಾಗಿತ್ತು. ರಾಜಮನೆತನದವರು ಮತ್ತು ಶ್ರೀಮಂತರು ಬೇಟೆಯಾಡುತ್ತಿದ್ದರು. ವಾರ್ಷಿಕ ಜಾತ್ರೆಗಳು ಮತ್ತು ಉತ್ಸವಗಳು ಅಲ್ಲಲ್ಲಿ ಜರುಗುತ್ತಿದ್ದು ಬಡಜನರಿಗೆ ನಿತ್ಯದುಡಿತದಿಂದ ಬಿಡುವನ್ನು ಒದಗಿಸುತ್ತಿದ್ದವು. ಬೇರೆ ಬೇರೆಡೆಗಳಲ್ಲಿದ್ದ ಸ್ನೇಹಿತರು ಅಲ್ಲಿ ಒಂದುಗೂಡಲು ಅವಕಾಶವಾಗುತ್ತಿತ್ತು. ಮುಸ್ಲಿಮರು ಉರುಸ್ ಸಂದರ್ಭದಲ್ಲಿ ಒಟ್ಟಿಗೆ ಸೇರುತ್ತಿದ್ದರು. ಹರಿದಾಸರು ಗ್ರಾಮದಿಂದ ಗ್ರಾಮಕ್ಕೆ ತೆರಳಿ ಧರ್ಮ ಬೋಧೆಯನ್ನೂ ಮನರಂಜನೆಯನ್ನೂ ನೀಡುತ್ತಿದ್ದರು. ಬಡವರು ದಟ್ಟಿಯಷ್ಟನ್ನೇ ಕಟ್ಟುತ್ತಿದ್ದರು. ಹೆಂಗಸರೂ ಹೆಚ್ಚು ಬಟ್ಟೆ ಧರಿಸುತ್ತಿರಲಿಲ್ಲ. ಬ್ರಾಹ್ಮಣರು ಆಂಗ್ರಕ ಎಂಬ ಮುಸ್ಲಿನ್‌ನ ನಿಲುವಂಗಿ ಹಾಕಿಕೊಂಡು ಪೇಟ ಇಟ್ಟುಕೊಳ್ಳುತ್ತಿದ್ದರು. ಮುಸ್ಲಿಮರು ಬಿಗಿಯಾದ ಪೈಜಾಮ, ಅಂಗಿ, ಉದ್ದನೆಯ ಕೋಟು ಮತ್ತು ಪೇಟವನ್ನು ಧರಿಸುತ್ತಿದ್ದರು. ಶ್ರೀಮಂತ ಹಿಂದೂ ಮಹಿಳೆಯರು ಆಭರಣವನ್ನು ಹೆಚ್ಚಾಗಿ ಧರಿಸುತ್ತಿದ್ದರು. ಮೂಗುತಿ, ಕಾಲ್ಗಡಗ, ಕೈಕಡಗ ಮತ್ತು ಕಂಠಾಭರಣಗಳು ಮುಖ್ಯವಾಗಿದ್ದವು. ಬಡವರು ಗಾಜಿನ ಬಳೆಗಳನ್ನು ತೊಡುತ್ತಿದ್ದರು. ಶ್ರೀಮಂತರ ಮನೆಗಳು ಸುಸಜ್ಜಿತವಾಗಿರುತ್ತಿದ್ದವು. ಕೆಲವು ರೋಗಗಳು ಹಾಗೂ ಹುಳಹುಪ್ಪಟೆಗಳನ್ನು ದೂರವಿಡಲು ನೆಲಕ್ಕೆ ಸಗಣಿ ಸಾರಿಸುತ್ತಿದ್ದರು. (ಪೆಟ್ರೊ-ಡ-ಲವೆಲ್ಲೆ ಇದನ್ನು ಇಟಲಿಯಲ್ಲೂ ರೂಢಿಗೆ ತರಲು ಬಯಸಿದ್ದನಂತೆ). ಬ್ರಾಹ್ಮಣರು, ಬನಿಯಾಗಳು ಸಸ್ಯಾಹಾರಿಗಳಾಗಿದ್ದರು. ಅಕ್ಕಿ, ಜೋಳ, ಗೋದಿ ಮತ್ತು ದ್ವಿದಳಧಾನ್ಯಗಳು ತುಪ್ಪ, ತರಕಾರಿ ಅವರ ಮುಖ್ಯ ಆಹಾರವಾಗಿತ್ತು. ಉಳಿದ ಜಾತಿಯುವರು ಮಾಂಸ, ಮೀನು ಮೊದಲಾದವುಗಳನ್ನೂ ಉಪಯೋಗಿಸುತ್ತಿದ್ದರು. ಕೊಂಕಣ ಕರಾವಳಿಯಲ್ಲಿ ಮೀನು ವಿಶೇಷವಾಗಿ ದೊರಕುತ್ತಿತ್ತು. ಸಾಮಾನ್ಯ ಜನರು ಅನ್ನ ಮತ್ತು ಧಾನ್ಯಗಳನ್ನು ಆಹಾರವಾಗಿ ಬಳಸುತ್ತಿದ್ದರು. ಕೊಂಕಣ ಕರಾವಳಿಯಲ್ಲಿ ಮೀನು ವಿಶೇಷವಾಗಿ ದೊರಕುತ್ತಿತ್ತು. ಸಾಮಾನ್ಯ ಜನರು ಅನ್ನ ಮತ್ತು ಧಾನ್ಯಗಳನ್ನು ಆಹಾರವಾಗಿ ಬಳಸುತ್ತಿದ್ದರೆಂದು ಫ್ರೈಯರ್ ಹೇಳಿದ್ದಾನೆ. ಮುಸ್ಲಿಮರು ಮಾಂಸ ಮತ್ತು ಗೋದಿಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಹಿಂದುಗಳು ಎಲೆಯಲ್ಲಿ ಊಟಮಾಡುತ್ತಿದ್ದರು. ಅರಮನೆಯಲ್ಲಿ ಪಿಂಗಾಣಿ ಪಾತ್ರೆಗಳು ಉಪಯೋಗದಲ್ಲಿದ್ದವು. ವೀಳ್ಯದ ಎಲೆಯನ್ನು ಎಲ್ಲವರ್ಗದ ಜನರೂ ಉಪಯೋಗಿಸುತ್ತಿದ್ದರು. ಪೋರ್ಚುಗೀಸ ಹೆಂಗಸರು, ಗಂಡಸರು ಸಹಾ ಈ ಅಭ್ಯಾಸ ಬೆಳೆಸಿಕೊಂಡಿದ್ದರು.

**ಲಲಿತಕಲೆ ಮತ್ತು ಸಾಹಿತ್ಯ :** ಆದಿಲ್‌ಶಾಹೀಗಳು ಬೌದ್ಧಿಕ ಚಟುವಟಿಕೆಗಳಿಗೆ ಪ್ರೋತ್ಸಾಹವಿತ್ತರು. ವಿದ್ವತ್ ಜನರಿಗೆ ಹಾಗೂ ಕಲಾವಿದರಿಗೆ ಪೋಷಕರಾಗಿದ್ದರು. ಕೆಲವು ರಾಜರು ಸ್ವತಃ ಗಣನೀಯ ಸಾಂಸ್ಕೃತಿಕ ಸಾಧನೆಗಳನ್ನು ಮಾಡಿದ್ದರು. ಯೂಸುಫ್ ಆದಿಲ್ ಷಾ ಪಾರಸೀ ಭಾಷೆಯಲ್ಲಿ ಕವಿಯೂ ಸಮರ್ಥ ಬರೆಹಗಾರನೂ ಆಗಿದ್ದ. ತನ್ನ ಆಸ್ಥಾನಕ್ಕೆ ಇರಾನ್, ಟುರಾನ್, ಅರೇಬಿಯ ಮತ್ತು ತುರ್ಕಿಗಳಿಂದ ವಿದ್ವಾಂಸರನ್ನು ಕರೆತಂದಿದ್ದ. ಇವನ ಉತ್ತರಾಧಿಕಾರಿ ಇಸ್ಮಾಯಿಲ್ ಆದಿಲ್ ಷಾ ಸ್ವತಃ ಕವಿಯಾಗಿದ್ದುದ್ದಲ್ಲದೇ ವಿದ್ವಾಂಸರಿಗಾಗಿ ಅಪಾರ ಹಣವನ್ನು ವಿನಿಯೋಗಿಸುತ್ತಿದ್ದ. ಇವನು ಪಾರಸಿ ಮತ್ತು ತುರ್ಕಿಭಾಷೆಗಳೆರಡರಲ್ಲೂ ಕೃತಿಗಳನ್ನು ರಚಿಸಿದ್ದಾನೆ. ಆದಿಲ್‌ಶಾಹೀ ರಾಜರು ಇತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಆಸಕ್ತರಾಗಿದ್ದು ಲಲಿತಕಲೆಗಳನ್ನೂ ಪ್ರೋತ್ಸಾಹಿಸಿದ್ದಾರೆ. ಇಸ್ಮಾಯಿಲ್ ಆದಿಲ್‌ಷಾ ಚಿತ್ರಕಲೆ, ಆಭರಣಗಳ ತಯಾರಿ, ಬಿಲ್ಲು ಬಾಣಗಳ ರಚನೆ ಇವುಗಳಲ್ಲಿ ನಿಷ್ಣಾತನಾಗಿದ್ದ. ಒಳ್ಳೆಯ ಉಡುಪು, ಆಹಾರಗಳಲ್ಲಿ ಆಸಕ್ತಿ ತೋರಿಸುತ್ತಿದ್ದ. ಎರಡನೆಯ ಇಬ್ರಾಹೀಂ ಆದಿಲ್ ಷಾ ಸಂಗೀತಪ್ರೇಮಿ. ಇವನ ಆಸ್ಥಾನದಲ್ಲಿ ಸಂಗೀತ ಚೆನ್ನಾಗಿ ಬೆಳೆಯಿತು. ಇವನೇ ಸ್ವತಃ ಆ ಕಾಲದ ಪ್ರಸಿದ್ಧ ಸಂಗೀತಗಾರನಾಗಿದ್ದುದ್ದಲ್ಲದೇ ಕಿತಾಬೆನವರಸ್ ಎಂಬ ಉತ್ತರಾದಿ ಸಂಗೀತ ಪದ್ಧತಿಯ ವಿವಿಧ ರಾಗಗಳಲ್ಲಿರುವ ಹಾಡುಗಳ ಗ್ರಂಥವನ್ನು ರಚಿಸಿದ್ದಾನೆ. ನಿಷ್ಠಾವಂತ ಸಂಗೀತಗಾರನಾಗಿ ಸಂಗೀತದ ಅಧಿದೇವತೆ ಸರಸ್ವತಿ ಹಾಗೂ ಜ್ಞಾನದೇವತೆ ಗಣಪತಿಗೆ ಯಾವ ಸಂಕೋಚವೂ ಇಲ್ಲದೆ ಭಕ್ತಿಯನ್ನು ತೋರಿಸಿದ್ದಾನೆ. ಹಿಂದುದೇವತೆಗಳ ಬಗ್ಗೆ ಗೌರವ ವ್ಯಕ್ತಪಡಿಸಿದ್ದರೂ ಇಬ್ರಾಹೀಂ ನಿಷ್ಠಾವಂತ ಮುಸ್ಲಿಂ ಧರ್ಮಗಳು ಬೇರೆ ಬೇರೆಯಾಗಿರಬಹುದು, ಆದರೆ ಹಿಂದುವಾಗಲಿ ಇಸ್ಲಾಮೀಯನಾಗಲಿ ರಸೋಲ್ಲಾಸದಲ್ಲಿ ವ್ಯತ್ಯಾಸಕಾಣುವ ಸಾಧ್ಯತೆಯಿಲ್ಲ ಎಂಬುದನ್ನು ಎತ್ತಿ ತೋರಿಸಿದ್ದಾನೆ.

ಪ್ರಾರಂಭದಲ್ಲಿ ಪಾರಸೀ ಹಾಗೂ ತುರ್ಕಿಗಳು ಆದಿಲ್‌ಶಾಹೀಗಳ ಆಸ್ಥಾನಭಾಷೆಗಳಾಗಿದ್ದವು. ಆದರೆ ತರುವಾಯ ಪಾರಸೀಯೊಂದನ್ನು ಮಾತ್ರ ಅಧಿಕೃತ ಭಾಷೆಯಾಗಿ ಅಂಗೀಕರಿಸಲಾಯಿತು. ಪಾರಸೀ ಅಧಿಕೃತ ಭಾಷೆಯಾಗಿದ್ದರೂ ಕನ್ನಡ ಹಾಗೂ ಮರಾಠಿಗಳೆರಡನ್ನೂ ಆಡಳಿತ ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು. ಇಲ್ಲಿನ ಮೊದಲ ಸುಲ್ತಾನರುಗಳ ಕಾಲದಲ್ಲಿ ದಖನಿ ಭಾಷೆ ರೂಪುಗೊಂಡಿತು. ಮುಂದೆ ಉರ್ದು ರೂಪುಗೊಂಡದ್ದು ಈ ದಖನಿಯಿಂದಲೇ. ಷಾ ಮಿರಂಜಿ ಮತ್ತು ಅವನ ಶಿಷ್ಯ ಬುರ್ಹಾನುದ್ದೀನ್ ಜಾನಮ್, ಈ ಬಿಜಾಪುರದ ಸೂಫಿಸಂತರು ದಖನೀ ಪದ್ಯಗಳನ್ನು ರಚಿಸಿರುವರಲ್ಲದೆ ಅದೇ ಭಾಷೆಯಲ್ಲಿ ತಮ್ಮ ಧರ್ಮಬೋಧೆ ಸಹ ಮಾಡುತ್ತಿದ್ದರು. ಇಬ್ರಾಹೀಂ ಆದಿಲ್ ಷಾನ ಕಾಲದಲ್ಲಿ ದಖನೀ ಭಾಷೆ ರಾಜಪ್ರೋತ್ಸಾಹವನ್ನೂ ಪಡೆಯಿತು. ಇವನ ಕಾಲದಲ್ಲಿ ರಾಜ್ಯದ ಪತ್ರಗಳು ಪಾರಸೀ, ಕನ್ನಡ ಮತ್ತು ಮರಾಠಿ ಭಾಷೆಯಲ್ಲಿರುತ್ತಿದ್ದುವು. ಬಿಜಾಪುರದಲ್ಲಿ ರಾಜಗ್ರಂಥಾಲಯ ಆರಂಭವಾದದ್ದೂ ಸುಮಾರು ಇದೇ ಕಾಲದಲ್ಲೇ. ಒಂದನೆಯ ಇಬ್ರಾಹೀಂ ಆದಿಲ್ ಷಾನ ಕಾಲದಲ್ಲಿ ಸಸ್ಯವರ್ಗ ಮತ್ತು ಪ್ರಾಣಿವರ್ಗದ ಮೇಲಿನ ಖ್ವಾಜ್‌ವಿನ್ ಎಂಬ ಅರಬ್ಬೀ ಕೃತಿಯನ್ನು ಪಾರಸಿಗೆ ಭಾಷಾಂತರಿಸಲಾಯಿತು. ಒಂದನೆಯ ಅಲಿ ಆದಿಲ್ ಷಾ ವಿದ್ವಜ್ಜನರ ಸಂಗವನ್ನು ಬಯಸುತ್ತಿದ್ದ. ಹಿಂದು ಹಾಗೂ ಮುಸ್ಲಿಂ ಸಾಧುಸಂತರ ಜೊತೆ ತತ್ತ್ವಶಾಸ್ತ್ರ ವಿಷಯಗಳನ್ನು ಚರ್ಚಿಸುತ್ತಿದ್ದ. ಅಲ್ಲದೆ ಇವನು ತನ್ನ ಆಸ್ಥಾನಕ್ಕೆ ಕ್ಯಾತೊಲಿಕ್ ಧರ್ಮ ನಿಯೋಗಗಳನ್ನೂ ಆಹ್ವಾನಿಸಿದ. ತನ್ನನ್ನು ಆದಿಲ್ ಷಾ ಸೂಫಿ ಎಂದು ಕರೆದುಕೊಂಡ. ಜಾತಿಮತಗಳ ವ್ಯತ್ಯಾಸವಿಲ್ಲದೆ ಪವಿತ್ರ ಸ್ಥಳಗಳಿಗೆ ಹಾಗೂ ವಿದ್ವಾಂಸರಿಗೆ ಭೂಮಿಗಳನ್ನು ದತ್ತಿ ಬಿಡುತ್ತಿದ್ದ. ಇವನು ಪುಸ್ತಕಪ್ರೇಮಿ. ಇವನ ಗ್ರಂಥಾಲಯದಲ್ಲಿ ಒಳ್ಳೆಯ ಪುಸ್ತಕ ಸಂಗ್ರಹವಿತ್ತು. ಅನಂತ ಪಂಡಿತನ ಮಗ ವಾಮನ ಪಂಡಿತ ಎಂಬ ಸಂಸ್ಕೃತ ವಿದ್ವಾಂಸನನ್ನು ವರ್ಷಕ್ಕೆ ಸಾವಿರ ವರಹದ ವೇತನದೊಂದಿಗೆ ಅರಮನೆಯ ಗ್ರಂಥಾಲಯದ ಗ್ರಂಥಪಾಲಕನನ್ನಾಗಿ ನೇಮಿಸಿಕೊಂಡಿದ್ದ. ಇಂದಿನ ಬೆಲೆಯಲ್ಲಿ ಅದು 90,000ರೂ.ಗಳನ್ನೂ ಮೀರುತ್ತದೆ. ಈ ಗ್ರಂಥಾಲಯಕ್ಕೆ ಸೇರಿದಂತೆ ವಿರಳ ಗ್ರಂಥಗಳ ಸಂಯೋಜನೆ ಮತ್ತು ಪ್ರತಿ ಮಾಡುವುದಕ್ಕಾಗಿ ಒಂದು ಪ್ರತ್ಯೇಕ ವಿಭಾಗವಿತ್ತು. ಇಲ್ಲಿ ಸುಮಾರು ಅರವತ್ತು ಜನ ಕುಶಲ ಬರಹಗಾರರೂ ಪುಸ್ತಕಗಳಿಗೆ ಮೆರಗು ಕಟ್ಟುವವರೂ ಇದ್ದರು. ಎರಡನೆಯ ಇಬ್ರಾಹೀಂ ಆದಿಲ್ ಷಾ ಬಹುದೊಡ್ಡ ವ್ಯಕ್ತಿ. ಪ್ರಜೆಗಳು ಪ್ರೀತಿಗೌರವಗಳಿಂದ ಜಗತ್‌ಗುರು ಎಂಬ ಬಿರುದನ್ನು ಅವನಿಗೆ ನೀಡಿದ್ದರು. ಇದನ್ನು ಹಣ್-ಎ-ನೌರಸ್ ಎಂಬ ತನ್ನ ದೊಡ್ಡ ಚಿನ್ನದ ನಾಣ್ಯಗಳ ಮೇಲೆ ಸಹ ಕೆತ್ತಿಸಿಕೊಂಡಿದ್ದಾನೆ. ಫೆರಿಸ್ತ ಎಂದು ಪ್ರಸಿದ್ಧನಾಗಿರುವ ಮಹಮ್ಮದ್ ಕಾಸಿಂ ಹಿಂದು ಷಾ ಎಂಬ ಖ್ಯಾತ ಇತಿಹಾಸಕಾರ ತಾರಿಖ್-ಇ-ಫೆರಿಸ್ತಾ ಎಂಬ ಗ್ರಂಥವನ್ನು ರಚಿಸಿದ್ದು ಈ ಕಾಲದಲ್ಲೇ. ಒಟ್ಟಿನಲ್ಲಿ ಆದಿಲ್‌ಶಾಹೀ ರಾಜರು ಕಲೆ ಹಾಗೂ ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಅವರು ಬಿಜಾಪುರವನ್ನು ಜ್ಞಾನಕೇಂದ್ರವನ್ನಾಗಿ ಮಾಡಿದುದಲ್ಲದೆ ಅವರ ಕಾಲದ ಭಾರತದ ಅತಿ ಸುಂದರ ನಗರಗಳಲ್ಲೊಂದಾಗುವಂತೆಯೂ ಮಾಡಿದರು.

**ವಾಸ್ತು-ಶಿಲ್ಪ :** ಭಾರತೀಯ ವಾಸ್ತುಶಿಲ್ಪ ವೈಭವಕ್ಕೆ ಬಿಜಾಪುರದ ಆದಿಲ್‌ಶಾಹೀಗಳು ಸಲ್ಲಿಸಿರುವ ಕಾಣಿಕೆ ಬಹು ಗಣನೀಯವಾದುದು. ಬಿಜಾಪುರಕ್ಕಿಂತ ಹೆಚ್ಚು ಭವ್ಯ ಕಟ್ಟಡಗಳನ್ನು ಕಲಾವೈಭವವನ್ನು ಹೊಂದಿರುವ ನಗರಗಳು ಭಾರತದಲ್ಲಿ ಬಹಳವಿಲ್ಲ. ಹೊಯ್ಸಳರ ಕಾಲದ ಅನಂತರ ಬಿಜಾಪುರದ ಆದಿಲ್‌ಶಾಹೀ ವಂಶವೇ ಸೌಂದರ್ಯೋಪಾಸನೆಯಲ್ಲೂ ರಚನಾಸಾಮರ್ಥ್ಯದಲ್ಲೂ ಅದ್ಭುತ ವಾಸ್ತುಶಿಲ್ಪವನ್ನು ಬೆಳೆಸಿದೆ ಎಂದು ಹೇಳಬಹುದು. ಇವರು ಗಾತ್ರ, ಸಂಖ್ಯೆ, ಅಲಂಕಾರ ವೈಭವದಲ್ಲಿ ಹಿಂದಿನವರ ಸಾಧನೆಯನ್ನು ಮೀರಿಸುವುದಕ್ಕೋಸ್ಕರ ವಾಸ್ತುಶಿಲ್ಪದ ಕಡೆಗೆ ತಮ್ಮ ಶಕ್ತಿ ಸಂಪನ್ಮೂಲಗಳನ್ನೆಲ್ಲ ವಿನಿಯೋಗಿಸಿದರು. ಇದರ ಫಲವಾಗಿ ಒಂದೇ ನಗರದಲ್ಲಿ ಐವತ್ತು ಮಸೀದಿಗಳು, ಇಪ್ಪತ್ತು ದರ್ಗಾಗಳು ಮತ್ತು ಸುಮಾರು ಅಷ್ಟೇ ಸಂಖ್ಯೆಯ ಅರಮನೆಗಳು ನಿರ್ಮಾಣವಾದವು. ಈ ಕಾಲದ ಭವ್ಯ ಮಂದಿರಗಳು ಕುಶಲತೆಯಲ್ಲಿ ಪರಿಪೂರ್ಣತೆ ಸಾಧಿಸಿವೆ. ಇಡೀ ಪ್ರಪಂಚದಲ್ಲಿ ಅತಿ ದೊಡ್ಡದಾದ ಗುಮ್ಮಟ ಚಾವಣಿ ಇರುವ ಗೋಳಗುಮ್ಮಟ ಈ ಕಾಲದ ಮಹಾಮೇಧಾವಿಯೊಬ್ಬನ ಅದ್ಭುತ ಸಾಧನೆ.

ಇಬ್ರಾಹೀಂ ರೋಜಾ

ಮೆಹತರ್ ಮಹಲ್



ಜಾಮೀಮಸೀದಿ



ಗೋಳಗುಮ್ಮಟ

ಬಿಜಾಪುರದಲ್ಲಿ ಕಟ್ಟಡಗಳ ರಚನಾ ಕಾರ್ಯ 16ನೆಯ ಶತಮಾನದ ಪೂರ್ವಾರ್ಧದಿಂದ ಪ್ರಾರಂಭವಾಯಿತು. ಆಗ ಒಂದು ಕೋಟೆ ಆಡಳಿತ ಕಛೇರಿ ಮತ್ತು ಎರಡು ಚಿಕ್ಕ ಮಸೀದಿಗಳು ನಿರ್ಮಾಣಗೊಂಡವು. 17ನೆಯ ಶತಮಾನದಲ್ಲಿ ಬಿಜಾಪುರದ ಶಕ್ತಿ ತುಟ್ಟತುದಿಯಲ್ಲಿದ್ದಾಗ ಈ ನಗರ ವಿಸ್ತಾರಗೊಂಡಿತು. ಎರಡನೆಯ ಇಬ್ರಾಹೀಂ ಆದಿಲ್ ಷಾ (1580-1627)ನವರಸಪುರ ಎಂಬ ಎರಡನೆಯ ನಗರವನ್ನು ಸ್ಥಾಪಿಸಿದ. ಆದರೆ ಎಲ್ಲ ಮುಖ್ಯ ಕಟ್ಟಡಗಳು ಹಳೆಯ ನಗರದ ಕೋಟೆಗೋಡೆಗಳ ಒಳಗಡೆಯೇ ಇವೆ. 17ನೆಯ ಶತಮಾನದ ಪ್ರಥಮಾರ್ಧಭಾಗ ಬಿಜಾಪುರದ ಕಲೆಯ ಸುವರ್ಣಯುಗ. ಇದು ಇಂಗ್ಲೆಂಡಿನ ಎಲಿಜಬತ್ ಯುಗದೊಡನೆ ಮತ್ತು ಪರ್ಷಿಯದ ಷಾ ಅಬ್ಬಾಸನ ಕಾಲದೊಂದಿಗೆ ಹೊಂದಿಕೊಂಡಿದೆ. ಇಲ್ಲಿಯ ಆಸಾರ್ ಮಹಲ್, ಗಗನ್ ಮಹಲ್, ಮೆಹತರ್ ಮಹಲ್, ಚೀನಿ ಮಹಲ್, ಗೋಳಗುಮ್ಮಟ, ಇಬ್ರಾಹೀಂ ರೋಜ, ಜಾಮೀಮಸೀದಿ ಮುಂತಾದವು ಆದಿಲ್‌ಷಾಹೀ ಸುಲ್ತಾನರ ಕಲಾಭಿಮಾನದ ಪ್ರತೀಕಗಳಾಗಿವೆ. ಬಿಜಾಪುರದ ಕಲಾ ಮತ್ತು ವಾಸ್ತುಶಿಲ್ಪ ಲಕ್ಷಣಗಳನ್ನು ಗಮನಿಸಿದಾಗ ಅದು ಹಳೆಯ ಪರ್ಷಿಯನ್ ಮತ್ತು ಆಟ್ಟೋಮನ್ ಕಲಾಪಂಥಗಳೊಂದಿಗೆ ಸಂಪರ್ಕವಿಟ್ಟುಕೊಂಡಿತ್ತೆಂದು ಕಂಡುಬರುತ್ತದೆ.

ಬಿಜಾಪುರದ ವಾಸ್ತುಶಿಲ್ಪದ ಕೆಲವು ಮುಖ್ಯ ಲಕ್ಷಣಗಳು ಹೀಗಿವೆ. ಮೊದಲನೆಯದಾಗಿ ಇಲ್ಲಿನ ಗುಮ್ಮಟ ಬಹುತೇಕವಾಗಿ ಆಕಾರದಲ್ಲಿ ವರ್ತುಲವಾಗಿದ್ದು ಅದರ ನೆಲಗಟ್ಟಿನಲ್ಲಿ ಹೂವಿನ ದಳದೋಪಾದಿಯ ಸಮೂಹವನ್ನು ನಿರ್ಮಿಸಿ ಮೇಲೇಳಿಸಲಾಗಿದೆ. ಕಟ್ಟಡದ ಮೇಲ್ಭಾಗದಲ್ಲಿ ಮಿನಾರುಗಳು ಸ್ತಂಭಗೋಪುರಗಳು ಚಿಕ್ಕಗುಮ್ಮಟಗಳಿಂದ ಅಲಂಕೃತವಾಗಿವೆ. ಗುಲ್‌ದಸ್ತಾಗಳು (ಚಿಕ್ಕ ಸ್ತಂಭಗೋಪುರಗಳು) ಇರುತ್ತವೆ. ಎರಡನೆಯದಾಗಿ, ಬಿಜಾಪುರದ ಕಮಾನಿನ ಆಕಾರ ಬಹಳ ವಿಶಿಷ್ಟವಾದುದು. ಅದರ ಗೆರೆಗಳ ಮಾಟ ಹಿಂದಿನ ಕೋನ ಸಂಧಿಗಳನ್ನು ಕಳೆದುಕೊಂಡು ನಯವಾಗಿ ಬಾಗಿ ಸಾಗುತ್ತದೆ. ಬಿಜಾಪುರದ ಕಮಾನು ಚತುಷ್ಕೇಂದ್ರ ಮಾದರಿಯದು. ಮೂರನೆಯದಾಗಿ, ಬಿಜಾಪುರದ ವಾಸ್ತುಶಿಲ್ಪಗಳಲ್ಲಿ ಕಂಬಗಳು ಇರುವುದಿಲ್ಲ. ಅವುಗಳ ಸ್ಥಳಗಳಲ್ಲಿ ಆಯಾಕಾರ ಛೇದ ವಿನ್ಯಾಸದ ದಪ್ಪ ಗೋಡೆಗಳೇ ಇರುತ್ತವೆ. ನಾಲ್ಕನೆಯದಾಗಿ, ಗೋಡೆಯ ಮೇಲಿನ ಚಾಚುಭಾಗ ಅಥವಾ ಚಜ್ಜವು ಬಹುತೇಕ ಕಟ್ಟಡಗಳಲ್ಲಿ ಆಲಂಕಾರಿಕವಾಗಿ ಎಲ್ಲೆಡೆಯೂ ಕಂಡುಬರುತ್ತದೆ. ಅಂತಿಮವಾಗಿ, ಇವುಗಳಲ್ಲಿನ ಅಲಂಕರಣ ಉಬ್ಬುಶಿಲ್ಪ ವಿನ್ಯಾಸಗಳು ಸ್ವಂತಿಕೆ ಮತ್ತು ವಿಶಿಷ್ಟರೂಪಲಕ್ಷಣಗಳನ್ನು ಹೊಂದಿರುತ್ತದೆ. ವಿನ್ಯಾಸಗಳು ಹಿಂದೆ ಕಾಣದ ಹೊಸರೀತಿಗಳಲ್ಲಿ ಇರುತ್ತವೆ. ಗುಲಾಬಿ ಹೂವಿನಾಕಾರ, ಸಾಂಪ್ರದಾಯಿಕ ತೂಗುದೀಪ, ನಿರಂತರವಾಗಿ ಹಬ್ಬುವ ಅಂಚು, ಒಂದಕ್ಕೊಂದು ಒಳತೂರಿ ಹೆಣೆದುಕೊಳ್ಳುವ ವಿನ್ಯಾಸಗಳು- ಇವು ಮುಖ್ಯವಾಗಿ ಕಾಣುತ್ತವೆ. ಇವನ್ನು ಉಬ್ಬುಶಿಲ್ಪವಾಗಿ ಕಲ್ಲಿನಿಂದ ಕೆತ್ತಲಾಗಿರಬಹುದು, ಇಲ್ಲವೆ ಗಾರೆಯವಾಗಿರಬಹುದು.

ಬಿಜಾಪುರದ ವಾಸ್ತುಶಿಲ್ಪವನ್ನು ನಾಲ್ಕು ವಿಶಿಷ್ಟ ಉದಾಹರಣೆಗಳೊಂದಿಗೆ ವಿವರಿಸಬಹುದು. ಅವುಗಳೆಂದರೆ ಜಾಮೀ ಮಸೀದಿ (ಅಭಿಜಾತ ರೀತಿ), ಇಬ್ರಾಹೀಂ ರೋಜ (ಬಹು ಅಲಂಕರಣದ ರಚನೆ), ಗೋಳಗುಮ್ಮಟ (ಬಹು ಭವ್ಯ ಶೈಲಿ), ಮೆಹತರ್ ಮಹಲ್ (ನಾಜೂಕಾದ ಚಿಕ್ಕ ರಚನೆ).

ಜಾಮೀ ಮಸೀದಿಯನ್ನು ಒಂದನೆಯ ಆದಿಲ್ ಷಾ (1558-80) ನಿರ್ಮಿಸಿದ. ಇದನ್ನು ಬಿಜಾಪುರದ ವಾಸ್ತುಕಲೆಯ ಅಭಿಜಾತ ರೀತಿಗೆ ಒಳ್ಳೆಯ ಉದಾಹರಣೆಯಾಗಿ ಪರಿಗಣಿಸಬಹುದು. ಅದರ ಎರಡು ಮಿನಾರ್‌ಗಳು ಪೂರ್ಣವಾಗಿಲ್ಲದೆ ಕಟ್ಟಡ ಅಪೂರ್ಣ ನಿರ್ಮಾಣವಾಗಿಯೇ ಉಳಿದಿದೆ. ಹಾಗಿದ್ದರೂ ಇದೊಂದು ಭವ್ಯ ರಚನೆಯಾಗಿದ್ದು ಕಟ್ಟುವಾಣಗಾರರ ಕಲೆಯ ಉಚ್ಚತಮ ಕೃತಿಯಾಗಿದೆ. ಇದು 450' X 228' ಪ್ರಮಾಣವಿರುವ ಆಯಾತಾಕಾರದ ಬೃಹತ್ ಕಟ್ಟಡ.ಇದರಲ್ಲಿ ಒಂದರ ಮೇಲೊಂದರಂತೆ ಎರಡು ಕಮಾನು ಸಾಲುಗಳು ಇವೆ. ಕೆಳಗಿನ ಕಮಾನುಗಳು ಆಲಂಕಾರಿಕ. ಮೇಲಿನವು ತೆರೆದಿದ್ದು ಸಾಲು ಕಮಾನಿನ ಮುಮ್ಮುಖವನ್ನು ಒದಗಿಸಿವೆ. ತೆರೆದ ಅಂಗಳ 150' ಚೌಕ, ಮೂರು ಬದಿಗಳು ವಿಳು ಬೃಹತ್ ಕಮಾನುಗಳು ಸಾಲುಗಳಿಂದ ಆವೃತವಾಗಿವೆ. ಈ ಕಮಾನುಗಳ ಮೇಲುಗಡೆ ಗಂಧವಾರಣಗಳ ಮೇಲೆ ನಿಂತ ಚಾಚು ಚಜ್ಜ ಹಬ್ಬಿದೆ. ಹಜಾರದ ಮಧ್ಯಭಾಗದಲ್ಲಿರುವ ಅಂಕಣದ ಸುತ್ತ ನಾಲ್ಕುಕಡೆ ಎತ್ತರವಾದ ಕಮಾನುಗಳಿದ್ದು ಅದರ ಮೇಲೆ ಮಾಡಿಗಿಂತ ಉನ್ನತವಾಗಿ ಎದ್ದಿರುವ ದೊಡ್ಡ ಗುಮ್ಮಟವಿದೆ. ಮಾಡಿನ ಮೇಲೆ ಗುಮ್ಮಟದ ಸುತ್ತ ಕಮಾನು ಅಲಂಕರಣವೂ ಸುತ್ತಲ ಕೈಪಿಡಿಯಲ್ಲಿ ಎದ್ದು ಕಾಣುವ ಹೆನ್ನಾಲಗೆಗಳ ಸಾಲೂ ಇವೆ. ಈ ಮಸೀದಿಯಲ್ಲಿರುವ 208' ಉದ್ದ ಮತ್ತು 107' ಅಗಲದ ಪ್ರಾರ್ಥನಾ ಹಜಾರ ಅದರ ಭವ್ಯತೆ ಮತ್ತು ವಿಸ್ತಾರದಿಂದಾಗಿ ಬಹು ಗಮನೀಯವಾದುದು.ಈ ಹಜಾರವನ್ನು ದೊಡ್ಡ ಗೋಡೆ ರೀತಿಯ ದಪ್ಪ ಕಂಬಗಳ ಮೇಲೆ ನಿಂತ ಕಮಾನುಗಳ ಸಹಾಯದಿಂದ ಐದು ಉದ್ದ ಭಾಗಗಳಾಗಿ ವಿಂಗಡಿಸಲಾಗಿದೆ. ಇದರ ಮಧ್ಯಾಂಕಣ 76' ಚೌಕ. ಸುತ್ತ 12 ದೊಡ್ಡ ಕಮಾನುಗಳಿದ್ದು ಮೇಲೆ ಹೋದಂತೆ ಅವು ಕೂಡಿಕೊಳ್ಳುತ್ತ, ಮೇಲಿನ ಗುಮ್ಮಟಕ್ಕೆ ಅಷ್ಟಕೋನಾಕಾರದ ತಳವನ್ನು ಒದಗಿಸಿವೆ. ಹಿಂಬದಿಯ ಮಧ್ಯದ ಕಮಾನಿನಲ್ಲಿ ಮಿಹ್ರಾಬ್ ಪವಿತ್ರ ಕೋಷ್ಠ ಇದೆ. ಇದಾದರೋ ಗಾರೆಯಲ್ಲಿ ರಚಿಸಿದ ವಿವರವಾದ ಉಬ್ಬುಶಿಲ್ಪ ವಿನ್ಯಾಸಗಳಿಂದಲೂ ಥಳಥಳಿಸುವ ಬಣ್ಣಗಳಿಂದಲೂ ಅಲಂಕೃತವಾಗಿದೆ. ಈ ಮಸೀದಿಯ ಶ್ರೇಷ್ಠತೆಯಿರುವುದು ಇದರ ಸರಳತೆ ಮತ್ತು ಗಾಂಭೀರ್ಯದಲ್ಲಿ, ಹೆಚ್ಚಿನ ಶಿಲ್ಪಾದಿ ಅಲಂಕರಣವಿಲ್ಲದಿದ್ದರೂ ಇದು ಪ್ರದರ್ಶಿಸುವ ಪರಿಪೂರ್ಣ ಕೋಮಲತೆಯಲ್ಲಿ.

ಇಬ್ರಾಹೀಂ ರೋಜ ಬಿಜಾಪುರದ ಕೋಟೆಯ ಹೊರಭಾಗದಲ್ಲಿದೆ. ಎರಡನೆಯ ಇಬ್ರಾಹೀಂ ಆದಿಲ್ ಷಾ (1580-1627) ತನ್ನ ಸಮಾಧಿಮಂದಿರವಾಗಿ ಇದನ್ನು ಕಟ್ಟಿಸಿಕೊಂಡ. ಇದರಲ್ಲಿ ಎರಡು ಮುಖ್ಯ ಕಟ್ಟಡಗಳಿವೆ, ಒಂದು ಸಮಾಧಿ; ಇನ್ನೊಂದು ಮಸೀದಿ. ರೋಜ ಸುಂದರಾಲಂಕೃತ ಕಟ್ಟಡ. ಅಷ್ಟೇ ಅಲ್ಲ ಇದರ ರಚನಾ ವಿನ್ಯಾಸದಲ್ಲಿ ಪರಿಪೂರ್ಣತೆಯನ್ನು ಸಾಧಿಸಿ; ತನ್ನ ಸರಿಸಮಾನವಿಲ್ಲದ ಕಟ್ಟಡವಾಗಿದೆ. ಕಟ್ಟಡ ಕಪಿಲವರ್ಣದ ಕಲ್ಲಿನದು. ಇದನ್ನು ಅಮೃತಶಿಲೆಯಲ್ಲೇನಾದರೂ ಕಟ್ಟಿದ್ದರೆ ತಾಜಮಹಲನ್ನು ಮೀರಿಸುತ್ತಿತ್ತು ಎಂದು ಒಬ್ಬವಾಸ್ತುಕಲಾ ವಿಮರ್ಶಕ ಹೇಳಿದ್ದಾನೆ. ಕಟ್ಟಡ ದೊಡ್ಡದೇನೂ ಅಲ್ಲ, ಆದರೆ ಅದರ ಸೌಂದರ್ಯವಿರುವುದು ಅದರ ವಿವರಗಳಲ್ಲಿ. ರಚನೆ, ತಂತ್ರ, ಅಲಂಕಾರ ಮತ್ತು ಉಪಯುಕ್ತತೆಯ ದೃಷ್ಟಿಯಿಂದ ಇದು ಪರಿಪೂರ್ಣವಾಗಿದೆ. ಎರಡು ಕಟ್ಟಡಗಳೂ 360' ಉದ್ದ ಮತ್ತು 150' ಅಗಲವಿರುವ ಜಗತಿಯ ಮೇಲೆ ಇವೆ. ರೋಜದಲ್ಲಿ ಮಧ್ಯದ ಹಜಾರ, ಸುತ್ತಲೂ ಕಮಾನು ಸಾಲುಗಳಿಂದ ಸುತ್ತುವರಿದ ಮೊಗಸಾಲೆ ಮತ್ತು ಮೇಲೆ ಗುಮ್ಮಟ ಇವೆ. ಅದರ ಪ್ರತಿಯೊಂದು ಭಾಗವೂ ಒಂದಕ್ಕೊಂದು ಪೂರಕವಾದ ಸಹಜ ಪರಿಮಾಣಗಳಲ್ಲಿದೆ. ಸುತ್ತಲಿನ ಕಮಾನು ಸಾಲುಗಳು ಹಾಗೂ ಅಲಂಕರಣ ಕಮಾನುಗಳು ವೈವಿಧ್ಯತೆಯನ್ನೂ ವಾಸ್ತು ನೈಪುಣ್ಯವನ್ನೂ ಪ್ರತಿಬಿಂಬಿಸುತ್ತವೆ. ಈ ವ್ಯತ್ಯಸ್ತ ರೀತಿಯ ಕಮಾನುಗಳು ಕಟ್ಟಡದ ಚೆಲುವಿನ ಪೂರಕವಾಗಿದೆ. ಇದೇ ಸೌಂದರ್ಯ ದೃಷ್ಟಿ ಇತರ ಅಂಗಗಳಲ್ಲೂ ಕಂಡುಬರುತ್ತವೆ. ತೆಳುವಾಗಿಯೂ ಉದ್ದವಾಗಿಯೂ ಇರುವ ಮಿನಾರುಗಳು ಕಟ್ಟಡದ ಮೇಲೆ ಎಲ್ಲ ಕೋನಗಳಲ್ಲೂ ನವಿರಾಗಿ ಮೇಲೆದ್ದು ನಿಂತಿವೆ. ಸಾಲು ಸಾಲು ತೆಳು ಗಂಧವಾರಣಗಳ ಮೇಲೆ ನಿಂತ ಮೇಲು ಭಾಗ, ಅದರ ಮೇಲೆ ಇರುವ ಗುಮ್ಮಟದ ವಿನ್ಯಾಸ ಕಟ್ಟಡದ ವೈಭವಕ್ಕೆ ಕಾರಣವಾಗಿವೆ. ಸಮಾಧಿಯಿರುವ ಅಂಕಣದ ಹೊರ ಅಂಚಿನಲ್ಲಿ ಕಮಾನು ಸಾಲಿದೆ. ಕಟ್ಟಡದ ಎಲ್ಲಾ ಭಾಗಗಳೂ ತೆಳು ಉಬ್ಬು ಶಿಲ್ಪಗಳಿಂದ ಅಲಂಕೃತವಾಗಿವೆಯಾದರೂ ಮಧ್ಯಾಂಕಣದ ಉತ್ತರ ಗೋಡೆಯ ಹೊರಭಾಗ ಬಹುವಾಗಿ ಹೆಣೆದುಕೊಂಡು ವಿನ್ಯಾಸಗಳಿಂದ ಕೂಡಿದೆ. ವಿನ್ಯಾಸ ಸೌಂದರ್ಯದಲ್ಲಿ ಇದು ವೈಶಿಷ್ಟ್ಯಪೂರ್ಣವಾಗಿದೆ, ಅನುಪಮವಾಗಿದೆ. ಪ್ರತಿಯೊಂದು ಗೋಡೆಯೂ ಮೂರು ಮೂರು ಕಮಾನು ವಿನ್ಯಾಸಗಳಿಂದಲೂ ಅಂಚುಪಟ್ಟಿ ಮತ್ತು ಮಧ್ಯಪಟ್ಟಿಕೆಗಳಿಂದಲೂ ಅಲಂಕೃತವಾಗಿದೆ. ನಡು ಹಜಾರ 18' ಚೌಕದ ಕೋಣೆ, ಮೇಲೆ ಪುನಃ ತೆಳು ಉಬ್ಬು ಶಿಲ್ಪಗಳಿಂದ ಕೂಡಿದ ಮಟ್ಟಸ ಚಾವಣಿ ಇದೆ. ಇಬ್ರಾಹೀಂ ರೋಜ ಬಿಜಾಪುರದ ಕಟ್ಟಡ ರಚನಾಚಾತುರ್ಯದ ಉತ್ತಮ ಸಾಧನೆ.

ಬಿಜಾಪುರದ ಗೋಳಗುಮ್ಮಟ (ನೋಡಿ) ಜಗತ್ಪ್ರಸಿದ್ಧ. ಆದಿಲ್‌ಶಾಹೀ ದೊರೆಗಳ ಆಳ್ವಿಕೆಯನ್ನು ಅಮರಗೊಳಿಸಿರುವ ಕೃತಿ. ಮಹಮ್ಮದ್ ಆದಿಲ್‌ಷಾನ (1627-57) ಈ ಗೋರಿ ಭಾರತದ

ಅದ್ಭುತವಾದ ಕಟ್ಟಡಗಳಲ್ಲೊಂದು. ಪ್ರಪಂಚದಲ್ಲೇ ಅತಿ ದೊಡ್ಡ ಗುಮ್ಮಟಾಚ್ಛಾದಿತ ಹಜಾರವಿರುವುದು ಇಲ್ಲಿಯೇ. ಇಲ್ಲಿಯ ಭಾರಿ ಗುಮ್ಮಟ ಪ್ರಮಾಣದಲ್ಲಿ ವಿಶ್ವದಲ್ಲೇ ಎರಡನೆಯದು. 205' ತಳ ಚೌಕ ಇದ್ದು 198½' ಅಡಿ ಎತ್ತರಕ್ಕೆ ಏರುವ ಗೋಳಗುಮ್ಮಟ ಬೃಹತ್ ಕಟ್ಟಡವಷ್ಟೇ ಅಲ್ಲ, ಬೃಹತ್ತಿಗೆ ತಕ್ಕಂಥ ಗಡಸುತನ, ಆದರೂ ವಿವಿಧ ಭಾಗಗಳ ಪ್ರಮಾಣ ಅಲಂಕರಣಗಳಿಂದ ವರ್ಧಿಸಿದ ಸೌಂದರ್ಯ ಇವುಗಳಿಂದ ಬಿಜಾಪುರದ ವಾಸ್ತುಶಿಲ್ಪಗಳ ಸಾಹಸೀ ಪ್ರವೃತ್ತಿಯನ್ನೂ ತಂತ್ರಜ್ಞಾನವನ್ನೂ ಸೌಂದರ್ಯದೃಷ್ಟಿಯನ್ನೂ ಈ ಕಟ್ಟಡ ಮೇಳೈಸಿಕೊಂಡಿದೆ.

ಮೆಹತರ್ ಮಹಲನ್ನು ಎರಡನೆಯ ಇಬ್ರಾಹೀಂ ಆದಿಲ್ ಷಾ 1620ರಲ್ಲಿ ಕಟ್ಟಿಸಿದ. ಇದೊಂದು ಚಿಕ್ಕ ಕಟ್ಟಡ, ಆದರೆ ಉಚ್ಚಮಟ್ಟದ ಕಲಾಕೃತಿ. ಇದರಲ್ಲಿ ಒಂದು ಸಣ್ಣ ಸಭಾಂಗಣವಿದೆ. ಮೇಲೆ ತೆರೆದ ಮಾಳಿಗೆಯಿದ್ದು ಅದರ ಸುತ್ತಲ ಗೋಡೆಯನ್ನು ಕಮಾನು ಕಿಟಕಿಗಳಿಂದ ಅಲಂಕರಿಸಲಾಗಿದೆ. ಅದರ ಮೇಲೆ ಜಾಲಂದ್ರದ ಕೈಪಿಡಿಯಿದೆ. ಕಟ್ಟಡದ ಮುಖಭಾಗ ಪ್ರಶಂಸಾರ್ಹ ಕಲ್ಪನೆ. ಇಕ್ಕೆಲದಲ್ಲೂ ಒಂದೊಂದು ಒತ್ತುಗಂಬಗಳಿದ್ದು ಮೇಲೇರುತ್ತ ಚಿಕ್ಕ ಮಿನಾರುಗಳಂತಾಗಿವೆ. ಮೇಲಿನ ಕಿಟಕಿ ವೈಶಿಷ್ಟ್ಯಪೂರ್ಣವಾಗಿದೆ. ಇದು ಗಂಧವಾರಣಗಳೆತ್ತಿದ ಚಾಚಣಿಕೆಯ ಮೇಲೆ ನಿಂತಿದೆ. ಇದರ ಮೇಲೆ ಅಗಲದ ಆಚ್ಛಾದನೆಯಿದೆ. ಬಾಗಿಲುವಾಡ ದಂತಪಂಕ್ತಿಯ ಕಮಾನಿನ ಆಕೃತಿಯಲ್ಲಿದೆ. ಇಲ್ಲಿಯ ಒಂದೊಂದು ವಿವರವೂ ಶಿಲ್ಪಭರಿತ. ಶಿಲ್ಪಕೆಲಸ ಉತ್ತಮ ಗುಣಮಟ್ಟದ್ದಾಗಿದ್ದು, ಶಿಲ್ಪಗಳು ಕಪಿಲ ಶಿಲೆಯಲ್ಲಿ ಮಾಡಿದ್ದರೂ ಜೇಡಿಯ ರೂಪಣೆಗಳಿದ್ದಂತೆ ಚೆನ್ನಾಗಿವೆ. ಉನ್ನತಕಲೆ ಇಲ್ಲಿ ಪ್ರತಿಬಿಂಬಿತವಾಗಿದೆ.

ಬಿಜಾಪುರದಲ್ಲಿರುವ ಷಾ ಕರೀಂದರ್ಗಾ, ಷಾ ನವಾಜ್‌ನ ಸಮಾಧಿ, ಶಾಹಪುರ ಬಡಾವಣೆಯಲ್ಲಿರುವ ಮಸೀದಿಗಳು, ಅಂದ ಮಸೀದಿ, ಮಲ್ಲಿಕಾ ಜಹಾನ್ ಬೇಗಂ ಮಸೀದಿ, ಅಲಿ ಷಹೀದ್ ಪೀರ್ ಮಸೀದಿ ಇತ್ಯಾದಿ ಕಟ್ಟಡಗಳು ಆದಿಲ್‌ಶಾಹೀ ರಾಜರ ಕಾಲದ ಇತರ ಕೆಲವು ಗಮನಾರ್ಹ ನಿರ್ಮಾಣಗಳು. ಬಿಜಾಪುರದಲ್ಲಿ ಅರಮನೆಗಳು, ಆಡಳಿತ ಕಟ್ಟಡಗಳು ಇತ್ಯಾದಿಗಳೂ ಇವೆ. ಆದರೆ ಇವುಗಳಲ್ಲಿ ಹೆಚ್ಚಿನ ವೈಶಿಷ್ಟ್ಯ ಕಾಣುವುದಿಲ್ಲ. ಆದರೂ ಅವುಗಳಲ್ಲಿ ಗಗನ ಮಹಲ್ (ರಚನೆ 1560) ಉಲ್ಲೇಖಾರ್ಹ. 120'x82' ವಿಸ್ತಾರದ ಈ ಕಟ್ಟಡ ಅರಮನೆಯಾಗಿ ಮತ್ತು ಸಮಾಲೋಚನಾಗೃಹವಾಗಿ ಉಪಯೋಗವಾಗುತ್ತಿತ್ತು. ಇದರ ಮೇಲಂತಸ್ತು ಜನಾನಾದವರಿಗೆ ಮೀಸಲಾಗಿತ್ತು. ಇದರ ಮುಂಭಾಗ ಪರಿಣಾಮಕಾರಿ ವಿನ್ಯಾಸವನ್ನು ಹೊಂದಿದೆ. ಇದರಲ್ಲಿ ಮೂರು ದೊಡ್ಡ ಕಮಾನುಗಳಿದ್ದು ಮಧ್ಯದ್ದು ಮಿಕ್ಕೆರಡಕ್ಕಿಂತ ದೊಡ್ಡದಾಗಿ 60' ಅಗಲ ಮತ್ತು 50' ಎತ್ತರವಿದೆ.

ಈ ಆದಿಲ್‌ಶಾಹೀ ವಾಸ್ತುರೀತಿಯ ಕಟ್ಟಡಗಳು ಬಿಜಾಪುರದ ಹೊರಗೂ ಅನೇಕ ಕಡೆಗಳಲ್ಲಿವೆ. ಆದರೆ ಇವೆಲ್ಲಾ ಚಿಕ್ಕವು. ಗುಲ್ಬರ್ಗದಲ್ಲಿರುವ ಚಾಂದ್‌ಬೀಬಿ ಕಟ್ಟಿಸಿದ (1585) ಹೀರಾಪುರ ಮಸೀದಿ, ಅದೇ ಜಿಲ್ಲೆಯ ಶಾಹಪುರ ತಾಲ್ಲೂಕಿನಲ್ಲಿರುವ ಕಡೇಚೂರ್, ಯಾದಗಿರಿ ತಾಲ್ಲೂಕಿನ ದೋರನಹಳ್ಳಿ ಇಲ್ಲಿಯ ಮಸೀದಿಗಳನ್ನು ಉದಾಹರಣೆಯಾಗಿ ಹೆಸರಿಸಬಹುದು.

ಬಿಜಾಪುರದ ವಾಸ್ತುಕೃತಿಗಳು ಬಹಳ ಉತ್ತಮ ದರ್ಜೆಯವು. ಬಿಜಾಪುರದ ವಾಸ್ತುತಜ್ಞರು ಗೋಳಗುಮ್ಮಟದಂಥ ಅಸೀಮ ಸಾಹಸೀ ಪ್ರಯತ್ನಗಳನ್ನೂ ಮೆಹತರ್ ಮಹಲ್‌ನಂಥ ಸಣ್ಣ ಕಟ್ಟಡಗಳನ್ನೂ ಬಹು ಆಸ್ಥೆಯಿಂದ ಕಟ್ಟಬಲ್ಲವರಾಗಿದ್ದರು. ಗೋಳಗುಮ್ಮಟದಂಥ ಕಟ್ಟಡದಲ್ಲಿ ಶ್ರೀಮದ್ಗಾಂಭೀರ್ಯ, ಸ್ವಲ್ಪ ಮಟ್ಟಿನ ಗಡಸುತನವಿದ್ದರೆ, ಇಬ್ರಾಹೀಂ ರೋಜದಂಥ ಕಟ್ಟಡಗಳಲ್ಲಿ ತದ್ವಿರುದ್ಧವಾಗಿ ಲಲನಾ ಲಾಲಿತ್ಯವೇ ಮೈವೆತ್ತಿದೆ. ಹೀಗೆ ವೈವಿಧ್ಯಪೂರ್ಣ ಕೃತಿಗಳನ್ನು ನಿರ್ಮಿಸಬಲ್ಲವರಾಗಿದ್ದ ಬಿಜಾಪುರದ ವಾಸ್ತುತಜ್ಞರ ಕೌಶಲ್ಯ ಪ್ರಶಂಸಾರ್ಹ. ಬಿಜಾಪುರದ ಕಟ್ಟಡಗಳಲ್ಲಿ ಕಮಾನುಗಳ ಅಂತರ್‌ಭೇದನ, ಗುಮ್ಮಟಗಳ ಅಳವಡಿಕೆ ಮುಂತಾದ ತಂತ್ರಗಳನ್ನು ನೋಡಿದರೆ ಕಟ್ಟಡಕಲೆ ಬಹು ಹಿಂದಿನಿಂದ ರೂಢಿತವಾಗಿದ್ದ ರೀತಿಯನ್ನು ತೋರಿಸುತ್ತದೆ. ಪ್ರಾಚೀನ ವಿಧಾನಗಳನ್ನು ಬಿಜಾಪುರದವರೂ ಅಳವಡಿಸಿಕೊಂಡಿರಬೇಕು. ಆ ವಂಶ ಕೊನೆಗೊಳ್ಳುವ ವರೆಗೂ ಅವರ ಈ ಕಟ್ಟಡ ರಚನಾಸಾಮರ್ಥ್ಯ ಯಾವ ಕ್ಷೀಣತೆಯ ಲಕ್ಷಣವೂ ಕಾಣಿಸಿಕೊಳ್ಳದೆ ಮುಂದುವರಿದಿತ್ತು.

ಶಾಸನಗಳು: ಆದಿಲ್‌ಶಾಹೀ ವಂಶಕ್ಕೆ ಸೇರಿದ ಶಾಸನಗಳು ಅಧಿಕ ಸಂಖ್ಯೆಯಲ್ಲಿವೆ. ಕರ್ನಾಟಕದಲ್ಲೆಲ್ಲಾ ಕಂಡುಬರುವ ಈ ಶಾಸನಗಳು ಸಾಮಾನ್ಯವಾಗಿ ಮಸೀದಿಗಳು, ದರ್ಗಾಗಳು, ಕೋಟೆಗಳು, ಪ್ರವೇಶದ್ವಾರಗಳು ಅಥವಾ ಜನೋಪಯೋಗಿ ನಿರ್ಮಾಣಗಳ ಸಮೀಪ ಇವೆ. ಇವುಗಳಲ್ಲಿ ಬಳಸಿರುವ ಭಾಷೆ ಅರಬ್ಬೀ, ಪಾರಸೀ ಮತ್ತು ಕೆಲವು ಸಂದರ್ಭಗಳಲ್ಲಿ ಕನ್ನಡ. ಮಸೀದಿಗಳು ಮತ್ತು ದರ್ಗಾಗಳಲ್ಲಿರುವ ಶಾಸನಗಳಲ್ಲಿ ಇಸ್ಲಾಮಿನ ಪ್ರಥಮ ಗ್ರಂಥ ಕೊರಾನ್ ಮತ್ತು ಕಲೀಮಗಳ ಪದ್ಯಗಳನ್ನು ಸಾಮಾನ್ಯವಾಗಿ ಉಲ್ಲೇಖಿಸಲಾಗಿರುತ್ತದೆ. ಇವು ಸಾಂಪ್ರದಾಯಿಕವಾದ ಬಿಸ್ಮಿಲ್ಲಾ ಪ್ರಾರ್ಥನೆಯಿಂದ ಶುರುವಾಗುತ್ತವೆ. ಇವು ಆಳುವ ರಾಜನ ಹೆಸರು, ಅವನ ಬಿರುದುಗಳು, ಕಟ್ಟಿದವನ ಹೆಸರು, ಕಾಲ ಇತ್ಯಾದಿ ವಿವರಗಳನ್ನೂ ಸಾಮಾನ್ಯವಾಗಿ ಒಳಗೊಂಡಿರುತ್ತವೆ. ಲಿಪಿಕಲೆಯ ದೃಷ್ಟಿಯಿಂದ ಕೆಲವು ಶಾಸನಗಳು ಉತ್ತಮ ಮಾದರಿಗಳಾಗಿವೆ. ಇವುಗಳಲ್ಲಿ ಅತಿ ಮೊದಲಿನದೆಂದರೆ ಹಿಜರಿ 920ರ (ಕ್ರಿ.ಶ.1514) ತೇದಿಯುಳ್ಳ ಬಿಜಾಪುರದ ಕೋಟೆಯೊಳಗಿರುವ ಇಸ್ಮಾಯಿಲ್ ಆದಿಲ್ ಷಾನ ಕಾಲಕ್ಕೆ ಸೇರಿದ್ದು. ಗಾಲಿಬ್ ಮಸೀದಿಯಲ್ಲಿರುವ ಶಾಸನ ಮತ್ತು ಅಥರ್ ಮಹಲ್‌ನಲ್ಲಿರುವ ಶಾಸನಗಳು ಕೋಟೆಯನ್ನು ರಚಿಸಿದ್ದರ ಬಗ್ಗೆ ತಿಳಿಸುತ್ತವೆ. ಒಂದನೆಯ ಇಬ್ರಾಹೀಂನ ಕಾಲಕ್ಕೆ ಸೇರಿದ ಹಿಜರಿ 945 (1538) ಮತ್ತು 951 (1544) ತೇದಿಯುಳ್ಳ ಎರಡು ಶಾಸನಗಳು ಕೋಟೆಯದ್ವಾರದ ಮೇಲಿವೆ. ಇದರಲ್ಲಿ ಒಂದನ್ನು ಬಹು ಸುಂದರವಾದ ಅಕ್ಷರಗಳಲ್ಲಿ ಬರೆದಿದೆ. ಇದು ಸಾಮಾನ್ಯ ಪ್ರಾರ್ಥನಾ ಪದ್ಯದಿಂದ ಪ್ರಾರಂಭವಾಗಿದೆ. ಮುಂದೆ ಷಿಯಾಪಂಥೀಯವಾದ "ಅಲಿ ಅಲ್ಲಾನ ಪ್ರತಿನಿಧಿ" ಎಂದು ಬರೆಯಲಾಗಿದೆ. ಈ ವಾಕ್ಯ ಬಿಜಾಪುರದ ಶಾಸನಗಳಲ್ಲಿ ಬಹು ಅಪರೂಪ. ಸುಲ್ತಾನನ ಫಿರಂಗಿಗಳ ಮೇಲೆ ಸಹ ಶಾಸನಗಳಿರುತ್ತಿದ್ದವು. ಇಂಥ ಮೂರು ಫಿರಂಗಿಗಳು ದೊರೆತಿವೆ. ಒಂದರಲ್ಲಿ ಅದನ್ನು ಮಾಡಿದವನ ಹೆಸರು (ತುರ್ಕಿದೇಶದ) ಹೆಸನ್ ರುಮಿಯ ಮಗ ಮಹಮ್ಮದ್ ಎಂದಿದೆ. ಇನ್ನೊಂದರಲ್ಲಿ ಅದನ್ನು ಎರಕ ಹೊಯ್ದ ದಿನಾಂಕವಿದೆ.

ವಿವಿಧ ಮಸೀದಿಗಳಲ್ಲಿ ಅನೇಕ ಶಾಸನಗಳು ಕಂಡುಬರುತ್ತವೆ. ಆದರೆ ಅವುಗಳಲ್ಲಿ ಕೊರಾನಿನ ಭಾಗಗಳ ಉದ್ಧರಣೆಗಳು ಹೆಚ್ಚಾಗಿರುವುದರಿಂದ ಅವು ಅಷ್ಟು ಐತಿಹಾಸಿಕ ಮಹತ್ವ ಹೊಂದಿಲ್ಲ. ಆದಾಗ್ಯೂ ಈ ಶಾಸನಗಳಲ್ಲಿ ಆಲಂಕಾರಿಕವಾಗಿ ಅಕ್ಷರಗಳು ಹೆಣೆದುಕೊಂಡಿರುವ ರೀತಿಯ ಬರೆವಣಿಗೆಯ ನಮೂನೆ ಆಕರ್ಷಣೀಯವಾಗಿದೆ. ಬಿಜಾಪುರದಲ್ಲಲ್ಲದೆ ಕರ್ನಾಟಕದ ಇತರ ಕಡೆಗಳಲ್ಲಿ ಅದರಲ್ಲೂ ಹಳೆಯ ಮೈಸೂರು ಭಾಗದಲ್ಲಿ ಆದಿಲ್‌ಶಾಹೀ ವಂಶದ ಅನೇಕ ಶಾಸನಗಳಿವೆ. ಶಿಕಾರಿಪುರ ತಾಲ್ಲೂಕಿನ ಮಾಸೂರಿನಲ್ಲಿ ರಾಜಾ ಫರೀದನ ಮಗ ಮಹಮ್ಮದ್ ಖಾನ್ ಎಂಬುವನು ಕಟ್ಟಿಸಿದನೆಂದು ತಿಳಿಸುವ 1632ರ ಒಂದು ಶಾಸನವನ್ನು ಸುಂದರ ನಮೂನೆಯ ಅರಬ್ಬೀ ಹಾಗೂ ಪಾರಸೀ ಲಿಪಿಯಲ್ಲಿ ಬರೆಯಲಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿರುವ ಒಂದು ಶಾಸನ ಮಹಮ್ಮದ್ ಷಾನ ಆಳ್ವಿಕೆಯ ಕಾಲದ್ದು. ಅದರಲ್ಲಿ ಬಾರಿ ಮಲಿಕ್ ಇಬ್ನೆ ಅರ್ಬನ್ ಎಂಬ ಅಮೀಲನು ಕೆರೆಯೊಂದನ್ನು ಕಟ್ಟಿಸಿದ ವಿಷಯವಿದೆ. ಈ ಕೆರೆಯನ್ನು ಕಟ್ಟಿಸುವ ಕಾರಣವನ್ನು ಕನ್ನಡದಲ್ಲಿ ದೀರ್ಘವಾಗಿ ವಿವರಿಸಲಾಗಿದೆ. ಸುಲ್ತಾನ ಮಹಮ್ಮದನು ಕಾಯಿಲೆ ಬಿದ್ದಿದ್ದ, ಅವನಿಗೆ ಗುಣವಾದರೆ ತಾನು ಕೆರೆಕಟ್ಟಿಸುವುದಾಗಿ ಅಮೀಲ ಹರಕೆ ಹೊತ್ತಿದ್ದ. ಸುಲ್ತಾನ ಗುಣಮುಖವಾಗಲು ಅಮೀಲ ಕಾಡನ್ನು ಕಡಿಸಿ, ಕೆರೆ ಕಟ್ಟಿಸಿ, ಕೆರೆ ಕೆಳಗಿನ ಭೂಮಿಯನ್ನು ರೈತರಿಗೆ ಉಚಿತವಾಗಿ ನೀಡುವ ವ್ಯವಸ್ಥೆ ಮಾಡಿದ ಎಂದು ಆ ಶಾಸನ ತಿಳಿಸುತ್ತದೆ. ಶಿರಾ ಇತ್ಯಾದೆಡೆಗಳಲ್ಲೂ ಆದಿಲ್‌ಶಾಹೀ ಶಾಸನಗಳು ದೊರೆಕಿವೆ.

**ನಾಣ್ಯಗಳು :** ಆದಿಲ್‌ಶಾಹೀ ವಂಶದ ಐದನೆಯ ಸುಲ್ತಾನ ಒಂದನೆಯ ಅಲಿಯೇ (1558-80) ನಾಣ್ಯಗಳನ್ನು ಹೊರಡಿಸಿದ ಬಿಜಾಪುರದ ಸುಲ್ತಾನರಲ್ಲಿ ಮೊದಲಿಗ. ಅವನ ನಾಣ್ಯಗಳು 1910ರಲ್ಲಿ ಮೊದಲಿಗೆ ದೊರೆತವು. ಜೆ.ಪಿ. ಟೇಲರ್ ಎಂಬುವರು ಬಿಜಾಪುರದಲ್ಲಿ ಕೆಲವು ತಾಮ್ರ ನಾಣ್ಯಗಳನ್ನೂ ಮತ್ತು ಬೆಳ್ಳಿ ಲಾರಿನ್‌ಗಳನ್ನೂ ಪತ್ತೆ ಹಚ್ಚಿದರು. 1912ರಲ್ಲಿ ಇವರು ಮಹಮ್ಮದ್ ಆದಿಲ್ ಷಾನ ಮೂರು ಚಿನ್ನದ ನಾಣ್ಯಗಳನ್ನು ಮತ್ತು ತರುವಾಯ ಇಸ್ಮಾಯಿಲ್‌ನ ನಾಲ್ಕು ಚಿನ್ನದ ನಾಣ್ಯಗಳನ್ನು 1922ರಲ್ಲಿ ಪತ್ತೆಹಚ್ಚಿದರು. ಆದಿಲ್‌ಶಾಹೀ ರಾಜರ ಕೆಲವು ನಾಣ್ಯಗಳು ವೃತ್ತಾಕಾರವಾಗಿಯೂ ಕೆಲವು

ಚಚ್ಚೌಕವಾಗಿಯೂ ಇವೆ. ಇವರ ಚಿನ್ನದ ನಾಣ್ಯಗಳ ತೂಕ 52 ಗ್ರೈನ್. ತಾಮ್ರದ ನಾಣ್ಯಗಳು ನಾಲ್ಕುಮೌಲ್ಯಗಳವು. 267, 180, 120, ಮತ್ತು 60 ಗ್ರೈನ್‌ಗಳಷ್ಟು ತೂಗುತ್ತವೆ. ಬೆಳ್ಳಿಯ ಲಾರಿನ್‌ಗಳ ತೂಕ ಸು.70 ಗ್ರೈನ್. ಇತರ ಮುಸ್ಲಿಂ ನಾಣ್ಯಗಳಂತೆ ಇವುಗಳಲ್ಲೂ ಸಾಮಾನ್ಯವಾಗಿ ಬಿರುದುಗಳು ಮತ್ತು ಪಾರಸೀ ದ್ವಿಪದಿಗಳು ಇರುವುದು ರೂಢಿ. ಹೆಚ್ಚಿನವುಗಳಲ್ಲಿ ದಿನಾಂಕ ಕಾಣುವುದಿಲ್ಲ. ಆದರೆ ರಾಜರ ಹೆಸರುಗಳು ಇರುತ್ತವೆ. ಅಲಿ ಆದಿಲ್ ಷಾನ ತಾಮ್ರ ನಾಣ್ಯಗಳಲ್ಲಿ ಅಲಿ-ಇಬ್ನ್-ಅಬಿ-ತಾಲಿಬ್ ಎಂದು ಮುಮ್ಮುಖದಲ್ಲೂ ಅಸದಲ್ಲಾ-ಅಲ್-ಗಾಲಿಬ್ ಎಂದು ಹಿಮ್ಮುಖದಲ್ಲೂ ಲೇಖಗಳಿವೆ. ಈ ರೀತಿಯ ನಾಣ್ಯಗಳು ಮೂರು ತೂಕಗಳಲ್ಲಿವೆ. ಅವುಗಳ ಗಾತ್ರ 0.65" ನಿಂದ 0.8"ರ ವರೆಗೂ ವ್ಯತ್ಯಾಸ ಹೊಂದಿವೆ. ಅವನ ಚೌಕನಾಣ್ಯಗಳು 0.5" ಅಗಲವಿರುತ್ತವೆ. ಎರಡನೆಯ ಇಬ್ರಾಹೀಂ ಆದಿಲ್ ಷಾನ ನಾಣ್ಯಗಳು ವೃತ್ತ ಮತ್ತು ಚೌಕ ಈ ಎರಡು ಬಗೆಯಲ್ಲೂ ಇವೆ. ವೃತ್ತಾಕಾರದ ನಾಣ್ಯಗಳು 0.55" ನಿಂದ 0.75" ವರೆಗೂ ಇವೆ. ಚಚ್ಚೌಕಾಕಾರದ ನಾಣ್ಯಗಳು 0.65" ಅಗಲದವು. ಇವುಗಳಲ್ಲಿ ಇಬ್ರಾಹೀಂ-ಅಬ್ಲಾ-ಬಾಲಿ ಎಂಬ ವಾಕ್ಯ ಹಿಂಭಾಗದಲ್ಲೂ ಗುಲಾಮ್ ಮುರ್ತುಜ ಅಲಿ ಎಂಬ ವಾಕ್ಯ ಮುಂಭಾಗದಲ್ಲೂ ಕಂಡುಬರುತ್ತದೆ. ಮುಹಮ್ಮದ್ ಆದಿಲ್ ಷಾ (1627-56) ಚಿನ್ನ ಮತ್ತು ತಾಮ್ರದ ನಾಣ್ಯಗಳೆರಡನ್ನೂ ಹೊರಡಿಸಿದ್ದಾನೆ. ಇವನ ಚಿನ್ನದ ನಾಣ್ಯಗಳು ವರ್ತುಲಾಕಾರವಾಗಿದ್ದು ಇವುಗಳ ವ್ಯಾಸ 0.35" ನಿಂದ 0.4" ನ ವರೆಗೂ ವ್ಯತ್ಯಾಸ ಹೊಂದಿದ್ದು 51.8 ಗ್ರೈನ್ ತೂಕವಿರುತ್ತವೆ. ನಾಣ್ಯದ ಮೇಲೆ ಎರಡು ಸಾಲುಗಳುಳ್ಳ ಪಾರಸೀ ದ್ವಿಪದಿಯನ್ನು ಎರಡು ಮುಖಗಳಲ್ಲಿಯೂ ಕೆತ್ತಲಾಗಿರುತ್ತದೆ. "ಪ್ರಪಂಚವು ಸೌಂದರ್ಯ ಮತ್ತು ಗಾಂಭೀರ್ಯವನ್ನು ಇಬ್ಬರು ಮಹಮ್ಮದರಿಂದ ಪಡೆಯಿತು. ಒಬ್ಬರು ಪ್ರವಾದೀ ಮಹಮ್ಮದ್, ಇನ್ನೊಬ್ಬರು ಸುಲ್ತಾನ್ ಮುಹಮ್ಮದ್" ಎಂಬುದು ಈ ದ್ವಿಪದಿಯ ಅರ್ಥ. ಈ ದ್ವಿಪದಿಯಲ್ಲಿ ತಾಜ್ ಜಹಾನ್ ಎಂಬ ಪದವಿದ್ದು, ಸುಲ್ತಾನ ಮಹಮ್ಮದನಿಗೆ ತಾಜ್ ಜಹಾನ್ ಎಂಬ ಹೆಂಡತಿಯೂ ಇದ್ದುದರಿಂದ ಈ ಪದ್ಯವನ್ನು ಇನ್ನೊಂದು ರೀತಿಯಲ್ಲಿ ಹೀಗೆ ಅರ್ಥೈಸಬಹುದು: ಸೌಂದರ್ಯ ಮತ್ತು ಗಾಂಭೀರ್ಯವನ್ನು ಪ್ರವಾದೀ ಮಹಮ್ಮದರಿಂದ ಈ ಲೋಕ ಪಡೆಯಿತು, ಜಹಾನಳು (ರಾಣಿ) ಸುಲ್ತಾನ ಮಹಮ್ಮದನಿಂದ ಪಡೆದಳು ಎಂದು. ಈ ಸರಣಿಯಲ್ಲಿ ಬೆಳ್ಳಿ ನಾಣ್ಯಗಳು ದೊರೆತಿಲ್ಲ. ತಾಮ್ರದ ನಾಣ್ಯಗಳು 267, 179, 117, 66 ಮತ್ತು 56 ಗ್ರೈನ್ ಗಳಷ್ಟು ತೂಕವಿರುತ್ತವೆ. ಇವು ವೃತ್ತಾಕಾರವಾಗಿದ್ದು, ಇವುಗಳ ವ್ಯಾಸ 0.5" ರಿಂದ 0.85" ನವರೆಗೂ ವ್ಯತ್ಯಾಸ ಹೊಂದಿದೆ. ಎರಡನೆಯ ಅಲಿ ಆದಿಲ್ ಷಾ (1656-72) ಲಾರಿನ್ ಎಂಬ ನಾಣ್ಯವನ್ನು ಹೊರಡಿಸಿದ. ಇದು ಮೂಲತಃ ಪರ್ಷಿಯ ಕೊಲ್ಲಿಯ ಲಾರ್ ಜಿಲ್ಲೆಯಲ್ಲಿ ಪ್ರಚಲಿತವಾಗಿದ್ದು, ಅರೇಬಿಯದ ಸಮುದ್ರ ವ್ಯಾಪಾರಿಗಳಲ್ಲಿ ತುಂಬಾ ಜನಪ್ರಿಯವಾಗಿತ್ತು. ಲಾರಿನ್ ವಿಚಿತ್ರ ರೂಪದ ನಾಣ್ಯ. ಇದು ಮಧ್ಯದ ಭಾಗದಲ್ಲಿ ಎರಡು ಪಟ್ಟೆ ಇರುವ ಬೆಳ್ಳಿಯ ತಂತಿ ಅಥವಾ ಬೆಳ್ಳಿಯ ಸರಳು. ತೂಕ ಮಾತ್ರ ನಿರ್ದಿಷ್ಟವಾಗಿರುತ್ತದೆ. ಸ್ಥಳಾವಕಾಶದ ಅಭಾವದಿಂದ ಇದರ ಮೇಲಿನ ಬರಹಗಳು ಅಸಂಪೂರ್ಣವಾಗಿರುತ್ತವೆ. ಸುಲ್ತಾನ್ ಅಲಿ ಆದಿಲ್ ಷಾ ಜರ್ಬ್ ಲಾರಿ -ದಾಂಗೆ ಎಂಬ ವಾಕ್ಯ ಸಾಮಾನ್ಯವಾಗಿ ಇರುತ್ತದೆ. ಇವುಗಳ ಮೇಲಿರುವ ದಿನಾಂಕ ಸ್ಪಷ್ಟವಿರುವುದಿಲ್ಲ. ಈ ಬಗೆಯ ನಾಣ್ಯಗಳು ರಾಜ್ಯಾದ್ಯಂತ ಚಲಾವಣೆಯಲ್ಲಿದ್ದುವೇ ಎಂಬುದು ಸಂಶಯಾಸ್ಪದ. ಬಹುಶಃ ಈ ನಾಣ್ಯಗಳು ಬಿಜಾಪುರದ ತೀರಪ್ರದೇಶದಲ್ಲಿ ಸ್ಥಳೀಯ ಬೇಡಿಕೆಯನ್ನು ಪೂರೈಸಲು ಚಲಾವಣೆಯಲ್ಲಿದ್ದಿರಬೇಕು. ಲಾರಿನ್‌ಗಳಲ್ಲಿ ಎರಡು ವಿಧಗಳಿವೆ. ಒಂದು 3.75" ಉದ್ದವಾಗಿಯೂ 74 ಗ್ರೈನ್ ತೂಕವಾಗಿಯೂ ಇದ್ದರೆ ಮತ್ತೊಂದು 1.75" ಉದ್ದವಾಗಿಯೂ 70 ಗ್ರೈನ್ ತೂಕವಾಗಿಯೂ ಇರುತ್ತದೆ. ಅವುಗಳಲ್ಲಿ ಹಿಜರಿ ಶಕದ 1077 ಎಂಬ ಕಾಲ ಇರುವುದರಿಂದ ಇವು ಎರಡನೆಯ ಅಲಿ ಆದಿಲ್ ಷಾನ ಕಾಲಕ್ಕೆ ಸಂಬಂಧಿಸಿದ್ದೆಂದು ಹೇಳಬಹುದು. ಕೊನೆಯ ರಾಜ ಸಿಕಂದರ್ ಆದಿಲ್ ಷಾನ ತಾಮ್ರದ ನಾಣ್ಯಗಳು ಹಿಜರಿಯ 1086 ದಿನಾಂಕ ಹೊಂದಿದ್ದು, ಮೂರು ಬಗೆಯ ತೂಕಗಳಲ್ಲಿ ಕಂಡುಬಂದಿವೆ. ಅವುಗಳ ಮುಮ್ಮುಖದಲ್ಲಿ ಸುಲ್ತಾನ್ ಸಿಕಂದರ್ ಖಿದಿರಿ ಎಂದೂ ಹಿಮ್ಮುಖದಲ್ಲಿ ಖುಸರವೆ ಗಿತಿಸ್ತಾನ್ ಎಂದೂ ಬರಹವಿರುತ್ತದೆ. (ಬಿ.ಎಸ್.ಎ.)

**ಆದ್ಯ ರಂಗಾಚಾರ್ಯ :** 1904-84. ಶ್ರೀರಂಗ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಆಧುನಿಕ ಕನ್ನಡದ ಪ್ರಸಿದ್ಧ ನಾಟಕಕಾರರು. ಸಮಕಾಲೀನ ಕನ್ನಡ ರಂಗಭೂಮಿಗೆ ಆಳ ಅಗಲಗಳನ್ನು ವೈವಿಧ್ಯವನ್ನು ತಂದುಕೊಟ್ಟ ಪ್ರಯೋಗಶೀಲರು. ಕನ್ನಡ ಸಂಸ್ಕೃತ ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳಲ್ಲಿ ಪರಿಣತರಾದ ಇವರು ರಾಷ್ಟ್ರೀಯ ಖ್ಯಾತಿ ಗಳಿಸಿರುವ ಲೇಖಕರು. ಆರ್.ವಿ.ಜಾಗಿರ್‌ದಾರ್ ಎಂಬುದು ಇವರ



ನಿಜನಾಮ. ಬಿಜಾಪುರ ಜಿಲ್ಲೆಯ ಅಗರಖೇಡದಲ್ಲಿ 1904 ಸೆಪ್ಟೆಂಬರ್ 26ರಂದು ಜನಿಸಿದರು. ಸಂಸ್ಕೃತವನ್ನು ವಿಶೇಷ ವ್ಯಾಸಂಗ ಮಾಡಿ ಪುಣೆಯ ಡೆಕ್ಕನ್ ಕಾಲೇಜಿನಿಂದ ಬಿ.ಎ.ಪದವಿ ಪಡೆದ (1925) ಅನಂತರ ಐ.ಸಿ.ಎಸ್. ಪರೀಕ್ಷೆಗೆ ಇಂಗ್ಲೆಂಡಿಗೆ ತೆರಳಿ ಅಲ್ಲಿ ಭಾಷಾ ಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಹಿಂದಿರುಗಿದರು. ಕೆಲ ಕಾಲ ನಿರುದ್ಯೋಗಿಯಾಗಿದ್ದು, ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ 18 ವರ್ಷಗಳ ಕಾಲ ಕೆಲಸಮಾಡಿದರು (1930-48). ಬೆಂಗಳೂರು ಆಕಾಶವಾಣಿಯಲ್ಲಿ ನಾಟಕ ವಿಭಾಗದ ನಿರ್ದೇಶಕರಾಗಿಯೂ ಸ್ವಲ್ಪಕಾಲ ಕೆಲಸಮಾಡಿದರು.

ಚಿಕ್ಕಂದಿನಿಂದ ಸಾಹಿತ್ಯಕ್ಕೆ ಒಲಿದಿದ್ದ ಶ್ರೀರಂಗರು ವಿದ್ಯಾರ್ಥಿಯಾಗಿದ್ದಾಗಲೇ ಸಂಸ್ಕೃತದಲ್ಲಿ ಪದ್ಯ ಬರೆದಿದ್ದುಂಟು. ತಮ್ಮ 15ನೆಯ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡರಲ್ಲದೆ ಆರ್ಥಿಕ ಅಡಚಣೆಗಳಿಗೂ ಒಳಗಾದರು. ಸುತ್ತಣ ಪರಿಸರದ ಕೃತಕತೆ ಮತ್ತು ಅರ್ಥಹೀನತೆಗಳನ್ನು ತಿರಸ್ಕರಿಸಿ, ಹೊಸದನ್ನು ಕಟ್ಟುವ, ಅದಕ್ಕಾಗಿ ದುಡಿಯುವ ಹೋರಾಟದ ಮನೋಭಾವವನ್ನು ರೂಢಿಸಿಕೊಂಡರು. ಇದರ ಫಲವೇ 'ಉದರವೈರಾಗ್ಯ' (1929) ನಾಟಕ. ಇವರಿಗೆ ಅಖಿಲ ಕರ್ನಾಟಕ ಖ್ಯಾತಿಯನ್ನು ತಂದುಕೊಟ್ಟಿದ್ದು ಹ-ರಿ-ಜ-ನ್ವಾ-ರ (1933). ನಾಟಕ ರಚನೆಯನ್ನು ಆರಂಭಿಸಿದ ಮೊದಲ ಹಂತದಲ್ಲಿ ಇವರು ಬರೆದ ಕೆಲವು ಮುಖ್ಯ ನಾಟಕಗಳಿವು - ಸಂಸಾರಿಗ ಕಂಸ, ನರಕದಲ್ಲಿ ನರಸಿಂಹ, ಪ್ರಪಂಚ ಪಾಣಿಪತ್ತು, ಸಂಧ್ಯಾಕಾಲ, ಜರಾಸಂಧಿ, ದರಿದ್ರನಾರಾಯಣ. ಇವರು 100ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಸುಮಾರು 70 ಏಕಾಂಕ ನಾಟಕಗಳು. ಶ್ರೀರಂಗ-ನಾಟ್ಯ-ತರಂಗ (1967) ಇವರ 27 ಏಕಾಂಕಗಳ ಸಂಗ್ರಹ. ಸಂಪ್ರದಾಯದ ವಿರುದ್ಧ ಬಂಡಾಯ ಇವರ ನಾಟಕದ ಮುಖ್ಯ ಲಕ್ಷಣ. ಜೊತೆಗೆ ಹರಿತವಾದ ಬುದ್ಧಿಶಕ್ತಿ, ವ್ಯಂಗ್ಯ ಹಾಸ್ಯ, ಕಟುವಿಡಂಬನೆ, ಮಾರ್ಮಿಕವಾದ ಮಾತುಗಾರಿಕೆ, ಉದ್ದಕ್ಕೂ ಸ್ವತಂತ್ರ ವಿಚಾರಸರಣಿ ಎದ್ದು ಕಾಣುತ್ತವೆ.

ಪ್ರಯೋಗಶೀಲರಾದ ಶ್ರೀರಂಗರು ತಮ್ಮ ನಾಟಕಗಳಲ್ಲಿ ವಸ್ತುವಿನ ಆಯ್ಕೆ ಮತ್ತು ತಂತ್ರಗಳಲ್ಲಿ ಹೊಸತನವನ್ನು ಮೆರೆದಿದ್ದಾರೆ. ಈ ದೃಷ್ಟಿಯಿಂದ ಕೇಳು ಜನಮೇಜಯ, ರಂಗಭಾರತ, ಶತಾಯು ಗತಾಯು, ಸ್ವರ್ಗಕ್ಕೆ ಮೂರೇ ಬಾಗಿಲು, ಗೆಳೆಯ ನೀನು ಹಳೆಯ ನಾನು, ನೀ ಕೊಡೆ ನಾ ಬಿಡೆ ಮುಂತಾದ ನಾಟಕಗಳನ್ನು ಹೆಸರಿಸಬಹುದು.

ಸಾಹಿತ್ಯದ ಇನ್ನಿತರ ಪ್ರಕಾರಗಳಲ್ಲೂ ಶ್ರೀರಂಗರ ಸಾಧನೆ ಗಮನಾರ್ಹ ಇವರ ಹಲವು ಕಾದಂಬರಿಗಳಲ್ಲಿ 'ವಿಶ್ವಾಮಿತ್ರನ ಸೃಷ್ಟಿ' ಮುಖ್ಯವಾದುದು. ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕ 'ಶಾರದೆಯ ಸಂಸಾರ'. ನಗುವಿನ ಸ್ವರೂಪವನ್ನು ಕುರಿತ ಪುಸ್ತಕ 'ನಗೆ' (1944). 'ಗೀತಾಗಾಂಭೀರ್ಯ'ದಲ್ಲಿ ಗೀತೆಯನ್ನು ಕುರಿತ ವಿಚಾರಾತ್ಮಕ ಅಧ್ಯಯನ ಇದೆ. 'ಆಹ್ವಾನ' ಇವರ ಒಂದು ಕವನ ಸಂಕಲನ. 'ನನ್ನ ನಾಟ್ಯ ನೆನಪುಗಳು' (1960) ಮತ್ತು ಸಾಹಿತಿಯ ಆತ್ಮಜಿಜ್ಞಾಸೆ (1973) ಆತ್ಮಕಥನ ರೂಪದ ಕೃತಿಗಳು. ಸಮತೂಕದ ಸಾಹಿತ್ಯ ವಿಮರ್ಶೆ ಇರುವ ಕಾಳಿದಾಸ ಗ್ರಂಥ' ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳಿಸಿದೆ (1970).

ಭಾರತೀಯ ರಂಗಭೂಮಿಯನ್ನು ಕುರಿತ 'ದಿ ಇಂಡಿಯನ್ ಥಿಯೇಟರ್' ಇವರ ಇಂಗ್ಲಿಷ್ ಪುಸ್ತಕ; ರಂಗಭೂಮಿಗೆ ಸಂಬಂಧಿಸಿದಂತೆ 'ಪ್ರೇಕ್ಷಕ ವರ್ಗ ನಮ್ಮ ರಂಗಭೂಮಿಯ ಸಮಸ್ಯೆ' (1969), 'ರಂಗನಾಟಕ ಶಾಸ್ತ್ರ' (1971), ಭರತನಾಟ್ಯ (1973), ನಾಟ್ಯಶಾಸ್ತ್ರದಲ್ಲಿ ನಟ (1982), ನಾಟ್ಯಶಾಸ್ತ್ರದ ಅಧ್ಯಾಯ ಸಂಗ್ರಹ (1983), ನಾಟ್ಯಶಾಸ್ತ್ರ (1984), ಭಾರತೀಯ ರಂಗಭೂಮಿಯ ಪರಂಪರೆ, ಕನ್ನಡ ರಂಗಭೂಮಿಯ ಮೇಲೆ ಅದರ ಛಾಯೆ; ನಾಟ್ಯಶಾಸ್ತ್ರದಲ್ಲಿ ನಾಟ್ಯ ಮಂಟಪ (1982), (1986) ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ.

ಶ್ರೀರಂಗರ ಸಾಹಿತ್ಯ ಸೇವೆಗಾಗಿ ಸಂದಿರುವ ಪ್ರಶಸ್ತಿಗಳು ಹಲವು. ರಾಯಚೂರಿನಲ್ಲಿ 1955ರಲ್ಲಿ ನಡೆದ 38ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. 1968ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಫೆಲೋಶಿಪ್ ಗೌರವ ದೊರೆಯಿತು. 1972ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು. ರಾಜ್ಯಸಾಹಿತ್ಯ ಅಕಾಡೆಮಿಗೆ ಇವರು ಅಧ್ಯಕ್ಷರಾಗಿದ್ದರು (1971-74). 1984 ಆಕ್ಟೋಬರ್ 17ರಂದು ಇವರು ನಿಧನರಾದರು. (ಎಲ್.ಎಸ್.ಎಸ್.)

**ಆನಂದ :** 1920-63. ಕನ್ನಡದ ಪ್ರಸಿದ್ಧ ಸಣ್ಣಕಥೆಗಾರರು ಹಾಗೂ ಪ್ರಬಂಧಕಾರರು. ಆನಂದ ಎಂಬುದು ಇವರ ಕಾವ್ಯನಾಮ. ನಿಜನಾಮ ಅಜ್ಜಂಪುರ ಸೀತಾರಾಂ. ಇವರು ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಆನವಟ್ಟಿಯಲ್ಲಿ. ಆರಂಭದ ಶಿಕ್ಷಣ ಶಿವಮೊಗ್ಗದಲ್ಲಿ ನಡೆಯಿತು. ಅನಂತರದ ವ್ಯಾಸಂಗ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ. ಅಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಟಿ.ಎಸ್. ವೆಂಕಣ್ಣಯ್ಯನವರ ಪ್ರಭಾವಕ್ಕೆ ಒಳಗಾಗಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಇವರು ಸಾಹಿತ್ಯದಲ್ಲಿ ಆಸಕ್ತಿ ವಹಿಸಿದರು. ಬಿ.ಎಸ್‌ಸಿ. ಪದವಿ ಪಡೆದು, ಸರ್ಕಾರದ ರೇಷ್ಮೆ ಇಲಾಖೆಯಲ್ಲಿ ಕೆಲವು ವರ್ಷಗಳ ಕಾಲ ಕೆಲಸ ಮಾಡಿದ ಅನಂತರ (1946) ಸ್ವತಂತ್ರ ಉದ್ಯೋಗವೊಂದನ್ನು ಮಾಡಿ ಅದನ್ನು ಬಿಟ್ಟು ಬರೆವಣಿಗೆಯಲ್ಲಿಯೇ ಆಸಕ್ತಿ ವಹಿಸಿದರು. ಇವರು ಒಳ್ಳೆಯ ಚಿತ್ರಕಾರರೂ ಮತ್ತು ಕ್ರಿಕೆಟ್ ಆಟಗಾರರೂ ಆಗಿದ್ದರು.

ಶ್ರೀನಿವಾಸರ ಸಣ್ಣ ಕಥೆಗಳನ್ನು ಆದರ್ಶವಾಗಿಟ್ಟುಕೊಂಡು ಕಥಾಪ್ರಪಂಚವನ್ನು ಪ್ರವೇಶಿಸಿದ ಆನಂದರು ಬರೆದ ಮೊದಲ ಕಥೆ ಭವತಿ ಭಿಕ್ಷಾಂ ದೇಹಿ. ಭಿಕ್ಷಾನ್ನದ ಹುಡುಗನೊಬ್ಬನ ದುಃಖಜೀವನದ ನೈಜಚಿತ್ರಣ ಇದರಲ್ಲಿದೆ. ಇದು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಯಿತಲ್ಲದೆ (1922) ಹಲವು ಹಿರಿಯರ ಮೆಚ್ಚುಗೆಯನ್ನು ಗಳಿಸಿತು. ಇದೇ ಮಾದರಿಯಲ್ಲಿ ಇವರು ಬರೆದ ಕಥೆಗಳಿವು: ಬೇವು-ಬೆಲ್ಲ ಮತ್ತು ಕೊನೇ ಎಂಟಾಣೆ. ಬೇವು-ಬೆಲ್ಲದಲ್ಲಿ ನಿರ್ಮಲ ಸ್ನೇಹದ ಹಿನ್ನೆಲೆಯಿದ್ದು ಕೊನೇ ಎಂಟಾಣೆಯಲ್ಲಿ ನಿರುದ್ಯೋಗಿಯ ದಾರುಣ ಚಿತ್ರವಿದೆ.

ಆನಂದರ ಕಥನ ಕಲೆ ಪ್ರಕಟವಾಗಿದ್ದು ಅವರು ಬರೆದ ಪ್ರಣಯ ಕಥೆಗಳಲ್ಲಿ. ಹೆಂಡತಿಯ ಕಾಗದ, ನಾವೂಹಾಗೆಯೇ, ಪದ್ಮಪಾಕ, ರಾಧೆಯಕ್ಷಮೆ ಇವು ಇವರ ಯಶಸ್ವಿ ಕಥೆಗಳು. ಇವರ ಕಥನಶೈಲಿ, ವಸ್ತು ಮತ್ತು ತಂತ್ರಗಳನ್ನು ಈ ಕಥೆಗಳಲ್ಲಿ ಗುರುತಿಸಬಹುದು. ನಾನು ಕೊಂದ ಹುಡುಗಿ ಕಥೆಯಿಂದ ಆನಂದರು ಹೆಚ್ಚಿನ ಪ್ರಸಿದ್ಧಿಯನ್ನು ಗಳಿಸಿದರು. ಬಸವಿ ಪದ್ಧತಿಯ ಹಿನ್ನೆಲೆಯಲ್ಲಿರುವ ಈ ಕಥೆ ಹೃದಯಸ್ಪರ್ಶಿಯಾದುದು. ಜೋಯಿಸರ ಚೌಡಿ ಕಥೆಯಲ್ಲಿ ಹಾಸ್ಯದ ಮಿನುಗು ಮಿಂಚಿದೆ. 'ಕೆಲವುಕಥೆಗಳು' ಆನಂದರ ಪ್ರಥಮ ಕಥಾಸಂಕಲನ. ಸಂಸಾರಶಿಲ್ಪ (1953), ಸ್ವಪ್ನಜೀವಿ ಮತ್ತು ಇತರ ಕಥೆಗಳು (1953), ಮಾಟಗಾತಿ ಮುಂತಾದವು ಇವರ ಇತರ ಸಂಕಲನಗಳು. ಈಸೋಪನ ಲೋಕನೀತಿ ಕಥೆಗಳು (1952) ಇವರ ಒಂದು ಅನುವಾದ. ಪಕ್ಷಿಗಾನದಲ್ಲಿ (1947) 22 ವಚನ ಚಿತ್ರಗಳಿದ್ದು, ಗದ್ಯದ ಸೌಲಭ್ಯವನ್ನೂ ಪದ್ಯದ ಮಾಧುರ್ಯವನ್ನೂ ಒಟ್ಟುಗೂಡಿಸುವ ಪ್ರಯತ್ನವಿದೆ. ಆನಂದಲಹರಿ ಇವರ ಹರಟೆಗಳ ಸಂಕಲನ. ವೀರಯೋಧ (1956), ದಹನಚಿತ್ರ ಇವರ ಅನುವಾದಿತ ನಾಟಕಗಳು. ಆನಂದರು 1963 ನವೆಂಬರ್ 17ರಂದು ನಿಧನರಾದರು. (ಜೆ.ಜ.)

**ಆನಂದದಾಸ, ಸುರಪುರದ :** ಸು.19ನೆಯ ಶತಮಾನದ ದಾಸಶ್ರೇಷ್ಠ ರಲ್ಲೊಬ್ಬರು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಇವರು ಮೈಸೂರಿಗೆ ಬಂದು ರಾಜಸನ್ಮಾನವನ್ನು ಪಡೆದರೆಂದು ತಿಳಿದುಬರುತ್ತದೆ.

ಇವರು ಹುಟ್ಟಿದ್ದು ರಾಯಚೂರು ಜಿಲ್ಲೆ ಮಾನ್ವಿ ಬಳಿಯ ಚೀಕಲಪರವಿಯಲ್ಲಿ. ಬಾಲ್ಯದಲ್ಲೇ ಇವರು ಮಾತಾ-ಪಿತೃಗಳನ್ನು ಕಳೆದು ಕೊಂಡು ನಿಜಾಮ್ ರಾಜ್ಯದ ಸುರಪುರ ಸಂಸ್ಥಾನವನ್ನು ಸೇರಿ ಅಲ್ಲಿ ರಾಜಾಚಾರ್ಯರೆಂಬ ಗುರುಗಳಲ್ಲಿ ವಿದ್ಯಾಭ್ಯಾಸ ಪಡೆದರು. ಸುರಪುರದ ರಾಜನಿಂದ ಸನ್ಮಾನಿತರಾದರು. ಇವರಲ್ಲಿ ಗಾಯನ ಪ್ರಾವೀಣ್ಯ, ನ್ಯಾಯವೇದಾಂತ ಶಾಸ್ತ್ರಪಾಂಡಿತ್ಯ, ಸಾಹಿತ್ಯ ಪರಿಣತಿ, ಕವಿತಾಶಕ್ತಿ, ಅನುಕರಣ ಶಕ್ತಿಗಳು ಅಗಾಧವಾಗಿದ್ದುವು. ಪಂಡಿತರಾಗಿ ಪಾಠಹೇಳಿ, ಗಾಯನಪಟುವಾಗಿ ಸಂಗೀತ ಕಲಿಸಿ, ನರ್ತನ ಪ್ರವೀಣರಾಗಿ ನೃತ್ಯಶಿಕ್ಷಣವನ್ನು ಕೊಟ್ಟು, ಶ್ರೇಷ್ಠಗುರುವಾಗಿ ಪ್ರಖ್ಯಾತಿ ಪಡೆದರು.

ಕೀರ್ತನಕಾರರೆಂದರೆ ಅಸಡ್ಡೆ ಮಾಡುತ್ತಿದ್ದ ಇವರು ಒಮ್ಮೆ ಜಗನ್ನಾಥ ದಾಸರ ಶಿಷ್ಯ ಶ್ರೀಶವಿಠಲರು (ಹುಂಡೇಕಾರ ದಾಸರು) ಸುರಪುರಕ್ಕೆ ಬಂದು ಕೀರ್ತನೆ ಮಾಡಿದಾಗ ಅವರ ಜ್ಞಾನ, ಗಾಯನಗಳಿಗೆ ಬೆರಗಾಗಿ ಮನಸೋತು, ಅವರಿಂದ ಕಮಲೇಶ ವಿಠಲ ಎಂಬ ಅಂಕಿತೋಪದೇಶ ಪಡೆದು ಹರಿದಾಸ ದೀಕ್ಷೆಯನ್ನು ಹೊಂದಿ ರಸಭರಿತವಾಗಿ ಕೀರ್ತನೆಗಳನ್ನು ಹಾಡಿ ಸಾಹಿತ್ಯ ರಚಿಸಿ ಸುರಪುರದ ಆನಂದದಾಸರೆಂದೇ ಪ್ರಸಿದ್ಧರಾದರು.

ದಶಮಸ್ಕಂದ ಭಾಗವತ, ಪ್ರಶ್ನೋತ್ತರ ಹಾಡುಗಳು, ಜಾವಳಿಗಳು, ಕೀರ್ತನ ಗೀತೆ ಮೊದಲಾದ ನಲವತ್ತು ಕೀರ್ತನೆಗಳು- ಹೀಗೆ ಆನಂದದಾಸರು ಅನೇಕ ವಿಧವಾಗಿ ಸಾಹಿತ್ಯರಚನೆ ಮಾಡಿದ್ದಾರೆ. ಅಶ್ಲೀಲವಲ್ಲದ ಶೃಂಗಾರ, ಕಟ್ಟಳೆಗಳಿಲ್ಲದ ಭಕ್ತಿ, ಜಿಜ್ಞಾಸೆಗವಕಾಶವಿಲ್ಲದ ತತ್ತ್ವ ಇವರ ರಚನೆಯ ವೈಶಿಷ್ಟ್ಯಗಳು. ಕೀರ್ತನ ಗೀತೆ ಎಂಬ ಇವರ ಗ್ರಂಥ ಪದ, ಆರ್ಯ, ದಂಡಕ, ಷಟ್ಪದಿ ಮೊದಲಾದ ವಿವಿಧ ಛಂದಸ್ಸುಗಳಿಂದ ಕೂಡಿ ಪಾಂಡಿತ್ಯಪೂರ್ಣವಾಗಿರುವ ಭಗವದ್ಗೀತೆಯ ಕೈಪಿಡಿ ಎಂದು ಹೆಸರು ಗಳಿಸಿದೆ. ಇದನ್ನು ಕೀರ್ತನರೂಪದಲ್ಲಿ ಕೇಳಿ ಆನಂದಪಟ್ಟ ಸುರಪುರದ ಅರಸು ಇವರಿಗೆ ಕನಕಾಭಿಷೇಕ ಮಾಡಿಸಿದನಂತೆ. ಕೊಲ್ಲಾಪುರ, ಗದ್ವಾಲ, ವನಪರ್ತಿ, ದೋಮಲಕೋಟ ಮತ್ತು ಮೈಸೂರು ಅರಸರಿಂದಲೂ ಇವರು ಸನ್ಮಾನಿತರಾದರು.

ರಮಾಸಮುದ್ರದ ಕುಮಾರಿ ನಿನ್ನಯ ಸಮಾನರಾರಮ್ಮ ಎಂಬ ಲಕ್ಷ್ಮೀಸ್ತುತಿ, ಕರೆದರೆ ಬರಬಾರದೆ ಎಂಬ ಶ್ರೀರಾಘವೇಂದ್ರದ ಸ್ತುತಿ ಮುಂತಾದ ಇವರ ಹಲವು ರಚನೆಗಳು ತುಂಬ ಪ್ರಸಿದ್ಧವಾಗಿವೆ. (ಕೆ.ಎಂ.ಕೆ.)

**ಆನಂದರಾವ್, ಟಿ. :** 1852-1919. ಮೈಸೂರು ಸಂಸ್ಥಾನದ ದಿವಾನರು (ಮಾರ್ಚ್ 1909 ನವೆಂಬರ್ 1912). ದಕ್ಷಿಣ ಭಾರತದ ಖ್ಯಾತ ರಾಜತಂತ್ರಜ್ಞ ದಿವಾನ್ ಸರ್ ತಂಜಾವೂರು ಮಾಧವರಾವ್ ಅವರ ಪುತ್ರ. ತಿರುವನಂತಪುರದಲ್ಲಿ ತಮ್ಮ ತಂದೆ ದಿವಾನರಾಗಿದ್ದ ಕಾಲದಲ್ಲಿ 15-05-1852ರಲ್ಲಿ ಹುಟ್ಟಿದ ಆನಂದರಾಯರು 1871ರಲ್ಲಿ ಪದವೀಧರರಾಗಿ ತಿರುವಾಂಕೂರಿನ ರಾಜ ಕುಮಾರನಿಗೂ ಮುಂದೆ ಇಂದೂರಿನ ರಾಜ ಕುಮಾರನಿಗೂ ಶಿಕ್ಷಕರಾಗಿ ಕೆಲಸ ಮಾಡಿದರು. ನವೆಂಬರ್ 1873ರಲ್ಲಿ ಮೈಸೂರು ಸಂಸ್ಥಾನದ ಸೇವೆಗೆ ಸೇರಿದ ಇವರು ದಿವಾನ್ ರಂಗಾಚಾರ್ಲು ಅವರ ಸಹಾಯಕರಾಗಿದ್ದು ಅವರಿಂದ ಪ್ರೋತ್ಸಾಹಿತರಾದರು. ಅನೇಕ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ, ಮೈಸೂರಿನಲ್ಲಿ ಡೆಪ್ಯುಟಿ ಕಮಿಷನರ್ ಆಗಿ, ಮೈಸೂರು ಸಂಸ್ಥಾನದ ಸ್ಟ್ಯಾಟಿಸ್ಟಿಕ್ಸ್ ವಿಭಾಗದ ನಿರ್ದೇಶಕರಾಗಿ ಹಾಗೂ ಸಂಸ್ಥಾನದ ಚೀಫ್ ಸೆಕ್ರೆಟರಿ ಆಗಿ ಸೇವೆ ಸಲ್ಲಿಸಿದರು. 1904ರಲ್ಲಿ ಇವರನ್ನು ರೆವಿನ್ಯೂ ಕಮಿಷನರ್ ಆಗಿ ಆಯ್ಕೆ ಮಾಡಲಾಗಿತ್ತು. ಸಂಸ್ಥಾನದ ಕಾರ್ಯಕಾರಿ ಸಮಿತಿಗೆ (ಎಕ್ಸಿಕ್ಯುಟಿವ್ ಕಮಿಟಿ)

ಕೆ.ಪಿ.ಪುಟ್ಟಣ್ಣಚೆಟ್ಟಿಯವರ ಜೊತೆ ಆಯ್ಕೆಗೊಂಡರು (1906). ದಿವಾನ್ ವಿ.ಪಿ.ಮಾಧವರಾಯರ ಅನಂತರ ದಿವಾನ್ ಪದವಿಗೆ ಇವರನ್ನು ನೇಮಿಸಲಾಯಿತು. ಜೂನ್ 1911ರಲ್ಲಿ ಮೈಸೂರು ಸಂಸ್ಥಾನದ ಮೊದಲ ಎಕನಾಮಿಕ್ ಕಾನ್ಫರೆನ್ಸ್ ನಡೆಸಿದುದು, ಕನ್ನಂಬಾಡಿ ಅಣೆಕಟ್ಟು ರಚನೆಗೆ ನಿರ್ಣಯ ಕೈ ಕೊಂಡುದು (1911) ಹಾಗೂ ಮೈಸೂರಿನ ಹೊಸ ಅರಮನೆ ಪೂರ್ತಿಯಾದುದು (1910) ಇವರ ದಿವಾನ ಗಿರಿಯ ಕಾಲದ ಕೆಲವು ಮುಖ್ಯ ಸಾಧನೆಗಳು. ಅಲ್ಲದೆ ಮದರಾಸು ಪ್ರಾಂತ್ಯದ ಜನರಿಗೆ ಮೈಸೂರು ಸಂಸ್ಥಾನದ ಉನ್ನತ ಹುದ್ದೆಗಳು ದೊರೆಯುತ್ತಿರುವುದರ ವಿರುದ್ಧ ನಡೆದ ಚಳವಳಿಗೆ ಮಣಿದು ಮೈಸೂರಿಗರಿಗೆ ಸಂಸ್ಥಾನದ ಸಿವಿಲ್ ಸರ್ವಿಸ್ ಹುದ್ದೆಗಳು ಮೀಸಲಾಗಿರಬೇಕೆಂದು ಇವರು ನಿರ್ಣಯ ಮಾಡಿದರು. 1912ರಲ್ಲಿ ಸೇವೆಯಿಂದ ನಿವೃತ್ತರಾದರು. ಇವರಿಗೆ ಪ್ರಧಾನಶಿರೋಮಣಿ ಎಂಬ ಬಿರುದು ಮತ್ತು ಸಿ.ಐ.ಇ. ಪ್ರಶಸ್ತಿ ದೊರಕಿತ್ತು. ಮುಂದೆ 20-07-1919ರಂದು ಬೆಂಗಳೂರಲ್ಲಿ ನಿಧನರಾದರು.

(ಎಸ್.ಕೆ.)

**ಆನೆಗೊಂದಿ :** ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಒಂದು ಊರು. ಹೊಸಪೇಟೆಗೆ 10ಕಿಮೀ. ದೂರದಲ್ಲಿ ಹಂಪೆಯ ಎದುರಿಗೆ ತುಂಗಭದ್ರಾ ನದಿಯ ಎಡದಂಡೆಯ ಮೇಲಿದೆ. ಆನೆಗೊಂದಿ ವಿಜಯನಗರ ಇತಿಹಾಸದ ಮೂಲಕ ಪ್ರಸಿದ್ಧಿ ಪಡೆದಿದೆ. ವಿಜಯನಗರದ ಅರಸರು ತಮ್ಮ ಸೈನ್ಯದ ಆನೆಗಳಿಗೆ ಇಲ್ಲಿ ಜಾಗ ಮಾಡಿದ್ದರು, ಆದ್ದರಿಂದ ಈ ಹೆಸರು ಬಂತೆಂದು ಪ್ರತೀತಿ. ಆನೆಗೊಂದಿ ಈ ಪ್ರದೇಶದ ಪರ್ವತಾವಳಿಯ



ನವ ಬೃಂದಾವನ

ಸ್ವಾಭಾವಿಕ ದುರ್ಗವಾಗಿದ್ದು ಸುರಕ್ಷಿತ ಸ್ಥಳವಾದುದರಿಂದ ಹಿಂದಿನ ಕೆಲವು ರಾಜರು ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಆನೆಗೊಂದಿಯನ್ನು ಆಳುತ್ತಿದ್ದ ಕಂಪಿಲರಾಯ ಮತ್ತು ಅವನ ಮಗ ಕುಮಾರರಾಮ ಇವರು ಅಲಾಉದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನನ್ನು ಎದುರಿಸಿ ಯುದ್ಧ ಮಾಡಿದರೆಂದು ತಿಳಿದುಬಂದಿದೆ. ಕಂಪಿಲರಾಯನ ಬಳಿ ಇದ್ದ ಹರಿಹರ ಮತ್ತು ಬುಕ್ಕ ಸಹೋದರರು ವಿಜಯನಗರದ ಸ್ಥಾಪನೆಗಾಗಿ ಶ್ರಮಿಸಿದವರು. ಆದುದರಿಂದಲೇ ನ್ಯೂನಿಜ್ ಎಂಬ ವಿದೇಶೀ ಯಾತ್ರಿಕ ಆನೆಗೊಂದಿಯನ್ನು ವಿಜಯನಗರದ ಮಾತೃಸ್ಥಾನವೆಂದು ಕರೆದಿದ್ದಾನೆ. ಅರಬ್ ಇತಿಹಾಸಕಾರರು ಆನೆಗೊಂದಿಯನ್ನು ನಾಗುಂಡಿಮ್ ಎಂದು ಕರೆದಿದ್ದಾರೆ. ವಿಜಯನಗರದ ಪತನಾನಂತರ ಆರವೀಡು ಸಂತತಿಯ ಅರಸರ ಶಾಖೆಯೊಂದು ಆನೆಗೊಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲಾರಂಭಿಸಿತು. 15ನೆಯ ಶತಮಾನದಲ್ಲಿ ಆನೆಗೊಂದಿಯ ಶ್ರೀರಂಗರಾಯ ಶ್ರೀರಂಗಪಟ್ಟಣದ ಕೋಟೆಯನ್ನೂ ಶ್ರೀರಂಗನಾಥ ಮಂದಿರವನ್ನೂ ಕಟ್ಟಿಸಿ ಈ ಪ್ರಾಂತವನ್ನು ಆಳಿದನೆಂದು ಶ್ರೀರಂಗಪಟ್ಟಣದ ಸ್ಥಳಪುರಾಣ ತಿಳಿಸುತ್ತದೆ. 16-17ನೆಯ ಶತಮಾನದಲ್ಲಿ ಆನೆಗೊಂದಿ ಸಂಸ್ಥಾನ ಮುಸ್ಲಿಮರ ಅಧೀನವಾಯಿತು. 1749ರಲ್ಲಿ ಮರಾಠರು ಇದನ್ನು ಸ್ವಾಧೀನಪಡಿಸಿಕೊಂಡರು. 1776ರಲ್ಲಿ ಟಿಪ್ಪುಸುಲ್ತಾನ ಈ ಊರಿನ ಮೇಲೆ ದಂಡೆತ್ತಿ ಹಾಳುಗೆಡವಿದ. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಪತನವಾದಮೇಲೆ ಬ್ರಿಟಿಷರು ಆನೆಗೊಂದಿಯ ಕೆಲವು ಭಾಗಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಉಳಿದ ಪ್ರದೇಶವನ್ನು ಹಿಂದಿನ ಅರಸರ ಸಂತತಿಗೆ ಒಪ್ಪಿಸಿಕೊಟ್ಟರು. 1949ರ ವರೆಗೆ ಇದು ಆ ಅರಸರ ಸಂಸ್ಥಾನವಾಗಿತ್ತು.

ಆನೆಗೊಂದಿಯಲ್ಲಿನ ಪ್ರಾಚೀನ ಕೋಟೆಕೊತ್ತಲಗಳು, ಶೇಷಶಾಯಿ ದೇವಾಲಯ, ಪಂಪಾಸರೋವರ, ವಾಲಿಭಂಡಾರ ಇಲ್ಲಿನ ಹಳೆಯ ಅರಮನೆ ಇವೆಲ್ಲಾ ಪ್ರೇಕ್ಷಣೀಯವಾಗಿವೆ. ಇಲ್ಲಿನ ಒಂಚ ಅಪ್ಪ ಮಠದಲ್ಲಿ ಹಳೆಯ ಭಿತ್ತಿಚಿತ್ರಗಳಿವೆ. ಇವಲ್ಲದೆ ಮಾಧ್ವಗುರುಗಳ ಒಂಬತ್ತು ವೃಂದಾವನಗಳು ಆನೆಗೊಂದಿಯಲ್ಲಿವೆ. (ಎಸ್.ಎಂ.ವಿ.)

**ಆನೇಕಲ್ಲು :** ಬೆಂಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಪಟ್ಟಣ. ಈ ತಾಲ್ಲೂಕು ಪೂರ್ವಕ್ಕೆ ತಮಿಳುನಾಡು, ಉತ್ತರ ಮತ್ತು ವಾಯವ್ಯಕ್ಕೆ ಹೊಸಕೋಟೆ ಮತ್ತು ಬೆಂಗಳೂರು, ದಕ್ಷಿಣ ಮತ್ತು ನೈಋತ್ಯಕ್ಕೆ ಕನಕಪುರ ತಾಲ್ಲೂಕುಗಳಿಂದ ಸುತ್ತುವರಿದಿದೆ. ಆನೇಕಲ್ಲು, ಜಿಗಣಿ, ಸರ್ಜಾಪುರ, ಅತ್ತಿಬೆಲೆ ಹೋಬಳಿಗಳಿದ್ದು ಒಟ್ಟು 223 ಗ್ರಾಮುಗಳನ್ನೊಳಗೊಂಡಿದೆ. ತಾಲ್ಲೂಕಿನ ವಿಸ್ತೀರ್ಣ 534ಚಕಿಮೀ. ಜನಸಂಖ್ಯೆ 2,98,961.

ತಾಲ್ಲೂಕಿನ ಪಶ್ಚಿಮ ಭಾಗ ಅರ್ಕಾವತಿ ಜಲಾನಯನದ ಕಣಿವೆ, ಕಾಡು ಮತ್ತು ಬೆಟ್ಟಗುಡ್ಡಗಳಿಂದ ಕೂಡಿದೆ. ಪೂರ್ವದ ಕಣಿವೆ ಪೊನ್ನೆಯಾರ್ ನದಿಯ ಜಲಾನಯನ ಭೂಮಿಗೆ ಸೇರಿದೆ. ಭೂಮಿ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ತಾಲ್ಲೂಕಿನ ಹೆಚ್ಚುಭಾಗ ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಸಾಮಾನ್ಯವಾಗಿ ಈ ಪ್ರದೇಶದಲ್ಲಿ ರಾಗಿ, ಬತ್ತ, ದ್ವಿದಳ ಧಾನ್ಯಗಳು ಮತ್ತು ಎಣ್ಣೆ ಬೀಜಗಳನ್ನು ಬೆಳೆಯುತ್ತಾರೆ. ಸಾಕಷ್ಟು ಮಳೆಯಾಗುತ್ತದೆ. ಉತ್ತಮ ಹವಾಗುಣ ಉಂಟು. ಬೆಳೆಗಳು ಕುಯ್ಲಿಗೆ ಬರುವ ಕಾಲದಲ್ಲಿ ಕೆಲವೊಮ್ಮೆ ಅಕ್ಕಪಕ್ಕದ ಕಾಡುಗಳಿಂದ ಆನೆಗಳು ನುಗ್ಗಿಬರುವುದುಂಟು.

ಚಂಪಕಧಾಮಸ್ವಾಮಿ ದೇವಾಲಯವಿರುವ ಬನ್ನೇರುಘಟ್ಟ (ನೋಡಿ) ಈ ತಾಲ್ಲೂಕಿನ ಒಂದು ಸುಪ್ರಸಿದ್ಧ ಕ್ಷೇತ್ರ. ದೊಮ್ಮಸಂದ್ರ ಕೈಮಗ್ಗದ ಸೀರೆಗಳಿಗೆ ಹೆಸರಾಗಿದೆ. ಹಿಂದೆ ಪಾರಂಗಲನಿ, ಖಗಪುರ ಎಂದು ಹೆಸರಿದ್ದ ಇಂದಿನ ಹಾರಗದ್ದೆಯಲ್ಲಿರುವ ಚನ್ನಕೇಶವ ದೇವಾಲಯ ದೊಡ್ಡದು. ಭಾರತ, ರುಕ್ಮಾಂಗದ ಚರಿತೆಗಳನ್ನು ಬರೆದ ಲಕ್ಷ್ಮಕವಿ (18ನೆಯ ಶತಮಾನ) ಇಲ್ಲಿಯವನು. ಪಾಳೆಯಪಟ್ಟುಗಳಿದ್ದ ಜಿಗಣಿ ಮತ್ತು ಸರ್ಜಾಪುರ (ನೋಡಿ) ಐತಿಹಾಸಿಕ ಸ್ಥಳಗಳು. ಆನೇಕಲ್ಲಿನಿಂದ 3-4ಕಿಮೀ ದೂರದಲ್ಲಿರುವ ಮುತ್ಯಾಲಮಡು (ಮುತ್ತಿನಂತೆ ನೀರು ತೊಟ್ಟಿಡುತ್ತಿರುವ) ಸಣ್ಣ ಜಲಪಾತವಿರುವ ಸ್ಥಳ, ಸುಂದರ ತಾಣ, ಇತ್ತೀಚೆಗೆ ಇದು ಪ್ರವಾಸಿ ತಾಣವಾಗಿ ರೂಪುಗೊಳ್ಳುತ್ತಿದೆ.

ತಾಲ್ಲೂಕಿನ ಕಸಬೆ ಆನೇಕಲ್ಲು ಬೆಂಗಳೂರಿನಿಂದ ಆಗ್ನೇಯಕ್ಕೆ 35ಕಿಮೀ ದೂರದಲ್ಲಿದೆ. ಬೆಂಗಳೂರು ಮತ್ತು ಹೊಸೂರುಗಳಿಗೆ ಇಲ್ಲಿಂದ ಉತ್ತಮ ರಸ್ತೆ ಇದೆ. ಜನಸಂಖ್ಯೆ 33,160. ಆನೇಕಲ್ಲಿನಲ್ಲಿ ನಗರಸಭೆ ಇದೆ. ಈ ಊರು ನೇಯ್ಗೆ ಸೀರೆಗಳಿಗೆ ಪ್ರಸಿದ್ಧ. ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ.

ಆನೇಕಲ್ಲನ್ನು 1603ರಲ್ಲಿ ಸುಗಟೂರು ಮನೆತನಕ್ಕೆ ಸೇರಿದ ಚಿಕ್ಕತಿಮ್ಮೇಗೌಡ ಸ್ಥಾಪಿಸಿದ. ಬಿಜಾಪುರದ ರಾಜ ಸುಗಟೂರನ್ನು ವಶಪಡಿಸಿಕೊಂಡಾಗ ಚಿಕ್ಕ ತಿಮ್ಮೇಗೌಡನಿಗೆ ಆನೇಕಲ್ಲು ಮಾತ್ರ

ಉಳಿಯಿತು. ಈತ ಇಲ್ಲಿ ಕೋಟೆಯನ್ನು ಕಟ್ಟಿ ಊರನ್ನು ಭದ್ರಪಡಿಸಿದ. ದೇವಾಲಯ ಮತ್ತು ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದ. ಇವರ ಮೊಮ್ಮಗ ದೊಡ್ಡ ತಿಮ್ಮೇಗೌಡ ಮೈಸೂರು ರಾಜರಿಗೆ ವರ್ಷಕ್ಕೆ 2,000 ರೂಪಾಯಿಗಳ ಕಾಣಿಕೆ ಕೊಡಲೊಪ್ಪಿ ರಾಜ್ಯವನ್ನು ಉಳಿಸಿಕೊಂಡ. ದೊಡ್ಡ ತಿಮ್ಮೇಗೌಡನ ಮೊಮ್ಮಗ ಚಾಮುಗೌಡನ ಕಾಲದಲ್ಲಿ ಹೈದರ್ ಈ ಊರನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡ.

ಮುತ್ಯಾಲಮಡು ಜಲಪಾತ

ಇಲ್ಲಿ ಚನ್ನಕೇಶವ, ಮಲ್ಲಿಕಾರ್ಜುನ, ವೇಣುಗೋಪಾಲ ದೇವಾಲಯಗಳಿವೆ. ಇವುಗಳಲ್ಲಿ ಚನ್ನಕೇಶವ ದೇವಾಲಯ ಪ್ರಾಚೀನವಾದುದು. ಹದಿನಾಲ್ಕು ಹಸ್ತಗಳುಳ್ಳ ವಿಷ್ಣುವಿನ ಪ್ರತಿಮೆ ಇದೆ. ಇಲ್ಲಿರುವ ಮಲ್ಲಿಕಾರ್ಜುನ ದೇವಾಲಯದ ಮುಂದೆ 20' ಎತ್ತರದ ದೀಪಸ್ತಂಭವಿದೆ. ತ್ರಿಕೂಟವರ್ಗಕ್ಕೆ ಸೇರಿದ ಈ ದೇವಾಲಯದ ಉತ್ತರ ದಕ್ಷಿಣದಲ್ಲಿ ಪಾರ್ವತಿ ಮತ್ತು ನಂಜುಂಡೇಶ್ವರ ವಿಗ್ರಹಗಳಿವೆ.ಸಾಧನಪುರವಾಸ ಎಂಬ ಅಂಕಿತದಿಂದ ಆನಂದ ರಾಮಾಯಣವನ್ನು ಬರೆದ ತಿರುಮಲಾರ್ಯ ಇಲ್ಲಿಯವನೆಂದು ಹೇಳಲಾಗಿದೆ. ಇಲ್ಲಿ ಒಂದು ಶಂಕರಮಠವಿದೆ. ಇಲ್ಲಿನ ಕರಗ ಬೆಂಗಳೂರಿನ ಕರಗದಷ್ಟೇ ಪ್ರಸಿದ್ಧ.

ಆನೇಕಲ್ಲಿನ ದಕ್ಷಿಣಕ್ಕೆ ಶಾಸನಬಸದಿಯೂ ಬೂದಿಹಳ್ಳ ಎಂದು ಕರೆಯುವ ಕ್ರಿಸ್ತಶಕಾರಂಭ ಕಾಲದ ಒಂದು ಪ್ರಾಚೀನ ನಿವೇಶನವೂ ಇವೆ. (ಎಚ್.ವಿ.ಎಸ್.;ಎನ್.ವಿ.)

**ಆನೇಕೆರೆ :** ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಚನ್ನರಾಯಪಟ್ಟಣದಿಂದ 6ಕಿಮೀ ಪಶ್ಚಿಮಕ್ಕಿರುವ ಗ್ರಾಮ. ಹೊಯ್ಸಳ ದೇವಾಲಯಗಳಿಂದ ಪ್ರಸಿದ್ಧವಾಗಿದೆ. ಶಾಸನಗಳಲ್ಲಿ ಆನೆಗಳ ಕೆರೆ, ಕೇಶವಪುರ ಎಂದು ಕರೆಯಲಾಗಿದೆ. ಊರಿನ ಮಧ್ಯದಲ್ಲಿರುವ ಚನ್ನಕೇಶವ (ಜನಾರ್ದನ) ಗುಡಿ ಸು.1191ರಲ್ಲಿ ರಚಿವಾಯಿತು. ಇದು ಏಕಕೂಟ ದೇವಾಲಯ, ಗರ್ಭಗೃಹ, ನವರಂಗ ಮತ್ತು ಅರ್ಧಮಂಟಪವಿರುವ ಈ ದೇವಾಲಯ ಜಗತಿಯ ಮೇಲೆ ನಿಂತಿದೆ. ಹೊಯ್ಸಳ ಕಾಲದ ಒಂದು ಸುತ್ತು ಪ್ರಾಕಾರ, ಅದಕ್ಕೆ ಸೇರಿದಂತೆ ಒಳ ಕೈಸಾಲೆ ಸಹ ಹಿಂದೆ ಇತ್ತು. ಈಗ ಈ ಭಾಗ ನವೀಕೃತವಾಗಿದೆ. ಭೈರಪ್ಪನಾಯಕ ಎಂಬುವನು 17ನೆಯ ಶತಮಾನದಲ್ಲಿ ಈ ಪ್ರಾಕಾರದ ಜೀರ್ಣೋದ್ಧಾರ ಮಾಡಿದ. ಶಂಖವೊಂದು ಇಳಿಬಿದ್ದಂತಿರುವ ನವರಂಗದ ಮಧ್ಯದಲ್ಲಿರುವ ಭುವನೇಶ್ವರಿ ಸುಂದರವಾಗಿದೆ. ಈಗ ಗರ್ಭಗುಡಿಯಲ್ಲಿರುವ ಮೂಲ ವಿಗ್ರಹ ಈಚಿನ ಸ್ಥಾಪನೆ. ದೇವಾಲಯದ ಹೊರಮೈ ಕೆತ್ತನೆ ಹಲವು ಭಾಗಗಳಲ್ಲಿ ಅಪೂರ್ಣವಾಗಿಯೇ ಉಳಿದಿದೆ. ಆದರೆ ಕೆಳಗೆ ಶಿಲ್ಪ ಪಟ್ಟಿಕೆಗಳು, ಭಿತ್ತಿಯ ಮೇಲೆ ಅರೆಗಂಬಗಳು, ಹಾರ ಇವೆ. ಶಿಖರದ ಕೆತ್ತನೆಯೂ ಪೂರ್ಣವಾಗಿಲ್ಲ.

ಸಮೀಪದಲ್ಲಿರುವ ವೀರಭದ್ರ ದೇವಾಲಯ, ಕೆರೆದಂಡೆಯಲ್ಲಿರುವ ಎರಡು ಚಿಕ್ಕ ದೇವಾಲಯಗಳು ಮತ್ತು ಶಂಭುಲಿಂಗೇಶ್ವರ ದೇವಾಲಯ ಸಹ ಹೊಯ್ಸಳ ಕೃತಿಗಳು.



ಜನಾರ್ದನ ದೇವಾಲಯ

ಈ ಊರಿನಲ್ಲಿ ದೊರಕಿರುವ 1191ರ ತಾಮ್ರ ಶಾಸನದಲ್ಲಿ ಹೊಯ್ಸಳ ವೀರ ಬಲ್ಲಾಳನ ಮಂತ್ರಿ ಶ್ರೀಕರಣ ಹೆಗ್ಗಡೆ ಮಾಚಯ್ಯ ಆನೇಕೆರೆಯನ್ನು ಅಗ್ರಹಾರವಾಗಿ ಮಾಡಿದ ವಿಷಯವಿದೆ. ಈ ಶಾಸನದ ಅಂತ್ಯದಲ್ಲಿ ಜನ್ನಯ್ಯನ ಕವಿತೆ ಎಂಬ ಬರೆಹವಿದ್ದು ಪ್ರಸಿದ್ಧ ಕನ್ನಡಕವಿ ಜನ್ನ ಇದರ ಕರ್ತೃ ಎಂದು ತಿಳಿಯಲಾಗಿದೆ. (ಎಚ್.ಎಂ.ಎನ್.)

**ಆನೇಕೊಂಡ :** ದಾವಣಗೆರೆ ಜಿಲ್ಲೆಯಲ್ಲಿ ದಾವಣಗೆರೆಗೆ ಹೊಂದಿಕೊಂಡಂತೆ ಅಲ್ಲಿಂದ 2ಕಿಮೀ ದೂರದಲ್ಲಿರುವ ಒಂದು ಸಣ್ಣ ಹಳ್ಳಿ. 11-12ನೆಯ ಶತಮಾನಗಳಲ್ಲಿ ಪ್ರಸಿದ್ಧ ಪಟ್ಟಣವಾಗಿತ್ತು. ಆನೇಕೊಂಡ ಎಂಬ ಹೆಸರು ಈ ಊರಿಗೆ ಯಾವಾಗ ಹೇಗೆ ಬಂದಿತೆಂಬುದು ತಿಳಿಯದು. ಶಾಸನಗಳು ಬೆಳ್ಳುಱು ಎಂಬ ಒಂದು ಊರನ್ನು ಹೆಸರಿಸುತ್ತವೆ. ಇದು ಈಗಿನ ಆನೇಕೊಂಡ, ಬೇತೂರು ಮತ್ತು ದಾವಣಗೆರೆಗಳನ್ನೊಳಗೊಂಡಿದ್ದಿರಬೇಕೆಂದು ಇವುಗಳ ನಡುವೆ ಇರುವ ಪುರಾತನ ನಿವೇಶನದಿಂದ ತಿಳಿಯಬಹುದು. ಈ ಹಳೆಯ ನಿವೇಶನದಲ್ಲಿ ಕೆಲವು ಗಜಪತಿ ನಾಣ್ಯಗಳು ದೊರಕಿವೆ. ಇದು ಉಚ್ಚಂಗಿ ಪಾಂಡ್ಯರ

ಮೊದಲ ರಾಜಧಾನಿಯಾಗಿದ್ದು ಬೆಳ್ತೂರು 12ರ ಮುಖ್ಯ ಬೀಡಾಗಿತ್ತು. ಹೊಯ್ಸಳರು ಪಾಂಡ್ಯರನ್ನು ಸೋಲಿಸಿದ ಮೇಲೆ ಊರು ಅವನತಿಯನ್ನು ಹೊಂದಿರಬೇಕು. ಮೂಲಸ್ಥಾನ, ಸರ್ಪೇಶ್ವರ, ತ್ರಿಭುವನಮಲ್ಲ ವೀರಪಾಂಡ್ಯ ಕಟ್ಟಿಸಿದ ತ್ರಿಭುವನಮಲ್ಲ ಪಾಂಡ್ಯೇಶ್ವರ, ಬೆಳ್ತೂರಿನ ಜಗತಿಗಳು ಮತ್ತು ಕೊತ್ತಳಗಳು ಜಗತೇಶ್ವರ, ರಾಯಪಾಂಡ್ಯನ ರಾಣಿ ಸೋವಲದೇವಿ ಕಟ್ಟಿಸಿದ ಸೋಮನಾಥ, ಧರ್ಮೇಶ್ವರ, ಅವಿಮುಕ್ತೇಶ್ವರ ಮತ್ತು ವಾಸುದೇವರ ದೇವಾಲಯಗಳು ಇಲ್ಲಿದ್ದುವೆಂದು ಶಾಸನಗಳು ತಿಳಿಸುತ್ತವೆ. ಇವುಗಳಲ್ಲಿ ಅನೇಕವು ಉಳಿದಿಲ್ಲ.

ಈಶ್ವರ ದೇವಾಲಯ

ಈಗಿನ ಆನೇಕೊಂಡದಲ್ಲಿ ಒಂದು ಈಶ್ವರ ದೇವಾಲಯ ಇದೆ. ಸು.1120ರಲ್ಲಿ ಕಟ್ಟಿರಬಹುದಾದ ತ್ರಿಭುವನಮಲ್ಲ ಪಾಂಡ್ಯೇಶ್ವರ ದೇವಾಲಯವಾಗಿರಬಹುದು. ಈ ಗುಡಿಗೆ 6ನೆಯ ವಿಕ್ರಮಾದಿತ್ಯ 1123ರಲ್ಲಿ ದತ್ತಿ ಬಿಟ್ಟಿದ್ದಾನೆ. ಇದು ಕಲ್ಯಾಣದ ಚಾಳುಕ್ಯರ ದೇವಾಲಯಗಳ ಮಾದರಿಯಲ್ಲಿ ಉಚ್ಚಂಗಿ ಪಾಂಡ್ಯರು ಕಟ್ಟಿಸಿದ ಬಳಪದ ಕಲ್ಲಿನ ಸುಂದರ ದೇವಾಲಯಗಳ ಒಂದು ಉತ್ತಮ ಉದಾಹರಣೆ. ಪೂರ್ವಾಭಿಮುಖವಾಗಿರುವ ಒಂದು ಗರ್ಭಗೃಹ, ಅದರ ಮುಂದೆ ಸುಕನಾಸಿ, ನವರಂಗಗಳು, ನವರಂಗಕ್ಕೆ ಸೇರಿದಂತೆ ಉತ್ತರಕ್ಕೆ ಇನ್ನೊಂದು ಗರ್ಭಗೃಹ, ಪೂರ್ವ ದಕ್ಷಿಣಗಳಲ್ಲಿ ಎರಡಂಕಣದ ಮುಖಭದ್ರಗಳಿರುವ ಅಪರೂಪ ವಿನ್ಯಾಸದ ಈ ದೇವಾಲಯದ ಹೊರಗೋಡೆಗಳು ಸರಳವಾಗಿದ್ದು ಅಲ್ಲಲ್ಲಿ ಅರೆಗಂಬಗಳಿವೆ. ತೆರೆದ ಮುಖಮಂಟಪಗಳ ಹೊರಮೈಯಲ್ಲಿ ಕಟಾಂಜನದ ಕೆಳಗೆ ಹಲವು ಸಾಲು ಅಡ್ಡಪಟ್ಟಿಕೆಗಳು, ಮೇಲೆ ಜೋಡಿ ಅರೆಗಂಬಗಳ ನಡುವೆ ನೃತ್ಯಗಣಪತಿ, ಋಷಿಗಳು, ನರ್ತನದ, ವಿವಿಧ ಭಂಗಿಗಳಲ್ಲಿರುವ ಸ್ತ್ರೀಮೂರ್ತಿಗಳು, ವ್ಯಾಧರು ಮುಂತಾದ ಕಿರುಮೂರ್ತಿಗಳ ಸಾಲಿನಿಂದ ತುಂಬಿದ್ದು ಒಳಭಾಗದಲ್ಲಿ ಎರಡು ಕಡೆಯೂ ಜಗತಿಗಳಿವೆ. ಈ ದೇವಾಲಯದ ಕಂಬಗಳು ಬಗೆಬಗೆಯಾಗಿವೆ. ಮುಖಮಂಟಪ ಮತ್ತು ನವರಂಗದ ಭುವನೇಶ್ವರಿಗಳು ಸುಂದರವಾಗಿದ್ದು ನವರಂಗದ ಸುತ್ತಲ ಅಂಕಣಗಳಲ್ಲಿ ಪದ್ಮಗಳ ನಡುವಣ ಗೊಂಡೆಗಳಲ್ಲಿ ಅಷ್ಟದಿಕ್ಪಾಲಕರು, ಮಧ್ಯದ ಅಂಕಣದಲ್ಲಿ ನಡುವೆ ಗಜಾರಿ ಮತ್ತು ಇಕ್ಕೆಲಗಳಲ್ಲಿ ವಿಷ್ಣು, ಬ್ರಹ್ಮ, ಮೇಲೆ ಕೆಳಗೆ ದ್ವಾದಶಾದಿತ್ಯರು, ಏಕಾದಶರುದ್ರರು, ಶಿವನ ಪರಿವಾರ ದೇವತೆಗಳು, ಯೋಗಾನರಸಿಂಹ, ಮೋಹಿನಿ, ಕೋದಂಡರಾಮ ಮುಂತಾದ ಮೂರ್ತಿಗಳಿಂದ ತುಂಬಿದ್ದು ಭವ್ಯವಾಗಿದೆ. ಬರಿದಾಗಿರುವ ಉತ್ತರದಿಕ್ಕಿನ ಗರ್ಭಗೃಹದ ಬಾಗಿಲುವಾಡ ಸುಂದರವಾಗಿದೆ. ಬಹುಶಃ ಈ ಗರ್ಭಗೃಹದಲ್ಲಿದ್ದ ಕೇಶವನ ಭಿನ್ನವಾದ ಮೂರ್ತಿ ದೇವಾಲಯದ ಎದುರಿಗೆ ಈಚೆಗೆ ಕಟ್ಟಿರುವ ಒಂದು ಚಿಕ್ಕಗುಡಿಯಲ್ಲಿದೆ. ಜಾಲಂಧ್ರದಿಂದ ಕೂಡಿದ ಸುಕನಾಸಿಯ ಬಾಗಿಲುವಾಡದ ಎರಡು ಕಡೆಯೂ ಅರೆಮಂಟಪಗಳಿವೆ. ಅಭಿನವಹಸ್ತವೆಡಂಗ ಸರಸ್ವತೀ ಗಣದಾಸಿ ಬಾಚೋಜನ ಮಗ ಬಾಮೋಜ ಈ ದೇವಾಲಯದ ಶಿಲ್ಪಿ. (ಎಂ.ಎಚ್.)

**ಆಭರಣಗಳು** : ಸೌಂದರ್ಯವರ್ಧಕ, ಸೌಂದರ್ಯರಕ್ಷಕ, ಔಪಯೋಗಿಕ, ಅನ್ಯಾಕರ್ಷಕ, ರೋಗನಿವಾರಕ, ಕ್ಷೇಮಚಿಂತಕ, ಮಾಂತ್ರಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಅಂತಸ್ತು ಸಿರಿತನದ ಪ್ರದರ್ಶನ ಇವೇ ಮೊದಲಾದ ಕಾರಣಗಳಿಗಾಗಿ ಆಭರಣಗಳನ್ನು ಉಪಯೋಗಿಸುವ ವಿಶ್ವಸಾಮಾನ್ಯ ಪ್ರವೃತ್ತಿಗೆ ಕನ್ನಡಿಗರು ಹೊರತಲ್ಲ. ವಿಶ್ವದ ಇತರೆಡೆಗಳಂತೆ ಕರ್ನಾಟಕದಲ್ಲಿ ಸಹ ಅತಿಪ್ರಾಚೀನ ಕಾಲದಲ್ಲಿ ನೈಸರ್ಗಿಕವಾಗಿ ದೊರೆಯುವ ಹೂವು, ಬಳ್ಳಿ, ಎಲೆ ಬಣ್ಣ ಮೊದಲಾದುವುಗಳನ್ನು ಅಲಂಕಾರಕ್ಕಾಗಿ ಬಳಸುವ ರೂಢಿ ಇದ್ದು ಕ್ರಮೇಣ ನಾಗರಿಕತೆ ಹಲವು ಮಜಲುಗಳಲ್ಲಿ ಬೆಳೆದಂತೆಲ್ಲಾ ವೈವಿಧ್ಯಮಯವಾದ ಹೆಚ್ಚು ಕಾಲ ಬಾಳಬಹುದಾದ, ಹೆಚ್ಚು ಆಕರ್ಷಕವಾದ, ಬೆಲೆಯುಳ್ಳ ಆಭರಣಗಳನ್ನು ಬಳಸುತ್ತಿದ್ದುದನ್ನು ಐತಿಹಾಸಿಕ ಮತ್ತು ಪುರಾವಸ್ತು ಆಧಾರಗಳಿಂದ ಗುರುತಿಸಬಹುದಾಗಿದೆ.

ಪ್ರಾಗೈತಿಹಾಸಿಕ ಕಾಲದಲ್ಲಿ ಪ್ರಾರಂಭಾವಸ್ಥೆಯಲ್ಲಿ ಪ್ರಕೃತಿದತ್ತ ವಸ್ತುಗಳ ಉಪಯೋಗವಿದ್ದಿತೆಂಬುದಕ್ಕೆ ಈಗಲೂ ಆದಿವಾಸಿ ಜನಾಂಗದಲ್ಲಿ ಕಂಡುಬರುವ ಬಿಚ್ಚೋಲೆ (ಓಲೆಗರಿಯನ್ನು ಸುರುಳಿ ಸುತ್ತಿ ಕಿವಿಗೆ ಇಟ್ಟುಕೊಳ್ಳುವಂಥ'ದ್ದು), ಬೆಂಡೋಲೆ (ಜೊಂಡು, ಜೋಳದ ಕಡ್ಡಿ ಇತ್ಯಾದಿಗಳ ಸಿಪ್ಪೆ ಸುಲಿದು ಒಳಗಿನ ಬೆಂಡನ್ನು ಕಿವಿಗೆ ಇಟ್ಟು ಕೊಳ್ಳುವಂಥದ್ದು) ಸೂಚಕವಾಗಿವೆ. ಲೋಹ ಮತ್ತು ಹರಳುಗಳ ಮೂಗುತಿ ಬರುವುದಕ್ಕಿಂತ ಮುಂಚೆ ಬಿದಿರುಕಡ್ಡಿಯನ್ನೇ ಮೂಗುತಿಯನ್ನಾಗಿ ಬಳಸುತ್ತಿದ್ದರು ಎಂಬುದಕ್ಕೆ ಗಂಧಕಾರನ ಗೌಡನ ಸೊಸೆಗೆ ಬಿದಿರುಕಡ್ಡಿ ಮೂಗುತಿ ಎಂಬ ಗಾದೆ ಸಾಕ್ಷ್ಯಾಧಾರವಾಗಿ ನಿಂತಿದೆ. ಇಂದಿಗೂ ನಿರ್ಗತಿಕರು, ಲೋಹದ ಮೂಗುತಿಗೆ ಬದುಕದವರು, ಬಿದಿರುಗಡ್ಡಿಯನ್ನೋ ಯಾವುದಾದರೂ ಕಡ್ಡಿಯನ್ನೋ ಮೂಗುತಿಯಂತೆ ಇಟ್ಟುಕೊಳ್ಳುವುದನ್ನು ಕಾಣಬಹುದು. ಹೀಗೆಯೇ ಎಡಗೈಗೆ ಇಟ್ಟಂಗಿ ಮಣಿ, ಬಲಗೈಗೆ ಬಟ್ಟೆ ತಿರಿ, ಹಿಂದೆ ನಮ್ಮಪ್ಪನೋರು ಬಲು ಬದುಕಿದ್ದರು ಅಂದ್ಹಂಗೆ ಎಂಬ ಗಾದೆ ಲೋಹದ ಒಡವೆಗಿಂತ ಮೊದಲು ಮಣಿಯನ್ನು, ಬಟ್ಟೆಬಳ್ಳನ್ನು ಕೈಮುರಿಯಂತೆ (ಆಭರಣ) ಬಳಸುತ್ತಿದ್ದರು ಎಂಬುದನ್ನೂ ಮತ್ತು ಲೋಹದ ಒಡವೆ ಬಂದ ಮೇಲೂ ಕಡು ಬಡವರು ಅವುಗಳನ್ನು ಆಭರಣಗಳನ್ನಾಗಿ ಬಳಸುತ್ತಿದ್ದರು, ಬಳಸುತ್ತಿದ್ದಾರೆ ಎಂಬುದನ್ನೂ ಸೂಚಿಸುತ್ತದೆ. ಪ್ರಾರಂಭದಲ್ಲಿ ಕಲ್ಲು, ಮೂಳೆ, ಸುಟ್ಟ ಮಣ್ಣಿನ ಒಡವೆಗಳು, ಬಿದಿರು ಮತ್ತು ಓಲೆಗರಿಯ ಒಡವೆಗಳು, ಮಣಿ, ಚಿಪ್ಪು, ಕವಡೆ ಹಾಗೂ ಬಗೆ ಬಗೆಯ ಬೀಜದ ಒಡವೆಗಳು ಬಳಕೆಯಲ್ಲಿದ್ದುವು ಎಂಬುದಕ್ಕೆ ಇಂದಿಗೂ ಹಾಲಕ್ಕಿ ಒಕ್ಕಲಿಗರ ಹೆಣ್ಣುಮಕ್ಕಳು ಹೆಚ್ಚಾಗಿ ಮಣಿಗಳ ಆಭರಣಗಳನ್ನೇ ಧರಿಸುವುದು ಮತ್ತು ಲಂಬಾಣಿ ಹೆಂಗಸರು ಮಣಿ, ಚಿಪ್ಪು, ಕವಡೆ ಇತ್ಯಾದಿ ಒಡವೆಗಳನ್ನು ಧರಿಸುವುದು ಸಾಕ್ಷ್ಯಾಧಾರಗಳಾಗಿ ನಿಲ್ಲುತ್ತವೆ.

ನವಶಿಲಾಯುಗ ಮತ್ತು ತಾಮ್ರ ಶಿಲಾಯುಗಗಳ ಕಾಲದಲ್ಲಿ ಕ್ರಿ.ಪೂ.ಸು. 2500-1000 ಸುಟ್ಟ ಮಣ್ಣಿನ ಮಣಿಗಳು, ಕವಡೆ ಮಣಿಗಳು, ಬಳಪದಕಲ್ಲಿನ ಮಣಿಗಳು, ತಾಮ್ರದ ಬಳೆ, ತಂತಿಯ ಸುರುಳಿ, ಚಿನ್ನದ ಕಿವಿಯ ಆಭರಣ ಮೊದಲಾದವು ಬಳಕೆಯಲ್ಲಿದ್ದುವು. ಕಬ್ಬಿಣದ ಯುಗದಲ್ಲಿ ಇದೇ ರೀತಿಯ ಸುಟ್ಟಮಣ್ಣು ಮತ್ತು ಕಾರ್ನೀಲಿಯನ್ ಮಣಿಗಳು ಮೊದಲಾದುವಿದ್ದುವು. ಆದಿಚಾರಿತ್ರಿಕ ಕಾಲದಲ್ಲಿ ಈ ಮೇಲಿನ ವಸ್ತುಗಳಲ್ಲದೆ, ಶಂಖುವಿನಿಂದ ಮಾಡಿದ ಬಳೆಗಳು ಹಾಗೂ ಬೆಳ್ಳಿ, ವಜ್ರ ವೈಡೂರ್ಯ ಮೊದಲಾದ ಬೆಲೆಬಾಳುವ ವಸ್ತುಗಳೂ ಆಭರಣಗಳೂ ಬಂದುದೂ ಮೊದಲು ಈ ಕಾಲದಲ್ಲಿಯೇ.

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ಪ್ರಚಲಿತವಿದ್ದ ಆಭರಣಗಳ ಬಗೆಗೆ ವರ್ಣ ಚಿತ್ರಗಳಿಂದ ಶಿಲ್ಪಕಲೆಯಿಂದ ಹಾಗೂ ಸಾಹಿತ್ಯಕೃತಿಗಳಿಂದ ಸಾಕಷ್ಟು ಮಾಹಿತಿ ದೊರಕುತ್ತದೆ. ಅವುಗಳನ್ನು ಶಿಷ್ಟ ಆಭರಣಗಳೆಂದು ಕರೆಯುವುದು ಸೂಕ್ತವೆನ್ನಿಸುತ್ತದೆ. ಏಕೆಂದರೆ ಆ ಎಲ್ಲ ಕಲೆಗಳು ಸುಸಂಸ್ಕೃತ ಶಿಷ್ಟಸಮಾಜಗಳಲ್ಲಿ ಮಾತ್ರ ಅರಳುವಂಥವು. ಸಾತವಾಹನ, ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ಹೊಯ್ಸಳ, ವಿಜಯನಗರ ಮೊದಲಾದ ರಾಜವಂಶಗಳ ಕಾಲದ ಶಿಲ್ಪ ಹಾಗೂ ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಆಭರಣಗಳು ತಲೆ, ಕಿವಿ, ಮೂಗು, ಕೊರಳು, ಸೊಂಟ, ತೋಳು, ಕೈಕಾಲು, ಬೆರಳುಗಳಿಗೆ ಸಂಬಂಧಪಟ್ಟಂಥವು. ಆದರೆ ಸುಮಾರು ಹನ್ನೊಂದು ಹನ್ನೆರಡನೆಯ ಶತಮಾನಕ್ಕಿಂತ ಹಿಂದಿನ ಶಿಲ್ಪಕಲೆಯಲ್ಲಾಗಲೀ

ಸಾಹಿತ್ಯಕೃತಿಗಳಲ್ಲಾಗಲೀ ಮೂಗಿಗೆ ಸಂಬಂಧಪಟ್ಟ ಆಭರಣ ಮೂಗುತಿ ಕಂಡುಬರುವುದಿಲ್ಲ. ಆ ತರುವಾಯದ ಶಿಲ್ಪಕಲೆ ಹಾಗೂ ಸಾಹಿತ್ಯ ಕೃತಿಗಳಲ್ಲಿ ಮೂಗುತಿಯ ಪ್ರಸ್ತಾಪ ಬರುತ್ತದೆ. ಉದಾಹರಣೆಗೆ ಹದಿಮೂರನೆಯ ಶತಮಾನದಲ್ಲಿದ್ದ ಹರಿಹರ ಚಂದ್ರೋದಯವನ್ನು ವರ್ಣಿಸುವಾಗ ಬಳಸುವ ಅಂಬರದ ಪುಳಿಂದಿ ತಾಳ್ದಿಸವ ಮೂಗಿನ ನತ್ತು ಎಂಬ ಮಾತಿನಲ್ಲಿ ಮೂಗುತಿಯ ಪ್ರಸ್ತಾಪವನ್ನು ಕಾಣಬಹುದು. ಮೊದಲು ಎಲ್ಲೂ ಕಾಣದ ಈ ಆಭರಣ ಇದ್ದಕ್ಕಿದ್ದಂತೆ ಇಣುಕಿದ್ದು ಮುಸಲ್ಮಾನರ ಪ್ರಭಾವದಿಂದ ಎಂಬ ಅಭಿಪ್ರಾಯವಿದೆ. ಸಾಮಾನ್ಯವಾಗಿ ಹಳ್ಳಿಗಾಡಿನಲ್ಲಿ ಅವಿದ್ಯಾವಂತ ಹೆಣ್ಣುಗಂಡು ತಮ್ಮ ತಾಯಿ ತಮಗೂ ಅಷ್ಟಿಷ್ಟು ಬುದ್ಧಿ ಕಲಿಸಿದ್ದಾಳೆ, ವ್ಯವಹಾರಜ್ಞಾನ ಕಲಿಸಿದ್ದಾಳೆ ಎಂಬ ಅರ್ಥದಲ್ಲಿ ನಮಗೂ ನಮ್ಮವ್ವ ಕಿವಿ ಚುಚ್ಚಿದ್ದಾಳೆ ಎಂಬ ನುಡಿಗಟ್ಟನ್ನು ಬಳಸುತ್ತಾರೆ. ಮೂಗು ಚುಚ್ಚಿದ್ದಾಳೆ ಎಂಬ ನುಡಿಗಟ್ಟನ್ನು ಬಳಸುವುದಿಲ್ಲ. ಅಂದರೆ ಕಿವಿ ಚುಚ್ಚುವುದು ಮತ್ತು ಕಿವಿಯೊಡವೆಯನ್ನು ಧರಿಸುವುದು ಹಿಂದು ಸಂಸ್ಕೃತಿಗೆ ಹೊಂದಿಕೊಂಡ ಸಂಪ್ರದಾಯವೆಂಬುದನ್ನೂ ಮೂಗು ಚುಚ್ಚುವುದು ಮತ್ತು ಮೂಗಿನ ಒಡವೆಯನ್ನು ಧರಿಸುವುದು ಹಿಂದು ಸಂಸ್ಕೃತಿಗೆ ಹೊರತಾದ ಅಥವಾ ಆಮದಾದ ಸಂಪ್ರದಾಯವೆಂಬುದನ್ನೂ ಪರೋಕ್ಷವಾಗಿ ಸೂಚಿಸುವ ಪಳೆಯುಳಿಕೆ ಎನ್ನಿಸುತ್ತದೆ ಆ ನುಡಿಗುಟ್ಟು.

ಸಾಮಾನ್ಯವಾಗಿ ಕರ್ನಾಟಕದ ಶಿಲ್ಪಕಲೆಯಲ್ಲಿ ಕಂಡುಬರುವ ಹಾಗೂ ಪ್ರಾಚೀನ ಸಾಹಿತ್ಯಕೃತಿಗಳಲ್ಲಿ ಉಕ್ತವಾಗಿರುವ ಶಿಷ್ಟ ಆಭರಣಗಳನ್ನು ಹೀಗೆ ಪಟ್ಟಿಮಾಡಬಹುದು (1) ತಲೆ: ಮುತ್ತಿನ ಬಲೆ, ಸೀಮಂತ ಮಣಿ, (2) ಕಿವಿ: ಕರ್ಣಕುಂಡಲ, ಕರ್ಣಿಕೆ, ಕರ್ಣಪೂರ ಇತ್ಯಾದಿ. (3) ಕೊರಳು: ತಾರಾಹಾರ, ಚಂದ್ರಹಾರ, ಮಣಿಹಾರ, ಮುತ್ತಿನಹಾರ, ಮುತ್ತಿನೇಕಾವಳಿ ಇತ್ಯಾದಿ. (4) ತೋಳು: ಬಾಹುಪೂರ, ತೋಳಬಂದಿ (5) ಕೈ: ಕಂಕಣ, ತೋಡ, ಬಳೆ (6) ಸೊಂಟ: ಕಟಿಸೂತ್ರ, ಕಾಂಚೀದಾಮ, ರಶನ, ಒಡ್ಯಾಣ, ಮೇಖಲೆ (7) ಕಾಲು: ಮಂಜೀರಕ, ನೂಪುರ, ನೇವುರ, ಅಂದುಗೆ, ತೋಡ ಇತ್ಯಾದಿ, (8) ಬೆರಳು: ಉಂಗುರ, ಮುದ್ರಿಕೆ. ಶ್ರೀಮಂತ ಸಮಾಜಗಳಲ್ಲಿ ಈ ಮೇಲಿನ ಆಭರಣಗಳು ಹೆಚ್ಚಿನ ಮಟ್ಟಿಗೆ ಚಿನ್ನ, ಬೆಳ್ಳಿ ಮತ್ತು ಹವಳ ಇತ್ಯಾದಿಗಳದಾಗಿರುತ್ತಿದ್ದುವು.

ಜನಪದಗೀತೆಗಳಲ್ಲಿ ಜನಪದ ಆಭರಣಗಳ ಒಂದು ಪಟ್ಟಿಯನ್ನೇ ನೀಡಲಾಗಿದೆ. ಅದು ಹೀಗಿದೆ:

ವಾಲಿ ಕೊಪ್ಪು ಕಿವಿಯಾಗಿಟ್ಟು ಸಿಕ್ಕಿದ ಡಾಬ ನಡಿಸಾಗಿಟ್ಟು ರಾಗುಟಿ ಚೌರಿ ತಲೆಯಾಗಿಟ್ಟು ರಾಗದಿಂದ ಕರಿಯ ಬಂದೆ|| ಹಿರಿಪಿಲ್ಲಿ ಕಿರಿಪಿಲ್ಲಿ ಉಂಗುರ ಪೈಜಾಣ ಕಾಲಸರಪಳಿ ಕೊಟ್ಟಾರ| ವಡ್ಯಾಣ ಬಡವರಿನ್ನೇನು ಕೊಟ್ಟಾರ|| ಗೆಜ್ಜೆಯ ಸರ ಟೀಕೆ ವಜ್ಜರ ಮೇಲ್ಬುಗುಡಿ ಹರಳು ಬಂಗಾರ ಮೂಗುತಿಯ ಸರಪದಕ ಬಡವರಿನ್ನೇನು ಕೊಟ್ಟಾರ||

ಅರಳೆಲೆ ಬೇಕವ್ವ ಬೆರಳಿಂಗುರಬೇಕ ಕೊರಳಿಗಿ ಬೇಕ ಅಸಲೀಯು| ಕಂದನ ಕಾಲೀಗಿ ಬೇಕ ಕಿರಿಗೆಜ್ಜೆ|| ಚಿಂತಾಕು ಇಡಲಿಲ್ಲ ಚಿಂತೆ ಬಿಟ್ಟಿರಲಿಲ್ಲ ಎಂತಲ್ಲಿ ಕೊಟ್ಟೆ ಹಡೆದವ್ವ| ನಡು ಮನೆಯ ಜಂತೆ ಜರಿದ್ಹಾಂಗ ಜರಿದೇನು|| ಸೂಳೀಗೆ ಸುತ್ತೋಲೆ ಮಡದೀಗೆ ಮೂಗ್ಬಟ್ಟು ಮೆಚ್ಚಿ ಬಂದೋಳಿಗೆ ಬಿಚ್ಚೋಲೆ| ಅಕ್ಕವ್ವ ಪಟ್ಟದ ರಾಣಿಗೆ ಹರಳೋಲೆ||

ಕೆಲವು ಜನಪದ ಗಾದೆಗಳೂ ಆಭರಣಗಳ ವೈವಿಧ್ಯಗಳ ಸೂಚಕವಾಗಿವೆ. ಮೂಗುತಿ ಮುಂಭಾರ ಹೆಣೆಗಂಟು ಹಿಂಭಾರ ಸೇರಿನ ವಂಕಿ ಕೈಭಾರ; ಆಚೆ ಮನೇಳು ವಾಲೆ ಇಕ್ಕೊಂಡ್ಲು ಈಚೆ ಮನೇಳು ಆಲೆ ಕಿತ್ಕೊಂಡ್ಲು; ಸಿರಿಮನೆ ಅಮ್ಮ ಸರಿಗೆ ಹಾಕ್ಕೊಂಡ್ಲು ನೆರೆಮನೆ ಅಮ್ಮ ನೇಣು ಹಾಕ್ಕೊಂಡ್ಲು; ಆಳಿಗೆ ಆಳು ಭಾರ ತೋಳಿಗೆ ಬಂದಿಭಾರ; ಬಂದಿ ಇಕ್ಕಿದೋಳ ಬಂಧಾನ ನೋಡು ಕಂಕಣ ಇಕ್ಕಿದೋಳ ಕೈ ನೋಡು; ಚಿತ್ತಾರದ ಗಂಡ ಬಿಚ್ಚೋಲೆ ತಂದು ಇಕ್ಕೋ ಅಂತ ಇಳ್ಳಿಲ್ಲ ತಿವಿದ; ಇವತ್ತಿನ ಬುದ್ಧಿ ಅವತ್ತಿದ್ರೆ ಮುತ್ತಿನಂಥ ಕೊಪ್ಪುತಗೊಂಡು ಹೋಗಿ ಒತ್ತೆ ಇಕ್ಕೋರ?; ಕಂಡ ಕೈಗ್ಯಾಕೆ ದುಂಡು ಕಡಗ?; ಚಿಂತಾಕ ಇಲ್ಲದ್ಕೆ ಬಡವಾಗ್ಯವಳೆ ಕುಲ್ಡು ಬೊಮ್ಮಿ ಅಂದ್ಹಂಗೆ; ತಾಲಿ ಕಟ್ಟಿದ್ದಾದ್ಮೇಲೆ ತೋಟಿಯಾದರೂ ಗಂಡನೇ ಇತ್ಯಾದಿ.

ಜನಪದ ಜೀವನದಲ್ಲಿ ಆಭರಣಗಳಿಗೆ ವಿಶೇಷ ಪ್ರಾಶಸ್ತ್ಯವುಂಟು ಎಂಬುದನ್ನು ಮೇಲಿನ ಜನಪದ ಗೀತೆಗಳು ಹಾಗೂ ಗಾದೆಗಳು ಸಾರಿ ಹೇಳುತ್ತಿವೆ. ಆಭರಣಗಳು ಶ್ರೀಮಂತಿಕೆಯ ಪ್ರತಿರೂಪ ಹೇಗೊ ಹಾಗೆ ಜನಪದ ಜೀವನದಲ್ಲಿ ಮಾನ ಮರ್ಯಾದೆಯ ಘನತೆ ಗೌರವದ ಪ್ರತಿರೂಪವೂ ಹೌದು. ಉದಾಹರಣೆಗೆ ಓಲೆ ಬುಗುಡಿ ಅಡ್ಡಿಕೆ ಡಾಬು ಕಾಲಂದುಗೆ ಚೈನು ಇತ್ಯಾದಿ ಕನಿಷ್ಠ ಆಭರಣಗಳು ಮೈಮೇಲೆ ಇಲ್ಲದಿದ್ದ ಪಕ್ಷಕ್ಕೆ ಸರಿ ದಾಯಾದಿಗಳ ಅಥವಾ ನೆಂಟರ ಮನೆಯಲ್ಲಿ ಜರುಗುವ ಹಬ್ಬ ಮದುವೆ ಇತ್ಯಾದಿ ಸಮಾರಂಭಗಳಿಗೆ ಹೋಗುವುದು ಅವಮಾನವೆಂದು ಭಾವಿಸುವ ಹೆಂಗಸರೂ ಗಂಡಸರೂ ಇದ್ದಾರೆ.



ವಿವಿಧ ಆಭರಣಗಳು

ಜನಪದ ಆಭರಣಗಳನ್ನು ಮನುಷ್ಯರ ಆಭರಣಗಳು ಹಾಗೂ ಪ್ರಾಣಿ (ಸಾಕು) ಗಳ ಆಭರಣಗಳು ಎಂದು ಎರಡು ಪ್ರಮುಖ ಗುಂಪುಗಳನ್ನಾಗಿ ವಿಭಜಿಸಿಕೊಂಡು ವಿವೇಚಿಸಬಹುದು. ಮತ್ತೆ ಮನುಷ್ಯರ ಆಭರಣಗಳನ್ನು ಪುರುಷರ ಆಭರಣಗಳು, ಸ್ತ್ರೀಯರ ಆಭರಣಗಳು ಮತ್ತು ಮಕ್ಕಳ ಆಭರಣಗಳು ಎಂದು ಮೂರು ಗುಂಪುಗಳನ್ನಾಗಿ ಮಾಡಿಕೊಂಡು ವಿವೇಚಿಸಬಹುದು.

ಜಾನುವಾರು ಆಭರಣಗಳನ್ನು ಜನಪದ ಸಮಾಜಗಳಲ್ಲಿ ಕಾಣಬಹುದೆ ಹೊರತು ಶಿಷ್ಟ ನಾಗರಿಕ ಸಮಾಜಗಳಲ್ಲಿ ಕಾಣುವುದು ದುರ್ಲಭವೆಂದೆ ಹೇಳಬೇಕು. ಜನಪದರಿಗೆ ತಾವು ಸಾಕಿದ ಅಚ್ಚುಮೆಚ್ಚಿನ ಪ್ರಾಣಿಗಳು ಪ್ರಾಣಕ್ಕಿಂತಲೂ ಮಿಗಿಲು. ಆದ್ದರಿಂದಲೇ ಪ್ರಾಣಿ ಸಂಬಂಧವಾದ ವಿಶಿಷ್ಟ ಒಡವೆಗಳನ್ನ ಕಾಣಲು ಸಾಧ್ಯವಾಯಿತು. ಉದಾಹರಣೆಗೆ ಟಗರಿನ ನುಲಿಕೆಕೊಂಬಿನ ತುದಿಯಲ್ಲಿ ತೂತು ಮಾಡಿ ಕಟ್ಟುವ ಗಲ್‌ಗಲ್ ಶಬ್ದದ ಗೆಜ್ಜೆಗೊಂಚಲು, ಕಪ್ಪು ದಂಡೆ ಹಾಗಿ ಕೊರಳಿಗೆ ಕಟ್ಟುವ ಟಣ್ ಟಿಣಿ ಟಿಣಿ ಟಣ್ ಶಬ್ದದ ಕಿರುಗಂಟೆಗಳನ್ನು ಹೆಸರಿಸಬಹುದು. ಹಾಗೆಯೆ ಹೋರಿ ಮತ್ತು ಎತ್ತುಗಳ ಕೊಂಬಿನ ತುದಿಗೆ

ಹಾಕುವ ಸಾದಾ ಕೋಡಣಸುಗಳು, ಕಲಾತ್ಮಕ ಕೆತ್ತನೆಯ ಕೊಂಬಿನ ಕಳಸಗಳು ಹಾಗೂ ಕಪ್ಪುಕೂದಲ ದಂಡೆ ಮತ್ತು ಹಿತ್ತಾಳೆ ಸರಪಳಿಯನ್ನು ಒಟ್ಟಿಗೆ ನುಲಿದು ಕೊರಳಿಗೆ ಕಟ್ಟುವ ಗಳಗಂಟೆ, ಶಂಕು, ಗಗ್ಗರ, ಮಾಗಾಯಿ ಮುಂತಾದ ಆಭರಣಗಳನ್ನು ಹೆಸರಿಸಬಹುದು.

ಮಕ್ಕಳ ಆಭರಣಗಳಲ್ಲಿ ತಲೆಗೆ ಸಂಬಂಧಪಟ್ಟವು ಇರುವುದಿಲ್ಲ. ಏಕೆಂದರೆ ಇನ್ನೂ ಕೂದಲು ಅಲಂಕಾರ ಮಾಡುವಷ್ಟು ಸಮೃದ್ಧವಾಗಿ ಹುಟ್ಟಿರುವುದಿಲ್ಲ; ಹೊರವಾಗಿ ಬೆಳೆದಿರುವುದಿಲ್ಲ. ಆದ್ದರಿಂದ ಮಕ್ಕಳ ಒಡವೆಗಳು ಏನಿದ್ದರೂ ಕಿವಿ, ಕೊರಳು, ಸೊಂಟ, ಕಾಲು, ಕೈ, ಕೈಬೆರಳುಗಳಿಗೆ ಸಂಬಂಧಪಟ್ಟಂಥವು ಎನ್ನಬಹುದು. (1) ಕಿವಿ: ಚುಚ್ಚುಮುರ ಚಿನ್ನದ್ದು. (2) ಕೊರಳು: ಚೈನು, ತಾಯಿತ, ಸಂದುತಾಲಿ, ಕರಿಎಳೆ ಇತ್ಯಾದಿ. (3) ಸೊಂಟ: ಉಡಿದಾರ (ಬೆಳ್ಳಿ ಉಡಿದಾರ, ಚಿನ್ನದ ಉಡಿದಾರ, ಗೆಜ್ಜೆ ಉಡಿದಾರ), ಅರಳೆಲೆ, ಮಾಗಾಯಿ. (4) ಕೈ: ಬದ್ದು, ಕಪ್ಪಕ, ಕೈಕಟ್ಟು (ಹವಳ, ಬಂಗಾರ), ಕೈಕಡಿ ಹವಳ, (ಬಂಗಾರ ಅಥವಾ ಬೆಳ್ಳಿ). (5) ಕೈಬೆರಳು: ಉಂಗುರ (6) ಕಾಲು: ಗೊಲಸು, ಗೆಜ್ಜೆ, ಕಾಲಂದುಗೆ, ಚೈನು ಇತ್ಯಾದಿ. ಹೆಣ್ಣುಮಕ್ಕಳಿಗೂ ಗಂಡುಮಕ್ಕಳಿಗೂ ಸಮಾನವಾದ ಆಭರಣಗಳು ಕಂಡುಬರುತ್ತವೆ. ಒಂದೇ ಒಂದು ಎದ್ದು ತೋರುವ ವ್ಯತ್ಯಾಸವೆಂದರೆ ಅರಳೆಲೆ (ಅರಳಿ ಎಲೆಯಾಕಾರದ್ದು) ಮಾತ್ರ ಹೆಣ್ಣುಮಗುವಿಗೆ; ಮೀಸಲಾದದ್ದು, ಮಾಗಾಯಿ ಗಂಡುಮಗುವಿಗೆ ಮೀಸಲಾದದ್ದು. ಈ ಎರಡು ಆಭರಣಗಳನ್ನು ಬಿಟ್ಟರೆ ಉಳಿದುವೆಲ್ಲ ಒಂದೇ ರೀತಿಯದಾಗಿರುತ್ತವೆ.

ಪುರುಷರ ಆಭರಣಗಳು ಸ್ತ್ರೀಯರ ಆಭರಣಗಳಿಗಿಂತ ಸಂಖ್ಯೆಯಲ್ಲಿ ಕಡಿಮೆ. ಮೂಗು ಮತ್ತು ತಲೆಗೆ ಸಂಬಂಧಪಟ್ಟಂತೆ ಆಭರಣಗಳು ಇರುವುದಿಲ್ಲ. (1) ಕಿವಿ: ಮುರ, ಮುತ್ತಿನಮುರ, ಮೇಟಿಮುರ, ಬಾವಲಿ, ಹತ್ತೊಂಟಿ ಇತ್ಯಾದಿ. (2) ಕೊರಳು: ತಾಯಿತ, ಹುಲಿತಾಯಿತ, ತಾಬೀಜು, ಕರಿಎಳೆ ಚೈನು, ಕಡ್ಲಿಸರ ಇತ್ಯಾದಿ. (3) ತೋಳು: ತೋಳ್ಬಳೆ, ತೋಡ, (4) ಕೈ: ಬದ್ದು, ಕಪ್ಪ, ನುಲಿಕೆಕಪ್ಪ (ಬೆಳ್ಳಿ, ಚಿನ್ನ), ಬಿರುದು (ಬೆಳ್ಳಿ, ಚಿನ್ನ). (5) ಸೊಂಟ: ಉಡಿದಾರ (ಬೆಳ್ಳಿ, ಚಿನ್ನ), ನೇವಳ, ಕಾಯದ ಉಡಿದಾರ. (6) ಕೈಬೆರಳು: ಉಂಗುರ. (7) ಕಾಲ್ಬೆರಳು: ಗಂಡುಮಿಂಚು.

ನೆತ್ತಿಸುಳಿಯಿಂದ ಕಾಲ್ಬೆರಳಿನವರೆಗೂ ಹೆಣ್ಣಿಗೆ ಒಡವೆಗಳುಂಟು ಒಂದೊಂದು ಒಡವೆ ದೊಡ್ಡದೊಂದುಕುಕ್ಕೆ ತುಂಬುವಷ್ಟಿರುತ್ತದೆ ಎಂದಾಗ ಆಕೆ ಧರಿಸುವ ಒಡವೆಗಳ ಆಧಿಕ್ಯ ಅರಿವಾಗುತ್ತದೆ ಎನ್ನಿಸುತ್ತದೆ. (1) ತಲೆ: ಹಣಿಸರ, ಹೂವ, ಚಂದ್ರಕಾಳಿಹೂವ, ನಾಗರು, ರಾಗಟೆ, ಜಡೆಬಿಲ್ಲೆ, ಸಾವಂತಿಗೆ ಹೂ, ಚೌಲಿ ತುಂಬು, ಜಡೆಕುಚ್ಚು, ಬೈತಲೆಮಣಿ ಇತ್ಯಾದಿ. (2) ಕಿವಿ: ಅಂಚಿನೋಲೆ (ಸಣ್ಣಂಚಿನೋಲೆ, ದೊಡ್ಡಂಚಿನೋಲೆ, ಗುಬ್ಬಂಚಿನೋಲೆ), ಕುಡಿಕೆ ಓಲೆ, ನಕಾಸದೋಲೆ, ಹರಳೋಲೆ, ಬೆಂಡೋಲೆ, ಕೆನ್ನೆಸರಪಣಿ, ಬುಗಡಿ, ಸಿಂಹದಮುರ, ಲವಂಗದ ಹೂ, ಬುರಿಗೆಬಟ್ಟು, ಕುಂಡಲ್ಲಿ ಮೀನ ಇತ್ಯಾದಿ. (3) ಮೂಗು: ನತ್ತು, ಮೂಗುನತ್ತು, ಮೂಗುಬೊಟ್ಟು, ಟಿಕಳಿ, ಬೇಸರಿ, ಮುತ್ತಿನ ಮುಕುರ, ಬುಲಾಕು ಇತ್ಯಾದಿ. (4) ಕೊರಳು: ತಾಳಿ, ಐತಾಳಿ, ಸರಿಗಿ, ಹಾರ, ಚಪಲಹಾರ, ಮುತ್ತಿನಹಾರ, ಟಿಕ್ಕೆ, ಗುಂಡಟಿಕ್ಕೆ, ಗೆಜ್ಜೆಟಿಕ್ಕೆ, ಪುತಳಿಸರ, ಜೋಮಾಲೆಸರ, ಕಾಸಿನಸರ, ಮಾವಿನಕಾಯಿಸರ, ಅಡ್ಡಿಕೆ, ಕಟ್ಟಾಣಿ, ಚಿಂತಾಕ, ಕಂಠಿ, ಟೀಕು, ಗುಂಡು, ದೊಡ್ಡಗುಂಡು, ಸಣ್ಣಗುಂಡು, ಮೂರೆಳೆಗುಂಡು, ಬಾಸಿಂಗದ ತಾಳಿ, ದೇವರತಾಳಿ, ಐರ್ದಾಲಿ ಇತ್ಯಾದಿ. (5) ತೋಳು: ಬಂದಿ, ನಾಗಮುರಿಗೆ, ನರಿಗೆ, ವಂಕಿ, ಬಾಜೂಬಂದು ಇತ್ಯಾದಿ. (6) ಕೈ: ಬಂದಳಿ, ಬಳೆ, ಕಡಗ, ಮುರಿ, ದುಂಡುಮುರಿ, ಪಟ್ಟೆಮುರಿ ಟೊಳ್ಳುಮುರಿ, ಗಟ್ಟಿಮುರಿ ಇತ್ಯಾದಿ. (7) ಸೊಂಟ: ನಡಿನಪಟ್ಟಿ, ನಡಿನಹಾರ, ವಜ್ರಪಟ್ಟಿ, ಡಾಬು, ಸಾದಾಡಾಬು, ಗೆಜ್ಜೆಡಾಬು, ವಂಕಿಡಾಬು (ಬೆಳ್ಳಿ, ಚಿನ್ನ). (8) ಕಾಲು: ಪೈಜಣ, ತೋಡ, ಸಣ್ಣತೋಡ, ದೊಡ್ಡತೋಡ, ಮುರುಗಿತೋಡ, ಕಾಲ್ಕಡಗ, ಕಾಲ್ಗೆಜ್ಜೆಸರ, ಕಾಲಂದುಗೆ, ರುಳಿ, ಚೈನು. (9) ಕಾಲ್ಬೆರಳು: ಕಾಲುಂಗುರ, ಸುತ್ತುಂಗರ, ಪಿಲ್ಲಿ, ಕಿರಿಪಿಲ್ಲಿ, ಹಿರಿಪಿಲ್ಲಿ ಮಿಂಚು ಇತ್ಯಾದಿ. (10) ಕೈಬೆರಳು: ಉಂಗುರ, ಬೆಳ್ಳಿ ಉಂಗುರ, ಚಿನ್ನದ ಉಂಗುರ.

ಕರ್ನಾಟಕದ ಆಭರಣಗಳ ವೈಶಿಷ್ಟ್ಯ ವೈವಿಧ್ಯ ಬೆರಗುಗೊಳಿಸುವಂಥದು. ಐತಿಹಾಸಿಕ ಯುಗದಲ್ಲಿ ಸಮಾಜದ ಸಂಪತ್ತು, ಶ್ರೀಮಂತವರ್ಗಗಳು ಬೆಳೆದಂತೆಲ್ಲಾ ಆಭರಣಗಳ ಉಪಯೋಗವೂ ಹೆಚ್ಚುತ್ತ ಬಂತು. ಹೊಯ್ಸಳರ ಕಾಲದ ಶಿಲ್ಪಗಳಲ್ಲಿ ಕಂಡುಬರುವ ಸರ, ಒಡ್ಯಾಣ, ತೋಳುಬಂದಿ ಇವುಗಳ ವೈವಿಧ್ಯವನ್ನೇ ಗಮನಿಸಬಹುದು. ಅವುಗಳ ಅಸಂಖ್ಯಾತ ಮಾದರಿಗಳು ಆಭರಣ ತಯಾರಿಯ ಕಲೆ ಎಷ್ಟರ ಮಟ್ಟಿಗೆ ಪ್ರವರ್ಧಮಾನವಾಗಿತ್ತೆಂಬುದನ್ನು ಸೂಚಿಸುತ್ತದೆ. ಸಹಜವಾಗಿ ಆಭರಣಗಳನ್ನು ತಯಾರು ಮಾಡುವುದೇ ಒಂದು ವೃತ್ತಿಯಾಗಿ ಮಾಡಿಕೊಂಡ ಒಂದು ವರ್ಗವೇ ಬೆಳೆದಿತ್ತು. ಈ ಅಕ್ಕಸಾಲಿಗರ ಪ್ರಸ್ತಾಪ ಹಲವಾರು ಶಾಸನಗಳಲ್ಲಿ ಬರುತ್ತವೆ. ಹಾಗೆಯೆ ಆಭರಣಗಳ ತಯಾರಿಕೆಗೆ ಆವಶ್ಯಕವಾದ ಚಿನ್ನ, ಹರಳು ಕಲ್ಲುಗಳು ಮೊದಲಾದ ಸ್ಥಳೀಯ ವಸ್ತುಗಳನ್ನೂ ಬೆಳ್ಳಿ ಮತ್ತು ಗೋಮೇಧಿಕ, ಪುಷ್ಯರಾಗ ಮತ್ತಿತರ ಹೊರನಾಡುಗಳಿಂದ ಬರುವ ವಸ್ತುಗಳನ್ನೂ ತಯಾರಾದ ಆಭರಣಗಳನ್ನೂ ಮಾರುವ ಶ್ರೀಮಂತವರ್ತಕರ ಪ್ರಸ್ತಾಪ ಸಹ ಶಾಸನ, ಕಾವ್ಯಗಳಲ್ಲಿ ಕಂಡುಬರುತ್ತವೆ. ಇಂದೂ ಆಭರಣಗಳ ಉಪಯೋಗ ಕಡಿಮೆಯಾಗಿಲ್ಲ. ಆಭರಣಗಳ ತಯಾರಿ ಒಂದು ವ್ಯಾಪಕವಾದ ಉದ್ಯಮವಾಗಿದೆ. (ಎಸ್‌ಯು.)

**ಆಭೀರರು :** ಮೂಲತಃ ಸಿಂಧು ದೇಶದ ನಿವಾಸಿಗಳಾಗಿದ್ದು ಕ್ರಮೇಣ ಇತರೆಡೆಗಳಿಗೆ ಹರಡಿ 3ನೆಯ ಶತಮಾನದ ಹೊತ್ತಿಗೆ ಉತ್ತರ ದಖನ್ನಿನಲ್ಲಿ ರಾಜ್ಯ ಸ್ಥಾಪನೆ ಮಾಡಿದ್ದ ಒಂದು ಜನಾಂಗ. ಕರ್ನಾಟಕದಲ್ಲಿ ಆಭೀರರು ಕದಂಬ ಮಯೂರಶರ್ಮನ ಸು.350ರ ಚಂದ್ರವಳ್ಳಿಯ ಶಾಸನದಲ್ಲಿ ಮೊದಲಾಗಿ ಕಾಣಿಸಿಕೊಳ್ಳುತ್ತಾರೆ. ಮಯೂರಶರ್ಮ ಅಂದು ಪ್ರಾಯಶಃ ಅವನ ರಾಜ್ಯದ ಉತ್ತರದಲ್ಲಿ ಆಳುತ್ತಿದ್ದ ಆಭೀರರ ಮೇಲೆ ಜಯಗಳಿಸಿದಂತೆ ತೋರುತ್ತದೆ. ಮುಂದಿನ ಏಳು ಶತಮಾನಗಳಲ್ಲಿ ಆಭೀರರ ಪ್ರಸ್ತಾಪ ಇಲ್ಲಿಯ ಐತಿಹಾಸಿಕ ದಾಖಲೆಗಳಲ್ಲಿ ದೊರಕುವುದಿಲ್ಲ. ಪುನಃ ಹನ್ನೊಂದನೆಯ ಶತಮಾನದ ಮಧ್ಯಭಾಗದಲ್ಲಿ ಚಾಳುಕ್ಯ 1ನೆಯ ಸೋಮೇಶ್ವರನ ಸೇನಾನಿ ಆಭೀರರ ಮೇಲೆ ಜಯಗಳಿಸಿದನೆಂದು ನಾಗಾವಿ ಶಾಸನ, ಸೋಮೇಶ್ವರನಿಗೆ ಇವರು ಕಪ್ಪಕಾಣಿಕೆಗಳನ್ನು ಅರ್ಪಿಸಿದರೆಂದು ಕುಲ್ಲು ಮಠದ ಶಾಸನ, ಆರನೆಯ ವಿಕ್ರಮಾದಿತ್ಯನ ಸೇನಾಪತಿ ಶ್ರೀವಲ್ಲಭನಿಂದ (1084) ಮತ್ತು ವಿಕ್ರಮಾದಿತ್ಯನ ತಮ್ಮ ವಿಕ್ರಮಾಂಕನಿಂದ (1114) ಇವರು ಪರಾಭವ ಹೊಂದಿ ಆನೆ ಮತ್ತು ಕುದುರೆಗಳನ್ನು ವಿಕ್ರಮಾದಿತ್ಯನಿಗೆ ಕಾಣಿಕೆಯಾಗಿ ಅರ್ಪಿಸಿದರೆಂದು ಬಳ್ಳಿಗಾವೆ ಶಾಸನ ಇವು ತಿಳಿಸುತ್ತವೆ. 1179ರಲ್ಲಿ ಕಳಚುರಿ ಸಂಕಮನಿಗೆ ಗಜಗಳನ್ನು ಕೊಡುಗೆಯಾಗಿ ಇತ್ತರು. ಆಭೀರ ಒಡೆಯನಾದ ಜೈತುಗಿ 2ನೆಯ ಸಿಂಘಣನ ಸಾಮಂತನಾಗಿದ್ದನೆಂದು 1215ರ ಒಂದು ಶಾಸನ ತಿಳಿಸುತ್ತದೆ. ಕೃಷ್ಣ ದೇವರಾಯನ ಆಮುಕ್ತಮಾಲ್ಯದಾ ಕಾವ್ಯದಲ್ಲಿ ಇವರು ಗಿರಿಜನವರ್ಗದವರೆಂದು ಪರಿಗಣಿತರಾಗಿದ್ದಾರೆ. (ಎ.)

**ಆಮೂರ, ಜಿ.ಎಸ್. :** 1925-. ಕನ್ನಡದ ಪ್ರಸಿದ್ಧ ವಿಮರ್ಶಕರು. ಗುರುರಾಜ ಶಾಮಾಚಾರ್ಯ ಆಮೂರ ಇವರ ಪೂರ್ಣ ಹೆಸರು. ಧಾರವಾಡ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಹೂರಣಗಿಲ್ಲಿಯಲ್ಲಿ 1925 ಮೇ 8ರಂದು ಜನಿಸಿದರು. ತಂದೆ ಶಾಮಾಚಾರ್ಯ, ತಾಯಿ ಗಂಗಾದೇವಿ. ಇಂಗ್ಲಿಷ್ ಎಂ.ಎ. ಪದವೀಧರರಾದ ಆಮೂರ ಅವರು ಕುಮಟ, ಗದಗ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡಿ ಔರಂಗಾಬಾದಿನ ಮರಾಠಾವಾಡ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿ ಈಗ ಧಾರವಾಡದಲ್ಲಿ ನೆಲಸಿದ್ದಾರೆ.

ಆಮೂರ ಅವರು ಕಳೆದ ಅರ್ಧ ಶತಮಾನದಿಂದ ಕನ್ನಡ ವಿಮರ್ಶೆಯ ಉತ್ಕರ್ಷಕ್ಕಾಗಿ ಶ್ರಮಿಸುತ್ತ ಬಂದಿದ್ದಾರೆ. ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ಕಾರಂತರ ಕಾದಂಬರಿಗಳ ಬಗ್ಗೆ ವಿಮರ್ಶೆ ಬರೆದು ಬಹುಮಾನ ಪಡೆದಿದ್ದರು (1943). ಕನ್ನಡ ಹಾಗೂ ಇಂಗ್ಲಿಷ್ ಈ ಎರಡೂ ಭಾಷೆಗಳು ಸೇರಿದಂತೆ 40 ವಿಮರ್ಶಾ ಗ್ರಂಥಗಳನ್ನೂ 500ಕ್ಕೂ ಹೆಚ್ಚು ವಿಮರ್ಶಾ ಲೇಖನಗಳನ್ನೂ ಬರೆದಿದ್ದಾರೆ. ಆಳವಾದ ಅಧ್ಯಯನ, ಪ್ರತಿಭೆ, ಪಾಂಡಿತ್ಯ ಕ್ಷೇತ್ರದಲ್ಲಿ ಮಹತ್ವ ಗಳಿಸಿದ್ದು, ವಿದ್ವಾಂಸರ ಆದರಕ್ಕೂ ಪಾತ್ರವಾಗಿದೆ.

ಆಮೂರ ಅವರ ವಿಮರ್ಶೆ ನಾಲ್ಕು ಸ್ತರಗಳಲ್ಲಿ ಪ್ರಕಟಗೊಂಡಿದೆ. ಕನ್ನಡ ಸಾಹಿತ್ಯ ವಿಮರ್ಶೆ, ಇಂಗ್ಲಿಷ್‌ನಲ್ಲಿ ಬಂದ ಭಾರತೀಯ ಸಾಹಿತ್ಯ, ಅಮೆರಿಕನ್ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯಕ್ಕೆ

ಸಂಬಂಧಿಸಿದಂತೆ ಇಂಗ್ಲಿಷ್‌ನಲ್ಲಿ ವಿಮರ್ಶೆ. ತಾತ್ತ್ವಿಕ ಮತ್ತು ಆನ್ವಯಿಕ ಅಧ್ಯಯನವೆ ಇವರ ವಿಮರ್ಶನ ಕೃತಿಗಳಲ್ಲಿ ಕಾಣುವ ಮುಖ್ಯ ಆಸ್ಥೆಯಾಗಿವೆ. ಮಹಾಕವಿ ಮಿಲ್ಟನ್ (1958), ಕೃತಿಪರೀಕ್ಷೆ (1970), ಸಮಕಾಲೀನ ಕಥೆ, ಕಾದಂಬರಿ (1988), ಭುವನದ ಭಾಗ್ಯ (1991), ವ್ಯವಸಾಯ (1992), ಕಾಮಿಡಿ (1993), ಕನ್ನಡ ಕಥನ ಸಾಹಿತ್ಯ ಕಾದಂಬರಿ (1994), ಸಾತ್ವಿಕ ಪಥ (1995), ಆಧುನಿಕ ಕನ್ನಡ ಸಾಹಿತ್ಯ ವಿರಾಟ್ ಪುರುಷ (1998), ಕಾದಂಬರಿಯ ಸ್ವರೂಪ ಹೊಸ ಚಿಂತನೆ (1999), ದತ್ತಾತ್ರೇಯ ರಾಮಚಂದ್ರ ಬೇಂದ್ರೆ (2000), ಬೇಂದ್ರೆ ಕಾವ್ಯದ ಪ್ರತಿಮಾ ಲೋಕ (2000), ಅಮೃತವಾಹಿನಿ (2000), ಸೀಮೋಲ್ಲಂಘನ (2002), ಕನ್ನಡ ಸಣ್ಣಕಥೆ (2003) - ಇವು ಇವರ ಕೆಲವು ಪ್ರಮುಖ ವಿಮರ್ಶನ ಕೃತಿಗಳು. ಇವರ ವಿಮರ್ಶೆಯಲ್ಲಿ ಕನ್ನಡ ಕಥನ ಸಾಹಿತ್ಯ ಸಣ್ಣಕಥೆ ಮತ್ತು ಕಾದಂಬರಿಗಳ ಕುರಿತಾದ ಕೃತಿನಿಷ್ಠ ವಿಮರ್ಶೆ ಪ್ರಮುಖವಾದದ್ದು. ಕನ್ನಡ ಕಥನ ಪರಂಪರೆ ವಾಸ್ತವವಾದಿ ನೆಲೆಯಲ್ಲಿ ಬೆಳೆದಿದೆ ಎಂಬ ಆಲೋಚನೆಯನ್ನು ಆಮೂರರು ವಿಸ್ತಾರವಾಗಿ ಚರ್ಚಿಸಿದ್ದಾರೆ. ತಮ್ಮ ವಿಮರ್ಶೆಗೆ ಸಂಶೋಧನೆಯಂತೆ ಆಧಾರ, ಆಕರ ಸಾಮಗ್ರಿಯನ್ನು ಒದಗಿಸಿ ಕೃತಿ ಪರೀಕ್ಷೆ ನಡೆಸಿ ವಸ್ತುನಿಷ್ಠ ದೃಷ್ಟಿಯಿಂದ ಪರಿಶೀಲಿಸಿ ವಿಮರ್ಶನ ಅಭಿಮತ ರೂಪಿಸುವುದು ಆಮೂರರ ನಿಮರ್ಶೆಯ ರೀತಿಯಾಗಿದೆ. ಹಾಗಾಗಿ ಕನ್ನಡ ಸಣ್ಣಕಥೆ ಮತ್ತು ಕಾದಂಬರಿಗಳ ಬಗ್ಗೆ ಇವರ ವಿಮರ್ಶೆ ಅತ್ಯಂತ ಮಹತ್ವದ ಕೊಡುಗೆಯಾಗಿದೆ.



ಬೇಂದ್ರೆಯವರ ಸಾಹಿತ್ಯವನ್ನು ಅದರ ಜಾರಿತ್ರಿಕ ನೆಲೆಯಲ್ಲಿ ಪರಿಶೀಲಿಸಿ, ಬೇಂದ್ರೆ ದರ್ಶನದ ಅಖಂಡತೆಯನ್ನು ವಸ್ತು ಮತ್ತು ಆಕೃತಿಗಳ ವಿಕಾಸಕ್ರಮವನ್ನು ಅಭಿವ್ಯಕ್ತಿಯ ವೈವಿಧ್ಯವನ್ನು ಗುರುತಿಸುವ ವಿಶಿಷ್ಟ ಕಾರ್ಯವನ್ನು ಆಮೂರರು ಭುವನದ ಭಾಗ್ಯ ಎಂಬ ಕೃತಿಯಲ್ಲಿ ಮಾಡಿದ್ದಾರೆ. ಬೇಂದ್ರೆ ಸಾಹಿತ್ಯವನ್ನು ವಸ್ತು ಮತ್ತು ಆಶಯದ ನೆಲೆಯಲ್ಲಿ ಬೆಳಗು, ಓ ಹಾಡೇ, ಮರಳು ಅರಳು, ಪಂಚಾಂಗ ಎಂದು ವಿಭಜಿಸಿ ವಿಶ್ಲೇಷಿಸಿ ಬೇಂದ್ರೆ ಸಾಹಿತ್ಯ ವಿಮರ್ಶೆಗೆ ನೂತನ ಆಯಾಮು ಒದಗಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ವಿರಾಟ್ ಪುರುಷ ಎಂಬುದು ಆಳವಾದ ವಿಮರ್ಶನ ಒಳನೋಟಗಳಿಂದ ಶ್ರೀರಂಗ ಸಾಹಿತ್ಯ ವಿಮರ್ಶೆಯ ಪ್ರಮಾಣ ಗ್ರಂಥವಾಗಿದೆ.

ಆಧುನಿಕ ಕನ್ನಡ ಸಾಹಿತ್ಯವನ್ನು ಇಂಗ್ಲಿಷ್ ಲೋಕಕ್ಕೆ ಪರಿಚಯಿಸಿ ಅದರ ಶ್ರೇಷ್ಠತೆಯ ಸಮಾಲೋಕನ ಮಾಡಿದ ಶ್ರೇಯಸ್ಸು ಆಮೂರರದು. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್‌ನಲ್ಲಿ ಇವರು ಬರೆದ ಗ್ರಂಥವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಆಮೂರ ಅವರು ಬರೆದ ಇಂಗ್ಲಿಷ್ ಗ್ರಂಥ ಹಾಗೂ ಲೇಖನಗಳು ವಿಪುಲವಾಗಿವೆ. ದಿ ಕಾನ್ಸೆಪ್ಟ್ ಆಫ್ ಕಾಮೆಡಿ ಇವರ ಪಿಎಚ್.ಡಿ. ಮಹಾಪ್ರಬಂಧ. ಮನೋಹರ ಮಳಗಾಂವಕರ, ಆದ್ಯ ರಂಗಾಚಾರ್ಯ, ಡಿ.ಆರ್. ಬೇಂದ್ರೆ ಎ ಕ್ರಿಟಿಕಲ್ ಸ್ಪೆಕ್ಟ್ರಂ, ಎಸ್ಸೆಸ್ ಆನ್ ಕಂಪ್ಯಾರೆಟಿವ್ ಲಿಟರೇಚರ್ ಅಂಡ್ ಲಿಂಗ್ವಿಸ್ಟಿಕ್ಸ್, ಕಾಲೋನಿಯಲ್ ಕಾನ್ಸಿಯಸ್‌ನೆಸ್ ಇನ್ ಕಾಮನ್‌ವೆಲ್ತ್ ಫ್ರೂಟ್, ಸೆಲೆಕ್ಟೆಡ್ ಕನ್ನಡ ಶಾರ್ಟ್ ಸ್ಟೋರೀಸ್, ಪರ್‌ಸಪ್ಷನ್ಸ್ ಆಫ್ ಮಾಡರ್ನ್ ಇಂಡಿಯನ್ ಲಿಟರೇಚರ್, ಕ್ರಿಟಿಕ್ ಆನ್ ದಿ ರನ್, ಐಡಿಯಾಸ್ ಅಂಡ್ ಇಮೇಜಸ್ ಇವು ಇವರ ಕೆಲವು ಪ್ರಮುಖ ಇಂಗ್ಲಿಷ್ ಕೃತಿಗಳು. ಇಂಗ್ಲಿಷ್‌ನಲ್ಲಿ ಹಾಗೂ ಕನ್ನಡದಲ್ಲಿ ಅಂಕಣಕಾರರಾಗಿಯೂ ಇವರು ಪುಸ್ತಕಗಳ ಬಗ್ಗೆ ವಿಮರ್ಶೆ ಬರೆದಿದ್ದಾರೆ. ಕೃತಿನಿಷ್ಠ ವಿಮರ್ಶೆಯ ಶ್ರೇಷ್ಠ ಮಾದರಿಯನ್ನು ಒದಗಿಸಿದ್ದಾರೆ.

ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ದೊರೆತಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸ.ಸ. ಮಾಳವಾಡ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಬಿ.ಎಚ್. ಶ್ರೀಧರ ಹಾಗೂ ಭುವನದ ಭಾಗ್ಯ ಎಂಬ ಕೃತಿಗೆ ಬೇಂದ್ರೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿವೆ. (ಜಿ.ಎಂ.ಎಚ್.)

**ಆಯತವರ್ಮ** : ಸು.1400. ಜೈನಕವಿ, ರತ್ನಕರಂಡಕ ಎಂಬ ಕನ್ನಡ ಚಂಪೂಗ್ರಂಥದ ಕರ್ತೃ. ವರ್ಧಮಾನ ಸಿದ್ಧಾಂತದೇವನ ಶಿಷ್ಯ.

ರತ್ನಕರಂಡಕದಲ್ಲಿ ಸಮ್ಯಗ್ದರ್ಶನಸ್ವರೂಪ ನಿರೂಪಣ, ಸಮ್ಯಗ್‌ಜ್ಞಾನಸ್ವರೂಪ ನಿರೂಪಣ, ಸಮ್ಯಗ್‌ಚಾರಿತ್ರಸ್ವರೂಪ ನಿರೂಪಣ ಎಂಬ ಮೂರು ಪರಿಚ್ಛೇದಗಳಿವೆ. ಗ್ರಂಥಾವತಾರದಲ್ಲಿ ಚತುರ್ವಿಂಶತಿ ಜಿನರ ಸ್ತುತಿಯಿದೆ. ಗ್ರಂಥಾಂತ್ಯದಲ್ಲಿ ಇದು ಭಗವದರ್ಹತ್ಪರಮೇಶ್ವರ ಪರಮಭಟ್ಟಾರಕ ವೀತರಾಗ ಸರ್ವಜ್ಞವದನ ವನಜಸಮುದ್ಗತ ಸದಸದಾತ್ಮಕ ಪರಮತತ್ತ್ವ ಭಾವನಾಭಾವಿತಸ್ವಾಂತ ಶ್ರೀವರ್ಧಮಾನಸಿದ್ಧಾಂತದೇವ ಚರಣಸರಸೀರುಹ ಸ್ಮರಣ ಪರಿಣತಾಂತಃಕರಣ ಕುಶೇಶಯ ಶ್ರೀಮದಾಯತ ವರ್ಮ ವಿರಚಿತಮಪ್ಪ ರತ್ನಕರಂಡಕದೊಳ್ ಎಂಬ ಗದ್ಯವಿದೆ. ಈ ಗ್ರಂಥದಲ್ಲಿ ಜಿನತತ್ತ್ವಗಳನ್ನು ನೇರವಾಗಿ ಪ್ರತಿಪಾದಿಸಲಾಗಿದೆ. ಇದು ಸಮಂತಭದ್ರನ ಸಂಸ್ಕೃತ ರತ್ನಕರಂಡಕವನ್ನು ಅನುಸರಿಸಿ ಬರೆದ ಕನ್ನಡದ ಸ್ವತಂತ್ರ ಗ್ರಂಥ. ಶಾಸ್ತ್ರಗ್ರಂಥವಾದರೂ ಭಾಷೆ ಸರಳವಾಗಿದೆ, ನೇರವಾಗಿದೆ. ಚತುರಂಗಬಲಮುಮಾಯುಧತತಿಯುಂ ಬರಮಿತ್ತದೈವಮುಂ ಬಂಧುಗಳುಂ ಕ್ಷಿತಿಯುಂ ನಿಜಭುಜವೀರ್ಯಮುಮತೀತಮಪ್ಪಂದು ಕಾಯಲಾರವು ನರರಂ; ಸಂಸಾರಕರಣಂಗಳೆ ಹಿಂಸಾರುಚಿ ಕಳವು ಪುಸಿ ಪರಸ್ತ್ರೀಗಮನಂ ಮಾಂಸ ಮಧುಮದ್ಯಸೇವನೆ ಸಂಸಯಮೇಂ ದುಃಖಕಾರಣಂಗಳಿವಿನಿತುಂ ಎಂಬ ಪದ್ಯಗಳು ತತ್ತ್ವನಿರೂಪಣೆಯ ಸರಳ ಶೈಲಿಗೆ ನಿದರ್ಶನಗಳಾಗಿವೆ. (ಎಂ.ಎ.)

**ಆಯುಧಗಳು** : ಮಾನವನ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುವ ಆಯುಧಗಳ ಬಳಕೆಯ ಇತಿಹಾಸ ಪ್ರಾಗಿತಿಹಾಸ ಕಾಲದಿಂದ ಆರಂಭವಾಗುತ್ತದೆ. ಮೊದಲಿನ ಆಯುಧಗಳೆಲ್ಲ ಕಲ್ಲಿನಲ್ಲಿ ಮಾಡಿದವುಗಳಾದರೆ ಸು.2ನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ ತಾಮ್ರ, ಕಂಚಿನ ಆಯುಧಗಳೂ ಸುಮಾರು 1ನೆಯ ಸಹಸ್ರಮಾನದಾರಂಭ್ಯ ಕಬ್ಬಿಣದ ಆಯುಧಗಳೂ ಬಳಕೆಗೆ ಬಂದವು (ನೋಡಿ: ಪ್ರಾಗಿತಿಹಾಸ).

ಕನ್ನಡ ಶಾಸನಗಳಲ್ಲಿ ಮತ್ತು ಕಾವ್ಯಗಳಲ್ಲಿ ನೂರಾರು ಆಯುಧಗಳ ಹೆಸರುಗಳು ಕಂಡುಬರುತ್ತವೆ. ಆದರೆ ಅವುಗಳಲ್ಲಿ ಕೆಲವು ಆಯುಧಗಳ ಸ್ವರೂಪ, ಉಪಯೋಗ, ಯಾವ ರೀತಿ ಇತ್ತು ಎಂಬ ವಿಷಯ ಈಗ ಅಜ್ಞಾತವಾಗಿಯೇ ಉಳಿದಿದೆ. ಯುದ್ಧದಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಿದ್ದ ಆಯುಧಗಳಲ್ಲಿ ಬಿಲ್ಲು ಬಾಣಗಳು ಮುಖ್ಯವಾದವು. ಬಿಲ್ಲನ್ನು ತಾಳವೃಕ್ಷ ಅಥವಾ ಬೊಂಬಿನಿಂದ ಮಾಡುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ತಾಳವೃಕ್ಷದ ಬಿಲ್ಲನ್ನು ಕಾರ್ಮುಕ ಎಂದು ಕರೆಯುತ್ತಿದ್ದರು. ಕನ್ನಡಿಗರು ಬಳಸುತ್ತಿದ್ದ ಬಿಲ್ಲುಗಳು ಮೂರಡಿಯಿಂದ ನಾಲ್ಕು ಅಥವಾ ನಾಲ್ಕುವರೆ ಅಡಿ ಎತ್ತರವಾಗಿರುತ್ತಿದ್ದವು. ಬಾಣಗಳನ್ನು ಕಬ್ಬಿಣದಿಂದ ಮಾಡುತ್ತಿದ್ದರು. ಬಿಳಿಯಂಬು, ಕೋಲಂಬು, ಸುಂಗುಲಂಬು ಮೊದಲಾದ ಬಾಣದ ಹಲವಾರು ಪ್ರಭೇದಗಳ ಹೆಸರುಗಳು ಶಾಸನಗಳಲ್ಲಿ ಕಂಡುಬರುತ್ತವೆ. ಪಂಪ ತನ್ನ ಕಾವ್ಯದಲ್ಲಿ ಪಾರೆಯಂಬು, ಕೆಲ್ಲಂಬು, ಕೆತ್ತಂಬು, ನಲ್ಲಂಬು, ಮುಸೆಯಂಬು, ಕೆಂಗರಿವೊನೆಯಂಬು, ಬಟ್ಟೆನಂಬು ಮುಂತಾದವುಗಳನ್ನು ಹೆಸರಿಸಿದ್ದಾನೆ. ರನ್ನ ಕವಲಂಬು ಎಂಬ ಬಾಣವೊಂದನ್ನು ಹೇಳುತ್ತಾನೆ. ಬಹುಶಃ ಇದು ಅರ್ಧಚಂದ್ರಾಕೃತಿಯ ಬಾಣವಿರಬಹುದು. ಜನ್ನ ಅಚ್ಚನಗಂಬು ಎಂಬ ಬಾಣವನ್ನು ಹೇಳಿದ್ದಾನೆ. ಕೇಶಿರಾಜ ಬೋಳೆ ಎಂಬ ಬಾಣದ ಹೆಸರನ್ನು ಹೇಳಿದ್ದಾನೆ. ಹರಿಹರ ತನ್ನ ಬೇಡರಕಣ್ಣಪ್ಪ ರಗಳೆಯಲ್ಲಿ ಬೋಳೆಯಂಬನ್ನು ಹೆಸರಿಸುತ್ತಾನೆ. ಇವುಗಳ ಪೂರ್ಣ ವಿವರ ಸಾಕಷ್ಟು ತಿಳಿಯುವುದಿಲ್ಲ. ಖಡ್ಗ ಅಥವಾ ಕತ್ತಿಗೆ, ಕರವಾಳ್ ಮತ್ತು ತೋಳಬಾಳ್ ಎಂಬ ಹೆಸರುಗಳೂ ಇವೆ. ಅಲಗು (ಕಿರುಗತ್ತಿ), ಸಬಳ, ಕೊಂತ (ಮರದ ದಂಡ, ಸುಮಾರು 5, 6 ಅಥವಾ 7 ಹಸ್ತಗಳಷ್ಟು ಉದ್ದವಿರುತ್ತದೆಯೆಂದು ಅರ್ಥಶಾಸ್ತ್ರದಲ್ಲಿ ಹೇಳಿದೆ), ಶಲ್ಯ, ಭಲ್ಯ (ಒಂದು

ರೀತಿಯ ಬಾಣ), ಶೂಲ (ಅನಿರ್ದಿಷ್ಟ ಉದ್ದವಿರುವ ಮೊನಚಾದ ದಂಡ), ಕಣೆಯ (ತ್ರಿಕೋನಾಕಾರದ ಎರಡು ತುದಿಗಳುಳ್ಳ ಲೋಹದ ದಂಡ),ಕರ್ಕಡ




ಆಯುಧಗಳು

ಪ್ರಾಚೀನ (1-11) ; ಮಧ್ಯಕಾಲೀನ (12-18) ; ಈಚಿನ (19-24)

(ಕೈಯಿಂದ ಎಸೆಯುವ ಶೂಲದಂಥ ಆಯುಧ), ಪರಿಘ (ಕಬ್ಬಿಣದ ದಂಡ), ಸುರಿಗೆ (ಒಂದು ಬಗೆಯ ಕತ್ತಿ), ಮುಸಲ (ಖಾದರದಲ್ಲಿ ಮಾಡಿದ ಮೊನಚಾದ ದಂಡ), ತೀರಿಕೆ, ಜಟ್ಟಿಗೆ, ಭಿಂಡವಾಳ (ದಪ್ಪ ತುದಿಯಿರುವ ಕಬ್ಬಿಣದ ದಂಡ), ಈಟಿ (ಭರ್ಜಿಯಂತೆಯೇ ಇರುವ ಆಯುಧ), ಶಕ್ತಿ (ನಾಲ್ಕು ಹಸ್ತಗಳಷ್ಟು ಉದ್ದದ ಲೋಹಾಯುಧ), ಪಂಚರಾಯುಧ, ಅವುತಿ, ಮಾಳಜಿಗೆ, ಪಿಡಿಕುತ್ತು, ತೋಮರ (4 ಅಥವಾ 5 ಹಸ್ತಗಳಷ್ಟು ಉದ್ದವಿರುವ ಬಾಣದಂಥ ತುದಿಯುಳ್ಳ ಆಯುಧ), ಕರ್ಪಣ (ಕೈಯಿಂದ ಎಸೆಯಬಹುದಾದ ಬಾಣ), ಮುಸುಂಡಿ, ಮುದ್ಗರ, ಬಿಟ್ಟೇರು, ಬಕ್ಕಣ, ಉದ್ದುವಾರೆ, ಅಡಾಯುಧ, ಲೌಡಿ (ಉದ್ದನೆಯ ಬಿದರ ಬಡಿಗೆ, ದೊಣ್ಣೆ) ಇವು ಇತರ ಆಯುಧಗಳು. ರಕ್ಷಣೆಗಾಗಿ ಗುರಾಣಿ (ಕೊರಳಿನಿಂದ ಸೊಂಟದವರೆಗೆ ರಕ್ಷಣೆಕೊಡುವ ಸುಮಾರು ಎರಡಡಿ ಉದ್ದ, ಎರಡಡಿ ಅಗಲವಿರುವ ಹಲಗೆ), ಸೀಸಹ, ಬಾಹುರಕ್ಕೆ, ತನುತ್ರ ಎಂಬ ಹಲವಾರು ಬಗೆಯ ಕವಚಗಳು ಉಪಯೋಗದಲ್ಲಿದ್ದುವು. ಕರ್ನಾಟಕದ ಜನ ಯುದ್ಧಗಳಲ್ಲಿ ಮದ್ದು ಗುಂಡನ್ನೂ ಬಳಸುತ್ತಿದ್ದರು. ಇವುಗಳ ಉಪಯೋಗದ ಚಿತ್ರಣ ಹದಿನಾರನೆಯ ಶತಮಾನದಿಂದ ಈಚಿನ ಕಾವ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಫಿರಂಗಿ, ಗುಂಡುಗೋವಿ, ಶರಘು ಮುಂತಾದವು ಸಿಡಿಮದ್ದಿನ ಆಯುಧಗಳು.

ದಿನಬಳಕೆಯಲ್ಲಿಯೂ ಕೆಲವು ಸಾಧನಗಳು ಉಪಕರಣಗಳಾಗಿಯೂ ಆಯುಧಗಳಾಗಿಯೂ ಉಪಯೋಗವಾಗುತ್ತಿರುವುದನ್ನು ಗಮನಿಸಬಹುದು. ದೊಣ್ಣೆಗಳು (ಧಾನ್ಯ) ಬಡಿಯಲೂ ಹೊಡೆಯಲೂ ಉಪಯೋಗವಾಗುತ್ತವೆ. ದೊಣ್ಣೆಗಳ ಹಿನ್ನೆಲೆಯಲ್ಲಿಯೇ ಸಿದ್ಧಗೊಂಡಿರುವ ಸಾಧನವಾದ ಕೊಡಲಿ, ಮರದ ಕಾವು, ಲೋಹದ ಕೊಡಲಿ ಇವನ್ನೊಳಗೊಂಡು ಕತ್ತರಿಸಲು, ಸೀಳಲು, ಬಳಸುವ ಆಯುಧ. ಅರ್ಧಚಂದ್ರಾಕಾರದ ಅಲುಗಿನ ಭಾಗವಿದ್ದರೆ ಈ ಸಾಧನವನ್ನು ಚಂದ್ರಾಯುಧವೆಂದು ಕೆಲವು ಕಡೆ ಕರೆಯುತ್ತಾರೆ. ಕೊಡಲಿಗಳಲ್ಲಿ ಕೈಗೊಡಲಿ, ಎಡೆಗೊಡಲಿ, ಪಿಳುಗೊಡಲಿ ಮುಖ್ಯವಾದವು. ಕಡಿಯುವ, ಇರಿಯುವ, ಚುಚ್ಚುವ, ಬಗೆಯುವ, ಹೆರೆಯುವ, ಹರಿಯುವ ಚಿಕ್ಕ ಚಿಕ್ಕ ಸಾಧನಗಳೂ ಈ ಗುಂಪಿಗೆ ಸೇರುತ್ತವೆ. ಕ್ಷೌರಿಕನ ಕತ್ತಿ ಮರದ ಹಿಡಿಯನ್ನು ಪಡೆದಿರುತ್ತದೆ. ಕುಡುಗೋಲು ಚಾಕು ಚೂರಿಗಳಿಗೂ ಹಿಡಿಗಳಿರುತ್ತವೆ. ಕುಡುಗೋಲಿನಲ್ಲಿ ಹತ್ತಾರು ಬಗೆಗಳಿವೆ. ಸೊಟ್ಟಗ ಕುಡುಲು, ಉಜ್ಜುಗರಿ, ಕೈಗುಡುಲು. ಹರಿಗುಡುಲು, ಜವಣೆಕುಡುಲು ಮುಂತಾದವು ಆಯಾ ಉದ್ದೇಶಕ್ಕೆ ತಕ್ಕಂತೆ ಬೇರೆ ಬೇರೆ ಆಕಾರದಲ್ಲಿರುತ್ತವೆ. ಕುಡುಲಿನ ಜಾತಿಗೆ ಸೇರಿದ, ಇನ್ನೂ ದೊಡ್ಡದಾದದು ಮುಚ್ಚು. ಹಬ್ಬಗಳಲ್ಲಿ ಕುರಿಯನ್ನೋ ಕೋಣವನ್ನೋ ಬಲಿಗೊಡಲು ಮಾತ್ರ ಬಳಸುವ ಸಾಧನ ಬಲಿಮುಚ್ಚು ಅಥವಾ ಕಂದಲು. ಇದು ಹೆಚ್ಚಾಗಿ ಕತ್ತರಿಸಲು ಉಪಯೋಗಿಸುವ ಸಾಧನ. ಚಾಕುಗಳಲ್ಲೂ ಅನೇಕ ಆಕಾರದವಿವೆ. ರೈತರು ಬಳಸುವ ಸಾಧನಗಳಲ್ಲಿ ವ್ಯವಸಾಯ ಹಾಗೂ ಮನೆಬಳಕೆಯ ಆಯುಧಗಳೂ ಇವೆ. ಹಾರೆ, ಗುದ್ದಲಿ, ಪಿಕಾಸಿ, ಬಾಚಿ, ಗುಳ, ಗುಳಕೊಕ್ಕೆ, ಕಳೆಗುಡ್ಲು, ಕೈಬಾಚಿ, ಕುಡ್ಲು, ಕೂಡ್ಲಿ, ಕೋಲುಗತ್ತಿ ಮುಂತಾದವು ಮುಖ್ಯವಾದವು. ಕಳ್ಳರು ಕನ್ನಗತ್ತಿ ಎಂಬ ಆಯುಧವನ್ನು ಮನೆಗಳಿಗೆ ಕನ್ನ ಹಾಕಲು ಬಳಸುತ್ತಿದ್ದರಂತೆ. ವಿವಿಧ ಕಾರ್ಯಗಳಿಗಾಗಿ ಉಪಯೋಗಿಸುವ ಇನ್ನೂ ಹಲವಾರು ಉಪಕರಣಗಳು ಕರ್ನಾಟಕದಲ್ಲಿ ಬಳಕೆಯಲ್ಲಿವೆ.

ಆಯುಧಗಳ ಮಹತ್ತ್ವವನ್ನು ಅರಿತಿದ್ದ ಕರ್ನಾಟಕದ ಜನರಲ್ಲಿ 'ಆಯುಧ ಪೂಜೆ' ಒಂದು ವಿಶಿಷ್ಟ ಆಚರಣೆಯಾಗಿ ಬೆಳೆದುಬಂದಿದೆ. ಕೆಲವೆಡೆ ಹಳ್ಳಿಗಳಲ್ಲಿ ಸಂಕ್ರಾಂತಿ ಹಬ್ಬದ ದಿನ ತಾವು ಉಪಯೋಗಿಸುವ ಎಲ್ಲ ವ್ಯವಸಾಯ ಸಾಧನಗಳನ್ನೂ ಆಯುಧ ವಿಶೇಷಗಳನ್ನೂ ಇಟ್ಟು ಪೂಜಿಸುವ ಸಂಪ್ರದಾಯ ರೂಢಿಯಲ್ಲಿದೆ. (ನೋಡಿ: ಹಬ್ಬಗಳು). *

**ಆಯ್ದಕ್ಕಿ ಮಾರಯ್ಯ :** 12ನೆಯ ಶತಮಾನದಲ್ಲಿದ್ದ ವಚನಕಾರ, ಕರ್ನಾಟಕದಲ್ಲಿ ನಡೆದ ಧಾರ್ಮಿಕ ಮಹಾಕ್ರಾಂತಿ ಮಂಥನದಲ್ಲಿ ಉದ್ಭವಿಸಿದ ಅನೇಕ ಶರಣರಲ್ಲಿ ಒಬ್ಬ. ರಾಯಚೂರು ಜಿಲ್ಲೆಯ ಅಮರೇಶ್ವರ ಈತನ ಜನ್ಮಸ್ಥಳ. ಸತಿ ಲಕ್ಕಮ್ಮ. ಬನವಾಸಿಯ ಮಧುಕೇಶ್ವರ ಮಂದಿರದ ಶಿಲಾಮಂಟಪದ ಗಗ್ಗರಿ ಕಲ್ಲಿನಲ್ಲಿ ಕೆತ್ತಿದ ಶರಣರ ವಿಗ್ರಹಗಳ ಕೆಳಗೆ ಈತನ ಹೆಸರು ಕಂಡುಬರುತ್ತದೆ.

ಶಿವನನ್ನು ಒಲಿಸಿಕೊಳ್ಳಲು ಭಕ್ತಿ, ಕರ್ಮ, ಜ್ಞಾನ, ವೈರಾಗ್ಯಗಳಲ್ಲಿ ಕರ್ಮಮಾರ್ಗವೇ ಶ್ರೇಷ್ಠವೆಂದು ತಿಳಿದಿದ್ದ. ಕಾಯಕ ಸದ್ಭಾವತಿಂದೊಡಗೊಂಡ ಲೋಕಜೀವನವೇ ಶಿವನ ಪ್ರಪಂಚವೆಂದು ನಂಬಿ ನಡೆದ ಶಿವಶರಣ. ಈತನ ದೃಷ್ಟಿಯಲ್ಲಿ ಸತ್ಯ ಶುದ್ಧ ಕಾಯಕದ ಫಲ, ಗುರುಲಿಂಗ ಜಂಗಮ ಪೂಜಾಫಲ. ಕಲ್ಯಾಣದಲ್ಲಿ ಅಕ್ಕಿಯಾಯ್ದು, ತನ್ನ ಪತ್ನಿಯೊಂದಿಗೆ ಶರಣಗಣಕ್ಕೆ ಅನ್ನ ಸಂತರ್ಪಣೆ ನೆರವೇರಿಸುತ್ತಿದ್ದ ಈ

ಶರಣನನ್ನು ಬಡವನೆಂದು ಬಗೆದ ಬಸವಣ್ಣ, ಈತನು ಅಕ್ಕಿ ಆರಿಸುವ ಸ್ಥಳದಲ್ಲಿ ಹೇರಳವಾಗಿ ಅಕ್ಕಿಯನ್ನು ಚೆಲ್ಲಿಸಿದಾಗ ಮನೆಗೆ ಎಲ್ಲವನ್ನು ಆಯ್ದುಕೊಂಡು ಬಂದ. ಆಗ ಇವನ ಸತಿ ಇಂಥ ಕಾಯಕ ಸಲ್ಲದು ಎಂದು ಬೋಧಿಸಿ, ತಂದ ಅಕ್ಕಿಯನ್ನು ತಿರುಗಿಸಲು ಹೇಳಿ, ಆಸೆಯೆಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ? ಎಂದು 1 ಲಕ್ಷ 93ಸಾವಿರ ಜಂಗಮರಿಗೆ ಭೋಜನ ಬಡಿಸಿ, ಬಸವಣ್ಣನಿಗೆ ಶರಣರ ಸಾಮರ್ಥ್ಯವನ್ನು ತೋರಿಸಿದಳು ಎಂಬ ಪ್ರತೀತಿ ಇದೆ.

ಈತ ಅಮರೇಶ್ವರಲಿಂಗ ಎಂಬ ಅಂಕಿತದಲ್ಲಿ ಸು.58 ವಚನಗಳನ್ನು ಬರೆದಿದ್ದಾನೆ. ಚಿತ್ತ ಮುಟ್ಟಿ ಸೇವೆಯ ಮಾಡುವ ಭಕ್ತರಿಗೆ ಮರ್ತ್ಯ ಕೈಲಾಸವೆಂಬುದುಂಟೇ? ಆತನಿದ್ದುದೇ ಸುಕ್ಷೇತ್ರ; ಕಾಯಕದಲ್ಲಿ ನಿರತನಾದರೆ ಗುರು ದರುಶನವಾದರೂ ಮರೆಯಬೇಕು, ಲಿಂಗ ಪೂಜೆಯಾದರೂ ಮರೆಯಬೇಕು, ಜಂಗಮ ಮುಂದಿದ್ದರೂ ಹಂಗು ಹರಿಯಬೇಕು, ಕಾಯಕವೆ ಕೈಲಾಸವಾದ ಕಾರಣ, ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು ಎಂಬ ವಚನಗಳು ಈತನ ಜೀವನದ ದೃಷ್ಟಿಯನ್ನು ನಿರ್ದೇಶಿಸುತ್ತವೆ. ಈತನ ಸತಿ ಲಕ್ಕಮ್ಮನೂ ಮಾರೇಶ್ವರ ಪ್ರಿಯ ಅಮಳೇಶ್ವರ ಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ರಚಿಸಿದ್ದಾಳೆ. (ಎಂ.ಎಸ್.ಐ.)

**ಆರಗ :** ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತೀರ್ಥಹಳ್ಳಿಗೆ 10ಕಿಮೀ ವಾಯುವ್ಯದಲ್ಲಿರುವ ಇತಿಹಾಸಪ್ರಸಿದ್ಧ ಗ್ರಾಮ. ಕಲ್ಲಿನಾಥ, ಬನಶಂಕರಿ, ಅಖಂಡೇಶ್ವರ, ಹನುಮಂತ ಮುಂತಾದ ಪ್ರಾಚೀನ ದೇವಾಲಯಗಳು ಇಲ್ಲಿವೆ. ಹದಿನಾಲ್ಕನೆಯ ಶತಮಾನದಲ್ಲಿ ಇದು ವ್ಯಾಪಾರ ಮತ್ತು ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿತ್ತು. 1382ರಲ್ಲಿ ಇಲ್ಲಿ ಸಂತೆ ನಡೆಯುತ್ತಿತ್ತೆಂದು ತಿಳಿದುಬರುತ್ತದೆ.

ಈ ಊರು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಹೊಂಬುಚದ ಸಾಂತರ ರಾಜರ ಅಧೀನದಲ್ಲಿತ್ತು. ಹೊಯ್ಸಳರ ಕಾಲಕ್ಕೆ ಇದು ಪ್ರಮುಖ ಸ್ಥಳವಾಗಿದ್ದಂತೆ ಕಂಡುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ 3 ಪಟ್ಟಣಗಳು ಮತ್ತು 18 ಕಂಪಣಗಳು ಇದ್ದ ಆರಗವೇಂಠೆ ಅಥವಾ ಆರಗ ರಾಜ್ಯದ ಮುಖ್ಯ ಸ್ಥಳವಾಯಿತು. ಆರಗ ರಾಜ್ಯ ಶಿವಮೊಗ್ಗ, ಶಿಕಾರಿಪುರ, ನಗರ, ತೀರ್ಥಹಳ್ಳಿ, ಸೊರಬ ಮತ್ತು ಕೊಪ್ಪ ತಾಲ್ಲೂಕುಗಳ ಭಾಗಗಳನ್ನು ಒಳಗೊಂಡಿತ್ತು. 1377ರಲ್ಲಿ ಇಮ್ಮಡಿ ಹರಿಹರನ ತಮ್ಮ ಮಾರಪ್ಪ, 1378ರಲ್ಲಿ 1ನೆಯ ಬುಕ್ಕನ ಮಗ ವಿರೂಪಣ್ಣ, 1381ರಲ್ಲಿ 2ನೆಯ ಹರಿಹರನ ಮಗ ಚಿಕ್ಕರಾಯ - ಹೀಗೆ ವಿಜಯನಗರದ ರಾಜಪ್ರತಿನಿಧಿಗಳು ಇಲ್ಲಿಂದ ಆಳುತ್ತಿದ್ದರು. 1403ರಲ್ಲಿ ಇಲ್ಲಿದ್ದ ಪ್ರತಿನಿಧಿ ವಿಟ್ಠಲ. ಅವನ ಅಧೀನಕ್ಕೆ ಆರಗ, ಗುತ್ತಿ, ಬಾರಕೂರು, ಮಂಗಳೂರು ರಾಜ್ಯಗಳೂ ಸೇರಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಇದರಿಂದ ಇಲ್ಲಿನ ರಾಜಕೀಯ ಚಟುವಟಿಕೆ ವಿಜಯನಗರ ಕಾಲದಲ್ಲಿ ಮಹತ್ತರವಾಗಿತ್ತೆಂದು ಹೇಳಬಹುದು.

ಆರಗವೇಂಠೆಯಲ್ಲಿ 59 ಅಗ್ರಹಾರಗಳು, 50 ನಾಡುಗಳು ಇದ್ದಂತೆ ತೋರುತ್ತದೆ. ಸ್ಥಳೀಯ ನ್ಯಾಯತೀರ್ಮಾನ ನಡೆಯುತ್ತಿದ್ದ ಸ್ಥಳಕ್ಕೆ ಆರಗ ಚಾವಡಿ ಎಂದು ಹೆಸರಿತ್ತು. ಇಲ್ಲಿನ ಕೆಲವು ಶಾಸನಗಳು ಜಮೀನು ವ್ಯಾಜ್ಯ ತೀರ್ಮಾನ, ತೆರಿಗೆ, ದತ್ತಿ, ಪಟ್ಟಣ ಆಡಳಿತ ಮೊದಲಾದ ವಿಷಯಗಳಿಗೆ ಸಂಬಂಧಿಸಿದೆ. (ಡಿ.ಎಸ್.ಜೆ.)

**ಆರ'ಣಿ :** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಬೆಳ್ಳೂರಿಗೆ ವಾಯುವ್ಯ ದಿಕ್ಕಿನಲ್ಲಿ 5ಕಿಮೀ ದೂರದಲ್ಲಿರುವ ಒಂದು ಸಣ್ಣ ಗ್ರಾಮ. ಇಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ವೀರಭದ್ರ ದೇವರ ಗುಡಿ ಇದೆ. ಗುಡಿಯಲ್ಲಿ ವೀರಭದ್ರನ ವಿಗ್ರಹವಿದೆ. ಗುಡಿಯ ನವರಂಗದಲ್ಲಿ ಅನೇಕ ವಿಷ್ಣುಮೂರ್ತಿಗಳಿವೆ. ಆರಣಿ ಕೆರೆಯ ದಕ್ಷಿಣ ಪಾರ್ಶ್ವದಲ್ಲಿ ಮಹಿಷಾಸುರಮರ್ದಿನಿಯ ವಿಗ್ರಹವಿದೆ. ಅದರ ಅಡಿಯಲ್ಲಿ ಹೊಯ್ಸಳರ ಕಾಲದ ಒಂದು ಶಾಸನವಿದೆ. ಪಕ್ಕದಲ್ಲೇ ಒಂದು ಗರುಡಸ್ತಂಭವಿದೆ, ಮಹಿಷಾಸುರಮರ್ದಿನಿಯ ವಿಗ್ರಹ ಕಲೆಯ ದೃಷ್ಟಿಯಿಂದ ಒಂದು ಒಳ್ಳೆಯ ಕೃತಿ. (ಕೆ.ಎಸ್.ಎಸ್.)

**ಆರತಿ :** ಭಾವಪೂರ್ಣ ಅಭಿನಯಕ್ಕೆ ಹೆಸರಾಗಿದ್ದ ಕನ್ನಡ ಚಲನಚಿತ್ರ ನಟಿ ಮತ್ತು ನಿರ್ಮಾಪಕಿ. ಗೆಜ್ಜೆಪೂಜೆ ಚಿತ್ರದಲ್ಲಿ ಚಿಕ್ಕ ಪಾತ್ರವೊಂದನ್ನು ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. ಕನ್ನಡದಲ್ಲಿ ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಪಾತ್ರವಹಿಸಿದ್ದಾರೆ. ಹೆಸರಾಂತ ನಿರ್ದೇಶಕ ಕಣಗಾಲ್ ಪುಟ್ಟಣ (ನೋಡಿ) ಇವರನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ಉಪಾಸನೆ, ನಾಗರಹಾವು, ಎಡಕಲ್ಲು ಗುಡ್ಡದ ಮೇಲೆ, ಶುಭಮಂಗಳ,

ಕಥಾಸಂಗಮ, ರಾಜ ನನ್ನ ರಾಜ, ಹೊಂಬಿಸಿಲು, ರಂಗನಾಯಕಿ, ಚಿತ್ರಗಳಲ್ಲಿ ಅಪೂರ್ವ ಅಭಿನಯ ನೀಡಿದ್ದಾರೆ. ಕಥಾಸಂಗಮ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಪ್ರಯೋಗ. ಕನ್ನಡದ ಮೂರು ಪ್ರಸಿದ್ಧ ಕತೆಗಳನ್ನು ಒಂದೇ ಚಿತ್ರದಲ್ಲಿ ಅಳವಡಿಸಿರುವ ಈ ಪ್ರಯೋಗಾತ್ಮಕ ಚಿತ್ರದಲ್ಲಿ ಆರತಿ ಮುನಿತಾಯಿಯಾಗಿ ನೀಡಿದ ಅಂಥ ಗೃಹಿಣಿಯ ಅಭಿನಯಕ್ಕಾಗಿ ಅತ್ಯುತ್ತಮ ನಟಿ ರಾಜ್ಯ ಪ್ರಶಸ್ತಿ ಲಭಿಸಿದೆ (1975-76). ಆರತಿಯವರ ಅಭಿನಯ ಕೌಶಲ್ಯಕ್ಕೆ ಸಾಕ್ಷಿಯಾದ ಇನ್ನೊಂದು ಚಿತ್ರ ರಂಗನಾಯಕಿ. ರಂಗಭೂಮಿಯ ಬದುಕು ಹಾಗೂ ವೈಯಕ್ತಿಕ ಬದುಕಿನ ನಡುವಣ ಸಂಘರ್ಷವನ್ನು ಕುರಿತ ಈ ಚಿತ್ರದಲ್ಲಿನ ಆರತಿಯವರ ಅಭಿನಯ ಅವಿಸ್ಮರಣೀಯವಾದದ್ದು. ಈ ಚಿತ್ರದ ಇವರ ಅಭಿನಯಕ್ಕೆ ಕೂಡ ಅತ್ಯುತ್ತಮ ನಟಿ ರಾಜ್ಯ ಪ್ರಶಸ್ತಿ ಲಭ್ಯವಾಗಿದೆ (1980-81). ಇವರು ಧರ್ಮಸೆರೆ ಎಂಬ ಚಲನಚಿತ್ರವನ್ನು ನಿರ್ಮಿಸಿ, ಅದರಲ್ಲಿ ನಟಿಸಿದ್ದಾರೆ. ಈ ಚಿತ್ರದ ಅಭಿನಯಕ್ಕೂ ಇವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿದೆ (1978-79). ಇವರು ವಿಧಾನ ಪರಿಷತ್ತಿನ ನಾಮಕರಣ ಸದಸ್ಯೆಯಾಗಿಯೂ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಕಣಗಾಲ್ ಪುಟ್ಟಣ್ಣನವರನ್ನು ಇವರು ವಿವಾಹವಾಗಿದ್ದರು. ಅವರಿಂದ ದೂರಸರಿದ ಬಳಿಕ ಮಾಜಿ ಶಿಕ್ಷಣ ಸಚಿವ ಎಂ.ರಘುಪತಿಯವರನ್ನು ವಿವಾಹವಾಗಿದ್ದರು. ಈ ದಾಂಪತ್ಯವೂ ಹೆಚ್ಚು ದಿನ ಉಳಿಯಲಿಲ್ಲ. ಕೆಲಕಾಲಾನಂತರ ಬಣ್ಣದ ಬದುಕಿನಿಂದ ಪೂರ್ಣವಾಗಿ ದೂರ ಸರಿದರು. ಕನ್ನಡದ ಹೆಸರಾಂತ ನಾಯಕ ನಟರಾದ ರಾಜಕುಮಾರ್, ಶ್ರೀನಾಥ್, ವಿಷ್ಣುವರ್ಧನ, ಅನಂತನಾಗ್, ಶಂಕರನಾಗ್ ಮೊದಲಾದವರೊಂದಿಗೆ ಇವರು ಅಭಿನಯಿಸಿದ್ದಾರೆ. *

**ಆಲತಿಗಿರಿ :** ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಒಂದು ಪ್ರೇಕ್ಷಣೀಯ ಸ್ಥಳ, ನಾಗಮಂಗಲದ ಉತ್ತರಕ್ಕೆ 9ಕಿಮೀ ದೂರದಲ್ಲಿ ಸುಂದರ ಸನ್ನಿವೇಶದಲ್ಲಿ ಇದೆ. ಮೈಸೂರು ತುಮಕೂರು ರಸ್ತೆಯ ಪೂರ್ವಕ್ಕೆ ತೋರುವ ಗಿರಿಶ್ರೇಣಿಯಲ್ಲಿ ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಆಲತಿಗಿರಿಯ ಉನ್ನತ ಶಿಖರ ಗೋಚರಿಸುತ್ತದೆ. ಇಲ್ಲಿನ ಶ್ರೀಮಲ್ಲೇಶ್ವರ ಗುಹಾಲಯ ಹೆಚ್ಚು ಗಮನಾರ್ಹ.

ಆಲತಿಗಿರಿ ಶ್ರೇಣಿ ದಕ್ಷಿಣೋತ್ತರವಾಗಿ ಹಬ್ಬಿದೆ. ಗಿರಿಯ ನೆತ್ತಿಯ ಗುಹಾಲಯವನ್ನು ತಲುಪಲು ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳಿಂದ ಸೋಪಾನಗಳನ್ನು ಕಡೆಯಲಾಗಿದೆ. ಈಗ ಇವು ಸವೆದಿವೆ. ಅತ್ಯಂತ ಆಳವಾದ ದೋಣೆಯೊಂದು ಗುಹಾಲಯದ ಸಮೀಪದಲ್ಲೇ ಇದೆ.

ತಾಯಿಯನ್ನು ಕಡಿದು ಬೇಸರಗೊಂಡ ಪರಶುರಾಮ ಲೋಕಸಂಚಾರವನ್ನು ಕೈಗೊಂಡು ಈ ಗಿರಿಯನ್ನೇರಿ ದೊಡ್ಡ ಬಂಡೆಯೊಂದರ

ಬುಡದಲ್ಲಿ ಕುಳಿತು ಆಯಾಸದಿಂದ ಹಾಯ್ ಮಲ್ಲೇಶ ಎಂದು ಉದ್ಗರಿಸಿದನೆಂದೂ ಬಂಡೆಯೊಳಗಿನಿಂದ ಓ ಎಂಬ ಧ್ವನಿ ಬಂದಿತೆಂದೂ ಆಗ ಆತ ಆಶ್ಚರ್ಯದಿಂದ ಬಂಡೆಯ ಕಡೆ ನೋಡಿ ಪೂರ್ವ ದಿಕ್ಕಿನಿಂದ ಒಬ್ಬ ಮನುಷ್ಯ ಪ್ರವೇಶಿಸುವಷ್ಟು ಭಾಗವನ್ನು ಬಂಡೆಯಲ್ಲಿ ಕಡಿದು ಅದರ ಗರ್ಭವನ್ನು ಪ್ರವೇಶಿಸಿದನೆಂದೂ ಬಂಡೆಯ ಒಡಲಲ್ಲಿ ಜಲ ಕಾಣಿಸಿಕೊಂಡಿತೆಂದೂ ಅದರ ಮಧ್ಯೆ ಮಲ್ಲೇಶ್ವರಲಿಂಗ ಕಾಣಿಸಿಕೊಂಡಿತೆಂದೂ ಐತಿಹ್ಯ. ಬಂಡೆಯನ್ನು ಕೊಡಲಿಯಿಂದಲೇ ಕಡಿದು ಗುಹೆಯನ್ನು ನಿರ್ಮಿಸಿದಂತೆ ಗುರುತುಗಳು ಇಂದಿಗೂ ಇವೆ. ಇಲ್ಲಿಗೆ ಬಂದವರು ಬಂಡೆಯ ನಡುವಿನ ಗುಹೆಯಲ್ಲಿ ನುಸುಳಿಕೊಂಡು ಹೋಗಬೇಕು. ಮಂಡಿಯುದ್ದ ನೀರಿದ್ದರೂ ಕತ್ತಲೆ ದಟ್ಟವಾಗಿ ಕವಿದಿರುವ ಮಾರ್ಗದಲ್ಲಿ ಹತ್ತಾರು ಗಜ ಸಾಗಿದರೆ ಲಿಂಗದರ್ಶನವಾಗುತ್ತದೆ. ಪಾಂಡವರ ಹೆಸರಿನ ಇನ್ನೊಂದು ಗುಹೆಯಲ್ಲಿ ಹಿಂದೆ ಪಾಂಡವರು ತಂಗಿದ್ದರು ಎಂಬ ಐತಿಹ್ಯವಿದೆ.

ಆಲತಿಗಿರಿಯಲ್ಲಿ ವರ್ಷಕ್ಕೊಮ್ಮೆ ಒಂದು ದೊಡ್ಡ ಜಾತ್ರೆ ನಡೆಯುತ್ತದೆ. ಗಿರಿಯ ತಪ್ಪಲು ಪ್ರಶಾಂತವಾಗಿರುವ ರಮ್ಯ ನಿಸರ್ಗ ಸೌಂದರ್ಯದಿಂದ ಕಂಗೊಳಿಸುತ್ತದೆ. ಇಲ್ಲಿನ ಗುಹಾಂತರ ದೇವಾಲಯ ಹೆಚ್ಚು ಖ್ಯಾತಿ ಗಳಿಸದಿದ್ದರೂ ಕರ್ನಾಟಕದ ಆಶ್ಚರ್ಯಗಳಲ್ಲಿ ಒಂದಾಗಿದೆ. ಆಲತಿಗಿರಿಯ ಬುಡದಲ್ಲಿ ಆದಿಚುಂಚನಗಿರಿ ಮಠದ ಕಿರು ಶಾಖೆಯೊಂದಿದೆ. *

**ಆಲಮಟ್ಟಿ :** ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಒಂದು ಗ್ರಾಮ. ಕೃಷ್ಣಾ ನದಿಯ ಎಡದಂಡೆಯ ಮೇಲೆ ಹುಬ್ಬಳ್ಳಿ ಸೊಲ್ಲಾಪುರ ರೈಲುಮಾರ್ಗದಲ್ಲಿ ಬಾಗಲಕೋಟೆಯ ಈಶಾನ್ಯಕ್ಕೆ 32ಕಿಮೀ ದೂರದಲ್ಲೂ ಬಿಜಾಪುರದ ದಕ್ಷಿಣಕ್ಕೆ ಸು.65ಕಿಮೀ ದೂರದಲ್ಲೂ ಇದೆ. ಗ್ರಾಮದ ಪೂರ್ವದಲ್ಲಿ ಪರ್ವತಕಟ್ಟೆ ಹಳ್ಳವೂ ರಕ್ಷಿತ ಅರಣ್ಯಪ್ರದೇಶವೂ ಇವೆ. ಆಲಮಟ್ಟಿಯಲ್ಲಿ ಹರ್ಡೇಕರ ಮಂಜಪ್ಪನವರ ಆಶ್ರಮವಿತ್ತು. ಅದು ಸಾಮಾಜಿಕ, ನೈತಿಕ ಮತ್ತು ಸಾಸ್ಕೃತಿಕ ಶಿಕ್ಷಣ ಕೊಡುವ ಒಂದು ಗುರುಕುಲವಾಗಿತ್ತು. ಇಂದು ಅವರ ಹೆಸರಿನ ಒಂದು ಪ್ರೌಢಶಾಲೆ ಇದೆ.

ಕೃಷ್ಣಾನದಿ ಮೇಲ್ದಂಡೆ ಮೊದಲಹಂತದ ಯೋಜನೆಯಲ್ಲಿ ಕೃಷ್ಣಾನದಿಗೆ ಅಡ್ಡಲಾಗಿ ಆಮಲಟ್ಟಿ ಬಳಿ ದೊಡ್ಡ ಕಟ್ಟೆ ಕಟ್ಟಲಾಗಿದೆ. ಇದರಿಂದ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳ ಸುಮಾರು 3.5ಲಕ್ಷ ಎಕರೆಗಳಿಗೆ ನೀರೊದಗಿಸಲಾಗುತ್ತದೆ. ಕಟ್ಟೆಯ ಹಿಂದಿನ ಜಲಾವೃತ ಪ್ರದೇಶದಲ್ಲಿ ಹಿನ್ನೀರಿನಿಂದ ಬಾಗಲಕೋಟೆ ಪಟ್ಟಣ ಮುಳುಗಡೆಯಾಗಿದ್ದು ಕಟ್ಟೆಯ ಉದ್ದ 1,578ಮೀಗಳು ಗರಿಷ್ಠ ಎತ್ತರ ತಳಪಾಯದಿಂದ 47.80ಮೀಗಳು. ಸಮುದ್ರ ಮಟ್ಟದಿಂದ 519.6ಮೀ. ಎತ್ತರವಿದೆ. ಒಟ್ಟು ಜಲ ಸಂಗ್ರಹ ಸಾಮರ್ಥ್ಯ 5,295 ಮಿಲಿಯನ್ ಘನ ಮೀಟರ್‌ಗಳು. ಎರಡನೆಯ ಹಂತದಲ್ಲಿ ಮತ್ತೆ ಸುಮಾರು 2.30 ಲಕ್ಷ ಎಕರೆಗೆ ನೀರು ಒದಗುವುದು. (ಎಚ್.ಎಸ್.ಎನ್.)

**ಆಲಮೇಲ :** ಸಿಂದಗಿ ತಾಲ್ಲೂಕಿನ ಒಂದು ಗ್ರಾಮ. ಸಿಂದಗಿಯ ಉತ್ತರಕ್ಕೆ 19ಕಿಮೀ ದೂರದಲ್ಲಿದೆ. ಈ ಗ್ರಾಮವನ್ನು ಕಳಚುರಿ ಬಿಜ್ಜಳ (1130-67) ಸ್ಥಾಪಿಸಿದನೆಂಬ ಪ್ರತೀತಿ ಇದೆ. ಇಲ್ಲಿರುವ ದೇವಾಲಯಗಳಲ್ಲಿ ರಾಮಲಿಂಗ, ಹನುಮಂತ ಮತ್ತು ಈಶ್ವರ ದೇವಾಲಯಗಳು ಮುಖ್ಯವಾದವು. 18ನೆಯ ಶತಮಾನದಲ್ಲಿ ಕಟ್ಟಲಾದ ಈ ದೇವಾಲಯಗಳು ಜೀರ್ಣವಾಗಿವೆ. 1876ರ ಬರಗಾಲದಲ್ಲಿ ಸರ್ಕಾರ ದುರಸ್ತಿಪಡಿಸಿದ ಒಂದು ದೊಡ್ಡಕೆರೆ ಊರಿನ ಪಶ್ಚಿಮಕ್ಕಿದೆ. ಕೆರೆಯ ಪೂರ್ವಕ್ಕೆ ಲಕ್ಷ್ಮೀ ದೇವಾಲಯವಿದೆ. ನಾಡಗೌಡರಿಗೆ ಸೇರಿದ್ದ ಪಾಳುಬಿದ್ದ ಕೋಟೆ ಇದೆ. ಇದರ ಸಮೀಪದಲ್ಲಿ ಸಹೋದರಿಯರಿಬ್ಬರ ತ್ಯಾಗದಿಂದಾದ ಅಕ್ಕತಂಗಿಯರ ಬಾವಿ ಇದೆ. ಗ್ರಾಮ ಸೇಂಗ ವ್ಯಾಪಾರಕ್ಕೆ ಪ್ರಸಿದ್ಧ. (ಎನ್.ಪಿ.ವಿ.)

**ಆಲೂರ ವೆಂಕಟರಾವ್ :** 1880-1964. ಕನ್ನಡದ ಮೂಲಕ ಭಾರತದ ಕಲ್ಯಾಣವನ್ನು ಧ್ಯೇಯವಾಗಿರಿಸಿಕೊಂಡು, ನಾಡುನುಡಿ ಸಂಸ್ಕೃತಿಗಳ ಸಂವರ್ಧನೆಗಾಗಿ ಶ್ರಮಿಸಿದ ಹಿರಿಯರು. ಕರ್ನಾಟಕದ ಕುಲಪುರೋಹಿತ ಎಂಬ ಅಭಿಧಾನಕ್ಕೆ ಪಾತ್ರರಾಗಿದ್ದವರು. ಇವರ ಮನೆತನದವರು ಮೊದಲು ಬಳ್ಳಾರಿ ಜಿಲ್ಲೆಯಲ್ಲಿದ್ದು ಅನಂತರ ಧಾರವಾಡ ಜಿಲ್ಲೆಯ ಆಲೂರಿಗೆ ಬಂದು ನೆಲೆಸಿದ್ದರಿಂದ ಇವರ ಮನೆತನಕ್ಕೆ ಆಲೂರ ಮನೆತನ ಎಂಬ ಹೆಸರು ಬಂತು. ವೆಂಕಟರಾಯರು ಬಿಜಾಪುರದಲ್ಲಿ 1880ರ ಜುಲೈ 12ರಂದು ಜನಿಸಿದರು. ತಂದೆ ಭೀಮರಾಯರು ಅಲ್ಲಿ ಶಿರಸ್ತೇದಾರರಾಗಿದ್ದರು. ತಾಯಿ ಭಾಗೀರಥಿಬಾಯಿ. ಬಿಜಾಪುರ ಮತ್ತು ಧಾರವಾಡಗಳಲ್ಲಿ ಆರಂಭದ ಶಿಕ್ಷಣವನ್ನು ಮುಗಿಸಿದ ಇವರು, ಅನಂತರ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಕಲಿತು ಬಿ.ಎ. ಪದವಿ (1903) ಪಡೆದರು. ಪುಣೆಯಲ್ಲಿದ್ದಾಗ ಮರಾಠಿಯರ ಪ್ರಾಬಲ್ಯದಿಂದ ಅಲ್ಲಿಯ ಕನ್ನಡಿಗರು ಎದುರಿಸುತ್ತಿದ್ದ ಸಮಸ್ಯೆಗಳ ಪರಿಚಯವಾಗಿ, ಕನ್ನಡಿಗರ ಹಿತಕ್ಕಾಗಿ ಹೋರಾಡಬೇಕೆಂಬ ಮನೋಭಾವವನ್ನು ಬೆಳೆಸಿಕೊಂಡರು. ಇದೇ ಅವಧಿಯಲ್ಲಿ ಬಾಲಗಂಗಾಧರ ಟಿಳಕರ ಪ್ರಭಾವಕ್ಕೂ ಒಳಗಾದರು. ಮುಂಬಯಿಯಲ್ಲಿ ಕಾನೂನು ವ್ಯಾಸಂಗ ಮಾಡಿ 1905ರಲ್ಲಿ ಎಲ್.ಎಲ್.ಬಿ. ಪದವಿ ಪಡೆದ ಇವರು ಧಾರವಾಡದಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು.

ಧಾರವಾಡದಲ್ಲಿ ಆ ದಿನಗಳಲ್ಲಿ ಮರಾಠಿ ಪ್ರಾಬಲ್ಯ ಅಧಿಕವಾಗಿದ್ದು ಕನ್ನಡಿಗರಿಗೆ ಬಹಳ ಅನ್ಯಾಯವಾಗುತ್ತಿತ್ತು. ಇದನ್ನು ಗಮನಿಸಿದ ವೆಂಕಟರಾಯರು ಕನ್ನಡಿಗರಲ್ಲಿ ಜಾಗೃತಿಯನ್ನುಂಟುಮಾಡಬೇಕೆಂಬ ಉದ್ದೇಶದಿಂದ 1906ರಲ್ಲಿ ವಾಗ್ಭೂಷಣ ಎಂಬ ಮಾಸಪತ್ರಿಕೆಯನ್ನು ಆರಂಭಿಸಿದರು. ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯವನ್ನು ಕುರಿತು ಅನೇಕ ಲೇಖನಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಿ ಕನ್ನಡಿಗರನ್ನು ಎಚ್ಚರಿಸಿದರು. ಕನ್ನಡಿಗರು ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಲು ಕರೆ ಕೊಟ್ಟ ಇವರು, ಅದಕ್ಕಾಗಿ ತಮ್ಮ ವಕೀಲ ವೃತ್ತಿಯನ್ನು ಬಿಟ್ಟು ದುಡಿದರು. ರಾಷ್ಟ್ರೀಯ ಶಿಕ್ಷಣದಿಂದ ಜನತೆಯಲ್ಲಿ ಸ್ವದೇಶಾಭಿಮಾನ ಮೂಡುತ್ತದೆಂದು ಭಾವಿಸಿದ ಇವರು ಎನ್.ಎಸ್.ಹರ್ಡೀಕರ್, ನಾರಾಯಣ ರಾಜಪುರೋಹಿತ ಮುಂತಾದವರ ಸಹಕಾರದಿಂದ ಧಾರವಾಡದಲ್ಲಿ ಒಂದು ರಾಷ್ಟ್ರೀಯ ಕಾಲೇಜನ್ನು ಆರಂಭಿಸಿ (1909) ಸುಮಾರು ಎರಡು ವರ್ಷಗಳ ಕಾಲ ನಡೆಸಿದರು. ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿ ರಾಜಕೀಯ ದಿಗ್ಬಂಧನಕ್ಕೂ ಒಳಗಾದರು.

ಚಿಕ್ಕಂದಿನಿಂದಲೂ ವೆಂಕಟರಾಯರಿಗೆ ಕರ್ನಾಟಕ ಇತಿಹಾಸದಲ್ಲಿ ಆಸಕ್ತಿ. ಕರ್ನಾಟಕದ ಭವ್ಯಪರಂಪರೆಯನ್ನು ತಿಳಿಯುವಲ್ಲಿ ಕುತೂಹಲ ಇತ್ತು. ಇವರು ವಕೀಲ ವೃತ್ತಿಯನ್ನು ಪ್ರಾರಂಭಿಸಿದ ಹೊಸತರಲ್ಲಿ ಆನೆಗೊಂದಿ, ಹಂಪೆ ಮೊದಲಾದ ಐತಿಹಾಸಿಕ ಸ್ಥಳಗಳಿಗೆ ಭೇಟಿ ಕೊಟ್ಟರು.



ತಮ್ಮ ಆ ಭೇಟಿಯನ್ನು ಕುರಿತು, ನಮ್ಮ ವಿಜಯನಗರ ಅಲ್ಲಿ ಪ್ರತ್ಯಕ್ಷವಾಗಿಯೂ ವಿಸ್ತಾರ ವಾಗಿಯೂ ನನ್ನ ಮುಂದೆ ಬಿದ್ದಿದೆ. ಆ ದಿವಸದ ದರ್ಶನದಿಂದ ನನ್ನ ಹೃದಯದಲ್ಲಿ ಕರ್ನಾಟಕ ದೇವಿಯ ಸುಂದರಮೂರ್ತಿ ಮೂಡಿತು. ಅದೊಂದು ಸ್ಮರಣೀಯ ಭೇಟಿ, ಎಂಬುದಾಗಿ ಹೇಳಿ ಕೊಂಡಿದ್ದಾರೆ. ಅಂದಿನಿಂದ ಇವರು ಕರ್ನಾಟಕ ದೇವಿಯ ತಪಸ್ಸನ್ನೇ ಕೈಗೊಂಡರು. ಕರ್ನಾಟಕ ದೇವಿಯ ತಪಸ್ಸೆಂದರೆ ಹಂಚಿ ಹೋಗಿದ್ದ ಕರ್ನಾಟಕವನ್ನು ಒಗ್ಗೂಡಿಸುವುದು, ಅದಕ್ಕೆ ಕರ್ನಾಟಕ ಎಂದು ಹೆಸರಿಡುವುದು, ಕನ್ನಡ ಭಾಷೆಯ ವಿಚಾರದಲ್ಲಿ ಕನ್ನಡಿಗರಲ್ಲಿ ಅಭಿಮಾನ ಮೂಡಿಸುವುದು, ಕನ್ನಡ ನಾಡಿನ ಚರಿತ್ರೆ, ಸಂಸ್ಕೃತಿಗಳನ್ನು ಬೆಳಕಿಗೆ ತರುವುದು ಇದೇ ಇವರು ಕಂಡ ದರ್ಶನವಾಗಿತ್ತು. ಇದಕ್ಕಾಗಿ ಇವರು ಸು.30 ವರ್ಷಗಳ ಕಾಲ ಸತತವಾಗಿ ಶ್ರಮಿಸಿದರು.

ವೆಂಕಟರಾಯರು ತಮ್ಮ ಅನಿಸಿಕೆಗಳನ್ನು ಅಭಿಪ್ರಾಯಗಳನ್ನು ಪತ್ರಿಕೆಗಳ ಮೂಲಕ ಜನತೆಗೆ ತಲುಪಿಸಲಾರಂಭಿಸಿದರು. ಅದಕ್ಕಾಗಿ ಇವರು

ಹಲವು ಪತ್ರಿಕೆಗಳನ್ನು ಹುಟ್ಟು ಹಾಕಿದರು. ಜಯಕರ್ನಾಟಕ ಪತ್ರಿಕೆಯನ್ನು 1923ರಲ್ಲಿ ಆರಂಭಿಸಿ 6 ವರ್ಷಗಳ ಕಾಲ ನಡೆಸಿದರು. ಕನ್ನಡಿಗ, ಕರ್ಮವೀರ ಮುಂತಾದ ಪತ್ರಿಕೆಗಳ ಸಂಪಾದನ ಕಾರ್ಯವನ್ನು ಇವರು ಕೆಲವು ಕಾಲ ನಿರ್ವಹಿಸಿದರು.

ವೆಂಕಟರಾಯರು ಶ್ರೀವಿದ್ಯಾರಣ್ಯ ಚರಿತ್ರೆ ಎಂಬ ಪುಸ್ತಕವನ್ನು ಪ್ರಕಟಿಸಿದರು (1907). ಕರ್ನಾಟಕದ ಬಗ್ಗೆ ಹೊಸ ಹೊಸ ವಿಚಾರಗಳನ್ನು ತಿಳಿಯಲು ಇವರು 1907-16ರಲ್ಲಿ ನಾಡಿನ ವಿವಿಧ ಭಾಗಗಳಲ್ಲಿ ಸಂಚರಿಸಿದರು. ಅಣ್ಣಿಗೇರಿ, ಲಕ್ಕುಂಡಿ, ಹಳೇಬೀಡು, ಬೇಲೂರು, ಬಂಕಾಪುರ, ಬಾದಾಮಿ ಮುಂತಾದ ಅನೇಕ ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸಿದ ಇವರು ಶಾಸನಗಳು ಮತ್ತು ತಾಳೆಗರಿ ಗ್ರಂಥಗಳನ್ನು ಸಂಗ್ರಹಿಸಿ, ಅಭ್ಯಾಸ ಮಾಡಿದರು. ಈ ಎಲ್ಲ ಪ್ರಯತ್ನಗಳಿಂದ ಇವರು ಕರ್ನಾಟಕ ಗತವೈಭವದ ಒಂದು ಸ್ಪಷ್ಟ ಚಿತ್ರವನ್ನು ಕಂಡರು. 1914ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ, ಕರ್ನಾಟಕ ಗತವೈಭವ ವಿಷಯ ಕುರಿತು ಇಂಗ್ಲಿಷಿನಲ್ಲಿ ಹಲವು ಉಪನ್ಯಾಸಗಳನ್ನು ಮಾಡಿದರು. ಆ ಉಪನ್ಯಾಸಗಳನ್ನು ಮೆಚ್ಚಿಕೊಂಡ ಅಲ್ಲಿಯ ಕನ್ನಡ ವಿದ್ಯಾರ್ಥಿಗಳು ತಮ್ಮ ಸಂತೋಷದ ಕುರುಹಾಗಿ ವೆಂಕಟರಾಯರಿಗೆ 100 ರೂಪಾಯಿಗಳ ನಿಧಿಯನ್ನು ಅರ್ಪಿಸಿದರು. ಆ ಉಪನ್ಯಾಸಗಳನ್ನು ಅನಂತರ ವೆಂಕಟರಾಯರು ಕನ್ನಡಕ್ಕೆ ಅನುವಾದಿಸಿ 'ಕರ್ನಾಟಕ ಗತವೈಭವ' ಎಂಬ ಹೆಸರಿನಲ್ಲಿ 1917ರಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದರು. ಈ ಗ್ರಂಥದಿಂದ ಕನ್ನಡಿಗರು ಬಹಳಷ್ಟು ಪ್ರಭಾವಿತರಾದರು. ಕಾವ್ಯ, ಸಾಹಿತ್ಯ, ಇತಿಹಾಸ, ರಾಜಕಾರಣ ಉಜ್ವಲ ದೇಶಾಭಿಮಾನದಿಂದ ಕೂಡಿದ ಇದು ಕನ್ನಡಿಗರ ಕೈಪಿಡಿಯಾಯಿತು.

ಕರ್ನಾಟಕ ಇತಿಹಾಸದ ಅಭ್ಯಾಸ, ಪ್ರಚಾರ ಮತ್ತು ಪ್ರಕಟಣೆಗಾಗಿ ವೆಂಕಟರಾಯರು ಕರ್ನಾಟಕ ಇತಿಹಾಸ ಮಂಡಳ ಎಂಬ ಸಂಸ್ಥೆಯನ್ನು 1914ರಲ್ಲಿ ಸ್ಥಾಪಿಸಿ ಅದರ ಮೊದಲ ಅಧ್ಯಕ್ಷರಾದರು. ಆ ಸಂಸ್ಥೆ ಈಗಲೂ ಕೆಲಸಮಾಡುತ್ತಿದೆ.

ವೆಂಕಟರಾಯರ ಸಾಹಿತ್ಯಸೃಷ್ಟಿ ವೈವಿಧ್ಯಮಯವಾದುದು. ಇತಿಹಾಸ, ರಾಜಕಾರಣ, ಸಂಸ್ಕೃತಿ, ಧರ್ಮ, ಕಲೆ ಮುಂತಾದ ಹತ್ತಾರು ವಿಷಯಗಳನ್ನು ಕುರಿತು ಇವರು 25 ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡಿಗರ ಭ್ರಮನಿರಸನ ಎಂಬ ಒಂದು ನಾಟಕವನ್ನು 1913ರಲ್ಲಿ ಬರೆದರು. ಕರ್ನಾಟಕ ವೀರ ರತ್ನಗಳು (1930) ಎಂಬ ಗ್ರಂಥದಲ್ಲಿ ಮಯೂರವರ್ಮ, ಪುಲಿಕೇಶಿ, ಕುಮಾರರಾಮ ಮುಂತಾದ 21 ಜನ ವೀರ ಕನ್ನಡಿಗರ ಆಕರ್ಷಕ ವ್ಯಕ್ತಿಚಿತ್ರಗಳಿವೆ. ಕರ್ನಾಟಕತ್ವದ ಸೂತ್ರಗಳು (1950), ಕರ್ನಾಟಕತ್ವದ ವಿಕಾಸ (1957) - ಇವು ನಾಡಿಗೆ ಸಂಬಂಧಿಸಿದ ಕೃತಿಗಳು. ಸುಖವೂ ಶಾಂತಿಯೂ ಎಂಬ ಗ್ರಂಥ ಎರಡು ಭಾಗಗಳಲ್ಲಿ ಪ್ರಕಟವಾಗಿದೆ. 1920ರಲ್ಲಿ ಸ್ವಾತಂತ್ರ್ಯ ಸಂಗ್ರಾಮ ಎಂಬ ಪುಸ್ತಕವನ್ನು ಪ್ರಕಟಿಸಿದರು. ಟಿಳಕರ ಗೀತಾರಹಸ್ಯವನ್ನು ಅದೇ ಹೆಸರಿನಿಂದ ಕನ್ನಡಕ್ಕೆ ಭಾಷಾಂತರಿಸಿದ್ದಾರೆ; ಇದಕ್ಕಾಗಿ ಇವರು ಭಗವದ್ಗೀತೆಯನ್ನು ವಿಸ್ತಾರವಾಗಿ ಅಭ್ಯಾಸ ಮಾಡಿದರು. ಇದರ ಫಲವೇ ಗೀತಾಪ್ರಕಾಶ (1934), ಗೀತಾ ಪರಿಮಳ (1936), ಗೀತಾಸಂದೇಶ (1936). ಮಧ್ವಮತದ ತತ್ತ್ವಗಳನ್ನು ವ್ಯಾಪಕವಾಗಿ ಅಧ್ಯಯನ ಮಾಡಿದ ವೆಂಕಟರಾಯರು ಆ ಮತದ ತತ್ತ್ವಗಳನ್ನು ಶ್ರೀ ಸಾಮಾನ್ಯರಿಗೆ ಸರಳವಾಗಿ ಹೇಳಬೇಕೆಂಬ ಉದ್ದೇಶದಿಂದ ಮಧ್ವ ಸಿದ್ಧಾಂತ ಪ್ರವೇಶಿಕೆ (1951), ಶ್ರೀಮಧ್ವಾಚಾರ್ಯರ ಮೂಲಸಿದ್ಧಾಂತ, ಶ್ರೀಮಧ್ವಾಚಾರ್ಯರ ಪೂರ್ಣಬ್ರಹ್ಮವಾದ ಮುಂತಾದ ಗ್ರಂಥಗಳನ್ನು ಬರೆದರು. ಇವುಗಳಲ್ಲಿ ಕೊನೆಯ ಗ್ರಂಥವನ್ನು ಇಂಗ್ಲಿಷಿಗೂ ಭಾಷಾಂತರಿಸಿದರು. ತಮ್ಮ ಜೀವನದ ಅನುಭವಗಳನ್ನು ನನ್ನ ಜೀವನಸ್ಮೃತಿಗಳು ಎಂಬ ಹೆಸರಿನಲ್ಲಿ ಎರಡು ಭಾಗಗಳಲ್ಲಿ ಪ್ರಕಟಿಸಿದ್ದಾರೆ.

ವೆಂಕಟರಾಯರು ಗ್ರಂಥಗಳನ್ನು ಬರೆದದ್ದು ಮಾತ್ರವಲ್ಲ, ಗ್ರಂಥ ಪ್ರಕಾಶನಕ್ಕಾಗಿ ಹಲವಾರು ಸಂಸ್ಥೆಗಳನ್ನೂ ಕಟ್ಟಿದರು. ಗ್ರಂಥ ಪ್ರಕಾಶಕರೆಲ್ಲ ಒಂದೆಡೆ ಸೇರಿ, ವಿಚಾರ ವಿನಿಮಯ ನಡೆಸಿ, ಒಳ್ಳೆಯ ಗ್ರಂಥಗಳನ್ನು ಪ್ರಕಟಿಸಲಿ ಎಂಬ ಉದ್ದೇಶದಿಂದ 1907ರಲ್ಲಿ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ವ್ಯವಸ್ಥೆ ಮಾಡಿದ ಇವರು 1908ರಲ್ಲಿ ಕರ್ನಾಟಕ ಗ್ರಂಥ ಪ್ರಕಟಣ ಮಂಡಳಿ ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು.

ಕರ್ನಾಟಕ ಏಕೀಕರಣಕ್ಕಾಗಿ ಬಹುವಾಗಿ ಶ್ರಮಿಸಿದ ವೆಂಕಟರಾಯರು, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿಶ್ವವಿದ್ಯಾಲಯ ಮುಂತಾದ ಸಂಸ್ಥೆಗಳ ಸ್ಥಾಪನೆಗಾಗಿಯೂ ದುಡಿದರು. ಕನ್ನಡ ಭಾಗಗಳೆಲ್ಲ ಒಂದುಗೂಡಬೇಕು, ನಾಡಿಗೆ ಕರ್ನಾಟಕ ಎಂಬ ಹೆಸರಾಗಬೇಕು ಎಂಬ ಹಂಬಲವನ್ನು ಹೊಂದಿದ್ದ ಇವರು 1956ರಲ್ಲಿ ಆದ ರಾಜ್ಯೋದಯವನ್ನು ಕಂಡು ಹರ್ಷಿಸಿದರು. ಆ ಸಂದರ್ಭದಲ್ಲಿ ಹಂಪೆಯಲ್ಲಿ ನಡೆದ ಭುವನೇಶ್ವರಿ ಪೂಜೆಯ ಪೌರೋಹಿತ್ಯವನ್ನು ಇವರು ವಹಿಸಿದರು.

ಆಲೂರ ವೆಂಕಟರಾಯರನ್ನು ಕನ್ನಡಿಗರು ಹಲವು ರೀತಿಯಲ್ಲಿ ಗೌರವಿಸಿ ಅವರ ಸೇವೆಯನ್ನು ಸ್ಮರಿಸಿದ್ದಾರೆ, ಹೈದರಾಬಾದ್ ಕನ್ನಡಿಗರು 1941ರಲ್ಲಿ ವೆಂಕಟರಾಯರಿಗೆ 'ಕರ್ನಾಟಕದ ಕುಲಪುರೋಹಿತ' ಎಂಬ ಬಿರುದನ್ನು ನೀಡಿ ಸನ್ಮಾನಿಸಿದರು. ಬೆಂಗಳೂರು ನಗರಸಭೆ 1961ರಲ್ಲಿ ಇವರನ್ನು ಗೌರವಿಸಿತು. ಅದೇ ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನಿತರಾದರು. ಹೀಗೆ ಬಗೆಬಗೆಯ ಗೌರವಾದರಗಳಿಗೆ ಪಾತ್ರರಾಗಿದ್ದ ವೆಂಕಟರಾಯರನ್ನು 1930ರಲ್ಲಿ ಮೈಸೂರಿನಲ್ಲಿ ನಡೆದ 16ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಯಿತು.

ತಮ್ಮ ಜೀವನದ ಕೊನೆಯವರೆಗೂ ನಾಡುನುಡಿಗಳ ಮೇಲ್ಮೆಯನ್ನೇ ಹಾರೈಸುತ್ತಿದ್ದ ಆಲೂರ ವೆಂಕಟರಾಯರು 1964 ಫೆಬ್ರವರಿ 25ರಂದು ತಮ್ಮ 84ನೆಯ ವಯಸ್ಸಿನಲ್ಲಿ ತೀರಿಕೊಂಡರು. (ಕೆ.ಪಿ.ಬಿ.,ಎಂ.ಎಸ್.ಐ.)

**ಆಲೂರು** : ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ತಾಲ್ಲೂಕಿನ ವಿಸ್ತೀರ್ಣ 442.5ಚಕಿಮೀ. ಜನಸಂಖ್ಯೆ 86131. ಪಾಳ್ಯ, ಆಲೂರು, ಕೆಂಚಮ್ಮನ ಹೊಸಕೋಟೆ ಮತ್ತು ಕುಂದೂರು ಈ ತಾಲ್ಲೂಕಿನ ಹೋಬಳಿಗಳು. 260 ಹಳ್ಳಿಗಳಿವೆ. ಈ ತಾಲ್ಲೂಕು ಪೂರ್ವಕ್ಕೆ ಹಾಸನ, ಉತ್ತರದಲ್ಲಿ ಬೇಲೂರು, ಪಶ್ಚಿಮಕ್ಕೆ ಸಕಲೇಶಪುರ, ದಕ್ಷಿಣದಲ್ಲಿ ಅರಕಲಗೂಡು ತಾಲ್ಲೂಕುಗಳಿಂದಲೂ ಮತ್ತು ದಕ್ಷಿಣದ ಸ್ವಲ್ಪಭಾಗ ಕೊಡಗಿನಿಂದಲೂ ಸುತ್ತುವರೆದಿದೆ.

ಈ ತಾಲ್ಲೂಕಿನ ಮಧ್ಯ ಮತ್ತು ಪಶ್ಚಿಮ ಭಾಗ ಹೆಚ್ಚು ಮಳೆ ಬೀಳುವ ಬೆಟ್ಟ ಗುಡ್ಡಗಳ ಮತ್ತು ಕಾಡುಗಳುಳ್ಳ ದಕ್ಷಿಣ ಮಲೆನಾಡು ಪ್ರದೇಶದಲ್ಲೂ ಪೂರ್ವಭಾಗ ಅರೆಮಲೆನಾಡು ಪ್ರದೇಶದಲ್ಲೂ ಇದೆ. ಇಲ್ಲಿನ ಕಾಡುಗಳಲ್ಲಿ ವಿವಿಧ ಜಾತಿಯ ಮರಗಳನ್ನೂ ಸಾಮಾನ್ಯ ಕಾಡುಪ್ರಾಣಿಗಳನ್ನೂ ಕಾಣಬಹುದು. ಮಲೆನಾಡಿನ ಹವಾಗುಣವಿದ್ದು, ವರ್ಷಕ್ಕೆ ಸರಾಸರಿ 1007.5ಮಿಮೀ ಮಳೆಯಾಗುತ್ತದೆ. ಈ ತಾಲ್ಲೂಕಿನ ಭೂಮಿ ಬೆಣಚುಕಲ್ಲು, ಜಂಬುಮಣ್ಣು ಮತ್ತು ಭಿನ್ನಸ್ತರ ಶಿಲಾಪದರಗಳಿಂದಾದ ಕೆಂಬಣ್ಣ ಮೇಲ್ಮೈಯಿರುವ ಮಣ್ಣಿನಿಂದ ಕೂಡಿದೆ. ವ್ಯವಸಾಯಕ್ಕೆ ಮತ್ತು ಜನೋಪಯೋಗಕ್ಕೆ ಅನುಕೂಲವಿರುವ ಕೆರೆಗಳೂ ಬಾವಿಗಳೂ ಈ ತಾಲ್ಲೂಕಿನಲ್ಲಿವೆ. ಬತ್ತ, ರಾಗಿ, ಕಬ್ಬು, ದ್ವಿದಳ ಧಾನ್ಯಗಳು, ಏಲಕ್ಕಿ ಮತ್ತು ಆಲೂಗೆಡ್ಡೆಯನ್ನು ಬೆಳೆಯುತ್ತಾರೆ. ರಾಜ್ಯ ತೋಟಗಾರಿಕೆ ಇಲಾಖೆಯವರು ಹಣ್ಣಿನ ತೋಟಗಳನ್ನು ಬೆಳೆಸಿ ಅದರ ವಿಸ್ತರಣಾಕಾರ್ಯ ಮುಂದುವರೆಸಿದ್ದಾರೆ. ಈ ತಾಲ್ಲೂಕಿನಿಂದ ಜಿಲ್ಲೆಯ ಎಲ್ಲೆಡೆಗೂ ಉತ್ತಮ ಮಾರ್ಗಗಳಿವೆ.

ಈ ತಾಲ್ಲೂಕಿನ ಬೆಂಡೆಕೆರೆ ಗ್ರಾಮದಲ್ಲಿ ಗೋಪಾಲಕೃಷ್ಣ ಮತ್ತು ರಾಮೇಶ್ವರ ದೇವಾಲಯಗಳಿವೆ. ಕೆಂಚಮ್ಮನ ಹೊಸಕೋಟೆ ಆಲೂರಿಗೆ ನೈಋತ್ಯದಲ್ಲಿ 27ಕಿಮೀ ದೂರದಲ್ಲಿ ಬಲ್ಲೂರು - ಮಡಿಕೇರಿ ಮಾರ್ಗದಲ್ಲಿದೆ. ಇಲ್ಲಿ ಕೆಂಚಾಂಬ ದೇವಾಲಯವಿದೆ. ವರ್ಷದ ವೈಶಾಖ ಮತ್ತು ಕಾರ್ತೀಕ ಪೂರ್ಣಿಮೆಯಂದು ಜಾತ್ರೆಯಾಗುವುದು. ಕಾಫಿ ಮತ್ತು ಏಲಕ್ಕಿ ಬೆಳೆಗೆ ಪ್ರಸಿದ್ಧಿ. 1958ರಲ್ಲಿ ಪ್ರಾರಂಭವಾದ ಒಂದು ಹೆಂಚಿನ ಕಾರ್ಖಾನೆ ಇದೆ. ಮಹಾರಾಜನದುರ್ಗ (ನೋಡಿ) ಪ್ರಸಿದ್ಧ ಕೋಟೆ. ಪಾಳ್ಯ ಆಲೂರಿನ ನೈಋತ್ಯಕ್ಕೆ 8ಕಿಮೀ ದೂರದಲ್ಲಿ ಬೆಂಗಳೂರು-ಮಂಗಳೂರು ಮಾರ್ಗದಲ್ಲಿದೆ. ಈ ಗ್ರಾಮದ ಮುಂಭಾಗದಲ್ಲಿ ಶಂಖತೀರ್ಥ ಮತ್ತು ಚಕ್ರತೀರ್ಥ ಎಂಬ ಎರಡು ತೊರೆಗಳು ಸಂಗಮಿಸಿ ಮುಂದೆ ಇದು ಪದ್ಮಾವತಿ ಎಂಬ ಹೆಸರಿನಿಂದ ಪ್ರವಹಿಸುವುದು. ಸ್ಥಳ ಪುರಾಣದ ಪ್ರಕಾರ ಇಲ್ಲಿ ಮಹರ್ಷಿ ಜಮದಗ್ನಿ ಇದ್ದನಂತೆ. ಇಲ್ಲಿ ಲಕ್ಷ್ಮೀಜನಾರ್ದನ, ತ್ರಿಪುರಾಂತಕೇಶ್ವರ ಮತ್ತು ರಾಮೇಶ್ವರ ದೇವಾಲಯಗಳಿವೆ.

ಆಲೂರು ತಾಲ್ಲೂಕಿನ ಕೇಂದ್ರ. ಜನಸಂಖ್ಯೆ 6133. ಹಾಸನ ಸಕಲೇಶಪುರ ಮಾರ್ಗದಲ್ಲಿ ಹಾಸನದ ಪಶ್ಚಿಮಕ್ಕೆ 13ಕಿಮೀ ದೂರದಲ್ಲಿದೆ. ಇದು ಹಾಸನ ಸಕಲೇಶಪುರ ರೈಲು ಹಾದಿಯ ಒಂದು ನಿಲ್ದಾಣ. ಆಲೂರು ಪುರಸಭಾಡಳಿತಕ್ಕೆ ಸೇರಿದೆ. ಯಗಚಿ ನದಿಯ ನೀರನ್ನು ಕುಡಿಯಲು ಬಳಸಿಕೊಳ್ಳಲಾಗುತ್ತಿದೆ. ಪ್ರೌಢಶಾಲೆ, ಜೂನಿಯರ್ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಅಭಿವೃದ್ಧಿ ಮಂಡಳಿ ಇವೆ. *

**ಆವತಿ :** ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಕಸಬಕ್ಕೆ 8ಕಿಮೀ ಉತ್ತರಕ್ಕೆ ಇರುವ ಗ್ರಾಮ. ಆಹುತಿ ಇದರ ಹಳೆಯ ಹೆಸರು. ಇದು ಆವತಿ ಪಾಳೆಯಗಾರರ ರಾಜಧಾನಿಯಾಗಿತ್ತು (ನೋಡಿ: ಆವತಿ ಪಾಳೆಯಗಾರರು). ಇಲ್ಲಿರುವ ಚನ್ನಕೇಶವ ದೇವಾಲಯ ಅವರ ಕಾಲದ್ದು. ಸತಿಯರೊಡಗೂಡಿರುವ ಸುಮಾರು ಎರಡು ಅಡಿ ಎತ್ತರದ ಈ ಚನ್ನಕೇಶವ ವಿಗ್ರಹ ಏಳು ಕೊಪ್ಪರಿಗೆ ನಿಧಿಯೊಂದಿಗೆ ಪ್ರಭುಗಳಿಗೆ ಸಿಕ್ಕಿತೆಂದೂ ಅನಂತರ ಅವರು ದೇವಾಲಯ ಕಟ್ಟಿ ಆ ವಿಗ್ರಹವನ್ನು ಪ್ರತಿಷ್ಠಾಪಿಸಿದರೆಂದೂ ಹೇಳಲಾಗಿದೆ. ಆವತಿ ಬಳಿಯ ಬೆಟ್ಟದಲ್ಲಿ ಪಾಳೆಯಗಾರರ ಕೋಟೆಯ ಅವಶೇಷಗಳಿವೆ. ಈ ಬೆಟ್ಟದ ತುದಿಯಲ್ಲಿ ಕಾಣಬರುವ ಕೆಲವು ದೊಡ್ಡ ಬಂಡೆಗಳ ಮೇಲೆ ಪ್ರಭುಗಳು ಕರಗದ ದೇವರನ್ನು ಕೂರಿಸುತ್ತಿದ್ದರೆಂದು ಪ್ರತೀತಿ. ಮತ್ತೊಂದು ಬಂಡೆಯ ಮೇಲೆ ವೀರ ಕೆಂಪಮ್ಮನ ಒಂದು ಅಡಿ ಎತ್ತರದ ಶಿಲ್ಪವಿದೆ. ಬೆಟ್ಟದ ಕೆಳಗಿನ ಇಳಿಜಾರಾದ ಬಂಡೆಯ ಬಳಿ ಗುಂಡಿಯಲ್ಲಿ ಸದಾ ನೀರಿದ್ದು ಅದನ್ನು ಕನ್ನಿಕಾಳಮ್ಮನ (ಕನಿಕಲಮ್ಮ) ಬಂಡೆಯೆಂದು ಕರೆಯುತ್ತಾರೆ. ಬರಗಾಲ ಮತ್ತು ಇತರ ಅನಾವೃಷ್ಟಿ ಕಾಲಗಳಲ್ಲಿ ಇಲ್ಲಿ ಪೂಜೆ ನಡೆಯುತ್ತದೆ. ಕನ್ನಿಕಾಳಮ್ಮ ಕುಮಾರಿ ದೇವತೆ. ಆದ್ದರಿಂದ ಕುಮಾರಿಯರು ಮತ್ತು ಗಂಡುಹುಡುಗರು ಮಾತ್ರ ಪೂಜಿಸುವ ಸಂಪ್ರದಾಯವಿದೆ.

ಬೆಟ್ಟದ ಪಶ್ಚಿಮಕ್ಕೆ ಕೋಳಿಗುಡ್ಡ ಎಂಬ ಇನ್ನೊಂದು ಗುಡ್ಡವಿದೆ. ಇಲ್ಲಿ ಆವತಿ ಪ್ರಭುಗಳು ಕೋಳಿ ಸಾಕುತ್ತಿದ್ದರಂತೆ. ಈ ಗುಡ್ಡದ ಮೇಲೆ ಭಕ್ತರ ಗವಿ ಇದೆ. ಈ ಎರಡು ಗುಡ್ಡಗಳ ಮಧ್ಯದ ಕಣಿವೆಯಲ್ಲಿ ಬೃಹತ್ ಶಿಲಾಸಮಾಧಿಗಳು ಬೆಳಕಿಗೆ ಬಂದಿವೆ. ಸಮೀಪದಲ್ಲಿ ಗೌತಮಗಿರಿ ಅಥವಾ ಯಂಬರಹಳ್ಳಿ ತಿಮ್ಮರಾಯಸ್ವಾಮಿ ಬೆಟ್ಟವಿದೆ. ಇದರ ಮೇಲೆ ಶ್ರೀನಿವಾಸ ದೇವಾಲಯವಿದೆ. ದೇವಾಲಯದ ಹೊರಗೋಡೆಗಳ ಮೇಲೆ ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ಶಿಲ್ಪಗಳಿವೆ. ಅಲ್ಲದೆ ಬೆಟ್ಟದ ಮೇಲೆ ಗೌತಮಾಶ್ರಮ, ಶಂಖ, ಚಕ್ರ ಮತ್ತು ಲಕ್ಷ್ಮೀತೀರ್ಥಗಳಿವೆ. ಮೊದಲನೆಯ ತೀರ್ಥದಲ್ಲಿ ತುಳಸಿ ಮತ್ತು ಬಿಲ್ವಪತ್ರೆಯನ್ನು ಹಾಕಿದಾಗ ತುಳಸಿ ಮುಳುಗಿ ಬಿಲ್ವಪತ್ರೆ ತೇಲಿದರೆ, ಎರಡನೆಯ ತೀರ್ಥದಲ್ಲಿ ಅವು ಅನುಕ್ರಮವಾಗಿ ತೇಲಿ ಮುಳುಗುತ್ತವೆಂದು ಪ್ರತೀತಿ.

ಮುಖ್ಯ ಹೋಬಳಿ ಕೇಂದ್ರವಾಗಿರುವ ಆವತಿ ಒಳ್ಳೆಯ ವ್ಯಾಪಾರ ಸ್ಥಳವೂ ಹೌದು. ಆಲೂಗಡ್ಡೆ, ದ್ರಾಕ್ಷಿ, ಹಿಪ್ಪನೇರಿಳೆ ಇವು ಇಲ್ಲಿನ ಮುಖ್ಯ ಬೆಳೆಗಳು. (ಎಚ್.ವಿ.ಎಸ್.)

**ಆವತಿ ಪಾಳೆಯಗಾರರು :** 14-18ನೆಯ ಶತಮಾನಗಳ ಅವಧಿಯಲ್ಲಿ ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಈ ವಂಶದ ಶಾಖೆಗಳವರು ಪಾಳೆಯಪಟ್ಟುಗಳನ್ನು ಸ್ಥಾಪಿಸಿ ಆಳಿದರು.

ಸು.14ನೆಯ ಶತಮಾನದಲ್ಲಿ ಏಳು ಜನ ರೈತರು ತಮ್ಮ ಕುಟುಂಬ ಸಮೇತರಾಗಿ ಕಂಚಿಯ ಹತ್ತಿರದ ಯಣಮಂಜಿ ಪುತ್ತೂರು ಎಂಬ ಸ್ಥಳದಿಂದ (ಆತ್ತೂರು ಎಂಬ ಹೇಳಿಕೆಯೂ ಇದೆ). ನಂದಿದುರ್ಗದ ಪೂರ್ವಕ್ಕಿರುವ ರಾಮಸ್ವಾಮಿ ಬೆಟ್ಟದ ಬಳಿ ಬಂದು ತಂಗಿದರು. ಮೂಲತಃ ತೆಲುಗರಾದ ಇವರು 'ಮೊರಸು ಒಕ್ಕಲು' ಎಂದು ಕರೆಯಲ್ಪಡುತ್ತಿದ್ದರು. ಇವರು ಭೈರವ ದೇವರ ಆರಾಧಕರು. ಇವರ ನಾಯಕ ರಣಭೈರೇಗೌಡ. ಇವನು ತನ್ನ ಏಕಮಾತ್ರ ಪುತ್ರಿ ದೊಡ್ಡಮ್ಮನನ್ನು ದುಷ್ಟ ಪಾಳೆಯಗಾರನೊಬ್ಬನಿಂದ ರಕ್ಷಿಸುವ ಸಲುವಾಗಿ ತನ್ನ ಊರನ್ನು ತ್ಯಜಿಸಿ ದೇವನಹಳ್ಳಿಯ ಉತ್ತರದಲ್ಲಿರುವ ಆಹುತಿ (ಈಗಿನ ಆವತಿ)ಯಲ್ಲಿ ನೆಲಸಿದ. ರಣಭೈರೇಗೌಡನ ಜೊತೆಯಲ್ಲಿ ಮಲ್ಲಭೈರೇಗೌಡ, ಸಣ್ಣಭೈರೇಗೌಡ, ವೀರೇಗೌಡ ಎಂಬ ಅವನ ತಮ್ಮಂದಿರೂ ಜಯಗೌಡ, ಸಣ್ಣಭೈರೇಗೌಡ, ಮಲ್ಲಭೈರೇಗೌಡ ಎಂಬ ಮಕ್ಕಳೂ ಇದ್ದರು. ಸ್ವಲ್ಪ ಕಾಲದಲ್ಲಿಯೇ ಇವರೆಲ್ಲ ಬೇರೆ ಬೇರೆ ಭಾಗಗಳಿಗೆ ಹೋಗಬೇಕೆಂದು ತೀರ್ಮಾನಿಸಿಕೊಂಡರು. ರಣಭೈರೇಗೌಡ ಆವತಿಯಲ್ಲಿಯೇ ನೆಲಸಿದ. ಅವನ ಮಕ್ಕಳು ದೇವನಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಈ ಸ್ಥಳಗಳಲ್ಲಿ ಪಾಳೆಯಪಟ್ಟುಗಳನ್ನು ಸ್ಥಾಪಿಸಿದರು. ಸಣ್ಣಭೈರೇಗೌಡ ಹೊಳವನಹಳ್ಳಿಯಲ್ಲಿ ನೆಲಸಿ ತುಮಕೂರು ಜಿಲ್ಲೆಯ ಕೊರಟಗೆರೆಯನ್ನು ಸ್ಥಾಪಿಸಿದ. ಈ ವಂಶದ ತಿಮ್ಮೇಗೌಡ ಜಂಗಮಕೋಟೆಯ ಹತ್ತಿರದಲ್ಲಿರುವ ಸುಗಟೂರಿಗೆ ಹೋಗಿ ಕೋಲಾರ ಮತ್ತು ಪುಂಗನೂರಿನ ಪಾಳೆಯಗಾರನಾಗಿ ಹೊಸಕೋಟೆಯನ್ನು ಸ್ಥಾಪಿಸಿದ. ಏಳನೆಯವನಾದ ಜಯಗೌಡ ಯಲಹಂಕದಲ್ಲಿ ನೆಲಸಿದ. ಇವನ ವಂಶಸ್ಥರು ಬೆಂಗಳೂರು ಮತ್ತು ಮಾಗಡಿ ಪಾಳೆಯಪಟ್ಟುಗಳನ್ನು ಸ್ಥಾಪಿಸಿದರು, ಅಲ್ಲದೆ ಆವತಿ ಕುಲದ ಇತರ ಶಾಖೆಗಳವರು ಗುಡಿಬಂಡೆ, ಮದ್ದಗಿರಿ, ಮಿಡಿಗೇಶಿ, ಹೆಬ್ಬೂರು, ಕುಣಿಗಲು, ಗುಬ್ಬಿ, ಆನೇಕಲ್ಲು, ನಂದಿ, ಹೊಸಕೋಟೆ, ಮುಳಬಾಗಿಲು, ಸರ್ಜಾಪುರ ಮೊದಲಾದೆಡೆಗಳಲ್ಲೂ ನೆಲಸಿದರು (ಈ ಪಾಳೆಯಪಟ್ಟುಗಳ ವಿಷಯವನ್ನು ಆಯಾ ಶೀರ್ಷಿಕೆಗಳಲ್ಲಿ ಕೊಡಲಾಗಿದೆ). (ಎಚ್.ವಿ.ಎಸ್.)

**ಆವನಿ :** ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನಲ್ಲಿ ಮುಳಬಾಗಿಲಿನಿಂದ ಸು.11ಕಿಮೀ ನೈಋತ್ಯಕ್ಕಿರುವ ಒಂದು ಪುಣ್ಯಕ್ಷೇತ್ರ. ಇದೇ ಹೆಸರಿನ ಹೋಬಳಿಯ ಮುಖ್ಯಸ್ಥಳ. ಗ್ರಾಮದ ಪರಿಸರದಲ್ಲಿಯೂ ಸಮೀಪದ ಬೆಟ್ಟದ ಮೇಲೆಯೂ ಇರುವ ಅನೇಕ ದೇವಾಲಯಗಳು ಮತ್ತು ಶಿಲಾಶಾಸನಗಳು ಇದರ ಪ್ರಾಚೀನ ಪ್ರಾಮುಖ್ಯವನ್ನು ಸಾರುತ್ತವೆ. ಊರಿನ ಪೂರ್ವದ ಹೆಸರು ಆಹವನೀಯ, ಆವನ್ಯ, ಆವಣಿ ಇತ್ಯಾದಿಯಾಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಸ್ಥಳೀಯ ನಂಬಿಕೆಗಳ ಪ್ರಕಾರ ಈ ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶ ಪುರಾಣಪ್ರಸಿದ್ಧವಾದ ಆವಂತಿಕಾ ಕ್ಷೇತ್ರ; ವಾಲ್ಮೀಕಿ ಋಷಿಯ ಆಶ್ರಮವಿದ್ದುದು ಇಲ್ಲಿಯ ಬೆಟ್ಟದಲ್ಲಿಯೇ; ರಾಮ ಲಂಕೆಯನ್ನು ಗೆದ್ದು ಅಯೋಧ್ಯೆಗೆ ಹಿಂತಿರುಗುವ ಹಾದಿಯಲ್ಲಿ ಇಲ್ಲಿಗೆ ಬಂದಿದ್ದನಂತೆ; ಸೀತಾದೇವಿ ಗಂಡನಿಂದ ಕಾಡಿಗೆ ಕಳುಹಿಸಲ್ಪಟ್ಟಾಗ ಇಲ್ಲಿ ಬಂದು ತಂಗಿ ಲವಕುಶರಿಗೆ ಜನ್ಮವಿತ್ತಳೆಂದೂ ಲವಕುಶರು ರಾಮನ ಯಜ್ಞಾಶ್ವವನ್ನು ಕಟ್ಟಿ ರಾಮನೊಡನೆ ಇಲ್ಲಿಯೇ ಯುದ್ಧ ಮಾಡಿದರೆಂದೂ ಐತಿಹ್ಯ. ಈ ಘಟನೆಗಳಿಗೆ ಸಂಬಂಧಪಟ್ಟಂತೆ, ಈ ಸುತ್ತಿನ ಅನೇಕ ತಾಣಗಳು ವಾಲ್ಮೀಕಿಯ ಕುಟೀರ, ಲವಕುಶರ ತೊಟ್ಟಿಲು, ಸೀತೆಯ ಅಡುಗೆಪಾತ್ರೆ, ಅವಳು ಬಟ್ಟೆಯೊಗೆಯುತ್ತಿದ್ದ ಕೊಳ, ಲವಕುಶರು ಯಜ್ಞಾಶ್ವವನ್ನು ಕಟ್ಟಿದ ಬಂಡೆ, ರಾಮಲಕ್ಷ್ಮಣರು ಕುಳಿತಿದ್ದ ಬಂಡೆ ಇತ್ಯಾದಿಯಾಗಿ ಪ್ರಸಿದ್ಧವಾಗಿವೆ.

ರಾಮಲಿಂಗೇಶ್ವರ ದೇವಾಲಯ

ಅತ್ಯಂತ ಪ್ರಾಚೀನ ದೇವಾಲಯಗಳು ಬೆಟ್ಟದ ನೈಋತ್ಯದಲ್ಲಿ ಒಂದು ದೊಡ್ಡ ಪ್ರಾಂಗಣದ ಮಧ್ಯೆ ಇವೆ. ಇವೆಲ್ಲವೂ ಶೈವ ದೇವಾಲಯಗಳು. ಮಧ್ಯದಲ್ಲಿ ಪಾರ್ವತಿ ದೇವಾಲಯವೂ ಅದರ ಸುತ್ತಲೂ ರಾಮೇಶ್ವರ, ಲಕ್ಷ್ಮಣೇಶ್ವರ, ಭರತೇಶ್ವರ, ಶತ್ರುಘ್ನೇಶ್ವರ, ಸುಗ್ರೀವೇಶ್ವರ, ಅಂಜನೇಶ್ವರ ಮುಂತಾದ ಗುಡಿಗಳಿವೆ. ಇವುಗಳಲ್ಲಿ ಲಕ್ಷ್ಮಣೇಶ್ವರ ಗುಡಿ ಅತ್ಯಂತ ಸುಂದರ ಕಟ್ಟಡ. ಗರ್ಭಗೃಹ, ಅಂತರಾಳ ಮತ್ತು ನವರಂಗವಿರುವ

ಈ ಗುಡಿಯ ಹೊರಮೈಯಸುತ್ತಲೂ ಬುಡದಲ್ಲಿ ಆನೆ, ಸಿಂಹ, ಯಾಳಿ, ಮಕರ, ಕುದರೆಲಾಳದಾಕೃತಿಯ ಕಮಾನುಗಳು ಇವುಗಳಿಂದ ಅಲಂಕೃತವಾದ ಆರು ಪಟ್ಟಿಕೆಗಳಿವೆ. ಮೇಲೆ ಅಲ್ಲಲ್ಲಿ ಯಕ್ಷ, ಶಿವ, ದುರ್ಗಿ, ಗಣೇಶ, ಭೈರವ, ಭೈರವಿ, ವಿಷ್ಣು ಮುಂತಾದ ಶಿಲ್ಪಗಳಿರುವ, ಸಮಾನಾಂತರಗಳಲ್ಲಿ ಅರ್ಧಕಂಬಗಳಿಂದ (ಪಿಲ್ಯಾಸ್ಟರ್) ಭೇದಿಸಲ್ಪಟ್ಟ ಎತ್ತರವಾದ ಭಿತ್ತಿಯಿದೆ. ಇದರಲ್ಲಿ ಮಧ್ಯೆ ಮಧ್ಯೆ ಮಹಿಷಾಸುರಮರ್ದಿನಿ, ಸೂರ್ಯ, ನಟರಾಜ ಮುಂತಾದ ವಿಗ್ರಹಗಳನ್ನೊಳಗೊಂಡ ಜಾಲಂಧ್ರಗಳೂ ಇದ್ದು ದೇವಾಲಯದ ಸೊಬಗನ್ನು ಹೆಚ್ಚಿಸಿವೆ. ಒಳಭಾಗದ ನವರಂಗದಲ್ಲಿ ಮಧ್ಯೆ ಉಮಾಮಹೇಶ್ವರ ಮತ್ತು ಸುತ್ತಲೂ ಅಷ್ಟ ದಿಕ್ಪಾಲಕರ ಕೆತ್ತನೆಯಿರುವ ಒಂದು ಮೋಹಕ ಭುವನೇಶ್ವರಿಯಿದೆ. ರಚನಾರೀತಿಯಲ್ಲಿ, ಲಕ್ಷ್ಮಣೇಶ್ವರ ದೇವಾಲಯ ಕಂಚಿಯ ದೇವಾಲಯಗಳ ಸಂಪ್ರದಾಯದಿಂದ ಬೆಳೆದು ಬಂದ ನೊಳಂಬವಾಸ್ತುಶಿಲ್ಪ ಶೈಲಿಯ ಒಂದು ಉತ್ತಮ ಪ್ರತೀಕವಾಗಿದೆ. ವಾಸ್ತು ಶೈಲಿಯಿಂದ ಮತ್ತು ಸ್ಥಳೀಯ ಶಾಸನಗಳ ಸಾಂದರ್ಭಿಕ ಮಾಹಿತಿಗಳಿಂದ ಈ ದೇವಾಲಯ ಹತ್ತನೆಯ ಶತಮಾನದಲ್ಲಿ ಕಟ್ಟಲಾಗಿರಬೇಕೆಂದು ಹೇಳಬಹುದು. ಆದರೆ ದೇವಾಲಯದ ಮೇಲುಭಾಗದಲ್ಲಿರುವ ಗೋಪುರ ಮುಂತಾದ ಇಟ್ಟಿಗೆಯ ಸೇರ್ಪಡೆಗಳು ಬಹುಶಃ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಆದವುಗಳು.

ಶತ್ರುಘ್ನೇಶ್ವರ, ಅಂಜನೇಶ್ವರ ಮತ್ತು ಭರತೇಶ್ವರ ದೇವಾಲಯಗಳೂ ಸುಮಾರು ಲಕ್ಷ್ಮಣೇಶ್ವರದ ಮಾದರಿಯವೇ. ಕಾಲದಲ್ಲೂ ಇವುಗಳಲ್ಲಿ ಬಹಳಷ್ಟು ಅಂತರವಿರಲಾರದೆಂಬುದು ಈ ಕೆಲವು ದೇವಾಲಯಗಳಲ್ಲಿ ಕಂಡುಬಂದಿರುವ ನೊಳಂಬ ಮತ್ತು ಗಂಗರ ಶಾಸನಗಳಿಂದ ಸಿದ್ಧವಾಗುತ್ತದೆ. ಇದೇ ಕಾಲದ ರಾಮೇಶ್ವರ ದೇವಾಲಯದ ದ್ರಾವಿಡ ಶೈಲಿಯ ಮೂಲ ಶಿಖರವನ್ನು ಇನ್ನೂ ಉಳಿಸಿಕೊಂಡಿದೆ. ಈ ದೇವಾಲಯದಲ್ಲಿ ಮೂಲಗರ್ಭಗುಡಿ ಮತ್ತು ನವರಂಗದ ಕೆಲವು ಭಾಗಗಳು ರಚನಾರೀತಿಯಲ್ಲಿ ಇತರ ಸಮಕಾಲೀನ ದೇವಾಲಯಗಳಂತೆಯೇ ಇದ್ದರೂ ಮುಂದೆ 12-13ನೆಯ ಶತಮಾನದ ಕೆಲವು ಸೇರ್ಪಡೆಗಳಿಂದಾಗಿ ಕಟ್ಟಡದ ಅಂದಕ್ಕೆ ಸ್ವಲ್ಪ ಕುಂದುಬಂದಿದೆ. ಮಧ್ಯದಲ್ಲಿರುವ ಪಾರ್ವತಿ ದೇವಾಲಯ ಗರ್ಭಗೃಹ, ನವರಂಗ ಮತ್ತು ಮುಖಮಂಟಪಗಳನ್ನೊಗೊಂಡಿರುವ ಸಾಮಾನ್ಯ ಕಟ್ಟಡ. ಇಲ್ಲಿಯ ವಾಸ್ತು ರಚನೆಯಲ್ಲಾಗಲೀ ಶಿಲ್ಪಗಳಲ್ಲಾಗಲೀ ಈ ಹಿಂದಿನ ದೇವಾಲಯಗಳಲ್ಲಿರುವ ಪ್ರಬುದ್ಧತೆ ಕಂಡುಬರುವುದಿಲ್ಲ. 13ನೆಯ ಶತಮಾನದಲ್ಲಿ ಕೋಲಾರ ಪ್ರದೇಶದಲ್ಲಿ ಆಳುತ್ತಿದ್ದ ತಮಿಳು ಗಂಗ ಅರಸು ಇಳವಂಜಿ ವಾಸುದೇವರಾಯ ಇದನ್ನು ಕಟ್ಟಿಸಿರಬಹುದೆಂದು ಊಹಿಸಲು ಆಧಾರಗಳಿವೆ. ದೇವಾಲಯದ ಒಳಗೆ ಇಳವಂಜಿ ವಾಸುದೇವರಾಯ ಮತ್ತು ಅವನ ತಮ್ಮನದೆಂದು ಹೇಳಲಾಗುವ ಎರಡು ಭಕ್ತವಿಗ್ರಹಗಳಿವೆ. ಈ ದೇವಾಲಯಗಳ ಗುಂಪಿನಲ್ಲೇ ಇರುವ ಕಾಮಾಕ್ಷಿ ಮತ್ತು ಇತರ ಗುಡಿಗಳು ಅನಂತರದ ಕಟ್ಟಡಗಳು.

ಬೆಟ್ಟ ಹತ್ತುವಲ್ಲಿ ಸಿಗುವ ಒಂದು ಗುಹೆಯನ್ನು ವಾಲ್ಮೀಕಿ ಗುಹೆ ಎಂದು ಕರೆಯುತ್ತಾರೆ. ಇದರ ಸಮೀಪದಲ್ಲಿ ಚೋಳ ಸಂಪ್ರದಾಯದ ಒಂದು ದೇವಾಲಯವಿದೆ. ಇಲ್ಲಿಂದ ಅನತಿ ದೂರದಲ್ಲಿರುವ ಏಕಾಂತರಾಮಯ್ಯನ ದೇವಾಲಯ ಸಹ ಚೋಳ ಸಂಪ್ರದಾಯದ ಕಟ್ಟಡ. ಆದರೆ ಇದರ ನವರಂಗ ಭಾಗ ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದುದು. ಬೆಟ್ಟದ ಮೇಲುಗಡೆ ಇರುವ ಸೀತಾಪಾರ್ವತಿ ಗುಡಿ ಹೊರನೋಟಕ್ಕೆ ಈಚಿನ ಬಹುಸಾಮಾನ್ಯ ಕಟ್ಟಡದಂತೆ ಕಂಡರೂ ಒಳಭಾಗ ಪುರಾತನವಾದುದು. ಇದು ನೊಳಂಬ ಅರಸರ ಕಾಲದ (9-10ನೆಯ ಶತಮಾನ) ಗುಹಾ ದೇವಾಲಯವೆಂದು ಕಾಣುತ್ತದೆ. ಆವನಿ ಗ್ರಾಮದಲ್ಲೂ ಬೆಟ್ಟದ ಮೇಲೂ 9-10ನೆಯ ಶತಮಾನದಿಂದ ಹಿಡಿದು ಇತ್ತೀಚಿನ ವರೆಗಿನ ಗಂಗ, ನೊಳಂಬ, ಚೋಳ, ಹೊಯ್ಸಳ, ತಮಿಳುಗಂಗ, ವಿಜಯನಗರ ಮತ್ತು ಪಾಳೆಯಗಾರರ ಆಳ್ವಿಕೆಗೆ ಸಂಬಂಧಿಸಿದ ಐವತ್ತಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿವೆ.

ಆವನಿಯಲ್ಲಿ ಸ್ಮಾರ್ತ ಸಂಪ್ರದಾಯದ ಮಠವೊಂದಿದೆ. ಮಾಘ ಬಹುಳ 14ರಂದು ರಾಮೇಶ್ವರನ ಜಾತ್ರೆ ನಡೆಯುತ್ತದೆ. ಜಾತ್ರೆಯ ಕಾಲದಲ್ಲಿ ದನಗಳ ಪರಿಷೆಯೂ ನಡೆಯುತ್ತದೆ. *

**ಆಸಂದಿ :** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಒಂದು ಗ್ರಾಮ. ಅಜ್ಜಂಪುರದ ಆಗ್ನೇಯಕ್ಕೆ 11ಕಿಮೀ ದೂರದಲ್ಲಿದೆ. ಗಂಗರ ಮತ್ತು ಹೊಯ್ಸಳರ ಕಾಲದಲ್ಲಿ ಇದು ಆಸಂದಿನಾಡು ಎಂಬ ಆಡಳಿತ ಪ್ರಾಂತ್ಯದ ಮುಖ್ಯ ಸ್ಥಳವಾಗಿದ್ದಿತು. ಎಂಟನೆಯ ಶತಮಾನದಲ್ಲಿ ಇದು ಶ್ರೀಪುರುಷನ ಮಗ ವಿಜಯಾದಿತ್ಯನ ಆಳ್ವಿಕೆಗೂ ಹನ್ನೆರಡು, ಹದಿಮೂರನೆಯ ಶತಮಾನಗಳಲ್ಲಿ ಗಂಗವಂಶದ ಒಂದು ಶಾಖೆಯ ಆಡಳಿತಕ್ಕೂ ಒಳಪಟ್ಟಿತ್ತು. ಇಲ್ಲಿನ ಪಾಳು ಬಿದ್ದಿರುವ ದೇವಾಲಯಗಳೂ ದೊರೆತಿರುವ ಶಾಸನಗಳೂ ಇದು ಹಿಂದೆ ಪ್ರಸಿದ್ಧಿಪಡೆದ ಸ್ಥಳವೆಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ. (ಎಸ್.ಎ.ಎಸ್)

1206ರ ಒಂದು ಶಾಸನದಿಂದ ಇಲ್ಲಿ 13 ಶೈವದೇವಾಲಯಗಳಿದ್ದುವೆಂದು ತಿಳಿಯುತ್ತದೆ. ಈಗ ಮೂರು ಮಾತ್ರ ಉಳಿದಿವೆ. ಮುಖ್ಯವಾದ್ದು ಗಂಗೇಶ್ವರ, ಬ್ರಹ್ಮೇಶ್ವರ ದೇವಾಲಯಗಳು. ವಸ್ತುತಃ ಇವೆರಡೂ ಎರಡು ಗುಡಿಗಳಿರುವ ಒಂದೇ ದೇವಾಲಯ. ಇದು ಇಲ್ಲಿ ಆಳುತ್ತಿದ್ದ ಸಾಮಂತ ಗಂಗ ಅರಸನಿಂದ 1191ರಲ್ಲಿ ರಚಿತವಾಯಿತು. ಎರಡು ಗುಡಿಗಳೂ, ಹಿನ್‌ಸರಿತ ಮುನ್‌ಸರಿತಗಳಿಂದ ಕೂಡಿದ ಪರಿಘವಿರುವ ಆಯಾಕಾರದ ತಳವಿನ್ಯಾಸದಲ್ಲಿವೆ. ಗರ್ಭಗುಡಿ, ಅಂತರಾಳ ಮತ್ತು ತೆರೆದ ಮಂಟಪಗಳಿವೆ. ಹೊರಮೈಯಲ್ಲಿ ಅಡ್ಡಪಟ್ಟಿಕೆಗಳ ಅಧಿಷ್ಠಾನ, ಶಿಖರಾಕೃತಿಗಳು, ಸಿಂಹ ಲಲಾಟಗಳನ್ನು ಕೆತ್ತಿರುವ ಅರೆಗಂಬಗಳಿಂದ ಕೂಡಿದ ಭಿತ್ತಿ ಇವೆ. ಶಿಖರಗಳು ಉಳಿದಿಲ್ಲ. ಒಳಕಂಬಗಳು ಹೊಯ್ಸಳ ರೀತಿಯವು. ದ್ವಾರಬಂಧಗಳು ಮತ್ತು ಭುವನೇಶ್ವರಿಗಳಲ್ಲಿ ಸುಂದರವಾದ ಕೆತ್ತನೆಗಳಿವೆ.

ಇಲ್ಲಿನ ವೀರಭದ್ರ ದೇವಾಲಯ 1205ರಲ್ಲಿ ಹರಹ ಸಾಹಣೆ ಎಂಬುವನಿಂದ ರಚಿತವಾದ್ದು. ಶಾಸನಗಳಲ್ಲಿ ದೇವರನ್ನು ಬಲ್ಲೇಶ್ವರ ಎಂದು ಹೆಸರಿಸಲಾಗಿದೆ. ಇದೊಂದು ತ್ರಿಕೂಟಾಚಲ. ಮೂರು ಗರ್ಭಗೃಹಗಳು, ಅಂತರಾಳ, ನವರಂಗ ಮತ್ತು ಮುಖಮಂಟಪವಿರುವ ಕಟ್ಟಡ. ಹೊರಮೈಯಲ್ಲಿ ಶಿಲ್ಪಾಲಂಕರಣಗಳು, ಒಳಗೆ ಹೊಯ್ಸಳ ಮಾದರಿಯ ಕಂಬಗಳು, ಕುಸುರಿ ಕೆತ್ತನೆಯ ಬಾಗಿಲುವಾಡ, ಭುವನೇಶ್ವರಿಗಳು ಇದ್ದು ಇದೊಂದು ಉತ್ತಮ ಹೊಯ್ಸಳ ವಾಸ್ತುಕೃತಿಯ ಉದಾಹರಣೆಯಾಗಿದೆ. ಹೊರಭಿತ್ತಿಯ ಶಿಲ್ಪಗಳಲ್ಲಿ ತಾಂಡವೇಶ್ವರ, ತ್ರಿವಿಕ್ರಮ ಮೊದಲಾದವು ಅನುಪಮ ಸುಂದರ ಕೃತಿಗಳು. ಒಳಗಿರುವ ವೀರಭದ್ರಮೂರ್ತಿ ಇತ್ತೀಚಿನದು. ದೇವಾಲಯದಲ್ಲಿ ಕೆಲವು ಕಂಚಿನ ಮೂರ್ತಿಗಳಿವೆ.

ಇಲ್ಲಿನ ಇನ್ನೊಂದು ದೇವಾಲಯ ಚಂಡಿಕೇಶ್ವರನದು. ಇದೂ ಬಹುಶಃ ಹೊಯ್ಸಳ ಕಾಲದ್ದಾದರೂ ಹೆಚ್ಚಿನ ಅಲಂಕರಣಗಳಿಲ್ಲದ ಸಾಮಾನ್ಯ ಕಟ್ಟಡ. *

**ಆಸಫ್‌ಜಾಹೀ ಆಳ್ವಿಕೆ :** 1724-1948. ಹೈದರಾಬಾದನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಆಸಫ್‌ಜಾಹೀ ರಾಜವಂಶದವರು ಉತ್ತರ ಕರ್ನಾಟಕದ ಪೂರ್ವಾರ್ಧದ ಭಾಗದ ಮೇಲೆ ಎರಡು ಶತಮಾನಗಳಿಗೂ ಹೆಚ್ಚುಕಾಲ ಒಡೆತನ ಹೊಂದಿದ್ದರು. ಈ ವಂಶದ ಸ್ಥಾಪಕನಿಗೆ ಆಸಫ್‌ಜಾ ಎಂದು ಬಿರುದಿದ್ದುದರಿಂದ ಇವನ ಮನೆತನ ಆಸಫ್‌ಜಾಹೀ ಎಂದೇ ಪ್ರಸಿದ್ಧವಾಯಿತು. ಈ ವಂಶದವರು ನಿಜಾಮ್-ಉಲ್-ಮುಲ್ಕ್ ಎಂಬ ಬಿರುದನ್ನೂ ಉಪಯೋಗಿಸುತ್ತಿದ್ದುದರಿಂದ ಇವರಿಗೆ ಹೈದರಾಬಾದಿನ ನಿಜಾಮರು ಎಂಬ ಹೆಸರೂ ಪ್ರಚಲಿತವಾಗಿದೆ. ಕನ್ನಡನಾಡಿನ ಆಸಫ್‌ಜಾಹೀಗಳ ನೇರ ಕಾಣಿಕೆ ಹೆಚ್ಚಿಲ್ಲದಿದ್ದರೂ 18ನೆಯ ಶತಮಾನದ ಕರ್ನಾಟಕದ ರಾಜಕೀಯದಲ್ಲಿ ಇವರು ಗಣನೀಯ ಪಾತ್ರವಹಿಸಿದ್ದರು. ಬಹುಕಾಲ ಇವರ ಆಳ್ವಿಕೆಗೆ ಒಳಪಟ್ಟಿದ್ದ ರಾಯಚೂರು, ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳಲ್ಲಿ (ಹೈದರಾಬಾದು ಕರ್ನಾಟಕ) ವಿಶಿಷ್ಟರೀತಿಯ ಆಡಳಿತ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸ್ಥಿತಿ ಮೂಡಲು ಕಾರಣರಾದರು.

**ರಾಜಕೀಯ ಇತಿಹಾಸ:** 1686ರಲ್ಲಿ ಬಿಜಾಪುರದ ಆದಿಲ್‌ಶಾಹೀಗಳ ಆಳ್ವಿಕೆ ಕೊನೆಗೊಂಡು ಅವರ ವಶದಲ್ಲಿದ್ದ ಕರ್ನಾಟಕದ ಭಾಗವೆಲ್ಲ ಮಗಲರ ಕೈಸೇರಿತು. ಮುಗಲರು ರೂಢಿಗೆ ತಂದ ರಾಜ್ಯವ್ಯವಸ್ಥೆಯಲ್ಲಿ ರಾಜ್ಯ ಹಲವು ಸುಬಾಗಳಾಗಿ (ಪ್ರಾಂತ್ಯ) ವಿಭಾಗಿತವಾಗಿರುತ್ತಿತ್ತು. ಪ್ರತಿಯೊಂದು ಸುಬಾಕ್ಕೂ ಒಬ್ಬ ಸುಬೇದಾರ (ಪ್ರಾಂತ್ಯಾಧಿಕಾರಿ) ಮುಖ್ಯಸ್ಥನಾಗಿರುತ್ತಿದ್ದ. ಮುಗಲರ ವಶವಾದ ಕರ್ನಾಟಕದ ಭಾಗ ದಖನ್

ಸುಬಾಕ್ಕೆ ಸೇರಿತ್ತು. ಔರಂಗಜೇಬನ ಮರಣಾನಂತರ ಮುಗಲ ಸಾಮ್ರಾಜ್ಯದಲ್ಲಿ ಉದಯಿಸಿದ್ದ ಅಸ್ತವ್ಯಸ್ತ ಪರಿಸ್ಥಿತಿಯ ಲಾಭ ಪಡೆದು ದಖನ್‌ನ ಸುಬೇದಾರನಾಗಿ ಹೈದರಾಬಾದಿನಲ್ಲಿದ್ದ ಮೀರ್ ಕಮ್ರುದ್ದೀನ್ ಚಿನ್ ಕುಲಿಕ್ ಖಾನ್ ಆಸಫ್ ಜಾ ಎಂಬುವನು 1724ರಲ್ಲಿ ಸ್ವಾತಂತ್ರ್ಯ ಸಾರಿಕೊಂಡು ಈ ಭಾಗದಲ್ಲಿ ತನ್ನ ಮನೆತನದ ಆಳ್ವಿಕೆಯನ್ನು ಪ್ರಾರಂಭಿಸಿದ.

ಮೊದಲನೆಯ ಆಸಫ್ ಜಾ (1724-48) ಚತುರ ರಾಜಕಾರಣಿ, ಸಮರ್ಥ ಸೇನಾನಾಯಕ. ಇವನ ರಾಜ್ಯ ಒಂದು ಕಾಲದಲ್ಲಿ ಒರಿಸ್ಸಾದಿಂದ ಹಿಡಿದು ತಂಜಾವೂರಿನವರೆಗಿನ ಇಡೀ ಕಡಲತೀರ ಹಾಗೂ ಗುಲ್ಬರ್ಗ, ಬಿದರೆ, ಬಿಜಾಪುರ, ಧಾರವಾಡ, ರಾಯಚೂರು ಜಿಲ್ಲೆಗಳ ಪ್ರದೇಶಗಳನ್ನೂ ಒಳಗೊಂಡಿತ್ತು. ಇವನ ಕಾಲದಲ್ಲಿ ಉತ್ತರ ಕರ್ನಾಟಕದ ಪಶ್ಚಿಮ ಭಾಗದಲ್ಲಿ ಮರಾಠರು ಪ್ರಬಲಿಸಿದ್ದರು. ಆದರೆ ಪೂರ್ವದಲ್ಲಿ ತುಂಗಭದ್ರಾನದಿಯ ಉತ್ತರ ಭಾಗವೆಲ್ಲ ಇವನ ವಶದಲ್ಲಿದ್ದುದಲ್ಲದೆ ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾನದಿಯ ಉತ್ತರಕ್ಕಿದ್ದ ಪ್ರದೇಶವೂ ಇವನಿಗೆ ಸೇರಿತ್ತು. ಆ ಭಾಗಕ್ಕೆ ನಾಸಿರ್‌ಜಂಗ್‌ನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ್ದ. ಅನಂತರ ಈತ ದಂಗೆಯೆದ್ದುದರಿಂದ ಆ ಭಾಗಕ್ಕೆ ಮುಜಫರ್‌ಜಂಗ್ ಅಧಿಕಾರಿಯಾದ. ಕೃಷ್ಣಾನದಿಯ ದಕ್ಷಿಣಕ್ಕಿದ್ದ ಬಿಜಾಪುರ ಜಿಲ್ಲೆಯ ಭಾಗಗಳು ಮತ್ತು ಧಾರವಾಡ ಜಿಲ್ಲೆಯ ಬಹುತೇಕ ಪ್ರದೇಶವನ್ನು ಸವಣೂರು ನವಾಬರು ಆಸಫ್‌ಜಾನ ಅಧೀನರಾಗಿ ಆಳುತ್ತಿದ್ದರು. 1746ರ ಸುಮಾರಿನಲ್ಲಿ ಆದ ಒಪ್ಪಂದದ ಪ್ರಕಾರ ಬಾದಾಮಿ ಮತ್ತು ಬಾಗಲಕೋಟೆಯ ಭಾಗಗಳನ್ನು ನಿಜಾಮ ಮರಾಠರಿಗೆ ಒಪ್ಪಿಸಿದ. ಆದರೆ ಉತ್ತರ ಕರ್ನಾಟಕದ ಬಹುಭಾಗದಲ್ಲಿ ಸ್ಥಳೀಯ ಆಡಳಿತಗಾರರು, ಮರಾಠರು ಹಾಗೂ ನಿಜಾಮ ಎಲ್ಲರೂ ಸಮಯ ಬಂದಂತೆ ತೆರಿಗೆಗಳನ್ನು ವಸೂಲಿಮಾಡುವ ವಿಚಿತ್ರ ಪರಿಸ್ಥಿತಿಯಿತ್ತು. *

1748ರಲ್ಲಿ ಮೊದಲನೆಯ ಆಸಫ್ ಜಾ ನಿಧನನಾದಾಗ ಇವನ ಎರಡನೆಯ ಮಗ ನಾಸಿರ್‌ಜಂಗ್‌ನಿಗೂ ಮಗಳ ಮಗ ಮುಜಫರ್ ಜಂಗ್‌ನಿಗೂ ಅಧಿಕಾರಕ್ಕಾಗಿ ಕಚ್ಚಾಟ ನಡೆಯಿತು. ಫ್ರೆಂಚರೂ ಬ್ರಿಟಿಷರೂ ಇವರ ಪಕ್ಷಗಳನ್ನು ವಹಿಸಿದರು. ಫ್ರೆಂಚರು ಬೆಂಬಲಿಸಿದ ಮುಜಫರ್‌ಜಂಗ್ ನಿಜಾಮನಾದ. ಆದರೆ 1751ರಲ್ಲಿ ಕೊಲೆಯಾದ. ಅನಂತರ ನಾಸಿರ್‌ಜಂಗ್‌ನ ತಮ್ಮ ಸಲಾಬತ್‌ಖಾನ್ ನಿಜಾಮನಾದ. ಇವನ ಕಾಲದಲ್ಲಿ ರಾಜ್ಯದಲ್ಲಿ ಫ್ರೆಂಚರ ಪ್ರಾಬಲ್ಯ ಹೆಚ್ಚಿತು. ಇದೇ ಕಾರಣದಿಂದ ಇಂಗ್ಲಿಷರೊಡನೆಯೂ ಯುದ್ಧಗಳನ್ನು ಮಾಡಬೇಕಾಯಿತು. ಜನವರಿ 1755ರಲ್ಲಿ ಬುಸ್ಸಿಯ ನೆರವಿನಿಂದ ಈತ ಮೈಸೂರಿಗೆ ದಂಡೆತ್ತಿಬಂದು ನಂಜರಾಜನಿಂದ 52 ಲಕ್ಷ ರೂಪಾಯಿಗಳಷ್ಟು ಅಪಾರ ಹಣವನ್ನು ಪರಿಹಾರವಾಗಿ ಪಡೆದುಕೊಂಡ. ಒಂದೇ ಸಮನೆ ದೂರದ ಯುದ್ಧಗಳಲ್ಲಿ ನಿರತನಾಗಿದ್ದ ಸಂದರ್ಭವನ್ನು ಉಪಯೋಗಿಸಿ ಸವಣೂರು ನವಾಬರು ಸ್ವತಂತ್ರರಾದರು. 1759ರ ಸುಮಾರಿನಲ್ಲಿ ಸಲಾಬತ್‌ನ ಸೈನಿಕರಲ್ಲೇ ಅತೃಪ್ತಿಮೂಡಿತು. ಆಗ ಬಿಜಾಪುರದ ಜಮೀನ್ದಾರರಿಂದ ಹಣ ಸೆಳೆದು ಸೈನಿಕರನ್ನು ನಿಭಾಯಿಸುವ ಪ್ರಯತ್ನ ನಡೆಯಿತು. ಪೇಶ್ವೆ ಬಾಲಾಜಿ ಈ ಸಂದರ್ಭದಲ್ಲಿ ಸಲಾಬತ್ ಜಂಗನನ್ನು ಸೋಲಿಸಿ ಹುನಗುಂದ ಭಾಗವನ್ನು ಬಿಟ್ಟು ಬಿಜಾಪುರ ಜಿಲ್ಲೆಯ ಮಿಕ್ಕೆಲ್ಲಾ ಪ್ರದೇಶವನ್ನೂ ವಶಪಡಿಸಿಕೊಂಡ. ಆ ಹೊತ್ತಿಗೆ ಇಂಗ್ಲಿಷರ ನೆರವು ಪಡೆದಿದ್ದ ಸಲಾಬತನ ತಮ್ಮ ನಿಜಾಮ್ ಅಲಿ ಖಾನ್ ಪ್ರಬಲನಾಗಿದ್ದ. ಆದ್ದರಿಂದ ಸಲಾಬತ್ ಅವನೊಡನೆ ಒಪ್ಪಂದ ಮಾಡಿಕೊಂಡು ಅವನನ್ನು ಪ್ರಧಾನಿಯಾಗಿ ನೇಮಿಸಿದ. ಇವನು 1761ರಲ್ಲಿ ತನ್ನ ಸಹೋದರನನ್ನು ಕೊಲೆಮಾಡಿ ತಾನೇ ನಿಜಾಮನಾದ (1761-1803). ಹೈದರನ ರಾಜಕೀಯ ಪ್ರಾಬಲ್ಯ ಬೆಳೆಯುತ್ತಿದ್ದುದನ್ನು ಸಹಿಸದ ನಿಜಾಮ್ ಅಲಿ ಕರ್ನಾಟಕದತ್ತ ಹೆಚ್ಚು ಗಮನ ಹರಿಸಿದ. ಹೈದರನಿಗೆ ಮೈಸೂರು ರಾಜಕೀಯದಲ್ಲಿ ಸ್ವತಂತ್ರನಾಗಿ ವರ್ತಿಸಲು ಅಧಿಕಾರವಿಲ್ಲವೆಂಬುದು ನಿಜಾಮನ ವಾದ. ತಾನು ದಖನ್ನಿನ ಮುಗಲ ರಾಜಪ್ರತಿನಿಧಿಯಾದ ಕಾರಣ ಹೈದರ್ ತನ್ನ ಸಾಮಂತನಾಗಿರಬೇಕೆಂಬುದು ಅವನ ನಿರೀಕ್ಷೆಯಾಗಿತ್ತು. ಆದರೆ ಹೈದರನನ್ನು ಅಂಥ ಸ್ಥಾನಕ್ಕೆ ಇಳಿಸುವಷ್ಟು ಶಕ್ತನಾಗಿರಲಿಲ್ಲ, ಆದ್ದರಿಂದ ತಾನು ನಿಜಾಮಪದವಿಗೆ ಬಂದ ಕಾಲದಿಂದ (1761) ಟಿಪ್ಪುಸುಲ್ತಾನನ ಮರಣದವರೆಗೆ (1799) ಮೈಸೂರಿನ ಬಗ್ಗೆ ನಿರಂತರ ಹಗೆತನ ಸಾಧಿಸುವುದು ಅವನ ನೀತಿಯಾಯಿತು. ತನ್ನ ಸೇಡಿನ ಸಾಧನೆಗೆ ಇಂಗ್ಲಿಷರು ಇಲ್ಲವೆ ಮರಾಠರು ಮೈಸೂರಿನ ಮೇಲೆ ಮಾಡಿದ ಯುದ್ಧಗಳಲ್ಲಿ ತಾನೂ ಅವಕಾಶ ಪಡೆದುಕೊಂಡ. ಆದರೆ ಹೈದರ್‌ಅಲಿ ಮತ್ತು ಟಿಪ್ಪು ಅವನ ಬಗ್ಗೆ ಜಾಗರೂಕತೆಯಿಂದ ವರ್ತಿಸಿ, ಅವನೊಂದಿಗೆ ಹೊಂದಿಕೊಳ್ಳುವ ನೀತಿಯನ್ನು ಅನುಸರಿಸಿದರು. ಅವನ ಮೇಲೆ ಯುದ್ಧ ಮಾಡುವ ಬಗ್ಗೆ ಅವರು ಇತರ ಬಲಯುತ ಪಕ್ಷಗಳಿಗೆ ಬೆಂಬಲ ನೀಡಲಿಲ್ಲ. 1761ರಲ್ಲಿ ನಿಜಾಮನ ಸಹೋದರ ಸಲಾಬತ್ ಜಂಗ್ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬಂದು ಶಿರಾ ಪ್ರಾಂತ್ಯವನ್ನು ಆಕ್ರಮಿಸಿಕೊಳ್ಳುವಲ್ಲಿ ವಿಫಲನಾದಾಗ ಹೈದರ್ ಅವನಿಗೆ ಅಪಮಾನ ಮಾಡದೆ, ಅವನಿಗೆ 3 ಲಕ್ಷ ರೂಪಾಯಿ ಒಪ್ಪಿಸಿ ಅವನಿಂದ ಶಿರಾ ನವಾಬಗಿರಿ ತನ್ನ ಹೆಸರಿಗೆ ಬರುವಂತೆ ಪ್ರಯತ್ನಿಸಿದರೂ ಮೈಸೂರು ರಾಜ್ಯ ಸ್ವತಂತ್ರವಾಗಿರುವುದನ್ನು ನಿಜಾಮ ಸಹಿಸಲಿಲ್ಲ.

1765ರಲ್ಲಿ ಮುಗಲ ಸಾಮ್ರಾಟನ ಫರ್ಮಾನ್ (ಸನ್ನದು) ಮೂಲಕ ಇಂಗ್ಲಿಷರು ಉತ್ತರ ಸರ್ಕಾರ್ ಪ್ರದೇಶಗಳನ್ನು ಗಳಿಸಿದಾಗ ನಿಜಾಮ ಉದ್ರಿಕ್ತನಾಗಿ, ಇಂಗ್ಲಿಷರನ್ನು ಮಟ್ಟಹಾಕಲು ಹೈದರನೊಂದಿಗೆ ಸೇರಿಕೊಳ್ಳಲು ಬಯಸಿದ. ಈ ಉದ್ದೇಶಕ್ಕಾಗಿ ಅವನು ಕರ್ನಾಟಿಕ್‌ನ (ಆರ್ಕಾಟಿನ) ನವಾಬ ಮಹಮ್ಮದಾಲಿಯ ಸಹೋದರ ಮಹಾಫಿಜ್ ಖಾನನನ್ನು ಹೈದರನ ಬಳಿ ಕಳುಹಿಸಿ, ಮದರಾಸು ಸರ್ಕಾರದ ವಿರುದ್ಧ ಹೈದರನ ನೆರವನ್ನು ಬಯಸಿದ ಹಾಗೂ ಹೈದರನಿಗೆ ಕರ್ನಾಟಿಕ್ ಪ್ರದೇಶದ ಬಗ್ಗೆ ಸನ್ನದುಗಳನ್ನು ನೀಡುವುದಾಗಿ ಸಹ ತಿಳಿಸಿದ. ನಿಜಾಮ ಮತ್ತು ಹೈದರ್ ನಡುವಣ ಮೈತ್ರಿಯಿಂದ ಸಂಭವಿಸಬಹುದಾದ ಅಪಾಯವನ್ನು ಗ್ರಹಿಸಿದ ಇಂಗ್ಲಿಷರು ನಿಜಾಮನಿಗೆ ಆಗಿದ್ದ ನಷ್ಟಕ್ಕೆ ಪರಿಹಾರವಾಗಿ ಕರ್ನಾಟಕ ಪ್ರದೇಶದ ಭಾಗಗಳನ್ನು ಗೆದ್ದುಕೊಡುವುದಾಗಿ ಭರವಸೆ ನೀಡಿದರು. ನಿಜಾಮ ಕೂಡಲೆ ಇಂಗ್ಲಿಷರ ಸಲಹೆಗೆ ಒಪ್ಪಿದ. ಅದಕ್ಕೆ ಮತ್ತೊಂದು ಕಾರಣವೂ ಇತ್ತು. ಮರಾಠರ ಪೇಶ್ವೆ ಮಾಧವರಾವ್ ಮೈಸೂರು ರಾಜ್ಯದ ಮೇಲೆ ದಾಳಿ ನಡೆಸಲು ನಿರ್ಧರಿಸಿದ್ದ; ತನ್ನ ರಾಜ್ಯವನ್ನು ವಿಸ್ತರಿಸಿಕೊಳ್ಳಲು ಈ ಅವಕಾಶವನ್ನು ಕಳೆದುಕೊಳ್ಳಲು ನಿಜಾಮನಿಗೆ ಇಷ್ಟವಿರಲಿಲ್ಲ. ಹೈದರ್ ಈ ಮಧ್ಯೆ ಹೈದರಾಬಾದಿನ ಅಂಚಿನ ಕಡಪ ಪ್ರದೇಶದ ಒಂದಿಷ್ಟು ಭಾಗವನ್ನು ಆಕ್ರಮಿಸಿಕೊಂಡಿದ್ದ. ಈ ಕಾರಣಗಳಿಂದ ಹೈದರನ ವಿರುದ್ಧ 1766ರಲ್ಲಿ ನಿಜಾಮ, ಮರಾಠರು ಹಾಗೂ ಇಂಗ್ಲಿಷರ ನಡುವೆ ಬಲಯುತವಾದ ಒಕ್ಕೂಟವೇರ್ಪಟ್ಟಿತು. ಯುದ್ಧ ಪ್ರಾರಂಭವಾದಾಗ ಮೈಸೂರಿನತ್ತ ನಿಜಾಮ ತನ್ನ ಸೈನ್ಯಗಳನ್ನು ತರಲು ತಡವಾಯಿತು. ಅಷ್ಟರಲ್ಲಿ ಹೈದರ್ ನಿಜಾಮನನ್ನು ಒಲಿಸಿಕೊಂಡ. ಕ್ಷಣಮಾತ್ರದಲ್ಲಿ ಆಕ್ರಮಣಕಾರನಾಗಿ ಬಂದ ನಿಜಾಮ ಮಿತ್ರನಾದ. ಆದರೆ ಮುಂದೆ ಒಂದೆರಡು ಯುದ್ಧಗಳಲ್ಲಿ ಅವನು ಇಂಗ್ಲಿಷರಿಗೆ ಸೋತು ಅವರೊಡನೆ ಒಪ್ಪಂದಮಾಡಿಕೊಂಡು ಹೈದರಾಬಾದಿಗೆ ಹಿಂತಿರುಗಿದ. ಇಂಗ್ಲಿಷರ ಮೇಲೆ ಸಾಮೂಹಿಕ ದಾಳಿ ನಡೆಸಬೇಕೆಂದು ಹೈದರ್, ಮರಾಠರು ಮತ್ತು ನಿಜಾಮ ಪ್ರಮಾಣ ವಚನದೊಂದಿಗೆ ಮಾಡಿಕೊಂಡ ಒಪ್ಪಂದವನ್ನೂ ನಿಜಾಮ ಉಲ್ಲಂಘಿಸಿದ.

ಹೈದರನ ಮರಣಾನಂತರ ಟಿಪ್ಪು ಅಧಿಕಾರಕ್ಕೆ ಬಂದಾಗ ಸಹ ಮೈಸೂರಿನೊಂದಿಗೆ ನಿಜಾಮನ ಸಂಬಂಧ ಉತ್ತಮಗೊಳ್ಳಲಿಲ್ಲ. ಹೈದರನ ವಿರುದ್ಧ ನಿಜಾಮ ಒಂದೇ ಯುದ್ಧಮಾಡಿದ್ದ; ಆ ಯುದ್ಧ ಸಹ ಅರ್ಧಮನಸ್ಸಿನಿಂದ ಮಾಡಿದ್ದಾಗಿತ್ತು. ಟಿಪ್ಪುವಿನ ಕಾಲದಲ್ಲಿ ನಿಜಾಮನ ನಿಲುವು ಪೂರ್ಣವಾಗಿ ಮಾರ್ಪಟ್ಟಿತ್ತು. 1785ರಿಂದ 1799ರ ವರೆಗೆ ನಿಜಾಮ ಟಿಪ್ಪುವಿನ ವಿರುದ್ಧ ಮೂರು ಬಾರಿ ಯುದ್ಧಮಾಡಿದ. ಟಿಪ್ಪುವಿನ ಪತನವಾದದ್ದು (1799) ವಾಸ್ತವಿಕವಾಗಿ ನಿಜಾಮ ಇಂಗ್ಲಿಷರ ಪಕ್ಷ ಸೇರಿದ ಕಾರಣದಿಂದ. ಮರಾಠರಾಗಲಿ, ಇಂಗ್ಲಿಷರಾಗಲಿ ಕರ್ನಾಟಕದ ಮೇಲೆ ಆಸೆಯ ನೋಟವನ್ನು ಬೀರಿದಾಗ, ತನ್ನ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಲು ನಿಜಾಮ ಅವರಿಗೆ ಸ್ನೇಹ ಹಸ್ತವನ್ನು ನೀಡುತ್ತಿದ್ದ. 1786ರಲ್ಲಿ ನಿಜಾಮ ಮತ್ತು ನಾನಾಸಾಹೇಬ ಒಟ್ಟುಗೂಡಿ ಮೈಸೂರಿನ ಮೇಲೆ ಯುದ್ಧಸಾರಿದರು. ಯುದ್ಧ ಒಂದು ವರ್ಷಕಾಲ (1786-87) ನಡೆದು ಗಜೇಂದ್ರಗಡದ ಕೌಲಿನಿಂದ ಕೊನೆಗೊಂಡಿತು. ಈ ಯುದ್ಧದಲ್ಲಿ ಟಿಪ್ಪು ಜಯ ಹೊಂದಿದರೂ ಇಂಗ್ಲಿಷರ ವಿರುದ್ಧ ಭಾರತದ ಇತರ ರಾಷ್ಟ್ರಗಳ ನೆರವನ್ನು ಪಡೆದುಕೊಳ್ಳುವ ತನ್ನ ನೀತಿಯನ್ನನುಸರಿಸಿ, ಅವನು ತನ್ನ ಗಡಿಯ ಸಮೀಪದ ಕೆಲವು ಸಣ್ಣಪುಟ್ಟ ಕೋಟೆಗಳನ್ನು ಕೊಟ್ಟು ಮರಾಠರನ್ನು ಮತ್ತು ನಿಜಾಮನನ್ನು ಸಮಾಧಾನಗೊಳಿಸಿದ. ಆದರೆ ಹಿಂದೆ ಹೈದರಾಬಾದಿಗೆ ಸೇರಿದ್ದ

ಪ್ರದೇಶಗಳನ್ನು ಗೆದ್ದುಕೊಡುವ ಹೊಣೆಹೊತ್ತು ತಮ್ಮೊಂದಿಗೆ ಕೂಡುವಂತೆ ನಿಜಾಮನಿಗೆ 1787ರಿಂದಲೂ ಇಂಗ್ಲಿಷರು ಆಸೆ ತೋರಿಸುತ್ತಿದ್ದರು. ಟಿಪ್ಪು ಸಹ ನಿಜಾಮನನ್ನು ತನ್ನ ಕಡೆ ಸೆಳೆಯಲು ಪ್ರಯತ್ನಿಸಿದ. ಗುಂಟೂರು ಭಾಗವನ್ನು ಕೊಡಬೇಕೆಂದು ಕಾರ್ನ್‌ವಾಲಿಸ್ ನಿಜಾಮನನ್ನು ಒತ್ತಾಯ ಮಾಡಿದಾಗ ಇಂಗ್ಲಿಷರಿಗೂ ನಿಜಾಮನಿಗೂ ಇದ್ದ ಸಾಮರಸ್ಯ ತಪ್ಪಿತು. ಸ್ವಲ್ಪಕಾಲ ಟಿಪ್ಪುವಿಗೂ ನಿಜಾಮನಿಗೂ ನಡುವೆ ಎಂದೂ ಇಲ್ಲದ ಸಹೃದಯತೆ ಮೂಡಿತು. 1786ರ ಯುದ್ಧದಲ್ಲಿ ಧಾರಾಳ ಷರತ್ತುಗಳ ಮೇಲೆ ಟಿಪ್ಪು ಮಾಡಿಕೊಂಡ ಒಪ್ಪಂದ ನಿಜಾಮ ಟಿಪ್ಪುವಿನೊಡನೆ ಸೇರಿಕೊಳ್ಳಲು ಉತ್ತೇಜಕವಾಯಿತು. ಆಗಸ್ಟ್ 1787ರಲ್ಲಿ ನಿಜಾಮನ ಆಸ್ಥಾನಿಕರಾದ ಇಂತಿಯಾಜ್-ಉದ್-ದೌಲ ಹಾಗೂ ಷಮ್ಸ್-ಉಲ್-ಉಮ್ರ ಟಿಪ್ಪುವಿನೊಡನೆ ಸಂಬಂಧ ಬೆಳೆಸಲು ನಿಜಾಮನಿಗಿದ್ದ ಇಷ್ಟವನ್ನು ಟಿಪ್ಪುವಿಗೆ ತಿಳಿಸಿದರು. ಟಿಪ್ಪು ಒಪ್ಪಿದ ಕಾರಣ ಹಾಫಿಜ್-ಫರೀದ್-ಉದ್-ದೀನ್ ಮತ್ತು ಬಹಾದ್ದೂರ್ ಖಾನ್ ಎಂಬಿಬ್ಬರು ರಾಯಭಾರಿಗಳು ಹೈದರಾಬಾದಿನಿಂದ ಶ್ರೀರಂಗಪಟ್ಟಣಕ್ಕೆ ಬಂದರು (ನವೆಂಬರ್ 1787). ನಿಜಾಮನನ್ನು ತಾನೇ ಕಂಡು ಪರಸ್ಪರ ಮೈತ್ರಿಯ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ನಿರ್ಧರಿಸಬೇಕೆಂದು ಟಿಪ್ಪು ಕಾತರನಾಗಿದ್ದ. ತನ್ನ ಮೈತ್ರಿ ಬಲವಾದ ತಳಹದಿಯ ಮೇಲಿರಬೇಕೆಂದು ನಿಜಾಮನ ಮಗಳನ್ನು ತನ್ನ ಮಗನಿಗೆ ತಂದುಕೊಳ್ಳಲು ಸಹ ಅಪೇಕ್ಷಿಸಿದ. ಆದರೆ ನಿಜಾಮ ಈ ವಿವಾಹದ ಬಗ್ಗೆ ಅಷ್ಟು ಆಸಕ್ತನಾಗಿರಲಿಲ್ಲ. ಅಲ್ಲದೆ, ಅವನ ಆಸ್ಥಾನದಲ್ಲಿ ಇಂಗ್ಲಿಷರ ಬೆಂಬಲ ಪಡೆದುಕೊಳ್ಳಬೇಕೆಂಬ ಪಕ್ಷವೇ ಬಲವಾಗಿತ್ತು. ಈ ಸಂದರ್ಭದಲ್ಲಿ ಟಿಪ್ಪುವಿನ ವಿರುದ್ಧ ಭಾರತದ ರಾಜ್ಯಗಳನ್ನು ಸಂಘಟಿಸಲು ಕಾರ್ನ್‌ವಾಲಿಸ್ ತೀವ್ರ ಕಾರ್ಯಾಚರಣೆಗಳನ್ನು ಕೈಗೊಂಡಿದ್ದ. ಆದ್ದರಿಂದ ಟಿಪ್ಪುವಿಗೆ ನಿಜಾಮನ ಉತ್ತರ ಅಸ್ಪಷ್ಟವಾಗಿತ್ತು ಹಾಗೂ ಸಂಬಂಧಕಲ್ಪನೆಯ ಬಗ್ಗೆ ನಡೆಸಿದ ವ್ಯವಹಾರ ಹಠಾತ್ತನೆ ನಿಂತುಹೋಯಿತು.

ಕಾರ್ನ್‌ವಾಲಿಸ್ ಹೈದರಾಬಾದಿನ ಭಾಗವಾದ ಗುಂಟೂರನ್ನು ಆಕ್ರಮಿಸಿಕೊಂಡಾಗ ನಿಜಾಮ ಟಿಪ್ಪುವಿನೊಡನೆ ಮತ್ತೆ ಬಾಂಧವ್ಯ ಬೆಳೆಸುವ ಬಗ್ಗೆ ಮಾತುಕತೆ ಮುಂದುವರಿಸಲು ನವೆಂಬರ್ 1788ರಲ್ಲಿ ಹಾಫಿಜ್ ಫರೀದ್-ಉದ್-ದೀನ್ ಹಾಗೂ ರಾಮಚಂದ್ರ ಇವರಿಬ್ಬರನ್ನು ಟಿಪ್ಪುವಿನ ಬಳಿ ಅಟ್ಟಿದ. ಆಗ ಟಿಪ್ಪು ಕೊಯಮತ್ತೂರಿನ ಬಳಿ ಬಿಡಾರ ಹಾಕಿದ್ದ. ಟಿಪ್ಪುವಿನ ಉತ್ತರ ಮತ್ತೆ ಆಹ್ವಾನಾರ್ಹವಾಗಿತ್ತು. ಅವನು ಮತ್ತೆ ವಿವಾಹ ಸಂಬಂಧವನ್ನು ಬಯಸಿ ಹೈದರಾಬಾದಿನ ವಕೀಲರೊಂದಿಗೆ ಸಮಾಲೋಚನೆ ನಡೆಸಿದ. ಈ ಸಮಾಲೋಚನೆಯಲ್ಲಿ ಮರಾಠರ ಪ್ರತಿನಿಧಿ ಶಿವಾಜಿರಾವ್ ಸಹ ಹಾಜರಿದ್ದ. ರಾಜಕೀಯ ಮೈತ್ರಿ ಹಾಗೂ ವಿವಾಹ ಸಂಬಂಧವನ್ನು ನಿರ್ಧರಿಸಿಕೊಂಡು ಬರಲು ಟಿಪ್ಪು ತನ್ನ ವಕೀಲನಾದ ಕುತ್ಬುದ್ದೀನ್ ಖಾನ್ ಮತ್ತು ಅಲಿ ರಾಜ ಇವರನ್ನು ಹೈದರಾಬಾದಿಗೆ ಕಳುಹಿಸಿದ. ಈ ಪ್ರಯತ್ನ ಸಹ ವಿಫಲವಾಯಿತು. ಈ ಹೊತ್ತಿಗೆ ಇಂಗ್ಲಿಷರ ಕುತಂತ್ರ ಬಲವಾಗಿ ಬೇರೂರಿತ್ತು. ಮೈಸೂರಿನ ಬಹುಭಾಗವನ್ನು ಗೆದ್ದುಕೊಳ್ಳಲು ಇದ್ದ ಅವಕಾಶಗಳನ್ನು ತಿಳಿಸಿ ಕಾರ್ನ್‌ವಾಲಿಸ್ ನಿಜಾಮನ ಮನಸ್ಸನ್ನು ಸೆಳೆದುಕೊಂಡ. ಟಿಪ್ಪುವಿನ ರಾಯಭಾರಿಗಳು ನಿಜಾಮನ ಸಂಶಯಕ್ಕೊಳಗಾಗಿ ಹೈದರಾಬಾದಿನಲ್ಲಿ ಸೆರೆಯಾದರು. ಟಿಪ್ಪು ಕೇವಲ ಫೌಜಿನ ನಾಯಕ್ ಹುದ್ದೆಯಲ್ಲಿದ್ದವರ ಪೀಳಿಗೆಯವನು ಅವನೊಂದಿಗೆ ವಿವಾಹಸಂಬಂಧ ಬೆಳೆಸುವುದು ನಿಜಾಮನ ಮನೆತನಕ್ಕೆ ಅಪಮಾನ, ಘನತೆಗೆ ಕುಂದು, ಎಂದು ನಿಜಾಮ ವಿವಾಹದ ವಿಷಯವನ್ನು ತಳ್ಳಿಹಾಕಿದ. ನಿಜಾಮ ಮೂರನೆಯ ಮೈಸೂರು ಯುದ್ಧದಲ್ಲಿ ಇಂಗ್ಲಿಷರೊಡನೆ ಸೇರಿಕೊಳ್ಳಲು ನಿರ್ಧರಿಸಿದ. ಟಿಪ್ಪುವಿನ ಮೇಲೆ ದಾಳಿ ನಡೆಸುವ ಬಗ್ಗೆ ನಡೆದ ಒಪ್ಪಂದದಲ್ಲಿ ಇಂಗ್ಲಿಷರು ಹಾಗೂ ಮರಾಠರೊಡನೆ ಸೇರಿಕೊಂಡ. ಈ ಯುದ್ಧದಲ್ಲಿ ಟಿಪ್ಪು ಸೋತು ಅವನ ರಾಜ್ಯದಲ್ಲಿ ಅರ್ಧಭಾಗ ದಾಳಿಕಾರರ ಪಾಲಾಯಿತು. ಅದರಲ್ಲಿ ಕೃಷ್ಣಾನದಿಯಿಂದ ಪೆನ್ನಾರ್ ನದಿಯವರೆಗಿನ ವಿಶಾಲ ಪ್ರದೇಶ ನಿಜಾಮನಿಗೆ ಸೇರಿತು. ಅದರಿಂದ ನಿಜಾಮನ ಆಸೆ ಮುಗಿಲಿಗೇರಿ 1799ರಲ್ಲಿ ನಡೆದ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಸಹ ಅವನು ಮತ್ತೆ ಇಂಗ್ಲಿಷರ ಪಕ್ಷವನ್ನು ಸೇರಿದ. ಈ ಯುದ್ಧದಲ್ಲಿ ಟಿಪ್ಪು ಮೃತನಾದ (4 ಮೇ 1799). ನಿಜಾಮನಿಗೆ ಯುದ್ಧದ ಫಲವಾಗಿ ಗುತ್ತಿ, ಗುರ್ರಮಕೊಂಡ ಹಾಗೂ ಚಿತ್ರದುರ್ಗ ಕೋಟೆಯ ವಿನಾ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳು ಸೇರಿದವು. ಯುದ್ಧ ದೃಷ್ಟಿಯಿಂದ ಉಪಯುಕ್ತವಾಗಿದ್ದ ಇಂಥ ಸ್ಥಳಗಳನ್ನು ಕಳೆದುಕೊಳ್ಳಲು ಇಂಗ್ಲಿಷರು ಸಿದ್ಧರಾಗಿರಲಿಲ್ಲ. 1792ರಲ್ಲಿ ಹಾಗೂ 1799ರ ಯುದ್ಧಗಳಲ್ಲಿ ಕೊಟ್ಟಿದ್ದ ಈ ಪ್ರದೇಶಗಳನ್ನು ಒಪ್ಪಿಸುವಂತೆ ನಿಜಾಮನನ್ನು ಅವರು ಒತ್ತಾಯ ಪಡಿಸಿದರು (1800). ಈ ಮಧ್ಯದಲ್ಲಿ ಬಿಜಾಪುರದ ಹುನಗುಂದ ಭಾಗವನ್ನು ನಿಜಾಮ ಮರಾಠರಿಗೆ ಒಪ್ಪಿಸಿದ್ದ. ಅಂದರೆ ಕರ್ನಾಟಕದಲ್ಲಿ ಮುಂದೆ ಹೈದರಾಬಾದು ಕರ್ನಾಟಕದ ಜಿಲ್ಲೆಗಳೆಂದು ಪ್ರಸಿದ್ಧವಾದ ಪ್ರದೇಶವಷ್ಟೇ ನಿಜಾಮನ ವಶದಲ್ಲಿ ಉಳಿಯಿತು.

1803ರಲ್ಲಿ ನಿಜಾಮ್ ಅಲಿ ಖಾನ್ ಮೃತನಾಗಿ ಅವನ ಮಗ ಸಿಕಂದರ್ ಜಾ (1803-29) ಹೈದರಾಬಾದಿನ ಗದ್ದುಗೆಯನ್ನೇರಿದ. ಈ ಕಾಲದಲ್ಲಿ ಬ್ರಿಟಿಷರ ಕೈಮೇಲಾಗಿ ಹಲವು ಪ್ರದೇಶಗಳನ್ನು ಅವರಿಗೊಪ್ಪಿಸಬೇಕಾಯಿತು. ವಿಷಯಾಕಾಂಕ್ಷಿಯಾದ ಈತ ಆಡಳಿತಕ್ಕೆ ಹೆಚ್ಚು ಗಮನವೀಯಲಿಲ್ಲ. ರಾಜ ಚಂದುಲಾಲ್ ಈ ಕಾಲದಲ್ಲಿ ದಿವಾನನಾಗಿದ್ದ. ಆಡಳಿತ ಸಾಕಷ್ಟು ಕೆಟ್ಟಿತ್ತು. (ಬಿ.ಎಸ್.ಎ.)

ಅವನ ತರುವಾಯ ನಿಜಾಮ್ ಪದವಿಗೆ ಬಂದ ನಾಸಿರುದ್ದೌಲ (1829-57) ಇಂಗ್ಲಿಷರಿಗೆ ನಿಷ್ಠಾವಂತನಾಗಿದ್ದ. ಅವರು ಒದಗಿಸಿದ್ದ ಸೈನ್ಯಸಹಾಯದ ಖರ್ಚಿಗಾಗಿ ರಾಯಚೂರು ಪ್ರದೇಶವನ್ನು ಅವರಿಗೆ ಒಪ್ಪಿಸಿದ. ಇಂಗ್ಲಿಷರ ಆದೇಶದಂತೆ ಚಂದುಲಾಲನನ್ನು ದಿವಾನಗಿರಿಯಿಂದ ತೆಗೆದ. 1843ರಲ್ಲಿ ಸರ್ ಸಾಲಾರ್ ಜಂಗ್ ದಿವಾನನಾದ. ಬ್ರಿಟಿಷರು ಹಿಂದಿನಿಂದ ನಿಜಾಮರ ಸ್ನೇಹಿತರಾಗಿದ್ದಾರೆ, ಎಂದೆಂದಿಗೂ ಅವರಿಗೆ ಕೃತಜ್ಞತೆಯಿಂದ ನಡೆದುಕೊಳ್ಳಬೇಕು ಎಂದು ನಾಸಿರುದ್ದೌಲ ಸಾಯುವಾಗ ತನ್ನ ಮಗ ಅಫ್ಜಲುದ್ದೌಲನಿಗೆ ಹೇಳಿದ್ದನಂತೆ. ತಂದೆಯ ಮರಣಾನಂತರ ಪಟ್ಟಕ್ಕೆ ಬಂದ ಅಫ್ಜಲುದ್ದೌಲ (1857-69) ಪಿತೃವಾಕ್ಯವನ್ನು ಪೂರ್ಣವಾಗಿ ಪಾಲಿಸಿದ. 1857-58ರಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದೆದುರು ಬ್ರಿಟಿಷರು ತಲ್ಲಣಿಸುತ್ತಿದ್ದಾಗಲೂ ನಿಜಾಮ ಮತ್ತು ಅವನ ಪ್ರಧಾನಿ ಸಾಲಾರ್ ಜಂಗ್ ಅವರಿಗೆ ಬೆಂಬಲವಾಗಿ ನಿಂತಿದ್ದರು. ಈ ಉಪಕಾರಕ್ಕಾಗಿ ಬ್ರಿಟಿಷ್ ಸರ್ಕಾರ ಇವನೊಡನೆ ಹೊಸ ಒಪ್ಪಂದವೊಂದನ್ನು ಮಾಡಿಕೊಂಡು ನಿಜಾಮರಿಂದ ತೆಗೆದುಕೊಂಡಿದ್ದ ಉಸ್ಮಾನಾಬಾದ್ ಮತ್ತು ರಾಯಚೂರು ಪ್ರದೇಶವನ್ನು ಹಿಂತಿರುಗಿಸಿತು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಿದರೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳು ಅಂದಿನಿಂದ ನಿಜಾಮನ ಆಳ್ವಿಕೆಯಲ್ಲೇ ಉಳಿದವು. ಸುರಪುರದ ದಂಗೆ ಈ ಕಾಲದಲ್ಲಿ ನಡೆದ ಮುಖ್ಯ ಘಟನೆ (ನೋಡಿ: ಸ್ವಾತಂತ್ರ್ಯ ಸಂಗ್ರಾಮ, ವೆಂಕಟಪ್ಪನಾಯಕ). ಅಫ್ಜಲುದ್ದೌಲ 1869ರಲ್ಲಿ ಮೃತನಾದ.

ಅನಂತರದ ನಿಜಾಮ ಮೀರ್ ಮಹಬೂಬ್ ಅಲಿ ಖಾನ್ (1869-1911) ಪಟ್ಟಕ್ಕೆ ಬಂದಾಗ ಈತ ಇನ್ನೂ ಮೂರುವರ್ಷದ ಬಾಲಕನಾಗಿದ್ದರಿಂದ ಸರ್ ಸಾಲಾರ್‌ಜಂಗ್ 1 ಮತ್ತು ನವಾಬ್ ಶಮ್ಸುಲಾ ಉಮ್ರಾ ಇವರು ಆಡಳಿತಗಾರರಾಗಿ ನಿಯಮಿತರಾಗಿದ್ದರು. ಆಡಳಿತದಲ್ಲಿ ಬ್ರಿಟಿಷ್ ರೆಸಿಡೆಂಟನ ಸಲಹೆಯನ್ನು ತೆಗೆದುಕೊಳ್ಳಲಾಗುತ್ತಿತ್ತು. ಈ ವ್ಯವಸ್ಥೆ 1884ರ ವರೆಗೂ ಮುಂದುವರಿದು, ಆ ವರ್ಷ ನಿಜಾಮರೇ ಆಡಳಿತ ವಹಿಸಿಕೊಂಡರು. ಇವರ ಕಾಲದಲ್ಲಿ ಆಡಳಿತದಲ್ಲಿ ಹಲವು ಬದಲಾವಣೆಗಳಾದವು. 1893ರಲ್ಲಿ ಒಂದು ಮಂತ್ರಿಮಂಡಲ ಮತ್ತು ನ್ಯಾಯಾಂಗ ಸಭೆ ವ್ಯವಸ್ಥಿತವಾಯಿತು. ಅಧಿಕಾರಿಗಳಲ್ಲದವರೂ ರಾಜ್ಯದ ಆಗು ಹೋಗುಗಳಲ್ಲಿ ಧ್ವನಿಗೂಡಿಸುವ ಅವಕಾಶ ಉಂಟಾಯಿತು.

ಮಹಬೂಬ್ ಅಲಿ ಖಾನ್‌ರ ಮರಣಾನಂತರ (1911) ಅವರ ಮಗ ಮೀರ್ ಉಸ್ಮಾನ್ ಅಲಿ ಖಾನ್ ನಿಜಾಮರಾದರು (1911-48). ಪ್ರಧಾನಿ ಸಾಲಾರ್‌ಜಂಗ್ III 1914ರಲ್ಲಿ ರಾಜೀನಾಮೆಯಿತ್ತಾಗ ಆಡಳಿತವನ್ನು ನಿಜಾಮರೇ ನೇರವಾಗಿ ನಿರ್ವಹಿಸತೊಡಗಿದರು. ಪ್ರಥಮ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷರಿಗೆ ಧನ-ಸೈನ್ಯ ಸಹಾಯವನ್ನು ನೀಡಿದರು. ಹೈದರಾಬಾದು ಸಂಸ್ಥಾನದ ಸಿಬ್ಬಂದಿಯನ್ನು ಪೂರ್ಣವಾಗಿ ಭಾರತೀಕರಣ ಮಾಡಿದ್ದು ಇವರ ಸಾಧನೆ. ಎಲ್ಲಾ ಹುದ್ದೆಗಳಲ್ಲೂ ಭಾರತೀಯರೇ ಅದರಲ್ಲೂ ಹೆಚ್ಚು ಮಟ್ಟಿಗೆ ಹೈದರಾಬಾದಿನವರೇ ನಿರ್ವಹಿಸುವ ವ್ಯವಸ್ಥೆಮಾಡಿದರು. ಮುಂದಿನ ದಿನಗಳಲ್ಲಿ ಭಾರತ ಸ್ವಾತಂತ್ರ್ಯ ಚಳವಳಿ ಹೈದರಾಬಾದು ಸಂಸ್ಥಾನದಲ್ಲಿ ಹರಡಿತು. ಆದರೆ ಅದನ್ನು ವ್ಯಗ್ರದೃಷ್ಟಿಯಿಂದ ನೋಡುವುದು ಅಂದಿನ ರಾಜನೀತಿಯಾಗಿತ್ತು.

1947ರಲ್ಲಿ ಭಾರತ ಸ್ವತಂತ್ರವಾದಾಗ ಇತರ ರಾಜ್ಯಗಳನ್ನು ಅನುಸರಿಸಿ ಭಾರತ ಒಕ್ಕೂಟಕ್ಕೆ ಸೇರದೆ ನಿಜಾಮರು 27-8-1947ರಂದು ಹೈದರಾಬಾದನ್ನು ಸ್ವತಂತ್ರ ರಾಷ್ಟ್ರವೆಂದು ಸಾರಿದರು. ಸ್ವಾತಂತ್ರ್ಯ ಸಂಗ್ರಾಮದ ಬಿರುಸು ಮತ್ತಷ್ಟು ಏರಿತು. ಈ ಮಧ್ಯದಲ್ಲಿ ರಜಾಕರರ ಸಂಸ್ಥೆಯೂ ತಲೆಯೆತ್ತಿ ಜನರನ್ನು ಕ್ರೂರವಾಗಿ ನಡೆಸಿಕೊಳ್ಳಲಾರಂಭಿಸಿತು. ಕೊಲೆ, ಸುಲಿಗೆಗಳು ಅವರ ಕಾರ್ಯಾಚರಣೆಯ ಭಾಗವಾಗಿದ್ದುವು. ಅದಕ್ಕೆ ವಿರುದ್ಧವಾಗಿ ಜನಗಳೂ ಸಂಘಟಿತರಾಗತೊಡಗಿ ರಾಜ್ಯದಲ್ಲಿ ಕರಾಳ ವಾತಾವರಣ ಒದಗಿಬಂತು. ರಜಾಕರರ ಸಂಸ್ಥೆಯನ್ನು ಬಹಿಷ್ಕರಿಸಬೇಕೆಂದು ಅನೇಕರು ಪ್ರಾರ್ಥಿಸಿದರೂ ನಿಜಾಮರು ಕ್ರಮ ಕೈಗೊಳ್ಳಲಿಲ್ಲ. ಭಾರತ ಸರ್ಕಾರದವರು ನಿಜಾಮರೊಡನೆ ಸಂಧಾನ ನಡೆಸಿದರೂ ಸಫಲವಾಗಲಿಲ್ಲ. ನಿಜಾಮರು ಭಾರತ ಸರ್ಕಾರದ ವಿರುದ್ಧ ಕತ್ತಿ ಮಸೆಯುತ್ತಿದ್ದುದು 1948ರ ಆದಿಭಾಗದ ಹೊತ್ತಿಗೇ ಸ್ಪಷ್ಟವಾಯಿತು. ಕೊನೆಗೆ 13-9-48ರಲ್ಲಿ ಭಾರತ ಸರ್ಕಾರ ನಿಜಾಮರ ದುರಾಡಳಿತದ ವಿರುದ್ಧ ಪೊಲೀಸ್ ಕಾರ್ಯಾಚರಣೆ ಆರಂಭಮಾಡಿತು. ನಿಜಾಮರು ಮೊದಲು ವಿರೋಧಿಸಿದರು. ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿದರು. ಆದರೆ ಬೆಂಬಲ ಸಿಕ್ಕಲಿಲ್ಲ. ಕೊನೆಗೆ ಭಾರತ ಸರ್ಕಾರದೊಡನೆ ಒಪ್ಪಂದಕ್ಕೆ ಒಡಂಬಟ್ಟರು. ಆಸಫ್‌ಜಾಹೀ ರಾಜತ್ವ ಕೊನೆಗೊಂಡಿತು. 18-9-48ರಂದು ಭಾರತ ಒಕ್ಕೂಟಕ್ಕೆ ಸೇರಿದ ಹೈದರಾಬಾದು ರಾಜ್ಯ ಉದಯವಾಯಿತು.

*

**ಆಡಳಿತ ವ್ಯವಸ್ಥೆ :** ಆಸಫ್‌ಜಾಹೀ ಆಡಳಿತ ಮುಗಲ್ ಪದ್ಧತಿಯಲ್ಲಿ ರೂಢಿತವಾದ್ದು, ಹೈದರಾಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಖನ್ನಿನಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸಿದಾಗ ಈ ಸಂತತಿಯವರಿಗೆ ಸರ್ಕಾರ ವ್ಯವಸ್ಥೆ ಹಾಗೂ ಆಡಳಿತ ನಿರ್ವಹಣೆಯಲ್ಲಿ ಒಳ್ಳೆಯ ಶಿಕ್ಷಣವಿತ್ತು. 1ನೆಯ ಆಸಫ್‌ಜಾ ತನ್ನ ಮನೆತನಕ್ಕೆ ಬಿಟ್ಟುಹೋದ ಶಾಸನ ಅವರ ಸರ್ಕಾರ ರಚನೆ ಮತ್ತು ನೀತಿಯನ್ನು ಸೂಚಿಸುತ್ತದೆ. ಅವರ ಆಡಳಿತ ವ್ಯವಸ್ಥೆ ಕಂದಾಯ, ಪೊಲೀಸು, ನ್ಯಾಯ ಮತ್ತು ಇತರ ಸಂಕೀರ್ಣ ಇಲಾಖೆಗಳು ಎಂದು ನಾಲ್ಕು ಸಾದರ್-ಉಲ್ ಮಹಾಮ್‌ಗಳಾಗಿ ವಿಭಾಗಿತವಾಗಿದ್ದುವು. ಒಬ್ಬ ವಜೀರನ (ಮಂತ್ರಿಯ) ನಿರ್ದೇಶನದಲ್ಲಿ ಅವುಗಳು ಕಾರ್ಯನಿರ್ವಹಿಸುತ್ತಿದ್ದುವು. ಇಡೀ ರಾಜ್ಯ ನಾಲ್ಕು ಸುಬಾ (ಪ್ರಾಂತ್ಯ) ಗಳಾಗಿ ವಿಭಜಿತವಾಗಿದ್ದಿತು. ನಿಜಾಮರ ಆಳ್ವಿಕೆಗೆ ಒಳಪಟ್ಟ ಕರ್ನಾಟಕದ ಭಾಗವು ಮರಾಠವಾಡ ಸುಬಾ ಎಂಬ ಎರಡನೆಯ ಸುಬೆಗೆ ಸೇರಿತ್ತು, ನಿಜಾಮರು ಕೆಲವು ಆಡಳಿತ ಸಂಸ್ಥೆಗಳನ್ನು ಸ್ಥಾಪಿಸಿದರಲ್ಲದೆ ಹಳೆಯ ಆಡಳಿತ ರೀತಿಗಳನ್ನೂ ಉಳಿಸಿಕೊಂಡರು. 1892ರಲ್ಲಿ ಕಾನೂನ್ ಚ-ಇ-ಮುಬಾರಕ್ (ಪವಿತ್ರ ಕಾಯಿದೆ) ಜಾರಿಗೆ ಬಂತು. ಅದು ಆಡಳಿತವರ್ಗಕ್ಕೆ ಕೈಪಿಡಿ; ಅದರಿಂದ ವಿವಿಧ ಇಲಾಖೆಗಳ ಕಾರ್ಯಾಚರಣೆಗಳಲ್ಲಿ ಕೆಲವು ಬದಲಾವಣೆಗಳಾದವು. ಮರಾಠವಾಡ ಸುಬೆಯಲ್ಲಿದ ಗುಲ್ಬರ್ಗ ವಿಭಾಗದಲ್ಲಿ ಗುಲ್ಬರ್ಗ, ರಾಯಚೂರು, ಲಿಂಗಸುಗೂರು ಮತ್ತು ಉಸ್ಮಾನಾಬಾದ್- ಈ ನಾಲ್ಕು ಜಿಲ್ಲೆಗಳಿದ್ದುವು. ತರುವಾಯ ಲಿಂಗಸುಗೂರು ಜಿಲ್ಲೆಯನ್ನು ವಿಭಜಿಸಿ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಸೇರಿಸಲಾಯಿತು. ಬಿದರೆ ಜಿಲ್ಲೆಯನ್ನು ಗುಲ್ಬರ್ಗ ವಿಭಾಗಕ್ಕೆ ಸೇರಿಸಲಾಯಿತು. ಪ್ರತಿ ವಿಭಾಗ ಒಬ್ಬ ಸುಬೇದಾರನ (ಕಮಿಷನರ್) ಅಧೀನದಲ್ಲಿತ್ತು. ಪ್ರತಿ ಜಿಲ್ಲೆ ಒಬ್ಬ ಜೇಷ್ಠ ತಾಲ್ಲೂಕುದಾರನ (ಕಲೆಕ್ಟರನ) ಆಡಳಿತದಲ್ಲಿತ್ತು. ದ್ವಿತೀಯ ಅಥವಾ ತೃತೀಯ ತಾಲ್ಲೂಕುದಾರರೆಂಬ ಹೆಸರಿನ ಇಬ್ಬರು ಅಥವಾ ಹೆಚ್ಚು ಅಧಿಕಾರಿಗಳು ಜೇಷ್ಠ ತಾಲ್ಲೂಕುದಾರನ ಸಹಾಯಕರಾಗಿರುತ್ತಿದ್ದರು. ಪ್ರತಿ ತಾಲ್ಲೂಕಿಗೆ (ತಹಸೀಲ್) ಒಬ್ಬ ತಹಸೀಲ್‌ದಾರ ಮುಖ್ಯಸ್ಥನಾಗಿರುತ್ತಿದ್ದ. ತಾಲ್ಲೂಕಿನ ಕಂದಾಯ ಹಾಗೂ ನ್ಯಾಯಾಡಳಿತ ಅವನಿಗೆ ಸೇರಿತ್ತು. ಒಬ್ಬ ಪೇಷ್ಕಾರ್ (ಸಹಾಯಕ) ಮತ್ತು ಗಿರ್ದಾವಾರ್ (ರೆವೆನ್ಯೂ ಇನ್ಸ್‌ಪೆಕ್ಟರ್) ಈ ಕೆಲಸಗಳಲ್ಲಿ ಅವನಿಗೆ ನೆರವು ನೀಡುತ್ತಿದ್ದರು. ಪಾಟೀಲ ಗ್ರಾಮದ ಪ್ರಮುಖ. ಗ್ರಾಮಲೆಕ್ಕಿಗನ ಹೆಸರು ಪಟವಾರಿ, ಕರ್ಣಂ ಅಥವಾ ಕುಲಕರ್ಣಿ, ಪಾಟೀಲರಲ್ಲಿ ರೆವಿನ್ಯೂ ಪಾಟೀಲ (ಮಾಲಿ ಪಾಟೀಲ), ಪೊಲೀಸು ಪಾಟೀಲ ಎಂಬ ಎರಡು ವರ್ಗ. 1870ರ ವರೆಗೆ ಪಾಟೀಲರಿಗೂ ಪಟವಾರಿಗಳಿಗೂ ಅವರ ಸೇವೆಗಾಗಿ ಇನಾಂ ಗ್ರಾಮಗಳನ್ನು ಕೊಡಲಾಗಿತ್ತು. ಆ ತರುವಾಯ ಸರ್ಕಾರ ಅವರ ಇನಾಂಗಳನ್ನು ಹಿಂದಕ್ಕೆ ಪಡೆದುಕೊಂಡು ಅದಕ್ಕೆ ಪ್ರತಿಯಾಗಿ ಅವರಿಗೆ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತಂದಿತು, ತಹಸೀಲ್ದಾರ್, ಮುನ್ಸೀಫ್, ನಾಜಿಮಾ-ಇ-ಸುಬಾ- ಇವರು ವಿವಿಧ ಹಂತಗಳಲ್ಲಿ ನ್ಯಾಯಾಡಳಿತವನ್ನು ನಿರ್ವಹಿಸುತ್ತಿದ್ದರು. ಎಲ್ಲಕ್ಕೂ ಮೇಲೆ ಉಚ್ಚ ನ್ಯಾಯಾಲಯವಿತ್ತು. ತಾಲ್ಲೂಕು ಹಂತದಿಂದ ರಾಜ್ಯದ ಪ್ರಮುಖ ಹಂತದವರೆಗೆ ಪ್ರತಿಯೊಂದು ನ್ಯಾಯಾಲಯವೂ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಿತ್ತು.

**ಆರ್ಥಿಕ ಸಾಮಾಜಿಕ ಸ್ಥಿತಿ :** ನಿಜಾಮರ ಆಳ್ವಿಕೆಗೆ ಗುಲ್ಬರ್ಗ ವಿಭಾಗದ ಆರ್ಥಿಕ ಪರಿಸ್ಥಿತಿ ಅವರ ರಾಜ್ಯದ ಇತರ ಪ್ರದೇಶಗಳಿಗಿಂತ ಭಿನ್ನವಾಗಿರಲಿಲ್ಲ. ನಿಜಾಮರಿಗೆ ಬಿಜಾಪುರ ಭಾಗದ ಬಗ್ಗೆ ಶಂಕಾಮನೋಭಾವವಿತ್ತು. ಫಲವತ್ತಾದ ಅದನ್ನು ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳನ್ನೂ ಬ್ರಿಟಿಷರಿಗೆ ಖಾಯಂ ಆಗಿ ಬಿಟ್ಟು ಕೊಟ್ಟು ಹೆಚ್ಚು ಫಲವತ್ತಾಗಿಲ್ಲದಿದ್ದ ಗುಲ್ಬರ್ಗ ಹಾಗೂ ಬಿದರೆ ಭಾಗಗಳು ನಿಜಾಮರಿಗೆ ಉಳಿದುವು. ಈ ಪ್ರದೇಶಗಳು ಸಾಮಾನ್ಯವಾಗಿ ಮಳೆಯ ಅಭಾವ ಹಾಗೂ ಕೆಲವು ವೇಳೆ ಕ್ಷಾಮಪರಿಸ್ಥಿತಿಗೆ ಒಳಗಾಗುವಂಥವು. 18 ಮತ್ತು 19ನೆಯ ಶತಮಾನಗಳಲ್ಲಿ ಸುಮಾರು 18 ಸಲ ಈ ಭಾಗಗಳಲ್ಲಿ ದುರ್ಭಿಕ್ಷ ಪರಿಸ್ಥಿತಿ ತಲೆದೋರಿತ್ತು. ಫಲವತ್ತಾದ ರಾಯಚೂರು ಪ್ರದೇಶದಲ್ಲಿ ಸಹ ಕ್ಷಾಮದ ಬೇಗೆ ಉಂಟಾಗುತ್ತಿತ್ತು. ನಿಜಾಮರ ಸರ್ಕಾರ ಅಂಥ ಕ್ಷಾಮ ಮತ್ತು ಅಭಾವ ಕಾಲದಲ್ಲಿ ತೆರಿಗೆ ವಸೂಲಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯುತ್ತಿತ್ತು. ಅನಾವೃಷ್ಟಿ ತೀವ್ರವಾಗಿದ್ದರೆ ಕಂದಾಯವನ್ನು ಮಾಫಿ ಮಾಡುತ್ತಿತ್ತು. ಮಳೆಯಾಗದ ಪ್ರದೇಶಗಳಲ್ಲಿ ಪರಿಹಾರ ಕ್ರಮಗಳನ್ನೂ ಕೈಗೊಳ್ಳುತ್ತಿತ್ತು.

ಭೂಮಿಗೆ ಸಂಬಂಧಿಸಿದಂತೆ ರಯತ್ವಾರಿ ಪದ್ಧತಿ ಸಾಮಾನ್ಯವಾಗಿತ್ತು. ಗುಲ್ಬರ್ಗ, ಬಿದರೆ, ರಾಯಚೂರು ಜಿಲ್ಲೆಗಳಲ್ಲಿ ಸರ್ವೇಕ್ಷಣೆ ನಡೆಸಿ ಹಿಡುವಳಿಗಳನ್ನು ನಿಗದಿಮಾಡಲಾಗಿತ್ತು. ಸರ್ಕಾರಕ್ಕೆ ಸಲ್ಲಬೇಕಾಗಿದ್ದ ಕಂದಾಯವನ್ನು ಪಾವತಿ ಮಾಡುವವರೆಗೂ ವ್ಯವಸಾಯ ಮಾಡುತ್ತಿದ್ದ ಭೂಮಿಯ ಮೇಲೆ ಸ್ವಾಮ್ಯ ಹೊಂದಿರಬಹುದಾಗಿತ್ತು. ಭೂಮಿಯಲ್ಲಿ ಬಿತ್ತ ಕಾಳಿನ ಪ್ರಮಾಣ ಇಲ್ಲವೆ ಉತ್ಪನ್ನವಾದ ಫಸಲಿನ ಆಧಾರದ ಮೇಲೆ ಕಂದಾಯ ನಿಗದಿಯಾಗುತ್ತಿತ್ತು. ಖುಷ್ಕಿ ಭೂಮಿಯಾದರೆ ರಾಜ್ಯದ ಪಾಲು ಭೂಮಿಯ ಉತ್ಪನ್ನದಲ್ಲಿ 1/4 ಭಾಗ, ತರಿ ಭೂಮಿಯಾದರೆ ಅದು ಉತ್ಪನ್ನದಲ್ಲಿ 2/5 ದಿಂದ 1/2 ಭಾಗದವರೆಗೆ ಇರುತ್ತಿತ್ತು.

18ನೆಯ ಶತಮಾನದಲ್ಲಿ ಈ ಪ್ರದೇಶ ಮರಾಠರ ದಾಳಿಗಳಿಗೆ ತುತ್ತಾಗಿ ಮತ್ತೆ ಶಾಂತಿ ನೆಲೆಸಿದ ಮೇಲೆ ಕಂದಾಯ ವಸೂಲಿಯನ್ನು ಬ್ಯಾಂಕರುಗಳಿಗೆ ಹಾಗೂ ಪಠಾಣ ಸೈನಿಕರಿಗೆ ಗೇಣಿಗೆ ವಹಿಸಿಕೊಡುವ ಪದ್ಧತಿ ರೂಢಿಗೆ ಬಂತು. 19ನೆಯ ಶತಮಾನದಲ್ಲಿ ಈ ಪದ್ಧತಿಯನ್ನು ಸರ್ ಸಾಲಾರ್ ಜಂಗ್ ರದ್ದು ಮಾಡಿದ. ಅದು ಜನರ ಏಳಿಗೆಗೆ ಕಾರಣವಾಗಬಲ್ಲ ಜನಪ್ರಿಯ ಕ್ರಮವಾಗಿತ್ತು.

ಆಸಫ್‌ಜಾಹೀ ಆಳ್ವಿಕೆಯಲ್ಲಿ ಕಲೆ, ಕುಶಲಕಲೆ, ಕಲಾತ್ಮಕ ವಸ್ತುಗಳ ತಯಾರಿಕೆ, ಹತ್ತಿ ಮತ್ತು ರೇಷ್ಮೆ ಉದ್ಯಮ, ಲೋಹ ಮತ್ತು ಬಿದ್ರಿ ವಸ್ತುಗಳ ತಯಾರಿಕೆ ಮೊದಲಾದವು ಸುಸ್ಥಿತಿಯಲ್ಲಿದ್ದುವು. ರಾಯಚೂರು ಹಾಗೂ ಲಿಂಗಸುಗೂರು ರೇಷ್ಮೆಸೀರೆಗಳ ನೇಯ್ಗೆಗ್ಗೆ, ಗುಲ್ಬರ್ಗ ಟಸಾರ್ ಮತ್ತು ಮಷ್ರೂ ರೇಷ್ಮೆ ಬಟ್ಟೆಗೆ ಮತ್ತು ಶತ್ರಂಗಿ ತಯಾರಿಕೆಗೆ, ಬಿದರೆ ಬಿದ್ರಿ ಕೆಲಸಕ್ಕೆ ಪ್ರಸಿದ್ಧವಾಗಿದ್ದುವು. ಬಿದ್ರಿ ಬಲು ನಾಜೂಕಾದ ಸೂಕ್ಷ್ಮ ಹಾಗೂ ಕಲಾತ್ಮಕವಾದ ಕೆಲಸವಾಗಿತ್ತು.

ನಿಜಾಮರ ಇಡೀ ರಾಜ್ಯದ ಒಟ್ಟು ಪ್ರಜಾಸಂಖ್ಯೆಯಲ್ಲಿ ಕನ್ನಡಿಗರು ಸೇ.14ರಷ್ಟಿದ್ದರು. ಅವರಲ್ಲಿ ಹೆಚ್ಚುಮಂದಿ ಗುಲ್ಬರ್ಗ, ಬಿದರೆ ಹಾಗೂ ರಾಯಚೂರು ಜಿಲ್ಲೆಗಳಲ್ಲಿದ್ದರು. ದೇಶದ ಇತರ ಕಡೆಗಳಲ್ಲಿರುವಂತೆ ಈ ಭಾಗದಲ್ಲೂ ಹಿಂದು ಸಮಾಜ ಸಾಂಪ್ರದಾಯಿಕವಾಗಿ ವಿಭಜಿತವಾಗಿತ್ತು. ಚತುರ್ವರ್ಣಗಳ ಜೊತೆಗೆ, ಈ ವ್ಯವಸ್ಥೆಯ ಹೊರಗಿದ್ದು ಅನೇಕ ಉಪಯುಕ್ತ ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿದ್ದವರೂ ಇದ್ದರು. ಮಾಲ, ಢೇರ, ಬಂಜಾರ ಅಥವ ಲಂಬಾಣಿ, ವಡ್ಡ, ಗಂಡಾಲ (ಈಡಿಗ), ಕೊರವ (ನೇಕಾರ) ಮೊದಲಾದ ಜನ ಇಲ್ಲಿದ್ದು ಗ್ರಾಮದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖಪಾತ್ರ ವಹಿಸಿದ್ದರು. ಕಾಪು ಅಥವಾ ಕುಣ್ಬಿ (ರೈತವರ್ಗ) ಹಾಗೂ ಗೊಲ್ಲಜನ ಸಹ ಅಧಿಕವಾಗಿದ್ದರು. ದೋತಿ, ಚಿಕ್ಕ

ಅಂಗಿ, ತಲೆಪಾಗು ಇಲ್ಲಿನ ಜನಸಾಮಾನ್ಯರ ಉಡುಪು. ಜಮಖಾನೆ ಇಲ್ಲವೆ ಕಂಬಳಿಯನ್ನು ಸದಾ ಜೊತೆಯಲ್ಲಿಟ್ಟುಕೊಂಡಿರುತ್ತಿದ್ದರು. ಹಿಂದು ಹಾಗೂ ಮುಸಲ್ಮಾನ ಸ್ತ್ರೀಯರಲ್ಲಿ ಸೀರೆ ಮತ್ತು ಚೋಳಿ ಸಾಮಾನ್ಯ. ಮುಸಲ್ಮಾನ ಹೆಂಗಸರು ಲಂಗ ಹಾಗೂ ಚೋಳಿ ಧರಿಸಿ ಭುಜದ ಮೇಲೆ ದುಪ್ಪಟ ಹೊದೆಯುವುದೂ ರೂಢಿ. ಲಂಬಾಣಿ ಸ್ತ್ರೀಯರ ಉಡುಪು ಸೊಂಟದಿಂದ ಇಳಿಬಿಟ್ಟು ಘಾಗ್ರ (ಲಂಗ) ಮತ್ತು ಮೇಲೆ ಕುಪ್ಪಸ.

ಈ ಭಾಗದ ಕರ್ನಾಟಕದ ಜನ ಇತರ ಭಾಗಗಳಲ್ಲಿರುವಂತೆ ಭಕ್ತಿ ಹಾಗೂ ಮನರಂಜನೆಗಾಗಿ ದೀಪಾವಳಿ, ಕಾಮನ ಹಬ್ಬ, ದಸರ, ನಾಗಪಂಚಮಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಿದ್ದರು. ಈದ್ ಉಜ್ಜುವ್ಹ, ಈದ್-ಉಲ್-ಫಿತರ್, ಮೊಹರಂ ಹಾಗೂ ಪೈಗಂಬರರ ಜನ್ಮದಿನ ಮುಹಮ್ಮದೀಯರ ಮುಖ್ಯ ಹಬ್ಬಗಳು. ರಾಜಧಾನಿ ಹೈದರಾಬಾದಿನಲ್ಲಿ ಆಚರಿಸುತ್ತಿದ್ದ ನವರೋಜ್ ಪಾರಸಿ ಹಬ್ಬದ ವೈಭವವನ್ನು ನೋಡಲು ಜನ ಹೋಗುತ್ತಿದ್ದರು.

ಜನರ ಮುಖ್ಯ ಆಹಾರ ಜೋಳ ಹಾಗೂ ಶಾವೆ ರೊಟ್ಟಿ. ಅವುಗಳಿಗೆ ನಂಜಿಕೊಳ್ಳುವುದಕ್ಕೆ ಬೇಳೆ ತರಕಾರಿ ಉಳ್ಳಾಗಡ್ಡೆ ಹಾಗೂ ಸಾಂಬಾರ ದಿನಸಿಗಳನ್ನು ಹಾಕಿ ಮಾಡಿದ ಸಾರು ಅಥವಾ ಪಲ್ಯ. ಕೆಲವು ವರ್ಗದ ಹಿಂದುಗಳು ಹಾಗೂ ಮುಸಲ್ಮಾನರು ಮಾಂಸಾಹಾರಿಗಳು. ಹಳ್ಳಿಗಳ ಕಡೆ ಮುಸಲ್ಮಾನರು ತಮ್ಮ ಹಿಂದು ನೆರೆಹೊರೆಯವರಿಗೆ ಅಸಮಾಧಾನವಾಗಬಾರದೆಂದು ಗೋಮಾಂಸವನ್ನು ತಿನ್ನುವುದಿಲ್ಲ. ನಗರವಾಸಿಗಳದು ವಿಶಾಲದೃಷ್ಟಿ, ಸಂಪ್ರದಾಯಗಳಿಗೆ ಕಟ್ಟು ಬಿದ್ದವರಲ್ಲ.

ಹಿಂದು ಹಾಗು ಮುಸಲ್ಮಾನರಲ್ಲಿ ಬಹುಪತ್ನಿತ್ವಕ್ಕೆ ಅವಕಾಶವಿತ್ತು. ಆದಾಗ್ಯೂ ವಿವಾಹಿತ ಸ್ತ್ರೀ-ಪುರುಷರ ಸಂಖ್ಯೆ ಸಮವಾಗಿದ್ದ ಕಾರಣ ಈ ಪದ್ಧತಿ ಹೆಚ್ಚಾಗಿ ಆಚರಣೆಯಲ್ಲಿರಲ್ಲವೆಂದು ತೋರುತ್ತದೆ. ವಿಧವೆಯರು ಸಾಕಷ್ಟು ಸಂಖ್ಯೆಯಲ್ಲಿದ್ದುದನ್ನು ನೋಡಿದರೆ ವಿಧವಾ ವಿವಾಹ ಸಮಾಜಗ್ರಾಹ್ಯವಾಗಿರಲಿಲ್ಲವೆಂದೆನಿಸುತ್ತದೆ. ಆದರೆ ರೈತವರ್ಗದಲ್ಲಿ ವಿಧವೆಯರ ಪುನರ್ವಿವಾಹಕ್ಕೆ ಅಡ್ಡಿಯಿರಲಿಲ್ಲ. ಅಂಥ ವಿವಾಹವನ್ನು ಮೊಹುತುರತ್ ಅಥವಾ ಮರ್ಮನು ಎಂದು ಕರೆಯುತ್ತಾರೆ.

**ವಾಸ್ತು-ಶಿಲ್ಪ :** ಆಸಫ್‌ಜಾಹೀ ಅರಸರು ಹಾಗೂ ಅವರ ವಜೀರರು (ಮಂತ್ರಿಗಳು) ಕಲೆ ಮತ್ತು ಶಿಲ್ಪಕ್ಕೆ ಉತ್ತೇಜನವಿತ್ತು ಸುಂದರವಾದ ಅರಮನೆ, ಮಸೀದಿ, ಉದ್ಯಾನ ಮೊದಲಾದುವನ್ನು ನಿರ್ಮಿಸಿದ್ದಾರೆ. ಆದರೆ ರಾಜಧಾನಿ ಹೈದರಾಬಾದಿನಿಂದ ಹೊರಗಡೆ ಇವರು ನಿರ್ಮಿಸಿದ ಕಟ್ಟಡಗಳು

ಐವಾನ್-ಎ-ಶಾಹೀ, ಗುಲ್ಬರ್ಗ

ಕಡಿಮೆ. ಗುಲಬರ್ಗದ ಐವಾನ್-ಎ-ಶಾಹೀ ಕಟ್ಟಡದಲ್ಲಿ ಗುಲ್ಬರ್ಗ ವಿಭಾಗದ ಮುಖ್ಯ ಕಚೇರಿಗಳಿದ್ದವು. ಆದರೆ ಹೈದರಾಬಾದಿನ ಬೃಹತ್ ಕಟ್ಟಡಗಳಿಗೆ ಹೋಲಿಸಿದರೆ ಅದೊಂದು ಸಾಮಾನ್ಯ ಕೃತಿ. ಆದರೆ ಕರ್ನಾಟಕ ಭಾಗದ ಐತಿಹಾಸಿಕ ಹಾಗೂ ಪುರಾವಸ್ತು ಸಂಬಂಧವಾದ ಕಟ್ಟಡಗಳನ್ನು ರಕ್ಷಿಸುವುದರಲ್ಲಿ ನಿಜಾಮರ ಸರ್ಕಾರ ಶ್ರಮವಹಿಸುತ್ತಿತ್ತು. ಗುಲ್ಬರ್ಗ, ರಾಯಚೂರು, ಮುದ್ಗಲ್ ಮೊದಲಾದೆಡೆಯ ಕೋಟೆಗಳು, ಹಲವಾರು ಮಸೀದಿಗಳು, ನಾಗಾಯಿ ಮೊದಲಾದೆಡೆಯ ಕೋಟೆಗಳು, ಹಲವಾರು ದೇವಾಲಯಗಳು ನಿಜಾಮ ಸರ್ಕಾರದಿಂದ ರಕ್ಷಿತವಾಗಿದ್ದುವು.

**ನಾಣ್ಯಗಳು :** ನಿಜಾಮರ ರಾಜ್ಯದಲ್ಲಿ ವಿವಿಧ ಮಾದರಿಯ ನಾಣ್ಯಗಳು ಚಲಾವಣೆಯಲ್ಲಿದ್ದವು. 1854ರಲ್ಲಿ ರೂಢಿಗೆ ತಂದ ಹಾಲಿ ಸಿಕ್ಕ ಮತ್ತು 1904ರಲ್ಲಿ ಚಲಾವಣೆಗೆ ಬಂದ ಮಹಬೂಬಿಯ ರೂಪಾಯಿ ನಿಜಾಮರು ಟಂಕಿಸುತ್ತಿದ್ದ ನಾಣ್ಯಗಳು. ಮಹಬೂಬಿಯ ರೂಪಾಯಿಯ ಒಂದು ಮುಖದಲ್ಲಿ ಚಾರ್‌ಮಿನಾರ್ ಕಟ್ಟಡದ ಚಿತ್ರವಿರುತ್ತದೆ. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಬೆಳ್ಳಿಯ ಅಭಾವದಿಂದ ಹಾಲಿ ಸಿಕ್ಕ ನಾಣ್ಯಗಳ ಟಂಕಣೆಯನ್ನು ನಿಲ್ಲಿಸಲಾಯಿತು. ಮಹಬೂಬ್ ಅಲಿಖಾನ್ ನಿಜಾಮರಾದಾಗ ನಾಣ್ಯಪದ್ಧತಿಯಲ್ಲಿ ಮತ್ತೆ ಸ್ಥಿರತೆ ಬಂತು. ನಿಜಾಮರು ಬೆಳ್ಳಿಯ ನಾಣ್ಯಗಳೊಡನೆ ವಿವಿಧ ಮೌಲ್ಯಗಳ ತಾಮ್ರದ ನಾಣ್ಯಗಳನ್ನು ಸಹ ಚಲಾವಣೆಗೆ ತಂದಿದ್ದರು. (ಬಿ.ಎಸ್.ಎ.)

**ಆಸಾದಿ :** ಧಾರ್ಮಿಕ ವೃತ್ತಿಗಾಯಕ ಪರಂಪರೆಗೆ ಸೇರಿದ ಮಾರಮ್ಮನ ಆರಾಧಕರು. ಮಾರಮ್ಮನಿಗೆ ಸಂಬಂಧಿಸಿದ ಹಾಡುಗಳನ್ನೇ ಹೆಚ್ಚಾಗಿ ಹಾಡುವರು. ಆಕೆ ಮೆರೆದ ಪವಾಡ ಹಾಗೂ ಮಹಿಮೆಗಳನ್ನು ಭಕ್ತ ಸಮೂಹಕ್ಕೆ ತಿಳಿಸುತ್ತ ಅವರಲ್ಲಿ ಭಯ ಭಕ್ತಿ, ಧರ್ಮ ಶ್ರದ್ಧೆಗಳನ್ನು ಮೂಡಿಸುವುದೇ ಇವರ ಕಾಯಕ. ಕರ್ನಾಟಕದಲ್ಲಿ ಚಿತ್ರದುರ್ಗ, ಬೆಂಗಳೂರು

ಆಸಾದಿ ಗಾಯಕ

ಗ್ರಾಮಾಂತರ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಭಾಗಗಳಲ್ಲಿ ವಿಶೇಷತಃ ಕಂಡುಬರುತ್ತಾರೆ. ಇವರು ಪರಿಶಿಷ್ಟ ಮಾದಿಗ ಜಾತಿಗೆ ಸೇರಿದವರು. ಮಾರಮ್ಮನ ಎದುರಿನಲ್ಲಿಯೇ ಇವರ ದೀಕ್ಷೆ ನಡೆಯುವುದು. ದೇವಿಯ ಮುದ್ರೆ ಬಿದ್ದಂದಿನಿಂದ ತಮ್ಮ ಕುಲಕಸಬಾದ ಚಮ್ಮಾರಿಕೆಯನ್ನು ಮಾಡುವಂತಿಲ್ಲ. ಅಲ್ಲದೆ ಊರಿನ ಯಾವುದೇ ಕೀಳು ಕೆಲಸಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ. ದೇವಿ ಪ್ರಾರ್ಥನೆಗೆ ಮಂಗಳವಾರ ಮತ್ತು ಶುಕ್ರವಾರ ಇವರಿಗೆ ಪ್ರಶಸ್ತ ದಿನಗಳು. ಇವರ ಉಡುಗೆ ತೊಡುಗೆಗಳಲ್ಲಿ ವಿಶೇಷತೆ ಕಾಣಬಹುದು. ಕೆಂಪುಸೀರೆಯ ರುಮಾಲು, ಬಿಳಿಯ ಕಾಸೆಪಂಚೆ, ನಿಲುವಂಗಿ, ಅದರ ಮೇಲೆ ಕೋಟು, ಕೊರಳಲ್ಲಿ ಕರಿಮಣಿಸರ, ಹಣೆಗೆ ಕುಂಕುಮ ಧರಿಸುವರು. ದೇವತೆಯನ್ನು ಕೊಂಡಾಡಲು ಕೈಯಲ್ಲಿರುವುದು ರಣಹಲಗೆ ಎಂಬ ವಾದ್ಯ. ಹಬ್ಬ ಹರಿದಿನಗಳಲ್ಲದೆ ಜಾತ್ರೆಯಂತಹ ಸಾಂಸ್ಕೃತಿಕ ಸಂದರ್ಭಗಳಲ್ಲೂ ಆಸಾದಿ ಪಾತ್ರ ಬಹುಮುಖ್ಯ. ಇವನಿಲ್ಲದೆ ಜಾತ್ರೆಯ ಕಾರ್ಯಗಳು ಪೂರ್ಣಗೊಳ್ಳುವುದಿಲ್ಲ. ಮಾರಮ್ಮನ ಮೆರವಣಿಗೆಯ ನಿಗದಿ, ಕೋಣ ಕುರಿಗಳ ಬಲಿ ಇತ್ಯಾದಿ ವಿಚಾರಗಳನ್ನು ತಿಳಿಸುವವನೇ ಈತ. ಇವರು ಮೆರವಣಿಗೆ ಹೊರಡುವ ಸಂದರ್ಭದಲ್ಲಿ ಹಲಗೆ ಹಿಡಿದು ದೇವತೆಯ ಬಗ್ಗೆ ಹೊಗಳಿ ಕೊಂಡಾಡುವುದುಂಟು. ಈ ಕೊಂಡಾಟದಲ್ಲಿ ಬಯ್ಗಳಗಳೂ ಇರುತ್ತವೆ. ಹೀಗೆ ಬೈಯ್ಯುವುದೂ ಇವರಿಗೆ ಈ ಸಂದರ್ಭದಲ್ಲಿರುವ ವಿಶೇಷ ಹಕ್ಕು; ಇದು ಈ ವೃತ್ತಿ ಗಾಯಕ ಪರಂಪರೆಯವರಿಗೆ ಮಾತ್ರ ಸೀಮಿತವಾದದ್ದು.

ಇವರು ತಮ್ಮ ಜೀವನದ ಬಹುಪಾಲು ಕಾಲವನ್ನು ಮಾರಿಗುಡಿಗಳಿರುವ ಊರುಗಳನ್ನು ಸುತ್ತುತ್ತ, ಹಾಡುಗಳನ್ನು ಹೇಳುತ್ತ ಕಳೆಯುವವರು. ಇವರ ಹಾಡುಗಳಲ್ಲಿ ಮುಖ್ಯವಾಗಿ ಮಾರಿದೇವತೆ ಕುರಿತ ಹಾಡುಗಳು ಕೊಣಬಿಗೌಡನ ಹಾಡುಗಳು, ವಿನೋದ ಸಂಬಂಧದ ಹಾಡುಗಳನ್ನು ಕಾಣಬಹುದು. ಮಾರಮ್ಮನ ಜಾತ್ರೆಯ ಸಂದರ್ಭದಲ್ಲಿ ಭಕ್ತ ಸಮೂಹದ ಒತ್ತಾಸೆ, ಒತ್ತಾಯಗಳಿಗೆ ಮಣಿದು ಅಶ್ಲೀಲ ಪದಗಳನ್ನೂ ಹಾಡುವರು. ಒಂದು ರೀತಿಯ ವಿಶಿಷ್ಟ ನಿಂದಾಸ್ತುತಿಯ ಮೂಲಕ ತಮ್ಮ ದೈವಾರಾಧನೆಯನ್ನು ಕೈಗೊಳ್ಳುವರು. ಇಂಥ ರಚನೆಗಳಲ್ಲಿ ಕೆಲವು ಕಡೆ ಮೇಲುವರ್ಗದವರನ್ನು ಕುರಿತು ಅವಾಚ್ಯವಾಗಿ, ತುಚ್ಛವಾಗಿ ಬಯ್ಯುವ ರಚನೆಗಳೂ ಕಂಡುಬರುತ್ತವೆ. ಒಂದು ಆಸಾದಿ ಪದ ಹೀಗಿದೆ.

ಗೌಡ ಗಂಭೀರನಲ್ಲ ತೌಡು ಬುಕ್ಕಿಟ್ಟಲ್ಲ
ಓಡಲ ಕಾಯಿ ಬೆಳಿಸಲ್ಲ ಈ ಊರ
ಗೌಡನ ಹೆಣ್ತಿ ಗರ್ಸ್ಯಲ್ಲ (ಎಂ.ಆರ್‌ಇ.)

**ಆಳಂದಕರ್, ಶಂಕರರಾವ್ :** 1905-71. ಚಿತ್ರಕಲಾವಿದ, ಲೇಖಕ. 1905 ಜುಲೈ 7ರಂದು ಕಲಬುರ್ಗಿಯ ಸರಾಫ್ ಮನೆತನದಲ್ಲಿ ಜನಿಸಿದರು. ತಂದೆ ನಾರಾಯಣರಾವ್, ತಾಯಿ ಚಂದುಬಾಯಿ. ಬಾಲ್ಯದಲ್ಲೇ ಇವರ ಕಲಾಸಕ್ತಿಯನ್ನು ಗುರುತಿಸಿ, ಚಿತ್ರಕಲಾ ಶಿಕ್ಷಕ ಜೋಶಿ ಎಂಬುವವರ ಒತ್ತಾಯದಿಂದ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಶಾಲೆ ಸೇರಿದರು. ಅಲ್ಲಿ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿ ಎಂದು ಹೆಸರು ಗಳಿಸಿದರು. ಅನಂತರ ಮುಂಬಯಿಯ ವಿವಿಧ ಕಲಾಶಾಲೆಗಳಲ್ಲಿ ಕಲಾ ಶಿಕ್ಷಕರಾಗಿ ದುಡಿದರು. ಕಲಬುರ್ಗಿಗೆ ಹಿಂದಿರುಗಿ ನೂತನ ವಿದ್ಯಾಲಯದಲ್ಲಿ 150 ರೂಪಾಯಿ ಸಂಬಳದ ಮೇಲೆ ಕಲಾಶಿಕ್ಷಕರಾಗಿ ಸೇರಿದರು (1924). ಚಿತ್ರಕಲೆಯ ಪುನರುಜ್ಜೀವನಕ್ಕಾಗಿ ಪ್ರಯತ್ನಿಸಿದರು. ತಮ್ಮ ಸಮಸ್ತ ಬದುಕನ್ನೇ ಕಲಾಸಾಧನೆಗೆ ಸಮರ್ಪಿಸಿಕೊಂಡರು. ಚಿತ್ರಗಳ ಬ್ಯಾನರ್, ಭಿತ್ತಿ ಚಿತ್ರಗಳನ್ನು ಸಿದ್ಧಪಡಿಸುವುದು, ನಾಟಕ ಪರದೆ, ವೇಷ ಭೂಷಣ ತಯಾರಿಸುವುದರಲ್ಲಿ ನಿರತರಾದರು. ಆರೋಗ್ಯದ ಕಡೆ ಹೆಚ್ಚು ಕಾಳಜಿ ವಹಿಸದೆ 40ನೆಯ ವಯಸ್ಸಿನಲ್ಲಿಯೇ ಕ್ಷಯರೋಗ ಮತ್ತು ಮೂಲವ್ಯಾಧಿಗೆ ತುತ್ತಾದರು. ಆದರೂ ಕಲಾಕೃತಿಗಳ ರಚನೆ, ಕಲಾಚಿಂತನೆ ನಡೆಸಿದರು. ತಮ್ಮ ಶಿಷ್ಯ ಎಸ್.ಎಮ್.ಪಂಡಿತ (ನೋಡಿ)ರನ್ನು ಪ್ರೋತ್ಸಾಹಿಸಿ ಮುಂಬಯಿಗೆ ಕಳುಹಿಸಿ, ಶ್ರೇಷ್ಠ ಕಲಾವಿದರನ್ನಾಗಿ ಮಾಡಿದರು. ಈ ಪಂಡಿತರು ತಮ್ಮ ಗುರುಗಳನ್ನು ಧ್ರುವತಾರೆ ಎಂದು ಕರೆದಿದ್ದಾರೆ.

ಆಳಂದಕರರಿಗೆ ಶಾಸ್ತ್ರೀಯ ಸಂಗೀತದಲ್ಲೂ ಪಿಯಾನೋ ಮತ್ತು ಗಿಟಾರ್ ನುಡಿಸುವುದರಲ್ಲೂ ವಿಶೇಷ ಆಸಕ್ತಿಯಿತ್ತು. ಸಾಹಿತ್ಯದಲ್ಲೂ ಪ್ರೀತಿ. ಕವಿ ರವೀಂದ್ರರ ಅನೇಕ ಶ್ರೇಷ್ಠ ಚಿತ್ರಭಂಗಿಗಳನ್ನು ರಚಿಸಿದ್ದಾರೆ. ನಿಜಾಮರ ಆಳ್ವಿಕೆಯಲ್ಲಿ ಹೈದರಾಬಾದ್ ಸರ್ಕಾರದ ವಾರ್ತಾ ಇಲಾಖೆಯಲ್ಲಿ ಇವರು ಕಲಾವಿದರಾಗಿ ಕೆಲಸ ಮಾಡಿದರು. ಆ ವೇಳೆಯಲ್ಲಿ ಮಹತ್ತ್ವದ ಕಲಾಕೃತಿಗಳನ್ನು ರಚಿಸಿಕೊಟ್ಟರು. ನಿಜಾಮರ ಪೂರ್ವಜ ಅಸಫಜಹಾ ಅವರ ಸಮಗ್ರ ಜೀವನ ಕಲ್ಪನೆಯನ್ನು ಪ್ರತಿಬಿಂಬಿಸುವ ಬೃಹತ್ ಚಿತ್ರಗಳ ಹೊತ್ತಗೆ ತಯಾರಿಸಿ ನಿಜಾಮರ ಕೃಪೆಗೆ ಪಾತ್ರರಾದರು. ಕರ್ನಾಟಕ ವಿಧಾನಸಭಾ ಸಭಾಂಗಣದಲ್ಲಿ ಹಾಕಲು ಜವಾಹರಲಾಲ್ ನೆಹರು ಅವರ ಪೂರ್ಣ ಕೃತಿಯ ತೈಲಚಿತ್ರವನ್ನು ಇವರು ಬರೆದುಕೊಟ್ಟರು. ಈ ಕಲಾಕೃತಿ ಜನರ ಮೆಚ್ಚುಗೆ ಪಡೆಯಿತು. ಇದಲ್ಲದೆ ರಾಷ್ಟ್ರಾಭಿಮಾನವನ್ನು ಪ್ರೇರೇಪಿಸುವ ಲಿವಿಂಗ್ ಕೋಹಿನೂರ್ ಎಂಬ ಮಹತ್ತ್ವಪೂರ್ಣ ಚಿತ್ರಮಾಲಿಕೆಯ ಎರಡು ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಆಳಂದಕರರು 1956ರಲ್ಲಿ ತಮ್ಮ ಸೇವೆಯನ್ನು ವರ್ಗಾಯಿಸಿಕೊಂಡು ಬೆಂಗಳೂರಿಗೆ ಬಂದರು. ಅನಂತರ ಅನಾರೋಗ್ಯದಿಂದ ಗುಲ್ಬರ್ಗದಲ್ಲೇ ಉಳಿದರು. ಶರಣ ಬಸವೇಶ್ವರ, ಪುರಂದರದಾಸ, ಕನಕದಾಸ, ಕುಮಾರವ್ಯಾಸ, ರಾಘವೇಂದ್ರಸ್ವಾಮಿ ಮೊದಲಾದ ಆಧ್ಯಾತ್ಮಿಕ ಪ್ರಪಂಚದ ಮಹಾಪುರುಷರ ತೈಲಚಿತ್ರಗಳನ್ನು ರಚಿಸಿ ಕನ್ನಡಿಗರ ಗೌರವಕ್ಕೆ ಪಾತ್ರರಾದರು. ಅಖಿಲ ಭಾರತ ಕಲಾ ಸಂಘದ ಸದಸ್ಯರಾಗಿ (1951-57), ರಾಜ್ಯದ ಪ್ರಮುಖ ಕಲಾ ಶೈಕ್ಷಣಿಕ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ತಮ್ಮ ಚಿತ್ರಕಲಾ ಬದುಕಿನಲ್ಲಿ ಇವರು ಒಂದು ಸಾವಿರಕ್ಕೂ ಹೆಚ್ಚು ಚಿತ್ರ ರಚಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ (1965-66). ಇವರು ತಮ್ಮ ಜೀವಿತದ ಕೊನೆಯನ್ನು ಭಗವದ್ಗೀತೆಯ ಮೇರುಕೃತಿ ನಿರ್ಮಿಸುವಲ್ಲಿ ತೊಡಗಿಸಿಕೊಂಡರು. ಒಬ್ಬ ಆದರ್ಶ ಶಿಕ್ಷಕರೂ ಕಲಾತಪಸ್ವಿಯೂ ಕಲಾಪ್ರಪಂಚಕ್ಕೆ ಅಪೂರ್ವ ಕೊಡುಗೆ ನೀಡಿದ ಶ್ರದ್ಧಾವಂತರೂ ಆಗಿದ್ದ ಇವರು 1971 ಮೇ 31ರಂದು ನಿಧನರಾದರು. (ಆರ್.ಜಿ.ಆರ್.)

**ಆಳುಪ ವಂಶ :** 7ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಕೊನೆಯವರೆಗೆ ಆಳುವಖೇಡವನ್ನು (ದಕ್ಷಿಣ ಕನ್ನಡ ಜಿಲ್ಲೆ ಅಥವಾ ತುಳುನಾಡು) ಆಳಿದ ರಾಜಮನೆತನ. ಕೆಲವು ಪುರಾಣಗಳಲ್ಲಿ ಉಕ್ತವಾಗಿರುವ ಆಪಿಕ, ಆಲಕ ಅಥವಾ ಆಲದ ಎಂಬ ಶಬ್ದ ಆಳುಪರನ್ನು ಸೂಚಿಸುತ್ತದೆ ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಕ್ರಿ.ಶ.2ನೆಯ ಶತಮಾನದಷ್ಟು ಹಿಂದೆಯೇ ಗ್ರೀಕ್ ಭೂಗೋಳಕಾರ ಟಾಲೆಮಿ ಆಳುವಖೇಡವನ್ನು ಪ್ರಸ್ತಾಪಿಸಿರುವನು. 5ನೆಯ ಶತಮಾನದ ಹಲ್ಮಿಡಿ ಶಾಸನದಲ್ಲಿ ಉಕ್ತನಾಗಿರುವ ಅಳಪಗಣದ ಪಶುಪತಿ ಆಳುಪ ಮನೆತನದವನೇ ಇದ್ದಿರಬಹುದು. ಕದಂಬ ರವಿವರ್ಮನ ಗುಡ್ನಾಪುರ ಶಿಲಾಶಾಸನದಲ್ಲಿ ಆಳುಪರು ಕದಂಬರ ಸಾಮಂತರಾಗಿ ಕಾಣಿಸಿಕೊಳ್ಳುತ್ತಾರೆ. ಚಳುಕ್ಯ ಮಂಗಲೀಶನ (610-42) ಮಹಾಕೂಟ ಸ್ತಂಭ ಶಾಸನದಲ್ಲೂ 2ನೆಯ ಪುಲಕೇಶಿಯ (610-42) ಐಹೊಳೆ ಶಾಸನದಲ್ಲೂ ಆಳುಪರ ಉಲ್ಲೇಖವಿದೆ.

ಖಚಿತವಾಗಿ ತಿಳಿದುಬರುವ ಪ್ರಾಚೀನತಮ ಆಳುಪರಾಜ 1ನೆಯ ಆಳುವರಸ (ಸು.650-63). ಅವನ ಅನಂತರ 10ನೆಯ ಶತಮಾನದ ಮಧ್ಯಭಾಗದವರೆಗೆ ರಾಜ್ಯವಾಳಿದ ಆಳುಪರನ್ನು ಪ್ರಾಚೀನ ಆಳುಪರೆಂದು ಪರಿಗಣಿಸಬಹುದಾಗಿದೆ. ಅವರ ಶಾಸನಗಳು ತಿಳಿಯಗೊಡುವಂತೆ ಆಳುಪರು ಪಾಂಡ್ಯ ಕುಲದವರು, ಮೀನಲಾಂಛನೋಪೇತರು, ಸೋಮಕುಲದವರು, ದೊರೆತಿರುವ ಶಾಸನಗಳ ಆಧಾರದ ಮೇಲೆ ಪ್ರಾಚೀನ ಆಳುಪರ ವಂಶವೃಕ್ಷವನ್ನು ಈ ಕೆಳಗಿನಂತೆ ನೀಡಬಹುದಾಗಿದೆ:

ಆಳುವರಸ 1 (ಆಳುಪ ಮಹಾರಾಜ, ಗುಣಸಾಗರ ಆಳುಪೇಂದ್ರ ಸು.650-63) (ಪತ್ನಿ, ಮಹಾದೇವಿ)
|
ಚಿತ್ರವಾಹನ I ಸು.663-730) (ಪತ್ನಿ, ಕುಂಕುಮದೇವಿ)
|
ಆಳುವರಸ II (ಸು.730-65)
|
ಚಿತ್ರವಾಹನ II (ಸು.765-800) — ರಣಸಾಗರ (ಸು.765-805)

ಚಿತ್ರವಾಹನ II → ಶ್ವೇತವಾಹನ (ಸು.805-15)

ರಣಸಾಗರ → ಪೃಥ್ವೀಸಾಗರ (ಆಳುವರಸ III) (ಸು.810-40)
|
ಮಾರಮ್ಮ (ಆಳುವರಸ IV, ಸು.840-70)
|
ವಿಮಲಾದಿತ್ಯ (ಸು.870-900)
|
ಆಳ್ವ ರಣಂಜಯ (ಸು.900-30) — ದತ್ತಾಳುಪ 1 (ಸು.930-50)

ಇವರಲ್ಲಿ 1ನೆಯ ಆಳುವರಸ ಚಳುಕ್ಯ 1ನೆಯ ವಿಕ್ರಮಾದಿತ್ಯನ ಸಾಮಂತನೂ ಪರಮಮಿತ್ರನೂ ಆಗಿದ್ದು, ತುಳುನಾಡಿಗಷ್ಟೇ ಅಲ್ಲದೆ ಕದಂಬ ಮಂಡಲಕ್ಕೂ ಪೊಂಬುಚ್ಚ ಪ್ರಾಂತಕ್ಕೂ ದೊರೆಯಾಗಿದ್ದ. ಚಕ್ರವರ್ತಿಯ ಬೇಡಿಕೆಯ ಮೇರೆಗೆ ದೂರದ (ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ) ಕಲ್ಲೂರಿಗೆ ತೆರಳಿದ್ದ ಈತ 663ರಲ್ಲಿ ಅಲ್ಲೇ ಅಸು ನೀಗಿದನೆಂದು ಮಾರುಟೂರು ತಾಮ್ರಶಾಸನದಿಂದ ತಿಳಿಯುತ್ತದೆ. ಅವನ ಮಗ 1ನೆಯ ಚಿತ್ರವಾಹನನ ಸುಮಾರು ಏಳು ದಶಕಗಳ ದೀರ್ಘ ಆಳ್ವಿಕೆಯ ಕಾಲ ಪ್ರಾಚೀನ ಆಳುಪರ ಸುವರ್ಣಯುಗ. ಮಧುರೆಯ ಪಾಂಡ್ಯರ ದಾಳಿಯನ್ನು



ಬೈಂದೂರಿನ ಸೇನೇಶ್ವರ ದೇವಾಲಯ

ಬೈಂದೂರಿನ ಸೇನೇಶ್ವರ ದೇವಾಲಯದಲ್ಲಿರುವ ಸರಸ್ವತಿ



ಬಾರಕೂರಿನ ಪಂಚಲಿಂಗೇಶ್ವರ ದೇವಾಲಯದಲ್ಲಿರುವ ಸ್ಕಂದ



ಕೋಟದ ಹಿರಿಯ ದೇವಾಲಯ

ಮಂಗಲಪುರದಲ್ಲಿ ತಡೆಹಿಡಿದು ಹಿಮ್ಮೆಟ್ಟಿಸಿ 'ಚಾಲುಕ್ಯ ರಾಜ್ಯಾಭಿವೃದ್ಧಿ ಹೇತುಭೂತಃ' ಎಂದು ಚಳುಕ್ಯರಿಂದ ಹೊಗಳಿಸಿಕೊಂಡ ಈ ಚಿತ್ರವಾಹನ ಚಳುಕ್ಯ ವಿಜಯಾದಿತ್ಯನ ತಂಗಿ ಕುಂಕುಮದೇವಿಯನ್ನು ಮದುವೆಯಾಗಿದ್ದ. ಇವನು ಕದಂಬಮಂಡಲ ಮತ್ತು ಪೊಂಬುಚ್ಚ ಪ್ರದೇಶಕ್ಕೆ ಅಧಿಪತಿಯಾಗಿದ್ದ. ಆದರೆ ಇವನ ಮಗ 2ನೆಯ ಆಳುವರಸನ ಆಳಿಕೆಯಲ್ಲಿ ಆಳುಪರು ಚಳುಕ್ಯರೊಡನೆ ವೈಮನಸ್ಯ ಬೆಳೆಸಿ ಕದಂಬಮಂಡಲವನ್ನು ಕಳೆದುಕೊಂಡರಲ್ಲದೆ ಕಾಂಚೀಪುರದ ಪಲ್ಲವರ ಸಾಮಂತರಾದರು. ಅವನು ತೀರಿಕೊಂಡಾಗ ಅವನ ಹಿರಿಯ ಮಗ 2ನೆಯ ಚಿತ್ರವಾಹನ ಪೊಂಬುಚ್ಚ ಪ್ರದೇಶಕ್ಕೂ ಕಿರಿಯ ಮಗ ರಣಸಾಗರ ತುಳುನಾಡಿಗೂ ಅಧಿಪತಿಗಳಾದರು. ರಾಷ್ಟ್ರಕೂಟ 3ನೆಯ ಗೋವಿಂದನ ದಾಳಿಗೆ ತುತ್ತಾಗಿ 2ನೆಯ ಚಿತ್ರವಾಹನ ಪೊಂಬುಚ್ಚ ಪ್ರದೇಶದಿಂದ ಕಾಲ್ತೆಗೆಯಬೇಕಾಗಿ ಬಂದಾಗ ಅವನು ತುಳುನಾಡಿಗೆ ಹಿಂತಿರುಗುವುದು ಅನಿವಾರ್ಯವಾಯಿತು. ಇದರಿಂದ ಉದ್ಭವಿಸಿದ ಯಾದವೀ ಕಲಹಗಳಲ್ಲಿ 2ನೆಯ ಚಿತ್ರವಾಹನ, ಅವನ ಮಗ ಶ್ವೇತವಾಹನ ಮತ್ತು ಸಹೋದರ ರಣಸಾಗರ ಇವರು ಅಸು ನೀಗಿದರು. ಈ ಯಾದವೀ ಕಲಹವನ್ನು ಕೊನೆಗೊಳಿಸಿದವ ರಣಸಾಗರನ ಮಗ ಪೃಥ್ವೀಸಾಗರ. ಅವನ ಮಗ ಮಾರಮ್ಮನು ಪರಮೇಶ್ವರ, ಅಧಿರಾಜರಾಜ ಎಂಬೀ ಪರಮಾಧಿಕಾರ ದ್ಯೋತಕವಾದ ಬಿರುದುಗಳನ್ನು ಧರಿಸಿದ್ದ. ಅವನ ಅನಂತರ ಪಟ್ಟಕ್ಕೆ ಬಂದ ವಿಮಳಾದಿತ್ಯ ಸು.900ರಲ್ಲಿ ರಾಷ್ಟ್ರಕೂಟರ ದಾಳಿಗೆ ತುತ್ತಾದ. ಆಳ್ವ ರಣಂಜಯ ತನ್ನ ಮಗಳು ಎಂಜಲದೇವಿಯನ್ನು ಶಾಂತರ ಮನೆತನದ ಚಾಗಿಶಾಂತರನಿಗೆ ಮದುವೆ ಮಾಡಿಕೊಟ್ಟಿದ್ದ. ಅವನು ತೀರಿಕೊಂಡಾಗ ಅವನ ಮಗ ಪ್ರಾಪ್ತವಯಸ್ಕನಿರದಿದ್ದ ಕಾರಣ, ಅವನ ತಮ್ಮ ದತ್ತಾಳುಪ ಸಿಂಹಾಸನವನ್ನೇರಿದ.

ಈ ಮೇಲಿನ ಆಳುಪ ಅರಸುಗಳು ಹೊರಡಿಸಿದ ಯಾವ ಶಾಸನಗಳಲ್ಲೂ ತೇದಿಯ ವಿವರಗಳಿಲ್ಲವಾದ ಕಾರಣ, ಅವರುಗಳ ಕಾಲನಿರ್ಣಯ ಮಾಡುವಲ್ಲಿ ತೌಲನಿಕ ಲಿಪಿಶಾಸ್ತ್ರವನ್ನು ಮರೆಹೋಗುವುದು ಅನಿವಾರ್ಯ. ಆದರೆ ದತ್ತಾಳುಪನನ್ನು ಪದಚ್ಯುತಗೊಳಿಸಿ ತನ್ನ ತಂದೆಯ ಸಿಂಹಾಸನವನ್ನು ತನ್ನದಾಗಿಸಿಕೊಂಡ ಕುಂದವರ್ಮನ ಕಾಲದಿಂದೀಚೆಗಿನ ಆಳುಪ ಶಾಸನಗಳಲ್ಲಿ ಹೆಚ್ಚಿನವು ತೇದಿಯ ವಿವರಗಳನ್ನೊಳಗೊಂಡಿವೆ. ಈ ಮಧ್ಯಯುಗೀನ ಆಳುಪರ ವಂಶವೃಕ್ಷ ಕೆಳಗಿನಂತಿದೆ

ಕುಂದವರ್ಮ (950-80)
|
ಜಯಸಿಂಹ 1 (980-1010)
|
ಚೋಳರ ಆಕ್ರಮಣ (1010-20)
|
ಬಂಕಿದೇವ 1 (1020-50)
|
ಪಟ್ಟಿಯೊಡೆಯ ಆಳುವರಸ 5 (1050-80)
|
ಪಾಂಡ್ಯಪಟ್ಟಿಯೊಡೆಯ ಜಯಸಿಂಹ II (1080-1110)
|
ಕವಿ ಆಳುಪೇಂದ್ರ (1110-60)
|
ಪತ್ನಿ, ಪಾಂಡ್ಯಮಹಾದೇವಿ
|
ಕುಲಶೇಖರ I (1160-1220)
|
ಪತ್ನಿ, ಜಾಕಲಮಹಾದೇವಿ
|
ಸಾಂತರ ಮನೆತನದ ಕುಂಡಣ (1220-30)
|
ವಲ್ಲಭದೇವ ದತ್ತಾಳುಪ II (1230-50)

ವೀರಪಾಂಡ್ಯ II (1250-75) ... ಮಗಳು
|
ಪತ್ನಿ ಬಲ್ಲಮಹಾದೇವಿ (1275-92) ... 2ನೆಯ ಬಂಕಿದೇವ (1285-1315)
|
ನಾಗದೇವರಸ (1290-1300)

2ನೆಯ ಬಂಕಿದೇವ (1285-1315)
|
ಸೋಯಿದೇವ (1315-35)
ಕುಲಶೇಖರ II (1335-46)
ಬಂಗಿದೇವ III (1346-55)
ಕುಲಶೇಖರ III (1355-90)
ವೀರಪಾಂಡ್ಯ II (1390-1400)

ಪ್ರಾಚೀನ ಆಳುಪರು ಕದಂಬ ಮಂಡಲವನ್ನು ಕಳೆದುಕೊಂಡ ಮೇಲೂ ಪೊಂಬುಚ್ಚ ಪ್ರದೇಶದ ಮೇಲಿನ ತಮ್ಮ ಆಧಿಪತ್ಯವನ್ನು ಉಳಿಸಿಕೊಂಡಿದ್ದರಾದರೆ, ಮಧ್ಯಯುಗೀನ ಆಳುಪರ ಅಧಿಕಾರ ತುಳುನಾಡಿಗೆ ಮಾತ್ರ ಸೀಮಿತಗೊಂಡಿತ್ತು. ಪ್ರಾಚೀನ ಆಳುಪರ ಕಾಲದಲ್ಲಿ ಉದಯಪುರ (ಇಂದಿನ ಉದ್ಯಾವರ), ಮಂಗಳಪುರ (ಇಂದಿನ ಮಂಗಳೂರು), ಪಟ್ಟಿಪೊಂಬುಚ್ಚ (ಇಂದಿನ ಹುಮಚ) ಮತ್ತು ಬನವಾಸಿ ಆಳುಪರ ರಾಜಧಾನಿಗಳಾಗಿ ಮೆರೆದಿದ್ದವಾದರೆ ಮಧ್ಯಯುಗದಲ್ಲಿ ಮಂಗಳಪುರ ಮತ್ತು ಬಾರಹಕನ್ಯಾಪುರ (ಇಂದಿನ ಬಾರಕೂರು) ಅವರ ರಾಜಧಾನಿಗಳಾಗಿದ್ದವು. ರಾಜ್ಯವಿಸ್ತಾರವು ಕುಂಠಿತಗೊಂಡಿದ್ದರೂ ಮಧ್ಯಯುಗದ ಆಳುಪರು ತಮ್ಮ ರಾಜ್ಯದೊಳಗೆ ಸರ್ವತಂತ್ರಸ್ವತಂತ್ರರಾಗಿಯೇ ಮೆರೆದಿದ್ದರಾಗಿ, ಪ್ರಾಚೀನ ಆಳುಪರಿಗಿಂತಲೂ ಹೆಚ್ಚಿನ ಸಂಖ್ಯೆಯ ಆಡಂಬರದ ಬಿರುದುಗಳನ್ನು ಧರಿಸಿದ್ದರು. ಉದಾಹರಣೆಗೆ ಪಾಂಡ್ಯಚಕ್ರವರ್ತಿ, ಸಮಸ್ತಭುವನಾಶ್ರಯ ಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಪರಮ ಭಟ್ಟಾರಕ, ಪಂಡಿತ ಪಾಂಡ್ಯ, ಪಾಂಡ್ಯ ಧನಂಜಯ ಇತ್ಯಾದಿ.

ಕುಂದವರ್ಮನ ಉತ್ತರಾಧಿಕಾರಿಯಾದ 1ನೆಯ ಜಯಸಿಂಹನ ಆಳ್ವಿಕೆಯ ಕೊನೆಯಲ್ಲಿ ತುಳುನಾಡು ಚೋಳರ ದಾಳಿಗೆ ತುತ್ತಾಗಿ ಸುಮಾರು ಹತ್ತು ವರ್ಷಗಳ ಕಾಲ ಅವರ ಆಕ್ರಮಣಕ್ಕೊಳಗಾಗಿತ್ತು. ಪುನಃ ಆಳುಪರ ಅಧಿಕಾರವನ್ನು ಸ್ಥಾಪಿಸಿದ ಕೀರ್ತಿ 1ನೆಯ ಬಂಕಿದೇವನದು. ಪಾಂಡ್ಯ ಪಟ್ಟಿಯೊಡೆಯ 2ನೆಯ ಜಯಸಿಂಹ ದ್ವಾರಸಮುದ್ರದ ಹೊಯ್ಸಳರ ದಾಳಿಯನ್ನು ಎದುರಿಸಿ ಸೋಲನ್ನನುಭವಿಸಬೇಕಾಯಿತು. ಆದರೂ ಈ ದಾಳಿಯಿಂದಾಗಿ ಆಳುಪರ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗಲಿಲ್ಲ. ಅದರಂತೆಯೆ ಕವಿ ಆಳುಪೇಂದ್ರನ ಆಳ್ವಿಕೆಯಲ್ಲಿ ಹೊಯ್ಸಳರು ತುಳುನಾಡಿನ ಮೇಲೆ ನಡೆಸಿದ ಎರಡನೆಯ ದಾಳಿಯಿಂದಲೂ ಆಳುಪರಿಗೆ ಸ್ವಾತಂತ್ರ್ಯಚ್ಯುತಿ ಉಂಟಾಗಲಿಲ್ಲ. ಕವಿ ಆಳುಪೇಂದ್ರನ ಮಹಿಷಿ ಪಾಂಡ್ಯಮಹಾದೇವಿ ಆಡಳಿತ ಕ್ಷೇತ್ರದಲ್ಲಿ ಪ್ರಮುಖಪಾತ್ರ ವಹಿಸಿದ್ದಳು. 1ನೆಯ ಕುಲಶೇಖರನ ರಾಣಿ ಜಾಕಲ ಮಹಾದೇವಿ ಸ್ವತಃ ಜೈನಧರ್ಮದವಳಿದ್ದು ಅನೇಕ ಧರ್ಮಕಾರ್ಯಗಳನ್ನು ನೆರವೇರಿಸಿದಳು.

1ನೆಯ ಕುಲಶೇಖರನ ತರುವಾಯ ಪಟ್ಟಕ್ಕೆ ಬಂದವನು ಶಾಂತರ ಮನೆತನದ ಕುಂಡಣ. ಇವನ ಆಳ್ವಿಕೆಗೆ ಸೇರಿದ ವರಾಂಗ ಶಿಲಾಶಾಸನ ಒಳ್ಳೆಯ ಕಾವ್ಯಶೈಲಿಯಲ್ಲಿ ರಚಿತವಾಗಿದ್ದು. ಅಂದಿನ ತುಳುನಾಡಿನ ರಾಜಕೀಯ ಧಾರ್ಮಿಕ ಸ್ಥಿತಿಗತಿಗಳ ಬಗೆ ಹೆಚ್ಚಿನ ಅಂಶಗಳನ್ನು ಹೊರಗೆಡುಹುವಂತಹದಾಗಿದೆ. 2ನೆಯ ದತ್ತಾಳುಪನ ಉತ್ತರಾಧಿಕಾರಿಯಾದ 1ನೆಯ ವೀರಪಾಂಡ್ಯದೇವ ಆಳುಪೇಂದ್ರದೇವ 25 ವರ್ಷಗಳ ಕಾಲ ರಾಜ್ಯವಾಳಿದ. ಅನಂತರ ಅವನ ಅರಸಿ ಬಲ್ಲಮಹಾದೇವಿ 17 ವರ್ಷಗಳ ಕಾಲ ಆಳುಪ ಸಿಂಹಾಸನವನ್ನಲಂಕರಿಸಿದ್ದಳು. ಅನಂತರ ಅವಳ ಮಗ ನಾಗದೇವರಸ ರಾಜ್ಯವಾಳಿದ ಬಗೆಗೆ ಶಾಸನಾಧಾರ ದೊರೆತಿರುವುದಾದರೂ ಅವಳ ಆಳ್ವಿಕೆಯ ಕಾಲದಲ್ಲೇ 1ನೆಯ ವೀರಪಾಂಡ್ಯದೇವನ ಅಳಿಯನಾದ 2ನೆಯ ಬಂಕಿದೇವ ದಂಗೆಯೆದ್ದಿದ್ದನೆಂದೂ ನಾಗದೇವರಸನ ತರುವಾಯ ಅವನೇ ತುಳುನಾಡಿನ ಏಕಾಧಿಪತಿಯಾದನೆಂದೂ ಅಂದಿನ ಶಾಸನಗಳಿಂದ ತಿಳಿದುಬರುತ್ತದೆ. ಅವನ ಆಳ್ವಿಕೆಯಲ್ಲಿ ತುಳುನಾಡಿನಲ್ಲಿ ಅನಾವೃಷ್ಟಿಯ ತೊಂದರೆ ಉಂಟಾಗಿತ್ತೆಂದೂ ಅವನ ಮೊರೆಗೆ ಓಗೊಟ್ಟು ತಿಮಿರೇಶ್ವರದೇವರು ಮಳೆ ತರಿಸಿದ್ದಕ್ಕೆ ಆ ದೇವರಿಗೆ ಬಂಕಿದೇವನು ದಾನಗಳನ್ನು ನೀಡಿದನೆಂದೂ 1305ರ ಸುಜೇರು ಶಾಸನ ತಿಳಿಸುತ್ತದೆ.

2ನೆಯ ಬಂಕಿದೇವನ ಉತ್ತರಾಧಿಕಾರಿ ಸೋಯಿದೇವನ ಆಳಿಕೆಯಲ್ಲಿ (1333ರಲ್ಲಿ), ಹೊಯ್ಸಳ 3ನೆಯ ಬಲ್ಲಾಳ ತುಳುನಾಡನ್ನು

ಆಕ್ರಮಿಸಿಕೊಂಡ. ಹೊಯ್ಸಳರನ್ನು ಹೊಡೆದೋಡಿಸುವ ಶಕ್ತಿ ಸಾಮರ್ಥ್ಯಗಳಿಲ್ಲದ ಆಳುಪರು ತಮ್ಮ ಸಿಂಹಾಸನವನ್ನು ಉಳಿಸಿಕೊಳ್ಳುವ ಸಲುವಾಗಿ ಆಳುಪ ರಾಜಕುಮಾರಿ ಕಿಕ್ಕಾಯಿ ತಾಯಿಯನ್ನು 3ನೆಯ ಬಲ್ಲಾಳನಿಗೆ ಮದುವೆ ಮಾಡಿಕೊಟ್ಟರು. ಅಂದಿನಿಂದ 1345ರ ವರೆಗೂ ಆಳುಪರೂ ಹೊಯ್ಸಳರೂ ತುಳುನಾಡಿನ ಮೇಲೆ ಪರಸ್ಪರ ಸ್ವತಂತ್ರವಾಗಿಯೇ ಅಧಿಕಾರ ಚಲಾಯಿಸುತ್ತಿದ್ದರೆಂಬುದು ಅಂದಿನ ಶಾಸನಗಳಿಂದ ವಿಶದವಾಗುತ್ತದೆ.

2ನೆಯ ಕುಲಶೇಖರನ ಆಳ್ವಿಕೆಯ ಕೊನೆಯ ವರ್ಷ 1345-46ರಲ್ಲಿ ತುಳುನಾಡಿನ ಮೇಲೆ ಆಳುಪರೂ ಹೊಯ್ಸಳರೂ ವಿಜಯನಗರದವರೂ ಪರಸ್ಪರ ಸ್ವತಂತ್ರರಾಗಿಯೇ ಅಧಿಕಾರ ನಡೆಸಿದ ಕುತೂಹಲಕಾರಿಯಾದ ಸನ್ನಿವೇಶ ಒದಗಿಬಂದಿತು. ಅಲ್ಲಿಂದ ಮುಂದೆ ಸುಮಾರು ಐದು ದಶಕಗಳ ಕಾಲ ಆಳುಪ ಮನೆತನದ 3ನೆಯ ಬಂಕಿದೇವ, 3ನೆಯ ಕುಲಶೇಖರ ಮತ್ತು 3ನೆಯ ವೀರಪಾಂಡ್ಯ ಇವರು ಸ್ವತಂತ್ರರಾಗಿಯೇ ರಾಜ್ಯವಾಳಿದರು. 15ನೆಯ ಶತಮಾನ ಪ್ರಾರಂಭವಾಗುವ ವೇಳೆಗೆ ಆಳುಪರ ಆಡಳಿತ ಕೊನೆಗೊಂಡು, ತುಳುನಾಡು ವಿಜಯನಗರ ಸಾಮ್ರಾಟರ ಪರಮಾಧಿಕಾರಕ್ಕೊಳಗಾಯಿತು.

ಶಾಸನಗಳು, ನಾಣ್ಯಗಳು: 7ನೆಯ ಶತಮಾನದ ಮಧ್ಯಭಾಗದಿಂದ 10ನೆಯ ಶತಮಾನದ ಮಧ್ಯಕಾಲದ ವರೆಗಿನ, ತುಳುನಾಡಿನ ಕೆಲವೆಡೆಗಳಲ್ಲಿ ಕಂಡುಬರುವ ಪ್ರಾಚೀನ ಆಳುಪರ ಶಿಲಾಶಾಸನಗಳ ಭಾಷೆ, ಸಂಸ್ಕೃತ ಅಥವಾ ಹಳಗನ್ನಡ ಮತ್ತು ಲಿಪಿ ಹಳಗನ್ನಡ. ಈಚೆಗೆ ದೊರೆತಿರುವ, 8ನೆಯ ಶತಮಾನದ ಪೂರ್ವಾರ್ಧದಲ್ಲಿ ಹೊರಬಿದ್ದ ಬೆಳ್ಮಣ್ಣು ತಾಮ್ರಶಾಸನ

ಆಳುಪ ಎರಡನೆಯ ಚಿತ್ರವಾಹನನ ಉದ್ಯಾವರ ಶಾಸನ (8ನೆಯ ಶತಮಾನ)

ಆಳುಪ ಮನೆತನದ ಏಕೈಕ ತಾಮ್ರ ಶಾಸನವಷ್ಟೇ ಅಲ್ಲದೆ, ಕನ್ನಡ ಭಾಷೆಯ ಪ್ರಾಚೀನತಮ ತಾಮ್ರಶಾಸನವೂ ಆಗಿರುತ್ತದೆ. ಉಡುಪಿ ತಾಲ್ಲೂಕಿನ ವಡ್ಡರ್ಸೆಯ ಹಳಗನ್ನಡ ಶಾಸನ ಆಳುಪರ ಶಾಸನಗಳಲ್ಲಿ ಪ್ರಾಚೀನತಮ ತಾಮ್ರಶಾಸನವೂ ಆಗಿರುತ್ತದೆ. ಉಡುಪಿ ತಾಲ್ಲೂಕಿನ ವಡ್ಡರ್ಸೆಯ ಹಳಗನ್ನಡದ ಶಾಸನ ಆಳುಪರ ಶಾಸನಗಳಲ್ಲಿ ಪ್ರಾಚೀನತಮವಾದದ್ದು. ಇದು 1ನೆಯ ಆಳುವರಸನಾಳ್ವಿಕೆಗೆ (ಸು.650-663) ಸೇರಿದ್ದು. 8-9ನೆಯ ಶತಮಾನದ ಸಂಧಿಕಾಲದಲ್ಲಿ ಆಳುಪರ ನಡುವೆ ನಡೆದು ಹೋದ ಭೀಕರ ಯಾದವೀಕಲಹಕ್ಕೆ ಸಂಬಂಧಿಸಿದ ವೀರಗಲ್ಲು ಶಾಸನಗಳೂ ತುಳುನಾಡಿನ ಕೆಲವೆಡೆಗಳಲ್ಲಿ ದೊರೆತಿವೆ. ಪ್ರಾಚೀನ ಆಳುಪರ ಯಾವ ಶಾಸನಗಳಲ್ಲೂ ತೇದಿಯ ವಿವರಗಳನ್ನು ನೀಡಲಾಗಿಲ್ಲ. ಪ್ರಾಚೀನ ಕಾಲದಲ್ಲಿ ತುಳುನಾಡು ನೆರೆಹೊರೆಯ ಪ್ರಾಂತ್ಯಗಳೊಂದಿಗೆ ಹೆಚ್ಚಾಗಿ ಬೆರೆಯದೆ ಉಳಿದಿತ್ತಾದ ಕಾರಣ ಆ ಕಾಲದ ತುಳುನಾಡಿನ ಶಾಸನಗಳಲ್ಲಿ ಇತರ ಪ್ರಾಂತ್ಯಗಳ ಕನ್ನಡ ಶಾಸನಗಳಲ್ಲಿ ಗುರುತಿಸಬಹುದಾದಷ್ಟು ಬಿರುಸಿನ ಬದಲಾವಣೆಗಳೂ ಬೆಳವಣಿಗೆಗಳೂ ಕಂಡುಬರುವುದಿಲ್ಲ. ಆದಕಾರಣ ಪ್ರಾಚೀನ ಆಳುಪರ ಶಾಸನಗಳ ಕಾಲವನ್ನು ತೌಲನಿಕ ಲಿಪಿಶಾಸ್ತ್ರದ ಸಹಾಯ ಪಡೆದು ನಿರ್ಣಯಿಸುವಲ್ಲಿ ಜಾಗರೂಕತೆ ವಹಿಸಬೇಕಾದುದು ಅತ್ಯಗತ್ಯ. ಪ್ರಾಚೀನ ಆಳುಪರ ಶಾಸನಗಳ ಪಾಠಗಳು ಅತ್ಯಂತ ಸಂಕ್ಷಿಪ್ತವಾಗುವ ಕಾರಣ, ಆ ಕಾಲದ ತುಳುನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಇತಿಹಾಸವನ್ನು ಪುನಾರಚಿಸುವಲ್ಲಿ ಅವುಗಳಿಂದ ಹೆಚ್ಚಿನ ಸಹಾಯ ದೊರೆಯುವುದಿಲ್ಲ. 'ವಾರಕೆಯ್', 'ಮುದಿಮೆಗೆಯ್', 'ನಾಟ್ಟು ಮುದಿಮೆ' ಮುಂತಾದ ಕೆಲವು ಪ್ರಾಂತೀಯ ಪಾರಿಭಾಷಿಕ ಪ್ರಯೋಗಗಳು ಅಂದಿನ ಆಳುಪರ ಶಾಸನಗಳಲ್ಲಿ ಕಂಡುಬರುವುದನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ.

10 ರಿಂದ 14ನೆಯ ಶತಮಾನಗಳ ವರೆಗಿನ ಮಧ್ಯಯುಗೀನ ಆಳುಪರ ಶಾಸನಗಳೆಲ್ಲ ಶಿಲಾಶಾಸನಗಳು. ಅವುಗಳ ಭಾಷೆ ಸಂಸ್ಕೃತ ಅಥವಾ ಕನ್ನಡ. ಲಿಪಿ ಕನ್ನಡ, ಗ್ರಂಥ ಅಥವಾ ಮಲೆಯಾಳಂ. ಇವುಗಳಲ್ಲಿ ಹೆಚ್ಚಿನವು ತೇದಿಯ ವಿವರಗಳನ್ನೊಳಗೊಂಡಿರುವ ಕಾರಣ ಆ ಕಾಲದ ತುಳುನಾಡಿನ ಇತಿಹಾಸವನ್ನು ಅರಿತುಕೊಳ್ಳುವಲ್ಲಿ ಸಂಶಯುಗಳಿಗೂ ಊಹಾಪೋಹಗಳಿಗೂ ಅವಕಾಶ ತೀರ ಕಡಿಮೆ. ಆಳುಪ ಅರಸು ಕುಂದವರ್ಮನ ಆಳ್ವಿಕೆಯಲ್ಲಿ ಬರೆಯಲಾದ ಕದಿರಿಯ ಲೋಕೇಶ್ವರ ಪ್ರತಿಮಾ ಶಾಸನ 968 ತೇದಿಯ ವಿವರಗಳನ್ನೊಳಗೊಂಡಿರುವ ಆಳುಪ ಶಾಸನಗಳಲ್ಲಿ ಪ್ರಾಚೀನತಮದ್ದು. ಮಧ್ಯಯುಗೀನ ಆಳುಪರ ಶಾಸನಗಳಲ್ಲಿ



ಆಳುಪ ನಾಣ್ಯಗಳು

ತಿಂಗಳು, ತಿಥಿಗಳನ್ನು ನೀಡುವಲ್ಲಿ ಹೆಚ್ಚಾಗಿ ಸೌರಮಾನ ಪದ್ಧತಿಯನ್ನು ಬಳಸಲಾಗಿದೆ. ಹಲವು ಶಾಸನಗಳ ಪಾಠಗಳು ಸುದೀರ್ಘವಿದ್ದು ಆ ಕಾಲದ ತುಳುನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಬೀರುತ್ತವೆ. ಇಲ್ಲಿಯವರೆಗೆ ದೊರೆತಿರುವಂತೆ 1392ರಲ್ಲಿ ಬರೆಯಲಾದ 2ನೆಯ ವೀರಪಾಂಡ್ಯದೇವನ ಮೂಡಬಿದರೆ ಶಾಸನವೇ ಆಳುಪರ ಕೊನೆಯ ಶಾಸನ.

ಈ ಕಾಲದಲ್ಲಿ ಆಳುಪರು ಹೊರಡಿಸಿದ ಕೆಲವು ನಾಣ್ಯಗಳೂ ದೊರಕಿವೆ. ಇವು ವೃತ್ತಾಕಾರದ ತಾಮ್ರನಾಣ್ಯಗಳು. ಮೀನಮಿಥುನದ ಚಿತ್ರ ಮತ್ತು ಶ್ರೀ ಪಾಂಡ್ಯ ಧನಂಜಯ ಎಂಬ ಬರೆಹ ಕನ್ನಡ ಅಥವಾ ನಾಗರಿ ಲಿಪಿಯಲ್ಲಿ ಇರುತ್ತವೆ. ಈ ನಾಣ್ಯಗಳು ದಕ್ಷಿಣ ಕನ್ನಡ ಜಿಲ್ಲೆಯ ಆಸುಪಾಸಿನಲ್ಲಿವೆ ಸಿಂಹಳದಲ್ಲಿ ಸಹ ದೊರಕಿವೆ. (ಕೆ.ವಿ.ಆರ್.)

**ವಾಸ್ತುಶಿಲ್ಪ :** ಆಳುಪರ ಆಳ್ವಿಕೆಯಲ್ಲಿಯೇ ಕಟ್ಟಲಾದುವೆಂದು ಶಾಸನಾಧಾರಗಳ ಸಹಿತವಾಗಿ ಹೇಳಬಹುದಾದ ಕಟ್ಟಡಗಳು ಬೆಳಕಿಗೆ ಬಂದಿಲ್ಲ. ಆದರೆ ಈ ಕಾಲದಲ್ಲಿ ಕಣಶಿಲೆಯ ಮತ್ತು ಜಂಬುಕಲ್ಲಿನ ಹಲವು ದೇವಾಲಯಗಳು ರಚಿತವಾಗಿರಬೇಕೆಂದು ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಬಹುದಾಗಿದೆ. ಇವುಗಳ ಬಗ್ಗೆಯೂ ಪ್ರಕಟವಾಗಿರುವ ವಿವರಗಳು ಕಡಿಮೆ. ಬಾರಕೂರಿನ ಪಂಚಲಿಂಗೇಶ್ವರ (ಮಾರ್ಕಂಡೇಶ್ವರ) ದೇವಾಲಯ 8ನೆಯ ಶತಮಾನದ್ದು ಎನ್ನಲಾಗಿದೆ. ಇದು ಗಜಪೃಷ್ಠಾಕಾರದ ತಳವಿನ್ಯಾಸವಿರುವ ಕಟ್ಟಡ. ಬ್ರಹ್ಮಾವರದ ಮಹಾಲಿಂಗೇಶ್ವರ ಸು.9ನೆಯ ಶತಮಾನ, ಕೋಟೇಶ್ವರದ ಕೋಟಿನಾಥ (ಸು.9-10ನೆಯ ಶತಮಾನ), ಕಡಂದಲೆಯ ಸುಬ್ರಹ್ಮಣ್ಯ (ಸು.9ನೆಯ ಶತಮಾನ), ಸುರತ್ಕಲ್ಲಿನ ಸದಾಶಿವ (ಸು.9-10ನೆಯ ಶತಮಾನ) ಈ ದೇವಾಲಯಗಳೂ ಗಜಪೃಷ್ಠಾಕಾರದವೇ. ಈ ಕಾಲದ ದೇವಾಲಯಗಳು ಸಾಮಾನ್ಯವಾಗಿ ಅಡ್ಡಪಟ್ಟಿಕೆಗಳ ಅಧಿಷ್ಠಾನ, ಅದರ ಮೇಲೆ ಅರೆಗಂಬಗಳು ಮತ್ತು ಕೋಷಗಳಿಂದ ಅಲಂಕೃತವಾದ ಭಿತ್ತಿ ಇರುತ್ತವೆ. ಆ ಕಾಲದ ಚಾವಣಿಗಳು ಉಳಿದುಬಂದಂತಿಲ್ಲ. ದೇವಾಲಯಗಳಲ್ಲಿ ಗೋಪುರಗಳಾಗಲೀ ಶಿಖರಗಳಾಗಲೀ ಇದ್ದ ಸೂಚನೆಗಳೂ ದೊರಕುವುದಿಲ್ಲ. ದೇವಾಲಯಗಳ ಭಿತ್ತಿ ಅಲಂಕರಣ, ಚೋಳ ಮತ್ತು ಗಂಗ ರೀತಿಯವುಗಳಿಗೆ ಹೊಂದಿಕೊಳ್ಳುತ್ತದೆ. 11ನೆಯ ಶತಮಾನದ ಸೇನೇಶ್ವರ ಗುಡಿಯಲ್ಲಿ ಮಾತ್ರ ಅಲಂಕರಣ ಸರಳವಾಗಿದ್ದರೂ ಕದಂಬ ನಾಗರ ರೀತಿಯ ಶಿಖರಗಳಿವೆ.

ಆಳುಪರ ಕಾಲದ ಶಿಲ್ಪ ಶೈಲಿಯನ್ನು ಪರಿಶೀಲಿಸಿದರೆ ಹೆಚ್ಚಿನ ಅಂಶಗಳಲ್ಲಿ ಆ ಶೈಲಿಯು ಬಾದಾಮಿ ಚಳುಕ್ಯ ಹಾಗೂ ಕಲ್ಯಾಣ ಚಾಳುಕ್ಯ ಶೈಲಿಯನ್ನೇ ಹೋಲುತ್ತದೆ. ಕೆಲವೊಮ್ಮೆ ಪಲ್ಲವ, ಚೋಳ ಶಿಲ್ಪಶೈಲಿಯೂ ಕಂಡುಬರುತ್ತದೆ. ಇದಕ್ಕೆ ಕಾರಣ ಪಲ್ಲವ, ಚೋಳ ರಾಜ್ಯಗಳೊಡನಿದ್ದ ಸಾಂಸ್ಕೃತಿಕ ಸಂಪರ್ಕ. ಆದುದರಿಂದ ಆಳುಪರ ಶಿಲ್ಪಶೈಲಿಯನ್ನು ಪ್ರತ್ಯೇಕವಾದ ಒಂದು ವರ್ಗಕ್ಕೆ ಅನ್ವಯಿಸುವುದು ಕಷ್ಟ. ಆಳುಪ ಕಾಲದ ಬಾದಾಮಿ, ಕಲ್ಯಾಣಚಾಳುಕ್ಯ ಮತ್ತು ಹೊಯ್ಸಳ ಶೈಲಿಗಳಿಗೆ ಈ ಕೆಳಗಿನ ದೃಷ್ಟಾಂತಗಳನ್ನೀಯಬಹುದು. ಬಾದಾಮಿ ಚಳುಕ್ಯ ಶೈಲಿ: ಶ್ರೀವಳ್ಳಿಯ ಕಡಿಯಾಳಿ ಮಹಿಷಮರ್ದಿನಿ, ನಂದಿಕೂರಿನ ಮಹಿಷಮರ್ದಿನಿ, ಬೆಳ್ಮಣ್ಣಿನ ಮಹಿಷಮರ್ದಿನಿ, ಮುಂಡುಕೂರಿನ ಮಹಿಷಮರ್ದಿನಿ, ಮೂಡಬಿದರೆಯ ಮಹಿಷಮರ್ದಿನಿ. ಕಲ್ಯಾಣಚಾಳುಕ್ಯ ಶೈಲಿ: ಬೈಂದೂರು ಸೇನೇಶ್ವರ ದೇವಾಲಯದ ಅಪ್ರತಿಮ ಮೂರ್ತಿಗಳು, ನೀಲಾವರದ ದುರ್ಗಾಭಗವತಿ, ಬಾರಕೂರಿನ ಕೋಟೆಕೇರಿ ವೇಣುಗೋಪಾಲಕೃಷ್ಣ, ಕುಂಭಾಶಿಯ ಕೇಶವ. ಹೊಯ್ಸಳ ಶೈಲಿ: ಕಾರ್ಕಳದ ಅನಂತಶಯನ, ಮಂಗಳೂರಿನ ಅತ್ತಾವರದ ಚಕ್ರಪಾಣಿ ಗೋಪಾಲಕೃಷ್ಣ, ತೊದ್ದಳ್ಳಿ ವಾಸುದೇವ. ಚೋಳರ ಶೈಲಿ: ಉಡುಪಿ ಚಂದ್ರೇಶ್ವರ ದೇವಾಲಯದ ಪಂಚಲೋಹದ ಸದಾಶಿವ, ಪೇರಂಪಳ್ಳಿಯ ಪಂಚಲೋಹದ ಸದಾಶಿವ, ಉಡುಪಿ ಶ್ರೀಕೃಷ್ಣಮಠದ ನಾರಾಯಣ, ಕದ್ರಿ ಲೋಕೇಶ್ವರ.

ಶಿಲಾಶಿಲ್ಪಗಳಲ್ಲಿ ಹೆಚ್ಚಿನವೆಲ್ಲ ಕಗ್ಗಲ್ಲಿನಿಂದ ಮಾಡಲ್ಪಟ್ಟವು. ಬಳಪದ ಕಲ್ಲನ್ನೂ ಉಪಯೋಗಿಸಿದೆ. ಕೆಲವೊಮ್ಮೆ ನಸು ಕೆಂಪುಶಿಲೆಯನ್ನೂ ಬಳಸಿಕೊಂಡಿದೆ. ಈ ಶಿಲ್ಪಗಳನ್ನು ಕೊರೆಯುವಲ್ಲಿ ಇತರ ಭಾಗಗಳಿಂದ ಸ್ಥಪತಿಗಳನ್ನು ಕರೆಸಿಕೊಂಡಿರಬಹುದು. ಸ್ಥಳೀಯ ಸ್ಥಪತಿಗಳು ಇತರ ಕಡೆ ಹೋಗಿ ತರಬೇತಿಯನ್ನು ಪಡೆದಿರಬಹುದು. (ಪಿ.ಜಿ.ಬಿ.)

# ಇ

**ಇಂಗಳದಾಳು :** ಚಿತ್ರದುರ್ಗ ತಾಲ್ಲೂಕಿನ ಒಂದು ಗ್ರಾಮ. ಚಿತ್ರದುರ್ಗದಿಂದ ಆಗ್ನೇಯಕ್ಕೆ 10ಕಿಮೀ ದೂರದಲ್ಲಿದೆ. ಬಹಳ ಹಿಂದಿನ ಕಾಲದಿಂದ ಅಲ್ಲಿ ಸಿಗುವ ತಾಮ್ರದ ಅದುರನ್ನು ಸಂಸ್ಕರಿಸಿ ಕೆಂಡದಂಥ (ಇಂಗಳ) ವರ್ಣದ ಸ್ವಚ್ಛ ತಾಮ್ರವನ್ನು ಉತ್ಪಾದಿಸುತ್ತಿದ್ದುದರಿಂದ.



ತಾಮ್ರದ ಅದುರು ಸಂಸ್ಕರಣದ ಕಾರ್ಯಾಗಾರ

ಈ ಪ್ರದೇಶಕ್ಕೆ ಇಂಗಳದಾಳು ಎಂಬ ಹೆಸರು ಬಂದಿದೆ. ರಾಜಧಾನಿ ಬೆಂಗಳೂರಿನಿಂದ 190ಕಿಮೀ ದೂರದಲ್ಲಿದ್ದು ಬೆಂಗಳೂರು- ಮುಂಬಯಿ ರಾಷ್ಟ್ರೀಯ ಹೆದ್ದಾರಿ ಈ ಪ್ರದೇಶದ ಮೂಲಕ ಹಾದುಹೋಗುತ್ತದೆ.

ಕರ್ನಾಟಕದಲ್ಲಿ ಅತಿ ಪ್ರಾಚೀನ ತಾಮ್ರದ ಗಣಿ ಇರುವುದು ಇಂಗಳದಾಳಿನಲ್ಲಿ. ಈ ಪ್ರದೇಶ ಕಡಿದಾದ ಬೆಟ್ಟದ ಸಾಲುಗಳಿಂದ ಆವೃತವಾಗಿದೆ.ಹಸಿರುಡದ ಈ ಬೋಳು ಬೆಟ್ಟಗಳು ಕಡಿದಾಗಿದ್ದು ಸಮುದ್ರಮಟ್ಟಕ್ಕಿಂತ 610ಮೀ.ಗಳಷ್ಟು ಎತ್ತರವಿದೆ. ಈ ಬೆಟ್ಟದ ಸಾಲಿನ ಮಧ್ಯೆ 1007ಮೀ.ಗಳ ಎತ್ತರದ ಬೆಳ್ಳಿ ಗುಡ್ಡ ವಿಶಿಷ್ಟವಾಗಿ ಕಾಣುತ್ತದೆ. ಬೆಳ್ಳಿಗುಡ್ಡದ ಸಾಲಿನ ಪಶ್ಚಿಮ ತಪ್ಪಲಿನ ಗರ್ಭದಲ್ಲಿ 30ಕಿಮೀ ದೂರ ಆಂಟಿಮನಿ, ಆರ್ಸೆನಿಕ್, ಸೀಸ ಮತ್ತು ತಾಮ್ರದ ಅದುರುಗಳು ಕಂಡುಬಂದಿವೆ. ಇತ್ತೀಚೆಗೆ ನಡೆದ ಅಂತರ್ಗತ ಶೋಧನೆಯಿಂದ ತಿಳಿದು ಬಂದಂತೆ 1000ಮೀ ಉದ್ದ ಹಾಗೂ 300ಮೀ. ಆಳದ ಶಿಲಾಸ್ತೋಮದಾದ್ಯಂತ ಅದುರುಗರ್ಭಿತ ಬೆಣಚು ಶಿಲೆಗಳು ಹರಡಿವೆ. ಚಾಲ್ಕೊಪೈರೈಟ್, ಪಿರ್ರೊಟೈಟ್ ಎಂಬ ತಾಮ್ರ ಹಾಗೂ ಗಂಧಕದ ಅದುರುಗಳು ಸ್ಫಾಲರೈಟ್ ಮತ್ತು ಗೆಲಿನಾ ಎಂಬ ಸತು ಮತ್ತು ಸೀಸದ ಅದುರುಗಳು ಈ ಶಿಲಾಗರ್ಭದಲ್ಲಿವೆ.

ಅನೇಕ ತಜ್ಞರ ಪ್ರಯತ್ನದಿಂದ ಇಲ್ಲಿ ತಾಮ್ರದ ಅದುರಿನ ಉತ್ಪಾದನೆ ಆರಂಭವಾಗಿದೆ. 1974ರಲ್ಲಿ ಅದುರಿನ ಸಂಸ್ಕರಣ ಸ್ಥಾವರವನ್ನು ಸ್ಥಾಪಿಸಲಾಯಿತು. ಕೈಗಾರಿಕೆಗಳಿಗೆ ತಾಮ್ರ ಅತಿ ಮುಖ್ಯ ವಸ್ತುವಾಗಿದ್ದು ಅದನ್ನು ನೀಡುವ ಇಂಗಳದಾಳು ಕರ್ನಾಟಕದ ಹೆಮ್ಮೆಯ ಸ್ಥಳವಾಗಿದೆ. (ವೈ.ಎಲ್.)

**ಇಂಗಳೇಶ್ವರ :** ಬಿಜಾಪುರ ಜಿಲ್ಲೆ ಬಾಗೇವಾಡಿಗೆ ಸು.10ಕಿಮೀ ಈಶಾನ್ಯಕ್ಕಿರುವ ಹಳ್ಳಿ. 12ನೆಯ ಶತಮಾನದಲ್ಲಿ ಅಂದರೆ ಬಸವಣ್ಣನವರ ಕಾಲದಲ್ಲಿ ಬಹಳ ಪ್ರಸಿದ್ಧವಾದ ಪಟ್ಟಣವಾಗಿತ್ತು. ಐತಿಹಾಸಿಕ ಮಹತ್ವವನ್ನು ಪಡೆದಿತ್ತು. ಬಾಗೇವಾಡಿಯನ್ನು ನಿರ್ದೇಶಿಸುವಾಗ ಪ್ರಸಿದ್ಧವಾದ ಇದರ ಹೆಸರಿನಿಂದ ಇಂಗಳೇಶ್ವರ ಬಾಗೇವಾಡಿ ಎಂದು ಕರೆಯುತ್ತಿದ್ದುದೂ ಉಂಟು.

ಇದು ಜೈನ ಮತ್ತು ಶೈವಧರ್ಮಗಳ ಕೇಂದ್ರವಾಗಿತ್ತು. ಇಲ್ಲಿಂದ ಬೆಳೆದು ಬಂದ ಜೈನ ಗುರುಗಳ ಒಂದು ಪರಂಪರೆಯನ್ನು ಇಂಗಳೇಶ್ವರ ಬಳಿ ಎಂದು ಕರೆಯಲಾಗಿದೆ. ಇದು ಶೈವಕ್ಷೇತ್ರವೂ ಆಗಿದ್ದಿತೆಂಬುದಕ್ಕೆ ಇಲ್ಲಿರುವ ರೇವಣಸಿದ್ಧರ ಗುಹೆ ಸಾಕ್ಷಿ. ಈ ಊರಿನ ಪೂರ್ವದಿಕ್ಕಿನಲ್ಲಿ ಕೆಂಪು ಗಚ್ಚುಕಲ್ಲಿನ ಗುಡ್ಡದಲ್ಲಿ ಈ ಗುಹೆಯಿದೆ. ಅಲ್ಲಿ ರೇವಣಸಿದ್ಧರ ಸುಂದರವಾದ ಆಸೀನಮೂರ್ತಿಯೊಂದಿದೆ. ಸಮೀಪದಲ್ಲಿ ಸಂಗಮೇಶ್ವರ ಮತ್ತು ಅಕ್ಕನಾಗಮ್ಮನ ಗುಡಿಗಳೂ ಇವೆ. ಬಹುಶಃ ಇದು ರೇವಣಸಿದ್ಧರ ಕಾರ್ಯಕ್ಷೇತ್ರವಾದ್ದಿರಬೇಕು. ಕಲ್ಮೇಶ್ವರ, ಸೋಮೇಶ್ವರ, ಶೋಭನೇಶ್ವರ ಮೊದಲಾದ ಶಿವದೇವಾಲಯಗಳೂ ನಾರಾಯಣ, ಕಾಳಪ್ಪ, ಹನುಮಂತನ ಗುಡಿಗಳೂ ಇಲ್ಲಿವೆ. ಇವುಗಳಲ್ಲಿ ಕೆಲವು 12ನೆಯ ಶತಮಾನದ ಕಲ್ಯಾಣ ಚಾಳುಕ್ಯ ಸಂಪ್ರದಾಯದವು.

ಐನೂರು ಮಹಾಜನಗಳಿಂದ ಕೂಡಿದ ಇಲ್ಲಿನ ಅಗ್ರಹಾರ ತುಂಬ ಪ್ರಸಿದ್ಧವಾಗಿತ್ತು, ವಿದ್ಯಾಕೇಂದ್ರವಾಗಿತ್ತು. ಜನಮೇಜಯನ ಕಾಲದಿಂದಲೂ ಈ ಅಗ್ರಹಾರ ಬೆಳೆದು ಬಂದು, ಕರ್ನಾಟಕದ ಕಾಶಿ, ದಕ್ಷಿಣ ವಾರಣಾಸಿ ಎಂಬ ಕೀರ್ತಿಯನ್ನು ಪಡೆದಿದ್ದಿತೆಂದು ಹೇಳಲಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಬಸವಣ್ಣನವರ ಜನ್ಮಸ್ಥಾನವಾದ ಬಾಗೇವಾಡಿಯೊಡನೆ ಉಲ್ಲೇಖವನ್ನು ಪಡೆದು ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣವಾದ ಸ್ಥಾನವನ್ನು ಪಡೆದಿದೆ. ಕವಿ ಅಗ್ಗಳ ಇಂಗಳೇಶ್ವರದವ. (ಎಚ್.ಟಿ.ಎಸ್.)

**ಇಂಚಲ** : ಬೆಳಗಾಂವಿ ಜಿಲ್ಲೆ ಪರಸಗಡ ತಾಲ್ಲೂಕಿನ ಒಂದು ಗ್ರಾಮ. ಬೈಲಹೊಂಗಲದಿಂದ 6ಕಿಮೀ ದೂರದಲ್ಲಿದೆ. ಇದೊಂದು ಪ್ರಾಚೀನ ಸಾಂಸ್ಕೃತಿಕ ಕೇಂದ್ರ. ಇಲ್ಲಿ ರಾಮಲಿಂಗ, ದುರ್ಗವ್ವ, ವೀರಭದ್ರ, ದ್ಯಾಮವ್ವ, ಹಣಮಂತ, ಕಲ್ಮೇಶ್ವರ ಅಥವಾ ಭೈರವೇಶ್ವರ, ನಾಗಲಿಂಗೇಶ್ವರ ಮತ್ತು ಮಲ್ಲಯ್ಯ ದೇವಾಲಯಗಳಿವೆ. ಇವುಗಳಲ್ಲಿ ಕರಿಗುಡಿ ಅಥವಾ ರಾಮಲಿಂಗ ದೇವಾಲಯ ಅತಿ ಪ್ರಾಚೀನವಾದುದು. ಊರ ಹೊರವಲಯದಲ್ಲಿರುವ ಈ ದೇವಾಲಯ ಚಾಳುಕ್ಯರ ಕಾಲದ ತ್ರಿಕೂಟಾಚಲ ಮಾದರಿಯದು. ಇದರಲ್ಲಿ ಮೂರು ಗರ್ಭಗುಡಿಗಳಿವೆ. ನವರಂಗವಿದೆ. ಆದರೆ ಮುಖ ಮಂಟಪವಿಲ್ಲ. ಮಧ್ಯದ ಗರ್ಭಗೃಹ ಅರ್ಧಮಂಟಪ ಹೊಂದಿದೆ. ಇಲ್ಲಿಯೇ ಇರುವ ಬಂಕನಾಥ ದೇವಾಲಯ ಕೊನೆಯ ಚಾಳುಕ್ಯರ ಕಾಲಕ್ಕೆ ಸೇರಿದ್ದಾಗಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಇಲ್ಲಿನ ಆವರಣದಲ್ಲಿ ಪ್ರಾಚೀನ ಕಾಲದ ದೇವಾಲಯಗಳ ಅವಶೇಷಗಳು ಅಲ್ಲಲ್ಲಿ ಕಂಡುಬರುತ್ತವೆ.

ಊರೊಳಗಿರುವ ದುರ್ಗವ್ವ ದೇವಾಲಯ ಎರಡು ಗುಡಿಗಳನ್ನು ಹೊಂದಿದೆ. ಒಂದು ಗರ್ಭಗುಡಿಯಲ್ಲಿ ಎರಡು ಮಹಿಷಮರ್ದಿನಿಯ ವಿಗ್ರಹಗಳಿವೆ. ವೀರಭದ್ರನ ಗುಡಿಯ ಸಮೀಪ ಬಕ್ಕವ್ವ, ಗಣಪತಿ, ಉಮಾಮಹೇಶ್ವರ ವಿಗ್ರಹಗಳು ಭಿನ್ನವಾಗಿ ಬಿದ್ದಿವೆ. ಅನೇಕ ವೀರಗಲ್ಲುಗಳೂ ಇವೆ. ದ್ಯಾಮವ್ವನ ದೇವಾಲಯದಲ್ಲಿ ಒಂದು ಜೈನ ಶಾಸನವಿದೆ. ಇಲ್ಲಿ ಕೊನೆಯ ಚಾಳುಕ್ಯರ ಕಾಲದ ಮರದ ಮೂರ್ತಿಗಳಿವೆ. ಹಣಮಂತ ದೇವಾಲಯದಲ್ಲಿ ವಿಷ್ಣು, ಗಣಪತಿ ಮತ್ತು ರಾಷ್ಟ್ರಕೂಟರ ಶೈಲಿಯ ಎರಡು ದ್ವಾರಪಾಲಕರ ವಿಗ್ರಹಗಳಿವೆ.

ಭೈರವೇಶ್ವರ ಅಥವಾ ಕಲ್ಮೇಶ್ವರ ದೇವಾಲಯ ಚಾಳುಕ್ಯ ಶೈಲಿಯಲ್ಲಿರುವ ಒಂದು ಚಿಕ್ಕ ಗುಡಿ. ನಾಗಲಿಂಗೇಶ್ವರ ಎಂಬುದು ಭಗ್ನ ದೇವಾಲಯದ ಅಂಗಳದಲ್ಲಿ ಸ್ಥಾಪಿಸಿರುವ ದೊಡ್ಡ ಶಿವಲಿಂಗ. ಮಲ್ಲಯ್ಯನ ದೇವಾಲಯ ವಿಜಯನಗರ ಕಾಲದ ವಾಸ್ತು ಶೈಲಿಯಲ್ಲಿದೆ.

ಇಲ್ಲಿ ಸು.200 ವರ್ಷಗಳ ಹಿಂದೆ ಸಂತ ಶಿವಪ್ಪ ಎಂಬವರಿಂದ ಸ್ಥಾಪಿತವಾದ ಶಿವಯೋಗಿಶ್ವರ ಸಾಧು ಅದ್ವೈತ ಮಠವಿದೆ. ಯುಗಾದಿ ಹಬ್ಬದ ಸಂದರ್ಭದಲ್ಲಿ ಶಿವಯೋಗಿಗಳ (ಶಿವಾನಂದ ಭಾರತಿ ಸ್ವಾಮಿ) ಹೆಸರಿನಲ್ಲಿ ರಥೋತ್ಸವ ನಡೆಯುತ್ತದೆ. (ಎಂ.ಬಿ.ಎಚ್.)

**ಇಂಡಿ** : ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಈ ತಾಲ್ಲೂಕು ಪೂರ್ವಕ್ಕೆ ಗುಲ್ಬರ್ಗಜಿಲ್ಲೆ, ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ರಾಜ್ಯ. ದಕ್ಷಿಣಕ್ಕೆ ಬಿಜಾಪುರ ಮತ್ತು ಸಿಂದಗಿ ತಾಲ್ಲೂಕುಗಳಿಂದ ಸುತ್ತುವರಿದಿದೆ. ವಿಸ್ತೀರ್ಣ 22,245ಚಕಿಮೀ. ಜನಸಂಖ್ಯೆ 3,56,768. ಇದರಲ್ಲಿ ಇಂಡಿ, ಚಡಚಣ ಮತ್ತು ಬಲ್ಲೊಳ್ಳಿ ಮೂರು ಸರ್ಕಲ್‌ಗಳಿದ್ದು 122 ಗ್ರಾಮಗಳಿವೆ.

ಈ ಪ್ರದೇಶ ಟ್ರ್ಯಾಪ್ ಕಲ್ಲಿನದು. ಕರಿಮಣ್ಣಿನ ಭೂಮಿ. ಸರಾಸರಿ ವಾರ್ಷಿಕ ಮಳೆ 637ಮಿಮೀ. ತಾಲ್ಲೂಕು ಉತ್ತರಕ್ಕೆ ಇಳಿಜಾರಾಗಿದೆ. ಭೀಮಾನದಿ ಈ ತಾಲ್ಲೂಕಿನ ಉತ್ತರ ಗಡಿಯಾಗಿ ಹರಿಯುವುದು. ಇಲ್ಲಿಯ ಬೋರಿ, ಸತ್ನಾಳ ಮೊದಲಾದ ತೊರೆಗಳು ಭೀಮಾನದಿಯನ್ನು ಸೇರಿಕೊಳ್ಳುತ್ತವೆ. ನೀರಾವರಿಗೆ ನಾಲೆ, ಕೆರೆ ಮತ್ತು ಬಾವಿಗಳು ಇವೆ. ಇಲ್ಲಿನ ಮುಖ್ಯಬೆಳೆ ಜೋಳ, ಹತ್ತಿ ಮತ್ತು ಸೇಂಗ. ಇವುಗಳ ಜೊತೆಗೆ ಭತ್ತ, ಕಬ್ಬು, ಗೋದಿ, ಸಜ್ಜೆ, ಮೆಣಸಿನಕಾಯಿ ಮತ್ತು ದ್ವಿದಳ ಧಾನ್ಯಗಳನ್ನು ಸ್ವಲ್ಪಮಟ್ಟಿಗೆ ಬೆಳೆಯುತ್ತಾರೆ. ಲಚ್ಯಾಣ ಎಂಬ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರವಿದೆ. (ಬಿ.)

ಅಗರಖೇಡ (ನೋಡಿ) ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲೊಂದು. ಬಂಥನಾಳದಲ್ಲಿ ಸಂಗನಬಸವೇಶ್ವರ ಮಠವಿದ್ದು ಈಗ ಸರ್ಕಾರ ಒಂದು ವಿದ್ಯಾಪೀಠ ತೆರೆದಿದೆ. ಚಡಚಣ ಗ್ರಾಮದಲ್ಲಿ ಒಂದು ಆರ್ಟ್ಸ್ ಕಾಲೇಜು ಮತ್ತು ಪರಮಾನಂದರ ಪುರಾತನ ದೇವಾಲಯವಿದೆ. ಪ್ರತಿವರ್ಷ ಇಲ್ಲಿ ಸಂಗಮೇಶ್ವರ ಜಾತ್ರೆ ನಡೆಯುತ್ತದೆ. ದೇವರನಿಂಬರಗಿಯಲ್ಲಿ ಗುರುಲಿಂಗಪ್ಪ ಮಹಾರಾಜರ ಸಮಾಧಿ ಇದೆ. ಹಲಸಂಗಿ ಊರಲ್ಲಿ ಆದಿಲ್‌ಷಾಹೀ ಕಾಲದ ಒಂದು ಹಳೇ ಕೋಟೆ ಉಂಟು. ಕವಿ ಮಧುರಚೆನ್ನರಿದ್ದ ಈ ಊರಿನಲ್ಲಿ ಅರವಿಂದ ಮಂಡಳಿ ಮತ್ತು ಅರವಿಂದ ಪ್ರೌಢಶಾಲೆ ಇವೆ. ಹೊರ್ತಿ ಗ್ರಾಮದಲ್ಲಿ ಸಿದ್ಧೇಶ್ವರ ಮತ್ತು ಮಲ್ಲಿಕಾರ್ಜುನ ಎಂಬ ಎರಡು ಪುರಾತನ ದೇವಾಲಯಗಳಿವೆ. ಇಂಚಗೇರಿಯಲ್ಲಿ ಗುರುಲಿಂಗ ಮಹಾರಾಜ್, ಭಾವುಸಾಹೇಬ್ ಮಹಾರಾಜ್ ಮತ್ತು ಗಿರಿಮಲ್ಲಪ್ಪ ಮಹಾರಾಜ್ - ಈ ಮೂರು ಮಂದಿ ಸಂತರು ಇದ್ದರು. ಮಿರಗಿಯಲ್ಲಿ ಸಂಗಮೇಶ್ವರ ದೇವಾಲಯವಿದೆ. ಇದು ರಮಾನಂದ ಸ್ವಾಮಿಯವರಿದ್ದ ಪವಿತ್ರ ಸ್ಥಳ. ನಿಂಬಾಳ ಮಹಾಶಿಲ್ಪಿ ಜಕ್ಕಣಾಚಾರ್ಯ ಇದ್ದ ಊರು ಎನ್ನುವರು. ಇಲ್ಲಿ ಆರ್.ಡಿ.ರಾನಡೆಯವರು ಸ್ಥಾಪಿಸಿದ ಆಧ್ಯಾತ್ಮಿಕ ಕೇಂದ್ರವಿದೆ. ಸಾಲೋಟಗಿ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತೆಂದು 945ರ ಒಂದು ಶಾಸನದಲ್ಲಿ ಹೇಳಲಾಗಿದೆ. ಇಲ್ಲಿ ಶಿವಯೋಗೀಶ್ವರ ದೇವಾಲಯವಿದೆ.

ಇಂಡಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಗದಗ- ಸೊಲ್ಲಾಪುರ ರೈಲು ಹಾದಿಯಲ್ಲಿರುವ ಇಂಡಿರೋಡ್ ರೈಲು ನಿಲ್ದಾಣದಿಂದ ಆಗ್ನೇಯ ದಿಕ್ಕಿನಲ್ಲಿ 6ಕಿಮೀ ದೂರದಲ್ಲಿದೆ. ಜನಸಂಖ್ಯೆ 31,483. ಇಂಡಿಪಟ್ಟಣ ಪಂಚಾಯಿತಿ ಆಡಳಿತಕ್ಕೆ ಸೇರಿದೆ. ಇಲ್ಲಿ ಅಸಿಸ್ಟೆಂಟ್ ಕಮಿಶನರ ಕಛೇರಿ, ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಪಶುವೈದ್ಯಾಲಯ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಸಿಂಡಿಕೇಟ್ ಬ್ಯಾಂಕುಗಳ ಶಾಖೆಗಳು ಮತ್ತು ಪ್ರೌಢಶಾಲೆಗಳು ಇವೆ. ಇಲ್ಲಿಯ ಶಾಂತೇಶ್ವರ ದೇವಸ್ಥಾನ ಬಹು ಪ್ರಸಿದ್ಧವಾದುದು. ಗೋಪುರ ಅಷ್ಟಮುಖಗಳಿಂದ ಕೂಡಿದ್ದು ಸುಂದರ ಶಿಲ್ಪಗಳನ್ನು ಒಳಗೊಂಡಿದೆ. *

**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್** : ಭಾರತದ ಔದ್ಯೋಗಿಕ ಮತ್ತು ವೈಜ್ಞಾನಿಕ ಪ್ರಗತಿಗೆ ನೆರವಾಗುವಂಥ ಸಂಶೋಧನೆಗಳನ್ನು ನಡೆಸಬೇಕೆಂಬ ಉದ್ದೇಶದಿಂದ ಮುಂಬಯಿಯ ಖ್ಯಾತ ಉದ್ಯಮಿ ದಿವಂಗತ ಜೆಮ್‌ಸೆಟ್‌ಜೀ ತಾತಾ ಅವರು ನೀಡಿದ್ದ ಧನಸಹಾಯದಿಂದ 1909ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಸಂಶೋಧನಾ ಮಂದಿರ. ಆರಂಭದಲ್ಲಿ ತಾತಾ ಇನ್‌ಸ್ಟಿಟ್ಯೂಟ್ ಎಂಬ ಹೆಸರನ್ನು ಹೊಂದಿದ್ದ ಈ ಸಂಸ್ಥೆ ಈಗ ಮೇಲಿನ ಹೆಸರನ್ನು ಧರಿಸಿದೆ. ಕರ್ನಾಟಕ ಮತ್ತು ಭಾರತ ಸರ್ಕಾರಗಳ ಸಹಾಯಧನವನ್ನು ಪಡೆಯುತ್ತಿರುವ ಈ ಸಂಸ್ಥೆಗೆ ಎಂ.ಡಬ್ಲ್ಯೂ.ಟ್ರಾವರ್ಸ್ ಮೊಟ್ಟಮೊದಲ ನಿರ್ದೇಶಕರಾಗಿದ್ದರು (1909-15). ಅನಂತರ ಸರ್ ಎ.ಜಿ.ಬೋರ್ನ್ (1915-21), ಸರ್ ಎಂ.ಒ.ಫಾರೆಸ್ಟರ್ (1922-33), ಸರ್ ಸಿ.ವಿ.ರಾಮನ್ (1933-37), ಜೆ.ಸಿ.ಘೋಷ್ (1937-48), ಪ್ರೊ, ಎಂ.ಎಸ್.ಥ್ಯಾಕರ್ (1949-55), ಡಾ.ಎಸ್.ಭಗವಂತಂ (1957-62), ಡಾ.ಎಸ್.ಧಾವನ್ ಮುಂತಾದ ಖ್ಯಾತವಿಜ್ಞಾನಿಗಳು ಆ ಸ್ಥಾನವನ್ನಲಂಕರಿಸುತ್ತ ಬಂದಿದ್ದಾರೆ. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಈ ಸಂಸ್ಥೆ ನಡೆಸಿದ ಸಂಶೋಧನೆಗಳಿಂದ ರಾಷ್ಟ್ರದ ಉದ್ಯೋಗಗಳಿಗೂ ರಕ್ಷಣೆಗೂ ತುಂಬಾ

ಸಹಾಯವಾಯಿತು. ಅದರ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಅದು ಹೆಚ್ಚು ಪರಿಣಾಮಕಾರಿಯಾಗಿ ಸಂಶೋಧನೆ ನಡೆಸುವ ಕಾರ್ಯ ಆರಂಭವಾಯಿತು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮುಖ್ಯಕಟ್ಟಡ

1942ರ ಅನಂತರ ಅನ್ವಯ ಗಣಿತಶಾಸ್ತ್ರ, ಹೈವೋಲ್ಟೇಜ್ ಎಂಜಿನಿಯರಿಂಗ್ ಮುಂತಾದ 19 ವ್ಯಾಸಂಗ ವಿಭಾಗಗಳು ಆರಂಭವಾಗಿವೆ. 1950 ರಿಂದ ಎಂಜಿನಿಯರಿಂಗ್ ವಿದ್ಯೆಯ ಏಳು ವಿವಿಧ ಶಾಖೆಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದೆ. ಸಂಶೋಧನ ವಿದ್ಯಾರ್ಥಿಗಳು ಮತ್ತು ಇತರರ ಉಪಯೋಗಕ್ಕಾಗಿ ಒಂದು ಉತ್ತಮ ಗ್ರಂಥಾಲಯವಿದೆ. ನೂರಾರು ಸಂಶೋಧನ ಪತ್ರಿಕೆಗಳೂ ಪರಾಮರ್ಶನ ಗ್ರಂಥಗಳೂ ಇವೆ. ವಿದ್ಯಾರ್ಥಿಗಳು ಸಂಸ್ಥೆಯ ಆವರಣದಲ್ಲಿ ವಾಸಿಸುತ್ತ ಅಧ್ಯಯನ ಮಾಡಲು ಅನುಕೂಲಿಸಲೆಂದು ಛಾತ್ರಾಲಯ, ಆಸ್ಪತ್ರೆ ಮುಂತಾದ ಸೌಲಭ್ಯಗಳನ್ನೂ ಕಲ್ಪಿಸಿದೆ.

ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳಿಗಾಗಿ ಸಂಸ್ಥೆ ಕಳೆದ 95 ವರ್ಷಗಳಿಂದೀಚೆಗೆ ಅನೇಕ ವಿಭಾಗಗಳನ್ನು ಆರಂಭಿಸಿದೆ. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ಸೂಚಿಸಿದೆ. ಇನಾರ್ಗ್ಯಾನಿಕ್ ಮತ್ತು ಫಿಜಿಕಲ್ ಕೆಮಿಸ್ಟ್ರಿ ವಿಭಾಗ (ಪ್ರಾರಂಭ 1909), ಆರ್ಗ್ಯಾನಿಕ್ ಕೆಮಿಸ್ಟ್ರಿಯ ವಿಭಾಗ (1911), ಬಯೋಕೆಮಿಸ್ಟ್ರಿಯ ವಿಭಾಗ (1921) ಫಿಜಿಕ್ಸ್ ವಿಭಾಗ (1945), ಮೆಟಲರ್ಜಿಕಲ್ ವಿಭಾಗ (1947), ಪವರ್ ಎಂಜಿನಿಯರಿಂಗ್ ವಿಭಾಗ (ವಿದ್ಯುತ್ ಶಕ್ತಿ) (1947), ಏರೋನಾಟಿಕಲ್ ಎಂಜಿನಿಯರಿಂದ್ ವಿಭಾಗ (1942), ಇಂಟರ್ನಲ್ ಕಂಬಸ್ಚನ್ ಎಂಜಿನಿಯರಿಂಗ್ ವಿಭಾಗ (1945), ಪವರ್ ಎಂಜಿನಿಯರಿಂಗ್ ಮೆಕ್ಯಾನಿಕಲ್ ವಿಭಾಗ (1950), ಪವರ್ ಎಂಜಿನಿಯರಿಂಗ್ ಸಿವಿಲ್ ಮತ್ತು ಹೈಡ್ರಾಲಿಕ್ ವಿಭಾಗ (1947), ಪವರ್ ಎಂಜಿನಿಯರಿಂಗ್ ಹೈವೋಲ್ಟೇಜ್ ಎಂಜಿನಿಯರಿಂಗ್ ವಿಭಾಗ (1926), ಎಲೆಕ್ಟ್ರಿಕಲ್ ಕಮ್ಯುನಿಕೇಶನ್ ಎಂಜಿನಿಯರಿಂಗ್ (1910), ಕೆಮಿಕಲ್ ಟೆಕ್ನಾಲಜಿ ಮತ್ತು ಕೆಮಿಕಲ್ ಎಂಜಿನಿಯರಿಂಗ್ ವಿಭಾಗ, ಅಪ್ಲೈಡ್ ಮೆಥಮೆಟಿಕ್ಸ್ ವಿಭಾಗ (1948), ಫಾರ್ಮಕಾಲಜಿ ವಿಭಾಗ (1941), ಫರ್ಮಂಟೇಷನ್ ಕೆಮಿಕಲ್ ಪ್ರಯೋಗಾಲಯ (1942). ಈ ವಿಭಾಗಗಳಲ್ಲಿ ವಿದ್ಯಾರ್ಥಿಗಳನ್ನು ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಆರಿಸಿಕೊಳ್ಳುವರು, ಭೂಮಿಶಾಸ್ತ್ರ, ರಸಾಯನವಿಜ್ಞಾನ, ಭೌತವಿಜ್ಞಾನ ಮುಂತಾದ ವಿಷಯಗಳಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು ಸಂಬಂಧಿಸಿದ ವಿಷಯ ವಿಭಾಗಗಳಲ್ಲಿ ಮಾಸ್ಟರ್ ಪದವಿಗೆ ಸೇರಲು ಅರ್ಹತೆ ಪಡೆದಿರುವರು. ಎಂಜಿನಿಯರಿಂಗ್ ವಿಭಾಗಗಳಲ್ಲಿ ಎಂ.ಇ. ಪದವಿಯನ್ನೂ ಉಳಿದ ವಿಭಾಗಗಳಲ್ಲಿ ಎಂ.ಎಸ್‌ಸಿ. ಪದವಿಯನ್ನೂ ನೀಡುವರು. ಸಂಶೋಧನೆಯ ಮೂಲಕ ಎಲ್ಲ ವಿಭಾಗಗಳಲ್ಲೂ ಪಿಎಚ್.ಡಿ. ಅಥವಾ ಡಿ.ಎಸ್‌ಇ. ಪದವಿಗಳನ್ನು ಪಡೆಯುವ ಅವಕಾಶವುಂಟು.

ಮೇಲಿನ ಶುದ್ಧ ಮತ್ತು ಆನ್ವಯಿಕ ವಿಜ್ಞಾನ ವಿಭಾಗಗಳ ಜೊತೆಗೆ ತಂತ್ರಶಾಸ್ತ್ರ, ಎಂಜಿನಿಯರಿಂಗ್, ಫಾರ್ಮಕಾಲಜಿ ಮುಂತಾದ ಕ್ಷೇತ್ರಗಳಲ್ಲೂ ಉತ್ತಮ ಮಟ್ಟದ ಶಿಕ್ಷಣವೀಯುವುದರ ಜೊತೆಗೆ ಫಲದಾಯಕವಾದ ಸಂಶೋಧನೆಗಳನ್ನು ನಡೆಸುತ್ತಿದೆ. ಈಚೆಗೆ ಸಮಾಜವಿಕಾಸದ ಹಲವು ಆನ್ವಯಿಕ ವಿಷಯ ವಿಭಾಗಗಳನ್ನು ಆರಂಭಿಸಿದೆ. ಉದ್ಯೋಗಗಳ ಪ್ರಗತಿಗೆ ಅಲ್ಲಿಯ ಮಾನವೀಯ ಸಂಬಂಧ, ಆಡಳಿತ ನಿರ್ವಹಣೆಯ ದಕ್ಷತೆ, ಮಾರ್ಗದರ್ಶನ ಮತ್ತು ಉತ್ಪನ್ನಗಳ ಗುಣ ನಿಯಂತ್ರಣ ಇವಕ್ಕೆ ಪ್ರಾಧಾನ್ಯತೆ ಬಂದಂತೆ ಆ ಕ್ಷೇತ್ರದಲ್ಲಿ ಶಿಕ್ಷಣಪಡೆದ ಪರಿಣತರನ್ನು ಒದಗಿಸುವುದಕ್ಕೂ ಅಗತ್ಯ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸುವುದಕ್ಕೂ ಅವಕಾಶ ಕಲ್ಪಿಸಿದೆ. ಔದ್ಯೋಗಿಕ ಅರ್ಥಶಾಸ್ತ್ರ, ಔದ್ಯೋಗಿಕ ಮನೋವಿಜ್ಞಾನ, ಔದ್ಯೋಗಿಕ ಎಂಜಿನಿಯರಿಂಗ್, ಔದ್ಯೋಗಿಕ ಆಡಳಿತ -ಈ ವಿಭಾಗಗಳು 1955 ರಿಂದ ಈಚೆಗೆ ಆರಂಭವಾಗಿ ಸಮಾಜ ವಿಭಾಗಗಳಲ್ಲೂ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಅವಕಾಶ ಕಲ್ಪಿಸಿದೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು ವಿದ್ಯಾರ್ಥಿವೇತನಗಳನ್ನೂ ಸಂಶೋಧನ ವೇತನಗಳನ್ನೂ ನೀಡುವ ವ್ಯವಸ್ಥೆ ಇದೆ. ಈ ಸಂಸ್ಥೆ ನೀಡುವ ವಿದ್ಯಾರ್ಥಿ ಮತ್ತು ಸಂಶೋಧನ ವೇತನಗಳ ಜೊತೆಗೆ, ಕೇಂದ್ರ ಸಚಿವಾಲಯ, ಔದ್ಯೋಗಿಕ ಮತ್ತು ವೈಜ್ಞಾನಿಕ ಸಂಶೋಧನ ಮಂಡಲಿ (ಸಿ.ಎಸ್.ಐ.ಆರ್) ಭಾರತೀಯ ಕೃಷಿ ಸಂಶೋಧನ ಮಂಡಲಿ (ಐ.ಸಿ.ಎ.ಆರ್) ಮತ್ತು ರಾಜ್ಯಸರ್ಕಾರಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ವೇತನಗಳನ್ನು ನೀಡುತ್ತಿವೆ.

ಸಂಸ್ಥೆ 1958ರಲ್ಲಿ ತನ್ನ 50 ವರ್ಷಗಳ ಫಲದಾಯಕ ಸೇವೆಯ ಕುರುಹಾಗಿ ಸುವರ್ಣ ಮಹೋತ್ಸವವನ್ನು ಆಚರಿಸಿತು. ಅದು ಈ ತನಕ ನಡೆಸಿರುವ ಸಂಶೋಧನೆಗಳ ಮೂಲಕವೂ ನಾಡಿನ ವಿವಿಧ ಕ್ಷೇತ್ರಗಳಿಗೆ ಅಗತ್ಯವೆನಿಸುವ ನಾಯಕರಿಗೆ ಶಿಕ್ಷಣ ನೀಡುವುದರ ಮೂಲಕವೂ ಭಾರತದ ಔದ್ಯೋಗಿಕ ಮತ್ತು ವೈಜ್ಞಾನಿಕ ಪ್ರಗತಿಗೆ ಅಮೋಘವಾದ ಸೇವೆಸಲ್ಲಿಸಿದೆ. ಭಾರತದಂತೆ ಅನ್ಯದೇಶಗಳಲ್ಲೂ ಉತ್ತಮ ಸಂಶೋಧನ ಸಂಸ್ಥೆಯೆಂದು ಖ್ಯಾತಿಗಳಿಸಿದೆ. 1958ರಿಂದ ಈ ಸಂಶೋಧನ ಸಂಸ್ಥೆ ಪರಿಗಣಿತ ವಿಶ್ವವಿದ್ಯಾಲಯದ ಸ್ಥಾನಮಾನಗಳನ್ನು ಪಡೆದುಕೊಂಡು ತನ್ನದೇ ಆದ ಪದವಿ ಪ್ರಶಸ್ತಿಗಳನ್ನು ನೀಡುತ್ತಿದೆ. (ಎನ್.ಎಸ್.ಪಿ.)

**ಇಂದಿರಾ, ಎಂ.ಕೆ. :** 1917-94. ಕನ್ನಡದ ಪ್ರಸಿದ್ಧ ಲೇಖಕಿ, ಕಾದಂಬರಿಗಾರ್ತಿ. ಇವರು 1917 ಜನವರಿ 5ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಜನಿಸಿದರು. ತಂದೆ ತರೀಕೆರೆಯ ಸೂರ್ಯ ನಾರಾಯಣರಾವ್, ತಾಯಿ ಬನಶಂಕರಮ್ಮ. ಪ್ರಜಾವಾಣಿ ಪತ್ರಿಕೆಯ ಸಂಪಾದಕರಾಗಿದ್ದ ಟಿ.ಎಸ್.ರಾಮಚಂದ್ರರಾವ್ (ನೋಡಿ) ಇವರ ಸೋದರ. ಹೊಯಿಸಳ (ನೋಡಿ) ಎಂಬ ಕಾವ್ಯನಾಮದಿಂದ ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನಿತ್ತ ಅರಗ ಲಕ್ಷ್ಮಣರಾಯ ಇವರ ತಾತ. ಇಂದಿರಾ ಅವರ ಶಾಲಾಶಿಕ್ಷಣ ಮಾಧ್ಯಮಿಕ ಶಾಲೆಯ ಎರಡನೆಯ ತರಗತಿಯವರೆಗೆ ಮಾತ್ರ ನಡೆಯಿತು. ಆದರೆ ಇವರು ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ರಾಮಾಯಣ, ಮಹಾಭಾರತಗಳನ್ನು ಓದುವ ಅಭಿರುಚಿ ಮತ್ತು ವಿವಿಧ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಜೊತೆಗೆ ಮಲೆನಾಡಿನ ಪ್ರಕೃತಿ ಸೌಂದರ್ಯ ಇವರ ಉತ್ಸಾಹ, ಚೈತನ್ಯವನ್ನು ಅರಳಿಸುತ್ತಿತ್ತು.

ಹನ್ನೆರಡನೆಯ ವಯಸ್ಸಿನಲ್ಲಿ ತಾಯಿಯ ಚಿಕ್ಕಪ್ಪನ ಮಗ ಮಂಡಗದ್ದೆ ಕೃಷ್ಣರಾಯರೊಡನೆ ಇಂದಿರಾ ಅವರ ವಿವಾಹ ನಡೆಯಿತು

(1929). ಈ ದಂಪತಿಗಳದು ಸರಳ, ಸರಸ, ಸಜ್ಜನಿಕೆಯ ಜೀವನ. ಇವರಿಗೆ ಎಂಟು ಮಂದಿ ಮಕ್ಕಳು. ಅವರಲ್ಲಿ ನಾಲ್ವರು ಗತಿಸಿ ನಾಲ್ವರು ಉಳಿದರು. 1969ರಲ್ಲಿ ಪತಿ ಕೃಷ್ಣರಾಯರು ಅಸ್ತಮಾ ಕಾಯಿಲೆಯಿಂದ ನಿಧನರಾದರು. ನಿಧನದ ಸಂದರ್ಭದಲ್ಲಿ 'ನನ್ನ ಸಾವಿನ ಅನಂತರ ನೀನು ಯಾವುದೇ ಅಂಧಶ್ರದ್ಧೆಗೆ ಬಲಿಯಾಗಬೇಡ ಮಾಂಗಲ್ಯ ವಿನಾ ಉಳಿದೆಲ್ಲ ಹಾಗೆಯೇ ಇರಲಿ. ಬಳೆ, ಕಾಲುಂಗರ, ಮೂಗುತಿ, ಕುಂಕುಮ ಯಾವುದನ್ನು ತೆಗೆಯಬೇಡ' ಎಂದಿದ್ದರಂತೆ.

ಇಂದಿರಾ ಅವರು ತಮ್ಮ ನಲವತ್ತೈದನೆಯ ವಯಸ್ಸಿನ ಅನಂತರ ಬರೆಯಲು ಪ್ರಾರಂಭಿಸಿದರು. ಸಂಪ್ರದಾಯ, ಅಂಧಶ್ರದ್ಧೆಯ ಪರಿಸರದಲ್ಲಿ ಬೆಳೆದು ಬಂದರೂ ವಿಚಾರವಂತಿಕೆಯನ್ನು ರೂಢಿಸಿಕೊಂಡರು. ಪತಿ ಕೃಷ್ಣರಾಯರ ಒತ್ತಾಸೆ, ಪ್ರೋತ್ಸಾಹಗಳಿಂದ ಲೇಖಕಿಯಾಗಿ ರೂಪುಗೊಂಡರು. ಇವರು 1960ರಲ್ಲಿಯೇ ಬರೆದ ತುಂಗಭದ್ರ ಚೊಚ್ಚಲ ಕಾದಂಬರಿ ಪ್ರಕಾಶಕರೊಬ್ಬರ ಅಜಾಕರೂಕತೆಯಿಂದಾಗಿ ಹಸ್ತಪ್ರತಿಯಲ್ಲಿಯೇ ಕಳೆದುಹೊಯಿತು. ನೆನಪಿನ ಆಧಾರದಿಂದ ಆ ಕಾದಂಬರಿಯನ್ನು 1963ರಲ್ಲಿ ಪುನಃ ಸೃಷ್ಟಿಸಿ ಪ್ರಕಟಿಸುವುದರ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು.

ಇವರು 40 ಕಾದಂಬರಿಗಳನ್ನೂ 12 ಕಥಾಸಂಕಲನಗಳನ್ನೂ ಹರಟೆ, ಪ್ರವಾಸಕಥನ ಮೊದಲಾದ ವಿಷಯುಗಳಿಗೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಬಾಲ್ಯವಿವಾಹ, ವೇಶ್ಯಾ ಸಮಸ್ಯೆ, ವರದಕ್ಷಿಣೆ, ಅಂಗವಿಕಲತೆ, ಬಂಜೆತನ, ಕಪಟ ಸಂನ್ಯಾಸಿಗಳ ವಂಚನೆ, ಸ್ತ್ರೀ ಶೋಷಣೆ, ಭಗ್ನಪ್ರಣಯ, ಅಂತರ್ಜಾತಿ ವಿವಾಹ ಮೊದಲಾದ ಸಮಸ್ಯೆಗಳು ಇವರ ಕಾದಂಬರಿಗಳ ವಸ್ತುಗಳಾಗಿವೆ. ಜಾಲ ಕಾದಂಬರಿಯಲ್ಲಿರುವ ಪಾರ್ವತಿಯ ಪಾತ್ರ ಕ್ಷಣಿಕ ಆಸೆಗಾಗಿ, ಮನೋದೌರ್ಬಲ್ಯಕ್ಕೊಳಗಾಗಿ ಹಾಳಾಗುವುದನ್ನು ಕಾಣಬಹುದು. ನಾಗವೀಣಾ ಕಾದಂಬರಿಯಲ್ಲಿ ವಿಲಾಸ ಜೀವನಕ್ಕೆ ಮಾರುಹೋದ ತಾಯಿಯಿಂದ ಮೃದುಸ್ವಭಾವದ ಮಗಳು ನೋವುಂಡು ದುರಂತದಲ್ಲಿ ಸಾವನ್ನಪ್ಪುವ ಚಿತ್ರಣವಿದೆ. ಗೆಜ್ಜೆಪೂಜೆ ಕಾದಂಬರಿಯಲ್ಲಿ ವೇಶ್ಯಾಪದ್ಧತಿಗೆ ಕಾರಣವಾಗಬಹುದಾದ ಧನದಾಹ, ಹೆಣ್ಣಿನ ಅಬಲೆತನ, ಗಂಡಿನ ಸ್ವಾರ್ಥಗಳ ಸೂಕ್ಷ್ಮದುರಂತ ಚಿತ್ರಣವಿದೆ. ಸದಾನಂದ ಕಾದಂಬರಿಯಲ್ಲಿ ಅಂಗವಿಕಲತೆ, ವಿಧವಾ ಸಮಸ್ಯೆಯನ್ನೂ ಅದಕ್ಕೆ ಪರಿಹಾರವನ್ನೂ ವ್ಯಕ್ತಿಗಳ ಹಂತದಲ್ಲಿ ಬದಲಾವಣೆ ತರಲು ಸಾಧ್ಯವೆಂಬ ವಿಚಾರವನ್ನೂ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಫಣಿಯಮ್ಮ ಕಾದಂಬರಿಯಲ್ಲಿ ಬಾಲ್ಯದಲ್ಲಿಯೇ ವಿಧವೆಯಾದ ಫಣಿಯಮ್ಮ ಬದುಕಿನುದ್ದಕ್ಕೂ ಶೋಷಿತಳಾಗುವುದು ಕಂಡುಬಂದರೆ, ಅದೇ ಕಾದಂಬರಿಯಲ್ಲಿ ಬರುವ ದಾಕ್ಷಾಯಿಣಿ ವಿಧವೆಯಾದರೂ ಗರ್ಭ ಧರಿಸುವುದರ ಮೂಲಕ ಬಂಡಾಯ ಪ್ರವೃತ್ತಿಯ ಸಂಕೇತವಾಗಿ ನಿಲ್ಲುತ್ತಾಳೆ. ಫಣಿಯಮ್ಮ (ಮಲಯಾಳಂ), ತುಂಗಭದ್ರ (ತೆಲುಗು), ಗೆಜ್ಜೆಪೂಜೆ (ಗುಜರಾತಿ ಹಾಗೂ ತೆಲುಗು)- ಈ ಕಾದಂಬರಿಗಳು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ಗೆಜ್ಜೆಪೂಜೆ, ಸದಾನಂದ, ಫಣಿಯಮ್ಮ, ಹೂಬಾಣ (ಮುತ್ತು ಒಂದು ಮುತ್ತು) ಕಾದಂಬರಿಗಳು ಚಲನಚಿತ್ರಗಳಾಗಿವೆ.

ಇಂದಿರಾ ಅವರು ಬರೆದಿರುವ ಕಥೆಗಳಲ್ಲಿ ಸಮಾಜದ ವಿವಿಧ ವ್ಯಕ್ತಿಗಳ ಬದುಕನ್ನು ಭಿನ್ನ ನೆಲೆಗಳಿಂದ ನೋಡುವ ಪರಿ ಕಂಡುಬರುತ್ತದೆ. ಮಾನವೀಯತೆ, ಸತ್ಯ, ಪ್ರಾಮಾಣಿಕತೆ, ತ್ಯಾಗ, ಆದರ್ಶ, ಪ್ರೀತಿ, ಪರೋಪಕಾರ, ಕೃತಜ್ಞತೆ, ಮೊದಲಾದವುಗಳನ್ನು ಪ್ರತಿನಿಧಿಸುವ ಪಾತ್ರಗಳು ಬರುತ್ತವೆ. 'ನಗಬೇಕು' ಹರಟೆಗಳ ಸಂಕಲನ 'ಚಿತ್ರಭಾರತ' ಚಲನಚಿತ್ರರಂಗದ ಹಲವಾರು ಮುಖಗಳನ್ನು ವಿವಿಧ ಕೋನಗಳಿಂದ ನೋಡಿರುವ ಕೃತಿ. 'ಚಿತ್ರಶಿಲ್ಪಿ ಪುಟ್ಟಣ್ಣಕಣಗಾಲ' ಚಲನಚಿತ್ರ ನಿರ್ದೇಶಕರನ್ನು ಕುರಿತದ್ದು. 'ಅನುಭವ ಕುಂಜ' ಪ್ರವಾಸ ಕಥನ.

ಇವರ ಸಾಹಿತ್ಯ ಸಾಧನೆಗೆ ಅನೇಕ ಸನ್ಮಾನ, ಪುರಸ್ಕಾರಗಳು ದೊರೆತಿವೆ. ತುಂಗಭದ್ರ ಕಾದಂಬರಿಗೆ ಪ್ರಾದೇಶಿಕ ಉತ್ತಮ ಕತೆ ಪ್ರಶಸ್ತಿ (1965), ಸದಾನಂದ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ (1965), ನವರತ್ನ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ (1970), ಫಣಿಯಮ್ಮ ಕಾದಂಬರಿಗೆ ಕರ್ನಾಟಕ ರಾಜ್ಯ ಪ್ರಶಸ್ತಿ (1976) ಲಭಿಸಿವೆ. ಇವರು ಸಲ್ಲಿಸಿದ ಅನುಪಮ ಸಾಹಿತ್ಯ ಸೇವೆಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನಿಸಿದೆ (1980). ದಾವಣಗೆರೆಯಲ್ಲಿ ಕರ್ನಾಟಕ ಲೇಖಕಿಯರ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷೆಯಾಗಿದ್ದರು (1981). ಇವರಿಗೆ ಸುರಗಿ ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಲಾಗಿದೆ (1991). ಇವರು 1994 ಮಾರ್ಚ್ 15ರಂದು ನಿಧನರಾದರು. (ಎಂ.ಎಲ್.ಎನ್.)

**ಇಂದ್ರ III :** ರಾಷ್ಟ್ರಕೂಟ ಅರಸ (914-29). 2ನೆಯ ಕೃಷ್ಣನ ಮೊಮ್ಮಗ, ಜಗತ್ತುಂಗನ ಮಗ. ಇವನಿಗೆ ನಿತ್ಯವರ್ಷ, ರಟ್ಟಮಾರ್ತಾಂಡ, ರಟ್ಟಕಂದರ್ಪ ಎಂಬ ಬಿರುದುಗಳಿದ್ದವು. ಲಂಜಗತ್ತುಂಗನು ಕೃಷ್ಣನ ಆಳ್ವಿಕೆಯಲ್ಲೇ ಗತಿಸಿದ್ದರಿಂದ, ಈತ ತನ್ನ ಅಜ್ಜನ ಅನಂತರ ರಾಷ್ಟ್ರಕೂಟ ರಾಜ್ಯವನ್ನು ವಹಿಸಿಕೊಂಡ. ಇವನ ವಿದ್ಯುಕ್ತ ಅಭಿಷೇಕ 915ರಲ್ಲಿ ಕುರುಂದಕ (ಕುರಂದ್ವಾಡ) ಕ್ಷೇತ್ರದಲ್ಲಿ ನಡೆಯಿತು.

ಪಟ್ಟಕ್ಕೆ ಬರುತ್ತಿದ್ದಂತೆಯೇ ಯುವಕ ಇಂದ್ರನಿಗೆ ತನ್ನ ಶೌರ್ಯ ಪ್ರದರ್ಶನವನ್ನು ಮಾಡುವ ಅವಕಾಶ ಒದಗಿ ಬಂದಿತು. ಪರಮಾರ ಕುಲದ ರಾಜಕುಮಾರ ಉಪೇಂದ್ರ ರಾಷ್ಟ್ರಕೂಟ ರಾಜ್ಯದ ಉತ್ತರದ ಭಾಗದ ಮೇಲೆ ಎರಗಿ, ಗೋವರ್ಧನ ಪ್ರಾಂತ್ಯವನ್ನು (ನಾಸಿಕ) ಆಕ್ರಮಿಸಿದ. ಇಂದ್ರ ಅವನನ್ನು ಎದುರಿಸಿ ಓಡಿಸಿದ. ಅನಂತರ ತನ್ನ ದೃಷ್ಟಿಯನ್ನು ಉತ್ತರ ಭಾರತದತ್ತ ಹರಿಸಿದ. 910 ರಲ್ಲಿ ಗೂರ್ಜರ ಪ್ರತೀಹಾರ ಮಹೇಂದ್ರಪಾಲ ಮೃತನಾಗಿದ್ದು, ಅವನ ಮಕ್ಕಳು ಇಮ್ಮಡಿ ಭೋಜ ಮತ್ತು ಮಹೀಪಾಲರಲ್ಲಿ ಸಿಂಹಾಸನಕ್ಕಾಗಿ ಕಲಹ ನಡೆಯುತ್ತಿತ್ತು. ಭೋಜ ತಂದೆಯ ಅನಂತರ ಪಟ್ಟವನ್ನೇರಿದರೂ ಮಹೀಪಾಲ ಚಾಂದೇಲರ ಸಹಾಯದಿಂದ ಭೋಜನನ್ನು ಸೋಲಿಸಿ ರಾಜನಾಗಿದ್ದ. ಅಲ್ಲಿನ ರಾಜಕೀಯ ಪರಿಸ್ಥಿತಿಯಲ್ಲಿ ಅಸ್ತವ್ಯಸ್ತತೆ ಉಂಟಾಗಿದ್ದ ಈ ಸಂದರ್ಭದಲ್ಲಿ ಇಂದ್ರ ಉತ್ತರ ಭಾರತಕ್ಕೆ ನುಗ್ಗಿದ (916). ಕಾಲ್ಪಿ ಎಂಬಲ್ಲಿ ಯಮುನೆಯನ್ನು ದಾಟಿ ಕನೂಜಿಗೆ ಮುತ್ತಿಗೆ ಹಾಕಿದ. ಉತ್ತರ ಭಾರತದ ಚಕ್ರಾಧಿಪತ್ಯಗಳ ರಾಜಧಾನಿಯಾಗಿ 300 ವರ್ಷಕ್ಕೂ ಮೇಲ್ಪಟ್ಟು ಮೆರೆದಿದ್ದ ಕನೂಜನ್ನು ರಾಷ್ಟ್ರಕೂಟ ಸೈನ್ಯ ವಶಪಡಿಸಿಕೊಂಡಿತು. ಮಹೀಪಾಲ ಕನೂಜಿನಿಂದ ತನ್ನ ಸ್ನೇಹಿತ ಚಾಂದೇಲ ಅರಸ ಹರ್ಷನ ರಾಜಧಾನಿ ಮಹೋಬಕ್ಕೆ ಓಡಿಹೋದ. ಇಂದ್ರನ ಸಾಮಂತ ಚಾಳುಕ್ಯ ನರಸಿಂಹ ಮಹೀಪಾಲನ ಬೆನ್ನಟ್ಟಿದ. 'ಸಿಡಿಲಿನಿಂದ ಘಾಸಿಯಾದಂತೆ ಮಹೀಪಾಲ ಆಹಾರ ನಿದ್ರೆಯನ್ನು ತ್ಯಜಿಸಿ ಓಡಿದ, ಬೆನ್ನಟ್ಟುತ್ತಿದ್ದ ನರಸಿಂಹ ತನ್ನ ಕುದುರೆಗಳನ್ನು ಗಂಗಾ ಯಮುನಾ ಸಂಗಮದಲ್ಲಿ ಸ್ನಾನ ಮಾಡಿಸಿ ಕೀರ್ತಿವಂತನಾದ' ಎಂದು ಪಂಪ ಈ ಸನ್ನಿವೇಶವನ್ನು ವರ್ಣಿಸಿದ್ದಾನೆ. ಇಂದ್ರನ ಉತ್ತರ ದೇಶದ ದಂಡಯಾತ್ರೆ ಯಶಸ್ವಿಯಾಗಿತ್ತು. ಆದರೆ ಅಲ್ಲಿ ಬಹು ಕಾಲ ನಿಲ್ಲದೆ ತನ್ನ ದೇಶಕ್ಕೆ ಮರಳಿದ. ಇತ್ತ ವೆಂಗಿ ಸಿಂಹಾಸನಕ್ಕಾಗಿ ಪೂರ್ವ ಚಾಳುಕ್ಯ ವಂಶದ ಹಲವರು ಸೆಣಸುತ್ತಿದ್ದರು. ಇಂದ್ರ ಈ ಮಧ್ಯೆ ಪ್ರವೇಶಿಸಿ ಕೊನೆಗೆ ತನ್ನ ಕಡೆಯುವನಾದ ಯುದ್ಧಮಲ್ಲನನ್ನು ಅರಸನನ್ನಾಗಿ ಮಾಡಿದ (ಸು.928). ಯುದ್ಧಮಲ್ಲನಿಗೆ ರಾಷ್ಟ್ರಕೂಟ ಸೇನಾನಿ ಶ್ರೀವಿಜಯ ಬಹು ಸಹಾಯ ಮಾಡಿದ್ದಂತೆ ಅನೇಕ ಶಾಸನಗಳಿಂದ ತಿಳಿಯುತ್ತದೆ.

ಇಂದ್ರ 14 ವರ್ಷ ಆಳಿದ 929ರಲ್ಲಿ ಮೃತನಾದ. ಕಳಚುರಿ ಅಮ್ಮಣದೇವನ ಮಗಳನ್ನು ಇಂದ್ರ ಮದುವೆಯಾಗಿದ್ದ. ಇವನಿಗೆ ಅಮೋಘವರ್ಷ (II) ಮತ್ತು ಗೋವಿಂದ ಎಂಬ ಇಬ್ಬರು ಮಕ್ಕಳಿದ್ದರು. ಅಮೋಘವರ್ಷ ಇಂದ್ರನ ಉತ್ತರಾಧಿಕಾರಿಯಾದ. (ಜಿ.ಎಸ್.ಡಿ.)

**ಇಂದ್ರ IV :** ರಾಷ್ಟ್ರಕೂಟ ವಂಶದ ರಾಜಕುಮಾರ. 3ನೆಯ ಕೃಷ್ಣನ ಮೊಮ್ಮಗ. ಇವನಿಗೆ ರಟ್ಟಕಂದರ್ಪ, ರಾಜಮಾರ್ತಾಂಡ, ಕೀರ್ತಿನಾರಾಯಣ, ಕಲಿಗಳೊಳ್ಗಂಡ, ಬೀರರಬೀರ, ಎಜೆವಬೆಡಂಗ, ಗೆಡೆಗಳಾಭರಣ, ಚಲದಗ್ಗಳಿ, ಚಲದಂಕಕಾರ- ಈ ಬಿರುದುಗಳಿರುವುದನ್ನು ನೋಡಿದರೆ ಯುದ್ಧದಲ್ಲಿಯೂ ಆಟದಲ್ಲಿಯೂ, ಸಮರ್ಥನೆಂದು ತಿಳಿಯುತ್ತದೆ. 973ರ ಕೊನೆಗೆ ಚಾಳುಕ್ಯ ವಂಶದ ಎರಡನೆಯ ತೈಲಪ ರಾಷ್ಟ್ರಕೂಟರ ಎರಡನೆಯ ಕರ್ಕನನ್ನು ಪದಚ್ಯುತಗೊಳಿಸಿ ಕಲ್ಯಾಣದ ಚಾಳುಕ್ಯರ ಆಳ್ವಿಕೆಯನ್ನು ಆರಂಭಿಸಿದ್ದರಿಂದ ಇವನು ರಾಜ್ಯವಾಳಲಿಲ್ಲ. 982ರಲ್ಲಿ ಸಲ್ಲೇಖನವ್ರತದಿಂದ ಶ್ರವಣಬೆಳಗೊಳದಲ್ಲಿ ಅಸು ನೀಗಿದ. (ಜಿ.ಎಸ್.ಡಿ.)

**ಇಕ್ಕೇರಿ** (ಹಳೇ ಇಕ್ಕೇರಿ): ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಸಾಗರಕ್ಕೆ ಸುಮಾರು 5ಕಿಮೀ ದೂರದಲ್ಲಿರುವ ಸಣ್ಣ ಹಳ್ಳಿ. ಸು.80 ವರ್ಷಗಳ ಕಾಲ ಕೆಳದಿ ಸಂಸ್ಥಾನದ ರಾಜಧಾನಿಯಾಗಿ ಮೆರೆದ ಐತಿಹಾಸಿಕ ಸ್ಥಳ. ಕೆಳದಿಯ ನಾಯಕರು 1560ರ ವೇಳೆಗೆ ತಮ್ಮ ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ವರ್ಗಾಯಿಸಿದರು. ಈಗಿರುವ ಹಳ್ಳಿಗೆ ಸು.2ಕಿಮೀ ದೂರದಲ್ಲಿ ಗುಡ್ಡದಮೇಲೆ ಒಂದು ವಿಸ್ತಾರವಾದ ಕಲ್ಲಿನಕೋಟೆ, ಕೋಟೆಯ ಸುತ್ತಲೂ ಅಗಳು ಇವೆ. ನಾಯಕರ ಅರಮನೆ ಮತ್ತು ಇತರ ಕಟ್ಟಡಗಳು ಇಲ್ಲಿದ್ದುವು. ಈಗ ಅವುಗಳ ಅವಶೇಷಗಳು ಮಾತ್ರ ಉಳಿದಿದ್ದು ಆ ಭಾಗವನ್ನು ಹಳೇ ಇಕ್ಕೇರಿ ಎಂದು ಕರೆಯುತ್ತಾರೆ. ಇದು ರಾಜಧಾನಿಯಾಗಿದ್ದಾಗ ವಿಸ್ತಾರವಾದ ನಗರವಾಗಿದ್ದಂತೆ ತೋರುತ್ತದೆ. ಅಲ್ಲಿ ಈಗ ಹರಡಿರುವ ಪ್ರಾಚೀನ ನಿವೇಶನದ ಅವಶೇಷಗಳು ಕೋಟೆಯ ಸುತ್ತಲೂ ಸುಮಾರು 3ಕಿಮೀಗಳಷ್ಟು ಸುತ್ತಳತೆಯ ಪ್ರದೇಶದಲ್ಲಿ ಕಂಡುಬರುತ್ತವೆ. ವಿಜಯನಗರದ ಅರಸರಿಂದ ಸ್ವತಂತ್ರರಾಗಿ ರಾಜ್ಯವನ್ನು ಮತ್ತಷ್ಟು ವಿಸ್ತಾರಗೊಳಿಸಿದ ಮೇಲೆ 1639ರಲ್ಲಿ ಈ ಇಕ್ಕೇರಿ ನಾಯಕರು ತಮ್ಮ ರಾಜಧಾನಿಯನ್ನು ಹೆಚ್ಚು ಆಯಕಟ್ಟಿನ ಸ್ಥಳವಾದ ಬಿದನೂರಿಗೆ ಬದಲಾಯಿಸಿದಾಗ ಇದರ ಪ್ರಾಶಸ್ತ್ಯ ತಗ್ಗಿರಬೇಕು. ಆ ಸಮಯದಲ್ಲಿ ತರೀಕೆರೆ ಮತ್ತು ಬಾಣಾವರದ ಪಾಳೆಗಾರರು, ಬಿಜಾಪುರದ ಸುಲ್ತಾನನ ನೆರವಿನೊಂದಿಗೆ ಈ ರಾಜ್ಯಕ್ಕೆ ನುಗ್ಗಿ ರಾಜಧಾನಿಯಾಗಿದ್ದ ಇಕ್ಕೇರಿಯನ್ನು ಹಿಡಿದು ಲೂಟಿ ಮಾಡಿದಂತೆ ತಿಳಿದುಬರುತ್ತದೆ. ಮುಂದೆ ಹೈದರನು ಬಿದನೂರನ್ನು ಮುತ್ತಿ ಈ ರಾಜವಂಶವನ್ನು ಕೊನೆಗಾಣಿಸಿ ಬಿದನೂರು ಸಂಸ್ಥಾನವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ ಮೇಲೆ ಇಕ್ಕೇರಿಯ ಪ್ರಾಶಸ್ತ್ಯ ಸಂಪೂರ್ಣವಾಗಿ ಉಡುಗಿಹೋಯಿತು. ಈಗ ಕೋಟೆ ಮತ್ತು ಅದರ ಸುತ್ತಮುತ್ತಲೂ ಇದ್ದ ಸ್ಥಳವೆಲ್ಲ ಸಂಪೂರ್ಣವಾಗಿ ನಿರ್ಜನವಾಗಿದೆ.



ಅಘೋರೇಶ್ವರ ದೇವಾಲಯ

ಅಲ್ಲಿಂದ ಸುಮಾರು ಒಂದೂವರೆ ಕಿಮೀ ದೂರದಲ್ಲಿ ಇಕ್ಕೇರಿ ನಾಯಕರ ಕಾಲದಲ್ಲಿ ಕಟ್ಟಿಸಿದ ಪ್ರಸಿದ್ಧವಾದ ಅಘೋರೇಶ್ವರ ದೇವಾಲಯದ ಬಳಿ ಒಂದು ಸಣ್ಣ ಹಳ್ಳಿ ಉಳಿದುಕೊಂಡು ಬಂದಿದೆ. ಈಗ ಅಲ್ಲಿನ ಮುಖ್ಯ ಆಕರ್ಷಣೆ ಎಂದರೆ ಅಘೋರೇಶ್ವರ ದೇವಾಲಯ. ಇದು ಬಹುಶಃ ಸದಾಶಿವನಾಯಕನ ಕಾಲದ (1530-67) ರಚನೆ. ದೇವಾಲಯದ ಹಾಸುಗಲ್ಲಿನ ಮೇಲಿರುವ ಭಕ್ತ ವಿಗ್ರಹಗಳು ಸದಾಶಿವನಾಯಕ ಮತ್ತು ಭದ್ರಪ್ಪನಾಯಕರದೆಂದು ಅವುಗಳ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ. ದೇವಾಲಯದ ಸುಕನಾಸಿಯ ಹೊಸಲಿನ ಮೇಲಿರುವ ಭಕ್ತವಿಗ್ರಹ ಸದಾಶಿವನಾಯಕನದಿರಬಹುದೆಂದು ಹೇಳುತ್ತಾರೆ. ಈ ಸುಂದರವಾದ ದೇವಾಲಯವನ್ನು ಕಟ್ಟಿಸಿದವನು ಹೊಂಬುಚ್ಚದ ಆಚಾರಿ ವೆಂಕಟಯ್ಯ ಎಂದು ಅಲ್ಲಿನ ಒಂದು ಶಾಸನದಿಂದ ತಿಳಿದುಬರುತ್ತದೆ. ಇಕ್ಕೇರಿ ನಾಯಕರ ವಾಸ್ತುಶೈಲಿಯಲ್ಲಿ ಅತ್ಯಂತ ಪ್ರಮುಖವಾದ ಈ ದೇವಾಲಯದಲ್ಲಿ ಹೊಯ್ಸಳ, ದ್ರಾವಿಡ ಮತ್ತು ಇಸ್ಲಾಮೀ ಶೈಲಿಗಳ ಹಿತಮಿತವಾದ ಸಮ್ಮಿಲನವಿದೆ. (ಎಂ.ಎಚ್.)

ಅಘೋರೇಶ್ವರ ದೇವಾಲಯ 5 ದಪ್ಪ ದಿಂಡುಗಳನ್ನೊಳಗೊಂಡ ಆರು ಅಡಿ ಎತ್ತರದ ಜಗತಿಯ ಮೇಲೆ ಇದೆ. ಅಡಿದಿಂಡಿನ ಮೇಲೆ ಒಂದರಲ್ಲಿ ಕೀರ್ತಿಮುಖಗಳ ಮತ್ತು ಇನ್ನೊಂದರ ಮೇಲೆ ಸಿಂಹಸಾಲುಗಳ ಅಲಂಕರಣವಿದೆ. ತಳವಿನ್ಯಾಸದಲ್ಲಿ ಈ ಜಗತಿ ಚತುರಸ್ರಾಕಾರವಾಗಿದ್ದರೂ ಪರಿಘದ ಓಟವನ್ನು ಅಲ್ಲಲ್ಲಿ ಹಿಂದಕ್ಕೆ ಮುಂದಕ್ಕೆ ಜಗ್ಗುವುದರಿಂದ ಅಂಚುಗಳು ದಂತಪಂಕ್ತಿಯಂತೆ ಕಾಣುತ್ತವೆ. ಈ ಅಂಗಗಳೆಲ್ಲ ಹೊಯ್ಸಳ ಶೈಲಿಯ ಸ್ವರೂಪವನ್ನೇ ಅನುಕರಿಸಿದ್ದರೂ ಜಗತಿಯ ಅಗಲ ಬಹಳ ಕಿರಿದಾಗಿದ್ದು ಅದಕ್ಕೆ ಹತ್ತಲು ಮೆಟ್ಟಿಲುಗಳೂ ಇಲ್ಲದಿರುವುದರಿಂದ ಈ ಜಗತಿ ಹೊಯ್ಸಳ ದೇವಾಲಯಗಳಲ್ಲಿರುವಂತೆ ಪ್ರದಕ್ಷಿಣೆಗೆ ಅನುವಾಗುವಂತೆ ಕಟ್ಟಲಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಜಗತಿಯ ಮೇಲಿನ ಗುಡಿಭಾಗದಲ್ಲಿ ಒಂದು ಚತುರಸ್ರಾಕಾರದ ಗರ್ಭಗೃಹವೂ ಅದರ ಮುಂದೆ ತೆರೆದ ಸುಕನಾಸಿಯೂ ಇದ್ದು ಅದಕ್ಕೂ ಮುಂದೆ 25 ಅಂಕಣಗಳ ಮಂಟಪವಿದೆ. ಗರ್ಭಗೃಹದ ಹೊರಭಿತ್ತಿಯ ಮೇಲೆ ಪೂರ್ವ ದಕ್ಷಿಣ ಮತ್ತು ಪಶ್ಚಿಮ ಪಾರ್ಶ್ವಗಳಲ್ಲಿ ದೇವಕೋಷ್ಠಗಳಿದ್ದು, ಅವುಗಳ ಮೇಲೆ ಸಿಂಹಪಟ್ಟಿಕೆ ಮತ್ತು ಗೋಪುರಗಳ ಅಲಂಕರಣವಿದೆ. ಸೂರಿನ ಭಾಗದಲ್ಲಿ S ಆಕಾರದ ಕಪೋತವಿದೆ. ಗರ್ಭಗೃಹದ ಮೇಲಿನ ಗೋಪುರ ಎರಡು ತಲಗಳಲ್ಲಿದೆ. ಗೋಪುರದ ಮೇಲಿನ ಅಲಂಕರಣ ಚಿಕ್ಕ ಗೋಪುರಗಳ ಮೇಲೆ ನಿಂತ ಸಿಂಹಗಳಿಂದ ಕೂಡಿದೆ. ಕೆಳತಲದ ಪೂರ್ವಭಾಗದಲ್ಲಿ ಗೋಪುರದ ಒಳಗಿನ ಬರಿ ಕೋಣೆಗೆ ಹೋಗಲು ಒಂದು ದ್ವಾರವೂ ಉತ್ತರದಲ್ಲಿ ಸುಕನಾಸಿಯ ಮೇಲಿನ ಭಾಗದವರೆಗೆ ಗೋಪುರದ ಚಾಚಣಿಕೆಯೂ ಇವೆ.

ಮಂಟಪದ ಹೊರಗೋಡೆಯ ಮೇಲೂ ಅಲ್ಪ ಉಬ್ಬಿನ ಶಿಲ್ಪಗಳ ಅಲಂಕರಣವಿದೆ. ಇಲ್ಲಿ ಆರು ಪಟ್ಟಿಕೆಗಳಿವೆ. ಕೆಳಗಿನದರಲ್ಲಿ ಮಧ್ಯೆ ಮಧ್ಯೆ ಸಿಂಹ, ಕೋತಿ, ಕಾಮಕೇಳಿಯ ಚಿತ್ರಗಳನ್ನೊಳಗೊಂಡಿರುವ ಹಂಸಗಳ ಸಾಲೂ ಎರಡನೆಯದರಲ್ಲಿ ಕಂಬಗಳ ಮೇಲೆ ಕೆತ್ತಿರುವ ಗೋಪುರಗಳ ಸಾಲೂ ಇವೆ. ಇದರ ಮೇಲುಗಡೆ ಜಾಲಂಧ್ರಗಳನ್ನುಳ್ಳ ಕಿಟಕಿಗಳ ಅಲಂಕರಣವಿದ್ದು, ಇವುಗಳ ಮಧ್ಯೆ ಕಮಾನಿನ ಆಕೃತಿಯ ಕೋಷ್ಠಗಳಿವೆ. ಕೋಷ್ಠಗಳಲ್ಲಿ ಯಕ್ಷರು, ದಿಕ್ಪಾಲಕರು, ವಿಷ್ಣು, ಭೈರವ ಇತ್ಯಾದಿ ಶಿಲ್ಪಗಳಿವೆ. ಇದರ ಮೇಲೆ ಕಿನ್ನರಿಯರು, ಪುರುಷಾಮೃಗ, ಹುಲಿಯನ್ನೇರಿರುವ ಯೋಗಿ ಇತ್ಯಾದಿ ಶಿಲ್ಪಗಳ ಸಾಲೂ 5ನೆಯ ಪಟ್ಟಿಕೆಯಲ್ಲಿ ಹೂಗಳೂ 6ನೆಯದರಲ್ಲಿ ಎಲೆಯಾಕಾರದ ನಕಾಸೆಯ ಸಾಲೂ ಇವೆ. ಈ ಭಿತ್ತಿಯ ಅಲಂಕರಣ ವಿನ್ಯಾಸ ಹೊಯ್ಸಳ ದೇವಾಲಯಗಳ ನೆನಪನ್ನು ತರುತ್ತವೆ. ಆದರೆ ಹೊಯ್ಸಳ ಶಿಲ್ಪಗಳಲ್ಲಿನ ನಯ ನಾಜೂಕು ಇಲ್ಲಿಲ್ಲ. ಇದೇ ಹೊಯ್ಸಳ ಶೈಲಿಯ ಅಂಶಗಳು ಮುಖ ಮಂಟಪದಲ್ಲೂ ಜಗತಿಯಲ್ಲೂ ದ್ವಾರಾಲಂಕರಣದಲ್ಲೂ ಒಳಗಿನ ಕಂಬಗಳಲ್ಲಿಯೂ ಎದ್ದು ಕಾಣುತ್ತವೆ. ಸುಕನಾಸಿ ತೆರೆದಂತೆ ಇದ್ದು ಅದರ ದ್ವಾರಾಲಂಕರಣವೂ ಸುಂದರವಾಗಿದೆ. ಸುಕನಾಸಿಯಿಂದ ಗರ್ಭಗೃಹವನ್ನು ಸುತ್ತಿ ಬರಲು ಪ್ರದಕ್ಷಿಣಾಪಥವಿದೆ. ಈ ದೇವಾಲಯದಲ್ಲಿ ಆಳವಾಗಿ ಕೆತ್ತಿದ ದಿಂಡುಗಳ ಸರಗಳುಳ್ಳ ಜಗತಿ, ಸುಕನಾಸಿಯ ಮೇಲೆ ಚಾಚಣಿಕೆಯಿರುವ ಕಲ್ಲಿನ ಶಿಖರ, ಗುಂಡಾದ ಮತ್ತು ಷೋಡಶ ಮುಖದ ಕಂಬಗಳು ಮತ್ತು ಹೊರಗೋಡೆಯ ಅಲಂಕರಣ ವಿನ್ಯಾಸಗಳು ಹೊಯ್ಸಳ ಶೈಲಿಯ ಅಂಶಗಳನ್ನೂ ತಲಗಳು ಮತ್ತು ದ್ವಾರವಿರುವ ಗೋಪುರ, ಚತುರಸ್ರಾಕಾರದ ಮಂಟಪ, ಸಿಂಹಬೋದಿಗೆಯನ್ನುಳ್ಳ ಅನೇಕ ಕಂಬಗಳು ಮತ್ತು ಅರೆಕಂಬಗಳು ಮತ್ತು ಸುಕನಾಸಿಯಿಂದಾರಂಭವಾಗುವ ಪ್ರದಕ್ಷಿಣಾ ಪಥ- ಇವು ದ್ರಾವಿಡ ಶೈಲಿಯ ಅಂಶಗಳನ್ನೂ ತೋರಿಸುತ್ತವೆ.

ಅಘೋರೇಶ್ವರದ ಪಶ್ಚಿಮಕ್ಕಿರುವ ಪಾರ್ವತಿ ಗುಡಿಯೂ ಮೇಲಿನದರ ಮಾದರಿಯಲ್ಲಿಯೇ ಇದೆ. ಆದರೆ ನವರಂಗದ ಬಾಗಿಲುವಾಡ ಮತ್ತು ಕಿಟಕಿಗಳಲ್ಲಿ ಚೂಪುತಲೆಯ ಕಮಾನುಗಳನ್ನು ಉಪಯೋಗಿಸಿರುವುದು ಇಲ್ಲಿಯ ವಿಶೇಷ. ಈ ಅಂಶ ಭಾರತೀಯ ಮುಸ್ಲಿಮ್ ವಾಸ್ತುಶೈಲಿಯಿಂದ ಬಂದಿದ್ದಾಗಿದೆ.

ಅಘೋರೇಶ್ವರದ ಮುಂದಿನ ನಂದಿಮಂಟಪ ಎತ್ತರವಾದ ಜಗತಿಯ ಮೇಲಿದ್ದು ಅದರ ಭಿತ್ತಿ ಏಳು ಚೂಪು ತಲೆಯ ಕಮಾನುಗಳನ್ನು ಒಳಗೊಂಡಿದೆ. ಕಮಾನುಗಳ ಮಧ್ಯದಲ್ಲಿ ಶಿಲ್ಪಗಳಿವೆ. ಪಾರ್ವತಿ ಗುಡಿಯೂ ಮುಂದಿನ ನಂದಿ ಮಂಟಪವೂ ಅಘೋರೇಶ್ವರ ಗುಡಿಗಿಂತಲೂ ಕೆಲಕಾಲದ ಅನಂತರ ಕಟ್ಟಿರಬಹುದಾಗಿದೆ.

ಅಘೋರೇಶ್ವರ ದೇವಾಲಯದಿಂದಾಗಿ ಇಕ್ಕೇರಿ ಇಂದೂ ಪ್ರಸಿದ್ಧವಾಗಿದೆ. ಇಲ್ಲಿನ ನಂದಿಮಂಟಪದಲ್ಲಿರುವ ನಂದಿ ಬಹು ನಯವಾಗಿ ಕೆತ್ತಿರುವ ಆಕರ್ಷಕ ಶಿಲ್ಪಿಗಳಲ್ಲೊಂದು. *

**ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ :** ಕನ್ಯಾವಿಕ್ರಯದ ಪರಿಣಾಮವು ಎಂಬ ಇನ್ನೊಂದು ಹೆಸರನ್ನೂ ಉಳ್ಳ ಈ ಪುಟ್ಟ ಪುಸ್ತಕ. ಹೊಸಗನ್ನಡದ ಪ್ರಪ್ರಥಮ ಸಾಮಾಜಿಕ ನಾಟಕ. ಮುಖಪುಟದಲ್ಲಿ ಉಲ್ಲೇಖವಾಗಿರುವಂತೆ ಹವ್ಯಕ ಹಿತೇಚ್ಛುವಾದ ಒಬ್ಬ ವಿದ್ವಾಂಸರಿಂದ ರಚಿತವಾಗಿದ್ದು (1887). ಮುಂಬಯಿಯ ಭಾರತೀ ಛಾಪಖಾನೆಯ ಅಧ್ಯಕ್ಷರು ತಮ್ಮ ಮುದ್ರಣಾಲಯದಲ್ಲಿ ಛಾಪಿಸಿದರು.

ಉತ್ತರ ಕನ್ನಡ ಜಿಲ್ಲೆಯ ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ (ನೋಡಿ) ಎಂಬ ಸಾಹಸಿ ವಿದ್ವಾಂಸರು ಮುಂಬಯಿಯಲ್ಲಿ ಭಾರತೀ ಛಾಪಖಾನೆಯನ್ನು ಸ್ಥಾಪಿಸಿದರು. ಅಲ್ಲಿ ಮಂಗಳೂರಿನ ಅಕ್ಕಸಾಲಿಗರಿಂದ ಕನ್ನಡ ಅಕ್ಷರ ಕೆತ್ತಿಸಿ ಕನ್ನಡದ ಹಳೆಯ ಕಾವ್ಯ ಪ್ರಸಂಗಗಳನ್ನು ಮುದ್ರಿಸಿದ್ದಲ್ಲದೆ ನಿಯತಕಾಲಿಕಗಳನ್ನು ಪ್ರಕಟಿಸುತ್ತಿದ್ದರು. ಅವರೇ ಈ ಪುಸ್ತಕದ ಕರ್ತೃ ಎಂಬುದು ಈ ಪುಸ್ತಕವನ್ನು ಎರಡನೆಯ ಬಾರಿಗೆ ಪರಿಚಯ ಸಮೇತ ಪ್ರಕಟಿಸಿದ (ಕುಮಟ 1953) ಲಿಂಗೇಶ ಶರ್ಮರ ಹೇಳಿಕೆ.

ಸ್ಥೂಲವಾಗಿ ನಾಟಕದ ಕಥೆ ಇದು: ಮದುವೆಯಾಗಿದ್ದು ಆಗಲೇ ಇಬ್ಬರು ಹೆಂಡಿರನ್ನು ಕಳೆದುಕೊಂಡು 60 ವರ್ಷ ಮೀರಿದ್ದ ಮುದುಕ ಇಗ್ಗಪ್ಪ ಹೆಗಡೆ ಸಾಲಮಾಡಿ ತೆರ (ವಧುದಕ್ಷಿಣೆ) ಕೊಟ್ಟು ಎಳೆಯ ಹುಡುಗಿಯನ್ನು ಮದುವೆಯಾದ. ದಾಂಪತ್ಯ ವಿರಸಗೊಳ್ಳುತ್ತಿರುವಾಗಲೇ ರೋಗದಿಂದ ಸತ್ತ. ಹಣಕ್ಕೆ ಮಗಳನ್ನು ಮಾರಿದ ಶಿವಭಟ್ಟನ ಮನೆಯೂ ಸುಟ್ಟಿತು. ಇದ್ದ ಒಬ್ಬನೇ ಮಗನೂ ಸತ್ತ. ವಿಧವೆಯಾದ ಹುಡುಗಿ ಕೆಟ್ಟಳು. ಗರ್ಭಖೂನಿ ಮಾಡಿ ಅಪರಾಧಿಯಾದಳು. ಈ ಅಪರಾಧದಲ್ಲಿ ಸಾಮಾಜಿಕ ದೋಷವೇ ಹೆಚ್ಚೆಂಬುದನ್ನು ಕಂಡ ನ್ಯಾಯಾಧೀಶರು ಅಲ್ಪ ಶಿಕ್ಷೆ ವಿಧಿಸಿ ಮುಗಿಸಿದರು.

ಇದೊಂದು ಚಿಕ್ಕ ನಾಟಕ. 14ಪುಟ್ಟ ಪುಟ್ಟ ದೃಶ್ಯಗಳುಳ್ಳದ್ದು. ಕ್ರೌನ್ ಅಷ್ಟಪತ್ರದ ಮುದ್ರಣದಲ್ಲಿ 47 ಪುಟ. ಸುಮಾರು ಮುಕ್ಕಾಲು ಗಂಟೆಯ ಅವಧಿಯಲ್ಲಿ ಆಡಬಹುದಾದದ್ದು. ಆಡುಭಾಷೆಯನ್ನೇ ತದ್ವತ್ ಲಿಪಿಗೊಳಿಸಿ ಸಂಭಾಷಣೆ ರಚಿಸಿದ್ದು ಈ ನಾಟಕದ ಮುಖ್ಯ ವೈಶಿಷ್ಟ್ಯ. ಇಲ್ಲಿನ ಮುಖ್ಯಪಾತ್ರಗಳು ಹೆಚ್ಚಾಗಿ ಅಡಕೆ ತೋಟವನ್ನೇ ಅವಲಂಬಿಸಿದ ಬ್ರಾಹ್ಮಣವರ್ಗದವರು, ಹವ್ಯಕರು. ಹವ್ಯಕರು ಇವತ್ತಿಗೂ ಬಳಸುವ ಹಳಗನ್ನಡ ಪ್ರಚುರವಾದ ವಿಶಿಷ್ಟ ದೇಸಿಯನ್ನೇ ಅಪ್ಪಟವಾಗಿ ಇಲ್ಲಿನ ಸಂಭಾಷಣೆಗಳಲ್ಲಿ ಬಳಸಿದೆ. ಹಾಗೇ ನಾಟಕದಲ್ಲಿ ಬರುವ ಕೊಂಕಣಸ್ಥರು ಕೊಂಕಣಿಯಲ್ಲಿ ಅಥವಾ ಕೊಂಕಣಸ್ಥ ಕನ್ನಡದಲ್ಲಿ ಮಾತನಾಡುತ್ತಾರೆ. ಆಳು ತನ್ನ ಸಮಾಜದ ದೇಸಿಯಲ್ಲೇ ಮಾತನಾಡುತ್ತಾನೆ.

ಕನ್ನಡ ಸಾಹಿತ್ಯ ಚರಿತ್ರೆಯ ಒಂದು ತಿರುವಿನಲ್ಲಿ ಅನೇಕ ಹೊಸತನಗಳಿವೆ. ಧೈರ್ಯಮಾಡಿದ ಈ ಚಿಕ್ಕ ಗ್ರಂಥದ ವೈಶಿಷ್ಟ್ಯಗಳು ಇವು: 1. ಕನ್ನಡದಲ್ಲಿ ಮುದ್ರಿತವಾದ ಮೊದಲ ಹತ್ತೆಂಟರಲ್ಲಿ ಇದೂ ಒಂದು. 2. ಕನ್ನಡದ ಮೊತ್ತಮೊದಲ ಸ್ವತಂತ್ರನಾಟಕ ಅಷ್ಟೇ ಅಲ್ಲ, ಹೊಸಗನ್ನಡವನ್ನು ಆರಂಭಿಸಿದ ಮೊದಲ ಸ್ವತಂತ್ರ ಕೃತಿ. 3. ಸಂಸ್ಕೃತದ ರೂಪಾಂತರವಾದ ಮಿತ್ರವಿಂದಾಗೋವಿಂದ ಕನ್ನಡದ ಮೊದಲ ನಾಟಕವಾದರೆ ಇದೇ ಎರಡನೆಯದು. 4. ವಸ್ತು ಯಾವುದೇ ಗ್ರಂಥವನ್ನು ಆಧರಿಸದೆ ಜೀವನದಿಂದ ನೇರ ಎತ್ತಿಕೊಂಡದ್ದು; ವಿಷಯ ಸಾಮಾಜಿಕ. 5. ಆದ್ಯಂತ ಆಡುಮಾತನ್ನೇ ಅಪ್ಪಟವಾಗಿ ಬಳಸಿಕೊಂಡಿದ್ದು.

ಕರ್ತೃವಿಗೆ ಕೃತಿನಿರ್ಮಾಣ ಶ್ರದ್ಧೆಗಿಂತ ಸಮಾಜೋದ್ಧಾರ ಶ್ರದ್ಧೆ ಹೆಚ್ಚಿದ್ದ ಕಾರಣ ಇದು ಶ್ರೇಷ್ಠ ಸಾಹಿತ್ಯ ಕೃತಿಯಾಗದೆ ಉಳಿದಿದೆ. (ಕೆ.ವಿ.ಎಸ್.)

**ಇಗ್ಗುತಪ್ಪ ದೇವರ ಶಿಖರ :** ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟದ ಬೆಟ್ಟಸಾಲಿನ ಶಿಖರಗಳಲ್ಲಿ ಎರಡನೆಯ ದೊಡ್ಡ ಶಿಖರ (ಮೊದಲನೆಯದು ತಡಿಯಂಡಮೋಳು). ವಿರಾಜಪೇಟೆಯಿಂದ ಸುಮಾರು 18ಕಿಮೀ ಪಶ್ಚಿಮಕ್ಕಿದೆ. ಎತ್ತರ ಸು.1220ಮೀ. ಈ ಶಿಖರಕ್ಕೆ ಮಲ್ಮ ಎಂಬ ಹೆಸರೂ ಇದೆ. ಶಿಖರದ ಬುಡದಲ್ಲಿ ಕುಂಜು (ಅಮ್ಮಂಗೇರಿ) ಎಂಬ ಗ್ರಾಮದಲ್ಲಿ ಇಗ್ಗುತಪ್ಪದೇವರ (ಪಾಡಿಸುಬ್ರಹ್ಮಣ್ಯ) ದೇವಾಲಯವಿದೆ. ಇದು ಕೊಡಗಿನ ಪ್ರಸಿದ್ಧ ಪುಣ್ಯಕ್ಷೇತ್ರ. ಕೊಡಗಿನ ಎಲ್ಲ ಭಾಗಗಳಿಂದಲೂ ಹಿಂದು ಯಾತ್ರಾರ್ಥಿಗಳು ಇಲ್ಲಿಗೆ ಬಂದು ತುಲಾಭಾರ ಇತ್ಯಾದಿ ಹರಕೆಗಳನ್ನೊಪ್ಪಿಸುವರು.

ಇಗ್ಗುತಪ್ಪ ದೇವಾಲಯ

ಮಲ್ಮ ಇಗ್ಗುತಪ್ಪ ದೇವರು ನೆಲೆಸಿದ ಸ್ಥಳ ಎಂದು ಪ್ರತೀತಿ. ಶಿಖರದ ಮೇಲೆ ಸು. ಅರ್ಧ ಎಕರೆ ಸಮಭೂಮಿ ಇದೆ. ಇದರ ಮಧ್ಯೆ ಇಗ್ಗುತಪ್ಪನ ಕಲ್ಲಿನ ವಿಗ್ರಹವಿದೆ. ಹತ್ತಿರದಲ್ಲೇ ವರ್ಷ ಪೂರ್ತಿ ನೀರಿರುವ ಒಂದು ಕೊಳವಿದೆ. ಮಲ್ಮದಲ್ಲಿ ವರ್ಷಕ್ಕೆ ನಾಲ್ಕು ಸಲ ಊರಿನವರು ನಾಡಿನವರು ಸೇರಿ ಹಬ್ಬವನ್ನು ಆಚರಿಸುತ್ತಾರೆ. ದೊಡ್ಡ ಹಬ್ಬಗಳು ಸಾಮಾನ್ಯವಾಗಿ ಡಿಸೆಂಬರ್ ಮತ್ತು ಮಾರ್ಚ್ ತಿಂಗಳಲ್ಲಿ ಬರುತ್ತವೆ. ಈ ಸಮಯದಲ್ಲಿ ದೇವರಿಗೆ ಪೂಜೆ ಒಪ್ಪಿಸುವುದು, ಅನೇಕ ವಿನೋದಗಳಲ್ಲಿ ನಿರತವಾಗುವುದು ವಾಡಿಕೆ. ಕೊಡಗರ ಆಚಾರ ಪದ್ಧತಿ ಹಬ್ಬ ಹುಣ್ಣಿಮೆಗಳೆಲ್ಲ ಈ ದೇವರ ಕಟ್ಟಳೆ ಪ್ರಕಾರ ನಡೆಯಬೇಕು. ಆದ್ದರಿಂದ ಈ ಸ್ಥಳದಲ್ಲಿ ನಾಡಿನವರು ಕೂಡಿದಾಗ ಕೊಡಗರ ಹಬ್ಬಗಳಾದ ಹುತ್ತರಿ, ಕೈಲ್ ಮುಹೂರ್ತ ಮೊದಲಾದವು ನಡೆಯಬೇಕಾದ ದಿನ, ನಕ್ಷತ್ರ ಇತ್ಯಾದಿಗಳನ್ನು ಇಲ್ಲೇ ತೀರ್ಮಾನ ಮಾಡುತ್ತಾರೆ.

ಕೇರಳ ಪ್ರಾಂತ್ಯದ ಕಣ್ಣಾನೂರು ನಗರದ ಪಶ್ಚಿಮಕ್ಕಿರುವ ಪಾಕಡ ಎಂಬ ದ್ವೀಪದಲ್ಲಿ ಹುಟ್ಟಿ ಬೆಳೆದ ಏಳುಜನ ದೇವತೆಗಳು - ಆರು ಜನ ಅಣ್ಣತಮ್ಮಂದಿರು ಒಬ್ಬ ತಂಗಿ - ಇತ್ತ ಕಡೆಗೆ ವಲಸೆ ಬರುತ್ತ ಒಬ್ಬೊಬ್ಬರು ಒಂದೊಂದೆಡೆ ನೆಲೆಸಿದರೆಂದೂ ಅವರಲ್ಲಿ 3 ಜನ ಅಣ್ಣಂದಿರು ಮತ್ತು ತಂಗಿ ಮಲಬಾರು ಕಡೆಯಿಂದ ಕೊಡಗಿನ ಗಡಿ ದಾಟಿ ಬಂದು ಮಲ್ಮದಿಂದ ಹುಟ್ಟಿಬರುವ ಅಂಬುಲಪೊಳೆಯ ದಡದಲ್ಲಿ ಪಾಡಿತ್ತೋರ ಕಂಡಿ ಎಂಬ ಸ್ಥಳದಲ್ಲಿ ತಂಗಿದ್ದರೆಂದೂ ಅನಂತರ ಕಾರಣಾಂತರದಿಂದ ಬೇರೆಯಾಗಿ, ತಂಗಿ ಅಲ್ಲಿಂದ 3ಕಿಮೀ ದೂರದಲ್ಲಿರುವ ಪನ್ನಂಗಾಲವೆಂಬ ಸ್ಥಳದಲ್ಲಿ, ಹಿರಿಯನಾದ ಇಗ್ಗುತಪ್ಪ ಮಲ್ಮದಲ್ಲಿ, ಒಬ್ಬ ತಮ್ಮ (ಪಾಲೂರಪ್ಪ) ನಾಪೋಕ್ಲುವಿನಿಂದ ಐದು ಕಿಮೀ ದೂರದಲ್ಲಿರುವ ಪಾಲೂರಿನಲ್ಲಿ, ಮತ್ತೊಬ್ಬ ತಮ್ಮ (ಕಿರುನೆಲ್ಲಿ ಪೆಮ್ಮಯ್ಯ) ಕೊಡಗು ವೈನಾಡು ಗಡಿಯ ತಿರುನೆಲ್ಲಿ ಎಂಬಲ್ಲಿ ನೆಲಸಿದರೆಂದು ಐತಿಹ್ಯವಿದೆ. (ಟಿ.ಪಿ.ಎಸ್.ಆರ್.;ಕೆ.ಬಿ.ಎಸ್.)

**ಇಟಗಿ[1] :** ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಸಿದ್ದಾಪುರದಿಂದ 1ಕಿಮೀ ದೂರದಲ್ಲಿದೆ. ಈ ಗ್ರಾಮದ ಪ್ರಾಚೀನ ಹೆಸರು ಇಷ್ಟಿಕಾಪುರ. ಈ ಊರು ಇಲ್ಲಿರುವ ರಾಮೇಶ್ವರ ದೇವಾಲಯದಿಂದ ಪ್ರಸಿದ್ಧವಾಗಿದೆ. ಬಿಳಿಗಿ ಅರಸು ಮನೆತನದ ಆಳ್ವಿಕೆಯಲ್ಲಿ ಪ್ರಸಿದ್ಧಿಗೆ ಬಂದ ಈ ದೇವಾಲಯ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. ಗರ್ಭಗೃಹ, ಸುಖನಾಸಿ ಮತ್ತು ನವರಂಗವನ್ನು ಹೊಂದಿರುವ ಈ ದೇವಾಲಯ ಕದಂಬನಾಗರ ಶೈಲಿಯಲ್ಲಿದೆ. 16ನೆಯ ಶತಮಾನದ ಲಕ್ಷಣಗಳಿರುವ, ಘಂಟೆಪ್ಪ ನಾಯಕರ ತಿಮ್ಮಪ್ಪನ ಸದಾಸೇವೆ ಎಂಬ ಬರೆಹವಿರುವ ಶಾಸನ ದೇವಾಲಯದಲ್ಲಿದೆ.

ದೇವಾಲಯದ ಭಿತ್ತಿಯ ಮೇಲೆ ವಿವಿಧ ಮೂರ್ತಿಗಳನ್ನು ಕೆತ್ತಲಾಗಿದೆ. ರಾಮಲಿಂಗೇಶ್ವರ ದೇವಾಲಯದ ಪಕ್ಕದಲ್ಲಿ ಪಾರ್ವತಿಯ ಆಲಯವಿದೆ. ದೇವಾಲಯದ ಎದುರು, ದೇವರ ಪೂಜಾ ಉತ್ಸವಗಳಿಗೆ ಅನುಕೂಲವಾಗಲೆಂದು ಕಟ್ಟಿಸಿದ ವಿಶಾಲವಾದ ಕೆರೆಯಿಂದ ರಾಮೇಶ್ವರ ದೇವರ ರಥೋತ್ಸವ ವರ್ಷಕ್ಕೊಮ್ಮೆ ಫಾಲ್ಗುಣ ಶುಕ್ಲ ದಶಮಿಯಂದು ವೈಭವದಿಂದ ಜರುಗುತ್ತದೆ. ಇತ್ತೀಚೆಗೆ ರಾಮೇಶ್ವರ ದೇವಾಲಯದ ಮುಂಭಾಗವನ್ನು ಆಧುನೀಕರಿಸಲಾಗಿದೆ. ದೇವಿಗುಡಿ, ವಿಠಲ ಮಂದಿರ ಮತ್ತು ಕಲ್ಯಾಣಿಗಳೂ ಈ ಗ್ರಾಮದಲ್ಲಿವೆ. ಇಲ್ಲಿಗೆ ಸಮೀಪದಲ್ಲಿ ಬಿಳಗಿ ಅರಸರ ರಾಜಧಾನಿಯಾಗಿದ್ದ ಐಸೂರು ಇದೆ. ಸುತ್ತಲಿನ ಹಳ್ಳಿಗಳಿಗೆ ವ್ಯಾಪಾರೀಕೇಂದ್ರವಾಗಿರುವ ಇಟಗಿಯಲ್ಲಿ ಪ್ರೌಢಶಾಲೆ, ಸಂಸ್ಕೃತ ಪಾಠಶಾಲೆ ಇವೆ. (ಆರ.ಪಿ.ಎಚ್.)

**ಇಟಗಿ[2] :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರದಿಂದ 22ಕಿಮೀ ದೂರದಲ್ಲಿದೆ. ಇಲ್ಲಿ ನಾರಾಯಣ, ಕಲ್ಮೇಶ್ವರ, ರಾಮಲಿಂಗೇಶ್ವರ, ಹನುಮಂತ, ಮಲ್ಲಿಕಾರ್ಜುನ, ದುರದುಂಡೇಶ್ವರ, ಲಕ್ಷ್ಮೀದೇವಿ, ವೀರಭದ್ರ, ಅಕ್ಕಮಹಾದೇವಿ, ಬಸವಣ್ಣದೇವರ ದೇವಾಲಯಗಳಿವೆ. ಒಂದು ವಿರಕ್ತ ಮಠವೂ ಇದೆ. ಕಲ್ಯಾಣ ಚಾಳುಕ್ಯರ ಕಾಲದ ನಾರಾಯಣ ದೇವರ ಗುಡಿಯನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಲಾಗಿದೆ. ಸು.1.5ಮೀ ಎತ್ತರವಿರುವ ನಾರಾಯಣಮೂರ್ತಿ ಕೊನೆಯ ಕಲ್ಯಾಣ ಚಾಳುಕ್ಯರ ವಿಶಿಷ್ಟ ನಿರ್ಮಾಣವಾಗಿದ್ದು, ಪ್ರಭಾವಳಿಯಲ್ಲಿ ಮಕರತೋರಣವಿದೆ. ಮರದ ಕಂಬಗಳಿರುವ ಕಲ್ಮೇಶ್ವರ ದೇವಾಲಯ ಕಿತ್ತೂರ ಮಲಸರ್ಜನಿಂದ ಕಟ್ಟಿಸಲ್ಪಟ್ಟದ್ದೆಂದು ಸ್ಥಳೀಯರ ಹೇಳಿಕೆ. ಸುಳುವು ಕೆತ್ತನೆಯಿಂದ ಕೂಡಿದ ಬಾಗಿಲುಗಳಲ್ಲಿ ದಶಾವತಾರದ ದೃಶ್ಯಗಳಿವೆ. ಸುಂದರವಾದ ತೊಡಿಗೆ ಮತ್ತು ಕೇಶಾಲಂಕಾರ ಹೊಂದಿದ ವಾದ್ಯಮೇಳದ ಚಿತ್ರಣವಿದೆ.

ಊರಿನ ಕೆರೆಯ ದಂಡೆಯಲ್ಲಿ ರಾಮಲಿಂಗೇಶ್ವರ ದೇವಾಲಯವಿದೆ. ಈ ಕೆರೆಯ ದಂಡೆಯನ್ನು ತಲವರಕೊಪ್ಪ ಎಂದು ಕರೆಯಲಾಗುತ್ತದೆ. ಇತ್ತೀಚೆಗೆ ನಿರ್ಮಿತವಾದ ಮಸೀದಿಯೊಂದು ಈ ಸ್ಥಳದಲ್ಲಿದೆ. (ಆರ್.ಐ.)

**ಇಟ್ಟಗಿ :** ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಗುಂತಕಲ್ಲು - ಹುಬ್ಬಳ್ಳಿ ರೈಲುಹಾದಿಯಲ್ಲಿರುವ ಬನ್ನಿಕೊಪ್ಪ ನಿಲ್ದಾಣದಿಂದ ಸುಮಾರು 5ಕಿಮೀ ದಕ್ಷಿಣಕ್ಕಿದೆ.

ಮಹಾಲಿಂಗೇಶ್ವರ ದೇವಾಲಯ

ಇಲ್ಲಿರುವ ಮಹಾದೇವ ಅಥವಾ ಮಹಾಲಿಂಗೇಶ್ವರ ದೇವಾಲಯ ಸುಪ್ರಸಿದ್ಧ. 1112ರಲ್ಲಿ 6ನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವನಿಂದ ರಚಿತವಾದ ಈ ಗುಡಿ ಕಲ್ಯಾಣ ಚಾಳುಕ್ಯ ಶೈಲಿಯ ಬೃಹತ್ ಹಾಗೂ ಸುಂದರ ಕೃತಿ. ಪ್ರಸಿದ್ಧ ವಾಸ್ತುಶಾಸ್ತ್ರಜ್ಞ ಕಸಿನ್ಸ್‌ರವರ ಪ್ರಕಾರ ಹಳೇಬೀಡಿನ ದೇವಾಲಯಗಳನ್ನು ಬಿಟ್ಟರೆ ಇದು ಕರ್ನಾಟಕದಲ್ಲೇ ಅತ್ಯಂತ ಸುಂದರ ದೇವಾಲಯ. 122' ಉದ್ದ 66' ಅಗಲವಾಗಿದ್ದು ಪೂರ್ವಾಭಿಮುಖವಾಗಿದೆ. ಇದರಲ್ಲಿ ಗರ್ಭಗುಡಿ, ಅಂತರಾಳ ಮುಚ್ಚಿದ ನವರಂಗ ಮತ್ತು ಅದರ ಮುಂದೆ ತೆರೆದ ಮಹಾಮಂಟಪ ಇವೆ. ಗರ್ಭಗುಡಿಯಲ್ಲಿ ಮಹಾಲಿಂಗೇಶ್ವರ ಲಿಂಗವಿದೆ. ನವರಂಗ ಮಂಟಪಕ್ಕೆ ನಾಲ್ಕು ಕಡೆ ದ್ವಾರಗಳಿದ್ದು ಪಶ್ಚಿಮದ್ದು ಅಂತರಾಳ ಮತ್ತು ಗರ್ಭಗುಡಿಗೆ ಪೂರ್ವದ್ದು ಮುಂದಿನ ಮಹಾಮಂಟಪಕ್ಕೆ ಮತ್ತು ಪಕ್ಕದವು ಹೊರಾಂಗಣಕ್ಕೆ ತೆರೆದಂತಿವೆ. ಈ ಎಲ್ಲಾ ದ್ವಾರಗಳು ಹಲವು ಸೂಕ್ಷ್ಮ ಕೆತ್ತನೆಯ ಶಾಖೆಗಳುಳ್ಳ ಬಹುಸುಂದರ ಕೃತಿಗಳು. ಪಕ್ಕದ ದ್ವಾರಗಳ ಮುಂದೆ ಮಂಟಪಗಳಿವೆ. ಇವುಗಳ ಭುವನೇಶ್ವರಿಗಳು ಅಷ್ಟಕೋನಾಕೃತಿಯಲ್ಲಿ ಆಳವಾಗಿದ್ದು, ಪಟ್ಟಿಕೆಗಳು ಮತ್ತು ಕುಸುರಿ ಕೆತ್ತನೆಗಳಿಂದ ಅಲಂಕೃತವಾಗಿವೆ. ಮುಂದಿನ ತೆರೆದ ಮಂಟಪದ ಅಂಚಿನಲ್ಲಿ ಸುತ್ತಲೂ ಕಕ್ಷಾಸನವಿದೆ. ಭಾಗಶಃ ಹಾಳಾಗಿರುವ ಈ ಕಕ್ಷಾಸನದ ಮೇಲಿದ್ದ 42 ಕುಬ್ಜ ಸ್ತಂಭಗಳು ಮತ್ತು ಮಧ್ಯಾಂಗಣದ 26 ದೊಡ್ಡ ಸ್ತಂಭಗಳು ಮಂಟಪದ ಚಾವಣಿಯನ್ನು ಹೊತ್ತಿದ್ದವು. ದೊಡ್ಡ ಕಂಬಗಳು ಹಲವು ನಮೂನೆಯಲ್ಲಿವೆ. ಆದರೂ ವ್ಯವಸ್ಥಿತವಾಗಿ ಅಳವಡಿತವಾಗಿವೆ. ಇವುಗಳಲ್ಲಿ ಮಧ್ಯದ ನಾಲ್ಕು ಕಂಬಗಳಲ್ಲಿ ಬಹು ಕ್ಲಿಷ್ಟ ವಿನ್ಯಾಸದ ಸುಂದರ ಶಿಲ್ಪಾಲಂಕರಣವಿದೆ. ಇವು ಹೊತ್ತಿರುವ ಆಳವಾದ ಭುವನೇಶ್ವರಿಯ ತ್ರಿಕೋಣಾಕೃತಿಯ ಪ್ರತಿಯೊಂದು ಮೂಲೆಕಲ್ಲುಗಳಲ್ಲೂ ಮಕರ, ಕೀರ್ತಿಮುಖ ಮತ್ತು ಬಳುಕಿಸುತ್ತ ಒಳತೂರುವ ಲತಾವಲ್ಲರಿಗಳ ಉಚ್ಚತಮ ಶಿಲ್ಪಬಂಧಗಳಿವೆ.

ಗರ್ಭಗುಡಿ, ಅಂತರಾಳ ಮತ್ತು ನವರಂಗ ಮಂಟಪದ ಹೊರಮೈ ಆಕರ್ಷಕವಾಗಿದೆ. ಸುತ್ತಲೂ ಹಬ್ಬಿರುವ ಅಧಿಷ್ಠಾನ ಪಟ್ಟಿಕೆಗಳ ಮೇಲಿನ ಭಿತ್ತಿ ಹಲವು ಅರೆಗಂಬಗಳು ಮತ್ತು ಕೋಷ್ಠಗಳಿಂದ ಅಲಂಕೃತವಾಗಿವೆ. ಕೋಷ್ಠಗಳು ನಾಗರ ರೀತಿಯ ಶಿಖರಗಳನ್ನೂ ಒಂಟಿ ಅರೆಗಂಬಗಳು ಲತಾಬಂಧಾಂತರ್ಗತ ಕಲಶ ಅಥವಾ ನಾಗರ ರೀತಿಯ ಶಿಖರಗಳನ್ನು ಹೊತ್ತಿರುವಂತೆ ಬಿಡಿಸಲಾಗಿದೆ. ಸ್ವಲ್ಪ ಮುಂದೆ ಸರಿದಂತಿರುವ ಕಟ್ಟಡದ ಸುತ್ತಲೂ ಹರಿಯುವ ಮೂರು ಅಡ್ಡಪಟ್ಟಿಕೆಗಳ ಕಪೋತವಿದೆ. ಮೇಲಿನ ಹಾರದಲ್ಲಿ ಕೂಟ, ಪಂಜರಗಳ ಭಾಗವನ್ನು ಅರೆ ಉಬ್ಬು ಶಿಲ್ಪದಲ್ಲೇ ಸೂಕ್ಷ್ಮ ಕೆತ್ತನೆಗಳೊಡನೆ ಬಿಡಿಸಲಾಗಿದೆ. ದೇವಾಲಯದ ಶಿಖರದ ಮೇಲು ಭಾಗ ಭಗ್ನವಾಗಿದ್ದರೂ ಉಳಿದಷ್ಟರಲ್ಲಿ, ಸಮಾನ ರೀತಿಯ ಅಲಂಕರಣಗಳಿರುವ, ಮೇಲೆ ಹೋದಂತೆ ಗಾತ್ರದಲ್ಲಿ ಸ್ವಲ್ಪ ಕಿರಿದಾಗುವ, ನಾಲ್ಕು ಏರುಗಳಿವೆ. ಆದರೆ ಈ ಏರು ಹಂತಗಳಲ್ಲಿ ಕೂಡಿಸಿರುವ ಶಿಖರಾಕೃತಿಗಳು ಮತ್ತು ಲತಾಕೀರ್ತಿಮುಖಗಳು ಒಂದೇ ನೇರದಲ್ಲಿ ಏರುವಂತೆ ವಿನ್ಯಸ್ತವಾಗಿದ್ದು, ಈ ಶಿಖರ ದ್ರಾವಿಡ ಮತ್ತು ನಾಗರ ಶಿಖರಾಂಶಗಳನ್ನು ಬಹು ಚತುರತೆಯಿಂದ ಒಗ್ಗೂಡಿಸಿರುವ ಉತ್ತಮ ವೇಸರಕೃತಿಯಾಗಿದೆ. ಒಂದೊಂದು ಭಾಗದ ವಿನ್ಯಾಸದಲ್ಲೂ ವಾಸ್ತುಕಾರ ತೋರಿಸಿರುವ ಜಾಣ್ಮೆ, ಅಲಂಕರಣದಲ್ಲಿ ಶಿಲ್ಪಿ ಮೂಡಿಸಿರುವ ನಯಗಾರಿಕೆ ಮತ್ತು ಕುಸುರಿ ಕೆಲಸ ಇವುಗಳಿಂದಾಗಿ ಈ ದೇವಾಲಯ ಅನುಪಮ ಮನೋಹರ ಕಲಾಕೃತಿಯಾಗಿ ರೂಪುಗೊಂಡಿದೆ. ಇಲ್ಲಿ ದೊರಕಿರುವ ಒಂದು ಶಾಸನ ಈ ಮಂದಿರವನ್ನು ದೇವಾಲಯ ಚಕ್ರವರ್ತಿ ಎಂದು ಕರೆದಿದೆ.

ದಂಡನಾಯಕ ಮಹಾದೇವ ತನ್ನ ತಂದೆಯ ಹೆಸರಿನಲ್ಲಿ ಕಟ್ಟಿಸಿದ ನಾರಾಯಣ ಗುಡಿಯೂ ಇಲ್ಲಿದೆ. ಇದು ಬಹು ಸಾಮಾನ್ಯ ರೀತಿಯ ಗ್ರಾನೈಟ್ ಕಲ್ಲಿನ ಕಟ್ಟಡ. (ಎಸ್.ಎನ್.)

**ಇಡಗುಂಜಿ :** ಶರಾವತಿಯ ಮುಖಪ್ರದೇಶದ ಎಡಭಾಗದಲ್ಲಿ ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಿಂದ 12ಕಿಮೀ ದೂರದಲ್ಲಿರುವ ಯಾತ್ರಾಕ್ಷೇತ್ರ. ದ್ವಿಭುಜ ಗಣಪತಿಯ ವಿಶಿಷ್ಟ ಸುಂದರ ಶಿಲಾವಿಗ್ರಹ ಇಲ್ಲಿದೆ. ಇಡಗುಂಜಿ ಇಡಾಕುಂಜದಿಂದ ಬಂದ ರೂಪ. ಮೊದಲು ಈ ಪ್ರದೇಶಕ್ಕೆ ಗುಂಜಾರಣ್ಯ ಎಂಬ ಹೆಸರೂ ಇತ್ತು.

ಈ ಕ್ಷೇತ್ರದ ಸೌಂದರ್ಯದಿಂದ ಮಾರುಹೋದ ನಾರದ ಇದಕ್ಕೆ ಇಡಾಕುಂಜವೆಂದು ಹೆಸರಿಟ್ಟು, ಲೋಕಕಲ್ಯಾಣರ್ಥವಾಗಿ ಗಜಾನನನನ್ನು ಕೈಲಾಸದಿಂದ ಕರೆತಂದು ಚಂಡವರ ಶಕಾಬ್ದ 813ನೆಯ ವಿಭವ ಸಂವತ್ಸರದಲ್ಲಿ ಇಲ್ಲಿ ಪ್ರತಿಷ್ಠಾಪಿಸಿದ. ನಾರದ, ಗಜಾನನ ಮತ್ತು ಅವನ ಜೊತೆಯಲ್ಲಿ ಬಂದ ತ್ರಿಮೂರ್ತಿಗಳು ಇಲ್ಲಿ ತೀರ್ಥಗಳನ್ನು ನಿರ್ಮಿಸಿದರು. ಎಂದು ಸ್ಕಾಂದಪುರಾಣದ ಕಥೆ ಇದೆ.

ಇಡಗುಂಜಿ ವಿಶೇಷತಃ ಹವ್ಯಕ ಜನಾಂಗದ ಯಾತ್ರಾಕ್ಷೇತ್ರ. ವಿಘ್ನೇಶ್ವರ ಇವರ ಕುಲದೈವ. ಇಲ್ಲಿ ಅವನಿಗೆ ಕೊಳೆಯಡಿಕೆ ಗಣಪತಿ ಎಂಬ

ಹೆಸರೂ ಇದೆ. ಅಡಕೆ ತೋಟಗಳಿಗೆ ಕೊಳೆರೋಗ ಬಂದಾಗ ಹರಕೆ ಹೊರುವುದು ಸಾಮಾನ್ಯ. ಉತ್ತರ ಕನ್ನಡದ ಯಕ್ಷಗಾನ ಪರಂಪರೆಗೆ ಇಡಗುಂಜಿಯ ಗಣಪತಿ ಮತ್ತು ಅಲ್ಲಿಂದ ಸುಮಾರು 16ಕಿಮೀ ದೂರದಲ್ಲಿರುವ ಗುಂಡಬಾಳದ ಹನುಮಂತ ದೇವರು ಸ್ಫೂರ್ತಿ ಸ್ವರೂಪರು.

ದ್ವಿಭುಜ ಗಣಪತಿ

ಶ್ರೀ ಇಡಗುಂಜಿ ಯಕ್ಷಗಾನ ಮಂಡಳಿ ಬಹು ಪ್ರಸಿದ್ಧವಾಗಿದೆ. ಇಲ್ಲಿ ಗುರುಕುಲ ಪದ್ಧತಿಯ ಸಂಸ್ಕೃತ ಪಾಠಶಾಲೆಯಿದ್ದು ಐದು ವರ್ಷಕಾಲ ವಿದ್ಯಾರ್ಥಿಗಳಿಗೆ ಉಚಿತ ಊಟವಸತಿಗಳ ಸೌಭ್ಯವಿದೆ. ದೇವಸ್ಥಾನದ ಪರಿಸರ 17 ಗುಂಟೆ ಕ್ಷೇತ್ರವನ್ನಾವರಿಸಿದ್ದು ದೇವಾಲಯ ಕಾಂಕ್ರೀಟಿನಿಂದ ನಿರ್ಮಿತವಾಗಿದೆ. ಇಲ್ಲಿ ಪ್ರತಿವರ್ಷವೂ ರಥಸಪ್ತಮಿ ದಿನ ರಥೋತ್ಸವವೂ ಗಣೇಶ ಚತುರ್ಥಿಯ ದಿವಸ ವೈಭವೋಪೇತ ಉತ್ಸವವೂ ನಡೆಯುತ್ತದೆ. *

**ಇಡಗೂರು ರುದ್ರಕವಿ :** 1887-. ವೀರಶೈವಕವಿ. ಈತ ಬರೆದ ಯಕ್ಷಗಾನ ಶಿವನಾಟಕ (ಪೂರ್ವಾರ್ಧ–ಉತ್ತರಾರ್ಧ), ಮಾರ್ಕಂಡೇಯಚರಿತ್ರೆ– ಈ ಕನ್ನಡ ಗ್ರಂಥಗಳು ಮತ್ತು ತೆಲುಗಿನಲ್ಲಿ ರಚಿಸಿದ ಯಕ್ಷಗಾನ ಮಾರ್ಕಂಡೇಯ ಚರಿತಮು, ಮುಮ್ಮಡಿ ಕೃಷ್ಣರಾಜೇಂದ್ರ ಪ್ರಶಂಸಾ, ಅಕ್ಷರಾಂಕನ ಗದ್ಯಟೀಕೆ (ಪಾಲ್ಕುರಿಕೆ ಸೋಮನಾಥ ಕೃತಿಯ ಟೀಕೆ), ಕವಿರುದ್ರಪ್ಪ ಶತಕಮು, ಮುರುಡಪ್ಪ ಶತಕಮು ಮುಂತಾದ ಸುಮಾರು 13 ಗ್ರಂಥಗಳು ಉಪಲಬ್ಧವಾಗಿವೆ. ಗೌರಿಬಿದನೂರು ತಾಲ್ಲೂಕಿನ ಇಡಗೂರು ಈತನ ಜನ್ಮಸ್ಥಳ. ಈತನ ತಂದೆ ಪುಷ್ಪದಾರ್ಯ, ತಾಯಿ ರಾಚಮ್ಮ. ಈತ ಗುಬ್ಬಿಯಲ್ಲಿ ಗುರುಗಳೊಬ್ಬರ ಆಶ್ರಯದಲ್ಲಿ ಕಾವ್ಯ, ನಾಟಕ, ಅಲಂಕಾರ, ವ್ಯಾಕರಣ, ಛಂದಸ್ಸು ಮುಂತಾದ ಶಾಸ್ತ್ರಗಳಲ್ಲಿ ಶಿಕ್ಷಣ ಪಡೆದುದಲ್ಲದೆ ವೀರಶೈವಾಮೃತ ಮಹಾಪುರಾಣವನ್ನು ಗಮಕ ರೀತಿಯಲ್ಲಿ ಓದಿ ವ್ಯಾಖ್ಯಾನ ಮಾಡುವ ಸಾಮರ್ಥ್ಯವನ್ನು ಪಡೆದಿದ್ದಂತೆ ತಿಳಿಯುತ್ತದೆ. ಅನಂತರ ಶ್ರೀಭಟ್ಟುಮೂರ್ತಿ ಎಂಬುವರಲ್ಲಿ ಆಂಧ್ರ ಸಾಹಿತ್ಯವನ್ನು ಅಭ್ಯಾಸಮಾಡಿ, ಕನ್ನಡ ಮತ್ತು ಆಂಧ್ರ ಭಾಷೆಗಳಲ್ಲಿ ಕವಿತಾಸಾಮರ್ಥ್ಯವನ್ನು ಹೊಂದಿದಂತೆ ತೋರುತ್ತದೆ. ಈತ ಒಂದು ಬಯಲಾಟದ ನಾಟಕಮಂಡಲಿಯನ್ನು ಕಟ್ಟಿ ಆಂಧ್ರ, ಕರ್ನಾಟಕ ಪ್ರಾಂತ್ಯಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದ. ಅಂದು ಇವನು ವಹಿಸುತ್ತಿದ್ದ ಶಿವನ ಪಾತ್ರ, ಅಭಿನಯಿಸುತ್ತಿದ್ದ ಶಿವನಾಟಕ ಪ್ರಖ್ಯಾತಿ ಪಡೆದಿದ್ದವು. 1841ರ ಸುಮಾರಿನಲ್ಲಿ ಆರಂಭವಾದ ಈ ನಾಟಕ ಮಂಡಲಿ 1867ರ ವರೆಗೆ ಅಪ್ರಾಹತವಾಗಿ ನಡೆಯಿತು. 1856ರ ಸುಮಾರಿನಲ್ಲಿ ಮೈಸೂರು ಅರಮನೆಯಲ್ಲಿ ಅಭಿನಯಿಸಿದ ಶಿವನಾಟಕವನ್ನು ನೋಡಿ ಹರ್ಷಿತರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಇವನಿಗೆ ಕರ್ನಾಟಕಕಾಂಧ್ರೋಭಯ ಭಾಷಾಕವಿತಾವಿಶಾರದ ಎಂಬ ಪ್ರಶಸ್ತಿ ನೀಡಿದಂತೆ ತಿಳಿದುಬರುತ್ತದೆ. (ಎಂ.ಜಿ.ಎನ್.)

**ಇತಿಹಾಸ :** ಬಹುಮುಖ ವ್ಯಾಪ್ತಿಯುಳ್ಳದ್ದೂ ವಿಸ್ತಾರವೂ ಆದ ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದಂತೆ ಎಲ್ಲ ರಾಜವಂಶಗಳು (ಉದಾ: ಕದಂಬವಂಶ, ಚಂಗಾಳ್ವ ವಂಶ, ಆವತಿ ಪಾಳೆಗಾರರು), ಪ್ರಮುಖ ರಾಜರು ಮತ್ತು ಇತರ ವ್ಯಕ್ತಿಗಳು (ಉದಾ: ವಿಷ್ಣುವರ್ಧನ, ಗಂಗರಾಜ) ಇತ್ಯಾದಿಗಳಿಗೆ ಇದೇ ಸಂಪುಟದಲ್ಲಿ ಪ್ರತ್ಯೇಕ ಲೇಖನಗಳಿವೆ. ಪ್ರಮುಖ ರಾಜವಂಶಗಳ ಲೇಖನಗಳಲ್ಲಿ ಅವುಗಳ ರಾಜಕೀಯ ಇತಿಹಾಸವಲ್ಲದೆ ತತ್ಕಾಲೀನ ಆಡಳಿತ ವ್ಯವಸ್ಥೆ, ಆರ್ಥಿಕ ಸಾಮಾಜಿಕ ಸ್ಥಿತಿ, ವಾಸ್ತು ಶಿಲ್ಪ, ನಾಣ್ಯಗಳು, ಶಾಸನಗಳು, ಲಲಿತಕಲೆ, ಸಾಹಿತ್ಯ ಇವುಗಳ ಬಗ್ಗೆ ಉಪವಿಭಾಗಗಳಿವೆ. ಅಲ್ಲದೆ ಕಲೆ, ಕೈಗಾರಿಕೆಗಳು, ಧರ್ಮ, ಸಾಹಿತ್ಯ ಸಂಗೀತ ಮೊದಲಾದ ಹಲವು ವಿಷಯಗಳಿಗೆ ಪ್ರತ್ಯೇಕ ಲೇಖನಗಳಿದ್ದು ಅವುಗಳಲ್ಲಿ ಐತಿಹಾಸಿಕ ವಿವರಗಳಿರುತ್ತವೆ. ಇಂಥ ಎಲ್ಲ ವಿವರಗಳನ್ನು ಹೊರತುಪಡಿಸಿ ಕರ್ನಾಟಕದ ಇತಿಹಾಸದ ಪಕ್ಷಿನೋಟವನ್ನು ಕೊಡುವುದು ಈ ಲೇಖನದ ಉದ್ದೇಶ.

ಕರ್ನಾಟಕದ ಇತಿಹಾಸಕಲ್ಪ ಪ್ರಾರಂಭವಾಗುವುದು ಕ್ರಿ.ಪೂ.3ನೆಯ ಶತಮಾನದಲ್ಲಿ ಮೌರ್ಯ ಸಾಮ್ರಾಟ ಅಶೋಕನ ಶಾಸನಗಳು ಕಾಣಿಸಿಕೊಳ್ಳುವಾಗಿನಿಂದ. ಅಂದಿನಿಂದ ಇಂದಿನ ವರೆಗಿನ ಸುಮಾರು ಇಪ್ಪತ್ತಮೂರು ಶತಮಾನಗಳ ದೀರ್ಘ ಅವಧಿಯ ಇತಿಹಾಸ ಕಲ್ಪದುದ್ದಕ್ಕೂ ಕರ್ನಾಟಕಕ್ಕೆ ಅದರದ್ದೇ ಎನ್ನಬಹುದಾದ ನಿರ್ದಿಷ್ಟ ಕ್ಷೇತ್ರ ವ್ಯಾಪ್ತಿ ಮತ್ತು ವಿಶಿಷ್ಟ ರಾಜಕೀಯ ಅಂತಸ್ತು, ಸಾಮಾಜಿಕ ಸ್ವರೂಪ, ಸಾಂಸ್ಕೃತಿಕ ಮೌಲ್ಯ ಹಾಗೂ ಧಾರ್ಮಿಕ ಪರಂಪರೆಗಳಿದ್ದುವೆ ಅಥವಾ ಕೇವಲ ಭಾಷೆ ಮತ್ತು ಲಿಪಿಗಳ ದೃಷ್ಟಿಯಿಂದ ಮಾತ್ರ ಈ ಪ್ರಾಂತ್ಯ ಭಾರತದ ಇತರ ಪ್ರಾದೇಶಿಕ ವಿಭಾಗಗಳಿಂದ ವ್ಯತ್ಯಸ್ತವಾದುದೇ ಎಂಬುದು ಚರಿತ್ರೆಕಾರರಲ್ಲಿ ಸಹಜವಾಗಿ ಮೂಡುವ ಪ್ರಶ್ನೆ.

ಕ್ರಿ.ಪೂ.3ನೆಯ ಶತಮಾನದಿಂದ ಮುಂದಿನ ಸುಮಾರು ಆರು ಶತಮಾನಗಳ ಕಾಲ ಕರ್ನಾಟಕ ದಕ್ಷಿಣಪಥದ ಒಂದು ಅನಿರ್ದಿಷ್ಟ ವ್ಯಾಪ್ತಿಯ ಅಸ್ಪಷ್ಟ ಸ್ವರೂಪದ ಭೂಪ್ರದೇಶವಾಗಿ ಮಾತ್ರ ಉಳಿದಿದ್ದು ಪ್ರಾದೇಶಿಕ, ರಾಜಕೀಯ, ಆಡಳಿತ, ಮಾನವಿಕ, ಸಾಂಸ್ಕೃತಿಕ ಮತ್ತು ಭಾಷಾಕ್ಷೇತ್ರಗಳಲ್ಲಿ ಅದರದ್ದೇ ಆದ ಐತಿಹಾಸಿಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಸಾಧ್ಯತೆಯನ್ನು ಹೊಂದಿರಲಿಲ್ಲ. ಕ್ರಿ.ಶ.4ನೆಯ ಶತಮಾನದ ಮಧ್ಯಭಾಗದಲ್ಲಿ ನಡೆದುಹೋದ ಒಂದೆರಡು ಮಹತ್ವದ ಘಟನೆಗಳಿಂದಾಗಿ ಕರ್ನಾಟಕದ ಈ ಸಂದಿಗ್ಧ ಪರಿಸ್ಥಿತಿ ಕೊನೆಗೊಂಡು ಪರಿಣಾಮಕಾರಿಯಾದ ಬದಲಾವಣೆಗಳುಂಟಾದವು. ಕದಂಬ ಮತ್ತು ಗಂಗ ರಾಜ್ಯಗಳು ಕರ್ನಾಟಕದ ಮೊಟ್ಟಮೊದಲ ಪ್ರಬಲ ದೇಶೀಯ ಸಂಸ್ಥಾನಗಳಾಗಿ ಆಗ ತಾನೆ ಸ್ಥಾಪನೆಗೊಂಡವು. ಇವು ಹಲವು ಸಾಂಸ್ಕೃತಿಕ ಮಾರ್ಪಾಡುಗಳಿಗೂ ಪ್ರೇರಕ ಶಕ್ತಿಗಳಾದವು. ಕರ್ನಾಟಕ ಸಂಸ್ಕೃತಿ ಸ್ವವ್ಯಕ್ತಿತ್ವದೊಡನೆ ರೂಪು ತಳೆಯಲಾರಂಭಿಸಿತು. ಕನ್ನಡ ಭಾಷೆ ಐತಿಹಾಸಿಕ ದಾಖಲೆಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿತು. ಹೀಗಾಗಿ ಕರ್ನಾಟಕದ ಇತಿಹಾಸ ಕಲ್ಪವನ್ನು ಕ್ರಿ.ಶ.4ನೆಯ ಶತಮಾನದ ಮಧ್ಯಭಾಗದವರೆಗಿನ ಕನ್ನಡ ಪೂರ್ವಯುಗ ಮತ್ತು ಅಂದಿನಿಂದೀಚೆಗಿನ ಕನ್ನಡ ಯುಗಗಳೆಂದು ಸ್ಥೂಲವಾಗಿ, ಆದರೂ ಸಾಧಾರವಾಗಿ, ವಿಂಗಡಿಸಬಹುದು. 6ನೆಯ ಶತಮಾನದ ಮಧ್ಯಭಾಗದಿಂದ 13ನೆಯ ಶತಮಾನದ ಅಂತ್ಯದವರೆಗೆ ಎಡೆಬಿಡದೆ ಕರ್ನಾಟಕ ದೇಶ ಪ್ರಬಲ ಚಕ್ರವರ್ತಿಕ್ಷೇತ್ರದ ಕೇಂದ್ರ ವಲಯವಾಗಿ ಸಾಮ್ರಾಜ್ಯಶಾಹಿ ಪ್ರಭುತ್ವಗಳ ಉದ್ಭವ ಭೂಮಿಯಾಗಿ ಮೆರೆಯುವಂತಾಯಿತು. ಕನ್ನಡ ಭಾಷೆ ಅಧಿಕೃತ ಮನ್ನಣೆ ಪಡೆದು ಸ್ವಯಂಪೂರ್ಣ ಸ್ವತಂತ್ರ ಭಾಷೆಯಾಗಿ ತನ್ನ ಸ್ವಂತ ಲಿಪಿಯೊಡನೆ ಬೆಳೆದದ್ದಲ್ಲದೆ ಕರ್ನಾಟಕದ ವಿಶಿಷ್ಟ ಸಂಸ್ಕೃತಿ ಜಾಜ್ವಲ್ಯಮಾನವಾಗಿ ಸಮಕಾಲೀನ ಭಾರತ ಹಾಗೂ ಹೊರದೇಶಗಳ ಮೇಲೆ

ಪ್ರಭಾವ ಬೀರುವ ಸ್ಥಿತಿಯನ್ನು ಗಳಿಸಿತು. ಅನಂತರ ಇಸ್ಲಾಮಿಯರ ದಾಳಿಗಳು ಮತ್ತು ಸಾಮ್ರಾಜ್ಯ ಸ್ಥಾಪನೆ, ಇವಕ್ಕೆ ಒದಗಿದ ದೇಶಿಯ ಪ್ರತಿಕ್ರಿಯೆ, ಇವುಗಳಿಂದಾಗಿ ಸು.13 ರಿಂದ 16ನೆಯ ಶತಮಾನಗಳ ಕಾಲದಲ್ಲಿ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಘರ್ಷಣೆಗಳು ಕಾಣಿಸಿಕೊಂಡವು. 16ನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾಗುತ್ತಿದ್ದಂತೆಯೇ ಕರ್ನಾಟಕ ದೇಶ ಅನೇಕ ಸಣ್ಣ ರಾಜಕೀಯ ಘಟಕಗಳಾಗಿ ಛಿದ್ರವಾಗಿ ಅದರ ಸಾಂಸ್ಕೃತಿಕ ಸ್ವರೂಪದಲ್ಲೂ ಕ್ಷೀಣದೆಸೆ ಕಾಣಿಸಿಕೊಳ್ಳಲಾರಂಭಿಸಿತು. ಆದರೆ ಈ ಕಾಲದಲ್ಲಿದ್ದ ಕೆಳದಿ ಹಾಗೂ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಸ್ವಲ್ಪಮಟ್ಟಿಗೆ ದೇಶೀ ಸೊಗಡು ಉಳಿದುಕೊಂಡಿದ್ದು ಮುಂದೆ 19ನೆಯ ಶತಮಾನದಲ್ಲಿ ಸ್ವಲ್ಪಮಟ್ಟಿನ ಕರ್ನಾಟಕತ್ವದ ಮನವರಿಕೆಗೆ ಅವಕಾಶವಾಯಿತು. 20ನೆಯ ಶತಮಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಈ ಕರ್ನಾಟಕತ್ವದ ಪ್ರಜ್ಞೆ ಮತ್ತಷ್ಟು ಪ್ರಬಲವಾಗುತ್ತ ಬಂದು ಕರ್ನಾಟಕ ರಾಜ್ಯ ರಚನೆಯೊಡನೆ ಹೊಸ ಸ್ವರೂಪ ಮೂಡಲು ಅವಕಾಶವಾಯಿತು.

ಈ ಐತಿಹಾಸಿಕ ಘಟ್ಟಗಳನ್ನು ಕೆಳಕಂಡಂತೆ ನಿರೂಪಿಸಬಹುದು.:

1. ರೂಪಣ ಯುಗ: ಕ್ರಿ.ಪೂ.3 ರಿಂದ ಕ್ರಿ.ಶ.6ನೆಯ ಶತಮಾನದವರೆಗೆ.
2. ಸಾಮ್ರಾಜ್ಯ ಯುಗ: 6ರಿಂದ 13ನೆಯ ಶತಮಾನದ ಅಂತ್ಯದ ವರೆಗೆ.
3. ಸಂಘರ್ಷಣ ಯುಗ: 14ರಿಂದ 16ನೆಯ ಶತಮಾನದ ಮಧ್ಯದ ವರೆಗೆ.
4. ವಿಚ್ಛಿನ್ನ ಯುಗ: 16ನೆಯ ಶತಮಾನದ ಮಧ್ಯಭಾಗದಿಂದ 19ನೆಯ ಶತಮಾನದ ಅಂತ್ಯದ ವರೆಗೆ.
5. ಸ್ವಾತಂತ್ರ್ಯ ಯುಗ: 20ನೆಯ ಶತಮಾನ.

ಇತಿಹಾಸ ಸ್ರೋತಸ್ಸ್ವರೂಪದ್ದಾದ್ದರಿಂದ ಹಳೆಯ ಘಟ್ಟಗಳಲ್ಲಿ ಹೊಸ ಘಟ್ಟಗಳ ನಡೆ ಸುಳಿವುಗಳು ಕಾಣಿಸಿಕೊಂಡಿರುತ್ತವೆಯಾಗಿ ಈ ಕಾಲಘಟ್ಟಗಳೆಲ್ಲ ಸ್ಥೂಲವಾದವು.

**ರೂಪಣ ಯುಗ :** ಪ್ರಾಗಿತಿಹಾಸ ಯುಗದ ಗ್ರಾಮೀಣ ಸಂಸ್ಕೃತಿಗಳ ಕಾಲ ಕಳೆಯುತ್ತಿದ್ದಂತೆಯೇ ಕರ್ನಾಟಕದ ಬಹುಭಾಗ ಮಗಧ ಸಾಮ್ರಾಜ್ಯದ ಕಕ್ಷೆಯಲ್ಲಿ ಸೇರಿ ಈ ನಾಡಿನಲ್ಲಿ ಹೊಸ ರಾಜಕೀಯ ಆರ್ಥಿಕ ಸಾಂಸ್ಕೃತಿಕ ವ್ಯವಸ್ಥೆ ಕಾಣಿಸಿಕೊಳ್ಳಲಾರಂಭಿಸಿತು. ಅಶೋಕನ ಶಾಸನಗಳೇ ಪ್ರಸಕ್ತ ದೊರೆತಿರುವ ಕರ್ನಾಟಕದ ಅತ್ಯಂತ ಪ್ರಾಚೀನ ಲಿಖಿತ ಐತಿಹಾಸಿಕ ದಾಖಲೆಗಳು. ಈ ದೃಷ್ಟಿಯಿಂದ ಕರ್ನಾಟಕದ ಇತಿಹಾಸ ಪ್ರಾರಂಭ ವಾಗುವುದು ಈ ಕಾಲದಲ್ಲಾದರೂ ಅಶೋಕ ತಾನೇ ಸ್ವತಃ ದಂಡೆತ್ತಿ ಬಂದು ಕರ್ನಾಟಕ ಪ್ರಾಂತ್ಯವನ್ನು ತನ್ನ ವಶಮಾಡಿಕೊಂಡಿರುವುದಕ್ಕೆ ನೇರ ಆಧಾರಗಳು ಇಲ್ಲದಿರುವುದರಿಂದಲೂ ಉತ್ತರ ಭಾರತ ಮತ್ತು ತಮಿಳುನಾಡುಗಳಲ್ಲಿ ದೊರೆಯುವ ಕೆಲವು ಸಾಂದರ್ಭಿಕ ಸಾಕ್ಷ್ಯಗಳ ಆಧಾರಗಳಿಂದಲೂ ಬಹುಶಃ ಕ್ರಿ.ಪೂ.4ನೆಯ ಶತಮಾನದಲ್ಲಿ ನಂದರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕ ಮಗಧ ಸಾಮ್ರಾಜ್ಯದ ಭಾಗವಾಗಿತ್ತು. ಎಂದು ಊಹಿಸುವ ಸಾಧ್ಯತೆ ಇದೆ. ಅನಂತರ ಉತ್ತರಾಧಿಕಾರತ್ವದಿಂದಾಗಿ ಮೌರ್ಯ ಅರಸರ ಆಳ್ವಿಕೆಗೆ ಸಾಮ್ರಾಜ್ಯದ ಇತರ ಭಾಗಗಳಂತೆ ಕರ್ನಾಟಕವೂ ಒಳಪಟ್ಟಿರಬಹುದು. ಅಶೋಕನ ಕಾಲದಲ್ಲಿ ಕರ್ನಾಟಕದಲ್ಲಿದ್ದ ರಾಜಕೀಯ ಸಾಂಸ್ಕೃತಿಕ ಸ್ಥಿತಿಗತಿಗಳ ವಿವರಗಳು ಸ್ಪಷ್ಟವಾಗಿಲ್ಲ. ಅವನ ಶಾಸನಗಳ ಮುಖ್ಯ ಉದ್ದೇಶ ತನ್ನ ಪ್ರಜೆಗಳೆಲ್ಲರೂ ಅವುಗಳಲ್ಲಿ ಹೇಳಿರುವಂತೆ ಸಜ್ಜೀವನ ನಡೆಸಬೇಕೆನ್ನುವುದು. ಪ್ರಾಕೃತ ಭಾಷೆಯಲ್ಲಿರುವ ಈ ಶಾಸನಗಳನ್ನು ಈ ಪ್ರಾಂತ್ಯದ ಪ್ರಜೆಗಳು ಎಷ್ಟರಮಟ್ಟಿಗೆ ಓದಿ ಅರ್ಥ ಮಾಡಿಕೊಳ್ಳಬಲ್ಲವರಿದ್ದರೆಂಬುದು ತಿಳಿಯದಾಗಿದೆ. ಆದರೂ ಪ್ರಾಕೃತ ತಿಳಿಯದಿದ್ದವರಿಗೂ ಅಶೋಕನ ಧರ್ಮಸಂದೇಶ ಅವನ ಅಧಿಕಾರ ವರ್ಗದವರಿಂದ ದೇಶಭಾಷೆಯ ಮಾಧ್ಯಮದಲ್ಲಿ ಮುಖತಃ ತಲಪುತ್ತಿತ್ತೆಂದು ಊಹಿಸಬಹುದಾಗಿದೆ. ಏನೇ ಆದರೂ ಕರ್ನಾಟಕದ ಮಟ್ಟಿಗೆ ಅಶೋಕ ದೂರದ ವ್ಯಕ್ತಿಯೇ ಆಗಿದ್ದ. ಇಲ್ಲಿಯ ಒಳಾಡಳಿತ ವ್ಯವಹಾರಗಳಲ್ಲಿ ಅವನ ಮತ್ತು ಅವನ ನಿಕಟವರ್ತಿ ಅಧಿಕಾರಿಗಳ ನೇರ ಚಟುವಟಿಕೆ ಹೆಚ್ಚಿದ್ದಿರಲಾರದು. ಆದರೂ ಈ ಕಾಲದಲ್ಲಿ ಒದಗಿ ಬಂದ ಉತ್ತರ ಭಾರತದ ರಾಜಕೀಯ ಸಂಪರ್ಕದಿಂದ ಆ ಪ್ರದೇಶದಲ್ಲಿದ್ದ ರಾಜಕೀಯ ವ್ಯವಸ್ಥೆಯ ಪರಿಚಯ ಹಾಗೂ ಅದರಿಂದ ಹಲವು ಪರಿಣಾಮಗಳು ಮೂಡಿದವು. ದೇಶದಲ್ಲಿ ಭದ್ರವಾದ ಸರ್ಕಾರವಿದ್ದು ಶಾಂತ ಪರಿಸ್ಥಿತಿಗೆ ಅವಕಾಶವಾಗಿ ಉದ್ಯಮಗಳು ಮತ್ತು ವ್ಯಾಪಾರ ಹೆಚ್ಚಾಗುವ ಸಾಧ್ಯತೆ ಬೆಳೆಯಿತು. ಉತ್ತರ ಭಾರತದಲ್ಲಿ ಹುಟ್ಟಿದ ಬೌದ್ಧ, ಹಿಂದು, ಜೈನ ಧರ್ಮಗಳು ಕರ್ನಾಟಕಕ್ಕೆ ಬಂದದ್ದೂ ಬಹುಶಃ ಈ ಕಾಲದಲ್ಲಿ. ಈ ಅಂಶಗಳಿಂದಾಗಿ ಇಲ್ಲಿನ ಜನರ ಜೀವನ ವಿಧಾನಗಳಲ್ಲಿ ಹೊಸ ತಿರುವು ಮೂಡಿತು. ಕರ್ನಾಟಕ ದೇಶ ಗ್ರಾಮೀಣ ಸಾಂಸ್ಕೃತಿಕ ಘಟ್ಟದಿಂದ ನಾಗರಿಕ ಘಟ್ಟಕ್ಕೆ ಕಾಲಿಡುವ ಪರಿಸ್ಥಿತಿ ಒದಗಿಬಂದಿತು.

ಮೌರ್ಯ ಸಾಮ್ರಾಜ್ಯದ ಪತನವಾದ ಅನಂತರ ದಕ್ಷಿಣಾಪಥದಲ್ಲಿ ಪ್ರಬಲರಾಗಿ ಮೆರೆದ ಸಾತವಾಹನರು (ಕ್ರಿ.ಪೂ.2 ರಿಂದ ಕ್ರಿ.ಶ.2ನೆಯ ಶತಮಾನ) ಕರ್ನಾಟಕದ ಕೆಲಭಾಗಗಳ ಅಧಿಪತಿಗಳಾಗಿ ಮೆರೆದಿದ್ದರೆಂಬುದು ಅವರ ಮತ್ತು ಅವರ ಸಾಮಂತರಾಗಿದ್ದ ಚುಟುವಂಶದವರ ಪ್ರಾಕೃತ ಶಾಸನಗಳಿಂದ ತಿಳಿದುಬರುತ್ತದೆ. ಈ ಅರಸು ಮನೆತನಗಳವರೂ ಹೊರನಾಡಿನವರೇ ಆಗಿದ್ದೂ ಆ ಕಾಲದಲ್ಲಿ ಕರ್ನಾಟಕದಲ್ಲಿ ಸ್ಥಳೀಯವಾದ ಯಾವ ಸ್ವತಂತ್ರ ರಾಜಕೀಯ ಶಕ್ತಿಯೂ ತಲೆಯೆತ್ತಿದಂತೆ ಕಾಣುವುದಿಲ್ಲ. ಆದರೆ 2ನೆಯ ಶತಮಾನದ ವೇಳೆಗೆ ಕರಾವಳಿಯ ತುಳುನಾಡಿನಲ್ಲಿ ಆಳುಪರು ಸಣ್ಣದೊಂದು ಸಂಸ್ಥಾನವನ್ನು ರೂಪಿಸಿಕೊಂಡಿದ್ದರು. ಸಾತವಾಹನರೂ ಆಳುಪರೂ ಕರ್ನಾಟಕದ ಬಂದರುಗಳ ಮೂಲಕ ವಿದೇಶಗಳೊಡನೆ ಸಂಪರ್ಕ ಬೆಳೆಸಿದ್ದರೆಂದು ಊಹಿಸಲು ಕೆಲವು ಆಧಾರಗಳಿವೆ. ಈ ಕಾಲದಲ್ಲಿ ಆರ್ಥಿಕ ಚಟುವಟಿಕೆಗಳು ಸಾಕಷ್ಟು ಬೆಳೆದಿದ್ದು ಅನೇಕ ಪಟ್ಟಣಗಳು ಬೆಳೆದಿದ್ದವೆಂಬ ಅಂಶ ಪುರಾತತ್ತ್ವ ಆಧಾರಗಳಿಂದ ಸ್ಪಷ್ಟವಾಗುತ್ತದೆ. ಸನ್ನತಿ, ಬನವಾಸಿ ಮೊದಲಾದ ಸ್ಥಳಗಳಲ್ಲಿ ದೊರೆತಿರುವ ಶಾಸನಗಳು ಬೌದ್ಧಧರ್ಮ ಪ್ರಬಲವಾಗಿತ್ತೆಂಬುದನ್ನು ಸೂಚಿಸುತ್ತವೆ. ಹಾಗೆಯೇ ವೈದಿಕ ಮತ್ತು ಜೈನ ಧರ್ಮಗಳೂ ಇಲ್ಲಿದ್ದುವೆಂಬುದಕ್ಕೆ ಸಾಂದರ್ಭಿಕ ಸಾಕ್ಷಿಗಳಿವೆ. ಉತ್ತಮ ನಾಗರಿಕ ಸ್ಥಿತಿಯ ಸೂಚಕಗಳಾದ ಪ್ರಬುದ್ಧ ವಾಸ್ತು ಮತ್ತು ಶಿಲ್ಪ ಕಲೆಗಳು ಈ ನಾಡಿನಲ್ಲಿ ಈ ಕಾಲದಲ್ಲಿ ಬೆಳೆಯಲಾರಂಭಿಸಿದ್ದುವೆಂಬುದನ್ನು ಸನ್ನತಿ, ಬನವಾಸಿಗಳಲ್ಲಿ ದೊರೆತಿರುವ ಶಿಲಾಶಿಲ್ಪಗಳು ಮತ್ತು ಕೋಟೆಯೇ ಮೊದಲಾದ ಕಟ್ಟಡಗಳ ಅವಶೇಷಗಳು ಸೂಚಿಸುತ್ತವೆ. ಕ್ರಿಸ್ತಶಕದ ಪ್ರಾರಂಭ ಶತಮಾನಗಳಲ್ಲಿ ದಕ್ಷಿಣ ಕರ್ನಾಟಕ ಪ್ರಾಂತ್ಯ ನೆರೆಯ ತಮಿಳುನಾಡಿನ ಜೊತೆಗೂ ನಿಕಟ ಸಂಪರ್ಕ ಬೆಳೆಸಿಕೊಂಡಿತ್ತು. ಸಾತವಾಹನರ ಅನಂತರ ಸ್ವಲ್ಪಕಾಲ ಕರ್ನಾಟಕದ ಕೆಲಭಾಗಗಳು ತಮಿಳುನಾಡಿನ ಪಲ್ಲವರ ಅಧೀನದಲ್ಲಿದ್ದವು. ಶಾಸನಗಳಲ್ಲಿ ಬಳಸಲಾಗಿರುವ ಭಾಷೆಯ ದೃಷ್ಟಿಯಿಂದ ಹೇಳುವುದಾದರೆ ಈ ಕಾಲ ಕರ್ನಾಟಕ ಇತಿಹಾಸದಲ್ಲಿ ಪ್ರಾಕೃತ ಭಾಷೆ ಪ್ರಬಲವಾಗಿದ್ದ ಕಾಲ. ಅವುಗಳನ್ನು ಹೊರಡಿಸಿದ ಅರಸುಗಳ ಪರಮಾಧಿಕಾರದ ಮೂಲಸ್ಥಾನಗಳು ಕರ್ನಾಟಕದ ಹೊರಗೇ ಇದ್ದವು.

ಹೀಗೆ ಶತಮಾನಗಳ ಕಾಲ ರಾಜಕೀಯ ಪಾರತಂತ್ರಕ್ಕೆ ಒಳಗಾಗಿದ್ದ ಈ ನಾಡಿನಲ್ಲಿ 4ನೆಯ ಶತಮಾನದ ಮಧ್ಯಭಾಗದಲ್ಲಿ ಇದೇ ಪ್ರದೇಶದ ಬನವಾಸಿಯ ಕದಂಬರು ಮತ್ತು ತಲಕಾಡಿನ ಗಂಗರು ಮೊದಲು ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು. ಕದಂಬ ರಾಜ್ಯವಾದರೂ ಹುಟ್ಟಿಕೊಂಡದ್ದೇ ಹೊರಗಿನವರ ಆಕ್ರಮಣದ ವಿರುದ್ಧ ತಲೆದೋರಿದ ಪ್ರತಿಭಟನೆಯಿಂದಾಗಿ. ಕಾಂಚೀಪುರದ ಪ್ರಸಿದ್ಧ ಘಟಿಕೆಯಲ್ಲಿ ತನ್ನ ವೈದಿಕ ಅಧ್ಯಯನವನ್ನು ಮುಂದುವರಿಸಲೋಸುಗ ಅಲ್ಲಿಗೆ ಹೋಗಿದ್ದ ಕದಂಬ ಮನೆತನದ ಮಯೂರಶರ್ಮ ಕ್ಷಾತ್ರವೃತ್ತಿಯ ಪಲ್ಲವರ ದುರಹಂಕಾರದಿಂದ ಅಪಮಾನಿತನಾಗಿ, ಸ್ವತಃ ಕ್ಷಾತ್ರವೃತ್ತಿಯನ್ನವಲಂಬಿಸಿ ಸೇನೆಯನ್ನು ಕಟ್ಟಿ ಪಲ್ಲವರೊಡನೆ ಕಾದಾಡಿ ಗೆದ್ದು, ಅದರಿಂದಲೇ ಮಲಪ್ರಭಾ ಮತ್ತು ಪಶ್ಚಿಮ ಸಮುದ್ರದ ನಡುವಣ ತನ್ನ ತಾಯ್ನೆಲದ ಪರಿಪಾಲಕನಾಗಿ ಅಭಿಷಿಕ್ತನಾದಂದು ಕರ್ನಾಟಕದ ಪ್ರಪ್ರಥಮ ಪ್ರಬಲ ಸ್ವತಂತ್ರ ಸ್ಥಳೀಯ ರಾಜ್ಯ ಹುಟ್ಟಿಕೊಂಡಿತು. ಈ ರಾಜ್ಯ ಮುಂದೆ ಚಳುಕ್ಯರಿಂದ ನಾಶವಾಗುವವರೆಗೂ ಅಂದರೆ ಸು.6ನೆಯ ಶತಮಾನದ ಅಂತ್ಯದ ವರೆಗೆ ಉತ್ತರ ಕರ್ನಾಟಕದ ಬಹುಭಾಗವನ್ನು ಒಳಗೊಂಡಿತ್ತು. ಮೂಲತಃ ಕೋಲಾರದಿಂದ ಬಂದವರಾದ ಗಂಗರು ಕ್ರಿ.ಶ. 360ರ ಸುಮಾರಿನಲ್ಲಿ ತಲಕಾಡಿನಲ್ಲಿ ರಾಜ್ಯಸ್ಥಾಪನೆ ಮಾಡಿ ಮುಂದೆ 10ನೆಯ ಶತಮಾನದ ಅಂತ್ಯದವರೆಗೂ ದಕ್ಷಿಣ ಕರ್ನಾಟಕದ ಬಹುಭಾಗದ ಮೇಲೆ ಆಳ್ವಿಕೆ ನಡೆಸಿದರು.

ಈ ಹಿಂದೆ ಹೊರನಾಡಿನವರು ಕರ್ನಾಟಕದ ಮೇಲೆ ಅಧಿಕಾರ ಚಲಾಯಿಸುತ್ತಿದ್ದರಾದರೆ, ಕದಂಬರು ಮತ್ತು ಗಂಗರ ಕಾಲದಲ್ಲಿ ಕನ್ನಡಿಗರು

ಪರದೇಶಗಳ ಮೇಲೆ ತಮ್ಮ ಪ್ರಭಾವವನ್ನು ಬೀರಲಾರಂಭಿಸಿದರು. ಕದಂಬರ ಮೊದಲ ರಾಜನಾದ ಮಯೂರ ಶರ್ಮ (ಸು.325-45) ಪಲ್ಲವರನ್ನು ಸೋಲಿಸಿದ್ದನಷ್ಟೇ ಅಲ್ಲದೆ ದೂರದ ರಾಷ್ಟ್ರಗಳ ಮೇಲೂ ಯಶಸ್ವಿಯಾಗಿ ದಾಳಿ ನಡೆಸಿದ್ದ. ಕಾಕುತ್ಸ್ಥವರ್ಮ (ಸು.405-30)ತನ್ನ ಮಕ್ಕಳ ಮೂಲಕ ಸಾಮ್ರಾಜ್ಯಶಾಹೀ ಗುಪ್ತರೂ ವಾಕಾಟಕರೂ ಸೇರಿದಂತೆ ಹಲವು ಅರಸುಮನೆತನಗಳೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದನೆಂಬುದು ಅಧಿಕಾರಕ್ಕೆ ಬಂದ ಸ್ವಲ್ಪ ಕಾಲದಲ್ಲೇ ಕದಂಬರು ರಾಜಕೀಯ ಕ್ಷೇತ್ರದಲ್ಲಿ ಉಚ್ಚಮಟ್ಟಕ್ಕೇರಿದ್ದರೆಂಬುದನ್ನು ಸೂಚಿಸುತ್ತದೆ. ಅದೇ ರೀತಿ ದಕ್ಷಿಣ ಕರ್ನಾಟಕದ ಗಂಗರೂ ತಮಿಳುನಾಡಿನ ಪಲ್ಲವರೊಡನೆ ಸಂಬಂಧ ಬೆಳೆಸಿದ್ದರು.

ಈ ಕಾಲದಲ್ಲಿ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ವಿಶೇಷವಾಗಿ ನಡೆಯಿತು. ಜೊತೆಗೆ ಜೈನಧರ್ಮಕ್ಕೂ ಪೋಷಣೆ ದೊರಕಿತು. ಆದರೆ ಬೌದ್ಧ ಧರ್ಮ ಕ್ಷೀಣಿಸಿತು. ಸಾಮಾಜಿಕ ಕ್ಷೇತ್ರದಲ್ಲಿ, ಅಲ್ಪಸಂಖ್ಯೆಯ ಬೌದ್ಧರನ್ನೂ ಸಾಕಷ್ಟು ಸಂಖ್ಯೆಯಲ್ಲಿದ್ದ ಜೈನರನ್ನೂ ಬಿಟ್ಟರೆ, ಕದಂಬ-ಗಂಗಯುಗದ ಕರ್ನಾಟಕದ ಸಮಾಜ ವೈದಿಕಧರ್ಮದ ರೀತ್ಯಾ ಚತುರ್ವರ್ಣಗಳಿಂದ ಕೂಡಿತ್ತು. ಧಾರ್ಮಿಕ ಕ್ಷೇತ್ರದಲ್ಲಿ ಕದಂಬ ರಾಜರೂ ಅವರ ಸಮಕಾಲೀನ ಗಂಗ ಅರಸುಗಳೂ ಸಾಮಂತ ಪ್ರಭುಗಳೂ ಅವರವರ ಸ್ವಂತ ಒಲವು ಯಾವುದೇ ಧರ್ಮಕ್ಕಿದ್ದರೂ ಎಲ್ಲ ಧರ್ಮಗಳನ್ನೂ ಗೌರವಿಸುವ ಪರಧರ್ಮಸಹಿಷ್ಣುತೆಯ ಉದಾತ್ತ ಪರಂಪರೆ ಕರ್ನಾಟಕದಲ್ಲಿ ಸ್ಥಿರವಾಗಿ ಉಳಿಯುವಂತೆ ಮಾಡಿದರು.

ಕದಂಬರು ಮತ್ತು ಗಂಗರು ವೈದಿಕ ಧರ್ಮಕ್ಕೆ ನೀಡಿದ ಪ್ರೋತ್ಸಾಹದಿಂದಾಗಿ ಪ್ರಾಕೃತದ ಬದಲು ಸಂಸ್ಕೃತ ಪ್ರಧಾನ ಶಾಸನಭಾಷೆಯಾಗಿ ಬಳಕೆಗೆ ಬಂತು. ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಯೂ ಆಯಿತು. ಕನ್ನಡತನದ ಪ್ರಜ್ಞೆ ವಿಶೇಷವಾಗಿ ನೆಲೆಗೊಂಡದ್ದೂ ಈ ಸಂಧಿಕಾಲದಲ್ಲಿ. ಇದಕ್ಕೂ ಹಿಂದಿನ ಶತಮಾನಗಳಲ್ಲಿ ಕರ್ನಾಟಕದಲ್ಲಿ ಕನ್ನಡ ಬಳಕೆಯಲ್ಲಿತ್ತೆಂಬುದರ ಸುಳಿವು ಈ ಪ್ರಾಂತ್ಯದ ಪ್ರಾಚೀನ ಪ್ರಾಕೃತ, ಸಂಸ್ಕೃತ ಶಾಸನಗಳಲ್ಲಿ ಉಕ್ತವಾಗಿರುವ ಕೆಲವು ಸ್ಥಳನಾಮಗಳ ವಿಶ್ಲೇಷಣೆಯಿಂದ ದೊರೆಯುತ್ತದೆಯಾದರೂ ಕೇವಲ ಆಡುಮಾತಾಗಿ ಬಳಕೆಯಲ್ಲಿದ್ದು ಕನ್ನಡ ರಾಜಾಶ್ರಯ ಮತ್ತು ಅಧಿಕೃತ ಮನ್ನಣೆ ಪಡೆದು ಬಿರುಸಾಗಿ ಸರ್ವತೋಮುಖವಾಗಿ ಬೆಳೆಯಲಾರಂಭಿಸಿದ್ದು 5ನೆಯ ಶತಮಾನದ ಮಧ್ಯಭಾಗದಿಂದಲೇ. ಹಲ್ಮಿಡಿ ಶಾಸನದಾರಭ್ಯ ಕನ್ನಡ ಶಾಸನಗಳು ದಿನೇ ದಿನೇ ಸಂಖ್ಯೆಯಲ್ಲಿ ಹೆಚ್ಚುತ್ತ ಬಂದುದು ಈ ಹೊಸ ಪ್ರಜ್ಞೆಯ ಸೂಚಕವಾಗಿದೆ.

ಕದಂಬರೂ ಗಂಗರೂ ಅದರಲ್ಲೂ ಮುಖ್ಯವಾಗಿ ಕದಂಬರು ರಾಜಕೀಯ ಕ್ಷೇತ್ರದಲ್ಲಿ ಸಾಮ್ರಾಜ್ಯಶಾಹೀ ಅಂತಸ್ತಿಗೆ ಏರುವ ಸಾಮರ್ಥ್ಯ ಹೊಂದಿದ್ದರಾದರೂ ಅಂದಿನ ಪ್ರಾರಂಭಿಕ ಸ್ಥಿತಿಯಲ್ಲಿ ಅವರಿಬ್ಬರಲ್ಲಿ ಯಾರೂ ಮತ್ತೊಬ್ಬರ ಪ್ರಾಂತ್ಯವನ್ನು ಸ್ವಾಧೀನಪಡಿಸಿಕೊಳ್ಳಲಾರದೇ ಹೋದುದರಿಂದ ಕರ್ನಾಟಕದ ಸಾರ್ವಭೌಮತ್ವವನ್ನು ಗಳಿಸಿಕೊಳ್ಳಲಾರದೇ ಹೋದರು. ಆದರೂ ಕರ್ನಾಟಕ ಸರ್ವತಂತ್ರ ಸ್ವತಂತ್ರವಾದ ಒಂದು ಚಕ್ರವರ್ತಿ ಕ್ಷೇತ್ರವಾಗಬಲ್ಲದು ಎಂಬ ಪ್ರಜ್ಞೆ ಕದಂಬ– ಗಂಗರು ತಮ್ಮ ಮುಂದಿನ ಪೀಳಿಗೆಯವರಿಗೆ ನೀಡಿಹೋದ ಕೊಡುಗೆಗಳಲ್ಲೆಲ್ಲ ಹೆಚ್ಚು ಪರಿಣಾಮಕಾರಿಯಾದುದು.

**ಸಾಮ್ರಾಜ್ಯ ಯುಗ :** ಚಕ್ರವರ್ತಿ ಕ್ಷೇತ್ರದ ಸಾಧ್ಯತೆಯನ್ನು ಮನವರಿಕೆ ಮಾಡಿಕೊಂಡು ಉತ್ತುಂಗ ಸಾಮ್ರಾಜ್ಯಗಳನ್ನು ಕಟ್ಟಿದ ಕೀರ್ತಿ ಮುಂದೆ ಆಳಿದ ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು ಮತ್ತು ಹೊಯ್ಸಳರದು. ಕದಂಬಪೂರ್ವ ಕಾಲದಲ್ಲಿ ಕರ್ನಾಟಕ ಹೊರನಾಡಿನ ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿದ್ದಿತಾದರೆ ಕದಂಬ ಗಂಗ ರಾಜ್ಯೋದಯದೊಡನೆ ಉದ್ಭವಿಸಿದ ದೇಶಿ ಪ್ರಜ್ಞೆ ಮತ್ತು ಸಾಧನ ಸಾಮರ್ಥ್ಯಗಳಿಂದ ಕರ್ನಾಟಕದ ಈ ರಾಜವಂಶಗಳು ಇದೇ ನಾಡಿನ ಬಾದಾಮಿ, ಮಳಖೇಡ, ಕಲ್ಯಾಣ, ದ್ವಾರಸಮುದ್ರಗಳಲ್ಲಿ ರಾಜಧಾನಿಯನ್ನು ಸ್ಥಾಪಿಸಿಕೊಂಡು ದಕ್ಷಿಣಾಪಥದ ಬಹುಭಾಗದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದದೂ ಅಲ್ಲದೆ ಕಾಲಕಾಲಕ್ಕೆ ಉತ್ತರ ಭಾರತ ಹಾಗೂ ತಮಿಳುನಾಡುಗಳ ಮೇಲೂ ತಮ್ಮ ಪ್ರಭಾವವನ್ನು ವಿಸ್ತರಿಸಿದ್ದು ಈ ಕಾಲದ ಮಹತ್ವದ ವಿಷಯ. ಮಹಾರಾಷ್ಟ್ರದ ದೇವಗಿರಿಯಿಂದ ಆಳಿದ ಸೇವುಣರು ಒಂದು ದೃಷ್ಟಿಯಿಂದ ಕನ್ನಡ ನಾಡಿನಲ್ಲೇ ಆಳುತ್ತಿದ್ದರು. ಇವರಲ್ಲದೆ ಕರ್ನಾಟಕ ಮೂಲದ ರಾಜಕುಲಗಳು ಮಿಥಿಲಾ ಬಂಗಾಳಗಳಲ್ಲಿ ಆಳುತ್ತಿದ್ದವೆಂಬುದಕ್ಕೆ ಸಾಕ್ಷಿಗಳಿವೆ. ಕನ್ನಡ ಮೂಲದ ಹಲವು ರಾಜಮನೆತನಗಳು ಈ ನಾಡಿನ ಹೊರಗೂ ರಾಜ್ಯ ಸ್ಥಾಪಿಸಬಲ್ಲ ಶಕ್ತಿ ಪಡೆದಿದ್ದವು. ಈ ರಾಜಕೀಯ ಸಾಧನೆಗಳಿಗೆ ಸ್ಥಳೀಯ ಆರ್ಥಿಕ ಬೆಂಬಲವಿದ್ದಿರಬೇಕಾಗಿದ್ದು ದೇಶ ಸಮೃದ್ಧ ಸ್ಥಿತಿಯಲ್ಲಿತ್ತೆಂಬುದಕ್ಕೂ ಇದೇ ಸೂಚಕವಾಗಿದೆ. ಸಹಜವಾಗಿ ನಾಡಿನಲ್ಲಿದ್ದ ರಾಜಕೀಯ ಔನ್ನತ್ಯ, ಆರ್ಥಿಕ ಬಲಗಳ ಹಿನ್ನೆಲೆಯಲ್ಲಿ ಕಲೆ ಸಾಹಿತ್ಯಾದಿ ಇತರ ರಂಗಗಳಲ್ಲೂ ಮಹತ್ಸಾಧನೆಗಳು ಈ ಕಾಲದಲ್ಲಾದವು. ಯಾವ ದೃಷ್ಟಿಯಿಂದ ನೋಡಿದರೂ ಕರ್ನಾಟಕದ ಇತಿಹಾಸದಲ್ಲಿ ಇದು ಪ್ರೌಢಯುಗ, ಹಿರಿಮೆಯ ಕಾಲ.

6ನೆಯ ಶತಮಾನದ ಮಧ್ಯಭಾಗದಲ್ಲಿ ಕದಂಬರು ಬಲಗುಂದಿದಾಗ ಉತ್ತರ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಉಂಟಾದ ತೆರಪನ್ನು ತುಂಬಿದವರು ಬಾದಾಮಿಯ ಚಳುಕ್ಯರು. ಕದಂಬರು ಹಾಗೂ ಚಳುಕ್ಯರು ಶಾಸನಗಳ ವಂಶಿಕ ಪ್ರಶಸ್ತಿಗಳನ್ನು ಹೋಲಿಸಿ ನೋಡಿದಾಗ ಚಳುಕ್ಯರು ತಮ್ಮ ಪೂರ್ವಜರನ್ನು ಎಷ್ಟರಮಟ್ಟಿಗೆ ಹಿಂಬಾಲಿಸಿದ್ದರು, ಅವರಿಂದ ಎಷ್ಟರಮಟ್ಟಿಗೆ ಪ್ರಭಾವಿತರಾಗಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಕರ್ನಾಟಕ ಮುಂದಿನ ಆರು ಶತಮಾನಗಳ ಕಾಲ ಏಕಾಧಿಪತ್ಯದ ಸಾಮ್ರಾಜ್ಯವಾಗಿ ಮೆರೆದದ್ದು ಈ ಚಳುಕ್ಯರ ಪರಿಶ್ರಮಗಳ ಫಲವಾಗಿ. ಹಲವು ಶಾಖೆಗಳೊಡನೆ, ಬಹು ವಿಸ್ತಾರವಾದ ಆಲದ ಮರದಂತೆ ಬೆಳೆದು ಚಿರಸ್ಥಾಯಿಯಾಗಿ ನಿಂತ ಈ ಸಾಮ್ರಾಜ್ಯಶಾಹೀ ಪ್ರಭುತ್ವದ ಬೀಜವನ್ನು ಬಿತ್ತಿದವನು ವಾತಾಪಿಯಲ್ಲಿ ನೆಲೆಯೂರಿ ಅಲ್ಲಿ ಅಜೇಯವಾದ ದುರ್ಗವನ್ನು ರಚಿಸಿದ 1ನೆಯ ಪುಲಕೇಶಿ (ಸು.540-66). ಇವನು ನಡೆಸಿದ ಅಶ್ವಮೇಧ ಯಾಗ ಯಶಸ್ವಿಯಾಗಿ ನೆರವೇರಿದುದು ಅವನ ಉತ್ತರಾಧಿಕಾರಿಗಳಲ್ಲಿ ಸಾಮ್ರಾಜ್ಯ ಸ್ಥಾಪನೆಯ ಮಹತ್ವಾಕಾಂಕ್ಷೆಯನ್ನೂ ಅದಕ್ಕೆ ಬೇಕಾದ ಧೈರ್ಯಸ್ಥೈರ್ಯಗಳನ್ನೂ ಹುಟ್ಟಿಸಿರಬೇಕು. ಇವನು ಬಿತ್ತಿದ ಬೀಜ ಮೊಳೆಕೆಯೂರಿ, ಚಿಗುರುವಂತೆ ಮಾಡಿದ ಕೀರ್ತಿಗೆ ಪಾತ್ರರು ಅವನ ಅಕ್ಕನ ಮಕ್ಕಳಾದ 1ನೆಯ ಕೀರ್ತಿವರ್ಮ ಮತ್ತು ಮಂಗಲೀಶ (596-610) ನಳ, ಮೌರ್ಯ, ಕದಂಬ ಮನೆತನಗಳನ್ನು ಸದೆಬಡಿದ ಕೀರ್ತಿವರ್ಮ ಕರ್ನಾಟಕದ ಸಾರ್ವಭೌಮತ್ವ ಚಳುಕ್ಯರದ್ದಾಗುವಂತೆ ಮಾಡಿದನಾದರೆ, ಅವನ ತಮ್ಮ ಮಂಗಲೀಶ ಸರ್ವದ್ವೀಪಗಳನ್ನೂ ಆಕ್ರಮಿಸುವಷ್ಟು ಶಕ್ತಿಯುತವಾದ ನೌಕಾಸೇನೆಯನ್ನು ಕಟ್ಟಿ ಚಳುಕ್ಯರ ರಾಜಕೀಯ ಪ್ರಭಾವ ಕಡಲುದಾಟಿ ಮೆರೆಯುವಂತೆ ಮಾಡಿದ. ಈ ದೃಷ್ಟಿಯಿಂದ ನೋಡಿದಾಗ ಕರ್ನಾಟಕದ ಪ್ರಥಮ ಚಕ್ರವರ್ತಿಯಾಗಿ ಮೆರೆದ ಯಶಸ್ಸು 1ನೆಯ ಕೀರ್ತಿ ವರ್ಮನದ್ದಾದರೆ, ಕರ್ನಾಟಕವೇ ಕೇಂದ್ರವಾಗಿ ಆಗತಾನೆ ಮೊದಲಬಾರಿಗೆ ಸೃಷ್ಟಿಗೊಂಡಿದ್ದ ಕರ್ನಾಟಕ ಚಕ್ರವರ್ತಿ ಕ್ಷೇತ್ರದ ನೇರ ಪ್ರಭಾವ ಅದರ ಕೇಂದ್ರವಲಯವನ್ನೂ ಮೀರಿ ಹೊರಹೊಮ್ಮುವಂತೆ ಮಾಡಿದ ಕೀರ್ತಿ ಮಂಗಲೀಶನದಾಗುತ್ತದೆ. 2ನೆಯ ಪುಲಕೇಶಿ (610-42) ದಕ್ಷಿಣ ಪಥದ ಅತಿಶ್ರೇಷ್ಠ ಚಕ್ರವರ್ತಿಗಳಲ್ಲೊಬ್ಬ. ಚಕ್ರವರ್ತಿ ಕ್ಷೇತ್ರವನ್ನು ವಿಸ್ತರಿಸುವ ಸಲುವಾಗಿ ದಿಗ್ವಿಜಯ ಪ್ರಯಾಣಗಳನ್ನು ಕೈಗೊಂಡು ಗುಜರಾತ್ ಆಂಧ್ರ ಪ್ರದೇಶಗಳಲ್ಲಿ ಚಳುಕ್ಯ ಸಂಸ್ಥಾನಗಳನ್ನು ಸ್ಥಾಪಿಸಿದ ಮಹಾರಾಷ್ಟ್ರದಲ್ಲಿ ತನ್ನ ಆಧಿಪತ್ಯವನ್ನು ನೆಲೆಸಿದ ನರ್ಮದೆಯ ತಡಿಯಲ್ಲಿ ಸಕಲೋತ್ತರಾ ಪಥೇಶ್ವರ ಹರ್ಷವರ್ಧನನಿಗೆ ಸೋಲಿನ ರುಚಿಯನ್ನು ತೋರಿಸಿದ. ಜೊತೆಗೆ ಪಲ್ಲವರ ಮೇಲೆ ದಾಳಿ ಮಾಡಿ, ಅವರನ್ನು ಸೋಲಿಸುವುದರ ಮೂಲಕ ಕರ್ನಾಟಕದ ಚಕ್ರವರ್ತಿಗಳ ಹಾಗೂ ತಮಿಳುನಾಡಿನ ರಾಜವಂಶಗಳ ನಡುವೆ ವಿರೋಧದ ಅವಿರತ ಪರಂಪರೆಯನ್ನು ಹುಟ್ಟಿಸಿದ. ಆ ವಿಷಮ ಪರಂಪರೆಯ ಮೊದಲ ಬಲಿಯೂ ಅವನೇ. ಹದಿಮೂರು ವರ್ಷಗಳ ಪಲ್ಲವರ ಆಕ್ರಮಣದ ಅನಂತರ 2ನೆಯ ಪುಲಕೇಶಿಯ ಮಗ 1ನೆಯ ವಿಕ್ರಮಾದಿತ್ಯ (655-81) ಅಂಥ ಅನಿಷ್ಟ ಘಟನೆಯೇನೂ ನಡೆದೇ ಇಲ್ಲವೆಂಬಂತೆ ಪುನಃ ಕರ್ನಾಟಕ ಸಾಮ್ರಾಜ್ಯದ ಮೇಲೆ ಚಳುಕ್ಯರ ಹತೋಟಿಯನ್ನು ಸಂಪೂರ್ಣವಾಗಿ ಸ್ಥಾಪಿಸಿದ. ಸಿಂಹಾಸನವನ್ನು ಏರುವ ಸಲುವಾಗಿ ಎಷ್ಟೇ ತೀವ್ರವಾದ ಹೋರಾಟಗಳು ನಡೆದರೂ ಈ ಸಾಮ್ರಾಜ್ಯ ಮಾತ್ರ ಸ್ಥಿರವಾಗಿ ಉಳಿದು ನೆರೆಹೊರೆಯ ರಾಷ್ಟ್ರಗಳ ಮನ್ನಣೆ ಪಡೆದು ಬಂದುದಕ್ಕೆ ಪುಲಕೇಶಿ - ವಿಕ್ರಮಾದಿತ್ಯರು ತಮ್ಮ ಸಾಧನೆಗಳಿಂದ ಸೃಷ್ಟಿಸಿದ್ದ ರಾಜಕೀಯ ಪರಂಪರೆ ಒಂದು ಮುಖ್ಯ ಕಾರಣ. ಚಳುಕ್ಯರು

ಮತ್ತು ಪಲ್ಲವರಲ್ಲಿ ತಾವು ಪ್ರಕೃತ್ಯಮಿತ್ರರು ಎಂಬ ಭಾವನೆಯನ್ನು ಬೆಳೆಸಿಕೊಂಡಿದ್ದರಿಂದ, ಅವರು ಅನೇಕ ಬಾರಿ ಒಬ್ಬರ ಮೇಲೊಬ್ಬರು ವೃಥಾ ದಾಳಿಗಳನ್ನು ನಡೆಸಿ ಕ್ರಮೇಣ ಬಲಹೀನರಾಗುತ್ತ ಬಂದಿದ್ದರು. ಸಾಲದ್ದಕ್ಕೆ ಚಳುಕ್ಯರು ಇತರ ವೈರಿಗಳ ಜೊತೆಗೂ ಮೇಲಿಂದ ಮೇಲೆ ಕಾದಾಡಬೇಕಾಗಿ ಬಂದಿತ್ತು. ಹೀಗಿದ್ದರೂ ಚಳುಕ್ಯ ಸಾಮ್ರಾಜ್ಯ ವಿನಯಾದಿತ್ಯ,ಇಮ್ಮಡಿ ವಿಕ್ರಮಾದಿತ್ಯರಂಥ' ದೊರೆಗಳ ಆಳ್ವಿಕೆಯಲ್ಲಿ ಗಟ್ಟಿಯಾಗಿಯೇ ಮುಂದುವರೆಯಿತು. ಕೊನೆಗೆ ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ಅಸ್ತಂಗತವಾಯಿತು (757).

ರಾಜಕೀಯ ವಾತಾವರಣದ ಮಹತ್ಸಾಧನೆಗಳಂತೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಧಾರ್ಮಿಕ ರಂಗಗಳಲ್ಲೂ ಪ್ರಗತಿ ಸಾಧಿತವಾಯಿತು. ಈ ಸರ್ವತೋಮುಖ ಬೆಳವಣಿಗೆಗೆ ಚಳುಕ್ಯ ಯುಗಕ್ಕೆ ಸಂಬಂಧಿಸಿದ ವಾಸ್ತು ಶಿಲ್ಪ ಅವಶೇಷಗಳು ತೋರುಗನ್ನಡಿಯಂತಿವೆ. ಶಾಸನಗಳಷ್ಟೇ ಅಲ್ಲದೆ ಈ ವಾಸ್ತುಕೃತಿಗಳು ಅಂದಿನ ಆರ್ಥಿಕ ಸುಸ್ಥಿತಿ ಮತ್ತು ಕಲೆಯ ಅಭಿಮಾನ ಇವುಗಳನ್ನು ಪ್ರದರ್ಶಿಸುತ್ತದೆ. ಬಾದಾಮಿ, ಪಟ್ಟದಕಲ್ಲು, ಐಹೊಳೆ, ಅಜಂತಾಗಳಲ್ಲಿ ಸೃಷ್ಟಿಸಿದ ಕಲಾಕೃತಿಗಳು ಕರ್ನಾಟಕ ವಾಸ್ತುಶಿಲ್ಪ ಪರಂಪರೆಯ ಮೂಲಸ್ವರೂಪಗಳಷ್ಟೇ ಅಲ್ಲ, ಅಂದಿನ ಕನ್ನಡಿಗರ ಪ್ರತಿಭಾಶಕ್ತಿಯ ಅತ್ಯುತ್ತಮ ಫಲಗಳೂ ಹೌದು. ಕದಂಬ ಗಂಗರಂತೆಯೇ ಚಳುಕ್ಯರೂ ಪರಧರ್ಮ ಸಹಿಷ್ಣುತೆಯ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದರೆಂಬುದಕ್ಕೆ ಅವರ ಹಿಂದು ಜೈನ ದೇವಾಲಯಗಳು ಒಳ್ಳೆಯ ನಿದರ್ಶನಗಳಾಗಿವೆ. ಕಾಂಚಿಪುರ ತನ್ನ ವಶವಾದಾಗ 2ನೆಯ ವಿಕ್ರಮಾದಿತ್ಯ ಹಿಂದೆ ಪಲ್ಲವರು ವಾತಾಪಿಯನ್ನು ಸುಟ್ಟುಹಾಕಿದ್ದ ದುಷ್ಕೃತ್ಯಕ್ಕೆ ಸೇಡು ತೀರಿಸಿಕೊಳ್ಳದೆ ಆ ನಗರವನ್ನು ಸಂರಕ್ಷಿಸಿ, ರಾಜಸಿಂಹೇಶ್ವರದ, ಧನಸಂಪತ್ತನ್ನು ಕಣ್ಣಾರೆ ನೋಡಿ ಆ ದೇವಾಲಯಕ್ಕೆ ಹಿಂದಿರುಗಿಸಿದನೆಂಬುದೂ ಕಾಂಚಿಯ ಪತನದ ಸ್ಮರಣಾರ್ಥ ಮಹಾಶಿಲ್ಪಿಯೊಬ್ಬನಿಗೆ ಮೂರು ಬಾರಿ ಉತ್ಸವ ನಡೆಸಿ ಗೌರವಿಸಿದ್ದನೆಂಬುದೂ ಚಳುಕ್ಯರ ಉಚ್ಚ ಕಲಾಪ್ರೇಮವನ್ನು ಎತ್ತಿ ತೋರಿಸುತ್ತದೆ. ವೈದಿಕ ಧರ್ಮದ ಪ್ರೋತ್ಸಾಹಕರಾಗಿದ್ದ ಚಳುಕ್ಯರು ಕದಂಬರಂತೆಯೆ ಹಲವು ಯಜ್ಞ ಯಾಗದಿಗಳನ್ನು ಮಾಡಿದರು. ಅವರು ವಿಷ್ಣುಭಕ್ತರೂ ಆಗಿದ್ದರಾಗಿ, ಅವರ ಕಾಲದಲ್ಲಿ ಕರ್ನಾಟಕದಲ್ಲಿ ವೈಷ್ಣವ ಪಂಥ ವಿಶೇಷವಾಗಿ ಬೆಳೆದಿರಬೇಕು. ಅವರ ರಾಜಕೀಯ ರಾಜಧಾನಿ ವಾತಾಪಿ, ಸಾಂಸ್ಕೃತಿಕ ರಾಜಧಾನಿ ಆರ್ಯಪುರ (ಇಂದಿನ ಐಹೊಳೆ) ಪ್ರಸಿದ್ಧ ವಿದ್ಯಾಕೇಂದ್ರಗಳಾಗಿ ಮೆರೆದವು. ಕನ್ನಡ ಭಾಷೆ ಇನ್ನಷ್ಟು ಬೆಳೆದು ಸಾಹಿತ್ಯಿಕ ಮಟ್ಟವನ್ನು ಮುಟ್ಟಿದ್ದು ಚಳುಕ್ಯ ಯುಗದಲ್ಲೆ. ಈ ಬೆಳವಣಿಗೆಗೆ ಮುಖ್ಯ ಕಾರಣ ಶ್ರವಣಬೆಳಗೊಳದ ಜೈನರು. ಕನ್ನಡ ಸಾಹಿತ್ಯ ಕೃಷಿ ಆರಂಭವಾದುದು ಈ ಕಾಲದಲ್ಲಿ.

8ನೆಯ ಶತಮಾನದ ಮಧ್ಯಭಾಗದಲ್ಲಿ 2ನೆಯ ಕೀರ್ತಿವರ್ಮ ಸಿಂಹಾಸನಸ್ಥನಿದ್ದಾಗ ವಾತಾಪಿಯ ಚಳುಕ್ಯರನ್ನು ಪದಚ್ಯುತಿಗೊಳಿಸಿ ಮೊದಲು ಚಳುಕ್ಯರ ಅಧೀನದಲ್ಲಿದ್ದು ಉತ್ತರ ಮಹಾರಾಷ್ಟ್ರ ಮತ್ತು ಗುಜರಾತ್ ಪ್ರದೇಶಗಳಲ್ಲಿ ಪ್ರಭಾವಿತರಾಗಿದ್ದ ರಾಷ್ಟ್ರಕೂಟರು ಕರ್ನಾಟಕ ಚಕ್ರವರ್ತಿಕ್ಷೇತ್ರದ ಒಡೆಯರಾದರು. ಚಳುಕ್ಯ ಯುಗದಂತೆಯೆ ರಾಷ್ಟ್ರಕೂಟ ಯುಗದಲ್ಲಿಯೂ ಕರ್ನಾಟಕ ಚಕ್ರವರ್ತಿ ಕ್ಷೇತ್ರದ ನೇರ ಪ್ರಭಾವ ಗುಜರಾತ್, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಿಗೆ ವ್ಯಾಪಿಸಿತ್ತು. 1ನೆಯ ಕೃಷ್ಣ, ಧ್ರುವ, 3ನೆಯ ಗೋವಿಂದ 3ನೆಯ ಕೃಷ್ಣ ಇಂಥ ಸಮರ್ಥರಾಜರಿಂದ ರಾಷ್ಟ್ರಕೂಟರ ಹಾಗೂ ಕರ್ನಾಟಕದ ಕೀರ್ತಿ ಪ್ರಭಾವಗಳು ಭಾರತದ ಬಹುಭಾಗದಲ್ಲಿ ಪಸರಿಸಿದವು. ಧ್ರುವ (780-93) ಮತ್ತು ಗೋವಿಂದರು (793-814) ಉತ್ತರಾಪಥದ ದಿಗ್ವಿಜಯಗಳಿಗೆ ಕಾರಣರಾದರೆ 3ನೆಯ ಕೃಷ್ಣ (939-67) ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ರಾಮೇಶ್ವರದವರೆಗೂ ದಂಡೆತ್ತಿ ಹೋಗಿ ದಕ್ಷಿಣ ಭಾರತವನ್ನೂ ಕರ್ನಾಟಕ ಸಾಮ್ರಾಜ್ಯದ ಕಕ್ಷೆಗೆ ಸೇರಿಸಿದ. ಈತ ತಮಿಳುನಾಡಿನ ಪ್ರಮುಖ ಅರಸುಗಳನ್ನು ಸದೆಬಡಿದು ಕಚ್ಚಿಯುಂ ತಂಜೈಯುಂ ಕೊಣ್ಡ (ಅಂದರೆ, ಕಾಂಚೀಪುರ ಮತ್ತು ತಂಜಾವೂರುಗಳನ್ನು ವಶಪಡಿಸಿಕೊಂಡನು) ಎಂಬ ಬಿರುದನ್ನು ಸ್ವೀಕರಿಸಿದ್ದನಷ್ಟೇ ಅಲ್ಲದೆ, ತಮಿಳುನಾಡಿನಲ್ಲಿ ತನ್ನ ಆಳ್ವಿಕೆಯ ಅನೇಕ ಶಾಸನಗಳನ್ನು ಬಿಟ್ಟು ಹೋಗಿದ್ದಾನೆ.

ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ ಕ್ಷೇತ್ರಗಳಲ್ಲಾದ ಬದಲಾವಣೆಗಳ ದೃಷ್ಟಿಯಿಂದ ರಾಷ್ಟ್ರಕೂಟ ಯುಗ ಮಹತ್ವದ್ದಾಗಿದೆ. ಕದಂಬ-ಗಂಗ ಯುಗದಲ್ಲೂ ಚಳುಕ್ಯ ಯುಗದ ಪೂರ್ವಾರ್ಧದಲ್ಲೂ ವೈದಿಕ ಧರ್ಮದ ರೀತ್ಯ ಅಶ್ವಮೇಧವೇ ಮೊದಲಾದ ಕಷ್ಟಸಾಧ್ಯ ವೈದಿಕ ಯಾಗಗಳನ್ನು ಮಾಡಿದ ಅರಸುಗಳಿದ್ದರು. ಚಳುಕ್ಯ ಯುಗದ ಉತ್ತರಾರ್ಧದಲ್ಲಿ ಕ್ರಮೇಣ ಸಡಿಲಗೊಳ್ಳಲಾರಂಭಿಸಿದ್ದ ವೈದಿಕ ಧರ್ಮ ರಾಷ್ಟ್ರಕೂಟ ಯುಗದಲ್ಲಿ ಸ್ಮೃತಿಪುರಾಣಸಿದ್ಧವಾದ ಸುಲಭಸಾಧ್ಯ ಮನರಂಜಕ ಅನುಷ್ಠಾನ ಆಚರಣೆಗಳಿಗೆ ಎಡೆಮಾಡಿಕೊಡುವಂತಾಯಿತು. ರಾಷ್ಟ್ರಕೂಟ ಯುಗದ ಕರ್ನಾಟಕದ ಅರಸುಗಳೂ ಬ್ರಾಹ್ಮಣರೂ ಹೆಚ್ಚಾಗಿ ಸ್ಮೃತಿ ಪುರಾಣೋಕ್ತವಾದ ಕರ್ಮಗಳನ್ನೇ ಆಚರಿಸುತ್ತಿದ್ದರೆಂದು ಅಂದಿನ ಶಾಸನಗಳಿಂದ ಸ್ಪಷ್ಟವಾಗಿಯೆ ತಿಳಿದುಬರುತ್ತದೆ. ಹೀಗೆ ಧಾರ್ಮಿಕ ಅನುಷ್ಠಾನಗಳಲ್ಲಿ ಉಂಟಾದ ಸಡಿಲಿಕೆಯಿಂದಾಗಿ ಧಾರ್ಮಿಕ ಚಿಂತನ ಮಂಥನಗಳು ಸಾಕಷ್ಟು ಸರಳಗೊಂಡು, ಭಕ್ತಿಮಾರ್ಗಕ್ಕೆ ಜನ ಮಾರುಹೋಗತೊಡಗಿದ್ದರು. ಇದರಿಂದಾಗಿ ರಾಷ್ಟ್ರಕೂಟ ಯುಗದ ಉತ್ತರಾರ್ಧದಲ್ಲಿ ಹಿಂದೂಗಳೂ ಜೈನರೂ ವಿಗ್ರಹಾರಾಧನೆ ದೇವಾಲಯ ನಿರ್ಮಾಣಗಳ ಕಡೆಗೆ ಹಿಂದೆಂದಿಗಿಂತಲೂ ಹೆಚ್ಚಿನ ಆಸಕ್ತಿ ತೋರಲಾರಂಭಿಸಿದರು. ರಾಷ್ಟ್ರಕೂಟರು ಸರ್ವಧರ್ಮಗಳನ್ನೂ ಸಮದೃಷ್ಟಿಯಿಂದ ಕಾಣುವಲ್ಲಿ ತಮ್ಮ ಪೂರ್ವಜರನ್ನು ಮೀರಿಸಿದ್ದರು. ಅವರ ಹಲವು ಶಾಸನಗಳಲ್ಲಿ ಶಿವ ಮತ್ತು ವಿಷ್ಣುಸ್ತುತಿಗಳು ಒಟ್ಟೊಟ್ಟಿಗೇ ಬರುತ್ತವೆ. ಪ್ರಖ್ಯಾತ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ಪರಮಜಿನಭಕ್ತ, ಅದೇ ವೇಳೆಗೆ ಮಹಾಲಕ್ಷ್ಮಿಯ ಆರಾಧಕನೂ ಆಗಿದ್ದ. ಮುಸಲ್ಮಾನರೂ ಅವನ ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನೆಲೆಸಿದ್ದು, ಅವರಿಗಾಗಿ ಅವನು ಮಸೀದಿಗಳನ್ನು ನಿರ್ಮಿಸಿದ್ದ.

ರಾಷ್ಟ್ರಕೂಟರ ರಾಜಕೀಯ ಸಾಧನೆಗಳ ಹಿನ್ನೆಲೆಯಲ್ಲಿದ್ದ ಆರ್ಥಿಕಬಲ ದೇಶದ ಸುವ್ಯವಸ್ಥಿತ ಸ್ಥಿತಿಯ ಕುರುಹು. ಕರ್ನಾಟಕ ಸಂಪದ್ಭರಿತ ದೇಶವೆಂದೂ ಬಲಿಷ್ಠ ರಾಷ್ಟ್ರವೆಂದೂ ಇಲ್ಲಿನ ವಲ್ಲಭ ದೊರೆ ಅಂದಿನ ವಿಶ್ವದ ರಾಜರುಗಳಲ್ಲೆಲ್ಲಾ ಶ್ರೇಷ್ಠನೆಂದೂ ಸಮಕಾಲೀನ ವಿದೇಶಿ ಸಂದರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಸಹಜವಾಗಿ ಈ ನಾಡಿನಲ್ಲಿ ಉತ್ತಮ ಸಾಂಸ್ಕೃತಿಕ ಸಾಧನೆಗಳಿಗೆ ಒಳ್ಳೆಯ ವಾತಾವರಣವಿದ್ದಿತು. ಕನ್ನಡ ಪ್ರಜ್ಞೆಯು ಹೆಚ್ಚಳವಾಗಿ ಪಂಪ, ಪೊನ್ನ, ರನ್ನರಂಥ' ಪ್ರಸಿದ್ಧ ಕವಿಗಳು ಇತರ ಹಲವರು ಕನ್ನಡದಲ್ಲಿ ಕೃತಿರಚನೆ ಮಾಡಿದರು. ಎಲ್ಲೋರದ ಕೈಲಾಸ ದೇವಾಲಯದಂಥ ಉತ್ಕೃಷ್ಟ ವಾಸ್ತುಕೃತಿಗಳು ನಿರ್ಮಾಣವಾದವು. ಸುಸ್ಥಿತಿ ಹಾಗೂ ಹಿರಿಮೆಯ ವಾತಾವರಣದಿಂದ ಸ್ವಲ್ಪಮಟ್ಟಿಗೆ ಉದಾಸೀನರಾದ ಅನಂತರದ ರಾಷ್ಟ್ರಕೂಟ ಅರಸರ ನಿರ್ಬಲತೆಯಿಂದ ರಾಷ್ಟ್ರಕೂಟ ವಂಶದ ಆಳ್ವಿಕೆ ಕೊನೆಗೊಂಡು, ಹಿಂದಿನಿಂದಲೂ ಅಧಿಕಾರಕ್ಕೆ ಚಡಪಡಿಸುತ್ತಿದ್ದ ಚಾಳುಕ್ಯ ವಂಶದವರು ಅವರ ಉತ್ತರಾಧಿಕಾರಿಗಳಾದರು (974).

ದಕ್ಷಿಣಾಪಥದ ಸಾಮ್ರಾಜ್ಯಗಳಲ್ಲೆಲ್ಲ ಕರ್ನಾಟಕ ಸಾಮ್ರಾಜ್ಯ ಉತ್ಕೃಷ್ಟತರದ್ದಾಗಿತ್ತು. ತುಲನೆಗಾಗಿ ತಮಿಳುನಾಡನ್ನು ಉದಾಹರಣೆಗೆ ತೆಗೆದುಕೊಂಡರೆ, ಅಲ್ಲಿಯ ರಾಜಕೀಯ ಆದಿಕಾಲದಿಂದಲೂ ಚೋಳ ಚೇರ ಪಾಂಡ್ಯ ಎಂಬ ಮೂರು ಸಣ್ಣ ಆದರೂ ಸ್ವತಂತ್ರ ಪರಂಪರಾಗತ ರಾಜ್ಯ ಕ್ಷೇತ್ರಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿದ್ದು ಸಾಮ್ರಾಜ್ಯ ಸ್ಥಾಪನೆಯ ಸಾಹಸಕ್ಕಿಳಿದವರು ಆ ಮೂರು ರಾಜ್ಯ ಕ್ಷೇತ್ರಗಳನ್ನು ತಮ್ಮ ಅಧೀನದಲ್ಲಿರಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಈ ತ್ರಿರಾಜ್ಯಗಳ ಸ್ಥಳೀಯ ಪರಂಪರೆ ಬಲಿಷ್ಠವಿದ್ದ ಕಾರಣ, ಸಮಗ್ರ ತಮಿಳುನಾಡಿಗೆ ಒಂದು ಸ್ಥಿರವಾದ ಚಕ್ರವರ್ತಿ ಕ್ಷೇತ್ರದ ಪರಂಪರೆಯನ್ನು ರೂಢಿಸಲು ಅಲ್ಲಿನ ಯಾವ ರಾಜವಂಶದವರೂ ಶಕ್ತರಾಗದೆ ಹೋದರು. ಆದರೆ ಕರ್ನಾಟಕದಲ್ಲಿ ಸರ್ವ ರಾಷ್ಟ್ರಗಳ ಮನ್ನಣೆ ಪಡೆದು, ಪರಂಪರೆಯ ಸ್ವರೂಪ ತಾಳಿದ್ದ ಚಕ್ರವರ್ತಿ ಕ್ಷೇತ್ರದ ಕಲ್ಪನೆ ಸಿದ್ಧವಾಗಿತ್ತು. ಇದರಿಂದ ಇಲ್ಲಿಯ ಚಕ್ರವರ್ತಿಗಳು ಒಳನಾಡಿನ ಯುದ್ಧಗಳಲ್ಲಿ ವೃಥಾ ಬಲಪ್ರಯೋಗಮಾಡಿ ಹೊತ್ತುಕಳೆಯದೆ, ಗುಜರಾತದಿಂದ ರಾಮೇಶ್ವರದವರೆಗೂ ಕರಾವಳಿಯಿಂದ ಕರಾವಳಿಯವರೆಗೂ ಹಲವು ಬಾರಿ ತಮ್ಮ ಸೇನೆಗಳನ್ನು ನಡೆಸಿ ಕರ್ನಾಟಕ ಚಕ್ರವರ್ತಿ ಕ್ಷೇತ್ರದ ಹಿರಿಮೆಯನ್ನು ಸಾರುವಂತಾಗುವ ಅವಕಾಶ ಹೆಚ್ಚಿತ್ತು.

ರಾಷ್ಟ್ರಕೂಟಯುಗ ಕೊನೆಗೊಂಡುದರೊಂದಿಗೆ ಕರ್ನಾಟಕ ಹೊಸ ಐತಿಹಾಸಿಕ ಕಲ್ಪವನ್ನು ಪ್ರವೇಶಿಸಿತು. ರಾಷ್ಟ್ರಕೂಟರು ಪದಚ್ಯುತರಾದಾಗ ಜೊತೆಗೇ ಉದ್ಭವಿಸಿದ ಕೆಲವು ಪರಿಣಾಮಕಾರಿಯಾದ ಬದಲಾವಣೆಗಳೆಂದರೆ, ಮೊದಲನೆಯದಾಗಿ ಮುಂದೆ ಸಹ ಕರ್ನಾಟಕ ಚಕ್ರವರ್ತಿ ಕ್ಷೇತ್ರ ಬಲವತ್ತಾಗಿಯೇ ಉಳಿದು ಅದರ ಕೇಂದ್ರ ವಲಯ ಇಡೀ ಕರ್ನಾಟಕವನ್ನು ವ್ಯಾಪಿಸಿತ್ತಾದರೂ ಅದರ ನೇರ ಪ್ರಭಾವಕ್ಕೆ ಒಳಗಾಗಿದ್ದ ವಿಸ್ತಾರ ಪ್ರದೇಶ

ಸ್ವಲ್ಪಮಟ್ಟಿಗೆ ಸಂಕುಚಿತವಾಯಿತು. ದೂರದ ರಾಷ್ಟ್ರಗಳು ಜಾರಿಹೋಗಿ ನೆರೆಹೊರೆಯ ಪ್ರಾಂತ್ಯಗಳು ಮಾತ್ರ ಉಳಿದುಕೊಂಡವು; ಎರಡನೆಯದಾಗಿ, ಸಾಮ್ರಾಜ್ಯದ ಹಲವು ಪ್ರಾಂತ್ಯಗಳು ಸಾಮಂತ ಅರಸು ಮನೆತನಗಳ ಪ್ರಭಾವ ಹೆಚ್ಚುವುದರ ಜೊತೆಗೆ, ರಾಜಕೀಯ ಕ್ಷೇತ್ರದಲ್ಲಿ ಪ್ರಭಾವಶಾಲೀ ದಂಡನಾಯಕರುಗಳ ಹಸ್ತಕ್ಷೇಪ ಹೆಚ್ಚಿತು; ಮೂರನೆಯದಾಗಿ ಜನಸಾಮಾನ್ಯರ ದೃಷ್ಟಿಯಲ್ಲಿ ಸಾಮ್ರಾಜ್ಯದ ಸಮಗ್ರ ಸ್ವರೂಪ ಸ್ವಲ್ಪಮಟ್ಟಿಗೆ ಮಾಸಿಹೋಗಿ, ಅವರವರ ನಾಡು, ಕಂಪಣ, ಗ್ರಾಮಗಳ ಮೇಲೆ ಸ್ಥಳೀಯ ಪ್ರೇಮ ಸ್ಪಷ್ಟವಾಗಿ ಕಾಣಿಸಿಕೊಳ್ಳಲಾರಂಭಿಸಿತು; ನಾಲ್ಕನೆಯದಾಗಿ ಆರ್ಥಿಕ ಕ್ಷೇತ್ರದಲ್ಲಿ ನಾಣ್ಯಗಳ ಚಲಾವಣೆ ಹೆಚ್ಚಿತಾಗಿ, ಒಳನಾಡು ಹೊರನಾಡು ವಾಣಿಜ್ಯ ಮತ್ತಷ್ಟು ಹೆಚ್ಚಾಗಿ ದೇಶ ಸಂಪದ್ಭರಿತವಾಯಿತು; ಐದನೆಯದಾಗಿ ಧಾರ್ಮಿಕ ಕ್ಷೇತ್ರದಲ್ಲಿ ದೇವಾಲಯಗಳ ನಿರ್ಮಾಣವೂ ಅವುಗಳಿಗೆ ಧನಕನಕಾದಿಗಳನ್ನು ದಾನ ಕೊಡುವುದೂ ಅದೃಷ್ಟಪೂರ್ವಪ್ರಮಾಣದಲ್ಲಿ ಹೆಚ್ಚಿತು; ಆರನೆಯದಾಗಿ, ಸ್ವದೇಶೀ ಮತ್ತು ವಿದೇಶೀ ವಾಣಿಜ್ಯ ಬೆಳೆದಂತೆ ಧನಿಕರಾಗುತ್ತ ಬಂದ ವರ್ತಕರು ಸಾಂಘಿಕವಾಗಿ ಮತ್ತು ವೈಯಕ್ತಿಕವಾಗಿ ಕನ್ನಡಿಗರ ಆರ್ಥಿಕ ಸಾಮಾಜಿಕ ಧಾರ್ಮಿಕ ಜೀವನದ ಮೇಲೆ ವಿಶೇಷ ಪ್ರಭಾವ ಬೀರಿದರು; ಏಳನೆಯದಾಗಿ ಚಾಳುಕ್ಯ ಸಾಮ್ರಾಟರು ವಾಂಶಿಕವಾಗಿ ವೈಷ್ಣವರಿದ್ದರೂ ಹಲವು ಪಂಥಗಳ ಆಚಾರ್ಯರ ಪರಿಶ್ರಮಗಳಿಂದಾಗಿ ಶೈವಧರ್ಮ ವ್ಯಾಪಕವಾಗಿ ಬೃಹದಾಕಾರಕ್ಕೆ ಬೆಳೆಯಿತು; ಎಂಟನೆಯದಾಗಿ, ಭಾಷಾ ಕ್ಷೇತ್ರದಲ್ಲಿ ಸಂಸ್ಕೃತದ ಪ್ರಭಾವ ಕಡಿಮೆಯಾಗಿ ಕನ್ನಡ ಪ್ರಾಮುಖ್ಯತೆಯನ್ನು ಪಡೆಯಿತು. ಹಾಗೂ ಕನ್ನಡ ಲಿಪಿ ಹಂತಹಂತದ ಬೆಳೆವಣಿಗೆಯ ಅನಂತರ ನಿರ್ದಿಷ್ಟ ರೂಪು ತಾಳಿತು; ಒಂಬತ್ತನೆಯದಾಗಿ, ವಾಸ್ತುಶಿಲ್ಪಕ್ಷೇತ್ರದಲ್ಲಿ ಹಿಂದಿನ ಪ್ರತಿಭೆಯ ಮತ್ತು ಹೊಸ ರೀತಿಗಳ ಪರಂಪರೆ ನೀರಸಗೊಂಡು ಗುಣಕ್ಕಿಂತಲೂ ಸಂಖ್ಯೆಗೇ ಹೆಚ್ಚಿನ ಗಮನ ದೊರೆಯಿತು.

ಚಾಳುಕ್ಯ ಯುಗದಲ್ಲಿ ಕರ್ನಾಟಕ ಸಾಮ್ರಾಜ್ಯ ನೇರ ಪ್ರಭಾವ ಬೀರಿದ ಹೊರವಲಯದ ವ್ಯಾಪ್ತಿ ಕಡಿಮೆಯಾದುದಕ್ಕೆ ಅಂದಿನ ಭಾರತದಲ್ಲಿ ಉಂಟಾಗಿದ್ದ ರಾಜಕೀಯ ಕ್ಷೇತ್ರದ ಸಾಂದರ್ಭಿಕ ಬದಲಾವಣೆಗಳು ಕಾರಣವೇ ಹೊರತು ಕರ್ನಾಟಕದ ಸಾಮ್ರಾಟರ ದೌರ್ಬಲ್ಯವಲ್ಲ. ಹಿಂದಿನ ಯುಗಗಳ ಬೃಹತ್ ಸಾಮ್ರಾಜ್ಯಗಳು ಕಣ್ಮರೆಯಾಗಿ ಬದಲಿಗೆ ಪರಮಾರ, ಪಾಲ, ಗೂರ್ಜರ, ಕಾಕತೀಯ, ಚೋಳ, ಪಾಂಡ್ಯ ಇತ್ಯಾದಿ ಹಲವು ಸ್ವತಂತ್ರ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಈ ಅರಸುಗಳು ಮೇಲಿಂದ ಮೇಲೆ ಒಬ್ಬರ ಮೇಲೊಬ್ಬರು ದಂಡೆತ್ತಿ ಹೋಗಿ ಪರಸ್ಪರ ಬಲಹೀನರಾಗುತ್ತ ಬಂದರಾಗಿ ಅವರಲ್ಲಿ ಯಾರೊಬ್ಬರು ಚಿರಕಾಲ ಬದುಕಬಲ್ಲ ಸಾಮ್ರಾಜ್ಯಶಾಹೀ ಪ್ರಭುತ್ವವನ್ನು ಸ್ಥಾಪಿಸಲಾರದೇ ಹೋದರು, ಈ ಅರಸುಗಳು ಹಲವೆಡೆಗಳಿಂದ ಯಾವಾಗಲೂ ಕರ್ನಾಟಕದ ಮೇಲೂ ಒತ್ತಡ ಹಾಕುತ್ತಿದ್ದರೂ ಚಾಳುಕ್ಯರು ಸಾಮ್ರಾಜ್ಯದ ನಿರ್ದಿಷ್ಟ ಪರಂಪರಾಗತ ಸರಹದ್ದುಗಳನ್ನಾದರೂ ಕಾಪಾಡಿಕೊಂಡು ಬಂದಿದ್ದರೆಂಬುದಷ್ಟೇ ಸಾಧನೆ.

ಇಮ್ಮಡಿ ತೈಲನ ರಾಜ್ಯಾಕ್ರಮಣದೊಂದಿಗೆ ಚಾಳುಕ್ಯರು ಪ್ರಾಬಲ್ಯಕ್ಕೆ ಬರುತ್ತಿದ್ದಂತೆಯೆ ಕರ್ನಾಟಕದ ಅನೇಕ ಸ್ಥಳೀಯ ಅರಸುಮನೆತನಗಳೂ ಸಾಕಷ್ಟು ಪ್ರಬಲವಾದವು. ಇದರಿಂದಾಗಿ ಆಯಾ ಪ್ರಾಂತ್ಯದ ಮಟ್ಟಿಗೆ ಅಲ್ಲಿಯ ಮಹಾಮಂಡಲೇಶ್ವರರೇ ಸ್ವತಂತ್ರ ದೊರೆಗಳಾಗಿ ಮೆರೆಯತೊಡಗಿ, ಸಾಮ್ರಾಟರು ದೂರದ ವ್ಯಕ್ತಿಗಳಾದರು. ಈ ಮಹಾಮಂಡಲೇಶ್ವರರ ಕಿರುಕುಳಗಳಿಂದ ಪಾರಾಗುವ ಸಲುವಾಗಿ ಸಾಮ್ರಾಟರು ಸೇನೆಯ ದಂಡನಾಯಕರುಗಳಿಗೆ ವಿಶೇಷ ಸವಲತ್ತುಗಳನ್ನಿತ್ತು ಅವರ ಸ್ವಾಮಿನಿಷ್ಠೆಯನ್ನು ಸಂಪಾದಿಸಿಕೊಳ್ಳಬೇಕಿತ್ತು. ಅಂಥ ಪ್ರಭಾವಶಾಲೀ ದಂಡನಾಯಕರಲ್ಲಿ ಅನೇಕರು ಬ್ರಾಹ್ಮಣರಿದ್ದರೆಂಬುದು ಅಂದಿನ ಶಾಸನಗಳಿಂದ ತಿಳಿದುಬರುತ್ತದೆ. ಈ ದಂಡನಾಯಕರ, ಮಹಾಮಂಡಲೇಶ್ವರರ ಅಧಿಕಾರವ್ಯಾಪ್ತಿ ಹೆಚ್ಚಿದಂತೆ ಕೇಂದ್ರಪ್ರಭುತ್ವದ ಸಾಮ್ರಾಟನ ಪರಮಾಧಿಕಾರ ಕ್ರಮೇಣ ಕ್ಷೀಣಿಸಿತು. 6ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಯ (1127) ತನಕವೂ ತಮ್ಮ ಪರಮಾಧಿಕಾರವನ್ನು ಚಳುಕ್ಯ ಸಾಮ್ರಾಟರು ಪೂರ್ಣವಾಗಿ ಉಳಿಸಿಕೊಂಡು ಬಂದಿದ್ದರು. ಅವನ ಅನಂತರ ರಾಜ್ಯವಾಳಿದ ಚಾಳುಕ್ಯರ ಕಾಲದಲ್ಲಿ ಸಾಮಂತ ದೊರೆಗಳು ಮತ್ತು ದಂಡನಾಯಕರದ್ದೇ ಮೇಲುಗೈ ಆಯಿತು. ಅಂಥ ದುರವಸ್ಥೆಯಲ್ಲಿ ಕರ್ನಾಟಕ ಸಾಮ್ರಾಜ್ಯದ ಸಿಂಹಾಸನವನ್ನು ಅಲುಗಾಡಿಸಬಹುದಷ್ಟೇ ಅಲ್ಲದೆ, ಕರ್ನಾಟಕ ಚಕ್ರವರ್ತಿ ಕ್ಷೇತ್ರದ ಪರಂಪರಾಗತ ನಿರ್ದಿಷ್ಟ ಸ್ವರೂಪವನ್ನೂ ಚದುರಿಸಬಹುದು ಎಂಬುದನ್ನು ನಿರೂಪಿಸಿದ ಮೊದಲ ಮಹಾಮಂಡಲೇಶ್ವರ ಕಳಚುರಿ ಮನೆತನದ ಬಿಜ್ಜಳ (1130-67). ಸಾಮ್ರಾಜ್ಯದ ಸಿಂಹಾಸನವನ್ನು ಅಪಹರಿಸುವಲ್ಲಿ ಅವನಿಗಿದ್ದ ಸಾಮರ್ಥ್ಯ ಅದನ್ನು ಚಿರಕಾಲ ಉಳಿಸಿಕೊಳ್ಳುವಲ್ಲಿ ಅವನ ಉತ್ತರಾಧಿಕಾರಿಗಳಿಗೆ ಇರಲಿಲ್ಲವಾಗಿ, ಸುಮಾರು ಎರಡು ದಶಕಗಳಷ್ಟೇ ಅಲ್ಪಕಾಲ ಸಾಮ್ರಾಟರಾಗಿ ಯದ್ವಾತದ್ವಾ ರಾಜ್ಯವಾಳಿದ ಕಳಚುರಿಗಳು ಕೊನೆಗೂ ಸಿಂಹಾಸನವನ್ನು ಚಾಳುಕ್ಯರಿಗೆ ಬಿಟ್ಟುಕೊಡುವಂತಾಯಿತು.

ಬಸವಣ್ಣನವರ ವೀರಶೈವ ಧಾರ್ಮಿಕ ಕ್ರಾಂತಿ ಈ ಕಾಲದ ಒಂದು ಗಮನಾರ್ಹ ಘಟನೆ. ಅವರ ಅನುಯಾಯಿಗಳು ಶಿವಭಕ್ತಿಯನ್ನು ವೀರನಿಷ್ಠೆಯಿಂದ ಪ್ರತಿಪಾದಿಸಿದರೂ ಆಳರಸರು ಪರಧರ್ಮಸಹಿಷ್ಣುತೆಯ ಪರಂಪರೆಯನ್ನು ಉಳಿಸಿಕೊಂಡು ಬರುವ ಪ್ರಯತ್ನದಲ್ಲಿ ತೊಡಗಿದ್ದರು. ಚಾಳುಕ್ಯ-ಕಳಚುರಿ ಯುಗದ ಕರ್ನಾಟಕದ ಅರಸರುಗಳೂ ಅನೇಕ ತುಂಡರಸರೂ ಅಧಿಕಾರಿವರ್ಗದವರೂ ಸಂಘಸಂಸ್ಥೆಗಳಿಗೂ ಎಷ್ಟರಮಟ್ಟಿಗೆ ಸರ್ವಧರ್ಮಪೋಷಕರಿದ್ದರೆಂದರೆ, ಅವರ ನಿಜಧರ್ಮ ಯಾವುದಿತ್ತೆಂದು ಖಚಿತವಾಗಿ ಹೇಳಬರುವುದಿಲ್ಲ. ಉದಾಹರಣೆಗೆ ಪೊಂಬುಚ್ಚ ಪ್ರದೇಶದ ಸಾಂತರ ಅರಸುಗಳ ವಂಶಿಕ ಪ್ರಶಸ್ತಿಯನ್ನೋದಿದಾಗ ಅವರು ಜೈನರಿದ್ದರೆಂದು ಸ್ಪಷ್ಟವಾಗಿಯೇ ತಿಳಿದುಬರುತ್ತಾದರೂ ಅವರು ಪರಧರ್ಮಗಳ ಬೆಳವಣಿಗೆಗೂ ಸಾಕಷ್ಟು ಪ್ರೋತ್ಸಾಹ ನೀಡಿದವರು.ಬಳ್ಳಾರಿ ಜಿಲ್ಲೆ ಬಾಗಳಿಯ 1115ರ ಶಾಸನವೊಂದರಲ್ಲಿ ಶಿವ ದೇವಾಲಯಕ್ಕೂ ಜೈನಬಸದಿಗೂ ನೀಡಲಾದ ದಾನದ ವಿವರಗಳನ್ನು ಒಟ್ಟಿಗೆ ಕೊಡಲಾಗಿದೆ. ಈ ಯುಗದ ಒಂದು ವೈಶಿಷ್ಟ್ಯವೆಂದರೆ ಬೌದ್ಧಧರ್ಮ ಕರ್ನಾಟಕದಲ್ಲಿ ಸ್ವಲ್ಪಮಟ್ಟಿಗೆ ಚೇತರಿಸಿಕೊಂಡದ್ದು. ಧಾರವಾಡ ಜಿಲ್ಲೆಯ ಡಂಬಳದ ಒಂದು ಶಾಸನದಲ್ಲಿ ಜೈನಮುನೀಂದ್ರರ ಹಾಗೂ ಬೌದ್ಧ ದೇವತೆ ತಾರೆಯ ಸ್ತೋತ್ರಗಳಿದ್ದು, ಅದು ಶೈವ ಧರ್ಮಾವಲಂಬಿಗಳಾದ ವೀರಬಣಂಜು ಸಂಘದವರು ತಾರಾ ಮತ್ತು ಬುದ್ಧನಿಗೆ ನೀಡಿದ ದಾನದ ವಿವರಗಳನ್ನೊಳಗೊಂಡಿದೆ.

ಕರ್ನಾಟಕದಲ್ಲಿ ಚಾಳುಕ್ಯ - ಕಳಚುರಿ ಕಾಲದಲ್ಲಿ, ಎಲ್ಲ ಧರ್ಮಗಳೂ ಅದರಲ್ಲೂ ಮುಖ್ಯವಾಗಿ ಜೈನಧರ್ಮ ವಿಪುಲವಾಗಿ ಹರಡಿ, ಅಳಿಯದೆ ಉಳಿದು ಬೆಳೆಯುವಲ್ಲಿ ಸ್ತ್ರೀಯರು ವಹಿಸಿದ್ದ ಪಾತ್ರ ಮಹತ್ವದ್ದು. ಈ ಕಾಲದಲ್ಲಿ ಗಂಡಹೆಂಡಿರು ಒಂದೇ ಧರ್ಮದವರಿರಬೇಕೆಂಬ ನಿಯಮವೂ ಇದ್ದಂತೆ ಕಂಡುಬರುವುದಿಲ್ಲ. ಉದಾಹರಣೆಗೆ ಹಾಸನ ಜಿಲ್ಲೆಯ ಹಬ್ಬಲಿನ ಒಂದು ಶಾಸನದ (12ನೆಯ ಶತಮಾನ) ಪ್ರಕಾರ ಶಿವಪದಸುತಗಾತ್ರನಾದ ಜವನೆಯ ಗೌಡನ ಹೆಂಡತಿ ಪರಮಜಿನಭಕ್ತೆಯಾಗಿದ್ದಳು. ಇದು ಧರ್ಮ ಸಮದರ್ಶಿತ್ವಕ್ಕೆ ಆದರ್ಶ.

ಇಲ್ಲಿ ಕರ್ನಾಟಕದ ಪ್ರಾದೇಶಿಕ ಆಡಳಿತ ಕ್ಷೇತ್ರದಲ್ಲಿ ರಾಷ್ಟ್ರಕೂಟ ಯುಗದಲ್ಲಿ ಪ್ರಾರಂಭವಾಗಿ ಚಾಳುಕ್ಯ-ಕಳಚುರಿ ಯುಗದಲ್ಲಿ ವ್ಯಾಪಕವಾಗಿ ಜಾರಿಗೆ ಬಂದ ಒಂದು ಪದ್ಧತಿ ಕರ್ನಾಟಕದ ಆಡಳಿತ ಪ್ರಾಂತ್ಯಗಳನ್ನು ಉಲ್ಲೇಖಿಸುವಾಗ ಅವುಗಳ ಹೆಸರುಗಳ ಹಿಂದೆ ನಿರ್ದಿಷ್ಟ ಪ್ರಮಾಣದ ಸಂಖ್ಯಾ ಪ್ರತ್ಯಯಗಳನ್ನು ಹಚ್ಚಿರುವುದು- ಉದಾಹರಣೆಗೆ ಕವಡಿ ದ್ವೀಪ- 1,25,000, ರಟ್ಟಪಾಡಿ-7,50,000, ಗಂಗವಾಡಿ-96,000, ಬನವಾಸಿ-12,000, ಪುರಿಗೆರೆ-300, ತಂಬೂರು-12 ಇತ್ಯಾದಿ. ಈ ಪದ್ಧತಿ ಹೊರನಾಡುಗಳಲ್ಲೂ ಆಚರಣೆಯಲ್ಲಿತ್ತಾದರೂ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಯೋಗದಲ್ಲಿತ್ತು.

ಕರ್ನಾಟಕದ ಏಕಾಧಿಪತ್ಯ ಸಾಮ್ರಾಜ್ಯ ತನ್ನ ಅವರೋಹಣೆಯ ಮೊದಲ ಹಂತವಾಗಿ 13ನೆಯ ಶತಮಾನದ ಆರಂಭ ಕಾಲದಲ್ಲಿ ಬಹುಶಃ ಕಾಲಾತ್ಖಂಡಿತವಾಗಿ ಎರಡಾಗಿ ಹರಿದು ಸ್ಪಂದಿಸಲಾರಂಭಿಸಿತು. ಯಾದವ ಕುಲದವರೇ ಆದ ಸೇವುಣರೂ ಹೊಯ್ಸಳರೂ ಅನುಕ್ರಮವಾಗಿ ಉತ್ತರ ಮತ್ತು ದಕ್ಷಿಣ ಕರ್ನಾಟಕ ಪ್ರಾಂತ್ಯಗಳನ್ನು ತಂತಮ್ಮ ಹತೋಟಿಗೆ ತೆಗೆದುಕೊಂಡು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಪರಿಶ್ರಮಕ್ಕಿಳಿದರು. 11ನೆಯ ಶತಮಾನದ ಆದಿಭಾಗಲ್ಲಿ ಚೋಳರು ದಕ್ಷಿಣ ಕರ್ನಾಟಕದ ಹಲವು ಭಾಗಗಳ ಮೇಲೆ ಅಧಿಕಾರ ವಿಸ್ತರಿಸಿದ ಕಾಲದಲ್ಲೇ ಈ ಒಡಕಿನ ಮೂಲ ಪ್ರಾರಂಭವಾಯಿತು. ತದಾರಭ್ಯ ಚೋಳರು ಕರ್ನಾಟಕದ ಭಾಗದ ಮೇಲೆ ಅಧಿಕಾರಸ್ಥರಿದ್ದರೂ ಚಾಳುಕ್ಯರು ಅವರನ್ನು ಓಡಿಸಲು ಸಾಕಷ್ಟು ಶ್ರಮ ವಹಿಸಿದಿದ್ದುದು ಈ ಭಾಗದ ಕನ್ನಡ ಅರಸು ಕುಲಗಳಲ್ಲಿ ಅಸಮಾಧಾನ ತಂದಿರಬೇಕು. ಚೋಳೋಚ್ಚಾಟನೆಯ ಗುರಿಯನ್ನು ಸಾಧಿಸುವಲ್ಲಿ ಶ್ರಮಿಸಿದ ಹೊಯ್ಸಳರು ತಮ್ಮ ಕಾರ್ಯಕ್ರಮದಲ್ಲಿ

ಸಾಮ್ರಾಟ ಚಾಳುಕ್ಯರನ್ನು ಧಿಕ್ಕರಿಸಿ ನಿಲ್ಲುವ ಮಾರ್ಗವನ್ನು ಅನುಸರಿಸಬೇಕಾಯಿತು. ವಿಷ್ಣುವರ್ಧನ ಚೋಳರನ್ನು ಓಡಿಸಿದ ಮೇಲೆ (1116) ಅವನ ವಂಶೀಯರು ದಕ್ಷಿಣ ಕರ್ನಾಟಕದ ಬಹುಭಾಗದ ಮೇಲೆ ಅಂಶತಃ ಚಾಳುಕ್ಯ ಸಾರ್ವಭೌಮತ್ವವನ್ನು ಒಪ್ಪಿದರೂ ಸ್ವತಂತ್ರರಾಗಿಯೇ ಆಳತೊಡಗಿದ್ದರು. ಅತ್ತ ಚಾಳುಕ್ಯ ರಾಜ್ಯ ಕಳಚುರಿಗಳಿಂದ ಹಾಳಾಗಿ ಮತ್ತೆ ತನ್ನ ಹಿಂದಿನ ಮಟ್ಟವನ್ನು ಸಾಧಿಸಿಕೊಳ್ಳಲಾಗದಿದ್ದಾಗ ಹೊಯ್ಸಳರಂತೆ ಸೇವುಣರೂ ಸ್ವತಂತ್ರ ರಾಜ್ಯಸ್ಥಾಪನೆ ಮಾಡಿದರು. ಮುಂದೆ ಹೊಯ್ಸಳರು ಹಾಗೂ ಸೇವುಣರು ಸಮಬಲದವರೇ ಆಗಿದ್ದ ಕಾರಣ ಆದಷ್ಟು ಮಟ್ಟಿಗೆ ಪರಸ್ಪರ ಪರಾಙ್ಮುಖರಾಗಿಯೇ ಉಳಿದು, ಬೇರೆಡೆಗಳಿಗೆ ತಮ್ಮ ಗಮನ ಹರಿಸಿದ್ದರಾಗಿ, ಸೇವುಣರು ಮಹಾರಾಷ್ಟ್ರ ಪ್ರಾಂತ್ಯದ ಮೇಲೂ ಹೊಯ್ಸಳರು ತಮಿಳುನಾಡಿನ ಮೇಲೂ ವಿಶೇಷ ಪ್ರಭಾವ ಬೀರುವಂತಾಯಿತು. ಸೇವುಣರು ಮಹಾರಾಷ್ಟ್ರದ ದೇವಗಿರಿಯನ್ನೇ ತಮ್ಮ ರಾಜಧಾನಿಯಾಗಿರಿಸಿಕೊಂಡರು. ದ್ವಾರಸಮುದ್ರದಿಂದ ಆಳಿದ ಹೊಯ್ಸಳರು ತಮ್ಮ ಆಳ್ವಿಕೆಯ ಉತ್ತರಾರ್ಧದಲ್ಲಿ ತಮಿಳುನಾಡಿನ ಹಲವು ಭಾಗಗಳನ್ನು ಗೆದ್ದುಕೊಂಡು, ತಿರುಚಿರಾಪಳ್ಳಿಯ ಬಳಿಯ ಕಣ್ಣಾನೂರನ್ನು ತಮ್ಮ ಮುಗದೊಂದು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರಷ್ಟೇ ಅಲ್ಲದೆ, ಅಂದಿನ ತಮಿಳುನಾಡಿನ ರಾಜಕೀಯ ಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಪಾತ್ರ ವಹಿಸಿದ್ದರು.

ಹೀಗೆ ಎರಡಾದ ಕರ್ನಾಟಕ ತನ್ನ ರಾಜಕೀಯ ಕ್ಷೇತ್ರದಲ್ಲಷ್ಟೇ ಅಲ್ಲದೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲೂ ಸ್ವತಂತ್ರವಾಗಿ ಭಿನ್ನವಾಗಿ ಬೆಳೆಯತೊಡಗಿದ್ದು ಈ ಹೊಯ್ಸಳ- ಸೇವುಣರ ಕಾಲದಲ್ಲಿ. ಈ ಎರಡು ಯಾದವ ವಂಶಗಳು ಪರಸ್ಪರ ಕಲಹಗಳಲ್ಲಿ ನಿರತವಾಗಿದ್ದುದರಿಂದ, ಕರ್ನಾಟಕದ ಎಲ್ಲೆಡೆಯಲ್ಲೂ ಇದುವರೆಗೆ ಕಂಡುಬರುತ್ತಿದ್ದ ಏಕರೀತಿಯ ಸಾಂಸ್ಕೃತಿಕ ಬೆಳವಣಿಗೆಯ ಪ್ರವೃತ್ತಿ ಕುಂಠಿತವಾಯಿತು. ಉತ್ತರ ಕರ್ನಾಟಕದಲ್ಲಿ ವೀರಶೈವ ಕ್ರಾಂತಿ ಬಿರುಸಾಗಿ ಮುಂದುವರಿಯಿತು. ದಕ್ಷಿಣ ಕರ್ನಾಟಕದಲ್ಲಿ, ಆಗತಾನೆ ಪ್ರಬಲವಾಗುತ್ತಿದ್ದ ಶ್ರೀವೈಷ್ಣವಪಂಥ ಹೊಯ್ಸಳರ ಆಶ್ರಯಪಡೆಯಿತು. ಪ್ರಾಯಶಃ ಈ ಪ್ರವೃತ್ತಿಗಳಿಂದ ಜೈನಧರ್ಮ ಕ್ಷೀಣಿಸಲಾರಂಭಿಸಿತು. ಉತ್ತರ ಕರ್ನಾಟಕ ಸೇವುಣರ ಆಳ್ವಿಕೆಯಲ್ಲಿದ್ದರೂ ಅವರ ರಾಜ್ಯಕೇಂದ್ರ ದೂರದ ದೇವಗಿರಿಯಲ್ಲಿದ್ದಿತ್ತಾಗಿ ರಾಜಕೀಯ ಕ್ಷೇತ್ರ ಹೊರತು ಉಳಿದ ಈ ಭಾಗದ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಅವರ ಗಮನ ಕಡಿಮೆಯಾಗಿ ಈ ಭಾಗದಲ್ಲಿ ಸಾಂಸ್ಕೃತಿಕ ಹಿಂಜರಿತವುಂಟಾಯಿತು. ಕಲೆಗೆ, ಸಂಸ್ಕೃತಿಯ ಅಭಿವೃದ್ಧಿಗೆ ರಾಜರ ಅಥವಾ ಶ್ರೀಮಂತರ ಪ್ರೋತ್ಸಾಹ ಕಡಿಮೆಹೋಯಿತು. ಜನಸಾಮಾನ್ಯರ ಸ್ವಶಕ್ತಿಯಿಂದ ಹುಟ್ಟಿದ ಕೆಲವೇ ವಾಸ್ತುಕೃತಿಗಳು ಹಾಗೂ ಸಾಹಿತ್ಯ ಈ ಸ್ಥಿತಿಗೆ ಸೂಚಕ. ಈ ಕಾಲದ ಧಾರ್ಮಿಕ ಚಟುವಟಿಕೆಗಳು ಈ ಸ್ಥಿತಿಗೆ ಹಾಗೂ ಸ್ವಲ್ಪ ಉತ್ತಮ ಸಾಧನೆಗಳಿಗೆ ಕಾರಣವಾದವು. ಆದರೆ ದಕ್ಷಿಣ ಕರ್ನಾಟಕದಲ್ಲಿ ಆಳಿದ ಹೊಯ್ಸಳರು ತಮ್ಮ ಹಿಂದಿನ ಚಾಳುಕ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದು ತಮ್ಮ ಆಳ್ವಿಕೆಯ ಅವಸಾನ ಕಾಲದವರೆಗೂ ದೇಶದ ಆರ್ಥಿಕ ಸಾಂಸ್ಕೃತಿಕ ಅಭಿವೃದ್ಧಿಯೆಡೆಗೆ ಶ್ರಮಿಸಿದರು. ಕೆರೆಕಟ್ಟೆಗಳ, ಹೊಸಗ್ರಾಮಗಳ, ಹಲವು ದೇವಾಲಯಗಳ ನಿರ್ಮಾಣ ಮುಂತಾದ್ದರಲ್ಲಿ ರಾಜರು ಹಾಗೂ ಅಸಂಖ್ಯಾತ ಸಾಮಂತರೂ ಶ್ರೀಮಂತರೂ ನಿರತರಾಗಿದ್ದು, ಬೇಲೂರು ಹಳೇಬೀಡುಗಳಲ್ಲಿರುವಂಥ ಮಹತ್ ವಾಸ್ತುಕೃತಿಗಳ ನಿರ್ಮಾಣಕ್ಕೆ ಕಾರಣರಾದರು. ಜನ್ನ, ಹರಿಹರ, ರಾಘವಾಂಕರಂಥ ಕವಿಗಳು ಕೃತಿರಚನೆ ಮಾಡುವ ವಾತಾವರಣ ಇಲ್ಲಿತ್ತು. ಈ ಸ್ಥಿತಿ ಸು.13ನೆಯ ಶತಮಾನದ ಅಂತ್ಯದವರೆಗೂ ಮುಂದುವರೆಯಿತು.

**ಸಂಘರ್ಷಣ ಯುಗ** : 14ನೆಯ ಶತಮಾನದಿಂದ ಮುಂದೆ ಕರ್ನಾಟಕದ ರಾಜಕೀಯದಲ್ಲಿ ಹೊಸ ಧಾಟಿ ಪ್ರಾರಂಭವಾಯಿತು. ಇದುವರೆಗಿನ ರಾಜಕೀಯ ಚಟುವಟಿಕೆಗಳಲ್ಲಿ ದೇಶೀ ಶಕ್ತಿಗಳಷ್ಟೇ ಪಾತ್ರ ವಹಿಸುತ್ತಿದ್ದರೆ, ಈ ಕಾಲದಲ್ಲಿ ಉತ್ತರ ಭಾರತದಿಂದ ಬಂದ ಇಸ್ಲಾಮೀ ಅರಸರು ಇಲ್ಲಿನ ಆಗುಹೋಗುಗಳ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರಬಲ್ಲಂತಾದದ್ದು ಇದಕ್ಕೆ ಮುಖ್ಯ ಕಾರಣ. ಆ ಹೊತ್ತಿಗೆ ಕರ್ನಾಟಕದಲ್ಲಷ್ಟೇ ಅಲ್ಲದೇ ಇಡೀ ದಕ್ಷಿಣ ಭಾರತದಲ್ಲಿ ಹಿಂದಿದ್ದ ರಾಜಕೀಯ ದೂರದೃಷ್ಟಿ ಹಾಗೂ ಸಾಧನೆಗಳ ಯುಗ ಕಳೆದು ಸೇವುಣರೂ ಹೊಯ್ಸಳರೂ ಒಳಗೊಂಡಂತೆ ಎಲ್ಲ ರಾಜಮನೆತನಗಳು ತಮ್ಮೊಳಗೇ ವೃಥಾ ಕಾದಾಟದಲ್ಲಿ ನಿರತವಾಗಿದ್ದವು. ಉತ್ತರಾಪಥದಲ್ಲೆಲ್ಲ ವಿಜಯ ಪತಾಕೆಗಳನ್ನು ಹಾರಿಸಿ, ದಕ್ಷಿಣದತ್ತ ಗಮನ ಹರಿಸಿದ್ದ ಮುಸಲ್ಮಾನರ ಮಹಾನ್ ಶಕ್ತಿಯನ್ನು ಗುರುತಿಸಲಾಗದಷ್ಟು ಅಂತಃ ಕಲಹಗಳಲ್ಲಿ ಅಂಧರಾಗಿದ್ದರು. ಮಲ್ಲಿಕ್ ಕಾಫೂರನ ದಂಡಯಾತ್ರೆಯ ಮೊದಲ ಹೊಡೆತದಿಂದಲೂ ಇವರು ಎಚ್ಚರಗೊಳ್ಳಲಿಲ್ಲ. 14ನೆಯ ಶತಮಾನದ ಪೂರ್ವಾರ್ಧದಲ್ಲಿ ಮುಸಲ್ಮಾನ ಆಕ್ರಮಣದ ಬಿರುಗಾಳಿ ಬೀಸಿದಾಗ ಅದರೆದುರು ನಿಲ್ಲಲಾರದೆ ಹೋದರು. ಅಲ್ಪಸ್ವಲ್ಪ ಪ್ರತಿಭಟನೆಯ ಪ್ರಯತ್ನಗಳು ನಡೆದರೂ 1312ರಲ್ಲಿ ಸೇವುಣ ರಾಜ್ಯವೂ 1342ರಲ್ಲಿ ಹೊಯ್ಸಳ ರಾಜ್ಯವೂ ನಂದಿಹೋದವು. ಶೀಘ್ರದಲ್ಲಿ ಬಹಮನೀ ಸಾಮ್ರಾಜ್ಯ ಸ್ಥಾಪನೆಯಾಗಿ (1347) ಉತ್ತರ ಕರ್ನಾಟಕದ ಬಹುಭಾಗ ಇದರ ಅಧೀನಕ್ಕೆ ಬಂದಿತು. ಹೊಸಧರ್ಮ, ಸಂಸ್ಕೃತಿಯ ಗಾಳಿ ಕರ್ನಾಟಕದಲ್ಲಿ ಪ್ರಬಲವಾಗಿ ಬೀಸಲಾರಂಭಿಸಿತು. ಉತ್ತರ ಕರ್ನಾಟಕದ ಜನಜೀವನದಲ್ಲಿ ಹೊಸ ಚೈತನ್ಯ ಮೂಡಲಾರಂಭಿಸಿತ್ತು.

ಇದಕ್ಕೆ ಪ್ರಬಲವಾದ ದೇಶೀ ಪ್ರತಿಕ್ರಿಯೆ ಹುಟ್ಟಿದ್ದು ದಕ್ಷಿಣ ಕರ್ನಾಟಕದಲ್ಲಿ. ಕರ್ನಾಟಕದ ಉಳಿದ ಭಾಗಗಳೂ ಸೇರಿದಂತೆ ದಕ್ಷಿಣ ಭಾರತದ ಬಹುಪಾಲನ್ನು ಹೊರಗಿನವರ ಆಕ್ರಮಣದಿಂದ ಪಾರುಮಾಡಿ, ಸ್ಥಳೀಯ ಧರ್ಮಗಳನ್ನು ಅಳಿವಿನಿಂದ ಉಳಿಸುವ ಪ್ರಯತ್ನ ಹೊಯ್ಸಳ 3ನೆಯ ಬಲ್ಲಾಳನಿಂದ ಸ್ವಲ್ಪಮಟ್ಟಿಗೆ ನಡೆದರೂ ಅದನ್ನು ಸಾಧಿಸಿದ ಕೀರ್ತಿಯ ಹೆಚ್ಚಿನಂಶ ಹರಿಹರ, ಬುಕ್ಕ ಮತ್ತು ಅವರ ಸಹೋದರರದ್ದು. ವಿದ್ಯಾರಣ್ಯರು ಈ ಮಹತ್ಸಾಧನೆಯ ಪ್ರೇರಕರು. ಇವರೆಲ್ಲರ ಶ್ರಮದಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು (1336). ಅತಿಪುರಾತನದ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸುವ ಸಲುವಾಗಿಯೇ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಲಾಯಿತು ಎಂಬುದನ್ನು ಗಮನಿಸಿದಾಗ, ಈ ಸಾಮ್ರಾಜ್ಯ ಭಾರತೀಯ ಇತಿಹಾಸದ ಪ್ರಥಮ ಮತ್ತು ಏಕೈಕ ಪ್ರಯೋಜನಾತ್ಮಕ ಸಾಮ್ರಾಜ್ಯವೆಂದು ಹೇಳಬಹುದಾಗಿದೆ. ಸಣ್ಣ ಪ್ರಮಾಣದ ಜನ್ಮಾವಸ್ಥೆಯಿಂದ ಒಂದೆರಡು ದಶಕಗಳ ಅಲ್ಪಾವಧಿಯಲ್ಲೆ ದಕ್ಷಿಣ ಭಾರತ ಹಿಂದೆಂದೂ ಕಂಡರಿಯದ ಮಹಾನ್ ಸಾಮ್ರಾಜ್ಯವಾಗಿ ಬೆಳೆಯಿತು. ವಿಜಯನಗರದ ಸ್ಥಾಪಕರಾದ ಹರಿಹರ ಬುಕ್ಕರು ಸನಾತನ ಧರ್ಮದ ಅಳಿದುಳಿದ ನೆಲೆಗಳ ಸುತ್ತ ಭದ್ರವಾದ ಕೋಟೆಯನ್ನು ಕಟ್ಟುವ ಕಾರ್ಯದಲ್ಲೇ ನಿರತರಾಗಿದ್ದ ಕಾರಣ, ಅವರು ಆಡಂಬರದ ಕಡೆಗೆ ಗಮನ ನೀಡದೆ, ಕೊನೆಯ ತನಕವೂ ಮಹಾಮಂಡಲೇಶ್ವರರೆಂದೇ ಕರೆದುಕೊಳ್ಳುತ್ತಿದ್ದರು. ಅವರ ಅನಂತರದವರು ಸಾಮ್ರಾಜ್ಯದ ಸುಭದ್ರತೆ ಶತಃಸಿದ್ಧವೆಂಬ ಅರಿವಿನಿಂದ ಪ್ರಚೋದಿತರಾಗಿ, ಸಾಮ್ರಾಜ್ಯದ ಕ್ಷೇತ್ರವ್ಯಾಪ್ತಿಯೂ ಇನ್ನಷ್ಟು ಬೆಳೆದಿದ್ದುದರಿಂದ ಕರ್ನಾಟಕ ಸಿಂಹಾಸನದ ಅಂದರೆ ವಿಜಯನಗರ ಸಾಮ್ರಾಜ್ಯದ ಮಹಾರಾಜಾಧಿರಾಜರಾಗಿ ಮೆರೆಯತೊಡಗಿದರು. ಹಿಂದೆ ಕರ್ನಾಟಕ ಸಾಮ್ರಾಜ್ಯ ನೆರೆಹೊರೆಯ ರಾಷ್ಟ್ರಗಳ ಮನ್ನಣೆ ಪಡೆದು ಒಂದು ಪರಂಪರೆಯಾಗಿ ಆರು ಶತಮಾನಗಳ ಕಾಲ ಉಳಿದಿದ್ದಂತೆ ವಿಜಯನಗರ ಸಾಮ್ರಾಜ್ಯವೂ ಒಂದು ಪರಂಪರೆಯೇ ಆಗಿಹೋಯಿತೆನ್ನಬಹುದಾಗಿದೆ. ವಿಜಯನಗರದ ರಾಜಮನೆತನದಲ್ಲೇ ಅಂತಃಕಲಹಗಳಿದ್ದರೂ ಒಂದು ಮನೆತನ ಮತ್ತೊಂದು ಮನೆತನವನ್ನು ಪದಚ್ಯುತಿಗೊಳಿಸಿ ಸಿಂಹಾಸನವನ್ನು ಆಕ್ರಮಿಸಿ ಕೊಂಡಾಗಲೂ ರಾಜ್ಯದ ಧೋರಣೆಯೇನೂ ಬದಲಾಗುತ್ತಿರಲಿಲ್ಲವಾಗಿ ಅಂಥ ಸಂದಿಗ್ಧ ಸ್ಥಿತಿಯಲ್ಲೂ ಲಾಭ ಪಡೆದು ಸಾಮ್ರಾಜ್ಯವನ್ನು ನಿರ್ನಾಮಗೊಳಿಸುವುದು ವೈರಿಪ್ರಭುತ್ವಗಳಿಗೆ ಸುಲಭಸಾಧ್ಯವಾಗಿರಲಿಲ್ಲ. ಹರಿಹರ, ಬುಕ್ಕ 1, ದೇವರಾಯ ಇಂಥ ದೊರೆಗಳ ಪರಿಶ್ರಮದಿಂದ ಬಲಿಷ್ಠವಾಗಲು ಸದವಕಾಶ ದೊರೆತ ಈ ಸಾಮ್ರಾಜ್ಯ ಕೃಷ್ಣದೇವರಾಯನ (1509-29) ಕಾಲದ ಹೊತ್ತಿಗೆ ಉಚ್ಛ್ರಾಯಸ್ಥಿತಿಗೇರಿತು. ತುಂಗಭದ್ರೆಯ ದಕ್ಷಿಣ ಭಾಗವೆಲ್ಲ ಇವರ ಸ್ಪಷ್ಟ ಸ್ವಾಧೀನದಲ್ಲಿದ್ದು ಉತ್ತರದ ಇಸ್ಲಾಮೀ ಅರಸರುಗಳ ಮೇಲೂ ಖಚಿತ ಮೇಲ್ಮೆ ಪಡೆಯಿತಲ್ಲದೆ, ವಿಜಯನಗರದ ಸೈನ್ಯ ಪೂರ್ವದಲ್ಲಿ ಆಂಧ್ರ ಪ್ರದೇಶದ ಕರಾವಳಿಯಿಂದ ಒರಿಸ್ಸದವರೆಗೂ ತನ್ನ ಜಯ ಸಾಧಿಸಿತು. ಬಹುಶಃ ಈ ಕಾಲದ ಸಾಧನೆಗಳಿಂದ ವಿಜಯನಗರದಲ್ಲೇ ಸಾಮ್ರಾಜ್ಯದ ಸಾಮರ್ಥ್ಯದ ಬಗ್ಗೆ ಅತಿ ನಂಬಿಕೆ ಬೆಳೆದದ್ದು ಹಾಗೂ ವಿಜಯನಗರದ ಮುಂದಿನ ಅರಸರ ರಾಜಕೀಯ ಧೋರಣೆಗೆ ಪ್ರತಿಯಾಗಿ ಇಸ್ಲಾಮೀ ಅರಸರು ಸಂಘಟಿಸಿಕೊಂಡಿದ್ದು ಇವುಗಳಿಂದಾಗಿ ರಕ್ಕಸತಂಗಡಿ ಯುದ್ಧದಲ್ಲಿ ಸಾಮ್ರಾಜ್ಯದ ಅವಸಾನವಾಯಿತು (1565).

ಉತ್ತರ ಕರ್ನಾಟಕದಲ್ಲಿ ನೆಲೆಗೊಂಡ ಬಹಮನೀ ರಾಜ್ಯ ಅಲಾಉದ್ದೀನ್, 1ನೆಯ ಮುಹಮ್ಮದ್ ಷಾ ಮುಂತಾದವರ

ಶ್ರಮಸಾಧನೆಗಳಿಂದ ಮಹಾರಾಷ್ಟ್ರ ಆಂಧ್ರಪ್ರದೇಶಗಳ ಬಹುಭಾಗಗಳನ್ನೊಳಗೊಳ್ಳುವಂತಾಯಿತು. ಉತ್ತರ ಕರ್ನಾಟಕದಲ್ಲಿ ಪಾರಸೀ, ತುರ್ಕೀ ರೀತಿಯ ಹೊಸ ಆಡಳಿತ ವ್ಯವಸ್ಥೆಗಳು ರೂಢಿಗೆ ಬಂದುವು. 15ನೆಯ ಶತಮಾನದ ಅಂತ್ಯದಲ್ಲಿ ಬಹಮನೀ ರಾಜ್ಯ ಒಡೆದರೂ ಕರ್ನಾಟಕದ ಭಾಗದಲ್ಲಿ ಬಿಜಾಪುರದಿಂದ ಆಳಿದ ಆದಿಲ್‌ಶಾಹೀಗಳು ಅದರಲ್ಲೂ ಯೂಸುಫ್, ಇಬ್ರಾಹೀಂ I ಮತ್ತು II, ಅಲಿ I, ಮಹಮ್ಮದ್ ಮೊದಲಾದ ಅರಸರು ಸಮರ್ಥವಾಗಿ ಬಹಮನೀ ಧೋರಣೆಗಳನ್ನು ಮುಂದುವರೆಸಿದರು. ರಕ್ಕಸ ತಂಗಡಿ ಯುದ್ಧದಲ್ಲಿ ಸಂಘಟಿತ ಇಸ್ಲಾಮೀ ರಾಜರು ವಿಜಯನಗರವನ್ನು ತುಳಿದರು (1565). ಇತರೆಲ್ಲರಿಗಿಂತ ಇದರಿಂದ ಲಾಭ ಗಳಿಸಿದವರು ಆದಿಲ್‌ಶಾಹೀ ಅರಸರು. ಮುಂದೆ ಮುಗಲರಿಂದ ಇವರ ರಾಜ್ಯ ನಾಶವಾಗುವುವರೆಗೂ (1686) ಉತ್ತರ ಕರ್ನಾಟಕವಷ್ಟೇ ಅಲ್ಲದೆ ದಕ್ಷಿಣ ಕರ್ನಾಟಕದ ಅನೇಕ ಪ್ರದೇಶಗಳ ಮೇಲೆ ಹಾಗೂ ಕೊಂಕಣ ಮಹಾರಾಷ್ಟ್ರಗಳ ಮೇಲೆ ತಮ್ಮ ಅಧಿಕಾರವನ್ನು ವ್ಯಾಪಿಸಿದ್ದರು.

ವಿಜಯನಗರದ ಕೇಂದ್ರ ಪ್ರಭುತ್ವ ಕರ್ನಾಟಕದಲ್ಲೇ ಇದ್ದಿತಾದರೂ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಕರ್ನಾಟಕ ತನ್ನ ಪ್ರಭಾವವನ್ನು ಇತರ ಪ್ರಾಂತ್ಯಗಳ ಮೇಲೆ ಹೆಚ್ಚಾಗಿ ಬೀರಲಾರದೇ ಹೋಗಿತ್ತಷ್ಟೇ ಅಲ್ಲದೆ ಆಂತರಿಕವಾಗಿ ತಾನೇ ಪರಿಣಾಮಕಾರಿಯಾದ ಬದಲಾವಣೆಗಳನ್ನು ಹೊಂದುವಂತಾಯಿತು. ಈ ಕಾಲದಲ್ಲಿ ಹಿಂದಿನಿಂದ ಅನೂಚಾನವಾಗಿ ಆಳುತ್ತಿದ್ದ ಪ್ರಾದೇಶಿಕ ರಾಜವಂಶಗಳು ಕಣ್ಮರೆಯಾದುವು. ಹಿಂದಿನ ಯುಗದ ಸಂಖ್ಯಾಪ್ರತ್ಯಯಗಳಿಂದ ಕೂಡಿದ ಬನವಾಸಿ- 12,000 ಮೊದಲಾದ ಪ್ರಾದೇಶಿಕ ನಾಮಗಳು ಹೆಸರಿಗೆ ಮಾತ್ರ ಉಳಿದಿದ್ದು, ಸಾಮ್ರಾಜ್ಯವನ್ನು ರಾಜ್ಯಗಳಾಗಿ ವಿಂಗಡಿಸಿ ಅವುಗಳ ಆಡಳಿತಕ್ಕೆಂದು ರಾಜ್ಯಪಾಲರುಗಳನ್ನು ನೇಮಿಸಲಾಗಿತ್ತು. ಸ್ವಲ್ಪ ಅನಂತರದಲ್ಲಿ ಹಲವು ಸ್ಥಳೀಯ ಸಂಸ್ಥಾನಗಳು ಹೊಸ ಸಾಮಂತ ತುಂಡರಸುಗಳ ನೇರ ಆಳ್ವಿಕೆಗೊಳಪಟ್ಟು ಸಾಮ್ರಾಜ್ಯದ ಬಹುಭಾಗಗಳಲ್ಲಿ ಎರಡು ಮಟ್ಟದ ಆಡಳಿತ ಪದ್ಧತಿ ಜಾರಿಯಲ್ಲಿತ್ತು. ಈ ಪ್ರಾದೇಶಿಕ ಆಡಳಿತ ಪದ್ಧತಿಯಲ್ಲಿ, ತಮ್ಮ ಪ್ರಭುತ್ವದ ಪರಮಾಧಿಕಾರದ ರಾಜಕೀಯ ಧ್ಯೇಯ ಧೋರಣೆಗಳ ಮೌಲ್ಯವನ್ನು ನಿರ್ಧರಿಸುವಲ್ಲಿ, ಸೇನೆಯನ್ನು ಕಟ್ಟುವಲ್ಲಿ, ಯುದ್ಧ ತಂತ್ರಗಳನ್ನು ಹೂಡುವಲ್ಲಿ ವಿಜಯನಗರದವರು ಬಹುಮಟ್ಟಿಗೆ ಮುಸಲ್ಮಾನರಿಂದ ಪ್ರಭಾವಿತರಾಗಿದ್ದರು. ಮುಸಲ್ಮಾನ ದೊರೆಗಳು ಸುಲ್ತಾನರಾದರೆ, ವಿಜಯನಗರದ ಸಾಮ್ರಾಟರು ಹಿಂದುರಾಯ ಸುರತ್ರಾಣರಿದ್ದರು. ಸುಲ್ತಾನರಿಗೆ ಸೇನಾಬಲವನ್ನು ಒದಗಿಸಿಕೊಡಲು ಸುಬೇದಾರರೇ ಮೊದಲಾದ ಅಧಿಕಾರೀ ಆಡಳಿತಗಾರರಿದ್ದರೆ, ವಿಜಯನಗರದವರಿಗೆ ಸೇನೆಗಳನ್ನು ಒದಗಿಸಲು ತುಂಡರಸರೂ ರಾಜ್ಯಪಾಲರುಗಳೂ ಪಾಳೆಯಗಾರರೂ ಬದ್ಧರಿದ್ದರು.

ಉತ್ತರದಲ್ಲಿ ಇಸ್ಲಾಮೀ, ದಕ್ಷಿಣದಲ್ಲಿ ವಿಜಯನಗರ ಈ ಎರಡು ಬೃಹತ್ ಶಕ್ತಿಗಳ ಸಂಘರ್ಷಣೆ ರಾಜಕೀಯ ರಂಗಕ್ಕೆಷ್ಟೇ ಸೀಮಿತವಾಗಲಿಲ್ಲ. ದಕ್ಷಿಣದಲ್ಲಿ ವಿಜಯನಗರದ ಅರಸರು ಸನಾತನ ಧರ್ಮ ಪ್ರತಿಪಾಲಕರಾಗಿ, ಸನಾತನ ಸಾಮಾಜಿಕ ವ್ಯವಸ್ಥೆಯನ್ನು ಪುನರುಜ್ಜೀವಿಸುವ ಹುರುಪನ್ನು ತೋರಿಸಿದರು. ಸಾಮ್ರಾಟರು ತಾವು ಸಕಲ ವರ್ಣಾಶ್ರಮ ಧರ್ಮಗಳನ್ನು ಪ್ರತಿಪಾಲಿಸುವವರೆಂದು ಹೇಳಿಕೊಳ್ಳುತ್ತಿದ್ದರು. ಅದರಂತೆಯ ವರ್ತಿಸುತ್ತಿದ್ದರು. ಇದರಿಂದ ಸ್ವಲ್ಪಮಟ್ಟಿಗೆ ಜೈನ, ಮುಸಲ್ಮಾನ, ಕ್ರೈಸ್ತ ಧರ್ಮಗಳೂ ಪ್ರೋತ್ಸಾಹಗಳಿಸಿದುವು. ಆದರೂ ಬಹುಸಂಖ್ಯಾತರ ಶೈವ, ವೈಷ್ಣವ ಧರ್ಮಗಳ ಮುನ್ನಡೆಯ ಬಿರುಸಿಗೆ ಸೋತ ಜೈನಧರ್ಮ 14ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಹುಟ್ಟುವ ವೇಳೆಗಾಗಲೇ ಹಲವೆಡೆಗಳಲ್ಲಿ ಬಲಗುಂದಿ, ಮಲೆನಾಡು ಹಾಗೂ ಕರಾವಳಿ ಪ್ರದೇಶಗಳ ಆಶ್ರಯ ಪಡೆಯುವಂತಾಯಿತು. ಧರ್ಮ ಪುನರುಜ್ಜೀವನ ಕಾರ್ಯದಲ್ಲಿ ದುರುಪಯೋಗಕ್ಕೆ ತುತ್ತಾದ ಹಳೆಯ ದಾನಗಳನ್ನು ಪುನಃ ನೀಡಿ ಹಳೆಯ ಅಗ್ರಹಾರಗಳನ್ನು ಪುನಃ ವ್ಯವಸ್ಥಿತಗೊಳಿಸಿದ್ದಲ್ಲದೆ ಈ ಸಂಬಂಧದಲ್ಲಿ ಹೊಸ ಹೊಸ ದಾನದತ್ತಿಗಳನ್ನು ನೀಡಲಾಯಿತು. ಶ್ರೀವೈಷ್ಣವಧರ್ಮಕ್ಕೆ ವಿಶೇಷ ಪ್ರೋತ್ಸಾಹದೊರಕಿತು. ಉತ್ತರ ಕರ್ನಾಟಕದಲ್ಲಿ ಇಸ್ಲಾಂ ಧರ್ಮ ವ್ಯವಸ್ಥಿತವಾಗಿ ಪ್ರೋತ್ಸಾಹಿತವಾಯಿತು. ಇಸ್ಲಾಮೀಯರ ಆಳ್ವಿಕೆಯಲ್ಲಿ ಅನೇಕ ದೊಡ್ಡ ಮಸೀದಿಗಳು ಗೋರಿ ಇತ್ಯಾದಿಗಳು ಸ್ಥಾಪಿತವಾದರೆ, ಅವಕ್ಕೆ ಸಮಸಮವಾಗಿ ವಿಜಯನಗರದ ರಾಜ್ಯದಲ್ಲಿ ಬೃಹತ್ ಧಾರ್ಮಿಕ ಕಟ್ಟಡಗಳು ಬೆಳೆದುವು. ದಕ್ಷಿಣದಲ್ಲಿ ವಿಜಯನಗರವಿದ್ದಂತೆ ಉತ್ತರದಲ್ಲಿ ಗುಲ್ಬರ್ಗ, ಬಿಜಾಪುರಗಳಂಥ ಮಹಾನ್ ನಗರಗಳು ಬೆಳೆದುವು. ಇಸ್ಲಾಮೀ ಅರಸರು ಪರ್ಷಿಯ, ತುರ್ಕಿ ಮುಂತಾದೆಡೆಗಳಿಂದ ವಿದ್ವಾಂಸರನ್ನು ಕರೆಸಿ ಆ ಭಾಗದಲ್ಲಿ ಪಾರಸೀ ಭಾಷೆ, ಇಸ್ಲಾಮೀ ವಿದ್ಯಾಕ್ರಮ, ಇಸ್ಲಾಮೀ ಕಲೆ ಮುಂತಾದವುಗಳು ಸ್ವಲ್ಪಮಟ್ಟಿನ ದೇಶಿ ಸೊಗಡಿನೊಡನೆ ಬೆಳೆಯುವ ಅವಕಾಶ ಮಾಡಿಕೊಟ್ಟರೆ, ವಿಜಯನಗರ ಸಾಮ್ರಾಜ್ಯದಲ್ಲಿ ಸನಾತನ ವಿದ್ಯಾಕ್ರಮ, ಕಲೆ, ಸಾಹಿತ್ಯ ಮುಂತಾದವು ಬೆಳೆದುವು. ಷಡಕ್ಷರಿ, ಕುಮಾರವ್ಯಾಸರಂಥವರು ಈ ದಿಶೆಯಲ್ಲಿ ಕೃತಿರಚನೆ ಮಾಡಿದರು. ಹೀಗೆ ಹಲವು ವಿಧಗಳಲ್ಲಿ ರಾಜಕೀಯ ಔನ್ನತ್ಯವನ್ನು ಸಾಧಿಸಿಕೊಳ್ಳುವುದರಲ್ಲಿದ್ದಂತೆ ಇತರ ರಂಗಗಳಲ್ಲೂ ಎರಡೂ ಪ್ರದೇಶಗಳಲ್ಲಿ ಒಂದು ರೀತಿಯ ಸ್ಪರ್ಧಾತ್ಮಕ ಬೆಳವಣಿಗೆ ಕಂಡುಬಂತು. ಇದರ ಜೊತೆಗೇ ಈ ರಂಗಗಳಲ್ಲಿ ಸ್ವಲ್ಪಮಟ್ಟಿನ ಕೊಡುಕೊಳ್ಳುವಿಕೆಯ ಕಾರ್ಯ ಸಹ ನಡೆಯಿತು. ಈ ಕಾಲದಲ್ಲಿ ಕಂಡುಬರುವ ಒಂದು ಅಂಶವೆಂದರೆ ಈ ಬೃಹತ್ ಸಾಧನೆಗಳು ಬಹುಮಟ್ಟಿಗೆ ರಾಜರ, ಅಧಿಕಾರಸ್ಥರ ಹೆಚ್ಚಳಕ್ಕಾಗಿ ಸಾಧಿಸಿದವೇ ಆಗಿದ್ದು ಸಾಮಾನ್ಯ ಜನ ಇದಕ್ಕಾಗಿ ತೆರ ತೆರಬೇಕಾಗಿತ್ತೆಂಬುದು. ರಾಜಕೀಯ ಶಕ್ತಿಗಳ ಪರಸ್ಪರ ಘರ್ಷಣೆ ಸ್ಪರ್ಧೆಗಳಲ್ಲಿ ದೇಶ ಆರ್ಥಿಕ ಅಭಿವೃದ್ಧಿ ಸಾಧಿಸಲಾರದೆ ಹೋಯಿತು. ಒಂದು ರೀತಿಯ ದ್ವಂದ್ವ ವ್ಯಕ್ತಿತ್ವ ನಾಡಿನ ಸಮಾಜದಲ್ಲಿ ಉದ್ಭವಿಸಿತು.

ಈ ಕಾಲದ ಐತಿಹಾಸಿಕ ಸ್ಮಾರಕಗಳನ್ನು ಶಾಸನಗಳನ್ನು ಪರಿಶೀಲಿಸಿದಾಗಲೂ ಈ ಕಾಲ ಕರ್ನಾಟಕ ಇತಿಹಾಸದ ವೈಪರೀತ್ಯಗಳ ವಿರೋಧಾಭಾಸದ ಕಾಲವೆಂದು ಪರಿಗಣಿಸಬಹುದಾಗಿದೆ. ಈ ಕಾಲದ ಐತಿಹಾಸಿಕ ಸ್ಮಾರಕಗಳು - ಅವು ಮುಸಲ್ಮಾನರದ್ದೇ ಇರಲಿ ಹಿಂದು ಜನಾಂಗದವರದ್ದೇ ಇರಲಿ - ಮಹತ್ವದ ಬೃಹತ್ವದ ಆಡಂಬರದ ರಚನೆಗಳೇನೋ ಹೌದು. ಅವರ ಕಾಲದ ಶಾಸನಗಳ ಸಂಖ್ಯೆಯೂ ಅವುಗಳಿಂದ ತಿಳಿದುಬರುವ ವಿಷಯಗಳೂ ಹೆಚ್ಚಿನವೇನೋ ಹೌದು. ಆದರೂ ಕರ್ನಾಟಕದಲ್ಲಿ ಶತಮಾನಗಳಿಂದ ಹರಿದು ಬಂದ ವೈಶದ್ಯಗಂಗೆ ಈ ಕಾಲಕ್ಕೆ ಬತ್ತಿಹೋದಂತೆ ಭಾಸವಾಗುತ್ತದೆ. ಇಂದು ತಿಳಿದುಬಂದಿರುವ ಅಂದಿನ ನಡೆನುಡಿಗಳಲ್ಲಿ ಬರಹಗಳಲ್ಲಿ ರಚನಾಕ್ರಮಗಳಲ್ಲಿ ಒಂದು ಬಗೆಯ ಅಸ್ತವ್ಯಸ್ತತೆ ಕಂಡುಬರುತ್ತದೆ. ಆ ಸಂಘರ್ಷಣ ಯುಗ ಸಾಂಸ್ಕೃತಿಕ ಕ್ಷೇತ್ರದಲ್ಲಿ ನಮ್ಮ ಇಂದಿನ ದಾರುಣ ಪರಿಸ್ಥಿತಿಯ ಉಪಕ್ರಮ ಕಾಲವಿದ್ದಿರಲೂಬಹುದು. ಈ ಕಾಲದಲ್ಲಿ ಉತ್ತರ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಜನಸಾಮಾನ್ಯ ನೆಲೆಯಿಂದ ಹುಟ್ಟಿದ ದಾಸಸಾಹಿತ್ಯದಲ್ಲಿ ಬರುವ ಭಕ್ತಿ, ಆರ್ತಭಾವನೆಗಳ ಹೆಚ್ಚಳ ಹಾಗೂ ಅಲ್ಲಿ ಕಂಡು ಬರುವ ಚಿತ್ರಣ - ಈ ಅಂಶಕ್ಕೆ ಒಳ್ಳೆಯ ಮಾಹಿತಿಯನ್ನು ಒದಗಿಸುತ್ತದೆ. (ಕೆ.ವಿ.ಆರ್.)

**ವಿಚ್ಛಿನ್ನ ಯುಗ** : ದಕ್ಷಿಣ ಭಾರತದ ಮಹಾನ್‌ಶಕ್ತಿಯಾಗಿದ್ದ ವಿಜಯನಗರದ ಪತನದೊಡನೆ ಕರ್ನಾಟಕದ ರಾಜಕೀಯ ರಂಗದಲ್ಲಿ ಅಲ್ಲೋಲ ಕಲ್ಲೋಲವಾಯಿತು. ವಿಜಯನಗರದ ಅರಸರ ಆಳ್ವಿಕೆ ಮುಂದೆ ಎರಡು ಶತಮಾನಗಳ ಕಾಲ ಮುಂದುವರೆದರೂ ಅದು ಕರ್ನಾಟಕದ ಭಾಗಕ್ಕೆ ಕೇವಲ ನಾಮಮಾತ್ರ ಪ್ರಭುತ್ವವಾಗಿತ್ತು. ದಕ್ಷಿಣ ಕರ್ನಾಟಕದ ಭಾಗ ಸಣ್ಣ ತುಂಡುಗಳಾಗಿ ಹಲವು ಪಾಳೆಯಗಾರರ ವಶಕ್ಕೆ ಬಂತು. ಇವರು ವಿಜಯನಗರದ ಸಾರ್ವಭೌಮತ್ವವನ್ನು ಒಪ್ಪಿದ್ದರೂ ಸ್ವತಂತ್ರರಾಗಿಯೇ ಆಳುತ್ತಿದ್ದರು. ಅನೂಚಾನ ಸಾರ್ವಭೌಮತ್ವವೆಂಬುದು ಮರೆಯಾಗಿ ಸ್ವಶಕ್ತಿಯಷ್ಟೇ ಈ ಪ್ರಭುಗಳ ಶಕ್ತಿಯಾಗಿ ಪರಸ್ಪರ ಸಂಘರ್ಷಣೆಯ ಸ್ಥಿತಿ ಸಾಮಾನ್ಯವಾಯಿತು. ನಡೆವಳಿಕೆಗಳಲ್ಲಿ ಒಂದೊಂದೂ ವಿಜಯನಗರದ ತುಣುಕುಗಳಂತೆ ವರ್ತಿಸಿದರೂ ಆ ಸಾಮ್ರಾಜ್ಯದ ಶಕ್ತಿಯಾಗಲೀ ಸಾಧನೆಯಾಗಲೀ ಇವುಗಳಲ್ಲಿ ಮೂಡುವ ಅವಕಾಶ ಇರಲಿಲ್ಲ. ಆದರೆ ಈ ಸಂದರ್ಭದಲ್ಲಿ ಹುಟ್ಟಿದ ಮೈಸೂರು ಒಡೆಯರ ಮತ್ತು ಕೆಳದಿ ಪ್ರಭುಗಳ ರಾಜಮನೆತನಗಳು ಸ್ವಲ್ಪಮಟ್ಟಿಗೆ ಈ ಕೊರತೆಯನ್ನು ನಿವಾರಿಸಿದ್ದುವು. ವಿಜಯನಗರದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಪ್ರವೃತ್ತಿಯನ್ನು ತೋರಿದುವು. ಮೈಸೂರು ಮನೆತನದ ರಾಜ ಒಡೆಯ, ಚಿಕ್ಕದೇವರಾಜ, ಕೆಳದಿ ಮನೆತನದ ವೆಂಕಟಪ್ಪ, ಶಿವಪ್ಪನಂಥ ಸಮರ್ಥ ಪ್ರಭುಗಳು ಈ ಸಾಧನೆಗೆ ಮುಖ್ಯ ಕಾರಣರು. ಇವರಲ್ಲಿ ಹಲವರು ಹೊಸ ವಾತಾವರಣಕ್ಕೆ ತಕ್ಕ ಆಡಳಿತ ನೀತಿಗಳನ್ನು ಅನುಸರಿಸಿದ್ದಲ್ಲದೆ, ಜನೋಪಯೋಗಿ ಕಾರ್ಯಗಳಲ್ಲಿಯೂ ನಿರತರಾಗಿ ತಮ್ಮ ಪ್ರದೇಶದ ಆರ್ಥಿಕ ಸಾಂಸ್ಕೃತಿಕ ರಂಗಗಳಲ್ಲಿ ಕ್ವಚಿತ್ ಅಭಿವೃದ್ಧಿಗೆ ಕಾರಣರಾದರು. ಉತ್ತರ

ಕರ್ನಾಟಕದ ಭಾಗದಲ್ಲಿಯಾದರೋ ಆದಿಲ್‌ಶಾಹೀ ಪ್ರಭುತ್ವ ಸು.17ನೆಯ ಶತಮಾನಾಂತ್ಯದವರೆಗೆ ಗಟ್ಟಿಯಾಗಿಯೇ ಮುಂದುವರೆಯಿತು. ಅನಂತರ ಮುಗಲರ ಆಕ್ರಮಣದಿಂದ ಬಿಜಾಪುರ ರಾಜ್ಯವೂ ನಾಶವಾಗಿ ಉತ್ತರ ಕರ್ನಾಟಕದಲ್ಲಿ ಒಂದು ರೀತಿಯ ರಾಜಕೀಯ ಟೊಳ್ಳಿನ ಪರಿಸ್ಥಿತಿ ಉಂಟಾಯಿತು. ಕ್ರಮೇಣ ಅಲ್ಲಿನ ಹಲವು ಅಧಿಕಾರಿಗಳು ದಕ್ಷಿಣ ಕರ್ನಾಟಕದ ಪಾಳೆಯಗಾರರಂತೆ ಸಣ್ಣ ಪ್ರದೇಶಗಳನ್ನು ರೂಢಿಸಿಕೊಂಡು ಒಡೆತನ ಮಾಡಲಾರಂಭಿಸಿದರು. ಇದೇ ಸಂದರ್ಭದಲ್ಲಿ ವಾಯುವ್ಯ ಕರ್ನಾಟಕದಲ್ಲಿ ಮರಾಠರು, ಈಶಾನ್ಯ ಕರ್ನಾಟಕದಲ್ಲಿ ಆಸಫ್‌ಜಾಹೀಗಳು ತಮ್ಮ ಅಧಿಕಾರವನ್ನು ವಿಸ್ತರಿಸಿದರು. ದಖನ್ನಿನ ಈ ಎರಡು ಶಕ್ತಿಗಳಿಗೆ ಕರ್ನಾಟಕದ ಬಗ್ಗೆ ಒಲವೇನೂ ಇಲ್ಲದೆ ಇದು ಕೇವಲ ಕೊಳ್ಳೆ ಹೊಡೆಯುವ ಪ್ರದೇಶವಾಗಿತ್ತು. ಜನೋಪಕಾರಕ್ಕಿಂತ ಧನಸಂಗ್ರಹವೇ ಅವುಗಳಿಗೆ ಮಹತ್ವದ ವಿಷಯವಾಗಿತ್ತು. ಈ ದಿಶೆಯಲ್ಲಿ ಸ್ಥಳೀಯ ಅಧಿಕಾರಿಗಳೂ ಆ ಪ್ರಭುತ್ವಗಳಿಗೆ ಪ್ರತಿನಿಧಿಗಳಂತಾದರು. ರಾಜಕೀಯ ಆರ್ಥಿಕ ಅನಿರ್ದಿಷ್ಟತೆ ಈ ಕಾಲದ ವೈಶಿಷ್ಟ್ಯವಾಯಿತು. ಸು.18ನೆಯ ಶತಮಾನದ ಮಧ್ಯಭಾಗದವರೆಗಿದ್ದ ಈ ವಿಚಿತ್ರ ವಿಚ್ಛಿನ್ನ ಸ್ಥಿತಿಯಲ್ಲೂ ಸ್ವಲ್ಪಮಟ್ಟಿನ ವ್ಯವಸ್ಥೆ ಬರಲು ಕಾರಣರಾದವರು ಮೈಸೂರಿನ ಸಂಸ್ಥಾನದ ಅಧಿಕಾರವನ್ನು ತಮ್ಮದಾಗಿಸಿಕೊಂಡಿದ್ದ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು. ಈ ಮುನ್ನ ಸಂಸ್ಥಾನದ ಪ್ರಮುಖರಾಗಿದ್ದ ದಳವಾಯಿಗಳು ಮೈಸೂರಿನ ಪ್ರಭುತ್ವವನ್ನು ತಮಿಳುನಾಡಿನ ಕೆಲವು ಭಾಗಗಳ ಮೇಲೂ ವಿಸ್ತರಿಸಿ ಗಳಿಸಿದ್ದ ರಾಜಕೀಯ ಶಕ್ತಿಯ ಹಿನ್ನೆಲೆಯೊಡನೆ ಈ ಇಬ್ಬರು ಸುಲ್ತಾನರು ಇಡಿಯ ದಕ್ಷಿಣ ಕರ್ನಾಟಕದ ಸಣ್ಣಪುಟ್ಟ ಪಾಳೆಯಗಾರರನ್ನೆಲ್ಲ ಸವರಿ ಹಾಕಿ, ಕೇರಳ ತಮಿಳುನಾಡುಗಳ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು, ದೊಡ್ಡ ರಾಜ್ಯವನ್ನೇ ಸ್ಥಾಪಿಸಿದರು. ರಾಜಕೀಯ ಅಸ್ತವ್ಯಸ್ತತೆಯನ್ನು ನಿರ್ಮೂಲಗೊಳಿಸಿದರು. ಇವರ ಏಳ್ಗೆ ಸಾಧನೆಗಳಿಂದ ಎಚ್ಚೆತ್ತ ಆಸಫ್‌ಜಾಹೀಗಳು ಹಾಗೂ ಮರಾಠರು ಇವರ ಪ್ರಬಲ ವಿರೋಧಿಗಳಾಗಿ ನಿಂತರು. ಪುನಃ ಕರ್ನಾಟಕದ ರಾಜಕೀಯದಲ್ಲಿ ದ್ವಿಮುಖ ಸಂಘರ್ಷವುಂಟಾಯಿತು. ಈ ಹೊತ್ತಿಗೆ ದಕ್ಷಿಣ ಭಾರತದ ರಾಜಕೀಯದಲ್ಲಿ ಕೈಹಾಕಲು ತೊಡಗಿದ್ದ ಬ್ರಿಟಿಷರಿಗೂ ಈ ಸುಲ್ತಾನರ ಏಳ್ಗೆ ಮುಳ್ಳಾಗಿದ್ದರಿಂದ ಇವರೆಲ್ಲರ ಒಕ್ಕೂಟ ಸಂಸ್ಥಾನದ ಛೇದನವನ್ನೂ ಸಾಧಿಸಿತು (1799). ಮೈಸೂರು ಸಂಸ್ಥಾನದ ಒಡೆಯರ ವಂಶದವರಿಗೂ ಉತ್ತರ ಕರ್ನಾಟಕದ ಪೂರ್ವಭಾಗ ಆಸಫ್‌ಜಾಹೀಗಳಿಗೂ ಪಶ್ಚಿಮ ಭಾಗ ಮರಾಠರಿಗೂ ಹಂಚಿದ್ದರೂ ಬ್ರಿಟಿಷ್ ಪ್ರಭುತ್ವ ಕರ್ನಾಟಕದ ಎಲ್ಲೆಡೆಯಲ್ಲೂ ತನ್ನ ಅಂಕುಶವನ್ನು ಸ್ಪಷ್ಟವಾಗಿ ಊರಿತು. ಕೆಲವೇ ವರ್ಷಗಳಲ್ಲಿ ಮರಾಠರ ಸೋಲು ಮತ್ತು ಮೈಸೂರು ಅರಸರ ಪದಚ್ಯುತಿಯಿಂದ (1831) ಆಸಫ್‌ಜಾಹೀ ಭಾಗದಲ್ಲಿದ್ದ ಪ್ರದೇಶ ಹೊರತು ಉಳಿದ ಕರ್ನಾಟಕದ ಪ್ರಾಂತ್ಯ ಬ್ರಿಟಿಷ್ ಅರಸರ ನೇರ ಆಳ್ವಿಕೆಗೆ ಒಳಪಟ್ಟಿತು. ಮುಂದೆ ಮೈಸೂರು ಸಂಸ್ಥಾನದಲ್ಲಿ ಒಡೆಯ ವಂಶದವರಿಗೆ ರಾಜ್ಯವನ್ನು ಹಿಂತಿರುಗಿಸಿದರೂ (1881) ಬ್ರಿಟಿಷರ ಪ್ರಭಾವ ಮುಂದುವರೆಯಿತು.

ಒಟ್ಟಿನಲ್ಲಿ ಇದು ವಿಚ್ಛಿನ್ನ ಯುಗ, ರಾಜಕೀಯ ಪ್ರಕ್ಷುಬ್ಧತೆಯ ಕಾಲ. ಕೆಳದಿ, ಮೈಸೂರು ಅರಸರ ಆಳ್ವಿಕೆಯಲ್ಲಿ ಪರಂಪರಾನುಗತ ರೀತಿನೀತಿಗಳ ಮುನ್ನಡೆಗೆ ಸ್ವಲ್ಪಮಟ್ಟಿನ ಪೋಷಣೆ ದೊರಕಿ ಆರ್ಥಿಕ ಸಾಂಸ್ಕೃತಿಕ ರಂಗದಲ್ಲಿ ಕ್ವಚಿತ್ ಸಾಧನೆಗಳಾದರೂ ಹೆಚ್ಚು ಮಟ್ಟಿಗೆ ಇದು ಸಾಂಸ್ಕೃತಿಕ ಸ್ಪಷ್ಟ ಸ್ವರೂಪದ ಕಸಿಗೆ ಅವಕಾಶವೇ ಇಲ್ಲದಿದ್ದಷ್ಟು ತ್ವರಿತವಾಗಿ ರಾಜಕೀಯ ಘಟನೆಗಳು ನಡೆಯುತ್ತಿದ್ದ ಕಾಲ. ಅಧಿಕಾರವನ್ನು ಹಿಡಿಯುವುದು ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದಷ್ಟೇ ಆಳರಸರ ಧ್ಯೇಯವಾಗಿದ್ದ ಕಾಲದಲ್ಲಿ ದೇಶಾಭಿವೃದ್ಧಿಯೆಡೆಗೆ ಗಮನವಿಡಲು ಅಸಾಧ್ಯವಾಯಿತು.

ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗುತ್ತಿದ್ದಂತೆಯೇ ದೇಶೀಯ ರೀತಿನೀತಿ ಮೌಲ್ಯಗಳು ಹಿಂದೆ ಬೀಳಲಾರಂಭಿಸಿ, ಆಡಳಿತ ವ್ಯವಸ್ಥೆ, ವಿದ್ಯಾಭ್ಯಾಸ, ಜನಜೀವನಗಳಲ್ಲಿ ಪಾಶ್ಚಿಮಾತ್ಯ ಸಂಪ್ರದಾಯಗಳು ನೆಲೆಯೂರಲು ಪ್ರಾರಂಭವಾಯಿತು. 19ನೆಯ ಶತಮಾನ ಈ ಹೊಸ ಗಾಳಿಯ ಹೊಡೆತದ ಕಾಲ. ದೇಶದ ಆಗುಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಉನ್ನತ ಜನವರ್ಗಗಳಿಗೆ ಇಂಗ್ಲಿಷ್ ಸಂಪ್ರದಾಯಗಳು ಮಾದರಿಯಾಗಲಾರಂಭಿಸಿದುವು. ಕ್ರೈಸ್ತಧರ್ಮ, ಪಾಶ್ಚಿಮಾತ್ಯ ವಾಸ್ತು - ಕಲಾ ಸಂಪ್ರದಾಯಗಳು, ಸ್ವಲ್ಪಮಟ್ಟಿಗೆ ಅಲ್ಲಿನ ಸಾಹಿತ್ಯ, ತತ್ತ್ವ, ನೀತಿ, ಧೋರಣೆಗಳು ಜನಪ್ರಿಯವಾಗಲಾರಂಭಿಸಿದುವು. ಆದರೆ ವಿದ್ಯಾಭ್ಯಾಸದ ಪ್ರಸಾರ ಮತ್ತು ದೇಶದಲ್ಲಿದ್ದ ಶಾಂತಸ್ಥಿತಿಯಿಂದಾಗಿ ದೇಶೀಯ ಪ್ರಜ್ಞೆ ಇಲ್ಲಿನ ಜನಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ತಲೆಯೆತ್ತಲಾರಂಭಿಸಿದ್ದು ಈ ಕಾಲದ ಒಂದು ವೈಶಿಷ್ಟ್ಯ. ಕಿತ್ತೂರ ರಾಣಿಚೆನ್ನಮ್ಮ (1824), ಸಂಗೊಳ್ಳಿರಾಯಣ್ಣ (1829-30) ಮುಂತಾದ ಕೆಲವು ಧೀರ ವ್ಯಕ್ತಿಗಳ ಆಂಗ್ಲರ ವಿರುದ್ಧದ ಹೋರಾಟ. ಕನ್ನಡ ಅಧ್ಯಯನದ ಹೆಚ್ಚಳ, ಕನ್ನಡ ಸಾಹಿತ್ಯದಲ್ಲಿ ಹೊಸ ರೀತಿ ವಿಧಾನಗಳು ಮುಂತಾದವು ಹುಟ್ಟಿಕೊಂಡಿದ್ದು, ಮೈಸೂರು ಸಂಸ್ಥಾನದಲ್ಲಿ ದೇಶೀ ಕಲೆಗೆ ದೊರಕಿದ ಪ್ರೋತ್ಸಾಹ- ಇವು ಈ ಹೊಸ ದೇಶೀ ಪ್ರಜ್ಞೆಯ ಸೂಚಕಗಳು. ಈ ಕಾಲದಲ್ಲಿ ವಿದೇಶೀ ಆಡಳಿತ ಮತ್ತು ಮೌಲ್ಯಗಳ ವಿರುದ್ಧ ಹುಟ್ಟಿದ ಪ್ರತಿಕ್ರಿಯೆ 20ನೆಯ ಶತಮಾನದಲ್ಲಿ ಪ್ರಬಲವಾಯಿತು.

**ಸ್ವಾತಂತ್ರ್ಯ ಯುಗ :** ಭಾರತ ಸ್ವಾತಂತ್ರ್ಯ ಗಳಿಸಿದ್ದು 1947ರಲ್ಲಾದರೂ ಭಾರತೀಯತೆಯ ಪ್ರಜ್ಞೆಯ ಉತ್ಕರ್ಷವಾದದ್ದು 19ನೆಯ ಶತಮಾನದ ಅಂತ್ಯದಲ್ಲೇ. 20ನೆಯ ಶತಮಾನದಲ್ಲಿ ಇದು ಬೃಹತ್ ಶಕ್ತಿಯಾಯಿತು. ಬ್ರಿಟಿಷರ ಆಳ್ವಿಕೆ ಮುಂದುವರಿದಿದ್ದರೂ ಇದು ಸ್ವಾತಂತ್ರ್ಯ ಯುಗವೇ. ಕರ್ನಾಟಕದ ಈ ಕಾಲದ ಇತಿಹಾಸ ಇಡೀ ಭಾರತ ಚರಿತ್ರೆಯ ಭಾಗವಾಗಿ ಅದೇ ಧಾಟಿಯಲ್ಲೇ ನಡೆಯಿತು. ಮಹಾತ್ಮ ಗಾಂಧೀಜೀಯವರ ನೇತೃತ್ವದಲ್ಲಿ ದೇಶಕ್ಕೆ ದೇಶವೇ ಒಂದಾಗಿ ಎದ್ದುನಿಂತು ಬಹುಮಟ್ಟಿಗೆ ಅಹಿಂಸಾತ್ಮಕವೇ ಆಗಿದ್ದ ರಾಜಕೀಯ ಚಳವಳಿಯನ್ನು ಹೂಡಿತು. ಸಮಸಮವಾಗಿ ಸ್ವದೇಶೀ ಚಳವಳಿ ಎಲ್ಲ ರಂಗಗಳಲ್ಲೂ ವ್ಯಾಪಿಸಿತು. ಕರ್ನಾಟಕವೂ ಒಳಗೊಂಡಂತೆ ಭಾರತದಲ್ಲೆಲ್ಲಾ ವಿದೇಶಿ ಪೊರೆಯನ್ನು ಕಳಚಿ ತನ್ನತನವನ್ನು ಕಂಡುಕೊಳ್ಳುವ ಪ್ರವೃತ್ತಿ ಬೆಳೆಯಿತು. ಸಹಜವಾಗಿ ಕರ್ನಾಟಕದಲ್ಲೂ ಇಡೀ ಕರ್ನಾಟಕ ಒಂದು ಸಾಂಸ್ಕೃತಿಕ ಘಟಕವೆಂಬ ಕಲ್ಪನೆ ಜೊತೆಜೊತೆಗೇ ಹುಟ್ಟಿ ಭಾರತ ಸ್ವಾತಂತ್ರ್ಯ ಸಂಗ್ರಾಮದೊಡನೆ ಕರ್ನಾಟಕ ಏಕೀಕರಣದ ವಿಚಾರಗಳೂ ಪ್ರಯತ್ನಗಳೂ ಪ್ರಬಲಿಸಿದವು. ಕರ್ನಾಟಕ ಸಂಸ್ಕೃತಿಯ ಬಗ್ಗೆ ಹೆಮ್ಮೆ, ಕನ್ನಡ ಭಾಷೆ ಸಾಹಿತ್ಯಗಳತ್ತ ಒಲವು ಹೊಮ್ಮಲಾರಂಭಿಸಿತು. 1956ರಲ್ಲಿ ಕರ್ನಾಟಕ ರಾಜ್ಯಸ್ಥಾಪನೆಯಾಗಿ ಕರ್ನಾಟಕದ ಏಳ್ಗೆಗೆ ಇದು ನಾಂದಿಯಾಯಿತು. ಇದರ ಸಂಘಟನೆ ನಡೆದಿರುವ ಈ ಶತಮಾನದಲ್ಲಿ ವಿಶ್ವದ ಯಾವ ಭಾಗವೂ ಸ್ವಕೋಶದಲ್ಲಿ ಉಳಿದುಕೊಳ್ಳುವುದು ಅಸಾಧ್ಯದ ಮಾತಾಗಿರುವುದರಿಂದ ಆರ್ಥಿಕ ಸಾಮಾಜಿಕ ರಂಗದಲ್ಲಿ ಎಲ್ಲೆಡೆಯೂ ಕಂಡುಬರುವ ಪ್ರವೃತ್ತಿಗಳಿಗೆ ಕರ್ನಾಟಕ ಹೊರತಾಗಿಲ್ಲ. ಆದರೆ ಸಾಂಸ್ಕೃತಿಕ ರಂಗದಲ್ಲಿ ಕನ್ನಡತನ, ಕನ್ನಡ ಪ್ರಜ್ಞೆ ಪ್ರಜ್ವಲಿಸುತ್ತಿದ್ದು ಕರ್ನಾಟಕದ ನವಸಂಸ್ಕೃತಿ ಪುನಾರೂಪಿತಗೊಳ್ಳುವ ಪ್ರವೃತ್ತಿಯನ್ನು ಇತಿಹಾಸಕಾರ ಗುರುತಿಸಬಹುದಾಗಿದೆ. (ಕೆ.ವಿ.ಆರ್.;ಕೆ.ಟಿ.ಆರ್.)

**ಇನಾಂದಾರ್, ವಿ.ಎಂ. :** 1912-86. ಕನ್ನಡದ ಪ್ರಸಿದ್ಧ ಕಾದಂಬರಿಕಾರರು, ಅನುವಾದಕರು, ವಿಮರ್ಶಕರು. ವೆಂಕಟೇಶ ಮಧ್ವರಾವ್ ಇನಾಂದಾರ್ ಇವರ ಪೂರ್ಣ ಹೆಸರು. ಬೆಳಗಾಂವಿ ತಾಲ್ಲೂಕಿನ ಹುದಲಿಯಲ್ಲಿ 1912 ಅಕ್ಟೋಬರ್ 1ರಂದು ಜನಿಸಿದರು. ತಂದೆ ಮಧ್ವರಾಯ, ತಾಯಿ ಕಮಲಾಬಾಯಿ. ಪ್ರಾಥಮಿಕ ಶಿಕ್ಷಣವನ್ನು ಹುದಲಿಯಲ್ಲಿ ಮುಗಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಬಿ.ಎ. (ಆನರ್ಸ್) ಪದವಿ ಪಡೆದರು. ಅನಂತರ ಇಂಗ್ಲಿಷ್ ವಿಷಯದಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು (1941). ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ (1943-50), ಉಪಪ್ರಾಧ್ಯಾಪಕರಾಗಿ (1950-60), ಪ್ರಿನ್ಸಿಪಾಲರಾಗಿ (1960-67), ಅನಂತರ ಯು.ಜಿ.ಸಿ.ಪ್ರಾಧ್ಯಾಪಕರಾಗಿ (1967-70) ಹೀಗೆ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆಸಲ್ಲಿಸಿ ನಿವೃತ್ತರಾದರು.

ಮರಾಠಿಯ ಪ್ರಸಿದ್ಧ ಲೇಖಕ ವಿ.ಸ.ಖಾಂಡೇಕರರ ಎರಡು ಧ್ರುವ (1937) ಕಾದಂಬರಿಯ ಅನುವಾದದೊಂದಿಗೆ ಸಾಹಿತ್ಯರಂಗಕ್ಕೆ ಪ್ರವೇಶಿಸಿದ ಇನಾಂದಾರರು ಸ್ವತಂತ್ರ ಕಾದಂಬರಿಗಳನ್ನು ಬರೆದರು, ಅನುವಾದಗಳನ್ನು ಮಾಡಿದರು. ಇವರಿಗೆ ಇಂಗ್ಲಿಷ್, ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಆಳವಾದ ಪರಿಶ್ರಮವಿತ್ತು. ಇವರು ಒಟ್ಟು 45ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮೊದಲಿಗೆ ವಿಮರ್ಶಾ ಗ್ರಂಥಗಳನ್ನು ಬರೆದು ಹೆಸರು ಮಾಡಿದರು. ಮೂರಾಬಟ್ಟೆ ಇವರ ಮೊದಲ ಸ್ವತಂತ್ರ ಕಾದಂಬರಿ (1946). ಕನಸಿನ ಮನೆ (1947), ವಿಜಯ ಯಾತ್ರೆ (1948), ಶಾಪ

(1949), ಸ್ವರ್ಗದ ಬಾಗಿಲು (1950) ಹೀಗೆ ಒಂದೇ ಕಾದಂಬರಿಯನ್ನು ನಾಲ್ಕು ಭಾಗಗಳಲ್ಲಿ ಬರೆದರು. ಈ ಪರಿಯ ಸೊಬಗು, ನವಿಲು ನೌಕೆ, ಚಿತ್ರಲೇಖ, ಯಾತ್ರಿಕರು, ಮುಕ್ತಿ ಮುಂತಾದ ಹದಿನೆಂಟು ಕಾದಂಬರಿಗಳನ್ನು ಬರೆದಿದ್ದಾರೆ. ಪಾಶ್ಚಾತ್ಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ ಇವು ಇವರ ವಿದ್ವತ್ ಕೃತಿಗಳು. ಗೋವಿಂದ ಪೈಗಳ ಕಾವ್ಯ, ಕುವೆಂಪು ಕಾದಂಬರಿಗಳು, ಶ್ರೀನಿವಾಸರ ಕಾದಂಬರಿಗಳು, ಕಾರಂತರ ಕಾದಂಬರಿಗಳು, ಕಾಳಿದಾಸನ ಕೃತಿಗಳು ಮೊದಲಾದವುಗಳ ಬಗ್ಗೆ ವಿಮರ್ಶೆ ಬರೆದಿದ್ದಾರೆ. ವಿ.ಸ.ಖಾಂಡೇಕರರ ಇನ್ನೊಂದು ಪ್ರಸಿದ್ಧ ಕಾದಂಬರಿ ಯಯಾತಿ ಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅನುವಾದ ಅತ್ಯಂತ ಸೃಜನಶೀಲವಾಗಿದೆ. ಬಿಡುಗಡೆ ಎಂಬುದು ಇವರು ಬರೆದ ಒಂದು ನಾಟಕ. ಅಂಬೇಡ್ಕರ್ ಅವರನ್ನು ಕುರಿತು ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಉತ್ತರರಾಮ ಚರಿತೆ, ಗೋವಿಂದ ಪೈ, ಶಿವರಾಮಕಾರಂತ - ಇವು ಇಂಗ್ಲಿಷ್‌ನಲ್ಲಿ ಬರೆದ ಗ್ರಂಥಗಳು. ಇವರು ಕೆಲವು ಕಾಲ ಸುಧಾ, ಜಯಂತಿ ಪತ್ರಿಕೆಗಳಲ್ಲಿ ಬರೆದು ಅಂಕಣಕಾರರಾಗಿಯೂ ಪ್ರಸಿದ್ಧಿ ಪಡೆದಿದ್ದರು. ಇವರು ಬರೆದ ಶಾಪ, ಮುಕ್ತಿ ಕಾದಂಬರಿಗಳು ಚಲನಚಿತ್ರವಾಗಿವೆ.



ಇವರ ಸಾಹಿತ್ಯ ಸೇವೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಗಳು ಗೌರವಿಸಿದೆ. ಯಯಾತಿ ಕಾದಂಬರಿಯ ಅನುವಾದಕ್ಕೆ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ. ಸಂಸ್ಕೃತ ನಾಟಕಗಳಲ್ಲಿಯ ನಾಯಿಕೆಯರು ಎಂಬ ಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾಲಯದ ಮಾಂಡಲಿಕ ಸುವರ್ಣ ಪದಕ, ಸಂಸ್ಕೃತ ನಾಟಕಗಳಲ್ಲಿಯ ದೀರ್ಘ ಎಂಬ ವಿದೂಷಕ ಪ್ರಬಂಧಕ್ಕೆ ಭಾರತೀಯ ವಿದ್ಯಾಭವನದ ಸುವರ್ಣ ಪದಕ ಇವರಿಗೆ ಲಭಿಸಿದ್ದವು. ಇಂಗ್ಲೆಂಡ್ ಕೆನಡ, ಅಮೆರಿಕ ದೇಶಗಳನ್ನು ಪ್ರವಾಸ ಮಾಡಿದ್ದ ಇವರು 1986ರಲ್ಲಿ ನಿಧನರಾದರು. (ಎಸ್.ಎಂ.ಕೆ.)

**ಇನಾಮತಿ, ಎಚ್.ಎಸ್. :** 1900-86. ಕರ್ನಾಟಕದ ಹಿರಿಯ ಚಿತ್ರಕಲಾವಿದ, ಕಲಾ ಶಿಕ್ಷಕ. ಇವರ ಪೂರ್ತಿ ಹೆಸರು ಹರಿರಾವ್ ಶಾಮರಾವ್ ಇನಾಮತಿ. 1900 ಏಪ್ರಿಲ್ 14ರಂದು ಜಬಲಪುರದಲ್ಲಿ ಜನಿಸಿದರು. ಇಂಟರ್ ಪರೀಕ್ಷೆಯನ್ನು ಪೂರೈಸುವ ಮುನ್ನವೇ ಚಿತ್ರಕಲೆಯಲ್ಲಿ ಆಕರ್ಷಿತರಾಗಿ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ವ್ಯಾಸಂಗ ಮಾಡಿದರು (1926). ಅಲ್ಲಿಯೇ ಡಿಪ್ಲೊಮಾ ಪದವಿ ಪಡೆದರು. (1931). ವಿದ್ಯಾರ್ಥಿ ಜೀವನದಲ್ಲಿಯೇ ಡ್ಯಾಲಿಕರ್ಸಡ್ಜಿ ಎರಡನೆಯ ಬಹುಮಾನ ಪಡೆದರು (1929). ಈ ಬಹುಮಾನದಿಂದಾಗಿ ಇವರಿಗೆ ಮೇಯೋ ವಿದ್ಯಾರ್ಥಿವೇತನ ದೊರೆಯಿತು.

ಕಲಾಶಾಲೆಯ ಪ್ರಾಂಶುಪಾಲರಾದ ಡಬ್ಲ್ಯು.ಜೆ.ಜೆ.ಗ್ಲ್ಯಾಡ್‌ಸ್ಟನ್ ಸಾಲೋಮನ್ ಅವರು 1930ರಲ್ಲಿ ಲಂಡನ್ನಿನಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಇವರು ರಚಿಸಿದ 'ನ್ಯಾಯ' ಚಿತ್ರ ಬಹುಮಾನ ಗಳಿಸಿತು. ಕೆಲ ಕಾಲ ಟೈಮ್ಸ್ ಆಫ್ ಇಂಡಿಯ ಮತ್ತು ಇಲಸ್ಟ್ರೇಟೆಡ್ ವೀಕ್ಲಿಯಂಥ' ಪ್ರಸಿದ್ಧ ಪತ್ರಿಕೆಗಳಲ್ಲಿ ಕಲಾವಿದರಾಗಿ ದುಡಿದರು. ಅನಂತರ ಸ್ವತಂತ್ರವಾಗಿ ಚಿತ್ರಗಳನ್ನು ಬರೆಯತೊಡಗಿದರು. ಜಲವರ್ಣದಲ್ಲಿ ನಿಸರ್ಗದ ಅಪೂರ್ವ ದೃಶ್ಯಗಳನ್ನು ಸೆರೆಹಿಡಿದರು. ಚಿತ್ರ ರಚಿಸುವಲ್ಲಿ ಪ್ರಭುತ್ವ ಪಡೆದರು. ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಇವರ ಚಿತ್ರಗಳಿಗೆ ಬಹುಮಾನ ದೊರೆಯಿತು. ಜಗನ್ಮೋಹನ ಚಿತ್ರಶಾಲೆಯಲ್ಲಿ ಇವರ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ. ಎಂ.ಎಸ್.ಎಂ.ರೈಲ್ವೆ ಕಂಪನಿಗೆ ಅನೇಕ ಭಿತ್ತಿ ಪತ್ರಗಳನ್ನು ರಚಿಸಿಕೊಟ್ಟರು. ಅವುಗಳಲ್ಲಿ ಪ್ರಮುಖವಾದುದು ವಿನೆಟ್ ಬಾಂಬೆ, ವಿನೆಟ್ ನಾಗಪುರ, ವಿನೆಟ್ ಮೈಸೂರ್ ದಸರ, ಪ್ರಸಿದ್ಧ ಕನ್ನಡ ಲೇಖಕ ಕೆ.ವಿ.ಅಯ್ಯರ್ ಅವರ ಶಿಷ್ಯರಲ್ಲೊಬ್ಬರಾಗಿದ್ದ ಇವರು ಅಂಗಸಾಧನೆಯಿಂದ ಉತ್ತಮ ದೇಹ ಸಂಪತ್ತನ್ನು ಹೊಂದಿದ್ದರು. ಕಲೆ ಕುರಿತಂತೆ ಇವರು ಅನೇಕ ಲೇಖನಗಳನ್ನು ಇಂಗ್ಲಿಷ್‌ನಲ್ಲಿ ಬರೆದರು. ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಮೈಸೂರು ಜಗನ್ಮೋಹನ ಶಾಲೆಯ ಕಲಾ ಗ್ಯಾಲರಿಯನ್ನು ಸುವ್ಯವಸ್ಥೆಗೊಳಿಸಿದ ಜೇಮ್ಸ್‌ಕಸಿನ್ಸ್ ಅವರು ಇನಾಮತಿಯವರ ಎಲ್ಲ ಕಲಾಕೃತಿಗಳನ್ನು ಒಂದೇ ಕಡೆ ವೀಕ್ಷಿಸುವ ಅವಕಾಶ ಕಲ್ಪಿಸಿದರು (1948-49). ಇವರು ರಚಿಸಿದ ಅನೇಕ ಕಲಾ ಕೃತಿಗಳು ಹಲವಾರು ಚಿತ್ರ ಸಂಗ್ರಹಾಲಯಗಳಲ್ಲಿವೆ.

1950ರ ಬಳಿಕ ಆಧ್ಯಾತ್ಮದ ಕಡೆ ಇವರ ಗಮನ ಹರಿಯಿತು. ಕೆಲಕಾಲ ಕಾಶ್ಮೀರಕ್ಕೆ ತೆರಳಿ ಆಶ್ರಮದಲ್ಲಿದ್ದರು. ಸಮಕಾಲೀನ ಕಲಾವಿದರಿಂದ ಜೀನಿಯಸ್ ಎಂದು ಕರೆಸಿಕೊಂಡರು. ಬೆಂಗಳೂರಿನ ಜ್ಞಾನಜ್ಯೋತಿ ಕಲಾ ಸಂಘದವರು ಇವರನ್ನು ಸನ್ಮಾನಿಸಿ ಗೌರವಿಸಿದ್ದಾರೆ (1962). ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯೂ ಇವರಿಗೆ ದೊರೆತಿದೆ. ಇವರು 1986 ಆಗಸ್ಟ್ 5ರಂದು ನಿಧನರಾದರು. (ಆರ್.ಜಿ.ಆರ್.)

**ಇಬ್ರಾಹೀಂ ಆದಿಲ್ ಷಾ I :** ಆದಿಲ್ ಶಾಹೀ ಮನೆತನದ ನಾಲ್ಕನೆಯ ಸುಲ್ತಾನ (1535-58). ಈ ಮನೆತನದ ಸ್ಥಾಪಕನಾದ ಯೂಸುಫ್ ಆದಿಲ್‌ಷಾನ ಮೊಮ್ಮಗ, ಮಲ್ಲುವಿನ ತಮ್ಮ ಮತ್ತು ಉತ್ತರಾಧಿಕಾರಿ. ಈತನ ತಾತ ಷಿಯಾಪಂಗಡದ ಮುಸ್ಲಿಮನಾಗಿದ್ದರೂ ಇವನು ಸುನ್ನಿ ಮತಸ್ಥ. ದೇಶದ ರಾಜಕೀಯದಲ್ಲಿ ಹೊರಗಿನವರ ಕೈವಾಡ ತಗ್ಗಿಸಬೇಕೆಂಬ ಉದ್ದೇಶದಿಂದ ಇವನು ಹೊರದೇಶಗಳಿಂದ ಬಂದಿದ್ದ ಆಡಳಿತಾಧಿಕಾರಿಗಳನ್ನೂ ಸೈನಿಕರನ್ನೂ ಹಿಂದಕ್ಕೆ ಕಳುಹಿಸಿ ಅವರ ಸ್ಥಾನಗಳಲ್ಲಿ ದಖನೀ ಜನರನ್ನೂ ಆಫ್ರಿಕನರನ್ನೂ ನೇಮಿಸಿದ. ಪಾರಸೀ ಭಾಷೆಯ ಬದಲು ಕನ್ನಡ - ಮರಾಠಿಗಳನ್ನು ಆಡಳಿತ ಭಾಷೆಗಳಾಗಿ ಬಳಸಬೇಕೆಂದು ಆಜ್ಞಾಪಿಸಿದ. ಈ ಕ್ರಮದ ಫಲವಾಗಿ ಸ್ಥಳೀಯ ಮುಸ್ಲಿಮರಿಗೂ ಹಿಂದುಗಳಿಗೂ ಸರ್ಕಾರಿ ಹುದ್ದೆಗಳು ದೊರಕುವುದು ಸಾಧ್ಯವಾಯಿತು.

ಇವನ ಕಾಲದಲ್ಲಿ ದಖನ್ನಿನಲ್ಲಿದ್ದ ಇತರ ಸುಲ್ತಾನರ ಮನೆತನಗಳಾದ ಇಮಾದ್ ಶಾಹೀ (ಬೀರಾರ್), ನಿಜಾಂ ಶಾಹೀ (ಅಹಮದ್‌ನಗರ), ಕುತ್ಬ್ ಶಾಹೀ (ಗೋಲ್ಕೊಂಡ), ಬರೀದ್ ಶಾಹೀ (ಬೀದರ್) ರಾಜ್ಯಗಳಲ್ಲೂ ಕೃಷ್ಣದೇವರಾಯನ ಅನಂತರದಲ್ಲಿ ಇಳಿಮುಖವಾಗಿದ್ದ ವಿಜಯನಗರದಲ್ಲೂ ಅಂತಃಕಲಹಗಳು ಸಾಮಾನ್ಯವಾಗಿದ್ದುವು. ಪಕ್ಷ- ಪ್ರತಿಪಕ್ಷಗಳು ನೆರೆರಾಜ್ಯಗಳ ನೆರವಿನಿಂದ ಇವನ ವಿರುದ್ಧ ಮಸಲತ್ತಿನಲ್ಲಿ ತೊಡಗಿದ್ದುವು. ಈ ಗೊಂದಲದ ಫಲವಾಗಿ ಇಬ್ರಾಹೀಮನಿಗೂ ಶಾಂತಿ ಇಲ್ಲವಾಗಿತ್ತು. ತನ್ನ ಆಳ್ವಿಕೆಯ ಹೆಚ್ಚು ಕಾಲವನ್ನು ಇವನು ಇವರೊಡನೆ ಯುದ್ಧಗಳಲ್ಲಿ ಕಳೆದ. *

**ಇಬ್ರಾಹೀಂ ಆದಿಲ್ ಷಾ II :** ಬಿಜಾಪುರದ ಆದಿಲ್ ಶಾಹೀ ಮನೆತನದ ಆರನೆಯ ಸುಲ್ತಾನ (1580-1627). ಮೊದಲನೆಯ ಇಬ್ರಾಹೀಂ ಆದಿಲ್ ಷಾನ ಸೋದರನ ಮಗ. ಮೊದಲನೆಯ ಇಬ್ರಾಹೀಂ ಆದಿಲ್‌ಷಾನ ಮಗ ಅಲಿ ಆದಿಲ್‌ಷಾ ಸತ್ತಮೇಲೆ ಒಂಬತ್ತನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದ. ಇವನ ಚಿಕ್ಕಂದಿನಲ್ಲಿ ಚಾಂದ್‌ಬೀಬಿ (ನೋಡಿ) ರಾಜ್ಯಪಾಲಕಳಾಗಿದ್ದಳು. ಅನಂತರದಲ್ಲಿ ಬಿಜಾಪುರ ಮತ್ತು ಅಹಮದ್‌ನಗರದ ಸುಲ್ತಾನರಲ್ಲಿ ವೈಮನಸ್ಯ ಬೆಳೆದು ಮುಂದುವರೆಯಿತು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ರಾಜ್ಯವನ್ನು ರಕ್ಷಿಸುವ ನೆಪದಲ್ಲಿ ದಿಲಾವರ್ ಖಾನ್ ಎಂಬವನು ಎಂಟು ವರ್ಷಗಳ ಕಾಲ ಅಧಿಕಾರವನ್ನು ಹಿಡಿದುಕೊಂಡನು. ಕೊನೆಗೆ ಸುಲ್ತಾನನೇ ಅವನನ್ನು ಉಪಾಯದಿಂದ ನಿಗ್ರಹಿಸಬೇಕಾಯಿತು. ಆದಿಲ್ -ಷಾನು ತನ್ನ ತಮ್ಮ ಇಸ್ಮಾಯಿಲ್‌ನ ದಂಗೆಯನ್ನು ಅಡಗಿಸಿ ರಾಜ್ಯವನ್ನು ಮಲಬಾರಿನವರೆಗೂ ವಿಸ್ತರಿಸಿದನು.

1590ರ ದಶಕದಲ್ಲಿ ಮುಗಲರು ದಖನ್ನಿನತ್ತ ವಿಸ್ತರಣಾ ನೀತಿಯನ್ನು ಅನುಸರಿಸತೊಡಗಿದರು. ಆಗ ಅಹಮ್ಮದ್ ನಗರದ

ಚಾಂದ್‌ಬೀಬಿಯು ಮುಗಲರನ್ನು ಎದುರಿಸಿದಾಗ ಆದಿಲ್ ಷಾನು ಅವಳ ನೆರವಿಗೆ ಹೋದನಾದರೂ ಪ್ರಯೋಜನವಾಗಲಿಲ್ಲ. 1601ರಲ್ಲಿ ಅವನು ಸಾಮ್ರಾಟ ಅಕ್ಬರನೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡನು. ತನ್ನ ಮಗಳನ್ನು ಅಕ್ಬರನ ಮಗನಿಗೆ ವಿವಾಹ ಮಾಡಿಕೊಟ್ಟನು.

ಎರಡನೆಯ ಆದಿಲ್ ಷಾನು ಬಿಜಾಪುರದ ಸುಲ್ತಾನರಲ್ಲೇ ಅತ್ಯಂತ ಸಮರ್ಥನೆಂದು ಇತಿಹಾಸಕಾರರು ಪರಿಗಣಿಸಿದ್ದಾರೆ. ಇವನ ಆಸ್ಥಾನದಲ್ಲಿ ಫೆರಿಸ್ತನೆಂಬ ಪ್ರಸಿದ್ಧ ಇತಿಹಾಸಕಾರನಿದ್ದನು. ಆದಿಲ್ ಷಾನ ಸೈನ್ಯದಲ್ಲಿ 80ಸಾವಿರ ಅಶ್ವದಳ ಮತ್ತು 2ಲಕ್ಷ ಪದಾತಿದಳವಿತ್ತೆಂದು ಹೇಳಲಾಗಿದೆ. ಎರಡನೆಯ ಇಬ್ರಾಹೀಂ ಪರಮತಸಹಿಷ್ಣು, ವಿವೇಕಿ, ಕಲೆಗೂ ಶಾಸ್ತ್ರಗಳಿಗೂ ಆಶ್ರಯದಾತ. ಪರ್ಷಿಯದಿಂದಲೂ ಭಾರತದ ಹಲವಾರು ಭಾಗಗಳಿಂದಲೂ ಕವಿಗಳೂ ಲೇಖಕರೂ ಸಂತರೂ ಆಗ ಬಿಜಾಪುರಕ್ಕೆ ಆಗಮಿಸಿದ್ದರು. ಈತನ ಕಾಲದಲ್ಲಿ ವಿಭಿನ್ನ ಕಲಾಶಾಖೆಗಳಲ್ಲಿ ಪ್ರಸಿದ್ಧವಾದ ಗ್ರಂಥಗಳು ರಚಿತವಾದುವು. ಇಬ್ರಾಹೀಮನಿಗೆ ಶಿಲ್ಪಕಲೆಯೆಂದರೆ ಬಹಳ ಇಷ್ಟ. ಲೋಕಪ್ರಸಿದ್ಧವಾದ ಬಿಜಾಪುರದ ಇಬ್ರಾಹೀಂ ರೋಜ ಇವನ ಕಾಲದಲ್ಲಿ ಕಟ್ಟಿದ ಸುಂದರ ಕಟ್ಟಡ. ಈತನ ಆಸ್ಥಾನದಲ್ಲಿದ್ದ ಪಾರಸೀ ಭಾಷೆಯ ಕವಿಗಳಲ್ಲಿ ಜಹೂರಿ ಮತ್ತು ಮಲ್ಲಿಕ್ ಕುಮಿ ಪ್ರಸಿದ್ಧರು. ಅಬುಲ್ ಕಾಸಿಂ ಫೆರಿಸ್ತ ಎಂಬುವನು ಆದಿಲ್ ಷಾನ ಪ್ರೋತ್ಸಾಹದಿಂದ ತಾರೀಖ್ ಫೆರಿಸ್ತ ಎಂಬ ಹೆಸರಿನಲ್ಲಿ ಭಾರತದ ಇತಿಹಾಸ ಬರೆದಿದ್ದಾನೆ. ಭಾರತೀಯ ಭಾಷೆ ಸಂಸ್ಕೃತಿಗಳಿಗೆ ಈ ಸುಲ್ತಾನ ತುಂಬ ಪ್ರೋತ್ಸಾಹ ನೀಡುತ್ತಿದ್ದ. ಪಾರಸೀ ಭಾಷೆಯಲ್ಲೂ ಇವನು ವಿದ್ವಾಂಸನಾಗಿದ್ದ. ದಖನೀ ಭಾಷೆಯಲ್ಲಿ ಪ್ರೇಮವಿತ್ತು. ಈತ ಕಿತಾಬೆ ನವರಸ್ ಎಂಬ ಸಂಗೀತ ಗ್ರಂಥವನ್ನು ಸು.1600ರಲ್ಲಿ ಬರೆದನೆಂದು ಹೇಳಲಾಗಿದೆ. ಇದರಲ್ಲಿ ರಾಗಗಳ ವಿವರಣೆಯೂ ಒಂದೊಂದು ರಾಗದ ಮೇಲೆ ಇವನು ಬರೆದಿರುವ ಗೀತೆಗಳೂ ದೋಹಾಗಳೂ ಇವೆ. ಈ 17 ರಾಗಗಳಲ್ಲಿ 59 ಗೀತೆಗಳು ಮತ್ತು 17 ದೋಹಾಗಳಿವೆ. ನವರಸವೆಂಬುದು ಈತನ ಪ್ರೀತಿಯ ಶಬ್ದ. ಇವನ ಪಟ್ಟದ ಆನೆಯ ಹೆಸರು ನವರಸ್ ಪೈಕರ್. ಧ್ವಜವೇ ಮುಂತಾದ ಒಂಬತ್ತು ಲಾಂಛನಗಳೂ ನವರಸವೇ. ಇವನು ಆಬಾದು ಮಾಡಿದ್ದ ಪಟ್ಟಣ ನವರಸಪುರವೆಂದೂ ನವರಸಮಹಲ್ ಮತ್ತು ನವರಸಬೆಹಿಷ್ತ್ ಎಂಬ ಕಟ್ಟಡಗಳನ್ನು ಇವನು ಕಟ್ಟಿಸಿದನೆಂದೂ ಹೇಳಲಾಗಿದೆ. ಇದರ ಒಂದು ಕೇರಿ ಸಂಗೀತವಿದ್ವಾಂಸರಿಗೆ ಮೀಸಲಾಗಿದ್ದು ಅಲ್ಲಿ ಸಾವಿರಾರು ಮಂದಿ ಕಲಾಕಾರರಿದ್ದರು. ಉತ್ತರ ಭಾರತ ಹಾಗೂ ವಾರಾಣಸಿಯಿಂದ ಅನೇಕ ಸಂಗೀತ ವಿದ್ವಾಂಸರು ಇಲ್ಲಿ ಬಂದು ವಾಸಿಸುತ್ತಿದ್ದರೆಂದೂ ಪ್ರತೀತಿ. ಉತ್ತಮ ದರ್ಜೆಯ ವಿದ್ವಾಂಸರಿಗೆ ಅತಾಯಿ ಎಂದೂ ಅವರಿಗಿಂತ ಕಡಿಮೆ ದರ್ಜೆಯವರಿಗೆ ಗುಣಿಜನರೆಂದೂ ಹೆಸರಿತ್ತಂತೆ. ಈತನ ಸಂಗೀತ ಪ್ರೇಮದಿಂದ ಇವನಿಗೆ ಜಗದ್ಗುರು ಎಂಬ ಖ್ಯಾತಿ ಬಂತೆಂದು ಪ್ರತೀತಿ. ಮೆಡೋಸ್ ಟೇಲರ್ ಎಂಬ ಇತಿಹಾಸಕಾರ ಈತನನ್ನು ಆದಿಲ್‌ಶಾಹೀ ಮನೆತನದಲ್ಲೇ ಅತ್ಯಂತ ಶ್ರೇಷ್ಠನೆಂದು ಹೊಗಳಿದ್ದಾನೆ. *

**ಇರುಗಪ್ಪ ದಂಡನಾಯಕ :** ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ಅರಸನಾದ ಇಮ್ಮಡಿ ಹರಿಹರನ (1376-1404) ಮಂತ್ರಿ. ಪ್ರಸಿದ್ಧ ದಂಡನಾಯಕ. ಒಂದನೆಯ ಬುಕ್ಕರಾಯನ ಮಗ ಬೈಚೆಯ ದಂಡನಾಯಕನ ಮಗ. ಈತ ಜೈನ. ಪಂಡಿತಾಚಾರ್ಯ ಇವನ ಗುರು. 1385ರ ಶಾಸನವೊಂದರ ಪ್ರಕಾರ ರಾಜಧಾನಿಯಾದ ವಿಜಯನಗರದಲ್ಲಿ ಕುಂತಜಿನಾಲಯ ಎಂಬ ಬಸದಿಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಈಗ ಹಂಪೆಯಲ್ಲಿರುವ ಗಾಣಗಿತ್ತಿ ದೇವಾಲಯವೇ ಈತ ಕಟ್ಟಿಸಿದ ಬಸದಿಯಾಗಿರಬೇಕೆಂದು ವಿದ್ವಾಂಸರ ಊಹೆ. ಶ್ರವಣಬೆಳಗೊಳದಲ್ಲಿ ಒಂದು ಕೆರೆಯನ್ನು ಕಟ್ಟಿಸಿ ಒಂದು ತೋಪನ್ನು ಬೆಳೆಸಿದನೆಂದು ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ.ಇರುಗಪ್ಪ ದಕ್ಷ ದಂಡನಾಯಕನಾಗಿದ್ದದಲ್ಲದೆ ಕವಿಯೂ ಆಗಿದ್ದ. ಸಂಸ್ಕೃತದ ನಾನಾರ್ಥ ರತ್ನಮಾಲಾ ಎಂಬ ಗ್ರಂಥ ಈತನಿಂದ ರಚಿತವಾಯಿತು (ಇರುಗಪ್ಪನಿಂದ ಪೋಷಿತನಾದ ಭಾಸ್ಕರ ಕವಿ ಇದರ ಕರ್ತೃ ಎಂದೂ ಕೆಲವರ ಅಭಿಪ್ರಾಯ). ಇಮ್ಮಡಿ ಬೈಚ ಮತ್ತು ಇಮ್ಮಡಿ ಇರುಗಪ್ಪ ಈತನ ಮಕ್ಕಳು. ಇಮ್ಮಡಿ ದೇವರಾಯನ ಆಳ್ವಿಕೆಯ ಪ್ರಾರಂಭದಲ್ಲಿ ಇರುಗಪ್ಪ ದಂಡನಾಯಕ ಮರಣಹೊಂದಿದ. (ಜಿ.ಆರ್.ಆರ್.)

**ಇರುಪು :** ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನಲ್ಲಿರುವ ಒಂದು ಯಾತ್ರಾಸ್ಥಳ ಹಾಗೂ ಪ್ರೇಕ್ಷಣೀಯ ಸ್ಥಳ. ವಿರಾಜಪೇಟೆಯಿಂದ ಸು.45ಕಿಮೀ ದೂರದಲ್ಲಿದೆ. ಇದನ್ನು ಇರ್ಪು ಎಂದೂ ಕರೆಯಲಾಗುತ್ತದೆ. ಕುರ್ಚಿ ಗ್ರಾಮಕ್ಕೆ ಸೇರಿರುವ ಈ ಯಾತ್ರಾಸ್ಥಳವನ್ನು ತಲುಪಲು ಕುಟ್ಟ ಶ್ರೀಮಂಗಲ ರಸ್ತೆಯಲ್ಲಿ ಹಾದು ಎಡಕ್ಕೆ ತಿರುಗಿ ಕಚ್ಚಾ ರಸ್ತೆಯಲ್ಲಿ 5ಕಿಮೀ ಸಾಗಿದರೆ ಇರ್ಪು ಸಿಗುತ್ತದೆ. ಇದು ಕಣಿವೆ ಭಾಗದಲ್ಲಿರುವ ರಮಣೀಯ ಜಾಗ. ಪೌರಾಣಿಕ ಹಿನ್ನಲೆ ಉಳ್ಳದ್ದು. ಇಲ್ಲಿರುವ ರಾಮೇಶ್ವರ ದೇವಾಲಯ ಹಾಗೂ ಬ್ರಹ್ಮಗಿರಿ ಬೆಟ್ಟದಿಂದ ಹರಿದುಬರುವ ಲಕ್ಷ್ಮಣ ತೀರ್ಥಹೊಳೆ ಇಲ್ಲಿಯ ಮಹತ್ತ್ವವನ್ನು ಹೆಚ್ಚಿಸಿದೆ. ಲಕ್ಷ್ಮಣತೀರ್ಥ ಇಲ್ಲಿ ಧುಮುಕಿ ಹರಿಯುವುದರಿಂದ ಜಲಪಾತ ಸೃಷ್ಟಿಯಾಗಿದೆ. ಇದು ಇರ್ಪು ಜಲಪಾತವೆಂದು ಜನಪ್ರಿಯವಾಗಿದೆ.

ಇರುಪು ಜಲಪಾತ

ಶ್ರೀರಾಮನು ಲಕ್ಷ್ಮಣತೀರ್ಥದ ದಡದಲ್ಲಿ ರಾಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನೆಂಬುದು ಸ್ಥಳಪುರಾಣ. ಈಗಿನ ದೇಗುಲದ ವಿಶಾಲ ಆವರಣ ಸುಂದರವಾಗಿದ್ದು ವಿವಿಧ ಕಟ್ಟಡಗಳನ್ನು ಹೊಂದಿದೆ. ಇಲ್ಲಿರುವ ಶಿಲ್ಪ ರಚನೆ ಕೇರಳದ ವಾಸ್ತುಶಿಲ್ಪವನ್ನು ಹೋಲುತ್ತದೆ. ದೇವಾಲಯದ ಸುತ್ತ ಪ್ರದಕ್ಷಿಣಾ ಪಥವಿದೆ. ಮೇಲ್ಭಾಗದಲ್ಲಿ ಶಿಖರವಿದೆ. ಹೊರ ಪ್ರಾಕಾರದಲ್ಲಿ ಗಂಧರ್ವ, ಭೈರವ, ಕುರ್ಚಿ ಮಹಾದೇವ, ಪಾರ್ವತಿ ಹಾಗೂ ಗಣಪತಿಯ ಗುಡಿಗಳಿವೆ. ಒಂದು ಸಣ್ಣ ಜೆಂಬಿಟ್ಟಿಗೆಯ ಗುಡಿಯಲ್ಲಿ ಖಾಲಿ ಇರುವ ಪಾಣಿಪೀಠವಿದೆ. ಎರಡು ಕಂಚಿನ ಮೂರ್ತಿಗಳಿದ್ದು, ಕುದರೆಯ ಮೇಲೆ ಕುಳಿತ ಮತ್ತೊಂದು ಮೂರ್ತಿ ಗಂಡಿನದಾಗಿದ್ದು ಕೈಯಲ್ಲಿ ಖಡ್ಗ ಹಾಗೂ ಫಲಕವಿದೆ. ಶಿವರಾತ್ರಿಯಂದು ಇಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತದೆ.

ರಾಮೇಶ್ವರ ದೇವಾಲಯ

ರಾಮೇಶ್ವರ ದೇವಾಲಯ ಆಗಿಂದಾಗ್ಗೆ ಜೀರ್ಣೋದ್ಧಾರವಾಗಿದೆ. ಕಿಗ್ಗಟ್ಟು ಹತ್ತುನಾಡು ರೈತರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ಬಗ್ಗೆ ಶಾಸನ ದಾಖಲೆಯಿದೆ.

ದೇವಾಲಯದ ದಕ್ಷಿಣಕ್ಕಿರುವ ಕುರ್ಚಿ ಗ್ರಾಮದಲ್ಲಿ ಹಿಂದೆ ಅರಮನೆ ಇತ್ತು. ದೊಡ್ಡವೀರರಾಜೇಂದ್ರ ಪಿರಿಯಾಪಟ್ಟಣದಿಂದ ಕಣ್ತಪ್ಪಿಸಿಕೊಂಡು ಬಂದಾಗ ಇಲ್ಲಿಯ ಆಯಕಟ್ಟಿನ ಜಾಗದಲ್ಲಿ ಚಿಕ್ಕ ಅರಮನೆ ಕಟ್ಟಿಸಿದ. ಇದನ್ನು ಕೇರಳದ ಇವನ ಶತ್ರುಗಳು ಸುಟ್ಟುಹಾಕಿದರು ಎಂದು ಹೇಳಲಾಗುತ್ತದೆ. ಪಿರಿಯಾಪಟ್ಟಣ ತಾಲ್ಲೂಕಿನ ಕಂಪಲಾಪುರದ 1174ರ ಶಾಸನದಲ್ಲಿ ಉಲ್ಲೇಖಿತವಾಗಿರುವ ಮಾಂಡಲೀಕ ಉದಯಾದಿತ್ಯನ ರಾಜಧಾನಿ ಕುರುಚಿ ಎಂಬ ಸ್ಥಳ ಇದೇ. ಕುರ್ಚಿ ಎಂದೂ ಹೇಳಲಾಗಿದೆ. ಇಲ್ಲಿ ಅಜಮಾಡ ಕುಟುಂಬಕ್ಕೆ ಸೇರಿದ ದೊಡ್ಡಮನೆ ಇದ್ದು ಎರಡು ಹಳೆಯ ತಾಳವಾರಗಳಿವೆ.

ದೇವಾಲಯದ ವಾಯುವ್ಯಕ್ಕೆ ಸುಮಾರು 1ಕಿ.ಮೀ ಏರುದಾರಿಯನ್ನು ಶ್ರಮಿಸಿದರೆ ಇರ್ಪು ಜಲಪಾತ ಸಿಗುತ್ತದೆ. ಇದಕ್ಕೆ ಸ್ವಲ್ಪ ದೂರದಲ್ಲಿ ಬ್ರಹ್ಮಗಿರಿ ಪರ್ವತ ಶ್ರೇಣಿ ಇದೆ. ಇಲ್ಲಿಂದ ಸುಂದರ ನಿಸರ್ಗವನ್ನು ವೀಕ್ಷಿಸಬಹುದು. ಕಡಿದಾದ ಕೋನಾಕಾರದ ಬೆಟ್ಟಗಳ ನಡುವೆ ಸು.100 ಅಡಿ ಹಾಗೂ 70 ಅಡಿ ಎತ್ತರದಿಂದ ಎರಡು ಹಂತಗಳಲ್ಲಿ ಈ ಹೊಳೆಯು ಭೋರ್ಗರೆಯುವ ಬಂಡೆಗಳಿಂದ ಕೂಡಿರುವ ಪ್ರಪಾತಕ್ಕೆ ಧುಮುಕುವ ದೃಶ್ಯ ನಯನ ಮನೋಹರವಾದುದು. ಲಕ್ಷ್ಮಣತೀರ್ಥ ಹೊಳೆ ಇಲ್ಲಿಂದ ವಾಯುವ್ಯಕ್ಕೆ ಹರಿದು ರಾಯತೀರ್ಥವೆಂಬ ಸಣ್ಣಹೊಳೆಯನ್ನು ಕೂಡಿಕೊಂಡು ಸಾಗಿ ಮೈಸೂರು ಜಿಲ್ಲೆಯಲ್ಲಿ ಕಾವೇರಿಯನ್ನು ಸೇರುತ್ತದೆ. ಇರ್ಪುವಿನಲ್ಲಿ ಶಿವರಾತ್ರಿಯ ಮರುದಿನ ದೊಡ್ಡ ಜಾತ್ರೆ ನಡೆಯುತ್ತದೆ. (ಎಸ್.ಎಚ್.ಇ.)

**ಇಸ್ತೂರು** : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಗ್ರಾಮ. ದೊಡ್ಡಬಳ್ಳಾಪುರದಿಂದ ಸು.12ಕಿಮೀ ದೂರದಲ್ಲಿದೆ. ಇದಕ್ಕೆ ಇಟ್ಟೂರು, ಏಸೂರು ಎಂಬ ಹೆಸರುಗಳೂ ಇವೆ. ಗ್ರಾಮದ ಹೊರವಲಯದಲ್ಲಿರುವ ನೀಲಕಂಠೇಶ್ವರ ದೇವಾಲಯ ಗಂಗರ ಕಾಲದ ಶೈಲಿಯಲ್ಲಿದೆ. ದೇವಾಲಯಕ್ಕೆ ಚತುರಸ್ರ ಗರ್ಭಗುಡಿ ಮತ್ತು ಕದಂಬನಾಗರ ಶೈಲಿಯ ಶಿಖರಗಳಿವೆ. ಇಲ್ಲಿ ಸೂರ್ಯ, ವಿಷ್ಣು, ಗಣೇಶ ಹಾಗೂ ಮಹಿಷಮರ್ದಿನಿ ಶಿಲ್ಪಕೃತಿಗಳಿವೆ. ಗರ್ಭಗುಡಿಯ ಮುಂದೆ ಅರ್ಧಮಂಟಪ ಹಾಗೂ ಅದರ ಮುಂದೆ ಹೊರಮಂಟಪ ಇದ್ದು ಇವೆರಡೂ ತರುವಾಯದಲ್ಲಿ ಸೇರಿಸಿದವಾಗಿದ್ದು ಹೊರಮಂಟಪ ಸಂಪೂರ್ಣ ವಿಜಯನಗರ ಶೈಲಿಯಲ್ಲಿದೆ. ಊರಿನ ಒಳಗೆ ಕೋದಂಡರಾಮ, ಆಂಜನೇಯ, ಕಬ್ಬಾಳಮ್ಮ ಮತ್ತು ಬಸವಣ್ಣ ದೇವಾಲಯಗಳಿವೆ. ಕಬ್ಬಾಳಮ್ಮ ದೇವಾಲಯದ ಬಳಿಯಲ್ಲಿ 1306ರ ಹೊಯ್ಸಳರ ಶಾಸನವೊಂದಿದೆ. ಮುಮ್ಮಡಿ ಬಲ್ಲಾಳನು ಬಡಿಗ, ಕಮ್ಮಾರ ಹಾಗೂ ಅಕ್ಕಸಾಲಿಗ ಮತ್ತು ಎಲ್ಲಾ ವೀರಪಾಂಚಾಳರು ಯಾರು ದ್ವಾರಸಮುದ್ರದ ಹಿರಿಯ ಕಲಮಠ ಹಾಗೂ ಅದರ ಶಾಖಾಮಠವಾದ ಜಪೆಗೂಮಠಕ್ಕೆ ಸಂಬಂಧಿಸಿರುವರೊ ಅವರೆಲ್ಲರಿಗೂ ಅನೇಕ ದಾನಗಳನ್ನು ಇತ್ತುದನ್ನು ದಾಖಲಿಸಿದೆ. ಅನೇಕ ಸುಂಕಗಳಿಗೆ ಸಂಬಂಧಿಸಿದಂತೆ ತಾಮ್ರಶಾಸನವನ್ನು ಬರೆಸಿದ ಸಂಗತಿಯನ್ನೂ ಈ ಶಾಸನ ತಿಳಿಸಿದೆ. ಇಲ್ಲಿಗೆ ಸಮೀಪದ ಕಾಡನೂರು ಮತ್ತು ದೊಡ್ಡಹೆಜ್ಜಾಜಿ ಗ್ರಾಮಗಳಲ್ಲಿ ವಿಜಯನಗರ ಕಾಲದ ದೇವಾಲಯಗಳಿವೆ. (ಎಸ್.ಜಿ.ಎ.)

**ಇಸ್ಮಾಯಿಲ್ ಆದಿಲ್ ಷಾ** : ಆದಿಲ್ ಶಾಹೀ ಮನೆತನದ 2ನೆಯ ದೊರೆ (1510-34). ಅದರ ಸ್ಥಾಪಕ ಯೂಸುಫನ ಮಗ. ಇವನು ಸುಲ್ತಾನನಾದಾಗ 12-13 ವರ್ಷಗಳ ಬಾಲಕ. ಯೂಸುಫ್ ತನ್ನ ಕೊನೆಗಾಲದಲ್ಲಿ ಮಂತ್ರಿ ಕಮಾಲ್‌ಖಾನನನ್ನು ರಾಜ್ಯ ಪ್ರತಿನಿಧಿಯನ್ನಾಗಿ ನೇಮಿಸಿದ್ದ. ಕಮಾಲ್‌ಖಾನ್ ಅಧಿಕಾರವನ್ನು ತನ್ನಲ್ಲೇ ಕೇಂದ್ರೀಕರಿಸಿಕೊಂಡು ಇಸ್ಮಾಯಿಲ್‌ನನ್ನು ಪದಚ್ಯುತಿಗೊಳಿಸಿ ಸುಲ್ತಾನನಾಗಲು ಪ್ರಯತ್ನಪಟ್ಟ. ಆದರೆ ಆ ಸಂಚಿನಲ್ಲಿ ಕಮಾಲ್‌ಖಾನನೇ ಕೊಲೆಯಾದ. ಬಹಮನೀ ರಾಜ್ಯದಲ್ಲಿ (ಬಿದರೆ) ಪ್ರಬಲನಾಗಿದ್ದ ಅಮೀರ್ ಬರೀದ್ ಎಂಬ ತುರ್ಕಿ ಶ್ರೀಮಂತನ ಕೈವಾಡದಿಂದ ಬಹಮನೀ ಮತ್ತು ಆದಿಲ್ ಶಾಹೀ ರಾಜ್ಯಗಳ ನಡುವೆ ಅನೇಕ ಯುದ್ಧಗಳು ನಡೆದವು. ಹಿಂದೆ ಇಸ್ಮಾಯಿಲ್‌ನನ್ನು ಪದಚ್ಯುತಿಗೊಳಿಸುವ ಒಳಸಂಚಿನಲ್ಲಿ ಕಮಾಲ್‌ಖಾನನ ಜೊತೆ ಅಮೀರ್ ಬರೀದ್ ಸಹ ಸೇರಿದ್ದ.

ಇಸ್ಮಾಯಿಲ್‌ನ ಕಾಲದಲ್ಲಿ ವಿಜಯನಗರದೊಡನೆಯೂ ಯುದ್ಧಗಳು ನಡೆದುವು. ರಾಯಚೂರು ಮತ್ತು ಮುದ್ಗಲನ್ನು ವಿಜಯನಗರದ ರಾಜನಿಂದ ಗೆಲ್ಲುವ ಉದ್ದೇಶದಿಂದ ದಂಡೆತ್ತಿ ಹೋಗಿ ಕೃಷ್ಣಾನದಿಯ ದಂಡೆಯ ಮೇಲೆ ಬಿಡಾರ ಬಿಟ್ಟಾಗ (1520ರ ಮೇ) ಕೃಷ್ಣದೇವರಾಯನ ಸೈನ್ಯಕ್ಕೂ ಮತ್ತು ಇಸ್ಮಾಯಿಲ್‌ನ ಸೈನ್ಯಕ್ಕೂ ನಡೆದ ಯುದ್ಧದಲ್ಲಿ ಇಸ್ಮಾಯಿಲ್ ಸೋತು ಪಲಾಯನ ಮಾಡಿದ. ಕಾಲಕ್ರಮೇಣ ಕೃಷ್ಣದೇವರಾಯನೇ ಬಿಜಾಪುರದ ಮೇಲೆ ದಂಡೆತ್ತಿಹೋಗಿ ಇಸ್ಮಾಯಿಲ್‌ನನ್ನು ಸೋಲಿಸಿ ತನ್ನ ರಾಜ್ಯಕ್ಕೆ ಹಿಂದಿರುಗಿದ. ಪುನಃ ಇಸ್ಮಾಯಿಲ್ ರಾಯಚೂರನ್ನು ಗೆಲ್ಲಲು ಪ್ರಯತ್ನಿಸಿ ವಿಫಲನಾದ. ಕೃಷ್ಣದೇವರಾಯನ ಮರಣಾನಂತರ ಇಸ್ಮಾಯಿಲ್ ರಾಯಚೂರು ಮತ್ತು ಮುದ್ಗಲಗಳನ್ನು ಗೆದ್ದುಕೊಂಡ.

ಇಸ್ಮಾಯಿಲ್‌ನ ಆಸ್ಥಾನಕ್ಕೆ ಇರಾನಿನ ಷಾ ರಾಯಭಾರಿಗಳನ್ನು ಕಳುಹಿಸಿದ್ದ. ಇದರಿಂದ ಪ್ರೀತನಾದ ಇಸ್ಮಾಯಿಲ್ ಇರಾನಿನ ಷಾ ಅನುಸರಿಸುತ್ತಿದ್ದ ಷಿಯಾ ಪಂಥಕ್ಕೆ ಪ್ರೋತ್ಸಾಹ ನೀಡಿದ. ರಾಜ್ಯ ವ್ಯವಹಾರದಲ್ಲಿ ಪ್ರಬಲರಾಗಿದ್ದ ದಖನೀ ಗುಂಪಿನವರ ಹಮ್ಮನ್ನು ತಗ್ಗಿಸಿದ್ದು ಇವನ ಸಾಧನೆಗಳಲ್ಲೊಂದು. (ಎಸ್.)

**ಇಸ್ಮಾಯಿಲ್, ಮಿರ್ಜಾ ಮಹಮ್ಮದ್** : 1883-1959. ಪ್ರಸಿದ್ಧ ಆಡಳಿತಗಾರರು, ಮೈಸೂರು ಸಂಸ್ಥಾನದ ದಿವಾನರು (1926-41).

ಪರ್ಷಿಯಾದಿಂದ ಬಂದು ಬೆಂಗಳೂರಿನಲ್ಲಿ ನೆಲೆಸಿದ್ದ ಗಣ್ಯ ಕುಟುಂಬವೊಂದರಲ್ಲಿ 1883 ಅಕ್ಟೋಬರ್ 20ರಂದು ಜನಿಸಿದರು. ಬಾಲ್ಯ

ವಿದ್ಯಾಭ್ಯಾಸ ಬೆಂಗಳೂರಿನ ಸೇಂಟ್ ಪ್ಯಾಟ್ರಿಕ್ ಶಾಲೆ ಮತ್ತು ವೆಸ್ಲಿಯನ್ ಶಾಲೆಗಳಲ್ಲಿ. ಅನಂತರ ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿದ (1901) ವಿಶೇಷ ಶಾಲೆಯಲ್ಲಿ ಅವರ ಸಹಪಾಠಿಗಳಾಗಿದ್ದು, ಮುಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಪದವೀಧರರಾಗಿ (1905), ಅದೇ ವರ್ಷ ಮೈಸೂರು ಸರ್ಕಾರದ ಪೊಲೀಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಸೂಪರಿಟೆಂಡೆಂಟ್ ಆಗಿ ನೇಮಕವಾದರು. ಮಹಾರಾಜರ ಉಪಕಾರ್ಯದರ್ಶಿ (1908), ಹುಜೂರ್ ಕಾರ್ಯದರ್ಶಿ (1914), ಆಪ್ತಕಾರ್ಯದರ್ಶಿ (1923) ಹುದ್ದೆಗಳನ್ನು ವಹಿಸಿಕೊಂಡು 1926ರಲ್ಲಿ ಸಂಸ್ಥಾನದ ದಿವಾನರಾದರು.

ಇವರು ದಿವಾನರಾಗಿದ್ದ ಹದಿನೈದು ವರ್ಷಗಳಲ್ಲಿ (1926-41) ಸರ್ ಎಂ.ವಿಶ್ವೇಶ್ವರಯ್ಯನವರು ಹಾಕಿದ್ದ ತಳಹದಿಯ ಮೇಲೆ ರಾಜ್ಯದ ಸರ್ವತೋಮುಖ ಬೆಳವಣಿಗೆಯನ್ನು ಸಾಧಿಸಲು ಯತ್ನಿಸಿದರು. ಮೈಸೂರು ಸಂಸ್ಥಾನ ಬ್ರಿಟಿಷರಿಗೆ ಕೊಡಬೇಕಾಗಿದ್ದ ಕಪ್ಪವನ್ನು 35 ಲಕ್ಷದಿಂದ 10½ ಲಕ್ಷಕ್ಕೆ ಇಳಿಸಿದರು (1928). ಮಂಡ್ಯ, ಮಳವಳ್ಳಿ ಮತ್ತು ತಿರುಮಕೂಡಲು ನರಸೀಪುರ ತಾಲ್ಲೂಕುಗಳಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುವ ಇರ್ವಿನ್ ನಾಲೆ (ಈಗಿನ ವಿಶ್ವೇಶ್ವರಯ್ಯ ನಾಲೆ) ನಿರ್ಮಾಣ ಮೊದಲಾದ ಕಾರ್ಯಗಳಿಂದ ಇವರ ಆಡಳಿತ ಕಾಲದಲ್ಲಿ 1,20,000 ಎಕರೆ ಭೂಮಿ ನೀರಾವರಿ ವ್ಯವಸಾಯಕ್ಕೆ ಬಂದಿತು. ಜೋಗ್ ಮತ್ತು ಶಿಂಷಾಗಳಲ್ಲಿ ವಿದ್ಯುದುತ್ಪಾದನಾ ಸ್ಥಾವರಗಳನ್ನು ಸ್ಥಾಪಿಸಿದ್ದಲ್ಲದೆ, ಗ್ರಾಮಗಳಿಗೂ ವಿದ್ಯುತ್ ಒದಗಿಸುವ ಯೋಜನೆಯನ್ನು ಇಡೀ ಭಾರತದಲ್ಲೇ ಮೊದಲು ಈ ಸಂಸ್ಥಾನದಲ್ಲಿ ಜಾರಿಗೆ ತಂದರು. ಭದ್ರಾವತಿಯಲ್ಲಿ ಕಾಗದ ಮತ್ತು ಸಿಮೆಂಟ್ ಕಾರ್ಖಾನೆಗಳು, ಬೆಂಗಳೂರಿನಲ್ಲಿ ಪಿಂಗಾಣಿ ಮತ್ತು ವಿಮಾನ ಕಾರ್ಖಾನೆಗಳು, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಬೆಳಗೊಳದಲ್ಲಿ ರಾಸಾಯನಿಕ ಮತ್ತು ಗೊಬ್ಬರದ ಕಾರ್ಖಾನೆ, ಶಿವಮೊಗ್ಗದಲ್ಲಿ ಬೆಂಕಿಪೆಟ್ಟಿಗೆ ಕಾರ್ಖಾನೆ ಇತ್ಯಾದಿಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಿ ರಾಜ್ಯದ ಔದ್ಯಮಿಕ ಪ್ರಗತಿಗೆ ಕಾರಣರಾದರು. ಗ್ರಾಮಕೈಗಾರಿಕೆಯನ್ನು ಉತ್ತಮಪಡಿಸಲು ಇವರು ಶ್ರಮಿಸಿದರು. ರೇಷ್ಮೆ

ಕೈಗಾರಿಕೆಗೂ ಗಮನವಿತ್ತರು. ಮೈಸೂರಿನ ಉತ್ಪನ್ನಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆ ಪಡೆಯುವ ಸಲುವಾಗಿ ಲಂಡನ್ನಿನಲ್ಲಿ ಒಬ್ಬ ಟ್ರೇಡ್ ಕಮಿಷನರನ್ನು ನೇಮಿಸಿದರು. ಬೆಂಗಳೂರು ಮತ್ತು ಮೈಸೂರು ನಗರಗಳನ್ನು ಸುಂದರಗೊಳಿಸಿದ್ದಲ್ಲದೆ, ಕೃಷ್ಣರಾಜಸಾಗರ ಜಲಾಶಯದ ಹಿಂಬದಿಯಲ್ಲಿ ಪ್ರಸಿದ್ಧ ಬೃಂದಾವನವನ್ನು ನಿರ್ಮಿಸಲು ಮಿರ್ಜಾರವರೇ ಕಾರಣ. ಗಾಂಧೀಜೀಯವರಲ್ಲಿ ಗೌರವವಿದ್ದ ಇವರು ಅವರನ್ನು 1927ರಲ್ಲಿ ಮೈಸೂರಿಗೆ ಆಹ್ವಾನಿಸಿ ಕೆಲವು ಕಾಲ ಆರೋಗ್ಯ ಸುಧಾರಣೆಗಾಗಿ ನಂದಿಬೆಟ್ಟದಲ್ಲಿ ತಂಗುವಂತೆ ಮಾಡಿದ್ದರು. ಮಿರ್ಜಾರವರು ಲಂಡನ್ನಿನಲ್ಲಿ ನಡೆದ (1930-32) ಮೂರು ದುಂಡುಮೇಜಿನ ಪರಿಷತ್ತುಗಳಲ್ಲೂ ದಕ್ಷಿಣ ಭಾರತದ ದೇಶಿ ರಾಜ್ಯಗಳ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಭಾರತದ ಭಾವೀ ರಾಜ್ಯ ಘಟನೆಯಲ್ಲಿ ದೇಶಿ ರಾಜ್ಯಗಳ ಮತ್ತು ಬ್ರಿಟಿಷ್ ಭಾರತದ ಪ್ರಾಂತ್ಯಗಳ ಸಂಯುಕ್ತ ವ್ಯವಸ್ಥೆಯ ಅಭಿಪ್ರಾಯವನ್ನು ಸ್ಪಷ್ಟೀಕರಿಸಿದರು. ಇವರ ಕಾಲದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮೈಸೂರು ರಾಜ್ಯದಲ್ಲೂ ಬಿರುಸಾಗಿ ನಡೆದು ಸರ್ಕಾರಕ್ಕೂ ಜನತೆಗೂ ನಡುವೆ ಅನೇಕ ಘರ್ಷಣೆಗಳುಂಟಾದವು. ನಾಲ್ವಡಿ ಕೃಷ್ಣರಾಜ ಒಡೆಯರ್ ಅನಂತರ ಜಯಚಾಮರಾಜ ಒಡೆಯರ್ ಅವರು 1940ರಲ್ಲಿ ಸಿಂಹಾಸನಕ್ಕೆ ಬಂದಮೇಲೂ ಕೆಲಕಾಲ ದಿವಾನರಾಗಿದ್ದು 1941ರ ಮೇ ತಿಂಗಳಲ್ಲಿ ವಿಶ್ರಾಂತಿ ಪಡೆದರು.

ಮೈಸೂರಿನಿಂದ ನಿವೃತ್ತರಾದ ಮೇಲೆ ಜಯಪುರದಲ್ಲಿ ಪ್ರಧಾನಮಂತ್ರಿಯಾಗಿ (1942-46) ಆ ನಗರದ ಸೌಂದರ್ಯವರ್ಧನೆ, ರಾಜಸ್ಥಾನ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ಆ ದೇಶದ ಸಂವಿಧಾನದ ಹಲವು ಬದಲಾವಣೆಗಳಿಗೆ ಕಾರಣರಾದರು. ಅನಂತರ 1946ರ ಆಗಸ್ಟ್‌ನಿಂದ 1947ರ ಮೇ ವರೆಗೆ ಹೈದರಾಬಾದ್ ಸಂಸ್ಥಾನದ ಪ್ರಧಾನ ಮಂತ್ರಿಯಾಗಿದ್ದರು. ನಿಷ್ಠಾವಂತ ಅಧಿಕಾರಿಯೆಂದು ಹೆಸರುಗಳಿಸಿದ್ದ ಇವರಿಗೆ ಬ್ರಿಟಿಷ್ ಸಾರ್ವಭೌಮರಿಂದ 1930ರಲ್ಲಿ ಕೆ.ಸಿ.ಐ.ಇ. ಪ್ರಶಸ್ತಿ ದೊರಕಿತು. ಮಿರ್ಜಾರವರು 1959ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. (ಬಿ.ಎಸ್.ಎ.)

**ಇಸ್ಲಾಂ ಧರ್ಮ :** ಏಳನೆಯ ಶತಮಾನದಲ್ಲಿ ಅರಬ್ ದೇಶದಲ್ಲಿ ಉಗಮವಾದ ಇಸ್ಲಾಂ ಧರ್ಮ ಅಲ್ಲಿಂದ ಒಂದೆರಡು ಶತಮಾನಗಳಲ್ಲೇ ಸುತ್ತಮುತ್ತಲ ಪ್ರದೇಶಕ್ಕೆಲ್ಲ ಹರಡಿತು. ಅರಬ್ಬೀ ವರ್ತಕರು ಕರ್ನಾಟಕದ ಪಶ್ಚಿಮ ತೀರದ ಪ್ರದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದರೆಂದು ತಿಳಿಯುವುದರಿಂದ ಸುಮಾರು ಈ ಕಾಲದಲ್ಲೇ ಕರ್ನಾಟಕಕ್ಕೆ ಈ ಧರ್ಮ ಮೊದಲು ಬಂದಿರಬೇಕೆಂದು ಹೇಳಬಹುದು. ರಾಷ್ಟ್ರಕೂಟ ಅರಸರ ಕಾಲದಲ್ಲಿ ಅವರ ರಾಜ್ಯದಲ್ಲಿ ಇಸ್ಲಾಮೀಯರು ಇದ್ದಂತೆಯೂ ಅವರು ತಮ್ಮ ನ್ಯಾಯನೀತಿಗಳ ನಿರ್ಧಾರಕ್ಕೆ ತಮ್ಮ ಅಧಿಕಾರಿಗಳು, ಕಾಜಿಗಳನ್ನು ಹೊಂದಿರುವುದಕ್ಕೆ ಅವಕಾಶವಿತ್ತೆಂದೂ ಆ ಕಾಲದ ಕೆಲವು ಅರಬ್ಬೀ ಲೇಖಕರು ತಿಳಿಸಿದ್ದಾರೆ. ಆ ಜನ ಸ್ಥಳೀಯ ವೇಷಭೂಷಣಗಳನ್ನೇ ಧರಿಸುತ್ತಿದ್ದರೆಂಬ ಹೇಳಿಕೆ ಸಹ ಇದೆ. ಇವುಗಳ ಬಗ್ಗೆ ಶಾಸನಾಧಾರಗಳು ಕರ್ನಾಟಕದಲ್ಲಿ ದೊರಕುವುದಿಲ್ಲ. ಠಾಣಾ ಜಿಲ್ಲೆಯಲ್ಲಿ ದೊರೆತ 926ರ ಒಂದು ಶಾಸನದಲ್ಲಿ ತಾಜಿಕನೊಬ್ಬ (ಅರಬ್ಬೀ) ರಾಷ್ಟ್ರಕೂಟರ ಕೈಕೆಳಗೆ ಪ್ರಾಂತ್ಯಾಧಿಕಾರಿಯಾಗಿದ್ದ ಬಗ್ಗೆ ಉಲ್ಲೇಖವಿದೆ. ಆದರೆ 11ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿಯಲ್ಲಿ ಇಸ್ಲಾಮೀಯರು ಹರಡಿದ್ದರೆಂಬುದಕ್ಕೆ ಸ್ಪಷ್ಟ ಸೂಚನೆಗಳಿವೆ. ಗೋವ ಕದಂಬ ದೊರೆ 1ನೆಯ ಜಯಕೇಶಿಯ ಅಂಗರಕ್ಷಕದಳದ ಮುಖ್ಯಸ್ಥ ತಾಜಿಕ ಕುಲದ ಅಲಿಯಮನ ಮಗ ಮದುಮುದನೆಂದೂ ಜಯಕೇಶಿ ಅವನಿಗೆ ಒಂದು ಗ್ರಾಮವನ್ನು ದತ್ತಿ ನೀಡಿದ್ದನೆಂದೂ 1054ರ ಒಂದು ಶಾಸನ ತಿಳಿಸುತ್ತದೆ. 12-13 ನೆಯ ಶತಮಾನಗಳಲ್ಲಿ ಸಹ ಅರಬ್ ಮತ್ತು ತುರ್ಕಿ ದೇಶಗಳಿಂದ ಉತ್ತಮತಳಿಯ ಕುದುರೆಗಳನ್ನು ಆ ದೇಶದ ಜನ ಇಲ್ಲಿಗೆ ತಂದು ವ್ಯಾಪಾರ ನಡೆಸುತ್ತಿದ್ದರು ಎಂಬ ಬಗ್ಗೆ ಗ್ರಂಥಾಧಾರಗಳಿವೆ. ಕೆಲವು ಶಾಸನಗಳು ಈ ಜನರನ್ನು ತುರುಷ್ಕರು ಎಂದು ಹೆಸರಿಸುತ್ತವೆ.

ಮಲಿಕ್ ಕಾಫೂರನ ದಂಡೆಯಾತ್ರೆ ಮತ್ತು ಬಹಮನೀ ಸಾಮ್ರಾಜ್ಯದ ಸ್ಥಾಪನೆಯೊಡನೆ ಈ ಧರ್ಮ ದಕ್ಷಿಣದಲ್ಲಿ ತ್ವರಿತವಾಗಿ ಹರಡಲಾರಂಭಿಸಿತು. ಮೊದಮೊದಲು ಇಲ್ಲಿ ನೆಲೆಸಿದ ಇಸ್ಲಾಮೀಯರು ಉತ್ತರ ಭಾರತದಿಂದ ಬಂದವರಾದರೂ ಅವರ ಅಧಿಕಾರ ದಕ್ಷಿಣದಲ್ಲಿ ನೆಲೆಯೂರಿದ ಮೇಲೆ ಉತ್ತರದವರೊಡನೆ ಅವರ ರಾಜಕೀಯ ಸಂಬಂಧಗಳು ಸುಗಮವಾಗಿ ಉಳಿಯಲಿಲ್ಲ. ಈ ನೆಲಸಿಗರಲ್ಲಿ ಹಲವರು ಮೂಲತಃ ಪಶ್ಚಿಮ ಏಷ್ಯದವರಾಗಿದ್ದರಿಂದ, ಅದೇ ಪ್ರದೇಶದ ಮುಸಲ್ಮಾನರೂ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕರ್ನಾಟಕ ಪ್ರದೇಶದಲ್ಲಿ ನೆಲಸಲಾರಂಭಿಸಿದರು. ಹೀಗೆ ನೆಲಸಿದವರಲ್ಲಿ ಕವಿಗಳು, ಕಲಾಕಾರರು, ಶಿಲ್ಪತಜ್ಞರು, ಸಂತರು ಸಹ ಇದ್ದು ಕರ್ನಾಟಕದಲ್ಲಿ ಇಸ್ಲಾಮೀ ಸಂಸ್ಕೃತಿ ಚೆನ್ನಾಗಿ ವ್ಯವಸ್ಥಿತವಾಗಲು ಕಾರಣರಾದರು. ಬಹಮನೀ ರಾಜ್ಯ ಒಡೆದ ಮೇಲೆ ಹುಟ್ಟಿದ ಬರೀದ್ ಶಾಹೀ, ಆದಿಲ್‌ಶಾಹೀ ಮತ್ತು ಕುತ್ಬ್‌ಶಾಹೀ ರಾಜ್ಯಗಳ ಒಡೆತನದ ಕಾಲದಲ್ಲಿ ಹಾಗೂ ಔರಂಗಜೇಬನ ಕಾಲದಲ್ಲಿ, ಅಲ್ಲದೆ ಮುಂದೆ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಆಳಿದ ಆಸಫ್‌ಜಾಹೀ ಅರಸರು, ಹಲವರು ಚಿಕ್ಕನವಾಬರು ಮತ್ತು ಹೈದರ್‌ಅಲಿ, ಟಿಪ್ಪುಸುಲ್ತಾನ್ ಇವರುಗಳ ಕಾಲದಲ್ಲಿ ಇಸ್ಲಾಂ ಧರ್ಮ ವಿಶೇಷವಾಗಿ ಪ್ರೋತ್ಸಾಹಗಳಿಸಿ, ಅದರ ಅನುಯಾಯಿಗಳ ಸಂಖ್ಯೆ ದಿನೇ ದಿನೇ ವರ್ಧಿಸಿತು. ಇಸ್ಲಾಂ ಸಂಸ್ಕೃತಿ ಬಹುಮುಖವಾಗಿ ಪಸರಿಸಿತು. ಬಹಮನೀ ಅರಸರ ಕಾಲದಲ್ಲಿ ಆಫ್ರಿಕದಿಂದ ಬಂದ ಇಸ್ಲಾಮೀಯರೂ ಕರ್ನಾಟಕದಲ್ಲಿ ನೆಲೆನಿಂತರು. ಕಾಲಾಂತರದಲ್ಲಿ ಆಫ್ರಿಕದ ಸಿದ್ದಿಗಳೂ ಉತ್ತರ ಭಾರತದಿಂದ ಬಂದವರೂ ಹೊಸತಾಗಿ ಇಲ್ಲಿ ಮತಾಂತರ ಹೊಂದಿದವರೂ ಒಂದು ಪ್ರತ್ಯೇಕ ವರ್ಗವಾಗಿ ದಖ್ಖನಿಗಳೆಂದು ಕರೆಯಲ್ಪಟ್ಟರು. ಮಾಲಿಕ್ ಬಿನ್ ದೀನಾರರ ಮೂಲಕ ಮತಾಂತರ ಹೊಂದಿದ ಕರಾವಳಿ ಕರ್ನಾಟಕದ ಇಸ್ಲಾಮೀಯರು ಮಹಾಪಿಳ್ಳೆ ಎಂದು ಹೆಸರು ಪಡೆದು, ಕಾಲಾಂತರದಲ್ಲಿ ಮಾಪಿಳ್ಳೆಯರೆಂದು ಕರೆಯಲ್ಪಟ್ಟರು.



ಮಾಲಿಕ್ ರೋಹನ್ ದರ್ಗ, ಶಿರಾ

ಇಸ್ಲಾಂ ಧರ್ಮಾನುಯಾಯಿಗಳಲ್ಲಿ ಷಿಯಾ ಮತ್ತು ಸುನ್ನಿ ಎಂಬ ಎರಡು ಮುಖ್ಯ ವರ್ಗಗಳಿವೆ. ಪೈಗಂಬರರ ಅಂತ್ಯ ಪ್ರವಾದಿತ್ವವನ್ನೂ ನಾಯಕತ್ವವನ್ನೂ ಅನುಸರಿಸಿ ಬರುವವರು ಸುನ್ನಿ ಪಂಥದವರು, ಪೈಗಂಬರರ ಅನಂತರ ಇವರ ಸಂತಾನದಲ್ಲೇ ಮತ್ತೊಂದು ನಾಯಕತ್ವವನ್ನು ಆರಿಸಿದ ವರ್ಗ ಷಿಯಾ. ಇವರ ಸಂಖ್ಯೆ ಕರ್ನಾಟಕದಲ್ಲಿ ಕಡಿಮೆ. ಸುನ್ನಿ ಪಂಥದವರಲ್ಲಿ ಹನಫೀ, ಶಾಫೀ, ಹಂಬಲೀ ಮತ್ತು ಮಾಲಿಕೀ ಎಂಬ ನಾಲ್ಕು ವರ್ಗಗಳಿವೆ. ಅವುಗಳು ಆಯಾಯ ಇಮಾಮರ (ದಾರ್ಶನಿಕರ) ಹೆಸರಿನಿಂದಲೇ ಪ್ರಖ್ಯಾತವಾಗಿವೆ. ಅವುಗಳಲ್ಲಿ ಕರ್ನಾಟಕದಲ್ಲಿ ಹನಫೀ ಮತ್ತು ಶಾಫೀ ವರ್ಗಗಳು ಮಾತ್ರ ಪ್ರಬಲವಾಗಿವೆ. ಹನಫೀ ವರ್ಗ ಉತ್ತರ ಭಾರತದ ರಾಜರಿಂದ ಪ್ರಚಾರಗೊಂಡು ದಖ್ಖನದ ಬಹಮನೀ ಸುಲ್ತಾನರು, ಇತರ ದಖನೀ ರಾಜರು ಹಾಗೂ ಮತ ಪ್ರಚಾರಕರಿಂದಲೂ ಹೈದರ್ ಮತ್ತು ಟಿಪ್ಪುಸುಲ್ತಾನರ ಪ್ರಭಾವದಿಂದಲೂ ಕರ್ನಾಟಕದಾದ್ಯಂತ ವಿಸ್ತರಿಸಿಕೊಂಡಿದೆ. ಇವರ ಭಾಷೆ ಉರ್ದು. ಶಾಫೀ ವರ್ಗದವರು ಕರಾವಳಿ ಕರ್ನಾಟಕದ ಮಾಪಿಳ್ಳೆಯವರು. ಇವರ ಭಾಷೆ ಮಲೆಯಾಳಂ. ಕರ್ನಾಟಕದಲ್ಲಿ ಇವರ ಸಂಖ್ಯೆ ಕಡಿಮೆ. ಈ ಎರಡು ವರ್ಗಗಳ ಮಧ್ಯೆ ಹೆಚ್ಚಿನ ಅಂತರವಿಲ್ಲದೆ ಮೂಲಧರ್ಮದಲ್ಲಿ ಒಂದಾಗಿ ಒಟ್ಟಾಗಿ ಬಾಳುವವರು.

ಕರ್ನಾಟಕದಾದ್ಯಂತ ಅನೇಕ ಮಸೀದಿಗಳಿವೆ. ಹಲವು ಸಂತರ ಸಮಾಧಿ (ದರ್ಗಾ) ಹಾಗೂ ಕ್ಷೇತ್ರಗಳಿವೆ. ಗುಲ್ಬರ್ಗದ ಬಂದೇ ನವಾಜರ ದರ್ಗಾ ಬಹು ಜನರನ್ನು ಆಕರ್ಷಿಸುತ್ತದೆ. ಸಂತಪೀರ್ ಅವರ ಕ್ಷೇತ್ರ ಮೈಸೂರಲ್ಲಿದೆ. ಬಾಬಾಬುಡನ್ ಗಿರಿಯು ಸೂಫಿ ಸಂತ ಬಾಬಾಬುಡನ್‌ರವರೂ ಉಲ್ಲಾಳದ ಸೈಯದ್ ಮದನೀ ಅವರು ಕಾಸರಗೋಡಿನ ಮಾಲಿಕ್ ಬಿನ್ ದೀನಾರರೂ ಬೆಂಗಳೂರಿನ ಅಲ್ ಅಮಾನ್ ಹಜ್ರತ್ ಯುಕೀನ್ ಷಾ ವಲೀ ಅವರೂ ಪ್ರಮುಖ ಸಂತರೆಂದು ತಿಳಿಯಲಾಗಿದೆ. ಇವರಲ್ಲದೆ ಇಚ್ಚಲಂಗೋಡಿನ ಮಾಲಿಕ್ ಬಿನ್ ದೀನಾರರೂ ಮಂಗಳೂರಿನ ಸೈದಾನಿ ಬೀಬೀ ಮೊದಲಾದ ಅನೇಕ ಸಂತರ ದರ್ಗಾಗಳು ಕರ್ನಾಟಕದ ಹಲವೆಡೆಗಳಲ್ಲಿವೆ. ದಿವಂಗತರಾದ ಈ ಸಂತ ಮಹಾಪುರುಷರ ಕ್ಷೇತ್ರದಲ್ಲಿ ಹರಕೆ ಉರುಸ್ ಇತ್ಯಾದಿಗಳು ನಡೆಯುತ್ತವೆ. ಮುಸ್ಲಿಮರೇತರರು ಈ ಕ್ಷೇತ್ರಗಳ ಕಾರ್ಯಕ್ರಮಗಳಲ್ಲಿ ಜಾತಿಭೇದವಿಲ್ಲದೆ ಪಾಲುಗೊಳ್ಳುತ್ತಾರೆ. (ಬಿ.ಎಂ.ಇ.)

**ಇಳಕಲ್ಲು :** ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನಲ್ಲಿ ಹುನಗುಂದದ ದಕ್ಷಿಣಕ್ಕೆ 13ಕಿಮೀ ದೂರದಲ್ಲಿರುವ ಊರು. ಜನಸಂಖ್ಯೆ 30,014. ನೇಯ್ಗೆ ಹಾಗೂ ಬಣ್ಣಹಾಕುವ ಕೈಗಾರಿಕೆಗಳಿಗೆ ಅದರಲ್ಲೂ ಸೀರೆಗಳಿಗೆ ಬಹಳ ಪ್ರಸಿದ್ಧಿ. ಇಲ್ಲಿ ಬನಶಂಕರಿ, ಬಸವಣ್ಣ ಮತ್ತು ವೆಂಕೋಬ ದೇವಸ್ಥಾನಗಳಿವೆ. ಮೊದಲೆರಡೂ ಈಚಿನವು. ಕೊನೆಯದು ಸ್ವಲ್ಪ ಪ್ರಾಚೀನಕಾಲದ್ದು. ಇದರಲ್ಲಿ ಬಳಸಲಾಗಿರುವ ಕಲ್ಲಿನ ಕಂಬಗಳನ್ನು ಐಹೊಳೆಯಿಂದ ತಂದಿರಬಹುದೆಂದು ಊಹೆ. ಮಹಂತಸ್ವಾಮಿಗಳೆಂಬ ವಿರಕ್ತರೊಬ್ಬರು ಪೀಠಾಧಿಪರಾಗಿರುವ ಒಂದು ವೀರಶೈವ ಮಠ ಇಲ್ಲಿದೆ. ಇದರ ಸ್ಥಾಪಕರು ಮಹಿಮಾವಂತರೆಂದು ಈ ಸ್ಥಳದ ಎಲ್ಲ ವರ್ಗದ ಜನರೂ ಆದರಿಸುತ್ತಾರೆ. ಇಲ್ಲಿನ ಪೌರಸಭೆ 1867ರಲ್ಲಿ ಸ್ಥಾಪಿತವಾಯಿತು. ಇಲ್ಲಿ ಮೂರು ಪ್ರೌಢ ಶಾಲೆಗಳು, ಒಂದು ಕಾಲೇಜು ಹಾಗೂ ಒಂದು ಸರ್ಕಾರಿ ಶಿಕ್ಷಕರ ತರಬೇತಿ ಕಾಲೇಜು ಇವೆ. *

# ಈ

**ಈಶ್ವರಕವಿ :** ಸು.1500. ಕವಿಜಿಹ್ವಾಬಂಧನಂ ಎಂಬ ಕನ್ನಡ ಛಂದೋಗ್ರಂಥದ ಕರ್ತೃ. ಈತನ ತಂದೆ ಕಚ್ಚುಟೇಶ. ಕವಿ ತನ್ನನ್ನು ಅಭಿನವಕೇಶಿರಾಜ ಎಂದು ಕರೆದುಕೊಂಡಿರುವುದರಿಂದ ಮತ್ತು ಆಂಧ್ರಕವಿಗಳು ತಮ್ಮ ಕಾವ್ಯಗಳಲ್ಲಿ ಯಥೇಚ್ಛವಾಗಿ ಬಳಕೆಮಾಡಿದ ವಡಿಗಳ ವಿಷಯವನ್ನು ವಿವರಿಸುವುದರಿಂದ ಈತ ಕೇಶಿರಾಜ, ಅಪ್ಪಕವಿಗಳಿಗಿಂತ ಈಚಿನವನಿರಬೇಕೆಂದು ಅಭಿಪ್ರಾಯವಿದೆ. 'ನವಜನರ ಕುರಿತು ಛಂದೋವರ್ಣದೊಳ್ ಕನ್ನಡದ ಪ್ರಾಸವಡಿಭೇದಗಳಂ ವಿವರವಿಡಿದಷ್ಟಭಾಷಾಕವಿವರ ಬಾಣಾಖ್ಯನೊಲಿದು ಪೇಳ್ದಂ ಮುದದಿಂ'; 'ಶ್ರೀಕಾರಗಳಿಲ್ಲದ ಪದ ಲೋಕದೊಳಂ ಸಲ್ಲದೆಂದ ಕವಿ ಫಣಿವರ್ಮಂ'; 'ಇತಿ ಬಾಣಕವಿ ವಿನಿರ್ಮಿತಮಪ್ಪ ಛಂದೋಂಬುರಾಶಿ ಪ್ರಥಮಪರಿಚ್ಛೇದಸಮಾಪ್ತಃ' - ಎಂಬ ಮಾತುಗಳು ಇವನ ಗ್ರಂಥದಲ್ಲಿ ಕಂಡುಬರುವುದರಿಂದ ಇವನಿಗೆ ಬಾಣ, ಫಣಿವರ್ಮ ಎಂಬ ಹೆಸರುಗಳೂ ಅಷ್ಟಭಾಷಾಕವಿವರ ಎಂಬ ಬಿರುದೂ ಗ್ರಂಥಕ್ಕೆ ಛಂದೋಂಬುಧಿ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ.

ಕವಿಜಿಹ್ವಾಬಂಧನದಲ್ಲಿ ನಾಲ್ಕು ಪರಿಚ್ಛೇದಗಳಿವೆ. ಕಂದ ವೃತ್ತಗಳಲ್ಲಿ ಬರೆದಿದೆ. ಒಂದನೆಯ ಪರಿಚ್ಛೇದದಲ್ಲಿ ಗಣಗಳೂ ಅವುಗಳ ವರ್ಣವಾಹನಮೈತ್ರೀವೈರ ಕುಲದೇವತಾಫಲಾದಿಗಳು ಹೇಳಿವೆ. ಎರಡನೆಯದರಲ್ಲಿ ಪ್ರಾಸ ವಡಿಗಳು ವಿಶದವಾಗಿ ನಿರೂಪಿತವಾಗಿವೆ. ಪ್ರಾಸಗಳಲ್ಲಿ ಸಿಂಹ, ಗಜ, ವೃಷಭ ಮುಂತಾದ 28 ಪ್ರಾಸಗಳನ್ನು ಹೇಳಿದ್ದಾನೆ. ವಡಿಗಳಲ್ಲಿ ಪದ್ಮ, ಗರುಡ, ಸಾರಂಗ ಮುಂತಾದ 6 ಭೇದಗಳನ್ನು ಹೇಳಿದ್ದಾನೆ. ಮೂರನೆಯದರಲ್ಲಿ ಅಕ್ಷರಗಳು ಅವುಗಳ ಕುಲ, ಅಧಿದೇವತೆ ಮೊದಲಾದ ವಿಷಯಗಳಿವೆ. ನಾಲ್ಕನೆಯದರಲ್ಲಿ ರಸ, ಭಾವ. ಅಲಂಕಾರ, ಕಂದ, ಷಟ್ಪದಿಗಳ ಲಕ್ಷಣ ಮುಂತಾದ ಅಂಶಗಳನ್ನು ಹೇಳಿದೆ. ಈತ ತನ್ನ ಗ್ರಂಥವನ್ನು ಕಾವ್ಯವೆಂದೂ ತಾನು ಕವೀಶಂ ಎಂದೂ ಹೇಳಿಕೊಂಡಿದ್ದರೂ ಇದೊಂದು ಲಕ್ಷಣಗ್ರಂಥ ಎಂಬುದು ಕೃತಿಯ ಅಭ್ಯಾಸದಿಂದ ತಿಳಿಯುತ್ತದೆ. (ಪಿ.ವಿ.ಸಿ.)

**ಈಸೂರು :** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಕಸಬೆಯಿಂದ 10ಕಿಮೀ ದಕ್ಷಿಣಕ್ಕೆ ಕುಮುದ್ವತಿ ನದಿಯ ಬಲದಂಡೆಯ ಮೇಲಿರುವ ಗ್ರಾಮ.

ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಿವಮೊಗ್ಗ ಜಿಲ್ಲೆಗೆ ಹೆಸರು ತಂದ ಊರು ಈಸೂರು. ಮಹಾತ್ಮ ಗಾಂಧೀಯವರ ಭಾರತ ಬಿಟ್ಟು ತೊಲಗಿ ಘೋಷಣೆಯೊಂದಿಗೆ ಅಂದಿನ ಬ್ರಿಟಿಷ್ ಸರ್ಕಾರ 1942 ಆಗಸ್ಟ್ 9ರಂದು ಭಾರತದ ಸ್ವಾತಂತ್ರ್ಯ ಚಳವಳಿಯ ನಾಯಕರನ್ನೆಲ್ಲ ಬಂಧಿಸಿತ್ತು. ಈಸೂರಿನ ಜನತೆಯೂ ನಾಯಕನ ಕರೆಗೆ ಓಗೊಟ್ಟು ತಾಳ್ಮೆಯಿಂದಲೇ ಸ್ವಾತಂತ್ರ್ಯ ಚಳವಳಿಯನ್ನು ನಡೆಸುತ್ತಿತ್ತು. 150ರಿಂದ 200 ಮಂದಿ ಗ್ರಾಮದಲ್ಲಿ ಮೆರವಣಿಗೆ ನಡೆಸಿ ಸರ್ಕಾರಕ್ಕೆ ತೆರಿಗೆಯನ್ನು ಕೊಡದಂತೆ, ಪ್ರತಿಭಟಿಸುವ ಅಧಿಕಾರಿಗಳನ್ನು ಗಮನಿಸದಂತೆ, ಸರ್ಕಾರಿ ಅಧಿಕಾರಿಗಳಿಗೆ, ಶಾಲೆಗೆ, ಕಚೇರಿಗಳಿಗೆ ಧಿಕ್ಕಾರ ಘೋಷಿಸಿದರು. 1942 ಸೆಪ್ಟೆಂಬರ್ 25ರಂದು ಸರ್ಕಾರದ ಅಧಿಕಾರವನ್ನು ಧಿಕ್ಕರಿಸಿ ಈಸೂರನ್ನು ಸ್ವತಂತ್ರ ಹಳ್ಳಿ ಎಂಬುದಾಗಿ ಸಾರಿದರು. ತಮ್ಮದೇ ಆದ ಸರ್ಕಾರ ರಚಿಸಿಕೊಂಡು ಗ್ರಾಮದ ಆಡಳಿತ ನಡೆಸತೊಡಗಿದರು. 1942 ಸೆಪ್ಟೆಂಬರ್ 28ರಂದು ಆ ತಾಲ್ಲೂಕಿನ ಅಮಲ್ದಾರರು, ಪೊಲೀಸ್ ಅಧಿಕಾರಿ ಮತ್ತು ಕೆಲವು ಪೊಲೀಸರೊಂದಿಗೆ ಗ್ರಾಮಕ್ಕೆ ಹೋದರು. ಅಲ್ಲಿ ನಡೆದ ಜನರ ಅಲ್ಪ ಪ್ರತಿಭಟನೆಗೆ ಅಧಿಕಾರಿಗಳು ಕೋಪಗೊಂಡು ನಿರಾಯುಧ ಜನತೆಯ ಮೇಲೆ ಮೊದಲು ಲಾಠಿಯಿಂದ ಹೊಡೆದು ಅನಂತರ ಗುಂಡು ಹಾರಿಸಿದರು. ಜನರೂ ಉದ್ರಿಕ್ತರಾದರು. ಗಲಭೆಯಲ್ಲಿ ಅಮಲ್ದಾರ ಚನ್ನಕೃಷ್ಣಪ್ಪ ಮತ್ತು ಪೊಲೀಸ್ ಅಧಿಕಾರಿ ಕೆಂಚೇಗೌಡ ಸತ್ತರು. ಸರ್ಕಾರಕ್ಕೆ ಸುದ್ದಿ ತಿಳಿದು ಸೈನ್ಯ ಮತ್ತು ಪೊಲೀಸ್ ದಳವನ್ನು ಕಳಿಸಿ ಹಳ್ಳಿಯನ್ನು ಲೂಟಿ ಮಾಡಿಸಿತು. ಇದ್ದವರನ್ನೆಲ್ಲ ಹೆಂಗಸರು ಮಕ್ಕಳೆನ್ನದೆ ಚಿತ್ರಹಿಂಸೆಗೆ ಗುರಿ ಮಾಡಿತು. ಸರ್ಕಾರದ ವಿರುದ್ಧ ಬಂಡಾಯವೆದ್ದವರೆಂದು 50 ಮಂದಿಯ ಮೇಲೆ ಆರೋಪ ಹೊರಿಸಿ 41 ಮಂದಿಯನ್ನು ಬಂಧಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿತು. ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು 1943 ಜನವರಿ 9ರಂದು ತೀರ್ಪಿತ್ತು, ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರಿ, ಬಿ. ಹಾಲಪ್ಪ ಮತ್ತು ಜಿ. ಶಂಕರಪ್ಪ ಇವರಿಗೆ ಮರಣದಂಡನೆಯನ್ನೂ ಹಾಲಮ್ಮ ಮತ್ತು ಪಾರ್ವತಮ್ಮ ಇವರಿಗೆ ಜೀವಾವಧಿ ಗಡೀಪಾರು ಶಿಕ್ಷೆಯನ್ನು ವಿಧಿಸಿದರು. ಉಳಿದವರಿಗೆ ನಾನಾರೀತಿಯ ವಿವಿಧ ಕಾಲದ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಅದರಂತೆ 1943 ಮಾರ್ಚ್ 8ರಂದು ಗುರಪ್ಪ ಮತ್ತು ಮಲ್ಲಪ್ಪ ಇಬ್ಬರನ್ನೂ ಗಲ್ಲಿಗೇರಿಸಲಾಯಿತು. ಮಾರನೆಯ ದಿನ ಸೂರ್ಯನಾರಾಯಣಾಚಾರಿ ಮತ್ತು ಹಾಲಪ್ಪನನ್ನೂ 10ನೆಯ ತಾರೀಖು ಜಿ. ಶಂಕರಪ್ಪನನ್ನೂ ಅಂದಿನ ಸರ್ಕಾರ ಗಲ್ಲಿಗೇರಿಸಿ ತನ್ನ ಸೇಡನ್ನು ತೀರಿಸಿಕೊಂಡಿತು. ಪಾರ್ವತಮ್ಮ, ಹಾಲಮ್ಮ ಮತ್ತು ಸಿದ್ಧಮ್ಮ ಇವರನ್ನು 1946 ಅಕ್ಟೋಬರ್ 21ರಂದು ಬಿಡುಗಡೆ ಮಾಡಲಾಯಿತು. ಇಡೀ ಕರ್ನಾಟಕದಲ್ಲಿ 'ಸ್ವತಂತ್ರ ಹಳ್ಳಿ' ಎಂದು ಘೋಷಿಸಿಕೊಂಡು ಸ್ವಾತಂತ್ರ್ಯಕ್ಕೆ ತಮ್ಮ ಪ್ರಾಣವನ್ನರ್ಪಿಸಿದ ಕಲಿಗಳಿಂದ ಈ ಊರು ಪ್ರತಿಷ್ಠಿತವಾಗಿದೆ. (ವಿ.ಜಿ.ಕೆ.)

# ಉ

**ಉಂಚಳ್ಳಿ ಜಲಪಾತ :** ಉತ್ತರ ಕನ್ನಡ ಜಿಲ್ಲೆ ಸಿದ್ಧಾಪುರದ ವಾಯುವ್ಯಕ್ಕೆ ಸು.19ಕಿಮೀ ದೂರದಲ್ಲಿ ಉಂಚಳ್ಳಿ ಗ್ರಾಮದ ಬಳಿ ಇರುವ ಒಂದು ಸುಂದರ ಜಲಪಾತ. ಅಘನಾಶಿನಿ (ನೋಡಿ) ನದಿ ಇಲ್ಲಿ 379' ಕೆಳಗೆ ದುಮುಕುತ್ತದೆ. ಕರಿಬಂಡೆಗಳ ಮೇಲೆ ಹಾಲುನೊರೆಯಂತೆ ಇಳಿದು ಬರುವ ನೀರಿನ ಧಾರೆಯ ಸೊಬಗು ಚೇತೋಹಾರಿಯಾದುದು. ಜಲಪಾತದ



ಸುತ್ತಲಿನ ಕಂದರ, ಅಡಕೆ ತೋಟಗಳು, ಸಮೃದ್ಧ ಅಡವಿಗಳು, ಇಕ್ಕೆಲಗಳಲ್ಲಿಯೂ ಎದ್ದಿರುವ ಕರಿಕಲ್ಲಿನ ಅಖಂಡ ಗೋಡೆಗಳು, ಈ ಜಲಪಾತಕ್ಕೆ ವಿಶೇಷ ಶೋಭೆಯನ್ನು ಕೊಟ್ಟಿವೆ. ಧೈರ್ಯಶಾಲಿಗಳು ಮಾತ್ರ ಜಲಪಾತದ ಕೆಳಗೆ ಇಳಿಯಬಹುದು. ಜಲಪಾತದ ಶಬ್ದ ಸು.13ಕಿಮೀ ದೂರದಲ್ಲಿರುವ ಬಿಳಗಿಯವರೆಗೂ ಕೇಳುವುದಂತೆ. ಕಿವಿಗಡಚಿಕ್ಕುವ ಅಗಾಧ ಶಬ್ದದಿಂದಾಗಿ ಇದಕ್ಕೆ ಕೆಪ್ಪಜೋಗ ಎಂಬ ಹೆಸರೂ ಸ್ಥಳೀಯರಲ್ಲಿ ಪ್ರಚಲಿತವಾಗಿದೆ. ಈ ಜಿಲ್ಲೆಯ ಕಲೆಕ್ಟರ್ ಆಗಿದ್ದ ಟಿ.ಡಿ.ಲುಸಿಂಗ್‍ಟನ್ ಅವರು 1843ರಲ್ಲಿ ಈ ಜಲಪಾತವನ್ನು ಕಂಡು ಹೊರ ಜಗತ್ತಿಗೆ ಪರಿಚಯ ಮಾಡಿಕೊಟ್ಟಿದ್ದರಿಂದ ಇದಕ್ಕೆ ಲುಸಿಂಗ್‍ಟನ್ ಫಾಲ್ಸ್ ಎಂದೂ ಹೆಸರು ಬಂದಿದೆ. ಈ ಜಲಪಾತದಿಂದ ಸುಮಾರು ಒಂದು ಕಿಮೀ ಮುಂದೆ ಬುರುಡೆಜೋಗ ಇದೆ. ಅಲ್ಲಿ ಇದೇ ನದಿ ಸು.300' ಕೆಳಗುರುಳಿ ಅನಂತರ ಎರಡು ಟಿಸಿಲುಗಳಾಗಿ 150' ಹಾರಿ ಸ್ವಲ್ಪ ದೂರ ಹರಿದು ಇನ್ನೊಂದು ಜಲಪಾತವನ್ನುಂಟು ಮಾಡಿದೆ. ಉಂಚಳ್ಳಿ ಜಲಪಾತಕ್ಕೆ ಸಿದ್ಧಾಪುರದಿಂದ ರಸ್ತೆ ಇದೆ. ಬಸ್ ಸೌಕರ್ಯವೂ ಉಂಟು. (ಆರ್.ಜಿ.ಆರ್.)

**ಉಂಡಿಗನಾಳು:** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಕಸಬೆಯಿಂದ ಸು.19ಕಿಮೀ ನೈಋತ್ಯಕ್ಕಿರುವ ಗ್ರಾಮ. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಜಟ್ಟಿ ಕುಲದವರು ಗುಜರಾತಿನೆಡೆಯಿಂದ ಬಂದು ಮೊದಲು ಇಲ್ಲಿ ನೆಲೆಸಿದರೆಂದು ಕೆಲವು ಐತಿಹಾಸಿಕ ಆಧಾರಗಳಿಂದ ಊಹಿಸಲಾಗಿದೆ. ಈ ಕುಲದ ಕೆಲವರು ಈ ಗ್ರಾಮ ಮತ್ತು ಸುತ್ತಣ ಪ್ರದೇಶವನ್ನು ಹೊಯ್ಸಳ ಸಾಮಂತರಾಗಿ ಆಳುತ್ತಿದ್ದರೆಂಬುದಕ್ಕೆ ಶಾಸನಾಧಾರಗಳಿವೆ. ಕೆಲವು ಶಾಸನಗಳಲ್ಲಿ ಜಟ್ಟಿಗಳ ಕುಲದೇವರಾದ ನಿಂಬಜಾದೇವಿಯ ಪ್ರಸ್ತಾಪ ಸಹ ಇದೆ.

ಇಲ್ಲಿರುವ ಚಾಮುಂಡೇಶ್ವರಿ ದೇವಾಲಯ ಮೂಲತಃ ಹೊಯ್ಸಳರ ಕಾಲದ್ದು. 1140ರ ರಚನೆ. ಆದರೆ ಈಗ ಅದರಲ್ಲಿ ಅನೇಕ ಅನಂತರಕಾಲದ ಸೇರ್ಪಡೆಗಳಿವೆ. ದೇವಾಲಯ ತ್ರಿಕೂಟಾಚಲ, ಮೂರು ಗರ್ಭಗುಡಿಗಳು, ಒಂದು ಸುಕನಾಸಿ, ಒಂದು ನವರಂಗ ಮತ್ತು ಒಂದು ಮುಖ ಮಂಟಪ ಇವೆ. ಬಾಗಿಲಿನ ನೇರ ಎದುರಿನ ಗರ್ಭಗುಡಿಯಲ್ಲಿ ಲಿಂಗ, ಉತ್ತರದ ಗರ್ಭಗುಡಿಯಲ್ಲಿ ಕೇಶವ ಮತ್ತು ದಕ್ಷಿಣದ ಗರ್ಭಗುಡಿಯಲ್ಲಿ ಮಹಿಷಾಸುರ ಮರ್ದಿನಿ ವಿಗ್ರಹಗಳಿವೆ. ನವರಂಗದಲ್ಲಿರುವ ಕಂಬಗಳು ಹೊಯ್ಸಳ ರೀತಿಯವು. ಇತರ ಭಾಗಗಳು ಬಹುಮಟ್ಟಿಗೆ ಈಚಿನವು. ಒಂದು ಮದನಿಕೆ ವಿಗ್ರಹ ಮುಂತಾದ ಹೊಯ್ಸಳರ ಕಾಲದ ಬಿಡಿ ಶಿಲ್ಪಗಳು ಇಲ್ಲಿವೆ. ದೇವಾಲಯದ ದಕ್ಷಿಣ ಭಾಗಗಳಲ್ಲಿ ಒಂದು ದೊಡ್ಡ ಉಯ್ಯಾಲೆ ಕಂಬವೂ ಅದರ ಎದುರು ಮೂರು ಅಂಕಣಗಳುಳ್ಳ ಒಂದು ಮಂಟಪವೂ ಇವೆ. ಮಂಟಪದಲ್ಲಿ ಹೊಯ್ಸಳ ಶೈಲಿಯ ಕಂಬಗಳಿವೆ. ಈ ಮಂಟಪದ ಹಿಂಭಾಗದಲ್ಲಿರುವ ಚಿಕ್ಕ ಗರ್ಭಗುಡಿಯಲ್ಲಿ ಅಕ್ಷಮಾಲೆ ತ್ರಿಶೂಲ ಚಕ್ರ ಶಂಖ ಡಮರು ಕುಂಭಗಳನ್ನು ಹಿಡಿದ, ನವಿಲಿನ ಮೇಲೆ ನಿಂತಿರುವ ದೇವಿ ಶಿಲ್ಪವಿದೆ. ಈ ಗುಡಿಯ ಎರಡು ಪಕ್ಕಗಳಲ್ಲಿ ಮತ್ತು ಕಂಬಗಳ ಮೇಲೆ ಜಟ್ಟಿಗಳ ಶಿಲ್ಪಗಳಿವೆ. *

**ಉಗಾಭೋಗ :** ಕರ್ನಾಟಕ ಸಂಗೀತದಲ್ಲಿ ಕನ್ನಡ ನಾಡಿಗೆ ವಿಶಿಷ್ಟವಾದ ಗಾನಪದ್ಧತಿ. ಕನ್ನಡ ದಾಸಸಾಹಿತ್ಯದ ಒಂದು ಮುಖ್ಯ ಪ್ರಕಾರ; 'ಗೀತತಾಯಿ ಸುಳಾದ್ಯುಗಾಭೋಗಪದ್ಯಪದ'ಗಳೆಂಬ ಪ್ರಕಾರಗಳಿದ್ದುದು ಪ್ರಸನ್ನ ವೆಂಕಟದಾಸರ ಕೃತಿಯೊಂದರಿಂದ ತಿಳಿದುಬರುತ್ತದೆ. ಉಗಾಭೋಗ ಎನ್ನುವ ಮಾತಿಗೆ ಉದ್ಗ್ರಾಹ ಮತ್ತು ಅಭೋಗ ಎಂಬೆರಡು ಪದಗಳು ಮೂಲ ಸಾಮಗ್ರಿಗಳೆಂದು ಹೇಳುತ್ತಾರೆ. ಇವೆರಡೂ ಗಾಯನದ ವಿವರಗಳು. ಮೊದಲು ಮಾಡುವ ಸಾಮಗ್ರಿಗೆ ಉದ್ಗ್ರಾಹವೆಂದೂ ಮುಗಿಸುವ ಸಾಮಗ್ರಿಗೆ ಅಭೋಗವೆಂದೂ ಹೆಸರಿವೆ.

ಸಾಮಾನ್ಯವಾಗಿ ಉಗಾಭೋಗ ಸಣ್ಣ ಕೃತಿ; ಕಡಿಮೆಯೆಂದರೆ ನಾಲ್ಕು ಸಾಲು, ಹೆಚ್ಚೆಂದರೆ ಹನ್ನೆರಡು ಸಾಲು. ಇವುಗಳಲ್ಲಿ ದ್ವಿತೀಯಾಕ್ಷರ ಪ್ರಾಸ ಮೊದಲಾದ ಸ್ಥೂಲವಾದ ಕವಿತಾ ಲಕ್ಷಣಗಳಿದ್ದರೂ ಇಲ್ಲಿ ಸಾಹಿತ್ಯವೇ ಮುಖ್ಯ. ದೇವರನಾಮ, ಸುಳಾದಿಗಳಿಗಿಂತಲೂ ಉಗಾಭೋಗದಲ್ಲಿ ಈ ಗುಣ ಹೆಚ್ಚು. ಹೇಳಬೇಕಾದುದನ್ನು ತಿಳಿಮಾತಿನಲ್ಲಿ ನೇರವಾಗಿ ಆದರೆ ಕಾವ್ಯಧರ್ಮದಿಂದೊಡಗೂಡಿ ಹೇಳಿರುತ್ತಾರೆ. ಇವು ವಚನಗಳ ಧಾಟಿಯಲ್ಲಿರುತ್ತವೆ. ಸ್ತುತಿ ನಿಂದೆ ವಿಮರ್ಶೆ ಹಾಸ್ಯ ಉಪದೇಶಗಳೆಲ್ಲವೂ ಇಲ್ಲಿ ಸಾಮಗ್ರಿಗಳು.

ಉಗಾಭೋಗಗಳಿಗೆ ರಾಗವನ್ನು ನಿರ್ದೇಶಿಸುವ ಪದ್ಧತಿಯಿದೆ. ಆದರೆ ತಾಳವನ್ನು ಸೂಚಿಸಿರುವುದಿಲ್ಲ. ಯಾವೊಂದು ತಾಳಪ್ರಕಾರಕ್ಕೂ ಅಳವಡದೆ ಸ್ವತಂತ್ರವಾಗಿ ನಿಲ್ಲುವುದಾದರೂ ಇದು ಪ್ರಮುಖವಾಗಿ ಕವಿತೆ,

ಪದ್ಯ, ಅದಕ್ಕೆಬೇಕಾದ ಛಂದಸ್ಸು, ಪ್ರಾಸಗಳಿರುತ್ತವೆ. ಇದ್ದರೂ ಕಟ್ಟುಪಾಡು ಅತಿಯಾಗಿಲ್ಲ. ಸಂಗೀತಾಂಶ ಕಡಿಮೆ, ಗೌಣವೇ ಎಂದರೂ ತಪ್ಪಾಗದು. ಇದರಲ್ಲಿ ಧ್ರುವ, ಚರಣಗಳೆಂಬ ಭೇದವಿರದು. ರಾಗದ ನಿರ್ಧಾರವೂ ನಿಶ್ಚಿತವಲ್ಲ. ಹಾಡುವ ಪದ್ಧತಿಯಲ್ಲಿ ವಿಸ್ತಾರ, ಪುನಶ್ಚರಣ, ಸ್ವರವಿನ್ಯಾಸಗಳಿರುವುದಿಲ್ಲ.

ಪುರಂದರದಾಸರಿಂದ ಉಗಾಭೋಗ ಪರಂಪರೆ ಆರಂಭವಾದಂತೆ ತೋರುತ್ತದೆ. ಇವರು ಒಟ್ಟು ಅರವತ್ತು ಸಾವಿರ ಉಗಾಭೋಗಗಳನ್ನು ರಚಿಸಿದರೆಂದು ಪ್ರತೀತಿ.ಆದರೆ ಉಳಿದಿರುವ ಸಂಖ್ಯೆ ತೀರ ಸಣ್ಣದು. ಉಗಾಭೋಗಗಳಿಗೆ ಹೆಸರಾದ ಇನ್ನೊಬ್ಬ ಹರಿದಾಸರೆಂದರೆ ವಿಜಯದಾಸರು. (ಎಸ್.ಕೆ.ಆರ್.)

**ಉಚ್ಚಂಗಿದುರ್ಗ :** ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ದಕ್ಷಿಣ ಎಲ್ಲೆಯಲ್ಲಿರುವ ಒಂದು ಗ್ರಾಮ. ಇಲ್ಲಿ ಇತಿಹಾಸ ಪ್ರಸಿದ್ಧವಾದೊಂದು ಬೆಟ್ಟವಿದೆ. ಈ ಬೆಟ್ಟದ ಮೇಲೆ ಉತ್ಸವಾಂಬ (ಉಚ್ಚಂಗಮ್ಮ) ದೇವತೆಯಿರುವುದರಿಂದ ಈ ಸ್ಥಳಕ್ಕೆ ಉಚ್ಚಂಗಿಯೆಂಬ ಹೆಸರು ಬಂತೆಂದು ಹೇಳಲಾಗಿದೆ. ಅಷ್ಟೇನೂ ಎತ್ತರವಾಗಿಲ್ಲದ ಉತ್ತರ-ದಕ್ಷಿಣವಾಗಿ $1^1/_2$ಕಿಮೀ ಗಳಷ್ಟು ದೂರ ಹಬ್ಬಿರುವ ಬೆಟ್ಟ ಬಹಳ ಕಡಿದಾಗಿದೆ. ದುರ್ಗದಲ್ಲಿ ಕಲ್ಲಿನಿಂದ ಕಟ್ಟಿದ ಕೋಟೆ ಕೊತ್ತಲಗಳ, ದೇವಾಲಯಗಳ ಮತ್ತು ಪಾಳುಕೊಳಗಳ ಅನೇಕ ಭಗ್ನಾವಶೇಷಗಳನ್ನು ಕಾಣಬಹುದು. ದುರ್ಗದ ಪ್ರವೇಶದ್ವಾರದಲ್ಲಿ ಪಾದ ದೇವರ ಗುಡಿಯಿದೆ. ಈ ದೇವಾಲಯದ ಎದುರಿನಲ್ಲಿ 50' ಎತ್ತರದ ದೀಪಸ್ತಂಭವಿದೆ. ಶಿಥಿಲ ಕೋಟೆಗೆ ಕೋಟೆಬಾಗಿಲು, ಮಳೆಬಾಗಿಲು, ಅಗಸೆ ಬಾಗಿಲು, ಹರಿಹರೇಶ್ವರ ಬಾಗಿಲು, ಅಣಜಿ ಬಾಗಿಲು ಎಂಬ ನಾಲ್ಕು ಹೆಬ್ಬಾಗಿಲುಗಳಿದ್ದುವು. ದುರ್ಗದಲ್ಲಿ ಅನೇಕ ದೇವಾಲಯಗಳಿವೆ.



ಉಚ್ಚಂಗಿ ದುರ್ಗದ ಕೋಟೆ

ಅವುಗಳಲ್ಲಿ ಹನುಮಂತ, ಬನಶಂಕರಿ, ವೀರಭದ್ರ, ತವಕೇಶ್ವರ, ಹೊನ್ನೆತ್ತಮ್ಮ- ಈ ಗುಡಿಗಳು ಮುಖ್ಯ. ಪಾಳು ಬಿದ್ದ ಅನೇಕ ಜೈನ ಬಸದಿಗಳೂ ಉಂಟು. ಹಲವಾರು ಚಿಕ್ಕ ಕೊಳಗಳನ್ನೂ ಹೊಂಡಗಳನ್ನೂ ಕಾಣಬಹುದು. ಇವುಗಳಲ್ಲಿ ಹಿರೇಹೊಂಡ, ಚಿಗೆಹೊಂಡ, ಹೊನ್ನೆರ‍್ಘುರಿ, ಆನೆಹೊಂಡ, ಸಗಣಿಹೊಂಡ, ಅರಿಶಿನ ಹೊಂಡಗಳು ಮುಖ್ಯ. ಅರಿಶಿನ ಹೊಂಡದ ನೀರನ್ನು ಇಂದಿಗೂ ಉಪಯೋಗಿಸುತ್ತಾರೆ. ಬೆಟ್ಟದ ಮೇಲಿರುವ ಬಾವಿಗಳಲ್ಲಿ ತೊಟ್ಟಿಲುಬಾವಿ, ಬಟ್ಟಲುಬಾವಿ ಪ್ರಸಿದ್ಧ. ದುರ್ಗದ ಮೇಲಿರುವ ಉತ್ಸವಾಂಬ ದೇವಾಲಯ ಕಲೆಯ ದೃಷ್ಟಿಯಿಂದ ಮುಖ್ಯವಲ್ಲದಿದ್ದರೂ ಪ್ರಾಚೀನವಾದದ್ದೆಂದು ಹೇಳಲಾಗಿದೆ. ಇಂದಿಗೂ ಈ ದೇವಾಲಯಕ್ಕೆ ಭಕ್ತರು ಹೆಚ್ಚು ಸಂಖ್ಯೆಯಲ್ಲಿ ಬರುತ್ತಾರೆ. ಇಲ್ಲಿಯ ದಸರ ಹಬ್ಬ ಬಹು ಜನರನ್ನು ಆಕರ್ಷಿಸುತ್ತದೆ.

ಹಿಂದೆ ಈ ದುರ್ಗದ ಹೆಸರು ಉಚ್ಚಶೃಂಗಿಯೆಂದಿತ್ತೆಂದೂ 5ನೆಯ ಶತಮಾನದಲ್ಲಿ ಕದಂಬ ಶಾಖೆಯೊಂದರ ರಾಜಧಾನಿಯಾಗಿತ್ತೆಂದೂ ಊಹೆ ಇದೆ. 11-12ನೆಯ ಶತಮಾನದಲ್ಲಿ ಇದು ಉಚ್ಚಂಗಿ ಪಾಂಡ್ಯರ ರಾಜಧಾನಿ. ವಿಷ್ಣುವರ್ಧನ ಇದನ್ನು ಆಕ್ರಮಿಸಿಕೊಂಡಿದ್ದ. ಸ್ವಲ್ಪ ಕಾಲ ಚಿತ್ರದುರ್ಗದ ಪಾಳೆಯಗಾರರ ವಶದಲ್ಲಿದ್ದು, ಅನಂತರ ಹರಪನಹಳ್ಳಿ ಪಾಳೆಯಗಾರರಿಗೆ ಸೇರಿತ್ತು.

ದುರ್ಗದ ನೈರುತ್ಯಕ್ಕೆ 5ಕಿಮೀ ದೂರದಲ್ಲಿ ಕರಡಿ ಬೆಟ್ಟವಿದೆ. ದಕ್ಷಿಣಕ್ಕೆ 8ಕಿಮೀ ದೂರದಲ್ಲಿ ಅಣಜಿ ಕೆರೆ ಇದೆ. ಬೆಟ್ಟಕ್ಕೆ ಹೊಂದಿಕೊಂಡಂತೆ ಪೂರ್ವ ದಿಕ್ಕಿನಲ್ಲಿ ಗ್ರಾಮವಿದೆ. *

**ಉಚ್ಚಂಗಿಯ ಪಾಂಡ್ಯರು :** 11-12ನೆಯ ಶತಮಾನಗಳಲ್ಲಿ ಉಚ್ಚಂಗಿ ಗಿರಿದುರ್ಗದಿಂದ ಆಳಿದ ಒಂದು ಅಧೀನ ರಾಜವಂಶದವರು. ಇವರು ಸೂರ್ಯವಂಶದವರಾಗಿದ್ದು ಮೂಲತಃ ಸಪ್ತಕೊಂಕಣಗಳಲ್ಲಿ ಒಂದಾದ ಹೈವೆಯನ್ನು ಶಿಶುಗಲಿ ರಾಜಧಾನಿಯಿಂದ ಆಳುತ್ತಿದ್ದರು. 1113ರಲ್ಲಿ ಆಳುತ್ತಿದ್ದ ಒಬ್ಬ ಪಾಂಡ್ಯ ದೊರೆ ಗೋಕರ್ಣಪುರದ ಒಡೆಯನೆಂದು ಕರೆದುಕೊಂಡಿದ್ದಾನೆ.

ಚಾಳುಕ್ಯ 2ನೆಯ ಜಯಸಿಂಹ (1015-1042) ಕೊಂಕಣವನ್ನು ಜಯಿಸಿದಾಗ ಹೈವೆಯಲ್ಲಿದ್ದ ಕೆಲ ಪಾಂಡ್ಯರು ಉಚ್ಚಂಗಿಗೆ ತೆರಳಿದರು. ಈ ಪಾಂಡ್ಯಕುಲದ ಮೂಲಪುರುಷ ಮಂಗಯ್ಯ ಅಥವಾ ಆದಿತ್ಯದೇವ. ಚೇದಿರಾಜ, ಪಾಂಡ್ಯ, ಪಲಂತ ಅನುಕ್ರಮವಾಗಿ ಅವನ ಸಂತಾನದವರು. ಮುಂದೆ ಅವರ ವಂಶದ ಇರುಕ್ಕವೇಲ ಇಲ್ಲವೆ ತ್ರಿಭುವನಮಲ್ಲ ಪಾಂಡ್ಯ ದಾವಣಗೆರೆಯ ಸನಿಹದ ಬೆಳ್ಳೂರಿಗೆ ತನ್ನ ರಾಜಧಾನಿಯನ್ನು ವರ್ಗಾಯಿಸಿಕೊಂಡು ನೊಳಂಬವಾಡಿ ಬಿಲ್ಲಕುಂದೆಗಳನ್ನು ಅನುಕ್ರಮವಾಗಿ 1083 ಮತ್ತು 1101ರಲ್ಲಿ ಆಳುತ್ತಿದ್ದ. ಇವನು ತನ್ನ ಭುಜಬಲ ಪರಾಕ್ರಮದಿಂದ ಚಾಳುಕ್ಯ ಚಕ್ರವರ್ತಿಯಾದ 6ನೆಯ ವಿಕ್ರಮಾದಿತ್ಯನ ವಿಶ್ವಾಸಕ್ಕೆ ಪಾತ್ರನಾಗಿ, ತ್ರಿಭುವನಮಲ್ಲ ದಕ್ಷಿಣ ಹಸ್ತದಂಡ ಎಂಬ ಬಿರುದನ್ನು ಸಂಪಾದಿಸಿದ್ದ. 1124ರಲ್ಲಿ ಸಾಂತಳಿಗೆ –1000ವನ್ನು ಕೈವಶಮಾಡಿಕೊಂಡ. ಇವನ ಕಾಲದಲ್ಲಿ ವಿಷ್ಣುವರ್ಧನ ಉಚ್ಚಂಗಿಯ ಮೇಲೆ ದಾಳಿ ಮಾಡಿ ಗೆದ್ದುಕೊಂಡಿದ್ದನೆಂದು ಹೊಯ್ಸಳ ಶಾಸನಗಳಿಂದ ತಿಳಿಯುತ್ತದೆ.

ಆಮೇಲೆ ತ್ರಿಭುವನಮಲ್ಲನ ಮಗ ರಾಯಪಾಂಡ್ಯ ಪಟ್ಟವನ್ನೇರಿದ. ಈತನು ದೊಡ್ಡ ಪರಾಕ್ರಮಿಯಾಗಿದ್ದ. ಪಂಡಿತಪಾಂಡ್ಯ, ವೀರಪಾಂಡ್ಯ, ಮತ್ತು ವಿಜಯಪಾಂಡ್ಯ (ಕಾಮದೇವ) ಇವನ ಮಕ್ಕಳು. ವೀರಪಾಂಡ್ಯ ಪಟ್ಟಕ್ಕೆ ಬಂದು ತನ್ನ ರಾಜಧಾನಿಯನ್ನು ಬೆಳ್ಳೂರಿನಿಂದ ಉಚ್ಚಂಗಿಗೆ ಬದಲಾಯಿಸಿದ; ಮಲೆಯನ್ನು ಜಯಿಸಿ ಚಾಳುಕ್ಯ ಚಕ್ರವರ್ತಿಗೆ ಒಪ್ಪಿಸಿದ. 1148ರಲ್ಲಿ ತುಂಗಭದ್ರಾ ಹರಿದ್ರೆಗಳ ಸಂಗಮದಲ್ಲಿ ಈತ ಭೂದಾನ ಮಾಡಿದ.

ಮುಂದಿನ ದೊರೆ ವಿಜಯಪಾಂಡ್ಯ ಚಾಳುಕ್ಯ ಮತ್ತು ಕಳಚುರಿಗಳ ಕಲಹದ ಲಾಭ ಪಡೆದು ಸ್ವತಂತ್ರವಾಗಿದ್ದ (1184). ಆದರೆ ಹೊಯ್ಸಳ ಇಮ್ಮಡಿ ಬಲ್ಲಾಳ (1173-1220) ಪಾಂಡ್ಯಬಲವನ್ನು ಮುರಿದು ಉಚ್ಚಂಗಿಯನ್ನು ವಶಪಡಿಸಿಕೊಂಡ; ಅಲ್ಲದೆ ವಿಜಯಪಾಂಡ್ಯನನ್ನು ಸೆರೆ ಹಿಡಿದ. ಕೊನೆಗೆ ಉದಾರವಾಗಿ ಅವನ ರಾಜ್ಯವನ್ನು ಅವನಿಗೆ ಬಿಟ್ಟು ಕೊಟ್ಟ. ಅವನ ಕಾಲಾನಂತರ ಕ್ರಮೇಣ ಉಚ್ಚಂಗಿ ರಾಜ್ಯ ಹೊಯ್ಸಳ ಸಾಮ್ರಾಜ್ಯದಲ್ಲಿ ಸೇರಿಹೋಯಿತು. (ಬಿ.ಎಚ್.ಎಸ್.)

**ಉಡುತಡಿ :** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಶಿಕಾರಿಪುರ ಪಟ್ಟಣದಿಂದ 14ಕಿಮೀ ಗಳ ದೂರದಲ್ಲಿದೆ. ಇದನ್ನು ಉಡುಗಣಿ ಎಂದೂ ಕರೆಯುತ್ತಾರೆ; ಪ್ರಾಚೀನ ಸ್ಥಳ. ಹರಿಹರ ತನ್ನ ಮಹಾದೇವಿಯಕ್ಕನ ರಗಳೆಗಳಲ್ಲಿ ಆಕೆ ಹುಟ್ಟಿ ಬೆಳೆದ ಪಟ್ಟಣ 'ಉಡುತಡಿ' ಎಂದು ಮೊತ್ತಮೊದಲು ಹೇಳಿರುತ್ತಾನೆ. ಆ ತರುವಾಯದ ಮಹಾದೇವಿಯಕ್ಕನ ಚರಿತ್ರೆಗೆ ಸಂಬಂಧಿಸಿದ ಪ್ರತಿಯೊಂದು ಕೃತಿಯಲ್ಲಿಯೂ ಉಡುತಡಿಯ ಹೆಸರು ಕಂಡು ಬಂದಿದೆ. ಹಿಂದಿನ ಕಾಲದ ವೀರಶೈವ ಕೃತಿಕಾರರ ಅಭಿಪ್ರಾಯದಂತೆ ಉಡುತಡಿ ಬಳ್ಳಿಗಾಮೆಗೆ ಹತ್ತಿರದ್ದಾಗಿರಬೇಕು. ಬಳ್ಳಿಗಾಮೆಯ ಸಮೀಪದಲ್ಲಿ ಇರುವ ಉಡುಪಗಣಿ. ತಡಗಣಿ ಎಂಬ ಹೆಸರಿನ ಎರಡು ಚಿಕ್ಕ ಹಳ್ಳಿಗಳ ಪ್ರದೇಶವೇ ಉಡುತಡಿ ಎಂಬ ಅಭಿಪ್ರಾಯ ಇದೆ. ಇಂದು ಉಡುಗಣಿಯಲ್ಲಿ ಅಕ್ಕಮಹಾದೇವಿಯ ದೇವಾಲಯ (1973) ಇತ್ಯಾದಿಗಳನ್ನು ಸ್ಥಾಪಿಸಲಾಗಿದೆಯಲ್ಲದೆ ಬಳಿಯಲ್ಲಿರುವ ಕೋಟೆಯನ್ನು ಕೌಶಿಕ ರಾಜನ ಕೋಟೆ ಎಂದೂ ತೋರಿಸುವುದುಂಟು. ಅಕ್ಕ ಲಿಂಗದೀಕ್ಷೆ ಪಡೆದಳೆಂದು

ಹೇಳಲಾದ ಗುರುಲಿಂಗ ಚನ್ನಮಲ್ಲಿಕಾರ್ಜುನ ಮಠದ ಅವಶೇಷಗಳು ಇಲ್ಲಿವೆ. ಚನ್ನಕೇಶವ ಮತ್ತು ಸೂರ್ಯಗುಡಿಗಳಿವೆ. (ಬಿ.ಕೆ.)

**ಉಡುಪಿ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಆಡಳಿತಕೇಂದ್ರ.

**ಜಿಲ್ಲೆ:** ಉಡುಪಿ ಜಿಲ್ಲೆ ಕರ್ನಾಟಕದ ನೈಋತ್ಯ ಭಾಗದಲ್ಲಿದೆ. 1997ಕ್ಕೂ ಮುಂಚೆ ಈ ಜಿಲ್ಲೆಯ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು.ಆ ವರ್ಷ ಜಿಲ್ಲಾ ಪುನರ್ವಿಂಗಡಣೆಯ ಯೋಜನೆಯನ್ನು ಜಾರಿಗೆ ತಂದು ಉಡುಪಿಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ರಚಿಸಲಾಯಿತು. ಈ ಜಿಲ್ಲೆಯ ಉತ್ತರದಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳು, ಪೂರ್ವದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ದಕ್ಷಿಣಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಅರಬ್ಬೀ ಸಮುದ್ರ ಇವೆ. ವಿಸ್ತೀರ್ಣ 3905.4 ಚಕಿಮೀ. ಜನಸಂಖ್ಯೆ 11,09,499. ಈ ಜಿಲ್ಲೆಯಲ್ಲಿರುವ ತಾಲ್ಲೂಕುಗಳ ಸಂಖ್ಯೆ ಮೂರು. ಉಡುಪಿ, ಕುಂದಾಪುರ ಮತ್ತು ಕಾರ್ಕಳ (ಆಯಾ ಸ್ಥಳಗಳನ್ನು ನೋಡಿ). ಜಿಲ್ಲೆಯ ಪಶ್ಚಿಮದಲ್ಲಿ ಉದ್ದಕ್ಕೂ ಅರಬ್ಬೀ ಸಮುದ್ರವಿದೆ. ಪೂರ್ವದಲ್ಲಿ ಎತ್ತರವಾದ ಪಶ್ಚಿಮಘಟ್ಟದ ಶ್ರೇಣಿಗಳಿವೆ. ದಕ್ಷಿಣದಿಂದ ಉತ್ತರಕ್ಕೆ ಹೋದಂತೆಲ್ಲಾ ಜಿಲ್ಲೆಯ ಅಗಲ ಕಿರಿದಾಗುತ್ತದೆ. ಜಿಲ್ಲೆಯ ಭೂ ಶಿಲಾ ರಚನೆಯನ್ನು ಮುಖ್ಯವಾಗಿ ಧಾರವಾಡ ಶಿಲಾವರ್ಗ, ಮಧ್ಯಂತರ ಸೇರ್ಪಡೆಗಳು ಮತ್ತು ಈಚಿನ ರಚನೆಗಳು ಎಂದು ವಿಂಗಡಿಸಬಹುದು. ಧಾರವಾಡ ಶಿಲಾವರ್ಗದಲ್ಲಿ ರೂಪಾಂತರಗೊಂಡ ಅನೇಕ ಪ್ರಾಚೀನ ಶಿಲೆಗಳಿವೆ. ಇವುಗಳಲ್ಲಿ ಮುಖ್ಯವಾಗಿ ಪದರ ಪದರವಾದ ಕಬ್ಬಿಣ ಮಿಶ್ರಿತವಾದ ಕ್ವಾರ್ಟ್‌ಸೈಟ್ ಮತ್ತು ಟಾಲ್ಕ್ ಹಾಗೂ ಹಾರ್ನ್‌ಬ್ಲೆಂಡ್ ಶಿಷ್ಟ್‌ಗಳು ಕಂಡುಬರುತ್ತವೆ. ಹಾರ್ನ್‌ಬ್ಲೆಂಡ್ ಹೊಡೆಪೊರೆಗಳು ಅಲ್ಲಲ್ಲಿ ವಿರಳವಾಗಿ ಕಾಣಸಿಗುತ್ತವೆ. ಜಂಬುಕಲ್ಲು ಕರಾವಳಿ ಪ್ರದೇಶದಲ್ಲಿ ಬಹುಮಟ್ಟಿಗೂ ಒಳಭಾಗದಲ್ಲಿ ಸ್ವಲ್ಪಮಟ್ಟಿಗೂ ಇದೆ. ಕರಾವಳಿಯಲ್ಲಿ ಕಂಡುಬರುವ ಮೆಕ್ಕಲು, ಜೇಡಿ ಮತ್ತು ಸುಣ್ಣಕಲ್ಲು ಪದರಗಳು ಈಚಿನ ರಚನೆಗಳಾಗಿವೆ.

ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಕಬ್ಬಿಣದ ಅದುರು ಹೇರಳವಾಗಿದೆ. ಕೊಡಚಾದ್ರಿಯ ಬಳಿ ಈ ಅದುರನ್ನು ತೆಗೆಯಲಾಗುತ್ತದೆ. ಕುಂದಾಪುರ ತಾಲ್ಲೂಕಿನಲ್ಲಿ ಉತ್ತಮ ದರ್ಜೆಯ ಬಾಕ್ಸೈಟ್ ಇದೆ. ಸುಣ್ಣದ ಚಿಪ್ಪು, ಸಿಲಿಕ ಮರಳು, ಸಿಲಿಮನೈಟ್, ಸೋಪುಕಲ್ಲು, ಹೆಂಚಿನ ತಯಾರಿಕೆಯ ಮಣ್ಣು- ಇವು ಜಿಲ್ಲೆಯ ವಿವಿಧ ಭಾಗಗಳಲ್ಲಿ ದೊರೆಯುತ್ತದೆ. ಕಾಪು, ಪಡುಬಿದರೆ, ಉದ್ಯಾವರ ಮೊದಲಾದೆಡೆಗಳಲ್ಲಿ ಅಭ್ರಕದಿಂದ ಕೂಡಿದ ಬೆಣಚುಕಲ್ಲಿನ ಶಿಲೆಗಳಿವೆ. ಮಲ್ಪೆ ಬಳಿ ಹೆಂಚು ತಯಾರಿಕೆಗೆ ಉಪಯುಕ್ತವಾದ ಮಣ್ಣು ದೊರೆಯುತ್ತದೆ.

**ಮೇಲ್ಮೈಲಕ್ಷಣ :** ಈ ಜಿಲ್ಲೆಯ ಪೂರ್ವ ಗಡಿಯುದ್ದಕ್ಕೂ ಎತ್ತರವಾದ ಮತ್ತು ದಟ್ಟವಾದ ಕಾಡಿನಿಂದ ಕೂಡಿದ ಪಶ್ಚಿಮ ಘಟ್ಟದ ಶ್ರೇಣಿಗಳಿವೆ. ಅಲ್ಲಲ್ಲಿ ಎತ್ತರವಾದ ಗಿರಿಶಿಖರಗಳು ಮತ್ತು ಮಧ್ಯೆ ಮಧ್ಯೆ ಕಂದರಗಳಿಂದ ಕೂಡಿರುವ ಭೂದೃಶ್ಯ ರುದ್ರರಮಣೀಯವಾಗಿವೆ. ಸಹ್ಯಾದ್ರಿ ಘಟ್ಟಗಳ ಶ್ರೇಣಿಗಳ ನಡುವೆ ಇರುವ ಆಗುಂಬೆ ಘಾಟಿ ರಸ್ತೆಯು ಕರ್ನಾಟಕದ ಮೈದಾನ ಪ್ರದೇಶದೊಂದಿಗೆ ಸಂಪರ್ಕಮಾರ್ಗವಾಗಿದೆ. ಕಾರ್ಕಳದ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಗಡಿಯನ್ನು ಸೇರಿ ಮುಂದೆ ಶೃಂಗೇರಿ ಮತ್ತು ಕುದುರೆಮುಖಗಳತ್ತ ಕವಲಾಗಿ ಹೋಗುವ ಹೆದ್ದಾರಿ ಈ ಪ್ರದೇಶದ ಇನ್ನೊಂದು ಪ್ರಮುಖ ಮಾರ್ಗ. ಆಗುಂಬೆಗೆ ಉತ್ತರದಲ್ಲಿರುವ ಕೊಡಚಾದ್ರಿ ಬೆಟ್ಟ ಈ ಜಿಲ್ಲೆಯ ಅತ್ಯಂತ ಎತ್ತರದ ಶಿಖರ (1341ಮೀ) ಇದು ಪ್ರವಾಸಿಗಳ ಆಕರ್ಷಣೀಯ ತಾಣವೂ ಹೌದು. ನದಿಗಳು ತೊರೆಗಳು ಮತ್ತು ನಿತ್ಯಹಸಿರು ಕಾಡುಗಳಿಂದ ಕೂಡಿರುವ ಈ ಭಾಗದ ಪ್ರಕೃತಿ ತುಂಬಾ ರಮ್ಯವಾಗಿದೆ.

ಘಟ್ಟದಿಂದ ಕೆಳಗೆ ಪಶ್ಚಿಮಾಭಿಮುಖವಾಗಿ ಬಂದಂತೆಲ್ಲಾ ಮೈದಾನ ಪ್ರದೇಶ ತೆರೆದುಕೊಳ್ಳುತ್ತದೆ. ಅಷ್ಟೇನೂ ಕಡಿದಾಗಿರದ ಇಳಿಜಾರಿನ ಪ್ರದೇಶದಲ್ಲಿ ಅಲ್ಲಲ್ಲಿ ಎತ್ತರದ ಗುಡ್ಡಬೆಟ್ಟಗಳುಂಟು. ವ್ಯವಸಾಯದ ಜಮೀನಿನಲ್ಲಿ ಗದ್ದೆಗಳು, ತೆಂಗು, ಅಡಿಕೆ, ಗೋಡಂಬಿ ತೋಟಗಳಿವೆ. ಕೆಲವೆಡೆ ಕೆಮ್ಮಣ್ಣಿನಿಂದ ಕೂಡಿದ ಬರಡು ದಿಣ್ಣೆಗಳಿವೆ. ಈ ಜಿಲ್ಲೆಯಲ್ಲಿ ಸಮತಟ್ಟಾದ ನೆಲ ಕಡಿಮೆಯೇ.



ಉಡುಪಿ ನಗರದ ವಿಹಂಗಮ ನೋಟ


ಉತ್ತರ ಕನ್ನಡ ಜಿಲ್ಲೆ
0 10 20
ಕಿಲೋಮೀಟರುಗಳು
ಉಡುಪಿ ಜಿಲ್ಲೆ
ಉಡುಪಿ ಜಿಲ್ಲೆ
ಕೊಡಚಾದ್ರಿ
ಬೈಂದೂರು
ಕೊಲ್ಲೂರು
ಮರವಂತೆ
ಕೊಲ್ಲೂರು ನದಿ
ಚಕ್ರ ನದಿ
ವಂಡ್ಸೆ
ಹೊಸಂಗಡಿ
ಗಂಗೊಳ್ಳಿ
ಚಿತ್ರಾ ನದಿ
ಮೆಕ್ಕೆಕಟ್ಟೆ
ಕುಂದಾಪುರ
ಬಸರೂರು
ಶಂಕರನಾರಾಯಣ
ಕೋಟ
ಬಾರಕೂರು
ಸಾಲಿಗ್ರಾಮ
ಸೋಮೇಶ್ವರ
ಬ್ರಹ್ಮಾವರ
ಸೀತಾ ನದಿ
ತೋನ್ಸೆ
ಅರಬ್ಬೀ
ಸಮುದ್ರ
ಕಲ್ಯಾಣಪುರ
ಪೆರಡೂರು
ಮಣಿಪಾಲ
ಮಲ್ಪೆ
ಉಡುಪಿ
ಅಜೆಕಾರ
ಉದ್ಯಾವರ
ಬೈಲೂರು
ಕಾಪು
ಕಾರ್ಕಳ
ಪಡುಬಿದ್ರಿ
ಮೂಡಬಿದರೆ
ವೇಣೂರು
ಕಡಿಂಜೆ
ಗುರುಪುರ ಹೊಳೆ
ಶಿ ವ ಮೊ ಗ್ಗ ಜಿ ಲ್ಲೆ
ಚಿ ಕ್ಕ ಮ ಗ ಳೂ ರು ಜಿ ಲ್ಲೆ
ದ ಕ್ಷಿ ಣ ಕ ನ್ನ ಡ ಜಿ ಲ್ಲೆ

ಜಿಲ್ಲೆಯ ತೀರಪ್ರದೇಶ ಅತ್ಯಂತ ಮುಖ್ಯವಾದ ಭಾಗ. ಇಲ್ಲಿಯ ಜನಸಾಂದ್ರತೆ ಅಧಿಕ. ಇದು ಆರ್ಥಿಕ ಚಟುವಟಿಕೆಗಳಿಂದ ಕೂಡಿದ ಪ್ರದೇಶ. ಇಲ್ಲಿಯ ತೀರ ಪ್ರದೇಶದ ಅಂಚು ಸಾಮಾನ್ಯವಾಗಿ ನೇರವಾಗಿದೆ. ನದಿಗಳು ಸಮುದ್ರ ಸೇರುವ ಎಡೆಗಳಲ್ಲಿ ಕೊಲ್ಲಿಗಳುಂಟಾಗಿವೆ. ಸಮುದ್ರದ ಹಿನ್ನೀರಿನ ಪ್ರದೇಶಗಳು ಮೀನುಗಾರಿಕೆಗೆ ಮತ್ತು ದೋಣಿಗಳ ಸಂಚಾರಕ್ಕೆ ಉಪಯುಕ್ತವಾಗಿವೆ. ಬೈಂದೂರು, ಗಂಗೊಳ್ಳಿ, ಕುಂದಾಪುರ, ಮಲ್ಪೆ, ಪಡುಬಿದರೆ ಮೊದಲಾದ ಪಟ್ಟಣಗಳು ಮೀನುಗಾರಿಕೆಗೆ ಮತ್ತು ವ್ಯಾಪಾರದಿಂದಾಗಿ ಅಭಿವೃದ್ಧಿಗೆ ಬಂದಿವೆ. ಮಲ್ಪೆ ಬಳಿ ಸಂತ ಮೇರಿ ದ್ವೀಪ ಸಮೂಹವಿದೆ. ತೀರದಲ್ಲಿ ವಿರಳವಾಗಿರುವ ದ್ವೀಪಗಳಲ್ಲಿ ಈ ದ್ವೀಪಸಮೂಹ ಪ್ರಮುಖವಾದದ್ದು.



ದೀಪಸ್ತಂಭ, ಕಾಪು

**ಜಲಸಂಪತ್ತು :** ಇಲ್ಲಿಯ ಭೌಗೋಳಿಕ ಸನ್ನಿವೇಶ ಹಾಗೂ ವಾಯುಗುಣದಿಂದಾಗಿ ಇಲ್ಲಿ ಹೆಚ್ಚಿನ ಜಲಸಂಪನ್ಮೂಲವಿದೆ. ನೈರುತ್ಯ ಮಾರುತಗಳು ಇಲ್ಲಿನ ತೀರ ಮತ್ತು ಘಟ್ಟ ಪ್ರದೇಶದಲ್ಲಿ ಹೇರಳವಾಗಿ ಮಳೆ ಸುರಿಸುತ್ತವೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಮುಂಗಾರಿನ ಕಾಲದಲ್ಲಿ ಬರುವ ಮಳೆಯಿಂದಾಗಿ ಪಶ್ಚಿಮ ಘಟ್ಟಗಳಲ್ಲಿ ಅನೇಕ ನದಿತೊರೆಗಳು ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದುಬರುತ್ತವೆ. ಇವುಗಳ ಉದ್ದ ಕಡಿಮೆಯಾದರೂ ನೀರು ಅಧಿಕವಾಗಿರುತ್ತದೆ. ಗಂಗೊಳ್ಳಿ ನದಿಯು (ಕುಂದಾಪುರದ ಬಳಿ) ಐದು ಉಪ ಹೊಳೆಗಳನ್ನು ಕೂಡಿಕೊಂಡು ಸಮುದ್ರ ಸೇರುವುದರಿಂದ ಈ ಸ್ಥಳವನ್ನು ಪಂಚಗಂಗಾವಳಿ ಎಂದು ಕರೆಯುತ್ತಾರೆ. ಇಲ್ಲಿ ವಿಸ್ತಾರವಾದ ಅಳಿವೆ ಇದೆ. ಇಲ್ಲಿ ಬಂದರು ಇದೆ. ಗುರುಪುರ, ಸ್ವರ್ಣ, ಸೀತಾ, ಹಳದಿ, ಚಕ್ರಾ ಮತ್ತು ಕೊಲ್ಲೂರು ನದಿಗಳು ಮುಖ್ಯವಾದವು. ಸೀತಾನದಿ ಮತ್ತು ಸ್ವರ್ಣನದಿಗಳು ಬಾರಕೂರು ಬಳಿ ಒಟ್ಟುಗೂಡಿ ಸಮುದ್ರ ಸೇರುತ್ತವೆ. ಈ ಎಲ್ಲ ನದಿಗಳು ಸೇರುವ ಹಿನ್ನೀರು ಪ್ರದೇಶ ದೋಣಿಗಳ ಸಂಚಾರಕ್ಕೆ ಅನುಕೂಲಕರವಾಗಿದೆ. ಜಿಲ್ಲೆಯಲ್ಲಿ ಜಲಸಂಪತ್ತು ಹೇರಳವಾಗಿದ್ದರೂ ಅದು ವ್ಯವಸಾಯಕ್ಕೆ ಉಪಯೋಗವಾಗುವುದಕ್ಕಿಂತ ಸಮುದ್ರಕ್ಕೆ ಹರಿದುಹೋಗುವುದೇ ಹೆಚ್ಚು. ಕಾರ್ಕಳ ತಾಲ್ಲೂಕಿನ ಭಂಡಾಜೆ ಜಲಪಾತದಲ್ಲಿ ನೀರು 700ಮೀ ಗಳ ಎತ್ತರದಿಂದ ದುಮುಕುತ್ತದೆ. ಇದರೊಂದಿಗೆ ತಾಲ್ಲೂಕಿನ ರಾಮಸಾಗರ ಸರೋವರ ಮುಖ್ಯ ಆಕರ್ಷಣೆಯಾಗಿದೆ.

**ಅರಣ್ಯಸಂಪತ್ತು :** ಪಶ್ಚಿಮ ಘಟ್ಟದ ಕಾಡುಗಳಲ್ಲಿ ನಿತ್ಯಹರಿದ್ವರ್ಣ ಮತ್ತು ಎಲೆ ಉದುರುವ ಸಸ್ಯವರ್ಗಗಳಿವೆ. ಇಲ್ಲಿನ ಅರಣ್ಯಗಳು ಪ್ರಪಂಚದಲ್ಲಿ ಅತ್ಯಂತ ವೈವಿಧ್ಯಮಯ ಸಸ್ಯಗಳನ್ನು ಹೊಂದಿರುವ ವಿರಳ ಅರಣ್ಯಗಳ ಸಾಲಿಗೆ ಸೇರುತ್ತವೆ. ಒಟ್ಟು 99439 ಹೆಕ್ಟೇರುಗಳ ಅರಣ್ಯ ಪ್ರದೇಶವಿದೆ. ಶ್ರೀಗಂಧ, ತೇಗ, ನಂದಿ, ಮತ್ತಿ, ಬೀಟೆ, ಸಿರಿಹೊನ್ನೆ, ದಬ್ಬೆ, ಕೋಗಿಲೆ, ಹಲಸು ಮೊದಲಾದ ಮೌಲ್ಯಯುತವಾದ ಮರಗಳು ಇಲ್ಲಿಯ ಕಾಡುಗಳಲ್ಲಿವೆ. ಆಲ, ಅತ್ತಿ, ಸಂಪಿಗೆ, ಅರಳೆ, ಮಾವು, ಹೊಂಗೆ ಮರಗಿಡಗಳು ಇವೆ. ಕೆಲವೆಡೆ ಬಿದಿರು, ಬೆತ್ತ, ವಾಟೆ, ಕೇದಿಗೆ. ಈಚಲು. ಬಗನಿ ಮುಂತಾದವು ಇವೆ. ಏಲಕ್ಕಿ, ಕಾಡುಮೆಣಸು, ಸೀಗೆ. ಗೇರು, ಅಂಟುವಾಳ, ಚಕ್ಕೆ ಮೊದಲಾದವು ಇಲ್ಲಿಯ ಅರಣ್ಯೋತ್ಪನ್ನಗಳು. ನಿಂಬೆ, ಕಾಡು, ಕಂಚಿ, ದೊಡ್ಡಳ್ಳಿಕಾಯಿ, ಕಾಡುಕಿತ್ತಳೆ, ಚಕ್ಕೋತ. ನೆಲ್ಲಿಕಾಯಿ ಮುಂತಾದವೂ ಇವೆ.

ದಕ್ಷಿಣ ಭಾರತದ ಎಲ್ಲ ಪ್ರಾಣಿವರ್ಗವಿದೆ. ಹುಲಿ, ಚಿರತೆ, ಆನೆ, ಕಾಟಿ, ಕಡವೆ, ಕಾಡುಹಂದಿಗಳಂತಹ ದೊಡ್ಡ ಪ್ರಾಣಿಗಳಿಂದ ಹಿಡಿದು ಮೊಲ, ಕೆಂಜಳಿಲು, ಮುಸಿಯ ಮಂಗಗಳಂತಹ ಬಗೆಬಗೆಯ ಪ್ರಾಣಿಗಳಿವೆ. ಉರಗ ಮತ್ತು ಪಕ್ಷಿ ಜಾತಿಗಳು ಸಮೃದ್ಧವಾಗಿವೆ.

ಇಲ್ಲಿಯ ಸಮುದ್ರಕ್ಕಿಂತಲೂ ಕೆರೆಗಳೇ ಮೀನು ಅಭಿವೃದ್ಧಿಗೆ ಅನುಕೂಲವಾಗಿವೆ.

**ವಾಯುಗುಣ :** ಈ ಜಿಲ್ಲೆಯು ಪಶ್ಚಿಮ ಕರಾವಳಿ ವಾಯುಗುಣದ ಲಕ್ಷಣಗಳನ್ನು ಪಡೆದಿದೆ. ಸಮುದ್ರ ಮಟ್ಟದಿಂದ ಹೆಚ್ಚು ಎತ್ತರವಲ್ಲದ ಭೂಪ್ರದೇಶವೇ ಇಲ್ಲಿ ಅಧಿಕ ಇರುವುದರಿಂದಾಗಿ ವರ್ಷದ ಬಹುಭಾಗ ಮೈಯಲ್ಲಿ ಬೆವರು ಬರಿಸುವ ಉಷ್ಣಾಂಶ ಮತ್ತು ತೇವಾಂಶದಿಂದ ಕೂಡಿದ ಸೆಕೆ ಇರುತ್ತದೆ. ಹಗಲು ರಾತ್ರಿ ಉಷ್ಣಾಂಶ ಏರಿಕೆಯಲ್ಲೇ ಇರುತ್ತದೆ. ಚಳಿಗಾಲದಲ್ಲಿ ಗರಿಷ್ಠ ಉಷ್ಣಾಂಶ ಅಪರೂಪಕ್ಕೆ 38 ಡಿಗ್ರಿ ಸೆಲಿಸಿಯಸ್‌ಗೆ ಹೋದರೆ ಕನಿಷ್ಠ ಉಷ್ಣಾಂಶ 17 ಡಿಗ್ರಿ ಸೆಲಿಸಿಯಸ್‌ಗೆ ಇಳಿಯುವುದುಂಟು. ಮಾರ್ಚ್‌ನಿಂದ ಮೇ ತಿಂಗಳ ಅಂತ್ಯದವರೆಗೆ ಕಡುಬೇಸಿಗೆಯಿದ್ದು, ವಿರಳವಾಗಿ ಬಿರುಮಳೆಗಳಾಗುತ್ತವೆ. ಪಶ್ಚಿಮ ಘಟ್ಟದತ್ತ ಹೋದಂತೆಲ್ಲಾ ತಂಪು ಹವೆ ಕಂಡುಬರುತ್ತದೆ.

ಜೂನ್‌ನಿಂದ ಆರಂಭವಾಗುವ ನೈರುತ್ಯ ಮಾರುತದ ಮುಂಗಾರು ಮಳೆಯು ಸೆಪ್ಟೆಂಬರ್ ಅಂತ್ಯದವರೆಗೆ ತೀಕ್ಷ್ಣವಾಗಿರುತ್ತದೆ. ಈ ಅವಧಿಯಲ್ಲಿ ಭಾರಿ ಮಳೆಯಾಗುತ್ತದೆ. ರಾಜ್ಯದ ಹೆಚ್ಚು ಮಳೆ ಬೀಳುವ ಜಿಲ್ಲೆಗಳಲ್ಲಿ ಉಡುಪಿ ಜಿಲ್ಲೆಯೂ ಒಂದು. ವಾರ್ಷಿಕವಾಗಿ ಸರಾಸರಿ 3500 ರಿಂದ 4000ಮಿಮೀ ಮಳೆಯಾಗುವ ಸಂಭವವಿದೆ. ಅಕ್ಟೋಬರ್‌ನಿಂದ ಮಳೆ ವಿರಳವಾಗುತ್ತಾ ಬರುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿಯವರೆಗಿನ ಚಳಿಗಾಲದ ತಿಂಗಳುಗಳಲ್ಲಿ ಉಷ್ಣಾಂಶ ಕಡಿಮೆ ಇರುವುದಲ್ಲದೆ, ಮಳೆಯು ತುಂಬಾ ವಿರಳ. ಕೆಲವು ವರ್ಷಗಳಲ್ಲಿ ಅತ್ಯಧಿಕ ಮಳೆಯಾದ ದಾಖಲೆ ಈ ಜಿಲ್ಲೆಗಿದೆ. 1961ರಲ್ಲಿ ಉಡುಪಿ ಮತ್ತು ಕಾರ್ಕಳ ಪಟ್ಟಣಗಳಲ್ಲಿ ಅನುಕ್ರಮವಾಗಿ 6335 ಮತ್ತು 6464 ಮಿಮೀ ಅಧಿಕ ಮಳೆಯಾದ ದಾಖಲೆ ಇದೆ.

**ವ್ಯವಸಾಯ :** ಕರ್ನಾಟಕದ ಇತರ ಜಿಲ್ಲೆಗಳಂತೆಯೇ ಇಲ್ಲಿಯೂ ವ್ಯವಸಾಯವೇ ಆರ್ಥಿಕತೆಯ ಬೆನ್ನೆಲುಬು. ಇದು ವರ್ಷದಲ್ಲಿ ನಾಲ್ಕು ತಿಂಗಳು ಅಧಿಕ ಮಳೆ ಬೀಳುವ ಪ್ರದೇಶವಾಗಿರುವುದರಿಂದ ಇಲ್ಲಿ ನೀರಾವರಿ ಬೆಳೆಗಳೇ ಹೆಚ್ಚು. ಭತ್ತ ಪ್ರಮುಖ ಆಹಾರ ಬೆಳೆ. ಇಲ್ಲಿ ಭತ್ತದ ಗದ್ದೆಗಳನ್ನು ಅವುಗಳ ಸನ್ನಿವೇಶಕ್ಕನುಗುಣವಾಗಿ ವಿಂಗಡಿಸುತ್ತಾರೆ. ಕೊಳಕ ಗದ್ದೆ, ಬೈಲು ಗದ್ದೆ ಮತ್ತು ಪಟ್ ಗದ್ದೆಗಳೆಂದು ಅವನ್ನು ಕರೆಯಲಾಗುತ್ತದೆ. ಕೆಲವೆಡೆ ಬೇಸಗೆ ಬೆಳೆ ಬೆಳೆಯುವುದುಂಟು. ವಾಣಿಜ್ಯ ಬೆಳೆಗಳಲ್ಲಿ ತೆಂಗು ಮುಖ್ಯವಾದುದು. ಸಮುದ್ರತೀರದಲ್ಲಿ ಮತ್ತು ಒಳನಾಡಿನಲ್ಲಿ ವ್ಯಾಪಕವಾಗಿ ತೆಂಗಿನಮರಗಳಿವೆ. ಬೆಟ್ಟದ ತಪ್ಪಲಲ್ಲಿ ಮೆಣಸು ಮತ್ತು ಏಲಕ್ಕಿ ವಾಣಿಜ್ಯ ಬೆಳೆಗಳು. ನೀರಾವರಿ ಅನುಕೂಲವಿರುವ ಹೆಚ್ಚಿನ ಭಾಗಗಳಲ್ಲಿ ಅಡಕೆತೋಟಗಳಿವೆ.

ಹೊಸ ಹೊಸ ಬೇಸಾಯ ವಿಧಾನಗಳಿಂದ ಮತ್ತು ಹೊಸ ತಳಿಗಳ ಹಾಗೂ ಬೆಳೆಗಳ ಪ್ರಯೋಗದಿಂದ ಇಂದು ಇಲ್ಲಿನ ವ್ಯವಸಾಯಕ್ಷೇತ್ರ ವೈವಿಧ್ಯಮಯವಾಗಿದೆ. ಅಲ್ಲಲ್ಲಿ ರಾಗಿ, ಉದ್ದು, ಹೆಸರು, ಹುರುಳಿ, ಅವರೆ, ಗೆಣಸು, ಪಪ್ಪಾಯಿ ಬೆಳೆಯಲಾಗುತ್ತದೆ. ಕಬ್ಬು, ಗೋಡಂಬಿ, ಮೆಣಸಿನಕಾಯಿ, ಸಪೋಟ, ಮಾವು, ಹಲಸು, ಬಾಳೆಗಳ ಸಾಗುವಳಿಯೂ ಉಂಟು. ಈಚಿನ ದಶಕಗಳಲ್ಲಿ ತಾಳೆ ಮರಗಳನ್ನು ಬೆಳೆಯುವುದು ಪ್ರಾರಂಭವಾಗಿದೆ. ಈ ಜಿಲ್ಲೆಯಲ್ಲಿ ಕೆರೆ ನೀರಾವರಿ ಕಡಿಮೆ. ಇಲ್ಲಿ ಅನೇಕ ಸಣ್ಣ ದೊಡ್ಡ ಕೆರೆಗಳಿವೆ. ಕುಂದಾಪುರ ತಾಲ್ಲೂಕಿನ ಚಂತರ ಮಡಗ ಮತ್ತು ಮರನಾಡ ಮಡಗ ಎಂಬ ಕೆರೆಗಳು ನೀರಾವರಿಗೆ ಹೆಚ್ಚು ಉಪಯುಕ್ತವಾಗಿವೆ. ಕಾರ್ಕಳದ ಬಳಿಯ ರಾಮಸಾಗರ ದೊಡ್ಡದು. ಜಿಲ್ಲೆಯಲ್ಲಿ ಒಟ್ಟು 126662 ಜನ ಸಾಗುವಳಿದಾರರಿದ್ದಾರೆ. 96565 ಕೃಷಿಕಾರ್ಮಿಕರಿದ್ದಾರೆ (1991). ಭತ್ತ ಅತಿ ವಿಸ್ತಾರ ಪ್ರದೇಶದಲ್ಲಿ ಬೆಳೆಯುವ ಬೆಳೆ (69892 ಹೆಕ್ಟೇರುಗಳು). ಗೇರು ಪ್ರಮುಖ ವಾಣಿಜ್ಯ

ಬೆಳೆಯಾಗಿದ್ದು, 18421 ಹೆಕ್ಟೇರುಗಳಲ್ಲಿ ಬೆಳೆಯುತ್ತಾರೆ. ತರುವಾಯದ ಸ್ಥಾನವನ್ನು ತೆಂಗು (13472 ಹೆ), ದ್ವಿದಳ ಧಾನ್ಯ (11422 ಹೆ) ಮತ್ತು ಅಡಿಕೆ (3834 ಹೆ) ಬೆಳೆಗಳು ಪಡೆದಿವೆ.



ಶ್ರೀಕೃಷ್ಣ ದೇವಾಲಯ

**ಮೀನುಗಾರಿಕೆ :** ಉಡುಪಿ ಜಿಲ್ಲೆಯ ಆರ್ಥಿಕ ಚಟುವಟಿಕೆಗಳಲ್ಲಿ ಮೀನುಗಾರಿಕೆ ಗಮನಾರ್ಹ ಸ್ಥಾನ ಪಡೆದಿದೆ. ಈ ಜಿಲ್ಲೆ ಪಾರಂಪರಿಕವಾಗಿ ಮೀನುಗಾರಿಕೆಗೆ ಹೆಸರಾದುದು. ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 141ಕಿಮೀ ತೀರಪ್ರದೇಶವಿತ್ತು. ಈಗ ಉಡುಪಿ ಜಿಲ್ಲೆಯಲ್ಲಿ ಹಿಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸೇ.60ರಷ್ಟು ಉದ್ದದ ಕರಾವಳಿ ಈ ಜಿಲ್ಲೆಗೆ ಸೇರಿದೆ. ದಕ್ಷಿಣದ ಯರಮಾಲುವಿನಿಂದ ಉತ್ತರದ ಬೈಂದೂರಿನವರೆಗೂ ಅನೇಕ ಮೀನುಗಾರಿಕೆ ಕೇಂದ್ರಗಳಿವೆ. ಅವುಗಳಲ್ಲಿ ಉಡುಪಿ ಬಳಿ ಇರುವ ಮಲ್ಪೆಯಲ್ಲಿ ಮತ್ತು ಕುಂದಾಪುರದ ದಡಗಳಲ್ಲಿ ಮತ್ಸ್ಯೋದ್ಯಮ ಹೆಚ್ಚಾಗಿ ಬೆಳೆದಿದೆ.

ಹಿಂದೆ ಸಮುದ್ರದಲ್ಲಿ ಮೀನು ಹಿಡಿಯುವುದು ಒಂದು ಉಪಜೀವನ ವೃತ್ತಿಯಾಗಿತ್ತು. ಮೀನುಗಾರರು ತಮ್ಮ ಸೀಮಿತ ಸಾಮಗ್ರಿ ಸಲಕರಣೆಗಳ ನೆರವಿನಿಂದ ದೋಣಿಗಳಲ್ಲಿ ಹೋಗಿ ಮೀನುಗಳನ್ನು ಸಂಗ್ರಹಿಸುತ್ತಿದ್ದರು. ಈಗ ಆಧುನಿಕ ಯಂತ್ರಚಾಲಿತ ಮೋಟರು ದೋಣಿಗಳು ಮತ್ತು ಸುಧಾರಿತ ಬಲೆಗಳು ಲಭ್ಯವಿವೆ. ಮೀನುಗಾರಿಕೆಯ ವಿಧಾನ ಹೆಚ್ಚು ವೈಜ್ಞಾನಿಕವಾಗಿದೆ. ಆದ್ದರಿಂದ ಸಮುದ್ರದಲ್ಲಿ ದೂರದ ಆಳ ಕಡಲಿನಲ್ಲಿ ಸಾಗಿ ಮೀನನ್ನು ಹಿಡಿದು ತರುತ್ತಾರೆ. ಇಂದು ಮೀನು ಮಾತ್ರವಲ್ಲದೆ ಏಡಿ, ಸೀಗಡಿ ಚಿಪ್ಪು ಹಾಗೂ ಹವಳ ಸಂಗ್ರಹಣೆಯೂ ಮೀನುಗಾರಿಕೆಯ ಅಂಗವಾಗಿ ಬೆಳೆದಿದೆ.

ಇಲ್ಲಿ ಹಿಡಿಯುವ ಮೀನುಗಳಲ್ಲಿ ಬಂಗಡೆ ಅಥವಾ ಬಗ್ಗಡೆ ಪ್ರಸಿದ್ಧವಾದುದು. ಅದು ಈ ತೀರದಲ್ಲಿ ಯಥೇಚ್ಛವಾಗಿ ದೊರಕುತ್ತದೆ. ಮಾಂಸ ಹಾಗೂ ರುಚಿಯ ದೃಷ್ಟಿಯಿಂದ ಇದು ಜನಪ್ರಿಯ. ಇದಲ್ಲದೆ ಭೂತಾಯಿ ಎಂಬ ಚಿಕ್ಕಮೀನು ಇಲ್ಲಿ ಹೆಚ್ಚಾಗಿ ಸಿಗುತ್ತದೆ. ಸಾರ್ಡೀಶ್ ಮೀನುಗಳನ್ನು ಹೆಚ್ಚಾಗಿ ಎಣ್ಣೆ ತೆಗೆಯಲು ಬಳಸುತ್ತಾರೆ.

ನದಿ ಮುಖದ ಹಿನ್ನೀರಿನಲ್ಲೂ ಒಳನಾಡಿನ ನದಿ ಕೆರೆಗಳಲ್ಲೂ ಸಾಕಷ್ಟು ಮೀನು ಲಭ್ಯವಿದೆ. ಈಗ ಮೀನು ಸಾಕಣೆ ಒಂದು ಮುಖ್ಯ ಉದ್ಯಮ. ಮೀನನ್ನು ಸಂಸ್ಕರಿಸುವ, ಒಣಗಿಸುವ, ಡಬ್ಬಕ್ಕೆ ತುಂಬುವ ಮತ್ತು ಕೆಡದಂತೆ ರಕ್ಷಿಸುವ ಉದ್ಯಮಗಳೂ ಇಲ್ಲಿ ಬೆಳೆದಿವೆ. ಇದರಿಂದ ಅನೇಕರಿಗೆ ಉದ್ಯೋಗ ದೊರಕಿದೆ. ಮೀನುಗಾರಿಕೆ ವರ್ಷಪೂರ್ತಿ ನಡೆಯುವ ಉದ್ಯೋಗವಲ್ಲ. ಸೆಪ್ಟೆಂಬರ್ ತಿಂಗಳಿನಿಂದ ಫೆಬ್ರವರಿಯವರೆಗೂ ಚಟುವಟಿಕೆ ಚುರುಕಾಗಿರುತ್ತದೆ. ಮುಂದೆ ಏಪ್ರಿಲ್‌ವರೆಗೂ ಕಡಿಮೆ. ಮೇ - ಆಗಸ್ಟ್‌ವರೆಗೆ ಸಮುದ್ರದಲ್ಲಿ ಮೀನು ಹಿಡಿಯಲಾಗುವುದಿಲ್ಲ. ಮುಂಗಾರಿನ ತೀವ್ರತೆ ಕಾರಣ ಈ ಅವಧಿಯಲ್ಲಿ ಮೀನುಗಾರರು ಬಹುತೇಕ ನಿರುದ್ಯೋಗಿಗಳಾಗಿರುತ್ತಾರೆ. ಈಗ ಸೀಗಡಿಗಳಿಗೆ ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದೆ. ಸೀಗಡಿಗಳನ್ನು ಹಿಡಿಯುವ, ಸಾಕಿ ಬೆಳೆಸುವ ಕಾಯಕಕ್ಕೆ ಈಗ ಪ್ರಾಮುಖ್ಯತೆ ಬಂದಿದೆ. ವಾರ್ಷಿಕವಾಗಿ ಸಾಗರೋತ್ಪನ್ನವಾಗಿ ಹಿಡಿದ ಮೀನಿನ ಪ್ರಮಾಣ 66914 ಟನ್‌ಗಳು. ಸಿಹಿ ನೀರು ಮೀನು 1713 ಟನ್‌ಗಳು.

**ಕೈಗಾರಿಕೆ :** ಉಡುಪಿ ಜಿಲ್ಲೆ ಕೈಗಾರಿಕಾ ಪ್ರಧಾನ ಜಿಲ್ಲೆಯಲ್ಲ. ಸಣ್ಣ ಕೈಗಾರಿಕೆ, ವ್ಯಾಪಾರ ಮತ್ತು ಇತರ ವ್ಯವಸಾಯೇತರ ಚಟುವಟಿಕೆಗಳಲ್ಲಿ ತೊಡಗಿರುವವರ ಪ್ರಮಾಣ ಜಿಲ್ಲೆಯ ಒಟ್ಟು ಜನಸಂಖ್ಯೆಯ ಸುಮಾರು ಸೇ.40 ರಷ್ಟು. ಮೀನುಗಳ ಸಂಸ್ಕರಣೆ, ವ್ಯಾಪಾರ, ವಿದೇಶಗಳಿಗೆ ರಫ್ತು ಮಾಡುವುದು ಮುಂತಾದ ಕಾರ್ಯಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ತೊಡಗಿದ್ದಾರೆ. ಮಲ್ಪೆ, ಕುಂದಾಪುರ, ಕೋಡಿ ಮೊದಲಾದವು ಈ ಚಟುವಟಿಕೆಗಳ ಕೇಂದ್ರಗಳಾಗಿವೆ. ನಿಸರ್ಗಸಂಪನ್ಮೂಲಗಳನ್ನು ಬಳಸಿಕೊಂಡು ಅನೇಕ ಉದ್ಯಮಗಳು ತಲೆ ಎತ್ತಿವೆ. ಅವುಗಳಲ್ಲಿ ಹೆಂಚಿನ ಕಾರ್ಖಾನೆಗಳು ಮುಖ್ಯವಾದವು. ಕುಂದಾಪುರ ಮತ್ತು ಉಡುಪಿಯಲ್ಲಿ ಈ ಕಾರ್ಖಾನೆಗಳು ಹೆಚ್ಚಾಗಿ ನೆಲೆಸಿವೆ. ವಿಶ್ವ ಪ್ರಸಿದ್ಧವಾದ ಮಂಗಳೂರು ಹೆಂಚುಗಳು ಇಲ್ಲಿಂದ ರಫ್ತಾಗುತ್ತವೆ. ಮನೆಗಳಲ್ಲಿ ಮತ್ತು ಕಟ್ಟಡಗಳಲ್ಲಿ ಬಳಸುವ ಮೊಸಾಯಿಕ್ ಹೆಂಚುಗಳು ಈಗೀಗ ಹೆಚ್ಚಾಗಿ ತಯಾರಾಗುತ್ತವೆ. ಮನೆಗಳ ಗೋಡೆಗಳನ್ನು ಕಟ್ಟಲು ಬಳಸುವ ಜಂಬಿಟ್ಟಿಗೆ ಕಲ್ಲು ಜಿಲ್ಲೆಯಲ್ಲಿ ಹೇರಳವಾಗಿ ಸಿಗುತ್ತವೆ. ಇದನ್ನು ಇಟ್ಟಿಗೆ ಮಾಡಿ ಘಟ್ಟದ ಮೇಲಿನ ಪಟ್ಟಣಗಳಿಗೆ ಮತ್ತು ಗ್ರಾಮಗಳಿಗೆ ಕಳುಹಿಸಲಾಗುತ್ತದೆ. ಇತ್ತೀಚೆಗೆ ಹೆಚ್ಚಾಗಿ ತೆಂಗಿನ ನಾರಿನಿಂದ ಹಗ್ಗ, ಜಮಖಾನೆ, ಕಾಲೊರೆಸುವ ತಾಟು ಮೊದಲಾದವನ್ನು ತಯಾರಿಸಲಾಗುತ್ತದೆ. ಇದೊಂದು ಮುಖ್ಯ ಗೃಹ ಕೈಗಾರಿಕೆಯಾಗಿ ಬೆಳೆದಿದೆ. ಉದ್ಯಾವರ, ಪಡುಬಿದ್ರಿ, ಕಲ್ಯಾಣಪುರಗಳಲ್ಲಿ ಈ ಚಟುವಟಿಕೆಗಳು ಹೆಚ್ಚಾಗಿ ನೆಲೆಸಿವೆ.

ಇಲ್ಲಿ ಅರಣ್ಯ ಪ್ರದೇಶ ಸಾಕಷ್ಟಿರುವುದರಿಂದ ಮರ, ಬೆತ್ತ, ಬಿದಿರುಗಳನ್ನು ಬಳಸಿ ವಿವಿಧ ಪೀಠೋಪಕರಣಗಳು, ಕುಕ್ಕೆಗಳು, ಚಾಟುಗಳು, ಮಳೆಗಾಲದಲ್ಲಿ ತಲೆಯ ಮೇಲೆ ಹಾಕಿಕೊಳ್ಳುವ ಗೊರಗಗಳು, ಗೋಡೆಗಳ ನಿರ್ಮಾಣಕ್ಕೆ ಬಳಸುವ ಬಿದಿರಿನ ತಡಿಕೆಗಳು ಮೊದಲಾದವನ್ನು ತಯಾರಿಸಲಾಗುತ್ತದೆ. ಕಾಡಿನಲ್ಲಿ ದೊರೆಯುವ ಈಚಲಿನಿಂದ ಮತ್ತು ದೊಡ್ಡ ಹುಲ್ಲಿನಿಂದ ಚಾಪೆ ತಯಾರು ಮಾಡುತ್ತಾರೆ.

ವ್ಯವಸಾಯ ಸಂಬಂಧವಾದ ಇನ್ನೂ ಹಲವಾರು ಉದ್ಯಮಗಳು ಜಿಲ್ಲೆಯಲ್ಲಿವೆ. ಕೊಬ್ಬರಿಯಿಂದ ಎಣ್ಣೆತೆಗೆಯುವ ಗಿರಣಿಗಳು, ಅಕ್ಕಿಗಿರಣಿಗಳು, ಗೋಡಂಬಿ ಸಂಸ್ಕರಣ ಘಟಕಗಳು, ಗೋಡಂಬಿಯ ಓಟೆಯಿಂದ ಎಣ್ಣೆ ತಯಾರಿಸುವ ಗಿರಣಿಗಳು, ಬೆಲ್ಲ ತಯಾರಿಕೆ ಘಟಕಗಳು - ಇವು ಮುಖ್ಯವಾದವು. ಬೀಡಿಕಟ್ಟುವುದು ಒಂದು ಹಳೆಯ ಉದ್ಯಮ. ಇದು ಕರಾವಳಿಯ ಊರುಗಳಲ್ಲಿ ಅಭಿವೃದ್ಧಿ ಹೊಂದಿದೆ. ಕಾರ್ಕಳ ಉಡುಪಿಗಳಲ್ಲಿ ಬೀಡಿ ತಯಾರಿಕೆ ಕಾರ್ಖಾನೆಗಳಿವೆ. ಕೈ ಮಗ್ಗದ ಬಟ್ಟೆಗಳು,ಲುಂಗಿಗಳು ಚೌಕಗಳು ಮೊದಲಾದವನ್ನು ತಯಾರಿಸುವ ಉದ್ಯಮಗಳು ಉಡುಪಿ, ಬ್ರಹ್ಮಾವರ ಮುಂತಾದ ಕಡೆಗಳಲ್ಲಿವೆ.

ಮಣಿಪಾಲ, ಉಡುಪಿ, ಕುಂದಾಪುರ, ಪಟ್ಟಣಗಳು ಆಧುನಿಕ ಕೈಗಾರಿಕೆಗಳಲ್ಲಿ ಮುಂದುವರೆದಿವೆ. ಉಕ್ಕಿನ ಉಪಕರಣಗಳು ಮೋಟಾರುವಾಹನದ ಬಿಡಿಭಾಗಗಳು, ಲೋಹದ ಪಾತ್ರೆಗಳು ಮುಂತಾದವುಗಳ ತಯಾರಿಕೆ, ತಂತಿ ತಯಾರಿಕೆ ಮತ್ತು ವಿದ್ಯುತ್ ಉಪಕರಣಗಳ ತಯಾರಿಕೆಗೆ ಸಂಬಂಧಿಸಿದ ಕಾರ್ಖಾನೆಗಳು ಇಲ್ಲಿವೆ. ಮುದ್ರಣ, ಪತ್ರಿಕೋದ್ಯಮ, ಮರಗೆಲಸ, ಕಬ್ಬಿಣದ ಕೆಲಸ, ಚಿನ್ನದ ಕೆಲಸ, ಚರ್ಮ ಕೈಗಾರಿಕೆ, ರಬ್ಬರ್ ಸಂಸ್ಕರಣ ಮುಂತಾದವುಗಳಲ್ಲಿ ಸಾವಿರಾರು ಜನ ದುಡಿಯುತ್ತಿದ್ದಾರೆ. ಗಂಗೊಳ್ಳಿ, ಬೈಂದೂರು, ಮಲ್ಪೆ, ಹಂಗಾರಕಟ್ಟೆ ಬಂದರುಗಳು ಜನರಿಗೆ ಉದ್ಯೋಗ ಒದಗಿಸಿವೆ. ಜಿಲ್ಲೆಯಲ್ಲಿ ಒಟ್ಟು 5629 ವಿವಿಧ ಬಗೆಯ ಸಣ್ಣ ಪ್ರಮಾಣದ ಉದ್ಯಮಗಳು ಸ್ಥಾಪನೆಗೊಂಡಿದ್ದು ಅವುಗಳಲ್ಲಿ 34123 ಉದ್ಯೋಗಿಗಳು ಕೆಲಸ ಮಾಡುತ್ತಾರೆ. ಮಧ್ಯಮ ಪ್ರಮಾಣದ ಉದ್ಯಮಗಳ ಸಂಖ್ಯೆ 14 (2001).



ಶ್ರೀಕೃಷ್ಣ ರಥೋತ್ಸವ

**ಸಾರಿಗೆ ಸಂಪರ್ಕ :** ಉಡುಪಿ ಜಿಲ್ಲೆಯ ಒಂದು ಬದಿಯಲ್ಲಿ ಸಮುದ್ರವೂ ಇನ್ನೊಂದು ಬದಿಯಲ್ಲಿ ಎತ್ತರದ ಘಟ್ಟಗಳೂ ಇವೆ. ಒಳನಾಡು ಚಿಕ್ಕ ದೊಡ್ಡ ಅಸಂಖ್ಯಾತ ನದಿಕೊಳ್ಳಗಳಿಂದ ಕೂಡಿದ ಭೌಗೋಳಿಕ ಸನ್ನಿವೇಶವು ಭೂಸಾರಿಗೆಗೆ ಅಷ್ಟೇನೂ ಅನುಕೂಲಕರವಾಗಿಲ್ಲ. ಹಿಂದೆ ಗಾಡಿ ರಸ್ತೆಗಳು ಹೆಚ್ಚಾಗಿದ್ದವು. ಆಧುನಿಕವಾದ ರಸ್ತೆಗಳು ಹೆಚ್ಚಾಗಿರಲಿಲ್ಲ. ಅವು ಮಳೆಗಾಲದಲ್ಲಿ ಬಹುತೇಕ ಸಂಚಾರಕ್ಕೆ ನಿರುಪಯುಕ್ತವಾಗಿರುತ್ತಿದ್ದವು. ಜಿಲ್ಲೆಯ ಭೌಗೋಳಿಕ ಮಹತ್ವ ಮತ್ತು ಬಂದರುಗಳಿಂದಾಗಿ ಬ್ರಿಟಿಷ್ ಸರ್ಕಾರ ಕೆಲವು ಘಾಟಿ ಮಾರ್ಗಗಳನ್ನು ಅಭಿವೃದ್ಧಿಪಡಿಸಿತು. ಇದರಿಂದ ಜಿಲ್ಲೆಯೊಂದಿಗೆ ಒಳನಾಡಿನ ಸಂಪರ್ಕ ಬೆಳೆಯಲು ಸಹಾಯವಾಯಿತು.

ಕೊಲ್ಲೂರು ಸಮೀಪದಲ್ಲಿ ಹಾದು ಹೋಗುವ ಉಡುಪಿ-ಸಾಗರ ರಸ್ತೆ ಶಿವಮೊಗ್ಗ ಜಿಲ್ಲೆಯ ಮೂಲಕ ಉತ್ತರ ಕರ್ನಾಟಕ ಭಾಗಕ್ಕೆ ಸಂಪರ್ಕ ಸಾಧಿಸುವ ಘಾಟಿ ರಸ್ತೆ. ಉಡುಪಿ-ಆಗುಂಬೆ-ಶಿವಮೊಗ್ಗ ರಸ್ತೆ ಇತ್ತೀಚಿನವರೆಗೂ ದೊಡ್ಡ ವಾಹನಗಳ ಸಂಚಾರಕ್ಕೆ ಅನುಕೂಲಕರ ವಾಗಿರಲಿಲ್ಲ. ಉಡುಪಿ-ಕಾರ್ಕಳ-ದಕ್ಷಿಣಕನ್ನಡದ ಎಲ್ಲೆ ಮತ್ತು ಶೃಂಗೇರಿ ರಸ್ತೆ ಉತ್ತಮ ಸ್ಥಿತಿಯಲ್ಲಿರುವ ಘಾಟಿಮಾರ್ಗ; ಇದು ಕುದುರೆಮುಖ ಗಣಿ ಪ್ರದೇಶಕ್ಕೂ ಸಂಪರ್ಕ ಕಲ್ಪಿಸುತ್ತದೆ. ಉಡುಪಿ-ಶಂಕರನಾರಾಯಣ-ಹೊಸಂಗಡಿ-ಹುಲಿಕಲ್ ಮೂಲಕ ಇನ್ನೊಂದು ಘಾಟಿ ಮಾರ್ಗ ಶಿವಮೊಗ್ಗ ಜಿಲ್ಲೆ ತಲುಪುತ್ತದೆ. ಉಡುಪಿ, ಭಟ್ಕಳ ರಸ್ತೆಯು ರಾಷ್ಟ್ರೀಯ ಹೆದ್ದಾರಿ. ಇದು ಉತ್ತರ ಕನ್ನಡ ಜಿಲ್ಲೆ ಮೂಲಕ ಹಾದು ಹೋಗುತ್ತದೆ. ಉಡುಪಿ -ಮಂಗಳೂರು ಮಾರ್ಗವೂ ರಾಷ್ಟ್ರೀಯ ಹೆದ್ದಾರಿಯ ಭಾಗವಾಗಿದೆ. 141ಕಿಮೀ ರಾಷ್ಟ್ರೀಯ ಹೆದ್ದಾರಿ, 289 ಕಿಮೀ ರಾಜ್ಯ ಹೆದ್ದಾರಿ, 623ಕಿಮೀ ಜಿಲ್ಲಾರಸ್ತೆಗಳು. 927ಕಿಮೀಗಳ ಉದ್ದವಿದೆ.

ಈಚಿನ ದಶಕಗಳಲ್ಲಿ ಇಲ್ಲಿನ ನದಿಗಳು ಮತ್ತು ಉಪನದಿಗಳಿಗೆ ಅನೇಕ ಸೇತುವೆಗಳನ್ನು ಕಟ್ಟಿದ್ದರಿಂದ ಒಳನಾಡಿನ ಸಂಪರ್ಕ ವ್ಯವಸ್ಥೆ ಉತ್ತಮಗೊಂಡಿದೆ. ಉಡುಪಿ-ಕಾರ್ಕಳ-ಬೆಳ್ತಂಗಡಿ ರಸ್ತೆ ಚಾರ್ಮಾಡಿ ಘಾಟ್ ರಸ್ತೆಗೆ ಸಂಪರ್ಕ ಕಲ್ಪಿಸುತ್ತವೆ.

ಏಕೈಕ ರೈಲು ಮಾರ್ಗವಾಗಿರುವ ತಿರುವನಂತಪುರ ಮುಂಬೈ-ಕೊಂಕಣ ರೈಲು ಮಾರ್ಗ ಇಲ್ಲಿಯ ಏಕೈಕ ರೈಲ್ವೆ ಸಂಪರ್ಕವ್ಯವಸ್ಥೆ ಇಲ್ಲಿ ಹಾದು ಹೋಗುತ್ತದೆ. ಇದರಿಂದ ಬೈಂದೂರು, ಕುಂದಾಪುರ, ಉಡುಪಿ, ಹಂಗಾರಕಟ್ಟೆ ಮೊದಲಾದ ತೀರದ ಪಟ್ಟಣಗಳಿಂದ ಭಾರತದ ಇತರ ಭಾಗಗಳಿಗೆ ರೈಲ್ವೇ ಸಂಪರ್ಕ ಒದಗಿಬಂದಿದೆ. ಒಟ್ಟು ರೈಲು ಮಾರ್ಗದ ಉದ್ದ 100ಕಿಮೀಗಳು.

ಜಲಸಾರಿಗೆಗೆ ಜಿಲ್ಲೆಯಲ್ಲಿ ಹೆಚ್ಚಿನ ಪ್ರಾಮುಖ್ಯ. ಕರಾವಳಿಯ ಬಂದರುಗಳಿಗೆ ಮತ್ತು ಪಟ್ಟಣಗಳಿಗೆ ದೋಣಿಗಳು ಸ್ಟೀಮರ್‌ಗಳು ಮತ್ತು ಸಣ್ಣ ಹಡಗುಗಳ ಮೂಲಕ ಜನ ಸಂಚಾರ ಮತ್ತು ಸಾಮಗ್ರಿಗಳ ಸಾಗಣೆ ನಡೆಯುತ್ತವೆ. ನದೀ ಮುಖಗಳು ಹಿನ್ನೀರು ದೋಣಿ ಸಂಚಾರಕ್ಕೆ ಅನುಕೂಲವಾಗಿದೆ. ಆಧುನಿಕ ದೂರಸಂಪರ್ಕ ವ್ಯವಸ್ಥೆ ಬಳಕೆಯಲ್ಲಿದೆ.

ಉಡುಪಿ ಜಿಲ್ಲೆ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯ ತವರು. ಇಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಸ್ಥಾಪಿತವಾದ ಬ್ಯಾಂಕಿಂಗ್ ಸಂಸ್ಥೆಗಳು ಹಲವು. 1906ರಷ್ಟು ಹಿಂದೆಯೇ ಕೆನರಾಬ್ಯಾಂಕ್ ಅಸ್ತಿತ್ವಕ್ಕೆ ಬಂದಿತು. ಅನಂತರ ಬಂದ ಹಲವಾರು ಬ್ಯಾಂಕ್‌ಗಳಲ್ಲಿ ಕೆಲವು ಉಳಿದಿವೆ. ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ಬ್ಯಾಂಕ್‌ಗಳು ಉಡುಪಿ ಮತ್ತು ಮಂಗಳೂರು ಮೂಲದವು. ಅವುಗಳಲ್ಲಿ ಕೆನರಾಬ್ಯಾಂಕಲ್ಲದೆ ಸಿಂಡಿಕೇಟ್‌ಬ್ಯಾಂಕ್, ವಿಜಯಾಬ್ಯಾಂಕ್ (1931), ಕರ್ನಾಟಕ ಬ್ಯಾಂಕ್ (1924), ಕಾರ್ಪೋರೇಷನ್‌ಬ್ಯಾಂಕ್ - ಇವು ಪ್ರಮುಖವಾದವು. ಜಿಲ್ಲೆಯಲ್ಲಿ 192 ವಾಣಿಜ್ಯಬ್ಯಾಂಕುಗಳು, 11 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, 24 ನಗರ ಸಹಕಾರಿಬ್ಯಾಂಕುಗಳು, 3 ವ್ಯವಸಾಯ ಮತ್ತು ಗ್ರಾಮೀಣಾಭಿವೃದ್ಧಿಬ್ಯಾಂಕುಗಳು ಮತ್ತು 52 ಕೃಷಿ ಸಾಲ ಸಹಕಾರ ಸಂಘಗಳಿವೆ (2001).

**ಶಿಕ್ಷಣ ಮತ್ತು ಸಂಸ್ಕೃತಿ :** ಶಿಕ್ಷಣದ ಅಭಿವೃದ್ಧಿಯಲ್ಲಿ ಉಡುಪಿ ರಾಜ್ಯದ ಪ್ರಥಮ ಪಂಕ್ತಿಯಲ್ಲಿರುವ ಜಿಲ್ಲೆ. ಇಲ್ಲಿನ ಮಠಗಳೂ ಅಗ್ರಹಾರಗಳೂ ಮೊದಲಿನಿಂದಲೂ ವೈದಿಕ ಅಧ್ಯಯನಕ್ಕೆ ಆಶ್ರಯ ನೀಡುತ್ತಾ ಬಂದವು. ಕೆಲವು ಆಂಗ್ಲ ಮಿಷನರಿಗಳು ಈ ಭಾಗದಲ್ಲಿ ಶಾಲೆಗಳನ್ನು ಸ್ಥಾಪಿಸಿ ಪತ್ರಿಕೆಗಳನ್ನು ಪ್ರಕಟಿಸಿ ಸಾಕ್ಷರತೆ ಹೆಚ್ಚುವಂತೆ ಮಾಡಿದರು. ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ ಉಡುಪಿಯಿಂದ ನಾನಾ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಆಧುನಿಕ ಶಿಕ್ಷಣದ ಸೌಲಭ್ಯಗಳನ್ನು ಈ ಜಿಲ್ಲೆ ಬೇಗ ಬಳಸಿಕೊಂಡಿತು. ಪೈ ಮನೆತನದವರು ಮಣಿಪಾಲದಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿ ದೇಶಕ್ಕೇ ಮಾದರಿಯಾದರು. ಮುಂದೆ ಹಲವಾರು ಕಾಲೇಜುಗಳು ಜಿಲ್ಲೆಯಲ್ಲಿ

ಅಸ್ತಿತ್ವಕ್ಕೆ ಬಂದುವು. ಅವುಗಳಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜು ಅತ್ಯಂತ ಮುಖ್ಯವಾದುದು. ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಸಂಸ್ಥೆ ಹಲವು ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದೆ. ಮಹಾತ್ಮಗಾಂಧಿ ಸ್ಮಾರಕ ಕಾಲೇಜು, ಕಾನೂನು ಕಾಲೇಜು, ಆಯುರ್ವೇದ ಕಾಲೇಜುಗಳಿವೆ. ಜಿಲ್ಲೆಯಲ್ಲಿ 62 ಪದವಿಪೂರ್ವ ಕಾಲೇಜುಗಳು, 11 ಕಾಲೇಜುಗಳು, 2 ಎಂಜಿನಿಯರಿಂಗ್ ಕಾಲೇಜುಗಳು, 2 ಮೆಡಿಕಲ್ ಕಾಲೇಜುಗಳು, 4 ಪಾಲಿಟೆಕ್ನಿಕ್‌ಗಳು ಇವೆ. ಒಟ್ಟು 46 ಗ್ರಾಮಪಂಚಾಯಿತಿ ಗ್ರಂಥಾಲಯಗಳಿವೆ. ಈ ಜಿಲ್ಲೆಯ ಸಾಕ್ಷರತೆ ಪ್ರಮಾಣ ಸೇ.79.87 ಪುರುಷರು ಸೇ.86.59ರಷ್ಟು ಮತ್ತು ಮಹಿಳೆಯರು ಸೇ.74.02ರಷ್ಟು ಸಾಕ್ಷರರಾಗಿದ್ದಾರೆ. ಪಾರಂಪರಿಕವಾದ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ನಡೆದಿವೆ. ಕೆರೋಡಿಸುಬ್ಬರಾವ್, ಮುದ್ದಣ, ಎಂ. ಗೋವಿಂದಪೈ, ಪಂಜೆ ಮಂಗೇಶರಾವ್, ಕಡೇಕಾರು ರಾಜಗೋಪಾಲ, ಕೃಷ್ಣರಾಯ, ಎಂ.ಎನ್. ಕಾಮತ್, ಉಗ್ರಾಣ, ಮಂಗೇಶರಾವ್, ಉಲ್ಲಾಳ ಮಂಗೇಶ್‌ರಾವ್, ಪೇಜಾವರ ಸದಾಶಿವರಾವ್, ಶಿವರಾಮ ಕಾರಂತ, ಸೇಡಿಯಾಪು ಕೃಷ್ಣಭಟ್ಟ, ಎಂ. ಮರಿಯಪ್ಪ ಭಟ್ಟ ಮೊದಲಾದ ಸಾಹಿತ್ಯ ಶ್ರೇಷ್ಠರ ಕಾರ್ಯಕ್ಷೇತ್ರ ಇದು. ಕೆ.ಕೆ. ಹೆಬ್ಬಾರರಂತಹ ಮಹಾಚಿತ್ರಕಲಾವಿದರ ಮೂಲ ಇಲ್ಲಿಯದು. ರಂಜಾಲ ಗೋಪಾಲಶೆಣ್ಯೆರ ಶಿಷ್ಯರ ವಿಕ್ರಮಶಿಲ್ಪ ಕಾರ್ಯಾಗಾರವಿದೆ. ಭರತನಾಟ್ಯ, ಯಕ್ಷಗಾನ ಹಾಗೂ ವಿವಿಧ ನೃತ್ಯಗಳನ್ನು ಕಲಿಸುವ ಮತ್ತು ಕಲಾವಿದರ ಸಂಸ್ಥೆಗಳು ಇಲ್ಲಿ ಬೇರುಬಿಟ್ಟಿವೆ. ಫೋಕಲ್ ಫೋಟೋಕ್ಲಬ್‌ನಂತಹ ಛಾಯಾಗ್ರಹಣ ಕಲೆ ರೂಢಿಸುವ ಸಂಸ್ಥೆಗಳಿವೆ. ಉಡುಪಿ ಜಿಲ್ಲೆ ಮತ್ತು ಪಟ್ಟಣ ಇಂತಹ ಕಲಾಸಂಪತ್ತು ಜೀವಂತವಾಗಿರಲು ಸಾಕಷ್ಟು ಕಾಣಿಕೆ ಸಲ್ಲಿಸಿವೆ. ಕೋಳಿ ಅಂಕ, ಕಂಬಳ ಮೊದಲಾದ ಗ್ರಾಮೀಣ ಪಂದ್ಯಗಳು ನಡೆದುಬಂದಿವೆ.



ವೇಣುಗೋಪಾಲ ದೇವಾಲಯ, ಮಣಿಪಾಲ

**ಇತಿಹಾಸ :** ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಇತಿಹಾಸ ಪರಂಪರೆಯು ಹೆಚ್ಚು ಸಮಾನ ಸ್ವರೂಪದ್ದು. ಇಡೀ ಕರ್ನಾಟಕದ ಕರಾವಳಿ ಪ್ರದೇಶ ಪರಶುರಾಮ ಸೃಷ್ಟಿಯೆಂದು ಪ್ರತೀತಿಯುಂಟು. ಮಾರ್ಕಂಡೇಯ, ವಾಯು ಮತ್ತು ಭವಿಷ್ಯೋತ್ತರ ಪುರಾಣಗಳು ಇಲ್ಲಿನ ಕೆಲವು ನದಿಗಳ ಮತ್ತು ಪರ್ವತಗಳ ಹೆಸರುಗಳನ್ನು ಉಲ್ಲೇಖಿಸುತ್ತವೆ. ತಮಿಳಿನ 'ಸಂಗಂ' ಕಾಲದ ಸಾಹಿತ್ಯದಲ್ಲಿ ತುಳುನಾಡಿನ ಪ್ರಸ್ತಾಪ ಬರುತ್ತದೆ. ಅಶೋಕನ ಶಾಸನಗಳಲ್ಲಿ ಬರುವ ಸಾತಿಯಪುತ ಅಥವಾ ಸತ್ಯಪುತ್ರರೆಂಬ ಸಮುದಾಯದ ಉಲ್ಲೇಖ ಈ ಪ್ರದೇಶದ ಜನರನ್ನು ಕುರಿತದ್ದೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಉಡುಪಿ ಜಿಲ್ಲೆ ತೀರಪ್ರದೇಶದಲ್ಲಿರುವುದರಿಂದ ಇದು ಹೊರಗಿನ ಪ್ರಪಂಚದ ಸಂಪರ್ಕವನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಕ್ರಿಸ್ತಶಕೆಯ ಆಚೀಚೆಗಿನ ಶತಮಾನಗಳಿಗೆ ಸೇರಿದ ಗ್ರೀಕ್ ಮತ್ತು ರೋಮನ್ನರ ಪ್ರವಾಸಿ ಕಥನಗಳಲ್ಲಿ ಈ ತೀರದ ಅನೇಕ ಸ್ಥಳಗಳ ಉಲ್ಲೇಖಗಳಿವೆ. ಅವುಗಳಲ್ಲಿ ನೇತ್ರಾವತಿ, ಮಂಗಳೂರು, ಬಸರೂರುಗಳು ಸೇರಿವೆ. ಪ್ರಾಚೀನಕಾಲದಿಂದಲೂ ಹೊರದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಬೆಳೆದುಬಂದುದ್ದು ನಿಸ್ಸಂದೇಹ. ಗ್ರೀಕ್ ನಾಟಕವೊಂದರಲ್ಲಿ ಬರುವ ಪಾತ್ರಗಳ ಸನ್ನಿವೇಶ ಈ ಕಡಲತೀರದ್ದೆಂದು ಮತ್ತು ಅಲ್ಲಿನ ಸಂಭಾಷಣೆಯಲ್ಲಿ ಬಳಸಿರುವ ಕೆಲವು ಪದಗಳು ತುಳು ಹಾಗೂ ಕನ್ನಡ ಪದಗಳೆಂದು ಗೋವಿಂದ ಪೈಗಳು ಅಭಿಪ್ರಾಯಪಟ್ಟಿದ್ದಾರೆ. ಇವು ಹಳಗನ್ನಡ ಪದಗಳೆಂದು ಪ್ರತಿಪಾದಿಸುವವರೂ ಇದ್ದಾರೆ. ಒಟ್ಟಿನಲ್ಲಿ ಈ ಜಿಲ್ಲೆ ಕ್ರಿಸ್ತಪೂರ್ವ ಕಾಲದಿಂದಲೂ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಹೊಂದಿದ್ದ ಪ್ರದೇಶವೆಂಬುದು ದೃಢಪಡುತ್ತದೆ.

ಈ ಜಿಲ್ಲೆಯ ಇತಿಹಾಸ ಕಾಲದ ಸ್ಪಷ್ಟ ಪುರಾವೆಗಳು ದೊರಕುವುದು ಆಳುಪರ ಕಾಲದಲ್ಲಿ. ಆಳುಪರ ಆಳ್ವಿಕೆ ಕ್ರಿಸ್ತಶಕಾರಂಭದ ಕಾಲಕ್ಕೇ ಪ್ರಾರಂಭವಾಗುತ್ತದೆಂದು ತಿಳಿದುಬರುತ್ತದೆ. ಅವರು ನಾಗಾರಾಧಕರಾಗಿದ್ದರು ಮತ್ತು ಶೈವ ಪಂಥೀಯರಾಗಿದ್ದರು. ಕದಂಬರು ನೆರೆಯ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ರಾಜ್ಯ ಸ್ಥಾಪಿಸಿದ ಮೇಲೆ ಈ ಪ್ರದೇಶವೂ ಅವರ ಸಾರ್ವಭೌಮತ್ವಕ್ಕೆ ಒಳಪಟ್ಟಿತ್ತು. ಆಗ ಅವರು ಇಲ್ಲಿ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆಸಿ ಇಲ್ಲಿನ ಮಠ ಮತ್ತು ಅಗ್ರಹಾರ ಪರಂಪರೆಗೆ ಬುನಾದಿ ಹಾಕಿದರೆಂದು ಹೇಳಲಾಗಿದೆ. ಜಮೀನು ಸಾಗುವಳಿ ಮತ್ತು ನಿರ್ವಹಣೆಯಲ್ಲಿ ಅನೇಕ ಕಟ್ಟುಪಾಡುಗಳನ್ನು ಕದಂಬರು ತಂದರೆಂಬ ನಂಬಿಕೆಯಿದೆ.

ಕದಂಬರ ಪ್ರಾಬಲ್ಯ ಕಡಿಮೆಯಾಗಿ ಬಾದಾಮಿ ಚಳುಕ್ಯರು ಮತ್ತು ತಲಕಾಡಿನ ಗಂಗರು ಈ ಪ್ರದೇಶದ ಮೇಲೆ ನಿಯಂತ್ರಣ ಸಾಧಿಸಿದಾಗ ಆಳುಪರು ಅವರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡು ತಮ್ಮ ರಾಜ್ಯವನ್ನು ವಿಸ್ತರಿಸಿದರು. ಆಳುಪರನ್ನು ಸೋಮ ಕುಲದವರೆಂದೂ ಮೀನ ಲಾಂಛನದವರೆಂದೂ ಹೇಳಲಾಗಿದೆ. ಇವರು ಆರನೆಯ ಶತಮಾನದ ಹೊತ್ತಿಗೆ ಉಡುಪಿ ಜಿಲ್ಲೆಯ ಉದಯಪುರ (ಉದ್ಯಾವರ) ಮಂಗಳಪುರ (ಮಂಗಳೂರು)ಗಳಲ್ಲಿ ರಾಜಧಾನಿಗಳನ್ನು ಸ್ಥಾಪಿಸಿ ಆಳಿದ್ದರಲ್ಲದೆ ಘಟ್ಟದ ಮೇಲಿನ ಕೆಲವು ಭಾಗಗಳ ಮೇಲೂ ಆಳ್ವಿಕೆ ಸ್ಥಾಪಿಸಿದರು. ಪಶ್ಚಿಮ ಚಾಳುಕ್ಯರ ಬೆಂಬಲದೊಂದಿಗೆ ಅವರು ಎಂಟನೆಯ ಶತಮಾನದವರೆಗೂ ಆಳ್ವಖೇಡ, ಬನವಾಸಿ ಮಂಡಲ ಮತ್ತು ಹೊಂಬುರ್ಚ್ಚ (ಹೊಸನಗರ ತಾಲ್ಲೂಕು) ಪ್ರಾಂತ್ಯಗಳನ್ನು ಆಳಿದರೆಂದು ಹೇಳಬಹುದು. ಉಡುಪಿ ಜಿಲ್ಲೆಯ ಬಾರಹಕನ್ಯಾಪುರ ಅಥ'ವಾ ಬಾರಕೂರು ಇವರ ರಾಜಧಾನಿಗಳಲ್ಲೊಂದಾಗಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಇವರ ಪ್ರಭಾವ ತಗ್ಗಿತ್ತು. ಗಂಗರಿಗೆ ಇವರು ನಾಮಮಾತ್ರ ಅಧೀನತೆ ತೋರಿಸಿ ಅವರೊಂದಿಗೆ ರಕ್ತಸಂಬಂಧ ಮಾಡುವ ಮೂಲಕ ಸೌಹಾರ್ದ ಬಾಂಧವ್ಯ ಹೊಂದಿದ್ದರು. ಇವರು ಕೆಲವೆಡೆ ತಮ್ಮನ್ನು ಪಾಂಡ್ಯರೆಂದು ಕರೆದುಕೊಂಡಿದ್ದಾರೆ. ಮೀನು ಇವರ ಲಾಂಛನವಾಗಿತ್ತು. ಹೊಯ್ಸಳರು ಪ್ರಾರಂಭದಲ್ಲಿ ಆಳುಪರ ಮೇಲೆ ಸಾಂಕೇತಿಕ ಆಧಿಪತ್ಯ ಹೊಂದಿದ್ದರೂ ಮೂರನೆಯ ಬಲ್ಲಾಳನ ಕಾಲದಲ್ಲಿ ಈ ಪ್ರದೇಶದ ಆಗುಹೋಗುಗಳಲ್ಲಿ ಅವರು ಹೆಚ್ಚಾಗಿ ಭಾಗವಹಿಸಿದ್ದು ಕಂಡುಬರುತ್ತದೆ.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮುಖ್ಯವಾಗಿ ಶೈವ ಪರಂಪರೆ ಹೊಂದಿದ್ದ ಪ್ರದೇಶಗಳು. ನಾಗಾರಾಧನೆ ಮತ್ತು ಶಿವ ಪೂಜೆ ಇಲ್ಲಿನ ಮೂಲ ಧಾರ್ಮಿಕ ಪರಂಪರೆಯ ಸ್ವರೂಪವಾಗಿತ್ತು. ತರುವಾಯ ವೈಷ್ಣವ ಪಂಥ' ಪ್ರವೇಶಿಸಿತು. ಮಧ್ವಚಾರ್ಯರು ಹದಿಮೂರನೆಯ ಶತಮಾನದಲ್ಲಿ ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪನೆ ಮಾಡಿದ ಮೇಲೆ ಮಾಧ್ವ ವೈಷ್ಣವಮತ ಪ್ರಬಲವಾಯಿತು. ಜೈನಧರ್ಮ ಪ್ರಾರಂಭದಿಂದಲೂ ರಾಜಾಶ್ರಯ ಪಡೆದಿದ್ದು ಹದಿನೆಂಟನೆಯ ಶತಮಾನದವರೆಗೂ ಕ್ರಿಯಾಶೀಲ ಧರ್ಮವಾಗಿ ಬೆಳೆಯಿತು. ಸ್ಥಳೀಯ ಪಂಜರವಳ್ಳಿ, ಭೂತ ಮೊದಲಾದ ಶಕ್ತಿಗಳ ಆರಾಧನೆ ಪ್ರಾರಂಭದಿಂದಲೂ ನಡೆದುಬಂದಿದೆ. ಪಾರ್ವತಿಯ ಅವತಾರವಾದ ಶಕ್ತಿ ದೇವತೆಗಳ ಆರಾಧನೆ (ಉದಾ: ಕೊಲ್ಲೂರು ಮೂಕಾಂಬಿಕೆ) ಜನಪ್ರಿಯವಾಗಿದೆ. ಈ ಪ್ರಾಂತದ ಜನರಿಗೆ ಧರ್ಮಶ್ರದ್ಧೆ ಹೆಚ್ಚು. ಭೂತಾರಾಧನೆಯಾಗಲೀ ಕೃಷ್ಣಪೂಜೆಯಾಗಲೀ ಹೋಮ ಹವನಗಳಾಗಲೀ ಎಲ್ಲದರಲ್ಲೂ ಇವರಿಗೆ ಹೆಚ್ಚಿನ ನಿಷ್ಠೆ. ವಿಜಯನಗರದ ಆಳ್ವಿಕೆ ಪ್ರಾರಂಭವಾದಾಗ ಹಿಂದಿನ ಪಾಳೆಯಗಾರರ ಅಥವಾ ಸ್ಥಾನಿಕ ರಾಜರ ಆಳ್ವಿಕೆಯ ಪ್ರಭಾವ ತಗ್ಗಿತು. ಆ ಕಾಲದಲ್ಲಿ ವಿಜಯನಗರದ ಸಾಮ್ರಾಟರು ನೇರವಾಗಿ ತಮ್ಮ ಪ್ರಾಂತಾಧಿಕಾರಿಗಳ ಮೂಲಕ ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಬಾರಕೂರು ಮತ್ತು ಮಂಗಳೂರು ಈ ಆಡಳಿತ ಕೇಂದ್ರಗಳಾಗಿದ್ದವು. ಮಂಗಳೂರು ರಾಜ್ಯವೆಂದೇ ಈ ಪ್ರಾಂತ್ಯವನ್ನು ಕರೆಯುತ್ತಿದ್ದರು. 1342ರಲ್ಲಿ ಈ ಮಾರ್ಗವಾಗಿ ಹಾದುಹೋದ ಇಬ್ನಬೂತೂತ ರಾಜ್ಯಾಧಿಕಾರಿಗಳು ಆಗಾಗ ಬದಲಾಗುತ್ತಿದ್ದುದರ ಬಗ್ಗೆ

ತಿಳಿಸಿದ್ದಾನೆ. ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮ ಉಡುಪಿಯ ಬಳಿಯ ದ್ವೀಪಗಳಿಗೆ ಭೇಟಿ ಕೊಟ್ಟಿದ್ದನೆಂದು ತಿಳಿದುಬರುತ್ತದೆ. ಈಗ ಆ ದ್ವೀಪಗಳು ಸಂತಮೇರಿ ದ್ವೀಪಗಳೆಂದು ಹೆಸರುಪಡೆದಿವೆ.

ಚತುರ್ಮುಖ ಬಸದಿ, ಕಾರ್ಕಳ

ವಿಜಯನಗರದ ಕೃಷ್ಣದೇವರಾಯ ಪೋರ್ಚುಗೀಸರೊಂದಿಗೆ ಹೆಚ್ಚಿನ ಸ್ನೇಹದಿಂದ ನಡೆದುಕೊಂಡ. ಆಗ ಪೋರ್ಚುಗೀಸರು ಕರಾವಳಿಯ ಬಂದರುಗಳಲ್ಲಿ ವ್ಯಾಪಾರದ ನೆಪದಲ್ಲಿ ಬಲವಾಗಿ ನೆಲೆಗೊಂಡರು. ಉಳ್ಳಾಲದ ರಾಣಿ ಅಬ್ಬಕ್ಕ ದೇವಿ ಮತ್ತು ಬಿದನೂರಿನ ನಾಯಕರು ವಿಜಯನಗರದ ಪತನದ ಅನಂತರ ಪೋರ್ಚುಗೀಸ್‌ರನ್ನು ಹತೋಟಿಯಲ್ಲಿಡಲು ಅನೇಕ ಕಾರ್ಯಾಚರಣೆಗಳನ್ನು ನಡೆಸಿದರು. ಬಿದನೂರ ನಾಯಕರು ಮಲ್ಪೆ ಮತ್ತು ಕುಂದಾಪುರಗಳಲ್ಲಿ ಕೋಟೆಗಳನ್ನು ನಿರ್ಮಿಸಿದರು.

ಅನೇಕ ತಂಡರಸರು ವಿಜಯನಗರ ಕಾಲದಲ್ಲಿ ಮುಂದುವರೆದಿದ್ದು ಅನಂತರ ಪ್ರಬಲರಾಗಿ ಈ ಪ್ರದೇಶದಲ್ಲಿ ಆಳಿದರು. ಅವರಲ್ಲಿ ಕಾರ್ಕಳದ ಭೈರರಸರು ಮತ್ತು ವೇಣೂರಿನ ಅಜಿಲರು ಪ್ರಮುಖರು. ಇವರ ಕಾಲದಲ್ಲಿ ಈ ಊರುಗಳಲ್ಲಿ ಅನೇಕ ಜೈನ ಬಸದಿಗಳು ವಿಶ್ವವಿಖ್ಯಾತ ಗೊಮ್ಮಟವಿಗ್ರಹಗಳು ನಿರ್ಮಾಣವಾದವು. ಉಡುಪಿಯ ಬಳಿ ಸುರಳದಲ್ಲಿ ತೊಳಹಾರರು ಮತ್ತು ಹೊನ್ನಕಂಬಳಿ ಅರಸರು ಆಳುತ್ತಿದ್ದರು. ಉತ್ತರಕನ್ನಡ ಜಿಲ್ಲೆಯ ಹಾಡುವಳ್ಳಿಯಿಂದ ಆಳುತ್ತಿದ್ದ ಅರಸರು ಉಡುಪಿ ಜಿಲ್ಲೆಯ ಉತ್ತರದ ಕೆಲವು ಭಾಗಗಳಲ್ಲಿ ಆಡಳಿತ ನಡೆಸಿದರು. ಮೈಸೂರು ರಾಜ್ಯದ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರು ಈ ಇಡೀ ಕರಾವಳಿ ಭಾಗವನ್ನು ಗೆದ್ದುಕೊಂಡರು. ಆದರೆ ಇಂಗ್ಲಿಷರ ಪ್ರಬಲ ಪ್ರತಿರೋಧದಿಂದಾಗಿ 1792ರ ಯುದ್ಧದಲ್ಲಿ ಅನಂತರದ ಒಪ್ಪಂದದ ಮೇರೆಗೆ ಈ ಭಾಗ ಬ್ರಿಟಿಷರ ವಶವಾಯಿತು. ಟಿಪ್ಪುಸುಲ್ತಾನನು ಇಲ್ಲಿನ ಅನೇಕ ಸ್ಥಳೀಯ ರಾಜರನ್ನು ಪದಚ್ಯುತಿಗೊಳಿಸಿದ್ದ. 1837ರಲ್ಲಿ ಕಲ್ಯಾಣಸ್ವಾಮಿ ಮತ್ತು ಲಕ್ಷ್ಮಪ್ಪ ಬಂಗೇಶ ಎಂಬ ಅರಸುಗಳು ಬ್ರಿಟಿಷರ ವಿರುದ್ಧ ದಂಗೆಯೆದ್ದರು. ಬ್ರಿಟಿಷರು ಈ ದಂಗೆಯನ್ನು ಅಡಗಿಸಿದರು. 1860ರಲ್ಲಿ ಕನ್ನಡ ಜನರಿದ್ದ ಕರಾವಳಿ ಪ್ರದೇಶವನ್ನು ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆಂದು ವಿಭಜಿಸಲಾಯಿತು. 1867ರಲ್ಲಿ ಮೊದಲನೆಯದನ್ನು ಮುಂಬಯಿ ಪ್ರಾಂತ್ಯಕ್ಕೂ ಎರಡನೆಯದನ್ನು ಮದರಾಸು ಪ್ರಾಂತ್ಯಕ್ಕೂ ಸೇರಿಸಲಾಯಿತು.

ಬ್ರಿಟಿಷ್ ಭಾರತದ ಭಾಗವಾಗಿದ್ದ ಈ ಕರಾವಳಿ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಮುಂದಿತ್ತು. ಸತ್ಯಾಗ್ರಹಿಗಳು ಸ್ವತಂತ್ರವಾಗಿ ಪತ್ರಿಕೆಗಳನ್ನು ಹೊರಡಿಸಿ ಜನತೆಯನ್ನು ಜಾಗೃತಿಗೊಳಿಸಿದರು. ಸ್ವದೇಶಾಭಿಮಾನಿ, ತಿಲಕ ಸಂದೇಶ (1919), ಸತ್ಯಾಗ್ರಹಿ (1921), ಸ್ವದೇಶಿ ಪ್ರಚಾರಕ (1940) ಮೊದಲಾದ ದೇಶಪ್ರೇಮಿ ಪತ್ರಿಕೆಗಳು ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದವು. ಕಾರ್ನಾಡ್ ಸದಾಶಿವರಾವ್, ಯು.ಎಸ್.ಮಲ್ಯ, ಕಮಲಾದೇವಿಚಟ್ಟೋಪಾಧ್ಯಾಯ, ಎಚ್.ವಿ.ಕಾಮತ್ ಮೊದಲಾದವರು ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿದ್ದರು. ಎ.ಬಿ.ಶೆಟ್ಟಿ, ಮೋನಪ್ಪ ತಿಂಗಳಾಯ, ಬಿ.ವಿ.ಬಾಳಿಗರಂತಹ ಸಮಾಜ ಸೇವಾಕರ್ತರು ಜನರನ್ನು ಸಂಘಟಿಸಿದರು. 1920ರಲ್ಲಿ ಗಾಂಧೀಜಿ ಮತ್ತು ಶೌಕತ್ ಅಲಿಯವರು ಜಿಲ್ಲೆಗೆ ಭೇಟಿ ನೀಡಿದ್ದರು. 1922ರಲ್ಲಿ ಸರೋಜಿನಿನಾಯ್ಡು ಅವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನ ನಡೆಯಿತು. 1934ರಲ್ಲಿ ಮತ್ತೆ ಗಾಂಧೀಜಿಯವರು ಈ ಪ್ರದೇಶಕ್ಕೆ ಭೇಟಿ ನೀಡಿದರು. ಮಾರನೆಯ ವರ್ಷ ರಾಜೇಂದ್ರಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಇನ್ನೊಂದು ರಾಜಕೀಯ ಸಮ್ಮೇಳನ ಇಲ್ಲಿ ಏರ್ಪಟ್ಟಿತು. 1937ರಲ್ಲಿ ಪಂಡಿತ ಜವಾಹರಲಾಲ್ ನೆಹರು ಅವರು ಜಿಲ್ಲೆಯನ್ನು ಸಂದರ್ಶಿಸಿ ಭಾಷಣ ಮಾಡಿದರು. 1942ರ ಚಲೇಜಾವ್ ಚಳುವಳಿಯು ಇಲ್ಲಿ ಬಿರುಸಾಗಿ ನಡೆಯಿತು. ಆಗ ನೇತೃತ್ವ ವಹಿಸಿದ್ದ ಪ್ರಮುಖರಲ್ಲಿ ಕೆ.ಆರ್.ಕಾರಂತ, ವಿಠಲದಾಸಶೆಟ್ಟಿ, ಶ್ರೀನಿವಾಸಮಲ್ಯ, ನಾಗಪ್ಪಆಳ್ವ, ಎಂ.ಡಿ.ಅಧಿಕಾರಿ, ಶಂಕರಆಳ್ವ ಮುಂತಾದವರಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಹಾಲಿ ಉಡುಪಿ ಜಿಲ್ಲೆಯು ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆ ಮದರಾಸು ರಾಜ್ಯದಲ್ಲೇ ಮುಂದುವರಿಯಿತು. 1956ರ ನವೆಂಬರ್ 1ರಂದು ಅಸ್ತಿತ್ವಕ್ಕೆ ಬಂದ ಭಾಷಾವಾರು ಪ್ರಾಂತ್ಯದ ರಚನೆಯಲ್ಲಿ ಇದು ವಿಶಾಲ ಮೈಸೂರು ರಾಜ್ಯದ ಭಾಗವಾಯಿತು. (ಡಿ.ಎಸ್.ಜೆ.)

**ತಾಲ್ಲೂಕು:** ವಿಸ್ತೀರ್ಣ 929ಚಕಿಮೀ. ಜನಸಂಖ್ಯೆ 527,557 ಉತ್ತರದಲ್ಲಿ ಕುಂದಾಪುರ, ದಕ್ಷಿಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಪೂರ್ವದಲ್ಲಿ ಕಾರ್ಕಳ ತಾಲ್ಲೂಕುಗಳಿಂದಲೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದಲೂ ಸುತ್ತುವರೆದಿದೆ. ಕಾಪು, ಕೋಟ, ಉಡುಪಿ ಮತ್ತು ಬ್ರಹ್ಮಾವರ ಹೋಬಳಿಗಳು. ಈ ತಾಲ್ಲೂಕಿನಲ್ಲಿ 6 ಪಟ್ಟಣಗಳು ಮತ್ತು 110 ಗ್ರಾಮಗಳು ಇವೆ.

ಶ್ರೀಲಕ್ಷ್ಮೀನಾರಾಯಣ, ಪಾಜಕ

ಪಶ್ಚಿಮ ಕರಾವಳಿಯಲ್ಲಿದ್ದು ಸಸ್ಯಸಮೃದ್ಧವಾಗಿರುವ ಈ ತಾಲ್ಲೂಕಿನಲ್ಲಿ ಸಾಗರಿಕ ವಾಯುಗುಣವಿದೆ. ನೈಋತ್ಯ ಮಾರುತಗಳಿಂದ

ಸಾಕಷ್ಟು ಮಳೆ ಬರುತ್ತದೆ. ವಾರ್ಷಿಕ ಸರಾಸರಿ 4188ಮಿಮೀ. ಪಶ್ಚಿಮ ಘಟ್ಟದಲ್ಲಿ ಹುಟ್ಟುವ ಅನೇಕ ತೊರೆಗಳು ಹಾಗೂ ಸೀತಾ ಮತ್ತು ಸ್ವರ್ಣ ನದಿಗಳು ಪಶ್ಚಿಮಾಭಿಮುಖವಾಗಿ ಹರಿಯುತ್ತವೆ. ಈ ತಾಲ್ಲೂಕಿನಲ್ಲಿ 4686 ಹೆಕ್ಟೇರ್‌ಗಳಷ್ಟು ಕಾಡು ಪ್ರದೇಶವಿದೆ. ಕಾಡಿನಲ್ಲಿ ಕರಿಮರ, ಮಾವು, ಮತ್ತಿ, ಕಿರಲಬೋಗಿ ಮತ್ತು ಬೆನ್ ಟೀಕ್ ಮುಂತಾದ ಮರಗಳು ಬೆಳೆಯುವುದಲ್ಲದೆ ಹುಣಸೆ, ಸೀಗೆಕಾಯಿ, ಬಿದಿರು ಈ ಉಪಯುಕ್ತ ವಸ್ತುಗಳೂ ದೊರೆಯುತ್ತವೆ. ಸ್ವಲ್ಪ ಮೆಣಸಿನ ಬೆಳೆಯೂ ಇದೆ.

ಶಿವಳ್ಳಿ ಕಕ್ಕುಂಜೆಯ ಶ್ರೀಜನಾರ್ದನ

ಉಡುಪಿ ತಾಲ್ಲೂಕಿನಲ್ಲಿ ದೊಡ್ಡ ನೀರಾವರಿ ಯೋಜನೆಗಳಿಲ್ಲ. ಆದರೆ ಸಾಕಷ್ಟು ಮಳೆ ಬೀಳುವುದರಿಂದ ನದಿ - ತೊರೆಗಳು ಇದ್ದು ಜಲಾಭಾವವಿಲ್ಲ. ಈ ತಾಲ್ಲೂಕಿನ ಚಂತರ ಮಡಗ ಮತ್ತು ಮರನಾಡ ಮಡಗ ಕೆರೆಗಳಿಂದ 370 ಎಕರೆಗಳಿಗೆ ನೀರೊದಗುತ್ತದೆ. ತಾಲ್ಲೂಕಿನಲ್ಲಿ ಪರ್ಷಿಯನ್ ಚಕ್ರ ಅಥವಾ ಪಂಪ್‌ಸೆಟ್ ಇರುವ, ಕಪಿಲೆ ಮತ್ತು ಇನ್ನಿತರ ನೀರಾವರಿ ಬಾವಿಗಳಿವೆ.

ತಾಲ್ಲೂಕಿನ ತೀರದ ಉದ್ದಕ್ಕೂ ಮತ್ತು ಸ್ವಲ್ಪ ಒಳಭಾಗದಲ್ಲೂ ಜಂಬು ಮಣ್ಣನ್ನು ಕಾಣಬಹುದು. ಇಲ್ಲಿನ ಕಲ್ಲುಗಳು ಹೆಚ್ಚು ಒತ್ತಾಗಿದ್ದು ಪುಡಿಪುಡಿಯಾಗುವ ಕೆಂಪು ಜೇಡಿ ಮಣ್ಣನ್ನು ಒಳಗೊಂಡಿದೆ. ಚಿಪ್ಪು ಸುಣ್ಣ ಕಲ್ಲಿನ ಮತ್ತು ಜೇಡಿಮಣ್ಣಿನ ಸಂಗ್ರಹವೂ ಇದೆ. ನದಿ ಕಣಿವೆಗಳ ಉದ್ದಕ್ಕೂ ನಾನಾ ಬಣ್ಣದ ಜೇಡಿಮಣ್ಣು ಮೆಕ್ಕಲು ಮಣ್ಣಿನೊಡನೆ ಇರುವುದನ್ನು ಕಾಣಬಹುದು. ಕಟ್ಟಡ ಕಲ್ಲುಗಳು ಇದ್ದು - ಅಲಿಯೂರು, ಶಿರ, ಪಾಡು, ಕಡವೂರು ಮತ್ತು ಹರಡಿಯಲ್ಲಿ ಕಲ್ಲುಚಪ್ಪಡಿ ತೆಗೆಯುತ್ತಾರೆ. ಈ ತಾಲ್ಲೂಕಿನ 59.34 ಹೆಕ್ಟೇರುಗಳಲ್ಲಿ ಚಿಪ್ಪು ಸುಣ್ಣವನ್ನು ಸಂಗ್ರಹಿಸುತ್ತಾರೆ. ಶುದ್ಧ ಬಿಳುಪಿನಿಂದ ಬೂದ ಮಿಶ್ರಿತ ಬಿಳಿ ರೀತಿಗಳ ಸಿಲಿಕ ಮರಳು ಹರಹುಗಳು ತೀರದ ಉದ್ದಕ್ಕೂ ಮುಳೂರು, ಕಾಪು, ಹೆಚ್ಚಾಡಿ, ತೋನ್ಸೆ ಮತ್ತು ಉಲಿಯಾರ್ಗೋಳಿ ಮುಂತಾದೆಡೆಗಳಲ್ಲಿ 30ಸೆ.ಮೀ. ನಿಂದ 1ಮೀ ಮಂದದಲ್ಲಿ ಹರಡಿವೆ. 12,000 ಟನ್ ಸಿಲಿಕ ಮರಳನ್ನು ಪ್ರತಿವರ್ಷ ಈ ಪ್ರದೇಶದಿಂದ ತೆಗೆದು ಬಳಸಿಕೊಳ್ಳಲಾಗುತ್ತಿದೆ. ಅಭ್ರಕದಿಂದ ಕೂಡಿದ ಬೆಣಚುಕಲ್ಲಿನ ಶಿಲೆಯನ್ನು ಈ ತಾಲ್ಲೂಕಿನ ಕಾಪು, ಪಡು, ಮುಳೂರು, ಉಲಿಯಾರ್ಗೋಳಿ, ಉದ್ಯಾವರ, ನದಿಸಲ ಮತ್ತು ಹೆಜ್ಜಾಡಿಗಳಲ್ಲಿ ಕಾಣಬಹುದು. ಹೆಂಚು ತಯಾರಿಕೆಗೆ ಬೇಕಾದಂಥ ವಿಶಿಷ್ಟವಾದ ಮಣ್ಣು ಈ ತಾಲ್ಲೂಕಿನ ಮಲ್ಪೆ ಮುಂತಾದೆಡೆ ದೊರೆಯುತ್ತದೆ.

ಬತ್ತ, ಕಬ್ಬು ಮತ್ತು ನೆಲಗಡಲೆ ಮುಖ್ಯ ವ್ಯವಸಾಯ ಬೆಳೆಗಳು. ತೆಂಗು, ಅಡಕೆ, ಗೇರು ಮುಖ್ಯ ತೋಟಗಾರಿಕೆ ಬೆಳೆಗಳು 1999-2000. ಅಂಕಿ ಅಂಶಗಳ ಪ್ರಕಾರ ತೆಂಗು (5408), ಕಬ್ಬು (740), ಬತ್ತ (29647), ಗೇರು (4020), ನೆಲಗಡಲೆ (1110), ದ್ವಿದಳ ಧಾನ್ಯಗಳು (7687), ಅಡಕೆ (560), ಬಾಳೆ (342), ಮಾವು (632), ಸಿಹಿ ಗೆಣಸು (363), ಮೊದಲಾದ ಬೆಳೆಗಳು ಬೆಳೆಯುತ್ತಿವೆ.

ಇಲ್ಲಿಯ ಜನರ ಮುಖ್ಯ ಕಸಬು ವ್ಯವಸಾಯವಾದರೂ ಇತರ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದುತ್ತಿದ್ದಾರೆ. ಸ್ವರ್ಣ ನದಿ ಮತ್ತು ಸೀತಾ ನದಿಗಳಲ್ಲಿ ಹಾಗೂ ಸಮುದ್ರದಲ್ಲಿ ಮೀನು ಹಿಡಿದು ಮತ್ಸೋದ್ಯಮವನ್ನೇ ಮುಖ್ಯ ಕಸಬನ್ನಾಗಿ ಮಾಡಿಕೊಂಡಿರುವವರೂ ಇದ್ದಾರೆ. ಈ ತಾಲ್ಲೂಕಿನಲ್ಲಿ ಕೋಳಿಸಾಕಣೆ ಮತ್ತು ಪಶುಪಾಲನೆ ಕೆಂದ್ರಗಳೂ ಇವೆ. ಜಿಲ್ಲೆಯ ಎಲ್ಲ ಕಡೆಗೂ ಉತ್ತಮ ರಸ್ತೆ ಸಂಪರ್ಕವಿದೆ. ಒಟ್ಟು 343 ಪ್ರಾಥಮಿಕ ಶಾಲೆಗಳು 94 ಪ್ರೌಢ ಶಾಲೆಗಳು ಮತ್ತು ಕಾಲೇಜುಗಳೂ ಇವೆ. ಉಡುಪಿಗೆ ಉತ್ತರದಲ್ಲಿ ಮೂರು ಕಿಮೀ ದೂರದಲ್ಲಿರುವ ಮಣಿಪಾಲದಲ್ಲಿ ಮಣಿಪಾಲ ಮುದ್ರಣಾಲಯ. ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಶಿಕ್ಷಣ ತರಬೇತಿ ಕಾಲೇಜುಗಳಿವೆ. ಸಿಂಡಿಕೇಟ್ ಬ್ಯಾಂಕ್‌ನ ಕೇಂದ್ರ ತಚೇರಿ ಇದೆ. ಇಲ್ಲಿ ಸ್ಥಾಪಿತವಾಗಿರುವ ದಿ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಸಂಸ್ಥೆ ವಿದ್ಯಾಪ್ರಸಾರಣಾ ಕಾರ್ಯದಲ್ಲಿ ವಿಶೇಷ ರೀತಿಯ ಸೇವೆ ಸಲ್ಲಿಸುತ್ತಿದೆ. 33 ಪ. ಪೂ. ಕಾಲೇಜುಗಳು, 3 ಸರ್ಕಾರಿ ಕಾಲೇಜುಗಳಿವೆ. ಮಣಿಪಾಲದಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜಿದೆ.

ಉದ್ಯಾವರ, ಕಲ್ಯಾಣಪುರ, ತೋನ್ಸೆ, ಪೆರ್ಡೂರು, ಬ್ರಹ್ಮಾವರ, ಬಾರಕೂರು, ಮಂದರ್ತಿ - ಇವು ತಾಲ್ಲೂಕಿನ ಕೆಲವು ಮುಖ್ಯ ಸ್ಥಳಗಳು (ಇವುಗಳಿಗೆ ಪ್ರತ್ಯೇಕ ಲೇಖನಗಳಿವೆ). ಉಡುಪಿಗೆ ಹತ್ತಿರವಿರುವ ಕರಂಕರಪಾಡಿಯಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಕೆಲವು ಕುರುಹುಗಳು ಸಿಕ್ಕಿವೆ. ಎಣ್ಣೆ ಹೊಳೆ ಮತ್ತು ಸ್ವರ್ಣನದಿ ಸಂಗಮದಲ್ಲಿರುವ ಭದ್ರಗಿರಿಯಲ್ಲಿ ವಿಠಲ ದೇವಾಲಯವಿದೆ. ಕಟಪಾಡಿಯಲ್ಲಿ ಪುರಾತನ ದೇವಾಲಯಗಳಿವೆ. ಕಾಪುವಿನಲ್ಲಿ ಜೈನಬಸದಿ ಮತ್ತು ಮಾರಿಯಮ್ಮನ ಗುಡಿಗಳೂ ಕೋಟದಲ್ಲಿ ನರಸಿಂಹ ಮಹಾದೇವ ಮತ್ತು ಅಮೃತೇಶ್ವರಿ ದೇವಾಲಯಗಳೂ ಇವೆ. ನಂದಿಕೂರಿನ ಅಮೃತೇಶ್ವರ, ಬಂಟ ಕಲ್ಲಿನಲ್ಲಿ ದುರ್ಗಾಪರಮೇಶ್ವರಿ, ನಾಯಂಪಳ್ಳಿಯ ಗೋಪಾಲಕೃಷ್ಣ, ನೀಲಾವರದ ದುರ್ಗಾಭಗವತಿ, ಸಾಲಿಗ್ರಾಮದ ಯೋಗಾನರಸಿಂಹ ಹೆಸರಿಸಬೇಕಾದ ಇತರ ದೇವಾಲಯಗಳು. ಸುರುಳುವಿನ ಮಹಾದೇವ ದೇವಾಲಯ ಪೂರ್ಣ ಕಪ್ಪು ಶಿಲೆಯಲ್ಲಿ ನಿರ್ಮಿತವಾದುದು. ಅಲೆವೂರಿನಲ್ಲಿ ದುರ್ಗಾ ಮತ್ತು ಜನಾರ್ದನ ದೇವಾಲಯಗಳಿವೆ. ಈ ಜನಾರ್ದನ ದೇವಾಲಯ ಕದಂಬ ಮಯೂರವರ್ಮ ಕಟ್ಟಿಸಿದ್ದೆಂದು ಪ್ರತೀತಿ. ಚಿತ್ರಪದಿ ದಕ್ಷಿಣ ಕನ್ನಡ ಜಿಲ್ಲೆಯ ಬಲ್ಲಾಳವಂಶದವರ ಮೂಲಸ್ಥಾನ. ಕುಂಜಾರು ಮಧ್ವಾಚಾರ್ಯರು ಹುಟ್ಟಿದ ಸ್ಥಳ. ಇಲ್ಲಿ ಮಹಿಷಾಸುರಮರ್ದಿನಿ ದೇವಾಲಯವೂ ನಾಲ್ಕು ಪುಷ್ಕರಣಿಗಳೂ ಇವೆ. ಹತ್ತಿರದಲ್ಲಿ ಕುಂಜಾರುಗಿರಿ ಮತ್ತು ಪರಶುರಾಮಗಿರಿ ಎಂಬ ಎರಡು ಚಿಕ್ಕ ಬೆಟ್ಟಗಳಿವೆ. ಪರಶುರಾಮಗಿರಿಯ ಮೇಲೆ ಪರಶುರಾಮ ವಿಗ್ರಹವಿದೆ. ಎರ್ಮಾಳಿನಲ್ಲಿ ಒಂದು ಚಂದ್ರನಾಥ ಬಸದಿ ಮತ್ತು ಮಧ್ವಾಚಾರ್ಯರು ಸ್ಥಾಪಿಸಿದ ಜನಾರ್ದನ ದೇವಾಲಯ ಇವೆ. ನಿಡಂಬೂರಿನಲ್ಲಿ ಆಂಜನೇಯ ದೇವಾಲಯವಿದೆ. ಇಲ್ಲಿ ಪ್ರಥಮವಾಗಿ ಪೂಜೆ ಸಲ್ಲಿಸಿದ ಅನಂತರವೇ ಉಡುಪಿಯ ಪರ್ಯಾಯ ಮಠಾಧಿಪತಿಗಳು ತಮ್ಮ ಪೂಜೆಯನ್ನು ಆರಂಭಿಸುವುದು ಪದ್ಧತಿ. ಪಡುಬಿದ್ರಿ ಒಂದು ದೊಡ್ಡ ಊರು, ಮೀನು ವ್ಯಾಪಾರಕ್ಕೆ ಪ್ರಸಿದ್ಧಿ, ಇಲ್ಲಿ ಕೆಲವು ದೇವಾಲಯಗಳೂ ಎರಡು ಪ್ರೌಢಶಾಲೆಗಳೂ ಇವೆ.

**ಪಟ್ಟಣ :** ಉಡುಪಿ ಈ ತಾಲ್ಲೂಕಿನಲ್ಲಿ ಆಡಳಿತ ಕೇಂದ್ರ. ಜಿಲ್ಲೆಯ ದೊಡ್ಡ ನಗರ. ಜನಸಂಖ್ಯೆ 113,039. ಮಂಗಳೂರಿಗೆ ಉತ್ತರದಲ್ಲಿ 58ಕಿಮೀ ದೂರದಲ್ಲಿದ್ದು ಮಂಗಳೂರು, ಕಾರ್ಕಳ, ಕುಂದಾಪುರ ಮುಂತಾದೆಡೆಗಳೊಡನೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿದೆ. ಪಶ್ಚಿಮಕ್ಕೆ 5ಕಿಮೀ ದೂರದಲ್ಲೇ ಮಲ್ಪೆ ಬಂದರಿದೆ.

ಉಡುಪಿ ಪ್ರಸಿದ್ಧ ಧಾರ್ಮಿಕ ಕೇಂದ್ರ ಹಾಗೂ ಯಾತ್ರಾಸ್ಥಳ. ಶಿಕ್ಷಣ, ಕೈಗಾರಿಕೆಗಳಲ್ಲಿ ಸಹ ಪ್ರಗತಿಪಥದಲ್ಲಿರುವ ಊರು. ಲಾ ಕಾಲೇಜು, ಆಯುರ್ವೇದ ಕಾಲೇಜು, ಪೂರ್ಣಪ್ರಜ್ಞ ಕಾಲೇಜು, ಮಹಾತ್ಮ ಗಾಂಧೀ ಸ್ಮಾರಕ ಕಾಲೇಜು, ಸಂಗೀತ, ಯಕ್ಷಗಾನ ಇತ್ಯಾದಿಗಳನ್ನು ಕಲಿಸುವ ಲಲಿತಕಲಾ ಕಾಲೇಜು ಮತ್ತು ವೇದ ವೇದಾಂತ ತರ್ಕ ವ್ಯಾಕರಣ ಇತ್ಯಾದಿಗಳನ್ನು ಕಲಿಸುವ ಸಂಸ್ಕೃತ ಮಹಾವಿದ್ಯಾಲಯ, ಎಂ. ಗೋವಿಂದ ಪೈ ಸಂಶೋಧನ ಕೇಂದ್ರ, ಸರ್ಕಾರಿ ಗ್ರಂಥಾಲಯ ಮುಂತಾದವು ಇಲ್ಲಿವೆ. ಏಳು ಪ್ರೌಢ ಶಾಲೆಗಳೂ ಹಲವಾರು ಮಾಧ್ಯಮಿಕ ಪ್ರಾಥಮಿಕ ಶಾಲೆಗಳೂ ಇವೆ. ಒಂದು ಹೆಂಚು ಕಾರ್ಖಾನೆ ಮತ್ತು ಕೊಬ್ಬರಿ ಎಣ್ಣೆ ಕಾರ್ಖಾನೆಗಳು ಇವೆ. ಮ್ಯಾಜಿಸ್ಟ್ರೇಟ್ ಮತ್ತು ಮುನ್ಸಿಫ್ ನ್ಯಾಯಾಲಯಗಳುಂಟು. ವ್ಯಾಪಾರೋದ್ಯಮಕ್ಕೆ ಅನುಕೂಲವಾಗುವ ಬಂಡವಾಳವನ್ನೊದಗಿಸುವ ಬ್ಯಾಂಕುಗಳು, ಹಣಕಾಸು, ಸಂಸ್ಥೆಗಳು, ಇಲ್ಲಿವೆ. ಭಾರತ ಜೀವವಿಮಾ ಸಂಸ್ಥೆಯ ವಿಭಾಗ ಕೇಂದ್ರ ಕಚೇರಿ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಇವೆ. ಅನೇಕ ಸಾಂಸ್ಕೃತಿಕ ಸಂಘ ಸಂಸ್ಥೆಗಳಿವೆ. ಉಡುಪಿಯಲ್ಲಿ ಪುರಸಭೆ ಇದೆ. ನದಿ ನೀರನ್ನು ಕುಡಿಯಲು ಬಳಸಿಕೊಳ್ಳುತ್ತಿದೆ.

14ನೆಯ ಶತಮಾನದ ತನಕ ಉಡುಪಿ ಎಂಬ ಹೆಸರು ಇಲ್ಲಿನ ಅನಂತೇಶ್ವರ ದೇವಾಲಯದ ಪರಿಸರದಲ್ಲಿ ಒಂದು ಅಗಲ ಕಿರಿದಾದ ಸ್ಥಳಕ್ಕೆ ಮಾತ್ರ ಅನ್ವಯಿಸಿತ್ತು. ಕಾಲಕ್ರಮೇಣ ಈ ಹೆಸರು ವೈಶಾಲ್ಯವನ್ನು ಪಡೆಯಿತು. ಉಡುಪಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಕ್ಕೆ ಶಿವಳ್ಳಿ ಎಂಬ ಹೆಸರು 8ನೆಯ ಶತಮಾನದಿಂದಲೇ ಇತ್ತು. ಇದರ ಸಮೀಪವೇ ಕಕ್ಕುಂಜೆ ಎಂಬಲ್ಲಿ ಬಹು ಪ್ರಾಚೀನವಾದ ಒಂದು ಜನಾರ್ದನ ಬಿಂಬ ಚಿಕ್ಕದಾದೊಂದು ಗುಡಿಯಲ್ಲಿದೆ. ಇತಿಹಾಸ ಕಾಲದಲ್ಲಿ ಉಡುಪಿ - ಶಿವಳ್ಳಿ - ನಿಡಂಬೂರು ಮತ್ತು ಬೆಟ್ಟುಪಾಡಿ ಬೀಡುಗಳು ಎಂಬ ಎರಡು ಪ್ರಮುಖ ವಿಭಾಗಗಳಿಂದ ಕೂಡಿತ್ತು. ಈ ಬೀಡುಗಳ ಅಧಿಕಾರಿಗಳು ಬ್ರಾಹ್ಮಣರಾಗಿದ್ದರು.

ಆನಂದಗಿರಿ ವಿರಚಿತ ಶಂಕರ ವಿಜಯದಲ್ಲೂ ಉಡುಪಿ ಮಹಾತ್ಮ್ಯದಲ್ಲೂ ಉಡುಪಿಗೆ ರಜತಪೀಠಪುರವೆಂಬ ಹೆಸರಿದೆ. ಸು.10ನೆಯ ಶತಮಾನದಲ್ಲಿ ಈ ಹೆಸರು ಬಳಕೆಯಲ್ಲಿತ್ತು. ತುಳು ನಾಡಿನ ಸಪ್ತಕ್ಷೇತ್ರಗಳಲ್ಲಿ ರೌಪ್ಯಪೀಠ ಅಥವಾ ರಜತಪೀಠಪುರ ಒಂದಾಗಿದೆ. ಚಂದ್ರ (ಉಡು+ಪಿ) ಶಾಪದಿಂದ ವಿಮೋಚನೆಯನ್ನು ಪಡೆಯುವುದಕ್ಕೋಸ್ಕರ ಶಿವನನ್ನು ಕುರಿತು ತಪಸ್ಸು ಮಾಡಿದಾಗ ಶಿವನು ಪ್ರತ್ಯಕ್ಷನಾದ ಸ್ಥಳ ಉಡುಪಿ ಎಂದು ಸ್ಥಳಪುರಾಣದ ಹೇಳಿಕೆ. ಉಡುಪಿ ಶಬ್ದ ನಾಗ ಸಂಬಂಧಿಯೂ ಆಗಿದ್ದುದರಿಂದ ಉಡುಪಿ ನಾಗಾರಾಧನೆಗೆ ಹೆಸರುವಾಸಿಯಾದ ಸ್ಥಳವೆನ್ನಬಹುದು.

ಇಲ್ಲಿಯ ಬಹು ಪ್ರಾಚೀನ ಚಾರಿತ್ರಿಕ ಅವಶೇಷ ಶ್ರೀ ಅನಂತೇಶ್ವರ ದೇವಾಲಯ, ಸು.8-9ನೆಯ ಶತಮಾನದ್ದು. ಇದು ಗಜಪೃಷ್ಠಾಕಾರವಾಗಿದ್ದು ಕರ್ನಾಟಕದ ಹಿರಿಯ ದೇವಾಲಯಗಳಲ್ಲಿ ಒಂದೆನ್ನಬಹುದು. ಈ ದೇವಾಲಯದ ಎದುರು ತಗ್ಗಾದ ಸ್ಥಳದಲ್ಲಿ ಚಂದ್ರಮೌಳೀಶ್ವರವೆಂಬ ದೇವಾಲಯವಿದೆ. ಇದು ಸಹ ಸು.9-10ನೆಯ ಶತಮಾನದ ದೇಗುಲ. ಈ ದೇವಾಲಯದ ನಿರ್ಮಾಣಕ್ಕಿಂತ ಮೊದಲು ಇದು ಕೆರೆಯಾಗಿರಬೇಕು.

ಇಲ್ಲಿನ ಕೃಷ್ಣದೇವಾಲಯ ಅಖಿಲ ಭಾರತದಲ್ಲೇ ಸಾಕಷ್ಟು ಖ್ಯಾತಿ ಪಡೆದಿದೆ. ಶ್ರೀ ಕೃಷ್ಣಮಠವೆಂದು ಕರೆಯಲ್ಪಡುವ ಈ ದೇವಾಲಯ ಅನಂತೇಶ್ವರ ದೇವಾಲಯದ ಪರಿಸರದಲ್ಲಿ ಈಶಾನ್ಯ ದಿಕ್ಕಿಗಿದೆ. ಈ ಮಠದ ರಚನೆ ಸರಳವಾಗಿದ್ದರೂ ಇದೊಂದು ಆಯತಾಕಾರದ ಕಟ್ಟಡವಾಗಿದ್ದು ಉತ್ತರ ಭಾಗದಲ್ಲಿ ಒಳಗೆ ಪ್ರವೇಶವಿದ್ದು ಪಶ್ಚಿಮ ಭಾಗದ ಕಿಂಡಿಯಿಂದ (ಕನಕನ ಕಿಂಡಿ) ಶ್ರೀಕೃಷ್ಣನ ದರ್ಶನವನ್ನು ಮಾಡುವ ವ್ಯವಸ್ಥೆಯಿಂದ ಕೂಡಿದೆ. ಈ ಮೂರ್ತಿಯನ್ನು ಮಧ್ವಾಚಾರ್ಯರು 13ನೆಯ ಶತಮಾನದ ಅಂತ್ಯ ಭಾಗದಲ್ಲಿ ಪ್ರತಿಷ್ಠಾಪಿಸಿದರು. ಕೃಷ್ಣನ ಮೂರ್ತಿ ಉಡುಪಿಗೆ ಹಡಗಿನ ಮೂಲಕ ಬಂದ ವಿಚಾರದಲ್ಲಿ ಸಾಂಪ್ರದಾಯಿಕವಾದ ಒಂದು ಹೇಳಿಕೆ ಇದ್ದರೂ ಇದನ್ನು ಮಧ್ವಾಚಾರ್ಯರು ತಮ್ಮ ಔತ್ತರೇಯ ಪರ್ಯಟನ ಸಮಯದಲ್ಲಿ ತಂದು ಉಡುಪಿಯಲ್ಲಿ ಸ್ಥಾಪಿಸಿದರೆನ್ನಬಹುದು. ಬಲ ಕೈಯಲ್ಲಿ ದಂಡ ಹಿಡಿದಿರುವ 15" ಎತ್ತರದ ಈ ಮೂರ್ತಿ ಬಹು ಪ್ರಾಚೀನವೂ ಮಹತ್ವಪುಳ್ಳದ್ದೂ ಆಗಿದೆ. ಶ್ರೀ ಕೃಷ್ಣಮಠದಲ್ಲೇ ಶಂಕರಾಚಾರ್ಯರ ಶಿಷ್ಯರಾದ ಹಸ್ತಾಮಲಕಾಚಾರ್ಯರಿಂದ ಪ್ರತಿಷ್ಠಿತವಾದದ್ದೆನ್ನಲಾದ ತೈಲಕೃಷ್ಣ ಎಂಬ ವ್ಯಾವಹಾರಿಕ ಹೆಸರನ್ನು ಪಡೆದಿರುವ ಇನ್ನೊಂದು ಸುಂದರ ಮೂರ್ತಿ ಇದೆ. ಇದು ಸು.9ನೆಯ ಶತಮಾನದ ವೇಣುಗೋಪಾಲ ಕೃಷ್ಣ ಮೂರ್ತಿ, ಶ್ರೀ ಕೃಷ್ಣಮಠದ ಒಂದು ಭಾಗದಲ್ಲಿ ಮಧ್ವಪುಷ್ಕರಿಣಿ ಇದೆ.

ಉಡುಪಿಯಲ್ಲಿ ಸೋದೆ, ಶಿರೂರು, ಕಾಣಿಯೂರು, ಕೃಷ್ಣಾಪುರ, ಆದಮಾರು ಪಲಿಮಾರು, ಪೇಜಾವರ, ಪುತ್ತಿಗೆ ಎಂಬ ಅಷ್ಟ ಮಠಗಳಿವೆ. ಈ ಮಠಗಳ ಯತಿಗಳು ಶ್ರೀಕೃಷ್ಣನ ಪೂಜೆಯನ್ನು ಪರ್ಯಾಯ ಕ್ರಮದಲ್ಲಿ ಎರಡೆರಡು ವರ್ಷಗಳ ತನಕ ಮಾಡುತ್ತಾರೆ. ಅಷ್ಟಯತಿಗಳ ಪರಂಪರೆಯನ್ನು ಸ್ಥಾಪಿಸಿದುದು ಶ್ರೀ ಮಧ್ವಾಚಾರ್ಯರಾದರೂ ಪರ್ಯಾಯ ಕ್ರಮವನ್ನು ಅನುಷ್ಠಾನಕ್ಕೆ ತಂದುದು ಸೋದೆ ಮಠದ ಯತಿವರ್ಯರಾದ ಶ್ರೀ ವಾದಿರಾಜರು.

ಹೊಸ ಮಾರಿಯಮ್ಮ ದೇವಾಲಯ, ಕಾಪು

ಅನುಕ್ರಮವಾಗಿ ಒಂದು ಮಠದ ಸ್ವಾಮಿಗಳಿಂದ ಇನ್ನೊಂದು ಮಠದ ಸ್ವಾಮಿಗಳು ಶ್ರೀ ಕೃಷ್ಣಮಠದ ಪೂಜಾಧಿಕಾರ ವಹಿಸಿಕೊಳ್ಳುವ ಸಮಾರಂಭವೇ ಪರ್ಯಾಯ ಮಹೋತ್ಸವ. ಇದು ಉಡುಪಿಯ ಅತ್ಯಂತ ದೊಡ್ಡ ಉತ್ಸವ, ಈ ಸಂದರ್ಭದಲ್ಲಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಉಡುಪಿಗೆ ಬರುತ್ತಾರೆ. ಉಡುಪಿಯಲ್ಲಿ ನಡೆಯುವ ಲಕ್ಷದೀಪೋತ್ಸವ, ಮಕರ ಸಂಕ್ರಮಣೋತ್ಸವ, ಶ್ರೀಕೃಷ್ಣ ಜಯಂತಿ ಇತರ ಪ್ರಮುಖ ಉತ್ಸವಗಳು. (ಪಿ.ಜಿ.ಬಿ.)

**ಉತ್ತಂಗಿ ಚನ್ನಪ್ಪ:** 1881-1962. ಅಸ್ತವ್ಯಸ್ತಗೊಂಡು ತಾರುಮಾರಾಗಿದ್ದ ಸರ್ವಜ್ಞನ ವಚನಗಳನ್ನು ಶಾಸ್ತ್ರೀಯವಾಗಿ ಅಣಿಗೊಳಿಸಿ, ಅವನ ವಾಣಿಯನ್ನು ಮನೆ ಮನೆಗೆ ತಲುಪಿಸಿ ಅವನ ಸಮಗ್ರ ದರ್ಶನವನ್ನು ಮಾಡಿಸಿದ ಕೀರ್ತಿವಂತರು. ಕ್ರೈಸ್ತ ಧರ್ಮದ ಉಪದೇಶಕರು. ಇವರ ಪೂರ್ಣ ಹೆಸರು ರೆವರೆಂಡ್ ಚನ್ನಪ್ಪ ದಾನಿಯೇಲಪ್ಪ ಉತ್ತಂಗಿ. ಇವರ ಕಾವ್ಯನಾಮ ತಿರುಳ್ಗನ್ನಡ ತಿರುಕ. ಇವರ ಹಿರಿಯರು ಬಳ್ಳಾರಿ ಜಿಲ್ಲೆಯ ಉತ್ತಂಗಿಯಲ್ಲಿದ್ದರು.



ಕಾರಣಾಂತರದಿಂದ ವೀರಶೈವ ಧರ್ಮದಿಂದ ಕ್ರೈಸ್ತಧರ್ಮಕ್ಕೆ

ಮತಾಂತರಗೊಂಡು ಕಾಲ ಕ್ರಮೇಣ ಧಾರವಾಡದಲ್ಲಿ ನೆಲಸಿದರು. ಚನ್ನಪ್ಪನವರು 1881 ಡಿಸೆಂಬರ್ 9ರಂದು ಧಾರವಾಡದಲ್ಲಿ ಜನಿಸಿದರು. ತಂದೆ ದಾನಿಯೇಲಪ್ಪನವರು ಅಲ್ಲಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಧಾರವಾಡ, ಗದಗ, ಬೆಟಗೇರಿಗಳಲ್ಲಿ ಚನ್ನಪ್ಪನವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ನಡೆಯಿತು. ಇವರು ಬುದ್ಧಿವಂತರಾಗಿದ್ದರೂ ವ್ಯಾಸಂಗದಲ್ಲಿ ಆಸಕ್ತಿ ವಹಿಸಲಿಲ್ಲವಾಗಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲ. ಯಂತ್ರವಿಜ್ಞಾನವನ್ನು ಕಲಿಯಬೇಕೆಂದು ಆಶಿಸಿದರು. ಬಡತನದಿಂದ ಅದು ಸಾಧ್ಯವಾಗಲಿಲ್ಲ. ಕೊನೆಗೆ ತಾಯಿಯ ಅಪೇಕ್ಷೆಯಂತೆ ತಮ್ಮ 21ನೆಯ ವಯಸ್ಸಿನಲ್ಲಿ ಮಂಗಳೂರಿಗೆ ಹೋಗಿ ಅಲ್ಲಿಯ ಕ್ರೈಸ್ತಧರ್ಮ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿದರು. ಅನಂತರ ಅಲ್ಲಿಯ ಬಾಸೆಲ್ ಸಂಸ್ಥೆಯಲ್ಲಿ ಉಪದೇಶಕ ವೃತ್ತಿಯನ್ನು ಕೈಗೊಂಡರು (1908). ಮುಂದೆ ಧಾರವಾಡ, ಹುಬ್ಬಳ್ಳಿ, ಹಾವೇರಿ, ಗದಗ ಮುಂತಾದ ಸ್ಥಳಗಳಲ್ಲಿ ಉಪದೇಶಕರಾಗಿ ಸು.33 ವರ್ಷಗಳ ಕಾಲ ಸೇವೆಸಲ್ಲಿಸಿ 1942ರಲ್ಲಿ ನಿವೃತ್ತರಾದರು.

ಚಿಕ್ಕಂದಿನಿಂದಲೂ ಧಾರ್ಮಿಕ ಒಲವಿನವರಾಗಿದ್ದ ಇವರು ತತ್ತ್ವಜ್ಞಾನದಲ್ಲಿ ಆಸಕ್ತಿವಹಿಸಿ, ಅನೇಕ ತಾತ್ತ್ವಿಕ ಗ್ರಂಥಗಳನ್ನು ಸ್ವತಂತ್ರವಾಗಿ ವ್ಯಾಸಂಗಮಾಡಿದರು. ಉಪದೇಶಕ ವೃತ್ತಿಯನ್ನು ಕೈಗೊಂಡ ಮೇಲೂ ತಮ್ಮ ಈ ಅಧ್ಯಯನವನ್ನು ಮುಂದುವರೆಸಿ ಕ್ರೈಸ್ತಧರ್ಮದ ಜತೆಗೆ ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ತ್ವದರ್ಶನಗಳ ವ್ಯಾಸಂಗ ಮಾಡಿದರಲ್ಲದೆ ಅನುಭವದ ಆಗರಗಳಾದ ಉಪನಿಷತ್ತು, ಭಗವದ್ಗೀತೆಗಳ ಜತೆಗೆ ಪ್ಲೇಟೋ. ಕಾಂಟ್, ಬ್ರಾಡ್ಲೆ, ವಿಲಿಯಂಜೇಮ್ಸ್ ಮುಂತಾದವರ ಗ್ರಂಥಗಳನ್ನು ಓದಿ ವಿಚಾರ ಶಕ್ತಿಯನ್ನು ಬೆಳೆಸಿಕೊಂಡರು.

ಕ್ರೈಸ್ತ ಧರ್ಮದ ಉಪದೇಶಕರಾಗಿದ್ದ ಚನ್ನಪ್ಪನವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. 1915ರಲ್ಲಿ ಬರೆವಣಿಗೆಯನ್ನು ಆರಂಭಿಸಿದ ಇವರು ಒಟ್ಟು 18 ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ಎರಡು ವಿಭಾಗ ಮಾಡಬಹುದು. 1. ಕ್ರೈಸ್ತಧರ್ಮಕ್ಕೆ ಸಂಬಂಧಿಸಿದುದು. 2. ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಗಳಿಗೆ ಸಂಬಂಧಿಸಿದುದು. ಸಾಹಿತ್ಯಾರಾಧನೆಯೇ ಈ ಎಲ್ಲದರ ಘನ ಉದ್ದೇಶ.

ಚನ್ನಪ್ಪನವರ ಮೊದಲ ಕೃತಿ ಬನಾರಸಕ್ಕೆ ಬೆತ್ಲೆಹೇಮಿನ ವಿನಂತಿ (1921). ಯೇಸುಕ್ರಿಸ್ತನ ಜೀವನವನ್ನು ತುಲನಾತ್ಮಕವಾಗಿ ಅಧ್ಯಯನಮಾಡಿ ಶಾಸ್ತ್ರೀಯ ದೃಷ್ಟಿಯಿಂದ ಬರೆದದ್ದು. ಅನಂತರ ಹಿಂದೂ ಸಮಾಜದ ಹಿತಚಿಂತಕ (1921) ಎಂಬ ಗ್ರಂಥವನ್ನು ಪ್ರಕಟಿಸಿದರು. ಭಾರತದಲ್ಲಿರುವ ಜಾತಿಭೇದದ ಬಗ್ಗೆ ಶಾಸ್ತ್ರೀಯ ವಿವೇಚನೆಯನ್ನು ಈ ಗ್ರಂಥದಲ್ಲಿ ಮಾಡಿದ್ದಾರೆ. ಮಕ್ಕಳ ಶಿಕ್ಷಣಪಟ (1923) ಎಂಬುದು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಗ್ರಂಥ.

ಸಾಹಿತ್ಯ ರಂಗದಲ್ಲಿ ಚನ್ನಪ್ಪನವರಿಗೆ ಶಾಶ್ವತವಾದ ಕೀರ್ತಿಯನ್ನು ತಂದುಕೊಟ್ಟದ್ದು, ಸರ್ವಜ್ಞ ವಚನಗಳು (1924) ಎಂಬ ಇವರ ಸಂಪಾದಿತ ಗ್ರಂಥ. ಸುಮಾರು 9 ವರ್ಷಗಳ ದೀರ್ಘಕಾಲ ಈ ಗ್ರಂಥದ ಸಂಪಾದನೆಯ ಕಾರ್ಯಕ್ಕೆ ದುಡಿದ ಇವರು 2000 ವಚನಗಳನ್ನು ಪರಿಷ್ಕರಿಸಿದ್ದಾರೆ. ಈ ಗ್ರಂಥಕ್ಕೆ ಬರೆದಿರುವ 108 ಪುಟಗಳ ಉಪೋದ್ಘಾತದಲ್ಲಿ ಸರ್ವಜ್ಞನ ಪೂರ್ವೋತ್ತರ ಮತ್ತು ಅವನ ವ್ಯಕ್ತಿತ್ವ ಕುರಿತು ಮನಮುಟ್ಟುವಂತೆ ವಿವರಿಸಿದ್ದಾರೆ. ಸರ್ವಜ್ಞ ವಚನಗಳನ್ನು ಪಾರಮಾರ್ಥಿಕ ಮತ್ತು ಲೌಕಿಕ ವಿಚಾರಗಳೆಂದು ವಿಭಾಗಿಸಿ ಅಣಿಗೊಳಿಸಿದ್ದಾರೆ. ಈ ಕೃತಿ ಬಹು ಬೇಗ ಜನಪ್ರಿಯವಾಯಿತು. ಆಗಿನ ಮೈಸೂರು ಸರ್ಕಾರ ಈ ಗ್ರಂಥದ ಸ್ವಾಮ್ಯವನ್ನು ಚನ್ನಪ್ಪನವರಿಂದ ಪಡೆದು, ಸುಲಭ ಬೆಲೆಯ ಆವೃತ್ತಿಗಳ ಮಾಲೆಯಲ್ಲಿ ಪ್ರಕಟಿಸಿತು. ಈ ಗ್ರಂಥ ಸರ್ವಜ್ಞ ವಚನಗಳ ಅಕಾರಾದಿಯನ್ನು ಒಳಗೊಂಡಿದೆ. ಸಾಹಿತ್ಯಆವೃತ್ತಿ (1924), ಜೇಬಿನಆವೃತ್ತಿ (1935), ಜನಪದಆವೃತ್ತಿ (1935) ಮತ್ತು ಅಗ್ಗದಆವೃತ್ತಿ (1941)- ಹೀಗೆ ನಾಲ್ಕು ಆವೃತ್ತಿಗಳಲ್ಲಿ ಪ್ರಕಟಗೊಂಡಿರುವ ಏಕೈಕ ಗ್ರಂಥವಿದು.

ಭಾರತೀಯ ಕ್ರೈಸ್ತ ಹಾಗೂ ದೇಶಪ್ರೇಮಿಯಾಗಿದ್ದ ಮಹಾರಾಷ್ಟ್ರದ ಪ್ರಸಿದ್ಧ ಕವಿ ನಾರಾಯಣ ವಾಮನ ತಿಲಕರನ್ನು ಕುರಿತು ಜೆ.ಸಿ.ವಿನ್ಸೊ ಅವರು ಇಂಗ್ಲಿಷಿನಲ್ಲಿ ಬರೆದಿದ್ದ ಗ್ರಂಥವನ್ನು ಚನ್ನಪ್ಪನವರು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ (1927). ಇವರ ಇನ್ನೊಂದು ಅನುವಾದ ದೃಷ್ಟಾಂತದರ್ಪಣ (1939); 500 ದೃಷ್ಟಾಂತಗಳ ಸಂಗ್ರಹ.

ವೀರಶೈವಧರ್ಮ ಮತ್ತು ಸಿದ್ಧಾಂತಗಳಲ್ಲಿ ಪರಿಶ್ರಮ ಪಡೆದಿದ್ದ ಚನ್ನಪ್ಪನವರು ಮೋಳಿಗೆ ಮಾರಯ್ಯ ಮತ್ತು ರಾಣಿಮಹಾದೇವಿಯವರ ವಚನಗಳು (1950), ಆದಯ್ಯನ ವಚನಗಳು (1957) ಎಂಬ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಸಿದ್ಧರಾಮ ಸಾಹಿತ್ಯ ಸಂಗ್ರಹ (1955) ಇವರ ಇನ್ನೊಂದು ಸಂಪಾದಿತ ಗ್ರಂಥ, ದೀರ್ಘವಾದ ಉಪೋದ್ಘಾತ ಮತ್ತು ವಿಮರ್ಶೆಗಳನ್ನು ಒಳಗೊಂಡಿದ್ದು ವಚನ ಸಾಹಿತ್ಯದಲ್ಲಿ ಇವರು ನಡೆಸಿದ ಸಂಶೋಧನೆಗೆ ಸಾಕ್ಷಿಯಂತಿದೆ. ಅನುಭವಮಂಟಪ : ಹಾರ್ಟ್ ಆಫ್ ಲಿಂಗಾಯಿತ್ ರಿಲಿಜಿನ್ ಎಂಬುದು ಇವರ ಒಂದು ಇಂಗ್ಲಿಷ್ ಗ್ರಂಥ.

ಹೀಗೆ ನಾನಾ ವಿಧದಲ್ಲಿ ಕ್ರೈಸ್ತಧರ್ಮ, ನಾಡು ಮತ್ತು ನುಡಿಗಳ ಸೇವೆಯನ್ನು ಮಾಡಿದ ಚನ್ನಪ್ಪನವರನ್ನು 1949ರಲ್ಲಿ ಗುಲ್ಬರ್ಗದಲ್ಲಿ ನಡೆದ 32ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಲಾಯಿತು. ಇವರ ಸಂಪಾದಿತ ಕೃತಿ ಸಿದ್ಧರಾಮ ಸಾಹಿತ್ಯ ಸಂಗ್ರಹಕ್ಕೆ ದೇವರಾಜ ಬಹದ್ದೂರ್ ದತ್ತಿ ಬಹುಮಾನ ಲಭಿಸಿದೆ.

ಚನ್ನಪ್ಪನವರು 1962 ಆಗಸ್ಟ್ 28ರಂದು ನಿಧನರಾದರು. ಇವರ ನಿಧನಾನಂತರ ಮೃತ್ಯುಂಜಯ (1963), ಲಿಂಗಾಯಿತ ಧರ್ಮ ಮತ್ತು ಕ್ರೈಸ್ತಧರ್ಮ (1969) ಎಂಬ ಎರಡು ಗ್ರಂಥಗಳು ಪ್ರಕಟವಾದವು. (ಎಸ್.ಆರ್.ಜಿ.)

**ಉತ್ತರ ಕನ್ನಡ :** ಕರ್ನಾಟಕದ ಪಶ್ಚಿಮ ಕರಾವಳಿಯ ಒಂದು ಜಿಲ್ಲೆ. ಈ ಜಿಲ್ಲೆಯ ಪೂರ್ವದಲ್ಲಿ ಧಾರವಾಡ, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳು, ಪಶ್ಚಿಮದಲ್ಲಿ ಅರಬ್ಬೀಸಮುದ್ರ ಉತ್ತರದಲ್ಲಿ ಗೋವಾ ಮತ್ತು ಬೆಳಗಾಂವಿ ಜಿಲ್ಲೆ, ದಕ್ಷಿಣದಲ್ಲಿ ಉಡುಪಿ ಜಿಲ್ಲೆ ಇವೆ. ವಿಸ್ತೀರ್ಣ 10,291ಚಕಿಮೀ. ಜನಸಂಖ್ಯೆ 13,53,299. ಈ ಜಿಲ್ಲೆಯ ಕೇಂದ್ರಸ್ಥಳ ಕಾರವಾರ.

ಮಧುಕೇಶ್ವರ ದೇವಾಲಯ, ಬನವಾಸಿ

ಈ ಜಿಲ್ಲೆಯನ್ನು ಎರಡು ಭೌಗೋಳಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು. ಸಮುದ್ರದಂಚಿನಿಂದ 10-15ಕಿಮೀ ಅಗಲ ಮತ್ತು ಸು.130ಕಿಮೀ ಉದ್ದವಾಗಿರುವ ಕರಾವಳಿ ಘಟ್ಟದ ಕೆಳಗಿನ ಭಾಗ. ಅದರ ಪೂರ್ವ ದಿಕ್ಕಿಗೆ ಗೋಡೆಯಂತೆ ದಕ್ಷಿಣೋತ್ತರವಾಗಿ ಹಬ್ಬಿದ ಜಂಬುಕಲ್ಲಿನ ಸಹ್ಯಾದ್ರಿ ಶ್ರೇಣಿ. ಬೆಟ್ಟದ ತಪ್ಪಲಿನಿಂದ ಹರಿದು ಸಮುದ್ರ ಸೇರುವ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ ನದಿಗಳು ಸುತ್ತಲೂ ಹಸಿರು ಹಾಸಿ ಸೌಂದರ್ಯ ಬೆಳೆಸಿವೆ. ಶಿವಮೊಗ್ಗ ಮತ್ತು ಉತ್ತರ ಕನ್ನಡದ ಗಡಿಯಲ್ಲಿ ಹರಿಯುವ ಶರಾವತಿ, ಗೇರುಸೊಪ್ಪೆಯ ಬಳಿ 252ಮೀ ಕೆಳಗೆ ದುಮುಕಿ ಜಗತ್‌ಪ್ರಸಿದ್ಧ ಜೋಗ್ ಜಲಪಾತವನ್ನು ನಿರ್ಮಿಸಿದೆ. ಅಘನಾಶಿನಿ ನದಿಯ ಉಂಚಳ್ಳಿ, ಗಂಗಾವಳಿ ನದಿಯ ಮಾಗೋಡು, ಕಾಳಿನದಿಯ ಲಾಲಗುಳಿ, ಗಣೇಶಪಾಲ ಹೊಳೆಯ ಶಿವಗಂಗಾ ಜಲಪಾತಗಳೂ ನಿಸರ್ಗ ಸೌಂದರ್ಯದಿಂದ ಕೂಡಿವೆ. ಇವಲ್ಲದೆ ಸುಸುಬ್ಬಿಯಂಥ ಅನೇಕ ಚಿಕ್ಕಪುಟ್ಟ


ಉತ್ತರ ಕನ್ನಡ ಜಿಲ್ಲೆ
ಬೆಳಗಾಂವಿ ಜಿಲ್ಲೆ
75
15
14
0 10 20 30
ಕಿಲೋಮೀಟರುಗಳು

ಜಲಪಾತಗಳಿವೆ. ಜೋಗದ ಶರಾವತಿ ಕಮರಿಯಲ್ಲಿ ಕಟ್ಟಲಾದ ಮಹಾತ್ಮಗಾಂಧಿ ವಿದ್ಯುತ್ ಉತ್ಪಾದನಾ ಕೇಂದ್ರವಿದೆ (1948). ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಶರಾವತಿ ವಿದ್ಯುತ್ ಉತ್ಪಾದನಾ ಕೇಂದ್ರ (1965) ಏಷ್ಯಾದಲ್ಲಿ ಅತ್ಯಂತ ದೊಡ್ಡ ವಿದ್ಯುತ್ ಉತ್ಪಾದನಾ ಕೇಂದ್ರ.

ಕಲ್ಲಿನ ಮಂಚ, ಸೊಂದ

ಕಾರವಾರದಿಂದ ಭಟ್ಕಳದವರೆಗೆ ಚಾಚಿಕೊಂಡ ಕರಾವಳಿ ಮರಳುಮಯವಾಗಿದೆ. ಘಟ್ಟದ ಕೆಳಗೆ ಕಾರವಾರ, ಅಂಕೋಲಾ, ಕುಮಟ, ಹೊನ್ನಾವರ, ಭಟ್ಕಳ ತಾಲ್ಲೂಕುಗಳಿವೆ. ಘಟ್ಟದ ಮೇಲೆ ಶಿರಸಿ, ಯಲ್ಲಾಪುರ, ಸಿದ್ದಾಪುರ, ಹಳಿಯಾಳ, ಜೊಯ್ಡ (ಸುಪಾ), ಮುಂಡಗೋಡ ತಾಲ್ಲೂಕುಗಳಿವೆ. ಕರಾವಳಿಯ ತಾಲ್ಲೂಕುಗಳಲ್ಲಿ ತೆಂಗು ವಿಪುಲವಾಗಿ ಬೆಳೆದರೆ ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಅಡಕೆ ಬೆಳೆಯುತ್ತದೆ.

ಇಲ್ಲಿಯ ಹವೆ ಹಿತಕರ. ಕರಾವಳಿ ತಾಲ್ಲೂಕುಗಳಲ್ಲಿ ಸೆಖೆ ಜಾಸ್ತಿ, ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಹೆಚ್ಚು ತಂಪಾದ ವಾಯುಗುಣವಿದೆ. ಮಳೆಗಾಲ ಜೂನ್‌ನಲ್ಲಿ ಆರಂಭಗೊಂಡು ಅಕ್ಟೋಬರ್‌ವರೆಗೂ ಇರುತ್ತದೆ. ವಾರ್ಷಿಕ ಸರಾಸರಿ ಮಳೆ 2835-3085 ಮಿಮೀ. ಕರಾವಳಿಯಲ್ಲಿ ಸಹ್ಯಾದ್ರಿಯ ಅಂಚಿನಲ್ಲಿ ಮಳೆ ಹೆಚ್ಚು. ಪೂರ್ವಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ.

ಜಿಲ್ಲೆಯ ಸೇ.80ರಷ್ಟು ನೆಲ ಅರಣ್ಯಾವೃತ. ಅರಣ್ಯದ ವಿಸ್ತೀರ್ಣ 8,15,057 ಹೆಕ್ಟೇರ್. 25,500 ಎಕರೆಯಲ್ಲಿ ತಾಳೆ ಬೆಳೆಯುತ್ತಾರೆ. ಸಾಗವಾನಿ, ಮತ್ತಿ, ಹೊನ್ನೆ, ನಂದಿ ಮೊದಲಾದ ಗಟ್ಟಿ ಮರಗಳಲ್ಲದೆ ಬೆಂಕಿಪೆಟ್ಟಿಗೆಯ ತಯಾರಿಕೆಗೆ ಉಪಯುಕ್ತವಾದ ಮೃದು ಮರಗಳೂ ಶ್ರೀಗಂಧದ ಮರವೂ ಇವೆ. ಬಿದಿರು ಹೇರಳವಾಗಿದೆ. ತೈಲಾಯುತ ಸಸ್ಯಜಾತಿಗಳೂ ಇವೆ. ಅಳಲೆ, ಸೀಗೆ, ಜೇನು, ಅರಗು, ಗೋಂದು, ಹಾಲಮಡ್ಡಿ ಇವು ಅರಣ್ಯೋತ್ಪನ್ನಗಳು. ರಾಜ್ಯದ ಅರಣ್ಯೋತ್ಪನ್ನದಲ್ಲಿ ಸೇ.65 ಈ ಜಿಲ್ಲೆಯಿಂದ ದೊರೆಯುತ್ತದೆ.

ಮ್ಯಾಂಗನೀಸ್, ಕಬ್ಬಿಣ, ಸುಣ್ಣದಕಲ್ಲು, ಜೇಡಿಮಣ್ಣು, ಇಲ್ಮನೈಟ್, ಗಾಜು, ಸಾಬೂನು, ಕಲ್ಲು, ಅಭ್ರಕ, ಬಾಕ್ಸೈಟ್ ಈ ಜಿಲ್ಲೆಯ ಖನಿಜಗಳು, ಜಿಲ್ಲೆಯಲ್ಲಿ ಅನೇಕ ಕಡೆ ಮ್ಯಾಂಗನೀಸ್ ದೊರೆಯುತ್ತದೆ. ಜೋಯ್ಡ ತಾಲ್ಲೂಕಿನ ಕೊಡ್ಲಿಗವಿಗಳು ಮ್ಯಾಂಗನೀಸ್‌ಗೆ ಪ್ರಸಿದ್ಧವಾಗಿದ್ದರೆ ಹೊನ್ನಾವರ ತಾಲ್ಲೂಕಿನ ಅಪ್ಸರಕೊಂಡದಲ್ಲೂ, ಕುಮಟ ತಾಲ್ಲೂಕಿನ ಯಾಣದಲ್ಲೂ ಕಬ್ಬಿಣದ ಅದಿರಿನ ನಿಕ್ಷೇಪವಿದೆ. ಸಹ್ಯಾದ್ರಿ ಪಾದಭಾಗಗಳಲ್ಲಿ ಕಬ್ಬಿಣವಲ್ಲದೆ ಇತರ ಲೋಹನಿಕ್ಷೇಪಗಳುಂಟು. ಯಾಣ ಮತ್ತಿತರ ಕಡೆಗಳಲ್ಲಿ ಸುಣ್ಣದಕಲ್ಲು ದೊರೆಯುತ್ತದೆ. ಹಲವೆಡೆ ಸ್ವರ್ಣಮಕ್ಕಿಕೆ ಬಿಳಿ ಜೇಡಿ ಇವೆ. ಬತ್ತ, ತೆಂಗು, ಕಬ್ಬು, ಅಡಕೆ, ಮೆಣಸು, ಏಲಕ್ಕಿ, ಬಾಳೆ ಮುಖ್ಯವಾದ ಬೆಳೆಗಳು. ಇವಲ್ಲದೆ ಜಿಲ್ಲೆಯಲ್ಲಿ ಗೋಡಂಬಿ, ಮಾವು, ಹುಣಸೆ, ನಿಂಬೆ, ಅನಾನಸು, ಹಲಸು, ಪಪ್ಪಾಯಿ, ಬಟಾಟೆ, ಬದನೆ, ಕಲ್ಲಂಗಡಿ, ಹೈಬ್ರಿಡ್‌ಜೋಳ, ರಾಗಿ, ಶೇಂಗಾ ಇತ್ಯಾದಿಗಳನ್ನು ಬೆಳೆಯುತ್ತಾರೆ. ಭತ್ತ 85924ಹೆ, ಕಬ್ಬು 1356ಹೆ, ಅಡಕೆ 11160ಹೆ, ತೆಂಗು 5907ಹೆ, ಗೋಡಂಬಿ 1827ಹೆ, ಮೆಣಸು 135ಹೆ, ಮಾವು 1140ಹೆ, ಬಾಳೆ 1320ಹೆ, ಏಲಕ್ಕಿ 369ಹೆ, ಅನಾನಸ್ 315ಹೆ, ಹಲಸು 206ಹೆ, ಪಪ್ಪಾಯಿ 114.9ಹೆ, ಹತ್ತಿ 14823ಹೆನಲ್ಲಿ ಬೆಳೆಸುತ್ತಾರೆ. ಅಡಕೆಯ ತೋಟದಲ್ಲಿ ಏಲಕ್ಕಿ, ಕಾಳುಮೆಣಸು, ಬಾಳೆ ಬೆಳೆಸುತ್ತಾರೆ. ಗದ್ದೆಯಲ್ಲಿ ರಾಗಿ, ಕಡಲೆ, ತೊಗರಿ ಮೊದಲಾದ ಧಾನ್ಯಗಳನ್ನೂ ಬೆಳೆಯುತ್ತಾರೆ.

ಈ ಜಿಲ್ಲೆಯಲ್ಲಿ ಮೀನುಗಾರಿಕೆ ಒಂದು ಮುಖ್ಯ ಉದ್ಯೋಗ. ಒಂದು ಕಾಲದಲ್ಲಿ ಹರಿಕಾಂತ, ತಾಂಡೇಲ, ಖಾರ್ವಿ, ಗಾಬಿತ, ಅಂಬಿಗ, ಮೊಗೇರ, ಆಗೇರ, ಕ್ರಿಶ್ಚಿಯನ್ ದಾಲಜಿಗಳಷ್ಟೇ ಈ ವೃತ್ತಿಯನ್ನವಲಂಬಿಸಿದ್ದರೆ ಇತ್ತೀಚೆಗೆ ಸಾಮಾನ್ಯವಾಗಿ ಎಲ್ಲ ಜಾತಿಯವರೂ ಮೀನು ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಸುಮಾರು 54,763 ಜನ ಈ ವೃತ್ತಿಯಲ್ಲಿದ್ದಾರೆ. ಇವರು ಕರಾವಳಿ ಪ್ರದೇಶದ 118 ಹಳ್ಳಿಗಳಲ್ಲಿದ್ದಾರೆ. ಸಮುದ್ರದಿಂದ ಮೀನು ಹಿಡಿಯುವ ಕೇಂದ್ರಗಳೆಂದರೆ ಅರ್ಗಾ, ಭಟ್ಕಳ, ಬಿಣಗಾ, ಚೆಂಡಿಯೆ, ಗಂಗಾವಳಿ, ಕಾರವಾರ, ಹೊನ್ನಾವರ, ಖಾರವಿ, ಕೇಣಿ, ಕೋಡಾರ್, ಕುಮುಟ, ಮಾಜಾಳಿ, ಮಂಕಿ, ಮುರ್ಡೇಶ್ವರ, ಶಿರಾಲಿ, ತದಡಿ. ಸಾಗರ ಮೀನುಗಾರಿಕೆಯಲ್ಲಿ 30094 ಟನ್ ಹಿಡಿದರೆ, ಸಿಹಿನೀರಿನಲ್ಲಿ 249ಟನ್ ಮೀನು ಹಿಡಿಯಲಾಗಿದೆ (2001).

ಮರ ಕೊಯ್ಯುವ ಗಿರಣಿ, ಹೆಂಚಿನ ಕಾರ್ಖಾನೆ, ನೇಯ್ಗೆ, ಮೇಣಬತ್ತಿಯ ಉತ್ಪಾದನೆ, ಸಾಬೂನು ತಯಾರಿಕೆ, ವಾಹನ ದುರಸ್ತಿ, ಮುದ್ರಣ, ಕೆತ್ತನೆಯ ಕೆಲಸ, ಚಿನ್ನ ಬೆಳ್ಳಿಯ ಕೆಲಸ, ಬುಟ್ಟಿ, ಚಾಪೆ ಹೆಣೆಯುವಿಕೆ, ಬೆತ್ತದ ಹೆಣಿಗೆ, ಜೇನು ಸಾಕಣೆ, ಕೋಳಿ ಕುರಿ ಸಾಕಣೆ, ರೇಷ್ಮೆ, ಚರ್ಮದ ಉದ್ಯೋಗ, ವ್ಯಾಪಾರ, ಏಜೆನ್ಸಿಗಳಲ್ಲಿ ಜನ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ಮಂಜುಗೆಡ್ಡೆ ತಯಾರಿಕಾ ಕಾರ್ಖಾನೆಗಳು 52 ಇವೆ. ದಾಂಡೇಲಿಯಲ್ಲಿಯೂ ಕಾಗದದ ಕಾರ್ಖಾನೆ ದೊಡ್ಡ ಉದ್ದಿಮೆ. ಅಲ್ಲದೆ ಪ್ಲೈವುಡ್, ಫೆರೋಮ್ಯಾಂಗನೀಸ್ ಉದ್ದಿಮೆಗಳೂ ಇವೆ. ಕಾರವಾರ, ಬೆಲೆಕೇರಿ, ತದಡಿ, ಕುಮಟ, ಹೊನ್ನಾವರ, ಭಟ್ಕಳ-ಇವು ಮುಖ್ಯ ಬಂದರುಗಳು.

ಕಾರವಾರ ಸರ್ವಋತು ಬಂದರನ್ನು ಬೃಹತ್ತಾಗಿ ಕಟ್ಟಿದ್ದಾರೆ. ಬಳ್ಳಾರಿ ಪ್ರದೇಶದ ಕಬ್ಬಿಣದ ಅದುರನ್ನು ಸಾಗಿಸಲು ಕಾರವಾರ ಬಂದರು ಉಪಯುಕ್ತವಾಗುತ್ತದೆ.



ಸಹಸ್ರಲಿಂಗ

ಜಿಲ್ಲೆಯಲ್ಲಿ 329ಕಿಮೀಗಳ ರಾಷ್ಟ್ರೀಯ ಹೆದ್ದಾರಿ, 672ಕಿಮೀಗಳ ರಾಜ್ಯ ಹೆದ್ದಾರಿ ಮಾರ್ಗಗಳಿವೆ. ಜಿಲ್ಲಾ ಮುಖ್ಯ ರಸ್ತೆಗಳು 795ಕಿಮೀ. 24 ಭಾರೀ ಸೇತುವೆಗಳಿವೆ. ಪಶ್ಚಿಮ ಕರಾವಳಿಯ ಹೆದ್ದಾರಿ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ, ಉತ್ತರಕ್ಕೆ ಕಾಶ್ಮೀರದವರೆಗೆ ಸಂಪರ್ಕ ಕಲ್ಪಿಸುತ್ತದೆ. ಕಾರವಾರದಿಂದ ಹುಬ್ಬಳ್ಳಿಯ ಕಡೆಗೆ ಹೋಗುವ ಹೆದ್ದಾರಿ ಅನೇಕ ನಗರಗಳ ಸಂಪರ್ಕ ಕಲ್ಪಿಸುತ್ತದೆ. ನಗರಗಳೊಂದಿಗೆ ಹಳ್ಳಿಗಳ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳೂ ಇವೆ. ಘಟ್ಟದ ಮೇಲೆ ಸಿದ್ದಾಪುರದಿಂದ ಹುಬ್ಬಳ್ಳಿಗೆ, ಕಾರವಾರಕ್ಕೆ, ದಾಂಡೆಲಿಗೆ, ಯಲ್ಲಾಪುರಕ್ಕೆ ಸಂಪರ್ಕ ದೊರಕಿಸುವ ರಸ್ತೆಗಳಿವೆ. ಇತ್ತೀಚೆಗೆ ಕೊಚ್ಚಿ ಮುಂಬೈಗಳಿಗೆ ಹೋಗುವ ಕೊಂಕಣ ರೈಲ್ವೆ ಈ ಜಿಲ್ಲೆಯ ಮೂಲಕ ಹೋಗುತ್ತದೆ. ಜಿಲ್ಲೆಯಲ್ಲಿ 179ಕಿಮೀ ಉದ್ದದ ರೈಲು ಮಾರ್ಗವಿದೆ. 15 ರೈಲು ನಿಲ್ದಾಣಗಳಿವೆ. ಇವುಗಳಲ್ಲಿ

ಮುಖ್ಯವಾದವು-ಭಟ್ಕಳ, ಹೊನ್ನಾವರ, ಕುಮಟ, ಗೋಕರ್ಣ, ಅಂಕೋಲಾ, ಕಾರವಾರ. ಇದಲ್ಲದೆ ಜಲಮಾರ್ಗದ ಸಂಪರ್ಕವೂ ಇದೆ.

ಜೈನಬಸದಿ, ಹಾಡುವಳ್ಳಿ

ಜಿಲ್ಲೆಯ ಒಟ್ಟು ಜನಸಂಖ್ಯೆ 13,52,299. ಇದರಲ್ಲಿ 9,65,345 ಜನ ಹಳ್ಳಿಯಲ್ಲಿ ವಾಸಿಸುತ್ತಾರೆ. ಇವರಲ್ಲಿ 4,90,001 ಗಂಡಸರು, 4,75,344 ಹೆಂಗಸರು. ಈ ಜಿಲ್ಲೆಯಲ್ಲಿ ಹಿಂದುಗಳೂ ಮುಸಲ್ಮಾನರೂ ಕ್ರೈಸ್ತರೂ ಇದ್ದಾರೆ. ಬಹುಸಂಖ್ಯಾತರು ಹಿಂದುಗಳು. ಈ ಜಿಲ್ಲೆಯಲ್ಲಿ ಬೌದ್ಧ, ಜೈನ ಮತಗಳೂ ಪ್ರಚಾರವಾದುವು. 10-12ನೆಯ ಶತಮಾನಗಳಲ್ಲಿ ನಾಥಪಂಥವೂ 16-18ನೆಯ ಶತಮಾನಗಳಲ್ಲಿ ವೀರಶೈವ ಪಂಥದ ಪ್ರಚಾರವೂ ನಡೆದವು. ಜಿಲ್ಲೆಯಲ್ಲಿ ಕ್ರೈಸ್ತ ಮಂದಿರಗಳೂ ಮಸೀದಿಗಳೂ ಸ್ಮಾರ್ತ, ಜೈನ, ವೀರಶೈವ, ವೈಷ್ಣವ ಮತಗಳೂ ಇವೆ. ಹಿಂದುಧರ್ಮದ ಹಲವು ಪಂಗಡಗಳಿಗೆ ಸೇರಿದ ನೂರಾರು ದೇವಾಲಯಗಳು ಇವೆ. ನಾಥಪಂಥದ ಅವಶೇಷಗಳು ಅಂಕೋಲಾ, ಬೆಳಂಬರ್, ಹೊನ್ನೆಬೈಲ, ಅಘನಾಶಿನಿ, ಲಿಂಗೆ, ಮಾಜಾಳಿ, ಯಾಣ, ಕವಳೆಯಲ್ಲಿವೆ.

**ಸಹಕಾರ :** 1904ರಲ್ಲಿ ಸಹಕಾರಿಸಂಘಗಳ ನೋಂದಣಿ ಕಾಯಿದೆ ಜಾರಿಗೆ ಬಂದಿತು. 1912ರಲ್ಲಿ ಅದಕ್ಕೆ ತಿದ್ದುಪಡಿ ಬಂತು. 1912ರ ಕಾಯಿದೆಯಂತೆ ಕೃಷಿ, ಕೃಷಿಯೇತರ ಸಾಲ ಸಂಘಗಳು ಅಸ್ತಿತ್ವಕ್ಕೆ ಬಂದುವು. 1905ರಲ್ಲಿ ಶಿರಸಿ ಗ್ರಾಮೀಣ ಸಹಕಾರಿ ಸಂಘ, 1912ರಲ್ಲಿ ಹಳಿಯಾಳದ ಸಂಘ, 1913ರಲ್ಲಿ ಪಾಳಾದಲ್ಲಿ ಕೃಷೀತರ ಸಾಲ ಸಂಘ ಪ್ರಾರಂಭವಾದುವು. 1911ರಲ್ಲಿ ಶಿರಸಿ ಚರ್ಮಕಾರರ ಪರಸ್ಪರ ಪತ್ತಿನ ಸಂಘ, 1917ರಲ್ಲಿ ಹೊನ್ನಾವರ ಹವ್ಯಕ ಕೊ-ಆಪರೇಟಿವ್ ಸೊಸೈಟಿ, 1918ರಲ್ಲಿ ಕಾರವಾರ ಕೆನರಾ ಕೆಥೊಲಿಕ್ ಕ್ರೆಡಿಟ್ ಸೊಸೈಟಿ, 1915ರಲ್ಲಿ ಮೀನುಗಾರರ ಸಹಕಾರಿ ಸಂಘವಾದ ಹರಿತಂತ್ರ ಖಾರವಿ ಫಿಷರೀಸ್ ಸೊಸೈಟಿ ಕಾರವಾರದಲ್ಲಿ ಪ್ರಾರಂಭವಾದವು.

1912ರಲ್ಲಿ ಕಾರವಾರ ಮತ್ತು ಕುಮಟ ಪಟ್ಟಣ ಬ್ಯಾಂಕುಗಳು ಮತ್ತು ಶಿರಸಿ ಅರ್ಬನ್‌ಬ್ಯಾಂಕ್ ಆರಂಭವಾದುವು. 1920ರಲ್ಲಿ ಜಿಲ್ಲಾ ಮಧ್ಯವರ್ತಿ ಸಹಕಾರಿಬ್ಯಾಂಕ್, 1922ರಲ್ಲಿ ಕುಮಟಾದಲ್ಲಿ ತೋಟಗಾರ್ಸ್ ಕೊ-ಅಪ್ ಸೇಲ್ಸ ಸೊಸೈಟಿ, ಅರೆಕಾನೆಟ್ ಕೊ-ಆಪ್-ಸೊಸೈಟಿ, ಕಾರವಾರದಲ್ಲಿ 1935ರಲ್ಲಿ ಆರಂಭವಾದ ಭೂ ಅಡಮಾನಬ್ಯಾಂಕ್, 1913ರಲ್ಲಿ ಸ್ಥಾಪನೆಯಾದ ಶಿರಸಿ ತೋಟಗಾರ್ಸ್ ಸಹಕಾರಿ ಖರೀದಿ ವಿತರಣ ಮತ್ತು ಸಾಲ ಸಂಘ 1962ರ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಗಿ ಪರಿವರ್ತನೆಯಾಯಿತು. 1950ರಲ್ಲಿ ತಾಲ್ಲೂಕು ಕೃಷಿ ಹುಟ್ಟುವಳಿ ಮಾರಾಟ ಸಂಘಗಳು, ಕೂಲಿಕಾರರ ಸಹಕಾರಿ ಸಂಘಗಳು, ಮಹಿಳಾ ಸಹಕಾರಿ ಸಂಘಗಳು ಹುಟ್ಟಿದ್ದುವು. ಈಗ ಎಲ್ಲ ತಾಲ್ಲೂಕುಗಳಲ್ಲೂ ಭೂ ಅಭಿವೃದ್ಧಿ ಬ್ಯಾಂಕುಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು, ಕೃಷಿ ಹುಟ್ಟುವಳಿ ಮಾರಾಟ ಸಂಘಗಳು, ನೌಕರರ ಸಹಕಾರಿ ಸಂಘಗಳು, ಸಂಸ್ಕರಣ ಸಹಕಾರಿ ಸಂಘಗಳು, ಮೀನುಗಾರಿಕೆ ಸಹಕಾರಿ ಸಂಘಗಳು, ಸ್ಥಳೀಯ ಅರ್ಬನ ಬ್ಯಾಂಕುಗಳು, ಚೇತನಾ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತವೆ. ಇವಲ್ಲದೆ ಕೂಲಿಕಾರರ ಅನೇಕ ಸಂಘಗಳಿವೆ. ಜಿಲ್ಲೆಯಲ್ಲಿ 160 ವ್ಯವಸಾಯ ಸಹಕಾರಿ ಸಂಘಗಳೂ 26 ಗೃಹ ನಿರ್ಮಾಣ ಸಹಕಾರ ಸಂಘಗಳೂ 9 ವ್ಯವಸಾಯೋತ್ಪನ್ನ ಮಾರಾಟ ಸಂಘಗಳೂ 32 ನಿಯಂತ್ರಿತ ಮಾರುಕಟ್ಟೆಗಳಿವೆ. ಹಾಲು ಉತ್ಪಾದಕರ ಮಾರಾಟ ಸಂಘಗಳು 138.

**ಉದ್ದಿಮೆಗಳು :** ಎಂಜಿನಿಯರಿಂಗ್ ಉದ್ಯಮ 14, ರಾಸಾಯನಿಕ ಕಾರ್ಖಾನೆಗಳು 9, ಬಟ್ಟೆ ಕಾರ್ಖಾನೆ 2, ಇತರೆ ಸಣ್ಣ ಪ್ರಮಾಣದ ಕಾರ್ಖಾನೆಗಳು 62, ಈ ಕಾರ್ಖಾನೆಗಳಲ್ಲಿ ಉದ್ಯೋಗಿಗಳು 1846. ಜಿಲ್ಲೆಯಲ್ಲಿ ಕೆಲವು ಬೃಹತ್ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿವೆ. ವೆಸ್ಟ್‌ಕೋಸ್ಟ ಪೇಪರ್ ಮಿಲ್ಸ್, ದಾಂಡೇಲಿಯ ಇಂಡಿಯನ್ ಪ್ಲೈವುಡ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ, ಜೈಹಿಂದ್ ಸಾಮಿಲ್, ಬಳ್ಳಾಪುರ ಇಂಡಸ್ಟ್ರಿಸ್ ಲಿ, ಬಿಣಗಾದ, ದಾಂಡೇಲಿ ಫೆರೊ ಅಲೋಯ್ಸ್ ಪ್ರೈ.ಲಿ.



ಸಾತೋಡ್ಡಿ ಜಲಪಾತ

ಇವು ಮುಖ್ಯ ಉದ್ದಿಮೆಗಳು. ಇವಲ್ಲದೆ ಸಣ್ಣ ಕೈಗಾರಿಕಾ ಘಟಕಗಳು, ಖಾದಿ ಗ್ರಾಮೋದ್ಯೋಗ ಕರಕುಶಲ ಘಟಕಗಳು ಹಾಗೂ ಕೈಮಗ್ಗದ ಘಟಕಗಳು ಜಿಲ್ಲೆಯಲ್ಲಿವೆ. ಹೆಂಚು ಕಾರ್ಖಾನೆಗಳಿವೆ. ಮೀನುಗಾರಿಕೆ ಘಟಕಗಳು, ದೋಣಿ ಕಟ್ಟುವ ಘಟಕಗಳು, ಆಹಾರ ಸಂಸ್ಕರಣ ಘಟಕಗಳು, ರಾಸಾಯನಿಕ ಘಟಕಗಳು ಚರ್ಮ ಮತ್ತು ರಬ್ಬರ್ ಘಟಕಗಳು, ಗಂಧ ಚಂದನ ಕೆತ್ತನೆಯ ಘಟಕಗಳು, ಮುದ್ರಣ ಘಟಕಗಳು, ನೂಲುವ ನೇಯುವ ಘಟಕಗಳು, ಜೇನು ಸಾಕಣೆ, ಬೆತ್ತ ಬಿದಿರುಗಳಿಂದ ವಸ್ತುಗಳನ್ನು ತಯಾರಿಸುವ ಘಟಕಗಳು, ಎಣ್ಣೆ ತಯಾರಿಕಾ

ಘಟಕಗಳು, ಕುಂಬಾರಿಕೆ ಮುಂತಾದ ಅನೇಕ ಉದ್ಯಮಗಳಿವೆ. ಇವುಗಳಲ್ಲಿ ಕೆಲವು ಕುಟೀರ ಕೈಗಾರಿಕೆಗಳು.

**ಶಿಕ್ಷಣ :** ಜಿಲ್ಲೆಯ ಸಾಕ್ಷರತಾ ಪ್ರಮಾಣ 76.59, ಪುರುಷರು 84.48, ಮಹಿಳೆಯರು 68.48 ಜಿಲ್ಲೆಯಲ್ಲಿ ಮೊದಲು ಜೈನ, ವೀರಶೈವ, ಬ್ರಾಹ್ಮಣ ಸಂಪ್ರದಾಯದ ಪಾಠಶಾಲೆಗಳು ನಡೆಯುತ್ತಿದ್ದವು, ಅದಕ್ಕೆ ಅನೇಕ ಅಗ್ರಹಾರಗಳು ಪ್ರಚಲಿತವಿದ್ದವು. ಅವುಗಳೆಲ್ಲ ಬ್ರಿಟಿಷರ ಆಳಿಕೆಯಲ್ಲಿ ಕೊನೆಗೊಳ್ಳುತ್ತ ಬಂದು 1866 ಸುಮಾರಿಗೆ ಸರ್ಕಾರಿ ಶಾಲೆಗಳಲ್ಲಿ 830 ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲಿ ಓದುತ್ತಿದ್ದರು. ಇವುಗಳಲ್ಲಿ ಹಳಿಯಾಳ, ಕುಮಟಾ, ಶಿರಸಿಗಳಲ್ಲಿ ಆ್ಯಂಗ್ಲೊವರ್ನಾಕ್ಯುಲರ್ ಶಾಲೆಗಳಿದ್ದವು. 1866ರಲ್ಲಿ ಒಂದು ಉರ್ದು ಶಾಲೆ ಹಳಿಯಾಳದಲ್ಲಿ ಆರಂಭವಾಯಿತು. 1880ರಲ್ಲಿ 96 ಶಾಲೆಗಳಿದ್ದುವು, 4979 ವಿದ್ಯಾರ್ಥಿಗಳಿದ್ದರು. 1890ರಲ್ಲಿ 206 ಶಾಲೆಗಳಲ್ಲಿ 12126 ವಿದ್ಯಾರ್ಥಿಗಳು ವ್ಯಾಸಂಗನಿರತರಾಗಿದ್ದರು. 1900ರಲ್ಲಿ 183 ಶಾಲೆಯಲ್ಲಿ 10204 ವಿದ್ಯಾರ್ಥಿಗಳಿದ್ದರು. 1910ರಲ್ಲಿ 287 ಶಾಲೆಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 15571.

1864ರಲ್ಲಿ ಕಾರವಾರದಲ್ಲಿ ಮೊದಲ ಹೈಸ್ಕೂಲು ಪ್ರಾರಂಭವಾಯಿತು. 1935-36ರಲ್ಲಿ 853 ಪ್ರಾಥಮಿಕ ಶಾಲೆಗಳಿದ್ದುವು. 23,465 ಮಂದಿ ಶಿಕ್ಷಣ ಪಡೆಯುತ್ತಿದ್ದರು. ಇವರಲ್ಲಿ 5776 ವಿದ್ಯಾರ್ಥಿನಿಯರು. ಆ ವರ್ಷದಿಂದ ಪರಿಶಿಷ್ಟ ಜಾತಿಯ, ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಲು ವಿಶೇಷ ಗಮನ ಕೊಡಲಾಯಿತು. ಜಿಲ್ಲಾ ಸ್ಕೂಲ್ ಬೋರ್ಡ್ 1944ರಲ್ಲಿ ಆರಂಭವಾಗಿ ಎಲ್ಲ ಶಾಲೆಗಳು ಸ್ಕೂಲ್ ಬೋರ್ಡ್ ಅಧೀನಕ್ಕೆ ಬಂದು ಶಿಕ್ಷಣದಲ್ಲಿ ಒಂದು ಬಗೆಯ ಶಿಸ್ತು ಬಂತು. ಸ್ಕೂಲ್‌ಬೋರ್ಡಿನಿಂದ ನಿಯಂತ್ರಣಗೊಂಡ ಶಿಕ್ಷಣ ಇಲಾಖೆಯ ಖರ್ಚು ಪೂರೈಸಲು ಸ್ಥಳೀಯ ಆಡಳಿತಗಳು ವಿದ್ಯಾಕರ ಸಂಗ್ರಹಿಸತೊಡಗಿದುವು.

ಶ್ರೀಮಾರಿಕಾಂಬ ದೇವಾಲಯ, ಶಿರಸಿ

ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನು (1918) ಜಾರಿಗೆ ಬಂದಾಗ ಹಳಿಯಾಳ ಮತ್ತು ಹೊನ್ನಾವರ ಪುರಸಭೆಗಳು ಈ ಯೋಜನೆಯನ್ನು ಜಾರಿಗೆ ತಂದುವು. 1947ರಲ್ಲಿ ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮದಂತೆ 7-11 ವರ್ಷದ ಮಕ್ಕಳು ಶಾಲೆಗೆ ಹೋಗುವುದು ಕಡ್ಡಾಯವಾಯಿತು. ರಾಜ್ಯ ಪುನರ್ರಚನೆಯ ಕಾಲದಲ್ಲಿ 969 ಪ್ರಾಥಮಿಕ ಶಾಲೆಗಳೂ 71779 ವಿದ್ಯಾರ್ಥಿಗಳೂ 1759 ಶಿಕ್ಷಕರೂ ಇದ್ದರು. 1900ರ ವೇಳೆಗೆ ಘಟ್ಟದ ಕೆಳಗೆ ಐದು ಪ್ರೌಢಶಾಲೆಗಳೂ ಘಟ್ಟದ ಮೇಲೆ ಶಿರಸಿಯಲ್ಲಿ ಒಂದೇ ಒಂದು ಪ್ರೌಢಶಾಲೆಯೂ ಇದ್ದವು. 1947ರ ವರೆಗೂ ಶಿಕ್ಷಣ ಒಂದು ತೀವ್ರ ಆಸಕ್ತಿಯ ವಿಷಯವಾಗಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅದುವರೆಗೆ ಜಿಲ್ಲೆಯಲ್ಲಿ ಪದವಿಯ ಮಟ್ಟದ ಉನ್ನತ ಶಿಕ್ಷಣದ ಸೌಲಭ್ಯಗಳಿರಲಿಲ್ಲ. ಸರ್ಕಾರದಿಂದ ಎಲ್ಲವನ್ನು ಅಪೇಕ್ಷಿಸುವುದು ಸಾಧ್ಯವಿಲ್ಲವೆಂದು ಮನಗಂಡ ಸಾರ್ವಜನಿಕರು 1947ರಲ್ಲಿ ಕುಮಟದಲ್ಲಿ ಕೆನರಾ ಎಜ್ಯುಕೇಶನ್ ಸೊಸೈಟಿಯನ್ನು ಆರಂಭಿಸಿದರು. 1919ರಲ್ಲಿ ಭಟ್ಕಳದಲ್ಲಿ ಆರಂಭವಾದ ಅಂಜುಮನ್ ಎಜ್ಯುಕೇಶನ್ ಟ್ರಸ್ಟ್, 1952ರಲ್ಲಿ ಸಿದ್ದಾಪುರದಲ್ಲಿ ಸ್ಥಾಪಿಸಿದ ಸಹಕಾರಿ ಶಿಕ್ಷಣ ಪ್ರಸಾರ ಸಮಿತಿ, 1954ರಲ್ಲಿ ಯಲ್ಲಾಪುರದಲ್ಲಿ ಆರಂಭವಾದ ಶಿವಾಜಿ ಎಜ್ಯುಕೇಶನ್ ಸೊಸೈಟಿ, 1961ರಲ್ಲಿ ಶಿರಸಿಯಲ್ಲಿ ಆರಂಭಿಸಲಾದ ಮಾಡರ್ನ್ ಎಜ್ಯುಕೇಶನ್ ಸೊಸೈಟಿ, 1962ರಲ್ಲಿ ಅಂಕೋಲೆಯಲ್ಲಿ ಆರಂಭಿಸಲಾದ ನೂತನ ಶಿಕ್ಷಣ ಸಭಾ ಟ್ರಸ್ಟ್, 1970ರಲ್ಲಿ ದಾಂಡೇಲಿಯಲ್ಲಿ ಆರಂಭಿಸಿದ ದಾಂಡೇಲಿ ಎಜ್ಯುಕೇಶನ್ ಸೊಸೈಟಿ, 1964ರಲ್ಲಿ ಹೊನ್ನಾವರದಲ್ಲಿ ಮಹಾವಿದ್ಯಾಲಯ ಸ್ಥಾಪಿಸಿದ ಮಲ್ನಾಡ ಪ್ರೊಗ್ರೆಸ್ಸಿವ್ ಎಜ್ಯುಕೇಶನ್ ಸೊಸೈಟಿ, 1953ರಲ್ಲಿ ದಿನಕರದೇಸಾಯಿ ಧುರೀಣತ್ವದಲ್ಲಿ ಸ್ಥಾಪಿತವಾದ ಕೆನರಾ ವೆಲ್‌ಫೇರ್ ಟ್ರಸ್ಟ್ ಮೊದಲಾದ ಅನೇಕ ಶಿಕ್ಷಣ ಸಂಸ್ಥೆಗಳು ಜಿಲ್ಲೆಯ ಶೈಕ್ಷಣಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಿದುವು.



ಕವಡಿ ಕೆರೆ

1949ರಲ್ಲಿ ಕುಮಟದಲ್ಲಿ ಕೆನರಾ ಕಾಲೇಜು ಆರಂಭವಾಗಿ ಅನಂತರ ಅದು ಎ.ವಿ.ಬಾಳಿಗಾ ಕಾಲೇಜ್ ಎಂದು ನಾಮಕರಣ ಗೊಂಡಿತು. 1961ರಲ್ಲಿ ಕಾರವಾರದಲ್ಲಿ ಕಾಲೇಜು ಆರಂಭವಾಯಿತು. ಮುಂದಿನ ಹದಿನೈದು ವರ್ಷಗಳಲ್ಲಿ 13 ಪದವಿ ಮಹಾವಿದ್ಯಾಲಯಗಳು, 3 ವೃತ್ತಿಪರ ಮಹಾವಿದ್ಯಾಲಯಗಳು, 3 ಬಿ.ಇಡಿ. ಮಹಾ ವಿದ್ಯಾಲಯಗಳು, ಒಂದು ಕಾನೂನು ಮಹಾವಿದ್ಯಾಲಯ ಆರಂಭವಾದವು. 1984-85ರಿಂದ ಶಿರಸಿ ಕುಮಟ ಮತ್ತು ದಾಂಡೇಲಿಯಲ್ಲಿ ಪಾಲಿಟೆಕ್ನಿಕ್‌ಗಳು ನಡೆಯುತ್ತಿವೆ. 1958ರಲ್ಲಿ ಕಾರವಾರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಆರಂಭವಾಯಿತು. ಈಗ ಈ ಜಿಲ್ಲೆಯ ಭಟ್ಕಳದಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜ್ ಇದೆ. ಸಿದ್ದಾಪುರದಲ್ಲೊಂದು ಆಯುರ್ವೇದ ಮಹಾವಿದ್ಯಾಲಯವಿದೆ. ಶಿರಸಿಯಲ್ಲಿ ಅರಣ್ಯ ವಿಜ್ಞಾನ ಕಾಲೇಜು ಇದೆ.

1937ರಲ್ಲಿ ಮುಂಬಯಿ ಸರ್ಕಾರದಿಂದ ಅನುದಾನಿತವಾದ ವಯಸ್ಕರ ಶಿಕ್ಷಣ ಸಮಿತಿಯ ರಚನೆಯಾಗಿತ್ತು. 1947-56ರ ಅವಧಿಯಲ್ಲಿ ಸಮುದಾಯ ಶಿಕ್ಷಣಕ್ಕೆ ಆದ್ಯತೆ ನೀಡಿದ್ದರಿಂದ ನಾಲ್ಕು ತಿಂಗಳ ಮತ್ತು ಆರು ತಿಂಗಳ ಅವಧಿಗಳ ಸಾಕ್ಷರತಾ ವರ್ಗಗಳು ಆರಂಭವಾದವು. 1980ರಲ್ಲಿ ಶಿರಸಿಯಲ್ಲಿ ವಯಸ್ಕರ ಶಿಕ್ಷಣಕ್ಕೆ ಯೋಜನಾ ಕಚೇರಿ ತೆರೆದ ಅನಂತರ ವಯಸ್ಕರ ಶಿಕ್ಷಣದತ್ತ ಹೆಚ್ಚಿನ ಗಮನ ಹರಿಯಿತು. ಈಗ 150 ವಯಸ್ಕರ ಶಿಕ್ಷಣ ಕೇಂದ್ರಗಳೂ 150 ಸಾಕ್ಷರೋತ್ತರ ತರಬೇತಿ ಕೇಂದ್ರಗಳೂ ಕೆಲಸ ಮಾಡುತ್ತಿವೆ. ಕೇಂದ್ರ ಸರ್ಕಾರದ ಯೋಜನೆಯಡಿ ನವೋದಯ ಶಾಲೆಯೂ ನಡೆಯುತ್ತಿದೆ.

ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಸಿಗುವ ನಿಟ್ಟಿನಲ್ಲಿ ಶಿಕ್ಷಣ ಖಾತೆ 1981-82ರಲ್ಲಿ ಪ್ರೌಢಶಾಲೆಯ 65 ಶಿಕ್ಷಕರಿಗೆ ತರಬೇತು ನೀಡಿ ಅವರನ್ನು ಕೆರಿಯರ್ ಮಾಸ್ಟರ್ಸ್ ಎಂದು ಕರೆದುದಲ್ಲದೆ ಬಿ.ಎಡ್. ವಿದ್ಯಾರ್ಥಿಗಳಿಗೂ ಈ ವಿಷಯ ಪರಿಚಯಿಸಿತು. ಜಿಲ್ಲೆಯಲ್ಲಿ 2164 ಪ್ರಾಥಮಿಕ ಶಾಲೆಗಳು, 240 ಪ್ರೌಢಶಾಲೆಗಳೂ 48 ಪದವಿಪೂರ್ವ ಕಾಲೇಜುಗಳೂ 24 ಸಾಮಾನ್ಯ ಶಿಕ್ಷಣ ಕಾಲೇಜುಗಳು, 6 ಪಾಲಿಟೆಕ್ನಿಕ್‌ಗಳು ಇವೆ (2000). ಜಿಲ್ಲೆಯಲ್ಲಿ 13 ಅಲೋಪತಿ ಆಸ್ಪತ್ರೆಗಳು, 2 ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆಗಳು, 58 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 64 ಕುಟುಂಬ ಕಲ್ಯಾಣ ಕೇಂದ್ರಗಳು ಇವೆ.

**ಇತಿಹಾಸ :** ಇಲ್ಲಿನ ಇತಿಹಾಸ ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ (ಕ್ರಿ.ಪೂ.4-3ನೆಯ ಶತಮಾನ). ಈ ಪ್ರದೇಶ ಮೌರ್ಯ ಸಾಮ್ರಾಜ್ಯದಲ್ಲಿತ್ತೆಂದೂ ವನವಾಸಿ ಅಥವಾ ಇಂದಿನ ಬನವಾಸಿ ಮುಖ್ಯ ಸ್ಥಳವಾಗಿತ್ತೆಂದೂ ಈ ಪ್ರದೇಶಕ್ಕೆ ಬೌದ್ಧ ಭಿಕ್ಷುಗಳನ್ನು ಧರ್ಮಪ್ರಸಾರಕ್ಕಾಗಿ ಅಶೋಕನ ಕಾಲದಲ್ಲಿ ಕಳಿಸಲಾಗಿತ್ತೆಂದೂ ಮಹಾವಂಶ, ದೀಪವಂಶ ಮೊದಲಾದ ಧರ್ಮಗ್ರಂಥಗಳಿಂದ ತಿಳಿಯುತ್ತದೆ. ಮುಂದೆ ಕ್ರಿ.ಪೂ.2 ರಿಂದ ಕ್ರಿ.ಶ.3ನೆಯ ಶತಮಾನದಲ್ಲಿ ಸಾತವಾಹನರ ಆಳ್ವಿಕೆಯಲ್ಲಿ ಇತ್ತೆಂದು ಬನವಾಸಿಯ ಉತ್ಖನನಗಳಿಂದ ತಿಳಿಯುತ್ತದೆ. ಇಲ್ಲಿ ಯಜ್ಞಶಾತಕರ್ಣಿಯ ಕೆಲವು ನಾಣ್ಯಗಳು ದೊರಕಿವೆ. 2 ಮತ್ತು 3ನೆಯ ಶತಮಾನದಲ್ಲಿ ಸಾತವಾಹನರ ಸಂಬಂಧಿಗಳಾದ ಚಟುಕುಲದವರು ಇಲ್ಲಿ ಆಳುತ್ತಿದ್ದರು. 4 ರಿಂದ 6ನೆಯ ಶತಮಾನದವರೆಗೆ ಈ ಪ್ರದೇಶ ಕದಂಬರ ಆಳ್ವಿಕೆಯಲ್ಲಿತ್ತು. ಕದಂಬರ ಅನಂತರ ಬಾದಾಮಿಯ ಚಳುಕ್ಯರು (6-8ನೆಯ ಶತಮಾನ), ರಾಷ್ಟ್ರಕೂಟರೂ (8-10ನೆಯ ಶತಮಾನ) ಆಳಿದರು. ರಾಷ್ಟ್ರಕೂಟರ ಮತ್ತು ಅನಂತರ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಜಿಲ್ಲೆಯ ಬಹುಭಾಗ ಬನವಾಸಿ 12000 ಎಂಬ ಪ್ರಮುಖ ಪ್ರಾಂತ್ಯದ ಭಾಗವಾಗಿತ್ತು. ಅಂದಿನ ಆಳರಸರ ಪ್ರತಿನಿಧಿಗಳು ಬನವಾಸಿಯನ್ನು ತಮ್ಮ ಪ್ರಾಂತೀಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. 11 ಮತ್ತು 13ನೆಯ ಶತಮಾನಗಳಲ್ಲಿ ಹಾನಗಲ್ಲು ಮತ್ತು ಗೋವೆಯ ಕದಂಬರು ಚಾಳುಕ್ಯ ಸಾಮಂತರಾಗಿ ಹೆಚ್ಚುಮಟ್ಟಿಗೆ ಈ ಪ್ರದೇಶವನ್ನು ಆಳುತ್ತಿದ್ದರು. 14ನೆಯ ಶತಮಾನದಾರಭ್ಯ ಸು.16ನೆಯ ಶತಮಾನದವರೆಗೆ ಈ ಜಿಲ್ಲೆಯ ಬಹುಭಾಗ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿತ್ತು. 17-18ನೆಯ ಶತಮಾನಗಳಲ್ಲಿ ಕೆಳದಿಯ ನಾಯಕರು ಮತ್ತು ಬಿಳಿಗಿ, ಸ್ವಾದಿ, ಗೇರುಸೊಪ್ಪೆ ಮೊದಲಾದ ಪಾಳೆಗಾರ ವಂಶದವರು ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಆಳುತ್ತಿದ್ದರು. 18ನೆಯ ಶತಮಾನದ ಉತ್ತರಾರ್ಧದಲ್ಲಿ, ಉತ್ತರ ಕನ್ನಡ ಜಿಲ್ಲೆ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನದ ಭಾಗವಾಯಿತು. 1799ರಲ್ಲಿ ಶ್ರೀರಂಗಪಟ್ಟಣದ ಪತನವಾದ ಅನಂತರ ಇದು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟು ಮುಂಬಯಿ ಪ್ರಾಂತ್ಯಕ್ಕೆ ಸೇರಿತು. ಸು.150 ವರ್ಷ ಆ ಪ್ರಾಂತ್ಯದಲ್ಲಿದ್ದ ಈ ಜಿಲ್ಲೆ ಭಾಷಾನುಗುಣ ಪ್ರಾಂತರಚನೆಯ ಅನಂತರ (1956) ಕರ್ನಾಟಕ ರಾಜ್ಯಕ್ಕೆ ಸೇರಿತು.

**ಸ್ವಾತಂತ್ರ್ಯ ಸಮರ :** 1862ಕ್ಕಿಂತ ಮೊದಲು ದಕ್ಷಿಣೋತ್ತರ ಜಿಲ್ಲೆಗಳು ಬೇರೆ ಬೇರೆಯಾಗಿರಲಿಲ್ಲ. ಆಗ ಈ ಇಡೀ ಜಿಲ್ಲೆಗೆ ಕನ್ನಡ ಜಿಲ್ಲೆ ಎಂಬ ಹೆಸರಿತ್ತು. ಈ ಜಿಲ್ಲೆಯ ಒಕ್ಕಟ್ಟು ಮುಂದೆ ಬ್ರಿಟಿಷ್ ಸರ್ಕಾರಕ್ಕೆ ಮುಳುವಾಗಬಹುದೆಂಬ ಶಂಕೆಯಿಂದ ಆಗಿನ ಜಿಲ್ಲಾ ಕಲೆಕ್ಟರ್ ಮುನ್ರೊ ಎಂಬಾತ ಈ ಜಿಲ್ಲೆಯನ್ನು ಎರಡಾಗಿ ಒಡೆಯಬೇಕೆಂದು ಸಲಹೆ ಮಾಡಿದ. ಅದರಂತೆ ಉತ್ತರ ಭಾಗವನ್ನು ಉತ್ತರ ಕನ್ನಡ ಎಂದು ಹೆಸರಿಸಿ ಮುಂಬಯಿ ಪ್ರಾಂತ್ಯಕ್ಕೂ ದಕ್ಷಿಣ ಭಾಗವನ್ನು ದಕ್ಷಿಣ ಕನ್ನಡ ಜಿಲ್ಲೆ ಎಂದು ಕರೆದು ಅದನ್ನು ಮದರಾಸು ಪ್ರಾಂತ್ಯಕ್ಕೂ ಸೇರಿಸಲಾಯಿತು. 1890ರಲ್ಲಿ ಜಿಲ್ಲೆಯ ಜನರಿಂದ ಜಂಗಲ್ ಸವಲತ್ತುಗಳನ್ನು ಕಸಿದುಕೊಳ್ಳಲಾಯಿತು. 1914-15ರಲ್ಲಿ ರೈತರ ಮೇಲೆ ವಿಪರೀತ ಕರ ಹೇರಲಾಯಿತು. ಮಾರಕ ರೋಗಗಳಾದ ಮಲೇರಿಯ, ಪ್ಲೇಗು ಹಬ್ಬಿ ಜನಸಂಖ್ಯೆ ಗಣನೀಯವಾಗಿ ಇಳಿಯಿತು. 1901ರಲ್ಲಿ 53,071 ಇದ್ದ ಜನಸಂಖ್ಯೆ 1931ರ ವೇಳೆಗೆ 37,000ಕ್ಕೆ ಇಳಿದಿತ್ತು. ಬ್ರಿಟಿಷ್ ಆಡಳಿತದಿಂದ ಜನ ಬೇಸರಗೊಂಡಿದ್ದರು.

ಮೂಲತಃ ಲೋಕಮಾನ್ಯ ಟಿಳಕರ ಕೇಸರಿಯ ಅಗ್ರಲೇಖದಿಂದ ಇಲ್ಲಿಯ ಜನ ಸ್ಫೂರ್ತಿ ಪಡೆದರು. ಕನ್ನಡ ಸುವಾರ್ತೆ (1882), ಹವ್ಯಕ ಸುಬೋಧ (1895), ಸಂಯುಕ್ತ ಕರ್ನಾಟಕ, ಕಾನಡಾವೃತ್ತ (1916), ಕಾನಡಾ ಧುರೀಣ, ಬಾಂಬೆಕ್ರಾನಿಕಲ್ ಪತ್ರಿಕೆಗಳಿಂದ ಜನರು ದೇಶವಿದೇಶದ ಸುದ್ದಿಗಳನ್ನು ತಿಳಿದುಕೊಂಡು ಬ್ರಿಟಿಷ್ ಆಡಳಿತದ ವಿರುದ್ಧ ಸಿಡಿದೆದ್ದರು. ಮೊದಲು ಟಿಳಕರ ವಿಚಾರಗಳನ್ನು ಬೆಂಬಲಿಸಿದ ಉತ್ತರ ಕನ್ನಡದ ಜನ ಟಿಳಕರ ಮರಣಾನಂತರ (1920) ಗಾಂಧೀಜಿಯವರು ನೇತೃತ್ವವಹಿಸಿದಾಗ ಅವರ ನಾಯಕತ್ವದಲ್ಲಿ ಹೋರಾಟ ಮುಂದುವರಿಸಿದರು.

ಸ್ವದೇಶಿ ಚಳವಳಿ (1906), ಅಸಹಕಾರ ಆಂದೋಲನ, ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ, ವೈಯಕ್ತಿಕ ಸತ್ಯಾಗ್ರಹ ಇವುಗಳಲ್ಲೆಲ್ಲಾ ಜಾತಿಮತಗಳನ್ನೆಣಿಸದೆ ಸಾವಿರಾರು ಜನ ಬೀದಿಗಿಳಿದು ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ನಿರತರಾದರು. ಅನೇಕರು ಶಾಲೆ ಕಾಲೇಜು ಕಚೇರಿಗಳನ್ನು ಬಿಟ್ಟು, ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ಜೈಲು ಸೇರಿದರು, ಕಠಿಣ ಶಿಕ್ಷೆ ಅನುಭವಿಸಿದರು. ಶಿರಸಿ, ಸಿದ್ದಾಪುರ, ಅಂಕೋಲಾ ಹೋರಾಟದ ಕೇಂದ್ರಗಳಾಗಿದ್ದುವು. ನಾರಾಯಣ ಚಂದಾವರಕರ, ತಿಪ್ಪಯ್ಯ ಮಾಸ್ತರ, ಕಡವೆ ರಾಮಕೃಷ್ಣ ಹೆಗಡೆ, ವಾಮನ ಹೊರಿಕೆ, ಶಂಕರರಾವ್ ಗುಲ್ವಾಡಿ, ತಿಮ್ಮಪ್ಪ ನಾಯಕ, ನಾರಾಯಣ ಮರಾಠೆ, ಶಿರಳಗಿ ಸುಬ್ರಾಯಭಟ್ಟ, ಎಸ್.ಎನ್. ಕೇಶವೈನ್ ಮೊಟೆನ್ಸರ್, ತಿಮ್ಮಪ್ಪ ಹೆಗಡೆ, ದೊಡ್ಮನೆ ನಾಗೇಶ ಹೆಗಡೆ, ಭವಾನಿಬಾಯಿ ಕಾನಗೋಡು, ಸೀತಾಬಾಯಿ ಮಡಗಾಂವೆಕರ, ಜೋಗಿ ಬೀರಣ್ಣ ನಾಯಕ, ಎನ್.ಜಿ.ಪೈ., ನಾರಾಯಣ ಪಿ ಭಟ್ಟ ಮೊದಲಾದವರು ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡು ಉತ್ತರ ಕನ್ನಡ ಜಿಲ್ಲೆಯ ಸಾಧನೆಗೆ ಚರಿತ್ರೆಯ ಪುಟಗಳಲ್ಲಿ ಶಾಶ್ವತ ಸ್ಥಾನ ದೊರಕಿಸಿಕೊಟ್ಟಿದ್ದಾರೆ. ಈ ಜಿಲ್ಲೆಯ ಜನ ಮಾಡಿದ ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ ಚಳವಳಿ ಇವು ಹೊಸ ಇತಿಹಾಸ ನಿರ್ಮಿಸಿದವು.

ಮುರುಡೇಶ್ವರ ದೇವಾಲಯದ ಗೋಪುರ

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೂ ಕರ್ನಾಟಕ ಏಕೀಕರಣ ಚಳವಳಿ ಮುಂದುವರಿಯಿತು. 1954ರಲ್ಲಿ ದಿನಕರ ದೇಸಾಯಿ ಮತ್ತು ಪಿ.ಎಸ್.ಕಾಮತರು ಮನವಿಯೊಂದನ್ನು ತಯಾರಿಸಿ ರಾಜ್ಯ ಮರುವಿಂಗಡಣೆ ಆಯೋಗಕ್ಕೆ ಒಪ್ಪಿಸಿದ್ದರು.

1940ರ ಸುಮಾರಿನಲ್ಲಿ ಉಳುವವನೆ ಭೂಮಿಯ ಒಡೆಯ ಎಂಬ ಘೋಷಣೆಯೊಂದಿಗೆ ಚುಟುಕು ಬ್ರಹ್ಮ ದಿನಕರ ದೇಸಾಯಿ

(ನೋಡಿ) ಅವರ ಧುರೀಣತ್ವದಲ್ಲಿ ನಡೆದ ಚಳವಳಿಯಲ್ಲಿ ಜಿಲ್ಲೆಯ ಜನ ಪಾಲ್ಗೊಂಡು ಅದನ್ನು ಒಂದು ಬಲಿಷ್ಠ ಸಂಘಟನೆಯನ್ನಾಗಿ ರೂಪಿಸಿದರು. ಸರ್ಕಾರ ಗಾಬರಿಗೊಂಡು 1940ರಿಂದ ದಿನಕರ ದೇಸಾಯಿಯವರು ಉತ್ತರ ಕನ್ನಡ ಗಡಿಯನ್ನು ಪ್ರವೇಶಿಸದಂತೆ ಆಜ್ಞೆ ಹೊರಡಿಸಿತು. ಆಗ ದಿನಕರ ದೇಸಾಯಿಯವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರಾಗಿ ಮುಂಬಯಿಯಲ್ಲಿದ್ದರು. ಆಗ ಶೇಷಗಿರಿ ಪಿಕಳೆ ಮತ್ತು ದಯಾನಂದ ನಾಡಕರ್ಣಿಯವರು ರೈತಕೂಟದ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡರು. ದಿನಕರ ದೇಸಾಯಿಯವರ ಮಾರ್ಗದರ್ಶನದಲ್ಲಿ ಚಳವಳಿ ನಡೆಯುತ್ತಿತ್ತು. ರೈತರು ಬಲಿಷ್ಠಗೊಳ್ಳಲೂ ಸ್ವತಂತ್ರರಾಗಲೂ ಇದು ಕುಮ್ಮಕ್ಕು ನೀಡಿತು. ಈ ಚಳವಳಿಯಲ್ಲಿ ಉತ್ತರ ಕನ್ನಡದ ಸಾವಿರಾರು ರೈತರು ರಾಜಕೀಯ ಪಕ್ಷಗಳ ಕಾರ್ಯಕರ್ತರು ಒಮ್ಮನಸ್ಸಿನಿಂದ ದುಡಿದು ಒಂದು ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು.

**ಪ್ರೇಕ್ಷಣೀಯ ಸ್ಥಳಗಳು :** ಈ ಜಿಲ್ಲೆಯ ದಟ್ಟವಾದ ಕಾಡು, ಕಾಡಿನಲ್ಲಿ ಭೋರ್ಗರೆಯುವ ಜಲಪಾತಗಳು, ವಿಶಾಲವಾದ ಕಡಲ ದಂಡೆಗಳು ಪಯಣಿಗರ ಹೃದಯಗಳನ್ನು ಸೂರೆಗೊಳ್ಳುತ್ತವೆ. ಕಾರವಾರದ ಹತ್ತಿರದ ಅಂಜದೀವ ನಡುಗಡ್ಡೆ, ಕಣಿವೆ ಮಾರ್ಗವಾದ ಅಣಿಘಟ್ಟೆ, ಶಿರಸಿಯ ಪಡುವಣಕ್ಕಿರುವ ಬೆಡಸಗಾಂವ್ ಗುಡ್ಡ, ಹೊನ್ನಾವರದ ಬಳಿಯ ಬಸವರಾಜದುರ್ಗ (ನೋಡಿ), ಜಿಲ್ಲೆಯ ಉತ್ತರ ಭಾಗದ ದರ್ಶನಗುಡ್ಡ, ಭಟ್ಕಳ ಸಮೀಪದ ನೇತ್ರಾಣಿ ಗುಡ್ಡ (ನೋಡಿ) - ಇವು ಸುಂದರವಾಗಿವೆ. ಹೊನ್ನಾವರ ತಾಲ್ಲೂಕಿನ ಇಡಗುಂಜಿ (ನೋಡಿ), ಗೋಕರ್ಣ (ನೋಡಿ), ಬನವಾಸಿ (ನೋಡಿ), ಉಳವಿ (ನೋಡಿ), ಮಂಜುಗುಣಿ (ನೋಡಿ), ಸೋದೆ (ನೋಡಿ) - ಇವು ಪುಣ್ಯ ಕ್ಷೇತ್ರಗಳೆಂದು ಪರಿಗಣಿತವಾಗಿವೆ. ಮುಂಡಗೋಡ ತಾಲ್ಲೂಕಿನ ತಟ್ಟಿಹಳ್ಳಿಯಲ್ಲಿ ಟಿಬೆಟನರ ಬೃಹತ್ ವಸತಿ ಇದೆ. 1966ರಿಂದ ಟಿಬೆಟನ್‌ರು ಕೃಷಿ, ಕರಕುಶಲ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಇವರು ಇಲ್ಲೊಂದು ಬೃಹತ್ ಬುದ್ಧಮಂದಿರ ಕಟ್ಟಿಸಿದ್ದಾರೆ. ಇದೊಂದು ಪ್ರೇಕ್ಷಣೀಯ ಪುಣ್ಯ ಕ್ಷೇತ್ರ. ಕಾಳಿ ನದಿಗೆ ಸುಪದಲ್ಲಿ ಜಲಾಶಯ ಕಟ್ಟಿದ್ದರಿಂದ ಆ ಪಟ್ಟಣ ಜಲಾವೃತವಾಯಿತು. ಈಗ ಜೋಯಿಡಾ ತಾಲ್ಲೂಕು ಕೇಂದ್ರವಾಗಿದೆ. ಲಂಬಿಕಾ ನಗರದಿಂದ ಮೂರು ಕಿಮೀ ದೂರದಲ್ಲಿರುವ ಸೈಕ್ಸ್ ಪಾಯಿಂಟ್ ಕಾಳಿ ನದಿಯ ವಿಹಂಗಮ ನೋಟ ಸುಂದರವಾಗಿದೆ. ಇದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಈ ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯ ಜನ ಕನ್ನಡ ಮಾತನಾಡುವವರು. ಕೊಂಕಣಿ, ಉರ್ದು, ಮರಾಠಿ ಮಾತನಾಡುವವರೂ ಗಣನೀಯ ಸಂಖ್ಯೆಯಲ್ಲಿದ್ದಾರೆ. ತೆಲುಗು, ತಮಿಳು, ಮಲಯಾಳಂ, ತುಳು, ರಾಜಸ್ಥಾನಿ, ಕೊಡವ, ಹಿಂದಿ, ಗುಜರಾತಿ, ಸಿಂಧಿ, ನೇಪಾಳಿ, ಬಂಗಾಳಿ, ಪಂಜಾಬಿ, ಒರಿಯ, ಪರ್ಷಿಯನ್ ಭಾಷೆ ಮಾತನಾಡುವವರನ್ನೂ ಕಾಣಬಹುದು.



ಕಾಳಿ ಸೇತುವೆ, ಕಾರವಾರ

ಉತ್ತರ ಕನ್ನಡ ಜಿಲ್ಲೆ ಜನಪದ ಸಂಸ್ಕೃತಿಯ ಬೀಡಾಗಿದೆ. ಹಾಲಕ್ಕಿ, ಹಸಲರು, ನಾಮಧಾರಿ, ನವಾಯತರು, ಸಿದ್ದಿ, ಹವ್ಯಕ, ಗೊಂಡರು, ಮುಕ್ರಿ, ಸಾರಸ್ವತ, ಪಟಗಾರ, ಭಜಂತ್ರಿ, ದೈವಜ್ಞ (ಜನಿವಾರರು), ಗವಳಿ, ಮೀನುಗಾರರ ಉಪಸಂಸ್ಕೃತಿಗಳು ಇವೆ. ಇವರ ಹಾಡು-ಕುಣಿತ-ಹಬ್ಬಗಳು ಮನಮೋಹಕ. ಇಲ್ಲಿ ಜನಪದ ಗೀತೆಗಳನ್ನು ಸಂಗ್ರಹಿಸಿದ ಪ್ರಮುಖರಲ್ಲಿ ವಿ.ಪೆ.ತೋರ್ಕೆ, ಮ.ಗ.ಶೆಟ್ಟಿ, ಜಿ.ಆರ್.ಹೆಗಡೆ, ಎಲ್.ಆರ್.ಹೆಗಡೆ, ಎನ್.ಆರ್.ನಾಯಕ, ಫಾದರ್‌ಸಿ.ಸಿ.ಎ.ಪೈ, ಎಲ್.ಜಿ.ಭಟ್ಟ, ಶಾಂತಿನಾಯಕ, ವಿ.ಗ.ನಾಯಕ ಮೊದಲಾದವರು ಪ್ರಮುಖರು. ವಿವಿಧ ಉಪಸಂಸ್ಕೃತಿಗಳ ಅಧ್ಯಯನ ಮಾಡಿದವರಲ್ಲಿ ಎಲ್.ಆರ್.:ಹೆಗಡೆ, ಎನ್.ಆರ್.ನಾಯಕ, ಜಿ.ಎಸ್.ಭಟ್ಟ, ಶ್ರೀಪಾದ ಶೆಟ್ಟಿ, ಶಾಲಿನಿ ರಘುನಾಥ್, ವಿಜಯನಳಿನಿ ರಮೇಶ, ಆರ್.ಜಿ.ಗುಂದಿ, ಶ್ರೀಪಾದ ಭಟ್ಟ ಇವರು ಮುಖ್ಯರು.



ಕೇತಾಪಿನಾರಾಯಣ ದೇವಾಲಯ, ಭಟ್ಕಳ

ಈ ಜಿಲ್ಲೆಯ ರಂಗಕಲೆಗಳಲ್ಲಿ ಯಕ್ಷಗಾನ ವಿಶಿಷ್ಟ ಸ್ಥಾನ ಗಳಿಸಿದೆ. ಕರ್ಕಿ ಪರಮಯ್ಯ ಹಾಸ್ಯಗಾರ (ನೋಡಿ), ಕೆರೆಮನೆ ಶಿವರಾಮ ಹೆಗಡೆ (ನೋಡಿ), ಕೆರೆಮನೆ ಮಹಾಬಲ ಹೆಗಡೆ (ನೋಡಿ), ಕೆರೆಮನೆ ಶಂಭು ಹೆಗಡೆ (ನೋಡಿ), ಚಿಟ್ಟಾಣಿ ರಾಮಚಂದ್ರ ಹೆಗಡೆ (ನೋಡಿ), ಎಕ್ಟರ್ ಜೋಶಿ, ಕೆರೆಮನೆ ಗಜಾನನ ಹೆಗಡೆ, ಪಿ.ವಿ.ಹಾಸ್ಯಗಾರ (ನೋಡಿ), ನಾರಾಯಣ ಹಾಸ್ಯಗಾರ, ಕೃಷ್ಣ ಹಾಸ್ಯಗಾರ, ಕೊಂಡದಕುಳಿ ರಾಮ ಹೆಗಡೆ, ಲಕ್ಷ್ಮಣ ಹೆಗಡೆ, ಮುರೂರು ದೇವರು ಹೆಗಡೆ (ನೋಡಿ), ಗೋಡೆ ನಾರಾಯಣ ಹೆಗಡೆ, ಡಿ.ಜಿ.ಹೆಗಡೆ, ಶಿರಳಗಿ ಭಾಸ್ಕರ ಜೋಶಿ, ಬಳ್ಕೂರ ಕೃಷ್ಣಯಾಜಿ, ವೆಂಕಟೇಶ ಜಲವಳ್ಳಿ, ಕಡತೋಕ ಮಂಜುನಾಥ ಭಾಗವತ, ನೆಬ್ಬೂರು ನಾರಾಯಣ ಭಾಗವತ ಪ್ರಮುಖ ಕಲಾವಿದರು. ಚಿಟ್ಟಾಗಿ ರಾಮಚಂದ್ರ ಹೆಗಡೆಯವರಿಗೆ ಜ್ಞಾನಪದ ಶ್ರೀ ಪ್ರಶಸ್ತಿ ಬಂದಿದೆ (2004). ತಾಳಮದ್ದಳೆಯ ಕಲಾವಿದರು ಅನೇಕರಿದ್ದಾರೆ. ನಾಟಕ ಕ್ಷೇತ್ರದಲ್ಲಿ ಹುಲಿಮನೆ ಸೀತಾರಾಮ ಶಾಸ್ತ್ರೀ (ನೋಡಿ) ಜಯಕರ್ನಾಟಕ ನಾಟಕ ಮಂಡಳಿ ಸ್ಥಾಪಿಸಿ ನಡೆಸಿದರು. ಸುಗ್ಗಿಕುಣಿತ, ಗುಮಟೆಯ ಪಾಂಡು, ದೋಣಿಯ ಹಾಡು, ಬೆಸ್ತರ ಪದ, ಜನಪದ ಗೀತೆಗಳು, ಸಿದ್ದಿಯರ ಕುಣಿತ- ಹಾಡುಗಳೂ ಜಿಲ್ಲೆಯ ಜನರನ್ನು ಮನರಂಜಿಸುತ್ತ ಬಂದಿವೆ.

ಸಾಹಿತ್ಯ ಕ್ಷೇತ್ರವನ್ನು ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ, ಜಿ.ಆರ್.ಪಾಂಡೇಶ್ವರ, ಗೌರೀಶ ಕಾಯ್ಕಿಣಿ, ಯಶವಂತ ಚಿತ್ತಾಲ, ಬಿ.ಎಚ್. ಶ್ರೀಧರ, ಶಾಂತಿನಾಥ ದೇಸಾಯಿ, ಸು.ರಂ.ಎಕ್ಕುಂಡಿ, ಅರವಿಂದ ನಾಡಕರ್ಣಿ, ಸ.ಪ.ಗಾಂವಕರ್, ಕೃಷ್ಣಾನಂದ ಕಾಮತ್, ಪ.ಸು.ಭಟ್ಟ, ಸುಂದರ ನಾಡಕರ್ಣಿ, ವಿ.ಜಿ.ಭಟ್ಟ, ದಿನಕರ ದೇಸಾಯಿ, ವಿ.ಜಿ.ಶಾನಭಾಗ, ಶಾ.ಮಂ.ಕೃಷ್ಣರಾಯ, ಗಂಗಾಧರ ಚಿತ್ತಾಲ, ಜಿ.ಜಿ.ಹೆಗಡೆ, ಜಿ.ಎಸ್.ಭಟ್ಟ, ಜಯಂತ ಕಾಯ್ಕಿಣಿ, ನಿರಂಜನ ವಾನಳ್ಳಿ, ರಾಜೀವ ಅಜ್ಜಿಬಳ ಇವರು ಸಮೃದ್ಧಗೊಳಿಸಿದ್ದಾರೆ. ಹೊಸ ತಲೆಮಾರಿನ ಅನೇಕ ಕವಿಗಳೂ ಲೇಖಕರೂ ಭರವಸೆ ಮೂಡಿಸುತ್ತಿದ್ದಾರೆ. ಪ್ರಮುಖ ಲೇಖಕರ ಬಗ್ಗೆ ಪ್ರತ್ಯೇಕ ಲೇಖನಗಳಿವೆ.

ಈ ಜಿಲ್ಲೆಯ ಪತ್ರಿಕೆಗಳಲ್ಲಿ ಹವ್ಯಕ ಸುಬೋಧ ಶಾಸ್ತ್ರಿ (1885), ಕಾರವಾರ ಚಂದ್ರಿಕೆ (1885), ಮಕ್ಕಳ ಪತ್ರಿಕೆ ಹಿತೋಪದೇಶ (1888), ಸರಸ್ವತಿ (1900), ವಿನೋದಿನಿ (1904)- ಇವು

ಮಾಸಪತ್ರಿಕೆಗಳು. 1919ರಲ್ಲಿ ಕುಮಟದಿಂದ ಕಾನಡಾ ಧುರೀಣ ಮೈಜೆಸ್ಟ್ (1922), ನಂದಿನಿ (1925) ಮಾಸ ಪತ್ರಿಕೆ ಮೊದಲು ಗೋಕರ್ಣದಿಂದ ಪ್ರಕಟಿಸಲಾಗುತ್ತಿದ್ದು ಕೆಲಕಾಲ ನಿಂತು 1937 ರಿಂದ ಶಿರಸಿಯಿಂದ ಪ್ರಕಟವಾಗತೊಡಗಿತು. ಶರಣ ಸಂದೇಶ (1931), ನವಚೇತನ (1941), ಸಾಧನ (1949) ಹೊನ್ನಾವರದಿಂದ ಪ್ರಕಟವಾಗುತ್ತಿತ್ತು. ಮಲಯವಾಣಿ (1955) ವಾರ್ಷಿಕ ಪತ್ರಿಕೆ. 1956ರಲ್ಲಿ ಭಾವಮಾ ಮಾಸ ಪತ್ರಿಕೆ ಶಿರಸಿಯಿಂದ ಪ್ರಕಟವಾಗತೊಡಗಿತು. 1957ರಲ್ಲಿ ಶಿರಸಿಯಿಂದ ಪ್ರಕಟವಾಗುತ್ತಿದ್ದ ನಗರವಾಣಿ ಅಲ್ಪಾಯುವಾಯಿತು. ಸಹಕಾರಿ ಸಮಾಜ (1979), ಯಕ್ಷಗಾನ (1959), ಗೋಕರ್ಣ ಗೋಷ್ಠಿ (1959), ಸ್ವತಂತ್ರವಾಣಿ (1960), ಮಧುವನ (1960), ಗ್ರಾಮಜೀವನ, ಸಮಾಜ (1965), ಸಂಘಟನೆ, ರಮಣ ಸಂದೇಶ, (1971), ಶಿರಸಿ ಸಮಾಚಾರ, ಸಹಚರ, ಸಮನ್ವಯ (1975) ಇವಲ್ಲದೆ ಕಡಲಧ್ವನಿ (1983), ಆಚಾರ (1980), ಕರಾವಳಿ ಗ್ರಾಮ ವಿಕಾಸ (1987), ಗ್ರಾಮ ಭಾರತಿ ಅಭಯ (1965), ನುಡಿಜೇನು (1968), ಗಿರಿಘರ್ಜನೆ, ಯುಗವಾಣಿ (1964), ಸಮಾಜವಾಣಿ (1965), ಚುನಾವಣೆ, ಆಧ್ಯಾತ್ಮಿಕ ಪತ್ರಿಕೆ ಜೀವೋತ್ತಮ ಉಲ್ಲೇಖನೀಯ. ಮುನ್ನಡೆ (1988) ದಿನಪತ್ರಿಕೆಯಾಗಿ 2000ದಲ್ಲಿ ನಿಂತುಹೋಯಿತು. ಜಿಲ್ಲೆಯ ಮೊದಲ ದೈನಿಕ ಲೋಕಧ್ವನಿ (1983), ಜನಮಾಧ್ಯಮ (1988), ಧ್ಯೇಯನಿಷ್ಠ ಪತ್ರಕರ್ತ (1991), ಕರಾವಳಿಯ ಮುಂಜಾವು (1994) - ಇವು ಇಂದಿನ ಪ್ರಮುಖ ಪತ್ರಿಕೆಗಳು.

ದೀರ್ಘಕಾಲ ನಡೆದ ಪತ್ರಿಕೆಗಳಲ್ಲಿ ಕಾನಡಾವೃತ್ತದ ಸ್ಥಾನ ಅದ್ವಿತೀಯ. ಇದು 1916ರಲ್ಲಿ ಪ್ರಾರಂಭವಾಗಿ ಈಗಲೂ ನಡೆಯುತ್ತಿದೆ. 1946ರಲ್ಲಿ ಆರಂಭವಾದ ನಾಗರಿಕ ಈಗಲೂ ಪ್ರಕಟವಾಗುತ್ತಿದೆ. 1960ರಲ್ಲಿ ಜನತಾ, 1955ರಲ್ಲಿ ದಿನಕರ ದೇಸಾಯಿ ಪ್ರಾರಂಭಿಸಿದ ಜನಸೇವಕ ಇದು 1972ರ ವರೆಗೆ ನಡೆದು ಅನಂತರ ನಿಂತಿತು. ಶೃಂಗಾರ ಹೊನ್ನಾವರದಿಂದ ಪ್ರಕಟವಾಗುತ್ತಿತ್ತು. (ಎಸ್.ಎಂ.ಕೆ.)

**ಉತ್ತರದೇಶದ ಬಸವಲಿಂಗದೇವ :** ಸು.1600. ವೀರಶೈವ ಕವಿ. ಬಸವೇಶ್ವರಪುರಾಣದ ಕಥಾಸಾಗರ, ಭೈರವೇಶ್ವರಕಾವ್ಯದ ಕಥಾಸಾಗರ, ಉಚಿತ ಕಥೆಗಳು ಎಂಬ ಗ್ರಂಥಗಳನ್ನು ಗದ್ಯದಲ್ಲಿ ಬರೆದಿದ್ದಾನೆ. ಇವುಗಳಲ್ಲಿ ತಾನು ಷಟ್‌ಸ್ಥಲಚಕ್ರವರ್ತಿ ಚೆನ್ನಬಸವದೇವನ ಕಾರುಣ್ಯದ ಶಿಶುವೆಂದೂ ಬಸವಣ್ಣನ ಕಥೆಗಳನ್ನು ಭಕ್ತಮಾಹೇಶ್ವರರು ಸುಲಭದಲ್ಲಿ ತಿಳಿಯುವಂತೆ ಹೇಳಹೊರಟಿರುವೆನೆಂದೂ ಕವಿ ಹೇಳಿಕೊಂಡಿದ್ದಾನೆ. ಈತನ ಭಾಷಾ ಸ್ವರೂಪವನ್ನು ನೋಡಿದರೆ ಸುಮಾರು 17ನೆಯ ಶತಮಾನದವನೆಂದೂ ಹೇಳಬಹುದು.

ಬಸವೇಶ್ವರಪುರಾಣದ ಕಥಾಸಾಗರದಲ್ಲಿ 464 ಕಥೆಗಳಿವೆ. ಈ ಕಥೆಗಳಲ್ಲಿ ಅಷ್ಟಾದಶ ಪುರಾಣಗಳು, ರಾಮಾಯಣ, ಮಹಾಭಾರತ ಮೊದಲಾದ ಸಂಸ್ಕೃತ ಗ್ರಂಥಗಳಿಂದ ಆಯ್ದುಕೊಂಡ ಕೆಲವು ಕಥೆಗಳು ಕಂಡುಬರುತ್ತವೆಯಾದರೂ ಬಸವಣ್ಣನವರನ್ನು ಕುರಿತ ಕಥೆಗಳನ್ನು ನಿರೂಪಿಸುವುದು ಇಲ್ಲಿನ ಮುಖ್ಯ ಗುರಿ. ಆದ್ದರಿಂದ ಈತ ಹರಿಹರ, ರಾಘವಾಂಕ, ಲಕ್ಕಣ್ಣ ದಂಡೇಶ, ನೀಲಕಂಠಾಚಾರ್ಯ, ಸಿಂಗಿರಾಜ, ಗುಬ್ಬಿಯ ಮಲ್ಲಣಾರ್ಯ ಮೊದಲಾದ ಪ್ರಸಿದ್ಧ ವೀರಶೈವ ಕವಿಗಳ ಕಾವ್ಯಗಳಿಂದ ತನ್ನ ಕತೆಗಳನ್ನು ಆಯ್ದುಕೊಂಡಿದ್ದಾನೆ. ಈ ಮೂಲ ಕಾವ್ಯಗಳ ಪದಗಳನ್ನೂ ಪದಪುಂಜಗಳನ್ನೂ ಸಂಗ್ರಹಕಾರನು ತನ್ನ ನಿರೂಪಣೆಯಲ್ಲಿ ಬಳಸಿರುವುದರಿಂದ, ಹಿಂದಿನ ಕವಿಕಾವ್ಯಗಳ ಕರ್ತೃತ್ವವನ್ನು ನಿರ್ಧರಿಸುವಲ್ಲಿ ಈ ಕಥೆಗಳು ಬಹು ಉಪಯುಕ್ತವಾಗಿವೆ.

'ಭೈರವೇಶ್ವರಕಾವ್ಯದ ಕಥಾಸಾಗರ' ಕಿಕ್ಕೇರಿಯಾರಾಧ್ಯ ನಂಜುಂಡ ಕವಿಯ (ಸು.1550) ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರದಿಂದ ಎತ್ತಿಕೊಂಡ 316 ಕಥೆಗಳನ್ನು ಒಳಗೊಂಡಿದೆ. 'ಉಚಿತ ಕಥೆಗಳು' ಬೇರೆ ಬೇರೆ ಕಡೆಗಳಿಂದ ಸಂಗ್ರಹಿಸಿರುವ 74 ಕಥೆಗಳನ್ನು ಒಳಗೊಂಡಿದೆ. (ಟಿ.ಎಸ್.ಎಸ್.)

**ಉತ್ತರ ಪಿನಾಕಿನಿ :** ಉತ್ತರ ಪೆನ್ನಾರ್ ಎಂದೂ ಕರೆಯುವ ಈ ನದಿ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟದ ವಾಯುವ್ಯದಲ್ಲಿರುವ ಚೆನ್ನಕೇಶವ ಬೆಟ್ಟದಲ್ಲಿ ಹುಟ್ಟಿ ಮಂಚೇನಹಳ್ಳಿ ಮತ್ತು ಗೌರಿಬಿದನೂರು ಮೂಲಕ ಆಂಧ್ರಪ್ರದೇಶವನ್ನು ಪ್ರವೇಶಿಸಿ ಹಿಂದೂಪುರ ತಾಲ್ಲೂಕು, ಕಡಪ ಮತ್ತು ನೆಲ್ಲೂರಿನ ಮೂಲಕ ಹರಿದು, ನೆಲ್ಲೂರಿನ ಹತ್ತಿರ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಕುಮುದ್ವತಿ ಮತ್ತು ಚಿತ್ರಾವತಿ ಇದರ ಉಪನದಿಗಳು.

ಕರ್ನಾಟಕದಲ್ಲಿ (ಕೋಲಾರ ಜಿಲ್ಲೆಯಲ್ಲಿ) ಈ ನದಿ 54ಕಿಮೀ ದೂರ ಹರಿಯುತ್ತದೆ. ಇದರ ಜಲಾನಯನ ಪ್ರದೇಶದ ವಿಸ್ತೀರ್ಣ 842 ಚಕಿಮೀ. 116 ಕೆರೆಗಳಿಗೆ ಈ ನದಿ ಆಸರೆಯಾಗಿದೆ. ಜಕ್ಕಲಮಡುಗು ಮತ್ತು ಶ್ರೀನಿವಾಸಸಾಗರ- ಇವು ಈ ನದಿಗೆ ಕಟ್ಟಿರುವ ಎರಡು ಮುಖ್ಯ ಅಣೆಕಟ್ಟುಗಳು. ಅನೇಕ ಕಾಲುವೆಗಳ ಮುಖಾಂತರ ಈ ನದಿಯ ನೀರನ್ನು ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಬೇಸಾಯಕ್ಕೆ ಬಳಸಿಕೊಳ್ಳುತ್ತಾರೆ. ವಿದುರಾಶ್ವತ್ಥ ಕ್ಷೇತ್ರ ಈ ನದಿ ದಡದಲ್ಲಿದೆ. *

**ಉದಯಕುಮಾರ್ :** 1935-85. ರಂಗಭೂಮಿ ಮತ್ತು ಚಲನಚಿತ್ರನಟ, ಚಿತ್ರನಿರ್ದೇಶಕ ಹಾಗೂ ಸಾಹಿತಿ. ಆನೇಕಲ್ಲು ತಾಲ್ಲೂಕಿನ ಬೊಮ್ಮಸಂದ್ರದಲ್ಲಿ 1935 ಮಾರ್ಚ್ 16ರಂದು ಜನಿಸಿದರು. ತಂದೆ ಶಾನುಭೋಗ ಶ್ರೀನಿವಾಸಯ್ಯ, ತಾಯಿ ಶಾರದಮ್ಮ. ಇವರ ಮೊದಲ ಹೆಸರು ಸೂರ್ಯನಾರಾಯಣ ಶಾಸ್ತ್ರಿ. ಪ್ರೌಢಶಾಲೆಯ ಹಂತದವರೆಗೂ ವ್ಯಾಸಂಗ ಮಾಡಿರುವ ಇವರು ಸಂಸ್ಕೃತವನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದರು. 1951ರಲ್ಲಿ ದಾಂಪತ್ಯ ಜೀವನಕ್ಕೆ ಪ್ರವೇಶಿಸಿದರು. ಬೆಂಗಳೂರಿನ ಸರ್ವೋದಯ ಇಲಾಖೆಯಲ್ಲಿ ಸಾಹಿತ್ಯ ವಿಭಾಗದ ಕಾರ್ಯದರ್ಶಿಯಾಗಿ ಒಂದು ವರ್ಷ (1954), ಆನೇಕಲ್ಲಿನ ಸರ್ಕಾರಿ ಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿ ಕೆಲವು ವರ್ಷ ಕೆಲಸ ಮಾಡಿ ಕೊನೆಗೆ ಆ ಕೆಲಸವನ್ನು ಬಿಟ್ಟು ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಚಾರ ಭಾಷಣಗಳನ್ನು ಮಾಡುವುದರಲ್ಲಿ ನಿರತರಾದರು. ನಟಿ ಬಿ.ಜಯಮ್ಮನವರ ಪರಿಚಯವಾಗಿ, ಅವರ ಮೂಲಕ ಗುಬ್ಬಿ ನಾಟಕ ಕಂಪೆನಿಯನ್ನು ಪ್ರವೇಶಿಸಿದ ಉದಯ ಕುಮಾರ್ ಪ್ರಾರಂಭದಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಿದರು. ಅನಂತರ ಕುರುಕ್ಷೇತ್ರ ನಾಟಕದಲ್ಲಿ ಪರಶುರಾಮನ

ಪಾತ್ರವನ್ನು ಅಭಿನಯಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರಲ್ಲದೆ. ನಾಟಕ ಕಂಪನಿಯ ಮಾಲೀಕರಾಗಿದ್ದ ಗುಬ್ಬಿ ವೀರಣ್ಣನವರ ಮೆಚ್ಚುಗೆಗೂ ಪಾತ್ರರಾದರು. ಅನಂತರ ಚಿತ್ರರಂಗವನ್ನು ಪ್ರವೇಶಿಸಿದ ಇವರು ಅಭಿನಯಿಸಿದ ಮೊದಲ ಚಿತ್ರ ಭಾಗ್ಯೋದಯ (1956). ಸೇಡಿಗೆಸೇಡು ಇವರ ಅಭಿನಯದ ನೂರನೆಯ ಚಿತ್ರ. ತಮ್ಮ ಅಭಿನಯನೈಪುಣ್ಯ ಮತ್ತು ಶ್ರದ್ಧೆಗಳಿಂದ ಪಾತ್ರಗಳನ್ನು ನಿರ್ವಹಿಸಿ ಚಿತ್ರರಂಗದಲ್ಲಿ ಬಹು ಬೇಗ ಜನ ಪ್ರಿಯರಾದರು. ಚಂದವಳ್ಳಿಯತೋಟದ ಶಿವನಂಜೇಗೌಡ, ವಿಜಯನಗರದ ವೀರಪುತ್ರದ ಕೃಷ್ಣದೇವರಾಯ, ರಾಮಾಂಜನೇಯ ಯುದ್ಧದ ಆಂಜನೇಯ ಈ ಪಾತ್ರಗಳು ಇವರ ಉನ್ನತ ಕಲಾಭಿನಯಕ್ಕೆ ಸಾಕ್ಷಿಯಾಗಿವೆ. ಇವರ ಅಭಿನಯವಿರುವ ಭಕ್ತಕನಕದಾಸ, ನಂದಾದೀಪ, ಸಂತತುಕಾರಾಂ, ಅಮರಶಿಲ್ಪಿ ಜಕಣಾಚಾರಿ, ಸತ್ಯಹರಿಶ್ಚಂದ್ರ, ಮಿಸ್ ಲೀಲಾವತಿ, ಸಂಧ್ಯಾರಾಗ ಮತ್ತು ಬಂಗಾರದ ಹೂ - ಈ ಚಿತ್ರಗಳು ರಾಷ್ಟ್ರಪ್ರಶಸ್ತಿ ಗಳಿಸಿವೆ. ತಮಿಳು ಮತ್ತು ತೆಲುಗು ಚಿತ್ರಗಳಲ್ಲೂ ಅಭಿನಯಿಸಿ ಆ ಭಾಷೆಗಳ ಚಿತ್ರಪ್ರೇಮಿಗಳಿಗೂ ಇವರು ಪರಿಚಿತರಾಗಿದ್ದಾರೆ. ಕನ್ನಡದಲ್ಲಿ ಸ್ವತಂತ್ರವಾಗಿ ಇದೇ ಮಹಾಸುದಿನ ಎಂಬ ಚಿತ್ರವನ್ನು ನಿರ್ಮಿಸಿದ್ದರು.

ಉದಯಕುಮಾರ್ ಅವರಿಗೆ 1964ರಲ್ಲಿ ರಾಷ್ಟ್ರಪ್ರಶಸ್ತಿ ಲಭಿಸಿತು. ಮದರಾಸಿನ ಫಿಲಂ ಫ್ಯಾನ್ಸ್ ಅಸೋಸಿಯೇಷನ್ ಇವರಿಗೆ

ಶ್ರೇಷ್ಠನಟ ಎಂಬ ಬಿರುದನ್ನಿತ್ತು ಗೌರವಿಸಿದೆ. ಕರ್ನಾಟಕದ ವಿವಿಧ ಸಾಂಸ್ಕೃತಿಕ ಸಂಸ್ಥೆಗಳು ಇವರಿಗೆ ಸನ್ಮಾನಿಸಿವೆ. ಕನ್ನಡದ ಕುಮಾರ ತ್ರಯರಲ್ಲಿ ಒಬ್ಬರೆಂದು ಪ್ರಸಿದ್ಧರಾಗಿದ್ದ ಇವರು 1985ರಲ್ಲಿ ಅಕಾಲಿಕವಾಗಿ ನಿಧನ ಹೊಂದಿದರು. (ಎಸ್.ಎಚ್.ವಿ.)

**ಉದಯವಾಣಿ :** ಕರಾವಳಿ ಕರ್ನಾಟಕದ ಒಂದು ದಿನಪತ್ರಿಕೆ. 1970ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲದಲ್ಲಿ ಪ್ರಕಟಣೆ ಆರಂಭಿಸಿತು. ಈಗ ಬೆಂಗಳೂರು ಮತ್ತು ಮುಂಬಯಿ ಆವೃತ್ತಿಯನ್ನೂ ಹೊಂದಿದೆ. ಪತ್ರಿಕೆಯ ಇಂದಿನ ಪ್ರಸಾರ ಸಂಖ್ಯೆ 55,000. ಈ ಪತ್ರಿಕೆ ಕರಾವಳಿ ಕರ್ನಾಟಕದಲ್ಲಷ್ಟೇ ಅಲ್ಲ ಮುಂಬೈ, ಕೊಲ್ಲಿ ರಾಷ್ಟ್ರಗಳಲ್ಲೂ ಅಸಂಖ್ಯಾತ ಓದುಗರನ್ನು ಹೊಂದಿದೆ.

ಪ್ರತಿವರ್ಷ ವೈಶಿಷ್ಟ್ಯಪೂರ್ಣವಾಗಿ ದೀಪಾವಳಿ ವಿಶೇಷ ಸಂಚಿಕೆ ಪ್ರಕಟಿಸಿ ಓದುಗರಿಗೆ ವೈವಿಧ್ಯಮಯ ಸಾಹಿತ್ಯವನ್ನು ಒದಗಿಸಲಾಗುತ್ತಿದೆ. ಮಹಿಳಾ ಸಂಪದ, ನಮ್ಮ ಬೆಂಗಳೂರು, ಕ್ರೀಡಾ ಸಂಪದ, ಕಲಾವಿಹಾರ, ಆರೋಗ್ಯವಾಣಿ, ಕರ್ನಾಟಕ ಸಂಪದಗಳಂತಹ ವಿಶೇಷ ಪುರವಣಿಗಳನ್ನೂ ಹೊರತರುತ್ತಿದೆ. ಇವಲ್ಲದೆ ಪ್ರಾದೇಶಿಕ ವಾರ್ತೆಗಳಿಗೂ ಮಹತ್ತ್ವ ನೀಡುತ್ತಿದೆ. ಈ ಪತ್ರಿಕೆ ಈಗ ಇಂಟರ್‌ನೆಟ್‌ನಲ್ಲೂ ಲಭ್ಯ.

ಬೆಂಗಳೂರು, ಮಣಿಪಾಲ ಮತ್ತು ಮುಂಬೈನಿಂದ ಪ್ರಕಾಶಿತ Published from Bangalore, Manipal & Mumbai
ಉದಯವಾಣಿ
UDAYAVANI KANNADA DAILY - BANGALORE
ಸಂಪುಟ: 12 ಸಂಚಿಕೆ: 169 ಬೆಂಗಳೂರು, ರವಿವಾರ, ಜೂನ್ 20, 2004 http://www.udayavani.com

ಪತ್ರಿಕೆಯ ಒಡೆತನ ಮಣಿಪಾಲ ಮೀಡಿಯ ನೆಟ್‌ವರ್ಕ್ ಲಿಮಿಟೆಡ್‌ಗೆ ಸೇರಿದೆ. ಉದಯವಾಣಿಯ ಈಗಿನ ಸಂಪಾದಕರು ಎನ್. ಗುರುರಾಜ್, ಪ್ರಧಾನ ಸಂಪಾದಕರು ಟಿ.ಸತೀಶ್, ಯು.ಪೈ. ಮುದ್ರಣ ಮತ್ತು ವಿನ್ಯಾಸಕ್ಕೆ ಭಾರತ ಸರ್ಕಾರದ ಸುದ್ದಿ ಮತ್ತು ಪ್ರಸಾರ ಇಲಾಖೆಯಿಂದ ಎಂಟು ಬಾರಿ ರಾಷ್ಟ್ರೀಯ ಪ್ರಶಸ್ತಿಯನ್ನು ಈ ಪತ್ರಿಕೆ ಪಡೆದುಕೊಂಡಿದೆ. (ಟಿ.ಎಂ.)

**ಉದಯಶಂಕರ, ಚಿ. :** 1934-93. ಕನ್ನಡ ಚಲನಚಿತ್ರಗೀತೆ ಮತ್ತು ಸಂಭಾಷಣೆ ರಚನಕಾರರು. ತುಮಕೂರು ಜಿಲ್ಲೆಯ ಚಿತ್ನಹಳ್ಳಿ ಗ್ರಾಮದಲ್ಲಿ 1934 ಫೆಬ್ರುವರಿ 19ರಂದು ಜನಿಸಿದರು. ತಂದೆ ಚಿ. ಸದಾಶಿವಯ್ಯ, ಕೂಡ ಚಲನಚಿತ್ರ ಕ್ಷೇತ್ರದಲ್ಲಿ ಹೆಸರು ಮಾಡಿದವರು.

ಉದಯಶಂಕರ ಅವರು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಬೆಂಗಳೂರಿನ ನ್ಯಾಷನಲ್ ಪ್ರೌಢಶಾಲೆಯಲ್ಲಿ ಮಾಡಿದರು. ಇವರೊಬ್ಬ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು. ಆಗ ಮಕ್ಕಳ ಕೂಟದ ಬಾವುಟ ಪತ್ರಿಕೆಗೆ ಸಂಪಾದಕರಾಗಿ ಕೆಲಸ ನಿರ್ವಹಿಸಿದರು. ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿದ ಬಳಿಕ ಸಿನಿಮಾಟಾಗ್ರಾಫಿಯಲ್ಲಿ (ಚಲನಚಿತ್ರ ಛಾಯಾಗ್ರಾಹಕ) ಜ್ಞಾನ ಸಂಪಾದಿಸಿದರು. ತಮ್ಮ ಕ್ಷೇತ್ರದ ಕಡೆಯೇ ದಾರಿ ಹಿಡಿದು ಬಂದ ಮಗನಿಗೆ ಮದರಾಸಿನಲ್ಲಿ ಸಹಕಾರ ಪ್ರೋತ್ಸಾಹ ನೀಡಿ ಅವನ ಬೆಳವಣಿಗೆಗೆ ಕಾರಣೀಭೂತರಾದವರು ತಂದೆ ಸದಾಶಿವಯ್ಯ. ಇವರಿಗೆ ಆಗ ಚಿಕ್ಕ ಪುಟ್ಟ ಪಾತ್ರದಲ್ಲಿ ನಟಿಸುವ ಅವಕಾಶ ದೊರೆಯಿತು. ವಿಜಯನಗರದ ವೀರಪುತ್ರ ಚಲನಚಿತ್ರದಲ್ಲಿ ನಟಿಸಿದರು. ಸಂತತುಕಾರಾಂ ಚಿತ್ರಕ್ಕೆ ಸಂಭಾಷಣೆ ಬರೆಯುವುದರ ಮೂಲಕ ಸಾಹಿತಿಯಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು (1963). ಶಿವರಾತ್ರಿ ಮಹಾತ್ಮೆ ಚಿತ್ರಕ್ಕಾಗಿ ಇವರು ಮೊದಲ ಹಾಡು ರಚಿಸಿದರು (1964). ಮಹಾಸತಿ ಅನುಸೂಯ ಚಿತ್ರಕ್ಕೆ ಸಂಭಾಷಣೆ ಮತ್ತು ಹಾಡು ಎರಡನ್ನೂ ಮೊದಲು ಬರೆದ ಖ್ಯಾತಿ ಇವರದು (1965). ಅನಂತರ ನೂರಾರು ಚಿತ್ರಗಳಿಗೆ ಸಾಹಿತ್ಯ ರಚಿಸಿದರು: ಸಂಭಾಷಣೆ ಹಾಗೂ ಸಾವಿರಾರು ಹಾಡುಗಳನ್ನು ಬರೆದು ಖ್ಯಾತಿ ಗಳಿಸಿದರು.

ಕನ್ನಡದಲ್ಲಿ ಹಾಡು ಮತ್ತು ಸಂಭಾಷಣೆಯನ್ನೇ ವೃತ್ತಿ ಮಾಡಿಕೊಂಡು ಪ್ರಬುದ್ಧಮಾನಕ್ಕೆ ಬಂದು ವೃತ್ತಿನಿರತ ಬರೆಹಗಾರರಾಗಿಯೇ ಬದುಕು ನಡೆಸಿದ ಏಕೈಕ ವ್ಯಕ್ತಿ ಎಂಬ ಹೆಗ್ಗಳಿಕೆ ಇವರದು. ಇವರು ಸರಳ ಸಜ್ಜನಿಕೆಗೆ ಹೆಸರಾಗಿದ್ದರು. ಚಿತ್ರರಂಗದ ಎಲ್ಲರ ಜೊತೆ ಪರಸ್ಪರ



ಅರಿವು ಮತ್ತು ಸಹಕಾರ ಮನೋಭಾವದಿಂದ ಚಿತ್ರದ ಯಶಸ್ಸಿಗೆ ಶ್ರಮಿಸುವ ಜಾಯಮಾನದವರಾಗಿದ್ದರು. ಚಲನಚಿತ್ರಕ್ಕೆ ಅಲ್ಲಿನ ಪಾತ್ರವರ್ಗ ತಮ್ಮ ಉತ್ತಮ ಅಭಿನಯ ಮತ್ತು ಚಿತ್ರಸಂಭಾಷಣೆಯಿಂದ ಜೀವ ತುಂಬಿದಾಗ ಮಾತ್ರ ಅದು ಯಶಸ್ವಿಯಾಗಬಲ್ಲುದು ಎಂಬುದು ಇವರ ದೃಢ ನಂಬಿಕೆಯಾಗಿತ್ತು. ವೆಂಕಟೇಶ್ವರ ಮಹಾತ್ಮೆ ಚಿತ್ರಕ್ಕೆ ಚಿತ್ರಕಥೆ ಬರೆಯುವ ಅವಕಾಶ ಒದಗಿ ಬಂದಾಗ ಖುದ್ದಾಗಿ ತಿರುಪತಿಗೆ ತೆರಳಿ ಅಲ್ಲಿಯ ಸ್ಥಳಪುರಾಣದ ಹಾಗೂ ಸಂಸ್ಕೃತಿಯ ಬಗ್ಗೆ ಸ್ಥಳೀಯರೊಡನೆ ಅಧ್ಯಯನ ನಡೆಸಿದರು. ಅಂತೆಯೇ ಮಹಾಕವಿ ಕಾಳಿದಾಸ ಚಿತ್ರಕ್ಕೆ ಸಂಸ್ಕೃತ ವಿದ್ವಾಂಸರೊಬ್ಬರ ನೆರವು ಪಡೆದು ಆಮೂಲಾಗ್ರ ಅಧ್ಯಯನ ನಡೆಸಿ ಕಾರ್ಯೋನ್ಮುಖರಾದರು. ಇವರು ಗಮಕ ಪ್ರವೀಣರೂ ಆಗಿದ್ದುದರಿಂದ ಗೀತೆಗಳನ್ನು ಸುಲಭವಾಗಿ ರಚಿಸಿಬಿಡುತ್ತಿದ್ದರು.

ಡಾ.ರಾಜಕುಮಾರ್ ಅವರ ಸುಮಾರು ಎಪ್ಪತ್ತಕ್ಕೂ ಹೆಚ್ಚು ಚಲನಚಿತ್ರಗಳಿಗೆ ಇವರು ಸಂಭಾಷಣೆ ಬರೆದಿರುವುದು ಇವರ ಪ್ರತಿಭೆಗೆ ಸಾಕ್ಷಿ. ಗೀತರಚನೆ ಮತ್ತು ಸಂಭಾಷಣೆ ಬರೆಯುವುದರ ಜೊತೆಗೆ ಐವತ್ತಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಇವರು ಅಭಿನಯಿಸಿದ್ದರು. ಲಗ್ನಪತ್ರಿಕೆ ಚಿತ್ರದ ಬಲುಅಪರೂಪ ನಮ್ ಜೋಡಿ ............ ಹಾಡಿಗೆ ಇವರು ನೀಡಿದ ಅಭಿನಯ ಜನಪ್ರಿಯ ಎನಿಸಿತು. ಚಿತ್ರರಂಗದಲ್ಲಿ ಬಹಳ ಕೀರ್ತಿ ಪ್ರತಿಷ್ಠೆಗಳನ್ನು ಪಡೆದು ಮೇಲಿಂದ ಮೇಲೆ ಉತ್ತುಂಗ ಶಿಖರಕ್ಕೇರುತ್ತಿದ್ದಾಗಲೇ ಉದಯೋನ್ಮುಖ ನಟನಾದ ಇವರ ಪುತ್ರ ಹರಯದಲ್ಲೇ ಅಪಘಾತದಲ್ಲಿ ತೀರಿಕೊಂಡದ್ದು ಇವರ ಬದುಕಿನ ದೊಡ್ಡ ದುರಂತ.

ಇವರಿಗೆ ಹಲವು ಪ್ರಶಸ್ತಿಗಳು ಬಂದಿವೆ. ಚಿತ್ರಪ್ರೇಮಿಗಳ ಸಂಘ ಇವರಿಗೆ ಕವಿರಾಜ ಎಂಬ ಬಿರುದನ್ನು ನೀಡಿ ಗೌರವಿಸಿದೆ. ಇನ್ನೊಂದು ಸಂಘ ಸಾಹಿತ್ಯ ರತ್ನ ಎಂಬ ಬಿರುದನ್ನು ನೀಡಿ ಸನ್ಮಾನಿಸಿದೆ. ಕುಲಗೌರವ, ನಾಗರಹಾವು, ಪ್ರೇಮದ ಕಾಣಿಕೆ, ಜೀವನ ಚೈತ್ರ ಚಿತ್ರಗಳ ಸಂಭಾಷಣೆಗಾಗಿ ಮತ್ತು ಭಾಗ್ಯದ ಲಕ್ಷ್ಮೀಬಾರಮ್ಮ, ಆನಂದ ಇವೇ ಮೊದಲಾದ ಚಿತ್ರಗಳ ಚಿತ್ರಕಥೆಗಳಿಗಾಗಿ ರಾಜ್ಯ ಸರ್ಕಾರದ ಶ್ರೇಷ್ಠ ಸಂಭಾಷಣಕಾರ ಹಾಗೂ ಶ್ರೇಷ್ಠ ಚಿತ್ರನಾಟಕ ಕರ್ತೃ ಪ್ರಶಸ್ತಿ ಲಭ್ಯವಾಗಿದೆ. ಇವರು 1993 ಜುಲೈ 7ರಂದು ನಿಧನರಾದರು. (ಎಸ್.ಜಿ.ಪಿ.)

**ಉದ್ಯಾನಗಳು :** ಅಲಂಕಾರದ ಎಲೆ ಹೂಗಳಿಂದ ಕೂಡಿದ ಗಿಡಮರಗಳಿಂದ ತುಂಬಿ ಶೋಭಾಯಮಾನವಾಗಿರುವ ಉದ್ಯಾನಗಳು ಮಾನವ ಬಾಳಿ ಬದುಕಲು ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡುತ್ತವೆ. ವಿಶ್ರಾಂತಿ ಮನೋಲ್ಲಾಸಗಳಿಗೂ ಆರೋಗ್ಯಕ್ಕೂ ಉದ್ಯಾನಗಳು ಆವಶ್ಯಕ. ಉದ್ಯಾನಗಳನ್ನು ನಿರ್ಮಿಸುವ ಕಲ್ಪನೆ ಬಹು ಪ್ರಾಚೀನವಾದದ್ದು. ಕನ್ನಡ ಕಾವ್ಯಗಳಲ್ಲಿ ಪ್ರಾಚೀನ ಶಾಸನಗಳಲ್ಲಿ ವನೋದ್ಯಾನಗಳ ಮತ್ತು ಪುಷ್ಪವಾಟಿಕೆಗಳ ಪ್ರಸ್ತಾಪ ಅನೇಕ ಕಡೆ ಬರುತ್ತದೆ. ರಾಜ ಮಹಾರಾಜರೂ ಋಷಿಮುನಿಗಳೂ ಆಶ್ರಮವಾಸಿಗಳೂ ಉದ್ಯಾನಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಮುಡಿಯುವ ಹೂವಿಗಾಗಿ, ದೇವರ ಪೂಜೆಗೆ ಮತ್ತು ಸುಂದರ ವಾತಾವರಣವನ್ನು ಕಲ್ಪಿಸಲು ದೇವಸ್ಥಾನ ಮನೆ ಬಂಗಲೆಗಳ ಆವರಣದಲ್ಲಿ ಉದ್ಯಾನಗಳನ್ನು ಬೆಳೆಸುವುದು ಹಿಂದಿನಿಂದಲೂ ರೂಢಿಯಲ್ಲಿದೆ.

ಆಧುನಿಕತೆ ಬೆಳೆದಂತೆಲ್ಲಾ ಉದ್ಯಾನಗಳ ಉದ್ದಿಶ್ಯ ವಿನ್ಯಾಸ ಮತ್ತು ತಂತ್ರ ಇವುಗಳಲ್ಲಿ ಅನೇಕ ವೈಜ್ಞಾನಿಕ ಅಂಶಗಳು ಬೆರೆಯುತ್ತ ಉದ್ಯಾನಗಳು ಹೊಸ ರೂಪವನ್ನು ಪಡೆಯುತ್ತಿವೆ. ಈ ಉದ್ಯಾನಗಳು ಕೇವಲ ಧನಿಕರ ಮನರಂಜನಾ ಸ್ಥಾನ ಮಾತ್ರವಾಗಿಲ್ಲದೆ ಸಾರ್ವಜನಿಕರೆಲ್ಲರ ಉಪಯೋಗಕ್ಕೆ ನಿರ್ಮಿತವಾಗುತ್ತಿವೆ. ಅದರಲ್ಲೂ ನಗರ ಪಟ್ಟಣಗಳಲ್ಲಿ ಕಾರ್ಖಾನೆ, ವಾಹನ ಇತ್ಯಾದಿಗಳಿಂದ ಕಲುಷಿತಗೊಂಡ ವಾತಾವರಣದಲ್ಲಿ ಈ ಉದ್ಯಾನಗಳು ಶುದ್ಧವಾಯುಪೂರೈಕೆಗೆ ಸಹಕಾರಿಗಳಾಗಿರುವುದಲ್ಲದೆ ಆ ಪ್ರದೇಶದ ಸೌಂದರ್ಯವನ್ನೂ ಹೆಚ್ಚಿಸುತ್ತಿವೆ.

ಈಗಿನ ಕಲ್ಪನೆಯ ಪ್ರಕಾರ ಉದ್ಯಾನವೆಂದರೆ ವರ್ಷದ ಎಲ್ಲ ಋತುವಿನಲ್ಲೂ ಒಂದಲ್ಲ ಒಂದು ಜಾತಿಯ ಬಣ್ಣ ಬಣ್ಣದ ಸುಗಂಧಭರಿತ ಹೂವು ಬಿಡುವ ಗಿಡ ಮರ ಬಳ್ಳಿಗಳಿಂದ ಕೂಡಿರುವ ಹುಲ್ಲಿನ ಮೈದಾನ, ಮುಖ್ಯ ರಸ್ತೆ, ಕಿರು ರಸ್ತೆ, ಕಲಾಕೃತ ಮಡಿಗಳು, ಅಲಂಕಾರದ ಕುರುಚಲು, ಪೊದೆಸಸ್ಯ ಮತ್ತು ಮರಗಳನ್ನು ವ್ಯವಸ್ಥಿತ ರೀತಿಯಲ್ಲಿ ಮನರಂಜಿಸುವಂತೆ ಬೆಳೆಸಿರುವ ಪ್ರದೇಶ.

ಸಾರ್ವಜನಿಕ ಉದ್ಯಾನಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕೆ ಇಲಾಖೆ ಪ್ರಮುಖ ಪಾತ್ರವಹಿಸುತ್ತಿದೆ. ಅನೇಕ ಕಡೆಗಳಲ್ಲಿ ಉತ್ತಮವಾದ ಉದ್ಯಾನಗಳನ್ನು ಇಲಾಖೆ ನಿರ್ಮಿಸಿರುವುದಲ್ಲದೆ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಹಾಗೂ ಇತರ ಸಂಸ್ಥೆಗಳ ನಿವೇಶನಗಳಲ್ಲಿ ಉದ್ಯಾನಗಳನ್ನು ಬೆಳೆಸಲು, ವೈಜ್ಞಾನಿಕ ರೀತಿಯ ಸಲಹೆ, ಸಹಕಾರ ಮತ್ತು ಪ್ರೋತ್ಸಾಹಕ ಬಹುಮಾನಗಳನ್ನೂ ನೀಡುತ್ತಿದೆ. ಈ ಕಾರ್ಯಕ್ರಮಗಳಿಂದ ಸರ್ಕಾರಿ ಮತ್ತು ಖಾಸಗಿ ಸಂಘ ಸಂಸ್ಥೆಗಳು ಹೆಚ್ಚುಹೆಚ್ಚಾಗಿ ಉದ್ಯಾನಗಳನ್ನು ತಮ್ಮ ಪ್ರದೇಶಗಳಲ್ಲಿ ಬೆಳೆಸಿ, ಅಭಿವೃದ್ಧಿಪಡಿಸಿಕೊಂಡು ಬರುತ್ತಿದ್ದಾರೆ. ಕಾರ್ಖಾನೆಯ ಕಾರ್ಮಿಕರು ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಶ್ರಮಜೀವಿಗಳು ಕೆಲಸ ನಿರ್ವಹಿಸಿ ಬಂದು ಉದ್ಯಾನಗಳಲ್ಲಿ ವಿಶ್ರಾಂತಿ, ವಿರಾಮ ಪಡೆದುಕೊಳ್ಳಲು ಅನುಕೂಲವಾಗುವಂತೆ ಅನೇಕ ಕಾರ್ಖಾನೆಗಳು ಉದ್ಯಾನಗಳನ್ನು ನಿರ್ಮಿಸುತ್ತಿವೆ. ನಗರ ಸಭೆ, ಪೌರಸಮಿತಿ ಮುಂತಾದ ಸಂಸ್ಥೆಗಳೂ ಮಕ್ಕಳ ಪ್ರಯೋಜನಕ್ಕಾಗಿ ನಗರ ಪಟ್ಟಣಗಳ ಮಧ್ಯೆ ಉದ್ಯಾನಗಳನ್ನು ನಿರ್ಮಿಸುವ ಕ್ರಮವನ್ನು ಕೈಗೊಂಡಿವೆ.

ಪ್ರತಿಯೊಂದು ನಗರ ಪಟ್ಟಣಗಳಲ್ಲಿ ಹೊಸದಾಗಿ ನಿರ್ಮಿತವಾದ ಬಡಾವಣೆಗಳಲ್ಲಿ ಮೊದಲು ಉದ್ಯಾನಕ್ಕಾಗಿ ಸ್ಥಳವನ್ನು ಗೊತ್ತುಮಾಡುವುದು ಹಾಗೂ ಸಾರ್ವಜನಿಕ ಉದ್ಯಾನಗಳಲ್ಲಿ ಸಸಿಕ್ಷೇತ್ರ, ಅಲಂಕಾರದ ಹಾಗೂ ನೆರಳಿನ ಮರಗಳು, ಹೂಮಡಿಗಳು, ಕಲಾಕೃತ ಮಡಿಗಳು, ಕಾಲುದಾರಿಗಳು, ಕಲ್ಲೇರಿಗಳು, ಲತಾಗೃಹ- ಇವುಗಳಿಗೆ ಉದ್ಯಾನ ವ್ಯವಸ್ಥೆಯಲ್ಲಿ ತಕ್ಕ ಸ್ಥಾನ ಕಲ್ಪಿಸುವುದು ಪದ್ಧತಿಯಾಗಿದೆ. ಮುಂದುವರೆದ ದೇಶಗಳಲ್ಲಿ ಕಂಡುಬರುವ ಅಲಂಕಾರೋದ್ಯಾನ ರಚನೆ ಕ್ರಮಗಳನ್ನು ಅನುಸರಿಸುವ ಪ್ರಯತ್ನಗಳೂ ನಡೆದಿವೆ.

ಕರ್ನಾಟಕದ ವಿವಿಧ ಭಾಗಗಳಲ್ಲಿ ಮುಖ್ಯ ಉದ್ಯಾನಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.

**ಕೃಷ್ಣರಾಜೇಂದ್ರ ಗಿರಿಧಾಮ - ಕೆಮ್ಮಣ್ಣುಗುಂಡಿ:** ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಪಶ್ಚಿಮಘಟ್ಟಗಳ ಸಹಜಸೌಂದರ್ಯವನ್ನು ಬಳಸಿಕೊಂಡು ಸು.22 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಇದನ್ನು ನಿರ್ಮಿಸಲಾಗಿದೆ. ಬಹುಮಂದಿ ಪ್ರವಾಸಿಗರು ಪ್ರತಿನಿತ್ಯ ಗಿರಿಧಾಮಕ್ಕೆ ಭೇಟಿ ನೀಡುತ್ತಾರಲ್ಲದೆ ಬೇಸಿಗೆಯ ದಿನಗಳಲ್ಲಿ ವಿಶ್ರಾಂತಿಗಾಗಿ ತಂಗುವುದೂ ಉಂಟು. ಇಳಿಜಾರಿನಲ್ಲಿ ಹಂತಹಂತವಾಗಿ ಕಡಿದು ಮಾಡಿದ ಜಗತಿ ತೋಟ, ಹುಲ್ಲಿನ ಮೈದಾನ, ಹೂಹಾಸಿಗೆ, ಕುರುಚಲು ಪೊದೆಸಸ್ಯ ಕಮಾನುಗಳ ಮೇಲೆ ಹಬ್ಬಿಸಿರುವ ಬಳ್ಳಿಗಳು ಎಲ್ಲ ಋತುಗಳಲ್ಲಿಯೂ ಹೂ ತುಂಬಿ ಮೆರಗುತ್ತವೆ. ಇದು ಒಳ್ಳೆಯ ವಿಶ್ರಾಂತಿ ಹಾಗೂ ಆರೋಗ್ಯಧಾಮ.

**ನಂದಿ ಗಿರಿಧಾಮ - ನಂದಿದುರ್ಗ:** ಇದು ರಾಜ್ಯದ ಪ್ರಸಿದ್ಧ ಗಿರಿಧಾಮ. ಕೋಲಾರ ಜಿಲ್ಲೆಯಲ್ಲಿದೆ. ಇಲ್ಲಿ ಅನುಕೂಲವಿರುವ ಕಡೆಗಳಲ್ಲೆಲ್ಲ ಉದ್ಯಾನವನ್ನು ಮಾಡಲಾಗಿದೆ. ಇಲ್ಲಿನ ನಿಸರ್ಗ ರಮಣೀಯವಾಗಿದೆ. ತಂಪು ಹವಾಗುಣವಿರುವುದರಿಂದ ಬೇಸಿಗೆ ಕಾಲದಲ್ಲಿ ಸಾರ್ವಜನಿಕರು ಬಂದು ಇಲ್ಲಿ ತಂಗುತ್ತಾರೆ. ಇದು ಉತ್ತಮ ಆರೋಗ್ಯಧಾಮವೆನಿಸಿಕೊಂಡಿದೆ.

**ಬೃಂದಾವನ ಉದ್ಯಾನ-ಕೃಷ್ಣರಾಜಸಾಗರ:** 1936ರಲ್ಲಿ 75ಎಕರೆ ವಿಸ್ತೀರ್ಣದ ಉದ್ಯಾನವನ್ನು ರಚನೋದ್ಯಾನ ಕ್ರಮವಾಗಿ ನಿರ್ಮಿಸಲಾಗಿದೆ. ವಿಶ್ವ ವಿಖ್ಯಾತಿಗಳಿಸಿರುವ ಬೃಂದಾವನ ಬಹಳ ಆಕರ್ಷಕ ಉದ್ಯಾನ.



ಸಂಗೀತ ಕಾರಂಜಿ, ಕೃಷ್ಣರಾಜಸಾಗರ

**ನಿಷಾದ್‌ಬಾಗ್ ಉದ್ಯಾನ - ಮೈಸೂರು:** ಇದು ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ ಕಾಲದಲ್ಲಿ ರಚಿತವಾದ ಉದ್ಯಾನ. ಇದರ ವಿಸ್ತೀರ್ಣ 12ಎಕರೆ. ಇದು ಹಿಂದೆ ಖಾಸಗಿಯವರ ಸ್ವತ್ತಾಗಿತ್ತಂತೆ; ಇದನ್ನು ಕುಪ್ಪಣ್ಣನ ತೋಟವೆಂದೂ ಕರೆಯುತ್ತಾರೆ. ಅರಮನೆಯ ಮೇಲ್ವಿಚಾರಕರಾಗಿದ್ದ ಜಿ.ಎಚ್. ಕ್ರಂಬಿಗಲ್‌ರವರ ಕಾಲದಲ್ಲಿ ಅಲಂಕಾರೋದ್ಯಾನವಾಯಿತು. ಅನಂತರ ರಾಜಮನೆತನದವರ ಮೇಲ್ವಿಚಾರಣೆಯಿಂದ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಯಿತು.

**ದಕ್ಷಿಣ ವಿಭಾಗದ ಉದ್ಯಾನ - ಮೈಸೂರು:** ಇದು ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಕಾಲದಲ್ಲಿ ಸ್ಥಾಪಿತವಾಯಿತು. 60ಎಕರೆಯ ಈ ಉದ್ಯಾನದ ಸುತ್ತ ಮುತ್ತಲು ಪ್ರೌಢಶಾಲೆ, ಮಹಾರಾಣಿ ಕಾಲೇಜು, ಮಹಾರಾಜ ಕಾಲೇಜು, ಕ್ರಾಫರ್ಡ್ ಹಾಲ್, ಅಠಾರ ಕಚೇರಿ ಮತ್ತು ಅತಿಥಿ ಗೃಹಗಳು ಬೆಳೆದುಕೊಂಡಿವೆ. ಇಲ್ಲಿ ವರ್ಷದ ನಾನಾ ಋತುವಿನಲ್ಲಿ ಒಂದಲ್ಲ ಒಂದು ಜಾತಿಯ ಗಿಡಗಳು ಹೂವಿನಿಂದ ತುಂಬಿರುವುದನ್ನು ಕಾಣಬಹುದು. ರಾಜಮನೆತನದವರ ಆಳ್ವಿಕೆಯಿಂದ ತೋಟಗಾರಿಕೆ ಇಲಾಖೆಗೆ ವರ್ಗಾವಣೆಗೊಂಡ ಮೇಲೆ ಇದರ ಮೇಲ್ವಿಚಾರಣೆ ಪೂರ್ಣವಾಗಿ ತೋಟಗಾರಿಕೆ ಇಲಾಖೆಯದಾಗಿದೆ.

**ಕರ್ಜನ್ ಉದ್ಯಾನ - ಮೈಸೂರು:** 5ಎಕರೆ ವಿಸ್ತೀರ್ಣವುಳ್ಳ ಈ ಉದ್ಯಾನವನ್ನು ಲಾರ್ಡ್ ಕರ್ಜನ್ ಅವರ ಜ್ಞಾಪಕಾರ್ಥವಾಗಿ ನಿರ್ಮಿಸಿದ ಉದ್ಯಾನವೆಂದು ಪರಿಗಣಿಸಲಾಗಿದೆ. ಇದನ್ನು ಕೂಡ ಕಂಬಿಗಲ್‌ರವರ ಕಾಲದಲ್ಲಿ ಸ್ಥಾಪಿಸಲಾಯಿತು. ಇದು ಮೈಸೂರು ನಗರದ ಮಧ್ಯಭಾಗದಲ್ಲಿ ಅರಮನೆಯ ಉತ್ತರ ದಿಕ್ಕಿನ ದ್ವಾರದ ಎಡಪಾರ್ಶ್ವಗೋಡೆಯ ಪಕ್ಕದಲ್ಲಿದೆ.

**ಚೆಲುವಾಂಬ ಉದ್ಯಾನ - ಮೈಸೂರು:** 1915ರ ಲಾಗಾಯ್ತು ಮೈಸೂರು ನಗರಸಭೆಯ ಆಡಳಿತಕ್ಕೆ ಒಳಪಟ್ಟಿದೆ. ಮೈಸೂರಿನಲ್ಲಿ 5 ರಿಂದ 10 ಎಕರೆ ವಿಸ್ತೀರ್ಣವುಳ್ಳ 33 ಸಣ್ಣ ದೊಡ್ಡ ಉದ್ಯಾನಗಳಿವೆ. ಈ ಸೊಬಗಿನ ಉದ್ಯಾನಗಳಿಂದ ತುಂಬಿ ಪ್ರವಾಸಿಗರನ್ನು ಆಕರ್ಷಿಸುವುದರಿಂದ ಮೈಸೂರು ಉದ್ಯಾನ ನಗರವೆಂದು ಪ್ರಸಿದ್ಧಿಯಾಗಿದೆ.

**ಲಾಲ್‌ಬಾಗ್ ಉದ್ಯಾನ - ಬೆಂಗಳೂರು:** 10ಎಕರೆ ವಿಸ್ತೀರ್ಣದ ಈ ಉದ್ಯಾನ 1770ರಲ್ಲಿ ಹೈದರ್ ಅಲಿಯಿಂದ ಬೆಂಗಳೂರು ನಗರದ ಮಧ್ಯಭಾಗದಲ್ಲಿ ಪ್ರಾರಂಭವಾಯಿತು. ಅನಂತರ ಟಿಪ್ಪುಸುಲ್ತಾನ್ ಈ ಉದ್ಯಾನದ ಸೊಬಗು ಹಾಗೂ ಅಲ್ಲಿನ ವಿವಿಧ ಜಾತಿಯ ಕಣ್ಣು ಕೋರೈಸುವ ಹೂವಿನ ಸಸ್ಯಗಳನ್ನು ಕಂಡು ಲಾಲ್‌ಬಾಗ್ ಎಂಬ ಹೆಸರನ್ನು ಕೊಟ್ಟ. ತರುವಾಯ ಅನೇಕ ತಜ್ಞರು ಲಾಲ್‌ಬಾಗಿನ ಮೇಲ್ವಿಚಾರಕರಾಗಿದ್ದು ಇದರ ಅಭಿವೃದ್ಧಿಗಾಗಿ ದುಡಿದಿದ್ದಾರೆ. ಜಾನ್ ಕೆಮರಾನ್ ಎಂಬಾತ ಪರದೇಶಗಳ ಸಸಿಯನ್ನು ತಂದು ನೆಟ್ಟು ಬೆಳೆಸಲಾರಂಭಿಸಿದ ಅನಂತರ

ಜಿ.ಎಚ್.ಕ್ರಂಬಿಗಲ್ ಈ ಉದ್ಯಾನವನ್ನು ವಿವಿಧ ಭಾಗಗಳನ್ನಾಗಿ ವಿಭಾಗಿಸಿದ. ಜವರಯ್ಯ, ನಂಜಪ್ಪ, ಎಂ.ಎಚ್.ಮರಿಗೌಡ ಮುಂತಾದ ನಿರ್ದೇಶಕರ ಶ್ರಮದ ಫಲವಾಗಿ ಅಭಿವೃದ್ಧಿಹೊಂದಿ ಇಂದು (1976)

ಲಾಲ್‌ಬಾಗ್, ಬೆಂಗಳೂರು

240ಎಕರೆ ವಿಸ್ತೀರ್ಣವುಳ್ಳದ್ದಾಗಿದೆ. ಈ ಉದ್ಯಾನದಲ್ಲಿ ಮುಗಲ್, ಇಟಾಲಿಯನ್, ಜಪಾನ್ ಮಾದರಿಗಳ ಅಲಂಕಾರೋದ್ಯಾನ ರಚನೆಯನ್ನು ಕಾಣಬಹುದು ಹಾಗೂ ಗುಲಾಬಿ ವನ, ಮಲ್ಲಿಗೆ ವನ, ತಾವರೆ ಕೊಳ, ಟೋಪಿಯೆರಿ, ಪುಷ್ಪಾಭಿವೃದ್ಧಿ ವಿಭಾಗ, ಬ್ಯಾಂಡ್ ಸ್ಟ್ಯಾಂಡ್, ಎಕನಾಮಿಕ್ಸ್ ಉದ್ಯಾನ, ಫೈಕಸ್‌ಲಾನ್, ಸೇಡ್ ಉದ್ಯಾನ, ಸ್ಟ್ಯಾಚುರೌಂಡ್, ಮ್ಯಾಗ್ನೋಲಿಯ ಲಾನ್, ಬಾಹಿನಿಯಾ ಲಾನ್, ಕ್ಯಾಸಿಯ ಲಾನ್ ಮುಂತಾದ ಉದ್ಯಾನ ವಿಭಾಗಗಳಾಗಿ ವಿಂಗಡಿಸಲಾಗಿದೆ. ವಿಶ್ವದ ನಾನಾ ಮೂಲೆಗಳಿಂದ ತಂದು ಬೆಳೆಸಿದ ಸಸ್ಯಗಳಿಂದ ಈ ಉದ್ಯಾನ ವಿಶ್ವ ಪ್ರಖ್ಯಾತವಾಗಿದೆ. ಇದು ಕರ್ನಾಟಕ ರಾಜ್ಯದ ತೋಟಗಾರಿಕೆ ಇಲಾಖೆಗೆ ಮೂಲಸ್ಥಾನ. ಇದರಲ್ಲಿ ಹಿರಿಯ ರಸ್ತೆಗಳು, ಕಾಲುದಾರಿಗಳು ಕುರುಚಲು ಸಸ್ಯ, ಪೊದೆಸಸ್ಯ ಮುಂತಾಗಿ ಗಿಡಮರಗಳನ್ನು ವಿಂಗಡವಾಗಿ ಜೋಡಿಸಿರುವಂತೆ ಬೆಳೆಸಿದ್ದಾರೆ. ನಾನಾ ಋತುವಿನಲ್ಲೂ ವಿವಿಧ ಬಣ್ಣದ ಹೂಗಳಿಂದ ತುಂಬಿರುತ್ತದೆ.

**ಕಬ್ಬನ್ ಉದ್ಯಾನ - ಬೆಂಗಳೂರು:** ಸರ್ ಮಾರ್ಕ್ ಕಬ್ಬನ್ನರ ಜ್ಞಾಪಕಾರ್ಥವಾಗಿ ಈ ಉದ್ಯಾನಕ್ಕೆ ಈ ಹೆಸರು ಬಂದಿದೆ. ಇದರ ವಿಸ್ತೀರ್ಣ 300 ಎಕರೆ. ಕ್ರಂಬಿಗಲ್ ಕಾಲದಲ್ಲಿ ಇದರ ರಚನೆಯಾಯಿತು. ಇದು ಬೆಂಗಳೂರು ನಗರದ ಮಧ್ಯಭಾಗದಲ್ಲಿದೆ. ಇದನ್ನು ರಾಣಿ ಉದ್ಯಾನ, ಬ್ಯಾಂಡ್ ಸ್ಟ್ಯಾಂಡ್ ಉದ್ಯಾನ, ಚಾಮರಾಜೇಂದ್ರ ಫೇರಿ ಫೌಂಟನ್ ಉದ್ಯಾನ, ಶೇಷಾದ್ರಿ ಹಾಲ್ ಉದ್ಯಾನ, ಕ್ಯಾನಾಬೆಡ್ ಉದ್ಯಾನಗಳಾಗಿ ವಿಂಗಡಿಸಲಾಗಿದೆ. ವರ್ಷದ ಎಲ್ಲ ಋತುವಿನಲ್ಲೂ ಒಂದಲ್ಲ ಒಂದು ಜಾತಿಯ ಹೂ ತುಂಬಿರುತ್ತದೆ.

**ರಾಜಭವನ ಉದ್ಯಾನ - ಬೆಂಗಳೂರು:** ಸುಮಾರು 5 ಎಕರೆ ವಿಸ್ತೀರ್ಣವುಳ್ಳ ಈ ಉದ್ಯಾನ ವನದಲ್ಲಿ ಗುಲಾಬಿ ಮತ್ತಿತರ ಹೂವಿನ ಮಡಿಗಳನ್ನು, ಹುಲ್ಲಿನ ಪಸಲೆಗಳನ್ನು ಕಾಣಬಹುದು.

**ವಿಧಾನಸೌಧದ ಉದ್ಯಾನ - ಬೆಂಗಳೂರು:** ವಿಧಾನಸೌಧಕ್ಕೆ ಮೆರುಗನ್ನು ನೀಡುತ್ತಿರುವ 18 ಎಕರೆ ವಿಸ್ತೀರ್ಣವುಳ್ಳ ಈ ಉದ್ಯಾನ ಸೌಧದ ಸುತ್ತಲೂ ನೇರವಾಗಿ ಬೆಳೆದು ನಿಂತ ಪಾಲಿಯಾಲ್ತಿಯ ಪೆಂಡುಲ ಸಸ್ಯ ಮತ್ತು ನಾನಾಜಾತಿಯ ಸುಂದರವಾದ ಹೂವಿನ ಮಡಿಗಳು, ಹುಲ್ಲಿನ ಪಸಲೆಗಳನ್ನು ಅಲಂಕಾರೋದ್ಯಾನ ರಚನೆಯೊಂದಿಗೆ ನಿರ್ಮಿಸಲಾಗಿದೆ. ಸೌಧದ ಮಧ್ಯೆ ಎರಡು ಅಂಗಳದಲ್ಲಿ ಫೌಂಟನ್ ಗುಲಾಬಿ ಗಿಡಗಳನ್ನು ಬೋಗನ್‌ವಿಲ್ಯ ಗಿಡಗಳನ್ನು ಬೆಳೆಸಲಾಗಿದೆ.

ಈ ಮುಖ್ಯ ಉದ್ಯಾನಗಳಲ್ಲದೆ ಕರ್ನಾಟಕದ ನಾನಾ ಕಡೆಗಳಲ್ಲಿ ಕೆಳಕಂಡ ಉದ್ಯಾನಗಳನ್ನು ಅಭಿವೃದ್ಧಿಪಡಿಸಲಾಗಿದೆ.

**ಕೊಡಗು ಜಿಲ್ಲೆ:** ಮಡಿಕೇರಿಯ ರಾಜಾಸೀಟ್ ಉದ್ಯಾನ (ಸ್ಥಾಪನೆ: 1969-70, ವಿಸ್ತೀರ್ಣ 5 ಎಕರೆ), ಸುದರ್ಶನ ಉದ್ಯಾನ, ಫೋರ್ಟ್ ಉದ್ಯಾನ.

**ಚಿಕ್ಕಮಗಳೂರು ಜಿಲ್ಲೆ:** ಚಿಕ್ಕಮಗಳೂರಿನ ಮಹಾತ್ಮಾಗಾಂಧೀ ಉದ್ಯಾನ (1957, 4ಎಕರೆ), ಮಹಾತ್ಮಾಗಾಂಧೀ ಶತಮಾನೋತ್ಸವ ಉದ್ಯಾನ (1972, 36 ಎಕರೆ), ತರೀಕೆರೆಯ ವಿಜ್ಞಾನ್ ಇಂಡಸ್ಟ್ರೀಸ್ ಉದ್ಯಾನ ಮತ್ತು ಕೊಪ್ಪದ ಪಿ.ಜೆ. ಗುರ್ಜರ್ ಉದ್ಯಾನ.

**ಬಿಜಾಪುರ ಜಿಲ್ಲೆ:** ಬಿಜಾಪುರದಲ್ಲಿ ಗೋಳಗುಮ್ಮಟ, ಜೋಡಿ ಗುಮ್ಮಟ, ಗಗನ್ ಮಹಲ್ - ಈ ಪ್ರಾಚೀನ ಸ್ಮಾರಕಗಳ ಬಳಿ ಇರುವ ಉದ್ಯಾನಗಳು (1958, ಕ್ರಮವಾಗಿ 20, 2, 2 ಎಕರೆಗಳು). ರಾಣಿ ಬಗೀಚಾ (1942), ಸೈನಿಕರ ಶಾಲಾ ಉದ್ಯಾನ (1962) ಮತ್ತು ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು ಉದ್ಯಾನ.

**ಚಿತ್ರದುರ್ಗ ಜಿಲ್ಲೆ:** ದಾವಣಗೆರೆಯ ಭಾರತರತ್ನ ವಿಶ್ವೇಶ್ವರಯ್ಯ ಉದ್ಯಾನ ಮತ್ತು ರಾಜನಹಳ್ಳಿ ಹನುಮಂತಪ್ಪ ಮತ್ತು ಮಕ್ಕಳ ಖಾಸಗಿ ಉದ್ಯಾನ, ಹರಿಹರದ ಕಿರ್ಲೋಸ್ಕರ್ ಕಾರ್ಖಾನೆ ಉದ್ಯಾನ.

**ಧಾರವಾಡ ಜಿಲ್ಲೆ:** ಹುಬ್ಬಳ್ಳಿ-ಧಾರವಾಡದಲ್ಲಿರುವ ಮಹಾತ್ಮಾ ಗಾಂಧೀ ಶತಮಾನೋತ್ಸವ ಉದ್ಯಾನ (1969), ಕರ್ನಾಟಕ ವೈದ್ಯಕೀಯ ಕಾಲೇಜು ಉದ್ಯಾನ, ಕರ್ನಾಟಕ ವಿಶ್ವವಿದ್ಯಾಲಯದ ಉದ್ಯಾನ, ಆಜಾದ್ ಉದ್ಯಾನ ಮತ್ತು ಕಿತ್ತೂರು ಚೆನ್ನಮ್ಮ ಉದ್ಯಾನ. ಬ್ಯಾಡಗಿಯ ಪೌರಸಮಿತಿಯ ಉದ್ಯಾನ, ರಾಣೆಬೆನ್ನೂರಿನ ವಿವೇಕಾನಂದ ಉದ್ಯಾನ, ಗದಗಿನ ವೀರ ನಾರಾಯಣ ವನ, ರೋಣ ತಾಲ್ಲೂಕಿನ ಹಾಲಕೋರಿಯಲ್ಲಿನ ಖಾಸಗಿ ಉದ್ಯಾನ, ನರೇಗಲ್ಲದ ಪ್ರೌಢಶಾಲಾ ಉದ್ಯಾನ.

**ಕೋಲಾರ ಜಿಲ್ಲೆ:** ಕೋಲಾರದ ಶ್ರೀಕೃಷ್ಣ ರಾಜೇಂದ್ರ ಉದ್ಯಾನ (1940), ಕಮಲಾ ನೆಹರು ಸ್ಯಾನಿಟೋರಿಯಂ ಉದ್ಯಾನ (1959), ಮಿಷನ್ ಆಸ್ಪತ್ರೆಯ ಉದ್ಯಾನ (1910, 3 ಎಕರೆ), ನಚಿಕೇತ ನಿಲಯದ ಉದ್ಯಾನ (1955, 4 ಎಕರೆ), ನರಸಿಂಹರಾಜ ಆಸ್ಪತ್ರೆ ಉದ್ಯಾನ (1953, 2 ಎಕರೆ), ಟಿ.ಚೆನ್ನಯ್ಯ ಮಕ್ಕಳ ಉದ್ಯಾನ, ನೆಹರು ಉದ್ಯಾನ (1953, 2 ಎಕರೆ), ಮಾಲೂರಿನ ಉದ್ಯಾನ, ಬಂಗಾರಪೇಟೆಯ ಸಿಲ್ವರ್ ಜ್ಯೂಬಿಲಿ ಉದ್ಯಾನ (1902, 3 ಎಕರೆ), ಕಿಂಗ್ ಜಾರ್ಜ್ ಹಾಲ್ ಉದ್ಯಾನ, ಡಾ. ಅಂಬೇಡ್ಕರ್ ಉದ್ಯಾನ (1950, 2 ಎಕರೆ), ಮಾರಿಕುಪ್ಪಮ್ ಉದ್ಯಾನ (1968, 30 ಎಕರೆ), ಮುಳಬಾಗಿಲು ಉದ್ಯಾನ (3 ಎಕರೆ), ಶ್ರೀನಿವಾಸಪುರ ಪುರಸಭಾ ಉದ್ಯಾನ, ಮುದ್ದೇನಹಳ್ಳಿ ಸರ್ ಎಂ.ವಿಶ್ವೇಶ್ವರಯ್ಯ ಸ್ಮಾರಕ ಉದ್ಯಾನ (1970, 1 ಎಕರೆ), ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿಗಳ ಪುರಸಭಾ ಉದ್ಯಾನಗಳು.



ಕಬ್ಬನ್ ಉದ್ಯಾನ, ಬೆಂಗಳೂರು

**ಬೆಳಗಾಂವಿ ಜಿಲ್ಲೆ:** ಶಾಹಪುರದ ಶಿವಾಜಿ ಉದ್ಯಾನ (8 ಎಕರೆ) ಟಿಳಕವಾಡಿಯ ಮಹಾತ್ಮಾ ಫೂಲೆ, ಕಾಂಗ್ರೆಸ್ ವೆಲ್, ನಾಥ್‌ಪೈ ಮತ್ತು

ಪುರಸಭಾ ಕಲಾ ಮಂದಿರ ಉದ್ಯಾನಗಳು, ಸಿವಿಲ್ ಆಸ್ಪತ್ರೆಗೆ ಸೇರಿದಂತಿರುವ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನ ($2\frac{1}{2}$ ಎಕರೆ), ಕಪಿಲೇಶ್ವರ ಮಾರ್ಗದ ಬಳಿಯ ಸಾಂಬಾಜಿ ಉದ್ಯಾನ ($1\frac{3}{8}$ ಎಕರೆ), ನಿಪ್ಪಾಣಿ ನಗರ ಪಂಚಾಯಿತಿ ಉದ್ಯಾನ.

**ಹಾಸನ ಜಿಲ್ಲೆ:** ಜಿಲ್ಲಾಧಿಕಾರಿ ಕಾರ್ಯಾಲಯ ಉದ್ಯಾನ (1962-63, 2 ಎಕರೆ), ಹಾಸನ ಪುರಸಭಾ ಉದ್ಯಾನ ಸಿಲ್ವರ್ ಜೂಬ್ಲಿ ಪಾರ್ಕ್ ($2\frac{1}{2}$ ಎಕರೆ).

**ದಕ್ಷಿಣ ಕನ್ನಡ ಜಿಲ್ಲೆ:** ಮಂಗಳೂರಿನ ಟ್ಯಾಗೂರ್ ಉದ್ಯಾನ (1 ಎಕರೆ), ಪುರಸಭಾ ಉದ್ಯಾನ ($\frac{1}{2}$ ಎಕರೆ), ಗಾಂಧೀ ಉದ್ಯಾನ (1 ಎಕರೆ).

**ರಾಯಚೂರು ಜಿಲ್ಲೆ:** ರಾಯಚೂರು ಪುರಸಭಾ ಉದ್ಯಾನ (5 ಎಕರೆ), ದೇವಸುಗೂರು ಉದ್ಯಾನ (5 ಎಕರೆ), ರಾಮಪುರ ಉದ್ಯಾನ (10 ಎಕರೆ), ಗಂಗಾವತಿ ಪುರಸಭಾ ಉದ್ಯಾನ ($1\frac{1}{2}$ ಎಕರೆ), ಕೊಪ್ಪಳ ಪುರಸಭಾ ಉದ್ಯಾನ (1 ಎಕರೆ), ಹಟ್ಟಿ ಚಿನ್ನದ ಗಣಿ ಉದ್ಯಾನ (3 ಎಕರೆ), ಮುನೀರಾಬಾದಿನಲ್ಲಿ ಇಲಾಖೆಯವರು ತುಂಗಭದ್ರಾನದಿ ಎಡದಂಡೆಯ ಮೇಲೆ ಬೆಳೆಸಿರುವ 60 ಎಕರೆ ವಿಸ್ತೀರ್ಣದ ಜಪಾನ್ ಮಾದರಿ ಉದ್ಯಾನ.

**ಶಿವಮೊಗ್ಗ ಜಿಲ್ಲೆ:** ಶಿವಮೊಗ್ಗದ ಮಹಾತ್ಮಾ ಗಾಂಧೀ ಉದ್ಯಾನ (1956, 16 ಎಕರೆ), ತುಂಗಾನದಿ ಎಡದಂಡೆಯ ಮೇಲಿನ ರಾಮಣ್ಣ ಉದ್ಯಾನ (1 ಎಕರೆ), ತುಂಗಾನದಿ ಬಲದಂಡೆಯ ವಿದ್ಯಾನಗರದ ಪುರಸಭೆ ಉದ್ಯಾನ ($1\frac{1}{2}$ ಎಕರೆ), ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಉದ್ಯಾನಗಳು, ಎಡೆಹಳ್ಳಿ, ತೀರ್ಥಹಳ್ಳಿ, ನೊಣಬೂರು, ಮಂಡಗದ್ದೆ, ನೆರಟೂರು, ಹೇರಂಬಪುರ ಮತ್ತು ಬಸವಾನಿ ಗ್ರಾಮಪಂಚಾಯಿತಿ ವನಗಳು. ಹೊನ್ನಾಳಿ ಪುರಸಭಾ ಉದ್ಯಾನ ($\frac{1}{2}$ ಎಕರೆ). ಶರಾವತಿ ಪ್ರವಾಸಿ ಮಂದಿರಗಳ ಉದ್ಯಾನಗಳು, ತಲಕಳಲೆ ಅಣೆಕಟ್ಟಿನ ಉದ್ಯಾನ, ಶಿಕಾರಿಪುರದ ಪುರಸಭಾ ಉದ್ಯಾನ ($1\frac{1}{2}$ ಎಕರೆ).

**ಉತ್ತರ ಕನ್ನಡ ಜಿಲ್ಲೆ:** ಭಟ್ಕಳ ಪುರಸಭಾ ಉದ್ಯಾನ (1958, 1 ಎಕರೆ) ಸಿದ್ದಾಪುರ, ಕಾರವಾರ, ಹಳಿಯಾಳ, ಕುಮಟ ಪುರಸಭಾ ಉದ್ಯಾನಗಳು, ದಾಂಡೇಲಿಯ ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆ ಮತ್ತು ಮ್ಯಾಂಗನೀಸ್ ಗಣಿ ಉದ್ಯಾನಗಳು, ಅಂಬಿಕಾನಗರದ ಮೈಸೂರು ಪವರ್ ಕಾರ್ಪೋರೇಷನ್ ಉದ್ಯಾನ.

**ಬಳ್ಳಾರಿ ಜಿಲ್ಲೆ:** ನಾರಾಯಣರಾವ್ ಪುರಸಭಾ ಉದ್ಯಾನ (2 ಎಕರೆ), ಬಳ್ಳಾರಿ ಜಿಲ್ಲಾಧಿಕಾರಿ ಕಛೇರಿ ಉದ್ಯಾನ, ಸತ್ಯನಾರಾಯಣ ಪೇಟೆ ಉದ್ಯಾನ (4 ಎಕರೆ), ಸಂಡೂರು, ಕೊಟ್ಟೂರು, ಹಗರಿಬೊಮ್ಮನಹಳ್ಳಿ ಉದ್ಯಾನಗಳು, ಹಂಪೆಯ ಪಂಚವಟಿ ಉದ್ಯಾನ, ತುಂಗಭದ್ರಾ ಅಣೆಕಟ್ಟಿನ ಉದ್ಯಾನ, ಶ್ರೀರಾಮುಲು ಉದ್ಯಾನ (2 ಎಕರೆ), ಶಿರಗುಪ್ಪ ಪುರಸಭಾ ಮತ್ತು ಕೊಠಾರಿ ಸಕ್ಕರೆ ಕಾರ್ಖಾನೆ ಉದ್ಯಾನಗಳು.

ಕಾರಂಜಿ, ಕೃಷ್ಣರಾಜಸಾಗರ

**ಗುಲ್ಬರ್ಗ ಜಿಲ್ಲೆ:** ಗುಲ್ಬರ್ಗದ ಮಹಬೂಬ್ ಗುಲ್ಷನ್ ಉದ್ಯಾನ (30 ಎಕರೆ), ಪುಸ್ತಕ ಭಂಡಾರ, ಮಕ್ಕಳ ಕ್ಷೇಮಾಭಿವೃದ್ಧಿ ಮತ್ತು ಫಿಲ್ಟರ್‌ಬೆಡ್ ಉದ್ಯಾನಗಳು, ಗಂಗಾಪುರ, ಅಫಜಲಪುರ, ಶಾಹಬಾದ್, ಯಾದಗಿರಿ ಉದ್ಯಾನಗಳು.

**ಮಂಡ್ಯ ಜಿಲ್ಲೆ:** ಮಂಡ್ಯದ ಗಾಂಧೀ ಉದ್ಯಾನ (1942), ಕಸ್ತೂರಬಾ, ಶಿವನಂಜಪ್ಪ, ಪೌರಸಭಾ, ಜೂಬಿಲಿ, ನೀರು ಸರಬರಾಜು ಕಚೇರಿ (13 ಎಕರೆ), ಮೈಶುಗರ್ (1933-34), ಸರ್ಕಾರಿ ಆಸ್ಪತ್ರೆ (1962, 4 ಎಕರೆ) ಮತ್ತು ಜಿಲ್ಲಾಧಿಕಾರಿ ಕಛೇರಿ (1962, 3 ಎಕರೆ) ಉದ್ಯಾನಗಳು, ಪಶ್ಚಿಮವಾಹಿನಿ ಉದ್ಯಾನ (1954, 6 ಎಕರೆ), ಶ್ರೀರಂಗಪಟ್ಟಣದ ಶ್ರೀಜಯಚಾಮರಾಜೇಂದ್ರ ಉದ್ಯಾನ (1965, 34 ಎಕರೆ), ದರಿಯಾದೌಲತ್ ಉದ್ಯಾನ (50 ಎಕರೆ), ಗುಂಬಜ್ ಉದ್ಯಾನ (20 ಎಕರೆ), ಮಳವಳ್ಳಿ, ಶಿಂಷಾ, ಶಿವನಸಮುದ್ರ, ತೊರಕಾಡನಹಳ್ಳಿ ಉದ್ಯಾನಗಳು.

**ತುಮಕೂರು ಜಿಲ್ಲೆ:** ತುಮಕೂರಿನ ಪೆನ್ಸರ್ಸ್ ಪ್ಯಾರಡೈಸ್ (1956), ಕಸ್ತೂರಬಾ ($1\frac{1}{4}$ ಎಕರೆ, 1952), ತಿಲಕ್ (1957), ಗಾಂಧೀ (1969), ಆಜಾದ್ (1960), ಸಿಂಕ್ (1960), ಸುಬ್ರಹ್ಮಣ್ಯ (1970, 1 ಎಕರೆ) ಮತ್ತು ಹನುಮಂತಪುರ (1974) ಉದ್ಯಾನಗಳು, ತುರುವೇಕೆರೆ ಪುರಸಭಾ (1956) ಮತ್ತು ಸಿಮೆಂಟ್ ಕಾರ್ಖಾನೆ (1960- 2 ಎಕರೆ) ಉದ್ಯಾನಗಳು. ಕುಣಿಗಲು, ತಿಪಟೂರು ಉದ್ಯಾನಗಳು.

**ಬೀದರ್ ಜಿಲ್ಲೆ:** ಬಿದರೆ ಪುರಸಭಾ ಉದ್ಯಾನ (1964-65, 2 ಎಕರೆ), ತಲವಾಡಿ ಮಕ್ಕಳ ಉದ್ಯಾನ, ಬಿದರೆ ಕೋಟೆ ಉದ್ಯಾನ, ಸೋಲಾ ಸುಲ್ತಾನ್ ಮಸೀದಿ ಮುಂಭಾಗದ ಉದ್ಯಾನ, ಪೊಲೀಸ್ ಅಧಿಕಾರಿಗಳ ಕಛೇರಿ ಉದ್ಯಾನ, ಕರ್ನಾಟಕ ಕಾಮರ್ಸ್ ಕಾಲೇಜು, ಬಿ.ವಿ. ಭೂಮರೆಡ್ಡಿ ಕಾಲೇಜು ಉದ್ಯಾನಗಳು, ಸ್ಟೇಟ್‌ಬ್ಯಾಂಕ್ ಆಫ್ ಹೈದರಾಬಾದ್, ಜೈಲು, ಭೂಗರ್ಭ ಇಲಾಖೆ, ಹಾಬಿಸ್ಕಾಟ್ ಬಂಗಲೆ, ಜಿಲ್ಲಾಧಿಕಾರಿ ಬಂಗಲೆ, ಸಿವಿಲ್ ಆಸ್ಪತ್ರೆ, ಫಿಲ್ಟರ್ ಬೆಡ್ ಉದ್ಯಾನಗಳು. ಹುಮನಾಬಾದ, ಬಸವಕಲ್ಯಾಣ, ಭಾಲ್ಕಿ, ಸಂತಪುರ ಉದ್ಯಾನಗಳು.

**ಮೈಸೂರು ಜಿಲ್ಲೆ:** ಮೈಸೂರಿನ ಬಾಡಿಗಾರ್ಡ್, ಲಲಿತಮಹಲ್ (47 ಎಕರೆ) ಸರ್ಕಾರಿ ಅತಿಥಿಗೃಹ (50 ಎಕರೆ), ಜಲದರ್ಶಿನಿ (18 ಎಕರೆ), ಕೃಷ್ಣರಾಜೇಂದ್ರ ಆಸ್ಪತ್ರೆ, ಚೆಲುವಾಂಬ, ಮಾನಸ ಗಂಗೋತ್ರಿ, ಕ್ರಾಫರ್ಡ್‌ಹಾಲ್ ಉದ್ಯಾನಗಳು.

**ಬೆಂಗಳೂರು ಜಿಲ್ಲೆ:** ಬೆಂಗಳೂರಿನ ರಾಜ್ಯ ನ್ಯಾಯಾಲಯ, ಜೀವವಿಮೆ ಕಚೇರಿ, ಶಾಸಕರ ಭವನ, ಕುಮಾರಕೃಪ, ಸುದರ್ಶನ, ಆಕಾಶವಾಣಿ, ರಸ್ತೆ ಸಾರಿಗೆ ಕಾರ್ಯಾಲಯ, ವಿಮಾನ ಕಾರ್ಖಾನೆ, ಎಚ್.ಎಂ.ಟಿ., ಐ.ಟಿ.ಐ., ಮೈಕೊ, ಕಿರ್ಲೋಸ್ಕರ್, ಎಲ್.ಆರ್.ಡಿ.ಇ. ಉದ್ಯಾನಗಳು, ಅಶೋಕ ಹೋಟೆಲ್, ಗೋಕುಲ, ತಿಪ್ಪಗೊಂಡನಹಳ್ಳಿ ನೀರು ಸರಬರಾಜು ಕೇಂದ್ರ, ಹೆಸರುಘಟ್ಟ ಮುಂತಾದ ಉದ್ಯಾನಗಳು. ಇವಲ್ಲದೆ ನೂರಾರು ಗ್ರಾಮಗಳ, ಬಡಾವಣೆಗಳ ಮತ್ತು ದೊಡ್ಡ ದೊಡ್ಡ ಚೌಕಗಳ ಉದ್ಯಾನಗಳುಂಟು. (ಕೆ.ಟಿ.ಕೆ.)

**ಉದ್ಯಾವರ** : ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಉಡುಪಿಯಿಂದ 5ಕಿಮೀ ನೈಋತ್ಯಕ್ಕೆ ಉದ್ಯಾವರ ನದಿಯ ಉತ್ತರ ದಡದಲ್ಲಿ ಸಮುದ್ರದಂಡೆಯಲ್ಲಿರುವ ಊರು. ಉದಯಪುರ, ಉದ್ಯೇವರ ಎಂದು ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳ. ಸು.10ನೆಯ ಶತಮಾನದವರೆಗೆ ಆಳುಪರ ರಾಜಧಾನಿಯಾಗಿತ್ತು. ಇದರ ಅವಶೇಷಗಳು ಸಮೀಪದ ಬೋಳಾರುಗಡ್ಡೆ ಎಂಬಲ್ಲಿರುವುದೆಂದು ಊಹೆ. 2-3ನೆಯ ಶತಮಾನದಲ್ಲಿಯೇ ಇಲ್ಲಿನ ಬಂದರಿನ ಮೂಲಕ ಮೆಡಿಟರೇನಿಯನ್ ಪ್ರದೇಶಗಳೊಡನೆ ವ್ಯಾಪಾರ ಸಂಪರ್ಕವಿತ್ತೆಂದು ಇತಿಹಾಸಕಾರರು ಊಹಿಸಿದ್ದಾರೆ. ದಕ್ಷಿಣ ಕನ್ನಡದ ಅತಿಪ್ರಾಚೀನ ದೇವಾಲಯಗಳಲ್ಲಿ ಒಂದಾದ ಚಂಬುಕಲ್ಲು ಶಿವಾಲಯ, ಪ್ರಾಯಶಃ ಆಳುಪರ ಕಾಲದ್ದು. ಸಪ್ತಮಾತೃಕೆಯರ ಮೃಣ್ಮಯ ಮೂರ್ತಿಗಳಿರುವ ಶಕ್ತ್ಯಾಲಯ ಇಲ್ಲಿದೆ. ಬೊಮ್ಮೇಶ್ವರವೆಂಬಲ್ಲಿ ಈಶ್ವರ ಮತ್ತು ವಿಷ್ಣು ಆಲಯವೂ ಬೋಳಾರಿನಲ್ಲಿ ದ್ವಿಬಾಹುಗಣಪತಿಯ ಆಲಯ ಹಾಗೂ ಜೀರ್ಣವಾದ ಮಹಿಷಮರ್ದಿನಿ ಮತ್ತು ಶಿವಾಲಯಗಳೂ ಇವೆ. ಈ ಎಲ್ಲ ದೇವಾಲಯಗಳೂ 11ನೆಯ ಶತಮಾನಕ್ಕಿಂತ ಪ್ರಾಚೀನವಾದವು. ಇಲ್ಲಿ ಸೋದೆ ಮಠದ ಒಂದು ಶಾಖೆಯೂ ಅಣ್ಣಯ್ಯಾಚಾರ್ಯರ ಮಠವೆಂಬ ಇನ್ನೊಂದು ಮಾಧ್ವಮಠವೂ ಇವೆ. ಒಂದು ಚರ್ಚ್ ಸಹ ಇದೆ. (ಪಿ.ಜಿ.ಬಿ.)

**ಉದ್ರಿ :** ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಒಂದು ಐತಿಹಾಸಿಕ ಮತ್ತು ಸಾಂಸ್ಕೃತಿಕ ಕೇಂದ್ರ. ಸೊರಬಕ್ಕೆ ಈಶಾನ್ಯದಲ್ಲಿ 15ಕಿಮೀ ದೂರದಲ್ಲಿದೆ. ಈ ಗ್ರಾಮ ಮತ್ತು ಸುತ್ತಲಿನ ಪ್ರದೇಶ ಚಾಳುಕ್ಯರ ಕಾಲದಿಂದ ವಿಜಯನಗರ ಕಾಲದವರೆಗೂ ಜನನಿಬಿಡವಾಗಿತ್ತು. ಇಲ್ಲಿ ದೊರೆತಿರುವ ಶಾಸನಗಳು, ದೇವಾಲಯಗಳು ಹಾಗೂ ಮತ್ತಿತರ ಅವಶೇಷಗಳಿಂದ ಇದೊಂದು ಪ್ರಮುಖ ಸ್ಥಳವಾಗಿತ್ತೆಂದು ಭಾವಿಸಬಹುದು. ಶಾಸನಗಳಲ್ಲಿ ಈ ಊರನ್ನು ಪುದ್ದರೆ, ಉದ್ಧರೆ ಮತ್ತು ಉದ್ಧಾರಪುರವೆಂದು ಕರೆಯಲಾಗಿದೆ. ಹಿಂದೆ ಇದು ಬನವಾಸಿ ಮಂಡಲದ ಪ್ರಮುಖ ಸ್ಥಳಗಳಲ್ಲೊಂದಾಗಿದ್ದಿತು. ಚಾಳುಕ್ಯ ಎರಡನೆಯ ಜಗದೇಕಮಲ್ಲನ ಕಾಲದ ಶಾಸನ ಉದ್ರಿಯನ್ನು ಒಂದು ನೆಲೆವೀಡೆಂದು ಉಲ್ಲೇಖಿಸುತ್ತದೆ. 1217ರ ಸೇವುಣರ ಶಾಸನವೊಂದರಲ್ಲಿ ಈ ಸ್ಥಳವನ್ನು ಬ್ರಹ್ಮಪುರಿ ಎಂದು ಕರೆಯಲಾಗಿದೆ. ಇಲ್ಲಿ ದೊರೆತಿರುವ ಹಲವಾರು ನಿಷಧಿ ಶಾಸನಗಳಿಂದ ಹೊಯ್ಸಳರ ಕಾಲದಲ್ಲಿ ಇದೊಂದು ಜೈನ ಧರ್ಮದ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಹೊಯ್ಸಳರ ಕಾಲದಲ್ಲಿ ಇದು ಎಕ್ಕಲರಸ ಎಂಬ ಮಾಂಡಲಿಕನ ರಾಜಧಾನಿಯಾಗಿತ್ತು. ಈ ಸ್ಥಳದ ಮೇಲೆ ನಿಯಂತ್ರಣ ಸಾಧಿಸಲು ಹೊಯ್ಸಳರು ಮತ್ತು ಸೇವುಣರು ನಿರಂತರ ಹೋರಾಟ ನಡೆಸಿರುವುದಕ್ಕೆ ಇಲ್ಲಿ ದೊರೆತಿರುವ ಅನೇಕ ವೀರಗಲ್ಲುಗಳು ಸಾಕ್ಷಿಯಾಗಿವೆ. ಸಮುದ್ರ ತೀರದ ವಾಣಿಜ್ಯ ಮಾರ್ಗ ಈ ಪ್ರದೇಶದ ಮೂಲಕ ಹಾದು ಹೋಗುತ್ತಿದ್ದರಿಂದ ಅದನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳಲು ಈ ಹೋರಾಟ ನಡೆದಿರಬಹುದು.

ಇಲ್ಲಿರುವ ಈಶ್ವರ ದೇವಸ್ಥಾನ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿಂದ ಕೂಡಿದೆ. ಸುಕನಾಸಿಯ ದ್ವಾರದ ಎರಡೂ ಬದಿಯಲ್ಲೂ ಗೂಡುಗಳಿದ್ದು ಬಲಗಡೆ ಷಣ್ಮುಖನ ವಿಗ್ರಹವಿದೆ. ಸುಕನಾಸಿಯ ಬೋದಿಗೆಯ ಮೇಲೆ ಜಿನ ವಿಗ್ರಹವಿದೆ. ಮೂಲತಃ ಈ ದೇವಾಲಯ ಜಿನಾಲಯವಾಗಿರಬಹುದೆಂದು ಊಹಿಸಬಹುದು. ನವರಂಗದ ಚಾವಣಿಯಲ್ಲಿರುವ ಬೃಹತ್ ಪದ್ಮಭುವನೇಶ್ವರಿ ಶಿಲ್ಪ ಆಕರ್ಷಕವಾಗಿದೆ. 1197ರಲ್ಲಿ ಈ ದೇವಾಲಯ ನಿರ್ಮಿತವಾಗಿದೆ. ಇಲ್ಲಿರುವ ಗಣಪತಿಯ ಇನ್ನೊಂದು ದೇವಾಲಯು ಕೂಡ ಹಿಂದೆ ಜಿನಾಲಯವಾಗಿದ್ದುದಕ್ಕೆ ಆಧಾರಗಳು ದೊರೆತಿವೆ. ದೇವಾಲಯದ ಗೋಪುರ ಪಿರಮಿಡ್ಡಿನ ಆಕಾರದಲ್ಲಿದ್ದು ಅದರ ಎದುರಿಗೆ ಮೊಗಸಾಲೆಯ ಮೇಲಿನ ಒಂದು ಮುಂಚಾಚುವಿನಲ್ಲಿ ಛತ್ರಿಯ ಕೆಳಗೆ ಪೀಠಸ್ಥನಾಗಿರುವ ಜಿನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಬಸದಿಯ ಆಸುಪಾಸಿನಲ್ಲಿ ಚಾಳುಕ್ಯರ ಕಾಲದ ಈಶ್ವರ ದೇವಾಲಯ ಮತ್ತು ಲಕ್ಷ್ಮೀನಾರಾಯಣ ಗುಡಿಗಳಿವೆ.

ಈ ಗ್ರಾಮದ ಪೂರ್ವಕ್ಕೆ ವೀರಭದ್ರ ದೇವಾಲಯವಿದೆ. ಈ ದೇವಾಲಯದ ಕಟ್ಟಡ ಇತ್ತೀಚಿನದಾಗಿದ್ದರೂ ದ್ವಾರಪಾಲಕರ ವಿಗ್ರಹಗಳು 1000 ವರ್ಷದಷ್ಟು ಹಳೆಯವು. ಈ ಸ್ಥಳದ ಸಮೀಪದ ಮುಂಚೆ ಎಂಬ ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಚೈತ್ರಮಾಸದಲ್ಲಿ ಇಲ್ಲಿ ಜರುಗುವ ರಥೋತ್ಸವ ಪ್ರಸಿದ್ಧವಾದುದು. ಇಲ್ಲಿಗೆ ಸಮೀಪದ ಮಾವಳ್ಳಿಯ ಕಲ್ಲೇಶ್ವರ ದೇವಾಲಯದ ಶಿಲ್ಪ ಆಕರ್ಷಕವಾಗಿದೆ. *

**ಉನ್ನತ ಶಿಕ್ಷಣ ಮತ್ತು ಸಂಶೋಧನೆ :** ಪ್ರಿ ಯೂನಿವರ್ಸಿಟಿ ಶಿಕ್ಷಣದ ಅನಂತರ ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣವನ್ನು ಕರ್ನಾಟಕದಲ್ಲಿ ಉನ್ನತ ಶಿಕ್ಷಣವೆಂದು ಪರಿಗಣಿಸಲಾಗಿದೆ. ಎಂದರೆ ಏಳು ವರ್ಷ ಪ್ರಾಥಮಿಕ ಶಿಕ್ಷಣವೂ 3+2 ವರ್ಷ ಪ್ರೌಢಶಿಕ್ಷಣವೂ ಸೇರಿದಂತೆ ಒಟ್ಟು ಹನ್ನೆರಡು ವರ್ಷಗಳ ಶಾಲಾಶಿಕ್ಷಣದ ಅನಂತರದ ಶಿಕ್ಷಣಕ್ಕೆ ಸಾಮಾನ್ಯವಾಗಿ ಈ ಹೆಸರನ್ನು ಬಳಸಲಾಗುತ್ತದೆ. ಇದು ವಿಶ್ವವಿದ್ಯಾಲಯಗಳಲ್ಲೂ ಅದರ ಆಂಗಿಕ ಮತ್ತು ಅಂಗೀಕೃತ ಕಾಲೇಜುಗಳಲ್ಲೂ ಸ್ನಾತಕೋತ್ತರ ವಿಭಾಗ ಅಥವಾ ಕೇಂದ್ರಗಳಲ್ಲೂ ಪರಿಗಣಿತ ವಿಶ್ವವಿದ್ಯಾಲಯಗಳಲ್ಲೂ ಇತರ ವಿಶಿಷ್ಟ ಶಿಕ್ಷಣ ಸಂಸ್ಥೆಗಳಲ್ಲೂ ವ್ಯವಸ್ಥೆಗೊಂಡಿದೆ. ಬೋಧನೆ, ಸಂಶೋಧನೆ, ವಿಸ್ತರಣೆ - ಈ ಸಾಂಪ್ರದಾಯಿಕ ಅಂಶಗಳು ಇಲ್ಲಿನ ಉನ್ನತ ಶಿಕ್ಷಣದ ಕರ್ತವ್ಯಗಳಾಗಿವೆ.

ಆಧುನಿಕ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿರುವ ಉನ್ನತ ಶಿಕ್ಷಣ ವ್ಯವಸ್ಥೆ ಕರ್ನಾಟಕದಲ್ಲಿ 1853ರಲ್ಲಿ ಆರಂಭವಾಯಿತೆನ್ನಬಹುದು. ಆ ವರ್ಷ ಮೈಸೂರಿನ ಮಹಾರಾಜ ಕಾಲೇಜು ಅನಂತರ 1858ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜು ಅಸ್ತಿತ್ವಕ್ಕೆ ಬಂದವು. ಅವೆರಡೂ ಆಗ ಮದರಾಸು ವಿಶ್ವವಿದ್ಯಾಲಯದ ಅಂಗೀಕಾರ ಪಡೆದಿದ್ದವು. ಮದ್ರಾಸ್ ಸರ್ಕಾರ 1869ರಲ್ಲಿ ಮಂಗಳೂರಿನಲ್ಲಿ ಎರಡನೆಯ ದರ್ಜೆ ಕಾಲೇಜನ್ನು ಸ್ಥಾಪಿಸಿತು. 1879ರಲ್ಲಿ ಮಂಗಳೂರಿನಲ್ಲಿ ಸೇಂಟ್ ಅಲಾಸಿಯಸ್ ಕಾಲೇಜು ಮತ್ತು 1882ರಲ್ಲಿ ಬೆಂಗಳೂರಿನಲ್ಲಿ ಸೇಂಟ್ ಜೋಸೆಫ್‌ರ ಕಾಲೇಜು ಅಸ್ತಿತ್ವಕ್ಕೆ ಬಂದವು. 1902ರಲ್ಲಿ ಮೈಸೂರಿನ ಮಹಾರಾಜ ಕಾಲೇಜನ್ನು ಪ್ರಥಮ ದರ್ಜೆಗೆ ಏರಿಸಲಾಯಿತು. ಮೈಸೂರು ಸಂಸ್ಥಾನದಲ್ಲಿ ಪ್ರತ್ಯೇಕ ವಿಶ್ವವಿದ್ಯಾನಿಲಯ ಸ್ಥಾಪಿಸಲು ನಡೆಸಿದ ಪ್ರಯತ್ನದ ಫಲವಾಗಿ 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಆರಂಭವಾಯಿತು. ಅನಂತರ 1950ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೂ 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವೂ ಅಸ್ತಿತ್ವಕ್ಕೆ ಬಂದವು. ಇವುಗಳ ಅಂಗ ಕಾಲೇಜುಗಳು ಪ್ರತಿ ಜಿಲ್ಲೆಯಲ್ಲೂ ಅಸ್ತಿತ್ವಕ್ಕೆ ಬಂದವು. 1963ರಲ್ಲಿ ಹೆಬ್ಬಾಳಿನ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು.

ಹಿಂದೆ ರಾಜ್ಯದ ಸಾಮಾನ್ಯ ಶಿಕ್ಷಣದ ಮೂರು ವಿಶ್ವವಿದ್ಯಾಲಯಗಳೆಂದರೆ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳು ಪ್ರತ್ಯೇಕ ರಾಜ್ಯ ಶಾಸನಗಳಿಂದ ಸಂಘಟಿತವಾಗಿ ತಮ್ಮದೇ ಆದ ರೀತಿಯ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ಆಡಳಿತದಲ್ಲಿ ಏಕತೆಯನ್ನು ತರಲು ರಾಜ್ಯಸರ್ಕಾರ 1975ರ ಕರ್ನಾಟಕ ವಿಶ್ವವಿದ್ಯಾಲಯಗಳ ಶಾಸನ ರೀತ್ಯಾ, ತಾರೀಖು 25-09-1975 ರಂದು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ, ಮೂರು ವಿಶ್ವವಿದ್ಯಾಲಯಗಳಿಗೂ ಏಕರೂಪದ ಶಾಸನವನ್ನು ರೂಪಿಸಿತು.

ಕ್ರಮೇಣ ಸರ್ಕಾರ ತಂದ ವಿವಿಧ ಕಾಯಿದೆ ತಿದ್ದುಪಡಿಗಳಿಂದಾಗಿ ವಿಶ್ವವಿದ್ಯಾಲಯದ ಆಡಳಿತ ವ್ಯವಹಾರಗಳ ಬಗ್ಗೆ ಸರ್ಕಾರದ ನಿಯಂತ್ರಣ ಹೆಚ್ಚಿದೆ. ವಿಶ್ವವಿದ್ಯಾಲಯದ ಪ್ರಮುಖ ಅಂಗವಾಗಿದ್ದ ಸೆನೆಟ್ ರದ್ದಾಗಿದ್ದು ಶಿಕ್ಷಣ ಮಂಡಳಿಯ ಸ್ವರೂಪವೂ ತೀವ್ರವಾಗಿ ಬದಲಾಗಿದೆ. ಕುಲಪತಿಗಳ ನೇಮಕದಲ್ಲೂ ಸರ್ಕಾರ ಹೆಚ್ಚಿನ ಅಧಿಕಾರ ಹೊಂದಿದೆ. ಮುಂದೆ ವಿಶ್ವವಿದ್ಯಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭವಾದವು. ಮಂಗಳೂರು ವಿಶ್ವವಿದ್ಯಾಲಯ (1980), ಗುಲ್ಬರ್ಗಾ ವಿಶ್ವವಿದ್ಯಾಲಯ (1980), ಕುವೆಂಪು ವಿಶ್ವವಿದ್ಯಾಲಯ (1987), ಕನ್ನಡ ವಿಶ್ವವಿದ್ಯಾಲಯ (1991) - ಇವು ಪ್ರಾರಂಭವಾಗಿ ಸ್ನಾತಕೋತ್ತರ ಶಿಕ್ಷಣವು ವಿವಿಧ ಕೇಂದ್ರಗಳಲ್ಲಿ ಪ್ರಾರಂಭವಾಗಲು ಅವಕಾಶ ಕಲ್ಪಿತವಾಯಿತು. ತುಮಕೂರು, ಹಾಸನ, ಮಂಡ್ಯ, ದಾವಣಗೆರೆ, ಬಳ್ಳಾರಿ, ಬೆಳಗಾಂವಿ ಮೊದಲಾದವು ಸ್ನಾತಕೋತ್ತರ ಶಿಕ್ಷಣಗಳ ಕೇಂದ್ರಗಳನ್ನು ಪಡೆದಿವೆ. ಮೈಸೂರಿನ ಜೆ.ಎಸ್.ಎಸ್.ನಂತಹ ಶಿಕ್ಷಣ ಸಂಸ್ಥೆಗಳು ಕೆಲವು ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ನೀಡುತ್ತಿವೆ. ಚಾಮರಾಜನಗರದಲ್ಲಿ ಈ ಸಂಸ್ಥೆಯ ಸ್ನಾತಕೋತ್ತರ ಕೇಂದ್ರವಿದೆ. ಮಣಿಪಾಲ ಶಿಕ್ಷಣ ಸಂಸ್ಥೆ ಸಂಭಾವ್ಯ (ಡೀಮ್ಡ್) ವಿಶ್ವವಿದ್ಯಾಲಯದ ಸ್ಥಾನಮಾನ ಪಡೆದಿದೆ. ರಾಜ್ಯಾದ್ಯಂತ ಕಾನೂನು ಶಿಕ್ಷಣ ಕಾಲೇಜುಗಳು ಪ್ರಾರಂಭಗೊಂಡಿವೆ.

ವೈದ್ಯಕೀಯ, ದಂತವೈದ್ಯ ವಿಜ್ಞಾನ, ಆಯುರ್ವೇದ ಯುನಾನಿ, ಹೋಮಿಯೋಪತಿ, ದಾದಿವೃತ್ತಿ ಶಿಕ್ಷಣ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಶಿಕ್ಷಣ, ಅರಿವಳಿಕೆ ಹಾಗೂ ಔಷಧ ವಿಜ್ಞಾನಶಾಸ್ತ್ರದಲ್ಲಿ ಅನೇಕ ಪದವಿ ಮತ್ತು ಸ್ನಾತಕೋತ್ತರ ಕೇಂದ್ರಗಳು ಸ್ಥಾಪನೆಗೊಂಡಿವೆ. ರಾಜ್ಯದಲ್ಲಿ ಸು.258 ಸಂಸ್ಥೆಗಳು ವಿವಿಧ ಆರೋಗ್ಯ ವಿಜ್ಞಾನ ವಿಷಯಗಳಲ್ಲಿ ಶಿಕ್ಷಣ ನೀಡುತ್ತಿವೆ (2000). ಈ ಸಂಸ್ಥೆಗಳ ಪರೀಕ್ಷೆಗಳ ನಿರ್ವಹಣೆ ಮತ್ತು ಉಸ್ತುವಾರಿಗಾಗಿ ರಾಜೀವಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ (ನೋಡಿ) ಸ್ಥಾಪಿಸಲಾಗಿದೆ (1996). ಹಾಗೆಯೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಮುನ್ನೂರಕ್ಕೂ ಹೆಚ್ಚು ಎಂಜಿನಿಯರಿಂಗ್, ತಾಂತ್ರಿಕ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳನ್ನು ನಿರ್ವಹಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ನೋಡಿ) ಸ್ಥಾಪಿಸಲಾಗಿದೆ (1999). ಪಶುವೈದ್ಯ ವಿಶ್ವವಿದ್ಯಾಲಯವೂ ಸ್ಥಾಪನೆಗೊಂಡಿದೆ (2004).

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ನೋಡಿ) ಮೈಸೂರಿನಲ್ಲಿದ್ದು ಇದು ಹಿಂದೆ ಮೈಸೂರು ವಿಶ್ವವಿದ್ಯಾನಿಲಯ ನಡೆಸುತ್ತಿದ್ದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಕಾರ್ಯಭಾರವನ್ನು

| ಈ ಕೆಳಕಂಡ ಕೋಷ್ಟಕದಲ್ಲಿ ಕರ್ನಾಟಕದ ಸಾಮಾನ್ಯ ವಿಶ್ವವಿದ್ಯಾಲಯಗಳ ಅಧೀನದಲ್ಲಿರುವ ಪದವಿ ಕಾಲೇಜುಗಳ ವಿವರವನ್ನು ನೀಡಲಾಗಿದೆ **(1999-2000)** | | | | | | |
|---|---|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆ | ಸರ್ಕಾರಿ ಕಾಲೇಜುಗಳು | ಖಾಸಗಿ ಕಾಲೇಜುಗಳು | | ಕಾನೂನು ಕಾಲೇಜುಗಳು | |
| | | | ಹಣಕಾಸು ನೆರವು ಪಡೆದವು | ಹಣಕಾಸು ನೆರವಿಲ್ಲದವು | ಹಣಕಾಸು ನೆರವು ಪಡೆದವು | ಹಣಕಾಸು ನೆರವಿಲ್ಲದವು |
| | | ಬೆಂಗಳೂರು ವಿಶ್ವವಿದ್ಯಾಲಯ | | | | |
| 1. | ಬೆಂಗಳೂರು (ನಗರ) | 11 | 44 | 111 | – | 20 |
| 2. | ಬೆಂಗಳೂರು (ಗ್ರಾ.) | 07 | 04 | 07 | – | – |
| 3. | ತುಮಕೂರು | 10 | 04 | 20 | – | 02 |
| 4. | ಕೋಲಾರ | 11 | 05 | 05 | – | 01 |
| | | ಮೈಸೂರು ವಿಶ್ವವಿದ್ಯಾನಿಲಯ | | | | |
| 5. | ಮೈಸೂರು | 08 | 13 | 21 | 01 | 03 |
| 6. | ಚಾಮರಾಜನಗರ | 03 | 03 | 05 | – | – |
| 7. | ಮಂಡ್ಯ | 05 | 07 | 09 | – | 02 |
| 8. | ಹಾಸನ | 10 | 05 | 07 | 01 | 01 |
| | | ಕುವೆಂಪು ವಿಶ್ವವಿದ್ಯಾಲಯ | | | | |
| 9. | ಶಿವಮೊಗ್ಗ | 01 | 09 | 09 | 01 | – |
| 10. | ಚಿತ್ರದುರ್ಗ | 07 | 07 | 17 | – | 02 |
| 11. | ದಾವಣಗೆರೆ | 03 | 09 | 13 | – | 01 |
| 12. | ಚಿಕ್ಕಮಗಳೂರು | 07 | 04 | 04 | – | 01 |
| | | ಮಂಗಳೂರು ವಿಶ್ವವಿದ್ಯಾಲಯ | | | | |
| 13. | ದಕ್ಷಿಣ ಕನ್ನಡ | 07 | 19 | 18 | – | 04 |
| 14. | ಉಡುಪಿ | 07 | 13 | 11 | – | 02 |
| 15. | ಕೊಡಗು | 01 | 03 | 03 | – | – |
| | | ಕರ್ನಾಟಕ ವಿಶ್ವವಿದ್ಯಾಲಯ | | | | |
| 16. | ಧಾರವಾಡ | 02 | 16 | 22 | 01 | 03 |
| 17. | ಗದಗ | 04 | 09 | 09 | – | 01 |
| 18. | ಹಾವೇರಿ | 04 | 08 | 06 | – | 01 |
| 19. | ಉತ್ತರ ಕನ್ನಡ | 04 | 13 | 07 | 01 | 02 |
| 20. | ಬೆಳಗಾಂವಿ | 03 | 28 | 30 | 01 | 05 |
| 21. | ಬಿಜಾಪುರ | – | 14 | 14 | – | 02 |
| 22. | ಬಾಗಲಕೋಟೆ | 02 | 12 | 12 | – | 01 |
| | | ಗುಲ್ಬರ್ಗಾ ವಿಶ್ವವಿದ್ಯಾಲಯ | | | | |
| 23. | ಗುಲ್ಬರ್ಗ | 10 | 14 | 25 | 02 | – |
| 24. | ರಾಯಚೂರು | 04 | 05 | 06 | – | 01 |
| 25. | ಕೊಪ್ಪಳ | 04 | 03 | 02 | – | – |
| 26. | ಬಳ್ಳಾರಿ | 05 | 07 | 07 | – | 01 |
| 27. | ಬೀದರ್ | 01 | 10 | 17 | – | 01 |
| | ಒಟ್ಟು | **150** | **292** | **427** | **08** | **58** |

ವಹಿಸಿಕೊಂಡಿರುವುದಲ್ಲದೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಇತ್ತೀಚೆಗೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದೆ (2004). ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ (ನೋಡಿ), ಮೈಸೂರಿನ ಪ್ರಾದೇಶಿಕ ಕಾಲೇಜು, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ನೋಡಿ), ಇನ್‌ಸ್ಟಿಟ್ಯೂಟ್ ಆಫ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕಾನಾಮಿಕ್ ಚೇಂಜ್ ಮೊದಲಾದವು ವಿಶಿಷ್ಟ ವಿಷಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣ ನೀಡುತ್ತಿವೆ. ಸಾಫ್ಟ್‌ವೇರ್ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಕ್ರಾಂತಿಕಾರಕ ಪ್ರಗತಿಯಾಗಿದ್ದು ಅವುಗಳಲ್ಲಿ ಶಿಕ್ಷಣ ನೀಡಲು ಹಲವಾರು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಮುಂದಾಗಿವೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳೂ ಜನಸಾಮಾನ್ಯರಲ್ಲಿ ಉನ್ನತ ಶಿಕ್ಷಣದ ಪ್ರಸಾರಕಾರ್ಯವನ್ನು ನಿರ್ವಹಿಸುತ್ತಿವೆ. ಪ್ರಚಾರೋಪನ್ಯಾಸ ಮತ್ತು ಪ್ರಕಟಣೆಗಳ ಮೂಲಕ ವಿಶ್ವವಿದ್ಯಾಲಯದ ನಿಯತ ವಿದ್ಯಾರ್ಥಿಗಳು ಪಡೆಯುತ್ತಿರುವ ಜ್ಞಾನಾರ್ಜನೆಯ ಸೌಲಭ್ಯವನ್ನು ರಾಜ್ಯದ ವಿವಿಧ ಭಾಗಗಳಲ್ಲಿರುವ ಜನಸಾಮಾನ್ಯರಿಗೂ ಒದಗುವಂತೆ ಅವಕಾಶ ಕಲ್ಪಿಸಿದೆ. ಅದಕ್ಕಾಗಿ ಒಂದು ಪ್ರತ್ಯೇಕ ವಿಭಾಗವನ್ನೇ ವ್ಯವಸ್ಥೆಗೊಳಿಸಿಕೊಂಡಿವೆ.

**ಸಂಶೋಧನೆ:** ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಸಂಶೋಧನೆಗೆ ಅವಕಾಶವಿದ್ದರೂ ಅದು ಮುಖ್ಯವಾಗಿ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿಭಾಗಗಳಲ್ಲೂ ಸ್ನಾತಕೋತ್ತರ ಕೇಂದ್ರಗಳಲ್ಲೂ ನಡೆಯುತ್ತಿವೆ. ಇವುಗಳ ಜೊತೆಗೆ ಸಂಶೋಧನೆಗೆಂದೇ ಮೀಸಲಾಗಿರುವ ಸಂಸ್ಥೆಗಳೂ ವಿಶಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿವೆ. ಬೆಂಗಳೂರಿನ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶಿಷ್ಟ ಕ್ಷೇತ್ರಗಳಲ್ಲಿ ಶಿಕ್ಷಣವೀಯುವುದರ ಜೊತೆಗೆ ಉದ್ಯೋಗ ಮತ್ತು ರಕ್ಷಣೆಯ ಕಾರ್ಯಗಳಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಕುರಿತು ಫಲದಾಯಕವಾದ ಸಂಶೋಧನೆ ನಡೆಸುತ್ತಿದೆ. ವಿವಿಧ ಉದ್ಯೋಗಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಿಡಿಸಿಕೊಡುವುದರಲ್ಲೂ ಇದು ಗಣನೀಯ ಪಾತ್ರ ನಿರ್ವಹಿಸುತ್ತಿದೆ. ಭಾರತೀಯ ಉದ್ಯಮಗಳೂ ರಕ್ಷಣಾಪಡೆಗಳೂ ಈ ಸಂಸ್ಥೆಯಿಂದ ಅನೇಕ ನೂತನ ವಿಧಾನಗಳನ್ನು ಪಡೆದುಕೊಂಡು ಕಾರ್ಯಕ್ಷೇತ್ರದಲ್ಲಿ ಬಳಸಿಕೊಳ್ಳುತ್ತಿವೆ. ಇದರಂತೆ ದಿವಂಗತ ಸರ್.ಸಿ.ವಿ. ರಾಮನ್ ಬೆಂಗಳೂರಿನಲ್ಲಿ ಸ್ಥಾಪಿಸಿರುವ ರಾಮನ್ ಸಂಶೋಧನಾ ಸಂಸ್ಥೆಯೂ ಭೌತಶಾಸ್ತ್ರದ ಸಂಶೋಧನೆಗಳಲ್ಲಿ ನಿರತವಾಗಿದೆ. ಔದ್ಯೋಗಿಕ ಮತ್ತು ವೈಜ್ಞಾನಿಕ ಸಂಶೋಧನ ಮಂಡಳಿಯ ನೇತೃತ್ವದಲ್ಲಿ ಏರ್ಪಟ್ಟಿರುವ ಎರಡು ಸಂಶೋಧನ ಸಂಸ್ಥೆಗಳು ಕರ್ನಾಟಕದಲ್ಲಿವೆ. ಮೈಸೂರಿನ ಕೇಂದ್ರ ಆಹಾರ ಸಂಶೋಧನ ಸಂಸ್ಥೆ ಜನತೆಯ ಹಾಗೂ ಸೈನ್ಯದ ಆಹಾರ ಸಮಸ್ಯೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸುತ್ತದೆ. ಇದು ಭಾರತದ ಅನೇಕ ಕಡೆ ತನ್ನ ಪ್ರಾದೇಶಿಕ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದೆ. ಆಹಾರ ತಯಾರಿಕೆಗೆ ಸಂಬಂಧಿಸಿದಂತೆ ಇದು ರೂಪಿಸಿದ ಅನೇಕ ವಿಧಾನಗಳು ಆಗಲೇ ವಾಣಿಜ್ಯ ಕ್ಷೇತ್ರದಲ್ಲಿ ಪ್ರಚಾರಕ್ಕೆ ಬಂದಿವೆ. ಬೆಂಗಳೂರಿನ ರಾಷ್ಟ್ರೀಯ ವಾಯುಯಾನ ಸಂಶೋಧನ ಸಂಸ್ಥೆಯೂ ವಿಮಾನಗಳ ವಿನ್ಯಾಸ ಮತ್ತು ಚಲನೆಗೆ ಸಂಬಂಧಿಸಿದಂಥ ಹಲವು ಪ್ರಧಾನ ಸಂಶೋಧನೆಗಳನ್ನು ನಡೆಸಿದೆ.

ಬೆಂಗಳೂರು ಮತ್ತು ಧಾರವಾಡದ ಕೃಷಿ ವಿಶ್ವವಿದ್ಯಾಲಯಗಳು ವ್ಯವಸಾಯ ಮತ್ತು ವ್ಯವಸಾಯೋದ್ಯಮಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿವೆ. ಬತ್ತ, ಜೋಳ, ರಾಗಿ, ಹತ್ತಿ ಮುಂತಾದವುಗಳ ನೂತನ ತಳಿಗಳ ನಿರ್ಮಾಣದ ಮೂಲಕ ರಾಜ್ಯದ ವ್ಯವಸಾಯದ ಪ್ರಗತಿಗೆ ಸಹಾಯ ಮಾಡಿವೆ. ಇವು ಹೆಬ್ಬಾಳ, ಮಂಡ್ಯ, ಮೂಡಿಗೆರೆ, ಧಾರವಾಡ, ರಾಯಚೂರು- ಈ ಸ್ಥಳಗಳಲ್ಲಿ ಪ್ರಾದೇಶಿಕ ಸಂಶೋಧನ ಕೇಂದ್ರಗಳನ್ನು ಹೊಂದಿವೆ. ಬೆಂಗಳೂರಿನ ಆಗ್ನೇಯದಲ್ಲಿ ಹೊಸೂರು ರಸ್ತೆಯ ಬಳಿ ಇರುವ ರಾಷ್ಟ್ರೀಯ ಕ್ಷೀರೋದ್ಯಮಕ್ಕೆ ಸಂಬಂಧಿಸಿದ ಸ್ನಾತಕ ಮತ್ತು ಸ್ನಾತಕೋತ್ತರ ತರಗತಿಗಳನ್ನು ನಡೆಸುವುದರ ಜೊತೆಗೆ ಕ್ಷೀರೋದ್ಯಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಅದು ಹರಿಯಾಣದ ಕರ್ನಾಲ್‍ನಲ್ಲಿರುವ ಕ್ಷೀರೋದ್ಯಮ ಸಂಶೋಧನ ಸಂಸ್ಥೆಯ ಅಂಗವಾಗಿ ನಡೆದುಕೊಂಡುಬರುತ್ತಿದೆ (ನೋಡಿ: ಆಡುಗೋಡಿ ಕ್ಷೀರೋದ್ಯಮ ಸಂಶೋಧನ ಕೇಂದ್ರ).

**ಇತಿಹಾಸ:** ಪ್ರಾಚೀನ ಕರ್ನಾಟಕದಲ್ಲಿ ಉನ್ನತ ಶಿಕ್ಷಣಕ್ಕೆ ವ್ಯಾಪಕವಾದ ವ್ಯವಸ್ಥೆಯಿತ್ತು. ಕ್ರಿ.ಪೂ.4ನೆಯ ಶತಮಾನದ ಕೊನೆಯಲ್ಲಿ ಇಲ್ಲಿಗೆ ಆಗಮಿಸಿದ ಚಂದ್ರಗುಪ್ತ ಮೌರ್ಯ ಮತ್ತು ಅವನ ಗುರು ಭದ್ರಬಾಹುವಿನೊಡನೆ ಜೈನಧರ್ಮವೂ ಜೈನಸಂಸ್ಥೆಗಳೂ ಆಗಮಿಸಿದುವು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ಜೈನಬಸದಿಗಳು ಆರಂಭವಾಗಿ ಮೋಕ್ಷಸಾಧನೆಗೆ ನಂಬಿಕೆ, ಭಕ್ತಿ, ಪೂಜೆ ಪುನಸ್ಕಾರಗಳಂತೆ ಸುಜ್ಞಾನವೂ ಅಗತ್ಯವೆಂದು ಸಾರಿ ಉನ್ನತ ಶಿಕ್ಷಣಕ್ಕೆ ಧಾರ್ಮಿಕ ಮನ್ನಣೆಯನ್ನೂ ಪ್ರೋತ್ಸಾಹವನ್ನೂ ನೀಡಿದುವು. ಅಶೋಕನ ಕಾಲದಲ್ಲಿ ಕರ್ನಾಟಕಕ್ಕೆ ಬೌದ್ಧ ಧರ್ಮದೊಡನೆ ಸಂಘಾರಾಮಗಳೂ ವಿಹಾರಗಳೂ ಆಗಮಿಸಿ ವ್ಯವಸ್ಥಿತ ರೀತಿಯ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದುವು. ಕ್ರಿಸ್ತಶಕದ ಆರಂಭದ ವೇಳೆಗೆ ದೇಶದ ಅನೇಕ ಕಡೆ ಬೌದ್ಧ ಮಠಗಳೂ ವಿಹಾರಗಳೂ ಏರ್ಪಟ್ಟವು. ಕ್ರಿ.ಶ. ಮೂರನೆಯ ಶತಮಾನದಲ್ಲಿ ಚುಟುಕುಲದ ಶಿವಸ್ಕಂದ ನಾಗಶ್ರೀ ಬನವಾಸಿಯಲ್ಲಿ ಒಂದು ಬೌದ್ಧವಿಹಾರವನ್ನು ಸ್ಥಾಪಿಸಿದ ವಿಷಯ ಅಲ್ಲಿನ ಮಧುಕೇಶ್ವರ ದೇವಾಲಯದ ನಾಗಶಿಲೆಯ ಶಾಸನವೊಂದರಿಂದ ತಿಳಿದುಬರುತ್ತದೆ. ನಮಗೆ ದೊರೆತಿರುವ ಸಾಕ್ಷ್ಯಾಧಾರಗಳ ಪ್ರಕಾರ ಇದು ಕರ್ನಾಟಕದಲ್ಲಿ ಮೊಟ್ಟ ಮೊದಲು ಆರಂಭವಾದ ಉನ್ನತ ಶಿಕ್ಷಣ ಸಂಸ್ಥೆ. ಜೈನ ಬೌದ್ಧ ಧರ್ಮಗಳು ಆರಂಭಿಸಿದ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳು ಇಲ್ಲಿ ಪೌರಾಣಿಕ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಗುರುಕುಲ ಮತ್ತು ಆಶ್ರಮ ಶಿಕ್ಷಣ ಪದ್ಧತಿಗಳ ಮೇಲೆ ಪರಿಣಾಮ ಬೀರಿ ಶಿಕ್ಷಣಕ್ಕೆ ಸಂಘ ಸಂಸ್ಥೆಗಳ ನಿಯಂತ್ರಣ ಆರಂಭವಾಯಿತು. ಅವುಗಳಲ್ಲಿ ಘಟಿಕ ಎಂಬುವು ಅತ್ಯಂತ ಪ್ರಾಚೀನತಮ ಸಂಸ್ಥೆಗಳು. ಕದಂಬ ಮಯೂರಶರ್ಮ ಉನ್ನತ ಶಿಕ್ಷಣದ ಪ್ರೇಮಿಯಾಗಿದ್ದು ಅಂದು ಕಾಂಚೀಪುರದಲ್ಲಿದ್ದ ಘಟಿಕಾಲಯದ ಮಾದರಿಯಲ್ಲಿ ತನ್ನ ರಾಜ್ಯದಲ್ಲೂ ಘಟಿಕಗಳನ್ನು ಸ್ಥಾಪಿಸಿದ್ದ ಎಂದು ಕೆಲವರ ಊಹೆ. ನಾಗಾಯಿ, ಹೆಂಜಾರಪುರ, ಕಾಡಿಯೂರು, ಕುಕ್ಕೂರು, ಮೋರಿಗೆರೆ, ರಾಯಬಾಗ್ ಮುಂತಾದೆಡೆ ಖ್ಯಾತಿಪಡೆದ ಘಟಿಕಾಲಯಗಳು ಬೇರೆ ಬೇರೆ ಕಾಲಗಳಲ್ಲಿ ಅಸ್ತಿತ್ವದಲ್ಲಿದ್ದವು. ಅಲ್ಲಿ ಶಿಕ್ಷಣ ಮುಗಿಸಿದವರಿಗೆ, ಸಮಾರಂಭವೊಂದನ್ನು ನಡೆಸಿ ಘಟಿಕಸಾಹಸ ಎಂಬ ಪ್ರಶಸ್ತಿ ನೀಡುತ್ತಿದ್ದರು.

ಘಟಿಕಗಳಂತೆ ಅಗ್ರಹಾರಗಳೂ ಬ್ರಹ್ಮಪುರಿಗಳೂ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದವು. ಅವು ಬ್ರಾಹ್ಮಣಪಂಡಿತರ ವಸತಿಗಳಾಗಿದ್ದು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಒದಗಿಸುತ್ತಿದ್ದವು. ತಾಳಗುಂದ, ಬಾದಾಮಿ, ಉಮ್ಮಚಿಗೆ, ದೇಗಾಂವಿ, ಕಾಡಿಯೂರು, ಸರ್ವಜ್ಞಪುರ ಮುಂತಾದ ಅಗ್ರಹಾರಗಳೂ ಬಳ್ಳಿಗಾವೆ, ತಲಕಾಡು, ವಿಕ್ರಮಪುರ ಮುಂತಾದ ಬ್ರಹ್ಮಪುರಿಗಳೂ ಉನ್ನತ ಶಿಕ್ಷಣದ ಪ್ರಸಿದ್ಧ ಕೇಂದ್ರಗಳಾಗಿದ್ದುವು.

ಹತ್ತನೆಯ ಶತಮಾನದ ವೇಳೆಗೆ ಬೌದ್ಧವಿಹಾರಗಳ ಮಾದರಿಯಲ್ಲಿ ವ್ಯವಸ್ಥೆಗೊಂಡ ಹಿಂದು ಮಠಗಳು ವೈವಿಧ್ಯಮಯವೆನ್ನಬಹುದಾದ ರೀತಿಯಲ್ಲಿ ಉನ್ನತ ಶಿಕ್ಷಣ ಕೊಡುತ್ತಿದ್ದುವು. ಕೋಡಿಮಠ, ನಾಗಾಯಿಮಠ, ಊರೂರಿಗೂ ವ್ಯಾಪಿಸಿದ್ದ ವೀರಶೈವ ಮಠಗಳು ಇವೆಲ್ಲ ಉನ್ನತ ಶಿಕ್ಷಣವನ್ನು ಪ್ರಸಾರ ಮಾಡುತ್ತಿದ್ದವು.

ಹತ್ತನೆಯ ಶತಮಾನದ ಸುಮಾರಿಗೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ದೇವಾಲಯದ ವಿದ್ಯಾಪೀಠಗಳು ಅನೇಕ ಸ್ಥಳಗಳಲ್ಲಿ ಅಸ್ತಿತ್ವಕ್ಕೆ ಬಂದುವು. ಅದುತನಕ ಸಂಸ್ಕೃತ ಉನ್ನತ ಶಿಕ್ಷಣದಲ್ಲಿ ಬೋಧನ ಮಾಧ್ಯಮವಾಗಿತ್ತು. ಈಗ ಕನ್ನಡವೂ ಆ ಕಾರ್ಯಕ್ಕೆ ಬಳಕೆಯಾಗುವುದು ಆರಂಭವಾಯಿತು. ಆ ಸುಮಾರಿಗೆ ಕನ್ನಡದಲ್ಲಿ ಸಾಹಿತ್ಯಿಕ, ಶಾಸ್ತ್ರೀಯ ಮತ್ತು ಇತರ ಗ್ರಂಥಗಳೂ ರಚನೆಯಾಗಿ ಅವುಗಳ ಅಧ್ಯಯನವೂ ನಡೆಯುತ್ತಿತ್ತು. ಸಾಲೋಟಗಿ, ಹರಿಹರದ ಹರಿಹರೇಶ್ವರ ದೇವಾಲಯ, ತಾಳಗುಂದದ ಪ್ರಣವೇಶ್ವರ ದೇವಾಲಯ, ಮನಗೋಳಿಯ ವ್ಯಾಕರಣ ವಿದ್ಯಾಪೀಠ, ಹೆಬ್ಬಾಳಿನ ಬುಜಬ್ಬೇಶ್ವರ ದೇವಾಲಯ, ಜಟಂಗ ರಾಮೇಶ್ವರದ ವಿದ್ಯಾಪೀಠ, ಬಿಜಾಪುರದ ಮೀಮಾಂಸೆ ವಿದ್ಯಾಪೀಠ, ಕೂಡಲ ಸಂಗಮದೇವಾಲಯದ ವಿದ್ಯಾಪೀಠ - ಇವೆಲ್ಲ ಪ್ರಸಿದ್ಧ ಉನ್ನತ ಶಿಕ್ಷಣ ಕೇಂದ್ರಗಳಾಗಿದ್ದವು. ಸಾಮಾನ್ಯವಾಗಿ ಪಠ್ಯಕ್ರಮದಲ್ಲಿ ವ್ಯಾಕರಣ, ಪುರಾಣ, ವೇದ, ಆಗಮ, ಕಾವ್ಯ, ನಾಟಕ ಮುಂತಾದುವು ಸೇರಿದ್ದುವು. ಆದರೆ ಒಂದೊಂದು ಕೇಂದ್ರವೂ ತನ್ನದೇ ಆದ ವಿಶೇಷ ವಿಷಯದಲ್ಲಿ ಶಿಕ್ಷಣವೀಯಲು ಹೆಸರಾಗಿತ್ತು. ಕೋಡಿಮಠದಲ್ಲಿ ಷಡ್ದರ್ಶನಗಳೂ ಕುಪ್ಪತ್ತೂರು ಮಠದಲ್ಲಿ ವಾತ್ಸಾಯನನ ಕಾಮಸೂತ್ರವೂ ವಿಶಿಷ್ಟ ಅಧ್ಯಯನ ವಿಷಯಗಳಾಗಿದ್ದುವು. ಸರ್ವಜ್ಞಪುರ ಭಾಷಾಶಾಸ್ತ್ರದಲ್ಲೂ ಉಮ್ಮಚಿಗೆ ವ್ಯಾಕರಣ, ಛಂದಸ್ಸು, ಕಾವ್ಯರಚನೆ - ಇವುಗಳಲ್ಲೂ ವಿಶೇಷ ಶಿಕ್ಷಣ ನೀಡುತ್ತಿದ್ದುವು. ನಾಗಾಯಿಮಠ ಮನುಧರ್ಮಶಾಸ್ತ್ರ, ಶುಕ್ರಶಾಸ್ತ್ರ ಮತ್ತು ವ್ಯಾಸಕೃತಿಗಳ ಬೋಧನೆಗೆ ಹೆಸರುಗಳಿಸಿತ್ತು.

12-13ನೆಯ ಶತಮಾನಗಳಲ್ಲಿ ಆರಂಭವಾದ ಮುಸಲ್ಮಾನರ ದಾಳಿಯಿಂದ ಭಾರತದ ಇತರೆಡೆಗಳಂತೆ ಕರ್ನಾಟಕದಲ್ಲೂ ಉನ್ನತ ಶಿಕ್ಷಣಕ್ಕೆ ಧಕ್ಕೆಯೊದಗಿತು. ಅವರ ದಾಳಿಗೆ ಸಿಕ್ಕಿದ ದೇವಾಲಯದ ವಿದ್ಯಾಪೀಠಗಳು ಮುಚ್ಚಿಹೋದವು. ಅಗ್ರಹಾರ, ಬ್ರಹ್ಮಪುರಿ ಮುಂತಾದ ಇತರ ಉನ್ನತ ವಿದ್ಯಾವಸತಿಗಳು ಹಿಂದಿನ ಪ್ರೋತ್ಸಾಹವಿಲ್ಲದೆ ಹಿಂಬದಿಗೆ ಬಿದ್ದುವು. ನಾಡಿನ ಎಲ್ಲೋ ಕೆಲವೆಡೆ ದಾಳಿಗೆ ಸಿಕ್ಕದೆ ಉಳಿದುಕೊಂಡಿದ್ದ ಹಲವು ಮಠಗಳು ತಮ್ಮ ವಿದ್ಯಾಪ್ರಸಾರವನ್ನು ಹಾಗೂ ಹೀಗೂ ಕೆಲಕಾಲ ಮುಂದುವರಿಸಿದುವು. ವಿಜಯನಗರ ಸ್ಥಾಪನೆಯಾದ ಮೇಲೆ ಮುಖ್ಯನಗರಗಳಲ್ಲಿ ಮತ್ತೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹವೇನೋ ದೊರೆಯಿತು. ಆದರೆ ಅದರ ಪತನಾನಂತರ ಸಣ್ಣಪುಟ್ಟ ಪಾಳೆಯಪಟ್ಟುಗಳು ಏರ್ಪಟ್ಟು ನಾಡು ನಿತ್ಯಕದನಗಳ ಬೀಡಾಗಿ ವ್ಯವಸ್ಥಿತ ರೀತಿಯಲ್ಲಿ ಶಿಕ್ಷಣ ಪ್ರಸಾರ ಇಲ್ಲವಾಯಿತು. ಮುಸಲ್ಮಾನರು

ಆಕ್ರಮಿಸಿದ ಪ್ರದೇಶಗಳಲ್ಲಿ ತಮ್ಮವರಿಗಾಗಿ ಮದ್ರಸಗಳೆಂಬ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಹದಿನಾಲ್ಕನೆಯ ಶತಮಾನದ ಮಧ್ಯಭಾಗದ ವೇಳೆಗೆ ಉತ್ತರ ಕರ್ನಾಟಕದಲ್ಲಿ ಅವು ಅಸ್ತಿತ್ವಕ್ಕೆ ಬಂದುವು. ಮಸೀದಿಗಳ ಅಂಗವಾಗಿ ಏರ್ಪಟ್ಟಿದ್ದ ಆ ಸಂಸ್ಥೆಗಳಲ್ಲಿ ಮುಸ್ಲಿಂ ಧರ್ಮಗ್ರಂಥಗಳನ್ನು ಬೋಧಿಸುತ್ತಿದ್ದರು. ಹೊನ್ನಾವರ ಪ್ರದೇಶದಲ್ಲಿದ್ದ ಕೆಲವು ಸಂಸ್ಥೆಗಳನ್ನು ಅಲ್ಲಿ ಸಂಚರಿಸುತ್ತಿದ್ದ ಇಬ್ನ ಬತೂತ ಕೊಂಡಾಡಿರುವನು. ಬಹಮನೀ ಅರಸರು ಉನ್ನತ ಶಿಕ್ಷಣದ ಪ್ರಚಾರದಲ್ಲಿ ತುಂಬ ಆಸಕ್ತಿ ವಹಿಸಿದ್ದರು. ಗುಲ್ಬರ್ಗ, ಬಿದರೆ ಮುಂತಾದೆಡೆ ಸ್ಥಾಪಿಸಿದ್ದ ಸಂಸ್ಥೆಗಳು ಪ್ರಸಿದ್ಧಿ ಪಡೆದಿದ್ದುವು. 15ನೆಯ ಶತಮಾನದ ಕೊನೆಯಲ್ಲಿ ಆ ರಾಜ್ಯದ ಮಂತ್ರಿಯಾಗಿದ್ದ ಮಹಮ್ಮದ್ ಗವಾನ್ ಬಿದರೆಯಲ್ಲಿ ವಿದ್ಯಾಲಯವೊಂದನ್ನು ಕಟ್ಟಿಸಿ ಧರ್ಮಶಾಸ್ತ್ರಗಳ ಜೊತೆಗೆ ಲೌಕಿಕ ವಿದ್ಯೆಗಳ ಬೋಧನೆಗೂ ವ್ಯವಸ್ಥೆಗೊಳಿಸಿದ. ಅಲ್ಲಿನ ಗ್ರಂಥಾಲಯಕ್ಕೆ ದೇಶವಿದೇಶಗಳಿಂದ ಅಮೂಲ್ಯ ಕೃತಿಗಳನ್ನು ತರಿಸಿ ಒದಗಿಸಿದ್ದ. ಅನಂತರ ಅಧಿಕಾರಕ್ಕೆ ಬಂದ ಆದಿಲ್ ಷಾಹೀ ಅರಸರು ಬಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪ್ರಾಥಮಿಕ ಸಾರ್ವತ್ರಿಕ ಶಿಕ್ಷಣಕ್ಕಾಗಿ ಮಕ್ತಾಬ್‌ಗಳೆಂದು ಶಾಲೆಗಳನ್ನು ಆರಂಭಿಸಿ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬರುವ ಅವಕಾಶ ಕಲ್ಪಿಸಿದರು. ಅರಬ್ಬೀ ಮತ್ತು ಪಾರಸೀ ಭಾಷೆಗಳ ವ್ಯಾಸಂಗಕ್ಕೂ ಶಿಲ್ಪ, ವೈದ್ಯ ಮುಂತಾದ ವೃತ್ತಿಶಿಕ್ಷಣಕ್ಕೂ ಪ್ರೋತ್ಸಾಹವಿತ್ತರು. ಕರ್ನಾಟಕದಲ್ಲಿ ಮುಸಲ್ಮಾನ ಆಳರಸರು ತಮ್ಮ ಮತದವರ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹನೀಡಿದ್ದರೂ ದೇಶೀಯ ಶಿಕ್ಷಣದ ಪುನರುಜ್ಜೀವನದ ಕಡೆಗೆ ಆಸಕ್ತಿ ತೋರಲಿಲ್ಲ. ಅಲ್ಲದೆ, ರಾಜಾಸ್ಥಾನದಲ್ಲಿ ಪುರಸ್ಕಾರವಿಲ್ಲದೆ ಜನತೆಗೂ ಅದರಲ್ಲಿ ಆಸಕ್ತಿ ತಪ್ಪಿತ್ತು. ಮೈಸೂರಿನ ಒಡೆಯರ ಕಾಲದಲ್ಲಿ ಅವರ ಆಡಳಿತ ಕ್ಷೇತ್ರದಲ್ಲೂ ರಾಜಧಾನಿಯಲ್ಲೂ ಸಂಗೀತ, ಶಾಸ್ತ್ರ, ಸಾಹಿತ್ಯ ಮುಂತಾದವಕ್ಕೆ ಪ್ರೋತ್ಸಾಹವನ್ನು ನೀಡಿದ್ದರು. 18ನೆಯ ಶತಮಾನದ ಆಡಳಿತ ಹೈದರ್ ಮತ್ತು ಅನಂತರ ಅವನ ಮಗ ಟಿಪ್ಪುವಿನ ಕೈಸೇರಿದಾಗ ಆ ಪ್ರೋತ್ಸಾಹ ಇಲ್ಲವಾಯಿತು. ಒಟ್ಟಿನಲ್ಲಿ ಸುಮಾರು ಎರಡು ಸಹಸ್ರ ವರ್ಷಗಳಿಂದ ಬೆಳೆದು ಬಂದಿದ್ದ ಉನ್ನತ ಶಿಕ್ಷಣದ ದೇಶೀಯ ಸಂಪ್ರದಾಯ ಕ್ರಮಕ್ರಮವಾಗಿ ಕುಂದುತ್ತ ಬಂದು ಮುಂದೆ ತಲೆಯೆತ್ತಲು ಅವಕಾಶವಿಲ್ಲವಾಯಿತು. (ಎನ್.ಎಸ್.ವಿ.)

**ಉಪಾಧ್ಯೆ, ಆ.ನೇ. :** 1906-75. ಸಂಸ್ಕೃತ, ಪ್ರಾಕೃತ, ಕನ್ನಡ, ಮರಾಠಿ, ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದ ಅಂತಾರಾಷ್ಟ್ರೀಯ ಖ್ಯಾತ ವಿದ್ವಾಂಸರು. ಇವರ ಪೂರ್ಣ ಹೆಸರು ಆದಿನಾಥ ನೇಮಿನಾಥ ಉಪಾಧ್ಯೆ. ಬೆಳಗಾಂವಿ ಜಿಲ್ಲೆಯ ಸದಲಗಿ ಗ್ರಾಮದಲ್ಲಿ 1906 ಫೆಬ್ರವರಿ 6ರಂದು ಜನಿಸಿದ ಇವರು ಬೆಳಗಾಂವಿಯಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದರು. ಸಂಸ್ಕೃತ ಪ್ರಾಕೃತ ಅರ್ಧಮಾಗಧೀ ಭಾಷೆ ಮತ್ತು ಸಾಹಿತ್ಯವನ್ನು ವ್ಯಾಸಂಗದ ವಿಷಯವನ್ನಾಗಿ ಆರಿಸಿಕೊಂಡು ಕೊಲ್ಹಾಪುರದ ರಾಜಾರಾಮ್ ಕಾಲೇಜು ಮತ್ತು ಸಾಂಗಲಿಯ ವಿಲಿಂಗ್‌ಡನ್ ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿ ಪಡೆದರು (1928). ಅನಂತರ ಪುಣೆಯ ಭಂಡಾರ್‌ಕರ್ ಸಂಸ್ಥೆಯಲ್ಲಿ ಕಲಿತು ಉನ್ನತ ಶ್ರೇಣಿಯಲ್ಲಿ ಎಂ.ಎ. ಪದವಿ ಪಡೆದರು. ಈ ಅವಧಿಯಲ್ಲಿ ವಿ.ಎಸ್. ಸುಕ್ತಂಕರ್, ಪಿ.ಎಲ್.ವೈದ್ಯ, ಎಸ್.ಕೆ. ಬೆಳವಲಕರ್ ಮೊದಲಾದ ಹೆಸರಾಂತ ವಿದ್ವಾಂಸರ ಉಪನ್ಯಾಸಗಳನ್ನು ಕೇಳಿ ಅವರಿಂದ ಪ್ರಭಾವಿತ ರಾದರು. ಕೊಲ್ಹಾಪುರದ ರಾಜಾರಾಮ್ ಕಾಲೇಜಿನಲ್ಲಿ ಅರ್ಧಮಾಗಧೀ ಪ್ರಾಕೃತ ವಿಭಾಗದ ಅಧ್ಯಾಪಕರಾಗಿ ನೇಮಕಗೊಂಡು (1930) ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಉಪಾಧ್ಯೆ ಅವರು ಮುಂದೆ ಮೂರೇ ವರ್ಷಕ್ಕೆ ಪ್ರಾಧ್ಯಾಪಕರಾದರು. 1939ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿಯನ್ನು ಪಡೆದರು. ಅದೇ ವಿಶ್ವವಿದ್ಯಾನಿಲಯದ ಸ್ಪ್ರಿಂಜರ್ ಸಂಶೋಧನ ಶಿಷ್ಯವೃತ್ತಿಯನ್ನು ಪಡೆದರು (1941-43). ರಾಜಾರಾಮ್ ಕಾಲೇಜಿನಲ್ಲಿ ಸುಮಾರು 33 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ನಿವೃತ್ತಿಯ ಅನಂತರ ಅದೇ ಕಾಲೇಜಿನಲ್ಲಿ ಯು.ಜಿ.ಸಿ. ಸಂಶೋಧನಾ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು. ಅನಂತರ ಇವರು ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಸಂಸ್ಥಾಪಕ ಪ್ರಾಧ್ಯಾಪಕರಾಗಿಯೂ ಮತ್ತು ಆ ವಿಭಾಗದ ಮುಖ್ಯಸ್ಥರೂ ಆಗಿದ್ದರು (1971-75).

ಬೋಧನೆ, ಸಂಶೋಧನೆ ಮತ್ತು ಪ್ರಕಟಣೆ- ಇವು ಉಪಾಧ್ಯೆ ಅವರ ಕಾರ್ಯಕ್ಷೇತ್ರ. ಈ ಕ್ಷೇತ್ರದಲ್ಲಿ ಇವರು ಶ್ರದ್ಧಾಪೂರ್ವಕವಾದ ದುಡಿಮೆಯನ್ನು ಮಾಡಿದ್ದಾರೆ. ತಮ್ಮ 23ನೆಯ ವಯಸ್ಸಿನಲ್ಲಿಯೇ ಬರೆವಣಿಗೆಯನ್ನು ಆರಂಭಿಸಿದ ಇವರು ಸುಮಾರು 150 ವಿದ್ವತ್ಪೂರ್ಣವಾದ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಗ್ರಂಥಸಂಪಾದನಾ ಕಾರ್ಯವನ್ನು ಒಂದು ಕಾಯಕ ಎಂದು ನಂಬಿ ಬಂದಿದ್ದ ಉಪಾಧ್ಯೆ ಸುಮಾರು

ಇಪ್ಪತ್ತೈದಕ್ಕೂ ಮೀರಿದ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಗ್ರಂಥ'ಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಪ್ರತಿಯೊಂದು ಸಂಪಾದಿತ ಗ್ರಂಥ'ಕ್ಕೂ ಪಾಂಡಿತ್ಯಪೂರ್ಣವಾದ ದೀರ್ಘಪೀಠಿಕೆ ಬರೆಯುವುದು ಇವರ ವೈಶಿಷ್ಟ್ಯ. ಇವರು ಸಂಪಾದಿಸಿರುವ ಕೆಲವು ಮುಖ್ಯ ಗ್ರಂಥ'ಗಳಿವು - ಪ್ರವಚನಸಾರ (1935), ಪರಮಾತ್ಮ ಪ್ರಕಾಶ (1936), ವರಾಂಗ ಚರಿತೆ (1936), ಕಂಸವಹೋ (1940), ಬೃಹತ್ ಕಥಾಕೋಶ (1943), ತಿಲೋಯಪಣ್ಣತ್ತಿ (1951), ಕುವಲಯಮಾಲಾ (1959-70), ಕಾರ್ತಿಕೇಯಾನುಪ್ರೇಕ್ಷಾ (1960), ಸಪ್ತಶತೀಸಾರ (1970), ಧರ್ಮರತ್ನಾಕರ (1974).

ಕನ್ನಡದಲ್ಲೂ ಉಪಾಧ್ಯೆ ಅವರು ದೇಶಿಕೋಶಗಳಲ್ಲಿನ ಕನ್ನಡ ಪದಗಳು, ಕವಿಪರಮೇಶ್ವರ ಅಥವಾ ಪರಮೇಷ್ಠಿ ಮುಂತಾದ ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ಇವರ ಪಾಲಿ ಮತ್ತು ಪ್ರಾಕೃತ ಎಂಬ ಗ್ರಂಥ ಕನ್ನಡಕ್ಕಿರುವ ಪ್ರಾಕೃತದ ಗಾಢ ಹಿನ್ನೆಲೆಯನ್ನು ವಿವರಿಸುತ್ತದೆ. ವಡ್ಡಾರಾಧನೆಯ ಮೇಲಿನ ಇವರ ಸಂಶೋಧನೆ ಬಹು ಬೆಲೆಯುಳ್ಳದ್ದು.

ಉಪಾಧ್ಯೆ ಅವರು ಹಲವು ವಿದ್ವತ್ ಸಮ್ಮೇಳನಗಳಿಗೆ ಅಧ್ಯಕ್ಷರಾಗಿದ್ದರು. ಅಖಿಲ ಭಾರತ ಪ್ರಾಚ್ಯ ಸಮ್ಮೇಳನ 1940ರಲ್ಲಿ ಹೈದರಾಬಾದಿನಲ್ಲಿ ನೆರೆದಿದ್ದಾಗ, ಅದರ ಪ್ರಾಕೃತ, ಬೌದ್ಧ, ಜೈನ ವಿಭಾಗಗಳ ಅಧ್ಯಕ್ಷರಾಗಿ ಇವರು ಆಯ್ಕೆಯಾಗಿದ್ದರು. ಅನಂತರ ಅಲಿಗಡದಲ್ಲಿ 1966ರಲ್ಲಿ ನಡೆದ ಪ್ರಾಚ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಶ್ರವಣಬೆಳಗೊಳದಲ್ಲಿ 1967ರಲ್ಲಿ ನಡೆದ 46ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ ಕನ್ನಡಿಗರು ಗೌರವಿಸಿದ್ದಾರೆ.

ರಾಷ್ಟ್ರದ ಹಲವು ಪ್ರಮುಖ ಸಂಘ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳೊಂದಿಗೆ ಉಪಾಧ್ಯೆ ಅವರಿಗೆ ನಿಕಟವಾದ ಸಂಪರ್ಕವಿತ್ತು. ಸೊಲ್ಲಾಪುರದ ಜೀವರಾಜ ಜೈನಗ್ರಂಥಮಾಲೆ, ವಾರಾಣಸೀ ಜ್ಞಾನಪೀಠ ಮೂರ್ತಿದೇವಿ ಜೈನ ಗ್ರಂಥಮಾಲೆ ಮುಂತಾದ ಹಲವು ಗ್ರಂಥಮಾಲೆಗಳ ಪ್ರಧಾನ ಸಂಪಾದಕರಾಗಿದ್ದರು. ಭಾರತೀಯ ಜ್ಞಾನಪೀಠದೊಂದಿಗೆ ನಿಕಟ ಸಂಪರ್ಕ ಪಡೆದಿದ್ದ ಇವರು ಪೀಠದ ಕನ್ನಡ ಕಾವ್ಯಮಾಲೆಯ ಉದಯಕ್ಕೆ ಕಾರಣರಾಗಿದ್ದರು. ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ 9 ವರ್ಷ ಕಲಾವಿಭಾಗದ ಡೀನರಾಗಿದ್ದ ಇವರು ಪುಣೆ, ಗಯಾ, ಮುಂಬಯಿ, ನಾಗಪುರ, ಬೆಂಗಳೂರು ಮುಂತಾದ ಹಲವು ವಿಶ್ವವಿದ್ಯಾಲಯಗಳ ವಿವಿಧ ಮಂಡಳಿಗಳ ಸದಸ್ಯರಾಗಿದ್ದರು. ಪುಣೆಯ ಸಂಸ್ಕೃತ ಕೋಶ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕೀಯ ಮಂಡಲಿಗಳಲ್ಲಿದ್ದರು.

ಭಾರತ ಸರ್ಕಾರದ ಪ್ರತಿನಿಧಿಗಳಾಗಿ ಕ್ಯಾನ್ಬೆರಾದಲ್ಲಿ (1971) ಮತ್ತು ಪ್ಯಾರಿಸ್‌ನಲ್ಲಿ (1973) ನಡೆದ ಅಂತಾರಾಷ್ಟ್ರೀಯ ಪ್ರಾಚ್ಯಪರಿಷತ್ತಿನಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಓದಿದ್ದರು. ಬೆಲ್ಜಿಯಂನಲ್ಲಿ 1974ರಲ್ಲಿ ನಡೆದ ಎರಡನೆಯ ಜಾಗತಿಕ ಧರ್ಮ ಮತ್ತು ಶಾಂತಿ ಸಮ್ಮೇಳನದಲ್ಲೂ ಭಾಗವಹಿಸಿದ್ದರು.

ಭಾರತ ಸರ್ಕಾರ 1975ರ ಸ್ವಾತಂತ್ರ್ಯ ದಿನದಂದು ಉಪಾಧ್ಯೆ ಅವರಿಗೆ ಸಂಸ್ಕೃತ ವಿದ್ವಾಂಸ ಪ್ರಶಸ್ತಿಪತ್ರ ಕೊಟ್ಟು ಗೌರವಿಸಿತು. ಇದೇ ವರ್ಷ ಇವರ ಸಿದ್ಧಸೇನ ದಿವಾಕರನ ನ್ಯಾಯಾವತಾರ ಎಂಬ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಬಹುಮಾನ ಲಭಿಸಿತು. ಅವರು 1975 ಅಕ್ಟೋಬರ್ 8ರಂದು ನಿಧನರಾದರು. (ಎಂ.ಎ.)

**ಉಪ್ಪಿನಂಗಡಿ :** ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನಲ್ಲಿ ನೇತ್ರಾವತಿ ದಂಡೆಯ ಮೇಲಿರುವ ಒಂದು ಊರು. ಪುತ್ತೂರಿಗೆ 13ಕಿಮೀ ಈಶಾನ್ಯಕ್ಕಿದೆ. ಪ್ರಾಚೀನ ಕಾಲದಲ್ಲಿ ಸಮುದ್ರದಿಂದ ಹೇರಳವಾಗಿ ಉಪ್ಪು ತಯಾರಿಸಿ ತಂದು ಇಲ್ಲಿ ಮಾರುತ್ತಿದ್ದರು. ಘಟ್ಟದ ಮೇಲಿನವರು ದವಸ, ಸಂಬಾರ ಮತ್ತಿತರ ತಮ್ಮ ವಸ್ತುಗಳನ್ನು ನೀಡಿ ಉಪ್ಪು ಮತ್ತಿತರ ವಸ್ತುಗಳನ್ನು ಕೊಂಡುಕೊಂಡು ಹೋಗುತ್ತಿದ್ದರು. ಆದ್ದರಿಂದ ಈ ಸ್ಥಳಕ್ಕೆ ಉಪ್ಪಿನಂಗಡಿ ಎಂಬ ಹೆಸರು ಬಂದಿತು. ಶ್ರೀರಂಗಪಟ್ಟಣದ ಪತನದ ತರುವಾಯ 1800ರಲ್ಲಿ ಈ ನಗರವನ್ನು ವಶಪಡಿಸಿಕೊಳ್ಳಲು ವಿಠಲ ಹೆಗ್ಗಡೆ ಹಾಗೂ ಸುಬ್ಬರಾವ್ ಪ್ರಯತ್ನಿಸಿದ್ದರು. 1882ರಲ್ಲಿ ಪುತ್ತೂರು ತಾಲ್ಲೂಕು ಆಗುವವರೆಗೆ ಉಪ್ಪಿನಂಗಡಿ ಅದೇ ಹೆಸರಿನ ತಾಲ್ಲೂಕಿನ ಕೇಂದ್ರವಾಗಿತ್ತು.

ತುಳು ಭಾಷೆಯಲ್ಲಿ ಈ ಊರನ್ನು ಉಬಾರ್ ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನದಿಗಳಾದ ನೇತ್ರಾವತಿ ಮತ್ತು ಕುಮಾರಧಾರಾಗಳು ಇಲ್ಲಿ ಸಂಗಮಿಸುತ್ತವೆ. ಇದೊಂದು ಪ್ರಮುಖ ಪುಣ್ಯ ಕ್ಷೇತ್ರವೆಂದು ಪರಿಗಣಿತವಾಗಿದೆ. ನೇತ್ರಾವತಿ ನದಿಯ ನಡುವೆ ಸಹಸ್ರಲಿಂಗೇಶ್ವರ ಲಿಂಗವಿದೆ. ದಡದ ಮೇಲೆ ಈ ದೇವರ ಗುಡಿಯೂ ಇದೆ. ಈಶ್ವರನ ಪರಿವಾರದೇವತೆಗಳಾದ ಕಲ್ಕುಡದೈವ ಮತ್ತು ಮಾಂಕಾಳಿಯ ಗುಡಿಗಳು ಸಮೀಪದಲ್ಲಿವೆ. ಕುಂಭಮಾಸದಲ್ಲಿ ಇಲ್ಲಿ ಮೂರು ಜಾತ್ರೆಗಳು ನಡೆಯುತ್ತವೆ. ಇಲ್ಲಿ 400 ವರ್ಷಗಳಷ್ಟು ಹಳೆಯದಾದ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನವಿದೆ. ಉಪ್ಪಿನಂಗಡಿ ಮೂಲಕ ಹಾಸನ - ಮಂಗಳೂರು ಹೆದ್ದಾರಿ ಹಾದು ಹೋಗುತ್ತದೆ. ಇಲ್ಲಿ ಪ್ರಥಮದರ್ಜೆಯ ಕಾಲೇಜಿದೆ. (ವಿ.ಜಿ.ಕೆ.)

**ಉಪ್ಪಿನಕುದುರು ಕೊಗ್ಗ ಕಾಮತ್ :** 1921-2003. ಯಕ್ಷಗಾನ ಗೊಂಬೆಯಾಟದ ಹೆಸರಾಂತ ಕಲಾವಿದರು. ಇಂದಿನ ಉಡುಪಿಜಿಲ್ಲೆ ಕುಂದಾಪುರ ತಾಲ್ಲೂಕಿನ ಉಪ್ಪಿನಕುದುರು ಗ್ರಾಮದಲ್ಲಿ 1921 ನವೆಂಬರ್

27ರಂದು ಜನಿಸಿದರು. ರಾಷ್ಟ್ರಪ್ರಶಸ್ತಿ ವಿಜೇತ ಉಪ್ಪಿನ ಕುದುರು ದೇವಣ್ಣ ಕಾಮತ್ (ನೋಡಿ) ಇವರ ತಂದೆ, ತಾಯಿ ರಾಧಾಬಾಯಿ. ವಂಶ ಪಾರಂಪರ್ಯವಾಗಿ ಯಕ್ಷಗಾನ ಗೊಂಬೆಯಾಟ ಕಲೆಯನ್ನು ಮುಂದುವರಿಸಿ ಕೊಂಡು ಬಂದ ತಂದೆಯಿಂದ ತರಬೇತಿ, ಅನುಭವ ಪಡೆದ ಕೊಗ್ಗ ಕಾಮತರು ಗೊಂಬೆಯಾಟಕ್ಕೆ ಹೊಸತನ ಹಾಗೂ ಜೀವಂತಿಕೆ ತುಂಬಿದರು. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಬಳಿಕ ತಮ್ಮ ತಂದೆ ಹಾಗೂ ಅಜ್ಜ ನಾಗಪ್ಪ ಭಾಗವತರ ಆಟಗಳನ್ನು ನೋಡಿ ತರಬೇತಿ ಪಡೆದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ತಂದೆಯ ಗೊಂಬೆಯಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಶೃಂಗೇರಿಯಲ್ಲಿ ಪ್ರದರ್ಶನ ಮಾಡುವ ಹೊತ್ತಿಗೆ (1941) ಆರ್ಥಿಕ ಮುಗ್ಗಟ್ಟು ಹಾಗೂ ಸಾರ್ವಜನಿಕ ಪ್ರೋತ್ಸಾಹವಿಲ್ಲದೆ ತಮ್ಮ ತಂದೆ ಹತ್ತು ಎಕರೆ ಜಮೀನು ಕಳೆದುಕೊಂಡಿದ್ದನ್ನು ನೋಡಿದ್ದರು. ಆದ್ದರಿಂದ ಈ ಕಲೆಯನ್ನಾಧರಿಸಿದರೆ ಉದರ ನಿರ್ವಹಣೆಗೆ ತೊಂದರೆಯಾಗಬಹುದೆಂದು ಭಾವಿಸಿ ನಾಗಪುರ, ಪುಣೆ, ಮುಂಬಯಿಗಳಲ್ಲಿ ಕೆಲಕಾಲ ನೌಕರಿ ಮಾಡಿದರು. ಹದಿನಾಲ್ಕು ವರ್ಷಗಳ ಅನಂತರ ಕಲೆಯ ತುಡಿತದಿಂದ ಮರಳಿ ಊರಿಗೆ ಬಂದರು (1955). ಬಣ್ಣ ಕಳೆದುಕೊಂಡು, ವೇಷ ಹರಿದುಕೊಂಡು ಮೂಲೆಯಲ್ಲಿ ಬಿದ್ದ ಗೊಂಬೆಗಳನ್ನು ಕೈಗೆತ್ತಿಕೊಂಡು ಅವಕ್ಕೆ ಹೊಸರೂಪ ಕೊಡಲು ಮುಂದಾದರು. ಅಲ್ಲಲ್ಲಿ ಪ್ರದರ್ಶನ ನೀಡಲಾರಂಭಿಸಿದರು. ಆದರೂ ಜೀವನ ಸಾಗಿಸುವುದು ಕಷ್ಟವಾದಾಗ ಕುಂದಾಪುರದ ಒಂದು ಕಟ್ಟಿಗೆ ಕೊರೆಯುವ ಮಿಲ್ಲಿನಲ್ಲಿ ಕೆಲಸಕ್ಕೆ ಸೇರಿಕೊಂಡರು.

ಕಮಲಾದೇವಿ ಚಟ್ಟೋಪಾಧ್ಯಾಯರ ಪ್ರೋತ್ಸಾಹದಿಂದ ಹ್ಯಾಂಡಿಕ್ರಾಫ್ಟ್ ಬೋರ್ಡಿನಿಂದ ಆರಂಭವಾದ ಟ್ರೈನಿಂಗ್ ಸೆಂಟರ್ ಕಾರಣಾಂತರಗಳಿಂದ ಮುಚ್ಚಿಹೋಗಿದ್ದರೂ (1966) ತಯಾರಾದ ಗೊಂಬೆಗಳು ಸುಸ್ಥಿತಿಯಲ್ಲಿದ್ದವು. ಇಂಥ ಸಂದರ್ಭದಲ್ಲಿ ಮೈಸೂರು ಎಜ್ಯುಕೇಶನಲ್ ಕಲ್ಚರಲ್ ಅಂಡ್ ಸರ್ವಿಸ್ ಕೋ-ಆಪ್ ಸಂಸ್ಥೆಯವರು ಆರ್ಥಿಕ ಸಹಾಯಕವಮಾಡಿ ಗೊಂಬೆಯಾಟ ತರಬೇತಿ ಕೇಂದ್ರ ನಡೆಸುವಂತೆ ಮಾಡಿದರು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯೂ ಕೊಂಚ ಆರ್ಥಿಕ ನೆರವು ನೀಡಿತು. ಈ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಗೆ ಅಕಾಡೆಮಿ ನೆರವು ನೀಡಲು ಮುಂದೆ ಬಂದರೂ ಕಾರಣಾಂತರಗಳಿಂದ ಕಾಮತರು ಅದನ್ನು ಸ್ವೀಕರಿಸಲಿಲ್ಲ.

ಕೇಂದ್ರ ಸಂಗೀತ ನಾಟಕ ಅಕಾಡೆಮಿ ದೆಹಲಿಯಲ್ಲಿ ನಡೆಸಿದ ಮುಖವಾಡ ಮತ್ತು ಗೊಂಬೆಗಳ ಉತ್ಸವಕ್ಕೆ ಕೊಗ್ಗ ಕಾಮತರನ್ನು ಆಹ್ವಾನಿಸಿತ್ತು (1972). ಅದೇ ವರ್ಷ ರಾಜ್ಯ ಸಾಹಿತ್ಯ ಅಕಾಡೆಮಿಯ ಸಹಕಾರದಿಂದ ಶಿವರಾಮ ಕಾರಂತರು ಏರ್ಪಡಿಸಿದ ಗೊಂಬೆಗಳ ಉತ್ಸವದಲ್ಲಿ ಭಾಗವಹಿಸಿ ಇವರು ಪ್ರಥಮ ಬಹುಮಾನ ಪಡೆದರು. ಕೇಂದ್ರ ಸಾಹಿತ್ಯ ಅಕಾಡೆಮಿ ದೆಹಲಿಯಲ್ಲಿ ವಿಚಾರಗೋಷ್ಠಿ ಏರ್ಪಡಿಸಿದಾಗ (1972), ಇವರ ಗೊಂಬೆಯಾಟ ಪ್ರದರ್ಶನಗೊಂಡಿತು. ಮುಂಬಯಿಯ ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆ ಇವರನ್ನು ಆಮಂತ್ರಿಸಿ ಪ್ರದರ್ಶನ ಏರ್ಪಡಿಸಿದಾಗ (1976) ದೇಶವಿದೇಶಗಳಿಂದ ಬಂದ ಜನ ಇವರ ಗೊಂಬೆಯಾಟದ ಪ್ರದರ್ಶನ ನೋಡಿ ತಮ್ಮಲ್ಲಿ ಪ್ರದರ್ಶನ ನೀಡಲು ಇವರನ್ನು ಆಹ್ವಾನಿಸಿದರು.

ಕೊಗ್ಗ ಕಾಮತರ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯೊಂದಿಗೆ ಸಂಪರ್ಕ ಹೊಂದಿದ ಕೆ.ಎಸ್. ಉಪಾಧ್ಯಾಯರ ಮೂಲಕ ಇವರು ಯುರೋಪ್ ದೇಶದ ವಿವಿಧ ಭಾಗಗಳಲ್ಲಿ ಪ್ರದರ್ಶನ ನೀಡಿ ಅಪಾರ ಜನಪ್ರಿಯತೆ ಗಳಿಸಿದರು (1978-79).

ಫ್ರಾನ್ಸಿನ ರೆನ್ನೆಯಲ್ಲಿ ನಡೆದ ಐದನೆಯ ಸಾಂಪ್ರದಾಯಿಕ ಕಲೆಗಳ ಉತ್ಸವದಲ್ಲಿ ಕಾಮತರು ಪಾಲ್ಗೊಂಡರು (1978). ಪ್ಯಾರಿಸ್‌ನಗರವೂ ಸೇರಿದಂತೆ ಫ್ರಾನ್ಸಿನ ಪ್ರಮುಖ ನಗರಗಳಲ್ಲಿ ಪ್ರದರ್ಶನ ನೀಡಿ ಭಾರತದ ಈ ಕಲೆಗೆ ಪ್ರತಿಷ್ಠೆ ತಂದುಕೊಟ್ಟರು. ಮೊದಲ ವಿದೇಶ ಯಾತ್ರೆಯಲ್ಲಿ ಜಯಭೇರಿ ಬಾರಿಸಿದ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯನ್ನು ಫ್ರಾನ್ಸ್ ಮತ್ತೊಮ್ಮೆ ಆಹ್ವಾನಿಸಿ ಫ್ರಾನ್ಸಿನ ಲಿಲೆ ಉತ್ಸವದಲ್ಲಿ ಭಾಗವಹಿಸುವಂತೆ ಮಾಡಿದ್ದಲ್ಲದೆ ಇನ್ನೂ ಅನೇಕ ಕಡೆ ಪ್ರದರ್ಶನ ಏರ್ಪಡಿಸಿತು (1979).

ದಿ ರಾಯಲ್ ಟ್ರಾಪಿಕಲ್ ಇನ್‌ಸ್ಟಿಟ್ಯೂಟ್ ಆಫ್ ಆಮ್‌ಸ್ಟರ್‌ಡ್ಯಾಮ್, ಹಾಲೆಂಡ್ ಎಂಬ ಸಂಸ್ಥೆ ಈ ಯಕ್ಷಗಾನ ಗೊಂಬೆಯಾಟ ಮಂಡಳಿಯನ್ನು ಆಹ್ವಾನಿಸಿ ಆಮ್‌ಸ್ಟರ್ ಡ್ಯಾಮ್ ಮತ್ತು ಬ್ರಿಡಾಗಳಲ್ಲಿ ಪ್ರದರ್ಶನ ಏರ್ಪಡಿಸಿತ್ತು.

ಯಕ್ಷಗಾನ ಗೊಂಬೆಯಾಟವನ್ನು ಜನಪ್ರಿಯಗೊಳಿಸಿದ ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದವು- ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1979), ರಾಜ್ಯೋತ್ಸವ ಪ್ರಶಸ್ತಿ (1985), ಮಧ್ಯಪ್ರದೇಶ ಸರ್ಕಾರದ ಪ್ರತಿಷ್ಠಿತ ತುಳಸಿ ಸಮ್ಮಾನ (1995). ಕು.ಶಿ. ಹರಿದಾಸ ಭಟ್ಟರು ಕೊಗ್ಗ ಕಾಮತರ ಗೊಂಬೆಗಳು ಎಂಬ ಪುಸ್ತಕ ಬರೆದಿದ್ದಾರೆ.

ಕಾಮತರು ಸ್ವತಃ ತಯಾರಿಸುತ್ತಿದ್ದ ಗೊಂಬೆಗಳಿಗೂ ಬೇಡಿಕೆಯಿತ್ತು. ಈ ಗೊಂಬೆಗಳು ದೇಶ ವಿದೇಶದ ಅನೇಕ ವಸ್ತು ಸಂಗ್ರಹಾಲಯ

ಗಳನ್ನಲಂಕರಿಸಿವೆ. ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಈ ಕಲೆಯ ಬೆನ್ನು ಬಿಡದೆ ಶ್ರೀಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯನ್ನು ಬದುಕಿಸಿಕೊಂಡು ಬಂದರು. ಲಕ್ಷ್ಮೀದೇವಿ ಇವರ ಪತ್ನಿ. ಈ ದಂಪತಿಗಳಿಗೆ ಒಬ್ಬ ಮಗ, ನಾಲ್ವರು ಹೆಣ್ಣು ಮಕ್ಕಳು. ಕೊಗ್ಗ ಕಾಮತರ ಮಗ ಭಾಸ್ಕರ ಕಾಮತರು 2003 ಆಗಸ್ಟ್ 27ರಂದು ನಿಧನರಾದರು. ತಮ್ಮ ತಂದೆಯ ಕಲೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. (ಎಸ್.ಎಂ.ಕೆ.)

**ಉಪ್ಪಿನಕುದುರು ದೇವಣ್ಣ ಕಾಮತ್ :** 1888-1971. ಯಕ್ಷಗಾನ ಗೊಂಬೆಯಾಟದಲ್ಲಿ ರಾಷ್ಟ್ರಪ್ರಶಸ್ತಿ ಗಳಿಸಿದ ಕಲಾವಿದ. ಇಂದಿನ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಉಪ್ಪಿನಕುದುರುವಿನಲ್ಲಿ 1888 ಸೆಪ್ಟೆಂಬರ್

17ರಂದು ಜನಿಸಿದರು. ಇವರ ಹಿರಿಯರು ಈ ಕಲೆಯನ್ನು ಪೋಷಿಸಿಕೊಂಡು ಬಂದದ್ದರಿಂದ ಇವರ ಮನೆತನಕ್ಕೆ ಭಾಗವತರ ಮನೆ ಎಂಬ ಹೆಸರು ಬಂತು. ಇವರ ತಂದೆ ವೆಂಕಟರಮಣ ಕಾಮತ್. ಆರಂಭದಲ್ಲಿ ಇವರಿಗೆ ಪ್ರಾಥಮಿಕ ಶಿಕ್ಷಣ ಮಾತ್ರ ದೊರೆತಿತ್ತು. ತಮ್ಮ ತಂದೆ ಹಾಗೂ ಅಜ್ಜ ಲಕ್ಷ್ಮಣಕಾಮತರಿಂದ ತರಬೇತಿ ಪಡೆದರು. ಅನಂತರ ಇವರು ತಮ್ಮ ಮಗ ಉಪ್ಪಿನಕುದುರು ಕೊಗ್ಗ ಕಾಮತರೊಂದಿಗೆ (ನೋಡಿ) ದೇಶದ ಬೇರೆ ಬೇರೆ ಭಾಗಗಳಲ್ಲಿ ಯಕ್ಷಗಾನ ಗೊಂಬೆಯಾಟದ ಪ್ರದರ್ಶನ ನೀಡಿ ಈ ಕಲೆಯ ಪ್ರಚಾರಕ್ಕೆ ಕಾರಣರಾದರು. ಇವರ ಪತ್ನಿ ರಾಧಾಬಾಯಿ. ಈ ದಂಪತಿಗಳಿಗೆ 3 ಗಂಡು, 3 ಹೆಣ್ಣು ಮಕ್ಕಳು.

ದೇವಣ್ಣ ಕಾಮತರು ಸ್ವತಃ ಯಕ್ಷಗಾನ ಕಲೆಯಲ್ಲಿ ನುರಿತವರಾದುದರಿಂದ ರಾಮಾಯಣ, ಮಹಾಭಾರತದ ಪ್ರಸಂಗಗಳಿಗೆ ಗೊಂಬೆಯ ಕುಣಿತ ಹೊಂದಿಸಿ ಅದೊಂದು ಮನರಂಜನೆಯ ಆಟವಾಗುವಂತೆ ಮಾಡಿದರು. ಯಕ್ಷಗಾನ ವೇಷಭೂಷಣ ಮುಖವರ್ಣಿಕೆಗೆ ಹೊಂದುವ ಗೊಂಬೆಗಳನ್ನು ತಾವೇ ತಯಾರಿಸಿದರು. ಪಾತ್ರಗಳಿಗೆ ಸೂಕ್ತವಾದ ವಸ್ತ್ರಾಲಂಕಾರ ಮಾಡಿ, ಹಿನ್ನೆಲೆಯಲ್ಲಿ ಯಕ್ಷಗಾನ ಸಂಗೀತ ಅಳವಡಿಸಿ ಗೊಂಬೆಗಳೂ ಮನುಷ್ಯರಂತೆ ಹಾವಭಾವ ಪೂರ್ಣವಾಗಿ ಕುಣಿಯುವಂತೆ ಮಾಡುವಲ್ಲಿ ಯಶಸ್ವಿಯಾದರು. ದೊಡ್ಡ ಆಕಾರದ ಮೂರ್ತಿಗಳ ರಚನೆ ಮಾಡಿ ಅವುಗಳ ಚಲನವಲನಕ್ಕೆ ಯೋಗ್ಯವಾದ ಸೂತ್ರಗಳನ್ನು ಜೋಡಿಸಿದ್ದು ಇವರ ಬಹು ದೊಡ್ಡ ಸಾಧನೆ.

1966ರಲ್ಲಿ ದೆಹಲಿಯ ಗಣರಾಜ್ಯೋತ್ಸವ ಸಮಾರಂಭಕ್ಕೆ ಆಮಂತ್ರಿತರಾದ ಇವರು ಅಂದಿನ ರಾಷ್ಟ್ರಪತಿ ಎಸ್. ರಾಧಾಕೃಷ್ಣನ್ ಅವರಿಂದ ರಾಷ್ಟ್ರಪ್ರಶಸ್ತಿ ಪಡೆದರು. ಆರ್ಥಿಕ ತೊಂದರೆಗಳ ನಡುವೆಯೂ ಇವರು ಛಲ ಮತ್ತು ನಿಷ್ಠೆಯಿಂದ ಈ ಕಲಾ ಸಂಪ್ರದಾಯವನ್ನು ಉಳಿಸಲು ಮತ್ತು ಬೆಳೆಸಲು ತುಂಬ ಪರಿಶ್ರಮಿಸಿದರು. ಕಮಲಾ ದೇವಿ ಚಟ್ಟೋಪಾಧ್ಯಾಯರ ನಿರ್ದೇಶನದಲ್ಲಿ ಸೆಂಟ್ರಲ್ ಹ್ಯಾಂಡಿಕ್ರಾಫ್ಟ್ ಬೋರ್ಡಿನ ಸಹಾಯದಿಂದ ಯಕ್ಷಗಾನ ಗೊಂಬೆಯಾಟ ತರಬೇತಿ ಕೇಂದ್ರವನ್ನು ಆರಂಭಿಸಿ ಅನೇಕ ವಿದ್ಯಾರ್ಥಿಗಳಿಗೆ ಈ ಕಲೆಯ ಪರಿಚಯ ಮಾಡಿಕೊಟ್ಟರು (1966-68). ಇವರು 1971 ಜುಲೈ 20ರಂದು ನಿಧನರಾದರು. (ಎಸ್.ಎಂ.ಕೆ.)

**ಉಪ್ಪೂರು ನಾರ್ಣಪ್ಪ ಭಾಗವತ :** 1918-84. ಯಕ್ಷಗಾನ ಬಡಗುತಿಟ್ಟಿನ ಹಳೆಯ ತಲೆಮಾರಿನ ಸಾಂಪ್ರದಾಯಿಕ ಶೈಲಿಯ ಪ್ರಸಿದ್ಧ ಭಾಗವತರು. ಖಚಿತ ರಾಗಜ್ಞಾನದಿಂದ, ಕುಣಿತಕ್ಕೆ ತಕ್ಕ ತಾಳವನ್ನು ನಡೆಸುವ ಸಾಮರ್ಥ್ಯದಿಂದ, ಹಾಡಿನ ಪದ ಪದಗಳನ್ನೂ ಹಿಂಜಿ ಅದರ ಭಾವವನ್ನು ಬಿಂಬಿಸುವ ಅಪರೂಪದ ಶೈಲಿಯಿಂದಾಗಿ ಯಕ್ಷಗಾನದ ಪ್ರಾಚಾರ್ಯರೆಂದೇ ಪರಿಚಿತರು. ಇವರು 1918ರಲ್ಲಿ ಜನಿಸಿದರು. ತಂದೆ ಶ್ರೀನಿವಾಸಭಾಗವತ. ಅವರೇ ಭಾಗವತಿಕೆಯಲ್ಲಿ ಮೊದಲ ಗುರು. ಉಪ್ಪೂರರು ಮೊದಲಿಗೆ ಸಂಗೀತಗಾರರಾಗಿ ಅನುಭವ ಪಡೆದು ಅನಂತರ ತಮ್ಮ 20ನೆಯ ವಯಸ್ಸಿನಲ್ಲೇ ಭಾಗವತರಾಗಿ ರೂಪುಗೊಂಡರು. ಅಮೃತೇಶ್ವರಿ, ಮಾರಣಕಟ್ಟೆ, ಕೊಲ್ಲೂರು, ಪೆರ್ಡೂರು, ಸೌಕೂರು, ಸಾಲಿಗ್ರಾಮ ಮುಂತಾದ ಮೇಳಗಳಲ್ಲಿ 30 ವರ್ಷಗಳನ್ನು ಕಳೆದರು.

ಭಾಗವತಿಕೆಯಲ್ಲಿ ಹೆಸರಾದಂತೆ ಇವರು ಯಕ್ಷಗಾನ ಕಲಿಕೆಯಲ್ಲಿ ಸಿದ್ಧಹಸ್ತರು. ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರದ ಪ್ರಾಚಾರ್ಯರಾಗಿ 13 ವರ್ಷ ಯಕ್ಷಗಾನದಲ್ಲಿ ತರಬೇತಿ ನೀಡಿದರು. ಅಪಾರ ಸಂಖ್ಯೆಯ ಶಿಷ್ಯರನ್ನು ಬೆಳೆಸಿದ್ದು, ಹಲವು ಮೇಳಗಳಲ್ಲಿ ಇವರ ಶಿಷ್ಯಂದಿರು ಅಗ್ರಪಂಕ್ತಿಯ ಕಲಾವಿದರಾಗಿರುವುದು ಉಲ್ಲೇಖನೀಯ. ಯಕ್ಷಗಾನ ಲೋಕದಲ್ಲಿ ಮಿಂಚಿ ಬಹುಬೇಗ ಮಾಯವಾದ ಪ್ರತಿಭಾವಂತ ಯುವ ಭಾಗವತ ಗುಂಡ್ಮಿ ಕಾಳಿಂಗ ನಾವಡ (ನೋಡಿ) ಇವರ ಪ್ರಮುಖ ಶಿಷ್ಯರಲ್ಲೊಬ್ಬರು.

ಇವರು ಯಕ್ಷಗಾನ ಕುರಿತು ಯಕ್ಷಗಾನ ಶಿಕ್ಷಕ, ಯಕ್ಷಗಾನ ಅಧ್ಯಯನ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಯಕ್ಷಗಾನದ ರಾಗ, ತಾಳ, ಕುಣಿತಗಳ ಬಗ್ಗೆ ದೀರ್ಘವಾದ ವಿವರಗಳು ಮತ್ತು ಮಾರ್ಗದರ್ಶಕ ಸೂತ್ರಗಳಿವೆ. ಸತ್ಯಂ ವಧ ಧರ್ಮಂ ಚರ ಎಂಬುದು ಇವರ ಒಂದು ಯಕ್ಷಗಾನ ಪ್ರಸಂಗ. ಉಪ್ಪೂರರು ಭಾಗವತರಾಗಿ ವಿದ್ವತ್ತು, ಸಹೃದಯತೆಯ ಜೊತೆಗೆ ಕಲಾವಿದರಿಗೆ ಮಾದರಿಯಾಗಬಲ್ಲ ವ್ಯಕ್ತಿತ್ವ ಹೊಂದಿದ್ದರು. ಸಂಪ್ರದಾಯಬದ್ಧ ಭಾಗವತಿಕೆಯನ್ನು ಮೈಗೂಡಿಸಿಕೊಂಡಿದ್ದರೂ ಹಲವಾರು ಅರ್ಥಪೂರ್ಣ ಬದಲಾವಣೆಗಳಿಗೆ ತಮ್ಮನ್ನು ಒಡ್ಡಿಕೊಂಡಿದ್ದರು. ಆದರೆ ಕೆಲವೊಮ್ಮೆ ಅತಿರೇಕದ ಬದಲಾವಣೆಗಳಿಗೆ ಇವರು ರಾಜಿಯಾಗಲಿಲ್ಲ. ಶಿವರಾಮ ಕಾರಂತರ ನೃತ್ಯ ನಾಟಕಗಳಲ್ಲಿ ಭಾಗವತರಾಗಿ ಭಾಗವಹಿಸಿದ್ದರಿಂದ, ಕಾರಂತರ ಪ್ರಯೋಗಗಳಿಂದ ತಮ್ಮ ಅನುಭವ ವಿಸ್ತಾರಗೊಂಡಿದ್ದನ್ನು ಇವರು ಒಪ್ಪಿಕೊಂಡಿದ್ದರು. ಯಕ್ಷಗಾನಕ್ಕೆ ನಾಟಕಗಳಲ್ಲಿರುವಂತೆ ನಿರ್ದೇಶನದ ಅಗತ್ಯವಿದೆ ಎಂಬ ಬಗ್ಗೆ ಇವರ ಸಹಮತವಿತ್ತು. ಇವರು 1984 ಏಪ್ರಿಲ್ 11ರಂದು ನಿಧನರಾದರು. (ಟಿ.ಎಂ.)

**ಉಮಾದೇವಿ :** ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರಬಲ್ಲಾಳನ (1173-1220) ಮಹಿಷಿಯರಲ್ಲಿ ಒಬ್ಬಳು. ಈಕೆಯ ವರ್ಣನೆ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಜಗನ್ನಾಥವಿಜಯದ ಕರ್ತೃ ರುದ್ರಭಟ್ಟ ತನ್ನ ಕಾವ್ಯದಲ್ಲಿ ಬಲ್ಲಾಳನನ್ನು ಉಮಾಕಾಮಿನೀಜೀವಿತೇಶ್ವರ ಎಂದು ಸಂಬೋಧಿಸಿದ್ದಾನೆ. ಬಲ್ಲಾಳನ ರಾಜ್ಯಾಡಳಿತದಲ್ಲಿ ಸಲಹೆಗಳನ್ನು ನೀಡುತ್ತಿದ್ದುದಲ್ಲದೆ ಸ್ವಯಂ ಯುದ್ಧಭೂಮಿಯಲ್ಲಿ ನಿಂತು ಶತ್ರುಗಳನ್ನು ಎದುರಿಸುತ್ತಿದ್ದಳು. 1196-97ರಲ್ಲಿ ಸೈನ್ಯಸಮೇತವಾಗಿ ಬೆಳಗವತ್ತಿಯ ಸಿಂಧಭೂಪಾಲನಾದ ಈಶ್ವರದೇವನ ರಾಜ್ಯವನ್ನು ಮುತ್ತಿ ಅವನ ಸೈನ್ಯವನ್ನು ಸೋಲಿಸಿ ಅಪಾರ ಐಶ್ವರ್ಯಸಮೇತ ಹಿಂದಿರುಗಿದಳೆಂದು ಹೊನ್ನಾಳಿ ತಾಲ್ಲೂಕಿನಲ್ಲಿ ದೊರೆತಿರುವ ಶಾಸನವೊಂದರಿಂದ ತಿಳಿದುಬರುತ್ತದೆ. ಈಕೆ ಸುಂದರಿಯೂ ಗೀತವಾದ್ಯ ನೃತ್ಯ ಚತುರೆಯೂ ಆಗಿದ್ದಳೆಂದು ಅರಸೀಕೆರೆ ಬಳಿ ಸಿಕ್ಕಿರುವ ತ್ರಿವಿಕ್ರಮ ಪಂಡಿತನದೆನ್ನಲಾದ ಶಾಸನವೊಂದರಿಂದ ತಿಳಿದು ಬರುತ್ತದೆ. *

**ಉಮ್ಮತ್ತೂರು :** ಚಾಮರಾಜನಗರ ಜಿಲ್ಲೆಯ ಅದೇ ತಾಲ್ಲೂಕಿನಲ್ಲಿ ಯಳಂದೂರಿನಿಂದ 14ಕಿಮೀ ದೂರದಲ್ಲಿರುವ ಗ್ರಾಮ. ಹಿಂದೆ ಇದು ಉಮ್ಮತ್ತೂರು ಪಾಳೆಯಗಾರರ ರಾಜಧಾನಿಯಾಗಿತ್ತು.

11ನೆಯ ಶತಮಾನದಲ್ಲಿಯೇ ಈ ಊರು ಇದ್ದುದಕ್ಕೆ ಇಲ್ಲಿರುವ ನಿಷಧಿಶಾಸನಗಳು ಸಾಕ್ಷಿ. ಆಗ ಇಲ್ಲಿ ಜೈನರ ವಸತಿ ಹೆಚ್ಚಾಗಿದ್ದಂತೆ ತೋರುತ್ತದೆ. ಇಲ್ಲಿರುವ ವರ್ಧಮಾನ ಬಸದಿ 13ನೆಯ ಶತಮಾನಕ್ಕೆ ಸೇರಿದ ಸರಳವಾದ ದ್ರಾವಿಡ ಶೈಲಿಯ ಕಟ್ಟಡ. 15-16ನೆಯ ಶತಮಾನಗಳಲ್ಲಿ ಈ ಪ್ರಾಂತ್ಯವನ್ನಾಳಿದ ಉಮ್ಮತ್ತೂರು ಅರಸರು ಇಲ್ಲಿ ಒಂದು ಕೋಟೆಯನ್ನು ಕಟ್ಟಿದ್ದರು. ಅದರ ಅವಶೇಷಗಳನ್ನು ಈಗಲೂ ಅಲ್ಲಲ್ಲಿ ಕಾಣಬಹುದು. ಊರಿನ ನೈಋತ್ಯಕ್ಕೆ ಆ ಅರಸರ ಅರಮನೆ ಇದ್ದುದು ನಾಮಾವಶೇಷವಾಗಿದೆ. ಅರಮನೆಯ ಹೊಲ ಎಂದು ಒಂದು ಹೊಲವನ್ನು ಸ್ಥಳೀಕರು ಗುರುತಿಸುತ್ತಾರೆ.

ಉಮ್ಮತ್ತೂರರಸರ ಕಾಲದಲ್ಲಿ ಈ ಊರಿನಲ್ಲಿ ಹಲವು ದೇವಾಲಯಗಳು ನಿರ್ಮಿತವಾದುವು. ಅವುಗಳಲ್ಲಿ ರಂಗನಾಥ ದೇವಾಲಯ ಮತ್ತು ಭುಜಂಗೇಶ್ವರ ದೇವಾಲಯಗಳು ದ್ರಾವಿಡ ಶೈಲಿಯಲ್ಲಿ ಕಟ್ಟಿರುವ ದೊಡ್ಡ ದೇವಾಲಯಗಳು. ಈ ದೇವಾಲಯಗಳ ಮುಂದೆ ಉನ್ನತವಾದ ಮತ್ತು ಸ್ಥೂಲವಾದ ಗರುಡಗಂಬಗಳಿವೆ. ರಂಗನಾಥಸ್ವಾಮಿ ದೇವಾಲಯದ ಮುಂದಿನ ಗರುಡಗಂಬದ ಬುಡದ ನಾಲ್ಕು ಮುಖಗಳಲ್ಲಿಯೂ ಕ್ರಮವಾಗಿ ಭಕ್ತವಿಗ್ರಹ ಹನುಮಾನ್, ಗರುಡ ಮತ್ತು ಪರವಾಸುದೇವರ ಮೂರ್ತಿಗಳಿವೆ. ಭಕ್ತವಿಗ್ರಹ, ಉಮ್ಮತ್ತೂರರಸನೊಬ್ಬನದಿರಬಹುದು. ಭುಜಂಗೇಶ್ವರ ದೇವಾಲಯದಲ್ಲಿಯೂ ಇಂಥದೇ ಒಂದು ಭಕ್ತವಿಗ್ರಹವನ್ನು ನೋಡಬಹುದು. ಈ ದೇವಾಲಯದಲ್ಲಿರುವ ಪಂಚಲಿಂಗಗಳಲ್ಲೊಂದರ ಮೇಲೆ ಜಟೆಯಿದ್ದು ಅದರ ಮೇಲೆ ಚತುರ್ಭುಜಳಾದ ಗಂಗೆಯ ಮೂರ್ತಿ ಇದೆ. ಇದು ಒಂದು ಅಪರೂಪ ಕೃತಿ. ಈ ದೇವಾಲಯದ ಮುಂದಿನ ಗರುಡಗಂಬದ ಚೌಕನಾದ ಬುಡದ ಮೇಲು ಮೂಲೆಯೊಂದರಲ್ಲಿ ತೆರೆದ ಬಾಯಿ ಕೋರೆಹಲ್ಲುಗಳು ಉಬ್ಬಿದ ಕಣ್ಣು ಕೆದರಿದ ತಲೆಯುಳ್ಳ ಸ್ಥೂಲಕಾಯದ ಒಂದು ಮೂರ್ತಿ ಇದೆ. ಇದನ್ನು ಬೇತಾಳನೆಂದೂ ಭುಜಂಗೇಶ್ವರ ದೇವಾಲಯವನ್ನು ಕಟ್ಟಿದ ಅನಂತರ ಆ ಊರ ಅರಸನಿಗೆ ಅದರಿಂದ ಬಿಡುಗಡೆಯಾಯಿತೆಂದೂ ಅದರಿಂದ ಆತ ಆ ಮೂರ್ತಿಯನ್ನು ಅಲ್ಲಿ ಕಂಡರಿಸಿದನೆಂದೂ ಹೇಳಿಕೆ ಇದೆ. ಈ ಎರಡು ದೇವಾಲಯಗಳಲ್ಲದೆ ಸಪ್ತಮಾತೃಕಾ, ವೀರಭದ್ರ ದೇವಾಲಯಗಳೂ ಇಲ್ಲಿವೆ. ಉಪ್ಪರಿಗೆ ಸಿಂಹಾಸನ ಮಠವೆಂಬ ಒಂದು ಮಠವೂ ಇಲ್ಲಿದ್ದುದಾಗಿ ತಿಳಿದುಬರುತ್ತದೆ. (ಎಂ.ಎಚ್.)

**ಉಮ್ಮತ್ತೂರು ಪಾಳೆಯಗಾರರು :** 15ನೆಯ ಶತಮಾನದ ಅಂತ್ಯ ಮತ್ತು 16ನೆಯ ಶತಮಾನದ ಆದಿಭಾಗಗಳಲ್ಲಿ ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮತ್ತು ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಆಳುತ್ತಿದ್ದ ಪಾಳೆಯಗಾರರು. ಚಾಮರಾಜನಗರ ತಾಲ್ಲೂಕಿನ ನಂಜನಗೂಡು-ಯಳಂದೂರು ರಸ್ತೆಯಲ್ಲಿ ಈಗ ಒಂದು ಚಿಕ್ಕ ಗ್ರಾಮವಾಗಿರುವ ಉಮ್ಮತ್ತೂರು ಇವರ ರಾಜಧಾನಿ. ಈ ವಂಶದ ಕೆಲವರು ಬೆಟ್ಟದ ಕೋಟೆ ಮತ್ತು ತೆರಕಣಾಂಬಿಯಲ್ಲಿ ಸಹ ಆಳುತ್ತಿದ್ದಂತೆ ತೋರುತ್ತದೆ.

ಮೂಲಾಧಾರಗಳು ಬಹು ವಿರಳವಾಗಿರುವದರಿಂದ ಈ ವಂಶದ ಇತಿಹಾಸ ಅಸ್ಪಷ್ಟ. ಶಾಸನಗಳ ಪ್ರಕಾರ ಈ ವಂಶದ ಆದ್ಯ ಹನುಮಪ್ಪ ಒಡೆಯ. ಇವನ ಮಗ ಇಮ್ಮಡಿರಾಯ ಒಡೆಯ. ಇವನಿಗೆ ಸೋಮರಾಯ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವನ ಹಿರಿಯ ಮಗ ದೇವಣ್ಣ ಒಡೆಯ. ಈತ ಚೇರ, ಚೋಳ, ಪಾಂಡ್ಯ ಮೂವರುರಾಯರ ಗಂಡ, ನೀಲಗಿರಿ ಸಾಧಾರ ಒಡೆಯ, ನೀಲಗಿರಿ ನಾಡಾಳ್ವ ಇತ್ಯಾದಿ ಬಿರುದುಗಳನ್ನು ಧರಿಸಿ ಮೂಡಣಕೋಟೆಯಲ್ಲಿ (ಪ್ರಾಯಶಃ ಗುಂಡ್ಲುಪೇಟೆ ಬಳಿಯ ಗೋಪಾಲಸ್ವಾಮಿಬೆಟ್ಟ) ಆಳ್ವಿಕೆ ನಡೆಸುತ್ತಿದ್ದ (ಸು.1488-1504). ಇದೇ ಬಿರುದುಗಳಿರುವ ಗೋವಣ್ಣ ಒಡೆಯ (1504) ದೇವಣ್ಣನ ಮಗ. ದೇವಣ್ಣನ ಇನ್ನೊಬ್ಬ ಮಗ ಚಿಕ್ಕರಾಯ (ಮಲ್ಲರಾಜ) ಪೆನುಗೊಂಡೆ ಚಕ್ರೇಶ್ವರ ಎಂಬ ಬಿರುದಿನೊಡನೆ ತೆರಕಣಾಂಬಿಯಿಂದ ಆಳುತ್ತಿದ್ದ (ಸು.1505-12). ಇವನ ರಾಜ್ಯ ಕೊಯಮತ್ತೂರು ಜಿಲ್ಲೆಯ ಅವನಾಸಿ ತಾಲ್ಲೂಕಿನ ಭಾಗಗಳನ್ನೂ ಒಳಗೊಂಡಂತೆ ತೋರುತ್ತದೆ. ಇವನ ಚಿಕ್ಕಪ್ಪ, ಅಂದರೆ ದೇವಣ್ಣ ಒಡೆಯನ ತಮ್ಮ ನಂಜರಾಜ ಉಮ್ಮತ್ತೂರಿನಲ್ಲಿ ಆಳ್ವಿಕೆ ನಡೆಸಿದ (ಸು.1482-1504). ಇವನಿಗೆ ಫೇಣಾಂಕ ಚಕ್ರೇಶ್ವರ, ಪೆಸಾಳಿ ಹನುಮ ಇತ್ಯಾದಿ ಬಿರುದುಗಳಿದ್ದವು. ಇವನ ರಾಜ್ಯ ಮೈಸೂರು ಜಿಲ್ಲೆಯ ದಕ್ಷಿಣ ಭಾಗವಲ್ಲದೆ ಕೊಯಮತ್ತೂರು ಜಿಲ್ಲೆಯ ಭಾಗಗಳಿಗೂ ಹಬ್ಬಿತ್ತು. ವಿಜಯನಗರದ ಕೃಷ್ಣದೇವರಾಯ ಪಟ್ಟಕ್ಕೆ ಬಂದ ತರುಣದಲ್ಲಿ (1509-12) ಉಮ್ಮತ್ತೂರು ಪಾಳೆಯಗಾರನನ್ನು ನಿಗ್ರಹಿಸಿ ತನ್ನ ಪ್ರತಿನಿಧಿಯನ್ನು ಇಲ್ಲಿಯ ಆಡಳಿತಕ್ಕೆ ನೇಮಿಸಿದ. ಈತ ಸೋಲಿಸಿದ ರಾಜನ ಹೆಸರು ಗಂಗರಾಜ ಎಂದು ಸಾಹಿತ್ಯಿಕ ಮೂಲಗಳಲ್ಲಿ ದೊರೆತರೂ ಈತ ನಂಜರಾಜ ಇರಬಹುದೆಂದು ಊಹಿಸಲಾಗಿದೆ. ಆದರೆ ಈ ನಂಜರಾಜ ಉಮ್ಮತ್ತೂರನ್ನು ಕಳೆದುಕೊಂಡರೂ ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಸು.1519ರವರೆಗೂ ಉಳಿಸಿಕೊಂಡಿರಬಹುದೆಂದು ಅಲ್ಲಿ ದೊರಕಿರುವ ಕೆಲವು ಶಾಸನಗಳಿಂದ ಊಹಿಸಬಹುದಾಗಿದೆ.

ಉಮ್ಮತ್ತೂರಿನ ನಾಯಕರಿಗೂ ಕಳಲೆ ಒಡೆಯರಿಗೂ ಹಗೆತನವಿತ್ತು. ಒಮ್ಮೆ ಉಮ್ಮತ್ತೂರಿನ ನಾಯಕನೊಬ್ಬ ಕಳಲೆ ಮನೆತನದ ಎಲ್ಲರನ್ನೂ ವಂಚನೆಯಿಂದ ಕೊಲ್ಲಿಸಿದನೆಂದೂ ಆಗ ಒಬ್ಬ ಬಾಲಕ ಮಾತ್ರ ತಪ್ಪಿಸಿಕೊಂಡು ಅನಂತರ ತನ್ನ ಮನೆತನದ ಆಳ್ವಿಕೆಯನ್ನು ಪುನಃ ಸ್ಥಾಪಿಸಿದನೆಂದೂ ತಿಳಿದುಬರುತ್ತದೆ. 1612ರಲ್ಲಿ ವಿಜಯನಗರದ ವೆಂಕಟಪತಿರಾಯ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿ ಶ್ರೀರಂಗಪಟ್ಟಣ ಮತ್ತು ಉಮ್ಮತ್ತೂರುಗಳನ್ನು ರಾಜ ಒಡೆಯರಿಗೆ ನೀಡಿದುದಾಗಿ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ದೊರೆತಿರುವ ಶಾಸನವೊಂದರಿಂದ ತಿಳಿದುಬರುತ್ತದೆ. 1613ರಲ್ಲಿ ರಾಜ ಒಡೆಯ ಉಮ್ಮತ್ತೂರಿನ ಮೇಲೆ ದಂಡೆತ್ತಿ ಹೋಗಿ ಅಲ್ಲಿನ ಪಾಳೆಯಗಾರರನ್ನು ಸೋಲಿಸಿ ಅವನ ರಾಜ್ಯವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡ. ಈ ಅನಂತರ ಕಾಲದ ಉಮ್ಮತ್ತೂರಿನ ಪಾಳೆಯಗಾರರು ಯಾರು, ಇವರಿಗೂ ಮೊದಲಿನ ನಂಜರಾಜ ಇತ್ಯಾದಿ ಪಾಳೆಯಗಾರರಿಗೂ ಇದ್ದ ಸಂಬಂಧವೇನೆಂದು ತಿಳಿಯುವುದಿಲ್ಲ. (ಜಿ.ಆರ್.ಆರ್.)

**ಉರಿಲಿಂಗದೇವ :** ಸು.1170. ಹನ್ನೆರಡನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಈತ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯಲ್ಲಿರುವ ಕಂದಹಾರ (ಕಂಧಾರ್, ಕಂದಾರಪುರ) ಎಂಬ ಪಟ್ಟಣದಲ್ಲಿ ಮಠಾಧಿಪತಿಯಾಗಿದ್ದ. ನಲ್ಲೂರಿ ಮಠದ ಸ್ವಾಮಿಯೂ ಆಗಿದ್ದ ಎನ್ನಲಾಗಿದೆ. ಈತ ಶರಣಸತಿ, ಲಿಂಗಪತಿ ಭಾವಸ್ಥಿತಿಯನ್ನು ಹೊಂದಿದ್ದ ನೈಷ್ಠಿಕ ಬ್ರಹ್ಮಚಾರಿ, ಆಚಾರ್ಯಪುರುಷ. ಎಂಥ ಕಷ್ಟಪರಿಸ್ಥಿತಿಯಲ್ಲೂ ಶಿವಯೋಗವನ್ನು ಬಿಟ್ಟವನಲ್ಲ. ಈತ ಕಾಶ್ಮೀರದಿಂದ ಬಂದು ಕಲ್ಯಾಣದಲ್ಲಿ ನೆಲೆಸಿದ ಮಹಾಪಂಡಿತ ಶಿವಲೆಂಕ ಮಂಚಣ್ಣನ ಮಗನೆಂದು ನೀಲಕಂಠಾರ್ಯನ ಆರಾಧ್ಯಚರಿತದಲ್ಲಿ (ಸು.1485) ಹೇಳಿದೆ. ಪೆದ್ದಣ್ಣ ಮತ್ತು ಕಾಳವ್ವೆಯರೆಂಬ ಅಸ್ಪೃಶ್ಯರಿಗೆ ಉರಿಲಿಂಗದೇವ ವೀರಶೈವೋಪ ದೇಶವಿತ್ತು ಶಿವಾನುಭವ ಶಾಸ್ತ್ರಕೋವಿದರನ್ನಾಗಿಸಿದ. ಅಷ್ಟೇ ಅಲ್ಲದೆ ಪೆದ್ದಣ್ಣನಿಗೆ ಮಠಾಧ್ಯಕ್ಷ ಪದವಿಯನ್ನೂ ದಯಪಾಲಿಸಿದ ಮಹಾಕ್ರಾಂತಿಕಾರಿ.

ಈತ 29 ವಚನಗಳನ್ನು ಬರೆದಿದ್ದಾನೆ. ಉರಿಲಿಂಗದೇವ ಎಂಬುದು ಈತನ ವಚನಗಳ ಅಂಕಿತ. ಇಂಬಿನ ಚುಂಬನವಮೃತಾಹಾರ ಆಲಿಂಗನವೆ ಆಭರಣಸೋಂಕೆ ಸುವಸ್ತ್ರ ನೋಟವೇ ಕೂಟ, ಒಡನಾಟವೆ ಅಷ್ಟಭೋಗ ಎನಗೆ ಉರಿಲಿಂಗ ದೇವನ ಕೂಟ ಪರಾತ್ಪರ ವಾಙ್ಮನೋತೀತ ಪರಮಸುಖವು ಎಂಬ ಒಂದು ವಚನ ಈತನ ಶರಣಸತಿ-ಲಿಂಗಪತಿ ಭಾವಕ್ಕೆ ಉಜ್ವಲ ಸಾಕ್ಷಿಯಾಗಿದೆ. (ಟಿ.ಎನ್.ಎಲ್.)

**ಉರಿಲಿಂಗಪೆದ್ದಿ :** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಉರಿಲಿಂಗದೇವನ ಶಿಷ್ಯ. ಪ್ರಸಿದ್ಧ ಶಿವಶರಣೆ ವಚನಕಾರ್ತಿ ಕಾಳವ್ವೆ ಈತನ ಸತಿ. ಈತನ ಸ್ಥಳ ಆಂಧ್ರ ಪ್ರದೇಶ. ಈತನ ಪೂರ್ವಾಶ್ರಮದ ಹೆಸರು ಪೆದ್ದಣ್ಣ. ಅಸ್ಪೃಶ್ಯಕುಲದಲ್ಲಿ ಹುಟ್ಟಿ, ಬಡವನಾಗಿದ್ದು ಕುಪ್ರಸಿದ್ಧ ಕಳ್ಳನಾಗಿದ್ದ. ಒಮ್ಮೆ ನಂದವಾಡ ಗ್ರಾಮದ ಸೂರಯ್ಯನಿಗೆ ಉರಿಲಿಂಗದೇವ ಲಿಂಗದೀಕ್ಷೆ ಕೊಡುತ್ತಿರುವಾಗ ಕಂಧಾರಕ್ಕೆ ಕಳ್ಳತನಕ್ಕಾಗಿ ಅದೇ ಮನೆಗೆ ಬಂದಿದ್ದ ಪೆದ್ದಣ್ಣ ಕುತೂಹಲದಿಂದ ದೀಕ್ಷಾಕಾರ್ಯವನ್ನು ನೋಡಿ ಮನಃಪರಿವರ್ತನೆಗೊಂಡನಂತೆ. ಅಂದಿನಿಂದ ಕಳ್ಳತನವನ್ನು ಬಿಟ್ಟು ಉರಿಲಿಂಗ ದೇವನನ್ನು ಲಿಂಗದೀಕ್ಷೆ ಕೊಡುವಂತೆ ಪ್ರಾರ್ಥಿಸಿ ಆತನ ಮಠಕ್ಕೆ ಹನ್ನೆರಡು ವರುಷ ಯಾರಿಗೂ ತಿಳಿಯದಂತೆ ಕಟ್ಟಿಗೆ ಹೊತ್ತುಹಾಕುತ್ತಿದ್ದ. ಒಮ್ಮೆ ಉರಿಲಿಂಗದೇವನಿಗೆ ಸಿಕ್ಕಿಬಿದ್ದು ಉರುವಲಿನ ಬೆಲೆ ತೆಗೆದುಕೋ ಎನ್ನಲು, ಸೂರಯ್ಯನಿಗೆ ಕೊಟ್ಟ ದೀಕ್ಷೆಯನ್ನೇ ನನಗೂ ಕೊಡಿ ಎಂದು ಕಾಡಿದ. ಬೇಸರ ಹೊಂದಿದ ಉರಿಲಿಂಗದೇವ ತೆಗೆದುಕೋ ಈ ಕಲ್ಲನ್ನು, ಹೊರಟುಹೋಗು-ಎಂದು ಹೇಳಿ ಒಂದು ಕಲ್ಲು ಎಸೆದನಂತೆ. ಪೆದ್ದಣ್ಣನ ಶುದ್ಧಭಕ್ತಿಯಿಂದ ಕಲ್ಲು ಲಿಂಗವಾಯಿತು. ಶಿಷ್ಯನ ನಿಷ್ಠಾಭಕ್ತಿಯನ್ನು ಕಂಡು ಗುರು ಆತನಿಗೆ ಲಿಂಗದೀಕ್ಷೆ ಕೊಟ್ಟು ಉರಿಲಿಂಗಪೆದ್ದಿಯೆಂದು ನಾಮಕರಣ ಮಾಡಿ ಮುಂದೆ ಆತನನ್ನೇ ತನ್ನ ಪೀಠಕ್ಕೆ ಕುಳ್ಳಿರಿಸಿದ. ಈ ಕಥೆ ಅದ್ಯಶ್ಯಕವಿಯ ಪ್ರೌಢರಾಯಕಾವ್ಯ, ಬಸವಕವಿಯ ಮಹಾಲಿಂಗಲೀಲೆಗಳಲ್ಲಿ ಸೂಚಿತವಾಗಿದೆ.

ಈತ ಉರಿಲಿಂಗಪೆದ್ದಿಪ್ರಿಯ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ರಚಿಸಿದ್ದಾನೆ. ಕೆಲವು ವಚನಗಳು 2-3 ಪುಟಗಳಷ್ಟು ದೀರ್ಘವಾಗಿದ್ದು ವೇದ ಶಾಸ್ತ್ರ ಪುರಾಣ ಆಗಮ ಉಪನಿಷತ್ತು ಮೊದಲಾದ ಧರ್ಮಗ್ರಂಥಗಳ ಪ್ರಮಾಣವಾಕ್ಯಭೂಯಿಷ್ಠವಾಗಿವೆ. ಲಿಂಗಲೀಲಾ

ವಿಲಾಸಚಾರಿತ್ರ, ಗಣಭಾಷ್ಯರತ್ನಮಾಲೆ - ಈ ಗ್ರಂಥಗಳಲ್ಲಿ ಈತನ ವಚನಗಳು ಉದ್ಧೃತವಾಗಿವೆ. ಪಾಲ್ಕುರಿಕೆ ಸೋಮನಾಥನ (ಸು.1195) ಸಹಸ್ರಗಣನಾಮದಲ್ಲಿ 350 ಅಮರಗಣಗಳೊಂದಿಗೆ ಈತನ ಹೆಸರಿದೆ. ಫ.ಗು. ಹಳಕಟ್ಟಿ ಇವನ 149 ವಚನಗಳನ್ನು ಸಂಗ್ರಹಿಸಿದ್ದಾರೆ (1936). ಈತ ತನ್ನ ಕೊನೆಯ ದಿನಗಳನ್ನು ಕಲ್ಯಾಣ ಪಟ್ಟಣಕ್ಕೆ ಬಂದು ಕಳೆದಂತೆ ಕಾಣುತ್ತದೆ. ಅಲ್ಲಿ ಇವನ ಮಠವೂ ಸಮಾಧಿಯೂ ಇದೆ ಎಂದು ಹೇಳುತ್ತಾರೆ. (ಕೆ.ಎಚ್.)

**ಉರುಟಣೆಯ ಹಾಡುಗಳು :** ಮದುವೆಯ ಸಂದರ್ಭದಲ್ಲಿ ವಧೂವರರಲ್ಲಿ ಸಂಕೋಚಪ್ರವೃತ್ತಿಯನ್ನು ಕಳೆಯಲು ಕೆಲವು ಹಾಡುಗಳನ್ನು ಹಾಡಿಸುವ ಉರುಟಣೆಯ ಸಂಪ್ರದಾಯ ಕರ್ನಾಟಕದಲ್ಲಿ ರೂಢಿಯಿದೆ. ನೂತನ ದಂಪತಿಗಳು ಹಸೆಮಣೆಯ ಮೇಲೆ ಕುಳಿತು ಅರಿಶಿನ ಕುಂಕುಮ ಗಂಧ ಪುಷ್ಪಗಳನ್ನು ಪರಸ್ಪರ ಅನುಲೇಪನ ಮಾಡಿ ತಾಂಬೂಲ ಕೊಡುವಾಗ ಈ ಹಾಡುಗಳನ್ನು ವಧುವೂ ಮತ್ತು ಸುಮಂಗಲಿಯರೂ ಹಾಡುತ್ತಾರೆ. ಈ ಹಾಡುಗಳು ಉರುಟಣೆಗೆ ಕರೆಯುವುದರಿಂದ ಪ್ರಾರಂಭವಾಗಿ ಕುಂಕುಮ ಅರಿಶಿನ ಹಚ್ಚುವುದು, ಚೆಂಡಾಡುವುದು, ತಾಂಬೂಲ ಕೊಡುವುದು, ಹಾರ ಹಾಕಿ ಆರತಿ ಬೆಳಗುವುದರೊಂದಿಗೆ ಮುಕ್ತಾಯವಾಗುವುವು. ಉರುಟಣೆಯ ಹಾಡುಗಳನ್ನು ಬಾಗಿಲು ತಡೆದು ವಧೂವರರ ಕೈಯಿಂದ ಹೆಸರು ಹೇಳಿಸುವುದು, ಓಕುಳಿಯಾಡುವುದು ಮುಂತಾದವುಗಳಲ್ಲೂ ಬಳಸುತ್ತಾರೆ. ಈ ಹಾಡುಗಳು ಒಗಟಾಗಿರಬಹುದು, ಹಾಸ್ಯದಿಂದ ಕೂಡಿ ಮನರಂಜನೆಯುಳ್ಳದ್ದಾಗಿರಬಹುದು, ಪತಿಭಕ್ತಿಪೂರ್ಣ ಹಾಡಾಗಿರಬಹುದು.

ಓಕುಳಿಯಾಡುವಾಗಿನ ಒಂದು ಸುಂದರ ಉರುಟಣೆಯ ಹಾಡು ಈ ರೀತಿ ಇದೆ :

ದೊಡ್ಡ ಲಕ್ಷ್ಮಣ ದೇವರೂ ಕರದಲ್ಲೀ
ಚಿನ್ನ ಜೀರ್ಕೊಳವಿಯನೂ
ಚಿನ್ನದುಂಗುರವನ್ನು ಕರದಲ್ಲಿ ಪಿಡಿಯುತ
ಆಡಿದರೋಕುಳಿಯಾ ಸೀತಾರಾಮ
ರಾಡಿದರೋಕುಳಿಯಾ

ಉರುಟಣೆಗೆ ವಧು ವರನನ್ನು ಕರೆಯುವ ಹಾಡು

ಜಯ ಜಾನಕೀಪತಿ ರಾಘವ ಮೂರುತಿ
ದಯಮಾಡುರುಟಣೆಗೆ
ನಿಗಮಾನುತ ಹೃದಯಾನ್ವಿತ
ಸೇವಿತ ಸೇವಕಿ ನಾ ನಿಮಗೆ

ವರ ಹಸೆಮಣೆಗೆ ಬಂದು ಕುಳಿತಾಗಿನ ಹಾಡು

ಗಂಧವನು ಹಚ್ಚುವೆನು ಇಂದಿರೇಶ ನಿಮಗೆ
ವಾಸನೆಯಿಂದಿರುವ ಕೇಸರಿಗಂಧವನು
ಶ್ರೀಪತಿ ಈ ನಿಮ್ಮ ಮುತ್ತಿನ ಕಂದರಕೀಗ

ಎಂದು ವಧು ಹಾಡುತ್ತಾ ಅರಿಶಿನ, ಗಂಧ ಲೇಪನ ಮಾಡುತ್ತಾಳೆ. ಇದಕ್ಕೆಲ್ಲ ಹಿರಿಯ ಮುತ್ತೈದೆಯರು ನವವಧುವಿಗೆ ಮಾರ್ಗದರ್ಶನಮಾಡುವರು. ಹೂವಿನ ಚೆಂಡಾಟ ಮುಂತಾದ ಕಾರ್ಯಗಳು ಮುಗಿದು ಕೊನೆಗೆ ಹಾರಹಾಕಿ ಆರತಿ ಎತ್ತುವಾಗ ವಧು ಮತ್ತು ಇತರ ಸುಮಂಗಲಿಯರು ಹಾಡುವ ಹಾಡಿನಲ್ಲಿ ಮಧುರತೆ, ರಸಿಕತೆ ಅಷ್ಟೇ ಭಕ್ತಿ ಗೌರವವನ್ನು ಕಾಣಬಹುದು.

ಹಾರ ಹಾಕುವೆ ನಾಂ
ಮಾರಸುಂದರ ನಿಮಗೆ
ಜಾಜಿ ಸೇವಂತಿಗೆ ಮೈಸೂರು ಮಲ್ಲಿಗೆ
ಪರಿಪರಿ ಪರಿಮಳ ಪುಷ್ಪಗಳಾ
ದುಂಡುಮಲ್ಲಿಗೆ ಸರ ಕೆಂಡಸಂಪಿಗೆ ಹಾರ
ಕಂಠಕ್ಕೆ ತೊಡಿಸುವೆ ಶ್ರೀಪತಿ ನಿಮಗೆ

ಎಂದು ಹಾರ ಹಾಕಿ

ನಳಿನಾಕ್ಷನೀಗ ಬೆಳಗೂವೆ ನಾ ಆರೂತಿಯನು
ಕಾಳಿಂಗಮರ್ದನ ಕೃಷ್ಣಗೆ ಈಗ
ಗೋಕುಲದಲಿ ಹುಟ್ಟಿ ಗೋವುಗಳನೆ ಕಾಯ್ದು
ಗೋಪಿಯರೊಡೆಯ ಮುರಳೀಲೋಲನೆ

ಎಂದು ಹಾಡಿ ಆರತಿ ಬೆಳಗುತ್ತಾರೆ.ಮದುಮಕ್ಕಳು ಅಂದು ಲಕ್ಷ್ಮೀನಾರಾಯಣ ಸ್ವರೂಪವೆಂಬ ಪವಿತ್ರಭಾವನೆ ಉಂಟು. ಹಾಗೇ ಲಕ್ಷ್ಮೀನಾರಾಯಣ, ಶಿವ-ಪಾರ್ವತಿ, ರತಿ-ಮನ್ಮಥ, ಸೀತೆ-ರಾಮ, ಕೃಷ್ಣ-ರುಕ್ಮಿಣಿ, ವೆಂಕಟರಮಣ- ಪದ್ಮಾವತಿ - ಈ ದೇವತೆಗಳನ್ನು ಮತ್ತು ಸುಭದ್ರೆ-ಅರ್ಜುನ, ನಳ- ದಮಯಂತಿ ಮುಂತಾದವರನ್ನು ಕುರಿತ ಉರುಟಣೆಯ ಹಾಡುಗಳೂ ಇವೆ. (ಎಲ್.ಆರ್.ಎಚ್.,ಸಿ.ಎಸ್.ಸಿ.)

**ಉಲ್ಲಾಳ :** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನಲ್ಲಿ ಮಂಗಳೂರಿನಿಂದ 8ಕಿಮೀ ದೂರದಲ್ಲಿ ನೇತ್ರಾವತಿ ದಕ್ಷಿಣ ದಂಡೆಯ ಮೇಲಿರುವ ಊರು. ಇಂದು ಮಂಗಳೂರು ಪಟ್ಟಣದ ಸಮೂಹದಲ್ಲೇ ಸೇರಿಹೋಗಿದೆ.

ಪುತ್ತಿಗೆಯ ಚೌಟ ಅರಸುಮನೆತನದ ಒಂದು ಶಾಖೆಯ ರಾಜರು ಉಲ್ಲಾಳವನ್ನು ಆಳುತ್ತಿದ್ದರು. ಇಲ್ಲಿಯ ಸೋಮನಾಥ ಅವರ ಕುಲದೇವರು. 16ನೆಯ ಶತಮಾನದಲ್ಲಿ ರಾಜ್ಯಭಾರ ಮಾಡುತ್ತಿದ್ದ ಅಬ್ಬಕ್ಕ (ನೋಡಿ) ಈ ಶಾಖೆಯಲ್ಲಿ ಪ್ರಸಿದ್ಧಳು. ವಿದೇಶಿಯರ ಬಲವನ್ನು ಮುರಿಯಲು ಸರ್ವಪ್ರಯತ್ನಮಾಡಿದ ಈ ವೀರರಾಣಿ ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದಳು. ಆಕೆಯ ತರುವಾಯ ಉಲ್ಲಾಳ ರಾಜ್ಯವನ್ನಾಳಿದ ಆಕೆಯ ಮಗಳು ಕಾರ್ಕಳದ ಅರಸರೊಡನೆ ಯುದ್ಧ ಮಾಡಿ ಸತ್ತಳು. ಆಕೆಯ ಮಗ ಚಿಕ್ಕರಾಯ (1606-28) ಬಿದನೂರು ವೆಂಕಟಪ್ಪನಾಯಕನ ನೆರವನ್ನು ಪಡೆದು ಕಾರ್ಕಳದ ಅರಸನನ್ನು ಸೋಲಿಸಿದ (1608). ಭೋಜರಾಜನ ಆಳ್ವಿಕೆಯಲ್ಲಿ (1630-44) ಉಲ್ಲಾಳ ಬಿದನೂರು ಸಂಸ್ಥಾನಕ್ಕೆ ಸೇರಿತು.

ಉಲ್ಲಾಳದಲ್ಲಿ ಕೋಟೆ ಮತ್ತು ಅರಮನೆಯ ಅವಶೇಷಗಳಿವೆ. ಸೋಮನಾಥ ದೇವಾಲಯದಲ್ಲಿ ಇಟಾಲಿಯನ್ ಶೈಲಿಯ ಹಲವು ಸುಂದರ ಶಿಲ್ಪಗಳಿವೆ. ಊರಿನಿಂದ ಸು.9ಕಿಮೀ ದೂರದಲ್ಲಿ ಉಲ್ಲಾಳ ಅರಸರ ಭದ್ರತಾಣವಾಗಿದ್ದ ಉಚ್ಚಿಲ ಕೋಟೆ ಮತ್ತು ಮಣೇಲ ಅರಮನೆ ಇವೆ. ಕಾರ್ಕಳದ ಭೈರರಸ ಒಡೆಯರೂ ಇಲ್ಲಿ ಅರಮನೆಗಳನ್ನು ಕಟ್ಟಿದ್ದರೆಂದು ಹೇಳಿಕೆ.

ಸೈಯದ್‌ಮಹಮ್ಮದ್ ಷರೀಫ ಮದನೀ ದರ್ಗಾ

ಉಲ್ಲಾಳದಲ್ಲಿರುವ ಸೈಯದ್ ಮಹಮ್ಮದ್ ಷರೀಫ ಮದನೀ ಅವರ ದರ್ಗಾ ಬಹು ಪ್ರಸಿದ್ಧ. ಈ ಸಂತರು ಸು.400 ವರ್ಷಗಳ ಹಿಂದೆ ಮದೀನಾದಿಂದ ಬಂದು ಇಲ್ಲಿನ ಮೇಲಂಗಡಿ ಮಸೀದಿಯಲ್ಲಿ ನೆಲಸಿ ಇಲ್ಲಿಯೇ ಮದುವೆಯಾಗಿ ಅನೇಕ ಪವಾಡಗಳನ್ನು ಮೆರೆಸಿ ಜನಮನ್ನಣೆ ಗಳಿಸಿದರೆಂದು ಪ್ರತೀತಿ. ಇವರ ಗೌರವಾರ್ಥ ಐದು ವರ್ಷಗಳಿಗೊಮ್ಮೆ ಉರುಸ್ ನಡೆಯುತ್ತದೆ. ಎಲ್ಲ ಜಾತಿಮತಗಳ ಜನ ಇಲ್ಲಿಗೆ ಬರುತ್ತಾರೆ. ಸಂತರ ಮರಣಾನಂತರ ಕಟ್ಟಿದ ದರ್ಗಾ ನಾಲ್ಕು ಬಾರಿ ಪುನರ್ನಿರ್ಮಾಣವಾಯಿತು. ಇಂದು ಇರುವ ಭವ್ಯ ಕಟ್ಟಡ 1970ರ ರಚನೆ. ಈ ದರ್ಗಾದ ಆಡಳಿತವರ್ಗ ಅರಬ್ಬೀ ಕಾಲೇಜು ಮತ್ತು ಪ್ರೌಢಶಾಲೆಯನ್ನು ನಡೆಸುತ್ತಿದೆ. 16ನೆಯ ಶತಮಾನದಲ್ಲಿ ಫ್ರಾನ್ಸಿಸ್ಕನ್ ಪಾದ್ರಿಗಳು ಕಟ್ಟಿಸಿದ ಚರ್ಚ್ ನಗರದಲ್ಲಿದೆ. ಕವಿ ಉಲ್ಲಾಳ ಮಂಗೇಶರಾಯರು ಈ ಊರಿನವರು. (ವಿ.ಜಿ.ಕೆ.)

**ಉಷಾ ನವರತ್ನರಾಮ್** : 1939-2000. ಕನ್ನಡದ ಜನಪ್ರಿಯ ಕಾದಂಬರಿಕಾರ್ತಿ. ಇವರು 1939 ನವೆಂಬರ್ 23ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಎಂ.ವಿ. ಸುಬ್ಬರಾವ್, ತಾಯಿ ಶಾಂತಾಬಾಯಿ. ಬೆಂಗಳೂರಿನ ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು. ಪತ್ರಿಕೋದ್ಯಮ, ಡಿಪ್ಲೊಮ, ಹರ್ಬಲ್ ಬ್ಯೂಟಿಕೇರ್‌ನಲ್ಲಿ ಸರ್ಟಿಫಿಕೇಟ್ ಕೋರ್ಸ್ ಮಾಡಿದ್ದ ಇವರು ಅನಂತರ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಇವರಿಗೆ ಕರ್ನಾಟಕ ಸಂಗೀತ, ಭರತನಾಟ್ಯದಲ್ಲಿ ಪ್ರವೇಶವಿತ್ತು. ಫ್ರೆಂಚ್, ಜರ್ಮನ್ ಹಾಗೂ ಸಂಸ್ಕೃತವನ್ನು ಬಲ್ಲವರಾಗಿದ್ದರು. ಬೆಂಗಳೂರಿನ ಚಾಮರಾಜಪೇಟೆಯ ಮಹಿಳಾ ಸೇವಾ ಸಮಾಜದ ಶಾಲೆಯಲ್ಲಿ ಅಧ್ಯಾಪಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಓದುತ್ತಿದ್ದ ಕಾಲಕ್ಕೇ ಬರೆಯುವ ಹವ್ಯಾಸವನ್ನು ರೂಢಿಸಿಕೊಂಡಿದ್ದರು. ತಮ್ಮಲ್ಲಿ ಫ್ರೆಂಚ್ ಕಲಿಯಲು ಬಂದ ನವರತ್ನರಾಮ್ ಎಂಬವರೊಡನೆ ಪ್ರೇಮಾಂಕುರವಾಗಿ ಅವರನ್ನೇ ಮದುವೆಯಾದರು (1963). ಇಲ್ಲಿಂದ ಮುಂದೆ ಉಷಾ ನವರತ್ನರಾಮ್ ಆಗಿ ಬರೆಹಗಾರ್ತಿಯಾಗಿ ಗುರುತಿಸಿಕೊಂಡರು. ಮದುವೆಯ ಅನಂತರ ನವರತ್ನರಾಮ್ ಫ್ರಾನ್ಸಿಗೆ ಹೋಗಿ ಅಲ್ಲಿಂದ ತಮ್ಮ ನಲ್ಲೆಗೆ ಬರೆದ ಪತ್ರಗಳು ಪ್ಯಾರಿಸ್ಸಿನಿಂದ ಪ್ರೇಯಸಿಗೆ ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಗೊಂಡು ಜನಪ್ರಿಯವಾಗಿದೆ.

ಇವರು ಸುಮಾರು ಎಂಬತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಎರಡು ಕಥಾಸಂಕಲನಗಳೂ ಸೇರಿದಂತೆ ತೊಂಬತ್ತಕ್ಕೂ ಹೆಚ್ಚು ಸಣ್ಣ ಕತೆಗಳನ್ನು ರಚಿಸಿದ್ದಾರೆ. ಒಂದು ಕಾಲದಲ್ಲಿ ಕನ್ನಡದಲ್ಲಿ ಉಷಾ ನವರತ್ನರಾಮ್ ಅವರ ಕಥೆ ಕಾದಂಬರಿಗಳನ್ನು ಪ್ರಕಟಿಸದ ವಾರ ಹಾಗೂ ಮಾಸಿಕ ಪತ್ರಿಕೆಗಳೇ ಇರಲಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಆ ಸಂದರ್ಭದಲ್ಲಿ ಅಪಾರ ಓದುಗರ ಮೆಚ್ಚುಗೆಗೆ ಪಾತ್ರರಾಗಿದ್ದ ಇವರನ್ನು ಕಾದಂಬರಿಗಳ ಕಾರ್ಖಾನೆ ಎಂದು ಕರೆದದ್ದೂ ಉಂಟು. ಪತ್ರಿಕೆಗಳ ಅಗತ್ಯಕ್ಕೆ ತಕ್ಕಂತೆ ಓದುಗರನ್ನು ಆಕರ್ಷಿಸಬಲ್ಲ ಸೆಳೆತ

ಇವರ ಬರೆಹದ ಶೈಲಿಯಾಗಿತ್ತು. ಹೊಂಬಿಸಿಲು ಇವರ ಮೊದಲ ಕಾದಂಬರಿ (1970). ಯೌವನದ ಹೊನಲಲ್ಲಿ, ಬಂಧನ, ಹ್ಯಾಪಿ ಬರ್ತಡೇ, ಹಕ್ಕಿ ಹಾರುತಿದೆ, ಹೃದಯ ಮಿಲನ, ದೋಣಿ ಸಾಗಲಿ ಮುಂದೆ ಹೋಗಲಿ, ಒಲವಿನ ಬದುಕು, ಕಂಡು ಕಂಡು ನೀ ಎನ್ನ, ಕರುಣಾಳು ಬಾ ಬೆಳಕೆ, ಇಲ್ಲೇ ಸ್ವರ್ಗ, ಹೊಸರಾಗ - ಇವು ಇವರ ಕೆಲವು ಕಾದಂಬರಿಗಳು. ಎಲ್ಲರಿಗೂ ಸುಲಭವಾಗಿ ದಕ್ಕಬಲ್ಲ ಪ್ರೀತಿಯ ಕನಸುಗಳನ್ನು, ಒಂದು ರೀತಿಯ ಭ್ರಾಮಕ ಜಗತ್ತನ್ನು ಇವರು ತಮ್ಮ ಕಾದಂಬರಿಗಳಲ್ಲಿ ನಿರ್ಮಿಸಿದರು. ಪ್ರೀತಿಯ ಕನಸನ್ನು ಕಾಣುವ ಹದಿಹರೆಯದ ಎಳೆಯರು, ಯುವಕ ಯುವತಿಯರ ಒಂದು ಹೊಸವರ್ಗವೇ ಇಲ್ಲಿ ನಿರ್ಮಿತಗೊಂಡಿತ್ತು. ಪ್ರೇಮ, ಕಲ್ಪನೆಯ ಪ್ರೇಮ ಇವರ ಕಾದಂಬರಿಗಳ ಜಗತ್ತು; ಕೇಂದ್ರ ಬಿಂದು. ನಗರ ಕೇಂದ್ರಿತ ಮಧ್ಯಮ ವರ್ಗದ ಹಗಲುಗನಸಿನ ಬದುಕು ಭಾವನೆಗಳಿಗೆ ಇವರು ತಮ್ಮ ಕಾದಂಬರಿಗಳಲ್ಲಿ ಕಾಮನಬಿಲ್ಲು ರಚಿಸಿದರು. ಸಾಮಾಜಿಕ ಪಿಡುಗಾಗಿರುವ ವೇಶ್ಯಾವೃತ್ತಿ ಕುರಿತ ಹಗಲುಗನಸು, ಕ್ಯಾಬರೆ ನರ್ತಕಿಯೊಬ್ಬಳ ಶೋಚನೀಯ ಬದುಕಿನ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂಬ ಕಾದಂಬರಿಗಳು ಇವರ ವಿಭಿನ್ನ ಆಲೋಚನೆಯನ್ನು ಮುಂದಿಡುತ್ತವೆ. ಅಪಾರ ಓದುಗರ ಮೆಚ್ಚುಗೆ, ಪ್ರೀತಿಗೆ ಪಾತ್ರವಾಗಿದ್ದ ಹೊಂಬಿಸಿಲು, ಬಂಧನ ಎಂಬ ಕಾದಂಬರಿಗಳು ಚಲನಚಿತ್ರಗಳಾಗಿಯೂ ಇವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟಿವೆ.

ಇವರು ಕಾದಂಬರಿಕಾರ್ತಿಯಾಗಿ ಅಷ್ಟೇ ಅಲ್ಲದೆ ಪತ್ರಿಕೋದ್ಯಮದಲ್ಲೂ ಅನುಭವ ಪಡೆದಿದ್ದರು. ಕೆಲಕಾಲ ಗೆಳತಿ ಎಂಬ ಪಾಕ್ಷಿಕ ಪತ್ರಿಕೆಯ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದ್ದರು. ಸೌಂದರ್ಯದ ಬಗ್ಗೆ, ಪ್ರಾಣಿಗಳ ಬಗ್ಗೆ ವಿಶೇಷ ಆಸಕ್ತಿ, ಪ್ರೀತಿ ಇಟ್ಟುಕೊಂಡಿದ್ದ ಇವರು ಸೌಂದರ್ಯ ಸಂಕಿರಣ, ನನ್ನಮರಿ ಮುದ್ದುಮರಿ ಹಾಗೂ ಪಾಕಶಾಸ್ತ್ರ ಕುರಿತಂತೆ ಸವಿ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಹಲವು ಪ್ರಶಸ್ತಿಗಳು ದೊರೆಕಿವೆ. ಅತ್ಯುತ್ತಮ ಲೇಖಕಿ ಪ್ರಶಸ್ತಿ (1975), ಅತ್ಯುತ್ತಮ ಉಪಾಧ್ಯಾಯಿನಿ ಪ್ರಶಸ್ತಿ (1975), ರಾಜ್ಯೋತ್ಸವ ಪ್ರಶಸ್ತಿ (1982) - ಇವು ಕೆಲವು ಮುಖ್ಯ ಪ್ರಶಸ್ತಿಗಳು. ಇವರು 2000 ಅಕ್ಟೋಬರ್ 1ರಂದು ನಿಧನ ಹೊಂದಿದರು. (ಎಚ್.ಎಲ್.ಪಿ.)

**ಉಷಾ ಸುಂದರರಾಜ್** : 1942-. ಪ್ರಸಿದ್ಧ ಟೇಬಲ್ ಟೆನ್ನಿಸ್ ಆಟಗಾರ್ತಿ. ಅರ್ಜುನ ಪ್ರಶಸ್ತಿ ವಿಜೇತೆ. 1942 ಮಾರ್ಚ್ 1ರಂದು ಬೆಂಗಳೂರಿನಲ್ಲಿ ಜನಿಸಿದರು. ಮಲ್ಲೇಶ್ವರಂ ಹೆಣ್ಣು ಮಕ್ಕಳ ಪ್ರೌಢಶಾಲೆ, ಮೌಂಟ್ ಕಾರ್ಮಲ್ ಕಾಲೇಜು ಹಾಗೂ ಸೆಂಟ್ರಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದರು. ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1961ರಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿ ರೂಪುಗೊಂಡು ಸತತ 7 ವರ್ಷಗಳ ತನಕ ರಾಷ್ಟ್ರೀಯ ಅಗ್ರ ಶ್ರೇಯಾಂಕ ಪಟ್ಟಿಯಲ್ಲಿ ತಮ್ಮ ಹೆಸರನ್ನು ಉಳಿಸಿಕೊಂಡಿದ್ದರು. ಇದರಲ್ಲಿ ಸತತ 4 ಬಾರಿ ರಾಷ್ಟ್ರೀಯ ಅಗ್ರ ಶ್ರೇಯಾಂಕ ಪಟ್ಟಿಯಲ್ಲಿ 2ನೆಯ ಸ್ಥಾನವನ್ನು ಪಡೆದಿದ್ದರು. 5 ಬಾರಿ ಅಗ್ರ ಶ್ರೇಯಾಂಕ ಪಟ್ಟಿಯಲ್ಲಿ ಮೊದಲಿಗರಾಗಿದ್ದರು. ಕರ್ನಾಟಕ ರಾಜ್ಯದ ಚಾಂಪಿಯನ್ನಾಗಿ ರಾಜ್ಯ ರ್‍ಯಾಂಕಿಂಗ್ ಪ್ರಶಸ್ತಿಯನ್ನು ಸತತ 21 ವರ್ಷಗಳ ಕಾಲ ತಮ್ಮ ಹೆಸರಿನಲ್ಲಿ ಉಳಿಸಿಕೊಂಡಿದ್ದು ದಾಖಲೆಯಾಗಿದೆ. ಇವರ ಈ ಸಾಧನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಇವರು ಕರ್ನಾಟಕ ರಾಜ್ಯದ ಮಹಿಳಾ ತಂಡದ ನಾಯಕಿಯಾಗಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಭಾಗವಹಿಸಿದ್ದಾರೆ. ಇವರು ಅನೇಕ ಬಾರಿ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಆಟಗಾರರಾಗಿ ಮತ್ತು ತಂಡದ ನಾಯಕರಾಗಿ ಭಾರತವನ್ನು ಮುನ್ನಡೆಸಿದ್ದಾರೆ. ಏಷ್ಯನ್ ಚಾಂಪಿಯನ್ ಷಿಪ್, ವರ್ಲ್ಡ್ ಚಾಂಪಿಯನ್‌ಷಿಪ್, ಕಾಮನ್‌ವೆಲ್ತ್ ಚಾಂಪಿಯನ್ ಷಿಪ್ - ಇವು ಕೆಲವು ಮುಖ್ಯ ಕ್ರೀಡಾಕೂಟಗಳು. ಕೀನ್ಯ ಹಾಗೂ ಉಗಾಂಡಗಳಿಗೆ ಭಾರತ ತಂಡ ಪ್ರವಾಸ ಕೈಗೊಂಡಾಗ ಇವರು ನಾಯಕಿಯಾಗಿದ್ದರು. ಇವರು ತರಬೇತುದಾರರಾಗಿಯೂ ಉತ್ತಮ ಕೆಲಸ ನಿರ್ವಹಿಸಿದ್ದಾರೆ. ಭಾರತೀಯ ಹೆಣ್ಣು ಮಕ್ಕಳ ತಂಡ ಜಪಾನ್ ಪ್ರವಾಸ ಕೈಗೊಂಡಾಗ ಮತ್ತು ಭಾರತೀಯ ಮಹಿಳೆಯರ ತಂಡ ಸಿಯೋಲ್ ಏಷ್ಯನ್ ಗೇಮ್ಸ್ ಹಾಗೂ ಚೀನದ ಏಷ್ಯನ್ ಚಾಂಪಿಯನ್‌ಷಿಪ್ ಪಂದ್ಯಾಟಗಳಲ್ಲಿ ಭಾಗವಹಿಸಿದ ಸಂದರ್ಭಗಳು ಪ್ರಮುಖವಾದವು.

ಭಾರತೀಯ ಟೇಬಲ್ ಟೆನ್ನಿಸ್ ಫೆಡರೇಷನ್ ಅನೇಕ ಸಂದರ್ಭಗಳಲ್ಲಿ ಇವರ ತಾಂತ್ರಿಕ ಪರಿಣತಿಯ ಅನುಭವದ ಪ್ರಯೋಜನ ಪಡೆದು ಕೊಂಡಿದೆ. ಇವರು ಭಾರತದ ಪ್ರತಿನಿಧಿಯಾಗಿ ಹಿರೋಷಿಮ ಮತ್ತು ನಾಗಸಾಕಿ ಹಾಗೂ ಒಸಾಕದಲ್ಲಿ ನಡೆದ ಮಹಿಳೆಯರ ಟೇಬಲ್ ಟೆನ್ನಿಸ್ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಇವರು ಕರ್ನಾಟಕದ ಪ್ರತಿಷ್ಠಿತ ಕ್ರೀಡಾಪುರಸ್ಕಾರವಾದ ಏಕಲವ್ಯ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿದ್ದರು. 1996ರ ಅಟ್ಲಾಂಟಾ ಒಲಿಂಪಿಕ್ಸ್‌ಗೆ ಕರ್ನಾಟಕದ ಪ್ರತಿನಿಧಿಯಾಗಿ ಹೋಗಿದ್ದರು. ಇವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ. 1966ರಲ್ಲಿ ಕರ್ನಾಟಕದ ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ ದೊರೆತಿದೆ. ಇದೇ ವರ್ಷ ಭಾರತ ಸರ್ಕಾರ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ. ಈ ಪ್ರಶಸ್ತಿ ಪಡೆದ ಮಹಿಳೆಯರಲ್ಲಿ ಇವರೇ ಮೊದಲಿಗರು. (ಎಸ್.ಆರ್.ಯು.)

**ಉಳುವಿ** : ಉತ್ತರ ಕನ್ನಡ ಜಿಲ್ಲೆಯ ಜೋಯಿಡ ತಾಲ್ಲೂಕಿನಲ್ಲಿ ಯಲ್ಲಾಪುರಕ್ಕೆ ಸಮೀಪದಲ್ಲಿ ಇರುವ ಒಂದು ಗ್ರಾಮ. ಹಿಂದೆ ಇದು ಶರಣರ ಕೇಂದ್ರವಾಗಿತ್ತು. ಈ ದುರ್ಗಮ ಪ್ರದೇಶಕ್ಕೆ ಬರಲು ಅಣಶಿ ಘಟ್ಟದ ಮತ್ತು ಸುಪದ ಮೇಲಿಂದ ಎರಡು ಅರಣ್ಯಮಾರ್ಗಗಳಿವೆ. ಗವಿಮಠ ಎನ್ನುವಲ್ಲಿ ವೀರಶೈವ ಸಾಧುಗಳ ಕೆಲವು ಗುಹೆಗಳಿವೆ. ಒಂದಕ್ಕೆ ಬಸವಣ್ಣನವರ ಸಹೋದರಿ ಅಕ್ಕನಾಗಮ್ಮನ ಗುಹೆ ಎನ್ನುವರು. 12ನೆಯ ಶತಮಾನದ ಕಲ್ಯಾಣದ ಕ್ರಾಂತಿಯ ಅನಂತರ ಚೆನ್ನಬಸವಣ್ಣ, ಅಕ್ಕನಾಗಮ್ಮ, ಕಿನ್ನರಿ ಬೊಮ್ಮಯ್ಯ, ಕೂಗಿನ ಮಾರಿತಂದೆ, ಮಡಿವಾಳ ಮಾಚಿದೇವ ಮೊದಲಾದ ಅನೇಕ ಶರಣರು ಉಳುವಿಗೆ ಬಂದು ನೆಲೆಸಿದರು. ಇಲ್ಲಿ ವೀರಶೈವ ಧರ್ಮ

ಪ್ರಸಾರದ ಬಗ್ಗೆ ಯೋಜನೆಗಳನ್ನು ರೂಪಿಸಿ ಯೋಗ್ಯರಾದ ಶರಣರಿಗೆ ವಹಿಸಲಾಯಿತು; ಇಲ್ಲಿಯೇ ಚೆನ್ನಬಸವಣ್ಣ ಲಿಂಗೈಕ್ಯನಾದ ಎಂದು ಪ್ರತೀತಿ.

ಚೆನ್ನಬಸವೇಶ್ವರ ದೇವಾಲಯ

ಚೆನ್ನಬಸವಣ್ಣನ ಸಮಾಧಿ ಇರುವ ಸ್ಥಳಕ್ಕೆ ಉಳುವಿಯ ಮಹಾಮನೆ ಎಂಬ ಹೆಸರಿದೆ. ಮಹಾಮನೆಯು ಗವಿಯ ಒಳಗೆ ಸಾವಿರಾರು ಜನರು ಕುಳಿತುಕೊಳ್ಳಬಹುದಾದ ದೊಡ್ಡ ಆವಾರವಿದೆ. ಈ ಮಹಾಮನೆಯಲ್ಲಿ ಕಡೆಯ ದಾಸೋಹ ನಡೆಯಿತೆಂದು ವೀರಶೈವ ಗ್ರಂಥಗಳು ತಿಳಿಸುತ್ತವೆ. ಮಹಾಮನೆಯಲ್ಲಿ ಪೂಜಾ ವಿಗ್ರಹಗಳೂ ವೀರಭದ್ರನ ವಿಗ್ರಹವೂ ಇವೆ. ಇಲ್ಲಿರುವ ಚೆನ್ನಬಸವೇಶ್ವರ ದೇವಾಲಯದಲ್ಲಿ ಶಿವರಾತ್ರಿಯ ಸಮಯದಲ್ಲಿ ದೊಡ್ಡಜಾತ್ರೆ ಸೇರುತ್ತದೆ. ನಾಡಿನ ನಾನಾ ಕಡೆಗಳಿಂದ ಸಾವಿರಾರು ಮಂದಿ ಭಕ್ತಾದಿಗಳು ಬರುತ್ತಾರೆ.

ಇಲ್ಲಿರುವ ವಿರಕ್ತಮಠ ಗವಿಮಠ ಮತ್ತು ವಡ್ಕಲದ ಬಳಿಯ ಹಳೆಯ ಕಟ್ಟಡ, ಬಾವಿಗಳು ಮೊದಲಾದವುಗಳಿಂದ ಒಂದು ಕಾಲದಲ್ಲಿ ಉಳುವಿ ಒಂದು ಪ್ರಮುಖ ಪ್ರದೇಶವಾಗಿತ್ತೆಂದು ತಿಳಿದುಬರುತ್ತದೆ. ಉಳುವಿಯ ಪೂರ್ವ ಭಾಗದ ಅಂಚಿನಲ್ಲಿರುವ ಬುದ್ಬುದ ತಲೆ ಎಂದು ಕರೆಯುವ ಬಾವಿಯಂತಿರುವ ಕೊಳದಲ್ಲಿ ನೀರು ಉಕ್ಕಿ ಮೇಲೆ ಬರುತ್ತದೆ. ಇಲ್ಲಿ ಜನ ಭಕ್ತಿಯಿಂದ ಮೀಯುತ್ತಾರೆ. ಈ ಕೊಳದ ಆಚೆಗೆ ಬೆಟ್ಟದ ಇಳಿಜಾರ ತುದಿಯಲ್ಲಿ ರುದ್ರಮಂಟಪವೆಂದು ಕರೆಯುವ ಸು.100' - 150' ಎತ್ತರವಿರುವ ಕಲ್ಲುಗಳ ಗುಂಪಿದೆ. ಇಲ್ಲೊಂದು ಗುಹೆ ಇದ್ದು ಅದರಲ್ಲಿ ಅನೇಕ ಲಿಂಗಗಳಿದ್ದುವೆಂದೂ ಭಾರಿ ಕಲ್ಲುಬಂಡೆಯೊಂದು ಅಡ್ಡಲಾಗಿ ಬಿದ್ದು ಅದನ್ನು ಮುಚ್ಚಿಬಿಟ್ಟಿದೆಯೆಂದೂ ಹೇಳುವರು.

ಹೈದರ್ ಈ ಪ್ರದೇಶವನ್ನು ಗೆದ್ದುಕೊಂಡು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಟಿಪ್ಪು ಸತ್ತ ಅನಂತರ ಇಲ್ಲಿ ಬಾರ್ಡೆ ಬಾಬುರಾವ್ ಎಂಬುವವನು ಸಣ್ಣ ಕೋಟೆ ಕಟ್ಟಿಸಿದ. ಈಗಲೂ ಈ ಕೋಟೆಯನ್ನು ಕಾಣಬಹುದು. ಇದರ ಸಮೀಪದ ಬಾರ್ಘಾರ ಕುಣಂಗ ಗ್ರಾಮ ಒಂದು ವ್ಯಾಪಾರ ಕೇಂದ್ರ.

(ಎಂ.ಆರ್.ಪಿ.)

# ಊ

**ಊದುಬತ್ತಿ ಉದ್ಯಮ** : ಸಾಂಬ್ರಾಣಿ, ಹಾಲುಮಡ್ಡಿ, ಗಂಧದಪುಡಿ ಮುಂತಾದ ಸುವಾಸನೆ ಬೀರುವ ವಸ್ತುಗಳ ಸರಿಯನ್ನು ಬಳಿದು ಮಾಡಿರುವ ಕಡ್ಡಿಯನ್ನು ಅಗರಬತ್ತಿ, ಸುವಾಸನೆ ಕಡ್ಡಿ (ಇನ್‌ಸೆನ್ಸ್ ಸ್ಟಿಕ್), ಗಂಧದಕಡ್ಡಿ, ಸಾಂಬ್ರಾಣಿ ಕಡ್ಡಿ, ಜಾಸ್ ಸ್ಟಿಕ್ ಎಂದೂ ಕರೆಯುವುದಿದೆ.

ದೇವಸ್ಥಾನಗಳಲ್ಲಿ, ಮುಂಜಿ ಮತ್ತು ಮದುವೆ ನಡೆಯುವ ಸ್ಥಳಗಳಲ್ಲಿ ಮತ್ತು ಸಭೆಗಳು ನಡೆಯುವ ಸ್ಥಳಗಳಲ್ಲಿ ಮತ್ತು ಇತರ ಶುಭ ಸಮಾರಂಭಗಳಲ್ಲಿ, ದಿನನಿತ್ಯ ಮನೆಮನೆಗಳಲ್ಲಿ ಸಾಂಬ್ರಾಣಿ ಧೂಪ, ಗಂಧದಕಡ್ಡಿಗಳನ್ನು ವಾಡಿಕೆಯಾಗಿ ಉರಿಸುತ್ತಾರೆ. ಸುವಾಸನೆಯನ್ನು ಬೀರುವ ಇವುಗಳ ಹೊಗೆ ವಾತಾವರಣದ ಸೂಕ್ಷ್ಮ ಕ್ರಿಮಿಗಳನ್ನು ನಾಶಮಾಡಿ ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಾತ್ಕಾಲಿಕವಾಗಿ ತಡೆಯುತ್ತದೆ. ಪ್ರಾಯಶಃ ಈ ಉದ್ದೇಶದಿಂದಲೇ ರೋಗಿಗಳ ಮತ್ತು ಬಾಣಂತಿಯರ ಕೊಠಡಿಗಳಲ್ಲಿ ಸಾಂಬ್ರಾಣಿ (ಗಮ್ ಬೆಂಜೋಯಿನ್) ಹೊಗೆಯನ್ನು ಹಾಕಿರುತ್ತಾರೆ. ಚಿತ್ತೈಕಾಗ್ರತೆಯಿಂದ ದೇವರ ಧ್ಯಾನ ಮಾಡಲು ಈ ಸುವಾಸನೆ ಸೌಲಭ್ಯ ಒದಗಿಸುತ್ತದೆ. ಹಿಂದಿನ ಕಾಲದಲ್ಲಿ ಹಲಗಾರತಿಯ ಕೆಂಡದಮೇಲೆ ದಶಾಂಗದ ಪುಡಿ ಉದುರಿಸಿ, ಬೇಕಾದ ಸುವಾಸನೆಯನ್ನು ಪಡೆಯುತ್ತಿದ್ದರು. ಈ ಸುಗಂಧ ವಾತಾವರಣವನ್ನು ಪಡೆಯಲು ಈಗ ಊದುಬತ್ತಿಯನ್ನು ಬಳಸಲಾಗುತ್ತಿದೆ.

ಊದುಬತ್ತಿ ಕೈಗಾರಿಕೆಯಲ್ಲಿ ವಿವಿಧ ಬೇರುಗಳು, ಮರಗಳು, ಬೀಜಗಳು, ತೊಗಟೆಗಳು, ಎಲೆಗಳು, ಗೋಂದುಗಳು, ಹೂಗಳು ಇತ್ಯಾದಿ ಅನೇಕ ಕಚ್ಚಾ ವಸ್ತುಗಳನ್ನು ಬಳಸುತ್ತಾರೆ. ಮರಗಳಲ್ಲಿ ಮುಖ್ಯವಾದುವು ಗಂಧ, ಅಗರ್ ಮತ್ತು ದೇವದಾರು; ಬೇರುಗಳಲ್ಲಿ ಮುಖ್ಯವಾದುವು ಖಸ್, ಕಾಸ್‌ಕಸ್, ನಲ್ ಮತ್ತು ಕೆಲೋಮಸ್; ತೊಗಟೆಗಳಲ್ಲಿ ಮುಖ್ಯವಾದುವು ದಾಲ್ಚಿನ್ನಿ, ಕಪೂರಕಚ್ರಿ; ಬೀಜಗಳಲ್ಲಿ ಮುಖ್ಯವಾದುವು ಆಮ್ ಬ್ರೆಟ್ಟೆ, ಆನಿಬೀಜ, ಕಸ್ತೂರಿ, ಮೆಲೊ, ಅಜವಾನ, ಗೌಲ, ಏಲಕ್ಕಿ; ಎಲೆಗಳಲ್ಲಿ ಮುಖ್ಯವಾದುವು ದವನ, ಪಚ್‌ಚೌಲಿ; ಹೂಗಳಲ್ಲಿ ಮುಖ್ಯವಾದುವು ಒಣಗಿದ ಗುಲಾಬಿ ಮೊಗ್ಗು, ಕೇಸರಿ, ಜಾಜಿ, ಬಕುಳ, ಲಾರೆಲ್ಸ್, ಇದಲ್ಲದೆ ಇದಕ್ಕೆ ಬಳಸುವ ಇತರ ವಸ್ತುಗಳೆಂದರೆ ಕಲ್ಲುಹೂ, ಓಕ್ ಮಾಸ್, ಸ್ಟೈರಾಕ್ಸ್, ಬೆನ್ ಜೋಯಿನ್, ಮಿರ್, ಒಲಿಬಾನಮ್, ಹಾಲುಮಡ್ಡಿ, ಗೋಂದು ಮತ್ತು ರೇಸಿನ್, ಪ್ರಕೃತಿಯಲ್ಲಿ ದೊರೆಯುವ ಅತ್ಯಂತ ಬೆಲೆಬಾಳುವ ಸುಗಂಧ ವಸ್ತುಗಳೆಂದರೆ ಕಸ್ತೂರಿ, ಪುನುಗು ಮತ್ತು ಆಂಬರ್.

ಈ ಮೇಲಿನ ಕಚ್ಚಾ ಪದಾರ್ಥಗಳನ್ನು ಊದುಬತ್ತಿ ಕೈಗಾರಿಕೆಯನ್ನೇ ಕುಲಕಸುಬಾಗುಳ್ಳವರು ಬಳಸುತ್ತಾರೆ. ಕಸ್ತೂರಿ, ಪುನುಗು ಇತ್ಯಾದಿಗಳನ್ನು ಇತ್ತೀಚೆಗೆ ಕೃತಕ ರೀತಿಯಲ್ಲಿ ತಯಾರಿಸುತ್ತಿದ್ದಾರೆ. ಈ ಕೃತಕ ವಸ್ತುಗಳ ಬೆಲೆ ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಎಲೆ, ಬೇರು, ತೊಗಟೆ ಮತ್ತು ರೇಸಿನ್‌ಗಳಿಂದ ಸುಗಂಧದ ಎಣ್ಣೆಗಳನ್ನು ಬಟ್ಟಿ ಇಳಿಸಿ ಊದುಬತ್ತಿಯಲ್ಲಿ ಬಳಸುತ್ತಾರೆ. ಕೃತಕ ರೂಪದಲ್ಲಿ ತಯಾರಾದ ಸುಗಂಧ ಎಣ್ಣೆಗಳೂ ಹೇರಳವಾಗಿ ದೊರೆಯುತ್ತವೆ. ಎರಡನೆಯ ಮಹಾಯುದ್ಧ ಮುಗಿದ ಅನಂತರ ಊದು ಬತ್ತಿ ಕೈಗಾರಿಕೆಯಲ್ಲಿ ಪ್ರಕೃತಿಯಿಂದ ದೊರಕುವ ಸುವಾಸನೆ ಎಣ್ಣೆಗಳ ಬಳಕೆ ಹೆಚ್ಚಿದೆ.

ತಾನು ಬಳಸುವ ಪುಡಿಗಳ ಮಿಶ್ರಣ, ಪ್ರಮಾಣ ಮತ್ತು ತಯಾರಿಸುವ ರೀತಿ ಈ ವಿಷಯಗಳನ್ನು ಪ್ರತಿಯೊಬ್ಬ ಊದುಬತ್ತಿ ತಯಾರಕನೂ ರಹಸ್ಯವಾಗಿ ಇಟ್ಟಿರುತ್ತಾನೆ. ಕಚ್ಚಾ ಪದಾರ್ಥಗಳನ್ನು ಸಣ್ಣಗೆ ಪುಡಿಮಾಡಿ, ಅಂಟಿಸುವ ವಸ್ತುವಿನ ಜೊತೆ ವಿವಿಧ ರೀತಿಯಿಂದ ಬೆರೆಸಿ, ಕಡೆಗೆ ತೆಳ್ಳಗಿರುವ ಬಿದಿರಿನ ಕಡ್ಡಿಗೆ ಈ ಮಿಶ್ರಣವನ್ನು ಹಚ್ಚಿ ಒಣಗಿಸುತ್ತಾರೆ. ಬಳಸಿರುವ ಕಚ್ಚಾ ಪದಾರ್ಥಗಳು, ಕಡ್ಡಿಯ ಉದ್ದ ಮತ್ತು ಗಾತ್ರಕ್ಕೆ ತಕ್ಕಂತೆ ಬತ್ತಿ ಉರಿಯುವ ಕಾಲ ವ್ಯತ್ಯಾಸವಾಗುತ್ತದೆ.

ತಯಾರಿಸುವ ವಿಧಾನ : ಉತ್ತಮ ದರ್ಜೆಯ ಊದುಬತ್ತಿಗಳನ್ನು ತಯಾರಿಸಲು ವಿವಿಧ ವಿಧಾನಗಳನ್ನು ಅನುಸರಿಸಲಾಗುತ್ತದೆ. ಮೊಟ್ಟ ಮೊದಲು ಕೆಂಪು ಮರದ ಪುಡಿ, ಬಿಳಿಯ ಚಿಪ್ಪಿನ ಪುಡಿ (ವೈಟ್ ಚಿಪ್ ಪೌಡರ್), ಇದ್ದಿಲು ಪುಡಿ, ಗಂಧದ ಪುಡಿ ಮತ್ತು ಮಸಾಲೆ ಪುಡಿ

## ಮಾದರಿ ಸೂತ್ರ

| ಪ್ರತಿವಸ್ತು ಪ್ರಮಾಣ 29.07 ಗ್ರಾಂ | ಪ್ರತಿವಸ್ತು ಪ್ರಮಾಣ 58.15 ಗ್ರಾಂ | ಪ್ರತಿವಸ್ತು ಪ್ರಮಾಣ 81.41 ಗ್ರಾಂ | ಪ್ರತಿವಸ್ತು ಪ್ರಮಾಣ 116.3 ಗ್ರಾಂ | ಪ್ರತಿವಸ್ತು ಪ್ರಮಾಣ 174.45 ಗ್ರಾಂ | ಪ್ರತಿವಸ್ತು ಪ್ರಮಾಣ 232.6 ಗ್ರಾಂ |
|---|---|---|---|---|---|
| 1 ಸಾಬೂನು<br>2 ಜಾಪತ್ರೆ | 3 ಕೋಟಿಚಂದನ<br>4 ಗೌಲ<br>5 ಜಾಕಾಯಿ<br>6 ಏಲಕ್ಕಿ | 7 ಕೀನೇರಿಪಟ್ಟಿ<br>8 ತಾಳೀಸಪತ್ರೆ<br>9 ಚಂಗಲಕೋಷ್ಟ<br>10 ಅತಿಮಧುರ<br>11 ಲವಂಗ | 12 ಸಜ್ಜರಸ<br>13 ಲವಂಗ ಚಕ್ಕೆ<br>14 ಬಿಳಿಮಸ್ತಕಿ | 15 ಅನಾರಸ ಹೂ<br>16 ನಖನಾಗ ಕೇಸರಿ<br>17 ಗುಲಾಬಿ ಹೂ | 18 ಸಂಪಿಗೆಮೊಗ್ಗು<br>19 ಲವಂಗಪತ್ರೆ<br>20 ದೇಶಾವರ<br>21 ಕಲ್ಲು ಹೂ<br>22 ಲಾಮಂಚ<br>23 ಮುಡಿದಾಳ<br>24 ಕಚೋರ<br>25 ಬಾವಂಚಿ ಬೀಜ<br>26 ಸಣ್ಣ ರಾಸ್ನೆ<br>27 ಪಚ್ಚೆ ಸೊಪ್ಪು<br>28 ತುಪ್ಪದ ದೇವದಾರು |

ಈ ಮಸಾಲೆ ಚೂರ್ಣಕ್ಕೆ ಕೆಳಗಿನ ವಸ್ತುಗಳನ್ನು ಸೇರಿಸಿ, ಮಿಶ್ರಣವನ್ನು ಪನ್ನೀರಿನ ಪಾತ್ರೆಯಲ್ಲಿ ಹಾಕಿ ಸ್ವಲ್ಪ ಹೊತ್ತು ನೆನೆ ಇಡಬೇಕು.

## ಮೇಲಿನ ಮಸಾಲೆಗೆ ಕೂಡಿಸುವ ವಸ್ತುಗಳು

| ಪ್ರತಿವಸ್ತು ಪ್ರಮಾಣ 11.63 ಗ್ರಾಂ | ಪ್ರತಿವಸ್ತು ಪ್ರಮಾಣ 14.53 ಗ್ರಾಂ | ಪ್ರತಿವಸ್ತು ಪ್ರಮಾಣ 23.26 ಗ್ರಾಂ | ಪ್ರತಿವಸ್ತು ಪ್ರಮಾಣ 58.15 ಗ್ರಾಂ | ಪ್ರತಿವಸ್ತು ಪ್ರಮಾಣ 145.3 ಗ್ರಾಂ | ಪ್ರತಿವಸ್ತು ಪ್ರಮಾಣ 174.45 ಗ್ರಾಂ | ಪ್ರತಿವಸ್ತು ಪ್ರಮಾಣ 232.6 ಗ್ರಾಂ |
|---|---|---|---|---|---|---|
| ಜೇನುತುಪ್ಪ | ಪುನುಗು ಚೆಟ್ಟು | ಕಲ್ಲುಸಕ್ಕರೆ<br>ಶಿಲಾರಸ<br>ಬಿಳಿ ಹಾಲುಮಡ್ಡಿ | ಜಾಲಿಯ ಅಂಟು<br>ಬೆಲ್ಲ | ಶ್ರೀಗಂಧವನ್ನು ಸಾಣೆಕಲ್ಲಿನ ಮೇಲೆ ತಿಕ್ಕಿದಾಗ ಬಂದ ದ್ರವ | ಕವಡ<br>ಲೋಬಾನ | ಮೇಲಿನ ಮಸಾಲೆ ಚೂರ್ಣ, ಪುಳ್ಳೆ ದೇವದಾರು ಕಟ್ಟಿಗೆಯಿಂದ ತಯಾರಿಸಿದ ಇದ್ದಲು |

| ಪ್ರತಿವಸ್ತು ಪ್ರಮಾಣ 0.7 ಗ್ರಾಂ | ಪ್ರತಿವಸ್ತು ಪ್ರಮಾಣ 1.4 ಗ್ರಾಂ | ಪ್ರತಿವಸ್ತು ಪ್ರಮಾಣ 11.63 ಗ್ರಾಂ | ಪ್ರತಿವಸ್ತು ಪ್ರಮಾಣ 14.53 ಗ್ರಾಂ | ಪ್ರತಿವಸ್ತು ಪ್ರಮಾಣ 23.26 ಗ್ರಾಂ | ಪ್ರತಿವಸ್ತು ಪ್ರಮಾಣ 26.16 ಗ್ರಾಂ | ಪ್ರತಿವಸ್ತು ಪ್ರಮಾಣ 81.41 ಗ್ರಾಂ | ಪ್ರತಿವಸ್ತು ಪ್ರಮಾಣ 93.04 ಗ್ರಾಂ | ಪ್ರತಿವಸ್ತು ಪ್ರಮಾಣ 116.3 ಗ್ರಾಂ |
|---|---|---|---|---|---|---|---|---|
| ಉತ್ತಮ ಕಸ್ತೂರಿ ಜವಾಜಿ | ಕೇಸರಿ ಪುನುಗು | ಪಚ್ಚ ಕರ್ಪೂರ | ಕಸ್ತೂರಿ ಗೆಡ್ಡೆ | ಬಿಳಿಹಾಲುಮಡ್ಡಿ<br>ಶಿಲಾರಸ<br>ಜಾಲಿಯ ಅಂಟು<br>ಕಲ್ಲುಸಕ್ಕರೆ | ಪುನುಗು ಚೆಟ್ಟಿ | ಕವಡ ಲೋಬಾನ | ಮೇಲಿನ ಮಸಾಲೆ | ಇದ್ದಲು |

ಇವನ್ನು ತೂಕ ಮಾಡಿ ಅನಂತರ ಜರಡಿಯಾಡಿಸಿ, ಉತ್ತಮ ದರ್ಜೆಯ ನುಣುಪಾದ ಪುಡಿಯನ್ನು ಮಾಡಿಕೊಳ್ಳಬೇಕು. ಕೆಲವು ಸುಗಂಧಯುಕ್ತ ರಾಸಾಯನಿಕ ವಸ್ತುಗಳನ್ನು (ಕೌಮಾರೀನ್ ಹರಳುಗಳು, ಗುಲಾಬಿ ಹರಳುಗಳು, ವೆನಿಲನ್ ಇತ್ಯಾದಿ) ಪುಡಿಮಾಡಿ, ಮೇಲೆ ಹೇಳಿರುವ ನುಣುಪಾದ ಪುಡಿಯ ಜೊತೆ ಬೆರೆಸಬೇಕು. ಈ ಮಿಶ್ರಣಕ್ಕೆ ಶಿಲಾರಸ ಮತ್ತು ಸಾಂಬ್ರಾಣಿಯನ್ನು ಬೆರೆಸಬೇಕು. ಉತ್ತಮ ದರ್ಜೆಯ ನಯವಾದ ಸರಿ ಪಡೆಯಲು ಸ್ವಲ್ಪ ಜೇನುತುಪ್ಪವನ್ನು ಹಾಕಬೇಕು. ಯಾವುದೇ ಸಂದರ್ಭದಲ್ಲೂ ನೀರನ್ನು ಬಳಸಬಾರದು. ನೀರಿದ್ದರೆ ಊದುಬತ್ತಿ ಸರಿಯಾಗಿ ಉರಿಯುವುದಿಲ್ಲ. ಈಗ ಈ ಮಿಶ್ರಣಕ್ಕೆ ವಿವಿಧ ಸುಗಂಧಗಳ ಮಿಶ್ರಣವೊಂದನ್ನು ಹಾಕಿ ಚೆನ್ನಾಗಿ ಬೆರೆಸಬೇಕು. ನಯವಾದ ಮತ್ತು ಮೃದುವಾದ ಸರಿ ತಯಾರಾದ ಅನಂತರ, ಕೈಯಲ್ಲಿ ಹಿಡಿಯುವಷ್ಟು ಮುದ್ದೆಯನ್ನು ಮಾಡಿಕೊಳ್ಳಬೇಕು.

ಅನಂತರ ಬಿದಿರಿನ ಕಡ್ಡಿಗಳನ್ನು ಆರಿಸಬೇಕು. ಈ ಕಡ್ಡಿಗಳ ಒಂದು ಕಡೆಯ ಭಾಗದಲ್ಲಿ (ಸುಮಾರು 1-12 ಅಂಗುಲದವರೆಗೆ) ಬಣ್ಣಗಳನ್ನು (ಕೆಂಪು, ಹಸಿರು) ಬಳಿಯಬೇಕು. ಈ ಕಡ್ಡಿಗಳಿಗೆ ಮೊದಲೇ ಮೇಲೆ ತಯಾರಿಸಿದ ಮುದ್ದೆಯ ಮಸಾಲೆಯನ್ನು ಸಮಾನ ರೀತಿಯಲ್ಲಿ ಹಚ್ಚಬೇಕು. ಮೊದಲು ಕಡ್ಡಿಯ ಮೇಲೆ ಮಸಾಲೆಯನ್ನು ಹಚ್ಚಿ, ಅದನ್ನು ನುಣುಪಾದ ಮರದ ಹಲಗೆಯ ಮೇಲೆ ಅದುಮಿ, ಅನಂತರ ಕಡ್ಡಿಯನ್ನು ಉರುಳಿಸಬೇಕು. ಅಭ್ಯಾಸ

ಮತ್ತು ಅನುಭವ ಬಂದ ಮೇಲೆ, ಒಂದು ಸಲಕ್ಕೆ ಅನೇಕ ಕಡ್ಡಿಗಳಿಗೆ ಮಸಾಲೆ ಹಚ್ಚಿ, ಮರದ ಹಲಗೆಯ ಮೇಲೆ ಉರುಳಿಸಿ, ಒಂದೇ ಸಮನಾದ ಊದಿನ ಕಡ್ಡಿಗಳನ್ನು ಪಡೆಯಬಹುದು. ಅನುಭವಿ ಕೆಲಸಗಾರನೊಬ್ಬ, ಒಂದು ಗಂಟೆಯಲ್ಲಿ 550 ಗ್ರಾಂನಿಂದ 1 ಕಿಲೊಗ್ರಾಂನಷ್ಟು ಊದುಬತ್ತಿಯನ್ನು ತಯಾರಿಸಬಹುದು. ಕಡ್ಡಿಗಳ ಮೇಲಿನ ಮಸಾಲೆ ಮಿಶ್ರಣ ದೊಡ್ಡದಾಗಿಯೂ ಮತ್ತು ದಪ್ಪನಾಗಿಯೂ ಇರಬೇಕಾದರೆ, ಮಸಾಲೆ ಸರಿ ಶಕ್ತಿಯುತವಾಗಿಯೂ ಗಟ್ಟಿಯಾಗಿಯೂ ಇರಬೇಕು. ಊದುಬತ್ತಿಗೆ ಅಪೇಕ್ಷಿತ ಬಣ್ಣ ಬರಬೇಕಾದರೆ, ನುರ್ವ ಬಣ್ಣದ ಪುಡಿಯನ್ನು ಮರದ ಹಲಗೆಯ ಮೇಲೆ ಹಾಕಿಕೊಂಡು, ಬತ್ತಿಯನ್ನು ಅದರ ಮೇಲೆ ಉರುಳಿಸಬೇಕು. ಇಷ್ಟು ಮಾಡಿದಾಗ, ಊದು ಬತ್ತಿ ಒದ್ದೆಯಾಗಿರುತ್ತದೆ. ಇದನ್ನು ಗಾಳಿಯಲ್ಲಿ ಬಿಟ್ಟು ಒಣಗಿಸಬೇಕು. ಬಹಳ ಬಿಸಿಲಿಗೆ ಬಿಡಬಾರದು. ಮೊದಲ ಸಲ ಕಡ್ಡಿಗೆ ಹಚ್ಚಿದ ಮಸಾಲೆ ಸರಿಯಾಗಿ ಅಂಟಿಕೊಳ್ಳದಿದ್ದರೆ ಕಡ್ಡಿಗಳನ್ನು ಒಣಗಿಸಿದ ಮೇಲೆ ಪುನಃ ಮಸಾಲೆ ಹಚ್ಚಿ ಹಲಗೆಯ ಮೇಲೆ ಅದುಮಿ ಉರುಳಿಸಿದರೆ, ಸಮನಾದ ಬತ್ತಿ ಸಿಗುತ್ತದೆ. ಒಣಗಿದ ಊದು ಬತ್ತಿಯ ಮೇಲೆ ಸುಗಂಧವನ್ನು ಹಚ್ಚುತ್ತಾರೆ. ಅನಂತರ ತೂಕಮಾಡಿ, ಸುರುಳಿ ಮಾಡಿ ಪಾರದರ್ಶಕ ಕಾಗದಗಳಲ್ಲಿ ಸುತ್ತಿ ರಟ್ಟಿನ ಡಬ್ಬಿಗಳಲ್ಲಿ ಅಥವಾ ತಗಡಿನ ಕೊಳವೆಗಳಲ್ಲಿ ಪ್ಯಾಕ್ ಮಾಡುತ್ತಾರೆ. ಪೊಟ್ಟಣದ ಮೇಲೆ ಹೆಸರು ಮುದ್ರಿಸಿದ ಕಾಗದ ಅಂಟಿಸಿ, ಜಲ್ಲಿ ಕಾಗದದಿಂದ ಸುತ್ತುತ್ತಾರೆ.

ಉತ್ತಮ ದರ್ಜೆಯ ಊದುಬತ್ತಿಯಲ್ಲಿ ಸುಗಂಧ ಮತ್ತು ಪರಿಮಳ ಕೊಡುವ ವಸ್ತುಗಳನ್ನು ಚೆನ್ನಾಗಿ ಬೆರೆಸಿ ಇತರ ಕಚ್ಚಾ ಪದಾರ್ಥಗಳ ಜೊತೆ ಚೆನ್ನಾಗಿ ಅರೆದು, ಬರುವ ಮಸಾಲೆ ಮುದ್ದೆಯನ್ನು ತೆಳ್ಳಗಿನ ಬಿದಿರಿನ ಕಡ್ಡಿಗಳಿಗೆ ಅಂಟಿಸುವರು, ಕೀಳುದರ್ಜೆಯ ಊದುಬತ್ತಿಯಲ್ಲಿ, ಮೊದಲು ಬಿದಿರಿನ ಕಡ್ಡಿಗೆ ಗೋಂದು ಹಾಕಿ, ಇದ್ದಲು ಪುಡಿ ಮತ್ತು ಗಂಧದ ಪುಡಿಯನ್ನು ಅಂಟಿಸುತ್ತಾರೆ. ಕಡೆಗೆ ಈ ಕಡ್ಡಿಯನ್ನು ಸುಗಂಧದ ವಸ್ತುವಿನಲ್ಲಿ ನೆನೆಸಿಟ್ಟು, ಕೆಲವು ನಿಮಿಷಗಳ ಮೇಲೆ ಪ್ಯಾಕ್ ಮಾಡುತ್ತಾರೆ.

ಉತ್ತಮ ದರ್ಜೆಯ ಊದುಬತ್ತಿಯ ಗುಣ ಅದರ ಮಸಾಲೆಯನ್ನು ಅವಲಂಬಿಸಿದೆ. ಒಳ್ಳೆಯ ಮಸಾಲೆಯನ್ನು ತಯಾರಿಸಲು ಕೆಳಗಿನ ಮಾದರಿಸೂತ್ರದಲ್ಲಿ ಕೊಟ್ಟಿರುವಂತೆ ಕಚ್ಚಾ ಪದಾರ್ಥಗಳನ್ನು ಯುಕ್ತ ಪ್ರಮಾಣದಲ್ಲಿ ತೆಗೆದುಕೊಂಡು, ಚೆನ್ನಾಗಿ ಕುಟ್ಟಿ ನುಣುಪಾದ ಪುಡಿಯನ್ನು ತಯಾರಿಸಬೇಕು. ಪುಡಿಯನ್ನು ಬಟ್ಟೆಯಲ್ಲಿ ಸೋಸಬೇಕು. ಚೆನ್ನಾಗಿ ಸೋಸಿದ ಈ ಮಿಶ್ರಣದ ಪುಡಿಯೇ ಊದುಬತ್ತಿ ತಯಾರಿಕೆಗೆ ಮುಖ್ಯವಾದ ದಿನಸು. ಇದನ್ನು ಮಸಾಲೆ ಅಥವಾ ಸಾಂಬ್ರಾಣಿ ಎಂದು ಕರೆಯುತ್ತಾರೆ. ಯಾವುದೇ ಜಾತಿಯ ಉತ್ತಮ ಊದುಬತ್ತಿ ತಯಾರಿಸಬೇಕಾದರೆ, ಈ ಮಸಾಲೆಯನ್ನು ಸಿದ್ಧಪಡಿಸಿಕೊಂಡು, ಒಂದು ಡಬ್ಬಿಯಲ್ಲಿ ಇಟ್ಟುಕೊಂಡಿರಬೇಕು. ಅನಂತರ ಎಲ್ಲ ವಸ್ತುವನ್ನೂ ಸಣ್ಣದಾಗಿ ಅರೆಯಬೇಕು. ಗಟ್ಟಿಯಾದರೆ ಸ್ವಲ್ಪ ಪನ್ನೀರನ್ನು ಪುನಃ ಹಾಕಿ ಚೆನ್ನಾಗಿ ಅರೆಯಬೇಕು. ಮಸಾಲೆ ಬೆಣ್ಣೆಯಂತೆ ಮಂದವಾಗಿರಬೇಕು. ಹೆಚ್ಚಿಗೆ ಪನ್ನೀರು ಹಾಕಿ ಮಸಾಲೆಯನ್ನು ಅಳ್ಳಕ ಮಾಡಬಾರದು. ಅನಂತರ ಈ ಮಿಶ್ರಣವನ್ನು ಸಿದ್ಧವಿರುವ ಬಿದಿರಿನ ಕಡ್ಡಿಗಳಿಗೆ ಹಚ್ಚಬೇಕು. ಊದು ಬತ್ತಿಯ ಸುವಾಸನೆ ಕಡಿಮೆಯಾಗಿದ್ದರೆ ಮೈದಾಲ ಪುಡಿಯನ್ನು ಮಿಶ್ರಣದಲ್ಲಿ ಹಾಕಿ ಕಲೆಸಬೇಕು. ಆಗ ಊದುಬತ್ತಿಗೆ ಸಾಕಷ್ಟು ಸುವಾಸನೆ ಬರುತ್ತದೆ. ಯಥಾಪ್ರಕಾರ ಇವನ್ನು ಪ್ಯಾಕ್ ಮಾಡಬಹುದು.

ಜವಾಜಿ ಬತ್ತಿ ತಯಾರಿಸಬೇಕಾದರೆ ಮೇಲೆ ತಿಳಿಸಿದ ಮುಖ್ಯ ಸಾಮಗ್ರಿ ತೆಗೆದುಕೊಂಡು ಈ ಕೆಳಗಿನ ವಸ್ತುಗಳನ್ನು ಅದಕ್ಕೆ ಸೇರಿಸಬೇಕು.

ಇದೇ ರೀತಿ ಸಾಮಗ್ರಿಗಳನ್ನು ಬದಲಾಯಿಸಿಕೊಂಡು, ಪುನುಗಿನ ಊದುಬತ್ತಿ, ಕಸ್ತೂರಿ ಊದುಬತ್ತಿ ಮತ್ತು ಸಾದಾ ಊದುಬತ್ತಿಗಳನ್ನು ತಯಾರಿಸುತ್ತಾರೆ.

ಮಸಾಲೆ ಬತ್ತಿ, ಜವಾಜಿ ಬತ್ತಿ, ದರಬಾರ್ ಬತ್ತಿ, ಪುನುಗಿನ ಬತ್ತಿ ಇತ್ಯಾದಿ ಅನೇಕ ರೀತಿಯ ಊದುಬತ್ತಿಗಳಿವೆ. ವಿವಿಧ ಜಾತಿಗಳನ್ನು ಸೂಚಿಸಿ, ಗಿರಾಕಿಗಳನ್ನು ಆಕರ್ಷಿಸಲು, ಹಸಿರು, ಕೆಂಪು, ಕಪ್ಪು ಮತ್ತು ಹಳದಿ ಬಣ್ಣದ ಊದುಬತ್ತಿಗಳು ಇರುತ್ತವೆ. ಊದುಬತ್ತಿಯ ಕಡ್ಡಿಗಳು ತೆಳ್ಳಗೂ ದಪ್ಪಗೂ ಇರುತ್ತವೆ. ಕಡ್ಡಿಗಳ ಉದ್ದ: 8 ಅಂಗುಲ, 8.5 ಅಂಗುಲ, 10 ಅಂಗುಲ, 11 ಅಂಗುಲ ಮತ್ತು 13 ಅಂಗುಲ. ಊದುಬತ್ತಿಯ ಉದ್ದ ಮತ್ತು ಗಾತ್ರವನ್ನು ಇನ್ನೂ ಕ್ರಮೀಕರಿಸಿಲ್ಲ.

ಊದುಬತ್ತಿಯ ರಫ್ತು: ಊದುಬತ್ತಿಯನ್ನು ಮುಂಬಯಿ ಮತ್ತು ಕೋಲ್ಕತ್ತಗಳ ಮುಖಾಂತರ ಹೊರಗಿನ ದೇಶಗಳಿಗೆ ರಫ್ತು ಮಾಡಲಾಗುತ್ತದೆ.

ಊದುಬತ್ತಿ ಉದ್ಯಮ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದೆ. ಹೆಂಗಸರು ತಮ್ಮ ಮನೆಗೆ ಊದುಬತ್ತಿಯ ಮಸಾಲೆಯನ್ನು ತೆಗೆದುಕೊಂಡು ಹೋಗಿ, ಸಂಸಾರದವರೆಲ್ಲ ಸೇರಿ, ಊದುಬತ್ತಿ ತಯಾರಿಸಿ ಕೂಲಿ ಸಂಪಾದಿಸುತ್ತಾರೆ. ಕೆಲಸಗಾರರು ಗುತ್ತಿಗೆಯ ಪ್ರಕಾರ ಸಂಪಾದನೆ ಮಾಡುತ್ತಾರೆ. ಚುರುಕಾಗಿ ಕೆಲಸ ಮಾಡುವವರು ಎಂಟು ಗಂಟೆಯಲ್ಲಿ ಅರ್ಧ ಕಿಲೋ ಊದುಬತ್ತಿ ತಯಾರಿಸುತ್ತಾರೆ.

ಬಿದಿರಿನ ಕಡ್ಡಿಗಳನ್ನು ಮಾಡುವುದು ಮತ್ತು ತಗಡಿನ ಕೊಳವೆಗಳನ್ನು ತಯಾರಿಸುವುದು ಇವೆರಡೂ ಊದುಬತ್ತಿಯ ತಯಾರಿಕೆಯನ್ನು ಅವಲಂಬಿಸಿರುವ ಗೃಹಕೈಗಾರಿಕೆಗಳು. ಕರ್ನಾಟಕ ರಾಜ್ಯದಲ್ಲಿ ನೂರಕ್ಕಿಂತ ಹೆಚ್ಚು ಊದುಬತ್ತಿ ಕಾರ್ಖಾನೆಗಳಿವೆ. ಬೆಂಗಳೂರು, ಮೈಸೂರು, ಚಿಂತಾಮಣಿ, ಕೋಲಾರ ಮತ್ತು ಬೆಳಗಾಂವಿ ಇವು ಪ್ರಮುಖ ಸ್ಥಳಗಳು.

*

**ಋಷ್ಯಶೃಂಗಪುರ** (ಕಿಗ್ಗ): ಚಿಕ್ಕ ಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಕಸಬೆಯಿಂದ ಸು.10ಕಿಮೀ ಪಶ್ಚಿಮಕ್ಕಿರುವ ಗ್ರಾಮ, ಹೋಬಳಿ

# ಋ

ಕೇಂದ್ರ. ಈ ಗ್ರಾಮಕ್ಕೆ ಮರಕಲು ಎಂಬ ಹೆಸರೂ ಇದೆ.

ಇಲ್ಲಿರುವ ಶೃಂಗೇಶ್ವರ (ಋಷ್ಯಶೃಂಗೇಶ್ವರ) ದೇವಾಲಯ ಈ ಸುತ್ತಿನಲ್ಲಿ ಬಹು ಪ್ರಸಿದ್ಧವಾದುದು. ಇದು ದಕ್ಷಿಣ ಕರ್ನಾಟಕದ ಅತಿ ಪ್ರಾಚೀನ ದೇವಾಲಯಗಳಲ್ಲೊಂದು. ಇಲ್ಲಿರುವ ಆಳುಪ ವಂಶದ ಗುಣಸಾಗರ (ಸು.650-63) ಮತ್ತು ಚಿತ್ರವಾಹನ (ಸು.663-730) ಇವರ ಶಾಸನಗಳು ಈ ದೇವಾಲಯುದ ಪ್ರಾಚೀನತೆಯನ್ನು ಸಾರುವುವಲ್ಲದೆ, ಅದು ಅಂದು ಕೀಟ

ಋಷ್ಯಶೃಂಗೇಶ್ವರ ದೇವಾಲಯ

ಜ್ಞಾನೇಶ್ವರ ದೇವಾಲಯ ಎಂದು ಪ್ರಸಿದ್ಧವಾಗಿತ್ತೆಂಬ ಅಂಶವನ್ನು ತಿಳಿಸುತ್ತವೆ. ದೇವಾಲಯುದಲ್ಲಿ ಗರ್ಭಗೃಹ ಹಾಗೂ ಸುಕನಾಸಿ, ಪ್ರದಕ್ಷಿಣಾಪಥ', ನವರಂಗ, ಮುಖಮಂಟಪ ಮತ್ತು ಮುಂದೆ ನಂದಿಮಂಟಪವಿರುವ ಮುಖ್ಯ ಘಟಕವೂ ಇದರ ಸುತ್ತ ಎರಡು ಪ್ರಾಕಾರಗಳೂ ಇವೆ. ಗರ್ಭಗೃಹ, ಸುಕನಾಸಿ ಮತ್ತು ಪ್ರದಕ್ಷಿಣಾಪಥ ದೇವಾಲಯುದ ಅತಿಪ್ರಾಚೀನ ಭಾಗಗಳು. ಇವೆಲ್ಲವನ್ನೂ ಸರಳವಾಗಿ ಕಟ್ಟಲಾಗಿದೆ.

ಗರ್ಭಗೃಹದ ಬಾಗಿಲ ಇಕ್ಕೆಲದಲ್ಲಿ ಗಣಪತಿ ಮತ್ತು ಮಹಿಷಮರ್ದಿನಿ ದೇವರುಗಳಿರುವ ಚಿಕ್ಕ ಗುಡಿಗಳಿವೆ. ನವರಂಗದ ಕಂಬಗಳು ಬುಡದಲ್ಲಿ ಚೌಕವಾಗಿಯೂ ಉಳಿದ ಭಾಗದಲ್ಲಿ ಅಷ್ಟಮುಖವಾಗಿಯೂ ಇವೆ. ಕಂಬಗಳ ಮೇಲೆ ಬಹುಶಃ ಅನಂತರದ ಕಾಲದಲ್ಲಿ ಕೆತ್ತಿದ, ಕಾಳಿಂಗಮರ್ದನ, ಉಗ್ರನರಸಿಂಹ, ನರ್ತಕಿಯರು ಒಯ್ಯುತ್ತಿರುವ ಋಷ್ಯಶೃಂಗ ಮೊದಲಾದ ವಿಜಯನಗರಕಾಲೀನ ತೆಳು ಉಬ್ಬುಶಿಲ್ಪಗಳಿವೆ. ಮುಖಮಂಟಪ ಆರು ಕಂಬಗಳದು. ಇದೂ ಹೊಸ ಸೇರ್ಪಡೆ. ಇದರ ಮುಂದೆ ನಂದಿಮಂಟಪವಿದೆ. ಗರ್ಭಗೃಹದಲ್ಲಿರುವ ಲಿಂಗ ವಿಚಿತ್ರ ರೀತಿಯದು. ಇದು ಕಂಬದಂತೆ ಸು.4 ಅಡಿಗಳಷ್ಟು ಎತ್ತರವಾಗಿದ್ದು ಅದರ ಮೇಲೆ ಮೂರು ಕೋಡುಗಳು ಎದ್ದಿವೆ. ಈ ಲಿಂಗ ಪುರಾಣ ಪ್ರಸಿದ್ಧ ಋಷ್ಯಶೃಂಗನ ಹೆಸರಿನಲ್ಲಿ ಸ್ಥಾಪಿತವಾದುದೆಂದೂ (ಅಥವಾ ಆತ ಅದರಲ್ಲಿ ಐಕ್ಯವಾಗಿದ್ದಾನೆಂದೂ) ಮೇಲಿನ ಕೋಡುಗಳಲ್ಲಿ ಒಂದು ಅವನ ಭಾರ್ಯೆ, ಶಾಂತಾಳನ್ನೂ ಇನ್ನೆರಡು ಅವನ ಶೃಂಗಗಳನ್ನೂ ಪ್ರತಿನಿಧಿಸುತ್ತವೆಯೆಂದೂ ಐತಿಹ್ಯ. ಈ ಲಿಂಗ ರುದ್ರಾಕ್ಷ ಸ್ವರೂಪವಾದುದು. ಇದರ ಶಕ್ತಿಯಿಂದ ಹನ್ನೆರಡು ಯೋಜನ ವಿಸ್ತೀರ್ಣದಲ್ಲಿ ಹರಡಿದ್ದ ಕ್ಷಾಮ ನಿವಾರಿತವಾಯಿತು. ಋಷ್ಯಶೃಂಗ ಮತ್ತು ಶಾಂತಾ ಇಲ್ಲಿ ನಂದಿನೀ ನದಿಯ ದಡದಲ್ಲಿ ವಾಸಿಸುತ್ತಾರೆ ಎಂದು ಸ್ಥಳಪುರಾಣ ತಿಳಿಸುತ್ತದೆ.

ದೇವಾಲಯದ ಪ್ರಾಕಾರದಲ್ಲಿ ನೈಋತ್ಯ ಭಾಗದಲ್ಲಿ ಒಂದು ಮಲ್ಲಿಕಾರ್ಜುನ ಗುಡಿ ಇದೆ. ಇದರ ಮುಂದಿರುವ ನಂದಿಮಂಟಪದಲ್ಲಿರುವ ನಂದಿ ವಿಗ್ರಹ ಬಹು ಸರಳವಾಗಿ ಸಹಜವಾಗಿ ನಿರೂಪಿತವಾಗಿದೆ. ಇದು ಪಲ್ಲವರ ಕಾಲದ ಶಿಲ್ಪ ಎಂದು ಅಭಿಪ್ರಾಯಪಡಲಾಗಿದೆ. (ಎಸ್.ಎನ್.)

**ಎಕ್ಕುಂಡಿ, ಸು.ರಂ. :** 1923-95. ಕನ್ನಡದ ಪ್ರಸಿದ್ಧ ಕವಿ. ಸುಬ್ಬಣ್ಣ ರಂಗನಾಥ ಎಕ್ಕುಂಡಿ ಇವರ ಪೂರ್ಣ ಹೆಸರು. ಕಲಬುರ್ಗಿಯ ಮಣ್ಣೂರು ಇವರ ಮೂಲ ಮನೆತನದ ಊರು. ಇವರು 1923 ಜನವರಿ 20ರಂದು ಇಂದಿನ ಹಾವೇರಿ ಜಿಲ್ಲೆ ರಾಣೆಬೆನ್ನೂರಿನಲ್ಲಿ ಜನಿಸಿದರು. ಇವರ ತಂದೆ ರಂಗಾಚಾರ್ಯ ಎಕ್ಕುಂಡಿಯವರು ರಾಣೆಬೆನ್ನೂರಿನಲ್ಲಿ ಶಿಕ್ಷಕರಾಗಿದ್ದರು. ತಾಯಿ ರಾಜಕ್ಕ. ಇವರಿಗೆ ಐದು ವರ್ಷಗಳಾಗಿದ್ದಾಗ ತಂದೆ ನಿಧನರಾದರು. ಚಿಕ್ಕಂದಿನಲ್ಲಿಯೇ ಸಂಸಾರದ ಭಾರ ತಲೆಯ ಮೇಲೆ ಬಿದ್ದುದರಿಂದ ಸವಣೂರಿನಲ್ಲಿ ಶ್ರೀ ಸತ್ಯಬೋಧ ಸೇವಾಸಂಘ ನಡೆಸುತ್ತಿದ್ದ ವಾಚನಾಲಯದ ಪುಸ್ತಕಗಳನ್ನು ಮನೆಮನೆಗೆ ಮುಟ್ಟಿಸುವ ಕೆಲಸಮಾಡಿದರು. ಪುಸ್ತಕಗಳನ್ನು ಪುಕ್ಕಟೆ ಓದುವ ಅವಕಾಶವಾದುದರಿಂದ ಬಾಲ್ಯದಲ್ಲಿ ಜ್ಞಾನಸಂಪಾದನೆ ಇವರ ಕಾಯಕವಾಯಿತು. ಇದರಿಂದ ಶಿಕ್ಷಣದತ್ತ ಒಲವು ಬೆಳೆಯಿತು. ಇವರ ಪ್ರಾಥಮಿಕಶಿಕ್ಷಣ ಹುಬ್ಬಳ್ಳಿಯಲ್ಲಾಯಿತು. ಪ್ರೌಢಶಾಲೆಯಲ್ಲಿದ್ದಾಗ ಉನ್ನತಿ ಎಂಬ ಕೈಬರೆಹದ ಮಾಸಿಕದ ಸಂಪಾದಕರಾದರು. ಇವರ ಗುರುಗಳು ಇವರಿಗೆ ಬಿ.ಎಂ.ಶ್ರೀ, ಟೆನಿಸನ್, ವರ್ಡ್ಸ್‌ವರ್ತ್ ಮುಂತಾದವರ ಸಾಹಿತ್ಯವನ್ನು ಪರಿಚಯ ಮಾಡಿಕೊಟ್ಟರು. ಇವರು ತಮ್ಮ ಹದಿನೈದನೆಯ ವಯಸ್ಸಿನಲ್ಲಿಯೇ ಕವಿತೆ ಬರೆಯಲಾರಂಭಿಸಿದರು. ಜಗದೀಶಚಂದ್ರ ಬೋಸರ ಸಾವು ಇವರ ಹೃದಯವನ್ನು ಕಲಕಿ ಕಾವ್ಯ ರೂಪದಲ್ಲಿ ಹೊರಬಂದಿತು.

ನಾಡಹಬ್ಬಕ್ಕೆ ಹುಬ್ಬಳ್ಳಿಗೆ ಬರುತ್ತಿದ್ದ ಬೇಂದ್ರೆ, ಗೋಕಾಕ, ಶಂ.ಬಾ.ಜೋಶಿ, ಶ್ರೀರಂಗ, ಬೆಟಗೇರಿ ಕೃಷ್ಣಶರ್ಮ ಮೊದಲಾದವರ ಪರಿಚಯವಾಗಿ ಕಾವ್ಯದಲ್ಲಿ ಆಸಕ್ತಿ ಬೆಳೆಯಿತು. ಇವರು ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಓದುತ್ತಿದ್ದಾಗ ಚಾಸರ್, ಷೇಕ್ಸ್‌ಪಿಯರ್, ಜೇಮ್ಸ್ ಬ್ಯಾರಿ ಮುಂತಾದ ಪಾಶ್ಚಾತ್ಯ ಸಾಹಿತಿಗಳನ್ನು ಓದಿದ್ದರು. ಪೇಜಾವರ ಸದಾಶಿವರಾಯರ ವರುಣನಿಗೆ ಆಹ್ವಾನ ಎಂಬ ಕವಿತೆ ಓದಿ ಪ್ರಭಾವಿತರಾದ ಇವರು ಗಂಗಾಧರ ಚಿತ್ತಾಲ, ವರದರಾಜ ಹುಯಿಲಗೋಳ, ರಾ.ಯ. ಧಾರವಾಡಕರ, ವಿ.ಜಿ.ಭಟ್ಟ ಇವರ ಒಡಗೂಡಿ ವರುಣಕುಂಜ ಎಂಬ ಬರೆಹಗಾರರ ಬಳಗ ಆರಂಭಿಸಿದರು. ಅಲ್ಲಿ ಪ್ರತಿವಾರವೂ ಸಾಹಿತ್ಯಕ ಚರ್ಚೆ ನಡೆಯುತ್ತಿತ್ತು. ಇವರು ವಿಲಿಂಗ್ಡನ್‌ನಲ್ಲಿ ಓದುತ್ತಿದ್ದಾಗಲೇ ಪ್ರಥಮ ಕವನ ಸಂಗ್ರಹ ಸಂತಾನವನ್ನು ರಂ.ಶ್ರೀ. ಮುಗಳಿ ಪ್ರಕಟಿಸಿದರು (1953). ಇವರು ಪದವಿ ಪಡೆದ ಅನಂತರ ಹೈದರಾಬಾದಿನಲ್ಲಿ ಬಿ.ಟಿ. ಉನ್ನತ ಶಿಕ್ಷಣ ಪಡೆದು, ಮುಂದೆ ಬಂಕಿಕೊಡ್ಲಿನ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಮುಖ್ಯೋಪಾಧ್ಯಾಯರಾಗಿ ಮೂವತ್ತೈದು ವರ್ಷ ಸೇವೆ ಸಲ್ಲಿಸಿ ನಿವೃತ್ತರಾದರು.

ಇವರು ಆನಂದತೀರ್ಥರು (ಖಂಡಕಾವ್ಯ 1953), ಹಾವಾಡಿಗರ ಹುಡುಗ (1967), ಮತ್ಸ್ಯಗಂಧಿ (1975), ಬೆಳ್ಳಕ್ಕಿಗಳು (1982), ಕಥನ ಕವನ (1985), ಬಕುಲದ ಹೂವುಗಳು (1991), ಗೋದಿಯ ತೆನೆಗಳು (1996) ಎಂಬ ಕಾವ್ಯಸಂಕಲನಗಳನ್ನು ಪ್ರಕಟಿಸಿದ್ದಾರೆ. ನೆರಳು ಎಂಬುದು ಇವರ ಕಥಾ ಸಂಕಲನ (1960). ಪು.ತಿ.ನರಸಿಂಹಾಚಾರ್ಯರು (ಜೀವನ ಚರಿತ್ರೆ, 1957), ಪಂಜುಗಳು (1998), ಎರಡು ರಷ್ಯನ್ ಕಾದಂಬರಿಗಳು, ಪ್ರತಿಬಿಂಬಗಳು, ಲೆನಿನ್ನರ ನೆನಪಿಗಾಗಿ, ನವ್ಯಕವಿತೆ, ವರುಣಕುಂಜ, ತಾಳತಂಬೂರಿ - ಇವು ಇವರ ಇತರ ಗ್ರಂಥಗಳು.

ಇವರು ಪ್ರಧಾನವಾಗಿ ಕವಿಯಾಗಿ ಹೆಸರು ಪಡೆದವರು. ಇವರ ಕಾವ್ಯದಲ್ಲಿ ಹೆಚ್ಚಾಗಿ ಉತ್ತರ ಕನ್ನಡ ಜಿಲ್ಲೆಯ ನಿಸರ್ಗ ಸೌಂದರ್ಯ ಮೈವೆತ್ತಿ ನಿಂತಿದೆ. ಅಲ್ಲಿಯ ಸಮುದ್ರ, ಮುಸಲಧಾರೆ ಮಳೆ, ಹಕ್ಕಿಪಕ್ಕಿಗಳ ಕಲರವ, ಹಾಲಕ್ಕಿ ಒಕ್ಕಲಿಗರ ಶ್ರಮಜೀವನ, ತೆಂಗಿನಮರಗಳ ಸೊಬಗು ಇವರ ಕವಿತೆಗಳಲ್ಲಿ ಜೀವಂತಿಕೆ ಪಡೆದಿವೆ. ಸಹಜ ಕವಿಯಾದ ಇವರ ಕಾವ್ಯದಲ್ಲಿ ಎಡಪಂಥೀಯ ಚಿಂತನೆಯ ಎಳೆಯನ್ನು ಗುರುತಿಸಬಹುದಾಗಿದೆ. ಕಾವ್ಯ ಜನವಾಣಿಯಾಗದ ಹೊರತು, ಸಮಾಜಮುಖಿಯಾಗದ ಹೊರತು ಅದಕ್ಕೆ ಬೆಲೆಯಿಲ್ಲವೆಂಬುದು ಇವರ ಅಭಿಪ್ರಾಯವಾಗಿದೆ. ಕೀಟ್ಸ್ ಇವರ ಪ್ರೀತಿಯ ಇಂಗ್ಲಿಷ್ ಕವಿ. ಕಥನ ಕವನ ಕಥೆಯ ಮೂಲಕ ಬರೆಯುವವನ ಅನುಭವಕ್ಕೂ ಓದುಗನ ಅನುಭವಕ್ಕೂ ಸೇತುವೆ ಕಟ್ಟುತ್ತದೆ ಎಂದು ಹೇಳಿದ ಇವರು ಕಥನ ಕವನಗಳಿಗೊಂದು ಹೊಸ ಆಯಾಮ ನೀಡಿದ್ದಾರೆ. ಇವರಿಗೆ ಅನೇಕ ಸನ್ಮಾನ, ಪ್ರಶಸ್ತಿಗಳು ಲಭ್ಯವಾಗಿವೆ. ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ (1970), ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (1982), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1992) ಇವು ಅವುಗಳಲ್ಲಿ ಕೆಲವು. ಇವರು ಕೆಲಕಾಲ ರೋಮನ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1995 ಆಗಸ್ಟ್ 20ರಂದು ನಿಧನರಾದರು.

(ಎಸ್.ಎಂ.ಕೆ.)

**ಎಡೆಯೂರು :** ತುಮಕೂರು ಜಿಲ್ಲೆಯ ಕುಣಿಗಲು ತಾಲ್ಲೂಕಿನ ಒಂದು ಗ್ರಾಮ ಮತ್ತು ಯಾತ್ರಾಸ್ಥಳ. ಬೆಂಗಳೂರು-ಹಾಸನ ಹೆದ್ದಾರಿಯಲ್ಲಿ ಕುಣಿಗಲಿಗೆ ನೈಋತ್ಯದಲ್ಲಿ 19ಕಿಮೀ ದೂರದಲ್ಲಿದೆ. ಇಲ್ಲಿ 15ನೆಯ ಶತಮಾನದಲ್ಲಿದ್ದ

ತೋಂಟದ ಸಿದ್ಧಲಿಂಗಸ್ವಾಮಿಗಳ ಸಮಾಧಿ ಇದೆ. ವೀರಶೈವ ಮಠ, ಚಿತ್ರಮಠ, ಸುಂದರವಾದ ತಟಾಕ ಮತ್ತು ಶಿಥಿಲವಾಗಿರುವ ವರದರಾಜಸ್ವಾಮಿ ದೇವಸ್ಥಾನ ಇತರ ಮುಖ್ಯ ಆಕರ್ಷಣೆಗಳು. ಎಡೆಯೂರು ವೀರಶೈವ ಧಾರ್ಮಿಕ ಕೇಂದ್ರವಾಗಿದ್ದರೂ ಎಲ್ಲ ಮತಗಳವರೂ ಈ ಕ್ಷೇತ್ರಕ್ಕೆ ಬರುತ್ತಾರೆ.

ಸಿದ್ಧಲಿಂಗೇಶ್ವರ ದೇವಾಲಯ

ಸಿದ್ಧಲಿಂಗೇಶ್ವರ ದೇವಾಲಯ ದ್ರಾವಿಡ ವಾಸ್ತುಶೈಲಿಯಲ್ಲಿದೆ. ದೇವಾಲಯದ ಮಹಾದ್ವಾರದ ಬಲಬದಿಯ ಪ್ರಾಂಗಣದಲ್ಲಿರುವ ಶಾಸನದಲ್ಲಿ ದಾನಿ ವಾಸದ ಚೆನ್ನವೀರಪ್ಪ ಒಡೆಯ ಈ ಮಂದಿರವನ್ನು ಕಟ್ಟಿಸಿದನೆಂದು ತಿಳಿದು ಬರುವುದಲ್ಲದೆ ಸಿದ್ಧಲಿಂಗ ಸ್ವಾಮಿಗಳ ಮಾಹಾತ್ಮ್ಯವೂ ವರ್ಣಿತವಾಗಿದೆ. ಈಗ ಶಾಸನದ ಬಲಬದಿಗೆ 6' ಎತ್ತರವಿರುವ ಶಿಲೆಯ ಮೇಲೆ ಎಡಗೈಯಲ್ಲಿ ಲಿಂಗವನ್ನಿಟ್ಟುಕೊಂಡು ಕುಳಿತಿರುವ ಸ್ವಾಮಿಗಳ, ನಿಂತಿರುವ ಚೆನ್ನವೀರಪ್ಪ ಮತ್ತು ಆತನ ಪತ್ನಿ ಪಾರ್ವತಮ್ಮ ಇವರ ಚಿತ್ರಗಳನ್ನು ಕಾಣಬಹುದು. ಮುಖಮಂಟಪ ಮತ್ತು ಹಜಾರದ ಚಾವಣಿಯ ಮೇಲೆ ಸಿದ್ಧಲಿಂಗಸ್ವಾಮಿಗಳ ಜೀವನದ ಹಲವು ದೃಶ್ಯಗಳನ್ನು ಮತ್ತು ಶಿವನ ಇಪ್ಪತ್ತೈದು ಲೀಲೆಗಳನ್ನೂ ಚಿತ್ರಿಸಿ ಅವನ್ನು ಕನ್ನಡದಲ್ಲಿ ವಿವರಿಸಿದೆ. ಗದ್ದುಗೆಯ ಮೇಲೆ ಬೆಳ್ಳಿಯ ಕವಚವುಳ್ಳ ವಿಭೂತಿಲಿಂಗವೂ ಲೋಹದ ಉತ್ಸವಮೂರ್ತಿಯೂ ಇವೆ.

ಇಲ್ಲಿ ಪ್ರತಿ ವರ್ಷ ಯುಗಾದಿ ಆದ ಅನಂತರ ರಥೋತ್ಸವ ಜರುಗುತ್ತದೆ. ಸಾಲು ಮರಗಳ ತೋಪು ಮತ್ತು ಮಾರ್ಕೋನಹಳ್ಳಿಯ ಜಲಾಶಯದ ಹಿನ್ನೆಲೆಯಲ್ಲಿ ಇದೊಂದು ಸುಂದರ ನೆಲೆಯಾಗಿ ಹೆಚ್ಚು ಜನರನ್ನು ಆಕರ್ಷಿಸುತ್ತಿದೆ. (ಎಸ್.)

**ಎಡೆಯೂರು ಸಿದ್ಧಲಿಂಗೇಶ್ವರ :** ಸು.1470. ಪ್ರಸಿದ್ಧ ವೀರಶೈವ ಯತಿ, ಗುರು ಹಾಗೂ ಕವಿ. ಷಟ್ಸ್ಥಲಜ್ಞಾನಸಾರಾಮೃತ ಎಂಬ ಗ್ರಂಥದ ಕರ್ತೃ. ಚಾಮರಾಜನಗರ ಜಿಲ್ಲೆಯ ಅದೇ ತಾಲ್ಲೂಕಿನ ಹರದನಹಳ್ಳಿ ಇವರ ಜನ್ಮಸ್ಥಳ. ಗುರು ಗೋಸಲ ಚೆನ್ನಬಸವೇಶ್ವರ.

ಇವರಿಗೆ ತೋಂಟದ ಸಿದ್ಧಲಿಂಗ ಯತಿ, ಸಿದ್ಧಲಿಂಗ ಶಿವಯೋಗಿ ಎಂಬ ಹೆಸರುಗಳೂ ಇವೆ. ಎಡೆಯೂರಿನ ಸಮೀಪದ ಕಗ್ಗೆರೆಯ ಹತ್ತಿರವಿರುವ ನಾಗಿಣೀನದಿ ತೀರದ ತೋಟದಲ್ಲಿ ಸು.12 ವರ್ಷಕಾಲ ಧ್ಯಾನಸ್ಥರಾಗಿದ್ದು ಶಿವಯೋಗದಲ್ಲಿದ್ದುದರಿಂದ ಇವರಿಗೆ ತೋಂಟದ ಎಂಬ ವಿಶೇಷಣ ರೂಢಿಗೆ ಬಂದಂತೆ ತಿಳಿಯುತ್ತದೆ. ಇವರು ವಿಜಯನಗರದ ವಿರೂಪಾಕ್ಷನ (1465-85) ಕಾಲದಲ್ಲಿದ್ದು ಅನೇಕ ಪವಾಡಗಳನ್ನು ಮೆರೆದ ಮಹಿಮಾಪುರುಷರೆಂದೂ ನಿರಂಜನ ಗಣೇಶನ ಅಪರಾವತಾರವಾಗಿದ್ದರೆಂದೂ ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣದಿಂದ ತಿಳಿದುಬರುತ್ತದೆ.

ಸಿದ್ಧಲಿಂಗೇಶ್ವರರು ಎಡೆಯೂರಿಗೆ ಬಂದು ನೆಲೆಸುವ ಮುನ್ನ ಸೌರಾಷ್ಟ್ರ, ಕೊಲ್ಲಿಪಾಕಿ, ಕೇದಾರ, ಚಿದಂಬರ, ಶ್ರೀರಂಗ, ಕಂಚಿ, ಕಾಳಹಸ್ತಿ, ಅರುಣಾಚಲ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಲ್ಲಿ ಕೆಲವು ಪವಾಡಗಳನ್ನು ಮೆರೆದು ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಅರುಣಾಚಲದ ರಾಜ ಇಂಥದೊಂದು ಪವಾಡವನ್ನು ಕಣ್ಣಾರೆ ಕಂಡು ಇವರ ಮಹಿಮೆಯನ್ನು ಮೆಚ್ಚಿ ವೀರಶೈವನಾಗಿ ಪರಿವರ್ತಿತನಾದಂತೆ ಪ್ರತೀತಿ ಇದೆ. ಒಮ್ಮೆ ಇವರು ಈಗಿನ ಸಿದ್ಧಗಂಗಾ ಕ್ಷೇತ್ರಕ್ಕೆ ಬಂದಾಗ ನೀರಿನ ಕ್ಷಾಮದಿಂದ ಬಳಲುತ್ತಿದ್ದ ಈ ನಾಡಿನಲ್ಲಿ ಇವರ ಪಾದಸ್ಪರ್ಶಮಾತ್ರದಿಂದ ಗಂಗೆ ಚಿಮ್ಮಿದಳೆಂದೂ ಅಂದಿನಿಂದ ಆ ಕ್ಷೇತ್ರಕ್ಕೆ ಸಿದ್ಧಗಂಗಾ ಕ್ಷೇತ್ರವೆಂದು ಹೆಸರಾಯಿತು ಎಂಬುದು ಇನ್ನೊಂದು ಪ್ರತೀತಿ. ಕುಣಿಗಲು ತಾಲ್ಲೂಕಿನ ಕಗ್ಗೆರೆಯಲ್ಲಿ 12 ವರ್ಷ ಶಿವಯೋಗದಲ್ಲಿದ್ದು ಅನಂತರ ಎಡೆಯೂರಿನ ಬಳಿಯ ಚಿತ್ರಾಮಠದಲ್ಲಿ ಕೆಲಕಾಲ ಕಳೆದು ಬೋಳಬಸವರಾಜೇಂದ್ರ ಎಂಬುವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿ ಇವರು ಎಡೆಯೂರಲ್ಲಿ ನಿರ್ವಿಕಲ್ಪ ಸಮಾಧಿ ಹೊಂದಿದರೆಂದು ಐತಿಹ್ಯಗಳು ತಿಳಿಸುತ್ತವೆ. ಇವರ ಜ್ಞಾಪಕಾರ್ಥವಾಗಿ ಈ ಊರಿನ ಬಳಿ ಕಟ್ಟಿಸಿದ ಸಿದ್ಧಲಿಂಗೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಈ ಯೋಗಿಯ ಮಹಿಮೆಯನ್ನು ಬಹಳವಾಗಿ ಕೊಂಡಾಡಿರುವ ಒಂದು ಶಿಲಾಶಾಸನವಿದೆ (1500). ಇದರಲ್ಲಿ ಇವರ ಶಿಷ್ಯರಲ್ಲಿ ಕೆಲವರ ಹೆಸರುಗಳನ್ನು ಉಲ್ಲೇಖಿಸಲಾಗಿದ್ದು, ಇವರಿಗಾಗಿ ಕೆಲಭಕ್ತರು ಈ ಊರಲ್ಲೇ ಒಂದು ಕಲ್ಲುಮಠ ಕಟ್ಟಿಸಿದಂತೆ ಹೇಳಿದೆ. ಚಿತ್ರದುರ್ಗದ ಶಾಸನದಲ್ಲಿ (1738) ಸಿದ್ಧಲಿಂಗೇಶ್ವರರ ವಚನವೊಂದು ಉಲ್ಲೇಖಿತವಾಗಿದೆ. ಇವರನ್ನು ಕುರಿತು ಶಾಂತೇಶನ ತೋಂಟದ ಸಿದ್ಧೇಶ್ವರನ ಪುರಾಣ, ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣ, ಸಿದ್ಧನಂಜೇಶನ ಭಾವರತ್ನಾಭರಣ (ಈ ಗ್ರಂಥ ದೊರೆತಿಲ್ಲ). ಹೇರಂಬನ ಸಿದ್ಧೇಶ್ವರ ಸಾಂಗತ್ಯ ಮೊದಲಾದ ಕೃತಿಗಳು ರಚಿತವಾಗಿವೆ. ಕರ್ತೃ ಗೊತ್ತಿಲ್ಲದ ತೋಂಟದ ಸಿದ್ಧೇಶ್ವರ ರಗಳೆಯಲ್ಲಿ ಇವರ ಪವಾಡಗಳನ್ನು ಬಣ್ಣಿಸಲಾಗಿದೆ. ಚೆನ್ನವೀರ ಜಂಗಮದೇವನ ಅಸಮಗ್ರ ಷಟ್ಸ್ಥಲ ವಲ್ಲಭದಲ್ಲಿ ಈ ಯತಿಯ ಚರಿತ್ರೆ ಮತ್ತು ಪವಾಡಗಳು ನಿರೂಪಿತವಾಗಿವೆ. ಎಡೆಯೂರಿನಲ್ಲಿ ಇರುವ ಇವರ ಗದ್ದುಗೆ ಶಿವಭಕ್ತರಿಗೆ ತೀರ್ಥಕ್ಷೇತ್ರವಾಗಿವೆ. ಸ್ವತಂತ್ರ ಸಿದ್ಧಲಿಂಗೇಶ್ವರ ಮತ್ತು ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಇವರ ಶಿಷ್ಯವರ್ಗಕ್ಕೆ ಸೇರಿದವರು.

ಷಟ್ಸ್ಥಲಜ್ಞಾನಸಾರಾಮೃತ ವಚನರೂಪದಲ್ಲಿದೆ. ಇದರಲ್ಲಿ 701 ವಚನಗಳೂ 7 ವೃತ್ತಗಳೂ ಇವೆ. ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೆ ಎಂಬುದು ಇವರ ವಚನಗಳ ಅಂಕಿತ. ಗ್ರಂಥದಲ್ಲಿ ಷಟ್ಸ್ಥಲ ವಿಚಾರ ವಿಸ್ತಾರವಾಗಿ ನಿರೂಪಿತವಾಗಿದೆ. ಶಿವಯೋಗದ ಸೂಕ್ಷ್ಮವಾದ ವಿವರಣೆ ಇದೆ. ಇವರ ವಚನಗಳು ವಿಶೇಷವಾಗಿ ಬೆಡಗಿನಿಂದ ಕೂಡಿದ್ದು, ಕೆಲವು ವಚನಗಳಲ್ಲಿ ಉತ್ತಮ ಸಾಹಿತ್ಯಗುಣ ಕಂಡುಬರುತ್ತದೆ. ಇವು ಸಾಧಕನ ಕಳವಳ ಆತ್ಮರೋದನಗಳಿಗಿಂತ ಸಿದ್ಧಪುರುಷನ ಪ್ರಶಾಂತತೆಗೆ ಹೆಸರಾಗಿವೆ. ಕಾಮದಿಂದ ಕರಗಿದೆನಯ್ಯಾ, ಕ್ರೋಧದಿಂದ ಕೊರಗಿದೆನಯ್ಯಾ, ಲೋಭಮೋಹಗಳಿಂದ ಅತಿನೊಂದೆನಯ್ಯಾ, ಮದಮತ್ಸರಗಳಿಂದ ಬೆದೆಬೆದೆ ಬೆಂದೆನಯ್ಯಾ, ಅಹಂಕಾರ ಮಮಕಾರದಿಂದ ಮತಿಮಂದನಾಗಿರ್ದೆನಯ್ಯಾ, ಇದು ಕಾರಣ ಎನ್ನ ಕಾಮಾದಿ ಷಡ್ವರ್ಗಂಗಳ ಕಳೆದು ಅಹಂಕಾರ ಮಮಕಾರಗಳ ಮಾಣಿಸಿ ನಿರಹಂಕಾರಿಯೆಂದೆನಿಸಯ್ಯಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ ಎಂಬ ವಚನ ಇವರ ಮಹೋನ್ನತ ವ್ಯಕ್ತಿತ್ವಕ್ಕೆ ಸುಲಲಿತ ವಿಚಾರಧಾರೆಗೆ ನಿದರ್ಶನವಾಗಿದೆ. ಇವರ ವಚನಗಳಿಗೆ ಅನುಭಾವ ಸಾಹಿತ್ಯದಲ್ಲಿ ಮಿಗಿಲಾದ ಸ್ಥಾನವಿದೆ. (ಜಿ.;ಜಿ.ಎಂ.;ಟಿ.ಎನ್.ಎಲ್.)

**ಎಪಿಗ್ರಾಫಿಯ ಕರ್ನಾಟಿಕ :** ಕರ್ನಾಟಕದ ಶಾಸನಗಳುಳ್ಳ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಮಾಲೆ. 1884ರಲ್ಲಿ ಮೈಸೂರು ಸರ್ಕಾರದ ಕಾರ್ಯದರ್ಶಿ ಹಾಗೂ ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿದ್ದ ಪ್ರಸಿದ್ಧ ವಿದ್ವಾಂಸ ಲೂಯಿರೈಸ್ ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶದಲ್ಲಿ ದೊರೆಯುವ ಅನೇಕ ಶಾಸನಗಳನ್ನು ಸಂಗ್ರಹಿಸಿ ಪ್ರಸಿದ್ಧಪಡಿಸಬೇಕೆಂಬ ಯೋಜನೆಯನ್ನು ಕೈಕೊಂಡು 1886ರಲ್ಲಿ ಕೊಡಗಿನ 23 ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಿಕದ ಮೊದಲ ಸಂಪುಟವಾಗಿ ಪ್ರಸಿದ್ಧಪಡಿಸಿದರು. ಎರಡನೆಯ ಸಂಪುಟದಲ್ಲಿ ಶ್ರವಣಬೆಳಗೊಳದಲ್ಲಿ ದೊರೆತ ಸು.150 ಶಾಸನಗಳನ್ನು ಪ್ರಕಟಿಸಲಾಯಿತು (1889). ಇವೆರಡು ಸಂಪುಟಗಳ ಪ್ರಕಟಣೆಯಿಂದ ಶಾಸನಗಳ ಅಧ್ಯಯನದ ಬಗ್ಗೆ ಹೆಚ್ಚಿನ ಆಸಕ್ತಿಯುಂಟಾಗಿ 1890ರಲ್ಲಿ ಆಗಿನ ದಿವಾನರಾದ ಶೇಷಾದ್ರಿ ಅಯ್ಯರ್ ಅವರ ಸಲಹೆಯಂತೆ ಹಳೆಯ ಮೈಸೂರು ಸಂಸ್ಥಾನದಲ್ಲಿ ಪ್ರತ್ಯೇಕವಾದ ಪುರಾತತ್ತ್ವ ಶಾಖೆಯನ್ನು ಲೂಯಿ ರೈಸರ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಅದರಿಂದ ಈ ಭಾಗದ ಪ್ರತಿಯೊಂದು ಜಿಲ್ಲೆಯಲ್ಲಿ ಶಾಸನಗಳ ಸಂಗ್ರಹ, ಅಧ್ಯಯನ ನಡೆದು ಸು.15 ವರ್ಷಗಳ

ಅವಧಿಯಲ್ಲಿ ಎಪಿಗ್ರಾಫಿಯ ಕರ್ನಾಟಿಕ 3ನೆಯ ಸಂಪುಟದಿಂದ 12ನೆಯ ಸಂಪುಟದವರೆಗೆ ಮೈಸೂರು (ಸಂ.3-4), ಹಾಸನ (ಸಂ.5), ಕಡೂರು (ಸಂ.6), ಶಿವಮೊಗ್ಗ (ಸಂ.7-8), ಬೆಂಗಳೂರು (ಸಂ.9), ಕೋಲಾರ (ಸಂ.10), ಚಿತ್ರದುರ್ಗ (ಸಂ.1) ಮತ್ತು ತುಮಕೂರು (ಸಂ.12) ಜಿಲ್ಲೆಗಳ ಶಾಸನಗಳನ್ನು ಪ್ರಸಿದ್ಧಪಡಿಸಲಾಯಿತು. ಹೀಗೆ 1886ರಿಂದ 1906 ರವರೆಗಿನ 20 ವರ್ಷಗಳ ಅವಧಿಯಲ್ಲಿ ರೈಸ್ 12 ಬೃಹತ್ ಸಂಪುಟಗಳನ್ನು ಸಂಪಾದಿಸಿ ಪ್ರಸಿದ್ಧಪಡಿಸಿದರು. ಈ ಸಂಪುಟಗಳಲ್ಲಿ ಸು.9000 ಶಾಸನಗಳು ಅಚ್ಚಾಗಿವೆ. ಆಗಿನ ಮೈಸೂರು ಸರ್ಕಾರ ಸಾಧಿಸಿದ ಇಂಥ ಮಹತ್ಕಾರ್ಯವನ್ನು ಭಾರತದ ಬೇರೆ ಯಾವ ಪ್ರಾಂತ್ಯವಾಗಲೀ ಸಂಸ್ಥಾನವಾಗಲೀ ಸಾಧಿಸಿಲ್ಲ. ಇಂಥ ಬೃಹತ್ ಯೋಜನೆಯನ್ನು ಕೈಕೊಂಡು ಕಾರ್ಯಗತಮಾಡಿದ ಶ್ರೇಯಸ್ಸು ಲೂಯಿ ರೈಸರಿಗೆ ಸಲ್ಲುತ್ತದೆ. ಈ ಸಂಪುಟಗಳಲ್ಲಿ ಪ್ರಸಿದ್ಧಪಡಿಸಲಾದ ಶಾಸನಗಳ ಪಾಠವನ್ನು ಕನ್ನಡ ಮತ್ತು ರೋಮನ್ ಲಿಪಿಗಳಲ್ಲಿ ಕೊಟ್ಟಿದ್ದು ಅವುಗಳ ಇಂಗ್ಲಿಷ್ ಭಾಷಾಂತರವನ್ನು ಒದಗಿಸಲಾಗಿದೆ. ಇವಲ್ಲದೆ ಪ್ರತಿಯೊಂದು ಸಂಪುಟದಲ್ಲಿ ಪ್ರಸಿದ್ಧಪಡಿಸಿದ ಮಹತ್ವವನ್ನು ಕುರಿತು ವಿಸ್ತೃತವಾದ ಮುನ್ನುಡಿಯನ್ನು ರೈಸರೇ ಬರೆದಿದ್ದಾರೆ. ಎಪಿಗ್ರಾಫಿಯ ಕರ್ನಾಟಿಕದ 12 ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳು ಕರ್ನಾಟಕದ ಇತಿಹಾಸ, ಸಂಸ್ಕೃತಿಗಳ ಅಧ್ಯಯನಕ್ಕೆ ತಳಹದಿಯಾಗಿದ್ದು ಕೆಲವು ಶಾಸನಗಳು ಭಾರತ ಇತಿಹಾಸ, ಸಂಸ್ಕೃತಿಗಳ ಮೇಲೆ ಮಹತ್ವದ ಬೆಳಕನ್ನು ಬೀರುತ್ತವೆ. 1914ರಲ್ಲಿ ಭಾರತ ಸರ್ಕಾರದ ಶಾಸನ ಇಲಾಖೆಯ ಎಚ್. ಕೃಷ್ಣಶಾಸ್ತ್ರಿ (ನೋಡಿ) ಅವರು ಎಪಿಗ್ರಾಫಿಯ ಕರ್ನಾಟಿಕದ ಮೊದಲ ಸಂಪುಟವನ್ನು ಪುನಃ ಪರಿಷ್ಕರಿಸಿ ಕೊಡಗಿನಲ್ಲಿ ದೊರೆತ ಹೆಚ್ಚಿನ ಶಾಸನಗಳನ್ನು ಸೇರಿಸಿ ವಿಸ್ತೃತವಾದ ಆವೃತ್ತಿಯನ್ನು ಪ್ರಸಿದ್ಧಪಡಿಸಿದರು. ತರುವಾಯ ಮೈಸೂರು ಪುರಾತತ್ತ್ವ ಶಾಖೆಯ ನಿರ್ದೇಶಕರಾದ ಆರ್.ನರಸಿಂಹಾಚಾರ್ಯರು (ನೋಡಿ) ಶ್ರವಣಬೆಳಗೊಳದ 2ನೆಯ ಸಂಪುಟವನ್ನು ಪುನಃ ಪರಿಶೀಲಿಸಿ ಸು.350 ಹೊಸ ಶಾಸನಗಳನ್ನು ಸೇರಿಸಿ ವಿಸ್ತೃತವಾದ ಆವೃತ್ತಿಯನ್ನು 1922-23ರಲ್ಲಿ ಪ್ರಸಿದ್ಧಪಡಿಸಿದರು. ಈ ವಿದ್ವಾಂಸರು 16 ವರ್ಷಗಳ (1906-22) ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸು.5000 ಹೊಸ ಶಾಸನಗಳನ್ನು ಸಂಗ್ರಹಿಸಿ ಪ್ರಕಟಣೆಗಾಗಿ ಸಿದ್ಧಪಡಿಸಿದರು. ಅವುಗಳಲ್ಲಿ ಕೆಲವು ಮಹತ್ವದ ಶಾಸನಗಳನ್ನು ತಾವು ಸಂಪಾದಿಸಿದ ವಾರ್ಷಿಕ ವರದಿಗಳಲ್ಲಿ ಪ್ರಸಿದ್ಧಪಡಿಸಿದ್ದಾರೆ. ಉಳಿದವನ್ನು ಎಪಿಗ್ರಾಫಿಯ ಕರ್ನಾಟಿಕದ 14ರಿಂದ 19ನೆಯ ಸಂಪುಟಗಳಲ್ಲಿ ಪ್ರಕಟಿಸಬೇಕೆಂದು ಯೋಚಿಸಲಾಗಿತ್ತು. 13ನೆಯ ಸಂಪುಟದಲ್ಲಿ 1 ರಿಂದ 12 ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳ ಪದ ಸೂಚಿಯನ್ನು ಪ್ರಸಿದ್ಧಪಡಿಸಬೇಕೆಂದು ಉದ್ದೇಶಿಸಿ ಎಂ.ಎಚ್.ಕೃಷ್ಣ (ನೋಡಿ) ಅವರು ಅದರ ಮೊದಲ ಭಾಗದಲ್ಲಿ A ಯಿಂದ K ವರೆಗಿನ ಶಬ್ದಗಳನ್ನು 1934ರಲ್ಲಿ ಪ್ರಕಟಪಡಿಸಿರುವರಲ್ಲದೆ, ನರಸಿಂಹಾಚಾರ್ಯರು ಸಂಗ್ರಹಿಸಿದ್ದ ಶಾಸನಗಳಲ್ಲಿ ಮೈಸೂರು ಮತ್ತು ಹಾಸನ ಜಿಲ್ಲೆಯವನ್ನು 14 ಮತ್ತು 15ನೆಯ ಸಂಪುಟಗಳಾಗಿ 1942 ಮತ್ತು 1943ರಲ್ಲಿ ಹೊರತಂದರು. ತುಮಕೂರು ಜಿಲ್ಲೆಯ ಶಾಸನಗಳನ್ನೊಳಗೊಂಡ 16ನೆಯ ಸಂಪುಟವನ್ನು ನೀಲಕಂಠ ಶಾಸ್ತ್ರಿಗಳು 1956ರಲ್ಲೂ ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಯ ಶಾಸನಗಳನ್ನನೊಳಗೊಂಡ 17 ಮತ್ತು 18ನೆಯ ಸಂಪುಟಗಳನ್ನು ಎಂ.ಶೇಷಾದ್ರಿ ಅವರು 1965 ಮತ್ತು 1970ರಲ್ಲೂ ಪ್ರಸಿದ್ಧಪಡಿಸಿದರು. ಬೆಂಗಳೂರಿನ ಅನುಬಂಧ ಸಂಪುಟವೊಂದು ಪ್ರಕಟವಾಯಿತು. 1987ರಲ್ಲಿ ಅ.ಸುಂದರ ಅವರು ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದಾಗ ಆರ್.ನರಸಿಂಹಾಚಾರ್ಯರು ಸಂಪಾದಿಸಿದ್ದ K ಯಿಂದ Z ವರೆಗಿನ ಶಬ್ದಗಳಿಂದ ಕೂಡಿದ ಪದಸೂಚಿಯನ್ನು ಸಂಪುಟ 13ರ ಎರಡನೆಯ ಭಾಗವಾಗಿ ಪ್ರಕಟಿಸಿದರು. ಅಂತು ಮೈಸೂರು ಪುರಾತತ್ವ ಇಲಾಖೆ ಎಪಿಗ್ರಾಫಿಯ ಕರ್ನಾಟಿಕ ಸರಣಿಯಲ್ಲಿ ಒಟ್ಟು 19 ಸಂಪುಟಗಳನ್ನು ಹೊರತಂದಿದೆ. ಅವುಗಳಲ್ಲಿ ಸು.10.500ಕ್ಕಿಂತಲೂ ಹೆಚ್ಚಿನ ಶಾಸನಗಳು ಅಚ್ಚಾಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಈ ಸಂಪುಟಗಳನ್ನು ಪರಿಷ್ಕರಿಸಿ ಮುದ್ರಿಸುವ ಕಾರ್ಯವನ್ನು ಕೈಗೊಂಡಿದೆ. ಇದುವರೆಗೆ ಕೊಡಗು ಜಿಲ್ಲೆಯ ಶಾಸನಗಳುಳ್ಳ 1ನೆಯ ಸಂಪುಟ (1972), ಶ್ರವಣಬೆಳಗೊಳದ ಶಾಸನಗಳುಳ್ಳ 2ನೆಯ ಸಂಪುಟ (1973), ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ನಂಜನಗೂಡು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ಶಾಸನಗಳುಳ್ಳ 3ನೆಯ ಸಂಪುಟ (1974), ಚಾಮರಾಜನಗರ ಜಿಲ್ಲೆ ಯಳಂದೂರು, ಕೊಳ್ಳೇಗಾಲ, ಹುಣಸೂರು, ಪಿರಿಯಾಪಟ್ಟಣ ಈ ತಾಲ್ಲೂಕಿನ ಶಾಸನಗಳುಳ್ಳ 4ನೆಯ ಸಂಪುಟ ಪ್ರಕಟವಾಗಿದೆ (1975), ಕೃಷ್ಣರಾಜನಗರ, ಮೈಸೂರು ಮತ್ತು ತಿ.ನರಸೀಪುರ ತಾಲ್ಲೂಕುಗಳ ಶಾಸನಗಳಿಂದ ಕೂಡಿದ 5ನೆಯ ಸಂಪುಟ (1976), ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಶಾಸನಗಳನ್ನೊಳಗೊಂಡ 6ನೆಯ ಸಂಪುಟ (1977), ಹಾಗೂ ನಾಗಮಂಗಲ, ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳ ಶಾಸನಗಳಿರುವ 7ನೆಯ ಸಂಪುಟ (1979), ಹಾಸನ ಜಿಲ್ಲೆಯ ಹೊಳೇನರಸೀಪುರ, ಅರಕಲಗೂಡು, ಹಾಸನ ಮತ್ತು ಆಲೂರು ತಾಲ್ಲೂಕುಗಳಿಗೆ ಸೇರಿದ ಶಾಸನಗಳಿಂದ ಕೂಡಿದ 8ನೆಯ ಸಂಪುಟ (1984), ಬೇಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ಶಾಸನಗಳನ್ನುಳ್ಳ 9ನೆಯ ಸಂಪುಟ (1990), ಹಾಗೂ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಿಗೆ ಸೇರಿದ ಶಾಸನಗಳಿರುವ 10ನೆಯ ಸಂಪುಟ (1997), ಹಾಗೂ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಮೂಡಿಗೆರೆ ಮತ್ತು ಶೃಂಗೇರಿ ತಾಲ್ಲೂಕುಗಳ ಶಾಸನಗಳನ್ನು ಹೊಂದಿರುವ 11ನೆಯ ಸಂಪುಟ (1998), ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಕಡೂರು, ಕೊಪ್ಪ, ತರೀಕೆರೆ ಹಾಗೂ ನರಸಿಂಹರಾಜಪುರ ತಾಲ್ಲೂಕಿನ ಶಾಸನಗಳನ್ನು ಹೊಂದಿರುವ 12ನೆಯ ಸಂಪುಟ (2003) ಪ್ರಕಟಗೊಂಡಿವೆ. ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ಶಾಸನಪಾಠಗಳ ಪರಿಷ್ಕಾರ ಕಾರ್ಯ ನಡೆಯುತ್ತಿದೆ. (ಜಿ.ಎಸ್.ಜಿ.)

**ಎಱೆಗಂಗ I :** ತಲಕಾಡಿನ ಗಂಗ ಅರಸ (ಸು.843-70). ಒಂದನೆಯ ರಾಚಮಲ್ಲನ ಮಗ. ಇವನ ಹೆಸರು ಎಱೆಯಂಗ ಎಂದೂ ಇದೆ. ರಣವಿಕ್ರಮಯ್ಯ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ನೀತಿಮಾರ್ಗ ಎಂಬುದು ಇವನ ಬಿರುದು. ಒಂದನೆಯ ರಾಚಮಲ್ಲನ ಅನಂತರ ಪಟ್ಟಕ್ಕೆ ಬಂದ ಈತ ರಾಷ್ಟ್ರಕೂಟರಿಂದ ಆಗತಾನೆ ಗಳಿಸಿದ್ದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷನೊಡನೆ ಸೆಣಸಬೇಕಾಗಿತ್ತು. ಗಂಗರಾಜ್ಯದ ಮೇಲೆ ದಂಡೆತ್ತಿ ಬಂದ ರಾಷ್ಟ್ರಕೂಟ ದಳಪತಿ ಬಂಕೇಶನನ್ನು ರಾಜಾರಾಮೆಡು ಎಂಬಲ್ಲಿ ಎದುರಿಸಿದ ಇವನು ಶತ್ರು ಸೈನ್ಯ ಸೋತು ಹಿಮ್ಮೆಟ್ಟುವಂತೆ ಮಾಡಿದ. ಗಂಗರನ್ನು ತುಳಿಯುವುದು ಕಷ್ಟವೆಂದು ಅರಿತ ಅಮೋಘವರ್ಷ ತನ್ನ ಮಗಳು ಚಂದ್ರೊಬ್ಬಲಬ್ಬೆಯನ್ನು ಇವನ ಮಗ ಬೂತುಗನಿಗೆ ಲಗ್ನ ಮಾಡಿಕೊಟ್ಟು ಸ್ನೇಹ ಸಾಧಿಸಿದ. ಇದಕ್ಕೆ ಮೊದಲು ಇವನು ನೊಳಂಬಾಧಿರಾಜನ ನೆರವಿನಿಂದ ಬಾಣರ ಮೇಲೂ ದಂಡೆತ್ತಿಹೋಗಿದ್ದ. ಸು.870ರಲ್ಲಿ ಇವನು ನಿಧನನಾದಂತೆ ತೋರುತ್ತದೆ. ದೊಡ್ಡ ಹುಂಡಿಯಲ್ಲಿ ದೊರೆತ ಒಂದು ವೀರಗಲ್ಲು ಇವನು ಸ್ವರ್ಗವೇರಿದುದನ್ನು ತಿಳಿಸುತ್ತಾ ಇವನೊಡನೆ ಇವನ ಮನೆಮಗತ್ತಿಯಾಗಿದ್ದ ಅಗರಯ್ಯನೆಂಬುವವನು ಕೀಱ್ಗುಣ್ಯೆಯಾದುದಾಗಿ ತಿಳಿಸುತ್ತದೆ. ಮರಣಶಯ್ಯೆಯಲ್ಲಿರುವ ರಾಜನನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಅಗರಯ್ಯ ಚಿತೆಯೇರಲು ಸಿದ್ಧನಾಗಿರುವುದೂ ಆಗ ಬಳಿಯಲ್ಲಿಯೇ ಇವನ ಮಗ ಸತ್ಯವಾಕ್ಯ ಎಱೆಯಪ್ಪ ದುಃಖಿತನಾಗಿ ನಿಂತಿರುವುದೂ ಈ ವೀರಗಲ್ಲಿನಲ್ಲಿ ಮನಮುಟ್ಟುವಂತೆ ಚಿತ್ರಿತವಾಗಿದೆ. (ಎಂ.ಎಚ್.)

**ಎಱೆಗಂಗ II :** ತಲಕಾಡಿನ ಗಂಗ ಅರಸ (ಸು.886-920). ಇಮ್ಮಡಿ ಸತ್ಯವಾಕ್ಯ ರಾಚಮಲ್ಲನ ತಮ್ಮ ಬೂತುಗನ ಮಗ. ಇವನಿಗೆ ಎಱೆಯಂಗ ಅಥವಾ ಎಱೆಯಪ್ಪ ಎಂಬ ಹೆಸರೂ ನೀತಿಮಾರ್ಗ ಎಂಬ ಬಿರುದೂ ಇದ್ದುವು. ಸತ್ಯವಾಕ್ಯ ರಾಚಮಲ್ಲ ಆಳುತ್ತಿದ್ದಾಗ ಅವನ ತಮ್ಮ ಯುವರಾಜ ಬೂತುಗ ನಿಧನನಾಗಲು ಈತ ಯುವರಾಜನಾಗಿ ಕೊಂಗಲ್‌ನಾಡು 8000, ನುಗುನಾಡು, ನವಿಲೆನಾಡುಗಳನ್ನು ಆಳುತ್ತಿದ್ದ. ಇವನೂ ಸತ್ಯವಾಕ್ಯ ರಾಚಮಲ್ಲನೂ ಕೆಲವು ಕಾಲ ಜೊತೆಯಾಗಿ ಆಳುತ್ತಿದ್ದು ರಾಚಮಲ್ಲನ ಅನಂತರ ಇವನೇ ಸ್ವಂತವಾಗಿ ಗಂಗ ಸಿಂಹಾಸನವನ್ನು ವಹಿಸಿಕೊಂಡಿದ್ದಂತೆ ತೋರುತ್ತದೆ. ಇವರು ಜೊತೆಯಲ್ಲಿ ಆಳುತ್ತಿದ್ದಾಗ ಪೂರ್ವ ಚಾಳುಕ್ಯ ಅಮ್ಮರಾಜ ನೊಳಂಬವಾಡಿಯ ಮೇಲೆ ದಂಡೆತ್ತಿ ಬಂದಿದ್ದ. ಆಗ ಎಱೆಯಪ್ಪನ ಸಹಾಯದಿಂದ ನೊಳಂಬ ಅಯ್ಯಪ ಅಮ್ಮರಾಜನನ್ನು ಎದುರಿಸಿ ಜೀವತೆತ್ತ. ಎಱೆಯಪ್ಪನ ಅನಂತರ ಇವನ ಮಗ ನರಸಿಂಹ ಪಟ್ಟಕ್ಕೆ ಬಂದ. (ಎಂ.ಎಚ್.)

**ಎಱೆಯಂಗ :** ಹೊಯ್ಸಳ ದೊರೆ (1098-1100) ವಿನಯಾದಿತ್ಯ ಮತ್ತು ಕೆಳೆಯಬ್ಬರಸಿಯರ ಮಗ. ಇವನು ರಾಜನಾಗಿ ರಾಜ್ಯವಾಳಿದನೋ ಇಲ್ಲವೋ

ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಬಹಳ ಭಿನ್ನಾಭಿಪ್ರಾಯಗಳಿವೆ. ರೈಸ್ ಅವರ ಪ್ರಕಾರ ಇವನು ಹೆಚ್ಚು ಕಾಲ ಬದುಕಿರಲಿಲ್ಲ ವಾದುದರಿಂದ ಇವನಿಗೆ ರಾಜ್ಯ ಪ್ರಾಪ್ತವಾಗಲಿಲ್ಲ. ಹಿಂದಿನ ಶಾಸನಗಳಲ್ಲಿ ಅಂದರೆ 1095ರ ದೇವಿಹಳ್ಳಿ ಶಾಸನ ಇವನನ್ನು ಮಹಾಮಂಡಲೇಶ್ವರ ವೀರ ಎರೆಯಂಗ ಹೊಯ್ಸಳ ದೇವ ಎಂದು ಕರೆದಿದೆ. ಮತ್ತೊಂದು ಶಾಸನ ಇವನನ್ನು ಯುವರಾಜನೆಂದು ಸಂಬೋಧಿಸಿದೆ.

ಪ್ರಾಯಶಃ ರಾಜನಾಗುವ ಹೊತ್ತಿಗೆ ಇವನು ವೃದ್ಧನಾಗಿದ್ದ. ಇವನು ಯುವರಾಜನಾಗಿದ್ದಾಗಲೇ ಕಲ್ಯಾಣದ ಚಾಳುಕ್ಯರೊಡನೆ ಸೇರಿ ಅವರ ಅನೇಕ ದಿಗ್ವಿಜಯಗಳಿಗೆ ಕಾರಣನಾದ. ಇವನು ಮಾಳವ ಸೈನ್ಯವನ್ನೂ ಧಾರಾ ನಗರವನ್ನೂ ತುಳಿದವನೆಂದೂ ಚೋಳ ರಾಜನನ್ನು ಸೋಲಿಸಿ ಅವನ ಶಿಬಿರವನ್ನು ಸುಟ್ಟವನೆಂದೂ ಕಳಿಂಗ ರಾಜ್ಯವನ್ನು ನೆಲಸಮಮಾಡಿದವನೆಂದೂ ಬಳೆಯ ಪಟ್ಟಣ ಎಂಬ ನಗರವನ್ನು ಸುಟ್ಟವನೆಂದೂ ಚಕ್ರಗೊಟ್ಟ ಎಂಬ ಪಟ್ಟಣವನ್ನು ವಶಪಡಿಸಿಕೊಂಡವನೆಂದೂ ಶಾಸನಗಳು ಹೇಳುತ್ತವೆ. ಈ ಎಲ್ಲ ಸಾಧನೆಗಳೂ ಚಾಳುಕ್ಯ ಸಾಮ್ರಾಟರ ಪರವಾಗಿಯೇ ಮಾಡಿದವುಗಳು. ಇವನ ಚಾಳುಕ್ಯಾಧೀನತ್ವದ ಕುರುಹಾಗಿ ಇವನಿಗೆ ತ್ರಿಭುವನ ಮಲ್ಲ ಎಂಬ ಬಿರುದು ಇತ್ತು. ಇವನು ವಿಕ್ರಮಾದಿತ್ಯನ ಬಲಭುಜದಂತಿದ್ದನೆಂದು ಒಂದು ಶಾಸನ ವರ್ಣಿಸಿದೆ. ಇವನು ಜೈನನಾಗಿದ್ದ. ಇವನ ಗುರು ಗೋಪನಂದಿ ಎಂಬುವವನಿಗೆ 1094ರಲ್ಲಿ ಸ್ವಲ್ಪ ಭೂಮಿಯನ್ನು ದಾನ ಕೊಟ್ಟನೆಂದು ಶಾಸನಗಳಲ್ಲಿ ಹೇಳಿದೆ. ಇವನಿಗೆ ಏಚಲದೇವಿ ಮತ್ತು ಮಹಾದೇವಿ ಎಂಬ ಇಬ್ಬರು ರಾಣಿಯರಿದ್ದರು. 1ನೆಯ ಬಲ್ಲಾಳ, ಬಿಟ್ಟಿದೇವ (ವಿಷ್ಣುವರ್ಧನ) ಮತ್ತು ಉದಯಾದಿತ್ಯ ಏಚಲದೇವಿಯಲ್ಲಿ ಹುಟ್ಟಿದ ಇವನ ಮಕ್ಕಳು. ಎರೆಯಂಗನ ಅನಂತರ ಒಂದನೆಯ ಬಲ್ಲಾಳ ಸು.1100ರಲ್ಲಿ ಪಟ್ಟಕ್ಕೆ ಬಂದ. (ಎಚ್.ವಿ.ಎಂ.)

**ಎಲ್ಲಮ್ಮ :** ಪ್ರಸಿದ್ಧ ಜನಪದ ದೇವತೆ. ಈಕೆಗೆ ರೇಣುಕಾದೇವಿ ಎಂಬ ಹೆಸರೂ ರೂಢಿಯಲ್ಲಿದೆ. ಈಕೆ ಮೂಲದಲ್ಲಿ ಜೈನದೇವತೆಯೇ ಆಗಿರಬೇಕೆಂದೂ ಅನಂತರ ವೈದಿಕದೇವತೆಯಾಗಿ ಪರಿವರ್ತಿತವಾಗಿರ ಬಹುದೆಂದೂ ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈಗ ಇವಳು ಶುದ್ಧ ಹಿಂದು ದೇವತೆ. ಎಲ್ಲಮ್ಮನನ್ನು ಕುರಿತಂತೆ ಪುರಾಣಗಳಲ್ಲೂ ಜನಪದದಲ್ಲೂ ಹಲವಾರು ಕಥೆಗಳೂ ನಂಬಿಕೆಗಳೂ ಕಂಡುಬರುತ್ತವೆ. ಕೆಲವು ಕಥೆಗಳ ಪ್ರಕಾರ ಆದಿಶಕ್ತಿಯೇ ತ್ರೇತಾಯುಗದಲ್ಲಿ ಸೀತೆಯಾಗಿ, ದ್ವಾಪರಯುಗದಲ್ಲಿ ದ್ರೌಪದಿಯಾಗಿ, ಕಲಿಯುಗದಲ್ಲಿ ಎಲ್ಲಮ್ಮನಾಗಿ ಅವತರಿಸಿದಳಂತೆ. ಪರಶುರಾಮನ ತಾಯಿ ರೇಣುಕೆಯೇ ಇವಳು ಎಂದು ಇನ್ನೊಂದು ನಂಬಿಕೆ. ಮತ್ತೊಂದು ಕಥೆಯಲ್ಲಿ ಈಕೆ ಕಾರ್ತವೀರ್ಯನಿಗೆ ಸೋದರಿ. ಮಗದೊಂದರ ಪ್ರಕಾರ ಈಕೆ ಕಾರ್ತವೀರ್ಯ ಅಳುಪಿ ವರಿಸಬಯಸಿದ ಋಷಿಪತ್ನಿ. ಜನಪದದಲ್ಲಿ ರೂಢಿಯಲ್ಲಿರುವ ಕಥೆಗಳ ಪ್ರಕಾರ ರೇಣುಕ ರಾಜನ ಮಗಳೇ ರೇಣುಕೆ. ಈಕೆ ಜಮದಗ್ನಿಯ ಧರ್ಮಪತ್ನಿ. ಇನ್ನೊಂದು ಕಥೆಯ ಪ್ರಕಾರ ಇವಳು ಶಿವನ ಮಗಳು. ವೀರಶೈವರು ತಮ್ಮದೇ ಆದ ರೀತಿಯಲ್ಲಿ ಇವಳ ಕಥೆ ಕಟ್ಟಿ ಹೇಳಿದ್ದಾರೆ. ಆ ಪ್ರಕಾರ ಇವಳು ಉಗುರುಕೊಳ್ಳ ಗ್ರಾಮದ ಶ್ರೀಮಂತ ವೀರಶೈವ ಗೃಹಸ್ಥನೊಬ್ಬನ ಮಗಳು. ಬೆಳೆಯುವ ಕಾಲಕ್ಕೆ ಈಕೆಗೆ ತೊನ್ನುಹತ್ತಿ ಯಾರೂ ಮದುವೆಯಾಗಬಯಸಲಿಲ್ಲ. ಹೀಗಿರುವಲ್ಲಿ ಒಮ್ಮೆ ಸವದತ್ತಿಗೆ ಹೋದಾಗ ಅಲ್ಲಿಯ ಗುಡ್ಡದ ಮೇಲೆ ಎಕ್ಕಯ್ಯ ಜೋಗಯ್ಯ ಎಂಬ ಇಬ್ಬರು ಸಿದ್ಧರ ಪಾದುಕೆಯ ಮೇಲಿನ ಮಳೆನೀರು ಇವಳ ಮೇಲೆ ಬಿದ್ದ ಕ್ಷಣವೇ ತೊನ್ನು ಮಾಯವಾಯಿತಂತೆ. ಈ ಸಿದ್ಧರಿಂದ ಶಿವದೀಕ್ಷೆಯನ್ನು ಹೊಂದಿ ಅಂದಿನಿಂದ ಇವಳು ಸತ್ಯಕ್ಕನೆಂಬ ಹೆಸರಿನಿಂದ ಅಲ್ಲೇ ನೆಲೆಸಿದಳಂತೆ. ಈಕೆಗೆ ಏಳುಕೊಳ್ಳದ ಎಲ್ಲಮ್ಮನೆಂಬ ಹೆಸರೂ ಇದೆ. ಜನಪದದಲ್ಲಿ ರೂಢಿಮೂಲ ನಂಬಿಕೆಯಾಗಿ ಬೆಳೆದು ಬಂದಿರುವ ಈ ಕಥೆಗಳಲ್ಲಿ ಕ್ವಚಿತ್ತಾಗಿ ಐತಿಹಾಸಿಕ ಹಾಗೂ ಪೌರಾಣಿಕ ಸಂಗತಿಗಳು ವಿಚಿತ್ರವಾಗಿ ಹೆಣೆದುಕೊಂಡಿರುವುದರ ಸುಳಿವನ್ನು ಕಾಣಬಹುದಾಗಿದೆ.

ಸಾಮಾಜಿಕ ಹಾಗೂ ನೈತಿಕ ದೃಷ್ಟಿಯಿಂದ ಕೂಡ ಈಕೆ ತುಂಬ ಪ್ರಭಾವ ಬೀರಿದ ಶಕ್ತಿಯಾಗಿದ್ದಾಳೆ. ನಂಬಿ ನೆಚ್ಚಿ ನಡೆದುಕೊಳ್ಳುವ ಭಕ್ತಾದಿಗಳಿಗೆ ಇಷ್ಟಾರ್ಥವನ್ನು ಕೊಡುವಳೆಂದು ಹೆಸರಾಗಿರುವ ಇವಳಿಗೆ ಎಲ್ಲ ಜಾತಿಮತಪಂಥಗಳಲ್ಲೂ ಭಕ್ತರಿದ್ದಾರೆ. ಹೆಂಗಸರಾಗಲಿ ಗಂಡಸರಾಗಲಿ ಇವಳ ಸೇವೆಗೆಂದು ತಮ್ಮನ್ನು ತಾವೇ ಸಮರ್ಪಿಸಿಕೊಳ್ಳುವುದನ್ನು ಜೋಗ್ತಿ (ನೋಡಿ: ಜೋಗಿತಿ ಸಂಪ್ರದಾಯ) ಎಂದು ಕರೆಯುತ್ತಾರೆ. ಹೀಗೆ ಜೋಗ್ತಿಯಾದ ಹೆಣ್ಣನ್ನು ಜೋಗವ್ವನೆಂದೂ ಗಂಡನ್ನು ಜೋಗಪ್ಪನೆಂದೂ ಕರೆಯುವುದು ರೂಢಿಯಲ್ಲಿದೆ. ಜೋಗಪ್ಪನಾದವನು ಹೆಂಗಸರಂತೆ ಮೂಗುತಿ, ವಾಲೆ, ತಾಲಿ, ಕಡಗ, ಬುಗುಡಿ, ಕಾಲಂದುಗೆ, ಕಾಲುಂಗುರ, ಸೀರೆ, ರವಿಕೆ, ಎಲ್ಲಮ್ಮನ ಮುತ್ತಿನಸರ, ಕಾಸಿನಗಲದ ಕುಂಕುಮ ಧರಿಸಿ ಕಾಲಿಗೆ ಗೆಜ್ಜೆಕಟ್ಟಿ ಜಗ (ಅಲಂಕೃತ ಬಿಂದಿಗೆ) ಹೊತ್ತುಕೊಂಡು ಕುಣಿಯುತ್ತ ಊರೂರು ಕೇರಿ ಕೇರಿಗಳನ್ನು ಸುತ್ತುತ್ತಾನೆ. ಜೋಗವ್ವೆ ಹಳದಿ ಬಣ್ಣದ ನಿಲುವಂಗಿಯನ್ನು ಮಾತ್ರ ಧರಿಸುತ್ತಾಳೆ. ಜೋಗವ್ವನನ್ನು ಎಲ್ಲಮ್ಮನ ಸೂಳೆ ಅಥವಾ ಎಲ್ಲಮ್ಮನ ಬಸವಿ ಎಂದೂ ಕರೆಯುವುದುಂಟು. ಹೀಗೆ ದೀಕ್ಷೆ ಪಡೆದವರು ಶಾಸ್ತ್ರೋಕ್ತವಾಗಿ ಮದುವೆಯಾಗುವಂತಿಲ್ಲ. ದೇವದಾಸಿಯರಂತೆ ನಡೆದುಕೊಳ್ಳಲು ಮಾತ್ರ ಅವಕಾಶವಿದೆ. ಜೋಗಪ್ಪ ಮಾತ್ರ ಎಲ್ಲಮ್ಮನ ಪ್ರಭಾವದಿಂದ ಸಂಪೂರ್ಣ ನಪುಂಸಕನಾಗುವನಂತೆ. ಎಲ್ಲಮ್ಮನನ್ನು ಎಲ್ಲ ಜಾತಿಯ ಜನ ಆರಾಧಿಸಿದರೂ ಹೆಚ್ಚಾಗಿ ಕೆಳ ವರ್ಗದವರಲ್ಲಿ ಮಾತ್ರ ಜೋಗ್ತಿ ಬಿಡುವ ಸಂಪ್ರದಾಯ ಉಳಿದುಬಂದಿರುವಂತೆ ತೋರುತ್ತದೆ. ಕರ್ನಾಟಕದ ಹಲವೆಡೆಗಳಲ್ಲಿ, ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಇಂದಿಗೂ ಇವಳ ಹೆಸರಿನಲ್ಲಿ ಹಬ್ಬಹರಿದಿನಗಳು ನಡೆದು ಬೆನ್ನುಸಿಡಿಯಾಡುವುದು, ಕೊಂಡಹಾಯುವುದೂ ಚಾಲ್ತಿಯಲ್ಲಿದೆ. ಇವಳ ಕಥೆಯನ್ನು ಕರ್ನಾಟಕದ ವೃತ್ತಿಗಾಯಕರಲ್ಲಿ ಚೌಡಿಕೆಯವರು, ಗೊಂದಲಿಗರು, ಜೋಗಿಯರು, ತಂಬೂರಿಯವರು ಮತ್ತು ನೀಲಗಾರರು ಹಾಡುವುದು ಕಂಡುಬರುತ್ತದೆ (ನೋಡಿ: ಚೌಡಿಕೆ ಮೇಳ). ಈ ದೇವತೆಯನ್ನು ಕುರಿತಂತೆ ಐತಿಹ್ಯಗಳು, ಪುರಾಣ ಕಥೆಗಳು, ಲಾವಣಿಗಳು, ಬಿಡಿಗೀತೆಗಳು ಇವುಗಳ ಸಂಗ್ರಹ ಕಾರ್ಯ ಇತ್ತೀಚೆಗೆ ಹೆಚ್ಚಾಗಿ ನಡೆದಿದೆ.

*

**ಎಳಂದೂರು ಹರೀಶ್ವರ :** ಸು.1606. ವೀರಶೈವ ಕವಿ. ಪ್ರಭು ದೇವರ ಪುರಾಣ ಎಂಬ ಕಾವ್ಯದ ಕರ್ತೃ. ಮೈಸೂರು ಜಿಲ್ಲೆಯ ಯಳಂದೂರು ಸಿಂಹಾಸನಾಧೀಶ್ವರನಾದ ಗುರು ಹರೀಶ್ವರದೇವರ ಮೊಮ್ಮಗ. ತೋಂಟದಾರ್ಯನ ಮಗ. ಆಗಮಜ್ಞನಾದ ವೃಷಭಪುರದ ಸಿದ್ಧವೀರನ ಶಿಷ್ಯ. ಕಾವ್ಯದಲ್ಲಿ ಕೆಲವೆಡೆ ತನ್ನನ್ನು ಹರೀಶ್ವರದೇವ, ಹರಿದೇವ, ಹರೀಶ್ವರಾಚಾರ್ಯ ಎಂದೂ ಕರೆದುಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ, ಪಂಡಿತದೇವ, ಗುಬ್ಬಿಯ ಮಲ್ಲಣ್ಣ, ಜಕ್ಕಣಾರ್ಯ, ಚಾಮರಸ, ಭೀಮಕವಿ, ನೀಲಕಂಠಾಚಾರ್ಯ, ಮಲ್ಲಣ, ಹಂಪೆಯ ಹರಿಹರ ಇವರನ್ನು ಸ್ತುತಿಸಿದ್ದಾನೆ.

ಪ್ರಭುದೇವರಪುರಾಣ ವಿವಿಧ ಷಟ್ಪದಿಗಳಲ್ಲಿ ರಚಿತವಾಗಿದೆ. 9 ಸಂಧಿ ಹಾಗೂ 1497 ಪದ್ಯಗಳಿರುವ ಈ ಕೃತಿಯಲ್ಲಿ ಅಲ್ಲಮಪ್ರಭುವಿನ ಸಮಗ್ರಚರಿತ್ರೆ ನಿರೂಪಿತವಾಗಿದೆ. ಕಾವ್ಯದ ಬಂಧ ಪ್ರೌಢವಾಗಿದೆ. ಕವಿಯೇ ಇದನ್ನು ಪ್ರಾಸರತ್ನಾಕರ ಎಂದು ಕರೆದಿದ್ದಾನೆ. ಲೌಕಿಕ ಪಾರಮಾರ್ಥಿಕ ಉದಾಹರಣೆಗಳಿಂದ ಚರಿತ್ರೆಯನ್ನು ಅತ್ಯಂತ ರಸವತ್ತಾದ ಕಾವ್ಯವನ್ನಾಗಿ ಮಾಡಿದ್ದಾನೆ. ತನ್ನ ಗ್ರಂಥವನ್ನು ವಿಶ್ವಾವಸು ಜ್ಯೇಷ್ಠ ಶುದ್ಧ ಪಾಡ್ಯದಲ್ಲಿ ಆರಂಭಿಸಿ ಪರಾಭವ ಜ್ಯೇಷ್ಠ ಶುದ್ಧ ಬಹುಳ ದಶಮಿಯಲ್ಲಿ (1606) ಮುಗಿಸಿದಂತೆ ಹೇಳಿಕೊಂಡಿದ್ದಾನೆ. (ಬಿ.ಎಸ್.ಎಸ್.)

**ಎಳನಾಡು :** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಯಳನಾಡು ಎಂದೂ ಕರೆಯಲಾಗುತ್ತದೆ. ಇಲ್ಲಿ ದ್ರಾವಿಡ ಶೈಲಿಯಲ್ಲಿ ಕಟ್ಟಿರುವ ಸಿದ್ಧರಾಮೇಶ್ವರ ಎಂಬ ಬೃಹತ್ ದೇವಾಲಯವಿದೆ. ಇದಕ್ಕೆ ಪೂರ್ವದಲ್ಲಿ ಮತ್ತು ದಕ್ಷಿಣದಲ್ಲಿ ಎರಡು ಮಹಾದ್ವಾರಗಳಿವೆ. ವೀರಶೈವ ಗುರು ಸಿದ್ಧರಾಮೇಶ್ವರ ಇಲ್ಲಿ ತಪಸ್ಸು ಮಾಡಿದನೆಂದು ನಂಬಿಕೆ. ಈ ದೇವಾಲಯವಲ್ಲದೆ ಇಲ್ಲಿ ಲಕ್ಷ್ಮೀ, ರೇವಣ್ಣಸಿದ್ದೇಶ್ವರ, ಹರಿಯಪ್ಪ ಮತ್ತು ಕರಿಯಮ್ಮ ದೇವಾಲಯಗಳೂ ಇವೆ. ಈ ಊರಲ್ಲಿ ರೇಣುಕಾ ಸಂಪ್ರದಾಯದ ವೀರಶೈವ ಮಠವೊಂದಿದೆ. ಇದನ್ನು ಶ್ರೀಮದರಸೀಕೆರೆ ಎಳನಾಡು ಸಂಸ್ಥಾನ ಎಂದು ಕರೆಯಲಾಗುತ್ತದೆ. ಇದು ಹತ್ತಿರದ ಗ್ರಾಮವಾದ ಗೋಡೆಕೆರೆ ಮಠದ ಶಾಖಾ ಮಠ. (ಎಸ್.ಜಿ.ಎ.)

**ಎಳಮಲೆಯ ಗುರುಶಾಂತದೇವ :** ಸು.1565. ವೀರಶೈವ ಕವಿ. ಪುರಾತನ ವಚನಗಳ ಸಂಕಲನಕಾರ. ಸಂಪಾದನೆಯ ಚೆನ್ನಂಜೆದೇವನ ಶಿಷ್ಯ. ಗುರುವಿನಂತೆಯೇ ವಿವಿಧ ದೃಷ್ಟಿಕೋನಗಳಿಂದ ಒಳ್ಳೆಯ ವಚನಗಳನ್ನು

ಆಯ್ದು ಸಂಕಲಿಸಿ ಸಂಪಾದನೆಯು ಗುರುಶಾಂತದೇವ ಎಂದು ಹೆಸರಾಗಿದ್ದಾನೆ. ಇವನಿಂದ ಸಂಕಲಿತವಾದ ಗ್ರಂಥದಲ್ಲಿ ಶರಣಸ್ತೋತ್ರದ ವಚನ, ಲಿಂಗವಿಕಳಾವಸ್ಥೆಯ ವಚನ, ಷಟ್‌ಸ್ಥಲ ಸ್ತೋತ್ರದ ವಚನ, ಅಷ್ಟಾವರಣ ಸ್ತೋತ್ರದ ವಚನಗಳಿವೆ. ಇವುಗಳಲ್ಲಿ ಅನುಕ್ರಮವಾಗಿ ಶರಣರ ಮಹಿತಿಯನ್ನು ಕೊಂಡಾಡುವ 110 ವಚನಗಳೂ ಲಿಂಗಪತಿಯ ಸಂಯೋಗಕ್ಕಾಗಿ ಪರಿತಪಿಸುವ ಶರಣಪತಿಯ 110 ವಚನಗಳೂ ಷಟ್‌ಸ್ಥಲಗಳ ವಿಶೇಷ ಗುಣಪ್ರಶಂಸೆಯ 130 ವಚನಗಳೂ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದಗಳ ಮಹಿಮೆಯನ್ನು ಬಿತ್ತರಿಸುವ 161 ವಚನಗಳೂ ಸಂಕಲಿತವಾಗಿವೆ. ಇವನ ಶಿಷ್ಯ ಸಂಪಾದನೆಯ ಗುರುಲಿಂಗದೇವ ಈತನನ್ನು ಭಕ್ತಿಜ್ಞಾನವೈರಾಗ್ಯದ ಸಮರಸಾನುಭವಿ ಎಂದು ಪ್ರಶಂಸಿದ್ದಾನೆ.

(ಎಂ.ಎಂ.)

**ಏಂಜೆಲ್ ಮೇರಿ, ಜೋಸೆಫ್ :** ಅಥ್ಲೆಟಿಕ್ಸ್‌ನ ನಾನಾ ವಿಭಾಗಗಳಲ್ಲಿ ಪರಿಣತರಾದ ಪ್ರಸಿದ್ಧ ಕ್ರೀಡಾಪಟು. ಅರ್ಜುನ್ ಪ್ರಶಸ್ತಿ ವಿಜೇತೆ. ದಾವಣಗೆರೆಯಲ್ಲಿ ಜನಿಸಿದ ಇವರು ಬೆಂಗಳೂರಿನ ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಕ್ರೀಡಾಕೂಟಗಳ ಮೂಲಕ ರೂಪುಗೊಂಡರು. ಪ್ರಾರಂಭದಲ್ಲಿ ಪೂರ್ಣವೇಗದ ಓಟ (ಸ್ಪ್ರಿಂಟ್) ಹಾಗೂ ಉದ್ದ ನೆಗೆತ (ಲಾಂಗ್ ಜಂಪ್) ಸ್ಪರ್ಧೆಗಳಲ್ಲಿ ಮೇಲ್ಮೆ ಸಾಧಿಸಿದರು. ಅನಂತರ ದಕ್ಷಿಣ ರೈಲ್ವೆ ತಂಡದಲ್ಲಿ ಪ್ರಮುಖ ಪಾತ್ರ ವಹಿಸಿ ಹಲವಾರು ವರ್ಷ ಭಾರತೀಯ ಕ್ರೀಡಾರಂಗದಲ್ಲಿ ದಕ್ಷಿಣ ರೈಲ್ವೆಯ ಕ್ರೀಡಾಪಟುವಾಗಿ ಭಾರತಕ್ಕೆ ಹಿರಿಮೆ ತಂದುಕೊಟ್ಟರು.

ಓಟದ ನಾನಾ ವಿಭಾಗಗಳಲ್ಲಿ ಸ್ಪರ್ಧಿಸಿ, ಮೂರು ಏಷ್ಯನ್ ಕ್ರೀಡೆಗಳಲ್ಲಿ ಭಾಗವಹಿಸಿದ್ದ ಈಕೆ ದೆಹಲಿಯ 1982ರ ಏಷ್ಯನ್ ಕ್ರೀಡೆಯ ಸ್ಪರ್ಧೆಯಲ್ಲಿ ಭಾಗವಹಿಸಿ ಅಂತಾರಾಷ್ಟ್ರೀಯ ಓಟದ ಸ್ಪರ್ಧೆಗಳಿಗೆ ವಿದಾಯ ಹೇಳಿದರು. 1978ರ ಬ್ಯಾಂಕಾಕ್ ಏಷ್ಯನ್ ಕ್ರೀಡೆಗಳಲ್ಲಿ ಭಾಗವಹಿಸಿ ಪೆಂಟಾತ್ಲಾನ್ ಹಾಗೂ ಉದ್ದ ನೆಗೆತದಲ್ಲಿ ಪಾಲ್ಗೊಂಡರು. ಉದ್ದ ನೆಗೆತದಲ್ಲಿ ಬೆಳ್ಳಿ ಪದಕ ಗಳಿಸಿದರು. 6.05 ಮೀಟರ್ ಉದ್ದ ಜಿಗಿತದೊಂದಿಗೆ ಇವರು ದಾಖಲೆ ನಿರ್ಮಿಸಿದ್ದಾರೆ. ಭಾರತದ ಅಥ್ಲೆಟಿಕ್ಸ್ ರಂಗದಲ್ಲಿ ಸಕಲ ವಿಭಾಗ ಕ್ರೀಡಾಪಟು (ಆಲ್ ರೌಂಡರ್) ಎಂದು ಖ್ಯಾತಿ ಪಡೆದಿದ್ದಾರೆ.

## ಏ

ಇವರ ಮಹತ್ತರವಾದ ಸಾಧನೆಗೆ ಮನ್ನಣೆಯಿತ್ತು ಭಾರತ ಸರ್ಕಾರ ಇವರಿಗೆ 1978-79ರ ಸಾಲಿನ ಅರ್ಜುನ ಪ್ರಶಸ್ತಿ ನೀಡಿದೆ. ಕರ್ನಾಟಕ ರಾಜ್ಯ ಸರ್ಕಾರ ರಾಜ್ಯ ಪ್ರಶಸ್ತಿ ಹಾಗೂ ದಸರಾ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿದೆ. ಇವರು ಸದ್ಯದಲ್ಲಿ ದಕ್ಷಿಣ ರೈಲ್ವೆ ವಿಭಾಗದ ಕ್ಷೇಮಾಭಿವೃದ್ಧಿ ಅಧಿಕಾರಿಯಾಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. (ಎಸ್.ಆರ್.ಯು.)

**ಏಕಾಂತದ ರಾಮಯ್ಯ :** 12ನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಶಿವಭಕ್ತ. ಕನ್ನಡನಾಡಿನಲ್ಲಿ ಶೈವನಿಷ್ಠೆಯ ಮೇಲ್ಮೆಯನ್ನು ಸ್ಥಾಪಿಸಿದ ವೀರಶೈವರಲ್ಲಿ ಗಣ್ಯ. ಗುಲ್ಬರ್ಗ ಜಿಲ್ಲೆಯ ಅಳಂದೆ (ಅಳಂದ) ಇವನ ಜನ್ಮಸ್ಥಳ. ಶ್ರೀವತ್ಸಗೋತ್ರದ ಪುರುಷೋತ್ತಮ, ಪದ್ಮಾಂಬಿಕೆಯರಿಗೆ ವೀರಭದ್ರನ ವರಪ್ರಸಾದದಿಂದ ಹುಟ್ಟಿದ. ಅಳಂದೆಯ ಸೋಮನಾಥನನ್ನು ಏಕಾಂತದಲ್ಲಿ ಏಕಾಗ್ರಭಕ್ತಿಯಿಂದ ಆರಾಧಿಸುತ್ತಿದ್ದುದರಿಂದ ಈತನಿಗೆ ಏಕಾಂತದ ರಾಮಯ್ಯನೆಂದು ಹೆಸರು ಬಂತು.

ಈತ ವೀರಭಕ್ತನಾಗಿದ್ದು ಶೈವಧರ್ಮದ ಪುನರುದ್ಧಾರದಲ್ಲಿ ನಿಷ್ಠೆ ಹೊಂದಿದ್ದ. ಶೈವಧರ್ಮದ ಅಭ್ಯುದಯವೇ ಜೀವನದ ಪರಮಗುರಿಯೆಂದು ತಿಳಿದಿದ್ದ ಈತ ಅಳಂದೆಯಿಂದ ಧಾರವಾಡ ಜಿಲ್ಲೆಯ ಪುಲಿಗೆರೆಗೆ (ಈಗಿನ ಲಕ್ಷ್ಮೇಶ್ವರಕ್ಕೆ) ಬಂದ. ಅಲ್ಲಿಂದ ಹಿರೇಕೆರೂರು ತಾಲ್ಲೂಕಿನ ಅಬ್ಬಲೂರಿಗೆ ತೆರಳಿ ಅಲ್ಲಿ ಪ್ರಬಲರಾಗಿದ್ದ ಜೈನರನ್ನು ಸೋಲಿಸಿ ಶೈವಧರ್ಮವನ್ನು ಪ್ರಸಾರ ಮಾಡಿದ ವಿಷಯ ಪವಾಡ ರೂಪವಾಗಿ ಅಬ್ಬಲೂರಿನ ಶಾಸನ ಮತ್ತು ಹರಿಹರನ ಏಕಾಂತರಾಮಿತಂದೆಗಳ ರಗಳೆಗಳಲ್ಲಿ ವರ್ಣಿತವಾಗಿದೆ.



ಏಕಾಂತದ ರಾಮಯ್ಯನ ಶಿರಸ್ಸು ಪವಾಡ, ಅಬ್ಬಲೂರಿನ ಸೋಮೇಶ್ವರ ದೇವಾಲಯ

ಅವುಗಳ ಪ್ರಕಾರ ಈತ ಅಬ್ಬಲೂರಿಗೆ ಬಂದು ಅಲ್ಲಿ ಬ್ರಹ್ಮೇಶ್ವರ ದೇವಸ್ಥಾನದಲ್ಲಿದ್ದು ಜೈನರೊಡನೆ ಸ್ಪರ್ಧೆಹೂಡಿ ತಾನೇ ಕತ್ತರಿಸಿಕೊಂಡ ತನ್ನ ತಲೆಯನ್ನು ಏಳು ದಿನಗಳು ಕಳೆದ ಮೇಲೆ ಮತ್ತೆ ತನ್ನ ಅಟ್ಟೆಯ ಮೇಲಿಟ್ಟುಕೊಂಡು ಜೀವಂತವಾಗಿ ಎದ್ದು ಜಿನ ದೇವಾಲಯಗಳಲ್ಲಿ ಮತ್ತು ಬಸದಿಗಳಲ್ಲಿ ಶಿವಲಿಂಗ ಪ್ರತಿಷ್ಠೆಯನ್ನು ಮಾಡಿಸಿದ. ಇದರಿಂದ ವ್ಯಥೆಗೊಂಡ ಜೈನರು ದೊರೆ ಬಿಜ್ಜಳನಲ್ಲಿ ಮೊರೆಯಿಡಲು ಈತ ಮತ್ತೆ ತನ್ನ ತಲೆಯನ್ನು ಕತ್ತರಿಸಿ ಜೈನರ ಕೈಗೆ ಕೊಡುವುದಾಗಿಯೂ ಅವರು ಅದನ್ನು ಸುಟ್ಟ ಮೇಲೆ ತಾನು ಮತ್ತದನ್ನು ಪಡೆಯುವುದಾಗಿಯೂ ಘೋಷಿಸಿದ. ಜೈನರು ಇದಕ್ಕೆ ಹೆದರಲು ಬಿಜ್ಜಳ ಇವನ ಕಾಲುಗಳನ್ನು ತೊಳೆದು ಜಯಪತ್ರವನ್ನಿತ್ತು ಸೋಮನಾಥದೇವರ ಅಂಗಭೋಗಾದಿಗಳಿಗಾಗಿ ಗೋಗಾವೆ ಎಂಬ ಹಳ್ಳಿಯನ್ನು ಕೊಟ್ಟ. ಇವನ ಮಹಿಮೆಯನ್ನು ಕೇಳಿದ ಚಾಳುಕ್ಯ ಪ್ರಭು ತ್ರಿಭುವನಮಲ್ಲ ಸೋಮೇಶ್ವರ ಅಬ್ಬಲೂರನ್ನೂ ಕದಂಬ ಪ್ರಭು ಕಾಮರಸ ಮುಳವಳ್ಳಿ ಗ್ರಾಮವನ್ನೂ ದಾನವಾಗಿ ಕೊಟ್ಟರು. ಇವನ ಹಲವು ಪವಾಡಗಳು ಅಬ್ಬಲೂರಿನ ಸೋಮೇಶ್ವರ ದೇವಾಲಯದ ಗೋಡೆಗಳ ಮೇಲೆ ಶಿಲ್ಪಿಸಿದ್ದು, ಅವುಗಳ ಕೆಳಗೆ ವಿವರಣಾತ್ಮಕ ಶಾಸನಗಳೂ ಇವೆ.

ಈತ ಚೆನ್ನರಾಮೇಶ್ವರಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ಕೆಲವು ವಚನಗಳನ್ನು ಬರೆದಿದ್ದಾನೆ. ಇವನ ಹತ್ತು ವಚನಗಳು ದೊರೆತಿವೆ. ಪಾಲ್ಕುರಿಕೆ ಸೋಮನಾಥ'ನ ಸಹಸ್ರಗಣನಾಮದಲ್ಲಿ ಇವನ ಹೆಸರಿದೆ. ಸುಮಾರು

ಹದಿನೇಳನೆಯ ಶತಮಾನದ ಶಾಂತ ನಿರಂಜನನ ಅಬ್ಬಲೂರು ಚರಿತೆ ಈತನನ್ನು ಕುರಿತದ್ದು. ಈತ ಪ್ರತಿಷ್ಠೆಮಾಡಿದ ವೀರಸೋಮೇಶ್ವರ ದೇವಾಲಯ ಈಗಲೂ ಅಬ್ಬಲೂರಿನಲ್ಲಿದೆ. (ಜಿ.ಎಸ್.ಎಸ್.ಐ.)

**ಏಚಲದೇವಿ :** ಈ ಹೆಸರಿನ ಮೂವರು ಹೊಯ್ಸಳ ವಂಶದಲ್ಲಿದ್ದಾರೆ. ಎರೆಯಂಗ ನೃಪನ ಪತ್ನಿಯೂ ವಿಷ್ಣುವರ್ಧನನ ತಾಯಿಯೂ ಆದವಳು ಒಬ್ಬಳು, 1ನೆಯ ನರಸಿಂಹನ ಪಟ್ಟಮಹಿಷಿಯೂ 2ನೆಯ ಬಲ್ಲಾಳನ ತಾಯಿಯೂ ಆದವಳು ಮತ್ತೊಬ್ಬಳು, ಹೊಯ್ಸಳ ರಾಜಕುಮಾರ ಉದಯಾದಿತ್ಯನ ಮಗಳು ಇನ್ನೊಬ್ಬಳು. ಕಡೆಯವಳ ವಿಚಾರ ಚಿಕ್ಕಮಗಳೂರು ತಾಲ್ಲೂಕಿನ ಒಂದೇ ಒಂದು ಶಾಸನದಿಂದ ಮಾತ್ರ ತಿಳಿದುಬರುವ ಸಂಗತಿಯಾಗಿದೆ. ಮೊದಲಿಬ್ಬರ ಬಗ್ಗೆ ಹಲವು ಕಡೆ ಶಾಸನ ಉಲ್ಲೇಖಗಳು ಸಿಗುತ್ತವೆ.

ಎರೆಯಂಗನ ಪತ್ನಿ ಏಚಲದೇವಿಯನ್ನು ಚೆಲ್ವಿಂಗೆರೆವಟ್ಟು ಶೀಲಗುಣದಿಂ ಎಂದೂ ನರಸಿಂಹನ ರಾಣಿ ಏಚಲದೇವಿಯನ್ನು ಮೃದುಪದೆ, ಸುದತಿ ಎಂದೂ ಬಣ್ಣಿಸಲಾಗಿದೆ. ಕೆಲವು ಕಡೆ ಏಚಲದೇವಿಗೆ ಸಂವಾದಿಯಾಗಿ ಏಚಲ, ಏಚಲೆ ಮತ್ತು ಏಚಲಾದೇವಿ ಎಂಬ ರೂಪುಗಳೂ ದೊರೆಯುತ್ತವೆ. (ಆರ್.ಜಿ.)

**ಏಣಗಿ ಬಾಳಪ್ಪ :** 1916-. ರಂಗಭೂಮಿಯ ಪ್ರಸಿದ್ಧ ನಟರು. ಸವದತ್ತಿ ತಾಲ್ಲೂಕಿನ ಏಣಗಿಯಲ್ಲಿ ಬಡಕುಟುಂಬ ಒಂದರಲ್ಲಿ ಜನಿಸಿದ ಇವರು ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಪೋಷಣೆಯಲ್ಲಿ ಬೆಳೆದರು. ಇವರಿಗೆ ಬಂದೊದಗಿದ ಕಷ್ಟದಿಂದ ಶಾಲಾಶಿಕ್ಷಣ ಪ್ರಾಥಮಿಕ ಮೂರನೆಯ ತರಗತಿಯವರೆಗೆ ಮಾತ್ರ ದೊರಕಿತು. ಚಿಕ್ಕಂದಿನಿಂದಲೂ ಇವರಿಗೆ ಬಯಲಾಟ, ಸಂಗೀತ ಎಂದರೆ ಬಹಳ ಆಸಕ್ತಿ. ಐದಾರು ವರ್ಷದ ಹುಡುಗನಾಗಿದ್ದಾಗ ಬಯಲಾಟಗಳಲ್ಲಿ ಚಿಕ್ಕ ಪಾತ್ರಗಳನ್ನು ಅಭಿನಯಿಸಿ ಜನರ ಪ್ರಶಂಸೆ ಪಡೆದರು. ಹನ್ನೊಂದು ವರ್ಷದ ಹುಡುಗನಾಗಿದ್ದಾಗ ಗರೂಡ ಸದಾಶಿವರಾಯರ ಪಾದುಕಾಪಟ್ಟಾಭಿಷೇಕ ನಾಟಕದಲ್ಲಿ ಭರತನ ಪಾತ್ರವಹಿಸುವ ಅವಕಾಶ ಒದಗಿಬಂತು. ಆ ನಾಟಕದಲ್ಲಿ ಇವರ ಪಾತ್ರ ಯಶಸ್ವಿಯಾಯಿತು.



ಇವರು ತಮ್ಮ ಮುಂದಿನ ಜೀವನದಲ್ಲಿ ಸಾಕಷ್ಟು ಬಡತನ ಎಡರು ತೊಡರುಗಳನ್ನು ಅನುಭವಿಸಿದರು. ಆ ಸಮಯದಲ್ಲಿ ಕವಿ ಹಾಗೂ ನಾಟಕಕಾರರಾದ ಶಿವಲಿಂಗಸ್ವಾಮಿಗಳು ಇವರ ಹಿತಚಿಂತಕರೂ ಮಾರ್ಗದರ್ಶಿಯೂ ಆಗಿದ್ದರು. ಅಬ್ಬಿಗೇರಿ ಬಂಧುಗಳಿಂದ ಆರಂಭವಾದ ಅಬ್ಬಿಗೇರಿ ನಾಟಕ ಸಂಘವನ್ನು ಇವರು 1926ರಲ್ಲಿ ಪ್ರವೇಶಿಸಿದರು. ಇದರೊಂದಿಗೆ ಇವರ ಕಲಾಜೀವನ ಆರಂಭವಾಯಿತು. ಆಗ ಇವರು ಅಭಿನಯಿಸಿದ ಕಿತ್ತೂರ ಚೆನ್ನಮ್ಮ ನಾಟಕ ಕರ್ನಾಟಕದಲ್ಲಿ ರಾಷ್ಟ್ರೀಯ ಇತಿಹಾಸವನ್ನು ನಿರ್ಮಿಸಿತು. ಅನಂತರ 1928ರಲ್ಲಿ ಮೈಲಾರೀ ಪ್ರಾಸಾದಿತ ಸಂಗೀತ ನಾಟಕ ಮಂಡಳಿಯನ್ನು ಪ್ರವೇಶಿಸಿದರು. 1932ರಲ್ಲಿ ಹುಚ್ಚಪ್ಪ ಸೂಡಿ ಎಂಬ ಸ್ನೇಹಿತರ ಸಹಕಾರದೊಂದಿಗೆ ಗುರುಸೇವಾ ಸಂಗೀತ ನಾಟಕ ಮಂಡಳಿಯನ್ನು ಕಟ್ಟಿದರು.

ಇವರು ಮುಖ್ಯವಾಗಿ ಸ್ತ್ರೀಪಾತ್ರಗಳನ್ನು ಹಾಕಿ ವಿವಿಧ ಕಂಪೆನಿಗಳಲ್ಲಿ ಆ ಮೂಲಕ ತಮ್ಮ ರಂಗ ಸೇವೆಯನ್ನು ಸಲ್ಲಿಸಿದ್ದಾರೆ. ಮಾರಿಕಾಂಬಾ ಪ್ರಾಸಾದಿಕ ನಾಟಕ ಮಂಡಳಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಮತ್ತು ಕಿತ್ತೂರು ರುದ್ರಮ್ಮ ಈ ಎರಡೂ ನಾಟಕಗಳಲ್ಲಿ ಇವರು ವಹಿಸುತ್ತಿದ್ದ ನಾಯಕಿಯ ಪಾತ್ರಗಳು ತುಂಬ ಜನಪ್ರಿಯವಾದವು. ಮುಂದೆ ಇವರು ಪುರುಷ ಪಾತ್ರಗಳನ್ನು ಹಾಕಿ ಪ್ರಖ್ಯಾತಿ ಪಡೆದರು.

ಕೆಲವು ಕಾಲಾನಂತರ ಇವರು ಕಲಾವೈಭವ ನಾಟಕ ಮಂಡಳಿ ಎಂಬ ಸ್ವಂತ ಕಂಪೆನಿಯನ್ನು ಪ್ರಾರಂಭಿಸಿದರು. ಈ ಮಂಡಳಿಯ ನೇತಾರರಾಗಿ ಅವಿಶ್ರಾಂತವಾಗಿ ರಂಗಭೂಮಿಯ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಕರುಣ ವೀರ ಹಾಸ್ಯರಸಗಳನ್ನು ಅಭಿವ್ಯಕ್ತಪಡಿಸುವಲ್ಲಿ ಶ್ರೀಯುತರು ತೋರುವ ಅಭಿನಯ, ಕಲೆಗಾರಿಕೆ ಮೆಚ್ಚುವಂಥದ್ದು. ಕರ್ನಾಟಕದ ರಂಗಭೂಮಿಯಲ್ಲಿ ಹವ್ಯಾಸಿ ಹಾಗೂ ವೃತ್ತಿರಂಗಗಳಿಗಿರುವ ಅಂತರವನ್ನು ತೊಡೆದುಹಾಕಬೇಕೆಂಬುದು ಇವರ ಮುಖ್ಯೋದ್ದೇಶವಾಗಿದೆ. ಇವರ ಮಾವ ಬಂದನಪೋ ಮಾವ ಎಂಬ ಸಾಮಾಜಿಕ ವಿಡಂಬನೆ ಈ ನಿಟ್ಟಿನಲ್ಲಿ ಒಂದು ಹೊಸ ಪ್ರಯೋಗ. ಇವರು ಬೆಳ್ಳಿತೆರೆಯಲ್ಲೂ ಅಭಿನಯಿಸಿದ್ದಾರೆ. ಇವರ ಅಭಿನಯ ಚಾತುರ್ಯವನ್ನು ಮೆಚ್ಚಿ ಕರ್ನಾಟಕ ಸರ್ಕಾರ ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿ ನೀಡಿ ಗೌರವಿಸಿದೆ (1994). ನಾಟ್ಯ ಭೂಷಣ ಅಭಿನಂದನಾ ಎಂಬ ಗ್ರಂಥವನ್ನು ಇವರಿಗೆ ಸಮರ್ಪಿಸಲಾಗಿದೆ (1998). ಪ್ರಸಿದ್ಧ ನಟ ಏಣಗಿ ನಟರಾಜ್ ಇವರ ಮಗ. (ಎನ್.ಕೆ.ಕೆ.)

**ಏಲಕ್ಕಿ :** ಕರ್ನಾಟಕದ ಮಲೆನಾಡು ಭಾಗಗಳಲ್ಲಿ ಬೆಳೆಯುವ ಪ್ರಮುಖ ಸಂಬಾರ ಹಾಗೂ ವಾಣಿಜ್ಯ ಬೆಳೆ. ಇದನ್ನು ವೈಜ್ಞಾನಿಕವಾಗಿ ಸೈಟಾಮಿನೆ ಉಪವರ್ಗದ ಜಿಂಜಿಬರೇಸಿ ಕುಟುಂಬಕ್ಕೆ ಸೇರಿದ ಏಕದಳ ಸಂಗಡದ ಬಹುವಾರ್ಷಿಕ ಸಸ್ಯ ಎಂದು ಪರಿಗಣಿಸಿದೆ. ಎಲೆಟೇರಿಯ ಕಾರ್ಡಮೋಮಮ್ ಇದರ ವೈಜ್ಞಾನಿಕ ಹೆಸರು. ಇದು ಜಗತ್ತಿನಲ್ಲೇ ಅತಿ ಬೆಲೆಬಾಳುವ ಸಂಬಾರ ಪದಾರ್ಥವೆನಿಸಿದ್ದು 'ಸಂಬಾರ ಬೆಳೆಗಳ ರಾಣಿ' ಎಂಬ ಹೆಗ್ಗಳಿಕೆಯ ಕೀರ್ತಿ ಇದಕ್ಕಿದೆ.

ಮುಖ್ಯವಾಗಿ ಭಾರತ ಮತ್ತು ಮಲಯ ಪರ್ಯಾಯ ದ್ವೀಪದಲ್ಲಿ ಇದನ್ನು ಬೆಳೆಯಲಾಗುತ್ತಿತ್ತು. ಈಗ ಇದು ತನ್ನ ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಗ್ವಾಟೆಮಾಲ, ಟಾಂಜೇನಿಯ, ಶ್ರೀಲಂಕಾ, ಥಾಯ್‌ಲೆಂಡ್, ಲಾವೋಸ್, ವಿಯೆಟ್ನಾಂ, ಕೊಸ್ಟಾರಿಕಾ, ಎಲ್‌ಸಾಲ್ವೆಡಾರ್ ಮೊದಲಾದ ದೇಶಗಳಲ್ಲೂ ಇದನ್ನು ಬೆಳೆಯಲಾಗುತ್ತಿದೆ. ಅಲ್ಲಲ್ಲಿ ಕಾಡಿನಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಈ ಗಿಡದ ಹಣ್ಣುಗಳ ಪ್ರಯೋಜನವನ್ನು ಗುರುತಿಸಿ ಇದನ್ನು ತೋಟಗಳಲ್ಲಿ ಬೆಳೆಯಲು ಪ್ರಾರಂಭಿಸಲಾಯಿತು. ಕ್ರಿಸ್ತಪೂರ್ವದ ಶತಮಾನಗಳಲ್ಲಿ ರೋಮನ್ ಸಾಮ್ರಾಜ್ಯ ಪೂರ್ವದೇಶಗಳೊಂದಿಗೆ ನಡೆಸುತ್ತಿದ್ದ ವಾಣಿಜ್ಯದ ಸರಕು ಪಟ್ಟಿಯಲ್ಲಿ ಏಲಕ್ಕಿಯ ಉಲ್ಲೇಖವಿದೆ. ಇದನ್ನು ಇಲಾಚಿ ಎಂದೂ ಕರೆಯಲಾಗುತ್ತಿತ್ತು. ಅಂತಾರಾಷ್ಟ್ರೀಯ ವಾಣಿಜ್ಯ ವಿಸ್ತರಿಸಿದಂತೆಲ್ಲ, ಮಧ್ಯಪ್ರಾಚ್ಯ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಇದರ ಬೇಡಿಕೆ ಹೆಚ್ಚಿತು. ಶೀತ ಹವಾಗುಣವಿರುವ ದೇಶಗಳಲ್ಲಿ ಕಾಫಿ, ಟೀ ಮತ್ತು ತಂಪು ಪಾನೀಯಗಳೊಂದಿಗೆ ಇದನ್ನು ಸೇರಿಸಿ ಸೇವಿಸುವ ಪದ್ಧತಿ ರೂಢಿಗೆ ಬಂತು. ಅಡುಗೆಯಲ್ಲಿ ಇದನ್ನು ಇದರ ಪರಿಮಳ ಗುಣಕ್ಕಾಗಿ ಬಳಸಲಾಗುತ್ತದೆ. ಔಷಧೀಯ ಗುಣಗಳಿಗಾಗಿಯೂ ಇದು ಪ್ರಸಿದ್ಧವಾಗಿದೆ.

ಇದನ್ನು ಮುಖ್ಯವಾಗಿ ಮೂರು ಬಗೆಗಳಾಗಿ ವಿಂಗಡಿಸಲಾಗುವುದು. ಸಿಲೋನ್ ಏಲಕ್ಕಿ, ಮೈಸೂರು ಏಲಕ್ಕಿ ಮತ್ತು ಮಲಬಾರ್ ಏಲಕ್ಕಿ. ಮೊದಲನೆಯದು ಸ್ವಲ್ಪ ಉದ್ದ ಕಾಯಿಯಾದರೆ, ಇನ್ನೆರಡು ಚಿಕ್ಕ ಗಾತ್ರದವು. ಏಲಕ್ಕಿಯ ಇನ್ನೂ ದೊಡ್ಡ ಬಗೆಯದು ಆಗ್ನೇಯ ಏಷ್ಯ ಮತ್ತು ಆಫ್ರಿಕದ ಭೂಮಧ್ಯ ರೇಖಾ ವಲಯದ ಹವಾಗುಣದಲ್ಲಿ ಬೆಳೆಯುತ್ತದೆ. ಇದು ಮುಖ್ಯವಾಗಿ ಮಳೆಯಾಶ್ರಿತ ಬೆಳೆ. ತಂಪಾಗಿರುವ ಹಸುರು ಕಾಡಿನಿಂದ ಕೂಡಿರುವ ತೇವಾಂಶಭರಿತ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಇಂತಹ ಈಬೆಳೆ ಬೆಳೆಯುವ ಶ್ರೇಷ್ಠವಾದ ಸ್ಥಳಕ್ಕೆ ಕರ್ನಾಟಕದ ಮಲೆನಾಡು ಭಾಗದಲ್ಲಿ ಹನಾಲು, ಹಡ್ಲು ಎಂದು ಕರೆಯುತ್ತಾರೆ. ಇಳಿಜಾರಿನ ಜಾಗದಲ್ಲೂ ಈ ಬೆಳೆಯನ್ನು ಬೆಳೆಯಬಹುದು. ಹಿಂದೆ ಕರ್ನಾಟಕದ ಕಾಡುಗಳಲ್ಲಿ ಅಲ್ಲಲ್ಲಿ ಕೆಲವು ಮರಗಳನ್ನು ಕಡಿದು ಉರುಳಿಸಿದಾಗ ಪ್ರಾಣಿ ಪಕ್ಷಿಗಳು ಹಿಕ್ಕೆಯ ರೂಪದಲ್ಲಿ ತಂದು ಹಾಕಿರುವ ಏಲಕ್ಕಿ ಬೀಜಗಳು ಸೂರ್ಯನ ಬಿಸಿಲಿಗೆ

ಮೊಳಕೆಯೊಡೆದು ಗಿಡಗಳಾಗಿ ಬೆಳೆಯುತ್ತಿದ್ದವು. ಮೂರು ವರ್ಷಗಳಲ್ಲಿ ಗಿಡ ಬಲಿತು ಕಾಯಿ ಬಿಡುತ್ತಿತ್ತು. ಹಣ್ಣು ಪಕ್ವವಾದ ಮೇಲೆ ಕುಯ್ದು ತಂದು ವ್ಯಾಪರಸ್ಥರಿಗೆ ಮಾರುತ್ತಿದ್ದರು. ಆದರೆ ಕಾಡು ಕಡಿಮೆಯಾದಂತೆ ವ್ಯವಸ್ಥಿತವಾದ ಕೃಷಿ ಪದ್ಧತಿಯಿಂದ ಮಾತ್ರ ಏಲಕ್ಕಿ ಬೆಳೆಯುವುದು ಸಾಧ್ಯವಾಗಿದೆ.

ಸಾಮಾನ್ಯವಾಗಿ ಇದನ್ನು ಬೀಜಗಳಿಂದ ವೃದ್ಧಿ ಮಾಡಲಾಗುತ್ತದೆ. ಉತ್ತಮ ಇಳುವರಿ ಮತ್ತು ಗುಣಗಳನ್ನು ಹೊಂದಿರುವ ಈ ಗಿಡಗಳಲ್ಲಿ ಹಿಡಿದಿರುವ ಇದರ ಹಣ್ಣನ್ನು ಆರಿಸಿ ಕುಯ್ದು ಬೀಜ ಮಾಡಲು ಬಳಸುತ್ತಾರೆ. ಇದರ ಸಿಪ್ಪೆ ತೆಗೆದು ಬೀಜವನ್ನು ಬೂದಿಯಿಂದ ಮಿಶ್ರಮಾಡಿ ನೆರಳಿನಲ್ಲಿ ಒಣಗಿಸಿ ಒಂದು ವಾರ ಬಿಟ್ಟು ನೆಲದಲ್ಲಿ ಅಂದರೆ ಮಡಿಗಳಲ್ಲಿ ಹಾಕಿ, ಕಾವು ಬರುವಂತೆ ಬತ್ತದ ಹುಲ್ಲು ಅಥವಾ ಚಿಮ್ಮಿ ಸೊಪ್ಪು ಅಥವಾ ಸೀಮೆಸೀಗೆ (ಲಂಟಾನ) ಸೊಪ್ಪನ್ನು ಮುಚ್ಚಿ ಮೇಲಕ್ಕೆ ಮೂರು ನಾಲ್ಕು ಅಡಿಗಳ ಎತ್ತರದಲ್ಲಿ ಚಪ್ಪರ ಹಾಕಿ ನೆರಳನ್ನು ಕಲ್ಪಿಸಲಾಗುತ್ತದೆ. ಹೀಗೆ ಒಟ್ಟು ಪಾತಿ ಮಾಡುವ ಜಮೀನನ್ನು ಬಹಳ ಸೂಕ್ಷ್ಮವಾಗಿ ಹದಮಾಡಿ ತಯಾರು ಮಾಡಬೇಕು. ಫಲವತ್ತಾದ ಮಣ್ಣನ್ನು ಅಷ್ಟೇ ಗೊಬ್ಬರದೊಂದಿಗೆ ಮಿಶ್ರಮಾಡಿ ಏರುಮಡಿಗಳನ್ನು ರಚಿಸಲಾಗುತ್ತದೆ. ಸಾಮಾನ್ಯವಾಗಿ ಈ ಮಡಿ ಅಥವಾ ಪಾತಿಗಳಿಗೆ ನಾಲ್ಕು ಅಡಿ ಅಗಲದ ಮುಕ್ಕಾಲು ಅಡಿ ಎತ್ತರದ ಪಾತಿ ಮಾಡುತ್ತಾರೆ. ಇದರಿಂದ ಮಳೆಗಾಲದಲ್ಲಿ ಹೆಚ್ಚಾದ ನೀರು ಬಸಿದು ಹೋಗಿ ಸಸಿಗಳು ಕೊಳೆಯದಂತೆ ರಕ್ಷಿಸಲು ಸಾಧ್ಯವಾಗುತ್ತದೆ. ಈ ಏರು ಮಡಿಗಳಲ್ಲಿ ಬೀಜಗಳನ್ನು ಬಿತ್ತಿ ಸ್ವಲ್ಪ ಮಣ್ಣಿನೊಳಗೆ ಹುಗಿದುಕೊಳ್ಳುವಂತೆ ಮೇಲ್ಮಣ್ಣನ್ನು ಚೆಲ್ಲುತ್ತಾರೆ. ಬೀಜ ಬಿತ್ತಿದ ಒಂದು ತಿಂಗಳ ಅನಂತರ ಮೊಳಕೆ ಬರಲು ಪ್ರಾರಂಭಿಸಿ ಸುಮಾರು ಎಂಟು ತಿಂಗಳಲ್ಲಿ ಸಸಿ ದೊಡ್ಡದಾಗುತ್ತದೆ. ಆಗ ತೀರ ಉದ್ದ ಅಂದರೆ ಎರಡು ಮೂರು ಅಡಿ ಉದ್ದ ಬಂದ ಸಸಿಗಳನ್ನು ಕಿತ್ತು ನೇರವಾಗಿ ತೋಟಗಳಲ್ಲಿ ಹಾಕುತ್ತಾರೆ. ಸಸಿಗಳು ಇನ್ನೂ ಚಿಕ್ಕವಾಗಿದ್ದರೆ ಮೂರು ನಾಲ್ಕು ಇಂಚಿಗೊಂದು ಗಿಡ ಬಿಟ್ಟು ಉಳಿದ ಸಸಿಗಳನ್ನು ಕಿತ್ತು ಪ್ರತ್ಯೇಕವಾಗಿ ಮಾಡಿದ ಪಾತಿಯಲ್ಲಿ ನೆಟ್ಟು ಮರುವರ್ಷ ಅವನ್ನೆಲ್ಲ ಕಿತ್ತು ತೋಟದಲ್ಲಿ ನೆಡುತ್ತಾರೆ. ಇತ್ತೀಚೆಗೆ ಬೀಜದಿಂದ ಮಾಡಿದ ಸಸಿಗಿಂತ ಗಿಡಗಳ ಬುಡದಲ್ಲಿ ಬರುವ ಕಂದುಗಳನ್ನು ನೇರವಾಗಿ ತೋಟದಲ್ಲಿ ನೆಡುವುದರಿಂದ ಅವು ಬೇಗ ಫಸಲು ಬಿಡುತ್ತವೆ ಮತ್ತು ಅಧಿಕ ಇಳುವರಿ ಕೊಡುತ್ತವೆ ಎಂದು ಕಂಡುಕೊಳ್ಳಲಾಗಿದೆ. ಇದಕ್ಕಾಗಿ ತೋಟದಲ್ಲಿ ಬಿಡಿ ಗಿಡಗಳನ್ನು ನೀರಿನ ಕೊರಕಲಿಗೆ ಹಾಕಿ ನೆಟ್ಟು ಅದರಿಂದ ಬರುವ ನಾಲ್ಕೈದು ಕಂದುಗಳನ್ನು ಅನಂತರ ಕಿತ್ತು ತೋಟಕ್ಕೆ ಹಾಕುವುದುಂಟು.

ತೋಟದಲ್ಲಿ ಸುಮಾರು ನಾಲ್ಕು ಐದಡಿ ದೂರಕ್ಕೊಂದು ಗುಂಡಿ ಬರುವಂತೆ ತೆಗೆದು ಬಡ್ಡೆಗಳನ್ನು ನೆಡಲಾಗುತ್ತದೆ. ಅವನ್ನು ದನಕರುಗಳು ತಿನ್ನದಂತೆ ನೋಡಿಕೊಳ್ಳಬೇಕು. ಕಳೆ ತೆಗೆದು ಗೊಬ್ಬರ ಹಾಕಿ, ಅಗತ್ಯ ಕ್ರಿಮಿನಾಶಕ ಸಿಂಪಡಿಸಿ ಪೋಷಿಸಬೇಕು. ಈ ಬೆಳೆಗೆ ಆಯ್ದುಕೊಂಡ ಜಾಗ ಫಲವತ್ತಾಗಿದ್ದು ಬೇಸಗೆಯಲ್ಲಿ ನೀರಾವರಿ ಅಥವಾ ಹನಿ ನೀರಾವರಿ ಒದಗಿಸುವುದು ಸಾಧ್ಯವಿದ್ದರೆ ಬೆಳೆ ಬೇಗ ಅಭಿವೃದ್ಧಿಯಾಗುತ್ತದೆ. ಗಿಡ ನೆಟ್ಟ ಮೂರು ವರ್ಷಗಳಲ್ಲಿ ಫಸಲು ಬರಲು ಪ್ರಾರಂಭವಾಗುತ್ತದೆ. ಆಯಾ ಭೂಮಿಯನ್ನನುಸರಿಸಿ ಐದರಿಂದ ಹತ್ತು ವರ್ಷಗಳವರೆಗೂ ಸುಸ್ಥಿತಿಯಲ್ಲಿರುತ್ತದೆ. ಸಾಂದ್ರ ಬೇಸಾಯ ಅನುಸರಿಸದೆ ಮಳೆಯನ್ನೇ ಆಧರಿಸಿ ಬೆಳೆ ಬೆಳೆದು ಸಾಮಾನ್ಯ ಕೃಷಿ ಮಾಡಿದರೆ ಎರಡು ಮೂರು ಫಸಲು ಕುಯ್ಯುವಷ್ಟರಲ್ಲಿ ತೋಟ ಕಳಪೆಯಾಗುತ್ತದೆ. ಮತ್ತೆ ಹೊಸದಾಗಿ ಗಿಡ ಹಾಕಬೇಕಾಗುತ್ತದೆ. ಏಲಕ್ಕಿ ಗಿಡಗಳಿಗೆ ರಾಸಾಯನಿಕ ಗೊಬ್ಬರಕ್ಕಿಂತ ಸಾವಯವ ಗೊಬ್ಬರ ಹೆಚ್ಚು ಸೂಕ್ತವೆಂದು ತಿಳಿದುಬಂದಿದೆ. ಆಯಾ ಮಣ್ಣಿನ ಗುಣವನ್ನು ಪರೀಕ್ಷಿಸಿ ಸ್ವಲ್ಪ ಪ್ರಮಾಣದ ರಾಸಾಯನಿಕ ಗೊಬ್ಬರವನ್ನೂ ನೀಡಬಹುದು. ಈ ಬೆಳೆಯನ್ನು ಹೆಚ್ಚು ಸ್ಥಿರ ಬೆಳೆಯಾಗಿ ಮಾಡಲು ಪ್ರಯತ್ನಗಳು ಮುಂದುವರಿದಿವೆ.

1957ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಮೂಡಿಗೆರೆ ಕೈಮರದ ಬಳಿ ಇದರ ಪ್ರಾದೇಶಿಕ ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಯಿತು. ಇದು ಪ್ರಾರಂಭದಲ್ಲಿ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅನಂತರ ಇದನ್ನು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿಸಲಾಯಿತು (1965). ಈ ಸಂಸ್ಥೆ ಕಡೂರು-ಮಂಗಳೂರು ಹೆದ್ದಾರಿಯಲ್ಲಿದ್ದು ನೂರಾರು ಎಕರೆಗಳ ಜಮೀನು ಹೊಂದಿದೆ. ಈಗ ಇದೇ ಆವರಣದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪಿತವಾಗಿದೆ. ಏಲಕ್ಕಿ, ಮೆಣಸು, ಕಿತ್ತಳೆ ಇತ್ಯಾದಿಗಳನ್ನು ವೈಜ್ಞಾನಿಕವಾಗಿ ಬೆಳೆಸುವುದು ಮತ್ತು ಅವುಗಳ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವುದು ಈ ಸಂಸ್ಥೆಯ ಉದ್ದೇಶ. 1984ರಲ್ಲಿ ಈ ಸಂಸ್ಥೆಯ ವಿಜ್ಞಾನಿಗಳು ರೂಪಿಸಿದ ಮೂಡಿಗೆರೆ 1 ಏಲಕ್ಕಿ ತಳಿಯನ್ನು ಬಿಡುಗಡೆ ಮಾಡಲಾಯಿತು. 1994ರಲ್ಲಿ ಇನ್ನೂ ಸುಧಾರಿತ ತಳಿಯಾದ ಮೂಡಿಗೆರೆ 2ನ್ನು ಬಿಡುಗಡೆ ಮಾಡಲಾಯಿತು. ಬೆಳೆಗಾರರಿಗೆ ಸಸಿಗಳನ್ನು ಒದಗಿಸುವುದು, ಮಾದರಿ ಪ್ರಾತ್ಯಕ್ಷಿಕೆ ನಡೆಸಿ ಅವರಿಗೆ ತರಬೇತಿ ನೀಡುವುದು ಇದರ ಕಾರ್ಯಕ್ರಮಗಳಲ್ಲಿ ಸೇರಿವೆ.

ಏಲಕ್ಕಿ ಹೂಗೊಂಚಲು

ಈ ಗಿಡ ಸಮಗ್ರವಾಗಿ ಬೆಳೆದಾಗ ಐದು ಆರು ಅಡಿ ಎತ್ತರದವರೆಗೂ ಬೆಳೆಯುತ್ತದೆ. ಶುಂಠಿ, ಅರಿಶಿಣದಂತೆ ಈ ಸಸ್ಯ ಕಂಡುಬಂದರೂ ನೆಲದ ಒಳಗೆ ಗೆಡ್ಡೆ ರೂಪದಲ್ಲಿ ಫಲ ಬಿಡುವುದಿಲ್ಲ. ಕಾಂಡದಲ್ಲೂ ಫಲ ಬಿಡುವುದಿಲ್ಲ. ಏಲಕ್ಕಿ ಗಿಡದ ಬುಡದಲ್ಲಿ ಸುತ್ತ ಗರಿಗಳು ಬರುತ್ತವೆ. ಗರಿ ಎಂದರೆ ಉದ್ದಕ್ಕೆ ಬೇರಿನಂತಿರುವ, ಮಧ್ಯೆ ಮಧ್ಯೆ ಟಿಸಿಲೊಡೆದಿರುವ ಒಳ್ಳೆಯ ಮಾದರಿ. ಇದು ಏಪ್ರಿಲ್, ಮೇ ತಿಂಗಳಿನಿಂದಲೇ ಮೊದಲ ಮಳೆಗೆ ಹೊರಹೊಮ್ಮಲು ಪ್ರಾರಂಭವಾಗುತ್ತದೆ. ಒಂದು ಗಿಡಕ್ಕೆ ಇಂಥ ನಾಲ್ಕು ಗರಿಗಳು ಹೊರಟು ಹತ್ತಾರು ಟಿಸಿಲುಗಳೊಂದಿಗೆ ನೆಲದ ಮೇಲೆ ಸು.2 ಅಡಿಗಳವರೆಗೂ ಹಬ್ಬಿ ಹರಡಿಕೊಳ್ಳುತ್ತದೆ. ಮುಂಗಾರು ಮಳೆ ಹೆಚ್ಚಿದಂತೆಲ್ಲ ಈ ಗರಿಗಳಲ್ಲಿ ನೀಲಿ ಬಣ್ಣದ ಹೂ ಬಿಟ್ಟು ಕಾಯಿಗಟ್ಟುವ ಪ್ರಕ್ರಿಯೆ ನಡೆಯುತ್ತಿರುತ್ತದೆ. ಈ ಕಾಯಿಗಳು ಸೆಪ್ಟೆಂಬರ್ ಪ್ರಾರಂಭಕ್ಕೆಲ್ಲ ಪಕ್ವವಾಗತೊಡಗುತ್ತವೆ. ಹಣ್ಣಾದಂತೆಲ್ಲ ಕಿತ್ತು ಒಣಗಿಸಿ ಸಂಸ್ಕರಿಸಿ ಮಾರಾಟಕ್ಕೆ ಬಿಡುಗಡೆ ಮಾಡಲಾಗುತ್ತದೆ. ಹೂ ಬಿಡುವ ಕಾರ್ಯ ಮಳೆ ಚೆನ್ನಾಗಿದ್ದರೆ ನವೆಂಬರ್‌ವರೆಗೂ ಮುಂದುವರಿಯುತ್ತದೆ. ಆದ್ದರಿಂದ ಏಲಕ್ಕಿ ಕುಯಿಲು ಸಹ ಡಿಸೆಂಬರ್ ಅಂತ್ಯದವರೆಗೂ ನಡೆಯುತ್ತದೆ.

ಬಲಿತ ಹಣ್ಣು ಕಾಯಿಗಳನ್ನು 4-5 ದಿವಸಗಳ ಕಾಲ ಪದೇಪದೇ ಬಿಸಿಲಿನಲ್ಲಿ ಒಣಗಿಸಿ, ಸ್ವಚ್ಛಗೊಳಿಸಿ ವ್ಯಾಪಾರಕ್ಕೆ ಅಣಿಮಾಡುತ್ತಾರೆ. ತೊಟ್ಟು ಉದುರಿಸಿ ಸ್ವಚ್ಛಮಾಡಲು ಈಗ ಯಂತ್ರಗಳು ಬಂದಿವೆ. ಬಿಸಿಲು ಸಾಕಾಗದೆ

ಪೋಡಗಟ್ಟಿದ ವಾತಾವರಣದಲ್ಲಿ ಒಣಗಿಸಿದರೆ ಇದರ ಗುಣಮಟ್ಟ ಹಾಳಾಗುತ್ತದೆ. ಇದನ್ನು ನಿವಾರಿಸುವ ಸಲುವಾಗಿ ಮಣ್ಣಿನ ಗೂಡು ಕಟ್ಟಿ ಮೇಲೆ ಸಾರಿಸಿ, ಅದರ ಮೇಲೆ ಇದರ ಹಣ್ಣು ಹರಡಿ ಗೂಡಿನ ಒಳಗೆ ಬೆಂಕಿ ಹಾಕಿ ಅದರ ಕಾವಿನಿಂದ ಇದು ಒಣಗುವಂತೆಯೂ ಮಾಡುತ್ತಾರೆ. ಈ ಕ್ರಮದಿಂದ ಇದು ಹಸುರು ಬಣ್ಣಕ್ಕೆ ತಿರುಗುತ್ತದೆ. ಇದನ್ನು ಒಣಗಿಸಲು ಈಗ ಆಧುನಿಕ ಯಂತ್ರಗಳೂ ಬಂದಿವೆ. ಸುಸ್ಥಿತಿಯಲ್ಲಿರುವ ತೋಟದಲ್ಲಿ ವರ್ಷಕ್ಕೆ ಎಕರೆ ಒಂದಕ್ಕೆ ಐವತ್ತರಿಂದ ಅರವತ್ತು ಕೆ.ಜಿ. ಕುಯ್ಲುಮಾಡಬಹುದು. ಆಧುನಿಕ ಕೃಷಿ ಅನುಸರಿಸಿ ಬೇಸಿಗೆಯಲ್ಲಿ ತುಂತುರು ನೀರಾವರಿ ನೀಡಿದರೆ 500 ಕೆ.ಜಿ.ಗೂ ಹೆಚ್ಚು ಇದನ್ನು ಬೆಳೆಯಬಹುದೆಂದು ಕಂಡುಬಂದಿದೆ. ಈ ಬೆಳೆ ಸಮೃದ್ಧವಾಗುವುದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೀಳುವ ಮಳೆಯನ್ನು ಹೆಚ್ಚಾಗಿ ಅವಲಂಬಿಸಿದೆ. ಆಗ ಸರಿಯಾದ ಪ್ರಮಾಣದಲ್ಲಿ ಮತ್ತು ಸರಿಯಾದ ಬಿಡುವಿನಲ್ಲಿ ಮಳೆಯಾಗದಿದ್ದರೆ ಮುಂದೆ ಎಷ್ಟೇ ಮಳೆ ಬಂದರೂ ಫಸಲಿಗೆ ಧಕ್ಕೆಯಾಗುತ್ತದೆ. ಕೃತಕವಾಗಿ ತುಂತುರು ಅಥವಾ ಹನಿ ನೀರಾವರಿಯಿಂದ ಈ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಪರಿಹರಿಸಿ ಕೊಳ್ಳಬಹುದು. ಆದರೆ ವಾತಾವರಣದಲ್ಲಿ ಹೆಚ್ಚಿನ ತೇವಾಂಶ ಇಲ್ಲದಿದ್ದರೆ ಆಗಲೂ ಫಸಲು ಕಡಿಮೆಯಾಗುತ್ತದೆ.

ಇದಕ್ಕೆ ಅನೇಕ ರೋಗಬಾಧೆಗಳುಂಟು. ನಾನಾ ತರದ ಕೀಟಗಳು ಇದರ ಹೀಚು ಮಿಡಿಗೆ ಸೋಂಕಿ ಕಾಯಿ ಬಲಿಯದೆ ಪೊಳ್ಳಾಗುವಂತೆ ಮಾಡುತ್ತವೆ. ನುಸಿರೋಗ ತಗುಲಿದರೆ ಹೀಚಿನಲ್ಲೇ ಕಾಯಿಯ ಬೆಳವಣಿಗೆ ಕುಂಠಿತವಾಗಿ ಕಜ್ಜಿ ಕಾಯಿ ಎನಿಸಿಕೊಳ್ಳುತ್ತದೆ. ಕಾಂಡ ಕೊರಕ ಕೀಟಗಳು ಗಿಡಗಳ ದಿಂಡನ್ನು ತಿಂದು ಟೊಳ್ಳು ಮಾಡಿ ಗಿಡಗಳನ್ನೇ ನಾಶಪಡಿಸುತ್ತವೆ. ಇವುಗಳ ನಿವಾರಣೆಗೆ ವಿವಿಧ ಕ್ರಿಮಿನಾಶಕಗಳು ಮಾರುಕಟ್ಟೆಗೆ ಬಂದಿವೆ. ಅವುಗಳಲ್ಲಿ ಬೋರ್ಡೋ ಮಿಶ್ರಣ, ಮೋನೋ ಕ್ರೊಟೋಫಾಸ್ (ನುವಕ್ರಾನ್) ಫೋಸೋಲಾನ್ (ಝೊಲಾನ್) ಮುಖ್ಯವಾದವು. ಇವನ್ನು ನಿಗದಿತ ಪ್ರಮಾಣದಲ್ಲಿ ಸಿಂಪಡಿಸಿ ಕೀಟ ಬಾಧೆಯನ್ನು ನಿವಾರಿಸಿಕೊಳ್ಳಬಹುದು. ಈ ಗಿಡಗಳಿಗೆ ಬೇರಿನ ಸೋಂಕಿನಿಂದ ಕಟ್ಟೆರೋಗ ಬರುವುದುಂಟು. ಹಣ್ಣುಗಳಿಗೆ ಅಳಿಲು, ಹಕ್ಕಿಗಳ ಕಾಟವೂ ಇದೆ. ಮಂಗಗಳ ಕಾಟವೂ ಉಂಟು. ಮಂಗಗಳು ಗಿಡಗಳನ್ನು ಸಿಗಿದು ಹಾಳು ಮಾಡುವುದುಂಟು.

ಇದಕ್ಕಿರುವ ಬೇಡಿಕೆ ಮತ್ತು ಬೆಲೆಯಿಂದಾಗಿ ವಿವಿಧ ರಾಷ್ಟ್ರಗಳು ಹೊಸದಾಗಿ ಇದನ್ನು ಬೆಳೆಯಲು ಮುಂದಾಗಿವೆ. ಇದನ್ನು ಬೆಳೆಯುವ ಒಟ್ಟು ಪ್ರದೇಶದ ಸೇ.90ರಷ್ಟು ಪ್ರದೇಶ ಗ್ವಾಟೆಮಾಲದಲ್ಲಿದ್ದು ಅಲ್ಲಿನ ಉತ್ಪತ್ತಿ ಪ್ರಪಂಚದ ಇದರ ಉತ್ಪತ್ತಿಯ ಸೇ.48ರಷ್ಟು ಆಗುತ್ತದೆ. ಭಾರತದ ಕೇರಳದಲ್ಲಿ 44,250 ಹೆಕ್ಟೇರು, ಕರ್ನಾಟಕದಲ್ಲಿ 33,743 ಹೆಕ್ಟೇರು ಮತ್ತು ತಮಿಳುನಾಡಿನಲ್ಲಿ 6048 ಹೆಕ್ಟೇರುಗಳಲ್ಲಿ ಇದನ್ನು ಬೆಳೆಯಲಾಗುತ್ತಿದೆ. ಈ ಏಲಕ್ಕಿಯನ್ನು ಸಣ್ಣ ಏಲಕ್ಕಿ ಎಂದು ಕರೆಯಲಾಗುತ್ತದೆ. ಈಶಾನ್ಯ ಭಾರತದ ರಾಜ್ಯಗಳಾದ ಅಸ್ಸಾಂ, ಮಣಿಪುರ, ಮೇಘಾಲಯಗಳಲ್ಲೂ ಇದನ್ನು ಬೆಳೆಯುತ್ತಿದ್ದು ಆ ಏಲಕ್ಕಿಯನ್ನು ದೊಡ್ಡ ಏಲಕ್ಕಿ ಎಂದು ಕರೆಯಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಬೆಳೆಯುವ ಜಿಲ್ಲೆ ಕೊಡಗು (14,500 ಹೆಕ್ಟೇರ್). ಹಾಸನ (8,480 ಹೆಕ್ಟೇರ್), ಚಿಕ್ಕಮಗಳೂರು (5,347 ಹೆಕ್ಟೇರ್), ಶಿವಮೊಗ್ಗ (318 ಹೆಕ್ಟೇರ್) ಮತ್ತು ಉತ್ತರ ಕನ್ನಡ (317 ಹೆಕ್ಟೇರ್) ಜಿಲ್ಲೆಗಳು ಅನಂತರದ ಸ್ಥಾನದಲ್ಲಿ ಬರುತ್ತವೆ. ಹಾಸನ ಜಿಲ್ಲೆಯ ಮಂಜರಾಬಾದ್ ಅಥವಾ ಸಕಲೇಶಪುರ ತಾಲ್ಲೂಕಿನ ಏಲಕ್ಕಿ ಉತ್ತಮ ಗುಣಮಟ್ಟದ್ದು. ಇದಕ್ಕೆ ಸಿಗುವ ಬೆಲೆಯೂ ಹೆಚ್ಚು.

ಇಂದು ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಈ ಬೆಳೆ ಕ್ಷೀಣ ಸ್ಥಿತಿಯಲ್ಲಿದೆ. ಕಾಡಿನ ನಾಶ ಮತ್ತು ಪಾರಂಪರಿಕವಾಗಿ ಏಲಕ್ಕಿ ಬೆಳೆಯುತ್ತಿದ್ದ ಪ್ರದೇಶಗಳಲ್ಲಿ ಕಾಫಿ ಸಾಗುವಳಿಯನ್ನು ವಿಸ್ತರಿಸಿದ್ದು ಇಂಥ ಕ್ಷೀಣ ಸ್ಥಿತಿಗೆ ಕಾರಣಗಳಾಗಿವೆ ಎನ್ನಬಹುದು.

*

**ಏಲೇಶ್ವರದ ಕೇತಯ್ಯ :** ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಗುಲ್ಬರ್ಗ ಜಿಲ್ಲೆಯ ಏಲೇಶ್ವರ ಅಥವಾ ಈಗಿನ ಏಲೇರಿ ಈತನ ಜನ್ಮಸ್ಥಳ. ಇವನ ಹೆಂಡತಿ ಸಾಯಿದೇವಿ, ಮಗ ಶಿವಣ್ಣ, ಮಗಳು ಶಿವಕ್ಕ. ಕೇತಯ್ಯ ವೀರಶೈವಾಚಾರದಲ್ಲಿ ಅತ್ಯಂತ ನಿಷ್ಠೆಯುಳ್ಳವನಾಗಿದ್ದ. ಈತ ರಾಜ ದಯಪಾಲಿಸಿದ ಲಿಂಗಮುದ್ರೆಯ ಭೂಮಿಯಲ್ಲಿ ವ್ಯವಸಾಯ ಮಾಡಿ ಉಪಜೀವನ ನಡೆಸುತ್ತಿದ್ದ. ಈತ ಭವಿಸಂಪರ್ಕವೇ ಇಲ್ಲದೆ ಇರಲು ಕೆಲವರು ವೀರಶೈವ ಸಂಪ್ರದಾಯ ದ್ರೋಹಿಗಳು ಇವನ ಕಣಜಕ್ಕೆ ಬೆಂಕಿಯನ್ನು ಹಾಕಿ ಉರಿಸಿಟ್ಟಾಗ ಬೆಂದ ಬೀಜವನ್ನೇ ಬಿತ್ತಿ ಬೆಳೆದನೆಂದೂ ತನ್ನನ್ನು ಕೊಲ್ಲಲು ಬಂದ ಕಟುಕರಿಗೆ ತನ್ನ ವಚನಗಳಮೂಲಕ ವೀರಶೈವಧರ್ಮ ಬೋಧಿಸಿ, ಅವರಿಗೆ ವೀರಶೈವದೀಕ್ಷೆ ಕೊಟ್ಟನೆಂದೂ ಕಥೆಯಿದೆ.

ಈತ ಸು.200 ವಚನಗಳನ್ನು ಬರೆದಿದ್ದಾನೆ. ರಾಮೇಶ್ವರಲಿಂಗ ಅಥವಾ ಏಲೇಶ್ವರಲಿಂಗ ಎಂಬುದು ಇವನ ವಚನಗಳ ಅಂಕಿತ. ಭಕ್ತರಿಗೆ ಬಯಕೆಯುಂಟೆ? ನಿತ್ಯಂಗೆ ಸಾವುಂಟೇ? ಸದ್ಭಕ್ತರಿಗೆ ಮಿಥ್ಯತಥ್ಯವುಂಟೇ? ಕೃತಕೃತ್ಯನಾದ ಶಾವಿನಲಿ ಪ್ರತ್ಯುತ್ತರಗೆಯ್ದಡೆ ಸತ್ಯ ಸದಾಚಾರಕ್ಕೆ ಹೊರಗೂ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದ ಆಣೆ ಎಂಬ ವಚನ ಇವನ ಶೈಲಿಗೆ ಉದಾಹರಣೆಯಾಗಿದೆ. (ಎಸ್.ಐ.)

**ಐಗಂಡಪುರ :** ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರುಘಟ್ಟ ಕೆರೆಯ ದಕ್ಷಿಣ ದಂಡೆಯಲ್ಲಿರುವ ಗ್ರಾಮ. ಇದರ ಪ್ರಾಚೀನ ಹೆಸರು ಐವರ್ಕಂಡಪುರವೆಂದೂ ಐದು ಜನ- ಪಂಚಪಾಂಡವರು- ಕಂಡು ನೆಲೆಸಿದ ಗ್ರಾಮವಾದ್ದರಿಂದ ಇದಕ್ಕೆ ಈ ಹೆಸರು ಬಂದಿತೆಂದೂ ಹೇಳಲಾಗಿದೆ. ಇಲ್ಲಿ ಧರ್ಮೇಶ್ವರ ಎಂಬ ದೊಡ್ಡ ದೇವಾಲಯವಿದ್ದು ಅದರೊಳಗೆ ಭೀಮ, ನಕುಲ, ಸಹದೇವ ಮತ್ತು ಕುಂತಿಯರ ಹೆಸರಿನಲ್ಲಿ ಲಿಂಗಗಳನ್ನೊಳಗೊಂಡ ಸಣ್ಣ ಗುಡಿಗಳಿವೆ. ಧರ್ಮೇಶ್ವರಾಲಯ ದಕ್ಷಿಣಾಭಿಮುಖವಾಗಿದ್ದರೂ ಗರ್ಭಗುಡಿಯ ಲಿಂಗ ಪೂರ್ವಾಭಿಮುಖವಾಗಿದೆ. ಗರ್ಭಗೃಹ ಸುಕನಾಸಿ ಮತ್ತು ನವರಂಗಗಳನ್ನೊಳಗೊಂಡಿದೆ. ಗರ್ಭಗೃಹದ ಮೇಲೆ ಪಲ್ಲವ ಶೈಲಿಯ ಮೆಟ್ಟಿಲು ಮೆಟ್ಟಿಲಿನ ವಿಮಾನವಿದೆ. ಒಳಗೆ ಲಿಂಗೋದ್ಭವ ಮೂರ್ತಿಯ ವಿಗ್ರಹವೊಂದಿದೆ.

# ಐ

ಲಿಂಗಪೀಠದ ಮೇಲಿರುವ ಸು.11ನೆಯ ಶತಮಾನದ ಪದ್ಯಶಾಸನಗಳಿಂದ ಈ ಪೀಠವನ್ನು ವಾಮನನ ಅಧೀನನಾದ ಮಾದನಾಯಕ ಮಾಡಿಸಿದುದಾಗಿ ತಿಳಿದುಬರುತ್ತದೆ.

ಇಲ್ಲಿನ ತಮಿಳು ಶಾಸನಗಳಿಂದ ಈ ಗ್ರಾಮದ ಮತ್ತು ಆಲಯ ಕುರಿತಾದ ಹೆಚ್ಚಿನ ವಿವರಗಳು ಲಭಿಸಿವೆ. ಚೋಳ ಮನೆತನದ 1ನೆಯ ರಾಜೇಂದ್ರ ಮತ್ತು 1ನೆಯ ಕುಲೋತ್ತುಂಗರು ಕ್ರಮವಾಗಿ 1033-34 ಮತ್ತು 1113-14ನೆಯ ವರ್ಷದ ಮತ್ತು ಹೊಯ್ಸಳ ರಾಮನಾಥನ ಆಳ್ವಿಕೆಯ 38ನೆಯ ವರ್ಷದ ಹಾಗೂ ಮುಮ್ಮಡಿ ಬಲ್ಲಾಳ 1302ರಲ್ಲಿ ಹೊರಡಿಸಿದ ತಮಿಳು ಶಾಸನಗಳು ಇಲ್ಲಿವೆ. ಚೋಳರ ಶಾಸನಗಳಿಂದ ಈ ಗ್ರಾಮ ವಿಕ್ರಮಚೋಳಮಂಡಲದ ಕುಕ್ಕನೂರು ನಾಡಿಗೆ ಸೇರಿದುದಾಗಿ ತಿಳಿದಿದೆ. ರಾಜೇಂದ್ರನ ಶಾಸನದಲ್ಲಿ ಈ ಗ್ರಾಮವನ್ನು ಕೊಳಿಸಂಪೂಚ್ಚೈ ಎಂದೂ ಕುಲೋತ್ತುಂಗನ ಶಾಸನದಲ್ಲಿ ಪೆರಿಯಮತ್ತಕ್ಕೂರು ಎಂದೂ ಕರೆದಿದೆ. ಹೊಯ್ಸಳ ರಾಮನಾಥನ ಶಾಸನದಲ್ಲಿ ಇಳೈಪಾಕನಾಡಿಗೆ ಸೇರಿದ ತೀಗೈಕೋಟ್ಟೈಪಯರ್ ಕಟ್ಟಂ ಎಂದಿದೆ. ಎಲ್ಲ ಶಾಸನಗಳಲ್ಲಿಯೂ ದೇವರನ್ನು ಐವರ್‌ಗಂಡ ಮಹಾದೇವ, ಐವರ್ಕಂಠೀಶ್ವರಮುಡೈಯ ಮಹಾದೇವ ಮತ್ತು ಐವರ್ಕಂಠೀಶ್ವರ ನಾಯನಾರ್ ಎಂದು ಕರೆದಿದೆ. ರಾಜೇಂದ್ರನ ಶಾಸನದಲ್ಲಿ ಈ ದೇವರನ್ನು ಸಿದ್ಧೇಶ್ವರನೆಂದು ಸಂಬೋಧಿಸಿದೆ. ಇದನ್ನು ಕಟ್ಟಿಸಿದಾತ ಯುದ್ಧಮಲ್ಲ. ದಂಡನಾಯಕ ಅಪ್ಪಯನ್ ವಾಮನಯ್ಯನ್ ಎಂದು ಹೇಳಿದೆ.

ಲಿಂಗಪೀಠದಲ್ಲಿ ದೊರೆತ ಶಾಸನದಲ್ಲಿ ಉಕ್ತನಾದ ವಾಮನ ಈತನೇ ಆಗಿರಬೇಕು. ಈ ದೇವಾಲಯ 11ನೆಯ ಶತಮಾನದ ಕಟ್ಟಡವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕುಂತಿಲಿಂಗದ ಗುಡಿಯ ಬಳಿ ದೊರೆತ ಹೊಯ್ಸಳ ನರಸಿಂಹನ ಕನ್ನಡ ಶಾಸನದಲ್ಲಿ ಈ ದೇವರನ್ನು ಅಯ್ಯರಗಂಡ ದೇವನೆಂದೇ ಕರೆದಿದೆ. (ಬಿ.ಆರ್.ಜಿ.)

**ಐತಿಹ್ಯ :** ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಪಟ್ಟದ್ದಾಗಿದ್ದು, ಪ್ರಾಚೀನ ವಾಗಿದ್ದು, ವಾಸ್ತವಿಕ ಘಟನೆಯೊಂದರ ಆಧಾರದ ಮೇಲೆ ಕಾಲ್ಪನಿಕ ಅಂಶವನ್ನು ಒಳಗೊಂಡು ಬೆಳೆದು ನಿಂತಿರುವ, ಪರಂಪರಾಗತವಾಗಿ ಜನಪದ ನಂಬಿಕೊಂಡು ಬಂದ ಒಂದು ವಿಶೇಷ ಸಂಗತಿ. ಇಂಥ ಐತಿಹ್ಯಗಳು ಕರ್ನಾಟಕದ ಹಲವೆಡೆಗಳಲ್ಲಿ ಕಂಡುಬರುತ್ತವೆ. ಐತಿಹ್ಯಗಳು ಪ್ರಾಚೀನವಾದ ಚಾರಿತ್ರಿಕ ಘಟನೆಗಳ ಪಳೆಯುಳಿಕೆಗಳು ಎಂಬಂತೆ ತೋರಿದರೂ ಎಲ್ಲವೂ ಹಾಗಲ್ಲ. ಕೆಲವು ಸ್ವಲ್ಪಮಟ್ಟಿಗೆ ಚಾರಿತ್ರಿಕ ಅಂಶವನ್ನು ಸೂಚಿಸಿದರೂ ಬಹಳಷ್ಟು ಪೌರಾಣಿಕ ಮತ್ತು ಕಾಲ್ಪನಿಕ ಅಂಶಗಳಿಂದ ಕೂಡಿದ್ದು ಆಕರ್ಷಕವಾಗಿರುತ್ತವೆ. ಕೆಲವೊಮ್ಮೆ ಇವುಗಳಲ್ಲಿ ಚಾರಿತ್ರಿಕ ಅಂಶವೆಷ್ಟು, ಕಾಲ್ಪನಿಕ ಅಂಶವೆಷ್ಟು ಎಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತದೆ.

ಸ್ವರೂಪದಲ್ಲಿ ಐತಿಹ್ಯಗಳು ತುಂಬ ಚಿಕ್ಕವಾಗಿದ್ದು, ಗದ್ಯಾತ್ಮಕವಾಗಿದ್ದು ಒಂದು ಅಥವಾ ಎರಡು ಆಶಯಗಳ ವ್ಯಾಪ್ತಿಯನ್ನಷ್ಟೇ ಪಡೆದಿರುತ್ತವೆ. ಅವು ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದರ ವಿವರಣಾತ್ಮಕ ಕಥೆಗಳಾಗಿರುತ್ತವೆ. ಆದರೆ ಇವು ಸಂಪ್ರದಾಯ ಮೂಲದಿಂದ ಬಂದವುಗಳಾಗಿದ್ದು ಐತಿಹ್ಯಗಳ ವ್ಯಾಪ್ತಿಯನ್ನು ಪಡೆದಿರುತ್ತವೆ. ತಾವು ಹುಟ್ಟಿದ ನಿಸರ್ಗಕ್ಕೆ ಅಂಟಿಕೊಂಡಿರುವುದು ಐತಿಹ್ಯಗಳ ಮತ್ತೊಂದು ವಿಶಿಷ್ಟ ಲಕ್ಷಣ.

ಐತಿಹ್ಯಗಳನ್ನು ವಸ್ತುವಿನ ದೃಷ್ಟಿಯಿಂದ ಪ್ರಧಾನವಾಗಿ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಎಂದು ಮೂರು ಬಗೆಯಲ್ಲಿ ವಿಂಗಡಿಸಬಹುದು. ಈ ಒಂದೊಂದು ವಸ್ತುವಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಕಥೆಗಳು ಸಂಪೂರ್ಣವಾಗಿ ಆಧಾರರಹಿತವಾದುವುಗಳಾಗಿರದೆ ವಾಸ್ತವಿಕಾಂಶದ ಜೊತೆಗೆ ಕಾಲ್ಪನಿಕಾಂಶಗಳಿಂದ ಕೂಡಿದ್ದು ಆಕರ್ಷಕ ವಾಗಿರುತ್ತವೆ. ಇವುಗಳಲ್ಲಿ ಜನಪದರ ನ್ಯಾಯ, ಧರ್ಮನಿಷ್ಠೆ ಹಾಗೂ ಅಂಥ ವಸ್ತುಗಳ ಬಗ್ಗೆ ಅವರಿಗಿರುವ ಪೂಜ್ಯ ಭಾವನೆಯನ್ನು ಕಾಣಬಹುದು.

ವಿತರಣೆಯ ದೃಷ್ಟಿಯಿಂದ ಐತಿಹ್ಯಗಳನ್ನು ಸ್ಥಳೀಯ ಹಾಗೂ ಸಂಚಾರಿ ಎಂದು ವಿಂಗಡಿಸಬಹುದು. ಸ್ಥಳೀಯ ಐತಿಹ್ಯಗಳು ಗೊತ್ತಾದ ಸ್ಥಳವೊಂದಕ್ಕೆ ಸೀಮಿತವಾಗಿದ್ದು, ಆ ನಿರ್ದಿಷ್ಟ ಸ್ಥಳವೊಂದರ ವೈಶಿಷ್ಟ್ಯಗಳನ್ನು ಬಣ್ಣಿಸುತ್ತವೆ, ಇಲ್ಲವೆ ಅಂಥ ಸ್ಥಳವೊಂದರ ಸಂಪ್ರದಾಯವನ್ನು ಕಾಯ್ದುಕೊಂಡು ಬರುವ ಕಥೆಯನ್ನು ಹೊಂದಿರುತ್ತವೆ. ಇವಕ್ಕೆ ಸಂಚಾರಿ ಗುಣವಿಲ್ಲ. ಸಾಮಾನ್ಯವಾಗಿ ಕಿನ್ನರ ಕಥೆಯ ಲಕ್ಷಣವನ್ನು ಪಡೆದಿದ್ದು, ಘಟನಾತ್ಮಕ ಹಾಗೂ ವಿವರಣಾತ್ಮಕವೆನಿಸಿದ್ದು ರಚನೆಯಲ್ಲಿ ಸರಳವಾಗಿರುತ್ತವೆ. ಸ್ಥಳೀಯ ಐತಿಹ್ಯಗಳಲ್ಲಿಯೂ ಸ್ಥಳದೇವತೆ, ಬಲಿ, ಕೌಟುಂಬಿಕ, ಐತಿಹಾಸಿಕ, ಕೆರೆ, ಬಾವಿ, ಕೊಳ, ಪ್ರಕೃತಿಯ ವೈಲಕ್ಷಣ್ಯ, ಊರಿನ ಹೆಸರು ಮುಂತಾದ ಹಲವಾರು ಬಗೆಗಳನ್ನು ಕಾಣಬಹುದು.

ಸಂಚಾರಿ ಐತಿಹ್ಯಗಳು ಲಕ್ಷಣ ಸ್ವಭಾವದಲ್ಲಿ ಸ್ಥಳೀಯ ಐತಿಹ್ಯಗಳಿಂದ ಭಿನ್ನವಾದವು. ಇವುಗಳಲ್ಲಿ ಆಶಯಗಳು ಜಾಸ್ತಿಯಿದ್ದು ಐತಿಹ್ಯ ದೀರ್ಘವಾಗಿರುತ್ತದೆ. ಎಷ್ಟೇ ಸಂಚಾರಗೊಂಡರೂ ಈ ಆಶಯಗಳು ಬದಲಾಗುವುದಿಲ್ಲ. ಯಾವುದೋ ಒಂದು ಸ್ಥಳದಲ್ಲಿ ರೂಪುಗೊಂಡಿದ್ದರೂ ಸಂಚಾರಗೊಂಡು ಹಲವು ಪಾಠಾಂತರಗಳನ್ನು ಪಡೆದುಕೊಂಡಿದ್ದು ಮೂಲ ಪಾಠವನ್ನು ಗುರುತಿಸುವುದು ಹಲವೊಮ್ಮೆ ಕಷ್ಟವಾಗುತ್ತದೆ.

ಸ್ಥಳೀಯ ಐತಿಹ್ಯವಾಗಲಿ, ಸಂಚಾರಿ ಐತಿಹ್ಯವಾಗಲಿ ವಿಶ್ವವ್ಯಾಪಿ ಯಾದುದು. ಅಲ್ಲಲ್ಲಿಯ ನಂಬಿಕೆ, ಧಾರ್ಮಿಕ ಶ್ರದ್ಧೆ, ಸಂಪ್ರದಾಯಗಳ ಪ್ರಾಬಲ್ಯಗಳಿಗನುಗುಣವಾಗಿ ಇವುಗಳ ಪ್ರಮಾಣವನ್ನು ಕಾಣಬಹುದು. ಇಂಥ ಐತಿಹ್ಯಗಳ ವಾಸ್ತವಿಕಾಂಶ ಏನೇ ಇರಲಿ ಅವು ನಮ್ಮ ಗಮನ ಸೆಳೆಯುವುದು ಅವುಗಳ ಅದ್ಭುತ ಕಲ್ಪನಾಸಾಮರ್ಥ್ಯದಿಂದ.

ಪೌರಾಣಿಕ ವ್ಯಕ್ತಿಗಳೆನಿಸಿದ ರಾಮ, ಸೀತೆ, ಆಂಜನೇಯ, ಅರ್ಜುನ, ಭೀಮ, ಧರ್ಮರಾಯ, ಕುಂತಿ, ಪರಶುರಾಮ ಮುಂತಾದವರಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಐತಿಹ್ಯಗಳು ಕರ್ನಾಟಕದಾದ್ಯಂತವೂ ಕಂಡುಬರುತ್ತದೆ. ಇವರು ಕರ್ನಾಟಕದ ಯಾವೊಂದು ಸ್ಥಳವನ್ನು ಸಂದರ್ಶಿಸದೆ, ಸ್ಪರ್ಶಿಸದೆ ಬಿಟ್ಟಿಲ್ಲವೆಂಬಂತೆ ಎಲ್ಲೆಡೆಯೂ ತಂಗಿ ಹೋದ ಗುರುತನ್ನು ಸೂಚಿಸುವ ಕಥೆಗಳನ್ನು ಕಟ್ಟಿ ಹೇಳುವುದುಂಟು. ಇವುಗಳ ಸಂಖ್ಯೆಯಂತೂ ಅಪರಿಮಿತ.

ರಾವಣ ಬಲವಂತವಾಗಿ ಸೀತೆಯನ್ನು ಆಕಾಶಮಾರ್ಗದಲ್ಲಿ ಕದ್ದೊಯ್ಯುವಾಗ ಆಕೆಯ ಸೀರೆಯ ಸೆರಗು ಜಾರಿ ಬೆಟ್ಟದ ತುದಿಯನ್ನು ಸವರಿಕೊಂಡು ಹೋಯಿತು, ಆ ಗುರುತು ಈಗಲೂ ಹಾಗೆಯೇ ಉಳಿದಿದೆ ಎಂಬ ಐತಿಹ್ಯ ತುಮಕೂರು ಜಿಲ್ಲೆಯ ಸಿದ್ಧಗಂಗಾ ಕ್ಷೇತ್ರದ ಬಳಿಯಿರುವ ರಾಮದೇವರ ಬೆಟ್ಟದ ತುದಿಯಲ್ಲಿ ಕಾಣುವ ಸೆರಗಿನಾಕಾರದ ಪಟ್ಟಿಗೆ ಈಗಲೂ ಉಳಿದುಬಂದಿದೆ. ಹಂಪೆಯ ಬಳಿಯ ಬಂಡೆಯೊಂದರ ಮೇಲೆ ಸೀರೆಯನ್ನು ಒಣಗ ಹಾಸಿದಂತೆ ಕಾಣುವ ಜಾಗವೊಂದಕ್ಕೆ ಸೀತಾದೇವಿ ಮಡಿಯುಟ್ಟು ಒಣಗಲು ಹಾಕಿದ ಸೀರೆಯ ಗುರುತು ಎಂಬ ಐತಿಹ್ಯವಿದೆ. ರಾಮಾದಿಗಳು ವನವಾಸದಲ್ಲಿ ತೊಡಗಿ ಸಂಚರಿಸುತ್ತ, ಮೇಲುಕೋಟೆಯ ಬೆಟ್ಟದ ದಕ್ಷಿಣ ತುದಿಗೆ ಬಂದರೆಂದೂ ಅಲ್ಲಿಗೆ ಬರುವಷ್ಟರಲ್ಲಿ ಸೀತಾದೇವಿ ಬಾಯಾರಿಕೆಯಿಂದ ಬಳಲಿರಲು, ಲಕ್ಷ್ಮಣ ಅಲ್ಲಿದ್ದ ಬಂಡೆಯೊಂದರ ಮೇಲೆ ಬಾಣ ಪ್ರಯೋಗ ಮಾಡಿ ನೀರು ಬರಿಸಿದನೆಂದೂ ಬಾಣಾಘಾತಕ್ಕೆ ಪಕ್ಕದ ಬಂಡೆಯೂ ಬಾಯಿ ಬಿಟ್ಟಿತೆಂದೂ ನಂಬುವವರಿದ್ದಾರೆ. ಇಂದಿಗೂ ಇದನ್ನೊಂದು ಪವಿತ್ರ ಸ್ಥಳವೆಂದು ಭಾವಿಸಿ ಜನ ಸಂದರ್ಶಿಸುವುದುಂಟು. ಸಮುದ್ರಕ್ಕೆ ಸೇತುವೆ ಕಟ್ಟಲು ಕಲ್ಲು ಬಂಡೆಗಳನ್ನು ಸಾಗಿಸುತ್ತಿದ್ದಾಗ, ಆಂಜನೇಯನ ಕೈಯಿಂದ ಜಾರಿದ ಕಲ್ಲು ಎಂದು ತೋರಿಸುವ ಬಂಡೆಯೊಂದು ಹಾಸನ ಜಿಲ್ಲೆಯ ಸಾಲಿಗ್ರಾಮದ ಸಮೀಪದಲ್ಲಿದೆ. ಇದನ್ನು ಆಂಜನೇಯನ ಕಲ್ಲೆಂದೇ ಜನ ಕರೆಯುತ್ತಾರೆ. ಹೊರಗಿನವರ ಕಣ್ಣಿಗೆ ಕೇವಲ ನಿರ್ಜೀವವಾಗಿ, ಸಾಮಾನ್ಯ ಕಲ್ಲಾಗಿ ಕಾಣುವ ಒಂದು ವಸ್ತು ಜನಪದರ ಕಣ್ಣಿಗೆ ಯಾವುದೋ ಮಹತ್ಕಥೆಯನ್ನು ಸಾರುವ, ಯಾವುದೋ ಮಹಾನ್‌ವ್ಯಕ್ತಿಯ ಅಪೂರ್ವ ಸಾಹಸ ಕಥೆಯನ್ನು ಬಣ್ಣಿಸುವ, ನೀತಿಯನ್ನೋ ಸತ್ಯವನ್ನೋ ಸಾರುವ ಸಜೀವ ವಸ್ತುಗಳಾಗಿರುತ್ತವೆ.

ಮಹಾಭಾರತಕ್ಕೆ ಸಂಬಂಧಿಸಿದಂತೆ ನೋಡಿದರೆ ನಮ್ಮ ಜನರನ್ನು ಬಹಳವಾಗಿ ಆಕರ್ಷಿಸಿರುವ ವ್ಯಕ್ತಿ ಭೀಮ. ಎಲ್ಲಿ ಒಂದು ಹೆಬ್ಬಂಡೆ ಕಾಣಲಿ ಅಥವಾ ಬಂಡೆಯ ಮೇಲೆ ಒಂದು ಗುಡಿ ಕಾಣಲಿ ಅದನ್ನು ಭೀಮನಿಗೆ ಆರೋಪಿಸಿ ಕಥೆಯೊಂದನ್ನು ಕಟ್ಟಿರುವುದು ಕಂಡುಬರುತ್ತದೆ. ಅರಗಿನಮನೆಯಿಂದ ತನ್ನ ತಾಯಿ ಹಾಗೂ ಸೋದರರನ್ನು ಹೆಗಲ ಮೇಲೆ ಹೊತ್ತು ಸಾಗುವಾಗ ಭೀಮ ಇಟ್ಟ ಹೆಜ್ಜೆ ಗುರುತೆಂದು ತೋರುವ ಹೆಜ್ಜೆಯಾಕಾರದ ಗುಡಿಯೊಂದು ಮಂಡ್ಯ ಜಿಲ್ಲೆಯ ಬೆಳ್ಳೂರಿನ ಬಳಿಯ ಅನಂತಗಿರಿಯಲ್ಲಿದೆ. ಒಬ್ಬ ವ್ಯಕ್ತಿ ನಿರಾಯಾಸವಾಗಿ ಹೊರಕ್ಕೆ ಕಾಣದಂತೆ ಮಲಗುವಷ್ಟು ವಿಶಾಲವಾದ ಜಾಗವಿದ್ದು ಇದಕ್ಕೆ ಭೀಮನ ಹೆಜ್ಜೆ ಎಂದು ಕರೆಯುವರು. ಇಷ್ಟೇ ಅಲ್ಲದೆ ಇಲ್ಲಿಂದ ಕೆಲವು ಮೈಲಿಗಳ ದೂರದಲ್ಲಿ ಆತ ಇಟ್ಟ ಮತ್ತೊಂದು ಹೆಜ್ಜೆಯ ಗುರುತೂ ಇದೆ ಎಂದು ಹೇಳುತ್ತಾರೆ. ಇದನ್ನು ಗಮನಿಸಿದಾಗ ಭೀಮನ ಶಕ್ತಿ ಹಾಗೂ ಅವನ ಬೃಹದಾಕಾರದ ಬಗ್ಗೆ ಜನಪದರು ಹೊಂದಿದ್ದ ಕಲ್ಪನೆಯು ಅರಿವಾಗದಿರದು. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಹಳ್ಳಿಯೊಂದರ ಬಳಿ ಇರುವ ಕೆರೆಯಲ್ಲಿ ಒಂದು ಕಪ್ಪೆಯೂ ಇಲ್ಲದೆ ಮತ್ತೊಂದು ಕಡೆಯ ಗುಂಡಿಯಲ್ಲಿ ನೂರಾರು ಕಪ್ಪೆಗಳಿರುವುದಕ್ಕೆ ಹೇಳುವ ಕಥೆ ಸ್ವಾರಸ್ಯವಾಗಿದೆ. ಬಾಯಾರಿಹೋದ ಧರ್ಮರಾಯ ನೀರು ಕುಡಿಯಲು ಈ ಕೆರೆಗೆ ಬಂದು ಬೊಗಸೆಯಲ್ಲಿ ನೀರೆತ್ತಿಕೊಂಡಾಗ ಜೊತೆಯಲ್ಲಿಯೇ ಕಪ್ಪೆಯೊಂದು ಬರಲು ಆತ ಬೇಸರದಿಂದ ಕೈ ಕೊಡವಿದನಂತೆ. ಅಂದಿನಿಂದ ಆ ಕೆರೆಯಲ್ಲಿ ಒಂದು ಕಪ್ಪೆಯೂ ಇಲ್ಲವಂತೆ.

ಪರಶುರಾಮನಿಗೆ ಸಂಬಂಧಿಸಿದಂತೆಯೂ ಅಲ್ಲಲ್ಲಿ ಇಂಥ ಹಲವಾರು ಐತಿಹ್ಯಗಳು ಹುಟ್ಟಿಕೊಂಡಿವೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಮೈಸೂರು - ತುಮಕೂರು ರಸ್ತೆಯ ಮೂಡಣ ದಿಕ್ಕಿನಲ್ಲಿರುವ ಆಲತಿಗಿರಿಗೆ ಪರಶುರಾಮ ಬಂದಿದ್ದನೆಂದು ಪ್ರತೀತಿ. ಗಿರಿಯನ್ನು ಏರಿ ಆಯಾಸಗೊಂಡ ಪರಶುರಾಮ ಆಯಾಸ ಪರಿಹಾರಕ್ಕಾಗಿ ನೆತ್ತಿಯ ಹೆಬ್ಬಂಡೆಯೊಂದರ ನೆರಳಲ್ಲಿ ಆಶ್ರಯ ಪಡೆದು, ಪರಮೇಶ್ವರಾ ಎಂದು ಉದ್ಗಾರ ತೆಗೆದ ತಕ್ಷಣವೇ ಇಲ್ಲಿದ್ದೇನೆ ಎಂಬ ಕೂಗು ಬಂಡೆಯೊಳಗಿನಿಂದ ಕೇಳಿಬಂತಂತೆ. ಆತ ಪರಮಾಶ್ಚರ್ಯಗೊಂಡು ಕೈಯಲ್ಲಿದ್ದ ಕೊಡಲಿಯಿಂದ ಬಂಡೆಯನ್ನು ಸೀಳಿದನಂತೆ. ಹತ್ತಿಪ್ಪತ್ತು ಗಜ ಸೀಳಿದಂತಿರುವ ಈ ಬಂಡೆಯಲ್ಲಿ ಅಲ್ಲಲ್ಲಿ

ಕೊಡಲಿಯಿಂದ ಕಡಿದಂತೆ ಗುರುತುಗಳೂ ಒಳಗಡೆ ಶಿವಲಿಂಗವೂ ಕತ್ತಲು ಕವಿದಿದ್ದರೂ ಬಂಡೆಯೊಳಗೆ ನೀರೂ ಕಂಡುಬರುತ್ತವೆ.

ಹೀಗೆ ಪೌರಾಣಿಕ ಅಂಶಗಳನ್ನೊಳಗೊಂಡ ಐತಿಹ್ಯಗಳು ಅಪಾರ ಸಂಖ್ಯೆಯಲ್ಲಿ ದೊರೆಯುತ್ತವೆ. ಅವುಗಳ ಪ್ರಭಾವಕ್ಕೆ ಜನಪದರು ಎಷ್ಟರಮಟ್ಟಿಗೆ ಒಳಗಾಗಿದ್ದರೆಂಬುದನ್ನು ಇದು ವ್ಯಕ್ತಪಡಿಸುತ್ತದೆ.

ಐತಿಹಾಸಿಕ ವಿಷಯಕ್ಕೆ ಸಂಬಂಧಿಸಿದಂತೆಯೂ ಹೇರಳವಾಗಿ ಐತಿಹ್ಯಗಳು ಹುಟ್ಟಿಕೊಂಡಿವೆ. ಪರಾಕ್ರಮಿಗಳ ಸಾಹಸವನ್ನು ಬಣ್ಣಿಸುವ , ಅವರ ತ್ಯಾಗ, ಸಾಹಸ, ಸತ್ಯಸಂಧತೆಯನ್ನು ಎತ್ತಿಹಿಡಿಯುವ ಘಟನೆಗಳನ್ನೊಳಗೊಂಡ ಐತಿಹ್ಯಗಳು ವಿಶೇಷವಾಗಿ ಕಂಡುಬರುತ್ತವೆ. ಇವುಗಳನ್ನು ಸಂಪೂರ್ಣ ಸತ್ಯವೆಂದು ನಂಬಲಾಗದಿದ್ದರೂ ಇತಿಹಾಸವನ್ನು ಕುರಿತು ಸಂಶೋಧನೆ ನಡೆಸುವವರಿಗೆ ಇಂಥವುಗಳಿಂದ ಸ್ವಲ್ಪವಾದರೂ ಸಹಾಯಕ ಅಂಶಗಳು ದೊರೆಯಬಹುದು. ರಾಜೇಂದ್ರ ಚೋಳನ ಮಹಿಮೆಗೆ ಸಂಬಂಧಿಸಿದಂತೆ ಹೇಳುವ ಒಂದು ಐತಿಹ್ಯ ಕುತೂಹಲಕಾರಿಯಾಗಿದೆ. ಬೆಂಗಳೂರು ಜಿಲ್ಲೆಯ ರಾಮನಗರದ ಬಳಿ ಅವ್ವೇರಹಳ್ಳಿಯಲ್ಲಿ ರೇವಣಸಿದ್ಧೇಶ್ವರ ಬೆಟ್ಟವಿದೆ. ಇದು ತೀರ ಕಡಿದಾಗಿದ್ದು ತನ್ನದೇ ಆದ ಸೌಂದರ್ಯದಿಂದ ಆಕರ್ಷಕವಾಗಿದೆ. ಹಿಂದೆ ಇಲ್ಲಿ ಶಿವರಾತ್ರೀಶ್ವರರು ತಪಸ್ಸು ಮಾಡುತ್ತಿದ್ದರಂತೆ. ಒಮ್ಮೆ ರೇಣುಕರು ರಾಜೇಂದ್ರ ಚೋಳನ ಕನಸಿನಲ್ಲಿ ಬಂದು ಶಿವರಾತ್ರೀಶ್ವರರ ದರ್ಶನ ಪಡೆ ಎಂದು ಹೇಳಿದಂತಾಗಲು, ಇವನ ಕುದುರೆ ಹತ್ತಿ ಕಡಿದಾದ ಆ ಬೆಟ್ಟವನ್ನು ನಿರಾಯಾಸವಾಗಿ ಏರಿ ಹೋದನೆಂದು ಅಲ್ಲಿ ಕುದುರೆ ಗೊರಸಿನ ಗುರುತುಗಳನ್ನು ಇಂದಿಗೂ ತೋರಿಸುತ್ತಾರೆ.

ಸಾಮಾಜಿಕ ಐತಿಹ್ಯಗಳು ಅತ್ಯಂತ ಆಕರ್ಷಕವಾಗಿರುತ್ತವೆ. ಸತ್ಯ, ಧರ್ಮ, ನ್ಯಾಯ, ನೀತಿ, ತ್ಯಾಗ ಮೊದಲಾದವುಗಳ ಮಹಿಮೆಯನ್ನು ವಿಶೇಷವಾಗಿ ಬೋಧಿಸುವಂತಿರುವ ಒಂದೊಂದು ವಸ್ತುವನ್ನೂ ಒಂದೊಂದು ನೆಲೆಯನ್ನೂ ತೋರಿಸಿ ಅದಕ್ಕೆ ಸಂಬಂಧಿಸಿದಂತೆ ಹೇಳುವ ಇಂಥ ಕಥೆಗಳು ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಯದುಗಿರಿಯ ಬಳಿಯಿರುವ ಅಕ್ಕ ತಂಗಿಯರ ಕೊಳಗಳ ನೀರು, ಒಂದರಲ್ಲಿ ಸಿಹಿಯಾಗಿಯೂ ಮತ್ತೊಂದರಲ್ಲಿ ಉಪ್ಪಾಗಿಯೂ ಇರುವುದಕ್ಕೆ ಅವರು ಕೊಡುವ ಕಾರಣ ನೀತಿಬೋಧಕವಾದುದು. ಅಕ್ಕ ಪ್ರೀತಿಯಿಂದ ಜನೋಪಕಾರ ದೃಷ್ಟಿಯಿಂದ, ಎಷ್ಟು ಹಣ ಖರ್ಚಾದರೂ ಲೆಕ್ಕಿಸದೆ ಕೊಳವನ್ನು ಕಟ್ಟಿಸಿದಳೆಂದೂ ಹಾಗಾಗಿ ಅದರಲ್ಲಿ ಸಿಹಿನೀರು ಬಂತೆಂದೂ ಅದರ ಪಕ್ಕದಲ್ಲಿಯೇ ತಂಗಿ ಅಕ್ಕನ ಮೇಲಿನ ಪೈಪೋಟಿಯಿಂದ, ಅಷ್ಟೇ ಹಣ ಸುರಿದು ಕೊಳ ಕಟ್ಟಿಸಿ ಎಷ್ಟೊಂದು ಹಣ ಖರ್ಚಾಯಿತು ಎಂದು ಲೆಕ್ಕ ಹಾಕಿದ್ದರಿಂದ ಉಪ್ಪುನೀರಾಯಿತೆಂದೂ ಹೇಳುತ್ತಾರೆ. ಮಾಡುವ ಕೆಲಸದಲ್ಲಿ ನಿಷ್ಠೆ ಮನಃಶುದ್ಧಿ ಇರಬೇಕೆಂಬುದನ್ನು ಈ ಕಥೆ ಸಾರಿ ಹೇಳುತ್ತದೆ. ತ್ಯಾಗಮಯಿ ನೀರಗಂಟಿ ಶ್ರವಣನ ಕಥೆ ಮನಕರಗಿಸುವಂಥದು. ಚಿತ್ರದುರ್ಗ ಜಿಲ್ಲೆಯ ಧರ್ಮಪುರದ ಬಳಿ ಹೊಸದಾಗಿ ಕೆರೆ ನಿರ್ಮಾಣವಾಗಿತ್ತು. ನಿರಂತರ ಹಾಗೂ ಭೀಕರ ಮಳೆಯಿಂದಾಗಿ ಕೆರೆ ತುಂಬಿ ತುಳುಕಾಡಲಾರಂಭಿಸಿ ಗಂಗೆ ಶ್ರವಣನನ್ನು ಕುರಿತು ಶ್ರವಣ ನಾನಿನ್ನು ತಡೆಯಲಾರೆ ಇಲ್ಲಿಂದ ಹೊರಟು ಹೋಗುತ್ತೇನೆ ಎಂದಳು. ನೀನು ಇಲ್ಲಿಂದ ಕಾಲ್ತೆಗೆದರೆ ನಮ್ಮ ಗತಿಯೇನೆಂದು ಶ್ರವಣ ಗಂಗೆಯನ್ನು ಬೇಡಿದ. ಕೊನೆಗೆ ಆತ ತಾಯಿ ತಾಳು ನಾನು ಊರೊಳಗೆ ಹೋಗಿ ಗೌಡರಿಗೆ ತಿಳಿಸಿ ಬರುವವರೆಗೂ ಇಲ್ಲಿಯೇ ಇರು ಎಂದು ಭಾಷೆ ಪಡೆದು ಹೊರಟು ಹೋದ. ಅತ್ತ ಹೋದ ಶ್ರವಣ ಊರನ್ನು ಸೇರಲಿಲ್ಲ. ಎಲ್ಲಿಯೋ ಕಣ್ಮರೆಯಾದ. ಶ್ರವಣನ ಬರುವಿಕೆಯನ್ನು ಕಾಯುತ್ತ ಗಂಗೆ ಇನ್ನೂ ಅಲ್ಲಿಯೇ ಕಾದಿದ್ದಾಳೆ ಎಂಬ ಐತಿಹ್ಯವಿದೆ.

ಕಟ್ಟಿದ ಕೆರೆ, ಕಟ್ಟೆ, ಕೋಟೆಗಳು ಸ್ಥಿರವಾಗಿ ನಿಲ್ಲಲು ತಮ್ಮನ್ನು ತಾವೇ ಬಲಿ ಕೊಟ್ಟುಕೊಂಡ ಅನೇಕ ಪ್ರಸಂಗಗಳು ದೊರೆಯುತ್ತವೆ. ಕೆರೆಗೆ ಹಾರ ಎಂಬ ಜನಪದ ಕಥೆಯನ್ನು ಇಲ್ಲಿ ನೆನೆಯಬಹುದು. ನಾಗಮಂಗಲದ ಬಳಿಯಿರುವ ಸೂಳೇಕೆರೆಗೆ ಸಂಬಂಧಿಸಿದಂತೆ ಹೇಳುವ ಒಂದು ಕಥೆ ಕೂಡ ರೋಮಾಂಚಕರವಾದುದು. ರಾಜನೊಬ್ಬ ಕಟ್ಟಿಸುತ್ತಿದ್ದ ಕೆರೆಯ ಏರಿ ಎಷ್ಟು ಪ್ರಯತ್ನಪಟ್ಟರೂ ನಿಲ್ಲದಿದ್ದಾಗ, ಕೊನೆಗೆ ರಾಜನ ಸೂಳೆ ತಾನೇ ಬಲಿಯಾಗಿ ಕೆರೆಯನ್ನು ಉಳಿಸಿದಳಂತೆ.

ದೊಂಬನೊಬ್ಬನ ಸಾಹಸವನ್ನು ಬಣ್ಣಿಸುವ ಕಥೆ ಚನ್ನಪಟ್ಟಣದ ಬಳಿಯಿರುವ ದೊಂಬನ ಕೊಡುಗೆಗೆ ಸಂಬಂಧಿಸಿದಂತೆ ಕಂಡುಬರುತ್ತದೆ. ಒಮ್ಮೆ ಬೊಮ್ಮ ಎಂಬ ದೊಂಬನೊಬ್ಬ ತಾನು ರೆಕ್ಕೆ ಕಟ್ಟಿಕೊಂಡು ಹಾರುವಷ್ಟು ಭೂಮಿಯನ್ನು ತನಗೆ ಕೊಡಬೇಕೆಂದು ಅಲ್ಲಿಯ ಪಾಳೆಯಗಾರನಿಗೆ ಷರತ್ತು ಹಾಕಿದನಂತೆ. ಅದರಂತೆ ಗೆದ್ದ ದೊಂಬನಿಗೆ ಪಾಳೆಯಗಾರ ತನ್ನ ಮಾತಿನಂತೆ ಆ ಪ್ರದೇಶವನ್ನೆಲ್ಲಾ ಬಳುವಳಿಯಾಗಿ ಕೊಟ್ಟನಂತೆ. ಈ ಜಾಗ ಈಗಲೂ ಗೋಮಾಳವಾಗೇ ಉಳಿದಿದ್ದು ಇದನ್ನು ದೊಂಬನ ಕೊಡುಗೆ, ಬೊಮ್ಮನ ಕೊಡುಗೆ ಎಂದು ಕರೆಯುತ್ತಾರೆ. ಚನ್ನಪಟ್ಟಣ ತಾಲ್ಲೂಕಿನ ದಶವಾರದ ಬಳಿ ಶ್ರೀ ನರಸಿಂಹಸ್ವಾಮಿ ಬೆಟ್ಟವಿದ್ದು ತುದಿಯಿಂದ ಕೆಳಕ್ಕೆ ಹರಿದಂತೆ ಕೆಂಪು ಪಟ್ಟೆಗಳಿವೆ. ಹಿಂದೊಮ್ಮೆ ಇಲ್ಲಿ ಪ್ರಹ್ಲಾದಚರಿತ್ರೆ ಎಂಬ ನಾಟಕವನ್ನು ಆಡಿದಾಗ, ನರಸಿಂಹನ ವೇಷಧಾರಿಯ ಮೈಮೇಲೆ ದೇವರು ಬಂದು, ಹಿರಣ್ಯಕಶಿಪು ಪಾತ್ರಧಾರಿಯನ್ನು ಎಲ್ಲಿ ಬಚ್ಚಿಟ್ಟರೂ ಬಿಡದೆ ಆ ಬೆಟ್ಟದ ಮೇಲೆ ಎಳೆದು ತಂದು ಕರುಳನ್ನು ಬಗೆದುದರ ಪರಿಣಾಮ ಬಂಡೆಯ ಮೇಲೆ ಹರಿದ ರಕ್ತದ ಗುರುತು ಎಂದು ಹೇಳುತ್ತಾರೆ. ಆ ಘಟನೆಯಿಂದಾಗಿ ಇಂದಿಗೂ ಈ ಸುತ್ತಮುತ್ತ ಎಲ್ಲೂ ಪ್ರಹ್ಲಾದ ಚರಿತ್ರೆಯನ್ನು ಆಡುವುದಿಲ್ಲವಂತೆ.

ಹೀಗೆ ಐತಿಹ್ಯಗಳು ಬಹಳವಾಗಿ ಪವಾಡಸದೃಶವಾದ, ಅದ್ಭುತ ಅಂಶಗಳನ್ನೇ ವಿವರಿಸಿದರೂ ವಾಸ್ತವಿಕಾಂಶದ ಬೀಜಾಂಶ ಅಲ್ಲಿ ಇದ್ದೇ ಇರುತ್ತದೆ ಎಂಬುದನ್ನು ಕಡೆಗಣಿಸುವಂತಿಲ್ಲ. ಅವುಗಳಲ್ಲಿ ಬಹುತೇಕ ಚಿರಂತನವಾಗಿ ಉಳಿಯಬಹುದು. ಮತ್ತೆ ಕೆಲವು ಆಧರಿಸಿದ ವಸ್ತು ಕಣ್ಮರೆಯಾಗುವವರೆಗೂ ಉಳಿದುಕೊಳ್ಳಬಹುದು. ಯಾವುದೋ ವಸ್ತುವನ್ನೊ ಘಟನೆಯನ್ನೊ ವ್ಯಕ್ತಿಯನ್ನೊ ಅಥವಾ ಚಿಹ್ನೆಯನ್ನೊ ನೆಪವಾಗಿಸಿಕೊಂಡು ತಮ್ಮ ಶ್ರೀಮಂತ ಕಲ್ಪನಾ ಪ್ರತಿಭೆಯಿಂದ ಅದ್ಭುತ ಕಥೆಯೊಂದನ್ನು ಹೆಣೆದು ಹೇಳುವ ಇಂಥ ಪ್ರಸಂಗಗಳಲ್ಲಿ ಕೆಲವು ಬದುಕಿಗೆ ಅವಶ್ಯವಾದ ಮೂಲತತ್ತ್ವಗಳನ್ನು ಸಾರಿ ಹೇಳುತ್ತವೆ. ಕರ್ನಾಟಕ ಇಂಥ ಅಪೂರ್ವ ಐತಿಹ್ಯಗಳ ಆಗರವಾಗಿದೆ. ಈ ಐತಿಹ್ಯಗಳು ಎಷ್ಟರಮಟ್ಟಿಗೆ ಸತ್ಯ ಎಂಬುದನ್ನಾಗಲಿ, ಇವುಗಳು ಹುಟ್ಟಿದ ಅಥವಾ ಅಂಥ ಘಟನೆಗಳು ನಡೆದಿರಬಹುದಾದ ಕಾಲವನ್ನಾಗಲಿ ತೀರ್ಮಾನಿಸುವುದು ಕಷ್ಟ.

(ಡಿ.ಕೆ.ಆರ್.)

**ಐನಾಪುರ :** ಬೆಳಗಾಂವಿ ಜಿಲ್ಲೆ ಅಥಣಿ ತಾಲ್ಲೂಕಿನ ಒಂದು ಗ್ರಾಮ. ಅಥಣಿಯಿಂದ 4ಕಿಮೀ ದೂರದಲ್ಲಿ ಕೃಷ್ಣಾನದಿ ತೀರದಲ್ಲಿದೆ. ಈ ಊರಿನ ಪ್ರಪ್ರಥಮ ಉಲ್ಲೇಖ 1639ರಲ್ಲಿ ಜರ್ಮನಿಯ ಪ್ರವಾಸಿ ಮಂಡೆಲ್‌ಸ್ಲೊನ ಕಥನದಲ್ಲಿ ದೊರೆಯುತ್ತದೆ. ಅವನು ಇದನ್ನು ಈಯುನಟೂರ್ ಎಂದು ಕರೆದಿದ್ದಾನೆ. 1791ರಲ್ಲಿ ಟಿಪ್ಪುವಿನ ವಿರುದ್ಧ ಮರಾಠರ ಸಹಾಯಕ್ಕಾಗಿ ಕಳುಹಿಸಲ್ಪಟ್ಟ ಕ್ಯಾಪ್ಟನ್ ಮೂರ್ ಐನಾಪುರದಲ್ಲಿ ಹಿಂದು ಮತ್ತು ಮುಸ್ಲಿಂ ವಾಸ್ತುಶೈಲಿಯ ಕಟ್ಟಡಗಳಿರುವುದನ್ನು ವರ್ಣಿಸಿರುವನು. 1942ರಲ್ಲಿ ಮೀರಜದ ಗೋಪಾಲರಾವ್ ಪಟವರ್ಧನನ ನಿಧನಾನಂತರ ಈ ಊರು ಬ್ರಿಟಿಷರ ಆಳಿಕೆಗೆ ಒಳಪಟ್ಟಿತ್ತು. ಐನಾಪುರ ಎಂಬ ಹೆಸರು ಜೈನಾಪುರದಿಂದ ಉತ್ಪತ್ತಿಯಾಗಿರಬೇಕೆಂದೂ ಅಯ್ಯನಾಪುರವೇ ಇಲ್ಲಿ ಐನಾಪುರವಾಗಿರಬೇಕೆಂದೂ ಅಭಿಮತವಿದೆ. ಇಲ್ಲಿ ಬ್ರಹ್ಮದೇವ, ವಿಶ್ವನಾಥ, ಸಿದ್ಧೇಶ್ವರ, ವೆಂಕಟರಮಣ, ಹನುಮಂತ, ರಾಮಲಿಂಗ ಮುಂತಾದ ದೇವಾಲಯಗಳಿವೆ. ವಿಶ್ವನಾಥ ದೇವಾಲಯ ಕೊನೆಯ ಚಾಳುಕ್ಯರ ಶೈಲಿಯ ಕಟ್ಟಡವಾಗಿದ್ದು ಗರ್ಭಗೃಹ ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ನವರಂಗದ ಕಂಬಗಳು ವರ್ತುಲಾಕಾರ ಮತ್ತು ಅಷ್ಟಕೋನಾಕೃತಿಯವು. ಈ ಊರ ಸರಹದ್ದಿನಲ್ಲಿ ಎತ್ತರವಾದ ಪ್ರದೇಶದಲ್ಲಿ ಭಾಗಶಃ ಶಿಥಿಲಗೊಂಡ ಒಂದು ದೇವಾಲಯವಿದೆ. ಈಗ ಇದನ್ನು ಗುಂಪು ಎಂದು ಕರೆಯುವರು. ಈ ದೇವಾಲಯದ ಗರ್ಭಗೃಹ ನಕ್ಷತ್ರಾಕಾರದಲ್ಲಿದೆ. ದೇವಾಲಯದ ಹೊರಗೋಡೆ ಸುಂದರವಾಗಿ ಕೆತ್ತಲ್ಪಟ್ಟಿದೆ. ನಾಟ್ಯ ಸರಸ್ವತಿ ಮತ್ತು ಮದನಿಕಾ ವಿಗ್ರಹಗಳ ಸಾಲು ಕೆತ್ತನೆ ಸುಂದರವಾಗಿದೆ. ಗರ್ಭಗೃಹದ ಬಾಗಿಲು ಸಮೃದ್ಧವಾಗಿ ಅಲಂಕರಿಸಲ್ಪಟ್ಟಿದೆ. ಇದು ವಿಷ್ಣುದೇವಾಲಯ ವಾಗಿರಬೇಕು. ಇದೇ ಗ್ರಾಮದ ಸರಹದ್ದಿನಲ್ಲಿ ಸಣ್ಣಗುಡ್ಡದ ಮೇಲೆ ಕಟ್ಟಲಾಗಿರುವ ರಾಮಲಿಂಗ ದೇವಾಲಯ ವಿಜಯನಗರದ ಅನಂತರದ ಶೈಲಿಯದು. ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ದೇವಾಲಯದ ಹೊರಬದಿಯಲ್ಲಿ 4 ಕಂಬಗಳುಳ್ಳ ಚಿಕ್ಕದಾದ ನಂದಿ ಮಂಟಪವಿದ್ದು, ಭಾಗಶಃ ಹಾಳಾಗಿದೆ. ಈ ದೇವಾಲಯದ ಸಮೀಪವಿರುವ ಚಿಕ್ಕಗುಡ್ಡದ ಮೇಲೆ ಹೊಸದಾಗಿ ಕಟ್ಟಲ್ಪಟ್ಟ ಎಲ್ಲಮ್ಮನ ದೇವಾಲಯವಿದೆ. ವಿಜಯನಗರದ ಅನಂತರದ ಶೈಲಿಯಲ್ಲಿ ನಿರ್ಮಿತವಾಗಿದ್ದ ಸಿದ್ಧೇಶ್ವರ ದೇವಾಲಯ ಈಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಸಿದ್ಧೇಶ್ವರ ದೇವರ ವಾರ್ಷಿಕ ಜಾತ್ರೆ ಜನವರಿ

ತಿಂಗಳಲ್ಲಿ ನಡೆಯುತ್ತದೆ. ಆಗ ದನಗಳ ಜಾತ್ರೆಯೂ ಸೇರುವುದು.

ಇಲ್ಲಿರುವ ಆದಿನಾಥ ಮತ್ತು ಪಾರ್ಶ್ವನಾಥ ಬಸದಿಗಳು ಅನಂತರದ ಚಾಳುಕ್ಯ ಶೈಲಿಯಲ್ಲಿವೆ. ಪೂರ್ವದಿಕ್ಕಿನ ಕಡೆಗೆ ಮುಖ ಮಾಡಿರುವ ಆದಿನಾಥ ಬಸದಿಯಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿವೆ. ಆದಿನಾಥನ ಮೂರ್ತಿಯನ್ನು ಬಿಜಾಪುರದಿಂದ ತರಲಾಗಿದೆ ಎಂದು ಪ್ರತೀತಿ. ಪಾರ್ಶ್ವನಾಥ ಬಸದಿ, ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಇತ್ತೀಚೆಗೆ ಕಂಚಿನ ಪಾರ್ಶ್ವನಾಥ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಬಲಭಾಗದಲ್ಲಿ ಪಾರ್ಶ್ವನಾಥಮೂರ್ತಿ ಮತ್ತು ಎಡಭಾಗದಲ್ಲಿ ಧ್ಯಾನದಲ್ಲಿರುವ ಮಹಾವೀರನ ಮೂರ್ತಿಗಳಿವೆ. ಅವುಗಳ ಪಾದಪೀಠದಲ್ಲಿ ಶಾಸನಗಳಿವೆ. ನವರಂಗದ ಬಲ ಮೂಲೆಯಲ್ಲಿ ನೆಲಮಾಳಿಗೆಯ ಕೋಣೆಗಳಿಗೆ ಹೋಗಲು ಕಿಂಡಿದಾರಿಯಿದೆ. ಸುಮಾರು ನೂರು ವರ್ಷಗಳ ಹಿಂದೆ ಆಚಾರ್ಯ ಕುಂತುಸಾಗರಜಿ ಎಂಬ ಜೈನಮುನಿ ಇಲ್ಲಿ ವಾಸವಾಗಿದ್ದರಂತೆ. ಮುಖಮಂಟಪದಲ್ಲಿ ಸಹಸ್ರ ಜಿನಬಿಂಬಗಳ ಕೆತ್ತನೆಯುಳ್ಳ ಚಿಕ್ಕ ಸ್ತಂಭವಿದೆ. ದೇವಾಲಯದ ಮುಂಭಾಗದಲ್ಲಿ ಸು.12ಮೀ ಎತ್ತರದ ಒಂದು ಮಾನಸ್ತಂಭವಿದೆ. ಗರ್ಭಗೃಹದ ತುದಿಯಲ್ಲಿ ಶಂಖಾಕಾರದ ಶಿಖರವಿದೆ. ಇದರ ಒಳಭಾಗದ ಒಂದು ಮಂಟಪದಲ್ಲಿ ಅಮೃತಶಿಲೆಯ ನೇಮಿನಾಥ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಊರಲ್ಲಿ ಸಯ್ಯದ್ ಉಮರ್ ಖಾದ್ರಿ ಎಂಬವರಿಗೆ ಸಂಬಂಧಿಸಿದ ಒಂದು ದರ್ಗಾ ಇದೆ. ಇಲ್ಲಿ ಬಕ್ರೀದ್ ಹಬ್ಬದ ತರುವಾಯ ಮೂರು ದಿನಗಳವರೆಗೆ ಉರುಸ್ ನಡೆಯುತ್ತದೆ. (ಆರ್.ಐ.)

**ಐಮಂಗಲ :** ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ಚಿತ್ರದುರ್ಗದಿಂದ 22ಕಿಮೀ ದೂರದಲ್ಲಿ ಹಿರಿಯೂರು ರಸ್ತೆಯಲ್ಲಿರುವ ಗ್ರಾಮ. ಐತಿಹಾಸಿಕ ಸ್ಥಳ. ಚಿತ್ರದುರ್ಗದ ಹಿರಿಮದಕರಿನಾಯಕನಿಂದ ವೀರಶೈವ ಅಯ್ಯನಿಗಾಗಿ (ಅರ್ಚಕ) ಕೋಟೆಯೊಂದನ್ನು ಕಟ್ಟಿದುದರಿಂದ ಈ ಹೆಸರು ಬಂತೆಂಬ ವಿವರಣೆ ಇದೆ. ದಾಸಯ್ಯನೊಬ್ಬ ತಾನು ಶಂಖವನ್ನೂದಿ ಗಂಟೆಯನ್ನು ಬಾರಿಸಿದಾಗ ಕೋಟೆಯನ್ನು ಕಟ್ಟಲು ಅಸ್ತಿಭಾರವನ್ನು ಹಾಕಿದರೆ ಕೋಟೆ ಅಜೇಯವಾಗಿ ಉಳಿಯುವುದೆಂದು ಹೇಳಿದುದಾಗಿಯೂ ಆ ಪ್ರಕಾರ ಗ್ರಾಮಸ್ಥರು ಕಾಯುತ್ತಿರಲು ಬೇರೊಬ್ಬ ದಾಸಯ್ಯ ಅವೇಳೆಯಲ್ಲಿ ಸೂಚನೆ ನೀಡಲು ಕೋಟೆ ಕೆಲಸ ಪ್ರಾರಂಭವಾಯಿತು, ಈ ತಪ್ಪಿನಿಂದಾಗಿ ಕೋಟೆ ಅಭ್ಯುದಯ ಕಾಣಲಿಲ್ಲ ಎಂದೂ ಒಂದು ಐತಿಹ್ಯವಿದೆ.

ಈ ಊರಿನಲ್ಲಿ ನೊಳಂಬರ ಕಾಲದ ಒಂದು ವೀರಗಲ್ಲಿದ್ದು (ಸು.975) ಅದರಲ್ಲಿ ಪೆರ್ಗ್ಗಡೆ ಗುಣ್ಡಯ್ಯ ಅಯ್ಯಪಮಂಗಲದ ಪೂರ್ವ ಮರ್ಯಾದೆಯನ್ನು ತಪ್ಪಿ ಅಕ್ರಮವನ್ನು ಮಾಡಿದಾಗ ವತ್ಸಗೋತ್ರದ ಏಚಯ್ಯ ಎಂಬುವನು ಆತನ ತಪ್ಪಿಗಾಗಿ ತನ್ನನ್ನು ತಾನೇ ಇರಿದುಕೊಂಡು ಹುತಾತ್ಮನಾಗಿ ಗುಂಡಯ್ಯನಿಗೆ ಕ್ಷಮೆದೊರೆಯುವಂತೆ ಮಾಡಿದನೆಂದು ತಿಳಿದುಬರುತ್ತದೆ. ಈ ಶಾಸನದ ಆಧಾರದಿಂದ 10ನೆಯ ಶತಮಾನ ದಿಂದಲಾದರೂ ಈ ಗ್ರಾಮ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಈ ಅಯ್ಯಪಮಂಗಲದಿಂದಲೇ ಐಮಂಗಲ ಎಂಬ ಹೆಸರು ಬಂದಿರಬಹುದು.

ಇಲ್ಲಿಯ ಪ್ರಮುಖ ಸ್ಮಾರಕಗಳೆಂದರೆ ಭಗ್ನವಾಗಿರುವ ಕೋಟೆ ಹಾಗೂ ವೀರಭದ್ರ ದೇವಾಲಯ. ಇವಲ್ಲದೆ ಇಲ್ಲಿ ಒಂದು ವಿರಕ್ತಮಠ ಮತ್ತು ವೈಷ್ಣವಮಠ ಇದ್ದುವೆಂಬುದಕ್ಕೆ ದಾಖಲೆ ಇದೆ. ಕೋಟೆ ಚತುರಸ್ರವಾಗಿದೆ. ಪ್ರತಿಮೂಲೆಯಲ್ಲೂ ಎತ್ತರವಾದ ಜಗಲಿ ಹಾಗೂ ಸುತ್ತ ಅಸಂಖ್ಯಾತ ಚಚ್ಚೌಕ ಬುರುಜುಗಳಿವೆ. ಮೂರು ಭಗ್ನವಾದ ಬಾಗಿಲುಗಳು ಉತ್ತರ, ಪೂರ್ವ ಮತ್ತು ಪಶ್ಚಿಮಕ್ಕೆ ಇವೆ. ಕೋಟೆಯ ಸುತ್ತಲೂ ಕಂದಕವಿತ್ತು. ವೀರಭದ್ರ ದೇವಾಲಯ ಗ್ರಾಮದ ಮುಖ್ಯರಸ್ತೆಯ ಉತ್ತರಕ್ಕೆ ವೈಷ್ಣವ ದೇವಾಲಯದ ಹತ್ತಿರದಲ್ಲಿದೆ. ಅಲ್ಲಿಯ ಭಗ್ನಾವಶೇಷಗಳನ್ನು ಗಮನಿಸಿದರೆ ಅಲ್ಲಿ ಅರಮನೆ ಇದ್ದಂತೆ ಕಂಡುಬರುತ್ತದೆ. ದೇವಾಲಯದಲ್ಲಿ ಗರ್ಭಗೃಹ ಮತ್ತು ಸುಕನಾಸಿ ಇವೆ. ಹೆಚ್ಚು ಕೆತ್ತನೆಗಳು ಇಲ್ಲ. ಇರುವ ಕೆಲವೇ ಶಿಲ್ಪಗಳು ನಾಯಕರ ಕಾಲದ ಶೈಲಿಯವು. ಐಮಂಗಲದಲ್ಲಿ ತಯಾರಾಗುವ ಖಾದಿ ಪ್ರಸಿದ್ಧಿ ಪಡೆದಿದೆ.

(ಕೆ.)

**ಐರಣಿ :** ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಒಂದು ಗ್ರಾಮ ಮತ್ತು ಪುಣ್ಯಕ್ಷೇತ್ರ. ತುಂಗಭದ್ರಾ ನದಿಯ ಎಡದಂಡೆಯ ಮೇಲೆ ರಾಣೆಬೆನ್ನೂರಿಗೆ ಪೂರ್ವದಲ್ಲಿ ಸು.22ಕಿಮೀ ದೂರದಲ್ಲೂ ಚಳಗೇರಿ ರೈಲು ನಿಲ್ದಾಣಕ್ಕೆ 10 ಕಿಮೀ ದೂರದಲ್ಲೂ ಇದೆ. ಮೆಡ್ಲೇರಿ ಹೋಬಳಿಗೆ ಸೇರಿದೆ. ಕೈಮಗ್ಗದ ಒರಟು ಉಣ್ಣೆಯ ಬಟ್ಟೆಗೆ ಈ ಗ್ರಾಮ ಪ್ರಸಿದ್ಧ. ಇಲ್ಲಿ ಪ್ರತಿ ಶುಕ್ರವಾರ ಸಂತೆ ಸೇರುತ್ತದೆ. ಈ ಗ್ರಾಮದ ಸಮೀಪದಲ್ಲಿ 2,500 ಅಡಿ ಎತ್ತರವಿರುವ ಐರಣಿ ಬೆಟ್ಟವಿದೆ.

ಐರಣಿಯಿಂದ ನೂರುಗಜ ದೂರದಲ್ಲಿ ತುಂಗಭದ್ರಾನದಿಯ ಎಡದಂಡೆಯ ಮೇಲೆ ಒಂದು ಹಳೆಯ ಕೋಟೆಯ ಅವಶೇಷವಿದೆ. ಶ್ರೀ ಜಗದ್ಗುರು ಮುಪ್ಪಿನಾರ್ಯ ಮಹಾಸ್ವಾಮಿಗಳು ಕಟ್ಟಿಸಿದ ಕೊಟ್ಟೂರೇಶ್ವರ ಮಠ ಅಥವಾ ಹೊಳೆ ಮಠವಿದೆ. ಇದನ್ನು ಮೊದಲು ಐರಾವತ ಕ್ಷೇತ್ರವೆಂದು ಕರೆಯುತ್ತಿದ್ದರೆಂದು ಹೇಳುವರು. ಇಲ್ಲಿ ಹುಚ್ಚಬಸವ ಸ್ವಾಮಿಗಳ, ಕೊಟ್ಟೂರುಸ್ವಾಮಿಗಳ, ಉರಿಲಿಂಗದೇವರ ಮತ್ತು ಲಿಂಗಪ್ಪದೇವರ ಗದ್ದುಗೆಗಳಿವೆ. ಗೋಣಿಸ್ವಾಮಿ ಮಠ, ಕಣವಿಸಿದ್ಧೇಶ್ವರ ಆಲಯ, ತುಂಗಭದ್ರಾ ತಟಾಕದಲ್ಲಿ ಸಿದ್ಧನಾಯಕನ ಗದ್ದುಗೆಯೂ ಬೆಟ್ಟದ ಮೇಲೆ ಕೊಟ್ಟೂರೇಶ್ವರ, ಮಲ್ಲಿಕಾರ್ಜುನ, ಮುಂಡಬಸಪ್ಪ, ಮಳೆಮಲ್ಲಪ್ಪ ಆಲಯಗಳೂ ಸಿದ್ಧಾಶ್ರಮ ಮತ್ತು ಅವಧೂತಾಶ್ರಮಗಳೂ ಇದ್ದು, ಬೆಟ್ಟದ ಕೆಳಗೆ ಮದ್ದಾನೇಶ್ವರ ಆಲಯವಿದೆ. ಕಾರ್ತೀಕ ಮಾಸದ ಮತ್ತು ಚೈತ್ರ ಶುದ್ಧ ನವಮಿ ಪೂಜೆಗೆ ಇಲ್ಲಿ ಸಾವಿರಾರು ಮಂದಿ ಸೇರುವರು. ಐರಣಿಯನ್ನು ದಕ್ಷಿಣಕಾಶಿ ಎಂದೂ ಭಾವಿಸುತ್ತಾರೆ. (ಎಸ್.ಎಸ್.ಎನ್.)

**ಐಶ್ವರ್ಯ ರೈ :** 1975-. ವಿಶ್ವ ಸುಂದರಿಯಾಗಿ ಆಯ್ಕೆಗೊಂಡ (1994) ಕನ್ನಡತಿ, ರೂಪದರ್ಶಿ, ಚಲನಚಿತ್ರನಟಿ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ 1975ರಲ್ಲಿ ಜನಿಸಿದರು. ಬೆಳೆದಿದ್ದು, ಓದಿದ್ದು ಮುಂಬಯಿಯಲ್ಲಿ. ವಿಶ್ವಸುಂದರಿಯಾಗುವ ಮುನ್ನ ಮುಂಬಯಿಯಲ್ಲಿ ರೂಪದರ್ಶಿ ಯಾಗಿದ್ದರು. ವಿಶ್ವಸುಂದರಿಯ ಪಟ್ಟ ಭಾರತದ ಬಾಲಿವುಡ್ (ಮುಂಬಯಿ) ಚಿತ್ರಜಗತ್ತಿನ ಪ್ರವೇಶಕ್ಕೆ ಹೆಬ್ಬಾಗಿಲು ಎಂಬ ಮಾತಿದೆ. ವಿಶ್ವಸುಂದರಿಯ ಪಟ್ಟ ಲಭಿಸಿದ ಒಂದು ವರ್ಷದೊಳಗೆ ಇವರು ಮಣಿರತ್ನಂ ನಿರ್ಮಿಸಿದ ತಮಿಳು ಚಿತ್ರ ಇರುವರ್ ಮೂಲಕ ಚಿತ್ರರಂಗ ಪ್ರವೇಶಿಸಿದರು.

ಅನಂತರ ಪ್ಯಾರ್ ಹೋಗಯಾ, ಜೀನ್ಸ್ ಮೊದಲಾದ ಹಿಂದಿ ಚಿತ್ರಗಳಲ್ಲಿ ನಟಿಸಿದರೂ ಅವು ಸಫಲವಾಗಲಿಲ್ಲ. ಆ ಅಬ್ ಲೌಟ್ ಚಲೇ, ಹಮ್ ದಿಲ್ ದೇ ಚುಕೇ ಸನಮ್, ತಾಲ್, ದೇವದಾಸ್, ಹಮ್ ತೋ ತೇರೇ ಹೈ ಸನಮ್, ದಿಲ್ ಕಾ ರಿಶ್ತಾ ಮೊದಲಾದ ಹಿಂದಿ ಚಲನಚಿತ್ರಗಳಲ್ಲಿ ಮನೋಜ್ಞ ಅಭಿನಯ ನೀಡಿದ್ದಾರೆ. ಅನುಪಮ ಸೌಂದರ್ಯದ ಜೊತೆಗೆ ಅಭಿನಯ ಕೌಶಲವನ್ನೂ ಮೈಗೂಡಿಸಿಕೊಂಡಿರುವುದರಿಂದ ಚಿತ್ರರಂಗದಲ್ಲಿ ಇವರಿಗೆ ಯಶಸ್ಸು

ದೊರೆಯುತ್ತಿದೆ ಎಂಬುದು ವಿಮರ್ಶಕರ ಅಭಿಪ್ರಾಯ. ಇಂಗ್ಲಿಷ್, ಬಂಗಾಲಿ ಮತ್ತು ಕನ್ನಡ ಚಲನಚಿತ್ರಗಳಲ್ಲಿ ಅಭಿನಯಿಸಲು ಕೂಡ ಇವರು ಒಪ್ಪಂದ ಮಾಡಿಕೊಂಡಿದ್ದಾರೆ. ಇಂಗ್ಲಿಷ್ ಸಿನಿಮಾ 'ಬ್ರೈಡ್ ಅಂಡ್ ಪ್ರಿಜ್ಯುಡೀಸ್' ನಲ್ಲಿ ನಟಿಸುವ ಮೂಲಕ ಹಾಲಿವುಡ್ ಚಿತ್ರರಂಗವನ್ನು ಪ್ರವೇಶಿಸಿದ್ದಾರೆ. ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

(ಪಿ.ಇ.ವಿ.)

**ಐಹೊಳೆ :** ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನಲ್ಲಿರುವ ಬಾದಾಮಿಯ ಚಳುಕ್ಯರ ಕಾಲದ ಸುಂದರ ದೇವಾಲಯ ಸಮೂಹಗಳಿಂದ ಪ್ರಾಚೀನ ವಾಸ್ತುಶಿಲ್ಪ ಕಲಾಕೇಂದ್ರವೆಂದು ವಿಶ್ವಪ್ರಸಿದ್ಧವಾಗಿರುವ ಗ್ರಾಮ, ಪ್ರವಾಸಿಕೇಂದ್ರ. ಹುನಗುಂದದಿಂದ 26ಕಿಮೀ ಪಶ್ಚಿಮಕ್ಕೆ ಮಲಪ್ರಭಾ ನದಿಯ ಬಲದಂಡೆಯ ಮೇಲಿದೆ.




ಐಹೊಳೆ ನಕ್ಷೆ

ಬಾಗಲಕೋಟೆಯಿಂದ ಅಮೀನಗಡದ ಮೂಲಕ (ಸು.50ಕಿಮೀ) ಅಥ್ವಾ ಬಾದಾಮಿಯಿಂದ ಪಟ್ಟದಕಲ್ಲಿನ ಮೂಲಕ (ಸು.30ಕಿಮೀ) ಐಹೊಳೆಯನ್ನು ತಲಪಲು ರಸ್ತೆ ಸಾರಿಗೆ ಸೌಕರ್ಯವಿದೆ. ಐಹೊಳೆಯಲ್ಲಿ ಉಳಿದುಕೊಳ್ಳಲು ಒಂದು ಪ್ರವಾಸಿ ಮಂದಿರ ಸಹ ಇದೆ. ಕೇಂದ್ರ ಪುರಾತತ್ತ್ವ ಇಲಾಖೆಯ ಒಂದು ಕಾರ್ಯಾಲಯ ಸಹ ಇಲ್ಲಿದೆ.

ಇತಿಹಾಸ: ಅಯ್ಯಾವೊಳೆ, ಆರ್ಯಪುರ ಇವು ಶಾಸನಗಳಲ್ಲಿ ಕಂಡುಬರುವ ಈ ಊರಿನ ಹೆಸರುಗಳು. ಐವಳ್ಳಿ, ಐಹೊಳ್ಳಿ, ಐಯ್ಯಹೊಳೆ ಎಂಬ ರೂಪಗಳೂ ಸ್ಥಳೀಯರಲ್ಲಿ ಪ್ರಚಾರದಲ್ಲಿವೆ. ಅಯ್ಯಗಳು, ಗುರುಗಳು ಈ ಊರಿನಲ್ಲಿ ವಾಸಿಸುತ್ತಿದ್ದುದರಿಂದ ಈ ಹೆಸರು ಬಂತೆಂದು ಊಹೆ. ಆರ್ಯಪುರ ಇದರಿಂದಲೇ ಹುಟ್ಟಿದ ಸಂಸ್ಕೃತ ರೂಪ ಪರಶುರಾಮ ಕ್ಷಾತ್ರವಧೆ ಪೂರೈಸಿದಮೇಲೆ ಇಲ್ಲಿಗೆ ಬಂದು ಮಲಪ್ರಭಾ ನದಿಯಲ್ಲಿ ತನ್ನ ಪರಶುವನ್ನು ತೊಳೆದಾಗ ನದಿಯ ನೀರೆಲ್ಲಾ ಕೆಂಪಾಯಿತು. ಮರುದಿನ ನದಿಗೆ ನೀರು ತರಲು ಹೋದ ಸ್ತ್ರೀಯರು ಕೆಂಪು ನೀರನ್ನು ಕಂಡು ಅಯ್ಯಯ್ಯ ಹೊಳೆ ಎಂದು ಉದ್ಗರಿಸಿದರು, ಅದರಿಂದ ಐಹೊಳೆ ಎಂಬ ಹೆಸರಾಯಿತು ಎಂದು ಒಂದು ಐತಿಹ್ಯ ಸಹ ಇದೆ. ಅಗಸ್ತ್ಯನಿಂದ ವಾತಾಪಿ ಹತನಾದಾಗ, ಅವನ ಸೋದರ ಇಲ್ವಲ ತಮ್ಮಿಬ್ಬರ ನೆನಪು ಉಳಿಯುವಂತೆ ಅಗಸ್ತ್ಯನನ್ನು ಪ್ರಾರ್ಥಿಸಿದನೆಂದೂ ಅಗಸ್ತ್ಯ ಒಪ್ಪಿದ್ದರಿಂದ ವಾತಾಪಿ ಬಾದಾಮಿಯಲ್ಲೂ ಇಲ್ವಲ ಐಹೊಳೆಯ ದಕ್ಷಿಣದಲ್ಲೂ ಗುಡ್ಡವಾಗಿ ಉಳಿದಿದ್ದಾರೆ ಎಂದೂ ಇನ್ನೊಂದು ಐತಿಹ್ಯವಿದೆ.

ದುರ್ಗ ದೇವಾಲಯ

ಈಗ ಚಿಕ್ಕಗ್ರಾಮವಾಗಿರುವ ಐಹೊಳೆ ಒಂದು ಕಾಲದಲ್ಲಿ ದೊಡ್ಡ ಪಟ್ಟಣ. ಇಲ್ಲಿನ ಅವಶೇಷಗಳ ಅವಗಾಹನೆಯಿಂದ ಕ್ರಿ.ಪೂ. ಸು.7-6ನೆಯ ಶತಮಾನದ ಹೊತ್ತಿಗೆ ಕಬ್ಬಿಣದ ಯುಗದಲ್ಲೇ ಇಲ್ಲಿ ಜನವಸತಿ ಇದ್ದಿರಬೇಕೆನಿಸುತ್ತದೆ. ಗ್ರಾಮದ ಸಮೀಪದಲ್ಲಿರುವ ಮೇಗುಟಿ ಗುಡ್ಡದ ಮೇಲೆ ಸು.2 ಎಕರೆಗಳಷ್ಟು ಹರಹಿನ ಪ್ರದೇಶದಲ್ಲಿ ಮೋರೇರ ಅಂಗಡಿಗಳು ಎಂದು ಕರೆಯಲಾದ ಬೃಹತ್ ಶಿಲಾಸಮಾಧಿಗಳು ಕಂಡುಬಂದಿವೆ. ಇವು ನಾಲ್ಕು ನೇರ ಚಪ್ಪಡಿಗಳನ್ನು ಪೆಟ್ಟಿಗೆಯಾಕೃತಿಯಲ್ಲಿ ಜೋಡಿಸಿ ಮೇಲೊಂದು ಚಪ್ಪಡಿಯಿಂದ ಮುಚ್ಚಿರುವ ಸಮಾಧಿಗಳು (ಸಿಸ್ಟ್). ಇಲ್ಲಿನ ಅಂಬಿಗೇರ ಗುಡಿ, ಹುಚ್ಚಪ್ಪಯ್ಯ ಮಠ ಇತ್ಯಾದಿಗಳ ಸಮೀಪದಲ್ಲಿ ಇತ್ತೀಚೆಗೆ ನಡೆಸಿದ ಅಗೆತಗಳಿಂದ ಕಂಡುಬಂದ ದೊಡ್ಡ ಪ್ರಮಾಣದ ಇಟ್ಟಿಗೆಗಳಿಂದ ಕಟ್ಟಿದ ಕಟ್ಟಡಗಳ ಅಡಿಪಾಯಗಳು, ಮಡಕೆಗಳು ಇತ್ಯಾದಿಗಳಿಂದ ಚಳುಕ್ಯ ಪೂರ್ವ ಕಾಲದಲ್ಲೂ ಇಲ್ಲಿ ಕಟ್ಟಡಗಳಿದ್ದುವೆಂದು ತಿಳಿಯುತ್ತದೆ. 6-7ನೆಯ ಶತಮಾನಗಳ ಹೊತ್ತಿಗೆ ಬಹುಶಃ ಬಾದಾಮಿಯ ಚಳುಕ್ಯರ ಆಳ್ವಿಕೆ ಪ್ರಾರಂಭವಾದಾರಭ್ಯ ಐಹೊಳೆ ದೊಡ್ಡ ಪಟ್ಟಣವಾಗಿ ಬೆಳೆಯಲಾರಂಭಿಸಿತು. 7-8ನೆಯ ಶತಮಾನಗಳು ಈ ಪಟ್ಟಣದ ವೈಭವದ ಕಾಲ. ಬಹುಪಾಲು ದೇವಾಲಯಗಳು ಹುಟ್ಟಿಕೊಂಡದ್ದು ಈ ಕಾಲದಲ್ಲಿಯೇ. ಇಲ್ಲಿನ ಅತಿಪ್ರಾಚೀನ ಶಾಸನಗಳು ಸು.6-7ನೆಯ ಶತಮಾನದವು. 8ನೆಯ ಶತಮಾನದಲ್ಲಿ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡುವು. ಚಳುಕ್ಯ ರಾಜ್ಯ ಕೊನೆಗೊಂಡಾಗ ಐಹೊಳೆಯ ವೈಭವವೂ ಇಳಿಮುಖವಾದಂತೆ ತೋರಿದರೂ ಮುಂದೆ ಕಲ್ಯಾಣದ ಚಾಳುಕ್ಯರ ರಾಜ್ಯಾಂತ್ಯದವರೆಗೆ ಈ ನಗರ ಸ್ವಲ್ಪಮಟ್ಟಿಗಾದರೂ ಚಟುವಟಿಕೆಗಳ ಕೇಂದ್ರವಾಗಿ ಮುಂದುವರಿಯಿತು. ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲೂ ಕೆಲವು ಶಾಸನಗಳು ಮತ್ತು ದೇವಾಲಯಗಳು ಹುಟ್ಟಿಕೊಂಡುವು. ಆದರೆ ಬಾದಾಮಿಯ ಚಳುಕ್ಯ ಕಾಲದವಕ್ಕೆ ಹೋಲಿಸಿದರೆ ಅವುಗಳ ಸಂಖ್ಯೆ ಕಡಿಮೆ. ಸ್ವರೂಪ, ವೈವಿಧ್ಯದಲ್ಲಿ ಸಹ ಅವು ಬಹು ಸಾಮಾನ್ಯ ದರ್ಜೆಯವು. 1169-70ರ ಒಂದು ಶಾಸನ ಐಹೊಳೆಯಲ್ಲಿ ದೊರಕಿರುವ ಕೊನೆಯ ಶಾಸನ. ತದನಂತರ ಉತ್ತರ ಕರ್ನಾಟಕದಲ್ಲಿ ಉಂಟಾದ ಸಾಮಾಜಿಕ ರಾಜಕೀಯ ಆಂದೋಳನದಿಂದಾಗಿ ಈ ಪ್ರಾಚೀನ ಪಟ್ಟಣ ತನ್ನ ಪ್ರಾಮುಖ್ಯವನ್ನು ಪೂರ್ಣವಾಗಿ ಕಳೆದುಕೊಂಡಂತೆ ತೋರುತ್ತದೆ.

ತನ್ನ ವೈಭವದ ಕಾಲದಲ್ಲಿ ಐಹೊಳೆ ವಿದ್ವಾಂಸರಿಂದ ತುಂಬಿದ್ದ ಊರಾಗಿತ್ತು. ಪ್ರಾಯಶಃ ಇದೊಂದು ಅಗ್ರಹಾರ. 8ನೆಯ ಶತಮಾನದ ಶಾಸನಗಳಲ್ಲಿ ಇಲ್ಲಿಯ ಮಹಾಜನರು ಶ್ರೀಮದಾರ್ಯಪುರದ ಶ್ರೀಮಹಾಚಾತುರ್ವಿದ್ಯಸಮುದಯಮಪ್ಪೂರ್ವರು ಎಂದು ವರ್ಣಿತರಾಗಿದ್ದಾರೆ. ಹಾಗೆಯೇ ಇದು ಶ್ರೀಮಂತರ ನೆಲೆಯೂ ಆಗಿದ್ದಿರಬೇಕು. 8ರಿಂದ 17ನೆಯ

ಶತಮಾನದವರೆಗೆ ದಕ್ಷಿಣ ಭಾರತದಾದ್ಯಂತ ಪ್ರಸಿದ್ಧವಾಗಿದ್ದ ವರ್ತಕ ಸಂಘವೊಂದು ಅಯ್ಯಾವೊಳೆ ಐನೂರ್ವರು (ನೋಡಿ) ಎಂಬ ಹೆಸರಿನಿಂದ ಮೆರೆಯುತ್ತಿತ್ತು. ಮೇಲಿನ ಮಹಾಜನ ಐನೂರ್ವರ ಮತ್ತು ವರ್ತಕ ಸಂಘದ ಐನೂರ್ವರ ಪರಸ್ಪರ ಸಂಬಂಧ ತಿಳಿಯದಾದರೂ ಪ್ರಾಯಶಃ ಒಂದು ಕಾಲದಲ್ಲಿ ಈ ಸಂಘದ ಕೇಂದ್ರ ಐಹೊಳೆಯಾಗಿರಬೇಕು. ಐಹೊಳೆಯ ಪ್ರಾಮುಖ್ಯ ಕುಗ್ಗಿದರೂ ಈ ಸಂಘದಿಂದಾಗಿ ಈ ನಗರದ ನೆನಪು ಬಹು ಕಾಲದವರೆಗೆ ಉಳಿದಿದ್ದಿತು. ದಕ್ಷಿಣ ಭಾರತದ ಅರಸೀಕೆರೆ, ನಿಟ್ಟೂರು, ಕೌಲೂರು ಮುಂತಾದ ಹಲವು ಊರುಗಳನ್ನು ತೆಂಕಣ ಅಯ್ಯಾವೊಳೆಯೆಂದು ಹೊಗಳಿರುವುದೂ ಅಯ್ಯಾವೊಳೆ ಹಿಂದೆ ಬಹು ವಿಖ್ಯಾತ ಸ್ಥಳವಾಗಿದ್ದಿರಬೇಕೆಂಬುದನ್ನು ಸೂಚಿಸುತ್ತದೆ. ಈಗ ಐಹೊಳೆಯಲ್ಲಿ ಕಾಣುವ ದೇವಾಲಯ ಸಮೂಹ ಆ ಖ್ಯಾತಿಯ ದ್ಯೋತಕವಾಗಿದೆ.

**ವಾಸ್ತುಶಿಲ್ಪ :** ಐಹೊಳೆಯಲ್ಲಿ ಕಿರಿ ಹಿರಿಯವೆಲ್ಲ ಸೇರಿ ಸು.125 ದೇವಾಲಯಗಳಿವೆ. ಪುರಾತತ್ತ್ವ ಸರ್ವೇಕ್ಷಣ ಇಲಾಖೆಯವರು ಇವನ್ನು 22 ಗುಂಪುಗಳಾಗಿ ಹೀಗೆ ವಿಂಗಡಿಸಿದ್ದಾರೆ: 1 ಹುಚ್ಚಿಮಲ್ಲಿ, 2 ಚಿಕ್ಕೀ, 3 ಅಂಬಿಗೇರ, 4 ದುರ್ಗ, 5 ಗೌಡರ, ಲಾಡಖಾನ್ ಮತ್ತು ಸೂರ್ಯನಾರಾಯಣ, 6 ಚಕ್ರ ಮತ್ತು ಬಡಿಗೇರ, 7 ರಾಚಿ, 8 ಏಣಿಯರ್, 9 ಹುಚ್ಚಪ್ಪಯ್ಯ ಮಠ, 10 ಕುಂತಿ, 11 ಚರಂತಿಮಠ, 12 ತ್ರ್ಯಂಬಕೇಶ್ವರ, 13 ಗೌರಿ, 14 ಜೈನ, 15 ಮಲ್ಲಿಕಾರ್ಜುನ, 16 ಗುಡ್ಡದಮೇಲಿನ ಜೈನ, 17 ಮೇಗುಟಿ, 18 ಜ್ಯೋತಿರ್ಲಿಂಗ, 19 ರಾವಳಫಡಿ, 20 ಹುಚ್ಚಪ್ಪಯ್ಯ, 21 ಗಳಗನಾಥ ಮತ್ತು 22 ರಾಮಲಿಂಗ. ಈ ದೇವಾಲಯ ಗುಂಪುಗಳು ಐಹೊಳೆ ಗ್ರಾಮದಲ್ಲಿರುವ ಕೋಟೆಯ ಆವರಣದ ಒಳಗೆ ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಹರಡಿಕೊಂಡಿವೆ. ಈ ಮುಂದೆ ಕೋಟೆ ಮತ್ತು ಕೆಲವು ಮುಖ್ಯ ದೇವಾಲಯಗಳನ್ನು ವಿವರಿಸಲಾಗಿದೆ.

**ಕೋಟೆ :** ಇಲ್ಲಿಯ ಕೋಟೆ ಸು.4-5 ಎಕರೆ ಪ್ರದೇಶವನ್ನು ಆವರಿಸಿದೆ. ಉಸಗು ಕಲ್ಲನ್ನು ದೊಡ್ಡ ಸೈಜುಗಲ್ಲುಗಳಾಗಿ ಕಂಡರಿಸಿ ಯಾವ ಬಂಧಕ ಸಾಮಗ್ರಿಯನ್ನೂ ಉಪಯೋಗಿಸದೆ ಒಂದರ ಮೇಲೊಂದು ಪೇರಿಸಿ ಹೊರಗೋಡೆಯನ್ನು ಕಟ್ಟಲಾಗಿದೆ. ಇದರ ದಪ್ಪ ಸು.3ಮೀ, ಎತ್ತರ ಸು.4ಮೀ. ಕೋಟೆ ಗೋಡೆ ಅಲ್ಲಲ್ಲಿ ಅಟ್ಟಾಲಕಗಳಿಂದ ಕೂಡಿದ್ದು ಸುಮಾರು ಅಂಡಾಕಾರದಲ್ಲಿ ಹಬ್ಬಿದೆ. ಸುತ್ತಲ ಕಂದಕವನ್ನೂ ಕೆಲವೆಡೆ ಗುರುತಿಸಬಹುದು. ಈಗ ಕೋಟೆಯ ಪಶ್ಚಿಮಭಾಗದ ಗೋಡೆಗಳು ಉಳಿದಿಲ್ಲ. ಪೂರ್ವದಲ್ಲಿ ಹೆಬ್ಬಾಗಿಲಿದೆ. ಕೋಟೆಯ ತೆನೆಗಳ ಮೇಲೆ ಸು.6-7ನೆಯ ಶತಮಾನದ ಹಳಗನ್ನಡ ಅಕ್ಷರದ ಶಾಸನಗಳಿವೆಯಾದ್ದರಿಂದ ಕೋಟೆ ಸು.6ನೆಯ ಶತಮಾನದ್ದೆಂದು ಹೇಳಬಹುದು. ಕರ್ನಾಟಕದಲ್ಲಿ ಉಳಿದು ಬಂದಿರುವ ಶಿಲಾಕೋಟೆಗಳಲ್ಲಿ ಇದೇ ಪ್ರಾಚೀನವಾದುದು.

**ದುರ್ಗಗುಡಿ :** ಉತ್ತರದ ರಸ್ತೆಯಿಂದ ಕೋಟೆಯನ್ನು ಪ್ರವೇಶಿಸುತ್ತಿದ್ದಂತೆಯೇ ಕಂಡುಬರುವುದು ಪ್ರಸಿದ್ಧವಾದ ದುರ್ಗ ದೇವಾಲಯ. ಇದು ದುರ್ಗ ದೇವತೆಗೆ ಮೀಸಲಾದ ದೇವಾಲಯವಾಗಿರದೆ, ಸುತ್ತಲೂ ದುರ್ಗದ ರೀತಿಯ ಕಟ್ಟಡವೊಂದರ ಮಧ್ಯ ಇದ್ದುದರಿಂದ ಈ ಹೆಸರು ರೂಢಿತವಾದಂತೆ ಕಾಣುತ್ತದೆ. ದುರ್ಗ ದೇವಾಲಯ ಸು.600ರ ರಚನೆ. ಇದರ ತಳವಿನ್ಯಾಸ ಬೌದ್ಧ ಚೈತ್ಯಾಲಯಗಳ ಮಾದರಿಯಲ್ಲಿ ಗಜಪೃಷ್ಠಾಕಾರವಾಗಿದೆ, ಪೂರ್ವಾಭಿಮುಖವಾಗಿದೆ. ಮುಂದುಗಡೆ ಆಯಾಕಾರದಲ್ಲಿ ಮುಂಚಾಚಿದ ಕಿರುಮಂಟಪವಿದ್ದು ಅದಕ್ಕೆ ಪ್ರವೇಶಿಸಲು ಅದರ ಮುಂದೆ ಎರಡು ಪಕ್ಕಗಳಿಂದ ಏರುವ ಪಾವಟಿಕೆಗಳಿವೆ. ಇಡೀ ದೇವಾಲಯ ಆರು ಅಡ್ಡದಿಂಡುಗಳಿರುವ ಎತ್ತರದ ಅಧಿಷ್ಠಾನದ ಮೇಲೆ ಇದೆ. ಇದರ ಮೇಲಿರುವ ಹೊರ ಅಂಚಿನ ಗೋಡೆ ಅರೆತೆರೆದ ರೀತಿಯದು. ಕುಳ್ಳು ಕೈಪಿಡಿಯ ಮೇಲೆ ಚೌಕಾಕಾರದ ಅಡ್ಡಕೊಯ್ತದ ಕಂಬಸಾಲುಗಳದು. ಇದು ಒಂದು ಕೈಸಾಲೆಯನ್ನು ಆವರಿಸಿದೆ. ಕೈಸಾಲೆಯ ನೆಲಮಟ್ಟದಿಂದ ಮತ್ತೊಂದು ಅಧಿಷ್ಠಾನವಿದ್ದು ಅದರ ಮೇಲೆ ಪುನಃ ಗಜಪೃಷ್ಠಾಕಾರದ ಗರ್ಭಗೃಹವಿದೆ. ಗರ್ಭಗೃಹ ಹೊರಗೋಡೆಯಿಂದ ಸರಿದಂತಿದ್ದು ಪ್ರದಕ್ಷಿಣೆಗೆ ಅನುಕೂಲವಿದೆ. ಗರ್ಭಗುಡಿಯ ಮುಂಭಾಗದಲ್ಲಿ ಎರಡು ಕಂಬಸಾಲುಗಳಿದ್ದು ಅವು ಸಭಾಮಂಟಪವನ್ನು ಉದ್ದುದ್ದವಾಗಿ ಮೂರು ಭಾಗಗಳಾಗಿ ವಿಂಗಡಿಸುತ್ತವೆ. ಮಧ್ಯದ ಅಂಕಣ ಗರ್ಭಗುಡಿಯ ಮುಂದೆಯೂ ಪಕ್ಕದ ಅಂಕಣಗಳು ಪ್ರದಕ್ಷಿಣಾ ಪಥಕ್ಕೆ ತೆರೆದಂತೆಯೂ ಇವೆ. ಗರ್ಭಗುಡಿ ಮತ್ತು ಮುಂದಿನ ಸಭಾ ಮಂಟಪದ ಕಂಬಸಾಲಿನ ಮಧ್ಯದ ಭಾಗದ ಮೇಲೆ ಮಟ್ಟವಾದ ಹಾಸುಗಲ್ಲಿನ ಚಾವಣಿ ಇದೆ. ಒಳ ಪ್ರದಕ್ಷಿಣಾಪಥ ಮತ್ತು ಸಭಾಮಂಟಪದ ಎರಡು ಪಕ್ಕದ ಭಾಗಗಳಿಗೆ ಮಟ್ಟ ಚಾವಣಿಗಿಂತ ಸ್ವಲ್ಪ ಕೆಳಮಟ್ಟದಲ್ಲಿ ಪುನಃ ಇಳಿಜಾರು ಚಾವಣಿಯೂ ಹೊರಗಿನ ಕೈಸಾಲೆಗೆ ಅದಕ್ಕಿಂತ ಕೆಳಮಟ್ಟದಲ್ಲಿ ಪುನಃ ಇಳಿಜಾರು ಚಾವಣಿಯೂ ಇವೆ. ಗರ್ಭಗುಡಿಯ ಮೇಲೆ ಚತುರಸ್ರಾಕಾರದ ಅಡ್ಡಕೊಯ್ತದ ಕುಳ್ಳಾದ ರೇಖಾನಾಗರ ಶಿಖರವಿದೆ. ಕಂಬಗಳು ಚತುರಸ್ರಾಕಾರದ ಅಡ್ಡಕೊಯ್ತವುಳ್ಳವು. ಕೆಲವು ಉಬ್ಬುಪಟ್ಟಿಗಳ ಹೊರತು ಬೇರೆ ಅಲಂಕರಣವಿಲ್ಲ,
ಒ ಳ ’ ಗಿ ನ ’

ದುರ್ಗಗುಡಿಯ ಒಳಸುತ್ತಿನ ಗೋಡೆಯ ಕೋಷ್ಠದಲ್ಲಿರುವ ಮಹಿಷಮರ್ದಿನಿ

ಬಾಗಿಲವಾಡದಲ್ಲೂ ಹೆಚ್ಚಿನ ಅಲಂಕರಣವಿಲ್ಲ. ಆದರೆ ದೇವಾಲಯದ ಮುಖಮಂಟಪದ ಹೊರ ಮೈಯಲ್ಲಿ ಅಡಿಪಟ್ಟಿಕೆಗಳ ಮೇಲಿನ ಕೈಪಿಡಿ ಭಾಗದಲ್ಲಿ ಸುಂದರ ಅಲ್ಪ ಉಬ್ಬು ಶಿಲ್ಪಗಳ ಸಾಲುಗಳೇ ಇವೆ. ರಾಮ ಲಕ್ಷ್ಮಣ ಸೀತೆಯರನ್ನು ಗುಹ ನಾವೆಯಲ್ಲಿ ನದಿ ದಾಟಿಸುತ್ತಿರುವುದು ಮುಂತಾದ ರಾಮಾಯಣದ ವಸ್ತುಗಳು ಇಲ್ಲಿ ಶಿಲ್ಪಿತವಾಗಿವೆ. ಅದರ ಮೇಲು ಪಟ್ಟಿಕೆಯಲ್ಲಿ ಮನುಷ್ಯ ಮುಖಗಳು ಇಣಿಕಿ ನೋಡುವಂತಿರುವ ಚೈತ್ಯಗೂಡುಗಳ ಸಾಲಿದೆ. ಕೈಸಾಲೆಯ ಸುತ್ತಲಿನ ಕಂಬಗಳು ಸಾದಾರೀತಿಯ ಚತುರಸ್ರಾಕಾರದ ಅಡ್ಡಕೊಯ್ತುವುಳ್ಳವು. ಆದರೆ ಮುಮ್ಮಂಟಪದಲ್ಲಿರುವ ಇದೇ ವಿನ್ಯಾಸದ ಕಂಬಗಳ ಮೇಲೆ ಅನೇಕ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಶಿವ, ನರಸಿಂಹ ಮೊದಲಾದ ದೇವ ವಿಗ್ರಹಗಳಲ್ಲದೆ, ನಾನಾ ಭಂಗಿಗಳಲ್ಲಿರುವ ಅನುರಕ್ತ ದಂಪತಿಗಳ ಶಿಲ್ಪಗಳೂ ಇವೆ. ಸೌಂದರ್ಯ ಮತ್ತು ವಿವಿಧ ಭಾವಗಳ ನಿರೂಪಣೆ ಇವುಗಳಿಂದಾಗಿ ಅವು ಚೇತೋಹಾರಿಯಾಗಿವೆ. ಕೈಸಾಲೆಯ ಭಾಗದಲ್ಲಿ ಒಳ ಹಜಾರದ ಹೊರಭಿತ್ತಿಯ ಮೇಲೆ ಸುತ್ತಲೂ ದೇವಕೋಷ್ಠಗಳಿದ್ದು ಒಂದೊಂದು ಕೋಷ್ಠದಲ್ಲೂ ವೃಷಭವಾಹನ ಶಿವ, ಮಹಿಷಮರ್ದಿನಿ, ವಿಷ್ಣು, ನರಸಿಂಹ, ವರಾಹ ಮೊದಲಾದ ದೇವಮೂರ್ತಿಗಳಿವೆ. ಮುಮ್ಮಂಟಪದಿಂದ ಒಳಮಂಟಪಕ್ಕೆ ಹೋಗುವ ದ್ವಾರದ ಮೇಲೆ ಗರುಡ ಮತ್ತು ಪಕ್ಕದ ನೆಲುಗಂಬಗಳ ಮೇಲೆ ಗಂಗಾ ಮತ್ತು ಯಮುನೆಯರ ಶಿಲ್ಪಗಳಿವೆ. ಗರ್ಭಗುಡಿಯಲ್ಲಿನ ಮೂಲಶಿಲ್ಪ ಈಗ ಉಳಿದಿಲ್ಲ. ಆದರೆ ಹಿಂದೆ ಇದು ವೈಷ್ಣವ ದೇವಾಲಯವಾಗಿರಬೇಕೆನಿಸುತ್ತದೆ. ದುರ್ಗ ದೇವಾಲಯ ಅದರ ವಿನ್ಯಾಸದಿಂದ ಹಾಗೂ ಭಾವಪೂರ್ಣ ಶಿಲ್ಪಗಳಿಂದ ಐಹೊಳೆಯಲ್ಲಿನ ಅತಿ ವೈಶಿಷ್ಟ್ಯಪೂರ್ಣ ವಾಸ್ತು ಕೃತಿಯಾಗಿದೆ. ಇಲ್ಲಿ ಒಂದೆರಡು ಶಾಸನಗಳಿದ್ದರೂ ಅವು ದೇವಾಲಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವುದಿಲ್ಲ. ದುರ್ಗಗುಡಿಯ ಬಳಿಯಲ್ಲೇ ಅದೇ ಕಾಲದ ಒಂದು ಕಲ್ಯಾಣಿ ಮತ್ತು ಇನ್ನೊಂದು ಚಿಕ್ಕ ಗುಡಿ ಇವೆ. ದೇವಾಲಯದ ದಕ್ಷಿಣದ ಕಡೆಗೆ ಬೇರೆಯಾಗಿ ನಿಂತಿರುವ ಮಹಾದ್ವಾರ ಮಂಟಪವಿದೆ. ಅದರ ಮೇಲೆ ಇಮ್ಮಡಿ ವಿಕ್ರಮಾದಿತ್ಯನ ಒಂದು ಶಾಸನ ಇದೆ.

**ಲಾಡಖಾನ್ ಗುಡಿ :** ದುರ್ಗ ಗುಡಿಯಿಂದ ಸ್ವಲ್ಪ ದಕ್ಷಿಣಕ್ಕೆ ಲಾಡಖಾನ್ ಗುಡಿಯ ಗುಂಪಿದೆ. ಈ ಗುಂಪಿನ ಹಲವು ದೇವಾಲಯಗಳಲ್ಲಿ ಲಾಡಖಾನ್ ಗುಡಿಯೇ ಬಹುಮುಖ್ಯವಾದುದು. ಲಾಡಖಾನ್ ಎಂಬುವನೊಬ್ಬ ಈ ಗುಡಿಯಲ್ಲಿ ವಾಸಿಸುತ್ತಿದ್ದರಿಂದ ಈ ಹೆಸರು ಬಂದಿದೆ. ಇದರಲ್ಲಿ ಚೌಕಾಕಾರದ ಮಂಟಪ ಮತ್ತು ಅದರ ಮುಂದೆ ಅಗಲವಾದ

ಲಾಡಖಾನ್ ಗುಡಿ

ಮುಖಮಂಟಪ ಇವೆ. ಚೌಕ ಮಂಟಪ ಮಧ್ಯದಲ್ಲಿರುವ ಕಂಬಗಳಿಂದ ಏಕಕೇಂದ್ರದ ಮೂರು ಚೌಕಾಂಕಣಗಳಂತೆ ರೂಪಿತವಾಗಿದೆ. ಕೇಂದ್ರ ಚೌಕ ನಾಲ್ಕು ಮೂಲೆಗಳಲ್ಲಿರುವ ನಾಲ್ಕು ಕಂಬಗಳಿಂದಾದುದು. ಅದನ್ನು ಮಧ್ಯದಲ್ಲಿ ಹೊಂದಿರುವ ಎರಡನೆಯ ಚೌಕ ಒಟ್ಟು 12 ಕಂಬಗಳಿಂದ, ಸಾಲಿಗೆ ನಾಲ್ಕರಂತೆ ಆದುದು. ಇದನ್ನೂ ಆವರಿಸಿಕೊಂಡಿರುವ ಚೌಕ ಹೊರಗೋಡೆಗಳಿಂದ ಆದುದು. ಈ ಹೊರ ಗೋಡೆ ಈಗ ಗೋಡೆಗೇ ಸೇರಿದಂತಿರುವ ಹಲವು ಕಂಬಗಳ ನಡುವೆ ದಪ್ಪ ಚಪ್ಪಡಿಗಳನ್ನು ಜೋಡಿಸಿ ಮಾಡಿರುವಂಥದು. ಪೂರ್ವ, ದಕ್ಷಿಣ ಮತ್ತು ಉತ್ತರ ಗೋಡೆಗಳಲ್ಲಿ ಸುಂದರವಾಗಿ ಕೆತ್ತಿದ ಜಾಲಂಧ್ರಗಳಿವೆ. ಒಳ ಹಜಾರದಲ್ಲಿ ಪಶ್ಚಿಮದ ಗೋಡೆಗೆ ಸೇರಿದಂತೆ ಚಿಕ್ಕ ಆಯಾಕಾರದ ಗರ್ಭಗೃಹವಿದೆ. ಇದರ ದ್ವಾರದ ಮೇಲೆ ಗರುಡ ವಿಗ್ರಹವಿದೆ. ಆದರೆ ಇದು ಶಿವ ದೇವಾಲಯ. ಒಳಗೆ ಲಿಂಗವಿದೆ. ಮಧ್ಯದ ಚೌಕಾಂಕಣದಲ್ಲಿ ಬಸವನ ವಿಗ್ರಹವಿದೆ. ಮೂರು ಚೌಕಾಂಕಣಗಳಿಗೂ ಬೇರೆ ಬೇರೆ ಮಟ್ಟದಲ್ಲಿ ಚಾವಣಿಗಳಿವೆ. ಮಧ್ಯದ ಚೌಕದಲ್ಲಿರುವುದು ಮಟ್ಟ ಚಾವಣಿ, ಉಳಿದ ಭಾಗಕ್ಕೆ ಇಳಿಜಾರು ಚಾವಣಿಗಳು. ಚಾವಣಿಗಳೆಲ್ಲ ಹಾಸುಗಲ್ಲಿನವು. ಮೇಲುಗಡೆ ಈ ಕಲ್ಲುಗಳು ಕೂಡುವ ಸ್ಥಳದಲ್ಲಿ ಒಳಕ್ಕೆ ನೀರಿಳಿಯದಂತೆ ಇನ್ನೊಂದು ಚಪ್ಪಡಿಯನ್ನು ಉದ್ದುದ್ದವಾಗಿ ಇಟ್ಟಿದೆ. ಮಟ್ಟ ಚಾವಣಿಯ ಮೇಲುಗಡೆ ಎರಡನೆಯ ಅಂತಸ್ತಾಗಿ ಮತ್ತೊಂದು ಕೋಣೆ ಇದೆ. ಮುಮ್ಮಂಟಪದಲ್ಲಿ ಇಟ್ಟಿರುವ ಕಲ್ಲು ಏಣಿಯಿಂದ ಈ ಅಂತಸ್ತನ್ನು ತಲುಪಬಹುದು. ದೇವಾಲಯದ ಕಂಬಗಳು ಚೌಕ ಅಡ್ಡ ಕೊಯ್ತು ರೀತಿಯವು; ಬಹು ದಪ್ಪವು. ಮುಂದಿನ ಮಂಟಪದ ಕಂಬಗಳಲ್ಲಿ ಮಾತ್ರ ಬಹು ಉತ್ತಮವಾಗಿ ಕೆತ್ತಿರುವ ಅನೇಕ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಯಮುನೆಯ ವಿಗ್ರಹ ಮತ್ತು ಕಾಮಕೇಳಿನಿರತ ರಸಿಕ ದಂಪತಿಗಳ ವಿಗ್ರಹಗಳು ಮನೋಹರ ಕೃತಿಗಳು. ಛತ್ತಿನ ಮೇಲಿನ ಕೋಣೆಯ ಮೂರು ಪಾರ್ಶ್ವದ ಗೋಡೆಗಳ ಮೇಲೂ ಹೊರಭಾಗದಲ್ಲಿ ದೇವಶಿಲ್ಪಗಳಿವೆ. ಅವುಗಳಲ್ಲಿ ಪಶ್ಚಿಮದ ಗೋಡೆಯ ಮೇಲಿರುವ ಸೂರ್ಯವಿಗ್ರಹ ಗಮನಾರ್ಹ. ಇತರ ವಿಗ್ರಹಗಳು ಅಸಂಪೂರ್ಣ. ಸರಳ ವಿನ್ಯಾಸ, ಸ್ಥಳೀಯ ಜನಪದ ವಾಸ್ತು ರೀತಿಗಳೊಡನೆ ಇದು ಹೊಂದಿರುವ ಸಾದೃಶ್ಯ - ಇವುಗಳಿಂದ ಈ ದೇವಾಲಯ ಐಹೊಳೆಯ ಅತಿ ಪ್ರಾಚೀನ ಗುಡಿ (ಸು.450) ಎಂದು ಅಭಿಪ್ರಾಯಪಡಲಾಗಿದೆ. ಆದರೆ ಈ ಊಹೆಯನ್ನು ಕೆಲವು ವಿದ್ವಾಂಸರು ಅಲ್ಲಗಳೆದಿದ್ದಾರೆ (ನೋಡಿ: ಚಾಳುಕ್ಯವಂಶ-ವಾಸ್ತುಶಿಲ್ಪ). ದೇವಾಲಯದ ಗೋಡೆಯ ಮೇಲೆ ಎರಡು ಶಾಸನಗಳಿವೆ. ಒಂದು ಶಾಸನ ಆರ್ಯಪುರದ ಮಹಾಜನರನ್ನು ಹೆಸರಿಸುತ್ತದೆ. ಈ ಶಾಸನಗಳು ದೇವಾಲಯದ ರಚನೆಯ ಕಾಲಕ್ಕಿಂತ ಈಚಿನವು. ಸು.8ನೆಯ ಶತಮಾನದವು.

**ಗೌಡರ ಗುಡಿ :** ಲಾಡಖಾನ್ ಗುಡಿಯ ಸಮೀಪದಲ್ಲೇ ಗೌಡರ ಗುಡಿ ಇದೆ. ಇದೂ ಸುಮಾರು ಲಾಡಖಾನ್ ಗುಡಿಯ ರೀತಿಯಲ್ಲಿ ಮಂಟಪದಂತಿರುವ ಕಟ್ಟಡ. ಎತ್ತರವಾದ ಅಧಿಷ್ಠಾನದ ಮೇಲೆ ನಿಂತಿದೆ. ಹೊರಗೋಡೆಯಲ್ಲಿ 16 ಕಂಬಗಳಿದ್ದು ಅವುಗಳ ನಡುವೆ ಕಲ್ಲುಚಪ್ಪಡಿಗಳನ್ನು ಗೋಡೆಯಾಗಿ ಜೋಡಿಸಲಾಗಿದೆ. ಮುಂಭಾಗವನ್ನುಳಿದು ಬೇರೆ ಕಡೆ ಕಕ್ಷಾಸನಗಳಿವೆ. ಅವುಗಳ ಹಿಂಭಾಗದಲ್ಲಿ ಪೂರ್ಣ ಕುಂಭಗಳ ಅಲಂಕರಣ ಇದೆ. ಒಳಗಡೆ ಮಧ್ಯದಲ್ಲಿ ನಾಲ್ಕು ಕಂಬಗಳು ಛತ್ತನ್ನು ಎತ್ತಿ ಹಿಡಿದಿವೆ. ಹಿಂಭಾಗದಲ್ಲಿ ಗರ್ಭಗುಡಿ ಇದ್ದು ಅದರ ಸುತ್ತಲೂ ಪ್ರದಕ್ಷಿಣೆ ಬರುವ ಅನುಕೂಲವಿದೆ. ಮಧ್ಯದ ಭಾಗದ ಮೇಲಿನ ಛತ್ತು ಮಟ್ಟವಾಗಿಯೂ ಬದಿಯ ಭಾಗದವು ಇಳಿಜಾರಾಗಿಯೂ ಇವೆ. ಕಂಬಗಳು ದಪ್ಪ, ಕುಳ್ಳು; ಬೋದಿಗೆಗಳೂ ಸಾದಾರೀತಿಯವು. ಮಧ್ಯಾಂಕಣದ ತೊಲೆಗಳಲ್ಲಿ ಮಾತ್ರ ಹೂವಿನ ಸುರುಳಿಗಳು, ಬಾಲಕರು ಮತ್ತು ಪ್ರಾಣಿಗಳ ಚಿತ್ರಗಳಿವೆ. ಗರ್ಭಗುಡಿಯ ದ್ವಾರಬಂಧ ಒಳ್ಳೆಯ ಕೆತ್ತನೆ. ದ್ವಾರತೋಳುಗಳ ಮೇಲೆ ಎರಡು ನೀಳ ಪುಷ್ಪಪಟ್ಟಿಗಳಿವೆ. ಚೌಕಟ್ಟಿನ ನೆತ್ತಿಯ ಮೇಲೆ ಗರುಡ ನಾಗಗಳ ಬಾಲಗಳನ್ನು ಹಿಡಿದು ಮನುಷ್ಯರೂಪೀ ಹಾರುತ್ತಿರುವಂತೆ ತೋರಿಸಲಾಗಿದೆ. ಅದರ ಮೇಲೆ ಮಾಡದಲ್ಲಿ ಕಮಲದ ಮೇಲೆ ಕುಳಿತ ಗಜಲಕ್ಷ್ಮಿಯ ಚಿತ್ರವಿದೆ. ಲಕ್ಷ್ಮಿ ಕಮಲಪಾಣಿಯಾಗಿದ್ದಾಳೆ. ಇಕ್ಕೆಲದಲ್ಲಿ ಒಂದೊಂದು ಆನೆ ಅಭಿಷೇಕ ಮಾಡುವಂತೆಯೂ ಕೆಳಗೆ ಸರೋವರದಲ್ಲಿ ಒಂದೊಂದು ಆನೆ ನಿಂತಂತೆಯೂ ಶಿಲ್ಪಿತವಾಗಿದೆ. ನಾಲ್ಕು ಆನೆಗಳಿಂದ ಕೂಡಿದ ಗಜಲಕ್ಷ್ಮಿ ಪ್ರಾಚೀನ ಸಂಪ್ರದಾಯದ್ದು. ಈಚೆಗೆ ಇದರ ಸುತ್ತಲೂ ನಡೆದ ಉತ್ಖನನದಿಂದ ಈ ಗುಡಿ ಲಾಡಖಾನಕ್ಕಿಂತ ಹಳೆಯದೆಂದು ಊಹಿಸಲು ಆಧಾರಗಳು ದೊರಕಿವೆ. ಆದರೆ ಶೈಲಿಯ ದೃಷ್ಟಿಯಲ್ಲಿ ಇದು ಲಾಡಖಾನಕ್ಕಿಂತ ಪರಿಷ್ಕೃತ ರೀತಿಯದು. ಇದು ಭಗವತಿಯ ಗುಡಿಯಾಗಿತ್ತೆಂದು ಅಲ್ಲಿನ 8ನೆಯ ಶತಮಾನದ ಒಂದು ಶಾಸನದಿಂದ ತಿಳಿಯುತ್ತದೆ.

**ಸೂರ್ಯನಾರಾಯಣ ಗುಡಿ :** ಇದು ಲಾಡಖಾನದಿಂದ ಈಶಾನ್ಯಕ್ಕೆ ಸ್ವಲ್ಪ ದೂರದಲ್ಲಿದೆ. ಇದರಲ್ಲಿ ನಾಲ್ಕು ಕಂಬಗಳ ಮುಖಮಂಟಪ, ನಡುವೆ ನಾಲ್ಕು ಕಂಬ, ಸುತ್ತ ಹನ್ನೆರಡು ಅರೆಗಂಬಗಳಿರುವ ಮಂಟಪ. ನಾಲ್ಕು ಕಂಬ ಮತ್ತು ಎರಡು ಅರೆಗಂಬಗಳುಳ್ಳ ಗರ್ಭಗುಡಿ ಇವೆ. ಮಂಟಪ ಸಾದಾ ರೀತಿಯದು, ದಪ್ಪ ಕಂಬ ಮತ್ತು ಮಟ್ಟ ಚಾವಣಿಯದು. ಮುಂಭಾಗದಲ್ಲಿ ಕಕ್ಷಾಸನಗಳಿವೆ. ಮಧ್ಯದ ಮಂಟಪ ಚೌಕ. ಮಧ್ಯದ ನಾಲ್ಕು ಕಂಬಗಳಲ್ಲಿ ಎರಡು ದ್ವಾರದ ಬಳಿ, ಇನ್ನೆರಡು ಗರ್ಭಗುಡಿಯ ಬಳಿ ಇವೆ. ಈ ಕಂಬಗಳು ದಪ್ಪ, ಚಚ್ಚೌಕ ಅಡ್ಡಕೊಯ್ತ ಮಾದರಿಯವು. ಇಲ್ಲಿನ ಗರ್ಭಗುಡಿಯ ಒಳಗೆ ನಾಲ್ಕು ಕಂಬಗಳಿರುವುದು ವಿಶೇಷ. ಇದರ ದ್ವಾರಬಂಧದ ಮೇಲೆ ನಾಗಹಿಡಿದ ಗರುಡ, ನಾಗಗಳ ಬಳಿ ಗಂಗಾ, ಯಮುನಾ ಮತ್ತು ಮೇಲಿನ ಪಟ್ಟಿಯಲ್ಲಿ ದ್ವಿಬಾಹು ಕಮಲಪಾಣಿಯಾದ ಆಸೀನ ಸೂರ್ಯವಿಗ್ರಹ ಇವೆ. ಗರ್ಭಗುಡಿಯ ಒಳಗೆ ಸಹ 2ಮೀ ಎತ್ತರದ ಹಸಿರುಮೋಡಿ ಕಲ್ಲಿನ ನಿಂತ ಸೂರ್ಯವಿಗ್ರಹವಿದೆ. ಮಂಟಪದ ಛತ್ತಿನಲ್ಲಿ ಪದ್ಮಾಸನಸ್ಥ ಶಿವಮೂರ್ತಿಯನ್ನು ಕೆತ್ತಿದೆ. ಗರ್ಭಗುಡಿಯ ಮೇಲೆ ಎರಡು ಭೂಮಿಗಳ ರೇಖಾನಾಗರ ಶಿಖರವಿದೆ. ಇದು ಚೈತ್ಯ ಪಟ್ಟಿಕೆಗಳು ಮತ್ತು ಆಮಲಕಗಳಿಂದ ಅಲಂಕೃತವಾಗಿದೆ. ಕಲಶ ಉಳಿದಿಲ್ಲ. ವಿಶಿಷ್ಟ ರೀತಿಯ ವಿನ್ಯಾಸವುಳ್ಳ ಈ ದೇವಾಲಯ ಚಿಕ್ಕದು, ಆದರೆ ಸುಂದರ ಕೃತಿ. ಇದರ ಕಾಲ ಅನಿರ್ದಿಷ್ಟ. ಶೈಲಿಯ ಆಧಾರದಿಂದ ಸು.7-8ನೆಯ ಶತಮಾನದ್ದೆಂದು ಹೇಳಬಹುದು.

**ಚಕ್ರಗುಡಿ :** ಲಾಡಖಾನ ಗುಂಪಿನಿಂದ ಮತ್ತಷ್ಟು ದಕ್ಷಿಣಕ್ಕಿರುವುದು ಚಕ್ರಗುಡಿ. ಇದು ದೊಡ್ಡ ಬಾವಿಯೊಂದರ ದಕ್ಷಿಣ ಪಾರ್ಶ್ವಕ್ಕಿದೆ. ಮಂಟಪ ಮತ್ತು ಗರ್ಭಗುಡಿಗಳಷ್ಟೇ ಇರುವ ಈ ದೇವಾಲಯದ ಮುಂಭಾಗ ಶಿಥಿಲವಾಗಿದೆ. ತಳ ಚೌಕವಿದ್ದು ಮೇಲೆ ದುಂಡು ಅಡ್ಡಕೊಯ್ತ ವಿನ್ಯಾಸವಿರುವ ಕಂಬಗಳು ಮಂಟಪದಲ್ಲಿವೆ. ಗರ್ಭಗುಡಿಯ ದ್ವಾರಬಂಧದ ತೋಳುಗಳಲ್ಲಿ ಒಂದೊಂದರಲ್ಲಿ ಹತ್ತರಂತೆ ಇಪ್ಪತ್ತು ರಸಿಕ ದಂಪತಿಗಳ ಶಿಲ್ಪಗಳಿವೆ. ಗರ್ಭಗುಡಿಯ ಮೇಲಿನ ಶಿಖರ ರೇಖಾನಾಗರ ರೀತಿಯದು. ಶಿಖರದಲ್ಲಿ ಎರಡು ಭೂಮಿಗಳಿದ್ದು ಮೇಲೆ ಆಮಲಕವಿದೆ. ಇದರ ಕಾಲ ಸು.9ನೆಯ ಶತಮಾನ.

**ಬಡಿಗೇರ ಗುಡಿ :** ಚಕ್ರ ಗುಡಿಯ ಪಶ್ಚಿಮಕ್ಕಿರುವ ಬಡಿಗೇರ ಗುಡಿ. ಮೂಲತಃ ಸೂರ್ಯದೇವಾಲಯ. ಮುಖಮಂಟಪ, ಮಂಟಪ ಮತ್ತು ಗರ್ಭಗುಡಿಗಳಿರುವ ಈ ದೇವಾಲಯಕ್ಕೆ ರೇಖಾನಾಗರ ಶಿಖರವಿದೆ. ಮುಖಮಂಟಪದ ಪ್ರದೇಶದ ಬಲಗಡೆಯ ಕಂಬದ ಮೇಲೆ ದಕ್ಷಬ್ರಹ್ಮ ಮತ್ತು ಎಡಗಡೆಯದರ ಮೇಲೆ ತ್ರಿಶೂಲ ರೀತಿಯ ಕೀರಿಟಧಾರಿಯಾದ ಕುಬ್ಜಮೂರ್ತಿಯೊಂದರ ಶಿಲ್ಪ ಇವೆ. ಶಿಖರದ ಮುಂಭಾಗದಲ್ಲಿರುವ ಚೈತ್ಯಗೂಡಿನಲ್ಲಿ ಸೂರ್ಯವಿಗ್ರಹವಿದೆ. ಈ ಗುಡಿಯೂ ಸು.9ನೆಯ ಶತಮಾನದ್ದು.

**ರಾಚಿಗುಡಿ :** ಇದು ಗ್ರಾಮದ ಪಶ್ಚಿಮ ಭಾಗದಲ್ಲಿದೆ. ಸು.11ನೆಯ ಶತಮಾನದಲ್ಲಿ ಕಟ್ಟಿದ ಈ ಗುಡಿ ತ್ರಿಕೂಟಾಚಲ ಶಿವಾಲಯ. ದೇವಾಲಯ ಪೂರ್ವಾಭಿಮುಖವಾಗಿದೆ. ಎತ್ತರವಾದ ಅಧಿಷ್ಠಾನವಿದೆ. ಅಂತರಾಳಸಹಿತವಾದ ಮೂರು ಗರ್ಭಗುಡಿಗಳು ಒಂದೇ ನವರಂಗ ಮಂಟಪಕ್ಕೆ ತೆರೆದಂತೆ ಮೂರು ಮುಖ್ಯ ದಿಕ್ಕುಗಳಲ್ಲಿವೆ. ಪೂರ್ವದಲ್ಲಿ ವಿಶಾಲವಾದ ಮುಖಮಂಟಪವಿದೆ. ಮುಖಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳು ಛತ್ತನ್ನು ಎತ್ತಿ ನಿಲ್ಲಿಸಿವೆ. ಸುತ್ತಲೂ ಕಕ್ಷಾಸನವಿದ್ದು ಅದರ ಮೇಲೆ ಚಿಕ್ಕ ಕಂಬಗಳಿವೆ, ಮಧ್ಯದ ಚಾವಣಿ ಮಟ್ಟ, ಸುತ್ತಲೂ ಇಳಿಜಾರು. ಈ ಮಂಟಪದ ನಡುವೆ ನಂದಿಯಿದೆ. ನವರಂಗದಲ್ಲೂ ನಾಲ್ಕು ಕಂಬಗಳಿವೆ. ಮುಖ್ಯ ಗರ್ಭಗೃಹದ ಅಂತರಾಳದ ದ್ವಾರದ ಚೌಕಟ್ಟಿನಲ್ಲಿ ಜಾಲಂಧ್ರಗಳಿವೆ. ಎರಡು ಗರ್ಭಗುಡಿಗಳ ಮೇಲೆ ಶಿಖರಗಳು ಉಳಿದುಕೊಂಡಿವೆ. ಗುಡಿಯ ಹೊರಗೋಡೆಗಳ ಮೇಲೆ ಚಿಕ್ಕ ಕೋಷ್ಠಗಳೂ ಗಣಪತಿ, ನಟರಾಜ, ಭೈರವ, ವಿಷ್ಣು ಮೊದಲಾದ ಮೂರ್ತಿಗಳೂ ಇವೆ.

**ಹುಚ್ಚಪ್ಪಯ್ಯನ ಮಠ :** ಗ್ರಾಮದ ದಕ್ಷಿಣಭಾಗದಲ್ಲಿ ಹುಚ್ಚಪ್ಪಯ್ಯನ ಮಠವಿದೆ. ಇದರಲ್ಲಿ ಎರಡು ಕಟ್ಟಡಗಳು ಪಕ್ಕಪಕ್ಕದಲ್ಲಿವೆ. ಒಂದು ದೇವಾಲಯ, ಇನ್ನೊಂದು ಮಠ. ದೇವಾಲಯದಲ್ಲಿ ಗರ್ಭಗುಡಿ ಮತ್ತು ಮಂಟಪ ಮಾತ್ರ ಇವೆ. ಮಂಟಪದ ಮಧ್ಯದಲ್ಲಿ 3 ಕಂಬಗಳ ಎರಡು ಸಾಲುಗಳಿದ್ದು ಅಂಚಿನಲ್ಲಿ ಅವುಗಳ ನೇರದಲ್ಲಿ ಗೋಡೆಗೆ ಸೇರಿದ ಅರೆಗಂಬಗಳಿವೆ. ಮಧ್ಯದ ಅಂಕಣಕ್ಕೆ ಮಟ್ಟಚಾವಣಿಯೂ ಬದಿಯ ಭಾಗಗಳಿಗೆ ಇಳಿಜಾರು ಚಾವಣಿಯೂ ಇದೆ. ಈ ದೇವಾಲಯ ಸುಂದರ ಶಿಲ್ಪಗಳ ಬೀಡು. ಛತ್ತಿನ ಮೇಲೆ ತ್ರಿಮೂರ್ತಿಗಳ ಶಿಲ್ಪವಿದೆ. ಹಲವು ಕಂಬಗಳ ಮೇಲೆ ಅನೇಕ ರೀತಿಯ ಕಾಮಕೇಳಿಗಳಲ್ಲಿ ನಿರತರಾದ ಸುಂದರ ರಸಿಕ ದಂಪತಿಗಳ ಶಿಲ್ಪಗಳಿವೆ. ಎಲ್ಲದರಲ್ಲೂ ಶೃಂಗಾರಭಾವ ಮತ್ತು ಕ್ರಿಯೆಗಳು ಸಹಜವಾಗಿ ನಿರೂಪಿತವಾಗಿವೆ. ಈ ಗುಡಿ ಸು.8ನೆಯ ಶತಮಾನದ ರಚನೆ. ಮಠ, ಒಳಮಂಟಪ ಮತ್ತು ಹೊರಮಂಟಪ ಎಂಬ ಎರಡು ಭಾಗಗಳಿಂದ ಕೂಡಿದ್ದು, ಕಂಬಗಳು ಅಲಂಕಾರ ರಹಿತವಾದವು. ಚಾವಣಿ ಮಟ್ಟ ರೀತಿಯದು. ದ್ವಾರದ ಮೇಲೆ ಗಜಲಕ್ಷ್ಮಿಯ ವಿಗ್ರಹವಿದೆ. ಇದರ ಹೊರತು ಬೇರೆ ಶಿಲ್ಪಗಳಿಲ್ಲ. ಇಲ್ಲಿ 1067ರ ಒಂದು ಶಾಸನವಿದೆ.

**ಹಾಲಬಸಪ್ಪನ ಗುಡಿ :** ಗ್ರಾಮದ ಪಶ್ಚಿಮಕ್ಕಿದೆ. ಇದು ಸು.7ನೆಯ ಶತಮಾನದ ಚಿಕ್ಕ ಕಟ್ಟಡ. ಗರ್ಭಗುಡಿ ಮತ್ತು ಮಂಟಪವಷ್ಟೇ ಇವೆ. ಮಧ್ಯದ ಚಾವಣಿ ಮಟ್ಟವಾಗಿಯೂ ಹಿಂಭಾಗ ಮುಂಭಾಗ ಇಳಿಜಾರಾಗಿಯೂ ಇವೆ. ಮಂಟಪದ ದ್ವಾರದ ಬಲಮಗ್ಗಲಿನಲ್ಲಿ ಆಮೆಯ ಮೇಲೆ ನಿಂತ ಯಮುನಾ ಮತ್ತು ಎಡಭಾಗದಲ್ಲಿ ಮೊಸಳೆಯ ಮೇಲೆ ನಿಂತ ಗಂಗಾ ವಿಗ್ರಹಗಳು ಇವೆ. ಜೊತೆಯಲ್ಲಿ ಶಂಖನಿಧಿ ಪೂರ್ಣಕುಂಭ ಮೊದಲಾದ ಮಂಗಲ ಚಿಹ್ನೆಗಳನ್ನು ಕೆತ್ತಲಾಗಿದೆ.



ಗುಹಾ ದೇವಾಲಯ

**ಕುಂತಿಗುಡಿ ಗುಂಪು :** ಪೇಟೆಯ ಒಳಗೆ ಸುಮಾರು ನಡುಮಧ್ಯದಲ್ಲಿ ಕುಂತಿಗುಡಿಗಳ (ಕೊಂತಿಗುಡಿ) ಗುಂಪಿದೆ. ಇದು ನಾಲ್ಕು ದೇವಾಲಯಗಳ ಕೂಟ. ಒಂದನೆಯ ದೇವಾಲಯ ಆಯಾಕಾರದ ಮಟ್ಟಚಾವಣಿಯ ಮಂಟಪ. ಒಳಗೆ 6 ಕಂಬಗಳ ಎರಡು ಸಾಲುಗಳಿವೆ. ಹಿಂಬದಿಯ ಗೋಡೆಗೆ ಸೇರಿದಂತೆ ಚಿಕ್ಕ ಆಯಾಕಾರದ ಗರ್ಭಗೃಹವಿದೆ. ಮಂಟಪದ ಛತ್ತಿನಲ್ಲಿ ಕಮಲಾಸೀನಬ್ರಹ್ಮ, ಅನಂತಶಾಯಿವಿಷ್ಣು ಮತ್ತು ಉಮಾಮಹೇಶ್ವರರ ಶಿಲ್ಪಚದರವೂ ಗರ್ಭಗುಡಿಯ ದಕ್ಷಿಣಗೋಡೆಯ ಮೇಲೆ ಶಿವತಾಂಡವ, ಅದರ ದ್ವಾರದ ಇಕ್ಕೆಲದಲ್ಲಿ ಶೈವ ದ್ವಾರಪಾಲಕರು, ಕಂಬಗಳ ಮೇಲೆ ರಸಿಕ ದಂಪತಿಗಳು ಮೊದಲಾದ ಶಿಲ್ಪಗಳೂ ಇವೆ. ಇದರ ಎದುರು ಸ್ವಲ್ಪ ಬದಿಗೆ ಇರುವ ಚೌಕ ತಳಪಾಯದ ಕಂಬಗಳ ಮೇಲೆ ನಿಂತ ಮಟ್ಟ ಚಾವಣಿಯ ಗುಡಿ ಎರಡನೆಯದು. ಇದರಲ್ಲೂ ಉಮಾಮಹೇಶ್ವರ, ಸೂರ್ಯ, ಗಣೇಶ, ಮಹಿಷಮರ್ದಿನಿ ಮೊದಲಾದ ಶಿಲ್ಪಗಳಿವೆ. ಈ ಎರಡು ಗುಡಿಗಳ ನಡುವೆ ನಾಲ್ಕು ಕಂಬಗಳ ಮೇಲೆ ನಿಂತ ಒಂದು ಮಂಟಪವಿದೆ. ಚಾವಣಿ ಮಟ್ಟವಾಗಿದ್ದು ಸುತ್ತಲೂ ಚಜ್ಜವಿದೆ. ಕಂಬದ ಮೇಲಿನ ಬೋದಿಗೆಗಳ ಕೆಳಗೆ ಯಾಳಿಗಳು ಮತ್ತು ಕುಬ್ಜಮೂರ್ತಿಗಳನ್ನು ಅಳವಡಿಸಲಾಗಿದೆ. ಈ ಮಂಟಪ ಉತ್ತಮ ಪ್ರಮಾಣ ಮತ್ತು ಅಲಂಕರಣದಿಂದ ಆಕರ್ಷಕವಾಗಿದೆ. 1 ಮತ್ತು 2ನೆಯ ಗುಡಿಗಳು ಸು.7ನೆಯ ಶತಮಾನದವು. ಆದರೆ ಈ ಗುಡಿಗಳಲ್ಲಿ ಕಂಡುಬರುವ ಸರಳ ವಿನ್ಯಾಸವನ್ನು ಆಧರಿಸಿ ಇವೇ ಐಹೊಳೆಯ ಅತಿ ಪ್ರಾಚೀನ ಗುಡಿಗಳು ಎಂಬ ಅಭಿಪ್ರಾಯವನ್ನು ಒಬ್ಬ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಮಂಟಪ ಸು.9ನೆಯ ಶತಮಾನದ್ದು. ಕುಂತಿಗುಡಿ ಗುಂಪಿನಲ್ಲಿ 3ನೆಯದು ಸು.7ನೆಯ ಶತಮಾನದ್ದು. ವಿನ್ಯಾಸ ಒಂದನೆಯದರಂತೆಯೇ. ಇದು ಶೈವಗುಡಿ. ಗರ್ಭಗುಡಿಯ ದ್ವಾರದ ಇಕ್ಕೆಲದಲ್ಲಿ ಶಂಖನಿಧಿ ಪದ್ಮನಿಧಿಗಳ ಶಿಲ್ಪಗಳಿವೆ. ಗಜ, ವೃಷಭ, ವರಾಹ, ಎರಡೇ ಕಾಲುಗಳ

ಮೇಲೆ ನಿಂತಿರುವ ಮೂವರು ಸ್ತ್ರೀಯರ ಸಂಯುಕ್ತ ಶಿಲ್ಪ ಮೊದಲಾದ ಶಿಲ್ಪಗಳು ಈ ಗುಡಿಯಲ್ಲಿವೆ. 4ನೆಯ ಗುಡಿ ಸ್ವಲ್ಪಮಟ್ಟಿಗೆ ಹಾಳಾಗಿದೆ. ಇಲ್ಲಿ ಕೆಲವು ರಸಿಕ ದಂಪತಿಗಳ ಶಿಲ್ಪಗಳು ಉತ್ತಮವಾಗಿ ಮೂಡಿವೆ. ಇದು ಸು.10ನೆಯ ಶತಮಾನದಲ್ಲಿ ಕಟ್ಟಿದ್ದು.

**ಚರಂತಿಮಠ ಗುಂಪು :** ಕುಂತಿಗುಡಿಗಳಿಂದ ಸ್ವಲ್ಪವೇ ಈಶಾನ್ಯಕ್ಕೆ ಇದೆ. ಇದು ಜೈನಗುಡಿಗಳ ಗುಂಪು. ಕಾಲಾಂತರದಲ್ಲಿ ಇವು ಚರಂತಿ ಮಠದವರ ಅಧೀನಕ್ಕೆ ಬಂದುದರಿಂದ ಈ ಹೆಸರು ರೂಢಿಗೆ ಬಂದಂತೆ ತೋರುತ್ತದೆ. ಈ ಗುಂಪಿನಲ್ಲಿರುವ ಮುಖ್ಯ ಗುಡಿ ತ್ರಿಕೂಟಾಚಲ. ಸು.11-12ನೆಯ ಶತಮಾನದ್ದು. ಕಲ್ಯಾಣ ಚಾಳುಕ್ಯ ವಾಸ್ತುಸಂಪ್ರದಾಯದಲ್ಲಿರುವ ಈ ಕಟ್ಟಡದಲ್ಲಿ ಮೂರು ಗರ್ಭಗೃಹಗಳನ್ನು ಕೂಡಿಸುವ ಒಂದು ಮಂಟಪ ಮತ್ತು ಅದರ ಮುಂದೆ ಮುಖಮಂಟಪ ಇವೆ. ಮುಖ ಮಂಟಪದಲ್ಲಿ ಎರಡು ಕಂಬಗಳು ಮತ್ತು ಎರಡು ಅರೆಗಂಬಗಳಿವೆ. ಒಳಮಂಟಪದ ಮಧ್ಯದಲ್ಲಿ ಎತ್ತರವಾದ ಕಟ್ಟೆಯ ಮೇಲೆ ನಾಲ್ಕು ಕಂಬಗಳೂ ಗೋಡೆಗೆ ಸೇರಿದಂತೆ ಅರೆಗಂಬಗಳೂ ಇವೆ. ಇಲ್ಲಿಯ ಕಂಬಗಳು ಚೌಕತಳದವು. ಮೇಲೆ ದುಂಡಗೆ ತಿರುಗಣೆಯಲ್ಲಿ ಕಡೆದ ಅಲಂಕರಣವುಳ್ಳವು. ದೇವಾಲಯದ ಶಿಖರ ಈಗ ಉಳಿದಿಲ್ಲ. ಮುಂದಣ ಪ್ರವೇಶದ್ವಾರದ ಮೇಲೆ ತೀರ್ಥಂಕರ ಮತ್ತು ಮಗ್ಗಲಲ್ಲಿ ಇಬ್ಬರು ಗಂಧರ್ವರ ವಿಗ್ರಹಗಳಿವೆ. ಮಧ್ಯದ ಗರ್ಭಗುಡಿಯ ಮುಂದೆ ಅಂತರಾಳವಿದ್ದು, ಅದರ ದ್ವಾರ ಬಂಧವು ಗಜಲಕ್ಷ್ಮಿ, ಕೆಲವು ಚಿಕ್ಕ ಮೂರ್ತಿಗಳು ಮತ್ತು ಹೂವಿನ ಸುಳಿವುಗಳಿಂದ ಅಲಂಕೃತವಾಗಿದೆ.

ಇದೇ ಗುಂಪಿನಲ್ಲಿ ಅವಳಿ ಬಸದಿ ಇದೆ. ಎರಡಕ್ಕೂ ಒಂದೇ ಮುಖಮಂಟಪವಿದೆ. ಒಟ್ಟು 24 ತೀರ್ಥಂಕರರನ್ನು ಒಂದರಲ್ಲಿ ಹನ್ನೆರಡರಂತೆ ಎರಡರಲ್ಲಿ ಕಡೆಯಲಾಗಿದೆ. ಅಲ್ಲದೆ ಯಕ್ಷಿಗಳು ಮೊದಲಾದ ಇತರ ಜೈನಮೂರ್ತಿಗಳೂ ಇವೆ. ಒಂದು ಗರ್ಭಗುಡಿಯಲ್ಲಿ ಮಾತ್ರ ಜಿನಮೂರ್ತಿ ಇದೆ. ವಾಸ್ತುರಚನೆಯಲ್ಲಿ ಕಲ್ಯಾಣ ಚಾಳುಕ್ಯ ಸಂಪ್ರದಾಯದ ಅಂಶಗಳು ಚೆನ್ನಾಗಿ ಮೂಡಿವೆ. ಇದು 1120ರಲ್ಲಿ ರಚಿತವಾಯಿತೆಂದು ಇಲ್ಲಿನ ಒಂದು ಶಾಸನ ತಿಳಿಸುತ್ತದೆ.

**ತ್ರ್ಯಂಬಕೇಶ್ವರ ಗುಡಿಗಳ ಗುಂಪು :** ಚರಂತಿ ಮಠದ ಆಗ್ನೇಯಕ್ಕೆ ಸ್ವಲ್ಪ ದೂರದಲ್ಲಿದೆ. ಇದರಲ್ಲಿರುವುದು ಎರಡು ತ್ರಿಕೂಟಾಚಲಗಳು, ಎತ್ತರವಾದ ಅಧಿಷ್ಠಾನದ ಮೇಲಿರುವ ಈ ಗುಡಿಗಳು ಪಶ್ಚಿಮಾಭಿಮುಖವಾಗಿವೆ. ತ್ರಿಕೂಟಾಚಲಗಳಲ್ಲಿ ಮುಖಮಂಟಪ, ನವರಂಗ ಮತ್ತು ಅದರ ಸುತ್ತ ಮೂರು ಅಂತರಾಳಯುತ ಗರ್ಭಗೃಹಗಳಿವೆ. ನವರಂಗದ ಮಧ್ಯಭಾಗದಲ್ಲಿ ಚೌಕತಳ ಮತ್ತು ಮೇಲೆ ತಿರುಗಣೆಯಲ್ಲಿ ಮಾಡಿದ ದುಂಡುನಡುಗಳ ನಾಲ್ಕು ಕಂಬಗಳಿವೆ. ಇದರ ಕಾಲ ಸು.12ನೆಯ ಶತಮಾನ.

ಇದರ ಸಮೀಪದಲ್ಲಿರುವ ಮದ್ದಿನ ಗುಡಿಯೂ ಮೇಲಿನವುಗಳ ವಿನ್ಯಾಸದ ತ್ರಿಕೂಟಾಚಲ. ಗರ್ಭಗುಡಿಗಳ ಮೇಲೆ ಮೆಟ್ಟಿಲುಮೆಟ್ಟಿಲಾಗಿ ಏರುವ ಕದಂಬ ನಾಗರ ಶಿಖರಗಳಿವೆ. ಮಂಟಪದಲ್ಲಿ ನಟರಾಜನ ಸುಂದರ ಮೂರ್ತಿಯಿದೆ. ಈ ದೇವಾಲಯ ಸು.11ನೆಯ ಶತಮಾನದ್ದು.

**ಜೈನ ಗುಡಿಗಳ ಗುಂಪು :** ತ್ರ್ಯಂಬಕೇಶ್ವರ ಗುಂಪಿನಿಂದ ಉತ್ತರಕ್ಕೆ ಜೈನ ನಾರಾಯಣ ಅಥವಾ ಯೋಗಿನಾರಾಯಣ ಎಂದು ಕರೆಯುವ ಗುಂಪಿದೆ. ಪಕ್ಕದಲ್ಲಿರುವ ಗೌರಿ ಗುಡಿ ಮೊದಲು (ಯೋಗಿ) ನಾರಾಯಣನ ಗುಡಿಯಾಗಿದ್ದುದರಿಂದ, ಈ ಜೈನ ಗುಡಿಗಳಿಗೂ ಜೈನನಾರಾಯಣ ಗುಡಿ ಎಂಬ ಹೆಸರು ಬಂದಿರುವಂತೆ ತೋರುತ್ತದೆ. ಈ ಗುಂಪಿನಲ್ಲಿಯ ಮುಖ್ಯ ಗುಡಿಯೂ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿರುವ ತ್ರಿಕೂಟಾಚಲ. 11ನೆಯ ಶತಮಾನದ್ದು. ಇದರಲ್ಲಿನ ಒಂದು ಕಂಬದ ಮೇಲೆ ಗಂಡವಿಮುಕ್ತ ಭಟ್ಟಾರಕನೆಂಬ ಜೈನಯತಿಯ ಸ್ತುತಿ ಇರುವ ಶಾಸನವಿದೆ. ನವರಂಗಕ್ಕೆ ತೆರೆದಂತಿರುವ ಮೂರು ಗರ್ಭಗುಡಿಗಳಲ್ಲಿ ಜೈನ ತೀರ್ಥಂಕರರ ಮೂರ್ತಿಗಳಿದ್ದುವು. ಈಗ ಮಧ್ಯದ ಗರ್ಭಗುಡಿಯಲ್ಲಿನ ಪಾರ್ಶ್ವನಾಥ ಮಾತ್ರ ಉಳಿದಿದೆ. ಬಲಗಡೆಯ ಮೇಲಿನ ಶಿಖರ ಸುಸ್ಥಿತಿಯಲ್ಲಿದೆ.

ಇದರ ಎದುರಿರುವ ಇನ್ನೊಂದು ಗುಡಿಯೂ ಜೈನ. ಸುಕನಾಸಿ ಮತ್ತು ಗರ್ಭಗುಡಿಗಳಷ್ಟೇ ಈಗಿವೆ. ಗರ್ಭಗುಡಿಯಲ್ಲಿ ಮೂಲವಿಗ್ರಹವಿಲ್ಲ. ಈಗ ಪರಶು, ಕಮಲ ಮತ್ತು ಪಾಶವನ್ನು ಹಿಡಿದಿರುವ ಯಕ್ಷನ ಮೂರ್ತಿ ಇದೆ. ಅದರ ಪೀಠದ ಮೇಲೆ ನವಿಲು ಅಥವಾ ಕುಕ್ಕುಟವಿದೆ. ಗುಡಿಯ ಮುಂದೆ ಚೌಮುಖಿ ಇದೆ. ಇದರ ಪ್ರತಿಯೊಂದು ಮಗ್ಗಲಲ್ಲೂ ಕಾಯೋತ್ಸರ್ಗಭಂಗದಲ್ಲಿರುವ ಐದು ತೀರ್ಥಂಕರರ ವಿಗ್ರಹಗಳಿವೆ. ಈ ಗುಡಿಯೂ ಸು.11ನೆಯ ಶತಮಾನದ ರಚನೆ. ಇವಲ್ಲದೆ ಇನ್ನೂ ಎರಡು ಜೈನಗುಡಿಗಳು ಈ ಗುಂಪಿನಲ್ಲಿವೆ.

**ಗೌರಿಗುಡಿ :** ಮೇಲಿನ ಗುಂಪಿನಿಂದ ಉತ್ತರಕ್ಕೆ ಗೌರಿಗುಡಿ (ವಿರೂಪಾಕ್ಷ ಗುಡಿ) ಇದೆ. ಇದರ ಮಂಟಪದಲ್ಲಿ ಎರಡು ಸ್ತ್ರೀ ಮೂರ್ತಿಗಳಿದ್ದು ಒಂದನ್ನು ಗೌರಿ ಎಂದು ಕರೆಯುವುದರಿಂದ ಗೌರಿಗುಡಿ ಎಂಬ ಹೆಸರೂ ಗರ್ಭಗುಡಿಯ ಲಿಂಗ ವಿರೂಪಾಕ್ಷ ಎನ್ನುವುದರಿಂದ ಆ ಹೆಸರೂ ಈ ದೇವಾಲಯಕ್ಕೆ ಬಂದಿರಬೇಕು. ಆದರೆ ಮೂಲತಃ ಇದು ವೈಷ್ಣವ ದೇವಾಲಯವೆಂಬುದು ಇಲ್ಲಿನ ಅನೇಕ ಶಿಲ್ಪಗಳಿಂದ ತಿಳಿಯುತ್ತದೆ. ದೇವಾಲಯದಲ್ಲಿ ಮುಂದೆ ಒಂದು ವಿಶಾಲವಾದ ಮಂಟಪ ಮತ್ತು ಹಿಂದೆ ಇದಕ್ಕೆ ಸೇರಿದಂತೆ ಸುಕನಾಸಿ ಮತ್ತು ಗರ್ಭಗುಡಿ ಇವೆ. ದೇವಾಲಯ ದಕ್ಷಿಣಾಭಿಮುಖವಾಗಿರುವುದು ವಿಶೇಷ. ಮಂಟಪಕ್ಕೆ ಪೂರ್ವ, ಪಶ್ಚಿಮ ಮತ್ತು ದಕ್ಷಿಣದ ಕಡೆಗಳಿಂದ ಪ್ರವೇಶ ದ್ವಾರಗಳಿವೆ. ಮಂಟಪದ ಮಧ್ಯದಲ್ಲಿರುವ ನಾಲ್ಕು ಎತ್ತರದ ಕಂಬಗಳು ಮತ್ತು ಸುತ್ತಲ ಕಕ್ಷಾಸನದ ಮೇಲಿರುವ ಕಿರುಗಂಬಗಳು ಛತ್ತನ್ನು ಎತ್ತಿಹಿಡಿದಿವೆ. ರಚನೆ ಪೂರ್ಣವಾಗಿ ಕಲ್ಯಾಣ ಚಾಳುಕ್ಯ ಸಂಪ್ರದಾಯದ್ದು. ಇದರ ಕಾಲ ಸು.12ನೆಯ ಶತಮಾನ. ಕಂಬಗಳ ಮೇಲೆ ವೈಷ್ಣವ ಮೂರ್ತಿಗಳ ಉಬ್ಬುಶಿಲ್ಪಗಳಿವೆ. ಅಂತರಾಳದ ಹೊರಗೋಡೆಗಳಲ್ಲಿ ನಾಲ್ಕು ಮಾಡಗಳಿವೆ. ಇವುಗಳಲ್ಲೂ ಹಿಂದೆ ಮೂರ್ತಿಗಳಿದ್ದಿರಬೇಕು. ಮಂಟಪದಲ್ಲಿ ಸುಂದರ ಕಮಲಭುವನೇಶ್ವರಿ ಇದೆ.

**ಅಂಬಿಗೇರ ಗುಡಿ ಗುಂಪು :** ಕೋಟೆಯ ಹೊರಗೆ ದುರ್ಗ ದೇವಾಲಯದಿಂದ ಪಶ್ಚಿಮಕ್ಕೆ ಈ ಗುಂಪಿದೆ. ಇಲ್ಲಿ ಮೂರು ದೇವಾಲಯಗಳಿವೆ. ಇವುಗಳಲ್ಲಿನ ದೊಡ್ಡ ಗುಡಿಯ ಮೇಲೆ ರೇಖಾನಾಗರ ಶಿಖರವಿದೆ. ತಳವಿನ್ಯಾಸದಲ್ಲಿ ಗರ್ಭಗುಡಿ ಮತ್ತು ಮಂಟಪಗಳಷ್ಟೇ ಇರುವ ಈ ದೇವಾಲಯ ಪೂರ್ವಾಭಿಮುಖವಾಗಿದ್ದರೂ ಮಂಟಪದ ಉತ್ತರ ಮತ್ತು ದಕ್ಷಿಣಕ್ಕೆ ಪ್ರವೇಶ ದ್ವಾರಗಳಿವೆ. ಮಂಟಪದ ದ್ವಾರಬಂಧದ ಮೇಲೆ ಸುರುಳಿಗಳು, ದ್ವಾರಪಾಲಕರು, ಗಣಪತಿ, ನವಿಲ ಮೇಲೆ ಕುಳಿತ ಸುಬ್ರಹ್ಮಣ್ಯ ಈ ಶಿಲ್ಪಗಳಿವೆ. ಹೊರಗೋಡೆಯ ಮೇಲೆ ಕಲಶ, ಬೋದಿಗೆಗಳನ್ನೆತ್ತಿರುವ ಅರೆಗಂಬಗಳ ಅಲಂಕರಣವಿದೆ. ಗುಡಿ ಸು.10ನೆಯ ಶತಮಾನದ್ದೆಂದು ಊಹಿಸಲಾಗಿದೆ. ಇನ್ನೆರಡು ಗುಡಿಗಳು ಸಾಧಾರಣ ರೀತಿಯವು. ಎರಡನೆಯ ಗುಡಿ ನಾಲ್ಕು ಅಡಿ ಎತ್ತರದ ಇಟ್ಟಿಗೆಯ ಕಟ್ಟೆಯ ಮೇಲೆ ಇದೆ. ಗರ್ಭಗುಡಿಯಲ್ಲಿ ಭಗ್ನವಾದ ಸೂರ್ಯ ಅಥವಾ ವಿಷ್ಣುವಿನ ವಿಗ್ರಹವಿದೆ.

**ಚಿಕ್ಕಿಗುಡಿಗಳ ಗುಂಪು :** ಅಂಬಿಗೇರ ಗುಡಿಯಿಂದ ಸ್ವಲ್ಪ ಉತ್ತರಕ್ಕೆ ಪ್ರವಾಸಿಮಂದಿರಕ್ಕೆ ಹೋಗುವ ಹಾದಿಯ ಎಡಗಡೆ ಇರುವುದೇ ಚಿಕ್ಕಿಗುಡಿಗಳ ಗುಂಪು. ಈ ಗುಂಪಿನಲ್ಲಿ ದೊಡ್ಡದಾದ ಚಿಕ್ಕಿಗುಡಿಯಲ್ಲಿ ಮುಖಮಂಟಪ, ಮಂಟಪ ಮತ್ತು ಮಂಟಪದ ಒಳಗೇ ಇರುವ ಗರ್ಭಗುಡಿ ಇವೆ. ತಳವಿನ್ಯಾಸ ಸುಮಾರು ಗೌಡರ ಗುಡಿ ರೀತಿಯದು. ಮುಖಮಂಟಪ ನಾಲ್ಕು ಚೌಕಕಂಬಗಳನ್ನುಳ್ಳ ಮಟ್ಟಸ ಚಾವಣಿಯದು. ಇದು ಮತ್ತು ಹಿಂದಿನ ಮಂಟಪ ಎತ್ತರದ ಅಧಿಷ್ಠಾನದ ಮೇಲೆ ಇವೆ. ಒಳಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಇವುಗಳ ಕೆಳಭಾಗ ಚೌಕ, ಮೇಲುಭಾಗ ಅಷ್ಟಕೋನ ಅಡ್ಡಕೊಯ್ತುವುಳ್ಳವು. ಇವುಗಳ ಮೇಲೆ ಅರ್ಧಪುಷ್ಪ, ಸರ, ಯಾಳಿ ಮೊದಲಾದ ಶಿಲ್ಪಗಳಿವೆ. ಗರ್ಭಗುಡಿಯ ಸುತ್ತ ಪ್ರದಕ್ಷಿಣಾಪಥವಿದೆ. ಪ್ರದಕ್ಷಿಣಾಪಥದ ಹೊರಗೋಡೆಗಳಲ್ಲಿ ಒಂದೊಂದರಲ್ಲೂ ಮೂರು ಮೂರು ಜಾಲಂಧ್ರಗಳಿವೆ. ಇವುಗಳಲ್ಲಿ ಮಧ್ಯದ ಜಾಲಂಧ್ರ ದೊಡ್ಡದು, ಪಕ್ಕದವು ಕಿರಿದು. ಗರ್ಭಗುಡಿಯ ದ್ವಾರಬಂಧದ ಮೇಲೆ ಬಳ್ಳಿ ಹೂವಿನ ಬಂಧಗಳಿವೆ. ದ್ವಾರಾಗ್ರ ಪಟ್ಟಿಯ ಮೇಲೆ ನಾಗಬಾಲಗಳನ್ನು ಹಿಡಿದು ಹಾರುತ್ತಿರುವ ಗರುಡನ ಶಿಲ್ಪವಿದೆ. ಚೌಕಟ್ಟಿನ ಅರ್ಧ ಕಂಬಗಳ ಮೇಲೆ ಬೋದಿಗೆಯೂ ಕೆಳಗೆ ಪೂರ್ಣಕುಂಭಗಳೂ ಇವೆ. ದ್ವಾರಾಗ್ರಪಟ್ಟಿಯ ಮೇಲುಗಡೆಯ ಪಟ್ಟಿಯಲ್ಲಿ ಚೈತ್ಯ ಕಿಟಕಿಗಳಿವೆ. ಇವುಗಳಲ್ಲಿ ಮಧ್ಯೆ ವೃಷಭಸಹಿತ ಶಿವ, ಬಲಗಡೆ ಬ್ರಹ್ಮ ಮತ್ತು ಎಡಗಡೆ ವಿಷ್ಣುವಿನ ನಿಂತಶಿಲ್ಪಗಳಿವೆ.

ಗರ್ಭಗುಡಿಯಲ್ಲಿ ದುಂಡಾದ ಶಾಲುಂಕದ ಮೇಲೆ ಶಿವಲಿಂಗವಿದೆ. ಗರ್ಭಗುಡಿಯ ಹೊರಗೋಡೆಯ ಮೇಲೆ ಮೂರು ಕಡೆ ಕೋಷ್ಠಗಳಿವೆ. ಗರ್ಭ ಗುಡಿಯ ಮುಂದಿನ ಮಂಟಪದಲ್ಲಿ ಕಮಲ, ಗಂಧರ್ವರು, ಅನಂತನ ಮೇಲೆ ಕುಳಿತ ಲಕ್ಷ್ಮೀಸಮೇತ ವಿಷ್ಣು, ತ್ರಿವಿಕ್ರಮ, ನಟರಾಜ ಮೊದಲಾದ ಶಿಲ್ಪಗಳನ್ನು ಛತ್ತಿನಲ್ಲಿ ಅಳವಡಿಸಲಾಗಿದೆ. ಮಂಟಪಕ್ಕೆ ಮಧ್ಯದಲ್ಲಿ ಮೇಲೆದ್ದ ಮಟ್ಟ ಚಾವಣಿಯಿದೆ. ಅದರ ಪಕ್ಕಗಳಿಂದ ಕಿಂಡಿಗಳನ್ನು ಮಾಡಿ ಛತ್ತಿನ ಶಿಲ್ಪಗಳಿಗೆ ಬೆಳಕು ಬೀಳುವಂತೆ ಮಾಡಿರುವುದು ಇಲ್ಲಿನ ವೈಶಿಷ್ಟ್ಯ. ಮಂಟಪದ ಬದಿಯ ಭಾಗಗಳಿಗೆ ಹಾಸುಗಲ್ಲುಗಳ ಇಳಿಜಾರು ಚಾವಣಿ ಇದೆ. ಗುಡಿ ಸು.7ನೆಯ ಶತಮಾನದ್ದೆಂದು ಊಹಿಸಲಾಗಿದೆ.

ಇದರ ಬಲಗಡೆ ನಿಂತ ಇನ್ನೊಂದು ಗುಡಿಯಲ್ಲಿ ಗರ್ಭಗುಡಿ, ಸುಕನಾಸಿ ಮತ್ತು ಮಂಟಪ ಇದ್ದುವು. ಈಗ ಮಂಟಪ ಬಿದ್ದಿದೆ. ಸುಕನಾಸಿಯ ಹತ್ತಿರ ಶೈವದ್ವಾರಪಾಲಕರ ವಿಗ್ರಹಗಳಿವೆ. ಪಕ್ಕದಲ್ಲಿ ಜಾಲಂಧ್ರಗಳಿವೆ. ಗುಡಿಯಲ್ಲಿ ಮೂಲವಿಗ್ರಹವಿಲ್ಲ. ಇದು ಸು.10ನೆಯ ಶತಮಾನದ ಕಟ್ಟಡ.

**ಹುಚ್ಚಿಮಲ್ಲಿ ಗುಂಪು :** ಗ್ರಾಮದ ಉತ್ತರಕ್ಕೆ ಪ್ರವಾಸಿ ಮಂದಿರದ ಹಿಂಬದಿಯಲ್ಲಿ ಕಾಣುವ ಒಂದು ಸುಂದರ ದೇವಾಲಯ ಹುಚ್ಚಿಮಲ್ಲಿ ಗುಡಿ. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯ, ಗರ್ಭಗುಡಿ ಸಣ್ಣದಾದ ಸಭಾಮಂಟಪ ಮತ್ತು ಮುಖ ಮಂಟಪದಿಂದ ಕೂಡಿದ್ದು, ಎತ್ತರವಾದ ಅಧಿಷ್ಠಾನದ ಮೇಲಿದೆ. ಗರ್ಭಗುಡಿಯಲ್ಲಿ ಮೂಲ ಶಿವಲಿಂಗವಿದೆ. ಇದರ ಬಾಗಿಲ ಚೌಕಟ್ಟು ಎರಡು ಬದಿಯಲ್ಲಿ ನಾಲ್ಕು ಶಾಖೆಗಳಿಂದ ಕೂಡಿದ್ದು, ಚೆಲುವಾದ ಕುಸುರಿನ ಕೆತ್ತನೆಯಿಂದ ಅಲಂಕೃತವಾಗಿದೆ. ಎರಡು ಬದಿಯಲ್ಲಿಯ ಶಾಖೆಗಳಲ್ಲಿ ಅನುರಕ್ತ ದಂಪತಿಗಳು, ಆನೆ ಮತ್ತು ಗಂಗೆ ಯಮುನೆಯರ ಶಿಲ್ಪಗಳಿವೆ. ಚೌಕಟ್ಟಿನ ಮೇಲಿನ ಅಡ್ಡಜಂತಿಯ ಮಧ್ಯದಲ್ಲಿ ಗರುಡನ ಮೂರ್ತಿಯೂ ಮತ್ತು ಈ ಜಂತಿಯ ಮೇಲೆ ಬ್ರಹ್ಮ, ನಟರಾಜ ಮತ್ತು ವಿಷ್ಣು, ಉಚ್ಚಮಟ್ಟದ ಶಿಲ್ಪಗಳು, ಸಭಾಮಂಟಪದ ಮಧ್ಯದ ಕಂಬಗಳನ್ನು ಸೇರಿಸಿ ಬಾಗಿಲು ಮತ್ತು ಜಾಲರಿಯುಳ್ಳ ಅಡ್ಡಗೋಡೆಯೊಂದನ್ನು ಮಾಡಲಾಗಿದೆ. ಸಭಾಮಂಟಪದ ಮಾನಲ್ಲಿ ಇಂದ್ರ, ಯಮ, ಕುಬೇರ ಮತ್ತು ಬ್ರಹ್ಮ ಹಾಗೂ ಕಮಲಗಳ ಶಿಲ್ಪಗಳಿವೆ. ಗರ್ಭಗುಡಿಗೆ ಸುತ್ತುಹಾಕಲು ಪ್ರದಕ್ಷಿಣಾಪಥವಿದ್ದು, ಇದರ ಹೊರಬದಿಯಲ್ಲಿ ಜಾಲಂಧ್ರಗಳುಳ್ಳ ಗೋಡೆಗಳಿವೆ. ಸಭಾಮಂಟಪದ ಬಾಗಿಲ ಚೌಕಟ್ಟು ಗರ್ಭಗುಡಿಯ ತರಹದ್ದೇ. ಮುಖ ಮಂಟಪದಲ್ಲಿ ಕುಳಿತುಕೊಳ್ಳಲು ಎರಡು ಬದಿಯಲ್ಲೂ ಕಕ್ಷಾಸನಗಳಿವೆ. ಮುಂದೆ ಏರಿಬರಲು ಮೆಟ್ಟಿಲುಗಳಿವೆ. ನೆಲದ ಮಟ್ಟದಲ್ಲಿಯ ಮೆಟ್ಟಿಲಿನ ಮುಂದೆ ಅರ್ಧ ಚಂದ್ರಾಕೃತಿಯ ಹಾಸುಗಲ್ಲಿದೆ. ಕಕ್ಷಾಸನದ ಹೊರಬದಿಯಲ್ಲಿ ಪೂರ್ಣ ಘಟಗಳ ಸಾಲಿನ ಉಬ್ಬುಶಿಲ್ಪಗಳಿವೆ. ಮಾಡಿನಲ್ಲಿ ಸುಂದರವಾದ ಕಾರ್ತಿಕೇಯನ ಉಬ್ಬುಶಿಲ್ಪವಿದೆ. ಗರ್ಭಗುಡಿಯ ಮೇಲೆ ಔತ್ತರೇಯ ಪದ್ಧತಿಯ ರೇಖಾನಾಗರ ಶಿಖರವಿದೆ. ಇದರ ಉತ್ತರ ಮತ್ತು ಪೂರ್ವಬದಿಗಳಲ್ಲಿ ಬ್ರಹ್ಮ, ಸೂರ್ಯರ ಮೂರ್ತಿಗಳಿವೆ. ದಕ್ಷಿಣ ಬದಿಯಲ್ಲಿಯ ಮೂರ್ತಿ ಒಡೆದುಹೋಗಿದೆ. ಪಶ್ಚಿಮದ ಬದಿಯಲ್ಲಿ ಅಷ್ಟೊಂದಾಗಿ ಎದ್ದು ಕಾಣದ ಸುಕನಾಸಿಯಿದ್ದು ಮುಂಬದಿಯಲ್ಲಿ ನಟರಾಜನ ಶಿಲ್ಪವಿದೆ. ಈ ದೇವಾಲಯದ ಮುಂದೆ ಮೆಟ್ಟಿಲುಗಳುಳ್ಳ ಒಂದು ಕೊಳವಿದೆ. ಇದರ ಗೋಡೆಯ ಮೇಲಿನ ಹಂತದಲ್ಲೇ ಉದ್ದಕ್ಕೂ ಅಷ್ಟದಿಕ್ಪಾಲಕರು, ನಟರಾಜ, ಮಹಿಷಮರ್ದಿನಿ, ಗಜಾನನ, ಬ್ರಹ್ಮ, ವಿಷ್ಣು, ಗಜಲಕ್ಷ್ಮಿ, ಕಾರ್ತಿಕೇಯ, ಕುದುರೆ, ಆನೆ, ದೇವಭಕ್ತರು, ಪಂಚತಂತ್ರದ ಮೊಸಳೆ ಮಂಗಗಳ ಕಥೆಯ ಸನ್ನಿವೇಶ, ಕಿರಾತಾರ್ಜುನೀಯದ ಕಥೆ ಮುಂತಾದ ಅನೇಕ ಶಿಲ್ಪಗಳಿವೆ. ಸ್ವಲ್ಪ ಕೆಳಗೆ ಮೂಲೆಗಳಲ್ಲಿ ಸಿಂಹಗಳ ಶಿಲ್ಪಗಳೂ ಮೆಟ್ಟಿಲುಗಳ ಬದಿಯಲ್ಲಿ ಸಪ್ತಮಾತೃಕೆಯರ ಮೂರ್ತಿಯೂ ಇವೆ. ಇದು ಮೊದಲಿನಿಂದಲೂ ಶಿವ ದೇವಾಲಯ. ಹುಚ್ಚಿಮಲ್ಲಿ ಎಂಬುದು ಈಚೆಗೆ ಬಂದ ಹೆಸರು. ಇತ್ತೀಚೆಗೆ ಇದಕ್ಕೆ ಕಾರ್ತಿಕೇಯ ದೇವಾಲಯವೆಂದು ಹೆಸರಿಡಲಾಗಿದೆ. ಸು.6-7ನೆಯ ಶತಮಾನಗಳಲ್ಲಿ ಈ ದೇವಾಲಯ ರಚಿತವಾಗಿರಬಹುದು. (ಎ.ಎಸ್.)

ಹುಚ್ಚಿಮಲ್ಲಿ ಗುಡಿಯ ಎದುರಿಗೆ ಸ್ವಲ್ಪ ಅಂತರದಲ್ಲಿ ಇನ್ನೊಂದು ಚಿಕ್ಕ ಗುಡಿ ಇದೆ. ಇದರ ಗರ್ಭಗುಡಿ ಶಿಥಿಲವಾಗಿ ಈಗ ಮುಖಮಂಟಪ ಮಾತ್ರ ನಿಂತಿದೆ. ಇದರಲ್ಲಿ ಪೂರ್ಣಕುಂಭಗಳನ್ನು ಹೊರಬದಿಗೆ ಕೆತ್ತಿರುವ ಕಕ್ಷಾಸನಗಳಿವೆ.

ಹುಚ್ಚಿಮಲ್ಲಿ ಗುಡಿಯ ಉತ್ತರಕ್ಕೆ ಇನ್ನೊಂದು ಚಿಕ್ಕ ಗುಡಿಯಲ್ಲಿ ಗರ್ಭಗುಡಿ ಸುಕನಾಸಿ ಮತ್ತು ಮಂಟಪ ಮಾತ್ರ ಇವೆ. ಗರ್ಭಗುಡಿಯ ಮೇಲೆ ಕದಂಬ ನಾಗರ ರೀತಿಯ ಶಿಖರವಿದೆ. ಸುಕನಾಸಿಯ ಮುಂಗೋಡೆಯಲ್ಲಿ ಜಾಲಂಧ್ರಗಳಿವೆ. ಇದು ಸು.11ನೆಯ ಶತಮಾನದಲ್ಲಿ ರಚಿತವಾದ ಕಟ್ಟಡವೆಂದು ಊಹಿಸಲಾಗಿದೆ.



ಹುಚ್ಚಿಮಲ್ಲಿ ಗುಡಿ

**ರಾವಳಫಡಿ :** ಐಹೊಳೆಯಲ್ಲಿ ಮೂರು ಗುಹಾ ದೇವಾಲಯಗಳಿವೆ. ಅವುಗಳಲ್ಲಿ ಪ್ರಖ್ಯಾತವಾಗಿರುವುದು ರಾವಳ(ಣ)ಫಡಿ. ಇದು ಹುಚ್ಚಿಮಲ್ಲಿ ಗುಂಪಿನ ಗುಡಿಗಳಿಂದ ಸು.30ಮೀಟರುಗಳ ಆಗ್ನೇಯಕ್ಕಿದೆ. ದೊಡ್ಡ ಮರಳುಗಲ್ಲು ಬಂಡೆಯ ಒಂದು ಪಾರ್ಶ್ವದಲ್ಲಿ ಕೊರೆದಿರುವ ಈ ಗುಹೆ ಶೈವದೇವಾಲಯ. ಬಾದಾಮಿಯ ಗುಹೆಗಳಿಗೆ ಹೋಲಿಸಿದರೆ ಬಹು ಚಿಕ್ಕದು. ಇದರಲ್ಲಿ 5x4ಮೀ ಅಗಲವಾದ ಮಂಟಪವಿದ್ದು ಮಂಟಪದ ಬಲ ಎಡ ಭಾಗಗಳಲ್ಲಿ ಕೋಣೆಗಳು (ಅಥವಾ ಕೋಷ್ಠಗಳು), ಹಿಂಬದಿಯಲ್ಲಿ ಅಂತರಾಳ ಮತ್ತು ಗರ್ಭಗುಡಿ ಇವೆ. ಈ ಮೂರು ಕಡೆಯ ಭಾಗಗಳು ಮಂಟಪದ ನೆಲದ ಮಟ್ಟಕ್ಕಿಂತ ಸ್ವಲ್ಪ ಎತ್ತರವಾಗಿರುವುದಲ್ಲದೆ ಅವುಗಳ ಮುಂಬದಿಯಲ್ಲಿ ಎರಡೆರಡು ಕಂಬಗಳಿವೆ. ನಡುಮಂಟಪದ ಮುಂಬದಿಯಲ್ಲೂ ಎರಡು ಕಂಬಗಳಿವೆ. ರಾವಳಫಡಿಯ ಮುಖನೋಟ ಬಹು ಸಾಮಾನ್ಯ ರೀತಿಯದು. ಬಲ ಎಡ ಬದಿಗಳಲ್ಲಿನ ಕೋಷ್ಠಗಳಲ್ಲಿ ಶಂಖನಿಧಿ ಪದ್ಮನಿಧಿಗಳು ಅವುಗಳ ಹತ್ತಿರ ಶೈವ ದ್ವಾರಪಾಲಕ ವಿಗ್ರಹಗಳು ಇವು ಮಾತ್ರ ಇವೆ. ಆದರೆ ಆಲಯವನ್ನು ಪ್ರವೇಶಿಸಿದಾಗ ಇದರ ನಿಜ ಸ್ವರೂಪ ಎದ್ದು ಕಾಣುತ್ತದೆ. ಇದು ಸುಂದರ ಶಿಲ್ಪಗಳ ಬೀಡು. ಒಂದೊಂದು ಶಿಲ್ಪವೂ ಅಸಮ ಸೌಂದರ್ಯಕ್ಕೆ ಉತ್ತಮ ಭಾವರಸ ನಿರೂಪಣೆಗೆ ಹೆಸರಾದುವು. ಒಳಭಾಗದ ವಾಸ್ತುವಿನ್ಯಾಸದಲ್ಲೇ ಒಂದು ಸೊಬಗಿದೆ. ಮಂಟಪದ ಚಾವಣಿಯಲ್ಲಿ ಚೌಕ ಪಟ್ಟಿಗಳಿಂದ ಸುತ್ತುವರಿದ ದೊಡ್ಡ ಕಮಲವಿದೆ. ನವಿರಾಗಿ ಅಲ್ಪ ಉಬ್ಬಿನಲ್ಲಿ ಕೆತ್ತಿರುವ ಈ

ಶಿಲ್ಪಗಳಿರುವ ಭಾಗ ಮಧ್ಯದಲ್ಲಿ ಕೆಳಗಿಳಿದಂತಿದ್ದು, ಕಸೂತಿಯ ಚಿತ್ರಕೆಲಸವಿರುವ ದೊಡ್ಡ ರತ್ನಗಂಬಳಿಯನ್ನು ಮೇಲೆ ಹರಹಿದಂತೆ ಕಾಣುತ್ತದೆ. ಮಂಟಪದ ಒಳ ಗೋಡೆಗಳ ಮೇಲೆ, ಕೋಣೆ ಅಂತರಾಳಗಳ ಪ್ರವೇಶಭಾಗಗಳ ಪಕ್ಕಗಳಲ್ಲಿ, ಹರಿಹರ, ಗಂಗಾಧರ, ಅರ್ಧನಾರೀಶ್ವರ ಮೊದಲಾದ ಮೂರ್ತಿಗಳಿವೆ. ಮಂಟಪದೊಳಗೇ ಇರುವ ಪಕ್ಕದ ಕೋಣೆಗಳ ಕೆಳ ಅಧಿಷ್ಠಾನದಲ್ಲಿ ಗಣಗಳ ಸಾಲುಗಳಿವೆ. ಒಂದೊಂದು ಗಣವೂ ವಿವಿಧ ಆಟಗಳಲ್ಲಿ ಮಗ್ನವಾಗಿರುವಂತೆ ತೋರಿಸಲಾಗಿದೆ. ಒಂದು ಗಣ ತಲೆಕೆಳಗಾಗಿ ಕೈಮೇಲೆ ನಿಂತಿದ್ದರೆ, ಇನ್ನೊಂದು ಬಲಗಾಲು ಮತ್ತು ಕೈ ಊರಿ ಲಾಗ ಹಾಕುತ್ತಿದೆ. ಇನ್ನೊಂದು ಗಣ ಪಕ್ಕದಲ್ಲಿ ಮಲಗಿರುವ ಗಣದ ಕೂದಲು ಹಿಡಿದು ಜಗ್ಗುತ್ತಿದೆ. ಬಾಲ್ಯ ವಿನೋದಗಳೆಲ್ಲಾ ಇಲ್ಲಿ ಶಿಲ್ಪಿತವಾಗಿವೆ. ಅಂತರಾಳದ ಹಾಗೂ ಕೋಣೆಗಳ ಬದಿಯ ಗೋಡೆಗಳಲ್ಲಿ ಕೂಡ ವರಾಹ, ಮಹಿಷಮರ್ದಿನಿ ಮೊದಲಾದ ಶಿಲ್ಪಗಳ ಕೆತ್ತನೆಗಳಿವೆ. ಈ ಗುಹೆಗಳಲ್ಲಿ ಬಹಳ ಪ್ರಸಿದ್ಧವಾಗಿರುವ ಅತ್ಯಂತ ಸುಂದರವಾದ ಶಿಲ್ಪ ಶಿವ ನಟರಾಜನದು. ದಶಬಾಹುವಾದ ನರ್ತನನಿರತನಾದ ಈ ಶಿವ ವಿಗ್ರಹದ ಅಂಗಾಂಗಗಳ ಸಹಜ ಪ್ರಮಾಣ, ನೃತ್ಯ ಭಂಗಿಗೆ ಸಹಜವಾದ ಮೈಬಾಗುಗಳು, ಮುಖದಲ್ಲಿ ಎದ್ದುಕಾಣುವ ಭಾವತನ್ಮಯತೆ ಇವೆಲ್ಲವೂ ಮೂರ್ತಿಯ ಕಳೆಯನ್ನು ಹೆಚ್ಚಿಸಿವೆ. ಈ ವಿಗ್ರಹದ ಅಕ್ಕ ಪಕ್ಕದಲ್ಲಿರುವ ಅಷ್ಟಮಾತೃಕೆಯರ ಶಿಲ್ಪಗಳಲ್ಲಿ ಒಂದೊಂದೂ ನಟರಾಜನಿಗಿಂತಲೂ ಒಂದೊಂದು ಕೈ ಮಿಗಿಲಾಗಿವೆ. ಈ ನೀಳದೇಹಿ ಶಿಲ್ಪಗಳಲ್ಲಿ ಕಂಡುಬರುವ ಬಳುಕು, ಕೋಮಲತೆ, ಲಾಸ್ಯ ಮತ್ತು ಆಕರ್ಷಣೆ ಅದ್ಭುತವಾದುವು. ಬಹು ಸರಳವಾದರೂ ಉತ್ತಮ ವಿನ್ಯಾಸವಿರುವ ಈ ಗುಹೆ ಕರ್ನಾಟಕದ ಬಾದಾಮಿ ಚಾಳುಕ್ಯ ಕಾಲದ ಗುಹಾ ದೇವಾಲಯಗಳ ಸರಣಿಯಲ್ಲಿ ಬಹುಶಃ ಬಹು ಪ್ರಾಚೀನವಾದುದು ಎಂಬ ಅಭಿಪ್ರಾಯವಿದೆ. ಇದರ ಕಾಲ ಸು.6ನೆಯ ಶತಮಾನದ ಆದಿಭಾಗ.

**ಜ್ಯೋತಿರ್ಲಿಂಗ ಗುಡಿಗಳ ಗುಂಪು :** ರಾವಳಫಡಿಯಿಂದ ಸ್ವಲ್ಪದೂರ ನೈಋತ್ಯದಲ್ಲಿ, ಕೋಟೆಯ ಗೋಡೆಗೆ ಅನತಿದೂರದಲ್ಲಿ, 16 ಜ್ಯೋತಿರ್ಲಿಂಗ ಗುಡಿಗಳ ಗುಂಪಿದೆ. ಇಲ್ಲಿನ ಎರಡು ಗುಡಿಗಳು ಚಿಕ್ಕವು. ಮಟ್ಟಸ ಚಾವಣಿಯವು. ಇವುಗಳ ಮುಂದೆ ನಂದಿಮಂಟಪಗಳಿವೆ. ಇವುಗಳ ಅಧಿಷ್ಠಾನ ಬಹಳ ಸರಳವಾಗಿರುವುದು, ಅದರ ಮೇಲಿನ ಪಟ್ಟಿಕೆಯ ಮೇಲೆ ನಾಲ ಇರುವುದು. ಗರ್ಭಗುಡಿಗೆ ಹೋಗುವ ಇಕ್ಕೆಲದಲ್ಲಿ ಕಟಾಂಜನವಿರುವುದು ಮುಂತಾದ ಇತರ ಅಂಶಗಳ ಆಧಾರದ ಮೇಲೆ ಇವೇ ಐಹೊಳೆಯ ಅತ್ಯಂತ ಪ್ರಾಚೀನ ಕಟ್ಟಡಗಳೆಂದು ಒಬ್ಬ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಒಂದು ಗುಡಿಯ ದ್ವಾರದ ಇಕ್ಕೆಲದಲ್ಲಿ ಶಂಖನಿಧಿ ಪದ್ಮನಿಧಿಯರ ಶಿಲ್ಪಗಳಿವೆ. ಎರಡೂ ಗುಡಿಗಳಲ್ಲಿ ರಸಿಕದಂಪತಿಗಳು, ವರಾಹ, ಬ್ರಹ್ಮ ಮೊದಲಾದ ಶಿಲ್ಪಗಳೂ ಇವೆ. ಉಳಿದ ಗುಡಿಗಳಲ್ಲಿ ಸಾಮಾನ್ಯವಾಗಿ ಗರ್ಭಗುಡಿ, ಸುಕನಾಸಿ, ಮಂಟಪ ಮತ್ತು ಮುಖಮಂಟಪ ಇವೆ. ಎರಡು ಗುಡಿಗಳ ಮೇಲೆ ಕದಂಬ ನಾಗರ ವಿಮಾನಗಳಿವೆ. ಈ ಎರಡು ಗುಡಿಗಳಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಒಂದೊಂದು ಶಾಸನವಿದೆ. ಇತರ ಗುಡಿಗಳು ಬಹು ಶಿಥಿಲವಾಗಿವೆ. ಇವೆಲ್ಲ ಸು.8-10ನೆಯ ಶತಮಾನ ಕಾಲಗಳವು.

**ಮಲ್ಲಿಕಾರ್ಜುನ ಗುಡಿಗಳ ಗುಂಪು :** ಜ್ಯೋತಿರ್ಲಿಂಗ ಗುಂಪಿನಿಂದ ಸ್ವಲ್ಪ ಆಗ್ನೇಯಕ್ಕೆ ಕೋಟೆಯ ಪೂರ್ವ ಬಾಗಿಲ ಕಡೆಗೆ 5 ಮಲ್ಲಿಕಾರ್ಜುನ ಗುಡಿಗಳ ಗುಂಪಿದೆ. ಇದರಲ್ಲಿ ದೊಡ್ಡದು ಸು.8ನೆಯ ಶತಮಾನದ ಕಟ್ಟಡ. ಗರ್ಭಗುಡಿ, ಮಂಟಪ ಮತ್ತು ಮುಖಮಂಟಪಗಳಿರುವ ಈ ಗುಡಿ ಎತ್ತರವಾದ ಅಧಿಷ್ಠಾನದ ಮೇಲಿದೆ. ಮುಮ್ಮಂಟಪ ನಾಲ್ಕು ಚಚ್ಚೌಕ ಕಂಬಗಳದು. ಒಳಗಿನ ಮಂಟಪದಲ್ಲಿ ನಾಲ್ಕು ಕಂಬಗಳೂ ನಾಲ್ಕು ಅರೆಗಂಬಗಳೂ ಇವೆ. ಮುಮ್ಮಂಟಪ ಮತ್ತು ಒಳಮಂಟಪದ ಮಧ್ಯಾಂಕಣ ಇವುಗಳ ಮಾಡು ಮಟ್ಟವಾಗಿದೆ. ಮಧ್ಯಾಂಕಣದ ಬದಿಯ ಭಾಗಗಳಲ್ಲಿನ ಮಾಡುಗಳು ಇಳಿಜಾರಾಗಿವೆ. ಗರ್ಭಗುಡಿಯ ಮೇಲೆ ಕದಂಬನಾಗರ ಶೈಲಿಯ ಶಿಖರವಿದೆ. ಇಲ್ಲಿನ ಕಂಬಗಳ ಮೇಲೆ ಸಿಂಹಮುಖದಿಂದ ಹೊರಟ ಮಣಿಸರಗಳು, ವರ್ತುಲಗಳ ಮಧ್ಯದಲ್ಲಿ ನೃತ್ಯಗಾತಿಯರು, ವಾದ್ಯಗಾರರು, ರಸಿಕದಂಪತಿಗಳು, ನರಸಿಂಹ - ಇವೇ ಮೊದಲಾದ ತೆಳುಉಬ್ಬುಶಿಲ್ಪಗಳಿವೆ. ದ್ವಾರಬಂಧಗಳಲ್ಲಿ ಸಮಕಾಲೀನ ರೀತಿಯಲ್ಲಿ ನಾಗಗಳನ್ನು ಹಿಡಿದ ಗರುಡನ ಶಿಲ್ಪಗಳಿವೆ. ಈ ಗುಡಿಯ ಹತ್ತಿರದಲ್ಲೇ ಅಂತರಗಂಗೆಯೆಂಬ ಹೊಂಡವಿದೆ. ಈ ಗುಂಪಿನ ಎರಡನೆಯ ಗುಡಿಯೂ ಮೇಲಿನದರ ಕಾಲದ್ದು, ರೀತಿಯದು, ಆದರೆ ಚಿಕ್ಕದು. ಇದರಲ್ಲಿ ಮಂಟಪ, ಅಂತರಾಳ ಮತ್ತು ಗರ್ಭಗುಡಿ ಮಾತ್ರ ಇವೆ. ಮೇಲಿನ ಕದಂಬನಾಗರ ಶಿಖರ ಅಪೂರ್ಣವಾಗಿದೆ. ಇತರ ಗುಡಿಗಳು ಸಾಮಾನ್ಯ ರೀತಿಯ ಕಟ್ಟಡಗಳು.

**ಗುಡ್ಡದ ಮೇಲಿನ ಗುಡಿಗಳು :** ಊರಿನ ಆಗ್ನೇಯ ದಿಕ್ಕಿಗಿರುವ ಗುಡ್ಡದ ಹಾದಿಯಲ್ಲಿ ಕೆಲವು ಚಿಕ್ಕ ದೇವಾಲಯಗಳಿವೆ. ಗುಡ್ಡದ ಮೇಲೆ ಮೇಗುಟಿ ದೇವಾಲಯವಿದೆ. ಗುಡ್ಡಕ್ಕೆ ಎರಡು ಕಡೆಗಳಲ್ಲಿ ಹಂತಗಳಿವೆ. ಬಲಗಡೆಯ ಮೆಟ್ಟಿಲುಗಳನ್ನು ಏರುತ್ತ ಸುಮಾರು ಮುಕ್ಕಾಲು ಎತ್ತರವನ್ನು ಕ್ರಮಿಸಿದಾಗ ಎರಡಂತಸ್ತಿನ ಶಿಲಾ ಕಟ್ಟಡವೊಂದು ಕಾಣುತ್ತದೆ. ಇದರ ಒಳಭಾಗ ನೈಸರ್ಗಿಕ ಗುಹೆ. ಕೆಳ ಅಂತಸ್ತಿನಲ್ಲಿ ನಾಲ್ಕು ಕಂಬಗಳು ಮತ್ತು ಎರಡು ಅರೆಗಂಬಗಳಿರುವ ಪಡಸಾಲೆ ಇದೆ. ಒಳಭಾಗದಲ್ಲಿ ಒಂದು ಗೋಡೆ, ಅದರ ಹಿಂಬದಿಯಲ್ಲಿ ಮೂರು ಸಣ್ಣ ಕೋಣೆಗಳು ಇವೆ. ಕೋಣೆಗಳು ಬಹಳ ಚಿಕ್ಕವು. ಮಧ್ಯದ ಕೋಣೆಯಲ್ಲಿ ದೇವಪೀಠವಿದೆ. ಮೇಲಂತಸ್ತಿನಲ್ಲೂ ಮುಂಭಾಗದಲ್ಲಿ ಕೆಳಗಿನ ರೀತಿಯ ಪಡಸಾಲೆ ಇದೆ. ಹಿಂಭಾಗದಲ್ಲಿ ಒಂದು ಚೌಕ ಕೋಣೆ ಇದೆ. ಕೆಳ ಗರ್ಭಗುಡಿಯ ಪೀಠದ ಮೇಲಿದ್ದ ವಿಗ್ರಹ ಇಂದು ಹೊರಗೆ ಇದೆ. ಇದು ಪದ್ಮಾಸನಸ್ಥನಾದ ಬುದ್ಧಮೂರ್ತಿ. ಇದೇ ರೀತಿಯ ಶಿಲ್ಪವನ್ನು ಮೇಲಂತಸ್ತಿನ ಪಡಸಾಲೆಯ ಛತ್ತಿನ ಮೇಲೂ ಕಡೆಯಲಾಗಿರುವುದರಿಂದ ಇದು ಬೌದ್ಧಾಲಯವೆಂದು ಹೇಳಬಹುದು. ಈ ಆಲಯ ಬೌದ್ಧ ವಿಹಾರವೆಂದು ಒಂದು ಅಭಿಪ್ರಾಯ. ಇದು ಚೈತ್ಯಗೃಹವೆಂದು ಮತ್ತೆ ಕೆಲವರ ಮತ. ಇಲ್ಲಿನ ಮೂರ್ತಿಗಳು ವಸ್ತ್ರಧಾರಿ ಜಿನ ವಿಗ್ರಹಗಳೆಂಬ ಹೇಳಿಕೆಯೂ ಇದೆ. ಗುಡ್ಡದ ಮೇಲಿನ ಜಿನಾಲಯವೆಂಬ ಹೆಸರೂ ಈ ಗುಡಿಗಿದೆ. ಕಟ್ಟಡ ಬಹಳ ಸಾದಾ ರೀತಿಯದಾಗಿರುವುದರಿಂದ ಇದು ಸು.5ನೆಯ ಶತಮಾನದ್ದೆಂದು ಊಹಿಸಲಾಗಿದೆ. ಇದರ ಕಂಬಗಳ ಮೇಲೆ ಶ್ರೀ ಬಿಣಅಮ್ಮನ್ ಮಹೇಂದ್ರ ಮುಂತಾದ ಹೆಸರುಗಳನ್ನು ಕೊರೆಯಲಾಗಿದೆ. ಲಿಪಿಯ ದೃಷ್ಟಿಯಿಂದ ಈ ಶಾಸನಗಳು ಸು.8ನೆಯ ಶತಮಾನದವು.

ಮೇಗುಟಿ ಗುಡ್ಡದ ಮೇಲಿರುವ ಮೇಗುಟಿ (ಮೇಗಣಗುಡಿ) ನಾಲ್ಕೂ ಕಡೆ ಒರಟು ಕಲ್ಲಿನ ಗೋಡೆಗಳಿಂದ ಆವೃತವಾದ ಬಹು ವಿಶಾಲವಾದ ಪ್ರಾಂಗಣದ ಮಧ್ಯೆ ಇದೆ. ದೇವಾಲಯದ ಮುಂಭಾಗದಲ್ಲಿ ನಾಲ್ಕು ಕಂಬಗಳ ನಾಲ್ಕು ಸಾಲುಗಳಿರುವ ಚೌಕ ಮಂಟಪವಿದೆ. ಅದರ ಮುಂದೆ ಎರಡು ಪಕ್ಕಗಳಿಂದ ಏರುವ ಪಾವಟಿಗೆಗಳುಂಟು. ಮಂಟಪದ ಹಿಂದೆ ಆಯಾಕಾರದ ಅಂತರಾಳ, ಅದರ ಹಿಂದೆ ಚೌಕ ಗರ್ಭಗುಡಿ ಇವೆ. ಗರ್ಭಗುಡಿಯ ಸುತ್ತ ಪ್ರದಕ್ಷಿಣಾಪಥವಿದೆ. ಅನಂತರದ ಯಾವುದೋ ಕಾಲದಲ್ಲಿ ಪ್ರದಕ್ಷಿಣಾಪಥದ ಮಧ್ಯೆ ಮಧ್ಯೆ ಚಿಕ್ಕ ಗೋಡೆಗಳನ್ನು ಎಬ್ಬಿಸಿ ಕೋಣೆಗಳಂತೆ ಮಾಡಿರುವುದರಿಂದ ಅದು ಈಗ ಪ್ರದಕ್ಷಿಣೆಗೆ ಅನುಕೂಲವಾಗಿಲ್ಲ. ಕೆಳಗರ್ಭಗುಡಿಯ ನೇರದಲ್ಲೇ ಮಾಳಿಗೆಯ ಮೇಲೆ ಇನ್ನೊಂದು ಗರ್ಭಗೃಹವುಂಟು. ಮಾಳಿಗೆಯ ಮೇಲಕ್ಕೆ ಹೋಗಲು ಅಂತರಾಳದಲ್ಲಿ ಮೆಟ್ಟಿಲುಗಳಿವೆ. ಹೊರ ಮೈಯ ಏರುವಿನ್ಯಾಸ ಬಹು ಸರಳ ರೀತಿಯದು. ಅಧಿಷ್ಠಾನ ಎತ್ತರವಾಗಿದೆ. ಹಲವು ಅಡ್ಡಪಟ್ಟಿಕೆಗಳಿಂದ ಕೂಡಿದ ಈ ಅಧಿಷ್ಠಾನದ ಮೇಲುಪಟ್ಟಿಕೆಯಲ್ಲಿ ಮನುಷ್ಯಮುಖಗಳಿರುವ ಚೈತ್ಯ ಕಿಂಡಿಗಳು, ಅದರ ಕೆಳಗಿನದರಲ್ಲಿ ದಂಪತಿಗಳು, ಹಾವಾಡಿಗ, ವಾದ್ಯಕಾರರು, ಮಲ್ಲರು ಮೊದಲಾದ ಚಿಕ್ಕ ಶಿಲ್ಪಗಳ ಅಲಂಕರಣ ಇದೆ. ಭಿತ್ತಿಯ ಮೇಲೆ ಕೆಲವು ಅರೆಗಂಬಗಳು ಮತ್ತು ಕೋಷ್ಠಗಳಿವೆ. ಆದರೆ ಶಿಲ್ಪಗಳಿಲ್ಲ. ಕಪೋತ ಚೌಕಪಟ್ಟಿಯ ರೀತಿಯದು. ಮೇಲ್ಮಾಳಿಗೆಯ ಗರ್ಭಗುಡಿಯಲ್ಲೂ ಮೂರು ಕಡೆ ಕೋಷ್ಠಗಳುಂಟು. ಅದರ ಚಾವಣಿ ಉಳಿದಿಲ್ಲ. ಹಿಂದೆಯೂ ಅದರ ಮೇಲೆ ಶಿಖರವಿದ್ದುದಕ್ಕೆ ಸೂಚನೆಗಳಿಲ್ಲ. ಮಂಟಪದ ಕಂಬಗಳು ಚಚ್ಚೌಕ ಅಡ್ಡಕೊಯ್ತು ರೀತಿಯವು. ದ್ವಾರಬಂಧಗಳು ಸಾದಾ ರೀತಿಯವು. ಪ್ರದಕ್ಷಿಣಾಪಥದ ಹೊರಗೋಡೆಯಲ್ಲಿ ಅಲ್ಲಲ್ಲಿ ಜಾಲಂಧ್ರಗಳನ್ನು ಅಳವಡಿಸಲಾಗಿದೆ. ಚಾವಣಿ ಮಟ್ಟಸವಾಗಿದೆ. ಗರ್ಭಗೃಹದಲ್ಲಿ ಸಿಂಹಾಸನದ ಮೇಲೆ ಕುಳಿತ ತೀರ್ಥಂಕರ ವಿಗ್ರಹವಿದೆ. ಪ್ರದಕ್ಷಿಣಾಪಥದಲ್ಲಿ ಜೈನ ಯಕ್ಷಿಣಿಯ ಮೂರ್ತಿಯಿದೆ. ಇದು ಸುಜಾತಾ ಅಥವಾ ಅಂಬಿಕಾಮೂರ್ತಿ.

ದೇವಾಲಯದ ರಚನಾವಿನ್ಯಾಸ ಅಥವಾ ಅಲಂಕರಣದಲ್ಲಿ ಹೆಚ್ಚಿನ ವೈಶಿಷ್ಟ್ಯಗಳನ್ನು ಗುರುತಿಸಲಾಗದಿದ್ದರೂ ವಾಸ್ತುಶಿಲ್ಪ ಇತಿಹಾಸಕಾರರ ದೃಷ್ಟಿಯಲ್ಲಿ ಇದು ಮಹತ್ವದ ಕಟ್ಟಡ. ರಚನೆಯ ಕಾಲ ಖಚಿತವಾಗಿ ಗೊತ್ತಿರುವ ಬಾದಾಮಿಯ ಚಳುಕ್ಯರ ಕಾಲದ ದೇವಾಲಯಗಳು ಹೆಚ್ಚಿಲ್ಲ. ಇರುವವುಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದುದು. ದೇವಾಲಯದ ಅಂತರಾಳದ ಪೂರ್ವ ಹೊರಗೋಡೆಯಲ್ಲಿ ಅಳವಡಿಸಿರುವ ಕರಿಚಪ್ಪಡಿಯ ಮೇಲೆ ಕೆತ್ತಿರುವ ಒಂದು ಶಾಸನವೇ ಪ್ರಸಿದ್ಧ ಐಹೊಳೆ ಶಾಸನ. ಈ ದೇವಾಲಯ ಜಿನಮಂದಿರ. ಇಮ್ಮಡಿ ಪುಲಕೇಶಿಯ ಸಮೀಪವರ್ತಿಯಾಗಿದ್ದ ರವಿಕೀರ್ತಿ ಇದನ್ನು ಶಾ.ಶ.556ರಲ್ಲಿ (634-35) ರಚಿಸಿದ ಎಂದು ಈ ಶಾಸನ ತಿಳಿಸುತ್ತದೆ. ಬಾದಾಮಿಯ ಚಳುಕ್ಯವಂಶದ ಮತ್ತು ಇಮ್ಮಡಿ ಪುಲಕೇಶಿಯ ಸಾಧನೆಗಳ ವಿವರಗಳನ್ನೂ ಒಳಗೊಂಡಿರುವ ಈ ಶಾಸನ ಚಳುಕ್ಯ ಇತಿಹಾಸದ ರಚನೆಗೆ ಅಮೂಲ್ಯ ದಾಖಲೆಯೂ ಹೌದು. ಮೇಗುಟಿ ಬೆಟ್ಟದ ಮೇಲಿಂದ ಐಹೊಳೆಯ ದೇವಾಲಯ ಸಮೂಹಗಳ ಪಕ್ಷಿ ನೋಟ ದೊರಕುತ್ತದೆ. ಇಲ್ಲಿಂದ ಕಾಣುವ, ಬಳಸಿ ಸುತ್ತುವ ಮಲಪ್ರಭಾ ನದಿ, ದಿಗಂತದವರೆಗೆ ಹಬ್ಬುವ ಹಸುರು ಹೊಲಗಳ ಹರಹು. ಇವುಗಳದು ಸುಂದರ ದೃಶ್ಯ.

**ಜೈನ ಗುಹೆ :** ಮೇಗುಟಿ ಗುಡಿಯ ಆಗ್ನೇಯಕ್ಕೆ ಸು.400ಮೀ ದೂರ ದಲ್ಲಿ ಒಂದು ಚಿಕ್ಕ ಜೈನ ಗುಹಾದೇವಾಲಯವಿದೆ. ತಳವಿನ್ಯಾಸದಲ್ಲಿ ಇದು ರಾವಳ ಫಡಿಯನ್ನು ಹೋಲುತ್ತದೆ. ಮುಂದೆ ಒಂದು ಪಡಸಾಲೆ, ಅದರ ಹಿಂದೆ ಒಂದು ಮಂಟಪ, ಮಂಟಪದ ಹಿಂದೆ ಗರ್ಭಗುಡಿ, ಮಂಟಪದ ಎರಡೂ ಬದಿಯಲ್ಲಿ ಒಂದೊಂದು ಕೋಣೆ ಇವೆ. ಇಲ್ಲಿನ ಶಿಲ್ಪಗಳು ಕರ್ನಾಟಕದ ಅತಿ ಪ್ರಾಚೀನ ಜೈನ ಶಿಲ್ಪಗಳ ಸಾಲಿಗೆ ಸೇರಿದವು. ಪಡಸಾಲೆಯ ಎಡಗಡೆ ಆಳೆತ್ತರದ ಗೊಮ್ಮಟನ ಅತ್ಯುಬ್ಬು ಶಿಲ್ಪವಿದೆ. ಕಾಯೋತ್ಸರ್ಗ ಭಂಗಿಯಲ್ಲಿರುವ ಗೊಮ್ಮಟನ ಇಕ್ಕೆಲದಲ್ಲಿ ಅವನ ತಂಗಿಯರಾದ ಬ್ರಾಹ್ಮೀ ಮತ್ತು ಸುಂದರಿಯರು ಗೊಮ್ಮಟನ ಮೇಲೆ ಬೆಳೆದ ಮಾಧವೀಲತೆಗಳನ್ನು ಕೀಳುತ್ತಿರುವಂತೆ ತೋರಿಸಿರುವುದು ಈ ಶಿಲ್ಪದ ವೈಶಿಷ್ಟ್ಯ. ಎದುರು ಗೋಡೆಯ ಮೇಲೆ ಕಾಯೋತ್ಸರ್ಗ ಭಂಗಿಯಲ್ಲಿರುವ ಸುಪಾರ್ಶ್ವನಾಥನ ಶಿಲ್ಪವಿದೆ. ಗರ್ಭಗುಡಿಯಲ್ಲಿ ಪರ್ಯಂಕಾಸನದಲ್ಲಿರುವ ತೀರ್ಥಂಕರನ (ಮಹಾವೀರ) ಮೂರ್ತಿ ಇದೆ. ಮಂಟಪದ ಬಲ ಕೋಣೆಯಲ್ಲಿ ಗೋಡೆಗಳ ಮೇಲೆ ಪರ್ಯಂಕಾಸನದಲ್ಲಿರುವ ತೀರ್ಥಂಕರ ಮತ್ತು ಪರಿಚರ ವಿಗ್ರಹಗಳಿವೆ. ಎಡಕೋಣೆಯಲ್ಲಿ ವಿಗ್ರಹವಿಲ್ಲ. ಈ ಗೋಡೆಯ ಹತ್ತಿರ ಪ್ರಾಯಶಃ ಈ ಆಲಯಕ್ಕೆ ಭೇಟಿ ಕೊಟ್ಟ ಶ್ರೀ ಹಿರಿಯ, ವಿಕ್ರಮಪುತ್ರ ಮೊದಲಾದ ವ್ಯಕ್ತಿಗಳ ಹೆಸರುಗಳು 7ನೆಯ ಶತಮಾನದ ಅಕ್ಷರಗಳಲ್ಲಿವೆ.

**ಹುಚ್ಚಪ್ಪಯ್ಯನ ಗುಡಿ :** ಐಹೊಳೆಯ ಕೋಟೆಯ ದಕ್ಷಿಣಕ್ಕೆ ಮಲಪ್ರಭಾ ನದಿಯೆಡೆಗೆ ಹೊಲಗಳ ಮಧ್ಯೆ ಸಾಗುವ ಸುಮಾರು 1.5ಕಿಮೀ ಉದ್ದದ ರಸ್ತೆ ಇದೆ. ಇದರ ಬಲಬದಿಯಲ್ಲಿ ನದಿಯ ದಂಡೆಗುಂಟ ಅನೇಕ ದೇವಾಲಯಗಳಿವೆ. ಈ ಸಮೂಹದಲ್ಲಿ ಮೊದಲು ಸಿಗುವುದು ಹುಚ್ಚಪ್ಪಯ್ಯನ ಗುಡಿ. ಈ ಗುಡಿಯಲ್ಲಿ ಮುಖಮಂಟಪ, ಮಂಟಪ ಮತ್ತು ಗರ್ಭಗೃಹ ಇವೆ. ಅಧಿಷ್ಠಾನ ಪಟ್ಟಿಕೆಗಳ ಮೇಲೆ ನಿಂತಿರುವ ಭಿತ್ತಿಯಲ್ಲಿ ಕೆಲವು ಜಾಲಂಧ್ರಗಳುಂಟು. ಮೇಲೆ ಪಟ್ಟಿಕಪೋತ ಮತ್ತು ಮುಂಜೂರು ಇವೆ. ಗರ್ಭಗುಡಿಯ ಮೇಲೆ ರೇಖಾನಾಗರ ಶಿಖರವಿದೆ. ಮುಖಮಂಟಪ ಮತ್ತು ಒಳಮಂಟಪದ ಕಂಬಗಳು ಚೌಕ ರೀತಿಯವು, ದಪ್ಪವು. ವಾಸ್ತು ವಿನ್ಯಾಸಕ್ಕಿಂತಲೂ ಇಲ್ಲಿಯ ಶಿಲ್ಪಗಳು ಅಸಾಧಾರಣವಾದವು. ಮುಮ್ಮಂಟಪದ ಕಂಬಗಳ ಮೇಲೆ ಕಾಮಕೇಳಿನಿರತ ಅನುರಕ್ತ ದಂಪತಿಗಳ ವಿಗ್ರಹಗಳಿವೆ. ಇವುಗಳಲ್ಲಿ ಕಂಡುಬರುವ ಸಂದರ್ಭಸಹಜ ತಲ್ಲೀನತೆ, ಆನಂದಭಾವ ಇವುಗಳ ನಿರೂಪಣೆಯ ಸೊಗಸನ್ನು ನೋಡಿಯೇ ಆನಂದಿಸಬೇಕು. ಈ ಕಂಬಗಳ ಮೇಲೆ ಶಂಖನಿಧಿ ಪದ್ಮನಿಧಿಗಳ ಶಿಲ್ಪಗಳೂ ಇವೆ. ಛತ್ತಿನಲ್ಲಿ ನಟರಾಜ ವಿಗ್ರಹವಿದೆ. ಮುಖಮಂಟಪದಿಂದ ಒಳಹೋಗುವ ದ್ವಾರದ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರನ್ನೂ ಪಕ್ಕದಲ್ಲಿ ರಸಿಕ ದಂಪತಿಗಳ ವಿಗ್ರಹಗಳನ್ನೂ ಕಾಣಬಹುದು. ಗರ್ಭಗುಡಿಯ ದ್ವಾರದ ಪಕ್ಕಗಳಲ್ಲೂ ಶೈವ ದ್ವಾರಪಾಲಕ ವಿಗ್ರಹಗಳಿವೆ. ಗಣೇಶ ಮತ್ತು ಮಹಿಷಮರ್ದಿನಿ ಒಂದೊಂದು ಪಕ್ಕಗಳಲ್ಲಿವೆ. ಮಧ್ಯದ ಮಂಟಪದ ಛತ್ತಿನಲ್ಲಿ ಅಷ್ಟದಿಕ್ಪಾಲಕರ ವಿಗ್ರಹಗಳುಂಟು (ಮಧ್ಯದ ಮಾಡಿನಲ್ಲಿ ತ್ರಿಮೂರ್ತಿಗಳ ಶಿಲ್ಪಗಳಿದ್ದುವು. ಈಗ ಅವು ಮುಂಬಯಿ ವಸ್ತು ಸಂಗ್ರಹಾಲಯದಲ್ಲಿವೆ). ಗರ್ಭ ಗುಡಿಯ ಹೊರ ಗೋಡೆಗಳ ಮೇಲೆ ಮೂರು ಕಡೆ ಒಂದೊಂದು ಕೋಷ್ಠಗಳಿವೆ. ಪಶ್ಚಿಮದಲ್ಲಿ ನರಸಿಂಹ, ಉತ್ತರದಲ್ಲಿ ಗಜಾಸುರ ಸಂಹಾರ ಮೂರ್ತಿಯ ಶಿಲ್ಪಗಳಿವೆ. ದಕ್ಷಿಣದ್ದು ಈಗ ಖಾಲಿ ಇದೆ. ಹುಚ್ಚಪಯ್ಯನ ಗುಡಿ ಶಿವಾಲಯ. ಇದರ ಗರ್ಭಗುಡಿಯಲ್ಲಿ ಲಿಂಗವಿದೆ. ಈ ದೇವಾಲಯ ಸು.8ನೆಯ ಶತಮಾನದ ರಚನೆ. ಈ ದೇವಾಲಯದಲ್ಲಿ ಅದೇ ಕಾಲದ ಎರಡು ಶಾಸನಗಳಿವೆ. ಅವುಗಳಲ್ಲಿ ಒಂದು ಶಾಸನ ವಾಸ್ತು ಪ್ರಾಸಾದಗಳನ್ನು ಕಟ್ಟಬಲ್ಲ ಇಂಥ'ವನು ಜಂಬೂದ್ವೀಪದಲ್ಲಿ ಹಿಂದೆ ಆಗಿಲ್ಲ, ಮುಂದೆ ಆಗುವುದಿಲ್ಲ, ಎಂದು ನರಸೊಬ್ಬನೆಂಬ ಒಬ್ಬ ಶಿಲ್ಪಿಯನ್ನು ಹೊಗಳುತ್ತದೆ. ಇನ್ನೊಂದು ಶಾಸನದಲ್ಲಿ ಗನಸೊಬ್ಬ ಎಂಬ ಶಿಲ್ಪಿಯ ಹೆಸರಿದೆ. ಇವರಿಬ್ಬರೂ ಈ ದೇವಾಲಯದ ರಚನೆ ಮಾಡಿದವರಿರಬೇಕು.

**ಗಳಗನಾಥ ಗುಡಿಗಳ ಗುಂಪು :** ಹುಚ್ಚಪ್ಪಯ್ಯನ ಗುಡಿಯಿಂದ ಮತ್ತಷ್ಟು ದಕ್ಷಿಣಕ್ಕೆ ನದಿಯ ದಂಡೆಯ ಮೇಲೆಯೇ ಗಳಗನಾಥ ಗುಡಿಗಳ ಗುಂಪು ಇದೆ. ಇದರಲ್ಲಿ ಒಟ್ಟು ಸು.38 ಚಿಕ್ಕ ಗುಡಿಗಳಿವೆ. ಈ ಗುಂಪಿನ ಗುಡಿಗಳಿಗೆ ಹೋಗುವ ಮೊದಲು ಒಂದು ಕಲ್ಲುತೋರಣವಿದೆ. ತೋರಣದ ಕಂಬಗಳು ಹಾಗೂ ಮೇಲಿನ ಅಡ್ಡತೊಲೆಯ ಮೇಲೆ ಸೂಕ್ಷ್ಮವಾದ ಕೆತ್ತನೆಗಳಿವೆ. ಸಮೀಪದಲ್ಲಿ 966ರ ಒಂದು ಶಾಸನದಲ್ಲಿ ಮೋನಿಭಟಾರರ ಗುಹೆ ಎಂದು ಹೆಸರಿಸಲಾಗಿರುವ ಒಂದು ಸಣ್ಣ ಗುಹೆಯುಂಟು. ಈ ಗುಂಪಿನ ಹಲವು ಗುಡಿಗಳು ಶಿಥಿಲವಾಗಿವೆ. ಆದರೆ ಗಳಗನಾಥನ ಗುಡಿ ಚೆನ್ನಾಗಿ ಉಳಿದಿರುವ ಕಟ್ಟಡ. ಗರ್ಭಗುಡಿ, ಅಂತರಾಳ ಮತ್ತು ಮಂಟಪವಿರುವ ಈ ಗುಡಿ ಪೂರ್ವಾಭಿಮುಖವಾಗಿದೆ. ಮಂಟಪಕ್ಕೆ ಪೂರ್ವ, ದಕ್ಷಿಣ ಮತ್ತು ಉತ್ತರಗಳಲ್ಲಿ ಪ್ರವೇಶದ್ವಾರಗಳಿವೆ. ಮಂಟಪ ವಿಶಾಲವಾಗಿದೆ. ಮಧ್ಯದಲ್ಲಿರುವ ನಾಲ್ಕು ಕಂಬಗಳು ಛತ್ತನ್ನು ಎತ್ತಿ ಹಿಡಿದಿವೆ. ಗರ್ಭಗುಡಿಯ ಚೌಕಟ್ಟಿನ ಮೇಲೆ ಹಾವುಗಳನ್ನು ಹಿಡಿದಿರುವ ಗರುಡ ಶಿಲ್ಪವಿದೆ. ಒಳಗೆ ಗಳಗನಾಥ' ಲಿಂಗವಿದೆ. ಮಂಟಪದಲ್ಲಿ ಸಪ್ತಮಾತೃಕೆಯರಿರುವ ಒಂದು ಕಲ್ಲು ಪಟ್ಟಿಕೆ ಇಟ್ಟಿದೆ. ಮಂಟಪದ ಛತ್ತಿನಲ್ಲಿ ಬ್ರಹ್ಮ ಶಿಲ್ಪವಿದೆ. ಗುಡಿ ರೇಖಾನಾಗರ ಶಿಖರದಿಂದ ಅಲಂಕೃತವಾದದ್ದು. ಅದರ ಮುಂಚಾಚುವಿನಲ್ಲಿ ವಿಷ್ಣುವಿನ ವಿಗ್ರಹ ವಿರುವುದರಿಂದ ಇದು ಮೂಲತಃ ವಿಷ್ಣು ದೇವಾಲಯವಾಗಿದ್ದಂತೆ ತೋರುತ್ತದೆ. ದೇವಾಲಯ ಸು.8ನೆಯ ಶತಮಾನದ್ದು.

ಪಶ್ಚಿಮಕ್ಕೆ ಮುಖ ಮಾಡಿರುವ ಸು.10ನೆಯ ಶತಮಾನದ ತ್ರಿಕೂಟಾಚಲವೊಂದು ಇದೇ ಗುಂಪಿನಲ್ಲಿದೆ. ನದಿಯ ಹತ್ತಿರದಲ್ಲೇ ಇರುವ ಈ ಗುಡಿಯ ಮುಂದೆ ಒಂದು ಸುಂದರವಾದ ಮಕರದ ಶಿಲ್ಪವನ್ನು ಇಟ್ಟಿದೆ. ಈ ಗುಂಪಿನ ಇನ್ನೊಂದು ದೇವಾಲಯದಲ್ಲಿ ಭಗ್ನವಾದ ಕಾರ್ತಿಕೇಯ ವಿಗ್ರಹವಿದೆ.

**ಏಣಿಯರ್ ಗುಡಿಗಳ ಗುಂಪು :** ನದಿಯ ದಂಡೆಯಲ್ಲೇ ಮತ್ತಷ್ಟು ದಕ್ಷಿಣಕ್ಕೆ ಈ ಗುಂಪಿದೆ. ಈ ಗುಂಪಿನಲ್ಲಿ ಎಂಟು ದೇವಾಲಯಗಳಿವೆ. ಎಲ್ಲಾ 11-12ನೆಯ ಶತಮಾನಗಳ ಕಟ್ಟಡಗಳು. ಇವುಗಳಲ್ಲಿ ಸಾಮಾನ್ಯವಾಗಿ ಗರ್ಭಗುಡಿ, ಮಂಟಪ, ಮುಖಮಂಟಪ ಇರುತ್ತವೆ. ಚೌಕತಳದ ದುಂಡು ಯಷ್ಟಿಯ ಕಂಬಗಳೂ ಕಕ್ಷಾಸನಗಳೂ ಕಾಣುತ್ತವೆ. ಒಂದು ದೇವಾಲಯ ತ್ರಿಕೂಟಾಚಲ ಇನ್ನೊಂದು ಗುಡಿಯ ಬಳಿ ಒಂದು ಬಾವಿಯೆಡೆಗೆ ಹೋಗುವ ಮಾರ್ಗವಾಗಿ ಒಂದು ತೋರಣವಿದೆ. ಅದರ ಮುಂಭಾಗದಲ್ಲಿ ಸಿಂಹ ಮತ್ತು ತ್ರಿಮೂರ್ತಿಗಳನ್ನು ಕೆತ್ತಲಾಗಿದೆ.

**ರಾಮಲಿಂಗ ಗುಡಿಗಳ ಗುಂಪು :** ಮೇಲಿನ ಗುಂಪಿನಿಂದ ಮತ್ತಷ್ಟು ದಕ್ಷಿಣಕ್ಕೆ ನಡೆದರೆ ರಾಮಲಿಂಗ ದೇವಾಲಯಗಳ ಗುಂಪು ಸಿಗುತ್ತದೆ. ಇವುಗಳಲ್ಲಿ ಮುಖ್ಯವಾದುದು ರಾಮಲಿಂಗ ದೇವಸ್ಥಾನ. ಇದು 11ನೆಯ ಶತಮಾನದ ತ್ರಿಕೂಟಾಚಲ. ಮಧ್ಯದ ಗರ್ಭಗುಡಿಯಲ್ಲಿ ರಾಮಲಿಂಗ ಎಂಬ ಹೆಸರಿನ ಲಿಂಗ, ಬಲಗಡೆಯ ಗರ್ಭಗುಡಿಯಲ್ಲಿ ಸಿದ್ಧೇಶ್ವರ ಲಿಂಗ ಇವೆ. ಇದರ ಜೊತೆಯಲ್ಲೇ ಒಂದು ಉಮಾಮಹೇಶ್ವರ ಮೂರ್ತಿ ಇದೆ.

ಎಡಗಡೆಯ ಗರ್ಭಗುಡಿಯಲ್ಲಿರುವ, ಈಗ ಪಾರ್ವತಿ ಎಂದು ಕರೆಯುವ, ಸ್ತ್ರೀದೇವತೆ ಜೈನ ಯಕ್ಷಿಣಿಯದು. ಇದನ್ನು ಕಾಲಾಂತರದಲ್ಲಿ ಎಲ್ಲಿಂದಲೋ ತಂದು ಇಲ್ಲಿ ಪ್ರತಿಷ್ಠಾಪಿಸಿದಂತೆ ತೋರುತ್ತದೆ. ಈ ಗರ್ಭಗುಡಿಗಳು ತೆರೆದುಕೊಳ್ಳುವ ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಮುಖ ಮಂಟಪದಲ್ಲಿ ಸುತ್ತಲೂ ಕಕ್ಷಾಸನಗಳಿವೆ. ಈಗ ಎರಡು ಗರ್ಭಗೃಹಗಳಿಗೆ ಮಾತ್ರ ಶಿಖರಗಳುಂಟು. ಇವು ಕದಂಬನಾಗರ ರೀತಿಯವು. ಈ ಗುಡಿ ಪಶ್ಚಿಮಾಭಿಮುಖವಾಗಿದೆ.

ಇದರ ಎದುರು ಪೂರ್ವಾಭಿಮುಖವಾಗಿರುವ ಗುಡಿ ವಿಷ್ಣು ದೇವಾಲಯ. ಗರ್ಭಗುಡಿ ಮತ್ತು ಮಂಟಪ ಮಾತ್ರವಿರುವ ಈ ದೇವಾಲಯವೂ 11ನೆಯ ಶತಮಾನದ್ದು. ಗರ್ಭಗುಡಿಯಲ್ಲಿ ವಿಷ್ಣುವಿಗ್ರಹವೂ ಗುಡಿಯ ಆವರಣದಲ್ಲಿ ಮಹಿಷಮರ್ದಿನಿ, ಸೂರ್ಯ, ಗಣಪತಿ ಮೊದಲಾದ ವಿಗ್ರಹಗಳೂ ಇವೆ.

ಇದೇ ಗುಂಪಿನಲ್ಲಿರುವ ಇನ್ನೊಂದು ದೇವಾಲಯ ಬ್ರಹ್ಮನದು. ಅಲ್ಲದೆ ಸಂಗಮನಾಥನದೆನ್ನುವ 12ನೆಯ ಶತಮಾನದ ಮತ್ತೊಂದು ದೇವಾಲಯವೂ ಇಲ್ಲಿದೆ. ಇದರ ಬಳಿ ರಾಮಲಿಂಗನ ಗುಡಿಯ ತೇರನ್ನು ನಿಲ್ಲಿಸುವ ಒಂದು ಆಧುನಿಕ ಕಟ್ಟಡವುಂಟು.

ರಾಮಲಿಂಗನ ಗುಡಿಯಿಂದ ನದಿಗೆ ಇಳಿಯಲು ಪಾವಟಿಗೆಗಳುಂಟು. ಅಲ್ಲಿ ಒಂದೆಡೆ ಒಂದು ಕೊಡಲಿಯ ಶಿಲ್ಪವಿದೆ. ಅದರ ಸಮೀಪದಲ್ಲೆ ಒಂದು ಚಿಕ್ಕ ಗುಡಿಯಲ್ಲಿ ಪರಶುರಾಮನ ಮೂರ್ತಿ ಇದೆ.

ಐಹೊಳೆಯ ಬಹುತೇಕ ಗುಡಿಗಳು ಇಂದು ಪಾಳುದೇಗುಲಗಳು. ಆದರೆ ರಾಮಲಿಂಗ ದೇವಾಲಯದಲ್ಲಿ ಪೂಜೆ ನಡೆಯುತ್ತದೆ. ಇಲ್ಲಿ ವರ್ಷಂಪ್ರತಿ ಫಾಲ್ಗುಣ ಶು.7ರಂದು ಜಾತ್ರೆ ನಡೆಯುತ್ತದೆ. ಹಮ್ಮೀರರಾಯ (ಅಂಬಿಗೇರ) ಕ್ಷತ್ರಿಯ ಮನೆತನದವರು ಆ ದಿವಸ ತೇರು ಎಳೆಯುವ ವ್ಯವಸ್ಥೆ ಮಾಡುವ ಸಂಪ್ರದಾಯವುಂಟು.

ಉಚ್ಚಮಟ್ಟದ ಶಿಲ್ಪಗಳಿಂದ ಅಲಂಕೃತವಾದ ಐಹೊಳೆಯ ನೂರಾರು ದೇವಾಲಯಗಳು ಕಲಾವಿಲಾಸಿಗಳಿಗೆ ಪ್ರಮುಖ ಆಕರ್ಷಣೆ. ಈ ದೇವಾಲಯಗಳು ಅವುಗಳ ಸೌಂದರ್ಯಕ್ಕಷ್ಟೇ ಅಲ್ಲದೆ, ದಕ್ಷಿಣ ಭಾರತದ ಶಿಲಾದೇವಾಲಯಗಳ ರಚನೆಯ ಸಂಪ್ರದಾಯದ ಉಗಮ ಮತ್ತು ವಿಕಾಸದ ಬಗ್ಗೆ ಬಹಳಷ್ಟು ಬೆಳಕು ಚೆಲ್ಲುವಂಥವು. ಒಂದು ದೃಷ್ಟಿಯಲ್ಲಿ ಐಹೊಳೆ ಶಿಲಾ ವಾಸ್ತುಸಂಪ್ರದಾಯದ ಪ್ರಯೋಗಶಾಲೆ. ಇಲ್ಲಿ ರೂಪಿತವಾದ ವಾಸ್ತುಶಿಲ್ಪ ವಿನ್ಯಾಸಗಳು ಕರ್ನಾಟಕದಲ್ಲಷ್ಟೇ ಅಲ್ಲದೆ ಭಾರತ ಮತ್ತು ಇತರ ಕಡೆಗಳಲ್ಲಿ ಸಹ ರಚಿತವಾದ ಮುಂದಿನ ದೇವಾಲಯಗಳಿಗೆ ಮಾದರಿಯನ್ನೋ ಸ್ಫೂರ್ತಿಯನ್ನೋ ಒದಗಿಸಿದುವು. ಬಾದಾಮಿ ಚಳುಕ್ಯ ಕಾಲದ ವಾಸ್ತು ಕಲಾಬೆಳೆವಣಿಗೆಯನ್ನು ಐಹೊಳೆಯಲ್ಲಿ ಸುಲಭವಾಗಿ ಗುರುತಿಸಬಹುದು (ನೋಡಿ: ಚಾಳುಕ್ಯ ವಂಶ ಲೇಖನದಲ್ಲಿ ಬಾದಾಮಿಯ ಚಳುಕ್ಯರು- ಶಿಲ್ಪ). ಇಂದು ಇಲ್ಲಿನ ಹೆಚ್ಚಿನ ದೇವಾಲಯಗಳು ರಾಷ್ಟ್ರೀಯ ಸ್ಮಾರಕಗಳೆಂದು ಪರಗಣಿತವಾಗಿ ಕೇಂದ್ರ ಸರ್ಕಾರದ ಪುರಾತತ್ತ್ವ ಇಲಾಖೆಯ ಆಡಳಿತಕ್ಕೊಳಪಟ್ಟಿವೆ. ಇವುಗಳನ್ನು ಸುಸ್ಥಿತಿಯಲ್ಲಿ ಕಾಪಾಡುವ ಮತ್ತು ಸ್ಥಳದ ಸೌಂದರ್ಯ ಸೌಕರ್ಯಗಳನ್ನು ಹೆಚ್ಚಿಸಿ ಉತ್ತಮ ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಕಾರ್ಯಗಳು ಸಾಗುತ್ತಿವೆ. *

# ಒ

**ಒಕ್ಕಲಿಗರ ಪತ್ರಿಕೆ :** ಬೆಂಗಳೂರಿನಲ್ಲಿ 1906ರಲ್ಲಿ ಸ್ಥಾಪಿತವಾದ ಒಕ್ಕಲಿಗರ ಸಂಘದ ಮುಖಪತ್ರ, ವಾರಪತ್ರಿಕೆ. ಸಂಘದ ಧ್ಯೇಯೋದ್ದೇಶಗಳನ್ನು ಸಾಧಿಸಲು ಸಹಾಯಕವಾಗುವಂತೆ ಅದರ ಆಶ್ರಯದಲ್ಲಿ 1907 ಮಾರ್ಚ್ 15ರಂದು ಶುಕ್ರವಾರ ಯುಗಾದಿ ಹಬ್ಬದ ದಿನ ಈ ಪತ್ರಿಕೆಯ ಪ್ರಕಟಣೆ ಆರಂಭವಾಯಿತು. ಆಗ ಇದರ ಕೇಂದ್ರ ಕಛೇರಿ ಅರಳೇಪೇಟೆಯಲ್ಲಿತ್ತು. ಬೆಂಗಳೂರು ಕೋಟೆ ಪ್ರದೇಶದಲ್ಲಿದ್ದ, ಆಗಿನ ಕಾಲಕ್ಕೆ ಸ್ಟ್ಯಾಂಡರ್ಡ್ ಮತ್ತು ನುಡಿಗನ್ನಡಿ ಎಂಬ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದ ಶ್ರೀನಿವಾಸ ಅಯ್ಯಂಗಾರ್ ಎಂಬವರ ಮುದ್ರಣಾಲಯದಲ್ಲಿ ಇದು ಅಚ್ಚಾಗುತ್ತಿತ್ತು. ಆಗ ಬೆಂಗಳೂರಿನಲ್ಲಿ ಗಣ್ಯ ವಕೀಲರಾಗಿದ್ದ ಸಿ.ಲಕ್ಷ್ಮಣಗೌಡ ಈ ಪತ್ರಿಕೆಯ ಪ್ರಥಮ ಸಂಪಾದಕರು. ಮೊದಲನೆಯ ಸಂಚಿಕೆಯ ಸಂಪಾದಕೀಯದಲ್ಲಿ ಈ ಪತ್ರಿಕೆಯ ಧ್ಯೇಯಧೋರಣೆಗಳನ್ನು ಕುರಿತು ಹೀಗೆ ಪ್ರಸ್ತಾವಿಸಿದ್ದಾರೆ. ವರ್ತಮಾನಪತ್ರಿಕೆಗಳು ಯಾವ ದೇಶದಲ್ಲಿ ಹೆಚ್ಚುತ್ತ ಬರುತ್ತವೋ ಆ ದೇಶ ನವನಾಗರಿಕತೆಯಲ್ಲಿ ಉನ್ನತಸ್ಥಿತಿಗೆ ಬರುವುದು. ಜಪಾನ್ ದೇಶದಲ್ಲಿ ವೃತ್ತಪತ್ರಿಕೆಗಳು ದಿನದಿನಕ್ಕೆ ಹೆಚ್ಚಾದ ಕಾರಣ ಕೇವಲ 50 ವರ್ಷಗಳೊಳಗಾಗಿ ಜಪಾನ್ ದೇಶೀಯರು ಪ್ರಪಂಚದ ಪ್ರಮುಖ ದೇಶೀಯರೊಳಗೆ ತಾವೂ ಪ್ರಮುಖರಾಗಿ ಪ್ರಖ್ಯಾತಿ ಪಡೆದಿರುತ್ತಾರೆ. ಯಾವ ಜನರ ಕ್ಷೇಮವನ್ನು ಈ ಪತ್ರಿಕೆ ಮುಖ್ಯವಾಗಿ ಉದ್ದೇಶಿಸಿರುವುದೋ ಅವರ ಪುರೋಭಿವೃದ್ಧಿಯಿಂದ ದೇಶಕ್ಕೆ ಔನ್ನತ್ಯವುಂಟಾಗುವುದರಲ್ಲಿ ಸಂದೇಹವಿಲ್ಲ ಪಂಡಿತ ಪಾಮರರು, ಹಳ್ಳಿಗರು-ಪಟ್ಟಣಿಗರ ಮಧ್ಯೆ ಅನ್ಯೋನ್ಯತೆ ಬೆಳೆಯುವುದು ದೇಶದ ಅಭಿವೃದ್ಧಿಗೆ ಅತ್ಯಂತ ಸಹಕಾರಿಯಾಗುವುದು ದೇಶೋನ್ನತಿಗೆ ಕಾರಣ ಭೂತವಾದ ಏರ್ಪಾಡುಗಳನ್ನು ಮಾಡಿಕೊಳ್ಳಬೇಕಾದರೆ 'ಇಂಥ' ಅನ್ಯೋನ್ಯತೆ ಅತ್ಯಾವಶ್ಯಕವಾಗಿರುತ್ತದೆ. ಐಕಮತ್ಯಕ್ಕೆ ನ್ಯೂನತೆ ಉಂಟಾಗದಂತೆ ಪ್ರಯತ್ನ ಪಡಬೇಕೆಂಬುವುದು ತಮ್ಮ ಉದ್ದೇಶ. ತಮ್ಮ ಈ ಪ್ರಯತ್ನದಲ್ಲಿ "ಸರ್ವರೂ ಚೈತನ್ಯ ಕೊಟ್ಟು ಇದನ್ನು ಅಭಿವೃದ್ಧಿಪಡಿಸತಕ್ಕ ರೀತಿಗಳನ್ನು ತೋರಿಸಿಕೊಡುತ್ತ ಬರುವರೆಂದು ದೃಢವಾಗಿ ನಂಬಿದ್ದೇವೆ".

ಈ ಪತ್ರಿಕೆಯಲ್ಲಿ ಅನೇಕ ವಿಷಯಗಳನ್ನು ಕುರಿತು ಬಗೆಬಗೆಯ ಉತ್ತಮ ಲೇಖನಗಳಲ್ಲದೆ ಒಳದೇಶದ ವೃತ್ತಾಂತ, ವರ್ತಮಾನ ಸಂಗ್ರಹ, ಮೈಸೂರು ಗೆಜೆಟ್, ಇಂಡಿಯ ದೇಶದ ವೃತ್ತಾಂತ, ಸರ್ಕಾರಿ ಹುಕುಂಗಳು ಎಂಬ ಶಿರೋನಾಮೆಗಳಲ್ಲಿ ಎಲ್ಲ ಕಡೆಗಳ ಮುಖ್ಯ ವಾರ್ತೆಗಳು ಪ್ರಕಟವಾಗುತ್ತಿದ್ದುವು. ಮೊದಲನೆಯ ಸಂಚಿಕೆಯಲ್ಲಿ ಪ್ರಕಟವಾದ ದವಸದ ಬ್ಯಾಂಕುಗಳು ಎಂಬ ಲೇಖನದ ಒಂದು ವಾಕ್ಯ ಹೀಗಿದೆ: "ಗ್ರಾಮಸ್ಥರಿಗೆ ಸಾಧ್ಯವಾದ ಮಟ್ಟಿಗೂ ಬ್ಯಾಂಕುಗಳಿಂದಾಗುವ ಪ್ರಯೋಜನಗಳನ್ನು ಹೇಳಿ, ಅವರನ್ನು ಪರಸ್ಪರ ಸಹಾಯಕರನ್ನಾಗಿ ಮಾಡಿ, ಹಣಕ್ಕೆ ಬದಲಾಗಿ ದವಸವನ್ನು ಬಂಡವಾಳಕ್ಕೆ ಕೊಡುವಂತೆ ಬೋಧಿಸಿದರೆ ಸಾರ್ಥಕವಾಗುತ್ತದೆಂದು ತಿಳಿದು ನಮ್ಮ ಘನ ಸರ್ಕಾರದವರು ಗ್ರಾಮಗಳಲ್ಲಿ ದವಸದ ಬ್ಯಾಂಕುಗಳನ್ನು ಏರ್ಪಡಿಸುತ್ತಿದ್ದಾರೆ". ಸರಳ, ನೇರ ನಿರೂಪಣೆ, ವಸ್ತುನಿಷ್ಠಾತ್ಮಕ ವಿವೇಚನೆ, ಸಾಮಾನ್ಯನ ಹಿತದೃಷ್ಟಿಯ ಪ್ರತಿಪಾದನೆ - ಇವುಗಳಿಗೆ ಈ ಪತ್ರಿಕೆಯ ಲೇಖನಗಳು ಹೆಸರಾಗಿದ್ದವು. ಸಿ.ಲಕ್ಷ್ಮಣಗೌಡರ ಅನಂತರದಲ್ಲಿ ಬಿ.ಪುಟ್ಟಯ್ಯ, ಎಸ್.ವಿ.ವೆಂಕಟರಾಮಯ್ಯ, ಎಚ್.ಗಿರಿಯಪ್ಪ ಗೌಡ, ಎಂ.ಸುಬ್ಬಯ್ಯ, ಬಿ.ಹನುಮಂತಯ್ಯಗೌಡ, ಎಚ್.ಕೆ.ವೀರಣ್ಣ ಗೌಡ(1927-28), ಬಿ.ಪುಟ್ಟಸ್ವಾಮಯ್ಯ, ಬಿ.ಆರ್.ನರಸಿಂಹಯ್ಯ, ಡಿ.ಆರ್.ರಾಮಯ್ಯ (1932-33), ಬಿ.ಸಿ.ಹನುಮಂತಯ್ಯ (ಎರಡು ಬಾರಿ), ಸಿ.ಆರ್.ಕಾಮತ್,ಕೆ.ಪಿ.ಮುದ್ದಪ್ಪ,ಎಂ.ಶಂಕರಲಿಂಗೇಗೌಡ, ಎನ್.ಸಿ.ಅಣ್ಣಯ್ಯ, ಎಂ.ಕೆ.ತಿಮ್ಮೇಶಪ್ರಭು - ಇವರು ಈ ಪತ್ರಿಕೆಯ ಸಂಪಾದಕರಾಗಿದ್ದರು. ಈ ಪತ್ರಿಕೆ 1923ರಲ್ಲಿ ಒಕ್ಕಲಿಗರ ಸಂಘ ವಿಶ್ವೇಶ್ವರಪುರದಲ್ಲಿ ಸ್ಥಾಪಿಸಿದ ಸ್ವಂತ ಮುದ್ರಣಾಲದಲ್ಲಿ ಅಚ್ಚಾಗುತ್ತಿತ್ತು. ಪತ್ರಿಕೆ ನಿಲ್ಲುವವರೆಗೆ ಇದೇ ಮುದ್ರಣಾಲಯದಲ್ಲಿ ಅಚ್ಚಾಗುತ್ತಿತ್ತು. ಈ ಪತ್ರಿಕೆಯ ಬೆಳೆವಣಿಗೆಯಲ್ಲಿ ಎಚ್.ಕೆ.ವೀರಣ್ಣಗೌಡ ಹಾಗೂ ಡಿ.ಆರ್.ರಾಮಯ್ಯನವರು ಅಪಾರವಾಗಿ

ಶ್ರಮಿಸಿದ್ದರು. ಎಚ್.ಕೆ.ವೀರಣ್ಣಗೌಡರು ಈ ಪತ್ರಿಕೆಯ ಸಂಪಾದಕರಾಗಿದ್ದಾಗ ಬರೆಯುತ್ತಿದ್ದ ಬೀದಿಮಾತು ಎಂಬ ಲೇಖನಮಾಲೆ ಅಪಾರ ಜನಪ್ರಿಯತೆ ಗಳಿಸಿತ್ತಲ್ಲದೆ ಈ ಲೇಖನಮಾಲೆಯ ಟೀಕೆ ಟಿಪ್ಪಣಿಗಳು ಆ ಕಾಲಕ್ಕೆ ಅಲ್ಲೋಲ ಕಲ್ಲೋಲವುಂಟುಮಾಡಿದ್ದವು. ಇವರು ವಾರ್ಷಿಕ ಸಂಚಿಕೆಯೊಂದನ್ನು ಸಂಪಾದಿಸಿ ಪ್ರಕಟಿಸಿದ್ದರು (1928). ಆ ಕಾಲಕ್ಕೆ ವಾರಪತ್ರಿಕೆಗಳಲ್ಲಿ ವಾರ್ಷಿಕ ಸಂಚಿಕೆ ಪ್ರಕಟಿಸಿದ ಕನ್ನಡದ ಮೊದಲ ಪತ್ರಿಕೆಯಿದು. ಈ ವಾರ್ಷಿಕ ಸಂಚಿಕೆಯಲ್ಲಿ ಕುವೆಂಪು, ಪಂಡಿತ ತಾರಾನಾಥ್, ಡಿ.ಕೆ.ಭಾರದ್ವಾಜ, ತೀ.ನಂ.ಶ್ರೀಕಂಠಯ್ಯ, ದೇವುಡು ನಹಸಿಂಹಶಾಸ್ತ್ರಿ, ತಿ.ತಾ.ಶರ್ಮ ಮೊದಲಾದ ಪ್ರಸಿದ್ಧ ಬರೆಹಗಾರರ ಲೇಖನಗಳೂ ಭಾವಚಿತ್ರಗಳೂ ಪ್ರಕಟವಾಗಿದ್ದವು. ಸು.65 ವರ್ಷಗಳ ಕಾಲ ಪ್ರಕಟವಾಗಿ 1972 ಫೆಬ್ರವರಿ 6ರಂದು ಪತ್ರಿಕೆ ತನ್ನ ಪ್ರಕಟಣೆಯನ್ನು ನಿಲ್ಲಿಸಿತು. *

**ಒಕ್ಕಲೇರಿ :** ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಒಂದು ಸ್ಥಳ, ಹೋಬಳಿ ಕೇಂದ್ರ. ಕೋಲಾರ ಮಾಲೂರು ಮಾರ್ಗದಲ್ಲಿ ಮಾಲೂರಿಗೆ 13ಕಿಮೀ ದೂರದಲ್ಲಿದೆ. ಈ ಊರಿನಿಂದ ಸು.3ಕಿಮೀ ದೂರದ ಒಕ್ಕಲೇರಿ ಬೆಟ್ಟದಲ್ಲಿರುವ ಮಾರ್ಕಂಡೇಶ್ವರ ದೇವಾಲಯ ಅತ್ಯಂತ ಪ್ರಾಚೀನವಾದದ್ದು. ವಾಸ್ತುಶಿಲ್ಪದ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಪಡೆದಿದೆ. ಬೆಟ್ಟಕ್ಕೆ ಹೋಗಲು ಕಾಲುದಾರಿ ಹಾಗೂ ವಾಹನ ದಾರಿಗಳಿವೆ. ಈ ದೇವಾಲಯದ ಸಮೀಪದಲ್ಲಿ ಮೃಕಣ್ಡು ಮುನಿಯ ಆಶ್ರಮವಿತ್ತೆಂಬ ಪ್ರತೀತಿಯಿದೆ.

ಮಾರ್ಕಂಡೇಯ ದೇವಾಲಯದಲ್ಲಿ ಶಿವಲಿಂಗವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಈ ಕಂಬಗಳ ನಾಲ್ಕೂ ಮುಖಗಳಲ್ಲಿ ದೇವತೆಗಳ ಸುಂದರ ಚಿತ್ರಗಳನ್ನು ಬಿಡಿಸಲಾಗಿದೆ. ಹಂಸ, ಗಂಡಭೇರುಂಡ, ಗಣಪತಿ, ಮತ್ಸ್ಯಾವತಾರ, ಗಜೇಂದ್ರಮೋಕ್ಷ, ನರಸಿಂಹ, ಆಂಜನೇಯ, ಶಂಖಚಕ್ರಧಾರಿ ವಿಷ್ಣುವಿನ ಚಿತ್ರಗಳು ಮನಸೆಳೆಯುತ್ತವೆ. ನವರಂಗದ ಮಧ್ಯದಲ್ಲಿ ಯೋಗನಂದಿಯ ವಿಗ್ರಹವಿದೆ. ಈ ದೇವಾಲಯದ ಸುತ್ತ ಉತ್ತರ ದಿಕ್ಕಿನಿಂದ ವೀರಭದ್ರೇಶ್ವರ, ಸಪ್ತಮಾತೃಕೆಯರು, ಗಣಪತಿ, ಸುಬ್ರಹ್ಮಣ್ಯ, ಚಂಡಿಕೇಶ್ವರ, ವೆಂಕಟೇಶ್ವರ, ಭೈರವೇಶ್ವರ ಮೂರ್ತಿಗಳುಳ್ಳ ಚಿಕ್ಕ ಗುಡಿಗಳಿವೆ. ವೀರಭದ್ರೇಶ್ವರನ ಗುಡಿಯ ಮುಂಭಾಗದಲ್ಲಿರುವ ವಸಂತ ಮಂಟಪ ಸುಂದರ ಚಿತ್ರಗಳ ಕೆತ್ತನೆಯಿಂದ ನೋಡುಗರ ಮನ ಸೆಳೆಯುತ್ತದೆ. ದೇವಾಲಯದ ಮುಂಭಾಗದಲ್ಲಿರುವ ಉಯ್ಯಾಲೆ ಮಂಟಪ ಹಾಗೂ ಪಾಕಶಾಲೆಗಳು ಮೋಹಕ ಶಿಲ್ಪಕಲಾಕೃತಿಗಳನ್ನು ಹೊಂದಿವೆ. ಮಾರ್ಕಂಡೇಶ್ವರನಿಗೆ ಶಿವರಾತ್ರಿಯಲ್ಲಿ ಎರಡು ದಿನಗಳ ವಿಶೇಷ ಪೂಜೆ ನಡೆಯುತ್ತದೆ. ಆ ಸಂದರ್ಭದಲ್ಲಿ ಅಧಿಕ ಪ್ರಮಾಣದಲ್ಲಿ ಭಕ್ತಾದಿಗಳು ಸೇರುತ್ತಾರೆ.

ಒಕ್ಕಲೇರಿ ಊರಿನಲ್ಲಿಯೂ ಸ್ಥಳದೇವರು ಎಂದು ಕರೆಯಲಾಗುವ ಮಾರ್ಕಂಡೇಶ್ವರ ದೇವಾಲಯವಿದೆ. ಒಕ್ಕಲೇರಿಯನ್ನು ಹಿಂದೆ ಕ್ರಮುಕಪುರಿ ಎಂದು ಕರೆಯಲಾಗುತ್ತಿತ್ತಂತೆ. ಇಲ್ಲಿ ಪ್ರತಿವರ್ಷ ಮಾಘಮಾಸದಲ್ಲಿ ಒಂದು ವಾರ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಜಾನುವಾರುಗಳ ಮಾರಾಟವೂ ಉಂಟು. ಈ ಊರಿನಲ್ಲಿ 8ನೆಯ ಶತಮಾನಕ್ಕೆ ಸೇರಿದ ಚಾಳುಕ್ಯರ ಕೆಲವು ತಾಮ್ರ ಶಾಸನಗಳೂ ದೊರೆತಿವೆ. (ಎ.ಬಿ.ಬಿ.)

**ಒಗಟು :** ಜನಸಾಮಾನ್ಯರ ಪ್ರತಿಭಾಸಾಮರ್ಥ್ಯಕ್ಕೂ ಅದ್ಭುತ ಕಲ್ಪನಾ ಶಕ್ತಿಗೂ ಜ್ವಲಂತ ನಿದರ್ಶನವಾಗುವ ಜನಪದಸಾಹಿತ್ಯ ಪ್ರಕಾರ. ಅರ್ಥಗೋಪನ, ಅಸ್ಪಷ್ಟತೆ, ರೂಪಕ, ಸಾಂಕೇತಿಕತೆ, ಹಾಸ್ಯ, ಅಶ್ಲೀಲತೆ, ಪ್ರಾಸ, ಅನುಪ್ರಾಸ, ಲಯಬದ್ಧತೆ, ಸಾರ್ವತ್ರಿಕತೆ ಇತ್ಯಾದಿಗಳು ಒಗಟಿನ ಲಕ್ಷಣಗಳು ಎನ್ನಬಹುದು. ಕನ್ನಡದಲ್ಲಿ ಒಂಟು, ಒಡಪು, ಒಡಗಥೆ ಮೊದಲಾದ ಹೆಸರುಗಳಿಂದಲೂ ಇದನ್ನು ಕರೆಯಲಾಗುತ್ತದೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ಮುಂಡಿಗೆ ಮತ್ತು ಮುಡಿಗೆ ಎಂಬ ಪದಗಳು ಕಾಣಿಸಿಕೊಳ್ಳುತ್ತವೆ. ಇಬ್ಬರ ಮಧ್ಯೆ ವಾದವೊಂದು ಎದ್ದಾಗ ಅವರಲ್ಲಿ ಒಬ್ಬ ತನ್ನ ತಲೆಯ ಮೇಲಿನ ಉಡುಪನ್ನು (ಮುಂಡಾಸು) ತೆಗೆದು ಎಸೆದರೆ ಅದು ಸವಾಲಿನ ಸೂಚಕವಾಗಿದ್ದು, ಇನ್ನೊಬ್ಬ ಅದನ್ನು ಎತ್ತಿಕೊಂಡರೆ ಆ ಸವಾಲನ್ನು ಅಂಗೀಕರಿಸಿದಂತಾಗುತ್ತಿದ್ದು, ಹೀಗೆ ಮುಂಡಿಗೆ ಮತ್ತು ಮುಡಿಗೆಗಳು ಮೊದಲು ಶಿರೋವಸ್ತ್ರವನ್ನು ಸೂಚಿಸುವ ಪದಗಳಾಗಿದ್ದು ಕ್ರಮೇಣ ಸವಾಲು ಎಂಬ ಅರ್ಥವನ್ನು ಪಡೆದುವು ಎಂಬ ಅಭಿಪ್ರಾಯವನ್ನೂ ಪ್ರಾಚೀನ ಕಾವ್ಯಗಳಲ್ಲಿನ ಇಂಥ ಪದಗಳನ್ನು ಒಗಟಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುವಾಗ ಇವು ಒಗಟಿನ ಸಮಾನಾರ್ಥ ಸೂಚಕ ಪದಗಳು ಎಂಬ ಅಭಿಪ್ರಾಯವನ್ನೂ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಒಗಟುಗಳನ್ನು ಸ್ಥೂಲವಾಗಿ ಜನಪದ ಒಗಟುಗಳು ಮತ್ತು ಸಾಹಿತ್ಯಿಕ ಒಗಟುಗಳು ಎಂದು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಜನಸಾಮಾನ್ಯರ ಬಾಯಿಂದ ಬಾಯಿಗೆ ಹರಿದು ಬಂದಿರುವ ಒಗಟುಗಳು ಜನಪದ ಒಗಟುಗಳು. ಇವೇ ಉಳಿದ ವರ್ಗಕ್ಕೆಲ್ಲ ಮೂಲ ಹಾಗೂ ಪುರಾತನ. ಬಹು ಮಟ್ಟಿಗೆ ಕೃತಕವೆನಿಸಿ, ಸಾಹಿತ್ಯ ಪ್ರವಾಹದ ಮೂಲಕ ಹರಿದು ಬಂದಿರುವಂಥವು ಸಾಹಿತ್ಯಿಕ ಒಗಟುಗಳು. ಆದರೆ ಇವು ಎಷ್ಟೋ ಸಾರಿ ಪರಸ್ಪರ ಅವಲಂಬಿಗಳು.

ವಚನಸಾಹಿತ್ಯದಲ್ಲಿ ಬೆಡಗಿನ ವಚನಗಳೆಂಬ ರೂಪವೊಂದುಂಟು. ಇವು ಆಧ್ಯಾತ್ಮಿಕ ರಹಸ್ಯದ ಒಗಟುಗಳು. ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಇವರ ರಚನೆಗಳಲ್ಲಿ ಇಂಥ ವಚನಗಳನ್ನು ಕಾಣಬಹುದು. ಅಲ್ಲಮಪ್ರಭುವಿನ ಒಂದು ರಚನೆಯನ್ನು ಉದಾಹರಣೆಗಾಗಿ ನೋಡಬಹುದು: ರಕ್ಕಸಿಗಿಬ್ಬರು ಮಕ್ಕಳು, ತೊಟ್ಟಿಲಮೇಲೈವರು, ರಕ್ಕಸಿ ಬಾಣತಿಯಾದರೆ ಮಕ್ಕಳಿಗಿನ್ನೆಂತೊ? ತೊಟ್ಟಿಲ ತೂಗುವೆ ಜೋಗುಳವಾಡುವೆ, ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತು, ಇದೇನು ಹೇಳಾ ಗುಹೇಶ್ವರ. ಇದನ್ನು ವಿದ್ವಾಂಸರೊಬ್ಬರು ಹೀಗೆ ವ್ಯಾಖ್ಯಾನಿಸುತ್ತಾರೆ: ಮಾಯೆಗೆ ಜೀವ, ಪ್ರಾಣ ಎಂಬ ಇಬ್ಬರು ಮಕ್ಕಳು. ಈ ಮಕ್ಕಳಿಗೆ ಆಶ್ರಯಸ್ಥಾನವಾದ ದೇಹವೆಂಬ ತೊಟ್ಟಿಲ ಮೇಲೆ ಪಂಚಭೂತಗಳು. ಇವನ್ನೆಲ್ಲಾ ನುಂಗುವಳು ಮಾಯೆ. ಹೀಗೆ ಮಾಯಾಧೀನತೆಯಿಂದ ದೇಹ ಕರ್ಮವಶವಾಗಿರುವವರೆಗೂ ನನಗೆ ತೊಳಲಾಟ ಮತ್ತು ಬರಿಯ ಮಾತಿನ ಹೋರಾಟ; ಮಾಯೆಯನ್ನು ಒಳಗೊಂಡಿರುವುದು ಈ ದೇಹ.

ಕಂತಿ ಹಂಪನ ಸಮಸ್ಯೆಗಳು, ಹರಿಹರನ ಮುಡಿಗೆಯ ಅಷ್ಟಕ, ಕನಕನ ಮುಂಡಿಗೆಗಳು ಕೂಡ ಇಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಇವುಗಳ ರೂಪ ಬಹುತೇಕವಾಗಿ ಒಗಟುಗಳ ರೂಪವನ್ನೇ ಹೋಲುತ್ತವೆ. ಕನಕದಾಸರ ಜೀವನಚರಿತ್ರೆಯಲ್ಲಿ ಇಂಥ ಒಗಟಿನ ಕೆಲವು ಪ್ರಸಂಗಗಳನ್ನು ಕಾಣಬಹುದು.

ಒಮ್ಮೆ ಕನಕದಾಸರ ಗುರುಗಳು ತಮ್ಮ ಶಿಷ್ಯರಿಗೆ ಸ್ವರ್ಗಕ್ಕೆ ಯಾರು ಹೋಗಬಲ್ಲಿರಿ ಎಂದು ಪ್ರಶ್ನೆ ಹಾಕಿದರಂತೆ. ಒಬ್ಬೊಬ್ಬರೂ ಒಂದೊಂದು ಬಗೆಯಲ್ಲಿ ಉತ್ತರ ಹೇಳಿದರಂತೆ. ಆಗ ಕನಕದಾಸರು ನಾನು ಹೋದರೆ ಹೋಗಬಹುದು ಎಂದರಂತೆ. ಈ ಮಾತು ಅರ್ಥಾಂತರೋಕ್ತಿಯಿಂದ ಕೂಡಿದೆ. ಇಲ್ಲಿ ನಾನು ಎಂದರೆ ಅಹಂಕಾರ ಎಂದರ್ಥ.

ಪುರಂದರದಾಸರ ಕೀರ್ತನೆಗಳಲ್ಲೂ ಅಲ್ಲಲ್ಲಿ ಇಂಥ ರಚನೆಗಳನ್ನು ಕಾಣಬಹುದೆಂಬುದಕ್ಕೆ ಒಂದು ನಿದರ್ಶನ: ಮುಳ್ಳುಕೊನೆಯ ಮೇಲೆ, ಮೂರು ಕೆರೆಯ ಕಟ್ಟಿ, ಎರಡು ಬರಿದು ಒಂದು ತುಂಬಲಿಲ್ಲ, ತುಂಬಲಿಲ್ಲದ ಕೆರೆಗೆ ಬಂದರು ಮೂವರೊಡ್ಡರು, ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ.

ಗೂಢಾರ್ಥ, ಉಕ್ತಿಚಮತ್ಕಾರ ಮೊದಲಾದ ಗುಣಗಳನ್ನು ಇಂಥ ಕೆಲವು ರಚನೆಗಳಲ್ಲಿ ಕಾಣಬಹುದು. ಈ ದಿಸೆಯಲ್ಲಿ ಸರ್ವಜ್ಞನದು ಮತ್ತೊಂದು ಮುಖ್ಯ ಹೆಸರು. ಸುಣ್ಣ ಎಂಬ ಉತ್ತರವುಳ್ಳ, ಜನಪದ ಸಂಪ್ರದಾಯದಲ್ಲೂ ಪ್ರಚಲಿತವಿರುವ ಒಂದು ಒಗಟಿನ ಪದ್ಯವನ್ನು ಸರ್ವಜ್ಞನಲ್ಲಿ, ಕಲ್ಲರಳಿ ಹೂವಾಗಿ ಎಲ್ಲರಿಗು ಬೇಕಾಗಿ ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ ಬಲ್ಲವರು ಹೇಳಿ ಸರ್ವಜ್ಞ - ಎಂಬ ರೂಪದಲ್ಲಿ ಕಾಣಬಹುದು. ಈತನ ಒಗಟುಗಳಲ್ಲಿ ಸ್ವಂತ ಸೃಷ್ಟಿಯವು ಕೆಲವಿದ್ದರೂ ಬಹುತೇಕವಾಗಿ ಜನಪದದಿಂದ ಆಯ್ದುವು ಎಂದು ಹೇಳಬಹುದು. ಹೀಗೆ ಕನ್ನಡದಲ್ಲಿ ಒಗಟಿನ ಇತಿಹಾಸ ತನ್ನದೇ ಆದ ಒಂದು ವಿಶಿಷ್ಟಮಾರ್ಗವನ್ನು ರೂಪಿಸಿಕೊಂಡಿದೆ.

ಸಾಮಾನ್ಯವಾಗಿ ಗಾದೆಯಂತೆ ಸಾರ್ವಕಾಲಿಕ ಪಾತ್ರವಲ್ಲದ ಒಗಟುಗಳು ಹಳ್ಳಿಯ ಜನರ ವಿರಾಮ ಕಾಲದಲ್ಲಿ ಮನರಂಜನೆಗಾಗಿ ಸೃಷ್ಟಿಯಾದವುಗಳು. ಮಕ್ಕಳನ್ನು ಕುರಿತಾಗಿಯೋ ಹಾಸ್ಯಕ್ಕಾಗಿಯೋ ವಿನೋದಕ್ಕಾಗಿಯೋ ಅಂಥ

ಸಂದರ್ಭದಲ್ಲಿ ಬಳಕೆಯಾಗುತ್ತಿದ್ದರೂ ಬುದ್ಧಿಶಕ್ತಿಗೆ ಸಾಣೆ ಹಿಡಿಯುವ ಇವು ಅವರ ದೈಹಿಕ ಶ್ರಮವನ್ನು ಮರೆಯಿಸಲು ಸಹಾಯಕವಾಗುತ್ತಿದ್ದವು. ಒಟ್ಟಿನಲ್ಲಿ ಒಗಟುಗಳನ್ನು ಸಾಮಾಜಿಕ ಮನರಂಜನೆಯ ಅತ್ಯುತ್ತಮ ಮಾರ್ಗವೆಂದು ಪರಿಗಣಿಸಬಹುದು.

ವಾಕ್ ಸಂಪ್ರದಾಯದಲ್ಲಿ ಕಾಣಿಸಿಕೊಂಡಿರುವ ಕೆಲವು ಒಗಟುಗಳನ್ನೂ ಅವುಗಳ ಸ್ವಾರಸ್ಯವನ್ನೂ ಮುಂದೆ ನೋಡಬಹುದು. ಎಲ್ಲ ವಿಷಯಗಳನ್ನು ಒಳಗೊಳ್ಳುವ ಈ ಪ್ರಕಾರದಲ್ಲಿ ಉದಾಹರಣೆಗಾಗಿ ಕೆಲವನ್ನು ಮಾತ್ರ ತೆಗೆದುಕೊಳ್ಳಲಾಗಿದೆ.

**ಸಂಭಾಷಣಾರೂಪದ ಒಗಟುಗಳು :** ಇದರಲ್ಲಿ ಎರಡು ಬಗೆಯನ್ನು ಉದಾಹರಿಸಲಾಗಿದೆ. ಒಂದು, ಅತ್ತೆ ಅಳಿಯಂದಿರ ನಡುವಿನ ಸಂಬಂಧವನ್ನು ಪ್ರತಿಮಿಸುವ ಪ್ರಶ್ನೋತ್ತರ ರೂಪದ್ದು; ಇನ್ನೊಂದು, ಹಾಡಿನಲ್ಲೇ ಸಾಗಿಬರುವ ತ್ರಿಪದಿ ರೂಪದ್ದು.

ಅತ್ತೆ: ಕರ ಕಟ್ಟದೆ ಹೊರ್ಲ್ಹಾಕದೆ ಕರ ಯಾಕೆ ಮೆಯ್‌ಲಿಲ್ಲ?
ಅಳಿಯ: ಮೋಡಗಟ್ಟದೆ ಮೊರಾಗದೆ ಮಳೆ ಯಾಕೆ ಹುಯ್‌ಲಿಲ್ಲ?

ಒಗಟಿನಲ್ಲಿ ಅತ್ಯಂತ ಪ್ರಾಚೀನ ರೂಪದ್ದೆಂದು ಹೇಳಲಾಗುವ, ವಿಶಿಷ್ಟ ಸಾಧನೆಯೆನಿಸಿರುವ ಪ್ರಶ್ನೋತ್ತರ ಒಗಟಿಗೆ ಇದೊಂದು ಒಳ್ಳೆಯ ಉದಾಹರಣೆ. ಸಾಮಾನ್ಯವಾಗಿ ಹಳ್ಳಿಗಳ ಕಡೆ ಅತ್ತೆ ಅಳಿಯಂದಿರು ಮಾತಾಡುವುದೇ ಅಪರೂಪ. ಮಾಧ್ಯಮ ರೂಪವಾಗಿ ಯಾರೂ ಇಲ್ಲದಿದ್ದಾಗಲೂ ನೇರವಾಗಿ ಮಾತಾಡುವುದಿಲ್ಲ. ಈ ಒಗಟು ಅಂಥ ಸಂಪ್ರದಾಯವನ್ನು ಸಮರ್ಥವಾಗಿ ಅಭಿವ್ಯಕ್ತಿಗೊಳಿಸುತ್ತಿರುವುದಲ್ಲದೆ ಸಂಭಾಷಣಾ ಚತುರತೆಯನ್ನೂ ವ್ಯಕ್ತಿಗಳ ಗುಣಗಳನ್ನೂ ನೈಸರ್ಗಿಕ ಕ್ರಿಯೆಗಳನ್ನೂ ಪ್ರತಿನಿಧಿಸುತ್ತದೆ. ಮೇಲಿನ ಒಗಟಿನ ಹಿಂದಿರುವ ಕಥೆ ಇದು. ಒಮ್ಮೆ ಅಳಿಯ ಅತ್ತೆ ಮನೆಗೆ ಹೋದನಂತೆ. ಬಂದ ಅಳಿಯನಿಗೆ ಅತ್ತೆ ಊಟಕ್ಕಿಕ್ಕಿದಳು. ಎಲ್ಲವೂ ಬಡಿಸಿ ಆಗಿದ್ದರೂ ಕೂಡ ಅಳಿಯ ಉಣ್ಣದೆ ಸುಮ್ಮನೆ ಕುಳಿತಿದ್ದ. ತುಪ್ಪ ಬಿಡಲಿಲ್ಲವೆಂಬುದು ಅದಕ್ಕೆ ಕಾರಣವಾಗಿತ್ತು. ಅತ್ತೆಯೂ ಬಹಳ ಜಿಪುಣೆ, ತುಪ್ಪ ಬಿಟ್ಟಿರಲಿಲ್ಲ. ಅಳಿಯ ಉಣ್ಣದೆ ಸುಮ್ಮನೆ ಕುಳಿತಿರುವುದನ್ನು ನೋಡಿದ ಅತ್ತೆ ಕರು ಬಿಟ್ಟದ್ದರೂ ಹೊರೆ ಹುಲ್ಲು ಹಾಕಿದ್ದರೂ ಕರು ಮೇಯ್ತಾ ಇಲ್ಲವಲ್ಲ ಕಾರಣವೇನು? ಎಂದು ಅಳಿಯನಿಗೆ ಹೇಳಿಯೂ ಹೇಳದಂತೆ ಮಾತಾಡುತ್ತಾಳೆ. ಅಳಿಯ ಅತ್ತೆಗಿಂತಲೂ ಕಿಲಾಡಿ. ಅತ್ತೆ ತುಪ್ಪ ಕಾಯಿಸಿ ಮೊವರು (ಮುದ್ರೆ) ಮಾಡಿ, ನೆಲುವಿನ ಮೇಲೆ ಮಡಗಿರುವ ಸಂಗತಿ ಹೇಗೋ ಅವನಿಗೆ ಗೊತ್ತಾಗಿರಬೇಕು; ಆದ್ದರಿಂದಲೇ ಅವನ ಹಟ. ಕಾಯಿಸಿದ ಮೇಲೆ ತುಪ್ಪ ಹೆತ್ತುಕೊಳ್ಳುವುದನ್ನು ಇಲ್ಲಿ ಮೋಡ ಎಂಬ ಪದವೂ ಅದನ್ನು ಮತ್ತೆ ಕಾಯಿಸಿದರೆ ದ್ರವವಾಗುವುದನ್ನು ಮಳೆ ಎಂಬ ಪದವೂ ಧ್ವನಿಸುತ್ತವೆ. ತುಪ್ಪ ಕಾಯಿಸಿ ಬಿಡುವ ಕ್ರಿಯೆಗೆ ಮೋಡ ಮಳೆಯಾಗಿ ಸುರಿಯುವ ಕ್ರಿಯೆಯನ್ನು ಹೋಲಿಸಿರುವುದು ಸಮುಚಿತವಾಗಿದೆ. ಅಳಿಯನಿಗೆ ಕೊಟ್ಟ ಕರುವಿನ ಪ್ರತಿಮೆಯೂ ಅಷ್ಟೇ ಉಚಿತವಾಗಿದೆ. ಕಾವ್ಯದ ದೃಷ್ಟಿಯಿಂದಲೂ ಈ ಒಗಟು ಗಮನಾರ್ಹವಾಗಿದೆ.

ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು, ಹೋಗೋರ ಮುಂಜೆರಗ ಹಿಡಿಯೋದು - ಎಲೆ ಬಾಲೆ, ಬಾಲೆ ಇದರರ್ಥ ಒಡೆದ್ಹೇಳೆ? ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು, ನೀವಾಡಿದ ಮಾತು ಹುಸಿಯಲ್ಲ - ಮಾಳಿವನೆ, ಉತ್ತರಾಣಿಗಿಡ ಅರಸೋರು.

ಇದು ಹಾಡಿನ ರೂಪದ ಒಗಟಿಗೆ ಉದಾಹರಣೆ. ಉತ್ತರಾಣಿ ಎಂಬ ಗಿಡದಲ್ಲಿ ಹೂವೆಲ್ಲ ಮುಳ್ಳುಗಳೇ (ಈ ಗಿಡವನ್ನು ಅಂಟುಪುರ್ಲೆ ಎಂದೂ ಕರೆಯುತ್ತಾರೆ). ಗಿಡದ ಕಡ್ಡಿಯ ಉದ್ದಕ್ಕೂ ಸಾಲಾಗಿ ಕಾಣಿಸಿಕೊಳ್ಳುವ ಇವು ಹಿಮ್ಮುಖವಾಗಿರುತ್ತವೆ. ಯಾವ ವಸ್ತು ಸಿಕ್ಕಿದರೂ ಅದರಲ್ಲಿ ಸಹಜವಾಗಿಯೇ ಅಂಟಿಕೊಳ್ಳುತ್ತವೆ. ಅಂಥದ್ದರಲ್ಲಿ ತೆಳುವಾದ ಸೀರೆಯ ಸೆರಗು ಸಿಕ್ಕರೆ ಇನ್ನೂ ಸುಲಭ. ಆದ್ದರಿಂದ ಇಲ್ಲಿ ಹೋಗೋರ ಮುಂಜೆರಗ ಹಿಡಿಯೋದು ಎಂಬ ಮಾತು ಧ್ವನಿಪೂರ್ಣವಾಗಿದೆ.

**ಗಣಿತ ಸಂಬಂಧವಾದ ಒಗಟುಗಳು :** ಇವು ಅತ್ಯಂತ ಸಮಸ್ಯಾತ್ಮಕವಾಗಿಯೂ ಕೆಲವು ಸಲ ವಿನೋದಾತ್ಮಕವಾಗಿಯೂ ಇರುತ್ತವೆ. ಉದಾ:

ನಾವು
ನಮ್ಮಷ್ಟು
ನಮ್ಮರ್ಧ
ನಮ್ಕಾಲು
ನೀನು ಸೇರಿದರೆ ನೂರು. ಹಾಗಾದರೆ ಬಂದ ಗಿಳಿಗಳೆಷ್ಟು?

ಈ ಒಗಟಿಗೆ ಉತ್ತರ ಇದು: ಒಂದು ಜೋಳದ ಹೊಲದಲ್ಲಿ ಒಂದು ಗಿಳಿ ಕುಳಿತಿರುತ್ತದೆ. ಅಲ್ಲಿಗೆ ಮತ್ತೆ ಕೆಲವು ಗಿಳಿಗಳು ಬರುತ್ತವೆ. ಆಗ ಮೊದಲೇ ಕುಳಿತಿದ್ದ ಗಿಳಿ ಬಂದ ಗಿಳಿಗಳನ್ನು ನೀವು ಎಷ್ಟು ಗಿಳಿಗಳು ಬಂದಿರಿ ಎಂದು ಕೇಳುತ್ತದೆ. ಅದಕ್ಕೆ ಉಳಿದ ಗಿಳಿಗಳು ಮೇಲಿನ ಒಗಟಿನ ರೂಪದಲ್ಲಿ ಉತ್ತರಿಸುತ್ತವೆ. ಉತ್ತರ ಮೂವತ್ತಾರು. ಬಂದ 36 ಗಿಳಿಗಳಿಗೆ ಅವರಷ್ಟು ಅಂದರೆ 36 ಸೇರಿಸಿದರೆ 72 ಗಿಳಿಗಳಾಗುತ್ತವೆ. ಇದಕ್ಕೆ ಅವುಗಳ ಅರ್ಧ 18 ಮತ್ತು ಕಾಲುಭಾಗ 9ನ್ನು ಸೇರಿಸಿದರೆ 99 ಆಗುತ್ತದೆ. ಇದಕ್ಕೆ ಮೊದಲು ಕುಳಿತಿದ್ದ ಗಿಳಿಯನ್ನು ಸೇರಿಸಿದರೆ 100 ಆಗುತ್ತದೆ.

**ನಂಬಿಕೆಗಳಿಗೆ ಸಂಬಂಧಿಸಿದವು :** ಗಂಡಹೆಂಡಿರು ಪರಸ್ಪರರ ಹೆಸರನ್ನು ಹೇಳಬಾರದೆಂಬುದು ಒಂದು ನಂಬಿಕೆ. ಕೆಲವು ವ್ಯಕ್ತಿಗಳ ಹೆಸರನ್ನು ಹೇಳಿದರೆ, ಹೇಳಿದವರಿಗೆ ತೊಂದರೆಯಾಗುತ್ತದೆ ಎಂಬುದೂ ಇನ್ನೊಂದು ನಂಬಿಕೆ. ಉದಾಹರಣೆಗೆ ತಂದೆಯ ಕೈಕೆಯ ಹೆಸರನ್ನು ಹೇಳಬಾರದೆಂಬುದು; ಹಾಗೆಯೇ ಮಂಡೋದರಿಯ ಹುಟ್ಟೆಸರು ಕೂಡ. ಇಂಥ ನಂಬಿಕೆಗಳ ಆಧಾರದ ಮೇಲೆ ಹುಟ್ಟಿಕೊಂಡಿರುವ ಒಗಟುಗಳಲ್ಲಿ ಒಂದು ಹೀಗಿದೆ: ಹತ್ತು ತಲೆ ಕೆಂಪು ಆರು ತಲೆ ಕಪ್ಪು ಆತನ ಸಖನ ಸುತನ ಒಡೆಯನ ವೈರಿಯ ಮಡದಿಯ ಹುಟ್ಟೆಸರೇನು? ಸಮಾಜದಲ್ಲಿ ಈ ನಿಷಿದ್ಧತೆ ಬರಲು ಕಾರಣವೇನು ಎಂಬುದಕ್ಕೆ ಉತ್ತರವಿಲ್ಲದಿದ್ದರೂ ಇಂಥದೊಂದು ನಿಷಿದ್ಧತೆಯಿತ್ತು ಎಂಬುದಕ್ಕೆ ಉದಾಹರಣೆಯಾಗಿಯಾದರೂ ಇಂಥ ಒಗಟುಗಳು ಉಳಿದುಕೊಂಡುಬಂದಿವೆ.

**ಸರ ಒಗಟುಗಳು :** ಒಂದು ಒಗಟಿಗೆ ಉತ್ತರ ಹೇಳಿದರೆ, ಆ ಉತ್ತರದಿಂದಲೇ ಪ್ರಾರಂಭವಾಗುವ ಮತ್ತೊಂದು ಒಗಟನ್ನು ಹೇರುವ ಚಾಕಚಕ್ಯತೆಯೂ ಈ ಪ್ರಕಾರದಲ್ಲಿ ಕಂಡುಬರುತ್ತದೆ. ಸೂಕ್ಷ್ಮಗ್ರಹಣ ಶಕ್ತಿಯುಳ್ಳವರೂ ಮೊನಚಾದ ಬುದ್ಧಿಯುಳ್ಳವರೂ ಒಂದೆಡೆ ಸೇರಿದಾಗ ಮನರಂಜನೆಗಾಗಿ ಒಬ್ಬರಿಗೊಬ್ಬರು ಪರೀಕ್ಷಿಸುವ ವಿಧಾನ ಕುತೂಹಲಕರವಾದದ್ದು.

ಒಬ್ಬ ಹೀಗೆ ಒಗಟನ್ನು ಎಸೆಯುತ್ತಾನೆ: ಏರಿ ಹಿಂದುಗಡೆ ಚೌಲ ಬಾರಿಸ್ತದೆ. ಏರಿಯ ಹಿಂದುಗಡೆ ಧನುರ್ಮಾಸದ ಗಾಳಿಗೆ ತಲೆದೂಗತ್ತ ನಿಂತ ಪೈರನ್ನು ದೊರೆಯ ಅಕ್ಕಪಕ್ಕ ನಿಂತ ಸೇವಕಿಯರು ಚವರಿ ಬೀಸುತ್ತಿರುವಂತೆ ಕಾಣಲಾಗಿದೆ. ಇದಕ್ಕೆ ಉತ್ತರ-ಬತ್ತ.

ಬತ್ತ ಎಂದು ಉತ್ತರ ಬಂದೊಡನೆಯೇ ಅದರ ಹಿಂದೆ ಇನ್ನೊಂದು ಒಗಟು: ಬತ್ತಕ್ಕೆ ಮೂರು ಮುತ್ತು. ಬೆಳಗಿನ ಜಾವದಲ್ಲಿ ಮುತ್ತಿನಂತೆಯೇ ಕಾಣುವ ಇಬ್ಬನಿ ಇದಕ್ಕೆ ಉತ್ತರ. ಉತ್ತರದ ಹಿಂದೆಯೇ ಇನ್ನೊಂದು ಒಗಟು ಸಿಡಿಯುತ್ತದೆ ಇಬ್ಬನಿಗೊಬ್ಬಣ್ಣ - (ಇಲ್ಲಿ ಅಣ್ಣ ಎಂದರೆ ಒಡೆಯ) ಇಬ್ಬನಿಗೆ ಒಡೆಯ ಸೂರ್ಯ. ಸೂರ್ಯನೇ ಇಲ್ಲಿಯ ಉತ್ತರ. ಸರಪಳಿ ರೂಪದ ಇಂಥ ಒಗಟುಗಳು ಕೇಳುಗರ ಮನಸ್ಸಿಗೆ ತೃಪ್ತಿ ಉಲ್ಲಾಸಗಳನ್ನು ನೀಡುತ್ತವೆ.

**ಅಶ್ಲೀಲ ರೂಪದವು :** ಒಗಟುಗಳಲ್ಲಿ ಕಂಡುಬರುವ ಮತ್ತೊಂದು ಗಮನಾರ್ಹ ಅಂಶವೆಂದರೆ ಅಶ್ಲೀಲತೆ. ಇದರಲ್ಲಿ ಎರಡು ರೀತಿ. ಹೊರನೋಟಕ್ಕೆ ಅಶ್ಲೀಲವೆಂಬಂತೆ ಕಂಡರೂ ಗಂಭೀರ ಕ್ರಿಯೆಯೊಂದನ್ನು ಹೇಳುವುದು ಒಂದು. ಹೊರನೋಟಕ್ಕೆ ಗಂಭೀರವೆಂಬಂತೆಯೇ ಕಂಡರೂ ಅಶ್ಲೀಲ ಅರ್ಥವನ್ನು ಒಳಗೊಂಡದ್ದು ಇನ್ನೊಂದು. ಅಂಥ ಒಂದೆರಡು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

ಮಾತುಗೀತು ಯಾವಾಗ ಎದುರುಬದುರು ಕುಂತಾಗ
ಅಳಗಿಳ ಯಾವಾಗ ಅರ್ಧ ಒಳಕ್ಕೋದಾಗ
ನೆಗಾನುಡಿ ಯಾವಾಗ ಪೂರ್ತಿ ಒಳಕ್ಕೋದಾಗ

ಈ ಒಗಟು ಮೇಲ್ನೋಟಕ್ಕೆ ಲೈಂಗಿಕ ಕ್ರಿಯೆಯೊಂದನ್ನು ಹಂತಹಂತವಾಗಿ ಹೇಳುವಂತಿದ್ದರೂ ಅದರ ಧ್ವನಿಯೇ ಬೇರೆ. ಹಳ್ಳಿಗಳಲ್ಲಿ ಬಳೆಗಾರನ ಮುಂದೆ ಕೂತು ಬಳೆ ತೊಡಿಸಿಕೊಳ್ಳುವಾಗ ಹೆಣ್ಣುಮಗಳು ಸಿರಿಯಿಂದ ಕುಳಿತುಕೊಳ್ಳುತ್ತಾಳೆ. ಹೀಗೆ ಎದುರುಬದುರು ಕುಳಿತ ಅನಂತರ ತರತರದ ಬಳೆಗಳನ್ನು ಬಳೆಗಾರ ತೋರಿಸುತ್ತಿದ್ದಂತೆ ಅದರ ಬೆಲೆಯ ಬಗ್ಗೆ, ಬಳೆಯ ಅಂದಚೆಂದದ ಬಗ್ಗೆ ಮಾತುಕತೆ ನಡೆಯುತ್ತದೆ. ಕಡೆಗೆ ಯಾವುದೋ ಒಂದು ಬಗೆಯ ಬಳೆ ಅವಳಿಗೆ ಒಪ್ಪಿಗೆಯಾಗುತ್ತದೆ. ಬಳೆಗಾರ ಹೆಣ್ಣಿನ ಕೈ ಹಿಡಿದು ಬಳೆ ತೊಡಿಸಲು ಪ್ರಾರಂಭಿಸುತ್ತಾನೆ. ಬಳೆ ಅರ್ಧ ಮುಂಗೈ ಏರಿದಾಗ ಮೂಳೆ ಗಂಟುಗಳ ಹತ್ತಿರ ಸಿಕ್ಕಿಕೊಂಡು ಅಪಾರ ಸಂಕಟವಾಗುತ್ತದೆ. ಆಗ ಸಹಜವಾಗಿಯೇ ಹೆಣ್ಣು ಮಗಳ ಕಣ್ಣಲ್ಲಿ ನೀರಾಡುತ್ತದೆ. ಆಕೆ ನಿಶ್ಯಬ್ದವಾಗಿ ಬಿಕ್ಕುತ್ತಿರುವುದು ಮೇಲ್ನೋಟಕ್ಕೆ ಯಾರ ಗಮನಕ್ಕೂ ಬರುವುದಿಲ್ಲ. ಬಳೆ ಸಂಪೂರ್ಣ ಕೈಯ ಒಳಹೋಗಿ ತನ್ನ ಸ್ಥಾನವನ್ನು ಸೇರಿದಾಗ ಆ ಹೆಣ್ಣುಮಗಳ ಹರ್ಷಕ್ಕೆ ಪಾರವೇ ಇರುವುದಿಲ್ಲ. ಹೊಸ ಬಳೆಯೊಂದಿಗೆ ರಾರಾಜಿಸುವ ತನ್ನ ಕೈಗಳನ್ನು ನೋಡಿಕೊಳ್ಳುತ್ತ ಆಕೆ ಸಂತೋಷಾತಿರೇಕದಿಂದ ನಗುನಗುತ್ತ ಮಾತಾಡಲು ತೊಡಗುತ್ತಾಳೆ. ಮುತ್ತೈದೆತನಕ್ಕೆ, ತನ್ಮೂಲಕ ಬದುಕಿನ ಸುಖಶಾಂತಿಗಳಿಗೆ ಸಂಕೇತವಾದ, ಪವಿತ್ರಕಾರ್ಯವಾದ ಬಳೆ ತೊಡಿಸುವ ಶಾಸ್ತ್ರವನ್ನು ಕುರಿತು ಜನಪದರು ಕಟ್ಟಿರುವ ಈ ಒಗಟು ಧ್ವನಿಪೂರ್ಣವಾಗಿದೆ. ಒಗಟನ್ನು ಕೇಳಿದಾಗ ಮೂಗು ಮುರಿದು, ಮುಖ ಸಿಂಡರಿಸುವವರು ಅರ್ಥ ಹೊಳೆದ ಮೇಲೆ ಅಚ್ಚರಿಪಡುತ್ತಾರೆ. ಇತ್ತೀಚೆಗೆ ಹಳ್ಳಿಗಳಲ್ಲೂ ಕಣ್ಮರೆಯಾಗುತ್ತಿರುವ, ದೊಡ್ಡ ಮಂತಿಗೆ ಹಗ್ಗ ಹಾಕಿ ಮೊಸರು ಕಡೆಯುವ ವಿಧಾನವನ್ನು ಕುರಿತ ಒಂದು ಒಗಟು ಈ ರೀತಿ ಇದೆ. ಉಡದಾರದ ಕೆಳಗೆ ಬಡಿದಾಡ್ತದೆ. ಇಂಥ ಒಗಟುಗಳನ್ನು ಬೇಸರ ಕಳೆಯಲೂ ಸಂತೋಷಾರ್ಥವಾಗಿಯೂ ಕುಚೋದ್ಯಕ್ಕಾಗಿಯೂ ಕಟ್ಟಿರಬಹುದಾದ ಸಾಧ್ಯತೆಗಳೆ ಹೆಚ್ಚೆಂದು ಹೇಳಬಹುದು.

ಕೆಲವು ಒಗಟುಗಳು ಮೇಲ್ನೋಟಕ್ಕೆ ಸಭ್ಯವಾಗಿ ಕಂಡರೂ ಒಳ ಅರ್ಥ ಅಶ್ಲೀಲವಾಗಿರಬಹುದು ಅಥವಾ ಲೈಂಗಿಕ ಅಂಶಗಳನ್ನು ಹೇಳುತ್ತಿರಬಹುದು. ಇಲ್ಲಿ ಅಂಥ ಒಂದು ಉದಾಹರಣೆಯನ್ನು ನೋಡಬಹುದು. ಬುಗುರಿಕಾಯಿ ಹೆಣ್ಣುಮಕ್ಕಳಿಗೇ ಆಗಲಿ ಗಂಡು ಮಕ್ಕಳಿಗೇ ಆಗಲಿ ಬಲು ಪ್ರಿಯವಾದ ಆಟಿಕೆಯ ವಸ್ತು. ಆದರೆ ಚಿಗುರುಡುಗಿಗೆ ಬುಗುರಿಕಾಯಿ ಎಂಬ ಒಂದು ಒಗಟು ಮೊಲೆ ಎಂಬ ವಿಶೇಷ ಅರ್ಥವನ್ನಡಗಿಸಿಕೊಂಡು ಬರುತ್ತದೆ. ಹೀಗೆ ಸಭ್ಯರೂಪದಲ್ಲಿಯೇ ಮಲಮೂತ್ರಾದಿಗಳನ್ನೂ ಲೈಂಗಿಕಾಂಗಗಳನ್ನೂ ಒಗಟುಗಳು ವರ್ಣಿಸುವುದುಂಟು.

**ಕಥೆಯ ಹಿನ್ನೆಲೆಯ ಒಗಟುಗಳು :** ಕೆಲವು ಒಗಟುಗಳು ದೀರ್ಘ ಕಥೆಯೊಂದನ್ನು ಹಿನ್ನೆಲೆಯಾಗುಳ್ಳಂಥವು. ಕಥೆ ತಿಳಿದಾಗ ಮಾತ್ರ ಒಗಟಿನ ಸ್ವಾರಸ್ಯ ವೇದ್ಯವಾಗುತ್ತದೆ. ಇಲ್ಲದಿದ್ದರೆ ಒಗಟು ವಿರೋಧಾಭಾಸವೆಂಬಂತೆ ಒಗಟೇ ಆಗಿ ಕಾಣುತ್ತದೆ. ಉದಾ: ಕತೆ ಯತೆಯಾಯ್ತು, ಸಂಸಾರ ಎರಡಾಯ್ತು, ನೆನ್ನೆ ಹೊಡೆದ ಮೊಲ ಎಸರಾಯ್ತು, ಮೊಲ ಹೊಡೆದೋನು ಸತ್ತು ಮೂರು ದಿನವಾಯ್ತು. ಈ ಒಗಟಿನ ಕಥೆ ಸ್ವಾರಸ್ಯವಾಗಿದ್ದು ಅದು ಹೀಗಿದೆ: ಹೆಂಡತಿ ಮತ್ತು ಮಿಂಡ ಸೇರಿ ತಮ್ಮ ಸುಖಕ್ಕೆ ಅಡ್ಡಿಬರುತ್ತಿದ್ದ ಗಂಡನನ್ನು ಕೊಂದು ಹೆಣವನ್ನು ಅಡವಿಯಲ್ಲಿ ಮರಕ್ಕೆ ನೇತುಹಾಕಿ ಬರುತ್ತಾರೆ. ಮೂರು ದಿನದ ಮೇಲೆ ಮಿಂಡ ಇತರರೊಂದಿಗೆ ಬೇಟೆಗೆ ಹೋಗುತ್ತಾನೆ. ಪೊದರಿನಿಂದ ಎದ್ದ ಮೊಲವೊಂದನ್ನು ಅಟ್ಟಿಸಿಕೊಂಡು ಹೋದಾಗ ಅದು ಓಡಿ ಓಡಿ ಗಂಡನನ್ನು ನೇತುಹಾಗಿದ್ದ ಮರದಡಿಯ ಪೊದೆಯಲ್ಲಿ ಅವಿತುಕೊಳ್ಳುತ್ತದೆ. ಬಿರುಗಾಳಿಯಿಂದಲೋ ಹಗ್ಗದ ಬಲ ಕುಂದಿದ್ದುದರಿಂದಲೋ ಹೆಣ ಮೇಲೆಬಿದ್ದು ಮೊಲ ಸಾಯುತ್ತದೆ. ಬೇಟೆಗಾರರು ಆ ಮೊಲವನ್ನು ಹಂಚಿಕೊಳ್ಳುತ್ತಾರೆ. ಮಿಂಡನೂ ಹೆಂಡತಿಯೂ ಅದನ್ನು ಎಸರು ಮಾಡಿಕೊಂಡು ಊಟಕ್ಕೆ ಕುಳಿತಾಗ ಮಿಂಡ ತಮ್ಮ ಕಥೆಯನ್ನೇ ಹೀಗೆ ಒಗಟಿನ ರೂಪದಲ್ಲಿ ಪ್ರೇಯಸಿಗೆ ಹೇಳುತ್ತಾನೆ. ಹೀಗೆ ಒಗಟುಗಳು ವೈವಿಧ್ಯಮಯವಾಗಿವೆ.

ಕನ್ನಡದಲ್ಲಿ ಒಗಟಿನ ಸಂಗ್ರಹಕಾರ್ಯ ಸಾಕಷ್ಟು ನಡೆದಿವೆ. ಮೊಟ್ಟಮೊದಲು ಒಗಟಿನ ಸಂಗ್ರಹವನ್ನು ಪ್ರಕಟಿಸಿದವರು ಶಂ.ಬಾ.ಜೋಷಿ. ಇವರ ಮಕ್ಕಳ ಒಡಪುಗಳು ಪ್ರಕಟವಾದುದು 1940ರಲ್ಲಿ. ಇದರಲ್ಲಿ 214 ಒಗಟುಗಳಿವೆ. ಅನಂತರ ಹಲವಾರು ಸಂಗ್ರಹಗಳು ಹೊರಬಂದಿವೆ. 1955ರಲ್ಲಿ ಎರಡು ಸಂಗ್ರಹಗಳು ಶಿವಕುಮಾರ್ ಅವರ ಒಗಟುಮಾಲೆ (61ಒಗಟುಗಳು) ಮತ್ತು ಶ್ರೀನಿವಾಸ ಪುರುಷೋತ್ತಮ ಭಟ್ ಅವರ ಜಾಣ್ಮೆಯ ಒಗಟುಗಳು (245) ಪ್ರಕಟವಾಗಿವೆ. 1956ರಲ್ಲಿ ಟಿ.ಚಂದ್ರರಾಜಶೆಟ್ಟಿ ಅವರ ಒಗಟುಗಳು ಮತ್ತು ಶ್ರೀನಿವಾಸ ಪುರುಷೋತ್ತಮ ಭಟ್ ಅವರ ಒಗಟುಗಳ ಗೊಂಚಲು (202), 1967ರಲ್ಲಿ ಜೀ.ಶಂ.ಪರಮಶಿವಯ್ಯ ಅವರ ಕನ್ನಡ ಒಗಟುಗಳು (300), 1969ರಲ್ಲಿ ಚಕ್ಕಲೂರು ಚನ್ನಪ್ಪ ಅವರ ಕನ್ನಡ ಒಗಟು ಮಾಲೆ (289), 1970ರಲ್ಲಿ ರಾಗೌ ಅವರ ನಮ್ಮ ಒಗಟುಗಳು (510), ಸುಧಾಕರ ಅವರ ಜನಪದ ಬೆಡಗಿನ ವಚನಗಳು (535), ಬಾಲಬಂಧು ಅವರ ಒಗಟಿನ ಗಂಟು (100), 1973ರಲ್ಲಿ ನಂ.ನಾರಾಯಣಗೌಡ ಅವರ ಜನಪದ ಒಗಟುಗಳು (246) ಮತ್ತು ಎಚ್.ಜೆ.ಲಕ್ಕಪ್ಪಗೌಡ ಅವರ ಒಗಟುಗಳು (1088) ಪ್ರಕಟಗೊಂಡಿವೆ. ಪ್ರಕಟಣೆಯ ವರ್ಷದ ನಮೂದಿಲ್ಲದ ನಾಲ್ಕು ಸಂಗ್ರಹಗಳಿವೆ: ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ ಅವರ ಒಡಗಥೆ (118), ಶ್ರೀಕಂಠಶಾಸ್ತ್ರಿ ನಲವಡಿ ಅವರ ಒಗಟಿನ ಮಾಲೆ (201) ಈ ಸಂಗ್ರಹದಲ್ಲಿ ಉತ್ತರವಿಲ್ಲ; ಅಧ್ಯಾಪಕ ರಾಮಚಂದ್ರಾಚಾರ್ಯರ ಒಗಟುಗಳು, ಬಿ.ಜಿ.ಸಂಕೇಶ್ವರ ಅವರ ಒಗಟಿನ ಮಾಲೆ. ಈ ಪಟ್ಟಿಯಲ್ಲಿ ಕನ್ನಡ ತಾತ್ಪರ್ಯಸಹಿತ ಪ್ರಕಟವಾಗಿರುವ ಎಂ.ನಾರಾಯಣ ಅವರ ತುಳು ಒಗಟುಗಳು (1962), ದೀರ್ಘವಾದ ಪ್ರಸ್ತಾವನೆ ಮತ್ತು ಕನ್ನಡ ಅನುವಾದದೊಂದಿಗೆ 1971ರಲ್ಲಿ ಪ್ರಕಟವಾದ ಬಿ.ಎ.ವಿವೇಕ ರೈ ಅವರ ತುಳು ಒಗಟುಗಳು (507) ಎಂಬ ಸಂಗ್ರಹಗಳನ್ನು ಹೆಸರಿಸಬಹುದು.

ಇದುವರೆಗೆ ಪ್ರಕಟವಾಗಿರುವ ಈ ಸಂಗ್ರಹಗಳಲ್ಲಿ ವಿಶೇಷವಾಗಿ ಹೆಸರಿಸಬಹುದಾದವೆಂದರೆ ರಾಗೌ ಅವರ ನಮ್ಮ ಒಗಟುಗಳು ಹಾಗೂ ಸುಧಾಕರ ಅವರ ಜನಪದ ಬೆಡಗಿನ ವಚನಗಳು. ಇವುಗಳಲ್ಲಿ ವಿದ್ವತ್ಪೂರ್ಣವಾದ ಪ್ರಸ್ತಾವನೆಯೂ ವೈಜ್ಞಾನಿಕವಾದ ವಿಶ್ಲೇಷಣೆಯೂ ವಿಶೇಷ ಅನುಬಂಧಗಳೂ ಸಮಾವೇಶಗೊಂಡಿವೆ. ರಾಗೌ ಅವರ ನಮ್ಮ ಒಗಟುಗಳು ಸಂಗ್ರಹದ ಪ್ರಸ್ತಾವನೆಯಲ್ಲಿ ಒಗಟುಗಳ ಉಗಮ, ವಿಕಾಸ, ರೂಪಾಂಶ, ಕಾವ್ಯಾಂಶ, ಪ್ರಾಚೀನತೆ, ವೈವಿಧ್ಯ, ಪ್ರಯೋಜನ ಇತ್ಯಾದಿಗಳನ್ನು ಸಮಗ್ರವಾಗಿ ಸಮರ್ಥವಾಗಿ ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ. ಸುಧಾಕರ ಅವರೂ ತಮ್ಮ ಜನಪದ ಬೆಡಗಿನ ವಚನಗಳು ಸಂಗ್ರಹದ ಪ್ರಸ್ತಾವನೆಯಲ್ಲಿ ವಚನಕಾರರ ಬೆಡಗಿನ ವಚನಗಳಿಗೂ ಜನಪದ ಒಗಟುಗಳಿಗೂ ಇರುವ ಸಾದೃಶ್ಯವನ್ನು ವಿವೇಚಿಸಿ, ವಚನಕಾರರಷ್ಟೇ ಜನಪದ ಕವಿಗಳೂ ಈ ನಿಟ್ಟಿನಲ್ಲಿ ಶಕ್ತರು ಎಂಬ ಅಂಶವನ್ನು ಸಾಧಾರವಾಗಿ ನಿರೂಪಿಸಿದ್ದಾರೆ. (ಕೆ.ಆರ್.)

**ಒತ್ತೆಕೋಲ :** ಭೂತಾರಾಧನೆಯ ಭಾಗವಾಗಿ ಬರುವ ಒಂದು ವಿಶಿಷ್ಟ ಜನಪದ ಆಚರಣೆ; ವಿಷ್ಣು ದೈವಾರಾಧನೆ. ಕೇರಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಪ್ರದೇಶಗಳಲ್ಲಿ ಹರಕೆಯ ರೂಪದಲ್ಲಿ ವಿಷ್ಣುವಿನ ಒತ್ತೆ ಕೋಲವನ್ನು ನಡೆಸುವ ಪದ್ಧತಿ ರೂಢಿಯಲ್ಲಿದೆ. ಇದು ಕೇರಳ ಮೂಲದಿಂದ ಬಂದದ್ದು. ಇದರ ವೇಷ ಕಟ್ಟುವವರು ಕೂಡ ಮಲಯಾಳಿಗಳು. ಈ ಆಚರಣೆಯಲ್ಲಿ ಭೂತದ ಪಾತ್ರಿ ಉರಿಯುವ ಕೊಂಡ ಹಾಯುವನು.

ವಿಷ್ಣುವಿನ, ನರಸಿಂಹನ ಅವತಾರವನ್ನು ಸೂಚಿಸುವ, ತೆಂಗಿನ ಗರಿಗಳಿಂದ ತಯಾರಿಸಲ್ಪಟ್ಟ ಭೂತದ ವೇಷ ಭೂಷಣ ವಿಚಿತ್ರ ವಿನ್ಯಾಸಗಳಿಂದ ಕಂಗೊಳಿಸುತ್ತದೆ. ಒಂದು ಗಮನಾರ್ಹ ಸಂಗತಿ ಎಂದರೆ ಮಲವ ಜನಾಂಗದವರಿಗೆ ಇದು ಪರಂಪರಾಗತವಾಗಿ ಬಂದ ಕುಲಕಸುಬು. ಒತ್ತೆಕೋಲದ ಆಚರಣೆಯ ವಿಧಿ ವಿಧಾನಗಳು ಹೀಗಿವೆ: ಸಾಮಾನ್ಯವಾಗಿ ಮುಸ್ಸಂಜೆಯಿಂದ ಮುಂಜಾನೆಯವರೆಗೆ ಕೋಲ ನಡೆಯುತ್ತದೆ. ಕಾರ್ಯಕ್ರಮ ಮೂರು ಘಟ್ಟಗಳಲ್ಲಿ ನಡೆಯುತ್ತದೆ. ಮಲೇರಿಗೆ ಅಗ್ನಿ ಸ್ಪರ್ಶ ನೀಡುವುದು, ಕುಳಿಚ್ಚಾಟ್, ಕೆಂಡದ ರಾಶಿಗೆ ಭೂತ ಬೀಳುವುದು - ಇವೇ ಆ ಮೂರು ಘಟ್ಟಗಳು.

ಒತ್ತೆಕೋಲ ನಡೆಸುವ ದಿನ ನಿರ್ಧರಿತವಾದ ಮೇಲೆ ಹಲಸು ಅಥವಾ ಹಾಲು ಒಸರುವ ಮರದ ಬಳಿ ಹೋಗಿ ಪೂಜಿಸಿ ಒಂದು ಕೊಂಬೆಯನ್ನು ಕಡಿದುಕೊಂಡು ಬಂದು ಕೋಲ ನಡೆಸುವ ಸ್ಥಳದಲ್ಲಿ ಹಾಕುವರು. ಹೀಗೆ ಒಂದು ತಿಂಗಳ ಕಾಲ ಸೌದೆ ಶೇಖರಣೆಯಾಗಿ ಕೋಲದ ಆರಂಭದ ದಿನ ಈ ಸೌದೆಯನ್ನು ಚೌಕಾಕಾರವಾಗಿ ಅಳೆತ್ತರಕ್ಕೆ ಜೋಡಿಸುವರು. ಇದೇ

ಮಲೇರಿ. ಇದರ ಎದುರಿಗೇ ಐವತ್ತು ಅಡಿಗಳ ಅಂತರದಲ್ಲಿ ಪೂರ್ವಾಭಿಮುಖವಾಗಿ ತೆಂಗಿನ ಗರಿಗಳಿಂದ ಮಂಟಪ ರೂಪಿಸಿ ಅಲ್ಲಿ ತೆಂಗಿನಕಾಯಿ, ಹೊಂಬಾಳೆಯನ್ನು ಸೇರಿಸಿ ನೇತು ಹಾಕುವರು. ಬೆಳ್ಚಿಪಾಡರು ವಿಷ್ಣುಮೂರ್ತಿ ದೇವಾಲಯದಿಂದ ಭಂಡಾರವನ್ನು ತಂದು ಮಂಟಪದಲ್ಲಿಡುವರು. ಹದಿನಾರು ಬಾಳೆಎಲೆಗಳನ್ನು ಹಾಕಿ ಪ್ರತಿಯೊಂದರಲ್ಲಿ ಎರಡೆರಡು ಬಾಳೆಹಣ್ಣು, ತೆಂಗಿನಕಾಯಿ, ಅಡಕೆ ಹಾಗೂ ಹೊಂಬಾಳೆಗಳನ್ನು ನೈವೇದ್ಯಕ್ಕಿಟ್ಟು ಪೂಜೆ ಮಾಡುವರು. ಅನಂತರ ಮಲೇರಿಗೆ ಬೆಂಕಿ ಕೊಡುವರು.

ನರಸಿಂಹನ ಅವತಾರ

ಮಧ್ಯರಾತ್ರಿ ವೇಳೆ ಕುಳಿಚ್ಚಾಟ್ ಆರಂಭವಾಗುತ್ತದೆ. ಇಲ್ಲಿ ದೈವವನ್ನು ಕಟ್ಟುವವ ಮಲಯ ಜಾತಿಯ ಪಾತ್ರಿ. ಮಡಿಯುಟ್ಟು ಕೆಂಪು ವಸ್ತ್ರ ಅಂಗೈಯಲ್ಲಿ ಹಿಡಿದು ಮಲೇರಿಗೆ ಮೂರು ಬಾರಿ ಪ್ರದಕ್ಷಿಣೆ ಮಾಡುವನು. ಇವನ ವೇಷ ಭೂಷಣಗಳು ವಿಶೇಷತೆಯಿಂದ ಕೂಡಿರುತ್ತವೆ. ಬಳಿಕ ಈತ ಮಂಟಪದಲ್ಲಿ ನಿಲ್ಲುವನು. ಈತನ ಸಹಾಯಕರು ಚಂಡೆಯನ್ನು ಬಾರಿಸುವರು. ಒಡನೆ ಪಾತ್ರಿಗೆ ದೈವದ ಆವಾಹನೆಯಾಗುವುದು. ವಿಷ್ಣು ನರಸಿಂಹಾವತಾರ ತಾಳಿ ಹಿರಣ್ಯಕಶಿಪುವನ್ನು ವಧಿಸಿ ಪ್ರಹ್ಲಾದನನ್ನು ರಕ್ಷಿಸಿದ ಕಥೆಯನ್ನು ಇಬ್ಬರು ಮಲಯಾಳಂ ಭಾಷೆಯಲ್ಲಿ ಪಾಡ್ದನವನ್ನು ಹಾಡುವರು. ಆಗ ಪಾತ್ರಿ ಹಾಡಿಗೆ ತಕ್ಕಂತೆ ಭಾವಾಭಿನಯ ನೀಡುವನು. ಇದೇ ಕುಳಿಚ್ಚಾಟ್.

ಈ ಕಾರ್ಯಕ್ರಮ ಮುಂಜಾನೆವರೆಗೂ ನಡೆಯುತ್ತದೆ. ಅನಂತರ ಪಾತ್ರಿ ಕುಳಿಚ್ಚಾಟ್ ವೇಷ ಕಳಚಿ ಬೇರೆ ವೇಷ ಹಾಕುವನು. ವಿಷ್ಣುಮೂರ್ತಿಯ ಕೊಂಡ ಹಾಯುವ ಮೊದಲಹಂತ ಆರಂಭವಾಗುವುದು. ಪಾತ್ರಿಯು ಮೈ ತುಂಬ ಬಾಳೆ ನಾರನ್ನು ಸುತ್ತಿ, ಸೊಂಟದ ಸುತ್ತ ತೆಂಗಿನಗರಿ ಬಿಗಿದು ಕೊಂಡ ಹಾಯಲು ಸಿದ್ಧನಾಗುವನು. ಇವನಿಗೂ ಮೊದಲು ಬೆಳ್ಚಪ್ಪಾಡರು ಕೆಂಡದ ರಾಶಿ ಮೇಲೆ ಮೂರು ಬಾರಿ ಓಡಾಡುವರು. ಅನಂತರ ವಿಷ್ಣುವೇಷದ ಪಾತ್ರಿ ಕೆಂಡದ ಮೇಲೆ ಪದೇ ಪದೇ ಬೀಳುವನು. ಈತ ಹೀಗೆ ಬೀಳುತ್ತಿದ್ದಂತೆ ಸಹಾಯಕರಿಬ್ಬರು ಸೊಂಟಕ್ಕೆ ಕಟ್ಟಿರುವ ತೆಂಗಿನ ಗರಿಗಳನ್ನು ಹಿಡಿದು ಎಳೆಯುವರು. ಈ ಕ್ರಿಯೆ ನಿರಂತರವಾಗಿ ಬೆಳಗಿನವರೆಗೂ ನಡೆಯುತ್ತದೆ. ಅನಂತರ ಒತ್ತೆಕೋಲಕ್ಕೆ ಹರಕೆಯಾಗಿ ತಂದ ಕೋಳಿಗಳನ್ನು ಬಲಿ ಕೊಡುವರು. ಈ ಸಂದರ್ಭದಲ್ಲಿ ಭಕ್ತಾದಿಗಳು ಪಾತ್ರಿಯೊಡನೆ ಭವಿಷ್ಯ ಅಥವಾ ಕಣಿ ಕೇಳುವುದೂ ಉಂಟು. ಅನಂತರ ವೇಷಧಾರಿ ಭೂತದ ಕಲ್ಲು ಇರುವಲ್ಲಿಗೆ ಹೋಗಿ ದೈವಕ್ಕೆ ಪ್ರಾರ್ಥನೆ ಸಲ್ಲಿಸುವಲ್ಲಿಗೆ ಕೋಲದ ಆಚರಣೆ ಮುಗಿಯುತ್ತದೆ. (ಎಂ.ಆರ್‌ಇ.)

**ಒನಕೆವಾಡು** : ಒರಳಲ್ಲಿ ಬತ್ತವನ್ನೋ ಇತರ ಧಾನ್ಯವನ್ನೋ ಹಾಕಿ ಒನಕೆಯಿಂದ ಕುಟ್ಟುವಾಗ ಹಾಡುಗಳನ್ನು ಹಾಡುವ ಪದ್ಧತಿ ಕರ್ನಾಟಕದಲ್ಲಿ ಉಂಟು. ಈ ಸಂಪ್ರದಾಯ ಪ್ರಾಚೀನ ಎಂಬುದಕ್ಕೆ ಶಾಸನ ಹಾಗೂ ಕಾವ್ಯಾಧಾರಗಳಿವೆ. ಗಂಗರ ದೊರೆ ಶಿವಮಾರನ (8ನೆಯ ಶತಮಾನ) ಗಜಾಷ್ಟಕ ಕೃತಿ ಒನಕೆವಾಡಾಗುವಷ್ಟು ಜನಪ್ರಿಯವಾಗಿತ್ತೆಂದು ಶಾಸನವೊಂದರಲ್ಲಿ ಹೇಳಿದೆ. ಸೋಮೇಶ್ವರ ಚಕ್ರವರ್ತಿಯ ಮಾನಸೋಲ್ಲಾಸದಲ್ಲಿ (ಅಭಿಲಷಿತಾರ್ಥ ಚಿಂತಾಮಣಿ) ಧಾನ್ಯವನ್ನು ಕುಟ್ಟುವಾಗ ತ್ರಿಪದಿಗಳನ್ನು ಹಾಡಬೇಕು ಎಂಬ ಸೂಚನೆಯಿದೆ. ನೇಮಿಚಂದ್ರ ತನ್ನ ಲೀಲಾವತಿ ಕಾವ್ಯದಲ್ಲಿ ವೇಶ್ಯೆಯರು ಒರಳಲ್ಲಿ ಅಕ್ಕಿಯನ್ನು ಕುಟ್ಟುತ್ತ ಸೂಳೆಸಿದ್ಧಾಂತವನ್ನು ಒನಕೆವಾಡಾಗಿ ಹಾಡುತ್ತಿದ್ದರೆಂದು ತ್ರಿಪದಿಗಳ ಒಂದು ಗುಚ್ಛವನ್ನು ಕೊಡುತ್ತಾನೆ. ಇದರಿಂದ ಒನಕೆವಾಡುಗಳು ತ್ರಿಪದಿ ರೂಪದಲ್ಲಿರುತ್ತಿದ್ದವೆಂದು ತಿಳಿಯುತ್ತದೆ.

ಒನಕೆವಾಡು ಶೃಂಗಾರದ ಹಾಡುಗಳಿಂದ ಮತ್ತು ಜನಸಾಮಾನ್ಯರ ಲೋಕಾನುಭವಗಳಿಂದ ಅಥವಾ ಸಿರಿಯಾಳದ ಕಥೆಯಂಥ ಕಥೆಗಳಿಂದ ಕೂಡಿದ್ದಿರಬಹುದು.

ಎಲ್.ಆರ್.ಹೆಗಡೆ ಅವರು ಸಂಕಲಿಸಿರುವ ಸುವ್ವೀ ಸುವ್ವೀ ಸುವ್ವಾಲೆ ಸಂಕಲನದಲ್ಲಿ ಒಂದು ಕಥನಕವನ ಈ ರೀತಿ ಇದೆ.

ಒಂದುಬ್ಬೆ ಕುಟುವಾಗ ಒಬ್ಬಣ್ಣನುಣುಬಂದೊ
ಒಬ್ಬಾಳಿಗುಬ್ಬೇs ನುರಿಯಾsವೋ|| ಅಣ್ಣಯ್ಯs
ಎಬ್ಬೀಸು ನಿನ್ನಾs ಮಡದೀsಯ||
ಸುವ್ವೀs ಸುವ್ವೀs ಸುವ್ವಾಲs||

ಇಂಥ ಪದ್ಯಗಳಲ್ಲಿ ಪಲ್ಲವಿಯಂತೆ ಕಾಣಿಸಿಕೊಳ್ಳುವ ಕೊನೆಯ ಸಾಲನ್ನು ಬಿಟ್ಟರೆ ಮೇಲಿನ ಒನಕೆವಾಡು ತ್ರಿಪದಿಯೇ ಆಗಿದೆ. (ಎಂ.ಪಿ.)

# ಓ

**ಓದುವಗಿರಿಯ** : ಸು.1525. ವೀರಶೈವ ಕವಿ. ಹರಿಶ್ಚಂದ್ರಸಾಂಗತ್ಯ ಎಂಬ ಕಾವ್ಯದ ಕರ್ತೃ. ಇವನ ಗುರು ಕಂತೆಯ ದೇವ. ತಂದೆ ಕರಿಯ ಸೋಮನಪ್ಪ. ಕವಿ ತನ್ನನ್ನು ಗಿರಿಯ, ಓದುವ ಗಿರಿಯ ಎಂದು ಕರೆದುಕೊಂಡಿದ್ದಾನೆ. ಶ್ರೀಗಿರಿಯಮಲ್ಲೇಶನ ಚರಣಕಮಲಮಧುಕರ, ಪರಕವಿಶರಧಿಚಂದ್ರಮ ಎಂದು ವಿಶ್ಲೇಷಿಸಿಕೊಂಡಿರುವುದರಿಂದ ಶ್ರೀಗಿರಿಯಮಲ್ಲೇಶ ಕವಿಯ ಇಷ್ಟದೈವ ಎಂದು ತೋರುತ್ತದೆ. ಸಾನಂದಗಣೇಶಸಾಂಗತ್ಯ ಈತನ ಇನ್ನೊಂದು ಕೃತಿ. ಇದರಲ್ಲಿ ಬರುವ ಹರಿಣಪುರದ ಸಿಂಹಾಸನಾಧೀಶ್ವರ ಗುರುಕೆಂಪನಂಜೇಶನ ಕರಜಾತ ನಂಜಯ್ಯ ಬರೆಸಿಹ ಹರಿಶ್ಚಂದ್ರಚರಿತೆ ಸಾನಂದ ಕೃತಿಯನು ಎಂಬ ಪದ್ಯದಿಂದ ಹರಿಣಪುರ ಸಿಂಹಾಸನಾಧೀಶ್ವರ ಗುರುಕೆಂಪನಂಜೇಶನ ಕರಜಾತ ನಂಜಯ್ಯ ಈ ಎರಡೂ ಕೃತಿಗಳನ್ನು ಬರೆಸಿದಂತೆ ವ್ಯಕ್ತವಾಗುತ್ತದೆ. ಹರಿಶ್ಚಂದ್ರ ಸಾಂಗತ್ಯದಲ್ಲಿ ಧರೆಯೊಳಧಿಕಪುಷ್ಪಾಪುರದೊಳೆಸೆವ ಎಂಬ ಮಾತು ಬಂದಿದೆ. ಈ

ಅಧಿಕಪುಷ್ಪಾಪುರವೆಂಬುದು ಈಗಿನ ದೊಡ್ಡಬಳ್ಳಾಪುರದ ಪರ್ಯಾಯನಾಮವಾದುದರಿಂದ ಕವಿ ಇದೇ ಊರಿನವನಾಗಿರಬಹುದು. ಈತ ಭಕ್ತಕವಿ, ಪೂರ್ವ ಕವಿಗಳಲ್ಲಿ ಬಾಣ, ಮಯೂರ, ಉದ್ಭಟ, ಕಾಳಿದಾಸ, ಹಂಪೆಯ ಹರೀಶ್ವರ, ಮಲುಹಣ, ರಾಘವಾಂಕ, ಹಲಾಯುಧ ಇವರನ್ನು ಸ್ಮರಿಸಿದ್ದಾನೆ.

ಹರಿಶ್ಚಂದ್ರಸಾಂಗತ್ಯ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 6 ಸಂಧಿಗಳೂ 441 ಪದ್ಯಗಳೂ ಇವೆ. ಹರಿಶ್ಚಂದ್ರನ ಕಥೆ ಕಾವ್ಯವಸ್ತು. ಈ ಕೃತಿಯ ಹೆಚ್ಚಿನ ಪ್ರತಿಗಳು ಅಲಭ್ಯವಾದುದರಿಂದ ಇದರ ಬಗೆಗೆ ಹೆಚ್ಚಿನ ಮಾಹಿತಿಗಳು ದೊರಕುವುದಿಲ್ಲ. ಕಾವ್ಯದ ಆದಿಯಲ್ಲಿ ರಾಘವಾಂಕನನ್ನು ಸ್ತುತಿಸಿರುವುದರಿಂದ ಈತ ತನ್ನ ಕೃತಿಯನ್ನು ರಚಿಸಲು ಹರಿಶ್ಚಂದ್ರಕಾವ್ಯವನ್ನು ಆಧರಿಸಿರಬಹುದೆಂದು ಊಹಿಸಲಾಗಿದೆ.

ಸಾನಂದಗಣೇಶಸಾಂಗತ್ಯ ಸಾಂಗತ್ಯದಲ್ಲಿದ್ದು ಇದರಲ್ಲಿ 6 ಸಂಧಿಗಳೂ 432 ಪದ್ಯಗಳೂ ಇವೆ. ಸಾನಂದನೆಂಬ ಮುನಿ ನಾರಕಿಗಳನ್ನು ಉದ್ಧರಿಸಿದ ಕಥೆ' ಇದರ ಕಥಾವಸ್ತು. ಕಾವ್ಯದಲ್ಲಿ ಹದಿನೆಂಟು ವರ್ಣನೆಗಳೂ ನರಕಜೀವಿಗಳಿಗೆ ದೊರೆಯುವ ಹಿಂಸೆ, ಪುಣ್ಯಜೀವಿಗಳಿಗೆ ದೊರೆಯುವ ಉಪಚಾರ, ಭೋಗ, ಕೈಲಾಸಲೋಕ ಮೊದಲಾದವುಗಳ ವರ್ಣನೆಗಳೂ ಅಡಕವಾಗಿವೆ. ಕೆಲವು ಶಿವಶರಣರ ಕಥಾನಕಗಳ ಉಲ್ಲೇಖಗಳೂ ಇವೆ. ಸಾನಂದನ ಕಥೆ ಪುರಾಣೋಕ್ತ, ಸಂಸ್ಕೃತದಲ್ಲಿ ರಚಿತ ಎಂಬ ಪ್ರತೀತಿ ಇದ್ದರೂ ಇಲ್ಲಿ ಅದರ ಸುಳಿವೂ ಸಿಕ್ಕುವುದಿಲ್ಲ. ಕೆಲವು ವರ್ಣನೆಗಳು ಚೆನ್ನಾಗಿವೆ. (ಆರ್.ಎಸ್.ವಿ.)

**ಓಬವ್ವೆ** : ಶತ್ರುಗಳೊಡನೆ ಕಾದು ಚಿತ್ರದುರ್ಗವನ್ನು ರಕ್ಷಿಸಿದ ವೀರ ಮಹಿಳೆ. ಚಿತ್ರದುರ್ಗದ ಕೊನೆಯ ಪಾಳೆಯಗಾರ ಮದಕರಿನಾಯಕನಿಗೂ (1753-1778) ಹೈದರನಿಗೂ ಆಗಾಗ ಕಾಳಗ ನಡೆದು ಅನೇಕ ಸಾರಿ ಹೈದರ್ ಹಿಮ್ಮೆಟ್ಟಿದ್ದ. ಕೋಟೆಯನ್ನು ವಶಪಡಿಸಿಕೊಳ್ಳಲು ತನ್ನ ಬೇಹುಗಾರರು ತಂದ ಸುದ್ದಿಯಂತೆ ಹೈದರ್ ತನ್ನ ಸೈನಿಕರನ್ನು ಮೊಸರು ಮಾರುವವಳು ನುಸುಳಿ ಹೋದ ಕಳ್ಳಗಂಡಿಯ ಮೂಲಕ ಒಳಗೆ ನುಗ್ಗಿಸಲು ಪ್ರಯತ್ನಿಸಿದ. ಕಾವಲುಗಾರನೊಬ್ಬನ ಹೆಂಡತಿಯಾದ ಓಬವ್ವೆ ಕಳ್ಳಗಂಡಿಯ ಹತ್ತಿರದ ಕೊಳಕ್ಕೆ ನೀರು ತರಲು ಬಂದಾಗ ಶತ್ರುಗಳ ಸುಳಿವು ತಿಳಿದು, ಕೈಯಲ್ಲಿ ಒನಕೆ ಹಿಡಿದು ನುಸುಳಿ ಬಂದ ಶತ್ರುಸೈನಿಕರ ತಲೆಯನ್ನು ಚಚ್ಚಿ ಹಾಕುತ್ತಿದ್ದಳು. ಹೆಂಡತಿಯನ್ನು ಹುಡುಕಿಕೊಂಡು ಬಂದ ಕಾವಲುಗಾರ ಇದನ್ನು ಕಂಡ, ಕಹಳೆಯನ್ನು ಊದಿ ಕೋಟೆಯ ಸೈನಿಕರನ್ನು ಎಚ್ಚರಿಸಿದ. ಅಷ್ಟರಲ್ಲಿ ಹೈದರ್ ಕಡೆಯ ಸೈನಿಕನೊಬ್ಬ ಓಬವ್ವೆಯನ್ನು ತನ್ನ ಕತ್ತಿಯಿಂದ ಇರಿದ. ಚಿತ್ರದುರ್ಗದ ಸೈನಿಕರ ಹೊಡೆತ ತಾಳಲಾರದೆ ಹೈದರ್ ಸೈನಿಕರು ಓಡಿಹೋಗಬೇಕಾಯಿತು. ಓಬವ್ವೆ ತನ್ನ ಪ್ರಾಣವನ್ನು ತೆತ್ತು ಚಿತ್ರದುರ್ಗದ ಸ್ವಾತಂತ್ರ್ಯವನ್ನು ಕಾಪಾಡಿ ಅಮರಳಾದಳು. ಈ ಕಥೆಯಲ್ಲಿ ಐತಿಹಾಸಿಕತೆಯೊಡನೆ ಐತಿಹ್ಯವೂ ಸೇರ್ಪಡೆಗೊಂಡಿದೆ. ಕರ್ನಾಟಕದಲ್ಲಿ ಓಬವ್ವೆಯನ್ನು ಕುರಿತಾದ ಅನೇಕ ಜನಪದಕಥೆ, ಕವನಗಳು ಪ್ರಚಾರದಲ್ಲಿವೆ. (ಪಿ.ಕೆ.ವೈ.ಡಿ.)

**ಓಲೆ ಗ್ರಂಥಗಳು** : ತಾಳೆಯ ಮರದ ಗರಿಗಳನ್ನು ಹದಗೊಳಿಸಿ, ಅವುಗಳಲ್ಲಿ ಅಕ್ಷರಗಳನ್ನು ಕೊರೆದು ಸಿದ್ಧಪಡಿಸಿದ ಪುಸ್ತಕಗಳು. ಕಾಗದ ದೊರೆಯದಿದ್ದ ಪ್ರಾಚೀನ ಯುಗದ ಜ್ಞಾನ ತಲೆಮಾರಿನಿಂದ ತಲೆಮಾರಿಗೆ ಉಳಿದು ಬಂದಿರುವುದು ಇಂಥ ಗ್ರಂಥಗಳಿಂದಲೇ.

ಓಲೆಗರಿಗಳನ್ನು ಬರವಣಿಗೆಗೆ ಉಪಯೋಗಿಸುತ್ತಿದ್ದುದನ್ನು ಪ್ಲಿನೀ (23-79) ಎಂಬ ಪ್ರಕೃತಿಶಾಸ್ತ್ರಜ್ಞ ಉಲ್ಲೇಖಿಸಿದ್ದಾನೆ. ಭಾರತ ದೇಶವನ್ನು ಸಂದರ್ಶಿಸಿದ ಯುವಾನ್ ಚಾಂಗ್ (629-645) ಕೊಂಕಣಪುರದ ಉತ್ತರಕ್ಕೆ ತಾಳೆಮರಗಳ ಕಾಡಿರುವುದನ್ನೂ ಅವುಗಳ ಎಲೆಗಳನ್ನು ಜನ ಬರವಣಿಗೆಗಾಗಿ ಉಪಯೋಗಿಸುವುದನ್ನೂ ತಿಳಿಸಿದ್ದಾನೆ. ಸು.1030ರಲ್ಲಿ ಭಾರತಕ್ಕೆ ಬಂದಿದ್ದ ಆಲ್‌ಬೆರೂನಿ ಎಂಬ ಪ್ರವಾಸಿ ತಾಳೆ ಮತ್ತು ಭೂರ್ಜಪತ್ರಗಳನ್ನು ನೋಡಿದ್ದುದಾಗಿ ತಿಳಿಸಿದ್ದಾನೆ. ಖರ್ಜೂರ ಅಥವಾ ಉತ್ತುತ್ತೆ, ತೆಂಗಿನ ಮರಗಳನ್ನು ಹೋಲುವ ಒಂದು ಜಾತಿಯ ಮರಗಳು ದಕ್ಷಿಣ ದೇಶದಲ್ಲಿ ಬೆಳೆಯುತ್ತವೆ. ಅವುಗಳ ಹಣ್ಣುಗಳನ್ನು ತಿನ್ನುತ್ತಾರೆ. ಅವುಗಳ ಎಲೆಗಳು ಒಂದು ಗಜ ಉದ್ದವಾಗಿಯೂ ಮೂರು ಕೈ ಬೆರಳುಗಳಷ್ಟು ಅಗಲವಾಗಿಯೂ ಇದೆ. ಜನ ಇವನ್ನು ತಾರೀ (ತಾಲ ಅಥವಾ ತಾರ) ಎಂದು ಕರೆಯುವರೆಂದೂ ಬರವಣಿಗೆಗೆ ಉಪಯೋಗಿಸುವರೆಂದೂ ಬರೆದಾದ ಮೇಲೆ ಎಲ್ಲ ಎಲೆಗಳನ್ನೂ ಅವುಗಳ ಮಧ್ಯದಲ್ಲಿ ಮಾಡಿದ ರಂಧ್ರದ ಮೂಲಕ ದಾರವನ್ನು ಹಾಕಿ ಒಟ್ಟಿಗೆ ಕಟ್ಟಿಡುವರೆಂದೂ ತಿಳಿಸಿದ್ದಾನೆ. ಸು.1441ರಲ್ಲಿ ಬಂದಿದ್ದ ಅಬ್ದುಲ್ ರಜಾಕ್ ಎಂಬ ಪ್ರವಾಸಿ ವಿಜಯನಗರದಲ್ಲಿ ಓಲೆಗ್ರಂಥ'ಗಳ ಬಳಕೆ ಇದ್ದುದನ್ನು ತಿಳಿಸಿ ಈ ಓಲೆಗರಿಗಳಲ್ಲಿ ತಾಲ ಮತ್ತು ಶ್ರೀತಾಲ ಎಂಬ ಎರಡು ಬಗೆ ಇರುವುದನ್ನು ಗುರುತಿಸಿದ್ದಾನೆ. ತಾಲ ಎಲೆಯ ಮೇಲೆ ಕಬ್ಬಿಣದ ಕಂಠದಿಂದ ಬರೆಯುತ್ತಿದ್ದರೆಂದೂ ಶ್ರೀತಾಲದ ಎಲೆಯನ್ನು ಮೊದಲು ಕಪ್ಪುಮಾಡಿ, ಅದರ ಮೇಲೆ ಲೇಖನಿಯಂಥ', ಮೃದುವಾದ ಚೂಪು ಕಲ್ಲಿನಿಂದ ಬರೆಯುತ್ತಿದ್ದರೆಂದೂ ಆತ ತಿಳಿಸಿದ್ದಾನೆ. ಈ ರೀತಿ ಬರೆಯುತ್ತಿದ್ದುದನ್ನು ತಾನು ಕನ್ನಡ ಜಿಲ್ಲೆಗಳಲ್ಲಿಯೂ ದಕ್ಷಿಣ ಭಾರತದಲ್ಲಿಯೂ ಕಂಡುದಾಗಿ ಎ.ಹ್ಯಾಮಿಲ್ಟನ್ ಎಂಬಾತ ಹೇಳಿದ್ದಾನೆ. ರಾಜೇಂದ್ರಮಿತ್ರ ಅವರು ಬಂಗಾಲದಲ್ಲಿ ಚಂಡಿ ಗ್ರಂಥ ಓಲೆಯಲ್ಲಿರುವುದಾಗಿ ತಿಳಿಸಿದ್ದಾರೆ.




ಎಡದಿಂದ ಬಲಕ್ಕೆ ೧, ೩, ೪ ಮೂರು ಬಗೆಯ ಕಂಠಗಳು. ಎರಡನೆಯದು ಕಂಠದ ಒರೆ, ೪ನೆಯದು ಒರೆಯಲ್ಲಿ ಇಟ್ಟ ಕಂಠ

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳ ಕೋಶಾಗಾರದಲ್ಲಿ ಕಾಲ ಉಲ್ಲೇಖವಾಗಿರುವ ಪುರಾತನ ಗ್ರಂಥವೆಂದರೆ ಸು.1235; ಗುಣವರ್ಮನ ಪುಷ್ಪದಂತ ಪುರಾಣವೆಂಬ ಚಂಪೂಗ್ರಂಥ. ಈ ಪ್ರತಿಯ ಕಾಲ 1436. ಇದಕ್ಕಿಂತಲೂ ಹಿಂದಿನದಾದ ಓಲೆಗ್ರಂಥವೆಂದರೆ ಶ್ರವಣಬೆಳಗೊಳದ ಜೈನಮಠದಲ್ಲಿರುವ ಪಂಪನ ಆದಿಪುರಾಣ.

ಪ್ರತಿಯ ಕಾಲ 1379. ಕಾಲ ನಮೂದಾಗಿರುವ ಮತ್ತೊಂದು ಮುಖ್ಯ ಪ್ರತಿಯೆಂದರೆ 1554ರಲ್ಲಿ ನಕಲಾಗಿರುವ ಗದುಗಿನ ನಾರಣಪ್ಪನ ಮಹಾಭಾರತದ ಪ್ರತಿ. ಇದರ ಪ್ರತಿ ಪತ್ರದ ಎರಡು ರಂಧ್ರಗಳಿಗೂ ಬೆಳ್ಳಿಯ ಉಂಗುರಗಳನ್ನು ಅಳವಡಿಸಿರುವುದು ವಿಶೇಷ ಸಂಗತಿಯಾಗಿದೆ.

ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ದೇವೀಸ್ತೋತ್ರ ಮತ್ತು ರಾಮಾಯಣದ ಭಾಗವಾದ ಸುಂದರಕಾಂಡ ಓಲೆಗ್ರಂಥಗಳು ಸೂಕ್ಷ್ಮಲಿಪಿಗೆ ಪ್ರಸಿದ್ಧವಾಗಿವೆ. ದೇವೀಸ್ತೋತ್ರದಲ್ಲಿ ಒಟ್ಟು 90 ಪತ್ರಗಳಿದ್ದು ಪ್ರತಿ ಪತ್ರವೂ $3^{1}/_{4}$ x $1^{1}/_{2}$ ಅಂಗುಲ. ಈ ಉದ್ದದಲ್ಲಿ ೨೫ ಅಕ್ಷರಗಳನ್ನು ಕೊರೆದಿದ್ದಾರೆ. ಅಗಲದಲ್ಲಿ 18-23 ಪಂಕ್ತಿಗಳಿವೆ. ಇದು ತೆಲುಗು ಲಿಪಿಯಲ್ಲಿದೆ. ಸುಂದರಕಾಂಡ ಗ್ರಂಥಾಕ್ಷರದಲ್ಲಿದೆ. ಇದರ ಪ್ರತಿಪತ್ರವೂ $4^{1}/_{2}$ x $1^{3}/_{4}$ ಅಂಗುಲ ಅಳತೆಯುಳ್ಳದ್ದಾದರೂ ಬರವಣಿಗೆಯ ಭಾಗದ ಅಳತೆ $3^{3}/_{4}$ x $1^{1}/_{2}$ ಅಂಗುಲ. ಈ ಉದ್ದದಲ್ಲಿ 47 ಅಕ್ಷರಗಳಿದ್ದು, ಅಗಲದಲ್ಲಿ 21 ರಿಂದ 25 ಸಾಲುಗಳಿವೆ. ಇವುಗಳ ಜೊತೆಗೆ ಇದೇ ಮಾದರಿಯಲ್ಲಿ ಬರೆದಿರುವ, ಹೆಸರು ತಿಳಿಯದ ಯಾವುದೋ ಗ್ರಂಥದ ಒಂದು ಪತ್ರದ ಅಳತೆ 18 x $1^{1}/_{4}$ ಅಂಗುಲ, $1^{1}/_{4}$ ಅಂಗುಲ ಅಗಲದಲ್ಲಿ 22 ಪಂಕ್ತಿಗಳಿದ್ದು 18 ಅಂಗುಲ ಅಗಲದಲ್ಲಿ 420 ಅಕ್ಷರಗಳಿವೆ ಎಂದಾಗ ಬೆರಗು ಹುಟ್ಟಿ ಕುತೂಹಲ ಕೆರಳುವುದು ಸಹಜವಾಗಿದೆ.

ತಾಲ ಮತ್ತು ಶ್ರೀತಾಲಗಳಲ್ಲಿ ತಾಳೆಗರಿಗಳನ್ನೇ ಹೆಚ್ಚಾಗಿ ಉಪಯೋಗಿಸಿರುವುದು ಕಂಡುಬರುತ್ತದೆ. ಏಕೆಂದರೆ ಇದು ಸ್ವಲ್ಪ ಮಂದವಾಗಿ ಅಗಲವಾದ ಕಬ್ಬಿಣದ ಸಲಾಕೆಯಂಥ ಕಂಠದಿಂದ ಕೊರೆಯಲು ಅನುಕೂಲವಾಗಿತ್ತು. ಒಂದು ಸಾರಿ ಕೊರೆದ ಅಕ್ಷರಗಳು ಮತ್ತೆ ಅಳಿಸಿಹೋಗುತ್ತವೆಂಬ ಹೆದರಿಕೆ ಇರಲಿಲ್ಲ. ಕೊರೆದ ಅಕ್ಷರಗಳ ಮೇಲೆ ಕಪ್ಪುಬಣ್ಣದ ಪುಡಿಯನ್ನು ಹಚ್ಚಿದರೆ ಕೊರೆದ ಭಾಗದಲ್ಲಿ ಆ ಬಣ್ಣ ಸೇರಿ ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತಿದ್ದುವು. ಈ ಕಪ್ಪುಬಣ್ಣ ಮಾಸಿ ಹೋದಾಗ ಮತ್ತೆ ಆ ಬಣ್ಣವನ್ನೇ ಉಪಯೋಗಿಸಿ ಚೆನ್ನಾಗಿ ಕಾಣುವಂತೆ ಮಾಡಬಹುದಾಗಿತ್ತು.

ತಾಳೆ ಎಲೆಗಳನ್ನು ಒಣಗಿಸಿ ಬೇಯಿಸಿ ಅಥವಾ ನೀರಿನಲ್ಲಿ ನೆನೆಸಿ ಮತ್ತೆ ಒಣಗಿಸಿ ಬೇಕಾದ ಅಳತೆಗೆ ಕತ್ತರಿಸಿ ಬರೆಯಲು ಉಪಯೋಗಿಸುತ್ತಿದ್ದರು ಎಂಬುದಾಗಿ ರಾಜೇಂದ್ರಲಾಲ್ ಮಿತ್ರ ಅವರು ತಿಳಿಸುತ್ತಾರೆ. ಗಿಡದಿಂದ ಎಲೆಯ ಮೋತೆ ಹೊರಹೊರಟು ಇನ್ನೇನು ಬಿಚ್ಚಿ ಹರಡುತ್ತದೆ ಎನ್ನುವಷ್ಟರಲ್ಲಿ ಹಾಡೆಯನ್ನು ಕತ್ತರಿಸಿ ತಂದು, ಕೊನೆಯಪಕ್ಷ ಏಳು ದಿನಗಳವರೆಗಾದರೂ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಅನಂತರ ಮೂರು ತಿಂಗಳವರೆಗಾದರೂ ನೆಲದಲ್ಲಿ ಹೂಳಿ, ತೆಗೆದು ಶುದ್ಧಗೊಳಿಸಿ, ಬೇಕಾದ ಅಳತೆಗೆ ಎಲೆಗಳನ್ನು ಕತ್ತರಿಸಿ ಅಡಿಗೆಮನೆಯ ಅಟ್ಟಗಳಲ್ಲಿಡುತ್ತಿದ್ದರು. ಅಡಿಗೆಮನೆಯ ಹೊಗೆಯಿಂದ ಅವು ಹದಗೊಳ್ಳುತ್ತಿದ್ದುವು. ಹೀಗೆ ಹದಗೊಂಡವನ್ನು ತಮಗೆ ಬೇಕಾದಾಗ ತೆಗೆದು ಉಪಯೋಗಿಸುತ್ತಿದ್ದರು ಎಂಬುದಾಗಿ ಬಿ. ಭಟ್ಟಾಚಾರ್ಯರು ತಿಳಿಸುತ್ತಾರೆ.

ತಾಳೆಯ ಗರಿಗಳನ್ನು ಹಸಿ ಇರುವಾಗ ಕುದಿನೀರಿನಲ್ಲಿ ಬೇಯಿಸಿ ನೆರಳಲ್ಲಿ ಒಣಗಿಸಿ ನುಣುಪಾದ ಗಾರೆಯ ಕಲ್ಲಿನಿಂದ ಉಜ್ಜಿ ಮೃದುಗೊಳಿಸುತ್ತಾರೆ. ಆಗ ಅದರ ಎರಡು ಪಕ್ಕಗಳೂ ಸಮತಲವಾಗುತ್ತವೆ. ಬರೆಹಕ್ಕೆ ಯೋಗ್ಯವಾಗುತ್ತವೆ ಎಂದು ಡಿ.ಎಲ್. ನರಸಿಂಹಾಚಾರ್ ತಿಳಿಸಿದ್ದಾರೆ.

ಹೀಗೆ ಓಲೆಗರಿಗಳನ್ನು ವಿವಿಧ ರೀತಿಯಲ್ಲಿ ಹದಗೊಳಿಸಿ ಬರವಣಿಗೆಗೆ ಉಪಯೋಗಿಸುವಾಗ ವಿಷಯದ ಜೊತೆಗೆ ವಿಷಯನಿರೂಪಣೆಗೆ ಸಹಾಯಕವಾಗಿ ಕೆಲವು ಪ್ರತಿಗಳಲ್ಲಿ ಅಲ್ಲಲ್ಲಿಯೇ ಚಿತ್ರಗಳನ್ನೂ ಕೊರೆದಿದ್ದಾರೆ. ಇಂಥ ಚಿತ್ರಗಳನ್ನು ಮೂಡಬಿದರೆ ಮಠದಲ್ಲಿರುವ ಅರ್ಧಮಾಗಧಿ ಭಾಷೆಯ ಕನ್ನಡ ಶಾಸನ ಲಿಪಿಯ ಜೈನ ಧವಳಗ್ರಂಥದಲ್ಲಿಯೂ ನೇಮಿಚಂದ್ರನ ನೇಮಿನಾಥಪುರಾಣ ಹಸ್ತಪ್ರತಿಯಲ್ಲಿಯೂ ಕಾಣಬಹುದಾಗಿದೆ.

ಈ ಓಲೆಗ್ರಂಥಗಳಲ್ಲಿ ವಿವಿಧ ರೀತಿಯ ಬರವಣಿಗೆಯನ್ನೂ ಒಂದೇ ಕೃತಿಯ ಹಲವಾರು ಪ್ರತಿಗಳನ್ನೂ ನಾವು ಕಾಣುತ್ತೇವೆ.



ಓಲೆಗ್ರಂಥದ ಒಂದು ಮಾದರಿ

ಶ್ರೀತಾಲ ಎಲೆ ಬಹಳ ತೆಳುವಾಗಿರುವುದರಿಂದ ಕೊರೆಯಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇದು ನಯವಾಗಿ ಮೃದುವಾಗಿದ್ದು ಮಸಿಯನ್ನು ಸುಲಭವಾಗಿ ಹೀರಬಲ್ಲುದಾಗಿದ್ದಿತು. ಬರೆದಾಗ ಚೆನ್ನಾಗಿ ಕಂಡರೂ ಯಾವುದೇ ಕಾರಣದಿಂದ ಅಳಿಸಿಹೋದಾಗ ಅದನ್ನು ಮತ್ತೆ ತುಂಬುವುದು ಸಮಸ್ಯೆಯಾಗಿ ಪರಿಣಮಿಸುತ್ತಿತ್ತು. ಅಂತಹದೇ ಮತ್ತೊಂದು ಪ್ರತಿ ದೊರೆಯದೆ ಅದನ್ನು ತುಂಬುವಂತಿರಲಿಲ್ಲ. ಆದ್ದರಿಂದಲೇ ಶ್ರೀತಾಲಕ್ಕಿಂತ ಹೆಚ್ಚಾಗಿ ತಾಳೆಗರಿಯನ್ನೇ ಎಲ್ಲೆಡೆಯೂ ಬಳಸಲಾಗಿದೆ.

ಮೂಲಗ್ರಂಥಗಳನ್ನು ನಕಲುಮಾಡಿ ಜನರು ಉಪಯೋಗಿಸುತ್ತಿದ್ದುದರಿಂದ, ನಮಗೆ ಕೃತಿಕಾರನೇ ಬರೆದ ಪ್ರತಿಗಳು ದೊರೆಯುವುದು ದುರ್ಲಭ. ದೊರೆಯುವ ಪ್ರತಿಗಳೆಲ್ಲವೂ ನಕಲುಗಳೇ. ಇಂಥ ನಕಲುಗಳನ್ನು ಆಯಾ ಭಾಷಾಗ್ರಂಥಗಳಲ್ಲಿ ಆಯಾ ಭಾಷಾಲಿಪಿಯನ್ನೇ ಸಾಮಾನ್ಯವಾಗಿ ಉಪಯೋಗಿಸಿದರೂ ಓದುಗರ ಇಚ್ಛೆಗೆ ಅನುಸಾರವಾಗಿ, ಆಯಾ ಪ್ರಾಂತದ ವಿಭಾಗದ ಜನರ ರೂಢಿಗೆ ತಕ್ಕಂತೆ ಕನ್ನಡ, ತಮಿಳು, ತೆಲುಗು, ತುಳು, ತಿಗಳಾರಿ, ನಾಗರಿ, ಗ್ರಂಥ ಮೊದಲಾದ ಹಲವಾರು

ಮಹಾಧವಳದ ಒಂದು ಪತ್ರ

ಲಿಪಿಗಳನ್ನು ಬೇರೆ ಬೇರೆ ಭಾಷಾಗ್ರಂಥಗಳಲ್ಲಿ ಬಳಸಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಭಾಷಾಭೂಷಣ ಹಸ್ತಪ್ರತಿ ಈ ಮಾದರಿಗೆ ಅತ್ಯಂತ ಉತ್ತಮ ನಿದರ್ಶನವಾಗಿದೆ. ಇದರಲ್ಲಿ ನೋಡುವುದು ಮಲಯಾಳಂ ಲಿಪಿಯನ್ನು, ಓದುವುದು ಸಂಸ್ಕೃತ ಭಾಷೆಯನ್ನು ತಿಳಿಯುವುದು ಕನ್ನಡ ವ್ಯಾಕರಣವನ್ನು ನಕಲುಮಾಡುವ ವ್ಯಕ್ತಿಗಳು ಬಹುಪ್ರಯಾಸದಿಂದ ಈ ಕೆಲಸ ನಿರ್ವಹಿಸುತ್ತಿದ್ದರು. ಕೆಲವರು ಅದನ್ನೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ನಕಲುಗಳನ್ನೆತ್ತಿದ ಪ್ರತಿಕಾರರು ಪ್ರತಿಗಳ ಕೊನೆಯಲ್ಲಿ ತಂತಮ್ಮ ವಿಳಾಸಗಳನ್ನು ಕೊಡುವುದರ ಜೊತೆಗೆ ಕೆಲವರು ತಿಥಿ ವಾರ ನಕ್ಷತ್ರಗಳನ್ನೂ ಕೊಟ್ಟಿದ್ದಾರೆ. ತಪ್ಪಿದ್ದರೆ ತಿದ್ದಿಕೊಳ್ಳಿರೆಂದು ಪ್ರಾರ್ಥಿಸಿದ್ದಾರೆ.

ರಾಸಾಯನಿಕ ಕ್ರಿಯೆಯಿಂದ ತಯಾರಾದ ಕಾಗದಕ್ಕಿಂತಲೂ ಪ್ರಕೃತಿಸಹಜವಾಗಿ ಬಂದ ಓಲೆಗರಿ ಹೆಚ್ಚು ಬಾಳಿಕೆ ಬರುವಂಥದೂ ಬಹುಬೇಗ ಹುಳುಗಳ ಹೊಡೆತಕ್ಕೆ ಬಲಿಯಾಗದುದೂ ಆದರೂ ಶೀತೋಷ್ಣಗಳಿಂದಲೂ ಹುಳುಗಳ ಕಾಟದಿಂದಲೂ ಹೊರತಾದುದಲ್ಲ. ಆದುದರಿಂದ ಈ ಅಮೂಲ್ಯ ಜ್ಞಾನಸಂಪತ್ತನ್ನು ರಕ್ಷಿಸುವಲ್ಲಿ ಹಲವರು ಹಲವು ಮಾರ್ಗಗಳನ್ನು ಅನುಸರಿಸಿದ್ದಾರೆ. ಕೆಲವರು ಅವನ್ನು ಬಣ್ಣದ ಬಟ್ಟೆಗಳಲ್ಲಿ ಸುತ್ತಿಟ್ಟು ದೂಳು ಮತ್ತು ಹುಳುಗಳಿಂದ ರಕ್ಷಿಸಿದ್ದಾರೆ. ಈ ಬಟ್ಟೆಯಲ್ಲಿ ಕೆಂಪು ಮತ್ತು ಹಳದಿ ಬಣ್ಣದವೂ ರೇಷ್ಮೆ ಬಟ್ಟೆಯೂ ಹುಳುಗಳನ್ನು ದೂರವಿಡಬಲ್ಲ ಶಕ್ತಿಯನ್ನು ಪಡೆದಿವೆಯೆಂದು ತಿಳಿದುಬರುತ್ತದೆ. ಕೆಲವರು ಓಲೆಕಟ್ಟಿನ ಆಕಾರಕ್ಕೆ ತಕ್ಕ ಮರದ ಪೆಟ್ಟಿಗೆಗಳಲ್ಲಿಟ್ಟು ಕಾಪಾಡಿದ್ದಾರೆ. ದಂತದ ಕುಸುರಿ ಕೆಲಸ ಮಾಡಿದ ಮರದ ಪೆಟ್ಟಿಗೆಗಳೂ ಕಂಡುಬರುತ್ತವೆ. ಮತ್ತೆ ಕೆಲವೆಡೆಗಳಲ್ಲಿ ಘೋಡಾವಚ, ಅದಕ್ಕಾಗಿಯೇ ಸಿದ್ಧಪಡಿಸಿದ ಎಣ್ಣೆ ಮೊದಲಾದುವುಗಳನ್ನೂ ಉಪಯೋಗಿಸುತ್ತಿದ್ದಾರೆ. ಇವುಗಳ ಸಂಗ್ರಹ, ಸಂರಕ್ಷಣೆ ಮತ್ತು ಪ್ರಕಟಣೆಗಾಗಿ ಹಲವಾರು ಸಂಸ್ಥೆಗಳು ಸ್ಥಾಪಿತವಾಗಿ ಕೆಲಸಮಾಡುತ್ತಿವೆ. *

# ಔ

**ಔರಾದ** : ಬೀದರ್ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯಸ್ಥಳ. ಈ ತಾಲ್ಲೂಕು ಕರ್ನಾಟಕ ರಾಜ್ಯದ ಅತ್ಯಂತ ಉತ್ತರದ ಗಡಿಯಲ್ಲಿದೆ. ಪಶ್ಚಿಮ ಮತ್ತು ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರ ಪ್ರದೇಶ, ದಕ್ಷಿಣದಲ್ಲಿ ಭಾಲ್ಕಿ ಮತ್ತು ಬೀದರ್ ತಾಲ್ಲೂಕುಗಳು ಸುತ್ತುವರಿದಿವೆ. 149 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1228.6ಚ.ಕಿಮೀ. ಜನಸಂಖ್ಯೆ 2,45,099.

ಮಾಂಜರಾ ನದಿ ಈ ತಾಲ್ಲೂಕಿನ ದಕ್ಷಿಣದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿದು ತಾಲ್ಲೂಕು ಗಡಿಯಾಗಿ ಔರಾದವನ್ನು ಭಾಲ್ಕಿ ಮತ್ತು ಬೀದರ್ ತಾಲ್ಲೂಕುಗಳಿಂದ ಬೇರ್ಪಡಿಸುತ್ತದೆ. ಬೀದರ್ ಜಿಲ್ಲೆಯ ಇತರ ತಾಲ್ಲೂಕುಗಳಿಗಿಂತ ಈ ತಾಲ್ಲೂಕಿನಲ್ಲಿ ಅರಣ್ಯಪ್ರದೇಶ ಹೆಚ್ಚು. ಈ ತಾಲ್ಲೂಕು ಎರೆಮಣ್ಣಿನಿಂದ ಕೂಡಿದ್ದು ಮಳೆ ಕಡಿಮೆ. ವಾರ್ಷಿಕ ಸರಾಸರಿ 910ಮಿಮೀ. ಜೋಳ, ಹತ್ತಿ, ಕಡಲೆ, ಗೋದಿ, ಸೇಂಗ, ತೊಗರಿ ಮತ್ತು ಉದ್ದು ಇಲ್ಲಿಯ ಬೆಳೆಗಳು. ತಾಲ್ಲೂಕಿನ ದೇವಣಿ ತಳಿಯ ಎತ್ತುಗಳು ಪ್ರಸಿದ್ಧವಾದವು. ತಾಲ್ಲೂಕಿನಲ್ಲಿ ಹತ್ತಿ ಕಾರ್ಖಾನೆಗಳು, ಮರಕೊಯ್ಯುವ ಮತ್ತು ಹೆಂಚಿನ ಕಾರ್ಖಾನೆಗಳು ಇವೆ. ವಿಕಾರಾಬಾದ್ ಪರಭಣಿ ರೈಲುಮಾರ್ಗ ತಾಲ್ಲೂಕಿನ ಪಶ್ಚಿಮದ ಭಾಗಗಳಲ್ಲಿ ಕಮಾಲನಗರದ ಮೂಲಕ ಹಾದುಹೋಗಿದೆ. ಜೊತೆಗೆ ಉತ್ತಮ ರಸ್ತೆಗಳಿವೆ.

ಔರಾದ ಈ ತಾಲ್ಲೂಕು ಮತ್ತು ಹೋಬಳಿ ಕೇಂದ್ರ. ಜನಸಂಖ್ಯೆ 16,189. ಇಲ್ಲಿ ಅಮರೇಶ್ವರನ ದೇವಾಲಯವಿದೆ. ಪ್ರತಿ ವರ್ಷ ಶಿವರಾತ್ರಿಗೆ ಇಲ್ಲಿ ಜಾತ್ರೆ ನಡೆಯುತ್ತದೆ. (ಬಿ.)

# ಕ

**ಕಂಚಲದೇವಿ :** ಕಲ್ಯಾಣಿ ಚಾಳುಕ್ಯ ದೊರೆ ಎರಡನೆಯ ಸೋಮೇಶ್ವರ ಭುವನೈಕಮಲ್ಲನ (1068-1076) ಹಿರಿಯ ಹೆಂಡತಿ. ಪಿರಿಯರಸಿ ಕಂಚಲದೇವಿ ಮೂಲಗುಂದ ನಾಡನ್ನು ಆಳುತ್ತಿದ್ದಳೆಂಬುದಾಗಿ 1072ರ ಗುಡಿಗೇರಿ ಶಾಸನದಿಂದ ತಿಳಿದುಬರುತ್ತದೆ. (ನೋಡಿ : ಸೋಮೇಶ್ವರ[2]) *

**ಕಂಠಸ್ಥ ಸಂಪ್ರದಾಯ :** ಗ್ರಂಥಸ್ಥಮೂಲವನ್ನು ಅವಲಂಬಿಸದೆ ತಲೆಮಾರಿನಿಂದ ತಲೆಮಾರಿಗೆ ಕರ್ಣಾಕರ್ಣಿಯಾಗಿ ಭಾಷೆ, ಸಂಗೀತ, ಸಾಹಿತ್ಯ ಮೊದಲಾದ ಎಲ್ಲ ಬಗೆಯ ಜ್ಞಾನವನ್ನೂ ಕಾಪಾಡಿಕೊಂಡು ಬರುವ ಕ್ರಮ. ತಾಯಿಯಿಂದ ಮಗಳಿಗೆ, ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ, ಹಿರಿಯ ತಲೆಮಾರಿನಿಂದ ಕಿರಿಯ ತಲೆಮಾರಿಗೆ, ಪೈಕದಿಂದ ಪೈಕಕ್ಕೆ ಈ ಸಂಪ್ರದಾಯದ ಮೂಲಕ ಪರಂಪರಾನುಗತ ಜ್ಞಾನವನ್ನು ಅರ್ಪಿಸುವ ಬಗ್ಗೆ ಮಾನವಕುಲಕ್ಕೆ ಸಹಜವಾಗಿ ಬಂದ ಒಂದು ವರವಾಗಿದೆ. ಪ್ರಾಣಿಕುಲಕ್ಕೂ ಮಾನವಕುಲಕ್ಕೂ ಇರುವ ಮೂಲಭೂತ ಅಂತರವನ್ನು ಇದು ಶ್ರುತಪಡಿಸುತ್ತದೆ. ಓದು, ಬರೆಹ ಬೆಳೆದಂತೆಲ್ಲ ಈ ಸಂಪ್ರದಾಯದೊಂದಿಗೆ ಗ್ರಂಥಸ್ಥ ಸಂಪ್ರದಾಯವೂ ಬೆಳೆದುಬಂದಿತೆಂದು ತೋರುತ್ತದೆ.

ಜಾನಪದ ಸಮಗ್ರ ಸಂಸ್ಕೃತಿಯ ಎರಡು ಅಂಗಗಳೆಂದು ಜಾನಪದ ವಿದ್ವಾಂಸರು ಗುರುತಿಸಿರುವ ಶಿಷ್ಟಸಂಸ್ಕೃತಿ ಹಾಗೂ ಜನಪದ ಸಂಸ್ಕೃತಿಗಳು ಪರಸ್ಪರ ಸ್ವೀಕರಣಕ್ಕೆ ಬದ್ಧವಾಗಿದ್ದರೂ ಎರಡೂ ನಡೆದು ಬಂದಿರುವ ದಾರಿ ಬೇರೆ ಬೇರೆ. ಎರಡರಲ್ಲಿಯೂ ಪರಂಪರೆಯ ಮುದ್ರೆ ಇದ್ದೇ ಇದೆ. ಅದರ ಶಿಷ್ಟಸಂಸ್ಕೃತಿ ಗ್ರಂಥಗಳಿಂದ, ವಿದ್ವಾಂಸರಿಂದ, ಧಾರ್ಮಿಕ ವಿಧಿಗಳಿಂದ ಪರಿಷ್ಕಾರಗೊಂಡದ್ದು, ಗೊತ್ತಾದ ಮೂಲದಿಂದ ಇದು ಶಿಷ್ಟರೂಪದಲ್ಲಿ ಉಳಿದು ಬರುತ್ತದೆ. ಜನಪದ ಸಂಸ್ಕೃತಿ ವ್ಯಾಪಕವಾದುದು, ಕಂಠಸ್ಥಮೂಲದಲ್ಲಿ ಮಾತ್ರ ಉಳಿದು ಬರತಕ್ಕುದು. ಮೊದಲಿನದರಲ್ಲಿ ವ್ಯಷ್ಟಿಯ ಪಾತ್ರ ಹೆಚ್ಚಾದರೆ ಎರಡನೆಯದರಲ್ಲಿ ಸಮಷ್ಟಿಯ ಪಾತ್ರ ಹಿರಿದು.

ಅನಕ್ಷರಸ್ಥ ಸಮಾಜಗಳಲ್ಲಿ ಕಂಠಸ್ಥಸಂಪ್ರದಾಯದ ಪಾತ್ರ ವಿಶಿಷ್ಟವಾದುದು. ಬದುಕಿಗೆ ಬೇಕಾಗುವ ಸಕಲವಿದ್ಯೆ ಹಾಗೂ ವ್ಯವಹಾರಜ್ಞಾನವನ್ನು ಈ ಸಂಪ್ರದಾಯದಿಂದಲೇ ಗ್ರಹಿಸಬೇಕಾಗುತ್ತದೆ. ಮನರಂಜನೆ ಹಾಗೂ ದೈನಂದಿನ ಆವಶ್ಯಕತೆಗಳ ಪೂರೈಕೆಗೆ ಕಂಠಸ್ಥಸಂಪ್ರದಾಯದಲ್ಲಿಯೇ ಬಂದ ಜ್ಞಾನ ನೆರವಾಗುತ್ತದೆ. ಪುರಾಣ, ಐತಿಹ್ಯ, ಕಥೆ, ಗಾದೆ, ಒಗಟು, ಹಾಡು, ಲಾವಣಿ, ಭಾಷೆ, ನಂಬಿಕೆ, ಆಚರಣೆ, ಕಲೆ, ವೈದ್ಯ, ವ್ಯವಸಾಯದ ಕ್ರಮ, ಅಡಿಗೆಗಳ ರೀತಿ, ಬೇಟೆಯಾಡುವ ವಿಧಾನ, ಆಟ, ಮಂತ್ರ, ಮಾಟ ಹೀಗೆ ಎಲ್ಲವೂ ಕೇಳಿ ನೆನಪಿಡುವುದರ ಮೂಲಕ, ನೋಡಿ ಅನುಕರಿಸುವುದರ ಮೂಲಕ ಹಿರಿಯ ತಲೆಮಾರಿನಿಂದ, ಕಿರಿಯ ತಲೆಮಾರಿಗೆ ಹರಿದು ಬರುತ್ತವೆ. ನೋಡಿ ಅನುಕರಿಸುವ ಕೆಲವು ವಿಷಯಗಳನ್ನು ಬಿಟ್ಟರೆ ಮಿಕ್ಕ ಎಲ್ಲ ವಿಷಯಗಳು ಕಂಠಸ್ಥ ಮೂಲದಲ್ಲಿಯೇ ಸಾಗಿ ಬರುತ್ತವೆ. ಅನುಕರಣೆಯ ಮೂಲಕ ಕಲಿಕೆ ಹಾಗೂ ಕಂಠಸ್ಥ ಸಂಪ್ರದಾಯದ ಪರಪಂರಾನುಗತ ಜ್ಞಾನವನ್ನೇ ಜಾನಪದ (ಫೋಕ್‌ಲೋರ್) ಎಂದು ಕರೆಯಲಾಗಿದೆ.

ಜಾನಪದವನ್ನು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸುವ ಹವ್ಯಾಸ ಎಲ್ಲ ದೇಶಗಳಲ್ಲೂ ಕಂಡು ಬಂದಿದೆ. ಕಥೆ, ಗೀತೆ, ಲಾವಣಿಗಳು ಬರವಣಿಗೆಗೆ ಇಳಿದಾಗ ಅವುಗಳ ಸಾಹಿತ್ಯಕ ಸ್ವರೂಪ ಮಾತ್ರ ಉಳಿದಂತಾಗುತ್ತದೆ. ಆದರೆ ಸಂಗೀತದ ಅಂಶವೂ ಅವುಗಳಲ್ಲಿ ಪ್ರಧಾನವಾದುದರಿಂದ, ಒಂದೊಂದು ಪ್ರಕಾರಕ್ಕೂ ವಿಶಿಷ್ಟವಾದ ಮಟ್ಟುಗಳು ಪರಂಪರೆಯಿಂದಲೇ ಬಂದಿರುವುದರಿಂದ ಅವುಗಳ ಮೂಲಧಾಟಿಗಳನ್ನು ಉಳಿಸುವ ಸಾಹಸವನ್ನೂ ವೈಜ್ಞಾನಿಕವಾಗಿ ಮಾಡಲಾಗುತ್ತಿದೆ. ಕರ್ನಾಟಕದಲ್ಲಿಯೂ ಈ ಕೆಲಸ ನಿರಂತರವಾಗಿ ನಡೆದಿದೆ. *

**ಕಂಠಿ, ಎಸ್.ಆರ್. :** 1908-69. ಕರ್ನಾಟಕದ ಮಾಜಿ ಮುಖ್ಯಮಂತ್ರಿ (1962). ಬಾಗಲಕೋಟೆ ತಾಲ್ಲೂಕಿನ ಕೆರೂರಿನಲ್ಲಿ 1908 ಡಿಸೆಂಬರ್ 21ರಂದು ಜನಿಸಿದರು. ಧಾರವಾಡದ ಕರ್ನಾಟಕ ಕಾಲೇಜು, ಕೊಲ್ಹಾಪುರದ ರಾಜಾರಾಮ್ ಕಾಲೇಜು ಮತ್ತು ಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ಇವರು ಬಾಗಲಕೋಟೆಯಲ್ಲಿ ವಕೀಲರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು (1935). ಹರಿಜನರ, ರೈತರ ಮತ್ತು ನೇಕಾರರ ಏಳ್ಗೆಗಾಗಿ ಶ್ರಮಿಸಿದರು. 1939ರಲ್ಲಿ ಕೆ.ಪಿ.ಸಿ.ಸಿ. ಮತ್ತು ಎ.ಐ.ಸಿ.ಸಿಗಳಿಗೆ ಸದಸ್ಯರಾಗಿ ಆಯ್ಕೆಯಾದರು. 1940-41ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಸತ್ಯಾಗ್ರಹ ವ್ಯವಸ್ಥೆ ಮಾಡಿ 10 ತಿಂಗಳ ಸೆರೆವಾಸವನ್ನು

ಅನುಭವಿಸಿದರು. 1942ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಮತ್ತೊಮ್ಮೆ ಸೆರೆಯಾಗಿ ಅದೇ ವರ್ಷ ಬಿಡುಗಡೆ ಹೊಂದಿದರು. ಅನಂತರ ಮುಂಬಯಿ ಸ್ಥಳೀಯ ಆಹಾರ ಸಮಿತಿಯ ಕ್ರಿಯಾಶೀಲ ಸದಸ್ಯರಾಗಿದ್ದುಕೊಂಡು ಕ್ಷಾಮ ಪರಿಹಾರ ಸಮಿತಿಯ ಪರವಾಗಿ ಕ್ಷಾಮಪೀಡಿತ ಪ್ರದೇಶಗಳಿಗೆ ಊಟ, ಬಟ್ಟೆ ಇತ್ಯಾದಿ ಸರಬರಾಜು ಮಾಡುವ ಸಾರ್ವಜನಿಕ ಸೇವೆಯಲ್ಲಿ ಪ್ರವೃತ್ತರಾದರು. 1946ರಲ್ಲಿ ಬಿಜಾಪುರ ಜಿಲ್ಲೆಯ ರೈತ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದರು. ಅನಂತರ ಅಂದಿನ ಮುಂಬಯಿ ಮಂತ್ರಿ ಮಂಡಲದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿ ನೇಮಕಗೊಂಡು 6 ವರ್ಷಗಳ ಕಾಲ ಸೇವೆ ಸಲ್ಲಿಸಿದರು (1946-52). ಆಗ ಸುಮಾರು ಎರಡು ವರ್ಷಗಳ ಕಾಲ ಹಣಕಾಸಿನ ಶಾಖೆಯನ್ನು ಹಾಗೂ ಮೂರು ವರ್ಷಗಳ ಕಾಲ ವ್ಯವಸಾಯ, ಅರಣ್ಯ ಮತ್ತು ಸಹಕಾರ ಇಲಾಖೆಗಳ ಅಧಿಕಾರವನ್ನು ವಹಿಸಿಕೊಂಡಿದ್ದರು. 1952-56ರ ವರೆಗೆ ಮುಂಬಯಿ ವಿಧಾನಸಭೆಯ ಉಪಾಧ್ಯಕ್ಷರಾಗಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕರ್ನಾಟಕ ರಾಜ್ಯದ ನಿರ್ಮಾಣದ ಬಗ್ಗೆ ವಿಷಯ ಸಂಗ್ರಹಿಸಿ ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಲು ರಚಿಸಿದ ಸಮಿತಿಗೆ ಇವರನ್ನು ಕಾರ್ಯದರ್ಶಿಯಾಗಿ ನೇಮಿಸಿತ್ತು. ಕರ್ನಾಟಕ ರಾಜ್ಯ ನಿರ್ಮಾಣವಾದ ಮೇಲೆ 1956ರಲ್ಲಿ ಮೈಸೂರು ವಿಧಾನ ಸಭೆಯ ಅಧ್ಯಕ್ಷರಾದ ಕಂಠಿಯವರು ಸುಮಾರು 6 ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದರು. 1961ರಲ್ಲಿ ಪಶ್ಚಿಮ ಜರ್ಮನಿಗೆ ಭೇಟಿ ನೀಡಿದ ಸಂಸದೀಯ ನಿಯೋಗಕ್ಕೆ ಇವರು ಮುಖ್ಯಸ್ಥರಾಗಿದ್ದರು. ಮೂರನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಹುನಗುಂದ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದ ಇವರು 1962 ಮಾರ್ಚ್ 9ರಿಂದ 1962 ಜುಲೈ 20ರವರೆಗೆ ವಿಶಾಲ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅನಂತರ 1962 ಜುಲೈ 21ರಂದು ವಿದ್ಯಾಮಂತ್ರಿಯಾಗಿ ನೇಮಕಗೊಂಡರು. ಬೆಂಗಳೂರು ವಿಶ್ವವಿದ್ಯಾಲಯ ಸ್ಥಾಪನೆಯಾದದ್ದು ಇವರು ವಿದ್ಯಾಮಂತ್ರಿಯಾಗಿದ್ದಾಗ. ನಾಲ್ಕನೆಯ ಸಾರ್ವತ್ರಿಕ ಚುನಾವಣೆಯಲ್ಲಿ

ಮತ್ತೊಮ್ಮೆ ವಿಧಾನಸಭೆಗೆ ಆಯ್ಕೆಯಾಗಿ 1967 ಮಾರ್ಚ್ 14ರಿಂದ 1968 ಏಪ್ರಿಲ್ 29ರವರೆಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿದ್ದರು. ಇವರು ಕೆಲಕಾಲ ಕರ್ನಾಟಕ ಹಿಂದಿ ಪ್ರಚಾರ ಸಭೆಯ ಅಧ್ಯಕ್ಷರೂ ಮೈಸೂರು ಪ್ರದೇಶದ ಭಾರತ ಸೇವಕ ಸಮಾಜದ ಅಧ್ಯಕ್ಷರೂ ಆಗಿದ್ದರು. 1959ರಲ್ಲಿ ಲಂಡನಿನಲ್ಲಿ ನಡೆದ ಕಾಮನ್‍ವೆಲ್ತ್ ಸಂಸದೀಯ ಸಮ್ಮೇಳನಕ್ಕೆ ಕರ್ನಾಟಕ ಸರ್ಕಾರ ಇವರನ್ನು ತನ್ನ ಪ್ರತಿನಿಧಿಯನ್ನಾಗಿ ಕಳಿಸಿತ್ತು. ಆ ಸಂದರ್ಭದಲ್ಲಿ ತಮಗಾದ ಅನುಭವಗಳನ್ನು ಇವರು ನೋಟ್ಸ್ ಆನ್ ದಿ ಪಾರ್ಲಿಮೆಂಟರಿ ಕೋರ್ಸ್ ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾರೆ.

ಕರ್ನಾಟಕದ ಏಳಿಗೆಗೆ ಅಪಾರವಾಗಿ ಶ್ರಮಿಸಿದ ಕಂಠಿಯವರು ರಾಜ್ಯ ವಿಧಾನ ಸಭೆಯ ಸದಸ್ಯರಾಗಿರುವಾಗಲೇ, 1969 ಡಿಸೆಂಬರ್ 25ರಂದು ನಿಧನ ಹೊಂದಿದರು. (ಟಿ.ಎಚ್.)

**ಕಂಠೀರವ :** 1919ರ ಏಪ್ರಿಲ್ ಒಂದನೆಯ ತಾರೀಖು ಯುಗಾದಿ ದಿನದಂದು ಮಂಗಳೂರಿನಿಂದ ಪ್ರಕಟವಾದ ವಾರಪತ್ರಿಕೆ. ಕೆಲಕಾಲ ದ್ವೈವಾರ ಪತ್ರಿಕೆಯಾಗಿ ನಡೆಯಿತು (1933-53). ಅನಂತರ 1967ರ ನವೆಂಬರ್ ತಿಂಗಳಲ್ಲಿ ನಿಂತು ಕೆಲಕಾಲ ನಡೆದು ವಿಶೇಷ ಸಂಚಿಕೆಯೊಂದನ್ನು ಕಂಡು ಅದೇ ವರ್ಷ ನಿಂತು ಹೋಯಿತು. ಬೋಳಾರು ವಿಠಲರಾಯರು ಇದರ ಪ್ರಥಮ ಸಂಪಾದಕರು ಹಾಗೂ ಪ್ರಕಾಶಕರು. ಪ್ರಾರಂಭಕಾಲದಲ್ಲಿ ಸಂಪಾದಕ ವಿಭಾಗಕ್ಕೆ ಹುರುಳಿ ಭೀಮರಾಯರು, ಕಡೇಕಾರು ರಾಜ ಗೋಪಾಲಕೃಷ್ಣರಾಯರು, ಬೆನಗಲ್ ರಾಮರಾಯರು, ಡಿ.ಕೆ.ಭಾರದ್ವಾಜರು ಬರೆಯುತ್ತಿದ್ದರು. ಮೊದಲಿನಿಂದಲೂ ಸಂಪಾದಕೀಯವನ್ನು ಬರೆಯುತ್ತಿದ್ದ ಹುರುಳಿ ಭೀಮರಾಯರೇ 1943ರಲ್ಲಿ ಸಂಪಾದಕತ್ವವನ್ನು ವಹಿಸಿಕೊಂಡರು.




ಪ್ರಾರಂಭವಾದಾಗ ಪತ್ರಿಕೆ ಮಂಗಳೂರಿನ ಧರ್ಮಪ್ರಕಾಶ ಮುದ್ರಣಾಲಯದಲ್ಲಿ ಅಚ್ಚಾಗುತ್ತಿತ್ತು. ಮುಂದೆ 1923 ರಿಂದ 1938ರವರೆಗೆ ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದು 1939ರಲ್ಲಿ ಒಂದು ವರ್ಷ ಮಾತ್ರ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಮುದ್ರಣಗೊಂಡಿತು. ಬಳಿಕ 1941ರಿಂದ ಆಚೆ ಮಂಗಳೂರು ಪ್ರೆಸ್ಸಿನಲ್ಲಿ ಮುದ್ರಣವಾಗತೊಡಗಿತು. 1943ರಿಂದ ಮಂಗಳೂರು ಪ್ರೆಸ್ಸಿನ ಒಡೆಯರಾದ ಎಂ. ಬಾಬುರಾಯಪ್ರಭು ಕಂಠೀರವದ ಪ್ರಕಾಶಕರಾದರು.

ಹದಿನಾರು ಪುಟಗಳ ಪತ್ರಿಕೆಯಾಗಿ ಹೊರಟ ಕಂಠೀರವ ಜನಪ್ರಿಯವಾಗಿ ಅಭಿವೃದ್ಧಿಗೊಂಡು ಒಂದು ಕಾಲಕ್ಕೆ ಮೂವತ್ತೆರಡು ಪುಟಗಳ ಪತ್ರಿಕೆಯಾಯಿತು.

ಕಳೆದ ವಾರ, ಅದಿಷ್ಟು ಇದಿಷ್ಟು, ಅದೂ ಇದೂ ಎಲ್ಲವೂ- ಎಂಬ ಒಂದಲ್ಲ ಒಂದು ಶೀರ್ಷಿಕೆಯಲ್ಲಿ ವಾರದ ವಿಶೇಷ ವಿಚಾರಗಳು; ಮಧ್ಯಪುಟದಲ್ಲಿ ಸಂಪಾದಕೀಯದ ಬಳಿಕ ವಿದೇಶ, ಹಿಂದೂದೇಶ, ಕರ್ನಾಟಕ, ದಕ್ಷಿಣಕನ್ನಡ ಮತ್ತು ತಾಲ್ಲೂಕುಗಳ ವಾರ್ತಾಸಂಗ್ರಹ; ದಾಸಯ್ಯನ ಜೋಳಿಗೆ, ಮಿಸ್ಟರ್ ತಿಪ್ಪಯ್ಯನ ಡೈರಿ, ಮುಹಮ್ಮದ್ ಸಾಹೇಬನ ಸೂಕ್ತಗಳು, ಗುಂಡನ ಗಜೇಟು ಎಂಬ ಶೀರ್ಷಿಕೆಗಳಲ್ಲಿ ಹುರುಳಿ ಭೀಮರಾಯರು ವ್ಯಂಗ್ಯಲೇಖನಗಳನ್ನು ಬರೆಯುತ್ತಿದ್ದರು. ಈ ಶೀರ್ಷಿಕೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದು ಪತ್ರಿಕೆಯ ಕೊನೆಯ ದಿನಗಳಲ್ಲಿ ಗುಂಡನ ಗಜೇಟು ಎಂಬ ಶೀರ್ಷಿಕೆ ಮಾತ್ರ ಉಳಿಯಿತು. ಇವುಗಳಲ್ಲದೆ ಆಗಾಗ್ಗೆ ವ್ಯಕ್ತಿಪರಿಚಯಗಳೂ ಸಣ್ಣಕಥೆಗಳೂ ಕವನಗಳೂ ಧಾರಾವಾಹಿ ಕಾದಂಬರಿಗಳೂ ಪ್ರಕಟವಾಗುತ್ತಿದ್ದುವು. ಪತ್ರವ್ಯವಹಾರ ಎಂಬ ವಿಭಾಗ ಯಾವಾಗಲೂ ಇರುತ್ತಿತ್ತು. ದ್ವೈವಾರಪತ್ರಿಕೆಯಾದಾಗ ಶುಕ್ರವಾರದ ಸಂಚಿಕೆಯಲ್ಲಿ ವಿಶೇಷ ಲೇಖನ ಮತ್ತು ಪತ್ರವ್ಯವಹಾರಗಳಿಗಿಂತ ವಾರ್ತೆಗೇ ಹೆಚ್ಚಿನ ಪ್ರಾಶಸ್ತ್ಯವಿತ್ತು.

1919ರಲ್ಲಿ ಪ್ರಾರಂಭವಾಗುವಾಗ ಮೊದಲ ಪುಟದ ಮೇಲ್ಗಡೆಯಲ್ಲಿ ಕಂಠೀರವ ಎಂಬ ಹೆಸರಿನ ಇಕ್ಕೆಡೆಗಳಲ್ಲಿ ಯೂನಿಯನ್ ಜಾಕ್ ಎಂಬ ಆಂಗ್ಲ ಸಾಮ್ರಾಜ್ಯ ಧ್ವಜವನ್ನೆತ್ತಿ ಹಿಡಿದ ಸಿಂಹಗಳು ಕುಳಿತ ಚಿತ್ರವಿತ್ತು. ಅದರ ಕೆಳಗಡೆಯಲ್ಲಿ ಸಂಸ್ಕೃತ ಕನ್ನಡಗಳಲ್ಲಿ ಕೆಳಗಿನ ಸೂಕ್ತಿಯಿತ್ತು:

> ಶ್ರೀ ಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
> ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ
> ಶಸ್ತ್ರಸ್ತ್ರದ್ವದಮೀಸು ಸಂವ್ಯವಹೃತಿ ಪ್ರಾಗಲ್ಭ್ಯ ಮತ್ತೋsನ್ವಹಂ
> ಜೇಯಾದ್ವಿಶ್ವಜನೀನ ವೃತ್ತಿಚತುರಶ್ರೀಕಂಠಕಂಠೀರವಃ
> ನರರ ಕುಲಗಳೊಳಾರ್ಯವಂಶವು ಧರೆಯ ದೇಶಗಳೊಳಗೆ ಭಾರತ
> ಅರಸುತನಗಳೊಳಾಂಗ್ಲರೊಡೆತನ ನುಡಿಗಳೊಳು ಮೆರೆವಾ
> ತಿರುಳುಗನ್ನಡವೊಂದಕ್ಕೊಂದೊಪ್ಪಿರುವ ತೆರ ಕಂಠೀರವನು ಮೆರೆ
> ದಿರಲಿ ವಂಶಕೆ ಧರೆಗೆ ಅರಸಗೆ ನುಡಿಗೆ ಸೊಬಗೆನಿಸೀ

ಇದಲ್ಲದೆ ಮಧ್ಯಪುಟದಲ್ಲಿ ಸಂಪಾದಕೀಯದ ಮೇಲ್ಗಡೆ ಪತ್ರಿಕೆಯ ಹೆಸರಿನ ಕೆಳಗೆ

> ವಿನಾ ನವಾರುಣಂ ನದೀನಾಯತೇ ನಿಶಾ
> ನವಾನಿಲಂ ವಿನಾ ಶಿಶಿರೋ ನ ಪುಷ್ಪವಾನ್

ಎಂದು ಮೊದಲಾಗುವ ಒಂದು ಶ್ಲೋಕವಿತ್ತು. ಮುಂದೆ ದೇಶದ ರಾಜಕೀಯ ವಾತಾವರಣಕ್ಕನುಗುಣವಾಗಿ ಕಂಠೀರವ ತನ್ನ ಧೋರಣೆಯನ್ನು ಬದಲಾಯಿಸಿಕೊಂಡಾಗ ಸಿಂಹಗಳು ಹಿಡಿದಿದ್ದ ಆಂಗ್ಲ ಸಾಮ್ರಾಜ್ಯಧ್ವಜ ಬಿದ್ದುಹೋಗಿ ಬರೇ ಸಿಂಹಗಳೆರಡು ಮಾತ್ರ ಉಳಿದುವು. ಅದರೊಂದಿಗೆ ಸಂಸ್ಕೃತ ಕನ್ನಡ ಶ್ಲೋಕಗಳೂ ಮಾಯವಾದುವು.

ಈ ಪತ್ರಿಕೆಯಲ್ಲಿ ಮೊದಮೊದಲು ಪಂಜೆ ಮಂಗೇಶರಾವ್, ಮಂಜೇಶ್ವರ ಗೋವಿಂದ ಪೈ, ಎಂ.ಎಸ್.ಕಾಮತ್, ಉಳ್ಳಾಲ ಮಂಗೇಶರಾವ್ ಮುಂತಾದವರು ಬರೆಯುತ್ತಿದ್ದರು. ಅನಂತರ ಜೆ.ವಾಮನ ಭಟ್ಟ, ಕಡೆಂಗೋಡ್ಲು ಶಂಕರಭಟ್ಟ, ಕುಡ್ಪಿ ವಾಸುದೇವ ಶೆಣೈ, ಬಿ.ಶಂಕರಭಟ್ಟ ಮುಂತಾದವರೂ ಬರೆಯುತ್ತಿದ್ದರಲ್ಲದೆ ಜಿಲ್ಲೆಯ ಹೊರಗಿನ ವಿದ್ವಾಂಸರು ವಿಶೇಷ ಲೇಖನಗಳನ್ನೂ ಬರೆಯುತ್ತಿದ್ದರು. ಕಂಠೀರವ ದಸರ ವಿಶೇಷ ಸಂಚಿಕೆಗಳನ್ನೂ ರಾಜ್ಯೋತ್ಸವ ವಿಶೇಷ ಸಂಚಿಕೆಗಳನ್ನೂ ಪ್ರಕಟಿಸಿದೆ.

ಸ್ಪಷ್ಟವಾದ ಹಾಗೂ ತೀಕ್ಷ್ಣವಾದ ಸಂಪಾದಕೀಯಕ್ಕಾಗಿ ಕಂಠೀರವ ಪ್ರಸಿದ್ಧವಾಗಿತ್ತು. ಅದರಲ್ಲಿನ ಪತ್ರವ್ಯವಹಾರ ಅದೇ ರೀತಿಯಲ್ಲಿ ಸತ್ಯ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತಿತ್ತು. ತನ್ನ ಧೋರಣೆ ಹಾಗೂ ಬರೆಹಗಳಿಗಾಗಿ ಕೆಲಕಾಲ ಅಂದಿನ ಮೈಸೂರು ಸಂಸ್ಥಾನದಲ್ಲಿ ಈ ಪತ್ರಿಕೆ ಬಹಿಷ್ಕಾರಕ್ಕೊಳಗಾಗಿತ್ತು.

1933 ಮೇ 23ರ ಸಂಚಿಕೆಯ ಕರ್ನಾಟಕ ಏಕೀಕರಣ ಎಂಬ ಸಂಪಾದಕೀಯದ ಒಂದು ವಾಕ್ಯ ಹೀಗಿದೆ:

ಹಲವು ಸರ್ಕಾರಗಳ ಆಡಳಿತಕ್ಕೆ ಒಳಪಟ್ಟು ಯಾವ ಮುಖಂಡ ಮಹನೀಯರ ಬೆಂಬಲವೂ ಇಲ್ಲದ ನಮ್ಮ ಅನಾಥ ದರಿದ್ರಕರ್ನಾಟಕ ಈ ಮಹತ್ಕಾರ್ಯವನ್ನು ಸಾಧಿಸುವುದೆಂದರೆ ಸ್ವಪ್ನಪ್ರಾಯವಲ್ಲವೇ ಎಂದು ಹಲವರು ಬಗೆಯಬಹುದಾದರೂ ಕನ್ನಡಿಗರು ತಮ್ಮ ನಿದ್ರಾವಸ್ಥೆಯಿಂದ ಎಚ್ಚತ್ತು ಏಕೀಕರಣ ಸದ್ಯದಲ್ಲೇ ಸಾಧಿಸದಿದ್ದರೂ ಅದು ಸಮೀಪಗತ ವಾಗುವುದರಲ್ಲಿ ಸಂದೇಹವಿಲ್ಲ.

1964 ಗಣರಾಜ್ಯೋತ್ಸವದ ದಿನದಂದು ದೀಕ್ಷಾದಿನವೆಂದು ಬರೆದ ಅಗ್ರಲೇಖನದ ಭಾಗ ಒಂದು ಹೀಗಿದೆ:

ಈವೊತ್ತು ನಮ್ಮದು ಪ್ರಜಾರಾಜ್ಯ. ಅದನ್ನು ಉಳಿಸಿ ಬೆಳೆಸಲು, ಆ ಕರ್ತವ್ಯ ಸಾಧಿಸಲು ನಾವು ಇಂದು ದೀಕ್ಷಾಬದ್ಧರಾಗಬೇಕಾಗಿದೆ. ಕಷ್ಟ ಕಾರ್ಪಣ್ಯ, ದುಃಖಯಾತನೆ, ಲೋಕಕ್ಕೆಲ್ಲ ಇರುವಂತೆ ನಮಗೂ ತಪ್ಪಿದ್ದಲ್ಲ. ಅದೇನಿದ್ದರೂ ಅದು ವ್ಯಕ್ತಿಗೂ ಸಮಾಜಗಳಿಗೂ ಅನ್ವಯಿಸುವಂಥದು. ರಾಷ್ಟ್ರ, ಅಂಥ ವ್ಯಕ್ತಿಗಳಿಗೂ ಸಮಾಜಗಳಿಗೂ ಅತಿ ಹೆಚ್ಚಿನದು. ಆ ರಾಷ್ಟ್ರ ಕಲ್ಯಾಣವಾದರೇನೇ ಆ ರಾಷ್ಟ್ರದ ಮತ್ತು ಸಮಾಜದ ಹಿತಸಾಧನೆ ಯಾಗುತ್ತದೆ. ಇದಕ್ಕೆ ಬೇರೆ ದಾರಿಯಿಲ್ಲ. ಅಂತಲೇ ನಾವು ಇಂದು ರಾಷ್ಟ್ರ ಉದ್ಧಾರದ ದಿಸೆಯಲ್ಲಿ ಕೆಲಕೆಲವು ದೀಕ್ಷಾಕ್ರಮಗಳನ್ನು ಕೈಗೊಳ್ಳಲೇಬೇಕಾಗುವುದು. *

**ಕಂಠೀರವ ನರಸರಾಜ ಒಡೆಯರ್ I :** ಮೈಸೂರು ರಾಜವಂಶದ ಖ್ಯಾತ ದೊರೆ (1638-59). 5ನೆಯ ಬೆಟ್ಟದ ಚಾಮರಾಜ ಒಡೆಯನ ಮಗ. ಇಮ್ಮಡಿ ರಾಜ ಒಡೆಯನ ಉತ್ತರಾಧಿಕಾರಿ. ಈತ 1615ರಲ್ಲಿ ಜನಿಸಿದ. ಚಿಕ್ಕವನಾಗಿದ್ದಾಗಲೇ ತನ್ನ ಸಾಹಸಪ್ರವೃತ್ತಿಯನ್ನೂ ಶೌರ್ಯಗುಣಗಳನ್ನೂ ಪ್ರದರ್ಶಿಸಿದ. ಆಗ ತಿರುಚಿನಾಪಳ್ಳಿ ಯಲ್ಲಿದ್ದ ಜಟ್ಟಿಯೊಬ್ಬ ಉಳಿದ ಮಲ್ಲರೆಲ್ಲರನ್ನೂ ಜಯಿಸಿ ಅಪ್ರತಿಮ ಮಲ್ಲನೆಂಬ ಹೆಸರನ್ನು ಗಳಿಸಿದ್ದ. ನರಸರಾಜ ಒಂದು ದಿನ ವೇಷ ಮರೆಸಿಕೊಂಡು ತಿರುಚಿನಾ ಪಳ್ಳಿಗೆ ಹೋಗಿ ಆಸ್ಥಾನದ ಸಾಮಂತರ ಸಮ್ಮುಖದಲ್ಲಿ ಆ ಜಟ್ಟಿಯನ್ನು ಅಪ್ಪಳಿಸಿ ಬಡಿದುಕೊಂದ. ಈ ಅಪೂರ್ವ ಸಾಧನೆಯನ್ನು ಕಂಡ ತಿರುಚಿನಾಪಳ್ಳಿಯ ಅರಸ ಇವನನ್ನು ಗೌರವಿಸಬಂದಾಗ, ಸಕಲ ಗೌರವಗಳನ್ನೂ ವಿನಯಪೂರ್ವಕವಾಗಿ ನಿರಾಕರಿಸಿ, ಯಾರಿಗೂ ತಿಳಿಯದಂತೆ ಮೈಸೂರಿಗೆ ಬಂದ.

ಈತ 1638ರಲ್ಲಿ ಮೈಸೂರಿನಲ್ಲಿ ಪಟ್ಟಾಭಿಷಿಕ್ತನಾದ. ಈತ ಅಧಿಕಾರವನ್ನು ವಹಿಸಿಕೊಂಡ ಕೂಡಲೇ ರಾಜನನ್ನೂ ಲೆಕ್ಕಿಸದೆ ಮತ್ತನಾಗಿದ್ದ ದೇಶ ದ್ರೋಹಿಯೂ ಕೊಲೆಗಾರನೂ ಆಗಿದ್ದ ದಳವಾಯಿ ವಿಕ್ರಮರಾಯನನ್ನು ಕೊಲ್ಲಿಸಿದ. ಈತ ಸಿಂಹಾಸನಾರೋಹಣ ಮಾಡಿದ ಮರುವರ್ಷವೇ ಬಾಹ್ಯಶತ್ರುಗಳನ್ನೂ ಎದುರಿಸಬೇಕಾಯಿತು. ಹಿಂದೆ ಚಾಮರಾಜನಿಂದ ಅವಮಾನಿತನಾಗಿದ್ದ ನಾಗಮಂಗಲದ ಚೆನ್ನಯ್ಯನೆಂಬುವನು ಮೈಸೂರು ರಾಜರ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುವ ದೃಷ್ಟಿಯಿಂದ ಬಿಜಾಪುರಕ್ಕೆ ಹೋಗಿ ಸುಲ್ತಾನನ ಸೈನ್ಯದ ಸಹಾಯವನ್ನು ಬೇಡಿದ. ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡುವುದಕ್ಕೆ ಸುಲ್ತಾನ ತನ್ನ ಸೇನಾನಿ ರಣದುಲ್ಲಾಖಾನನನ್ನು ದೊಡ್ಡ ಸೈನ್ಯದೊಡನೆ ಕಳುಹಿಸಿಕೊಟ್ಟ. ರಣದುಲ್ಲಾಖಾನ್ ಮೊದಲು ಇಕ್ಕೇರಿಯನ್ನು ಧ್ವಂಸಮಾಡಿ ಅಪಾರ ಹಣವನ್ನೂ ಸೈನ್ಯವನ್ನೂ ಕೂಡಿಸಿಕೊಂಡು ಶ್ರೀರಂಗಪಟ್ಟಣವನ್ನು ಆಕ್ರಮಿಸಲು ಮುನ್ನಡೆದ. ಶ್ರೀರಂಗಪಟ್ಟಣದ ಬಳಿ ನಡೆದ ಭೀಕರ ಕದನದಲ್ಲಿ ನರಸರಾಜ ಶತ್ರುವನ್ನು ಸೋಲಿಸಿ ಶಾಂತಿ ಒಪ್ಪಂದ ಮಾಡಿಕೊಂಡ.

ಅನಂತರ ಇವನು ದಕ್ಷಿಣಾಭಿಮುಖವಾಗಿ ಹೊರಟು ದಣ್ಣಾಯಕನಕೋಟೆ, ಸತ್ಯಮಂಗಲ ಮೊದಲಾದ ಹಲವಾರು ಪ್ರಾಂತ್ಯಗಳನ್ನು ಮಧುರೆ ನಾಯಕನಿಂದ ವಶಪಡಿಸಿಕೊಂಡ. ಪಶ್ಚಿಮದಲ್ಲಿ ಅರಕಲಗೂಡು ಬೆಟ್ಟದಪುರಗಳನ್ನೂ ಉತ್ತರದಲ್ಲಿ ಹೊಸೂರನ್ನೂ ಜಯಿಸಿದ. ಮಾಗಡಿ ಕೆಂಪೇಗೌಡನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆ ಪಡೆದ. 1646ರಲ್ಲಿ ಬಿಜಾಪುರದ ಸೈನ್ಯ ಮುಸ್ತಫಖಾನನ ನಾಯಕತ್ವದಲ್ಲಿ ತುರುವೇಕೆರೆಯ ಬಳಿ ನಡೆದ ಯುದ್ಧದಲ್ಲಿ ಮೈಸೂರು ರಾಜ್ಯದ ಮೇಲೆ ಮತ್ತೆ ದಾಳಿ ಮಾಡಿತು. ತುರುವೇಕೆರೆಯ ಬಳಿ ನಡೆದ ಯುದ್ಧದಲ್ಲಿ ಮೈಸೂರಿನ ದಳವಾಯಿ ನಂಜರಾಜಯ್ಯ ಪರಾಕ್ರಮದಿಂದ ಹೋರಾಡಿ, ಶತ್ರು ಸೈನ್ಯವನ್ನು ಹಿಂದಕ್ಕೆ ಅಟ್ಟಿದ. ಆದರೆ ಆತ ಯುದ್ಧಭೂಮಿಯಲ್ಲಿ ಮಡಿದ. 1648ರಲ್ಲಿ ನರಸರಾಜ ಮುಸ್ತಫಖಾನನ ಸೇನಾಧಿಪತ್ಯದಲ್ಲಿ ನಡೆದ ಬಿಜಾಪುರದ ಮತ್ತೊಂದು ದಾಳಿಯನ್ನು ಹಿಮ್ಮೆಟ್ಟಿಸಿದ. ಈ ಸಂದರ್ಭದಲ್ಲಿ ಬಿಜಾಪುರದವರೊಡನೆ ಆದ ಒಂದು ಒಪ್ಪಂದದ ಪ್ರಕಾರ ಚನ್ನರಾಯಪಟ್ಟಣದ ಕೋಟೆ ಮೈಸೂರು ಅರಸರ ವಶಕ್ಕೆ ಬಂತು.

ಇವನು ಅನೇಕ ರಕ್ಷಣಾತ್ಮಕ ಮತ್ತು ಧಾರ್ಮಿಕ ಕಾರ್ಯಗಳನ್ನು ಕೈಗೊಂಡ. ಶ್ರೀರಂಗಪಟ್ಟಣದ ಸುತ್ತಲೂ ಇದ್ದ ಕೋಟೆ ಕೊತ್ತಲಗಳನ್ನು ಬಲಪಡಿಸಿದ. ರಾಜ್ಯದ ಅನೇಕ ದೇಗುಲಗಳಿಗೆ ಅಪಾರ ಧನವನ್ನು ಉಂಬಳಿಯಾಗಿ ನೀಡಿದ. ಶ್ರೀರಂಗಪಟ್ಟಣದಲ್ಲಿ ನರಸಿಂಹ ದೇವಾಲಯವನ್ನು ಕಟ್ಟಿಸಿದ (ಈ ದೇವಾಲಯದಲ್ಲಿ ಈತನ ವಿಗ್ರಹವೊಂದಿದೆ). ಶ್ರೀರಂಗಪಟ್ಟಣದಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಅಲ್ಲಿ ಕಂಠೀರವಪಣ ಎಂಬ ನಾಣ್ಯಗಳನ್ನು ಟಂಕಿಸಿದ, ಹಲವಾರು ಅಗ್ರಹಾರಗಳನ್ನು ಕಟ್ಟಿಸಿದ, ಪ್ರಾಚೀನ ವ್ರತನಿಯಮಗಳನ್ನು ಪರಿಷ್ಕರಿಸಿದ. ಮೈಸೂರು ರಾಜ್ಯದ ವಿಸ್ತಾರ, ಬಲ ಮತ್ತು ಕೀರ್ತಿಯನ್ನು ಹೆಚ್ಚಿಸಿದ ಈತ 1659ರಲ್ಲಿ ಮೃತನಾದ. ಇವನ ರಾಣಿಯರು 1662ರಲ್ಲಿ ಕಳಲೆಯಲ್ಲಿ ಇವನ ಸ್ಮಾರಕವಾಗಿ ಒಂದು ಮಠವನ್ನು ಕಟ್ಟಿಸಿ ಅದಕ್ಕೆ ಉಂಬಳಿ ನೀಡಿದರು. ಇವನ ಕಾಲದಲ್ಲಿ ಮೈಸೂರು ರಾಜ್ಯ ಸಂಪತ್ಸಮೃದ್ಧಿಯಿಂದ ತುಂಬಿ ತುಳುಕುತ್ತಿತ್ತು. (ಬಿ.ಎಂ.)

**ಕಂಠೀರವ ನರಸರಾಜ ಒಡೆಯರ್ II :** ಮೈಸೂರು ರಾಜವಂಶದ ದೊರೆ (1704-1713). ಸುಪ್ರಸಿದ್ಧ ಚಿಕ್ಕದೇವರಾಜ ಒಡೆಯನ ಮಗ. ಜನ್ಮತಃ ಮೂಕನಾಗಿದ್ದರಿಂದ ಮೂಕರಸು ಎಂಬ ಅಡ್ಡಹೆಸರು ಈತನಿಗೆ ಪ್ರಾಪ್ತವಾಗಿತ್ತು. ಮೂಕನಾಗಿದ್ದರೂ ಅಮಾತ್ಯ ತಿರುಮಲಯ್ಯಂಗಾರ್ಯನ ಪ್ರಭಾವದಿಂದ ಇವನಿಗೆ ಪಟ್ಟ ಪ್ರಾಪ್ತವಾಯಿತು. ಪಟ್ಟವೇರಿದ ಪ್ರಾರಂಭದಲ್ಲೇ ಈತ ಚಿಕ್ಕದೇವರಾಜನ ಸರಿಯಾದ ಉತ್ತರಾಧಿಕಾರಿಯಲ್ಲ ಎಂಬ ಊಹೆಯ ನೆಪದಲ್ಲಿ ಔರಂಗಜೇಬ್ ಮೈಸೂರು ರಾಜ್ಯವನ್ನು ಆಕ್ರಮಿಸಲು ಪ್ರಯತ್ನಿಸಿದಾಗ ಇವನು ಸ್ವಲ್ಪ ಮೊತ್ತವನ್ನು ಕಪ್ಪವಾಗಿ ಕೊಡಲು ಒಪ್ಪಿದ. ಕಾರಣಾಂತರಗಳಿಂದ ಈ ದ್ರವ್ಯ ಔರಂಗಜೇಬನಿಗೆ ತಲಪಲಿಲ್ಲ. ಕೆಲವು ದಿನಗಳ ಅನಂತರ ಮುಗಲ ಸೇನಾನಿ ಸಾದತುಲ್ಲಾ ದಂಡೆತ್ತಿ ಬಂದು ಅಪಾರ ಹಣವನ್ನು ವಸೂಲಿಮಾಡಿದ. ಇವನ ನಿಶ್ಶಕ್ತಿಯನ್ನು ಗಮನಿಸಿದ ಮುಗಲರು ಆಗಾಗ್ಗೆ ಮೈಸೂರು ಭಂಡಾರದ ಲಾಭ ಪಡೆಯುತ್ತಿದ್ದರು. ಇವನ ಕಾಲದಲ್ಲಿ ದಳವಾಯಿ ಕಾಂತಯ್ಯ ಚಿಕ್ಕಬಳ್ಳಾಪುರವನ್ನು ವಶಪಡಿಸಿಕೊಳ್ಳಲು ಯತ್ನಿಸಿ ಪ್ರಾಣ ಕಳೆದುಕೊಂಡ. ಆದರೆ ಅವನ ಪುತ್ರನಾದ ಬಸವರಾಜ ಚಿಕ್ಕಬಳ್ಳಾಪುರದ ಮುತ್ತಿಗೆಯನ್ನು ಮುಂದುವರಿಸಿ ಅಲ್ಲಿಂದ ಕಪ್ಪ ಸೆಳೆದುಕೊಂಡನೆಂದು ತೋರುತ್ತದೆ.

ಇವನಲ್ಲಿ ಚಿಕ್ಕದೇವರಾಜನಲ್ಲಿದ್ದ ಶಕ್ತಿ ಸಾಮರ್ಥ್ಯಗಳಾಗಲಿ, ದೂರದೃಷ್ಟಿಯಾಗಲಿ, ರಾಜನೀತಿ ವಿಚಕ್ಷಣತೆಯಾಗಲಿ ಇರಲಿಲ್ಲವಾಗಿ ಇವನ

ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ ಕ್ಷೀಣದೆಶೆ ಬಂತು. ರಾಜ್ಯದ ಆಗುಹೋಗುಗಳು ದಳವಾಯಿಗಳ ಕೈಸೇರಿದವು. ಕಳಲೆ ವಂಶದ ದಳವಾಯಿಗಳು ಪ್ರಮುಖ ಪಾತ್ರ ವಹಿಸಲಾರಂಭಿಸಿದರು. ಈ ವಂಶದ ಚಲುವಾಜಮ್ಮಣ್ಣಿ ಕಂಠೀರವ ಇವನನ್ನು ಮದುವೆಯಾಗಿದ್ದಳು. ಇವನು 1713ರಲ್ಲಿ ಮೃತನಾದ.

ಶಿವರಾಮಕೃಷ್ಣ ಕವಿಯ ಅನಂಗವಿಜಯ ಭಾಣಃ ಎಂಬ ಸಂಸ್ಕೃತ ನಾಟಕ, ಮೈಸೂರು ದೊರೆಗಳ ಪೂರ್ವಾಭ್ಯುದಯವಿವರ ಎಂಬ ಕನ್ನಡ ಗ್ರಂಥ ಇವು ಇವನ ಕಾಲದಲ್ಲಿ ರಚಿತವಾದುವು. (ಎಸ್.)

**ಕಂಠೀರವ ನರಸಿಂಹರಾಜ ಒಡೆಯರ್ :** 1888-1940. ಮೈಸೂರಿನ ಯುವರಾಜ. ಮಹಾರಾಜ ಚಾಮರಾಜೇಂದ್ರ ಒಡೆಯರ (1863-94) ಎರಡನೆಯ ಮಗ, ನಾಲ್ವಡಿ ಕೃಷ್ಣರಾಜ ಒಡೆಯರ ತಮ್ಮ. 1888 ಜುಲೈ 5ರಂದು ಜನಿಸಿದರು. ಅಣ್ಣನೊಂದಿಗೆ ಸರ್‌ಸ್ಟ್ಯೂಯರ್ಟ್ ಫ್ರೇಸರ್‌ನಲ್ಲಿ ಬೇಸಗೆ ಅರಮನೆಯಲ್ಲಿ ಇವರ ವ್ಯಾಸಂಗ ನಡೆಯಿತು. ಪಿ.ರಾಘವೇಂದ್ರರಾವ್ ಇವರ ಇನ್ನೊಬ್ಬ ಗುರು. ರಾಜಯೋಗ್ಯವಾದ ಇತರ ವಿಷಯಗಳಲ್ಲೂ ಇವರಿಗೆ ಶಿಕ್ಷಣ ದೊರಕಿತು. ಓದಿನ ಜೊತೆಗೆ ಅಂಗ ಸಾಧನೆ, ಕುದುರೆ ಸವಾರಿ, ಶಿಕಾರಿ, ಕ್ರಿಕೆಟ್, ಟೆನಿಸ್, ಪೋಲೋ ಮೊದಲಾದವುಗಳಲ್ಲಿ ಇವರಿಗೆ ವಿಶೇಷ ಆಸಕ್ತಿಯಿತ್ತು. ಚಿಕ್ಕ ವಯಸಿನಲ್ಲೇ ರಾಜ್ಯದಲ್ಲೆಲ್ಲ ಪರ್ಯಟನ ಕೈಗೊಂಡಿದ್ದರಿಂದ ದೇಶದ ಸ್ಥಿತಿಯೂ ಜನಜೀವನದ ಪರಿಚಯವೂ ಇವರಿಗೆ ದೊರಕಿದ್ದವು. ಅಣ್ಣನೊಂದಿಗೆ ಇವರು ಬರ್ಮಾದಲ್ಲಿ ಪೆಗು, ಮಾಂಡಲೆ ಮುಂತಾದವನ್ನು ಸಂದರ್ಶಿಸಿ ಹಿಂತಿರುಗಿದರು. ಉನ್ನತ ವ್ಯಾಸಂಗಕ್ಕಾಗಿ 1903ರಲ್ಲಿ ಅಜ್ಮೀರಿನ ಮೇಯೋ ರಾಜಕುಮಾರ್ ಕಾಲೇಜನ್ನು ಸೇರಿದರೂ ಅನಾರೋಗ್ಯದ ದೆಸೆಯಿಂದ ಮರುವರ್ಷ ಮೈಸೂರಿಗೆ ಮರಳಿದರು. ಮೈಸೂರಿನಲ್ಲೇ ಕ್ಯಾಪ್ಟನ್ ಆರ್.ಜೆ.ಡಬ್ಲ್ಯೂ. ಹಿಲ್ ಮತ್ತು ಎಂ.ಎ.ನಾರಾಯಣ ಐಯಂಗಾರ್ಯರಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. 1908ರಲ್ಲಿ ಕರ್ನಲ್ ಡ್ರೇಕ್ ಬ್ರಾಕ್ಮನನ ಜೊತೆಯಲ್ಲಿ ಕಾಶ್ಮೀರದ ಪ್ರವಾಸವನ್ನು ಕೈಗೊಂಡರು.

1902ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ ರಾಜಸೂತ್ರವನ್ನು ವಹಿಸಿದಾಗ ಇವರು ಯುವರಾಜ ಪದವಿಯನ್ನಲಂಕರಿಸಿದರು. 1908-9ರಲ್ಲಿ ಜಪಾನ್ ದೇಶಕ್ಕೆ ಭೇಟಿಯಿತ್ತು ಆ ದೇಶದ ತಾಂತ್ರಿಕ ಮುನ್ನಡೆಯನ್ನು ಸಂದರ್ಶಿಸಿ ಹಿಂದಿರುಗಿದರು. 1910ರಲ್ಲಿ ಸರದಾರ್ ದಳವಾಯಿ ದೇವರಾಜೇ ಅರಸರ ನಾಲ್ಕನೆಯ ಮಗಳು ಕೆಂಪುಚಲುವಾಜಮ್ಮಣ್ಣಿಯನ್ನು ಮದುವೆಯಾದರು. 1911ರಲ್ಲಿ 5ನೆಯ ಜಾರ್ಜನ ಪಟ್ಟಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆದ ದರ್ಬಾರಿಗೆ ತಮ್ಮ ಅಣ್ಣನೊಂದಿಗೆ ಹೋಗಿದ್ದರು. ಬ್ರಿಟಿಷ್ ದೊರೆಯಿಂದ ಇವರಿಗೆ ನೈಟ್ ಕಮಾಂಡರ್ ಪ್ರಶಸ್ತಿ ದೊರಕಿತು. 1913ರಲ್ಲಿ ಐರೋಪ್ಯ ಪ್ರವಾಸ ಕೈಗೊಂಡು ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಸ್ವಿಟ್ಸರ್‌ಲೆಂಡ್ ಮತ್ತು ಬೆಲ್ಜಿಯಂ ರಾಷ್ಟ್ರಗಳನ್ನು ಸಂದರ್ಶಿಸಿದರು. ಇವರು ಪ್ರವಾಸದಿಂದ ಹಿಂದಿರುಗಿದ ಅನಂತರ ಇವರಿಗೆ ಮಹಾರಾಜರ ಸಚಿವ ಮಂಡಳಿಯ ವಿಶೇಷ ಸದಸ್ಯತ್ವ ದೊರಕಿತು. ಇವರಿಗೆ ಸೇನಾಖಾತೆಯ ಆಡಳಿತವನ್ನು ವಹಿಸಿದುದಲ್ಲದೆ ಪೊಲೀಸುದಳ, ವೈದ್ಯಕೀಯ, ನೈರ್ಮಲ್ಯ ಮತ್ತು ಸೆರೆಮನೆ ವಿಭಾಗಗಳ ಆಡಳಿತವನ್ನು ವಹಿಸಲಾಯಿತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಯುದ್ಧದಲ್ಲಿ ಹೋರಾಡಿದ ಮೈಸೂರಿನ ಯೋಧರಿಗೆ ನೋವುಂಡ ಕುಟುಂಬಗಳಿಗೆ ಪರಿಹಾರನಿಧಿಯನ್ನು ಸಂಗ್ರಹಿಸುವುದಲ್ಲದೆ ಯುದ್ಧದಲ್ಲಿ ಎಲ್ಲ ರೀತಿಯ ಸೌಕರ್ಯಗಳನ್ನೂ ಒದಗಿಸಿಕೊಡಲು ಇವರು ಪ್ರತ್ಯೇಕವಾದ ನಿಧಿಸಂಗ್ರಹವನ್ನು ಪ್ರಾರಂಭಿಸಿದರು. 1915ರಲ್ಲಿ ಬ್ರಿಟಿಷ್ ಸರ್ಕಾರದಿಂದ ಇವರಿಗೆ ಜಿ.ಸಿ.ಐ.ಇ. ಬಿರುದೂ 1918ರಲ್ಲಿ ಹಿಸ್ ಹೈನೆಸ್ ಪ್ರಶಸ್ತಿಯೂ ಲಭಿಸಿದುವು.

ಕಂಠೀರವ ನರಸಿಂಹರಾಜ ಒಡೆಯರಿಗೆ ಸಂಸ್ಥಾನದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಕಾರ್ಯಗಳಲ್ಲಿ ವಿಶೇಷ ಆಸಕ್ತಿಯಿತು. ಇವರು ಸಂಸ್ಥಾನದ ಸ್ಕೌಟ್ ಚಳವಳಿಯ ಮುಖ್ಯರಾಗಿದ್ದುದಲ್ಲದೆ ರೆಡ್ ಕ್ರಾಸ್ ಸಂಸ್ಥೆಯ ಸದಸ್ಯರಾಗಿದ್ದರು. ಗರ್ಭಿಣಿ ಮತ್ತು ಶಿಶುಸಂರಕ್ಷಣಾಕಾರ್ಯದಲ್ಲಿ ವಿಶೇಷ ಆಸ್ಥೆ ವಹಿಸಿದ್ದು ಈ ಕ್ಷೇತ್ರದಲ್ಲಿ ಅನೇಕ ಚಿಕಿತ್ಸಾಲಯಗಳ ಸ್ಥಾಪನೆಗೆ ಕಾರಣರಾದರು. ಕಿವುಡರ ಮತ್ತು ಕುರುಡರ ಶಿಕ್ಷಣಕ್ಕೆ ಇವರಿಂದ ವಿಶೇಷ ಪ್ರೋತ್ಸಾಹ ಲಭಿಸಿತು. ದೀನದಲಿತರಲ್ಲಿ ಇವರು ತೋರಿಸುತ್ತಿದ್ದ ಔದಾರ್ಯ ವಿಶೇಷವಾದುದಾಗಿತ್ತು. ಇವರ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಹಲವು ಕಡೆಗಳಲ್ಲಿ ಸ್ಥಾಪಿತವಾದ ಹರಿಜನ ವಿದ್ಯಾರ್ಥಿನಿಲಯಗಳಿಗೆ ಇವರ ಹೆಸರನ್ನಿಡಲಾಗಿದೆ. ಸಂಗೀತ ಮತ್ತು ಸಾಹಿತ್ಯದಲ್ಲಿ ಇವರಿಗೆ ಹೆಚ್ಚಿನ ಅಭಿರುಚಿ ಇತ್ತು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕ ಅಧ್ಯಕ್ಷರೂ ಮಿಥಿಕ್ ಸೊಸೈಟಿಯ ಮುಖ್ಯ ಉಪಪೋಷಕರೂ ಮೈಸೂರು ವಿಶ್ವವಿದ್ಯಾನಿಲಯದ ಪ್ರೊ-ಛಾನ್ಸೆಲರೂ ಆಗಿದ್ದರು. ಕಂಠೀರವ ನರಸಿಂಹರಾಜ ನಾಮಾಂಕಿತ ಕಟ್ಟಡಗಳೂ ರಸ್ತೆಗಳೂ ಬಡಾವಣೆಗಳೂ ದಕ್ಷಿಣ ಕರ್ನಾಟಕದಲ್ಲಿವೆ. ಕಂಠೀರವ ನರಸಿಂಹರಾಜ ಒಡೆಯರು ಧರ್ಮಗಳ ವಿಷಯದಲ್ಲೂ ವಿಶೇಷ ಆಸಕ್ತಿ ವಹಿಸಿದ್ದರು. ಇವರು ಮುಖ್ಯವಾಗಿ ಹಿಂದು ಮುಸಲ್ಮಾನರ ಏಕತೆಗೆ ಸಾಕಷ್ಟು ಶ್ರಮಿಸಿದರು.

ಇವರು 1940 ಮಾರ್ಚ್ 11ರಂದು ಮುಂಬಯಿಯಲ್ಲಿ ನಿಧನರಾದರು. ಕೃಷ್ಣರಾಜ ಒಡೆಯರ ಅನಂತರ ಮೈಸೂರು ಸಂಸ್ಥಾನದ ರಾಜರಾದ ಜಯಚಾಮರಾಜ ಒಡೆಯರು (ನೋಡಿ) ಇವರ ಪುತ್ರ. (ಎಸ್.)

**ಕಂಠೀರಾವ್ :** 1926-. ಕರ್ನಾಟಕ ರಾಜಭಾಷಾ ಆಯೋಗದ ಅಧ್ಯಕ್ಷರು. ಕನ್ನಡ ಕಾನೂನು ಸಾಹಿತ್ಯ ಲೇಖಕರು. ಬಹು ಭಾಷಾ ವಿಶಾರದರು. ಇವರು ರಾಯಚೂರು ಜಿಲ್ಲೆ ಗುಡುಗುಂಟೆ ಸಂಸ್ಥಾನದ ಜಹಗೀರದಾರರ ಮನೆತನಕ್ಕೆ ಸೇರಿದವರು. 1926ರಲ್ಲಿ ಜನಿಸಿದರು. ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಎಲ್.ಎಲ್.ಬಿ. ಪದವಿಗಳನ್ನು ಪಡೆದರು. ಕರ್ನಾಟಕ ರಾಜ್ಯದ ಭಾಷಾಂತರ ನಿರ್ದೇಶನಾಲಯದಲ್ಲಿ ಸೇವೆ ಸಲ್ಲಿಸಿ ಅದರ ನಿರ್ದೇಶಕರಾಗಿ ನಿವೃತ್ತರಾದರು. ಆಡಳಿತ ಪದಕೋಶ ಪರಿಶೀಲನಾ ಸಮಿತಿಯ ಅಧ್ಯಕ್ಷರೂ ಆಗಿದ್ದ ಇವರು ಅನಂತರ ರಾಜಭಾಷಾ ಆಯೋಗದ ಅಧ್ಯಕ್ಷರೂ ಆದರು.

ಕಾನೂನು ಮತ್ತು ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಕನ್ನಡದಲ್ಲಿ 16ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಭಾರತೀಯ ನ್ಯಾಯ ಪದ್ಧತಿ, ಮಕ್ಕಳು ಮತ್ತು ಕಾನೂನು ಎಂಬ ಗ್ರಂಥಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನಗಳು ಬಂದಿವೆ. ಆಡಳಿತ ವಿಷಯ ಪಾರಿಭಾಷಿಕ, ಇಸ್ಲಾಮೀನ್ಯಾಯ, ಕಾನೂನು ಭಾಷೆ-ಭಾಷಾಂತರ ಸಮಸ್ಯೆ, ನ್ಯಾಯ ನಿಬಂಧನೆ - ಇವರ ಇತರ ಮುಖ್ಯ ಕೃತಿಗಳು. ಆಡಳಿತ ಸಂಬಂಧಿಯಾದ ಶುಷ್ಕ ಭಾಷಿಕ ವಿಚಾರವನ್ನೂ ಹಿತವಾಗಿ ಹೃದ್ಯವಾಗಿ ಬರೆಯುವ ಕಲೆ ಇವರಿಗೆ

ಸಿದ್ಧಿಸಿತ್ತು. ಇಂಗ್ಲಿಷ್, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ಆಳವಾದ ಜ್ಞಾನ ಹೊಂದಿದ್ದ ಇವರು ಭಾರತೀಯ ಕಾನೂನಿನ ತಳಹದಿಯಾದ ಸಂಸ್ಕೃತ ಕೃತಿಗಳ ಸಾರವನ್ನು ಮನಮುಟ್ಟುವಂತೆ ನಿರೂಪಿಸುವ ಮತ್ತು ವಿಶ್ಲೇಷಿಸುವ ವಿಶೇಷ ಪಾಂಡಿತ್ಯ ಮತ್ತು ಸಾಮರ್ಥ್ಯವನ್ನು ಪಡೆದಿದ್ದರು. ಉತ್ತಮ ವಾಗ್ಮಿಯಾಗಿದ್ದ ಇವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸಿ ವಿದ್ವಜ್ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ರಾಜ್ಯದ ಭಾಷಾಂತರ ನಿರ್ದೇಶನಾಲಯದ ರೂವಾರಿಯಾಗಿದ್ದ ಇವರನ್ನು ವಿ.ಕೃ.ಗೋಕಾಕರು ಕನ್ನಡ ಕಾನೂನು ಆಚಾರ್ಯ ಎಂದು ಕರೆದಿದ್ದಾರೆ. ಸೇವೆಯಿಂದ ನಿವೃತ್ತರಾದ ಮೇಲೂ ಇವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗಾಗಿ ಹಲವು ಭಾಷಾಂತರ ಕಾರ್ಯಗಳಲ್ಲಿ ತೊಡಗಿದ್ದರು. ಇವರು ನಿವೃತ್ತಿಯ ಅನಂತರ ಹೆಚ್ಚುಕಾಲ ಬದುಕಲಿಲ್ಲ. *

**ಕಂತಿ :** ಸು.110. ಕನ್ನಡದ ಮೊದಲ ಕಬ್ಬಿಗಿತಿ. ಈಕೆ ಅಭಿನವ ಪಂಪನ (ನಾಗಚಂದ್ರ) ಸಮಕಾಲೀನೆ, ದೋರರಾಯನ ಆಸ್ಥಾನ ಪಂಡಿತೆ ಎಂಬ ಹೇಳಿಕೆಗಳಿವೆ. ಇದರ ಬಗ್ಗೆ ಭಿನ್ನಾಭಿಪ್ರಾಯಗಳೂ ಇವೆ.

ಕಂತಿ, ಕಂತಿಕೆ ಜೈನಸಂನ್ಯಾಸಿನಿಯರನ್ನು ನಿರ್ದೇಶಿಸುವ ಸಾಮಾನ್ಯ ಹೆಸರು. ಇದರಿಂದ ಕಂತಿ ಎಂಬ ವ್ಯಕ್ತಿ ಇದ್ದಿರಬಹುದಾದರೂ ಜೈನ ಮತೀಯಳಿರಬೇಕೆಂದು ವಿದ್ವಾಂಸರ ಊಹೆ. ಇವಳ ಸಮಕಾಲೀನನೆಂದು ಹೇಳುವ ನಾಗಚಂದ್ರನ ಕಾವ್ಯಗಳಲ್ಲಿ ಕಂತಿ ಎಂಬ ಹೆಸರಿನ ಉಲ್ಲೇಖವಾಗಲಿ, ಅವಳಿಗೆ ಸಂಬಂಧಿಸಿದ ಯಾವುದೆ ವಿಷಯಗಳಾಗಲಿ ತಿಳಿದುಬರುವುದಿಲ್ಲ. ದೋರರಾಯ ಯಾರೆಂಬುದು ಸರಿಯಾಗಿ ತಿಳಿಯದು. ನಾಗಕುಮಾರ ಚರಿತ್ರೆಯ ಕರ್ತೃ ಬಾಹುಬಲಿ ಕವಿ (16ನೆಯ ಶತಮಾನ), ರಾಜಾವಳೀ ಕಥೆಯ ಕರ್ತೃ ದೇವಚಂದ್ರ (19ನೆಯ ಶತಮಾನ) ಇವಳ ಹೆಸರನ್ನು ಹೇಳುತ್ತಾರೆ. ಅಲ್ಲದೆ ಇವರ ಕಾವ್ಯಗಳಿಂದ ಕಂತಿಯ ಬಗ್ಗೆ ಕೆಲವು ಕುತೂಹಲಕರ ಸಂಗತಿಗಳೂ ತಿಳಿದುಬರುತ್ತವೆ. ರಾಜಾವಳೀ ಕಥೆಯಲ್ಲಿ ಕಂತಿ ಕಬ್ಬಿಗಿತಿ ಆದದ್ದು ಒಂದು ಪವಾಡವಾಗಿ ಚಿತ್ರಿತವಾಗಿದ್ದು ಆ ಕಥೆ ಹೀಗಿದೆ. ದೋರರಾಯನ ಮಂತ್ರಿಯಾದ ಧರ್ಮಚಂದ್ರನ ಮಗ ವೃತ್ತಿಯಿಂದ ಉಪಾಧ್ಯಾಯ. ಆತ ವಿದ್ಯಾರ್ಥಿಗಳಿಗೆ ಛಂದಸ್ಸು ಅಲಂಕಾರಶಾಸ್ತ್ರ ವ್ಯಾಕರಣ ಕಾವ್ಯಾದಿ ಪಾಠ ಹೇಳುತ್ತಿದ್ದು ಮಕ್ಕಳಿಗೆ ತಿಳುವಳಿಕೆ ಹೆಚ್ಚಿಸಲು ಜೋತಿಷ್ಮತೀ ತೈಲವೆಂಬ ವಿಶಿಷ್ಟ ತೈಲವನ್ನು ಸಿದ್ಧಪಡಿಸಿ ಒಂದು ಪುಟ್ಟ ಕುಡಿಕೆಯಲ್ಲಿಟ್ಟುಕೊಂಡಿದ್ದು ಸ್ವಲ್ಪ ದಡ್ಡರಾಗಿದ್ದ ಶಿಷ್ಯರಿಗೆ ಅರ್ಧ ಬಿಂದು ತೈಲ ಕುಡಿಸುತ್ತಿದ್ದ. ಇದರಿಂದ ಅವರಲ್ಲಿ ದಡ್ಡತನ ತೊಲಗಿ ಚುರುಕು ಕಾಣುತ್ತಿತ್ತು. ಕಂತಿ ಈತನ ಮನೆಗೆಲಸದವಳು. ಒಮ್ಮೆ ತಿಳಿಯದೆ ಆ ಕುಡಿಕೆಯಲ್ಲಿದ್ದ ತೈಲವನ್ನೆಲ್ಲ ಕುಡಿದುಬಿಟ್ಟಳು. ಕೂಡಲೆ ಅವಳ ಮೈಯಲ್ಲಿ ಉರಿ ಹತ್ತಿದಂತಾಗಿ ಅದರ ಶಮನಕ್ಕಾಗಿ ಹತ್ತಿರದ ಬಾವಿಗೆ ದುಮುಕಿದಳು. ಪುಣ್ಯವಿಶೇಷದಿಂದ ಬಾವಿಯಲ್ಲಿ ಹೆಚ್ಚಾಗಿ ನೀರಿಲ್ಲದ್ದರಿಂದಾಗಿ ಬದುಕಿದಳು. ಉರಿಯೆಲ್ಲ ಕಡಿಮೆಯಾಯಿತು. ಕುರಿತೋದದ ಕಂತಿ ಕಾವ್ಯ ಕಟ್ಟುವ ಪರಿಣತ ಮತಿಯಾದಳು. ಈಕೆಯ ಕಾವ್ಯಗಳಾವುವೂ ದೊರೆತಿಲ್ಲ. ಆದರೆ ಕಂತಿ ಹಂಪನ ಸಮಸ್ಯೆಗಳೆಂಬ - ಜನಪ್ರಿಯ ಹೆಸರು ಪಡೆದ ಈ ಸಂವಾದಗಳಲ್ಲಿ ಕೆಲವು ಸ್ಪರ್ಧಾಮನೋಭಾವದಿಂದ ಕೂಡಿರುವುದೂ ಉಂಟು. ಕಾವ್ಯದ ಬುದ್ಧಿಯ ಚಮತ್ಕಾರ ಬಹುವಾಗಿ ಕಂಡುಬರುತ್ತದೆ. ಅಲ್ಲಲ್ಲಿ ಕಾವ್ಯದ ಮಿಂಚು ಪಡೆದು ಕೆಲವು ಸಮಸ್ಯೆಗಳು ಸರಸಹಾಸ್ಯದ ಚಿಲುಮೆಯಾಗಿ ಪುಟಿದಿವೆ. ಸಂವಾದದಲ್ಲಿ ನಾಗಚಂದ್ರ ಒಡ್ಡುವ ಸಮಸ್ಯೆಗಳನ್ನು ಕಂತಿ ಚಮತ್ಕಾರದಿಂದ ಉತ್ತರ ಕೊಟ್ಟು ಪರಿಹರಿಸುತ್ತಿದ್ದಳು. ಉದಾ: ದನವಂ ಕಡಿಕಡಿದು ಬಸದಿಗೆಚಿಯುತ್ತಿರ್ದರ್ ಎಂದು ಹಂಪ ಹೇಳಿದರೆ, ವನದೊಳಗೆ ಪುಟ್ಟಿ ಬೆಳೆಯುತೆ ತನಿಗಂಪಂ ಪತ್ತುದೆಸೆಗೆ ಬೀರುತ್ತಿರ್ಪಾ ಘನತರ ಸುರುಚಿರ ಸಚ್ಛಂದನವಂ ಕಡಿಕಡಿದು ಬಸದಿಗೆಚಿಯುತ್ತಿರ್ದರ್ ಎಂದು ಕಂತಿ ಉತ್ತರ ನೀಡುತ್ತಿದ್ದಳು. ಒಮ್ಮೊಮ್ಮೆ ಕಂತಿಯೂ ಹಂಪನಿಗೆ ಸಮಸ್ಯೆ ಒಡ್ಡುತ್ತಿದ್ದಳು. ಅಂಥ ಒಂದು ನಿದರ್ಶನ: 'ನಿನ್ನ ಕವಿತ್ವಮೆಲ್ಲಂ ಮುಡಕೆ ತುಡಕೆ ಅಡುಕೆ ಹೊಡಕೆ ಎಂದು ಕಂತಿ ಹೇಳಿದರೆ, ಮುಡಕೆ ನಿಮಿರ್ದಾಡೆ ಜಡೆಗಳ್ ತುಡುಕೆ ಶರೌಘಮುಮನಭವನತಿಕೋಪದೊಳಂ ಅಡಕೆ ಮರುಳ್ಗಳ್ ಪೆಣನಂ ಹೊಡಕೆಡೆದರ್ ದೈತ್ಯರಂದು ತ್ರಿಪುರಸ್ಥಳದೊಳ್' ಎಂದು ಹಂಪ ಉತ್ತರ ನೀಡಿದ. ಈ ಕಾವ್ಯಸ್ಪರ್ಧೆಯಲ್ಲಿ ಯಾವಾಗಲೂ ಕಂತಿಯದೇ ಮೇಲುಗೈ. ಇದರಿಂದಾಗಿ ಅಭಿನವವಾಗ್ದೇವಿಯೆಂದು ಹೆಸರು ಹೊಂದಿದ್ದ ಕಂತಿಯಿಂದ ಒಮ್ಮೆ ಹೊಗಳಿಸಿಕೊಳ್ಳಬೇಕೆಂದು ಅಭಿನವಪಂಪನಿಗೆ ಆಸೆಯಾಯಿತಂತೆ. ಇದಕ್ಕಾಗಿ ಆತ ಒಂದು ಉಪಾಯ ಯೋಚಿಸಿದ. ಒಂದು ದಿನ ತಾನು ಸತ್ತಂತೆ ಸುಳ್ಳು ಸುದ್ದಿ ಹಬ್ಬಿಸಿ ಮುಸುಕು ಹಾಕಿಕೊಂಡು ಮಲಗಿದ. ಸುದ್ದಿ ತಿಳಿದು ಕಂತಿ ಧಾವಿಸಿ ಬಂದಳು. ಸತ್ತುಮಲಗಿದ್ದ ಕವಿಯ ಶಕ್ತಿಸಾಮರ್ಥ್ಯಗಳನ್ನು ನಾನಾಪರಿಯಲ್ಲಿ ಸ್ತುತಿಸಿದಳು. ಹೊಗಳಿಸಿಕೊಂಡ ಪಂಪ ದಿಗ್ಗನೆ ಎದ್ದು ಕುಳಿತ. ತನ್ನ ಪಂಥ' ಗೆದ್ದಿತೆಂದ. ಅದಕ್ಕೂ ಕಂತಿ ಸೋಲದೆ ಸತ್ತ ಹಂಪನನ್ನು ಹೊಗಳಿದೆ ಎಂದಳಂತೆ. ಈ ಗ್ರಂಥದ ಶೈಲಿ ನಾಗಚಂದ್ರನ ಕಾಲದ ಹಳಗನ್ನಡವಾಗಿರದೆ ಹೊಸಗನ್ನಡದ ಒಂದು ಬಗೆ ಇರುವಂತಿದ್ದು ಸಮಸ್ಯಾಪದ್ಯಗಳಲ್ಲಿ ಹೆಚ್ಚಾಗಿ ಶ್ಲೇಷೆ, ವಿಚಿತ್ರ ಶಬ್ದಜೋಡಣೆ ಕಂಡುಬರುತ್ತದೆ. ಇದನ್ನು ಲಕ್ಷಿಸಿದರೆ ಕೊನೆಗೂ ಕಂತಿ ಕಲ್ಪನೆಯ ವ್ಯಕ್ತಿಯೇ, ಕಂತಿ ಹಂಪನ ಸಮಸ್ಯೆಗಳು ಇವಳು ರಚಿಸಿದ ಗ್ರಂಥವೇ ಎಂಬ ಅನುಮಾನ ಉಳಿಯುತ್ತದೆ. ಒಟ್ಟಿನಲ್ಲಿ ಇದರ ಬಗ್ಗೆ ನಿರ್ಣಯಾತ್ಮಕವಾಗಿ ಹೇಳಬಲ್ಲ ಆಧಾರಗಳು ಯಾವುವೂ ಇದುವರೆಗೆ ದೊರೆತಿಲ್ಲ. (ಎಚ್.ಪಿ.ಎಸ್.)

**ಕಂದ [1] :** ಒಂದು ಮಾತ್ರಾವೃತ್ತ. ಚಂಪೂಕಾವ್ಯಗಳಲ್ಲಿ ಇದರ ಬಳಕೆ ವಿಶೇಷವಾಗಿ ಕಾಣುತ್ತದೆ. ಕಂದವನ್ನೇ ಮುಖ್ಯ ಛಂದಸ್ಸಾಗಿಟ್ಟುಕೊಂಡು ರಚಿಸಿರುವ ಕೃತಿಗಳೇ ಕನ್ನಡದಲ್ಲಿ ಇವೆ. ಲಕ್ಷಣಗ್ರಂಥಗಳ ಸೂತ್ರಗಳು ಸಾಮಾನ್ಯವಾಗಿ ಕಂದದಲ್ಲಿಯೇ ಕಟ್ಟಿದವಾಗಿವೆ. ಉದಾಹರಣೆಗೆ, ಜನ್ನಕವಿಯ ಯಶೋಧರ ಚರಿತೆ (1209), ಕೇಶಿರಾಜನ ಶಬ್ದಮಣಿ ದರ್ಪಣ (ಸು.1260) ಇಂಥವನ್ನು ಹೇಳಬಹುದು. ಹೀಗೆ ಕನ್ನಡ ಕವಿಗಳಿಗೆ ಕಂದ ಅಚ್ಚುಮೆಚ್ಚಿನ ಛಂದಸ್ಸು. ಕಂದಂಗಳಮೃತ ಲತಿಕಾ | ಕಂದಂಗಳ್ | .......... ಕಂದಂಗಳ್ ವಾಗ್ವನಿತೆಯ | ಕಂದಂಗಳ್ .......... ಎಂದು ಮುಂತಾಗಿ ಹರಿಹರ, ಸುರಂಗಕವಿ ಮೊದಲಾದ ಒಬ್ಬಿಬ್ಬರು ಕವಿಗಳು ತಮ್ಮ ಮೆಚ್ಚಿಗೆಯನ್ನು ವ್ಯಕ್ತವಾಗಿಯೇ ತಿಳಿಸಿದ್ದಾರೆ.

ಕನ್ನಡದಲ್ಲಿ ಕಂದದ ಬಳಕೆಗೆ ದೀರ್ಘವಾದ ಇತಿಹಾಸವಿದೆ. ಪ್ರಾಚೀನ ಕನ್ನಡ ಶಾಸನಗಳಲ್ಲಿಯೇ ಅದು ತಲೆದೋರಿದೆ. ಕವಿರಾಜಮಾರ್ಗದಲ್ಲಿಯ (ಸು.850) ಸೂತ್ರೋದಾಹರಣೆಗಳಲ್ಲಿ ಅದು ವಿಪುಲವಾಗಿ ಬಳಕೆಯಾಗಿದೆ. ಅದರ ಬಂಧದ ಸೊಗಸು ನೆನೆಯತಕ್ಕದ್ದಾಗಿದೆ. ಅಲ್ಲಿಂದೀಚೆಗೆ ಪಂಪ ಮೊದಲಾದ ಕನ್ನಡ ಚಂಪೂ ಕವಿಗಳು ತಮ್ಮ ಕೃತಿಗಳಲ್ಲಿ ಕಂದವನ್ನು ಇತರ ವೃತ್ತಜಾತಿಗಳಿಗಿಂತ ಪ್ರಾಯಃ ಹೆಚ್ಚಾಗಿಯೇ ಎನ್ನುವಂತೆ ಹೇರಳವಾಗಿ ಬಳಸಿದ್ದಾರೆ. ಕವಿರಾಜ ಮಾರ್ಗದ ಕರ್ತೃವೂ ಪಂಪ, ಜನ್ನ, ಷಡಕ್ಷರಿ ಈ ಮೊದಲಾದ ಕೆಲವರೂ ಕಂದ ಪದ್ಯವನ್ನು ಸೊಗಸಾಗಿ ಬರೆಯಬಲ್ಲವರೆಂದು ಹೆಸರಾಗಿದ್ದಾರೆ. ಅದು ಹಳಗನ್ನಡ ಸಾಹಿತ್ಯದ ಜೀವಾಳವಾದ ಛಂದಸ್ಸು. ಅದರ ಲಕ್ಷಣದಲ್ಲಿ, ನಡುಗನ್ನಡದ ಕಾಲದಿಂದೀಚೆಗೆ ಆಗಾಗ ಶೈಥಿಲ್ಯಗಳು ತಲೆದೋರದಿದ್ದರೂ ಇಂದಿಗೂ ಅದರ ರಚನೆ ನಿಂತಿಲ್ಲ.

ಕಂದಪದ್ಯ ಸಂಸ್ಕೃತದ ಮಾತ್ರಾವೃತ್ತಗಳಲ್ಲಿ ದ್ವಿಪದಿಯಾದ ಆರ್ಯಾ ಅಥವಾ ಪ್ರಾಕೃತದ ಮಾತ್ರಾವೃತ್ತಗಳಲ್ಲಿ ದ್ವಿಪದಿಯಾದ ಗಾಥಾ ಎಂಬ ವೃತ್ತಜಾತಿಯ ವರ್ಗಕ್ಕೆ ಸೇರಿದ್ದಾಗಿದೆ. ಆರ್ಯೆಯ ಸಾಮಾನ್ಯಲಕ್ಷಣ ಹೀಗೆ ಎರಡು ಅರ್ಧಗಳು ಪೂರ್ವಾರ್ಧದಲ್ಲಿ 7 ಚತುರ್ಮಾತ್ರಾಗಣ + 1 ಗುರು (=30ಮಾತ್ರೆ); ಉತ್ತರಾರ್ಧದಲ್ಲಿ 5 ಚತುರ್ಮಾತ್ರಾಗಣ + 1 ಲಘು + 1 ಚತುರ್ಮಾತ್ರಾಗಣ + 1 ಗುರು (=27ಮಾತ್ರೆ); ಎರಡೂ ಅರ್ಧಗಳ ವಿಷಮಸ್ಥಾನಗಳಲ್ಲಿ ಮಧ್ಯಗುರುವಿನ ಗಣ (ಜಗಣ) ಬರಕೂಡದು; ಪೂರ್ವಾರ್ಧದಲ್ಲಿ 6ನೆಯ ಗಣಸ್ಥಾನದಲ್ಲಿ ತಪ್ಪದೆ ಮಧ್ಯ ಗುರುವಿನ ಗಣ (ಜಗಣ); ಅಥವಾ ಸರ್ವಲಘುವಿನ ಗಣ ಬಂದಿರಬೇಕು ಸರ್ವ ಲಘುವಿನ ಗಣವಾಗಿದ್ದ ಪಕ್ಷದಲ್ಲಿ 2ನೆಯ ಲಘುವಿಂದ ಹೊಸಪದ ಆರಂಭವಾಗಿರಬೇಕು. ಆದರೆ ಪೂರ್ವಾರ್ಧದ 7ನೆಯ ಗಣ ಅಥವಾ ಉತ್ತರಾರ್ಧದ 5ನೆಯ ಗಣ ಇವು ಸರ್ವಲಘು ರೀತಿಯದಾಗಿದ್ದರೆ 1ನೆಯ ಲಘುವಿಂದಲೇ ಹೊಸಪದ ಆರಂಭವಾಗಬೇಕು. ಚತುರ್ಮಾತ್ರಾಗಣಗಳ ಕಟ್ಟು ಕೆಡಬಾರದು.

ಗಾಥಾದ ಲಕ್ಷಣವೂ ಇದೇ ರೀತಿಯಾಗಿರುತ್ತದೆ. ಆರ್ಯಾ ಮತ್ತು ಗಾಥಾ ಎರಡರಲ್ಲಿಯೂ ಲಕ್ಷಣದ ಚೌಕಟ್ಟನ್ನು ಹೀಗೆಯೇ ಉಳಿಸಿಕೊಂಡು ಮಾತ್ರಾಸಂಖ್ಯೆಯಲ್ಲಿ ಮಾತ್ರ ಅದಲು ಬದಲು ಮಾಡಿಕೊಳ್ಳುವುದರ ಮೂಲಕ, ಅಲ್ಪಸ್ವಲ್ಪ ವ್ಯತ್ಯಾಸವನ್ನು ಮಾಡಿ ಕೊಳ್ಳುವುದರ ಮೂಲಕ, ಕೆಲವು ಪ್ರಭೇದಗಳನ್ನು ಕಲ್ಪಿಸಿಕೊಂಡಿದೆ. ಆರ್ಯಾದಲ್ಲಿ ಗೀತಿ: 30, 30; ಉದ್ಗೀತಿ 27, 30; ಉಪಗೀತಿ 27, 27; ಆರ್ಯಾಗೀತಿ 32, 32 ಇತ್ಯಾದಿ. ಹೀಗೆಯೇ ಗಾಥಾದಲ್ಲಿ ಕೂಡ.

ಸಂಸ್ಕೃತದ ಆರ್ಯಾಪ್ರಭೇದಗಳಲ್ಲಿ ಆರ್ಯಾಗೀತಿ ಎಂಬುದೂ ಪ್ರಾಕೃತ ಗಾಥಾ ಪ್ರಭೇದಗಳಲ್ಲಿ ಸ್ಕಂಧಕ ಎಂಬುದೂ ಕನ್ನಡ ತೆಲುಗುಗಳ ಕಂದವನ್ನು ಹತ್ತಿರದಿಂದ ಹೋಲತಕ್ಕವಾಗಿವೆ. ಆದುದರಿಂದ ಅವುಗಳ ಸ್ವರೂಪವನ್ನು ಸ್ವಲ್ಪ ಗಮನಿಸಬೇಕಾಗುತ್ತದೆ.

ಸಂಸ್ಕೃತದಲ್ಲಿ ಆರ್ಯಾಗೀತಿ ಎಂದು ಹೇಳಿರುವುದನ್ನೆ ಪ್ರಾಕೃತದಲ್ಲಿ ಸ್ಕಂಧಕ ಎಂದಿರುತ್ತದೆ. ಭರತಪಿಂಗಲಾದ್ಯರು ಆರ್ಯಾಗೀತಿಯ ಲಕ್ಷಣವನ್ನೂ ಸ್ವಯಂಭು ಹೇಮಚಂದ್ರಾದ್ಯರು ಸ್ಕಂಧಕದ ಲಕ್ಷಣವನ್ನೂ ನಿರೂಪಿಸಿದ್ದಾರೆ. ಅವುಗಳ ಲಕ್ಷಣ ಒಂದೇ. ಅದು ಹೀಗೆ: ಎರಡು ಅರ್ಧಗಳು; ಪ್ರತಿಯರ್ಧದಲ್ಲಿಯೂ 8 ಚತುರ್ಮಾತ್ರಾಗಣಗಳಿರುತ್ತವೆ. ಎರಡೂ ಅರ್ಧಗಳ 6ನೆಯ ಗಣಸ್ಥಾನದಲ್ಲಿ ತಪ್ಪದೆ ಮಧ್ಯಗುರುವಿನ ಗಣವೋ (ಜಗಣ) ಸರ್ವಲಘುವಿನ ಗಣವೋ ಬಂದಿರುತ್ತದೆ. (ಸುಲ್ಹಣ ಮೊದಲಾದ ಕೆಲವರು ಆರ್ಯೆಯನ್ನೆ 2 ಮಾತ್ರೆಗಳಿಂದ ಬೆಳೆಸಿದ್ದು ಎಂಬುದಾಗಿ ಹೇಳಿರುವುದುಂಟು. ಆಗ ಮಾತ್ರಾ ಸಂಖ್ಯೆ ಕ್ರಮವಾಗಿ 32, 29 ಆಗುವುದು. ಆದರೆ 32 ಮಾತ್ರೆಗಳ 2 ಸಮಾರ್ಧಗಳಾಗಿ ತಿಳಿಯುವುದೇ ಸಾಮಾನ್ಯ).

ಆರ್ಯಾ ಅಥವಾ ಗಾಥಾಭೇದವಾದ, ಎರಡು ಸಮಾರ್ಧಗಳನ್ನುಳ್ಳ, ಗೀತಿಯ (30,30) ಎರಡೂ ಅರ್ಧಗಳ ಕೊನೆಯ ಗುರುವಿಗೆ ಇನ್ನೊಂದು ಗುರುವನ್ನು ಸೇರಿಸಿ ಒಂದು ಚತುರ್ಮಾತ್ರಾಗಣವನ್ನಾಗಿ ಮಾಡಿಕೊಂಡದ್ದು (32, 32) ಆರ್ಯಾಗೀತಿ ಅಥವಾ ಸ್ಕಂಧಕಯೆನಿಸಿದಂತೆ ತೋರುತ್ತದೆ. ಆರ್ಯೆ (ಗಾಥೆಯ) ಗೀತಿಯಾದಾಗ ಆರ್ಯೆಯ (ಗಾಥೆಯ) ಪೂರ್ವಾರ್ಧದ ಲಕ್ಷಣ ಗೀತಿಯ ಪೂರ್ವಾರ್ಧ ಉತ್ತರಾರ್ಧಗಳಿಗೂ ಅನ್ವಯಿಸಿದಂತೆ, ಗೀತಿ ಆರ್ಯಾಗೀತಿಯಾದಾಗ (ಸ್ಕಂಧ'ಕವಾದಾಗ) ಗೀತಿಯ ಲಕ್ಷಣ ಆರ್ಯಾಗೀತಿಗೂ (ಸ್ಕಂಧ'ಕಕ್ಕೂ) ಅನ್ವಯಿಸಿತೆಂದು ಸಹಜವಾಗಿಯೇ ತಿಳಿಯಬಹುದು. ಮುಖ್ಯವಾಗಿ, ಸೂತ್ರಕಾರರೂ ವ್ಯಾಖ್ಯಾನಕಾರರೂ ಆರ್ಯಾಗೀತೆ (ಸ್ಕಂಧಕ) ಪ್ರತಿಯರ್ಧದಲ್ಲಿ 8 ಚತುರ್ಮಾತ್ರಾಗಣಗಳಿಂದ ಕೂಡಿದ್ದು, ಅದರ 6ನೆಯ ಗಣ ಸ್ಥಾನದಲ್ಲೆಲ್ಲ ಮಧ್ಯಗುರುವಿನ ಗಣ (ಜಗಣ) ಅಥವಾ ಸರ್ವಲಘುವಿನ ಗಣ ಬರತಕ್ಕದ್ದು ಎಂಬುದನ್ನು ಒತ್ತಿ ಹೇಳಿದ್ದಾರೆ. ಆರ್ಯಾದ ಅಥ'ವಾ ಗಾಥಾದ (ಗೀತಿಯ) 7ನೆಯ ಲಕ್ಷಣಾಂಶವನ್ನು ಎತ್ತಿರುವಂತೆ ತೋರುವುದಿಲ್ಲ. ಆದರೆ ಎರಡೂ ಅರ್ಧಗಳ 6 ಮತ್ತು 7ನೆಯ ಗಣಗಳು ಸರ್ವ ಲಘುವಿನ ಗಣಗಳಾದಾಗ ಪಾಲಿತವಾಗಬೇಕಾದ ನಿಯಮವನ್ನು ಕೂಡ ಆರ್ಯಾ ಗೀತಿಗೆ (ಸ್ಕಂಧಕಕ್ಕೆ) ಅವರು ಒಪ್ಪಿದ್ದಾರೆಂಬುದು ಗ್ರಹಿಸಬಹುದು.

ಮೊದಲು ಪ್ರಾಯಃ ಸಂಸ್ಕೃತದಲ್ಲಿ ಆರ್ಯಾಪ್ರಭೇದವಾಗಿ ಆರ್ಯಾಗೀತಿ ಕಾಣಿಸಿಕೊಂಡಿರಬೇಕು. ಅದೇ ಅನಂತರದಲ್ಲಿ ಪ್ರಾಕೃತಕ್ಕೆ ಸ್ಕಂಧಕವೆಂಬ ಹೆಸರಿಂದ ಗಾಥಾ ಪ್ರಭೇದಗಳ ಸಾಲಿಗೆ ಸ್ವೀಕೃತವಾಗಿರಬೇಕು. ಆರ್ಯಾಗೀತಿಯ ಲಕ್ಷಣವನ್ನು ಭರತ, ಪಿಂಗಲ, ಮೊದಲಾದ ಪ್ರಾಚೀನರು ಹೇಳಿರುವುದು ಈ ಭಾವನೆಗೆ ಅವಕಾಶಕೊಡುತ್ತದೆ. ಆದರೆ ಈ ಪೌರ್ವಾಪರ್ಯವನ್ನು ಹೀಗೆಯೇ ಸರಿ ಎನ್ನುವುದು ಕಷ್ಟ.

ಈಗ ಆರ್ಯಾಗೀತಿಗೂ ಸ್ಕಂಧಕಕ್ಕೂ ಒಂದೊಂದು ಉದಾಹರಣೆಯನ್ನು ನೋಡಬಹುದು.

1. ಆರ್ಯಾಗೀತಿಗೆ: ಅಜಮಜ| ರಮಮರ| ಮೇಕಂ| ಪ್ರತ್ಯ| ಕ್ಚೈತ|
ನ್ಯಮೀಶ್ವ| ರಂ ಬ್ರ| ಹ್ಮಪರಮ್|
ಆತ್ಮಾ| ನಂ ಭಾ| ವಯತೋ| ಭವಮು|ಕ್ತಿಃ ಸ್ಯಾ|
ದಿತೀಯ| ಮಾರ್ಯಾ| ಗೀತಿಃ|

(ಪಿಂಗಲ ಛಂದಶಾಸ್ತ್ರ)

2. ಸ್ಕಂಧಕಕ್ಕೆ: ಚಲಿಲಂ | ಚವಾಣ | ರವಲಂ |
ಚಲಿವಿ | ತಮ್ಮಿಚ | ಲಕೇಸ| ಸಡು | ಜ್ಝೋಅಮ್ |
ಗಹಿಅದಿ | ಸಾಪರಿ | ಣಾಹಂ |
ವಣೂಹ | ಜಾಲಂ | ವದಿಣಾ | ರಸ್ಸ ಪು | ರನ್ನಮ್ |

(ಪ್ರವರಸೇನನ ಸೇತುಬಂಧ)

ಈ ಮೇಲಿನ ವಿವೇಚನೆಯು ಬೆಳಕಿನಲ್ಲಿ ಈಗ ಕಂದಪದ್ಯದ ಸ್ವರೂಪವನ್ನು ಪರಿಶೀಲಿಸುವುದು ಸುಲಭ. ಕನ್ನಡದಲ್ಲಿ ಕಂದದ ಲಕ್ಷಣವನ್ನು ಮೊದಲು ನಾಗವರ್ಮನ ಛಂದೋಂಬುಧಿಯಲ್ಲಿ (ಕ್ರಿ.ಶ.ಸು.990) ಅದರ ಚತುರ್ಥಾಧಿಕಾರದಲ್ಲಿ ಕಾಣುತ್ತೇವೆ. ಆರ್ಯಾ ಮತ್ತು ಅದರ ಕೆಲವು ಪ್ರಭೇದಗಳ ಲಕ್ಷಣವನ್ನು ಅಲ್ಲಿಯೇ ಹೇಳಿದ್ದರೂ ಕಂದಕ್ಕೆ ಅವುಗಳೊಡನೆ ಇರುವ ಸಂಬಂಧವನ್ನು ಉಚಿತವಾದ ಕ್ರಮದಲ್ಲಿ ಸ್ಪಷ್ಟವಾಗಿ ತೋರಿಸಿಲ್ಲ. ಆತನು ಕೊಡುವ ಕಂದಪದ್ಯದ ಲಕ್ಷಣ: 4 ಪಾದಗಳು; ಇವುಗಳಲ್ಲಿ ಕ್ರಮವಾಗಿ 3,5,3,5 ಗಣಗಳಿರುತ್ತವೆ. ಹಾಗೂ 12,20,12,20 ಮಾತ್ರೆಗಳು ಬರುತ್ತವೆ (4-5). ಹಿಂದೆ ಆರ್ಯಾದಿಗಳಿಗೆ ಹೇಳಿದ ಸಾಮಾನ್ಯ ಲಕ್ಷಣಗಳ್ನು ಇಲ್ಲಿಗೆ ಅನ್ವಯಿಸಿಕೊಳ್ಳಬೇಕು. ಎಂಬುದು ಆತನ ನಿರೂಪಣೆಯ ಕ್ರಮವನ್ನು ನೋಡಿದರೆ ತಿಳಿಯುತ್ತದೆ. ಕಂದದ ಗಣಗಳು ಕೂಡ ಚತುರ್ಮಾತ್ರೆಗಳಿಂದಾದವು. ಆ ಗಣಗಳು ಣಾ, -ಣಾ -, ಣಾ ಣಾಣಾ ಎಂಬ ಐದು ತೆರನಾದವು. ಈ ಐದು ಗಣಗಳಲ್ಲಿ ಣಾ ಣಾ ಎಂಬುದು ವಿಷಮಸ್ಥಾನಗಳಲ್ಲಿ ಬರಕೂಡದು. ಇವು ಹಾಗೆ ಅನ್ವಯವಾಗತಕ್ಕ ಲಕ್ಷಣಗಳು. ಇನ್ನು 6ನೆಯ ಗಣ ಸ್ಥಾನದಲ್ಲಿ ಮಧ್ಯಗುರುವಿನ ಅಥವಾ ಸರ್ವಲಘುವಿನ ಗಣವಾಗಿದ್ದ ಪಕ್ಷದಲ್ಲಿ 2ನೆಯ ಲಘುವಿನಿಂದ ಹೊಸಪದ ಆರಂಭವಾಗಿರಬೇಕು ಎಂಬುದನ್ನೂ ವ್ಯಕ್ತವಾಗಿ ಹೇಳದಿದ್ದರೂ ಲಕ್ಷಣಗಳನ್ನು ನೋಡಿ ತಿಳಿದುಕೊಳ್ಳಬೇಕು.

ಕಂದದ ಈ ನಿಯಮಗಳು ಈ ಮೊದಲು ನೋಡಿದ ಆರ್ಯಾಗೀತಿ ಅಥವಾ ಸ್ಕಂಧಕದ ನಿಯಮಗಳಿಗೆ ಅನುಸಾರವಾಗಿಯೇ ಇವೆ. ಕಂದದ ಮೂಲ ಆರ್ಯಾಗೀತಿಯೋ ಸ್ಕಂಧಕವೋ ಆಗಿರಬೇಕೆಂದು ತಿಳಿಯುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಪಾದಸಂಖ್ಯೆಯನ್ನು ಕಂದದಲ್ಲಿ ನಾಲ್ಕು ಎಂದು ನಾಗವರ್ಮ ಹೇಳಿರುವುದು ಒಂದು ತೋರಿಕೆಯ ವ್ಯತ್ಯಾಸ. ಆರ್ಯಾಗೀತಿ, ಸ್ಕಂದಕಗಳು ದ್ವಿಪದಿಗಳಾದ ಮಾತ್ರಾವೃತ್ತಗಳು. ಆದರೆ ಅವುಗಳಲ್ಲಿಯೂ ಆ ವರ್ಗದ ಇತರ ಪ್ರಭೇದಗಳಲ್ಲಿಯೂ ಪ್ರತಿಯರ್ಧದಲ್ಲಿಯೂ 12ನೆಯ ಮಾತ್ರೆಯಾದ ಯತಿ ಬರುವುದನ್ನು ನಿದರ್ಶನಗಳ ಪರಿಶೀಲನೆಯಿಂದ ಕಾಣುತ್ತೇವೆ ಎನ್ನುವುದರಿಂದಲೂ ಪಥ್ಯಾರ್ಯಾ ಮೊದಲಾದ ಕಡೆ ಅದನ್ನು ವ್ಯಕ್ತವಾಗಿಯೇ ಹೇಳಿರುವುದರಿಂದಲೂ ಪ್ರತಿಯರ್ಧವನ್ನೂ ಎರಡು ಭಾಗಗಳಾಗಿ ಗಣಿಸುವುದು ಸಹಜವೇ ಆಗಿದೆ. ಕನ್ನಡದಲ್ಲಿ ದ್ವಿತೀಯಾಕ್ಷರ ಪ್ರಾಸದ ಬಳಕೆಯಿಂದಾಗಿ ಕಂದ 4 ಸಾಲುಗಳಾಗಿಯೇ ರೂಪಗೊಂಡಿದೆ.

ಇದನ್ನು ಗಮನಿಸಿ ಕಂದದ ಲಕ್ಷಣವನ್ನು ಹೀಗೆ ಹೇಳಬಹುದು: 4 ಪಾದಗಳು, ಇವುಗಳಲ್ಲಿ 1,2 ನೆಯ ಪಾದಗಳಂತೆಯೇ 3,4 ನೆಯ ಪಾದಗಳಿರುತ್ತವೆ. 1,2 ನೆಯ ಪಾದಗಳಲ್ಲಿ ಕ್ರಮವಾಗಿ 3,5ರ ಹಾಗೆ ಒಟ್ಟು 8 ಚತುರ್ಮಾತ್ರಾಗಣಗಳು (12+20=32); 3,4 ನೆಯ ಪಾದಗಳಲ್ಲಿಯೂ ಹೀಗೆಯೇ (12+20=32). ಚತುರ್ಮಾತ್ರಾಗಣಗಳ ಕಟ್ಟು ಕೆಡಬಾರದು. ಪೃಥ'ಮಾರ್ಧದ ಹಾಗೂ ದ್ವಿತೀಯಾರ್ಧದ 8ನೆಯ ಗಣಸ್ಥಾನದ ಅಂತ್ಯದಲ್ಲಿ ಗುರು ತಪ್ಪದೆ ಬಂದಿರಬೇಕು; ಈ ಎರಡೂ ಅರ್ಧಗಳ ವಿಷಮ ಸ್ಥಾನಗಳಲ್ಲಿ ಮಧ್ಯ ಗುರುವಿನ ಗಣ (ಜಗಣ) ಬರಬಾರದು. ಆದರೆ ಅವುಗಳ 6ನೆಯ ಗಣಸ್ಥಾನದಲ್ಲಿ ಮಧ್ಯ ಗುರುವಿನ ಗಣ (ಜಗಣ) ವಾಗಲಿ ಸರ್ವಲಘುವಿನ ಗಣವಾಗಲಿ ತಪ್ಪದೆ ಬಂದಿರಬೇಕು. ಸರ್ವಲಘುವಿನ ಗಣವಾಗಿದ್ದ ಪಕ್ಷದಲ್ಲಿ, ಹಾಗೆಯೇ ಮಧ್ಯಗುರುವಿನ ಗಣ ಎಂದರೆ ಜಗಣವಾಗಿದ್ದ ಪಕ್ಷದಲ್ಲಿಯೂ ಮೊದಲನೆಯ ಹ್ರಸ್ವದ ಮುಂದೆ ಯತಿಯಿರಬೇಕು. 7ನೆಯ ಗಣ ಸರ್ವಲಘುವಿನ ಗಣವಾಗಿದ್ದಲ್ಲಿ ಮೊದಲನೆಯ ಹ್ರಸ್ವದಿಂದಲೇ ಹೊಸಪದ ಮೊದಲಾಗಬೇಕು.

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕವಿಗಳು ಬಲುಮಟ್ಟಿಗೆ ಈ ನಿಯಮಕ್ಕೆ ಅನುಗುಣವಾಗಿಯೇ ಕಂದಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ಯತಿ

ನಿಯಮವು ಐಚ್ಛಿಕವಾದುದು ಎಂದು ತಿಳಿದಿರುವುದರಿಂದ ಯತಿಯನ್ನು ನಿಯತವಾಗಿ ಪಾಲಿಸುವ ವಿಷಯದಲ್ಲಿ ಅಲ್ಲಲ್ಲಿ ಅಪವಾದಗಳು ಕಾಣಿಸಿಕೊಂಡಿರವುದುಂಟು. ಹಾಗೆಯೇ ಈಚಿನ ಕಾಲದ ಕವಿಗಳು ಚತುರ್ಮಾತ್ರಾಗಣ ನಿಯಮಕ್ಕೆ ಸರಿಯಾಗಿ ಲಕ್ಷ್ಯಕೊಡದೆ, 8ನೆಯ ಗಣದ ಕೊನೆಗೆ ಗುರುವನ್ನು ತರದೆ,ಸಾಮಾನ್ಯ ನಿಯಮವನ್ನು ಮೀರಿರುವುದೂ ಉಂಟು. ಆದರೆ ಒಟ್ಟಿನಲ್ಲಿ ಕಂದದಲ್ಲಿ ಗಣನಿಯಮ ಯತಿನಿಯಮಗಳ ಪಾಲನೆ ಬಲುಮಟ್ಟಿಗೆ ಸರಿಯಾಗಿಯೇ ಆಗಿದೆಯೆಂಬುದನ್ನು ನಿದರ್ಶನಗಳ ಪರಿಶೀಲನೆಯಿಂದ ತಿಳಿಯಬಹುದು.

ಲಕ್ಷಣಾನ್ವಿತವಾದ ಕಂದಕ್ಕೆ ಉದಾಹರಣೆ

ಕಾವೇ | ರಿಯಿಂದ | ಮಾಗೋ |
ದಾವರಿ | ವರಮಿ | ರ್ಪನಾಡ | ದಾ ಕನ್ನಡದೊಳ್|
ಭಾವಿಸಿ | ದ ಜನಪ | ದಂ ವಸು | ಧಾವಳ | ಯವಿಲೀ | ನ ವಿಶದ | ವಿಷಯವಿಶೇಷಂ|

(ಕವಿರಾಜಮಾರ್ಗ1-36)

ಕಂದಪದ್ಯ ಸಂಸ್ಕೃತದ ಆರ್ಯಾಗೀತಿಯ ಅಥ್ವಾ ಪ್ರಾಕೃತದ ಸ್ಕಂಧಕದ ಮೂಲಕವಾಗಿ ಬಂದಿದೆಯೆಂದು ಅವುಗಳ ತುಲನಾತ್ಮಕ ಪರಿಶೀಲನೆಯಿಂದ ಸಿದ್ಧಪಡುವುದು. ಆದರೆ ಅದು ಆರ್ಯಾಗೀತಿಯ ಮೂಲಕವಾಗಿ ಬಂತೇ ಸ್ಕಂಧಕದ ಮೂಲವಾಗಿ ಬಂತೇ ಎಂಬುದನ್ನು ಖಚಿತವಾಗಿ ನಿರ್ಣಯಿಸುವುದು ಕಷ್ಟ. ಆರ್ಯಾ ವರ್ಗವನ್ನು ಪ್ರಾಕೃತ ದಲ್ಲಿ ಸ್ಕಂಧಕ ಜಾತಿಯೆಂದೇ ತಿಳಿದಿರುವುದುಂಟು (ಸ್ವಯಂ ಭೂಛ್ಛಂದಃ). ಕನ್ನಡದಲ್ಲಿಯೂ ನಾಗವರ್ಮ ಹೀಗೆಯೇ ಮಾಡಿದಂತೆ ತೋರುತ್ತದೆ. ವಾಕಾಟಕ ಪ್ರವರಸೇನ IIನ (ಸು.410-40) ಸೇತುಬಂಧ ಪೂರ್ತಿಯಾಗಿ ಸ್ಕಂಧಕದಲ್ಲಿ ರಚಿತವಾಗಿರುವ ಪ್ರಾಕೃತಕಾವ್ಯ. ಇಲ್ಲಿಯ ಸ್ಕಂಧಕಗಳು ನಿಯಮಬದ್ಧವಾಗಿವೆ. ಕನ್ನಡ ಭಾಷೆಗೆ ಪ್ರಾಕೃತಭಾಷೆ ಸಾಹಿತ್ಯಗಳ ಸಂಪರ್ಕವಾದ ಆರಂಭಕಾಲದಲ್ಲಿ ಪ್ರಾಕೃತಕಾವ್ಯದ ಸ್ಕಂಧಕದ ಛಂದಸ್ಸು ಕಂದವಾಗಿ ಕನ್ನಡಕ್ಕೆ ಪ್ರವೇಶಿಸಿ, ಈ ಭಾಷೆಗೆ ಹೊಂದಿಕೊಂಡಿತೆಂದು ತೋರುತ್ತದೆ. ಕಂದ ಎಂಬ ಹೆಸರು ಕೂಡ ಸ್ಕಂಧಕದ ಪ್ರಾಕೃತ ರೂಪಗಳಲ್ಲಿ ಒಂದರಿಂದ ನಿಷ್ಪನ್ನವಾಗಿರುವಂತೆ ಕಾಣುವುದು (ಖಂಧಕಂ, ಖಂಧಅ, ಖಂಧಯ, ಎಂಬವು ಸ್ಕಂಧಕದ ಪ್ರಾಕೃತರೂಪಗಳು; ಖಂಧಅ -ಖಂದ- ಕಂದ ಎಂದು ಆಗಿರುವುದು ಸಾಧ್ಯ). ಈ ರೀತಿ ತಿಳಿಯುವುದಕ್ಕೆ ಅವಕಾಶಕೊಡುತ್ತವೆ.

ಕನ್ನಡದಲ್ಲಿ ಉತ್ತಮ ಕಂದಗಳಿಗೆ ಶಾಸನಗಳಲ್ಲಿಯೂ ಕವಿರಾಜಮಾರ್ಗದಲ್ಲಿಯೂ ಹೇರಳವಾದ ನಿದರ್ಶನಗಳು ಸಿಗುತ್ತವೆ. ಪಂಪ, ರನ್ನ, ಪೊನ್ನ, ಕಾದಂಬರಿಯ ನಾಗವರ್ಮ, ನಾಗಚಂದ್ರ, ನಯಸೇನ ಮೊದಲಾದ ಕವಿಗಳು ಇದನ್ನು ತಮ್ಮ ಕಾವ್ಯಗಳಲ್ಲಿ ವಿಪುಲವಾಗಿ ಬಳಸಿಕೊಂಡಿದ್ದಾರೆ. ವ್ಯಾಕರಣಕಾರರಾದ ನಾಗವರ್ಮ ಮತ್ತು ಕೇಶಿರಾಜರು ಸೂತ್ರಗಳನ್ನು ಶುದ್ಧ ಕಂದಛಂದಸ್ಸಿನಲ್ಲಿ ರಚಿಸಿದ್ದಾರೆ. ಜನ್ನನಂತೂ ತನ್ನ ಯಶೋಧರ ಚರಿತೆಯೆಂಬ ಕಾವ್ಯವನ್ನು ಕಂದದಲ್ಲೇ ನಿರ್ವಹಿಸಿರುವುದು ಗಮನಾರ್ಹವಾದ ಸಂಗತಿ. ಈಚೆಗೆ ಬಸವಪ್ಪ ಶಾಸ್ತ್ರಿಗಳು, ಡಿ.ವಿ.ಜಿ. ಮೊದಲಾದ ಆಧುನಿಕರಲ್ಲೂ ಉತ್ತಮ ಕಂದರಚನೆ ಕಂಡುಬರುತ್ತದೆ. ಈಚೆಗೆ ನವ್ಯಕಾವ್ಯ ಸೃಷ್ಟಿಯಾಗತೊಡಗಿದ ಮೇಲೆ ಕಂದ ಸ್ವಲ್ಪ ಹಿಂದೆ ಬಿದ್ದಿದೆಯೆನ್ನಬೇಕು.
*

**ಕಂದ²** : ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಮಕ್ಕಳ ಮಾಸಪತ್ರಿಕೆ. ಮೈಸೂರು ನಗರದ ಜಯನಗರದಲ್ಲಿರುವ ಚಿಲ್ಡ್ರನ್ಸ್ ಬುಕ್ ಕೌನ್ಸಿಲ್ (ಶಿಶು ಸಾಹಿತ್ಯ ಸಂಘ) ಎಂಬ ಸಂಸ್ಥೆಯ ಆಶ್ರಯದಲ್ಲಿ 1947 ನವೆಂಬರ್ 27ರಂದು ಇದರ ಪ್ರಕಟಣೆ ಆರಂಭವಾಯಿತು. ಎನ್. ನಾಗೇಶರಾವ್ ಸಂಪಾದಕರು. ಮಕ್ಕಳ ಆಸಕ್ತಿಯನ್ನು ಪ್ರಚೋದಿಸುವ, ಸೃಜನಾತ್ಮಕ ಶಕ್ತಿಯನ್ನು ಬೆಳೆಸುವ ಮತ್ತು ಅವರ ಮನಸ್ಸುಗಳನ್ನು ರಂಜಿಸುವ ಲೇಖನ ಕವಿತೆ ಕಥೆ ಚುಟುಕಗಳೇ ಮುಂತಾದವನ್ನು ಅನುರೂಪ ಚಿತ್ರಗಳೊಂದಿಗೆ ಪ್ರಕಟಿಸುತ್ತ ಬಂದ ಈ ಪತ್ರಿಕೆ ಮೂರು ವರ್ಷಗಳ ಕಾಲ ನಡೆದು ನಿಂತಿತು. ಒಂದೊಂದು ಸಂಚಿಕೆಯಲ್ಲೂ ನಾನಾ ವಿಷಯಗಳನ್ನೊಳಗೊಂಡ ಪತ್ರಿಕಾರೂಪದ ಪ್ರಕಟಣೆಯ ಬದಲು ಒಂದೊಂದು ಸಂಚಿಕೆಯನ್ನು ಒಂದೊಂದು ವಿಷಯಕ್ಕೆ ಮೀಸಲಾಗಿಟ್ಟು

ಶಾಶ್ವತವಾದ ಮಕ್ಕಳ ಸಾಹಿತ್ಯ ಸೃಷ್ಟಿಯಲ್ಲಿ ಇದನ್ನು ತೊಡಗಿಸ ಬೇಕೆಂದು 1956 ನವೆಂಬರ್‌ನಲ್ಲಿ ನಡೆದ ಸಂಘದ ಸಭೆಯಲ್ಲಿ ಕೈ ಗೊಂಡ ತೀರ್ಮಾನಕ್ಕೆ ಅನುಗುಣವಾಗಿ ಈ ಪತ್ರಿಕೆಯನ್ನು 1957ರಲ್ಲಿ ಕಂದ ಕಾವ್ಯ ಮಾಲೆಯೆಂದು ಪರಿವರ್ತಿಸಲಾಯಿತು. ರಾಮಾಯಣ, ಮಹಾಭಾರತ ಮತ್ತು ಪೌರಸ್ತ್ಯ ಪಾಶ್ಚಾತ್ಯ ಕಥೆಗಳು, ಜೀವನ ಚರಿತ್ರೆಗಳು, ವಿಜ್ಞಾನ ವಿಚಾರ, ಚರಿತ್ರೆ, ಭೂವಿವರಣೆ, ಸಾಮಾನ್ಯಜ್ಞಾನ, ನಾಟಕಗಳು- ಇವೆಲ್ಲ ಈ ಮಾಲೆಯಲ್ಲಿ ಪ್ರಕಟವಾಗಿವೆ. ಇಂಥ ಸಂಚಿಕೆಗಳ ಒಟ್ಟು ಸಂಖ್ಯೆ 110. 1964ರಲ್ಲಿ ಕಂದಕಾವ್ಯಮಾಲೆಯೂ ನಿಂತು ಹೋಯಿತು.
*

**ಕಂಣಡ ಸಮಾಚಾರ** : ಕನ್ನಡದಲ್ಲಿ ಪ್ರಕಟವಾದ ಪ್ರಥಮ ವಾರ್ತಾ ಪತ್ರಿಕೆ. ಈ ಪತ್ರಿಕೆ ಮೊದಲು ಮಂಗಳೂರು ಸಮಾಚಾರ ಎಂಬ ಹೆಸರಿನಿಂದ 1843 ಜುಲೈ 1ನೆಯ ತಾರೀಕು ಪ್ರಾರಂಭವಾಯಿತು. 1838ರಲ್ಲಿ ಮಂಗಳೂರಿಗೆ ಬಂದು, ಕನ್ನಡ ಭಾಷೆ ಕಲಿತು, ಎರಡು ವರ್ಷಗಳ ಅನಂತರ ಕೊಡಗಿನಲ್ಲಿ ಉಪದೇಶಕನಾಗಿ ಕೆಲಸ ಮಾಡಿದ ಬಾಸೆಲ್‌ಮಿಶನ್ನಿನ ರೆವರೆಂಡ್ ಹರ್ಮನ್ ಮೊಗ್ಲಿಂಗ್ ಇದರ ಸ್ಥಾಪಕಸಂಪಾದಕ. ಪಕ್ಷಪತ್ರಿಕೆಯಾಗಿದ್ದ ಮಂಗಳೂರು ಸಮಾಚಾರ ಎಂಟು ತಿಂಗಳ ಕಾಲ ಮಂಗಳೂರಿನಿಂದ ಪ್ರಕಟವಾಯಿತು. ಅನಂತರ ಬಳ್ಳಾರಿಗೆ ಬಂತು. ಅಲ್ಲಿ ಪತ್ರಿಕೆಯ ಹೆಸರು ಕಂಣಡ ಸಮಾಚಾರ ಎಂದು ಬದಲಾಯಿತು. ಈ ಬದಲಾವಣೆಗೆ ಸಂಪಾದಕ ಮೊಗ್ಲಿಂಗ್ ಮಂಗಳೂರು ಸಮಾಚಾರದ ಹದಿನಾರನೆಯ ಸಂಚಿಕೆಯಲ್ಲಿ ಈ ರೀತಿ ಕಾರಣ ಕೊಟ್ಟಿದ್ದಾನೆ: ಪತ್ರಿಕೆಗೆ ಸಂಪಾದಕನ ನಿರೀಕ್ಷೆಗಿಂತ ಹೆಚ್ಚು ಪ್ರೋತ್ಸಾಹ ದೊರೆಯಿತು. ಕನ್ನಡ ಜನರು ಪತ್ರಿಕೆಯನ್ನು ಓದಲು ಆಸಕ್ತಿ ತೋರಿದ್ದರಿಂದ ಈ ಆಸಕ್ತಿಯನ್ನು ಬೆಳೆಸಲು ಪತ್ರಿಕೆಯ ಮುದ್ರಣದಲ್ಲಿ ಅಭಿವೃದ್ಧಿ ಬಯಸಿ ಕಲ್ಲಚ್ಚಿನ ಬದಲು ಅಚ್ಚುಮೊಳೆಗಳನ್ನು ಉಪಯೋಗದಲ್ಲಿ ತರಲು ನಿರ್ಧರಿಸಲಾಯಿತು, ಇದಕ್ಕೆ ಬಳ್ಳಾರಿಯಲ್ಲಿ ಹೆಚ್ಚು ಸೌಕರ್ಯವಿದ್ದುದರಿಂದ ಮಂಗಳೂರಿನಿಂದ ಬಳ್ಳಾರಿಗೆ ಬದಲಾಯಿಸಲಾಯಿತು. ಕನ್ನಡ ಮಾತಾಡುವ ಎಲ್ಲ ಜನರಲ್ಲೂ ಹೆಚ್ಚು ಪ್ರಸಾರಕ್ಕೆ ಬರಲಿ ಎಂಬ ಆಶಯದಿಂದ ಪತ್ರಿಕೆಯ ಹೆಸರನ್ನೂ ಬದಲಾಯಿಸಲಾಯಿತು.

ಕಂಣಡ ಸಮಾಚಾರದ ಮೊದಲ ಸಂಚಿಕೆ 1844 ಮಾರ್ಚ್ 1ರಂದು ಬಳ್ಳಾರಿಯಿಂದ ಪ್ರಕಟವಾಯಿತು. ಪುಟಸಂಖ್ಯೆ ನಾಲ್ಕರಿಂದ ಎಂಟಕ್ಕೆ ಹೆಚ್ಚಿತು. ಬೆಲೆ ಒಂದು ದುಡ್ಡು ಇದ್ದದ್ದು ಎರಡು ದುಡ್ಡಿಗೆ ಏರಿತು. ಪತ್ರಿಕೆ ಹತ್ತು ತಿಂಗಳ ಕಾಲ ನಡೆದು ಅನಂತರ ನಿಂತುಹೋಯಿತು.

ಮೊಗ್ಲಿಂಗ್ ತನ್ನ ಪತ್ರಿಕೆ ನಿಂತುಹೋದರೂ ಮೈಸೂರು ಸರ್ಕಾರದ ಆಶ್ರಯದಲ್ಲಿ ಪ್ರಕಟವಾದ ವಾಗ್ವಿಧಾಯಿನಿ, ಉಡುಪಿಯಲ್ಲಿ ಆರಂಭವಾದ ಕ್ರೈಸ್ತಸಭಾ ಪತ್ರಿಕೆಗಳಿಗೆ ಸಹಾಯ ಮಾಡಿದ. ಸಂಪರ್ಕ ಸಾಧನಗಳು ಹೆಚ್ಚಿಲ್ಲದಿದ್ದ ಆ ಕಾಲದಲ್ಲಿ ಮೊಗ್ಲಿಂಗ್ ಕಂಣಡ ಸಮಾಚಾರದಲ್ಲಿ ಸ್ಥಳೀಯ ವಾರ್ತೆಗಳ ಜೊತೆಗೆ ದೇಶವಿದೇಶಗಳ ವಾರ್ತೆಯನ್ನೂ ಪ್ರಕಟಿಸುತ್ತಿದ್ದ. ಕಂಣಡ ಸಮಾಚಾರವನ್ನು ಕ್ಯಾನರೀಸ್ ನ್ಯೂಸ್ ಪೇಪರ್ ಎಂದು ಭಾಷಾಂತರಿಸಿದ್ದ. ಆಗತಾನೆ ಬೆಳೆಯುತ್ತಿದ್ದ ಆಧುನಿಕ ಕನ್ನಡ ಗದ್ಯರಚನೆಯನ್ನು ಪತ್ರಿಕೋದ್ಯಮಕ್ಕೆ ಯಶಸ್ವಿಯಾಗಿ ಬಳಸಿಕೊಂಡ.

(ಎಂ.ಎನ್.ಪಿ.)

**ಕಂಪಣ (ಕುಮಾರ ಕಂಪಣ) :** ಮುಳಬಾಗಿಲು ಪ್ರಾಂತ್ಯದ ರಾಜ್ಯಾಧಿಕಾರಿ (ಸು.1356-66). ವಿಜಯನಗರದ ದೊರೆ ಒಂದನೆಯ ಬುಕ್ಕನ ಮಗ.

ಹಿಂದೆ ಹರಿಹರನಿಂದ ಸಹಾಯ ಪಡೆದಿದ್ದ ಶಂಬವರಾಯ ಸ್ವತಂತ್ರನಾಗಲು ಪ್ರಯತ್ನಿಸಿದಾಗ ಇವನು 1363ರಲ್ಲಿ ಅವನನ್ನು ಸೋಲಿಸಿ, ಕಂಚಿಯನ್ನು ಆಕ್ರಮಿಸಿಕೊಂಡು, ತಮಿಳುನಾಡಿನ ವಿಜಯನಗರ ಸಾಮ್ರಾಟನ ಪ್ರತಿನಿಧಿಯಾಗಿ ಕೆಲವು ಕಾಲ ಆಳಿದ. ಇವನ ಈ ದಕ್ಷಿಣದ ದಂಡಯಾತ್ರೆಯನ್ನು ವಸ್ತುವಾಗಿಟ್ಟುಕೊಂಡು ಈತನ ಹೆಂಡತಿ ಗಂಗಾದೇವಿ ಮಧುರಾ ವಿಜಯಂ ಅಥವಾ ವೀರಕಂಪರಾಯ ಚರಿತಂ ಎಂಬ ಐತಿಹಾಸಿಕ ಕಾವ್ಯವನ್ನು ಸಂಸ್ಕೃತದಲ್ಲಿ ಬರೆದಿದ್ದಾಳೆ. ತೊಂಡೈ ಮಂಡಳದ ರಾಜನಾಗಿದ್ದ ಶಂಬವರಾಯನ ಮೇಲೆ ಯುದ್ಧ ಮಾಡಲು ಇವನು ಬುಕ್ಕ ಆಜ್ಞಾಪಿಸಿದ, ಇವನು ಸುಸಜ್ಜಿತವಾದ ಸೈನ್ಯದೊಡನೆ ಹೊರಟು ಮುಳಬಾಗಿಲನ್ನು ತಲಪಿ ಅದನ್ನು ತನ್ನ ಕೇಂದ್ರವಾಗಿ ಮಾಡಿಕೊಂಡ, ಅನಂತರ ಪಾಲಾರ್ ನದಿಯ ಮೇಲಿನ ವಿರಿಂಜಿಪುರದ ಕಡೆಯಿಂದ ಶಂಬವರಾಯನ ರಾಜ್ಯವನ್ನು ಪ್ರವೇಶಿಸಿದ, ಭಯಂಕರವಾಗಿ ನಡೆದ ಕಾಳಗದಲ್ಲಿ ಶಂಬವರಾಯ ಸೋತು ತನ್ನ ರಾಜಧಾನಿ ಕಂಚಿಯ ದಿಕ್ಕಿನಲ್ಲಿ ಓಡಿಹೋದ, ಇವನು ಅವನನ್ನು ಬೆನ್ನಟ್ಟಿ ಕಂಚಿಯನ್ನು ಆಕ್ರಮಿಸಿಕೊಂಡ, ಶಂಬವರಾಯ ಹುದುಗಿಕೊಂಡಿದ್ದ ರಾಜಗಂಭೀರ ಕೋಟೆಯನ್ನು (ಪಡೈವೀಡು) ಮುತ್ತಿದ. ಶಂಬವರಾಯ ಇವನೊಡನೆ ನಡೆದ ದ್ವಂದ್ವಯುದ್ಧದಲ್ಲಿ ಮಡಿದ. ಇವನು ಕಂಚಿಯನ್ನು ಪ್ರವೇಶಿಸಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿದ. ಹೀಗೆಂದು ಈ ಕಾವ್ಯದಲ್ಲಿ ವರ್ಣಿಸಲಾಗಿದೆ.

ಆ ಕಾಲದಲ್ಲಿ ಮಧುರೆಯ ಸುಲ್ತಾನ ಆ ಪ್ರದೇಶದ ಜನರಿಗೆ ಒಂದೇ ಸಮನೆ ಕಿರುಕುಳ ಕೊಟ್ಟು ಪೀಡಿಸುತ್ತಿದ್ದನಲ್ಲದೆ ಚಿದಂಬರಂ, ಶ್ರೀರಂಗ, ಮಧುರೆ ಮುಂತಾದ ಸ್ಥಳಗಳಲ್ಲಿ ದೇವಸ್ಥಾನಗಳೇ ಮುಂತಾದ ಮತೀಯ ಸಂಸ್ಥೆಗಳನ್ನು ನಾಶ ಮಾಡಿದ್ದ. ಶಂಬವರಾಯನ ರಾಜ್ಯವನ್ನು ಆಕ್ರಮಿಸಿಕೊಂಡ ಅನಂತರ ಇವನು ಅನೇಕ ವನರಾಜರನ್ನು ಸೋಲಿಸಿ, ಮಧುರೆಯವರೆಗೆ ಇದ್ದ ಮುಸ್ಲಿಂ ಸ್ವತಂತ್ರಾಧಿಕಾರಿಗಳನ್ನು ಅಡಗಿಸಿ, ಮಧುರೆಯ ಸುಲ್ತಾನನ ಮೇಲೆ ಯುದ್ಧ ಹೂಡಿದ. ಈ ಯುದ್ಧದಲ್ಲಿ ಇವನ ಸೇನಾಧಿಕಾರಿ ಗೋಪಣ್ಣ ಮುಖ್ಯ ಪಾತ್ರ ವಹಿಸಿದ್ದ. ಮಧುರೆಯ ಸುಲ್ತಾನ 1371ರಲ್ಲಿ ಯುದ್ಧದಲ್ಲಿ ಮಡಿದ. ದಕ್ಷಿಣ ದೇಶದಲ್ಲಿ ಇವನು ಮಹಮ್ಮದೀಯರ ಆಳ್ವಿಕೆಯನ್ನು ಕೊನೆಗಾಣಿಸಿ ವಿಜಯನಗರದ ಅಧಿಕಾರವನ್ನು ಬಲಪಡಿಸಿದ. ಸಿಂಹಳಕ್ಕೂ ಮುನ್ನಡೆದು ಕಪ್ಪ ವಸೂಲಿ ಮಾಡಿದ. ಮಹಮ್ಮದೀಯರ ದಾಳಿಯಿಂದ ರಕ್ಷಿಸಲು ತಿರುಪತಿಗೆ ಸಾಗಿಸಲಾಗಿದ್ದ, ಶ್ರೀರಂಗದ ದೇವಸ್ಥಾನದಲ್ಲಿನ ರಂಗನಾಥ ವಿಗ್ರಹವನ್ನು ಕುಮಾರ ಕಂಪಣ ಹಿಂದಕ್ಕೆ ತರಿಸಿ ಶ್ರೀರಂಗದಲ್ಲಿ ಪುನಃ ಪ್ರತಿಷ್ಠೆ ಮಾಡಿಸಿದ.

ಇವನ ದಂಡಯಾತ್ರೆಯಿಂದ ತುಂಗಭದ್ರಾ ನದಿಯ ದಕ್ಷಿಣಕ್ಕೆ, ದಕ್ಷಿಣ ಭಾರತವೆಲ್ಲ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತು. ಈತ ತಮಿಳು ನಾಡಿನ ರಾಜಪ್ರತಿನಿಧಿಯಾಗಿ ಮುಂದುವರಿದು, ಆಕ್ರಮಿತ ಪ್ರದೇಶಗಳಲ್ಲಿ ಸುವ್ಯವಸ್ಥಿತವಾದ ಸರ್ಕಾರವನ್ನು ಸ್ಥಾಪಿಸಿದ. ದೇವಸ್ಥಾನಗಳು ಮತ್ತು ಇತರ ಸಂಸ್ಥೆಗಳಲ್ಲಿ ಧಾರ್ಮಿಕ ಕಾರ್ಯಗಳನ್ನು ಪುನರುಜ್ಜೀವನ ಗೊಳಿಸಿದ.ನಿವನ ಹೆಸರು ಚಿರಸ್ಮರಣೀಯವಾಗಿರಲು ಕಂಪರಾಜಪುರ (ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಮೋಡಹಳ್ಳಿ) ಗ್ರಾಮವನ್ನು ಸ್ಥಾಪಿಸಲಾಯಿತು. ಈತ ಸು.1374ರಲ್ಲಿ ನಿಧನನಾದ. (ಎ.ವಿ.ವಿ.)

**ಕಂಪಿಲಿ ರಾಜ್ಯ :** 11-14ನೆಯ ಶತಮಾನಗಳ ಅವಧಿಯಲ್ಲಿ ಪ್ರಾಯಶಃ ಈಗಿನ ಬಳ್ಳಾರಿ, ಕೊಪ್ಪಳ, ಧಾರವಾಡ, ಚಿತ್ರದುರ್ಗ ಹಾಗೂ ಅನಂತಪುರ ಜಿಲ್ಲೆಗಳ ಕೆಲಭಾಗಗಳನ್ನು ಒಳಗೊಂಡಿದ್ದ ಒಂದು ಚಿಕ್ಕ ರಾಜ್ಯ. ಕುಮ್ಮಟ ಮತ್ತು ಕಂಪಿಲಿ ಇದರ ರಾಜಧಾನಿಗಳು.

ಕಂಪಿಲಿ ಮೊದಲು ಚಾಳುಕ್ಯರ ಪ್ರಾಂತೀಯ ರಾಜಧಾನಿಯಾಗಿತ್ತು. ಚಾಳುಕ್ಯ ಸಾಮಂತನಾಗಿದ್ದ ಜಗದೇಕಮಲ್ಲ ನೊಳಂಬ - ಪಲ್ಲವ 1022ರಲ್ಲಿ ಕಂಪಿಲಿಯಲ್ಲಿ ಆಳುತ್ತಿದ್ದ. 1046ರಲ್ಲಿ ರಾಜರಾಜ ಚೋಳ ಕಂಪಿಲಿಗೆ ಮುತ್ತಿಗೆ ಹಾಕಿ ಅದನ್ನು ನಾಶಪಡಿಸಿದನಂತೆ. ಸು.1046ರಲ್ಲಿ ಚಾಳುಕ್ಯ ವಿಜಯಾದಿತ್ಯ ಕಂಪಿಲಿ ರಾಜಧಾನಿಯಿಂದ ನೊಳಂಬವಾಡಿ ಪ್ರದೇಶವನ್ನು ಆಳುತ್ತಿದ್ದ. 1178ರ ಶಿಲಾಶಾಸನವೊಂದು ತಿಳಿಸುವಂತೆ, ಹೊಯ್ಸಳ ವಿಷ್ಣುವರ್ಧನ ಇಲ್ಲಿನ ದುರ್ಗಮ ಕೋಟೆಯೆನಿಸಿದ್ದ ಕುಮ್ಮಟವನ್ನು ವಶಪಡಿಸಿಕೊಂಡ.

13ನೆಯ ಶತಮಾನದ ಅಂತ್ಯಭಾಗದಿಂದ ಕಂಪಿಲಿ ರಾಜ್ಯ ಒಂದು ಅಧೀನ ರಾಜಮನೆತನದ ಆಳಿಕೆಗೆ ಒಳಪಟ್ಟಿತು. ಇದರ ಸ್ಥಾಪಕ ಪ್ರಾಯಶಃ ಮುಮ್ಮಡಿ ಸಿಂಗೆಯ ನಾಯಕ (ಸು.1280-1300). ಇವನ ಮಗ ಕಂಪಿಲ ದೇವ (ಸು.1300-1327). ಇವನಿಗೆ ಖಂಡೆಯರಾಯನೆಂದೂ ಹೆಸರಿತ್ತು. ಇವನು ಸೇವುಣರ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದ. ಇದರಿಂದ ಹೊಯ್ಸಳರ ಜೊತೆ ಆಗಾಗ್ಗೆ ಸೆಣಸಬೇಕಾಗಿತ್ತು. 1303ರ ಸುಮಾರಿನಲ್ಲಿ ಕಂಪಿಲದೇವ ಹೊಯ್ಸಳ ದಂಡನಾಯಕ ಸೋಮಯನನ್ನು ರಣರಂಗದಲ್ಲಿ ಕೊಂದ.

ಕಂಪಿಲಿಯ ಕಥೆ ಶೌರ್ಯ ಸಾಹಸಗಳಿಂದ ಕೂಡಿದ್ದು. ಕಂಪಿಲ ದೇವ ದಕ್ಷಿಣ ಭಾರತದಲ್ಲಿ ಬೆಳೆಯುತ್ತಿದ್ದ ವಿದೇಶೀ ಶಕ್ತಿಯ ಪ್ರಬಲ ವಿರೋಧಿಯಾಗಿದ್ದ. ಮಲಿಕ್ ಕಾಫರ್ ಸು.1314-15ರಲ್ಲಿ ಕಂಪಿಲಿಯ ಮೇಲೆ ದಂಡೆತ್ತಿ ಬಂದನಾದರೂ ಹೆಚ್ಚು ಯಶಸ್ವಿಯಾಗಲಿಲ್ಲ. ಅಲ್ಲದೆ ಮಹಮ್ಮದ್-ಬಿನ್-ತುಗಲಕನ ಅಧಿಕಾರಿಗಳು ಅಪೇಕ್ಷಿಸಿದ ಕಪ್ಪಕಾಣಿಕೆಗಳನ್ನು ಕೊಡಲು ಕಂಪಿಲದೇವ ನಿರಾಕರಿಸಿದ. ಇಲ್ಲಿಂದ ಸು.10 ವರ್ಷಗಳ ಕಾಲ ಕಂಪಿಲಿ ಅಭಿವೃದ್ಧಿ ಸಾಧಿಸಿತಾದರೂ ಅನಂತರ ದೆಹಲಿಯ ಸುಲ್ತಾನನ ದಾಳಿಗೆ ತುತ್ತಾಯಿತು. ಆ ಸಮಯದಲ್ಲಿ ಗುಲ್ಬರ್ಗದ ಸಮೀಪದ ಸಾಗರದ ರಾಜ್ಯಪಾಲನಾಗಿದ್ದ, ಸುಲ್ತಾನನ ಸೋದರ ಸಂಬಂಧಿ ಬಹಾಉದ್ದೀನ್ ಗುರ್ಷಾಸ್ಪ್ ಸ್ವಂತ ಕಾರಣಕ್ಕಾಗಿ ಸುಲ್ತಾನನ ವಿಷಯದಲ್ಲಿ ಅಸಮಾಧಾನವನ್ನು ಹೊಂದಿದ್ದು ದೆಹಲಿಯ ಸಿಂಹಾಸನಕ್ಕೆ ತನ್ನ ಹಕ್ಕನ್ನು ಹೂಡಲು ಪ್ರಯತ್ನಿಸಿ ದಂಗೆಯೆದ್ದಿದ್ದ. ಸುಲ್ತಾನನಾದರೊ ತನ್ನ ಸಾಮಂತರಾದ ಗುಜರಾತಿನ ರಾಜ್ಯಪಾಲ ಮಲಿಕ್ ಜಾದ ಮತ್ತು ದೇವಗಿರಿಯ ರಾಜ್ಯಪಾಲನಾದ ಮಜಿರ್ ಅಬುರಿಜ ಇವರಿಬ್ಬರಿಗೂ ಈ ದಂಗೆಕೋರನನ್ನು ಸದೆಬಡಿಯಲು ಆಜ್ಞಾಪಿಸಿದ. ಗೋದಾವರಿ ತೀರದಲ್ಲಿ ನಡೆದ ಯುದ್ಧದಲ್ಲಿ ಬಹಾಉದ್ದೀನ್ ಸೋತು, ತನ್ನ ಮಡದಿಮಕ್ಕಳೊಂದಿಗೆ ಓಡಿಬಂದು ಕಂಪಿಲಿಯ ನಾಯಕನಾದ ಕಂಪಿಲದೇವನಲ್ಲಿ ಆಶ್ರಯ ಪಡೆದ. ಇದನ್ನು ತಿಳಿದ ಸುಲ್ತಾನ ಈ ಹಿಂದು ರಾಜನನ್ನು ನಾಶಮಾಡುವಂತೆ ಆಜ್ಞಾಪಿಸಿದ. ಆದರೆ ಇದು ಅವನು ತಿಳಿದಷ್ಟು ಸುಲಭಸಾಧ್ಯವಾದ ಕೆಲಸವಾಗಿರಲಿಲ್ಲ. ಕುಮ್ಮಟ ಕೋಟೆಯನ್ನು ಹಿಡಿಯಲು ಮಲಿಕ್ ಜಾದ ಎರಡು ಬಾರಿ ಪ್ರಯತ್ನಿಸಿದರೂ ಸಫಲನಾಗಲಿಲ್ಲ. ಆದರೂ ಮೂರನೆಯ ಪ್ರಯತ್ನದಲ್ಲಿ ಯಶಸ್ವಿಯಾದ.

ಕುಮ್ಮಟ ಸುಲ್ತಾನನ ವಶವಾಗಿ, ಕಂಪಿಲದೇವ ಹೊಸದುರ್ಗ (ಆನೆಗೊಂದಿ)ದಲ್ಲಿ ರಕ್ಷಣೆ ಪಡೆದ. ಆದರೆ ಸುಲ್ತಾನನ ಸೇನೆ ಹೊಸದುರ್ಗವನ್ನೂ ಸುತ್ತುವರಿಯಿತು. ಕಂಪಿಲದೇವ ಬಹಾಉದ್ದೀನನನ್ನು ಆತನ ಸಂಸಾರದೊಂದಿಗೆ ಸುರಕ್ಷಿತವಾಗಿ ದ್ವಾರಸಮುದ್ರಕ್ಕೆ ತಲಪಿಸಿದ. ವೈರಿಗಳನ್ನು ಎದುರಿಸುವ ಮುನ್ನ ಅವನ ರಾಣೀ ಜನರೂ ಮಂತ್ರಿಗಳ ಹಾಗೂ ಸಾಮಂತರ ಪತ್ನಿಯರೂ ಅಗ್ನಿಪ್ರವೇಶ ಮಾಡಿದರು. ಅನಂತರ ಕಂಪಿಲದೇವ ಮತ್ತು ಅವನ ಮಗ ರಾಮನಾಥ ಕಡುಗಲಿಗಳಂತೆ ವೈರಿಗಳ ಮೇಲೆಬಿದ್ದು ಅನೇಕರನ್ನು ಧ್ವಂಸಮಾಡಿದರು. ಕೊನೆಗೆ ರಣಭೂಮಿಯಲ್ಲೇ ಸಾವನ್ನಪ್ಪಿದ (ಸು.1327) ಕಂಪಿಲದೇವನ ತಲೆಬುರುಡೆಯನ್ನು ಸುಲ್ತಾನನಿಗೆ ಕಳುಹಿಸಲಾಯಿತಂತೆ. ಕಂಪಿಲಿ ರಾಜ್ಯವನ್ನು ಸುಲ್ತಾನ ವಶಪಡಿಸಿಕೊಂಡು, ಅಲ್ಲಿಗೆ ತನ್ನವನಾದ ಮಲಿಕ್ ಮಹಮ್ಮದ್ ಎಂಬುವನನ್ನು ರಾಜ್ಯಪಾಲನಾಗಿ ನೇಮಿಸಿದ. ಅಲ್ಲಿನ ಸುತ್ತ ಮುತ್ತಲಿನ ಪ್ರದೇಶವನ್ನು ತನ್ನ ಹಿಡಿತದಲ್ಲಿಡುವ ಸಲುವಾಗಿ ಹೊಸದುರ್ಗದಲ್ಲಿ ಸೈನ್ಯವನ್ನಿಟ್ಟ. ಕಂಪಿಲ ದೇವನ ಮಗ ರಾಮನಾಥನು ತನ್ನ ಪ್ರಾಮಾಣಿಕ, ದೇಶಪ್ರೇಮ ಹಾಗೂ ತ್ಯಾಗಗಳಿಗೆ ಪ್ರಖ್ಯಾತನಾದ ವೀರಾಗ್ರಣಿಯಾಗಿ ಕುಮಾರರಾಮನೆಂಬ ಹೆಸರಿನಿಂದ ಹಲವು ಕಥೆಗಳ ನಾಯಕನಾಗಿ ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತನಾಗಿದ್ದಾನೆ (ನೋಡಿ: ಕುಮಾರರಾಮ).

ಇಲ್ಲಿಂದ ಯುದ್ಧ ಕೈದಿಗಳಾಗಿ ದೆಹಲಿಗೆ ಕೊಂಡೊಯ್ದ ವ್ಯಕ್ತಿಗಳಲ್ಲಿ ಭಾವೀ ವಿಜಯನಗರದ ಸಂಸ್ಥಾಪಕರಾದ ಹರಿಹರ ಮತ್ತು ಬುಕ್ಕರೆಂಬ ಸಹೋದರರೂ ಸೇರಿದ್ದರೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. (ಎಸ್.ಜಿ.)

**ಕಂಪ್ಲಿ :** ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನಲ್ಲಿ ಹೊಸಪೇಟೆಯ ವಾಯವ್ಯಕ್ಕೆ 32ಕಿಮೀ ದೂರದಲ್ಲಿ ತುಂಗಭದ್ರಾ ನದಿಯ ಸನಿಹದಲ್ಲಿರುವ ಒಂದು ಊರು. ಇತಿಹಾಸ ಪ್ರಸಿದ್ಧ ಸ್ಥಳ. ಕೈಗಾರಿಕಾ ಕೇಂದ್ರ. ಜನಸಂಖ್ಯೆ 35,386.

ತುಂಗಭದ್ರಾನದಿಯ ಅಂಚಿನಲ್ಲಿರುವ ಆ ನದಿಯ ಪಾತ್ರ ಭೂಮಿಯಲ್ಲಿ ಉಪಲಬ್ಧವಾದ ಕಪ್ಪು ಬಂಡೆಗಳಿಂದ ರಚಿತವಾಗಿರುವ ಇಲ್ಲಿನ ಕೋಟೆಯನ್ನು ಬಳ್ಳಾರಿಯ ಪಾಳೆಯಗಾರರಲ್ಲೊಬ್ಬ ಕಟ್ಟಿಸಿದನೆಂದು ಪ್ರತೀತಿ. ಕೋಟೆಯಲ್ಲಿ ಮತ್ತು ಕೋಟೆಯ ಹೊರಗಿರುವ ಪೇಟೆಯಲ್ಲಿ ಇಕ್ಕಟ್ಟಾದ ರಸ್ತೆಗಳ ಇಕ್ಕೆಲದಲ್ಲೂ ಗುಂಪು ಮನೆಗಳಿವೆ.

ಮೊದಲು ಇಲ್ಲಿ ನೇಯ್ಗೆ ಪ್ರಧಾನವೆನಿಸಿತ್ತು. ಕಬ್ಬಿನಿಂದ ಬೆಲ್ಲ ತಯಾರಿಸುತ್ತಿದ್ದರು. ಮರದ ಕೆತ್ತನೆ ಕೆಲಸ ಹಾಗೂ ಆಟದ ಸಾಮಾನುಗಳನ್ನು ಮಾಡುವ ಉದ್ಯಮಗಳಿಗೂ ಈ ಸ್ಥಳ ಹೆಸರಾಗಿತ್ತು. 1954ರಿಂದ ಇಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ನಡೆಯುತ್ತಿದೆ. ಇದು ಕರ್ನಾಟಕದಲ್ಲಿ ಸ್ಥಾಪಿತವಾದ ಮೊದಲನೆಯ ಸಹಕಾರಿ ಸಕ್ಕರೆ ಕಾರ್ಖಾನೆ. ಕಬ್ಬು ಅರೆಯುವ ಕಾಲದಲ್ಲಿ ಇದು ಸು.1000 ಕಾರ್ಮಿಕರಿಗೆ ಉದ್ಯೋಗ ಒದಗಿಸುತ್ತದೆ. ಇಲ್ಲಿನ ನಗರ ಪಂಚಾಯಿತಿ 1896ರಲ್ಲೇ ಸ್ಥಾಪಿತವಾಗಿದ್ದು, ಬಳ್ಳಾರಿ ಜಿಲ್ಲೆಯಲ್ಲೇ ಅತಿ ಪುರಾತನ ಪಂಚಾಯಿತಿಗಳಲ್ಲೊಂದಾಗಿದೆ. ಇದು 1960ರಲ್ಲಿ ಹೊಸ ನಿಯಮಗಳಿಗನುಸಾರವಾಗಿ ಪುನರ್ರೂಪಿತವಾಗಿದೆ. 1958ರಲ್ಲಿ ಸ್ಥಾಪಿತವಾದ ಇಲ್ಲಿಯ ಮಹಿಳಾಸೇವಾ ಸಮಾಜ ಮಹಿಳೆಯರ ಅಭ್ಯುದಯಕ್ಕಾಗಿ ದುಡಿಯುತ್ತಿದೆ. ಗಾಂಧೀಕುಟೀರ ಸಮಾಜಸೇವೆ ನಡೆಸುತ್ತಿದೆ.

11-14ನೆಯ ಶತಮಾನಗಳಲ್ಲಿ ಇದು ಚಿಕ್ಕ ರಾಜ್ಯವೊಂದರ ರಾಜಧಾನಿಯಾಗಿತ್ತು (ನೋಡಿ: ಕಂಪಿಲಿ ರಾಜ್ಯ). 1851ರ ವರೆಗೆ ಇದು ತಾಲ್ಲೂಕಿನ ಕೇಂದ್ರವಾಗಿತ್ತು. ಅಂದಿನ ಕಂಪ್ಲಿ ತಾಲ್ಲೂಕು ಈಗಿನ ಹೊಸಪೇಟೆ ತಾಲ್ಲೂಕಿನ ಭಾಗಗಳನ್ನೊಳಗೊಂಡಿತ್ತು. (ಎಸ್.ಜಿ.)

**ಕಂಬದಹಳ್ಳಿ :** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಕಸಬೆಯಿಂದ 16ಕಿಮೀ ದೂರದಲ್ಲಿ ಶ್ರವಣಬೆಳಗೊಳ ರಸ್ತೆಯಲ್ಲಿರುವ ಒಂದು ಜೈನಕ್ಷೇತ್ರ. ಇಲ್ಲಿನ ಪಂಚಕೂಟ ಬಸದಿಯ ಉತ್ತರದಲ್ಲಿರುವ 15.24ಮೀ ಎತ್ತರದ ಕರಿಕಲ್ಲಿನ ಬ್ರಹ್ಮದೇವರ ಕಂಬವೇ ಊರಿನ ಹೆಸರಿಗೆ ಕಾರಣ. ಈ ಕಂಬದ ತಳಭಾಗದ ಎಂಟು ಮುಖಗಳ ಮೇಲೂ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಕಂಬದ ಮೇಲೆ ಪೂರ್ವಾಭಿಮುಖವಾಗಿ ಬ್ರಹ್ಮ

ಶಾಂತಿನಾಥ ಬಸದಿ

ದೇವರ ಶಿಲ್ಪವಿದೆ. ಸಮೀಪದಲ್ಲಿ ದ್ರಾವಿಡ ಶೈಲಿಯಲ್ಲಿ ಕಲ್ಲಿನಿಂದ ಕಟ್ಟಲಾದ ಏಳು ದೇವಾಲಯಗಳಿವೆ. 900ರ ಸುಮಾರಿನಲ್ಲಿ ಕಟ್ಟಲಾದ ಪಂಚಕೂಟ ಬಸದಿಯಲ್ಲಿ ನಡುವೆ ಇರುವುದೇ ತ್ರಿಕೂಟಾಚಲ ಆದಿನಾಥ ಬಸದಿ. ಈ ಕಣಶಿಲೆಯ ಕಟ್ಟಡದಲ್ಲಿ ಪಲ್ಲವ ಶೈಲಿಯ ಪ್ರಭಾವ ಕಂಡುಬರುತ್ತದೆ. ದೇವಾಲಯದ ಕೆಳಭಾಗ ಅಷ್ಟಕೋನಾಕಾರದ್ದು. ಗೋಡೆಯ ಮೇಲುಗಡೆ ಯಕ್ಷ ಮತ್ತು ಜಿನರ ಲತಾಪಟ್ಟಿಕೆಗಳಿವೆ. ಕೋಷ್ಠಗಳಿಗೆ ಪುಷ್ಪ ಅಥವಾ ಮಕರತೋರಣಗಳಿವೆ. ಇವುಗಳಲ್ಲಿ ಗಂಧರ್ವ, ಯಾಳಿ, ಮುಕ್ಕೊಡೆ, ಮಕರಗಳ ಅಲಂಕರಣಗಳಿವೆ. ಮೇಲ್ಛಾವಣಿಗಳು ಬಾಗಿವೆ. ಲಾಳದ ಆಕಾರದ ಕಮಾನುಗಳಿಂದ ಅಲಂಕೃತವಾಗಿವೆ. ಕೈಪಿಡಿ ಗೋಡೆಯ ಮೇಲೆ ಸಿಂಹ ಮುಖದ ಮೀನು, ನೀರ್ಗುದುರೆಗಳಿವೆ. ಗರ್ಭಗುಡಿಗಳಲ್ಲಿ ನೇಮಿನಾಥ, ಶಾಂತಿನಾಥ ವಿಗ್ರಹಗಳು ಕುಳಿತ ಭಂಗಿಯಲ್ಲಿವೆ. ಗುಡಿಯ ಪೂರ್ವದ ಶಿಖರ ದುಂಡು ಉತ್ತರದ್ದು ಚತುರಸ್ರ, ಪಶ್ಚಿಮದ್ದು ಅಷ್ಟಾಸ್ರ. ಇವುಗಳ ಮೇಲೆ ಲತಾಪಟ್ಟಿಕೆ ಮತ್ತು ಲಾಳದ ಆಕಾರದ ಕಮಾನುಗಳ ಅಲಂಕರಣವಿದೆ. ಗ್ರೀವಾಕಾರದ ಅಂತಸ್ತುಗಳುಳ್ಳ ಇಲ್ಲಿನ ಗೋಪುರಗಳು ಸುಂದರವಾಗಿ ಎತ್ತರವಾಗಿ ಸ್ತಂಭಿಕೆಗಳಿಂದ ಅಲಂಕೃತವಾಗಿವೆ. ಶಿಖರಗಳ ಮೇಲೆ ಮಗುಚಿ ಹಾಕಿದ ಪದ್ಮ ಇವೆ. ಬಸದಿಯಲ್ಲಿರುವ ವಾಹನಸ್ಥ ದಿಕ್ಪಾಲಕರಾದಿಯಾದ ಹಲವು ಪ್ರತಿಮೆಗಳು ಗಮನಾರ್ಹವಾದವು.

ಇಲ್ಲಿನ ಒಂದು ಶಾಂತಿನಾಥ ಬಸದಿ ದ್ರಾವಿಡ ಸಂಪ್ರದಾಯದ್ದು. ಆಮೇಲೆ ಸೇರಿಸಿದ ಒಂಬತ್ತಂಕಣಗಳ ನವರಂಗದಲ್ಲಿ ನಾಲ್ಕು ಹೊಯ್ಸಳ ರೀತಿಯ ಬಳಪದ ಕಲ್ಲಿನ ಕಂಬಗಳಿವೆ. ಈ ಮಂದಿರವನ್ನು 12ನೆಯ ಶತಮಾನದಲ್ಲಿ ಹೊಯ್ಸಳ ವಿಷ್ಣುವರ್ಧನನ ದಂಡನಾಯಕ ಗಂಗರಾಜನ ಮಗ ಬೊಪ್ಪನು ದ್ರೋಹಘರಟ್ಟಾಚಾರಿ ಎಂಬ ಶಿಲ್ಪಿಯ ಸಹಾಯದಿಂದ ಕಟ್ಟಿಸಿದ. ಇದರ ಹೊರವಲಯದ ಗೋಡೆಗಳ ಮೇಲಿರುವ ಆನೆ, ಕುದುರೆ, ಸಿಂಹ ಮತ್ತು ಯಾಳಿಗಳ ಚಿತ್ರಪಟ್ಟಿಕೆಗಳು ಅಮೋಘ ಕೆತ್ತನೆಗಳು. ಇತರ ಹೊಯ್ಸಳ ದೇವಾಲಯಗಳಲ್ಲಿರುವ ಕೆತ್ತನೆಗಳನ್ನು ಇವು ಹೋಲುತ್ತವೆ. ಇಲ್ಲಿನ ಶಾಂತಿನಾಥ ವಿಗ್ರಹ 3.05ಮೀ ಎತ್ತರವಿದೆ. ಇದು ಕಂಬದಹಳ್ಳಿಯ ಬಹು ಸುಂದರ ಶಿಲ್ಪಕೃತಿಗಳಲ್ಲೊಂದಾಗಿದೆ. (ಬಿ.ಕೆ.ಜಿ.)

**ಕಂಬಳ :** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಜನಪದ ವಿನೋದಗಳಲ್ಲಿ ಒಂದಾದ ಕೋಣಗಳ ಓಟದ ಸ್ಪರ್ಧೆ. ಹೊಲ ಗದ್ದೆಗಳನ್ನು ಉತ್ತು ಹರಗಿ ಆದ ಬಳಿಕ ವಿನೋದಕ್ಕಾಗಿ ಕೋಣಗಳನ್ನು ಗದ್ದೆಯಲ್ಲಿ ಓಡಿಸುತ್ತಿದ್ದ ಗ್ರಾಮೀಣ ಅಭಿರುಚಿಯ ವಿನೋದ ಉತ್ಸವವು ರೂಪತಾಳಿತು. ಗ್ರಾಮದ ಹಿರಿಯ ಗುತ್ತು ಮನೆಯವರೂ ನಾಡಿನ ಬಲ್ಲಾಳರೂ ಕಂಬಳಗಳನ್ನು ಏರ್ಪಡಿಸತೊಡಗಿದರು. ಅರಸರು ಜರುಗಿಸುತ್ತಿದ್ದ ದೊಡ್ಡ ಕಂಬಳಕ್ಕೆ ಅರಸುಕಂಬಳ ಎಂಬ ಹೆಸರಿತ್ತು. ಮೂಲ್ಕಿ ಸಾವಂತ ಅರಸರ ಕಾಲದ ಕಂಬಳ ಹೆಸರುವಾಸಿಯಾದುದು. ವಂಡಾರು ಎಂಬಲ್ಲಿಯ ಕಂಬಳ ಬಹು ಪ್ರಸಿದ್ಧ.

ಉತ್ತಮ ತಳಿಯ ಕೋಣಗಳನ್ನು ವಿಶೇಷ ಪೌಷ್ಟಿಕ ಆಹಾರ ಕೊಟ್ಟು ಕಂಬಳದ ಓಟಕ್ಕಾಗಿ ಪ್ರತ್ಯೇಕವಾಗಿ ಸಾಕುವ ಹವ್ಯಾಸ ಇತ್ತೀಚಿಗಿನವರೆಗೂ ಇತ್ತು. ಇಂಥ ಕೋಣಗಳ ಹೆಚ್ಚು ಜೊತೆಗಳನ್ನು ಸಾಕುವ ವ್ಯಕ್ತಿಯ ಪ್ರತಿಷ್ಠೆ ಹೆಚ್ಚಾಗುತ್ತಿತ್ತು. ಓಟಕ್ಕಾಗಿ ಮಾತ್ರ ಮೀಸಲಾಗಿದ್ದ ಇಂಥ ಕೊಬ್ಬಿದ ಕೋಣಗಳಿಂದ ಗದ್ದೆ ಉಳುವಂಥ ಶ್ರಮದ ಕೆಲಸಗಳನ್ನು ಮಾಡಿಸುತ್ತಿರಲಿಲ್ಲ. ನಾಗರಿಕ ಆಕರ್ಷಣೆಗಳು ಹೆಚ್ಚಾದಂತೆಲ್ಲ ಓಟದ ಕೋಣಗಳನ್ನು ಸಾಕುವ ಹವ್ಯಾಸ ಕಡಿಮೆಯಾಗುತ್ತಿದೆ.

ವಿಶಾಲವಾದ ಹೊಲದ ಒಂದು ಮಗ್ಗುಲಿನ ಉದ್ದಕ್ಕೆ ಸು.4.57ಮೀ ಅಗಲಕ್ಕೆ ಕರೆ ಕಡಿದು ಓಟದ ಜಾಗವನ್ನು ಪ್ರಶಸ್ತಗೊಳಿಸುತ್ತಾರೆ. ಇದರ ಇಮ್ಮಡಿಯಷ್ಟು ಜಾಗವನ್ನು ಕಡಿದಿದ್ದರೆ ಅದಕ್ಕೆ ಜೋಡುಕರೆ ಎನ್ನುತ್ತಾರೆ. ಹೀಗಿದ್ದಲ್ಲಿ ಓಡಿದ ಕೋಣಗಳು ಹಿಂದೆ ತಿರುಗಿ ಬರುವುದಕ್ಕೂ ಸಾಧ್ಯವಾಗುತ್ತದೆ. ಓಟದ ಜಾಗಕ್ಕೆ ಒಂದು ಹದದಲ್ಲಿ ನೀರು ಬಿಟ್ಟಿರುತ್ತಾರೆ. ನೀರು ಹೆಚ್ಚು ಅಥವಾ ಕಡಿಮೆಯಾದರೆ ಓಟಕ್ಕೆ ಅಡ್ಡಿಯಾಗುತ್ತದೆ. ಕೆಲವು ಕಡೆ ಹೊಳೆಯ ನೀರನ್ನು ಕಾಲುವೆಯಂತೆ ಉಪಯೋಗಿಸುತ್ತಾರೆ. ಅಲ್ಲಿ ಕಂಬಳದ ಕರೆ ಕಡಿಸುವುದೂ ಉಂಟು.

ಕಂಬಳಕ್ಕೆ ಆಮಂತ್ರಣ ಹೋದಮೇಲೆ ಓಟದ ಕೋಣಗಳನ್ನು ಸಿಂಗರಿಸಿ, ವಾದ್ಯಘೋಷ ಕುಣಿತ ಹಾಡು ಸಿಡಿಮದ್ದುಗಳ ಸಮೇತ ಕಂಬಳದ ಗದ್ದೆಯ ಬಳಿಗೆ ತರುತ್ತಾರೆ. ಈಚೆಗೆ ಕೋಣವನ್ನು ಲಾರಿಯಲ್ಲಿ ಸಾಗಿಸುವುದೂ ಉಂಟು. ಅನಂತರ ಒಂದೊಂದೇ ಜೊತೆ ಕೋಣಗಳನ್ನು ವಿಧಿವತ್ತಾಗಿ ಕಂಬಳಕ್ಕೆ ಬಿಡುತ್ತಾರೆ. ಕೋಣಗಳಿಗೆ ಕಟ್ಟಿದ ಹರಗುವ ಹಲಗೆಯ

(ಗೋರುಹಲಗೆ) ಮೇಲೆ ಕೋಣಗಳನ್ನು ಓಡಿಸುವ ವ್ಯಕ್ತಿ ನಿಂತು, ಕೋಣಗಳ ಬಾಲಗಳನ್ನು ಎಡಗೈಯಿಂದ ಬಿಗಿಹಿಡಿದು ಬಲಗೈಯ ಚಾವಟಿಯಿಂದ ಬಲವಾಗಿ ಅವುಗಳಿಗೆ ಬಾರಿಸುತ್ತ ವೇಗವಾಗಿ ಓಡಿಸುವನು. ಸೊಕ್ಕಿದ ಕೋಣಗಳನ್ನು ನಿಯಂತ್ರಿಸುವುದು ಕಷ್ಟ ಮತ್ತು ಅಪಾಯಕಾರಿ ಕೆಲಸವಾದ್ದರಿಂದ ಅದನ್ನು ನಿರ್ವಹಿಸುವವ ಬಲಶಾಲಿಯೂ ನುರಿತವನೂ ಆಗಿರಬೇಕು.

ಕಂಬಳ ಓಟದ ಒಂದು ದೃಶ್ಯ

ಕೋಣಗಳು ಮುಂದಕ್ಕೆ ಓಡುತ್ತಿದ್ದಂತೆ ವ್ಯಕ್ತಿ ನಿಂತ ಅಡ್ಡಹಲಗೆ ನೀರನ್ನು ಮೇಲಕ್ಕೆ ಹಾಯಿಸುತ್ತದೆ. ಸಾಮಾನ್ಯವಾದ ಗೋರು ಹಲಗೆಯನ್ನೇ ಓಟಕ್ಕೂ ಅಡ್ಡಹಲಗೆಯಾಗಿ ಹಿಂದೆ ಉಪಯೋಗಿಸುತ್ತಿದ್ದರು. ಆದರೆ ಅದರ ಮೂಲಕ ಸಾಕಷ್ಟು ಹೆಚ್ಚು ಎತ್ತರಕ್ಕೆ ನೀರು ಚಿಮ್ಮುವುದಿಲ್ಲವೆಂದು ಅದರ ರಚನೆಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಕಣೆಹಲಗೆ ಎಂಬುದನ್ನು ಈಗ ಬಳಸತೊಡಗಿದ್ದಾರೆ.

ಕೋಣಗಳು ಓಡಿ ಗುರಿ ಮುಟ್ಟುವ ಕಂಬಳದ ಕೊನೆಯ ತುದಿಗೆ ಮಂಜೊಟ್ಟಿ ಎನ್ನುತ್ತಾರೆ. ಕಂಬಳದ ಕೋಣಗಳನ್ನು ಮಂಜೊಟ್ಟಿ ಕೋಣ ಎಂದು ಕರೆಯುವುದುಂಟು. ಹಿಂದೆ ನಡೆದುದೆನ್ನಲಾದ ಕಂಬಳದ ಒಂದು ದುರಂತ ಪ್ರಕರಣ ಮಂಜೊಟ್ಟಿಗೋಣ ಎಂಬ ತುಳುಪಾಡ್ದನವಾಗಿ ಈಗಲೂ ಪ್ರಚಲಿತವಿದೆ.

ಕಂಬಳದ ಕರೆಯ ಸುಮಾರು ಮಧ್ಯದಲ್ಲಿ ಅಥವಾ ಮಂಜೊಟ್ಟಿಗೆ ಸಮೀಪವಾಗಿ ಒಂದೋ ಎರಡೋ ನಿಶಾನೆಗಳನ್ನು ನೆಟ್ಟಿರುತ್ತಾರೆ. ಸು.7ಮೀ. ಎತ್ತರದಲ್ಲಿ ಅಡ್ಡವಾಗಿ ಕಟ್ಟುವ ನಿಶಾನೆಗೆ ಬಟ್ಟೆ ಅಥವಾ ಹಲಗೆಯನ್ನು ಉಪಯೋಗಿಸುತ್ತಾರೆ. ಆ ನಿಶಾನೆಗೆ ನೀರು ಮುಟ್ಟಿಸಿದ ಕೋಣಗಳು ಗೆದ್ದಂತೆ. ನಿಶಾನೆ ಎಷ್ಟು ಎತ್ತರಕ್ಕೆ ಒದ್ದೆಯಾಯಿತು ಎಂಬುದರ ಮೇಲಿಂದ ಒಂದನೆಯ ಎರಡನೆಯ ಇತ್ಯಾದಿ ಬಹುಮಾನಗಳು ಅನುಕ್ರಮವಾಗಿ ಸಲ್ಲುತ್ತವೆ. ಚಿನ್ನ ಬೆಳ್ಳಿಯ ಪದಕಗಳನ್ನೂ ಬಾಳೆಯ ಗೊನೆಯನ್ನೂ ಬಹುಮಾನಗಳಾಗಿ ಇರಿಸುವರು. ಕಂಬಳದ ಓಟದ ಜೊತೆಗೆ ಗೆಲ್ಲುವ ಕೋಣದ ಮೇಲೆ ಬಾಜಿಕಟ್ಟುವ ಜೂಜಾಡುವ ಪರಿಪಾಠವೂ ಇತ್ತೀಚೆಗೆ ಬೆಳೆದಿದೆ.

ಒಂದೇ ಸಾರಿ ಎರಡೆರಡು ಜೊತೆ ಕೋಣಗಳನ್ನು ಓಡಿಸಿ, ಓಟದಲ್ಲಿ ಯಾವುದು ಮೊದಲು ಬರುತ್ತದೆ ಎಂಬ ಸ್ಪರ್ಧೆಯನ್ನೂ ಈ ಕಾಲದಲ್ಲಿ ಏರ್ಪಡಿಸುವುದುಂಟು. ಕಂಬಳದ ಅಂಗವಾಗಿ ಕೋಳಿ ಕಾಳಗ ಮುಂತಾದ ಇತರ ಮನರಂಜನೆ ಆಟಗಳು ಈ ಸಂದರ್ಭದಲ್ಲಿ ನಡೆಯುತ್ತವೆ. (ಎ.ಎಸ್‌ಟಿ.)

**ಕಂಬಳಿ ಉದ್ಯಮ** : ಜನಪದರು ಹೊದೆಯಲು ಹಾಸಲು ಉಪಯೋಗಿಸುವ ಉಣ್ಣೆಯ ನೇಯ್ಗೆ. ಇದು ಉಷ್ಣ ಅವಾಹಕವಾದ್ದರಿಂದ ದೇಹೋಷ್ಣತೆಯನ್ನು ಒಳಗೆ ಕಾಪಿಡುವುದಲ್ಲದೇ ಪರಿಸರದ ಶೈತ್ಯ ಒಳಗೆ ಬರದಂತೆಯೂ ನಿವಾರಿಸುವದು.

ಭಾರತದಲ್ಲಿ ಋಗ್ವೇದದ ಕಾಲದಿಂದಲೂ ಉಣ್ಣೆಯ ವಸ್ತ್ರ ಬಳಕೆಯಲ್ಲಿ ಇತ್ತೆಂಬುದುಕ್ಕೆ ಆಧಾರವಿದೆ. ಊರ್ಣವತೀ ಯುವತಿಃ ಶೀಲ ಮಾವತಿ, ಊರ್ಣವಂತಂ ಊರ್ಣವಸತ ಶ್ರುಂದ್ರುವ ಮುಂತಾದ ಋಗ್ವೇದೋಕ್ತಿಗಳನ್ನು ಗಮನಿಸಬಹುದು. ಉಣ್ಣೆ, ನಾರು, ರೇಷ್ಮೆ ಮುಂತಾದವುಗಳಿಂದ ನೇದ ಬಟ್ಟೆಗಳು ದೇವತಾಕಾರ್ಯಗಳಲ್ಲಿ ತೊಟ್ಟುಕೊಳ್ಳಲು ಉಪಯೋಗಿಸಬಹುದಾದ ಮಡಿವಸ್ತ್ರಗಳೆಂದೂ ವೈದಿಕ ಕಾಲದಿಂದಲೂ ಬೆಳೆದು ಬಂದಿರುವ ಸಂಪ್ರದಾಯವೂ ಉಣ್ಣೆವಸ್ತ್ರದ ಪ್ರಾಚೀನತೆಗೆ ಸಾಕ್ಷಿ.

ಜಂಗಮ ದಾಸೋಹದಲ್ಲಿ ಸಣ್ಣ ಕಂಬಳಿ ಮತ್ತು ಶಾಲುಗಳ ಅರ್ಪಣೆಯೂ ಒಂದು ಪ್ರಮುಖ ವಿಧಿಯಾಗಿ ಬರುತ್ತದೆ. ಹನ್ನೆರಡನೆಯ ಶತಮಾನದ ವಚನಗಳಲ್ಲಿ ಕಂಬಳಿ ನಾಗಿದೇವ ಎಂಬ ವಚನಕಾರನೊಬ್ಬ ಪ್ರಾಯಶಃ ಕಂಬಳಿ ಮಾಡುವ ವೃತ್ತಿಯವನಿರಬೇಕು. ಕಂಬಳಿ ಮತ್ತು ಕರಿಯ ಕಂಬಳಿಗಳಂತೂ ಜನಪದ ಸಾಹಿತ್ಯ ಮತ್ತು ಗಾದೆಗಳಲ್ಲಿ ಪ್ರಸಿದ್ಧಿ ಪಡೆದಿದ್ದುವು. ಅಂಬಲಿಯಂತ ಊಟವಿಲ್ಲ ಕಂಬಳಿಯಂತ ಹೊದಿಕೆಯಿಲ್ಲ ಎಂಬ ಗಾದೆಯೇ ಜನಪದರಲ್ಲಿ ಅಂಬಲಿ, ಕಂಬಳಿಗಳ ಬಗೆಗಿನ ಪ್ರೀತಿ ಭಾವವನ್ನು ಪ್ರಕಟಿಸುತ್ತದೆ.

ಕನ್ನಡನಾಡು ಕಂಬಳಿ ತಯಾರಿಕೆಯಲ್ಲಿ ಬಹಳ ಪುರಾತನವಾದ ದೇಶ. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದಲ್ಲಿ ಕಂಬಳಿ ದಾನದ ಬಗ್ಗೆ ವಿಪುಲವಾದ ಹೇಳಿಕೆಗಳಿವೆ. ಕಂಬಳಿಯ ಗದ್ದುಗೆಯಂತೂ ಬಹಳ ಪ್ರಸಿದ್ಧವಾದುದು, ವಿಜಯನಗರದ ಅಕ್ಕಪಕ್ಕದ ಮೈದಾನಗಳಲ್ಲಿ ಹುಡುಗರು ಕುರಿಗಳ ಮೇಲೆ ಸವಾರಿ ಮಾಡುತ್ತಿದ್ದುದನ್ನು ಕಂಡುದಾಗಿ ಪೋರ್ಚುಗೀಸ್ ಯಾತ್ರಿಕ ಪೆಯಿಜ್ ಹೇಳಿದ್ದಾನೆ. ಈ ಹೇಳಿಕೆ ಆ ಕಾಲದ ಕುರಿಗಳ ಸುದೃಢತೆಗೆ ಸಾಕ್ಷಿ, ತರುವಾಯ ಮೈಸೂರು ಅರಸರು ಕುರಿಸಾಕಣೆ ಮತ್ತು ಉಣ್ಣೆಯ ಉದ್ಯಮಕ್ಕೆ ಉದಾರ ನೆರವು ನೀಡಿದರು.

**ಕಂಬಳಿ ತಯಾರಿಕೆ :** ಕಂಬಳಿ ತಯಾರಿಕೆಯ ಮೊದಲನೆಯ ಹಂತ ತುಪ್ಪಟ ಸಂಗ್ರಹ. ಇದನ್ನು ಬಂಡ ಎಂದು ಕರೆಯುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಕುರುಬ, ಹಳ್ಳಿಕಾರ, ಹಟ್ಟಿಕಾರ, ಒಕ್ಕಲಿಗರು, ಗೊಲ್ಲರು, ಲಿಂಗಾಯಿತರು ಗೊಬ್ಬರ ಮತ್ತು ಮಾಂಸಕ್ಕಾಗಿ ಕುರಿ ಸಾಕುತ್ತಾರೆ. ಹೀಗೆ ಸಾಕಿದ ಕುರಿಗಳ ತುಪ್ಪಟದಿಂದ ಹೊದೆಯುವ ಕಂಬಳಿಗಳು ಅವರಿಗೆ ದೊರೆಯುವ ಉಪ ಆದಾಯ. ಮೇಲೆ ಹೇಳಿದ ಜನಾಂಗಗಳಲ್ಲಿ ಕುರಿಯ ತುಪ್ಪಟ ಕತ್ತರಿಸಿ ಕಂಬಳಿ ಮಾಡುವ ಕಲೆ ಕುರುಬ ಜನಾಂಗದವರಿಗೆ ಮಾತ್ರ ಸಿದ್ಧಿಸಿದೆ. ಯಂತ್ರಯುಗದ ಆರಂಭದವರೆಗೆ ಇದು ಕೇವಲ ಕುರುಬರ ಕಸಬಾಗಿತ್ತು. ಒಂದು ಕತ್ತರಿ, ಕೆಲವು ಕಂಬಳಿಗಳನ್ನು ಹೆಗಲ ಮೇಲೆ ಹಾಕಿಕೊಂಡು ಈ ಕಂಬಳಿ ನೇಯ್ಗೆಕಾರ ವರ್ಷಕ್ಕೆ ಎರಡುಬಾರಿ ಬಂಡ ಸಂಗ್ರಹಣೆಗೆ ಹಳ್ಳಿಗಳ ಮೇಲೆ ಹೋಗುತ್ತಾನೆ. ಕುರಿ ಸಾಕಿದ ರೈತರು ತುಪ್ಪಟ ಬೆಳೆದ ತಮ್ಮ ಕುರಿಗಳನ್ನು ಕತ್ತರಿಸಲು ಅವನಿಗೊಪ್ಪಿಸಿ ಅದಕ್ಕೆ ಬದಲಾಗಿ ಕಂಬಳಿಗಳನ್ನು ಪಡೆಯುತ್ತಾರೆ. ಐವತ್ತು ಕುರಿಗಳ ಒಂದು ಸೊಲಿಗೆ ತುಪ್ಪಟಕ್ಕೆ ಒಂದು ದಡೂತಿ ಕಂಬಳಿ ವಿನಿಮಯವಾಗುತ್ತದೆ. ಹೀಗೆ ಪಡೆದ ಒಂದು ಸೊಲಿಗೆ ತುಪ್ಪಟ ಹಳೇ ತೂಕದ ಒಂದು ಮಣವಿರುತ್ತದೆ. ಅದರಲ್ಲಿ ಮೂರು ದಡೂತಿಯ ಕಂಬಳಿಗಳಾಗುತ್ತವೆ. ಅದರಿಂದ ಕಸುಬುದಾರನಿಗೆ ಎರಡು ಕಂಬಳಿಗಳ ಲಾಭ ದೊರೆಯುತ್ತದೆ.

ಬಂಡದಲ್ಲಿ ಎರಡು ವಿಧ. ಮೊದಲೇ ಕುರಿಗಳನ್ನು ಚೆನ್ನಾಗಿ ತೊಳೆದು ಕತ್ತರಿಸುವುದು ಮೊದಲನೆಯ ರೀತಿ. ಇದು ಒಳ್ಳೆಯ ಬಂಡ. ಏಕೆಂದರೆ ಕುರಿಗಳ ಮೈಗೆ ಅಂಟಿದ್ದ ಕಸಕಡ್ಡಿ, ಮುಳ್ಳು, ಕೊಳೆಯೆಲ್ಲ ಹೋಗಿ ತುಪ್ಪಟ ಸ್ವಚ್ಛವಾಗಿರುತ್ತದೆ. ಕುರಿಗಳನ್ನು ತೊಳೆಯದೆ ಕತ್ತರಿಸುವುದು ಎರಡನೆಯ ವಿಧ. ಅದನ್ನು ಬೆವರು ತುಪ್ಪಟ ಎಂದು ಕರೆಯುತ್ತಾರೆ. ಈ ಬೆವರು ತುಪ್ಪಟವನ್ನು ಗೆರೆಸಿಗಳಲ್ಲಿ ಹಾಕಿಕೊಂಡು ಕೆರೆಗಳಲ್ಲಿ ಅಥವಾ ಹೊಳೆಯ ತಿಳಿನೀರಿನಲ್ಲಿ ಕೀರೆಸೊಪ್ಪು ಜಾಲಿಸುವಂತೆ ಜಾಲಿಸಿ ತೊಳೆದು ಒಣಗಿಸುತ್ತಾರೆ. ಇದನ್ನು ಹಿಂಜಿ ಹಂಜಿ ಮಾಡುವುದು ಎರಡನೆಯ ಕೆಲಸ. ಈಗ ತುಪ್ಪಟ ಹಿಂಜುವುದಕ್ಕೆ ಯಂತ್ರಗಳಿವೆ. ಆದರೆ ಮೊದಲಿಗೆ ಪಿಂಜಾರರು ಕೈಬೆಸಗಳಿಂದ ತುಪ್ಪಟ ಹೊಡಚುತ್ತಿದ್ದರು. ಕಂಬಳಿ ತಯಾರಿಕೆ ಗೃಹಕೈಗಾರಿಕೆಯಾಗಿರುವ ಕಡೆಗಳಲ್ಲೆಲ್ಲ ಇಂದಿಗೂ ಈ ಪದ್ಧತಿ ಜಾರಿಯಲ್ಲಿದೆ. ಚೆನ್ನಾಗಿ ಹೊಡಚಿದ ತುಪ್ಪಟ ಬಹಳ ಮೃದುವಾಗುತ್ತದೆ. ಇದರಿಂದ ಹಂಜಿಗಳನ್ನು ತಯಾರುಮಾಡುತ್ತಾರೆ.

ಕಂಬಳಿ ನೇಯ್ಗೆಯಲ್ಲಿ ನೂಲುವುದು ಒಂದು ಪ್ರಮುಖವಾದ ಕಾರ್ಯ. ನೂಲು ಯಾವ ಮಟ್ಟವಿರುತ್ತದೆಯೋ ಕಂಬಳಿ ಆ

ಮಟ್ಟದ್ದಾಗುತ್ತದೆ. ಹೊಡಚಿ ಹಿಂಜಿ ಹಂಜಿಮಾಡಿದ ತುಪ್ಪಟವನ್ನು ಕಂಬಳಿಗಳ ವಿನ್ಯಾಸದ ಯೋಜನೆಗನುಗುಣವಾಗಿ ನೂಲುತ್ತಾರೆ.

ಬಹಳ ಹಿಂದೆ ಇಂಥ ಹಂಜಿಗಳನ್ನೂ ತೊಡೆಗದಿರಿನಿಂದ ನೂಲುತ್ತಿದ್ದರು. ಇದು ಬಹಳ ನಿಧಾನ ಮತ್ತು ಕಷ್ಟದ ಕೆಲಸವಾಗಿತ್ತು. ರಾಟೆಯ ಪ್ರವೇಶ ಬಹುಶಃ ನೂಲುವುದರ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನು ಎಬ್ಬಿಸಿತು. ಈ ಕುಶಲ ಕಲೆ ಬೆಳೆದುಬಂದ ರೀತಿಯೇ ಒಂದು ಕೌತುಕದ ಕಥೆ. ಸು.600 ವರ್ಷಗಳಷ್ಟು ಹಳೆಯದಾದ ಚರಕವನ್ನು ಭಾರತೀಯರೇ ಮೊದಲು ಕಂಡುಹಿಡಿದದ್ದು ಎಂದು ಅನೇಕರ ಅಭಿಪ್ರಾಯ. ಆದರೆ ಇದನ್ನು ಕಂಡುಹಿಡಿದವರ ಹೆಸರು ಅಜ್ಞಾತವಾಗಿಯೇ ಉಳಿದಿದೆ. ತಿರುಗಿಸಲು ದೊಡ್ಡ ಚಕ್ರದ ಬಳಕೆ ಮತ್ತು ಅದಕ್ಕೆ ತಕ್ಕ ಕದರನ್ನು ಉಪಯೋಗಿಸಿದುದರಿಂದ ಚರಕವನ್ನು ವೇಗವಾಗಿ ತಿರುಗಿಸಲು ಸಾಧ್ಯವಾಗಿ ಹೆಚ್ಚು ನೂಲು ತೆಗೆಯಲು ಅನುಕೂಲವಾಯಿತು. ಆದುದರಿಂದಲೇ ಕಂಬಳಿ ಮತ್ತು ಜಮಖಾನೆಯ ಉದ್ಯಮದಲ್ಲಿ ಚರಕ ಬಹಳ ಪ್ರಮುಖವಾದ ಮಾಧ್ಯಮವಾಗಿದೆ.

ಚಕರದಿಂದ ನೂತ ನೂಲನ್ನು ಕಂಡಿಕೆಗಳಾಗಿ ಮಾಡಿಕೊಳ್ಳುತ್ತಾರೆ. ಕಂಬಳಿ ನೇಕಾರರೇ ನೂಲನ್ನು ನೂಲುವುದಿಲ್ಲ. ಬೇರೆಯವರಿಗೆ ಕೂಲಿ ಕೊಟ್ಟು ನೂಲಿಸುವುದೂ ಉಂಟು. ಇಪ್ಪತ್ತೆಂಟು ತೊಲ ಹಿಂಜಿದ ತುಪ್ಪಟಕ್ಕೆ ಒಂದು ಹಂಜಿ ಎಂದು ಹೆಸರು. ಇಂಥ ಮೂರು ಹಂಜಿಯನ್ನು ನೂತರೆ ಒಂದು ರೂಪಾಯಿ ಕೂಲಿ ಸಿಗುತ್ತದೆ. ನೂಲಿನಲ್ಲಿ ಅನೇಕ ವಿಧಗಳುಂಟು: 1 ಹುರಿಗಂಬಳಿ ನೂಲು, 2 ಉಜ್ಜುಗಂಬಳಿ ನೂಲು, 3 ಸಣ್ಣಕಂಬಳಿ ನೂಲು, ಇತ್ಯಾದಿ. ಒಟ್ಟಿನಲ್ಲಿ ನೂಲಿನ ಗುಣಮಟ್ಟದಂತೆ ಕಂಬಳಿ ತಯಾರಾಗುತ್ತದೆ.

ಕಂಬಳಿ ನೇಯುತ್ತಿರುವುದು

ಆಧಾರವೆಂತೆಂಬ ಅಂಬಲಿಯನೆ ತೊಡೆದು - ಎಂಬ ಜನಪದ ನುಡಿಯೊಂದರಂತೆ ಅಂಬಲಿಯ ತಯಾರಿಕೆ ಮತ್ತು ಅದನ್ನು ನೂತ ದಾರಕ್ಕೆ ಸವರುವುದು ಒಂದು ವಿಶಿಷ್ಟ ಕಲೆ. ಕಂಬಳಿಯ ತಯಾರಿಕೆಯುಲ್ಲಿ ಅಂಬಲಿಯ ಪಾತ್ರ ಹಿರಿದಾದುದು. ಇದರ ತಯಾರಿಕೆಯೇ ಒಂದು ವಿಶಿಷ್ಟ ರೀತಿಯದು. ಮೊದಲು ಒಳ್ಳೆಯ ಹುಣಿಸೆ ಬೀಜವನ್ನು ಹದವರಿತು ಹುರಿಯಬೇಕು. ಆಮೇಲೆ ಅವನ್ನು ನೆಗ್ಗಿ ಮೇಲಿನ ಕರಿಯ ಸಿಪ್ಪೆ ತೆಗೆದರೆ ದೊರೆಯುವ ಬಿಳಿ ಪೊಪ್ಪುಗಳನ್ನು ಸುಮಾರು ಹನ್ನೆರಡು ಗಂಟೆಗಳ ಕಾಲ ಅಥವಾ ಒಂದು ರಾತ್ರಿ ನೀರಿನಲ್ಲಿ ನೆನೆಹಾಕಬೇಕು. ಚೆನ್ನಾಗಿ ನೆನೆದ ಬೀಜವನ್ನು ಒರಳಲ್ಲಿ ಹಾಕಿ ಚೆನ್ನಾಗಿ ನುಣ್ಣಗೆ ತಿರುವಿ ಆ ಹಿಟ್ಟನ್ನು ನೀರಿನಲ್ಲಿ ಕದರಿ ಒಲೆಯ ಮೇಲಿಟ್ಟು ಹದವಾದ ಉರಿಯಲ್ಲಿ ಚೆನ್ನಾಗಿ ಬೇಯಿಸಬೇಕು. ಉದ್ದನೆಯ ಕೋಲಿನ ತುದಿಗೆ ಈಚಲುಗರಿಯನ್ನು ಸಿಕ್ಕಿಸಿದ ಉಜ್ಜುಗುಲ್ಲದಿಂದ ಅದನ್ನು ಗಂಟಾಗದಂತೆ ತಿರುವುತ್ತಿರಬೇಕು. ಸುಮಾರು ಎರಡು ಮೂರು ಗಂಟೆಗಳ ಕಾಲ ಹೀಗೆ ಬೇಯಿಸಿದ ಅನಂತರ ಅದು ಚೆನ್ನಾಗಿ ಬೆಂದು ಒಂದು ರೀತಿಯ ಮುದ್ದೆಯಂತಾಗುತ್ತದೆ. ಈ ಮುದ್ದೆಯನ್ನು ಮತ್ತೆ ನೀರಿನಲ್ಲಿ ಕದರಿದರೆ ಅದು ಅಂಟು ಅಂಟಾದ ಗಂಜಿಯಂಥ ಸರಿಯಾಗುತ್ತದೆ. ಇದನ್ನು ಹುಣಿಸೆ ಅಂಬಲಿ, ಗಂಜಿಸರಿ ಎಂದೆಲ್ಲ ಕರೆಯುತ್ತಾರೆ.

ಮುಂದಿನ ಕ್ರಮ ದಾರವನ್ನು ಹಾಸುಮಾಡುವುದು. ಸುಮಾರು ಒಂಬತ್ತು ಮೊಳ ಉದ್ದದ 220ರಿಂದ 240 ಜೊತೆ ದಾರಗಳುಳ್ಳ ಹಾಸುಗಳನ್ನಾಗಿ ಮಾಡುತ್ತಾರೆ. ಹಾಸು ಎಂದರೆ ಎಳೆಗಳು ಬಿಡಿ ಬಿಡಿಯಾಗಿ ಒಂದರ ಪಕ್ಕದಲ್ಲೊಂದು ಬರುವಂತೆ ಜೋಡಿಸುವ ರೀತಿ. ಏಳು ಗೂಟಗಳ ಆರುಗಣಿ ಎಂಬ ಹಲಗೆಯಂಥ ಸಾಧನದಲ್ಲಿ ನೂಲನ್ನು ಹಾಸಿಕ್ಕುತ್ತಾರೆ. ಹೀಗೆ ಹಾಸಿದ ನೂಲನ್ನು ಒಂದು ಕ್ರಮದಲ್ಲಿ ಕಟ್ಟಿ ತಿಳಿಯಾದ ಹುಣಿಸೆ ಸರಿಯಲ್ಲಿ ಅದ್ದಿ ಬಿಸಿಲಿನಲ್ಲಿಟ್ಟುಕೊಂಡು ಕುಂಚಿಗೆ ಎಂಬ ಉಪಕರಣದ ಸಹಾಯದಿಂದ ಊಕೆ ಮಾಡುತ್ತಾರೆ - ಎಂದರೆ ನೂಲನ್ನು ನಯುಗೊಳಿಸುವುದು ಎಂದರ್ಥ. ಆಗ ನೂಲಿನ ಕೂದಲು ಬಲಿಯೊಡನೆ ಸೇರಿ ಒಂದು ಹದಕ್ಕೆ ಬರುತ್ತದೆ. ಎಳೆಗಳು ಒಂದಕ್ಕೊಂದು ಅಂಟದೆ ಬಿಡಿಬಿಡಿಯಾಗಿರುತ್ತವೆ.

ಇಷ್ಟೆಲ್ಲ ಆದ ಮೇಲೆ ದಾರ ಅಥವಾ ಹುರಿಯನ್ನು ಮಗ್ಗಕ್ಕೆ ಏರಿಸುತ್ತಾರೆ. ಹೋಳು ಎನ್ನುವ ಸಾಧನದಲ್ಲಿ ನೂಲನ್ನು ಜೋಡಿಸಿ ಮಗ್ಗದಲ್ಲಿಟ್ಟು ನೇಯುತ್ತಾರೆ. ಈ ಹೋಳುಗಳು 9 ಮೊಳ ಉದ್ದ 3 ಮೊಳ ಅಗಲವಿರುತ್ತವೆ. ನೇಯ್ದ ಮೇಲೆ ಅನುಕೂಲಕ್ಕೆ ತಕ್ಕಹಾಗೆ ಈ ಹೋಳುಗಳನ್ನು (ಎರಡರಿಂದ ನಾಲ್ಕನ್ನು ಸೇರಿಸಿ ಒಂದು ಕಂಬಳಿ ಮಾಡುತ್ತಾರೆ). ಅಣಿಗಳನ್ನು ಬಿಡಿಸಿ ಗಂಜಿಯಲ್ಲಿ ಅದ್ದಿ ಸಿದ್ಧವಾದ ಹುರಿಯನ್ನು ಲಾಳಿಯ ಮೂಲಕ ಸೇರಿಸಿ ಮತ್ತೆ ಅಣಿಯನ್ನು ಕೂಡಿಸಿ ಬೇವು ಎಂಬ ಸಾಧನದಿಂದ ಒತ್ತಿ ಹುರಿಗಳನ್ನು ಹತ್ತಿರ ಸೇರಿಸುತ್ತ ಹೋಗುತ್ತಾರೆ. ಹೀಗೆ ನೇಯ್ದು ಸಿದ್ಧವಾದ ಕಂಬಳಿಯ ಹೋಳುಗಳಿಗೆ ಮತ್ತೆ ಹುಣಿಸೆ ಸರಿಯನ್ನು ಸವರಿ ಬಿಸಿಲಿನಲ್ಲಿ ನೇತು ಹಾಕಿ ಒಣಗಿಸುತ್ತಾರೆ. ಹೀಗೆ ಕ್ರಮಬದ್ಧವಾಗಿ ಒಣಗಿಸಿದ ನೇಯ್ದ ಹೋಳುಗಳನ್ನು ಅನುಕೂಲಕ್ಕೆ ಅನುಗುಣವಾಗಿ ಎರಡರಿಂದ ನಾಲ್ಕು ಹೋಳುಗಳನ್ನು ಉಣ್ಣೆಯ ದಾರದಿಂದ ಹೊಲೆದರೆ ಒಂದು ಪೂರ್ಣ ಕಂಬಳಿ ಸಿದ್ಧವಾದಂತಾಯಿತು.

ಕಂಬಳಿಗಳಲ್ಲಿ ಹಲವು ವಿಧಗಳುಂಟು. ತುಪ್ಪಟದ ಉತ್ಕೃಷ್ಟತೆ ಮತ್ತು ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ (1) ಹುರಿಗಂಬಳಿ (2) ಉಜ್ಜುಗಂಬಳಿ (3) ಸಣ್ಣಕಂಬಳಿ (4) ಶಾಲು (5) ಗದ್ದುಗೆ ದಾವಳಿ (6) ಕರಿಯಕಂತೆ ಇತ್ಯಾದಿ.

**ಹುರಿಗಂಬಳಿ :** ಇದು ಸಾಮಾನ್ಯ ಬಳಕೆಗೆ ತಯಾರುಮಾಡುವ ಒರಟು ಕಂಬಳಿ. ಅಂಥ ಮೃದುವಲ್ಲದ ತುಪ್ಪಟದಿಂದ ನೂತ ಕೊಂಚ ದಪ್ಪನೆಯ ನೂಲುಗಳಿಂದ ಇದನ್ನು ನೇಯುತ್ತಾರೆ. ನೂಲು ಹುರಿಯ ಗಾತ್ರ ವಿರುವುದರಿಂದ ಹುರಿಗಂಬಳಿ ಎಂದು ಕರೆಯುತ್ತಾರೆ. ಹುರಿಗಂಬಳಿ ನಾಲ್ಕು ಹೋಳುಗಳಿಂದ ತಯಾರಾಗಿರುತ್ತದೆ. ಒಂದೇ ಕಂಬಳಿಯ ಅರ್ಧವನ್ನು ಹಾಸಿ ಮತ್ತರ್ಧವನ್ನು ಹೊದೆಯುತ್ತಾರೆ. ಇದನ್ನು ಹೆಗ್ಗಂಬಳಿ ಎಂದೂ ಕರೆಯುತ್ತಾರೆ. ಹಳ್ಳಿಗಾಡುಗಳಲ್ಲಿ ವಾಸಿಸುವ ರೈತರು ಇದನ್ನು ಕೊಳ್ಳುತ್ತಾರೆ; ಕುರಿ ಸಾಕುವವರು ಬಂಡದ ವಿನಿಮಯಕ್ಕೆ ಪಡೆಯುತ್ತಾರೆ.

**ಉಜ್ಜುಗಂಬಳಿ :** ಕಂಬಳಿ ತಯಾರಿಕೆಯಲ್ಲಿ ಉಜ್ಜುಗಂಬಳಿ ಮಾಡುವುದು ಒಂದು ವಿಶೇಷ ಕಲೆ. ಕಂಬಳಿ ಮಾಡುವ ಎಲ್ಲ ಕಸುಬುದಾರರಿಗೂ ಇದು ಬರುವುದಿಲ್ಲ. ಆ ಕೆಲಸದಲ್ಲಿ ನಿಷ್ಣಾತರಾದ ಕೆಲವು ಜನ ಮಾತ್ರ ಇದನ್ನು ಮಾಡಬಲ್ಲರು. ಉಜ್ಜು ಕಂಬಳಿಯನ್ನು ಸಾಮಾನ್ಯ ಬಂಡದಿಂದ ಮಾಡಲು ಬರುವುದಿಲ್ಲ. ನೇಕಾರರು ತರುವ ರಾಶಿಬಂಡದಲ್ಲಿ ಮೃದುವಾದುದನ್ನು ಆರಿಸಬೇಕು. ಒಂದು ಮಣದಷ್ಟಿರುವ ಬಂಡದ ರಾಶಿಯಲ್ಲಿ ಇಂಥ ಮೃದುವಾದ ತುಪ್ಪಟ ಮೂರು ಅಥವಾ ನಾಲ್ಕು ಪೌಂಡು ದೊರೆಯುತ್ತದೆ. ಸಾಮಾನ್ಯವಾಗಿ ಈ ತುಪ್ಪಟ ಕುರಿಯ ಮೊದಲನೆಯ ಕತ್ತರಿಯದಾಗಿರಬೇಕು. ಕುರಿಯ ಕತ್ತಿನ ಭಾಗ ಮತ್ತು ಬೆನ್ನಿನ ಮೇಲಿನ ತುಪ್ಪಟ ಇದಕ್ಕೆ ಉತ್ತಮವಾದುದು. ಹೀಗೆ ಆರಿಸಿ ತೆಗೆದ ಅಪ್ಪಟವಾದ ಮೃದು ತುಪ್ಪಟವನ್ನು ಹಿಂಜಿ ಹಂಜಿ ಮಾಡಬೇಕು. ಈಗಿನಂತೆ ಹಿಂಜು ಯಂತ್ರಗಳು ಇಲ್ಲದಿದ್ದ ಹಿಂದಿನ ಕಾಲದಲ್ಲಿ ತುಪ್ಪಟವನ್ನೂ ಕೈಬೆಸಗಳಿಂದ ಹಿಂಜುತ್ತಿದ್ದರು. ಹಿಂಜಿದ ಹಂಜಿಯಿಂದ ಮೃದುವಾದ, ಹೆಚ್ಚು ಸಡಿಲವಲ್ಲದ, ಹೆಚ್ಚು ಹುರಿಯೂ ಅಲ್ಲದ ಹೆಚ್ಚು

ದಪ್ಪನಲ್ಲದ, ಹೆಚ್ಚು ಸಣ್ಣವೂ ಅಲ್ಲದ ಮಧ್ಯಮ ರೀತಿಯ ದಾರ ತೆಗೆಯಬೇಕು. ಉಜ್ಜುಗಂಬಳಿಯ ನೂಲು ತೆಗೆಯುವುದೇ ಇಲ್ಲಿ ಬಹು ಮುಖ್ಯ ಕೆಲಸ. ಎಷ್ಟರಮಟ್ಟಿಗೆ ಒಳ್ಳೆಯ ನೂಲು ಬರುತ್ತದೆಯೋ ಅಷ್ಟರ ಮಟ್ಟಿಗೆ ಕಂಬಳಿ ಉತ್ತಮವಾಗುತ್ತದೆ. ಉಜ್ಜುಗಂಬಳಿ ನೇಯ್ಗೆಯೂ ಒಂದು ವಿಶೇಷ ಕ್ರಮ. ಹುರಿಗಂಬಳಿ ನೇಯುವಾಗ ಹೊಕ್ಕನ್ನು ಹುಣಿಸೆ ಸರಿಯಲ್ಲಿ ನೆನೆಸಿ ಉಪಯೋಗಿಸುತ್ತಾರೆ. ಉಜ್ಜುಗಂಬಳಿಗೆ ಉಪಯೋಗಿಸುವ ಹೊಕ್ಕನ್ನು ಹುಣಿಸೆ ಸರಿಯಲ್ಲಿ ಅದ್ದುವುದಿಲ್ಲ. ನೇಯ್ಗೆಗೆ ತಯಾರಾದ ಹಾಸನ್ನು ತಕ್ಕ ಉಪಕರಣಗಳಿಂದ ಮಗ್ಗದಲ್ಲಿ ಜೋಡಿಸಿ ಹೊಕ್ಕಿನ ಎಳೆಗಳನ್ನು ಒಂದು ಕ್ರಮದಲ್ಲಿ ನೇಯುತ್ತಾರೆ. ಉಜ್ಜುಗಂಬಳಿಯ ತಯಾರಿಕೆಯಲ್ಲಿ ನೇಯ್ದು ಬಹಳ ಜಾಗರೂಕತೆಯಿಂದ ಮಾಡಬೇಕಾದ ಕೆಲಸ. ಹೀಗೆ ನೇಯ್ದು ಹೋಳುಗಳು 9ಮೊಳ ಉದ್ದ 2.5ಮೊಳ ಅಗಲವಿರುತ್ತವೆ. ಇಂಥ ಎರಡು ಹೋಳುಗಳನ್ನು ಸೇರಿಸಿ ಉಣ್ಣೆಯ ದಾರದಿಂದ ಹೊಲೆಯುತ್ತಾರೆ. ಆಗ ಅದು ಒಂದು ಕಂಬಳಿಯಾಗುತ್ತದೆ. ಈ 9ಮೊಳ ಉದ್ದ 5ಮೊಳ ಅಗಲದ ಕಂಬಳಿಯನ್ನು 6ಮೊಳ ಉದ್ದ 4ಮೊಳ ಅಗಲಕ್ಕೆ ಇಳಿಸುವ ಕಾರ್ಯ ಉಜ್ಜುವುದರಿಂದ ಆಗುತ್ತದೆ.

ಈಚಲು ಗರಿಗಳ ಸುತ್ತ ಇರುವ ಸೀಬು ಎಂಬ ನಾರನ್ನು ತಂದು ಅದನ್ನು ಹಿಂಜಿ ಹದವಮಾಡಿ ಹಗ್ಗದಂಥ' ದಾರ ತೆಗೆಯುತ್ತಾರೆ. ಈ ಹಗ್ಗವನ್ನು ಸುಮಾರು ನಾಲ್ಕು ಅಡಿ ಉದ್ದದ ನಾಲ್ಕು ಮರದ ತುಂಡುಗಳನ್ನು ಚಚ್ಚೌಕವಾಗಿ ಜೋಡಿಸಿ ಮಧ್ಯೆ ಚಪ್ಪಟೆಯಂತೆ ಒತ್ತಾಗಿ ಹೆಣೆಯುತ್ತಾರೆ. ಇದು ಒಂದು ರೀತಿಯ ಚೌಕಟ್ಟಿನಂತೆ ಕಾಣುತ್ತದೆ. ಇದನ್ನು ಚೌಕಾಕಾರವಾಗಿ ಒಂದೇ ಎತ್ತರದಲ್ಲಿ ನೆಟ್ಟಿರುವ 3ಅಡಿ ಎತ್ತರದ ನಾಲ್ಕು ಕಲ್ಲುಕಂಬಗಳ ಮೇಲಿಡುತ್ತಾರೆ.

ನೇಯ್ದ ಕಂಬಳಿಯನ್ನು ಕುದಿಯುವ ನೀರಿನಲ್ಲಿ ಚೆನ್ನಾಗಿ ನೆನೆಯುವಂತೆ ಅದ್ದಿ ವರ್ಚಿನ ಮೇಲೆ ಹಾಕಿ ನಾಲ್ಕು ಮಂದಿ ಬಲವಾದ ಆಳುಗಳು - ಆ ಕಡೆ ಇಬ್ಬರು ಈ ಕಡೆ ಇಬ್ಬರು - ಎದುರುಬದುರಾಗಿ ನಿಂತುಕೊಂಡು ಉಜ್ಜುತ್ತಾರೆ. ಮಧ್ಯೆ ಮಧ್ಯೆ ಕುದಿಯುವ ನೀರಿನಲ್ಲಿ ಅದ್ದಿಕೊಳ್ಳುತ್ತಿರುತ್ತಾರೆ. ಕಂಬಳಿಯ ಉದ್ದ 6ಮೊಳ ಅಗಲ 4ಮೊಳಕ್ಕೆ ಇಳಿಯುವವರೆಗೆ ಈ ಉಜ್ಜುವಿಕೆ ನಿರಂತರವಾಗಿ ನಡೆಯುತ್ತದೆ. ವಿರಳವಾಗಿ ಹೆಣೆಯಲಾಗಿದ್ದ ಕಂಬಳಿ ಒತ್ತಾಗಿ, ಮಂದವಾಗುತ್ತದೆ. ಎಳೆಗಳು ಒಡೆದು ಒಂದರೊಡನೊಂದು ಬಲವಾಗಿ ಹೊಂದಿಕೊಳ್ಳುತ್ತದೆ. ನೇಯ್ದ ಯಾವ ಗುರುತೂ ಈಗ ಉಳಿಯುವುದಿಲ್ಲ. ಹೀಗೆ ಉಜ್ಜಿದ ಕಂಬಳಿಯನ್ನು ಕೆರೆಗೋ, ಹೊಳೆಗೋ, ತೆಗೆದುಕೊಂಡು ಹೋಗಿ ಗಂಜಿಯೆಲ್ಲ ಹೋಗುವ ಹಾಗೆ ತಿಳಿನೀರಿನಲ್ಲಿ ಜಾಲಾಡಿ ತೊಳೆಯುತ್ತಾರೆ. ಅನಂತರ ಕಂಬಳಿಯನ್ನು ಬಿಸಿಲಿನಲ್ಲಿ ಒಣಗುಹಾಕಿ, ಸುಮಾರು ನಾಲ್ಕೈದು ಗಂಟೆ ಆದ ಮೇಲೆ, ಇನ್ನೂ ಹಸಿಯಿದ್ದ ಹಾಗೆಯೆ, ಕ್ರಮವಾಗಿ ಮಡಿಸಿ ಅಕ್ಕಿಗೆ ಹಾಕುತ್ತಾರೆ. ಇನ್ನೂ ಹಸಿಯಾಗಿರುವ ಕಂಬಳಿ ಹೇಗೆ ಎಳೆದರೆ ಹಾಗೆ ಬರುತ್ತದೆ. ಉದ್ದ ಅಗಲಗಳನ್ನು ಕ್ರಮವಾಗಿ ಎಳೆದು ಸರಿಪಡಿಸುತ್ತಾರೆ. ತರುವಾಯ ನೆಲದ ಮೇಲೆ ಹಾಕಿ ಅದರ ಮೇಲೆ ಒಣಗಿದ ಕಂಬಳಿಯನ್ನೋ ಚಾಪೆಯನ್ನೋ ಹಾಸಿ ಒಂದು ದಿನ ಬಿಡುತ್ತಾರೆ. ಮೂರನೆಯ ದಿನ ಮತ್ತೆ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಮಡಿಸಿಡುತ್ತಾರೆ. ಇಲ್ಲಿಗೆ ತಯಾರಿಕೆ ಪೂರ್ಣವಾದಂತಾಗಿ ಅದು ಹೊದೆಯಲು ಸಿದ್ಧವಾಗುತ್ತದೆ.

ಉಜ್ಜುಗಂಬಳಿಗೆ ಕೃತಕವಾದ ಬಣ್ಣಹಾಕುವುದು ಅಸಾಧ್ಯವಾದ ಮಾತೆಂದೇ ಹೇಳಬೇಕು. ಏಕೆಂದರೆ ಕಂಬಳಿಯನ್ನು ನೇಯ್ದಮೇಲೆ ಕುದಿಯುವ ನೀರಿನಲ್ಲಿ ಅದ್ದಿ ಅದ್ದಿ ಉಜ್ಜಿ ಅನಂತರ ತೊಳೆಯುವುದರಿಂದ ಕಟ್ಟಿದ ಬಣ್ಣ ಉಳಿಯುವುದು ಕಷ್ಟ. ಸಾಮಾನ್ಯವಾಗಿ ಉಣ್ಣೆಯ ಬಣ್ಣವೇ ಉಜ್ಜುಗಂಬಳಿಯ ಬಣ್ಣವೂ ಆಗಿದೆ. ಉಣ್ಣೆಯ ಪ್ರಕೃತಿದತ್ತವಾದ ಕಪ್ಪು, ಬಿಳಿ ಮಾಸಲು ಕಂದುಬಣ್ಣಗಳಲ್ಲಿ ಇವು ದೊರೆಯುತ್ತವೆ. ಈ ಬಣ್ಣಗಳು ಯಾವ ಪರಿವರ್ತನೆಯನ್ನೂ ಹೊಂದದೆ ಕಡೆಯತನಕ ಉಳಿಯುತ್ತವೆ. ಮೊನ್ನೆಮೊನ್ನೆಯವರೆಗೆ ಉಜ್ಜುಗಂಬಳಿಗಳು ಯಾವ ನಮೂನೆಯೂ ಇಲ್ಲದೆ ಪ್ರಕೃತಿದತ್ತ ಬಣ್ಣಗಳಲ್ಲಿ ದೊರೆಯುತ್ತಿದ್ದವು. ಈಗ ಕೊಳ್ಳುವವರ ಅಭಿರುಚಿಗೆ ತಕ್ಕಹಾಗೆ ಮೇಲೆ ಹೇಳಿದ ವಿವಿಧ ಬಣ್ಣದ ಉಣ್ಣೆಯನ್ನೂ ಉಪಯೋಗಿಸಿ, ಬಹು ಆಕರ್ಷಕವಾದ ಹೊಸ ಹೊಸ ನಮೂನೆಯ ಉಜ್ಜುಗಂಬಳಿಗಳನ್ನು ಮಾಡುತ್ತಾರೆ.

**ಶಾಲು, ಸಕಲಾತಿ ಮತ್ತು ಸಣ್ಣ ಕಂಬಳಿ :** ಉತ್ತಮವಾದ ಉಣ್ಣೆಯಿಂದ ಸಣ್ಣದಾಗಿ ನೂಲು ತೆಗೆದು ಈ ವಸ್ತ್ರಗಳನ್ನು ನೇಯುತ್ತಾರೆ. ಶಾಲು ಮತ್ತು ಸಕಲಾತಿಗಳು ಅತ್ಯುತ್ತಮವಾದ ಹೊದೆಯುವ ವಸ್ತ್ರಗಳು. ಇವು ಮೇಲು ದರ್ಜೆಯ ಜನರಿಗಾಗಿ ತಯಾರಾಗುತ್ತಿದ್ದುವು. ಈ ಯಂತ್ರಯುಗದಲ್ಲಂತೂ ಶಾಲು ಅತ್ಯಂತ ವ್ಯಾಪಕವಾದ ಜನಪ್ರಿಯತೆಯನ್ನು ಪಡೆದಿದೆ. ಸಕಲಾತಿ ಈಗ ಶಾಲಿನಲ್ಲಿ ಐಕ್ಯವಾಗಿದೆ. ಸಣ್ಣಕಂಬಳಿ ಶಾಲಿನ ರೀತಿಯ ಒರಟಾದ ಹೊದೆಯುವ ವಸ್ತ್ರ. ಇದನ್ನು ತೊಳೆಗಂಬಳಿ ಎಂದೂ ಕರೆಯುತ್ತಾರೆ. ಏಕೆಂದರೆ ಕೊಳೆಯಾದಾಗಲೆಲ್ಲ ಇದನ್ನು ತೊಳೆದು ಶುಭ್ರಗೊಳಿಸಬಹುದು. ಕೋಲಾರ, ರಾಣೆಬೆನ್ನೂರು, ದಾವಣಗೆರೆ, ಚಿಕ್ಕನಾಯಕನಹಳ್ಳಿಗಳಲ್ಲಿ ವಿಶೇಷವಾಗಿ ಇದನ್ನು ತಯಾರಿಸುತ್ತಾರೆ. ಶಾಲಿನ ತಯಾರಿಕೆ ಇಂದು ಬಹುಮಟ್ಟಿಗೆ ಯಂತ್ರಗಳಿಂದ ಆಗುತ್ತಿದೆ. ಕಾಶ್ಮೀರ ಇವುಗಳಿಗೆ ಜಗದ್ವಿಖ್ಯಾತವಾದ ಸ್ಥಳವಾಗಿದೆ.

**ಗದ್ದುಗೆ ಧಾವಳಿ :** ಧಾವಳಿ ಎಂದರೆ ಧವಳ, ಬಿಳಿ ಎಂದು ಅರ್ಥ. ಗದ್ದುಗೆ ಕೂರುವ ಸ್ಥಳ. ಆದುದರಿಂದ ಗದ್ದುಗೆಧಾವಳಿ ಕೂರಲು ಉಪಯೋಗಿಸುವ ಅಚ್ಚ ಬಿಳಿಯ ಕಂಬಳಿ. ಧಾರ್ಮಿಕ ಗುರುಗಳ ಗದ್ದುಗೆಗೂ ಮಿಕ್ಕಂತೆ ಪವಿತ್ರ ಕಾರ್ಯಗಳಲ್ಲಿಯೂ ಅದನ್ನು ಉಪಯೋಗಿಸುತ್ತಿದ್ದರು. ಈ ಕಂಬಳಿ ವಿಶೇಷವಾಗಿ ವೈದಿಕರ ಉಪಯೋಗಕ್ಕಾಗಿ ತಯಾರಾಗುತ್ತಿತ್ತು. ಗದ್ದುಗೆಗಾಗಿಯೇ ಇದನ್ನು ಹೆಚ್ಚಾಗಿ ಬಳಸುತ್ತಾರಾದರೂ ಇದನ್ನು ಶಾಲಿನಂತೆ ಹೊದೆಯಲು ಉಪಯೋಗಿಸುವುದೂ ಉಂಟು. ಪೂಜಾವಸ್ತುಗಳನ್ನಿಡುವ ಚೀಲಗಳನ್ನು ಇದರಿಂದ ತಯಾರಿಸುತ್ತಾರೆ.

**ಕರಿಯ ಕಂತೆ :** ಕುರುಬರ ಗುರು ರೇವಣ ಸಿದ್ದೇಶ್ವರ ತನ್ನ ಅವತಾರ ಕಾಲದಲ್ಲಿ ಕುರಿ ಕಾಯುತ್ತಿದ್ದನೆಂದೂ ಅದರಿಂದಲೇ ಕುರುಬರಿಗೆ ಕುರಿಸಾಕಣೆಯ ಪರಂಪರೆ ಉಂಟಾಯಿತೆಂದೂ ನಂಬಿಕೆ. ರೇವಣ ಸಿದ್ದೇಶ್ವರನಿಗೆ ಉಣ್ಣೆಯ ವಸ್ತ್ರ ಬಹುಪ್ರಿಯ. ಕುರುಬ ಜನಾಂಗ ಎಲ್ಲೆಲ್ಲುಂಟೊ ಅಲ್ಲೆಲ್ಲ ರೇವಣಸಿದ್ದೇಶ್ವರನ ಮಠಗಳಿದ್ದು ಅಲ್ಲೆಲ್ಲ ಉಣ್ಣೆಯ ಕರಿಯ ವಸ್ತ್ರವನ್ನು ಗುರುವಿಗೆ ಅರ್ಪಿಸುತ್ತಾರೆ. ಇದನ್ನು ಕರಿಯ ಕಂತೆ ಎಂದು ಕರೆಯುತ್ತಾರೆ. ಕಂತೆ ಎಂದರೆ ಪೂಜೆಯ ಸಮಯದಲ್ಲಿ ಉಡುವ ವಸ್ತ್ರ - ಎಂದು ಅರ್ಥ. ಈ ಕರಿಯ ಕಂತೆಯ ಪ್ರಸ್ತಾಪ ಕುರುಬರ ಜನಾಂಗದ ನಂಬಿಕೆ ಮತ್ತು ಸಂಪ್ರದಾಯಗಳನ್ನು ವಿವರಿಸುವ ತಗರಪವಾಡ ಎಂಬ ಪ್ರಾಚೀನ ಗ್ರಂಥದಲ್ಲಿ ಬರುತ್ತದೆ.

ಕರಿಯ ಕಂತೆಯನ್ನು ಮಾಡುವವರು ಗುರುಪರಂಪರೆಯಲ್ಲಿ ಬಂದ ಒಡೆಯರ ಮನೆತನದವರು. ನಾಲ್ಕೈದು ಜನ ಸ್ನಾನಮಡಿಗಳಿಂದ ಉಪವಾಸವಿದ್ದು ಅಚ್ಚಕರಿಯ ತುಪ್ಪಟವನ್ನು ಕೈಯಲ್ಲಿಯೇ ಹಿಂಜಿ ಕೈಯಲ್ಲಿಯೇ ಎಳೆ ಹೊಸೆದು ಅಣಿಮಾಡಿ ವಸ್ತ್ರವನ್ನು ನೇಯುತ್ತಾರೆ. ಇದು ರೇವಣ ಸಿದ್ದೇಶ್ವರನ ಗರ್ಭಗುಡಿಯಲ್ಲಿ ನಡೆಯುವ ಕೆಲಸ. ಇದೊಂದು ಮೂರು ಮೂಲೆಯ ಉಣ್ಣೆಯ ವಸ್ತ್ರ. ಕಂತೆ ಸಿದ್ಧವಾದ ಮೇಲೆ ಅದನ್ನು ರೇವಣಸಿದ್ದೇಶ್ವರನಿಗೆ ಒದಿಸುವ ಪವಿತ್ರಸಮಾರಂಭ ವೈಭವಯುತವಾಗಿ ನಡೆಯುತ್ತದೆ. ಇದಲ್ಲದೆ ಅಚ್ಚಕರಿಯ ತುಪ್ಪಟದಿಂದ ಮಾಡಿದ ಕಂಬಳಿಯನ್ನು ಮದುವೆ ಸಂದರ್ಭಗಳಲ್ಲಿ ಗುರುಗಳಿಗೆ ಪೀಠವಾಗಿಯೂ ಧಾರೆ ಹರವಿಯ ಕೆಳಗೆ ಹಾಸಲೂ ಕುರುಬ ಜನಾಂಗದವರು ಇಂದಿಗೂ ಉಪಯೋಗಿಸುತ್ತಾರೆ.

ಕಂಬಳಿ ಮತ್ತು ಜಮಖಾನೆಯ ಉದ್ಯಮಕ್ಕೆ ಉಣ್ಣೆ, ಹತ್ತಿ, ಸೆಣಬು ಮುಖ್ಯವಾದ ಕಚ್ಚಾವಸ್ತುಗಳು. ಇವು ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಇಂದು ಉತ್ಪನ್ನವಾಗುತ್ತಿವೆ. ಅಮೆರಿಕ, ಆಸ್ಟ್ರೇಲಿಯ, ಇಂಗ್ಲೆಂಡ್, ರಷ್ಯ ಉಣ್ಣೆಗೆ ಪ್ರಸಿದ್ಧವಾದರೆ, ಈಜಿಪ್ಟ್ ಹತ್ತಿಗೆ ಪ್ರಸಿದ್ಧವಾದರೆ, ಭಾರತ ಮತ್ತು ಪಾಕಿಸ್ತಾನ ಸೆಣಬಿಗೆ ಪ್ರಸಿದ್ಧವಾಗಿವೆ. ಇಂದು ವಿಶ್ವದ ಬಹುತೇಕ ದೇಶಗಳಲ್ಲಿ ಕಂಬಳಿ ಮತ್ತು ಜಮಖಾನೆಗಳ ಯಾಂತ್ರಿಕ ತಯಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಪಶ್ಚಿಮ ರಾಷ್ಟ್ರಗಳಲ್ಲಿಯಂತೂ ಈ ಉದ್ಯಮ ಸಂಪೂರ್ಣವಾಗಿ ಯಂತ್ರೀಕೃತವಾಗಿದೆ. ಭಾರತದಲ್ಲಿಯೂ ಅನೇಕ ಕಂಬಳಿ ಮಿಲ್ಲುಗಳು ವಿಪುಲವಾಗಿ ಕಂಬಳಿ ತಯಾರಿಕೆಯಲ್ಲಿ ತೊಡಗಿದ್ದರೂ ಕೈಮಗ್ಗಗಳಲ್ಲಿ ನೇಯುವ ಕಲೆ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವುದೊಂದು ಆಶ್ಚರ್ಯದ ಸಂಗತಿಯಾಗಿದೆ.

*

**ಕಂಬಿಯ ಪದ :** ಕಂಬಿಯ ಅಯ್ಯಗಳು ಗಿರಿಯಮಲ್ಲಯ್ಯನನ್ನು ಕುರಿತು ಭಕ್ತಿಯಿಂದ ಸಂಬಾಳ ವಾದ್ಯದೊಡನೆ ಮೇಳದ ಜೊತೆ ಹಾಡುವ ಪದ. ಐದಾರು ಮೊಳ ಉದ್ದದ ಬಿದಿರ ತುಂಡಿನ (ಕೋಲು) ಎರಡೂ ತುದಿಗಳಲ್ಲಿ ಸಿಕ್ಕಿಸಿದ ಬೆತ್ತದ ಇಲ್ಲವೆ ಬಿದಿರಿನಲ್ಲಿ ಮಾಡಿದ ನಿಲವುಗಳಲ್ಲಿ (ಕಾವಡಿ) ಒಂದರಲ್ಲಿ ನೀರ ಬಿಂದಿಗೆಯನ್ನು ಇನ್ನೊಂದರಲ್ಲಿ ಬಟ್ಟೆಬರಿ ಬುತ್ತಿ ಮೊದಲಾದ ಸಾಮಗ್ರಿಗಳನ್ನೂ ತುಂಬಿದ ಅಡ್ಡೆಗೆ ಕಂಬಿಯೆಂದೂ ಮಲ್ಲಯ್ಯನ ಕಾವಡಿಯೆಂದೂ ಕರೆಯುವರು. ಕಂಬಿ (ಕೋಲು), ಕಾವಡಿ (ನೆಲವು) - ಇವು ಮೊದಲಿನಿಂದಲೂ ಮಲ್ಲಯ್ಯನಾಗಿ ಪೂಜೆಗೊಳ್ಳುತ್ತ ಬಂದಿವೆ. ಇವನ್ನು ಹೊರುವ ಕಂಬಿಯ ಅಯ್ಯಗಳಿಗೆ ಕಾವಡಿಯ ಅಯ್ಯಗಳು ಎಂಬ ಹೆಸರೂ ಇದೆ. ಶಿವರಾತ್ರಿಯ ಕಾಲಕ್ಕೊ ಯುಗಾದಿಯ ಹತ್ತಿರದಲ್ಲೊ ಬೆಳುವಲದ ಭಕ್ತರು ಮಲ್ಲಯ್ಯನ ದರ್ಶನಕ್ಕಾಗಿ ಶ್ರೀಶೈಲಕ್ಕೆ ಯಾತ್ರೆ ಹೊರಡುತ್ತಾರೆ. ಆ ಸಮಯದಲ್ಲಿ ಕಂಬಿಯ ಅಯ್ಯಗಳು ಕಂಬಿ ಹೊತ್ತು ಹೊರಡುವುದುಂಟು. ಹೀಗೆ ಯಾತ್ರೆ ಹೊರಟ ಯಾತ್ರಿಕರಿಗೆ ಮಾರ್ಗಮಧ್ಯದಲ್ಲಿ ವಿಶ್ರಾಂತಿಗಾಗಿ ಶ್ರಿಮಂತರಾದವರು ತಂಗುದಾಣಗಳನ್ನು ಮಾಡಿಸಿ ಅವರ ಊಟ ಉಪಚಾರವನ್ನು ಮಾಡುವುದೂ ಉಂಟು. ಒಮ್ಮೊಮ್ಮೆ ಈ ಶ್ರೀಮಂತರು ಕಂಬಿಯನ್ನು ತಮ್ಮ ಮನೆಯಲ್ಲೆ ಇಟ್ಟು ಪೂಜಿಸಿ ವರ್ಷಕ್ಕೊಂದು ಬಾರಿ ಕಂಬಿಯ ಅಯ್ಯಗಳಿಗೆ ಹಣ ನೀಡಿ ತಮ್ಮ ಪರವಾಗಿ ಶ್ರೀಶೈಲಕ್ಕೆ ಕಳಿಸುವುದೂ ಇದೆ. ಗಿರಿಗೆ ಹೋಗಲಾಗದ ಕೆಲವು ಭಕ್ತರು ಮಲ್ಲಯ್ಯನಿಗಾಗಿ ಕಾಣಿಕೆಗಳನ್ನು ಕಂಬಿಯ ಅಯ್ಯಗಳ ಜೊತೆ ಕಳುಹಿಸುತ್ತಾರೆ. ಭಕ್ತರು ಕೊಟ್ಟ ಹರಕೆಯನ್ನು ಒಯ್ಯುವ ಮೂಲಕ ಮಾಡುವ ಈ ಸೇವೆಯನ್ನು ಕಂಬಿಯ ಕಾಯಕ ಎನ್ನುವರು. ಶ್ರೀಶೈಲಕ್ಕೆ ಹೋಗಿಬಂದ ಕಂಬಿಗಳನ್ನು ಜನ ಮಲ್ಲಯ್ಯನೆಂದು ಪೂಜಿಸುವುದು ರೂಢಿ. ದೇವರ ದರ್ಶನ ಹೊಂದಿಬಂದ ಕಂಬಿಯ ಅಯ್ಯಗಳನ್ನೂ ಕಂಬಿಯನ್ನೂ ಜನ ಊರಿನಲ್ಲಿ ಬಹು ಸಂಭ್ರಮ ಹಾಗೂ ಭಕ್ತಿಯಿಂದ ಇದಿರುಗೊಳ್ಳುತ್ತಾರೆ. ಊರಿಗೆ ಬಂದ ಅಯ್ಯಗಳು ಕಂಬಿಗಳನ್ನು ಸಾಲಾಗಿ ಇಟ್ಟು ಪೂಜಿಸಿ ಅವುಗಳನ್ನು ಹೊತ್ತು ಆಡಿಸುತ್ತ ವಾಲಗಮಾಡುತ್ತ ಮಲ್ಲಯ್ಯನ ಬಿರುದಾವಳಿಗಳನ್ನು ಮೊದಲಿಗೆ ಹೇಳುತ್ತಾರೆ. ಇದಕ್ಕೆ ಉಗ್ಗಡಿಸುವುದು ಎನ್ನುವರು. ಅನಂತರ ಪದಗಳನ್ನು ಹಾಡುತ್ತಾರೆ. ಇವುಗಳಲ್ಲಿ ಮಲ್ಲಯ್ಯನ ಲೀಲೆಗಳೂ ಭಕ್ತರ ಭಕ್ತಿಯೂ ವಿಶೇಷವಾಗಿ ವರ್ಣಿತವಾಗಿರುತ್ತದೆ. ನಡುನಡುವೆ ನೀತಿಪ್ರಧಾನ, ಹಾಸ್ಯಪ್ರಧಾನ ಗೀತೆಗಳೂ ಕಾಣಿಸಿಕೊಳ್ಳುತ್ತವೆ. ತಮ್ಮ ಆರಾಧ್ಯದೈವವನ್ನು ಕೊಂಡಾಡುವುದು ಪ್ರಧಾನವಾಗಿ ಈ ಪದಗಳ ಉದ್ದೇಶವಾದರೂ ಯಾತ್ರಿಕರಲ್ಲಿ, ಕೇಳುವವರಲ್ಲಿ ಭಕ್ತಿಯ ಆವೇಶ, ಶ್ರದ್ಧೆ, ನಿಷ್ಠೆಗಳನ್ನು ತುಂಬುತ್ತವೆ. ಯಾತ್ರಿಕರಿಗೆ ಈ ಪದಗಳು ಕೈಪಿಡಿಯಂತೆ ಮಾರ್ಗದರ್ಶಿಯೂ ಹೌದು.

ಹಿಮ್ಮೇಳ ಮುಮ್ಮೇಳಗಳೊಡನೆ ತಾಳ ಹಾಕುತ್ತ ರಾಗವೆತ್ತಿ ಹಾಡುವ ಈ ಪದಗಳು ಕೇಳಲು ಇಂಪಾಗಿರುತ್ತವೆ. ನೋಡುವುದಕ್ಕೆ ಎರಡು ಸಾಲಿನ ವಿಶಿಷ್ಟ ಧಾಟಿಯ ದ್ವಿಪದಿಗಳಂತೆ ಕಂಡುಬಂದರೂ ಮೂಲತಃ ಇವು ತ್ರಿಪದಿಗಳು ಎನ್ನಲು ಸಾಕಷ್ಟು ನಿದರ್ಶನಗಳು ದೊರೆಕುತ್ತವೆ. ಧಾಟಿ ಮತ್ತು ವಸ್ತು ವಿನ್ಯಾಸದಲ್ಲಿ ಕೆಲವು ಪದಗಳು ಕೋಲಾಟದ ಗತ್ತಿಗೂ ಒಗ್ಗುತ್ತವೆ.

ಕಂಬಿಯ ಸಂಪ್ರದಾಯ ಸಾಕಷ್ಟು ಪ್ರಾಚೀನ ಸಂಪ್ರದಾಯ ಎಂದು ವಿದ್ವಾಂಸರು ಹಲವು ಆಧಾರಗಳಿಂದ ನಿರೂಪಿಸಿದ್ದಾರೆ. ಕಂಬಿಯ ಅಯ್ಯಗಳನ್ನು ಕುರಿತು ಸ್ವಲ್ಪ ಮಟ್ಟಿಗೆ ಸಂಶೋಧನೆ ನಡೆದಿದೆ. ಈ ದಿಸೆಯಲ್ಲಿ ಬಿ.ಎಸ್. ಗದ್ದಗಿಮಠ (ನೋಡಿ) ಅವರು ಕಂಬಿಯ ಹಾಡುಗಳು (1955) ಎಂಬ ಸಂಕಲನವನ್ನು ಹೊರತಂದಿದ್ದಾರೆ. (ಎಸ್.ಎಲ್.)

**ಕಂಸಾಳೆ :** ಮಲೆಯಮಾದೇಶ್ವರನ ಭಕ್ತರಾದ ದೇವರ ಗುಡ್ಡರು ಎಂಬ ಧಾರ್ಮಿಕ ವೃತ್ತಿಗಾಯಕರು ಬಳಸುವ ಕಂಚಿನ ತಾಳಗಳು. ಇದೊಂದು ಜನಪದ ಧಾರ್ಮಿಕ ವಾದ್ಯ. ಕಾಂಸ್ಯತಾಲ ಎಂಬುದರ ತದ್ಭವರೂಪವೆ ಕಂಸಾಳೆ. ದೇವರ ಗುಡ್ಡರು ಇದನ್ನು ಬಿರುದು ಎಂದೂ ಕರೆಯುತ್ತಾರೆ. ಸಾಧಾರಣ ಬಟು ತಾಳಗಳಿಗಿಂತ ಕಂಸಾಳೆ ಗಾತ್ರದಲ್ಲಿ ದೊಡ್ಡದು, ಆಕೃತಿಯಲ್ಲಿ ವಿಶಿಷ್ಟವಾದುದು. ಅಂಗೈ ಅಗಲದ ಚಕ್ರಾಕಾರವಾದ ಬಟ್ಟಲು, ಚಿಕ್ಕ ಜಾಗಟೆಯಂತಿರುವ ಮಟ್ಟಸವಾದ ಮೇಲುತಾಳ, ಮೇಲುತಾಳಕ್ಕೆ ಸೇರಿದಂತೆ ಹಿಡಿದುಕೊಳ್ಳಲು ಮಾಡಿಕೊಂಡ ಗೊಂಡೇವದ ಕಲಾತ್ಮಕ ಹುರಿ ಇವು ಕಂಸಾಳೆಯ ಮುಖ್ಯ ಭಾಗಗಳು. ಬಟ್ಟಲನ್ನು ಮೇಲು ಮುಖವಾಗಿ ಎಡ ಅಂಗೈ ಮೇಲೆ ಇರಿಸಿಕೊಂಡು ಬಲಗೈಯಲ್ಲಿ ಹಿಡಿದ ಮೇಲುತಾಳವನ್ನು ಅದರ ಮೇಲೆ ಕುಟ್ಟುವುದರಿಂದ ಕಣಿಕಣಿ ಎಂಬ ಮಧುರನಾದ ಉಂಟಾಗುತ್ತದೆ. ಈ ನಾದದ ಹಿನ್ನೆಲೆಯಲ್ಲಿ ಗುಡ್ಡರು ಹಾಡುತ್ತಾರೆ. ಕೆಲವೊಮ್ಮೆ ಕೆಲವು ಗುಡ್ಡರು ಕಂಚಿನ ತಾಳಗಳಿಗೆ ಬದಲಾಗಿ ಹಿತ್ತಾಳೆಯ ತಾಳಗಳನ್ನು ಬಳಸುವುದುಂಟು. ವೃತ್ತಿಗಾಯಕರು ಬಳಸುವ ವಾದ್ಯಗಳಲ್ಲೆಲ್ಲ ಭಿಕ್ಷಾಪಾತ್ರೆಯಾಗಿಯೂ ಬಳಸಲ್ಪಡುವ ಏಕಮಾತ್ರ ಸಾಧನ ಕಂಸಾಳೆ. ಗುಡ್ಡರು ಭಿಕ್ಷೆಯನ್ನು ಸ್ವೀಕರಿಸುವಾಗ ಕಂಸಾಳೆಯ ಬಟ್ಟಲನ್ನು ಮಾತ್ರ ಮುಂದೆ ಒಡ್ಡಿ ಅನಂತರ ಜೋಳಿಗೆಗೆ ಸುರಿದುಕೊಳ್ಳುತ್ತಾರೆ. ಇದೊಂದು ಪವಿತ್ರ ಸಾಧನವಾದುದರಿಂದ ಅರ್ಪಿಸುವ ಕಾಣಿಕೆ ಮಲೆಯ ಮಾದಯ್ಯನಿಗೆ ಸಮರ್ಪಿತವಾದಂತೆಯೇ ಎಂಬ ಭಾವನೆ ಗುಡ್ಡನಿಗೂ ದಾನಿಗೂ ಇರುತ್ತದೆ. ಕಂಸಾಳೆಯ ಮಹಿಮೆ ದೊಡ್ಡದು ಎಂದು ಭಾವಿಸುವ ಗುಡ್ಡ ಅದನ್ನು ಪೂಜಿಸುತ್ತಾನೆ. ಕೈಗೆತ್ತಿಕೊಳ್ಳುವ ಮುನ್ನ 'ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿ ಕಣಪ್ಪ ಶರಣು ಶರಣಾರ್ತಿ' ಎಂದು ಶರಣು ಮಾಡಿ ಕಣ್ಣಿಗೊತ್ತಿಕೊಂಡು ಅನಂತರ ಬಾರಿಸುತ್ತಾನೆ.

**ಕಂಸಾಳೆ ಪದಗಳು :** ಭಿಕ್ಷಾಟನೆ ಹಾಗೂ ಯಾತ್ರೆಗಳ ಸಂದರ್ಭದಲ್ಲಿ ಬಿಡಿ ಹಾಡುಗಳನ್ನು ಹೇಳಿಕೊಳ್ಳಲು ಮಾತ್ರವಲ್ಲದೆ ವಿಶೇಷ ಸಂದರ್ಭಗಳಲ್ಲಿ, ಹಬ್ಬ ಆಚರಣೆಗಳಲ್ಲಿ ಮೇಳವನ್ನು ನಡೆಸಲೂ ಬೀಸುಕಂಸಾಳೆಯ ನೃತ್ಯದಲ್ಲಿ ಹಾಡಲೂ ಕುಣಿಯಲೂ ಕಂಸಾಳೆಯನ್ನು ಬಳಸುತ್ತಾರೆ. ಸಾಮಾನ್ಯವಾಗಿ ದೇವರಗುಡ್ಡರು ಎತ್ತರವಾದ ರಂಗದಲ್ಲಿ ಕುಳಿತು ಕತೆ ಮಾಡುತ್ತಾರೆ. ಕಂಸಾಳೆ ಪದಗಳನ್ನು ನಡೆಸಲು ಕೊನೆಯ ಪಕ್ಷ ಮೂವರು ಗುಡ್ಡರಾದರೂ ಬೇಕು. ಮೇಳದಲ್ಲಿ ಏಕತಾರಿ, ದಮ್ಮಡಿಗಳನ್ನು ಹಿಮ್ಮೇಳದವರು ಬಳಸುತ್ತಾರೆ. ಮುಖ್ಯ ಗುಡ್ಡ ಮುಮ್ಮೇಳಗಾರ ಕಂಸಾಳೆಯನ್ನು ಹಿಡಿಯುವವನು. ಗುಡ್ಡರು ಹಾಡುವ ಗೀತೆಗಳು ತಾಳದ ಗತ್ತಿಗೆ ತಕ್ಕಂತೆ ವಿವಿಧ ಮಟ್ಟುಗಳಲ್ಲಿರುತ್ತವೆ. ಕಂಸಾಳೆಯ ನಾದವೈಖರಿಗೆ ತಕ್ಕಂತೆ ಶಕ್ತಿವತ್ತಾದ, ಲಯಬದ್ಧವಾದ ರಚನೆಗಳಿವು. ಉದಾ:

ಕೂಗೊ ಕೂಗೊ ಮಾದೇವನ
ಕೂಗಯ್ಯ ದುಂಡು ಮಾದೇವನ
ಕೂಗಿದರೆ ಕುಣಿಯುತ್ತ ಬರುವನು ಮಾದೇವ
ಕೂಗಯ್ಯ ಮುದ್ದು ಮಾದೇವನ

ಮಗ್ಗು ಮಗ್ಗಲ ಗಿರಿಗೆ
ಮೊಗ್ಗು ಬಂದವು ನೋಡಿರಿ
ಮಾದಯ್ನ ಗಿರಿಗೆ
ಹೂವು ಬಂದವು ನೋಡಿರಿ.

ಕಂಸಾಳೆಯ ಗತ್ತಿಗೆ ತಕ್ಕಂತೆಯೇ ತಾಳಕ್ಕೆ ಅನುಗುಣವಾಗಿಯೇ ಕಥೆಯನ್ನು ಪದ್ಯ, ನಡುನಡುವೆ ವಿಶೇಷವಾಗಿ ವಚನದಲ್ಲಿ ನಿರೂಪಿಸಲಾಗುತ್ತದೆ. ಈ ವಚನ ಒಂದು ವಿಶಿಷ್ಟವಾದ ಪದ್ಯಗಂಧಿಯಾದ

ಗದ್ಯ. ವಚನವನ್ನು ಪ್ರಧಾನ ಗಾಯಕ ನಿರೂಪಿಸುತ್ತಿರುವಾಗ ಅದರ ಪ್ರತಿ ಸಾಲಿನ ಅಂತ್ಯದಲ್ಲಿ ಸೊಲ್ಲಿನವರು ಹೌದು, ಹೌದೌದು, ಶಿವಶಿವಾ, ಮಾದೇವ, ಹುಂ ಮುಂತಾಗಿ ದನಿ ಕೊಡುತ್ತಿದ್ದು - ಇದು ಕಥಾವಾಹಿನಿ ನಿರರ್ಗಳವಾಗಿ ಹರಿಯಲು ಪೋಷಕವಾಗಿರುತ್ತದೆ.

ಮಲೆಯ ಮಾದೇವ ಬರುವ ಚೆಂದವ
ನೋಡಿ ನಮ್ಮ ಶಿವನಾ ||ಪ||

ಒಂದೊಂದು ಪುಟ್ಟ ಪುಟ್ಟ ಪಾದದ ಅಂತ್ಯದಲ್ಲಿ ಕಂಸಾಳೆಯನ್ನು ಬಾರಿಸುತ್ತ ಕಥಾನಿರೂಪಣೆಗೆ ಚೈತನ್ಯವನ್ನು ತುಂಬಿಕೊಳ್ಳಲಾಗುತ್ತದೆ. ಹೆಜ್ಜೆಹಜ್ಜೆಗೂ ಕಂಸಾಳೆಯ ಮಿಡಿತ ಅದರ ಜೊತೆಯಲ್ಲಿ ಸಾಗುವ ವಿಸ್ತಾರ ಗದ್ಯಕಥನ ಆಕರ್ಷಕ ಕಥೆಯ ಓಟಕ್ಕೆ ಒಂದು ಉದಾಹರಣೆ:

ಹರ ಹರ ನಮ್ಮಪ್ಪಾಜಿ ಮಾಯಕಾರ ಮಾದೇವ
ಆ ಬಂಕಾಪುರಿ ಶ್ರವಣ ದೊರೆ ಮೇಲೆ
ದೃಷ್ಟಿ ಮಡಗುತಾರೆ ಮಾದೇವ||
ಮಲೆಯ ಮಾದೇವ ಬರುವ ಚೆಂದವ
ಆ ಶ್ರವಣದೊರೆ ಅಂದರೆ ಸಾಮಾನ್ಯವಲ್ಲ
ಈ ಭೂಮಿ ಭೂಮಂಡಲವನ್ನೆಲ್ಲ ಕೈಕೆಳಗಿಟ್ಟುಕೊಂಡಿದ್ದಾನೆ
ಸುರ ಮುನ್ನೂರು ಕೋಟಿ ದೇವಮಾನ್ಯವರ ತಂದು
ಕೈಸೆರೆ ಹಿಡಿದುಕೊಂಡಿದ್ದಾನೆ
ಕಂಗಳ್ಳಿ ಮಲ್ಲಿಕಾರ್ಜುನ ಪಟೇಲನಂತೆ
ಮುಡುಕುತೊರೆ ಮಲ್ಲಣ್ಣ ಚಾಕರನಂತೆ
ಕಂಕುಳಲ್ಲಿ ದೊಣ್ಣೆ ಕೊಟ್ಟಿದ್ದಾನೆ
ತಲೆದಿಂಬು ಮಾಡಿಕೊಂಡವನೆ ಶಿವನೆ
ಶನಿದೇವರ ಹಿಡಿದು ಮಕ್ಕಡೆ ಕೆಡವಿಕೊಂಡು
ನಾಲ್ಕುಕಾಲು ಮಂಚ ಮಾಡಿಕೊಂಡು
ತನ್ನ ಪಾದವನ್ನು ಅವನ ಬೆನ್ನಮೇಲೆ ಇಟ್ಟುಕೊಂಡು ಕೂತವನೆ ಶಿವನೆ
ಮಲೆಯಮಾದೇವ ಬರುವ ಚೆಂದವ ನೋಡಿ ನಮ್ಮ ಶಿವನಾ||

ಪದ್ಯ, ವಚನಗಳೆರಡಕ್ಕೂ ಕಂಸಾಳೆಯ ನಾದ ಒಗ್ಗಿಕೊಳ್ಳುತ್ತದೆ. ಇದರ ಗುಂಗಿನಲ್ಲಿಯೇ ಕಥೆ ಸಾಗುತ್ತದೆ. *

ಮಲೆಯ ಮಾದೇಶ್ವರ ದೇವರಡ್ಡರು ಹಾಡುವ ಪ್ರಧಾನ ಕಥೆ. ಇದೊಂದು ಜನಪದ ಮಹಾಕಾವ್ಯ. ಇದು ಇವರ ಧಾರ್ಮಿಕ ಕಾವ್ಯವೂ ಹೌದು. ಫಿನ್ಲೆಂಡಿನ ಕಲೇವಾಲಕ್ಕೂ ದೊಡ್ಡ ಗಾತ್ರದ ಕಾವ್ಯವೊಂದನ್ನು ಕೊಟ್ಟ ಕೀರ್ತಿ ದೇವರ ಗುಡ್ಡರದು. ಇದಲ್ಲದೆ ಇವರು ಪಿರಿಯಾಪಟ್ಟಣದ ಕಾಳಗ, ಸಾರಂಗಧರ, ಚೆನ್ನಿಗರಾಮ ಘುನಪತಿರಾಯ, ಬಿಳಿಗಿರಿರಂಗಸ್ವಾಮಿ, ಬೆಟ್ಟದ ಚಾಮುಂಡಿ, ಬಾಲನಾಗಮ್ಮ, ರಾಜಾವಿಕ್ರಮ, ಮುಡುಕುತ್ತೊರೆ ಮಲ್ಲಪ್ಪ, ಬಸವಪುರಾಣ, ಕೋಳೂರುಕೊಡುಗೂಸು, ಬಂಜೆಹೊನ್ನಮ್ಮ ಮುಂತಾದ ಲೌಕಿಕ ಧಾರ್ಮಿಕ ಐತಿಹಾಸಿಕ ಕಾವ್ಯಗಳನ್ನು ಹಾಡುತ್ತಾರೆ. ಕೆಲವೊಮ್ಮೆ ನೀಲಗಾರರ ಧಾರ್ಮಿಕ ಕಥೆಯಾದ ಮಂಟೇಸ್ವಾಮಿ ಕಾವ್ಯವನ್ನು, ಅದರಲ್ಲೂ ಸಿದ್ಧಪ್ಪಾಜಿಗೆ ಸಂಬಂಧಿಸಿದ ಭಾಗವನ್ನು ಕಂಸಾಳೆ ಗತ್ತಿಗೇ ಅಳವಡಿಸಿಕೊಂಡು ಹಾಡುವುದೂ ಉಂಟು. ಪಿರಿಯಾಪಟ್ಟಣದ ಲಾವಣಿ ಮಾತ್ರ ವಿಶಿಷ್ಟವಾದ ಬಂಧುರವಾದ ಪದ್ಯಕಾವ್ಯವಾಗಿದ್ದು ಕಂಸಾಳೆಯ ಗತ್ತಿಗೇ ರಚಿಸಿದಂತೆ ತೋರುತ್ತದೆ. ಆ ಕಾವ್ಯದ ಒಂದು ತುಣುಕು ಹೀಗಿದೆ:

ತಂದನಾನಿ ತಂದಾನಿ ತಾನನ
- ತಂದೇ ನಾನ
ತಂದನಾನಿ ತಂದಾನಿ ತಾನನ
ಕೊಡಗು ಮಲೆಯಾಳ ರಾಜ್ಯಕೆ
ಗಡಿಯಾವುದು ಎಂದರೆ
ಬೆಡಗಿನಂಥ ಪಿರಿಯಾಪಟ್ಟಣ
ಬೆಡಗಿನಂಥ ಪಿರಿಯಾಪಟ್ಟಣಕೆ
ದೊರೆಯಾರು ಎಂದರೆ
- ಹೆಚ್ಚಿನ ದೊರೆ
ವೀರರಾಜು ದೊರೆರಾಯ. (ಪಿ.ಕೆ.ಆರ್.)

**ಕಂಸಾಳೆ ನೃತ್ಯ :** ಬೀಸುಕಂಸಾಳೆ ದೇವರಗುಡ್ಡರ ವಿಶಿಷ್ಟವಾದ ನೃತ್ಯ, ಕರ್ನಾಟಕದ ಜನಪದ ನೃತ್ಯಗಳಲ್ಲಿ ಅತ್ಯಪೂರ್ವವಾದುದು. ನೃತ್ಯದಲ್ಲಿ ಇಬ್ಬರಿಂದ ಎಂಟು ಮಂದಿಯವರೆಗೂ ಪಾಲುಗೊಳ್ಳಬಹುದು. ಇದರಲ್ಲಿ ತಾರ್‌ಬಟ್ಟು, ತಟ್‌ಬಟ್ಟು ಮುಂತಾದ ಬೇರೆ ಬೇರೆ ಬಗೆಯ ನೃತ್ಯಗಳಿವೆ. ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ ಮುದ್ದುಲಿಂಗ ಬಾ ನಮ್ಮ ಮುದ್ದು ಮಾದಯ್ಯನ ಲಿಂಗ ಬಾ ಎಂದು ಹಾಡುತ್ತಾರೆ. ಒಬ್ಬ ಗುಡ್ಡ ಕಂಸಾಳೆಯನ್ನು ಆ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತ ಕುಣಿಯುತ್ತಾನೆ. ತಲೆಯ ಮೇಲೆ, ಬೆನ್ನಹಿಂದೆ, ಕಾಲಕೆಳಗೆ, ಕುಳಿತು, ನಿಂತು, ಬಾಗಿಬಳುಕಿ, ತೀವ್ರಗತಿಯಲ್ಲಿ ನರ್ತಿಸುವ ಬಗೆ ಆಶ್ಚರ್ಯಕರವಾದುದು; ಅದ್ಭುತವಾದುದು. ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲೆತು ನರ್ತಿಸುವುದು ಉಂಟು. ಒಬ್ಬರ ಕಂಸಾಳೆಗೆ ಇನ್ನೊಬ್ಬರ ಕಂಸಾಳೆಯನ್ನು ಕುಟ್ಟುತ್ತ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ. ಗಿರಿಯ ಮಾದಯ್ಯನ ಜಾತ್ರೆಯಲ್ಲಂತೂ ಎಲ್ಲ ಕಡೆಯ ಕಂಸಾಳೆಯ ಗುಡ್ಡರೂ ಸೇರಿ ಅವರದೇ ಒಂದು ದೊಡ್ಡ ಕೂಟವಾಗುತ್ತದೆ. ಆಗ ಎಲ್ಲೆಂದರಲ್ಲಿ ಕಂಸಾಳೆಯ ಮೇಳಗಳು ನಡೆಯುತ್ತಿರುತ್ತವೆ. ಕಂಸಾಳೆಯನ್ನು ಬಳಸುವ ಕಲಾವಿದರು ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ವಿಶೇಷವಾಗಿದ್ದಾರೆ. *

**ಕಂಸಾಳೆ ಮಹಾದೇವಯ್ಯ :** 1920-96. ಪ್ರಸಿದ್ಧ ಜನಪದ ಕಲಾವಿದ. ಇವರ ಮೂಲ ಹೆಸರು ಬಡಗಲಹುಂಡಿ ಮಹಾದೇವಯ್ಯ. ಕಂಸಾಳೆ ಜನಪದ ಕಲೆಗಾಗಿ ತಮ್ಮ ಬದುಕನ್ನು ಅರ್ಪಿಸಿಕೊಂಡದ್ದರಿಂದ ಇವರು ಕಂಸಾಳೆ ಮಹದೇವಯ್ಯ ಎಂದೇ ಪ್ರಸಿದ್ಧರು. ಮೂಲತಃ ಇವರು ಮೈಸೂರು ತಾಲ್ಲೂಕಿನ ವರಕೋಡು ಹೋಬಳಿಯ ಬಡಗಲಹುಂಡಿಯವರು. ಸು.1920ರಲ್ಲಿ ಜನಿಸಿದರು. ಕಂಸಾಳೆ ಕಲೆ ಇವರಿಗೆ ವಂಶಪಾರಂಪರ್ಯವಾಗಿ



ಬಂದ ಆಸ್ತಿ. ಇವರ ತಂದೆ ನಂಜಯ್ಯನವರೂ ಕಂಸಾಳೆ ಕಲಾವಿದರಾಗಿದ್ದು ಮೈಸೂರಿಗೆ ಬಂದು ಹಾಲು ಮಾರುವ ವೃತ್ತಿಯಲ್ಲಿ ತಮ್ಮನ್ನುತೊಡಗಿಸಿಕೊಂಡಿದ್ದರು. ಬಾಲ್ಯದಲ್ಲಿ ಈ ಕಲೆಯನ್ನು ತಂದೆಯಿಂದ ಕಲಿಯಲು ಇವರು ಇಷ್ಟ ಪಡಲಿಲ್ಲ. ಇವರ ತುಂಟಾಟ ಸಹಿಸದ ತಂದೆ ಕಂಬಕ್ಕೆ ಕಟ್ಟಿ ಹಾಕುತ್ತಿದ್ದುದುಂಟು. ಅಂಥ ಒಂದು ಸಂದರ್ಭದಲ್ಲಿ ಮನೆ ಮುಂದಿನ ದಾರಿಯಲ್ಲಿಸಾಗುತ್ತಿದ್ದ ನೀಲಗಾರ ಜೋಗಿಯೊಬ್ಬರು ಈ ಬಾಲಕನನ್ನು ಕಂಬದಿಂದ ಬಿಡಿಸಿದರಂತೆ. ಆ ನೀಲಗಾರ ಜೋಗಿಯಿಂದ ಕಂಸಾಳೆ ಕಲಿತ ಮಹಾದೇವಯ್ಯ ಹತ್ತು ವರ್ಷಗಳ ತರುವಾಯ ಪುನಃ ಮನೆಯವರಿಗೆ ಕಾಣಿಸಿಕೊಂಡದ್ದು ನಂಜನಗೂಡಿನ ಜಾತ್ರೆಯಲ್ಲಿ. ಮನೆಬಿಟ್ಟು ಹೋದಾಗಿನಿಂದ ಅವಿರತವಾಗಿ ಈ ಕಲೆಯನ್ನು ಕಲಿತು ಸ್ವಂತ ತಂಡವೊಂದನ್ನು ಅಷ್ಟು ಹೊತ್ತಿಗೆ ಕಟ್ಟಿಕೊಂಡಿದ್ದರು.

ಮಹದೇಶ್ವರನ ಒಕ್ಕಲೆಂದೇ ಕರೆಯಲಾಗುವ ದಕ್ಷಿಣ ಕರ್ನಾಟಕದ ಈ ಜನ ದೀಪಾವಳಿಯಂಥ ಹಬ್ಬಗಳ ಸಂದರ್ಭದಲ್ಲಿ ದೇವರ ಹೆಸರಿನಲ್ಲಿ ಮಹದೇಶ್ವರನ ಕಾವ್ಯವನ್ನು ಹಾಡುತ್ತ ಕಂಸಾಳೆ ಕುಣಿಯುತ್ತ ಬೆಟ್ಟಕ್ಕೆ ಹೋಗುವುದೊಂದು ವಾಡಿಕೆ. ಮಹಾದೇವಯ್ಯನವರು ಈ ಪರಂಪರೆಗೆ ಸೇರಿದವರು. ನಂಜನಗೂಡಿನಲ್ಲಿ ಪತ್ತೆಯಾದ ಮಹಾದೇವಯ್ಯ ಪುನಃ ಓಡಿಹೋಗಬಹುದೆಂದು ಹೆದರಿದ ಮನೆಯವರು ಏಳರ ಬಾಲೆ ಪುಟ್ಟಮಾದಮ್ಮನವರ ಜೊತೆ ವಿವಾಹ ಮಾಡಿಸಿದರು. ಅನಂತರ ಇವರಿಗೆ ರೈಲ್ವೆ ಇಲಾಖೆಯಲ್ಲಿ ಕೆಲಸವೊಂದನ್ನು ಕೊಡಿಸಿದರು. ಕಂಸಾಳೆ ಪ್ರದರ್ಶನ

ನೀಡಲು ಕಚೇರಿ ನಿಯಮಾವಳಿಗಳು ಅಡ್ಡ ಬರುತ್ತಿದ್ದುವು. ಇದರಿಂದ ಬೇಸತ್ತ ಇವರು ತಮ್ಮ ನೌಕರಿ ತ್ಯಜಿಸಿ ಸ್ವತಂತ್ರ ಕಲಾವಿದರಾದರು. ಇವರ ಕಲಾಸಾಧನೆಯನ್ನು ಗುರುತಿಸಿದ ಮೈಸೂರು ವಿಶ್ವವಿದ್ಯಾನಿಲಯ ಇವರನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಂದರ್ಶಕ ಕಲಾವಿದರನ್ನಾಗಿ ನೇಮಿಸಿಕೊಂಡಿತು. ಇಲ್ಲಿನ ಜಾನಪದ ವಸ್ತುಸಂಗ್ರಹಾಲಯದಲ್ಲಿ ಹಲವಾರು ವರ್ಷ ದುಡಿದು ಮಹಾದೇವಯ್ಯನವರು ಸ್ಥಳೀಯ ಹಾಗೂ ಹೊರರಾಜ್ಯಗಳ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಆಸಕ್ತರಿಗೆ, ಕಂಸಾಳೆಕಲೆ ಕಲಿಸಿದರು. ಗಂಡುಕಲೆ ಕಂಸಾಳೆಯನ್ನು ಮಹಿಳೆಯರಿಗೆ ಮೊದಲು ಕಲಿಸಿದ ಕೀರ್ತಿಯೂ ಇವರದು. ದೇಶದ ನಾನಾ ಕಡೆಗಳಲ್ಲಿ ತರಬೇತಿಗಳನ್ನು ನೀಡಿದ ಇವರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ, ಮೈಸೂರಿನ ರಂಗಾಯಣ ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ಕಲಾವಿದರಿಗೆ ಕಂಸಾಳೆ ತರಬೇತಿ ನೀಡಿದರು. 1950ರ ದಶಕದಲ್ಲಿ ಎಂ.ವಿ.ಗೋಪಾಲಸ್ವಾಮಿಯವರು ಮೈಸೂರಿನಲ್ಲಿ ಆಕಾಶವಾಣಿ ಆರಂಭಿಸಿದಾಗ ಬಿತ್ತರವಾದ ಮೊದಲ ಜನಪದ ಗೀತೆ ಮಹಾದೇವಯ್ಯನವರದು.

ಅಪ್ಪಟ ಜನಪದ ಕಲಾವಿದರಾದ ಇವರು ಕಂಸಾಳೆ ಕಲೆಯನ್ನು ದೇಶಾದ್ಯಂತ ಪ್ರದರ್ಶಿಸಿದರು. 1974ರಲ್ಲಿ ಅಂತಾರಾಷ್ಟ್ರೀಯ ಜನಪದ ಕಲಾ ಮೇಳದಲ್ಲಿ ಭಾರತವನ್ನು ಪ್ರತಿನಿಧಿಸಿ ಇಟಲಿ, ಟರ್ಕಿ, ಸೈಪ್ರಸ್ ಮುಂತಾದ ಹೊರದೇಶಗಳಲ್ಲೂ ತಮ್ಮ ತಂಡದ ಪ್ರದರ್ಶನ ನೀಡಿ ಪ್ರತಿಭೆ ಪ್ರದರ್ಶಿಸಿದರು. ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ ಭಾಗವಹಿಸಿದ ಇವರ ಕಲಾತಂಡದ ಪ್ರದರ್ಶನವನ್ನು ಅಂದಿನ ಪ್ರಧಾನಿಗಳಾಗಿದ್ದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಮೆಚ್ಚಿಕೊಂಡಿದ್ದರು.

ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ದೊರೆತಿವೆ. ಅವುಗಳಲ್ಲಿ ಮುಖ್ಯವಾದವು- ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1968), ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1982), ಇಂದಿರಾಗಾಂಧಿ ಫೆಲೋಶಿಪ್ (1988), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1990), ಕರ್ನಾಟಕ ಸರ್ಕಾರದ ಅತ್ಯುನ್ನತ ಪ್ರಶಸ್ತಿಗಳಲ್ಲೊಂದಾದ 1995ನೆಯ ಸಾಲಿನ ಜಾನಪದಶ್ರೀಯನ್ನು ಮರಣೋತ್ತರವಾಗಿ ಇವರಿಗೆ ಪ್ರದಾನ ಮಾಡಲಾಗಿದೆ. ಇವರ ಸಿರಿಕಂಠದಲ್ಲಿ ಮಲೆಯ ಮಹದೇಶ್ವರ ಕಾವ್ಯದ ಇಪ್ಪತ್ತೈದು ಧ್ವನಿಸುರುಳಿಗಳು ಹೊರಬಂದಿವೆ. ಇವರ ಕಂಸಾಳೆ ಪ್ರದರ್ಶನಗಳನ್ನು ಕನ್ನಡ, ಹಿಂದಿ ಹಾಗೂ ಇಂಗ್ಲಿಷ್ ಚಲನಚಿತ್ರಗಳಲ್ಲೂ ಬಳಸಿಕೊಳ್ಳಲಾಗಿದೆ. ಏಕತಾರಿ ಹಾಗೂ ಕಂಜರಿಗಳನ್ನೂ ನುಡಿಸುತ್ತಿದ್ದ ಇವರ ಸಂಗೀತವನ್ನು ವಂಶವೃಕ್ಷ ಚಲನಚಿತ್ರದಲ್ಲಿ ಅಳವಡಿಸಿಕೊಂಡಿದೆ. ಮಹಾದೇವಯ್ಯ ಸಂಪ್ರದಾಯ ನಿಷ್ಠರಾಗಿದ್ದರು. ಸೋಮವಾರ ಹಾಗೂ ಶುಕ್ರವಾರ ಕ್ವಾರಣ್ಯ(ಭಿಕ್ಷೆ)ಕ್ಕಾಗಿ ಕಂಸಾಳೆ ನುಡಿಸುತ್ತ ಮನೆ ಮನೆಗೆ ತೆರಳುತ್ತಿದ್ದುದುಂಟು. ಈ ಕಾಯಕವನ್ನು ಸಾಯುವವರೆಗೂ ನಿಲ್ಲಿಸಲಿಲ್ಲ. ನೋಡುಗರ ಮೈನವಿರೇಳುವಂತೆ ಕಂಸಾಳೆ ನೃತ್ಯ ಪ್ರದರ್ಶನ ನೀಡುತ್ತಿದ್ದ ಮಹಾದೇವಯ್ಯನವರ ಕಲೆಯಲ್ಲಿ ನೈಪುಣ್ಯ ಹಾಗೂ ಜನಪದ ಸೊಗಡು ಹದವಾಗಿ ಬೆರೆತಿರುತ್ತಿದ್ದುವು. ಕುಣಿತದ ಭಂಗಿ ಹಾಗೂ ಗತ್ತುಗಳಿಂದ ಇವರು ನಾಡಿನ ಅಪರೂಪದ ಕಲಾವಿದರಾಗಿದ್ದರು. ಇವರು 1996 ಏಪ್ರಿಲ್ 21ರಂದು ಮೈಸೂರಿನಲ್ಲಿ ನಿಧನರಾದರು.

ಇವರ ಮಗ ಕುಮಾರಸ್ವಾಮಿ ತಂದೆಯಂತೆಯೇ ಕಂಸಾಳೆ ಕಲೆಯಲ್ಲಿ ಪ್ರಾವೀಣ್ಯ ಪಡೆದಿದ್ದಾರೆ. ಮೊಮ್ಮಕ್ಕಳಾದ ಕೆ.ರವಿಚಂದ್ರ ಹಾಗೂ ಕೆ.ಮಹದೇವ ಕೂಡ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

(ಎಸ್.ಬಿಎಚ್ಎ.)

**ಕಕ್ಕ I :** ಸು.8ನೆಯ ಶತಮಾನ ಕರ್ನಾಟಕವನ್ನು ಆಳಿದ ರಾಷ್ಟ್ರಕೂಟ ವಂಶದ ಅರಸರ ಮೂಲ ಪುರುಷರಲ್ಲಿ ಒಬ್ಬ. ಈತನ ಬಗ್ಗೆ ಇತಿಹಾಸದಲ್ಲಿ ವಿವರಗಳು ದೊರೆಯುವುದಿಲ್ಲ. ಇವನ ಆಳಿಕೆಯ ಕಾಲದ ಬಗ್ಗೆಯೂ ಖಚಿತವಾದ ಅಂಶಗಳು ಬೆಳಕಿಗೆ ಬಂದಿಲ್ಲ. ಈತ ಒಂದನೆಯ ಗೋವಿಂದರಾಜನ ಮಗ. ತನ್ನ ಪೂರ್ವಿಕರಾದ ದಂತಿವರ್ಮ, ಒಂದನೆಯ ಇಂದ್ರ ಮತ್ತು ತಂದೆಯಾದ ಗೋವಿಂದರಾಜನಂತೆ ಬಾದಾಮಿ ಚಾಲುಕ್ಯರ ಮಾಂಡಲಿಕನಾಗಿ ರಾಜ್ಯಭಾರ ನೆಡಸಿರಬಹುದೆಂದು ಊಹಿಸಬಹುದು. *

**ಕಕ್ಕ II :** ಕರ್ನಾಟಕವನ್ನಾಳಿದ ರಾಷ್ಟ್ರಕೂಟ ರಾಜರಲ್ಲಿ ಕೊನೆಯವ. ಕರ್ಕ್ಕ ಎಂದೂ ಈತನನ್ನು ಕರೆಯುವುದುಂಟು. ರಾಷ್ಟ್ರಕೂಟ ದೊರೆಯಾದ ಮುಮ್ಮಡಿ ಅಮೋಘವರ್ಷನಿಗೆ (935-39), ಮೂರನೆಯ ಕೃಷ್ಣ (939-66), ಜಗತ್ತುಂಗ ಕೊಟ್ಟಿಗ (967-72) ಮತ್ತು ನಿರುಪಮ ಎಂಬ ನಾಲ್ವರು ಮಕ್ಕಳಿದ್ದರು. ಕಕ್ಕ ನಿರುಪಮನ ಮಗ. ಮೂರನೆಯ ಕೃಷ್ಣ ಮಕ್ಕಳಿಲ್ಲದೆ ತೀರಿಕೊಂಡಾಗ ಅವನ ತಮ್ಮ ಕೊಟ್ಟಿಗ ಸಿಂಹಾಸನವನ್ನೇರಿದ. ಆ ವೇಳೆಗಾಗಲೇ ಕೊಟ್ಟಿಗನಿಗೆ ಮುಪ್ಪಡರಿಸಿತ್ತಾದ್ದರಿಂದ ಆತ ಬಹುಕಾಲ ಆಳಲಿಲ್ಲ. ಆತನ ಅನಂತರ ಆಳಿದವನೇ ಕಕ್ಕ.

ಕೊಟ್ಟಿಗನ ಕಾಲದಲ್ಲೇ ರಾಷ್ಟ್ರಕೂಟರ ಅವನತಿ ತುತ್ತತುದಿ ಮುಟ್ಟುವುದರಲ್ಲಿತ್ತು. ಆತ ಮೊದಲೇ ಅಸಮರ್ಥ, ಜೊತೆಗೆ ಮುದುಕ. ಆದ್ದರಿಂದ ತನ್ನ ರಾಜ್ಯವನ್ನು ರಕ್ಷಿಸಲಾರದೆ ಹೋದ. ಹಳೆಯ ವೈರ ಸಾಧಿಸುತ್ತಿದ್ದ ಪರಮಾರ ದೊರೆ ಶಿಯಕ ಆತನ ಮೇಲೆ ದಂಡೆತ್ತಿ ಬಂದು ರಾಜಧಾನಿಯನ್ನು ಹಿಡಿದುಕೊಂಡು ಕೊಳ್ಳೆಹೊಡೆದ. ಕೊಟ್ಟಿಗ ಎದೆಯೊಡೆದು ಸತ್ತ. ಇಂಥ' ಸಮಯದಲ್ಲಿ ಅಧಿಕಾರಕ್ಕೆ ಬಂದ ಕಕ್ಕನಾದರೂ ದಕ್ಷನಾಗಿದ್ದಿದ್ದರೆ ಪರಿಸ್ಥಿತಿ ಸುಧಾರಿಸುತ್ತಿತ್ತು. ಆದರೆ ಇವನಿಗೂ ಆಡಳಿತ ಗೊತ್ತಿರಲಿಲ್ಲ. ಈತ ದುಷ್ಟ ಮಂತ್ರಿಗಳಿಬ್ಬರ ಕೈಗೊಂಬೆಯಾಗಿದ್ದ. ಈ ದೌರ್ಬಲ್ಯದಿಂದಾಗಿ ಇವನ ಸಾಮಂತರಾಜರಲ್ಲಿ ದುರಾಸೆ ಬೆಳೆಯಿತು. ಪಟ್ಟಕ್ಕೆ ಬಂದ ಹದಿನೆಂಟೇ ತಿಂಗಳಲ್ಲಿ ಕಕ್ಕ ರಾಜ್ಯ ಕಳೆದುಕೊಂಡ.

ರಾಷ್ಟ್ರಕೂಟ ಸಾಮ್ರಾಜ್ಯದ ದುಃಸ್ಥಿತಿಯ ದುರುಪಯೋಗ ಪಡಿಸಿಕೊಳ್ಳುವುದರಲ್ಲಿ ಪ್ರತಿಹಾರ ವಂಶದವರು ಮೊದಲಿಗರಾದರು. ಉತ್ತರ ಭಾರತದ ಹಲಕೆಲವು ಪಾಳೆಯಪಟ್ಟುಗಳೊಡನೆ ಸಂಚು ನಡೆಸಿ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಮುತ್ತಿಗೆ ಹಾಕಲು ಇವರು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಇವರು ಎಷ್ಟರ ಮಟ್ಟಿಗೆ ಜಯಶಾಲಿಗಳಾದರು ಎಂಬುದರ ಬಗ್ಗೆ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. 972ರಲ್ಲಿ ಬರೆಯಲಾದ ಕರ್ಡ್ಡಾಡದ ಶಾಸನವನ್ನು ನಂಬುವುದಾದರೆ ಈತ ಪ್ರತಿಹಾರರ ದಾಳಿಯನ್ನು ಹಿಮ್ಮೆಟ್ಟಿಸಲು ಸಮರ್ಥನಾದನೆಂದು ಹೇಳಬಹುದು.

ಆದರೂ ಕಕ್ಕನ ರಾಜ್ಯ ಉಳಿಯಲಿಲ್ಲ. ಬಾದಾಮಿಯ ಚಳುಕ್ಯ ವಂಶದ ಎರಡನೆಯ ತೈಲಪ ದಂಡೆತ್ತಿ ಬಂದ. ಮೂರನೆಯ ಗೋವಿಂದನಿಂದ ತರ್ದವಾಡಿ ಪ್ರಾಂತ್ಯದಲ್ಲಿ ಮಾಂಡಲಿಕನಾದಾಗಿನಿಂದಲೂ ಆತ ರಾಷ್ಟ್ರಕೂಟರನ್ನು ನಾಶಮಾಡುವ ಹಂಚಿಕೆ ಹೂಡಿದ್ದ. ಬಾದಾಮಿಯ ಚಳುಕ್ಯರ ವಂಶಜನೆಂದು ಭಾವಿಸಿದ್ದ ತೈಲಪನಿಗೆ ತನ್ನ ಹಿರಿಯರಿಂದ ರಾಷ್ಟ್ರಕೂಟರು ಕಿತ್ತುಕೊಂಡಿದ್ದ ಸಾಮ್ರಾಜ್ಯವನ್ನು ಮತ್ತೆ ಸಂಪಾದಿಸಬೇಕೆಂಬ ಆಕಾಂಕ್ಷೆಯಿತ್ತು. ಎರಡನೆಯ ಕಕ್ಕನ ಕಾಲದಲ್ಲಿ ಆತನಿಗೆ ಈ ಅವಕಾಶ ದೊರೆಯಿತು. ಕಕ್ಕನ ವಿರುದ್ಧವಾಗಿ ಎದ್ದ ತೈಲಪನನ್ನು ಅಡಗಿಸುವ ಉದ್ದೇಶದಿಂದ ದಂಡೆತ್ತಿಹೋದ ಕಕ್ಕನಿಗೆ ಸೋಲು ಕಾದಿತ್ತು (973). ಕಕ್ಕನ ಮಂತ್ರಿಗಳು ಕಾಳಗದಲ್ಲಿ ಕೊನೆಗೊಂಡರು. ಕಕ್ಕ ಮಾತ್ರ ಹೇಗೋ ತಲೆ ತಪ್ಪಿಸಿಕೊಂಡು ಹೋಗಿ ಮೈಸೂರು ಸೀಮೆಯ ಸೊರಬ ಪ್ರದೇಶದಲ್ಲಿ ಒಂದಿಷ್ಟು ನೆಲ ಗಿಟ್ಟಿಸಿಕೊಂಡು ಅಲ್ಲಿ 991ರ ವರೆಗೂ ಆಳ್ವಿಕೆ ನಡೆಸಿದ. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಮತ್ತೆ ಸಂಪಾದಿಸುವ ಆಸೆಯನ್ನು ಕಕ್ಕ ಕೈಬಿಟ್ಟನಾದರೂ ಮೂರನೆಯ ಕೃಷ್ಣನ ಮಗನಾದ ನಾಲ್ಕನೆಯ ಇಂದ್ರನನ್ನು ಸಿಂಹಾಸನಕ್ಕೆ ತರಲು ಗಂಗವಂಶದ ದೊರೆ ಎರಡನೆಯ ಮಾರಸಿಂಹ ಪ್ರಯತ್ನಪಟ್ಟ. ಆದರೆ ಅದು ಫಲಿಸಲಿಲ್ಲ. *

**ಕಕ್ಕೇರಿ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರ- ಹಳ್ಯಾಳ ರಸ್ತೆಯಲ್ಲಿ ಖಾನಾಪುರಕ್ಕೆ 30ಕಿಮೀ ದೂರದಲ್ಲಿದೆ. ಇದು ವೀರಶೈವ ಶರಣನಾದ ಡೋಹರ ಕಕ್ಕಯ್ಯ ಚೆನ್ನಬಸವಣ್ಣನೊಂದಿಗೆ ಕಲ್ಯಾಣದಿಂದ ಉಳುವಿಗೆ ಹೋಗುವ ಮಾರ್ಗದಲ್ಲಿ ಕಳಚುರಿ ಸೈನ್ಯದೊಂದಿಗೆ ಹೋರಾಡಿ ವೀರಮರಣ ಹೊಂದಿದ ಸ್ಥಳವೆಂಬ ನಂಬಿಕೆ ಇದೆ. ಹೊಲಗಳ ಮಧ್ಯದಲ್ಲಿ ಡೋಹರ ಕಕ್ಕಯ್ಯನದು ಎನ್ನಲಾದ ಗದ್ದುಗೆಯಿದೆ. ಈ ಗುಡಿಗೆ ಒಂದು ಚಿಕ್ಕ ಗರ್ಭಗೃಹವಿದ್ದು ಇದರಲ್ಲಿ ಲಿಂಗಪೂಜೆಯಲ್ಲಿ ನಿರತನಾದ ಕಕ್ಕಯ್ಯನ ಕಲ್ಲಿನ ಮೂರ್ತಿಯಿದೆ. ಇವನ ಗದ್ದುಗೆ ಬಳಿ ಪ್ರತಿವರ್ಷ ಶಿವರಾತ್ರಿಯಲ್ಲಿ ಮೂರು ದಿನಗಳವರೆಗೆ ಜಾತ್ರೆ ನಡೆಯುವುದು.

ಈ ಗದ್ದುಗೆಯ ಸಮೀಪ ಇತ್ತೀಚೆಗೆ ನಿರ್ಮಿತವಾದ ಪ್ರಜ್ಞೋದಯ ಆಶ್ರಮ ಇದೆ. ಆಶ್ರಮದಲ್ಲಿ ವಿರಕ್ತ ಸನ್ಯಾಸಿನಿಯೊಬ್ಬರು ವಾಸವಾಗಿರುವರು. ಊರಲ್ಲಿ ವೀರಭದ್ರ, ಬಸವಣ್ಣ, ಮಾರವ್ವ ಮೂಕಮ್ಮ, ದುರಗವ್ವ ದೇವಾಲಯಗಳಿವೆ. ಅಡವಿ ಸಿದ್ದೇಶ್ವರ ಎಂಬ ಮಠವಿದೆ. ಸುಮಾರು ಮೂರು ಶತಮಾನಗಳ ಹಿಂದೆ ನಿರ್ಮಿಸಲಾದ ಎರಡು ಹಳೆಯ ದೇವಾಲಯಗಳಲ್ಲಿ, ಒಂದನ್ನು ಸ್ಥಳೀಯರು ಬೀಸ್ಟದೇವಿ ದೇವಾಲಯವೆಂದು ಕರೆಯುವರು. ಅದು ಇಂಡೋ - ಸರಾಸೆನಿಕ್ ಶೈಲಿಯಲ್ಲಿದ್ದು, ಗುಮ್ಮಟವನ್ನು ಹೊಂದಿದೆ. ಈ ದೇವಿಯ ಜಾತ್ರೆ ವರ್ಷಕ್ಕೊಮ್ಮೆ 3 ದಿನಗಳವರೆಗೆ ನಡೆಯುತ್ತದೆ. ಈ ಊರಲ್ಲಿ ಸೇಂಟ್ ಅಂಥೊನಿ ಚರ್ಚ್ ಎಂದು ಕರೆಯಲಾಗುವ ಕೆಥೊಲಿಕ್ ಚರ್ಚ್ ಇದೆ. (ಆರ್.ಐ.)

**ಕಟೀಲು :** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಒಂದು ಗ್ರಾಮ. ಮಂಗಳೂರಿನ ಪೂರ್ವಕ್ಕೆ 27ಕಿಮೀ ದೂರದಲ್ಲಿ ಕಿನ್ನಿಗೋಳಿಗೆ ಹೋಗುವ ರಸ್ತೆ ಬದಿಯಲ್ಲಿದೆ. ಇದು ದಕ್ಷಿಣಕನ್ನಡದ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ಒಂದು. ನಂದಿನಿ ನದಿಯ ಎರಡು ಕವಲುಗಳ ಮಧ್ಯೆ ಬಂಡೆಗಳ ನಡುವೆ ಇರುವ ಉದ್ಭವ ಲಿಂಗದ ಆಕಾರದ ಮೂರ್ತಿಯನ್ನು ದುರ್ಗಾಪರಮೇಶ್ವರಿ ಎಂದು ಪೂಜಿಸುವರು. ನದಿಯ ಮಧ್ಯಭಾಗದಲ್ಲಿ ಅಂದರೆ ಕಟಿ ಪ್ರದೇಶದಲ್ಲಿ ಈ ಪವಿತ್ರ ಸ್ಥಳ ಇರುವುದರಿಂದ ಇದಕ್ಕೆ ಕಟೀಲು ಎಂಬ ಹೆಸರು ಬಂದಿರಬಹುದು. ಅಲ್ಲದೆ ಈ ದೇವಿಗೆ ಕಟಿಳಾ ಎಂಬ ಹೆಸರೂ ಇರುವುದರಿಂದ ಗ್ರಾಮದ ಹೆಸರು ರೂಪುಗೊಂಡಿರಬೇಕು. ಅಸ್ರಣ್ಣ ಉಪನಾಮದ ಮಾಧ್ವ ವೈಷ್ಣವ ಕುಟುಂಬದವರು ಇಲ್ಲಿನ ಅರ್ಚನೆ ಹಾಗೂ ಆಡಳಿತ ನೋಡುತ್ತ ಬಂದಿದ್ದಾರೆ. ಹಿಂದಿನ ದೇವಾಲಯ ಪ್ರವಾಹದಿಂದ ಕೊಚ್ಚಿಹೋದ ಕಾರಣ ಈಗ ಇರುವ ವಿಸ್ತಾರವಾದ ದೇವಸ್ಥಾನದ ಕಟ್ಟಡವನ್ನು 1944ರಲ್ಲಿ ಕಟ್ಟಲಾಗಿದೆ. ಕಲ್ಲಿನ ಕಂಬಗಳ ಮೇಲೆ ಕುಸುರಿ ಕೆಲಸದ ಪ್ರತಿಮೆಗಳಿವೆ. ಈ ದೇವಾಲಯ ನದಿಯ ಮಧ್ಯದ ದಿಬ್ಬದ ಮೇಲಿದ್ದು ಗೋಪುರಗಳನ್ನು ಹೊಂದಿದೆ. ಕಾರ್ಕಳದ ಶಿಲ್ಪಿ ರಂಜಾಳ ಗೋಪಾಲ ಕೃಷ್ಣ ಶೆಣೈ ಈ ದೇವಾಲಯದ ಶಿಲ್ಪಗಳನ್ನು ಕೆತ್ತಿದ್ದಾರೆ.



ದುರ್ಗಾಪರಮೇಶ್ವರಿ ದೇವಾಲಯ

ಸ್ಥಳಪುರಾಣದಂತೆ ಇಲ್ಲಿಂದ 3ಕಿಮೀ ದೂರದ ಎಕ್ಕಾರು ಗ್ರಾಮದಲ್ಲಿ ಇದ್ದ ಬ್ರಹ್ಮನ ವರ ಪಡೆದ ಅರುಣಾಸುರನೆಂಬ ದೈತ್ಯನನ್ನು ದೇವಿಯು ಬೃಹದಾಕಾರದ ಭ್ರಮರ ರೂಪದಿಂದ ಬಂದು ಕೊಂದು, ಭಕ್ತರ ಪ್ರಾರ್ಥನೆಯಂತೆ ದುರ್ಗಾ ರೂಪದಲ್ಲಿ ನೆಲೆನಿಂತಿದ್ದಾಳೆ. ದಿನವೂ ರಾಜಮರ್ಯಾದೆಗಳೊಡನೆ ಬಲಿ ಮೂರ್ತಿಯನ್ನು ದೇವಸ್ಥಾನದ ಆವರಣದಲ್ಲಿ ಮೆರೆಸುತ್ತಾರೆ. ಅನಂತರ ದೇವಿಯನ್ನು ಹೊತ್ತವರಿಂದ ಪ್ರಸಾದ ವಿನಿಯೋಗ. ಕೊನೆಗೆ (ದರ್ಪಣ) ವಸಂತ ಮಂಟಪದಲ್ಲಿ ದೇವಿಯನ್ನು ಕೂರಿಸಿ, ಅನೇಕ ಬಗೆಯಲ್ಲಿ ಪೂಜಿಸುತ್ತಾರೆ. ಗುಡಿ ಪ್ರವೇಶಿಸುವಾಗ ಪುಟ್ಟ ಗುಡಿಯಿರುವ ರಕ್ತೇಶ್ವರಿಕಲ್ಲು, ಒಳಗೆ ಗಣಪತಿ, ನಾಗರುಗಳಿವೆ. ಜಾತ್ರೆಯ ಸಮಯದಲ್ಲಿ ಹತ್ತಿರದ ಶಿಬರೂರು ಗ್ರಾಮದ ಕೊಡಮಣಿತ್ತಾಯ ಭೂತಕ್ಕೂ ಇಲ್ಲಿ ಮನ್ನಣೆಯಿದೆ.

ದೇವಸ್ಥಾನದಲ್ಲಿ ನಿತ್ಯ ಅನ್ನದಾನ ಸೇವೆಯಿರುತ್ತದೆ. ದೇವಸ್ಥಾನ ಮಂಡಳಿಯು ಪ್ರಾಥಮಿಕ ಶಾಲೆಯಿಂದ ಪದವಿ ಕಾಲೇಜಿನವರೆಗೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತದೆ. ಪ್ರಧಾನವಾಗಿ ದೇವಿಯ ಆರಾಧನೆಯ ರೂಪವಾಗಿ ಮೂರು ಯಕ್ಷಗಾನ ಮೇಳಗಳನ್ನು ನಡೆಸುತ್ತಿದೆ. ಮೇಳದವರು ಆಟ ನಡೆಸುವ ಊರಿನಲ್ಲಿ ಬೆಳಗ್ಗೆ ತಮ್ಮಲ್ಲಿನ ರಾಮಲಕ್ಷ್ಮಣರ ಕಿರೀಟಗಳಿಗೆ ಪೂಜೆ ಮಾಡುತ್ತಾರೆ. ಈ ಪೂಜೆ ಪ್ರಸಾದಕ್ಕೆ ಕಟೀಲಿನ ಪ್ರಸಾದದಂತೆಯೆ ಮನ್ನಣೆ ಇದ್ದು, ಭಕ್ತಾದಿಗಳು ಹರಕೆ ತೀರಿಸುವುದೂ ಉಂಟೂ. ಈ ಮೇಳದವರು ಕಟೀಲಿನಲ್ಲಿ ದೇವೀಮಹಾತ್ಮೆ, ಕಟೀಲು ಕ್ಷೇತ್ರ ಮಹಾತ್ಮೆ ಆಡುವಂತಿಲ್ಲ. ಇಲ್ಲಿ ಜಾಗ್ರತದೈವ ಎಂಬ ದೇವರಿದೆ. ಪ್ರತಿ ಹನ್ನೆರಡು ವರ್ಷಕ್ಕೆ ಒಮ್ಮೆ ಬ್ರಹ್ಮಕಳಶ ನಡೆಯುತ್ತದೆ. ಮಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ಸ್ನಾತಕೋತ್ತರ ಕೇಂದ್ರ ಇಲ್ಲಿದೆ. (ಎಚ್.ಪಿ.ವಿ.)

**ಕಟ್ಟೀಮನಿ, ಬಸವರಾಜ :** 1919-89. ಕನ್ನಡ ಪ್ರಗತಿಶೀಲ ಸಾಹಿತ್ಯದ ಅಗ್ರಮಾನ್ಯ ಲೇಖಕರು. 1919 ಅಕ್ಟೋಬರ್ 5ರಂದು ಬೆಳಗಾಂವಿ ಜಿಲ್ಲೆಯ ಗೋಕಾಕದಲ್ಲಿ ಜನಿಸಿದರು. ತಂದೆ ಅಪ್ಪಯ್ಯಣ್ಣ, ತಾಯಿ ಬಾಳವ್ವ, ತಾಯಿಯ ತವರೂರು ಮಲಾಮರಡಿ. ಅಲ್ಲಿನ ಬಸವಣ್ಣ ದೇವರಿಗೆ ಹರಕೆ ಹೊತ್ತು ಹುಟ್ಟಿದ ಹುಡುಗ ಬಸ್ಯಾ. ಅದೇ ಹೆಸರು ನಾನಾ ರೀತಿಯಾಗಿ ಬೆಳೆಯಿತು. ಬಸಣ್ಣ, ಬಸಪ್ಪ, ಬಸವೇಶ್ವರ -ಹೀಗೆ ವಿವಿಧ ರೂಪ ತಾಳಿತು. ಪತ್ರಿಕಾ ಸಂಪಾದಕರೊಬ್ಬರು ಬಸವರಾಜ ಎಂದು ಕರೆದರು. ಅದೇ ಹೆಸರು ಉಳಿದು ಸಾಹಿತ್ಯ ಪ್ರಪಂಚದಲ್ಲಿ ಬಸವರಾಜ ಕಟ್ಟೀಮನಿ ಎಂದೇ ಪ್ರಸಿದ್ಧರಾದರು. ನಿರಕ್ಷರಿಯಾಗಿದ್ದ ತಂದೆ ಅಪ್ಪಯ್ಯಣ್ಣ ನವರು ಸಂಬಂಧಿಕರೊಬ್ಬರ ಮೋಸಕ್ಕೆ ಬಲಿಯಾಗಿ ಇದ್ದ ಸಣ್ಣಹೊಲವನ್ನೂ ಕಳೆದುಕೊಂಡರು. ಜೀವನಕ್ಕಾಗಿ ಸಶಸ್ತ್ರ ಪೊಲೀಸ್ ಪಡೆಯಲ್ಲಿ ಸಿಪಾಯಿಯಾಗಿ ಸೇರಿಕೊಂಡರು.

ಕಟ್ಟೀಮನಿಯವರ ವ್ಯಕ್ತಿತ್ವದಲ್ಲಿ ಕಾಣಿಸುತ್ತಿದ್ದ ನೇರವಾದ ನಡೆ, ನುಡಿ, ಪ್ರಾಮಾಣಿಕತೆ, ಸರಳತೆ, ಔದಾರ್ಯ ಮುಂತಾದ ಗುಣಗಳು ನಿರಕ್ಷರಿಗಳಾದ ರೈತಾಪಿವರ್ಗದ ತಂದೆ ತಾಯಿಗಳಿಂದಲೇ ಬಂದವು. ಕುಂದರನಾಡ ಮಣ್ಣಿನ ಗುಣಗಳಾದ ಸ್ವಾಭಿಮಾನ, ಧೈರ್ಯ, ಕ್ರಾಂತಿಕಾರಿ ಮನೋಭಾವಗಳನ್ನು ಇವರು ರೂಢಿಸಿಕೊಂಡಿದ್ದರು. ಹಸಿವು, ಬಡತನ ಹುಟ್ಟಿನಿಂದಲೇ ಬಂದವು. ತಂದೆಗೆ ಆಗಾಗ ಬೇರೆ ಬೇರೆ ಊರುಗಳಿಗೆ ವರ್ಗವಾಗುತ್ತಿತ್ತು. ಆ ಊರುಗಳಲ್ಲಿ ಸರಿಯಾದ ಶಾಲೆ ಇರುತ್ತಿರಲಿಲ್ಲ. ಜೊತೆಗೆ ಭಾಷೆಯ ಸಮಸ್ಯೆ ಬೇರೆ. ಇದರಿಂದ ಕಟ್ಟೀಮನಿಯವರಿಗೆ ಶಿಕ್ಷಣದಲ್ಲಿ ಒಂದು ಬಗೆಯ ನಿರಾಸಕ್ತಿ ಉಂಟಾಯಿತು. ತಾಯಿಯ ಒಲವು ಒತ್ತಾಸೆಗಳಿಂದಲೇ ಇವರು ಕೊಂಚ ಶಿಕ್ಷಣ ಪಡೆದರು.

ಇವರ ಪ್ರಾಥಮಿಕ ಶಿಕ್ಷಣ ತೊಡಗಿದ್ದು ಕಿತ್ತೂರಿನಲ್ಲಿ. ಅಲ್ಲಿಂದ ಗೋಕಾಕಕ್ಕೆ ಬಂದು ಮೂರನೆಯ ತರಗತಿಗೆ ಸೇರಿದರು. ಅಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೆ ಇವರಿಗೆ ಕಿವುಡುತನ ಕಾಣಿಸಿಕೊಂಡಿತು. ಎಷ್ಟು ಪ್ರಯತ್ನಿಸಿದರೂ ಇವರು ಕಿವುಡುತನದಿಂದ ಪಾರಾಗಲಿಲ್ಲ. ಇದರಿಂದ ಇವರಲ್ಲಿ ಕೀಳರಿಮೆ ಬೆಳೆಯಿತು. ಸೂಕ್ಷ್ಮಗ್ರಹಣಶಕ್ತಿ ಹಾಗೂ ಜ್ಞಾಪಕ ಶಕ್ತಿಗಳು ಇವರನ್ನು ತರಗತಿಗಳಲ್ಲಿ ಮೊದಲಿಗರನ್ನಾಗಿಸುತ್ತಿದ್ದುವು. ಆದರೆ ಇವರಲ್ಲಿ ಏಕಾಂಗಿತನ ಮತ್ತು ಅಂತರ್ಮುಖತೆಗಳು ನೆಲೆಯಾದವು. ಈ ಅಂಶಗಳು ಇವರ ವ್ಯಕ್ತಿತ್ವದ ಮೇಲೂ ಪ್ರಭಾವಬೀರಿದುವು. ಬೆಳಗಾಂವಿಯಲ್ಲಿ ಇವರು ಪ್ರ.ಗೋ. ಕುಲಕರ್ಣಿಯವರ ಶಿಷ್ಯರಾಗಿದ್ದರು. ಕಟ್ಟೀಮನಿಯವರ ಬದುಕಿನಲ್ಲಿ ಗಾಢ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಅವರ ಆಶ್ರಯದಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಿಕೊಂಡರು. ವಿದ್ಯಾರ್ಥಿ ಎಂಬ ಕೈಬರೆಹದ ಪತ್ರಿಕೆಯನ್ನೂ ಆರಂಭಿಸಿದರು. ಜಿಲ್ಲೆಗೆ ನಾಲ್ಕನೆಯವರಾಗಿ ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ತಂದೆಯವರಿಗೆ ಬೆಳಗಾಂವಿಯಿಂದ ಪುಣೆಗೆ ವರ್ಗವಾಯಿತು. ಆಗ ಶಿಕ್ಷಣಕ್ಕೆ ನಿಜವಾದ ತಡೆ ಉಂಟಾಯಿತು. ಕಟೀಮನಿಯವರನ್ನು ಬೆಳಗಾಂವಿಯಲ್ಲಿಯೇ ಬಿಡುವುದು ಅನಿವಾರ್ಯವಾಯಿತು. ತಮ್ಮ ಮನೆಯ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದಿದ್ದ ಇವರು ಬೆಳಗಾಂವಿಯಲ್ಲಿದ್ದಾಗ ಪತ್ರಿಕೆ ಹಂಚಿ, ಅಲ್ಪ ಸ್ವಲ್ಪ ಸಂಪಾದನೆ ಮಾಡುತ್ತ, ತಾವೇ ಅಡುಗೆ

ಮಾಡಿಕೊಂಡು ಅಭ್ಯಾಸ ಸಾಗಿಸಿದರು. ಗಣಿತ ಮಾತ್ರ ಇವರಿಗೆ ತಲೆನೋವಿನ ವಿಷಯವಾಗಿತ್ತು. ಅದರಿಂದಲೇ ಇವರು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಉಳಿದರು. ಸರ್ಕಾರಿ ನೌಕರಿ ತಮ್ಮ ಗುರಿಯಲ್ಲ ಎಂದುಕೊಂಡು ಶಾಲೆ ತ್ಯಜಿಸಿದರು.

ಸಾಹಿತ್ಯ, ಪತ್ರಿಕೋದ್ಯಮಗಳಲ್ಲಿ ಕಟ್ಟೀಮನಿಯವರಿಗೆ ಆರಂಭದಿಂದಲೂ ಆಸಕ್ತಿ, ಜೀವನಕ್ಕಾಗಿ ಅದೇ ಕ್ಷೇತ್ರಗಳನ್ನು ಆಶ್ರಯಿಸಿದರು. ಇವರು ಕೆಲಸಕ್ಕೆ ಸೇರಿದ ಮೊದಲನೆಯ ಪತ್ರಿಕೆ 'ಸಂಯುಕ್ತ ಕರ್ನಾಟಕ'. ಅಲ್ಲಿಂದ ಮುಂದೆ 'ತರುಣ ಕರ್ನಾಟಕ'ದಲ್ಲಿ ಕೆಲಸಕ್ಕೆ ಸೇರಿದರು. ದಿವಾಕರರೊಡನೆ ನಡೆಸಿದ ಒಂದು ಸಂದರ್ಶನದ ಫಲವಾಗಿ ಅದನ್ನೂ ಬಿಡಬೇಕಾಯಿತು. ಫಾಣೇಕರ ಅವರ 'ಸಮಾಜ' ಪತ್ರಿಕೆಗೆ ಸೇರಿದರು. ಅದು ಬೆಂಗಳೂರಿಗೆ ಹೋದಾಗ ತಾವೂ ಬೆಂಗಳೂರಿಗೆ ಹೋದರು. ಆದರೆ ಅಲ್ಲಿ ಅದರ ಮಾಲೀಕರಾಗಿದ್ದವರ ಅಧಿಕಾರಶಾಹಿ ಪ್ರವೃತ್ತಿಗೆ ಬೇಸತ್ತು ಪ್ರತಿಭಟಿಸಿ ಪುನಃ ಹುಬ್ಬಳ್ಳಿಗೆ ಬಂದು 'ಲೋಕ ಮತ' ಪತ್ರಿಕೆ ಸೇರಿದರು. ಅದನ್ನೂ ಬಿಟ್ಟು ಗದಗಿಗೆ ಹೋಗಿ ಅಲ್ಲಿ 'ಕರ್ನಾಟಕ ಬಂಧು' ಪತ್ರಿಕೆಯಲ್ಲಿ ಕೆಲಸಕ್ಕೆ ತೊಡಗಿದರು. ಆ ಪತ್ರಿಕೆಯಲ್ಲಿರುವಾಗಲೇ ಕನ್ನಡದ ಹಿರಿಯ ಸಾಹಿತಿಗಳಾದ ಮಾಸ್ತಿ, ಬೇಂದ್ರೆ, ಅನಕೃ ಮೊದಲಾದವರ ಸಂಪರ್ಕಉಂಟಾಯಿತು. ಯಾವ ಪತ್ರಿಕೆಯಲ್ಲಿಯೂ ಇಪ್ಪತ್ತು ರೂಪಾಯಿಗಿಂತ ಹೆಚ್ಚಿನ ಸಂಬಳ ದೊರೆಯುತ್ತಿರಲಿಲ್ಲ. 'ಕರ್ನಾಟಕ ಬಂಧು' ಪತ್ರಿಕೆಯಲ್ಲಿ ಇದ್ದಕ್ಕಿದ್ದಂತೆ ಸಂಬಳ ಕಡಿಮೆ ಮಾಡಿದ್ದರಿಂದ ಅದನ್ನು ಬಿಟ್ಟು ಬೆಂಗಳೂರಿಗೆ ಬಂದರು. ಶಿವಮೂರ್ತಿ ಶಾಸ್ತ್ರಿಗಳು ಸಂಪಾದಿಸುತ್ತಿದ್ದ 'ಸ್ವತಂತ್ರ ಕರ್ನಾಟಕ' ಪತ್ರಿಕೆ ಸೇರಿದರು. ಆದರೆ ಇಲ್ಲಿಯೂ ಬಹಳ ಕಾಲ ನಿಲ್ಲುವುದು ಕಟ್ಟೀಮನಿಯವರಿಗೆ ಸಾಧ್ಯವಾಗಲಿಲ್ಲ.



1942ರ ಚಲೇಜಾವ್ ಚಳವಳಿಯಲ್ಲಿ ಕಟ್ಟೀಮನಿಯವರೂ ದುಮುಕಿದರು. ಉಗ್ರಭಾಷಣಗಳನ್ನು ಮಾಡಿ, ಬಂಧನಕ್ಕೆ ಒಳಗಾದರು. ಇದರಿಂದ ಇವರ ಅನುಭವ ವಿಸ್ತಾರಗೊಂಡಿತು. ಸೆರೆಮನೆಯಿಂದ ಹೊರಬಂದ ಮೇಲೆ ಮತ್ತೆ ಪತ್ರಿಕೋದ್ಯೋಗದ ಹುಡುಕಾಟದಲ್ಲಿ ತೊಡಗಿದರು. 'ಉಷಾ' ಪತ್ರಿಕೆಯಲ್ಲಿ ದುಡಿದು ಆ ಪತ್ರಿಕೆಗೊಂದು ಹೆಸರು ತಂದರು. ಆಗ ಕನ್ನಡದ ಸಿದ್ಧಪ್ರಸಿದ್ಧರೆಲ್ಲ ಅದರಲ್ಲಿ ಬರೆಯುತ್ತಿದ್ದರು. 'ಉಷಾ' ಪತ್ರಿಕೆಯೊಡನೆ ಇವರೂ ಬೆಳೆದರು. ಅದೇ ದಿನಗಳಲ್ಲಿ ಇವರ ಮದುವೆಯೂ ಆಯಿತು. ಈ ದಂಪತಿಗಳಿಗೆ ಐವರು ಮಕ್ಕಳು. ಎರಡು ಗಂಡು, ಮೂರು ಹೆಣ್ಣು. ಪ್ರಗತಿಶೀಲ ವಿಚಾರಗಳನ್ನು ಆಧರಿಸಿ 'ಸ್ವತಂತ್ರ' ಪತ್ರಿಕೆಯನ್ನು ಸ್ವಲ್ಪ ಕಾಲ ನಡೆಸಿದ್ದು ಇವರ ಮಹತ್ವದ ಸಾಧನೆ. ಇವರ ನಿಷ್ಠುರ ಸ್ವಭಾವ ಇವರನ್ನು ಯಾವ ಪತ್ರಿಕೆಯಲ್ಲಿಯೂ ಬಹಳ ಕಾಲ ಉಳಿಯುವಂತೆ ಮಾಡಲಿಲ್ಲ.

ಇವರು ಸುಮಾರು ಅರುವತ್ತು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕಾದಂಬರಿಗಳದೇ ಮೇಲುಗೈ. ಹೆಚ್ಚು ಕಡಿಮೆ ನಲವತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಹತ್ತು ಕಥಾಸಂಕಲನಗಳು ಪ್ರಕಟವಾಗಿವೆ. ಎರಡು ಕವನಸಂಗ್ರಹಗಳೂ ಎರಡು ಜೀವನಚಿತ್ರಗಳೂ ಒಂದು ಪ್ರವಾಸ ಕಥನವೂ ಪ್ರಕಟಗೊಂಡಿವೆ. ಕಾದಂಬರಿಕಾರನ ಆತ್ಮಕಥೆ ಶೀರ್ಷಿಕೆಯಲ್ಲಿ ಆತ್ಮಕಥೆ ರಚಿಸಿದ್ದಾರೆ (1981).

ಇವರ ಮೊದಲನೆಯ ಕಾದಂಬರಿ ಸ್ವಾತಂತ್ರ್ಯದೆಡೆಗೆ 1946ರಲ್ಲಿ ಪ್ರಕಟವಾಯಿತು. ಅಲ್ಲಿಂದ ಇವರು ಸತತವಾಗಿ ಬರೆಯತೊಡಗಿದರು. ಇವರ ಕಾದಂಬರಿಗಳಲ್ಲಿ ಅತ್ಯಂತ ಪ್ರಸಿದ್ಧವಾದವು ಎಂದರೆ ಮೋಹದ ಬಲೆಯಲ್ಲಿ (1952) ಮತ್ತು ಜರತಾರಿ ಜಗದ್ಗುರು (1953). ಆದರೆ ಗುಣದಲ್ಲಿ ಅವು ಅದೇ ಮಟ್ಟದವು ಎಂದು ಹೇಳುವಂತಿಲ್ಲ. ಇವರ ಕಾದಂಬರಿಗಳಲ್ಲಿ ನೆನೆಯಬೇಕಾದವು: ಮಾಡಿ ಮಡಿದವರು (1950), ಮಣ್ಣು ಮತ್ತು ಹೆಣ್ಣು (1953), ಖಾನಾವಳಿಯಲ್ಲಿ ನೀಲಾ (1953). ಜ್ವಾಲಾಮುಖಿಯ ಮೇಲೆ (1951), ಇವರಿಗೆ ಸೋವಿಯೆತ್ ದೇಶದ ನೆಹರೂ ಪ್ರಶಸ್ತಿ ತಂದು ಕೊಟ್ಟ ಕೃತಿ. ನಾನೂ ಪೊಲೀಸನಾಗಿದ್ದೆ ಹಾಗೂ ಬಂಗಾರದ ಜಿಂಕೆಯ ಹಿಂದೆ (1954) - ಈ ಎರಡೂ ಕಾದಂಬರಿಗಳು ಆತ್ಮಕಥನಾತ್ಮಕವಾದವು. ಗಿರಿಯ ನವಿಲು (1956) ಅಕ್ಕಮಹಾದೇವಿಯನ್ನು ಕುರಿತದ್ದು. ಇವರ ಯಾವುದೇ ಕಾದಂಬರಿಯಲ್ಲಾದರೂ ಆಸಕ್ತಿಯಿಂದ ಓದಿಸಿಕೊಳ್ಳುವ ಗುಣ ಇರುತ್ತದೆ. ಇವರ ಸಾಹಿತ್ಯದಲ್ಲಿ ವಾಸ್ತವತೆಯ ಯಥಾವತ್ತಾದ ಚಿತ್ರಣ ದೊರಕುತ್ತದೆ. ಅವುಗಳಲ್ಲಿ ಬರುವ ವ್ಯಕ್ತಿಗಳ ಹೆಸರಾದರೂ ನಿಜಜೀವನದ ವ್ಯಕ್ತಿಗಳ ಹೆಸರಿನ ಅಲ್ಪಸ್ವಲ್ಪ ಮಾರ್ಪಾಡೇ ಆಗಿರುತ್ತದೆ. ಇವರ ಕಾದಂಬರಿಗಳಲ್ಲಿ ಹೆಚ್ಚಿನ ಕಲೆಗಾರಿಕೆ ಕಾಣಿಸುವುದಿಲ್ಲ; ತಂತ್ರಗಾರಿಕೆಗೆ ಇವರು ಹೆಚ್ಚಿನ ಗಮನ ಕೊಡಲಿಲ್ಲ. "ಕಲೆಗಾಗಿ ಕಲೆ ಎನ್ನುವ ದೃಷ್ಟಿ ನನ್ನದಲ್ಲ. ನಮ್ಮ ಸುತ್ತಲಿನ ಹತ್ತಾರು ಜೀವಿಗಳ ಬದುಕು ಬಂಗಾರವಾಗಬೇಕು ಎನ್ನುವ ದೃಷ್ಟಿ ನನ್ನದು" ಎಂದು ಇವರೇ ಹೇಳಿಕೊಂಡಿದ್ದಾರೆ.

ಕಟ್ಟೀಮನಿಯವರು ವಿಧಾನ ಪರಿಷತ್ತಿನ ನಾಮಕರಣ ಸದಸ್ಯರಾಗಿದ್ದರು (1968-74). ಸೋವಿಯೆತ್ ದೇಶಕ್ಕೂ ಭೇಟಿ ಕೊಟ್ಟಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು (1970-73). ಅನೇಕ ಸಂಘ ಸಂಸ್ಥೆಗಳೊಡನೆ ಇವರ ಸಂಬಂಧ ನಿಕಟವಾಗಿತ್ತು. ಇವರ ಜೀವನ ಮತ್ತು ಸಾಹಿತ್ಯವನ್ನು ಕುರಿತಂತೆ ಬಸವರಾಜ ಸಾದರ ಅಧ್ಯಯನ ಮಾಡಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. (ಎಚ್.ಎಂ.ಎಸ್‌ಎ.)

**ಕಡತೋಕ** : ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಒಂದು ಧಾರ್ಮಿಕ ಸ್ಥಳ. ಹೊನ್ನಾವರದಿಂದ 14ಕಿಮೀ ದೂರದಲ್ಲಿದೆ. ಇಲ್ಲಿರುವ ಕೇಶವನಾರಾಯಣ, ನರಸಿಂಹ, ವಿಳುಕೊಪ್ಪರಿಗೆಗುಡಿ ಪ್ರಮುಖವಾದವುಗಳು. ಕೇಶವನಾರಾಯಣ ಪುರಾತನ ದೇವಾಲಯ. ಮರದ ಚಾವಣಿ ಇದ್ದ ಈ ದೇವಾಲಯ ಇತ್ತೀಚಿಗೆ ಜೀರ್ಣೋದ್ಧಾರಗೊಂಡಿದೆ. ಇದನ್ನು ಆಳುತ್ತಿದ್ದ ಮಹಾಮಾತ್ಯ ಪ್ರಭು ಸರಬತಿಥ್ಯ ಎಂಬವನ ಪ್ರತಿಕೃತಿ ಇದೆ. ಭೋಗವೆಗ್ಗಡೆಯಿಂದ ಸ್ಥಾಪಿಸಲ್ಪಟ್ಟ ಸ್ವಯಂಭುವಿನ ದೇವಾಲಯವೂ ಇದೆ. ಇದಲ್ಲದೆ ಹವ್ಯಕ ಸಮುದಾಯದ ಪ್ರಾಚೀನ ಮಠವೊಂದಿದೆ. ಇದನ್ನು ಲಕ್ಷ್ಮೀನರಸಿಂಹ ಮಠ ಎಂದೂ ಕರೆಯಲಾಗುತ್ತದೆ. ಇಲ್ಲಿನ ಶಂಭುಲಿಂಗ ಮಂದಿರವನ್ನು ಗ್ರಾಮದೇವತೆ ಎಂದು ಪರಿಗಣಿಸಿ ಪೂಜಿಸಲಾಗುತ್ತದೆ. ಚೋಳ-ಗಂಗ ಮಾದರಿಯಲ್ಲಿ ಈ ಕಟ್ಟಡವಿದೆ. ಕನ್ನಡ ಶಾಸನವೊಂದು ಇಲ್ಲಿದೆ. ತ್ರ್ಯಂಬಕೇಶ್ವರ ವಿಷ್ಣುಮೂರ್ತಿ, ಮಕ್ಕಿನಾರಾಯಣ ಹಾಗೂ ವಿಷ್ಣು ಮೊದಲಾದ ದೇವಸ್ಥಾನಗಳೂ ಇಲ್ಲಿವೆ. ಇಲ್ಲಿಯ ಹಳೇಮಠದ ಹತ್ತಿರ ಉತ್ಕೃಷ್ಟವಾದ ವಿಷ್ಣುವಿನ ಮೂರ್ತಿಯೊಂದಿದೆ. ಕಡತೋಕದ ಭಾಗವಾಗಿರುವ ಮಾಡಗೇರಿಯಲ್ಲಿ ನಾರಾಯಣನ ಮಂದಿರ ಇದೆ. ಇಲ್ಲಿ ಏಪ್ರಿಲ್‌ನಲ್ಲಿ ಜಾತ್ರೆ ಜರುಗುವುದು. ಆ ಸಂದರ್ಭದಲ್ಲಿ ಕೊಂಡ ಹಾಯುವ ಸಂಪ್ರದಾಯವಿದೆ. (ಎಸ್.ಎಚ್‌ಇ.)

**ಕಡಬ** : ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ ಕಸಬೆಯಿಂದ ನೈಋತ್ಯಕ್ಕೆ 19ಕಿಮೀ ದೂರದಲ್ಲಿ ಶಿಂಷಾನದಿಯ ಬಲದಂಡೆಯ ಮೇಲೆ ನಿಟ್ಟೂರು - ಮಾಯಸಂದ್ರ ಹಾದಿಯಲ್ಲಿರುವ ಗ್ರಾಮ. 1886ರವರೆಗೆ ಕಡಬ ಇದೇ ಹೆಸರಿನ ತಾಲ್ಲೂಕಿನ ಕೇಂದ್ರವಾಗಿತ್ತು. ಈಗ ಇದು ಹೋಬಳಿ ಕೇಂದ್ರ.

ದಶರಥ'ರಾಮ ಚತುರ್ವೇದಿಮಂಗಲಂ ಎಂಬುದು ಇಲ್ಲಿನ ತಮಿಳುಶಾಸನಗಳಲ್ಲಿ ಕಂಡುಬರುವ ಈ ಊರಿನ ಪ್ರಾಚೀನ ಹೆಸರು. ಹೆಸರೇ ಸೂಚಿಸುವಂತೆ ಈ ಊರು ಒಂದು ಪ್ರಾಚೀನ ಅಗ್ರಹಾರ. ಇದು ಹೆಬ್ಬಾರ್ ಶ್ರೀವೈಷ್ಣವರ ಪಂಚಗ್ರಾಮಗಳಲ್ಲಿ ಒಂದು. ರಾಮಾನುಜಾ ಚಾರ್ಯರು ಇಲ್ಲಿ ನೆಲಸಿದ್ದಂತೆ ಪ್ರತೀತಿ ಇದೆ. ಕದಂಬ ಋಷಿ ಇಲ್ಲಿನ ಶಿಂಷುಪ (ಶಿಂಷಾ) ನದಿಯ ದಡದಲ್ಲಿ ತಪಸ್ಸು ಮಾಡುತ್ತಿದ್ದುದ್ದರಿಂದ

ಊರಿಗೆ ಕಡಬ ಎಂದು ಹೆಸರಾಯಿತೆಂದೂ ರಾಮ ಲಂಕೆಯಿಂದ ಹಿಂದಿರುಗುವಾಗ ಸೀತೆಯ ಇಚ್ಛೆಯಂತೆ ಇಲ್ಲಿನ ತಟಾಕವನ್ನು ನಿರ್ಮಾಣ ಮಾಡಿದನೆಂದೂ ಸ್ಥಳಪುರಾಣ ತಿಳಿಸುತ್ತದೆ.

ಇಲ್ಲಿ ರಾಮ, ಕೈಲಾಸೇಶ್ವರ ಮತ್ತು ಹನುಮಾನ್ ದೇವಾಲಯಗಳಿವೆ. ರಾಮ ದೇವಾಲಯ ಒಂದೇ ಸಾಲಿನಲ್ಲಿ ಮೂರು ಗರ್ಭಗುಡಿಗಳಿರುವ ಕಣಶಿಲೆಯ ಕಟ್ಟಡ. ಹೆಸರು ರಾಮದೇವಾಲಯವಾದರೂ ಈಗ ಇಲ್ಲಿ ರಾಮವಿಗ್ರಹವಿಲ್ಲ. ಉತ್ತರದ ಗರ್ಭಗುಡಿಯಲ್ಲಿ ಯೋಗಾನರಸಿಂಹ, ಮಧ್ಯದಲ್ಲಿ ಜನಾರ್ದನ ದಕ್ಷಿಣದಲ್ಲಿ ವೇಣುಗೋಪಾಲ ವಿಗ್ರಹಗಳಿವೆ. ಯೋಗಾನರಸಿಂಹ ಹೊಯ್ಸಳ ಕಾಲದ ಶಿಲ್ಪ. ಉಳಿದೆರಡು ಪಾಳೆಯಗಾರರ ಕಾಲದ್ದು. ಕೆಲವು ತಮಿಳು ಶಾಸನಗಳ ತುಂಡುಗಳು ಕಟ್ಟಡದಲ್ಲಿ ಅಸ್ತವ್ಯಸ್ತವಾಗಿ ಸೇರಿಹೋಗಿದೆ. ಪ್ರಾಯಶಃ ಹೊಯ್ಸಳರ ಕಾಲದ ಮೂಲದೇವಾಲಯ ಪಾಳೆಯಗಾರರ ಕಾಲದಲ್ಲಿ ಪುನರ್ನಿರ್ಮಿತ ವಾಗಿರುವಂತೆ ತೋರುತ್ತದೆ. ದೇವಾಲಯದ ಮುಂದೆ ಸು.8ಮೀ ಎತ್ತರದ ಗರುಡಗಂಬವಿದೆ. ಗ್ರಾಮದ ಈಶಾನ್ಯದಲ್ಲಿ ಶಿಂಷಾ ಮತ್ತು ಕೆರೆಯ ಸಮೀಪದಲ್ಲಿ ಕೈಲಾಸೇಶ್ವರ ದೇವಾಲಯವಿದೆ. ಇದೂ ಕಣಶಿಲೆಯ ಸಾಮಾನ್ಯ ರೀತಿಯ ಚಿಕ್ಕ ಕಟ್ಟಡ. ಇದರ ಮುಂದೆಯೂ ಸು.6ಮೀ ಎತ್ತರದ ದೀಪದ ಕಂಬವಿದೆ. ಕೆರೆಯ ಪೂರ್ವದ ತೂಬಿನ ಬಳಿ ಹನುಮಾನ್ ಗುಡಿ ಇದೆ. ಇದರ ಬಳಿ ಇರುವ ಸು.5ಮೀ ಎತ್ತರದ ಉಯ್ಯಾಲೆ ಕಂಬ ಕೆತ್ತನೆಯ ಲತಾವಿನ್ಯಾಸಗಳಿಂದ ಸುಂದರವಾಗಿ ಅಲಂಕೃತವಾಗಿದೆ.
(ಎಜ್.ವಿ.ಎಸ್.)

**ಕಡವ ಶಂಭುಶರ್ಮ** : 1895-1964. ಕನ್ನಡ ಅರುಣೋದಯ ಕಾಲದ ಹಿರಿಯ ವಿದ್ವಾಂಸರು, ಸಾಹಿತಿ, ಆಯುರ್ವೇದ ವೈದ್ಯ, ಪ್ರಯೋಗಶೀಲ ಕೃಷಿಕ, ಗಾಂಧೀವಾದಿ. ಇವರು 1895 ಆಗಸ್ಟ್ 8ರಂದು ಜನಿಸಿದರು. ಇವರ ತಂದೆ ಕಡವ ಕೃಷ್ಣಭಟ್, ತಾಯಿ ಸತ್ಯವತಿ. ಶಂಭುಶರ್ಮರು ಔಪಚಾರಿಕ ವಿದ್ಯಾಭ್ಯಾಸವನ್ನು ಮಾಡದೇ ಮದರಾಸು ಸಂಸ್ಕೃತ ಕಾಲೇಜಿನಿಂದ ಅದ್ವೈತ ವೇದಾಂತ ಶಿರೋಮಣಿ ಪದವಿ ಪಡೆದು



ಮುಂದೆ ಸ್ವಂತ ಪರಿಶ್ರಮದಿಂದ ಕನ್ನಡ ವಿದ್ವಾನ್ ಪದವಿ ಗಳಿಸಿಕೊಂಡರು. ಪುತ್ತೂರಿಗೆ ಬರುವ ಮೊದಲು ಕೆಲವು ಕಾಲ ಮದರಾಸಿನ ಪ್ರಾಚ್ಯವಿದ್ಯಾ ಸಂಸ್ಥೆಯಲ್ಲಿ ಕೆಲಸ ಮಾಡಿದರು. ಈ ಅವಧಿಯಲ್ಲಿ ಆಯುರ್ವೇದದ ಹಲವು ಕೃತಿಗಳನ್ನು ಅಧ್ಯಯನ ಮಾಡಿ ಸಿದ್ಧಿಯನ್ನು ಪಡೆದರು. ಅನಂತರ (1925) ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಉಗ್ರಾಣ ಮಂಗೇಶರಾಯರ ಸಹೋದ್ಯೋಗಿಯಾಗಿ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ಕನ್ನಡದ ಕಂಪು ಮತ್ತು ಇಂಪುಗಳನ್ನು ಉಣಬಡಿಸಿದರು. ಅಧ್ಯಾಪಕರಾಗಿರುವಾಗಲೇ ಬಿಡುವಿನ ವೇಳೆಯ ಪ್ರವೃತ್ತಿಯಾಗಿ ಸಿದ್ಧರಸ ವೈದ್ಯಶಾಲಾ ಸಂಸ್ಥೆಯನ್ನು ಆರಂಭಿಸಿ ಆಯುರ್ವೇದದ ಚಿಕಿತ್ಸೆಯನ್ನು ನೀಡತೊಡಗಿದರು. ಮಲೇರಿಯಾ, ರಕ್ತಬೇಧಿ, ಆನೆಕಾಲು, ಪ್ಲೇಗ್ ರೋಗಕ್ಕೆ ಸ್ವಂತ ಪರಿಶ್ರಮದಿಂದ ಪರಿಣಾಮಕಾರಿ ಔಷಧಿಯನ್ನು ಶೋಧಿಸಿದ್ದರು. ಹೈನುಗಾರಿಕೆಯಲ್ಲಿ ಕ್ರಾಂತಿಕಾರಿ ಪ್ರಯೋಗ ಇವರದು. ಡೈರಿಯ ಕಲ್ಪನೆಯೇ ಇನ್ನೂ ಸರಿಯಾಗಿ ಮೊಳಕೆಯೊಡೆಯದಿದ್ದ ಕಾಲದಲ್ಲಿ ಕ್ಷೀರಸಾಗರ ಎಂಬ ಕೇಂದ್ರದ ಮೂಲಕ ಬಾಟಲಿಗಳಲ್ಲಿ ಹಾಲನ್ನು ಸರಬರಾಜು ಮಾಡಿದ್ದರು. ಇವರು ಸಿದ್ಧಪಡಿಸುತ್ತಿದ್ದ ಸುಗಂಧಾರ್ಕಮಧು ಅತ್ಯಂತ ಜನಪ್ರಿಯ ತಂಪು ಪಾನೀಯವಾಗಿತ್ತು. ತಮ್ಮ ಮನೆಯಲ್ಲಿಯೇ ಮಗ್ಗ, ಖಾದಿ ನೂಲನ್ನು ನೇಯಲು ವ್ಯವಸ್ಥೆ ಮಾಡಿ ಹತ್ತಾರು ಮಂದಿಗೆ ಜೀವನೋಪಾಯ ಕಲ್ಪಿಸಿಕೊಟ್ಟಿದ್ದರು. ದಲಿತರ ಮೇಲೆ ನಡೆಯುತ್ತಿದ್ದ ಶೋಷಣೆಯನ್ನು ಪ್ರತಿಭಟಿಸುವ ಸಲುವಾಗಿ 'ವಿಶ್ವಂಭರ ಸಂಘ'ದ ಸ್ಥಾಪನೆ ಮಾಡಿದ್ದರು. ಯಾವುದೋ ಒಂದು ಸಂದರ್ಭದಲ್ಲಿ ನಡೆದ ಅಪಘಾತದಲ್ಲಿ ಕಾಲನ್ನು ಕಳೆದುಕೊಂಡರು. ಊನತೆ ಬದುಕಿನ ದಾರಿಯನ್ನು ಬದಲಿಸಿತುದಿವರು ಬರೆವಣಿಗೆ, ಸಂಶೋಧನೆಯ ಕಡೆಗೆ ಹೆಚ್ಚು ಒಲವು ಮೂಡಿತು.

ಇವರಿಗೆ ಬರೆವಣಿಗೆ ಹೊಸದಾಗಿರಲಿಲ್ಲ. 22ರ ಹರಯಕ್ಕಾಗಲೇ ಸಂಸ್ಕೃತದಿಂದ ಭಾಸನ ಪ್ರತಿಮಾ ನಾಟಕ, ಶ್ರೀಹರ್ಷನ ನಾಗಾನಂದ ನಾಟಕವನ್ನು ಅನುವಾದಿಸಿದ್ದರು. ಅನಂತರ ಕಾಳಿದಾಸನ ರಘುವಂಶ, ಅಶ್ವಘೋಷನ ಸೌಂದರನಂದ, ಬುದ್ಧ ಚರಿತೆ ಹಾಗೂ ಶ್ರೀಮದ್ಭಗವದ್ಗೀತೆಯನ್ನು ಕನ್ನಡಕ್ಕೆ ಅನುವಾದಿಸಿದರು. ಇವರ ಅನುವಾದ ಮೂಲನಿಷ್ಠವಾದದ್ದು. ಇವರು ಮಾಡಿದ ಭಗವದ್ಗೀತೆಯ ಅನುವಾದವೂ ವಿಶಿಷ್ಟವಾದುದು. ಕನ್ನಡದಲ್ಲಿ ಭಾಮಿನಿ, ವಾರ್ಧಕ ಮೊದಲಾದ ಬಂಧಗಳಲ್ಲಿ ಗೀತೆಯ ಹಲವು ಅನುವಾದಗಳು ಬಂದಿವೆ. ಆದರೆ ಶರ್ಮರದು ಭಗವದ್ಗೀತೆಯ ವೃತ್ತಾನುವೃತ್ತ ಅನುವಾದ. ಮೂಲದ ಛಂದಸ್ಸು ಮತ್ತು ಲಯ ಇಲ್ಲಿನದು. ಇಡೀ ಕೃತಿಯನ್ನು ಮೂಲನಿಷ್ಠರಾಗಿ ಅನುಷ್ಟುಪ್ ಛಂದಸ್ಸಿನಲ್ಲಿ ಮರುಸೃಷ್ಟಿ ಮಾಡಿದ್ದಾರೆ.

ಇವರು ಗಾಂಧೀಜಿಯವರ ಅಭಿಮಾನಿ, ಅನುಯಾಯಿ. ಗಾಂಧೀಜಿಯವರ ಬದುಕು, ಆದರ್ಶ, ಸಂದೇಶಕ್ಕೆ ಸಂಬಂಧಿಸಿದಂತೆ ಗಾಂಧೀಲಹರಿ, ಗಾಂಧೀಶತಕಂ, ಗಾಂಧೀನಿರ್ವಾಣಂ, ಗಾಂಧೀಸಂದೇಶ ಮತ್ತು ಗಾಂಧೀವಿಜಯಂ ಎಂಬ ಕಾವ್ಯಗಳನ್ನು ಬರೆದಿರುವರು. ಗಾಂಧೀಜಿಯ ಬಗೆಗೆ ಇಷ್ಟೊಂದು ಕಾವ್ಯವನ್ನು ಬರೆದವರು ಬಹುತೇಕ ಕನ್ನಡದಲ್ಲಿ ಮತ್ತೊಬ್ಬರಿಲ್ಲ. ಗಾಂಧೀವಿಜಯಂ ಏಳು ಆಶ್ವಾಸಗಳಿರುವ ಕಾವ್ಯ. ಗಾಂಧೀಜಿಯ ಹುಟ್ಟಿನಿಂದ ಮರಣದವರೆಗಿನ ಕಥೆ ಇಲ್ಲಿ ತೆರೆದುಕೊಳ್ಳುತ್ತದೆ. ಕಟ್ಟುಕತೆಯಲ್ಲ, ಪ್ರೇಮಕತೆಯಲ್ಲ, ಸತ್ಯಶೋಧನೆಯ ಕತೆಯಿದು ಎಂದು ಕೃತಿಯ ಆರಂಭದಲ್ಲಿ ಹೇಳಿದ್ದಾರೆ.

ತಿಮ್ಮಪ್ಪಯ್ಯ ಸ್ಮಾರಕಂ 62 ಕಂದಪದ್ಯಗಳಿರುವ ಕಾವ್ಯ. ಮುಳಿಯ ತಿಮ್ಮಪ್ಪಯ್ಯನವರಿಗೆ ಇಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಇವರ ಇನ್ನೊಂದು ಮಹತ್ವದ ಕೃತಿ 'ತುಳು ದೇಶಭಾಷಾ ವಿಚಾರವು'. 1955ರಷ್ಟು ಹಿಂದೆಯೇ ಬರೆದಿದ್ದ ಈ ಕೃತಿ ಪ್ರಕಟವಾದದ್ದು 1970ರಲ್ಲಿ. ತುಳು ದೇಶ, ಭಾಷೆ, ಪ್ರಾಚೀನತೆ, ನಾಥಪಂಥ ಮೊದಲಾದ ವಿಷಯದ ಬಗೆಗೆ ವಿಶೇಷ ಮಾಹಿತಿಯಿದೆ. ದೇಶೀಯ ಅಧ್ಯಯನ ಪರಂಪರೆಗೆ ಇದೊಂದು ಮಾದರಿ ಕೃತಿ. ಮದರಾಸು ಸರ್ಕಾರ ಈ ಪ್ರಬಂಧಕ್ಕೆ 1955ರಲ್ಲಿ ಬಹುಮಾನ ನೀಡಿ ಗೌರವಿಸಿದೆ.

ಮಂಗಳೂರು ನಾಥಪಂಥದ ಕೇಂದ್ರಗಳಲ್ಲಿ ಒಂದು. 10ನೆಯ ಶತಮಾನದ ಮಧ್ಯಭಾಗದಲ್ಲಿ ನಾಥಪಂಥ ಕರ್ನಾಟಕಕ್ಕೆ ಬಂತೆಂಬುದು ಸಂಶೋಧಕರ ಅಭಿಪ್ರಾಯ. ಆದರೆ ಶಂಭುಶರ್ಮರು ಇದಕ್ಕೆ ಸಹಮತವನ್ನು ವ್ಯಕ್ತಪಡಿಸುವುದಿಲ್ಲ. ನಾಥಪಂಥದ ಸ್ವಯಂಬೋಧ ಅಮನಸ್ಕಯೋಗ ಮತ್ತು ಆತ್ಮವಾದ, ಸಿದ್ಧಸಿದ್ಧಾಂತ ಪದ್ಧತಿ, ಚರ್ಪಟನಾಥ ಶತಕಂ, ನವನಾಥ ಕಥಾಚ ಮೊದಲಾದ ಕೃತಿಗಳನ್ನು ಇವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಹಠಯೋಗದ ಬಗೆಗೆ ಉಪನ್ಯಾಸ ಮಾಡುವಷ್ಟು ಪಾಂಡಿತ್ಯವನ್ನು ಇವರು ಪಡೆದಿದ್ದರು.

ಕಾವ್ಯದಲ್ಲಿ ಬಳಸುವ ಭಾಷೆಯ ಬಗೆಗೆ ಇವರದು ಖಚಿತವಾದ ನಿಲವು. ಯಾವುದೇ ನಿಯಮಗಳಿಲ್ಲದೆ ಕಾವ್ಯ ಬರೆಯುವುದನ್ನು ಇವರು ಒಪ್ಪುವುದಿಲ್ಲ. ಈ ದಿಸೆಯಲ್ಲಿ ಬಿ.ಎಂ.ಶ್ರೀಕಂಠಯ್ಯನವರ ನಿಲವುಗಳನ್ನೂ ಮುಲಾಜಿಲ್ಲದೆ ಟೀಕಿಸಿದ್ದರು.. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ಸಂಸ್ಕೃತಕ್ಕೆ ಅನುವಾದಿಸಿದ ಪಾಂಡಿತ್ಯ ಇವರದು. ಇವರ ಸಮಗ್ರ ಅಪ್ರಕಟಿತ ಕೃತಿಗಳನ್ನು 'ಕಡವ ಶಂಭಶರ್ಮ ಕೃತಿಸಂಚಯ' ಎಂಬ ಹೆಸರಿನಲ್ಲಿ ಎಚ್.ಜಿ. ಶ್ರೀಧರ್ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ (2003).

ಪುತ್ತೂರು ಕರ್ನಾಟಕ ಸಂಘದ ಸ್ಥಾಪಕ ಸದಸ್ಯರಲ್ಲಿ ಇವರೂ ಒಬ್ಬರು. ಶಿವರಾಮ ಕಾರಂತರು ನಡೆಸುತ್ತಿದ್ದ ನಾಡಹಬ್ಬದ ಕಾರ್ಯಕ್ರಮದಲ್ಲಿ ಇವರು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುತ್ತಿದ್ದರು. ಇವರ ವ್ಯಕ್ತಿತ್ವ ಆಳನಿರಾಳ ಕಾದಂಬರಿಯ ಒಂದು ಪಾತ್ರಕ್ಕೆ ಪ್ರೇರಣೆ ಎಂದು ಶಿವರಾಮಕಾರಂತರು ದಾಖಲಿಸಿದ್ದಾರೆ. ಇವರು 1964 ಮೇ 3ರಂದು ನಿಧನ ಹೊಂದಿದರು.
(ಎಚ್.ಎಸ್.ಜಿ.)

**ಕಡಿದಾಳ್ ಮಂಜಪ್ಪ :** 1910-92. ಕರ್ನಾಟಕದ ಮಾಜಿ ಮುಖ್ಯ ಮಂತ್ರಿ, ಸ್ವಾತಂತ್ರ್ಯ ಹೋರಾಟಗಾರ, ವಕೀಲ, ರಾಜಕೀಯ ಧುರೀಣ ಹಾಗೂ ಕಾದಂಬರಿಕಾರರು. ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರಾಗೊಳಿಗೆ ಗ್ರಾಮದಲ್ಲಿ. 1910ರಲ್ಲಿ ಬಡ ರೈತರೊಬ್ಬರ ಮಗನಾಗಿ ಹುಟ್ಟಿದ ಇವರು ಬಾಲ್ಯದಲ್ಲಿ ತುಂಬ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದರು. ದನಕುರಿಗಳನ್ನು ಕಾಯುವುದು, ಗೊಬ್ಬರಗೋಡುಗಳನ್ನು ಹೊರುವುದು, ಗದ್ದೆ ಉಳುವುದು ಇವೇ ಮುಂತಾದ ಬಾಲ್ಯದ ಕೃಷಿಕ ಜೀವನದ ಅನುಭವಗಳು ಮತ್ತು ನಿಸರ್ಗ ರಮಣೀಯ ಮಲೆನಾಡಿನ ಪರಿಸರ ಇವರ ಬಾಳಿನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದುವು.

ಇವರ ವಿದ್ಯಾಭ್ಯಾಸ ಐಗಳ ಮಠದಲ್ಲಿ ಹರಡಿದ ಮರಳುರಾಶಿಯ ಮೇಲೆ ಅಕ್ಷರತಿದ್ದುವುದರಿಂದ ಆರಂಭವಾಯಿತು. ತೀರ್ಥಹಳ್ಳಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ಇವರು ಶಿವಮೊಗ್ಗದಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದರು. ಶಿವಮೊಗ್ಗ ಹಾಗೂ ಬೆಂಗಳೂರಿನಲ್ಲಿ ಇಂಟರ್ ಮಿಡಿಯೇಟ್ ಪರೀಕ್ಷೆ ಪೂರೈಸಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು (1932). ಪುಣೆಯ ಲಾ ಕಾಲೇಜಿನಲ್ಲಿ ಕಾನೂನು ಶಿಕ್ಷಣ ಪಡೆದು ಉತ್ತೀರ್ಣರಾದರು (1934).

ಅಲ್ಲಿಂದ ಶಿವಮೊಗ್ಗಕ್ಕೆ ಬಂದು 1935ರಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು. ಅದೇ ವರ್ಷ ಅಖಿಲ ಭಾರತ ಕಾಂಗ್ರೆಸ್ಸಿನ ಸದಸ್ಯರಾದರು. ಇವರು ಪ್ರೌಢಶಾಲೆಯಲ್ಲಿದ್ದಾಗ ಶಿವಮೊಗ್ಗಕ್ಕೆ ಬಂದ ಗಾಂಧೀಜಿಯವರ ದರ್ಶನದಿಂದಲೂ ಅವರು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆಯುತ್ತಿದ್ದ ಲೇಖನಗಳಿಂದಲೂ ಪ್ರಭಾವಿತರಾಗಿ ಚಿಕ್ಕಂದಿನಲ್ಲೇ ಇವರಲ್ಲಿ ರಾಷ್ಟ್ರಭಕ್ತಿ ಮೂಡಿ ಇವರು ರಾಜಕೀಯ ರಂಗಕ್ಕೆದುಮುಕುವಂತೆ ಮಾಡಿತು. 1937ರಿಂದ ಸುಮಾರು ಮೂರು ವರ್ಷ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. 1942ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ 9 ತಿಂಗಳು ಸೆರೆಮನೆಯಲ್ಲಿದ್ದರು. ಮೈಸೂರಿನ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಚಳವಳಿಯ ಸಂಬಂಧದಲ್ಲಿಯೂ ಕೆಲವು ತಿಂಗಳು ಸೆರೆಮನೆವಾಸ ಅನುಭವಿಸಿದರು.



1941-45ರ ಅವಧಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಸದಸ್ಯರಾಗಿಯೂ 1942-52ರ ಅವಧಿಯಲ್ಲಿ ಮೈಸೂರು ನ್ಯಾಯವಿಧಾಯಕ ಸಭೆ ಮತ್ತು ರಾಜ್ಯಾಂಗ ಸಭೆಗಳ ಕಾಂಗ್ರೆಸ್ ಸದಸ್ಯರಾಗಿಯೂ 1952-67ರ ಅವಧಿಯಲ್ಲಿ ಮೈಸೂರು ವಿಧಾನಸಭೆಯ ಕಾಂಗ್ರೆಸ್ ಸದಸ್ಯರಾಗಿಯೂ ಆಯ್ಕೆಯಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಮಂತ್ರಿಯಾಗಿಯೂ ಕೆಲವು ತಿಂಗಳುಗಳ ಕಾಲ ಮುಖ್ಯಮಂತ್ರಿಯಾಗಿಯೂ ಇದ್ದರು.

1962ರಲ್ಲಿ ಬೆಂಗಳೂರಿನಲ್ಲಿ ನೆಲಸಿ ಇವರು ವಕೀಲಿ ಆರಂಭಿಸಿದರು. ಮಂಜಪ್ಪನವರು ತಮ್ಮ ಖಾಸಗಿ ಹಾಗೂ ರಾಜಕೀಯ ಜೀವನದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠಾವಂತಿಕೆ ಮೆರೆದವರು. ಒಳ್ಳೆಯ ವಿಚಾರವಂತರಾದ ಇವರು ಯೌವನದಲ್ಲಿ ನಾಸ್ತಿಕರಂತೆ ಕಂಡರೂ ವಯೋಧರ್ಮ ಹಾಗೂ ಜೀವನದ ಅನುಭವಗಳಿಂದ ಪೂರ್ಣ ಆಸ್ತಿಕರಾಗಿದ್ದರು. ಇವರು ಕಾದಂಬರಿಕಾರರಾಗಿ ಹೆಸರು ಗಳಿಸಿದರು. ಇವರು ಪಂಜರವಳ್ಳಿಯ ಪಂಜು (1963) ಎಂಬ ಕಾದಂಬರಿಯಲ್ಲಿ ಮಲೆನಾಡಿನ ನಿಸರ್ಗ ಸೌಂದರ್ಯವನ್ನೂ ಅಲ್ಲಿಯ ಜನಜೀವನವನ್ನೂ ಯಥಾವತ್ತಾಗಿ ಚಿತ್ರಿಸಿದ್ದಾರೆ. ಮೂರು ತಲೆಮಾರಿನ ಕಥೆ ತಿಳಿಸುವ ಈ ಕಾದಂಬರಿಯಲ್ಲಿ ರಾಜಕಾರಣದಲ್ಲಿ ಗಾಂಧೀತತ್ತ್ವಗಳ ಅನುಷ್ಠಾನ ಅಗತ್ಯವೆಂದು ಹೇಳಿ ಕಾಂಗ್ರೆಸ್ಸಿನ ಧ್ಯೇಯ - ಧೋರಣೆ - ಸಾಧನೆಗಳನ್ನು ತಿಳಿಸಲಾಗಿದೆ. ಈ ಪುಸ್ತಕ ಇಂಗ್ಲಿಷ್ ಮತ್ತು ಮಲಯಾಳಂ ಭಾಷೆಗಳಿಗೆ ಅನುವಾದವಾಗಿದೆ. ನಾಳೆಯ ನೆಳಲು (1966) ಇವರ ಇನ್ನೊಂದು ಕಾದಂಬರಿ. ಸಾರ್ವಜನಿಕ ಜೀವನದ ಶುದ್ಧೀಕರಣ ಈ ಕಾದಂಬರಿಯ ಮುಖ್ಯ ಉದ್ದೇಶ. ಕ್ರಾಂತಿಕೂಟ (1974) ಇವರ ಮತ್ತೊಂದು ಕಾದಂಬರಿ. ನನಸಾಗದ ಕನಸು ಎಂಬುದು ಇವರ ಆತ್ಮಚರಿತ್ರೆ. ಕಾಯಕವೇ ಕೈಲಾಸ ಎಂಬ ತತ್ತ್ವಕ್ಕನುಗುಣವಾಗಿ ಇವರು ತಾವು ಸಕ್ರಿಯರಾಗಿರುವವರೆಗೂ ವಕೀಲವೃತ್ತಿ ನಡೆಸಿದರು. ಮಲೆನಾಡ ಗಾಂಧಿ ಎಂಬ ಅಭಿದಾನಕ್ಕೆ ಪಾತ್ರರಾಗಿದ್ದ ಇವರದು ಆದರ್ಶ ತುಂಬಿದ ಬದುಕು. ಸರ್.ಎಂ.ವಿಶ್ವೇಶ್ವರಯ್ಯನವರು ಇವರನ್ನು ತುಂಬಾ ಮೆಚ್ಚಿಕೊಂಡಿದ್ದರು.

*

**ಕಡೂರು :** ಚಿಕ್ಕಮಗಳೂರು ಜಿಲ್ಲೆಯ ಪೂರ್ವಭಾಗದಲ್ಲಿರುವ ಒಂದು ತಾಲ್ಲೂಕು; ಆ ತಾಲ್ಲೂಕಿನ ಕೇಂದ್ರ. ಚಿತ್ರದುರ್ಗ, ತುಮಕೂರು, ಹಾಸನ ಜಿಲ್ಲೆಗಳು ಮತ್ತು ಚಿಕ್ಕಮಗಳೂರು, ತರೀಕೆರೆ ತಾಲ್ಲೂಕುಗಳು ಈ ತಾಲ್ಲೂಕನ್ನು ಬಳಸಿವೆ. ಕಡೂರು, ಬೀರೂರು, ಯಗಟಿ, ಹಿರೇನಲ್ಲೂರು, ಸಿಂಗಟಗೆರೆ, ಸಕ್ಕರೆಪಟ್ಟಣ ಈ ತಾಲ್ಲೂಕಿನ ಹೋಬಳಿಗಳು. ತಾಲ್ಲೂಕಿನಲ್ಲಿರುವ ಒಟ್ಟು ಗ್ರಾಮಗಳು 306. ತಾಲ್ಲೂಕಿನ ವಿಸ್ತೀರ್ಣ 1414.6ಚ.ಕಿಮೀ. ಜನಸಂಖ್ಯೆ 2,89,092.

ಕಡೂರು ತಾಲ್ಲೂಕು ಆಗಿಂದಾಗ್ಗೆ ಬದಲಾವಣೆಗೆ ಒಳಪಟ್ಟಿತು. ಬಲು ಹಿಂದೆ ಕಡೂರು, ಯಗಟಿ, ಗರುಡನಗಿರಿ ಮತ್ತು ಬಾಣಾವರ ಸೀಮೆಗಳಿದ್ದುವೆಂದೂ ಕಡೂರು ಯಗಟಿಗಳು ಇಕ್ಕೇರಿ ರಾಜ್ಯಕ್ಕೆ ಸೇರಿದ್ದುವೆಂದೂ ಹೇಳಲಾಗಿದೆ. ಇವನ್ನು ಮೈಸೂರು ದೊರೆಗಳು ವಶಪಡಿಸಿಕೊಂಡು ತರೀಕೆರೆಯ ಪಾಳೆಯಗಾರನಿಗೆ ಕೊಟ್ಟರು. ಹೈದರ್ ಇವನ್ನು ಮತ್ತೆ ಮೈಸೂರಿಗೆ ಸೇರಿಸಿಕೊಂಡ. 1835ರಲ್ಲಿ ಯಗಟಿಯನ್ನು ಕಡೂರಿಗೆ ಸೇರಿಸಲಾಯಿತು. 1876ರಲ್ಲಿ ಕಡೂರು ಬಾಣಾವರಗಳನ್ನು ಒಂದೇ ತಾಲ್ಲೂಕಾಗಿ ಮಾಡಿ ಅದನ್ನು ಬಾಣಾವರ ತಾಲ್ಲೂಕೆಂದು ಕರೆಯಲಾಯಿತು. 1882ರಲ್ಲಿ ಮತ್ತೆ ಕಡೂರು ತಾಲ್ಲೂಕು ಕೇಂದ್ರವಾಯಿತು. 1886ರಲ್ಲಿ ಅರಸೀಕೆರೆ ತಾಲ್ಲೂಕು ಆದಾಗ ಹಳೆಯ ಬಾಣಾವರ ತಾಲ್ಲೂಕಿನ ಭಾಗವನ್ನೂ ಬಾಣಾವರವನ್ನೂ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿಗೆ ವರ್ಗಾಯಿಸಿ ಚಿಕ್ಕಮಗಳೂರು ತಾಲ್ಲೂಕಿನ ಸಕ್ಕರೆಪಟ್ಟಣವನ್ನು ಕಡೂರಿಗೆ ಸೇರಿಸಿ, ತಾಲ್ಲೂಕನ್ನು ಈಗಿರುವಂತೆ ರೂಪಿಸಲಾಯಿತು.

ಆಂಜನೇಯ ಹಾಗೂ ಆಂಜನೇಯ ದೇವಾಲಯದ ಅಲಂಕೃತ ಕಂಬ, ಕಡೂರು

ಕಡೂರು ತಾಲ್ಲೂಕಿನ ಪಶ್ಚಿಮಕ್ಕೆ ಬಾಬಾಬುಡನ್ ಪರ್ವತಶ್ರೇಣಿಯ ಪೂರ್ವದ ಕವಲುಗಳು ಹರಡಿವೆ. ದಕ್ಷಿಣದಲ್ಲಿ ಜಾವಗಲ್ಲಿನಿಂದ ಗರುಡನಗಿರಿಯವರೆಗೆ ಇನ್ನೊಂದು ಶ್ರೇಣಿಯುಂಟು. ತೊಟ್ಟಿಲಿನಂತಿರುವ ಈ ತಾಲ್ಲೂಕಿನ ನಡುಭಾಗದಲ್ಲಿ ಈಶಾನ್ಯಾಭಿಮುಖವಾಗಿ ಹರಿಯುವ ನದಿಯೇ

ವೇದಾವತಿ. ಬಾಬಾಬುಡನ್ ಪರ್ವತದಲ್ಲಿ ಹುಟ್ಟುವ ವೇದಾ ಮತ್ತು ಆವತಿ ನದಿಗಳು ಕೂಡಿ ವೇದಾವತಿಯಾಗಿದೆ. ಈ ನದಿಯನ್ನು ಯಗಟಿಯ ಬಳಿ ಕೂಡುವ ಇನ್ನೊಂದು ತೊರೆಯ ಹೆಸರು ಜಾವಗಲ್ಲು ಹಳ್ಳ. ವೇದಾ ನದಿ ಅಯ್ಯನಕೆರೆಯನ್ನೂ ಆವತಿ ನದಿ ಮದಗಕೆರೆಯನ್ನೂ ಕೂಡಿ ಮುಂದೆ ಸಾಗುತ್ತವೆ. ಅಯ್ಯನಕೆರೆ, ಮದಗಕೆರೆ ಮತ್ತು ವಿಷ್ಣು ಸಮುದ್ರ ಈ ಸುತ್ತಿನ ಅತಿ ದೊಡ್ಡ ಕೆರೆಗಳು. ವೇದ ಮತ್ತು ಆವತಿ ನದಿಗಳಿಗೆ ಕಟ್ಟೆಗಳನ್ನು ಕಟ್ಟಿ, ತಾಲ್ಲೂಕಿನಲ್ಲಿ ನೀರಾವರಿಯ ಬಲೆ ಹೆಣೆಯಲಾಗಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 558.51 ಮಿಮೀ. ತಾಲ್ಲೂಕಿನಲ್ಲಿ 9162 ಎಕರೆ ಅರಣ್ಯ ಪ್ರದೇಶವಿದೆ. ವಾಯವ್ಯ ಭಾಗದಲ್ಲಿರುವ ಹೊಗರಿ ಬೆಟ್ಟದಲ್ಲಿ ಕಬ್ಬಿಣದ ಅದುರು ಸಿಗುತ್ತದೆ.

ತಾಲ್ಲೂಕಿನಲ್ಲಿ ಫಲವತ್ತಾದ ಕಪ್ಪುಮಣ್ಣಿನಿಂದ ಮರಳು ಮಣ್ಣಿನವರೆಗೆ ಹಲವು ಬಗೆಯ ಮಣ್ಣು ಕಂಡಬರುತ್ತದೆ. ದಕ್ಷಿಣ ಪಶ್ಚಿಮಗಳಲ್ಲಿ ಒಳ್ಳೆಯ ಹೊಗೆಸೊಪ್ಪು ಬೆಳೆಯುತ್ತದೆ. ತಗ್ಗಿನ ಮರಳುನೆಲದಲ್ಲಿ ತೆಂಗಿನ ಮರಗಳು ವಿಶೇಷ. ತಾಲ್ಲೂಕಿನಲ್ಲಿ ತರಿ, ಖುಷ್ಕಿ ಮತ್ತು ಬಾಗಾಯತು ಈ ಮೂರೂ ಬೆಳೆಗಳೂ ಇವೆ. ಹಲವೆಡೆ ತೆಂಗು, ಬಾಳೆ, ಅಡಕೆ ಬೆಳೆಯುತ್ತಾರೆ. ಸಕ್ಕರೆಪಟ್ಟಣದ ಹಲಸು, ಬೀರೂರಿನ ಅಡಕೆ, ಅಣೆಗೆರೆಯ ಎಳನೀರು, ಎಮ್ಮೆದೊಡ್ಡಿಯ ಕಿತ್ತಳೆಹಣ್ಣು ಪ್ರಸಿದ್ಧ. ಕಡೂರು ಪಟ್ಟಣದ ಸುತ್ತಮುತ್ತ ಜೋಳ, ರಾಗಿ ಮತ್ತು ಮೆಣಸಿನಕಾಯಿ ವಿಶೇಷವಾಗಿ ಬೆಳೆಯುತ್ತಾರೆ. ಈ ತಾಲ್ಲೂಕಿನಲ್ಲಿ ಬೆಳೆಯುವ ಎಳ್ಳಿನಲ್ಲಿ ಕೊಬ್ಬಿನ ಅಂಶ ಹೆಚ್ಚು.

ಹಾಸನ-ಶಿವಮೊಗ್ಗ ರಸ್ತೆ ಹಾಗೂ ಅರಸೀಕೆರೆ-ಪುಣೆ ರೈಲುಮಾರ್ಗ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತವೆ. ಕಡೂರು-ಚಿಕ್ಕಮಗಳೂರು, ಬೀರೂರು-ಅಜ್ಜಂಪುರ, ಬೀರೂರು-ಲಿಂಗದಹಳ್ಳಿ, ಬಾಬಾಬುಡನ್‌ಗಿರಿ ರಸ್ತೆಗಳು ತಾಲ್ಲೂಕಿನ ಮುಖ್ಯ ಹಾದಿಗಳು.

ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳು ವೀರಗಾಸೆ ಕುಣಿತ, ಕರಡೆಮಜಲು, ಕರಪಾಲ, ಕೀಲುಕುದುರೆನರ್ತನ-ಮುಂತಾದವಕ್ಕೆ ಹೆಸರಾಗಿವೆ. ಗಿರಿಯಾಪುರ, ಕಾವೇನಹಳ್ಳಿ ಮುಂತಾದ ಊರುಗಳ ಕಲಾವಿದರು ನೆರೆ ರಾಜ್ಯಗಳಲ್ಲಿ ಕೂಡ ತಮ್ಮ ಕಲಾಕೌಶಲವನ್ನು ಪ್ರದರ್ಶಿಸಿ ಮನ್ನಣೆಗಳಿಸಿದ್ದಾರೆ.

ಐತಿಹಾಸಿಕ ಸ್ಥಳಗಳಾದ ಆಸಂದಿ (ನೋಡಿ) ಮಚೇರಿ (ನೋಡಿ) ಪ್ರಸಿದ್ಧ ರಂಗನಾಥ ದೇವಾಲಯವಿರುವ ಸಕ್ಕರೆಪಟ್ಟಣ (ನೋಡಿ), ರೈಲ್ವೆ ಮತ್ತು ವ್ಯಾಪಾರಸ್ಥಳ ಬೀರೂರು (ನೋಡಿ) ಈ ತಾಲ್ಲೂಕಿನಲ್ಲಿದೆ. ಕಡೂರಿನಿಂದ ಸು.20ಕಿಮೀ ದೂರದಲ್ಲಿ ಯಗಟಿ ಗ್ರಾಮದ ಬಳಿ ಇರುವ ವೇದಾ-ಆವತಿ ನದಿಗಳ ಸಂಗಮ ರಮಣೀಯವಾಗಿದೆ. ಹಿರೇನಲ್ಲೂರಿನಲ್ಲಿ ಬಹು ಪ್ರಾಚೀನವಾದ ದೇವಾಲಯಗಳಿವೆ.

ಕಡೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ಜನಸಂಖ್ಯೆ 30,802. ಇದು ಬೆಂಗಳೂರು-ಪುಣೆ, ರೈಲುಮಾರ್ಗ ಹಾಗೂ ಬೆಂಗಳೂರು-ಶಿವಮೊಗ್ಗ ರಸ್ತೆಯ ಮೇಲೆ, ಜಿಲ್ಲೆಯ ಮುಖ್ಯ ಪಟ್ಟಣವಾದ ಚಿಕ್ಕಮಗಳೂರಿನಿಂದ 39ಕಿಮೀ ಈಶಾನ್ಯಕ್ಕಿದೆ.

ಈಗಿನ ಕಡೂರು ಪಟ್ಟಣ ಇರುವ ಸ್ಥಳದಲ್ಲಿ ನಾರ್ಣಪುರ ಅಗ್ರಹಾರವಿತ್ತೆಂದು ಹೇಳಲಾಗಿದೆ. ಮಾದನಾಯಕ ಒಮ್ಮೆ ಇತ್ತ ಮೃಗಾಯಾವಿಹಾರಕ್ಕಾಗಿ ಬಂದಿದ್ದಾಗ ಈ ಬಳಿಯಲ್ಲಿ ಕಡವೆಯೊಂದು ನಾಯಕನ ಬೇಟೆನಾಯಿಗಳನ್ನು ಅಟ್ಟಿಸಿಕೊಂಡು ಬಂತು. ನಾಯಕ ಇಲ್ಲೊಂದು ಕೋಟೆ ಕಟ್ಟಿಸಿದ. ಈ ಊರಿಗೆ ಕಡವೆಯ ಊರು ಅಥವಾ ಕಡೂರು ಎಂಬ ಹೆಸರು ಬಂತು ಎಂದು ಐತಿಹ್ಯವಿದೆ.

ಕಡೂರಿನ ಕೋಟೆಯೊಳಗೆ ಕೊಳದ ಬಳಿ ಇರುವ ಆಂಜನೇಯ ದೇವಸ್ಥಾನ ಈಚಿನದು. ಆದರೆ ಈ ದೇವಾಸ್ಥಾನದ ಮೊಗಸಾಲೆಯ ನಾಲ್ಕು ಕಂಬಗಳು ರಾಷ್ಟ್ರಕೂಟರ ಕಾಲದವು. ಹಲವು ಪುರಾಣಗಳ ದೃಶ್ಯಗಳನ್ನು ಈ ಕಂಬಗಳ ಮೇಲೆ ಕೆತ್ತಲಾಗಿವೆ. ಕಡೂರು ರೈಲ್ವೆನಿಲ್ದಾಣ ಪುಟ್ಟದಾದರೂ ಪ್ರಾಮುಖ್ಯ ಪಡೆದಿದೆ. ಬೀರೂರು ರೈಲ್ವೆ ಕೂಡು ತಾಣ ಇಲ್ಲಿಗೆ 6ಕಿಮೀ ದೂರದಲ್ಲಿದೆ.

ಕಡೂರಿನ ಸುತ್ತಮುತ್ತ ಇರುವ ಬಂಡೆಗಳಿಂದ ಚಪ್ಪಡಿ ತೆಗೆಯಲಾಗುತ್ತಿದೆ. ಇಲ್ಲೊಂದು ಹೆಂಚು ಕಾರ್ಖಾನೆ ಇದೆ. ಕಡೂರು ಈ ಜಿಲ್ಲೆಯ ಮಲೆನಾಡಿನ ಹೆಬ್ಬಾಗಿಲಿನಂತಿರುವುದರಿಂದ ಜಿಲ್ಲೆಯ ವ್ಯಾಪಾರದ ಒಂದು ಭಾಗ ಇದರ ಮೂಲಕ ನಡೆಯುವುದು. ಹಿಂದೆ ಕಡೂರು ಈ ಹೆಸರಿನ ಜಿಲ್ಲೆಯ ಮುಖ್ಯಸ್ಥಳವಾಗಿತ್ತು. ಅನಂತರ ಜಿಲ್ಲೆಯ ಮುಖ್ಯಸ್ಥಳ ಚಿಕ್ಕಮಗಳೂರು ಆಗಿ ಅದೇ ಹೆಸರು ಜಿಲ್ಲೆಗೂ ಬಂದಿತು. *

**ಕಡೆಂಗೋಡ್ಲು ಶಂಕರಭಟ್ಟ** : 1904-68. ಕವಿ, ಕತೆಗಾರ ಮತ್ತು ಪತ್ರಿಕೋದ್ಯಮಿ. ಮಂಗಳೂರು ಬಳಿಯ ಪೆರುವಾಯಿಯಲ್ಲಿ 1904 ಆಗಸ್ಟ್ 9ರಂದು ಜನಿಸಿದರು. ತಂದೆ ಈಶ್ವರ ಭಟ್ಟ. ಹುಟ್ಟೂರಿನಲ್ಲಿ ಆರಂಭದ ಶಿಕ್ಷಣವನ್ನು ಮುಗಿಸಿ, ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗ, ಅಸಹಕಾರ ಚಳವಳಿಯ ಪ್ರಭಾವಕ್ಕೆ ಒಳಗಾಗಿ ಮಧ್ಯದಲ್ಲಿಯೇ ಶಾಲೆ ಬಿಟ್ಟರು. ಖಾದಿ ತೊಟ್ಟು ಸ್ವದೇಶಿ ವ್ರತಗಳನ್ನು ಕೈಗೊಂಡು ಮಂಗಳೂರಿನ ತಿಲಕ ವಿದ್ಯಾಲಯದಲ್ಲಿ ಸ್ವಲ್ಪ ಕಾಲ ಉಪಾಧ್ಯಾಯರಾಗಿದ್ದರು. ಇದೇ ಅವಧಿಯಲ್ಲಿ ಖಾಸಗಿಯಾಗಿ ವ್ಯಾಸಂಗ ಮಾಡಿ ಮದರಾಸು ವಿಶ್ವವಿದ್ಯಾಲಯದ ಪರೀಕ್ಷೆಗೆ ಕುಳಿತು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. 1927ರಲ್ಲಿ ಮಂಗಳೂರಿನ ಸೇಂಟ್ ಆಗ್ನೀಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿ 1964ರ ಆಗಸ್ಟ್‌ನಲ್ಲಿ ಆ ಹುದ್ದೆಯಿಂದ ನಿವೃತ್ತರಾದರು. ಪತ್ರಿಕಾ ಕ್ಷೇತ್ರದಲ್ಲಿ ಶಂಕರ ಭಟ್ಟರ ಸೇವೆ ಗಮನಾರ್ಹ. ನವಯುಗ ಪತ್ರಿಕಾಲಯದಲ್ಲಿ ಸ್ವಲ್ಪಕಾಲ ಕೆಲಸ ಮಾಡಿದರು. 1928-53ರ ವರೆಗೆ ರಾಷ್ಟ್ರಬಂಧು ಪತ್ರಿಕೆಗೆ ಸಂಪಾದಕರಾಗಿದ್ದರು. ರಾಷ್ಟ್ರಮತದ ಸಂಪಾದಕರಾಗಿ ಕೊನೆಯವರೆಗೂ ದುಡಿದರು. ಮುಳಿಯ ತಿಮ್ಮಪ್ಪಯ್ಯನವರು ಶಂಕರ ಭಟ್ಟರ ಸಮೀಪದ ಬಂಧುಗಳು. ಪಂಜೆಮಂಗೇಶರಾಯರಿಂದ ಇವರು ಪ್ರಭಾವಿತರಾಗಿದ್ದರು.

ಶಂಕರಭಟ್ಟರಿಗೆ ಕನ್ನಡದ ಜೊತೆಗೆ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲೂ ಪರಿಶ್ರಮವಿತ್ತು. ಇವರು 1927ರಲ್ಲಿ ಕಾಣಿಕೆ ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದರು. ಅದು ವಿದ್ವಾಂಸರ ಮನ್ನಣೆಯನ್ನು ಗಳಿಸಿತು. ಅನಂತರ ನಲ್ಮೆ ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದರು (1932).



ಹೊನ್ನಿಯ ಮದುವೆ, ಮಾದ್ರಿಯ ಚಿತೆ ಮತ್ತು ಮುರಲೀನಾದ ಎಂಬ ಮೂರು ಪದ್ಯಗಳಿರುವ ಈ ಸಂಕಲನ ಶಂಕರಭಟ್ಟರಿಗೆ ಕನ್ನಡ ಕಾವ್ಯಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ತಂದು ಕೊಟ್ಟಿತು. ಅದೇ ವರ್ಷ ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು. ಹಣ್ಣು, ಕಾಯಿ, ಘೋಷಯಾತ್ರೆ ಇವು ಇವರ ಇತರ ಕವನ ಸಂಗ್ರಹಗಳು, ಘೋಷಯಾತ್ರೆ ರಾಜದ್ರೋಹ ಪೂರಿತವಾದುದೆಂದು ಅಂದಿನ ಸರ್ಕಾರ ಬಹಿಷ್ಕರಿಸಿತ್ತು. ಷಟ್ಪದಿ ಮತ್ತು ಚೌಪದಿಗಳಲ್ಲೂ ಇವರ ಕಾವ್ಯರಚನೆ ನಡೆದಿದೆ. ಧೂಮಕೇತು, ದೇವತಾ ಮನುಷ್ಯ ಮತ್ತು ಲೋಹದ ಕಣ್ಣು ಇವು ಇವರ ಕಾದಂಬರಿಗಳು, ಗುರುದಕ್ಷಿಣೆ, ಹಿಡಿಂಬೆ ಎಂಬ ಎರಡು ನಾಟಕಗಳನ್ನೂ ಗಾಜಿನ ಬಳೆ, ದುಡಿಯುವ ಮಕ್ಕಳು ಎಂಬ ಎರಡು ಕಥಾಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಸ್ವರಾಜ್ಯ ಯುದ್ಧ ಎಂಬುದು ಇವರ ಒಂದು ಅನುವಾದ ಕೃತಿ. ವಾಙ್ಮಯ ತಪಸ್ಸು ಇವರ ಹಲವು ಲೇಖನಗಳ ಸಂಗ್ರಹ. ಸುಸಂಸ್ಕೃತ ಪ್ರೌಢಶೈಲಿ ಇವರ ಕೃತಿಗಳಲ್ಲಿ ಎದ್ದು ಕಾಣುವ ಲಕ್ಷಣ.

ಶಂಕರಭಟ್ಟರು 1930ರಲ್ಲಿ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೂ 1955ರಲ್ಲಿ ಕಾರವಾರದಲ್ಲಿ ನಡೆದ 45ನೆಯ ಕನ್ನಡ

ಸಾಹಿತ್ಯ ಸಮ್ಮೇಳನಕ್ಕೂ ಅಧ್ಯಕ್ಷರಾಗಿದ್ದರು. ಕಡೆಂಗೋಡ್ಲು ಶಂಕರಭಟ್ಟರ ಕಾವ್ಯ, ಕಾದಂಬರಿ, ನಾಟಕ, ಸಣ್ಣಕಥೆ ಮತ್ತು ಗದ್ಯ, ಪ್ರಬಂಧಗಳನ್ನು ಕಡೆಂಗೋಡ್ಲು ಸಮಗ್ರವಾಙ್ಮಯ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. (ಟಿ.ಜಿ.ಕೆ.ಬಿ.)

**ಕಣಕುಂಬಿ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರದಿಂದ 38ಕಿಮೀ ದೂರದಲ್ಲಿದೆ. ಇದು ದಟ್ಟವಾದ ಕಾಡಿನಲ್ಲಿರುವ ಸುಂದರ ಸ್ಥಳ. ಕುಲ್ಲಕ ಎಂಬ ಮುನಿ ಇಲ್ಲಿ ಧ್ಯಾನ ಮಾಡುತ್ತಿದ್ದಾಗ ಅವನ ಕುಂಭದಿಂದ ಪವಿತ್ರ ಜಲ ಹರಿದುದರಿಂದ ಈ ಊರ ಹೆಸರು ಕುಲಕುಂಭಿ ಎಂದಾಯಿತೆಂತೆ. ಸ್ಥಳೀಯರು ಈಗಲೂ ಇದನ್ನು ಕುಲಕುಂಭಿ ಎಂದೇ ಕರೆಯುವರು. ಈ ಊರ ಹೊರಗೆ ಮಲಪ್ರಭಾ ನದಿಯ ಉಗಮ ಸ್ಥಾನವಿದೆ. ಅಲ್ಲಿ ಮಹಾದೇವ ಮತ್ತು ರಾಮೇಶ್ವರ ದೇವಾಲಯಗಳಿವೆ. ಮಹಾದೇವ ಮಂದಿರ ಇತ್ತೀಚೆಗೆ ನಿರ್ಮಿಸಲ್ಪಟ್ಟಿದ್ದು, ಗರ್ಭಗೃಹ ವಿಶಾಲವಾದ ಪ್ರಾಂಗಣ ಮತ್ತು ಮುಖಮಂಟಪ ಗಳನ್ನೊಳಗೊಂಡಿದೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲೂ ಬೆಣಚುಕಲ್ಲಿನ ರಾಷ್ಟ್ರಕೂಟ ಶೈಲಿಯಲ್ಲಿರುವ ಕಂಬಗಳಿದ್ದು, ಅವುಗಳ ಮೇಲೆ ಕಲಶಗಳ ಕೆತ್ತನೆಯಿದೆ. ಅರ್ಧ ವರ್ತುಲಾಕಾರದ ನಕ್ಷೆ ಹೊಂದಿದ ಛಾವಣಿ ಈ ಪ್ರಾಂಗಣದಲ್ಲಿದೆ. ನವರಂಗದ ಕಂಬಗಳು ವರ್ತುಲಾಕಾರವಾಗಿದ್ದು, ಕೆಂಪು ಮುರುಳುಕಲ್ಲಿನಿಂದ ಕೂಡಿವೆ. ಗರ್ಭಗೃಹದ ಎಡಪ್ರವೇಶ ದ್ವಾರದಲ್ಲಿ ರೇವರಿತು ಖಂಡೋಬಾ, ಕಾಳಭೈರವ ಗಣಪತಿ ಮೂರ್ತಿಗಳಿವೆ. ಪ್ರದಕ್ಷಿಣಾ ಪಥ'ದಲ್ಲಿರುವ ಮಾಡಿನಲ್ಲಿ ದೇವತೆಯ ಕಂಚಿನ ಮೂರ್ತಿ ಇದೆ. ಮುಖಮಂಟಪದ ಹೊರಗೆ ಕೆರೆಯ ಸಮೀಪ ತೆರೆದ ಮಂಟಪವಿದೆ. ಹೊಸದಾಗಿ ಹೆಂಚಿನ ಛಾವಣಿ ಮಾಡಿ ನಿರ್ಮಿಸಲಾಗಿರುವ ಶಾಂತೇರಿ ದೇವಾಲಯದ ಗರ್ಭಗೃಹದಲ್ಲಿ ಗಜಲಕ್ಷ್ಮಿ ಮೂರ್ತಿಯಿದೆ. ಈ ಗರ್ಭಗೃಹದಲ್ಲಿ ಮಹಿಷಮರ್ದಿನಿ, ದುರ್ಗಾಮೂರ್ತಿಗಳ ಎರಡು ವೀರಗಲ್ಲುಗಳೂ ಇವೆ. ಈ ದೇವಾಲಯದ ಮುಂದೆ ಒಂದು ಕೆರೆಯಿದ್ದು ಅದು ಮಲಪ್ರಭಾ ನದಿಯ ಮೂಲವೆಂದು ಪ್ರತೀತಿ. ಕೆರೆಯ ಮುಂದೆ ಗಣಪತಿಯ ದೇವಾಲಯವಿದೆ. ಈ ದೇವಾಲಯದ ಸ್ವಲ್ಪ ಅಂತರದಲ್ಲಿ ತೀರ್ಥವಿರುವ ಸ್ಥಳವಿದ್ದು, ಅಲ್ಲಿ ಚಿಕ್ಕ ಹಳ್ಳವಿದ್ದು ಅದರಲ್ಲಿ ಗುರುವು ಮಕರರಾಶಿ ಪ್ರವೇಶಿಸಿದ ಮುಹೂರ್ತದಲ್ಲಿ ನೀರು ಹಾಲಿನ ಬಣ್ಣದಲ್ಲಿರುವುದೆಂದು ಹೇಳಲಾಗಿದೆ. ಆಗ ಇಲ್ಲಿ ಜಾತ್ರೆ ನಡೆಯುವುದು. ಇಲ್ಲಿನ ನೀರಿನ ಹರಿವು ಅಂತರಗಾಮಿಯಾಗಿದೆ.

ಮಹಾದೇವ ದೇವಾಲಯದ ಹಿಂಬದಿಯಲ್ಲಿ ರಾಮೇಶ್ವರ ದೇವಾಲಯವಿದ್ದು, ಇದು ಮರಳುಗಲ್ಲಿನ ರಚನೆಯಾಗಿದೆ. ಗರ್ಭಗೃಹ ಮತ್ತು ವಿಶಾಲವಾದ ಅರ್ಧವರ್ತುಲಾಕಾರದ ಚಾವಣಿವುಳ್ಳ ಪ್ರಾಂಗಣವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇಲ್ಲಿಯ ಪ್ರವೇಶದ್ವಾರದ ಬಲಬದಿಗೆ ಗಣಪತಿ ಮೂರ್ತಿ ಮತ್ತು ಮಹಾಸತಿ ಕಲ್ಲುಗಳಿವೆ. ಮಲ್ಲವ್ವಳು ಸತಿ ಹೋದ ಬಗ್ಗೆ ಮಾಹಿತಿ ಇದೆ. ಇದರ ಹಿಂದೆ ಸದ ಎಂಬ ಗ್ರಾಮ ಕಣಕುಂಬಿಯಿಂದ 5ಕಿಮೀ ದೂರದಲ್ಲಿದ್ದು ಖೋರ್ಲಾ ದಾರಿಯಲ್ಲಿದೆ. ಇದು ಅತ್ಯಂತ ಎತ್ತರ ಪ್ರದೇಶವಾಗಿದ್ದು, ಇಲ್ಲಿಯ ಕೋಟೆಯನ್ನು ಶಿವಾಜಿ ಕಟ್ಟಿಸಿದನೆಂದು ಪ್ರತೀತಿ. ಒಂದು ಹಳೆಯ ಫಿರಂಗಿ ತೋಪು ಕೋಟೆಯೊಳಗೆ ಕಂಡುಬರುತ್ತದೆ. ಇಲ್ಲಿ ಭಗವತಿ ದೇವಾಲಯವಿದೆ. ಇಲ್ಲಿರುವ ಮರಾಠರು ತಮ್ಮ ಕೆಲವು ಧಾರ್ಮಿಕ ಆಚರಣೆ ಮತ್ತು ಸಂಪ್ರದಾಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆಂದು ತಿಳಿದುಬರುತ್ತದೆ. (ಆರ್.ಐ.)

**ಕಣ್ವ :** ಬೆಂಗಳೂರು ಜಿಲ್ಲೆಯಲ್ಲಿ ಹರಿಯುವ ಒಂದು ಚಿಕ್ಕ ನದಿ. ಮಾಗಡಿ ತಾಲ್ಲೂಕಿನ ಶ್ರೀಪತಿಹಳ್ಳಿ ಎಂಬ ಗ್ರಾಮದ ಸಮೀಪದಲ್ಲಿ ಹುಟ್ಟಿ ಚನ್ನಪಟ್ಟಣ ತಾಲ್ಲೂಕಿನ ನಡುವೆ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. ಈ ನದಿ ಹರಿಯುವ ಪ್ರದೇಶ ಸಮುದ್ರದಮಟ್ಟಕ್ಕಿಂತ 625ಮೀ ಎತ್ತರದಲ್ಲಿದೆ. ಜಲಾನಯನ ಪ್ರದೇಶ ಸು.215ಚ.ಕಿಮೀ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಈ ನದಿ ಹರಿಯುವ ಭಾಗದ ಉದ್ದ 34ಕಿಮೀ. ಇದು ತಾಲ್ಲೂಕಿನ ಎಲ್ಲೆಯಿಂದ ಸುಮಾರು ಒಂದು ಕಿಮೀ ದೂರದಲ್ಲಿ ಸರಗೂರು ಗ್ರಾಮದ ಹತ್ತಿರ ಶಿಂಷಾ ನದಿಯನ್ನು ಸೇರುತ್ತದೆ. ಕಣ್ವನದಿ ಬೇಸಗೆಯಲ್ಲಿ ಒಣಗಿದ್ದು ಮಳೆಗಾಲದಲ್ಲಿ ಹೆಚ್ಚು ನೀರಿನಿಂದ ಕೂಡಿರುತ್ತದೆ. ಈ ನದಿ ಸು.420ಚ.ಕಿಮೀ ವಿಸ್ತೀರ್ಣದ ಪ್ರಮುಖ ತಗ್ಗು ಪ್ರದೇಶವೊಂದನ್ನು ನಿರ್ಮಿಸಿದೆ. ನದಿಯ ಉದ್ದಕ್ಕೂ ಇಕ್ಕೆಲಗಳಲ್ಲಿ ತೋಟಗಳಿವೆ. ಸ್ವಲ್ಪ ಕಬ್ಬು ಮತ್ತು ಬತ್ತ ಬೆಳೆಯುತ್ತಾರೆ. ಅಬ್ಬೂರು, ಮಳೂರು ಈ ನದಿಯ ದಂಡೆಯಲ್ಲಿರುವ ಯಾತ್ರಾಸ್ಥಳಗಳು.

ಕಣ್ವ ಜಲಾಶಯ

ಚನ್ನಪಟ್ಟಣ ತಾಲ್ಲೂಕಿನಲ್ಲಿ ಅಬ್ಬೂರಿನ ಬಳಿ ನದಿಗೆ ಅಡ್ಡವಾಗಿ ಒಂದು ಕಟ್ಟೆ ಕಟ್ಟಲಾಗಿದೆ (1940-46). ಇದರಿಂದ ಹೊರಡುವ ನಾಲೆಗಳು 40ಕಿಮೀ ದೂರ ನೀರು ಸಾಗಿಸಿ 5000 ಎಕರೆಗಳಿಗೆ ನೀರುಣಿಸುತ್ತವೆ. ಇದರಿಂದ 30 ಗ್ರಾಮಗಳಿಗೆ ಪ್ರಯೋಜನವುಂಟಾಗಿದೆ. (ಎಚ್.ಜಿ.)

**ಕಥಾಂಜಲಿ :** ಕನ್ನಡದಲ್ಲಿ ಸಣ್ಣಕಥೆಗಳಿಗೆ ಮೀಸಲಾಗಿದ್ದ ಪತ್ರಿಕೆ. 1929ರ ಜುಲೈನಲ್ಲಿ ಪ್ರಕಟಣೆಯನ್ನು ಆರಂಭಿಸಿತು. ಪ್ರಸಿದ್ಧ ಸಾಹಿತಿಗಳೂ ಸ್ವತಃ ಕಥೆಗಾರರೂ ಕಾದಂಬರಿಕಾರರೂ ಆಗಿದ್ದ ಅ.ನ.ಕೃಷ್ಣರಾಯರು ಇದರ ಸಂಪಾದಕರು. ಅನಂತರ ಕೃಷ್ಣರಾಯರು ಪತ್ರಿಕೆಯ ಪ್ರಕಾಶನದ ಜವಾಬ್ದಾರಿಯನ್ನು ಬಿ.ಎನ್.ಗುಪ್ತರವರಿಗೆ ವಹಿಸಿಕೊಟ್ಟು, ಪತ್ರಿಕೆಗೆ ಹದಿನಾಲ್ಕು ತಿಂಗಳು ತುಂಬುವವರೆಗೆ ಸಂಪಾದಕರಾಗಿದ್ದರು. ಅನಂತರ ಮಾ.ನಾ.ಚೌಡಪ್ಪ, ಶ್ರೀನಾಥ', (ಎನ್.ಶ್ರೀನಿವಾಸರಾವ್), ಎಸ್.ವೆಂಕಟಾಚಲಪತಿ ಮತ್ತು ನಾಡಿಗೇರ ಕೃಷ್ಣರಾಯರು ಇದರ ಸಂಪಾದಕರಾಗಿದ್ದರು.


“ಕಥಾಂಜಲಿ”
ನಂದಾದೀಪ

ಮೊದಲನೆಯ ಮಜಲಿನಲ್ಲಿ ಕಥಾಂಜಲಿ 1931ರ ಕೊನೆಯವರೆಗೆ ಪ್ರಕಟಣೆಗೊಂಡು ನಿಂತು ಹೋಯಿತು. ಅನಂತರ ಎರಡನೆಯ ಘಟ್ಟದಲ್ಲಿ 1937ರ ಮಧ್ಯಭಾಗದಿಂದ 1941ರ ಅಂತ್ಯದ ವರೆಗೆ ಪ್ರಕಟವಾಯಿತು. ಹೀಗೆ ಕಥಾಂಜಲಿ ಸುಮಾರು ಏಳು ವರ್ಷಗಳ ಕಾಲ ಕನ್ನಡ ಸಾಹಿತ್ಯಕ್ಕೆ ತನ್ನ ಸೇವೆಸಲ್ಲಿಸಿತು.

ಕಥಾಂಜಲಿಯ ಸ್ಥಾಪನೆಯ ಉದ್ದೇಶವನ್ನು ಪತ್ರಿಕೆಯ ಪ್ರಥಮ ಸಂಪಾದಕೀಯ ಲೇಖನದಲ್ಲಿ ಈ ರೀತಿ ಸ್ಪಷ್ಟಪಡಿಸಲಾಗಿದೆ. "ನಮ್ಮ ಕನ್ನಡ ನಾಡಿನಲ್ಲಿ. ಕೇವಲ ಸಣ್ಣಕಥೆಗಳಿಗಾಗಿಯೇ ಸಮರ್ಪಿಸಲ್ಪಟ್ಟು ಒಂದು ನಿಯುಕ್ತ ಆದರ್ಶವನ್ನಿಟ್ಟುಕೊಂಡು ಹೊರಟಿರುವ ಪತ್ರಿಕೆಯ ಕೊರತೆ ಬಹುಕಾಲದಿಂದಲೂ ಇದ್ದೇ ಇದ್ದಿತು ನಮ್ಮಲ್ಲಿ ಸರ್ವತೋಮುಖವಾದ

ಬೆಳೆ ಬೆಳೆದು ಕುಯಿಲಿಗೆ ಸಿದ್ಧವಾಗಿದ್ದರೂ ಅದನ್ನು ಕುಯ್ದು ನಾಡಿಗರಿಗೆ ಹಂಚುವವರಿಲ್ಲವಲ್ಲ ಎಂದು ಎನಿಸುತ್ತಲೇ ಇದ್ದಿತು. ಈ ಅಂತಸ್ತಾಪವನ್ನು ದೂರಮಾಡಿ, ಸನ್ಮಿತ್ರರ ಸಹಾಯ ಸ್ಫೂರ್ತಿಗಳಿಂದ ಹುರಿಗೊಂಡು ನಾವು ಈ ಕೆಲಸಕ್ಕೆ ಉದ್ಯುಕ್ತರಾಗಿರುವೆವು. ಸಣ್ಣ ಕಥೆಗಳಲ್ಲಿ ನಾನಾ ಬಗೆಗಳುಂಟು, ಸಂಪ್ರದಾಯಗಳುಂಟು, ಶೈಲಿಗಳುಂಟು, ನಾವು ಯಾವ ಒಂದು ಶೈಲಿ ಸಂಪ್ರದಾಯಕ್ಕೂ ತಾಳಿಕಟ್ಟುವುದಿಲ್ಲ. ಎಲ್ಲವುಗಳ ಪರಿಚಯಾನುಭವವನ್ನು ಕನ್ನಡಿಗರಿಗೆ ಮಾಡಿಸಿಕೊಡಬೇಕೆಂಬುದೇ ನಮ್ಮಿಚ್ಛೆ. ಸ್ವಕಪೋಲಕಲ್ಪಿತವಾದ ಕನ್ನಡಿಗರ ಕಥೆಗಳಿಗೆ ಪ್ರಾಧಾನ್ಯ ಕೊಟ್ಟು ಅನಂತರ ಇತರ ಭಾಷೆಗಳಲ್ಲಿನ ಕಥೆಗಳ ಪರಿಚಯವನ್ನು ಉಂಟುಮಾಡಿಕೊಡುತ್ತೇವೆ".

ಕಥಾಂಜಲಿ ತನ್ನ ಜೀವಿತಾವಧಿಯಲ್ಲಿ ಈ ಧ್ಯೇಯವನ್ನು ಚೆನ್ನಾಗಿ ಪರಿಪಾಲಿಸಿಕೊಂಡು ಬಂದಿತೆನ್ನಬಹುದು. ತಂತ್ರವೈವಿಧ್ಯವುಳ್ಳ ಹಲವಾರು ಉತ್ತಮ ಕನ್ನಡ ಸಣ್ಣಕಥೆಗಳನ್ನೂ ಕನ್ನಡೇತರ ಭಾಷೆಗಳ ಕಥೆಗಳ ಅನುವಾದವನ್ನೂ ಅದು ಪ್ರಕಟಿಸಿತು. ವಸ್ತುನಿಷ್ಠವಾದ ಸಾಹಿತ್ಯ ಸಮೀಕ್ಷೆಯನ್ನೂ ನಡೆಸಿತು. ಹೊಸ ಲೇಖಕರ ವಿಕಾಸಕ್ಕೆ ನೆರವಾಯಿತು. ಸುಮಾರು 50 ಜನ ಲೇಖಕರು ಕಥಾಂಜಲಿಯಿಂದ ಮುಂದಕ್ಕೆ ಬಂದರು. ಸಣ್ಣಕಥೆಗಳ ವಿಪುಲವಾದ ಸೃಷ್ಟಿಗೂ ಕಥನಕಲೆಯ ನವ ವಿಜ್ಞಾನದ ಉದಯಕ್ಕೂ ಕಥಾಂಜಲಿ ಕಟ್ಟಿಬದ್ಧವಾಗಿ ದುಡಿಯಿತು.

ಶ್ರೀನಾಥ, ಮಾ.ನಾ.ಚೌಡಪ್ಪ,ವಾಣಿ, ನಾಡಿಗೇರ ಕೃಷ್ಣರಾಯ -ಇವರು ಕನ್ನಡ ಸಾಹಿತ್ಯಲೋಕವನ್ನು ಪ್ರವೇಶಿಸಿದ್ದು ಕಥಾಂಜಲಿಯ ಮೂಲಕ. ಜಿ.ಪಿ.ರಾಜರತ್ನಂ, ಮ.ನ.ಮೂರ್ತಿ, ಕ್ಷೀರಸಾಗರ (ಸೀತಾರಾಮ ಶಾಸ್ತ್ರಿ), ರಾಘವ (ಎಂ.ವಿ.ಸೀತಾರಾಮಯ್ಯ), ಇ.ಎ.ಭಾಸ್ಕರರಾವ್, ರಾ.ಶಿ. (ಎಂ.ಶಿವರಾಮ್) ಮುಂತಾದವರ ಆರಂಭಕಾಲದ ಲೇಖನಗಳಲ್ಲಿ ಹಲವು ಬೆಳಕು ಕಂಡದ್ದು ಕಥಾಂಜಲಿಯಲ್ಲಿ. ಆನಂದ (ಎ.ಸೀತಾರಾಂ), ಕೆ.ಗೋಪಾಲಕೃಷ್ಣರಾಯ, ದೇವುಡು, ಕೃಷ್ಣಕುಮಾರ ಕಲ್ಲೂರ, ಶ್ರೀರಂಗ (ಆದ್ಯ ರಂಗಾಚಾರ್ಯ), ಡಿ.ಕೆ.ಭಾರದ್ವಾಜ್, ಬೆಳ್ಳಾವೆ ನರಹರಿಶಾಸ್ತ್ರಿ ಮುಂತಾದ ಖ್ಯಾತ ಲೇಖಕರು ಕಥಾಂಜಲಿಯ ಲೇಖಕ ಬಳಗದಲ್ಲಿ ಸೇರಿದ್ದರು. *

**ಕಥಾಕಾಲಕ್ಷೇಪ :** ಯಾವುದಾದರೊಂದು ಕಥೆಯನ್ನು ಸಂಗೀತಾಭಿನಯ ಉಪಕಥೆ; ಗಾದೆ ಮುಂತಾದುವುಗಳ ಮಿಶ್ರಣದಿಂದ ರಸವತ್ತಾಗಿ ತಿಳಿಯುತ್ತ ಕಾಲವನ್ನು ಕಳೆಯುವುದು ಕಥಾಕಾಲಕ್ಷೇಪ. ಈ ಪದ್ಧತಿ ಪ್ರಾರಂಭವಾದದ್ದು ಮಹಾರಾಷ್ಟ್ರದಲ್ಲಿ, ಕರ್ನಾಟಕದಲ್ಲಿ ಈ ಕಲೆ ಬಳಕೆಗೆ ಬರುವ ಮೊದಲು ಇಲ್ಲಿ ಪುರಾಣ ಪಠಣ, ಭಜನೆ ಮುಂತಾದುವುಗಳು ದೇವಾಲಯಗಳಲ್ಲಿ ನಡೆಯುತ್ತಿದ್ದುವು. ಇಲ್ಲಿ ಕೆಲವು ಕಾಲಾನಂತರ ಪುರಾಣ ಪಠಣವೇ ಕಥಾಕಾಲಕ್ಷೇಪವಾಗಿ ಪರಿವರ್ತಿತವಾಯಿತು.

ಕಥಾಕಾಲಕ್ಷೇಪವನ್ನು ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ಪ್ರಚುರಪಡಿಸಿದವರೆಂದರೆ ಮಹಾರಾಷ್ಟ್ರದ ಅನಂತಪದ್ಮನಾಭ ಗೋಸ್ವಾಮಿ. ಇವರ ಶಾರೀರಕ್ಕೆ ಮಾರುಹೋದ ಜನ ಇವರನ್ನು ಕೋಕಿಲಕಂಠ ಮೇರು ಸ್ವಾಮಿ ಎಂದೂ ಕರೆಯುತ್ತಿದ್ದರು. ಈ ಕಲೆಗೆ ಸರಿಯಾದ ಸ್ವರೂಪವನ್ನು ಕಲ್ಪಿಸಿ ಜನಪ್ರಿಯತೆಯೊಂದಿಗೆ ತುಂಬುಕಲೆಯಾಗಿ ಮಾರ್ಪಡಿಸಿದವರು ತಂಜಾವೂರಿನ ಕೃಷ್ಣ ಭಾಗವತರು ಮತ್ತು ಪಂಚಾ ಪಕೇಶ ಶಾಸ್ತ್ರಿಗಳು. ಇವರು ತೋರಿರುವ ಮಾರ್ಗವನ್ನೇ ಕರ್ನಾಟಕದ ಇಂದಿನ ಹರಿಕಥಾ ವಿದ್ವಾಂಸರೂ ಅನುಸರಿಸುತ್ತಿರುವುದು ಕಂಡುಬಂದಿದೆ.

ಕಥಾಕಾಲಕ್ಷೇಪದ ಮುಖ್ಯೋದ್ದೇಶ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಬೋಧಿಸುವುದು. ಅಲ್ಲದೆ ಇದು ಮುಕ್ತಿಗೆ ಒಂದು ಸುಲಭಸಾಧ್ಯವಾದ ಮಾರ್ಗವೆನಿಸಿದೆ. ಇದರಲ್ಲಿ ಸಂಗೀತವು ಕಥೆಯ ನಿರೂಪಣೆಗಾಗಿ ರಾಗ ತಾಳಮೇಳ ಹಾಗೂ ಉಪಕಥೆಗಳೊಡನೆ ಹಿತಮಿತವಾಗಿ ಸಮ್ಮಿಲನಗೊಂಡು ವಿಶಿಷ್ಟವಾಗಿರುತ್ತದೆ. ಜನರಲ್ಲಿ ಧರ್ಮನೀತಿಗಳನ್ನು ಸೌಂದರ್ಯ ಕಲೋಪಾಸನೆಯನ್ನೂ ಜಾಗೃತಗೊಳಿಸಿದ ಈ ಕಲೆ ಸಂಗೀತಕ್ಕಿಂತ ಹೆಚ್ಚು ಜನಪ್ರಿಯತೆ ಗಳಿಸಿದೆ. ಅನಂತರಾಮ ಭಾಗವತರು, ಮುತ್ತಯ್ಯ ಭಾಗವತರು, ವೇದಾಂತ ಭಾಗವತರು ಮೊದಲಾದ ಅನೇಕ ಸಂಗೀತ ವಿದ್ವಾಂಸರು ಕಥಾಕಾಲಾಕ್ಷೇಪ ಕಲೆಯನ್ನು ಕಲಿತು ತಮ್ಮ ಸಂಗೀತದ ವಿದ್ವತ್ತನ್ನು ಇದರ ಮೂಲಕ ಪ್ರದರ್ಶಿಸಿದರು.

ಕಥಾಕಾಲಕ್ಷೇಪಕ್ಕಾಗಿ ಮಹಾರಾಷ್ಟ್ರದಲ್ಲಿ ಸಖಿ,ದಂಡಿ, ಅಂಜನಗೀತ, ಸವಾಯ್, ಓವಿ, ಅಭಂಗ ಮುಂತಾದವುಗಳನ್ನು ಬಳಸುತ್ತಾರೆ. ದಕ್ಷಿಣ ಭಾರತದಲ್ಲಿ ಕಥಾ ಪ್ರಾರಂಭದಲ್ಲಿ ಪಂಚಮುಖಿಯನ್ನು ಹಾಡುವುದುಂಟು. ಜೊತೆಗೆ ಸಂಗೀತದ ವಾದ್ಯಗಳಾದ ಹಾರ್ಮೋನಿಯಂ, ತಬಲ ಪಿಟೀಲು, ಮೃದಂಗ ಮುಂತಾದವುಗಳನ್ನು ಹಿಮ್ಮೇಳಕ್ಕಾಗಿ ಬಳಸುತ್ತಾರೆ.

ಕಥಾಕಾಲಕ್ಷೇಪ ಮಾಡುವ ವಿದ್ವಾಂಸರನ್ನು ಭಾಗವತರೆಂದು ಕರೆಯುವುದು ರೂಢಿ. ಕಥೆ ಸಂತ ಮಹಾನುಭಾವರ ಅಥವಾ ಭಗವತ್ಸಿದ್ಧಾಂತಗಳನ್ನು ತೋರುವ ಯಾವುದೇ ವಿಷಯವನ್ನು ಕುರಿತದ್ದಾದರೂ ಅದನ್ನು ಕ್ರಮಬದ್ಧರೀತಿಯಲ್ಲಿ ವಿಭಾಗಿಸಿ ಸಂಗೀತರಚನೆಗಳನ್ನೂ ಉಪಕಥೆಗಳನ್ನೂ ಗಾದೆಗಳನ್ನೂ ಸಂದರ್ಭೋಚಿತವಾಗಿ ಮಾಡುವಾಗ ಭಾಗವತರ ಜವಾಬ್ದಾರಿ ಗುರುತರವಾಗಿರುತ್ತದೆ. ಕಥೆಯಲ್ಲಿ ಬರುವ ವಿವಿಧ ಪಾತ್ರಗಳೂ ತಾವೇ ಎಂಬಂತೆ ಏಕಪಾತ್ರಾಭಿನಯವನ್ನು ಮಾಡುವ ಸಾಮರ್ಥ್ಯದ ಜೊತೆಗೆ ಭಾಷಾಜ್ಞಾನ, ಜ್ಞಾಪಕಶಕ್ತಿ ಮತ್ತು ಸಂಗೀತದ ವಿಷಯದಲ್ಲಿನ ಅರಿವುಗಳು ಭಾಗವತರಿಗೆ ಅತ್ಯವಶ್ಯಕವಾಗಿರುತ್ತದೆ. ಚತುರರಾದ ಹರಿಕಥಾ ವಿದ್ವಾಂಸರು ರಸಭಾವಗಳಿಗೆ ತಕ್ಕಂತೆ ಅಭಿನಯ ಉಪಕಥೆ ಸಂಗೀತ ಮುಂತಾದವುಗಳ ಮಿಶ್ರಣದಿಂದ ಕ್ರಮಬದ್ಧರೀತಿಯಲ್ಲಿ ಮಾಡಿದ ಕಥಾಕಾಲಕ್ಷೇಪದ ಗುರಿ ಶ್ರಾವಕರ ಚಿತ್ರದಲ್ಲಿ ಚಿರಕಾಲ ಉಳಿಯುವುದರಲ್ಲಿ ಸಂಶಯವಿಲ್ಲ.

ಕನ್ನಡನಾಡಿನಲ್ಲಿ ಕಥಾಕಾಲಕ್ಷೇಪ ಹರಿಕಥೆ ಎಂಬ ಮತ್ತೊಂದು ಹೆಸರಿನಲ್ಲಿ ಬಳಕೆಯಲ್ಲಿದೆ. ಈ ಕಲೆಗೆ ದಾಸರ ಕೊಡುಗೆ ಅಪಾರವಾದುದು. 20ನೆಯ ಶತಮಾನದಲ್ಲಿ ಕೊಣನೂರು, ಸೀತಾರಾಮ ಶಾಸ್ತ್ರಿ, ಶ್ರೀಕಂಠಶಾಸ್ತ್ರಿ, ಭದ್ರಗಿರಿ ಕೇಶವದಾಸರು, ಭದ್ರಗಿರಿ ಅಚ್ಯುತದಾಸರು, ವೇಣು ಗೋಪಾಲದಾಸರು, ಕುರ್ತಕೋಟಿ ಶ್ರೀಪಾದಶಾಸ್ತ್ರಿ, ಮುಂತಾದವರು ಹೆಸರಾಂತ ವಿದ್ವಾಂಸರೆನಿಸಿದ್ದಾರೆ. (ವಿ.ಆರ್.)

**ಕಥಾವಳಿ :** ಉತ್ತಮ ಕಥಾ ಸಾಹಿತ್ಯವನ್ನೊದಗಿಸಲು ಪ್ರಾರಂಭವಾದ ಮಾಸಪತ್ರಿಕೆ. 1938ರ ಜುಲೈನಲ್ಲಿ ಪ್ರಕಟಣೆಯನ್ನು ಆರಂಭಿಸಿದರು. ಓಲೇಟಿ ವಿ. ಗುಪ್ತರ ಒಡೆತನದಲ್ಲಿ ಡಿ.ಎಸ್. ರಾಮಕೃಷ್ಣರಾಯರ ಶ್ರದ್ಧೆ. ದುಡಿಮೆಗಳಿಂದ ಬೆಂಗಳೂರು ಅಕ್ಕಿಪೇಟೆಯ ಮೋಹನ್ ಪ್ರೆಸ್ ಎಂಬ ಸಣ್ಣ ಮುದ್ರಣಾಲಯದಲ್ಲಿ ಜನ್ಮತಾಳಿ,ಕೆಲವೇ ವರ್ಷಗಳಲ್ಲಿ ಕರ್ನಾಟಕದ ಪ್ರಸಿದ್ಧ ಮಾಸಪತ್ರಿಕೆಯಾಯಿತು. ಅದು ಪ್ರಾರಂಭವಾದ ಕಾಲ ಅದರ ಪ್ರಗತಿಗೆ ಅನುಕೂಲವಾಗಿಯೇ ಇತ್ತು. ಸಿ.ಕೆ. ವೆಂಕಟರಾಮಯ್ಯ, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಆನಂದ ಮೊದಲಾದ ಪ್ರಸಿದ್ಧರು ಆಧುನಿಕ ಸಣ್ಣಕಥೆಗಳ ವೈಶಿಷ್ಟ್ಯವನ್ನು ಪರಿಚಯ ಮಾಡಿಕೊಟ್ಟು, ಜನತೆಯ ಆಸಕ್ತಿಯನ್ನು ಹೆಚ್ಚಿಸಿದ್ದರು.

ಕಥಾವಳಿ ಪ್ರಾರಂಭದಲ್ಲಿ ಕ್ರೌನ್ $^{1}/_{4}$ ಆಕಾರದಲ್ಲಿದ್ದು 1943 ರಿಂದ ಕ್ರೌನ್ $^{1}/_{8}$ ಆಕಾರದಲ್ಲಿ ಪ್ರಕಟವಾಯಿತು. ಅದರ ಬಿಡಿ ಪ್ರತಿ 4 ಆಣೆಯಿಂದ 6 ಆಣೆಯ ವರೆಗೂ ಹತ್ತಿ, ವಾರ್ಷಿಕ ಚಂದಾ 5 ರೂಪಾಯಿಗಳಾದುವು. ಪ್ರಾರಂಭದಲ್ಲಿ ಪ್ರಕಟವಾಗುತ್ತಿದ್ದ ಪ್ರತಿಗಳ ಸಂಖ್ಯೆ 1,000; ಪತ್ರಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ 1951ರಲ್ಲಿ ಪ್ರಕಟ ವಾಗುತ್ತಿದ್ದ ಪ್ರತಿಗಳು 7,000, ಮನರಂಜನೆಯೇ ಕಥಾವಳಿಯ ಮುಖ್ಯ ಗುರಿ. ಸಣ್ಣಕಥೆ, ಕವಿತೆ,ಹರಟೆ, ಏಕಾಂಕನಾಟಕ, ಹಾಸ್ಯ, ವ್ಯಕ್ತಿಚಿತ್ರಗಳು ಪ್ರಕಟವಾಗುತ್ತಿದ್ದವು. ಕಾರ್ಡಿನಲ್ಲಿ ಕಥೆಗಳು ಎಂಬ ವಿಭಾಗ ಅತ್ಯಂತ ಜನಪ್ರಿಯ ಅಂಕಣವಾಗಿತ್ತು.

ಕಥಾವಳಿಯ ಸಂಪಾದಕ ಮಂಡಲಿಯಲ್ಲಿ ಜಿ.ವರದರಾಜರಾವ್ ಹಾಗೂ ನಗುವನಂದ ಮಾಸಪತ್ರಿಕೆಯಲ್ಲಿ 1933ರಿಂದ ಹಾಸ್ಯಲೇಖನಗಳನ್ನು ಬರೆಯುತ್ತಿದ್ದ ವಿ.ಜಿ. ಕೃಷ್ಣಮೂರ್ತಿ ಅವರು ಬಹುಕಾಲವಿದ್ದು ಅದರ ಪ್ರಕಟಣೆಯ ಬಗ್ಗೆ ಉಪಯುಕ್ತ ಸಲಹೆಗಳನ್ನು ಕೊಡುತ್ತಿದ್ದರು. ಕಥಾವಳಿ ಉಚ್ಚಸ್ಥಾನದಲ್ಲಿದ್ದಾಗ ಅದರಲ್ಲಿ ಸಣ್ಣ ಕತೆಗಳಲ್ಲದೆ ಮಕ್ಕಳ ಬಳಗ, ವನಿತಾವಿಭಾಗ, ಸಂಶೋಧನ ಸಮಸ್ಯೆ, ಸಾಹಸವಾಹಿನಿ, ನಗೆಮಿಂಚು, ಸಾಹಿತ್ಯ ಭಂಡಾರ, ಚಲನಚಿತ್ರ, ರಾಶಿ ಭವಿಷ್ಯ ಮೊದಲಾದ ವಿಭಾಗಗಳಿದ್ದುವು. ಉಡುಪಿಯ ಗಿರಿಬಾಲೆ ವನಿತಾವಿಭಾಗವನ್ನು ನೋಡಿಕೊಳ್ಳುತ್ತಿದ್ದರು. ಮಕ್ಕಳ ಬಳಗ, ಬಿ.ಆರ್.ಎಂ.ಸ್ವಾಮಿಯವರ

ನೆರವಿನಿಂದ ಮಕ್ಕಳಿಗೆ ಪ್ರಿಯವಾಗಿತ್ತು. ಕಥೆಗಳನ್ನು ಸಮಸ್ಯೆಯ ರೂಪದಲ್ಲಿ ಕೊಟ್ಟು, ಸಾರಸ್ಯವಾದ ಘಟ್ಟದಲ್ಲಿ ನಿಲ್ಲಿಸಿ, ಮುಂದಿನ ಸಂಚಿಕೆಗಾಗಿ ಕಾಯುವಂತೆ ವಾಚಕರ ಉತ್ಸಾಹವನ್ನು ಕೆರಳಿಸುವ ವಿಧಾನವನ್ನು ಕಥಾವಳಿ ಪ್ರಾರಂಭಿಸಿತು. ಇದಲ್ಲದೆ ಸಾಹಸವಾಹಿನಿ ವಿಭಾಗದಲ್ಲಿ ಸಾಹಸದ ಕಥೆಗಳು ಅವಿಚ್ಛಿನ್ನವಾಗಿ ಪ್ರಕಟವಾಗುತ್ತಿದ್ದುವು.

ಕಥಾವಳಿಯ ವಿಶೇಷ ಆಕರ್ಷಣೆ ಪ್ರತಿವರ್ಷ ಜುಲೈ ತಿಂಗಳಲ್ಲಿ ಹೊರಡುತ್ತಿದ್ದ ಆದರ ವಾರ್ಷಿಕ ಸಂಚಿಕೆ. 250 ಪುಟಗಳಿಗೂ ಮಿಕ್ಕಿದ ಈ ವಿಶೇಷ ಸಂಚಿಕೆಗಾಗಿ ಏರ್ಪಡಿಸುತ್ತಿದ್ದ ವಾರ್ಷಿಕ ಕಥಾಸ್ಪರ್ಧೆಯಲ್ಲಿ ಉತ್ತಮ ಕಥೆಗಳಿಗೆ ಬಹುಮಾನ ನೀಡುವ ಪದ್ಧತಿ ಇತ್ತು. ಕಥಾವಳಿಯ 12ನೆಯ ವಾರ್ಷಿಕ ಕಥಾಸ್ಪರ್ಧೆಯಲ್ಲಿ 1950 ಪ್ರಥಮ ಬಹುಮಾನ ಗಳಿಸಿದ ಸಣ್ಣಕಥೆ ಸಮಸ್ಯೆಯ ಮಗು ಅದರ ಲೇಖಕಿ ತ್ರಿವೇಣಿಯವರ ಕಾದಂಬರಿ ಕ್ಷೇತ್ರದಲ್ಲಿನ ಉಜ್ವಲ ಭವಿಷ್ಯವನ್ನು ಸಾರಿತು. ಎಸ್.ವಿ.ಪರಮೇಶ್ವರಭಟ್ಟ, ಬಸವರಾಜ ಕಟ್ಟೀಮನಿ, ಗೋಪಾಲಕೃಷ್ಣ ಅಡಿಗ, ಜಿ.ಪಿ.ರಾಜರತ್ನಂ, ಜಿ.ವರದರಾಜರಾವ್, ಬಿ.ಪುಟ್ಟಸ್ವಾಮಯ್ಯ, ಎಂ.ವಿ.ಸೀತಾರಾಮಯ್ಯ, ಗೊರೂರು ರಾಮಸ್ವಾಮಿ ಐಯಂಗಾರ್, ವಿ.ಜಿ.ಕೃಷ್ಣಮೂರ್ತಿ, ಕೈವಾರ ರಾಜರಾವ್, ಕೃಷ್ಣಮೂರ್ತಿ ಪುರಾಣಿಕ, ಮತಿಘಟ್ಟ ಕೃಷ್ಣಮೂರ್ತಿ, ವಿ.ಎಂ.ಇನಾಂದಾರ್, ಕಾಂತರಾಜಯ್ಯ, ಗಿರಿಬಾಲೆ, ಅಮ್ಮೆಂಬಳ ಶಂಕರ ನಾರಾಯಣ ನಾವಡ, ನವಗಿರಿನಂದ, ಕೆ.ಗೋಪಾಲಕೃಷ್ಣರಾವ್, ಎನ್.ಸೂರಪ್ಪ ನಾಡಿಗೇರ ಕೃಷ್ಣರಾಯ, ಆರ್.ಎಸ್.ರಾಮರಾವ್, ತ್ರಿವೇಣಿ ಮೊದಲಾದ ನಾಡಿನ ಸುಪ್ರಸಿದ್ಧ ಸಾಹಿತಿಗಳು. ಕಥಾವಳಿಯ ಲೇಖಕವರ್ಗಕ್ಕೆ ಸೇರಿದವರು. ಸು.20 ವರ್ಷ ಸೇವೆ ಸಲ್ಲಿಸಿದ ಈ ಪತ್ರಿಕೆ 1958ರ ವರೆಗೂ ಅಸ್ತಿತ್ವದಲ್ಲಿದ್ದು ತರುವಾಯ ನಿಂತುಹೋಯಿತು. *

**ಕದಂ, ಬಿ.ಪಿ. :** 1922-. ಸಂಸದೀಯ ಪಟು, ಸ್ವಾತಂತ್ರ್ಯ ಹೋರಾಟಗಾರ, ಸಾಮಾಜಿಕ ಕಾರ್ಯಕರ್ತ. ಇವರ ಪೂರ್ಣ ಹೆಸರು ಬಾಲಸು ಪುರುಷು ಕದಂ. ಉತ್ತರ ಕನ್ನಡ ಜಿಲ್ಲೆ ಕಾರವಾರದ ಸದಾಶಿವ ಗಡದಲ್ಲಿ 1922 ಡಿಸೆಂಬರ್ 2ರಂದು ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಕಾರವಾರದಲ್ಲಿ ಮುಗಿಸಿದರು. ಕೊಲ್ಹಾಪುರದ ರಾಜಾರಾಮ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಕೊಲ್ಹಾಪುರದ ಕಾಲೇಜು ಗಳಲ್ಲಿ ಶಿಕ್ಷಣ ಮುಗಿಸಿದರು. ಕಾರವಾರದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿ (1948), ಅಪಾರ ಯಶಸ್ಸು ಗಳಿಸಿದರು. 1972ರ ವರೆಗೂ ಈ ವೃತ್ತಿಯನ್ನು ಮುಂದುವರಿಸಿದರು.



ತರುಣ ರಾಷ್ಟ್ರೀಯವಾದಿ ಕದಂ ಕೊಲ್ಹಾಪುರ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿ, ಎರಡು ತಿಂಗಳು ಭೂಗತರಾಗಿದ್ದರು. ಆಗ ಎರಡು ತಿಂಗಳು ಕಾಲೇಜಿನಲ್ಲಿ ಗೈರು ಹಾಜರಾಗಿದ್ದ ಬಗ್ಗೆ ಪ್ರಾಂಶುಪಾಲರಿಗೆ ತಮ್ಮ ಚತುರ ಮಾತಿನಿಂದ ಮನದಟ್ಟು ಮಾಡಿಕೊಟ್ಟು ಪರೀಕ್ಷೆಗೆ ಕುಳಿತು ತೇರ್ಗಡೆಯಾದರು. ವಕೀಲಿ ವೃತ್ತಿಯಲ್ಲಿದ್ದಾಗ ಬಡವರಿಗೆ, ರೈತರಿಗೆ, ಕಾರ್ಮಿಕರಿಗೆ ನೆರವಾದರು.

ರಾಜಕೀಯದಲ್ಲಿ ಧುಮುಕಿದ ಇವರು ಮುಂಬಯಿಯ ವಿಧಾನಸಭೆಗೆ ಕಾಂಗ್ರೆಸ್‌ಪಕ್ಷದ ಶಾಸಕರಾಗಿ ಆಯ್ಕೆಯಾದರು (1952-57). ಕರ್ನಾಟಕ ವಿಧಾನಸಭೆಗೆ ಕಾರವಾರ ಕ್ಷೇತ್ರದಿಂದ ಆಯ್ಕೆಯಾಗಿ ಏಕಪ್ರಕಾರ ಮೂರು ಅವಧಿಗೆ ಶಾಸಕರಾಗಿ ಸೇವೆ ಸಲ್ಲಿಸಿದರು. ಅನಂತರ ವಿಧಾನ ಸಭೆಯ ಉಪಸಭಾಪತಿ ಸ್ಥಾನ ಪಡೆದು ಐದು ವರ್ಷ ಕಾರ್ಯನಿರ್ವಹಿಸಿದರು. ಲೋಕಸಭೆಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿ (1977-81) ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ದುಡಿದರು.

ಇವರು ಹಲವು ಸಂಘ ಸಂಸ್ಥೆಗಳಲ್ಲೂ ಸೇವೆಸಲ್ಲಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಸದಾಶಿವಗಡ ಶಿವಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ (1983-2002); ಕಾರವಾರ ಜಿಲ್ಲಾ ಸ್ಕೂಲ್ ಬೋರ್ಡ್ ಸಮಿತಿಯ ಉಪಾಧ್ಯಕ್ಷ (1950-53), ಕಾಳಿ ಪ್ರಾಜೆಕ್ಟ್ ಜಲಾಶಯ ಹಾಗೂ ನಿರಾಶ್ರಿತರ ಸಮಸ್ಯೆ ಸಮಿತಿ ಅಧ್ಯಕ್ಷ, ಪಾರ್ಲಿಮೆಂಟ್ ಕಾಯಿದೆ ಸಮಿತಿ ಸದಸ್ಯ ಇವು ಮುಖ್ಯವಾದುವು.

ಇವರಿಗೆ ಬೇಸಾಯದಲ್ಲಿ ವಿಶೇಷ ಆಸಕ್ತಿ. ಅಗಾಧ ಪುಸ್ತಕ ಪ್ರೇಮಿ, ಒಳ್ಳೆಯ ಭಾಷಣಕಾರರು, ಸಂಘಟನಾ ಚತುರರು. ಕನ್ನಡ, ಇಂಗ್ಲಿಷ್, ಮರಾಠಿ, ಕೊಂಕಣಿಯಲ್ಲಿ ಸುಲಲಿತವಾಗಿ ಮಾತನಾಡಬಲ್ಲರು. ಸಂಸದೀಯ ಹಾಗೂ ಸಂವಿಧಾನ ತಜ್ಞರಾಗಿ ಅನೇಕ ಸಮಿತಿಗಳಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ತಮಗೆ ದೊರೆತ ಅಧಿಕಾರವನ್ನು ನಿಷ್ಠೆ, ಶ್ರದ್ಧೆ, ತ್ಯಾಗ, ಸಮರ್ಪಣ ಭಾವಗಳಿಂದ ನಿರ್ವಹಿಸಿದ್ದಾರೆ. ಇವರ ಧರ್ಮಪತ್ನಿ ರಮಾಬಾಯಿ. (ಆರ್.ಜಿ.ಆರ್.)

**ಕದಂಬ ವಂಶ :** ವಾಯವ್ಯ ಕರ್ನಾಟಕದಲ್ಲಿ 4-7ನೆಯ ಶತಮಾನ ಗಳಲ್ಲಿ ಬನವಾಸಿಯಿಂದ ಸ್ವತಂತ್ರವಾಗಿಯೂ 10-13ನೆಯ ಶತಮಾನಗಳಲ್ಲಿ ಹಾನಗಲ್ಲು, ಗೋವ ಮುಂತಾದ ಕಡೆಗಳಲ್ಲಿ ಬಹುತೇಕ ಸಾಮಂತ ಸ್ಥಿತಿಯಲ್ಲೂ ಆಳಿದ ಒಂದು ರಾಜಮನೆತನ.



ಕದಂಬ ಲಾಂಛನ

ಕದಂಬ ಮನೆತನದ ಮೂಲದ ಬಗ್ಗೆ ಹಲವು ಕಥೆಗಳಿವೆ. ತ್ರಿಲೋಚನ ಕದಂಬ ಈ ಮನೆತನದ ಮೂಲಪುರುಷ. ಶಿವನ ಬೆವರು ಕದಂಬ ವೃಕ್ಷದ ಕೆಳಗೆ ಬಿದ್ದು ಆತ ಹುಟ್ಟಿದ. ಆದ್ದರಿಂದಲೇ ಅವನ ವಂಶಸ್ಥರಿಗೆ ಕದಂಬರೆಂದು ಹೆಸರಾಯಿತು. ಅವನಿಗೆ ನಾಲ್ಕು ಕೈ, ಮೂರು ಕಣ್ಣು ಇದ್ದವಂತೆ. ಆ ತ್ರಿಲೋಚನ ಕದಂಬನ ಮಗ ಮಯೂರಶರ್ಮ. ಅವನೇ ಕದಂಬ ರಾಜ್ಯಸ್ಥಾಪಕ ಎಂದು ಒಂದು ಕಥೆ. ಮಯೂರ ಶರ್ಮನೇ ಕದಂಬ ವೃಕ್ಷದ ಕೆಳಗೆ ಹುಟ್ಟಿದನೆಂದು ಇನ್ನೊಂದು ಐತಿಹ್ಯ. ಅವನಿಗೂ ಹಣೆಯ ಮೇಲೆ ಕಣ್ಣಿದ್ದುದರಿಂದ ಕಿರೀಟವನ್ನು ಮುಡಿಯ ಮೇಲೆ ಕಟ್ಟಬೇಕಾಯಿತಂತೆ. ಪರಶುರಾಮ ಕ್ಷೇತ್ರಸೃಷ್ಟಿಯಾದ ಮೇಲೆ ಶಿವಪಾರ್ವತಿಯರು ಸಹ್ಯಾದ್ರಿಯ ಸುಂದರ ಪ್ರದೇಶಕ್ಕೆ ಬಂದಿದ್ದರೆಂದೂ ಅಲ್ಲಿ ಅವರಿಗೆ ಹುಟ್ಟಿದ ಮಗನೇ ಕದಂಬವಂಶದ ಆದ್ಯ ಪುರುಷನೆಂದೂ ಇನ್ನೊಂದು ಕಥೆಯಿದೆ. ಆದರೆ ಇಂಥ ಕಥೆಗಳೆಲ್ಲ ಕದಂಬರ ಆಡಳಿತ ಆರಂಭವಾದ ಅನೇಕ ವರ್ಷಗಳ ಮೇಲೆ ಹುಟ್ಟಿಕೊಂಡವಾದ್ದರಿಂದ ಇವಕ್ಕೆ ಹೆಚ್ಚಿನ ಬೆಲೆ ಕೊಡಬೇಕಾದುದಿಲ್ಲ. ಕದಂಬಪುಷ್ಪ ಪಾರ್ವತಿಗೆ ಪ್ರಿಯವಾದುದರಿಂದ ಶಿವಸಂಬಂಧವಾದ ಇಂಥ ಕಥೆಗಳು ಹುಟ್ಟಿಕೊಂಡಿರ ಬಹುದು ಎಂಬುದು ಇತಿಹಾಸಕಾರರ ಅಭಿಪ್ರಾಯ.

## ಬನವಾಸಿಯ ಕದಂಬರು

**ರಾಜಕೀಯ ಇತಿಹಾಸ :** ಬನವಾಸಿಯ ಕದಂಬರು 4ನೆಯ ಶತಮಾನದ ಆರಂಭದಲ್ಲಿ ಸುಮಾರು 3 ಶತಮಾನಗಳ ಕಾಲ ವಾಯುವ್ಯ ಕರ್ನಾಟಕದ ಬಹು ಭಾಗವನ್ನಾಳಿದರು. ಇವರ ರಾಜಧಾನಿ ಬನವಾಸಿ. ಮಾನವ್ಯಗೋತ್ರದ ಹಾರಿತೀವಂಶದ ಬಾಹ್ಮಣ ವೀರಶರ್ಮ ಎಂಬುವನು ಈ ವಂಶದ ಆದ್ಯ. ಇವನ ಮಗ ಬಂಧುಷೇಣ ಕ್ಷಾತ್ರವೃತ್ತಿಯನ್ನು ಕೈಕೊಂಡಿದ್ದ ಎಂದು ಇತ್ತೀಚೆಗೆ ದೊರೆತ ಗುಡ್ನಾಪುರ ಶಾಸನ ತಿಳಿಸುತ್ತದೆ. ಅದೇ ಶಾಸನದಲ್ಲಿ ಬಂಧುಷೇಣನ ಮಗ ಮಯೂರಶರ್ಮ ಎಂದೂ ಈತ ಬ್ರಾಹ್ಮಣವನ್ನು ಪಾಲಿಸುತ್ತಿದನೆಂದೂ ತಿಳಿಸಿದರೆ, ತಾಳಗುಂದದಲ್ಲಿರುವ ಶಾಂತಿವರ್ಮನ ಶಾಸನ ಕದಂಬವಂಶ ಮತ್ತು ರಾಜ್ಯದ ಸ್ಥಾಪನೆಯ ಬಗ್ಗೆ ಹೆಚ್ಚು ವಿವರಗಳನ್ನು ಒದಗಿಸುತ್ತದೆ. ಅದರ ಪ್ರಕಾರ ಬ್ರಾಹ್ಮಣರಾದ ಈ ವಂಶಜರ ಮನೆಯ ಬಳಿ ಕದಂಬ ವೃಕ್ಷವೊಂದು ಇದ್ದುದರಿಂದ, ಈ ಮನೆಯವರಿಗೆ ಕದಂಬ ಎಂಬ ಹೆಸರು ಪ್ರಚಲಿತವಾಯಿತು. ಈ ಮಯೂರಶರ್ಮನೇ ಕದಂಬರಾಜ್ಯದ ಸ್ಥಾಪಕ. ಈತ ವೇದಾಧ್ಯಯನಕ್ಕಾಗಿ ತನ್ನ ತಾತ ವೀರಶರ್ಮನೊಡನೆ ಕಂಚಿಯ ಘಟಿಕಾಸ್ಥಾನಕ್ಕೆ ಹೋಗಿದ್ದ. ಅಲ್ಲಿಯ ರಾಜ ಅಶ್ವಮೇಧ ಯಾಗ ಮಾಡಿದಾಗ ಯಾವುದೋ ಕಾರಣದಿಂದ ಅವಮಾನಿತನಾಗಿ, ಛಲದಿಂದ ಶಸ್ತ್ರವಿದ್ಯೆ ಕಲಿತು ದಂಡುಕಟ್ಟಿ ದಾಳಿಮಾಡಿ ಪಲ್ಲವರ ಗಡಿನೆಲ ಶ್ರೀಪರ್ವತದ ಬಳಿಯ ಭಾಗವನ್ನಾಕ್ರಮಿಸಿಕೊಂಡ. ಮಗ್ಗುಲ ಮುಳ್ಳಾಗಿದ್ದ ಮಯೂರಶರ್ಮನ ವಿರೋಧ ಕಟ್ಟಿಕೊಳ್ಳಬಾರದೆಂಬ ಉದ್ದೇಶದಿಂದ ಪಲ್ಲವರು ಅವನಿಗೆ ಪಶ್ಚಿಮ ಸಮುದ್ರದಿಂದ ಪ್ರೇಹಾರ (ಪ್ರಾಯಶಃ ಮಲಪ್ರಭಾ ಅಥವಾ ಘಟಪ್ರಭಾ) ವರೆಗಿನ ಪ್ರದೇಶವನ್ನು ಬಿಟ್ಟುಕೊಟ್ಟರು.

ಮಯೂರಶರ್ಮ ಪಲ್ಲವಸಾಮಂತನಾಗಿ ಕದಂಬರಾಜ್ಯ ಸ್ಥಾಪನೆ ಮಾಡಿದರೂ ಸ್ವಲ್ಪ ಕಾಲದಲ್ಲೇ ಸ್ವಾತಂತ್ರ್ಯ ಘೋಷಿಸಿಕೊಂಡಂತೆ ತೋರುತ್ತದೆ. ಇವನ ಚಂದ್ರವಳ್ಳಿಯ ಶಾಸನದ ಪ್ರಕಾರ ಈತ ತ್ರೈಕೂಟಕ, ಅಭೀರ, ಪಲ್ಲವ, ಪರಿಯಾತ್ರಕ, ಶಕಸ್ಥಾನ, ಮೋಕರಿ, ಪುನ್ನಾಟ, ಸಯಿಂದಕ (ಸೇಂದ್ರಕ) ಮುಂತಾದ ರಾಜ್ಯಗಳನ್ನು ಗೆದ್ದ. ಆರಾವಳಿಯಿಂದ ವಿಂಧ್ಯದವರೆಗೆ ಇದ್ದುದ್ದು ಸಯಿಂದಕರ ರಾಜ್ಯ. ಕಾವೇರಿ ಕಪಿನಿಗಳ ನಡುವಣ ರಾಜ್ಯ ಪುನ್ನಾಟ. ಮೋಕರಿಗಳು ಆಳುತ್ತಿದ್ದ ಉಜ್ಜಯಿನಿ ಮತ್ತು ರಾಜಸ್ತಾನಗಳ ವರೆಗೆ ತನ್ನ ರಾಜ್ಯ ವಿಸ್ತರಿಸಿದನೇ ಎಂಬುದು ಸಂದೇಹಾಸ್ಪದ. ಅಂತೂ ಈ ನಾನಾ ರಾಜ್ಯಗಳ ಅರಸರೊಂದಿಗೆ ಈತ ಘರ್ಷಣೆ ನಡೆಸಿರಬಹುದೆಂಬುದಾಗಿ ಹೇಳಬಹುದಾಗಿದೆ. ಆದರೆ ಈಚೆಗೆ ಇಡೀ ಶಾಸನಪಾಠವನ್ನು ಪರಿಷ್ಕರಿಸಲಾಗಿದ್ದು, ಅದರ ಪ್ರಕಾರ ಶಾಸನವು ಕೆರೆಯೊಂದರ ನಿರ್ಮಾಣದ ವಿಷಯವನ್ನಷ್ಟೇ ಹೇಳುತ್ತದೆ. ಹಾಗೆಯೇ ಸೊರಬ ತಾಲ್ಲೂಕಿನ ಜಡೆ ಗ್ರಾಮದಲ್ಲಿ ದೊರೆತ ಏಳು ತಾಮ್ರಶಾಸನಗಳು ಕದಂಬರ ಕೆಲವು ಹೊಸ ಅರಸರ ಹೆಸರುಗಳನ್ನು - ಉದಾಹರಣೆಗೆ

**ಬನವಾಸಿಯ ಕದಂಬರ ವಂಶಾವಳಿ:**



ಪ್ರದ್ಯೋತವರ್ಮ - ತಿಳಿಸುತ್ತವೆ. ಈ ಬಗ್ಗೆ ವಿವರಗಳು ಪ್ರಕಟವಾಗಬೇಕಾಗಿವೆ.

ಕದಂಬರಸರ ಮೊದಲಿಗ ಮಯೂರಶರ್ಮನಾದರೂ (ಸು.325-45) ಅವನ ಅನಂತರ ಬಂದವರು ತಮ್ಮ ಹೆಸರುಗಳ ಕೊನೆಯ ಶಬ್ದವನ್ನು ವರ್ಮ ಎಂದು ಬದಲಾಯಿಸಿಕೊಂಡು ತಮ್ಮದು ರಾಜವಂಶವೆಂದು ಘೋಷಿಸಿಕೊಂಡರು. ಮಯೂರಶರ್ಮನ ಅನಂತರ ಕಂಗವರ್ಮ (ಸು.345-65), ಭಗೀರಥ (ಸು.365-85) ಮತ್ತು ರಘು (ಸು.385-405) ಪುತ್ರಾನುಕ್ರಮವಾಗಿ ಆಳಿದರು. ಅನಂತರ ಆಳಿದ ರಘುವಿನ ತಮ್ಮ ಕಾಕುತ್ಸ್ಥವರ್ಮ (ಸು.405-30) ಪ್ರಸಿದ್ಧ ದೊರೆ. ಈತ ಪಲ್ಲವರೊಂದಿಗೆ ಯುದ್ಧ ಮಾಡಿ, ನೆರೆಯ ಅರಸರೊಂದಿಗೆ ವಿವಾಹಸಂಬಂಧ ಬೆಳೆಸಿ ಕದಂಬ ರಾಜ್ಯವನ್ನು ವಿಸ್ತರಿಸಿ ಶಕ್ತಿಯುತವಾಗಿ ಮಾಡಿದ. ಆದರೆ ಇವನ ಮರಣಾನಂತರ ರಾಜ್ಯ ಭಾಗವಾಯಿತು. ಇವನ ಮಗ ಶಾಂತಿವರ್ಮ (ಸು.430-55) ಬನವಾಸಿಯಲ್ಲಿ ಆಳ್ವಿಕೆ ಮುಂದುವರಿಸಿದ. ಇನ್ನೊಬ್ಬ ಮಗ ಒಂದನೆಯ ಕೃಷ್ಣವರ್ಮ ತ್ರಿಪರ್ವತದಲ್ಲಿ ರಾಜ್ಯವಾಳತೊಡಗಿದ. ಶಾಂತಿವರ್ಮನ ಅನಂತರ ಬಂದ ಮೃಗೇಶ (ಸು.455-80) ಪಲ್ಲವರೊಂದಿಗೂ ಗಂಗರೊಂದಿಗೂ ಯುದ್ಧಮಾಡಿದ. ಮೃಗೇಶನ ಕಾಲದಲ್ಲಿ ಕದಂಬ ರಾಜ್ಯ ಇನ್ನೂ ವಿಸ್ತರಿಸಿತು. ಬನವಾಸಿಯ ಜೊತೆಗೆ ಪಲಾಶಿಕಾ ಎಂಬುದು (ಖಾನಾಪುರ ತಾಲ್ಲೂಕಿನಲ್ಲಿರುವ ಹಲಶಿ) ಎರಡನೆಯ ರಾಜಧಾನಿಯಾಯಿತು. ಮೃಗೇಶನ ತಮ್ಮ ಮಾಂಧಾತೃವರ್ಮನ ಹ್ರಸ್ವ ಆಳ್ವಿಕೆಯ (ಸು.480-85), ಅನಂತರ ಮೃಗೇಶನ ಮಗ ರವಿವರ್ಮ (ಸು.485-519), ಆಳಿದ. ಇವನು ವಿಷ್ಣುವರ್ಮನೆಂಬುವನನ್ನು ಸೋಲಿಸಿ ಕಾಂಚೀಪತಿ ಚಂಡದಂಡೇಶನನ್ನು ಕೊಂದು ರಾಜ್ಯವಿಸ್ತರಿಸಿದ. ಇವನ ಕಾಲದಲ್ಲಿ ಉಚ್ಚಂಗಿದುರ್ಗ (ಬಳ್ಳಾರಿ ಜಿಲ್ಲೆ) ಇನ್ನೊಂದು ರಾಜಧಾನಿಯಾಯಿತು. ರವಿವರ್ಮನ ಮಗ ಹರಿವರ್ಮ (ಸು.519-30) ಶಾಂತಿವರ್ಮನ ವಂಶದ ಕೊನೆಯ ದೊರೆ. ತ್ರಿಪರ್ವತ ಶಾಖೆಯ ಇಮ್ಮಡಿ ಕೃಷ್ಣವರ್ಮ ಇವನನ್ನು ಸೋಲಿಸಿ ಬನವಾಸಿಯನ್ನು ಆಕ್ರಮಿಸಿಕೊಂಡ. ಅನಂತರ ಆದ್ಯ ಕದಂಬರ ತ್ರಿಪರ್ವತ ಶಾಖೆಯವರ ಆಳ್ವಿಕೆ ಮುಂದುವರಿಯಿತು. ಈ ಶಾಖೆಯವರ ರಾಜಧಾನಿ ತ್ರಿಪರ್ವತ ಯಾವುದು, ಅವರ ಆಳ್ವಿಕೆಯುಪ್ರದೇಶದ ವಿಸ್ತಾರ ಎಷ್ಟು ಎಂಬುದು ಸರಿಯಾಗಿ ತಿಳಿದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಿಶಿಲವೇ ಮಯೂರಶರ್ಮನು ರಾಜ್ಯ ಸ್ಥಾಪನೆ ಮಾಡಿದ ತ್ರಿಪರ್ವತ ಅಥವಾ ಶ್ರೀಪರ್ವತ ಎಂಬ ಅಭಿಪ್ರಾಯವೂ ಇದೆ. ಶ್ರೀಪರ್ವತ ಕರ್ನೂಲು ಜಿಲ್ಲೆಯ ಶ್ರೀಶೈಲಂ ಅಥವಾ ನಾಗಾರ್ಜುನಕೊಂಡ ಎಂದು ಒಂದು ಊಹೆಯಾದರೆ, ಹಾಸನ ಜಿಲ್ಲೆಯ ಹಳೇಬೀಡು, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಅಥವಾ ಬೆಳಗಾಂವಿ ಜಿಲ್ಲೆಯ ಮುರ್ಗೋಡು ಎಂಬ ಊಹೆಗಳು ಇವೆ. ಒಂದನೆಯ ಕೃಷ್ಣವರ್ಮ (ಸು.430-60) ಶೂರದೊರೆ. ಈತ ನಾಗರನ್ನು (ಬಹುಶಃ ಸೇಂದ್ರಕರು) ಸೋಲಿಸಿ, ಪಲ್ಲವರಾಜ ನಣಕ್ಕಾಸನನ್ನೂ ಬಗ್ಗಿಸಿದ್ದಲ್ಲದೆ ಅಶ್ವಮೇಧಯಜ್ಞ ಮಾಡಿದ. ಇವನ ಅನಂತರ ವಿಷ್ಣುವರ್ಮ (ಸು.460-90), ಸಿಂಹವರ್ಮ (ಸು.490-516) ಮತ್ತು ಕೃಷ್ಣವರ್ಮ II (ಸು.516-40) ಪುತ್ರಾನುಕ್ರಮವಾಗಿ ಆಳಿದರು. ಕೃಷ್ಣವರ್ಮ ಮೂಲವಂಶದ ಹರಿವರ್ಮನನ್ನು ಸೋಲಿಸಿ ಬನವಾಸಿಯಲ್ಲಿ ನೆಲೆಗೊಂಡ. ಆದರೆ ಸು.540ರ ಹೊತ್ತಿಗೆ ಒಂದನೆಯ ಪುಲಕೇಶಿ ಕೃಷ್ಣವರ್ಮನನ್ನು ಸೋಲಿಸಿ ಚಳುಕ್ಯ ರಾಜ್ಯಸ್ಥಾಪನೆ ಮಾಡಿದ ಅನಂತರವೂ ಇಮ್ಮಡಿ ಪುಲಕೇಶಿಯ ಕಾಲದವರೆಗೆ ಕೃಷ್ಣವರ್ಮನ ವಂಶದ ಅಜವರ್ಮ, ರವಿವರ್ಮ ಮತ್ತು ಭೋಗಿವರ್ಮ ಎಂಬುವರು ಸಣ್ಣಪುಟ್ಟ ಪ್ರದೇಶಗಳನ್ನು ಉಳಿಸಿಕೊಂಡಿದ್ದರು. ಚಳುಕ್ಯ ರಾಜ್ಯ ವಿಸ್ತಾರದೊಡನೆ ಕದಂಬರ ಸ್ವತಂತ್ರ ಆಳ್ವಿಕೆ ನಿರ್ನಾಮವಾಯಿತು. (ಬಿ.ಎಚ್.ಎಸ್.)

**ಆಡಳಿತ ವ್ಯವಸ್ಥೆ :** ಕದಂಬರಾಜ್ಯದಲ್ಲಿದ್ದುದು ಏಕರಾಜಪ್ರಭುತ್ವವಾಗಿದ್ದು ರಾಜತ್ವ ವಂಶಪಾರಂಪರ್ಯವಾಗಿ ಬರುತ್ತಿತ್ತು. ರಾಜ್ಯಾಡಳಿತದಲ್ಲಿ ರಾಜ ನಿರಂಕುಶ ಪ್ರಭುವೇ ಆಗಿದ್ದರೂ ಆತ ಬುದ್ಧಿವಂತ ಮತ್ತು ನಿಷ್ಠಾವಂತ ಅಧಿಕಾರಿಗಳ ಸಹಾಯದಿಂದ ಧರ್ಮವಾಗಿ ಆಡಳಿತ ನಡೆಸಬೇಕಾಗಿತ್ತು. ಕೆಲವು ಕದಂಬ ಶಾಸನಗಳಲ್ಲಿ ರಾಜನ ಸಮೀಪಬಂಧುಗಳು ರಾಜ್ಯದ ಆಡಳಿತದಲ್ಲಿ ಭಾಗವಹಿಸುತ್ತಿದ್ದರೆಂಬುದಕ್ಕೆ ಆಧಾರಗಳಿವೆ (ಉದಾ: ಕಾಕುತ್ಸ್ಥನ ಅಳಿಯ ಪಶುಪತಿ). ಆದರೆ ಈ ಕಾಲದಲ್ಲಿ ರಾಣಿಯರು ರಾಜಕುಮಾರಿಯರು ಇವರುಗಳ ಪಾತ್ರ ಆಡಳಿತದಲ್ಲಿ ಇದ್ದಂತೆ ತೋರುವುದಿಲ್ಲ. ಕದಂಬ ರಾಜರು ಆಡಳಿತಕ್ಕೆ ಸಂಬಂಧಿಸಿದಂತೆ ವೃದ್ಧರ ಉಪದೇಶಗಳನ್ನು ಗ್ರಹಿಸುತ್ತಿದ್ದರೆಂಬುದು ಕೆಲವು ಶಾಸನಗಳಲ್ಲಿ ರಾಜನಿಗೆ ಅನ್ವಯವಾಗುವಂತಿರುವ ವೃದ್ಧೋಪದೇಶ ಗ್ರಾಹೀ ಎಂಬ ಮಾತಿನಿಂದ ತಿಳಿಯುತ್ತದೆ. ಹರಿವರ್ಮನಿಗೆ ಅವನ ಕಕ್ಕ ಶಿವರಥನೂ ಇಮ್ಮಡಿ ಕೃಷ್ಣವರ್ಮನಿಗೆ ಹರಿದತ್ತ ಶ್ರೇಷ್ಠಿಯೂ ಮೃಗೇಶವರ್ಮನಿಗೆ ಧರ್ಮನನ್ದಆಚಾರ್ಯ ಮತ್ತು ರವಿನನ್ದ್ಯಾಚಾರ್ಯರು ಉಪದೇಶಕರಾಗಿದ್ದರು.

ಕದಂಬರ ವಿಸ್ತಾರ ರಾಜ್ಯದಲ್ಲಿ ವಿವಿಧ ಪ್ರದೇಶಗಳನ್ನು ರಾಷ್ಟ್ರ, ವಿಷಯ, ನಾಡು ಈ ರೀತಿಯ ಸಣ್ಣ ಆಡಳಿತ ಘಟಕಗಳಾಗಿ ವಿಂಗಡಿಸಲಾಗಿತ್ತು. ಅವರ ಶಾಸನಗಳಲ್ಲಿ ಸ್ಥಾನಕುನ್ದೂರ ವಿಷಯ, ಕರವನ್ನಾಡ್ಗ ವಿಷಯ, ತಗರೆ ವಿಷಯ, ಮೊಗಲೂರು ವಿಷಯ, ಸೇಂದ್ರಕ ವಿಷಯ, ಆಸನ್ದಿ ವಿಷಯ ಈ ಪ್ರಾಂತ್ಯಗಳ ಹೆಸರುಗಳು ಬರುತ್ತವೆ. ಕದಂಬ ವಿಷ್ಣುಶರ್ಮನ ತಂಗಳಿ ಶಾಸನದಲ್ಲಿ ಸಿನ್ದುಥಯಾ ರಾಷ್ಟ್ರದ ಹೆಸರಿದೆ. ಹಲ್ಮಿಡಿ ಶಾಸನದಲ್ಲಿ ನರಿದಾವಿಳೆನಾಡನ್ನು ಹೆಸರಿಸಿದೆ. ಪ್ರಾಂತೀಯ ವಿಭಾಗಗಳಲ್ಲಿನ ಆಡಳಿತ ಹೇಗಿತ್ತೆಂಬುದಕ್ಕೆ ಸ್ಪಷ್ಟ ಆಧಾರಗಳಿಲ್ಲ. ಆದರೆ ಸೇಂದ್ರಕ ವಿಷಯದಂತ ಭಾಗದಲ್ಲಿ ಸೇಂದ್ರಕರು, ಹಾಗೇ ಕೊಂಕಣದ ಭಾಗದಲ್ಲಿ ಕೇಕಯರು ಈ ರೀತಿಯ ಸಣ್ಣ ರಾಜವಂಶಗಳವರು ವಂಶಪಾರಂಪರ್ಯವಾಗಿ ಅಧಿಕಾರದಲ್ಲಿರುತ್ತಿದ್ದರೆಂದು ತೋರುತ್ತದೆ. ಈ ಕಾಲದ ಶಾಸನಗಳಲ್ಲಿ ಉಕ್ತವಾಗಿರುವ ವಿಷಯಪತಿ, ಸಾಮಂತ, ಗ್ರಾಮಭೋಗಿಕ, ಮಹತ್ತರ, ದೇಶಾಧಿಪತಿ, ರಾಜಪುರುಷ ಮೊದಲಾದವರು ಪ್ರಾಂತ್ಯಗಳ ಹಾಗೂ ಗ್ರಾಮಗಳ ಅಧಿಕಾರಿಗಳಾಗಿರಬಹುದು. ಸೇನಾಪತಿ, ಬಹುಶಃ ಸಟ್ಟಿಜ್ಞ ಇವರುಗಳು ಸೈನ್ಯದ ಅಧಿಕಾರಿಗಳಾಗಿದ್ದರು.

ರಾಜರು ಪ್ರಜೆಗಳಿಂದ ಅನೇಕ ರೀತಿಯ ತೆರಿಗೆಗಳನ್ನು ಸಂಗ್ರಹಿಸಿ ಕೋಶಾಭಿವೃದ್ಧಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು. ಹಲ್ಮಿಡಿ ಶಾಸನದಲ್ಲಿ ಪತ್ತೊನ್ದಿ ಕುಱುಮ್ಬಿಡಿ ಈ ತೆರಿಗೆಗಳ ಹೆಸರು ಇವೆ.

**ಆರ್ಥಿಕ-ಸಾಮಾಜಿಕ ಸ್ಥಿತಿ :** ಕದಂಬರ ರಾಜಕೀಯ ಇತಿವೃತ್ತವನ್ನು ಗಮನಿಸಿದರೆ ಈ ಕಾಲದಲ್ಲಿ ಭದ್ರವಾದ ಆರ್ಥಿಕ ಸ್ಥಿತಿ ಮತ್ತು ವ್ಯವಸ್ಥೆಗಳು ಇದ್ದಂತೆ ತೋರುತ್ತದೆ. ವ್ಯವಸಾಯ ನಾಡಿನ ಮುಖ್ಯ ಆರ್ಥಿಕ ಮೂಲವಾಗಿತ್ತು. ಹಲವಾರು ಶಾಸನಗಳಲ್ಲಿರುವ ಭೂಮಿದಾನ ಮಾಡಿರುವುದರ ಪ್ರಸ್ತಾಪ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಭೂಮಿ ಸ್ಥಿರಾಸ್ತಿ, ಸರ್ವಕಾಲದಲ್ಲೂ ಉತ್ಪನ್ನ ನೀಡಬಲ್ಲುದು ಎಂಬುದೇ ಇದಕ್ಕೆ ಕಾರಣ. ವ್ಯವಸಾಯ ಭೂಮಿಗಳಲ್ಲಿ ಗಜ್ಜಿದ, ಖಜ್ಜಾಣ ಮೊದಲಾದ ಭಿನ್ನರೀತಿಯವು ಇದ್ದುದ್ದು ಕಂಡುಬರುತ್ತದೆ. ವ್ಯವಸಾಯದ ಅಭಿವೃದ್ಧಿಗೆ ರಾಜ್ಯದ ಪ್ರೋತ್ಸಾಹವೂ ಇರುತ್ತಿತ್ತು. ಚಂದ್ರವಳ್ಳಿ ಶಾಸನದಲ್ಲಿ ಮಯೂರಶರ್ಮ ಅಲ್ಲಿ ಕೆರೆ ಕಟ್ಟಿಸಿದ ವಿಷಯವಿದೆ. ರವಿಮಹಾರಾಜನ ಗುಡ್ನಾಪುರ ಶಾಸನದಲ್ಲಿ ಗುಡ್ಡ ತಟಾಕದ ಪ್ರಸ್ತಾಪವಿದೆ. ಕಾಕುತ್ಸ್ಥವರ್ಮ ತಾಳಗುಂದದಲ್ಲಿ ಕೆರೆಯೊಂದನ್ನು ಕಟ್ಟಿಸಿದ. ಪಶುಪಾಲನೆ, ನೇಯ್ಗೆ ಮೊದಲಾದ ಇತರ ಕಸಬುಗಳೂ ಈ ಕಾಲದಲ್ಲಿದ್ದಿರಬೇಕು. ಬಹುಶಃ ವ್ಯಾಪಾರ ಸಾಕಷ್ಟು ಅಭಿವೃದ್ಧಿಯಾಗಿರಬೇಕು. ಆದರೆ ಈ ವಿಷಯದಲ್ಲಿ ತಕ್ಕಷ್ಟು ಆಧಾರಗಳು ದೊರಕುವುದಿಲ್ಲ. ಕದಂಬರು ಗುಪ್ತರೇ ಮೊದಲಾದವರೊಡನೆ ಸಂಬಂಧ ಬೆಳೆಸಿದ್ದುದು, ಮಯೂರಶರ್ಮನ ಕಂಚಿಯ ಪ್ರಯಾಣ ಮೊದಲಾದ ಪ್ರಸ್ತಾಪಗಳು ಅಂದಿನ ಕಾಲದಲ್ಲಿ ಭಾರತದ ಇತರ ಭಾಗಗಳೊಡನೆ ಕದಂಬ ರಾಜ್ಯ ಒಳ್ಳೆಯ ಸಂಪರ್ಕವ್ಯವಸ್ಥೆ ಹೊಂದಿರಬೇಕೆನಿಸುತ್ತದೆ. ಇವು ವ್ಯಾಪಾರಕ್ಕೂ ಸಹಕಾರಿಯಾಗಿರಬೇಕು. ಅಲ್ಲದೆ ಆಗ್ನೇಯ ಏಷ್ಯದಲ್ಲಿ ದೊರಕಿರುವ ಹಲವು ಶಾಸನಗಳಲ್ಲಿ ಕದಂಬರ ಕಾಲದಲ್ಲಿದ್ದ ಲಿಪಿ ಹಾಗೂ ಶಾಸನ ಸ್ವರೂಪ ಅಲ್ಲಿಯೂ ಪ್ರಚಲಿತವಾಗಿತ್ತು ಎಂಬುದಕ್ಕೆ ಸ್ಪಷ್ಟ ಸಾಕ್ಷ್ಯಗಳು ದೊರಕುವುದರಿಂದ, ದ್ವೀಪಾಂತರಗಳೊಡನೆ ಕದಂಬರ ಕಾಲದಲ್ಲಿ ಕರ್ನಾಟಕ ಸಂಪರ್ಕ ಬೆಳೆಸಿಕೊಂಡಿತ್ತೆಂಬುದು ತಿಳಿಯುತ್ತದೆ. ಅಲ್ಲದೆ ಬನವಾಸಿಯ ಹೆಸರು ಈ ಕಾಲದಲ್ಲಿ ಬರ್ಮಾ, ಶ್ರೀಲಂಕಾಗಳಲ್ಲಿ ಸಹ ಪ್ರಸಿದ್ಧವಾಗಿತ್ತು. ಈ ಸಂಪರ್ಕಗಳು ಪ್ರಾರಂಭಿಕವಾಗಿ ವ್ಯಾಪಾರದಿಂದ ಕುದುರಿದ್ದರೆ ಆಶ್ಚರ್ಯವಿಲ್ಲ.

ವ್ಯಾಪಾರದ ಸಂಬಂಧದಲ್ಲಿ ರಾಜನ ಪ್ರೋತ್ಸಾಹವೂ ಸಾಕಷ್ಟಿರಬೇಕು. ಕದಂಬರ ಒಂದು ಶಾಸನದಲ್ಲಿ ನನ್ದಪದವೆಂಬ ಹಾದಿಯನ್ನೂ ಕರ್ಣ್ಣೀಸಕವೆಂಬ ನದಿಗೆ ಒಂದು ಸೇತುವೆಯನ್ನೂ ಮಾಡಿಸಿದ ವಿಷಯವಿದೆ. ರಾಜರು ನಾಣ್ಯಗಳನ್ನು ಹೊರಡಿಸುತ್ತಿದ್ದುದು ವ್ಯಾಪಾರ ಸುಗಮವಾಗಿ ನಡೆಯಲು ಸಹಾಯಕವಾಗಿತ್ತು. ಹೀಗೆ ಬೆಳೆಯುತ್ತಿದ್ದ ಆರ್ಥಿಕ ವ್ಯವಸ್ಥೆಯಿಂದ ದೇಶ ಸಮೃದ್ಧವಾಗಿ, ರಾಜಧಾನಿ ಬನವಾಸಿಯಲ್ಲದೆ, ತಾಳಗುಂದ, ಹಲಶಿ, ಹರೇಶಪುರ, ಉಚ್ಚಂಗಿ ಮೊದಲಾದ ಅನೇಕ ನಗರಗಳು ಹುಟ್ಟಿಕೊಳ್ಳುವ ಸಾಧ್ಯತೆ ಉಂಟಾಯಿತು.

ಬನವಾಸಿಯ ಕದಂಬರ ಕಾಲದಲ್ಲಿ ಅವರ ರಾಜ್ಯದಲ್ಲಿ ಅನೇಕ ಧರ್ಮಗಳು ಪ್ರಚಲಿತವಾಗಿದ್ದುವು. ಆದರೆ ಈ ಹಿಂದೆ ಬನವಾಸಿ ಪ್ರದೇಶದಲ್ಲಿ ನೆಲೆಗೊಂಡಿದ್ದ ಬೌದ್ಧಧರ್ಮ ಎಷ್ಟರ ಮಟ್ಟಿಗೆ ಮುಂದುವರಿಯಿತು ಎಂಬುದಕ್ಕೆ ಐತಿಹಾಸಿಕ ಮಾಹಿತಿಗಳು ದೊರಕುವುದಿಲ್ಲ. ಹೊನ್ನಾವರದಲ್ಲಿ ದೊರಕಿದ ಒಂದು ತಾಮ್ರಪಟದಲ್ಲಿ ಮಾತ್ರ ಕದಂಬ ರವಿವರ್ಮನ ಸಾಮಂತನಾಗಿದ್ದ ಕೇಕಯ ಅರಸನೊಬ್ಬ ಬೌದ್ಧರಿಗೆ ದಾನಕೊಟ್ಟ ಪ್ರಸ್ತಾಪವಿದೆ. ಈ ಕಾಲದಲ್ಲಿ ಜೈನಧರ್ಮ ಮತ್ತು ಹಿಂದುಧರ್ಮಗಳು ಪ್ರಬಲಗೊಂಡು ಬೌದ್ಧಧರ್ಮ ಹಿಂದೆ ಸರಿದಿದ್ದಂತೆ ತೋರುತ್ತದೆ.

ಬನವಾಸಿಯ ಕದಂಬರ ಕಾಲದಲ್ಲಿ ಜೈನಧರ್ಮಕ್ಕೆ ಸ್ವಲ್ಪಮಟ್ಟಿನ ರಾಜ ಪ್ರೋತ್ಸಾಹ ದೊರಕಿತು. ಯುವರಾಜ ಕಾಕುತ್ಸ್ಥವರ್ಮ ಪಲಾಶಿಕೆಯಲ್ಲಿದ್ದಾಗ ಅರ್ಹಂತರಿಗೆ ಭೂಮಿದಾನ ಮಾಡಿದನೆಂದು ಹಲಶಿ ತಾಮ್ರಪಟದಲ್ಲಿ ಹೇಳಿದೆ. ಹಲಶಿಯ ಇನ್ನೊಂದು ತಾಮ್ರಪಟದಲ್ಲಿ ಮೃಗೇಶವರ್ಮ ತನ್ನ ತಂದೆಯ ಜ್ಞಾಪಕಾರ್ಥವಾಗಿ ಅದೇ ನಗರದಲ್ಲಿ ಜಿನಾಲಯವೊಂದನ್ನು ಕಟ್ಟಿಸಿ ಜೈನರಿಗೆ ದತ್ತಿಗಳನ್ನು ಕೊಟ್ಟ ವಿಷಯವಿದೆ. ಇದೇ ಹಲಶಿಯ ಜಿನಾಲಯಕ್ಕೆ ದತ್ತಿ ನೀಡಿದ ಬಗ್ಗೆ ರವಿವರ್ಮನ ಕಾಲದ ಶಾಸನಗಳೂ ಇವೆ. ರವಿವರ್ಮ ತನ್ನ ರಾಜಧಾನಿಯಲ್ಲಿ ಅರಮನೆಯ ಬಳಿಯಲ್ಲೇ ಕಾಮಜಿನಾಲಯವೊಂದನ್ನು ಕಟ್ಟಿಸಿದ ವಿಷಯ ಗುಡ್ನಾಪುರ ಶಾಸನದಿಂದ ತಿಳಿಯುತ್ತದೆ. ಕದಂಬರ ಕಾಲದಲ್ಲಿ ಜೈನರು ರಾಜರ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿದ್ದಿರಬೇಕು. ರವಿಮಹಾರಾಜ ಜೈನ ಕುಮಾರದತ್ತನಿಂದ ರಾಜ್ಯ ಹಾಗೂ ಧರ್ಮದ ವಿಷಯದಲ್ಲಿ ಸಲಹೆ ಪಡೆಯುತ್ತಿದ್ದನೆಂದು ಒಂದು ಶಾಸನ ತಿಳಿಸುತ್ತದೆ. ಈ ಕಾಲದ ಜೈನಧರ್ಮದಲ್ಲಿ ಹಲವು ಪಂಥೀಯ ಪ್ರಭೇದಗಳಿದ್ದುವು. ಕದಂಬ ಶಾಸನಗಳಲ್ಲಿ ಯಾಪನೀಯ ನಿರ್ಗ್ರಂಥ ದಿಗಂಬರ ಕೂರ್ಚಕ ಮತ್ತು ಶ್ವೇತಪಟ (ಶ್ವೇತಾಂಬರ) ಪಂಥಗಳ ಪ್ರಸ್ತಾಪ ದೊರಕುತ್ತದೆ. ಜೈನ ದೇವಾಲಯಗಳ ರಚನೆ, ಮುನಿಗಳು ಅಲ್ಲಿ ವಾಸಿಸುತ್ತಿದ್ದದ್ದು, ಬಸದಿಗಳಲ್ಲಿ ಉಪಲೇಪನ, ಅಭ್ಯಂಜನ, ಭಿನ್ನ ಸಂಸ್ಕಾರ, ಮಹಿಮಾ (ಉತ್ಸವ) ಮೊದಲಾದವೂ ಆಹಾರ, ವಿದ್ಯಾದಾನಗಳೂ ನಡೆಯುತ್ತಿದ್ದುದು ಸಮಕಾಲೀನ ಶಾಸನಗಳಿಂದ ತಿಳಿಯುತ್ತದೆ.

ಬನವಾಸಿಯ ಕದಂಬರು ಬಹುತೇಕ ವೈದಿಕ ಧರ್ಮಾವಲಂಬಿಗಳಾಗಿದ್ದರು. ತಾಳಗುಂದ ಶಾಸನದಲ್ಲಿ ವೇದಾಧ್ಯಯನ ಮತ್ತು ಯಜ್ಞಯಾಗಾದಿಗಳಲ್ಲಿ ಕದಂಬ ಮನೆತನದವರು ನಿರತರಾಗಿದ್ದರೆಂದು ಹೇಳಿದೆ. ರವಿವರ್ಮ, ಕೃಷ್ಣವರ್ಮ ಮೊದಲಾದ ಅರಸರು ಅಶ್ವಮೇಧಾದಿ ಯಜ್ಞಗಳನ್ನು ಮಾಡಿದ್ದರು. ಕದಂಬ ವಂಶದವರು ಅಹಿಚ್ಛತ್ರದಿಂದ ಬ್ರಾಹ್ಮಣ ಕುಟುಂಬಗಳನ್ನು ತಂದು ತಮ್ಮ ರಾಜ್ಯದಲ್ಲಿ ನೆಲಸಿದರೆಂದು ಐತಿಹ್ಯಗಳಿವೆ. ಆ ಕಾಲದಲ್ಲಿ ವೇದಪಾರಗರೂ ಛನ್ದೋಪಾರಗರೂ ಯಜ್ಞವಿದರೂ ಷಟ್ಕರ್ಮನಿರತರೂ ಆದ ಬ್ರಾಹ್ಮಣರು ಇದ್ದರೆಂಬ ವಿಷಯ ಅನೇಕ ಕದಂಬ ಶಾಸನಗಳಲ್ಲಿ ದೊರೆಯುತ್ತದೆ. ಈ ಕಾಲದಲ್ಲಿ ವೈದಿಕ ಹಿಂದು ಧರ್ಮ ಮುಂದುವರೆಯುತ್ತಿದ್ದರೂ ಪೌರಾಣಿಕ ಹಿಂದುಧರ್ಮ ಸಹ ಪ್ರಚಾರದಲ್ಲಿತ್ತು. ಕದಂಬರಾಜರ ವ್ಯಕ್ತಿನಾಮಗಳಲ್ಲಿ ಕಂಡುಬರುವ ಭಗೀರಥ, ರಘು, ಕಾಕುತ್ಸ್ಥ, ರವಿ, ಕೃಷ್ಣ, ಹರಿ, ಭಾನು ಇಂಥ ಹೆಸರುಗಳು ರಾಮಾಯಣದೊಳಗಿನ ಮತ್ತು ವೈಷ್ಣವೀಯ ಹೆಸರುಗಳೇ ಆಗಿವೆ. ಮಯೂರಶರ್ಮನ ಹೆಸರು ಸ್ಕಂದನನ್ನು ಸೂಚಿಸುತ್ತದೆ. ಹಲ್ಮಿಡಿ ಮೊದಲಾದ ಶಾಸನಗಳಲ್ಲಿ ವಿಷ್ಣುಸ್ತುತಿ ತಾಳಗುಂದ ಶಾಸನದ ಮಹಾದೇವ ದೇವಾಲಯದ ಉಲ್ಲೇಖ, ಅಲ್ಲದೆ ಇತರ ಕೆಲವು ಶಾಸನಗಳಲ್ಲಿರುವ ಬ್ರಹ್ಮ ಮತ್ತು ತ್ರಿಮೂರ್ತಿಗಳನ್ನು ಕುರಿತ ಪ್ರಾರ್ಥನಾಪದ್ಯಗಳು ಈ ಕಾಲದ ಪೌರಾಣಿಕ ಹಿಂದುಧರ್ಮದ ಪ್ರಭಾವವನ್ನು ಪರಿಚಯಮಾಡಿಕೊಡುತ್ತವೆ. ಹಿಂದು ದೇವಾಲಯಗಳ ರಚನೆಯೂ ಈ ಕಾಲದಲ್ಲಿದ್ದುದಕ್ಕೆ ತಾಳಗುಂದ ಶಾಸನ ಮಾಹಿತಿ ನೀಡುತ್ತದೆ. ಶಿವಮೊಗ್ಗ ಜಿಲ್ಲೆಯ ಜಂಬೆಹಳ್ಳಿಯಲ್ಲಿ ಈ ಕಾಲದ ಮಹಿಷಮರ್ದಿನಿಯ ಶಿಲ್ಪವೊಂದು ದೊರಕಿದೆ.

ಜಂಬೆಹಳ್ಳಿಯ ದುರ್ಗಾ ವಿಗ್ರಹ

ವರ್ಣ ಮತ್ತು ಜಾತಿಗಳು ಈ ಕಾಲದ ಹೊತ್ತಿಗೆ ವ್ಯವಸ್ಥಿತವಾಗುತ್ತಿದ್ದುವು. ಮನು ಮೊದಲಾದವರ ಧರ್ಮಶಾಸ್ತ್ರಗಳು ಸಮಾಜದ ರೀತಿನೀತಿಗಳಿಗೆ ಆಧಾರಸ್ತಂಭಗಳಾಗಿ ಪರಿಗಣಿತವಾಗಿದ್ದುವು. ಚತುರ್ವರ್ಣಗಳ ಪ್ರಸ್ತಾಪವಲ್ಲದೆ, ವರ್ಣಾಶ್ರಮ ಧರ್ಮವನ್ನು ಸಂರಕ್ಷಿಸುವುದು ರಾಜನ ಕರ್ತವ್ಯವೆಂಬ ಭಾವನೆ ಬೆಳೆದಿತ್ತು. ಆದರೆ ಈ ವರ್ಣ ವ್ಯವಸ್ಥೆ ಮುಂದಿನ ಕಾಲದಲ್ಲಿದ್ದಷ್ಟು ಸ್ನಿಗ್ಧವಾಗಿದ್ದಂತೆ ತೋರುವುದಿಲ್ಲ. ಬ್ರಾಹ್ಮಣನಾಗಿದ್ದ ಮಯೂರಶರ್ಮ ಕ್ಷತ್ರಿಯಧರ್ಮವನ್ನು ಅನುಸರಿಸಿದ್ದು, ಆ ಕಾಲದ ಬ್ರಾಹ್ಮಣ ವರ್ಗಗಳಲ್ಲಿ ಹಲವರು ಸಂಸ್ಕೃತಾನ್ಯ ದೇಶೀರೂಪದ ವ್ಯಕ್ತಿನಾಮಗಳನ್ನು ಹೊಂದಿದ್ದು (ಉದಾ: ತದಂಗುಟ್ಟಿ) ಬ್ರಾಹ್ಮಣ ವಂಶೀಯನಾದ ಕಾಕುತ್ಸ್ಥ ವೈಶ್ಯಮೂಲದ ಗುಪ್ತರಂಥವರೊಡನೆ ಕೊಡುಕೊಳ್ಳುವ ಸಂಬಂಧ ಬೆಳೆಸಿದ್ದು ಮೊದಲಾದವು ಈ ಸ್ಥಿತಿಯ ಸೂಚಕಗಳಾಗಿವೆ. ಕದಂಬರ ಕಾಲದ ಹೊತ್ತಿಗೆ ವೃತ್ತಿ ಸಂಬಂಧವಾದ ಜಾತಿಗಳೂ ಬೆಳೆದಿರಬಹುದಾದರೂ ಇದಕ್ಕೆ ಸ್ಪಷ್ಟ ನೇರ ಆಧಾರಗಳು ದೊರಕುವುದಿಲ್ಲ. ಸ್ವಕುಲದ ಬಗ್ಗೆ ಗೌರವ ಬಹುಮಟ್ಟಿಗೆ ಬೆಳೆದು ಬಂದಿದ್ದು ಕುಲಾಭಿಮಾನ ಮತ್ತು ಕುಲಶುದ್ಧಿ ಮೊದಲಾದ ಅಂಶಗಳು ವರ್ಣ ಜಾತಿಗಳು ಸ್ನಿಗ್ಧವಾಗಲು ಅವಕಾಶ ಮಾಡಿಕೊಟ್ಟಂತೆ ಕಾಣುತ್ತದೆ. ಈ ಪ್ರವೃತ್ತಿಯ ಬಗ್ಗೆ ಸಮಕಾಲೀನ ಶಾಸನಗಳಲ್ಲಿ ಸಾಂದರ್ಭಿಕ ಸಾಕ್ಷ್ಯಗಳು ದೊರಕುತ್ತವೆ. ಜೈನ ಮತ್ತು ಬೌದ್ಧ ಸಂಪ್ರದಾಯಾನುಯಾಯಿಗಳು ಈ ವರ್ಣಜಾತಿ ವ್ಯವಸ್ಥೆಯ ಹೊರಗಿದ್ದಂತೆ ತೋರುತ್ತದೆ.

ಬನವಾಸಿಯು ಕದಂಬರ ಕಾಲದಲ್ಲಿ ಹುಟ್ಟಿದ ತಾಮ್ರ, ಶಿಲಾಶಾಸನಗಳನ್ನು ನೋಡಿದರೆ ಆ ಕಾಲದಲ್ಲಿ ಸಾಕಷ್ಟು ವಿದ್ಯಾಪ್ರೋತ್ಸಾಹ ವಿರಬೇಕೆಂಬುದು ತಿಳಿಯುತ್ತದೆ. ಬಹುಶಃ ತಾಳಗುಂದದಂಥ ಸ್ಥಳಗಳಲ್ಲಿ ಬ್ರಹ್ಮಪುರಿಗಳಿದ್ದು ಅವು ವಿದ್ಯಾ ಕೇಂದ್ರಗಳಾಗಿರಬೇಕು. ಸಮಕಾಲೀನ ಶಾಸನಗಳಲ್ಲಿ ನಾನಾ ಗೋತ್ರಸೂತ್ರದ ಬ್ರಾಹ್ಮಣರಿಗೆ ಗ್ರಾಮದಾನ ಮಾಡಿರುವ ವಿಷಯಗಳು ತಿಳಿಯುವುದರಿಂದ ಅಗ್ರಹಾರಗಳೂ ಇದ್ದು ವಿದ್ಯಾಧ್ಯಯನ ಮತ್ತು ಪ್ರಸಾರಕ್ಕೆ ಸಹಾಯಕವಾಗಿರಬಹುದೆಂದು ಊಹಿಸಬಹುದು. ಜೈನ ಕೇಂದ್ರಗಳಲ್ಲಿ ವಿದ್ಯಾದಾನವೂ ಮುಖ್ಯವಾಗಿತ್ತು. ವೇದ, ಛಂದಸ್ಸುಗಳಲ್ಲಿ ಪಾರಂಗತರಾಗಿದ್ದ ಬ್ರಾಹ್ಮಣರ ಪ್ರಸ್ತಾಪ ಶಾಸನಗಳಲ್ಲಿವೆ. ಶಾಸ್ತ್ರಾಗಮಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಜೈನ ಕುಮಾರದತ್ತ ಎಂಬುವನ ಉಲ್ಲೇಖ ಹಲಶಿಯ ತಾಮ್ರಪಟದಲ್ಲಿದೆ. ಇವು ಆಕಾಲದ ಅಧ್ಯಯನ ವಿಷಯಗಳ ಬಗ್ಗೆ ಸ್ವಲ್ಪ ಸೂಚನೆ ನೀಡುತ್ತವೆ. ಸಂಸ್ಕೃತ ಭಾಷೆ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಾರಕ್ಕೆ ಬಂದಿದ್ದು ಕದಂಬರ ಕಾಲದಲ್ಲಿ, ಇವರ ಹಲವಾರು ಶಾಸನಗಳು ಸಂಸ್ಕೃತ ಭಾಷೆಯಲ್ಲಿವೆ. ತಾಳಗುಂದ ಶಾಸನದಂಥ ಉತ್ಕೃಷ್ಟ ಕಾವ್ಯರಚನೆಗಳೂ ಈ ಕಾಲದಲ್ಲಿ ಕಂಡುಬರುತ್ತವೆ. ಬಹುಶಃ ಕನ್ನಡ ಭಾಷೆಯೂ ಆಡಳಿತಾದಿಗಳಲ್ಲಿ ಉಪಯೋಗಕ್ಕೆ ಬಂದು ಅದು ಗ್ರಂಥಸ್ಥ ಭಾಷೆಯಾಗಬಲ್ಲ ರೂಪವನ್ನು ಪಡೆದುಕೊಳ್ಳಲಾರಂಭಿಸಿರಬೇಕೆಂದು ಹಲ್ಮಿಡಿ ಶಾಸನದಿಂದ ತಿಳಿಯಬಹುದು. ಲಲಿತ ಕಲೆಗಳ ಬಗ್ಗೆ ಸಮಕಾಲೀನ ಮಾಹಿತಿಗಳು ಕಡಿಮೆ. ಸಮಾಜದ ಉನ್ನತ ವರ್ಗಗಳಲ್ಲಿ ಶಿಷ್ಟಸಂಗೀತ ರೂಪಿತವಾಗಿದ್ದಿತೆಂಬುದಕ್ಕೆ ತಾಳಗುಂದ ಶಾಸನದಲ್ಲಿ ಆಧಾರ ದೊರಕುತ್ತದೆ. ಕದಂಬರ ಮನೆಯಲ್ಲಿ ಸಂಗೀತ ಪ್ರತಿಧ್ವನಿಸುತ್ತಿತ್ತು ಎಂದು ಅದರಲ್ಲಿ ಹೇಳಲಾಗಿದೆ.

**ವಾಸ್ತುಶಿಲ್ಪ :** ಕಾಕುತ್ಸ್ಥವರ್ಮನ ತಾಳಗುಂದ ಶಾಸನದ ಮಹಾದೇವ ದೇವಾಲಯದ ಉಲ್ಲೇಖ, ಹಲಶಿ ತಾಮ್ರಪಟದಲ್ಲಿ ಬರುವ ಪಲಾಸಿಕ ಎಂಬಲ್ಲಿ ಮೃಗೇಶ ಕಟ್ಟಿಸಿದ ಜೈನಬಸದಿಯ ಪ್ರಸ್ತಾಪ ಇಂಥವು ಆ ಕಾಲದಲ್ಲಿ ದೇವಾಲಯ ರಚನೆ ರೂಢಿಯಲ್ಲಿತ್ತೆಂಬುದಕ್ಕೆ ಸಾಕ್ಷ್ಯಗಳಾಗಿವೆ. ಆದರೆ ಮೊದಲ ಕದಂಬ ಅರಸರ ಕಾಲಕ್ಕೆ ಖಚಿತವಾಗಿ ಸೇರಿದ ಕಟ್ಟಡಗಳನ್ನು ಗುರುತಿಸಿಲ್ಲವಾದ್ದರಿಂದ, ಅಂದಿನ ದೇವಾಲಯಗಳ ಸ್ವರೂಪವೇನು, ಭಾರತೀಯ ವಾಸ್ತುಶಿಲ್ಪ ಪರಂಪರೆಯಲ್ಲಿ ಅವುಗಳ ಸ್ಥಾನವೇನು ಎಂಬ ಮುಖ್ಯ ವಿಷಯಗಳು ತಿಳಿಯುವಂತಿಲ್ಲ. ದಕ್ಷಿಣ ಭಾರತದಲ್ಲಿ ಶಿಲಾದೇವಾಲಯಗಳ ರಚನಾ ಸಂಪ್ರದಾಯ ಸುಮಾರು 5-6ನೆಯ ಶತಮಾನದಲ್ಲಿ ಬಾದಾಮಿಯ ಚಳುಕ್ಯ ಮತ್ತು ಕಂಚಿಯ ಪಲ್ಲವ ಅರಸರ ಆಶ್ರಯದಲ್ಲಿ ವಿಶೇಷವಾಗಿ ಬೆಳೆಯಿತೆಂದು ಎಲ್ಲ ವಿದ್ವಾಂಸರೂ ಹೇಳುತ್ತಾರೆ. ಹಾಗಿದ್ದಲ್ಲಿ ಬನವಾಸಿಯ ಕದಂಬರ ಕಾಲದ ದೇವಾಲಯಗಳು ಮರ ಅಥವಾ ಇಟ್ಟಿಗೆಯಲ್ಲಿ ಕಟ್ಟಿದವುಗಳಾಗಿರಬೇಕು. ಶಿಲಾ ದೇವಾಲಯ ಗಳಿದ್ದುದೇ ಆದರೆ ಚಳುಕ್ಯ ಮತ್ತು ಪ್ರಾಯಶಃ ಪಲ್ಲವ ಶೈಲಿಗೆ ಕೂಡ ಮೂಲಮಾದರಿಗಳನ್ನು ಇವು ಒದಗಿಸಿರಬಹುದು. ಈಗ ತಾಳಗುಂದದಲ್ಲಿ ಕದಂಬ ಶಾಸನಗಳಲ್ಲಿ ಹೆಸರಿಸಿರುವ ಪ್ರಣವೇಶ್ವರ ದೇವಾಲಯ ವೆಂಬುದೊಂದಿದ್ದರೂ ಅದು ಇತ್ತೀಚೆಗೆ ಬಹುವಾಗಿ ನವೀಕರಿಸಲ್ಪಟ್ಟಿದ್ದು, ಸ್ಪಷ್ಟ ಪ್ರಾಚೀನ ಅಂಶಗಳೇನನ್ನೂ ಉಳಿಸಿಕೊಂಡಿಲ್ಲ. ಮೊದಲ ಕದಂಬರ ರಾಜಧಾನಿಯಾದ ಬನವಾಸಿಯಲ್ಲಿ ಅವರ ಕುಲದೈವ ಮಧುಕೇಶ್ವರನ ಗುಡಿ ಇದೆ. ಈಗ ಇರುವ ಕಟ್ಟಡದ ಮುಂಭಾಗವೆಲ್ಲಾ 12ನೆಯ ಶತಮಾನದ್ದು. ಗರ್ಭಗುಡಿ, ಸುತ್ತಿರುವ ಪ್ರದಕ್ಷಿಣಾಪಥ ಮತ್ತು ಒಳಮಂಟಪವನ್ನೊಳಗೊಂಡ ಮೂಲ ದೇವಾಲಯ ಹಳೆಯದು. ಆದರೆ ಇವುಗಳ ವಾಸ್ತುವಿನ್ಯಾಸ ಮತ್ತು ಕಂಬಗಳ ರಚನೆಗಳು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವೇ ಮುಂತಾದ 8ನೆಯ ಶತಮಾನದ ಕಟ್ಟಡಗಳ ಮಾದರಿಯಲ್ಲಿರುವುದರಿಂದ, ಈ ಗುಡಿಯೂ ಅದೇ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಬನವಾಸಿ ಪ್ರಾಂತ್ಯ ಚಳುಕ್ಯರ ಅಧೀನದಲ್ಲಿತ್ತಾದ್ದರಿಂದ ಈಗಿನ ಬನವಾಸಿಯ ಮೂಲಗುಡಿ ಸಹ ಕದಂಬರ ಕೊಡುಗೆಯೆಂದು ಹೇಳುವುದು ಕಷ್ಟ. ಬೆಳಗಾಂವಿ ಜಿಲ್ಲೆಯ ಖಾನಪುರ ತಾಲ್ಲೂಕಿನ ಹಲಶಿಯಲ್ಲಿ ಕೆಲವು ಪ್ರಾಚೀನ ದೇವಾಲಯಗಳಿವೆ. ಶೈಲಿಯ ದೃಷ್ಟಿಯಿಂದ ನೋಡುವುದಾದರೆ ಇಲ್ಲಿಯ ಜೈನಬಸದಿ ಅತ್ಯಂತ ಹಳೆಯದು. ಇದರಲ್ಲಿ ಗರ್ಭಗೃಹ ಮತ್ತು ಸುಕನಾಸಿ ಮಾತ್ರ ಇವೆ. ಸುಕನಾಸಿ ಗರ್ಭಗೃಹಕ್ಕಿಂತ ದೊಡ್ಡದು. ದೊಡ್ಡ ದೊಡ್ಡ ಒರಟುಕಲ್ಲುಗಳನ್ನು ಪೇರಿಸಿ ಗೋಡೆಗಳನ್ನು ಏರಿಸಲಾಗಿದೆ. ದೇವಾಲಯದಲ್ಲಿ ಯಾವ ರೀತಿಯ ಅಲಂಕರಣವೂ ಇಲ್ಲ. ನಯನಾಜೂಕಿಲ್ಲದೆ ಕಟ್ಟಿರುವ ಈ ಕಟ್ಟಡ ಪ್ರಾಯಶಃ ದಕ್ಷಿಣ ಭಾರತದ ಶಿಲಾಕಟ್ಟಡಗಳ ರಚನೆಯಲ್ಲಿ ಪ್ರಾರಂಭಿಕ ಘಟ್ಟದ್ದೆಂದು ಹೇಳಬಹುದು. ಇಲ್ಲಿ ಯಾವ ಶಾಸನಗಳೂ ದೊರೆಕಿಲ್ಲವಾದ್ದರಿಂದ ಇದರ ಕಾಲನಿರ್ದೇಶ ಕಷ್ಟ. ಆದರೆ ಮೃಗೇಶವರ್ಮನ ತಾಮ್ರಪಟದಲ್ಲಿ ಉಲ್ಲೇಖಿಸಿರುವ ಜೈನಬಸದಿ ಇದೇ ಆದರೆ ಇದು ಅವನ ಕಾಲದ್ದೆಂದು ಹೇಳಬಹುದು. ಹಾಗಿದ್ದಲ್ಲಿ ಈ ದೇವಾಲಯವೇ ಕರ್ನಾಟಕದಲ್ಲಿ ಉಳಿದುಬಂದಿರುವ ಅತ್ಯಂತ ಪ್ರಾಚೀನ ಶಿಲಾ ಕಟ್ಟಡವಾಗುತ್ತದೆ.



ರವಿವರ್ಮನ ಗುಡ್ನಾಪುರ ಶಾಸನ

ಬನವಾಸಿಯ ಕದಂಬರ ಕಾಲದ್ದೆಂದು ಸ್ಪಷ್ಟವಾಗಿ ಹೇಳಬಹುದಾದ ಶಿಲ್ಪಗಳು ಅಲ್ಪ. ಸೊರಬ ತಾಲ್ಲೂಕು ಜಂಬೆಹಳ್ಳಿಯಲ್ಲಿರುವ ದೇವಿ ದೇವಾಲಯದ ಮುಂದಿರುವ ಶಾಸನವೊಂದರಿಂದ ಆ ಗುಡಿ ಮೂಲತಃ ಕದಂಬ ಶಾಂತಿವರ್ಮನ ಕಾಲದಲ್ಲಿ ಕಟ್ಟಿದ್ದೆಂದು ತಿಳಿಯುತ್ತದೆ. ಈಗ ಗುಡಿ ಹಾಳಾಗಿದ್ದರೂ ಅಲ್ಲಿ ದೊರಕಿರುವ ದುರ್ಗಾವಿಗ್ರಹ ಆ ದೇವಾಲಯದ ಮೂಲಶಿಲ್ಪ ಎಂದು ಹೇಳಬಹುದು. ಈ ಶಿಲ್ಪದಲ್ಲಿರುವ ಚತುರ್ಭುಜ ಮಹಿಷಮರ್ದಿನಿ ಪ್ರಾಣಿಯಾಕೃತಿಯಲ್ಲಿರುವ ಅಸುರನನ್ನು ಮೆಟ್ಟಿ ಎಡಗೈಯಲ್ಲಿ ಎಮ್ಮೆಯ ಬಾಲವನ್ನು ಹಿಡಿದೆತ್ತಿದ್ದಾಳೆ. ಇತರ ಕೈಗಳಲ್ಲಿ ಶಂಖ, ಕತ್ತಿ, ತ್ರಿಶೂಲಗಳಿವೆ. ದೇವಿಯ ಸುಂದರ ಮುಖ, ಆಯುಧಗಳನ್ನು ಹಿಡಿದಿರುವ ರೀತಿ, ನಿರಾಯಾಸವಾಗಿ ಅಸುರನನ್ನು ಮೆಟ್ಟಿ ಕೊಲ್ಲುತ್ತಿರುವ ಭಾವ ಮುಂತಾದವು ಸ್ಫುಟವಾಗಿ ವ್ಯಕ್ತವಾಗಿವೆ. ಇದು ಒಂದು ಉತ್ತಮ ಕಲಾಕೃತಿ.

**ಶಾಸನಗಳು :** ಮೊದಲ ಕದಂಬ ವಂಶಕ್ಕೆ ಸೇರಿದ ಶಾಸನಗಳಲ್ಲಿ ಹೆಚ್ಚಿನವು ತಾಮ್ರಪಟಗಳು. ಇವು ಮೈಸೂರು, ಹಾಸನ, ಕಡೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ದೊರಕಿವೆ.

ಹಲ್ಮಿಡಿ ಶಾಸನ

ಕದಂಬರ ತಾಮ್ರಪಟಗಳಲ್ಲಿ ಓಲೆಗರಿಯ ರೀತಿಯ ತೆಳುವಾದ ಆಯಾಕಾರದ ತಾಮ್ರದ ಹಲಗೆಗಳ ಮೇಲೆ ಬರೆಹವಿದ್ದು, ಮೂರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ಹಲಗೆಗಳು ಅವುಗಳ ಒಂದು ಕೊನೆಯಲ್ಲಿರುವ ದುಂಡು ತೂತಿನ ಮೂಲಕ ತಾಮ್ರದ ಉಂಗುರದಿಂದ ಪೋಣಿಸಲ್ಪಟ್ಟಿರುತ್ತವೆ. ತಾಮ್ರದ ಉಂಗುರದ ಮೇಲೆ ಕದಂಬರ ರಾಜಚಿಹ್ನೆಯಾದ ಸಿಂಹಮುದ್ರೆ ಇರುತ್ತದೆ. ಇವುಗಳಲ್ಲಿರುವ ಲಿಪಿ ಬಹುತೇಕ ಪೆಟ್ಟಿಗೆಯ ತಲೆಯ ದಾಕ್ಷಿಣಾತ್ಯ ಬ್ರಾಹ್ಮೀ, ಭಾಷೆ ಸಂಸ್ಕೃತ ಗದ್ಯ. ಈ ತಾಮ್ರಪಟಗಳೆಲ್ಲ ದಾನಶಾಸನಗಳು. ದಾನ ಕೊಡುವ ರಾಜನ ಮತ್ತು ಅವನ ವಂಶದ ವಿವರಣೆ ಇವುಗಳಲ್ಲಿರುವುದರಿಂದ ಇವು ಅಮೂಲ್ಯ ಚಾರಿತ್ರಿಕ ದಾಖಲೆಗಳು. ಇದುವರೆಗೆ ಮೊದಲ ಕದಂಬರಲ್ಲಿ ಮೃಗೇಶವರ್ಮ ಮತ್ತು ಅವನ ಅನಂತರದ ಅರಸರ ತಾಮ್ರಶಾಸನಗಳು ಮಾತ್ರ ದೊರಕಿವೆ.



ಶಿವಮಾಂಧಾತೃವರ್ಮನ ಶಿವಮೊಗ್ಗ ಶಾಸನ

ಈ ಕಾಲದ ಶಿಲಾಶಾಸನಗಳು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಶಿವಮೊಗ್ಗ ಜಿಲ್ಲೆಯ ಮಳವಳ್ಳಿ ಮತ್ತು ತಾಳಗುಂದ, ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಗುಡ್ನಾಪುರ, ಹಾಸನ ಜಿಲ್ಲೆಯ ಹಲ್ಮಿಡಿ ಮುಂತಾದೆಡೆಗಳಲ್ಲಿ ಬೆಳಕಿಗೆ ಬಂದಿವೆ. ಇವುಗಳ ಲಿಪಿಯೂ ಮೇಲಿನ ರೀತಿಯ ಬ್ರಾಹ್ಮಿಯೇ. ಮಳವಳ್ಳಿ ಮತ್ತು ಚಂದ್ರವಳ್ಳಿ ಶಾಸನಗಳ ಭಾಷೆ ಪ್ರಾಕೃತ; ಆದರೆ ಚಂದ್ರವಳ್ಳಿ ಶಾಸನದ ಭಾಷೆ ಸಂಸ್ಕೃತ ಎಂದು ಈಚೆಗೆ ಭಾವಿಸಲಾಗಿದೆ. ತಾಳಗುಂದ, ಬನವಾಸಿ ಇತ್ಯಾದಿಗಳವು ಸಂಸ್ಕೃತದಲ್ಲಿ ಪದ್ಯರೂಪದಲ್ಲಿವೆ. ಹಲ್ಮಿಡಿ ಶಾಸನ ಕನ್ನಡದಲ್ಲಿ ಗದ್ಯರೂಪದಲ್ಲಿದೆ. ಈ ಶಿಲಾಶಾಸನಗಳ ಉದ್ದೇಶ ಬೇರೆಬೇರೆಯಾದವು. ಚಂದ್ರವಳ್ಳಿ ಮತ್ತು ತಾಳಗುಂದ ಶಾಸನಗಳು ತಟಾಕ ನಿರ್ಮಾಣವನ್ನು ಹೇಳಿದರೆ, ಹಲ್ಮಿಡಿ ಶಾಸನ ದಾನವನ್ನು ನಿರೂಪಿಸುತ್ತದೆ. ತಾಮ್ರಶಾಸನಗಳಂತೆ ಈ ಶಿಲಾಶಾಸನಗಳೂ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಅಲ್ಲದೆ ಹಲವು ಶಾಸನಗಳು ಭಾಷಾ ಸಾಹಿತ್ಯ ದೃಷ್ಟಿಯಿಂದಲೂ ಮುಖ್ಯವಾದವು. ಮಳವಳ್ಳಿ ಶಾಸನವು ಕರ್ನಾಟಕದಲ್ಲಿ ಪ್ರಚಲಿತವಿದ್ದ ಪ್ರಾಕೃತ ಭಾಷೆಯನ್ನು ಪರಿಚಯ ಮಾಡಿಕೊಟ್ಟರೆ ಹಲ್ಮಿಡಿ ಶಾಸನ 5ನೆಯ ಶತಮಾನದಲ್ಲಿ ರೂಢವಾಗಿದ್ದ ಕನ್ನಡ ಭಾಷೆಯ ಸ್ವರೂಪವನ್ನು ತೋರಿಸಿಕೊಡುತ್ತದೆ. ಈಗ ನಮಗೆ ತಿಳಿದಿರುವಂತೆ ಇದೇ ಅತ್ಯಂತ ಪ್ರಾಚೀನ ಕನ್ನಡ ಶಾಸನ. ಹಾಗೆಯೇ ತಾಳಗುಂದ ಶಾಸನವೂ ಕರ್ನಾಟಕದ ಅತ್ಯಂತ ಪ್ರಾಚೀನ ಸಂಸ್ಕೃತ ಶಾಸನವೆನಿಸಿದೆ. ಅಲ್ಲದೆ ಆ ಶಾಸನದಲ್ಲಿ ಅದನ್ನು ರಚಿಸಿದ ಕವಿ ಕುಬ್ಜನ ಹೆಸರೂ ಇದೆ. ಕುಬ್ಜನೇ ಈಗ ಗೊತ್ತಿರುವಂತೆ ಕರ್ನಾಟಕದ ಕವಿಗಳಲ್ಲಿ ಅತ್ಯಂತ ಪ್ರಾಚೀನ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ತ್ವ ಇಲಾಖೆಯವರು ಬನವಾಸಿಯಲ್ಲಿ ಪತ್ತೆಹಚ್ಚಿದ ಮೃಗೇಶವರ್ಮನ ಶಾಸನವೇ ಕದಂಬರ ರಾಜಧಾನಿಯಲ್ಲಿ ದೊರಕಿರುವ ಮೊಟ್ಟ ಮೊದಲನೆಯ ಶಾಸನ. ಪೆಟ್ಟಿಗೆ ತಲೆಯ ದಾಕ್ಷಿಣಾತ್ಯ ಲಿಪಿಯಲ್ಲಿರುವ ಈ ಶಾಸನವನ್ನು ಬಲು ಸುಂದರವಾದ ಚತುರ್ಮುಖ ಶಿಲಾಸ್ತಂಭದ ಮೇಲೆ ಕೆತ್ತಲಾಗಿದೆ. ಇದೇ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿ ಇರುವ ದೊಡ್ಡ ಸ್ತಂಭ ಶಾಸನವೊಂದು ಬನವಾಸಿಯ ಬಳಿಯ ಗುಡ್ನಾಪುರದಲ್ಲಿ ದೊರಕಿದ್ದು, ಕದಂಬ ಇತಿಹಾಸದ ಮೇಲೆ ಅಮೂಲ್ಯ ಬೆಳಕನ್ನು ಚೆಲ್ಲುತ್ತದೆ.

**ನಾಣ್ಯಗಳು :** ಮೊದಲ ಕದಂಬ ಅರಸರ ಕಾಲಕ್ಕೆ ಖಚಿತವಾಗಿ ಸೇರುವ ನಾಣ್ಯಗಳು ಇದುವರೆಗೆ ದೊರಕಿಲ್ಲ. ಆದರೆ ಪುಟ್ಟ ಬಟ್ಟಲಾಕಾರದ ಕೆಲವು ಚಿನ್ನದ ನಾಣ್ಯಗಳು. ಈ ಕಾಲದವೆಂದು ಕೆಲವರ ಅಭಿಪ್ರಾಯ. ಇವನ್ನು ಪದ್ಮಟಂಕ ಎಂದು ಕರೆಯುತ್ತಾರೆ. ಗುಂಡಗಿರುವ ಈ ನಾಣ್ಯಗಳು 0.6-0.8 ಅಂಗುಲ ವ್ಯಾಸವಿದ್ದು, 52-70 ಗ್ರೇನ್ ತೂಗುತ್ತವೆ. ಸಾಮಾನ್ಯವಾಗಿ 52 ಮತ್ತು 66 ಗ್ರೇನ್‌ಗಳವೇ ಹೆಚ್ಚು. ಇವುಗಳ ತಗ್ಗಿನ ಕಡೆಯಲ್ಲಿ ಅಂಕನ ಮಾಡಿದ ಪದ್ಮದ ಚಿತ್ರವೂ ಸುತ್ತಲೂ ನಾಲ್ಕು ಸಣ್ಣ ಚಿಹ್ನೆಗಳೂ

ಇರುತ್ತವೆ. ಮೊದಮೊದಲು ಎರಡು ಶ್ರೀಕಾರಗಳು, ಶಂಖ ಮತ್ತು ಬಿಲ್ಲು ಇವೇ ಆ ಸಣ್ಣ ಚಿಹ್ನೆಗಳಾಗಿರುತ್ತಿದ್ದುವು. ಅನಂತರದ ಪದ್ಮಟಂಕಗಳಲ್ಲಿ ಇವುಗಳ ಬದಲು ನಾಲ್ಕು ಸಣ್ಣ ಸಿಂಹಗಳು ಕಾಣುತ್ತವೆ. ಹಿಂಭಾಗದಲ್ಲಿ ಯಾವ ಚಿಹ್ನೆಗಳೂ ಇರುವುದಿಲ್ಲ. ಇವುಗಳ ಮೇಲೆ ಯಾವ ಬರೆಹಗಳೂ ಇಲ್ಲದಿರುವುದರಿಂದ, ಇವು ಕದಂಬರೇ ಹೊರಡಿಸಿದವೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. (ಎಸ್.ಎನ್.)

## ಹಾನಗಲ್ಲಿನ ಕದಂಬರು

ಇವರು ಸು.10ನೆಯ ಶತಮಾನದ ಕಡೆಯ ಪಾದದಿಂದ 13ನೆಯ ಶತಮಾನದ ಮೊದಲನೆಯ ಪಾದದ ವರೆಗೆ ಹೆಚ್ಚು ಮಟ್ಟಿಗೆ ಉತ್ತರ ಕನ್ನಡ ಜಿಲ್ಲೆಯ ಪೂರ್ವ ಮತ್ತು ಧಾರವಾಡ ಜಿಲ್ಲೆಯ ಪಶ್ಚಿಮ ಭಾಗಗಳ ಮೇಲೆ ಒಡೆತನ ಪಡೆದಿದ್ದ ಸಾಮಂತರು. ಇವರ ರಾಜಧಾನಿ ಮೊದಲು ಬನವಾಸಿ, ಅನಂತರ ಹಾನಗಲ್ಲು (ಪಾನುಂಗಲ್ಲು, ಹಾನುಂಗಲ್ಲು, ಹಾನುಗಲ್ಲು.)

ಈಗ ತಿಳಿದಿರುವಂತೆ ಈ ಕದಂಬ ಶಾಖೆಯ ಆದ್ಯ ಚಟ್ಟಯ್ಯದೇವ (ಚಟ್ಟ, ಚಟ್ಟಿಗ ಸು.972-1015). ಇವನು ಆರಂಭದಲ್ಲಿ ರಾಷ್ಟ್ರಕೂಟ ಕಕ್ಕನ ಆಶ್ರಿತನಾಗಿದ್ದು, ಅನಂತರ ಚಾಳುಕ್ಯ ಇಮ್ಮಡಿ ತೈಲನ ಸಾಮಂತನಾಗಿ 979-80 ರಲ್ಲಿ ಬನವಾಸಿ ಪ್ರಾಂತ್ಯವನ್ನೂ, 982ರ ಹೊತ್ತಿಗೆ ಇದರ ಜೊತೆಗೆ ಸಾಂತಳಿಗೆ 1000 ಪ್ರಾಂತ್ಯವನ್ನೂ ಪುನಃ 986-87, 993, 1012ರಲ್ಲಿ ಬನವಾಸಿ 12,000 ಪ್ರಾಂತ್ಯವನ್ನು ಮಾತ್ರ ಆಳುತ್ತಿದ್ದನೆಂದು ಶಾಸನಗಳಿಂದ ತಿಳಿಯುತ್ತದೆ. ಈ ಮೇಲಿನ ವರ್ಷಗಳ ಮಧ್ಯಕಾಲದಲ್ಲಿ ಇತರ ಕೆಲವರು ಇದೇ ಪ್ರದೇಶವನ್ನು ಆಳುತ್ತಿದ್ದರೆಂದು ಕಾಣುವುದರಿಂದ ಚಟ್ಟಯ್ಯನ ಆಳ್ವಿಕೆ ಅವಿಚ್ಛಿನ್ನವಾಗಿರಲಾರದು. 1012ರಲ್ಲಿ ಬನವಾಸಿ ಪ್ರಾಂತ್ಯದ ಅಧಿಕಾರವನ್ನು ಚಾಳುಕ್ಯ ಇಜಿವಬೆಡಂಗ ಸತ್ಯಾಶ್ರಯನ ಅಳಿಯ ಕುಂದಮರಸ ವಹಿಸಿಕೊಂಡ. ಆದರೂ ಚಟ್ಟಯ್ಯ ಚಾಳುಕ್ಯರ ಆಶ್ರಿತನಾಗಿಯೇ ಮುಂದುವರೆದು, ಇಮ್ಮಡಿ ಜಯಸಿಂಹನ ಕಾಲದಲ್ಲಿ ಚೋಳ, ಪರಮಾರ, ಕಳಚುರಿಗಳು ಒಟ್ಟಾಗಿ ಮಾನ್ಯಖೇಟದ ಮೇಲೆ ದಾಳಿಮಾಡಿದಾಗ ಚಾಳುಕ್ಯರ ಪರವಾಗಿ ಶೌರ್ಯದಿಂದ ಕಾದು ಕಟಕದ ಗೋವ ಎಂಬ ಬಿರುದನ್ನು ಸಂಪಾದಿಸಿದ. ಚಟ್ಟಯ್ಯನ ಮಗ ಜಯಸಿಂಹ. ಇವನ ಮಕ್ಕಳು ಮಾವುಲಿ, ತೈಲ, ಶಾಂತಯ ದೇವ, ಜೋಕಿದೇವ ಮತ್ತು ವಿಕ್ರಮಾಂಕ. ಇವರ ಬಗ್ಗೆ ಏನೂ ತಿಳಿದಿಲ್ಲ. ಇವರ ಕಾಲದಲ್ಲಿ ಬನವಾಸಿ ಪ್ರದೇಶ, ದಂಡನಾಯಕ ಚಾವುಂಡರಾಯರಸ ಮತ್ತು ಇನ್ನೊಂದು ಕದಂಬ ಶಾಖೆಗೆ ಸೇರಿದ ಮಯೂರವರ್ಮ, ಅವನ ಹೆಂಡತಿ ಅಕ್ಕಾದೇವಿ ಮತ್ತು ಅವರ ಮಕ್ಕಳು ಜೋಯಿದೇವ ಮತ್ತು ಅರಿಕೇಸರಿ ಇವರ ಆಳ್ವಿಕೆಗೆ ಒಳಪಟ್ಟಿತ್ತೆಂದು ತೋರುತ್ತದೆ. ಈ ಅನ್ಯಶಾಖೆಯ ಮಯೂರವರ್ಮನೇ ಈ ಕಾಲದಲ್ಲಿ ಹಾನಗಲ್ಲಿನ ಮೇಲೆ ಒಡೆತನ ಪಡೆದ ಮೊದಲ ಕದಂಬ ವಂಶೀಯ.

ಚಟ್ಟಯ್ಯನ ವಂಶದ ಕೀರ್ತಿವರ್ಮ 1068ರ ಹೊತ್ತಿಗೆ ಬನವಾಸಿ ಪ್ರಾಂತ್ಯದ ಅಧಿಪತಿಯಾದ. ಇವನು ಇಮ್ಮಡಿ ಸೋಮೇಶ್ವರನ ವಿರುದ್ಧ, ಅವನ ತಮ್ಮ ಆರನೆಯ ವಿಕ್ರಮಾದಿತ್ಯನಿಗೆ ಸಹಾಯಮಾಡಿದ್ದರಿಂದ, ಸೋಮೇಶ್ವರ ಬನವಾಸಿಯ ಮೇಲೆ ದಾಳಿ ಮಾಡಿದ; ಸ್ವಂತ ತಮ್ಮನಾದ ತೈಲಪದೇವನೂ ಎದುರು ಬಿದ್ದ. ಕೊನೆಗೆ 1071ರಲ್ಲಿ ಕೀರ್ತಿವರ್ಮನ ಪ್ರಾಂತ್ಯಾಧಿಪತ್ಯ ಕೈಬಿಟ್ಟು ಅವನ ಆಳ್ವಿಕೆ ಕೇವಲ ಬನವಾಸಿಪುರಕ್ಕೆ ಸೀಮಿತವಾದಂತೆ ತೋರುತ್ತದೆ. ಆರನೆಯ ವಿಕ್ರಮಾದಿತ್ಯ ಪಟ್ಟಕ್ಕೆ ಬಂದಮೇಲೂ ಇವನಿಗೆ ಅಧಿಕಾರ ದಕ್ಕಲಿಲ್ಲ.

ಆರನೆಯ ವಿಕ್ರಮಾದಿತ್ಯ 1087ರ ಹೊತ್ತಿಗೆ ಕೀರ್ತಿವರ್ಮನ ಚಿಕ್ಕಪ್ಪನಾದ ಶಾಂತಿವರ್ಮನಿಗೆ ಬನವಾಸಿ ಮತ್ತು ಹಾನಗಲ್ಲು ಪ್ರಾಂತ್ಯಗಳನ್ನು ವಹಿಸಿದ. ಇವನ ಮಗನಾದ ತೈಲ 1082ರ ಸುಮಾರಿನಲ್ಲಿಯೇ ತಂದೆಯ ಜೊತೆಯಲ್ಲಿ ಆಡಳಿತದಲ್ಲಿ ಭಾಗಿಯಾಗಿದ್ದರೂ ತಂದೆಯ ಮರಣಾನಂತರ 1089-90ರಲ್ಲಿ ಪಟ್ಟಕ್ಕೆ ಬಂದು 1130ರ ವರೆಗೆ ಆಳಿದ. ಈತ ಹೊಯ್ಸಳ ವಿಷ್ಣುವರ್ಧನನ ಸತತವಾದ ದಾಳಿಗಳಿಂದ ತನ್ನ ಪ್ರಾಂತ್ಯವನ್ನು ರಕ್ಷಿಸಿಕೊಂಡದ್ದಲ್ಲದೆ, ಕೆಲವು ಸಂದರ್ಭಗಳಲ್ಲಿ ತನ್ನ ಆಳ್ವಿಕೆಯನ್ನು ಬನವಾಸಿ ಮತ್ತು ಹಾನಗಲ್ಲು ಪ್ರಾಂತ್ಯಗಳ ಹೊರಗೂ ವಿಸ್ತರಿಸಿದ. ಇವನ ಮಗ ಮಯೂರವರ್ಮ (1130-32) ಇನ್ನೂ ಹೆಚ್ಚು ಪ್ರದೇಶಗಳನ್ನು ಅಧೀನ ಮಾಡಿಕೊಂಡಿದ್ದಂತೆ ತೋರುತ್ತದೆ.

**ಹಾನಗಲ್ಲು ಕದಂಬ ಶಾಖೆಯ ವಂಶಾವಳಿ:**



ಅನಂತರ ಮಯೂರವರ್ಮನ ತಮ್ಮ ಮಲ್ಲಿಕಾರ್ಜುನ (1132-46) ಹೊಯ್ಸಳರ ದಂಡನ್ನು ಯಶಸ್ವಿಯಾಗಿ ಎದುರಿಸಿ ಅವರ ವಶದಲ್ಲಿದ್ದ ಲೊಕ್ಕಿಗುಂಡಿಯ ಮೇಲೂ ದಾಳಿಮಾಡಿದ. ಮಲ್ಲಿಕಾರ್ಜುನನ ಅನಂತರ ಕ್ರಮವಾಗಿ ಇವನ ತಮ್ಮ ತೈಲಮ III (1147-1148) ಮತ್ತು ತೈಲಮನ ಮಗ ಮಾವುಲಿ ತೈಲ ಆಳಿದರು. ಅನಂತರ ಪಟ್ಟಕ್ಕೆ ಬಂದ ಮಾವುಲಿ ತೈಲನ ತಮ್ಮ ಕೀರ್ತಿವರ್ಮನ (ಸು.1161-00) ಆಳ್ವಿಕೆಯ ಕಾಲದಲ್ಲಿ ಚಾಳುಕ್ಯ, ಸೇವುಣ, ಕಳಚುರಿ ಮತ್ತು ಹೊಯ್ಸಳರು ಅಧಿಕಾರಕ್ಕಾಗಿ ಸೆಣಸುತ್ತಿದ್ದರಾದ್ದರಿಂದ, ಸಾಮಂತರ ಮನೆತನಗಳವರ ಸ್ಥಿತಿ ಇಕ್ಕಟ್ಟಿನದಾಗಿತ್ತು. ಕೀರ್ತಿವರ್ಮ 1163-68ರಲ್ಲಿ ಕಳಚುರಿ ಬಿಜ್ಜಳನ ಅಧೀನನಾಗಿದ್ದಂತೆ, ತೋರುತ್ತದೆ. ಉಚ್ಚಂಗಿಯ ವೀರಪಾಂಡ್ಯ ಕದಂಬರ ಅಧೀನನಾಗಿ ಪುಲಿಗೆರೆ ನಾಡನ್ನು ಆಳುತ್ತಿದ್ದ. ಸಾಂತಳಿಗೆಯ ಸಾಂತರ ದೊರೆ ಜಗದೇವ 1160ರಲ್ಲಿ ಬನವಾಸಿ ನಾಡಿನ ಕೆಲಭಾಗವನ್ನು ದಾಳಿಮಾಡಿ ಗೆದ್ದುಕೊಂಡ. ಆದರೆ ಕೀರ್ತಿವರ್ಮ ಮತ್ತು ಬಿಜ್ಜಳ ಅವನನ್ನು ಸೋಲಿಸಿದರು. ಹೊಯ್ಸಳರು ಆಕ್ರಮಿಸಿಕೊಂಡಿದ್ದ ಕುಂತಳದ ಭಾಗಗಳೂ ಕೀರ್ತಿವರ್ಮನ ವಶವಾದುವು. 1175-80ರಲ್ಲಿ ಕದಂಬ ಚಕ್ರವರ್ತಿ ವೀರಸೋವಿದೇವ ಆಳುತ್ತಿದ್ದ. ಇವನು ಕದಂಬ ವಂಶದ ಅನ್ಯಶಾಖೆಗೆ ಸೇರಿದಂತೆ ತೋರುತ್ತದೆ. ಅನಂತರ ಪಟ್ಟಕ್ಕೆ ಬಂದ ಕೀರ್ತಿವರ್ಮನ ತಮ್ಮ ಕಾಮದೇವ (ಸು.1180-1217) ಕರ್ನಾಟಕದ ಅರಸುಮನೆತನಗಳು ಪರಸ್ಪರ ಹೋರಾಟದಲ್ಲಿ ನಿರತರಾಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು 1191ರಲ್ಲಿ ಸ್ವತಂತ್ರನಾಗಿ, ಚಾಳುಕ್ಯ ಚಕ್ರೇಶ್ವರರ ಎಲ್ಲ ಬಿರುದುಗಳನ್ನೂ ಧರಿಸಿ ಸುತ್ತಲಿನ ರಾಜ್ಯಗಳನ್ನೂ ಗೆದ್ದು ವಿಶಾಲವಾದ ರಾಜ್ಯಕ್ಕೆ ಅಧಿಪತಿಯಾದ. ಈತನಿಗೆ ಕಾಳಲದೇವಿ ಎಂಬ ಪತ್ನಿಯೂ ಬರ್ಮ, ಸೋಮ, ಮಲ್ಲ (ಮಲ್ಲಿದೇವ) ಎಂಬ ಮಕ್ಕಳೂ ಇದ್ದರು. ಕಾಮದೇವನ ಅನಂತರ ಮಲ್ಲಿದೇವ (ಸು.1217-52) ಮೊದಲು ಪ್ರಾಯಶಃ ಸ್ವತಂತ್ರವಾಗಿ ಅನಂತರ ಯಾದವ ಸಿಂಘಣನ ಆಶ್ರಿತನಾಗಿ ಆಳಿದ. ಆತ 1217ರ ಸುಮಾರಿನಲ್ಲಿ ಹೊಯ್ಸಳರನ್ನು ಸೋಲಿಸಿ ತನ್ನ ಸ್ಥಾನವನ್ನು ಭದ್ರಪಡಿಸಿ ಕೊಂಡರೂ ಮುಂದೆ ಅವರಿಂದ ಸೋತು ಕೆಲವು ಪ್ರದೇಶಗಳನ್ನು ಕಳೆದುಕೊಂಡ. ಮಲ್ಲಿದೇವ ಹಾನಗಲ್ಲು ಕದಂಬ ಶಾಖೆಯ ಕೊನೆಯ ದೊರೆ.

ಮಲ್ಲಿದೇವನ ಅನಂತರ ಕೆಲವು ಕದಂಬ ವಂಶೀಯರು ಆಗಾಗ್ಗೆ ಈ ಪ್ರದೇಶವನ್ನು ಆಳುತ್ತಿದ್ದರೂ ಅವರಿಗೂ ಹಾನಗಲ್ಲು ಶಾಖೆಗೂ ಇದ್ದ ಸಂಬಂಧ ತಿಳಿಯದು. (ಬಿ.ಎಚ್.ಎಸ್.)

### ಗೋವೆಯ ಕದಂಬರು

ಇವರು 10ರಿಂದ 13ನೆಯ ಶತಮಾನದವರೆಗೆ ಬಹುತೇಕ ಗೋವ ರಾಜ್ಯ, ಬೆಳಗಾಂವಿ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳ ಭಾಗಗಳನ್ನೊಳಗೊಂಡಿದ್ದ ಪಲಸಿಗೆ-12,000 ಮತ್ತು ಕೊಂಕಣ-900 ವಿಭಾಗಗಳನ್ನು ಆಳುತ್ತಿದ್ದ ಸಾಮಂತರು. ಇವರ ರಾಜಧಾನಿ ಮೊದಲು ಚಂದ್ರಪುರ (ಗೋವದ ಸಾಲ್ಸೆತ್‌ನ ಈಗಿನ ಚಂದೋರ್.) ಅನಂತರ ಗೋವ (ಪಣಜಿ.) ಅನಿಲಾಪುರ (ಧಾರವಾಡ ಜಿಲ್ಲೆಯ ಅಳಣಾವರ) ಸಹ ಇವರ ನೆಲೆವೀಡಾಗಿತ್ತು. ಶಿವನಿಂದ ಹುಟ್ಟಿದ ಜಯಂತ (ತ್ರಿಲೋಚನ ಪಲ್ಲವ) ಈ ವಂಶದ ಆದ್ಯನೆಂದು ಶಾಸನಗಳ ಹೇಳಿಕೆ. ಬನವಾಸಿ ಪುರವರಾಧೀಶ್ವರ, ತ್ಯಾಗ ಜಗಝಂಪಂಪರಝಂಪಡಾಚಾರ್ಯ ಇವರ ಬಿರುದುಗಳು.

ಮೂಲತಃ ಬನವಾಸಿಯವರಾದ ಈ ವಂಶೀಯರು ಶಿಲಾಹಾರರನ್ನು ಗೆದ್ದು ಕೊಂಕಣದಲ್ಲಿ ತಳವೂರಿರಬೇಕು. ಈ ವಂಶದ ಮೊದಲಿಗ ಷಷ್ಠದೇವ I 'ಅವನ ಮಗ ನಾಗವರ್ಮ'. ಅವನ ಮಗ - ಗೂವಲ (ಗೂಹಲ್ಲ) ದೇವ I. ಈ ಅರಸುಗಳ ಬಗ್ಗೆ ಹೆಚ್ಚು ವಿವರಗಳು ತಿಳಿದಿಲ್ಲ. ಒಂದನೆಯ ಷಷ್ಠದೇವ ಚಾಳುಕ್ಯ ತೈಲಪನ ಅನುಗ್ರಹದಿಂದ ಗೋವದ ಮಂಡಲೇಶ್ವರನಾಗಿರಬಹುದು. ಒಂದನೆಯ ಗೂಹಲ್ಲದೇವನಿಗೆ ವ್ಯಾಘ್ರಮಾರಿ ಎಂಬ ಬಿರುದಿತ್ತೆಂದು ಒಂದು ದಾಖಲೆ ತಿಳಿಸುತ್ತದೆ. ಒಂದನೆಯ ಗೂಹಲ್ಲದೇವನ ಮಗ ಷಷ್ಠದೇವ II (ಸು.1000-1072) ಕಲ್ಯಾಣದ ಚಾಳುಕ್ಯರ ಸಾಮಂತತ್ವದಲ್ಲಿ ಶಿಲಾಹಾರರ ಆಳ್ವಿಕೆಯನ್ನು ಕೊನೆಗಾಣಿಸಿ ಇಡೀ ಕೊಂಕಣಕ್ಕೆ ಒಡೆಯನಾದ. ಈತನ ಕಾಲದಲ್ಲಿ ಗೋವೆ ಬಹುವಾಗಿ ಅಭಿವೃದ್ಧಿ ಹೊಂದಿತು. ಎರಡನೆಯ ಷಷ್ಠದೇವನಿಗೆ ಗೂವಲದೇವ II ಮತ್ತು ಜಯಕೇಶಿ I ಪೆರ್ಮಾಡಿದೇವ ಎಂಬ ಮಕ್ಕಳಿದ್ದರು. ಇವರಿಬ್ಬರೂ ತಂದೆಯ ಆಡಳಿತದಲ್ಲಿ ಮೊದಲಿನಿಂದಲೂ ಪಾಲುಗೊಂಡಿರಬೇಕು. ಪ್ರಾಯಶಃ ಹಿರಿಯನಾದ ಗೂವಲದೇವನ ಅಕಾಲಮರಣಾನಂತರ ಷಷ್ಠದೇವ ಮತ್ತು ಜಯಕೇಶಿ (ಸು.1050-78) ಜೊತೆಯಾಗಿಯೇ ಆಳುತ್ತಿದ್ದರೆಂದು ಅನೇಕ ಶಾಸನಗಳಿಂದ ಊಹಿಸಬಹುದಾಗಿದೆ. ಜಯಕೇಶಿ ರಾಜಧಾನಿಯನ್ನು ಗೋವಪಟ್ಟಣಕ್ಕೆ ಬದಲಾಯಿಸಿದ. ಇವನ ನೌಕಾ ಬಲ ಅಜೇಯವಾಗಿತ್ತು. ಎದುರು ಬಿದ್ದ ಕಾಪರ್ದಿಕ ದ್ವೀಪದ ಶಿಲಾಹಾರ ದೊರೆ ಮುಮ್ಮುರಿಯನ್ನು ಸದೆಬಡಿದ, ಲಾಟರಾಜನ ಸೊಕ್ಕನ್ನಿಳಿಸಿದ, ಗೋಕರ್ಣದಲ್ಲಿದ್ದ ಪಾಂಡ್ಯ ತ್ರಿಭುವನಮಲ್ಲ ಕಾಮದೇವನನ್ನು ಉನ್ಮೂಲನಗೊಳಿಸಿದ ಚೋಳರನ್ನೂ ಹಣ್ಣುಮಾಡಿದ ಎಂದು ಶಾಸನಗಳು ತಿಳಿಸುತ್ತವೆ. ಈತ ಚಾಳುಕ್ಯ ಎರಡನೆಯ ಸೋಮೇಶ್ವರನ ಸಾಮಂತನೂ ಗೆಳೆಯನೂ ಆಗಿದ್ದು, ರಾಜತಂತ್ರದ ಆವಶ್ಯಕತೆಯಿಂದ ಅವನ ತಮ್ಮ ಆರನೆಯ ವಿಕ್ರಮಾದಿತ್ಯನಿಗೆ ತನ್ನ ಮಗಳನ್ನು ಮದುವೆಮಾಡಿಕೊಟ್ಟು, ಅವನಿಗೆ ರಾಜನಾಗಲೂ ಸಹಾಯ ಮಾಡಿದ. ಕಂಚಿಯಲ್ಲಿ ಚಾಳುಕ್ಯರಿಗೂ ಚೋಳರಿಗೂ ರಾಜಿ ಮಾಡಿಸಿದ್ದು ಈತನ ತಂತ್ರನೈಪುಣ್ಯಕ್ಕೆ ಸಾಕ್ಷಿ. ಇದೆ ದೃಷ್ಟಿಯಿಂದ ತನ್ನ ಇನ್ನೊಬ್ಬ ಮಗಳನ್ನು ಅನಹಿಲವಾಡದ ಒಂದನೆಯ ಕರ್ಣನಿಗೆ ಮದುವೆಮಾಡಿಕೊಟ್ಟಿದ್ದ.

ವರಾಹನರಸಿಂಹ ದೇವಾಲಯ, ಹಲಶಿ

ಜಯಕೇಶಿಯ ಮಗ 3ನೆಯ ಗೂವಲದೇವ (ಸು.1078-1125) ಪಲಸಿಗೆ 12,000 ಮತ್ತು ಕೊಂಕಣ - 900 ಪ್ರಾಂತ್ಯಗಳನ್ನು ಆಳುತ್ತಿದ್ದರೂ ಅನಂತರದಲ್ಲಿ ಚಾಳುಕ್ಯ ವಿಕ್ರಮಾದಿತ್ಯ ಗೂವಲದೇವನ ತಮ್ಮ ವಿಜಯಾದಿತ್ಯನ ಮಗನಾದ ಎರಡನೆಯ ಜಯಕೇಶಿಗೆ ತನ್ನ ಮಗಳು ಮೈಳಲದೇವಿಯನ್ನು ಲಗ್ನಮಾಡಿಕೊಟ್ಟು ಪಲಸಿಗೆ 12,000 ಪ್ರಾಂತ್ಯವನ್ನು ಅವನಿಗೆ ಬಳುವಳಿಯಾಗಿ ಇತ್ತ. ಗೂವಲದೇವನ ಆಳ್ವಿಕೆಯ

ಕಡೆಯ ಕಾಲದಲ್ಲಿ ಈ ಜಯಕೇಶಿಯೂ ಗೋವ ಕದಂಬ ರಾಜ್ಯದ ಆಡಳಿತದಲ್ಲಿ ಸಮಭಾಗಿಯಾಗಿದ್ದಂತೆ ತೋರುತ್ತದೆ. 1122ರ ಸುಮಾರಿನಲ್ಲಿ, ಚಾಳುಕ್ಯ ರಾಜ್ಯದ ಸಂದಿಗ್ಧ ಸ್ಥಿತಿಯನ್ನು ಉಪಯೋಗಿಸಿಕೊಂಡು ಜಯಕೇಶಿ ಸ್ವತಂತ್ರನಾಗಲು ಪ್ರಯತ್ನಿಸಿದ. ಆದರೆ ಚಾಳುಕ್ಯರ ಪರವಾಗಿ ಸಿಂದ ಎರಡನೆಯ ಆಚುಗಿ ಇವನ ಮೇಲೆ ಯುದ್ಧಹೂಡಿ ಆ ಪ್ರಯತ್ನವನ್ನು ಮುರಿದು ಕೊಂಕಣವನ್ನೂ ಆಕ್ರಮಿಸಿಕೊಂಡ. ಕೇವಲ ಮೂರು ವರ್ಷಗಳಲ್ಲಿ (1125) ಪ್ರಾಯಶಃ ಗೂವಲದೇವನ ಮರಣಾನಂತರ, ಜಯಕೇಶಿ ಪುನಃ ಅಧಿಕಾರ ಪಡೆದುಕೊಂಡರೂ ಹಿಂದೆ ಈ ಮನೆತನದ ಅಧೀನದಲ್ಲಿದ್ದ ಅನೇಕ ಪ್ರಾಂತ್ಯಗಳನ್ನು ಕಳೆದುಕೊಂಡು, ಕೇವಲ ಹಲಸಿಗೆ-12,000, ಕೊಂಕಣ-900, ಹೈವೆ-500 ಮತ್ತು ಕವಡಿದ್ವೀಪ-1,25,000, ವಿಭಾಗಗಳ ಮಂಡಲೇಶ್ವರನಾದ, ಮುಂದೆ ಹೈವೆ-500ನ್ನು ಸಹ ಕಳೆದುಕೊಂಡ. 1133ರ ಒಂದು ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನ ಜಯಕೇಶಿಯನ್ನು ಸೋಲಿಸಿದ ಪ್ರಸ್ತಾಪವಿದೆ. 1135ರ ಹೊತ್ತಿಗೆ ಹಲಸಿಗೆ ಭಾಗವೂ ವಿಷ್ಣುವರ್ಧನನಿಗೆ ಸೇರಿತು. 1140ರ ಅನಂತರ ಜಯಕೇಶಿ ಉತ್ತರ ಕೊಂಕಣದ ಶಿಲಾಹಾರ ಅಪರಾದಿತ್ಯನನ್ನು ಸೋಲಿಸಿ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಂಡ.

ಜಯಕೇಶಿಯ ಜ್ಯೇಷ್ಠಪುತ್ರ ಪೆರ್ಮಾಡಿದೇವ ಶಿವಚಿತ್ತ (ಸು.1147-1192) ತನ್ನ ತಂದೆಯ ಕಾಲಾನಂತರ ಪಟ್ಟಕ್ಕೆ ಬಂದ. ಈತನ ತಮ್ಮ ವಿಜಯಾದಿತ್ಯ ವಿಷ್ಣುಚಿತ್ತ (ಸು.1147-1187) ಆಡಳಿತ ನಿರ್ವಹಣೆಯಲ್ಲಿ ಇವನ ಜೊತೆಗೂಡಿದ್ದ. ಇವರು ರಾಮಲಕ್ಷ್ಮಣರಂತಿದ್ದರೆಂದು ಒಂದು ಶಾಸನ ತಿಳಿಸುತ್ತದೆ. ಶಿವಚಿತ್ತನು ಚಾಳುಕ್ಯ ಜಗದೇಕಮಲ್ಲ ಮತ್ತು ಮೂರನೆಯ ತೈಲ ಇವರ ಸಾಮಂತನಾಗಿದ್ದರೂ ಅನಂತರ ಕಳಚುರಿಗಳ ಪ್ರಭಾವದಿಂದ ಚಾಳುಕ್ಯರು ಹಿಂದೆ ಸರಿದಾಗ ಸ್ವತಂತ್ರನಾಗಿ ರಾಜ್ಯಭಾರ ಮಾಡಲಾರಂಭಿಸಿದ. ಮುಂದೆ ನಾಲ್ಕನೆಯ ಸೋಮೇಶ್ವರ ರಾಜ್ಯಗಳಿಸಿದಾಗ ಅವನ ಸಾಮಂತತ್ವವನ್ನು ಒಪ್ಪಿದ್ದಲ್ಲದೆ, ಕೆಲವು ಕಾಲ ಅವನಿಗೆ ಗೋವೆಯಲ್ಲಿ ನೆಲಸಲೂ ಅವಕಾಶ ನೀಡಿದ್ದಂತೆ ತೋರುತ್ತದೆ. ವಿಜಯಾದಿತ್ಯನ ಅವಸಾನಾನಂತರ (ಸು.1187) ಅವನ ಮಗ ಮೂರನೆಯ ಜಯಕೇಶಿಯನ್ನು ಪೆರ್ಮಾಡಿದೇವ ತನ್ನ ಆಡಳಿತಕ್ಕೆ ಜೊತೆಮಾಡಿಕೊಂಡ. ಪೆರ್ಮಾಡಿದೇವನ ಮರಣಾನಂತರ ಮೂರನೆಯ ಜಯಕೇಶಿ (ಸು.1187-1225) ರಾಜನಾದ. ಇವನ ಮಗ ವಜ್ರದೇವನೂ ಆಡಳಿತದಲ್ಲಿ ಭಾಗಿಯಾಗಿದ್ದ. ಈ ಕಾಲದಲ್ಲಿ ಸೇವುಣ ಸಿಂಘಣ ಜಯಕೇಶಿಯ ಮೇಲೆ ದಂಡೆತ್ತಿಬಂದು ಪ್ರಾಯಶಃ ಸೋಲಿಸಿದನಾದರೂ ಕದಂಬ ಆಳ್ವಿಕೆ ಸಂಕುಚಿತವಾಯಿತೇ ಹೊರತು ಅಳಿಯಲಿಲ್ಲ. ಸು.1225ರಲ್ಲಿ ದೊರೆಯಾದ ಜಯಕೇಶಿಯ ಕಿರಿಯಮಗ ತ್ರಿಭುವನಮಲ್ಲ ಸೋಮದೇವ (ಸೋಯಿದೇವ, ಸು.1225-46) ಮತ್ತು ಅನಂತರ ಪಟ್ಟವೇರಿದ ಅವನ ಮಗ 3ನೆಯ ಷಷ್ಠ (ಸು.1246-60) ಇವರ ಬಗ್ಗೆ ಏನೂ ತಿಳಿದಿಲ್ಲ. 1260ರ ಅನಂತರ ಗೋವ ಕದಂಬರ ಬಗ್ಗೆ ಉಲ್ಲೇಖಗಳು ದೊರಕುವುದಿಲ್ಲವಾದ್ದರಿಂದ ಈ ಸುಮಾರಿನಲ್ಲಿ ಯಾದವ, ಹೊಯ್ಸಳರ ದಾಳಿಯಲ್ಲಿ ಅವರ ರಾಜತ್ವ ಅಳಿಸಿಹೋಗಿರಬೇಕು.

**ವಾಸ್ತುಶಿಲ್ಪ :** ಗೋವ ಕದಂಬ ಅರಸರ ಆಳ್ವಿಕೆಯಲ್ಲಿ ಅನೇಕ ಕಟ್ಟಡಗಳು ನಿರ್ಮಿತವಾಗಿವೆ. ಕದಂಬರ ಕಾಲದ ಬಹುತೇಕ ಕೃತಿಗಳಲ್ಲಿ ಹೊಯ್ಸಳ ಚಾಳುಕ್ಯ ಶೈಲಿಯ ಪ್ರಭಾವ ಕಂಡುಬರುತ್ತದೆ. ಆದರೆ ಕದಂಬರ ಕಟ್ಟಡಗಳಲ್ಲಿ ಕೆಲವು ವೈಶಿಷ್ಟ್ಯಗಳಿರುವುದರಿಂದ ವಾಸ್ತುಶಿಲ್ಪ ಪರಂಪರೆಯಲ್ಲಿ ಕದಂಬ ಶೈಲಿ ಎಂಬ ಒಂದು ಪ್ರಕಾರವನ್ನು ಗುರುತಿಸಬೇಕು. ಎಂಬುದು ವಿದ್ವಾಂಸ ಮೊರೇಸ್ ಅಭಿಪ್ರಾಯ. ಸುಕನಾಸಿ ಗರ್ಭಗುಡಿಗಿಂತ ಅಗಲವಾಗಿರುವುದು, ವಿವಿಧ ರೀತಿಯ ಜಾಲಂಧ್ರಗಳ ಅಳವಡಿಕೆ, ಚಾವಣಿಯ ಸುತ್ತ ಚಪ್ಪಡಿಗಳನ್ನು ಇಳಿಜಾರಾಗಿ ಜೋಡಿಸಿ ಮಾಡಿದ ಕಪೋತ ಮತ್ತು ಕದಂಬನಾಗರವೆಂಬ ಶಿಖರರೀತಿ ಇವು ಮೊರೇಸ್ ಪ್ರಕಾರ ಕದಂಬ ಶೈಲಿಯ ವೈಶಿಷ್ಟಗಳು. ಕದಂಬ ನಾಗರಶಿಖರ ಚತುರಸ್ರಾಕಾರದ ಚಾವಣಿಯ ಮೇಲೆ ಪಿರಮಿಡ್ಡಿನಾಕೃತಿಯಲ್ಲಿ ಮೆಟ್ಟಲುಮೆಟ್ಟಲಾಗಿ ಮೇಲೆ ಹೋದಂತೆ ಚಿಕ್ಕದಾಗುವ ಚಪ್ಪಟೆ ಸ್ತರಗಳಿಂದ ಎತ್ತಲ್ಪಟ್ಟಿದ್ದು ಮೇಲೆ ಕಳಶ ಹೊಂದಿರುತ್ತದೆ. ಶಿಖರದ ಮೇಲೆ ಯಾವ ರೀತಿಯ ಶಿಲ್ಪಗಳೂ ಇರುವುದಿಲ್ಲ. ಎಲ್ಲೋ ಕೆಲವು ಸಲ ಅಂಚುಗಳನ್ನು ಹಲ್ಲಿನಾಕೃತಿಯಲ್ಲಿ ಬಿಡಿಸಿರುವುದಷ್ಟೇ ಈ ಶಿಖರ ರೀತಿಯ ಅಲಂಕರಣ. ಕದಂಬ ವಾಸ್ತುಶಿಲ್ಪ ಶೈಲಿ ಆದ್ಯ ಕದಂಬರ ಕಾಲದಿಂದ ವಿಶಿಷ್ಟವಾಗಿ ಬೆಳೆದಿರಬೇಕು. ಕ್ರಮವಾಗಿ ಹಲಶಿಯ ಜೈನಬಸ್ತಿ,

**ಗೋವೆಯ ಕದಂಬ ಶಾಖೆಯ ವಂಶಾವಳಿ:**

- ಷಷ್ಠ I
  - ನಾಗವರ್ಮ
    - ಗೂವಲದೇವ I
      - ಷಷ್ಠ II (ಸು.1000-72)
        - ಗೂವಲದೇವ II (ಸು.1038)
        - ಜಯಕೇಶಿ I (ಸು.1050-78)
          - ಗೂವಲದೇವ III (ಸು.1078-1125)
          - ವಿಜಯಾದಿತ್ಯ
            - ಪದ್ಮಲದೇವಿ
            - ಜಯಕೇಶಿ II (ಸು.1125-47)
              - ಸಾವಿತ್ರಿ
              - ಪೆರ್ಮಾಡಿದೇವ (ಶಿವಚಿತ್ತ: ಸು.1147-92)
              - ವಿಜಯಾದಿತ್ಯ (ವಿಷ್ಣುಚಿತ್ತ: ಸು.1147-87)
                - ಜಯಕೇಶಿ III (ಸು.1187-1225)
                  - ವಜ್ರದೇವ (ಸು.1200-21)
                  - ತ್ರಿಭುವನಮಲ್ಲ (ಸು.1225-46)
                    - ಷಷ್ಠ III (ಸು.1246-60)
            - ತ್ರಿಭುವನಮಲ್ಲ
          - ಮಯಣಲ್ಲಾದೇವಿ
          - (ಇನ್ನೊಬ್ಬ ಮಗಳು)

ಮಲಪ್ರಭಾ ದಂಡೆಯ ಕದರೋಲಿಯ ಗುಡಿ, ಹಲಶಿಯ ಹತ್ತಿಕೇಶ್ವರ, ಕಲ್ಲೇಶ್ವರ, ಸುವರ್ಣೇಶ್ವರ ಮತ್ತು ರಾಮೇಶ್ವರ ದೇವಾಲಯಗಳಲ್ಲೂ ಅನಂತರ ಯಲವತ್ತಿಯ ಹಿಂದು ಮತ್ತು ಜೈನಗುಡಿಗಳಲ್ಲಿಯೂ ಮುಂದೆ ಈ ಶೈಲಿಯ ಪರಮೋಚ್ಚ ಕೃತಿಯನ್ನು ಬೆಳಗಾಂವಿ ಜಿಲ್ಲೆಯ ದೇಗಾಂವೆಯ ಕಮಲಾನಾರಾಯಣ ದೇವಾಲಯದಲ್ಲಿಯೂ ಕಾಣಬಹುದೆಂದು ಮೊರೇಸರ ಬರೆವಣಿಗೆಯಿಂದ ತಿಳಿದುಬರುತ್ತದೆ.



ದೇಗಾಂವೆಯ ಕಮಲಾನಾರಾಯಣ ಗುಡಿ

ಶಿವಚಿತ್ತನ (1147-92) ಪತ್ನಿ ಕಮಲಾದೇವಿಯ ಆಜ್ಞೆಯಿಂದ ತಿಪ್ಪೋಜನೆಂಬುವನು ದೇಗಾಂವೆಯ ಕಮಲಾನಾರಾಯಣ ದೇವಾಲಯವನ್ನು ಕಟ್ಟಿದನೆಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಈ ದೇವಾಲಯ ಒಂದು ತ್ರಿಕೂಟಾಚಲ. ಮೂರು ದೇವಗೃಹಗಳು ಮುಂದಿನ ಮಂಟಪಕ್ಕೆ ತೆರೆದಂತಿವೆ. ದೇವಗೃಹಗಳಲ್ಲೊಂದೊಂದರಲ್ಲೂ ಒಂದು ಗರ್ಭಗೃಹ ಮತ್ತು ಸುಕನಾಸಿ ಇವೆ. ಸುಕನಾಸಿ ಮತ್ತು ಗರ್ಭಗೃಹದ ಬಾಗಿಲವಾಡಗಳು ಬಲು ನಾಜೂಕಾಗಿ ಶಿಲ್ಪಿತವಾಗಿವೆ. ಸುಕನಾಸಿಯ ಬಾಗಿಲುಗಳನ್ನು ಕಲಾತ್ಮಕವಾಗಿ ಕೆತ್ತಿದ ಜಾಲಂಧ್ರಗಳ ಚೌಕಟ್ಟಿನ ಮಧ್ಯದಲ್ಲಿರಿಸಲಾಗಿದೆ. ದೇವಾಲಯದ ಹೊರಗೋಡೆಯ ಮೇಲೆ ಕದಂಬನಾಗರ ರೀತಿಯ ಶಿಖರವನ್ನು ಹೊತ್ತಿರುವ ಜೋಡಿ ಅರೆಗಂಬಗಳ ಅಲಂಕರಣವಿದೆ. ಮೇಲಿನ ಕೈಪಿಡಿಯನ್ನು ಹೊತ್ತು ಸೆಟೆದು ನಿಂತ ಸಿಂಹಗಳೂ ಅವುಗಳ ಮಧ್ಯೆ ನೃತ್ಯ ಬಾಲಿಕೆಯರ ವಿಗ್ರಹಗಳೂ ಇವೆ. ಅಲಂಕರಣ, ಸ್ತಂಭರೀತಿ ಮುಂತಾದವುಗಳಲ್ಲಿ ಸಮಕಾಲೀನ ಚಾಳುಕ್ಯ ಹೊಯ್ಸಳ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ದೇಗಾಂವೆಯ ಕಮಲಾನಾರಾಯಣ ಗುಡಿ ಕರ್ನಾಟಕದ ಸುಂದರ ದೇವಾಲಯಗಳಲ್ಲೊಂದೆಂಬುದರಲ್ಲಿ ಸಂದೇಹವಿಲ್ಲ. ಈ ಗುಡಿ ಕದಂಬ ವಾಸ್ತುಶಿಲ್ಪ ಶೈಲಿಯ ಉಚ್ಚ ಹಾಗೂ ಸ್ವರೂಪ ನಿರ್ದೇಶಕ ಕೃತಿ.

ಗೋವ ಕದಂಬರ ಕಾಲದ ಶಿಲ್ಪಗಳು ಹೆಚ್ಚುಮಟ್ಟಿಗೆ ಕಲ್ಯಾಣದ ಚಾಳುಕ್ಯ ಶೈಲಿಯಲ್ಲಿಯೇ ಇರುತ್ತವೆ. ಚೂಪುತಲೆಯ ಪ್ರಭಾವಳಿ ಮಾತ್ರ ಈ ಕದಂಬ ಶಿಲ್ಪಗಳ ವೈಶಿಷ್ಟ್ಯವಿರಬಹುದು. ಹಲಶಿಯ ದೇವಾಲಯದಲ್ಲಿರುವ ಲಕ್ಷ್ಮೀನಾರಾಯಣ ವಿಗ್ರಹ ಗೋವ ಕದಂಬ ಶಿಲ್ಪಗಳಿಗೆ ಒಂದು ಉತ್ತಮ ಉದಾಹರಣೆ. (ಎಸ್.ಎನ್.)

**ನಾಣ್ಯಗಳು :** ಗೋವ ಕದಂಬರ ನಾಣ್ಯಗಳು ಕಲಾತ್ಮಕವಾಗಿಯೂ ವೈವಿಧ್ಯಪೂರ್ಣವಾಗಿಯೂ ಇದ್ದು ಕರ್ನಾಟಕ ನಾಣ್ಯ ಇತಿಹಾಸದಲ್ಲಿ ಮುಖ್ಯವಾಗಿವೆ. ಚಿನ್ನ ಮತ್ತು ತಾಮ್ರದ ಇವರ ನಾಣ್ಯಗಳು ಗೋವದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ವಿಶೇಷವಾಗಿ ದೊರಕಿವೆ. ಸಾಮಾನ್ಯವಾಗಿ ಈ ನಾಣ್ಯಗಳ ಮುಮ್ಮುಖದಲ್ಲಿ ಸಿಂಹ ಮತ್ತು ಸಂವತ್ಸರದ ಹೆಸರು, ಹಿಮ್ಮುಖದಲ್ಲಿ ನಾಗರೀ ಲಿಪಿಯಲ್ಲಿ ರಾಜನ ಹೆಸರು ಸೇರಿದಂತೆ ಬರೆಹ ಕಾಣಬರುತ್ತವೆ. ಮಲೆಗೆಭೈರವ ಮತ್ತು ಮಲವರಮಾರಿ ಎಂಬ ಇವರ ಬಿರುದುಗಳನ್ನು ಇವರ ನಾಣ್ಯಗಳ ಮೇಲೆ ಕಾಣಬಹುದು.

ಮೊದಲನೆಯ ಜಯಕೇಶಿಯ ನಾಣ್ಯಗಳು ಈ ರೀತಿ ಇವೆ: ಮುಮ್ಮುಖದಲ್ಲಿ ಸಿಂಹ ಮತ್ತು ನಾಗರೀಲಿಪಿಯಲ್ಲಿ ವಿಜಯ ಎಂಬ ಬರೆಹ ಹಿಮ್ಮುಖದಲ್ಲಿ ಬಿಂದುಗಳಿಂದ ಮಾಡಿದ ವೃತ್ತದಲ್ಲಿ, ಶ್ರೀಸಪ್ತಕೋಟೀಶ ಲಬ್ಧವರವೀರ ಜಯಕೇಶಿದೇವ ಮಲವರಮಾರಿ' ಎಂಬ ಐದು ಸಾಲಿನ ನಾಗರೀ ಬರೆಹ ಇವೆ. ಇವನ ಇನ್ನೊಂದು ರೀತಿಯ ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಗಜಸಿಂಹ, ಹಿಮ್ಮುಖದಲ್ಲಿ ತ್ರಿಶೂಲ ಮತ್ತು ಶ್ರೀಮಲೆಗೈಭೈರವ ಎಂಬ ಎರಡು ಸಾಲುಗಳ ನಾಗರೀಲಿಪಿ ಇರುತ್ತವೆ. ಈ ನಾಣ್ಯಗಳು ಚಿನ್ನದಿಂದ ಮಾಡಿದವು. 76.5 ಗ್ರೇನ್ ತೂಕ, 0.6 ಅಂಗುಲ ವ್ಯಾಸವುಳ್ಳವು. 45 ಗ್ರೇನ್ ತೂಕ,0.45" ವ್ಯಾಸವಿದ್ದು ಹಿಮ್ಮುಖದಲ್ಲಿ ಶ್ರೀಮಲವರಮಾರಿ ಎಂಬ ನಾಗರೀಲಿಪಿಯ ಬರೆಹವಿರುವ ನಾಣ್ಯಗಳು ಸಹ ಇವನವೇ ಇರಬಹುದು. ಇವುಗಳಲ್ಲೂ ನಾಲ್ಕು ರೀತಿಯವಿವೆ. ಒಂದನೆಯ ನಾಣ್ಯದಲ್ಲಿ ಧ್ವಜಸ್ತಂಭ, ಎರಡನೆಯದರಲ್ಲಿ ರಾಜದಂಡ ಮತ್ತು ಛತ್ರಿ, ಮೂರನೆಯದರಲ್ಲಿ ಎತ್ತರವಾದ ಗೋಪುರವುಳ್ಳ ದೇವಾಲಯ, ನಾಲ್ಕನೆಯದರಲ್ಲಿ ಅಂಕುಶ, ಇವುಗಳ ಜೊತೆಗೆ ಸಿಂಹ ಇವು ಮುಮ್ಮುಖದಲ್ಲಿ ಕಾಣುತ್ತವೆ.

ಎರಡನೆಯ ಜಯಕೇಶಿ ಹೊರಡಿಸಿರಬಹುದಾದ ಒಂದು ಚಿನ್ನದ ನಾಣ್ಯದಲ್ಲಿ 'ದುರ್ಮತಿ' ಎಂಬ ಸಂವತ್ಸರದ ಹೆಸರು ಮತ್ತು ಹಿಮ್ಮುಖದಲ್ಲಿ ಐದು ಸಾಲಿನ ಬರೆಹ ಕಾಣುತ್ತದೆ. ಶಿವಚಿತ್ತ, ಪೆರ್ಮಾಡಿಯ ಒಂದು ರೀತಿಯ ನಾಣ್ಯದಲ್ಲಿ ಮುಮ್ಮುಖದಲ್ಲಿ ಸಿಂಹ, ಸೂರ್ಯ ಮತ್ತು 'ಜಯ' ಎಂಬ ಬರೆಹ, ಹಿಮ್ಮುಖದಲ್ಲಿ 'ಸಪ್ತಕೋಟೀಶ ಲಬ್ಧವರ ವೀರ ಹೆಮ್ಮಾಡಿದೇವ ಮಲವರಮಾರಿ' ಎಂಬ ಐದು ಸಾಲುಗಳ ನಾಗರೀಬರೆಹವಿದ್ದರೆ ಮತ್ತೊಂದು ನಮೂನೆಯ ನಾಣ್ಯದಲ್ಲಿ ಶಿವಚಿತ್ತ ವೀರಹೆಮ್ಮಾಡಿದೇವ ಎಂಬ ಬರೆಹ ಕಾಣಬರುತ್ತದೆ. ಇವನ ನಾಣ್ಯಗಳಲ್ಲಿ ವಿಷ್ಣು, ಬಹುಧಾನ್ಯ, ಈಶ್ವರ, ಕೀಲಕ ಮುಂತಾದ ಸಂವತ್ಸರಗಳ ಹೆಸರುಗಳು ಕಾಣಬರುತ್ತವೆ. ಇನ್ನೊಂದು ರೀತಿಯ ನಾಣ್ಯವೊಂದನ್ನೂ ಈ ರಾಜ ಅಚ್ಚು ಹಾಕಿಸಿದ, ಮುಮ್ಮುಖದಲ್ಲಿ ಎರಡು ವೃತ್ತಗಳು. ಅದರೊಳಗೆ ನಿಂತಿರುವ ಸಿಂಹ, ಸಿಂಹದ ಬಾಯಿಯ ಸಮೀಪದಲ್ಲಿ ಸ್ವಸ್ತಿಕ ಚಿಹ್ನೆ, ಕೆಳಗೆ ಪ್ಲವ ಎಂಬ ನಾಗರೀ ಬರೆಹ, ಹಿಮ್ಮುಖದಲ್ಲಿ ಎರಡು ವೃತ್ತಗಳು, ಇದರೊಳಗೆ ಶಿವಚಿತ್ತ ಎಂಬ ಹೆಸರು ನಾಗರೀ ಲಿಪಿ ಮತ್ತು ಕನ್ನಡ ಲಿಪಿಗಳಲ್ಲಿ ಒಂದರ ಕೆಳಗೆ ಒಂದರಂತೆ ಬರೆಯಲ್ಪಟ್ಟಿರುತ್ತವೆ. ಮೊದಲನೆಯ, ಮೂರನೆಯ ಮತ್ತು ಐದನೆಯ ಸಾಲುಗಳು ನಾಗರೀಲಿಪಿಯಲ್ಲಿಯೂ ಎರಡು ಮತ್ತು ನಾಲ್ಕನೆಯ ಸಾಲುಗಳು ಕನ್ನಡ ಲಿಪಿಯಲ್ಲಿಯೂ ಇರುತ್ತವೆ. ಮೂರನೆಯ ಜಯಕೇಶಿಯ ನಾಣ್ಯಗಳು ಮೊದಲನೆಯ ಜಯಕೇಶಿಯ ನಾಣ್ಯಗಳಂತೆಯೇ ಇವೆ.



ಗೋವ ಕದಂಬರ ನಾಣ್ಯಗಳು

ಸೋಯಿದೇವನ ನಾಣ್ಯಗಳಲ್ಲೂ ಮುಮ್ಮುಖದಲ್ಲಿ ಸಿಂಹ ಮತ್ತು ಸಂವತ್ಸರದ ಹೆಸರು, ಹಿಮ್ಮುಖದಲ್ಲಿ ಸಪ್ತಕೋಟೇಶ್ವರ ಚರಣ ಲಬ್ಧವರ

ವೀರ ಸೋಯಿದೇವ ಎಂಬ ನಾಲ್ಕು ಸಾಲುಗಳ ನಾಗರೀ ಲಿಪಿಯ ಬರೆಹ ಇರುತ್ತದೆ. ಪ್ಲವ ಮತ್ತು ವಿಶ್ವಾವಸು ಸಂವತ್ಸರಗಳನ್ನುಳ್ಳ ಇವನ ನಾಣ್ಯಗಳು ಈವರೆವಿಗೆ ದೊರಕಿವೆ. ಇದಕ್ಕಿಂತ ಭಿನ್ನವಾದ ಇವನ ನಾಣ್ಯವೊಂದರ ಮುಮ್ಮುಖದಲ್ಲಿ ಬಿಂದುಗಳಿಂದ ಮಾಡಿದ ವೃತ್ತ, ಅದರೊಳಗೆ ಒಂದು ಕಾಲನ್ನು ಎತ್ತಿರುವ ಸಿಂಹ, ಅದರ ಮುಂದೆ ಶಂಖ ಮತ್ತು ಶ್ರೀಸೋಇ ಎಂಬ ಬರೆಹ ಇವೆ. ಹಿಮ್ಮುಖದಲ್ಲಿ ತ್ರಿಶೂಲ ಮತ್ತು ಶ್ರೀಮಲವರಮಾರಿ ಎಂಬ ಬರೆಹ ಇದೆ.

ಷಷ್ಠದೇವನಿಗೆ ಖಚಿತವಾಗಿ ಸೇರಬಹುದಾದ ನಾಣ್ಯಗಳು ದೊರಕಿಲ್ಲ. ದೇವಷಷ್ಠ ಸೋಮದೇವ ಎಂಬ ಬರೆಹವನ್ನುಳ್ಳ ನಾಣ್ಯ ಷಷ್ಠದೇವನಿಗೆ ಸೇರಿರಬೇಕೆಂದು ಮೊರೇಸರ ಅಭಿಪ್ರಾಯ. ಆದರೆ ಈ ಬರೆಹ ಸರಿಯಾಗಿದೆಯೇ ಎಂಬುದು ಇನ್ನೂ ತಿಳಿದಿಲ್ಲ.

ಇವುಗಳ ಜೊತೆಗೆ ಯಾವ ಗೋವ ಕದಂಬ ರಾಜನಿಗೂ ಖಚಿತವಾಗಿ ಸಂಬಂಧಿಸಿದೆಯೆಂದು ಹೇಳಲಾಗದ ಕೆಲವು ನಾಣ್ಯಗಳೂ ದೊರಕಿವೆ. ಇವುಗಳಲ್ಲಿ ಸಂವತ್ಸರದ ಹೆಸರು, ಸಪ್ತಕೋಟೀಶ್ವರ ಮುಂತಾದ ಬರೆಹಗಳು, ಸೂರ್ಯ, ಚಂದ್ರ, ಸಿಂಹ, ಸ್ವಸ್ತಿಕ ಮೊದಲಾದವುಗಳು ಕಾಣಬರುತ್ತವೆ.

ಗೋವ ಕದಂಬ ನಾಣ್ಯಗಳ ಒಂದು ಒಳ್ಳೆಯ ಸಂಗ್ರಹ ಮುಂಬಯಿಯ ಇಂಡಿಯನ್ ಹಿಸ್ಟಾರಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿದೆ. (ಎ.ವಿ.ಎನ್.)

### ಇತರ ಕದಂಬ ಶಾಖೆಗಳು

**ಕರಡಿಕಲ್ಲಿನ ಕದಂಬರು :** ರಾಯಚೂರು ಜಿಲ್ಲೆಯಲ್ಲಿ ಲಭಿಸಿರುವ ಶಾಸನಗಳಿಂದ 11-12ನೆಯ ಶತಮಾನಗಳಲ್ಲಿ ಆ ಪ್ರದೇಶದ ಕರಡಿಕಲ್ಲು- 400 ಪ್ರಾಂತವನ್ನು ಕದಂಬ ಶಾಖೆಗೆ ಸೇರಿದ ಕೆಲವು ಸಾಮಂತರು ಆಳುತ್ತಿದ್ದರೆಂದು ತಿಳಿದಿದೆ. ಬನವಾಸಿಪುರವರೇಶ್ವರ, ಕದಂಬರಾಭರಣ ಎಂಬ ಬಿರುದುಗಳನ್ನು ಧರಿಸಿರುವುದರಿಂದ ಇವರು ಕದಂಬಕುಲಕ್ಕೆ ಸೇರಿದವರೆಂದು ಹೇಳಬಹುದಾಗಿದೆ. ಇತರ ಕದಂಬ ಶಾಖೆಗಳವರಿಂದ ಭಿನ್ನರೆಂಬುದು ಇವರು ಧರಿಸಿದ ನವಿಲೆಯ ಪಾರ್ಥ, ತೊಳೆದಡಿಯ ಭೀಮ, ಮನ್ನೆಯ ಗೂಡವೆ ಎಂಬ ವಿಶಿಷ್ಟಬಿರುದುಗಳಿಂದ ಕಂಡುಬರುತ್ತದೆ (ನವಿಲೆ ಎಂಬುದು ಈಗಿನ ನವಲಿ ಎಂಬ ಗ್ರಾಮ. ಇಲ್ಲಿನ ಜಡೆಯ ಶಂಕರದೇವರು 11ನೆಯ ಶತಮಾನದ ಶಂಕರ ದಾಸಿಮಯ್ಯನೆಂಬ ಶಿವಶರಣನ ಆರಾಧ್ಯದೈವ). ಈ ಶಾಖೆಯ ಮಹಾಸಾಮಂತ ನಾಗವರ್ಮರಸ ಚಾಳುಕ್ಯ ಮೊದಲನೆಯ ಸೋಮೇಶ್ವರನ ಅಧೀನದಲ್ಲಿ 1066ರಲ್ಲಿ ಕರಡಿಕಲ್ಲು- 400ನ್ನು ಆಳುತ್ತಿದ್ದ. 1113 ಮತ್ತು 1119ನೆಯ ವರ್ಷಗಳ ಶಾಸನಗಳಲ್ಲಿ ಮಹಾಮಂಡಲೇಶ್ವರ ಬೂತರಸನ ಪ್ರಸ್ತಾಪವಿದೆ. ಈತ ಆರನೆಯ ವಿಕ್ರಮಾದಿತ್ಯನ ಸಾಮಂತ, ಬಹುಶಃ ನಾಗವರ್ಮರಸನ ಅನಂತರ ಅಧಿಕಾರಕ್ಕೆ ಬಂದಾತ. ಮೂರನೆಯವ ಮಾಧವತ್ತಿಯರಸ, ಮುಮ್ಮಡಿ ಸೋಮೇಶ್ವರನ ಮಹಾಮಂಡಲೇಶ್ವರ -ಈತ ಕಾಣಿಸಿಕೊಳ್ಳುವ ಕಾಲ 1135. ಈತ ಬಹುಶಃ ಬೂತರಸನ ಉತ್ತರಾಧಿಕಾರಿ. ಆದರೆ ಇವರ ನಡುವಣ ಬಾಂಧವ್ಯ ಖಚಿತವಾಗಿ ತಿಳಿಯದು. ಬಹುಶಃ ಕ್ರಮವಾಗಿ ತಂದೆ ಮಕ್ಕಳಾಗಿರಬಹುದು.

ಸುಮಾರು ಆರು ದಶಕಗಳ ಅನಂತರ 1191ರ ಮತ್ತು 1215ರ ಕರಡಿಕಲ್ಲು ಮತ್ತು ಮುಟಗಲ್ಲಿನ ಶಾಸನಗಳಲ್ಲಿ ಕದಂಬ ಕುಲದ ಸಾಮಂತರ ಪ್ರಸ್ತಾಪವಿದೆ. ಮೇಲೆ ಹೇಳಿದ ಕದಂಬರು ಧರಿಸಿದ ವಿಶಿಷ್ಟವಾದ ಬಿರುದುಗಳನ್ನೇ ಇವರು ಸಹ ಧರಿಸಿದ್ದರು. ಆದರೆ ಇವರ ಹೆಸರುಗಳು ಮಾತ್ರ ಸ್ವಲ್ಪಭಿನ್ನ. ಲಭ್ಯ ಶಾಸನಗಳಿಂದ ಇವರ ವಂಶಾವಳಿಯನ್ನು ಹೀಗೆ ರೂಪಿಸಬಹುದು:

ಬಜ್ಜ I
|
ಕಾಚ I
|
ಬಜ್ಜ II (ಪತ್ನಿ, ಬಾಚಲದೇವಿ)
|
ಕಾಚ II (ಪತ್ನಿ, ಸಜ್ಜಲದೇವಿ)
|
ಬಜ್ಜ III (ಪತ್ನಿ, ಹೊಲ್ಲಾದೇವಿ)

ಶಾಸನದಲ್ಲಿ ಒಂದನೆಯ ಕಾಚನ ಮಗನನ್ನು ಅಗ್ರನಂದನನೆಂದಿರುವುದರಿಂದ ಇಮ್ಮಡಿ ಬಜ್ಜನಿಗೆ ಕಿರಿಯ ಸೋದರರಿದ್ದಿರಬಹುದು. ಮುಮ್ಮಡಿ ಬಜ್ಜ ಮುದುಗಲ್ಲ ಪಟ್ಟಣವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದ. ಈತನ ಮಹಾ ಪ್ರಧಾನನಾದ ಮಾಳಯನಾಯಕ ಅಂತರಿಸಿರ್ದ ಕದಂಬ ರಾಜ್ಯವಂಶೋದಯ ಮಾಗಲುದ್ಧರಿಸಿದನೆಂದು ಶಾಸನದಲ್ಲಿ ಹೇಳಿರುವುದನ್ನು ಗಮನಿಸಿದರೆ ಬಹುಶಃ ಮಾದವತ್ತಿಯರಸನ ಅನಂತರ ಇವರು ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದು, ಸ್ವಲ್ಪ ಕಾಲಾನಂತರ ಇನ್ನೊಮ್ಮೆ ತಮ್ಮ ಆಳ್ವಿಕೆಯ ಪ್ರದೇಶಗಳನ್ನು ಪಡೆದುಕೊಂಡರೆಂದು ಊಹಿಸಬಹುದಾಗಿದೆ.

ಈ ಕದಂಬರನ್ನು ಶಾಸನಗಳಲ್ಲಿ ಕಡಂಬರೆಂದೂ ಕರೆಯಲಾಗಿದೆ. ಇದು ಕೇವಲ ರೂಪಭೇದ, ಮೂರ್ಧನ್ಯೀಕರಣದ ಫಲ.

**ನೂಱುಂಬಾಡದ ಕದಂಬರು :** ಶಾಸನಗಳಲ್ಲಿ ಕಡಂಬರೆಂದೇ ಕರೆಯಲಾಗಿರುವ ಈ ಶಾಖೆಯವರು 12ನೆಯ ಶತಮಾನದಲ್ಲಿ ಇಂದಿನ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ಮತ್ತು ಹಿರೇಕೆರೂರು ತಾಲ್ಲೂಕಿನ ಭಾಗಗಳನ್ನೊಳಗೊಂಡ, ರಟ್ಟಪಳ್ಳಿ-70 ಮತ್ತು ಇಟ್ಟಿಗೆ-70 ಎಂಬ ಎರಡು ಭಾಗಗಳನ್ನು ಸೇರಿಸಿ ಕರೆಯಲಾದ ನೂಱುಂಬಾಡ ಪ್ರಾಂತವನ್ನು ಆಳುತ್ತಿದ್ದರು. ಚಾಳುಕ್ಯ 1ನೆಯ ಸೋಮೇಶ್ವರನ ಸಮಕಾಲೀನನಾಗಿದ್ದ ಸಾಮಂತ ಬೀರದೇವ ಈ ಶಾಖೆಯ ಮೊದಲಿಗ. ಈತನ ಸೋದರ ಕೇತರಸ 1. ಈತನ ಮಗ ನಾಮರಸ, ಇವರ ವಂಶಾವಳಿ ಹೀಗಿದೆ:

ಬೀರದೇವ ಕೇತರಸ I
|
ನಾಮರಸ
|
ಕೇತರಸ II (ಪತ್ನಿ, ಅತ್ತಿಯಬ್ಬೆ)
|
ಪುಲಕೇಶಿ ಪೆರ್ಮ ರಾಣಕಿದೇವ ಬೀರದೇವ II ಬಮ್ಮರಸ ಮಲ್ಲಿದೇವ
(ಪೆರ್ಮಾಡಿ) (ಪತ್ನಿ, ಬಾಚಲದೇವಿ)
|
ಕೇತರಸ III (ಪತ್ನಿಯರು- ಲಳಿಯಾದೇವಿ, ಕಂಚಲದೇವಿ, ದೊಣಲದೇವಿ)
|
ಗರುಡಪಾಂಡ್ಯ (ಪತ್ನಿ, ಬಾಚಲದೇವಿ) ವೀರಪಾಂಡ್ಯ

ಇಮ್ಮಡಿ ಕೇತರಸನ ಪತ್ನಿ ಅತ್ತಿಯಬ್ಬೆಗೆ ಇಮ್ಮಡಿ ಬೀರದೇವ, ಬಮ್ಮರಸ, ಮಲ್ಲಿದೇವರೆಂಬ ಮೂವರು ಮಕ್ಕಳಿದ್ದರೆಂದು ಶಾಸನದಲ್ಲಿ ಹೇಳಿದೆ. ಆದರೆ ಕೇತರಸನಿಗೆ ಪುಲಕೇಶಿ, ಪೆರ್ಮ ಮತ್ತು ರಾಣಕಿದೇವ ಎಂಬ ಇನ್ನೂ ಮೂವರು ಮಕ್ಕಳಿರುವುದನ್ನು ಸಹ ಶಾಸನದಲ್ಲಿ ಹೇಳಿದೆಯಾಗಿ, ಅವರು ಆತನ ಇನ್ನೊಬ್ಬ ಪತ್ನಿಯ ಮಕ್ಕಳಾಗಿರಬೇಕು. ಇಮ್ಮಡಿ ಬೀರದೇವನ ಪತ್ನಿ ಬಾಚಲದೇವಿ ಗುತ್ತವಂಶದ ರಾಜಕುಮಾರಿ. ಈತನ ಮಗ ಮುಮ್ಮಡಿ ಕೇತರಸನ ಪತ್ನಿ ಲಳಿಯಾದೇವಿ ಸಹ ಆ ವಂಶಕ್ಕೇ ಸೇರಿದವಳು. ಕಂಚಲದೇವಿ ಮತ್ತು ದೋರಲದೇವಿ ಈ ಕೇತರಸನ ಇನ್ನಿಬ್ಬರು ಪತ್ನಿಯರು. ದೋರಲದೇವಿ ಸಿಂದ ಕುಲದವಳು. ಗರುಡ ಪಾಂಡ್ಯನು ಗುತ್ತ 1ನೆಯ ವಿಕ್ರಮಾದಿತ್ಯನ ಮಗಳಾದ ಬಾಚಲದೇವಿಯನ್ನು ಮದುವೆಯಾಗಿದ್ದ. ಗರುಡಪಾಂಡ್ಯ 2ನೆಯ ಸೇವುಣ ಸಿಂಘಣನ ಮಾಂಡಲಿಕನಾಗಿದ್ದ ಇವನ ಪೂರ್ವಜರು ಆರಂಭದಲ್ಲಿ ಚಾಳುಕ್ಯರ, ಅನಂತರ ಕಳಚುರಿಗಳ ಸಾಮಂತರಾಗಿದ್ದರು.

**ಬಂಕಾಪುರದ ಕದಂಬರು :** 11-12ನೆಯ ಶತಮಾನಗಳಲ್ಲಿ ಹಾನಗಲ್ಲು ಪ್ರಾಂತವನ್ನು ಆಳುತ್ತಿದ್ದ ಕದಂಬ ಮನೆತನದಲ್ಲಿ ಮಯೂರವರ್ಮ ಎಂಬ ಅರಸನೂ ಇದ್ದನೆಂದು ಇದುವರೆಗೂ ಭಾವಿಸಲಾಗಿತ್ತು. ಆದರೆ ಲಭ್ಯಶಾಸನಗಳ ಆಧಾರದಿಂದ ಈ ಮಯೂರವರ್ಮ ಬಂಕಾಪುರಕ್ಕೆ ಸೇರಿದವನೆಂದು ತಿಳಿದುಬರುತ್ತದೆ. ಪಾಂಥಿ ಪುರಾಧಿಪ ಎಂಬುದು ಈತನ ವಿಶಿಷ್ಟ ಬಿರುದು. ಈತ ಚಾಳುಕ್ಯ ಇಮ್ಮಡಿ ಜಯಸಿಂಹನ ಸೋದರಿಯಾದ ಅಕ್ಕಾದೇವಿಯನ್ನು ಲಗ್ನವಾಗಿದ್ದ. 1034-35ರಲ್ಲಿ ಈತ ಬನವಾಸಿ

ಪನ್ನಿಚ್ಛಾಸಿರ ಮತ್ತು ಪಾನುಂಗಲ್ಲೈನೂರು ಪ್ರಾಂತಗಳನ್ನಾಳುತ್ತಿದ್ದ. ಮಯೂರವರ್ಮನನ್ನು ಹರಿಕಂತನ ಸಿಂಗನೆಂದು ವರ್ಣಿಸಿದೆ. ಈತನ ತಂದೆ ಹರಿಕಂತ ಅರಿಕೇಸರಿ ಆಗಿರಬಹುದು. ಅಕ್ಕಾದೇವಿಯು ಮಗ ತೋಯಿಮದೇವ. ಈತ 1062ರ ಅನಂತರ ಆಡಳಿತ ಹೊಣೆ ವಹಿಸಿದ. ಮಯೂರವರ್ಮ 1047ರ ವರೆಗೆ ಹಾನುಂಗಲ್ಲು ಪ್ರಾಂತಾಧಿಕಾರಿಯಾಗಿದ್ದ. ಅನಂತರ ಆತನ ಇನ್ನೊಬ್ಬ ಮಗ ಅರಿಕೇಸರಿ ಅಧಿಕಾರಕ್ಕೆ ಬಂದ. ಅವನ ಉತ್ತರಾಧಿಕಾರಿ ತಮ್ಮನಾದ ತೋಯಿಮ, ಈತ ಕೇವಲ 5-6 ವರ್ಷಗಳ ಕಾಲ ಆಳಿದ ಬಳಿಕ ಈ ಪ್ರಾಂತ ಹಾನುಗಲ್ಲಿನ ಕದಂಬರ ವಶವಾಯಿತು. ಇವರನ್ನು ಬಂಕಾಪುರದ ಕದಂಬರೆಂದು ಗುರುತಿಸಿ ಅವರ ವಂಶಾವಳಿಯನ್ನು ಹೀಗೆ ರೂಪಿಸಬಹುದು:

ಅರಿಕೇಸರಿ
|
ಮಯೂರವರ್ಮ (ಪತ್ನಿ, ಅಕ್ಕಾದೇವಿ)
|
ಅರಿಕೇಸರಿ II — ತೋಯಿಮ

**ಬಯಲ್ನಾಡ ಕದಂಬರು :** ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಭಾಗದಲ್ಲಿ 10-12ನೆಯ ಶತಮಾನಗಳಲ್ಲಿ ಕದಂಬ ಶಾಖೆಗೆ ಸೇರಿದ ಕೆಲವು ಸಾಮಂತರ ಶಾಸನಗಳು ದೊರೆತಿವೆ. ಇವರು ಬಯಲ್ನಾಡನ್ನು ಆಳುತ್ತಿದ್ದರೆಂದು ಅವುಗಳಲ್ಲಿ ಹೇಳಿದೆ. ರೈಸ್ ಅವರು ಈ ಸಾಮಂತರನ್ನು ಕುರಿತು ಪ್ರಸ್ತಾಪಿಸಿ, ಕೆಲವರ ಹೆಸರುಗಳನ್ನು ಕೊಟ್ಟಿದ್ದಾರೆ. ಆದರೆ ಈ ಶಾಸನಗಳ ಪುನಃಪರಿಶೀಲನೆಯಿಂದ ಜಾಗಿ, ಉರವಿಯಮ್ಮರಸ (998-99), ಈಕರವರ್ಮ (1079) ಮತ್ತು ಇರವಿಚಲ್ಲಮ್ಮ (1107) ಎಂಬುವರ ಹೆಸರುಗಳು ಈಗ ಸ್ಪಷ್ಟವಾಗಿ ತಿಳಿದಿವೆ. ಕದಂಬ ಕಣ್ಠೀರವ ಮುಕ್ಕಣ್ಣಕದಂಬ, ಕದಂಬ ವಂಶೋದ್ಭವ ಎಂಬುದು ಇವರ ಬಿರುದುಗಳು. ಈಕರವರ್ಮನನ್ನು ಬನವಾಸಿ ವಿಷಯಾಧೀಶ್ವರನೆಂದು ವರ್ಣಿಸಿದ್ದರೂ ಆತ ಆಳುತ್ತಿದ್ದ ಪ್ರದೇಶ ಬಯಲ್ನಾಡಯ್ದುಮುನ್ನೂರು ಎಂದು ಹೇಳಿದೆ. ಇವರಲ್ಲಿ ಮೊದಲಿಗ ಜಾಗಿ ಮತ್ತು ಮುಂದಣವರ ಸಂಬಂಧ ಸ್ಪಷ್ಟವಾಗಿಲ್ಲ. ಇವರು ಬಹುಶಃ ಇದೆ ಕಾಲದಲ್ಲಿ ಈ ಪ್ರದೇಶದಲ್ಲಿ ಆಳುತ್ತಿದ್ದ ಚೋಳರ ಸಾಮಂತರಾಗಿದ್ದಿರಬಹುದು. ಇವರ ಶಾಸನಗಳ ಕನ್ನಡ ಭಾಷೆ ಬಹುಮಟ್ಟಿಗೆ ತಮಿಳಿನಿಂದ ಪ್ರಭಾವಿತವಾಗಿದೆ. ಇನ್ನೂ ಕೆಲವು ಕದಂಬ ಶಾಖೆಗಳು ವಿವಿಧ ಕಡೆಗಳಲ್ಲಿ ಆಳುತ್ತಿದ್ದವೆಂದು ತಿಳಿದುಬರುತ್ತದೆ. (ಬಿ.ಆರ್.ಜಿ.)

**ಕದ್ರಾ :** ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಒಂದು ಧಾರ್ಮಿಕ ಕ್ಷೇತ್ರ. ಕಾರವಾರದಿಂದ 32ಕಿಮೀ ದೂರದಲ್ಲಿದೆ. ಅಂಶಿಘಟ್ಟದ ಕೆಳಭಾಗದಲ್ಲಿರುವ ಕದ್ರಾದಲ್ಲಿ ಇತ್ತೀಚೆಗೆ ಕಟ್ಟಲಾದ ಮಹಾಮಾಯಾ ದೇಗುಲ, ಕೆಥೊಲಿಕ್ ಚರ್ಚ್ ಹಾಗೂ ಒಂದು ಮಸೀದಿ ಇವೆ.

ಮಹಾಮಾಯಾ ದೇವಾಲಯದಲ್ಲಿ ದೀಪಾವಳಿಯ ಸಂದರ್ಭದಲ್ಲಿ 12 ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಕದ್ರಾದಿಂದ ಕಾರವಾರದ ವರೆಗೆ ಕಾಳಿನದಿಯಲ್ಲಿ ಹಾಯ್ಗಡಗಳಿದ್ದವು. ಇದು ಹಿಂದೆ ವಿಶೇಷವಾಗಿ ಆದಿಲ್ ಶಾಹಿಗಳ ಕಾಲದಲ್ಲಿ ಸಮುದ್ರ ವ್ಯಾಪಾರದ ಕೂಡು ಮಾರ್ಗದಲ್ಲಿತ್ತು. ಕದ್ರಾ ಬಳಿ ಆದಿಲ್‌ಶಾಹಿಗಳು ಕಟ್ಟಿಸಿದ ಒಂದು ಕೋಟೆ ಇದ್ದು ಅದನ್ನು ಸೋಂದಾ ಸದಾಶಿವನಾಯಕ (1705) ಕೆಡವಿ ಹಾಕಿದನೆಂದು ತಿಳಿದುಬರುತ್ತದೆ. ಹೈದರನ ಕಾಲದಲ್ಲಿ ಕದ್ರಾ ಒಂದು ಪರಗಣದ ಕೇಂದ್ರವಾಗಿತ್ತು. ಇಲ್ಲಿಗೆ ಸಮೀಪದ ಕೊಡಸಳ್ಳಿಯಲ್ಲಿ ಕಾಳಿ ಜಲವಿದ್ಯುತ್ ಉತ್ಪಾದನಾ ಯೋಜನೆಯ ಎರಡನೆಯ ಹಂತದ ಅಣೆಕಟ್ಟೆ ನಿರ್ಮಿತವಾಗಿದೆ. (ಎಸ್.ಎಚ್.ಇ.)

**ಕನಕಗಿರಿ :** ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಒಂದು ಗ್ರಾಮ. ಗಂಗಾವತಿಗೆ ಸು.21ಕಿಮೀ ಉತ್ತರದಲ್ಲಿ ಲಿಂಗಸುಗೂರು ಮಾರ್ಗದಲ್ಲಿದೆ. ಈ ಗ್ರಾಮದ ಮೂರು ದಿಕ್ಕುಗಳನ್ನು ಇಲ್ಲಿ ಹರಿಯುವ ಎರಡು ತೊರೆಗಳು ಸುತ್ತುವರಿದಿವೆ. ಕಣ್ಣಿದ್ದವರು ಕನಕಗಿರಿ ನೋಡಬೇಕೆಂಬುದು ಆ ಭಾಗದಲ್ಲಿನ ಜನವಾಣಿ. ಇದು ಈ ಊರಿನ ದೇವಾಲಯಗಳ ಪ್ರೇಕ್ಷಣೀಯತೆಯನ್ನು ಸೂಚಿಸುತ್ತದೆ. ಇಲ್ಲಿಯ ಕನಕಾಚಲಸ್ವಾಮಿಯ ದೇವಸ್ಥಾನದಲ್ಲಿ ಹಳೆಯ ಕಾಲದಿಂದಲೂ ಜಾತ್ರೆಯ ಮೂರು ದಿನಗಳಲ್ಲಿ ಹರಿಜನರನ್ನು ದೇವರ ದರ್ಶನಕ್ಕೆ ಬಿಡುವ ಪರಂಪರೆಯಿತ್ತು. ಹರಿಜನರಿಗಾಗಿಯೇ ಈ ದೇವರು ಇಲ್ಲಿ ನೆಲಸಿದನೆಂಬ ಪ್ರತೀತಿ ಇದೆ. ಇಲ್ಲಿನ ರಥೋತ್ಸವ ವರ್ಷಪ್ರತಿ ಫಾಲ್ಗುಣ ಬಹುಳ ಸಪ್ತಮಿಯಂದು ನಡೆಯುತ್ತದೆ.

ಕನಕನೆಂಬ ಮುನಿ ಇಲ್ಲಿ ತಪಸ್ಸು ಮಾಡಿದನೆಂದು ಹೇಳುವರು. ವಿಜಯದಾಸರು ಕ್ಷೇತ್ರ ಸುಳಾದಿಯಲ್ಲಿಯೂ ಈ ವಿಚಾರ ಹೇಳಿದ್ದಾರೆ. ಕನಕಗಿರಿಯ ಉತ್ತರ ದಕ್ಷಿಣ ಪ್ರದೇಶದಲ್ಲಿ (ಮಸ್ಕಿ, ಕೊಪ್ಪಳ) ಅಶೋಕನ ಶಾಸನಗಳು ದೊರೆತಿದ್ದು ಮತ್ತು ಕನಕಗಿರಿ ವ್ಯಾಪಾರೀ ಮಾರ್ಗದಲ್ಲಿ ಇರುವುದನ್ನು ನೋಡಿದರೆ ಈ ಊರೇ ಅಶೋಕನ ದಕ್ಷಿಣದ ಕಾರ್ಯಕೇಂದ್ರವಾಗಿದ್ದ ಸುವರ್ಣಗಿರಿ ಎಂಬ ಊಹೆಗೆ ಅವಕಾಶ ಮಾಡಿಕೊಡುತ್ತದೆ. ಎರಡನೆಯ ಶತಮಾನದ ಟಾಲೆಮಿಯ ಭೂಗೋಳದಲ್ಲಿ ಭೀಮಾನದಿ ಹಾಗೂ ಬನವಾಸಿಗಳ ನಡುವಣ ಮಾರ್ಗದಲ್ಲಿ ಬರುವ ಊರುಗಳನ್ನು ಹೆಸರಿಸುವಲ್ಲಿ ಹೇಳಿರುವ 'ಕಲ್ಲಿಗೇರಿಸ್' ಕನಕಗಿರಿ ಇರಬಹುದೆಂದು ಊಹಿಸಲಾಗಿದೆ. 15-17ನೆಯ ಶತಮಾನಗಳ ಅವಧಿಯಲ್ಲಿ ಈ ಊರು ಒಂದು ಪಾಳೆಯಪಟ್ಟಿನ ಕೇಂದ್ರವಾಗಿತ್ತು.

**ಕನಕಗಿರಿಯ ಪಾಳೆಯಗಾರರು :** ಇವರ ಇತಿಹಾಸ 15ನೆಯ ಶತಮಾನದ ಮಧ್ಯದಲ್ಲಿ ಆರಂಭವಾಗುತ್ತದೆ. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ 12 ಗ್ರಾಮಗಳನ್ನು ಉಂಬಳಿಯಾಗಿ ಪಡೆದ ಗುಜ್ಜಲ ವಂಶದ ಪರಸಪ್ಪನಾಯಕ ಇಲ್ಲಿನ ಕನಕಾಚಲ ಲಕ್ಷ್ಮೀನರಸಿಂಹ ದೇವರ ಗರ್ಭಾಲಯವನ್ನು ಕಟ್ಟಿಸಿ ಹೊಸ ಊರಿನ ಸ್ಥಾಪನೆಗೆ ಕಾರಣನಾದ. ಇವನ ವಂಶದ ನಾಯಕರು ಮುಂದೆ ಪ್ರಬಲರಾಗಿ 40ಲಕ್ಷ ವರಹಗಳ ಆದಾಯದ ಪ್ರಾಂತ್ಯವನ್ನು ಗಳಿಸಿಕೊಂಡು ವಿಜಯನಗರದ ನರಪತಿಗಳ ಬಲಪಾರ್ಶ್ವದ ಮರ್ಯಾದೆಗಳನ್ನು ಹೊಂದಿದ ಪಾಳೆಯಗಾರರಾಗಿದ್ದರು. ಕೃಷ್ಣ ದೇವರಾಯನ ಆಮುಕ್ತಮಾಲ್ಯದ ಗ್ರಂಥದಲ್ಲಿ ಕನಕಗಿರಿಯ ಪ್ರಸ್ತಾಪವಿದೆ. ವಿಜಯನಗರ ನಾಶವಾದ ಅನಂತರ ಈ ನಾಯಕರಲ್ಲಿ ಕೆಲವರು ಬಿಜಾಪುರದ ಪರವಾಗಿಯೂ ಹೋರಾಡಿದಂತೆ ದಾಖಲೆಗಳಿವೆ. ವಿಜಯನಗರದ ಅರಸರಾದ ಸಾಳುವ ನರಸಿಂಹ, ಕೃಷ್ಣದೇವರಾಯ, ಅಚ್ಯುತರಾಯ ಇವರೆಲ್ಲ ಕನಕಗಿರಿಯ ದೇವಸ್ಥಾನಕ್ಕೆ ಗ್ರಾಮಗಳನ್ನು ದತ್ತಿ ಕೊಟ್ಟದ್ದಕ್ಕೆ ಕನಕಾಚಲ ದೇವಸ್ಥಾನದಲ್ಲಿ ಶಿಲಾಶಾಸನಗಳಿವೆ. ಶ್ರೀಮತ್ ಸ್ವರ್ಣಗಿರೀಶಸ್ಯ ನಾರಸಿಂಹಸ್ಯ ಶಾಸನಂ ಎಂಬುದು ಈ ಶಾಸನಗಳ ಪ್ರಾರಂಭ ಶ್ಲೋಕಭಾಗ.

ಪರಸಪ್ಪನಾಯಕನ ಮಗ ನವಾಬ ಉಡಿಚೆನಾಯಕ ಪ್ರಭಾವಶಾಲಿ ದೊರೆಯಾಗಿದ್ದ. ಏಳು ಗ್ರಾಮಗಳನ್ನು ಸೇರಿಸಿ ಕನಕಗಿರಿಯನ್ನು ಈತ ವಿಸ್ತರಿಸಿದ. ಗಂಗಾವತಿ ಹತ್ತಿರವಿರುವ ಎಮ್ಮೆಗುಡ್ಡದಲ್ಲಿ ಈತ ಕೋಟೆ ಕಟ್ಟಿಸಿದ. ಕನಕಗಿರಿಯಲ್ಲೇ ಮುನ್ನೂರಕ್ಕಿಂತ ಹೆಚ್ಚು ದೇವಾಲಯಗಳನ್ನು ಕಟ್ಟಿಸಿದನಂತೆ. ಇಲ್ಲಿನ ಮುಖ್ಯ ದೇವಾಲಯದ ಪ್ರಾಕಾರ, ಗೋಪುರಗಳನ್ನೆಲ್ಲ ಈತನೇ ಕಟ್ಟಿಸಿದ. ಈ ದೇವಾಲಯದಲ್ಲಿರುವ ಮಧ್ಯರಂಗ ಶಿಲ್ಪಕಲೆಯ ಒಂದು ಅದ್ಭುತ. ಇದು 54' ಉದ್ದ ಹಾಗೂ 36' ಅಗಲವಿರುವ ಒಂದು ನಾಟ್ಯ ಶಾಲೆ. ಮಧ್ಯ ಯಾವ ಆಧಾರವೂ ಇಲ್ಲದೆ ಪಕ್ಕದ ಸಿಂಹಸ್ತಂಭಗಳ ಮೇಲೆ ನಿಂತಿದೆ. ನವಾಬ ಉಡಿಚೆನಾಯಕನ ಮಗ ಕೆಲವಡಿ ಉಡಿಚೆನಾಯಕ ಹಾಗೂ ಅವನ ರಾಣಿಯರು ದೇವಸ್ಥಾನಗಳಲ್ಲೆಲ್ಲ ಸುಂದರವಾದ ಪೌರಾಣಿಕ ಪ್ರತಿಮೆಗಳನ್ನು ಮಾಡಿಸಿದರು. ಅನಂತರ ಬಂದ ಕನಕಯ್ಯ ಉಡಿಚೆನಾಯಕ ಊರಿನ ಎರಡು ಬದಿಯಲ್ಲಿ ವಿಶಾಲವಾದ ಪುಷ್ಕರಣಿಗಳನ್ನೂ ಅವನ ತಮ್ಮನಾದ ವೆಂಕಟಪ್ಪನಾಯಕ ಜಲಕ್ರೀಡಾ ಮಹಲನ್ನೂ (ವೆಂಕಟಪತಿ ಬಾವಿ) ಕಟ್ಟಿಸಿದ. ಹಂಪೆಯ ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಗೋಪುರ ಕನಕಗಿರಿಯ ನಾಯಕರು ಕಟ್ಟಿಸಿದ್ದು.

ಅನಂತರ ಬಂದ ಹಿರೇ ರಂಗಪ್ಪನಾಯಕ ಕವಿಗಳಿಗೂ ಪಂಡಿತರಿಗೂ ಆಶ್ರಯವಿತ್ತಿದ್ದ. ಕನ್ನಡದಲ್ಲಿ ಭಟ್ಟಂಗಿ ದಂಡಕಗಳನ್ನು ರಚಿಸಿರುವ ಹಾಗೂ ಘುಳಿಗೆಯಲ್ಲಿ ನೂರು ಶ್ಲೋಕ ರಚಿಸಬಲ್ಲನೆಂಬ ಖ್ಯಾತಿಯಿದ್ದ ಜಯವೆಂಕಟಾಚಾರ್ಯ, ಶ್ರೀಕೃಷ್ಣಪಾರಿಜಾತ ನಾಟಕ ರಚಿಸಿದ ಅಪರಾಳ ತಮ್ಮಣ್ಣ, ಚಿದಾನಂದ ಅವಧೂತ ಇವರು ಈ ಪಾಳೆಗಾರನ ಆಶ್ರಯದಲ್ಲಿದ್ದವರು.

ಕೊನೆಯ ಪಾಳೆಯಗಾರ ಹಿರೇನಾಯಕನ ಕಾಲದಲ್ಲಿ ಕನಕಗಿರಿ ರಾಜ್ಯ ಹರಿಹರ ದಾವಣಗೆರೆಯವರೆಗೆ ಬೆಳೆದಿತ್ತು. ಆದರೆ ಸುತ್ತಲಿನ ಶತ್ರುಗಳ ಬಗ್ಗೆ ಇವನಿಗೆ ಎಚ್ಚರವಿರಲಿಲ್ಲ. ಹೈದರಾಬಾದಿನ ನಿಜಾಮು ಕನಕಗಿರಿಯ ನಾಯಕನ ಬಂಧುವೇ ಆದ ಸುರಪುರದ ಪಾಮನಾಯಕನ ಮೂಲಕ ಕನಕಗಿರಿಯ ಮೇಲೆ ದಾಳಿ ಮಾಡಿಸಿ ನಾಯಕನನ್ನು ಸೆರೆಹಿಡಿಸಿ ಹೈದರಾಬಾದಿನಲ್ಲಿ ಕೊಲ್ಲಿಸಿದ. ನಾಯಕನ ಮನೆತನಕ್ಕೆ 16 ಹಳ್ಳಿಗಳನ್ನು ಮಾತ್ರ ಕೊಡಲಾಯಿತು. ಸುರಪುರದ ಪಾಮನಾಯಕನಿಗೆ ಕನಕಗಿರಿಯ ದಮನ ಮಾಡಿದುದಕ್ಕಾಗಿ ರುಸೂಮು, ಜಾಗೀರಿಗಳು ಸಿಕ್ಕವು. ಆದರೆ ಅನತಿ ಕಾಲದಲ್ಲೇ ಸುರಪುರದ ಗತಿಯೂ ಕನಕಗಿರಿಯಂತೆಯೇ ಆಯಿತು.

ಕನಕಗಿರಿಯ ಮೇಲೆ ಟಿಪ್ಪುವಿನ ದಾಳಿಯೂ ಒಮ್ಮೆ ಆದಂತೆ, ಅಲ್ಲದೆ ಈ ನಾಯಕರು ಮರಾಠರನ್ನೂ ಎದುರಿಸಿದಂತೆ ದಾಖಲೆಗಳಿವೆ. (ಜೆ.ಆರ್.ಪಿ.)

**ಕನಕದಾಸ :** 1508-1606 ಪ್ರಸಿದ್ಧ ಹರಿದಾಸರು, ಕೀರ್ತನಕಾರರು ಹಾಗೂ ಕವಿ. ಪುರಂದರದಾಸರ ಸಮಕಾಲೀನರೂ ವ್ಯಾಸರಾಯರ ಶಿಷ್ಯರೂ ಆದ ಕನಕದಾಸರು ಧಾರವಾಡ ಜಿಲ್ಲೆಯ ಕಾಗಿನೆಲೆಯ ಸಮೀಪದಲ್ಲಿ ಇಂದಿಗೂ ವಾಸಿಸುತ್ತಿರುವ ದಾಸರೆಂಬ ಒಂದು ಬುಡಕಟ್ಟಿಗೆ ಸೇರಿದವರಿರಬಹುದೆಂದು ಕೆಲವರ ಅಭಿಪ್ರಾಯ. ಈ ದಾಸ ಜನಾಂಗದವರು ರಾಮಾನುಜ ಪಂಥದ ಅನುಯಾಯಿಗಳಾಗಿದ್ದರೆಂದೂ ಇದರಿಂದ ಕನಕದಾಸರು ತಮ್ಮ ಮೋಹನತರಂಗಿಣಿಯಲ್ಲಿ ರಾಮಾನುಜಾಚಾರ್ಯರನ್ನೂ ತಾತಾಚಾರ್ಯರನ್ನೂ ಸ್ತುತಿಸಿದ್ದಾರೆ ಎಂದೂ ತರ್ಕಿಸಲಾಗಿದೆ. ತಮ್ಮ ಕೆಲವು ಕೀರ್ತನೆಗಳಲ್ಲಿ ಬೇರೇ ದೇವರನ್ನು ಕೊಂಡಾಡಿರುವುದರಿಂದ ಇವರು ಕುರುಬರೆಂದು ಇಲ್ಲವೆ ಬೇಡರ ಬುಡಕಟ್ಟಿನ ನಾಯಕ ಪಂಥದವರೆಂದು ಹೇಳುವವರೂ ಇದ್ದಾರೆ. ಕಾಗಿನೆಲೆಯಲ್ಲಿ ಹುಟ್ಟಿಬೆಳೆದು, ಬಾಡವೆಂಬ ಪ್ರದೇಶದಲ್ಲಿ (ಹಾವೇರಿ ಜಿಲ್ಲೆ) ನಾಯಕರಾಗಿ ಆಡಳಿತ ನಡೆಸಿ, ಯಾವುದೋ ಒಂದು ಕಾಳಗದಲ್ಲಿ ಸೋತು, ತನ್ನವರೆಂಬುವರನ್ನೆಲ್ಲ ಕಳೆದುಕೊಂಡು, ಪರಮಾತ್ಮನ ಅನುಗ್ರಹದಿಂದ ಚೇತರಿಸಿಕೊಂಡು, ಹರಿದಾಸರಾದಂತೆಯೂ ಅನಂತರ ದೇಶಸಂಚಾರ ಮಾಡುತ್ತಿದ್ದು ಕೆಲವು ಕಾಲ ಉಡುಪಿ, ಹಂಪೆ, ತಿರುಪತಿ, ಬೇಲೂರುಗಳಲ್ಲಿ ನೆಲಸಿದ್ದಂತೆಯೂ ಇವರ ಕೃತಿಗಳಿಂದ ತಿಳಿಯುತ್ತದೆ. ಕಾಗಿನೆಲೆಯ ಆದಿಕೇಶವ ಇವರ ಆರಾಧ್ಯದೈವ. ಇವರಿಗೆ ತಿಮ್ಮಪ್ಪ, ಕನಕನಾಯಕ ಎಂಬ ಹೆಸರುಗಳಿದ್ದಂತೆ ತಿಳಿದುಬಂದರೂ ತಮ್ಮ ಕೃತಿ ಹಾಗೂ ಸಾಧನೆಯಿಂದ ಕನಕದಾಸರೆಂದೇ ಪ್ರಸಿದ್ಧಿ ಹೊಂದಿದರು. ಇವರು ಹಲವು ಪವಾಡಗಳನ್ನು ಮೆರೆದಂತೆ ತಿಳಿಯುತ್ತದೆ. ಉಡುಪಿಯ ಶ್ರೀಕೃಷ್ಣ ದೇವಾಲಯದಲ್ಲಿರುವ ಕನಕನ ಕಿಂಡಿ ಇಂಥ ಪವಾಡಗಳಲ್ಲಿ ಒಂದೆಂಬ ನಂಬಿಕೆಯಿದೆ.

ಕನಕದಾಸರು ಅನೇಕ ಭಾವಪೂರ್ಣ ಕೀರ್ತನೆಗಳನ್ನು ರಚಿಸಿರುವರಲ್ಲದೆ ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ರಾಮಧಾನ್ಯ ಚರಿತ್ರೆ, ನೃಸಿಂಹಸ್ತವ ಎಂಬ ಕೃತಿಗಳನ್ನೂ ರಚಿಸಿದ್ದಾರೆ. ನೃಸಿಂಹಸ್ತವ ಉಪಲಬ್ಧವಿಲ್ಲ. (ಕೆ.ಎಂ.ಕೆ.)

ಮೋಹನತರಂಗಿಣಿ ಸಾಂಗತ್ಯ ಕಾವ್ಯ. ಇದರಲ್ಲಿ 42 ಸಂಧಿಗಳೂ 2,700 ಸಾಂಗತ್ಯಗಳೂ ಇವೆ. ಇದಕ್ಕೆ ಕೃಷ್ಣಚರಿತೆ ಎಂಬ ಹೆಸರೂ ಇದೆ. ಸ್ಕಾಂದಪುರಾಣ, ವಿಷ್ಣುಪುರಾಣ, ಮಹಾಭಾರತ, ಭಾಗವತ, ಹರಿವಂಶ ಇವುಗಳಲ್ಲಿ ಬರುವ ಕಥೆಗಳು ಈ ಗ್ರಂಥಕ್ಕೆ ಆಕರ. ಕಾವ್ಯದಲ್ಲಿ ಮನ್ಮಥ ದಹನ, ಕಾಮೋತ್ಪತ್ತಿ, ಶಂಬರಾಸುರ, ಬಾಣಾಸುರ ವಧೆ, ಅನಿರುದ್ಧ ಲೀಲೆ ಮುಂತಾದ ವಿಷಯಗಳು ನಿರೂಪಿತವಾಗಿವೆ. ಕಾವ್ಯದಲ್ಲಿ ಸಾಂಪ್ರದಾಯಿಕವಾದ ಹದಿನೆಂಟು ವರ್ಣನೆಗಳನ್ನು ಬಳಸಲು ಪ್ರಯತ್ನಿಸಲಾಗಿದೆ. ಇದರಿಂದ ಕಥೆಯ ಓಟಕ್ಕೆ ಸ್ವಲ್ಪಮಟ್ಟಿಗೆ ಭಂಗ ಬಂದಂತಾಗಿದೆ. ವರ್ಣನೆಗಳಲ್ಲಿ ಕೆಲವೊಮ್ಮೆ ಸಹಜತೆಯಿದೆ, ಸುಂದರವಾದ ಕಲ್ಪನಾವಿಲಾಸವಿದೆ. ಅಚ್ಚಗನ್ನಡದಿಂದ ಕೂಡಿದ ಈ ಸಾಂಗತ್ಯದ ಬಂಧ ಬಂಧುರವಾಗಿದೆ. ಇಲ್ಲಿನ ಅನೇಕ ವರ್ಣನೆಗಳಲ್ಲಿ ಸಮಕಾಲೀನ ಜೀವನದ ಪ್ರತಿಬಿಂಬಗಳಿವೆ. ತಮ್ಮ ಕೃತಿಯನ್ನು ಹರಿಶರಣರಚ್ಚು ಬುಧಜನರಿಗೆ ಮೆಚ್ಚು....... ಕೇಳ್ವರಿಗಿದು ತನಿಬೆಲ್ಲದಚ್ಚು ಎಂದು ಮುಂತಾಗಿ ದಾಸರೇ ಪ್ರಶಂಸಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಈ ಕೃತಿ ಮಹಾಕಾವ್ಯವಲ್ಲದಿದ್ದರೂ ಕವಿಯ ಮಾತಿನಲ್ಲೇ ಹೇಳುವುದಾದರೆ ಇದೊಂದು ಮೇಲ್ಗತೆ.

ನಳಚರಿತ್ರೆ ಭಾಮಿನೀ ಷಟ್ಪದಿಯಲ್ಲಿದ್ದು ಇದರಲ್ಲಿ 9 ಸಂಧಿಗಳೂ 480 ಪದ್ಯಗಳೂ ಇವೆ. ಮಹಾಭಾರತದಲ್ಲಿ ಉಕ್ತವಾಗಿರುವ ನಳೋಪಾಖ್ಯಾನವನ್ನು ಕವಿ ಇಲ್ಲಿ ಮನಕರಗುವಂತೆ ನಿರೂಪಿಸಿದ್ದಾರೆ. ಕಾವ್ಯ ಚಿಕ್ಕದಾದರೂ ಚೊಕ್ಕವಾಗಿದೆ. ರಾಜನಾದರೂ ವಿಧಿಯ ಕೈವಾಡಕ್ಕೆ ಸಿಕ್ಕು ಬಗೆಬಗೆಯ ಕೋಟಲೆಯನ್ನನುಭವಿಸಿ ಕಡೆಗೆ ಮಂಗಳದಲ್ಲಿ ಪರ್ಯವಸಾನವಾಗುವ ನಳನ ಕಥೆ ಕನಕದಾಸರ ಕೈಯಲಿ ಸಿಕ್ಕು ಉಜ್ವಲವಾದ ಕಾಂತಿ ಹೊಂದಿದೆ. ನಳ ದಮಯಂತಿಯರ ಚಿರಂತನ ಪ್ರೇಮದ ಚಿತ್ರಣ ಕಾವ್ಯದ ಜೀವಾಳವಾಗಿದೆ. ಸುಲಭ ಶೈಲಿ, ಘನವಾದ ವಸ್ತು, ಹೃದಯ ಸ್ಪರ್ಶಿಯಾದ ಚಿತ್ರಣಗಳಿಂದ ಈ ಕಾವ್ಯ ಕನ್ನಡಕ್ಕೆ ಅಪೂರ್ವ ಕೊಡುಗೆಯಾಗಿದೆ. (ಬಿ.ಎಸ್.ಎಸ್.)

ರಾಮಧಾನ್ಯ ಚರಿತ್ರೆ ಭಾಮಿನೀಷಟ್ಪದಿಯಲ್ಲಿದೆ. ಸುಮಾರು 156 ಪದ್ಯಗಳಲ್ಲಿ ರಾಮಧಾನ್ಯದ (ರಾಗಿ) ಉತ್ಕೃಷ್ಟತೆಯನ್ನು ಬಹಳ ಚಮತ್ಕಾರವಾಗಿ ನಿರೂಪಿಸಲಾಗಿದೆ. ರಾಮಾಯಣದಿಂದ ಆರಿಸಿಕೊಂಡ ವಸ್ತುವಿನಂತೆಯೇ ತೋರಿದರೂ ಇದೊಂದು ಸ್ವತಂತ್ರ ಕಲ್ಪನಾವಸ್ತುವುಳ್ಳ ಕೃತಿ. ರಾಗಿ, ಅಕ್ಕಿಗಳಲ್ಲಿ (ನರೆದಲೆಗ, ವ್ರೀಹಿ) ರಾಗಿಯೇ ಶ್ರೇಷ್ಠ ಎಂದು ಹೇಳುವುದು ಇಲ್ಲಿಯ ಮುಖ್ಯ ಉದ್ದೇಶ. ಇಂದಿನಂತೆಯೇ ಅಂದಿನ ಸಮಾಜದಲ್ಲಿಯೂ ನೆಲಸಿದ್ದ ದೀನಧನಿಕರ ಅಂತರವನ್ನು ಬಹಳ ಅರ್ಥವತ್ತಾಗಿ ವ್ಯಂಗ್ಯವಾಗಿ ಎತ್ತಿ ತೋರಿಸಲಾಗಿದೆ. ರಾಗಿ ಮತ್ತು ಅಕ್ಕಿಗಳ ಮಧ್ಯೆ ನಡೆಯುವ ಸಂವಾದಶೈಲಿ, ನಿಷ್ಪಕ್ಷಪಾತಿಯಾದ ಶ್ರೀರಾಮನ ವರ್ತನೆ ಮನನೀಯವಾಗಿದೆ. ಈ ಕಥೆಗೆ ಆಧಾರವೇನೋ ತಿಳಿಯದು. ಬಹುಶಃ ಕವಿ ಆ ಕಾಲದಲ್ಲಿ ಪ್ರಚಲಿತವಿದ್ದ ಜನಪದ ಕಥೆಯೊಂದನ್ನು ಅವಲಂಬಿಸಿ ಈ ಕೃತಿಯನ್ನು ಬರೆದಿರಬಹುದು.

ಹರಿಭಕ್ತಿಸಾರವನ್ನು ಒಂದು ರೀತಿಯಲ್ಲಿ ಭಕ್ತಿಭಾವಭರಿತ ಶತಕಗ್ರಂಥವೆನ್ನಬಹುದು. ಇದು ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. 110 ಪದ್ಯಗಳಿವೆ. ಪ್ರತಿ ಪದ್ಯದಲ್ಲಿಯ ಕೊನೆಯ ಚರಣ ರಕ್ಷಿಸು ನಮ್ಮನನವರತ ಎಂದು ಮುಗಿಯುತ್ತದೆ. ನೀತಿ, ಭಕ್ತಿ, ವೈರಾಗ್ಯ ಇವುಗಳ ಬೋಧೆ ಗ್ರಂಥದ ಮುಖ್ಯ ಗುರಿ. ಕನಕದಾಸರ ತತ್ತ್ವಜ್ಞಾನ, ಜೀವನಾದರ್ಶ, ಲೋಕನೀತಿಗಳು ಇಲ್ಲಿ ತಿಳಿಯಾದ ಕನ್ನಡನುಡಿಯಲ್ಲಿ ಪ್ರತಿಪಾದಿತವಾಗಿವೆ. ನೃಸಿಂಹಸ್ತವ ಸಾಂಗತ್ಯ ಕೃತಿಯೆಂದು ತಿಳಿದುಬರುತ್ತದೆ.

ಕನಕದಾಸರ ಕೀರ್ತನೆಗಳು ಸಂಖ್ಯಾದೃಷ್ಟಿಯಿಂದ ಕಡಿಮೆ ಅನಿಸಿದರೂ ಗುಣದ ದೃಷ್ಟಿಯಿಂದ ಮಹತ್ತ್ವದ್ದಾಗಿವೆ. ಇದುವರೆಗೂ ಸುಮಾರು ನಾನೂರು ಕೀರ್ತನೆಗಳು ದೊರಕಿವೆ. ಇವರ ಮುದ್ರಿಕೆ ಕಾಗಿನೆಲೆಯ ಆದಿಕೇಶವನ ಹೆಸರಿನದಾಗಿದೆ. ತಲ್ಲಣಿಸದಿರು ಕಂಡ್ಯ ತಾಳು ಮನವೆ, ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ, ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ, ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ, ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ, ನೀ ಮಾಯೆಯೊಳಗೂ ನಿನ್ನೊಳು ಮಾಯೆಯೋ, ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು, ದೇವಿ ನಮ್ಮ ದ್ಯಾವರು ಬಂದರು ನೋಡಿರೆ ಮುಂತಾದ ಕೀರ್ತನೆಗಳಲ್ಲಿ ದೈವಭಕ್ತಿ, ಜೀವನದರ್ಶನ, ಸಮಾಜ ವಿಮರ್ಶೆ, ಲೋಕಾನುಭವ ಎಲ್ಲವೂ ಕಾವ್ಯಾತ್ಮಕವಾಗಿ ಹೊರಹೊಮ್ಮಿವೆ. ಕನಕದಾಸರು ಸಮಾಜದ ಅಂಕುಡೊಂಕುಗಳನ್ನು ಬಿಚ್ಚುಮಾತುಗಳಲ್ಲಿ ಚುಚ್ಚಿ ಎಚ್ಚರಿಸಿದ್ದಾರೆ. ಕಿಡಿಯಾಗಿ ಸಿಡಿಯುವ, ಅರಳಾಗಿ ಅರಳುವ ನುಡಿಗಳಿಂದ ದೀನದಲಿತರ ಮೂಢರೂಢಿಗಳನ್ನು ಬಯಲಿಗೆಳೆದು ಕಳಕಳಿಯಿಂದ ಕಳವಳಪಟ್ಟಿದ್ದಾರೆ. ದೇಶೀ ಶೈಲಿಯಲ್ಲಿ ಭಕ್ತಿಯ ತತ್ತ್ವವನ್ನು ಅರಳಿಸಿದ್ದಾರೆ. ಕೆಲವೊಮ್ಮೆ ಇವರು ಕೊಡುವ ಉಪಮಾನಗಳು ಮಾರ್ಮಿಕವಾಗಿವೆ. ಇವರ ಮಿಂಚಿನಂಥ ಮಾತುಗಳು ಇವರ ವಿಶಿಷ್ಟ ವ್ಯಕ್ತಿತ್ವದ್ಯೋತಕವಾಗಿದ್ದು ನಾಣ್ಣುಡಿಯ ಸತ್ತ್ವದಿಂದ ಸಾರಭೂತವೂ ಆಗಿ ಸುಪ್ತಜನತೆಯನ್ನು ಬಡಿದೆಬ್ಬಿಸುತ್ತವೆ.

ಕನಕನ ಮುಂಡಿಗೆಗಳೆಂದು ಪ್ರಸಿದ್ಧವಾದ ಇವರ ಕೆಲವು ಕೀರ್ತನೆಗಳು ವಚನ ಸಾಹಿತ್ಯದಲ್ಲಿ ಕಂಡುಬರುವ ಬೆಡಗಿನ ವಚನಗಳಂತೆ, ಒಗಟಿನಂತೆ, ಬಿಡಿಸಲಾರದ ಕಗ್ಗಂಟಿನಂತೆ ಇವೆ. (ಕೆ.ಎಂ.ಕೆ.)

**ಕನಕಪುರ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ಬೆಂಗಳೂರು ಜಿಲ್ಲೆಗೇ ದೊಡ್ಡದಾದ ಈ ತಾಲ್ಲೂಕಿನ ವಿಸ್ತೀರ್ಣ 1594ಚ.ಕಿಮೀ. ಜನಸಂಖ್ಯೆ 3,36,625. ಜಿಲ್ಲೆಯ ಅತ್ಯಂತ ದಕ್ಷಿಣಕ್ಕಿರುವ ಈ ತಾಲ್ಲೂಕನ್ನು ಪೂರ್ವದಲ್ಲಿ ತಮಿಳುನಾಡಿನ ಸೇಲಂ ಜಿಲ್ಲೆ, ಈಶಾನ್ಯದಲ್ಲಿ ಆನೇಕಲ್ಲು ತಾಲ್ಲೂಕು, ಉತ್ತರದಲ್ಲಿ ದಕ್ಷಿಣ ಬೆಂಗಳೂರು ತಾಲ್ಲೂಕು, ವಾಯವ್ಯದಲ್ಲಿ ರಾಮನಗರ ತಾಲ್ಲೂಕು, ಪಶ್ಚಿಮದಲ್ಲಿ ಚನ್ನಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕುಗಳು ಸುತ್ತುವರಿದಿವೆ. ದಕ್ಷಿಣದಲ್ಲಿ ತಾಲ್ಲೂಕಿನ ಎಲ್ಲೆಯಾಗಿ ಕಾವೇರಿ ನದಿ ಇದೆ. ನದಿಯ ಆಚೆದಡದಲ್ಲಿ ಕೊಳ್ಳೇಗಾಲ ತಾಲ್ಲೂಕು ಇದೆ. ಕನಕಪುರ ತಾಲ್ಲೂಕಿನಲ್ಲಿ ಹಾರೋಹಳ್ಳಿ, ಕನಕಪುರ, ಮರಳವಾಡಿ, ಕೋಡಿಹಳ್ಳಿ, ಉಯ್ಯಂಬಳ್ಳಿ ಮತ್ತು ಸಾತನೂರು ಹೋಬಳಿಗಳಿದ್ದು, ಒಟ್ಟು 258 ಹಳ್ಳಿಗಳಿವೆ.

ಈ ತಾಲ್ಲೂಕು ಬಹುಮಟ್ಟಿಗೆ ಕಣಶಿಲೆಯ ಪ್ರದೇಶ, ಹೆಚ್ಚಿನ ಭಾಗದಲ್ಲಿ ಇದೇ ತಳಶಿಲೆ. ಕನಕಪುರದಿಂದ ರಾಮನಗರದ ಕಡೆಗೆ ಕಣಶಿಲೆಯ ಬೋಳುಗುಂಡುಗಳ ಬೆಟ್ಟಗುಡ್ಡಗಳು ಹರಡಿವೆ. ಕೆಲವೆಡೆ ಉದ್ಗತ ಕರಿಶಿಲೆಯ ಹೊಡೆಸಾಲುಗಳೂ (ಡೈಕ್) ಕಂಡುಬರುವುದುಂಟು. ತಾಲ್ಲೂಕಿನ ಉತ್ತರದಲ್ಲಿರುವ ಹಾರೋಹಳ್ಳಿಯ ವಾಯವ್ಯಭಾಗದಲ್ಲಿ ಚಾರ್ನಕೈಟ್ ಜಾತಿಯ ಹಾಗೂ ಹಾರ್ನ್‌ಬ್ಲೆಂಡ್‌ನ ಹೊಡೆಸಾಲೂಗಳು ಸ್ವಲ್ಪಮಟ್ಟಿಗೆ ಇವೆ. ಹಾರೋಶಿವರದ ಬಳಿ ಕಬ್ಬಿಣದ ಅದುರೂ ಸಾಲಹುಣಿಸೆ ಮತ್ತು ಮರಳಹಳ್ಳಿಗಳ ಬಳಿ ಪದ್ಮರಾಗವೂ ದೊರಕುತ್ತವೆ.

ಮುತ್ತತ್ತಿ ಸಮೀಪದಲ್ಲಿ ಕಾವೇರಿ ನದಿ

ನೆಲಮಂಗಲದ ಪಶ್ಚಿಮ ಕಡೆಯಿಂದ ಬರುವ ಶಿಲಾ ಬೆಟ್ಟಗಳು ಮಾಗಡಿ, ರಾಮನಗರ ತಾಲ್ಲೂಕುಗಳನ್ನು ಹಾಯ್ದು ಈ ತಾಲ್ಲೂಕನ್ನು ಉತ್ತರಭಾಗದಿಂದ ಪ್ರವೇಶಿಸಿ ಪೂರ್ವ ಪಶ್ಚಿಮ ಮತ್ತು ದಕ್ಷಿಣ ಅಂಚಿನಲ್ಲಿ ಕವಚದಂತೆ ಒತ್ತಾಗಿ ಹಬ್ಬಿವೆ. ಬೆಟ್ಟಗಳಲ್ಲಿ ಮುಖ್ಯವಾದವು - ಪಶ್ಚಿಮದಲ್ಲಿ ಬಾಣಂತಿಮಾರಿ ಬೆಟ್ಟ (1043ಮೀ) ಭೀಮುಕಂಡಿ, ಕಡಕಲ್ ಮತ್ತು ಮುದವಾಡಿ, ನೈಋತ್ಯದಲ್ಲಿ ಪತ್ರಧಾರಿದೇವ, ಆಗ್ನೇಯದಲ್ಲಿ ದೇವರಬೆಟ್ಟ, ಕೊಪ್ಪಬೆಟ್ಟ (870ಮೀ) ಮತ್ತು ಬರೀಕಲ್ಲು ಬೆಟ್ಟ, ಪೂರ್ವದಲ್ಲಿ ಬಿಳೀಕಲ್ಲುಬೆಟ್ಟ ಮತ್ತು ಗುಲಕಲ್ ಬೆಟ್ಟ, ಉತ್ತರದಲ್ಲಿ ಗಂಗಾಧರಬೆಟ್ಟ. ಭೂಮಿ ಉತ್ತರದಿಂದ ದಕ್ಷಿಣದ ಕಾವೇರಿ ಕಣಿವೆಯ ಕಡೆಗೆ ಇಳಿಜಾರಾಗಿದೆ. ದಕ್ಷಿಣದ ತ್ರಿಭುಜಾಕೃತಿಯ ತಗ್ಗುಪ್ರದೇಶದಲ್ಲಿ ಎರೆಮಣ್ಣಿದೆ. ಉಳಿದ ಕಡೆಗಳಲ್ಲಿ ಅಗ್ನಿಶಿಲೆಯಿಂದಾದ ಹಗುರ ರಚನೆಯುಳ್ಳ ಕೆಂಪುಮಣ್ಣಿದೆ.

ಅರ್ಕಾವತಿ ನದಿ ವಾಯವ್ಯದಿಂದ ಈ ತಾಲ್ಲೂಕನ್ನು ಪ್ರವೇಶಿಸಿ ತಾಲ್ಲೂಕಿನ ಮಧ್ಯದಲ್ಲಿ ಉತ್ತರದಿಂದ ದಕ್ಷಿಣ ಮುಖವಾಗಿ ಹರಿದು ಸಂಗಮದ ಬಳಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ವೃಷಭಾವತಿ ನದಿ ಮುದುವಾಡಿಯ ಬಳಿ ತಾಲ್ಲೂಕಿನ ಎಲ್ಲೆಯಲ್ಲೇ ಅರ್ಕಾವತಿಯನ್ನು ಸೇರಿಕೊಳ್ಳುವುದು. ಈಶಾನ್ಯದಿಂದ ಹರಿದು ಬರುವ ಅಂತರಗಂಗೆ, ಬಸವನ ಹೊಳೆ, ಕೂಟ್ಲೆ ಹೊಳೆಗಳು ಕನಕಪುರದ ಬಳಿ ಅರ್ಕಾವತಿಯನ್ನು ಸೇರುವುವು. ಆಗ್ನೇಯದ ಎಲ್ಲೆಯವರೆಗೂ ದೊಡ್ಡಹೊಳೆ ಹರಿದು ಬಂದು ಸಂಗಮದ ಎದುರು ದಂಡೆಯಲ್ಲೇ ಮಾಹಳ್ಳಿಯ ಬಳಿ ಅರ್ಕಾವತಿಯನ್ನು ಸೇರುತ್ತದೆ. ಬಂಡಿಹಳ್ಳ ಉಯ್ಯಂಬಳ್ಳಿ ಕಬ್ಬಾಳ ರಸ್ತೆಗೆ ಸಮಾನಾಂತರವಾಗಿ ಹರಿದು ಪಶ್ಚಿಮದ ಕಡೆಯಿಂದ ಅರ್ಕಾವತಿಯನ್ನು ಸೇರುವುದು.

ಮೇ-ನವೆಂಬರ್ ವರೆಗೆ ನೈಋತ್ಯ ಮಾರುತಗಳಿಂದ ಇಲ್ಲಿ ಸು.607ಮಿಮೀ ಮಳೆಯಾಗುತ್ತದೆ. ತಾಲ್ಲೂಕಿನ ಹೆಚ್ಚು ಪ್ರದೇಶ ಬೆಟ್ಟಕಾಡುಗಳಿಂದ ಕೂಡಿದೆ. ತಾಲ್ಲೂಕಿನ ಉತ್ತರ ಮತ್ತು ಮಧ್ಯಭಾಗಗಳಲ್ಲಿ ನದಿ ಹೊಳೆಗಳ ದಡಗಳಲ್ಲಿ ವ್ಯವಸಾಯ ಸಾಧ್ಯ. ಅರ್ಕಾವತಿ ನದೀಬಯಲು ಮುಖ್ಯವಾದದ್ದು. ಇಡೀ ಜಿಲ್ಲೆಯ ಬೇಸಾಯದ ಭೂಮಿಯಲ್ಲಿ $^1/_6$ ಭಾಗದಷ್ಟು ಇಲ್ಲಿ ಇದೆ. ಇಲ್ಲಿನ ಮುಖ್ಯ ಬೆಳೆಗಳು ರಾಗಿ ಮತ್ತು ಬತ್ತ. ಹಿಪ್ಪನೇರಳೆ, ಅವರೆ, ತೆಂಗು, ಹರಳು, ಹುಣಿಸೆ ಇತರ ಬೆಳೆಗಳು. ತಾಲ್ಲೂಕಿನಲ್ಲಿ ನೂರಕ್ಕೂ ಹೆಚ್ಚು ಕೆರೆಗಳಿವೆ. ಇವು ಬಹುತೇಕ ಸಣ್ಣವು. ಕನಕಪುರದ ದಕ್ಷಿಣಕ್ಕೆ 16ಕಿಮಿ. ದೂರದಲ್ಲಿರುವ ಸಾತನೂರು ಬಳಿಯ ಅಣೆಕಟ್ಟು ಮಧ್ಯಮ ತರಗತಿಯ ನೀರಾವರಿ ಯೋಜನೆಗಳಲ್ಲೊಂದು. ಇದರಿಂದ 10,000 ಎಕರೆ ಭೂಮಿ ನೀರಾವರಿಗೆ ಒಳಪಡುವುದು. ಅರ್ಕಾವತಿ ನದಿಗೆ ಹಾರೋಬಲೆಯ ಸಮೀಪದಲ್ಲಿ ಕಟ್ಟೆಕಟ್ಟುವ ಕಾರ್ಯ ನಡೆಯುತ್ತಿದೆ. ಮೇಕೆದಾಟು ವಿದ್ಯುತ್ ಯೋಜನೆಯೂ ಪರಿಶೀಲನೆಯಲ್ಲಿದೆ.

ಈ ತಾಲ್ಲೂಕಿಗೆ ರೈಲು ಸಂಪರ್ಕವಿಲ್ಲದಿದ್ದರೂ ಉತ್ತಮ ರಸ್ತೆಗಳಿವೆ. ಬೆಂಗಳೂರು- ಮಳವಳ್ಳಿ- ಮೈಸೂರು ರಸ್ತೆ ಈ ತಾಲ್ಲೂಕಿನ ಮುಖಾಂತರ ಹಾದು ಹೋಗುತ್ತವೆ. ಹಲಗೂರು- ಕನಕಪುರ, ಚನ್ನಪಟ್ಟಣ- ಹನಸನಹಳ್ಳಿ, ರಾಮನಗರ- ಕನಕಪುರ, ಚನ್ನಪಟ್ಟಣ- ಕನಕಪುರ ರಸ್ತೆಗಳು ಇತರ ಮುಖ್ಯಮಾರ್ಗಗಳು.

ಹಾರೋಹಳ್ಳಿ, ಮರಳವಾಡಿ, ಕೋಡಿಹಳ್ಳಿ, ಸಾತನೂರು, ಮಾವತ್ತೂರು ಇವು ತಾಲ್ಲೂಕಿನ ಕೆಲವು ಮುಖ್ಯ ಗ್ರಾಮಗಳು. ಬೇಚಿರಾಕ್ ಬಸವಾಪಟ್ಟಣ - ವೀರಸಂದ್ರದಲ್ಲಿರುವ ವೀರಶೈವ ಗುರು ಹುಚ್ಚಬಸವಪ್ಪನ ಗುಡಿ ಈ ಭಾಗದಲ್ಲಿ ಪ್ರಸಿದ್ಧ. ತಾಲ್ಲೂಕಿನ ದಕ್ಷಿಣ ಅಂಚಿನಲ್ಲಿರುವ ಮೇಕೆದಾಟು (ನೋಡಿ) ಸುಂದರ ಪ್ರೇಕ್ಷಣೀಯ ಸ್ಥಳ.

ಕನಕಪುರ ಈ ತಾಲ್ಲೂಕಿನ ಮುಖ್ಯ ಊರು, ಆಡಳಿತ ಕೇಂದ್ರ, ಬೆಂಗಳೂರಿಗೆ 56ಕಿಮೀ. ದಕ್ಷಿಣಕ್ಕೆ ಬೆಂಗಳೂರು - ಮಳವಳ್ಳಿ ಮಾರ್ಗಮಧ್ಯದಲ್ಲಿ ಅರ್ಕಾವತಿ ನದಿಯ ಬಲದಂಡೆಯ ಮೇಲಿದೆ ಜನಸಂಖ್ಯೆ 47,047

1947ರ ವರೆಗೂ ಈ ಊರಿಗೆ ಕಾನಕಾನಹಳ್ಳಿ ಎಂಬ ಹೆಸರಿತ್ತು. 13ನೆಯ ಶತಮಾನದ ಶಾಸನದಲ್ಲಿ ಕಾಣಿಕಾರಹಳ್ಳಿ ಎಂಬ ಉಲ್ಲೇಖವಿದೆ. ಇಲ್ಲಿನ ಕೋಟೆ ಚನ್ನಪಟ್ಟಣದ ಪಾಳೆಯಗಾರನಾಗಿದ್ದ ಜಗದೇವರಾಯ ಕಟ್ಟಿಸಿದ್ದೆಂದು ತೋರುತ್ತದೆ. 1630ರಲ್ಲಿ ಮೈಸೂರಿನ ಚಾಮರಾಜ ಇದನ್ನು ವಶಪಡಿಸಿಕೊಂಡ. ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದ ಬ್ರಿಟಿಷ್ ಸೇನೆಗೆ ಈ ಊರು ತಂಗು ನಿಲ್ದಾಣವಾಗಕೂಡದೆಂಬ ಉದ್ದೇಶದಿಂದ ಟಿಪ್ಪುಸುಲ್ತಾನ ಎರಡು ಸಾರಿ ಈ ಪಟ್ಟಣವನ್ನು ಹಾಳುಗೆಡವಿದ್ದ. ಹಳೆಯ ಕೋಟೆಯಲ್ಲಿ ಜೀರ್ಣವಾದ ರಂಗನಾಥ ದೇವಾಲಯವಿದೆ.

ಶಿವನಸಮುದ್ರ ಮತ್ತು ಶಿಂಷಾಗಳಿಂದ ರಾಮನಗರ, ಬೆಂಗಳೂರು, ಕೋಲಾರದ ಚಿನ್ನದ ಗಣಿ ಮುಂತಾದೆಡೆಗಳಿಗೆ ಕನಕಪುರದ ಮುಖಾಂತರ ವಿದ್ಯುತ್ ಹರಿಯುತ್ತದೆ. ರೇಷ್ಮೆ ಬಿತ್ತನೆ ಕೋಠಿಗಳು, ರೇಷ್ಮೆಗೂಡಿನಿಂದ ರೇಷ್ಮೆ ತೆಗೆಯುವ (ಫಿಲೇಚರ್ಸ್) ಕಾರ್ಖಾನೆಯೂ ಇಲ್ಲುಂಟು. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮತ್ತು ಕಾಲೇಜು ಇವೆ. ಪ್ರತಿ ಗುರುವಾರ ಕನಕಪುರದಲ್ಲಿ ಸಂತೆ ಸೇರುವುದು. ಇಲ್ಲಿಂದ ಮಳವಳ್ಳಿ, ಮೈಸೂರು, ಹಲಗೂರು, ಚನ್ನಪಟ್ಟಣ, ರಾಮನಗರ, ಬೆಂಗಳೂರು ಮುಂತಾದೆಡೆಗಳಿಗೆ ಉತ್ತಮ ರಸ್ತೆ ಸಂಪರ್ಕವಿದ್ದು ಒಂದು ವ್ಯಾಪಾರ ಸ್ಥಳವಾಗಿ ಅಭಿವೃದ್ಧಿಯಾಗುತ್ತಿದೆ. 1971 ನವಂಬರ್ ತಿಂಗಳಲ್ಲಿ ಬೆಂಗಳೂರು ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಇಲ್ಲಿ ನಡೆಯಿತು. ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಲ್ಲಿ 1999ರಲ್ಲಿ ಜರುಗಿತು. *

**ಕನ್ನಡ ಅಭಿವೃದ್ಧಿ ಪ್ರಾಧಿಕಾರ :** ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಹಾಗೂ ಕರ್ನಾಟಕದ ಸಮಸ್ತ ಮಾಹಿತಿಗಳನ್ನು ದಾಖಲುಗೊಳಿಸುವ ಉದ್ದೇಶ ಹೊಂದಿದೆ. ಸರ್ಕಾರದ ಒಂದು ಕಾರ್ಯ ಯೋಜನೆಯ ಅಂಗವಾಗಿ ಸ್ಥಾಪಿತವಾದ. ಸಂಸ್ಥೆ. ಕನ್ನಡ ಭಾಷೆಯನ್ನು ಆಡಳಿತದಲ್ಲಿ ಜಾರಿಗೆ ತರಲು ಸೂಕ್ತ ಮಾರ್ಗದರ್ಶನ, ಸಲಹೆ, ಸೂಚನೆಗಳನ್ನು ನೀಡುವ ಉದ್ದೇಶದ ಹಿನ್ನೆಲೆಯಲ್ಲಿ 1983 ಜೂನ್ 23ರಂದು ಕನ್ನಡ ಕಾವಲು ಸಮಿತಿಯನ್ನು ರಚಿಸಲಾಯಿತು. ಕರ್ನಾಟಕದ ಗಡಿ ಸಮಸ್ಯೆಯನ್ನೂ ಈ ಸಮಿತಿಯ ವ್ಯಾಪ್ತಿಗೆ ಸೇರಿಸಿದ ತರುವಾಯ 1984 ಏಪ್ರಿಲ್ 18ರಂದು ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಎಂದು ಪುನರ್ ನಾಮಕರಣ ಮಾಡಲಾಯಿತು. ಅನಂತರ 1990 ಅಕ್ಟೋಬರ್ 14ರಂದು ಸಮಿತಿಯ ಉದ್ದೇಶಗಳನ್ನೂ ಅಧಿಕಾರ ವ್ಯಾಪ್ತಿಗಳನ್ನೂ ಹಿಗ್ಗಿಸಿ ಕನ್ನಡ ಅಭಿವೃದ್ಧಿ ಮಂಡಳಿ ಎಂದು ಮರುನಾಮಕರಣ ಮಾಡಲಾಯಿತು. ಆಡಳಿತದ ಎಲ್ಲ ಹಂತದಲ್ಲಿ ಕನ್ನಡವನ್ನು ಬಳಸುವಂತೆ ಚಾಲನೆ ನೀಡುವುದು, ಪರಿಶೀಲಿಸುವುದು, ಕನ್ನಡವನ್ನು ಬಳಸದೇ ಹೋದ ಸಂದರ್ಭದಲ್ಲಿ ಶಿಸ್ತು ಕ್ರಮದ ಜಾರಿ ಮುಂತಾದ ಅಧಿಕಾರಗಳನ್ನು ಶಾಸನಬದ್ಧಗೊಳಿಸಿ 1992 ಫೆಬ್ರವರಿ 6ರಂದು ಈ ಮಂಡಳಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂಬ ಹೆಸರಿನಲ್ಲಿ ಉನ್ನತೀಕರಿಸಲಾಯಿತು. ಈ ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರವನ್ನು ನೀಡಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ ಕಾಯಿದೆ ಜಾರಿಗೊಳಿಸಲಾಗಿದೆ (1995).

ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ರಕ್ಷಣೆಯಲ್ಲಿ ಜನತೆಯ ಆಶೋತ್ತರಗಳನ್ನು ರಚನಾತ್ಮಕವಾಗಿ ಕಾರ್ಯರೂಪಕ್ಕೆ ತರುವುದು ಪ್ರಾಧಿಕಾರದ ಮುಖ್ಯ ಧ್ಯೇಯ. ಆಡಳಿತದಲ್ಲಿ ಕನ್ನಡದ ಬಳಕೆ ಮತ್ತು ಸರೋಜಿನಿ ಮಹಿಷಿ ವರದಿಯ ಅನುಷ್ಠಾನಗಳು ಪ್ರಾಧಿಕಾರದ ಮುಖ್ಯ ಜವಾಬ್ದಾರಿಗಳಾಗಿವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ 1 ರಿಂದ 10ನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ವೃತ್ತಿಪರ ಶಿಕ್ಷಣದಲ್ಲಿ ಮೀಸಲಾತಿ ನೀಡುವಂತೆ ಪ್ರಾಧಿಕಾರ ಚಾರಿತ್ರಿಕ ಮಹತ್ವದ ವರದಿಯನ್ನು ಸಲ್ಲಿಸಿದೆ. ರಾಜ್ಯದಲ್ಲಿರುವವರೆಲ್ಲ ಕನ್ನಡ ಕಲಿಯಬೇಕೆಂಬ ಆಶಯದಿಂದ ಅಲ್ಪಸಂಖ್ಯಾತರಿಗೆ ಕನ್ನಡ ಕಲಿಸುವ ಯೋಜನೆ ಹಾಕಿಕೊಂಡಿದೆ.

ಪ್ರಾಧಿಕಾರದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಸರ್ಕಾರ ನೇಮಿಸಿದ ಒಬ್ಬ ಅಧ್ಯಕ್ಷರಿರುತ್ತಾರೆ. ಇವರ ಅಧಿಕಾರಾವಧಿ ಮೂರು ವರ್ಷ. ಪ್ರಾಧಿಕಾರಕ್ಕೆ ಏಳು ಜನ ಅಧಿಕಾರೇತರ ಸದಸ್ಯರನ್ನು ಸರ್ಕಾರ ನಾಮನಿರ್ದೇಶನ ಮಾಡುತ್ತದೆ. ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಗೂ ಕಾರ್ಯದರ್ಶಿಗಳು ಇದರ ಪದನಿಮಿತ್ತ ಸದಸ್ಯರು. ಜಿಲ್ಲಾಧಿಕಾರಿ ದರ್ಜೆಯ ಒಬ್ಬ ಅಧಿಕಾರಿಯನ್ನು ಸರ್ಕಾರ ಕಾರ್ಯದರ್ಶಿಯಾಗಿ ನೇಮಿಸುವುದು. ಈ ತನಕ ಸಿದ್ಧರಾಮಯ್ಯ, ಜಿ.ನಾರಾಯಣ, ಎಚ್.ನರಸಿಂಹಯ್ಯ, ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ ಇದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಬಿ.ಎಂ.ಇದಿನಬ್ಬ ಈಗಿನ ಅಧ್ಯಕ್ಷರು. ಮಾಹಿತಿ ತಂತ್ರಜ್ಞಾನದ ಪ್ರವಾಹದಲ್ಲಿ ಅನ್ಯಭಾಷೆಗಳಿಂದ ಅದರಲ್ಲೂ ಇಂಗ್ಲಿಷಿನಿಂದ ಕನ್ನಡವನ್ನು ರಕ್ಷಿಸುವ ಕೆಲಸ ಪ್ರಾಧಿಕಾರದ ಮುಂದಿರುವ ಬಹು ದೊಡ್ಡ ಸವಾಲಾಗಿದೆ. (ಎಸ್.ಬಿಎಚ್ಎ.)

**ಕನ್ನಡ ಕೇಸರಿ :** ಧಾರವಾಡದಿಂದ ಪ್ರಕಟವಾಗುತ್ತಿದ್ದ ವಾರಪತ್ರಿಕೆ. ಬಿಂದೂರಾವ್ ಮುತಾಲಿಕ ದೇಸಾಯಿ ಎಂಬವರು 1902ರಲ್ಲಿ ಈ ಪತ್ರಿಕೆಯನ್ನು ಆರಂಭಿಸಿದರು. ಇದು ಲೋಕಮಾನ್ಯ ಟಿಳಕರ ಪ್ರಸಿದ್ಧ ಮರಾಠಿ ಪತ್ರಿಕೆ ಕೇಸರಿಯ ಕನ್ನಡ ಅವತರಣ. ಬಂಗಾಳ ವಿಭಜನೆಯಂಥ ಘಟನೆಗಳು ಮತ್ತು ಮಹಾರಾಷ್ಟ್ರದಲ್ಲಿ ಟಿಲಕರು ಪ್ರಾರಂಭಿಸಿದ ರಾಷ್ಟ್ರೀಯ ಆಂದೋಳನಗಳ ಪ್ರಭಾವ ಉತ್ತರ ಕರ್ನಾಟಕದಲ್ಲಿ ಎಷ್ಟು ತೀವ್ರವಾಗಿತ್ತೆನ್ನುವುದಕ್ಕೆ ಕನ್ನಡ ಕೇಸರಿಯಂಥ ಪತ್ರಿಕೆಗಳ ಉಗಮ ಪ್ರಬಲ ನಿದರ್ಶನವಾಗಿದೆ.

ಪ್ರತಿವಾರವೂ ಮರಾಠಿ ಕೇಸರಿಯ ಲೇಖನಗಳನ್ನು ಕನ್ನಡದಲ್ಲಿ ಅನುವಾದಿಸಿ ಕನ್ನಡ ಕೇಸರಿಯಲ್ಲಿ ಪ್ರಕಟಿಸಲಾಗುತ್ತಿತ್ತು. ಪತ್ರಿಕೆಯ ಮುದ್ರಣದ ಕಾರ್ಯ ನಡೆಯುತ್ತಿದ್ದುದು ಹುಬ್ಬಳ್ಳಿಯಲ್ಲಿ. ಸತ್ಯಾಗ್ರಹ ಯೋಧ ಹಾಗೂ ಸೇವಾದಳದ ಸಂಸ್ಥಾಪಕರಾದ ನಾ.ಸು. ಹರ್ಡೀಕರ್ ಅವರು ಈ ಕಾರ್ಯದಲ್ಲಿ ನೆರವಾಗಲು ಮುಂದಾದರು. ಮುದ್ರಣದ ಮೇಲ್ವಿಚಾರಣೆಯ ಜೊತೆಗೆ ಅವರು ಮರಾಠಿಯ ಮೂಲ ಲೇಖನಗಳ ಕನ್ನಡ ಅನುವಾದ ಕಾರ್ಯವನ್ನೂ ನೆರವೇರಿಸುತ್ತಿದ್ದರು. ಲೇಖನಗಳ ಜೊತೆಗೆ ಹಲವಾರು ಸಾಂದರ್ಭಿಕ ಚಿತ್ರಗಳನ್ನೂ ಪ್ರಕಟಿಸಲಾಗುತ್ತಿತ್ತು. ಒಂದು ಸಂದರ್ಭದಲ್ಲಿ ಹರ್ಡಿಕರರು ಬರೆದ ಟಿಪ್ಪಣಿಯ ಭಾಷೆ ಎಷ್ಟು ತೀಕ್ಷ್ಣವಾಗಿತ್ತೆಂದರೆ ಸಂಪಾದಕರಾದ ಬಿಂದೂರಾಯರು ಕೊನೆಯ ಗಳಿಗೆಯಲ್ಲಿ ಅದನ್ನು ಗಮನಿಸಿ ಅಂಚೆಗೆ ಹೋದ ಪತ್ರಿಕೆಯನ್ನು ಮರಳಿ ತರಿಸಿಕೊಂಡು ಹರ್ಡೀಕರರ ಮಾತಿನ ಬಿಸಿಯನ್ನು ತಗ್ಗಿಸಿ ಬೇರೆ ಟಿಪ್ಪಣಿ ಬರೆದದ್ದುಂಟು. ಇಲ್ಲವಾದರೆ ಪತ್ರಿಕೆಗೆ ದುರ್ಧರವಾದ ಪ್ರಸಂಗವೊದಗುತ್ತಿತ್ತು. ಲೋಕಮಾನ್ಯ ಟಿಳಕರ ವಿಚಾರಗಳನ್ನೂ ರಾಷ್ಟ್ರೀಯ ಹೋರಾಟದ ಸ್ವರೂಪವನ್ನೂ ಜನತೆಗೆ ತಿಳಿಸುವಲ್ಲಿ ಯಶಸ್ವಿಯಾದ ಈ ಪತ್ರಿಕೆ ಆ ಕಾಲದಲ್ಲಿ ತುಂಬ ಜನಪ್ರಿಯವಾಗಿತ್ತು. *

**ಕನ್ನಡ ಕೋಗಿಲೆ :** ಮುಳಿಯ ತಿಮ್ಮಪ್ಪಯ್ಯನವರ ಸಂಪಾದಕತ್ವದಲ್ಲಿ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. 1916ರ ಏಪ್ರಿಲ್‌ನಲ್ಲಿ




ಪ್ರಾರಂಭವಾಗಿ, ನಾಲ್ಕೂವರೆ ವರ್ಷ ನಡೆಯಿತು. ಮಂಗಳೂರಿನ ಶಾರದಾ ಮುದ್ರಣಾಲಯದಲ್ಲಿ ಮುದ್ರಿತವಾಗುತ್ತಿದ್ದ ಈ ಪತ್ರಿಕೆ ಧರ್ಮ, ಅರ್ಥ, ಸಮಾಜ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದ ಪ್ರೌಢ ಲೇಖನಗಳನ್ನು ಪ್ರಕಟಿಸುತ್ತಿತ್ತು. ಪ್ರಸಿದ್ಧ ಕವಿಗಳ ಕವನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಖ್ಯಾತ ಲೇಖಕರಾಗಿದ್ದ ಪಿ.ಭೋಜರಾವ್ ಸಂಪಾದಕ ವರ್ಗದಲ್ಲಿದ್ದರು. ಉಗ್ರಾಣ ಮಂಗೇಶರಾವ್, ಮುಳಿಯ ಶಂಕರಭಟ್ಟ ಮೊದಲಾದವರು ಲೇಖಕ ವರ್ಗದಲ್ಲಿದ್ದರು. ಕನ್ನಡ ಕೋಗಿಲೆ ಸದ್ವಿಷಯದ ಪತ್ರಿಕೆಯೆಂದು ಹೆಸರು ಪಡೆದಿತ್ತು. (ಎಸ್.ವಿ.ಪಿ.)

**ಕನ್ನಡ ಚಂಪೂ ಸಾಹಿತ್ಯ :** ಸಂಸ್ಕೃತ ಕನ್ನಡಗಳಲ್ಲಿಯೂ ಇತರ ಕೆಲವು ಭಾರತೀಯ ಭಾಷೆಗಳಲ್ಲಿಯೂ ಚಂಪೂ (ಚಂಪು) ಎಂಬುದು ಪ್ರಾಚೀನವೂ ಪ್ರಸಿದ್ಧವೂ ಆದ ಒಂದು ಸಾಹಿತ್ಯ ಪ್ರಕಾರ. ಸಾವಿರ ವರ್ಷಗಳಿಗೆ ಮೇಲ್ಪಟ್ಟ ಇತಿಹಾಸ ಇದಕ್ಕಿದೆ. ಆಯಾ ಭಾಷೆಯಲ್ಲಿ ಬಹುಕಾಲ ನಿಲ್ಲುವ ಉತ್ಕೃಷ್ಟವಾದ ಸಾಹಿತ್ಯ ಈ ಪ್ರಕಾರದಲ್ಲಿ ನಿರ್ಮಿತವಾಗಿದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಮೊದಮೊದಲಿನ ಶ್ರೇಷ್ಠ ಕವಿಗಳು ಈ ಪ್ರಕಾರವನ್ನು ಯಶಸ್ವಿಯಾಗಿ ಬಳಸಿಕೊಂಡು ಉತ್ತಮ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದು ಮುಂದೆ ಅದು ವಿಶೇಷವಾಗಿ ಪ್ರಬಲಿಸಿ ಕನ್ನಡ ಸಾಹಿತ್ಯದಲ್ಲಿ ಗಣ್ಯವೂ ಸುಸ್ಥಿರವೂ ಆದ ನೆಲೆಯನ್ನು ಗಳಿಸಿಕೊಳ್ಳುವಂತಾಯಿತು.

ಚಂಪೂವಿನ ಲಕ್ಷಣವನ್ನು ದಂಡಿಯ (ಸು.650) ಕಾವ್ಯಾದರ್ಶವೆಂಬ ಸಂಸ್ಕೃತ ಭಾಷೆಯ ಲಕ್ಷಣಗ್ರಂಥದಲ್ಲಿ ಮೊದಲು ನಿರೂಪಿಸಿದೆ. ಅನಂತರದಲ್ಲಿ ಹೇಮಚಂದ್ರ (1088-1172) ವಿಶ್ವನಾಥ (ಸು.1400) ವಿದ್ಯಾನಾಥ (ಸು.1400) ಮುಂತಾದವರು ತಮ್ಮ ಅಲಂಕಾರ ಗ್ರಂಥಗಳಲ್ಲಿ ಹೇಳಿದ್ದಾರೆ. ಹಾಗೆಯೇ ಕನ್ನಡದಲ್ಲಿಯೂ 2ನೆಯನಾಗವರ್ಮ ಉದಯಾದಿತ್ಯ ಇವರ ಅಲಂಕಾರಗ್ರಂಥಗಳಲ್ಲಿ ಆ ವಿಷಯದ ಉಲ್ಲೇಖವಿದೆ. ದಂಡಿ ಚಂಪೂವಿನ ಲಕ್ಷಣವನ್ನು ಗದ್ಯಪದ್ಯಮಯೀಕಾಚಿಚ್ಚಂಪೂರಿತ್ಯಭಿಧೀಯತೇ ಎಂದು ಹೇಳಿದ್ದಾನೆ. ಚಂಪೂ ಪ್ರಧಾನವಾಗಿ ಗದ್ಯ ಪದ್ಯಮಯಿಯಾದದ್ದು ಎಂಬುದು ಇಲ್ಲಿ ಸ್ಫುರಿಸಿರುವ ಅದರ ಲಕ್ಷಣ. ಹೆಚ್ಚಿನ ವಿವರಗಳಾಗಲಿ ವ್ಯತ್ಯಾಸವಾಗಲಿ ಇಲ್ಲದೆ ಇದೇ ಲಕ್ಷಣವನ್ನು ಈಚಿನವರು ಅನುವಾದ ಮಾಡಿದ್ದಾರೆ.

ಚಂಪೂ ಎಂಬ ಪದದ ಮೂಲ ಅನಿರ್ದಿಷ್ಟವಾದುದು. ಅದರ ನಿಷ್ಪತ್ತಿಯನ್ನು ಬೇರೆ ಬೇರೆ ರೀತಿಯಲ್ಲಿ ವಿದ್ವಾಂಸರು ವಿವರಿಸಿದ್ದಾರೆ. ಈ ಸಾಹಿತ್ಯಪ್ರಕಾರ ಸಂಸ್ಕೃತ ಮೂಲವಾದುದು ಎಂದು ಗ್ರಹಿಸುವವರು ಒಂದು ರೀತಿಯಾಗಿಯೂ ಕನ್ನಡ ಮೂಲವಾದುದೆಂದು ಗ್ರಹಿಸುವವರು, ಇನ್ನೊಂದು ರೀತಿಯಾಗಿಯೂ ಹೇಳುವುದು ಕಾಣುತ್ತದೆ. ಈ ಬಗೆಗೆ ವಿಚಾರಮಾಡುವುದು ಪ್ರಕೃತ ಲೇಖನದ ಉದ್ದೇಶವಲ್ಲ. ಚಂಪೂ ಮಾತೂ ರೀತಿಯೂ ಕನ್ನಡದ್ದೇ ಎಂದು ಹೇಳುವವರ ವಾದವನ್ನು ಮಾತ್ರ ಸಂಗ್ರಹವಾಗಿ ತಿಳಿಸಿ ಕನ್ನಡ ಚಂಪೂಸಾಹಿತ್ಯದ ಪರಿಚಯವನ್ನು ಇಲ್ಲಿ ನಿವೇದಿಸಲಾಗುತ್ತದೆ.

ಚಂಪೂವಿಗೆ ಕನ್ನಡ ಮೂಲವನ್ನು ಹೇಳುವವರ ಅಭಿಪ್ರಾಯ ಹೀಗಿದೆ: ಪ್ರಾಚೀನವಾದ ಸಂಸ್ಕೃತ ವಾಙ್ಮಯದಲ್ಲಿ ಚಂಪೂ ಸಾಹಿತ್ಯಪ್ರಕಾರ ಅಷ್ಟೇನೂ ಪ್ರಾಚೀನವಾದುದಲ್ಲ. ಈಚೆಗೆ ಕಾಣಿಸಿಕೊಂಡದ್ದು. ಆ ಭಾಷೆಯಲ್ಲಿ ಆ ರೀತಿಯ ಸಾಹಿತ್ಯ ಕಣ್ಣಿಗೆ ಬೀಳುವುದು 10ನೆಯ ಶತಮಾನದಿಂದ. ತ್ರಿವಿಕ್ರಮಭಟ್ಟನ (ಸು.915) ದಮಯಂತೀ ಕಥೆ ಅಥವಾ ನಳಚಂಪೂ ಮತ್ತು ಸೋಮದೇವನ ಯಶಸ್ತಿಲಕ ಚಂಪೂ (ಸು.959) ಇವು ಈಗ ತಿಳಿದಮಟ್ಟಿಗೆ ಆ ಭಾಷೆಯಲ್ಲಿಯ ಆದ್ಯ ಚಂಪೂ ಕೃತಿಗಳು. ಇವು ರಚನೆಯಾದದ್ದು ಕರ್ನಾಟಕದಲ್ಲಿ ಹಾಗೂ ಕನ್ನಡ ರಾಜರ ಆಶ್ರಯ ಪಡೆದ ಕವಿಗಳಿಂದ, ಇವರು ಆ ವೇಳೆಗಾಗಲೇ ಕನ್ನಡ ನಾಡಿನ ಕನ್ನಡ ಜೈನಕವಿಗಳು ಕಲ್ಪಿಸಿ ರೂಢಿಸಿದ್ದ ಚಂಪೂ ಮಾರ್ಗವನ್ನು ಅನುಸರಿಸಿದರೆಂದು ತೋರುತ್ತದೆ. ಕನ್ನಡದಲ್ಲಿ ಚಂಪೂಗ್ರಂಥಗಳು 8-9ನೆಯ ಶತಮಾನಗಳಲ್ಲಿಯೇ ಕಾಣಿಸಿಕೊಂಡಿದ್ದವೆಂದು ತಿಳಿಯುವುದಕ್ಕೆ ಆಧಾರಗಳಿವೆ. ಆದರೆ ಸು.7ನೆಯ ಶತಮಾನದ ದಂಡಿ ಚಂಪೂವಿನ ಲಕ್ಷಣವನ್ನು ಹೇಳಿದ್ದಾನಲ್ಲದೆ, ಆತನ ಕಾಲದಲ್ಲಿಯೂ ಅದಕ್ಕೆ ಮೊದಲಲ್ಲಿಯೂ ಸಂಸ್ಕೃತ ಚಂಪೂಗ್ರಂಥಗಳು ಇಲ್ಲದೆ ಹೀಗೆ ಹೇಳಿರುವುದು ಸಾಧ್ಯವೇ - ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ದಂಡಿಗೆ ಪರಿಚಿತವಾಗಿದ್ದ ಚಂಪೂಸಾಹಿತ್ಯ ಪೂರ್ತಿಯಾಗಿ ನಷ್ಟವಾಗಿದೆ ಎಂಬುದು ತೃಪ್ತಿಕರವಾದ ಉತ್ತರವಲ್ಲ. ಆತ ದಾಕ್ಷಿಣಾತ್ಯನಾದುದರಿಂದ, ಆ ಕಾಲಕ್ಕೆ ದಕ್ಷಿಣದಲ್ಲಿ ಪ್ರಚಲಿತವಾಗಿದ್ದ ಕನ್ನಡ, ತಮಿಳು ಭಾಷೆಗಳಲ್ಲಿಯ ಚಂಪೂಕೃತಿಗಳನ್ನು ನೋಡಿದ್ದಿರಬಹುದು. ಒಂದು ಪಕ್ಷ ಚಂಪೂ ಮೂಲತಃ ಸಂಸ್ಕೃತದ್ದೆಂದು ತಿಳಿದರೂ ಅದು ಕನ್ನಡ ಸಾಹಿತ್ಯದಲ್ಲಿ ಪಡೆದ ರೂಪ ಸಂಸ್ಕೃತದ ಅನುಕರಣೆಯ ಫಲವಲ್ಲ. ಅದಕ್ಕೆ ಒಂದು ವೈಶಿಷ್ಟ್ಯವಿದೆ. ಇದಿಷ್ಟೂ ಒಟ್ಟಿನಲ್ಲಿ ಒಬ್ಬ ವಿದ್ವಾಂಸರ ವಿಚಾರಸರಣಿ.

ಇನ್ನೊಬ್ಬ ವಿದ್ವಾಂಸರು ಹೀಗೆಯೇ, ಸಂಸ್ಕೃತ ಸಾಹಿತ್ಯದಲ್ಲಿ ಚಂಪೂಸಾಹಿತ್ಯದ ಅರ್ವಾಚೀನತೆ, ಸಂಸ್ಕೃತದ ಪ್ರಾಚೀನ ಲಾಕ್ಷಣಿಕರಲ್ಲಿ ದಾಕ್ಷಿಣಾತ್ಯನಾದ ದಂಡಿಯೊಬ್ಬನೆ ಅದನ್ನು ಹೆಸರಿಸಿರತಕ್ಕವನು ಎಂಬ ಸಾಕ್ಷ್ಯ, ಚಂಪೂ ಶಬ್ದಕ್ಕೆ ಸಂಸ್ಕೃತದಲ್ಲಿ ಸ್ವರಸವಾದ ರೂಪನಿಷ್ಪತ್ತಿಯನ್ನು ಹೇಳುವುದರ ಆವಶ್ಯಕತೆ, ತಮಿಳು ಭಾಷೆಯ ಪ್ರಾಚೀನ ಕಾವ್ಯವಾದ ಶಿಲಪ್ಪದಿಕಾರಮ್‌ನ ಅನೇಕ ಸರ್ಗಗಳು ಗದ್ಯಪದ್ಯಾತ್ಮಕಗಳಾಗಿರುವುದು. ಇವನ್ನು ಗಮನಿಸಿ ಚಂಪೂಕಾವ್ಯರೂಪ ಭಾರತೀಯ ಸಾಹಿತ್ಯಕ್ಕೆ ದಕ್ಷಿಣ ಭಾರತದ ಕೊಡಿಗೆಯಾಗಿರಬೇಕೆಂದು ಭಾವಿಸಬಹುದು ಎಂದಿದ್ದಾರೆ. ಅಲ್ಲದೆ ಕನ್ನಡದ ಮಟ್ಟಿಗೆ ಹೇಳುವುದಾದರೆ, ಹಿಂದಿನಿಂದ ಪ್ರಚುರವಾಗಿದ್ದ ಚತ್ತಾಣದಲ್ಲಿ ಗದ್ಯಖಂಡಗಳು ವಚನಗಳು ನಡುನಡುವೆ ಸೇರಿ ಚಂಪೂ ತಲೆಯೆತ್ತಿರಬಹುದು ಎಂಬುದಾಗಿ ಕನ್ನಡದಲ್ಲಿ ಚಂಪೂವಿನ ಉಗಮವನ್ನು ಗುರುತಿಸಲು ಯತ್ನಿಸಿದ್ದಾರೆ. ಚತ್ತಾಣ ಎಂಬುದರ ಸ್ವರೂಪವನ್ನು ಅವರು ಹೀಗೆ ಹೇಳಿದ್ದಾರೆ. ಕವಿರಾಜಮಾರ್ಗದಲ್ಲಿ ಉಕ್ತವಾದ, ಅದಕ್ಕೆ ಹಿಂದಿನ ಕಾಲದಿಂದಲೂ ಕನ್ನಡದಲ್ಲಿ ಪ್ರಚಲಿತವಾಗಿದ್ದ ಕಾವ್ಯರೂಪ, ಇದು ಬಾಜನೆ ಗಬ್ಬ, ವಾಚಿಸತಕ್ಕದ್ದು, ಇದರಲ್ಲಿ ಕಂದ, ಹಲವು ಬಗೆಯ ಸಂಸ್ಕೃತ ವೃತ್ತಗಳು, ದೇಶೀಯ ಪದ್ಯಜಾತಿಗಳು ಇವೆಲ್ಲ ಬರುತ್ತವೆ. ಪದ್ದಳಿಯೂ ಬರಬಹುದು. ಇದು ಅಖಿಲ ವರ್ಣನೆಗಳಿಂದ ಕೂಡಿದ ಕಾವ್ಯ. ಆದಕಾರಣವೇ ಬಹುಶಃ ದೀರ್ಘವಾಗಿರುತ್ತದೆ.

ಅಂತೂ ಚಂಪೂವಿನ ಉಗಮದ ವಿಷಯದಲ್ಲಿ ಭಿನ್ನಮತವಿರುವುದೂ ಅನಿರ್ದಿಷ್ಟತೆಯಿರುವುದೂ ಇದರಿಂದ ಸ್ಪಷ್ಟವಾಗಿ ತೋರುತ್ತದೆ. ಸಂಶೋಧನೆಯಿಂದ ಹೊಸ ಸಂಗತಿಗಳು ಬೆಳಕಿಗೆ ಬಂದ ಹೊರತು ಈ ವಿಷಯದಲ್ಲಿ ಯಾವ ನಿರ್ಣಯಕ್ಕೂ ಬರುವುದು ಸಾಧ್ಯವಿಲ್ಲ.

ಕನ್ನಡದಲ್ಲಿ ಚಂಪೂಸಾಹಿತ್ಯವನ್ನು ಗಮನಿಸುವ ಮೊದಲು ಕನ್ನಡ ಚಂಪೂವಿನ ಸಾಮಾನ್ಯ ಚೌಕಟ್ಟನ್ನು ಸ್ವಲ್ಪ ಗಮನಿಸಬೇಕು. ಕನ್ನಡ ಚಂಪೂವನ್ನು ರೂಢಿಯಲ್ಲಿ ವಸ್ತುಕ, ಓದುಗಬ್ಬ, ಮಾರ್ಗ ಕವಿತ್ವ ಎಂದು ಹೇಳುವುದುಂಟು. ಅದರಲ್ಲಿ ಪ್ರತಿಪಾದಿತವಾಗುವ ವಸ್ತು ಲೌಕಿಕ, ಧಾರ್ಮಿಕ ಅಥವಾ ಐತಿಹಾಸಿಕವಾಗಿರುತ್ತದೆ. ರಾಮಾಯಣ, ಭಾರತಗಳು, ವೈದಿಕ ಜೈನಪುರಾಣಗಳು, ಕಲ್ಪಿತ ಕಥಾವಸ್ತುವುಳ್ಳ ಕಾವ್ಯಗಳು, ಐತಿಹಾಸಿಕ ವೃತ್ತಾಂತಗಳು ಇವು ವಸ್ತುವಿಗೆ ಪ್ರಮುಖವಾದ ಆಕರಗಳು. ಪ್ರಾಚೀನ ಸಂಸ್ಕೃತ ಕಾವ್ಯಪರಂಪರೆಯಲ್ಲಿ ಕಾಣುವಂತೆ, ಉದಾತ್ತನಾಯಕನ ಮಹಿಮಾತಿಶಯ ನಿರೂಪಣೆ, ನಾಯಕ ಪ್ರತಿನಾಯಕ ಸಂಘರ್ಷ, ಇಷ್ಟದೈವ, ದೈವಭಕ್ತಿ, ಧಾರ್ಮಿಕ ಕ್ಷೇತ್ರಾದಿಗಳ ಉತ್ಕರ್ಷ ಸಾಧನೆ ಮತ್ತು ಮಹಿಮೆ ಮುಂತಾದವುಗಳ ಕಥನ, ಮತಪ್ರಸಾರ, ತತ್ತ್ವಪ್ರಸಾರ, ಮನರಂಜನೆ ಇವು ಇಲ್ಲಿಯೂ ಕಾಣುತ್ತವೆ. ಸಂಸ್ಕೃತ ಸಾಹಿತ್ಯದ ಪ್ರೌಢಕವಿಗಳ ರೀತಿಯಲ್ಲಿ ಇರುವಂತೆಯೇ ವಿವಿಧ ಸಾಂಪ್ರದಾಯಿಕ ವರ್ಣನೆಗಳ ಪ್ರಾಚುರ್ಯ, ಅಲಂಕಾರಪ್ರಿಯತೆ, ವಿಭಿನ್ನ ರಸದೃಷ್ಟಿ ಇವು ಎದ್ದುಕಾಣುವಂತಿರುತ್ತವೆ. ಸಾಮಾನ್ಯವಾಗಿ ಕಥೆಗಿಂತಲೂ ವರ್ಣನೆಗೆ, ರಸಭಾವಗಳಿಗಿಂತಲೂ ಶಬ್ದಾರ್ಥಾಲಂಕಾರಗಳಿಗೆ, ಸ್ವಾನುಭವಕ್ಕಿಂತಲೂ ಕವಿಸಮಯಕ್ಕೆ ಹೆಚ್ಚು ಅವಕಾಶ ದೊರೆತಿರುತ್ತದೆ. ದೇಸೀಯವಾದ ಮಾತುಗಾರಿಕೆ ಮತ್ತು ಸಂಸ್ಕೃತ ಭೂಯಿಷ್ಠವಾದ ಆಲಂಕಾರಿಕ ಪದರಚನೆ ಇವುಗಳಲ್ಲಿ ಒಮ್ಮೆ ಅದು ಒಮ್ಮೆ ಇದು ಮೇಲುಗೈಯಾಗಿರುತ್ತದೆ. ವಿಶೇಷವಾಗಿ ಎರಡನೆಯದರ ಪ್ರಾಬಲ್ಯವೇ ಹೆಚ್ಚು. ಒಮ್ಮೊಮ್ಮೆ ಆ ಎರಡರ ಹಿತಮಿತವಾದ ಮಿಶ್ರಣವಿರುತ್ತದೆ.

ಕನ್ನಡ ಚಂಪೂವಿನಲ್ಲಿ, ಲಕ್ಷಣಾನುಸಾರವಾಗಿ ಗದ್ಯಪದ್ಯಗಳ ಸಮಪ್ರಾಚುರ್ಯ ಸಾಮಾನ್ಯವಾಗಿರುತ್ತದೆ. ಆದರೆ ಪದ್ಯ ಗದ್ಯಕ್ಕಿಂತ ಹೆಚ್ಚಾಗಿ ಬರುವುದೇ ಸಾಮಾನ್ಯ. ಗದ್ಯಪದ್ಯಗಳು ಇಷ್ಟೇ ಪ್ರಮಾಣದಲ್ಲಿ ಇಂಥದೇ ವಿಷಯಕ್ಕಾಗಿ, ಹೀಗೆಯೇ ಯೋಜನೆಗೊಂಡಿರಬೇಕೆಂಬ ನಿಶ್ಚಿತವಾದ ನಿಯಮವೇನಿಲ್ಲ. ಆದರೆ ವರ್ಣನೆಗಳು, ಇತಿವೃತ್ತಾತ್ಮಕ ವಿವರಣೆಗಳು, ಸಂಬಂಧಸೂಚನೆಗಳು ಗದ್ಯದಲ್ಲಿರುವುದುಂಟು. ಕೃತಿ ಸಾಮಾನ್ಯವಾಗಿ ಆಶ್ವಾಸಗಳಾಗಿ ವಿಭಾಗವಾಗಿರುತ್ತದೆ. ಆಶ್ವಾಸ ಸಂಖ್ಯೆ 14 ಅಥವಾ 16 ಇರಬಹುದು. ಮುಂದೆ ಮುಂದೆ ಈ ಸಂಖ್ಯೆಯಲ್ಲಿ ಹೆಚ್ಚುಕಡಿಮೆಗಳಾಗಿವೆ. ಅವುಗಳ ಆದ್ಯಂತಗಳಲ್ಲಿ ಒಂದು ಗೊತ್ತಾದ ರೀತಿಯ ಪದ್ಯಬಂಧ ಮತ್ತು ಗದ್ಯಬಂಧಗಳಿರುತ್ತವೆ. ಕೃತಿಯು ಉಪಕ್ರಮದಲ್ಲಿ ಇಷ್ಟದೇವತಾಸ್ತುತಿ, ಕೃತಿಕರ್ತೃವಿನ, ಪೋಷಕನ ವಿಚಾರ ಇತ್ಯಾದಿ ಸಾಂಪ್ರದಾಯಿಕ ಸರಣಿಯ ವಿವರಗಳೂ ಉಪಸಂಹಾರದಲ್ಲಿ ಫಲಶ್ರುತಿಯೂ ಬರುತ್ತದೆ. ಛಂದಸ್ಸಿನ ದೃಷ್ಟಿಯಿಂದ, ಕಂದಪದ್ಯಗಳೂ ಅವಕ್ಕೆ ಸ್ವಲ್ಪ ಕಡಿಮೆಯಾಗಿ ಖ್ಯಾತ ಕರ್ಣಾಟಕಗಳೆಂದು ರೂಢಿಯಾಗಿರುವ ಆರು ವರ್ಣವೃತ್ತಗಳೂ ಹೆಚ್ಚು ಸಂಖ್ಯೆಯಲ್ಲಿರುತ್ತವೆ. ಇವಲ್ಲದೆ ವಿರಳವಾಗಿ ತರಳ, ಮಲ್ಲಿಕಾಮಾಲೆ ಮುಂತಾದ ಇನ್ನೂ ಕೆಲವು ವರ್ಣವೃತ್ತಗಳೂ ಪ್ರಾಕೃತ ಪ್ರಭಾವದ ರಗಳೆಯ ಪ್ರಭೇದಗಳೂ ದೇಶೀಯಗಳಾದ ಅಕ್ಕರ ತ್ರಿಪದಿ ಮುಂತಾದವೂ ಕೃತಿಯ ಮೈಯಲ್ಲಿ ಅಲ್ಲಲ್ಲಿ ಸೇರಿಕೊಂಡಿರುತ್ತವೆ. ಒಟ್ಟಿನಲ್ಲಿ ಕಂದವೃತ್ತಗಳೂ ವಿರಳವಾಗಿ ಇತರ ಪದ್ಯಜಾತಿಗಳೂ ನಡುನಡುವೆ ಗದ್ಯವೂ ಹಾಸುಹೊಕ್ಕಾಗಿ ಸೇರಿಕೊಂಡು ಕೃತಿಯ ರೂಪದಲ್ಲಿ ನಾದಗಳಲ್ಲಿ ವೈವಿಧ್ಯ ಸಾಧಿತವಾಗಿರುತ್ತದೆ. ಕೃತಿವಸ್ತು ಇವಗಳಲ್ಲಿ ಅನುಸ್ಯೂತವಾಗಿ ಹರಿದುಕೊಂಡು ಹೋಗುತ್ತದೆ. ಒಮ್ಮೊಮ್ಮೆ, ಒಂದೇ ಪದ್ಯದಲ್ಲಿ ಅಥವಾ ಗದ್ಯಭಾಗದಲ್ಲಿ ಮುಗಿಯದ ಒಂದು ಸಂಗತಿಯೋ ಭಾವವೋ ಮುಂದಿನ ಪದ್ಯಕ್ಕೋ ಗದ್ಯಕ್ಕೋ ಮುಂದುವರಿಯುವುದುಂಟು. ಕೃತಿಯ ಛಂದಸ್ಸಿನ ವೈವಿಧ್ಯ ಒಂದೇ ಬಗೆಯ ಛಂದಸ್ಸಿನ ಬಳಕೆಯಿಂದುಂಟಾಗುವ ಗತಾನುಗತಿಕತೆಯನ್ನೂ ನಿಷ್ಠುರ ನಿಯಮ ಬದ್ಧತೆಯನ್ನೂ ನಿವಾರಿಸಿರುವುದಲ್ಲದೆ, ಕವಿಗೆ ಹೆಚ್ಚಿನ ರಚನಸ್ವಾತಂತ್ರ್ಯವೂ ಸೌಲಭ್ಯವೂ ಇದರಿಂದ ದೊರೆಯುವಂತಾಗಿದೆ. ರಚನೆಯ ಸೌಕರ್ಯಕ್ಕೆ ಹಾಗೂ ರಸಭಾವಗಳ ವೈವಿಧ್ಯಕ್ಕೆ ತಕ್ಕಂತೆ ಹೀಗೆ ವಿವಿಧ ಪದ್ಯಜಾತಿಗಳನ್ನೂ ಗದ್ಯವನ್ನೂ ಬಳಸುವುದು ಕಾವ್ಯಪುಷ್ಟಿಗೆ ಅನುಕೂಲವೇ ಆಗಿದೆ.

ಕನ್ನಡದಲ್ಲಿ ಚಂಪೂ ಸಾಹಿತ್ಯ ಪದ್ಧತಿಗೆ ಮೊದಲು ಚತ್ತಾಣ ಮತ್ತು ಬೆದಂಡೆ ಎಂಬ ಪ್ರಕಾರದ ಕಾವ್ಯಗಳು ಪ್ರಸಿದ್ಧವಾಗಿದ್ದವೆಂದು ಕವಿರಾಜಮಾರ್ಗದ ಉಲ್ಲೇಖದಿಂದ ತಿಳಿಯುತ್ತದೆ. ಆ ಗ್ರಂಥದಲ್ಲಿ ಉಕ್ತರಾದ ಪದ್ಯಕವಿಗಳು ಕೆಲವರಾದರೂ ಅಂಥ ಕಾವ್ಯಗಳನ್ನು ರಚಿಸಿರಬೇಕೆಂದು ತಿಳಿಯುವುದಕ್ಕೆ ಅಲ್ಲಿಯೇ ಅವಕಾಶವಿದೆ. ಆ ಕಾವ್ಯ ಪ್ರಕಾರಗಳ

ಸ್ವರೂಪವನ್ನು ಅಲ್ಲಿ ವಿವರಿಸಿದೆ. ಆ ಲಕ್ಷಣಗ್ರಂಥ ಮುಖ್ಯವಾಗಿ ದಂಡಿಯ ಕಾವ್ಯಾದರ್ಶವನ್ನು ಅನುಸರಿಸಿಯೂ ಚಂಪೂವಿನ ಹೆಸರನ್ನೆತ್ತದಿರುವುದನ್ನು ಗಮನಿಸಿದರೆ, ಆತನಿಗೆ ಪೂರ್ವದಲ್ಲಿಯೂ ಆತನ ಕಾಲದಲ್ಲಿಯೂ ಈ ಚತ್ತಾಣ, ಬೆದಂಡೆಗಳ ರೂಪದಲ್ಲಿ ಕೃತಿರಚನೆ ನಡೆಯುತ್ತಿದ್ದಿರಬೇಕೆಂಬ ಭಾವನೆಯುಂಟಾಗುತ್ತದೆ. ಕವಿರಾಜಮಾರ್ಗದ ಕಾಲದಿಂದೀಚೆಗೆ ಚತ್ತಾಣದಲ್ಲಿ ನಡುನಡುವೆ ಗದ್ಯಭಾಗಗಳು ಕೂಡಿ ಚಂಪೂ ರೀತಿ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿರಬಹುದು.

ಕನ್ನಡ ಚಂಪೂಸಾಹಿತ್ಯಕ್ಕೆ ಉಜ್ಜ್ವಲವೂ ಸುದೀರ್ಘವೂ ಆದ ಇತಿಹಾಸವಿದೆ. ಉಳಿದ ಕಾವ್ಯಪದ್ಧತಿಗಳಿಗಿಂತ ಅದು ಕವಿಜನರಿಗೆ ಹೆಚ್ಚು ಆದರಣೀಯವೂ ವಿದ್ವನ್ಮಾನ್ಯವೂ ಆಗಿದ್ದುದು ಅದರಿಂದ ತಿಳಿಯುತ್ತದೆ. ಚಂಪೂಸಾಹಿತ್ಯ ಕನ್ನಡದಲ್ಲಿ ಎಂದಿನಿಂದ ರಚನೆಯಾಗುತ್ತ ಬಂದಿದೆ. ಆರಂಭಕಾಲದ ಚಂಪೂಕೃತಿಗಳು ಯಾವುವು ಎಂಬ ವಿಷಯಗಳು ನಮಗೆ ತಿಳಿದಿಲ್ಲ. ದೊರೆತವುಗಳಲ್ಲಿ ಪಂಪಕವಿಯ (ಸು.941) ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯಗಳೇ ಅತ್ಯಂತ ಪ್ರಾಚೀನವಾದವು. ಅವುಗಳ ಚೌಕಟ್ಟನ್ನು ಪರಿಶೀಲಿಸಿದರೆ ಅವು ಆ ಪದ್ಧತಿಯ ಪರಿಣತರಚನೆಗಳೇ ಆಗಿರುವಂತೆ ತೋರುತ್ತವೆ. ಶ್ರೇಷ್ಠ ಕವಿಯಾದ ಪಂಪ ಚಂಪೂ ರೀತಿಯನ್ನು ಕೌಶಲದಿಂದಲೂ ಸಾಮರ್ಥ್ಯದಿಂದಲೂ ನಿರ್ವಹಿಸಿದ್ದಾನೆ. ಆ ಪದ್ಧತಿ ಆತನಿಗೆ ಸ್ವಲ್ಪ ಹಿಂದಿನಿಂದಲೂ ಬೆಳೆದುಕೊಂಡು ಬಂದಿದ್ದು ಆ ಸಿದ್ಧರೂಪಕ್ಕೆ ಬಂದಿರುವುದು ಸಾಧ್ಯ. ಪಂಪ ಪೂರ್ವಕಾಲದ ಕವಿ ಒಂದನೆಯ ಗುಣವರ್ಮ (ಸು.900) ಬರೆದಿದ್ದಂತೆ ತಿಳಿದಿರುವ ಎರಡೂ ಕೃತಿಗಳಲ್ಲಿ ಶೂದ್ರಕ ಎಂಬುದು ಒಂದು ಚಂಪೂ ಕಾವ್ಯವಾಗಿರಬೇಕು. ಆ ಕಾವ್ಯದ ಕೆಲವು ಪದ್ಯಗಳ ಜೊತೆಗೆ ಒಂದು ಗದ್ಯಭಾಗವೂ ಅಭಿನವವಾದಿ ವಿದ್ಯಾನಂದನ ಕಾವ್ಯಸಾರದಲ್ಲಿ ದೊರೆಯುತ್ತಿರುವುದು ಅದಕ್ಕೆ ಸಾಕ್ಷಿ. ಪಂಪ, ರನ್ನ ಮೊದಲಾದ ಜೈನಕವಿಗಳ ಉತ್ತರಕಾಲೀನ ಕಾವ್ಯಸಂಪ್ರದಾಯವನ್ನು ಗಮನಿಸಿ, ಗುಣವರ್ಮನ ಲೌಕಿಕ ಕಾವ್ಯ ಚಂಪೂ ಆಗಿದ್ದಂತೆ, ಆತನ ಧಾರ್ಮಿಕ ಕಾವ್ಯ ಹರಿವಂಶ ಕೂಡ ಚಂಪೂ ಆಗಿದ್ದಿರಬೆಕು ಎಂದು ತಿಳಿದರೆ ತಪ್ಪಾಗಲಾರದು. ಈಚೆಗೆ 3ನೆಯ ಮಂಗರಸ (ಸು.1508) ತನ್ನ ನೇಮಿಜಿನೇಶಸಂಗತಿಯಲ್ಲಿ ಶ್ರೀವಿಜಯನೆಂಬ ಕವಿ ಚಂದ್ರಪ್ರಭಪುರಾಣವನ್ನು ಚಂಪೂರೂಪವಾಗಿ ರಚಿಸಿದ್ದಂತೆ ಹೇಳಿದ್ದಾನೆ. ಈ ಸಂಗತಿಯನ್ನು ಗಮನಿಸಿ ಕವಿರಾಜಮಾರ್ಗದಲ್ಲಿ ಉಲ್ಲೇಖವಾಗಿರುವ ಪ್ರಾಚೀನ ಪದ್ಯಕವಿಗಳಲ್ಲಿ ಒಬ್ಬನಾದ ಶ್ರೀವಿಜಯನೇ (ಸು.850) ಆ ಪುರಾಣಕರ್ತೃ ಎಂಬುದಾಗಿ ಕೆಲವರು ಭಾವಿಸಿದ್ದಾರೆ. ಇದು ನಿಜವಾದರೆ ಕನ್ನಡ ಚಂಪೂಸಾಹಿತ್ಯದ ಇತಿಹಾಸವನ್ನು 9ನೆಯ ಶತಮಾನದ ಪೂರ್ವ ಅಥವಾ ಮಧ್ಯ ಭಾಗದಿಂದಲೇ ಮೊದಲು ಮಾಡಲು ಸಾಧ್ಯವಾಗುತ್ತದೆ. ಆದರೆ ಕವಿರಾಜಮಾರ್ಗದಲ್ಲಿ ಉಕ್ತನಾಗಿರುವ ಶ್ರೀವಿಜಯನೇ ಚಂದ್ರಪ್ರಭಪುರಾಣಕರ್ತೃ ಎನ್ನುವುದಕ್ಕೆ ಪ್ರಬಲವಾದ ಆಧಾರಗಳಿಲ್ಲ. ಕವಿರಾಜಮಾರ್ಗದಲ್ಲಿ ಉಕ್ತರಾದ ಇತರ ಕವಿಗಳ ಕೃತಿವಿಚಾರ ನಮಗೆ ಸರಿಯಾಗಿ ಏನೂ ತಿಳಿಯದು. ಇನ್ನು ಅಸಗ ಕವಿ (ಸು.853) ಕನ್ನಡದಲ್ಲಿ ಕರ್ನಾಟ ಕುಮಾರಸಂಭವ ಕಾವ್ಯವನ್ನು ರಚಿಸಿದ್ದಂತೆ ನಿಶ್ಚಯವಾಗಿ ತಿಳಿದಿದೆಯಾದರೂ ಅದು ಯಾವ ರೂಪದಲ್ಲಿತ್ತು ಎಂಬುದನ್ನು ತಿಳಿಯಲು ನಮಗೆ ಆ ಗ್ರಂಥ ದೊರೆತಿಲ್ಲ. ಚಂಪೂ ಆಗಿದ್ದಿರುವುದು ಅಸಂಭವವೇನಲ್ಲ.

ಅಂತೂ ಕನ್ನಡದಲ್ಲಿ ಚಂಪೂವಿನ ಇತಿಹಾಸ ಈಗ ತಿಳಿದಮಟ್ಟಿಗೆ, ಒಂದನೆಯ ಗುಣವರ್ಮನಿಂದ (ಸು.900) ಆರಂಭವಾದಂತೆ ಇಟ್ಟುಕೊಳ್ಳುವುದು ಸೂಕ್ತ. (ಸು.10)ನೆಯ ಶತಮಾನದಿಂದ 12ನೆಯ ಶತಮಾನದ ಮಧ್ಯಭಾಗದ ವರೆಗೆ ಕನ್ನಡದಲ್ಲಿ ಚಂಪೂಸಾಹಿತ್ಯ ವಿಶೇಷವಾಗಿ ರಚನೆಯಾಗಿದೆ. ಈ ಕಾಲವನ್ನು ಚಂಪೂಯುಗ ಎನ್ನುವುದುಂಟು. 10ನೆಯ ಶತಮಾನವಂತೂ ಆ ಕಾಲದ ಉತ್ಕೃಷ್ಟ ಚಂಪೂಕಾವ್ಯಗಳ ರಚನೆಯಿಂದಾಗಿ ಕನ್ನಡ ಸಾಹಿತ್ಯದ ಸ್ವರ್ಣಯುಗವೆಂದು ಖ್ಯಾತವಾಗಿದೆ. ಈ ಅವಧಿಯ (10-12ಶ). ಚಂಪೂ ಸಾಹಿತ್ಯದ ಒಂದು ಸಾಮಾನ್ಯ ಸಮೀಕ್ಷೆಯನ್ನು ಈಗ ನೋಡಬಹುದು.

ಚಂಪೂ ಸಾಹಿತ್ಯಕ್ಕೆ ಭದ್ರವಾದ ನೆಲೆಗಟ್ಟು ಹಾಕಿದವ ಪಂಪಕವಿ. ಆತನ ಎರಡೂ ಕೃತಿಗಳು ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯ. ಅವುಗಳಲ್ಲಿ ಚಂಪೂಮಾರ್ಗದ ಸಿದ್ಧರೂಪ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಅದರ ಗಾಂಭೀರ್ಯ, ಸೊಗಸು ಸೌಲಭ್ಯಗಳು ಮನವರಿಕೆಯಾಗುತ್ತವೆ. ವಸ್ತು ಮತ್ತು ರೀತಿ ಎರಡು ದೃಷ್ಟಿಗಳಿಂದಲೂ ಆತನ ಚಂಪೂಕಾವ್ಯಗಳು ಉತ್ತರಕಾಲೀನ ಚಂಪೂ ಕವಿಗಳಿಗೆ ಅನುಕರಣೀಯವಾದ ಆದರ್ಶವಾಗಿಯೂ ಮಾದರಿಯಾಗಿಯೂ ಪರಿಣಮಿಸಿದುವು. ಪಂಪನನ್ನು ಗೌರವದಿಂದ ನೆನೆಯುವ, ಆತನ ವಸ್ತುವನ್ನೂ ಭಾವವನ್ನೂ ಉಕ್ತಿಯನ್ನೂ ನಿರೂಪಣ ವಿಧಾನವನ್ನೂ ಕೊಳ್ಳುವ, ಕವಿಗಳ ಚರ್ಯೆಯನ್ನು ಪರಿಶೀಲಿಸಿರೆ ಈ ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ. ಮುಂದಿನ ಕವಿಗಳು ಅನುಸರಿಸುವ ಚಂಪೂವಿನ ಚೌಕಟ್ಟು ಒಟ್ಟಿನಲ್ಲಿ ಪಂಪನ ಚಂಪೂವಿನ ಚೌಕಟ್ಟನ್ನೇ ಹೋಲುತ್ತದೆ. ಕವಿಯ ದೃಷ್ಟಿವಿಶೇಷಕ್ಕೆ ಅನುಸಾರವಾಗಿ, ಕಾಲಧರ್ಮಕ್ಕೆ ಅನುಸಾರವಾಗಿ ಆಗಾಗ ಕೆಲವು ವೈಲಕ್ಷಣ್ಯಗಳು ಹೊಸದಾಗಿ ತೋರಿರುವುದೂ ಉಂಟು.

ಪಂಪನ ಆದಿಪುರಾಣ ಆದಿತೀರ್ಥಂಕರನ ಚರಿತೆ, ವಿಕ್ರಮಾರ್ಜುನವಿಜಯ (ಪಂಪಭಾರತ) ಮಹಾಭಾರತದ ಕಥೆಯನ್ನು ಒಳಗೊಂಡದ್ದು, ಪೊನ್ನನ (ಸು.950) ಶಾಂತಿಪುರಾಣ 16ನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆ. ಆತನ ಅನುಪಲಬ್ಧವಾದ ಭುವನೈಕರಾಮಾಭ್ಯುದಯ ಪ್ರಾಯಃ ರಾಮಾಯಣ ಕಥಾವಸ್ತುವನ್ನುಳ್ಳ ಚಂಪೂ. 1ನೆಯ ನಾಗವರ್ಮನ (ಸು.990) ಕರ್ನಾಟಕ ಕಾದಂಬರಿ ಕಲ್ಪಿತ ಕಥಾವಸ್ತುವನ್ನುಳ್ಳ ಬಾಣನ ಕಾದಂಬರಿಯ ಚಂಪೂ ರೂಪ. ರನ್ನನ (ಸು.993) ಅಜಿತಪುರಾಣ 2ನೆಯ ತೀರ್ಥಂಕರನಾದ ಅಜಿತನಾಥನ ಚರಿತೆ, ಸಾಹಸಭೀಮ ವಿಜಯ (ಗದಾಯುದ್ಧ) ಗದಾಸೌಪ್ತಿಕ ಪರ್ವಗಳ ಭಾರತದ ಕಥೆ, ಪಂಪಭಾರತದಿಂದ (13-14ನೆಯ ಆಶ್ವಾಸ) ಪ್ರಭಾವಿತವಾದದ್ದು. ದುರ್ಗಸಿಂಹನ (ಸು.1031) ಪಂಚತಂತ್ರ ವಸುಭಾಗಭಟ್ಟನ ಪಂಚತಂತ್ರವನ್ನು ಅನುಸರಿಸಿದ ನೀತಿಕಾವ್ಯ. ಶ್ರೀಧರಾಚಾರ್ಯನ (ಸು.1049) ಅನುಪಲಬ್ಧವಾದ ಚಂದ್ರಪ್ರಭಚರಿತೆ 8ನೆಯ ತೀರ್ಥಂಕರ ಚಂದ್ರಪ್ರಭನ ಚರಿತೆಯನ್ನೊಳಗೊಂಡ ಚಂಪುವಾಗಿರಬೇಕು. ಶಾಂತಿನಾಥನ (ಸು.1088) ಸುಕುಮಾರ ಚರಿತೆ ಜೈನ ಮಹಾಪುರುಷರಲ್ಲಿ ಉಪಸರ್ಗ ಕೇವಲಿಯೊಬ್ಬನ ಚರಿತೆ. ನಯಸೇನನ (ಸು.1112) ಧರ್ಮಾಮೃತ ಕಥಾರೂಪವಾಗಿ ಜೈನತತ್ತ್ವಗಳನ್ನು ಪ್ರತಿಪಾದಿಸಿರುವ ಕೃತಿ. ನಾಗಚಂದ್ರನ (ಸು.1140) ಮಲ್ಲಿನಾಥಪುರಾಣ 19ನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತೆ ರಾಮಚಂದ್ರಚರಿತಪುರಾಣ (ಪಂಪರಾಮಾಯಣ) ವಿಮಲಸೂರಿ ರವಿಷೇಣರ ಸಂಪ್ರದಾಯದ ಜೈನರಾಮಾಯಣ. ಕರ್ಣಪಾರ್ಯನ (ಸು.1160-70) ನೇಮಿನಾಥಪುರಾಣ 22ನೆಯ ತೀರ್ಥಂಕರನಾದ ನೇಮಿನಾಥನ ಚರಿತೆ. ನೇಮಿಚಂದ್ರನ (ಸು.1180) ನೇಮಿನಾಥಪುರಾಣ (ಅರ್ಧನೇಮಿಪುರಾಣ) ಅದೇ ವಸ್ತುವನ್ನುಳ್ಳದ್ದು. ಆತನ ಲೀಲಾವತಿ ಕಲ್ಪಿತ ಕಥಾಕಾವ್ಯ. ರುದ್ರಭಟ್ಟನ (ಸು.1185) ಜಗನ್ನಾಥವಿಜಯ ಮುಖ್ಯವಾಗಿ ವಿಷ್ಣುಪುರಾಣದ ಆಧಾರದ ಮೇಲೆ ರಚಿತವಾಗಿರುವ ಕೃಷ್ಣಕಥೆ. ಅಗ್ಗಳನ (ಸು.1189) ಚಂದ್ರಪ್ರಭಪುರಾಣ ಆ ತೀರ್ಥಂಕರನ ಕಥೆ. ಆಚಣ್ಣನ (ಸು.1189-1205) ವರ್ಧಮಾನಪುರಾಣ 24ನೆಯ ತೀರ್ಥಂಕರನಾದ ವರ್ಧಮಾನನ ಚರಿತೆ.

ಈ ಅವಧಿಯಲ್ಲಿ ಇನ್ನೂ ಕೆಲವು ಚಂಪೂಕೃತಿಗಳು ರಚಿತವಾಗಿರುವ ಹಾಗೆ ತೋರುತ್ತದೆ. ಆದರೆ ಇವು ಯಾವುವೂ ಈವರೆಗೆ ನಮಗೆ ದೊರೆತಿಲ್ಲ. ವಿವರಗಳೂ ಸರಿಯಾಗಿ ತಿಳಿದಿಲ್ಲ. ಹೀಗೆ 10 ರಿಂದ 12ನೆಯ ಶತಮಾನದ ವರೆಗೆ, ವೀರಶೈವ ವಚನಕಾರರೂ ಕವಿಗಳೂ ಕಾಣಿಸಕೊಂಡು ವಚನಗಳನ್ನೂ ರಗಳೆ ಷಟ್ಪದಿ ಮೊದಲಾದ ಛಂದಸ್ಸುಗಳಲ್ಲಿ ಕಾವ್ಯಗಳನ್ನೂ ರಚಿಸಲು ಆರಂಭಿಸುವವರೆಗೆ ಚಂಪೂ ಸಾಹಿತ್ಯರಚನೆ ಉತ್ಕರ್ಷದಲ್ಲಿತ್ತು. ಈ ಕಾಲದ ಚಂಪೂವಿನ ಕೆಲವು ವೈಲಕ್ಷಣ್ಯಗಳನ್ನು ಈಗ ನೋಡಬಹುದು.

ಕನ್ನಡ ಸಾಹಿತ್ಯದಲ್ಲಿ ಚಂಪೂವಿನ ಪ್ರಥಮ ಪುರಸ್ಕರ್ತರು ಜೈನಕವಿಗಳು. ಅವರಲ್ಲಿ ಆದ್ಯರೂ ಅನಂತರದವರೂ ಸಂಸ್ಕೃತ (ಮತ್ತು ಪ್ರಾಕೃತ) ಭಾಷೆಯಲ್ಲಿ ರಚಿತವಾಗಿರುತ್ತಿದ್ದ ಪೂರ್ವಾಚಾರ್ಯರ ಪದ್ಯರೂಪದ ಜೈನ ಮಹಾಪುರಾಣ, ಹರಿವಂಶಪುರಾಣ ಮೊದಲಾದವನ್ನು ಅಥವಾ ಅವುಗಳ ಭಾಗಗಳನ್ನು ಯಥೋಚಿತವಾಗಿ ಸಂಗ್ರಹಿಸಿ ಅಥವಾ ವಿಸ್ತರಿಸಿ ಚಂಪೂರೂಪದಲ್ಲಿ ತಮ್ಮ ಜೈನ ಪುರಾಣಗಳನ್ನು ರಚಿಸಿದರು. ಹಾಗೆಯೇ ಅವರು ರಚಿಸಿದ ಲೌಕಿಕ ಕಾವ್ಯಗಳು ಕೂಡ ಪದ್ಯರೂಪದ ಸಂಸ್ಕೃತ (ಮತ್ತು ಪ್ರಾಕೃತ) ಭಾರತ ರಾಮಾಯಣಗಳ ಚಂಪೂ ರೂಪಗಳಾಗಿದ್ದೂ ಅವುಗಳಲ್ಲಿಯೇ ಸಂಸ್ಕೃತ ನಾಟಕಗಳ ಹಾಗೂ ಕಾವ್ಯಸಾಹಿತ್ಯದ ವಸ್ತು ಶೈಲಿಗಳೂ ಅಳವಟ್ಟಿರುವುದು ಕಂಡುಬರುತ್ತದೆ. ಕಾಳಿದಾಸಾದ್ಯರ ಸಂಸ್ಕೃತ ಮಹಾಕಾವ್ಯಗಳ ಸಾಂಪ್ರದಾಯಿಕ ಲಕ್ಷಣಗಳು, ವರ್ಣನೆಗಳು, ಅಲಂಕಾರ, ನಿರೂಪಣೆ, ವಿಧಾನ, ಕಥಾಂಶ, ನಾಯಕವ್ಯಕ್ತಿ ಇತ್ಯಾದಿ ಆ ಕಾವ್ಯಗಳಲ್ಲಿ ಗರ್ಭೀಕೃತವಾಗಿದೆ. ತೀರ್ಥಂಕರ ಚರಿತೆಗಳಲ್ಲಿ ಆಯಾ ತೀರ್ಥಂಕರನ ಮತ್ತು

ಸಹಚರ ಜೀವರ ಪೂರ್ವಭವಾವಳಿಗಳು ಮತ್ತು ಪಂಚಕಲ್ಯಾಣದ ವಿವರಗಳು ಬರುತ್ತವೆ. ಲೌಕಿಕ ಕಾವ್ಯಗಳಲ್ಲಿ ಪೌರಾಣಿಕ ಮತ್ತು ತತ್ಕಾಲಿನ ಚಾರಿತ್ರಿಕ ವ್ಯಕ್ತಿಗಳ ಸಮೀಕರಣ ಮೂಲಕವಾದ ವಸ್ತುಕಥನವಿರುತ್ತದೆ. ಇನ್ನು ಕಲ್ಪಿತಕಥಾವಸ್ತುವಿನ ಸಂಸ್ಕೃತ ಗದ್ಯಕಾವ್ಯಗಳನ್ನು ಕನ್ನಡಕ್ಕೆ ತಂದುಕೊಳ್ಳುವಾಗ, ಚಂಪೂ ಪದ್ಧತಿಗೆ ಆಳವಡಿಸಿಕೊಂಡು ನಿರೂಪಿಸುವ ಸಂಪ್ರದಾಯವನ್ನು ಮೊದಲು ಹೂಡಿದ ಕವಿ ನಾಗವರ್ಮ I. ಆತ ತನ್ನ ಕೃತಿ ಕರ್ನಾಟಕ ಕಾದಂಬರಿಯಲ್ಲಿ, ಕಲ್ಪಿತಕಥೆಯನ್ನು ಕಾವ್ಯವಸ್ತುವನ್ನಾಗಿ ಮಾಡಿಕೊಂಡದ್ದು ಹಾಗೂ ಗದ್ಯರೂಪದ ಕೃತಿಯನ್ನು ಚಂಪೂರೂಪಕ್ಕೆ ತಿರುಗಿಸಿದ್ದು ಒಂದು ವೈಶಿಷ್ಟ್ಯಪೂರ್ಣವಾದ ಸಾಹಸ. ಈ ಪರಂಪರೆ ಮುಂದೆ ನೇಮಿಚಂದ್ರ, ದೇವಕವಿ ಮತ್ತು ಚೌಂಡರಸರ ಕೈಯಲ್ಲಿ ಮುಂದುವರಿಯಿತು. ಮೂಲ ಶುದ್ಧವಾಗಿ ಪದ್ಯದಲ್ಲಿರಲಿ ಅಥವಾ ಗದ್ಯದಲ್ಲಿರಲಿ, ಅದನ್ನು ಚಂಪೂವಿಗೆ ತಿರುಗಿಸುವ ಈ ಪ್ರಯತ್ನ ಕನ್ನಡ ಸಾಹಿತ್ಯದಲ್ಲಿ ಚಂಪೂವಿನ ಪ್ರಾಬಲ್ಯವನ್ನೂ ಕನ್ನಡ ಕವಿಗಳ ಒಲವು, ಸಂಪ್ರದಾಯ ಶ್ರದ್ಧೆಗಳನ್ನೂ ಎತ್ತಿ ತೋರಿಸುತ್ತದೆ.

ಒಂದನೆಯ ನಾಗವರ್ಮನ ಕರ್ನಾಟಕ ಕಾದಂಬರಿ ಅಖಂಡವಾದ ಕಥಾಸೂತ್ರವುಳ್ಳ ಚಂಪೂವಾದರೆ, ದುರ್ಗಸಿಂಹನ ಪಂಚತಂತ್ರ ಹಲವು ಕಥೆಗಳ ಚಂಪೂ. ದೇಸಿ, ಮಾರ್ಗಗಳೆರಡರಲ್ಲಿಯೂ ನಡೆಯುವ ಗದ್ಯಪದ್ಯಗಳು, ದೀರ್ಘತರ ಸಮಾಸ ರಚನೆ, ಶಬ್ದಾಲಂಕಾರಪ್ರಿಯತೆ ಈತನ ಪ್ರೌಢಶೈಲಿಯ ಚಂಪೂವಿನ ವೈಶಿಷ್ಟ್ಯಗಳು. ಕಥಾಸಂಬಂಧಿಯಾದ ಚಂಪೂಗದ್ಯದ ಸ್ವರೂಪ ಹೇಗಿರಬಹುದೆಂದು ತಿಳಿಯುವುದಕ್ಕೆ ಇಲ್ಲಿ ಅವಕಾಶವಿದೆ. ಹಲವು ಕಥೆಗಳ ಚಂಪೂವಿನ ಈ ಪದ್ಧತಿ ಮುಂದೆ ನಯಸೇನ ಮೊದಲಾದವರ ಕೈಯಲ್ಲಿ ಪ್ರಬಲಿಸಿತು. ಶಾಂತಿನಾಥನ ಸುಕುಮಾರಚರಿತ ಪದ್ಧತಿಯಂತೆ ತೀರ್ಥಂಕರ ಚರಿತೆಯಾಗಿರದೆ ಉಪಸರ್ಗ ಕೇವಲಿಯೊಬ್ಬನ ಕಥೆಯಾಗಿರುವುದು ವಸ್ತುವಿನ ದೃಷ್ಟಿಯಿಂದ ಒಂದು ವಿಶೇಷ. ಆತನ ಚಂಪೂವಿನ ಚೌಕಟ್ಟಿನಲ್ಲಿ ರಗಳೆ ಮತ್ತು ದೇಸಿ ಛಂದಸ್ಸಿನ ಪ್ರಭೇದಗಳನ್ನು ಮನಸೆಳೆಯುವಂತೆ ಬಳಸಿದೆ.

ಈವರೆಗೆ ಬೆಳೆದು ಬಂದ ಪ್ರೌಢ ಚಂಪೂ ಮಾರ್ಗ ನಯಸೇನನ ಕಾಲದಲ್ಲಿ, ಆತ ದೇಸಿಗೆ ಕೊಟ್ಟ ಮಹತ್ವದಿಂದ ಸುಧಾರಣೆಗೊಂಡು ಸರಳವಾದ ರೂಪರೇಷೆಗಳನ್ನು ಪಡೆದುಕೊಂಡಿತು. ಸ್ವಲ್ಪಮಟ್ಟಿಗೆ ದುರ್ಗಸಿಂಹನ ಕೃತಿಯಲ್ಲಿಯೇ ಇದನ್ನು ಗುರುತಿಸಬಹುದು. ಚಂಪೂವಿನ ವಸ್ತು, ಭಾಷೆ ಮತ್ತು ಶೈಲಿ ಜನಸಾಮಾನ್ಯನ ಹೃದಯಕ್ಕೆ ಮೆಚ್ಚಾಗುವಂತೆ ಆಕರ್ಷಕವೂ ಅರ್ಥಯುಕ್ತವೂ ಆಯಿತು. ವ್ಯಾಪಕವಾದ ಜನಜೀವನದ ಸಂಸ್ಕೃತಿಯನ್ನೂ ಭಾಷೆಯನ್ನೂ ಹೃದಯಂಗಮವಾಗಿ ಪ್ರತಿಬಿಂಬಿಸಿರುವ ಈ ಚಂಪೂ ಕೃತಿಯ ಶೈಲಿ ವಿಶಿಷ್ಟವಾದುದು. ನಾಗಚಂದ್ರನ ಚಂಪೂಕೃತಿಗಳ ಮುಖ್ಯ ಲಕ್ಷಣಗಳು ಎಂದರೆ ಸಾಂಪ್ರದಾಯಿಕ ವರ್ಣನೆಗಳ ಪ್ರಾಚುರ್ಯ ಮತ್ತು ಶೈಲಿಯ ಸೌಕುಮಾರ್ಯ. ಇದಕ್ಕೆ ಪ್ರತಿಯಾಗಿ ಎನ್ನುವಂತೆ ಕರ್ಣಪಾರ್ಯನ ಕೃತಿ ಅದರ ವಿಶಾಲವಾದ ಕಥಾಭಿತ್ತಿಯಿಂದಾಗಿ ಸಾಂಪ್ರದಾಯಿಕ ವರ್ಣನೆಗಳ ಗೋಜು ಗೊಂದಲವಿಲ್ಲದೆ ರಚಿತವಾಗಿರುವ ಒಂದು ಸರಳಶೈಲಿಯ ಚಂಪೂಕಾವ್ಯ. ನೇಮಿಚಂದ್ರನ ಕೃತಿಗಳು ಕಥೆಗಿಂತ ವರ್ಣನೆಗಳಿಗೆ, ಚಮತ್ಕಾರಕವಾದ ಕಲ್ಪನೆಯ ಚಿತ್ರಗಳಿಗೆ, ಅಲಂಕಾರವೈಖರಿಗೆ ಗಮನ ಕೊಟ್ಟಿರತಕ್ಕವು. ರುದ್ರಭಟ್ಟನಲ್ಲಿಯೂ ಈ ಗುಣಗಳನ್ನು ಕಾಣಬಹುದು. ಆಚಣ್ಣ ತನ್ನ ಕೃತಿ ವರ್ಧಮಾನಪುರಾಣದಲ್ಲಿ ಚಂಪೂವಿನ ಸಾಂಪ್ರದಾಯಿಕ ಲಕ್ಷಣಗಳೊಡನೆ ಚಿತ್ರಕವಿತ್ವದ ವೈಲಕ್ಷಣ್ಯಗಳನ್ನೂ ಜೊತೆಗೂಡಿಸಿದ್ದಾನೆ.

12ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯ ಹೊಸ ತಿರುವನ್ನು ಪಡೆದುಕೊಂಡಿತು. ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ಹೆಚ್ಚು ಹೆಚ್ಚು ಜನಸಮ್ಮುಖವಾಗತೊಡಗಿತು. ವಚನ ಸಾಹಿತ್ಯದ ಕಾಲದಿಂದೀಚೆಗೆ ದೇಶಿಛಂದಸ್ಸುಗಳು ಹರುಪುಗೊಂಡು ಕಾವ್ಯವಾಹಕಗಳಾದವು. ಅವುಗಳಿಗೆ ಜೊತೆಜೊತೆಯಾಗಿ ಚಂಪೂ ಪದ್ಧತಿ ಮುನ್ನಡೆಯಿತಲ್ಲದೆ ಕ್ಷೀಣಿಸಲಿಲ್ಲ. ವಸ್ತು ಮತ್ತು ಶೈಲಿಯಲ್ಲಿ ಕಾಲಧರ್ಮಕ್ಕೆ ಅನುಸಾರವಾಗಿ ಸರಳತೆ ತಲೆದೋರಿತು. ಆದರೆ ಸಂಪ್ರದಾಯ ಶ್ರದ್ಧೆಯಿಂದ ಹುಟ್ಟಿದ ಪ್ರೌಢ ಚಂಪೂವಿನ ರಚನೆಯೇನೂ ನಿಲ್ಲಲಿಲ್ಲ. ನಯಸೇನನ ಮಾರ್ಗಕ್ಕಿಂತ ನೇಮಿಚಂದ್ರ, ರುದ್ರಭಟ್ಟರ ಮಾರ್ಗವೇ ಚಂಪೂ ಕವಿಗಳಿಗೆ ಹೆಚ್ಚು ಮೆಚ್ಚಾಯಿತು. 12ರಿಂದ 15ನೆಯ ಶತಮಾನದವರೆಗಿನ ಚಂಪೂ ಸಾಹಿತ್ಯ ಅದರ ಇತಿಹಾಸದಲ್ಲಿ ಎರಡನೆಯ ಘಟ್ಟ. ಈ ಅವಧಿಯ ಕೃತಿಗಳ ಒಂದು ಸಾಮಾನ್ಯ ಸಮೀಕ್ಷೆಯನ್ನು ಈಗ ನೋಡಬಹುದು.

ಬಂಧುವರ್ಮನ (ಸು.1200) ಹರಿವಂಶಾಭ್ಯುದಯ ಮುಖ್ಯವಾಗಿ ನೇಮಿನಾಥ ಚರಿತ್ರೆ. ಆತನ ಜೀವಸಂಬೋಧನೆ ಜೈನಮತದ ದ್ವಾದಶಾನುಪ್ರೇಕ್ಷೆಗಳನ್ನು ಕಥಾರೂಪವಾಗಿ ಪ್ರತಿಪಾದಿಸುವ ಕೃತಿ. ದೇವಕವಿಯ (ಸು.1200) ಕುಸುಮಾವಳಿ ಒಂದು ಕಲ್ಪಿತಕಥಾಕಾವ್ಯ. ಹರಿಹರನ ಗಿರಿಜಾಕಲ್ಯಾಣ (ಸು.1200) ಶಿವಪಾರ್ವತಿಯರ ವಿವಾಹವನ್ನು ಕುರಿತದ್ದು. ಪಾರ್ಶ್ವಪಂಡಿತನ ಪಾರ್ಶ್ವನಾಥಪುರಾಣ (ಸು.1222) 23ನೆಯ ತೀರ್ಥಂಕರನಾದ ಪಾರ್ಶ್ವನಾಥನ ಚರಿತ್ರೆಯನ್ನು ಒಳಗೊಂಡದ್ದು. ಸೋಮರಾಜನ ಉದ್ಭಟಕಾವ್ಯ (ಸು.1222) ಉದ್ಭಟದೇವನೆಂಬ ಶಿವಭಕ್ತನ ಕಥೆ. ಜನ್ನನ ಅನಂತನಾಥಪುರಾಣ (ಸು.1230) 14ನೆಯ ತೀರ್ಥಂಕರನಾದ ಅನಂತನಾಥನ ಚರಿತೆ. ಕಮಲಭವನ ಶಾಂತೀಶ್ವರ ಪುರಾಣ (ಸು.1235) 16ನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆ. ಆಂಡಯ್ಯನ ಕಬ್ಬಿಗರ ಕಾವ (ಸು.1235) ವೈದಿಕ ಕಥಾಮೂಲದ ಶಿವಮನ್ಮಥರ ವಿರಸವೃತ್ತಾಂತ. 2ನೆಯ ಗುಣವರ್ಮನ (ಸು.1255) ಪುಷ್ಪದಂತ ಪುರಾಣ 9ನೆಯ ತೀರ್ಥಂಕರನಾದ ಪುಷ್ಪದಂತನ ಚರಿತೆ. ಮಹಾಬಲನ ನೇಮಿನಾಥ ಪುರಾಣ (ಸು.1254) ನೇಮಿತೀರ್ಥಂಕರನ ಚರಿತೆ. ಚೌಂಡರಸನ (ಸು.1300) ಅಭಿನವ ದಶಕುಮಾರ ಚರಿತೆ ಕಲ್ಪಿತ ಕಾಥಾಕಾವ್ಯ. ನಾಗರಾಜನ ಪುಣ್ಯಾಸ್ರವ ಚಂಪೂ (ಸು.1331) ಜೈನ ತತ್ತ್ವಗಳನ್ನು ಕಥಾರೂಪದಲ್ಲಿ ಪ್ರತಿಪಾದಿಸುವ ಕೃತಿ. ವೃತ್ತವಿಲಾಸನ (ಸು.1350) ಧರ್ಮಪರೀಕ್ಷೆ ಜೈನಮತೋತ್ಕರ್ಷವನ್ನು ಕಥಾರೂಪದಲ್ಲಿ ನಿರೂಪಿಸುವ ಕೃತಿ. ಬಾಹುಬಲಿ ಪಂಡಿತನ ಧರ್ಮನಾಥ ಪುರಾಣ (ಸು.1352) ಮತ್ತು ಮಧುರನ (ಸು.1400) ಧರ್ಮನಾಥ ಪುರಾಣ 15ನೆಯ ತೀರ್ಥಂಕರನಾದ ಧರ್ಮನಾಥನ ಚರಿತೆಗಳಾಗಿವೆ. ಆಯತವರ್ಮನ (ಸು.1400) ಕನ್ನಡ ರತ್ನಕರಂಡಕ ಜೈನಮತದ ರತ್ನತ್ರಯಗಳನ್ನು ಕುರಿತ ಕೃತಿ. ಕವಿಮಲ್ಲನೆಂಬುವನ (ಸು.1400) ಮನ್ಮಥವಿಜಯವೆಂಬ ಕೃತಿ ಪ್ರಾಯಃ ಶೃಂಗಾರಪ್ರತಿಪಾದಕವಾದುದು.

ಈ ಕಾಲದ ಚಂಪೂವಿನ ಕೆಲವು ವೈಲಕ್ಷಣ್ಯಗಳು ಹೀಗಿವೆ: ಬಂಧುವರ್ಮ, ಪಾರ್ಶ್ವಪಂಡಿತ, ಜನ್ನ, ಕಮಲಭವ, 2ನೆಯ ಗುಣವರ್ಮ, ಮಹಾಬಲ, ಬಾಹುಬಲಿ ಪಂಡಿತ ಮತ್ತು ಮಧುರ ಈ ಜೈನಕವಿಗಳು ತೀರ್ಥಂಕರಚರಿತೆಗಳನ್ನು ಚಂಪೂ ರೂಪದಲ್ಲಿ ರಚಿಸಿದ್ದಾರೆ. ಇವು ಈ ಮೊದಲೇ ಸಂಪ್ರದಾಯಸಿದ್ಧವಾಗಿ ರಚಿತವಾಗುತ್ತ ಬಂದಿದ್ದ ತೀರ್ಥಂಕರಚರಿತೆಗಳ ಮಾದರಿಯಲ್ಲೇ ಬಲುಮಟ್ಟಿಗೆ ರಚಿತವಾಗಿರತಕ್ಕವು. ಕಥೆಗಿಂತ ವರ್ಣನೆಗಳು, ಸರಳತೆಗಿಂತ ಪ್ರೌಢಿಮೆ, ದೇಸಿಗಿಂತ ಮಾರ್ಗ ಇವುಗಳ ಕಡೆಗೆ ಕವಿಗಳ ಒಲವು ಕಾಣುತ್ತದೆ. ಪ್ರಾಯಃ ಒಂದೆರಡನ್ನು ಬಿಟ್ಟರೆ, ಉಳಿದ ತೀರ್ಥಂಕರ ಚರಿತೆಗಳಲ್ಲಿ ಕಥಾಭಿತ್ತಿಯೇ ಅಲ್ಪವಾಗಿದ್ದು ಸಾಂಪ್ರದಾಯಿಕವಾದ ಕಾವ್ಯಾಂಗಗಳ ವರ್ಣನೆಗಳಿಂದಲೂ ಪುರಾಣಲಕ್ಷಣಗಳಿಂದಲೂ ಅದನ್ನು ಹಿಗ್ಗಿಸಿರುವುದು ಕಾಣುತ್ತದೆ. ಪಾಂಡಿತ್ಯ ಪ್ರದರ್ಶನದ ಕಾಂಕ್ಷೆ ತಲೆದೋರಿದೆ. ಹರಿಹರ ಮತ್ತು ಸೋಮರಾಜರ ವೀರಶೈವ ಚಂಪೂ ಕೃತಿಗಳೂ ಬಲುಮಟ್ಟಿಗೆ ಅವೇ ವೈಲಕ್ಷಣ್ಯಗಳನ್ನು ಒಳಗೊಂಡಿವೆ. ಆದರೆ ವೀರಶೈವ ಚಂಪೂಗಳಲ್ಲಿ ಹರಿಹರನ ಗಿರಿಜಾಕಲ್ಯಾಣ ಉತ್ಕೃಷ್ಟವಾದುದಾಗಿದೆ. ಅನಂತರದ ಕವಿಗಳು ಆತನಿಂದ ಪ್ರಭಾವಿತವಾದುದು ಕಾಣುತ್ತದೆ. ಸೋಮರಾಜನ ಕೃತಿ ವಸ್ತುವಿನ ಆಯ್ಕೆಯ ದೃಷ್ಟಿಯಿಂದಲೂ ಅದರಲ್ಲಿಯ ಛಂದೋವೈವಿಧ್ಯದ ದೃಷ್ಟಿಯಿಂದಲೂ ಗಮನಿಸತಕ್ಕದ್ದಾಗಿದೆ.

ಗದ್ಯರೂಪವಾಗಿರುವ ಕಲ್ಪಿತಕಥಾಕಾವ್ಯವನ್ನು ಚಂಪೂವಿಗೆ ತಿರುಗಿಸುವ ನಾಗವರ್ಮನ ಕಾವ್ಯಪದ್ಧತಿ ದೇವಕವಿ, ಚೌಂಡರಸರ ಮೂಲಕ ಮುಂದುವರಿದಿದೆ. ದೇವಕವಿಯ ಕುಸುಮಾವಳಿ ಕಾವ್ಯ ಸುಬಂಧು, ಬಾಣರ ಗದ್ಯಕಾವ್ಯಗಳ ಪ್ರಭಾವದಿಂದಾದುದು. ಚೌಂಡರಸನ ಅಭಿನವ ದಶಕುಮಾರ ಚರಿತೆ, ದಂಡಿಯ ಗದ್ಯಕಾವ್ಯ ದಶಕುಮಾರ ಚರಿತೆಯ ಪರಿವರ್ತನೆ. ಇಲ್ಲಿಯೂ ಕಥೆಗಾರಿಕೆ, ರಸದೃಷ್ಟಿಗಳಿಗಿಂತ ವರ್ಣನೆಯ ದೃಷ್ಟಿ ಪ್ರಬಲವಾಗಿದೆ. ಇನ್ನು ಜೈನಮತ ತತ್ತ್ವಗಳನ್ನು ಕಥೆಗಳ ರೂಪದಲ್ಲಿ ಪ್ರತಿಪಾದಿಸುವ ನಯಸೇನನ ಕಾವ್ಯಪದ್ಧತಿ ಬಂಧುವರ್ಮ, ನಾಗರಾಜ, ವೃತ್ತ ವಿಲಾಸ ಇವರ ಕೈಯಲ್ಲಿ ಮುಂದುವರಿಯಿತು. ಬಂಧುವರ್ಮನ ಜೀವಸಂಬೋಧನೆಯ ಚಂಪೂವಿನ ಚೌಕಟ್ಟು ಸ್ವಾರಸ್ಯಕರವಾದುದು.

ಆಂಡಯ್ಯನ ಕಬ್ಬಿಗರ ಕಾವ ದೇಶ್ಯ ಮತ್ತು ತದ್ಭವ ಶಬ್ದಗಳನ್ನು ಮಾತ್ರ ಬಳಸಿದ ಹಾಗೂ ಪರಿಮಾಣದಲ್ಲಿ ಚಿಕ್ಕದಾಗಿರುವ ಚಂಪೂ. ಆಯತವರ್ಮನ ಕನ್ನಡ ರತ್ನಕರಂಡಕ ಕೇವಲ ತಾತ್ತ್ವಿಕ ವಿಷಯವನ್ನುಳ್ಳ

ಚಂಪೂ. ಹೀಗೆ ಈ ಅವಧಿಯ ಚಂಪೂ ರೂಪದಲ್ಲಿ ಪೌರಾಣಿಕ ವ್ಯಕ್ತಿಚರಿತ್ರೆ, ಕಥೆ, ತತ್ತ್ವ ಇವು ಅವಕಾಶ ಪಡೆದಿವೆ.

15ರಿಂದ 17ನೆಯ ಶತಮಾನದ ವರೆಗಿನ ಕಾಲ ಚಂಪೂ ಸಾಹಿತ್ಯದ ಇತಿಹಾಸದಲ್ಲಿ ಇಳಿಗಾಲ. ಈ ಅವಧಿಯಲ್ಲಿ ಷಟ್ಪದಿ, ಸಾಂಗತ್ಯ ಮೊದಲಾದ ಛಂದಸ್ಸುಗಳಲ್ಲಿ ರಚಿತವಾದ ಕಾವ್ಯಗಳು ಹೆಚ್ಚಾಗಿ ಬಂದವು. ಅವುಗಳ ಕರ್ತೃಗಳು ಆ ಕಾವ್ಯಗಳಲ್ಲಿಯೇ ಹಿಂದಿನ ಚಂಪೂಕಾವ್ಯಗಳ ವಸ್ತು ಮತ್ತು ಶೈಲಿಗಳ ಕೆಲವು ಲಕ್ಷಣಗಳನ್ನು ಅಳವಡಿಸಿದರು. ಚಂಪೂಕಾವ್ಯ ಪದ್ಧತಿಯ ಉತ್ತಮವಾದ ಮಾದರಿಗಳು ಸು.10-12ನೆಯ ಶತಮಾನದಲ್ಲಿಯೇ ಬಂದು ಹೋಗಿದ್ದು, ಈಚಿನವು ಹೆಚ್ಚಿನ ಮಟ್ಟಿಗೆ ಅವುಗಳ ಶುಷ್ಕ ಅನುಕರಣಗಳಾಗಿ ತೋರುತ್ತವೆ. ಮಧುರ ಕವಿಯ (1377-1404) ಧರ್ಮನಾಥಪುರಾಣ ಚಂಪೂಶೈಲಿಯ ಅವಸಾನದ ಹಂಸಗೀತೆ.

ಚಂದ್ರಕವಿಯ (ಸು.1430) ಪಂಪಾಸ್ಥಾನವರ್ಣನ ಹಂಪೆಯ ವಿರೂಪಾಕ್ಷ ದೇವರ ಆಸ್ಥಾನ ವರ್ಣನೆಯನ್ನು ಕುರಿತಿದೆ. ಸುರಂಗಕವಿಯ (ಸು.1500) ತ್ರಿಷಷ್ಟಿಪುರಾತನಚಾರಿತ್ರ ತಮಿಳುನಾಡಿನ 63 ಶಿವಭಕ್ತರ ಕಥೆಗಳನ್ನೊಳಗೊಂಡಿದೆ. ಕಥೆಯ ಒಂದು ಎಳೆಗೂ ಎಡೆಯಿಲ್ಲದಂತೆ ಕೇವಲ ವರ್ಣನೆಗಳಿಂದಲೇ ಕಾವ್ಯವನ್ನು ಕಟ್ಟಿರುವ ಚಂದ್ರಕವಿಯ ಕೌಶಲ ಕುತೂಹಲಕರವಾದುದು. ಈವರೆಗಿನ ಚಂಪೂ ಪದ್ಧತಿಯಲ್ಲಿ ನವೀನವಾದುದು. ಕನ್ನಡದ ಅತಿ ಪುಟ್ಟ ಚಂಪೂಕಾವ್ಯಗಳಲ್ಲಿ ಒಂದಾದ ಈ ಕೃತಿಯಲ್ಲಿ ಇರುವ ಅಲ್ಪಾವಕಾಶದಲ್ಲಿಯೇ ಸಾಂಪ್ರದಾಯಿಕ ವರ್ಣನೆಗಳು ಯಥೋಚಿತವಾಗಿ ಎಡೆಪಡೆದಿವೆ. ಸುರಂಗಕವಿಯ ಕೃತಿ, ಅದಕ್ಕೆ ಪ್ರತಿಯಾಗಿ ಎನ್ನುವಂತೆ, ಕನ್ನಡದ ಅತಿ ದೊಡ್ಡ ಚಂಪೂ ಕಾವ್ಯಗಳಲ್ಲಿ ಒಂದಾಗಿದ್ದು, ಹರಿಹರನ ಕಥಾಮೂಲವನ್ನೂ ಚಂಪೂಮಾರ್ಗವನ್ನೂ ಬಲುಮಟ್ಟಿಗೆ ಅನುಸರಿಸಿದ್ದು ಹರಿಹರನ ಅನಂತರದ ವೀರಶೈವ ಚಂಪೂಗ್ರಂಥಗಳಲ್ಲಿ ಗಣ್ಯವಾದದ್ದಾಗಿದೆ.

ಕಳೆದೆರಡು ಶತಮಾನಗಳಲ್ಲಿ ಸ್ಥಗಿತಗೊಂಡಿದ್ದ ಚಂಪೂಸಾಹಿತ್ಯರಚನೆ 17 ರಿಂದ 19ನೆಯ ಶತಮಾನದ ಅವಧಿಯಲ್ಲಿ ಪುನರುಜ್ಜೀವನಗೊಂಡಿತು. ಈ ಅವಧಿಯಲ್ಲಿ ವೀರಶೈವ ಕವಿಗಳೇ ಅಧಿಕ ಸಂಖ್ಯೆಯಲ್ಲಿ ಚಂಪೂಕೃತಿಗಳನ್ನು ರಚಿಸಿದರು. ಜೈನ ಕವಿಗಳು ಕಾರಣಾಂತರಗಳಿಂದ ಚಂಪೂಪದ್ಧತಿಯನ್ನು ಬಿಟ್ಟು ದೇಸೀ ಕಾವ್ಯಗಳ ರಚನೆಗೆ ತೊಡಗಿದರು. ಈ ಅವಧಿಯ ಚಂಪೂಸಾಹಿತ್ಯದ ಒಂದು ಸಾಮಾನ್ಯವಾದ ಸಮೀಕ್ಷೆ ಹೀಗಿದೆ.

ಪ್ರಭುಗನ (ಸು.1520) ಚೂಡನಾಸ್ಥಾನ ಮತ್ತು ವೈಭೋಗರಾಜಾಸ್ಥಾನಗಳು ಈಶ್ವರನ ಆಸ್ಥಾನದ ವರ್ಣನೆಯನ್ನು ಒಳಗೊಂಡಂಥವು. ವೀರಭದ್ರರಾಜನ (ಸು.1530) ವೀರಭದ್ರವಿಜಯ ವೀರೇಶನ ಚರಿತೆ. ಸದಾಶಿವಯೋಗಿಯ ರಾಮನಾಥ'ವಿಲಾಸ (ಸು.1554) ವೀರಶೈವ ಮತೋತ್ಕರ್ಷವನ್ನು ಮಾಡಿದ ರಾಮನಾಥಾಚಾರ್ಯನ ಚರಿತ್ರೆ. ಮುರಿಗೆ ದೇಶಿಕೇಂದ್ರನ (ಸು.1560) ಹಮ್ಮೀರ ಕಾವ್ಯ ಶಿವಭಕ್ತನಾದ ಹಮ್ಮೀರರಾಜನ ಚರಿತೆ. ಸಿದ್ಧಲಿಂಗ ಶಿವಯೋಗಿಯ (ಸು.1600) ಭೈರವೇಶ್ವರಪುರಾಣ ಶಿವಭಕ್ತನಾದ ಭೈರವರಾಜನ ಕಥೆ. ಶಾಂತವೀರ ದೇಶಿಕನ (ಸು.1650) ಶಿವಲಿಂಗಚಾರಿತ್ರ ಶಿವಲಿಂಗಾರ್ಯನ ಕಥೆ. ಕವಿ ಮಾದಣ್ಣನ (ಸು.1650) ನನ್ನಯ್ಯಗಳ ಚರಿತ್ರೆ ಶಿವಭಕ್ತನಾದ ನನ್ನಯ್ಯನ ಚರಿತೆ. ಷಡಕ್ಷರಿಯ ರಾಜಶೇಖರವಿಲಾಸ (ಸು.1655) ಸತ್ಯೇಂದ್ರ ಚೋಳನ ಮಗನಾದ ರಾಜಶೇಖರನ ಕಥೆ. ಬಸವರಾಜ ವಿಜಯ ಅಥವಾ ವೃಷಭೇಂದ್ರ ವಿಜಯ (ಸು.1677) ಬಸವಣ್ಣನವರ ಚರಿತ್ರೆ. ಶಬರಶಂಕರವಿಲಾಸ ಮಹಾಭಾರತದ ಕಿರಾತಾರ್ಜುನೀಯ ಪ್ರಸಂಗವನ್ನು ಕುರಿತದ್ದು.

16-17ನೆಯ ಶತಮಾನದ ವೀರಶೈವ ಕವಿಗಳ ಈ ಚಂಪೂಸಾಹಿತ್ಯ ಮುಖ್ಯವಾಗಿ ಶಿವನನ್ನೂ ಶಿವಭಕ್ತರ ಪುಣ್ಯಕಥೆ'ಗಳನ್ನೂ ಆಧಾರವಾಗಿಟ್ಟುಕೊಂಡು ರಚಿತವಾಗಿದೆ. ವಸ್ತು, ಶೈಲಿ ಮತ್ತು ಉದ್ದೇಶಗಳಲ್ಲಿ ಹರಿಹರನ ಕಾವ್ಯಮಾರ್ಗದ ಪ್ರಭಾವ ಇದರಲ್ಲಿ ಕಾಣುತ್ತದೆ. ಎಂದಿನಂತೆ ಇಲ್ಲಿಯೂ ವರ್ಣನೆ, ಅಲಂಕಾರ, ಕವಿಸಮಯಗಳಲ್ಲಿ ಕನ್ನಡ ಚಂಪೂಕಾವ್ಯಪರಂಪರೆ ಮುನ್ನಡೆದಿದೆ. ಪ್ರಭುಗನ ಶಿವಾಸ್ಥಾನ ವರ್ಣನೆಯ ಚಿಕ್ಕಚಂಪೂಗ್ರಂಥ'ಗಳು ಒಂದೊಂದೂ 101 ಪದ್ಯಗಳನ್ನು ಒಳಗೊಂಡಿರುವುದರಿಂದ ಪ್ರಾಯಃ ಶತಕ ಚಂಪೂ ಆಕೃತಿಯನ್ನು ತಳೆದಂತೆ ಭಾವನೆಯುಂಟಾಗುತ್ತದೆ. ಅಲ್ಲದೆ ಇಲ್ಲಿ ಚಂದ್ರಕವಿಯ ಸಂಪ್ರದಾಯ ಮುನ್ನಡೆದಿದೆ. ವೀರಭದ್ರನ ಕೃತಿ ವರ್ಣನಾಭಾಗ ಹೆಚ್ಚಾಗಿರುವ ಚಂಪೂ, ಸದಾಶಿವಯೋಗಿಯ ಕೃತಿಯಲ್ಲಿ ಷಟ್ಪದಿಗಳು ಬಳಕೆಯಾಗಿವೆ. ಇನ್ನು ವೀರಶೈವ ಚಂಪೂ ಕಾವ್ಯಕರ್ತೃಗಳ ಪರಂಪರೆಯಲ್ಲಿ ಬಹು ಸಮರ್ಥನಾದವನೆಂದರೆ ಷಡಕ್ಷರಿ. ಒಳ್ಳೆಯ ಕವಿತ್ವಶಕ್ತಿಯೊಡನೆ ಪಾಂಡಿತ್ಯ ದೃಷ್ಟಿಯೂ ಸಂಪ್ರದಾಯ ನಿಷ್ಠೆಯೂ ಈತನಲ್ಲಿ ವಿಶೇಷವಾಗಿತ್ತು. ಈತನ ಚಂಪೂಕೃತಿಗಳಲ್ಲಿ ಪ್ರಾಚೀನ ಕಾಲದ ಪ್ರೌಢ ಚಂಪೂಕಾವ್ಯಗಳ ಗುಣಲಕ್ಷಣಗಳು ಪ್ರತಿಬಿಂಬಿತವಾಗಿವೆ. ಚಂಪೂಶೈಲಿಯ ಆಕರ್ಷಣೆ ಬಿಟ್ಟೂ ಬಿಡದಂತೆ ಕನ್ನಡ ಕವಿಗಳ ಮನಸ್ಸನ್ನು ಸೆರೆ ಹಿಡಿದಿದ್ದು, ಅವರ ಪ್ರತಿಭೆ ಪಾಂಡಿತ್ಯಗಳ ಪರೀಕ್ಷೆಗೆ ಒಳ್ಳೆಯ ನಿಕಷವಾಗಿತ್ತು. ಷಡಕ್ಷರಿಯಂಥ ಕವಿ ಆ ಪರೀಕ್ಷೆಯಲ್ಲಿ ಹೆಮ್ಮೆಯಿಂದ ಪಾಲುಗೊಂಡು, ಯಶಸ್ವಿಯಾಗಿರುವುದು ಕಾಣುತ್ತದೆ. ಕಥೆಯನ್ನು ನಿಮಿತ್ತವಾಗಿ ಮಾಡಿಕೊಂಡು, ಮುಖ್ಯವಾಗಿ ವರ್ಣನ ವೈಚಿತ್ರ್ಯಗಳನ್ನೂ ಕಲ್ಪನಾಚಾತುರ್ಯ ಮತ್ತು ಅಲಂಕಾರ ವೈಖರಿಗಳನ್ನೂ ತನ್ನ ಕೃತಿಗಳಲ್ಲಿ ಈತ ಮೆರೆದಿದ್ದಾನೆ.

17ನೆಯ ಶತಮಾನದ ಉತ್ತರಾರ್ಧದಲ್ಲಿ, ಮೈಸೂರರಸರಲ್ಲಿ ಪ್ರಖ್ಯಾತನಾದ ಚಿಕ್ಕದೇವರಾಯನ (ಸು.1672-1704) ಆಶ್ರಯದಲ್ಲಿ ಕೆಲವರು ಬ್ರಾಹ್ಮಣಕವಿಗಳು ಚಂಪೂಸಾಹಿತ್ಯದ ಬೆಳೆವಣಿಗೆಗೆ ತುಂಬ ನೆರವಾದರು. ಚಿಕ್ಕದೇವರಾಜನ ಕಾಲದ ಹಾಗೂ ಅವನ ಪೋಷಣೆ ಪಡೆದ ಕವಿಸಮೂಹದಲ್ಲಿ ತಿರುಮಲಾರ್ಯ, ಚಿಕುಪಾಧ್ಯಾಯ, ತಿಮ್ಮಕವಿ, ಮಲ್ಲಿಕಾರ್ಜುನ, ಮಲ್ಲರಸ ಇವರು ಚಂಪೂಕೃತಿಗಳನ್ನು ರಚಿಸಿದರು. ಇವರಲ್ಲಿ ಕೆಲವರ ಕಾವ್ಯಮಾರ್ಗದ ಮೇಲೆ ಷಡಕ್ಷರಿಯ ಪ್ರಭಾವವಾಗಿರುವುದು ಸಾಧ್ಯ. ತಿರುಮಲಾರ್ಯನ (1645-1706) ಚಿಕದೇವರಾಜವಿಜಯ ಆ ದೊರೆಯ ಪೂರ್ವಜರ ವಿಷಯವನ್ನೂ ಆತನ ಜನನ ಬಾಲ್ಯದಿನಗಳನ್ನೂ ಕುರಿತಿದೆ. ಚಿಕುಪಾಧ್ಯಾಯನ (1672) ಹಸ್ತಿಗಿರಿಮಾಹಾತ್ಮ್ಯ (1679) ಬ್ರಹ್ಮಾಂಡಪುರಾಣದ ತೀರ್ಥಕಾಂಡಕಾದಲ್ಲಿ ಉಕ್ತವಾದ ಕಂಚಿಯ ಮಾಹಾತ್ಮ್ಯವನ್ನು ಕುರಿತದ್ದು. ಕಮಲಾಚಲ ಮಾಹಾತ್ಮ್ಯ (1680) ಭವಿಷ್ಯೋತ್ತರ ಪುರಾಣದ ತೀರ್ಥಕಾಂಡಕಾದಲ್ಲಿ ಉಕ್ತವಾದ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಾಹಾತ್ಮ್ಯವನ್ನು ಕುರಿತದ್ದು. ರುಕ್ಮಾಂಗದ ಚರಿತೆ (1681) ಏಕಾದಶೀವ್ರತದ ಮಹಿಮೆಯನ್ನು ಹೇಳುತ್ತದೆ. ವಿಷ್ಣುಪುರಾಣ ಸಂಸ್ಕೃತ ವಿಷ್ಣುಪುರಾಣದ ಪರಿವರ್ತನೆ. ದಿವ್ಯಸೂರಿಚರಿತೆ 12 ಮಂದಿ ಆಳ್ವಾರರ ಚರಿತ್ರೆ. ಸಾತ್ತ್ವಿಕಬಹ್ಮವಿದ್ಯಾವಿಲಾಸ ಮತ್ತು ಅರ್ಥಪಂಚಕಗಳು ವಿಶಿಷ್ಟಾದ್ವೈತ ಮತಸಿದ್ಧಾಂತ ಗ್ರಂಥಗಳು. ತಿಮ್ಮಕವಿಯ (1677) ಯಾದವಗಿರಿ ಮಾಹಾತ್ಮ್ಯ (1677) ನಾರದೀಯ ಪುರಾಣೋಕ್ತವಾದ ಯಾದವಗಿರಿಯ (ಮೇಲುಕೋಟೆಯ) ಮಾಹಾತ್ಮ್ಯವನ್ನು ಕುರಿತದ್ದು. ಪಶ್ಚಿಮ ರಂಗಮಾಹಾತ್ಮ್ಯ ಶ್ರೀರಂಗಪಟ್ಟಣದ ಮಾಹಾತ್ಮ್ಯವನ್ನು ಕುರಿತದ್ದು. ವೆಂಕಟಗಿರಿಮಾಹಾತ್ಮ್ಯ (1679) ತಿರುಪತಿಯ ಮಾಹಾತ್ಮ್ಯವನ್ನು ಹೇಳುತ್ತದೆ. ಮಲ್ಲಿಕಾರ್ಜುನನ (1678) ಶ್ರೀರಂಗಮಾಹಾತ್ಮ್ಯ ಬ್ರಹ್ಮಾಂಡಪುರಾಣದಲ್ಲಿನ ಶ್ರೀರಂಗಕ್ಷೇತ್ರದ ಮಾಹಾತ್ಮ್ಯವನ್ನು ಕುರಿತದ್ದು. ಮಲ್ಲರಸನ (ಸು.1680) ದಶಾವತಾರ ಚರಿತೆಯಲ್ಲಿ ವಿಷ್ಣುವಿನ ಹತ್ತು ಅವತಾರಗಳ ಕಥನವಿದೆ. ಕೃಷ್ಣಶರ್ಮನ (ಸು.1700) ಸರಜಾ ಹನುಮೇಂದ್ರಚರಿತೆ ತರೀಕೆರೆ ಪ್ರಭು ಸರಜಾ ಹನುಮೇಂದ್ರ ಯಶೋವಿಲಾಸಂ ಚರಿತ್ರೆಯಾಗಿದೆ.

ಚಿಕ್ಕದೇವರಾಯನ ಕಾಲದಿಂದೀಚೆಗೆ ಕೂಡ ಕೆಲವು ಚಂಪೂಕೃತಿಗಳು ರಚಿತವಾಗಿವೆ. ಅವುಗಳ ಒಂದು ಸಾಮಾನ್ಯ ಸಮೀಕ್ಷೆ ಹೀಗಿದೆ. ಇಮ್ಮಡಿ ಮುರಿಗೆಯ ಸ್ವಾಮಿಯ ಹಾಲಾಸ್ಯಪುರಾಣ (ಸು.1720) ಮಧುರೆಯ ಸುಂದರೇಶ್ವರ 64 ಲೀಲೆಗಳನ್ನು ನಟಿಸಿದ ಕಥಾವೃತ್ತಾಂತವನ್ನು ಕುರಿತಿದೆ. ವೆಂಕಟೇಶನ (ಸು.1740) ಹಾಲಾಸ್ಯಮಾಹಾತ್ಮ್ಯವೂ ಶಿವಲೀಲಾಪರವಾದುದು. ಲಿಂಗಣ್ಣನ (ಸು.1750) ಕೆಳದಿ ನೃಪವಿಜಯ ಕೆಳದಿಯ ಅರಸರ ಚರಿತ್ರೆ. ವೆಂಕಾಮಾತ್ಯನ (ಸು.1770) ರಮಾಭ್ಯುದಯ ಕಾವ್ಯ ಲಕ್ಷ್ಮೀದೇವಿಯ ಅವತಾರವೇ ಮೊದಲಾದ ಪೌರಾಣಿಕ ಕಥೆಗಳನ್ನು ಒಳಗೊಂಡದ್ದು. ದೇವಚಂದ್ರನ ರಾಮಕಥಾವತಾರದಲ್ಲಿ (ಸು.1797) ಜೈನ ಸಂಪ್ರದಾಯದ ರಾಮಾಯಣ ಕಥೆ ಬಂದಿದೆ. ಚಾರುಕೀರ್ತಿ ಪಂಡಿತನ (ಚಂದ್ರಸಾಗರ ವರ್ಣಿಯ) ಭವ್ಯಜನಚಿಂತಾಮಣಿ (1815) ಜಿನಪೂಜಾಮಹಿಮೆಯಿಂದ ಸದ್ಗತಿ ಪಡೆದವರ ಕಥೆಗಳನ್ನು ಒಳಗೊಂಡಿದೆ. ತಮ್ಮಯ ಕವಿಯ ರಾಜವಂಶರತ್ನಪ್ರಭೆ (ಸು.1834) ಮೈಸೂರು ಅರಸರ ಚರಿತ್ರೆ. ಅಳಿಯ ಲಿಂಗರಾಜನ ನಳಕೂಬರ ವಿಲಾಸ (ಸು.1851) ಪೌರಾಣಿಕ ವ್ಯಕ್ತಿಯಾದ ನಳಕೂಬರನ ಕಥೆ, ನರಪತಿಚರಿತ ಅಲಂಕಾರಗ್ರಂಥ. ವೆಂಕಟರಮಣಯ್ಯನ ಗಯೋಪಾಖ್ಯಾನ

(ಸು.1857) ಕೃಷ್ಣಾರ್ಜುನರ ಸಂಗ್ರಾಮದ ಪೌರಾಣಿಕ ಕಥೆ. ಹಿರಿಣ್ಯಗರ್ಭನ (ಸು.1860) ಸರಸ್ವತೀ ಪ್ರಬಂಧ ಶ್ರೀ ಸರಸ್ವತೀದೇವಿ ಕಥೆಯೆಂಬ ಪೂರ್ವಕಥೆ. ಬಸವಪ್ಪಶಾಸ್ತ್ರಿಗಳ (19ನೆಯ ಶತಮಾನ) ದಮಯಂತೀಸ್ವಯಂವರ ಮಹಾಭಾರತದ ನಳೋಪಾಖ್ಯಾನವನ್ನು ಕುರಿತದ್ದು.

17ರಿಂದ 19ನೆಯ ಶತಮಾನದವರೆಗೆ ರಚಿತವಾಗಿರುವ ಈ ಚಂಪೂಸಾಹಿತ್ಯದ ವೈಲಕ್ಷಣ್ಯಗಳನ್ನು ಈಗ ಗಮನಿಸಬಹುದು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಆತನ ಪ್ರೇರಣೆಯಂತೆ ಆತನ ಪೋಷಣೆಯ ಹಲವರು ಕವಿಗಳೂ ಆ ಕವಿಗಳ ಪ್ರಚೋದನೆಯಿಂದ ಇತರ ಕೆಲವರೂ ಕೆಲವು ಚಂಪೂಕೃತಿಗಳನ್ನು ರಚಿಸಿದರು. ಹಲವು ಗ್ರಂಥಗಳ ಕರ್ತೃ ಚಿಕುಪಾಧ್ಯಾಯ ಸ್ವತಃ ಆರೇಳು ಚಂಪೂಕೃತಿಗಳನ್ನು ಬರೆದುದಲ್ಲದೆ ತಿಮ್ಮಕವಿ, ಮಲ್ಲಿಕಾರ್ಜುನ ಮೊದಲಾದವರ ಕೃತಿರಚನೆಗೆ ಪ್ರೇರಕನಾದ. ತಿರುಮಲಾರ್ಯ ಶುದ್ಧವಾದ ಐತಿಹಾಸಿಕ ವಸ್ತುವನ್ನು ಆಧರಿಸಿ ಮೊದಲ ಬಾರಿಗೆ ಚಂಪೂಗ್ರಂಥವನ್ನು ಬರೆದ ಮೇಲೆ, ಆ ಸಂಪ್ರದಾಯ ವೇಣುಗೋಪಾಲವರಪ್ರಸಾದಿ, ಕೃಷ್ಣಶರ್ಮ, ಲಿಂಗಣ್ಣ, ತಮ್ಮಯ ಕವಿ ಇವರ ಮೂಲಕವಾಗಿ ಮುಂದುವರಿಯಿತು. ತಿರುಮಲಾರ್ಯನ ಕೃತಿಯಲ್ಲಿ ತ್ರಿಪದಿಗಳ ಜೊತೆಗೆ ಸಾಂಗತ್ಯಗಳೂ ಹಾಡುಗಳೂ ಸೇರಿವೆಯೆಂಬುದು ಒಂದು ವಿಶೇಷ. ಚಿಕುಪಾಧ್ಯಾಯ ಪುರಾಣೋಕ್ತವಾದ ಕ್ಷೇತ್ರಮಾಹಾತ್ಮ್ಯಗಳನ್ನು ಚಂಪೂ ರೂಪದಲ್ಲಿ ಅಳವಡಿಸಿ ತಿಮ್ಮಕವಿ, ಮಲ್ಲಿಕಾರ್ಜುನ ಮೊದಲಾದವರಿಗೆ ಮಾರ್ಗದರ್ಶಕನಾದ. ಆತನ ಚಂಪೂಕೃತಿಗಳಲ್ಲಿ ಕ್ಷೇತ್ರಮಾಹಾತ್ಮ್ಯ, ಪೌರಾಣಿಕ ಕಥೆ, ಪುರಾಣಾನುವಾದ, ಆಚಾರ್ಯರ ಚರಿತ್ರೆ, ಹಾಗೂ ಮತಸಿದ್ಧಾಂತ ಈ ವಸ್ತುವೈವಿಧ್ಯ ಅಳವಟ್ಟಿದೆ. ಈ ಚಂಪೂಕಾಲದ ಚಂಪೂಪದ್ಧತಿಯ ಪುನರುಜ್ಜೀವನಕರ್ತರಲ್ಲಿ ಈತ ಪ್ರಮುಖನಾಗಿದ್ದಾನೆ. ಈತನ ದಿವ್ಯಸೂರಿಚರಿತೆ ಮತ್ತು ಅರ್ಥಪಂಚಕಗಳು ತಮಿಳು ಮೂಲದ ಗ್ರಂಥಗಳನ್ನು ಅನುಸರಿಸಿರುವಂತೆ ತಿಳಿಯುತ್ತದೆ. ಕೃಷ್ಣಶರ್ಮನ ಕೃತಿಯಲ್ಲಿ ಅಲ್ಲಲ್ಲಿ ಸಾಂಗತ್ಯಗಳನ್ನೂ ಷಟ್ಪದಿಗಳನ್ನೂ ಬಳಸಿದೆಯಲ್ಲದೆ ವರ್ಣನೆಗೆ ಪ್ರಾಶಸ್ತ್ಯವಿದೆ. ಲಿಂಗಣ್ಣನ ಕೆಳದಿನೃಪವಿಜಯದಲ್ಲಿ ಗದ್ಯದ ಪ್ರಾಚುರ್ಯ ಕಾಣುತ್ತದೆ. ತಮ್ಮಯ ಕವಿಯ ಕೃತಿ ರುಚಿಪ್ರಚಾರ ಎಂಬ ಐದು ವಿಭಾಗಗಳನ್ನು ಒಳಗೊಂಡಿರುವುದಲ್ಲದೆ, ಅದರಲ್ಲಿ ಕೆಲವು ಸೀಸಪದ್ಯಗಳೂ ಇವೆ. ಅಳಿಯ ಲಿಂಗರಾಜನ ನರಪತಿಚರಿತ ಲಕ್ಷಣಗ್ರಂಥವಾಗಿದ್ದರೂ ಚಂಪೂವಿನಲ್ಲಿದೆ. ವೆಂಕಟರಮಣಯ್ಯನ ಗಯೋಪಾಖ್ಯಾನದಲ್ಲಿ ಕೆಲವು ಷಟ್ಪದಿಗಳನ್ನು ಬಳಸಿದೆ. ಹೀಗೆ ಈ ಅವಧಿಯ ಚಂಪೂಕೃತಿಗಳು ವಸ್ತುವಿನಲ್ಲಿಯೂ ರೂಪದಲ್ಲಿಯೂ ಕೆಲಮಟ್ಟಿಗೆ ಹೊಸತಾಗಿದ್ದರೂ ಒಟ್ಟಿನಲ್ಲಿ ತನ್ನ ಸಾಂಪ್ರದಾಯಿಕ ಸ್ವರೂಪದಲ್ಲಿಯೇ ಮುನ್ನಡೆದಿರುವುದೂ ಮಾರ್ಗಕವಿತ್ವವನ್ನೂ ಹಳಗನ್ನಡ ಭಾಷೆಯನ್ನೂ ಜೀವಂತವಾಗಿಡಲು ಪ್ರಯತ್ನಿಸಿರುವುದೂ ಸ್ಪಷ್ಟವಾಗಿ ಗೋಚರಿಸುತ್ತದೆ. 19ನೆಯ ಶತಮಾನವನ್ನು ದಾಟಿಬಂದಿರುವ ಈ ಕಾಲದಲ್ಲಿಯೂ ಚಂಪೂರೂಪದಲ್ಲಿ ಕೃತಿರಚನೆ ಮಾಡುವ ಪ್ರಯತ್ನ ಕ್ವಚಿತ್ತಾಗಿ ನಡೆಯುತ್ತಿದೆ. ಇದು ಈ ಸಾಹಿತ್ಯಪ್ರಕಾರದ ಪ್ರಭಾವವನ್ನೂ ಅದರಲ್ಲಿ ಕವಿಗಳಿಗಿರುವ ಅಭಿಮಾನವನ್ನೂ ಎತ್ತಿ ತೋರಿಸತಕ್ಕದ್ದಾಗಿದೆ.

ಇಪ್ಪತ್ತನೆಯ ಶತಮಾನದಲ್ಲಿ ಚಂಪೂ ರೀತಿಯ ಭವಿಷ್ಯವೇನು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಸಾಂಪ್ರದಾಯಿಕ ರೀತಿಯಲ್ಲಿ ರಚಿತವಾದ ಚಂಪೂಕಾವ್ಯಗಳು ಕೇವಲ ಅಲ್ಲೊಂದು ಇಲ್ಲೊಂದು ಹೊರಬಂದಿರುವುದುಂಟು. ಸೋಸಲೆ ಅಯ್ಯಶಾಸ್ತ್ರಿಗಳು ಈ ಶತಮಾನದ ಆದಿಯಲ್ಲಿ ಮಹೀಶೂರ ಮಹಾರಾಜ ಚರಿತಂ ಎಂಬೊಂದು ಗ್ರಂಥವನ್ನು ರಚಿಸಿದ್ದಾರೆ. ಅನಂತರ 1950ರಿಂದ ಈಚೆಗೆ ಟಿ.ಕೇಶವಭಟ್ಟರು ಸತ್ತ್ವಾವಲೋಕನಂ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇದು ಶ್ರೀಕೃಷ್ಣನನ್ನು ಕುರಿತ ಕಥೆ. ಇಲ್ಲಿ ಅಗತ್ಯವಾಗಿ ಸೂಚಿಸಬೇಕಾಗಿರುವ ಇನ್ನೆರಡು ಗ್ರಂಥಗಳೆಂದರೆ ವಿನಾಯಕ ರಚಿತ ತ್ರಿವಿಕ್ರಮರ ಆಕಾಶಗಂಗೆ ಮತ್ತು ಇಂದಲ್ಲ ನಾಳೆ. ಮೊದಲ ಕೃತಿ ಆತ್ಮಚರಿತ್ರರೂಪವಾದುದು. ಆದರೂ ಆತ್ಮವಿಕಾಸವನ್ನೇ ಪ್ರಧಾನವಾಗಿ ಚಿತ್ರಿಸುವಂಥದ್ದು, ಎರಡನೆಯದು ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿ ಮತ್ತು ಜೀವನ ಕ್ರಮಗಳ ಸಮೀಕ್ಷಾರೂಪವಾದುದು. ಎರಡರಲ್ಲೂ ಹೊಸಗನ್ನಡ ಛಂದಸ್ಸಿನ ಪದ್ಯದೊಂದಿಗೆ ಹೊಸಗನ್ನಡ ಗದ್ಯ ಹಾಸುಹೊಕ್ಕಾಗಿ ಬರುತ್ತದೆ. ಇಲ್ಲಿನ ಚಂಪೂ ಶೈಲಿಯಪ್ರಯೋಗ ಗಮನಾರ್ಹವಾದುದು. *

**ಕನ್ನಡ ಚಳವಳಿಗಳು** : ಏಕೀಕರಣೋತ್ತರ ಕರ್ನಾಟಕವನ್ನು ಪ್ರಗತಿ ಪರವಾಗಿ ರೂಪಿಸಲು ಬೌದ್ಧಿಕ ಹಾಗೂ ಭೌತಿಕ ಈ ಎರಡು ನೆಲೆಗಳಲ್ಲೂ ನಡೆಸಿದ ಚಳವಳಿಗಳನ್ನು ಕನ್ನಡ ಚಳವಳಿ ಎಂದು ಗುರುತಿಸಲಾಗುತ್ತದೆ. ಬೌದ್ಧಿಕವಾಗಿ ಅಥವಾ ಸೈದ್ಧಾಂತಿಕವಾಗಿ ಕರ್ನಾಟಕವನ್ನು ರೂಪಿಸುವ ಕಾರ್ಯದಲ್ಲಿ ಪ್ರಧಾನವಾದ ಪಾತ್ರವೆಂದರೆ, ಛಿದ್ರಗೊಂಡಿದ್ದ ಕನ್ನಡ ಪ್ರದೇಶಗಳಲ್ಲಿನ ಸೃಜನಶೀಲದ ಸಾಹಿತ್ಯಕ ಸೃಷ್ಟಿ. ಇದು ಕನ್ನಡದ ಸಂವೇದನೆಯನ್ನು ಕಾಯ್ದುಕೊಂಡು ಬಂದ ಸಾಂಸ್ಕೃತಿಕ ಪ್ರಕ್ರಿಯೆ. ಈ ಪ್ರಕ್ರಿಯೆ ಕವಿರಾಜಮಾರ್ಗಕಾರನಿಂದ ಮೊದಲ್ಗೊಂಡು ಬೇಂದ್ರೆ, ಕುವೆಂಪು ಅವರನ್ನು ಒಳಗೊಂಡಂತೆ ಇತ್ತೀಚಿನ ಸಾಹಿತ್ಯ ಸೃಷ್ಟಿಯವರೆಗೂ ಮುಂದುವರಿದಿದೆ. ಅಂದರೆ ನಾಡು, ನುಡಿ ಮತ್ತು ಕನ್ನಡಿಗರನ್ನು ಕುರಿತಂತೆ ಸಂಸ್ಕೃತ, ಇಂಗ್ಲಿಷ್ ಇನ್ನಿತರ ಭಾಷೆಗಳನ್ನು ಎದುರುಗೊಳ್ಳುವುದರೊಂದಿಗೆ ಕನ್ನಡದ ಅನನ್ಯತೆಯನ್ನು ಉಳಿಸಿಕೊಳ್ಳಲು ನಡೆಸಿದ ಪ್ರಯತ್ನ. 12ನೆಯ ಶತಮಾನದ ಎಲ್ಲ ವರ್ಗಗಳ ವಚನಕಾರರು ಕನ್ನಡ ಸಂವೇದನೆಯನ್ನು ಮೆರೆದದ್ದು ಮಹತ್ವಪೂರ್ಣವಾದುದು. ಎಲ್ಲ ರೀತಿಯ ಸಂವಹನ, ಅನುಸಂಧಾನಗಳಿಗೆ ಕನ್ನಡ ಭಾಷೆಯೊಂದನ್ನೇ ಮಾಧ್ಯಮವನ್ನಾಗಿಸಿದ್ದು ವಚನಗಳ, ವಚನಕಾರರ ಹೆಗ್ಗಳಿಕೆ. ಈ ದಿಸೆಯಲ್ಲಿ ವಚನಕಾರರನ್ನು ಮೊದಲ ಭಾಷಿಕ (ಕನ್ನಡ) ಹರಿಕಾರರು ಎನ್ನಬಹುದು. ಅನಂತರದ ನವೋದಯ, ಪ್ರಗತಿಶೀಲರ ಸಾಹಿತ್ಯ ಸೃಷ್ಟಿ, ಭಾರತದ ಸ್ವಾತಂತ್ರ್ಯ ಏಕೀಕರಣದ ಪ್ರಕ್ರಿಯೆ ಇವುಗಳು ಈ ಕನ್ನಡ ಚಳವಳಿಗಳಿಗೆ ಪ್ರೇರಣೆ ನೀಡಿದವು. ಇಂಥ ಪ್ರೇರಣೆ, ಪ್ರಯತ್ನಗಳಿಂದಾಗಿ ವಸಾಹತು ಕಾಲದಲ್ಲಿ ತುಂಡಾಗಿದ್ದ ಕನ್ನಡ ಭೂ ಪ್ರದೇಶಗಳು ಒಂದುಗೂಡಿದವು. ಹೀಗೆ ಒಂದಾದದ್ದೂ ಕನ್ನಡ ಚಳವಳಿಯೇ ಆಗಿದೆ. ಆದರೂ ಭಿನ್ನ ಸ್ವರೂಪದ ಚಳವಳಿಯ ಪ್ರಕ್ರಿಯೆಗಳು ಕಾಣಿಸಿಕೊಂಡದ್ದು ಏಕೀಕರಣದ ಅನಂತರವೇ.

ಸಾಂಸ್ಕೃತಿಕವಾಗಿ ದತ್ತವಾದ ಕನ್ನಡದ ಸಂವೇದನೆಗಳನ್ನು ತನ್ನದಾಗಿಸಿಕೊಂಡಿದ್ದ ರಾಜಕಾರಣ ಸೋಲನ್ನು ಅನುಭವಿಸತೊಡಗಿದ್ದು ಏಕೀಕರಣದ ಅನಂತರವೇ. ಆಡಳಿತದ ದೃಷ್ಟಿಯಿಂದ ಒಂದುಗೂಡಿದ ವಿಭಿನ್ನ ಪ್ರದೇಶಗಳ ಕನ್ನಡಿಗರ ಅಭಿರುಚಿ, ಸಂಸ್ಕೃತಿಗಳು ಭಿನ್ನವಾಗಿದ್ದುದರಿಂದ, ಇದನ್ನು ಅರಿಯಲು ಹಾಗೂ ಅರಿತು ಕನ್ನಡಿಗರ ಸಮಸ್ಯೆಗಳನ್ನು ಬಗೆಹರಿಸಲು ರಾಜಕಾರಣಿಗಳು ಸೋತರು. ಇದರ ಪರಿಣಾಮವಾಗಿಯೇ ಕನ್ನಡ ಚಳವಳಿ ಭಿನ್ನ ರೀತಿಯಲ್ಲಿ ಕಾಣಿಸಿಕೊಂಡಿತು. 1960ರ ದಶಕದಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಆಶೋತ್ತರಗಳ ಈಡೇರಿಕೆಗಾಗಿ ಕನ್ನಡಿಗರು ಮತ್ತೆ ಸಂಘಟಿತರಾಗುವ ಅನಿವಾರ್ಯತೆ ಹುಟ್ಟಿಕೊಂಡಿತು. ಏಕೀಕೃತ ಕರ್ನಾಟಕ ಎಲ್ಲ ಕನ್ನಡ ಪ್ರದೇಶಗಳನ್ನು ಒಂದೇ ಆಡಳಿತದ ತೆಕ್ಕೆಗೆ ಪೂರ್ತಿಯಾಗಿ ತೆಗೆದುಕೊಂಡಿರಲಿಲ್ಲ. ಜತ್, ಅಕ್ಕಲಕೋಟೆ, ಸೊಲ್ಲಾಪುರ, ಕಾಸರಗೋಡು, ಆಲೂರು, ಆದವಾನಿ, ರಾಯದುರ್ಗ, ಮಡಕಶಿರ, ಗೂಳ್ಯಂ, ಕೌತಾಳ್, ಬದನೆಹಾಳ್, ಹೊಸೂರು, ತಾಳವಾಡಿ, ನೀಲಗಿರಿ ಮೊದಲಾದವು ಕನ್ನಡ ರಾಜ್ಯಕ್ಕೆ ಸೇರಲಿಲ್ಲ. ಬದಲಾಗಿ, ತೆಲುಗು, ತಮಿಳು, ಮಲೆಯಾಳ, ಮರಾಠಿ ಮೊದಲಾದ ಭಾಷಿಕರೊಂದಿಗೆ ಆಯಾ ರಾಜ್ಯ ಸರ್ಕಾರಗಳ ಒತ್ತಡಗಳಿಗೆ ಮಣಿಯುವಂತೆ ಆಗಿತ್ತು. ಏಕೀಕರಣ ಸ್ಥಳೀಯ ಗಡಿಭಾಗಗಳ ಕನ್ನಡಿಗರನ್ನು ಭಾಷಿಕ ಕೀಳರಿಮೆಗೆ ಒಳಗಾಗುವಂತೆ ಮಾಡಿತು. ಈ ಕುರಿತ ಸಮಸ್ಯೆಗಳು ಕರ್ನಾಟಕ ಸರ್ಕಾರದ ಆಡಳಿತ ನೀತಿಗೆ ಸವಾಲಾಗಿ ಪರಿಣಮಿಸಿದವು. ನಾಡಿನ ರಾಜಧಾನಿಯೂ ಆಡಳಿತ ವ್ಯವಸ್ಥೆಯ ಕೇಂದ್ರವೂ ಆಗಿದ್ದ ಬೆಂಗಳೂರು ನಗರ ಕನ್ನಡೇತರರ ಪ್ರಾಬಲ್ಯದ ಕೇಂದ್ರವಾಯಿತು. ಹಳೆಯ ಮೈಸೂರು, ಮುಂಬಯಿ, ಹೈದರಾಬಾದ್, ಮದರಾಸು ಹಾಗೂ ಕೊಡಗು ಪ್ರದೇಶಗಳಲ್ಲಿ ಕನ್ನಡಿಗರ ಮನೋಗತವನ್ನು ಅರಿಯುವಲ್ಲಿ ರಾಜಕಾರಣ ವಿಫಲವಾಯಿತು. ಸಾಂಸ್ಕೃತಿಕವಾಗಿ ಒಪ್ಪುತ್ತಿದ್ದ ಕರ್ನಾಟಕ ಎಂಬ ಹೆಸರಿಗೆ ಬದಲಾಗಿ ವಿಶಾಲ ಮೈಸೂರು ರಾಜ್ಯವೆಂಬ ಹೆಸರಿನಿಂದ ಏಕೀಕರಣವನ್ನು ಸಾಧಿಸಿದ್ದು ಕನ್ನಡಿಗರಲ್ಲಿ ಆಘಾತವನ್ನುಂಟುಮಾಡಿತ್ತು. ಇದಕ್ಕೆ ಮುಂಬಯಿ ಕರ್ನಾಟಕದ (ಉತ್ತರದ) ಕನ್ನಡಿಗರು ತೀವ್ರವಾಗಿ ಪ್ರತಿಕ್ರಿಯಿಸಿದ್ದೂ ಉಂಟು. ಇಂಥ ಹಲವು ಕಾರಣಗಳಿಂದಾಗಿ ನಾಡಿನ ಏಕೀಕರಣ ಸಮಾಧಾನವನ್ನುಂಟು ಮಾಡಿರಲಿಲ್ಲ. ಇದರ ಪರಿಣಾಮವೇ ಬೆಂಗಳೂರಿನ ಪರಿಸರದಲ್ಲಿ ಕನ್ನಡ ಚಳವಳಿ ಸಂಘಟಿತ ರೂಪ ಪಡೆದು, ನಾಡಿನ ಉಳಿದೆಡೆಗಳಿಗೆ ಅದು ಕ್ರಮೇಣ ಪಸರಿಸಿತು. ಆದರೆ ಇದರಲ್ಲಿ ಬೆಂಗಳೂರು ಕೇಂದ್ರಿತ ಕನ್ನಡ ಚಳವಳಿಗಳ ಪಾಲು ದೊಡ್ಡದು.

**ಬೆಂಗಳೂರಿನ ಕನ್ನಡ ಪರಿಸರ :** ಮೈಸೂರು ಸಂಸ್ಥಾನದ ಆಡಳಿತ ಕೇಂದ್ರವಾಗಿದ್ದ ಬೆಂಗಳೂರು ಏಕೀಕರಣದ ಅನಂತರ ರಾಜ್ಯದ ರಾಜಧಾನಿಯಾಗಿ ಮುಂದುವರಿಯಿತು. ಅದರಿಂದ ನಗರದ ಬೆಳವಣಿಗೆಯೂ ಸಾಧಿಸಿತು. ಆದರೆ ನಾಡು, ನುಡಿ, ಸಂಸ್ಕೃತಿಗಳ ಕೇಂದ್ರಸ್ಥಾನವಾಗಿ ಅದು ತನ್ನನ್ನು ಗುರುತಿಸಿಕೊಳ್ಳಲಿಲ್ಲ. ಕನ್ನಡಿಗರಿಗೆ ಭರವಸೆ ಮೂಡಿಸುವ ಹಾಗೂ ಕನಸುಗಳನ್ನು ನನಸಾಗಿಸುವ ನಿಟ್ಟಿನಲ್ಲಿ ಬೆಂಗಳೂರು ವಿಫಲವಾಯಿತು. ಇದಕ್ಕೆ ಕಾರಣವೆಂದರೆ ಅಲ್ಲಿ ನೆಲೆಸಿದ್ದ ಕನ್ನಡೇತರರ ಪ್ರಾಬಲ್ಯ, ಹಿಂದಿನ ಕಮೀಷನರು, ದಿವಾನರುಗಳ ಆಡಳಿತದಿಂದಲೂ ಶಿಕ್ಷಣ, ಉದ್ಯೋಗಗಳನ್ನರಸಿ ಬರುವ ಕನ್ನಡೇತರರಿಗೆ ಪ್ರೇರಣೆ ನೀಡಿತ್ತು. ದೇಶದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದ ಅನಂತರವೂ ಅನೇಕ ಉದ್ದಿಮೆಗಳು ಬೆಂಗಳೂರಿನಿಂದ ಆಕರ್ಷಿತವಾದವು. ಇವುಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಬಹುಪಾಲು ಪಕ್ಕದ ತಮಿಳುನಾಡಿನ ತಮಿಳುಭಾಷಿಕರೇ ಆಗಿದ್ದರು. ಜೊತೆಗೆ ಇತರ ಭಾಷಿಕರೂ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದರು. ಕೇಂದ್ರ ಸರ್ಕಾರಿ ಉದ್ಯಮಗಳಲ್ಲೂ ಇವರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಾಗಿತ್ತು. ಬೆಂಗಳೂರಿನಲ್ಲಿದ್ದ ಐ.ಟಿ.ಐ., ಬಿ.ಇ.ಎಲ್., ಎಚ್.ಎಂ.ಟಿ., ಮೈಕೋ ಮೊದಲಾದ ಕಾರ್ಖಾನೆಗಳಲ್ಲಿ ಕನ್ನಡಿಗರ ಸಂಖ್ಯೆ ತೀರ ಕಡಿಮೆ. ಸ್ಥಳೀಯ ಕನ್ನಡಿಗರಿಗೆ ಸೇಕಡ 50ರಷ್ಟು ಪ್ರಾತಿನಿಧ್ಯ ಕೊಡಬೇಕೆಂಬ ನಿಯಮವನ್ನು ಕೇಂದ್ರ ಸರ್ಕಾರಿ ಸಂಘ ಸಂಸ್ಥೆಗಳು ಮುರಿದಿದ್ದವು. ಅಂಚೆ, ತಂತಿ, ರೈಲ್ವೆ ಮೊದಲಾದ ಇಲಾಖೆಗಳಲ್ಲಿ ಕನ್ನಡ ಮಾತನಾಡುವವರೇ ಇರಲಿಲ್ಲ. ಸಾರಿಗೆ, ಪೋಲೀಸು ಇಲಾಖೆಗಳಂಥ ರಾಜ್ಯ ಸರ್ಕಾರಿ ನೌಕರಿಗಳಲ್ಲೂ ತಮಿಳರು ಉದ್ಯೋಗಗಳನ್ನು ಪಡೆದಿದ್ದರು.

ಬೆಂಗಳೂರಿನ ಜನನಿಬಿಡ ಪ್ರದೇಶಗಳಾದ ರೈಲ್ವೆ ನಿಲ್ದಾಣ, ಕೆಂಪೇಗೌಡ ಬಸ್ ನಿಲ್ದಾಣ (ಇಂದಿನ ಮೆಜೆಸ್ಟಿಕ್ ಪ್ರದೇಶ), ಗಾಂಧೀನಗರ ಮೊದಲಾದ ಕಡೆಗಳಲ್ಲಿ ತಮಿಳು ಮಾತನಾಡುವವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕನ್ನಡದ ನಾಮಫಲಕಗಳು ಕಾಣುತ್ತಿರಲಿಲ್ಲ. ಬದಲಾಗಿ ತಮಿಳು ಹಾಗೂ ಇಂಗ್ಲಿಷನವೆ ಹೆಚ್ಚು. ಕನ್ನಡಿಗರನ್ನು ಸ್ವಾಗತಿಸುತ್ತಿದ್ದ ಕೂಲಿ ಆಳುಗಳು, ರಿಕ್ಷಾ ಚಾಲಕರು ತಮಿಳರೇ ಆಗಿದ್ದರು. ತೆಲುಗು, ಮಲೆಯಾಳ, ಹಿಂದಿ, ಮರಾಠಿ ಭಾಷೆಗಳನ್ನು ಆಡುವವರನ್ನೂ ನೋಡಬಹುದಿತ್ತು. ದೂರದ ಊರುಗಳಿಂದ ಬೆಂಗಳೂರಿಗೆ ಬರುತ್ತಿದ್ದ ಕನ್ನಡಿಗರು ಕನ್ನಡೇತರರಿಂದ ಅವಮಾನ, ಕೀಟಲೆಗಳನ್ನು ಅನುಭವಿಸುವ ಪರಿಸ್ಥಿತಿ ಉದ್ಭವವಾಗಿತ್ತು. ಆಗ ಇದನ್ನು ಪ್ರತಿಭಟಿಸುವ ಯಾವುದೇ ಸಂಘಟಿತ ಮಾರ್ಗಗಳು ಕನ್ನಡಿಗರಿಗೆ ಇರಲಿಲ್ಲ. ಇಂಥ ವೇದಿಕೆಗಳನ್ನು ನಿರ್ಮಿಸಿಕೊಂಡು ಕನ್ನಡತನವನ್ನು ಮೂಡಿಸಲು ಮುಂದೆ ಬಂದವರು ಬೆರಳೆಣಿಕೆಯಷ್ಟು ಸಂಖ್ಯೆಯ ಮಂದಿ ಮಾತ್ರ. ಅ.ನ.ಕೃಷ್ಣರಾವ್, ಕೋಣಂದೂರು ಲಿಂಗಪ್ಪ, ಮ.ರಾಮಮೂರ್ತಿ, ನಾಡಿಗೇರ ಕೃಷ್ಣರಾವ್, ಮೈ.ಸು.ನಟರಾಜ, ಮೈ.ಸು.ಶೇಷಗಿರಿರಾವ್, ಕರ್ಲಮಂಗಲಂ ಶ್ರೀಕಂಠಯ್ಯ, ಬೆ.ನಿ.ಈಶ್ವರಪ್ಪ, ತಿ.ತಾ.ಶರ್ಮ, ಎಂ.ವಿ.ಸುಬ್ಬರಾವ್ ಮೊದಲಾದವರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಇವರೆಲ್ಲ 1960ರ ದಶಕದ ಆರಂಭಿಕ ವರ್ಷಗಳಲ್ಲಿ ಕನ್ನಡದ ಚಳವಳಿಗಾಗಿ ತಮ್ಮನ್ನು ತೊಡಗಿಸಿಕೊಂಡವರು. ಆದರೆ ಇವರನ್ನು ಒಂದು ವೇದಿಕೆಯಡಿಗೆ ತಂದ ಕೋಣಂದೂರು ಲಿಂಗಪ್ಪ ಅವರ ಪ್ರಯತ್ನಗಳು ಪ್ರಧಾನವಾದವು. ಕನ್ನಡ ಚಳವಳಿಗೆ ಆರಂಭಿಕ ನೆಲೆಗಟ್ಟನ್ನು ಹಾಕಿಕೊಟ್ಟ ಕೀರ್ತಿ ಅವರಿಗೂ ಇತರ ಆದ್ಯ ಹೋರಾಟಗಾರರಿಗೂ ಸಲ್ಲುತ್ತದೆ.

**ಚಳವಳಿಯ ಮೊದಲ ಘಟ್ಟ :** ರಾಮಮನೋಹರ ಲೋಹಿಯ ಅವರ ಭಾಷಿಕ ಸಿದ್ಧಾಂತಗಳಿಂದ ಪ್ರೇರಿತರಾಗಿದ್ದ ಶಾಂತವೇರಿ ಗೋಪಾಲಗೌಡರು ತಮ್ಮದೇ ಆದ ರೀತಿಯಲ್ಲಿ ಕನ್ನಡಕ್ಕಾಗಿ ಚಿಂತನೆ ನಡೆಸಿದ್ದರು. ರಾಜಕಾರಣದಲ್ಲಿ ಇವರು ಪ್ರಯತ್ನ ನಡೆಸಿದ್ದಂತೆ ಇದೇ ದಿಕ್ಕಿನಲ್ಲಿ ಸಾಹಿತ್ಯಕವಾಗಿ ಕುವೆಂಪು ಮೊದಲಾದವರು ಚಿಂತನೆ ನಡೆಸಿದ್ದರು. ಪ್ರಗತಿಶೀಲದ ವಲಯದಲ್ಲಿ ಅ.ನ.ಕೃ. ಆದಿಯಾಗಿ ಅನೇಕರು ಈ ಕುರಿತು ತಾತ್ವಿಕ ತಳಹದಿಯನ್ನು ರೂಪಿಸಲು ಪ್ರಯತ್ನಗಳನ್ನು ಮಾಡಿದ್ದು ಗಮನಾರ್ಹ. ಶಾಂತವೇರಿಯವರ ಶಿಷ್ಯರಾಗಿದ್ದ ಕೋಣಂದೂರು ಲಿಂಗಪ್ಪ ಬೆಂಗಳೂರಿಗೆ (ವಿದ್ಯಾರ್ಥಿ ದೆಸೆಯಲ್ಲಿ) ಬಂದಾಗ ತಮಿಳರಿಂದ ಅಪಮಾನಕ್ಕೆ ಒಳಗಾದರು. ಈ ಅಪಮಾನದ ಪರಿಣಾಮವಾಗಿ ಅವರು ಕರ್ನಾಟಕ (ಕನ್ನಡ) ಯುವಜನ ಸಭಾವನ್ನು ಹುಟ್ಟುಹಾಕಿದರು. 1957ರ ವೇಳೆಗೆ ಲೋಹಿಯ ಕರೆಯನ್ನು ಅನುಸರಿಸಿ ಅಂಗ್ರೇಜಿ (ಇಂಗ್ಲಿಷ್) ಹಠಾವೋ ಚಳವಳಿ ಆರಂಭಗೊಂಡಿತ್ತು. ಮೈಸೂರಿನಲ್ಲಿ ಕುವೆಂಪು ಅವರು ಸಹ ಈ ಕರೆಗೆ ಸ್ಪಂದಿಸಿದರು. ಇಂಗ್ಲಿಷ್ ಪ್ರಾಧ್ಯಾಪಕರ ರಾಷ್ಟ್ರೀಯ ಸಭೆಯೊಂದು ಮೈಸೂರಿನಲ್ಲಿ ನಡೆಯಿತು. ಇದಕ್ಕೆ ಪ್ರತಿಕ್ರಿಯಿಸಲು ಕೋಣಂದೂರು ಲಿಂಗಪ್ಪ, ಪೂರ್ಣಚಂದ್ರತೇಜಸ್ವಿ, ಕೆ.ಎಚ್. ಶ್ರೀನಿವಾಸ, ಕಡಿದಾಳ್ ಶಾಮಣ್ಣ ಮೊದಲಾದ ವಿದ್ಯಾರ್ಥಿಗಳಿಗೆ ಕುವೆಂಪು ಪ್ರೇರಣೆ ನೀಡಿದ್ದರು. ಈ ಪ್ರತಿಕ್ರಿಯೆಗೆ ಇಂಗ್ಲಿಷಿನಲ್ಲಿಯೇ ಪ್ರತಿಭಟನಾ ಕರಪತ್ರಗಳನ್ನು ರಚಿಸುವುದು ಅನಿವಾರ್ಯವಾಯಿತು. ಆಗ ಇಂಗ್ಲಿಷ್ ವಿರುದ್ಧ ಇಂಗ್ಲಿಷಿನಲ್ಲಿಯೇ ಕರಪತ್ರವೊಂದನ್ನು ಬರೆದುಕೊಟ್ಟವರು ಯು.ಆರ್.ಅನಂತಮೂರ್ತಿ, ಇಂಗ್ಲಿಷ್ ಪ್ರಾಧ್ಯಾಪಕರ ಸಭೆಯಲ್ಲಿ ಕನ್ನಡದ ಯುವಕರು ಈ ಕರಪತ್ರಗಳನ್ನು ಹಂಚುವುದರ ಮುಖೇನ ಕನ್ನಡದ ಪ್ರಾಶಸ್ತ್ಯದ ಕಡೆಗೆ ಗಮನ ಸೆಳೆದಿದ್ದರು. ಇಂಥ ಚಟುವಟಿಕೆಗಳನ್ನು ಹುಟ್ಟುಹಾಕಿದ ಮೊತ್ತಮೊದಲ ಯುವ ಸಂಘಟನೆಯೇ ಕನ್ನಡ ಯುವಜನ ಸಭಾ. ಇದು ಮೈಸೂರಿನ ಇಂದಿನ ದಾಸ್ ಪ್ರಕಾಶ್ ಹೊಟೇಲ್ ಬಳಿ ತನ್ನ ಮೊದಲ ಸಭೆ ಸೇರಿ ಕನ್ನಡದ ಅಳಿವು ಉಳಿವಿನ ಬಗ್ಗೆ ಚಿಂತನೆ ನಡೆಸಿತ್ತು. ಇದು ಕನ್ನಡ ಚಳವಳಿಯ ಚರಿತ್ರೆಯಲ್ಲಿಯೇ ಮೊದಲ ಸಂಘಟನೆಯಾಗಿತ್ತು. ಬೆಂಗಳೂರಿನಲ್ಲಿ ಕನ್ನಡತನವನ್ನು ಮೂಡಿಸುವುದಕ್ಕೆ ಕನ್ನಡ ಯುವಜನ ಸಭಾದ ವೇದಿಕೆಯನ್ನು ಬಳಸಿಕೊಳ್ಳಲಾಯಿತು. ಬೆಂಗಳೂರಿನಲ್ಲಿ ಚಳವಳಿ ಹೂಡುವುದಕ್ಕೆ ಮೊದಲು ನಾಡಿನ ಇತರ ಜಿಲ್ಲೆ, ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ 120ಕ್ಕೂ ಹೆಚ್ಚಿನ ಸಭಾದ ಶಾಖೆಗಳನ್ನು ತೆರೆದು ಸಂಘಟಿಸಿದ್ದು ಗಮನಾರ್ಹ ಸಂಗತಿ. 1959ರ ವೇಳೆಗೆ ಕನ್ನಡದ ಸ್ಥಿತಿಗತಿಗಳ ಸುಧಾರಣೆಗಾಗಿ ಕನ್ನಡಿಗರು ಸಂಘಟಿತರಾಗುವುದು ಅನಿವಾರ್ಯ ಎಂಬ ವಾತಾವರಣವನ್ನು ಮೂಡಿಸಲಾಗಿತ್ತು. ಇದಕ್ಕೆ ಸಾಹಿತಿ ಅ.ನ.ಕೃ. ಅವರ ಪ್ರಯತ್ನ, ಪ್ರವಾಸ ಕಾರ್ಯಕ್ರಮಗಳು ಹೆಚ್ಚಿನ ಹುರುಪನ್ನು ತಂದಿದ್ದವು. ಅ.ನ.ಕೃ. ಅವರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಂದು ಪರಿಷತ್ತು (ಕ.ಸಾ.ಪ.) ಈ ವೇಳೆಗಾಗಲೇ ಘೋಷಿಸಿತ್ತು. ಅ.ನ.ಕೃ. ಅವರು ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ (ಮಣಿಪಾಲ, 1960), ಕನ್ನಡದ ಬಂಟರ ಆವಶ್ಯಕತೆಯನ್ನು ಒತ್ತಿ ಹೇಳಿದ್ದರು. ಸಮ್ಮೇಳನದಲ್ಲಿದ್ದ ಈ ಕನ್ನಡ ಯುವಜನ ಸಭಾದ ಯುವಕರು ಕನ್ನಡ ಯುವಜನ ಸಭೆಯನ್ನು ವರಕವಿ ಬೇಂದ್ರೆ ಅವರಿಂದ ವಿದ್ಯುಕ್ತವಾಗಿ ಉದ್ಘಾಟನೆ (28-12-1960) ಮಾಡಿಸಿದ್ದು ಒಂದು ದಾಖಲೆ. ಲಿಂಗಪ್ಪನವರು ಸಭಾದ ಸಂಚಾಲಕರಾಗಿ ನಾಡಿನ ವಿವಿಧ ಕಡೆಗಳಲ್ಲಿ ಅ.ನ.ಕೃ. ಅವರಿಂದ ಭಾಷಣ ಮಾಡಿಸಿ ಜಾಗೃತಿ ಮೂಡಿಸಿದರು. ಮುಂದೆ ಬೆಂಗಳೂರಿನಲ್ಲಿ ಸಭೆ ಸೇರಿ ಎಂ.ವಿ.ಸುಬ್ಬರಾಯರ ಸಾಹಿತ್ಯ ಕುಟೀರದ ಅಡಿಯಲ್ಲಿ ಕನ್ನಡ ಕೆಲಸದ ರೂಪ ರೇಷೆಗಳನ್ನು ಸಿದ್ಧಪಡಿಸಲಾಯಿತು. ಇದರಲ್ಲಿ ಬಹುಪಾಲು ಹಿರಿಯ ಸಾಹಿತಿ, ಕಲಾವಿದರು ಭಾಗವಹಿಸಿದ್ದರು. ಸಭಾದವರು ಹಿರಿಯರ ಸಹಕಾರ ಪಡೆದು ಆಲೂರ ವೆಂಕಟರಾಯರ ಕರೆಗೆ ಓಗೊಟ್ಟು ನವೆಂಬರ್ ತಿಂಗಳಿನಲ್ಲಿ ರಾಜ್ಯೋತ್ಸವವನ್ನು (1961) ಆಚರಿಸಿದ್ದು ಗಮನಾರ್ಹ. ಅಲ್ಲದೆ ಬೆಂಗಳೂರಿನಲ್ಲಿ ಕನ್ನಡಿಗರನ್ನು ಸಂಘಟಿಸಿ ಪ್ರತಿಕ್ರಿಯಿಸುವಂತೆ ಮಾಡಲು ಸಭಾದ ಯುವಕರು ಕನ್ನಡ ದಿನವನ್ನು ಆಚರಿಸಲು ಕರೆಕೊಟ್ಟರು. ಅದರಂತೆ 23-11-1961ರಂದು ನಾಡು ನುಡಿಗಳ ಬಗ್ಗೆ ಅರಿವು ಮೂಡಿಸಲಾಯಿತು. ಇದಾದ ಅನಂತರ ದಾವಣಗೆರೆಯಲ್ಲಿ ಬೃಹತ್ ಸಮಾವೇಶವೊಂದನ್ನು ನಡೆಸಲು ಸಿದ್ಧತೆಗಳನ್ನು ಮಾಡಲಾಯಿತು. ಬೆಂಗಳೂರಿನಲ್ಲಿ ಸಭಾದ ಮೊದಲ ಬೃಹತ್ ಅಧಿವೇಶನ ನಡೆಯಿತು. ಕನ್ನಡ ಭುವನೇಶ್ವರಿ ಬಾವುಟವನ್ನು ಹಾರಿಸುವುದರೊಂದಿಗೆ (4-12-1962) ಉದ್ಘಾಟನೆಗೊಂಡ ಈ ಬೃಹತ್ ಅಧಿವೇಶನ ಕನ್ನಡ ಚಳವಳಿಯ ಚರಿತ್ರೆಯಲ್ಲಿ ಮುಖ್ಯವಾದುದು. ಇಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕಗಳಿಗೆ ಸಂಬಂಧಿಸಿದಂತೆ 15 ನಿರ್ಣಯಗಳನ್ನು ಮಂಡಿಸಿ ಸ್ವೀಕರಿಸಲಾಯಿತು. ನಾಡಿನ ಗಡಿಗಳು, ರೈಲ್ವೆ, ಪ್ರಶಸ್ತಿ, ಕನ್ನಡ ಬೆರಳಚ್ಚುಯಂತ್ರ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮಾಧ್ಯಮ, ಕನ್ನಡ ಕಲಾವಿದರಿಗೆ ಆದ್ಯತೆ, ಕನ್ನಡ ಚಲನಚಿತ್ರಗಳಿಗೆ ಪ್ರೋತ್ಸಾಹ, ಆರ್ಥಿಕ, ಅಭಿವೃದ್ಧಿ ಮೊದಲಾದ ಎಲ್ಲ ವಿಚಾರಗಳೂ ನಿರ್ಣಯಗಳಲ್ಲಿ ಸೇರಿದ್ದವು. ಈ ನಿರ್ಣಯಗಳನ್ನು ನಾಡಿನ ಎಲ್ಲ ಕನ್ನಡಪರವಾದ ಸಂಘಟನೆಗಳಿಗೂ ಕಳುಹಿಸಿಕೊಡಲಾಯಿತು. ಆದರೆ ಬೆಂಗಳೂರಿನ ಚಾಮರಾಜಪೇಟೆಯ ರಾಮಸೇವಾ ಮಂಡಲಿಯವರು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕನ್ನಡ ಕಲಾವಿದರನ್ನು ಕರೆಸದೆ ಸಭೆಯ ನಿರ್ಣಯಗಳನ್ನು ಮುರಿದರು. ಮದರಾಸಿನಿಂದ ಎಂ.ಎಸ್. ಸುಬ್ಬುಲಕ್ಷ್ಮಿಯವರನ್ನು ಕರೆಸಿ ಸಂಗೀತ ಕಛೇರಿಯನ್ನು ನಡೆಸಿದ್ದು ಕನ್ನಡ ಕಾರ್ಯಕರ್ತರ ಪ್ರತಿಭಟನೆಗೆ ಗುರಿಯಾಗುವಂತೆ ಮಾಡಿತು. ಶಾಂತ ರೀತಿಯಲ್ಲಿ ಕನ್ನಡದ ಕಳಕಳಿಯನ್ನು ಪ್ರದರ್ಶಿಸಲು ಹಾತೊರೆದಿದ್ದ

ಕಾರ್ಯಕರ್ತರನ್ನು ಕಿಡಿಗೇಡಿಗಳು ಕೆಣಕಿದರು. ಪರಿಸ್ಥಿತಿ ಹಿಂಸಾತ್ಮಕ ರೂಪ ಪಡೆದು, ಪೊಲೀಸರಿಂದ ಲಾಠಿ ಪ್ರಹಾರ ಆಯಿತು. ತಮಿಳು ಪತ್ರಿಕೆಗಳು ಇದನ್ನು ಭಾಷಿಕ ದ್ವೇಷವೆಂದು ತಿರುಚಿ ಬರೆದವು. ಕನ್ನಡಿಗರಿಗೆ ಸಂಕುಚಿತರೆಂಬ ಪಟ್ಟ ಕಟ್ಟಲು ಪ್ರಯತ್ನಿಸಿದ ಈ ಘಟನೆ ಕನ್ನಡ ಚಳವಳಿಯನ್ನು ಭಿನ್ನ ಸ್ವರೂಪದಲ್ಲಿ ಗ್ರಹಿಸಲು ಎಡೆಮಾಡಿಕೊಟ್ಟಿತು.

**ಕನ್ನಡ ಜಾಗೃತ ಪರಿಷತ್ ಹಾಗೂ ಸಂಯುಕ್ತ ರಂಗ :** ಬೆಂಗಳೂರಿನಲ್ಲಿ ಅ.ನ.ಕೃ., ಮ. ರಾಮಮೂರ್ತಿ ಮೊದಲಾದ ಚಳವಳಿ ನಾಯಕರು ಕನ್ನಡಪರವಾದ ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳಲು ಕರೆ ನೀಡಿದ್ದರು. ತಮಿಳರ ಸಂಘಟನೆಗಳು ವಿಪರೀತವಾಗತೊಡಗಿದ್ದವು. ಅದರಲ್ಲೂ ಡಿ.ಎಂ.ಕೆ. (ದ್ರಾವಿಡ ಮುನ್ನೇಟ್ರ ಕಳಗಂ) ಪಕ್ಷದವರ ಕಪ್ಪು ಮತ್ತು ಕೆಂಪು ಬಣ್ಣದ ಬಾವುಟಗಳ ಹಾರಾಟ ಹೆಚ್ಚಾಯಿತು. ಕನ್ನಡಿಗರಿಗೆ ನಿರ್ದಿಷ್ಟ ಕನ್ನಡ ಬಾವುಟ ಇರಲಿಲ್ಲ. ಭುವನೇಶ್ವರಿ, ಕರ್ನಾಟಕ ಭೂಪಟ, ಗಂಡಭೇರುಂಡ, ಚಿತ್ರಗಳಿರುವ ಬಾವುಟಗಳನ್ನೇ ಬಳಸುತ್ತಿದ್ದರು. ಹೀಗಾಗಿ ಕನ್ನಡದ ಈ ಸಂಘಟನೆಗಳು ಬಾವುಟದ ಕೊರತೆಯನ್ನು ಮನಗಂಡು ಕ್ರಿಯಾಶೀಲವಾಗಿದ್ದವು. ಕನ್ನಡಿಗರಲ್ಲಿ, ಸಂಘ ಸಂಸ್ಥೆಗಳಲ್ಲಿ ಅಭಿಮಾನವನ್ನು ಮೂಡಿಸಲು ಕನ್ನಡ ಜಾಗೃತ ಪರಿಷತ್ ಎಂಬ ಸಂಘಟನೆ ಹುಟ್ಟಿಕೊಂಡಿತು. ಕನ್ನಡದ ಅಭಿಮಾನಕ್ಕಾಗಿ, ಚಳವಳಿಯ ರೂಪರೇಷೆಗಳಿಗಾಗಿ ಈ ಸಂಘಟನೆ ಹೊರಡಿಸಿದ ಪತ್ರಿಕೆಯೇ 'ಕನ್ನಡ ಜಾಗೃತ ಪತ್ರ'. ಇದು ತ್ರೈಮಾಸಿಕವಾಗಿತ್ತು. ಕೆಲವೇ ದಿನಗಳಲ್ಲಿ ಇದೇ ಆಶಯಕ್ಕಾಗಿ ಧ್ರುವ ಎಂಬ ಮಾಸಿಕ ಹೊರಬಂತು. ಎಂ.ನಾಗರಾಜ್ ಅವರು ಇವೆರಡರ ಸಂಪಾದಕರಾಗಿದ್ದರು. ಪತ್ರಿಕೆ ನಡೆಸಿ, ನಷ್ಟ ಅನುಭವಿಸಿ ಆತ್ಮಹತ್ಯೆ, ಮಾಡಿಕೊಂಡರು. ಈ ದುರಂತ ಘಟನೆ ಕನ್ನಡ ಯುವಜನ ಸಭಾದವರಿಗೆ ಮತ್ತಷ್ಟು ಕೆಚ್ಚು, ಹುಮ್ಮಸ್ಸುಗಳನ್ನು ತುಂಬಿತು. ಸಭಾದವರು ಚಳವಳಿಗಳಿಗಾಗಿಯೇ 'ಕನ್ನಡ ಯುವಜನ' ಎಂಬ ಪತ್ರಿಕೆಯನ್ನು ಹೊರಡಿಸಲಾರಂಭಿಸಿದರು. ಇದರ ಸಂಪಾದಕರಾಗಿದ್ದವರು ಚಳವಳಿಗಾರ ಮ. ರಾಮಮೂರ್ತಿ. ಅ.ನ.ಕೃ. ಮತ್ತು ಮ.ರಾಮಮೂರ್ತಿ ಅವರು ಜನ ಕರೆದೆಡೆಗೆ ಹೋಗಿ ಕನ್ನಡಿಗರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಸಲಹೆ ನೀಡಿ ಸಂಘಟಿಸತೊಡಗಿದರು. ಇದರ ಪರಿಣಾಮವಾಗಿ ಹುಟ್ಟಿಕೊಂಡಿದ್ದೇ ಕರ್ನಾಟಕ ಸಂಯುಕ್ತ ರಂಗ. ಕನ್ನಡದ ಎಲ್ಲ ಸಂಸ್ಥೆಗಳನ್ನು ಒಂದೇ ವೇದಿಕೆಯಡಿಗೆ ತರುವುದು ಇದರ ಆಶಯವಾಗಿತ್ತು. 1962ರಲ್ಲಿ ಅಸ್ತಿತ್ವಕ್ಕೆ ಬಂದ ಈ ರಂಗದ ಅಧ್ಯಕ್ಷರು ಅ.ನ.ಕೃ., ಕಾರ್ಯದರ್ಶಿ ಮ. ರಾಮಮೂರ್ತಿ. ಇವರೊಂದಿಗೆ ತ.ರಾ.ಸು., ಅ.ನ.ಸುಬ್ಬರಾವ್, ಬೀಚಿ, ವೀರಕೇಸರಿ ಸೀತಾರಾಮಶಾಸ್ತ್ರೀ, ನಾ.ಕೃ. ಸತ್ಯನಾರಾಯಣ, ಭಾರತೀಂದ್ರಸ್ವಾಮಿ, ಸುಬ್ಬರಾವ್ ಮೊದಲಾದವರು ಸೇರಿಕೊಂಡಿದ್ದರು. ಸಂಯುಕ್ತ ರಂಗದಿಂದಾಗಿ ಪ್ರಧಾನ ಧಾರೆಗೆ ಸಭಾವು ಬರಲಾಗದಿದ್ದರೂ ತನ್ನದೇ ಆದ ಮಿತಿಗಳ ನಡುವೆಯೇ ಕನ್ನಡದ ಚಟುವಟಿಕೆಗಳನ್ನು ಚಾಲ್ತಿಯಲ್ಲಿ ಇಟ್ಟಿತ್ತು.

ಕನ್ನಡ ನಾಡು ಏಕೀಕೃತವಾಗಿ 1963ರ ವೇಳೆಗೆ ಏಳು ವರುಷಗಳಾಗಿದ್ದವು. ಆದರೆ ಕನ್ನಡಿಗರ ಆಶಯಗಳು ಈಡೇರಿರಲಿಲ್ಲ. ಈ ಕುರಿತು ಜಾಗೃತಿ ಮೂಡಿಸಲು ಆ ವರ್ಷದ ನವೆಂಬರ್ ಒಂದರಂದು ಸ್ವಾತಂತ್ರ್ಯೋತ್ಸವದ ರೀತಿಯಲ್ಲಿ ರಾಜ್ಯೋತ್ಸವವನ್ನು ಆಚರಿಸಲು ಸಂಯುಕ್ತ ರಂಗ ಯೋಜಿಸಿತು. ಅದರಂತೆ 1963ರ ನವೆಂಬರ್ 1ನ್ನು ರಾಜ್ಯೋತ್ಸವ ದಿನವನ್ನಾಗಿ ಅದ್ದೂರಿಯಾಗಿ ಆಚರಿಸಲಾಯಿತು. ನಾಡಿನ ಎಲ್ಲ ಕನ್ನಡಪರ ಸಂಘಟನೆಗಳನ್ನೂ ಬೆಂಗಳೂರಿನ ಧರ್ಮಾಂಬುಧಿ ಕೆರೆಯ (ಸುಭಾಶ್ ನಗರ, ಈಗಿನ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ನಿಲ್ದಾಣವಿರುವ ಪ್ರದೇಶ) ಮೈದಾನದಲ್ಲಿ ಸೇರುವಂತೆ ಮಾಡಿತು. ಕನ್ನಡ ಚಳವಳಿ ಚರಿತ್ರೆಯಲ್ಲಿ ಇದೇ ಪ್ರಥಮಬಾರಿ ರಾಜ್ಯೋತ್ಸವ ನಡೆಯಿತು. ಅನಂತರ ಪ್ರತಿ ವರ್ಷವೂ ಈ ಆಚರಣೆ ಜಾರಿಗೆ ಬಂತು. ಕನ್ನಡಕ್ಕಾಗಿ ದುಡಿದ ರಾಮಮೂರ್ತಿ ಅವರ ಉತ್ಸಾಹ, ಅಭಿಮಾನಗಳನ್ನು ಕಂಡು ಅವರನ್ನು ಕನ್ನಡ ಸೇನಾನಿ ಎಂದು ಕರೆಯಲಾಯಿತು. ಏಕೆಂದರೆ ಕನ್ನಡ ಕಾರ್ಯಕರ್ತರ ಮೊಕದ್ದಮೆಗಳಲ್ಲಿ ಇವರೇ ಜಾಮೀನುದಾರರು. ಕನ್ನಡದ ಕಾರಣಕ್ಕಾಗಿ ಇವರು ಅನೇಕ ಮೊಕದ್ದಮೆಗಳನ್ನು ಎದುರಿಸಿದರು.

**ಚಲನಚಿತ್ರ ಮತ್ತು ಕನ್ನಡ ಚಳವಳಿ :** ಇದೇ ವೇಳೆಗೆ ಕನ್ನಡ ಚಲನಚಿತ್ರ ರಂಗದಲ್ಲಿಯೂ ಕನ್ನಡತನ ಬಡವಾಗಿತ್ತು. ಕನ್ನಡ ಕಲಾವಿದರಿಗೆ ನಿರ್ಮಾಪಕ ನಿರ್ದೇಶಕರಿಗೆ ಕನ್ನಡನಾಡಿನಲ್ಲಿ ಪ್ರಾತಿನಿಧ್ಯವಿರಲಿಲ್ಲ. ಹೆಚ್ಚಾಗಿ ಪರಭಾಷೆಯ ಚಿತ್ರಗಳು ಓಡುತ್ತಿದ್ದವು. ಕನ್ನಡ ಚಿತ್ರಗಳಿಗೆ ಎರಡು ಅಥವಾ ಮೂರನೆಯ ಸ್ಥಾನ ಮೀಸಲಾಗಿತ್ತು. ಕನ್ನಡದ ಕಲಾವಿದರಲ್ಲಿ ಕೆಲವರು ಅನ್ಯಭಾಷೆಗಳಲ್ಲಿ ನೆಲೆನಿಂತು ಅಭಿಮಾನಶೂನ್ಯರಾಗಿದ್ದರು. ಕನ್ನಡಿಗರಿಗೆ ಥಿಯೇಟರ್, ಸ್ಟುಡಿಯೋ ಸಮಸ್ಯೆಗಳ ಜೊತೆಗೆ ಡಬ್ಬಿಂಗ್ ಹಾವಳಿಯೂ ಆವರಿಸಿಕೊಂಡಿತ್ತು. ಬೇರೆ ಭಾಷೆಗಳಲ್ಲಿನ ಚಿತ್ರಗಳು ಕನ್ನಡ ಭಾಷೆಗೆ ಡಬ್ ಆಗಿ ಕನ್ನಡತನವಿಲ್ಲದಂತೆ ಮಾಡಿದ್ದವು. ಕರ್ನಾಟಕ ಸರ್ಕಾರದಿಂದಲೂ ಕನ್ನಡ ಚಲನಚಿತ್ರೋದ್ಯಮಕ್ಕೆ ಆದ್ಯತೆ ದೊರೆತಿರಲಿಲ್ಲ. ಇಂಥ ಸಮಸ್ಯೆಗಳನ್ನು ಕನ್ನಡ ಚಳವಳಿಗಾರರು ಕೈಗೆತ್ತಿಕೊಂಡರು. ಮ.ರಾಮಮೂರ್ತಿ, ಅ.ನ.ಕೃ. ಮೊದಲಾದವರು ಪ್ರತಿಭಟನೆಯ ಹಾದಿ ಹಿಡಿದರು. ಈ ಸಂದರ್ಭದಲ್ಲಿ ವಾಟಾಳ್ ನಾಗರಾಜರಂಥ ಯುವಕರು ಚಳವಳಿಗೆ ಧುಮುಕಿದರು. ಕನ್ನಡದ ಮೇರು ನಟ ರಾಜಕುಮಾರ್ ಅವರನ್ನೂ ಒಳಗೊಂಡಂತೆ ಜಿ.ವಿ. ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಸೇರಿ ಕನ್ನಡ ಚಲನಚಿತ್ರ ಕಲಾವಿದರ ಸಂಘವನ್ನು ರಚಿಸಲಾಯಿತು. ಈ ಸಂಘಟನೆಯ ಅಡಿಯಲ್ಲಿ ಅನೇಕ ಕನ್ನಡ ಚಿತ್ರಗಳನ್ನು ನಿರ್ಮಿಸುವ ಪ್ರಯತ್ನಗಳು ನಡೆದವು. ಇಂಥ ಚಿತ್ರಗಳನ್ನು ಸಿನಿಮಾ ಮಂದಿರದ ಮಾಲೀಕರು ಕಡ್ಡಾಯವಾಗಿ ಪ್ರದರ್ಶಿಸಲು ಒತ್ತಾಯಿಸಲಾಯಿತು. ಖಾಸಗಿ ಉದ್ಯಮಗಳ, ಸಂಘಸಂಸ್ಥೆಗಳ ಯುವಕರೂ ಈ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹೀಗಾಗಿ ಕನ್ನಡದ ನಿರ್ಮಾಪಕರುಗಳಿಗೆ, ಕನ್ನಡ ಚಿತ್ರಗಳಿಗೆ ಭರವಸೆಯ ವಾತಾವರಣ ಮೂಡುವಂತಾಯಿತು.

ಮದರಾಸಿನಲ್ಲಿ ಚಲನಚಿತ್ರದ ಉದ್ಯಮ ಪ್ರಗತಿಪರವಾಗಿತ್ತು. ಇದಕ್ಕೆ ಅಲ್ಲಿನ ಕಲಾವಿದರ, ರಾಜಕಾರಣಿಗಳ ಸ್ವಭಾಷಿಕ ಪ್ರೇಮವೇ ಕಾರಣವಾಗಿತ್ತು. ತಮಿಳು ಚಿತ್ರರಂಗಕ್ಕೆ ಎಂ.ಜಿ.ಆರ್.(ಎಂ.ಜಿ.ರಾಮಚಂದ್ರನ್), ಎಂ.ಕರುಣಾನಿಧಿ ಅವರು ನೀಡಿದ ಪ್ರೋತ್ಸಾಹ ಬಹು ದೊಡ್ಡದು. ಬೆಂಗಳೂರಿನ ಡಿ.ಎಂ.ಕೆ. ಪಕ್ಷದ ಕಾರ್ಯಕರ್ತರು ಇತರೆ ತಮಿಳು ಸಂಘಟನೆಗಳೊಂದಿಗೆ ಸೇರಿಕೊಂಡು ತಮಿಳು ಚಲನಚಿತ್ರಗಳಿಗೆ ಅತಿಯಾಗಿ ಪ್ರೋತ್ಸಾಹಿಸುತ್ತಿದ್ದರು. 1964ರ ವೇಳೆಗೆ ಎಂ.ಜಿ.ಆರ್. ನಟಿಸುತ್ತಿದ್ದ ಚಲನಚಿತ್ರಗಳು ಬೆಂಗಳೂರಿನ ತಮಿಳರನ್ನು ಅತಿಯಾಗಿ ವರ್ತಿಸುವಂತೆ ಮಾಡಿದ್ದವು. ಇದರ ಪರಿಣಾಮವಾಗಿ 'ಕಾಂಚಿ ತಲೈವನ್' ಚಲನಚಿತ್ರದ ವಿರುದ್ಧ ಕನ್ನಡ ಚಳವಳಿ ತೀವ್ರ ಸ್ವರೂಪ ಪಡೆದುಕೊಂಡಿತು.

'ಕಾಂಚಿ ತಲೈವನ್' ಚಲನಚಿತ್ರ (1964) ಕಂಚಿಯ ಪಲ್ಲವರ ದೊರೆ 1ನೆಯ ನರಸಿಂಹವರ್ಮ ಬಾದಾಮಿ ಚಳುಕ್ಯ ದೊರೆ ಇಮ್ಮಡಿ ಪುಲಕೇಶಿಯನ್ನು ಸೋಲಿಸಿದ ಕಥೆಯನ್ನೊಳಗೊಂಡಿದೆ. ಕನ್ನಡಿಗರನ್ನು ಅವಮಾನಿಸಲೋ ಎಂಬಂತೆ ತಮಿಳು ದೊರೆ ಕರ್ನಾಟಕದ ಬಾವುಟವನ್ನು ಕಾಲಿನಲ್ಲಿ ತುಳಿಯುವ ದೃಶ್ಯಗಳನ್ನು ಆ ಚಿತ್ರದಲ್ಲಿ ಚಿತ್ರೀಕರಿಸಲಾಗಿತ್ತು. ಚರಿತ್ರೆಯ ಸೂಕ್ಷ್ಮ ಸಂಗತಿಗಳನ್ನು ಭಾಷಿಕ ನೆಲೆಯಲ್ಲಿ ವೈಯಕ್ತಿಕವಾಗಿ ತೆಗೆದುಕೊಂಡ ಸಂದರ್ಭ ಇದಾಗಿತ್ತು. ತಮಿಳರ ಈ ವರ್ತನೆ ಕನ್ನಡಿಗರನ್ನು ಕೆರಳಿಸಿತು. ಚಳವಳಿಗಾರರು, ಇತಿಹಾಸ ತಜ್ಞರು, ವಿದ್ವಾಂಸರು, ಕನ್ನಡಾಭಿಮಾನಿಗಳು ಚಲನಚಿತ್ರದ ಕೆಲವು ಭಾಗಗಳನ್ನು ತೆಗೆದುಹಾಕಲು ಒತ್ತಾಯಿಸಿ ಪ್ರತಿಭಟಿಸಿದರು. ಆದರೂ ಆಕ್ಷೇಪಾರ್ಹ ಭಾಗಗಳನ್ನು ತೆಗೆಯದೆ ಚಿತ್ರವನ್ನು ಪ್ರದರ್ಶಿಸತೊಡಗಿದ್ದು ಕನ್ನಡಿಗರ ಸ್ವಾಭಿಮಾನವನ್ನು ಕೆರಳಿಸಿತು. ಈ ಘಟನೆ ಹಿಂಸಾರೂಪಕ್ಕೆ ತಿರುಗಿತು. ಈ ಘಟನೆಯೇ ಅ.ನ.ಕೃ. ಹಾಗೂ ರಾಮಮೂರ್ತಿಯವರಲ್ಲಿ ಭಿನ್ನಾಭಿಪ್ರಾಯಗಳಿಗೆ ಕಾರಣವಾಯಿತು. ಭಾವೋದ್ವೇಗ ಬಿಟ್ಟು ಚರಿತ್ರೆಯನ್ನು ನೋಡಬೇಕೆಂಬ ವಿಚಾರ ಅ.ನ.ಕೃ. ಅವರದು. ಭಾವನೆಯೂ ಚರಿತ್ರೆಯ ಭಾಗ ಎಂಬುದು ರಾಮಮೂರ್ತಿಯವರ ನಿಲವು. ಇಂಥ ತಾತ್ವಿಕ ಭಿನ್ನಾಭಿಪ್ರಾಯದಿಂದಾಗಿ ಕಡೆಗೆ ಅ.ನ.ಕೃ. ಕನ್ನಡ ಚಳವಳಿಯಿಂದ ಹಿಂದಕ್ಕೆ ಸರಿದರು. ಆದರೆ ನಾಡಿನ ಬೇರೆಡೆಗಳಲ್ಲೂ ಈ ಚಲನಚಿತ್ರ ಪ್ರದರ್ಶಿತವಾಗದಂತೆ ಮ.ರಾಮಮೂರ್ತಿ ಚಳವಳಿ ಹೂಡಿದರು. ಭದ್ರಾವತಿ, ಹಾಸನ ಮೊದಲಾದೆಡೆಗಳಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಚಳವಳಿಗಾರರ ಮೇಲೆ ಪೋಲೀಸರು ಮೊಕದ್ದಮೆಗಳನ್ನು ದಾಖಲು ಮಾಡಿದ್ದೂ ಇದೆ. ಇವೆಲ್ಲ ಕಾರಣಗಳಿಂದ ತಮಿಳರ ಹಾಗೂ ಕನ್ನಡಿಗರ ಮಧ್ಯೆ ಭಾಷಿಕ ವೈಷಮ್ಯ ವೃದ್ಧಿಸಿತು. ಇದರಿಂದಾಗಿ ಚಳವಳಿ ಹಾಗೂ ಪ್ರತಿಭಟನೆಗಳ ಮೂಲಕ ಕನ್ನಡ ಚಲನಚಿತ್ರರಂಗ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬರುವಂತಾಯಿತು.

**ಮ.ರಾಮಮೂರ್ತಿ ಮತ್ತು ಕನ್ನಡ ಚಳವಳಿ :** ಅ.ನ.ಕೃ. ಅವರು ದೂರ ಸರಿದರೂ ಮ.ರಾಮಮೂರ್ತಿ ಅವರು ಏಕಾಂಗಿಯಾಗಿ ಸಂಯುಕ್ತ ರಂಗವನ್ನು

ಮುನ್ನಡೆಸಿದರು. ತಮಿಳರು ಡಿ.ಎಂ.ಕೆ. ಪಕ್ಷದವರ ಸಹಕಾರದಿಂದ ತಾವು ವಾಸಿಸುವ ಕಡೆಗಳಲ್ಲಿ ತಮಿಳು ಬಾವುಟಗಳನ್ನು ಹಾರಾಡಿಸಿದರು. ಈ ಸಂಗತಿ ಕನ್ನಡ ಕಾರ್ಯಕರ್ತರನ್ನು ಪ್ರಚೋದಿಸಿತು. ಕನ್ನಡದ ಪ್ರದೇಶಗಳಲ್ಲಿ ಕನ್ನಡದ ಬಾವುಟಕ್ಕೆ ಪ್ರಾಶಸ್ತ್ಯವೆಂದು ರಾಮಮೂರ್ತಿ ಚಳವಳಿ ಹೂಡಿದರು. ಇದರ ಪರಿಣಾಮವಾಗಿ ಹಿಂಸಾಕೃತ್ಯಗಳೂ ಜರುಗಿದವು. ತಮಿಳರ ಸಂಖ್ಯೆ ಹೆಚ್ಚಿದ್ದ ಕಡೆಗಳಲ್ಲಿ ಅಲ್ಪಸಂಖ್ಯಾತ ಕನ್ನಡಿಗರ ಮೇಲೆ ದೌರ್ಜನ್ಯಗಳು ನಡೆದವು. ಬೆಂಗಳೂರಿನಲ್ಲಿ ತಮಿಳರೇ ಹೆಚ್ಚಾಗಿದ್ದ ಶ್ರೀರಾಮಪುರ, ಜೋಗುಪಾಳ್ಯ, ನಾಗಪ್ಪ ಬ್ಲಾಕ್, ಕಾಕ್ಸ್ ಟೌನ್, ಫ್ರೇಜರ್ ಟೌನ್, ದಂಡು ಪ್ರದೇಶ ಮೊದಲಾದ ಕಡೆಗಳಲ್ಲಿ ಕನ್ನಡ ಚಳವಳಿ ಹಾಗೂ ಕನ್ನಡದ ಸಂಘಟನೆ ತೀವ್ರಗೊಂಡಿತು. ತಮಿಳರೇ ಹೆಚ್ಚಾಗಿದ್ದ ಕೆಲವು ಕಾರ್ಖಾನೆಗಳಲ್ಲಿ ಕನ್ನಡ ಕಾರ್ಮಿಕರು ಹಿಂಸೆ ಹಾಗೂ ಹಲ್ಲೆಗೆ ಒಳಗಾದರು. ಇದಕ್ಕೆ ಕೆಲವೊಮ್ಮೆ ಡಿ.ಎಂ.ಕೆಯಂಥ ರಾಜಕೀಯ ಪಕ್ಷದ ಬೆಂಬಲವೂ ಕೆಲವು ತಮಿಳುಪರ ಪತ್ರಿಕೆಗಳ ಬರೆವಣಿಗೆಯ ಬೆಂಬಲವೂ ಇತ್ತು.

ಸ್ಥಳೀಯ ಸಂಸ್ಥೆಗಳಿಗೆ ನಡೆಯುತ್ತಿದ್ದ ಚುನಾವಣೆಗಳಿಗೆ ತಮಿಳರೂ ಸ್ಪರ್ಧಿಸುವ ಮಟ್ಟಿಗೆ ಬಲಾಢ್ಯರಾದರು. ಹಿರಿಯೂರಿನಲ್ಲಿ ತಮಿಳರೇ ಹೆಚ್ಚು ಸಂಖ್ಯೆಯಲ್ಲಿದ್ದರು. ಇವರು ತಮ್ಮ ಕ್ಷೇತ್ರದಲ್ಲಿ ಡಿ.ಎಂ.ಕೆ. ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವುದರೊಂದಿಗೆ ಪ್ರಾತಿನಿಧ್ಯ ಪಡೆದದ್ದು ಗಮನಾರ್ಹ ಸಂಗತಿ. ಹಿರಿಯೂರಿನ ವೃತ್ತದಲ್ಲಿ ಡಿ.ಎಂ.ಕೆ. ಪಕ್ಷದ ಬಾವುಟವನ್ನೂ ಪ್ರದರ್ಶಿಸಲಾಗಿತ್ತು. ಇದಕ್ಕೆ ಸ್ಥಳೀಯ ಕನ್ನಡಿಗರು ಪ್ರತಿಭಟಿಸಿದ್ದು ಪ್ರಯೋಜನಕ್ಕೆ ಬರಲಿಲ್ಲ. ಕೊನೆಗೆ ರಾಮಮೂರ್ತಿ ಅವರು ತಮ್ಮ ಕಾರ್ಯಕರ್ತರೊಂದಿಗೆ ಖುದ್ದಾಗಿ ಬಂದು ಡಿ.ಎಂ.ಕೆ. ಬಾವುಟವನ್ನು ತೆಗೆಸಿ ಕನ್ನಡಿಗರನ್ನು ಹುರಿದುಂಬಿಸಿದರು. ಈ ಎಲ್ಲ ಪ್ರಯತ್ನಗಳೂ ಕನ್ನಡಿಗರನ್ನು ಸಂಘಟಿಸುವುದರ ಜೊತೆಗೆ ಕನ್ನಡ ಬಾವುಟದ ಅನಿವಾರ್ಯತೆ ರಾಜಕಾರಣಿಗಳ ನಿರಭಿಮಾನವನ್ನು ಸಾಬೀತುಪಡಿಸಿದ್ದವು. ಇದರ ಪರಿಣಾಮವಾಗಿ ಚಳವಳಿಯಲ್ಲಿ ಜಾತೀಯತೆ, ರಾಜ ಕಾರಣದ ಸ್ವಾರ್ಥ ಚಿಂತನೆಗಳು ನುಸುಳುವಂತೆ ಆಯಿತು. ಕನ್ನಡೇತರರ ಮತಗಳನ್ನು ತಮ್ಮ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದ ಕೆಲವು ರಾಷ್ಟ್ರೀಯ ಪಕ್ಷಗಳು ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಲು ಹಿಂಜರಿದವು. ಹೀಗಾಗಿ ಕನ್ನಡಿಗರ ಆಶೋತ್ತರಗಳಿಗಾಗಿ ಪ್ರಾದೇಶಿಕವಾದ ರಾಜಕೀಯ ಪಕ್ಷವೊಂದರ ಅಗತ್ಯತೆ ಕಾರ್ಯಕರ್ತರನ್ನು ಕಾಡಿತು. ಈ ನಿಟ್ಟಿನಲ್ಲಿ ಆಲೋಚಿಸುವುದಕ್ಕೆ ಮೊದಲೇ ಕನ್ನಡ ಚಳವಳಿಯಲ್ಲಿ ಜಾತೀಯವಾದ ತಲೆದೋರಿತು. ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರೆಂಬ ಎರಡು ಗುಂಪುಗಳು ಹುಟ್ಟಿಕೊಂಡವು. ಸಂಯುಕ್ತ ರಂಗದ ಚಳವಳಿ ನಾಯಕರನ್ನು (ರಾಮಮೂರ್ತಿ ಅವರನ್ನೂ ಒಳಗೊಂಡಂತೆ) ಬ್ರಾಹ್ಮಣರ ಗುಂಪಿಗೆ ಸೇರಿಸಲಾಗಿತ್ತು. ಚಳವಳಿಯನ್ನು ಭಿನ್ನ ರೀತಿಯಾಗಿ ನಡೆಸುವಲ್ಲಿ, ಉತ್ಸಾಹ ತೋರಿದ್ದ ವಾಟಾಳ್ ನಾಗರಾಜರ ನೇತೃತ್ವದ ಗುಂಪು ಬ್ರಾಹ್ಮಣೇತರರೆಂದು ಗುರುತಿಸಿಕೊಳ್ಳುವಂತೆ ಆಯಿತು. ಆ.ಸಂಜೀವಪ್ಪ, ಸಾ.ಕೃ.ಸಂಪಂಗಿ, ಜಿ.ನಾರಾಯಣ ಕುಮಾರ್ ಮೊದಲಾದವರು ವಾಟಾಳರೊಂದಿಗೆ ಸೇರಿದರು. ಸೈದ್ಧಾಂತಿಕ ಒಡಕಿನಿಂದಾಗಿ ವಾಟಾಳ್ ನಾಗರಾಜರ ನೇತೃತ್ವದ ಕಾರ್ಯಕರ್ತರು ಸಂಯುಕ್ತ ರಂಗದಿಂದ ಹೊರಬಂದಿದ್ದರು. ವಾಟಾಳರು ಆಟೋ ಚಾಲಕರು, ಹೋಟೆಲು ಕಾರ್ಮಿಕರು, ಸಾರಿಗೆ ಸಿಬ್ಬಂದಿ ಮೊದಲಾದವರು ಕನ್ನಡ ಚಳವಳಿಯನ್ನು ತೀವ್ರ ಸ್ವರೂಪದಲ್ಲಿ ಗುರುತಿಸಿಕೊಳ್ಳುವಂತೆ ಸಾಹಿತಿ ಕಲಾವಿದರಿಗಿಂತ ಹೆಚ್ಚಾಗಿ ಜನಸಾಮಾನ್ಯ ಕನ್ನಡಿಗರು ಈ ವಿಚಾರದಲ್ಲಿ ಒಗ್ಗೂಡುವಂತೆ ತಂತ್ರ ರೂಪಿಸಿದರು. ಈ ಘಟ್ಟದಿಂದ ಕನ್ನಡ ಚಳವಳಿ ಛಿದ್ರವಾಗುತ್ತಾ ಹೋಯಿತು.

**ಮಹಾಜನ್ ಆಯೋಗ ಮತ್ತು ಚಳವಳಿಗಾರರು :** 1965ರ ವೇಳೆಗೆ ಬೆಂಗಳೂರಿನಲ್ಲಿ ರಾಜ್ಯೋತ್ಸವವನ್ನು ಎರಡು ಸ್ಥಳಗಳಲ್ಲಿ ನಡೆಸಲು ಆರಂಭವಾಯಿತು. ಆದರೂ ಮ. ರಾಮಮೂರ್ತಿ ಹಾಗೂ ವಾಟಾಳರು ಬೆಂಗಳೂರಿನಲ್ಲಿ ಕನ್ನಡ ಬಾವುಟದ ವಿಚಾರಕ್ಕಾಗಿ ಒಂದೆಡೆ ಸೇರಿದ್ದು ಗಮನಾರ್ಹ. ಅಲ್ಲದೆ ಈ ವೇಳೆಗೆ (1966) ಮರಾಠಿಗರ ಆಕ್ರಮಣಕಾರಿ ಭಾಷಿಕ ಪ್ರವೃತ್ತಿ ಹೆಚ್ಚಾಗತೊಡಗಿದ್ದವು. ಶಿವಸೇನೆಯ ಬಾಳಠಾಕ್ರೆ ಮೊದಲಾದವರಿಂದ ಕನ್ನಡಿಗರಿಗೆ (ಮುಂಬಯಿಯಲ್ಲಿ) ಕಿರುಕುಳ ಆರಂಭವಾಗಿತ್ತು. ಇದೇ ವೇಳೆಗೆ ಮಹಾರಾಷ್ಟ್ರ, ಕೇರಳ ಹಾಗೂ ಕರ್ನಾಟಕದ ಗಡಿಗಳಿಗೆ ಸಂಬಂಧಿಸಿದ ವಿವಾದಗಳ ಇತ್ಯರ್ಥಕ್ಕೆ ಮಹಾಜನ್ ಆಯೋಗ ನೇಮಕ ಆಗಿತ್ತು. ಈ ಆಯೋಗದ ಮೇಲೆ ಹಾಗೂ ಕೇಂದ್ರ ಸರ್ಕಾರದ ಮೇಲೆ ಮರಾಠಿಗರು ಒತ್ತಡ ಹೇರತೊಡಗಿದ್ದರು. ಇದಕ್ಕೆ ಕನ್ನಡಿಗರಿಂದ ಎಲ್ಲೆಡೆ ಪ್ರತಿರೋಧಗಳು ಕಾಣಿಸಿಕೊಂಡವು. ಬೆಳಗಾಂವಿ ಕರ್ನಾಟಕದ ಅವಿಭಾಜ್ಯ ಅಂಗವೆಂಬುದನ್ನು ಸಾಬೀತುಪಡಿಸುವುದು ಚಳವಳಿಗಾರರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ಸಭಾದವರು 29-7-1966ರಂದು ನಡೆಸಿದ ಸಂಪೂರ್ಣ ಕರ್ನಾಟಕ ಸರ್ವಪಕ್ಷ ಸಮ್ಮೇಳನ ಪ್ರಧಾನವಾದುದು. ಹೀಗಾಗಿ ನಾಡಿನ ಎಲ್ಲೆಡೆ ಮಹಾಜನ್ ಆಯೋಗದ ವಿರುದ್ಧ ತೀವ್ರವಾದ ಪ್ರತಿಭಟನೆಗಳು ನಡೆದವು. ರಸ್ತೆ ತಡೆ, ರೈಲು ತಡೆ, ಮೆರವಣಿಗೆ, ಪ್ರದರ್ಶನಗಳು, ಬಂದ್ ಆಚರಣೆ ಇತ್ಯಾದಿಗಳು ಚಳವಳಿಕಾರರನ್ನು ಇನ್ನಷ್ಟು ಹುರಿದುಂಬಿಸಿದ್ದವು.

ಮಹಾಜನ್ ಆಯೋಗದ ವರದಿ ಜತ್, ಅಕ್ಕಲಕೋಟೆ, ಕಾಸರಗೋಡುಗಳನ್ನು ಕರ್ನಾಟಕಕ್ಕೂ ನಿಪ್ಪಾಣಿ, ಖಾನಾಪುರ, ಹಳಿಯಾಳಗಳನ್ನು ಮಹಾರಾಷ್ಟ್ರಕ್ಕೂ ಸೇರಿಸಬೇಕೆಂದು ಶಿಫಾರಸು ಮಾಡಿತ್ತು. ಅಲ್ಲದೆ ಕನ್ನಡ ನೆಲವಾದ ಬೆಳಗಾಂವಿಯನ್ನು ಕರ್ನಾಟಕದಲ್ಲಿಯೇ ಉಳಿಸಬೇಕೆಂದೂ ಶಿಫಾರಸ್ಸು ಮಾಡಿತ್ತು. ಈ ಆಯೋಗದ ವರದಿಗೆ ಒಪ್ಪಿಕೊಳ್ಳುವುದಾಗಿ ಹೇಳಿದ್ದ ಮರಾಠಿಗರು ಮಾತು ಮುರಿದು ಪ್ರತಿಕ್ರಿಯಿಸಿದರು. ಈ ವಿಚಾರ 1970 ರಲ್ಲಿ ದೆಹಲಿಯ ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ಚರ್ಚೆಗೆ ಬಂತು. ಮರಾಠಿಗರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾರಂಭಿಸಿದ್ದರು. ಇದರಿಂದ ಕನ್ನಡಿಗರ ಪ್ರತಿಭಟನೆಗಳು ತೀವ್ರಸ್ವರೂಪ ಪಡೆದವು. ಈ ಘಟ್ಟದಲ್ಲಿ ಕೆಲವರು ಕನ್ನಡ ಚಳವಳಿಗಾರರು ಕರ್ನಾಟಕ ಎಕ್ಸ್‌ಪ್ರೆಸ್ ರೈಲನ್ನು ತಡೆಯಲು ಮುಂದಾದರು. ಈ ಪ್ರಯತ್ನದಲ್ಲಿ ಮು. ಗೋವಿಂದರಾಜು ಎಂಬ ಕಾರ್ಯಕರ್ತರು ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಈ ಘಟನೆ (13-12-1970) ತಾತ್ಕಾಲಿಕವಾಗಿ ಮಹಾಜನ್ ವರದಿಯ ಅನುಷ್ಠಾನವನ್ನು ತಡೆಹಿಡಿಯಿತು. ಅಂದಿನಿಂದಲೂ ಇದುವರೆಗೂ ಕರ್ನಾಟಕಕ್ಕೆ ಸೇರಬೇಕಾದ ಕನ್ನಡದ ಭೂಪ್ರದೇಶಗಳು ಕರ್ನಾಟಕದ ಹೊರಗೇ ಉಳಿದಿವೆ.

**ಕನ್ನಡ ಬಾವುಟದ ಚರಿತ್ರೆ :** 1966ರ ವರೆಗೂ ಕನ್ನಡದ ಕಾರ್ಯಕರ್ತರಿಗೆ ಯಾವುದೇ ನಿರ್ದಿಷ್ಟ ಕನ್ನಡ ಬಾವುಟವೆಂಬುದು ಇರಲಿಲ್ಲ. ಕನ್ನಡ ಬಾವುಟದ ಕೊರತೆಯನ್ನು ನೀಗಲು ರಾಮಮೂರ್ತಿ ಹಾಗೂ ವಾಟಾಳರು ಬೆಂಗಳೂರಿನಲ್ಲಿ ಕನ್ನಡ ಸಂಘಟನೆಗಳ ಸಭೆ ಸೇರಿಸಿದರು. ಇಲ್ಲಿ ಪರಿಚಯಿಸಿದ ಬಾವುಟ ಕರ್ನಾಟಕದ ನಕಾಶೆಯನ್ನು ಹೊಂದಿತ್ತು. ನಕಾಶೆಯ ಮಧ್ಯೆ ಬೆಳೆಯುತ್ತಿರುವ ಪೈರಿನ ಚಿತ್ರಣವಿತ್ತು. ಈ ಬಾವುಟ ಕರ್ನಾಟಕಕ್ಕೆ ಸೇರಬೇಕಾದ ಗಡಿಭಾಗಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಿಕೆ ನೀಡಲಾಯಿತು. ಎಲ್ಲರೂ ಈ ಬಾವುಟವನ್ನು ಒಪ್ಪಿದ್ದರು. ಆದರೆ ರಾಮಮೂರ್ತಿಯವರು ಬಾವುಟವನ್ನು ಬದಲಾಯಿಸಿದ್ದು (ನವೆಂಬರ್ 1969) ಕಾರ್ಯಕರ್ತರಲ್ಲಿ ಅಸಮಾಧಾನಕ್ಕೆ ಎಡೆಮಾಡಿಕೊಟ್ಟಿತು.

ಬಾವುಟದ ಬದಲಾವಣೆಯ ಪ್ರಕ್ರಿಯೆಗೆ ಅಂದಿನ ರಾಜಕಾರಣವೇ ಪ್ರಮುಖ ಕಾರಣ. ಮ. ರಾಮಮೂರ್ತಿ ಹಾಗೂ ವಾಟಾಳ್ ಇವರಿಬ್ಬರ ತಾತ್ವಿಕ ಭಿನ್ನಾಭಿಪ್ರಾಯಗಳು ಎರಡು ಪ್ರಾದೇಶಿಕ ಪಕ್ಷಗಳ ಹುಟ್ಟಿಗೆ ಕಾರಣವಾದವು. ರಾಮಮೂರ್ತಿ ಅವರ ಕನ್ನಡ ಪಕ್ಷ 1966ರ ನಗರಸಭಾ ಹಾಗೂ 1969ರ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿತು. ವಾಟಾಳರ ಚಳವಳಿ ಪಕ್ಷ ಕೊಂಚ ರಾಜಕೀಯ ಶಕ್ತಿಯನ್ನು ಪಡೆಯಿತು. ಜೊತೆಗೆ ಬ್ರಾಹ್ಮಣೇತರ ಚಳವಳಿಗಾರರ ಗುಂಪಾಗಿ ಗುರುತಿಸಿಕೊಂಡಿತ್ತು. ವಾಟಾಳರು ತಮ್ಮ ಪಕ್ಷದ ಚಿಹ್ನೆಯಾಗಿ ನಕಾಶೆಯಿರುವ ಬಾವುಟವನ್ನೇ ಬಳಸಿದ್ದರು. ಇದರಿಂದ ರಾಮಮೂರ್ತಿ ಅವರು ತಮ್ಮ ಕನ್ನಡ ಪಕ್ಷಕ್ಕಾಗಿ ಹೊಸ ಬಾವುಟವನ್ನು ಪರಿಚಯಿಸುವುದು ಅನಿವಾರ್ಯವಾಯಿತು.

ಮ.ರಾಮಮೂರ್ತಿ 1968ರ ವೇಳೆಗೆ ಸಂಯುಕ್ತ ರಂಗದ ಕಾರ್ಯಕರ್ತರ ಸಭೆ ಕರೆದು ಹೊಸ ಬಾವುಟವನ್ನು ಪರಿಚಯಿಸಿದರು. ಕರ್ನಾಟಕ ಮಿತ್ರ ಮಂಡಲಿಯ ಬಿ.ನಿ. ಈಶ್ವರಪ್ಪನವರು ಸೂಚಿಸಿದ ಬಾವುಟವನ್ನು ರಾಮಮೂರ್ತಿ ಒಪ್ಪಿದ್ದರು. ಕಾಟನ್‌ಪೇಟೆಯಲ್ಲಿ ನಡೆದ ಸಭೆಯಲ್ಲಿ ನಾಲ್ಕು ಮೂಲೆಗಳ ಹಳದಿ ಕೆಂಪು ಬಣ್ಣಗಳಿದ್ದ ಬಾವುಟವನ್ನು ಸರ್ವರೂ ಒಪ್ಪಿದ್ದರು. ಆದರೆ ಇದರಲ್ಲಿ ಕರ್ನಾಟಕದ ನಕಾಶೆ ಇರಲಿಲ್ಲ. ಬದಲಾಗಿ ಹಳದಿ ಕೆಂಪು ಬಣ್ಣಗಳನ್ನು ಶಾಂತಿ, ಸಹನೆ, ಕ್ರಾಂತಿಗಳ ಸಂಕೇತವೆಂದೂ ಅರಿಸಿನ ಕುಂಕುಮಗಳು ಮುತ್ತೈದೆತನದ ಸಂಕೇತವೆಂದೂ

ವಿವರಣೆ ನೀಡಲಾಗಿತ್ತು. ಮ.ರಾಮಮೂರ್ತಿ ಅವರು ಕನ್ನಡ, ಕನ್ನಡಿಗ, ಕರ್ನಾಟಕಗಳನ್ನು ಪ್ರತಿನಿಧಿಸುವ ಯಾವುದೇ ಸಭೆ, ಸಮಾರಂಭಗಳಿಗೆ ಈ ಹೊಸ ಬಾವುಟವನ್ನೇ ಬಳಸಲು ಕರೆಯಿತ್ತರು. ತಮ್ಮ ಕನ್ನಡ ಪಕ್ಷಕ್ಕೂ ಇದೇ ಬಾವುಟವನ್ನೇ ಬಳಸಿದ್ದರು. ಹೀಗಾಗಿ ಇಂದಿಗೂ ಹಳದಿ ಕೆಂಪು ಬಣ್ಣದ ಬಾವುಟಗಳೂ ಕನ್ನಡದ ಸಂಕೇತವಾಗಿ ಬಳಕೆಯಾಗುತ್ತಿವೆ.

**ವಾಟಾಳ್ ನಾಗರಾಜ್ ಮತ್ತು ಕನ್ನಡ ಚಳವಳಿ :** 1970ರ ದಶಕ ಬಹುಪಾಲು ವಾಟಾಳ್ ನೇತೃತ್ವದ ಕನ್ನಡ ಚಳವಳಿಯಾಗಿ ಪರಿಣಮಿಸಿತು. ಸಂಯುಕ್ತ ರಂಗದ ಅಧ್ಯಕ್ಷರಾಗಿದ್ದ ರಾಮಮೂರ್ತಿ ಅವರು ಆಕಸ್ಮಿಕ ಮರಣಕ್ಕೀಡಾದರು (25-12-1967). ತ.ರಾ.ಸು. ಅವರು ಕನ್ನಡ ಪಕ್ಷದ ಚುಕ್ಕಾಣಿ ಹಿಡಿದಿದ್ದರು. ಆದರೆ ವಾಟಾಳರ ಜನಪ್ರಿಯತೆಯ ಮುಂದೆ ಇನ್ನಾವುದೇ ನಾಯಕನೂ ಚಳವಳಿಯ ನೇತಾರನಾಗಲಿಲ್ಲ. ವಾಟಾಳರ ಹಿಂದೆ ಬೆಂಬಲಕ್ಕಿದ್ದವರೆಂದರೆ ಅ.ಸಂಜೀವಪ್ಪ, ಸಾ.ಕೃ.ಸಂಪಗಿ, ಜಿ.ನಾರಾಯಣ ಕುಮಾರ್, ಪ್ರಭಾಕರ್ ರೆಡ್ಡಿ ಮೊದಲಾದ ಚಳವಳಿಗಾರರು. ಇವರೆಲ್ಲರ ಬೆಂಬಲದಿಂದ ಕನ್ನಡ ಚಳವಳಿ ಪಕ್ಷ ರಾಜಕಾರಣದ ಬಲವನ್ನೂ ಪಡೆದಿತ್ತು. ಕನ್ನಡಿಗರ ಸಮಸ್ಯೆಗಳಿಗೆ ಇಂಥ ಪ್ರಾದೇಶಿಕ ಪಕ್ಷವೊಂದು ಸ್ಪಂದಿಸುವುದು ಎಲ್ಲರ ಗಮನ ಸೆಳೆಯಿತು. ಆದರೆ ವಾಟಾಳರ ಒಡನಾಡಿಗಳು ಭಿನ್ನಾಭಿಪ್ರಾಯಗಳನ್ನು ತಳೆದದ್ದು ಮತ್ತೆ ಕನ್ನಡ ಚಳವಳಿಯಲ್ಲಿ ಬಿರುಕನ್ನುಂಟುಮಾಡಿತು. 1980ರಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷ ಎಂದು ಹೊಸ ಹೆಸರು ಪಡೆಯುವವರೆಗೂ ವಾಟಾಳರು ನಾಡಿನ ಸಮಸ್ಯೆಗಳನ್ನು ಕುರಿತಂತೆ ಚಳವಳಿಗಳನ್ನು ಹೂಡುತ್ತಲೇ ಇದ್ದರು. ಅಂಥವುಗಳಲ್ಲಿ ತಾಳವಾಡಿ ಮುತ್ತಿಗೆ (1967) ಚಳವಳಿಯೂ ಒಂದು. ಕರ್ನಾಟಕಕ್ಕೆ ಸೇರಬೇಕಿದ್ದ ಹೊಸೂರು, ತಾಳವಾಡಿಗಳನ್ನು ತಮಿಳುನಾಡಿಗೆ ಸೇರಿಸಲಾಗಿತ್ತು. ಇವುಗಳನ್ನು ಪಡೆಯಲು ತಾಳವಾಡಿ ಮುತ್ತಿಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಇದರಲ್ಲಿ ಭಾಗವಹಿಸಿದ್ದ ವಾಟಾಳರನ್ನು ಅಂದಿನ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕರುಣಾನಿಧಿ ಬಂಧಿಸಲು ಆದೇಶಿಸಿದ್ದರು. ಬಂಧನಕ್ಕೊಳಗಾದ ವಾಟಾಳರ ಬಿಡುಗಡೆಗಾಗಿ ಒತ್ತಾಯಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ, ಹಿಂಸಾಚಾರಗಳು ನಡೆದವು. ತಮಿಳರ ವಿರುದ್ಧ ಕನ್ನಡಿಗರು ಉಗ್ರ ರೂಪದಲ್ಲಿ ಪ್ರತಿಭಟನೆಗಳನ್ನು ಸಾರಿದರು. ಕನ್ನಡೇತರರ ಮತಗಳಿಗಾಗಿ ಕಾದಿದ್ದ ಕನ್ನಡದ ರಾಜಕಾರಣಿಗಳು ಈ ಘಟನೆಗೆ ಸ್ಪಂದಿಸದೆ ಇದ್ದದ್ದು ಕನ್ನಡಿಗರನ್ನು ಕೆರಳಿಸದಿರಲಿಲ್ಲ. ಅದೇ ರೀತಿ 1968ರಲ್ಲಿ ಸಿ.ರಾಜಗೋಪಾಲಾಚಾರಿ (ರಾಜಾಜಿ) ಅವರು ಕನ್ನಡಕ್ಕೆ ಅಪಮಾನವಾಗುವ ಮಾತುಗಳನ್ನು ಆಡಿದಾಗ ವಾಟಾಳ್ ನಾಗರಾಜ್ ಮತ್ತು ಇತರ ಚಳವಳಿಗಾರರು ಪ್ರತಿಕ್ರಿಯಿಸಿರಲಿಲ್ಲ. ಅಂತೆಯೇ ಕನ್ನಡ ಸಾಹಿತ್ಯ ಪರಿಷತ್ತೂ ಸಹ. ಇಂಥ ವಿರೋಧಾಭಾಸಗಳೂ ಕನ್ನಡ ಚಳವಳಿಯ ಚರಿತ್ರೆಯಲ್ಲಿ ಕಪ್ಪುಚುಕ್ಕೆಯಾಗಿ ಉಳಿದುಬಿಟ್ಟವು.

**ಗೋಕಾಕ್ ಚಳವಳಿ :** ಹಿಂದಿನ ಅವೈಜ್ಞಾನಿಕ ಶಿಕ್ಷಣ ನೀತಿಯೊಂದು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ತೊಡಕಾಗಿ ಪರಿಣಮಿಸಿತ್ತು. ಇದನ್ನು ಸರಿಪಡಿಸಲು ವ್ಯಾಪಕವಾದ ಭಾಷಿಕ ಚಳವಳಿಯನ್ನೇ ಕನ್ನಡಿಗರು ಹೂಡಿದ್ದು ಗಮನಾರ್ಹ ಸಂಗತಿ. ಸಂಸ್ಕೃತ ಭಾಷೆಯನ್ನು ಮಾತೃಭಾಷೆಗೆ ಸರಿಸಮವೆಂದು ಕರ್ನಾಟಕ ಸರಕಾರದ ಶಿಕ್ಷಣ ನೀತಿ ಪರಿಗಣಿಸಿದ್ದು ಚಳವಳಿಗಳಿಗೆ ಕಾರಣವಾಗಿತ್ತು. ಅಂದರೆ ಕೇವಲ ಪ್ರೌಢಶಾಲೆಯಲ್ಲಿ ಶಿಕ್ಷಣ ಕ್ರಮ ಆರಂಭಿಸಲಾಗುವ ಸಂಸ್ಕೃತ ಹಿಂದಿನ ಏಳು ವರ್ಷಗಳಲ್ಲಿ ವಿದ್ಯಾರ್ಥಿಗಳು ಓದಿದ ಭಾಷೆಯೊಂದಕ್ಕೆ ಸಮವೆನಿಸಿತ್ತು. ಸಂಸ್ಕೃತ ಅಧ್ಯಾಪಕರ ಉದಾರ ಪ್ರೋತ್ಸಾಹ ಮತ್ತು ಹೆಚ್ಚು ಅಂಕ ನೀಡುವ ಪ್ರವೃತ್ತಿಯಿಂದ ಕನ್ನಡದ ವಿದ್ಯಾರ್ಥಿಗಳೂ ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯಾಗಿ ಓದಲು ಆರಂಭಿಸಿದ್ದರು. ಇದರಿಂದ ರ್‍ಯಾಂಕ್ ಗಳಿಕೆ ಸುಲಭವಾಗಿತ್ತು. ಇಲ್ಲಿ ಇನ್ನೊಂದು ಅನುಕೂಲವೂ ಇತ್ತು. ಅದು ಈ ಭಾಷೆಯ ಪ್ರಶ್ನೆ ಪತ್ರಿಕೆಯನ್ನು ಕನ್ನಡ ಅಥವಾ ಇಂಗ್ಲಿಷಿನಲ್ಲಿ ಉತ್ತರಿಸುವುದು. ಈ ಬಗೆಯ ನೀತಿಯಿಂದ ಕನ್ನಡಕ್ಕೆ ಹೆಚ್ಚಿನ ಪ್ರಾಧಾನ್ಯ ದಕ್ಕಿರಲಿಲ್ಲ. ಹೀಗಾಗಿ ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ತೆಗೆದು ಮೂರನೆಯ ಸ್ಥಾನಕ್ಕೆ ಇಳಿಸುವ ಸರ್ಕಾರದ ಆಜ್ಞೆಗೆ (1969 ರ ಅಕ್ಟೋಬರ್) ಸಂಸ್ಕೃತವಾದಿಗಳಿಂದ ವಿರೋಧಗಳು ವ್ಯಕ್ತವಾದವು. ಇದಕ್ಕೆ ವಿರುದ್ಧವಾಗಿ ಕನ್ನಡ ಪರವಾದಿಗಳು ಸಹ ವಿರೋಧಿಸಲಾರಂಭಿಸಿದ್ದರು. ಕೊನೆಗೆ ಯಾವುದೇ ನಿರ್ಧಾರವನ್ನು ಕೈಗೊಳ್ಳಲಾಗದೆ ಸರ್ಕಾರ ವಿ.ಕೃ. ಗೋಕಾಕ್ ಅಧ್ಯಕ್ಷತೆಯಲ್ಲಿ ಭಾಷಾತಜ್ಞರ ಸಮಿತಿಯೊಂದನ್ನು ರಚಿಸಿತು (1980). ಈ ಸಮಿತಿಯಲ್ಲಿದ್ದ ಬಹುಪಾಲು ಸದಸ್ಯರು ಸಂಸ್ಕೃತದ ವಾದಿಗಳೆಂದೇ ಕನ್ನಡದ ವಾದಿಗಳು ಆರಂಭದಲ್ಲಿ ಶಂಕಿಸಿದ್ದರು. ಹೀಗಾಗಿ ಸಮಿತಿಯ ವಿರುದ್ಧವೇ ಮೊದಲ ಪ್ರತಿಭಟನೆಗಳು ಆರಂಭಗೊಂಡವು. ಈ ಸಮಿತಿ ವರದಿಯ ಸಿದ್ಧತೆಗೆ ನಾಡಿನಾದ್ಯಂತ ಕೈಗೊಂಡ ಪ್ರವಾಸಕ್ಕೆ ಆಗ ಪ್ರತಿರೋಧಗಳು ಕಂಡುಬಂದವು. ಆದರೆ ವರದಿ ಕನ್ನಡ ಪರವಾಗಿದ್ದು ಅಂಥ ಶಂಕೆ ಸಂದೇಹ ನಿವಾರಿಸಿತು. ಅಂತೆಯೆ ವರದಿಯನ್ನು ಅನುಷ್ಠಾನಗೊಳಿಸುವಲ್ಲಿ ಚಳವಳಿಗಾರರು ತೀವ್ರತರವಾದ ಹೋರಾಟಕ್ಕೆ ಇಳಿದಿದ್ದರು. ಗೋಕಾಕ್ ವರದಿ ಕುರಿತು ನಡೆದ ಚಳವಳಿ ಕನ್ನಡ ಚಳವಳಿಯೇ ಆಗಿ ಗೋಕಾಕ್ ಚಳವಳಿ ಎಂದೇ ಪ್ರಚಾರಕ್ಕೆ ಬಂತು.

ಗೋಕಾಕ ಚಳವಳಿಗೆ ಧಾರವಾಡದಿಂದ ಆರಂಭಿಕ ಚಾಲನೆ ದೊರೆತು ನಾಡಿನಾದ್ಯಂತ ವಿಭಿನ್ನ ಘಟ್ಟಗಳಲ್ಲಿ ಚಳವಳಿ ನಡೆಯಿತು. ಚಂದ್ರಶೇಖರ ಪಾಟೀಲ, ಎಂ.ಎಂ.ಕಲಬುರ್ಗಿ, ಬಸವರಾಜ ಕಟ್ಟೀಮನಿ, ಚನ್ನವೀರ ಕಣವಿ ಪಾಟೀಲ ಪುಟ್ಟಪ್ಪ ಮೊದಲಾದ ಸಾಹಿತಿಗಳು ಹಾಗೂ ಕಲಾವಿದರು, ಮಠಾಧೀಶರು ಉತ್ತರ ಕರ್ನಾಟಕದಲ್ಲಿ ಪ್ರತಿಕ್ರಿಯಿಸಲಾರಂಭಿಸಿದರು. ಅಂತೆಯೇ ಹಳೆಯ ಮೈಸೂರಿನ ಜಿಲ್ಲೆಗಳಿಂದ, ಬೆಂಗಳೂರನ್ನು ಕೇಂದ್ರವಾಗಿಸಿಕೊಂಡು ಚಳವಳಿ ಆರಂಭಗೊಂಡಿತು. ಇದರಲ್ಲಿ ಪಿ.ಲಂಕೇಶ್, ಜಿ.ಎಸ್.ಶಿವರುದ್ರಪ್ಪ, ಗೊರೂರು, ಸಿದ್ಧಯ್ಯಪುರಾಣಿಕ್, ಎಂ.ಚಿದಾನಂದಮೂರ್ತಿ, ಹಾ.ಮಾ.ನಾಯಕ, ಕೋ.ಚೆನ್ನಬಸಪ್ಪ, ಮಳಗಿ, ತ.ರಾ.ಸು., ಸತ್ಯ, ಪೂರ್ಣಚಂದ್ರತೇಜಸ್ವಿ ಮೊದಲಾದ ಸಾಹಿತಿಗಳು, ಕಲಾವಿದರು ಭಾಗವಹಿಸಿದ್ದರು. ಸಾಹಿತಿಗಳ, ಕಲಾವಿದರ ಬಳಗ ಹುಟ್ಟಿಕೊಂಡದ್ದು ಇದೇ ಸಂದರ್ಭದಲ್ಲಿಯೇ. ಚಳವಳಿಗಾರ ರಹಮಾನ್ ಖಾನ್, ಜಿ.ನಾರಾಯಣಕುಮಾರ್, ಕೆ.ಪ್ರಭಾಕರ ರೆಡ್ಡಿ ಮೊದಲಾದವರು ತೀವ್ರವಾಗಿ ಪ್ರತಿಕ್ರಿಯಿಸಿದರು. ಈ ಚಳವಳಿಗೆ ಕೇಂದ್ರ ಹಾಗೂ ಸ್ಥಳೀಯ ಕನ್ನಡ ಕ್ರಿಯಾ ಸಮಿತಿಗಳು, ಕನ್ನಡ ಸಂರಕ್ಷಣಾ ಸಮಿತಿ, ಕನ್ನಡ ಸಂಘರ್ಷ ಸಮಿತಿ, ಕನ್ನಡ ಪಕ್ಷ, ಮೈಸೂರಿನ ಚೇತನ ಕನ್ನಡ ಸಂಘ ಮೊದಲಾದ ಸಂಘಟನೆಗಳು ತಮ್ಮನ್ನು ತೊಡಗಿಸಿಕೊಂಡಿದ್ದವು. ಕರ್ನಾಟಕದ ಬಹುಪಾಲು ಎಲ್ಲ ಹಿರಿಕಿರಿಯ ಸಾಹಿತಿ ಕಲಾವಿದರೂ ಗೋಕಾಕ ಚಳವಳಿಯ ಸಂದರ್ಭದಲ್ಲಿ ಭಾಗವಹಿಸಿದ್ದು ಇಲ್ಲಿ ಉಲ್ಲೇಖನೀಯ. ಈ ಸಂದರ್ಭದಲ್ಲಿ ಪರ ವಿರೋಧದ ಧ್ವನಿಗಳೂ ಹುಟ್ಟಿಕೊಂಡಿದುಂಟು. ಸರ್ಕಾರ ಕನ್ನಡವನ್ನು ಒಂದು ಹಂತದಲ್ಲಿ ಕಡ್ಡಾಯವಾಗಿ ಪ್ರೌಢಶಾಲಾ ಹಂತದಲ್ಲಿ ಜಾರಿಗೊಳಿಸುವ ಸೂತ್ರ ಮುಂದಿಟ್ಟಿತು. ಆಗ ಅದನ್ನು ಒಪ್ಪಿ ಹಾ.ಮಾ.ನಾ., ಹಂಪನಾ, ವಿ.ಎಚ್.ಗೌಡ ಮೊದಲಾದವರು ಸ್ವಾಗತಿಸಿದರು. ಆದರೆ ಇದಕ್ಕೊಪ್ಪದವರು ಚಿದಾನಂದಮೂರ್ತಿಗಳು ಮತ್ತು ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಚಳವಳಿಯನ್ನು ಮುಂದವರಿಸಿ ಪ್ರಾಥಮಿಕ ಹಂತದಿಂದ ಕನ್ನಡ ಕಡ್ಡಾಯಮಾಡಲು ಆಗ್ರಹಿಸಿದರು. ಸರ್ಕಾರ ಗೋಕಾಕ್ ಭಾಷಾ ಸೂತ್ರವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ಹಿಂದೇಟು ಹಾಕಿದಾಗ ಚಳವಳಿ ವ್ಯಾಪಕವೂ ಹಿಂಸಾತ್ಮಕವೂ ಆಯಿತು. ಖ್ಯಾತ ನಟ ರಾಜಕುಮಾರ್ ಅವರು ಜಾಥಾದ ಮುಂದಾಳತ್ವವನ್ನು ವಹಿಸಿದ ಮೇಲೆ ಚಳವಳಿಗೆ ಇನ್ನಷ್ಟು ಚುರುಕು, ಬಿರುಸು ಪ್ರಾಪ್ತವಾಯ್ತು. ಮೆರವಣಿಗೆ, ಬಂದ್, ರಸ್ತೆ ರೈಲು ತಡೆ, ಜೈಲು ತುಂಬುವ ಚಳವಳಿ, ಪೋಲೀಸರ ಗೋಲಿಬಾರ್ ಸಾಮಾನ್ಯವಾದವು. ಅರಸಪ್ಪ ಎಂಬ ಕಾರ್ಯಕರ್ತರೊಬ್ಬರು ಪೋಲೀಸರ ಗುಂಡಿಗೆ ಬಲಿಯಾದರು. ಪರಿಸ್ಥಿತಿಗೆ ಮಣಿದ ಸರ್ಕಾರ ಸರ್ವಸಮ್ಮತ ಭಾಷಾಸೂತ್ರವನ್ನು ಪ್ರಕಟಿಸಿತು. ನಾಲ್ಕು ತಿಂಗಳ ಕಾಲ ನಡೆದ ಚಳವಳಿ ಅಂತ್ಯಗೊಂಡಿತು. ಆದರೆ ಕನ್ನಡೇತರರು, ಸಂಸ್ಕೃತಪರ ವಾದಿಗಳು ಅಲ್ಪಸಂಖ್ಯಾತರು ಕೋರ್ಟಿನಲ್ಲಿ ಕಟ್ಲೆಗಳನ್ನು ಹಾಕಿದ್ದರಿಂದ ವರದಿ ಜಾರಿಗೆ ಬರಲಿಲ್ಲ. 1984 ಜನವರಿ 24ರಂದು ಸರ್ಕಾರ ಈ ಎಲ್ಲ ಕಟ್ಲೆಗಳ ವಿಲೇವಾರಿ ಮಾಡಿ ಭಾಷಾಸೂತ್ರವನ್ನು ಜಾರಿಗೆ ತಂದಿತು. ಆದರೆ ವರದಿಯ ಸಂಪೂರ್ಣ ಅನುಷ್ಠಾನದ ಬಗ್ಗೆ ಇನ್ನೂ ಯಾವುದೇ ರೀತಿಯ ನಿರೀಕ್ಷಿತ ಫಲಿತಾಂಶ ಕಂಡುಬಂದಿಲ್ಲ.

**ಕನ್ನಡ ದೇಶ ಮತ್ತು ಕರ್ನಾಟಕ ಪ್ರಗತಿರಂಗ :** ಗೋಕಾಕ್ ಚಳವಳಿ ಅಂತ್ಯವಾಗುವ ವೇಳೆಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತ ಕೊನೆಗೊಂಡಿತು. ರೈತ (1983), ದಲಿತ ಹಾಗೂ ಭಾಷಾ ಚಳವಳಿಗಳ ಆಶೋತ್ತರಗಳನ್ನು ಈಡೇರಿಸುವ ಭರವಸೆಯನ್ನು ನೀಡಿ ಜನತಾ ಪಕ್ಷ

ಅಧಿಕಾರಕ್ಕೆ ಬಂತು. ಆದರೆ ಬಹಳ ಬೇಗ ಈ ಸರ್ಕಾರವೂ ಕನ್ನಡಿಗರ ಅಸಹನೆಗೆ ಗುರಿಯಾಯಿತು. ಈ ಸಂದರ್ಭದಲ್ಲಿ ಸ್ಥಳೀಯವಾದ ರಾಜ್ಯಪಕ್ಷವೊಂದರ ಅಗತ್ಯ ಕಂಡುಬಂತು. ಆಗ ಹೊಸ ರಾಜಕೀಯ ಪಕ್ಷವೊಂದರ ತುರ್ತು ಕನ್ನಡಿಗರಲ್ಲಿ ಕಾಣಿಸಿಕೊಂಡಿತು. ಇದರ ಪರಿಣಾಮವಾಗಿ ಹುಟ್ಟಿಕೊಂಡದ್ದೇ ಕನ್ನಡ ದೇಶ ಹಾಗೂ ಕರ್ನಾಟಕ ಪ್ರಗತಿರಂಗ ಎಂಬ ಪಕ್ಷಗಳು.

ವಾಟಾಳರ ಚಳವಳಿಪಕ್ಷ ಪ್ರಾದೇಶಿಕವಾಗಿ ಗುರುತಿಸಿಕೊಂಡಿದ್ದರೂ ಅದು ರಾಜ್ಯವ್ಯಾಪಿ ಪಕ್ಷವಾಗಿ ವಿಸ್ತೃತಗೊಂಡಿರಲಿಲ್ಲ. ಹೀಗಾಗಿ 1987ರಲ್ಲಿ ಕನ್ನಡ ದೇಶ ಪಕ್ಷ ಕವಿ ಕುವೆಂಪು ಅವರ ಪ್ರೇರಣೆಯಿಂದ ಅಸ್ತಿತ್ವಕ್ಕೆ ಬಂತು. ಈ ಪಕ್ಷದ ನೇತೃತ್ವವನ್ನು ವಹಿಸಿದ್ದವರು ರೈತ ಸಂಘದ ಎಂ.ಡಿ.ನಂಜುಂಡಸ್ವಾಮಿ ಅವರು. ಕನ್ನಡ ದೇಶ ಪಕ್ಷ ಕನ್ನಡಿಗರ ಆಶೋತ್ತರಗಳ ಈಡೇರಿಕೆಗೆ ದುಡಿಯುವ ಮುನ್ನವೇ ಸೋಲನ್ನು ಕಂಡಿತು. ಈ ಘಟ್ಟದಲ್ಲಿ ಎ.ಕೆ.ಸುಬ್ಬಯ್ಯನವರ ಕನ್ನಡಪರ ಪ್ರಯತ್ನಗಳೂ ಗಮನಾರ್ಹವೆನಿಸಿವೆ.

ಪ್ರಗತಿಪರ ಮನಸ್ಸುಳ್ಳ ವ್ಯಕ್ತಿಗಳು ಅದುವರೆಗಿನ ಎಲ್ಲಕೊರತೆಗಳನ್ನು ಪರಿಶೀಲಿಸಿ 1988ರಲ್ಲಿ ಕರ್ನಾಟಕ ಪ್ರಗತಿರಂಗ ಎಂಬ ರಾಜಕೀಯ ಪಕ್ಷವನ್ನು ರೂಪಿಸಿದರು. ಈ ರಂಗಕ್ಕೆ ಲಂಕೇಶ್ ಪತ್ರಿಕೆಯ ಮೂಲಕ ರೂಪಿಸಲಾದ ಹಿನ್ನೆಲೆ ಮತ್ತು ಸಿದ್ಧಾಂತಗಳಿದ್ದವು. ಕಾಂಗ್ರೆಸ್ ಮತ್ತು ಜನತಾ ಪಕ್ಷಗಳಿಗೆ ಪರ್ಯಾಯವಾಗಿ ಹುಟ್ಟಿಕೊಂಡ ಪಕ್ಷವಿದು. ಇದರ ನೇತೃತ್ವ ಪಿ.ಲಂಕೇಶ್ ಅವರದು. ಕನ್ನಡ, ಕನ್ನಡಿಗ, ಕರ್ನಾಟಕಗಳ ಬಗೆಗಿನ ಕಾಳಜಿಯಿಂದ ರಚನೆಗೊಂಡ ಈ ಪಕ್ಷಕ್ಕೆ ಕನ್ನಡಿಗರಿಂದ ನಿರೀಕ್ಷಿಸಲಾಗಿದ್ದ ಬೆಂಬಲ, ಪ್ರೋತ್ಸಾಹಗಳು ದೊರೆಯಲಿಲ್ಲ. ಈ ಪಕ್ಷವೂ ಸಂಘಟನಾ ಹಂತದಲ್ಲೇ ಕ್ಷೀಣಿಸಿತು. ಕನ್ನಡ ಚಳವಳಿಯ ಚರಿತ್ರೆಯಲ್ಲಿ ಈ ರಾಜಕೀಯ ಪಕ್ಷಗಳಿಗೆ ದೊರೆಯದೆ ಹೋದ ಬೆಂಬಲಗಳು ಕನ್ನಡಿಗರಿಂದ ಮತ್ತೆ ರಾಷ್ಟ್ರೀಯ ಪಕ್ಷಗಳಿಗೆ ದೊರೆತವು.

ಗೋಕಾಕ್ ಚಳವಳಿಯ ಅನಂತರ ಸಂಭವಿಸಿದ ರಾಜಕೀಯ ಬದಲಾವಣೆಗಳು ಚಳವಳಿಯ ಸ್ವರೂಪ ಬಹುಮುಖಿ ನೆಲೆಗಳನ್ನು ಕಂಡುಕೊಳ್ಳುವಂತೆ ಮಾಡಿತು. ಇದಕ್ಕೆ ಪ್ರಾತಿನಿಧ್ಯ, ಆಮಿಷ, ಅಗ್ಗದ ಪ್ರಚಾರ ಪ್ರಿಯತೆ, ಕನ್ನಡದ ಹೆಸರಿನಲ್ಲಿ ಲೂಟಿ, ಹಿಂಸೆಗಳು, ಜಾತಿ ಮುಖಂಡರ, ರಾಜಕಾರಣಿಗಳ ಭ್ರಷ್ಟಾಚಾರಗಳು ಎಲ್ಲವೂ ಕಾರಣ. 1980 ಹಾಗೂ 1990ರ ದಶಕದಲ್ಲಾದ ಈ ವೈಪರೀತ್ಯಗಳು ಕನ್ನಡ ಚಳವಳಿಯನ್ನು ಭಿನ್ನ ರೀತಿಯಲ್ಲಿ ಗ್ರಹಿಸಲು ಎಡೆಮಾಡಿಕೊಟ್ಟವು. ಆದರೆ ಇವೆಲ್ಲವುಗಳನ್ನೂ ಹೊರತುಪಡಿಸಿ ನಾಡು, ನುಡಿ, ಸಂಸ್ಕೃತಿಯ ನೆಲೆಗಳಲ್ಲಿ ಕಾರ್ಯನಿರ್ವಹಿಸಿದ ನಿಸ್ವಾರ್ಥ ಕನ್ನಡ ಚಳವಳಿಗಾರರನ್ನು, ಸಂಘಟನೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

**ಕನ್ನಡ ಶಕ್ತಿ ಕೇಂದ್ರ ಮತ್ತು ಇತರ ಸಂಘಟನೆಗಳು :** ಚಳವಳಿಗಳಿಗೆ ಸಂಬಂಧಿಸಿದ ಮಾರ್ಗದರ್ಶನಗಳನ್ನು ನೀಡಿ ನಡೆಸಿಕೊಂಡು ಹೋಗಲು ಸಾಹಿತಿ, ಕಲಾವಿದರ ಬಳಗ ಹುಟ್ಟು ಹಾಕಿದ ಸಂಸ್ಥೆಯೇ ಕನ್ನಡ ಶಕ್ತಿ ಕೇಂದ್ರ. 1988ರಲ್ಲಿ ಅಸ್ತಿತ್ವಕ್ಕೆ ಬಂದ ಈ ಕೇಂದ್ರ ಎಂ. ಚಿದಾನಂದಮೂರ್ತಿಯವರ ನೇತೃತ್ವದಲ್ಲಿ ಮುನ್ನಡೆದಿದೆ. ಇದು ಗೋಕಾಕ್ ಚಳವಳಿಯ ಅನಂತರ ಕನ್ನಡದ ಹೋರಾಟವನ್ನು ಇತರೆ ಸಮಸ್ಯೆಗಳ ಕಡೆಗೂ ಕೇಂದ್ರೀಕರಿಸುವಂತೆ ಮಾಡಿತು.

ಕನ್ನಡ ಶಕ್ತಿ ಕೇಂದ್ರ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವ ಸರೋಜಿನಿ ಮಹಿಷಿ ವರದಿಯ ಅನುಷ್ಠಾನಕ್ಕಾಗಿ ಒತ್ತಾಯಿಸಿತು. ಅಲ್ಲದೆ ನೈರುತ್ಯ ರೈಲ್ವೆ ವಲಯದ ಕೇಂದ್ರವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವವರೆಗೂ ಅನೇಕ ರೀತಿಯಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕಗಳ ಬೇಡಿಕೆಗಳಿಗೆ ಸ್ಪಂದಿಸುತ್ತಿದೆ. ರಾಜ್ಯ ಲೋಕಸೇವಾ ಆಯೋಗದಲ್ಲಿ ಕನ್ನಡಕ್ಕೆ ಆದ್ಯತೆ, ದೂರದರ್ಶನದ ಕನ್ನಡೀಕರಣ, ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ, ಉರ್ದು ವಾರ್ತಾಪ್ರಸಾರ ತಡೆ, ಕಾವೇರಿ ಜಲವಿವಾದ ಚಳವಳಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರಗಳ ಸ್ಥಾಪನೆ, ಬೆಳಗಾಂವಿಯಲ್ಲಿ ತಾಂತ್ರಿಕ ವಿಶ್ವವಿದ್ಯಾಲಯದ ಸ್ಥಾಪನೆ ಇತ್ಯಾದಿ ಕನ್ನಡ ಪರವಾದ ಸಾಧನೆಗಳಿಗಾಗಿ ಇದು ಶ್ರಮಿಸಿದೆ. ಕೆ.ಜಿ.ಎಫ್.ನಲ್ಲಿ ತಮಿಳರ ದೌರ್ಜನ್ಯ, ಬೀದರ್‌ನಲ್ಲಿ ಸಿಖ್ಖರಿಂದ ಆಗುತ್ತಿರುವ ಅತ್ಯಾಚಾರಗಳು, ಹಂಪಿ ಮತ್ತು ಗೋಕರ್ಣಗಳಲ್ಲಿನ ಹಿಪ್ಪಿಗಳ ಸ್ವೇಚ್ಛಾಚಾರ, ಬೆಳಗಾಂವಿಯಲ್ಲಿ ಎಂ.ಇ.ಎಸ್. ಪಕ್ಷದವರ ಕನ್ನಡ ವಿರೋಧಿ ಕಾರ್ಯಕ್ರಮಗಳ ವಿರುದ್ಧವೂ ಕನ್ನಡ ಶಕ್ತಿ ಕೇಂದ್ರ ಚಳವಳಿ ಮಾಡಿದೆ. ವಲಸಿಗರ ತಡೆ, ಅಂಚೆ ತಂತಿ ರೈಲ್ವೆ ಆಡಿಟರ್ ಕಚೇರಿಗಳಲ್ಲಿ ಕನ್ನಡೇತರರ ನೇಮಕಗಳ ಬಗೆಗೂ ಕನ್ನಡಪರವಾದ ಸಂಘಟನೆಗಳು ಪ್ರಯತ್ನಿಸುತ್ತಿವೆ. ಶಕ್ತಿ ಕೇಂದ್ರದ ಜೊತೆಗೆ ಕನ್ನಡ ಸಂಘರ್ಷ ಸಮಿತಿ, ಕನ್ನಡ ಸೇನೆ, ಕನ್ನಡ ಸಂರಕ್ಷಣಾ ವೇದಿಕೆ, ಕರ್ನಾಟಕ ರಕ್ಷಣಾ ವೇದಿಕೆ ಮೊದಲಾದ ಸಂಘಟನೆಗಳೂ ಸೇರಿಕೊಂಡಿವೆ. ಸಾರಿಗೆ, ಹೋಟೆಲು, ಚಿತ್ರಮಂದಿರ, ಆಟೋರಿಕ್ಷಾ, ಬ್ಯಾಂಕುಗಳು, ಉದ್ಯಮಗಳು ಮೊದಲಾದ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಘ ಸಂಸ್ಥೆಗಳಲ್ಲಿನ ಕನ್ನಡ ಸಂಘಟನೆಗಳು ಗಮನಾರ್ಹವಾಗಿ ಕಾರ್ಯನಿರತವಾಗಿವೆ. ಅಂತೆಯೇ ಕರ್ನಾಟಕ ಕೆಥೊಲಿಕ್ ಕ್ರೈಸ್ತರ ಕನ್ನಡ ಸಂಘಗಳು ಕ್ರೈಸ್ತ ಮಂದಿರಗಳಲ್ಲಿ ಕನ್ನಡದಲ್ಲಿ ಕಲಾಪಗಳನ್ನು ನಡೆಸಲು ಚಳವಳಿ ಹೂಡಿವೆ.

ಕನ್ನಡ ಚಳವಳಿಗಳು ಕನ್ನಡ ಹೋರಾಟಗಳಾದದ್ದು 1990ರ ದಶಕದಿಂದೀಚೆಗೆ. ಕರ್ನಾಟಕದಲ್ಲೂ ರಾಜಕಾರಣಿಗಳ ಆಸೆ, ಆಮಿಷಗಳಿಂದಾಗಿ ಕೋಮುವಾದಿ ಬೀಜಗಳ ಬಿತ್ತನೆ ಆಯಿತು. ಭ್ರಷ್ಟಾಚಾರ ಮನೋವೃತ್ತಿಯ ರಾಜಕಾರಣಿಗಳು ಜನಸಾಮಾನ್ಯರನ್ನು ಶೋಷಿಸಲು ಕನ್ನಡ ಚಳವಳಿಗಳಿಗೆ ಹಿಂಸಾತ್ಮಕ ರೂಪ ಕೊಟ್ಟರು ಎಂಬುದೊಂದು ಗುರುತರ ಆರೋಪ. ಕನ್ನಡಿಗರ ಭಾಷಿಕ ಭಾವೋದ್ವೇಗಗಳು ಜಾತಿ, ಧರ್ಮ, ಕೋಮು, ಜನಾಂಗ, ಪ್ರದೇಶ, ನೀರು ಮೊದಲಾದ ಸೂಕ್ಷ್ಮ ಸಂವೇದನೆಗಳಿಗೆ ಬಂಡವಾಳವಾಗುವಂತೆ ಆಯಿತು. ಕನ್ನಡದ ಹೆಸರಿನಲ್ಲಿ ಕಿಡಿಗೇಡಿಗಳು ತಮಿಳು, ಮುಸ್ಲಿಮ್ ಸಹೋದರರ ಜೊತೆಗೆ ಕನ್ನಡಿಗರೂ ಪ್ರಾಣಗಳನ್ನು ತೆರುವಂತೆ ಮಾಡಿದರು. ಇಂಥ ಸನ್ನಿವೇಶಗಳಲ್ಲಿಯೇ ಕನ್ನಡ ಚಳವಳಿಗಳು ಕನ್ನಡ ಹೋರಾಟಗಳು ಎಂಬ ಭಿತ್ತಿಯನ್ನು ಅನಾವರಣಗೊಳಿಸಿದ್ದು.

ಕೇಂದ್ರ ಸರ್ಕಾರದ ಧೋರಣೆಗಳಿಂದಾಗಿ ಕರ್ನಾಟಕದಂಥ ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ಬರಿದುಮಾಡಿಕೊಳ್ಳುತ್ತಿವೆ. ಜಪಾನ್ ಕೈಗಾರಿಕಾ ವಸಾಹತು, ಸಿಂಗಪೂರ್ ಟೌನ್‌ಷಿಪ್, ಗ್ಯಾಟ್ ಒಪ್ಪಂದಗಳು, ಗಂಗಡಿಕಲ್ಲು ಅದಿರು ಯೋಜನೆ, ತುಂಗಾ ಮೂಲ ನಾಶ, ಪರಿಸರ ಮಾಲಿನ್ಯ ಹೀಗೆ ಕನ್ನಡಿಗರು ಶೋಷಣೆಗೆ ಒಳಗಾಗುತ್ತಿದ್ದುದ್ದನ್ನು ಕನ್ನಡ ಚಳವಳಿಗಾರರು ಪ್ರತಿಭಟಿಸಿದರು. ಈ ನಿಟ್ಟಿನಲ್ಲಿ ಕರ್ನಾಟಕ ವಿಮೋಚನಾರಂಗ, ಪ್ರಜಾತಾಂತ್ರಿಕ ಜನರ ವೇದಿಕೆ, ತುಂಗಾಮೂಲ ಉಳಿಸಿ ಸಂಘಗಳಂಥ ಸಂಘಟನೆಗಳ ಹೋರಾಟಗಾರರ ಪಾತ್ರ ದೊಡ್ಡದು.

ಒಟ್ಟಾರೆ ಕನ್ನಡ ಚಳವಳಿಗಳ ಕಳೆದ ಎರಡು ದಶಕಗಳ ಚರಿತ್ರೆಯನ್ನು ಪರಿಶೀಲಿಸಿದರೆ ರಾಜಕಾರಣದ ಆಮಿಷ, ಪ್ರಚಾರಪ್ರಿಯತೆ, ಅಸಂಖ್ಯ ಪೋಷಿತ ಹಾಗೂ ಘೋಷಿತ ನಾಯಕರ ಸಂಘಟನೆಗಳು ಗೋಚರವಾಗುತ್ತವೆ. ಕನ್ನಡದ ರಾಜಕಾರಣಿಗಳು ಕನ್ನಡೇತರ ರಾಜಕೀಯ ಪಕ್ಷಗಳೊಂದಿಗೆ ಡಿ.ಎಂ.ಕೆ., ಅಣ್ಣಾ ಡಿ.ಎಂ.ಕೆ. ಇತ್ಯಾದಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸ್ಪರ್ಧಿಸುವುದೂ ಕಂಡುಬಂದಿದೆ. ಕನ್ನಡ, ಕನ್ನಡಿಗ, ಕರ್ನಾಟಕ ಪರವಾದ ಪ್ರಾದೇಶಿಕ ರಾಜಕೀಯ ಪಕ್ಷವೊಂದನ್ನು ರಚಿಸಿ ಅಧಿಕಾರಕ್ಕೆ ತರಲಾಗದ ಕನ್ನಡಿಗರ ಅಸಹಾಯಕತೆಯ ಸ್ಥಿತಿಯನ್ನು ಇದು ಸಂಕೇತಿಸುತ್ತದೆ. ಸಂಕುಚಿತ, ಭಾಷಿಕ ಭಾವೋದ್ವೇಗಗಳಿಂದ, ಅತಿರೇಕದ ಭಾಷಾಭಿಮಾನದಿಂದ ಕನ್ನಡ ಚಳವಳಿ ಮತ್ತು ಚಿಂತನೆಗಳು ಕೆಲವೊಮ್ಮೆ ಸೋತಿವೆಯೆನಿಸುತ್ತದೆ. ಕನ್ನಡದ ಅಧಿಕಾರಿಗಳೂ ನೌಕರರೂ ಕನ್ನಡವನ್ನು ಆಡಳಿತದಲ್ಲಿ ಬಳಸುವಲ್ಲಿ ಹೆಚ್ಚು ಉತ್ಸುಕರಾಗದಿರುವುದು ಕಂಡುಬಂದಿದೆ. ಆದ್ದರಿಂದಲೇ ಇಂದಿಗೂ ಶಿಕ್ಷಣ ರಂಗದಲ್ಲಿ ಕನ್ನಡ ಮಾಧ್ಯಮವಾಗಲಿ,ಸರೋಜಿನಿ ಮಹಿಷಿ ವರದಿಯ ಅನುಷ್ಠಾನವಾಗಲಿ, ಆಡಳಿತ ಭಾಷೆ ಕನ್ನಡವಾಗಲಿ ಪೂರ್ಣವಾಗಿ ಸಾಧ್ಯವಾಗಿಲ್ಲ. ಇತ್ತೀಚಿನ ಕೆಲವು ಪ್ರಕರಣಗಳು ಕನ್ನಡಿಗರನ್ನು ಭಿನ್ನವಾಗಿ ಆಲೋಚಿಸುವಂತೆ ಮಾಡಿವೆ. ಕಾಡುಗಳ್ಳ ವೀರಪ್ಪನ್‌ನಿಂದ ಆದ ನಟ ರಾಜಕುಮಾರ್ ಅಪಹರಣ, ಅಂತೆಯೇ ಸಚಿವ ನಾಗಪ್ಪ ಅವರ ಅಪಹರಣಗಳು ಹಾಗೂ ಅವರ ಸಾವು ಕನ್ನಡಿಗರ ತಾಳ್ಮೆಯನ್ನು ಪರೀಕ್ಷಿಸುವಂತೆ ಮಾಡಿವೆ. ಜೊತೆಗೆ ಕಾವೇರಿ ನದಿಯ ನೀರಿನ ವಿವಾದ, ಹೋರಾಟಗಳು ಉಗ್ರರೂಪ ತಳೆದು ರಾಜಕಾರಣದ ಸ್ವಾರ್ಥ, ಅಸಹಾಯಕತೆಗಳನ್ನು ಅನಾವರಣಗೊಳಿಸಿವೆ. ನಿಷ್ಠಾವಂತ ಕನ್ನಡಿಗರಿಂದ ಹಾಗೂ ಕರ್ನಾಟಕ ಸರ್ಕಾರದ ಪ್ರಗತಿಪರ ಸ್ವಾಭಿಮಾನ ಪೂರಿತ ಪ್ರಯತ್ನಗಳಿಂದ ಮುಂದೆ ಕರ್ನಾಟಕದ ಹಿತಗಳನ್ನು ಕಾಯ್ದುಕೊಳ್ಳುವುದು ಸಾಧ್ಯವಾಗಬಹುದೆಂದು ಆಶಿಸಬಹುದು. (ಸಿ.ಆರ್.ಜಿ.)

**ಕನ್ನಡ ಛಂದಸ್ಸು :** ಕನ್ನಡ ಭಾಷೆಯ ಪದ್ಯಸಾಹಿತ್ಯದಲ್ಲಿ ಬಹಳ ಹಿಂದಿನಿಂದಲೂ ವಾಡಿಕೆಯಾಗಿ ಬಳಕೆಯಾಗುತ್ತ ಬಂದಿರುವ ಸಂಸ್ಕೃತ ಮತ್ತು ಪ್ರಾಕೃತ ಪ್ರಭಾವದ ಪದ್ಯಜಾತಿಗಳನ್ನೂ ವಿಶೇಷವಾಗಿ ಅಚ್ಚಕನ್ನಡ ಮಟ್ಟುಗಳೆನಿಸಿದ ತ್ರಿಪದಿ ಮೊದಲಾದ ಪದ್ಯಜಾತಿಗಳು ಮತ್ತು ಹೊಸಗನ್ನಡ ಕವಿತೆಯ ಮಟ್ಟುಗಳನ್ನೂ ಕನ್ನಡ ಛಂದಸ್ಸು ಎಂಬ ಮಾತು ಒಳಗೊಳ್ಳುತ್ತದೆ.

ಉಪಲಬ್ಧ ಕನ್ನಡ ಛಂದೋಗ್ರಂಥಗಳಲ್ಲಿ 1ನೆಯ ನಾಗವರ್ಮ ಬರೆದ ಛಂದೋಂಬುಧಿ (ಸು.990) ಅತ್ಯಂತ ಪ್ರಾಚೀನವೂ ಪ್ರಮಾಣಭೂತವೂ ಪ್ರಸಿದ್ಧವೂ ಆದ ಗ್ರಂಥ. ಇದರಲ್ಲಿ ಕನ್ನಡ ಛಂದಸ್ಸಿಗೆ ಸಂಬಂಧಿಸಿದ ನಾನಾ ವಿಷಯಗಳು ಸ್ವತಂತ್ರವಾಗಿಯೂ ತಕ್ಕಮಟ್ಟಿಗೆ ವಿಸ್ತಾರವಾಗಿಯೂ ಪ್ರತಿಪಾದಿತವಾಗಿವೆ. ಇದಕ್ಕೂ ಮುಂಚಿನ ಕಾವ್ಯಲಕ್ಷಣಗ್ರಂಥವಾದ (ಸು.850) ಕವಿರಾಜಮಾರ್ಗ (ನೋಡಿ) ಕನ್ನಡ ಛಂದಸ್ಸಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಒಳಗೊಂಡಿದೆ. ತಮಿಳು ಭಾಷೆಯ ಯಾಪ್ಪರುಂಗಲಕ್ಕಾರಿಹೈ ಎಂಬ ಪ್ರಾಚೀನ ಛಂದೋಗ್ರಂಥದ ವ್ಯಾಖ್ಯಾನದಲ್ಲಿ ಗುಣಗಾಂಕಿಯಂ ಎಂಬ ಕನ್ನಡ ಛಂದೋಗ್ರಂಥದ ಉಲ್ಲೇಖವಿದೆ. ಇದು ಈವರೆಗೆ ದೊರೆತಿಲ್ಲ. ಅಲ್ಲದೆ ಈ ಗ್ರಂಥದ ಅಸ್ತಿತ್ವ, ಕರ್ತೃತ್ವ, ಕಾಲ ಎಲ್ಲವೂ ತೀರ ಅನಿಶ್ಚಿತವೂ ವಿವಾದಾಸ್ಪದವೂ ಆಗಿವೆ. ಇಮ್ಮಡಿ ನಾಗವರ್ಮ (ಸು.1042) ಛಂದೋವಿಚಿತಿ ಎಂಬೊಂದು ಗ್ರಂಥವನ್ನು ಬರೆದಿದ್ದಂತೆ ಕಾವ್ಯಾವಲೋಕನದಲ್ಲಿ ದೊರೆಯುವ ಒಂದು ಆಧಾರದಿಂದ (ಪದ್ಯ 965) ತಿಳಿಯುತ್ತದೆ. ಇದೂ ದೊರೆತಿಲ್ಲ. ಈಶ್ವರಕವಿಯ ಕವಿಜಿಹ್ವಾಬಂಧನಂ, ಗುಣಚಂದ್ರನ ಛಂದಸ್ಸಾರ (ಸು.1650), ಶಾಲ್ಯದ ಕೃಷ್ಣರಾಜನ ಷಟ್ಪ್ರತ್ಯಯ ಮೊದಲಾದ ಛಂದೋಗ್ರಂಥಗಳಲ್ಲಿ ಛಂದಸ್ಸಿನ ಸಾಮಾನ್ಯ ವಿಷಯಗಳನ್ನೂ ಕನ್ನಡ ಛಂದಸ್ಸನ್ನೂ ಕುರಿತಂತೆ ಯಥೋಚಿತವಾಗಿ ವಿಷಯನಿರೂಪಣೆ ಕಂಡುಬರುತ್ತದೆ.

ಕೆಲವು ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಕೂಡ ಪ್ರಾಸಂಗಿಕವಾಗಿ ಕನ್ನಡ ಛಂದಸ್ಸಿನ ಗಣಸ್ವರೂಪವನ್ನೂ ಪ್ರಸಿದ್ಧವಾದ ಪದ್ಯಜಾತಿಗಳನ್ನೂ ವಿವೇಚಿಸಿರುವುದು ಕಂಡುಬರುತ್ತದೆ. ಜಯಕೀರ್ತಿಯ ಛಂದೋನುಶಾಸನಮ್ (ಸು.1050) ಎಂಬ ಗ್ರಂಥ ಈ ದೃಷ್ಟಿಯಿಂದ ಮುಖ್ಯವಾದುದು. ಇದರಲ್ಲಿ ಕನ್ನಡ ಛಂದಸ್ಸಿನ ಸಂಗತಿಗಳು ಕ್ವಚಿತ್ತಾಗಿ ಉಕ್ತವಾಗಿರುವುದಲ್ಲದೆ, ಕರ್ಣಾಟಕ ವಿಷಯ ಭಾಷಾ ಜಾತ್ಯಧಿಕಾರವೆಂಬ 7ನೆಯ ಅಧಿಕಾರದಲ್ಲಿ ಪೂರ್ತಿಯಾಗಿ ಕನ್ನಡ ಛಂದಸ್ಸಿನ ವಿವೇಚನೆ ಲಕ್ಷಣ ಲಕ್ಷ್ಯ ಸಮನ್ವಿತವಾಗಿ ಬಂದಿದೆ. ಈ ಗ್ರಂಥದಲ್ಲಿ ನಾಗವರ್ಮನ ಛಂದೋಂಬುಧಿಯ ಪ್ರಭಾವವನ್ನು ಕಾಣಬಹುದಾಗಿದೆ. 3ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ (ಸು.1129) ಅದರ ಚತುರ್ವಿಂಶತಿಯ 6ನೆಯ ಅಧ್ಯಾಯದಲ್ಲಿ ಕನ್ನಡ ಛಂದಸ್ಸಿಗೆ ಸಂಬಂಧಪಟ್ಟಂತೆ, ಅಂಶಗಣಗಳ ಸ್ವರೂಪವನ್ನೂ ತ್ರಿಪದಿ ಷಟ್ಪದಿ ಹಾಗೂ ಕಂದಪದ್ಯ ಇವುಗಳ ಸ್ವರೂಪವನ್ನೂ ಲಕ್ಷಣ ಲಕ್ಷ್ಯಗಳೊಂದಿಗೆ ವಿವರಿಸಿದೆ. ಶಾರ್ಙ್ಗದೇವನ ಸಂಗೀತರತ್ನಾಕರವೆಂಬ ಗ್ರಂಥದಲ್ಲಿ, ಅದರ 4ನೆಯ ಪ್ರಬಂಧಾಧ್ಯಾಯದಲ್ಲಿ, ಕನ್ನಡ ಛಂದಸ್ಸಿನ ಏಳೆ, ತ್ರಿಪದಿ ಮತ್ತು ಷಟ್ಪದಿಗಳ ಲಕ್ಷಣವನ್ನು ನಿರೂಪಿಸಿದೆ. ಕನ್ನಡ ಭಾಷಾಸಾಹಿತ್ಯಗಳ ಪರಿಚಯವಿದ್ದಂತೆ ತೋರುವ ಈ ಲಾಕ್ಷಣಿಕರ ವಿವರಣೆಗಳಿಂದ ಕನ್ನಡ ಛಂದಸ್ಸಿನ ಸ್ವರೂಪಜ್ಞಾನಕ್ಕೆ ತುಂಬ ಉಪಕಾರವಾಗಿದೆ.

**ಕನ್ನಡ ಛಂದಸ್ಸಿನ ವಿವಿಧ ಗುಣಸ್ವರೂಪ :** ಕನ್ನಡದಲ್ಲಿ ಪ್ರಚಲಿತವಾಗಿರುವ ಪದ್ಯಜಾತಿಗಳು ಮೂರು ವಿಧ. ವರ್ಣವೃತ್ತಗಳು, ಮಾತ್ರಾವೃತ್ತಗಳು ಮತ್ತು ಅಂಶವೃತ್ತಗಳು. ವರ್ಣವೃತ್ತಗಳಲ್ಲಿ ಪ್ರತಿಪಾದದಲ್ಲಿಯೂ ನಿರ್ದಿಷ್ಟವಾದ ಅಕ್ಷರ ಸಂಖ್ಯೆಯಿದ್ದು ಲಘುವೋ ಗುರುವೋ ಆಗಿರುವ ಆಯಾ ಅಕ್ಷರಗಳ ವಿನ್ಯಾಸವೂ ನಿರ್ದಿಷ್ಟವಾಗಿರುತ್ತದೆ. ಮಯರಸತಜಭನ ಎಂಬುದಾಗಿ ಸಂಜ್ಞೆಗಳನ್ನು ಮಾಡಿಕೊಂಡು ಪದ್ಯಪಾದವನ್ನು 3-3 ಅಕ್ಷರಗಳ ಗಣಗಳನ್ನಾಗಿ ವಿಭಜಿಸಿ ವೃತ್ತಗಳ ಲಕ್ಷಣವನ್ನು ತಿಳಿಯಲಾಗುತ್ತದೆ. ಮಾತ್ರಾವೃತ್ತಗಳಲ್ಲಿ ಪ್ರತಿಪಾದದಲ್ಲಿಯೂ ಇಷ್ಟಿಷ್ಟು ಮಾತ್ರೆಗಳ ಇಷ್ಟಿಷ್ಟು ಗಣಗಳೆಂದಿದ್ದು ಮಾತ್ರಾ ಸಂಖ್ಯೆಗೆ ಅನುಗುಣವಾಗಿ ಕೆಲವು ಸಂದರ್ಭಗಳಲ್ಲಿ ಕೆಲವು ವಿಶಿಷ್ಟ ಗಣನಿಯಮಗಳನ್ನನುಸರಿಸಿ, ಗಣಭಾಗವಿರುತ್ತದೆ. ಅಂಶ ವೃತ್ತಗಳಲ್ಲಿ, ಪ್ರತಿಪಾದದಲ್ಲಿಯೂ ವಾಚನದ ಅಥವಾ ಗಾಯನದ ಗತಿಯನ್ನನುಸರಿಸಿ, ತಾಳಲಯಗಳು ಸರಿಯಾಗಿ ಹೊಂದಿಕೊಳ್ಳಲು ಲಘುಗುರುಗಳ ಮಾತ್ರಾ ಪರಿಮಾಣವೂ ಹಿಗ್ಗಿ ಅಥವಾ ಕುಗ್ಗಿ ಹೊಂದಿಕೆಗೆ ಅನುವಾಗುವ ಅಕ್ಷರ (ಅಂಶ)ಗಳಿಂದ ಕಟ್ಟಿದ ಗಣಗಳು ಬಂದಿರುತ್ತವೆ. ಎಂದರೆ ಹಾಗೆ ಅಕ್ಷರಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಕ್ರಮವಾಗಿ 2, 3 ಮತ್ತು 4 ಅಂಶಗಳ ಗಣಗಳಿಗೆ ಬ್ರಹ್ಮ, ವಿಷ್ಣು, ರುದ್ರ ಎಂಬ ಸಂಕೇತಗಳನ್ನು ಕನ್ನಡದಲ್ಲಿ ಕೊಟ್ಟಿದೆ. ಅಚ್ಚಕನ್ನಡ ಮಟ್ಟುಗಳು ಅಂಶವೃತ್ತಗಳು.

**ಸಂಸ್ಕೃತ ಛಂದಸ್ಸಿನ ಮೂಲದ ವರ್ಣವೃತ್ತಗಳು :** ಪ್ರಾಚೀನ ಕನ್ನಡ ಸಾಹಿತ್ಯದ ಕಾವ್ಯಗಳೂ ಪುರಾಣಗಳೂ ವಿಶೇಷವಾಗಿ ಚಂಪೂ ಪದ್ಧತಿಯಲ್ಲಿ ರಚಿತವಾಗಿವೆ. ಚಂಪೂ ಪದ್ಧತಿಯ ಚೌಕಟ್ಟು ಮುಖ್ಯವಾಗಿ ಗದ್ಯ ಹಾಗೂ ಕಂದ, ವೃತ್ತಗಳಿಂದಾದುದು.

**ವೃತ್ತಗಳು, ವರ್ಣವೃತ್ತಗಳು :** ಸಮ, ಅರ್ಧಸಮ ಮತ್ತು ವಿಷಮ ಎಂಬ ಅವುಗಳ ಮೂರು ಪ್ರಕಾರಗಳಲ್ಲಿ ಮೊದಲನೆಯದೇ ವಿಶೇಷವಾಗಿ ಬಳಕೆಯಾಗಿರತಕ್ಕದ್ದು. ಉಳಿದವು ತೀರ ಕ್ವಚಿತ್ತಾಗಿ ಬಂದಿರತಕ್ಕವು. ವರ್ಣವೃತ್ತಗಳಲ್ಲಿ ಕೆಲವನ್ನು ಸಂಸ್ಕೃತ ಛಂದಸ್ಸಿನಿಂದ ಕನ್ನಡಕ್ಕೆ ನೇರವಾಗಿ ತೆಗೆದುಕೊಂಡಿದೆ. ಉದಾಹರಣೆಗೆ ಶಾರ್ದೂಲ ವಿಕ್ರೀಡಿತ, ಸ್ರಗ್ಧರೆ ಇತ್ಯಾದಿ: ಇನ್ನು ಕೆಲವನ್ನು ಆ ಮಾದರಿಗಳಲ್ಲಿ ಹೊಸದಾಗಿ ರಚಿಸಿಕೊಂಡಿದೆ. ಉದಾ: ಮತ್ತೇಭವಿಕ್ರೀಡಿತ, ಮಹಾಸ್ರಗ್ಧರೆ ಇತ್ಯಾದಿ. ಜೊತೆಗೆ ಕೆಲವು ವ್ಯತ್ಯಾಸಗಳನ್ನೂ ಕನ್ನಡ ಕವಿಗಳು ಮಾಡಿಕೊಂಡರು. ಸಂಸ್ಕೃತದಲ್ಲಿಯ ನಿಯತ ಯತಿಯನ್ನು ಐಚ್ಛಿಕವಾಗಿ ಭಾವಿಸಿದ್ದು. ಸಂಸ್ಕೃತದಲ್ಲಿಲ್ಲದ ದ್ವಿತೀಯಾಕ್ಷರ ಪ್ರಾಸವನ್ನು ಪಾಲಿಸಿದ್ದು, ಸಂಸ್ಕೃತದಲ್ಲಿರುವಂತೆ ಪಾದಾಂತ್ಯದಲ್ಲಿ ನಿಲುಗಡೆಯನ್ನು ಕಡ್ಡಾಯವಾಗಿಟ್ಟುಕೊಳ್ಳದೆ ಪಾದ ಮುಂದಕ್ಕೆ ಓಡುವಂತೆ ಮಾಡಿಕೊಂಡದ್ದು- ಇವು ಗಮನಿಸತಕ್ಕ ವ್ಯತ್ಯಾಸಗಳು. ಸಂಸ್ಕೃತ ವರ್ಣವೃತ್ತಗಳ ಧಾಟಿ ಘೋಷಗಳನ್ನು ಪಾಲಿಸುವುದಕ್ಕಾಗಿ ಕನ್ನಡದಲ್ಲಿ ಬಳಸಿದ ಅಂಥ ವರ್ಣವೃತ್ತಗಳಲ್ಲಿಯೂ ಸಂಸ್ಕೃತ ಶಬ್ದಗಳು ಹೆಚ್ಚು ಹೆಚ್ಚಾಗಿ ಬಳಕೆಗೆ ಬಂದು ಕನ್ನಡ ನುಡಿಗಳು ತಮ್ಮ ಸ್ವರಗಳೊಡನೆ ಎದ್ದು ನಿಂತು ಕಾಣದಂತಾಯಿತು ಎಂಬುದು ನಿಜ.

ಕನ್ನಡ ಪದ್ಯಸಾಹಿತ್ಯದಲ್ಲಿ ಬಹು ಪ್ರಚಲಿತವಾಗಿರತಕ್ಕ ವರ್ಣವೃತ್ತಗಳು ಖ್ಯಾತ ಕರ್ಣಾಟಕಗಳು ಎಂಬ ಹೆಸರಿನಲ್ಲಿ ರೂಢಿಯಾಗಿವೆ. ಇವು ಶಾರ್ದೂಲ ವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೆ, ಎಂಬ ಆರುವೃತ್ತಗಳು. ಇವು ಸರಿಸುಮಾರು 7ನೆಯ ಶತಮಾನದಿಂದ ಕನ್ನಡ ಶಾಸನಗಳಲ್ಲಿಯೂ ಕಾವ್ಯಗಳಲ್ಲಿಯೂ ಹೆಚ್ಚಾಗಿ ಬಳಕೆಯಲ್ಲಿವೆ. ಇವುಗಳ ಲಕ್ಷಣವನ್ನು ರೂಢಿಯ ಸಂಜ್ಞೆಗಳನ್ನು ಬಳಸಿದ ಪ್ರಸ್ತಾರ ನಿಯಮಕ್ಕೆ ಅನುಗುಣವಾಗಿ ಈ ಸೂತ್ರಗಳಿಂದ ನೆನಪಿಟ್ಟುಕೊಳ್ಳಬಹುದು: 1 ಶಾರ್ದೂಲ ವಿಕ್ರೀಡಿತ; ಕಣ್ಗೊಪ್ಪಲ್ | ಮಸಜಂ | ಸತಂತ| ಗಮುಮಾ | ಶಾರ್ದೂಲ | ವಿಕ್ರೀಡಿತಂ | 2 ಮತ್ತೇಭವಿಕ್ರೀಡಿತ : ಸಭರಂ | ನಂಮಯ| ಲಂಗಮುಂ | ಬಗೆಗೊಳಲ್ | ಮತ್ತೇ | ಭವಿಕ್ರೀ | ಡಿತಂ | 3 ಉತ್ಪಲಮಾಲೆ: ಉತ್ಪಲ| ಮಾಲೆಯ | ಪ್ಪುದು | ಭರಂನಭ | ಭಂರಲ | ಗಂನೆಗ | ಳ್ದಿರಲ್ | 4 ಚಂಪಕ ಮಾಲೆ: ನಜಭ | ಜಜಂಜ | ರಂ ಬಗೆ | ಗೊಳುತ್ತಿ | ರೆ ಚಂಪ | ಕಮಾಲೆ | ಯೆಂದಪರ್ | 5 ಸ್ರಗ್ಧರೆ: ತೋರಲ್ ಮಂ | ರಂಭನಂ | ಮೂಯಗ | ಣಮುಮ | ದೆತಾಂ ಸ್ರ | ಗ್ಧರಾವೃ| ತ್ತಮಕ್ಕುಂ | 6 ಮಹಾಸ್ರಗ್ಧರೆ: ಸತತಂ | ನಂಸಂರ | ರಂಗಂನೆ | ರೆದೆಸೆ | ಯೆ ಮಹಾ | ಸ್ರಗ್ಧರಾ | ವೃತ್ತಮ ಕ್ಕುಂ|. ಇಲ್ಲಿಯ ಪ್ರಸ್ತಾರ ಕ್ರಮವನ್ನು ಪರೀಶೀಲಿಸಿ ಧಾಟಿಯನ್ನರಿತುಕೊಂಡರೆ ಶಾರ್ದೂಲವಿಕ್ರೀಡಿತ, ಉತ್ಪಲಮಾಲೆ ಮತ್ತು ಸ್ರಗ್ಧರೆಗಳ ಪಾದಾದಿಯ ಗುರುವಿಗೆ ಎರಡು ಲಘುಗಳನ್ನಿಟ್ಟು ಕ್ರಮವಾಗಿ ಮತ್ತೇಭವಿಕ್ರೀಡಿತ, ಚಂಪಕಮಾಲೆ ಮತ್ತು ಮಹಾಸ್ರಗ್ಧರೆಗಳನ್ನು ಕನ್ನಡ ಕವಿಗಳು ಮಾಡಿಕೊಂಡಂತೆ ತೋರುವುದು (ಉತ್ಪಲ ಮಾಲೆ, ಚಂಪಕಮಾಲೆ ಈ ಜೋಡಿಯ ವಿಷಯದಲ್ಲಿ ಮಾತ್ರ. ಚಂಪಕಮಾಲೆಯ ಆದಿ ದ್ವಿಲಘುವಿಗೆ ಒಂದು ಗುರುವನ್ನಿಟ್ಟುಕೊಂಡು ಉತ್ಪಲಮಾಲೆಯನ್ನು ಮಾಡಿಕೊಂಡಿರುವ ಸಾಧ್ಯತೆಯಿದೆ). ಸಂಸ್ಕೃತದಲ್ಲಿ ಪೂರ್ವೋಕ್ತವಾದ ಶಾರ್ದೂಲಾದಿಗಳು ಪ್ರಸಿದ್ಧವಾಗಿರುವುದೂ ಮತ್ತೇಭಾದಿಗಳು ಏನೂ ಪ್ರಸಿದ್ಧವಾಗಿಲ್ಲದಿರುವುದೂ ಹೀಗೆ ತಿಳಿಯುವುದಕ್ಕೆ ಎಡೆಕೊಟ್ಟಿದೆ.

ಹಳಗನ್ನಡ ಸಾಹಿತ್ಯದಲ್ಲಿ ಖ್ಯಾತಕರ್ಣಾಟಕಗಳ ಜೊತೆಗೆ ಅಲ್ಲಲ್ಲಿ ವಿರಳವಾಗಿ ಬಳಸಿರುವ ಇನ್ನೂ ಕೆಲವು ವರ್ಣವೃತ್ತಗಳುಂಟು. ಮಾಲಿನಿ, ಹರಿಣಿ, ಪೃಥ್ವಿ, ಮಲ್ಲಿಕಾಮಾಲೆ, ತರಳ ಮೊದಲಾದವು ಹೀಗೆ

ಬಳಕೆಯಾಗಿರತಕ್ಕವು. ಕವಿಯ ಕೌಶಲವನ್ನು ಎತ್ತಿತೋರುವುದಕ್ಕಾಗಿಯೇ ರಚನೆಯಲ್ಲಿ ವೈವಿಧ್ಯವನ್ನು ತರುವುದಕ್ಕಾಗಿಯೇ ಒಂದೊಂದು ಕೃತಿಯಲ್ಲಿ ಅಲ್ಲಲ್ಲಿ 1-2ರಂತೆ ಅಥವಾ ಬೆರಳೆಣಿಕೆಗೆ ಸಿಗುವಷ್ಟು ಮಾತ್ರ ಇವು ಬಂದಿವೆ. ಇಲ್ಲಿಯೂ ಕೆಲವು ಸಂಸ್ಕೃತದಿಂದ ನೇರವಾಗಿ ಪಡೆದಂಥವು. ಕೆಲವು ಸ್ವತಃ ಮಾಡಿಕೊಂಡವು. ಈ ಎರಡು ಬಗೆಗಳೂ ಕಾವ್ಯ ಗ್ರಂಥ'ಗಳಿಗಿಂತ ಶಾಸ್ತ್ರಗ್ರಂಥಗಳಲ್ಲಿ ಕಾಣುವುದೇ ಹೆಚ್ಚು. ಉದಾಹರಣೆಗೆ ಚಂದ್ರರಾಜನ ಮದನತಿಲಕ, ಜನ್ನನ ಅನುಭವ ಮುಕುರ ಇತ್ಯಾದಿಗಳನ್ನು ನೋಡಬಹುದು. ಇಂಥ' ವೃತ್ತಗಳಲ್ಲಿ ಪ್ರಸಿದ್ಧವಾದವುಗಳ ಲಕ್ಷಣಗಳನ್ನು ಪಿಂಗಲ, ಜಯದೇವಾದ್ಯರ ಸಂಸ್ಕೃತ ಛಂದೋ ಗ್ರಂಥಗಳಲ್ಲಿಯೂ ನಾಗವರ್ಮ, ಗುಣ ಚಂದ್ರಾದ್ಯರ ಕನ್ನಡ ಛಂದೋಗ್ರಂಥಗಳಲ್ಲಿಯೂ ಹೇಳಿದೆ. (ಟಿ.ವಿ.ವಿ.,ಡಿ.ಎಸ್.ಕೆ.)

ಗದಾಯುದ್ಧ, ಪಂಪರಾಮಾಯಣ ಮುಂತಾದ ಕೆಲವು ಕಾವ್ಯಗಳಲ್ಲಿ ಲಲಿತ ವೃತ್ತವೆಂಬ ಪ್ರಸಿದ್ಧವಾದ ಮಾಲಾವೃತ್ತವನ್ನು ಬಳಸಿದೆ. ಲಕ್ಷಣ - ಇದರಲ್ಲಿ ನಾಲ್ಕು ಪಾದಗಳು, ಪ್ರತಿ ಪಾದದಲ್ಲಿಯೂ ಮೂವತ್ತು ಅಕ್ಷರಗಳು. ಅಕ್ಷರಗಳ ವಿನ್ಯಾಸ ಹೀಗೆ- ಭ ಜ ಸ ನ ಭ ಜ ಸ ನ ಭ ಯ. ನಿದರ್ಶನಕ್ಕೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ದೇಕಬ್ಬೆಯ ಶಾಸನದಲ್ಲಿ ಬರುವ ಲಲಿತವೃತ್ತದ ಒಂದು ಸಾಲು:

ಭ ಜ ಸ ನ ಭ ಜ
ಶ್ರೀ ರಮ | ಣಿ ಗೌರಿ | ಸಚಿ ಧಾ | ರಿಣಿಯ | ಪುತ್ರಿ ರ | ತಿ ಭೂರ|

ಸ ನ ಭ ಯ
ಮಣಿಯಂ | ದದ ಸ | ರೂಪವ | ಜೀವಳ್ಪ | 

ಶಾಸನದಲ್ಲಿರುವ ಆ ಪದ್ಯದ ಪೂರ್ಣಪಾಠವನ್ನು ಗಮನಿಸಿ ಅದರಲ್ಲಿ ಮೂರು ಮೂರು ಅಕ್ಷರಗಳ ಹತ್ತು ಗಣಗಳಿವೆಯೆಂದು ಹೇಳಬಹುದು. ಆದರೆ ಅದು ಪ್ರತಿ ಪಾದದಲ್ಲಿಯೂ ಬರುವ ಅಕ್ಷರವಿನ್ಯಾಸವನ್ನು ಹೇಳಿದಂತಾಗುತ್ತದೆಯೆ ಹೊರತು, ಪದ್ಯವನ್ನು ಓದಿದಾಗ ನಮ್ಮ ಕಿವಿಗೆ ಬೀಳುವ ಲಯವನ್ನು ನಿರೂಪಿಸಿದಂತಾಗುವುದಿಲ್ಲ. ವಾಸ್ತವವಾಗಿ ಆ ಪದ್ಯದ ಪ್ರತಿ ಪಾದದಲ್ಲಿ ಐದು ಮಾತ್ರೆಯ ಏಳು ಗಣಗಳೂ ಕೊನೆಯಲ್ಲಿ ನಾಲ್ಕು ಮಾತ್ರೆಯ ಒಂದು ಗಣವೂ ನಮ್ಮ ಕಿವಿಗೆ ಕೇಳಿಸುತ್ತದೆ. ದ್ವಿತೀಯ ಪ್ರಾಸಾಕ್ಷರ ಪ್ರತಿ ಪಾದದಲ್ಲೂ ಮತ್ತೆ ಎರಡು ಸಾರಿ ಪುನರಾವರ್ತನಗೊಳ್ಳುವುದು ಇಲ್ಲಿ ಗಮನಿಸಬೇಕಾದ ಸಂಗತಿ.

ನಾಗವರ್ಮ ಛಂದೋಂಬುಧಿಯಲ್ಲಿ ಹೇಳಿರುವ ಈ ಲಲಿತ ವೃತ್ತವೇ ಲಯಗ್ರಾಹಿಯಾಗಿ ಮುಂದೆ ಚಿಕದೇವರಾಜಬಿನ್ನಪ ಮುಂತಾದ ಕೃತಿಗಳಲ್ಲಿ ಬಳಕೆಯಾಯಿತು. ತೆಲುಗಿನ ಕವಿಜನಾಶ್ರಯಮು ಮುಂತಾದ ಛಂದೋಗ್ರಂಥಗಳಲ್ಲೂ ಕನ್ನಡದ ಲಲಿತವೃತ್ತವನ್ನೇ ಲಯಗ್ರಾಹಿ ಎಂದು ಕರೆಯಲಾಗಿದೆ. ತೆಲುಗಿನ ಲಯಗ್ರಾಹಿಯಲ್ಲಿ ದ್ವಿತಿಯ ಪ್ರಾಸಾಕ್ಷರ ಪ್ರತಿ ಪಾದದಲ್ಲೂ ಮತ್ತೆ ಮೂರು ಸಾರಿ ಪುನರಾವರ್ತನಗೊಳ್ಳುತ್ತದೆ. ಕನ್ನಡದ ಲಲಿತಕ್ಕೂ ತೆಲುಗಿನ ಲಯಗ್ರಾಹಿಗೂ ಇರುವ ಒಂದು ಸಣ್ಣ ವ್ಯತ್ಯಾಸ ಇದು. ತೆಲುಗಿನ ಪ್ರಭಾವದಿಂದ ಹತ್ತು ಹನ್ನೊಂದನೆಯ ಶತಮಾನದ ಲಲಿತವೃತ್ತವು ಲಯಗ್ರಾಹಿ ಎಂದು ಹದಿನೈದನೆಯ ಶತಮಾನದಿಂದ ಈಚೆಗೆ ಕನ್ನಡದಲ್ಲಿ ಬಳಕೆಗೆ ಬಂದು, ತೆಲುಗಿನ ಲಕ್ಷಣಗಳನ್ನೆ ಪಡೆದುಕೊಂಡಿತು. ಅಂದರೆ, ಪ್ರಾಸಾಕ್ಷರ ಮತ್ತೆ ಮೂರು ಬಾರಿ ಪುನರಾವರ್ತನ ಗೊಳ್ಳುವುದನ್ನು ಈಚಿನ ಕನ್ನಡ ಲಯಗ್ರಾಹಿಗಳಲ್ಲಿ ಗುರುತಿಸಬಹುದು. ಷಡಕ್ಷರ ಕವಿಯ ರಾಜಶೇಖರವಿಳಾಸದ ಒಂದು ಲಯಗ್ರಾಹಿಯ ಮೊದಲ ಸಾಲು ಹೀಗಿದೆ: ಧೀರಜನರಿಂ ಶ್ರುತಿ ವಿಚಾರಪರರಿಂ ಲಸದುದಾರಗುಣದಿಂ ದುರಿತದೂರ ಶಿವಭಕ್ತ್ಯಾ|ಲಯಗ್ರಾಹಿ ಅನೇಕ ಕವಿಗಳಿಂದ ಬಳಕೆಯಾಗಿರುವುದಲ್ಲದೆ, ಇದರಲ್ಲೇ ನಂದಿದೇವ ಎಂಬ ಕವಿ ಲಯಗ್ರಾಹಿಶತಕ ಎಂಬ ಸ್ತೋತ್ರರೂಪವಾದ ಶತಕವನ್ನೇ ರಚಿಸಿದ್ದಾನೆ. ಲೀಲಾವತಿಯಲ್ಲಿ ಮಾತ್ರಾವರ್ಣ ಮಿಶ್ರ ಚತುಷ್ಪದಿಯಾದ (ಮಾತ್ರಾವೃತ್ತ) ಲಯೋತ್ತರವೆಂಬ ಒಂದು ವೃತ್ತವಿದೆ. ಹೀಗೆಯೇ ಇಂಥ ವೃತ್ತಗಳು ಇನ್ನೂ ಕೆಲವು ಬೇರೆ ಬೇರೆ ಕಾವ್ಯಗಳಲ್ಲಿರಬಹುದು. (ಎಂ.ಪಿ.)

ಹಳಗನ್ನಡ ಪದ್ಯಗ್ರಂಥಗಳಲ್ಲಿ ಅರ್ಧಸಮ ಮತ್ತು ವಿಷಮವೃತ್ತಗಳು ಹಾಗೂ ದಂಡಕಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುವುದಿಲ್ಲ. ಕವಿರಾಜಮಾರ್ಗ, ಕಾವ್ಯಾವಲೋಕನ, ಚಿಕದೇವ ರಾಜವಿಜಯ- ಇವುಗಳಲ್ಲಿ ಕ್ರಮವಾಗಿ ಪುಷ್ಪಿತಾಗ್ರ, ನಾಗ, ವಿಯೋಗಿನಿ ಮತ್ತು ವಸಂತಮಾಲಿಕೆ- ಈ ಅರ್ಧಸಮವೃತ್ತಗಳು ಬಳಕೆಯಾಗಿವೆ. ಮದನತಿಲಕದಲ್ಲಿ ತ್ರಿಪದೋನ್ನತಿಯೆಂಬ ವಿಷಮವೃತ್ತವಿದೆ.

ಸಂಸ್ಕೃತ ಕಾವ್ಯಗಳ, ಶಾಸ್ತ್ರಗಳ ಸುಪ್ರಸಿದ್ಧವಾದ ಶ್ಲೋಕಛಂದಸ್ಸು ಕನ್ನಡದಲ್ಲಿ ಕ್ವಚಿತ್ತಾಗಿ ಮಾತ್ರ ಕಾಣುತ್ತದೆ. ಕವಿರಾಜಮಾರ್ಗದಲ್ಲಿ ನಿಯಮಬದ್ಧವಾದ ಕೆಲವು ಶ್ಲೋಕಗಳಿವೆ. ಕಾವ್ಯಾವಲೋಕನದಲ್ಲಿಯೂ ಕೆಲವು ಶ್ಲೋಕಗಳಿವೆ. ಆದರೆ ಇದರ ಬಳಕೆ ಮುಂದೆ ಹೆಚ್ಚಾಗಿ ಆಗಲಿಲ್ಲ. ಕವಿರಾಜಮಾರ್ಗದಿಂದ ಒಂದು ಉದಾಹರಣೆಯನ್ನು ನೋಡಬಹುದು:

ತಾರಾ ಜಾನಕಿಯಂ ಪೋಗಿ |
ತಾರಾ ತರಳನೇತ್ರೆಯಂ |
ತಾರಾಧಿಪತಿತೇಜಸ್ವಿ |
ತಾರಾದಿವಿಜಯೋದಯಾ ||

ಇಲ್ಲಿಯ 4 ಪಾದಗಳಲ್ಲಿ, ಪ್ರತಿ ಪಾದದಲ್ಲಿಯೂ 5ನೆಯ ಅಕ್ಷರ ಲಘುವಾಗಿಯೂ 6ನೆಯದು ಗುರುವಾಗಿಯೂ ಇದ್ದು, 7ನೆಯ ಅಕ್ಷರ 1,3ನೆಯ ಪಾದಗಳಲ್ಲಿ ಗುರುವಾಗಿಯೂ 2,4ನೆಯ ಪಾದಗಳಲ್ಲಿ ಲಘುವಾಗಿಯೂ ಇರುವುದು ಕಾಣುತ್ತದೆ. ಕನ್ನಡ ಪದ್ಯಗಳಿಗೆ ಸಹಜವಾದ ಆದಿಪ್ರಾಸವನ್ನಿಟುಕೊಂಡಿದೆ.

**ಸಂಸ್ಕೃತ-ಪ್ರಾಕೃತ ಪ್ರಭಾವದಿಂದ ಹುಟ್ಟಿದ ಮಾತ್ರಾವೃತ್ತಗಳು :** ಕನ್ನಡ ಸಾಹಿತ್ಯದ ಕಾವ್ಯಶಾಸ್ತ್ರಾದಿ ಗ್ರಂಥಗಳಲ್ಲಿ ಬಳಕೆಯಾಗಿರುವ ಕಂದಪದ್ಯವೂ ಅಲ್ಲಿಯೇ ವಿರಳವಾಗಿ ಬಳಕೆಯಾಗಿರುವ ರಗಳೆಯೂ ಈ ಗುಂಪಿನ ಗಣ್ಯವೃತ್ತಗಳಾಗಿವೆ. ಈ ಪದ್ಯಜಾತಿಗಳನ್ನೆ ತನಿಯಾಗಿ ಬಳಸಿ ಕೃತಿರಚನೆ ಮಾಡಿರುವುದೂ ಉಂಟು. ಲಕ್ಷಣ ಗ್ರಂಥಗಳ ರಚನೆಗೆ ಕಂದಪದ್ಯವನ್ನು ಹೆಚ್ಚಾಗಿ ಬಳಸಿದೆ. ಜನ್ನನ ಯಶೋಧರ ಚರಿತೆ ಕಾವ್ಯವಾಗಿಯೂ ಸಮಗ್ರವಾಗಿ ಕಂದದಲ್ಲಿ ರಚಿತವಾಗಿದೆ. ಹರಿಹರ ಮತ್ತು ಅವನಿಗೆ ಈಚಿನ ಕೆಲವು ಕವಿಗಳು ಬರೆದಿರುವ ಶೈವಪರವಾದ ಕೃತಿಗಳು ರಗಳೆಯಲ್ಲಿವೆ.

**ಕಂದ :** ಸಂಸ್ಕೃತದ ಆರ್ಯಾವೃತ್ತವರ್ಗದ ಆರ್ಯಗೀತೆಯೇ ಪ್ರಾಕೃತದಲ್ಲಿ ಸ್ಕಂಧಕ (ಖಂಧಅ)ವೆಂದಾಗಿ, ಆ ಮೂಲಕವಾಗಿ ಕನ್ನಡಕ್ಕೆ ಬಂದು ಕಂದ ಎಂಬ ಹೆಸರಿನಲ್ಲಿ ರೂಢಿಯಾಗಿರಬೇಕೆಂದು ತೋರುತ್ತದೆ. ಇದರ ಸಾಮಾನ್ಯಲಕ್ಷಣ ಹೀಗೆ: 4 ಪಾದಗಳು; ಇವುಗಳಲ್ಲಿ 1, 2ನೆಯ ಪಾದಗಳಂತೆಯೇ 3, 4ನೆಯ ಪಾದಗಳಿರುತ್ತವೆ. 1, 2ನೆಯ ಪಾದಗಳಲ್ಲಿ ಕ್ರಮವಾಗಿ 3, 5 ರ ಹಾಗೆ ಒಟ್ಟು 8 ಚತುರ್ಮಾತ್ರಾಗಣಗಳು (12+20=32); 3, 4ನೆಯ ಪಾದಗಳಲ್ಲಿಯೂ ಹೀಗೆಯೇ. ಚತುರ್ಮಾತ್ರಾ ಗಣಗಳ ಕಟ್ಟು ಕೆಡಬಾರದು. ಪ್ರಥಮಾರ್ಧದ ಹಾಗೂ ದ್ವಿತೀಯಾರ್ಧದ 8ನೆಯ ಗಣಸ್ಥಾನದ ಅಂತ್ಯದಲ್ಲಿ ಗುರು ತಪ್ಪದೆ ಬಂದಿರಬೇಕು. ಈ ಎರಡೂ ಅರ್ಧಗಳ ವಿಷಮ ಸ್ಥಾನಗಳಲ್ಲಿ ಮಧ್ಯಗುರುವಿನ (⏑–⏑) ಗಣ ಬರಬಾರದು. ಆದರೆ ಅವುಗಳ 6ನೆಯ ಗಣಸ್ಥಾನಗಳಲ್ಲಿ ಮಧ್ಯ ಗುರುವಿನ ಗಣವಾಗಲಿ ಸರ್ವಲಘುವಿನ (⏑⏑⏑⏑) ಗಣವಾಗಲಿ ತಪ್ಪದೆ ಬಂದಿರಬೇಕು. ಸರ್ವಲಘುವಿನ ಗಣವಾಗಿದ್ದ ಪಕ್ಷದಲ್ಲಿ ಹಾಗೆಯೇ ಮಧ್ಯಗುರುವಿನ ಗಣ (ಜಗಣ)ವಾಗಿದ್ದ ಪಕ್ಷದಲ್ಲಿಯೂ ಮೊದಲ ಹ್ರಸ್ವದ ಮುಂದೆ ಯತಿಯಿರಬೆಕು. 7ನೆಯ ಗಣ ಸರ್ವಲಘುವಿನ ಗಣವಾಗಿದ್ದಲ್ಲಿ ಮೊದಲನೆಯ ಹ್ರಸ್ವದಿಂದಲೇ ಹೊಸ ಪದ ಮೊದಲಾಗಬೇಕು. ಲಕ್ಷಣಾನ್ವಿತವಾದ ಕಂದಕ್ಕೆ ಉದಾಹರಣೆ:

ಕಾವೇ | ರಿಯಿಂದ | ಮಾ ಗೋ
ದಾವರಿ | ವರಮಿ | ರ್ಪ ನಾಡ | ದಾ ಕ | ನ್ನಡದೊಳ್
ಭಾವಿಸಿ | ದ ಜನಪ | ದಂ ವಸು
ಧಾವಳ | ಯ ವಿಲೀ | ನ ವಿಶದ | ವಿಷಯವಿ | ಶೇಷಂ|
(ಕವಿರಾಜಮಾರ್ಗ)

**ರಗಳೆ :** ನಾಗವರ್ಮ ಮತ್ತು ಜಯಕೀರ್ತಿ ಈ ಛಂದಸ್ಸಿನ ಲಕ್ಷಣವನ್ನು ಹೇಳಿದವರಲ್ಲಿ ಮುಖ್ಯರು. ಮಂದಾನಿಲ, ಲಲಿತ ಮತ್ತು ಉತ್ಸಾಹ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿರುವ ರಗಳೆಯ ಮೂರು

ಪ್ರಭೇದಗಳು ಹರಿಹರನ ರಗಳೆಯ ಕಾವ್ಯಗಳಲ್ಲಿ ಮತ್ತು ಈಚೆಗೆ ಹೆಚ್ಚು ಸ್ಪಷ್ಟವಾದ ರೂಪದಲ್ಲಿ ಗೋಚರಿಸುತ್ತವೆ. ಆದರೆ ಇದಕ್ಕೆ ಮೊದಲೇ ಇವನ್ನು ಹೋಲುವ ಕೆಲವು ನಿದರ್ಶನಗಳು ಪಂಪ, ಪೊನ್ನ ರನ್ನ ಮೊದಲಾದ ಪ್ರಾಚೀನ ಕನ್ನಡ ಕವಿಗಳ ಚಂಪೂಕಾವ್ಯಗಳಲ್ಲಿ ಕ್ವಚಿತ್ತಾಗಿ ಕಂಡುಬರುತ್ತವೆ. ಇವುಗಳಲ್ಲಿ ಮಂದಾನಿಲ ರಗಳೆಯನ್ನು ಹೋಲುವ 16, 32 ಮುಂತಾಗಿ ಪಾದ ಪ್ರಮಾಣವನ್ನುಳ್ಳ ನಿದರ್ಶನಗಳೇ ಪ್ರಮುಖವಾದವು. ಇವುಗಳ ಲಕ್ಷಣವನ್ನು ಪರಿಶೀಲಿಸಿದಾಗ ಇವು ಅಪಭ್ರಂಶ ಕಾವ್ಯ ಪ್ರಚಲಿತಗಳಾದ ಪಜ್ಝಟಿಕಾ ಛಂದಸ್ಸನ್ನು ಬಳಸಿ ಕಟ್ಟಿರುವ ಷೋಡಶಪಾದ ಪ್ರಮಾಣದ ಕಡವಕಗಳ ಅನುಕರಣದಿಂದಾಗಿ ಹುಟ್ಟಿರಬೇಕೆಂಬ ಸಂಗತಿ ತಿಳಿದುಬಂದಿದೆ. ಜಯಕೀರ್ತಿಯು ಕೊಡುವ ರಘಟಾಲಕ್ಷಣದ ಪದ್ಯದಲ್ಲಿ ದೊರೆಯುವ ಒಂದು ಸೂಚನೆಯಿಂದಲೂ ಅಲ್ಲಲ್ಲಿ ಇಂಥ ಪದ್ಯಗಳಿಗೆ ಪದ್ಧತಿ (ಪಜ್ಝಟಿಕೆ) ಎಂಬುದರ ಪ್ರತಿಶಬ್ದವಾಗಿ ಪದ್ದಳಿ, ಪಡ್ಡಳಿ ಎಂಬ ರೂಪಗಳು ಮಾತೃಕೆಗಳಲ್ಲಿ ಕಂಡುಬರುವುದರಿಂದಲೂ ಈ ವಿಷಯ ದೃಢಪಟ್ಟಿದೆ. ಕನ್ನಡದ ಪದ್ದಳಿಯ ರಗಳೆ ಅಪಭ್ರಂಶದ ಪಜ್ಝಟಿಕೆಯ ಕಡವಕಗಳ ಹಾಗೆ. ಹೀಗೆ ಪ್ರಾಕೃತ ಮೂಲವನ್ನು ಅನುಸರಿಸಿದಾಗ ಸ್ವತಂತ್ರಿಸಿ ಕೆಲವು ವ್ಯತ್ಯಾಸಗಳನ್ನು ಕನ್ನಡದಲ್ಲಿ ಮಾಡಿಕೊಂಡಿದೆ:

1 ಪಜ್ಝಟಿಕೆ ಛಂದಸ್ಸಿನ ಕಡವಕದ ಒಂದು ಪಾದಯುಗ್ಮ:
ಉತ್ತುಂ | ಗಸಿಹರು | ಸುರಗಿರಿ | ಸಮಾಣು
ಆಸ | ಣ್ಣು ಗಂಪಿ | ಮಣಹರು | ವಿಮಾಣು
(ಣಾಯಕುಮಾರ ಚರಿಉ)

ಅದೇ ಛಂದಸ್ಸಿನ (ಪದ್ಧಳಿ, ಪಡ್ಡಳಿ) ರಗಳೆಯ ಒಂದು ಪಾದಯುಗ್ಮ:
ಸ್ಫುರಿತೇಂದ್ರ ನೀಲಮಣಿಖಚಿತಭೂಮಿ |
ಚೆಲುವಿಂಗಿದು ನೆಟ್ಟನೆ ಜನ್ಮಭೂಮಿ ‖ (ಆದಿಪುರಾಣ)

2 ಹೀಗೆಯೇ 4 ತ್ರಿಮಾತ್ರಾಗಣಗಳಿಂದಾದ ಕಡವಕದ ಒಂದು ಪಾದಯುಗ್ಮ:
ಕಾಣ | ಕುಂಟ | ಪಿಂಗ | ಲಾಹ
ಅಂಧ | ಮೂಯ | ಪಂಗು | ಲಾಹ ‖ (ಪುಷ್ಪದಂತನ ಮಹಾಪುರಾಣ)
ಅದನ್ನು ಹೋಲುವ ರಗಳೆಯ ಒಂದು ಪಾದಯುಗ್ಮ:
ಅದಱ | ಬಳಸಿ | ದುಪವ | ನಂಗ
ಳುದಿತ | ಕೋಕಿ | ಲಸ್ವ | ನಂಗ (ಅಜಿತಪುರಾಣ)

3 ಹೀಗೆಯೇ 4 ಪಂಚಮಾತ್ರಾಗಣಗಳಿಂದಾದ ಕಡವಕದ ಒಂದು ಪಾದಯುಗ್ಮ:
ಪರದರಣೆ | ಪರತರುಣಿ | ಪರದವಿಣ | ಕಂಖಾಎ
ಮರಿಹೀಸಿ | ದುಚ್ಚಾರ | ಖಲಚೋರ | ಸಿಕ್ಖಾಎ
ಅದನ್ನು ಹೋಲುವ ರಗಳೆಯ ಒಂದು ಪಾದಯುಗ್ಮ:
ಶ್ರೀಗೆ | ಕುಲ | ಸದನಮೆನೆ | ತೊಳಪ | ಮಣಿ | ಭವನದೊಳ್
ರಾಗರಸ ‖ ಮೊದವೆ | ಸರ | ಸಿರುಹ ಸಮ | ವದನದೊಳ್
(ಆದಿಪುರಾಣ)

ಚಂಪೂಕಾವ್ಯ ಪ್ರಚಲಿತಗಳಾದ, ಕ್ವಚಿತ್ತಾಗಿ ಶಾಸನಗಳಲ್ಲಿಯೂ ಕಾಣುವ ಈ ಮೂರು ಬಗೆಯ ರಗಳೆಗಳಿಗೂ ಅಪಭ್ರಂಶ ಛಂದಸ್ಸಿನಲ್ಲಿ ಕ್ರಮವಾಗಿ ತ್ರಿಕಲ, ಚತುಷ್ಕಲ ಮತ್ತು ಪಂಚಕಲಗಳ ಮೂರು ಬಗೆಯ ಛಂದಸ್ಸುಗಳಿಂದ ಕಟ್ಟಿದ ಕಡವಕಗಳೇ ಪ್ರಾಯಃ ಮೂಲ ಮತ್ತು ಪ್ರೇರಕ ಎಂಬುದು ಇದರಿಂದ ವಿಶದಪಡುತ್ತದೆ. ಇವುಗಳಿಗೆ ರಗಳೆಯೆಂಬ ಸಾಮಾನ್ಯ ವಾಚಕವಿದ್ದುದು ಸ್ಪಷ್ಟ, ಆದರೆ ಪ್ರಭೇದಗಳಿಗೆ ಪ್ರತ್ಯೇಕವಾಗಿ ಗೊತ್ತಾದ ಹೆಸರುಗಳಿದ್ದಂತೆ ತೋರುವುದಿಲ್ಲ. 3, 4 ಮತ್ತು 5 ಮಾತ್ರೆಗಳ ಈ ರಗಳೆಗಳಲ್ಲಿ ಪಾದಸಂಖ್ಯೆ, ಪ್ರಾಸಸಂಖ್ಯೆ, ಪ್ರಾಸವಿನ್ಯಾಸ, ಅಂತ್ಯಗಣನಿಯಮ ಮೊದಲಾದವುಗಳಲ್ಲಿ ಪ್ರಾಚೀನ ಕನ್ನಡ ಕವಿಗಳು ಅಪಭ್ರಂಶ ಕವಿಗಳ ಹಾಗೆಯೇ ತಾವೂ ವ್ಯತ್ಯಾಸಗಳನ್ನೂ ವೈವಿಧ್ಯಗಳನ್ನೂ ಕಾಣಿಸಿದ್ದಾರೆ. ಇವು 12ನೆಯ ಶತಮಾನದಲ್ಲಿ ಹರಿಹರನ ಕೈಯಲ್ಲಿ ಬಲುಮಟ್ಟಿಗೆ ಒಂದು ಸ್ಥಾಯಿಯಾದ ರೂಪವನ್ನು ಪಡೆದುಕೊಂಡು ಉತ್ಸಾಹ, ಮಂದಾನಿಲ ಮತ್ತು ಲಲಿತವೆಂಬ ಹೆಸರಿಂದ ಮುನ್ನೆಲೆಗೆ ಬಂದುವು. ವರ್ಣನೆ, ಕಥನಗಳಿಗೆ ಚೆನ್ನಾಗಿ ಒಗ್ಗುವ ಈ ಛಂದಸ್ಸನ್ನು ಕಾವ್ಯರಚನೆಗೆ ಪ್ರಮುಖವಾದ ಛಂದಸ್ಸಾಗಿ ಆತ ಯೋಜಿಸಿ ಅವಕ್ಕೆ ಮಹತ್ತ್ವವನ್ನು ತಂದುಕೊಟ್ಟ. ಬಲುಮಟ್ಟಿಗೆ ನಿಯತ ಇಲ್ಲವೆ ಅಲ್ಪ ಸಂಖ್ಯೆಯ ಪಾದಪ್ರಮಾಣ, ಅಂತ್ಯಪ್ರಾಸನಿಬದ್ಧತೆ, ಹೊಂದಾಣಿಕೆಯ ಮಾತ್ರಾಲಯ, ಪಾದಾಂತದಲ್ಲಿ ಪದ ಮುಗಿಯದೆ ಮುಂದಿನ ಪದಕ್ಕೋಡುವುದು. ಅಂತ್ಯಗಣನಿಯಮಬದ್ಧತೆ, ಇವುಗಳ ಸ್ಥಾನದಲ್ಲಿ ಅನಿಯತ ಹಾಗೂ ಅಧಿಕಸಂಖ್ಯೆಯ ಪಾದಪ್ರಮಾಣ, ಆದ್ಯಂತ ಪ್ರಾಸಬದ್ಧತೆ, ಖಚಿತವಾದ ಮಾತ್ರಾಲಯ, ತಾಳಗತಿಗೆ ಅಡ್ಡಿಯಾಗದಂತೆ ಗಣೋಪಸಂಹಾರ- ಇವು ಹರಿಹರಾದ್ಯರು ಬಳಸಿದ ಉತ್ಸಾಹಾದಿ ರಗಳೆಗಳ ಸಾಮಾನ್ಯ ಲಕ್ಷಣಗಳಾದುವು.

ಉತ್ಸಾಹದ ಸಾಮಾನ್ಯ ಲಕ್ಷಣ ಒಂದು ರೀತಿ - 4 ತ್ರಿಮಾತ್ರಾಗಣಗಳಂತೆ ಪಾದಕ್ಕೆ 12 ಮಾತ್ರೆಗಳು

ಕುಳಿರ್ವ | ಪೂಗೊ | ಳಂಗ | ಳಲ್ಲಿ
ತಳಿರ |ಕಾವ | ಣಂಗ | ಳಲ್ಲಿ (ಕಬ್ಬಿಗರ ಕಾವ)

ಇನ್ನೊಂದು ರೀತಿ 8 ತ್ರಿಮಾತ್ರಾಗಣಗಳಂತೆ ಪಾದಕ್ಕೆ 16 ಮಾತ್ರೆಗಳು
ಮಗನ | ಕರೆಯ | ಲಂದು | ಶಂಕೆ | ಯಿಲ್ಲ | ದಿರ್ದ | ರೆಳ್ದು | ಪೋಗಿ
ಮಗನೆ | ಮಗನೆ | ಬಾರೆ | ನುತ್ತೆ | ತಂದೆ | ಕರೆದು | ನೋಡಿ ಬೀಗಿ ‖
(ಸಿರಿಯಾಳನ ರಗಳೆ)

ಮಂದಾನಿಲದ ಸಾಮಾನ್ಯ ಲಕ್ಷಣ: 4 ಚತುರ್ಮಾತ್ರಾಗಣಗಳಂತೆ ಪಾದಕ್ಕೆ 16 ಮಾತ್ರೆಗಳು:
ಪಂಕಜ | ದಂತಿರೆ | ಪುಟ್ಟಿದ | ಳೊಲವಿಂ
ಪಂಕವ | ನೆಂದುಂ | ಪೊರ್ದದೆ | ನಲವಿಂ
(ಆದಯ್ಯನ ರಗಳೆ)

ಲಲಿತದ ಸಾಮಾನ್ಯ ಲಕ್ಷಣ 4 ಪಂಚಮಾತ್ರಾಗಣಗಳಂತೆ ಪಾದಕ್ಕೆ 20 ಮಾತ್ರೆಗಳು:
ಸೊಂಪಿನಿಂ | ಕಂಪಿಡುವ | ಸಂಪಗೆಗ | ಳಂ ಕೊಂಡು ‖
ಹೊಂಪೆಸೆವ | ಹೊಂಗೇದ | ಗೆಯ ಹೂಗ | ಳಂ ಕೊಂಡು
(ಬಸವರಾಜದೇವರ ರಗಳೆ)

**ಅಚ್ಚಕನ್ನಡ ಛಂದಸ್ಸಿನ ಮಟ್ಟುಗಳು :** ಇದನ್ನು ನಾಗವರ್ಮ ಕರ್ಣಾಟಕ ವಿಷಯಜಾತಿವೃತ್ತ ಎಂದೂ ಜಯಕೀರ್ತಿ ಕರ್ಣಾಟಕ ವಿಷಯಭಾಷಾಜಾತಿ ಎಂದೂ ಕರೆದಿದ್ದಾರೆ. ಕನ್ನಡನಾಡಿನ ಅಥವಾ ಕನ್ನಡನಾಡಿನ ಭಾಷೆಯಲ್ಲಿರುವ ಜಾತಿವೃತ್ತಗಳು (ಜಾತಿ) ಎಂದರೆ ಸಂಸ್ಕೃತೇತರವಾದ ವೃತ್ತಗಳು ಎಂದು ಇದರ ಅರ್ಥ. ಅಕ್ಕರ, ತ್ರಿಪದಿ, ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ, ಉತ್ಸಾಹ ಷಟ್ಪದಿ- ಈ ಹತ್ತು ಮುಖ್ಯವಾದ ಮಟ್ಟುಗಳನ್ನು ನಾಗವರ್ಮ ಹೇಳಿದ್ದಾನೆ. ಉತ್ಸಾಹವೆಂಬ ಒಂದು ಬಗೆಯನ್ನು ಮಾತ್ರ ಈತ ಮಿಶ್ರಾಧಿಕಾರದಲ್ಲಿ ಕೊಟ್ಟಿದ್ದಾನೆ. ಜಯಕೀರ್ತಿಯೂ ಇವನ್ನು ಹೇಳಿದ್ದಾನೆ. 3ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ತ್ರಿಪದಿ ಷಟ್ಪದಿಗಳ ಉಲ್ಲೇಖವಿದೆ. ಶಾರ್ಙ್ಗದೇವನ ಸಂಗೀತರತ್ನಾಕರದಲ್ಲಿ ಆ ಎರಡನ್ನೂ ಒಳಗೊಂಡು ಏಳೆಯ ವಿಚಾರ ಬಂದಿದೆ. ಈ ಮಟ್ಟುಗಳಲ್ಲಿ ಕೆಲವು ಮಾತ್ರ ಪ್ರಾಚೀನ ಶಾಸನಗಳಲ್ಲಿಯೂ ಕಾವ್ಯಗಳಲ್ಲಿಯೂ ಬಳಕೆಯಾಗಿವೆ. ಕೆಲವಕ್ಕೆ ನಿದರ್ಶನಗಳು ದೊರೆತಿಲ್ಲ. ಏಳೆ, ತ್ರಿಪದಿಗಳಿಗೂ ಪಿರಿಯಕ್ಕರ ಅಕ್ಕರ ಭೇದಗಳಿಗೂ ಒಂದಕ್ಕೊಂದು ಸಂಬಂಧವಿರುವಂತೆ ತೋರುತ್ತದೆ. ಉಳಿದವು ಅಂಶಗಣದ ಜಾಯಮಾನವನ್ನನುಸರಿಸಿ ಬೇರೆ ಬೇರೆಯಾಗಿಯೇ ಹುಟ್ಟಿರಬಹುದು.

**ಅಕ್ಕರ :** ಇದರಲ್ಲಿ ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ ಮತ್ತು ಕಿರಿಯಕ್ಕರ ಎಂಬ ಐದು ಪ್ರಭೇದಗಳಿವೆ. ಸಂಸ್ಕೃತದಲ್ಲಿ ಇವಕ್ಕೆ ಕ್ರಮವಾಗಿ ಮಹಾಕ್ಷರ, ಸಮಾನಾಕ್ಷರ, ಮಧ್ಯಾಕ್ಷರ, ಅಂತರಾಕ್ಷರ ಮತ್ತು ಅಲ್ಪಾಕ್ಷರ ಎಂಬುವು ಪ್ರತಿ ನಾಮಗಳು. ಹಾಗೆಯೇ ತೆಲುಗಿನಲ್ಲಿ ಕ್ರಮವಾಗಿ ಮಹಾಕ್ಕರ, ಮಧ್ಯಾಕ್ಕರ, ಮಧುರಾಕ್ಕರ, ಅಂತರಾಕ್ಕರ, ಅಲ್ಪಾಕ್ಕರ ಎಂಬ ಹೆಸರುಗಳನ್ನು ಹೇಳಿದೆ.

**(I) ಪಿರಿಯಕ್ಕರ :** ಅಕ್ಕರ ಭೇದಗಳಲ್ಲಿ ಪ್ರಸಿದ್ಧವಾದುದು; ಪಿರಿಯಕ್ಕರ ಇದು ಪ್ರಾಚೀನ ಶಾಸನಗಳಲ್ಲೂ ಕಾವ್ಯಗಳಲ್ಲೂ ಕಂಡುಬಂದಿದೆ. ಸಾಮಾನ್ಯ ಲಕ್ಷಣ: 4 ಪಾದಗಳು, ಪ್ರತಿಪಾದದಲ್ಲಿ 1 ಬ್ರ, 5 ವಿ, 1 ರು ಹೀಗೆ 7 ಗಣಗಳು. ಆದರೆ ಕರ್ತೃವಿನ ಇಷ್ಟವನ್ನನುಸರಿಸಿ ಯಾವುದೇ ಪಾದದಲ್ಲಿ 2ನೆಯ ಮತ್ತು 4ನೆಯ ಗಣ ವಿಷ್ಣುವಿಗೆ ಬದಲಾಗಿ ಬ್ರಹ್ಮವಾಗಿರುವುದು.

ಇದು ಲಾಕ್ಷಣಿಕರು ಕೊಡುವ ಸಾಮಾನ್ಯ ನಿಯಮ. ಆದರೆ ಹಾಡಿಗೆ ಹೊಂದಿ ಪರ್ಯಾಯ ಗಣಗಳು ಯಾವುದೇ ಗಣಸ್ಥಾನದಲ್ಲಿ ಬರುವುದು ಸಾಧ್ಯ (ನಿದರ್ಶನಗಳಿಗೆ ನೋಡಿ- ಆದಿಪು. 2-44, 6-27, ಪಂಪಭಾ. 5-26, 42: 7-28; ಶಾಂತಿಪು. 10-9) ಉದಾಹರಣೆಗೆ ಒಂದು ಸಾಲು:

ಬೀರ | ದ ಳವಿಯ | ನನ್ನಿಯ | ಜಾಗದ | ಶಾಸನಂ | ಚಂದ್ರಾರ್ಕ | ತಾರಂಬರಂ
(ಪಂಪಭಾರತ)

**(II) ದೊರೆಯಕ್ಕರ :** ಸಾಮಾನ್ಯ ಲಕ್ಷಣ 4 ಪಾದಗಳು; ಪ್ರತಿಪಾದದಲ್ಲಿ 2 ವಿ, 1 ಬ್ರ, 2 ವಿ, 1 ಬ್ರ, ಹೀಗೆ 6 ಗಣಗಳು. ಇಲ್ಲಿಯೂ ಯಾವುದೇ ಗಣ ಸ್ಥಾನದಲ್ಲಿ ಪರ್ಯಾಯ ಗಣಗಳು ಬರುವುದು ಸಾಧ್ಯ. ಇದು ಕಿವಿಗೆ ಇಂಪಾದುದೆಂದೂ ಅಕ್ಕರಿಗರಿಂದ ಹೆಚ್ಚು ಮಾನ್ಯತೆ ಪಡೆದದ್ದೆಂದೂ ಸಗ ಕವಿಯ ಕರ್ಣಾಟ ಕುಮಾರಸಂಭವ ಕಾವ್ಯದಲ್ಲಿ ಇದನ್ನು ಬಳಸಿದೆಯೆಂದೂ ಜಯಕೀರ್ತಿ ತಿಳಿಸಿದ್ದಾನೆ. ನಮಗೆ ಆ ಕಾವ್ಯ ದೊರೆತಿಲ್ಲ. ಅನ್ಯತ್ರ ಇದರ ಉದಾಹರಣೆಯಿಲ್ಲ. ಆದರೆ ಚಂದ್ರರಾಜ ತನ್ನ ಮದನತಿಲಕದಲ್ಲಿ ಎರಡು ಕಂದಮುಂ, ದ್ವಿಪದಿಕೆಯುಂ, ಗೀತಿಕೆಯುಮೈದು ಮಕ್ಕರಮುಮಕ್ಕುಂ ಎಂದು ಹೇಳಿ ಕೊಡುವ ಪದ್ಯದಿಂದ ದೊರೆಯಕ್ಕರವನ್ನು ಪಡೆಯಬಹುದು. ನಿದರ್ಶನಕ್ಕೆ ಒಂದು ಸಾಲು

[ಗಿರಿಧರ] | ಸುತನೆನೆ | ಪರನಾ | ರಿಗೆ ವಾಯು | ಜ ಸ್ವಯಂ | ತಾನೆ
(ಮದನತಿಲಕ 10-14, 15)

**(III) ನಡುವಣಕ್ಕರ :** ಇದು ಗಣಸಂಖ್ಯೆಯ ದೃಷ್ಟಿಯಿಂದ ಅಕ್ಕರಭೇದಗಲ್ಲಿ ಮಧ್ಯೆ ನಿಲ್ಲುವುದು. ಸಾಮಾನ್ಯ ಲಕ್ಷಣ ಪಾದಗಳು ಪ್ರತಿ ಪಾದದಲ್ಲಿ 1 ಬ್ರ, 3 ವಿ, 1 ರು ಹೀಗೆ 5 ಗಣಗಳು. ಇಲ್ಲಿಯೂ ಪರ್ಯಾಯ ಗಣಗಳು ಬರುವುದು ಸಾಧ್ಯ. ಕರ್ಣಾಟ ಮಾಲತೀಮಾಧವ ಮುಂತಾದ ಕಾವ್ಯಗಳಲ್ಲಿ ಇದನ್ನು ಬಳಸಿದೆಯೆಂದು ಜಯಕೀರ್ತಿ ತಿಳಿಸಿದ್ದಾನೆ. ಆದರೆ ಆ ಕಾವ್ಯಗಳು ದೊರೆತಿಲ್ಲ. ಚಂದ್ರರಾಜನ ಮದನತಿಲಕದಲ್ಲಿ ಒಂದು ಪದ್ಯವಿದೆ. ನಿದರ್ಶನಕ್ಕೆ ಆ ಪದ್ಯದ ಒಂದು ಸಾಲು

ನುಡಿಗು | ಮೋಪನ | ಪಡೆಮಾತ | ನಾತನಿ | ರ್ದೆಡೆಗೆ ವಕ್ಕುಂ |

**(IV) ಎಡೆಯಕ್ಕರ :** ಸಾಮಾನ್ಯ ಲಕ್ಷಣ: 4 ಪಾದಗಳು, ಪ್ರತಿಪಾದದಲ್ಲಿ 1 ಬ್ರ, 2 ವಿ, 1 ರು, ಹೀಗೆ 4 ಗಣಗಳು. ಇಲ್ಲಿಯೂ ಪರ್ಯಾಯ ಗಣಗಳು ಬರಬಹುದು. ಕರ್ಣಾಟೇಶ್ವರಕಥಾ ಮತ್ತು ಇತರ ಜೈನಕೃತಿಗಳಲ್ಲಿ ಇದರ ಬಳಕೆಯಾಗಿದೆಯೆಂದು ಜಯಕೀರ್ತಿ ತಿಳಿಸಿದ್ದಾನೆ. ಆದರೆ ಅವು ಯಾವುವೂ ನಮಗೆ ದೊರೆತಿಲ್ಲ. ಚಂದ್ರರಾಜನ ಮದನತಿಲಕದಲ್ಲೆ ಒಂದು ಪದ್ಯವಿದೆ (1-15) ನಿದರ್ಶನಕ್ಕೆ ಒಂದು ಸಾಲು

ಅಂಗ | ಯಿಂಗಿತ | ಶಿಕ್ಷಿತ | ನಿಂದುಯಶಂ

**(V) ಕಿರಿಯಕ್ಕರ :** ಅಕ್ಕರಭೇದಗಳಲ್ಲಿ ಎಲ್ಲಕ್ಕಿಂತ ಚಿಕ್ಕದು. ಸಾಮಾನ್ಯ ಲಕ್ಷಣ: 4 ಪಾದಗಳು ಪ್ರತಿ ಪಾದದಲ್ಲಿ 2 ವಿ, 1 ರು ಹೀಗೆ 3 ಗಣಗಳು, ಪರ್ಯಾಯ ಗಣಗಳು ಬರಬಹುದು. ಉದಾಹರಣೆ ದೊರೆಯುವುದೆಂದು ಜಯ ಕೀರ್ತಿ ತಿಳಿಸುವ ಶೃಂಗಾರಪಿಂಡದಂಥ ಕನ್ನಡ ಕಾವ್ಯಗಳು ಈಗ ದೊರೆಯುವುದಿಲ್ಲ.

ಚಂದ್ರರಾಜನ ಮದನತಿಲಕದಿಂದ (1-15) ಒಂದು ಕಿರಿಯಕ್ಕರವನ್ನು ಬಿಡಿಸಬಹುದು. ನಿದರ್ಶನಕ್ಕೆ ಒಂದು ಸಾಲು

ಇಂಗಿತ | ಶಿಕ್ಷಿತ | ನಿಂದುಯಶಂ (ಟಿ.ವಿ.ವಿ., ಡಿ.ಎಸ್.ಕೆ.)

ತ್ರಿಪದಿ ಮೂರು ಸಾಲಿನ ಒಂದು ಪದ್ಯಜಾತಿ. ತನ್ನ ಮೊದಲ ಘಟ್ಟದಲ್ಲಿ ಅಂಶಗಣಗಳಿಂದ ಕೂಡಿತ್ತು. ಗಣಗಳ ವಿನ್ಯಾಸ ಹೀಗೆ ಮೊದಲ ಪಾದದಲ್ಲಿ ನಾಲ್ಕು ಗಣ. ಎರಡನೆಯ ಪಾದದಲ್ಲಿ ನಾಲ್ಕು ಗಣ, ಮೂರನೆಯ ಪಾದದಲ್ಲಿ ಮೂರು ಗಣ, ಆರು ಮತ್ತು ಹತ್ತನೆಯ ಸ್ಥಾನದಲ್ಲಿ ಬ್ರಹ್ಮಗಣ, ಉಳಿದುವೆಲ್ಲ ವಿಷ್ಣುಗಣಗಳು. ಇದು ಸ್ಥೂಲ ಲಕ್ಷಣ

ವಿ | ವಿ | ವಿ | ವಿ |
ವಿ | ಬ್ರ | ವಿ | ವಿ |
ವಿ | ಬ್ರ | ವಿ |

ಆದರೆ ತ್ರಿಪದಿಯನ್ನು ವಾಚನ ಮಾಡುವಾಗ ಎರಡನೆಯ ಪಾದದ ಮೂರನೆಯ ಗಣಕ್ಕೆ ಬಂದು, ಅಲ್ಲಿ ನಿಲ್ಲಿಸಿ ಮತ್ತೆ ಇದೇ ಪಾದದ ಮೊದಲಿಗೆ ಹೊಗಿ ಇಡೀ ಪಾದವನ್ನು ಹೇಳಿ ಅನಂತರ ಮೂರನೆಯ ಪಾದಕ್ಕೆ ಹೋಗಬೇಕು. (ಈ ಪುನರಾವರ್ತನೆಯನ್ನು ಇಂದಿಗೂ ಹಳ್ಳಿಯ ತ್ರಿಪದಿಗಳಲ್ಲಿ ಜನಪದಗೀತೆಗಳಲ್ಲಿ ಕೇಳಬಹುದು.) ಮೂರು ಪಾದಗಳಲ್ಲೂ ಇರುವ (ದ್ವಿತೀಯ) ಪ್ರಾಸಾಕ್ಷರ ಮೊದಲ ಪಾದದ ಎರಡು ಗಣಗಳ ಬಳಿಕ ಮತ್ತೆ ಕಾಣಿಸಿಕೊಳ್ಳುತ್ತದೆ. ಪೊನ್ನನ ಶಾಂತಿಪುರಾಣದ ಕೆಳಗಿನ ತ್ರಿಪದಿ ಮೇಲೆ ಹೇಳಿದ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ.

ವಿ ವಿ ವಿ ವಿ
ಅಂತುಮಾ | ರೂಪನೆ | ಚಿಂತಿಸಿ | ಚಿಂತಿಸಿ
ವಿ ಬ್ರ ವಿ ವಿ
ಕಾಂತೆಯರ್ | ಪತಿಗೆ | ರತಿ ಸೋಲ್ತು | ಕೆಂದಳಿ
ವಿ ಬ್ರ ವಿ
ರಂತಲ | ರ್ಗಣೆಗೆ | ಡೊಣೆಯಾದರ್

ಎರಡನೆಯ ಪಾದ ಮತ್ತೆ ಮಗುಚಿ ಬರುವುದರಿಂದ, ವಾಚನದ ಸಂದರ್ಭದಲ್ಲಿ ಇದು ನಾಲ್ಕು ಸಾಲಿನ ಪದ್ಯವಾಗಿ ಕೇಳಿಸುತ್ತದೆ.

ವಿ | ವಿ | ವಿ | ವಿ |
ವಿ | ಬ್ರ | ವಿ |
ವಿ | ಬ್ರ | ವಿ | ವಿ
ವಿ | ಬ್ರ | ವಿ ||

ಆದ್ದರಿಂದ ಮೊದಲ ಪಾದದಲ್ಲಿ 4 ಗಣ, ಎರಡನೆಯ ಪಾದದಲ್ಲಿ 3 ಗಣಗಳಿರುವ ಏಳೆಯೇ ಇಮ್ಮಡಿಸಿ ತ್ರಿಪದಿಯಾಗಿರಬಹುದು.

ಮೇಲಿನ ಲಕ್ಷಣ ಸ್ಥೂಲವಾದುದು. ಏಕೆಂದರೆ ವಿಷ್ಣುವಿನ ಸ್ಥಾನದಲ್ಲಿ ಒಮ್ಮೊಮ್ಮೆ ಬ್ರಹ್ಮವೂ ಆಕಸ್ಮಿಕವಾಗಿ ರುದ್ರವೂ ಕಾಣಿಸಿಕೊಳ್ಳುವುದುಂಟು. ಆದರೆ 6 ಮತ್ತು 10ನೆಯ ಸ್ಥಾನದಲ್ಲಿ ಬರುವ ಬ್ರಹ್ಮ ಬಹುಮಟ್ಟಿಗೆ ನಿಯತವೆಂದೇ ಹೇಳಬೇಕು. ತ್ರಿಪದಿಯ ಬಂಧದಲ್ಲಿ ಇದು ಮುಖ್ಯವಾದುದಷ್ಟೆ ಅಲ್ಲದೆ, ಅದರ ಗಟ್ಟಿ ಭಾಗವೂ ಆಗಿದೆ. ಅಂಶವೃತ್ತವಾಗಿದ್ದ ತ್ರಿಪದಿ ಮುಂದೆ ಮಾತ್ರಾವೃತ್ತವಾದಾಗಲೂ 6 ಮತ್ತು 10ನೆಯ ಸ್ಥಾನಗಳಲ್ಲಿ ಬ್ರಹ್ಮಗಣ ಉಳಿದುಕೊಂಡು ಬಂದಿತು. ಬ್ರಹ್ಮಗಣಗಳು ತ್ರಿಪದಿಯ ನಡೆಗೆ ಒಂದು ಬಳುಕನ್ನು ನಾಟ್ಯವೈವಿಧ್ಯವನ್ನು ತಂದು ಕೊಡುತ್ತವೆ.

ಕನ್ನಡದಲ್ಲಿ ಬಾದಾಮಿ ಶಾಸನದ (ಸು.700) ತ್ರಿಪದಿಗಳೆ ಅತ್ಯಂತ ಪ್ರಾಚೀನವಾದುವು. ಕಪ್ಪೆಯರಭಟ್ಟನ ಶೌರ್ಯ ಸದ್ಗುಣಾದಿಗಳನ್ನು ವರ್ಣಿಸುವ ಅವು ಒಳ್ಳೆಯ ಕಾವ್ಯಗುಣವನ್ನೂ ಪಡೆದಿವೆ. ಈ ದೃಷ್ಟಿಯಿಂದ

ಕಟ್ಟಿದ ಸಿಂಘಮನ್ ಕೆಟ್ಟೊದೇನೆಮಗೆಂದು
ಬಿಟ್ಟವೊಲ್ ಕಲಿಗೆ ವಿಪರೀತಂಗಹಿತರ್ಕಳ್
ಕೆಟ್ಟರ್ಮೇಣ್ಸತ್ತರ ವಿಚಾರಂ||

ಎಂಬ ಪದ್ಯವನ್ನು ಗಮನಿಸಬಹುದು.

ಕನ್ನಡದಲ್ಲಿ ಲಿಖಿತಸಾಹಿತ್ಯ ದೊರೆಯುವುದಕ್ಕೆ ಮುಂಚೆಯೇ ತ್ರಿಪದಿ ರೂಪವಾದ ಜನಪದ ಸಾಹಿತ್ಯವಿದ್ದಿರಬೇಕು. ಇದು ಮುಖ್ಯವಾಗಿ ಜನಪದ ಮಟ್ಟು. ಬಾದಾಮಿ ಶಾಸನದ ತ್ರಿಪದಿಗಳು ಕನ್ನಡದಲ್ಲಿ ಅಂಥ ಜನಪದ ಸಾಹಿತ್ಯವಿದ್ದಿತೆಂಬುದಕ್ಕೆ ಒಂದು ಕುರುಹಾಗಿದೆ. ಅವಿದ್ಯಾವಂತರು, ಅಷ್ಟು ವಿದ್ಯಾವಂತರಲ್ಲದವರು ತ್ರಿಪದಿಗಳನ್ನು ಕಟ್ಟಿ, ಹಾಡಿ ನಲಿಯುತ್ತಿದ್ದರೆಂಬುದಕ್ಕೆ 971ರ ಶಾಸನವೊಂದರಲ್ಲಿ ಬಂದಿರುವ ಮಾತು (ತ್ರಿಪದಿ) ಸಾಕ್ಷಿಯಾಗಿದೆ. ಆ ಶಾಸನದಲ್ಲಿ ನಾರಣ ಎಂಬ ಕವಿ ತನ್ನ ವಿಷಯವನ್ನು ಹೀಗೆ ಹೇಳಿಕೊಂಡಿದ್ದಾನೆ

ವೇದವೇದಾಂಗಮನೋದದೆ ಶಾಸ್ತ್ರಮ
ನಾದಿಮಧ್ಯಾಂತಮಱಿಯದೆ ನಾರಣಂ
ಗಾದುದು ಕವಿತೆ ಸಹಜಮೇ ||

ತಾನು ವೇದ, ವೇದಾಂಗ ಶಾಸ್ತ್ರಗಳನ್ನು ಅರಿಯದವನಾದರೂ ತನಗೆ ಕವಿತೆ ಸಹಜವಾಗಿ ಬಂದಿದೆಯೆಂದು ಆತ ತ್ರಿಪದಿಯಲ್ಲಿ ಹೇಳಿಕೊಂಡಿರುವುದು ಗಮನಾರ್ಹ.

ಬೀಸುವಾಗ, ಕುಟ್ಟುವಾಗ ಜನಸಾಮಾನ್ಯರು ತ್ರಿಪದಿಗಳನ್ನು ಹಾಡುತ್ತಿದ್ದರು (ಈಗಲೂ ಕೆಲವೊಮ್ಮೆ ಹಾಡುತ್ತಾರೆ.) ಮಾನಸೋಲ್ಲಾಸದಲ್ಲಿ ತ್ರಿಪದಿಗಳನ್ನು ಬತ್ತಕುಟ್ಟುವಾಗ ಜನರು ಹಾಡುತ್ತಿದ್ದರೆಂಬ ಉಲ್ಲೇಖವಿದೆ. ಇಂಥ ಹಾಡುಗಳೇ ಒನಕೆವಾಡುಗಳು. ನೇಮಿಚಂದ್ರನ ಲೀಲಾವತಿಯಲ್ಲಿ ಬಂದಿರುವ ಒನಕೆವಾಡು ತ್ರಿಪದಿಗಳ ಒಂದು ಗುಚ್ಛವೇ ಆಗಿದೆ.

ಸು.700 ರಿಂದ ಸು.1140ರ ವರೆಗಿನ ಶಾಸನಗಳಲ್ಲಿ ಚಂಪೂ ಕಾವ್ಯಗಳಲ್ಲಿ ಮಧ್ಯೆ ಅಲ್ಲಲ್ಲಿ ಅನೇಕ ತ್ರಿಪದಿಗಳು ಕಾಣಿಸಿಕೊಳ್ಳುತ್ತವೆ. ಇವೆಲ್ಲ ಬಹುತೇಕ ಅಂಶಗಣಗಳಿಂದ ಕೂಡಿದುದಾಗಿವೆ.

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಅಂಶಗಣಗಳು ಮಾತ್ರಾಗಣಗಳಾದದ್ದು ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಬಹು ಪ್ರಮುಖವಾದ ಘಟನೆ. ಇದರ ಫಲವಾಗಿ ತ್ರಿಪದಿಯ 6 ಮತ್ತು 10 ನೆಯ ಸ್ಥಾನದಲ್ಲಿ ಬರುತ್ತಿದ್ದ ಬ್ರಹ್ಮಗಣಗಳನ್ನು ಬಿಟ್ಟು, ಉಳಿದೆಲ್ಲ ಅಂಶಗಣಗಳ ಸ್ಥಾನದಲ್ಲಿ ಮಾತ್ರಾಗಣಗಳು (ಸಾಮಾನ್ಯವಾಗಿ ಐದು ಮಾತ್ರೆಯ ಗಣಗಳು) ಕಾಣಿಸಿಕೊಂಡವು. ಇಂಥ ಅನೇಕ ತ್ರಿಪದಿಗಳನ್ನು ಅಕ್ಕಮಹಾದೇವಿಯಂಥ ವಚನಕಾರರು ಬರೆದಿರುವುದನ್ನು ನೋಡಬಹುದು.

1160ರ ಅನಂತರ ತ್ರಿಪದಿಗಳ ಇತಿಹಾಸ ಸರಳವಾಗಿಲ್ಲ. ಈ ಕಾಲದಲ್ಲಿ ಕೆಲವೆಡೆ ಕೇವಲ ಅಂಶಗಳಿಂದ ಕೂಡಿದ, ಕೆಲವೆಡೆ ಕೇವಲ ಮಾತ್ರಾಗಣಗಳಿಂದ ಕೂಡಿದ, ಕೆಲವೆಡೆ ಎರಡೂ ಜಾತಿಯ ಗಣಗಳಿಂದ ಕೂಡಿದ ತ್ರಿಪದಿಗಳನ್ನು ನೋಡುತ್ತೇವೆ. ಆದರೆ, ತ್ರಿಪದಿಯ ಉಳಿದ ಗಣಗಳು ಯಾವುದೇ ಆಗಿರಲಿ 6 ಮತ್ತು 10ನೆಯ ಸ್ಥಾನಗಳಲ್ಲಿ ಮಾತ್ರ ಬ್ರಹ್ಮಗಣ ಉಳಿದುಬಂತು.

ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ತ್ರಿಪದಿಗಳು ಚಂಪೂಕಾವ್ಯದ ಮಧ್ಯೆ ಅಲ್ಲಲ್ಲಿ ವೈವಿಧ್ಯಕ್ಕಾಗಿ ಕಾಣಿಸಿಕೊಂಡಿದ್ದುವು. ಅಥವಾ ತತ್ತ್ವ ಪ್ರಧಾನವಾದ ಚಿಕ್ಕ ಚಿಕ್ಕ ರಚನೆಗಳಿಗೆ ತ್ರಿಪದಿ ಬಳಕೆಯಾಗಿದ್ದಿತು. ತ್ರಿಪದೀರೂಪವಾದ ಕಥನ ಕಾವ್ಯಗಳು ಕನ್ನಡದಲ್ಲಿ ಬಹಳ ವಿರಳವೆಂದೇ ಹೇಳಬೇಕು. ಅಂಥ ವಿರಳ ಕಾವ್ಯಗಳಲ್ಲಿ ಸು.1500ರ ಚಂದನೆಯ ಕಥೆ ಬಹುಶಃ ಅತ್ಯಂತ ಪ್ರಾಚೀನವಾದುದು. ಚೋರ ಕಥೆ ತ್ರಿಪದಿ ಕಾವ್ಯಗಳಲ್ಲಿ ಇನ್ನೊಂದು ಉಲ್ಲೇಖಾರ್ಹ ಕೃತಿ. ತ್ರಿಪದಿಯ ಇತಿಹಾಸದಲ್ಲಿ ಬಹು ದೊಡ್ಡ ಹೆಸರು ಸರ್ವಜ್ಞನದು. ಇವನ ತ್ರಿಪದಿಗಳಲ್ಲಿ ಕೆಲವು ಅಂಶಲಯಾನ್ವಿತವೂ ಕೆಲವು ಮಾತ್ರಾಲಯಾನ್ವಿತವೂ ಆಗಿವೆ. ಕೆಲವು ಪದ್ಯಗಳಲ್ಲಿ ಇವೆರಡು ಲಯಗಳು ಮಿಶ್ರಗೊಂಡಿರವುದೂ ಉಂಟು. ಮುಂದಿನವರು ತ್ರಿಪದಿಗಳನ್ನು ಸರ್ವಜ್ಞನಂತೆ ಮುಕ್ತಕಗಳನ್ನು ಬರೆಯಲು ಬಳಸಿದರೇ ಹೊರತು ಕಥನಕಾವ್ಯಗಳನ್ನು ಬರೆಯಲಿಕ್ಕೆ ಬಳಸಲಿಲ್ಲ. ಜನಪದ ಸಾಹಿತ್ಯದ ಗಣನೀಯ ಭಾಗ ತ್ರಿಪದೀರೂಪವಾಗಿದೆ. ಇಂದಿಗೂ ಈ ತ್ರಿಪದಿಗಳಲ್ಲಿ ಅಂಶಲಯ ಮಿಡಿಯುತ್ತಿರುವುದನ್ನು ಗುರುತಿಸಬಹುದು. ಬೇಂದ್ರೆ, ತೀ.ನಂ.ಶ್ರೀ., ಪರಮೇಶ್ವರ ಭಟ್ಟ ಮುಂತಾದ ಆಧುನಿಕರೂ ತ್ರಿಪದಿಗಳನ್ನು ಬರೆದಿದ್ದಾರೆ.

ತ್ರಿಪದಿಯ ವ್ಯಾಪ್ತಿ ಕಿರಿದು. ಇದರಲ್ಲಿ ವಿಸ್ತಾರದ ವರ್ಣನೆಯನ್ನಾಗಲಿ, ದೀರ್ಘಕಾಲ ಮಿಡಿಯುವ ಭಾವವನ್ನಾಗಲಿ, ಸವಿವರವಾದ ಯಾವುದೊಂದು ವಿಚಾರವನ್ನಾಗಲಿ ಸಂಗತಿಯನ್ನಾಗಲಿ ಕೂರಿಸುವುದು ಅಸಾಧ್ಯ. ಬಿಡಿ ಬಿಡಿ ವಿಚಾರಗಳನ್ನು ಚಿಕ್ಕ ಚಿಕ್ಕ ಭಾವಗಳನ್ನು ಬೇರೆ ಬೇರೆಯಾಗಿ ಹೇಳುವುದಕ್ಕೆ ಬಿಡಿ ಬಿಡಿಯಾಗಿ ವ್ಯಕ್ತ ಮಾಡಲಿಕ್ಕೆ ಇದೂ ಸಹಾಯಕಾರಿ. ಆದ್ದರಿಂದಲೇ ಇದರಲ್ಲಿ ಹೇಳಿಕೊಳ್ಳುವಂಥ ಯಾವುದೇ ದೀರ್ಘಕಾವ್ಯವೂ ರಚಿತವಾಗಲಿಲ್ಲ. ಆದರೂ ವಿಶೇಷವಾಗಿ ಸರ್ವಜ್ಞನಿಗೆ, ಜನಪದ ಕವಿಗಳಿಗೆ ಕಾವ್ಯ ಮಾಧ್ಯಮವಾಗಿ ಕನ್ನಡಕ್ಕೆ ತ್ರಿಪದಿ ಕೊಟ್ಟಿರುವ ಕಾಣಿಕೆ ಹಿರಿದು. (ಎಂ.ಪಿ.)

**ಏಳೆ:** ಇದರ ಲಕ್ಷಣವನ್ನು ನಾಗವರ್ಮನೂ ಜಯಕೀರ್ತಿ ಶಾರ್ಙ್ಗದೇವರೂ ಹೇಳಿದ್ದಾರೆ. ಸಾಮಾನ್ಯ ಲಕ್ಷಣ: 2 ಪಾದಗಳು, ಅವುಗಳಲ್ಲಿ ಮೊದಲನೆಯ ಪಾದದಲ್ಲಿ 4 ಗಣ, ಎರಡನೆಯ ಪಾದದಲ್ಲಿ 3 ಗಣ ಹೀಗೆ 7 ಗಣಗಳು. ಇವುಗಳಲ್ಲಿ 6ನೆಯದು ಬ್ರಹ್ಮ, ಉಳಿದವು ವಿಷ್ಣು; ಮೊದಲನೆಯ ಪಾದದಲ್ಲಿ 2ನೆಯ ಗಣವಾದ ಮೇಲೆ ಯತಿ, 3ನೆಯ ಗಣದಲ್ಲಿ ದ್ವಿತೀಯಾಕ್ಷರ ಪ್ರಾಸದ ಆವೃತ್ತಿ (ಒಳಪ್ರಾಸ). ತ್ರಿಪದಿಯ ವಿಷಯದಲ್ಲಿ ನೋಡಿದಂತೆಯೇ ಇಲ್ಲಿಯೂ ವಿಷ್ಣುಗಣ ಸ್ಥಾನದಲ್ಲಿ ಸಾಮಾನ್ಯವಾಗಿ ಬ್ರಹ್ಮವೋ ರುದ್ರವೋ 6ನೆಯ ಬ್ರಹ್ಮದ ಸ್ಥಾನದಲ್ಲಿ ವಿರಳವಾಗಿ ವಿಷ್ಣುವೋ ರುದ್ರವೋ ಬರುವುದು ಸಾಧ್ಯ. ಏಳೆಗೆ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನಿದರ್ಶನಗಳಿಲ್ಲ. ಜನಪದಸಾಹಿತ್ಯದಲ್ಲಿಯೂ ಈಚೆಗೆ ವಿರಳವಾಗಿ ಹೊಸಗನ್ನಡ ಕಾವ್ಯದಲ್ಲಿಯೂ ನಿದರ್ಶನಗಳು ದೊರೆಯುತ್ತವೆ.

ಸಾಮಾನ್ಯ ಲಕ್ಷಣಕ್ಕೆ ಒಪ್ಪುವ ಒಂದು ನಿದರ್ಶನ

ಹಡೆದ ತಾ | ಯಿಗೆ ಬನ್ನಿ | ಹಡೆದ ತಂ | ದೆಗೆ ಬನ್ನಿ |
ಪಡೆದ ಗಂ | ಡನಿಗೆ | ನಮ ಬನ್ನಿ

(ಟಿ.ವಿ.ವಿ., ಡಿ.ಎಸ್.ಕೆ.)

**ಚೌಪದಿ :** ಇದರಲ್ಲಿ ಅಂಶಗಣಾತ್ಮಕ ಮತ್ತು ಮಾತ್ರಾಗಣಾತ್ಮಕ ಎಂಬುದಾಗಿ ಎರಡು ಬಗೆ. ಇವುಗಳ ಹುಟ್ಟು ಮತ್ತು ಸ್ವರೂಪ ಬೇರೆ ಬೇರೆಯೆ. (I) ಅಂಶಗಣ ಚೌಪದಿ (ಚೌಪದಿಗೆ): ನಾಗವರ್ಮ ಮತ್ತು ಜಯಕೀರ್ತಿ ಇಬ್ಬರಲ್ಲೂ ಇದರ ಲಕ್ಷಣ ನಿರೂಪಣೆ ಒಂದೇ ರೀತಿಯಾಗಿದೆ. ಅದು ಹೀಗಿದೆ. ದ್ವಿತೀಯಾಕ್ಷರ ಪ್ರಾಸದೊಡನೆ ಪಾದಗಳು, ಪ್ರತಿಪಾದದಲ್ಲಿಯೂ 1 ವಿಷ್ಣುಗಣದ ಮುಂದೆ 1 ರುದ್ರಗಣ. ಕನ್ನಡದಲ್ಲಿ ಇಂಥ ಲಕ್ಷಣದ ಚೌಪದಿ ಈಗ ದೊರೆತಿರುವುದು ಒಂದು ಮಾತ್ರ. ಚಂದ್ರರಾಜನ ಮದನತಿಲಕದಲ್ಲಿ ಬರುವ ಆ ಪದ್ಯ ಹೀಗಿದೆ:

ರತಿಹೀನಂ | ಪೆಟಿವಂ ಕುಬ್ಜಂ
ಮತಿವಂತಂ | ಕೃಶನತ್ಯಂತ
ನೃತವಾಕ್ಯಂ | ಸತಿಯಂ ಕಾಯ
ಲ್ಕತಿ ಶಿಷ್ಟಂ | ಪೆಱತೇಂ ಶ್ರೇಷ್ಠಂ ||

ಇಂಥ ಇನ್ನೊಂದು ಚೌಪದಿಯನ್ನು ಇದೇ ಗ್ರಂಥ'ದ ಪ್ರಥಮಾಧಿಕಾರದ 15ನೆಯ ವೃತ್ತದ ಮೂಲಕವಾಗಿಯೂ ಪಡೆಯಬಹುದೆಂದು ಕವಿಯ ಸೂಚನೆಯಿದೆ. ಚೌಪದಿಗೆ ಉದಾಹರಣೆ ದೊರೆಯುವುದೆಂದು ಜಯಕೀರ್ತಿ ತಿಳಿಸಿರುವ ಚೂಡಾಮಣಿ ಎಂಬ ಗ್ರಂಥ ಈಗ ಉಪಲಬ್ಧವಿಲ್ಲ. (II) ಮಾತ್ರಾಗಣಚೌಪದಿ ಇದರ ಲಕ್ಷಣವನ್ನು ಪ್ರಾಚೀನ ಗ್ರಂಥಗಳಲ್ಲಿ ಹೇಳಿಲ್ಲ. ಛಂದೋಂಬುಧಿಯಲ್ಲಿ ಪ್ರಕ್ಷಿಪ್ತವಾಗಿ ಸೇರಿರುವ ಈ ಪದ್ಯಜಾತಿಯ ಲಕ್ಷಣ ಹೀಗಿದೆ: ಆದ್ಯಂತ ಪ್ರಾಸಗಳ ನಾಲ್ಕು ಪಾದಗಳು. ಪ್ರತಿಪಾದದಲ್ಲಿಯೂ ಒಟ್ಟು, 8 ಮಾತ್ರೆಗಳು, 8ನೆಯ ಅಕ್ಷರಕ್ಕೆ ಯತಿ (ಗಣವಿಭಜನೆಯನ್ನು ಗಮನಿಸಿದರೆ, ಪ್ರತಿಪಾದದಲ್ಲಿಯೂ 5 ಮಾತ್ರೆಗಳ 3 ಗಣಗಳೂ 2 ಮಾತ್ರೆಗಳ 1 ಗಣವೂ ಬರುವುದು ಕಾಣುತ್ತದೆ.) ಇಂಥ ಚೌಪದಿ ನಡುಗನ್ನಡ ಕಾಲದ ಹಲವು ಲಘುಕಾವ್ಯಗಳಲ್ಲಿ ದಾಸರ ಪದಗಳಲ್ಲಿ ಕಂಡುಬರುತ್ತವೆ. ಮಾನೌಮಿಯ ಚೌಪದದಿಂದ ಒಂದು ಉದಾಹರಣೆ:

ಮಳೆ ಹೊಯ್ದು | ಬೆಳೆ ಬೆಳೆದು | ಇಳೆ ದಣಿಯ | ಲೆಂದು
ತಿಳಿಗೊಳಗ | ಳುಕ್ಕಿ ಗೋ | ವ್ಗಳು ಕರೆಯ | ಲೆಂದು
ನಳಿನಮುಖಿ | ಯರು ಪುತ್ರ | ಯರ ಪಡೆಯ | ಲೆಂದು
ಇಳೆಯೊಳಗೆ | ಹರಸಿದೆವು | ಬಾಲಕರು | ಬಂದು

ತೆಲುಗು ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ದ್ವಿಪದ ಛಂದಸ್ಸು (3 ಇಂದ್ರಗಣ, 1 ಇನಗಣ) ಕನ್ನಡದಲ್ಲಿ ಮಾತ್ರಾಗಣಕ್ಕೆ ತಿರುಗಿದ ದ್ವಿಪದಿಯಾಗಿ ಈ ದ್ವಿಪದಿ ಕಾಲಕ್ರಮದಲ್ಲಿ ದ್ವಿಗುಣಗೊಂಡು ಈ ಚೌಪದಿ ಹುಟ್ಟಿದ್ದಾಗಿರಬಹುದು. ಇಲ್ಲವೆ ಅಚ್ಚಕನ್ನಡ ಛಂದಸ್ಸಿನ ಛಂದೋವತಂಸ ಮಾತ್ರಾಗಣಕ್ಕೆ ತಿರುಗಿದ್ದಾಗಿರಬಹುದು.

**ಛಂದೋವತಂಸ :** ನಾಗವರ್ಮನ ಪ್ರಕಾರ ಇದರ ಸಾಮಾನ್ಯ ಲಕ್ಷಣ ಹೀಗಿದೆ: ನಾಲ್ಕು ಪಾದಗಳು, ಪ್ರತಿ ಪಾದದಲ್ಲಿಯೂ ಮೊದಲಿಗೆ ಒಂದು ವಿಷ್ಣು ಅನಂತರ ನಾಲ್ಕು ಬ್ರಹ್ಮ, ಹೀಗೆ ಐದು ಗಣಗಳು

ನಿದರ್ಶನಕ್ಕೆ ನಾಗವರ್ಮನ ಲಕ್ಷಣ ಪದ್ಯದ ಒಂದು ಸಾಲು:

ಮಂದರ | ಧರಗಣ | ಮೆಸೆದಿರೆ | ಮೊದಲೊಳ್

**ಜಯಕೀರ್ತಿಯ ಲಕ್ಷಣ :** ನಾಲ್ಕು ಪಾದಗಳು. ಪ್ರತಿಪಾದದಲ್ಲಿಯೂ ಕಂದರ್ಪ (ವಿಷ್ಣು) ಗಣದ ಮುಂದೆ ನಾಲ್ಕು ರತಿ (ಬ್ರಹ್ಮ) ಗಣ, ಹೀಗೆ ಐದು ಗಣಗಳು. ನಿದರ್ಶನಕ್ಕೆ ಜಯಕೀರ್ತಿಯ ಲಕ್ಷಣಪದ್ಯದ ಒಂದು ಸಾಲು

ಕಂದರ್ಪ | ಗಣತೋ | ರತಿ ಗ | ಣಾಚತು | ಷ್ಕಂ ಚೇತ್

ಆದರೆ ಇದನ್ನು ಜಯಕೀರ್ತಿ ಆದಿವರಾಹ ಎಂದು ಕರೆದಿರುವುದು ಗಮನಾರ್ಹವಾಗಿದೆ. ಛಂದೋವತಂಸಕ್ಕೆ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಉದಾಹರಣೆಗಳು ದೊರೆಯುವುದಿಲ್ಲ. ಜಯಕೀರ್ತಿ ಕರ್ಣಾಟ ಕುಮಾರಸಂಭವಾದಿ ಕಾವ್ಯಗಳಲ್ಲಿ ತಾನು ಆದಿವರಾಹವೆಂಬ ಹೆಸರಿನಿಂದ ಕರೆದಿರುವ ಛಂದೋವತಂಸದ ನಿದರ್ಶನಗಳಿವೆಯೆಂದು ಹೇಳಿದ್ದಾನೆ. ಆದರೆ ಅಂಥ ಯಾವ ಕಾವ್ಯವೂ ನಮಗೆ ದೊರೆತಿಲ್ಲ. ನಡುಗನ್ನಡ ಕಾಲದ ದಾಸರ ಪದಗಳಲ್ಲಿ ಮತ್ತು ಇತರ ಕಡೆಗಳಲ್ಲಿ ಈ ಲಕ್ಷಣಕ್ಕೆ ಸರಿಬರುವ ಕೆಲವು ಪದ್ಯಗಳುಂಟು. ಆದರೆ ಇವು ನಿಶ್ಚಯವಾಗಿ ಛಂದೋವತಂಸದ ಉದಾಹರಣೆಗಳೇ ಎಂಬುದು ಸರಿಯಾಗಿ ತಿಳಿಯದು. (ಟಿ.ವಿ.ವಿ.)

**ಅಕ್ಕರಿಕೆ :** ಇದರ ಸಾಮಾನ್ಯ ಲಕ್ಷಣ ನಾಗವರ್ಮನ ಪ್ರಕಾರ 4 ಪಾದಗಳು. ಪ್ರತಿ ಪಾದದಲ್ಲಿ ವಿ, ಬ್ರ, ವಿ, ಬ್ರ, ವಿ, ರು ಹೀಗೆ 6 ಗಣಗಳು. 6ನೆಯ ಅಕ್ಷರಕ್ಕೆ 2 ಸಾರಿ ಯತಿ. ಜಯಕೀರ್ತಿಯ ಪ್ರಕಾರ ವಿ, ಬ್ರ, ವಿ, ಬ್ರ, ವಿ, ವಿ + ಗುರು ಹೀಗೆ ಗಣವಿನ್ಯಾಸ. ಪ್ರತಿ ಪಾದದಲ್ಲಿಯೂ ಮಾತ್ರೆಗಳಂತೂ ಇರಬೇಕು. ಪಾದಗಳಲ್ಲಿ ಒಟ್ಟು ಮಾತ್ರಾ ಸಂಖ್ಯೆ 104: 8-8 ಮಾತ್ರೆಗಳಿಗೊಮ್ಮೆ 2 ಸಾರಿ ಯತಿ. ಅಥವಾ ಅಂಶಗಣದ ಬದಲು ಜಗಣವಲ್ಲದ 6 ಚತುರ್ಮಾತ್ರಾಗಣಗಳು + ಗುರು ಕೂಡ ಬರಬಹುದು. ಈ ನಿರೂಪಣೆ ಪರಸ್ಪರವಾಗಿ ಭಿನ್ನವೆಂದು ತೋರಿದರೂ ಲಕ್ಷಣ ಒಟ್ಟಿನಲ್ಲಿ ಒಂದೇ. ಆದರೆ ಜಯಕೀರ್ತಿಯ ಲಕ್ಷಣ ನಾಗವರ್ಮನ ಲಕ್ಷಣಕ್ಕಿಂತ ಸಮಗ್ರವೂ ಸ್ಪಷ್ಟವೂ ಆಗಿದೆ. ಈ ಅಕ್ಕರಿಕೆ ಅನಂತರ ಮಾತ್ರಾಗಣವಾಗಿ ಪರಿಣಮಿಸಿತು.

ಷಡಕ್ಷರಿಯ ರಾಜಶೇಖರವಿಳಾಸದಿಂದ ನಿದರ್ಶನಕ್ಕೆ ಒಂದು ಸಾಲು:

ಸುರನುತ | ಚರಣೇ | ವರಗುಣ | ಭರಣೇ | ಖರರುಚಿ | ಬಿಂಬಗತೇ

**ಮದನವತಿ :** ನಾಗವರ್ಮನ ಪ್ರಕಾರ ಇದರ ಸಾಮಾನ್ಯ ಲಕ್ಷಣ ಮೂರು ರೀತಿಯ ಗಣವಿಭಜನೆಯ ಸಾಧ್ಯತೆಯನ್ನು ಕುರಿತಿರುವ ಹಾಗೆ ತೊರುತ್ತದೆ. 4 ಪಾದಗಳು ಮೊದಲನೆಯ ರೀತಿ 5 ವಿ + 1 ಗುರು; ಎರಡನೆಯ ರೀತಿ 4 ವಿ + 1 ರು, ಮೂರನೆಯ ರೀತಿ 3 ರು + 1 ವಿ. ಪಾದಪಾದಕ್ಕೆ ಗಣನಿಯಮ ವ್ಯತ್ಯಾಸವಾದರೂ ಪ್ರತಿಪಾದದಲ್ಲೂ 22 ಮಾತ್ರೆಯಿರಬೇಕು. ಜಯಕೀರ್ತಿಯ ಲಕ್ಷಣ ನಾಲ್ಕು ಪಾದಗಳು. ಮೊದಲ ಪಾದದಲ್ಲಿ 20 ಲಘು + 1 ಗುರು ಉಳಿದ ಸಾಲುಗಳಲ್ಲಿ 4 ವಿ + 1 ಬ್ರ. ಒಟ್ಟಿನಲ್ಲಿ ಪ್ರತಿ ಪಾದದಲ್ಲಿಯೂ 22 ಮಾತ್ರೆಗಳು ಯತಿಯೊಡಗೂಡಿ ಬಂದಿರಬೇಕು. ಈತನ ವಿವರಣೆಯೂ ಅಂಶ ಮತ್ತು ಮಾತ್ರಾಗಣಗಳ ಸಮ್ಮಿಶ್ರ ನಿರೂಪಣೆ ಬಂದಿರುವುದಕ್ಕೆ ಕಾರಣ. ಇದು ಕೂಡ ಅಂಶ ವೃತ್ತವಾಗಿಯೂ ಧಾಟಿಯಲ್ಲಿ ಮಾತ್ರಾವೃತ್ತವಾಗಿ ಪರಿಣಮಿಸಿರುವುದೇ ಆಗಿದೆ. ಆದರೆ ಲಕ್ಷಣ ನಿರೂಪಣೆಯಲ್ಲಿ ಮಾತ್ರಾ ಸಾಮ್ಯವನ್ನೊಪ್ಪಿಯೂ ಗಣವಿನ್ಯಾಸವನ್ನು ಬೇರೆಯಾಗಿ ಹೇಳಿರುವುದಕ್ಕೆ ಕಾರಣವೇನೋ ತಿಳಿಯದು. ಪ್ರಾಚೀನ ಸಾಹಿತ್ಯದಲ್ಲಿ ಇದು ಎಲ್ಲಿ ಬಳಕೆಯಾಗಿದೆಯೆಂಬುದು ಗೊತ್ತಾಗಿಲ್ಲ. ಜನಪದ ಸಾಹಿತ್ಯದಲ್ಲಿ ಇಂಥ ಪದ್ಯಗಳು ದೊರೆಯಬಹುದೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ನಿದರ್ಶನಕ್ಕೆ ನಾಗರ್ವಮನ ಲಕ್ಷಣ ಪದ್ಯದ ಒಂದು ಸಾಲು

ಮದನನ | ತಂದೆಯ | ಗಣಮವು | ವಿಷಯದೊ | ಳಿರೆ ಗುರು | ಮುಂ

(ಟಿ.ವಿ.ವಿ., ಡಿ.ಎಸ್.ಕೆ.)

**ಗೀತಿಕೆ :** ನಾಗವರ್ಮ ಮತ್ತು ಜಯಕೀರ್ತಿ ಗೀತಿಕೆಯ ಲಕ್ಷಣಕ್ಕೆ ಕೊಟ್ಟಿರುವ ಪದ್ಯವೇ ಲಕ್ಷ್ಯವೂ ಆಗಿದೆ.

ನಾಗವರ್ಮನ ಲಕ್ಷಣ ಪದ್ಯ:

ಎರಡಱೊ | ಳಾಱೆಂ | ಬ(ಬಾ?) | ಸಂಖ್ಯೆಯೊಳ್ |
ಬರೆ ಪದ್ಮ | ಭವನುೞಿ | ದುವು ಮೆ | ಚ್ಚುವ ತೆಱದಿಂ|
ದಿರೆ ಮುಂ | ದಣ ಪ | ದಂ ಮುನ್ನಿನಂ
ತಿರೆ ಕರಂ | ಗೀತಿಕೆ | ಯಿಂತ | ಕ್ಕುಂ ಸಖೀ |

ಜಯಕೀರ್ತಿಯ ಲಕ್ಷಣಪದ್ಯ:

ರಗಣೋ ದ್ವಿತೀಯೇ ಷಷ್ಠೆ ಚ
ಲಗಣೋ ಧಗಣೋವ್ಯಾSನ್ಯತ್ರ ಪಂಚಸ್ಪರ್ಧಯೋಶ್ಚ
ತ್ರಿಗಣೋSಯುಕ್ ಸಮಪಾದೋಬ್ಧಿಗಣೋ
ನಿಗದಿತಾ ಗೀತಿಕಾಲಂಕಾರೇ ಪ್ರಭುಸೇನೀಯೈಃ

ನಾಗವರ್ಮನ ಪದ್ಯಕ್ಕೆ ಕನ್ನಡ ಕೈಪಿಡಿಯಲ್ಲಿ ಹೀಗೆ ವಿವರಿಸಿದ್ದಾರೆ. ಏಳೇಳು ಗಣದ ಎರಡು ಪಾದ ಮಾತ್ರ. ನಾಲ್ಕನೆಯ ಗಣದಲ್ಲಿ ಒಳಪ್ರಾಸ. ಕಡೆಯಲ್ಲಿ ರುದ್ರ, ಮಿಕ್ಕ ಕಡೆ ವಿಷ್ಣು (ರುದ್ರ ಪರ್ಯಾಯಗಣ). "2-6ರಲ್ಲಿ ಬ್ರಹ್ಮ ಎಂದು ಹೇಳಬಹುದೆ? ಗೀತಿಕೆ ಎಂಬುದರಿಂದ ಸಾಂಗತ್ಯ ಸಂಬಂಧಿಯಾಗಿರಬಹುದೆ?"

ಏಳೆ, ತ್ರಿಪದಿ, ಅಕ್ಕರ, ಗೀತಿಕೆ, ಸಾಂಗತ್ಯ- ಇವೆಲ್ಲವೂ ಒಂದೇ ಬುಡಕಟ್ಟಿನ ಛಂದೋರೀತಿಗಳಾದದ್ದರಿಂದ ಒಂದೊಂದಕ್ಕೆ ಪರಸ್ಪರ ಸಂಬಂಧ ಕಲ್ಪಿಸುವುದು ಕಷ್ಟವೇನಲ್ಲ. ಗೀತಿಕೆ ಗೇಯಾತ್ಮಕವಾಗಿದ್ದು, ಮುಂದೆ ಸಾಂಗತ್ಯ ಹಾಡುಗಬ್ಬಗಳಲ್ಲಿ ವಿಶೇಷ ಪ್ರಚಾರಕ್ಕೆ ಬಂದದ್ದರಿಂದ ಎರಡಕ್ಕೂ ಹತ್ತಿರದ ನಂಟು ಇರಬಹುದೆಂದು ಥಟ್ಟನೆ ತೋರುವುದು ಸಹಜ. ಏಳೆ, ತ್ರಿಪದಿ, ಸಾಂಗತ್ಯ- ಇವುಗಳ ನಡುವೆ ಕಂಡುಬರುವ ಸಂಬಂಧಸಾಮೀಪ್ಯ ಗೀತಿಕೆ ಸಾಂಗತ್ಯಗಳ ನಡುವೆ ಕಂಡುಬರುವುದಿಲ್ಲ.

ಇನ್ನು ಗೀತಿಕೆಗೆ 'ಏಳೇಳು ಗಣದ ಎರಡು ಪಾದ ಮಾತ್ರ' ಎಂಬ ಮಾತು ವಿಚಾರಾರ್ಹ. ಕವಿರಾಜಮಾರ್ಗದ ಲಕ್ಷ್ಯಪದ್ಯಗಳಿಂದ ಇದು ಸಮಚತುಷ್ಪದಿಯಾಗಿಯೂ ನಾಗವರ್ಮ ಜಯಕೀರ್ತಿಗಳ ಲಕ್ಷ್ಯಗಳ ಲಕ್ಷ್ಯ ಲಕ್ಷಣ ಸಮನ್ವಿತ ಪದ್ಯಗಳ ಪ್ರಕಾರ ಅರ್ಧಸಮ ಚತುಷ್ಪದಿಯಾಗಿಯೂ ಕಂಡುಬರುತ್ತದೆ. ನಾಗವರ್ಮ ಜಯಕೀರ್ತಿಗಳ ಲಕ್ಷಣಾನುಸಾರವಾಗಿ ಏಳೇಳು ಗಣಗಳುಳ್ಳ ಪೂರ್ವಾರ್ಧ ಉತ್ತರಾರ್ಧಗಳ 2-6ನೆಯ ಸ್ಥಾನಗಳಲ್ಲಿ ಬ್ರಹ್ಮಗಣ ಬಂದೇತೀರಬೇಕು. ಉಳಿದ 5 ಕಡೆಗಳಲ್ಲಿ ಬ್ರಹ್ಮ ವಿಷ್ಣು ರುದ್ರಗಳಲ್ಲಿ ಯಾವುದಾದರೂ ಬರಬಹುದು. ಈ ಐಚ್ಛಿಕತೆಗೆ ಅವಕಾಶವಿದ್ದರೂ ಸಾಮಾನ್ಯವಾಗಿ ವಿಷ್ಣುವಿನ ಪ್ರಾಚುರ್ಯವೇ ಹೆಚ್ಚು. ಈ ಲಕ್ಷಣಕ್ಕೆ ಅನುಗುಣವಾದ ಒಂದು ಪದ್ಯವೂ ಕನ್ನಡ ಕಾವ್ಯರಾಶಿಯಲ್ಲಿ ಕಂಡುಬರದಿರುವುದು ಸೋಜಿಗ.

ನಾಗವರ್ಮ ಮತ್ತು ಜಯಕೀರ್ತಿಯ ಪದ್ಯಗಳ ಆಧಾರದ ಮೇಲೆ ಕವಿರಾಜಮಾರ್ಗದ ಗೀತಿಕೆಗಳಿಗೆ ಲಕ್ಷಣ ಸಮನ್ವಯ ಮಾಡಲಾಗುವುದಿಲ್ಲ. ಇವರಿಬ್ಬರೂ ಈ ಪದ್ಯಗಳನ್ನು ಗಮನಿಸಿದ್ದರೋ ಇಲ್ಲವೋ ಹೇಳುವುದು ಕಷ್ಟ. ಕವಿರಾಜ ಮಾರ್ಗದ ಎಲ್ಲ ಗೀತಿಕೆಗಳ (ಇವು 23 ಇವೆ) ಸ್ಥೂಲ ಪರೀಕ್ಷಣದಿಂದ, ಅದರಲ್ಲಿನ ಗೀತಿಕೆಯ ಲಕ್ಷಣವನ್ನು ಹೀಗೆ ನಿರ್ದೇಶಿಸಬಹುದು: ಇದು ಸಮಚತುಷ್ಪದಿ. ಪ್ರತಿ ಪಾದದಲ್ಲಿಯೂ ನಾಲ್ಕು ನಾಲ್ಕು ಅಂಶಗಣ. ನಾಗವರ್ಮ ಹೇಳುವಂತೆ 2-6ನೆಯ ಸ್ಥಾನಗಳಲ್ಲಿ ಬ್ರಹ್ಮ ಇರಬೇಕೆಂಬ ನಿಯಮ ಕಂಡುಬರುವುದಿಲ್ಲ ಗಣ ವಿನ್ಯಾಸದಲ್ಲಿಯೂ ನಿಶ್ಚಿತ ನಿಯಮ ವ್ಯವಸ್ಥೆ ಇದ್ದಂತಿಲ್ಲ. ಓದುವ ಅಥವಾ ಹಾಡುವ ಧಾಟಿಯಲ್ಲಿ ಸಹಜ ಯತಿಯನ್ನು ಗಮನಿಸಿ ಗಣಯೋಜನೆಯನ್ನು ರೂಪಿಸಿಕೊಳ್ಳುವ ಧಾರಾಳತೆಗೆ ಅವಕಾಶವಿರುವಂತಿದೆ. ಕೆಲವೆಡೆ ಬಹು ಅಪೂರ್ವವಾಗಿ ಒಂದು ಪಾದದಲ್ಲಿ ಮೂರು ಗಣದ ವಿವಕ್ಷೆಯೂ ಕಂಡುಬರುವುದುಂಟು. ಅಂಥ ಪಾದದಲ್ಲಿ ನಾಲ್ಕು ಗಣಗಳ ಕಟ್ಟುಪಾಡನ್ನು ತುಂಬುವುದಕ್ಕಾಗಿ ಪಾದಾಂತ್ಯದ ಗುರುವನ್ನು (ಅಂಶವನ್ನು) ಪ್ರತ್ಯೇಕಿಸಿ, ಅದಕ್ಕೆ, ಗಣದ ಬೆಲೆಯನ್ನೇ ಕೊಡಬಹುದಾಗಿ ಕಂಡುಬರುತ್ತದೆ. ಕವಿರಾಜಮಾರ್ಗದ ಮೊದಲನೆಯ ಗೀತಿಕೆಯನ್ನು ಮಾದರಿಯ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಬ್ರ ವಿ ಬ್ರ ವಿ
ಕಾಣ | ನೇಗೆಯ್ದುಂ | ತನ್ನ | ದೋಷಮಂ
ವಿ ವಿ ವಿ ರು
ಕಾಣದಂ | ತೆಂದುಂ ಕ | ಣ್ಗಳ್ತಮ್ಮ | ಕಾಡಿಗೆಯಂ
ವಿ ರು ಬ್ರ
ಪೂಣಿಗ | ನಾದುದಱಿಂ | ಪೆಱರಿಂS
ವಿ ವಿ ವಿ ವಿ
ಜಾಣರಿ | ನೋದಿಸಿ | ಪೇೞ್ವುದು | ಕಬ್ಬಮಂ

ಮಾತ್ರಾವೃತ್ತಗಳಾದ ಆರ್ಯೆಯಿಂದಲೂ ಪ್ರಾಕೃತದ ಸ್ಕಂದಕದಿಂದಲೂ ಗೀತಿಕೆಯನ್ನು ಹೊರಡಿಸಬಹುದು. ಒಟ್ಟಿನ ಮೇಲೆ ಕವಿರಾಜಮಾರ್ಗಕಾರನೋ ಇಲ್ಲವೆ ಅವನಿಗಿಂತ ಪೂರ್ವದ ಸಂಸ್ಕೃತ ಛಂದೋರಚನೆಗಳನ್ನು ಬಲ್ಲ ಕವಿಗಳೋ ಪ್ರಚಾರದಲ್ಲಿದ್ದ ತ್ರಿಪದಿ ಮುಂತಾದ ಪದ್ಯಜಾತಿಗಳ ದೇಶ್ಯ ಛಂದಸ್ಸನ್ನು ಆಧರಿಸಿ ಗೀತಿಕೆಯನ್ನು ನಿರ್ಮಾಣ ಮಾಡಿರಬಹುದು. ಕಂದ ಪದ್ಯದ ಮೂಲ ಛಂದಸ್ಸಾದ ಆರ್ಯಾಗೀತಿ ಅಥವಾ ಗೀತಿ ಗೀತಿಕೆಯ ನಿರ್ಮಾಣಕ್ಕೆ ಪ್ರೇರಕ ವಾಗಿರಬಹುದು.

ಅಂಶಗಣನಿಬದ್ಧವಾದ 'ಗೀತಿ'ಯ ಪ್ರಕಾರಗಳು ತೆಲುಗಿನಲ್ಲೂ ಇವೆ. ತೆಲುಗು ಛಂದೋಗ್ರಂಥ'ಗಳಲ್ಲಿ ಅತ್ಯಂತ ಪ್ರಾಚೀನವಾದ ಕವಿಜನಾಶ್ರಯಮುವಿನ ಕರ್ತೃ ಅಪ್ಪ ಕವಿ (ಸು.1100) ತೆಲುಗು ಜಾತಿ ಛಂದಸ್ಸಿನ ಪ್ರಕಾರಗಳಲ್ಲಿ ಗೀತಿಯನ್ನೂ ಹೆಸರಿಸಿದ್ದಾನೆ. ಎತ್ತುಗೀತಿ, ಪ್ರಗೀತಿ, ಮೇಲನಗೀತಿ, ತೇಟಗೀತಿ, ಆಟವೆಲದಿ ಇವು ಗೀತಿಯ ಇತರ ಪ್ರಭೇದಗಳು. ಇವೆಲ್ಲವೂ ಸಮಚತುಷ್ಪದಿಗಳು. ಕವಿರಾಜಮಾರ್ಗದ ಗೀತಿಕೆಗೂ ಪ್ರತಿಪಾದಕ್ಕೂ 5 ಗಣಗಳುಳ್ಳ (ಸೂರ್ಯ- ಇಂದ್ರ- ಇಂದ್ರ- ಸೂರ್ಯ- ಸೂರ್ಯ = ಬ್ರ- ವಿ- ವಿ- ಬ್ರ- ಬ್ರ) ತೇಟಗೀತಿಗೂ ಬಹುಮಟ್ಟಿನ ಹೋಲಿಕೆ ಕಂಡುಬರುತ್ತದೆ.

ನಾಗವರ್ಮನ ಕಾವ್ಯಾವಲೋಕನದಲ್ಲಿನ ಪ್ರತಿಯೊಂದು ಅಧಿಕರಣ ಕೊನೆಯಾಗುವ ಸ್ವಲ್ಪ ಮೊದಲಿಗೆ ಒಂದು ಗೀತಿಕೆ ಬರುತ್ತದೆ. ಪ್ರಭುಸೇನನ ಅನುಯಾಯಿಗಳು (?) ಅಲಂಕಾರದಲ್ಲಿ ಗೀತಿಕೆಯನ್ನು ವರ್ಣಿಸಿರುವುದಾಗಿ ಜಯಕೀರ್ತಿ ಹೇಳಿದ್ದಾನೆ. ಆದರೆ ಆ ಗ್ರಂಥ' ಯಾವುದೆಂಬುದು ನಮಗೆ ಸರಿಯಾಗಿ ತಿಳಿಯದು.

ಈಗ ತಿಳಿದುಬಂದಿರುವ ಮಟ್ಟಿಗೆ ಗೀತಿಕೆಯ ಮೊದಲ ಉಲ್ಲೇಖ ಹಾಗೂ ಹಲವಾರು ಗೀತಿಕೆಗಳು ದೊರೆತಿರುವುದು ಕವಿರಾಜಮಾರ್ಗದಲ್ಲಿ. ಚತ್ತಾಣವೆಂಬ ಕಾವ್ಯ ಪ್ರಭೇದದ ಸ್ವರೂಪವನ್ನು ತಿಳಿಸುವಾಗ, ಕವಿರಾಜಮಾರ್ಗಕಾರ ಇದನ್ನು ಹೆಸರಿಸಿದ್ದಾನೆ. ಈ ಗ್ರಂಥಕ್ಕೂ ಪೂರ್ವದ ಶಾಸನಗಳಲ್ಲಿಯಾಗಲಿ ನಾಗವರ್ಮ ಛಂದೋಂಬುಧಿಯಲ್ಲಿ ಕೊಟ್ಟಿರುವ ಲಕ್ಷ್ಯ-ಲಕ್ಷಣ ಪದ್ಯವನ್ನೂ ಬಿಟ್ಟು ಉಳಿದ ಯಾವ ಪ್ರಾಚೀನ ಕಾವ್ಯದಲ್ಲಿಯಾಗಲಿ ಗೀತಿಕೆ ಕಂಡುಬರುವುದಿಲ್ಲ. ಚಂದ್ರರಾಜನ ಮದನತಿಲಕದಲ್ಲಿ ಒಂದೇ ಪದ್ಯದಲ್ಲಿ ಹಲವು ಛಂದೋಬಂಧಗಳು ಹೆಣೆದುಕೊಳ್ಳುವಂಥ' ಚಮತ್ಕಾರದ ಪದ್ಯರಚನೆಗಳಿವೆ. ಮಯೂರಕ್ರೀಡೆ ಎಂಬ ಇಂಥ ಒಂದು ಪದ್ಯದಲ್ಲಿ 'ಎರಡು ಕಂದಮುಂ ದ್ವಿಪದಿಕೆಯುಂ ಗೀತಿಕೆಯುಮೈದುವಕ್ಕರಮುಮುಕ್ಕುಂ' ಎಂದು ಹೇಳಿದ್ದಾನೆ. ಗೀತಿಕೆಯ ಲಕ್ಷಣವನ್ನು ಅನುಲಕ್ಷಿಸಿ ಈ ಮಯೂರಕ್ರೀಡೆಯಿಂದ ಗೀತಿಕೆಯನ್ನು ಹೊರಡಿಸಬಹುದೇ ಹೊರತು ಇದನ್ನೇ ಗೀತಿಕೆಯೆಂದು ಪರಿಗಣಿಸ ಲಾಗುವುದಿಲ್ಲ. ಸಂಸ್ಕೃತದ ಗೀತಿ, ಉದ್ಗೀತಿ ಮುಂತಾದ ಮಾತ್ರಾ ಛಂದಸ್ಸಿನ ವೃತ್ತಗಳಿಗೂ ಇದಕ್ಕೂ ನಾಮ ಸಾದೃಶ್ಯವೊಂದನ್ನು ಬಿಟ್ಟರೆ ಬೇರೆ ಯಾವ ಸಂಬಂಧವೂ ಇಲ್ಲ. (ಎಂ.ವಿ.ಎಸ್.)

**ಉತ್ಸಾಹ :** ನಾಗವರ್ಮನ ಪ್ರಕಾರ ಇದರ ಸಾಮಾನ್ಯ ಲಕ್ಷಣ 4 ಪಾದಗಳು, ಪ್ರತಿ ಪಾದದಲ್ಲಿ 7 ಬ್ರ + 1 ಗುರು. ಕೊನೆಯ ಗುರು ಲಯಗ್ರಾಹಿಯಾಗಿ ಮುನ್ನಡೆಯುತ್ತದೆ. ಪದ್ಯದಲ್ಲಿ ಎದ್ದು ತೋರುವ ಮಾತ್ರಾಲಯದ ಧಾಟಿಯೇ ಕಂಡುಬರುವುದರಿಂದ, ಅಕ್ಕರಿಕೆ, ಮದನವತಿಗಳ ಹಾಗೆಯೇ ಇದೂ ಮಾತ್ರಾವೃತ್ತವಾಗಿ ಪರಿಣಮಿಸಿದೆ ಎಂದು ಹೇಳಬಹುದು. ಉತ್ಸಾಹಪೂರ್ಣವಾದ ಲಯಗತಿಗೆ ಅನುಸಾರವಾಗಿ ವೃತ್ತದ ಹೆಸರು ಉತ್ಸಾಹ ಎಂದಿರುವುದು ಉಚಿತವೇ ಆಗಿದೆ. ಜಯಕೀರ್ತಿ ಈ ಪದ್ಯಜಾತಿಯನ್ನು ಮಿಶ್ರಾಧಿಕಾರದಲ್ಲಿ ಸೇರಿಸಿ ಮಾತ್ರಾವೃತ್ತವೆನ್ನುವಂತೆ ಹೀಗೆ ಲಕ್ಷಣವನ್ನು ಹೇಳಿದ್ದಾನೆ: 7 ಗುರುಲಘುಗಳ ಜೋಡಿ + 1 ಗುರು. ಯಾವುದೇ ಗುರು ಲಘುವಿನ ಜೋಡಿಯ ಸ್ಥಾನದಲ್ಲಿ ನಗಣ (ᴗᴗᴗ) ಕೂಡ ಬರಬಹುದು. ನಾಗವರ್ಮನ ಲಕ್ಷಣಪದ್ಯದಲ್ಲಿಯ ಮಾತ್ರಾಗತಿಯನ್ನು ನೋಡಿಯೇ ಜಯಕೀರ್ತಿ ಹೀಗೆ ಮಾತ್ರಾವೃತ್ತವನ್ನಾಗಿ ಹೇಳಿದ್ದಾನೆಂದು ಊಹಿಸಬಹುದು. ಪಂಪಭಾರತ (12-13), ಜಗನ್ನಾಥ'ವಿಜಯ, ಚಂದ್ರಪ್ರಭಪುರಾಣ (13-72, 75), ಕಬ್ಬಿಗರ ಕಾವ (ಪ-171), ಹರಿವಂಶಾಭ್ಯುದಯ (11-37), ಅನಂತನಾಥಪುರಾಣ (5-70)- ಮೊದಲಾದ ಕಾವ್ಯಗಳಲ್ಲಿ ಇದು ಬಳಕೆಯಾಗಿದೆ.

ಪಂಪಭಾರತದಿಂದ ಒಂದು ಸಾಲು:

ಎಚ್ಚ | ಡಸುರ | ನಿಟ್ಟು | ಬೆಟ್ಟು | ನೊಂದು | ವಜ್ರ | ಶರದಿ | ನಾ

ಜಯಸಿಂಹನ ತಲಂಗೆರೆ ಶಾಸನದಲ್ಲಿಯೂ (ಸು.10ನೆಯ ಶ.) ಒಂದು ನಿದರ್ಶನವಿದೆ. ಅದರ ಒಂದು ಸಾಲು:

ಊರ | ಕಡೆಯ | ತೊಱೆಯ | ತಡಿಯ | ಕಱಿಯ | ಕಲ್ಲ | ಮೋಱ | ದಿವ್

(ಎ‌ಇ., 29 - ಪು. 205-6)

(ಈ ಪದ್ಯದ 2ನೆಯ ಪಾದದ 1ನೆಯ ಗಣ ವಿಷ್ಣುಗಣವಾಗಿದೆ.) (ಟಿ.ವಿ.ವಿ.)

**ಷಟ್ಪದಿ :** ಅಚ್ಚಕನ್ನಡ ಛಂದಸ್ಸಿನ ಮಟ್ಟುಗಳಲ್ಲಿ ತ್ರಿಪದಿಯಂತೆಯೇ ಗಮನಾರ್ಹವಾದ ಒಂದು ಮಟ್ಟು. ಮೊದಲಲ್ಲಿ ಅಂಶಗಣಗಳಿಂದ ಕಟ್ಟಿದ ಒಂದು ಬಗೆಯ ಷಟ್ಪದಿ ಕಾಣಿಸಿಕೊಂಡಿತು. ಅನಂತರದಲ್ಲಿ ಸು.12-13ನೆಯ ಶತಮಾನದಿಂದೀಚೆಗೆ ಮಾತ್ರಾ ಗಣಗಳಿಂದ ಕಟ್ಟಿದ ಆರು ಬಗೆಯ ಷಟ್ಪದಿಗಳು ಮುಖ್ಯವಾಗಿ ಕಾಣಿಸಿಕೊಂಡು ಪ್ರಬಲಿಸಿ ಪ್ರಸಿದ್ಧಿಗೆ ಬಂದುವು. ಆಗ ಮೊದಲನೆಯದು ಬಲು ಮಟ್ಟಿಗೆ ಕಣ್ಮರೆಯಾಯಿತು. ಷಟ್ಪದಿ ಸಾಹಿತ್ಯದ ಇತಿಹಾಸವನ್ನು ಪರಿಶೀಲಿಸಿದರೆ ಇದು ತಿಳಿಯುತ್ತದೆ.

**ಅಂಶಗಣಾತ್ಮಕ ಷಟ್ಪದಿ :** ನಾಗವರ್ಮ, ಜಯಕೀರ್ತಿ, 3ನೆಯ ಸೋಮೇಶ್ವರ, ಶಾರ್ಙ್ಗದೇವ ಈ ನಾಲ್ವರೂ ಇದರ ಲಕ್ಷಣವನ್ನು ಸಮಾನವಾಗಿ ಹೇಳಿದ್ದಾರೆ. ಲಕ್ಷಣ ಲಕ್ಷ್ಯಗಳನ್ನು ಸಮನ್ವಯಿಸಿಕೊಂಡು ಸಾಮಾನ್ಯ ಲಕ್ಷಣವನ್ನು ಹೀಗೆ ಹೇಳಬಹುದು. 3-3 ಪಾದಗಳ 2 ಸಮಾರ್ಧಗಳನ್ನುಳ 6 ಪಾದಗಳು. ಪೂರ್ವಾರ್ಧದಲ್ಲಿ 1, 2 ಮತ್ತು 3 ನೆಯ ಪಾದಗಳಲ್ಲಿ ಕ್ರಮವಾಗಿ 2ವಿ, 2ವಿ ಮತ್ತು 2ವಿ + 1ರು ಹೀಗೆ 7 ಗಣಗಳು (ವಿ+ವಿ+ವಿ+ವಿ+ವಿ+ವಿ+ರು) ಉತ್ತರಾರ್ಧದಲ್ಲಿಯೂ ಹೀಗೆಯೇ. ವಿಷ್ಣು ಮತ್ತು ರುದ್ರಗಣಗಳ ಸ್ಥಾನಗಳಲ್ಲಿ ವಿರಳವಾಗಿ ಪರ್ಯಾಯ ಗಣಗಳು ಬರುವುದುಂಟು.

ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಈ ಷಟ್ಪದಿ ಕನ್ನಡ ಭಾಷೆಗೆ ಸೇರಿದ್ದೆಂದೂ ಆ ಭಾಷೆಯಲ್ಲಿ ಅದು ಹಾಡತಕ್ಕದ್ದೆಂದೂ ಕಥೆ'ಯನ್ನು ಅದು ಒಳಗೊಂಡಿರುತ್ತದೆಂದೂ ಮುಂತಾಗಿ ಕೆಲವು ಸಂಗತಿಗಳನ್ನು ಹೇಳಿದೆ. ಸು.12ನೆಯ ಶತಮಾನದ ಆದಿಭಾಗದಲ್ಲಿಯೇ (1126-39) ಷಟ್ಪದಿನಿಬದ್ಧವಾದ ಕಾವ್ಯಗಳು ಹುಟ್ಟಿದ್ದವೆಂದು ತಿಳಿಯುವುದಕ್ಕೆ ಈ ಗ್ರಂಥದಲ್ಲಿ ಕೆಲವು ಸೂಚನೆಗಳಿವೆ. ಆದರೆ ಅಂಥ ಕಾವ್ಯಗಳಾವುವೂ ದೊರೆತಿಲ್ಲ. ಇಂಥ' ಷಟ್ಪದಿಗಳು ಈವರೆಗೆ ಕೆಲವೇ ದೊರೆತಿವೆ. ಚಂದ್ರರಾಜನ ಮದನತಿಲಕ (ಸು.1025) ಶಾಂತಿನಾಥನ ಸುಕುಮಾರಚರಿತೆ (ಸು.1068) ಇವುಗಳಲ್ಲಿ ಒಂದೊಂದು, ಮಾನಸೋಲ್ಲಾಸದಲ್ಲಿಯ ಲಕ್ಷ್ಯಪದ್ಯವೊಂದು ಈ ಮೂರನ್ನು ಬಿಟ್ಟರೆ ಉಳಿದವೆಲ್ಲ ಶಾಸನಗಳಲ್ಲಿ ಕಾಣಿಸಿಕೊಂಡಿರತಕ್ಕವಾಗಿವೆ. ಅವು ಚಿತ್ರದುರ್ಗದ 47ನೆಯ ಶಾಸನ (1067). ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಚಡಚಣದ ಶಾಸನ (1067) ಅಮ್ಮಿನಭಾವಿಯ ಶಾಸನ (1071) ಮತ್ತು ಮೆಹಬೂಬ್‌ನಗರ ಜಿಲ್ಲೆಯ ಗಂಗಾಪುರದ ಶಾಸನ (ಸು.1,100-40) -ಇವಗಳಲ್ಲಿ ಕಂಡುಬಂದಿರತಕ್ಕವು.

ನಿದರ್ಶನಕ್ಕೆ:

ಅದು ಪರ | ಮಾಸ್ಪದ
ಮದು ಪುಣ್ಯ | ಸಂಪದ
ಮದು ಮಹಾ | ಭ್ಯುದಯ ವಿ | ಲಾಸಾವಾಸಂ
ಸುಕುಮಾರಚರಿತೆ- (12-51)

**ಮಾತ್ರಾಗಣಾತ್ಮಕ ಷಟ್ಪದಿಗಳು :** ಇವು ಶರ, ಕುಸುಮ, ಭೋಗ, ಭಾಮಿನೀ, ಪರಿವರ್ಧಿನಿ ಮತ್ತು ವಾರ್ಧಕ- ಎಂಬುದಾಗಿ ಆರು ಬಗೆ. ಇವುಗಳ ಜೊತೆಗೆ ಉದ್ದಂಡ ಎಂಬೊಂದು ಬಗೆ ಕೂಡ ಉಂಟು. ಮೊದಲು ಅಂಶ ಷಟ್ಪದಿಗೆ ಸಮೀಪವಾದ ಶರಕುಸುಮ ಷಟ್ಪದಿಗಳೂ ಆಮೇಲೆ ಷಟ್ಪದಿಯ ಮೂಲ ಚೌಕಟ್ಟಿಗೆ ಹೊಂದುವಂತೆ 2-2 ಮಾತ್ರೆಗಳ ಪ್ರಮಾಣವನ್ನು ವರ್ಧಿಸುವುದರ ಮೂಲಕವಾಗಿ ಭೋಗದಿಂದ ವಾರ್ಧಕದ ವರೆಗೆ ಉಳಿದ ಪ್ರಭೇದಗಳೂ ಹುಟ್ಟಿಕೊಂಡಿರಬೇಕೆಂದು ತೋರುತ್ತದೆ. ಇನ್ನು ಉದ್ದಂಡ ಎಂಬುದು ಒಟ್ಟಿನಲ್ಲಿ ವಾರ್ಧಕವನ್ನೇ ಹೋಲುವ

ಒಂದು ಬಗೆ. ಈ ಎಲ್ಲ ಬಗೆಗಳಲ್ಲಿಯೂ ಸ್ವತಂತ್ರವಾಗಿ ಕೃತಿರಚನೆಯಾಗಿದೆ. ರಾಘವಾಂಕ, ಚಾಮರಸ, ಕುಮಾರವ್ಯಾಸ, ಲಕ್ಷ್ಮೀಶ, ಮುಂತಾದವರು ಷಟ್ಪದಿಗಳಲ್ಲಿ ರಚಿಸಿರುವ ಕಾವ್ಯಗಳು ಪ್ರಸಿದ್ಧವಾಗಿವೆ. ಇವುಗಳ ಸಾಮಾನ್ಯ ಲಕ್ಷಣ:

**(I) ಶರಷಟ್ಪದಿ :** ಪೂರ್ವಾರ್ಧದಲ್ಲಿ 1, 2 ಮತ್ತು 3ನೆಯ ಪಾದ ಗಳಲ್ಲಿ ಕ್ರಮವಾಗಿ ಚತುರ್ಮಾತ್ರಾಗಣಗಳು 2, 2 ಮತ್ತು 3+1 ಗುರು ಉತ್ತರಾರ್ಧದಲ್ಲಿಯೂ ಹೀಗೆಯೇ

ಈಶನ | ಕರುಣೆಯ
ನಾಶಿಸು | ವಿನಯದಿ
ದಾಸನ | ಹಾಗೆಯೆ | ನೀ ಮನ | ವೇ (ಪದ್ಯಸಾರ)

**(II) ಕುಸುಮ ಷಟ್ಪದಿ :** ಪೂರ್ವಾರ್ಧದಲ್ಲಿ 1, 2 ಮತ್ತು 3 ನೆಯ ಪಾದಗಳಲ್ಲಿ ಕ್ರಮವಾಗಿ ಪಂಚಮಾತ್ರಾ ಗಣಗಳು 2, 2 ಮತ್ತು 3+1 ಗುರು ಉತ್ತರಾರ್ಧದಲ್ಲಿಯೂ ಹೀಗೆಯೇ

ನಿದರ್ಶನಕ್ಕೆ ಪೂರ್ವಾರ್ಧ

ನಾಡು ಮನ | ಸಿಜನೊಲವಿ
ನಾಡುವೆಡೆ | ಸಂತತಂ
ಬೀಡು ರತಿ | ಪತಿಗೆ ಸತ | ತ ನಿಧಾನ | ವು
(ಕುಮುದೇಂದು ರಾಮಾಯಣ)

**(III) ಭೋಗ ಷಟ್ಪದಿ :** ಪೂರ್ವಾರ್ಧದಲ್ಲಿ 1, 2 ಮತ್ತು 3 ನೆಯ ಪಾದಗಳಲ್ಲಿ ಕ್ರಮವಾಗಿ ತ್ರಿಮಾತ್ರಾಗಣಗಳು 4, 4 ಮತ್ತು 6 + 1 ಗುರು ಉತ್ತರಾರ್ಧದಲ್ಲಿಯೂ ಹೀಗೆಯೇ

ನಿದರ್ಶನಕ್ಕೆ ಪೂರ್ವಾರ್ಧ

ಮೆಚೆಯು | ತಿದ್ದ | ಭಾಗ್ಯ | ವೆಲ್ಲ
ಹಚಿದು | ಹೋಯಿ | ತೆನುತ | ತಿರುಕ
ಮರಳಿ | ನಾಚಿ | ಪೋಗು | ತಿದ್ದ | ಮರುಳ | ನಂತೆ | ಯೇ
(ಮುಪ್ಪಿನ ಷಡಕ್ಷರಿ)

**(IV) ಭಾಮಿನೀ ಷಟ್ಪದಿ :** ಪೂರ್ವಾರ್ಧದಲ್ಲಿ 1, 2 ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ 3, 4ರ ಹಾಗೆ ಬರುವ ಗಣಗಳು 2, 2 ಮತ್ತು 3 + 1 ಗುರು ಉತ್ತರಾರ್ಧದಲ್ಲಿಯೂ ಹೀಗೆಯೇ

ನಿದರ್ಶನಕ್ಕೆ ಕುಮಾರವ್ಯಾಸ ಭಾರತದ ಒಂದು ಪದ್ಯದ ಪೂರ್ವಾರ್ಧ

ವೀರ | ನಾರಾ | ಯಣನೆ | ಕವಿ ಲಿಪಿ
ಕಾರ | ಕುವರ | ವ್ಯಾಸ | ಕೇಳುವ
ಸೂರಿ | ಗಳು ಸನ | ಕಾದಿ | ಗಳು ಜಂ | ಗಮ ಜ | ನಾರ್ಧನ | ರು

**(V) ಪರಿವರ್ಧಿನಿ ಷಟ್ಪದಿ :** ಪೂರ್ವಾರ್ಧದಲ್ಲಿ 1, 2 ಮತ್ತು 3 ನೆಯ ಪಾದಗಳಲ್ಲಿ ಕ್ರಮವಾಗಿ ಚತುರ್ಮಾತ್ರಾಗಣಗಳು 4, 4 ಮತ್ತು 6 + 1 ಗುರು ಉತ್ತರಾರ್ಧದಲ್ಲಿಯೂ ಹೀಗೆಯೇ

ನಿದರ್ಶನಕ್ಕೆ ಪೂರ್ವಾರ್ಧ:

ದುರಿತ ವ | ನಂ ಬೆಳೆ | ವುದೆ ಪೊ | ಲಂ ಕೊಲೆ
ಪರ ಕಲಿ | ಸಿದ ನವ | ದೋಹಳ | ಮ ನೃತಂ
ಪರಿಕಾ | ಲುದಕಮೆ | ದಕೆ ಕಳ | ವನ್ಯ | ಸ್ತ್ರೀ ಸಂ | ಗಮೆ | ಗೆ | ಯ್ಮೆ
(ಜಯನೃಪಕಾವ್ಯ)
(ಟಿ.ವಿ.ವಿ., ಡಿ.ಎಸ್.ಕೆ.)

**(VI) ವಾರ್ಧಕ ಷಟ್ಪದಿ :** ಷಟ್ಪದಿಗಳಲ್ಲಿ ಇದು ಅತ್ಯಂತ ದೊಡ್ಡದು. ಪೂರ್ವಾರ್ಧದಲ್ಲಿ 1, 2 ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ಪಂಚ ಮಾತ್ರಾ ಗಣಗಳು, 4, 4 ಮತ್ತು 6+1 ಗುರು. ಉತ್ತರಾರ್ಧದಲ್ಲಿಯೂ ಹೀಗೆಯೇ. ಆದರೆ ಇದರಲ್ಲಿ ‿‿—‿ ‿— ಎಂಬ ಗಣಗಳು ಬರಕೂಡದು. ಲಲಿತ ರಗಳೆಯೇ ವಾರ್ಧಕ ಷಟ್ಪದಿಯ ಆವಿರ್ಭಾವಕ್ಕೆ ಮೂಲ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಷಟ್ಪದಿಯ ಕಿರಿಯ ಚರಣಗಳಲ್ಲಿ ಲಲಿತ ರಗಳೆಯ ಸಾಲಿನಷ್ಟೇ ಮಾತ್ರೆಗಳು ಮತ್ತು ಗಣಗಳಿರುವುದು ಈ ನಿಲುವನ್ನು ಸಮರ್ಥಿಸುತ್ತದೆ: ಕುಸುಮ ಷಟ್ಪದಿಯನ್ನು ದ್ವಿಗುಣಿಸಿಯೂ ವಾರ್ಧಕವನ್ನು ಹೊರಡಿಸಲು ಸಾಧ್ಯವಿದೆ. ಭಾವಗಳನ್ನೂ ಕಥೆಯನ್ನೂ ಸಮರ್ಥವಾಗಿ ನಿರೂಪಿಸಲು ಈ ಷಟ್ಪದಿಯ ಬಂಧ ಅತ್ಯಂತ ಅನುಕೂಲಕರವಾಗಿದೆ, ಲಯವೂ ಲಲಿತವಾಗಿದೆ. ನಡುಗನ್ನಡದಲ್ಲಿ ಕ್ಲಿಷ್ಟವಾದ ಚಂಪೂಮಾರ್ಗವನ್ನು ಬಿಟ್ಟು ವಾರ್ಧಕ ಷಟ್ಪದಿಯಲ್ಲಿ ಕಾವ್ಯ ರಚನೆಯಾಗಲು ಇದರಲ್ಲಿ ಕಂಡುಬರುವ ಲಾಲಿತ್ಯ ಮತ್ತು ಸೌಲಭ್ಯಗಳೆ ಮುಖ್ಯ ಕಾರಣ. ಈ ಛಂದಸ್ಸನ್ನು ಅಧಿಕವಾಗಿ ಬಳಸಿಕೊಂಡು ವೀರಶೈವ ಕವಿಗಳು ಕಾವ್ಯಗಳನ್ನು ರಚಿಸಿದ್ದಾರೆ. ಕವಿ ರಾಘವಾಂಕನ ಹರಿಶ್ಚಂದ್ರಕಾವ್ಯ ವಾರ್ಧಕ ಷಟ್ಪದಿಯ ಮೊದಲ ಗಣ್ಯಕೃತಿ. ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ಲಕ್ಷ್ಮೀಶನ ಜೈಮಿನಿಭಾರತ ಮೊದಲಾದ ಕಾವ್ಯಗಳು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿವೆ. ಮಂಗರಸನ ಸಮ್ಯಕ್ತ್ವಕೌಮುದಿ, ತಿರುಮಲಭಟ್ಟನ ಶಿವಗೀತೆ ಮತ್ತು ಸಾಳ್ವ ಕವಿಯ ಭಾರತ ಈ ಕೃತಿಗಳಲ್ಲಿರುವ ಪದ್ಯಗಳು ವಾರ್ಧಕ ಷಟ್ಪದಿಯ ಲಕ್ಷಣಕ್ಕನುಗುಣವಾಗಿದ್ದರೂ ಈ ಕಾವ್ಯಗಳ ಪ್ರಾಚೀನ ಹಸ್ತಲಿಖಿತ ಪ್ರತಿಗಳಲ್ಲಿ ಇದನ್ನು ಉದ್ದಂಡ ಷಟ್ಪದಿ ಎಂಬ ಹೆಸರಿನಿಂದ ಕರೆದಿರುವುದನ್ನು ಗಮನಿಸಿದರೆ ಒಂದು ಕಾಲದಲ್ಲಿ ವಾರ್ಧಕಕ್ಕೆ ಉದ್ದಂಡ ಎಂಬ ಹೆಸರೂ ರೂಢಿಯಲ್ಲಿತ್ತೆಂದು ತೋರುತ್ತದೆ.

ನಿದರ್ಶನಕ್ಕೆ ಪೂರ್ವಾರ್ಧ:

ಶ್ರೀವಧುವಿ | ನಂಬಕ ಚ | ಕೋರಕಂ | ಪೊರೆಯೆ ಭ
ಕ್ತಾವಳಿಯ | ಹೃತ್ಕುಮುದ | ಕೋರಕಂ | ಬಿರಿಯೆ ಜಗ
ತೀ ವಳಯ | ದಮಲ ಸೌ | ಭಾಗ್ಯ ರ | ತ್ನಾಕರಂ |
ಪೆರ್ಚೆನಿಂ | ಮೇರೆವರಿ | ಯೇ
(ಜೈಮಿನಿ ಭಾರತ)
(ಎಸ್.ಎನ್.ಕೆ.)

**(VII) ಉದ್ದಂಡ ಷಟ್ಪದಿ :** ಪೂರ್ವಾರ್ಧದಲ್ಲಿ 1, 2 ಮತ್ತು 3ನೆಯ ಪಾದಗಳಲ್ಲಿ ಕ್ರಮವಾಗಿ ಚತುರ್ಮಾತ್ರಾಗಣಗಳು 5, 5 ಮತ್ತು 8 ಉತ್ತರಾರ್ಧದಲ್ಲಿಯೂ ಹೀಗೆಯೇ

ನಿದರ್ಶನಕ್ಕೆ ಪೂರ್ವಾರ್ಧ:

ಪರಿಕಿಪೊ | ಡೀಕೃತಿ | ಗಾವುದು | ಮೊದಲೆನೆ | ಹಳಚುವ
ತೆರೆಯೊಳು | ತಿರುಗುವ | ಕರಿಮಕ | ರಂಗಳ | ಪುಚ್ಛೋ
ತ್ಕರಹತಿ | ಯಿಂ ಚೆ | ಲ್ಲಿದ ಮಣಿ | ಗಳ ಬೆಳೆ |
ಗಿಂ ಶ್ವೇ | ತ ದ್ವೀ | ಪವನಣ | ಕಿಸುತ

ಈ ಮೇಲೆ ವಿವರಿಸಿದ ಷಟ್ಪದಿ ಭೇದಗಳಲ್ಲಿ ಗಮನಿಸತಕ್ಕ ಕೆಲವು ಸಾಮಾನ್ಯ ಸಂಗತಿಗಳೆಂದರೆ ಆದಿ ಪ್ರಾಸವಿರತಕ್ಕದ್ದು; ‿— ಎಂಬ ರೀತಿಯ ಗಣ ಬರತಕ್ಕದ್ದಲ್ಲ 3-6ನೆಯ ಪಾದಾಂತ್ಯದಲ್ಲಿ ಲಘುವಿದ್ದಾಗ ಎಣಿಕೆಗೆ ಗುರುವೆಂದಿಟ್ಟುಕೊಳ್ಳಬೇಕು - ಎಂಬುವು.

**ಸಾಂಗತ್ಯ :** ಅಚ್ಚಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಸು.14-15ನೆಯ ಶತಮಾನಗಳಲ್ಲಿ ರೂಪುಗೊಂಡ ಮಟ್ಟು. ಅಲ್ಲಿಂದೀಚೆಗೆ ಕನ್ನಡ ಕವಿಗಳು ಈ ಛಂದಸ್ಸಿನಲ್ಲಿ ವಿಪುಲವಾಗಿ ಕೃತಿರಚನೆ ಮಾಡಿದ್ದಾರೆ. ರತ್ನಾಕರವರ್ಣಿ, ನಂಜುಂಡ ಕವಿ ಮೊದಲಾದವರು ರಚಿಸಿರುವ ಪ್ರಸಿದ್ಧ ಕಾವ್ಯಗಳು ಈ ಛಂದಸ್ಸಿನಲ್ಲಿವೆ. ಇದರ ಬೆಳವಣಿಗೆಯಲ್ಲಿ ಎರಡು ಮುಖ್ಯವಾದ ಘಟ್ಟಗಳಿವೆ. ಸು.1410ರಲ್ಲಿದ್ದ ದೇಪರಾಜನ ಸೊಬಗಿನ ಸೋನೆ ಮತ್ತು ಈಚೆಗೆ ಸೊಬಗಿನ ಸೋನೆ ಎಂಬ ಮಾತಿನ ಜೊತೆಗೆ ಸೇರಿಕೊಂಡು ಬಂದಿರುವ ತತ್ತ್ವದ ಸೊಬಗಿನ ಸೋನೆ, ಮದನಮೋಹಿನಿ ಕಥೆ, ಸೊಬಗಿನ ಸೋನೆ ವರ್ಣ ಇಂಥ ಕೆಲವು ಕೃತಿಗಳಲ್ಲಿ ತೋರುವ ಲಕ್ಷಣ ಒಂದು ರೀತಿಯಾಗಿಯೂ ರತ್ನಾಕರವರ್ಣಿಯ ಭರತೇಶವೈಭವ, ಹೊನ್ನಮ್ಮನ ಹದಿಬದೆಯ ಧರ್ಮ ಇಂಥ ಕೃತಿಗಳಲ್ಲಿ ತೋರುವ ಲಕ್ಷಣ ಇನ್ನೊಂದು ರೀತಿಯಾಗಿಯೂ ಇದೆ. ಸೊಬಗಿನ ಸೋನೆಯ

ಧಾಟಿಯ ಛಂದಸ್ಸನ್ನು ಸಾಮಾನ್ಯವಾಗಿ ಸಾಂಗತ್ಯವೆಂದೇ ತಿಳಿಯಲಾಗಿದೆ. ಆದರೆ ಇದನ್ನು ಸೊಬಗಿನ ಸೋನೆಯ ಛಂದಸ್ಸು (ವರ್ಣ) ಎಂದು ಪ್ರತ್ಯೇಕವಾಗಿಯೂ ಕರೆದಿರುವುದುಂಟು. ಐತಿಹಾಸಿಕವಾಗಿ ನೋಡಿದರೆ ಇದು ಸಾಂಗತ್ಯದ ಮೊದಲ ರೂಪವೆಂದೂ ಮುಂದೆ ಇದರಲ್ಲಿ ಮಾರ್ಪಾಟು ತಲೆದೋರಿ ನಿಷ್ಕೃಷ್ಟ ರೂಪಕ್ಕೆ ಬಂದು ಸಾಂಗತ್ಯವಾಗಿರಬಹುದೆಂದೂ ಊಹಿಸಬಹುದು.

**ಸೊಬಗಿನ ಸೋನೆಯ ಛಂದಸ್ಸಿನ ಸಾಮಾನ್ಯ ಲಕ್ಷಣ :** ಎರಡು ಸಮಾರ್ಧಗಳನ್ನುಳ್ಳ 4 ಪಾದಗಳು. ಪೂರ್ವಾರ್ಧದ 1, 2ನೆಯ ಪಾದಗಳಲ್ಲಿ ಕ್ರಮವಾಗಿ 4 ಮತ್ತು 3 ವಿಷ್ಣುಗಣಗಳು; ಉತ್ತರಾರ್ಧದಲ್ಲಿಯೂ ಹೀಗೆಯೇ, ವಿಷ್ಣುಗಣಗಳಿಗೆ ಪರ್ಯಾಯವಾಗಿ ಬ್ರಹ್ಮವೋ ರುದ್ರವೋ ಬರಬಹುದು.

ನಿದರ್ಶನಕ್ಕೆ ಪೂರ್ವಾರ್ಧ:

ಎಲೆ ಪ್ರಿಯೆ | ಕೇಳು ತೊ | ಳೆದ ಮುತ್ತು | ಕರತಳಾ
ಮಳಕವೀ | ಕಥೆ ಸೊಬ | ಗಿನ | ಸೋನೆ

(ಸೊಬಗಿನ ಸೋನೆ 1-21)

**ಸಾಂಗತ್ಯ ಛಂದಸ್ಸಿನ ಸಾಮಾನ್ಯ ಲಕ್ಷಣ :** ಎರಡು ಸಮಾರ್ಧಗಳನ್ನುಳ್ಳ 4 ಪಾದಗಳು. ಪೂರ್ವಾರ್ಧದ 1, 2ನೆಯ ಪಾದಗಳಲ್ಲಿ ಕ್ರಮವಾಗಿ 4ವಿ ಮತ್ತು 2 ವಿ+1 ಬ್ರ; ಉತ್ತರಾರ್ಧದಲ್ಲಿಯೂ ಹೀಗೆಯೇ ಆದರೆ ವಿಷ್ಣು ಮತ್ತು ಬ್ರಹ್ಮಗಳ ಸ್ಥಾನದಲ್ಲಿ ಪರ್ಯಾಯ ಗಣಗಳು ಬರಬಹುದು.

ನಿದರ್ಶನಕ್ಕೆ ಪೂರ್ವಾರ್ಧ

ಪರಮ ಪ | ರಂಜ್ಯೋತಿ | ಕೋಟಿ ಚಂ | ದ್ರಾದಿತ್ಯ
ಕಿರಣ ಸು | ಜ್ಞಾನ ಪ್ರ | ಕಾಶ

(ಭರತೇಶವೈಭವ)

ಪಿರಿಯಕ್ಕರ, ಗೀತಿಕೆ, ತ್ರಿಪದಿ, ಏಳೆ ಈ ಅಂಶವೃತ್ತಗಳಲ್ಲಿ ಯಾವುದಾದರೊಂದರ ಮೂಲಕವಾಗಿ ಸಾಂಗತ್ಯ ಹುಟ್ಟಿರಬೇಕೆಂದು ವಿದ್ವಾಂಸರು ವಿಚಾರ ಮಾಡಿದ್ದಾರೆ. ಆದರೆ ವಾಸ್ತವವಾಗಿ ಯಾವುದೇ ಕನ್ನಡ ಛಂದಸ್ಸಿನ ಮೂಲದಿಂದ ಸಾಂಗತ್ಯದ ರೂಪಸಿದ್ಧಿಯನ್ನು ತೃಪ್ತಿಕರವಾಗಿ ಸಾಧಿಸುವುದು ಕಷ್ಟ. ಜನಪ್ರಿಯವಾದ ತ್ರಿಪದಿಯ ಧಾಟಿ ಅದರ ಆವಿರ್ಭಾವದಲ್ಲಿ ಕೆಲಮಟ್ಟಿಗೆ ಪ್ರೇರಣೆ ಕೊಟ್ಟಿರಬಹುದು. ಸೊಬಗಿನ ಸೋನೆಯ ಮಟ್ಟಿನಲ್ಲಿ ಪ್ರತಿಯರ್ಧದ ಕೊನೆಗೆ ಬರುವ ವಿಷ್ಣುಗಣ ಕಾಲಕ್ರಮದಲ್ಲಿ ಆಲಾಪದ ಆವಶ್ಯಕತೆಗಾಗಿ ಬ್ರಹ್ಮಗಣವಾಗಿ ಮಾರ್ಪಟ್ಟು ಸ್ಥಿರಗೊಂಡು ಸಾಂಗತ್ಯವಾಗಿರಬಹುದೇನೋ.

ಅಚ್ಚಕನ್ನಡ ಛಂದಸ್ಸಿನ ಮಟ್ಟುಗಳಲ್ಲಿ ಈ ಮೇಲೆ ವಿವರಿಸಿದ ಪ್ರಸಿದ್ಧವೂ ಲಾಕ್ಷಣಿಕೋಕ್ತವೂ ಆದ ಕೆಲವು ಮಟ್ಟುಗಳು ಮಾತ್ರವಲ್ಲದೆ, ಜನಪದ ಸಾಹಿತ್ಯ ಹಾಗೂ ಯಕ್ಷಗಾನಾದಿಗಳಲ್ಲಿ ಇನ್ನೂ ಕೆಲವು ಮಟ್ಟುಗಳು ತ್ಯಾಗಮಾನ, ಯಾಲಪದ ಮೊದಲಾದ ಹೆಸರಿನಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಅಂಶಗಣಗಳ ಕಟ್ಟಿನಲ್ಲಿ ನಡೆದರೆ, ಇನ್ನು ಕೆಲವು ಮಾತ್ರಾಗಣಗಳ ಕಟ್ಟಿನಲ್ಲಿವೆ. (ಟಿ.ವಿ.ವಿ.,ಡಿ.ಎಸ್.ಕೆ.)

**ತ್ಯಾಗಮಾನ :** ಅಂಶಗಣಗಳ ರಚನೆಯುಳ್ಳ ಒಂದು ಬಗೆಯ ಚೌಪದಿ. ಇದರ ರಚನೆ ಹೆಚ್ಚಾಗಿ ಯಕ್ಷಗಾನ ಕೃತಿಗಳಲ್ಲಿ ಕಂಡುಬರುತ್ತದೆ. ಏಕತಾಳ ಹಾಗೂ ತಿತ್ತಿತ್ತೈ ತಾಳಗಳ ಗತಿಗೆ ಒಡಂಬಡುವ ಈ ಪದ್ಯರೂಪಕ್ಕೆ ಇತ್ತೀಚಿನ ಯಕ್ಷಗಾನ ಕೃತಿಗಳಲ್ಲಿ ಕಾಂಭೋಜಿ, ಏಕತಾಳ ದೇಶಿ ಏಕತಾಳ ಅಥವಾ ತೋಡಿ ಅಷ್ಟತಾಳ ಎಂದು ಕರೆಯಲಾಗಿದೆ. ಇದು ಕೆಲವು ಕಡೆ ಎರಡೇ ಪಾದಗಳ ಪದ್ಯವಾಗಿರುವುದೂ ಉಂಟು. ಇದರ ಪ್ರತಿಯೊಂದು ಪಾದದಲ್ಲಿ ಮೂರು ರುದ್ರಗಣಗಳು, ಕೊನೆಯ ಗಣದ ಸಾಹಿತ್ಯ ಎರಡೆರಡು ಪಾದಗಳಲ್ಲಿ ಅಥ’ವಾ ನಾಲ್ಕು ಪಾದಗಳಲ್ಲಿ ಪುನರುಕ್ತಿಗೊಳ್ಳುತ್ತದೆ. ಒಂದನೆಯ ಮತ್ತು ಮೂರನೆಯ ಪಾದಾಂತ್ಯದಲ್ಲಿ ಒಂದು ಬಗೆಯ ಬ್ರಹ್ಮಗಣ ಅದರ ಮುಂದಿನ ಪಾದಕ್ಕೆ ಪೋಷಕವಾಗಿ ಬರುತ್ತದೆ. ಈ ಅಂಶಗಣ ಕೆಲವೆಡೆ ಮಾತ್ರಾಗಣಕ್ಕೆ ತಿರುಗಿದುದೂ ಉಂಟು. ನಿದರ್ಶನಕ್ಕಾಗಿ ಒಂದು ಪದ್ಯ.

ನೋಡು ಮುಂದೆ | ಕಾಣುತಿದೆ ಎಲೊ | ಪಾರ್ಥ | ನಿಲ್ಲ
ದೋಡುತಿಹುದು | ಸೇನೆಯದಕೊ | ಎಲೊ ಪಾರ್ಥ
ರೂಢಿಪತಿಯ | ಸ್ಪಂದನವು | ಪೋಪುದು ಮುಂದೆ ಅದರ
ಕೂಡೆ ಮಾದ್ರೀಸುತರ ರಥವಿಹುದು ಹಿಂದೆ

ಯಕ್ಷಗಾನ ಸಾಹಿತ್ಯ ಸಂಗ್ರಹ ಸಮಗ್ರವಾಗಿ ನಡೆದು, ಅವುಗಳ ಛಂದಸ್ಸಿನ ಶಾಸ್ತ್ರೀಯ ಸಮಾಲೋಚನೆ ಇನ್ನೂ ನಡೆಯಬೇಕಾಗಿದೆ. (ಟಿ.ಕೆ.ಬಿ)

**ಹೊಸಗನ್ನಡ ಛಂದಸ್ಸು :** ಕನ್ನಡದಲ್ಲಿ ಛಂದಸ್ಸು ನಡೆದು ಬಂದ ದಾರಿಯನ್ನು ಗುರುತಿಸಲು ಹೊರಟರೆ 19ನೆಯ ಶತಮಾನದವರೆಗೆ ಅದು ಸಂಪ್ರದಾಯದ ಜಾಡಿನಲ್ಲಿಯೇ ನಡೆಯುತ್ತ ಆಗಾಗ ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತ, ಅವನ್ನು ಬೆಳೆಸುತ್ತ, ಬಲಿಸುತ್ತ, ಹಳೆಯದನ್ನು ಆವರ್ತಗೊಳಿಸುತ್ತ, ಕೆಲವನ್ನು ಬಿಡುತ್ತ ಬಂದುದು ಕಾಣುತ್ತದೆ. 20ನೆಯ ಶತಮಾನದಲ್ಲಿ ಕಾಲಿಡುತ್ತಿದ್ದಂತೆ ಕನ್ನಡ ಕವಿತ್ವದ ಮೇಲೆ ಇಂಗ್ಲಿಷ್ ಕವಿತ್ವದ ಪ್ರಭಾವ ಹೊಸದಾಗಿ ಬಿದ್ದು ಹಲವು ಹೊಸರೀತಿಯ ಪ್ರಯೋಗಗಳೂ ಹಳೆಯದರ ಹೊಸ ರೂಪಗಳೂ ಅನುವಾದಗಳ ಮತ್ತು ಸ್ವತಂತ್ರ ಕೃತಿಗಳ ಮೂಲಕ ನಡೆಯಲಾರಂಭಿಸಿದವು. ಭಾವದ ನಾನಾ ಸ್ಥಿತಿಗಳನ್ನು ಅವುಗಳ ಏರಿಳಿತಗಳಿಗೆ ತಕ್ಕಂತೆ ಸಮರ್ಥವಾಗಿ ಪ್ರತಿಬಿಂಬಿಸುವ ಬಗೆಬಗೆಯ ಧಾಟಿಗಳು ಹುಟ್ಟಿಕೊಂಡುವು. ಹೊಸಗನ್ನಡದ ಲಲಿತವಾದ ಮಾತುಗಾರಿಕೆಯನ್ನು ಬಳಸಿ, ವಿಶೇಷವಾಗಿ 3, 4 ಮತ್ತು 5 ಮಾತ್ರೆಗಳ ಗಣಗಳನ್ನು ಹೂಡಿ ನವೀನ ರೀತಿಯ ಚತುಷ್ಪದಿಗಳನ್ನೂ ಇತರ ಮಟ್ಟುಗಳನ್ನೂ ಕಟ್ಟುವುದು ರೂಢಿಗೆ ಬಂದಿತು. ತ್ರಿಪದಿ, ಷಟ್ಪದಿ, ಅಕ್ಕರ, ರಗಳೆ, ಸಾಂಗತ್ಯ ಮುಂತಾದ ಹಳೆಯ ಛಂದಸ್ಸುಗಳು ಹೊಸ ರೂಪದಲ್ಲಿ ಕಾಣಿಸಿಕೊಂಡುವು. ಇಂಗ್ಲಿಷಿನ ಸಾನೆಟ್, ಬ್ಲ್ಯಾಂಕ್‌ವರ್ಸ್, ಓಡ್ ಮುಂತಾದವು ಅಷ್ಟಷಟ್ಪದಿ, ಸರಳರಗಳೆ, ಪ್ರಗಾಥ’ ಮುಂತಾದ ಆವಿಷ್ಕಾರಗಳನ್ನು ಪಡೆದವು. ಬಿ.ಎಂ.ಶ್ರೀಕಂಠಯ್ಯನವರ ಇಂಗ್ಲಿಷ್ ಗೀತೆಗಳು, ಹಟ್ಟಿಯಂಗಡಿ ನಾರಾಯಣರಾಯರ ಆಂಗ್ಲಕವಿತಾಸಾರ, ಪಂಜೆ ಮಂಗೇಶರಾಯ ಮತ್ತು ಗೋವಿಂದ ಪೈ ಅವರ ಕವಿತೆಗಳು ಆರಂಭಕಾಲದ ಹೊಸ ಪ್ರಯೋಗಗಳನ್ನು ತೋರಿಸುತ್ತವೆ. ನುಡಿಗಳು, ಗಣಗಳು, ಪ್ರಾಸಯೋಜನೆ ಮೊದಲಾದವುಗಳಲ್ಲಿ ಸ್ವಯಂಚಾಲಿತವಾದ ಸ್ವಾತಂತ್ರ್ಯವಿದ್ದೂ ಕ್ರಮಬದ್ಧತೆಯೂ ಇವುಗಳಲ್ಲಿ ಕಾಣುತ್ತದೆ. ಮುಖ್ಯವಾಗಿ ಇವು ಮಾತ್ರಾವೃತ್ತಗಳು. ಆದರೆ ಔಚಿತ್ಯಕ್ಕೆ ತಕ್ಕಂತೆ ಮಾತ್ರೆಗಳ ಪ್ರಮಾಣವನ್ನು ಹಿಗ್ಗಿಸುವುದು ಕುಗ್ಗಿಸುವುದು ಪಾದಾಂತ್ಯದಲ್ಲಿ ಒಂದು ಅಕ್ಷರವನ್ನೋ (ಮುಡಿ) ಎರಡು ಅಥ’ವಾ ಮೂರು ಅಕ್ಷರಗಳನ್ನೋ (ಪದ್ಮಗಣ) ನಿಲ್ಲಿಸುವುದು ಈ ಕೆಲವು ವೈಲಕ್ಷಣ್ಯಗಳು ಇಲ್ಲಿ ಕಾಣುತ್ತವೆ. ಇವುಗಳ ಬೇರುಗಳನ್ನು ಕೆಲಮಟ್ಟಿಗೆ ಹಳೆಯ ಛಂದಸ್ಸಿನಲ್ಲಿಯೇ ಗುರುತಿಸುವುದು ಸಾಧ್ಯ. ಹೀಗೆ ಸಂಪ್ರದಾಯ ಮತ್ತು ಪ್ರಗತಿ ಎರಡನ್ನೂ ಮೈಗೂಡಿಸಿಕೊಂಡು ಹೊಸಗನ್ನಡ ಛಂದಸ್ಸು ಮುನ್ನಡೆದಿದೆ.

ಈಗ ಸುಮಾರು ಎರಡು ದಶಕಗಳಿಂದ ಹೊಸಗನ್ನಡ ಛಂದಸ್ಸು ಎಲಿಯಟ್, ಡ್ರೈಡನ್ ಮೊದಲಾದ ಪಾಶ್ಚಾತ್ಯ ಕವಿಗಳ ಸ್ವಚ್ಛಂದ ಛಂದೋವಿಲಾಸದ ರೀತಿನೀತಿಗಳನ್ನು ರೂಢಿಸಿಕೊಂಡು ಇನ್ನೂ ಹೆಚ್ಚು ಹೆಚ್ಚಾಗಿ ಹೊಸ ರೂಪರೇಖೆಗಳನ್ನು ಪಡೆದುಕೊಳ್ಳುತ್ತಿದೆ. ಪಾದಸಂಖ್ಯೆ, ಲಯಗತಿ. ಗಣನಿಯಮ, ಪ್ರಾಸಯೋಜನೆ ಇವು ಮೊದಲಿಗಿಂತ ಹೆಚ್ಚು ಸಡಿಲಗೊಳ್ಳುತ್ತ ಬದಲಾಯಿಸುತ್ತ ಬಂದಿವೆ. ರಸದೃಷ್ಟಿಯನ್ನುಳ್ಳ, ಲಯನಿಷ್ಠೆಯನ್ನು ಬಯಸುವ, ಶ್ರುತಿಮಧುರವೂ ಭಾವಗಮ್ಯವೂ ಆದ ತಾಳಮಾನತೆ, ಗೇಯತೆಗಳಿಗಿಂತ, ಚಿಂತನ ದೃಷ್ಟಿಯನ್ನುಳ್ಳ ವಚೋನಿಷ್ಠೆಯನ್ನು ಬಯಸುವ ಬುದ್ಧಿಗಮ್ಯವಾದ ವಾಚ್ಯತೆ, ನವೋನವವಾದ ಪ್ರಯೋಗಾಕಾಂಕ್ಷೆ ಇವು ಈಚಿನ ಕನ್ನಡಕವಿತೆಯ ಛಂದಸ್ಸಿನಲ್ಲಿ ಕಾಣುತ್ತವೆ. ಇದಕ್ಕೆ ಹಿಂದಿನ ಛಂದಸ್ಸು ಕೂಡ ಇದರ ಜೊತೆಯಲ್ಲಿ ಸಾಗುತ್ತಿದೆ. ಬಿ.ಎಂ.ಶ್ರೀ., ಕೆ.ಎಸ್.ನ., ಪುತಿನ, ಕುವೆಂಪು, ದ.ರಾ.ಬೇಂದ್ರೆ ಮೊದಲಾದವರು ಅನೇಕ ಬಗೆಯ ಗೇಯ ಗೀತೆಗಳಲ್ಲಿ ವೈವಿಧ್ಯವನ್ನು ಕೊಟ್ಟಿದ್ದಾರೆ. ಕುವೆಂಪು ಅವರಂತೂ ಸರಳ ರಗಳೆಯನ್ನು ಯುಕ್ತವಾಗಿ ಮಾರ್ಪಡಿಸಿಕೊಂಡು ತಮ್ಮ ಶ್ರೀ ರಾಮಾಯಣದರ್ಶನಂ ಮಹಾಕಾವ್ಯದಲ್ಲಿ ಮಹಾ ಛಂದಸ್ಸನ್ನಾಗಿಸಿದ್ದಾರೆ. ಗೋಪಾಲಕೃಷ್ಣ ಅಡಿಗ, ಚೆನ್ನವೀರ ಕಣವಿ, ಎ.ಕೆ.ರಾಮಾನುಜನ್, ಚಂದ್ರಶೇಖರ ಕಂಬಾರ, ಲಂಕೇಶ ಮೊದಲಾದವರು ಛಂದಸ್ಸಿನ ಹೊಸ

ಪ್ರಯೋಗಗಳನ್ನು ಮಾಡುತ್ತಲೇ ಬಂದಿದ್ದಾರೆ. ಗೋಕಾಕರಿಂದ ಪ್ರಾರಂಭವಾದ ಮುಕ್ತಛಂದಸ್ಸಿನ ಈ ಪರಂಪರೆ ಹಲವಾರು ವೈವಿಧ್ಯವನ್ನೂ ಹೊಸ ಹೊಸ ಆವಿಷ್ಕಾರವನ್ನೂ ಪಡೆಯುತ್ತ ಮುಂದುವರಿಯುತ್ತಿದೆ. ಇತ್ತೀಚಿನ ನವಪೀಳಿಗೆ ಹೊಸ ರೀತಿಯ ಕಾವ್ಯಾಭಿವ್ಯಕ್ತಿಯಲ್ಲಿ ತೊಡಗಿದೆ. ಕವನವಾಗಬೇಕಾದರೆ ಹೀಗೇ ಇರಬೇಕೆಂಬ ಕೆಲ ಧೋರಣೆಗಳು ಇಂದು ಬುಡಮೇಲಾಗಿದೆ. ಜೀವಂತಿಕೆ ಹಾಗೂ ದಟ್ಟ ಅನುಭವ ಕಾವ್ಯವಾಗಲು ಬೇಕಾದ ಮೂಲ ಬಂಡವಾಳ ಎಂಬ ಅಂಶದ ಮೇಲೆ ಹೆಚ್ಚಿನ ಒತ್ತು ಬಿದ್ದು ಕವನ ತನ್ನೆಲ್ಲ ದಿಗ್ಬಂಧನಗಳನ್ನೂ ಕಿತ್ತೊಗೆದು ಅರ್ಥಗರ್ಭಿತವಾಗುತ್ತ ಛಂದೋರೀತಿಯಲ್ಲಿ ವೈವಿಧ್ಯಮಯವಾಗುತ್ತ ಸರಳವಾಗುತ್ತ ನಡೆದಿದೆ.

ಹೊಸಗನ್ನಡ ಛಂದಸ್ಸಿನ ಒಂದು ನುಡಿ:

ಮೊದಲು ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿ ನುಡಿದು
ಕೆಳೆಯರೊಡನೆ ಬೆಳೆದು ಬಂದ ಮಾತದಾವುದು
ನಲ್ಲೆಯೊಲವ ತೆರೆದು ತಂದ ಮಾತದಾವುದು (ಶ್ರೀ-ಕಾಣಿಕೆ)

ಸ್ವಚ್ಛಂದ ಛಂದಸ್ಸಿನಲ್ಲಿಯ ಕವನದ ಮೊದಲ ಎಂಟು ಸಾಲುಗಳು:

ಹೊಗೆ, ಬೆಂಕಿ
- ಅಯ್ಯೊ, ಹಾಳಾಗ, ಉರಿ, ಸೆಖೆ, ತಾಪ ಹೊರಗೆ
ರಣರಣ ಬಿಸಿಲು, ಒಳಗೆ ಮಾರಣ ಬೆಂಕಿ
ಮಲಗಿತ್ತು ಮನ ಚಿತೆಯ ಮೇಲೆ ಆಫೀಸಿನಲ್ಲಿ
ಭೂತಗನ್ನಡಿ ಬಿಸಿಲುಮಚ್ಚು ಚುಚ್ಚಿತು ತಲೆಯ
ಮಿದುಳು - ಬಚ್ಚಲ ಹಂಡೆಯಲ್ಲಿ ಬೇಯುವ ಆಮೆ-
ಎದ್ದೆದ್ದು ಬಿದ್ದು ಒದ್ದಾಡುತ್ತಿತ್ತು
(ಹಿಮಗಿರಿಯ ಕಂದರ- ಗೋಪಾಲಕೃಷ್ಣ ಅಡಿಗ)

ಹೀಗೆ ಕನ್ನಡ ಛಂದಸ್ಸು ನಿಂತ ನೀರಾಗಿರದೆ ಒಂದು ಜೀವಂತ ಭಾವವಾಹಕ ಶಕ್ತಿಯಾಗಿದೆ ಎಂಬುದು ಅದರ ಇತಿಹಾಸದಿಂದ ಮನದಟ್ಟಾಗುತ್ತದೆ. (ಟಿ.ವಿ.ವಿ.,ಡಿ.ಎಸ್.ಕೆ.)

**ಕನ್ನಡದ ಉಪಭಾಷೆಗಳು :** ಕನ್ನಡ ಭಾಷಾ ಪ್ರದೇಶವನ್ನು ಗಮನಿಸಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರಲ್ಲಿ ಅನೇಕ ಬಗೆಯ ಭಾಷಾ ಪ್ರಭೇದಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಮುಖ್ಯವಾಗಿ ಮೈಸೂರು ಕನ್ನಡ, ಕರಾವಳಿಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗ ಕನ್ನಡ- ಎಂಬ ನಾಲ್ಕು ಉಪಭಾಷಾ ಪ್ರಭೇದಗಳನ್ನು ಗುರುತಿಸಬಹುದು. ಈ ಪ್ರಭೇದಗಳನ್ನು ಪ್ರಾದೇಶಿಕವಾಗಿ ಹಾಗೂ ಸಾಮಾಜಿಕವಾಗಿ ಪರಿಶೀಲಿಸಲು ಹೊರಟಾಗ ಇವುಗಳಲ್ಲೇ ಎಷ್ಟೋ ಬಗೆಯ ಒಳ ಪ್ರಭೇದಗಳು ಇರುವುದು ಕಂಡುಬರುತ್ತದೆ.

**ಮೈಸೂರು ಕನ್ನಡ :** ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಮತ್ತು ಚಿಕ್ಕಮಗಳೂರು- ಈ ಜಿಲ್ಲೆಗಳಲ್ಲಿ ಆಡುವ ಕನ್ನಡಭಾಷೆಯನ್ನು ಮೈಸೂರುಕನ್ನಡ ಎಂದು ಕರೆಯುವುದು ವಾಡಿಕೆ.

ಈ ಕನ್ನಡದಲ್ಲಿ ಸಾಮಾನ್ಯವಾಗಿ ಸಂಧ್ಯಕ್ಷರಗಳು ಗೋಚರಿಸುವುದಿಲ್ಲ. ವಿದ್ಯಾವಂತರ ಕನ್ನಡದಲ್ಲಿ ಅ, ಆ, ಇ, ಈ, ಉ, ಊ, ಎ, ಏ, ಒ, ಓ, ಎಂಬ ಹತ್ತು ಸ್ವರ ಧ್ವನಿಮಾಗಳಿವೆ. ಅವಿದ್ಯಾವಂತರ ಕನ್ನಡದಲ್ಲಿ ಈ ಹತ್ತು ಸ್ವರ ಧ್ವನಿಮಾಗಳ ಜೊತೆಗೆ ಆ, ಆ್ಯ ಮತ್ತು ಒ ಎಂಬ ಮೂರು ಸ್ವರ ಧ್ವನಿಮಾಗಳು ಸೇರಿ ಒಟ್ಟು 13 ಕ್ಕೂ ಹೆಚ್ಚು ಸ್ವರ ಧ್ವನಿಮಾಗಳು ಗೋಚರವಾಗುತ್ತವೆ; ಮಹಾಪ್ರಾಣಾಕ್ಷರಗಳು ಕಂಡುಬರುವುದಿಲ್ಲ. ಅವಿದ್ಯಾವಂತರ ಭಾಷೆಯಲ್ಲಿ ವಿಶೇಷವಾಗಿ ಮಂಡ್ಯ ಪ್ರಾಂತದಲ್ಲಿ ಹ ಕಾರ ಲೋಪವಾಗಿ ಹಾಲು ಎಂಬುದನ್ನು ಆಲು ಎಂತಲೂ ಹಲ್ಲು ಎಂಬುದನ್ನು ಅಲ್ಲು ಎಂತಲೂ ಹೇಳುವುದೂ ರೂಢಿ. ಹಾಗೆಯೇ ಅ ಮತ್ತು ಆ ಕಾರಗಳ ಸ್ಥಳದಲ್ಲಿ ಹ ಮತ್ತು ಹಾ ಕಾರಗಳು ನುಸುಳುವುದುಂಟು. ವಿದ್ಯಾವಂತ ಹಾಗೂ ಅವಿದ್ಯಾವಂತರಿಬ್ಬರಲ್ಲೂ ಞ, ಙ ಎಂಬ ಅನುನಾಸಿಕ ಧ್ವನಿಗಳು ನ ಅನುನಾಸಿಕ ಧ್ವನಿಮಾದ ಉಪಧ್ವನಿಗಳಾಗಿ ಕಂಡುಬರುತ್ತವೆ. ಅವಿದ್ಯಾವಂತರ ಕನ್ನಡದಲ್ಲಿ ಶ,ಷ,ಸ, ಎಂಬ ಊಷ್ಮ ಧ್ವನಿಗಳು ಕಂಡುಬರುತ್ತವೆಯಾದರೂ ಅವು ಬೇರೆ ಬೇರೆ ಧ್ವನಿಮಾಗಳಾಗಿರದೆ ಶ ಮತ್ತು ಷ ಧ್ವನಿಗಳು ಸ ಧ್ವನಿಯ ಉಪಧ್ವನಿಯಾಗಿ ಕಂಡಬರುತ್ತವೆ. ಇಂಗ್ಲಿಷಿನ ಕೆಲವು ಸ್ವೀಕೃತ ಪದಗಳಲ್ಲಿ ಫ (f) ಜ (z), ಇತ್ಯಾದಿ ಧ್ವನಿಗಳು ಕಂಡುಬರುತ್ತವೆ. ಆದರೂ ಅವುಗಳನ್ನು ಅವಿದ್ಯಾವಂತರು ಪ (ಕಾಫಿ > ಕಾಪಿ) ಮತ್ತು (ಡಜನ್ > ಡಜನ್) ಎಂದೇ ಉಚ್ಚರಿಸುತ್ತಾರೆ. ಪದದ ಆದಿಯಲ್ಲಿ ಬರುವ ಎ ಮತ್ತು ಒ ಸ್ವರಗಳು 'ಯೆ' ಮತ್ತು 'ವೊ' ಎಂದು ಉಚ್ಚಾರವಾಗುತ್ತವೆ. ಈ ಬಗೆಯ ಭಾಷಾ ವ್ಯತ್ಯಾಸ ಒಂದೇ ವರ್ಗದ ಅವಿದ್ಯಾವಂತರಿಗೆ ಮಾತ್ರ ಸೀಮಿತವಾಗಿರದೆ ಎಲ್ಲಾ ಜಾತಿ,ಸಂಸ್ಕೃತಿಯ ಜನರಿಗೂ ಅನ್ವಯಿಸುತ್ತದೆ. ನಿಮ್ನವರ್ಗದ ಜನರ ಆಡುಭಾಷೆಯನ್ನು ಗಮನಿಸಿದರೆ, ಅವರು 'ಏ' ಕಾರವನ್ನು 'ಯಾ' ಎಂತಲೂ ಮತ್ತೆ ಕೆಲವು ವಿದ್ಯಾವಂತರೂ ಕೂಡ ಈ ಬಗೆಯಲ್ಲಿಯೇ 'ಬೇಡ' ಎಂಬುದನ್ನು 'ಬ್ಯಾಡ' ಎಂತಲೂ ಪೇಟೆ ಎಂಬುದನ್ನು ಪ್ಯಾಟೆ ಎಂತಲೂ ಬೇಟೆ ಎಂಬುದನ್ನು ಬ್ಯಾಟೆ ಎಂತಲೂ ಉಚ್ಚರಿಸುವುದನ್ನು ಕಾಣಬಹುದು. ಹಾಸನ ಪ್ರಾಂತದ ಕೆಲವು ಕಡೆ ಅವಿದ್ಯಾವಂತರಲ್ಲಿ 'ಕ' ಕಾರ ಚಕಾರವಾಗಿ ಉಚ್ಚಾರವಾಗುತ್ತದೆ ಉದಾ: ಕೆಂಡ > ಚೆಂಡ, ಕೆರೆ > ಚೆರೆ, ಕೆಲ > ಚೆಲ. ಕೆಲವರು ಚ ಕಾರವನ್ನು ಸ ಕಾರವನ್ನಾಗಿ (ಚಾಪೆ > ಸಾಪೆ) ಉಚ್ಚರಿಸುವುದೂ ಉಂಟು. ಹಾಗೆಯೇ ಕಾಗದ > ಕಾದಗ, ಕಾಜಗ ಎಂದು ಉಚ್ಚರಿಸುವುದನ್ನು ಅಲ್ಲಲ್ಲಿ ಕಾಣಬಹುದು.

ಮೈಸೂರು ಕನ್ನಡದ ವಿದ್ಯಾವಂತ ಹಾಗೂ ಅವಿದ್ಯಾವಂತರ ಭಾಷೆಗಳ ನಡುವೆ ವ್ಯಾಕರಣ ವಿಚಾರಗಳಲ್ಲಿ ಕೇವಲ ಸ್ವಲ್ಪ ಅಂತರ ಕಂಡುಬರುತ್ತದೆ. ಅವನು ಎಂಬುದನ್ನು ಅವ್ನು, ಅವ ಎಂತಲೂ ಕೆಲವು ರೂಪಗಳು ವ್ಯತ್ಯಾಸಗೊಂಡು ಬಳಕೆಯಲ್ಲಿರುವುದನ್ನು ಗಮನಿಸಬಹುದು. ಹಾಗೆಯೇ ಮಾಡುತ್ತೇನೆ, ಮಾಡ್ತೇನೆ, ಮಾಡ್ತಿನಿ, ನೋಡುತ್ತೇನೆ, ನೋಡ್ತೇನೆ, ನೋಡುವ, ಮಾಡೋಣ, ಮಾಡುವ ಎಂಬ ವಿಧ್ಯರ್ಥಕ ರೂಪಗಳೂ ವಿದ್ಯಾವಂತ ಹಾಗೂ ಅವಿದ್ಯಾವಂತರ ನಡುವೆ ವ್ಯತ್ಯಸ್ತಗೊಂಡು ಉಚ್ಚಾರಗೊಳ್ಳುವುದನ್ನು ಕಾಣಬಹುದು. (ಕೆ.ಕೆ.ಜಿ.)

**ಕರಾವಳಿ ಕನ್ನಡ :** ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎರಡು ರೀತಿಯ ಕನ್ನಡ ಬಳಕೆಯಲ್ಲಿದೆ. ತುಳು, ಕೊಂಕಣಿ, ಮರಾಠಿ, ಮಲೆಯಾಳಂ ಮೊದಲಾದ ಭಾಷೆಗಳನ್ನು ಮನೆಮಾತಾಗಿ ಬಳಸುವ ಜನರು ಪರಸ್ಪರ ಸಾಧನೆಗಾಗಿ ಬಳಸುವ ಕನ್ನಡ ಒಂದು ರೀತಿಯದಾದರೆ, ಹವ್ಯಕ, ಗೌಡ, ಕೋಟ, ಕುಂಬಾರ, ಬೈರ ಮೊದಲಾದ ಸಮಾಜಗಳಿಗೆ ಸೇರಿದ ಜನ ತಮ್ಮತಮ್ಮೊಳಗೆ ಬಳಸುವ ಕನ್ನಡ ಇನ್ನೊಂದು ರೀತಿಯದು. ಇವುಗಳಲ್ಲಿ ಮೊದಲಿನದನ್ನು ಸಾಂಪರ್ಕಿಕ ಕನ್ನಡವೆಂದು ಎರಡನೆಯದನ್ನು ತಾಯಿನುಡಿ ಕನ್ನಡವೆಂದೂ ಪ್ರತ್ಯೇಕಿಸಿ ಹೇಳಬಹುದು.

ಹೊರಗಿನಿಂದ ಬಂದವರಿಗೆ ಈ ಜಿಲ್ಲೆಯಲ್ಲಿ ಮೊದಲಿಗೆ ಕೇಳಿಸುವುದು ಸಾಂಪರ್ಕಿಕ ಕನ್ನಡ. ಇದನ್ನು ಆಡುವವರು ಬೇರೆ ಬೇರೆ ಭಾಷೆಗಳನ್ನು ಮನೆಮಾತಾಗಿ ಬಳಸುವವರಾದ್ದರಿಂದ, ಈ ನುಡಿಯಲ್ಲಿ ತುಳು, ಕೊಂಕಣಿ ಮೊದಲಾದ ಭಾಷೆಗಳ ಪ್ರಭಾವ ಹೆಚ್ಚು ಕಾಣಿಸುತ್ತದೆ. ಅಲ್ಲದೆ, ಈ ಕನ್ನಡವನ್ನು ಬಹುಮಂದಿ ಶಾಲೆ, ಕಾಲೇಜು, ಪುಸ್ತಕ, ಪತ್ರಿಕೆ ಇವುಗಳ ಮೂಲಕ ಮತ್ತು ಸಭೆ, ನಾಟಕಗಳ ಮೂಲಕ ಪಡೆದಿರುವವರಾದ್ದರಿಂದ ಇದು ಆಡುನುಡಿಗಿಂತಲೂ ಬರೆಹದ ಕನ್ನಡವನ್ನೇ ಹೆಚ್ಚು ಹೋಲುತ್ತದೆ. ಸಾಂಪರ್ಕಿಕ ಕನ್ನಡ ಯಾವ ರೀತಿಯಲ್ಲಿ ಬೆಳೆದುಬಂದಿದೆ. ಅದರ ಬೆಳವಣಿಗೆಗೂ ಆಡುನುಡಿಯ ಬೆಳವಣಿಗೆಗೂ ಏನು ಭೇದವಿದೆ. ಅದರಲ್ಲಿ ಬೇರೆ ಬೇರೆ ಸಮಾಜಗಳಿಗೆ ಮತ್ತು ಆ ಸಮಾಜದವರ ಮಾತೃಭಾಷೆಗಳಿಗೆ ಅನುಗುಣವಾಗಿ ಹೇಗೆ ಪ್ರಭೇದಗಳು ಮೂಡಿಬಂದಿವೆ. ಅದರ ಮೇಲೆ ವಿದ್ಯಾಭ್ಯಾಸದ ಪ್ರಭಾವ ಎಂಥದ್ದು ಇತ್ಯಾದಿ ಪ್ರಶ್ನೆಗಳನ್ನು ಉತ್ತರಿಸಲು ಇನ್ನೂ ಬಹಳಷ್ಟು ಸಂಶೋಧನೆಗಳನ್ನು ನಡೆಸುವ ಆವಶ್ಯಕತೆಯಿದೆ.

ಕನ್ನಡ ಭಾಷೆಯ ಚರಿತ್ರೆಯ ದೃಷ್ಟಿಯಿಂದ ನೋಡುವುದಾದರೆ, ಈ ಸಾಂಪರ್ಕಿಕ ಪ್ರಭೇದಕ್ಕಿಂತಲೂ ಹವ್ಯಕ, ಕೋಟ, ಗೌಡ, ಕುಂಬಾರ ಮೊದಲಾದ ಸಮಾಜಗಳವರು ಮನೆಮಾತಾಗಿ ಬಳಸುವ ಆಡುನುಡಿ ಕನ್ನಡ ಹೆಚ್ಚು ಪ್ರಮುಖವಾದುದೆಂದು ಹೇಳಬಹುದು. ಪಶ್ಚಿಮ ಘಟ್ಟಗಳ ಪಶ್ಚಿಮಕ್ಕಿರುವ

ಕರಾವಳಿ ಪ್ರದೇಶದಲ್ಲೆಲ್ಲಾ ಪ್ರಚಾರದಲ್ಲಿರುವ ಕನ್ನಡ ಇತರ ಒಳನಾಡ ಕನ್ನಡದ ಪ್ರಭೇದಗಳಿಂದ ಬೇರೆಯಾಗಿ ಸುಮಾರು ಒಂದೂವರೆ ಸಾವಿರ ವರ್ಷಗಳಾದರೂ ಕಳೆದಿರಬಹುದು. ಕನ್ನಡದ ಆಧುನಿಕ ಪ್ರಭೇದಗಳನ್ನೆಲ್ಲ ತೌಲನಿಕವಾಗಿ ಅಭ್ಯಾಸಮಾಡಿದಾಗ, ಕರಾವಳಿ ಮತ್ತು ಒಳನಾಡ ಕನ್ನಡಗಳೊಳಗೆ ನಡೆದ ಪೂರ್ವ ಪಶ್ಚಿಮ ವಿಭಜನೆ ಕನ್ನಡದ ಮಟ್ಟಿಗೆ ಅತ್ಯಂತ ಪ್ರಾಚೀನವಾದುದೆಂದು ತಿಳಿದುಬಂದಿದೆ. ಈ ವಿಭಜನೆ ಹಳಗನ್ನಡದ ಕಾಲಕ್ಕಿಂತಲೂ ಹಿಂದಿನದೆಂಬುದಕ್ಕೆ ಸ್ಪಷ್ಟವಾದ ಆಧಾರಗಳಿವೆ.

ಉದಾಹರಣೆಗಾಗಿ, ಹಳಗನ್ನಡದ ಕಾಲಕ್ಕಿಂತ ಮೊದಲು ಎಂದರೆ, ಆರು ಏಳನೆಯ ಶತಮಾನದಲ್ಲಿ ನಡೆದ ಮಧ್ಯಸ್ವರ ಉಚ್ಚಸ್ವರದೆದುರು ಉಚ್ಚವಾಗಿರುವ ಬದಲಾವಣೇಯನ್ನು ಗಮನಿಸಬಹುದು. ಈ ಬದಲಾವಣೆಯ ಫಲವಾಗಿ ಹಿಂದಿದ್ದ ಬೆಳಿ > ಬಿಳಿ, ಕೆವಿ > ಕಿವಿ, ಬೆಸಿ > ಬಿಸಿ, ಒಳಿ > ಉಳಿ, ತೊದಿ > ತುದಿ, ತೊಳಿ > ತುಳಿ ಇತ್ಯಾದಿಯಾಗಿ ಬದಲಾವಣೆ ಹೊಂದಿತು. ಐದೂ ಆರನೆಯ ಶತಮಾನಗಳ ಶಾಸನಗಳಲ್ಲಿ ಈ ಬದಲಾವಣೆಯಾದಂತೆ ಕಾಣಿಸುವುದಿಲ್ಲ. ಅಲ್ಲದೆ ಇಂದಿನ ಕರಾವಳಿಯ ಆಡುನುಡಿ ಕನ್ನಡದಲ್ಲೂ ಇದು ಕಾಣಿಸುತ್ತಿಲ್ಲ. ಈ ಪರಿಸ್ಥಿತಿಯ ಅರ್ಥವೇನೆಂದರೆ, ಐದು ಆರನೆಯ ಶತಮಾನಗಳು ಈ ಬದಲಾವಣೆ ನಡೆದ ಕಾಲಕ್ಕಿಂತ ಹಿಂದಿನವಾಗಿರಬೇಕು ಮತ್ತು ಕರಾವಳಿಯ ಆಡುನುಡಿ ಕನ್ನಡ ಈ ಬದಲಾವಣೆ ನಡೆದ ಕಾಲಕ್ಕಿಂತ ಹಿಂದೆಯೆ ಒಳನಾಡ ಕನ್ನಡದಿಂದ ಒಡೆದು ಬೇರಾಗಿ ಬಂದಿರಬೇಕು. ಮತ್ತು ಒಳನಾಡಿನಲ್ಲಿ ಮಾತ್ರವೆ ನಡೆದ ಈ ಬದಲಾವಣೆ ಇದಕ್ಕೆ ಒಳಪಡದೆ ಇದ್ದಿರಬೇಕು.

ಕರಾವಳಿಯ ಆಡುನುಡಿ ಕನ್ನಡವನ್ನು ಒಳನಾಡಿನ ಆಡುನುಡಿ ಕನ್ನಡದಿಂದ ಬೇರ್ಪಡಿಸುವ ಅಂಶಗಳು ಇನ್ನೂ ಹಲವಾರಿವೆ. ಉದಾಹರಣೆಗೆ ಒಳನಾಡಿನ ಆಡುನುಡಿ ಕನ್ನಡದ ಪ್ರಭೇದಗಳಲ್ಲೆಲ್ಲ ಮೂರಕ್ಷರದ ಪದಗಳಲ್ಲಿ ಬರುವ ಎರಡನೆಯ ಸ್ವರ ಲೋಪಗೊಂಡಿದೆ (ಹಗಲು- ಹಗ್ಲು, ಅಡಕೆ- ಅಡ್ಕೆ, ಅಂಗಡಿ- ಅಂಗ್ಡಿ, ಬಾಗಿಲು- ಬಾಗ್ಲು ಇತ್ಯಾದಿ.) ಆದರೆ ಈ ಬದಲಾವಣೆ ಕರಾವಳಿಯ ಆಡು ನುಡಿಯಲ್ಲಾಗಿಲ್ಲ. ಹಾಗೆಯೆ ದೀರ್ಘ ಸ್ವರದ ಅನಂತರ ಇಲ್ಲವೆ ಮೂರಕ್ಷರದ ಪದಗಳಲ್ಲಿ ಎರಡನೆಯ ಸ್ವರಕ್ಕೆ ಪರವಾಗಿ ಬರುವ ಅನುನಾಸಿಕಗಳು ಸಮಾನಸ್ಥಾನಿಯಾದ ವ್ಯಂಜನ ಪರವಾದಾಗ ಲೋಪಗೊಂಡಿರುವುದನ್ನು ಒಳನಾಡಿನ ಕನ್ನಡದಲ್ಲಿ ಕಾಣಬಹುದು (ನಾಂಟು- ನಾಟು, ನೂಂಕು- ನೂಕು, ಮುರುಂಟು- ಮುರುಟು, ಕಲಂಕು- ಕಲಕು ಇತ್ಯಾದಿ). ಕರಾವಳಿಯ ದಕ್ಷಿಣ ಭಾಗದಲ್ಲಿ ಈ ಲೋಪ ಸಂಭವಿಸಿಲ್ಲ.

ಈ ಪ್ರಭೇದಗಳ ವ್ಯಾಕರಣವನ್ನು ಗಮನಿಸಿದರೆ, ಕರಾವಳಿಯ ಪ್ರಭೇದಗಳು ಹಳಗನ್ನಡದಲ್ಲಿ ತೋರಿಬರುವ ನಿಷೇಧ ಕ್ರಿಯಾರೂಪ (ಕೇಳೆಂ, ಪೇಳೆಂ ಇತ್ಯಾದಿ) ಮತ್ತು ಭವಿಷ್ಯದ್ರೂಪ (ಕೇಳ್ವೆಂ, ಪೇಳ್ವೆಂ ಇತ್ಯಾದಿ) ಇವುಗಳನ್ನು ಉಳಿಸಿಕೊಂಡು ಬಂದಿರುವುದೂ ಒಳನಾಡಿನ ಪ್ರಭೇದಗಳು ಇವೆರಡನ್ನೂ ಕಳೆದುಕೊಂಡಿರುವುದ ಸ್ಪಷ್ಟವಾಗುತ್ತದೆ. ಅಲ್ಲದೆ ಹಳಗನ್ನಡದಲ್ಲಿ ಕಾಣಿಸದೆ ಇರುವ ಪೂರ್ಣ ವರ್ತಮಾನ ರೂಪವೊಂದು (ಕುಡ್ದೀನಿ, ಮಾಡ್ದೀನಿ, ಇತ್ಯಾದಿ) ಹೊಸತಾಗಿ ಈ ಒಳನಾಡಿನ ಪ್ರಭೇಧಗಳಲ್ಲಿ ಮೂಡಿಬಂದಿದೆಯೆಂಬ ವಿಷಯವೂ ತಿಳಿಯುತ್ತದೆ.

ಕರಾವಳಿಯ ಪ್ರಭೇದಗಳಲ್ಲಿ ಬರುವ ಪುರುಷವಾಚಕ ಪ್ರತ್ಯಯಗಳಿಗೆ ಎಲ್ಲಾ ಕಾಲವಾಚಕ ಕ್ರಿಯಾರೂಪಗಳಲ್ಲೂ ಒಂದೇ ರೂಪವಿದೆಯಾದರೆ, ಒಳನಾಡಿನ ಪ್ರಭೇದಗಳಲ್ಲೆಲ್ಲ ಇವಕ್ಕೆ ಭೂತ ಪ್ರತ್ಯಯದೆದುರು ಹ್ರಸ್ವರೂಪವಿದೆ ಮತ್ತು ಇತರೆಡೆಗಳಲ್ಲಿ ದೀರ್ಘರೂಪವಿದೆ (ಕುಡ್ದೆ- ಕುಡಿತೀನಿ. ಮಾಡ್ದೆ- ಮಾಡ್ತೀನಿ ಇತ್ಯಾದಿ).

ಕರಾವಳಿಯಲ್ಲೂ ಕೂಡ ದಕ್ಷಿಣ ಕನ್ನಡ ಉಡುಪಿಜಿಲ್ಲೆಗಳಲ್ಲಿ ಕಾಣಿಸುವ ಆಡುನುಡಿ ಕನ್ನಡ ಒಂದು ತೆರನಾದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಣಿಸುವ ಆಡುನುಡಿ ಕನ್ನಡ ಇನ್ನೊಂದು ತೆರ. ಸಾಮಾನ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ಪ್ರಭೇದಗಳ ಮೇಲೆ ಒಳನಾಡ ಕನ್ನಡದ ಪ್ರಭಾವ ಸ್ಪಷ್ಟವಾಗಿಯೆ ಕಾಣಿಸುತ್ತಿದೆಯೆನ್ನಬಹುದು. ತುಳು- ಮಲೆಯಾಳಂಗಳ ಸಂಪರ್ಕವಿದ್ದುದರಿಂದಾಗಿ ಮತ್ತು ಕಳೆದ ನೂರು- ನೂರೈವತ್ತು ವರ್ಷಗಳಲ್ಲಿ ಕೇರಳ ಮತ್ತು ತಮಿಳುನಾಡುಗಳೊಡನೆ ಆಡಳಿತದ ಮಟ್ಟಿಗೂ ಹತ್ತಿರದ ಸಂಪರ್ಕವಿದ್ದುದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಆಡುನುಡಿ ಕನ್ನಡ ತನ್ನದೇ ಆದ ವಿಶಿಷ್ಟ ರೂಪವನ್ನು ಪಡೆದಿದೆ.

ಕನ್ನಡ ಭಾಷೆಯ ಸ್ವರೂಪವನ್ನು ಮತ್ತು ಅದು ಬೆಳೆದು ಬಂದ ರೀತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಎಂತೆಂತಹ ಪ್ರಭೇದಗಳು ಪ್ರಚಾರದಲ್ಲಿವೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳುವುದು ಆವಶ್ಯ. ಮುದ್ದಣನ ಊರಾದ ದಕ್ಷಿಣ ಕನ್ನಡ ಜಿಲ್ಲೆ ಈ ಮಟ್ಟಿಗೆ ಹಲವಾರು ವಿಶಿಷ್ಟವಾದ ಪ್ರಭೇದಗಳನ್ನು ಪಂಡಿತರ ಕೈಗೆ ಕೊಡಬಲ್ಲುದು. ಭೌಗೋಳಿಕ ಮತ್ತು ರಾಜಕೀಯ ಕಾರಣಗಳಿಂದಾಗಿ ಈ ಭಾಗ ಕರ್ನಾಟಕದ ಇತರ ಭಾಗಗಳಿಂದ 1956ರವರೆಗೂ ಬೇರಾಗಿಯೆ ಉಳಿದಿತ್ತು. ಇದರಿಂದಾಗಿ ಇಲ್ಲಿನ ಆಡುನುಡಿಗಳು ಕನ್ನಡದ ಇತರ ಆಡುನುಡಿಗಳಿಂದ ಬೇರೆಯಾಗಿದ್ದು, ತಮ್ಮವೇ ಆದ ದಿಕ್ಕಿನಲ್ಲಿ ಬೆಳೆದು ಬಂದಿವೆ. ಕೆಲವು ವಿಷಯಗಳಲ್ಲಿ ಇವು ಹೊಸ ಹಾದಿ ಹಿಡಿದಿವೆಯಾದರೆ ಇನ್ನು ಕೆಲವು ವಿಷಯಗಳಲ್ಲಿ ಇವು ಹಳೆಯ ಪ್ರಕಾರಗಳನ್ನು ಹಾಗೆಯೆ ಉಳಿಸಿಕೊಂಡು ಬಂದಿವೆ. (ಡಿ.ಎನ್.ಎಸ್.)

**ಧಾರವಾಡ ಕನ್ನಡ :** ಇದು ಕನ್ನಡದ ಪ್ರಾದೇಶಿಕ ಉಪಭಾಷೆಗಳಲ್ಲಿ ಪ್ರಮುಖ ಉಪಭಾಷಾಪ್ರಭೇದ. ಇದರಲ್ಲಿ ಧಾರವಾಡ, ಬಿಜಾಪುರ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಭಾಷಾರೂಪಗಳು ಸಮಾವೇಶಗೊಳ್ಳುತ್ತವೆ. ಜಿಲ್ಲೆ ಜಿಲ್ಲೆಗೆ, ತಾಲ್ಲೂಕು ತಾಲ್ಲೂಕಿಗೆ, ಮತ್ತೆ ಒಳಭೇದಗಳು ಕಂಡುಬಂದರೂ ಈ ಪ್ರದೇಶದ ವಿಶಿಷ್ಟ ರೂಪಗಳೆನ್ನಲು ಬರುವಂಥ ಪ್ರಯೋಗಗಳಿವೆ. ಈ ಪ್ರಯೋಗಗಳನ್ನು ಇತರ ಉಪಭಾಷಾ ಪ್ರಭೇದಗಳಲ್ಲಿ ಕಂಡುಬರುವ ರೂಪಗಳೊಡನೆ ಹೋಲಿಸಿ ನೋಡಿದಾಗ ಧಾರವಾಡ ಕನ್ನಡದ ವೈಶಿಷ್ಟ್ಯಗಳು ವಿಶಿಷ್ಟವಾಗಿ ಕಂಡುಬಂದು, ಅದಕ್ಕೆ ಒಂದು ಭಿನ್ನಸ್ಥಾನ ಒದಗಿಸಿಕೊಡುತ್ತವೆ.

ಗ್ರಂಥಸ್ಥ ಭಾಷೆಯಲ್ಲಿ (ಅದೇ ರೀತಿ, ಮೈಸೂರು ಮುಂತಾದ ಪ್ರಭೇದಗಳಲ್ಲಿ) ಎ ಕಾರದಲ್ಲಿ ಕೊನೆಗೊಳ್ಳುವ ಶಬ್ದಗಳು ಇಲ್ಲಿ ಇ ಕಾರಾಂತವಾಗುತ್ತವೆ. ಉದಾ ಮನೆ- ಮನಿ,ತೆನೆ-ತೆನಿ, ತಲೆ-ತಲಿ, ಬರೆ-ಬರಿ ಇತ್ಯಾದಿ.

ಶಬ್ದಮಧ್ಯದ ಒ ಸ್ವರ ಇಲ್ಲಿ ಆ್ಯ ಆಗುತ್ತದೆ. ಉದಾ ಕೋಟೆ- ಕ್ವಾಟೆ, ದೋಸೆ- ದ್ವಾಸಿ, ಗೋಡೆ- ಗ್ವಾಡಿ ಕೊರೆ - ಕ್ವಾರಿ ಇತ್ಯಾದಿ

ಶಬ್ದಮಧ್ಯದ ಎ ಇಲ್ಲಿ ಆ್ಯ ಆಗಿದೆ. ಉದಾ ಮೇಲೆ - ಮ್ಯಾಲೆ ಕೆರೆ - ಕ್ಯಾರಿ ಮೆರೆ - ಮ್ಯಾರಿ ಇತ್ಯಾದಿ

ಮಹಾಪ್ರಾಣದ ಉಚ್ಚಾರ ಮೈಸೂರು ಕನ್ನಡದಲ್ಲಿ ಕಂಡುಬರುವುದಕ್ಕಿಂತ ಇಲ್ಲಿ ಹೆಚ್ಚು ಸ್ಪಷ್ಟವಾಗಿದೆ. ಉದಾ ಭಾಸೆ -(ಮೈ ಬಾಷಿ-) ವಿದ್ಯಾರ್ಥಿ -(ಮೈ ವಿದ್ಯಾರ್ತಿ-), ಭೆಟ್ಟಿ -(ಮೈ ಬೆಟ್ಟಿ-) ಇತ್ಯಾದಿ

ಇಲ್ಲಿ ಕಂಡುಬರುವ ಸಂಸ್ಕೃತ ಪದಗಳ ಉಚ್ಚಾರಣೆ (ಅನುಸ್ವಾರದ ಉಚ್ಚಾರ) ಮೈಸೂರು ಕನ್ನಡಕ್ಕಿಂತ ಭಿನ್ನವಾಗಿದೆ. ಉದಾ ಸಂಸಾರ (ಮೈ. ಸರ್ಮ್‌ಸಾರ,) ಸಿಂಹ (ಮೈ. ಸಿಮ್ಹ) ಇತ್ಯಾದಿ.

ಇಲ್ಲಿ ಬಳಕೆಯಾಗುವ ಇಂಗ್ಲಿಷ್ ಪದಗಳ ಉಚ್ಚಾರ ಮೈಸೂರು ಕನ್ನಡಕ್ಕಿಂತ ಭಿನ್ನವಾಗಿದೆ. ಉದಾ: ರೇಲು (ಮೈ.ರೈಲು), ಜಜ್ (ಮೈ.ಜಡ್ಜ್), ಜಾಯಿಂಟ್ (ಮೈ.ಜಂಟಿ), ರಜಿಸ್ಟ್ರಾರ್ (ಮೈ.ರಿಜಿಸ್ಟ್ರಾರ್) ಇತ್ಯಾದಿ.

ಕ್ರಿಯಾರೂಪಗಳಲ್ಲಿಯ ಶಬ್ದಾಂತ್ಯ- ಎ ಕಾರ ಇಲ್ಲಿ ಇ ಕಾರಾಂತವಾಗಿದೆ. ಉದಾ: ಹೋಗ್ತೀನಿ (ಹೋಗ್ತೇನಿ), ಬರ್ತೀನಿ (ಬರ್ತೇನೆ), ಕೊಡತೀನಿ (ಕೊಡತೇನೆ) ಇತ್ಯಾದಿ.

ಕ್ರಿಯಾರೂಪಗಳಲ್ಲಿಸಮರೂಪಧಾರಣೆ ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉದಾ: ತಿನ್ನಿ (ತಿಂದೆ), ಬಾನ್ನಿ (ಬಂದೆ) ಮಲಕೊನ್ನಿ (ಮಲಗಿಕೊಂಡೆ), ತಾನ್ನಿ (ತಂದೆ) ಇತ್ಯಾದಿ.

ಕ್ರಿಯಾರೂಪಗಳಲ್ಲಿ ಇನ್ನೊಂದು ರೀತಿಯ ವೈಶಿಷ್ಟ್ಯವೂ ಇದೆ. ಉದಾ: ಬರತತಿ (ಮೈ. ಬರುತ್ತೆ), ಹೋಗತತಿ (ಮೈ. ಹೋಗತ್ತೆ), ತಿಂತತಿ (ಮೈ. ತಿನ್ನುತ್ತೆ) ಇತ್ಯಾದಿ.

ಧಾರವಾಡ ಕನ್ನಡಕ್ಕೆ ವಿಶಿಷ್ಟವೆನಿಸುವ ಕೆಲಪದಪ್ರಯೋಗಗಳಿವೆ. ಉದಾ ತಿನಸು (ಮೈ. ತಿಂಡಿ), ಗಿಡ (ಮೈ. ಮರ), ಆಯಿರೀ (ಮೈ.

ಉಡುಗೊರೆ), ತೊಪ್ಪಲು (ಮೈ. ಸೊಪ್ಪು), ಚಲೂ (ಮೈ. ಚನ್ನಾಗಿ, ಚನ್ನಾದು, ಅಮ್ಮ (ಮೈ. ಅಜ್ಜಿ), ಸಿರಾ (ಮೈ. ಕೇಸರಿಭಾತ್), ತಿಂದು (ಮೈ. ತಿಂದ್ಕೊಂಡು), ಹಾಲು ಹಿಂಡು (ಮೈ. ಹಾಲುಕರಿ), ಚಲೂ ಐತಿ (ಮೈ. ಚನ್ನಾಗಿದೆ). ದಂಡಿ ಮುಟ್ಟಬೇಕು (ಮೈ. ದಡ ಸೇರಬೇಕು) ಇತ್ಯಾದಿ.

ಇಲ್ಲಿಯ ಭೌಗೋಳಿಕ ಪರಿಸರ ಮತ್ತು ಐತಿಹಾಸಿಕ ಕಾರಣಗಳಿಂದ ಧಾರವಾಡ ಕನ್ನಡದ ಮೇಲೆ ಮರಾಠಿಯ ಪ್ರಭಾವ ಕಂಡುಬರುತ್ತದೆ. ಉದಾಹರಣೆಗೆ ಶಂಬರ್ (ನೂರು), ಸವ್ವಾಸೇರು (ಒಂದೂಕಾಲು ಸೇರು), ಪೋನೆ ಏಳು (6 ಮುಕ್ಕಾಲು), ಛತ್ತೀಸ್ (36, ಆಢ್ಯ ಮನುಷ್ಯ), ತಿರಸಟ್ಟಿ (63, ಎಡವಟ್ಟು ಮನುಷ್ಯ), ಟಕ್ಕೆ (ಪ್ರಮಾಣ), ಮಿಸಳ್ (ಒಂದು ತಿಂಡಿ), ಭಾಮಟ್ಯಾ (ಒಂದು ಬೈಗಳು), ಮುಂತಾದ ಪ್ರಯೋಗಗಳ ಬಹುಸಂಖ್ಯೆಯಲ್ಲಿ ಬಳಕೆಯಲ್ಲಿವೆ. ಮೈಸೂರು ಕನ್ನಡ ಗ್ರಂಥಸ್ಥ ಭಾಷೆಗೆ ಸಮೀಪವಾಗಿದ್ದರೆ ಧಾರವಾಡ ಕನ್ನಡ ಗ್ರಂಥಸ್ಥ ಭಾಷೆಗೆ ಬಲು ದೂರವಾಗಿದೆ. (ಜೆ.ಎಸ್.ಕೆ)

**ಗುಲ್ಬರ್ಗ ಕನ್ನಡ :** ಗುಲ್ಬರ್ಗ, ಬಿದರೆ, ರಾಯಚೂರು ಜಿಲ್ಲೆಗಳ ಕನ್ನಡವನ್ನು ಹೈದರಾಬಾದ್ ಕರ್ನಾಟಕ ಕನ್ನಡ ಎಂದೂ ಕರೆಯುವುದುಂಟು. ಈ ಉಪಭಾಷೆಯ ಮೇಲೆ ಮರಾಠಿ, ಉರ್ದು, ಸಂಸ್ಕೃತಗಳ ಪ್ರಭಾವ ತೀವ್ರತರವಾಗಿ ಆಗಿದೆ. ಮೊದಲಿಗೆ ಈ ಉಪಭಾಷೆಯನ್ನಾಡುವ ಪ್ರದೇಶ ಹೈದರಾಬಾದ್ ನಿಜಾಮರ ಆಳಿಕೆಗೆ ಒಳಗಾಗಿತ್ತಾದ ಕಾರಣ ಉರ್ದು ಈ ಭಾಷೆಯ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. ಈ ಉಪಭಾಷೆಯಲ್ಲೂ ಉಳಿದ ಕನ್ನಡದ ಉಪ ಭಾಷೆಗಳಲ್ಲಿ ಕಂಡುಬರುವಂತೆ ಆ ಧ್ವನಿಮಾ ಆ್ಯ ಮತ್ತು ಆ ಎಂಬ ಎರಡು ಧ್ವನಿಮಾ ಆಗಿ ರೂಪ ತಾಳಿದೆ. ಚ ಮತ್ತು ಜ ಎಂಬ ಈಷತ್ ಸ್ಪರ್ಶ ವ್ಯಂಜನ ಧ್ವನಿಮಾಗಳು ಈ ಕನ್ನಡದಲ್ಲಿ ಕಂಡುಬರುತ್ತವೆ. ಇವುಗಳ ಜೊತೆಗೆ ಚ ಜ ಎಂಬ ತಾಲವ್ಯ ಸ್ಪರ್ಶವ್ಯಂಜನ ಧ್ವನಿಮಾಗಳೂ ಬಳಕೆಯಲ್ಲಿವೆ. ಎಷ್ಟೋ ವೇಳೆ ಉರ್ದುವಿನ ಪ್ರಭಾವದಿಂದ ಕನ್ನಡದ ಜ ವ್ಯಂಜನ ಧ್ವನಿಮಾಕ್ಕೆ ಬದಲು ಜ ಬಳಕೆಯಾಗುತ್ತದೆ ಉದಾ: ಬೀಜ > ಬೀಜ, ಶಿಷ್ಟ ಕನ್ನಡದ ವಕಾರಾಂತ ಶಬ್ದಗಳು ವ್ಯಂಜನಾಂತವಾಗಿವೆ. ಹೆಚ್ಚಿನ ಬದಲಾವಣೆ ವ್ಯಾಕರಣ ಪ್ರಕ್ರಿಯೆಗಳಿಗಿಂತ ಪದಕೋಶಕ್ಕೆ ಸೀಮಿತವಾಗಿದೆ. ಕೆಲವೊಮ್ಮೆ ಊರುಗಳ ಹೆಸರುಗಳು ಗುರುತು ಸಿಗದಷ್ಟು ರೂಪಾಂತರ ಹೊಂದಿವೆ. ಗುಲ್ಬರ್ಗದ ಮೂಲ ಹೆಸರು ಕಲುಬುರುಗೆ ಎಂದಿದ್ದಿತಾದರೂ ಈಗಿನ ಹೆಸರಿನಲ್ಲಿ ಅದರ ಸುಳಿವೂ ಸಿಗುವುದಿಲ್ಲ. ಇಂಥ ಬದಲಾವಣೆಗಳು ಕೆಲವೊಮ್ಮೆ ಸ್ವಾಭಾವಿಕವಾಗಿಯೇ ಆಗಿರದೆ ಆಡಳಿತಗಾರರ ಬಲಾತ್ಕಾರದ ಹೇರಿಕೆಯಿಂದಲೂ ಆಗಿರುವುದುಂಟು. ಬಿಜಾಪುರ ಕನ್ನಡವನ್ನು ಕೆಲವೊಮ್ಮೆ ಗುಲ್ಬರ್ಗ ಕನ್ನಡದಲ್ಲೇ ಸೇರಿಸುವುದುಂಟು. ಈ ಎರಡೂ ಪ್ರಭೇದಗಳ ನಡುವೆ ಅಂತರ ಹೆಚ್ಚಾಗಿ ಕಂಡುಬರುವುದಿಲ್ಲ. ವ್ಯಾಕರಣಾಂಶಗಳಲ್ಲಿಯೂ ಬಿಜಾಪುರ ಕನ್ನಡ ಗುಲ್ಬರ್ಗ ಕನ್ನಡದೊಂದಿಗೆ ಸಾಮ್ಯ ಹೊಂದಿದೆ. ಈ ಎರಡು ಭಾಷಾರೂಪಗಳಲ್ಲಿ ಕೆಲವೊಮ್ಮೆ ಆಕಾರಾಂತ ಸಂಬಂಧಸೂಚಕ ಸರ್ವನಾಮಗಳು ಯಕಾರಾದಿಯಾಗುತ್ತವೆ. ಉದಾ: ಅಪ್ಪ > ಯಪ್ಪ, ಅವ್ವ > ಯವ್ವ. ಈ ಭಾಷಾ ಪ್ರಭೇದಗಳಲ್ಲಿ ಅನ್ಯರನ್ನು ಕುರಿತು ಸಂಬೋಧಿಸುವಾಗ 'ರಿ' ಎಂಬ ಪ್ರತ್ಯಯ ಹೆಚ್ಚಾಗಿ ಬಳಕೆಯಾಗುತ್ತದೆ. ವಿದ್ಯಾವಂತರ ಭಾಷೆಯಲ್ಲಿ ಮಾತ್ರ ಮಹಾಪ್ರಾಣಾಕ್ಷರಗಳು ಉಳಿದಿವೆ. ಅಲ್ಪಪ್ರಾಣವನ್ನೇ ಮಹಾಪ್ರಾಣವಾಗಿ ಉಚ್ಚರಿಸುವ ಪ್ರವೃತ್ತಿ ಅನ್ಯಭಾಷೆಯನ್ನಾಡುವವರಲ್ಲಿ ಕಂಡುಬರುತ್ತದೆ. ಅವಿದ್ಯಾವಂತರಲ್ಲಿ ಹಾಗೂ ಕೆಳವರ್ಗದವರಲ್ಲಿ ಹ ಕಾರ ಲೋಪವಾಗುತ್ತದೆ. ಉಕಾರಾಂತ ಪದಗಳ ವಿದ್ಯಾವಂತರ ನುಡಿಯಲ್ಲಿ ಅಕಾರಾಂತವಾಗುವುದುಂಟು (ಆಕಳು > ಆಕಳ). ಈ ಭಾಷೆಯಲ್ಲಿ ಬಳಕೆಯಾಗುವ ಬಹಳಷ್ಟು ಸಂಖ್ಯಾವಾಚಕಗಳು ಉರ್ದು ಇಲ್ಲವೇ ಮರಾಠಿ ಭಾಷೆಗಳಿಂದ ಎರವಲು ತಂದವಾಗಿವೆ. ತೀಸ್, ಅಡೀಚ್, ದೀಡು, ಶಂಭರ್ ಇತ್ಯಾದಿ. ತಿನ್ನದೆ, ಮಾಡದೆ ಎಂಬ ನಿಷೇಧಾರ್ಥಕ ರೂಪಗಳು ತಿನ್ಲಾರದೆ, ಮಾಡ್ಲಾರದೆ ಎಂಬ ರೂಪತಾಳಿ ಲಾರದೆ ಎಂಬ ಪ್ರತ್ಯಯಗಳನ್ನು ಹೊಂದುತ್ತವೆ. ರಾಯಚೂರು ಕನ್ನಡ ಕೂಡ ಗುಲ್ಬರ್ಗ ಕನ್ನಡವನ್ನೇ ಹೋಲುವುದಾದರೂ ಕೆಲವು ಸಾಮಾನ್ಯ ಬದಲಾವಣೆಗಳೂ ಕಂಡುಬರುತ್ತವೆ. ಈ ಪ್ರಭೇದದಲ್ಲಿ ಅವ, ಇವ, ಮಾವ, ಕಿವುಡ, ಕಿವಿ, ಸೋವಿ ಮುಂತಾದ ಪದಗಳಲ್ಲಿ ವಕಾರ ಅನುನಾಸಿಕವಾಗಿ ಉಚ್ಚಾರಗೊಳ್ಳುತ್ತದೆ.

ಉಪಭಾಷೆಗಳಲ್ಲಿ ಮೇಲೆ ಚರ್ಚಿಸಲಾದ ಪ್ರಾದೇಶಿಕ ಉಪಭಾಷೆಗಳ ಜೊತೆಗೆ ಆಯಾ ವಿಶಿಷ್ಟ ಸಮುದಾಯಕ್ಕೆ ಸೇರಿದ ಉಪಭಾಷೆಗಳೂ ಇವೆ. ಸೋಲಿಗ, ಬಡಗ, ಹವ್ಯಕ, ಕುರುಬ (ಕುರುಂಬ) ಇತ್ಯಾದಿ ಭಾಷೆಗಳು ಈ ಗುಂಪಿಗೆ ಸೇರುತ್ತವೆ. *

**ಸೋಲಿಗ :** ಚಾಮರಾಜನಗರ ಜಿಲ್ಲೆ ಬಿಳಿಗಿರಿರಂಗನ ಬೆಟ್ಟ, ಮಹದೇಶ್ವರ ಬೆಟ್ಟ, ಮೈಸೂರು ಜಿಲ್ಲೆಯ, ಹೆಗ್ಗಡದೇವನಕೋಟೆ, ಕಾಕನಕೋಟೆ ಹಾಗೂ ಬೆಂಗಳೂರು, ಮಂಡ್ಯ, ತುಮಕೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಾಸವಾಗಿರುವ ಸೋಲಿಗ (ಶೋಲಿಗ) ಎಂಬ ಆದಿವಾಸಿ ಜನಾಂಗದವರ ಆಡು ಭಾಷೆ.

ಸೋಲಿಗ ಭಾಷೆಯನ್ನು ಸಾಮಾನ್ಯವಾಗಿ ಸೋಲಿಗ ಕನ್ನಡ ಎಂದು ಕರೆಯುವುದು ರೂಢಿ. ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ಮತ್ತು ಚಾಮರಾಜನಗರದ ಸುತ್ತಮುತ್ತಲ ಪ್ರದೇಶದ ಕನ್ನಡ ಭಾಷೆಯಲ್ಲಿ. ಸೋಲಿಗಕನ್ನಡದಲ್ಲಿ ಕಂಡುಬರುವ ಕೆಲವು ವೈಶಿಷ್ಟಗಳನ್ನು ಕಾಣಬಹುದು. ಉದಾಹರಣೆಗೆ ಕರೆ > ಕರಿ, ಮರೆ > ಮರಿ, ಬರೆ > ಬರಿ, ತೆರೆ > ತೆರಿ, ಇತ್ಯಾದಿ. ಮಗು, ಮಕ್ಕಳು ಎಂಬ ಪದ ಈ ಸುತ್ತಮುತ್ತಲ ಪ್ರದೇಶಗಳಲ್ಲಿಯ ಕನ್ನಡದಲ್ಲಿ ಮಕ್ಕ, ಮಕ್ಕಗ ಎಂದು ಬಳಕೆಯಲ್ಲಿದೆ. ನಾಸಿಕತ್ವ ಈ ಭಾಷೆಯಲ್ಲಿ ಅರ್ಥವ್ಯತ್ಯಾಸವನ್ನುಂಟುಮಾಡುವ ಸಾಮರ್ಥ್ಯವನ್ನು ಪಡೆದಿದೆ. ಉದಾಹರಣೆಗೆ ಅವ > ಅವನು, ಬನ್ನೆ > ಬಂದೆ, ಮಾದ > ಮಾದ ಇತ್ಯಾದಿ.

ಸೋಲಿಗರ ಕನ್ನಡಕ್ಕೂ ಹಾಗೂ ಶಿಷ್ಟ ಕನ್ನಡಕ್ಕೂ ಇರುವ ಕೆಲವು ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು.

ಸೋಲಿಗ ಕನ್ನಡದಲ್ಲಿ ಶಕಟರೇಫ ಸ್ವತಂತ್ರ ವರ್ಣವಾಗಿಯೂ ೞ ಕಾರ ಒಂದು ಧ್ವನಿಪ್ರಭೇದವಾಗಿಯೂ ಬಳಕೆಯಲ್ಲಿವೆ.

| ಉದಾಹರಣೆಗೆ : | **ಸೋ.ಕನ್ನಡ** | **ಶಿ.ಕನ್ನಡ** |
|---|---|---|
| | ಅಱೆ | ಅರೆಬಂಡೆ |
| | ಮುಱು | ಮುರಿ |
| | ಕೆಱೆ | ಕೆರೆ |
| | ಕೋೞಿ | ಕೋಳಿ |
| | ಉೞು ಉಳು | ಉಳು |
| | ಮೞೆ | ಮಳೆ |

ಶಿಷ್ಟ ಕನ್ನಡದಲ್ಲಿ ನಪುಂಸಕಲಿಂಗಗಳಿಗೆ ಹತ್ತುವ ಬಹುವಚನ ಪ್ರತ್ಯಯ ಸೋಲಿಗ ಕನ್ನಡದಲ್ಲಿ ಗ ಆಗಿದೆ.

| ಉದಾಹರಣೆಗೆ : | **ಸೋ.ಕನ್ನಡ** | **ಶಿ.ಕನ್ನಡ** |
|---|---|---|
| | ಮರಗ | ಮರಗಳು |
| | ಆನೆಗ | ಆನೆಗಳು |
| | ಕುರಿಗ | ಕುರಿಗಳು |
| | ಎತ್ತುಗ | ಎತ್ತುಗಳು |

ಚತುರ್ಥಿವಿಭಕ್ತಿ ಪ್ರತ್ಯಯಗಳಲ್ಲೂ ಸೋಲಿಗ ಕನ್ನಡ ಶಿಷ್ಟ ಕನ್ನಡದಿಂದ ಬೇರೆಯಾಗಿದೆ.

| ಉದಾಹರಣೆಗೆ : | **ಸೋ.ಕನ್ನಡ** | **ಶಿ.ಕನ್ನಡ** |
|---|---|---|
| | ಕಾಡಿಗ | ಕಾಡಿಗೆ |
| | ಕರುವಿಗ | ಕರುವಿಗೆ |
| | ನನಗ | ನನಗೆ |
| | ಹುಲಿಕ | ಹುಲಿಗೆ |
| | ಮನೆಕ | ಮನೆಗೆ |
| | ಮರಕ | ಮರಕ್ಕೆ |
| | ಅದಕ | ಅದಕ್ಕೆ |

ಭೂತಕಾಲ ಪ್ರತ್ಯಯವಾದ ನ್ ಕನ್ನಡದ ಬೇರೆ ಯಾವ ಉಪಭಾಷೆಗಳಲ್ಲೂ ಕಂಡುಬರುವುದಿಲ್ಲ, ಸೋಲಿಗ ಭಾಷೆಯಲ್ಲಿ ಕಂಡುಬರುತ್ತದೆ. ಈ ಭೂತಕಾಲ ಪ್ರತ್ಯಯ ಕೇವಲ ಉತ್ತಮಪುರುಷ

ಏಕವಚನ ಬಹುವಚನಗಳಲ್ಲೂ ಹಾಗೂ ಪ್ರಥಮ ಪುರುಷ ಏಕವಚನದಲ್ಲೂ ಬರುತ್ತದೆ.

| **ಸೋ.ಕನ್ನಡ** | **ಶಿ.ಕನ್ನಡ** |
|---|---|
| ಹೋನೆ | ಹೋದೆ |
| ಹೋನೊ | ಹೋದೆವು |
| ಹೋನ | ಹೋದ (ಹೋದನು) |

ಈಗ ಸೋಲಿಗರು ಕನ್ನಡದ ಇತರ ಉಪಭಾಷೆಗಳನ್ನಾಡುವ ಜನರ ಸಂಪರ್ಕವನ್ನು ಹೊಂದುತ್ತಿರುವುದರಿಂದ, ಕಾಲಕ್ರಮೇಣ ಇವರ ಕನ್ನಡದಲ್ಲಿಯ ವೈಶಿಷ್ಟ್ಯಗಳು ಮರೆಯಾಗಬಹುದು. ಆದ್ದರಿಂದ ಈ ಉಪಭಾಷೆಯಲ್ಲಿ ದೊರೆಯುವ ಜನಪದ ಸಾಹಿತ್ಯವನ್ನು ಆದಷ್ಟು ಬೇಗ ಸಂಗ್ರಹಿಸುವ ಅವಶ್ಯಕತೆ ಇದೆ. (ಕೆ.ಎಸ್.ಜಿ.)

**ಬಡಗಭಾಷೆ :** ಈ ಭಾಷೆಯನ್ನು ಇತ್ತೀಚೆಗೆ ಕೆಲವು ವಿದ್ವಾಂಸರು ಒಂದು ಸ್ವತಂತ್ರ ದ್ರಾವಿಡ ಭಾಷೆ ಎಂದು ಪರಿಗಣಿಸಿದ್ದಾರೆ. ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವೆ ಸಾಲಾಗಿ ಹಬ್ಬಿರುವ ಮಧುಮಲೈ ಮತ್ತು ನೀಲಗಿರಿಬೆಟ್ಟಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ವಾಸವಾಗಿರುವ ಸು.ಒಂದು ಲಕ್ಷಕ್ಕೂ ಹೆಚ್ಚು ಬಡಗರು ಈ ಭಾಷೆಯನ್ನಾಡುವರು. ಬಡಗ ಭಾಷೆಯಲ್ಲಿ ಹತ್ತು ಸ್ವರಧ್ವನಿಮಾಗಳು, 19 ವ್ಯಂಜನ ಧ್ವನಿಮಾಗಳು ಪ್ರಧಾನವಾಗಿ ಕಂಡುಬರುತ್ತವೆ. ಕನ್ನಡದಲ್ಲಿ ಪ ಕಾರ ಹ ಕಾರವಾಗಿ ಪರಿವರ್ತನೆಗೊಂಡಿರುವಂತೆ ಬಡಗದಲ್ಲಿ ಈ ಪರಿವರ್ತನೆ ಕಂಡುಬರುವುದಿಲ್ಲ. ಅನೇಕ ವ್ಯಾಕರಣಾಂಶಗಳಲ್ಲಿ ಬಡಗಭಾಷೆ ಕನ್ನಡ ಭಾಷೆಯನ್ನೇ ಹೆಚ್ಚು ಹೋಲುತ್ತದೆ. ಹಳಗನ್ನಡದ ಎಷ್ಟೋ ಧ್ವನಿಗಳೂ ಧ್ವನಿಮಾಗಳು, ಪದಗಳು ಮತ್ತು ವ್ಯಾಕರಣ ವೈಶಿಷ್ಟ್ಯಗಳು ಈ ಭಾಷೆಯಲ್ಲಿ ಕಂಡುಬರುತ್ತವೆ. ಬಡಗ ಭಾಷೆಯ ಮೇಲೆ ತಮಿಳು ಮತ್ತು ಮಲೆಯಾಳಂ ಭಾಷೆಗಳ ಪ್ರಭಾವ ತೀವ್ರತರವಾಗಿ ಕಂಡುಬಂದರೂ ಇದನ್ನು ತಮಿಳು ಭಾಷೆಯ ಅಥವಾ ಮಲೆಯಾಳಂ ಭಾಷೆಯ ಉಪಭಾಷೆ ಎಂದು ಹೇಳಲು ಬರುವುದಿಲ್ಲ.

ಭಾರತೀಯ ಭಾಷೆಗಳ ಸರ್ವೇಕ್ಷಣಾ ಕಾರ್ಯವನ್ನು ಕೈಗೊಂಡಿದ್ದ ಜಾರ್ಜ್ ಗ್ರಿಯರ್‌ಸನ್ ಬಡಗ ಭಾಷೆಯನ್ನು ಕನ್ನಡದ ಉಪಭಾಷೆ ಎಂದು ಪರಿಗಣಿಸಿ, ಈ ಕಾರಣದಿಂದಲೇ ಇದರ ಪ್ರಸ್ತಾಪವನ್ನು ಕನ್ನಡ ಭಾಷೆಯೊಂದಿಗೆ ಕೈಗೊಂಡಿದ್ದಾನೆ.

**ಹವ್ಯಕ :** ಹೆಚ್ಚಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನೆಲಸಿರುವ ಹವ್ಯಕರ ಆಡುಭಾಷೆ. ಇದನ್ನು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಆಡುವವರಿದ್ದಾರೆ. ಇದು ಕನ್ನಡದ ಉಪಭಾಷೆಯಾಗಿದ್ದರೂ ಇದನ್ನಾಡುವ ಜನ ಹವ್ಯಕ ಕನ್ನಡ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಭಾಷೆಗೆ ತನ್ನದೇ ಆದ ಲಿಪಿ ಸೌಲಭ್ಯವಿಲ್ಲ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಕುಮಟ ಮುಂತಾದ ಕಡೆ ಆಡುವ ಹವ್ಯಕ ಭಾಷೆಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸುಳ್ಯ, ಪುತ್ತೂರು, ಮೂಡಬಿದರೆ, ಬಂಟ್ವಾಳ, ಮಂಗಳೂರು, ಉಡುಪಿ ಮುಂತಾದ ಕಡೆ ಆಡುವ ಭಾಷೆಗೂ ತುಂಬ ಅಂತರ ಕಂಡುಬರುತ್ತದೆ. ಈ ಅಂತರ ಅನುನಾಸಿಕತೆ, ತಾಲವ್ಯೀಕರಣ, ಓಷ್ಠ್ಯೀಕರಣ ಇತ್ಯಾದಿ ಧ್ವನಿಲಕ್ಷಣಗಳಲ್ಲಿ ಹೆಚ್ಚು. ಹಾಗೆಯೇ ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಆಡುವ ಹವ್ಯಕ ಭಾಷೆಯಲ್ಲೂ ಈ ವ್ಯತ್ಯಾಸಗಳಿವೆ. ಇದಕ್ಕೆ ಕಾರಣ ಕೆಲವು ಕಡೆ ತುಳು ಮಲೆಯಾಳಂ ಭಾಷೆಗಳ, ಮತ್ತೆ ಕೆಲವು ಕಡೆ ಕನ್ನಡ ಕೊಡಗು ಮತ್ತು ಕೊಂಕಣಿ ಭಾಷೆಗಳ ಪ್ರಭಾವವೆನ್ನಬಹುದು.

ಹವ್ಯಕ ಭಾಷೆಯಲ್ಲಿ ಸಂಸ್ಕೃತ ಪದಗಳು ಹೆಚ್ಚು. ಉಚ್ಚಾರದಲ್ಲಿ ಕೆಲವು ಸಂಸ್ಕೃತ ಪದಗಳು ವಿಕೃತಗೊಂಡಿವೆ; ಕೆಲವು ವ್ಯತ್ಯಾಸಗೊಂಡಿವೆ: ಮತ್ತೆ ಕೆಲವು ಹಾಗೆಯೇ ಉಳಿದುಕೊಂಡಿವೆ. ಈ ಭಾಷೆಯ ಧ್ವನಿಮಾ ಆಕೃತಿಮಾ ವಾಕ್ಯರಚನಾ ವ್ಯವಸ್ಥೆಗಳನ್ನು ಗಮನಿಸಿದಾಗ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಅಂಶಗಳು ಕಂಡುಬರುತ್ತವೆ. ಅದರಲ್ಲೂ ಪೂರ್ವದ ಹಳಗನ್ನಡ ರೂಪಗಳು ಹೇರಳವಾಗಿ ಕಂಡುಬರುತ್ತವೆ. ವ್ಯಾಕರಣಾಂಶಗಳಲ್ಲಿ ಈ ಭಾಷೆ ನಡುಗನ್ನಡವನ್ನೇ ಹೆಚ್ಚು ಹೋಲುತ್ತದೆ. ಅಭಿವ್ಯಾಪಕ, ವ್ಯಾವರ್ತಕ, ಪ್ರಥಮಪುರುಷ ಬಹುವಚನಗಳಲ್ಲಿನ ವ್ಯತ್ಯಾಸ ಹಳಗನ್ನಡ, ನಡುಗನ್ನಡಗಳಲ್ಲಿರುವಂತೆಯೇ ಇದೆ.

**ಕುರುಬ :** (ಕುರುಂಬ): ಕೇರಳದ ವೈನಾಡು (ಮಲಬಾರು), ತಮಿಳು ನಾಡಿನ ನೀಲಗಿರಿ, ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಕುರುಬ ಎಂಬ ಆದಿವಾಸಿ ಜನಾಂಗದವರು ಈ ಭಾಷೆಯನ್ನಾಡುತ್ತಾರೆ. ಕುರುಬರಲ್ಲಿ ಪ್ರಮುಖವಾಗಿ ಊರುಕುರುಬ, ಕಾಡುಕುರುಬ ಎಂಬ ಎರಡು ಪಂಗಡಗಳಿವೆ. ಈ ಪಂಗಡಗಳಲ್ಲಿಯೂ ಹಲವಾರು ಒಳಪಂಗಡಗಳಿವೆ. ಇವರು ಆಡುವ ಭಾಷೆಯನ್ನು ಕುರುಬಕನ್ನಡ ಎಂದು ಕರೆಯುತ್ತಾರೆ. ಕನ್ನಡ ಭಾಷೆಯಲ್ಲಿ ಕಂಡುಬರುವ ಕೆಲವು ಸ್ವರ ಮತ್ತು ವ್ಯಂಜನ ಧ್ವನಿಮಾಗಳು ಈ ಭಾಷೆಯಲ್ಲೂ ಕಂಡುಬರುತ್ತವೆ. ಕಾಡುಕುರುಬರ ಭಾಷೆಯಲ್ಲಿ ಹಳಗನ್ನಡದ ಭಾಷಾಂಶಗಳು ಹೆಚ್ಚು. ಈ ಭಾಷೆಯ ಮೇಲೆ ತಮಿಳು ಮತ್ತು ಮಲೆಯಾಳಂ ಭಾಷೆಗಳು ಪ್ರಭಾವ ಬೀರಿದ್ದು ಕೆಲವರು ಭಾಷಾತಜ್ಞರು ಕುರುಬ ಭಾಷೆಯನ್ನು ಕನ್ನಡದ ಉಪಭಾಷೆ ಎಂದೂ ಮತ್ತೆ ಕೆಲವರು ತಮಿಳಿನ ಉಪಭಾಷೆ ಎಂದೂ ಅನುಮಾನಿಸಿದ್ದಾರೆ. (ಕೆ.ಕೆ.ಜಿ.)

**ಕನ್ನಡದಲ್ಲಿ ಅಂಕಣ ಸಾಹಿತ್ಯ :** ಇದೊಂದು ವಿಶಿಷ್ಟ ಬಗೆಯ ಪತ್ರಿಕಾಸಾಹಿತ್ಯ. ಪತ್ರಿಕೆಗಳಲ್ಲಿ ನಿಯತವಾಗಿ ಬರೆಯುವ ನಿರ್ದಿಷ್ಟ ಲೇಖನಕ್ಕೆ ಅಂಕಣ ಬರೆಹವೆಂದು ಹೆಸರು. ಕನ್ನಡದಲ್ಲಿ ಅಂಕಣ ಹಾಗೂ ಅಂಕಣ ಸಾಹಿತ್ಯದ ಪರಿಕಲ್ಪನೆ ಇಂಗ್ಲಿಷ್ ಪತ್ರಿಕೋದ್ಯಮದಿಂದ ಬಂದಿದ್ದು. ಇಂಗ್ಲಿಷಿನ ಕಾಲಂ ಎಂಬ ಪದ ಹಾಗೂ ಪರಿಕಲ್ಪನೆಗೆ ಸಂವಾದಿಯಾಗಿ ಕನ್ನಡದಲ್ಲಿ ಅಂಕಣ ಎಂಬ ಪದ ಬಳಕೆಯಾಗುತ್ತಿದೆ. ಯಾವುದೇ ವಸ್ತು ವಿಷಯವನ್ನು ಕುರಿತು ಒಂದು ನಿರ್ದಿಷ್ಟ ಪತ್ರಿಕೆ ಅಥವಾ ನಿಯತಕಾಲಿಕೆಗೆ ತಮ್ಮ ವೈಯಕ್ತಿಕ ಚಿಂತನೆಯನ್ನು ಸೇರಿಸಿ ನಿಯತವಾಗಿ ಬರೆಯುವವನೇ 'ಅಂಕಣಕಾರ'. ಅಂಕಣ ಬರೆಹದಲ್ಲಿ ಅಂಕಣಕಾರ ಸಮಕಾಲೀನ ವಸ್ತು ವಿಷಯಗಳಿಗೆ ಸ್ವಂತಿಕೆಯ ಲೇಪ ಹಾಗೂ ಛಾಪನ್ನು ನೀಡಬೇಕಾಗುತ್ತದೆ. - ಇದು ಅಂಕಣ ಬರೆಹದ ಒಂದು ಮುಖ್ಯಲಕ್ಷಣವಾಗಿದೆ.

ಇಂಗ್ಲಿಷ್‌ನಲ್ಲಿ ಅಂಕಣ ಸಾಹಿತ್ಯಕ್ಕೆ ಒಂದು ದೀರ್ಘ ಪರಂಪರೆಯೇ ಇದೆ. ಬೆಂಜಮಿನ್ ಫ್ರಾಂಕ್ಲಿನ್‌ನ ಸಹೋದರನಾದ ಜೇಮ್ಸ್ (ನ್ಯೂ ಇಂಗ್ಲೆಂಡ್ ಕೋರಂಟ್), ಜಾನ್ ಡಿಕಿನ್‌ಸನ್ಸ್ [ಲೆಟರ್ಸ್ ಫ್ರಂ ಎ ಫಾರ್ಮರ್ ಇನ್ ಪೆನ್ಸಿಲ್‌ವೇನಿಯ ಟು ದಿ ಇನ್ ಹ್ಯಾಬಿಟಂಟ್ಸ್ ಆಫ್ ದಿ ಬ್ರಿಟಿಷ್ ಕಾಲನೀಸ್, ಪೆನ್ಸಿಲ್‌ವೇನಿಯ ಕ್ರಾನಿಕಲ್ (1767-68)], ಅಲೆಕ್ಸಾಂಡರ್ ಹ್ಯಾಮಿಲ್ಟನ್, ಜೇಮ್ಸ್ ಮ್ಯಾಡಿಸನ್, ಜಾನ್ ಜೇ [ಫೆಡರಲಿಸ್ಟ್ ಲೇಟರ್ಸ್ ಇಂಡಿಪೆಂಡೆಂಟ್ ಜರ್ನಲ್ ಅಥವಾ ಜನರಲ್ ಅಡ್ವರ್ಟೈಸರ್ (1787-88)] ಮೊದಲಾದವರು ಅಂಕಣ ಸಾಹಿತ್ಯದಲ್ಲಿ ಆದ್ಯ ಬರೆಹಗಾರರಾಗಿದ್ದರು. ಆಂಬ್ರೋಸ್ ಬಿಯರ್ಸ್ (ಸ್ಯಾನ್‌ಫ್ರಾನ್ಸಿಸ್ಕೋ ಎಕ್ಸಾಮಿನರ್), ಅನಂತರದಲ್ಲಿ ಯೂಜಿನ್ ಫೀಲ್ಡ್ (ಡೆನ್ವರ್ ಟ್ರಿಬ್ಯೂನ್), ಹೊರೇಸ್ ಗ್ರೀಲಿ, ಜೇಮ್ಸ್ ಗೇರ್ಡನ್ ಬೆನ್ನೆಟ್, ಹೆನ್ರಿ, ವಾಟರ್‌ಸನ್ ಮೊದಲಾದವರು ಈ ಪರಂಪರೆಯನ್ನು ಮುಂದುವರಿಸಿದರು. ಪತ್ರಿಕಾ ಓದುಗರು ಸಂಪಾದಕೀಯದ ಜೊತೆಗೆ ಅಂಕಣ ಬರೆಹಗಳನ್ನೂ ಬಯಸುತ್ತಿದ್ದರು. ಕೆಲವೊಮ್ಮೆ ಅಂಕಣ ಬರೆಹಗಳು ಜನಸಾಮಾನ್ಯರ ಅಭಿಪ್ರಾಯ ಧ್ವನಿಯಾಗಿರುತ್ತಿದ್ದವು. ಹೀಗೆ ಬೆಳೆದ ಅಂಕಣ ಬರೆಹ ಪತ್ರಿಕೋದ್ಯಮದಲ್ಲಿ ಒಂದು ಚಿರಸ್ಥಾನವನ್ನು ಪಡೆಯಿತಲ್ಲದೆ ಇದಕ್ಕೆ ಒಂದು ಪರಂಪರೆಯೂ ಸೃಷ್ಟಿಯಾಯಿತು. ಇತ್ತೀಚಿನ ಸಮೀಕ್ಷೆಯ ಪ್ರಕಾರ ಪ್ರಪಂಚದ ಇಂಗ್ಲಿಷ್ ಮತ್ತಿತರ ಭಾಷೆಗಳ ಪತ್ರಿಕೋದ್ಯಮಕ್ಕೆ ಅಂಕಣ ಬರೆಹಗಳನ್ನು ಬರೆಹಗಾರರಿಂದ ಒದಗಿಸಿಕೊಡುವ ಸುಮಾರು ಇನ್ನೂರಕ್ಕೂ ಹೆಚ್ಚು 'ಸಿಂಡಿಕೇಟ್'ಗಳು ಕಾರ್ಯನಿರ್ವಹಿಸುತ್ತಿವೆ.

ಕನ್ನಡದಲ್ಲಿ ಅಂಕಣ ಸಾಹಿತ್ಯ 20ನೆಯ ಶತಮಾನದ ಆರಂಭದಲ್ಲಿ ಕಾಣಿಸಿಕೊಳ್ಳತೊಡಗಿತು. ಕನ್ನಡ ಪತ್ರಿಕೋದ್ಯಮದ ಆರಂಭವನ್ನು 'ಮಂಗಳೂರ ಸಮಾಚಾರ' (1843) ಪತ್ರಿಕೆಯಿಂದ ಗುರುತಿಸಲಾಗುತ್ತಿದೆ. ಅಂಕಣ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಬಗೆಯ ಗದ್ಯವಿರುತ್ತದೆ. ಇತ್ತ ವರದಿಯೂ ಅಲ್ಲದ ಅತ್ತ ಪೂರ್ಣವಾಗಿ ಸಾಹಿತ್ಯವೂ ಅಲ್ಲದ ಆದರೆ ಸಮಕಾಲೀನ ಆಗುಹೋಗುಗಳನ್ನು ಹಿಡಿದಿಡುವ ಸೃಜನಶೀಲತೆಯ ಸೆಲೆಯುಳ್ಳ ಬರೆಹವೇ ಕನ್ನಡ ಅಂಕಣ ಸಾಹಿತ್ಯವೆನಿಸಿಕೊಂಡಿತು. ಕನ್ನಡದ ಸಾಹಿತಿ

ಪತ್ರಿಕೋದ್ಯಮಿಗಳಾದ ಡಿವಿಜಿ ಮತ್ತು ಮಾಸ್ತಿ ವೆಂಕಟೇಶಅಯ್ಯಂಗಾರ್ ಅವರ ಸಂಪಾದಕೀಯ ಬರೆಹಗಳು ಕನ್ನಡ ಅಂಕಣ ಸಾಹಿತ್ಯದ ಉಗಮಕ್ಕೆ ತೋರುದೀವಿಗೆಗಳಾದವು. ಕನ್ನಡ ಪತ್ರಿಕೋದ್ಯಮ ಬೆಳೆಯುತ್ತ ಬಂದಂತೆ ಅದರ ವ್ಯಾಪ್ತಿಯೂ ವಿಸ್ತಾರವಾಗತೊಡಗಿತು. ಸಂಪಾದಕೀಯ ಬರೆಹಗಳ ಜೊತೆಗೆ ಅಂಕಣಗಳು ಪ್ರತ್ಯೇಕವಾಗಿ ಕಾಣಿಸಿಕೊಳ್ಳಲು ಆರಂಭವಾದವು. ಸ್ವದೇಶಾಭಿಮಾನಿ, ಅಂತರಂಗ, ದೇಶಬಂಧು, ಛಾಯಾ, ಪ್ರಜಾಮತ, ಪ್ರಜಾವಾಣಿ, ಕನ್ನಡ ಪ್ರಭ, ಕರ್ಮವೀರ, ವಿಶ್ವಕರ್ನಾಟಕ, ಪ್ರಪಂಚ ಮುಂತಾದ ಪತ್ರಿಕೆಗಳು ಅಂಕಣ ಬರೆಹಗಳಿಗೆ ವೇದಿಕೆಯನ್ನು ನೀಡಿದವಲ್ಲದೆ ಅಂಕಣ ಬರೆಹಕ್ಕೆ ಒಂದು ಆಯಾಮವನ್ನೂ ಕೊಟ್ಟವು. ಸಿದ್ಧವನಹಳ್ಳಿ ಕೃಷ್ಣಶರ್ಮ, ನಿರಂಜನ, ಎಚ್ಚೆಸ್ಕೆ, ಹಾ.ಮಾ.ನಾಯಕ, ಕು.ಶಿ,ಹರಿದಾಸಭಟ್ಟ, ಪಾ.ವೆಂ.ಆಚಾರ್ಯ, ತಿ.ತಾ.ಶರ್ಮ, ಎನ್ಕೆ, ಎಂ.ವಿ.ಕಾಮತ್, ಕಲ್ಲೆ ಶಿವೋತ್ತಮರಾವ್, ಕೀರ್ತಿನಾಥ ಕುರ್ತಕೋಟಿ, ಟಿ.ಎಸ್.ರಾಮ ಚಂದ್ರರಾವ್, ಬಿ.ವಿ.ವೈಕುಂಠರಾಜು, ಪಿ.ಲಂಕೇಶ್, ವೈಎನ್ಕೆ, ಜಿ.ವೆಂಕಟಸುಬ್ಬಯ್ಯ, ಸಿ.ವಿ.ರಾಜಗೋಪಾಲ ಬಿ.ಎ.ವಿವೇಕ ರೈ, ಎಸ್.ಎನ್.ಹೆಗಡೆ, ಸೋಮಶೇಖರ ಇಮ್ರಾಪುರ, ಲಿಂಗದೇವರು ಹಳೆಮನೆ ಮೊದಲಾದವರ ಅಂಕಣಗಳು ವಿಶಿಷ್ಟವಾದವು. ಪ್ರಸ್ತುತ ಕನ್ನಡ ಪತ್ರಿಕೋದ್ಯಮದಲ್ಲಿ ಈಗ ಅಂಕಣ ಬರೆಹ ಇಲ್ಲದ ಒಂದು ಪತ್ರಿಕೆಯೂ ಇಲ್ಲ ಎನ್ನಬಹುದು.

ಅಂಕಣ ಬರೆಹದ ವೈಶಿಷ್ಟ್ಯವೆಂದರೆ ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರ ತನಕ ಎಲ್ಲರನ್ನೂ ಆಕರ್ಷಿಸುವ ಗುಣವನ್ನು ಪಡೆದುಕೊಂಡಿರುವುದೇ ಆಗಿದೆ. ಓದುಗರಲ್ಲಿ ಅಭಿರುಚಿ ಮೂಡಿಸುವ ಕಾರ್ಯವನ್ನು ಅಂಕಣ ಬರೆಹ ಮಾಡುತ್ತದೆ. ಅಂಕಣ ಬರೆಹಗಳು ಆತ್ಮಕೇಂದ್ರಿತವೆ, ಸಮಾಜ ಸಾಹಿತ್ಯ ಸಂಸ್ಕೃತಿ ಕೇಂದ್ರಿತವೆ ಎಂಬ ಪ್ರಶ್ನೆಯೂ ಇದೆ. ಸಾಮಾನ್ಯವಾಗಿ ಅಂಕಣ ಬರೆಹದಲ್ಲಿ ಲೇಖಕ ನಾನು ಎಂಬ ಪ್ರತ್ಯಯವನ್ನು ಬಳಸಿದರೂ ಅದು ಆತ್ಮಕೇಂದ್ರಿತ ಅಥವಾ ಅಹಮಿಕೆಯನ್ನು ಸೂಚಿಸುವ ಪದವಾಗಿ ಉಳಿಯುವುದಿಲ್ಲ; ಬದಲಿಗೆ ಬರೆಹಕ್ಕೆ ಸಂವಾದ ಸ್ವರೂಪವನ್ನು ನೀಡುತ್ತದೆ.

ಅಂಕಣ ಬರೆಹಕ್ಕೆ ಸಮಕಾಲೀನ ಸಮಾಜದ ಯಾವ ಮುಖವಾದರೂ ವಸ್ತುವಾಗಬಹುದೆಂದು ಪ್ರಸಿದ್ಧ ಅಂಕಣಕಾರರಾದ ಹಾ.ಮಾ. ನಾಯಕರು ಅಭಿಪ್ರಾಯಪಟ್ಟಿದ್ದಾರೆ. ಹೆಚ್ಚಿನ ಅಂಕಣ ಬರೆಹಗಳು ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ಕುರಿತಿರುತ್ತವೆ. ಸಾಹಿತ್ಯಕ ಪ್ರಸ್ತಾಪವುಳ್ಳ ಅಂಕಣಗಳು ಕನ್ನಡದಲ್ಲಿ ವಿರಳ. ವಿಜ್ಞಾನ, ಸಂಗೀತ, ಕಲೆ, ಶಿಕ್ಷಣ, ವೈದ್ಯಕೀಯ, ಕ್ರೀಡೆ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂಕಣಗಳು ದುರ್ಲಭವೇನಲ್ಲ. ಈಗೀಗ ಲಘು ಹರಟೆಗಳೂ ಅಂಕಣ ಬರೆಹದಲ್ಲಿ ಸ್ಥಾನಪಡೆದಿವೆ. ಸಾಹಿತ್ಯ ವಿಚಾರ ಪ್ರಧಾನವಾದ ಅಂಕಣಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿ, ಕೃತಿ, ಸಂಸ್ಕೃತಿ, ಶಿಕ್ಷಣ ಹಾಗೂ ಕಲೆಗಳನ್ನು ಕುರಿತ ಚಿಂತನೆ ಇರುತ್ತದೆ. ಈ ಬಗೆಯ ಕನ್ನಡ ಅಂಕಣಕಾರರಲ್ಲಿ ನಿರಂಜನರೇ ಆದ್ಯರು. 'ಉಷಾ' ಪತ್ರಿಕೆಯಲ್ಲಿ ಬರೆದ ಸರೋಜ ಸಂಚಯ ಎಂಬ ಅಂಕಣ 'ಜನಪ್ರಗತಿ' ಪತ್ರಿಕೆಯಲ್ಲಿ ಬರೆದ ಸಾಧನ ಸಂಚಯ ಎಂಬ ಅಂಕಣ, 'ಚಿತ್ರಗುಪ್ತ' ಪತ್ರಿಕೆಯ ಐದು ನಿಮಿಷ ಎಂಬ ಅಂಕಣ, 'ಪ್ರಜಾವಾಣಿ' ಪತ್ರಿಕೆಯ ಬೇವು ಬೆಲ್ಲ ಎಂಬ ಅಂಕಣ 'ಕರ್ಮವೀರ' ಪತ್ರಿಕೆಯ ರಾಜ್ಯದ ರಾಜಧಾನಿಯಿಂದ ಹಾಗೂ ಅನಂತರದಲ್ಲಿ ನನ್ನ ದಿನಚರಿಯಿಂದ ಎಂಬ ಅಂಕಣಗಳು ಪ್ರಸಿದ್ಧವಾಗಿದ್ದವು. ಜಿ.ಪಿ.ರಾಜರತ್ನಂ ಅವರ ವಿಚಾರ ಸರಣಿ ವಿ.ಎಂ.ಇನಾಂದಾರರ ಸಾಹಿತ್ಯ ವಿಹಾರ, ಕು.ಶಿ.ಹರಿದಾಸಭಟ್ಟರ ಲೋಕಾಭಿರಾಮ, ಇವು ಪ್ರಮುಖ ಸಾಹಿತ್ಯಕ ಅಂಕಣಗಳಾಗಿದ್ದವು. ಇದೇ ವರ್ಗಕ್ಕೆ ಸೇರುವ, ಆದರೆ ಹೆಚ್ಚುಕಾಲ ಬರೆಯದ ಅಂಕಣಕಾರರಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮ, ಶ್ರೀರಂಗ, ಬಸವರಾಜ ಕಟ್ಟೀಮನಿ, ತರಾಸು, ಹಿರೇಮಲ್ಲೂರು ಈಶ್ವರನ್, ಬಿ.ಭಾಸ್ಕರರಾವ್, ಪಾಟೀಲ ಪುಟ್ಟಪ್ಪ, ಎಲ್.ಎಸ್.ಶೇಷಗಿರಿರಾವ್, ನಾ.ಡಿಸೋಜ ಮುಂತಾದವರನ್ನು ಹೆಸರಿಸಬಹುದು.

ಕನ್ನಡದಲ್ಲಿ ಹೆಚ್ಚು ನಿಯತಕಾಲಿಕೆಗಳಿಗೆ ಹೆಚ್ಚುಕಾಲ ಸಾಹಿತ್ಯಕ ಅಂಕಣ ಬರೆದವರಲ್ಲಿ ಹಾ.ಮಾ.ನಾಯಕ ಮತ್ತು ಎಚ್ಚೆಸ್ಕೆ ಅವರನ್ನು ಹೆಸರಿಸಬಹುದು. ಎಚ್ಚೆಸ್ಕೆ ಅವರ ಅಂಕಣ ಸಾಹಿತ್ಯಕ್ಕಷ್ಟೇ ಸೀಮಿತವಲ್ಲ, ಆರ್ಥಿಕ ವಿಚಾರ, ವ್ಯಕ್ತಿವಿಷಯ, ರಾಜಕೀಯ ಮುಂತಾದವೂ ಅಲ್ಲಿ ಪ್ರಸ್ತಾಪಗೊಳ್ಳುತ್ತವೆ. ಎಚ್ಚೆಸ್ಕೆ ಅವರು ದೇಶಬಂಧು, ವಿಶ್ವಕರ್ನಾಟಕ, ಛಾಯಾ, ಕನ್ನಡನುಡಿ, ಪ್ರಜಾವಾಣಿ, ಸುಧಾ ಪತ್ರಿಕೆಗಳಲ್ಲಿ ಐದಾರು ದಶಕಗಳ ಕಾಲ ಅಂಕಣ ವ್ಯವಸಾಯ ಮಾಡಿದ್ದಾರೆ. ವಾರದಿಂದ ವಾರಕ್ಕೆ, ವಾರದ ವ್ಯಕ್ತಿ, ವ್ಯಕ್ತಿ, ವಿಷಯ, ಆರ್ಥಿಕ ನೋಟ, ದುರ್ಬೀನು ತರಂಗ, ಮುಂತಾದವು ಇವರ ಅಂಕಣ ಶೀರ್ಷಿಕೆಗಳು. ಇತ್ತೀಚೆಗೆ ಇಂಗ್ಲಿಷ್‌ನಲ್ಲಿಯೂ ಸ್ಟಾರ್ ಆಫ್ ಮೈಸೂರು ಪತ್ರಿಕೆಯಲ್ಲಿ ಅಂಕಣಗಳನ್ನು ಬರೆಯುತ್ತಿದ್ದಾರೆ.

ಸಾಹಿತ್ಯ ಹಾಗೂ ಸಂಸ್ಕೃತಿಯನ್ನೇ ಅಂಕಣದ ಧ್ಯೇಯ ಹಾಗೂ ಮೂಲವಸ್ತು ಎನ್ನುವಂತೆ ಪರಿಗಣಿಸಿ ಬಹುದೀರ್ಘಕಾಲ ಅಂಕಣ ಕೃಷಿಯನ್ನು ನಡೆಸಿದವರು ಹಾ.ಮಾ. ನಾಯಕರು. ಇವರು ಅಂಕಣ ಪ್ರಕಾರಕ್ಕೆ ಒಂದು ಸಿದ್ಧಿಯನ್ನು ದೊರಕಿಸಿಕೊಟ್ಟವರು. ಇವರು 1951ರಲ್ಲಿ ನಂದಿನಿ ಎಂಬ ಪತ್ರಿಕೆಗೆ ಪೂರ್ಣಿಮೆಗೆ ಪತ್ರಗಳು ಎಂಬ ಶೀರ್ಷಿಕೆಯಲ್ಲಿ ಅಂಕಣ ಬರೆಹ ಆರಂಭಿಸಿದರು. ಅನಂತರ 'ನಾ ಕಂಡ ಸಾಹಿತಿಗಳು' ಅಂಕಣ ಬರೆದರು. ಕನ್ನಡ ಪ್ರಭದಲ್ಲಿ 1967 ರಿಂದ ಸಾಹಿತ್ಯ ಸಲ್ಲಾಪ ಎಂಬ ಅಂಕಣ ಬರೆಯಲಾರಂಭಿಸಿದರು. ಅನಂತರ ಡಾ.ಹಾ.ಮಾ.ನಾಯಕ ಬರೆಯುತ್ತಾರೆ (ಪ್ರಜಾಮತ), ವರ್ತಮಾನ (ಇಂಚರ), ಸಂಪ್ರತಿ (ಪ್ರಜಾವಾಣಿ), ಸ್ವಗತ (ತರಂಗ), ತಿಂಗಳ ಪುಸ್ತಕ (ಗ್ರಂಥಲೋಕ), ಗ್ರಂಥಲೋಕದ ಸುತ್ತಮುತ್ತ ಹಾಗೂ ತಿಂಗಳ ಆಯ್ಕೆ (ಗ್ರಂಥಲೋಕ), ಪುಸ್ತಕ ಪ್ರಸಂಗ (ಸಂಕೇತ) ಪುಸ್ತಕ ಪ್ರಸ್ತಾಪ (ಕರ್ಮವೀರ), ಸಂಪ್ರತಿ (ಸುಧಾ) ಇವು ಇವರ ಮುಖ್ಯವಾದ ಸಾಹಿತ್ಯಕ ಅಂಕಣಗಳು. ಐದು ದಶಕಗಳ ಕಾಲ ನಿರಂತರವಾಗಿ ಇವರು ಒಂದಲ್ಲ ಒಂದು ಸಾಹಿತ್ಯಕ ಅಂಕಣವನ್ನು ಬರೆದಿದ್ದಾರೆ. ನಿರಂಜನರು ಆರಂಭಿಸಿದ ಸಾಹಿತ್ಯಕ ಅಂಕಣ ಬರೆಹಗಳಿಗೆ ಸಾರ್ವಕಾಲಿಕತೆಯ ರೂಪಕೊಟ್ಟು ಅಂಕಣ ಬರೆಹವನ್ನು ಕೀರ್ತಿಶಿಖರಕ್ಕೆ ಏರಿಸಿದವರು ಹಾ.ಮಾ. ನಾಯಕರು. ಇವರು ಅಂಕಣ ಬರೆಹಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಸ್ಥಾನ ಕಲ್ಪಿಸಿಕೊಟ್ಟರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಅಂಕಣಕಾರರೆಂಬ ಖ್ಯಾತಿಗೆ ಪಾತ್ರರಾದರು. ಆ ಮೂಲಕ ಅಂಕಣ ಸಾಹಿತ್ಯದ ಹಾಗೂ ಕನ್ನಡದ ಪ್ರತಿಷ್ಠೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಏರಿಸಿದರು. ಇಂದು ಕನ್ನಡ ಅಂಕಣ ಸಾಹಿತ್ಯ ವೈವಿಧ್ಯಪೂರ್ಣವಾಗಿ ಬೆಳೆದಿದೆ. ಬೆಳೆಯುತ್ತಿದೆ. ಕೆಲವು ಪತ್ರಿಕೆಗಳು ನಿತ್ಯ ಅಂಕಣವನ್ನೂ ಪ್ರಕಟಿಸುತ್ತಿವೆ. ಇದು ಅಂಕಣ ಬರೆಹದ ಜನಪ್ರಿಯತೆಗೆ ಸಾಕ್ಷಿ.

ಅಂಕಣ ಬರೆಹಗಳು ಕೃತಿರೂಪಗಳನ್ನೂ ಪಡೆದಿವೆ. ನಿರಂಜನರ ಅಂಕಣ (1972), ರಾಜಧಾನಿಯಿಂದ (1972) ಇಂಥ ಪರಂಪರೆಗೆ ಮೂಲ. ಹಾಮಾನಾ ಅವರ ಸಾಹಿತ್ಯ ಸಲ್ಲಾಪ, ಸಂಪ್ರತಿ ಮುಂತಾದ ಹತ್ತೊಂಬತ್ತು ಅಂಕಣ ಗ್ರಂಥಗಳು, ಎಚ್ಚೆಸ್ಕೆ ಅವರ ಬೆಳಕು ಚೆಲ್ಲಿದ ಬದುಕು (1998), ಮಾನ್ಯರು-ಸಾಮಾನ್ಯರು (1999), ಗಗನಚುಕ್ಕಿ-ಭರಚುಕ್ಕಿ (2000), ಹೊನ್ನಾರು ಕಟ್ಟಿದವರು ಹೊನ್ನಬಿತ್ತಿಬೆಳೆದವರು (2004); ಕು.ಶಿ.ಹರಿದಾಸಭಟ್ಟರ 'ಲೋಕಾಭಿರಾಮ' ಸಂಪುಟಗಳು ಹೆಸರಿಸಬೇಕಾದ ಅಂಕಣ ಗ್ರಂಥಗಳು.

(ಎಸ್.ಬಿಎಚ್ಎ.)

**ಕನ್ನಡದಲ್ಲಿ ಅಕ್ಷರಮಾಲಿಕೆಗಳು** : ವರ್ಣಮಾಲೆಯ ಅಕ್ಷರಗಳ ಅನುಕ್ರಮದಲ್ಲಿ ಪದ್ಯಗಳ ಆರಂಭವಿದ್ದು ಕವಿಯ ಇಷ್ಟದೇವತೆಯ ಸ್ತುತಿ ಮುಖ್ಯ ವಿಷಯವಾಗಿರುವ ಸ್ತೋತ್ರ ಸಾಹಿತ್ಯದ ಒಂದು ಬಗೆಯಾದ ಅಕ್ಷರಮಾಲಿಕೆಯ ಪ್ರಕಾರವನ್ನು ಕನ್ನಡ ಸಾಹಿತ್ಯದಲ್ಲಿ ಜೈನ, ವೀರಶೈವ ಮತ್ತು ಬ್ರಾಹ್ಮಣ ಕವಿಗಳು ಬಳಸಿದ್ದಾರೆ. ಒಂದೆರಡು ಮಾತ್ರ ಅಚ್ಚಾಗಿವೆ. ಇವುಗಳ ಪದ್ಯಗಳು ಸಾಮಾನ್ಯವಾಗಿ ಕಂದಗಳು.

ಈಗ ತಿಳಿದಿರುವ ಮಟ್ಟಿಗೆ ಪೊನ್ನನ (ಸು.950) ಜಿನಾಕ್ಷರಮಾಲೆ ಕನ್ನಡದ ಮೊದಲನೆಯ ಅಕ್ಷರಮಾಲಿಕೆ. ಇದರಲ್ಲಿ ಕರ್ತೃವಿನ ಹೆಸರನ್ನು ಕುರುಳ್ಗಳ ಸವಣ ಎಂದು ಹೇಳಿದೆ. ಇದು ಪೊನ್ನಕವಿಯ ಹೆಸರೆಂದು ತಿಳಿದಿರುವುದರಿಂದ, ಈತನೇ ಇದರ ಕರ್ತೃವೆಂದು ಭಾವಿಸಲಾಗಿದೆ. ಆದರೆ ಪೊನ್ನನ ಕರ್ತೃತ್ವವನ್ನು ವಿದ್ವಾಂಸರು ಸಂದೇಹಿಸಿರುವುದೂ ಉಂಟು. ಈ ಕೃತಿಯಲ್ಲಿ ಒಟ್ಟು 39 ಕಂದ ಪದ್ಯಗಳಿವೆ; ಜಿನಸ್ತುತಿ ಮುಖ್ಯ ವಿಷಯವಾಗಿದೆ. ಸಂಸ್ಕೃತ ಸ್ತೋತ್ರಗಳಲ್ಲಿ ಕಾಣುವಂತೆ ಅಂತಾದಿ ಕ್ರಮವನ್ನು ಅನುಸರಿಸಿದೆ. ಅಂತಾದಿ ಕ್ರಮ ಎಂದರೆ ಹಿಂದಿನ ಪದ್ಯದ ಅಂತ್ಯಾಕ್ಷರದಿಂದ ಮುಂದಿನ ಪದ್ಯ ಆರಂಭವಾಗುವುದು ಎಂದು ಅರ್ಥ. ಹೀಗೆ ಆರಂಭವಾಗುವಾಗ ಪದ್ಯಗಳಲ್ಲಿ ವರ್ಣಮಾಲೆಯ ಅನುಕ್ರಮ

ತಪ್ಪದಂತಿರಬೇಕಾದರೆ ಹಿಂದಿನ ಪದ್ಯದ ಅಂತಾಕ್ಷರ ಆ ಪದ್ಯದ ಆದ್ಯಕ್ಷರದ ಮುಂದಿನ ವರ್ಣಮಾಲಾಕ್ಷರವೇ ಆಗಿರುತ್ತದೆ. ಅಕ್ಷರಮಾಲಿಕೆಯ ರಚನಾಪದ್ಧತಿಯನ್ನೂ ಇದರಲ್ಲಿ ಒಮ್ಮೊಮ್ಮೆ ಪಾಲಿಸುವ ಅಂತಾದಿ ಕ್ರಮವನ್ನೂ ತಿಳಿಯಲು ಇಲ್ಲಿ ಎರಡು ಉದಾಹಣೆಗಳನ್ನು ಜಿನಾಕ್ಷರಮಾಲೆಯಿಂದ ಎತ್ತಿಕೊಡಲಾಗಿದೆ:

ಕಂತುಮದಹರ ದುರಿತಬಲಾಂತಕ ದಿವಿಜೇಂದ್ರವಂದ್ಯ ನಿರ್ವೃತಿಲಕ್ಷ್ಮೀ
ಕಾಂತಭವತ್ಪದಯುಗಮಂ ಚಿಂತಿಸುವಂಗಾವುದರಿದು ತುಹಿನಕರನಾಖಾ ||
ಖಚರ ಸುರೋರಗನರ ರಾತ್ರಿಚರ ಚಮೂವಂದ್ಯ ನೆಱೆಯೆ ಭಾವಿಸುವಾಗಳ್
ಸಚರಾಚರೋರ್ವ್ವಿಯೊಳ್ ನಿನ್ನ ಚರಿತ್ರಂ ಚಿತ್ರಮೆಂದು ಪೊಗಳ್ದಪುದು ಜಗಂ||

ನಾಗಚಂದ್ರ (ಸು.1130) ಒಂದು ಜಿನಾಕ್ಷರಮಾಲೆಯನ್ನು ಬರೆದಿದ್ದಂತೆ ದೇವಚಂದ್ರನ ರಾಜಾವಳೀ ಕಥೆಯಲ್ಲಿ ಹೇಳಿದೆ. ವೀರಶೈವಕವಿ ಹರಿಹರನೂ (ಸು.1200) ಒಂದು ಶಿವಾಕ್ಷರಮಾಲೆಯನ್ನು ರಚಿಸಿದ್ದನೆಂದು ಭಾವಿಸಲಾಗಿದೆ. ಆದರೆ ಇವು ದೊರೆತಿಲ್ಲ. ಅಜ್ಞಾತಕರ್ತೃಕವಾದ ಶಿವಾಕ್ಷರಮಾಲೆಯೊಂದನ್ನು (ಸು.1400) ಕವಿಚರಿತೆಕಾರರು ಗುರುತಿಸಿದ್ದಾರೆ. ಇದರಲ್ಲಿ 44 ಕಂದಗಳಿವೆಯೆಂದು ಸೂಚಿಸಿದ್ದಾರೆ. ಇವರೇ ಸೂಚಿಸಿರುವ 39 ಕಂದಗಳ ಹರ್ಯಕ್ಷರಮಾಲೆ (ಸು.1400) ಎಂಬುದೂ ಅಜ್ಞಾತ ಕರ್ತೃಕವೇ ಆಗಿದೆ. ಇದು ಹರಿಯ ಅವತಾರವಾದ ರಾಮನ ಸ್ತುತಿಯಾಗಿರುವಂತೆ ತೋರುತ್ತದೆ.

ಚಿಕುಪಾಧ್ಯಾಯನ (ಸು.1672) ಅಕ್ಷರಮಾಲಿಕಾ 104 ಸಾಂಗತ್ಯದ ಪದ್ಯಗಳಲ್ಲಿ ಕವಿಯ ಇಷ್ಟದೇವತೆ ರಂಗನಾಥಸ್ವಾಮಿಯ ಸ್ತುತಿಯನ್ನು ಒಳಗೊಂಡ ಕೃತಿ. ಇದರಲ್ಲಿ ಮೊದಲು ಚತುರ್ವಿಂಶತಿ ವಿಷ್ಣುನಾಮಗಳನ್ನು ಯಥಾಕ್ರಮದಲ್ಲಿ ಸ್ತುತಿಸಿ, ಅನಂತರದಲ್ಲಿ ಅಕಾರಾದಿಯಾಗಿಯೂ ಕಾಗುಣಿತದ ಅಕ್ಷರಕ್ರಮದಲ್ಲಿಯೂ ರಂಗನಾಥನ ಸ್ತೋತ್ರ ಮಾಡಿರುವುದು ಕಂಡುಬರುತ್ತದೆ. ಅಂತಾದಿಕ್ರಮವನ್ನು ಅನುಸರಿಸಿಲ್ಲ. ಪ್ರತಿಯಾಗಿ ಪ್ರತಿಪದ್ಯದ ಎರಡೆರಡು ಪಾದಗಳ ಆದಿಯಲ್ಲಿ ಹಾಗೂ ಪದ್ಯದ ನಡುವೆ ಅಕಾರ ಮೊದಲುಗೊಂಡು ಕೊನೆಯ ಅಕ್ಷರದವರೆಗೆ ಆಯಾ ವರ್ಣಮಾಲೆಯ ಅಕ್ಷರ ಪುನರಾವೃತ್ತಿಗೊಳ್ಳುವಂತೆಯೂ ಕ್ರಮವಾಗಿ ಕಕಾರಾದಿ ವ್ಯಂಜನಾಕ್ಷರಗಳೊಂದೊಂದರ ಕಾಗುಣಿತವೂ ಒಂದೊಂದು ಪದ್ಯದಲ್ಲಿ ಬಳಕೆಯಾಗುವಂತೆಯೂ ರಚಿಸಲಾಗಿದೆ. ಇದರಲ್ಲಿ ಭಕ್ತಿಗಿಂತ ಹೆಚ್ಚು ಶಬ್ದ ಚಮತ್ಕಾರವೇ ಎದ್ದು ತೋರುತ್ತದೆ.

ನಂಜುಂಡೇಶ್ವರನ ಸ್ತುತಿಯಿರುವ ಕರ್ತೃ ತಿಳಿಯದ ಒಂದು ಅಕ್ಷರಮಾಲಿಕೆ (ಸು.1700) ಶತಕಗಳಂತೆ ಇಷ್ಟದೈವದ ಅಂಕಿತದೊಡನೆ ಮುಗಿಯುವುದು ಗಮನಿಸತಕ್ಕದ್ದಾಗಿದೆ. ಪರಮದೇವನ (ಸು.1777) ನಾರಾಯಣಾಕ್ಷರಮಾಲಿಕೆ ದೊರೆತಿಲ್ಲ. ಮಾಣಿಕ್ಯಪುರದ ಜೈನಕವಿ ಪಾರಿಶನೆಂಬವನ ರಾಮವಿಜಯ ಎಂಬ ರಾಮಾಕ್ಷರ ಮಾಲೆಯೊಂದುಂಟು. ಇದರ ಕಾಲ ತಿಳಿಯದು. ನಡುಗನ್ನಡ ಕಾಲದ್ದಿರಬಹುದು. ಇದರಲ್ಲಿ 40 ಕಂದಪದ್ಯಗಳಿದ್ದು ಕೃತಿ ಪೊನ್ನನ ಜಿನಾಕ್ಷರಮಾಲೆಯಂತೆ ಅಂತಾದಿಕ್ರಮದಲ್ಲಿದೆ. ವಿಶೇಷವೆಂದರೆ ಇಷ್ಟದೇವತಾಸ್ತುತಿರೂಪದಲ್ಲಿರದೆ, ರಾಮಾಯಣ ಕಥೆಯನ್ನು ಸಂಕ್ಷೇಪವಾಗಿ ನಿರೂಪಿಸತಕ್ಕದ್ದಾಗಿದೆ. ಇದು ಜೈನ ಸಂಪ್ರದಾಯದ ರಾಮಾಯಣ ಕಥೆ. (ಟಿ.ವಿ.ವಿ.)

**ಕನ್ನಡದಲ್ಲಿ ಅಷ್ಟಕಗಳು :** ಸಾಮಾನ್ಯವಾಗಿ ಎಂಟು ಪದ್ಯಗಳ ಒಂದು ಗುಚ್ಛವನ್ನು ಅಷ್ಟಕವೆಂದು ಕರೆಯುವುದು ವಾಡಿಕೆ. ಈ ಪದ್ಯಗಳು ವೃತ್ತ ಷಟ್ಪದಿಗಳಾಗಿರಬಹುದು ಅಥವಾ ಮತ್ತೆ ಯಾವುದೇ ಛಂದೋರೂಪದಲ್ಲಿರಬಹುದು. ಎಲ್ಲ ಅಷ್ಟಕಗಳಲ್ಲಿಯೂ ಎಂಟು ಪದ್ಯಗಳೆ ಇರಬೇಕೆಂಬ ನಿಯಮ ನಿಯತವೇನೂ ಅಲ್ಲ. ಅನೇಕ ಅಷ್ಟಕಗಳಲ್ಲಿ ಈ ಸಂಖ್ಯೆ ಒಂಬತ್ತಾಗಬಹುದು, ಹತ್ತಾಗಬಹುದು, ಹನ್ನೊಂದಾಗಬಹುದು. ಅದು ಅನಿರ್ದಿಷ್ಟವಾಗಿ ಬೆಳೆದುಕೊಂಡು ಹೋಗಿರುವುದೂ ಉಂಟು. ಉದಾಹರಣೆಗೆ ಲಿಂಗಾಷ್ಟಕದಲ್ಲಿ ಎರಡೆರಡು ಪಂಕ್ತಿಯ ಪದ್ಯಗಳು ಐವತ್ತು ಇರುವುದು ಕಂಡುಬರುತ್ತದೆ. ಒಟ್ಟಾರೆ ನೋಡಿದಾಗ ಒಂಬತ್ತು ಪದ್ಯಗಳನ್ನೊಳಗೊಂಡಿರುವ ಅಷ್ಟಕಗಳೇ ಸಂಖ್ಯೆಯಲ್ಲಿ ಹೆಚ್ಚು ಕಂಡುಬರುತ್ತವೆ.

ಅಷ್ಟಕಗಳು ಇತರ ಪಂಚಕ, ಷಟ್ಕ, ದಶಕ, ಶತಕಗಳಂತೆ ಸ್ತೋತ್ರಸಾಹಿತ್ಯದ ಸಾಲಿನಲ್ಲಿ ಬರುತ್ತವೆ. ಇವುಗಳ ಪ್ರಧಾನ ವಿಷಯ ಭಕ್ತಿ ಮತ್ತು ವೈರಾಗ್ಯ, ಪ್ರತಿಯೊಂದು ಅಷ್ಟಕವೂ ಸಾಮಾನ್ಯವಾಗಿ ಇಷ್ಟದೈವವನ್ನು ಕುರಿತ ಸ್ತುತಿರೂಪವಾದ ಭಕ್ತಿಗೀತೆಯಾಗಿರುತ್ತವೆ. ಆ ಇಷ್ಟದೈವ ಜಿನನಾಗಬಹುದು. ಶಿವನಾಗಬಹುದು. ಹರಿಯಾಗಬಹುದು. ಅಥವಾ ಮತ್ತೆ ಯಾರಾದರೂ ಆಗಿರಬಹುದು. ಚಂದ್ರನಾಥಾಷ್ಟಕ, ಪಾರ್ಶ್ವನಾಥಾಷ್ಟಕ, ಹರ್ಯಷ್ಟಕ, ಲಿಂಗಾಷ್ಟಕ, ಶಂಕರಾಷ್ಟಕ, ವಿನಾಯಕಾಷ್ಟಕ, ಹೀಗೆ ವಿರಳವಾಗಿ ಅಷ್ಟಕಗಳಲ್ಲಿ ರಾಜನನ್ನು ಸ್ತುತಿಸಿರುವುದೂ ಉಂಟು. ದೇವರಾಜ ವಲ್ಲಭಾಷ್ಟಕ ಇದಕ್ಕೆ ನಿದರ್ಶನವಾಗಿದೆ. ವೈರಾಗ್ಯ, ತತ್ತ್ವಪ್ರತಿಪಾದನೆ ಮತ್ತು ಆತ್ಮನಿವೇದನೆಗಳೂ ಅಷ್ಟಕಗಳಲ್ಲಿ ವಿರಳವಾಗಿ ಕಂಡುಬರುತ್ತವೆ. ಪಂಚಪದಾಷ್ಟಕ ಮತ್ತು ತತ್ತ್ವಭೇದಾಷ್ಟಕಗಳು ವೈರಾಗ್ಯ ಮತ್ತು ತತ್ತ್ವಪ್ರತಿಪಾದನೆಯನ್ನು ಕುರಿತವಾಗಿವೆ. ಅಷ್ಟಕದ ಒಂದು ಸಾಮಾನ್ಯ ಲಕ್ಷಣವೆಂದರೆ ಅದರ ಪ್ರತಿಯೊಂದು ಪದ್ಯದ ಕೊನೆಯಲ್ಲೂ ಇಷ್ಟದೈವದ ಸಂಭೋದನೆಯಿರುತ್ತದೆ. ಚಂದ್ರನಾಥಾಷ್ಟಕದಲ್ಲಿ ಚಂದ್ರನಾಥಾ ಎಂಬ ಸಂಬೋಧನೆ ಪ್ರತಿಪದ್ಯದ ಕೊನೆಯಲ್ಲೂ ಬರುತ್ತದೆ. ಕೆಲವು ವೇಳೆ ಮೊದಲ ಪದ್ಯದ ಕೊನೆಯ ಸಾಲು ಪ್ರತಿಪದ್ಯದಲ್ಲಿಯೂ ಪುನರುಕ್ತವಾಗುತ್ತದೆ. ಷಡಕ್ಷರದೇವ ಸಂಸ್ಕೃತದಲ್ಲಿ ರಚಿಸಿರುವ ಸಿದ್ಧಲಿಂಗಾಷ್ಟಕದಲ್ಲಿ ಪ್ರತಿ ಪದ್ಯವೂ ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ಎಂಬುದರಿಂದ ಕೊನೆಯಾಗುತ್ತದೆ. *

**ಕನ್ನಡದಲ್ಲಿ ಕಾದಂಬರಿ ಸಾಹಿತ್ಯ :** ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಪ್ರಭಾವಶಾಲಿಯೂ ಜನಪ್ರಿಯವೂ ಆಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಹೊಸಗನ್ನಡದಲ್ಲಿ ಸಣ್ಣಕಥೆ, ಪ್ರಬಂಧ, ಭಾವಗೀತೆ, ಜೀವನಚರಿತ್ರೆ ಮೊದಲಾದ ಹೊಸ ಪ್ರಕಾರಗಳು ಹುಟ್ಟಿದಂತೆ ನಾವೆಲ್ ಎಂಬ ಪ್ರಕಾರ ಕಾದಂಬರಿ ಎಂಬ ಹೆಸರಿನಿಂದ ಪ್ರಚುರವಾಯಿತು. ಕಾದಂಬರಿ ಎಂಬ ಹೆಸರು ಹೇಗೆ ಬಂದಿತೆಂಬ ವಿಷಯ ಕುತೂಹಲ ಹುಟ್ಟಿಸುವಂಥದ್ದು. ಸಂಸ್ಕೃತದಲ್ಲಿ ಬಾಣಭಟ್ಟ ರಚಿಸಿದ ಗದ್ಯಕಾವ್ಯ ಕಾದಂಬರಿ ಹೆಸರಿನಿಂದ ಪ್ರಸಿದ್ಧವಾಗಿದೆ. ಇದೇ ಉತ್ತರ ಕರ್ನಾಟಕದಲ್ಲಿ ತುರಮರಿಯವರಿಂದ ಕಾದಂಬರೀ ಕಾವ್ಯದ ಹೊಸಗನ್ನಡ ಗದ್ಯರೂಪ ಎಂಬ ಹೆಸರಿನಿಂದ ಪ್ರಕಟವಾಗಿ (1875) ಜನರ ಮನಸ್ಸನ್ನು ಸೂರೆಗೊಂಡಿತು. ಜೆ.ವೈ.ಕೃಷ್ಣಾಚಾರ್ಯರ ಕಾದಂಬರಿ ಕನ್ನಡ ಗದ್ಯಕಥೆಯ ಸವಿ ದಕ್ಷಿಣ ಕರ್ನಾಟಕದ ಮೈಸೂರು ಸಂಸ್ಥಾನದ ಜನರಿಗೆ ಉಂಟಾಗಿತ್ತು. ಕಾದಂಬರೀ ಕಾವ್ಯದ ಸೊಗಸು ನಾಗವರ್ಮನ ಕೃತಿಯ ಮೂಲಕ ಕನ್ನಡಿಗರಿಗೆ ಹಿಂದಿನಿಂದಲೂ ಪರಿಚಯವಾಗಿತ್ತು. ಕಥೆ, ಶೈಲಿ, ನಿರೂಪಣೆ, ವರ್ಣನೆಯ ಚಮತ್ಕೃತಿ, ರಸ ಮೊದಲಾದ ದೃಷ್ಟಿಗಳಿಂದ ಕಾದಂಬರೀ ಕಾವ್ಯ ಜನಮನವನ್ನು ಸೂರೆಗೊಂಡಿತು. ಆದುದರಿಂದ ಸಂಸ್ಕೃತದ ಕಾದಂಬರೀ ಕಾವ್ಯದಂತೆ ರಮ್ಯವಾದ ಎಲ್ಲ ಕೃತಿಗಳನ್ನೂ ಕಾದಂಬರಿ ಎಂಬ ಹೆಸರಿನಿಂದಲೇ ಕರೆಯುವ ವಾಡಿಕೆ ಏರ್ಪಟ್ಟಿತು. ಹೀಗಾಗಿ ನಾವೆಲ್ ಜಾತಿಗೆ ಕಾದಂಬರಿ ಎಂದು ಕನ್ನಡಿಗರು ಕೊಟ್ಟ ಹೆಸರು ಸಾರ್ಥಕವಾಗಿ ಸ್ಥಿರವಾಗಿ ಉಳಿಯಿತು.

ಕನ್ನಡ ಸಾಹಿತ್ಯದಲ್ಲಿ ನಾಗವರ್ಮನ ಕಾದಂಬರಿ, ದುರ್ಗಸಿಂಹನ ಪಂಚತಂತ್ರ, ನೇಮಿಚಂದ್ರನ ಲೀಲಾವತಿ ಪ್ರಬಂಧ, ಚೌಂಡರಸನ ಅಭಿನವದಶಕುಮಾರಚರಿತ್ರೆ, ದೇವಕವಿಯ ಕುಸುಮಾವಳಿ ಮೊದಲಾದುವು ಕುತೂಹಲಕರವಾದ ಕಥೆಗಳನ್ನುಳ್ಳ ಪದ್ಯಕಾವ್ಯಗಳು. ಗದ್ಯಕಥೆಗಳೂ ಕನ್ನಡ ಸಾಹಿತ್ಯದಲ್ಲಿ ಇಲ್ಲದಿಲ್ಲ. ಪ್ರಾಚೀನ ಗದ್ಯಗ್ರಂಥವಾದ ವಡ್ಡಾರಾದನೆ ಹಲವು ಉತ್ತಮ ಕಥೆಗಳ ಸಂಗ್ರಹ. ಮುದ್ದಣನ ರಾಮಾಶ್ವಮೇಧ ಈಚಿನ ಗದ್ಯ ಕಥೆ. ಆದರೆ ಇವು ಯಾವುವೂ ಕಾದಂಬರಿ ಎಂಬ ಸಾಹಿತ್ಯ ಪ್ರಕಾರಕ್ಕೆ ಸೇರುವುದಿಲ್ಲ. ಏಕೆಂದರೆ ಇವುಗಳಲ್ಲಿ ಮೊದಲನೆಯದು ಕೇವಲ ಕಥೆಗಳ ಗುಂಪು. ಎರಡನೆಯದು ಕಾವ್ಯ. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ಕೆಂಪುನಾರಾಯಣನ (ಸು.1823) ಮುದ್ರಾ ಮಂಜೂಷವೆಂಬ ಗದ್ಯಕೃತಿಯಲ್ಲಿ ಕನ್ನಡ ಕಾದಂಬರಿಯ ರೂಪರೇಷೆಗಳನ್ನು ಗುರುತಿಸಬಹುದಾಗಿದೆ. ಮುದ್ದಣ 'ಗೋದಾವರಿ' ಎಂಬ ಒಂದು ಕಾದಂಬರಿಯನ್ನು ಬರೆದು ಮುಗಿಸುವಷ್ಟರಲ್ಲಿಯೇ ತೀರಿಕೊಂಡನೆಂದು ಹೇಳುತ್ತಾರೆ. ಕನ್ನಡಿಗರಿಗೆ ಕಾದಂಬರಿಗಳ ಮೊದಲ ಪರಿಚಯ ಕನ್ನಡದ ಮೂಲಕ ಆದುದು ಬಿ.ವೆಂಕಟಾಚಾರ್ಯರು ಮಾಡಿದ ಬಂಗಾಳಿ ಕಾದಂಬರಿಗಳ ಭಾಷಾಂತರದಿಂದ. ಬಂಕಿಮಚಂದ್ರರ ಕಾದಂಬರಿ ದುರ್ಗೇಶನಂದಿನಿಯನ್ನು ಬಂಗಾಳಿ ಭಾಷೆಯಿಂದ ಕನ್ನಡಕ್ಕೆ 1865ರಲ್ಲಿ ಭಾಷಾಂತರಿಸಲಾಯಿತು. ಆಚಾರ್ಯರು ಮೊದಲು ಭಾಷಾಂತರ ಮಾಡಿದ ಕೃತಿ ಭ್ರಾಂತಿವಿಲಾಸ. ಇದೇ ಕನ್ನಡದಲ್ಲಿ ಕಾದಂಬರಿಗಳ ಆರಂಭಕ್ಕೆ ನಾಂದಿ ಎಂದು ಹೇಳಬಹುದು. ಅಂದಿನಿಂದ ಇಂದಿನ ವರೆಗಿನ

ಕಾದಂಬರಿಗಳ ಬೆಳೆವಣಿಗೆ ಮತ್ತು ವಿಲಾಸಗಳನ್ನು ಕಾಲಮಾನ ರೀತಿಯಿಂದ ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಆರಂಭ ಕಾಲ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಿಂದ ಇಪ್ಪತ್ತನೆಯ ಶತಮಾನದ ಕಾಲು ಶತಕದವರೆಗೆ. ಎರಡನೆಯದು ನಿರ್ಮಾಣಶೀಲ ಯುಗ 1925 ಅಥವಾ 30ರಿಂದ ಸ್ವಾತಂತ್ರ್ಯೋದಯದವರೆಗೆ. ಮೂರನೆಯದು ಸ್ವಾತಂತ್ರ್ಯೋದಯದ ಯುಗ: ಸ್ವಾತಂತ್ರ್ಯೋದಯದ ಕಾಲದಿಂದ ಇಲ್ಲಿಯವರೆಗೆ.

ಮೈಲಾಪುರದಲ್ಲಿ ಹೈಕೋರ್ಟಿನ ವಕೀಲರಾಗಿದ್ದ ರೆಂಟ್ಲ ವೆಂಕಟಸುಬ್ಬರಾವ್ ಅವರಿಂದ ರಚಿತವಾಗಿ ಮದರಾಸಿನಲ್ಲಿ ಪ್ರಕಟವಾದ ಕೇಸರಿವಿಲಾಸ (1895) ಕಾದಂಬರಿಯು ವಿಶಿಷ್ಟ ಲಕ್ಷಣಗಳನ್ನುಳ್ಳ ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿ ಎಂಬುದು ಗೋವಿಂದ ಪೈ ಅವರ ಅಭಿಪ್ರಾಯ. ದಕ್ಷಿಣ ಕನ್ನಡ ಜಿಲ್ಲೆಯ ಗುಲ್ವಾಡಿ ವೆಂಕಟರಾಯರು ಬರೆದ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ (1899) ಎರಡನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ. 250 ಪುಟಗಳ ಈ ಕಾದಂಬರಿಯಲ್ಲಿ ಅಂದಿನ ಸಾರಸ್ವತ ಸಮಾಜದ ವಾಸ್ತವಿಕ ಚಿತ್ರವಿದೆ. ಭಾಗೀರಥಿ, ಸೀಮಂತಿನಿ ಇವು ಇವರ ಇನ್ನೆರಡು ಕಾದಂಬರಿಗಳು. ಗಳಗನಾಥರ ಹೆಸರು ಕಾದಂಬರಿ ಸಾಹಿತ್ಯದ ಬೆಳೆವಣಿಗೆಯಲ್ಲಿ ಗುರುತಿಸುವಂಥದು. ಪದ್ಮನಯನೆ ಇವರ ಪ್ರಥಮ ಕಾಲ್ಪನಿಕ ಕಾದಂಬರಿ (1898). ಮಂಗಳೂರಿನ ಬೋಳಾರ ಬಾಬುರಾಯರ ಸ್ವತಂತ್ರ ಕಾದಂಬರಿ ವಾಗ್ದೇವಿ (1905). ಇದು ಸುಮಾರು 308 ಪುಟಗಳಿದ್ದು ಈ ಕಾದಂಬರಿಯ ವಸ್ತುವಿಗೆ ಆಗಿನ ಕಾಲದಲ್ಲಿ ನಡೆದ ಕೆಲವೊಂದು ಘಟನೆಗಳೇ ಆಧಾರ ಎಂಬುದಾಗಿ ತಿಳಿದವರು ಹೇಳುತ್ತಾರೆ. ಅಂದಿನ ಸಾಮಾಜಿಕ ಜೀವನದಲ್ಲಿ ಮಠಗಳ ಪಾತ್ರ, ನ್ಯಾಯ ವಿತರಣೆಯ ರೀತಿನೀತಿ, ಅಧಿಕಾರಿಗಳು ಸಾಮಾಜಿಕ ಜೀವನದಲ್ಲಿ ನಡೆಸುತ್ತಿದ್ದ ಕೃತ್ರಿಮ ಕೈವಾಡ ಇವೇ ಮೊದಲಾದ ವಾಸ್ತವ ಚಿತ್ರಗಳು ಈ ಕಾದಂಬರಿಯಲ್ಲಿ ಮೂಡಿಬಂದಿವೆ. ವಾಸ್ತವಿಕ ಘಟನೆಗಳ ಆಧಾರದ ಮೇಲೆ ಅಂದಿನ ಸಮಾಜದ ಕೆಲವೊಂದು ಲೋಪದೋಷಗಳನ್ನು ಎತ್ತಿ ತೋರಿಸುವ ಇಂಥ ಒಂದು ಕಾದಂಬರಿಯನ್ನು ರಚಿಸಿದುದು ಅಂದಿನ ಕಾಲಕ್ಕೆ ಒಂದು ದಿಟ್ಟತನವೆಂದೇ ಹೇಳಬಹುದು. 1906ರಲ್ಲಿ ಅಣ್ಣಾಜಿರಾವ್ ಗುಲ್ವಾಡಿ ಎಂಬುವರು ರಚಿಸಿದ 'ರೋಹಿಣಿ ಇಲ್ಲವೇ ಸಾರಸ್ವತ ಮಂಡಳ '232 ಪುಟಗಳನ್ನೊಳಗೊಂಡ ಒಂದು ಸಾಮಾಜಿಕ ಕಾದಂಬರಿ. ಉತ್ತರ ಕರ್ನಾಟಕದ ಕೆರೂರ ವಾಸುದೇವಚಾರ್ಯರು ರಚಿಸಿದ (1908) ಇಂದಿರೆ ಎಂಬ ಕಾದಂಬರಿ ಸ್ವತಂತ್ರ ಕಾದಂಬರಿಗಳ ಮಾಲೆಯಲ್ಲಿ ಒಂದು ಗಮನಾರ್ಹ ಕೃತಿ. ಉತ್ತರ ಕರ್ನಾಟಕ ಭಾಷೆಯನ್ನು ಕಾದಂಬರಿಯ ಗದ್ಯಕ್ಕೆ ಅಳವಡಿಕೊಳ್ಳಲು ಕಾದಂಬರಿಕಾರ ಮಾಡಿರುವ ಪ್ರಯತ್ನ ಇಲ್ಲಿ ಸ್ಮರಿಸುವಂಥದ್ದು. ಅಂದು ವಿಶೇಷವಾಗಿ ಚರ್ಚೆಗೆ ಒಳಗಾಗಿದ್ದ ವಿಧವಾವಿವಾಹ, ಸ್ತ್ರೀ ಶಿಕ್ಷಣ ಮತ್ತು ಸ್ತ್ರೀ ಸ್ವಾತಂತ್ರ್ಯದಂಥ ವಿಷಯಗಳು ಈ ಕಾದಂಬರಿಯಲ್ಲಿ ಬರುತ್ತವೆ. ಇಂದಿರೆಯನ್ನು ಆದರ್ಶ ಮಹಿಳೆಯನ್ನಾಗಿ ಚಿತ್ರಿಸಿ ಉತ್ತಮ ಸ್ತ್ರೀ ಶಿಕ್ಷಣದ ಬಗೆಗೆ ಒಳ್ಳೆಯ ನಿದರ್ಶನವನ್ನು ಒದಗಿಸಲಾಗಿದೆ. ಇಲ್ಲಿ ಗಮನಾರ್ಹವಾದ ಮತ್ತೊಂದು ಸಂಗತಿ ಕಾದಂಬರಿಯ ಸೌಂದರ್ಯವನ್ನು ಹೆಚ್ಚಿಸಲು ಉಪಯೋಗಿಸಿರುವ ಮೋಹಕ ವರ್ಣನೆಗಳು. ಔರಂಗಜೇಬ ಎಂಬುದು ಇತಿಹಾಸವನ್ನು ವಸ್ತುವಾಗುಳ್ಳ ಇವರ ಇನ್ನೊಂದು ಕಾದಂಬರಿ.

ಕಾದಂಬರಿಗಳ ಆರಂಭಕಾಲದ ಮೊದಲಿನಲ್ಲಿ ಕೃತಿಗಳನ್ನು ರಚಿಸಿದ ಕೆಲವರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ರಚಿಸಿದ ಚೋರಗ್ರಹಣತಂತ್ರ ಕನ್ನಡದ ಪ್ರಥಮ ಪತ್ತೇದಾರಿ ಕಾದಂಬರಿ. ಎಂ.ಎಲ್.ಶ್ರೀಕಂಠೇಶಗೌಡ ಅವರ ಕನ್ಯಾವಿತಂತು 1895ರಲ್ಲಿ ಪ್ರಕಟವಾಯಿತು. ತೆಲುಗಿನಲ್ಲಿ ವಿರೇಶಲಿಂಗ ಪಂತುಲು ಅವರು ರಚಿಸಿದ ನೂತನ ರೀತಿಯ ಕಲ್ಪನಾ ಕಥೆಗಳಾದ ರಾಜಶೇಖರ ಚರಿತ್ರೆ, ಸತ್ಯವತೀ ಚರಿತ್ರೆ ಮತ್ತು ಸತ್ಯರಾಜಾ, ಪೂರ್ವದೇಶದ ಯಾತ್ರೆಗಳು ಎಂಬ ಮೂರು ಕೃತಿಗಳನ್ನು ಬೆನಗಲ್ ರಾಮರಾಯರು 1899ರ ಹೊತ್ತಿಗೆ ಕನ್ನಡಕ್ಕೆ ಭಾಷಾಂತರಿಸಿದ್ದರು. ಗೋಡೆ ಜೀವಣರಾಯರು ಜಾನ್‌ಸನ್ನನ ಕಾದಂಬರಿ ರಾಸೆಲಾಸನ್ನು ಕನ್ನಡಿಸಿದರು.

ಅಂದಿಗೆ ಕಾದಂಬರಿಗಳನ್ನು ಓದಬೇಕೆಂದು ಹಾತೊರೆಯುವ ಪ್ರವೃತ್ತಿಯುಂಟುಮಾಡಿ ಕನ್ನಡ ಜನತೆಯ ಹಂಬಲವನ್ನು ತುಂಬಿಕೊಟ್ಟವರು ವೆಂಕಟಾಚಾರ್ಯರು. ಅಂದು ಬಂಗಾಳಿ ಭಾಷೆಯಲ್ಲಿ ಕೃತಿರಚನೆ ಮಾಡಿ ನವಚೇತನವನ್ನು ನಾಡಿನ ಜೀವನದಲ್ಲಿ ತುಂಬಿದ್ದ ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮಚಂದ್ರ, ರಮೇಶಚಂದ್ರದತ್ತ- ಇವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿಕೊಟ್ಟ ಕೀರ್ತಿ ಆಚಾರ್ಯರದು. ಇವರ ಕೃತಿರಚನೆ ಸುಮಾರು ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಅವ್ಯಾಹತವಾಗಿ ನಡೆಯಿತು. ದೇಶಾಭಿಮಾನ, ಸಾಹಸ, ಭಕ್ತಿ ಮೊದಲಾದ ಗುಣಗಳಿಂದ ಮೆರೆಯುವ ಸ್ವತಂತ್ರ, ಐತಿಹಾಸಿಕ ಹಾಗೂ ಸಾಮಾಜಿಕ ಕಾದಂಬರಿಗಳನ್ನು ಬಂಗಾಳಿಯಲ್ಲಿ ರಚಿಸಿದ ಕೀರ್ತಿ ಬಂಕಿಮಚಂದ್ರರದು. ಆನಂದಮಠ, ದೇವಿಚೌಧುರಾಣಿ, ವಿಷವೃಕ್ಷ ಮೊದಲಾದ ಕಾದಂಬರಿಗಳನ್ನು ಇಂದಿಗೂ ಜನ ಓದಿ ಆನಂದಿಸಬಲ್ಲವರಾಗಿದ್ದಾರೆ. ಆ ಕಾಲಕ್ಕೆ ಇಂಗ್ಲಿಷಿನಲ್ಲಿ ಸರ್ ವಾಲ್ಟರ್ ಸ್ಕಾಟ್ ರಚಿಸಿದ ಐತಿಹಾಸಿಕ ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿದ್ದುವು. ಬಂಕಿಮಚಂದ್ರರು ಸರ್ ವಾಲ್ಟರ್ ಸ್ಕಾಟ್ ಮತ್ತು ಸರ್ ವಿಲ್ಕಿ ಕಾಲಿನ್ಸರ ಕಾದಂಬರಿಗಳಿಂದ ಸ್ಫೂರ್ತಿ ಪಡೆದು ಭಾರತ ದೇಶದ ಚಾರಿತ್ರಿಕ ಘಟನೆಗಳ ಆಧಾರದ ಮೇಲೆ ಕಾದಂಬರಿಗಳನ್ನು ಬರೆದರು. ಅವರ ಸಾಮಾಜಿಕ ಕಾದಂಬರಿಗಳಲ್ಲಿ ವಿಧವಾ ವಿವಾಹ, ಸ್ತ್ರೀ ಶಿಕ್ಷಣ ಮೊದಲಾದ ಅಂದಿನ ಪ್ರಮುಖ ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣವಿದೆ. ಸಜೀವ ಕಲ್ಪನೆ, ನಾಟಕೀಯ ಶಕ್ತಿ, ಪರಿಶುದ್ಧ ಧ್ಯೇಯ- ಇವು ಬಂಕಿಮಚಂದ್ರರ ಕಾದಂಬರಿಗಳ ವೈಶಿಷ್ಟ್ಯ. ಸಂಸ್ಕೃತ ಭೂಯಿಷ್ಠವಾದ ಶುದ್ಧಗ್ರಾಂಥಿಕ ಶೈಲಿ ಬಂಗಾಳಿ ಕಾದಂಬರಿಗಳದು. ಇದೇ ಶೈಲಿ ವೆಂಕಟಾಚಾರ್ಯರ ಅನುವಾದ ಕೃತಿಗಳಲ್ಲಿಯೂ ಹಾಸು ಹೊಕ್ಕಾಯಿತು.

ಗಳಗನಾಥರು ವೆಂಕಟಾಚಾರ್ಯರಂತೆಯೇ ಪ್ರಮುಖ ಕಾದಂಬರಿಕಾರರು. ಇವರು ಮರಾಠಿಯಿಂದ ಕನ್ನಡಕ್ಕೆ ಅನುವಾದ ಮಾಡಿರುವಂತೆ ಸ್ವಂತ ಕೃತಿಗಳನ್ನೂ ರಚಿಸಿದ್ದಾರೆ. ಅಂದಿಗೆ ಮರಾಠಿ ಕಾದಂಬರಿಕಾರರಲ್ಲಿ ಸತ್ವಶಾಲಿ ಕೃತಿಕಾರರಾಗಿದ್ದ ಹರಿನಾರಾಯಣ ಆಪ್ಟೆಯವರ ಗಢ ಆಲಾಪಣ ಸಿಂಹಗೇಲಾ ಎಂಬ ಕಾದಂಬರಿಯನ್ನು ಇವರು ಕಮಲಕುಮಾರಿ ಎಂಬ ಹೆಸರಿನಿಂದ ಕನ್ನಡಿಸಿದ್ದಾರೆ. ಉಳಿದ ಹಲವು ಕಾದಂಬರಿಗಳಿಗೆ ಮರಾಠಿಯಿಂದ ವಸ್ತುವನ್ನು ಒದಗಿಸಿಕೊಂಡು ತಮಗೆ ಸರಿಕಂಡ ಹಾಗೆ ತಿದ್ದಿ, ವಿಸ್ತರಿಸಿ, ಮೊಟಕುಮಾಡಿ ತಮ್ಮದೇ ಆದ ಒಂದು ರೀತಿಯಲ್ಲಿ ಕನ್ನಡಕ್ಕೆ ನೀಡಿದ್ದಾರೆ. ಸದ್ಬೋಧ ಚಂದ್ರಿಕೆ ಮತ್ತು ಸದ್ಗುರು ಎಂಬ ಪತ್ರಿಕೆಗಳಲ್ಲಿ ಭಾಗಭಾಗವಾಗಿ ಇವರ ಕಾದಂಬರಿಗಳು ಸಹೃದಯರಿಗೆ ದೊರಕಿದವು. ಮಾಧವಕರುಣಾವಿಲಾಸ (1923) ವಿಜಯನಗರದ ಇತಿಹಾಸವನ್ನು ವಸ್ತುವಾಗುಳ್ಳ ಗಳಗನಾಥರ ಸ್ವತಂತ್ರ ಮೇರುಕೃತಿ. ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ವಿಷಯ ಕುಮುದಿನಿಯಲ್ಲಿಯೂ ಬರುತ್ತದೆ. 'ಕನ್ನಡಿಗರ ಕರ್ಮಕಥೆ' ತಾಳೀ ಕೋಟೆಯ ಕಾಳಗದ ವಿಷಯವನ್ನೊಳಗೊಂಡ ಐತಿಹಾಸಿಕ ಕಾದಂಬರಿ. ಇವರ ಉಳಿದ ಬಹುತೇಕ ಕಾದಂಬರಿಗಳು ಮರಾಠರ ಮತ್ತು ರಜಪೂತರ ಚರಿತ್ರೆಗಳಿಗೆ ಸಂಬಂಧಪಟ್ಟುವು. ಈಶ್ವರೀಸೂತ್ರ, ಧಾರ್ಮಿಕ ತೇಜ, ಕ್ಷಾತ್ರತೇಜ, ಶಿವಪ್ರಭುವಿನ ಪುಣ್ಯ- ಇವೇ ಮೊದಲಾದ 22 ಕೃತಿಗಳನ್ನು ಇವರು ರಚಿಸಿದ್ದಾರೆ. ಇವರ ರಚನೆಯಲ್ಲಿ ಹೆಚ್ಚಿನವು ಐತಿಹಾಸಿಕ ಕಾದಂಬರಿಗಳು. ಇವರ ಕಾದಂಬರಿಗಳು ಕ್ಷಾತ್ರತೇಜಸ್ಸು, ಧಾರ್ಮಿಕ ಪ್ರಭಾವ ಮತ್ತು ದೇಶಪ್ರೇಮದಿಂದ ತುಂಬಿ ತುಳುಕುತ್ತಿವೆ. ಉತ್ತರ ಕರ್ನಾಟಕದ ಆಡುಭಾಷೆಯನ್ನು ಯಶಸ್ವಿಯಾಗಿ ಬಳಸಿರುವುದು ಇವರ ಕೃತಿಗಳಲ್ಲಿ ಕಾಣಬರುತ್ತದೆ. ಆದರೂ ಗಳಗನಾಥರ ಭಾಷೆಯು ಬಳಕೆ ಏಮ್ಮುಖ ವಾದುದೇ ಹೊರತು ವೈವಿಧ್ಯಮಯವಲ್ಲ.

ವೆಂಕಟಾಚಾರ್ಯರ ಮತ್ತು ಗಳಗನಾಥರ ಕಾದಂಬರಿಗಳು ಕೇವಲ ಓದುಗರ ಮೇಲೆಯೇ ಅಲ್ಲದೆ ಬರೆಯುವವರ ಮೇಲೆಯೂ ಸಾಕಷ್ಟು ಪ್ರಭಾವವನ್ನು ಬೀರಿದುವು. ವೀರಶೌರ್ಯೋದಾರ್ಯಾದಿ ಗುಣಗಳುಳ್ಳ ನಾಯಕ ನಾಯಕಿಯರಿಂದ ಕೂಡಿದ ಅದ್ಭುತ, ರಮ್ಯ, ಐತಿಹಾಸಿಕ ಸಾಮಾಜಿಕ ಕಾದಂಬರಿಗಳ ಪ್ರವಾಹ ಇಪ್ಪತ್ತನೆಯ ಶತಮಾನದ ಮೊದಲ ಮೂರು ದಶಕಗಳವರೆಗೆ ವ್ಯಾಪಕವಾಗಿಯೂ ಅನಂತರ ಕಿಂಚಿತ್ತಾಗಿಯೂ ಹರಿಯಿತು. ಹಲವಾರು ಕಾದಂಬರಿಗಳನ್ನು ರಚಿಸಿದ ಭಿ.ಪ.ಕಾಳೆ ಮತ್ತು ನಾಗೇಶ ಇವರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನಾಗೇಶರ ಈಶಸಂಕಲ್ಪ ಮತ್ತು ವಿಚ್ಚಮನಾಯಕ ಕಾದಂಬರಿಗಳು ಕನ್ನಡನಾಡಿನ ಚರಿತ್ರೆಯ ಮೇಲೆ ಆಧಾರಿತವಾದವು. ಕನ್ನಡ ಗರಡಿಯಾಳು ಎಂಬುವರ ಕರ್ಮಫಲ ಅಥವಾ ಪ್ರೇಮಫಲ, ಬಿ.ಕೃಷ್ಣಪ್ಪನವರ ರಾಯಚೂರು ವಿಜಯ, ಡಿ.ಶ್ರೀನಿವಾಸ ಶರ್ಮರ ನೀಲವಸನಾ ಸುಂದರಿ ಇವು ಈ ಕಾಲದಲ್ಲಿ ರಚಿತವಾದ ಕೆಲವು ಕಾದಂಬರಿಗಳು.

ಈ ಕಾಲದಲ್ಲೇ ಪತ್ತೇದಾರಿ ಕಾದಂಬರಿಗಳೂ ಹುಟ್ಟಿದುವು. ಬಾಲ ಸರಸ್ವತಿ, ಭಿ.ಪ.ಕಾಳೆ, ನಾಗೇಶ ಮೊದಲಾದವರು ಪತ್ತೇದಾರಿ ಕಾದಂಬರಿಗಳನ್ನು ಕೊಟ್ಟವರಲ್ಲಿ ಮುಖ್ಯರು. ಬಾಲಸರಸ್ವತಿಯವರು ಕೆಲವು ಬಂಗಾಳಿ ಕಾದಂಬರಿಗಳನ್ನು ಕನ್ನಡಿಸಿದರು. ಪಾಂಚಕೊಡಿ ಡೇ ಅವರ ಹತ್ಯಾಕಾರಿ ಎಂಬ ಬಂಗಾಳಿ ಕಾದಂಬರಿಯ ಕಥೆಯನ್ನು ಅವಲಂಬಿಸಿ ಕುಮುದಿನಿ ರಚಿತವಾಯಿತು. (1911) ಚಿತ್ರಗುಪ್ತನ ದಫ್ತರಗಳು, ಗುರುತು ಕಂಡ ಕಳ್ಳ, ನರಬಲಿ- ಇವು ಬಾಲಸರಸ್ವತಿಯವರ ಪತ್ತೇದಾರಿ ಕಾದಂಬರಿಗಳು, ಕಂಠಾಭರಣ, ರಾಣೀ ಚೌಧುರಾಣಿ, ಕುಮಾರಕಂಠೀರವ ಮೊದಲಾದ ಸಾಮಾಜಿಕ ಹಾಗೂ ಸಾಂಸಾರಿಕ ಕಾದಂಬರಿಗಳನ್ನೂ ಇವರು ಬರೆದಿದ್ದಾರೆ.

ಕನ್ನಡ ಕಾದಂಬರಿಗಳ ಆರಂಭಕಾಲದಲ್ಲಿ ಸ್ತ್ರೀಯರೂ ಕೃತಿರಚನೆ ಮಾಡಿದ್ದಾರೆ. ಎಂಬುದಕ್ಕೆ ಸತೀಹಿತೈಷಿಣೀ ಗ್ರಂಥಮಾಲೆಯ ತಿರುಮಲಾಂಬಾ ನಿದರ್ಶನವಾಗಿದ್ದಾರೆ. ವಿರಾಗಿಣಿ, ವಿದ್ಯುಲ್ಲತಾ, ನಭ, ಪೂರ್ಣಕಲಾ- ಇವೇ ಮೊದಲಾದುವು ಇವರ ಕೃತಿಗಳು. ವಿಶೇಷವಾಗಿ ಸ್ತ್ರೀಯರಿಗೂ ಅವರ ಸಾಮಾಜಿಕ ಸ್ಥಾನಮಾನಗಳಿಗೂ ಸಂಬಂಧಿಸಿದ ವಿಷಯ ಇವರ ಕೃತಿಗಳ ವೈಶಿಷ್ಟ್ಯ. ಸಾಹಿತ್ಯಗುಣ ಅಷ್ಟೊಂದಾಗಿ ಇಂಥ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. ಮಾಸ್ತಿಯವರು ಇವರ ಕೃತಿಗಳನ್ನು ನಾಟಕರೂಪದ ನಾವೆಲುಗಳೆಂದು ಕರೆದಿದ್ದಾರೆ.

ಇದೇ ಕಾಲದಲ್ಲಿ ಎ.ಎ.ಶ್ರೀನಿವಾಸಾಚಾರ್ಯ, ಉಲ್ಲಾಳ ಮಂಗೇಶರಾಯರು ಮುಂತಾದವರು ಇಂಗ್ಲಿಷಿನಿಂದ ಹಲವಾರು ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು.

ಕಾದಂಬರಿಗಳ ಬೆಳವಣಿಗೆಯಲ್ಲಿ ಕ್ರಮೇಣ ನವೀನತೆ ಮತ್ತು ಆಧುನಿಕತೆಗಳು ತಲೆಹಾಕಲಾರಂಭಿಸಿದುವು. ಅಲ್ಲಲ್ಲಿ ಒಂದೊಂದು ಕೃತಿ ವಾಸ್ತವಿಕತೆಯ ಕಡೆಗೆ ತಿರುಗುತ್ತಿದ್ದುದು ಕಂಡುಬರುತ್ತಿತ್ತು. ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ (1914) ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದುದೆಂದು ಹೇಳಲಾದ ಹಲಕೆಲವು ಸಂಗತಿಗಳ ಆಧಾರದಿಂದ ರಚಿತವಾದೊಂದು ಗಮನಾರ್ಹ ಕೃತಿ. ಇವರು ಕಥೆ ಕಟ್ಟುವ ವೈಖರಿ, ಸನ್ನಿವೇಶಗಳನ್ನು ಸೃಷ್ಟಿಸುವ ಚಮತ್ಕಾರ, ಸ್ಥಳೀಯ ವಾತಾವರಣವನ್ನು ತರುವಲ್ಲಿ ಬಳಸಿರುವ ಭಾಷೆಯ ಪ್ರಾದೇಶಿಕತೆ, ಅಂದಿನ ಸಾಮಾಜಿಕ ಹಾಗೂ ರಾಜಕೀಯ ವಾಸನೆಯನ್ನು ಸಹಜವಾಗಿಸುವಂತೆ ಬಳಸುವ ಶಬ್ದಭಂಡಾರ - ಇವು ಎಂಥವರನ್ನೂ ಬೆರಗುಗೊಳಿಸುತ್ತವೆ. ಅಂದಿನ ಕಾಲದ ಜನಜೀವನಕ್ಕೆ ಇವರ ಕಾದಂಬರಿಗಳು ನಿಕಟವಾದವು. ಮುಸುಕು ತೆಗೆಯೆ ಮಾಯಾಂಗನೆ ಇವರ ಇನ್ನೊಂದು ಕೃತಿ. ಕಾದಂಬರಿಯ ಕ್ಷೇತ್ರದಲ್ಲಿ ಪುಟ್ಟಣ್ಣನವರದು ಮರೆಯಲಾಗದ ಹೆಸರು.

ಇಪ್ಪತ್ತನೆಯ ಶತಮಾನದ ಮೂರನೆಯ ದಶಕದಿಂದ ಮುಂದಕ್ಕೆ ಆಧುನಿಕ ಪ್ರವೃತ್ತಿಯ ಕಾದಂಬರಿಗಳ ನಿರ್ಮಾಣವನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ವಸ್ತು, ನಿರೂಪಣೆ, ಶೈಲಿ, ತಂತ್ರಗಳಲ್ಲಿ ಆಧುನಿಕತೆ ಈ ಕಾದಂಬರಿಗಳ ನಿರ್ಮಾಣದ ಮುಖ್ಯತತ್ತ್ವಗಳು. ಆದುದರಿಂದ ಈ ಕಾಲಕ್ಕೆ ನಿರ್ಮಾಣಶೀಲಯುಗವೆಂದು ಹೆಸರಿಡಲಾಗಿದೆ. ಆನಂದಕಂದರ (ಬೆಟಗೇರಿ ಕೃಷ್ಣಶರ್ಮ) ಸುದರ್ಶನ (1933) ಹಾಗೂ ಮಗಳ ಮದುವೆ; ರಂ.ಶ್ರೀ. ಮುಗಳಿಯವರ ಬಾಳುರಿ, ಅನ್ನ, ಕಾರಣ ಪುರುಷ; ಜಡಭರತರ ಧರ್ಮಸೆರೆ ಮುಂತಾದ ಕಾದಂಬರಿಗಳು ಆದರ್ಶವಾದವನ್ನು ದೃಷ್ಟಿಯಲ್ಲಿಟ್ಟುಕೊಂಡು ಸೃಷ್ಟಿಯಾದವು. ಕಾರಂತರ ಚೋಮನ ದುಡಿ 1933ರಲ್ಲಿ ಪ್ರಕಟವಾಯಿತು. ಅ.ನ.ಕೃ. ಅವರ ಉದಯರಾಗ ಮತ್ತು ಜೀವನಯಾತ್ರೆ. ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ 1934ರಲ್ಲಿ ಬೆಳಕುಕಂಡವು. 1935ನೆಯ ಸಂವತ್ಸರದಲ್ಲಿ ಆನಂದಕಂದರ ರಾಜಯೋಗಿ ಮತ್ತು ಅಶಾಂತಿಪರ್ವಗಳೆಂಬ ಎರಡು ಐತಿಹಾಸಿಕ ಕಾದಂಬರಿಗಳೂ ವಿನಾಯಕರ ಇಜ್ಜೋಡು, ಅ.ನ.ಕೃ. ಅವರ ಸಂಧ್ಯಾರಾಗ ಮತ್ತು ಜಡಭರತರ ಧರ್ಮಸೆರೆ ಕನ್ನಡಿಗರ ಕೈಸೇರಿದುವು. 1936ರಲ್ಲಿ ಕುವೆಂಪು ಅವರ ಬೃಹತ್ ಕಾದಂಬರಿ ಕಾನೂರು ಸುಬ್ಬಮ್ಮ ಹೆಗ್ಗಡತಿ ಹೊರಬಂತು.

ನಿರ್ಮಾಣಶೀಲಯುಗದ ಪ್ರಮುಖ ಕಾದಂಬರಿಕಾರರೆಂದರೆ ಕುವೆಂಪು, ಶಿವರಾಮ ಕಾರಂತ, ಅ.ನ.ಕೃ. ಆನಂದಕಂದ, ರಂ.ಶ್ರೀ.ಮುಗಳಿ, ಕಡೆಂಗೋಡ್ಲು ಶಂಕರ ಭಟ್ಟ, ಶ್ರೀರಂಗ, ಮಿರ್ಜಿ ಅಣ್ಣಾರಾಯ, ದೇವುಡು ಮೊದಲಾದವರು. ಇವರೆಲ್ಲ ಆಧುನಿಕ ವಿದ್ಯಾಭ್ಯಾಸವನ್ನು ಪಡೆದವರೂ ವಿಚಾರಶೀಲರೂ ಆಗಿದ್ದಾರೆ. ಶ್ರೀನಿವಾಸರ ಸುಬ್ಬಣ್ಣವನ್ನು ಕಾದಂಬರಿಯೆಂದು ಹೇಳಲಾಗದು. ಆದರೆ ಇದು ಕಾದಂಬರಿಯ ಘನತೆಯುಳ್ಳ ನೀಳ್ಗತೆಯಾಗಿ ವಸ್ತು, ಶೈಲಿಗಳ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಕೃತಿಯೆಂಬುದರಲ್ಲಿ ಸಂಶಯವಿಲ್ಲ. ಇದರಲ್ಲಿ ಸಂಗೀತಗಾರನೊಬ್ಬನ ಜೀವನಚಿತ್ರಣ, ಮಾಸ್ತಿಯವರ ಮನೋಧರ್ಮ, ಬದುಕಿನ ಬಗ್ಗೆ ಇವರಿಗಿರುವ ನೈಜ ತಿಳುವಳಿಕೆ ಇವುಗಳಿಂದ ಮೈತುಂಬಿಕೊಂಡಿದೆ. ಶಿವರಾಮ ಕಾರಂತರು ಮೂವತ್ತನಾಲ್ಕು ಕಾದಂಬರಿಗಳನ್ನು (1974) ರಚಿಸಿದ್ದಾರೆ. ಇವುಗಳಲ್ಲಿ ಸ್ವಾತಂತ್ರ್ಯಾನಂತರ ಬರೆದ ಕಾದಂಬರಿಗಳೂ ಸೇರಿವೆ. ಕಾರಂತರ ಮೊದಲ ಕಾದಂಬರಿ ಚೋಮನ ದುಡಿ ವಸ್ತು ಶೈಲಿ ಒಟ್ಟಿನ ಪರಿಣಾಮಗಳ ದೃಷ್ಟಿಯಿಂದ ನಿಜವಾಗಿಯೂ ಮೊದಲ ಬಾರಿಗೆ ವೈಶಿಷ್ಟ್ಯ ಸ್ಥಾಪಿಸಿತು. ಶೂದ್ರನೊಬ್ಬನ ಬದುಕು ಹೇಗೆ ತುಳಿತಕ್ಕೆ ಒಳಗಾಗಿ ನಾಶವಾಯಿತು ಎಂಬುದನ್ನು ಈ ಕಾದಂಬರಿಯು ಜೀವಂತವಾಗಿ ಚಿತ್ರಿಸುತ್ತದೆ. ಇವರ ಮರಳಿ ಮಣ್ಣಿಗೆ ಕನ್ನಡದ ಮಹಾಕಾದಂಬರಿ ಗಳಲ್ಲೊಂದು. ಈ ಕೃತಿಯಲ್ಲಿ ಕರಾವಳಿ ಪ್ರದೇಶದ ಮೂರು ತಲೆಮಾರುಗಳ ಜೀವನ ದರ್ಶನ ಅರಳಿದೆ. ಬೆಟ್ಟದ ಜೀವ, ಔದಾರ್ಯದ ಉರುಳಲ್ಲಿ, ಮುಗಿದ ಯುದ್ಧ, ಕುಡಿಯರ ಕೂಸು ಕಾರಂತರ ಕಾದಂಬರಿಗಳಲ್ಲಿ ವೈಶಿಷ್ಟ್ಯಪೂರ್ಣವಾದುವು. ಇವರ ಇನ್ನೊಂದು ಕಾದಂಬರಿ ಅಳಿದ ಮೇಲೆ ತಂತ್ರ, ವಸ್ತು, ಆಲೋಚನೆಗಳಲ್ಲಿ ಒಂದು ಮಹತ್ತ್ವಪೂರ್ಣ ಕೃತಿಯಾಗಿದೆ. ಕಾರಂತರ ವಿಚಾರಶೀಲ ವ್ಯಕ್ತಿತ್ವ ಇದರಲ್ಲಿ ವಿಕಾಸಗೊಂಡಿದೆ. ಮೈಮನಗಳಸುಳಿಯಲ್ಲಿ, ಮೂಕಜ್ಜಿಯ ಕನಸು ಹೊಸ ದೃಷ್ಟಿಯಿಂದ ಅಷ್ಟೇ ಮಹತ್ತ್ವಪೂರ್ಣ ಕೃತಿಗಳಾಗಿವೆ. ಇವರ ಇನ್ನೊಂದು ಮಹತ್ತ್ವದ ಕಾದಂಬರಿ ಧರ್ಮರಾಯನ ಸಂಸಾರ (1972). ಒಟ್ಟಿನಲ್ಲಿ ಇವರ ಕಾದಂಬರಿಗಳಲ್ಲಿ ಆಳವಾದ ಜೀವನಾನುಭವ, ಬದುಕನ್ನು ಸಮಗ್ರವಾಗಿ ಅದರ ಒಳಿತು ಕೆಡುಕುಗಳೊಂದಿಗೆ ನೋಡುವ ಸೂಕ್ಷ್ಮದೃಷ್ಟಿ. ಜೀವಂತ ಪಾತ್ರಗಳು, ಸಹಜ ಶೈಲಿ, ವೈಜ್ಞಾನಿಕನಿಗೊಪ್ಪುವ ಪ್ರಾಮಾಣಿಕತನ, ಯಾವ ಸಂಪ್ರದಾಯಕ್ಕೂ ಸೇರದ ಸ್ವತಂತ್ರ ಮನೋವೃತ್ತಿ ಇವು ಮುಖ್ಯವಾಗಿ ಕಂಡುಬರುತ್ತವೆ. ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕನ್ನಡದ ಎರಡು ಮಹಾ ಕಾದಂಬರಿಗಳು ಎಂಬ ಪ್ರಖ್ಯಾತಿ ಪಡೆದಿವೆ. ಶ್ರೀ ರಾಮಾಯಣದರ್ಶನಂ ಇವರ ಪದ್ಯಕಾವ್ಯವಾದರೆ, ಕಾದಂಬರಿಗಳೆರಡೂ ಇವರ ಗದ್ಯಕಾವ್ಯಗಳು. ಇಲ್ಲಿ ಬಳಕೆಯಾಗಿರುವ ಭಾಷೆ ಕನ್ನಡ ಗದ್ಯಶೈಲಿಯ ಶ್ರೀಮಂತ ಪ್ರತಿನಿಧಿಯಾಗಿದೆ. ಮಲೆನಾಡಿನ ಜೀವನ ಚಿತ್ರವನ್ನು ಅದರ ಹಿನ್ನೆಲೆ, ವಿಸ್ತಾರ, ಆಳ, ವರ್ಣವಿನ್ಯಾಸಗಳೊಂದಿಗೆ ಚಿತ್ರಿಸಿರುವ ರೀತಿ ಅನ್ಯಾದೃಶವಾದುದು. ಕುವೆಂಪುರವರ ತಂತ್ರ, ರೀತಿ, ಶೈಲಿಗಳ ಮಾರ್ಗದಲ್ಲಿ ನಡೆದು ಚಿತ್ರವತ್ತಾಗಿ ಸನ್ನಿವೇಶಗಳನ್ನು ಜೋಡಿಸಿ, ಬೃಹತ್ತಾಗಿ ಪಾತ್ರಗಳನ್ನು ಸೃಷ್ಟಿಸುವ ಇನ್ನೊಂದು ಉದಾಹರಣೆ ಕಾಣಬರುತ್ತಿಲ್ಲ. ಒಂದು ಜನಾಂಗದ ಜೀವನ ಸಮಗ್ರವಾಗಿ ಅದರ ಆಳ ಅಗಲಗಳಲ್ಲಿ ನಿರೂಪಿತವಾಗಿರುವುದು ಇದೇ ಮೊದಲು. ಕಾದಂಬರಿ ಕರತಲ ರಂಗಭೂಮಿ ಎಂಬ ಅವರ ವಿಮರ್ಶಕ ನುಡಿಗೆ ಅವರ ಕಾದಂಬರಿಗಳೇ ಉದಾಹರಣೆಗಳಾಗಿವೆ. ಗೋಕಾಕರ ಇಜ್ಜೋಡು ಮೊದಲು ಎರಡು ಭಾಗಗಳಿಂದ ಪೂರ್ಣಗೊಂಡು ಸಮರಸವೇ ಜೀವನ ಎಂಬ ಹೆಸರಿನಲ್ಲಿ 1300 ಪುಟಗಳ ಬೃಹತ್ ಕಾದಂಬರಿಯಾಗಿ ಹೊರಬಂದಿದೆ. ಇಪ್ಪತ್ತೈದು ವರ್ಷಗಳಲ್ಲಿನ ಜೀವನದ ಸಾಮಾಜಿಕ ಸಮಸ್ಯೆಗಳು, ಸೋಲುಗೆಲವು, ಹೊಯ್ದಾಟ ಹೋರಾಟಗಳ ಚಿತ್ರ ಈ ಕಾದಂಬರಿಯಲ್ಲಿ ಮೂಡಿಬಂದಿದೆ. ಸಮರಸವೇ ಜೀವನ ಹಲವು ದೃಷ್ಟಿಗಳಿಂದ ಮಹತ್ತ್ವದ ಸ್ಥಾನ ಪಡೆದುಕೊಂಡಿದೆ. ಅ.ನ.ಕೃ. ಕನ್ನಡದಲ್ಲೆಲ್ಲ ಹೆಚ್ಚು ಕಾದಂಬರಿಗಳನ್ನು ರಚಿಸಿದವರೆಂದು ಖ್ಯಾತರಾಗಿದ್ದಾರೆ. ಸುಮಾರು ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ ಸಮಾಜದ ಹಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಇವರು ಸಂಧ್ಯಾರಾಗದಿಂದ ಕಾದಂಬರಿಕಾರರೆಂದು ಪ್ರಸಿದ್ಧಿಪಡೆದರು. ನಟಸಾರ್ವಭೌಮ ಎಂಬ ದೊಡ್ಡ ಕಾದಂಬರಿಯಲ್ಲಿ ಕಲಾವಿದನ ಬಾಳಿನ ಏಳು ಬೀಳುಗಳ ಹೊಯ್ದಾಟ ತುಯ್ದಾಟಗಳ ಚಿತ್ರವಿದೆ. ಮಂಗಳಸೂತ್ರ, ಕಣ್ಣೀರು ಉತ್ತಮ ಕಾದಂಬರಿಗಳು. ಇವರ ಸರಳವಾದ ಚಿತ್ತಾಕರ್ಷಕ ಶೈಲಿ, ನಿರೂಪಣಾವಿಧಾನ, ಕನ್ನಡದ ಬಗ್ಗೆ ಇವರಿಗಿರುವ ಅಭಿಮಾನ, ಸಮಾಜದ ಲೋಪದೋಷಗಳನ್ನು ಎತ್ತಿ ಆಡುವಲ್ಲಿ ಕಾಣುವ ಉತ್ಸಾಹ, ಕಲಾವಿದರ ಬಗ್ಗೆ ಇವರಿಗಿರುವ

ಸಹಾನುಭೂತಿ, ಸಹಜ ಸಂಭಾಷಣೆಗಳನ್ನು ಹೆಣೆವಲ್ಲಿ ಕಾಣಬರುವ ಜಾಣ್ಮೆ ಈ ಗುಣಗಳಿಂದ ಅ.ನ.ಕೃ. ಜನಪ್ರಿಯ ಲೇಖಕರಾದರು. ಇವರ ಕಾದಂಬರಿಗಳಲ್ಲಿ ಆಳವಾದ ಅನುಭವವಿಲ್ಲ. ಪಾತ್ರಗಳಿಗೆ ಗುರಿಯಿಲ್ಲ. ಕಲೆ ಗಂಭೀರವಾಗಿ ನಿರೂಪಿತವಾಗುವುದೂ ಇಲ್ಲ. ವಿಚಾರಗಳು ಬಂದರೂ ಅವು ಕಡೆಗೆ ಭಾವನಾವಶತೆಯಲ್ಲಿ ತೇಲಿಬಿಡುತ್ತವೆ. ಸಂಖ್ಯೆ ದೊಡ್ಡದಾಗಿ ಬೆಳೆದರೂ ಗುಣದ ದೃಷ್ಟಿಯಿಂದ ಇವರ ಕಾದಂಬರಿಗಳು ದೊಡ್ಡವಾಗಲಿಲ್ಲ.

ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ. ಪುರುಷಾರ್ಥ, ಓದುಗರ ಗಮನ ಸೆಳೆದ ಎರಡು ಕಾದಂಬರಿಗಳು. ವಿಶ್ವಾಮಿತ್ರ ಸೃಷ್ಟಿಯಲ್ಲಿ ಪ್ರಜ್ಞಾಪ್ರವಾಹ ತಂತ್ರವನ್ನು ಬಳಕೆಮಾಡಿದ್ದಾರೆ. ಬುದ್ಧಿಯ ವಿಲಾಸ ಇಂಥ ಕಾದಂಬರಿಗಳಲ್ಲಿ ಕಂಡುಬರುವ ಪ್ರಮುಖ ಅಂಶ. ಸ್ವಾತಂತ್ರ್ಯಾನಂತರವೂ ಇವರು ಕೆಲವು ಕಾದಂಬರಿಗಳನ್ನು ಕೊಟ್ಟಿದ್ದಾರೆ. ದೇವುಡು ಅವರ ಮಯೂರ ಮೊದಲ ಐತಿಹಾಸಿಕ ಕಾದಂಬರಿ. ಇವರ ಅಂತರಂಗ ಒಂದು ವಿಶಿಷ್ಟ ಕೃತಿ. ಇದು ಮನಸ್ಸಿನ ಹೊಯ್ದಾಟ ತುಯ್ದಾಟಗಳನ್ನು ಮಾರ್ಮಿಕವಾಗಿ ಬಣ್ಣಿಸಲೆಳಸಿದ ಪ್ರಥಮ ಕಾದಂಬರಿ. ಇವರು ರಚಿಸಿರುವ ಹಲವು ಕಾದಂಬರಿಗಳಲ್ಲಿ ಮಹಾಬ್ರಾಹ್ಮಣ ಒಂದು ಶ್ರೇಷ್ಠ ಕೃತಿ. ವೇದಕಾಲದ ವಿಶ್ವಾಮಿತ್ರನ ಕಥೆ ಇದರಲ್ಲಿ ಸತ್ತ್ವಯುಕ್ತವಾಗಿ ಅರಳಿದೆ. ಮಿರ್ಜಿ ಅಣ್ಣಾರಾಯರ ನಿಸರ್ಗ ಕನ್ನಡ ಕಾದಂಬರಿಗಳ ಸಾಲಿನಲ್ಲಿ ಉತ್ತಮ ಸ್ಥಾನವನ್ನು ಗಳಿಸಿಕೊಂಡಿದೆ. ಒಲಿದ ಹೆಣ್ಣುಗಂಡುಗಳ ವಿಫಲ ಪ್ರಣಯದಿಂದಾದ ದುರಂತ ಆಡುನುಡಿಯ ಜೀವಂತ ಭಾಷೆಯಲ್ಲಿ ಸುಂದರ ಕಲಾಕೃತಿಯಾಗಿ ಮೂಡಿಬಂದಿದೆ. ರಾಷ್ಟ್ರಪುರುಷ, ಪ್ರತಿಸರಕಾರ, ಭಸ್ಮಾಸುರ, ಅಶೋಕಚಕ್ರ ಮೊದಲಾದುವು ಇವರ ಸಾಮಾನ್ಯ ದರ್ಜೆಯ ಕಾದಂಬರಿಗಳು. ಕಡೆಂಗೋಡ್ಲು ಶಂಕರಭಟ್ಟರ ಧೂಮಕೇತು, ದೇವತಾಮನುಷ್ಯ ಮತ್ತು ಲೋಕದ ಕಣ್ಣು ಸಾಮಾಜಿಕ ಕಾದಂಬರಿಗಳು, ಬಾ.ಕೃ.ಲಕ್ಮ್ಷೇಶ್ವರರ ಗ್ರಾಮ ಪಂಚಾನನ ಕಾದಂಬರಿಯಲ್ಲಿ ಮೊದಲ ಬಾರಿಗೆ ಹಳ್ಳಿಯ ಜನರ ಜೀವನಚಿತ್ರ ಬಂದಿರುವುದನ್ನು ಕಾಣಬಹುದು. ನಾ.ಕಸ್ತೂರಿಯವರ ಗಾಳಿಗೋಪುರ, ಚಕ್ರದೃಷ್ಟಿ, ಶಂಖವಾದ್ಯ, ಚಂಗೂಲಿ ಚಲುವ ಇವುಗಳನ್ನು ಕಾದಂಬರಿ ಎಂದು ಕರೆಯಲು ಆಕ್ಷೇಪಿಸಬಹುದಾದರೂ ಈ ಕಾದಂಬರಿಗಳಲ್ಲಿನ ತಂತ್ರ ಮತ್ತು ವಿಡಂಬನೆಗಳು ಗಮನಾರ್ಹ. ಭಗ್ನಮಂದಿರ ಈ ಕಾಲದ ಒಂದು ಮುಖ್ಯ ಸಾಮಾಜಿಕ ಕಾದಂಬರಿ.

ಸ್ವಾತಂತ್ರ್ಯ ಬಂದ ಆನಂತರದ ಇಪ್ಪತ್ತೈದು ವರ್ಷಗಳಲ್ಲಿ ಕಾದಂಬರಿಗಳ ರಚನೆ ವಿಪುಲವಾಗಿ ಮುಂದೆ ಸಾಗಿದೆ. ಸ್ವಾತಂತ್ರ್ಯ ಪೂರ್ವಕಾಲದ ಹಲವು ಜನ ಪ್ರಮುಖ ಕಾದಂಬರಿಕಾರರು ಸ್ವಾತಂತ್ರ್ಯ ನಂತರವೂ ಸತ್ತ್ವಶಾಲಿ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಹಲವು ಜನ ಹೊಸ ಕಾದಂಬರಿಕಾರರೂ ಮುಂದೆ ಬಂದಿದ್ದಾರೆ. ಅವರಲ್ಲಿ ಕೆಲವರು ಬಹುಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿದವರಿದ್ದಾರೆ. ಕಾದಂಬರಿಗಳ ಹರಹು ಕೂಡ ವಿಸ್ತಾರವಾಗಿದೆ. 1953ನೆಯ ಇಸವಿಯಲ್ಲಿ ಸುಲಭ ಬೆಲೆಯ ಕೈ ಹೊತ್ತಗೆಗಳು ಆರಂಭವಾದಮೇಲೆ ಕಾದಂಬರಿಗಳನ್ನು ಕೊಳ್ಳುವ ಓದುವ ಕನ್ನಡಿಗರ ಸಂಖ್ಯೆ ಬೆಳೆಯಿತು. ಹಿರಿಯ ಹಾಗೂ ತರುಣ ಕಾದಂಬರಿಕಾರರಿಗೆ ಉತ್ತೇಜನ ದೊರಕಿತು. ಹಳೆಯ ಜಾಡಿನಲ್ಲಿಯೇ ಕಾದಂಬರಿಯ ರಚನೆಯಾಗಿರುವಂತೆ, ಹೊಸ ಜಾಡನ್ನು ಹಿಡಿದ ಹೊಸರೀತಿಯ ಕಾದಂಬರಿಗಳೂ ಪ್ರಕಟಗೊಂಡಿವೆ. ವಸ್ತು, ಶೈಲಿ, ನಿರೂಪಣೆ, ತಂತ್ರ ಮೊದಲಾದುವುಗಳಲ್ಲಿ ವೈವಿಧ್ಯ ಮೂಡಿದೆ. ಸಾಮಾಜಿಕ ಕಾದಂಬರಿಗಳೇ ವಿಪುಲವಾಗಿದ್ದರೂ ಕೆಲವು ಐತಿಹಾಸಿಕ, ಪೌರಾಣಿಕ ಮತ್ತು ಪತ್ತೇದಾರಿ ಕಾದಂಬರಿಗಳೂ ಬಂದಿವೆ.

ಭಾರತ ದೇಶದಲ್ಲಿ ನಡೆದ ರಾಜಕೀಯ ಹೋರಾಟ ಮತ್ತು ಸ್ವಾತಂತ್ರ್ಯ ಚಳವಳಿಗಳನ್ನು ವಸ್ತುವಾಗಿ ಉಳ್ಳ ಕೆಲವು ಕಾದಂಬರಿಗಳು ಕನ್ನಡದಲ್ಲಿ ಬಂದಿವೆ. ಶಿವರಾಮ ಕಾರಂತರ ಔದಾರ್ಯದ ಉರುಳಲ್ಲಿ ಭಾರತದ ರಾಜಕೀಯ ಹಾಗೂ ಶೈಕ್ಷಣಿಕ ರಂಗದಲ್ಲಿ ನಡೆದ ಪ್ರಯೋಗಗಳ, ಸೋಲುಗೆಲುವುಗಳ ಮಾರ್ಮಿಕ ಚಿತ್ರವಿದೆ. ಮಿರ್ಜಿ ಅಣ್ಣಾರಾಯರ ಪ್ರತಿಸರಕಾರ, ರಾಷ್ಟ್ರಪುರುಷ; ಬಸವರಾಜ ಕಟ್ಟೀಮನಿಯವರ ಸ್ವಾತಂತ್ರ್ಯದೆಡೆಗೆ ಮತ್ತು ಮಾಡಿಮಡಿದವರು, ತ.ರಾ.ಸು.ರವರ ರಕ್ತತರ್ಪಣ, ಕೋ. ಚೆನ್ನಬಸಪ್ಪನವರ ರಕ್ತತರ್ಪಣ, ಪ.ಸು.ಭಟ್ಟರ ಆತ್ಮಾರ್ಪಣೆ, ನಿರಂಜನರ ಚಿರಸ್ಮರಣೆ ಮೊದಲಾದವು ಸ್ವಾತಂತ್ರ್ಯಕ್ಕಾಗಿ ನಡೆದ ಚಳವಳಿಯನ್ನು ನೇರವಾಗಿ ನಿರೂಪಿಸುತ್ತವೆ. 1942ರ ಆಗಸ್ಟ್ ತಿಂಗಳು ಮುಂಬಯಿಯಲ್ಲಿ ನಡೆದ ಚಳವಳಿಯ ಹಿನ್ನೆಲೆಯಲ್ಲಿ ರಚಿತವಾದ ವಸ್ತು ವಿ.ಎಂ. ಇನಾಮದಾರರ ಮೂರಾಬಟ್ಟೆಯಲ್ಲಿ ಬರುತ್ತದೆ. ಅ.ನ.ಕೃ. ರವರ ಅಮರ ಆಗಸ್ಟ್, ಶ್ರೀರಂಗರ ಪುರುಷಾರ್ಥ ಮತ್ತು ಕುಮಾರಸಂಭವ ಇವೇ ಮೊದಲಾದ ಕಾದಂಬರಿಗಳಲ್ಲಿ ವಿಶಿಷ್ಟ ತಂತ್ರಗಳನ್ನು ಅಳವಡಿಸಿಕೊಂಡು ರಾಜಕೀಯ ಹೋರಾಟದ ಮತ್ತು ಜೀವನದ ಚಿತ್ರಗಳನ್ನು ಕೊಡಲಾಗಿದೆ. ಕಡಿದಾಳು ಮಂಜಪ್ಪನವರ ಪಂಜರವಳ್ಳಿಯ ಪಂಜು ಇತ್ತೀಚಿನ ರಾಜಕೀಯಕ್ಕೆ ಸಂಬಂಧಿಸಿದ ಒಂದು ಕಾದಂಬರಿ.

ಬಿ.ವೆಂಕಟಾಚಾರ್ಯರು ಹಾಗೂ ಗಳಗನಾಥರು ಆಗಿಹೋದ ಮೇಲೆ ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳ ರಚನೆ ಅಷ್ಟೊಂದು ವಿಪುಲವಾಗಿ ನಡೆಯಲಿಲ್ಲ ಎನ್ನಬಹುದು. ಆದರೂ ಹಲವಾರು ಕಾದಂಬರಿಕಾರರು ಇತಿಹಾಸಕ್ಕೆ ವಾಸ್ತವಿಕತೆಯ ರಕ್ತದಾನ ಮಾಡಿ ಕೃತಿಗಳನ್ನು ರಚನೆ ಮಾಡಿದರು. ಇಂಥ' ಕಾದಂಬರಿಗಳಲ್ಲಿ ಶ್ರೀನಿವಾಸರ ಚನ್ನಬಸವನಾಯಕ ಒಂದು ಮೈಲುಗಲ್ಲು. ಕೆಳದಿಯ ರಾಜ್ಯದ ಕೊನೆಯ ನಾಯಕರ ಸ್ಥಿತಿಯನ್ನು ಚಿತ್ರಿಸಿ ಹೈದರನ ಕುತಂತ್ರದ ಫಲವಾಗಿ ಆ ರಾಜ್ಯ ಮತ್ತು ರಾಜಧಾನಿ ಹೇಗೆ ಅವನ ವಶವಾಯಿತು ಎಂಬುದನ್ನು ನಿರೂಪಿಸಲಾಗಿದೆ. ಇಷ್ಟೇ ಗಮನಾರ್ಹವಾದ ಇವರ ಇನ್ನೊಂದು ಐತಿಹಾಸಿಕ ಕಾದಂಬರಿ ಚಿಕ್ಕವೀರರಾಜೇಂದ್ರ. ತ.ರಾ.ಸು. ಅವರ ಹಂಸಗೀತೆ. ಚಿತ್ರದುರ್ಗದ ಇತಿಹಾಸದ ಹಿನ್ನೆಲೆಯಲ್ಲಿ ರಚಿತವಾದ ಒಂದು ಉತ್ತಮ ಕೃತಿ. ಚಿತ್ರದುರ್ಗದ ಇತಿಹಾಸವನ್ನೇ ಆಧರಿಸಿ ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ, ಹೊಸ ಹಗಲು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಈ ಕಾದಂಬರಿಗಳ ಪಾತ್ರರಚನೆ ವರ್ಣನೆ ಇವುಗಳಲ್ಲಿ ವೀರರಸ ಮಡುಗಟ್ಟಿದೆ. ಇವರ ಶಿಲ್ಪಶ್ರೀ, ಚಾವುಂಡರಾಯನ ಜೀವನದ ಆಧಾರದ ಮೇಲೆ ರಚಿತವಾದ ಇತ್ತೀಚಿನ ಕೃತಿ. ಅ.ನ.ಕೃ. ಕೂಡ ವಿಜಯನಗರದ ಇತಿಹಾಸದ ಮೇಲೆ ಕಾದಂಬರಿಗಳನ್ನು ರಚಿಸಿದ್ದಾರೆ. ಐತಿಹಾಸಿಕ ಕಾದಂಬರಿಗಳಲ್ಲಿ ನಮ್ಮ ಮನಸ್ಸನ್ನು ಮುತ್ತುವ ಇನ್ನೊಂದು ಕಾದಂಬರಿ ಕೆ.ವಿ.ಅಯ್ಯರ್ ಅವರ ಶಾಂತಲಾ. ಹೊಯ್ಸಳ ವಿಷ್ಣುವರ್ಧನನ ಶಾಂತಲಾ ದೇವಿಯ ಜೀವನ ಚಿತ್ರಣ ಕಾದಂಬರಿಯ ವಸ್ತು. ಬರೆವಣಿಗೆ ಸುಂದರವಾಗಿದೆ. ವೀರಕೇಸರಿ ಸೀತಾರಾಮಶಾಸ್ತ್ರಿಗಳು ಟಿಪ್ಪುಸುಲ್ತಾನನ ಕಾಲದ ಚರಿತ್ರೆಯನ್ನು ವಸ್ತುವಾಗಿ ಉಳ್ಳ ದೌಲತ್ ಎಂಬ ವೀರ ಶೃಂಗಾರಗಳಿಂದ ಕೂಡಿದ ಮೂರು ಭಾಗಗಳ ಬೃಹತ್ ಕಾದಂಬರಿಯನ್ನು ಬರೆದಿದ್ದಾರೆ. ಶ್ರೀನಿವಾಸರಾವ್ ಕೊರಟಿ ಕನ್ನಡದಲ್ಲಿ ಬಹುಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿದ್ದು ಇವರ ಪರಮೇಶ್ವರ ಪುಲಿಕೇಶಿ ಖ್ಯಾತಿಪಡೆದ ಕಾದಂಬರಿಯಾಗಿದೆ. ಬಿ.ಪುಟ್ಟಸ್ವಾಮಯ್ಯ ನೂರ್ಮಡಿ ತೈಲಪನನ್ನೂ ವಿಜಯನಗರದ ಇತಿಹಾಸವನ್ನು ಕುರಿತಂತೆ ಹಲವಾರು ಕಾದಂಬರಿಗಳನ್ನೂ ಬರೆದಿದ್ದಾರೆ. ಇವರ ಕ್ರಾಂತಿಕಲ್ಯಾಣ 12ನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಕ್ರಾಂತಿಯನ್ನು ಚಿತ್ರಿಸುತ್ತದೆ. ಸಮೇತನಹಳ್ಳಿ ರಾಮರಾಯರ ಸವತಿ ಗಂಧವಾರಣೆ ವಿಷ್ಣುವರ್ಧನನ ರಾಣಿ ಶಾಂತಲಾದೇವಿಗೆ ಸಂಬಂಧಿಸಿದ ಒಂದು ಉತ್ತಮ ಕೃತಿ.

ಪೌರಾಣಿಕ ಕಾದಂಬರಿಗಳಲ್ಲಿ ಹೊಸ ಜಾಡನ್ನು ತುಳಿದು ಉತ್ತಮ ಕೃತಿಗಳನ್ನು ಕನ್ನಡಕ್ಕೆ ಕೊಟ್ಟವರಲ್ಲಿ ದೇವುಡು ಪ್ರಮುಖರು. ಇವರ ಮಹಾಬ್ರಾಹ್ಮಣ ಹಾಗೂ ಮಹಾಕ್ಷತ್ರಿಯ ಎರಡು ಉತ್ತಮ ಕಾದಂಬರಿಗಳು. ಪುರಾಣವಸ್ತು ದೇವುಡು ಅವರ ಕೈಯಲ್ಲಿ ಹೊಸತನದೊಂದಿಗೆ ನಿರೂಪಿತವಾಗುತ್ತದೆ. ಅಲ್ಲಿಯ ಪಾತ್ರಗಳು ಪುರಾಣಕ್ಕೆ ಸಂಬಂಧಿಸಿದವಾದರೂ ನಮಗೆ ಹೆಚ್ಚು ಹತ್ತಿರವಾಗುತ್ತವೆ. ಇತ್ತೀಚೆಗೆ ಹೊರಬಂದ ಜನಾರ್ಧನ ಗುರ್ಕಾರರ ಚೂಡಾಲ ಒಂದು ಉತ್ತಮ ಕೃತಿ. ತ.ರಾ.ಸು. ಅವರ ಬೆಳಕು ತಂದ ಬಾಲಕ ಪುರಾಣ ವಸ್ತುವನ್ನು ಬಳಸಿಯೂ ಹೇಗೆ ಉತ್ತಮವಾಗಿ ಕಾದಂಬರಿ ಬರೆಯಬಹುದೆಂಬುದಕ್ಕೆ ಒಂದು ನಿದರ್ಶನವಾಗಿದೆ. ಇತಿಹಾಸವನ್ನೊಳಗೊಂಡಿದ್ದೂ ಆಧ್ಯಾತ್ಮಿಕ ಸ್ತರದಲ್ಲಿ ನಡೆಯುವ ಕಾದಂಬರಿಗಳಲ್ಲಿ ಎಚ್.ತಿಪ್ಪೇರುದ್ರಸ್ವಾಮಿಯವರ ಕದಳಿಯ ಕರ್ಪೂರ, ಜ್ಯೋತಿ ಬೆಳಗುತ್ತಿದೆ, ಪರಿಪೂರ್ಣದೆಡೆಗೆ, ತ.ರಾ.ಸು. ಅವರ ಅಗ್ನಿರಥ ಮುಕ್ತಪಥ ಇವುಗಳನ್ನು ಹೆಸರಿಸಬಹುದು.

ಕಾದಂಬರಿಕಾರರ ದೃಷ್ಟಿ ಹಳ್ಳಿಗಳ ಕಡೆ ಹರಿದು, ಹಳ್ಳಿಗಳ ಜೀವನದ ಬಗ್ಗೆ ಕೆಲವು ಒಳ್ಳೆಯ ಕಾದಂಬರಿಗಳು ಬಂದಿರುವುದು ಗಮನಾರ್ಹ. ಎಚ್.ದೇವೀರಪ್ಪನವರ ಬೆಳವಲದ ಮಡಿಲಲ್ಲಿ, ಕೃಷ್ಣಮೂರ್ತಿ, ಪುರಾಣಿಕರ ಹಬ್ಬಿದ ಬಳ್ಳಿ, ಬಸವರಾಜ ಕಟ್ಟೀಮನಿಯವರ ಮಣ್ಣು ಮತ್ತು ಹೆಣ್ಣು, ಚದುರಂಗರ ಸರ್ವಮಂಗಳಾ,

ತ.ರಾ.ಸು. ಅವರ ಚಂದವಳ್ಳಿಯ ತೋಟ ಇವೇ ಮೊದಲಾದ ಕಾದಂಬರಿಗಳಲ್ಲಿ ಹಳ್ಳಿಗಳ ಸರಳ ಸುಂದರ ಜೀವನದ ಹಾಗೂ ಬದಲಾಗುತ್ತಿರುವ ಹಳ್ಳಿಗಳ ಜೀವನದ ವಾಸ್ತವಿಕ ಚಿತ್ರಣಗಳನ್ನು ಕಾಣಬಹುದು. ಹಳ್ಳಿಯ ಜೀವನವನ್ನು ಕುರಿತ ರಾವಬಹದ್ದೂರ ಅವರ ಗ್ರಾಮಾಯಣ ಈ ಕಾಲದ ವೈಶಿಷ್ಟ್ಯ ಪೂರ್ಣವಾದ ಉತ್ಕೃಷ್ಟ ಕಾದಂಬರಿ. ಹಳ್ಳಿಯ ಸರಳವಾದ ಚೊಕ್ಕ ಜೀವನವನ್ನು ಚಿತ್ರಿಸುತ್ತಿರುವಂತೆಯೆ ಬದಲಾಗುತ್ತಿರುವ ಹಳ್ಳಿಯ ಜೀವನದ ಲೋಪದೋಷಗಳನ್ನು ಇಷ್ಟೊಂದು ಮಾರ್ಮಿಕವಾಗಿ ಚಿತ್ರಿಸಿದವರು ವಿರಳ, ವೃಂದಾವನ, ಬಿತ್ತಿ ಬೆಳೆದವರು ಧೂಮಕೇತು ಇವರ ಈಚಿನ ಕಾದಂಬರಿಗಳು.

ಹರಿಜನರ ಸಮಸ್ಯೆಯ ಬಗ್ಗೆ ಬಂದ ಕಾದಂಬರಿಗಳು ಕಡಿಮೆ. ಕೆ.ಎ.ಎನ್.ರಾವ್ ಅವರ ಮುನಿಯನ ಮಾದರಿ, ಎಂ.ವಿ.ಸೀತಾರಾಮಯ್ಯನವರ ಮಾದನ ಮಗಳು, ಕಟ್ಟೀಮನಿಯವರ ನೀ ನನ್ನ ಮುಟ್ಟಬೇಡ ಇವುಗಳನ್ನು ಉದಾಹರಣೆಗಾಗಿ ಉಲ್ಲೇಖಿಸಬಹುದಾಗಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾದಂಬರಿಗಳನ್ನು ರಚಿಸಿದ ಕೆಲವು ಕಾದಂಬರಿಕಾರರನ್ನು ಹೆಸರಿಸಬಹುದು. ಶಿವರಾಮ ಕಾರಾಂತ, ಕುವೆಂಪು, ರಾವಬಹಾದ್ದೂರ, ದೇವುಡು (ಅಂತರಂಗ, ಮಲ್ಲಿ, ಎರಡನೆಯ ಜನ್ಮ), ಬಿ.ಪುಟ್ಟಸ್ವಾಮಯ್ಯ, ಶ್ರೀನಿವಾಸ, ಎಂ.ಆರ್.ಶ್ರೀನಿವಾಸಮೂರ್ತಿ, ಅ.ನ.ಕೃ.,ಶ್ರೀರಂಗ, ಗೋಕಾಕ, ಕೆ.ವಿ.ಅಯ್ಯರ್ ಮಿರ್ಜಿ ಅಣ್ಣಾರಾಯ, ತ.ರಾ.ಸು. (ಚಂದನದ ಬೊಂಬೆ, ಮಸಣದ ಹೂವು, ನಾಗರಹಾವು), ಬಸವರಾಜ ಕಟ್ಟೀಮನಿ (ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಖಾನಾವಳಿಯ ನೀಲಾ), ವಿ.ಎಂ.ಇನಾಂದಾರ್ (ಶಾಪ, ಈ ಪರಿಯ ಸೊಬಗು, ಮುಗಿಯದ ಕತೆ), ನಿರಂಜನ (ಅಭಯಾಶ್ರಮ, ಚಿರಸ್ಮರಣೆ), ಚದುರಂಗ (ಉಯ್ಯಾಲೆ), ಆನಂದಕಂದ (ಸುದರ್ಶನ, ಮಗಳ ಮದುವೆ), ಎಸ್.ಅನಂತನಾರಾಯಣ, (ಅತ್ತಿಗೆ), ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಹೇಮಾವತಿ, ಊರ್ವಶಿ), ವ್ಯಾಸರಾಯ ಬಲ್ಲಾಳ (ಹೇಮಂತಗಾನ, ವಾತ್ಸಲ್ಯಪಥ, ಚಿರವಿರಹಿ), ಬೀಚಿ (ದಾಸಕೂಟ), ಕೃಷ್ಣಮೂರ್ತಿ ಪುರಾಣಿಕ (ಮುಗಿಲ ಮಲ್ಲಿಗೆ, ಮನೆ ತುಂಬಿದ ಹೆಣ್ಣು, ಮಣ್ಣಿನ ಮಗಳು, ತಂಪುನೆಳಲು), ರಾಮಚಂದ್ರ, ಕೊಟ್ಟಲಗಿ (ದೀಪ ಹತ್ತಿತು), ಭಾರತೀಸುತ (ಎಡಕಲ್ಲು ಗುಡ್ಡದ ಮೇಲೆ), ಎಸ್.ಎಲ್.ಭೈರಪ್ಪ (ವಂಶವೃಕ್ಷ, ಗೃಹಭಂಗ, ಗ್ರಹಣ, ದಾಟು). ವಿಶುಕುಮಾರ್ (ಕರಾವಳಿ, ಮದರ್), 'ಎನ್ಕೆ ಸಾವಿನ ಉಡಿಯಲ್ಲಿ, ಎರಡನೆ ಸಂಬಂಧ,' ಯಶವಂತ ಚಿತ್ತಾಲ (ಮೂರು ದಾರಿಗಳು ಶಿಕಾರಿ) ಶಾಂತಿನಾಥ ದೇಸಾಯಿ (ಮುಕ್ತಿ, ವಿಕ್ಷೇಪ), ಯು.ಆರ್.ಅನಂತಮೂರ್ತಿ (ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ) ಪಿ.ಲಂಕೇಶ್ (ಬಿರುಕು), ಎ.ಕೆ.ರಾಮಾನುಜನ್ (ಹಳದಿ ಮೀನು), ಶಂಕರ ಮೊಕಾಶಿ ಪುಣೇಕರರ (ಗಂಗವ್ವ ಗಾಂಗಾಮಾಯಿ), ಪೂರ್ಣಚಂದ್ರತೇಜಸ್ವಿ (ಸ್ವರೂಪ), ಗಿರಿ (ಗತಿಸ್ಥಿತಿ), ಕಾಮರೂಪಿ (ಕುದುರೆಮೊಟ್ಟೆ), ಆರ್ಯ (ಗುರು), ಶ್ರೀಕೃಷ್ಣ ಆಲನಹಳ್ಳಿ, (ಕಾಡು, ಪರಸಂಗದ ಗೆಂಡೆತಿಮ್ಮ, ಭುಜಂಗಯ್ಯನ ದಶಾವತಾರ) ಮೊದಲಾದವರು.

ಸಂಸ್ಕಾರ, ವಂಶವೃಕ್ಷ, ದಾಟು, ಕರಾವಳಿ, ಮುಕ್ತಿ, ವಿಕ್ಷೇಪ, ಕಾಡು, ಗಂಗವ್ವಗಂಗಾಮಾಯಿ, ಗತಿಸ್ಥಿತಿ, ಬಿರುಕು, ಮಲೆಗಳಲ್ಲಿ ಮದುಮಗಳು, ಗ್ರಾಮಾಯಣ, ಮರಳಿಮಣ್ಣಿಗೆ, ಅಳಿದಮೇಲೆ, ಕುಸುಮಬಾಲೆ ಇವು ಇತ್ತೀಚೆಗೆ ಹೆಚ್ಚು ಚರ್ಚೆಗೆ ಒಳಗಾದ ಕಾದಂಬರಿಗಳಾಗಿವೆ.

ಸ್ತ್ರೀಯರೂ ಮುಂದೆ ಬಂದು ಕಾದಂಬರಿಗಳನ್ನು ರಚಿಸಿರುವುದು ಸ್ವಾತಂತ್ರ್ಯೋತ್ತರ ಕಾಲದ ಒಂದು ವೈಶಿಷ್ಟ್ಯ. ಶರಪಂಜರ, ಹಣ್ಣೆಲೆ ಚಿಗುರಿದಾಗ, ಬೆಕ್ಕಿನ ಕಣ್ಣು, ಬೆಳ್ಳಿಮೋಡ- ಮೊದಲಾದ ಕಾದಂಬರಿಗಳನ್ನು ಬರೆದಿರುವ ತ್ರಿವೇಣಿ ಅವರು ಓದುಗರಿಗೆ ಹೆಚ್ಚು ಪರಿಚಿತರಾಗಿದ್ದಾರೆ. ಮಾನವ ಜೀವನದ ಹಲವು ಜಟಿಲ ಹಾಗೂ ಮನೋವೈಜ್ಞಾನಿಕ ಸಮಸ್ಯೆಗಳ ಮೇಲೆ ಇವರು ಕಾದಂಬರಿಗಳನ್ನು ರಚಿಸಿದ್ದಾರೆ. ಅನುಪಮಾ ನಿರಂಜನ, ಎಂ.ಕೆ.ಇಂದಿರಾ, ವಾಣಿ, ಜಯಲಕ್ಷ್ಮಿ, ಆರ್ಯಾಂಬ ಪಟ್ಟಾಭಿ, ಗೀತಾಕುಲಕರ್ಣಿ, ಕೆ.ಸರೋಜರಾವ್, ಎ.ಪಿ.ಮಾಲತಿ, ವೀಣಾ ಬಿ.ಟಿ.ಲಲಿತಾನಾಯಕ, ಲತಾರಾಜಶೇಖರ, ಸುಧಾಮೂರ್ತಿ -ಮೊದಲಾದ ಕಾದಂಬರಿಕಾರ್ತಿಯರು ಕನ್ನಡದಲ್ಲಿ ಕಾದಂಬರಿ ರಚನೆಯಲ್ಲಿ ತೊಡಗಿದ್ದಾರೆ.

ಒಂದು ಕಡೆ ಸೃಜನಶೀಲ ಸಾಹಿತ್ಯ ಕಾದಂಬರಿ ಪ್ರಕಾರವನ್ನು ಶ್ರೀಮಂತಗೊಳಿಸಿದರೆ ಇನ್ನೊಂದೆಡೆ ಶ್ರೇಷ್ಠ ಭಾಷಾಂತರಗಳು ಈ ಸಾಹಿತ್ಯವನ್ನು ಹೆಚ್ಚು ಸಂಪದ್ಭರಿತಗೊಳಿಸಿವೆ. ಫ್ರೆಂಚ್, ಇಂಗ್ಲಿಷ್, ರಷಿಯನ್, ಮರಾಠಿ, ಬಂಗಾಳಿ, ಹಿಂದಿ, ತಮಿಳು, ತೆಲುಗು, ಮಲೆಯಾಳಂ ಹಾಗೂ ಇತರ ಹಲವು ಭಾಷೆಗಳಿಂದ ಭಾಷಾಂತರಕಾರ್ಯ ಸಾಗಿದೆ. ಹಮ್ಮು ಬಿಮ್ಮು, ಪುನರುತ್ಥಾನ, ಮದಾಂ ಬಾವರಿ, ಅನ್ನ, ಸೋತು ಗೆದ್ದವನು, ಕೆಂಪುಮೀನು ಮುಂತಾದ ಶ್ರೇಷ್ಠ ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡಿವೆ. (ನೋಡಿ: ಕನ್ನಡದಲ್ಲಿ ಭಾಷಾಂತರಗಳು).

ಅಗ್ಗದ ಕಿರುಹೊತ್ತಗೆಗಳಿಂದ ಒಂದು ಕಾಲದಲ್ಲಿ ಕಾದಂಬರಿ ಜನಪ್ರಿಯವಾಗಿತ್ತು. ಈಗ ಆ ಕೆಲಸವನ್ನು ದಿನಪತ್ರಿಕೆಗಳು ವಾರಪತ್ರಿಕೆಗಳು ಮಾಸಪತ್ರಿಕೆಗಳು ನೆರವೇರಿಸುತ್ತಿವೆ. ದೈನಿಕ ಧಾರಾವಾಹಿಯಾಗಿ ಕಾದಂಬರಿಯನ್ನು ಪ್ರಕಟಿಸುವ ಉದ್ಯಮವನ್ನು ಕನ್ನಡಪ್ರಭ ಮೊದಲಿಗೆ ಪ್ರಾರಂಭಿಸಿತು. ಮಯೂರ, ಮಲ್ಲಿಗೆ, ತುಷಾರ, ಸುಧಾ, ಪ್ರಜಾಮತ, ಜನಪ್ರಗತಿ, ಕರ್ಮವೀರ ಮುಂತಾದ ವಾರಪತ್ರಿಕೆಗಳಲ್ಲೂ ಕಾದಂಬರಿಗಳು ಪ್ರಕಟವಾಗುತ್ತಿವೆ. *

ಎಪ್ಪತ್ತರ ದಶಕದ ಉತ್ತರಾರ್ಧದ ಹೊತ್ತಿಗೆ ಕನ್ನಡ ಕಾದಂಬರಿ ಪರಂಪರೆಯಲ್ಲಿ ಮಹತ್ವದ ಬದಲಾವಣೆಯುಂಟಾಯಿತು. ಕುವೆಂಪು, ಕಾರಂತ, ನಿರಂಜನ, ತ.ರಾ.ಸು., ಬಸವರಾಜಕಟ್ಟೀಮನಿ, ವಿ.ಎಂ.ಇನಾಂದಾರ, ಎಸ್.ಎಲ್.ಭೈರಪ್ಪ, ಯು.ಆರ್.ಅನಂತಮೂರ್ತಿ, ಶಾಂತಿನಾಥ ದೇಸಾಯಿ, ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ, ಅನುಪಮಾ ನಿರಂಜನ, ಎಂ.ಕೆ.ಇಂದಿರಾ ಮೊದಲಾದ ಕಾದಂಬರಿಕಾರರು ತಮ್ಮದೇ ಸಂಪ್ರದಾಯವನ್ನು ಈಗಾಗಲೇ ನಿರ್ಮಿಸಿಕೊಂಡಿದ್ದರು. ವಸ್ತು, ಶೈಲಿ, ಧೋರಣೆ, ಸಂವಿಧಾನ ಮೊದಲಾದ ವಿಷಯಗಳಲ್ಲಿ ಎದ್ದುಕಾಣುವ ತಮ್ಮತನದ ಮುದ್ರೆಯನ್ನು ತಮ್ಮ ಕಾದಂಬರಿಗಳಲ್ಲಿ ಇವರೆಲ್ಲಾ ಒತ್ತಿದ್ದರು. ತಮ್ಮ ಕೃತಿಗಳ ಬಗೆಗೆ ಪೂರ್ವ ನಿರೀಕ್ಷೆಯುಳ್ಳ ಓದುಗ ವರ್ಗವನ್ನು ಈ ಕಾದಂಬರಿಕಾರರು ಹುಟ್ಟು ಹಾಕಿದ್ದರು. ಇದಕ್ಕೆ ನಿದರ್ಶನವೆಂದರೆ, 1977ರಲ್ಲಿ ಬಂದ ಕಾರಂತರ 'ಅದೇ ಊರು ಅದೇ ಮರ' ಕಾದಂಬರಿಯು ಸುಧಾರಣಾವಾದಿ ಪಾತ್ರತೆಯೊಳಗಿನ ಬದಲಾವಣೆಯ ಬಗೆಗಿನ ಅಸಹನೆಯನ್ನೇ ಮುಂದುವರೆಸಿದೆ. 'ಗ್ರಾಮಾಯಣ'ದ ದರ್ಶನ ನೀಡಿದ ರಾವಬಹಾದ್ದೂರರು ಚಲೇಜಾವ್ ಚಳುವಳಿಯ ಸಂದರ್ಭದ ವಿವಿಧ ಬಗೆಯ ಜೀವನಾಸಕ್ತಿಯುಳ್ಳ ವ್ಯಕ್ತಿಗಳ ಅನುಭವವನ್ನು ಸೂಕ್ಷ್ಮ ಕಲೆಗಾರಿಕೆಯಲ್ಲಿ ದಾಖಲಿಸುತ್ತಾರೆ. 1978ರಲ್ಲಿ ಬಂದ ಯು.ಆರ್. ಅನಂತಮೂರ್ತಿಯವರ 'ಅವಸ್ಥೆ' ಕಾದಂಬರಿಯಲ್ಲಿ 'ಸಂಸ್ಕಾರ' 'ಭಾರತೀಪುರ' ಕಾದಂಬರಿಗಳ ಆಶಯವೇ ಮುಂದುವರಿಯಿತು. ಅಂತರಂಗ ಬಹಿರಂಗಗಳ ನಡುವಿನ ಗೆರೆಯನ್ನೇ ಇಲ್ಲವಾಗಿಸುವಷ್ಟು ಸಂಕೀರ್ಣ ಸಂಬಂಧವನ್ನು ಹೊಂದಿದ ವ್ಯಕ್ತಿತ್ವದ ಶೋಧವನ್ನು 'ಅವಸ್ಥೆ' ಕೈಗೊಳ್ಳುತ್ತದೆ. ಸಾಮಾಜಿಕ ಪ್ರಕ್ರಿಯೆಯ ಪಾತಳಿಯಲ್ಲಿ ರಾಜಕೀಯ ವ್ಯಕ್ತಿತ್ವವನ್ನು ಕೃಷ್ಣಪ್ಪನ ಪಾತ್ರ ಹೊಂದಿದರೆ, ವೈಯಕ್ತಿಕ ಪಾತಳಿಯಲ್ಲಿ ಪ್ರೇಮಿ, ಆಧ್ಯಾತ್ಮಿಯ ಪಾತ್ರವಿದೆ. ಇವೆರಡರ ನಡುವಿನ ದ್ವಂದ್ವದಲ್ಲಿ ವ್ಯಕ್ತಿ-ಸಮಾಜ -ಚರಿತ್ರೆಯ ವಾಸ್ತವಗಳು ನಿರ್ಮಾಣವಾಗುತ್ತವೆಂಬ ದರ್ಶನ ಈ ಕಾದಂಬರಿಯದು. ಭ್ರಷ್ಟ ರಾಜಕೀಯದ ಹಿನ್ನೆಲೆಯಲ್ಲಿ ಮನುಷ್ಯ ಪ್ರಜ್ಞೆಯ ವಿವಿಧ ಅವಸ್ಥಾಂತರಗಳನ್ನು ಕೃಷ್ಣಪ್ಪ ಪಾತ್ರದ ಬದುಕಿನ ವಿವಿಧ ಹಂತಗಳಲ್ಲಿ ಈ ಕಾದಂಬರಿ ಅನಾವರಣಗೊಳಿಸುತ್ತದೆ.

ಗ್ರಾಮ್ಯಜೀವನದ ಸಂಕ್ರಮಣಾವಸ್ಥೆಯನ್ನು ಶೋಧಿಸಲೆತ್ನಿಸುವ ಕಾದಂಬರಿಗಳಾದ ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಹಾಗೂ ಚಂದ್ರಶೇಖರ ಕಂಬಾರರ 'ಕರಿಮಾಯಿ' 70ರ ದಶಕದವೇ. ಬರೆಯುವ ಪ್ರೇರಣೆಯನ್ನು ವಿಮರ್ಶಕರಿಂದ ಪಡೆಯುವಂತಿದ್ದ ನವ್ಯ ಸಂದರ್ಭವು 70ರ ದಶಕದ ಕೊನೆಯ ಹೊತ್ತಿಗಾಗಲೇ ಹೆಚ್ಚು ವಾಚಕಾಭಿಮುಖಿಯಾಗ ತೊಡಗಿತು. ಹೀಗಾಗಿ ಕಥನದ ತಾಂತ್ರಿಕತೆಯಕಡೆ ಒಲಿಯದ ನಿರಾಳ ಶೈಲಿಯನ್ನು ಲಂಕೇಶ ಮತ್ತು ಕಂಬಾರರು ಅನುಸರಿಸಿದರು. ಅಂತರಾಳದ ಸಂಘರ್ಷಗಳ ಶೋಧ ಉಸಿರುಗಟ್ಟಿಸುವಷ್ಟು ಅಸಹನೀಯವೆನಿಸಿದಾಗ, ಗ್ರಾಮ್ಯಸಹಜ ವ್ಯಕ್ತಿತ್ವಗಳ ಜೀವನೋತ್ಸಾಹಗಳನ್ನು ಕಾಣಿಸುವ ಉದ್ದೇಶ ಇವರಿಬ್ಬರಲ್ಲಿ ಕಂಡುಬರುತ್ತದೆ. ಆಧುನೀಕರಣ ಪ್ರಕ್ರಿಯೆಯನ್ನು ಸಿನಿಕತನದಿಂದ ನಿರಾಕರಿಸದೆ ಅದನ್ನು ಉತ್ಸಾಹ, ಬೆರಗಿನಿಂದ ಅರ್ಥೈಸಿಕೊಳ್ಳಲು ಎರಡೂ ಕಾದಂಬರಿಗಳು ಯತ್ನಿಸುತ್ತವೆ.

ನವ್ಯ ಸಾಹಿತ್ಯಕ್ಕೆ ದಕ್ಕಿದ ಈ ಆಯಾಮ ಸೃಜನಶೀಲತೆಯ ಸಾಧ್ಯತೆಗಳ ವಿಸ್ತಾರದ ಅರಿವನ್ನುಂಟುಮಾಡಿತು. ಈ ದಶಕದಲ್ಲಿ ಬಂದ ಶಾಂತಿನಾಥ ದೇಸಾಯಿಯವರ 'ಸೃಷ್ಟಿ' (1979) ಬದುಕಿನ ಅನಂತ ಸಾಧ್ಯತೆಗಳನ್ನೆಲ್ಲ ಸಾಹಿತ್ಯ ಒಳಗೊಳ್ಳುತ್ತದೆಂಬುದನ್ನು ಕಲಾತ್ಮಕವಾಗಿ ಬಿಂಬಿಸುವ ಕೃತಿ. ಸಾಮಾಜಿಕ ಬದ್ಧತೆ ಸೃಷ್ಟಿಕ್ರಿಯೆಯ ಪ್ರಮುಖ ಗುರಿಯಾದಾಗ ಲೆಕ್ಕಣಿಕೆಯ ಮಸಿಯನ್ನೆಷ್ಟು ಹರಿಸಿದರೂ ವ್ಯರ್ಥ; ರಕ್ತಕ್ರಾಂತಿ ಎಂಬ ಗಂಗಾವತರಣದಲ್ಲಿ ಮಿಂದು ಕಲಾವಿದರ ಪುನರ್ಜನ್ಮವಾಗಬೇಕೆಂಬ ಆಶಯ ಈ ಕಾದಂಬರಿಯದು. ಕನ್ನಡ ಕಥಾಸಾಹಿತ್ಯ ತನ್ನನ್ನು ಪರಂಪರೆಯ ಸಾಹಿತ್ಯರೂಪದಲ್ಲಿ ಸ್ಥಾಪಿಸಿಕೊಳ್ಳುವುದಕ್ಕೆ ಬದಲಾಗಿ ಹೊಸದಾಗಿ ಪುನಃ ರೂಪಿಸಿಕೊಂಡದ್ದನ್ನು ಸೂಚಿಸುವ ಕೃತಿಯಾಗಿ 'ಸೃಷ್ಟಿ' ಮುಖ್ಯವೆನಿಸುತ್ತದೆ.

'ಸೃಷ್ಟಿ' ಕ್ರಿಯೆಯಲ್ಲಿ ಅನುಭವದ ತಾತ್ವಿಕತೆಗಿಂತ ಅಭಿವ್ಯಕ್ತಿಯ ತಾಂತ್ರಿಕತೆಗಿಂತ 'ಅನುಭವವೇ' ಮುಖ್ಯವಾದ ಸಂದರ್ಭ ದಲಿತ ಬಂಡಾಯ ಚಳವಳಿಯದು. ಕಾದಂಬರಿ ರಚನೆಯ ಹಿಂದೆ ಕೆಲಸ ಮಾಡಿದ ಕಾಳಜಿಯನ್ನೇ ಪ್ರಧಾನನೆಲೆಗೆ ತರುವ ಹವಣಿಕೆ ಈ ಸಂದರ್ಭದ ಕಾದಂಬರಿಗಳದು. ವಸ್ತು, ತಂತ್ರ, ಶೈಲಿ, ವರ್ಣನೆಗಳು ತಮಗೆ ತಾವೇ ಮುಖ್ಯವಾಗದೆ ಅನುಭವದ ಒಡಲಾಳದಿಂದ ಮೂಡಿಬರುವ ಬದ್ಧತೆಗೆ ಪ್ರಾಧಾನ್ಯ ಬಂತು. ದೇವನೂರ ಮಹದೇವರ ಕಿರುಕಾದಂಬರಿ 'ಒಡಲಾಳ'ದ ಕೇಂದ್ರ ಪ್ರತಿಮೆ ಹಿಂಗಿಸಲು ಅಸಾಧ್ಯವಾಗುಳಿದ ಹಸಿವೆಯ ಬೆಂಕಿ. ಈ ಹಸಿವಿನ ಬೆಂಕಿ ನವೋದಯದ ಸುಧಾರಣಾವಾದಿ ಸುರಕ್ಷಿತ ನೆಲೆಯನ್ನು ದುಃಸ್ವಪ್ನದಂತೆ ಕಾಡಬಲ್ಲ ಕ್ರಾಂತಿಯ ಬೆಂಕಿ. ದುಃಸ್ವಪ್ನವಾದದ್ದು ಪ್ರಗತಿಶೀಲರಲ್ಲಿ ಅತಿಸರಳೀಕರಣಗೊಂಡು ರಂಜನೆಯ ವಿಷಯವಾಯಿತು. ಆದರೆ ದಲಿತ ಬಂಡಾಯದ ಸಂದರ್ಭ ಸ್ಪಷ್ಟವಾಗಿ ಸಾಮಾಜಿಕ ಸಂಚಲನಗಳನ್ನು ಸಂಘಟಿತ ರೂಪದಲ್ಲಿ ಸಾಧ್ಯವಾಗಿಸಿತು. ದಲಿತ ಸಂಘರ್ಷ ಸಮಿತಿ, ಬಂಡಾಯ ಸಂಘಟನೆಗಳು ಕನ್ನಡದ ಮಹತ್ವದ ಕಾದಂಬರಿಕಾರರ ಸಾಮಾಜಿಕ ಬದ್ಧತೆಯ ನೆಲೆಗಳಾದವು.

ವರ್ಣವ್ಯವಸ್ಥೆಯ ಸಂಕೀರ್ಣ ಗ್ರಾಮಸಮಾಜದ ಶೋಷಣೆಯ ಸ್ವರೂಪವನ್ನು ವಾಸ್ತವತಾವಾದೀ ನೆಲೆಯಲ್ಲಿ ಕಂಡರಿಸುವ ಯತ್ನ ಹಲವಾರು ಕಾದಂಬರಿಗಳದು. ಜಾತಿ, ಅಸ್ಪೃಶ್ಯತೆ, ವರ್ಗಸಂಬಂಧಗಳು, ಲಿಂಗ ವ್ಯವಸ್ಥೆಗಳ ನಡುವಿನ ಸಂಬಂಧಗಳ ಜಟಿಲತೆಯನ್ನು ಬರಗೂರು ರಾಮಚಂದ್ರಪ್ಪನವರ 'ಒಂದು ಊರಿನ ಕತೆ' ಸ್ಪಷ್ಟಪಡಿಸುತ್ತದೆ. 'ಸೂರ್ಯ', 'ಉಕ್ಕಿನ ಕೋಟೆ', 'ಹುತ್ತ' ಕಾದಂಬರಿಗಳಲ್ಲಿ ವ್ಯವಸ್ಥೆಯ ಕ್ರೌರ್ಯದ ಬಹುಮುಖಗಳನ್ನು ಹಾಗೂ ಶೋಷಿತರ ಪ್ರತಿರೋಧವನ್ನು ಬರಗೂರರು ಮುಖಾಮುಖಿಯಾಗಿಸುತ್ತಾರೆ. ಸಾಮಾಜಿಕ ಚಳವಳಿಯ ತಾತ್ವಿಕತೆಯ ವ್ಯಾಖ್ಯಾನರೂಪವಾಗಿ ಈ ಕಾದಂಬರಿಗಳು ನಿಲ್ಲುತ್ತವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಬಡ ಗೇಣಿದಾರನ ಅತಂತ್ರ ಸ್ಥಿತಿಯನ್ನು ವಿಶುಕುಮಾರರ 'ಭೂಮಿ' ಹಿಡಿದಿಡುತ್ತದೆ. ನಾ.ಡಿಸೋಜರ 'ತಿರುಗೋಡಿನ ರೈತ ಮಕ್ಕಳು' (1979), ರಮೇಶ ಹುಲ್ಲುಕೆರೆಯವರ 'ತೆಂಡೆ', ನಾ.ಮೊಗಸಾಲೆ ಅವರ 'ಪಲ್ಲಟ' ಗ್ರಾಮ್ಯವೈಷಮ್ಯವನ್ನು ವಸ್ತುವಾಗಿಟ್ಟುಕೊಂಡ ಕಥನಗಳು. ಇದೇ ಅವಧಿಯಲ್ಲಿ ಬಂದ ಬಸವರಾಜ ಕಟ್ಟೀಮನಿಯವರ 'ಹರಿಜನಾಯಣ' ವರ್ಗ ಸಂಘರ್ಷದ ಸಮಸ್ಯೆಗಳನ್ನು ಸರಳೀಕೃತಗೊಳಿಸಿದ ಕಾದಂಬರಿ. ಕಾರಂತರಂಥ ಕಾದಂಬರಿಕಾರರು 'ನಾವು ಕಟ್ಟಿದ ಸ್ವರ್ಗ'ದಲ್ಲಿ ಸ್ವಾತಂತ್ರ್ಯೋತ್ತರ ಭಾರತವನ್ನು ಕುರಿತಂತೆ ಭ್ರಮನಿರಸನ ಭಾವವನ್ನು ಚಿತ್ರಿಸಿದರು.

70ರ ದಶಕದ ಉತ್ತರಾರ್ಧ ಕನ್ನಡದ ಹಿರಿಯ ಸಾಹಿತಿಗಳಿಗೆ ಭ್ರಮನಿರಸನವನ್ನುಂಟುಮಾಡಿದ ಕಾಲ. ಗ್ರಾಮ-ನಗರಗಳಲ್ಲಿನ ವಿಕರೂಪ ಭ್ರಷ್ಟರೂಪದೊಂದಿಗೆ, ಇನ್ನಿಲ್ಲದ ಸಾಂಸ್ಕೃತಿಕ ಬಿಕ್ಕಟ್ಟುಗಳು ಮೂಡಿಬಂದ ಕಾಲವಿದು. 'ನಾವು ಕಟ್ಟಿದ ಸ್ವರ್ಗ' ಎಂಬ ವ್ಯಂಗ್ಯದ ನೆಲೆಯ ಕಾದಂಬರಿಯನ್ನು ಕಾರಂತರು ಬರೆದರೆ ಎಸ್.ಎಲ್.ಭೈರಪ್ಪನವರು 'ಪರ್ವ'ದ ಮೂಲಕ ಬಿಕ್ಕಟ್ಟುಗಳಿಗೆ ಪರ್ಯಾಯವನ್ನು ಹುಡುಕುವ ಹವಣಿಕೆಯಲ್ಲಿ ತೊಡಗಿದರು. ಮಹಾಭಾರತವನ್ನು ಸಮೂಹ ಜೀವನ ಸಂಹಿತೆಯ ನೆಲೆಯಿಂದ ವ್ಯಕ್ತಿಗತ ನೆಲೆಯಲ್ಲಿ ಸ್ಥಾಪಿಸುವ ನಾಟಕೀಯ ಹಾಗೂ ಭಾವಗೀತಾತ್ಮಕ ನಿರೂಪಣಾ ಶೈಲಿಯುಳ್ಳ ಕೃತಿಯಿದು. ಪ್ರಭುತ್ವ ಹಾಗೂ ಕುಟುಂಬ ವ್ಯವಸ್ಥೆಯೊಳಗಿನ ಸ್ತ್ರೀಪುರುಷ ಸಂಬಂಧಗಳ ಪಲ್ಲಟಗಳನ್ನು 'ಪರ್ವ' ವಿಭಿನ್ನ ನೆಲೆಯಲ್ಲಿ ಹಿಡಿದಿಡಲೆತ್ನಿಸುತ್ತದೆ. ಕತೆಯ ಮೂಲ ಪುರಾಣದ್ದಾದರೂ ಪುರಾಣಭಂಜನೆ ಮಾಡದೇ ಪುರಾಣವನ್ನು ಸಮಕಾಲೀನ ಸಂದರ್ಭದ ವ್ಯಾಖ್ಯಾನವಾಗಿ ರೂಪಾಂತರಿಸಲಾಗಿದೆ. ಸಿದ್ಧಪಾತ್ರಗಳ ಚೌಕಟ್ಟಿನಾಚೆ ಸ್ತ್ರೀಪಾತ್ರಗಳಿಗೆ ಈ ಕಾದಂಬರಿ ಕಲ್ಪಿಸಿರುವ ಆಯಾಮ 80ರ ದಶಕದಲ್ಲಿ ಪ್ರಚುರಗೊಂಡ ಮಹಿಳಾ ಆಂದೋಲನದ ಪೂರ್ವ ಸೂಚನೆಯಾಗಿದೆ. ಇದೇ ಅವಧಿಯಲ್ಲಿ (1980) ಬಂದ ಎಚ್.ವಿ.ಸಾವಿತ್ರಮ್ಮ ಅವರ 'ಸೀತೆ-ರಾಮ-ರಾವಣ' ಕಾದಂಬರಿಯು ರಾಮಾಯಣವನ್ನು ಸ್ತ್ರೀವಾದಿ ನೆಲೆಯಲ್ಲಿ ಕಟ್ಟಿಕೊಡಲೆತ್ನಿಸುತ್ತದೆ. ವ್ಯವಸ್ಥೆಯ ವೈರುಧ್ಯವಾದ ರಕ್ಷಣೆ-ಆಕ್ರಮಣಗಳ ಸುಳಿಗೆ ಸಿಕ್ಕ ಸ್ತ್ರೀ ಪಾತ್ರಗಳು ಈ ಕೃತಿಯಲ್ಲಿ ತಮ್ಮ 'ಅನುಭವ'ವನ್ನು ತಾತ್ವೀಕರಿಸಿಕೊಳ್ಳಲೆತ್ತಿಸುತ್ತವೆ. ಅನುಪಮಾ ನಿರಂಜನರ 'ಆಳ', ಗೀತಾನಾಗಭೂಷಣರ 'ಹಸಿಮಾಂಸ ಮತ್ತು ಹದ್ದು', ವೀಣಾ ಶಾಂತೇಶ್ವರ ಅವರ 'ಗಂಡಸರು' ಕಾದಂಬರಿಗಳು ಮಹಿಳಾ ಸಮಸ್ಯೆಯನ್ನು ಪ್ರಜ್ಞೆ- ಪರಿಸರಗಳ ನಡುವಿನ ಗತಿತಾರ್ಕಿಕತೆಯಲ್ಲಿ ಅತ್ಯಂತ ನೈಜವಾಗಿ ಸ್ಥಾಪಿಸಲೆತ್ನಿಸುತ್ತವೆ. ತನ್ನೆಲ್ಲ ಮಾನಸಿಕ ಭಾವದ್ರವ್ಯವನ್ನು ಮಹಿಳೆ ಪುರುಷ ಕೇಂದ್ರಕ್ಕೆ ಸಮರ್ಪಿಸುವ, 'ತ್ಯಾಗಸುಖ'ದ ಜನಪ್ರಿಯ ಕಥನಗಳಿಂದ ಭಿನ್ನವಾದ ಮಾರ್ಗವನ್ನು ಮಹಿಳಾ ಬರೆವಣಿಗೆ ಹಿಡಿಯತೊಡಗಿತು. ಮಹಿಳಾ ಶೋಷಣೆಯ ಪ್ರತೀಕವಾಗಿ 'ಹಸಿಮಾಂಸ ಮತ್ತು ಹದ್ದು'ವನ್ನು ಪರಿಭಾವಿಸುವ ಗೀತಾನಾಗಭೂಷಣರು ತಾಯ್ತನಕ್ಕಂಟಿಕೊಂಡಿರುವ ವೈಭವೀಕರಣವನ್ನು ಲಚ್ಚಿ ಪಾತ್ರದ ಮೂಲಕ ಸ್ಫೋಟಿಸಿದರು. ವಿದ್ಯಾವಂತ ಉದ್ಯೋಗಸ್ಥ ಹೆಣ್ಣಿನ ಪ್ರಜ್ಞಾಜಾಗೃತಿ ಒಳಗೊಳ್ಳಬಹುದಾದ ತಲ್ಲಣಗಳನ್ನು ನಿರೂಪಿಸುತ್ತಲೇ ಪುರುಷ ರಾಜಕಾರಣದ ಸ್ವರೂಪವನ್ನು ನಾಗರಿಕ ಸಂದರ್ಭದಲ್ಲಿ ತೆರೆದಿಡುವ ಯತ್ನ 'ಆಳ' ಹಾಗೂ 'ಗಂಡಸರು' ಕಾದಂಬರಿಗಳದು.

ಪಶ್ಚಿಮದ ಅಭಿವೃದ್ಧಿ ಸಿದ್ಧಾಂತಗಳನ್ನು ಅನುಮಾನದಿಂದ ನೋಡಬಲ್ಲ, ಪ್ರಶ್ನಿಸಬಲ್ಲ ಪರ್ಯಾಯ ಸೃಷ್ಟಿಯನ್ನು ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಗಳು ಹೊಂದಿವೆ. ವ್ಯಕ್ತಿ, ಸಮೂಹ, ನಿಸರ್ಗದ ನಿತ್ಯದೈನಿಕದ ಸೂಕ್ಷ್ಮಾತಿಸೂಕ್ಷ್ಮ ಆಗುಹೋಗುಗಳ ದರ್ಶನ ಸುಲಭಗ್ರಾಹ್ಯವಲ್ಲ. ಎಲ್ಲವನ್ನೂ ಅರ್ಥೈಸಬಲ್ಲೆ ಎಂಬ ಬೌದ್ಧಿಕ ಅಹಂಕಾರಕ್ಕೆ ಸಿಗದೆ ನುಣುಚಿಕೊಳ್ಳುವ ವಾಸ್ತವಸತ್ಯವನ್ನು ಗ್ರಹಿಸುವ ಬಗೆ ಯಾವುದೆಂಬ ಹುಡುಕಾಟ 'ಕರ್ವಾಲೋ' ಕೃತಿಯದು. ಜೀವವಿಕಾಸ ಸಿದ್ಧಾಂತವನ್ನಾಧರಿಸಿದ ಅಭಿವೃದ್ಧಿ ಸಿದ್ಧಾಂತಗಳು, ಅವುಗಳನ್ನಾಧರಿಸಿದ ರಾಜಕಾರಣದಲ್ಲಿ 'ಮಂದಣ್ಣ'ನಂಥ ದೇಸಿ ಪ್ರತಿಭೆಗಳು 'ಸ್ಥಗಿತ ಪ್ರಜ್ಞೆ'ಯುಳ್ಳ ಜೀವಿಗಳಾಗಿ ತಪ್ಪು ವ್ಯಾಖ್ಯಾನಕ್ಕೊಳಗಾಗುತ್ತಿದ್ದಾರೆ. ಬೌದ್ಧಿಕತೆಗೆ ಮಾನವೀಯ ಸ್ಪರ್ಶವಿದ್ದಾಗ ಮಾತ್ರ ಸಾಮರ್ಥ್ಯದ ಅನಂತ ಸಾಧ್ಯತೆಗಳ ನೆಲೆಯಾಗಿ ಜೀವಿಯನ್ನು ಕಾಣಲು ಸಾಧ್ಯವೆಂಬ ತಾತ್ವಿಕ ಸತ್ವವನ್ನು 'ಕರ್ವಾಲೋ' ಒದಗಿಸುತ್ತದೆ. ವೇಗದ ಓಟದಲ್ಲಿ ಹಿಂದುಳಿದವರ ಅದಮ್ಯ ಶಕ್ತಿಯ ಅಪಾರ ಸಾಧ್ಯತೆಗಳ ಬಗೆಗೆ ಹೆಚ್ಚು ಆಶಾವಾದಿಯಾದ ಸಂದರ್ಭ 70ರ ದಶಕದ್ದು. ಸಾಮಾಜಿಕ ಸಂಘಟನೆಗಳ ನಾಯಕತ್ವವನ್ನು ಸುಧಾರಣಾವಾದಿ ನೆಲೆಗಿಂತ ಭಿನ್ನವಾಗಿ ವಿವರಿಸಿಕೊಳ್ಳಬೇಕಾದ ಅನಿವಾರ್ಯತೆ ಈ ಸಂದರ್ಭದಲ್ಲುಂಟಾಯಿತು. ಹೊಸ ಬದುಕಿನ ನಿರ್ಮಾಣಕ್ಕೆ ತೊಡಗುವವರು ಯಾವ ವರ್ಗದವರೇ ಇದ್ದರೂ ಮುಂಚೂಣಿಯ ನಾಯಕತ್ವ ದಲಿತರದೇ ಇರಬೇಕೆಂಬ ಆಶಯ ಬರಗೂರರ 'ಸೀಳುನೆಲ'ದ್ದು (1980). ಅಂತರ್ಮುಖವಾಗಿದ್ದು, ಕ್ರಾಂತಿಯ ಬಗೆಗಿನ ವೈಚಾರಿಕ ಪ್ರೇರಣೆಗಳನ್ನು ಹೊರಗಿನಿಂದ ಪಡೆದ ನಾಯಕನ ವ್ಯಕ್ತಿತ್ವದ ಮಿತಿಗಳನ್ನು 'ನಾಯಕತ್ವ'ದ ಸಮಸ್ಯೆಯಾಗಿ ಇಲ್ಲಿ ಕಾಣಿಸಲಾಗಿದೆ. ಈ ಹೊತ್ತಿನಲ್ಲೇ ಬಂದ ಎಚ್.ತಿಪ್ಪೇರುದ್ರಸ್ವಾಮಿಯವರ 'ನೆರಳಾಚೆಯ ಬೆಳಗು' ಕಾಯಕವನ್ನು ಯೋಗವಾಗಿಸಿಕೊಂಡು ಸಿದ್ಧರಾಮನನ್ನು ಸಿದ್ಧಕಥಾಚೌಕಟ್ಟಿನಲ್ಲಿಯೇ ಚಿತ್ರಿಸುತ್ತದೆ.

ನಗರ ಹಾಗೂ ಗ್ರಾಮವೆಂಬ ಭಿನ್ನತೆಯನ್ನು ಕಾಯ್ದು ಕೊಳ್ಳಲಾರದಷ್ಟು ಸಂಕೀರ್ಣಗೊಂಡ ಸಾಮಾಜಿಕ ಸಂದರ್ಭವನ್ನು 80ರ ದಶಕದ ಕಾದಂಬರಿಗಳು ವಿಶ್ಲೇಷಣೆಗೊಳಪಡಿಸುತ್ತವೆ. ಚದುರಂಗರ 'ವೈಶಾಖ', ತೇಜಸ್ವಿಯವರ 'ಚಿದಂಬರ ರಹಸ್ಯ', ದೇವನೂರು ಮಹಾದೇವ ಅವರ 'ಕುಸುಮಬಾಲೆ', ಮನಜ ಅವರ 'ಮಾಗಿ', ಕುಂ. ವೀರಭದ್ರಪ್ಪನವರ 'ಕಪ್ಪು, ಪಕ್ಷಿ', ಅರವಿಂದ ಮಾಲಗತ್ತಿಯವರ 'ಕಾರ್ಯ', ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ಇವು ಸಾಮಾಜಿಕ ಸ್ಥಿತ್ಯಂತರಗೊಳ್ಳುತ್ತಿರುವ ಭಾರತದ ದರ್ಶನವನ್ನು ಮಾಡಿಕೊಡುತ್ತವೆ. ಈ

ಕೃತಿಗಳು ದಲಿತ ಮತ್ತು ಮಹಿಳೆ ಹಾಗೂ ಅಂತಾರಾಷ್ಟ್ರೀಯ ರಾಜಕಾರಣದ ನೆಲೆಗಳಿಂದ ಸ್ಥಿತ್ಯಂತರದ ಸೂಕ್ಷ್ಮಗಳನ್ನು ಅರ್ಥೈಸಲೆತ್ನಿಸುತ್ತವೆ.

ಮಾನವನ ಅಂತರಂಗದ 'ನಿಗೂಢತೆ'ಯ ಶೋಧದಷ್ಟೇ ಮಾನವ ಸಮಾಜದ ಅಂತರಂಗವೂ ಅನೂಹ್ಯವೆಂಬುದನ್ನು ತೇಜಸ್ವಿಯವರ 'ಚಿದಂಬರ ರಹಸ್ಯ' ಸಾಧಿಸುತ್ತದೆ. ಸಮಾಜದ ಅಂತರಂಗವನ್ನು ಕಲಾತ್ಮಕ ರೂಪದಲ್ಲಿ ಹಿಡಿದಿಡಲೆತ್ನಿಸಿದಾಗ ತೆಳುಪತ್ತೇದಾರಿ ಕಥನದಷ್ಟೇ ವ್ಯರ್ಥವೆಂಬುದನ್ನು ಕೃತಿ ತಿಳಿಸುತ್ತದೆ. ಮೌಢ್ಯ, ಜಾತೀಯ ದಂಗೆ, ಅಸಂಗತ ದಾಂಪತ್ಯ, ಕಚ್ಚೆ ಹರುಕತನ, ಪರಿಸರ ನಾಶ, ಅಂತಾರಾಷ್ಟ್ರೀಯ ಮಾಫಿಯಾ ಚಟುವಟಿಕೆ, ಕೊಲೆ, ಸುಲಿಗೆಗಳೇ ತಾಣವಾದ 'ಕೆಸರೂರು' ಭಾರತೀಯ ಸಮಾಜದ ಅಡ್ಡಕೊಯ್ತದ ಮಾದರಿಯಾಗಿ ಕಾಣುತ್ತದೆ. ಇಷ್ಟೆಲ್ಲಾ ವೈಷಮ್ಯದ ಮಧ್ಯೆಯೂ ಪ್ರಕೃತಿ ಸಹಜ ಮುಗ್ಧ ಪ್ರಾಮಾಣಿಕ ಪ್ರಣಯಿಗಳು ವಿನಾಶದ ಬೆಂಕಿಯಿಂದ ಪಾರಾಗುವ ಆಶಯ ಆಶಾವಾದಿ ನೆಲೆಯದಾಗಿದೆ.

ವೈಶಾಖ ಮತ್ತು ಕುಸುಮಬಾಲೆ ಕಾದಂಬರಿಗಳು ಸ್ತ್ರೀ ಶೋಷಣೆಯೊಂದಿಗೆ ಹಾಸುಹೊಕ್ಕಾಗಿರುವ ವರ್ಣ-ವರ್ಗ ಸಮಾಜದ ಬೇರುಗಳನ್ನು ಶೋಧಿಸಲೆತ್ನಿಸುತ್ತವೆ. ಎರಡೂ ಕಾದಂಬರಿಗಳಲ್ಲಿ ಲೈಂಗಿಕತೆ ಪ್ರಮುಖ ವಿಷಯವಾಗಿದೆ. ಜಾತಿ ಮತ್ತು ಹೆಣ್ಣಿನ ಪಾವಿತ್ರ್ಯ ಪರಿಕಲ್ಪನೆಗಳು ಒಗ್ಗೂಡಿ ಬ್ರಾಹ್ಮಣ ಜಾತಿಯ ರುಕ್ಮಿಣಿಯನ್ನೂ ದಲಿತ ಲಕ್ಕನನ್ನೂ ಬಲಿತೆಗೆದುಕೊಳ್ಳುವ ಮಾರ್ಮಿಕ ಕಥ'ನ ವೈಶಾಖ ಕಾದಂಬರಿಯಲ್ಲಿದೆ. ಮಾನವ ಅಸ್ತಿತ್ವವೇ ನಿರಾಕೃತಗೊಂಡ ದಲಿತ ಸಮುದಾಯದ ಬದುಕನ್ನು ಹೋರಾಟದ ಬೃಹತ್ ರೂಪಕವಾಗಿ ದೇವನೂರರ 'ಕುಸುಮಬಾಲೆ' ಹಿಡಿದಿಟ್ಟಿದೆ. ಕರುಳು ಬಳ್ಳಿ ತೊಡಕುಗಳನ್ನು ಆವರಿಸಿರುವ ಶ್ರದ್ಧೆ-ನಂಬಿಕೆಗಳ ದಟ್ಟ ಲೋಕದೊಳಗೆ ಭೂತ-ವರ್ತಮಾನ-ಭವಿಷ್ಯವೆಂಬ ಕಾಲಪರಿಗಣನೆಯಿಲ್ಲ. ವರ್ಣವ್ಯವಸ್ಥೆಯ ಭದ್ರ ಬೇರುಗಳುಳ್ಳ ಮರ ಗಿಡದ ಟೊಂಗೆಯಲ್ಲರಳುವ ಕುಸುಮವು ವರ್ಣಸಂಕರದ ಸಹಜ ಧರ್ಮಕ್ಕೆ ಅಧೀನ. ಈ ಸಹಜತೆಯನ್ನು ಹೊಸಕಿಹಾಕಬಲ್ಲ ವ್ಯವಸ್ಥೆಯ ಹಿಂಸಾಗುಣಕ್ಕೆ ಮಾಂತ್ರಿಕ ಶಕ್ತಿಯಿದೆ. ಸಾವಿನೆದುರು ಬದುಕಲೆಳಸುವ ಹೋರಾಟದಲ್ಲಿ ಮೈದುಂಬಿಕೊಳ್ಳದಿದ್ದರೆ ಗತ್ಯಂತರವಿಲ್ಲ. ಕ್ರಾಂತಿಯ ಸೂಚಕವಾದ ರಕ್ತದೊಂದಿಗಿನ ನೆನಪುಗಳೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸುತ್ತ ಕಾಯುತ್ತ ಕೂತ ದಲಿತ ಪ್ರಜ್ಞೆಯ ಜಾಗರಣವನ್ನು 'ಕುಸುಮ ಬಾಲೆ' ಪ್ರತಿಮಿಸುತ್ತದೆ. ಸಾಂಸ್ಕೃತಿಕ ನೆನಪುಗಳ ಮೂಲದ್ರವ್ಯವನ್ನು ಸಮಕಾಲೀನ ದಲಿತ-ಬಂಡಾಯ ಹೋರಾಟದ ತಾತ್ವಿಕ ಅಂಶವಾಗಿ ಹೇಗೆ ವಿನ್ಯಾಸಗೊಳಿಸಿಕೊಳ್ಳಬಹುದೆಂಬ ಮಹತ್ವದ ಸೂಚನೆ ಈ ಕಾದಂಬರಿಯಲ್ಲಿದೆ.

ಸಾಮಾಜಿಕ ಶೋಷಣೆಯನ್ನು ಸ್ತ್ರೀ ಕೇಂದ್ರದಿಂದ ನೋಡುತ್ತಾ ವಿಶಿಷ್ಟವಾಗಿ ವ್ಯಾಖ್ಯಾನಿಸುವ ಕೃತಿ - ಮ.ನ.ಜ. ಅವರ 'ಮಾಗಿ', ಪುರುಷ ಪ್ರಧಾನ ಕೌಟುಂಬಿಕ ಸಂರಚನೆಯೊಳಗೆ ಸೇರಿಯೂ ಸೇರದ ಮಹಿಳೆಯ ಅತಂತ್ರ ಸ್ಥಿತಿಯನ್ನು ಹಿಡಿದಿಡುತ್ತದೆ. ದಲಿತ ಮಹಿಳೆಯೊಬ್ಬಳ ಶ್ರಮ ಜೀವನದ ಮೌಲ್ಯವನ್ನು ಹೊಸ ಆರ್ಥಿಕ ಪರಿಭಾಷೆಯಲ್ಲಿ ಈ ಕೃತಿ ಕಟ್ಟುತ್ತದೆ.

ಉತ್ಪಾದನಾ ಸಾಧನವಾದ ಭೂಮಿ ಇಲ್ಲದಿದ್ದರೂ ಕೌಟುಂಬಿಕ ಸಂಬಂಧಗಳ ಆಪ್ತನೆಲೆಯನ್ನೂ ದಲಿತ ಪಾತ್ರಗಳು ಕಳೆದುಕೊಳ್ಳುವ ಪರಿ ಗೀತಾನಾಗಭೂಷಣರ 'ನೀಲಗಂಗಾ'ದಲ್ಲಿದೆ. ಜಮೀನ್ದಾರೀ ಪದ್ಧತಿಯ ಅಮಾನುಷ ಮುಖವನ್ನು ಬಸವಿ ಸಮಸ್ಯೆಯ ಮೂಲಕ ಕುಂ.ವೀ. ಅವರ 'ಕಪ್ಪು' ಪರಿಚಯಿಸುತ್ತದೆ. ಪಿತೃಪ್ರಾಧಾನ್ಯದ ಸಂಕೋಲೆಗಳ ಅರಮನೆಯಲ್ಲಿ ಹೆಣ್ಣೊಬ್ಬಳ ಜೀವಚೈತನ್ಯ ಮುರುಟಿಹೋಗುವುದನ್ನು ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಹೃದಯಂಗಮವಾಗಿ ಚಿತ್ರಿಸುತ್ತದೆ.

ಸಿಂಗಾರೆವ್ವನಂತೆಯೇ ಬರಗೂರರ 'ಬೆಂಕಿ'ಯ ನಾಯಿಕೆ ಲಕ್ಷ್ಮಿ ಈಡೇರಿಸಿಕೊಳ್ಳಲಾಗದ ದೈಹಿಕ ಕಾಮನೆಗಳಿಂದ ತಪ್ತಳಾದವಳು. ದಾಂಪತ್ಯದ ಎಲ್ಲೆಕಟ್ಟನ್ನು ಮೀರುವಲ್ಲಿ ದ್ವಂದ್ವಕ್ಕೊಳಗಾದರೂ ಹೊಸಬಾಳಿನ ಸಂಕಲ್ಪವನ್ನು ಹೊತ್ತ ಪಾತ್ರವಾಗಿ ಲಕ್ಷ್ಮಿ ಮೂಡಿಬಂದಿದ್ದಾಳೆ. ಸ್ತ್ರೀವಾದಿ ತಾತ್ವಿಕತೆಯ ಹಿನ್ನೆಲೆಯಲ್ಲಿ ಸ್ತ್ರೀ ಪುರುಷ ಸಂಬಂಧಗಳನ್ನು ವಿಭಿನ್ನವಾಗಿ ನಿರ್ವಚಿಸಿಕೊಳ್ಳುವ ಯತ್ನ ವೀಣಾ ಶಾಂತೇಶ್ವರರ 'ಮಹಿಳೆ' ಶೋಷಣೆ ಬಂಡಾಯ ಇತ್ಯಾದಿಯಲ್ಲಿದೆ. ತನ್ನ ಪರಿಚಯದ ಮಹಿಳೆಯರ ಮೇಲಿನ ಶೋಷಣೆಯನ್ನು ಅರ್ಥಮಾಡಿಕೊಳ್ಳುತ್ತಲೇ ತಾನೂ ಅವರ ಸಾಲಿನ ಪಾತ್ರವಾಗಿಬಿಡುವ ವಿಶಿಷ್ಟತೆ ಶಶಿಯದು. ಬೌದ್ಧಿಕ ನೆಲೆಯ ಸ್ತ್ರೀವಾದಿ ತಾತ್ವಿಕತೆಗೆ ಕ್ರಿಯಾಶೀಲ ಆಯಾಮವಿಲ್ಲದಿದ್ದರೆ ಏನಾಗುತ್ತದೆಂಬುದನ್ನು ಈ ಕೃತಿ ಪ್ರಕಟಿಸುತ್ತದೆ. ಬಳೆಪ್ರಿಯ ಮಹಿಳೆಯರು ಹಾಗೂ ಬಳೆಮುರುಕ ಅತ್ಯಾಚಾರಿ ಗಂಡಸರನ್ನೊಳಗೊಂಡ ಈ ಸಮಾಜದಲ್ಲಿ ಮಹಿಳೆಯ ನೆಲೆ-ಬೆಲೆಗಳೇನೆಂಬುದರ ವಿವೇಚನೆ ಬಿ.ಟಿ.ಲಲಿತಾನಾಯಕರ 'ನೆಲೆ-ಬೆಲೆ' ಕಾದಂಬರಿಯಲ್ಲಿದೆ. ಆದರೆ ಈ ದಶಕದಲ್ಲಿಯೇ ಬಂದ ಎಂ.ಕೆ.ಇಂದಿರಾ ಅವರ 'ತಾಳಿದವರು' ತಾಳಿಕೆಯ ನೀತಿಯನ್ನೇ ಬೋಧಿಸಲೆತ್ನಿಸುವ ಕೃತಿಯಾಗಿದೆ.

ನಗರೀಕರಣದ ಸಮಸ್ಯೆಯನ್ನು ಯಶವಂತ ಚಿತ್ತಾಲರ ಶಿಕಾರಿ ಸಮರ್ಥವಾಗಿ ಮನಗಾಣಿಸುತ್ತದೆ (ಪರಿಸರದ ಕ್ರೌರ್ಯಕ್ಕೆ ಉಪಾಯವೆಂಬಂತೆ 'ಮಣ್ಣಿಗೆ ಮರಳುವ' ಆಶಯ ಕಾರಂತರ 'ಗೆದ್ದ ದೊಡ್ಡಸ್ತಿಕೆ'ಯಲ್ಲಿದೆ). ಇಂಥ ರಮ್ಯ ಕಲ್ಪನೆಯಾಚೆ, ಗತಬದುಕಿನ ಮಣ್ಣಿನ ಸೆಳೆತವನ್ನು ನಿಷ್ಠುರ ಪರೀಕ್ಷೆಗೆ ಚಿತ್ತಾಲರು ಒಡ್ಡುತ್ತಾರೆ. ಗತದ ಬೇರುಗಳ ಮೂಲಕ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಯತ್ನವನ್ನು ಹೊಸಕಿಹಾಕಬಲ್ಲ ವ್ಯಾವಹಾರಿಕ ಸ್ಪರ್ಧಾ ಜಗತ್ತಿನ ಕ್ರೌರ್ಯವನ್ನು 'ಶಿಕಾರಿ' ನಿಚ್ಚಳವಾಗಿ ತೋರಿಸಲೆತ್ನಿಸುತ್ತದೆ.

ಯಶವಂತ ಚಿತ್ತಾಲರ ಶಿಕಾರಿ ಒಂದು ಮಹತ್ವದ ಕಾದಂಬರಿ. ಬೇಟೆಗೆ ಗುರಿಯಾಗುವವನಲ್ಲಿ ಇನ್ನಿಲ್ಲದ ಜೀವವಾಂಛೆಯನ್ನುದ್ದೀಪಿಸುವ ಕಲಾತ್ಮಕತೆ ಶಿಕಾರಿಗಿದೆ. ತನ್ನನ್ನು ತಾನು ಸಜ್ಜುಗೊಳಿಸಿಕೊಳ್ಳುವುದಕ್ಕೆ ಅವಕಾಶವನ್ನೇ ನೀಡದಂಥ ಕತ್ತಲಮರೆಯ ತರ್ಕಾತೀತ ಕ್ರೌರ್ಯವನ್ನು ಚಿತ್ತಾಲರ 'ಛೇದ' ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಕೊಲೆ ಸುಲಿಗೆಗಳ ಕ್ರೂರಜಗತ್ತಿನಲ್ಲಿ ಕೋಯಿ ಬಚಾವ್ ಎಂಬ ಕೂಗು ಪ್ರತಿಧ್ವನಿಸುತ್ತ ಮಾನವತ್ವದ ಛೇದವನ್ನು ಅಭಿನಯಿಸುತ್ತದೆ. 'ಪುರುಷೋತ್ತಮ'ದಲ್ಲಿಯೂ (1990) ಕ್ರೌರ್ಯವನ್ನೇ ಕೇಂದ್ರ ವಸ್ತುವಾಗಿ ಚಿತ್ತಾಲರು ನಿರೂಪಿಸಿದ್ದಾರೆ. ಅಸ್ತಿತ್ವದ ಭದ್ರನೆಲೆ, ವಿಸ್ತಾರವಾಗಬಹುದಾದ 'ಮನೆ'ಯು ಅತಿಕ್ರಮಣಕ್ಕೆ ಗುರಿಯಾಗುವ ಅಪಾಯಕಾರಿ ಸ್ಥಿತಿಯಲ್ಲಿಯೇ ಪುರುಷೋತ್ತಮತ್ವದ ಪೂರ್ಣ ಪ್ರಕಟನೆ ಸಾಧ್ಯವೆಂಬ ಧ್ವನಿ ಇಲ್ಲಿದೆ. 1990ರಲ್ಲಿ ಬಂದ ಭೈರಪ್ಪನವರ 'ಅಂಚು' ಕೂಡ ಹತಾಶಬದುಕಿನ ಪರಿಣಾಮವಾದ ಮಾನಸಿಕ ದೌರ್ಬಲ್ಯ ವಿಕೃತಿಯಿಂದ ಜೀವಪರತೆಯಲ್ಲಿ ನೆಲೆಗೊಳ್ಳುವ ಹೆಣ್ಣಿನ ಕಥನ. ಕುಟುಂಬ ಸಂಬಂಧಗಳ ಗಟ್ಟಿನೆಲೆಗಳು ಕರಗಿ ವ್ಯಕ್ತಿಗಳು ಅತಂತ್ರಗೊಳ್ಳುವ ಪರಿಯನ್ನು 1983ರಲ್ಲಿ ಬಂದ ಭೈರಪ್ಪನವರ 'ನೆಲೆ' ವಿವರಿಸಲೆತ್ನಿಸುತ್ತದೆ. ಕಾಮ ಮತ್ತು ಸಾವಿನ ತೀವ್ರಾನುಭವಗಳು ವ್ಯಕ್ತಿ ನೆಲೆಯನ್ನು ಪ್ರಭಾವಗೊಳಿಸುವ ಬಗೆಯನ್ನು ಇಲ್ಲಿ ಕಾಣಿಸಲಾಗಿದೆ.

ವ್ಯಾಸರಾಯ ಬಲ್ಲಾಳರ 'ಬಂಡಾಯ' (1984) ಹಾಗೂ ಶಂಕರ ಮೊಕಾಶಿ ಪುಣೇಕರರ 'ಅವಧೇಶ್ವರಿ' (1987) ಕಾದಂಬರಿಗಳು ಸಮೂಹ ವ್ಯಕ್ತಿ ಪ್ರತಿಭಟನೆಯ ತಾತ್ವಿಕತೆಯನ್ನು ಚಾರಿತ್ರಿಕ ನೆಲೆಯಲ್ಲಿ ವ್ಯಾಖ್ಯಾನಿಸಲೆತ್ನಿಸುತ್ತವೆ. 'ಬಂಡಾಯ'ದ ವಸ್ತು ಸಮಕಾಲೀನ ಚಾರಿತ್ರಿಕತೆಯಾದರೆ, 'ಅವಧೇಶ್ವರಿ'ಯ ವಸ್ತು ವೇದಕಾಲ ಸ್ಥಿತ್ಯಂತರಗೊಳ್ಳುತ್ತಿರುವ ಚಾರಿತ್ರಿಕತೆ. ವರ್ಗ ಪ್ರಜ್ಞೆಯ ವಿಕಾಸದ ಹಂತದಲ್ಲಿ ಪಲ್ಲಟಗೊಳ್ಳುವ ಸಾಮಾಜಿಕ ಸಂಬಂಧಗಳನ್ನು 'ಬಂಡಾಯ' ಅನ್ವೇಷಿಸುತ್ತದೆ. ವರ್ಣ ಪ್ರಜ್ಞೆಯ ಸಂಹಿತೆಯೊಳಗಿನ ಸಡಿಲಿಕೆಯುಂಟುಮಾಡುವ ರಾಜಕೀಯ ಸಂಘರ್ಷವನ್ನು 'ಅವಧೇಶ್ವರಿ' ಪುನಾರಚಿಸುತ್ತದೆ. ಕುಟುಂಬದೊಳಗಿನ ಸಿದ್ಧಪಾತ್ರದಿಂದಾಚೆ ತುಡಿವ ಸ್ತ್ರೀಪಾತ್ರಗಳನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಎರಡೂ ಕಾದಂಬರಿಗಳು ಸಾಮಾಜಿಕ ಬದಲಾವಣೆಯ ಸ್ವರೂಪ-ಸಾಧ್ಯತೆಗಳ ದರ್ಶನವನ್ನು ಕಟ್ಟಿಕೊಡುತ್ತವೆ. ಮಹಿಳೆಗೆ ವಿಧಿಸಿರುವ ಲೈಂಗಿಕ ಸಂಹಿತೆಯನ್ನು ಅನುಸರಿಸುವಾಗ ಎದುರಾಗಬಹುದಾದ ರಾಜಕೀಯ ತಾತ್ವಿಕತೆಯನ್ನು ಈ ಕಾದಂಬರಿಗಳು ಹಿಡಿದಿಡುತ್ತವೆ.

ಸಾಮಾಜಿಕ ಕ್ರಾಂತಿಯಲ್ಲಿನ ಮಹಿಳಾ ಸಹಭಾಗಿತ್ವವನ್ನು ಅನುಪಮಾ ನಿರಂಜನರ 'ಘೋಷ' (1985) ಹಾಗೂ 'ಮುಕ್ತಿಚಿತ್ರ' (1988) ಕಾದಂಬರಿಗಳು ಪ್ರಮುಖ ವಸ್ತುವನ್ನಾಗಿಸಿಕೊಂಡಿವೆ. ಅಬಲೆ, ಅಸಹಾಯಕಳೆಂದು ಕರೆಸಿಕೊಳ್ಳುತ್ತಿದ್ದ ಮಹಿಳೆ ಹೊಸ ಪ್ರಜ್ಞೆಯಿಂದ

ಜಾಗೃತಳಾಗಿ ಶೋಷಣೆಯ ವಿರುದ್ಧ ಬಂಡೇಳುವ ಕಥನ ಈ ಕಾದಂಬರಿಗಳದು.

ಕಾ.ತ.ಚಿಕ್ಕಣ್ಣನವರ 'ಮುಂಜಾವು' (1989) ಹಾಗೂ ಅರವಿಂದ ಮಾಲಗತ್ತಿಯವರ 'ಕಾರ್ಯ' (1989) ಕಾದಂಬರಿಗಳು ಶೋಷಿತರ ಬದುಕಿನ ಮೂಲರೂಪೀ ದುರಂತವನ್ನು ಚಿತ್ರಿಸುತ್ತವೆ. ದಲಿತರ, ಶೋಷಿತರ ಜೀವನ ಪ್ರೀತಿ, ಮುಗ್ಧತೆ, ಜಾಣತನ, ಸಹನೆ, ತಾಳ್ಮೆಗಳ ನಿರೂಪಣೆಗೆ ಹೊಸ ಆಯಾಮವನ್ನು ದಲಿತ ಬಂಡಾಯ ಸಂಘಟನೆ ಒದಗಿಸಿತು. ಮುಂಜಾವಿನ ತಿಮ್ಮಾಜಿಯ ದಂಗೆ ಹಾಗೂ 'ಕಾರ್ಯ'ದ ದಲಿತ ಸಮೂಹ ಕೈಗೊಳ್ಳಲೆತ್ನಿಸುವ ನ್ಯಾಯ ತೀರ್ಮಾನಗಳು ಸ್ಥಾಪಿತ ಸಂಸ್ಕೃತಿಯ ಸಂರಚನೆಯನ್ನೇ ಬುಡಮೇಲಾಗಿಸಬಲ್ಲಷ್ಟು ಸಶಕ್ತವಾಗಿವೆ. ಆದರೆ ತಮ್ಮಲ್ಲೇಳುವ ಪ್ರತಿರೋಧಕ ಅನುಭವವನ್ನು ಬೌದ್ಧಿಕ ನೆಲೆಯಲ್ಲಿ ಜ್ಞಾನರೂಪದ ತತ್ವವನ್ನಾಗಿಸಿಕೊಳ್ಳಲಾರದ ದುರಂತವನ್ನು 'ಕಾರ್ಯ' ಸೆರೆ ಹಿಡಿಯುತ್ತದೆ. ಹುಟ್ಟು ಸಾವುಗಳ ವರ್ತುಲಕ್ಕೆ ಸಂಬಂಧಿಸಿದ ಶ್ರದ್ಧೆ ನಂಬಿಕೆಗಳ ಮೂಲವಾದ ಭಾವದ್ರವ್ಯವನ್ನು ಪುರೋಹಿತಶಾಹಿ, ಊಳಿಗಮಾನ್ಯ ಪ್ರಬಲರು ಬಳಸಿಕೊಳ್ಳುವಲ್ಲಿ ಶೋಷಣೆಯ ಬೇರುಗಳಿರುವುದನ್ನು ಕಾರ್ಯ ಕಾದಂಬರಿ ಗುರುತಿಸುತ್ತದೆ.

ಮುಸ್ಲಿಂ ಸಮುದಾಯದ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಮೌಲ್ಯಗಳ ವಸ್ತುನಿಷ್ಠ ವಿಶ್ಲೇಷಣೆಯನ್ನು ಸಾರಾ ಅಬೂಬಕರ್‌ರವರ ಚಂದ್ರಗಿರಿಯ ತೀರದಲ್ಲಿ, ಸಹನಾ, ವಜ್ರಗಳು ಕಾದಂಬರಿಗಳು ಮಾಡಿವೆ. ಪಿತೃಪ್ರಧಾನ ಮೌಲ್ಯ ವ್ಯವಸ್ಥೆಯಡಿಯಲ್ಲಿ ನಲುಗಿಹೋದ ಮುಸ್ಲಿಂ ಮಹಿಳೆಯರ ಬವಣೆಯ ಕಥನ ಬಂಡಾಯದ ಆಶಯಕ್ಕೆ ಪೂರಕವಾಗಿದೆ.

ಒಟ್ಟಿನಲ್ಲಿ 1980ರ ದಶಕದ ಕಾದಂಬರಿಗಳು ವ್ಯಕ್ತಿ-ಸಮೂಹ ಸಾಧ್ಯತೆಗಳ ವಿಸ್ತಾರದ ಅರಿವನ್ನು ಹೆಚ್ಚಿಸಿದವು. ಈ ದಶಕದ ಪ್ರಾರಂಭದಲ್ಲಿ ಬಂದ ಶಾಂತಿನಾಥ ದೇಸಾಯಿ ಅವರ 'ಬೀಜ' ಕಾದಂಬರಿಯ ತಾತ್ವಿಕತೆಯಲ್ಲಿ ಇದು ಸ್ಪಷ್ಟವಾಗುತ್ತದೆ. ಬೀಜ, ಏಕಕಾಲಕ್ಕೆ ಬಂಧಿತ ಸ್ಥಿತಿಯನ್ನೂ ಬಿಡುಗಡೆಯ ಸಾಧ್ಯತೆಯನ್ನೂ ತನ್ನೊಳಗೆ ಅದ್ಭುತವಾಗಿ ಅಡಗಿಸಿಕೊಂಡ ರಹಸ್ಯ ಬಂಧನ ಒಡೆದು ಬೆಳೆದು ನಿಲ್ಲುವುದು ಮುಕ್ತಿ. ಬೀಜದ ಮುಕ್ತಿ ಸಂಗತಿ ಜಾಗೃತಿಗೆ ಆತ್ಮರತಿಯ ನವ್ಯನಾಯಕತ್ವದಿಂದ ಹೆಚ್ಚು ಸಮಾಜಮುಖಿಯಾಗಿ ಹೊರಳಿಕೊಳ್ಳುವ 'ಬೀಜ'ದ ನಾಯಕ ಶ್ರೇಯಾಂಸ-ಸ್ಥಿತ್ಯಂತರದ ಸೂಕ್ತ ಪ್ರತಿಮೆಯಾಗಿದ್ದಾನೆ.

ದಲಿತರ ವಿಚಾರ-ಭಾವದ್ರವ್ಯದ ಹರಣವನ್ನು ಕುರಿತ 'ಕಾರ್ಯ'ದ ಕಥನದ ಮುಂದುವರಿಕೆಯಾಗಿ 1992ರಲ್ಲಿ ಬಂದ ಮುಳ್ಳೂರು ನಾಗರಾಜ್ ಅವರ 'ಮರಣ ಮಂಡಲ ಮಧ್ಯದೊಳಗೆ' ಕಂಡುಬರುತ್ತದೆ. ಶೋಷಣೆಯ ಮೂಲವೇ ಮಿದುಳ ಹರಣವೆಂಬುದನ್ನು ಜಾನಪದೀಯ ಶೈಲಿಯಲ್ಲಿ ಈ ಕೃತಿ ನಿರೂಪಿಸುತ್ತದೆ. ಈ ಕೃತಿಯಲ್ಲಿ ಶುದ್ಧತೆ-ಅಶುದ್ಧತೆಯ ಪರಿಕಲ್ಪನೆಯನ್ನಾಧರಿಸಿದ ವರ್ಣಾಶ್ರಮ ವ್ಯವಸ್ಥೆಯ ಐತಿಹಾಸಿಕ ಪ್ರಕ್ರಿಯೆಯನ್ನು ಆಧುನಿಕ ಪೌರಾಣಿಕ ನೆಲೆಯಲ್ಲಿ ಹಿಡಿದಿಡಲಾಗಿದೆ. ವರ್ಣಸಂಕರದಿಂದ ಮೊಳೆಯುವ ಸ್ತ್ರೀ-ಪುರುಷ ಸಂಬಂಧಗಳು ಪ್ರೇಮ-ದ್ವೇಷ-ಅಸೂಯೆ-ಪ್ರತೀಕಾರ-ಪರಿವರ್ತನೆಗಳ ಸುಳಿಯಲ್ಲಿ ಸಿಲುಕಿಕೊಳ್ಳುವುದನ್ನು ಕಾದಂಬರಿ ಚಿತ್ರಿಸುತ್ತದೆ. ಕತ್ತಲ ರಾಜ್ಯದ ಸಾಂಕೇತಿಕತೆಯನ್ನು ಪ್ರಮುಖ ತಾತ್ವಿಕ ಪ್ರಶ್ನೆಯಾಗಿ ಬೆಳೆಸುವ ಪಾತ್ರವಾಗಿ ಬಸರಾಜು ಇದ್ದಾನೆ. ಆದರೆ ಸಂಘಟನೆಯು ಈ ತಾತ್ವಿಕತೆಯ ಅರಿವಿಲ್ಲದ ವ್ಯಕ್ತಿಗಳಲ್ಲಿರುವುದು ನೋವಿನ ಸಂಗತಿ. ಸಮಕಾಲೀನ ದಲಿತ ಬಂಡಾಯ ಸಂಘಟನೆಗಳ ಕುರಿತಾದ ಲೇಖಕರ ನಿಲುವೂ ಇದಾಗಿರಬಹುದೆನಿಸುತ್ತದೆ.

ಕಾರಂತ, ಕುವೆಂಪುರವರ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಈ ಹೊತ್ತಿನ ಪರಿಸ್ಥಿತಿಗೂ ಇರುವ ಅಂತರವನ್ನು ಪೂರ್ಣಚಂದ್ರ ತೇಜಸ್ವಿಯವರ 'ಜುಗಾರಿ ಕ್ರಾಸ್' ತೋರ್ಪಡಿಸುತ್ತದೆ. ಈ ಹೊತ್ತು ಕಾಳದಂಧೆಗಳ ತವರುಮನೆಯಾಗಿರುವ ಕಾಡು ರಮ್ಯ ಕಲ್ಪನೆಯ ತಾಣವಾಗಿಲ್ಲವೆಂಬ ವಾಸ್ತವವನ್ನು ಈ ಕಾದಂಬರಿ ಚಿತ್ರಿಸುತ್ತದೆ. ಅತ್ಯಂತ ಅಭದ್ರ ಸ್ಥಿತಿಯ ಅಂಚಿಗೆ ಸಾಮಾನ್ಯ ನಾಗರೀಕರನ್ನು ತಂದಿಟ್ಟ ಭ್ರಷ್ಟ ವ್ಯವಸ್ಥೆಯ ವಿಷವರ್ತುಲವನ್ನು ಈ ಕಾದಂಬರಿ ಪರಿಚಯಿಸುತ್ತದೆ. ಕೇಶವ ಮಳಗಿಯವರ ಕುಂಕುಮ ಭೂಮಿ - ಭೂಮಿಯೊಂದಿಗಿನ ಮಾನವ ಸಂಬಂಧಗಳ ಭಾವನಾತ್ಮಕ ಹಾಗೂ ಉಪಭೋಗಾತ್ಮಕ ನೆಲೆಗಳನ್ನು ಚರ್ಚಿಸುವ ಕೃತಿ. ಅಭಿವೃದ್ಧಿ ಸಿದ್ಧಾಂತಗಳ ರಾಜಕಾರಣವು ಪರಿಸರ ನಾಶದೊಂದಿಗೆ ಆ ಪರಿಸರವನ್ನಾಶ್ರಯಿಸಿದ್ದ ಶ್ರಮಜೀವಿಗಳನ್ನು ಹೊಸಕಿಹಾಕುವುದನ್ನು ನಾ.ಡಿಸೋಜರ 'ಒಡ್ಡು' ಸರಳವಾಗಿ ನಿರೂಪಿಸುತ್ತದೆ. ಪರಿಸರ ಅಧ್ಯಯನ ಆಯಾಮದ ಮೂಲಕ ಸ್ಥಳೀಯ ನೆಲೆಯ ಶೋಷಿತರ ಕಥನಗಳು ಜಾಗತಿಕ ನೆಲೆಗೆ ವಿಸ್ತಾರಗೊಳ್ಳುವುದನ್ನು 80ರ ದಶಕದ ಉತ್ತರಾರ್ಧದ ಕಾದಂಬರಿಗಳು ಸೂಚಿಸುತ್ತವೆ.

1990ರಲ್ಲಿ ಬಂದ ರೇಖಾ ಕಾಖಂಡಕಿಯವರ 'ಹೊಸ ಹೆಜ್ಜೆ' ಲಂಬಾಣಿ ಸಮುದಾಯದ ಸಾಂಸ್ಕೃತಿಕ ಬದುಕಿನ ವಿವರಗಳ ಒಡಲಿನಿಂದಲೇ ಬಂಡಾಯದ ಆಶಯವನ್ನು ಸ್ತ್ರೀಕೇಂದ್ರಿತ ನೆಲೆಯಲ್ಲಿ ಪ್ರಕಟಿಸುವ ಕೃತಿ. ಪುರುಷಕೇಂದ್ರದ ಸುತ್ತ ಕಟ್ಟಿಕೊಂಡ ತನ್ನ ಮಾನಸಿಕ ಭೌತಿಕ ಜೀವನದಿಂದ ಆಚೆ ಬರುವ ಕ್ರಿಯಾಶೀಲ ತಾತ್ವಿಕತೆ ಎಚ್.ವಿ.ಸಾವಿತ್ರಮ್ಮ ಅವರ 'ವಿಮುಕ್ತಿ'ಯಲ್ಲಿದೆ. ಸಾರ್ವತ್ರಿಕ ಜೀವನ ಸಂಹಿತೆಯಡಿ ಇಲ್ಲವಾಗುವ ರಾಮನ ಬದುಕೂ ಅದನ್ನವಲಂಬಿಸಿದ ಸೀತೆಯ ಸಂಕಷ್ಟಗಳನ್ನು ಲೇಖಕಿ ದಾಖಲಿಸುತ್ತಾರೆ. ಆ ಮೂಲಕ ಪುರುಷ ಪ್ರಧಾನವ್ಯವಸ್ಥೆಯೊಂದಿಗಿನ ಭಾವನಾತ್ಮಕ ಸಂಬಂಧಗಳನ್ನು ಮೀರಲೆಳಸುವ ಸೀತೆಯ ಮೂಲಕ ಸ್ತ್ರೀಸ್ವಾತಂತ್ರ್ಯದ ದರ್ಶನವನ್ನು 'ವಿಮುಕ್ತಿ' ನೀಡಿದೆ. ಜ್ಞಾನವನ್ನೇ ಅಧಿಕಾರವಾಗಿಸಿಕೊಂಡ ಯಜಮಾನ ಸಂಸ್ಕೃತಿಯ ದಬ್ಬಾಳಿಕೆಗೆ ಗುರಿಯಾದವರ ಬದುಕಿನ ಸತ್ವವನ್ನು (1989) ಸುನಂದಾ ಬೆಳಗಾಂವಕರರ 'ನಾಸು' ಕಳಕಳಿಯಿಂದ ಸ್ಥಾಪಿಸುತ್ತದೆ. ಸ್ತ್ರೀ ಗುಣಗಳೆಂದು ಪರಿಭಾವಿತವಾಗುವ ಅಂತಃ ಕರಣ, ಮೃದುತ್ವ, ಸಹನೆ, ಭಾವನಾತೀವ್ರತೆಗಳನ್ನು ಪುರುಷ ಚೇತನ ಅಂತರ್ಗತಮಾಡಿಕೊಳ್ಳಬೇಕಾದ ಜರೂರನ್ನು 'ನಾಸು' ಪಾತ್ರದ ಮೂಲಕ ಈ ಕೃತಿ ಮನಗಾಣಿಸುತ್ತದೆ. ಸಾಂಸ್ಕೃತಿಕ ಸ್ತ್ರೀವಾದೀ ಚಿಂತನೆಯನ್ನು ಪುರುಷಪಾತ್ರ ಕೇಂದ್ರದಿಂದ ಅಭಿವ್ಯಕ್ತಿಸುವ ಕಾದಂಬರಿ ಇದಾಗಿದೆ.

ಶೋಷಣೆಯ ಕಥನವನ್ನು ಮಾನವಶಾಸ್ತ್ರೀಯ ಸಂಶೋಧನ ಕುತೂಹಲದಿಂದ ಹಿಡಿದಿಡಲಾಗದೆಂಬುದು 1990ರ ದಶಕಗಳ ಕಾದಂಬರಿಗಳ ಮೂಲಕ ಇನ್ನಷ್ಟು ಸ್ಫುಟವಾಗುತ್ತದೆ. ಶಿವರಾಮ ಕಾರಂತರ ಅಥೆಂಟಿಸಿಟಿಗೂ 1990ರಿಂದೀಚಿಗಿನ ಸೃಜನಶೀಲತೆಯ ಅಥೆಂಟಿಸಿಟಿಗೂ ಗುಣಾತ್ಮಕ ವ್ಯತ್ಯಾಸ ಕಂಡುಬರುತ್ತದೆ. ಸಾಹಿತ್ಯಕ ಸೃಜನಶೀಲತೆ ಇನ್ನಿಲ್ಲದಂತೆ ಸಾಮಾಜಿಕ ಬದ್ಧತೆಯ ಪ್ರಶ್ನೆಯನ್ನು ಮುಖಾಮುಖಿಯಾಗಿಸಿಕೊಂಡ ಸಂದರ್ಭ ಇದಾಗಿದೆ.

ಸ್ವಂತ ಬದುಕಿನ ರಕ್ತ ಸಂಬಂಧಗಳ ಶೋಧದ ಮೂಲಕ ವರ್ಣಸಂಕರದ ಸಾಮಾಜಿಕ ಸೂಕ್ಷ್ಮಗಳನ್ನು ಅಧ್ಯಯನ ಮಾಡುವ ಕೇಂದ್ರ ಪಾತ್ರ - 'ಮೂಲಮುಖಿ'ಯ ಚಾರುಮತಿ. 1991ರಲ್ಲಿ ಹೊರಬಂದ ಈ ಕಾದಂಬರಿಯಲ್ಲಿ ಅನುಪಮಾ ನಿರಂಜನರು ಮಹಿಳಾ ಹೋರಾಟಗಳ ಮೂಲದ್ರವ್ಯವಾಗಿ ತಾತ್ವಿಕತೆಯೊಂದಿಗೆ ಕ್ರಿಯಾಶಾಲಿ ಜೀವನಾನುಭವವೂ ಅತ್ಯಗತ್ಯವೆಂದು ಸ್ಥಾಪಿಸುತ್ತಾರೆ. ಗ್ರಾಮ್ಯ ಬದುಕಿನ ಮುಗ್ಧತೆ, ಒಳಸಂಚುಗಳ ಸುಳಿಗಳು, ಔದಾರ್ಯ, ಕ್ಷುದ್ರತನಗಳ ಪ್ರತ್ಯಕ್ಷಾನುಭವದಲ್ಲಿಯೇ ಸಂಶೋಧನೆಗೆ ಮಾನವೀಯ ಆಯಾಮ, ಅಧಿಕೃತತೆ ಪ್ರಾಪ್ತವಾಗಬಲ್ಲುದೆಂಬುದನ್ನು ಈ ಕೃತಿ ಸೂಚಿಸುತ್ತದೆ. ಡಿ.ಎಸ್.ನಂದಾರಿಂದ ಪೂರ್ಣಗೊಂಡ ಅನುಪಮಾರ 'ದಿಟ್ಟೆ', ಸ್ವಂತ ನಿರ್ಧಾರಗಳ ಮೂಲಕವೇ ವೈಯಕ್ತಿಕವೂ ಹಾಗೂ ರಾಜಕೀಯ ವ್ಯಕ್ತಿತ್ವ ಉಳಿಸಿಕೊಂಡ ಅಬ್ಬಕ್ಕ ರಾಣಿಯ ದಿಟ್ಟತನವನ್ನು ಕೀರ್ತಿಸುತ್ತದೆ.

ಸೃಷ್ಟಿಯನ್ನು ಸ್ತ್ರೀತತ್ವವಾಗಿ ಅರ್ಥೈಸುವ ಪುರುಷ ಸೌಂದರ್ಯ ಮೀಮಾಂಸೆಯನ್ನು ಪುನರ್‌ವ್ಯಾಖ್ಯಾನಿಸುವ ನೆಲೆ ಸುನಂದಾ ಬೆಳಗಾಂವಕರ ಅವರ 'ಝುವಾದಿ'. ಸ್ವಾಹಿಲಿ ಭಾಷೆಯಲ್ಲಿ 'ಕಾಣಿಕೆ' ಎಂಬ ಅರ್ಥವುಳ್ಳ ಪದ 'ಝುವಾದಿ'. ಪ್ರಕೃತಿ ಹಾಗೂ ಸ್ತ್ರೀಯಲ್ಲಿನ ಸಂಗೋಪನಾ ಸತ್ವವನ್ನು ಕಾಣಿಕೆಯ ಭಾವದಲ್ಲಿ ಸ್ವೀಕರಿಸಿದಾಗ ಮಾತ್ರವೇ ಪುರುಷಅಹಂಕಾರ ಕರಗಿ ನಿಜಮಾನವತ್ವ ಸಾಧ್ಯವಾಗುತ್ತದೆ. ಅಂತರ್‌ದೃಷ್ಟಿ ಮೊಳೆಯುವ ತನಕ ಹೆಣ್ಣಿನ ಶೋಷಣೆ ಇರತಕ್ಕದ್ದೇ ಎಂಬ ನಿಲುವು ಈ ಕೃತಿಯದು.

ಕಥನದ ಸಾಂಪ್ರದಾಯಿಕ ಕ್ರಮಗಳಿಂದ ಬಿಡಿಸಿಕೊಂಡ ಸವಿತಾ ನಾಗಭೂಷಣರ 'ಸ್ತ್ರೀಲೋಕ' ಮಹಿಳಾ ಸಂಸ್ಕೃತಿಯ ವಿನೂತನ ಅಭಿವ್ಯಕ್ತಿಯಾಗಿದೆ. ಮಹಿಳೆಯರಿಬ್ಬರ ಸಂಭಾಷಣೆಯ ಘಟಕಗಳ ಮೂಲಕ ನಿತ್ಯ ದೈನಿಕವನ್ನು ವೈವಿಧ್ಯಮಯ ಗೃಹಿಕೆಗಳ ನೆಲೆಯಲ್ಲಿ ಈ ಕಾದಂಬರಿ ಸೃಷ್ಟಿಸುತ್ತದೆ. ಎಲ್ಲವನ್ನೂ ತಾತ್ವೀಕರಿಸುವ ಬೌದ್ಧಿಕತೆಯ ಅಹಂಕಾರಕ್ಕೆ ಉತ್ತರವೆಂಬಂತೆ ಸ್ತ್ರೀಲೋಕವನ್ನು ಈ ಕೃತಿ ಪುನರ್‌ವ್ಯಾಖ್ಯಾನಿಸುತ್ತದೆ.

80 ಹಾಗೂ 90ರ ದಶಕಗಳ ದಲಿತ ಬಂಡಾಯ ಕಥಾಸಾಹಿತ್ಯ ಈಗಾಗಲೇ ಸಿದ್ಧಗೊಂಡಿದ್ದ ತಾತ್ವಿಕತೆಯ ಒಳಶೋಧವನ್ನು ಸೂಕ್ಷ್ಮನೆಲೆಗೆ ವಿಸ್ತರಿಸಲೆತ್ನಿಸಿತು. ಹಾಗಾಗಿ, ಶೋಷಣೆಯ ಕಥನವನ್ನು ಸಮಕಾಲೀನ ಹಾಗೂ ಪುರಾತನ ನೆಲೆಗಳೆರಡರಲ್ಲೂ ಏಕಕಾಲಕ್ಕೆ ನಿರೂಪಿಸುವಂಥ ವಿನೂತನ ತಂತ್ರವನ್ನು ಬಳಸಿಕೊಳ್ಳಲಾಯ್ತು. ಆ ಮೂಲಕ ಆಚರಣಾತ್ಮಕ ಭಾವದ್ರವ್ಯಕ್ಕೆ ವೈಚಾರಿಕ, ಚಾರಿತ್ರಿಕ ವೇದಿಕೆಯನ್ನು ಕಲ್ಪಿಸಲಾಯಿತು. ಹಾಗೆಯೇ ಸಮಕಾಲೀನ ಸಮಾಜದ ವಾಸ್ತವದಲ್ಲಿನ ಹೋರಾಟಕ್ಕೆ ಭದ್ರವಾದ ಸಾಂಸ್ಕೃತಿಕ ಭಾವಕೋಶ ನಿರ್ಮಾಣಗೊಂಡಿತು.

ಸ್ವಾತಂತ್ರ್ಯೋತ್ತರ ಭಾರತೀಯ ಸಾಮಾಜಿಕ ಸಂದರ್ಭದ ಸಂಚಲನಗಳನ್ನು ಶೋಷಿತರ ನೆಲೆಯಿಂದ ಹಿಡಿದಿಡುವ ಕಾದಂಬರಿಗಳು ಸಾಕಷ್ಟು ಬಂದಿವೆ. ಭೂಮಿ ಮೇಲಿನ ಹಕ್ಕು, ವಿದ್ಯೆ ಹಾಗೂ ಉದ್ಯೋಗಾವಕಾಶಗಳ ಬೇಡಿಕೆ, ಸ್ವಾಭಿಮಾನ ಗಳಿಕೆ, ಸಾಂಸ್ಕೃತಿಕ ಗುರುತುಗಳ ಬಗೆಗಿನ ಹೆಮ್ಮೆ ಇತ್ಯಾದಿಗಳು ಕಾದಂಬರಿಗಳ ಪ್ರಮುಖ ಆಶಯಗಳಾಗಿವೆ. 1993ರ ಕುಂ.ವೀರಭದ್ರಪ್ಪನವರ 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಜೀತದಾಳೊಬ್ಬನ ಮಗ ವಿದ್ಯೆ ಪಡೆಯಲು ಹೊರಟ ಸಂಘರ್ಷದ ಕತೆಯನ್ನು ಹೇಳುತ್ತದೆ. ಬಿಡುಗಡೆಯ ಸಾಧ್ಯತೆಗಳ ಅರಿವು ಮಾತ್ರ ದಲಿತರನ್ನು ಮಾನಸಿಕ ದಾಸ್ಯದಿಂದ ಮುಕ್ತರಾಗಿಸಬಲ್ಲದೆಂಬುದನ್ನು ಇವರ ಇನ್ನೊಂದು ಕಾದಂಬರಿ ಕೆಂಡದ ಮಳೆ (1989) ನಿರೂಪಿಸುತ್ತದೆ. ಭೂಹೀನ ದಲಿತರ ಬದುಕುವ ಹಕ್ಕುಗಳಿಗಾಗಿ ಅಧಿಕಾರಶಾಹಿ ವ್ಯವಸ್ಥೆಯೊಳಗಿದ್ದೇ ಹೋರಾಡುವ ದಲಿತ ಸರ್ಕಾರಿ ಅಧಿಕಾರಯೊಬ್ಬನ ಸೋಲು ಗೆಲವುಗಳ ಕಥನ ಆರ್.ವಿ.ಭಂಡಾರಿಯವರ 'ಬೆಂಕಿಯ ಮಧ್ಯೆ' (1984) ಕಾದಂಬರಿಯದು.

ಬಿ.ಟಿ.ಲಲಿತಾನಾಯಕರ ಗತಿ (1983) ಹಾಗೂ ಎಂ.ವೀರಪ್ಪ ಮೊಯಿಲಿವರ ಕೊಟ್ಟ (1993) - ಈ ಕೃತಿಗಳು ಲಂಬಾಣಿ ಮತ್ತು ಕೊರಗ ಜನಾಂಗದ ನಂಬಿಕೆ, ಆಚರಣೆಗಳ ಹಿನ್ನೆಲೆಯುಳ್ಳವು. ಪುರೋಹಿತಶಾಹಿ ಹಾಗೂ ಅಧಿಕಾರಶಾಹಿ ವ್ಯವಸ್ಥೆ ಈ ಸಮುದಾಯಗಳನ್ನು ಶೋಷಿಸುವ ಬಗೆ ಇಲ್ಲಿ ನಿರೂಪಿತವಾಗಿವೆ. ಜೈವಿಕ ಮಾದರಿಯ ಬಂಡಾಯವನ್ನು ಸಂಘಟಿತ ಶೋಷಿತರು ಕೈಗೊಳ್ಳಬೇಕಾದ ಅನಿವಾರ್ಯತೆಯನ್ನು 80ರಿಂದೀಚಿನ ಕಾದಂಬರಿಗಳು ಮನಗಾಣಿಸುತ್ತವೆ. ಜೀವಪ್ರೇಮಕ್ಕೆ ಇಂಬಾಗಬಲ್ಲ ವರ್ಣಸಂಕರದ ಪುರಾತನ ಘಟನೆಗೆ ಮರಣ ಮಂಡಲ ಮಧ್ಯದೊಳಗೆ ಕೃತಿಯ ನಾಯಕ ಬಸರಾಜುವಿನ ಕನಸಿನ ಕಣ್ಣು ಸಾಕ್ಷಿಯಾಗುತ್ತದೆ. ಈ ಕಣ್ಣು ಹೋರಾಟದ ತಾತ್ವಿಕತೆಗೆ ಜೀವಂತಿಕೆ ತರಬಲ್ಲುದೆಂಬ ಆಶಾವಾದ ಕೃತಿಯಲ್ಲಿದೆ.

ಇರುವಿಕೆ ಮತ್ತು ಆಗುವಿಕೆಗಳ ನಡುವಿನ ಗತಿ ತಾರ್ಕಿಕತೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಮೂರು ತಲೆಮಾರಿನ ಪುರುಷ ಪಾತ್ರಗಳ ಕಥೆ ಅನಂತ ಮೂರ್ತಿಯವರ ಭವ ಕಾದಂಬರಿಯಾದು. ಆಗುವಿಕೆಯ ಹಂಬಲದಲ್ಲಿ ಮಾನವ ಸಂಬಂಧಗಳನ್ನು ಪುರುಷ ಪಾತ್ರಗಳು ಬೇಜವಾಬ್ದಾರಿಯಿಂದ ವ್ಯಾವಹಾರಿಕವಾಗಿ ಕಾಣುತ್ತವೆ. ಅದೇ, ನಿತ್ಯದೈನಿಕದ ಮಾನವಸಂಬಂಧಗಳನ್ನು ಜೀವಪ್ರೇಮದಿಂದ ಭವದ ಸ್ತ್ರೀಪಾತ್ರಗಳು ಕಾಣುತ್ತವೆ.

ಇವರ ದಿವ್ಯ ಕಾದಂಬರಿಯು ಸ್ತ್ರೀಸಾಮರ್ಥ್ಯದ ಬಗೆಗಿನ ತುಂಬು ವಿಸ್ಮಯದ ಕಥನವಾಗಿದೆ. ನೆಹರೂ ಪ್ರಣೀತ ಆಧುನಿಕ ಅಭಿವೃದ್ಧಿ ಸಿದ್ಧಾಂತದ ಪ್ರಾತಿನಿಧಿಕ ಪಾತ್ರ-ಘನಶ್ಯಾಮ. ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಗಾಢವಾಗಿ ತೊಡಗಿಸಿಕೊಳ್ಳುತ್ತಲೇ ಪ್ರಕೃತಿಯೊಂದಿಗಿನ ತಾದಾತ್ಮ್ಯವನ್ನೂ ಬೆಳೆಸಿಕೊಂಡಾಕೆ ಗೌರಿ. ಈ ಎರಡು ಮೂಲಗಳಿಂದ ಒದಗಿಬರುವ ಜೀವನಾನುಭವಗಳನ್ನು ಬೌದ್ಧಿಕ ಜ್ಞಾನವಾಗಿಸಿಕೊಳ್ಳದೆ ಸಹಜಜ್ಞಾನಿಯಾಗುತ್ತ ಸಾಗಿದವಳೀಕೆ. ಒಳ ಹೊರಗುಗಳ ದ್ವಂದ್ವವುಳ್ಳ ಪುರುಷನಿಗೆ ಗೌರಿಯಂಥ ರಹಸ್ಯ ಚೇತನದ ಸಂಗಮ ಅತ್ಯಗತ್ಯ. ಚಿರವಾಸ್ತವದ ಪ್ರತೀಕವಾದ ಗೌರಿ ಪ್ರತಿನಿಧಿಸುವ ಜೀವನತತ್ವ ಚರವಾಸ್ತವದ ಮಿತ ತಿಳುವಳಿಕೆಯ ಪಾಲಿಗೆ ದಿವ್ಯವೇ ಆಗುತ್ತದೆ. ಕೃಷ್ಣಮೂರ್ತಿ ಹನೂರರು ನಿಕ್ಷೇಪದಲ್ಲಿ (1998) ನಾಗರಿಕ ವ್ಯಾವಹಾರಿಕತೆ ಹಾಗೂ ಪ್ರಾಕೃತಿಕ ಜೀವನ ಸೌಂದರ್ಯ, ಮುಗ್ಧತೆಗಳನ್ನು ಮುಖಾಮುಖಿಯಾಗಿಸುತ್ತಾರೆ. ಉಪಭೋಗ ಸಂಸ್ಕೃತಿಯ ಕ್ರೌರ್ಯದಡಿಯಲ್ಲಿ ಆದಿವಾಸಿ ಹೆಣ್ಣುಗಂಡುಗಳ ಸುಂದರ ಬದುಕು ನಿರ್ನಾಮವಾಗುವುದನ್ನು ಕಾದಂಬರಿ ನಿರೂಪಿಸುತ್ತದೆ.

ಚದುರಂಗರ ಹೆಜ್ಜಾಲ (1998) ಪ್ರಕೃತಿಯ ಜೀವ ಸಂಗೋಪನೆಯನ್ನು ಕೇಂದ್ರವಾಗಿಟ್ಟುಕೊಂಡ, ಕಾಲೂರನೆಂಬ ದಲಿತನ ಕಥಾನಕ. ಶ್ರೇಣೀಕೃತ ಸಮಾಜದ ಕ್ರೌರ್ಯ, ಶೋಷಣೆಗಳನ್ನು ಬಯಲಿಗೆಳೆಯುತ್ತಲೇ ಬಿಡುಗಡೆಯ ಸಾಧ್ಯತೆಗಳನ್ನು ನಮ್ಮ ಮುಂದಿಡುವ ಕೃತಿ. ವೀರಪ್ಪಮೊಯ್ಲಿಯವರ ತೆಂಬರೆ (1999) ಕಾದಂಬರಿ ಭೂತಾರಾಧನೆ ಸಂದರ್ಭದಲ್ಲಿ ಪಂಜುರ್ಲಿ ಭೂತವನ್ನು ಕಟ್ಟುವ ಪಂಬದ ಜನಾಂಗದ ಬದುಕನ್ನು ಹಿನ್ನೆಲೆಯಾಗಿಟ್ಟುಕೊಂಡಿದೆ. ತೆಂಬರೆ ವಾದ್ಯ ಸಾಮಾಜಿಕ ಕ್ರಾಂತಿಗೆ ಅತ್ಯಗತ್ಯವಾದ ಶೋಷಿತರ ಅಂತರಾಳದ ಜೀವಚೈತನ್ಯದ ಬೃಹತ್ ಪ್ರತೀಕವಾಗಿ ಬೆಳೆದು ನಿಲ್ಲುತ್ತದೆ.

90ರ ದಶಕದಲ್ಲಿ ಬಂದ ಕಾದಂಬರಿಗಳು ಶೋಷಿತ ಸಮುದಾಯಗಳ ಆತ್ಮಕಥನಗಳಂತೆ ನಿರೂಪಿತವಾಗಿವೆ. ಶೋಷಣೆಯ ಸುಳಿಯಲ್ಲೇ ಉಳಿಯುವ ಬಹುಸಂಖ್ಯಾತರ ನಡುವಿನಿಂದ ಬಂದ ಶಿಕ್ಷಿತ ಪಾತ್ರವಾಗಿ ಈ ಕಾದಂಬರಿಗಳ ಕರ್ತೃಗಳೂ ಸೇರಿಹೋಗಿದ್ದಾರೆ. ಸಮುದಾಯದಿಂದ ಪ್ರತ್ಯೇಕವಾಗಿ ತನ್ನನ್ನು ಪ್ರಜ್ಞೆಯ ನೆಲೆಯಲ್ಲಿ ಗುರುತಿಸಲೆತ್ನಿಸಿಕೊಳ್ಳುವ ನವ್ಯ ಕಾದಂಬರಿಗಳಿಗಿಂತ ಭಿನ್ನಹಾದಿಯನ್ನು ಈ ದಶಕದ ಅನಂತರದ ಕೃತಿಗಳು ಹಿಡಿಯಲಾರಂಭಿಸಿದವು. ವ್ಯಕ್ತಿಪ್ರಜ್ಞೆಯನ್ನು ಸಮುದಾಯದೊಂದಿಗಿನ ತಮ್ಮ ಸಂಬಂಧವನ್ನು ಮತ್ತೂ ಗಾಢ ಹಾಗೂ ಆಳಗೊಳಿಸಿಕೊಳ್ಳಲು ಈ ಕಾದಂಬರಿಕಾರರು ಬಳಸಿಕೊಳ್ಳುತ್ತಾರೆ. ಹೀಗಾಗಿ ಏಕತಾನತೆ, ಘೋಷಣೆಗಳಿಲ್ಲದ, ಬಹುಮುಖಿ ಆಯಾಮಗಳುಳ್ಳ ಸಮುದಾಯ ಕಥನಗಳು ಸೃಷ್ಟಿಗೊಳ್ಳತೊಡಗಿದವು.

ತೆಂಬರೆ ಕಾದಂಬರಿಯ ತೋಮುವಿನಂತೆಯೇ ನೇರ ಹೋರಾಟಕ್ಕಿಳಿದ ದಲಿತ ಕೃಷಿಕಾರ್ಮಿಕಪಾತ್ರ ಲಕ್ಷ್ಮಣರ 'ಬದುಕು' ಕಾದಂಬರಿಯ ಮಾಳಕ್ಕಜ್ಜಿ. ಅಸಹಾಯಕತೆಯ ಚಿಪ್ಪೊಡೆದು, ಅನ್ಯಾಯದ ಬಗೆಗಿನ ಅರಿವನ್ನು ಹೊಂದುವ ಮಾಳಕ್ಕಜ್ಜಿ ದಲಿತ ಹೋರಾಟದ ಆತ್ಮವಿಶ್ವಾಸದ ಸಂಕೇತವಾಗುತ್ತಾಳೆ. ಬುಡಕಟ್ಟಿನ ಜೀವನಕ್ರಮದಲ್ಲಿ ಉಂಟಾಗುವ ಪಲ್ಲಟಗಳನ್ನೂ ಅದರ ತಲ್ಲಣಗಳನ್ನೂ ಸಮರ್ಥವಾಗಿ ಜಂಬಣ್ಣ ಅಮರಚಿಂತರ ಕುರುವಯ್ಯ ಮತ್ತು ಅಂಕುಶದೊಡ್ಡಿ (1993) ಹಿಡಿದಿಟ್ಟಿದೆ.

ಶೋಷಕ ಶೋಷಿತ ಸಂಬಂಧವನ್ನು ದ್ವೈತದ ನೆಲೆಯಲ್ಲಿ ಪರಿಭಾವಿಸದೆ, ವ್ಯಕ್ತಿಗತ ನೆಲೆಯಲ್ಲಿ ಏಕತ್ರಗೊಳಿಸಿ ಕಾಣಿಸುವ ಯತ್ನ ಶಿವರುದ್ರ ಕಲ್ಲೋಳಿಕರರ ಹೊಲಗೇರಿಯ ರಾಜಕುಮಾರ (1994) ಕಾದಂಬರಿಯದು. ದಲಿತರು ಹಾಗೂ ಅಂಬೇಡ್ಕರ್ ಚಿಂತನೆಗಳ ನಡುವಿನ ಚಾರಿತ್ರಿಕ ಸಂಬಂಧವನ್ನು ಈ ಕೃತಿ ಸೂಕ್ಷ್ಮವಾಗಿ ವಿವೇಚಿಸುತ್ತದೆ. ಇಳಿತ, ಭರತ, ಪ್ರವಾಹ, ಸುಳಿ - ಎಂಬ ನಾಲ್ಕು ಭಾಗಗಳ ಯೋಜನೆಯುಳ್ಳ ಕೃತಿ - ಸಾರಾ ಅಬೂಬಕರ್‌ರವರ ಸುಳಿಯಲ್ಲಿ ಸಿಕ್ಕವರು (1994). ಬಡತನದಂತೆಯೇ ಶ್ರೀಮಂತಿಕೆಯೂ ಸುಳಿಯಾಗಬಲ್ಲದೆಂಬುದನ್ನು ಮುಮ್ಮಟಿ ಪಾತ್ರದ ಮೂಲಕ ಇಲ್ಲಿ ತೋರಿಸಿಕೊಡಲಾಗಿದೆ. ಈ ಸುಳಿಯಲ್ಲಿ ವಿಶೇಷವಾಗಿ ಸೇರ್ಪಡೆಯಾಗುವ ಕುಟುಂಬದ ಹೆಣ್ಣುಗಳ ನೋವು ಸಂಕಷ್ಟಗಳ ಸರಣಿಯ ನಿರೂಪಣೆಯಿದೆ. ಎಚ್.ಎಸ್.ಚಂಪಾವತಿಯವರ ಶಿವಗಂಗಾ (1997) ಎಂಬ ಕಾದಂಬರಿ ಮಹಿಳಾ ಹೋರಾಟದ ಅನುಭವಗಳು ವ್ಯಕ್ತಿಯ ಅಂತಃಕರಣದ ವಿಕಾಸಕ್ಕೆಡೆ ಮಾಡಿಕೊಡುವ ಸಾಧ್ಯತೆಗಳನ್ನು ಗಂಗಾ ಪಾತ್ರದ ಮೂಲಕ ವಿವೇಚಿಸುತ್ತದೆ. ತಮ್ಮ ಅಸ್ತಿತ್ವದ ಶೋಧಕ್ಕೆ ಹೆಣ್ಣನ್ನು ಜೈವಿಕವಸ್ತುವಾಗಿ ಪರಿಭಾವಿಸುವ ನವ್ಯಕಾದಂಬರಿಗಳ ನಾಯಕ ಪಾತ್ರಗಳನ್ನು ಶಿವಗಂಗಾ ಲಿಂಗವ್ಯವಸ್ಥೆಯ ನೆಲೆಯಲ್ಲಿ ವಿಮರ್ಶಿಸುತ್ತದೆ.

ಲಿಂಗವ್ಯವಸ್ಥೆಯೊಳಗಿನ ಹೆಣ್ಣಿನ ವಿವಿಧ ಮನಃಸ್ತರಗಳ ಸಂಕೀರ್ಣಲೋಕವನ್ನು ತಾರಾಭಟ್‌ರವರ ಅವ್ಯಕ್ತ ಪರಿಚಯಿಸುತ್ತದೆ. ಭಾವನೆ ಹಾಗೂ ವ್ಯಾವಹಾರಿಕ ಜಗತ್ತುಗಳ ನಡುವಿನ ದ್ವಂದ್ವವನ್ನು, ಸ್ತ್ರೀಯ ಪ್ರಜ್ಞಾವಿಕಾಸದ ಸಾಧ್ಯತೆಗಳು ಹೊಸಕಿಹೋಗುವ ಬಗೆಯನ್ನು ಈ ಕಾದಂಬರಿ ಕಾಣಿಸುತ್ತದೆ. ಲಿಂಗದರ್ಪವಿರದ ಅಮೆರಿಕನ್ ಜೋಫ್ರೆ ಕ್ಲಾರ್ಕನ ಕಣ್ಣಿನಿಂದ ದೊರಕುವ ನೋಟವನ್ನು ವಿಮರ್ಶಾತ್ಮಕವಾಗಿ ಲೇಖಕಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಕೊಳೆಗೇರಿ ಬಾಲಕ ಕ್ಯಾತನ ಜೀವನಾನುಭವಗಳ ಹಿನ್ನೆಲೆಯಲ್ಲಿ ಪಿ.ಲಂಕೇಶರ 'ಅಕ್ಕ' (1991) ರಚಿತವಾಗಿದೆ. ಅಕ್ಕನೊಂದಿಗಿನ ಭಾವಸಂಬಂಧಗಳು ಮಾನಸಿಕ ಪೋಷಣೆಯ ನೆಲೆಯನ್ನೂ ದಾಟಿ ಸಾಮಾಜಿಕ

ವಾಸ್ತವದ ಕ್ರೌರ್ಯವನ್ನು ಒಳಗೊಳ್ಳುವುದನ್ನು ಕಾದಂಬರಿ ದರ್ಶಿಸುತ್ತದೆ. ಬಾಲಕನೊಬ್ಬನ ಪ್ರಜ್ಞೆಯು ಬೆಳೆವಣಿಗೆಯ ಗತಿಯೊಂದಿಗೇ ಆತನ ನಿರೂಪಣೆಯ ಮೂಲಕ ಸಾಮಾಜಿಕ ವಾಸ್ತವವನ್ನು ಈ ಕೃತಿ ಅಧಿಕೃತವಾಗಿ ಹಿಡಿದಿಡುತ್ತದೆ. ಸಾಕ್ಷಿ ಪ್ರಜ್ಞೆಯ ಮೂಲಕ ಗತ ಅನುಭವಗಳನ್ನು ವರ್ತಮಾನದ ಅರಿವಿನೊಂದಿಗೆ ಮುಖಾಮುಖಿಯಾಗಿಸುವ ಯತ್ನವನ್ನು ಶಾಂತಿನಾಥ ದೇಸಾಯಿಯವರು ತಮ್ಮ ಅಂತರಾಳ (1993) ಕಾದಂಬರಿಯಲ್ಲಿ ಮಾಡಿದ್ದಾರೆ. ಓಂಣಮೋ (1998) ಕಾದಂಬರಿಯಲ್ಲಿ ವ್ಯಕ್ತಿಸ್ವಾತಂತ್ರ್ಯದ ತಾತ್ತ್ವಿಕತೆಯನ್ನು ಜೈನದರ್ಶನ ಹಾಗೂ ಆಚರಣೆಗಳಲ್ಲಿ ಶೋಧಿಸುವ ಪ್ರಯತ್ನವನ್ನು ಶಾಂತನಾಥ' ದೇಸಾಯಿ ಮಾಡಿದ್ದಾರೆ. ವ್ಯಕ್ತಿನಿಷ್ಠ ನೆಲೆಯಲ್ಲಿಯೇ ಧರ್ಮದ ಸಾಮಾಜಿಕ ಆಯಾಮ ಸದಾ ಚಿಕಿತ್ಸೆಗೊಳಗಾಬೇಕಾದುದು ಅನಿವಾರ್ಯವೆಂಬ ಮಹತ್ವದ ನಿರ್ಧಾರ ಈ ಕೃತಿಯದು. ಕುಂ.ವೀರಭದ್ರಪ್ಪನವರ ಶಾಮಣ್ಣ (1998), ಸಾಂಪ್ರದಾಯಿಕ ವೈದಿಕ ಕುಟುಂಬದ ಮೂರು ತಲೆಮಾರುಗಳ ಏಳುಬೀಳುಗಳನ್ನು ಕಥಿಸುತ್ತಲೇ ಪಾಶ್ಚಾತ್ಯ ಹಾಗೂ ಪಾರ್ವಾತ್ಯ ಜೀವನ ಶೈಲಿಗಳ ಮುಖಾಮುಖಿಯಲ್ಲಿ ಪ್ರಕಟಗೊಳ್ಳಬಹುದಾದ ಅಸಂಗತತೆಯನ್ನು ವೈನೋದಿಕ ಶೈಲಿಯಲ್ಲಿ ಈ ಕಾದಂಬರಿ ಹಿಡಿದಿಡುತ್ತದೆ. ದಕ್ಷಿಣ ಕನ್ನಡದ ಗ್ರಾಮೀಣ ವರ್ಗದ ಬಡ ಮುಸ್ಲಿಂರ ಬದುಕನ್ನು ನಿಯಂತ್ರಿಸುವ ಧಾರ್ಮಿಕ ಮೂಲಭೂತವಾದವನ್ನು ರಫೀಕ್ ಉಪ್ಪಿನಂಗಡಿಯವರ ಅಜ್ಜಿಮಾದ (1998) ಪರಿಚಯಿಸುತ್ತದೆ. ಜೊತೆಗೆ ಮೂಲಭೂತವಾದವನ್ನು ಸ್ವಂತ ಸಂಕಲ್ಪಬಲದ ಮೂಲಕ ಪ್ರತಿಭಟಿಸುವ ಅಜ್ಜಿಮಾದಳ ಜೀವಪರತೆಯನ್ನು ಕೃತಿ ದಾಖಲಿಸುತ್ತದೆ.

ತುಳುನಾಡಿನ ಸಾಂಸ್ಕೃತಿಕ ಕಥನದ ಒಡಲಿನಿಂದಲೇ ಸಾಮಾಜಿಕ ಸಂಚಲನಗಳನ್ನು ದಲಿತ ಹಾಗೂ ಸ್ತ್ರೀಕೇಂದ್ರದಿಂದ ದಾಖಲಿಸುವ ಕೃತಿ ಎಚ್.ಎಸ್.ನಾಗವೇಣಿಯವರ 'ಗಾಂಧಿ ಬಂದ' (1999). ಜನರ ಬದುಕಿನ ಸೂಕ್ಷ್ಮವಿವರಗಳೊಂದಿಗೆ ಗಾಂಧೀ ತತ್ತ್ವ ಹಾಸುಹೊಕ್ಕಾಗಿ ಪ್ರಾಯೋಗಿಕ ರೂಪದಲ್ಲಿ ಪ್ರಕಟವಾಗುವ ಪರಿ ಇಲ್ಲಿದೆ. ಗುಲ್ಬರ್ಗ ಜಿಲ್ಲೆಯ ಗಡಸು ಗ್ರಾಮೀಣ ಭಾಷೆಯಲ್ಲಿ ಹಳ್ಳಿಯ ದಲಿತ ಹೆಣ್ಣುಮಕ್ಕಳ ಮೇಲಾಗುವ ಧಾರ್ಮಿಕ, ಆರ್ಥಿಕ, ಸಾಮಾಜಿಕ ಶೋಷಣೆಯನ್ನು ಗೀತಾ ನಾಗಭೂಷಣರ ಬದುಕು (2001) ಕಾದಂಬರಿ ವಿವರಿಸುತ್ತದೆ. ಊಳಿಗಮಾನ್ಯ ಹಾಗೂ ಬಂಡವಾಳಶಾಹೀ ವ್ಯವಸ್ಥೆಯಡಿ ನಲುಗಿ ಹೋಗುವ ಕುಟುಂಬದ ದುರಂತವನ್ನು ಈ ಕಾದಂಬರಿ ವಿಸ್ತೃತವಾಗಿ ಹಿಡಿದಿಟ್ಟಿದೆ. ಉಮಾರಾವ್‌ರವರ ನೂರುಸ್ವರ (1999) ಆಧುನಿಕ ಸಂವೇದನೆಯುಳ್ಳ ಮಹಿಳೆಯೊಬ್ಬಳ ತಲ್ಲಣಗಳನ್ನು ಸೂಕ್ಷ್ಮವಾಗಿ ಚಿತ್ರಿಸುವ ಕಾದಂಬರಿ. ಲತಾರಾಜಶೇಖರರ ಈ ಸ್ನೇಹ ಈ ಜೀವನ (1999) ಸಾಂಪ್ರದಾಯಿಕ ಕೌಟುಂಬಿಕ ಸಂಬಂಧಗಳನ್ನು ಶೋಧಿಸಲೆತ್ನಿಸುತ್ತದೆ. ಎಚ್.ಎಸ್.ಶ್ರೀಮತಿಯವರ ಉದ್ಗಮ (2000) ಎಂಬ ಕಾದಂಬರಿ ತನ್ನೊಳಗಿನ ರಹಸ್ಯಗಳಿಗೆ ಬಾಯಿಕೊಡಲೆತ್ನಿಸುವ ಮಹಿಳೆಯೊಬ್ಬಳ ಸ್ವಗತ ಕತೆ ಎನ್ನಬಹುದು. ಪುರಷನಿಗಿಂತಲೂ ಹೆಚ್ಚು ಆತಂಕ ಒತ್ತಡಗಳನ್ನು ಪ್ರೇಮವಿವಾಹವಾಗುವ ಮಹಿಳೆ ಹೊರಬೇಕಾದ ಸ್ಥಿತಿಯನ್ನು ಈ ಕೃತಿ ಚಿತ್ರಿಸುತ್ತದೆ. ಗ್ರಾಮ ರಾಜಕಾರಣದೆದುರು ಕೃಷಿಯ ಬಗೆಗಿನ ರಮ್ಯಕಲ್ಪನೆಗಳು ಧೂಳೀಪಟವಾಗುವುದನ್ನು ಎಂ.ಎಸ್.ವೇದಾರ ಜಮೀನು (2000) ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಪಟ್ಟಣವಾಸಿ ನೌಕರನಾಗಿಯೂ ಭೂಮಿಯೊಂದಿಗಿನ ಸಂಬಂಧವನ್ನು ಜೀವಂತವಾಗಿಟ್ಟುಕೊಳ್ಳಲೆತ್ನಿಸಿ ಸೋಲುವ ಶಿವಪ್ಪ ಹಾಗೂ ಆತನ ಪತ್ನಿ ದೇವಮ್ಮರ ಪ್ರಯತ್ನದ ಸೂಕ್ಷ್ಮಚಿತ್ರ ಇಲ್ಲಿದೆ. ಗ್ರಾಮೀಣ ಸಂವೇದನೆಗಳೊಳಗಿನಿಂದಲೇ ತನ್ನ ಸುತ್ತಲಿನ ಸಾಮಾಜಿಕ ವ್ಯವಸ್ಥೆಯನ್ನು ಅದರೆಲ್ಲ ಕ್ರೌರ್ಯದೊಂದಿಗೆ ಕಾಣಿಸುವ ಕೃತಿಯಿದು. ಸರಸ್ವತಿಯವರ ಈಗೇನ್ ಮಾಡೀರಿ? (2001) ಎಂಬ ಕೃತಿಯಲ್ಲಿ ಬಂಡವಾಳಶಾಹಿ ಕ್ರೌರ್ಯಕ್ಕೆ ಸವಾಲೆಂಬಂತೆ ತಾಯಿಯ ನೆನಪುಗಳುಳ್ಳ ರಮ್ಯಭಾವಕೇಂದ್ರವನ್ನು ಜೀವಂತವಾಗಿಡಲು ಇಲ್ಲಿಯ ನಾಯಕಿ ಯತ್ನಿಸುತ್ತಾಳೆ.

ಕಲಾವಿದ ಚೇತನದ ಒಳತುಮುಲಗಳ ನಿರೂಪಣೆಯ ಮೂಲಕವೇ ಮಾನವ ಬದುಕಿನ ಸಾರ್ಥಕತೆಯ ಮಹತ್ವದ ಪ್ರಶ್ನೆಗಳನ್ನೆತ್ತುವ ಕೃತಿ ಎಸ್.ಎಲ್.ಭೈರಪ್ಪನವರ 'ಮಂದ್ರ'. ಕಲಾಜೀವನದಲ್ಲಾಗಲೀ ಬದುಕಿನಲ್ಲಾಗಲೀ ಮಾನವ ಸಂಬಂಧಗಳು ಹೊಂದಬಹುದಾದ ವ್ಯಾವಹಾರಿಕ ಹಾಗೂ ಆಧ್ಯಾತ್ಮಿಕ ನೆಲೆಯ ಸ್ವರೂಪವನ್ನು ಕುರಿತಂತೆ ಈ ಕೃತಿ ಚರ್ಚಿಸುತ್ತದೆ. ಸೋಸಲೆ ಗಂಗಾಧರ ಅವರ ಯಾಮಿನಿ (2001) ಶ್ರಮಜೀವನದಲ್ಲಿಯೇ ತಮ್ಮ ಸ್ವಾಭಿಮಾನದ ನೆಲೆಗಳನ್ನು ಅರ್ಥಪೂರ್ಣವಾಗಿ ದಕ್ಕಿಸಿಕೊಳ್ಳಲೆತ್ನಿಸುವ ದಲಿತ ಲೋಕದ ಕಥನವಾಗಿದೆ. ಕುಂ.ವೀರಭದ್ರಪ್ಪನವರ ಯಾಪಿಲ್ಲು (2001) ಆಧುನೀಕರಣ ಪ್ರಕ್ರಿಯೆಗೆ ಒಳಗಾಗುತ್ತಲೇ ದುರಂತದೆಡೆ ಹೆಜ್ಜೆ ಇಡುತ್ತಿರುವ ದಲಿತರ ಸ್ಥಿತಿಯನ್ನು ಅಸಹಾಯಕ ಚಲನೆಯ ಬಾಲಿಕೆಯ ರೂಪಕದಲ್ಲಿ ಹಿಡಿದಿಡುತ್ತದೆ. ಶಿಕ್ಷಣ ಹಾಗೂ ಆ ಮೂಲಕ ದಕ್ಕಬಹುದಾದ ಜೀವನಾವಶ್ಯಕಗಳು ಶೋಷಿತರ ಪಾಲಿಗೆ ಕಡೆಗೂ ಮರೀಚಿಕೆಯಾಗುವ ದುರಂತವನ್ನು ಕಾದಂಬರಿ ಹಿಡಿದಿಡಲು ಪ್ರಯತ್ನಿಸುತ್ತದೆ. ಜಾಗತೀಕರಣದ ನೆಲೆಯಲ್ಲಿನ ಭಾರತದಂತಹ ತೃತೀಯ ಜಗತ್ತಿನ ರಾಷ್ಟ್ರಗಳ ತಲ್ಲಣಗಳಿಗೂ ಈ ಕಾದಂಬರಿ ಪ್ರತೀಕವಾಗುತ್ತದೆ.

ಬಿಳುಮನೆ ರಾಮದಾಸ್ ಅವರ ನಂಬಿಕೆಟ್ಟವರಿಲ್ಲವೊ, ಎಸ್.ವಿ.ಪ್ರಭಾವತಿ ಅವರ ಶಕುಂತಲಾ, ಅಗ್ರಹಾರಕೃಷ್ಣಮೂರ್ತಿಯವರ ನೀರು ಮತ್ತು ಪ್ರೀತಿ, ದೇವುಹನೇಹಳ್ಳಿಯವರ ಶಿಲೆಯೊಳಡಗಿದ ಕಪ್ಪೆ, ಮಲ್ಲಿಕಾರ್ಜುನ ಹಿರೇ ಮಠರ ಹವನ, ವಿವೇಕ್ ಶಾನುಭಾಗರ ಇನ್ನೂ ಒಂದು ಇವು 2001ರಲ್ಲಿ ಬಂದಿರುವ ಕೆಲವು ಕಾದಂಬರಿಗಳು. ಪ್ರೀತಿಯ ಕಣ್ಣು (ಶಾಂತಾರಾಮ ಸೋಮಯಾಜಿ); ಅರ್ಥ (ನಾ.ಮೊಗಸಾಲೆ); ಚಿತ್ರಮಾಲ (ಆರ್.ವಿಜಯರಾಘವನ್); ಮಳೆನಿಂತ ಮೇಲಿನ ಮರ (ಶಿವಾನಂದ ಬೇಕಲ್); ಗೌರಿ (ಜಾನಕಿ ಸುಂದರೇಶ್); ಕಲ್ಲುಖಣಿಯಾಗು ಕರಿಕೆಬೇರಾಗು (ದಮಯಂತಿ ನರೇಗಲ್ಲ) - ಇವು 2002ರಲ್ಲಿ ಬಂದ ಕೆಲವು ಕಾದಂಬರಿಗಳು.

ಮನಜರ ಸೂರಪ್ಪ (2004) ಕಾದಂಬರಿ ಗತದ ಯಶೋಗಾಥೆ ಹಾಗೂ ದುರಂತದ ನೆನಪುಗಳೆರಡರ ಮೂಲಕ ದಲಿತತ್ವದ ಆತ್ಮತೇಜವನ್ನು ಸಶಕ್ತವಾಗಿ ಸೃಷ್ಟಿಸಿಕೊಳ್ಳುವ ಕಥನವಾಗಿದೆ. ಸಿಪಾಯಿ ಸೂರಪ್ಪನ ಧೈರ್ಯ ಸಾಹಸಗಳ ಕಥನದೊಂದಿಗೆ ಟಿಪ್ಪುಸುಲ್ತಾನನ ಬಗೆಗಿನ ಚರಿತ್ರೆ ಹೊಸ ಆಯಾಮವನ್ನು ಪಡೆದುಕೊಳ್ಳುವುದು ಈ ಕಾದಂಬರಿಯ ವಿಶೇಷತೆ. ಅಂತೆಯೇ ಯಜಮಾನ್ ಸೂರಪ್ಪನ ಜೀವನ ಕೌಶಲ್ಯದ ಕಥನವು ಹಳೇ ಮೈಸೂರು ಇತಿಹಾಸವನ್ನು ಹೊಸ ಬೆಳಕಿನಲ್ಲಿ ಅರ್ಥೈಸುತ್ತದೆ. ಅಂಚಿಗೆ ಒತ್ತರಿಸಲ್ಪಟ್ಟ ಚೇತನಗಳನ್ನು ಪ್ರಧಾನನೆಲೆಗೆ ತರುವುದರ ಮೂಲಕ ಈ ಕೃತಿ ಇತಿಹಾಸದ ಪುನರ್ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ. ಗ್ರಾಮೀಣ ಕೃಷಿಕ ಜೈನ ಸಮಾಜದ ಚಿತ್ರಣವುಳ್ಳ ಕೃತಿ ಬಾಳಾ ಸಾಹೇಬ ಲೋಕಾಪೂರರ ಹುತ್ತ (2002), ಅಹಿಂಸೆ ಹಾಗೂ ಹಿಂಸೆಗಳ ನಡುವಿನ ವೈರುಧ್ಯದಲ್ಲಿ ಪ್ರಕಟಗೊಳ್ಳುವ ಗ್ರಾಮರಾಜಕಾರಣವನ್ನೂ ಮಾನವಸಂಬಂಧಗಳ ಸೂಕ್ಷ್ಮಕಂಪನಗಳನ್ನೂ ಇದು ದಾಖಲಿಸುತ್ತದೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಚಲನಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ಅನೇಕ ಮಹತ್ತ್ವದ ಕಾದಂಬರಿಗಳು ಹೊರಬಂದಿವೆ. ಪ್ರಯೋಗದ ನಾವೀನ್ಯತೆ ಹಾಗೂ ಪ್ರಬುದ್ಧತಾತ್ತ್ವಿಕತೆಯುಳ್ಳ ಕನ್ನಡ ಕಾದಂಬರಿಗಳು ಜಾಗತಿಕ ಕಥನ ಸಾಹಿತ್ಯಕ್ಕೆ ವಿಶಿಷ್ಟ ಆಯಾಮವನ್ನು ನೀಡುತ್ತ ಬಂದಿವೆ. (ಪಿ.ಎಸ್‌ಎಚ್.)

**ಕನ್ನಡದಲ್ಲಿ ಗದ್ಯ ಸಾಹಿತ್ಯ :** ಸದ್ಯದಲ್ಲಿ ಕನ್ನಡ ಗದ್ಯ ಸಾಹಿತ್ಯದ ಇತಿಹಾಸವನ್ನು ಹಲ್ಮಿಡಿ ಶಾಸನದಿಂದ (ಸು.450) ಗುರುತಿಸಬಹುದು. ಸು.5ನೆಯ ಶತಮಾನದಿಂದ ಸು.18ನೆಯ ಶತಮಾನದವರೆಗೆ ಅಸಂಖ್ಯ ಗದ್ಯ ಶಾಸನಗಳು ದೊರೆಯುತ್ತವೆ. ಅವುಗಳಲ್ಲಿ ವೀರಗಲ್ಲು, ಮಾಸ್ತಿಕಲ್ಲು, ದತ್ತಿಶಾಸನಗಳಲ್ಲಿಯ ಗದ್ಯ ಆಯಾ ಕಾಲದ ಐತಿಹಾಸಿಕ, ಸಾಮಾಜಿಕ ಮತ್ತು ಇತರ ಸಂಗತಿಗಳೊಂದಿಗೆ ಭಾಷಾಸ್ವರೂಪವನ್ನು ತಿಳಿಸುತ್ತದೆ.

ಕದಂಬ ಕಾಕುತ್ಸ್ಥವರ್ಮನ ಕಾಲಕ್ಕೆ ಸೇರಿದ ಹಲ್ಮಿಡಿ ಶಾಸನ ಪೂರ್ವದ ಹಳಗನ್ನಡ ಭಾಷೆಯಲ್ಲಿದೆ. ಅದರ ಕೆಲವು ಪಂಕ್ತಿಗಳನ್ನು ನೋಡಬಹುದು:

> ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ (ನಾ) ಅರಿ ಕ
> ಕುಸ್ಥಭಟ್ಟೋರನಾಳೆ ನರಿದಾವಿ(ಳೆ)ನಾಡುಳ್ ಮೃಗೇಶನಾ
> ಗೇನ್ದ್ರಾಭಿಳಭ್ರ್ಬಟಹರಪ್ಪೋರ್ ಶ್ರೀಮೃಗೇಶನಾಗಾಹ್ವಯ
> ರಿರ್ವ್ವರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ
> ಗಣಪಶುಪತಿ...........................
> ಭಟ್ಟರ್ಗ್ಗೀಗಟ್ಟೆ ಒಡ್ಡಲಿ ಆಪತ್ತೊನ್ದಿವಿಟ್ಟಾರಕರ

ಆರಂಭದಲ್ಲಿನ ಶ್ಲೋಕವನ್ನು ಬಿಟ್ಟರೆ ಹಲ್ಮಿಡಿ ಶಾಸನದಲ್ಲಿ ಉಳಿದಿದ್ದೆಲ್ಲವೂ ಗದ್ಯದಲ್ಲಿದೆ. ಇದರಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚು. ಕನ್ನಡ ಪದಗಳು ಬೆರಳಲ್ಲಿ ಎಣಿಸುವಷ್ಟು ಮಾತ್ರ ಇವೆ. ಪೂರ್ವ ಹಳಗನ್ನಡದ ವಿಭಕ್ತಿ ಪ್ರತ್ಯಯಗಳು ಅಲ್ಲಲ್ಲಿ ಕಾಣುತ್ತವೆ. ಕರ್ಮಣೀಪ್ರಯೋಗದ ಒಂದು ರೂಪವೂ ಇದೆ. ಹೀಗೆ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಅನೇಕ ರಂಗಗಳಲ್ಲಿ ಬೆಳೆದುಕೊಡು ಬಂದಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ. ಈ ಶಾಸನದಿಂದ 1-2ನೆಯ ಶತಮಾನಗಳ ಹಿಂದಿನಿಂದಲೂ ಕನ್ನಡ ಗ್ರಾಂಥಿಕ ಭಾಷೆಯಾಗಿ ಬೆಳೆಯತೊಡಗಿತ್ತು ಎಂದು ಹೇಳಬಹುದು. ಇದು ಸಂಸ್ಕೃತದ ಒತ್ತಡಕ್ಕೆ ಒಳಗಾದ ಕನ್ನಡದ ಪ್ರಯೋಗ ಕಾಲವೆಂದು ಹೇಳಬಹುದು.

ಹಲ್ಮಿಡಿ ಶಾಸನದ ಅನಂತರ ಬಾದಾಮಿಯ ಚಳುಕ್ಯ ರಾಜ ಮಂಗಳೇಶನ 578ರ ಗದ್ಯಶಾಸನವನ್ನು ಇಲ್ಲಿ ಹೆಸರಿಸಬೇಕು. ಈ ಶಾಸನದಲ್ಲಿ ಸಾಹಿತ್ಯ ಗುಣಗಳಿಲ್ಲದಿದ್ದರೂ ಪೂರ್ವದ ಹಳಗನ್ನಡ ಭಾಷೆಯ ವಿಶಿಷ್ಟ ರೂಪಗಳಿವೆ.

ಮುಂದೆ, 7, 8, 9ನೆಯ ಶತಮಾನದ ಗದ್ಯಶಾಸನಗಳಲ್ಲಿ ಹಳಗನ್ನಡ ಶಬ್ದಗಳ ಬಳಕೆಯನ್ನು ವಿಶೇಷವಾಗಿ ಕಾಣುತ್ತೇವೆ. ಅಲ್ಲಲ್ಲಿ ಪೂರ್ವದ ಹಳಗನ್ನಡದ ಪ್ರಯೋಗಗಳೂ ಇವೆ. ಸಂಸ್ಕೃತ, ಪ್ರಾಕೃತ ತದ್ಭವಗಳ ಮಿಶ್ರಣ ಈ ಕಾಲದ ಗದ್ಯ ಶಾಸನಗಳಲ್ಲಿ ಕಂಡುಬರುತ್ತದೆ. ಆದರೂ ಕನ್ನಡ ಭಾಷೆ, ಅದರ ವ್ಯಾಕರಣ ಪ್ರಯೋಗಗಳು ಬಹುಮಟ್ಟಿಗೆ ತಮಿಳು ಭಾಷೆಯನ್ನು ಹೋಲುತ್ತವೆ.

10ನೆಯ ಶತಮಾನದ ಹೊತ್ತಿಗೆ ಗದ್ಯಕ್ಕಿಂತ ಪದ್ಯದ ಕಡೆಗೆ ಒಲವು ಹೆಚ್ಚಿರುವುದು ಕಾಣುತ್ತದೆ. ಇದು ಚಂಪೂಯುಗದ ಸುವರ್ಣಕಾಲ. ಪಂಪ ರನ್ನರ ಪ್ರಭಾವ ಶಾಸನ ಕವಿಗಳ ಮೇಲೆಯೂ ಬಿದ್ದಿರಬೇಕು. ಈ ಕಾಲದಲ್ಲಿ ಗದ್ಯಶಾಸನಗಳಿಗಿಂತ ಪದ್ಯ ಶಾಸನಗಳೇ ಹೇರಳವಾಗಿವೆ. ಅನಂತರ 13-14ನೆಯ ಶತಮಾನಗಳಲ್ಲಿಯ ಶಾಸನಗಳು ಸಂಪ್ರದಾಯ ಹಾಗೂ ಅನುಕರಣಕ್ಕೆ ಮಾರುಹೋಗಿವೆ. ಅವುಗಳಲ್ಲಿ ಹೊಸತನವಿಲ್ಲ. ಅನಂತರ 15, 16, 17ನೆಯ ಶತಮಾನಗಳಲ್ಲಿಯ ಶಾಸನಗಳಲ್ಲಿಯೂ ಭಾಷಾಪ್ರೌಢಿಮೆಯಿಲ್ಲ. ದೇಶದಲ್ಲಿ ಮಹಮ್ಮದೀಯರು ಹಾಗೂ ಇಂಗ್ಲಿಷರ ಆಕ್ರಮಣದಿಂದ ಆಯಾ ಭಾಷೆಯ ಬಳಕೆಯ ಮಾತುಗಳು ಶಾಸನ ಸಾಹಿತ್ಯದಲ್ಲಿಯೂ ಸೇರಿಕೊಂಡಿವೆ.

ಸು.11 ರಿಂದ 18ನೆಯ ಶತಮಾನದ ಅವಧಿಯಲ್ಲಿ ಪದ್ಯ ಶಾಸನಗಳೇ ಹೇರಳವಾಗಿ ದೊರೆಯುತ್ತವೆ. ಗದ್ಯ ಶಾಸನಗಳು ಅಲ್ಲಲ್ಲಿ ಮಿನುಗುತ್ತವೆ. ವೀರಗಲ್ಲು, ದತ್ತಿಶಾಸನಗಳು ವಿಶೇಷವಾಗಿ ಗದ್ಯದಲ್ಲಿಯೇ ಸಿಗುತ್ತವೆ. ಅವು ಚಿಕ್ಕ ಚಿಕ್ಕವಾಗಿದ್ದರೂ ಮೇಲ್‌ಸ್ತರದ ಗದ್ಯಶೈಲಿಯನ್ನು ಅಲ್ಲಿ ಕಾಣಬಹುದು. ಈ ಕಾಲದ ಶಾಸನಗಳಲ್ಲಿ ಬಳಸಿದ ಗದ್ಯದಲ್ಲಿಯೂ ಒಂದು ಹೊಸ ನೋಟವಿದೆ. ಇಲ್ಲಿಯ ಗದ್ಯ ನೀರಸವಾಗಿರದೆ ಹೃದ್ಯವಾಗಿದೆ. ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಕಾಲದ ಸಜ್ಜನತಿಲಕನೆಂಬ ಕವಿ ಬರೆದ ಸಿರಸಂಗಿ ಶಾಸನ ಸೊಗಸಾದ ಚಿಕ್ಕ ಚಂಪೂ ಕಾವ್ಯ ಎನ್ನುವಂತಿದೆ. ಋಷ್ಯಶೃಂಗನ ಜನ್ಮಕಥೆ ಇದು ಹೃದಯಂಗಮವಾದ ಗದ್ಯ ಶೈಲಿಯಲ್ಲಿದೆ. ಒಂದು ಸುದೀರ್ಘವಾದ ವಾಕ್ಯದಲ್ಲಿ ಚಿಕ್ಕ ಚಿಕ್ಕ ವಾಕ್ಯಗಳ ಮಾಲೆಯನ್ನು ಹೆಣೆದು ಅದರಲ್ಲಿ ಚಿಕ್ಕ ಕಥೆಯನ್ನು ಜೋಡಿಸಿದುದು ಕಾವ್ಯದ ಮೇಲ್ಮಟ್ಟವನ್ನು ಸೂಚಿಸುತ್ತದೆ. ಇದೇ ಶಾಸನದಲ್ಲಿ ಮತ್ತೊಂದು ಗದ್ಯಭಾಗ ಹೀಗಿದೆ: ಇಂತೆನಿಸಿ ...............ಮಟ್ಟಮೀರದೆ ಸಿಟ್ಟು ನುಡಿವ ದುಟ್ಟನಾಯಕರ ನಿಟ್ಟೆಲ್ವಂ ಮುಳುದೊಟ್ಟಜಿಯಿಂದಟ್ಟಿಯಾಡಿಸುವ ಬಿರುದನಾಯಕರ ಶಿರದ ಶಿರ್ಪಂ ಬಿದಿರ್ಚುವ ಚಪಳನಾಯಕ ಹೃದಯನಲ್ಲ, ಭೀತನಾಯಕರ ಕೊಲ್ಲ, ಸತ್ಯರಾಧೇಯ, ಸಾಹಸವೈನತೇಯ- ಈ ಮಾತುಗಳು ಹಬ್ಬೆಯ ನಾಯಕನ ಸಾಹಸವನ್ನು ಅವನ ಸತ್ಯಸಂಧತೆಯನ್ನು ಸಾರುತ್ತವೆ. ಇಲ್ಲಿಯ ಅಚ್ಚಗನ್ನಡದ ಪದಗಳ ಜೋಡಣೆ ಟಕಾರದ ಠೇಂಕಾರ ಮನೋಜ್ಞವಾಗಿದೆ. ಹೀಗೆ ಕೆಲವು ಶಾಸನಗಳು ಸಂಪ್ರದಾಯ ಹಾಗೂ ಅನುಕರಣಕ್ಕೆ ಮಾರುಹೋದರೆ, ಹಲವು ಶಾಸನಗಳು ಅಚ್ಚಗನ್ನಡದ ಬಿಗುವಿನಿಂದಲೂ ಚಿಕ್ಕ ಚಿಕ್ಕ ವಾಕ್ಯಗಳ ಶ್ರೇಷ್ಠ ಗದ್ಯಶೈಲಿಯಿಂದಲೂ ಶೋಭಿಸುತ್ತವೆ. ಶಾಸನದ ಗದ್ಯ ಕನ್ನಡದ ಗದ್ಯ ಸಾಹಿತ್ಯಕ್ಕೆ ಹಿರಿದಾದ ಕೊಡುಗೆಯನ್ನು ಕೊಟ್ಟಿದೆ. ಅಂದಿನ ಶಾಸನಗಳಲ್ಲಿ ಮುಖ್ಯವಾಗಿ ಆಡುಮಾತಿನ ಗ್ರಂಥಸ್ಥ ಭಾಷೆಯು, ವ್ಯಾವಹಾರಿಕ ಹಾಗೂ ಸರ್ಕಾರಿ ಭಾಷೆಯು, ಕಾವ್ಯಭಾಷೆಯು, ಪ್ರಾದೇಶಿಕ ಸೊಗಡಿನ ಎಲ್ಲ ಸ್ತರಗಳನ್ನೂ ಕಾಣಬಹುದಾಗಿದೆ.

ಕವಿರಾಜಮಾರ್ಗದಲ್ಲಿ (ಸು.850) ಪದಪಾದವಿಯುತ ನಿಯಮಾಸ್ಪದಮಲ್ಲದಳಂಕೃತಂ ಕ್ರಿಯಾಕಾರಕದೊಳ್ ಪುದಿದರ್ಥ ವ್ಯಕ್ತಿಯನೀವುದು ಗದ್ಯಮನೇಕ ರೂಪಭೇದವಿವಿಕ್ತಂ ಎಂದು ಗದ್ಯಕಾವ್ಯದ ಲಕ್ಷಣವನ್ನು ತಿಳಿಸಿದೆ. ವಿಮಳ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತಾದಿಗಳು ಗದ್ಯ ಕ್ಷೇತ್ರದಲ್ಲಿ ಖ್ಯಾತಿಯನ್ನು ಪಡೆದಿದ್ದಾರೆನ್ನುವುದು ಕವಿಯ ಅಭಿಪ್ರಾಯವಾಗಿದೆ. ಇಲ್ಲಿಯವರೆಗೆ ಇವರ ಯಾವ ಗ್ರಂಥಗಳೂ ದೊರೆತಿಲ್ಲ. ಇವರಲ್ಲದೆ ಇನ್ನೂ ಸಾಮಾನ್ಯ ಗದ್ಯ ಲೇಖಕರು ಎಷ್ಟು ಜನರಿದ್ದರೋ ತಿಳಿಯದು. ಅಂತು ನೃಪತುಂಗನ ಕಾಲಕ್ಕೆ ಸ್ವತಂತ್ರವಾದ ಗದ್ಯಲೇಖನ ಚೆನ್ನಾಗಿ ಬೆಳೆದುಬಂದಿತ್ತೆಂದು ಹೇಳಬಹುದು.

ವಡ್ಡಾರಾಧನೆ (ಸು.920) ಕನ್ನಡ ಸಾಹಿತ್ಯದ ಮೊಟ್ಟಮೊದಲನೆಯ ಗದ್ಯ ಗ್ರಂಥ (ನೋಡಿ ವಡ್ಡಾರಾಧನೆ). ಈ ಗ್ರಂಥದಲ್ಲಿ ಕವಿ ಜೈನ ತತ್ತ್ವಗಳನ್ನು ಕಥೆಗಳ ಮೂಲಕ ಸಾಮಾನ್ಯರಿಗೂ ಮನಮೆಚ್ಚುವಂತೆ ಬೋಧಿಸಿದ್ದಾನೆ. ಶೈಲಿಯಲ್ಲಿ ಕನ್ನಡತನವಿದೆ. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಕತೆಯ ಓಟ ಸುಗಮವಾಗಿ ಸಾಗುತ್ತದೆ. ಎಲ್ಲಿಯೂ ವರ್ಣನೆಗಳ ಆಡಂಬರವಿಲ್ಲ. ನಾಣ್ಣುಡಿಗಳು, ಅನುಭವವೇದ್ಯವಾದ ದೃಷ್ಟಾಂತಗಳು ಅಡಿಗಡಿಗೆ ಬಂದು ಕಥೆಗಳಿಗೆ ಕಳೆಕಟ್ಟಿವೆ. ಹೀಗೆ ದೇಶೀಯ ಪ್ರಚುರತೆ, ವಿಶಿಷ್ಟವಾದ ವ್ಯಾಕರಣ ಪ್ರಕ್ರಿಯೆಗಳು, ಅಪೂರ್ವ ಪದಗಳು, ಜೀವಂತ ಮಾತುಗಾರಿಕೆ, ಅನುಭವ ಸಂಪನ್ನವಾದ ಅಭಿವ್ಯಕ್ತಿ, ಕನ್ನಡ ಸಂಸ್ಕೃತ ಪದಗಳ ಸಮತೂಕ ಇವುಗಳಿಂದ ವಡ್ಡಾರಾಧನೆಯ ಗದ್ಯ ವಿಶಿಷ್ಟವಾದರೂಪ ತಾಳಿದೆ. ಹಳಗನ್ನಡ ಗದ್ಯದ ಒಳ್ಳೆಯ ಮಾದರಿಗೆ ಈ ಗ್ರಂಥ ಮೇಲುಪಂಕ್ತಿಯಾಗಿದೆ.

ಕನ್ನಡ ಗದ್ಯ ಸಾಹಿತ್ಯ ಚರಿತ್ರೆಯಲ್ಲಿ ಶಾಸನಗದ್ಯ, ವಡ್ಡಾರಾಧನೆಯ ಗದ್ಯ ಒಂದೊಂದು ಘಟ್ಟವಾದರೆ ಚಾವುಂಡರಾಯನ ಗದ್ಯ ಇನ್ನೊಂದು ಘಟ್ಟ. ಇವನ ತ್ರಿಷಷ್ಟಿಲಕ್ಷಣ ಮಹಾಪುರಾಣ (ಸು.978) ಕನ್ನಡ ಗದ್ಯಸಾಹಿತ್ಯದ ಎರಡನೆಯ ಪ್ರಮುಖ ಗ್ರಂಥ. ಇದರಲ್ಲಿ ಜೈನಧರ್ಮದ ನಂಬಿಕೆಗಳೂ ತತ್ತ್ವಗಳೂ ಅರುವತ್ತುಮೂರು ಪುರಾತನರ ಚರಿತ್ರೆಗಳೂ ಅಡಕವಾಗಿವೆ. ಅಲ್ಲಲ್ಲಿ ಪದ್ಯಗಳೂ ಪ್ರಾಕೃತ ಗಾದೆಗಳೂ ಬಂದಿವೆ. ಈ ಕೃತಿಯ ಗದ್ಯಶೈಲಿ ವಡ್ಡಾರಾಧನೆಯದಕ್ಕಿಂತ ಸ್ವಲ್ಪಮಟ್ಟಿಗೆ ಪ್ರೌಢವೂ ಗಂಭೀರವೂ ಆಗಿದೆ. ಇದರಲ್ಲಿ ಸಂಸ್ಕೃತ ಪದಗಳ ಬಳಕೆ, ಮತಸಂಬಂಧವಾದ ವಿಷಯಗಳು ಹೆಚ್ಚು. ವಾಕ್ಯಗಳು ಉದ್ದುದ್ದವಾಗಿವೆ. ಕನ್ನಡ, ಸಂಸ್ಕೃತ, ಪ್ರಾಕೃತಗಳಲ್ಲಿ ಕವಿಗಿರುವ ಪಾಂಡಿತ್ಯ ಗ್ರಂಥದ ಉದ್ದಕ್ಕೂ ಕಾಣಬರುತ್ತದೆ. ಇಲ್ಲಿಯ ಸಾಹಿತ್ಯ ಸ್ವರೂಪ, ಭಾಷೆ ಪೂರ್ತಿಯಾಗಿ ಹಳಗನ್ನಡದಲ್ಲಿದೆ. ವಡ್ಡಾರಾಧನೆಯ ಅನಂತರ ಸು.60 ವರ್ಷಗಳಾದ ಮೇಲೆ ಬೆಳೆದು ಬಂದ ಈ ಗದ್ಯ ವೈಶಿಷ್ಟ್ಯಪೂರ್ಣವಾಗಿದೆ. ವಡ್ಡಾರಾಧನೆಯಲ್ಲಿ ಕಥಾ ಗದ್ಯಕ್ಕೆ ಪ್ರಾಧಾನ್ಯವಿದ್ದರೆ ಇಲ್ಲಿ ಕಥಾಗದ್ಯ ಮತ್ತು ಶಾಸ್ತ್ರೀಯ ಗದ್ಯ ಮಿಲನವಾಗಿವೆ. ಇವೆರಡನ್ನೂ ಹೀಗೆ ಮಿಲನ ಮಾಡಿದ ಈ ಕವಿ ಮೇಲ್ತರಗತಿಯ ಗದ್ಯಕಾರನೆಂದು ಹೇಳಬೇಕು.

ಚಂಪೂ ಗ್ರಂಥಗಳಲ್ಲಿ ಬಳಕೆಯಾದ ಗದ್ಯ, ಗದ್ಯ ಸಾಹಿತ್ಯದ ಬೆಳವಣಿಗೆಗೆ ತುಂಬ ಸಹಾಯವಾಗಿದೆ. ಪಂಪ ತನ್ನ ಎರಡೂ ಚಂಪೂಕೃತಿಗಳಲ್ಲಿ ಔಚಿತ್ಯಪೂರ್ಣವಾಗಿ ಗದ್ಯವನ್ನು ಬಳಸಿದ್ದಾನೆ. ತನ್ನ ಕಥಾನಾಯಕನಾದ ಅರಿಕೇಸರಿಯ ಯೌವನೋದಯ ಸಂದರ್ಭವನ್ನು ಸುಮಾರು 55 ಪಂಕ್ತಿಗಳ ಗದ್ಯದಲ್ಲಿ ಬಣ್ಣಿಸಿದ್ದಾನೆ. ಇಲ್ಲಿ ಅತಿಶಯೋಕ್ತಿಯಿದ್ದರೂ ಮನೋಹರತೆಯಿದೆ. ಕಥಾನಾಯಕನ ಸೊಬಗನ್ನು ಮಧುರವಾಗಿ ಚಿತ್ರಿಸಲಾಗಿದೆ. ಹೇರಳವಾದ ಹೋಲಿಕೆಗಳಿದ್ದರೂ ಎಲ್ಲವೂ ಹದವರಿತು ಬಂದಿವೆ. ಇದರಿಂದಾಗಿ ಸುದೀರ್ಘವಾದರೂ ಈ ಗದ್ಯಭಾಗ ಚಿತ್ತಾಕರ್ಷಕವಾಗಿದೆ. ಕಾವ್ಯಮಯವಾಗಿದೆ. ದೇಸೀ ನುಡಿಗಟ್ಟುಗಳು, ನಾದ ಸೂಕ್ಷ್ಮಗಳು ಇವನ ಕಾವ್ಯ ಶೈಲಿಯ ಗುಣಗಳು. ಈ ಎಲ್ಲವನ್ನೂ ನಾವು ಇವನ ಗದ್ಯದಲ್ಲೂ ಕಾಣಬಹುದು. ಈತನ ಚಂಪೂಕಾವ್ಯಗಳಲ್ಲಿ ಬಳಕೆಯಾದ ಗದ್ಯ ಮುಂದಿನ ತಲೆಮಾರಿನವರಿಗೆ ಮಾರ್ಗದರ್ಶಿಯಾಯಿತು.

ಪಂಪನ ಅನಂತರ ಬಂದ ಚಂಪೂಕಾವ್ಯಗಳಲ್ಲಿನ ಗದ್ಯ ಸಾಮಾನ್ಯವಾಗಿ ಪಾಂಡಿತ್ಯ ಪ್ರದರ್ಶನದಿಂದ ತುಂಬಿದೆ. ಕಥೆಯ ಬೆಳವಣಿಗೆಯ

ದೃಷ್ಟಿ, ವಿವರಗಳ ಸಂಕ್ಷಿಪ್ತತೆ ಪಂಪನಂತೆ ಕೆಲವು ಕವಿಗಳಲ್ಲಿ ಕಾಣುವುದಿಲ್ಲ. ರುದ್ರಭಟ್ಟ, ಜನ್ನ, ಷಡಕ್ಷರಿ ಮೊದಲಾದವರು ಇದಕ್ಕೆ ಹೊರತಾಗಿಲ್ಲ.

ದುರ್ಗಸಿಂಹ, ನಯಸೇನರ ಚಂಪೂ ಕೃತಿಗಳಲ್ಲಿನ ಗದ್ಯದಲ್ಲಿ ಸ್ಪಷ್ಟತೆ, ಸರಳತೆ, ಹೃದ್ಯತೆ ವಿಶೇಷವಾಗಿದೆ ದುರ್ಗಸಿಂಹನ ಪಂಚತಂತ್ರದಲ್ಲಿ ಪದ್ಯಕ್ಕಿಂತ ಗದ್ಯವೇ ಹೆಚ್ಚು. ಕಥಾನಿರೂಪಣೆಗೆ ಗದ್ಯ ಆವಶ್ಯಕವೆಂಬುದನ್ನು ಕವಿ ಇಲ್ಲಿ ತೋರಿಸಿಕೊಟ್ಟಿದ್ದಾನೆ. ಇವನ ಗದ್ಯದಲ್ಲಿ ನಾಣ್ನುಡಿಗಳೂ ಜಾಣ್ನುಡಿಗಳೂ ಇವೆ. ನಯಸೇನನ ಧರ್ಮಾಮೃತದಲ್ಲಿ ಈ ಸಂಪ್ರದಾಯ ಬೆಳೆದಿದೆ. ಧರ್ಮಾಮೃತದಲ್ಲಿ ದೀರ್ಘವಾದ ಗದ್ಯ ಹೆಚ್ಚಾಗಿಲ್ಲ. ಚಿಕ್ಕ ಚಿಕ್ಕದಾಗಿ ಹೆಣೆದ ಇಲ್ಲಿನ ಗದ್ಯ ಚೊಕ್ಕವಾಗಿದೆ. ಹೋಲಿಕೆಗಳಂತೂ ಹೊಳೆಯಾಗಿ ಹರಿದಿವೆ. ಕಥೆಯನ್ನು ಹೇಳಹೇಳುತ್ತಲೇ ರಾಶಿರಾಶಿಯಾಗಿ ಸಾದೃಶ್ಯ ಮಾಲಿಕೆಗಳನ್ನು ತರುವುದು ಇವನ ಶೈಲಿಯ ಗುಣವಿಶೇಷವೂ ಪರಿಮಿತಿಯೂ ಆಗಿದೆ. ಸಂಸ್ಕೃತವನ್ನು ಅಲ್ಲಲ್ಲಿ ಬಳಸಿದ್ದರೂ ತಿರುಳ್ಗನ್ನಡದ ಹೊಗರು ಹೆಚ್ಚಾಗಿ ಹೊರಹೊಮ್ಮಿದೆ. ಇವನ ಅನಂತರ ಬಂದ ಎಲ್ಲ ಚಂಪೂ ಕವಿಗಳ ಗದ್ಯ ಸುಮಾರಾಗಿ ಒಂದೇ ಮಾದರಿಯದು. ಇವರ ಗದ್ಯಭಾಗದಲ್ಲಿನ ಅಲಂಕಾರಗಳ ಬಾಹುಳ್ಯ ಮತ್ತು ಉದ್ದುದ್ದ ಸಮಾಸಗಳು ಕಥಾವಸ್ತುವಿಗೆ ಪೋಷಕವಾಗಿಲ್ಲದಿರುವುದು. ಗದ್ಯಬಂಧ ಬಿಗಿಯಾಗಿರದೆ ಶಿಥಿಲವಾಗಿರುವುದು ಕಂಡುಬರುತ್ತದೆ. ಆದರೂ ಚಂಪೂಗದ್ಯ, ಗದ್ಯ ಸಾಹಿತ್ಯದ ಬೆಳೆವಣಿಗೆಗೆ ಪ್ರೇರಕ, ಪೋಷಕ, ಸಹಾಯಕ ಆಗಿದೆ ಎಂಬ ಮಾತು ಸ್ಪಷ್ಟ.

ಕನ್ನಡ ಗದ್ಯಕ್ಕೆ ವಚನಗಳದು ಒಂದು ಅಪೂರ್ವವಾದ ಕಾಣಿಕೆ. ಅನುಭಾವಿಗಳ ಈ ಭಾಷೆಯಲ್ಲಿ ಉತ್ಕಟವಾದ ಭಾವಾವೇಶವಿದೆ, ಲಯವಿದೆ, ನಾದವಿದೆ, ಮಾಧುರ್ಯವಿದೆ. ಇವುಗಳನ್ನು ಗಮನಿಸಿದಾಗ ಈ ವಚನಗಳು ಪದ್ಯಜಾತಿಗೆ ಸೇರಿದುವೇ ಅಥವಾ ಗದ್ಯಜಾತಿಗೆ ಸೇರಿದುವೇ ಎಂಬ ಪ್ರಶ್ನೆ, ಆಲೋಚನೆ ಉಂಟಾಗುತ್ತದೆ. ಮೂಲದಲ್ಲಿ ಇವು ಛಂದೋಬದ್ಧ ರಚನೆಗಳೆಂದೇ ಕೆಲವು ವಿದ್ವಾಂಸರು ಹೇಳಿದರೆ, ಹಲವರು ಗದ್ಯವೆಂದೂ ಗದ್ಯಪದ್ಯಗಳ ನಡುವಿನ ಒಂದು ಮಾದರಿಯೆಂದೂ ಅಭಿಪ್ರಾಯಪಡುತ್ತಾರೆ.

ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ಉಕ್ಕಂದವಾಗಿ ಹರಿದ ಈ ಸಾಹಿತ್ಯ ಅತ್ಯಂತ ಶ್ರೀಮಂತವಾಯಿತು. ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ ಮೊದಲಾದವರ ವಚನ ಸಾಹಿತ್ಯವು ಅಂದಿನ ಸಾಹಿತ್ಯ ಧೋರಣೆ, ಜೀವನ, ಮತಧರ್ಮ ಮೊದಲಾದವಕ್ಕೆ ಸಾಕ್ಷಿಯಾಯಿತು. ಇವರ ವಚನಗಳಲ್ಲಿ ಹೊಸಗನ್ನಡ ಗದ್ಯದ ಪ್ರಾರಂಭವನ್ನು ಗುರುತಿಸಬಹುದು. ಅಚ್ಚುಕಟ್ಟಾದ ಗಾದೆ ಮಾತಿನಂಥ ಸೂತ್ರರೂಪದ ವಾಕ್ಯಗಳು, ಮಾಲೆಮಾಲೆಯಾಗಿ ಬರುವ ದೃಷ್ಟಾಂತಗಳು, ರೂಪಕಗಳು, ಉಪಮೆಗಳು, ಮಾತಿನ ಅಭಿಪ್ರಾಯದ ಹಿತಮಿತವಾದ ಪುನರಾವರ್ತನೆ, ಕಠೋರವೆನಿಸದ ಪ್ರಾಸನಿರ್ವಹಣೆ, ಕೊನೆಯಲ್ಲಿ ಹೊಳೆದು ನಿಲ್ಲುವ ತತ್ತ್ವ ಇವುಗಳಿಂದಾಗಿ ವಚನಗಳು ಇಂದಿಗೂ ತಮ್ಮ ಚೆಲುವನ್ನು ಕಳೆದುಕೊಂಡಿಲ್ಲ. ಈ ಪ್ರಕಾರ ಇಪ್ಪತ್ತನೆಯ ಶತಮಾನದ ಕೆಲವು ಕವಿಗಳಿಗೂ ಸ್ಫೂರ್ತಿಯನ್ನು ಕೊಟ್ಟಿದೆ ಎಂಬ ವಿಷಯವನ್ನು ಇಲ್ಲಿ ಸ್ಮರಿಸಬಹುದು. ಮುಂದೆ 15ನೆಯ ಶತಮಾನದಲ್ಲಿ ಕೆಲವು ವಚನಕಾರರು ಹಿಂದಿನ ವಚನ ಸಾಹಿತ್ಯವನ್ನು ಅಚ್ಚುಕಟ್ಟಾಗಿ ಆಯ್ದು ಜೋಡಿಸಿದರು. ಇದರ ಪರಿಣಾಮವಾಗಿ ಶೂನ್ಯ ಸಂಪಾದನೆ ಮೊದಲಾದ ವಿಶಿಷ್ಟ ಮಾದರಿಯ ವಚನ ಗ್ರಂಥಗಳು ಹೊರಬಂದುವು.

ಹರಿಹರನ ರಗಳೆಯಲ್ಲಿಯ ಗದ್ಯ ಕನ್ನಡ ಗದ್ಯಕ್ಕೆ ಒಂದು ಹಿರಿದಾದ ಕೊಡುಗೆ. ಕಥೆ ದೊಡ್ಡದಾದಾಗ ಹರಿಹರ ಒಂದು ಭಾಗ ರಗಳೆ, ಇನ್ನೊಂದು ಭಾಗ ಗದ್ಯ, ಮತ್ತೆ ರಗಳೆ ಅನಂತರ ಗದ್ಯ ಹೀಗೆ ಸಂದರ್ಭಗಳನ್ನು ಬೆಳೆಸಿದ್ದಾನೆ. ಇದೊಂದು ಅಪೂರ್ವ ಪ್ರಯೋಗ. ಹಳೆಯ ಚಂಪೂಕ್ರಮ ಇಲ್ಲಿ ಇನ್ನೂ ಹಿಗ್ಗಿದೆ. ಪದ್ಯ ಭಾಗದಲ್ಲಿ ಹೇಗೊ ಹಾಗೆ ಗದ್ಯಭಾಗದಲ್ಲೂ ಕಥೆ, ವರ್ಣನೆ ಎಲ್ಲ ನಿರರ್ಗಳವಾಗಿ ಹರಿಯುತ್ತದೆ. ಚಂಪೂವಿನಲ್ಲಿ ಕಥೆಯ ಓಟಕ್ಕೆ ಸಹಾಯಕವಾಗಿದ್ದ ಗದ್ಯಕ್ಕೆ ಇಲ್ಲಿ ಸ್ವತಂತ್ರ ಅಸ್ತಿತ್ವ ದೊರಕಿತು. ಒಂದು ಕಡೆ ವಚನಗಳ ಧೋರಣೆ, ಇನ್ನೊಂದು ಕಡೆ ತಾನೇ ಬಳಸಿ ರೂಢಿಸಿದ ರಗಳೆ ಇವೆರಡರ ಸಂಗಮದಿಂದ ಇವನ ಗದ್ಯ ಹರಿತವಾಯಿತು. ಹೆಚ್ಚು ಜೀವಂತವಾಯಿತು. ಭಾಷೆ ಆಡುಮಾತಿಗೆ ಬಹು ಹತ್ತಿರವಾಯಿತು. ಅಂದರೆ ಇಲ್ಲಿ ಗದ್ಯದ ನಿಜವಾದ ಉದ್ದೇಶ ಸಫಲವಾಯಿತೆನ್ನಬಹುದು.

ಕನ್ನಡ ಗದ್ಯ ಸಾಹಿತ್ಯದ ಇತಿಹಾಸದಲ್ಲಿ ವ್ಯಾಖ್ಯಾನಕಾರರಿಗೆ ಒಂದು ಸ್ಥಾನವಿದೆ. ವೈದ್ಯ, ಜ್ಯೋತಿಷ, ಪಾಕ, ಸಂಗೀತ, ಗಣಿತ, ಸಾಮುದ್ರಿಕ, ಧರ್ಮ, ವ್ಯಾಕರಣ ಮೊದಲಾದ ವಿಷಯಗಳ ಮೇಲೆ ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳಿವೆ. ಅವುಗಳಲ್ಲಿ ಕೆಲವಕ್ಕೆ ವಿಸ್ತಾರವಾದ ವ್ಯಾಖ್ಯಾನಗಳು, ಟೀಕೆ, ಟಿಪ್ಪಣಿಗಳು ಬಂದಿವೆ. ಸೂಚ್ಯವಾದುದನ್ನು ವಾಚ್ಯವಾಗಿ ವಿವರಿಸಿ ಹೇಳುವುದೇ ಇವುಗಳ ಮುಖ್ಯ ಗುರಿ. ಹೇಳುವ ಮಾತಿನಲ್ಲಿ, ಬಳಸುವ ಶಬ್ದಗಳಲ್ಲಿ ಕ್ಲಿಷ್ಟತೆ ಇದ್ದರೂ ಇದೊಂದು ಮಾದರಿಯ ಗದ್ಯವಾಗಿ ಬೆಳೆದುಕೊಂಡು ಬಂದಿದೆ. ಅಷ್ಟು ಉತ್ತಮ ಗದ್ಯವಲ್ಲದಿದ್ದರೂ ಇದಕ್ಕೆ ಗದ್ಯ ಸಾಹಿತ್ಯ ವಿವೇಚನೆಯಲ್ಲಿ ಒಂದು ಸ್ಥಾನವಿದೆ.

ಹಸ್ತಿಮಲ್ಲನ ಪೂರ್ವಪುರಾಣಕ್ಕೂ ಕನ್ನಡ ಗದ್ಯ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸ್ಥಾನವಿದೆ. ಸು.14ನೆಯ ಶತಮಾನದ ಗದ್ಯದ ಒಂದು ಮಾದರಿಯನ್ನು ಇಲ್ಲಿ ಕಾಣಬಹುದಾಗಿದೆ. ಈ ಪುಟ್ಟ ಕೃತಿಯ ಗದ್ಯ ಸುಲಭವೂ ಸರಳವೂ ಆಗಿದೆ. ಚಿಕ್ಕ ಚಿಕ್ಕ ವಾಕ್ಯಗಳೂ ಆಡುಮಾತುಗಳೂ ಇಲ್ಲಿ ದೊರೆಯುತ್ತವೆ. ಸಾಮಾನ್ಯವಾಗಿ ಜೈನ ಪುರಾಣಗಳಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚು. ಆದರೆ ಇಲ್ಲಿ ಅವು ಕಡಿಮೆಯಾಗಿದ್ದು ಬಂದ ಕಡೆ ಚೆನ್ನಾಗಿ ಹೊಂದಿಕೊಂಡು ಬಂದಿರುವುದನ್ನು ಗಮನಿಸಬಹುದು.

14ನೆಯ ಶತಮಾನದಿಂದ 17ನೆಯ ಶತಮಾನದವರೆಗೆ ಕನ್ನಡ ಗದ್ಯ ಸಾಹಿತ್ಯದ ಸ್ರೋತ ಬತ್ತಿದಂತೆ ಕಾಣುತ್ತದೆ. ನಿಜಗುಣ ಶಿವಯೋಗಿ, ಗುಬ್ಬಿಯ ಮಲ್ಲಣ್ಣ, ಮಗ್ಗೆಯ ಮಾಯಿದೇವ ಮೊದಲಾದ ವೀರಶೈವ ಶಾಸ್ತ್ರೀಯ ಗದ್ಯಗ್ರಂಥಗಳನ್ನು ಬಿಟ್ಟರೆ ಗದ್ಯಸಾಹಿತ್ಯವನ್ನು ಬೆಳೆಸಿದ ಬೇರೆ ಕವಿಗಳ ಯಾವ ಕೃತಿಗಳೂ ಈ ಕಾಲದಲ್ಲಿ ಕಾಣುವುದಿಲ್ಲ.

17ನೆಯ ಶತಮಾನದಲ್ಲಿ ಮೈಸೂರು ಅರಸರೂ ಅವರ ಆಶ್ರಯದಲ್ಲಿದ್ದ ಕವಿಗಳೂ ಗದ್ಯಸಾಹಿತ್ಯವನ್ನು ಸಾಕಷ್ಟು ಬೆಳೆಸಿದರು. ಚಿಕ್ಕದೇವರಾಜನು ಚಿಕ್ಕದೇವರಾಜ ಬಿನ್ನಪವನ್ನೂ ಭಾಗವತ, ಶೇಷಧರ್ಮಗಳ ಟೀಕೆಗಳನ್ನೂ ಗದ್ಯದಲ್ಲಿ ಬರೆದಿದ್ದಾನೆ. ಶಾಂತಲಿಂಗ ದೇಶಿಕ, ತಿರುಮಲಾರ್ಯ, ಚಿಕುಪಾಧ್ಯಾಯ (ಸು.1672) ಈ ಕಾಲದ ಉತ್ತಮ ಗದ್ಯಕಾರರು. ಶಾಂತಲಿಂಗ ದೇಶಿಕನ ಕೃತಿಗಿಂತಲೂ ತಿರುಮಲಾರ್ಯನ ಚಿಕ್ಕದೇವರಾಜವಂಶಾವಳಿಯ ಭಾಷೆ ಪ್ರೌಢವಾಗಿಯೂ ಹಳಗನ್ನಡದ ಬಿಗುವಿನಿಂದಲೂ ಕೂಡಿದೆ. ಚಿಕುಪಾಧ್ಯಾಯನೇ ಸುಮಾರು ಏಳು ಗದ್ಯ ಗ್ರಂಥಗಳನ್ನು ಬರೆದಂತೆ ತಿಳಿಯುತ್ತದೆ. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಹಳಗನ್ನಡ ನಡುಗನ್ನಡ ಶಬ್ದರೂಪಗಳ ಮಿಶ್ರಣ ಕಂಡುಬರುತ್ತದೆ.

17-18ನೆಯ ಶತಮಾನದಲ್ಲಿ ಬಖೈರು, ಕೈಫಿಯತ್ತು ಎಂಬ ಹೆಸರಿನ ಐತಿಹಾಸಿಕ ಗದ್ಯಕೃತಿಗಳು ಸಿಗುತ್ತವೆ. ಇವುಗಳಲ್ಲಿ ಉರ್ದು, ಪಾರಸೀ ಶಬ್ದಗಳು ಹೇರಳವಾಗಿ ಬಳಕೆಯಾಗಿವೆ. ಬಖೈರುಗಳ ಗದ್ಯಶೈಲಿ ಇತಿಹಾಸವನ್ನು ಚಿತ್ರಿಸುವ ಅಂದವಾದ ಶೈಲಿಯಾಗಿದೆ. ಕನ್ನಡ ಗದ್ಯದ ಬೆಳೆವಣಿಗೆಯ ದೃಷ್ಟಿಯಿಂದ ಈ ಬಖೈರುಗಳು ಉಲ್ಲೇಖನಾರ್ಹವಾಗಿವೆ.

18-19ನೆಯ ಶತಮಾನದಲ್ಲಿ ಕನ್ನಡ ಗದ್ಯಸಾಹಿತ್ಯ ವಿಪುಲವಾಗಿ ಸಮರ್ಥವಾಗಿ ಬೆಳೆದಿದೆ. ಈ ಕಾಲದಲ್ಲಿ ಕಾಣಬರುವಷ್ಟು ಗದ್ಯ ಕೃತಿಗಳು ಹಿಂದೆ ಮತ್ತಾವ ಕಾಲದಲ್ಲಿಯೂ ಕಂಡುಬಂದಿಲ್ಲ. ಇದನ್ನು ಗದ್ಯ ಸಾಹಿತ್ಯದ ಸುವರ್ಣಯುಗವೆಂದೇ ಕರೆಯಬಹುದು. ಕಳಲೆ ನಂಜರಾಜ (1740), ದೇವಚಂದ್ರ (1770-1841), ಮುಮ್ಮಡಿ ಕೃಷ್ಣರಾಜ (1794-1868), ಕೆಂಪುನಾರಾಯಣ (ಸು.1823), ಅಳಿಯ ಲಿಂಗರಾಜ (1823-74), ಮುದ್ದಣ (1870-1901) ಮೊದಲಾದ ಗದ್ಯ ಲೇಖಕರು ಈ ಕಾಲದಲ್ಲಿ ಪ್ರಸಿದ್ಧರಾಗಿದ್ದಾರೆ. ಕೆಂಪುನಾರಾಯಣನ ಮುದ್ರಾಮಂಜೂಷ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಭಾಷೆಗಳಿಂದ ಮುಪ್ಪುರಿಗೊಂಡಿದೆ. ಕಥಾ ನಿರೂಪಣೆಗೆ ಉಚಿತವಾದ ಗದ್ಯವನ್ನಿಲ್ಲಿ ಕಾಣಬಹುದು. 20ನೆಯ ಶತಮಾನದ ಗದ್ಯಕ್ಕೆ ಈ ಗ್ರಂಥ ಮುಂಬೆಳಕಾಯಿತು. ಮುಂದೆ ಕ್ರೈಸ್ತ ಮಿಶನರಿಗಳು ಗದ್ಯಕ್ಕೆ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಟ್ಟರು. ಬೈಬಲ್ ಗ್ರಂಥ ಸು.1823ರಲ್ಲಿ ಕನ್ನಡ ಗದ್ಯದಲ್ಲಿ ಪ್ರಕಟವಾಯಿತು. 19ನೆಯ ಶತಮಾನದ ಮಧ್ಯದಲ್ಲಿ ಹೊರಟ ಸಭಾಪತ್ರ, ಸತ್ಯ ದೀಪಿಕೆಗಳೆಂಬ ಪತ್ರಿಕೆಗಳು ಪತ್ರಿಕಾ ವ್ಯವಸಾಯಕ್ಕೆ ನೆಲಗಟ್ಟಾದುವು.

ಮುದ್ದಣ ಎರಡು ಗದ್ಯಗ್ರಂಥ'ಗಳನ್ನು ಬರೆದ. ಅದ್ಭುತ ರಾಮಾಯಣ ಸರಳ ಶೈಲಿಯಲ್ಲಿ ಚೊಕ್ಕವಾಗಿರುವ ಹಳಗನ್ನಡ ಗ್ರಂಥ. ಹಳಗನ್ನಡ ಅಭ್ಯಾಸಿಗಳಿಗೆ ಇದು ಹಿತಮಿತವಾದ ಕೃತಿ. ರಾಮಾಶ್ವ ಮೇಧದಲ್ಲಿ ಇವನ ಪ್ರತಿಭೆ ಇನ್ನೂ ಮಿಗಿಲಾಗಿದೆ. ಇಲ್ಲಿಯೇ ಕವಿ ಪದ್ಯಂ ವಧ್ಯಂ ಗದ್ಯಂ ಹೃದ್ಯಂ ಎಂದು ಗದ್ಯದ ಮೇಲ್ಮೆಯನ್ನು ಹೇಳಿದ್ದಾನೆ. ಇದರಲ್ಲಿ ಆರಂಭದ ಮಳೆಗಾಲದ ವರ್ಣನೆ, ಮುದ್ದಣ ಮನೋರಮೆಯರ ಸಂಭಾಷಣಾಕುಶಲತೆ, ಕಥಾನಿರೂಪಣೆಯಲ್ಲಿನ ನವೀನತೆ ಇವೆಲ್ಲವೂ ಇವನ ಗದ್ಯಶೈಲಿಯ ಬೆಡಗನ್ನು ತೋರುತ್ತವೆ. ಹಳಗನ್ನಡ ಭಾಷೆಯನ್ನು ಹೊಸಗನ್ನಡ ಧೋರಣೆಯಲ್ಲಿ ಬಳಸಿರುವುದೇ ಮುದ್ದಣನ ವೈಶಿಷ್ಟ್ಯ. ಇವನ ಶೈಲಿಯಲ್ಲಿ ಆಧುನಿಕ ಕಥೆಕಾದಂಬರಿಗಳ ಸೊಗಸು ವೈವಿಧ್ಯಗಳನ್ನು ಕಾಣಬಹುದಾಗಿದೆ.

ಹೊಸಗನ್ನಡ ಗದ್ಯ ಸಾಹಿತ್ಯ ಹೊಸ ಮಾದರಿಯಲ್ಲಿ ರೂಪುಗೊಂಡಿತು. ನಡುಗನ್ನಡ ಶಬ್ದಗಳು ಮಾಯವಾಗಿ ಹೊಸ ಹೊಸ ಶಬ್ದಗಳು ತಲೆದೋರಿದುವು. ಮುಸಲ್ಮಾನರು, ಫ್ರೆಂಚರು, ಪೋರ್ಚುಗೀಸರು, ಇಂಗ್ಲಿಷರು ಮುಂತಾದವರ ಭಾಷಾ ಸಾಹಿತ್ಯಗಳ ಪ್ರಭಾವ ನೇರವಾಗಿ ಕನ್ನಡದ ಮೇಲೆ ಆದುದರಿಂದ ಕನ್ನಡದಲ್ಲಿ ಅನ್ಯದೇಶ ಶಬ್ದಗಳು ಸೇರಿಕೊಂಡವು. ದೇಶೀಯ ಸಾಹಿತ್ಯದೊಂದಿಗೆ ಇಂಗ್ಲಿಷ್ ಹಾಗೂ ಇತರ ವಿದೇಶೀಯ ಸಾಹಿತ್ಯಗಳ ವ್ಯಾಸಂಗದ ಪರಿಣಾಮವಾಗಿ ಕನ್ನಡದಲ್ಲಿಯೂ ನವಜಾಗೃತಿಯುಂಟಾಯಿತು. ಗದ್ಯ ಸಾಹಿತ್ಯದ ವಿವಿಧ ಪ್ರಕಾರಗಳು ಬೆಳೆದುವು. ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ನಾಟಕ, ವ್ಯಕ್ತಿಚಿತ್ರ, ಪ್ರಬಂಧ, ಹರಟೆ, ಪ್ರವಾಸಸಾಹಿತ್ಯ, ಪತ್ರಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಮಾನವಿಕ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಮರ್ಶೆ ಹೀಗೆ ನಾನಾ ರೂಪದಲ್ಲಿ ಹುಲುಸಾಗಿ ಬೆಳೆಯುತ್ತಿದೆ. ಇವುಗಳಲ್ಲಿ ಕೆಲವು ಮುಖ್ಯ ಪ್ರಕಾರಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

ಕಾದಂಬರಿ ಸಾಹಿತ್ಯ ಪ್ರಕಾರ ಕನ್ನಡಕ್ಕೆ ಹೊಸತು. ಇದು ಬಂಗಾಲಿ, ಮರಾಠಿ, ಇಂಗ್ಲಿಷ್ ಇತ್ಯಾದಿ ಭಾಷೆಗಳ ಪ್ರಭಾವದಿಂದ ಕನ್ನಡಕ್ಕೆ ಬಂದುದು. ಚ.ವಾಸುದೇವಯ್ಯನವರ ಆರ್ಯಕೀರ್ತಿ, ಭೀಷ್ಮ ಚರಿತೆಗಳು ಹೊಸಗನ್ನಡದ ಗದ್ಯಶೈಲಿಗೆ ಭದ್ರವಾದ ತಳಹದಿಯನ್ನು ಹಾಕಿದುವು. ಬಿ.ವೆಂಕಟಾಚಾರ್ಯರು ಮತ್ತು ಗಳಗನಾಥರು ಬಂಗಾಲಿ, ಮರಾಠಿ ಭಾಷೆಗಳ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದರು. ಎಂ.ಎಸ್.ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಮೊದಲಾದ ಸ್ವತಂತ್ರ ಕಾದಂಬರಿಗಳಲ್ಲಿ ಮೈಸೂರು ಚಾಮರಾಜನಗರಗಳ ಕಡೆಯ ಅಂದಿನ ಕನ್ನಡದ ಪ್ರಾದೇಶಿಕ ಕಸುವನ್ನು ಕಾಣಬಹುದು. ಮುಂದೆ ಕಾದಂಬರಿ ಕ್ಷೇತ್ರ ವೈವಿಧ್ಯ ಪೂರ್ಣವಾಗಿ ಬೆಳೆಯಿತು. ಐತಿಹಾಸಿಕ, ಪೌರಾಣಿಕ, ಸಾಮಾಜಿಕ, ರಾಜಕೀಯ, ಪತ್ತೇದಾರಿ ಹೀಗೆ ಐದು ಬಗೆಯಲ್ಲಿ ಅದು ವಿಕಸಿಸಿತು. ಶಿವರಾಮ ಕಾರಂತ, ಅ.ನ.ಕೃ., ಕೃಷ್ಣಮೂರ್ತಿ ಪುರಾಣಿಕ, ತ.ರಾ.ಸು., ಶ್ರೀನಿವಾಸರಾವ್ ಕೊರಟಿ, ತ್ರಿವೇಣಿ, ಬಸವರಾಜ ಕಟ್ಟೀಮನಿ, ವಿ.ಎಂ.ಇನಾಂದಾರ್ ಮೊದಲಾದವರ ಕಾದಂಬರಿಗಳಲ್ಲಿನ ಭಾಷೆ ಗದ್ಯಕ್ಕೆ ಹೊಸತನವನ್ನು ತಂದುಕೊಟ್ಟಿತು. ಭಾಷೆಯ ಪ್ರಾದೇಶಿಕ ವೈಭವಕ್ಕೆ ಕುವೆಂಪು, ಮಿರ್ಜಿ ಅಣ್ಣಾರಾಯ, ರಾವಬಹಾದ್ದೂರ, ಶಿವರಾಮ ಕಾರಂತ, ಶ್ರೀರಂಗ ಇವರ ಕೃತಿಗಳನ್ನು ವೀಕ್ಷಿಸಬಹುದು. ಇವರ ಗದ್ಯದಿಂದ ಅನೇಕಾನೇಕ ಪ್ರಾದೇಶಿಕ ಶಬ್ದಗಳು, ನುಡಿಗಟ್ಟುಗಳು ಭಾಷಾಮರ್ಯಾದೆಗಳು ಕನ್ನಡಕ್ಕೆ ಬಂದು ಸೇರಿವೆ. ಜೀವನವನ್ನು ವರ್ಣಿಸುವಲ್ಲಿ, ಸಂಭಾಷಣೆಗಳನ್ನು ಹೆಣೆಯುವುದರಲ್ಲಿ ಗದ್ಯಕ್ಕಿರುವ ಎಲ್ಲ ಸಾಮರ್ಥ್ಯವನ್ನೂ ಉಪಯೋಗಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಮುಂದೆ ನವ್ಯ ಸಾಹಿತ್ಯ ಪ್ರಕಾರ ಬೆಳೆದು ಭಾಷೆಗೆ ಹೊಸ ಸತ್ವವನ್ನೂ ಜೀವಂತಿಕೆಯನ್ನೂ ತುಂಬಿತು. ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಗಿರಿ, ಶಾಂತಿನಾಥ ದೇಸಾಯಿ, ಪೂರ್ಣಚಂದ್ರ ತೇಜಸ್ವಿ, ಶ್ರೀಕೃಷ್ಣ ಆಲನಹಳ್ಳಿ ಮುಂತಾದ ಶ್ರೇಷ್ಠ ದರ್ಜೆಯ ಗದ್ಯ ಲೇಖಕರು ಕನ್ನಡ ಗದ್ಯದ ಬೆಳವಣಿಗೆಗೆ ಶಕ್ತಿ ನೀಡಿದ್ದಾರೆ.

ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಕಾದಂಬರಿಯ ಅನಂತರ ಸಣ್ಣ ಕಥೆಗಳದೇ ಅಗ್ರಸ್ಥಾನ. ಒಂದು ದೃಷ್ಟಿಯಲ್ಲಿ ಕಾದಂಬರಿಗಿಂತ ಸಣ್ಣಕಥೆಯ ರಚನೆ ಹೆಚ್ಚು ಕ್ಲಿಷ್ಟವಾದುದು. ಹೀಗಿರುವಲ್ಲಿ ಕನ್ನಡ ಸಣ್ಣಕಥೆಗಳು ತಮ್ಮ ಕ್ಷೇತ್ರದಲ್ಲಿ ಪಡೆದಿರುವ ಸಿದ್ಧಿಯನ್ನು ನೋಡಿದರೆ ಕನ್ನಡ ಗದ್ಯ ಎಷ್ಟರಮಟ್ಟಿಗೆ ವಿಕಸನಗೊಂಡಿದೆಯೆಂಬ ಅಂಶ ಸ್ವಯಂವೇದ್ಯವಾಗುತ್ತದೆ. ಕೆರೂರ ವಾಸುದೇವಾಚಾರ್ಯ, ಪಂಜೆ, ಮಂಗೇಶರಾಯ, ಎಂ.ಎನ್.ಕಾಮತ್, ಶ್ರೀನಿವಾಸ ಇವರು ಕನ್ನಡ ಸಣ್ಣ ಕಥೆಗಳ ಮೊದಲಿಗರು. ನವೋದಯದಲ್ಲಿ ಕುವೆಂಪು, ಚದುರಂಗ, ಅ.ನ.ಕೃ. ಅಶ್ವತ್ಥ, ಎ.ಆರ್.ಕೃ., ಮೊದಲಾದ ಲೇಖಕರೂ ನವ್ಯದಲ್ಲಿ ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಶಾಂತಿನಾಥ ದೇಶಾಯಿ, ಪಿ.ಲಂಕೇಶ್, ಟಿ.ಜಿ.ರಾಘವ, ಕಾಮರೂಪಿ, ಯಶವಂತ ಚಿತ್ತಾಲ ಮೊದಲಾದವರು ಉತ್ತಮ ಕಥೆಗಳನ್ನು, ಶ್ರೇಷ್ಠ ದರ್ಜೆಯ ಭಾಷೆಯನ್ನು ಕೊಟ್ಟಿದ್ದಾರೆ.

ಜೀವನಚರಿತ್ರೆಯೂ ಗದ್ಯ ಪ್ರಕಾರಗಳಲ್ಲಿ ಒಂದು. ಎಂ.ಎಸ್.ಪುಟ್ಟಣ್ಣ, ಚ.ವಾಸುದೇವಯ್ಯ, ಡಿ.ವಿ.ಜಿ., ಕುವೆಂಪು, ಆಲೂರ ವೆಂಕಟರಾಯ, ಸಿ.ಕೆ.ವೆಂಕಟರಾಮಯ್ಯ ಮೊದಲಾದವರು ಉತ್ತಮ ದರ್ಜೆಯ ಜೀವನ ಚರಿತ್ರೆಗಳನ್ನು ನೀಡಿದ್ದಾರೆ. ಅದರಲ್ಲಿಯೂ ಕುವೆಂಪು ಅವರ ಗದ್ಯ ವಿಶಿಷ್ಟವಾದದ್ದು, ಪ್ರೌಢವಾದದ್ದು. ದೇಜಗೌ ಅವರ ಭಾಷೆ ಹೆಚ್ಚು ಗ್ರಾಮೀಣವಾದದ್ದು. ಶಿವರಾಮ ಕಾರಂತರದು ಹದವರಿತ ಶೈಲಿ. ಬೆಳೆಯುತ್ತಿರುವ ಆಧುನಿಕ ಜೀವನವನ್ನು ಯುಕ್ತವಾಗಿ ನಿರೂಪಿಸಬಲ್ಲ ಶಕ್ತಿ ಕನ್ನಡ ಗದ್ಯಕ್ಕೆ ಇದೆ ಎನ್ನುವ ವಿಷಯ ಈ ಜೀವನ ಚರಿತ್ರೆಗಳಿಂದ ಸ್ಪಷ್ಟವಾಗುತ್ತದೆ.

ನಾಟಕ ಇನ್ನೊಂದು ಬಗೆಯ ಗದ್ಯಕ್ಕೆ ದಾರಿಮಾಡಿಕೊಟ್ಟಿದೆ. ಆಧುನಿಕ ಕನ್ನಡ ನಾಟಕಗಳನ್ನು ವಿವೇಚಿಸಬೇಕಾದರೆ ಆಳಸಿಂಗರಾಚಾರ್ಯ, ಬಸವಪ್ಪಶಾಸ್ತ್ರಿ, ಟಿ.ಪಿ.ಕೈಲಾಸಂ, ಶ್ರೀರಂಗ, ಕುವೆಂಪು ಮೊದಲಾದವರನ್ನು ಮರೆಯುವಂತಿಲ್ಲ. ಗಿರೀಶ ಕಾರ್ನಾಡ ಕನ್ನಡ ನಾಟಕಗಳಿಗೆ ಒಂದು ಹೊಸ ದೃಷ್ಟಿಕೋನ ಕೊಟ್ಟರು. ನವ್ಯನಾಟಕಕಾರರಲ್ಲಿ ಪಿ.ಲಂಕೇಶ್, ಎಚ್.ಎಂ.ಚನ್ನಯ್ಯ, ಚಂದ್ರಶೇಖರ ಪಾಟೀಲ, ಚದುರಂಗ, ಕೀರ್ತಿನಾಥ ಕುರ್ತಕೋಟಿ, ಚಂದ್ರಕಾಂತ ಕುಸನೂರ, ಚಂದ್ರಶೇಖರ ಕಂಬಾರ ಮೊದಲಾದವರು ಸಮರ್ಥ ಲೇಖಕರು. ಇವರ ಕೈಯಲ್ಲಿ ಕನ್ನಡ ಗದ್ಯ ಬೆಳೆದಿದೆ; ಶ್ರೀಮಂತವಾಗಿದೆ. ಇಂಥ ಬರೆಹಗಾರರಿಂದ ಕನ್ನಡ ಗದ್ಯಸಾಹಿತ್ಯ ಹೊಸಹೊಸ ಆಯಾಮವನ್ನು ಪಡೆಯುತ್ತಿದೆ. ಪೌರಾಣಿಕ, ರುದ್ರ ಪ್ರಹಸನ, ಏಕಾಂಕ ನಾಟಕ ಈ ಮೊದಲಾದ ಪ್ರಕಾರಗಳಲ್ಲಿ ನಾಟಕಕಾರರು ಬಳಸಿರುವ ಗದ್ಯಭಾಷೆ ತನ್ನ ವೈವಿಧ್ಯದಿಂದ ಔಚಿತ್ಯದಿಂದ ಸಂಕೀರ್ಣತೆಯಿಂದ ವ್ಯಾಸಂಗಯೋಗ್ಯವೆನಿಸಿದೆ.

ವಿಮರ್ಶಾತ್ಮಕ ಲೇಖನಗಳು, ಕೃತಿಗಳು, ಹೊಸಗನ್ನಡ ಗದ್ಯವನ್ನು ಬೆಳೆಸುವುದರಲ್ಲಿ ಹೆಚ್ಚಿನ ಕೆಲಸ ನಡೆಸಿವೆ. ಮೊದಮೊದಲು ಈ ಲೇಖನಗಳು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಪ್ರಬುದ್ಧ ಕರ್ಣಾಟಕ, ಜಯಂತಿ, ಜಯಕರ್ನಾಟಕ, ಜೀವನ, ಶರಣಸಾಹಿತ್ಯ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುವು. ಈಗ ಅವುಗಳ ಜೊತೆಗೆ ಕರ್ನಾಟಕ ಭಾರತಿ, ವಿಜ್ಞಾನ ಕರ್ಣಾಟಕ, ಮಾನವಿಕ ಕರ್ಣಾಟಕ, ಸಾಧನೆ, ಸಂಕ್ರಮಣ, ಸಾಕ್ಷಿ, ಸಮನ್ವಯ, ಜಾನಪದ ಮೊದಲಾದುವು ಸೇರಿವೆ. ಇವಲ್ಲದೆ ದೈನಂದಿನ ಮತ್ತು ವಾರಪತ್ರಿಕೆಗಳಾದ ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಸುಧಾ, ಕರ್ಮವೀರ, ತರಂಗ, ಪ್ರಜಾಮತ, ಜನಪ್ರಗತಿ ಮೊದಲಾದುವು ವರ್ಷಕ್ಕೆ ಒಂದು ಬಾರಿಯೋ ಎರಡು ಬಾರಿಯೋ ಹೊರತರುವ ವಿಶೇಷಾಂಕಗಳಲ್ಲೂ ಪ್ರೌಢಲೇಖನಗಳು ಅಚ್ಚಾಗುತ್ತಿವೆ. ವಿಮರ್ಶಾರಂಗ ವಿಶಾಲವಾಗಿ ಬೆಳೆಯುವುದಕ್ಕೆ ಈ ಪತ್ರಿಕೆಗಳಿಂದ ಆಗಿರುವ ಸಹಾಯ ಅಪಾರ. ಇವಲ್ಲದೆ ವಿಮರ್ಶನ ಗದ್ಯ ಕಾಲಕಾಲಕ್ಕೆ ಪುಸ್ತಕಗಳಾಗಿಯೂ ಹೊರಬಂದಿದೆ. ಪಂಪ, ರನ್ನ, ಕುಮಾರವ್ಯಾಸ, ಮುದ್ದಣ ಮೊದಲಾದವರನ್ನು ಕುರಿತ ಪ್ರಶಸ್ತಿಗಳು ಆಯಾ ಕವಿಯ ಮತ್ತು ಕಾವ್ಯದ ಪರಿಚಯವನ್ನು ಮಾಡಿಕೊಡುವ ವಿಮರ್ಶಾತ್ಮಕ ಕೃತಿಗಳು. ಇಲ್ಲಿಯ ಲೇಖನಗಳೆಲ್ಲ ಶಾಸ್ತ್ರೀಯ ಗದ್ಯ ಶೈಲಿಯಲ್ಲಿವೆ. ಇವೇ ಮುಂದಿನ ವಿಮರ್ಶಕರಿಗೆ ಮಾರ್ಗದರ್ಶನ ನೀಡಿದುವೆನ್ನಬಹುದು. ಅಭಿವಂದನೆ, ಸಂಭಾವನೆ, ಉಡುಗೊರೆ, ಉಪಾಯನ, ಬಾಗಿನ, ಗಂಗೋತ್ರಿ, ದೇಜಗೌ ಐವತ್ತು, ರಸಿಕರಂಗ, ಗಂಗೋತ್ರಿ, ಸಹ್ಯಾದ್ರಿ, ಕಾರಂತ ಪ್ರಪಂಚ, ಸವಿನೆನಪು, ಮಹಾಮಾರ್ಗ ಈ ಮೊದಲಾದ ಅಭಿನಂದನ ಗ್ರಂಥಗಳು ಕನ್ನಡ ವಿಮರ್ಶಾಗದ್ಯದ ಉಜ್ವಲ ಮಾದರಿಗಳನ್ನು ಒದಗಿಸುತ್ತವೆ. ವಿಮರ್ಶಾರಂಗದಲ್ಲಿ ಎಸ್.ವಿ.ರಂಗಣ್ಣ, ದೇಜಗೌ, ಹಾ.ಮಾ.ನಾಯಕ, ಎಲ್.ಬಸವರಾಜು, ಎಂ.ಚಿದಾನಂದಮೂರ್ತಿ, ರಂ.ಶ್ರೀ.ಮುಗಳಿ, ಜಿ.ಎಸ್.ಶಿವರುದ್ರಪ್ಪ, ಸಿ.ಪಿ.ಕೃಷ್ಣಕುಮಾರ್ ಮೊದಲಾದವರು ಸ್ಮರಣೀಯ ಕೆಲಸ ಮಾಡಿದ್ದಾರೆ. ಈ ಮಹನೀಯರಲ್ಲಿ

ಕೆಲವರು ಹಳಗನ್ನಡ ಕಾವ್ಯಗಳನ್ನು ಪರಿಷ್ಕರಿಸಿ ಸಂಪಾದಿಸಿ ಅವುಗಳಿಗೆ ಮುನ್ನುಡಿ, ಪ್ರಸ್ತಾವನೆಗಳನ್ನು ಗದ್ಯದಲ್ಲಿ ಬರೆದು ಗದ್ಯಸಾಹಿತ್ಯವನ್ನು ಪುಷ್ಟಿಗೊಳಿಸಿದ್ದಾರೆ. ಇವರಲ್ಲದೆ ಹೆಚ್ಚಾಗಿ ನವ್ಯ ಸಾಹಿತ್ಯವನ್ನು ಕುರಿತು ವಿಮರ್ಶಿಸಿ ಹೊಸದೃಷ್ಟಿಯನ್ನು ಬೆಳೆಸಿದವರಲ್ಲಿ ಗೋಪಾಲಕೃಷ್ಣ ಅಡಿಗ, ಎಂ.ಜಿ.ಕೃಷ್ಣಮೂರ್ತಿ, ಯು.ಆರ್.ಅನಂತಮೂರ್ತಿ, ಕುರ್ತಕೋಟಿ, ಶಂಕರ ಮೊಕಾಶಿ ಪುಣೇಕರ, ಪಿ.ಲಂಕೇಶ್, ಜಿ.ಎಚ್.ನಾಯಕ, ಎಚ್.ಎಂ.ಚನ್ನಯ್ಯ, ಎನ್.ಎಸ್.ಎಲ್.ಭಟ್ಟ, ಸುಮತೀಂದ್ರ ನಾಡಿಗ, ಡಿ.ಆರ್.ನಾಗರಾಜ್, ಟಿ.ಪಿ.ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮೊದಲಾದವರು ಮುಖ್ಯರು.

ಗದ್ಯದ ಬೆಳವಣಿಗೆಗೆ ವೃತ್ತ ಪತ್ರಿಕೆಗಳು, ಸಾಪ್ತಾಹಿಕ ಪತ್ರಿಕೆಗಳು, ಮಾಸಪತ್ರಿಕೆಗಳು, ತ್ರೈಮಾಸಿಕ ಪತ್ರಿಕೆಗಳು, ಆಯನಪತ್ರಿಕೆಗಳು ನಾನಾಮುಖವಾಗಿ ಸೇವೆ ಸಲ್ಲಿಸುತ್ತಿವೆ. ಗದ್ಯ ವಿಕಸನಕ್ಕೆ ಆಡುಮಾತನ್ನು ಬಿಟ್ಟರೆ ಪತ್ರಿಕೆಗಳೇ ಪ್ರಮುಖ ರಂಗವನ್ನು ಒದಗಿಸಿವೆಯೆಂಬ ಮಾತು ನಿಜ. ಮಾತು, ಅಭಿಪ್ರಾಯ, ವರದಿ, ವರ್ಣನೆ, ವಾದ, ವಿವಾದ, ತರ್ಕ, ರಂಜನೆ ಎಲ್ಲ ಅನುಭವಗಳಿಗೂ ಪತ್ರಿಕೆ ಎಡೆಕೊಡುತ್ತದೆ. ತನ್ಮೂಲಕ ಗದ್ಯ ಮಾದರಿಗಳನ್ನು ಬೆಳೆಸುತ್ತದೆ. ಸದ್ಯಕ್ಕೆ ಒದಗಬಲ್ಲ ಹೊಸ ಹೊಸ ಪದಗಳ ಸೃಷ್ಟಿಯಾಗುವುದೂ ಪತ್ರಿಕೆಗಳಲ್ಲಿಯೇ. ಈ ದೃಷ್ಟಿಯಿಂದ ಪ್ರಜಾವಾಣಿ, ಉದಯವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಸುಧಾ, ಕರ್ಮವೀರ, ಕಸ್ತೂರಿ, ಮಯೂರ, ತುಷಾರ, ತರಂಗ ಮೊದಲಾದವು ಮಾಡುತ್ತಿರುವ ಕೆಲಸ ಮುಖ್ಯವಾದುದು. ಹೀಗೆ ಪತ್ರಿಕೆ ಜೀವದ್ಭಾಷೆಯ ಪ್ರಯೋಗಶಾಲೆಯಾಗಿದೆ.

ಅನುವಾದಕೃತಿಗಳಿಂದಲೂ ಕನ್ನಡ ಗದ್ಯಭಾಷೆ ಹೆಚ್ಚು ಸಂಪದ್ಭರಿತವಾಗಿದೆ. ಸಂಸ್ಕೃತ, ಇಂಗ್ಲಿಷ್, ರಷ್ಯನ್ ಹಿಂದಿ, ತೆಲುಗು, ತಮಿಳು, ಮಲೆಯಾಳಂ, ಮರಾಠಿ, ಬಂಗಾಲಿ ಇತ್ಯಾದಿ ಭಾಷೆಗಳ ಅನುವಾದದಿಂದ ಕನ್ನಡದ ಗದ್ಯ ಹೊಸ ಸತ್ವವನ್ನು ಪಡೆಯುತ್ತಿದೆ. ವಿವಿಧ ಭಾಷೆಗಳ ವಿಶಿಷ್ಟ ಶಬ್ದಗಳು, ನುಡಿಗಟ್ಟು, ವಾಕ್ಯರಚನೆ ಮುಂತಾದುವನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಕನ್ನಡ ಹೇಗೆ ಅದನ್ನು ನಿರ್ವಹಿಸಿದೆ. ಅದರಲ್ಲಿ ಎರವಲು ಎಷ್ಟು, ಎಷ್ಟರಮಟ್ಟಿಗೆ ಅನುವಾದ ಸಫಲವಾಗಿದೆ ಎಂಬ ವಿಷಯಗಳನ್ನು ಪರಿಶೀಲಿಸಿದಲ್ಲಿ ಅನುವಾದದಿಂದ ಭಾಷೆ ಹೇಗೆ ಬೆಳೆಯಬಲ್ಲದೆಂಬ ಅಂಶ ಸ್ಪಷ್ಟವಾಗುತ್ತದೆ. ಸಂಸ್ಕೃತ ಗ್ರಂಥವನ್ನು ಅನುವಾದಿಸುವುದರಲ್ಲಿ ಕೆ.ಕೃಷ್ಣಮೂರ್ತಿಯವರ ಹೆಸರು ಹೊಸಗನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ದೇಜಗೌ ಅವರು ಇಂಗ್ಲಿಷ್ ಹಾಗೂ ರಷ್ಯನ್ ಸಾಹಿತ್ಯಾನುವಾದದಿಂದ ಕನ್ನಡದ ಗದ್ಯಸಂಪತ್ತನ್ನು ಬೆಳಗಿಸಿದ್ದಾರೆ. ಇವರ ಗದ್ಯದಲ್ಲಿ ಬಿಗು ಬಿನ್ನಾಣವಿದೆ, ಬನಿ ತನಿ ಇದೆ, ಆಡುಮಾತುಗಳ ಜಾಲವಿದೆ, ಅಸಂಖ್ಯ ಹೊಸ ಶಬ್ದಗಳ ಸೃಷ್ಟಿಯಿದೆ. ಶಾಸ್ತ್ರೀಯ ಅನುವಾದಕ್ಕೆ ಎನ್.ಬಾಲಸುಬ್ರಹ್ಮಣ್ಯಂ ಹೆಸರಾಗಿದ್ದಾರೆ. ಸಿ.ಪಿ.ಕೆ. ಅವರು ಸಂಸ್ಕೃತ, ಇಂಗ್ಲಿಷ್ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಗದ್ಯ ಸಾಹಿತ್ಯವನ್ನು ಬಲಪಡಿಸಿದ್ದಾರೆ.

ಇನ್ನು ವಿದ್ವಾಂಸರು ನಡೆಸಿದ ಹಿರಿಯ ಸಂಶೋಧನೆಗಳ ಪ್ರಕಟಣೆಗಳನ್ನು ಗಮನಿಸಬಹುದು. ಎ.ಆರ್.ಕೃ, ಅವರ ಕನ್ನಡ ನಾಟಕ, ಬಂಕಿಮಚಂದ್ರ, ಜಿ.ವರದರಾಜರಾವ್ ಅವರ ಕುಮಾರರಾಮನ ಸಾಂಗತ್ಯಗಳು, ಚಿದಾನಂದಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಜಿ.ಎಸ್.ಶಿವರುದ್ರಪ್ಪನವರ ಸೌಂದರ್ಯ ಸಮೀಕ್ಷೆ, ಪ್ರಭುಶಂಕರರ ಭಾವಗೀತೆ, ಟಿ.ವಿ.ವೆಂಕಟಾಚಲಶಾಸ್ತ್ರೀ ಅವರ ಕನ್ನಡ ಛಂದಸ್ಸು, ಶ್ರೀನಿವಾಸ ಹಾವನೂರರ ಹೊಸಗನ್ನಡದ ಅರುಣೋದಯ ಮೊದಲಾದವು ಈ ಬಗೆಯ ಗದ್ಯಕ್ಕೆ ಉತ್ತಮ ಉದಾಹರಣೆಗಳು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗುತ್ತಿರುವ ಕನ್ನಡ ವಿಶ್ವಕೋಶದ ಸಂಪುಟಗಳು ಗದ್ಯ ಕ್ಷೇತ್ರದಲ್ಲಿ ಹೊಸದೊಂದು ವಿಕ್ರಮ ಸ್ಥಾಪಿಸುತ್ತಿವೆ. ಭಾಷೆಯನ್ನು ವೈಜ್ಞಾನಿಕವಾಗಿ ಬಳಸುವುದು, ಪದಪ್ರಯೋಗಗಳಲ್ಲಿ ಸಾಧ್ಯವಾದಷ್ಟು ಏಕತೆಯನ್ನು ಸಾಧಿಸುವುದು, ಅನುಚಿತವೆನಿಸಬಹುದಾದ ಕೆಲವು ಪ್ರತ್ಯಯಗಳನ್ನು ನಿವಾರಿಸುವುದು, ಭಿನ್ನ ಭಿನ್ನ ಲೇಖಕರ ಬರೆಹಗಳನ್ನು ಉಚಿತ ಸಂಯೋಜನೆಯಿಂದ ಒಂದು ಸಮಾನ ರೂಪಕ್ಕೆ ತರುವುದು ಈ ಮೊದಲಾದ ಅಂಶಗಳಿಂದಾಗಿ ಇಲ್ಲಿನ ಗದ್ಯ ಪರಿಶೀಲನಯೋಗ್ಯವಾಗಿದೆ. ವಿವಿಧ ಜ್ಞಾನಕ್ಷೇತ್ರಗಳಲ್ಲಿನ ಅದರಲ್ಲೂ ವಿಜ್ಞಾನ ವಿಭಾಗಗಳಲ್ಲಿನ ಸೂಕ್ಷ್ಮವೂ ಸಂಕೀರ್ಣವೂ ಆದ ಅಂಶಗಳನ್ನು ಶಾಸ್ತ್ರೀಯ ಸ್ಪಷ್ಟತೆಯಿಂದ ಕನ್ನಡ ಗದ್ಯ ರೂಪಿಸಬಲ್ಲುದೆಂಬುದಕ್ಕೆ ಈ ಕೋಶಗಳಲ್ಲಿ ನಿದರ್ಶನಗಳಿವೆ. ಇದರ ಜೊತೆಗೆ ವಿಜ್ಞಾನ ವಿಷಯಗಳನ್ನು ಕುರಿತು ಆರ್.ಎಲ್.ನರಸಿಂಹಯ್ಯ, ಶಿವರಾಮ ಕಾರಂತ, ಜೆ.ಆರ್.ಲಕ್ಷ್ಮಣರಾವ್, ಡಿ.ಎಸ್.ಶಿವಪ್ಪ, ಜಿ.ಟಿ.ನಾರಾಯಣರಾವ್ ಮೊದಲಾದವರು ರಚಿಸಿರುವ ಗ್ರಂಥಗಳನ್ನೂ ಕನ್ನಡ ವಿಜ್ಞಾನ ಸಾಹಿತ್ಯ ನಿರ್ಮಾಣ ಗ್ರಂಥಗಳನ್ನೂ ಪರಿಶೀಲಿಸಬಹುದು. ಇತ್ತೀಚೆಗೆ ಹೆಚ್ಚು ವಿಶಾಲವೂ ವೈಜ್ಞಾನಿಕವೂ ಆಗಿ ಬೆಳೆಯುತ್ತಿರುವ ವಿಷಯಗಳಲ್ಲಿ ಜಾನಪದವೂ ಒಂದು. ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಕಥೆ, ಒಗಟು, ಗಾದೆ, ಗೀತೆ ಪ್ರಮುಖವಾದವು. ನೂರಾರು ಜನಪದ ಕಥೆಗಳೂ ಗಾದೆ ಗೀತೆ ಒಗಟುಗಳೂ ಸಂಪಾದನೆ ಹೊಂದಿ ಪ್ರಕಟವಾಗಿವೆ. ಹಲವಾರು ವಿದ್ವಾಂಸರು ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ ಹೆಸರು ಗಳಿಸಿದ್ದಾರೆ. ಜಾನಪದದ ಬಗ್ಗೆ ಜನಪದ ಸಾಹಿತ್ಯದ ಬಗ್ಗೆ ಅನೇಕ ಲೇಖನಗಳೂ ವಿಮರ್ಶಾಕೃತಿಗಳೂ ಹೊರಬಂದಿವೆ. ಜನಪದ ಸಾಹಿತ್ಯದಲ್ಲಿ ಕಥೆ, ಒಗಟು, ಗಾದೆ ಇವುಗಳಲ್ಲಿ ಬಳಕೆಯಾಗಿರುವ ಗದ್ಯ ಆಡುಭಾಷೆಯ ಸೊಗಡಿನಿಂದ ಕೂಡಿದ್ದು ಜೀವಂತವಾಗಿದೆ. ಈ ಭಾಷೆ ಕನ್ನಡದ ನೈಜ ಜಾಯಮಾನದ ಸಂಪತ್ತಿನಿಂದ ಕೂಡಿದೆ.

ಇಂದು ಸೃಜನಶೀಲ ಗದ್ಯ ಒಂದು ಕಡೆ, ಶಾಸ್ತ್ರ ಗದ್ಯ ಇನ್ನೊಂದು ಕಡೆ ವೈವಿಧ್ಯಪೂರ್ಣವಾಗಿ ಬೆಳೆಯುತ್ತಿದೆ. ಪದ್ಯಕ್ಕಿಂತ ಗದ್ಯಕ್ಕೆ ಹೆಚ್ಚಿನ ವ್ಯಾವಹಾರಿಕ ಪ್ರಾಮುಖ್ಯವಿದೆ. ಆಧುನಿಕ ಯುಗದಲ್ಲಂತೂ ಗದ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ಸಂದಿದೆ. ಈಚೆಗೆ ವಾಣಿಜ್ಯ ವ್ಯವಹಾರಗಳಲ್ಲಿ ಕನ್ನಡದ ಬಳಕೆ ಹೆಚ್ಚಿದೆ. ಕನ್ನಡ ಹಂತಹಂತವಾಗಿ ಆಡಳಿತ ಭಾಷೆಯಾಗಿ ರೂಢಿಯಾಗುತ್ತಿದೆ. ಪದವಿ ಮಟ್ಟದ ಶಿಕ್ಷಣ ಕನ್ನಡ ಮಾಧ್ಯಮದಿಂದ ಯಶಸ್ವಿಯಾಗಿ ನೆರವೇರುತ್ತಿದೆ. ಅದಕ್ಕನುಕೂಲವಾಗಿ ಪಠ್ಯಪುಸ್ತಕಗಳು ಸೃಷ್ಟಿಯಾಗುತ್ತಿವೆ. ಕನ್ನಡ ಗದ್ಯ ಸುಪುಷ್ಟವಾಗಿ ಬೆಳೆದು ಶಾಸ್ತ್ರಾಭಿವ್ಯಕ್ತಿಗೂ ಭಾವಾಭಿವ್ಯಕ್ತಿಗೂ ಸಮರ್ಥವಾದುದಾಗಿದೆ. ಕನ್ನಡ ಮಾಧ್ಯಮದಿಂದ ಯಾವ ವಿಷಯವನ್ನಾದರೂ ಹೇಳಲು ಕಲಿಯಲು ಬರುತ್ತದೆ ಎಂಬ ಅಂಶ ಮೇಲಿನ ಪರಿಶೀಲನೆಯಿಂದ ಸಹಜವಾಗಿ ಸ್ಪಷ್ಟಗೊಳ್ಳುತ್ತಿದೆ.

*

1970ರ ದಶಕ ಕನ್ನಡ ಗದ್ಯಸಾಹಿತ್ಯಕ್ಷೇತ್ರದಲ್ಲಿ ಬಹಳ ಪ್ರಮುಖವಾದದ್ದು ನವೋದಯ ಕಾಲದ ಸಾಹಿತ್ಯ, ಪ್ರಗತಿಶೀಲ ಕಾಲದ ಸಾಹಿತ್ಯದ ಹಂತಗಳನ್ನು ದಾಟಿ ನವ್ಯಪಂಥದ ಕಾಲದ ಸಾಹಿತ್ಯ ಶಿಖರಾವಸ್ಥೆಯನ್ನು ತಲಪಿದ ಕಾಲವದು. ಕಾವ್ಯದ ಕ್ಷೇತ್ರದಲ್ಲಿ ನವ್ಯಪಂಥ ಒಂದು ವಿನೂತನ ಕಾವ್ಯಮಾದರಿಯನ್ನು ರೂಢಿಸಿತು. ಪದ್ಯಗಂಧಿ ಗದ್ಯ ಹೆಚ್ಚು ಪ್ರಬಲವಾಯಿತು. ಕಾವ್ಯ ತನ್ನ ಗೇಯತೆಯನ್ನು ಕಳೆದುಕೊಂಡು ವಾಸ್ತವಕ್ಕೆ ಹೆಚ್ಚು ಹತ್ತಿರವಾಯ್ತು. ಅನೇಕ ನವ್ಯ ಲೇಖಕರು ಕನ್ನಡ ಗದ್ಯವನ್ನು ಅತ್ಯಂತ ಸೃಜನಶೀಲವಾಗಿ ಬೆಳೆಸಿದರು. ಗದ್ಯವೂ ಕಾವ್ಯದಷ್ಟೇ, ಅದಕ್ಕೆ ಒಂದು ಕೈ ಮೇಲಾಗಿ ಸಾಹಿತ್ಯವನ್ನು ತುಂಬಿಕೊಂಡಿತು. ವಿಮರ್ಶೆಯ ಕ್ಷೇತ್ರ, ಅದರ ಪರಿಮಿತಿಗಳ ನಡುವೆಯೂ ಅತ್ಯಂತ ಶ್ರೀಮಂತವಾದದ್ದು ನವ್ಯ ಸಾಹಿತ್ಯ ಸಂದರ್ಭದಲ್ಲಿ. ಗೋಪಾಲಕೃಷ್ಣ ಅಡಿಗ, ಲಂಕೇಶ್, ಅನಂತಮೂರ್ತಿ, ಎಂ.ಜಿ.ಕೃಷ್ಣಮೂರ್ತಿ, ಮೊದಲಾದವರು ಕನ್ನಡ ಗದ್ಯಸಾಹಿತ್ಯ ಕ್ಷೇತ್ರದ ಕ್ಷಿತಿಜವನ್ನು ತಮ್ಮ ಬರಹಗಳಿಂದ ವಿಸ್ತರಿಸಿದರು. ಈ ವಿಸ್ತರಣೆಯಲ್ಲಿ ಸಾಕ್ಷಿ, ಸಂಕ್ರಮಣ ಮೊದಲಾದ ಸಾಹಿತ್ಯ ಪತ್ರಿಕೆಗಳ ಕೊಡುಗೆಯನ್ನು ನಾವು ಮರೆಯುವಂತಿಲ್ಲ. ಅನಂತರ ಬಂಡಾಯ, ದಲಿತ ಸಾಹಿತ್ಯದ ಸಂದರ್ಭದಲ್ಲಿ ಗದ್ಯ ನ ಭೂತೋ ನ ಭವಿಷ್ಯತಿ ಎಂಬಂತೆ ಸಹಸ್ರ ಮುಖಿಯಾಯ್ತು. ಕೆಳವರ್ಗದಿಂದ ಬಂದ ಲೇಖಕರ ತಾಜಾ ಅನುಭವಗಳ ಅಭಿವ್ಯಕ್ತಿ ಆಯಾ ಪ್ರಾದೇಶಿಕ ಭಾಷೆಯ ಎಲ್ಲ ಸತ್ವದೊಡನೆ ವಿಜೃಂಭಿಸಿತು. ಕನ್ನಡ ಗದ್ಯಕ್ಕೆ ಹೊಸ ರಕ್ತದಾನವಾಯಿತು.

ತೇಜಸ್ವಿ, ಲಂಕೇಶ್, ಬೆಸಗರಹಳ್ಳಿ ರಾಮಣ್ಣ, ಕುಂ.ವೀರಭದ್ರಪ್ಪ, ವೀರಭದ್ರ, ಗಿರೀಶ್ ಕಾರ್ನಾಡ್, ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಪಾಟೀಲ, ಸಿದ್ಧಲಿಂಗಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜ, ಮಾಧವ ಕುಲಕರ್ಣಿ, ಚೆನ್ನಣ್ಣ ವಾಲೀಕಾರ ಮುಂತಾದವರು ಕನ್ನಡ ಗದ್ಯಕ್ಕೆ ಹೊಸ ಆಯಾಮವನ್ನು ನೀಡಿದರು. ಕಾರ್ನಾಡ್, ಕಂಬಾರ, ಲಂಕೇಶ್ ಮುಂತಾದವರು ನಾಟಕ ಕ್ಷೇತ್ರದ ಗದ್ಯದಲ್ಲಿ ಉತ್ತಮ ಸಾಧನೆ ಮಾಡಿದರು.

ಬಂಡಾಯ ಸಾಹಿತ್ಯದಲ್ಲಿ ಮುಖ್ಯವಾಗಿ ಮೂರು ಬಗೆಯ ಸಂವೇದನೆಗಳನ್ನು ನೋಡಬಹುದು - ದಲಿತ ಸಂವೇದನೆ, ಮಹಿಳಾ ಸಂವೇದನೆ

ಮತ್ತು ಮುಸ್ಲಿಂ ಸಂವೇದನೆ. ಸಣ್ಣಕಥೆಗಳ ಕ್ಷೇತ್ರದಲ್ಲಿ ಬರವಣಿಗೆಯ ಹೊಸತನ ಕಾಣಿಸಿಕೊಳ್ಳತೊಡಗಿತು. ಕುಂ.ವೀರಭದ್ರಪ್ಪನವರ ಇನ್ನಾದರೂ ಸಾಯಬೇಕು, ಬೆಸಗರಹಳ್ಳಿ ರಾಮಣ್ಣನವರ ಕನ್ನಂಬಾಡಿ, ಬರಗೂರು ರಾಮಚಂದ್ರಪ್ಪನವರ ಕಪ್ಪುನೆಲದ ಕೆಂಪುಕಾಲು, ಫಕೀರ್ ಮಹಮ್ಮದ್ ಕಟ್ಪಾಡಿಯವರ ನೋಂಬು, ಬಾನು ಮುಷ್ತಾಕ್ ಅವರ ಹೆಜ್ಜೆ ಮೂಡದ ಹಾದಿ, ವೀರಭದ್ರ ಅವರ ಕನ್ನಡಿ ನೋಡಿದ ನಾಯಿ, ಚದುರಂಗರ ಮೃಗಯಾ, ವೀಣಾ ಶಾಂತೇಶ್ವರರ ಬಿಡುಗಡೆ, ಕೊಡ್ಲೆಕೆರೆಯವರ ಯಕ್ಷಸೃಷ್ಟಿ, ತೇಜಸ್ವಿಯವರ ಕಿರಗೂರಿನ ಗಯ್ಯಾಳಿಗಳು, ಮೊಗಳ್ಳಿ ಗಣೇಶ್ ಅವರ ಬುಗುರಿ ಮುಂತಾದ ಕೃತಿಗಳಲ್ಲಿ ಗ್ರಾಮೀಣ ಲಕ್ಷಣವನ್ನುಳ್ಳ ಭಾಷೆಯನ್ನೂ ಗದ್ಯದ ವಿಕಾಸವನ್ನೂ ಕಾಣುತ್ತೇವೆ. ನಾ.ಡಿಸೋಜರವರ ಸಣ್ಣಕಥೆಗಳ ಭಾಷೆಯ ಸ್ವಾರಸ್ಯದಿಂದಾಗಿ ಓದುಗರು ಕ್ರೈಸ್ತ ಸಮಾಜ, ಸಮುದಾಯದ ನಡುವೆಯೇ ಇರುವಂತೆ ತೋರುತ್ತದೆ. ಕೆಳವರ್ಗದವರ ಬದುಕಿನ ಹೃದಯಸ್ಪರ್ಶಿ ಚಿತ್ರಣವನ್ನು ಅನೇಕ ಸಣ್ಣಕತೆಗಾರರ ಬರೆಹಗಳಲ್ಲಿ ಕಾಣುತ್ತೇವೆ. ದೇವನೂರು ಮಹಾದೇವ, ಮೊಗಳ್ಳಿ ಗಣೇಶ್, ಕುಂ.ವೀರಭದ್ರಪ್ಪ, ಅಮರೇಶ ನುಗುಡೋಣಿ, ಎಂ.ಎಸ್.ವೇದಾ ಮುಂತಾದವರ ಕಥೆಗಳನ್ನು ಭಾಷೆಯ ಸ್ವಾರಸ್ಯಕ್ಕಾಗಿಯೂ ಮತ್ತೆ ಮತ್ತೆ ಓದಬೇಕೆನಿಸುವುದುಂಟು.

ಇದೇ ಸಂದರ್ಭದಲ್ಲಿ ಬಂದ ಕಾದಂಬರಿಗಳೂ ಭಾಷೆಯ ಗತಿಸ್ಥಿತಿಯನ್ನು ವಿಸ್ತೃತಗೊಳಿಸಿದವು. ದೇವನೂರರ ಕುಸುಮಬಾಲೆ ಕಾದಂಬರಿಯ ಗದ್ಯ, ಒಡಲಾಳದ ಗದ್ಯ ಒಂದು ಸಮಾಜದ ಸಮುದಾಯವೊಂದರ ಆಡುಭಾಷೆಯ ಎಲ್ಲ ಕಸುವನ್ನೂ ಬೆರಗನ್ನೂ ಒಳಗೊಂಡಿರುವುದು ನಮ್ಮ ಗಮನ ಸೆಳೆಯುತ್ತದೆ. ಈ ಕೃತಿಗಳನ್ನು ಓದಲು, ಅರ್ಥೈಸಲು ಒಂದು ವಿಶಿಷ್ಟ ಬಗೆಯ ಮನೋಭಾವ, ಗ್ರಾಮೀಣ ಬದುಕಿನ ಅರಿವು ಅತ್ಯಂತ ಅಗತ್ಯವಾಗಿಬಿಡುತ್ತದೆ. ಕನ್ನಡ ಗದ್ಯಲೋಕ ಅದುವರೆಗೆ ಈ ಬಗೆಯ ಬೆರಗಿನ ಭಾಷೆಯನ್ನು ಕಂಡಿರಲಿಲ್ಲ.

ಕನ್ನಡದಲ್ಲಿ ನಾಟಕಗಳು ಕಡಿಮೆ ಎಂಬ ಭಾವನೆ ಇದೆ. ಶ್ರೀರಂಗರ ಅನಂತರ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರರು ನಾಟಕದ ಗದ್ಯವನ್ನು ಬೆಳೆಸಿದರು. ಕಂಬಾರರು ಉತ್ತರ ಕರ್ನಾಟಕದ ಭಾಷೆಯನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಕಾರ್ನಾಡ್‌ರ ನಾಟಕಗಳು ಸೊಗಸಾದ ಗದ್ಯವನ್ನು ನಿರ್ಮಿಸಿಕೊಟ್ಟಿವೆ. ತುಘಲಕ್, ಯಯಾತಿ, ಹಯವದನ, ಅಗ್ನಿ ಮತ್ತು ಮಳೆ ಮುಂತಾದುವುಗಳ ಗದ್ಯವನ್ನು ನೋಡಬಹುದು. ಎಚ್.ಎಸ್.ಶಿವಪ್ರಕಾಶ್ ಅವರ ಸುಲ್ತಾನ್ ಟಿಪ್ಪು, ಮಹಾಚೈತ್ರ, ಟಿ.ಎನ್.ಸೀತಾರಾಮ್ ಅವರ ಆಸ್ಫೋಟ, ನಮ್ಮೊಳಗೊಬ್ಬ ನಾಜೂಕಯ್ಯ ಮುಂತಾದುವನ್ನೂ ಭಾಷೆಯದೃಷ್ಟಿಯಿಂದ ಪರಿಶೀಲಿಸಬೇಕು.

ಕನ್ನಡದಲ್ಲಿ ನವ್ಯಪಂಥದ ಕಾಲದಲ್ಲಿ ಕುರ್ತುಕೋಟಿ, ಆಮೂರ, ಗಿರಡ್ಡಿ, ಲಂಕೇಶ್, ಚಂದ್ರಶೇಖರ ಪಾಟೀಲ್, ಮಾಧವ ಕುಲಕರ್ಣಿ, ಎಚ್.ಎಂ.ಚನ್ನಯ್ಯ ಮುಂತಾದವರು ವಿಮರ್ಶೆಯ ಗದ್ಯವನ್ನು ಕನ್ನಡ ಜಾಯಮಾನಕ್ಕೆ ಒಗ್ಗುವಂತೆ ಬಳಸತೊಡಗಿದರು.

ದಲಿತ ಸಂವೇದನೆ ಸ್ಪಷ್ಟವಾಗಿ ಕನ್ನಡ ನೆಲದಲ್ಲಿ ಹಬ್ಬಿದ ಅನಂತರ ಕನ್ನಡ ಗದ್ಯಕ್ಕೆ ಹೊಸ ಆಯಾಮ ಲಭಿಸಿತು. ಅದುವರೆಗೆ ಶಿಷ್ಟರಿಗೆ ಅಗೋಚರವಾಗಿದ್ದ ಪರಿಶಿಷ್ಟರ ಗದ್ಯದ ಗತ್ತು ತಿಳಿದುಬಂದಿತು. ದೇವನೂರು ಮಹಾದೇವರ ಅನಂತರ ಮುಳ್ಳೂರು ನಾಗರಾಜ, ಮ.ನ.ಜ., ಮೊಗಳ್ಳಿ ಗಣೇಶ್, ಅರವಿಂದ ಮಾಲಗತ್ತಿ ಮೊದಲಾದವರ ಗದ್ಯ ದಲಿತ ಸಂವೇದನೆಯನ್ನು ಪ್ರಕಟಿಸತೊಡಗಿತು. ಮಹಿಳಾ ಸಂವೇದನೆ ಕಳೆದ ಕಾಲು ಶತಮಾನದಲ್ಲಿ ಬೆಳೆದಂತೆ ಹಿಂದೆಂದೂ ಬೆಳೆದಿರಲಿಲ್ಲ. ಹಿಂದೆ ಮಹಿಳಾ ಕಾದಂಬರಿಕಾರರು ಇದ್ದರೇ ವಿನಾ ಮಹಿಳಾ ಸಂವೇದನೆಯನ್ನು ಪ್ರತಿಪಾದಿಸುವ ಧೈರ್ಯವನ್ನು ತೋರುವವರು ತುಂಬಾ ಕಡಿಮೆ ಇದ್ದರು. ಮಹಿಳೆಯರಲ್ಲಿ ದಲಿತ ದಲಿತೇತರ ಎಂಬ ವ್ಯತ್ಯಾಸವೇನೂ ಇಲ್ಲ. ಏಕೆಂದರೆ ಇಡೀ ಸ್ತ್ರೀವರ್ಗವೇ ವಿಮೋಚನೆಯನ್ನು ಬಯಸುವ ಸ್ಥಿತಿಯಲ್ಲಿತ್ತು. ಉಷಾನವರತ್ನರಾಂ, ಸಿ.ಎನ್.ಮುಕ್ತಾ, ಈಚನೂರು ಸಹೋದರಿಯರು, ಸಾರಾ ಅಬೂಬಕರ್, ಬಾನು ಮುಷ್ತಾಕ್, ಗೀತಾ ನಾಗಭೂಷಣ, ವಿಜಯಾ, ಫಿಲೋಮಿನಾ, ಸಂಧ್ಯಾರೆಡ್ಡಿ, ಸುನಂದಾ ಬೆಳಗಾಂವಕರ, ವಿಜಯಾ ದಬ್ಬೆ, ಸುಮಿತ್ರಾಬಾಯಿ, ಪ್ರತಿಭಾ ನಂದಕುಮಾರ್, ನಾಗಚಂದ್ರ ಮೊದಲಾದ ಅನೇಕ ಲೇಖಕಿಯರು ಕೃತಿರಚನೆ ಮಾಡಿದ್ದಾರೆ. ಆದರೆ ಭಾಷೆಯ ವೈಶಿಷ್ಟ್ಯವನ್ನು ತೋರಿಸಿದವರಲ್ಲಿ ಸುನಂದಾ ಬೆಳಗಾಂವಕರ, ವೈದೇಹಿ ಮುಂತಾದವರು ಪ್ರಮುಖರು. ಮುಸ್ಲಿಂ ಸಂವೇದನೆ ತುಂಬ ತಡವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿತು. ರಮಜಾನದರ್ಗಾ, ಅದೀಬ್‌ಅಕ್ತರ್, ಅಬ್ದುಲ್‌ರಷೀದ್, ಬೊಳುವಾರು, ಕಟ್ಪಾಡಿ, ರಹಮತ್ ತರೀಕೆರೆ ಮುಂತಾದವರು ಕನ್ನಡವನ್ನು ಮಾತೃಭಾಷೆಯೆಂಬಂತೆ ಬಳಸಿದ್ದಾರೆ. ಮುಚ್ಚಿದ ಸಮಾಜವೆನ್ನಿಸಿಕೊಂಡಿರುವ ಮುಸ್ಲಿಂ ಸಮಾಜದ ಒಳ ಆಯಾಮಗಳು ಇನ್ನೂ ಹೆಚ್ಚಾಗಿ ಬೆಳಕಿಗೆ ಬರುವಂತಾದರೆ ಕನ್ನಡ ಭಾಷೆಗೆ ಹೊಸ ಮಗ್ಗಲು ಪ್ರಾಪ್ತವಾಗುತ್ತದೆ.

ಕನ್ನಡ ನಿಯತಕಾಲಿಕೆಗಳಲ್ಲಿ ಅಂಕಣ ಸ್ಥಿರಶೀರ್ಷಿಕೆ ಪ್ರಾರಂಭವಾದ ಬಳಿಕ ಕನ್ನಡ ಗದ್ಯಕ್ಕೆ ಇನ್ನೊಂದು ಬಣ್ಣದ ಎಳೆ ಸೇರಿಕೊಂಡಿತು. ಕು.ಶಿ.ಹರಿದಾಸಭಟ್ಟ, ನಿರಂಜನ, ಹಾ.ಮಾ.ನಾಯಕ, ಎಚ್ಚೆಸ್ಕೆ ಮುಂತಾದ ಹಿರಿಯರು ಬರೆದಿರುವ ಅಂಕಣ ಗದ್ಯ ಕನ್ನಡಕ್ಕೆ ಇನ್ನೊಂದು ಗರಿಯನ್ನು ಮೂಡಿಸಿತು. ಎಚ್ಚೆಸ್ಕೆಯವರ ವ್ಯಕ್ತಿಚಿತ್ರ ವಿಶಿಷ್ಟ ಸ್ವರೂಪದ ಗದ್ಯವಾಗಿದೆ. ಉದಾಹರಣೆಗೆ 'ಬಕ್ಕತಲೆ, ಚೂಪಾದ ಮೂಗು, ಭೇದಿಸಿ ನೋಡುವ ಕಣ್ಣು, ಕಿವಿಯೊಳಗಿಂದ ಬೆಳೆದ ಪೊದೆಗೂದಲು, ಕೈಯಲ್ಲೊಂದು ಕೊಡೆ, ಪುಟಪುಟನೆ ನಡೆದು ಬರುತ್ತಿದ್ದ ಪುಟ್ಟ ಆಕೃತಿ'. ಹೀಗೆ ಭಾಷೆಯನ್ನು ಹೇಗೆಂದರೆ ಹಾಗೆ ನಿರಾಯಾಸವಾಗಿ ಬಳಸಿಕೊಳ್ಳುವ ಶಕ್ತಿ ಎಚ್ಚೆಸ್ಕೆಯವರಿಗಿರುವುದನ್ನು ಕಾಣುತ್ತೇವೆ.

ಸಾಹಿತ್ಯಕ ಬರೆಹಗಳಲ್ಲಿಯೂ ಗದ್ಯದ ಎಲ್ಲ ಸಾಧ್ಯತೆಗಳನ್ನೂ ದುಡಿಸಿಕೊಂಡ ಲೇಖಕರು ಕನ್ನಡದಲ್ಲಿ ಅನೇಕರಿದ್ದಾರೆ. ದೇಜಗೌ, ಎ.ಎನ್.ಮೂರ್ತಿರಾವ್, ಹಾ.ಮಾ.ನಾಯಕ, ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಎಂ.ಜಿ.ಕೃಷ್ಣಮೂರ್ತಿ, ಸುಮತೀಂದ್ರ ನಾಡಿಗ, ಲಂಕೇಶ್, ತೇಜಸ್ವಿ, ಎಂ.ಚಿದಾನಂದಮೂರ್ತಿ, ಎಚ್ಚೆಸ್ಕೆ ಮೊದಲಾದವರು ಕನ್ನಡ ಗದ್ಯ ಬರವಣಿಗೆಯನ್ನು ವಿಸ್ತೃತಗೊಳಿಸಿದರು. ಡಾಕ್ಟೋರೇಟ್ ಪದವಿಗಳಿಗೆ ಬರೆದ ನಿಬಂಧಗಳಿಂದಲೂ ಕನ್ನಡ ಗದ್ಯಕ್ಕೆ ಉತ್ತಮ ಕೊಡುಗೆ ಲಭ್ಯವಾಗಿದೆ. ಸಂಶೋಧನ ಗ್ರಂಥಗಳಲ್ಲಿಯೂ ಕೇವಲ ಶಾಸ್ತ್ರೀಯ ಪರಿಭಾಷೆಯನ್ನು ಮೀರಿದ ಗುಣಗಳನ್ನು ನಾವು ಕಾಣಬಹುದು. ಹಾಸ್ಯ ಬರೆಹಗಳು ಕನ್ನಡ ಗದ್ಯಕ್ಕೆ ಮೊನಚು ತಂದಿರುವುದು ಸ್ವಯಂವೇದ್ಯ ವಿಚಾರವೇ ಸರಿ. ರಾ.ಶಿ., ಪಾ.ವೆಂ., ಬೀಚಿ, ಅ.ರಾ.ಮಿತ್ರ, ಅ.ರಾ.ಸೇ., ಎಚ್.ಎಲ್.ಕೇಶವಮೂರ್ತಿ, ಮನೋಹರ ಚಂದ್ರನ್, ಭುವನೇಶ್ವರಿ ಹೆಗಡೆ, ಬಿ.ಚಂದ್ರೇಗೌಡ ಮುಂತಾದವರು ಗದ್ಯವನ್ನು ಬಳಸಿ ಬೆಳೆಸಿದ್ದಾರೆ. ವೈಎನ್ಕೆಯವರ 'ವಂಡರ್ ಕಣ್ಣು' ಅಂಕಣ ಒಂದು ವಿಶಿಷ್ಟ ಬಗೆಯ ಬರವಣಿಗೆ. ಅದು ವಿದ್ವತ್ಪೂರ್ಣವೂ ಹೌದು ಅತ್ಯಂತ ಸರಸವೂ ಸರಳವೂ ಹೌದು. ಇಂಥ ಸಮ್ಮಿಳನ ಬಹಳ ಅಪರೂಪ ಎನ್ನಬಹುದು. ಪುಂಡಲೀಕ ಶೇಟ್ ಬರೆಯುತ್ತಿದ್ದ ಹುಬ್ಬಳ್ಳಿಯಾಂವ ಶೀರ್ಷಿಕೆಯ ಹಾಸ್ಯ ಬರೆಹದ ಗದ್ಯ ಬಹಳ ಸೊಗಸಾದುದು. ಬಯಲು ಸೀಮೆಯ ಕಟ್ಟೆಪುರಾಣ ಶೀರ್ಷಿಕೆಯಲ್ಲಿ ಬಂದ ಬಿ.ಚಂದ್ರೇಗೌಡರ ಗದ್ಯವಂತೂ ಮಂಡ್ಯ ಹಾಸನ ಗಡಿಭಾಗದ ಆಡುಭಾಷೆಯ ಪ್ರತಿರೂಪವಾಗಿದೆ. "ಅಂಗಲ್ಲ ಕಣ ಮಾವ, ನಮಿಗುವೆ ಯಾವುದು ಸರಿ, ಯಾವುದು ತಪ್ಪು ಅಂತ ತಿಳಿವಳಿಕೆ ಬಂದದೆ, ಏನಾದ್ರೂ ಇದ್ದುದ್ದ ಬರಿಯೋ ಅಂತ ಸಗತಿನೂ ಬಂದದೆ, ಓದೋ ಸಗತಿನೂ ಅದೆ ..... ಅದರೊಳಿಕೋಗಿ ಬ್ಯಾಡಬ್ಯಾಡ ಅಂದ್ರೂವೆ ಕೋಟಿಕ್ಕಿ ಅದ್ಯೆಂತದ್ನೋ ಹಗ್ಗಬಿಗಿದಂಗೆ ಕತ್ತಿಗೆ ಬಿಗುದು ತಗಸಿದ್ರು ಆ ಪೊಟಾ ನೋಡಿದೋರ್‍ಯೆಲ್ಲ ನೀನು ರಾಜಕುಮಾರನಿಗೆ ಏನು ಕಮ್ಮಿ ಅಂದ್ರು ............." ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಚಹಾದ ಜೋಡಿ ಚೂಡಾದಾಂಗ ಎಂಬ ಅಂಕಣ ಬರೆಹದ ಗದ್ಯವೂ ಅತ್ಯಂತ ಆಪ್ತವಾದದ್ದು.

ಆತ್ಮಚರಿತ್ರೆ, ಜೀವನ ಚರಿತ್ರೆಗಳ ರಚನೆಯಲ್ಲಿಯೂ ಭಾಷೆಯ ಅಂಶವನ್ನು ಪ್ರತ್ಯೇಕವಾಗಿ ಗಮನಿಸುವುದರಿಂದ ಆ ಗ್ರಂಥಗಳ ವಿಮರ್ಶೆಗೂ ಬೆಲೆ ಬರುತ್ತದೆ. ವಸ್ತು ಮತ್ತು ವಾಹಕಗಳೆರಡೂ ಇಲ್ಲಿ ಮುಖ್ಯ. ಎ.ಎನ್.ಮೂರ್ತಿರಾಯರ ಸಂಜೆಗಣ್ಣಿನ ಹಿನ್ನೋಟ, ಎಚ್.ನರಸಿಂಹಯ್ಯನವರ ತೆರೆದ ಮನ, ಕೋ.ಚನ್ನಬಸಪ್ಪನವರ ನ್ಯಾಯಾಧೀಶನ ನೆನಪುಗಳು, ತರಳಬಾಳು ಶಿವಾಚಾರ್ಯರ ಆತ್ಮನಿವೇದನ, ಕೆ.ಆರ್.ರಾಮಚಂದ್ರನ್ ಅವರ ತಾಪೇದಾರಿ, ಬಿ.ಡಿ.ಜತ್ತಿಯವರ ನನಗೆ ನಾನೇ ಮಾದರಿ, ಸಿದ್ಧಲಿಂಗಯ್ಯನವರ ಊರುಕೇರಿ ಮುಂತಾದುವನ್ನು ನೋಡಿದಾಗ ಕನ್ನಡ ಗದ್ಯ ಎಷ್ಟು ಸುಲಲಿತವಾದುದು ಎಂಬುದು ತಿಳಿಯುತ್ತದೆ. ಇಡೀ ಭಾರತದಲ್ಲಿಯೇ ಕನ್ನಡ ಅತ್ಯಂತ

ಸಮೃದ್ಧವಾದ ಭಾಷೆ ಎಂಬ ಮಾತು ಗದ್ಯ ಬರೆಹಕ್ಕೂ ಋಣಿಯಾಗಿದೆ ಎಂದರೆ ಅದು ಅತಿಶಯೋಕ್ತಿಯ ಮಾತಲ್ಲ. ಗದ್ಯಂ ಕವೀನಾಂ ನಿಕಷಂ ವದಂತಿ ಎಂಬ ಮಾತು ತ್ರಿಕಾಲಬಾಧಿತ ಸತ್ಯವೆಂದು ತೋರುತ್ತದೆ. ಇತ್ತೀಚಿನ ಕನ್ನಡ ಗದ್ಯದ ಕೆಲವು ಮಾದರಿಗಳನ್ನು ಇಲ್ಲಿ ನೋಡಬಹುದು.

'ಅಕ್ಷರ ರಹಿತ ಆತ್ಮಗಳ ಮೇಲೆ ಅಕ್ಷರಗಳು ಹರಿದಾಡಿ ಹೊರಟಾಗಿನ ಅದೇ ಅಲಂಕಾರರಹಿತ ಶಬ್ದಗಳ ಗ್ರಾಮ್ಯತೆ, ಒಂದು ವಿನೂತನ ಅಲಂಕಾರವನ್ನೂ ಅನುಭಾವ ಸೌಂದರ್ಯವನ್ನು ಕನ್ನಡ ಅಕ್ಷರಗಳು ಪಡೆಯತೊಡಗಿದವೆಂಬುದನ್ನು ಮರೆಯುವಂತಿಲ್ಲ'

'ಮಾನವನು ಸ್ವತಂತ್ರನಾಗಿಯೇ ಹುಟ್ಟಿಲ್ಲ. ಸ್ವತಂತ್ರನಾಗಲು ಹುಟ್ಟಿದವನು. ಸ್ವಾತಂತ್ರ್ಯದ ಪ್ರೇರಣೆಯು ಮಾನವ ಜೀವನದ ಮರ್ಮ'.

'ಮತಿದಾಸ್ಯ, ಮತದಾಸ್ಯ ಪೂರ್ವದ ಲಕ್ಷಣ ಬುದ್ಧಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ ಪಶ್ಚಿಮದ ಲಕ್ಷಣ'

'ಬಡತನ, ಅಜ್ಞಾನ, ದಟ್ಟವಿಷಾದ ಹಾಗೂ ಬದುಕಿನ ವಿವಿಧ ಲಯಗಳು ಇಲ್ಲಿ ಜೀವಂತವಾಗಿವೆ.'

'ಕಂಡದ್ದನ್ನು ಮೈತುಂಬ ತುಂಬಿಕೊಂಡು ನಡುಗಿದರು. ಮತ್ತೆ ಕಣ್ಣು ತೆರೆದು ನೇರವಾಗಿ ನಿರ್ಭಯವಾಗಿ ನೋಡಿದರು. ಕೆಂಡದಂತೆ ಉರಿಯುತ್ತ ಅಬ್ಬರಿಯ ತಳದಲ್ಲಿ ಮಲಗಿದ್ದ ಹುಲಿಯೂ ಅವರನ್ನು ನೋಡಿತು. ಅವರ ಹಾಗೆ ಕಣ್ಣಗಲಿಸಿ, ನಿರ್ಭಯವಾಗಿ, ಯಾವ ಎಗ್ಗೂ ಇಲ್ಲದೆ, ನಿಶ್ಚಯ'

'ಕೂದಲು ಕತ್ತರಿಸಿದ ಮುಂಡೆಯಂತಿದ್ದ ತೋಟವನ್ನು ನೋಡಿದವರ ಸುತ್ತ ಸೊನ್ನೆಗಳು ಮಿಡತೆಗಳಂತೆ ಮುತ್ತಿದುವು. ಅಷ್ಟೆತ್ತರ ಹಸಿರು ಹೊತ್ತು ಬಳುಕುತ್ತಿದ್ದ ಅಡಿಕೆ ಮರಗಳು ಹೀಗೆ ರುಬ್ಬಾರುಬ್ಬಿ ಬೇರು ಸಹಿತ ಕಿತ್ತು ಯಾಕೆ ಬಿದ್ದಿವೆ?'

'ಪ್ರಾಣದ ವಿಸರ್ಜನೆಗೆ ಧ್ಯಾನಿಸುತ್ತಿರುವರೆಂಬಂತೆ ಕುಕ್ಕೂರು ಕೂತ ....... ಅವರು ಮಾತಾಡಲಿಲ್ಲ. ಮೌನಿಯ ವಸ್ತ್ರಾವೃತ ಆಕೃತಿ ಕಣ್ಣಿನಲ್ಲಿ ಊರಿದಂತಾಗಿ .........ರ ಸಲೀಸು ಬಾಯಿ ಸ್ತಬ್ಧವಾಯಿತು'

'ಅವನು ವ್ಯಾವಹಾರಿಕವಾದ ಘಟನೆಗಳಿಂದ ಕಾಯುವ, ಹೊಂದಿಕೊಳ್ಳುವ ಮೂಲಗಳಿಂದಲೇ ಅಸಹಕಾರದಿಂದ, ಅವಮಾನದಿಂದ, ವಿಶಿಷ್ಟ ಸಂಸ್ಕಾರಗಳನ್ನು ಪಡೆಯುತ್ತಾ ಬಂದಂತೆ ತನ್ನ ಪರಿಗಳನ್ನು ಕೀಳುತ್ತ ಕೀಳುತ್ತ ಜೈವಿಕ ಪ್ರಪಂಚದಿಂದ ದೂರವಾಗುತ್ತಾ ಒಂಟಿಯಾಗುತ್ತಾನೆ'

'ಒಂದು ಗುಂಪು ಅಥವಾ ಸಮಾಜ ಪರಂಪರಾಗತ ಮೌಲ್ಯದ ಒತ್ತಡ ಮಾತ್ರದಿಂದಲೇ ಅಲ್ಲದೆ ತಮ್ಮದೇ ಆದ ದೌರ್ಬಲ್ಯ, ಅಚಾತುರ್ಯ, ಅತಿಭಾವುಕತೆ, ಕಾರ್ಪಣ್ಯ, ಹಾಯಲಾರದ, ಕಟ್ಟಲಾರದ ಬದುಕಿನ ಪೇಚು ಇತ್ಯಾದಿಗಳಲ್ಲಿ ಯಾವುದೋ ಒಂದು ಅಥವಾ ಎಲ್ಲವೂ ಕಾರಣವಾಗಿ ಬದುಕಿನ ಅಸ್ವಸ್ಥತೆ, ದುಃಖ, ಯಾತನೆಗಳನ್ನು ........ ಹೆಚ್ಚಾಗಿ ಗಮನಿಸಿದಂತೆನಿಸುವುದಿಲ್ಲ'

'ಆ ವಿಚಾರಗಳ ನೇಪಥ್ಯದಲ್ಲಿ ಅದರ ಒಡೆಯನ, ಸಜೀವ ಎದೆಬಡಿತವನ್ನು ಅಡಿಗಡಿಗೂ ಆಲಿಸಿ ಭಾವ ಅಲೋಚನೆಗಳ ಮಾತಂತಿರಲಿ, ಅವುಗಳನ್ನು ಶಬ್ದಗಳಲ್ಲಿ ಹರಳಿಸುವ ಮಾತುಗಾರಿಕೆಯ ಸಂವೇದನಾಶೀಲ ಗತಿ ಸೂಕ್ಷ್ಮಗಳ ಮೇಲೆ ನಯವಂತ ಗೇಯಾತ್ಮಕ ಲಯ ಸೌಕುಮಾರ್ಯದ ಮೇಲೆ ..... ಆನಂದಾಶ್ಚರ್ಯಗಳು ಅಷ್ಟಿಷ್ಟಲ್ಲ'.

'ವಾಸ್ತವತೆಯ ಹೆಸರಿನಲ್ಲಿ ತಮ್ಮ ಲೋಕಾನುಭವವನ್ನು ಹಾಗೆ ಹಾಗೇ ಕಚ್ಚಾ ಸ್ಥಿತಿಯಲ್ಲಿ ತೋಡಿಕೊಳ್ಳುತ್ತಿರುವ ಲೇಖಕರ ಅಪ್ರಬುದ್ಧ ಹುಂಬ ಹುಮ್ಮಸ್ಸಿಗೆ ಕಡಿವಾಣ ಜಡಿಯಬೇಕಾದದ್ದು ತುಂಬಾ ಸಮಂಜಸ'

ಮೇಲಿನ ಉದ್ಧೃತ ಭಾಗಗಳಲ್ಲಿ ಕೆಲವು ಉದ್ಧೃತಗಳು ಲಕ್ಷಣ ಸಮನ್ವಿತವಾಗಿರುವುದನ್ನೂ ಗಮನಿಸಬಹುದು. ಬಂಡಾಯ, ದಲಿತ, ಸಮನ್ವಯ ಎಂಬ ಹೆಸರಿನಲ್ಲಿ ಸಾಹಿತ್ಯ ಪ್ರಯಾಣ ಮುಂದುವರಿಯುವ ಮುನ್ನ ಕನ್ನಡ ಗದ್ಯದ ಒಂದು ಮುಖ ಹೇಗಿತ್ತು ಎಂಬುದನ್ನು ಈ ಮುಂದಿನ ಒಂದು ಉದ್ಧೃತ ಭಾಗದ ಸಹಾಯದಿಂದ ಕಲ್ಪಿಸಿಕೊಳ್ಳಬಹುದು.

'ಇದು ತುಂಬಾ ಅಥೆಂಟಿಕ್ ಆಗಿರುವಂತೆ ಕಂಡರೂ ಆಬ್ವಿಯಸ್ ಎನ್ನಿಸುವುದಿಲ್ಲ. ಪಾತ್ರಗಳ ಐಡೆಂಟಿಟಿ ಬಗ್ಗೆ ಅನುಮಾನವಿರುವುದಾದರೂ ಅವುಗಳ ಸ್ಟೆಬಿಲಿಟಿಗೆ ಕಾರಣವನ್ನು ಇದರಲ್ಲೇ ಹುಡುಕಬಾರದು'

ಕನ್ನಡ ಗದ್ಯ ಇಂದು ಬಹಳ ಶಕ್ತಿಯುತವಾಗಿ, ಭಾವನೆ ಆಲೋಚನೆಗಳ ಪ್ರಬಲ ಮಾಧ್ಯಮವಾಗಿ ಅಗತ್ಯಕ್ಕೆ ತಕ್ಕ ರೂಪವನ್ನು ಪಡೆಯುವ ಅಂತಃಸತ್ತ್ವವನ್ನು ಮೈಗೂಡಿಸಿಕೊಳ್ಳುತ್ತ ಸಾಗಿದೆ ಎಂದು ಹೇಳಬಹುದು. (ಎಂ.ಆರ್.)

**ಕನ್ನಡದಲ್ಲಿ ಗಾಂಧೀ ಸಾಹಿತ್ಯ :** 20ನೆಯ ಶತಮಾನದ ವಿಚಾರಶೀಲ ಸಾಹಿತ್ಯದಲ್ಲಿ ಗಾಂಧೀ ಸಾಹಿತ್ಯ ಒಂದು ಅನುಪಮ ಸ್ಥಾನವನ್ನು ಗಳಿಸಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಧ್ಯಯನದ ಉತ್ತಮ ಆಕರವಾಗಿರುವುದೇ ಅಲ್ಲದೆ ಭಾರತದ ಇತಿಹಾಸ, ಸಂಸ್ಕೃತಿ, ಲೋಪದೋಷಗಳು, ಅಭ್ಯುದಯ - ಇವುಗಳ ಮೇಲೆ ಜಿಜ್ಞಾಸಾತ್ಮಕ ಬರೆಹಗಳಾಗಿರುವ ಗಾಂಧೀ ಸಾಹಿತ್ಯದ ಕೃಷಿ ಕನ್ನಡದಲ್ಲೂ ಸಾಕಷ್ಟು ನಡೆದಿದೆ.

ಗಾಂಧೀ ಸಾಹಿತ್ಯ ಗಾಂಧೀಯವರ ಸ್ವಂತ ಬರೆಹಗಳನ್ನು, ಇತರರು ಅವರನ್ನು ಮತ್ತು ಅವರ ವಿಚಾರಗಳನ್ನು ಕುರಿತು ಬರೆದ ಬರೆಹಗಳನ್ನು ಒಳಗೊಳ್ಳುತ್ತದೆ. ಗಾಂಧೀಜೀಯವರೇ ಬರೆದಿರುವ ವಿಷಯಗಳ ವ್ಯಾಪ್ತಿ ಅಪಾರ. ಅಲ್ಪಸಂಖ್ಯಾತರು, ಅಸ್ಪೃಶ್ಯತೆ, ಅಹಿಂಸೆ, ಆರೋಗ್ಯ, ಆಹಾರ, ಇಸ್ಲಾಂ, ಉಪವಾಸ, ಕಸ್ತೂರಬಾ, ಕೈಗಾರಿಕಾ ಸಂಬಂಧಗಳು, ಕ್ರಿಶ್ಚಿಯನ್ನರು, ಖಿಲಾಫತ್ ಚಳವಳಿ, ಜಪಾನ್, ಜನನ ನಿಯಂತ್ರಣ, ಜಲಿಯನ್ ವಾಲಾಬಾಗ್, ಜಾತೀಯತೆ, ದೇವರು, ನೀತಿ, ಬೌದ್ಧಮತ, ಮುಷ್ಕರಗಳು, ಮೂಲ ಶಿಕ್ಷಣ, ರಾಷ್ಟ್ರಭಾಷೆ, ವೈದ್ಯ, ಶಿಕ್ಷಣ, ಸರ್ವೋದಯ, ಸತ್ಯಾಗ್ರಹ, ಸಿಖ್ ಮತ, ಸ್ವದೇಶೀ, ಸ್ತ್ರೀಯರು, ಸೋಷಿಯಲಿಸಂ ಮುಂತಾಗಿ ನಾನಾ ವಿಷಯಗಳ ಮೇಲೆ ಗಾಂಧೀಜಿ ಬರೆದಿದ್ದಾರೆ. ನಾನಾ ಸಮಸ್ಯೆಗಳನ್ನು ಸತ್ಯ ಅಹಿಂಸೆಯ ಆಧಾರದ ಮೇಲೆ ಸಾಮಾಜಿಕ ನ್ಯಾಯದೃಷ್ಟಿಯಿಂದ ವಿವೇಚಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅವರ ಬರೆಹಗಳನ್ನು 600 ಶೀರ್ಷಿಕೆಗಳಲ್ಲಿ ವಿಂಗಡಿಸಲಾಗಿದೆ. ಗಾಂಧೀಜಿಯವರನ್ನು ಬುದ್ಧ, ಕ್ರಿಸ್ತ, ಹೆನ್ರಿಫೋರ್ಡ್, ಲೆನಿನ್, ಸ್ಟಾಲಿನ್, ಟಾಗೂರ್, ಟಾಲ್‌ಸ್ಟಾಯರಿಗೆ ಹೋಲಿಸಿ ಬರೆದವರಿದ್ದಾರೆ. ಅವರನ್ನು ಸಂತರೆಂದೂ ಪ್ರವಾದಿಯೆಂದೂ ಕ್ರಾಂತಿಕಾರರೆಂದೂ ಸಮಾಜಸುಧಾರಕರೆಂದೂ ನಾನಾ ರೀತಿಯಲ್ಲಿ ಕರೆದವರಿದ್ದಾರೆ. ಗಾಂಧೀಜಿಯವರನ್ನು ಕುರಿತು ಬರೆದಿರುವ ಬರೆಹಗಳಲ್ಲಿ ಪೂರ್ಣಜೀವನ ಚರಿತ್ರೆ, ಅವರ ಜೀವನದ ನಾನಾ ಘಟನೆಗಳು, ಅಹಿಂಸಾದರ್ಶನ, ಸತ್ಯಾಗ್ರಹ ವಿಚಾರಧಾರೆಯನ್ನು ಕುರಿತ ಪ್ರಬಂಧಗಳು, ಲೇಖನಗಳು, ಪತ್ರಗಳು, ಪದ್ಯಗಳು, ಸಂದರ್ಶನ ವರದಿಗಳು, ಶ್ರದ್ಧಾಂಜಲಿಗಳು ಅನೇಕವಿವೆ. ಕಳೆದ ಐವತ್ತು ವರ್ಷಗಳಲ್ಲಿ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಯನ್ನು ಕುರಿತು ಬರೆದಿರುವ ಪ್ರತಿಯೊಂದು ಪುಸ್ತಕದಲ್ಲೂ ಗಾಂಧೀಜಿಯವರ ಪಾತ್ರವನ್ನು ಕುರಿತು ಬರೆಯುವುದು ಅನಿವಾರ್ಯವೆನಿಸಿದೆ. ಈ ಲೇಖನಗಳು ಅವರ ಪ್ರಶಂಸಾಕಾರರಿಂದಲೂ ಸಹಾನುಭೂತಿಯುಳ್ಳ ಟೀಕಾಕಾರರಿಂದಲೂ ತೀವ್ರ ಎದುರಾಳಿಗಳಿಂದಲೂ ಬಂದಿದ್ದು ಗಾಂಧೀ ಸಾಹಿತ್ಯ ವೈವಿಧ್ಯಮಯವಾಗಿದೆ.

ಗಾಂಧೀಜಿಯವರು ಬರೆದಿರುವ ಪುಸ್ತಕಗಳಲ್ಲಿ ಈಗ ತಿಳಿದಿರುವಂತೆ ಕನ್ನಡದ ಪ್ರಥಮ ಅನುವಾದ ಅವರ ಇಂಡಿಯನ್ ಹೋಂ ರೂಲ್ ಎಂಬ ಪುಸ್ತಕ. ದ.ಕೃ.ಭಾರದ್ವಾಜರು ಆ ಕೆಲಸ ಮಾಡಿದ್ದಾರೆ (1919). ಇದೇ ರೀತಿ ಇನ್ನೂ ಮೂರು ಪುಸ್ತಕಗಳನ್ನು ಭಾರದ್ವಾಜರು ಅನುವಾದಿಸಿದ್ದಾರೆ. ಗಾಂಧೀಸಾಹಿತ್ಯ ಅನುವಾದಕರಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರು ಅಗ್ರಗಣ್ಯರು. ಇವರು ತಮ್ಮ ಸರಳ ಹಾಗೂ ಶಕ್ತಿಯುತ ಶೈಲಿಯಲ್ಲಿ 20 ಪುಸ್ತಕಗಳನ್ನು ಸ್ವಂತವಾಗಿಯೂ ನಾಲ್ಕನ್ನು ಇತರರೊಡಗೂಡಿಯೂ ಅನುವಾದಿಸಿದ್ದಾರೆ. ಅನುವಾದಗಳ ಪೈಕಿ ಆರ್ಥಿಕ ವಿಚಾರಗಳಲ್ಲಿ 3, ಆರೋಗ್ಯ 1, ಖಾದಿ ಗ್ರಾಮೋದ್ಯೋಗ 1, ಜೀವನ ಚರಿತ್ರೆ (ಆತ್ಮಕಥೆ) 20, ಧರ್ಮ 8, ನೀತಿ ಸತ್ಯ ಅಹಿಂಸೆ 8, ಭಗವದ್ಗೀತೆ 3, ಮಹಿಳೆಯರು 4, ರಾಜಕೀಯ ವಿಚಾರಗಳು 14, ಶಿಕ್ಷಣ 3, ಸರ್ವೋದಯ 1, ಸಾಮಾಜಿಕ ದರ್ಶನ 6, -ಈ ರೀತಿ 72 ಪುಸ್ತಕಗಳಿವೆ. ಗಾಂಧೀಜಿಯವರ ಪ್ರಮುಖ ಕೃತಿಗಳಾದ ಸತ್ಯಶೋಧನೆ, ಹಿಂದ್ ಸ್ವರಾಜ್ಯ, ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ, ನನ್ನ ಕನಸಿನ ಭಾರತ,

ಅನಾಸಕ್ತಿಯೋಗ, ಸರ್ವೋದಯ, ಮೂಲಶಿಕ್ಷಣ ಮುಂತಾದ ಮುಖ್ಯ ಕೃತಿಗಳೆಲ್ಲವೂ ಕನ್ನಡಕ್ಕೆ ಅನುವಾದವಾಗಿವೆ.

ಅನುವಾದಕರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ರಂ.ರಾ.ದಿವಾಕರ, ವಿ.ಎಸ್.ನಾರಾಯಣರಾವ್, ಜಿ.ವಿ.ನಾರಾಯಣಮೂರ್ತಿ, ಕೆ.ಎಸ್.ನರಸಿಂಹಸ್ವಾಮಿ, ಎಸ್.ವಿ.ಕೃಷ್ಣಮೂರ್ತಿರಾವ್ ಮುಖ್ಯರು. ಇವರೆಲ್ಲರೂ ನುರಿತ ಲೇಖಕರಾದುದರಿಂದ ಅನುವಾದಗಳು ಮೂಲದಂತೆಯೇ ಮನೋಜ್ಞವಾಗಿವೆ. ಹಿರಿಯ ರಾಜಕಾರಣಿ ಶಂಕರಗೌಡರು ಪ್ಯಾರೇಲಾಲ್‌ರವರ 'ಮಹಾತ್ಮ ಗಾಂಧೀ ಅಂತಿಮ ಹಂತ' ಎಂಬ ಬೃಹತ್ ಗ್ರಂಥವನ್ನು ಭಾಷಾಂತರಿಸಿದ್ದಾರೆ. ಗಾಂಧೀಸಾಹಿತ್ಯಕ್ಕೆ ಇದೊಂದು ಬಹುದೊಡ್ಡ ಕೊಡುಗೆ.

ಗಾಂಧೀನಿಧಿಯವರು ಅಚ್ಚುಕಟ್ಟಾಗಿ ಪ್ರಕಟಿಸಿರುವ, ಸುಲಭ ಬೆಲೆಯ ಇಪ್ಪತ್ತು ಕನ್ನಡ ಪುಸ್ತಕಗಳು ನಮಗೆ ಬಾಪುವಿನ ಜೀವನ ಸಾಧನೆಗಳನ್ನು ಸರಳ ಶೈಲಿಯಲ್ಲಿ ಸುಲಭವಾಗಿ ಅರ್ಥವಾಗುವಂತೆ ತಿಳಿಸುತ್ತವೆ.

ಮಹಾಪುರುಷರ ಜೀವನ ಚರಿತ್ರೆಗಳನ್ನು ಸಂಕ್ಷಿಪ್ತವಾಗಿ ಬರೆದ ಅನೇಕ ಪುಸ್ತಕಗಳಲ್ಲಿ ಗಾಂಧೀಜಿಯವರ ಬದುಕು, ಸಾಧನೆಯನ್ನು ಕುರಿತು ಬರೆದ ಅಧ್ಯಾಯಗಳಿವೆ. ಇವುಗಳಲ್ಲಿ ಮುಖ್ಯವಾದವು ಕುವೆಂಪುರವರ ವಿಭೂತಿ ಪೂಜೆ, ಎಚ್.ಕೃಷ್ಣರಾಯರ ಚರಿತ್ರೆಯ ಮಹಾಪುರುಷರು, ಮಿರ್ಜಿ ಅಣ್ಣಾರಾಯರ ಭಾರತದ ಬೆಳಕು, ಕೆ.ಎಸ್.ನಾರಾಯಣಸ್ವಾಮಿಯವರ ವಿಶ್ವಜ್ಯೋತಿಗಳು, ತೀ.ನಂ.ಶ್ರೀ. ಅವರ ನಂಟರು, ಸಾ.ಶಿ.ಮರುಳಯ್ಯನವರ ವಿಭೂತಿ ಪುರುಷರು ಮುಂತಾದ ಪುಸ್ತಕಗಳು ಗಮನಾರ್ಹವಾದವು.

ರಾಜಕೀಯ ಸಾಮಾಜಿಕ ವಿಚಾರಗಳಲ್ಲಿ ಕ್ರಾಂತಿಯೆಬ್ಬಿಸಿದ ಗಾಂಧೀಜಿಯವರ ವಿಚಾರಧಾರೆಗಳಿಗಿಂತ, ವೈಚಾರಿಕ ವಿಷಯಗಳ ಸಿದ್ಧಿಯಾದ ಭಾರತ ಸ್ವಾತಂತ್ರ್ಯ ಸಂಗ್ರಾಮ ಅಗಾಧ ಪರಿಣಾಮ ಬೀರಿತು. ಈ ಹೋರಾಟ ಜನಗಳಿಗೊಂದು ಅಪೂರ್ವ ಅನುಭವವನ್ನೊದಗಿಸಿತು. ಈ ಸಂಗ್ರಾಮದ ಕಾವು ಹೆಚ್ಚು ಚುರುಕಾಗಿ ತಟ್ಟಿದುದು ಉತ್ತರ ಕರ್ನಾಟಕದಲ್ಲೇ, ತ.ರಾ.ಸು. ಅವರ ಕಾದಂಬರಿ ರಕ್ತತರ್ಪಣದಿಂದ ಆರಂಭವಾಗಿ ಮಿರ್ಜಿ ಅಣ್ಣಾರಾಯ, ಬಸವರಾಜು ಕಟ್ಟೀಮನಿ, ಎಸ್.ಅನಂತನಾರಾಯಣ, ಅ.ನ.ಕೃ., ನಿರಂಜನ, ವಿ.ಎಂ.ಇನಾಂದಾರ, ಕೋ.ಚೆನ್ನಬಸಪ್ಪ, ಅಶ್ವತ್ಥ ಮೊದಲಾದವರ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ವರ್ಣನೆ ಕಷ್ಟನಷ್ಟಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ನಿರಂಜನ, ಅಶ್ವತ್ಥ, ಬಸವರಾಜ ಕಟ್ಟೀಮನಿ ಮುಂತಾದ ಲೇಖಕರ ಕಥೆಗಳಲ್ಲಿ ಗಾಂಧೀಜಿಯವರ ತತ್ತ್ವಗಳ ಪ್ರತಿಪಾದನೆ ಇದೆ. ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆ ಇದೆ. ಆದರೆ ಈ ಎಲ್ಲ ಲೇಖಕರು ತಮ್ಮ ಕಲಾಕೃತಿಗಳಲ್ಲಿ ಗಾಂಧೀ ತತ್ತ್ವಗಳನ್ನು ಒರೆಗೆ ಹಚ್ಚಿಲ್ಲ ಎಂಬ ಟೀಕೆ ಇದ್ದೇ ಇದೆ. ಸಣ್ಣಕಥೆಗಳಲ್ಲಿಯೂ ಗಾಂಧೀಜಿಯವರ ಆದರ್ಶತತ್ತ್ವಗಳನ್ನು ಎತ್ತಿ ಹಿಡಿಯಲಾಗಿದೆ. ನಿರಂಜನರ ಬಾಪೂಜಿ ಬಾಪೂಜಿ, ರಾ.ಬಸವರಾಜರ ಕುರಿಗಳು ಸಾಕಿದ ತೋಳ, ಪೂರ್ಣಚಂದ್ರತೇಜಸ್ವಿ ಅವರ ಗಾಂಧೀಜಿ ದೆಸೆಯಿಂದ, ಅಶ್ವತ್ಥರ ಪುಣ್ಯಾತ್ಮರು, ಜನಾರ್ದನ ಗುರ್ಕಾರರ ಬಾಪೂಜಿ - ಮುಂತಾದ ಕಥೆಗಳು ಗಾಂಧೀ ತತ್ತ್ವಗಳಿಂದ ಪ್ರಭಾವಗೊಂಡು ಕನ್ನಡಕ್ಕೆ ಬಂದವು.

ಗಾಂಧೀಜಿಯವರ ಆದರ್ಶ, ನಡೆನುಡಿಗಳು, ಬರೆಹಗಳು ಭಾವಜೀವಿಗಳಾದ ಕವಿಗಳನ್ನು ಉತ್ತೇಜಿಸಿದುದರಲ್ಲಿ ಆಶ್ಚರ್ಯವಿಲ್ಲ. ಡಿ.ವಿ.ಜಿ.ಕುವೆಂಪು, ಮಾಸ್ತಿ, ರಂ.ಶ್ರೀ.ಮುಗಳಿ, ವಿ.ಸೀ., ಬೇಂದ್ರೆ, ಪು.ತಿ.ನ., ತೀ.ನಂ.ಶ್ರೀ., ಕಯ್ಯಾರ ಕಿಞ್ಞಣ್ಣ ರೈ, ಸುಜನಾ, ಕೆ.ಎಸ್.ನರಸಿಂಹಸ್ವಾಮಿ, ಜಿ.ಪಿ.ರಾಜರತ್ನಂ, ಎಸ್.ವಿ.ಪರಮೇಶ್ವರಭಟ್ಟ, ಚೆನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಸಿದ್ಧಲಿಂಗ ಪಟ್ಟಣಶೆಟ್ಟಿ, ವಿ.ಕೃ.ಗೋಕಾಕ, ದಿನಕರ ದೇಸಾಯಿ, ಸಿದ್ಧಯ್ಯ ಪುರಾಣಿಕ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ನಿಸಾರ್ ಅಹಮದ್, ಡಿ.ಎಸ್.ಕರ್ಕಿ, ಸಿ.ಪಿ.ಕೆ - ಮೊದಲಾದವರ ಕವನಗಳಲ್ಲಿ ಗಾಂಧೀಜಿಯವರ ದರ್ಶನ, ಸಾಧನೆಗಳ ಪ್ರಶಂಸೆಯಿದೆ.

ಶ್ರೀರಂಗರ ಹರಿಜನ್ವಾರ, ಶೋಕಚಕ್ರ, ಕುವೆಂಪು ಅವರ ಬಲಿದಾನ, ಶಿವರಾಮ ಕಾರಂತರ ಗರ್ಭಗುಡಿ, ಬೇಂದ್ರೆಯವರ ಉದ್ಧಾರ ಎಂಬ ನಾಟಕಗಳಲ್ಲಿ ಅಸ್ಪೃಶ್ಯತೆ, ಮದ್ಯಪಾನ ನಿರೋಧ ಮುಂತಾದ ಗಾಂಧೀ ತತ್ತ್ವಗಳ ಪ್ರತಿಪಾದನೆ ಇದೆ. ರಾಜರತ್ನಂ ಅವರ ಸಂಭವಾಮಿ ಯುಗೇ ಯುಗೇ, ನಾ.ಕಸ್ತೂರಿಯವರ ಕ್ರಾಂತಿಮಾರ್ಗ, ಇದು ಭಾರತದ ದಾರಿ, ಎಚ್.ರಾಮಕೃಷ್ಣರಾವ್ ಅವರ ಗಾಂಧೀಜಿ ಸ್ವರ್ಗದಲ್ಲಿ, ಎಂ.ಎ.ದೊರೆಸ್ವಾಮಿ ಅಯ್ಯಂಗಾರ್ ಅವರ ಧರ್ಮಜ್ಯೋತಿ, ಪು.ತಿ.ನ. ಅವರ ವಿಕಟಕವಿ ವಿಜಯ ಮೊದಲಾದ ನಾಟಕಗಳು ಒಂದಲ್ಲ ಒಂದು ದೃಷ್ಟಿಕೋನದಲ್ಲಿ ಗಾಂಧೀಜಿ ಅವರ ತತ್ತ್ವಗಳನ್ನು ಪ್ರತಿಪಾದಿಸುವ ನಾಟಕಗಳಾಗಿವೆ. ಗಾಂಧೀತತ್ತ್ವಗಳನ್ನು ನಿರೂಪಿಸುವ ಮತ್ತು ಎತ್ತಿ ಹಿಡಿಯುವ ಕಥೆ, ಕಾದಂಬರಿ, ನಾಟಕ, ಪ್ರಬಂಧಗಳಿರುವಂತೆ ಸ್ವತಂತ್ರ ಪುಸ್ತಕಗಳು (ಲೇಖನಗಳ ಸಂಕಲನ) ಪ್ರಕಟಗೊಂಡಿವೆ. ಹರ್ಡೇಕರ ಮಂಜಪ್ಪ, ಗೊರೂರು, ರಂ.ರಾ.ದಿವಾಕರ, ಬಿಂದುಮಾಧವ, ಜಿ.ಪಿ.ರಾಜರತ್ನಂ, ಸಿದ್ಧವನಹಳ್ಳಿ ಕೃಷ್ಣಶರ್ಮ, ಪಾಟೀಲ ಪುಟ್ಟಪ್ಪ, ಎಚ್ಚೆಸ್ಕೆ, ಕಾರ್ನಾಡ ಸದಾಶಿವರಾಯ, ಕಡಪ ರಾಘವೇಂದ್ರರಾಯ, ಕಡೆಂಗೋಡ್ಲು ಶಂಕರಭಟ್ಟ, ಕೆ.ಕೆ.ಶೆಟ್ಟಿ, ನಾರಾಯಣರಾವ್ ಕೆಲ್ಲಿ ಈ ರೀತಿಯ ಬರೆವಣಿಗೆಯಲ್ಲಿ ಪ್ರಮುಖರು, ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀಭವನ ಡಿ.ಜಿ.ತೆಂಡೂಲ್ಕರ್ ಅವರ ಮಹಾತ್ಮ ಸಂಪುಟಗಳನ್ನು ವಿವಿಧ ಲೇಖಕರಿಂದ ಭಾಷಾಂತರಿಸಿ ಪ್ರಕಟಿಸಿದೆ. ಇದಲ್ಲದೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ಮಹಾತ್ಮಗಾಂಧೀಯವರ ಹಾಸ್ಯ ಪ್ರವೃತ್ತಿ ಮತ್ತು ಇತರ ಲೇಖನಗಳು, ದೇ.ಜವರೇಗೌಡರ ಲೋಕದ ಬೆಳಕು, ಎಚ್.ತಿಪ್ಪೇರುದ್ರಸ್ವಾಮಿಯವರು ಸಂಪಾದಿಸಿರುವ ಗಾಂಧೀ ವಿಚಾರ ಮಾರ್ಗ, ಮಹಾತ್ಮ ಗಾಂಧೀ - ನೂರುವರ್ಷಗಳು ಮುಂತಾದ ಪುಸ್ತಕಗಳು ಪ್ರಕಟವಾಗಿವೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ ಎಂಬ ಕೃತಿಯನ್ನು ಪ್ರಕಟಿಸಿದೆ (1971). ಇದನ್ನು ಹಾ.ಮಾ. ನಾಯಕರು ಸಂಪಾದಿಸಿದ್ದಾರೆ. ಜಿ.ಪಿ.ರಾಜರತ್ನಂ ಅವರ ವಿಚಾರತರಂಗ, ಕೃಷ್ಣಾನುಭವ, ಸಿದ್ಧವನಹಳ್ಳಿ ಕೃಷ್ಣಶರ್ಮರ ಪರ್ಣಕುಟಿ - ಉತ್ತಮ ಬರೆವಣಿಗೆಗೆ ನಿದರ್ಶನಗಳಾಗಿವೆ. ಕೃಷ್ಣಶರ್ಮರ ಶೈಲಿಯಂತೂ ಚೈತನ್ಯಭರಿತವಾಗಿದೆ. ವಿಷಯನಿರೂಪಣೆ ಸೊಗಸಾಗಿದೆ. ನೇರವಾಗಿ ವಿಷಯ ಪ್ರತಿಪಾದಿಸುವುದು, ಕ್ಲಿಷ್ಟವಾದ ವಿಷಯಗಳನ್ನು ಸರಳವಾಗಿ ಹೇಳುವುದು ಇವರ ವೈಶಿಷ್ಟ್ಯ, ಸುಶೀಲಾ ಕೊಪ್ಪರ ಮತ್ತು ಮಂದಾಕಿನಿಬಾಯಿ ಮಹಿಳೆಯರ ಬಗ್ಗೆ ಗಾಂಧೀಜಿಯವರ ದೃಷ್ಟಿ ಎಂಥದ್ದು ಎಂಬುದನ್ನು ಕುರಿತು ಪ್ರಬಂಧಗಳನ್ನು ಬರೆದಿದ್ದಾರೆ.

ಗಾಂಧೀಜಿಯವರ ಆಲೋಚನೆ - ದೃಷ್ಟಿಕೋನಗಳನ್ನು ಕುರಿತು ಬರೆದ ಪುಸ್ತಕಗಳಲ್ಲಿ ಹರ್ಡೇಕರ ಮಂಜಪ್ಪನವರ 'ಖಾದಿಶಾಸ್ತ್ರ' ಬಹು ಮುಖ್ಯವಾದುದು. ಇದರಲ್ಲಿ ಖಾದಿಯ ಉಪಯೋಗಗಳನ್ನೂ ಅದರ ಗುಣವಿಶೇಷ ಮೊದಲಾದ ವಿಷಯಗಳನ್ನೂ ವಿವರವಾಗಿ ನಿರೂಪಿಸಲಾಗಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪೂರ್ಣಸ್ವದೇಶಿ ಎಂಬ ಗ್ರಂಥ'ದಲ್ಲಿ ಗಾಂಧಿಜೀಯವರಿಗೆ ಹಳ್ಳಿಗಳ ಏಳ್ಗೆಯ ಬಗ್ಗೆ ಇದ್ದ ಪೂರ್ಣದೃಷ್ಟಿಯನ್ನು ಕುರಿತು ಬರೆಯಲಾಗಿದೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ಸೇವಾಗ್ರಾಮ ಮತ್ತು ಸರ್ವೋದಯ, ಗಾಂಧೀಯೋಜನೆ, ವಿ.ಎಸ್.ನಾರಾಯಣರಾಯರ ಗಾಂಧೀವಾದ, ಗಾಂಧೀಯವರ ಆರ್ಥಿಕವಾದ - ಇವು ಗಾಂಧೀಜಿಯವರ ಸಾಮಾಜಿಕ, ಆರ್ಥಿಕ, ರಾಜಕೀಯ ದೃಷ್ಟಿ ಯಾವ ರೀತಿಯದ್ದು ಎಂಬ ವಿಷಯದ ಬಗ್ಗೆ ಬೆಳಕು ಚೆಲ್ಲುವ ಕೃತಿಗಳು. ಜಿ.ಪಿ. ರಾಜರತ್ನಂ ಅವರ 'ಗಾಂಧೀವಿದ್ಯಾ' ಖಾದಿಯ ಆರ್ಥಿಕತೆಯನ್ನು ಕುರಿತ ಪುಸ್ತಕ, ಮಹಾತ್ಮರ ಮರಣ ಹಾಗೂ ಇತರ ಉಪನ್ಯಾಸಗಳು, ದೇವರ ಸಾಕ್ಷಿ ಗಾಂಧೀಜಿ, ಗಾಂಧೀ ಸಾಹಿತ್ಯದ ಮೂಲ - ಇದೇ ಲೇಖಕರ ಇತರ ಕೃತಿಗಳು. ಕೆ.ಎಸ್.ಜೋಶಿಯವರ ಗಾಂಧೀಜಿಯ ತತ್ತ್ವಜ್ಞಾನದ ರಹಸ್ಯ, ರಂ.ರಾ.ದಿವಾಕರರ ಸತ್ಯಾಗ್ರಹ - ಇವು ಅಷ್ಟೇ ಗಮನಾರ್ಹವಾದ ಕೃತಿಗಳು. ದಿವಾಕರರ ಪುಸ್ತಕದಲ್ಲಿ ಗಾಂಧೀಜಿಯವರ ಸತ್ಯಾಗ್ರಹ ಸಿದ್ಧಾಂತಗಳು, ತಂತ್ರ, ಧೋರಣೆ, ಅದರ ಇತಿಮಿತಿ ಮುಂತಾದ ವಿಷಯಗಳು ತುಂಬ ಸೊಗಸಾಗಿ ನಿರೂಪಿತವಾಗಿವೆ.

ಕನ್ನಡದಲ್ಲಿ ಗಾಂಧೀಜಿಯವರ ಜೀವನಚರಿತ್ರೆಯನ್ನು ಕುರಿತಂತೆ ಹಲವಾರು ಪುಸ್ತಕಗಳು ಪ್ರಕಟಗೊಂಡಿವೆ. ಹರ್ಡೇಕರ ಮಂಜಪ್ಪನವರ ಮಹಾತ್ಮಾಗಾಂಧೀಯವರ ಚರಿತ್ರೆ - ಗಾಂಧೀಜಿಯವರ ಮೊದಲ 50 ವರ್ಷಗಳ ಬದುಕನ್ನು ತುಂಬ ಸರಳ ಭಾಷೆಯಲ್ಲಿ ನಿರೂಪಿಸಿರುವ ಕೃತಿ.

ಬಿ.ಎಲ್.ಆಚಾರ್ ಅವರ ಮಹಾತ್ಮಗಾಂಧೀ (ಜೀವನ ಚರಿತ್ರೆ, ಜಾತಕ), ಬಿ.ಎ.ಆರ್. ಅವರ ಪೂಜ್ಯ ಗಾಂಧೀಜಿ, ಧನ್ಯೆ ಕಸ್ತೂರಬಾ, ವಿ.ಎಸ್.ನಾರಾಯಣರಾವ್ ಅವರ ಮಹಾತ್ಮ ಬಾಪೂಜಿ, ನಘರವರ ಗಾಂಧೀಜಿ, ಅ.ನ.ಕೃ. ಅವರ ಭಾರತದ ಬಾಪು, ಗೊರೂರರ ಭಾರತ ಭಾಗ್ಯವಿಧಾತ, ಜೋನ್ ಆಫ್ ಆರ್ಕ್ ಮತ್ತು ಮಹಾತ್ಮ ಗಾಂಧೀ, ದಿವಾಕರರ ಮಹಾತ್ಮಗಾಂಧೀ, ಕರಗುಪ್ಪಿಯವರ ಮಹಾತ್ಮಗಾಂಧೀ ಚರಿತ್ರೆ, ರಾಮರಾಯರ ಮಹಾತ್ಮ ಗಾಂಧೀ - ಇವು ಕೆಲವು ಮುಖ್ಯ ಕೃತಿಗಳು. ದಿವಾಕರರ, ಗೊರೂರರ ಪುಸ್ತಕಗಳು ಜೀವನಚರಿತ್ರೆಯ ದೃಷ್ಟಿಯಿಂದ ಬಹುಮುಖ್ಯ ಗ್ರಂಥಗಳಾಗಿವೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ಗಾಂಧೀ ಕಥೆಗಳು, ಕೃಷ್ಣಗೋಸಾವಿಯವರ ಬಾಪೂಜಿಯ ಬದುಕು- ಜೀವನಚರಿತ್ರೆಯ ಮಾದರಿಯಲ್ಲಿ ಬರೆದ ಗಾಂಧೀಜಿಯನ್ನು ಕುರಿತ ಗ್ರಂಥಗಳಾಗಿವೆ.

ಮಕ್ಕಳಿಗಾಗಿಯೇ ಗಾಂಧೀಜಿಯವರ ವಿಷಯ ಕುರಿತ ಹಲವಾರು ಪುಸ್ತಕಗಳು ಬಂದಿವೆ. ಹರ್ಡೇಕರ ಮಂಜಪ್ಪನವರ ಗಾಂಧೀ ಸಂದೇಶ - ಈ ಉದ್ದೇಶದಿಂದ ಮೊದಲು ಬಂದ ಕನ್ನಡ ಗ್ರಂಥ. ಇದರಲ್ಲಿ ತುಂಬ ಸರಳ ಹಾಗೂ ನೇರ ಭಾಷೆಯಲ್ಲಿ ಗಾಂಧೀಜಿಯವರನ್ನು ಮಕ್ಕಳಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. 'ಮಕ್ಕಳ ಕಹಳೆ' ಬಿ.ಎನ್.ಸುಂದರರಾವ್ ಅವರಿಂದ ಮಕ್ಕಳಿಗಾಗಿ ರಚಿತವಾದ ಪುಸ್ತಕದಲ್ಲಿ ಗಾಂಧೀಯವರನ್ನು ಕುರಿತ ಕೆಲವು ಕವನಗಳಿವೆ. ಪರಿಮಳ ಮತ್ತು ಟಿ.ಎಂ.ಆರ್.ಸ್ವಾಮಿ ಅವರು ಅಜ್ಜ ಅಜ್ಜಿ ಎಂಬ ಪುಸ್ತಕವನ್ನು ಹೊರತಂದಿದ್ದಾರೆ. ಈ ಪುಸ್ತಕ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಬಗ್ಗೆ ಮಕ್ಕಳಿಗೆ ತಿಳಿವಳಿಕೆ ನೀಡುತ್ತದೆ. ನಾರಾಯಣಶರ್ಮರ ಮಕ್ಕಳ ಮಹಾತ್ಮ ಗಾಂಧಿ, ರವಿಚಂದ್ರರ ಮಹಾತ್ಮಗಾಂಧಿ, ವಿ.ಎಸ್.ನಾರಾಯಣರಾಯರ ಗಾಂಧಿ ಕಥಾವಳಿ, ಸವ್ಯಸಾಚಿಯವರ ಭಾರತ ಭಾಗ್ಯವಿಧಾತ ಮೊದಲಾದ ಪುಸ್ತಕಗಳು ಮಕ್ಕಳ ಮನಸ್ಸಿಗೆ ರಂಜಕವಾಗುವ ರೀತಿಯಲ್ಲಿ ಗಾಂಧೀಜಿಯವರ ಜೀವನ ಹಾಗೂ ಕೃತಿಗಳನ್ನು ಕುರಿತು ರಚಿತವಾಗಿವೆ. ಮಕ್ಕಳ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯನ್ನೇ ಇತ್ತಿರುವ ಜಿ.ಪಿ.ರಾಜರತ್ನಂ ಮಕ್ಕಳ ಗಾಂಧಿ ಎಂಬ ಬೃಹತ್ ಸಂಕಲನವನ್ನು ಹೊರತಂದಿದ್ದಾರೆ. ಇದರಲ್ಲಿ ಮಕ್ಕಳಿಗಾಗಿ ರಚಿತವಾದ ಕಥೆ, ಕವನ, ನಾಟಕಗಳು ಸಂಕಲನಗೊಂಡಿವೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಬರೆದು ಅದರ ಕೋಪಕ್ಕೆ ಪಾತ್ರವಾದ ವಿಶ್ವಕರ್ಣಾಟಕ, ತಾಯಿನಾಡು, ಸಂಯುಕ್ತ ಕರ್ನಾಟಕ, ಪ್ರಜಾಮತ ಪತ್ರಿಕೆಗಳನ್ನೂ ಇವುಗಳಲ್ಲಿ ದಿಟ್ಟತನದಿಂದ ಸಂಪಾದಕೀಯ ಬರೆಯುತ್ತಿದ್ದ ತಿ.ತಾ.ಶರ್ಮ, ಪಿ.ಆರ್.ರಾಮಯ್ಯ, ರಂ.ರಾ.ದಿವಾಕರ, ಬಿ.ಎನ್.ಗುಪ್ತ ಇವರ ಪ್ರಭಾವಶಾಲೀ ಬರೆಹಗಳನ್ನೂ ಯಾರೂ ಮರೆಯುವಂತಿಲ್ಲ.

ಪತ್ರಿಕೆಗಳಂತೆ ಪ್ರಕಾಶಕರಲ್ಲೂ ಎಲ್ಲರೂ ಗಾಂಧೀ ಸಾಹಿತ್ಯವನ್ನು ಒಂದಲ್ಲ ಒಂದು ರೀತಿಯಿಂದ ಪ್ರಕಟಿಸಿದ್ದಾರೆ. ಕಾವ್ಯಾಲಯ, ಉಷಾ ಸಾಹಿತ್ಯ ಮಾಲೆ, ಗೀತಾ ಬುಕ್ ಹೌಸ್, ಮೋಹನ ಪ್ರಕಾಶನ, ವಯಸ್ಕರ ಶಿಕ್ಷಣ ಸಮಿತಿ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಸತ್ಯಶೋಧನ ಪ್ರಕಟನಾಲಯ, ಸ್ಟ್ಯಾಂಡರ್ಡ್ ಬುಕ್ ಡಿಪೋ, ಗಾಂಧೀ ಸಾಹಿತ್ಯ ಮಂಡಳಿ, ಕರ್ನಾಟಕ ಸಂಘ - ಸೆಂಟ್ರಲ್ ಕಾಲೇಜು, ಸರ್ವೋದಯ ಸಂಘ, ಮಿಂಚಿನ ಬಳ್ಳಿ, ಸಾಧನ ಬುಕ್ ಡಿಪೋ, ಮನೋಹರ ಗ್ರಂಥಮಾಲೆ, ಗಾಂಧೀಭವನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ - ಮೊದಲಾದವು ಈ ದಿಸೆಯಲ್ಲಿ ಸೇವೆ ಸಲ್ಲಿಸಿವೆ. ಇತ್ತೀಚೆಗೆ ಬೆಂಗಳೂರಿನ ಭಾರತೀಯ ವಿದ್ಯಾಭವನ ಕೇಂದ್ರ ಗಾಂಧೀಜಿಯವರ ಸಮಗ್ರ ಬರೆಹದ ಅನುವಾದ ಮಾಡಿಸಿ ಪ್ರಕಟಿಸುವ ಬೃಹತ್ಕಾರ್ಯವನ್ನು ಕೈಗೊಂಡಿದ್ದು ಅದರಲ್ಲಿ ಕೆಲವು ಸಂಪುಟಗಳು ಬೆಳಕುಕಂಡಿವೆ. (ಟಿ.ವಿ.ಎಸ್.)

**ಕನ್ನಡದಲ್ಲಿ ಗ್ರಂಥಸಂಪಾದನೆ :** ಕನ್ನಡದಲ್ಲಿ ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿ ಬೆಳೆದಿದೆ. ಮುದ್ರಣಸೌಲಭ್ಯವಿಲ್ಲದ ಕಾಲದಲ್ಲಿ ಗ್ರಂಥಗಳನ್ನು ಓಲೆಗರಿಗಳಲ್ಲಿ ಬರೆದಿಡಲಾಗುತ್ತಿತ್ತು. ಇದಕ್ಕಾಗಿ ನಿಯತವಾಗಿ ಪ್ರತಿಕಾರರೇ ಇರುತ್ತಿದ್ದರು. ಇಂಥ ಪ್ರತಿಕಾರರಿಂದಲೇ ದಾನಚಿಂತಾಮಣಿ ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಹಸ್ರ ಪ್ರತಿಗಳನ್ನು ಮಾಡಿಸಿ ಹಂಚಿದ ವಿಷಯ ಇತಿಹಾಸ ಪ್ರಸಿದ್ಧವಾಗಿದೆ. ಹೀಗೆ ಪ್ರತಿ ಮಾಡುವಾಗ ಕೈ ತಪ್ಪಿನಿಂದಲೋ ಅನವಧಾನದಿಂದಲೋ ಕೆಲವು ದೋಷಗಳು ಉಂಟಾಗುತ್ತವೆ. ಕೆಲವು ಪ್ರೌಢ ಪ್ರತಿಕಾರರು ಬುದ್ಧಿ ಪೂರ್ವಕವಾಗಿಯೇ ಕೆಲವು ತಿದ್ದುಪಡಿ ಮಾಡಿರುವುದೂ ಹಲವಾರು ಪದ್ಯಗಳನ್ನೂ ಪದ್ಯಭಾಗಗಳನ್ನೂ ಹೊಸದಾಗಿ ಸೇರಿಸಿರುವುದೂ ಕಂಡುಬರುತ್ತದೆ. ಇಂಥ ಕಾರ್ಯದಿಂದ ಮೂಲಗ್ರಂಥಗಳ ಸ್ವರೂಪ ಬದಲಾಗಿ ಮೂಲಕರ್ತೃವಿನ ಪಾಠವೇನಿರಬಹುದೆಂಬ ಸಮಸ್ಯೆ ತಲೆದೋರುತ್ತದೆ. ಇಂಥ ಗ್ರಂಥದ ಹಲವು ಪ್ರತಿಗಳ ಸಹಾಯದಿಂದ ಮೂಲಪಾಠವನ್ನು ನಿರ್ಣಯಿಸಿ, ಕೃತಿಯ ಪರಿಚಯ ವಿಮರ್ಶೆ ಮೊದಲಾದವುಗಳೊಡನೆ ಗ್ರಂಥವನ್ನು ಹೊರತರುವುದೇ ಸಂಪಾದನಾ ಕಾರ್ಯ. ಈ ನಿಟ್ಟಿನಲ್ಲಿ ಅನುಸರಿಸಬೇಕಾದ ಮೂಲ ತತ್ವಗಳೇ ಸಂಪಾದನಾ ಶಾಸ್ತ್ರದ ನಿಯಮಗಳಾಗಿವೆ.

ಭಾರತದಲ್ಲಿ 19ನೆಯ ಶತಮಾನದ ಆದಿಭಾಗದಲ್ಲಿ ಮ್ಯಾಕ್ಸ್ ಮುಲ್ಲರ್, ಬ್ಯೂಲರ್ ಮೊದಲಾದ ವಿದೇಶಿ ವಿದ್ವಾಂಸರು ಹಾಗೂ ಪಿ.ಎಲ್.ವೈದ್ಯ, ಎಸ್.ಎಂ.ಕತ್ರೆ ಮೊದಲಾದ ಸ್ವದೇಶೀ ವಿದ್ವಾಂಸರಿಂದ ಗ್ರಂಥಸಂಪಾದನೆ ಕಾರ್ಯ ಒಂದು ಸ್ವರೂಪವನ್ನು ಪಡೆಯಿತು. ಇದನ್ನೇ ಕನ್ನಡದಲ್ಲಿಯೂ ವಿದ್ವಾಂಸರು ಆದರ್ಶವಾಗಿ ತೆಗೆದುಕೊಂಡರು. ಆದರೆ ಈ ಕಾರ್ಯ ಬಹು ಹಿಂದಿನಿಂದಲೂ ಭಾರತದಲ್ಲಿ ನಡೆಯುತ್ತಲೇ ಬಂದಿರುವುದನ್ನು ಯಾರೂ ಮರೆಯುವಂತಿಲ್ಲ. ಏಕೆಂದರೆ ಸು.1400ರಲ್ಲಿದ್ದ ಮಲ್ಲಿನಾಥ ಮೇಘದೂತದಲ್ಲಿಯ ಪೂರ್ವಮೇಘದಲ್ಲಿನ ಕೆಲವು ಶ್ಲೋಕಗಳನ್ನು ಪ್ರಕ್ಷಿಪ್ತವೆಂದು ಗುರುತಿಸಿದ್ದಾನೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ನಾವು ಕನ್ನಡ ಗ್ರಂಥಸಂಪಾದನೆಯ ಪ್ರಗತಿಯಲ್ಲಿ ಹಲವಾರು ಹಂತಗಳನ್ನು ಗುರುತಿಸಬಹುದು.

ಮುದ್ರಣ ಉಪಯೋಗ ಪಾಶ್ಚಾತ್ಯ ದೇಶಗಳಲ್ಲಿ 1457ರ ವೇಳೆಗೆ ಆರಂಭವಾದರೂ ಅದು ಕನ್ನಡ ಭಾಷೆಗೆ ಲಭ್ಯವಾದದ್ದು 1817ರಲ್ಲಿ. ಬಂಗಾಲದ ಶ್ರೀರಾಮಪುರದಲ್ಲಿ ಕ್ರೈಸ್ತಮತ ಪ್ರಚಾರಕನಾಗಿದ್ದ ವಿಲಿಯಂ ಕೇರಿ ಎಂಬುವನು ತನ್ನ ಹಿಸ್ಟರಿ ಆಫ್ ಕರ್ನಾಟ ಲಾಂಗ್ವೇಜ್ ಎಂಬ ಪುಸ್ತಕಕ್ಕೆ ಕನ್ನಡದ ಅಚ್ಚುಮೊಳೆಗಳನ್ನು ಪ್ರಥಮ ಬಾರಿಗೆ (1817ರಲ್ಲಿ) ಬಳಸಿದಂತೆ ತಿಳಿಯುತ್ತದೆ. ಅನಂತರ ಜಾನ್ ಮೆಕ್ಕೆರಲ್ ಎಂಬಾತ ಬರೆದ ಗ್ರಾಮರ್ ಆಫ್ ದಿ ಕರ್ನಾಟಿಕ ಲಾಂಗ್ವೇಜ್ ಎಂಬ ಮತ್ತೊಂದು ಕೃತಿ 1820ರಲ್ಲಿ ಮದರಾಸಿನಲ್ಲಿ (ಚೆನ್ನೈ) ಪ್ರಕಾಶಿತವಾಯಿತು. 1824ರಲ್ಲಿ ವಿಲಿಯಂರೀವ್ ಎಂಬುವನಿಂದ ರಚಿತವಾದ ಇಂಗ್ಲಿಷ್ - ಕನ್ನಡ ನಿಘಂಟು, 1832ರಲ್ಲಿ ಆತನಿಂದಲೇ ರಚಿತವಾದ ಕನ್ನಡ - ಇಂಗ್ಲಿಷ್ ನಿಘಂಟು ಪ್ರಕಟವಾದವು. ಅನಂತರ ಶ್ರೀರಂಗಪಟ್ಟಣದ ಕೃಷ್ಣಮಾಚಾರಿಯ 'ಹೊಸಗನ್ನಡ ನುಡಿಗನ್ನಡಿ' ಎಂಬ ಅಪೂರ್ವ ಕೃತಿ 1838ರಲ್ಲಿ ಮದರಾಸಿನಲ್ಲಿ ಮುದ್ರಿತವಾಯಿತು. ಇದಕ್ಕೂ ಮುಂಚೆ ಬಳ್ಳಾರಿಯಲ್ಲಿ ಕ್ರಿಶ್ಚಿಯನ್ನರ ಮೇಲ್ವಿಚಾರಣೆಯಲ್ಲಿ 1820ರಲ್ಲಿ ಬೈಬಲ್‌ನ ಕನ್ನಡ ಅನುವಾದವೊಂದು ತೆಲುಗು ಲಿಪಿಯಲ್ಲಿ ಪ್ರಕಟವಾಗಿತ್ತು.

ಆದರೆ ಪೂರ್ವಗ್ರಂಥಗಳನ್ನೂ ಬಿಡಿ ಹಾಡುಗಳನ್ನೂ ಸಂಕಲಿಸಿ ಪ್ರಕಟಿಸುವ ಸಂಪಾದನಾಕಾರ್ಯ ಮೊದಲುಗೊಂಡದ್ದು 1841ರಲ್ಲಿ ಮಂಗಳೂರಿನಲ್ಲಿ ಜರ್ಮನ್ ಮಿಶನರಿಯವರು ತೆರೆದ ಮುದ್ರಣಶಾಲೆಯ ಮೂಲಕ. ಇವರು ಜನಪ್ರಿಯವಾದ ತುಳು ಕೀರ್ತನೆಗಳು, ಗಾದೆಗಳು, ದಾಸರ ಪದಗಳು ಹಾಗೂ ಜೈಮಿನಿ ಭಾರತ (1848), ಬಸವಪುರಾಣ (1850), ಕುಮಾರವ್ಯಾಸ ಭಾರತ (1851), ಚೆನ್ನಬಸವ ಪುರಾಣ (1851) -ಈ ಗ್ರಂಥಗಳನ್ನು ಕಲ್ಲಚ್ಚಿನ ಮೂಲಕ ಹೊರತಂದರು. ಮೊದಮೊದಲು ಶುದ್ಧವೋ ಅಶುದ್ಧವೋ ಜನತೆಗೆ ಗ್ರಂಥಗಳು ದೊರೆಯುವಂತಾಗಬೇಕೆಂಬ ಹಂಬಲದಿಂದ ಓಲೆಕಟ್ಟುಗಳಲ್ಲಿದ್ದುದನ್ನು ಮುದ್ರಿಸತೊಡಗಿದರು. ಆದರೆ ಮುದ್ರಿತ ಅನಂತರದಲ್ಲಿ ರೆವರೆಂಡ್ ಎಫ್.ಕಿಟ್ಟೆಲ್, ಬಿ.ಎಲ್.ರೈಸ್ ಮೊದಲಾದ ವಿದ್ವಾಂಸರು ಲಭ್ಯ ಹಸ್ತಪ್ರತಿಗಳನ್ನೆಲ್ಲ ಸಂಗ್ರಹಿಸಿ, ಅವುಗಳನ್ನು ಪರಸ್ಪರ ಪರಿಶೀಲಿಸಿ, ಮೂಲಪಾಠಗಳನ್ನು ನಿರ್ಣಯಿಸಿ, ಕೃತಿಯ ಪರಿಚಯ, ವಿಮರ್ಶೆ ಮೊದಲಾದ ಸೂಕ್ತ ಪೀಠಿಕೆಯೊಡನೆ ಗ್ರಂಥಗಳನ್ನು ಓದುಗರಿಗೆ ಒದಗಿಸಲು ಬದ್ಧಕಂಕಣರಾದರು. ಹಾಗಾಗಿ ಜೆ.ಗ್ಯಾರೆಟ್ ಎಂಬುವರು 1868ರಲ್ಲಿ ಪ್ರಕಟಿಸಿದ್ದ ಕೇಶಿರಾಜನ ಶಬ್ದಮಣಿದರ್ಪಣವನ್ನು ಅನಂತರ ಕಿಟ್ಟೆಲ್ಲರು ಒಂಬತ್ತು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಿ ಪ್ರಕಟಿಸಿದರು (1872). ಮೂಲಪಾಠ ನಿಷ್ಕರ್ಷೆಯಲ್ಲಿ ತಾವು ಅಗಾಧ ಕಷ್ಟವನ್ನು ಅನುಭವಿಸಿರುವುದಾಗಿ, ತೊಳಲಾಟಕ್ಕೆ ಸಿಕ್ಕಿರುವುದಾಗಿ ಅವರು ಪೀಠಿಕೆಯಲ್ಲಿ

ಹೇಳಿಕೊಂಡಿದ್ದಾರೆ. ಈ ಗ್ರಂಥ'ವನ್ನೇ ಮತ್ತೆ ಸಂಪಾದಿಸಿದ ಡಿ.ಎಲ್.ನರಸಿಂಹಾಚಾರ್ಯರು ಪೀಠಿಕೆಯಲ್ಲಿ 'ಕೇಶಿರಾಜನ ಸ್ವಹಸ್ತಪ್ರತಿಯ' ಸ್ವರೂಪವನ್ನು ಕಂಡುಹಿಡಿಯುವುದಕ್ಕೂ ಅದು ಸಾಧ್ಯವಾಗದಿದ್ದಲ್ಲಿ ಅದಕ್ಕೆ ಅತಿ ಸಮೀಪವಾದ ಪಾಠವನ್ನು ಗೊತ್ತುಪಡಿಸುವುದಕ್ಕೂ ಪಾಠ ಸಮಸ್ಯೆಗಳ ವಿಶದೀಕರಣಕ್ಕೂ ಸರ್ವ ಪಾಠಭೇದಗಳನ್ನೊಳಗೊಂಡ ಸಶಾಸ್ತ್ರೀಯ ಸವಿಮರ್ಶೆ ಪರಿಷ್ಕರಣವನ್ನು (ವೇರಿಯೋರಂ ಅಂಡ್ ಕ್ರಿಟಿಕಲ್ ಎಡಿಷನ್ ಬೇಸ್ಡ್ ಆನ್ ದಿ ಸೈನ್ಸ್ ಆಫ್ ಟೆಕ್ಸ್ಚುಯಲ್ ಕ್ರಿಟಿಸಿಸಂ) ಸಿದ್ಧಪಡಿಸಬೇಕಾದ ಆವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಗ್ರಂಥ' ಸಂಪಾದನೆಯಲ್ಲಿರುವ ಸಂಕಷ್ಟಗಳೆಷ್ಟೆಂಬುದು ವಿದಿತವಾಗುತ್ತದೆ. ಎಫ್. ಕಿಟ್ಟೆಲ್ಲರು ಸಂಪಾದಿಸಿರುವ ಒಂದನೆಯ ನಾಗವರ್ಮನ ಛಂದೋಂಬುಧಿಯೂ ಶಬ್ದಮಣಿದರ್ಪಣದಂತೆಯೇ ಒಂದು ಮುಖ್ಯಕೃತಿಯಾಗಿದ್ದು ಇದು 1875ರಲ್ಲಿ ಪ್ರಕಟವಾಯಿತು. ಇದನ್ನು ಅವರು ಹದಿನಾಲ್ಕು ಪ್ರತಿಗಳನ್ನು ಆಧರಿಸಿ ಸಂಪಾದಿಸಿದ್ದಾರೆ. ಎಫ್.ಕಿಟ್ಟೆಲ್ಲರಂತೆಯೇ ಸಂಪಾದನಾಕಾರ್ಯದಲ್ಲಿ ಬಹು ಶ್ರದ್ಧೆಯಿಂದ ದುಡಿದ ಮುಖ್ಯರೆಂದರೆ ಶಾಸನ ಇಲಾಖೆಯ ಮುಖ್ಯಸ್ಥರಾಗಿದ್ದ ಬಿ.ಎಲ್.ರೈಸ್. ಇವರು ಕನ್ನಡ ಶಾಸನಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆಗಳಲ್ಲಿ ವಹಿಸಿದ ಆಸಕ್ತಿಯನ್ನೇ ಪ್ರಾಚೀನ ಕನ್ನಡ ಗ್ರಂಥಗಳ ಪ್ರಕಾಶದಲ್ಲಿಯೂ ತೋರಿಸಿದರು. ಇವರಿಂದಲೇ ಬಿಬ್ಲಿಯೋಥಿಕ ಕರ್ನಾಟಿಕ ಎಂಬ ಅಂಕಿತದಲ್ಲಿ ಕನ್ನಡದ ಪ್ರಾಚೀನ ಕೃತಿಗಳ ಪ್ರಕಾಶನ ಮೊದಲಾಯಿತು. ಪಂಪ ರಾಮಾಯಣ (1882), ಕರ್ಣಾಟಕ ಶಬ್ದಾನು ಶಾಸನ (1890), ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ (1884), ಪಂಪಭಾರತ (1898), ಕವಿರಾಜಮಾರ್ಗ ಮೊದಲಾದ ಗ್ರಂಥಗಳು ಈ ಮಾಲೆಯಲ್ಲಿ ಪ್ರಸಿದ್ಧವಾದವು. ಈ ಗ್ರಂಥಗಳೊಂದೊಂದಕ್ಕೂ ರೈಸ್ ಅವರು ಬರೆದಿರುವ ಪ್ರಸ್ತಾವನೆಗಳು ಮುಂದಣ ಸಂಪಾದಕರಿಗೆ ದಿಕ್ಸೂಚಿಯಾಗಿವೆ. ಕನ್ನಡದ ಮಹಾಕಾವ್ಯಗಳಲ್ಲಿ ಒಂದಾದ ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯ (ಪಂಪ ಭಾರತ) ಮೊದಲ ಬಾರಿಗೆ ಪ್ರಕಟವಾದದ್ದು ಬಿ.ಎಲ್.ರೈಸ್ ಅವರಿಂದ. ಇವರ ಅನಂತರ ಈ ಕಾರ್ಯದಲ್ಲಿ ಮುಂದುವರಿದ ರಾ.ನರಸಿಂಹಾಚಾರ್ಯರೇ ಮೊದಲಾದವರು ರೈಸ್ ಅವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದ್ದಾರೆ.

ರಾ.ನರಸಿಂಹಾಚಾರ್ಯರು ರೈಸ್ ಅವರ ಹಾದಿಯಲ್ಲೇ ನಡೆದು ಎರಡನೆಯ ನಾಗವರ್ಮನ ಕಾವ್ಯಾವಲೋಕನವನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿ ಪ್ರಥಮ ಬಾರಿಗೆ ಪ್ರಕಟಿಸಿದರು (1902). ರೈಸ್ ಅವರ ಮೇಲ್ವಿಚಾರಣೆಯಲ್ಲಿಯೇ ಕವಿರಾಜಮಾರ್ಗವನ್ನು ಸಂಪಾದಿಸಿದ ಕೆ.ಬಿ.ಪಾಠಕ್ ಅವರು ಮೂರು ಹಸ್ತಪ್ರತಿಗಳನ್ನು ಆಧರಿಸಿ ಕೆಲಸಮಾಡಿದ್ದಾರೆ. ಈ ಕೃತಿ 1898ರಲ್ಲಿ ಪ್ರಕಟವಾಯಿತು. ಹೀಗೆ 19ನೆಯ ಶತಮಾನದಲ್ಲಿ ಆರಂಭವಾಗಿ 20ನೆಯ ಶತಮಾನದ ಆರಂಭ ಕಾಲದವರೆಗೆ ಕ್ರಮಕ್ರಮವಾಗಿ ಅಭಿವೃದ್ಧಿಹೊಂದಿದ ಕನ್ನಡ ಗ್ರಂಥ ಸಂಪಾದನೆಯ ಕಾರ್ಯ ಮುಂದಿನ ಪೀಳಿಗೆಗೆ ಭದ್ರವಾದ ಅಸ್ತಿಭಾರವನ್ನು ಹಾಕಿತು.

ಗ್ರಂಥ'ಸಂಪಾದನೆಗೆ ಆವಶ್ಯವಾಗಿ ಬೇಕಾಗಿದ್ದ ಹಸ್ತಪ್ರತಿಗಳ ಸಂಗ್ರಹಕಾರ್ಯ ಹಾಗೂ ಸಂಪಾದನೆ ಮೊದಲು ಪ್ರಾಕ್ತನ ಇಲಾಖೆಗೆ ಸೇರಿದ್ದಿತು. ಕನ್ನಡ ಸಾಹಿತ್ಯದ ಅಗಾಧ ಗ್ರಂಥ'ಸಮುದಾಯ ಹಸ್ತಪ್ರತಿಗಳಲ್ಲಡಗಿರುವುದನ್ನು ಗಮನಿಸಿದ ಸರ್ಕಾರ ಗ್ರಂಥ'ಗಳ ಸಂಪಾದನಾಕಾರ್ಯಕ್ಕಾಗಿಯೇ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯಬೇಕೆಂಬ ಯೋಚನೆಯಿಂದ 1891ರಲ್ಲಿ ಮೈಸೂರಿನಲ್ಲಿ ಓರಿಯಂಟಲ್ ಲೈಬ್ರರಿಯನ್ನು ಸ್ಥಾಪಿಸಿತು. ಇಲ್ಲಿ ಸಂಸ್ಕೃತ, ಕನ್ನಡ ಗ್ರಂಥಗಳೆರಡನ್ನೂ ಸಂಪಾದಿಸುವ ಹಾಗೂ ಪ್ರಕಟಿಸುವ ಯೋಜನೆ ಸಿದ್ಧವಾಯಿತು. ಈ ಸಂಸ್ಥೆಯ ಕನ್ನಡ ಮಾಲೆಯಲ್ಲಿ ಪ್ರಕಟವಾದ ಮೊದಲ ಗ್ರಂಥ ಪಂಪನ ಆದಿಪುರಾಣ (1900). ಇದನ್ನು ಎಸ್.ಜಿ.ನರಸಿಂಹಾಚಾರ್ಯರು ಸಂಪಾದಿಸಿಕೊಟ್ಟರು. ಕುಮಾರವ್ಯಾಸಭಾರತ ಈ ಮೊದಲು ಅಚ್ಚಾಗಿದ್ದರೂ ಇದರ ಶುದ್ಧವಾದ ಪ್ರತಿಯನ್ನು ಹೊರತರಬೇಕೆಂಬ ಸದಿಚ್ಛೆಯಿಂದ ವಿ. ಶ್ಯಾಮಾಚಾರ್ಯರೇ ಮೊದಲಾದವರು ಮೊದಲ ಐದು ಪರ್ವಗಳನ್ನು ಸಂಪಾದಿಸಿದರು. ಯುದ್ಧಪಂಚಕದ ಸಂಪಾದನಾ ಕಾರ್ಯಕ್ಕೆ ಬಿ.ಎಂ.ಶ್ರೀಕಂಠಯ್ಯ, ಟಿ.ಎಸ್.ವೆಂಕಣ್ಣಯ್ಯ, ಡಿ.ಶ್ರೀನಿವಾಸಾಚಾರ್, ತೀ.ನಂ.ಶ್ರೀಕಂಠಯ್ಯ - ಇವರುಗಳನ್ನೊಳಗೊಂಡ ಸಂಪಾದಕ ಮಂಡಲಿಯನ್ನು ರಚಿಸಲಾಯಿತು. ಈ ಮಂಡಲಿಯಲ್ಲಿ ಆಗಿಂದಾಗ್ಗೆ ಬದಲಾವಣೆಗಳಾಗಿ ಸಂಪಾದನಾ ಕಾರ್ಯದಲ್ಲಿ ಎ.ಆರ್.ಕೃಷ್ಣಶಾಸ್ತ್ರೀ, ಎಂ.ಎಸ್.ಬಸವಲಿಂಗಯ್ಯ, ಡಿ.ಎಲ್.ನರಸಿಂಹಾಚಾರ್, ಎಚ್.ದೇವೀರಪ್ಪ ಮೊದಲಾದವರು ಭಾಗವಹಿಸಿದ್ದಾರೆ. ಒಟ್ಟಿನಲ್ಲಿ ಸಂಸ್ಥೆ ಪ್ರಕಟಿಸಿದ ಕುಮಾರವ್ಯಾಸ ಭಾರತದ 10 ಪರ್ವಗಳನ್ನು ಗಮನಿಸಿದರೆ ಕನ್ನಡ ಗ್ರಂಥಸಂಪಾದನಾಕಾರ್ಯದ ಹಲವು ಸಮಸ್ಯೆಗಳು, ಅದು ಬೆಳೆದು ಬಂದ ಹಲವಾರು ಹಂತಗಳು ವಿದಿತವಾಗುತ್ತದೆ. ಈ ಸಂಸ್ಥೆಯ ಆಶ್ರಯದಲ್ಲಿ 43 ಕನ್ನಡ ಗ್ರಂಥಗಳು ಪ್ರಕಟವಾದವು (1967). ವಿವಿಧ ಧರ್ಮಗಳಿಗೆ ಸಂಬಂಧಿಸಿದ ಕೃತಿಗಳನ್ನೂ ಶಾಸ್ತ್ರಗ್ರಂಥಗಳನ್ನೂ ಪ್ರಕಟಿಸಿದ ಯಶಸ್ಸು ಈ ಸಂಸ್ಥೆಗೆ ಸಲ್ಲುತ್ತದೆ.

ಕನ್ನಡ ಪ್ರಾಚೀನ ಗ್ರಂಥಗಳ ಪ್ರಕಟನೆಯ ಕಾರ್ಯದಲ್ಲಿ ಇದೇ ರೀತಿ ಮಹತ್ವದ ಪಾತ್ರ ವಹಿಸಿದ ಹಿರಿಯ ಸಂಸ್ಥೆಗಳಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಂಶೋಧನ ಸಂಸ್ಥೆ, ಕನ್ನಡ ಅಧ್ಯಯನ ಸಂಸ್ಥೆ, ಮದರಾಸು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಮುಖ್ಯವಾದುದಾಗಿವೆ. 1968ರಲ್ಲಿ ಅಸ್ತಿತ್ವಕ್ಕೆ ಬಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಈಗಾಗಲೇ 37 ಪ್ರಾಚೀನ ಗ್ರಂಥ'ಗಳನ್ನು ಪ್ರಚುರಪಡಿಸಿದೆ. ಇವುಗಳಲ್ಲಿ ಬಹು ಕಾಲದಿಂದ ಅಲಭ್ಯವಾಗುಳಿದಿದ್ದ ಬಿ.ಎಸ್. ಸಣ್ಣಯ್ಯನವರಿಂದ ಸಂಪಾದಿತವಾಗಿರುವ ಎರಡನೆಯ ನಾಗವರ್ಮನ ವರ್ಧಮಾನ ಪುರಾಣ, (1974) ಬಹುಮುಖ್ಯವಾದುದು. ಹಾಗೆಯೇ ಇದುವರೆಗೆ ಅಪ್ರಕಟಿತವಾಗುಳಿದಿದ್ದ ಬಂಧುವರ್ಮನ ಹರಿವಂಶಾಭ್ಯುದಯ, ಇಮ್ಮಡಿ ಗುರುಸಿದ್ಧರ ಹಾಲಾಸ್ಯ ಪುರಾಣ ಮೊದಲಾದ ಗ್ರಂಥಗಳೂ ವಿದ್ವಾಂಸರ ಗಮನವನ್ನು ಸೆಳೆದಿವೆ. ಇವೇ ಅಲ್ಲದೆ ಇದೇ ಸಂಸ್ಥೆಯ ಹರಿದಾಸ ಸಾಹಿತ್ಯ ವಿಭಾಗದಿಂದ ಹರಿದಾಸರ ಕೀರ್ತನೆಗಳ ಸಂಪಾದನಾಕಾರ್ಯ ನಡೆದಿದ್ದು ಈಗಾಗಲೇ ಹನ್ನೆರಡು ಸಂಪುಟಗಳು ಪ್ರಕಟವಾಗಿವೆ. ಸಂಸ್ಥೆಯ ಜಾನಪದ ವಿಭಾಗದಿಂದ ಜಾನಪದ ಮಾಲೆಯಲ್ಲಿ ಅನೇಕ ಗ್ರಂಥಗಳು ಪ್ರಕಟವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಪಂಪರಾಮಾಯಣ, ಪಂಪಭಾರತ, ಶಬ್ದಮಣಿದರ್ಪಣಗಳು ಗಮನಾರ್ಹವಾದುವಾಗಿವೆ. ಇವುಗಳ ಕಾರ್ಯ ತೃಪ್ತಿಕರವಾಗಿರಲು ಮುಖ್ಯ ಕಾರಣರಾದವರೆಂದರೆ ಬೆಳ್ಳಾವೆ ವೆಂಕಟನಾರಣಪ್ಪನವರು.

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯವರು ಶಿ.ಶಿ.ಬಸವನಾಳ, ಶಿ.ಚೆ.ನಂದೀಮಠ, ಎಸ್.ಎಸ್.ಮಾಳವಾಡ ಮೊದಲಾದ ವಿದ್ವಾಂಸರ ಬೆಂಬಲದಿಂದ ಚೆನ್ನಬಸವಪುರಾಣ, ಪ್ರಭುಲಿಂಗಲೀಲೆ, ಗಿರಿಜಾಕಲ್ಯಾಣ, ರಕ್ಷಾಶತಕ, ಪಂಪಾಶತಕ ಮೊದಲಾದ ಗ್ರಂಥಗಳನ್ನು ಪ್ರಸಿದ್ಧಪಡಿಸಿ ಸಂಪಾದನಾಕಾರ್ಯದಲ್ಲಿ ಸಾಕಷ್ಟು ಹೆಸರು ಗಳಿಸಿದ್ದಾರೆ.

ಹೀಗೆ ಸಂಸ್ಥೆಗಳಲ್ಲದೆ ಕೆಲವು ವ್ಯಕ್ತಿಗಳೂ ಈ ಸಂಪಾದನಾಕಾರ್ಯದಲ್ಲಿ ನಿಷ್ಣಾತರಾಗಿ ದುಡಿದಿದ್ದಾರೆ. ಇವರಲ್ಲಿ ಎಸ್.ಜಿ.ನರಸಿಂಹಾಚಾರ್ ಮತ್ತು ಎಂ.ಎ.ರಾಮಾನುಜಯ್ಯಂಗಾರ್ ಎಂಬ ಎರಡು ಹೆಸರುಗಳು ಪ್ರಮುಖವಾದುವು. ಇವರು ಕರ್ನಾಟಕ ಕಾವ್ಯ ಕಲಾನಿಧಿ ಮತ್ತು ಕರ್ನಾಟಕ ಕಾವ್ಯಮಂಜರಿ ಗ್ರಂಥಮಾಲೆಗಳ ಮೂಲಕ ಕನ್ನಡದ ಹಲವಾರು ಅಪೂರ್ವ ಗ್ರಂಥಗಳನ್ನು ಸಂಪಾದಿಸಿ, ಮೊದಲ ಬಾರಿಗೆ ಪ್ರಕಟಿಸಿದರು. ಈ ಸಾಹಸದಿಂದ ಕನ್ನಡಿಗರ ಕೃತಜ್ಞತೆಗೆ ಪಾತ್ರರಾದರು. ನೇಮಿಚಂದ್ರನ ನೆಮಿನಾಥಪುರಾಣ (ಅರ್ಧನೇಮಿ), ಲೀಲಾವತಿ ಪ್ರಬಂಧ, ಮಂಗರಸನ ಜಯನೃಪಕಾವ್ಯ, ಚತುರಾಸ್ಯನ ಚತುರಾಸ್ಯ ನಿಘಂಟು ಮೊದಲಾದ ಗ್ರಂಥಗಳು ಇವರಿಂದ ಬೆಳಕು ಕಂಡವು.

ಒಂದನೆಯ ನಾಗವರ್ಮನ ಕರ್ನಾಟಕ ಕಾದಂಬರಿಯನ್ನು ಏಕೈಕ ಹಸ್ತಪ್ರತಿಯ ಸಹಾಯದಿಂದಲೇ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಬಿ.ಮಲ್ಲಪ್ಪನವರಿಗೆ ಸಲ್ಲುತ್ತದೆ. ಇದು 1892ರಲ್ಲಿ ಮುದ್ರಿತವಾಗಿ ಸಂಶೋಧಕರ ಮೆಚ್ಚುಗೆಯನ್ನು ಗಳಿಸಿದೆ. ಬಿಜಾಪುರದಲ್ಲಿ ವಕೀಲರಾಗಿದ್ದ ರಾವಬಹಾದ್ದೂರ, ಫ.ಗು.ಹಳಕಟ್ಟಿಯವರು ವಚನಸಾಹಿತ್ಯ ಹಾಗೂ ಹರಿಹರನ ರಗಳೆಗಳನ್ನು ಸಂಪಾದಿಸಿ ಪ್ರಕಟಿಸುವಲ್ಲಿ ತಮ್ಮ ಆಯುಷ್ಯವನ್ನು ಸವೆಸಿದರು. ಸಂಪಾದನಾ ಕ್ಷೇತ್ರದಲ್ಲಿ ಅವರು ಮಾಡಿರುವ ಸೇವೆ ಅಪರಿಮಿತವಾದುದು. ಆರ್.ಸಿ.ಹಿರೇಮಠ, ಆರ್.ಎಸ್.ಪಂಚಮುಖಿ, ಎಸ್.ಎಸ್.ಭೂಸನೂರಮಠ, ಬಿ.ಶಿವಮೂರ್ತಿಶಾಸ್ತ್ರಿ, ಉಳ್ಳಾಲ

ಮಂಗೇಶರಾವ್, ಕೆ.ಜಿ.ಕುಂದಣಗಾರ, ಎ.ಶಾಂತರಾಜಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ, ತೀ.ನಂ.ಶ್ರೀಕಂಠಯ್ಯ, ಎಂ.ವಿ.ಸೀತಾರಾಮಯ್ಯ, ಜಿ.ಬ್ರಹ್ಮಪ್ಪ, ಎಂ.ಎಂ.ಕಲಬುರ್ಗಿ, ಎಲ್.ಬಸವರಾಜು ಎಸ್.ಶಿವಣ್ಣ, ಜಿ.ಜಿ.ಮಂಜುನಾಥನ್, ಹ.ಕ.ರಾಜೇಗೌಡ ಮೊದಲಾದವರು ಈ ಕೆಲಸದಲ್ಲಿ ಶ್ರದ್ಧೆಯಿಂದ ದುಡಿದಿದ್ದಾರೆ. ಬೆಟಗೇರಿ ಕೃಷ್ಣಶರ್ಮರು ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ ಪುರಂದರದಾಸರ ಕೀರ್ತನೆಗಳ 6 ಸಂಪುಟಗಳನ್ನೂ ಕನಕದಾಸರ ಕೀರ್ತನೆಗಳ ಒಂದು ಸಂಪುಟವನ್ನೂ ಪರಿಷ್ಕರಿಸಿ, ಸಂಪಾದಿಸಿ ಪ್ರಕಟಿಸಿರುವುದು ಅಭಿನಂದನಾರ್ಹವಾಗಿದೆ. ದೇ.ಜವರೇಗೌಡರು ಕಬ್ಬಿಗರ ಕಾವ ಮತ್ತು ಲೀಲಾವತಿ ಪ್ರಬಂಧಗಳನ್ನು (ಇತರರೊಡನೆ) ಸಂಪಾದಿಸಿ ಅವುಗಳಿಗೆ ಬರೆದಿರುವ ವಿದ್ವತ್ಪೂರ್ಣ ಕವಿ - ಕಾವ್ಯ ಪರಿಚಯಗಳು ಅತ್ಯಂತ ಮಹತ್ವದಿಂದ ಕೂಡಿವೆ. ಡಿ.ಎಲ್.ನರಸಿಂಹಾಚಾರ್ಯರ ವಡ್ಡಾರಾಧನೆ, ಅವರು ಟಿ.ಎಸ್.ವೆಂಕಣ್ಣಯ್ಯ ನವರೊಡನೆ ಸಂಪಾದಿಸಿರುವ ಸಿದ್ಧರಾಮಚಾರಿತ್ರ ಗಮನಾರ್ಹವಾದುವು. ಎಲ್.ಬಸವರಾಜು ಅವರು ಸಂಪಾದಿಸಿರುವ ಅಲ್ಲಮನ ವಚನಚಂದ್ರಿಕೆ, ಶಿವದಾಸ ಗೀತಾಂಜಲಿ, ಶೂನ್ಯಸಂಪಾದನೆ, ಆದಿಪುರಾಣ ಮೊದಲಾದ ಗ್ರಂಥಗಳು ಮುಂದಿನ ಸಂಪಾದಕರಿಗೆ ಮಾದರಿ ಗ್ರಂಥ'ಗಳಾಗಿವೆ. ಎಸ್.ಬಸವಾರಾಧ್ಯ, ಕೆ.ವೆಂಕಟರಾಮಪ್ಪ, ಎಚ್.ತಿಪ್ಪೇರುದ್ರಸ್ವಾಮಿ, ಕೆ.ರಾಘವೇಂದ್ರರಾವ್, ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ, ಬಿ.ಎಸ್.ಕುಲಕರ್ಣಿ, ಬಿ.ಎಸ್.ಸಣ್ಣಯ್ಯ, ಎಂ.ಪಿ.ಮಂಜಪ್ಪಶೆಟ್ಟಿ, ಮೈಲಹಳ್ಳಿ ರೇವಣ್ಣ, ಟಿ.ಎನ್.ನಾಗರತ್ನ, ವೈ.ಸಿ.ಭಾನುಮತಿ, ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ ಮೊದಲಾದವರೂ ಈ ಕಾರ್ಯದಲ್ಲಿ ನಿರತರಾಗಿದ್ದಾರೆ. ಗ್ರಂಥ' ಸಂಪಾದನೆ ಶಾಸ್ತ್ರವನ್ನು ಕುರಿತಂತೆ ಡಿ.ಎಲ್.ನರಸಿಂಹಾಚಾರ್ ಅವರು ಕನ್ನಡ ಗ್ರಂಥಸಂಪಾದನೆ ಎಂಬ ಅಮೂಲ್ಯ ಗ್ರಂಥವನ್ನು ರಚಿಸಿದ್ದಾರೆ.

ಕನ್ನಡ ಗ್ರಂಥಸಂಪಾದನೆಯ ಕಾರ್ಯ ಒಂದು ನಿರಂತರ ಪ್ರಕ್ರಿಯೆ. ಅದು ನಡೆಯುತ್ತಲೇ ಇರಬೇಕು. ಹೊಸ ಹೊಸ ಹಸ್ತಪ್ರತಿಗಳ ಶೋಧವಾದಾಗಲೂ ಸಂಪಾದನ ಕಾರ್ಯವೂ ಶೋಧಿತವಾಗುತ್ತ ಹೊಸದು ಸೇರ್ಪಡೆಗೊಳ್ಳುತ್ತ ಸಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲಸ ಮುಂದುವರಿದ್ದು, 1978 ರಿಂದೀಚೆಗೆ ಈ ಕ್ಷೇತ್ರದಲ್ಲಿ ಆಗಿರುವ ಕೆಲಸದ ಸ್ಥೂಲ ಪರಿಚಯುವನ್ನು ಇಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಹೀಗೆ ಪರಿಷ್ಕೃತವಾಗಿ ಪ್ರಕಟವಾಗಿರುವ ಗ್ರಂಥಗಳಲ್ಲಿ ಕೆಲವು ಪ್ರಥಮ ಬಾರಿಗೆ ಬೆಳಕು ಕಂಡರೆ, ಮತ್ತೆ ಕೆಲವು ಮರುಪರಿಷ್ಕರಣವಾಗಿವೆ. ಅಲ್ಲದೆ ಕೆಲವು ಸಂಗ್ರಹ ಕೃತಿಗಳಾಗಿಯೂ ಹೊರಬಂದಿವೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಆರಾಧ್ಯ ಚಾರಿತ್ರ, ಚತುರಾಚಾರ್ಯ ಚಾರಿತ್ರ, ಸಹ್ಯಾದ್ರಿ ಖಂಡ, ಷಟ್ಸ್ಥಲ ತಿಲಕ, ಧರ್ಮಪರೀಕ್ಷೆ, ಚಂದ್ರಪ್ರಭ ಚರಿತೆ, ಕೃಷ್ಣಾರ್ಜುನರ ಕಾಳಗ, ಬತ್ತೀಸ ಪುತ್ತಳಿ ಕಥೆ, ರಾಜಾವಳಿ ಕಥಾಸಾರ ಮೊದಲಾದ ಕೃತಿಗಳು ದೊರೆತ ಹಸ್ತಪ್ರತಿಗಳನ್ನು ಉಪಯೋಗಿಸಿ ಶಾಸ್ತ್ರನಿಬದ್ಧವಾಗಿ ಪರಿಷ್ಕರಣಗೊಂಡು (1980-88). ಹಾಗೆಯೇ ಬೇರೆ ಬೇರೆ ಕಡೆಗಳಿಂದ ಪ್ರಕಟವಾಗಿರುವ ನಿಂಬಸಾಮಂತ ಚರಿತೆ, ಷಟ್ಸ್ಥಲ ಶಿವಾಯಣ ಮೊದಲಾದ ಕೃತಿಗಳೂ ಅಚ್ಚುಕಟ್ಟಾಗಿ ಸಂಪಾದಿತವಾಗಿ ಪ್ರಕಟವಾಗಿವೆ. ಇವೆಲ್ಲವೂ ಮೊದಲ ಬಾರಿಗೆ ಓಲೆಗಳಿಂದ ಬಿಡುಗಡೆಗೊಂಡು ಅಚ್ಚಿನ ಮೂಲಕ ಸಹೃದಯರ ಕೈಸೇರಿದ ಪ್ರಥಮ ಮುದ್ರಣಗಳಾಗಿವೆ.

ನೀಲಕಂಠಾಚಾರ್ಯ (1485) ರಚಿಸಿರುವ ಆರಾಧ್ಯ ಚಾರಿತ್ರ ಎಂಬ ವಾರ್ಧಕ ಷಟ್ಪದಿ ಗ್ರಂಥ'ವನ್ನು ಎಸ್. ಬಸವಾರಾಧ್ಯರು ಪರಿಷ್ಕರಣ ಮಾಡಿದ್ದಾರೆ (1980). ಇದರ ಸಂಪಾದನೆಗೆ ಮೂರು ಹಸ್ತಪ್ರತಿಗಳನ್ನೂ ಒಂದು ಅಸಮಗ್ರ ಅಚ್ಚಿನ ಪ್ರತಿಯನ್ನೂ ಬಳಸಲಾಗಿದೆ. ಶುದ್ಧ ಹಸ್ತಪ್ರತಿಗಳು ದೊರೆತಿರುವುದರಿಂದ ಹೆಚ್ಚಿನ ಪಾಠ ಸಮಸ್ಯೆಗಳು ಕಂಡುಬರುವುದಿಲ್ಲ. ವಿಸ್ತಾರವಾದ ಪೀಠಿಕೆಯಲ್ಲಿ ಕವಿ ಕೃತಿಗಳ ವಿಷಯ ನಿರೂಪಣೆಯಲ್ಲದೆ ದೀರ್ಘ ಕಥಾಸಾರವನ್ನೂ ನೀಡಲಾಗಿದೆ. ಹಾಗೆಯೇ ಇದೇ ಸಂಪಾದಕರಿಂದ ಪರಿಷ್ಕೃತವಾದ ಸಂಪಾದನೆಯ ಪರ್ವತೇಶ (1698) ರಚಿಸಿರುವ ವಾರ್ಧಕ ಷಟ್ಪದಿಯ ಬೃಹತ್ಕೃತಿ ಚತುರಾಚಾರ್ಯ ಚಾರಿತ್ರ. ನಾಲ್ಕು ಹಸ್ತಪ್ರತಿಗಳ ಉಪಯೋಗದಿಂದ ಮಾಡಿರುವ ಸಂಪಾದನಾ ಕಾರ್ಯ ಉತ್ತಮವಾಗಿದೆ. ದೀರ್ಘ ಪೀಠಿಕೆಯಲ್ಲಿ ಕಥಾಸಾರ ಕವಿಕಾವ್ಯಗಳ ಪರಿಚಯ ಮಾಡಿಕೊಡಲಾಗಿದೆ.

ಸಹ್ಯಾದ್ರಿಖಂಡ (1984) 89 ಸಂಧಿಗಳೂ 3272 ಭಾಮಿನಿ ಷಟ್ಪದಿಗಳಿರುವ ಬೃಹತ್ಕಾವ್ಯ. ಇದನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ವೈ.ಸಿ.ಭಾನುಮತಿಯವರು ಸಮರ್ಥ ರೀತಿಯಲ್ಲಿ ಪರಿಷ್ಕರಿಸಿರುವರು. ಇದರಲ್ಲಿ ಅಳವಡಿಸಿರುವ ಭಾವಚಿತ್ರಗಳು ಕೃತಿಯ ಅಂದವನ್ನು ಹೆಚ್ಚಿಸಿವೆ.

ಪಾರ್ಶ್ವ ಕವಿಯ (ಸು.1700) ನಿಂಬಸಾಮಂತಚರಿತೆ ಎಂಬ ಷಟ್ಪದಿ ಕಾವ್ಯ ಎಂ.ಎಂ.ಕಲಬುರ್ಗಿಯವರಿಂದ ಸಂಪಾದಿತವಾಗಿದೆ (1981). ಇದರಲ್ಲಿ 5 ಸಂಧಿಗಳೂ 506 ಭಾಮಿನಿ ಷಟ್ಪದಿಗಳೂ ಇವೆ. ಈ ಕೃತಿಯನ್ನು ಎರಡು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಲಾಗಿದೆ. ಪಾಠನಿರ್ಣಯ ಉತ್ತಮವಾಗಿದೆ. ಪ್ರಸ್ತಾಪನೆಯಲ್ಲಿ ನಿಂಬಸಾಮಂತನ ಬಗೆಗೆ ದೊರೆಯುವ ಎಲ್ಲ ಸಾಮಗ್ರಿಗಳನ್ನೂ ಕೂಡಿಸಿಕೊಂಡು ಮಾಡಿರುವ ವಿಮರ್ಶೆ ಉತ್ತಮ ಗುಣಮಟ್ಟದಿಂದ ಕೂಡಿದೆ. ಅನುಬಂಧಗಳು ಉಪಯುಕ್ತವಾಗಿವೆ.

ವಿಮಲಾನಂದನ ಕೃಷ್ಣಾರ್ಜುನರ ಕಾಳಗ ಎಂಬ ಕೃತಿಯನ್ನು ಕೆ.ಆರ್.ಶೇಷಗಿರಿ ಅವರು ಮೂರು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದ್ದಾರೆ (1981). ಕೆಲವು ಪ್ರಾಸಸ್ಥಾನಗಳನ್ನು ಬಿಟ್ಟರೆ ಹೆಚ್ಚಿನ ಪಾಠಸಂದಿಗ್ಧತೆ ಕಂಡುಬರುವುದಿಲ್ಲ. ಪೀಠಿಕೆಯಲ್ಲಿ ಮಾಡಿರುವ ವಿಚಾರ ವಿಮರ್ಶೆ ಚೆನ್ನಾಗಿದೆ. ಪದ್ಯಗಳ ಆಕಾರಾದಿ ಅರ್ಥಕೋಶಗಳು ಉಪಯುಕ್ತವಾಗಿವೆ.

ಇದೇ ಮೊದಲ ಬಾರಿಗೆ ಪ್ರಕಟವಾಗಿರುವ ದೇವಚಂದ್ರನ ರಾಜಾವಳೀ ಕಥಾಸಾರ (1988), ಬತ್ತೀಸಪುತ್ತಳಿ ಕಥೆ' (1989) ಮೊದಲಾದ ಗದ್ಯಕೃತಿಗಳೂ ನಮ್ಮ ಗಮನ ಸೆಳೆಯುತ್ತವೆ. ಈ ಎರಡೂ ಕೃತಿಗಳನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹೊರತಂದಿದೆ. ಎಲ್ಲ ವಿಧದ ಸಂಶೋಧಕರಿಗೆ ಅಗತ್ಯವಾಗಿ ಬೇಕಾದ ಮಾಹಿತಿಯನ್ನೊಳಗೊಂಡು ಸಾಹಿತ್ಯ ಧರ್ಮ ಜಾನಪದ ಇತಿಹಾಸಗಳಲ್ಲದೆ ತತ್ತ್ವನಿರೂಪಣೆಯ ತಾರ್ಕಿಕ ಮಂಡನೆಯನ್ನೊಳಗೊಂಡ ರಾಜಾವಳೀ ಕಥಾಸಾರವೆಂಬ ಅಪೂರ್ವ ಕೃತಿಯನ್ನು ಪರಿಷ್ಕರಣ ಮಾಡಿರುವವರು ಬಿ.ಎಸ್.ಸಣ್ಣಯ್ಯ ಅವರು. ಬತ್ತೀಸ ಪುತ್ತಳಿ ಕಥೆಯನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿದ್ದಾರೆ.

ಹೀಗೆ ಮೊದಲ ಬಾರಿಗೆ ಪ್ರಕಟವಾಗಿರುವ ಗ್ರಂಥ'ಗಳಲ್ಲದೆ ಮರುಪರಿಷ್ಕರಣಗೊಂಡು ಹೊರಬಂದಿರುವ ಹಲವಾರು ಗ್ರಂಥಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದಾಗಿದೆ.

ರನ್ನನ ಸಾಹಸಭೀಮವಿಜಯು ಗ್ರಂಥ'ವನ್ನು ಪೂರ್ವದ ಆವೃತ್ತಿಗಳೆಲ್ಲವನ್ನೂ ಗಮನಿಸಿ ಹೊಸ ಹಸ್ತಪ್ರತಿಯು ಸಹಾಯದಿಂದ ಪರಿಷ್ಕರಣ ಮಾಡಿರುವವರು ಬಿ.ಎಸ್. ಸಣ್ಣಯ್ಯ ಮತ್ತು ರಾಮೇಗೌಡ ಅವರು. ಇದು 1985ರಲ್ಲಿ ಪ್ರಕಟವಾಗಿದೆ. ಹೊಸ ಓಲೆ ಪ್ರತಿಯು ಶಕ 1264ರ ಕಾಲನಮೂದಿತ ಪ್ರತಿಯಾಗಿದ್ದು ಶಕಟರೇಫವನ್ನೊಳಗೊಂಡಿದೆ; ಸಾಕಷ್ಟು ಶುದ್ಧವಾಗಿದ್ದು ಉತ್ತಮ ಪಾಠಗಳು ದೊರೆಯುತ್ತವೆ. ಇದನ್ನು ಪೂರ್ವದ ಸಂಪಾದಕರಾರೂ ಬಳಸಿಕೊಂಡಿಲ್ಲ. ಇದಕ್ಕೆ ಆಧಾರವೆಂದರೆ ತೀನಂಶ್ರೀ ಅವರು ತಮ್ಮ ಗದಾಯುದ್ಧ ಸಂಗ್ರಹದಲ್ಲಿ ಸರಿಯಾದ ಪಾಠವಿರಬಹುದೆಂದು ಊಹಿಸಿ ಕಂಸದಲ್ಲಿ ಕೊಟ್ಟಿರುವ ಪಾಠಗಳು ಈ ಪ್ರತಿಯಲ್ಲಿ ದೊರೆಯುತ್ತವೆ. ಪೀಠಿಕೆಯಲ್ಲಿ ಮಾಡಿರುವ ಗ್ರಂಥ'ದ ಮೌಲ್ಯಮಾಪನ ಉತ್ತಮವಾಗಿದೆ; ಕಥಾಸಾರ ಮತ್ತು ಟಿಪ್ಪಣಿಗಳಿಂದ ಸಾಮಾನ್ಯ ಓದುಗರಿಗೂ ಅನುಕೂಲವಾಗಿದೆ.

ರನ್ನನ ಅಜಿತನಾಥ ತೀರ್ಥಂಕರ ಪುರಾಣತಿಲಕ ಎಂಬ ಕೃತಿಯನ್ನು ಬಿ.ಎಸ್.ಸಣ್ಣಯ್ಯ ಮತ್ತು ರಾಮೇಗೌಡಹೊಸ ಹಸ್ತಪ್ರತಿಯ ಸಹಾಯದಿಂದ ಪರಿಷ್ಕರಿಸಿದ್ದಾರೆ. ಇದರಲ್ಲಿ ಉತ್ತಮ ಪಾಠಗಳ ಆಯ್ಕೆಯಿದೆ. ಆಶ್ವಾಸ 5-61ನೆಯ ಪದ್ಯದ ನಾಲ್ಕನೆಯ ಪಾದದಲ್ಲಿದ್ದ ಅಪೂರ್ಣತೆಯನ್ನು ಹೋಗಲಾಡಿಸಲಾಗಿದೆ. ಮುಂದಣ 62ನೆಯ ಪದ್ಯದಲ್ಲಿ ಇದುವರೆಗೂ ಉಪಯೋಗವಾಗಿದ್ದ 'ಅರಳೆಲೆ' ಪದವನ್ನು ಪ್ರಾಸಕ್ಕನುಸಾರವಾಗಿ ತಿದ್ದಿ ಸಮರ್ಥನೆ ನೀಡಲಾಗಿದೆ. ಕವಿ ಕಾವ್ಯಗಳ ಬಗೆಗೆ ಮಾಡಿರುವ ವಿಮರ್ಶೆ ಉತ್ತಮವಾಗಿದೆ. ಕೊಟ್ಟಿರುವ ಟಿಪ್ಪಣಿಗಳು, ಪದ್ಯಗಳ ಅಕಾರಾದಿ ಓದುಗರಿಗೆ ಅನುಕೂಲಕರವಾಗಿದೆ.

ಈ ಮೊದಲಿಗೆ ಎರಡು ಮೂರು ಬಾರಿ ಪ್ರಕಟವಾಗಿದ್ದ ಜನ್ನನ ಯಶೋಧರ ಚರಿತೆಯನ್ನು ಸಿ.ಪಿ.ಕೃಷ್ಣಕುಮಾರ್ ಅವರು ಗದ್ಯಾನುವಾದ ಸಹಿತವಾಗಿ ಸಿದ್ಧಪಡಿಸಿದ್ದು, ಇದನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ

ಹೊರತಂದಿದೆ (1994). ಇಲ್ಲಿನ ವಿಶೇಷವೆಂದರೆ ಇದುವರೆಗೆ ಪ್ರಕಟವಾಗಿದ್ದ ಆವೃತ್ತಿಗಳಲ್ಲಿ ಮೂಲಪಾಠಗಳು ಅರ್ಥವಾಗದೆ ಹೇಗೆ ಅಪಪಾಠಗಳನ್ನು ಊಹಿಸಿದ್ದಾರೆ ಎಂಬುದನ್ನು ಸಾಧಾರವಾಗಿ ನಿರೂಪಿಸಲಾಗಿದೆ. ಅಲ್ಲದೆ ಕಥಾಸಾರ ಆಕರ ಕಾವ್ಯೋದ್ದೇಶ ಪಾತ್ರರಚನೆ ವರ್ಣನೆಗಳು ಶೈಲಿ ಸ್ಥಾನನಿರ್ದೇಶ ಎಂಬ ಅಂಕಿತಗಳಲ್ಲಿ ಚಿಕ್ಕದಾದರೂ ಚೊಕ್ಕದಾದ ನಿರ್ದಿಷ್ಟ ವಿವರಣೆಗಳನ್ನು ನೀಡುವ ಮೂಲಕ ಕೃತಿಯ ಆಂತರಿಕ ಸೌಂದರ್ಯವನ್ನು ತೆರೆದು ತೋರಿಸಿರುವ ರೀತಿ ಮೆಚ್ಚುವಂಥದ್ದು.

ಹಿರಿಯ ವಿದ್ವಾಂಸರಾದ ಎಲ್.ಬಸವರಾಜು ಅವರು ಪಂಪನ ವಿಕ್ರಮಾರ್ಜುನ ವಿಜಯವನ್ನು ಸರಳ ಪಂಪಭಾರತ ಎಂಬ ಹೆಸರಿನಲ್ಲಿ, ಮುಖ್ಯವಾಗಿ ಸಾಮಾನ್ಯ ಓದುಗರನ್ನೂ ಪಂಡಿತ ವರ್ಗವನ್ನೂ ದೃಷ್ಟಿಯಲ್ಲಿ ಟ್ಟುಕೊಂಡು ವಿನೂತನವಾಗಿ ರೂಪಿಸಿದ್ದಾರೆ. ಈ ಆವೃತ್ತಿಯ ಅರಿಕೆಯಲ್ಲಿ ನಿರೂಪಣಕಾರರು ಪ್ರಸ್ತಾಪಿಸಿರುವಂತೆ ಚಂಪೂ ಶೈಲಿಯಲ್ಲಿ ಎಡೆಬಿಡದೆ ಸಂಧಿಸಮಾಸಗಳ ಉದ್ದುದ್ದವಾದ, ವಾಕ್ಯಗಳಿರುವುದು ಪ್ರತಿಷ್ಠೆಯ ಮಾತಾಗಿತ್ತು......... ಅವರ ಕಾವ್ಯವನ್ನು ಎಲ್ಲಿ ನಿಲ್ಲಿಸಬೇಕು, ಯಾವುದನ್ನು ಎಲ್ಲೆಲ್ಲಿಗೆ ಬಿಡಿಸಿ ಕೂಡಿಸಿ ಓದಬೇಕೆಂಬುದೂ ತಿಳಿಯದೆ ಯಾರಾಗಲಿ ತಬ್ಬಿಬ್ಬಾಗುವುದುಂಟು ಎಂಬೆಲ್ಲಾ ಆಲೋಚನೆಯಿಂದ ಮಾಡಿರುವ ಈ ಪರಿಷ್ಕರಣ ಕಾರ್ಯ ಒಂದು ವಿನೂತನ ಮಾದರಿಯದು. ಆದರೆ ಹೀಗೆ ಪದ ಪದಪುಂಜಗಳನ್ನು ಬೇರೆ ಬೇರೆ ಮಾಡಿದಷ್ಟರಿಂದ ಸಾಮಾನ್ಯ ಓದುಗರೂ ಇದನ್ನು ಓದಬಹುದು ಎಂದು ಭಾವಿಸುವುದು ಸೂಕ್ತವಾದರೂ ಕಾವ್ಯಾರ್ಥವನ್ನು ಗ್ರಹಿಸಲು ಸ್ವಲ್ಪಮಟ್ಟಿನ ಭಾಷಿಕ ಪರಿಶ್ರಮ, ಸಾಮರ್ಥ್ಯ ಬೇಕೆಂಬ ಅಂಶವನ್ನು ನಾವು ಮರೆಯುವಂತಿಲ್ಲ.

ಸಾಹಿತ್ಯ ಕೃತಿಗಳಲ್ಲಿ 1978ರಲ್ಲಿ ಪ್ರಕಟವಾಗಿರುವ ಜಿನಸೇನ ದೇಶವ್ರತಿಯ ವರ್ಧಮಾನಪುರಾಣ, ಪರ್ವತದೇವನ ನನ್ನಯ್ಯ ಚಾರಿತ್ರ, 1979ರಲ್ಲಿ ಹೊರಬಂದಿರುವ ಸೋಮನಾಥನ ರುಕ್ಮಾಂಗದ ಚರಿತೆ, 1980ರಲ್ಲಿ ಪ್ರಕಟವಾಗಿರುವ ದೊಡ್ಡಯ್ಯನ ಚಂದ್ರಪ್ರಭ ಚರಿತೆ, ಸಿದ್ಧಕವಿಯ ಸಿರುಮಣನಾಯಕನ ಸಾಂಗತ್ಯ, 1996ರಲ್ಲಿ ಪ್ರಕಾಶಿತವಾಗಿರುವ ದೇವರಸನ ಮದನಮೋಹಿನಿ ಚರಿತೆ ಮೊದಲಾದ ಅನೇಕ ಕೃತಿಗಳು ಕಂಡುಬರುತ್ತವೆ. ಇವುಗಳಲ್ಲಿ ಬಹುಮಟ್ಟಿನವು ಪ್ರಥಮ ಬಾರಿಗೆ ಪ್ರಕಟವಾಗಿ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಕಾರಣವಾಗಿವೆ. ಇವುಗಳಲ್ಲಿ ಜಿನಸೇನ ದೇಶವ್ರತಿಯ ವರ್ಧಮಾನ ಪುರಾಣ ಮತ್ತು ದೇವರಸನ ಮದನಮೋಹಿನಿ ಚರಿತೆಗಳು ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗುಳಿದಿದ್ದ ಕೃತಿಗಳಾಗಿವೆ.

ಸಾಹಿತ್ಯದ ಇತರ ಪ್ರಕಾರಗಳಲ್ಲಿಯೂ ಅನೇಕ ಕೃತಿಗಳು ಹೊರಬಂದಿರುವುದುಂಟು. ಟಿ.ಎನ್.ನಾಗರತ್ನ ಅವರು ಪರಿಷ್ಕರಿಸಿರುವ ವಾದಿರಾಜರ ಕೃತಿಗಳು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಹೊರಬಂದಿವೆ (1980). ಇದರಲ್ಲಿ 290 ಕೀರ್ತನೆಗಳು, 10 ಸುಳಾದಿಗಳು, 12 ಉಗಾಭೋಗಗಳಿವೆ. ಇವುಗಳಲ್ಲಿ ಕೆಲವು ಈಗಾಗಲೆ ಪ್ರಕಟವಾಗಿದ್ದರೂ ಅನೇಕ ಹಸ್ತಪ್ರತಿಗಳನ್ನು ಬಳಸಿಕೊಂಡು ಮಾಡಿರುವ ಕೆಲಸ ಶಾಸ್ತ್ರ ನಿಬದ್ಧತೆಯನ್ನು ಪಡೆದು ಅಧಿಕೃತತೆಯನ್ನು ಹೊಂದಿದೆ. ಇವರೇ ಪರಿಷ್ಕರಿಸಿರುವ ಜಗನ್ನಾಥದಾಸರ ಕೃತಿಗಳು 1987ರಲ್ಲಿ ಪ್ರಕಟವಾಗಿದೆ. ಸುಮಾರು 112 ಆಕರಗಳನ್ನು ಆಧರಿಸಿ ಮಾಡಿರುವ ಕೃತಿ ಕರ್ತೃಗಳ ಮೌಲಿಕ ವಿಚಾರವನ್ನೊಳಗೊಂಡ ಉತ್ತಮ ಸಂಪಾದಿತ ಕೃತಿಯಿದು.

ಇತ್ತೀಚೆಗೆ ಹೆಸರಿಸಬಹುದಾದ ವಚನ ಸಾಹಿತ್ಯ ಕೃತಿಗಳೆಂದರೆ ಮುಖ್ಯವಾಗಿ ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ವೀರಶೈವ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ಸ್ವರ ವಚನಗಳ ಆರು ಸಂಪುಟಗಳು (1982-86) ಮತ್ತು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಲ್ಲಿ ಹೊರಬಂದಿರುವ ಸ್ವರವಚನಗಳ ಹತ್ತು ಸಂಪುಟಗಳು (1995-98). ಹಾಗೆಯೆ ವೀರಶೈವ ಅಧ್ಯಯನ ಸಂಸ್ಥೆಯಿಂದ ಸಹೃದಯರ ಕೈಸೇರಿರುವ ವಚನ ಸಂಕಲನ ಸಂಪುಟ 1-5 ಗ್ರಂಥಗಳು ಪ್ರಮುಖವಾದುವಾಗಿವೆ (1990-92). ಈ ಎಲ್ಲ ಕೃತಿಗಳಲ್ಲಿ ಪೂರ್ವದಲ್ಲಿಯೇ ವಿವಿಧೆಡೆಗಳಲ್ಲಿ, ಬೇರೆ ಬೇರೆ ರೀತಿಯಲ್ಲಿ ಪ್ರಕಾಶಿತವಾಗಿದ್ದ ಕೃತಿಗಳು ಸೇರಿದ್ದರೂ ಎಲ್ಲವೂ ಒಟ್ಟಿಗೆ ನವೀನ ರೀತಿಯಲ್ಲಿ ಹೊರಬಂದಿರುವುದು ಉತ್ತೇಜನಕಾರಿಯಾಗಿದೆ. ಇವುಗಳ ಜತೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಜನಪ್ರಿಯ ಆವೃತ್ತಿಯ ಹೆಸರಿನಲ್ಲಿ ಸಮಗ್ರ ವಚನಗಳ 15 ಸಂಪುಟಗಳನ್ನು ಪ್ರಕಟಿಸಿದೆ (1993). ದಾಸಸಾಹಿತ್ಯದ 50 ಸಂಪುಟಗಳನ್ನು 2003ರಲ್ಲಿ ಹೊರತಂದಿದೆ. ಶಾಸ್ತ್ರ ಪ್ರಕಾರ ಗ್ರಂಥಗಳಲ್ಲಿಯೂ ಕೆಲವು ಉತ್ತಮ ಕೃತಿಗಳು ಹೊರಬಂದಿರುವುದುಂಟು. ಅವುಗಳಲ್ಲಿ ಬಿ.ಎಸ್.ಸಣ್ಣಯ್ಯ ಅವರಿಂದ ಪರಿಷ್ಕರಣವಾಗಿ 1984ರಲ್ಲಿ ಹೊರಬಂದಿರುವ ಸಕಲವೈದ್ಯ ಸಂಹಿತಾಸಾರಾರ್ಣವ ಸಂ.2 ಮತ್ತು ಇವರಿಂದಲೇ ಪರಿಷ್ಕರಣಗೊಂಡು 1993ರಲ್ಲಿ ಪ್ರಕಾಶಿತವಾಗಿರುವ ಬೊಮ್ಮಯ್ಯನ ವೈದ್ಯಕಂದ ಮೊದಲಾದುವನ್ನು ಇಲ್ಲಿ ಗಣಿಸಬಹುದಾಗಿದೆ. ಇವೆರಡೂ ಮೊದಲ ಬಾರಿಗೆ ಬೆಳಕು ಕಂಡರೆ ಛಂದೋಂಬುಧಿ, ಶಬ್ದಮಣಿದರ್ಪಣಂ ಮೊದಲಾದ ಇತರ ಗ್ರಂಥಗಳು ಮರುಪರಿಷ್ಕರಣವಾದ ವಿವಿಧ ಆವೃತ್ತಿಗಳಾಗಿವೆ.

ಈ ಎಲ್ಲಾ ಪರಿಷ್ಕೃತ ಕೃತಿಗಳನ್ನು ಪರಿವೀಕ್ಷಿಸಿದಾಗ ಕಂಡುಬರುವ ಅಂಶವೆಂದರೆ ಕೆಲವು ಕೃತಿಗಳು ಸಂಪಾದನಾಶಾಸ್ತ್ರಕ್ಕನುಗುಣವಾಗಿ ಸಂಪಾದಿತವಾಗಿದ್ದರೆ ಮತ್ತೆ ಕೆಲವು ಕೃತಿಗಳಲ್ಲಿ ಅನೇಕ ಲೋಪದೋಷಗಳು ನುಸುಳಿವೆ. ಮರುಪರಿಷ್ಕರಣವಾದ ಕೃತಿಗಳಲ್ಲಿ ಕೆಲವೊಮ್ಮೆ ಪೂರ್ವದ ಆವೃತ್ತಿಗಳಿಗಿಂತ ಗುಣಮಟ್ಟದಲ್ಲಿ ಹಿಂಜರಿತ ಉಂಟಾಗಿದೆ. ಅಲ್ಲದೆ ಅಪ್ರಕಟಿತ ಗ್ರಂಥಗಳು ಓಲೆಕಟ್ಟುಗಳಲ್ಲಿಯೇ ನಶಿಸಿ ಹೋಗುತ್ತಿದ್ದರೂ ಅವುಗಳನ್ನು ಗಮನಿಸದೆ ಪ್ರಕಟವಾಗಿರುವ ಕೃತಿಗಳನ್ನೆ ಸಂಪಾದನೆಗೆ ಆಯ್ದುಕೊಳ್ಳುವ ಪ್ರವೃತ್ತಿ ಹೆಚ್ಚಾಗಿದೆ. ಇಂತಹ ಮನೋವಾಂಛಲ್ಯದಿಂದ ಮುಕ್ತವಾದರೆ ಮಾತ್ರ ಹಲವಾರು ಅಪ್ರಕಟಿತ ಕೃತಿಗಳು ಪ್ರಕಟವಾಗಿ ಕನ್ನಡ ಸಾಹಿತ್ಯ ಶ್ರೀಮಂತವಾಗುವುದಲ್ಲದೆ ಪೂರ್ವದ ಕೃತಿಕಾರರ ಆಶಯವೂ ಈಡೇರಿದಂತಾಗುತ್ತದೆ. ಇಂತಹ ಕಾರ್ಯಸಾಧನೆಗೆ ಕನ್ನಡದಲ್ಲಿ ವಿಪುಲ ಅವಕಾಶಗಳಿವೆ. (ಬಿ.ಎಸ್.ಎಸ್.)

**ಕನ್ನಡದಲ್ಲಿ ಜೀವನ ಚರಿತ್ರೆಗಳು** : ಕನ್ನಡದಲ್ಲಿ ಜೀವನ ಚರಿತ್ರೆಯ ಇತಿಹಾಸ ಅಷ್ಟೊಂದು ಪ್ರಾಚೀನವೇನಲ್ಲ ಆದರೂ ಕರ್ನಾಟಕದಾದ್ಯಂತ ವಿಪುಲವಾಗಿ ಹರಡಿರುವ ಮಾಸ್ತಿಕಲ್ಲು. ವೀರಗಲ್ಲುಗಳಲ್ಲಿ, ಇನ್ನಿತರ ಶಿಲಾಶಾಸನಗಳಲ್ಲಿ ವ್ಯಕ್ತಿಗಳ ಜೀವನಕಥೆ ಮಿಂಚಿ ಮರೆಯಾಗುತ್ತದೆ. ಕನ್ನಡ ಕಾವ್ಯಗಳಲ್ಲಿಯೂ ಕವಿಗಳು ಸ್ವವಿಷಯವಾಗಿಯೂ ಪರವಿಷಯವಾಗಿಯೂ ಹೇಳಿರುವ ಮಾತುಗಳಲ್ಲಿ ಅವರ ಜೀವನಕ್ಕೆ ಸಂಬಂಧಿಸಿದ ಹಲವಾರು ವಿಷಯಗಳು ವ್ಯಕ್ತವಾಗಿವೆ. ಹರಿಹರ, ರಾಘವಾಂಕಾದಿಗಳೂ ಮೈಸೂರು ಒಡೆಯರ ಆಸ್ಥಾನ ಕವಿಗಳೂ ತಮ್ಮ ತಮ್ಮ ಆದರ್ಶ ವ್ಯಕ್ತಿಗಳನ್ನು ಕುರಿತು, ಪೋಷಕರ ಶೀಲ ಚಾರಿತ್ರ್ಯಾದಿಗಳನ್ನು ಕುರಿತು ಬಣ್ಣಿಸಿದ್ದಾರೆ. ಜನಪದ ಗೀತೆಗಳಲ್ಲಿಯೂ ಐತಿಹಾಸಿಕ, ಧಾರ್ಮಿಕ ವೀರವರೇಣ್ಯರ ಜೀವನ ಚಿತ್ರಿತವಾಗಿದೆ. ಸ್ಮರಣ ಚಿತ್ರಗಳು, ಪತ್ರಗಳು, ದಿನಚರಿಗಳು ಕೂಡ ಜೀವನ ಚರಿತ್ರೆಗೆ ಸಾಧನ ಸಲಕರಣೆಗಳಾಗಿವೆ. ಆದರೆ ಜೀವನ ಚರಿತ್ರೆ ಕನ್ನಡದಲ್ಲಿ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದದ್ದು ಇತ್ತೀಚೆಗೆ ಅದೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎನ್ನಬಹುದು.

ಸ್ವಾತಂತ್ರ್ಯಪೂರ್ವದ ಸುಮಾರು ಐದು ದಶಕಗಳ ಅವಧಿಯಲ್ಲಿ ಕನ್ನಡದಲ್ಲಿ ಐನೂರಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ. ಸ್ವಾತಂತ್ರ್ಯೋತ್ತರದಲ್ಲಿ ಇದೀಗ 1000ಕ್ಕೂ ಹೆಚ್ಚು ಜೀವನ ಚರಿತ್ರೆಗಳು ರಚಿತವಾಗಿವೆ. ಕನ್ನಡದಲ್ಲಿ ಮೊದಲು ರಚಿತವಾದ ಜೀವನ ಚರಿತ್ರೆಗಳು ಮಹಾಪುರುಷರ ಜೀವಿತದ ಸಾಧನೆ ಸಿದ್ಧಿಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ, ಆ ಮೂಲಕ ದೇಶಾಭಿಮಾನವನ್ನೂ ಉನ್ನತ ಧ್ಯೇಯ ಧೋರಣೆಗಳನ್ನೂ ಜನತೆಯ ಮನಸ್ಸಿನಲ್ಲಿ ಬಿತ್ತುವ ಉದ್ದೇಶದಿಂದ ಕೂಡಿವೆ. ಹಾಗಾಗಿ ಧಾರ್ಮಿಕ ಪುರುಷರ, ಮಠಾಚಾರ್ಯರ, ಸಾಧುಸಂತರ, ಸಮಾಜ ಸುಧಾರಕರ, ಚರಿತ್ರೆಯ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳು ಪ್ರಕಟಗೊಂಡವು. ಇವುಗಳಲ್ಲಿ ಯೇಸುಕ್ರಿಸ್ತ (ಕಿಟ್ಟೆಲ್), ಬಸವ ಚರಿತ್ರೆ, ಭಗವಾನ್ ಬುದ್ಧನ ಚರಿತ್ರೆ, ಸ್ವಾಮಿ ರಾಮತೀರ್ಥ (ಹರ್ಡೇಕರ ಮಂಜಪ್ಪ), ಶಂಕರಾಚಾರ್ಯರ ಚರಿತ್ರೆ, (ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ), ಮಧ್ವಾಚಾರ್ಯರ ಚರಿತ್ರೆ (ನಾ.ಶ್ರೀ.ರಾಜಪುರೋಹಿತ), ಅಲ್ಲಮಪ್ರಭು (ಸಿದ್ದಯ್ಯ ಪುರಾಣಿಕ), ಮಹಮದ್ ಪೈಗಂಬರ್ (ಎಂ.ಪಿ.ಪೂಜಾರ), ರಜಿಯಾ ಬೇಗಂ (ಹುರುಳಿ ಭೀಮರಾಯ) ಅಬ್ರಹಾಂ ಲಿಂಕನ್ (ಬಿ.ಚಂದ್ರಶೇಖರಯ್ಯ, ಸಿ.ಕೆ.ವೆಂಕಟರಾಮಯ್ಯ, ಹೊಸ್ನಾಪುರ ಮಠ), ಅಕ್ಬರ್, ಛತ್ರಪತಿ ಶಿವಾಜಿ, ಟಿಪ್ಪೂಸುಲ್ತಾನ, ನಾನಾ ಫಡ್ನವೀಸ, ರಣಜಿತ್ ಸಿಂಹ (ರಾ.ಹ.ದೇಶಪಾಂಡೆ), ನೆಪೋಲಿಯನ್ ಬೋನಪಾರ್ಟೆ (ಆನವಟ್ಟಿ ರಾಮರಾಯ) ಮೊದಲಾದವು ಗಮನಾರ್ಹವಾಗಿವೆ.

ಅನಂತರದ ಬೆಳೆವಣಿಗೆಯ ಘಟ್ಟದಲ್ಲಿ ಜೀವನಚರಿತ್ರೆಗಳ ವಿಷಯವೈವಿಧ್ಯ ವಿಸ್ತಾರವಾಯಿತು. ರಾಜಕಾರಣಿಗಳು, ದೇಶಭಕ್ತರು, ನಟರು, ವಿಜ್ಞಾನಿಗಳು, ಕವಿಗಳು- ಇವರನ್ನು ಕುರಿತಂತೆ ಜೀವನ ಚರಿತ್ರೆಗಳು ರಚನೆಗೊಂಡವು. ಸಾಹಿತ್ಯದ ವಿವಿಧ ರಂಗಗಳಲ್ಲಿ ಕೆಲಸ ಮಾಡಿದ ಮಹನೀಯರುಗಳು ಈ ಪ್ರಕಾರದಲ್ಲಿ ಬರೆಯತೊಡಗಿದ್ದರಿಂದ ಜೀವನಚರಿತ್ರೆ ಲಕ್ಷಣಬದ್ಧವಾದ ಒಂದು ಸಾಹಿತ್ಯ ಪ್ರಕಾರವಾಗಿ ಪರಿಣಮಿಸಿತು. ಇದರಿಂದಾಗಿ, ಚ.ವಾಸುದೇವಯ್ಯ, ಎಂ.ಎಸ್.ಪುಟ್ಟಣ್ಣ, ಆಲೂರ ವೆಂಕಟರಾಯ, ಡಿ.ವಿ.ಜಿ., ಮಾಸ್ತಿ, ಸಿ.ಕೆ.ವೆಕಂಟರಾಮಯ್ಯ, ಜಿ.ಪಿ.ರಾಜರತ್ನಂ, ಎ.ಆರ್.ಕೃಷ್ಣಶಾಸ್ತ್ರೀ, ಸುಬೋಧ ರಾಮರಾಯ, ದ.ಕೃ.ಭಾರದ್ವಾಜ, ಟಿ.ಎಸ್.ವೆಂಕಣ್ಣಯ್ಯ, ಕುವೆಂಪು ಮೊದಲಾದ ಸಮರ್ಥ ಲೇಖಕರು ಹುಟ್ಟಿಕೊಂಡರು.

ಬೌದ್ಧ, ಜೈನ, ವೈದಿಕ, ವೀರಶೈವ ಮೊದಲಾದ ಧರ್ಮಗಳಿಗೆ ಸಂಬಂಧಿಸಿದ ಧಾರ್ಮಿಕ ಆಚಾರ್ಯರನ್ನು ಕುರಿತ ಕೃತಿಗಳು ರಚಿತವಾದವು. ಬುದ್ಧನನ್ನು ಕುರಿತಂತೆ ಜಿ.ಪಿ.ರಾಜರತ್ನಂ ಅವರ ಗೌತಮ ಬುದ್ಧ ಒಂದು ಉತ್ತಮ ಜೀವನಚರಿತ್ರೆ. ಮಹಾವೀರನ ಜೀವನ ಚರಿತ್ರೆಯನ್ನು ಮಿರ್ಜಿ ಅಣ್ಣಾರಾಯರು ಸಮರ್ಪಕವಾಗಿ ನೀಡಿದ್ದಾರೆ. ಶೈವಧರ್ಮಕ್ಕೆ ಸಂಬಂಧಿಸಿದ 63 ಪುರಾತನರ ಜೀವನವನ್ನು ವಸ್ತುವಾಗುಳ್ಳ ಸಿದ್ಧಯ್ಯ ಪುರಾಣಿಕರ ಶರಣಚರಿತಾಮೃತ, ಆಳ್ವಾರರ ಬಗೆಗೆ ಯಾಮುನಾಚಾರ್ಯರು ಬರೆದಿರುವ ಆಳ್ವಾರರು- ಇವು ಉಲ್ಲೇಖನೀಯ. ಆದರೆ ಇವು ಶುದ್ಧ ಜೀವನಚರಿತ್ರೆಗಳಲ್ಲ. ಇದಕ್ಕೆ ಕಾರಣ ಇಂಥ ಜೀವನ ಚರಿತ್ರೆಗಳನ್ನು ಬರೆಯುವುದಕ್ಕೆ ದೊರಕುವ ಸಾಮಗ್ರಿಯ ಅಭಾವ, ರಾಮಾನುಜರನ್ನು ಕುರಿತು ಬರೆದ ಎಚ್ಚೆಸ್ಕೆ ಅವರ ಶ್ರೀ ರಾಮಾನುಜ ಧಾರ್ಮಿಕ ಪುರುಷರನ್ನು ಕುರಿತು ಬರೆದ ಜೀವನ ಚರಿತ್ರೆಗಳಲ್ಲಿ ಗಮನಾರ್ಹವಾದದ್ದು. ಬಸವಣ್ಣನವರ ಜೀವನಚರಿತ್ರೆಯನ್ನು ಕುರಿತಂತೆ ಸಾಕಷ್ಟು ಗ್ರಂಥಗಳು ರಚಿತವಾಗಿವೆ. ಮೈಸೂರು ಸರ್ಕಾರ ಬಸವೇಶ್ವರರ ಎಂಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ ಶ್ರೀ ಬಸವೇಶ್ವರರು- ಪ್ರಾಮಾಣಿಕವೂ ಪ್ರಾತಿನಿಧಿಕವೂ ಆದ ಗ್ರಂಥ. ಇದರಲ್ಲಿ ಕನ್ನಡದ ಹಲವಾರು ಶ್ರೇಷ್ಠ ವಿದ್ವಾಂಸರು ತಮ್ಮ ಲೇಖನಗಳಲ್ಲಿ ಬಸವಣ್ಣನವರ ಜೀವನ, ವ್ಯಕ್ತಿತ್ವ, ಸಾಧನೆ, ಸಿದ್ಧಿ- ಇವುಗಳ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಬಸವಣ್ಣನವರ ಬದುಕಿನ ವಿವಿಧ ಮುಖಗಳ ಪರಿಚಯ ಈ ಗ್ರಂಥದಿಂದ ತಿಳಿದುಬರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನ ಸಿದ್ಧಿ- ಆರು ಉಪನ್ಯಾಸಗಳನ್ನೊಳಗೊಂಡ ಒಂದು ಉತ್ತಮ ಗ್ರಂಥ'. ಈ ರೀತಿಯ ಹಲವಾರು ಗ್ರಂಥ'ಗಳು ಕನ್ನಡ ಕವಿಗಳನ್ನು ಕುರಿತಂತೆ ಪ್ರಕಟಗೊಂಡಿವೆ. ಎಂ.ಚಿದಾನಂದಮೂರ್ತಿಯವರ 'ಬಸವಣ್ಣನವರು' ವಸ್ತುನಿಷ್ಠ ಹಾಗೂ ಸಂಶೋಧನ ದೃಷ್ಟಿಯನ್ನೊಳಗೊಂಡ, ವಚನ, ಶಾಸನ ಹಾಗೂ ಕಾವ್ಯಾಧಾರಗಳ ಮೇಲೆ ಬರೆದ ಗ್ರಂಥ'. 'ರಾಮಕೃಷ್ಣಾಲೀಲಾ ಪ್ರಸಂಗ', ಬಂಗಾಲಿಯಿಂದ ಸ್ವಾಮಿ ಪ್ರಣವೇಶಾನಂದರಿಂದ ಕನ್ನಡಕ್ಕೆ ಅನುವಾದಗೊಂಡ ರಾಮಕೃಷ್ಣಪರಮಹಂಸರನ್ನು ಕುರಿತ ಗ್ರಂಥ. 'ರಾಮಕೃಷ್ಣ ಶಿಷ್ಯಕೋಟಿ', ರಾಮಕೃಷ್ಣರ ಮೂವತ್ತು ಜನ ಶಿಷ್ಯರನ್ನೂ ಅವರ ಜೀವನ ಚರಿತ್ರೆಯನ್ನೂ ಸಂಕ್ಷೇಪವಾಗಿ ನಿರೂಪಿಸುವ ಒಂದು ಗಮನಾರ್ಹ ಕೃತಿ. ಸ್ವಾಮಿ ಸೋಮನಾಥಾನಂದರು ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಶಾರದಾದೇವಿ ಎಂಬ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಜಿ.ವೆಂಕಟಯ್ಯನವರ 'ಬುದ್ಧದೇವ' ತನ್ನ ಸರಳ ಶೈಲಿಯಿಂದ ಗಮನ ಸೆಳೆಯುತ್ತದೆ. ಬುದ್ಧನನ್ನು ಕುರಿತಂತೆ ಮರಾಠಿಯಲ್ಲಿ ರಚಿತವಾಗಿರುವ ಭಗವಾನ್ ಬುದ್ಧ ಶ್ರೀರಂಗರಿಂದ ಕನ್ನಡಕ್ಕೆ ಅನುವಾದಗೊಂಡಿದೆ. ಉ.ಕಾ. ಸುಬ್ಬರಾಯಚಾರ್ಯರ ಯೇಸುಕ್ರಿಸ್ತ ಎಂಬ ಜೀವನ ಚರಿತೆ ಹೆಸರಿಸಬೇಕಾದ ಮಹತ್ತ್ವ ಪಡೆದಿದೆ. ಕುವೆಂಪು ಅವರ ಶ್ರೀ ರಾಮಕೃಷ್ಣಪರಮಹಂಸ ಮತ್ತು ಸ್ವಾಮಿ ವಿವೇಕಾನಂದ ಎಂಬ ಜೀವನಚರಿತ್ರೆಗಳು ಕನ್ನಡ ಜೀವನ ಚರಿತ್ರೆಗಳ ಸಾಲಿನಲ್ಲಿ ವಿಶಿಷ್ಟವಾಗಿ ನಿಲ್ಲುವ ಮಹತ್ತ್ವ ಪಡೆದುಕೊಂಡಿವೆ. ವಿಷಯನಿರೂಪಣೆ, ಭಾಷೆ, ವರ್ಣನೆ ಈ ದೃಷ್ಟಿಗಳಿಂದ ಈ ಜೀವನ ಚರಿತ್ರೆಗಳು ಕಾದಂಬರಿಯ, ಕಾವ್ಯತ್ವದ ಓಜಸ್ಸನ್ನು ಪಡೆಯುತ್ತವೆ. ಕುವೆಂಪು ಅವರ ಶೈಲಿ ಈ ರಂಗದಲ್ಲೂ ಪ್ರತ್ಯೇಕವಾಗಿ ಗುರುತಿಸುವಷ್ಟರಮಟ್ಟಿಗೆ ಸ್ವಂತಿಕೆಯಿಂದ ಕೂಡಿದೆ. ಕೋ.ಚೆನ್ನಬಸಪ್ಪನವರ ಸ್ವಾತಂತ್ರ್ಯಯೋಧ ಶ್ರೀಅರವಿಂದ ಅರವಿಂದರ ಜೀವನವನ್ನು ಪರಿಚಯ ಮಾಡಿಕೊಡುತ್ತದೆ.

ಸಾಹಿತಿಗಳ, ಕಲಾವಿದರ ಜೀವನ ಚರಿತ್ರೆಗಳು ಕನ್ನಡದಲ್ಲಿ ವಿಪುಲ ಸಂಖ್ಯೆಯಲ್ಲಿವೆ. ಪ್ರಾಚೀನ ಕನ್ನಡ ಕವಿಗಳನ್ನು ಕುರಿತಂತೆ ಪಂಪ, ರನ್ನ, ಮುದ್ದಣ, ಕುಮಾರವ್ಯಾಸ ಮೊದಲಾದ ಪ್ರಶಸ್ತಿ ಗ್ರಂಥಗಳಲ್ಲಿ ಆಯಾ ಕವಿಗಳ ಜೀವನ ಪರಿಚಯ ಸಾಕಷ್ಟು ದೊರೆಯುತ್ತದೆ. ಪಂಪನನ್ನು ಕುರಿತಂತೆ ಪ್ರಕಟವಾಗಿರುವ ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ' ಸಂಶೋಧನೆ, ಚರಿತ್ರೆ, ಸಾಹಿತ್ಯ- ಈ ಮೂರು ಅಂಶಗಳನ್ನೊಳಗೊಂಡ ಜೀವನ ಚರಿತ್ರೆಯಾಗಿ ರೂಪುಗೊಂಡಿದೆ. ಇವರೇ ರಚಿಸಿದ ಪಾರ್ತಿಸುಬ್ಬ ಸಹ ಒಂದು ಗಮನಾರ್ಹ ಕೃತಿ. ದೇಜಗೌ ಅವರ ರಾಷ್ಟ್ರಕವಿ ಕುವೆಂಪು ಮತ್ತು ತೀನಂಶ್ರೀ, ಅನಕೃ ಅವರ ಕೈಲಾಸಂ, ತರಾಸು ಅವರ ಅನಕೃ, ವಿ.ಸೀ.ಅವರ ಶಿವರಾಮಕಾರಂತ, ಎನ್.ಅನಂತರಂಗಾಚಾರ್ಯರ ಪ್ರಾಕ್ತನ ವಿಮರ್ಶಾ ವಿಚಕ್ಷಣ, ರಾವ್‌ಬಹದ್ದೂರ ಆರ್.ನರಸಿಂಹಾಚಾರ್ಯ ಜೀವನ ಮತ್ತು ಕಾರ್ಯ, ಶಿವರಾಮಕಾರಂತರ ಕಲಾವಿದ ಕೃಷ್ಣಹೆಬ್ಬಾರರು, ತಿರುಮಲೆ ರಾಜಮ್ಮನವರ ವೀಣೆ ಶೇಷಣ್ಣ, ಕು.ಶಿ.ಹರಿದಾಸಭಟ್ಟ ಅವರ ಕೆ.ಕೆ.ಹೆಬ್ಬಾರರ ಕಲೆ ಮತ್ತು ಬದುಕು, ಎಚ್.ತಿಪ್ಪೇರುದ್ರಸ್ವಾಮಿಯವರ ಬಸವೇಶ್ವರ, ಗಾಂಧೀಜಿ, ಚೆನ್ನವೀರ ಕಣವಿಯವರ ಮಧುರಚೆನ್ನ, ವಿಜಯನಾರಸಿಂಹ ಅವರ ಪುಟ್ಟಣ್ಣ ಕಣಗಾಲ್, ಎಲ್.ಎಸ್.ಶೇಷಗಿರಿರಾವ್ ಅವರ ಟಿ.ಪಿ.ಕೈಲಾಸಂ, ವಿ.ಎಂ.ಇನಾಂದಾರರ, ಬಿ.ಎಂ.ಶ್ರೀ., ಶಾ.ಮಂ.ಕೃಷ್ಣರಾಯರ ಪಾಪು, ಬಸವರಾಜ ಮನ್ಸೂರ, ಕವಿ ತಿಪ್ಪಯ್ಯ, ಮಾಸ್ತರ್, ಅ.ನ.ಕೃಷ್ಣರಾಯ, ಬಳ್ಳಾರಿ ಬೀಚಿ ಪ್ರತಿಭಾಶಿಖರಗಳು, ಕೀರ್ತಿಕಳಶಗಳು, ಹಾ.ಮಾ.ನಾಯಕರ ಸ್ತವನ, ಆರ್.ವಿ.ಎಸ್. ಸುಂದರಂರವರ ರಾಮಕೋಟೀಶ್ವರರಾವ್, ಪಟ್ಟಾಭಿ ಸೀತಾರಾಮಯ್ಯ, ಪಾಲ್ಕುರಿಕೆ ಸೋಮನಾಥ, ವೇಮನ, ಅಕ್ಕಮಹಾದೇವಿಯವರ ದಾಸವರೇಣ್ಯ, ಅನ್ನಮಾಚಾರ್ಯರು, ಬಿ.ಶಾಮಸುಂದರ ಅವರ ಫ.ಗು, ಹಳ್ಳಕಟ್ಟಿ, ಮಾಚಿದೇವ, ಡಾ.ಹಾನಿಮನ್ ಮೊದಲಾದ ಗ್ರಂಥಗಳು ಗಮನಾರ್ಹವಾಗಿವೆ. ರಾಜಕುಮಾರ್ ಹಾಗೂ ಕಾಡುಗಳ್ಳ ವೀರಪ್ಪನ್ ಕುರಿತ ಅನೇಕ ಜೀವನ ಚರಿತ್ರೆಗಳು ಪ್ರಕಟವಾಗಿವೆ.

ಪ್ರಪಂಚದ ವಿಜ್ಞಾನಿಗಳ ಜೀವನ ಚರಿತ್ರೆಯಲ್ಲಿ ಕೆಲವು ಕೃತಿಗಳು ಕನ್ನಡಕ್ಕೆ ಅನುವಾದವಾಗಿಯೂ ಬಂದಿವೆ. ಐಸಾಕ್ ನ್ಯೂಟನ್, ಥಾಮಸ್ ಆಲ್ವ ಎಡಿಸನ್, ಯಂತ್ರಯೋಗಿ ಕಿರ್ಲೋಸ್ಕರ್ ಲಕ್ಷ್ಮಣರಾಯ, ಮಹಾವಿಜ್ಞಾನಿಗಳು, ಭಾರತೀಯ ವಿಜ್ಞಾನಿಗಳು, ಮೇರಿ ಕ್ಯೂರಿ, ಮೇಡಂ ಕ್ಯೂರಿ, ಚಾರ್ಲ್ಸ್ ಡಾರ್ವಿನ್, ಅಲೆಗ್ಸಾಂಡರ್ ಫ್ಲೆಮಿಂಗ್, ಲೂಯಿ ಪ್ಯಾಶ್ಚರ್, ಆಲ್ಬರ್ಟ್ ಐನ್‌ಸ್ಟಿನ್, ಹೆನ್ರಿ ಫೋರ್ಡ್, ದೇಶ ವಿದೇಶದ ಪ್ರಭೃತಿಗಳಾದ ಮ್ಯಾಕ್ಸಿಂ ಗಾರ್ಕಿ, ಸಾಕ್ರಟೀಸ್, ಸ್ಟ್ಯಾಲಿನ್, ಲೆನಿನ್, ನಿಕ್ಸನ್, ಕಾರ್ಲ್ ಮಾರ್ಕ್ಸ್, ಕೆಮಾಲ್ ಪಾಷಾ, ಜಾನ್ ಸ್ಟುವರ್ಟ್ ಮಿಲ್, ಫ್ರಾಂಕ್ಲಿನ್, ಮಾರ್ಟಿನ್ ಲೂಥರ್ ಕಿಂಗ್, ಸ್ಯಾಮ್ಯುಯಲ್ ಜಾನ್‌ಸನ್, ಅಬ್ರಹಾಂ ಲಿಂಕನ್, ಕೆನಡಿ ಮೊದಲಾದವರ ಜೀವನ ಚರಿತ್ರೆಗಳು ಸ್ವಂತ ಕೃತಿಗಳಾಗೋ ಅನುವಾದ ಕೃತಿಗಳಾಗೋ ಕನ್ನಡಿಗರಿಗೆ ದೊರಕಿವೆ.
(ಎಸ್.ವಿ.ಪಿ.ಬಿ.)

ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಹಲವು ರಾಷ್ಟ್ರೀಯ ನಾಯಕರ ಮತ್ತು ಭಾರತೀಯ ಲೇಖಕರನ್ನು ಕುರಿತಂತೆ ಜೀವನ ಚರಿತ್ರೆಗಳನ್ನು ಪ್ರಕಟಿಸಿವೆ. ಈ ಮಾಲೆಗಳಲ್ಲಿ ರಾಜಾರಾಮಮೋಹನರಾಯ್, ಕಬೀರ, ಚಂಡಿದಾಸ್, ಜಯದೇವ ಮೊದಲಾದ ಸಮಾಜ ಸುಧಾರಕರು, ಸಂತರು, ಕವಿಗಳನ್ನು ಕುರಿತಂತೆ ಜೀವನ ಚರಿತ್ರೆಗಳು ಪ್ರಕಟವಾಗಿವೆ. ಶ್ರೀನಿವಾಸರಾಘುವನ್‌ರ್ ನಮ್ಮಾಳ್ವಾರ್ (ಪುತಿನ) ಕಂಬನ್ (ಎಸ್.ಮಹಾಜನ್) ದೇವೇಂದ್ರನಾಥ್ ಠಾಕೂರ್ (ನಾ.ಚೌಧರಿ) ಅನುವಾದಗೊಂಡಿವೆ. ಸ್ನೇಹಲತಾ ರೆಡ್ಡಿಯವರ ಜೈಲಿನ ದಿನಚರಿ (ಯು.ಆರ್.ಅನಂತಮೂರ್ತಿ), ಅನುವಾದಗೊಂಡಿದೆ. ಬೆಂಗಳೂರಿನ ಶ್ರೀ ರಮಣ ಸೆಂಟರ್ ಫಾರ್ ಲರ್ನಿಂಗ್ ಸಂಸ್ಥೆಯು ಫಾಲ್ ಬ್ರೆಂಟನ್‌ರ ರಮಣ ಮಹರ್ಷಿ ಅವರ ಸಂದೇಶಗಳನ್ನು ಅನುವಾದಿಸಿ (ಎ.ಎಸ್.ವೇಣುಗೋಪಾಲರಾವ್) ಪ್ರಕಟಿಸಿದೆ. ಬಿ.ವಿ.ನರಸಿಂಹ ಸ್ವಾಮಿಯವರು ರಚಿಸಿದ ಸೆಲ್ಫ್ ರಿಯಲೈಸೇಷನ್ ಎಂಬುದು ರಮಣ ಮಹರ್ಷಿಗಳ ಜೀವನ ಚರಿತ್ರೆ. ಇದನ್ನು ಕೆ.ಎ.ನಾರಾಯಣ್ ಅನುವಾದಿಸಿದ್ದಾರೆ. ನಾ.ಕಸ್ತೂರಿಯವರ ಸತ್ಯಂ ಶಿವಂ ಸುಂದರಂ ಎಂಬುದು ಸತ್ಯಸಾಯಿಬಾಬಾರವರ ಜೀವನ ಚರಿತ್ರೆ. ಕೆ.ಎಸ್.ನಾರಾಯಣ ಸ್ವಾಮಿಯವರು

ಅಬ್ರಹಾಂ ಲಿಂಕನ್, ಲೆನಿನ್ ಮತ್ತು ಗಾಂಧೀಜಿಯವರ ಜೀವನ ಚರಿತ್ರೆ ರಚಿಸಿದ್ದಾರೆ. ಕ.ರಾ.ಸಾರಂಗರ ರಾಜೇಂದ್ರಪ್ರಸಾದ್, ಮತ್ತೂರು ಕೃಷ್ಣಮೂರ್ತಿಯವರ ಡಾ.ಜಾಕೀರ್ ಹುಸೇನ್, ಡಿ.ವಿ.ಜಿ.ಯವರ ಮೈಸೂರಿನ ದಿವಾನರುಗಳು ಜ್ಞಾಪಕ ಚಿತ್ರಶಾಲೆ ಸಂಪುಟಗಳು, ಬಿ.ಆರ್.ಪ್ರಾಣೇಶರಾಯರ, ಲಾಲ್ ಬಹದ್ದೂರ್ ಶಾಸ್ತ್ರೀ, ರಾಜಾರಾವು ಮೋಹನರಾಯ, ಕೆ.ಎಸ್.ಪಾಟೀಲರ ಸಮಾಜವಾದಿ ಇಂದಿರಾಗಾಂಧೀ, ನೇತಾಜಿ ಸುಭಾಷ್‌ಚಂದ್ರ ಬೋಸ್, ಜಿ.ಎಸ್.ಭಟ್ಟರ ರಾಜಾರಾಮ್ ಮೋಹನ ರಾಯ್, ಸಾಹಿತ್ಯ ಕಲಾ ಸಂಪನ್ನರು, ಲೋಕಮಾನ್ಯ, ರಾಷ್ಟ್ರಶಿಲ್ಪಿ (ಸರ್ದಾರ ಪಟೇಲ್) ಲಾಲಾ ಲಜಪತರಾಯ್, ಟಿ.ಆರ್.ಅನಂತರಾಮು ಅವರ ಶಕ್ತಿ ಸಾರಥಿ ರಾಷ್ಟ್ರಪತಿ (ಅಬ್ದುಲ್ ಕಲಾಂ), ಎಂ.ಎಸ್.ಜಾಂದ್ ಕವಟಿರವರ ಸೇವೆ ತ್ಯಾಗ (ಡಿ.ವಿ.ನಂಜುಂಡಪ್ಪನವರ ಜೀವನ ಚರಿತ್ರೆ), ಹೊ.ಶ್ರೀನಿವಾಸಯ್ಯನವರ ಎನ್.ಎಸ್.ಹರ್ಡೀಕರ, ದೇಜಗೌ ಅವರ ಅಮೇರಿಕಾ ಗಾಂಧಿ, ಲೋಕದ ಬೆಳಕು, ಲೋಕನಾಯಕ ವಿಚಾರವಾದಿ ಪೆರಿಯಾರ್, ನಿತ್ಯ ಸಚಿವ, ಕರ್ನಾಟಕದ ರೂವಾರಿ, ತೀ.ತಾ.ಶರ್ಮರ ಮೋಕ್ಷಗುಂಡಂ, ವಿ.ಎಂ.ಇನಾಂದಾರ್‌ರ ಡಾ.ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ, ರಂಜಾನ್ ದರ್ಗಾರ ನೆಲ್ಸನ್ ಮಂಡೇಲಾ, ಪಾಟೀಲ್ ಪುಟ್ಟಪ್ಪನವರ ಭಾರತದ ಬೆಳಕು, ನೆಲದ ನಕ್ಷತ್ರಗಳು, ಜೀವನ ಪ್ರಕಾಶ, ಡಿ.ಎಸ್.ಜಯಪ್ಪಗೌಡರ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಮೊದಲಾದವು ಕನ್ನಡ ನಾಡಿನ ಭಾರತೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತಿವೆತ್ತ ರಾಜಕಾರಣಿಗಳ ಜೀವನ ಚರಿತ್ರೆಯನ್ನು ನಿರೂಪಿಸುತ್ತವೆ. ಎಚ್ಚೆಸ್ಕೆಯವರ ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ವ್ಯಕ್ತಿ ಚಿತ್ರಗಳ ಮೂರು ಬೃಹತ್ ಸಂಪುಟಗಳಾದ ಬೆಳಕು ಚೆಲ್ಲಿದ ಬದುಕು, ಮಾನ್ಯರು ಸಾಮಾನ್ಯರು, ಗಗನಚುಕ್ಕಿ-ಭರಚುಕ್ಕಿ -ಇವು ಉಲ್ಲೇಖನೀಯ. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಕನ್ನಡ ಪ್ರತಿಭೆ ಎಂಬ ಕೃತಿಯನ್ನು ಪ್ರಕಟಿಸಿದೆ. ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಆಡಳಿತ, ಶಿಕ್ಷಣ, ಸಮಾಜಸೇವೆ, ಕ್ರೀಡೆ ಮೊದಲಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳ ಬಗ್ಗೆ ಚಿತ್ರಣವಿದೆ. ಮೈಸೂರಿನ ಮುಲಕನಾಡು ಸಭಾದವರು ಮುಲಕನಾಡು ಮಹನೀಯರು ಎಂಬ ಮಾಲಿಕೆಯಲ್ಲಿ ವಿಶ್ವೇಶ್ವರಯ್ಯ, ಟಿ.ಎಸ್.ವೆಂಕಣ್ಣಯ್ಯ, ಎಚ್.ವಿ.ನಂಜುಂಡಯ್ಯ ಬಿ.ಕೃಷ್ಣಪ್ಪ, ದೇವುಡು ಮೊದಲಾದ ವ್ಯಕ್ತಿಗಳನ್ನು ಕುರಿತು 20 ಕೃತಿಗಳನ್ನು ಹೊರತಂದಿದ್ದಾರೆ.

ಒಬ್ಬ ವ್ಯಕ್ತಿಯ ಸಾಧನೆಯ ಗೌರವಾರ್ಥವಾಗಿ ಅರ್ಪಿಸುವ ಅಭಿನಂದನಾ ಗ್ರಂಥಗಳು, ಸಂಭಾವನಾ ಗ್ರಂಥಗಳು ಜೀವನ ಚರಿತ್ರೆಗೆ ದೊಡ್ಡ ಕೊಡುಗೆಗಳೇ ಆಗಿವೆ. ಇಲ್ಲಿ ಲೇಖಕರು ವಿವಿಧ ದೃಷ್ಟಿ ಕೋನಗಳಿಂದ ಅಭಿನಂದಾನಾರ್ಹ ವ್ಯಕ್ತಿಯ, ಜೀವನದ ವಿವಿಧ ಮುಖಗಳ ಪರಿಚಯ ವಿಮರ್ಶೆಗಳನ್ನು ಒದಗಿಸಿರುತ್ತಾರೆ. ವ್ಯಕ್ತಿಯ ಜೀವನ ಚರಿತ್ರೆ ಸಾಧ್ಯವಾದ ಮಟ್ಟಿಗೆ ಇವುಗಳಲ್ಲಿ ಸಮರ್ಪಕವಾಗಿ ಸಿಗುತ್ತದೆ. (ನೋಡಿ: ಕನ್ನಡದಲ್ಲಿ ಸಂಕಲನ ಗ್ರಂಥಗಳು).

ಕನ್ನಡದ ಅನೇಕ ಪ್ರಮುಖ ಸಾಹಿತಿಗಳು ಅಂಕಣ ಪ್ರಕಾರ ಸಾಹಿತ್ಯದಲ್ಲಿ ಕೆಲಸ ಮಾಡಿದ್ದಾರೆ. ಈ ಬರೆಹಗಳಲ್ಲಿ ಹಲವು ವ್ಯಕ್ತಿಗಳ ಜೀವನ, ಸಾಧನೆಗಳು ದೊರೆಯುತ್ತವೆ (ನೋಡಿ: ಕನ್ನಡದಲ್ಲಿ ಅಂಕಣ ಸಾಹಿತ್ಯ). ಕನ್ನಡದಲ್ಲಿ ಕವಿಕೃತಿಗಳನ್ನು ಕುರಿತಂತೆ ಹಲವರು ಪ್ರೌಢ ಪ್ರಬಂಧಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಆ ಲೇಖಕರ ಜೀವನ ಚರಿತ್ರೆಗಳು ಲಭ್ಯವಾಗಿವೆ. ಸಾಹಿತ್ಯ ಸಂಪದ ಎಂಬ ಮಾಲೆಯಲ್ಲಿ ನವಕರ್ನಾಟಕ ಪ್ರಕಾಶನ ಸಂಸ್ಥೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಲೇಖಕರ ಬಗೆಗೆ ಕೃತಿಗಳನ್ನು ಹೊರತರುವ ಯೋಜನೆಯನ್ನು (ಸಂ: ಹಾ.ಮಾ. ನಾಯಕ, ಪ್ರಧಾನ ಗುರುದತ್ತ) ಹಮ್ಮಿಕೊಂಡಿದ್ದು, ಇದುವರೆಗೆ 20 ಕೃತಿಗಳು ಹೊರಬಂದಿವೆ (2004).

ಆತ್ಮಕಥೆಗಳು : ವ್ಯಕ್ತಿ ತನ್ನ ಜೀವನ ವಿಚಾರಗಳನ್ನು ತಾನೇ ಬರೆದಲ್ಲಿ ಆತ್ಮಕಥೆ ಎನಿಸಿಕೊಳ್ಳುತ್ತದೆ. ಅದನ್ನೇ ಇತರರು ಬರೆದಾಗ ಜೀವನ ಚರಿತ್ರೆಯಾಗುತ್ತದೆ. ಆತ್ಮಕಥೆ ಜೀವನ ಚರಿತ್ರೆಯೆಂಬ ಸಾಹಿತ್ಯ ಪ್ರಕಾರದ ಒಂದು ಭಾಗ. ಆತ್ಮಕಥೆ ವ್ಯಕ್ತಿಯೊಬ್ಬನ ಚರಿತ್ರೆಯಾಗಿರುವಂತೆ ಆತನ ಪರಿಸರದ ಚರಿತ್ರೆಯೂ ಆಗಿರುತ್ತದೆ. ಕಥಾನಾಯಕ ತನ್ನ ಮತ್ತು ತನ್ನ ಸುತ್ತುಮುತ್ತಿನ ಜೀವನವನ್ನು ತಾನು ಕಂಡಂತೆ ಇಲ್ಲಿ ವರ್ಣಿಸಿರುತ್ತಾನೆ. ಬರೆಯುವಷ್ಟು ಶಕ್ತಿ ಮತ್ತು ತಾಳ್ಮೆ ಇದ್ದಲ್ಲಿ ಪ್ರತಿಯೊಬ್ಬನೂ ತನ್ನ ಆತ್ಮಕಥೆಯನ್ನು ಬರೆಯಬಹುದು. ಒಂದೊಂದೊಂದಕ್ಕೂ ಪ್ರಾಮುಖ್ಯ ಇದ್ದೇ ಇದೆ. ಬರೆದಾತ ಸಮಾಜದಲ್ಲಿ ಗಣ್ಯವ್ಯಕ್ತಿಯಾದಾಗಲಂತೂ ಆತ ಬರೆದ ಆತ್ಮಕಥೆಗೆ ಹೆಚ್ಚಿನ ಪ್ರಾಧಾನ್ಯ ಒದಗುತ್ತದೆ.

ಕನ್ನಡದಲ್ಲಿ ಆತ್ಮಕಥಾಸಾಹಿತ್ಯ ಹೆಚ್ಚು ಬೆಳೆದಿಲ್ಲವೆನ್ನಬೇಕು. ಈಗ ಬಂದಿರುವ ಜೀವನಚರಿತ್ರೆಗಳಲ್ಲಿ ಅರ್ಧದಷ್ಟೂ ಆತ್ಮಕಥೆಗಳಿಲ್ಲ. ಬಂದಿರುವಂಥವು ಅರ್ಧ ಸ್ವತಂತ್ರ ಆತ್ಮಕಥೆಗಳಾದರೆ ಉಳಿದವು ಅನುವಾದಗಳು. ಅವು ರಾಷ್ಟ್ರನಾಯಕರು, ಅನ್ಯರಾಷ್ಟ್ರನಾಯಕರು, ಸಾಹಿತಿಗಳು ಮತ್ತು ವಿಜ್ಞಾನಿಗಳನ್ನು ಕುರಿತವಾಗಿವೆ. ಸ್ವತಂತ್ರ ಆತ್ಮಕಥೆಯಲ್ಲಿ 50ಕ್ಕೂ ಹೆಚ್ಚು ಜನ ಸಾಹಿತಿಗಳ ಮತ್ತು ಕಲಾವಿದರ ಆತ್ಮವೃತ್ತಾಂತಗಳನ್ನು ಕಾಣಬಹುದು. 1350 ಪುಟಗಳಷ್ಟು ವ್ಯಾಪ್ತಿವುಳ್ಳ ಕೆಲವು ಸಂಪುಟಗಳಲ್ಲಿ ಪ್ರಕಟವಾಗಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಭಾವ (1968-69) ಕನ್ನಡದ ಆತ್ಮಚರಿತ್ರೆಗಳಲ್ಲಿ ಒಂದು ದೊಡ್ಡ ಹೆಜ್ಜೆ. ಗಾತ್ರದಲ್ಲಿಯೂ ಪಾತ್ರದಲ್ಲಿಯೂ ಹಿರಿದಾದ ಸ್ಥಾನವನ್ನು ಪಡೆದಿರುವ ಈ ಗ್ರಂಥ ಅವರ ಸಾರ್ಥಕ ಬಾಳಿನ ಅರ್ಧಶತಮಾನವನ್ನು ಬಿಂಬಿಸಿದೆ. ಮೊದಲ ಭಾಗದಲ್ಲಿ ತಮ್ಮ ಊರಿಗೆ ಮಾಸ್ತಿ ಎಂದು ಹೆಸರು ಬರಲು ಕಾರಣ, ತಮ್ಮ ಬಾಲ್ಯ, ವಿದ್ಯಾಭ್ಯಾಸ, ಆಗಿನ ಕಾಲದ ಸಂಪ್ರದಾಯ ಮೊದಲಾದವುಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಎರಡನೆಯ ಭಾಗದಲ್ಲಿ ಅವರ ಅಧಿಕಾರಾವಧಿಯ ಏಕಮುಖ ಚಿತ್ರವಿದೆ. ಮೂರನೆಯ ಭಾಗದಲ್ಲಿ ವಿಶ್ರಾಂತಿ ಕಾಲದ ಬದುಕಿದೆ. ಮಾಸ್ತಿಯವರ ಸಮಕಾಲೀನರಾಗಿ ಕನ್ನಡಕ್ಕಾಗಿ ಬಹುವಿಧವಾಗಿ ದುಡಿದ ಕೆಲವು ಹಿರಿಯ ಚೇತನಗಳ ವಿಷಯಗಳೂ ಹಾಸುಹೊಕ್ಕಾಗಿ ಈ ಗ್ರಂಥದಲ್ಲಿ ಬಂದಿವೆ. ಒಂದು ದೃಷ್ಟಿಯಿಂದ ಇದು ಸುಮಾರು ಆರು ದಶಕಗಳ ಕನ್ನಡನಾಡಿನ ಚಿತ್ರವನ್ನೂ ಕನ್ನಡ ನಿಧಾನವಾಗಿಯಾದರೂ ಸುಪುಷ್ಟವಾಗಿ ತಲೆಯೆತ್ತಿದ ಬಗೆಯನ್ನೂ ಪ್ರತಿಬಿಂಬಿಸುತ್ತದೆ.

ಹುಚ್ಚು ಮನಸ್ಸಿನ ಹತ್ತು ಮುಖಗಳು (1948) ಕೆ.ಶಿವರಾಮ ಕಾರಂತರ ಕಾಲುಶತಮಾನದ ಬಾಳಿನ ಕಥೆ. ಈ ಕೃತಿ ಕಾರಂತರ ಸಮೃದ್ಧಾನುಭವಕ್ಕೂ ಬಹುಮುಖ ಪ್ರತಿಭೆಗೂ ಜ್ವಲಂತ ಸಾಕ್ಷಿಯಾಗಿದೆ. ಗುರುವಿಲ್ಲದೆ, ಗುರಿಯಿಲ್ಲದೆ ಹುಚ್ಚು ಮನಸ್ಸು ತೋರಿದ ದಿಕ್ಕಿನಲ್ಲಿ ನಡೆದು ಇವರ ಸಾಧನೆ ಅದ್ಭುತ. ವಿಷ್ಣುವಿಗೆ ಬರಿಯ ಹತ್ತು ಅವತಾರಗಳಾದರೆ, ತನ್ನ ಧ್ಯೇಯಗಳು ಹದಿನಾರು ಅವತಾರಗಳನ್ನು ತಳೆಯುವಂತಾಯಿತೆಂದು ಲೇಖಕರೇ ಹೇಳಿಕೊಂಡಿದ್ದಾರೆ. ರಾಷ್ಟ್ರಭಕ್ತಿ, ಸ್ವದೇಶಿಚಳವಳಿ, ವ್ಯಾಪಾರ, ಪತ್ರಿಕೋದ್ಯಮ, ಅಧ್ಯಾತ್ಮಸಾಧನೆ, ಕಲೆಯ ಭಿನ್ನ ಭಿನ್ನ ಮುಖಗಳು, ಪೋಟೋಗ್ರಫಿ, ನಾಟಕ, ನೃತ್ಯ, ಚಿತ್ರ, ವಾಸ್ತು, ಸಂಗೀತ, ಚಲನಚಿತ್ರ, ಸಮಾಜಸುಧಾರಣೆ, ಗ್ರಾಮೋದ್ಧಾರ, ಶಿಕ್ಷಣ ವಲಯದಲ್ಲಿ ಪ್ರಯೋಗಗಳು, ಉದ್ಯೋಗ ಇವೆಲ್ಲ ಅವತಾರಗಳೂ ಅವಾಂತರಗಳೂ ಕಾರಂತರ ಜೀವನದಲ್ಲಿ ಆಗಿಹೋಗಿವೆ. ಸ್ವತಂತ್ರ ಜೀವನದಿಂದ ಸನ್ಯಾಸಿ ಜೀವನದ ಮೂಲಕ ಹಾದು ಸಂಸಾರಿಯಾಗಿಯೂ ಸಾಗಿದ್ದೇನೆ ಎಂದು ಅವರೇ ಹೇಳಿಕೊಂಡಿದ್ದಾರೆ. ಪ್ರಚಲಿತ ವಿಷಯಗಳ ಬಗ್ಗೆ ಆಳವಾಗಿ ಆಲೋಚನೆ ಮಾಡಿ, ಅಸಾಧ್ಯ ಸಾಹಸಗಳಿಗೆ ಕೈಹಾಕಿ ಜಯಿಸಿದ ಕೀರ್ತಿ ಕಾರಂತರದು. ಇಷ್ಟೊಂದು ವ್ಯಾಪಕ ಹವ್ಯಾಸಗಳನ್ನುಳ್ಳ ಬೇರೊಬ್ಬ ಕನ್ನಡ ಸಾಹಿತಿಯನ್ನು ಹೆಸರಿಸುವುದು ಕಷ್ಟ. ಸ್ಮೃತಿಪಟಲದಿಂದ (1977-78 ಮೂರು ಭಾಗಗಳು) ಎಂಬ ಕೃತಿ ಕಾರಂತರ ಆತ್ಮಕಥೆಯ ಮುಂದುವರಿದ ಭಾಗ.

ಹೋರಾಟದ ಬದುಕು (1968) ದೇ.ಜ.ಗೌ. ಅವರ ಆತ್ಮಕಥೆ. ಇದು ಅಚ್ಚಕನ್ನಡದ ಧೀಮಂತ ಯೋಧನ ಹೋರಾಟದ ಬದುಕನ್ನು ಒಳಗೊಂಡಿದೆ. ಬಡಕುಟುಂಬದಲ್ಲಿ ಗುಡಿಸಲಿನಲ್ಲಿ ಜನಿಸಿ, ಅಡಿಗಡಿಗೆ ನಾನಾ ಎಡರುತೊಡರುಗಳನ್ನು ಎದುರಿಸಿ, ಗೊತ್ತುಗುರಿಯಿಲ್ಲದೆ ಬೆಳೆದು, ಗುರು ಕುವೆಂಪು ಅವರ ಕೃಪಾಕಟಾಕ್ಷಕ್ಕೆ ಪಾತ್ರವಾಗಿ, ಅವರ ಆಶೀರ್ವಾದದ ಮಹಾರಕ್ಷೆಯಲ್ಲಿ ಕನ್ನಡದ ದೀಕ್ಷೆಯನ್ನು ಪಡೆದು, ಕನ್ನಡಕ್ಕಾಗಿ ದುಡಿದು, ಕನ್ನಡದಿಂದ ಕೀರ್ತಿ, ಯಶಸ್ಸುಗಳನ್ನು ಪಡೆದು, ಕನ್ನಡಕ್ಕಾಗಿಯೇ ತನು, ಮನ, ಧನಗಳನ್ನು ಸಮರ್ಪಿಸಿಕೊಂಡ ಮಹಾಚೇತನವೊಂದರ ಆತ್ಮವೃತ್ತಾಂತವಿದು. ಗುಡಿಸಲಿನಿಂದ ಗಂಗೋತ್ರಿಯವರೆಗೆ ನಡೆದ ಜೀವನಾವಧಿಯಲ್ಲಿ ನಾನಾ ಕಾರಣಗಳಿಂದ, ನಾನಾ ರೀತಿಯಲ್ಲಿ ಲೇಖಕರು ನಡೆಸಿದ ಹೋರಾಟಗಳ ವೃತ್ತಾಂತವನ್ನೊಳಗೊಂಡಿರುವ ಈ ಕೃತಿಗೆ

ಹೋರಾಟದ ಬದುಕು ಎಂಬ ಹೆಸರು ಉಚಿತವಾಗಿದೆ. ಆರಂಭದಲ್ಲಿ ಬಡತನದೊಂದಿಗೆ, ಜಾತೀಯತೆಯೊಂದಿಗೆ ಹೋರಾಟ ನಡೆದಿರುವುದು ಕಂಡುಬಂದರೂ ಪ್ರಮುಖವಾದ ಹೋರಾಟ ಕನ್ನಡಕ್ಕೆ ಸಂಬಂಧಿಸಿದುದಾಗಿದೆ. ಈ ಕೃತಿ ಆತ್ಮಕಥಾಸಾಹಿತ್ಯಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ. ಇಲ್ಲಿನ ಗದ್ಯದ ಗತ್ತು ಮತ್ತು ಗ್ರಾಮೀಣ ಭಾಷಾ ಬಳಕೆಯ ಸೊಗಡು ಹೆಚ್ಚು ಆಕರ್ಷಣೀಯವೂ ಮನೋಜ್ಞವೂ ಆಗಿದ್ದು ಶೈಲಿಯ ಹೊಸದೊಂದು ಮಾದರಿಗೆ ಬುನಾದಿಯಾಗಿದೆ. ಕನ್ನಡದ ಮುನ್ನಡೆಗೆ ಇರಬಹುದಾದ ತೊಡಕುಗಳು, ಅಡ್ಡಬಂದ ವ್ಯಕ್ತಿಗಳು, ಸನ್ನಿವೇಶಗಳು, ಕನ್ನಡ ಪ್ರಗತಿಯ ಹಲವಾರು ಮಾರ್ಗಗಳು, ಕನ್ನಡ ನಾಡಿನಲ್ಲಿ ನಡೆದ ಹೋರಾಟದ ವಿವರ ಇಲ್ಲಿ ಚಿತ್ರಿತವಾಗಿರುವುದರಿಂದ ಕನ್ನಡ ನುಡಿ ಮತ್ತು ಸಾಹಿತ್ಯದ ಬಗೆಗಿನ ಮೂಲ ವಸ್ತುವನ್ನೊದಗಿಸುವುದರಲ್ಲಿ ಈ ಕೃತಿಗೆ ಸಾರ್ಥಕತೆ ಲಭಿಸಿದೆ.

ಹತ್ತು ವರುಷ (1939) ಜಿ.ಪಿ.ರಾಜರತ್ನಂ ಅವರ ಆತ್ಮಕಥೆ. 152 ಪುಟಗಳ ಈ ಕೃತಿಯಲ್ಲಿ ಲೇಖಕರ ಹತ್ತು ವರ್ಷಗಳ ಜೀವನ ಕಥೆಯಿದೆ. ಇದರಲ್ಲಿ ರಾಜರತ್ನಂ ಅಯ್ಯಂಗಾರ್ ರಾಜರತ್ನಂ ಆದುದು, ನಮ್ಮ ನಮ್ಮವರು ಕೃತಿ ಅಚ್ಚಾದುದು ಈ ಎರಡು ಭಾಗಗಳು ತುಂಬ ಸ್ವಾರಸ್ಯವಾಗಿವೆ. ರತ್ನನ ತಂದೆ ತೀರಿಕೊಂಡಾಗ ನಂಟರಾರೂ ಸಹಕರಿಸದೆ ಶವವನ್ನು ಜಟಕಾ ಗಾಡಿಯಲ್ಲಿ ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಿದ್ದನ್ನು ಓದಿದಾಗ ಎಂಥವರ ಎದೆಯೂ ಕರಗುತ್ತದೆ. ಸತಿಯನ್ನು ಕ್ಷಯದ ಆಸ್ಪತ್ರೆಗೆ ಸೇರಿಸಿ ಹಿಂತಿರುಗಿ ಬರುವಾಗ ದಾರಿಯಲ್ಲಿ ಕಂಡ ಹೆಂಡದಂಗಡಿಯ ಅನುಭವವೇ ಅವರ ರತ್ನನ ಪದಗಳು ಸೃಷ್ಟಿಯಾಗಲು ಕಾರಣವಾಯಿತೆಂದು ಓದಿದಾಗ ಕುತೂಹಲವೂ ಆಶ್ಚರ್ಯವೂ ಉಂಟಾಗುತ್ತದೆ.

ಮಿಂಚಿನ ಬಳ್ಳಿ ಕಾರ್ಯಾಲಯದಿಂದ ಪ್ರಕಟವಾದ ಸಾಹಿತ್ಯಜ್ಞರ ಆತ್ಮಕಥನ (1946) ಇನ್ನೊಂದು ವಿಶಿಷ್ಟ ಕೃತಿ. ಈ ಕೃತಿಯಲ್ಲಿ ಹನ್ನೊಂದು ಪ್ರಸಿದ್ಧ ಸಾಹಿತಿಗಳ ಭಿನ್ನಾನುಭವಗಳ ವೈವಿಧ್ಯಮಯವೂ ಸ್ವಾರಸ್ಯಪೂರ್ಣವೂ ಆದ ಪರಿಚಯವನ್ನು ಅವರವರ ಮಾತಿನಲ್ಲಿಯೇ ಕಾಣಬಹುದು. ಗೋವಿಂದ ಪೈ, ಆರ್.ವಿ.ಜಾಗೀರದಾರ್, ದೇವುಡು ನರಸಿಂಹಶಾಸ್ತ್ರೀ, ರಂ.ಶ್ರೀ.ಮುಗಳಿ, ಸಿ.ಕೆ.ವೆಂಕಟರಾಮಯ್ಯ, ವಿ.ಕೃ.ಗೋಕಾಕ, ಶಂ.ಬಾ.ಜೋಶಿ, ಚನಪ್ಪ ಉತ್ತಂಗಿ, ಬೆಟಗೇರಿ ಕೃಷ್ಣಶರ್ಮ, ಎ.ಆರ್.ಕೃಷ್ಣಶಾಸ್ತ್ರೀ, ದ.ರಾ.ಬೇಂದ್ರೆ, ಇವರುಗಳೇ ಅಲ್ಲಿನ ಸಾಹಿತಿಗಳು.

ನಾಟ್ಯನೆನಪುಗಳು ಎಂಬ ಕೃತಿಯಲ್ಲಿ ಶ್ರೀರಂಗರು ರಂಗಭೂಮಿಗೂ ತಮಗೂ ಇರುವ ನಂಟನ್ನು ಹೇಳಿಕೊಂಡಿದ್ದಾರೆ. ನಡೆದು ಬಂದ ದಾರಿಯ ಮೂರನೆಯ ಸಂಪುಟದಲ್ಲಿ (1961) ಬೇಂದ್ರೆ ಅವರು ಚತುರ್ಮುಖ ಎಂಬ ಶೀರ್ಷಿಕೆಯಲ್ಲಿ ತಮ್ಮ ಆತ್ಮವೃತ್ತಾಂತವನ್ನು ಬರೆದಿದ್ದಾರೆ. ಮನ್ವಂತರದ ಒಂದನೆಯ ಸಂಪುಟದಲ್ಲಿಯೂ ಅವರು ತಮ್ಮ ಕಾವ್ಯಜೀವನದ ಹಿನ್ನೆಲೆಯನ್ನು ವಿವರಿಸಿದ್ದಾರೆ. ಸಿಂ.ಪಿ.ಲಿಂಗಣ್ಣನವರು ಮೂವತ್ತೈದು ವರ್ಷಗಳು ಎಂಬ ಕೃತಿಯಲ್ಲಿ ತಾವು ಕಂಡುಂಡ ಸಿಹಿಕಹಿಗಳ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಆಲೂರು ವೆಂಕಟರಾಯರ ಜೀವನ ಸ್ಮರಣೆ ಎಂಬ ಗ್ರಂಥದಲ್ಲಿ ಕರ್ನಾಟಕದ ಹೊಸ ಪ್ರಜ್ಞೆಯ ಬೆಳವಣಿಗೆಯನ್ನು ಕಾಣಬಹುದು.

ನವರತ್ನ ರಾಮರಾಯರ ಕೆಲವು ನೆನಪುಗಳು, ವಾಸುದೇವಾಚಾರ್ಯರ ನೆನಪುಗಳು, ಡೂನು ಅವರ ಕಾಡಿನಲ್ಲಿ ಕಳೆದ ದಿನಗಳು, ದಿವಾಕರರ ಸೆರೆಮನೆ ಇವು ಅತ್ಯುತ್ತಮ ನೆನಪುಗಳಾಗಿವೆ. ಗುಬ್ಬಿ ವೀರಣ್ಣನವರ ಕಲೆಯೇ ಕಾಯಕ (1967) ಕಲಾವಿದನೊಬ್ಬನ ಹಲವು ಹನ್ನೆರಡು ಬವಣೆಗಳ, ನೂರಾರು ಸಮಸ್ಯೆಗಳ ಪ್ರಾತಿನಿಧಿಕ ಗ್ರಂಥದಂತಿದೆ. ಕನ್ನಡ ರಂಗಭೂಮಿಗೆ ಗುಬ್ಬಿ ವೀರಣ್ಣನವರು ಸಲ್ಲಿಸಿದ ಬಹುಮುಖ ಸೇವೆಯನ್ನೂ ಅವರ ಸಾಧನೆ ಸಿದ್ಧಿಗಳನ್ನೂ ಇಲ್ಲಿ ಕಾಣಬಹುದು.

ಸುಧಾ, ಕರ್ಮವೀರ ಮೊದಲಾದ ವಾರಪತ್ರಿಕೆಗಳಲ್ಲಿಯೂ ಪ್ರಜಾವಾಣಿ ದಿನಪತ್ರಿಕೆಯಲ್ಲಿಯೂ ಅನೇಕರ ಆತ್ಮಕಥೆಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಕರ್ಣನ ಪಾತ್ರಕ್ಕೆ ಅತ್ಯಂತ ಹೆಸರುವಾಸಿಯಾದ ಕೊಟ್ಟೂರಪ್ಪ ಮತ್ತು ಭೀಮನ ಪಾತ್ರದ ಮೂಲಕ ಹೆಸರು ಪಡೆದ ಸ್ತ್ರೀ ನಾಟಕ ಮಂಡಳಿಯ ನಾಗರತ್ನಮ್ಮ ಇವರ ಆತ್ಮಚರಿತ್ರೆಗಳು ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗಿವೆ.

ಕನ್ನಡದ ಅತ್ಯಂತ ಜನಪ್ರಿಯ ನಾಯಕ ನಟ ರಾಜಕುಮಾರ್ ಅವರ ಹೃದ್ಯವಾದ ಆತ್ಮಕಥೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು (1970). ಮಣ್ಣಿನ ಮಗನೊಬ್ಬ ತನಗೆ ರಕ್ತಗತವಾಗಿ ಬಂದ ಕಲೆಯನ್ನು ಭಯ ಭಕ್ತಿ ಶ್ರದ್ಧೆ ಗೌರವಗಳಿಂದ ಆರಾಧಿಸಿ, ಸಾಧಿಸಿ, ಅತ್ಯುನ್ನತ ಮಟ್ಟಕ್ಕೇರಿದ ಚಿತ್ರವನ್ನಿಲ್ಲಿ ಕಾಣಬಹುದು. ಸಾಧನೆಯ ಸಮಯದಲ್ಲಿ ಆತ ಪಟ್ಟ ಪಾಡು, ತೊಟ್ಟ ನಿಷ್ಠೆ, ಕನ್ನಡ ಪ್ರೇಮ ಎಂಥವರಿಗೂ ಮೆಚ್ಚಿಗೆ ತರುವಂಥವು.

ಆತ್ಮಕತೆ ನಿವೇದಿಸಿದವರಲ್ಲಿ ಹೆಸರಾಂತ ಲೇಖಕರು, ಕಲಾವಿದರು, ಕ್ರೀಡಾಪಟುಗಳು, ಚಲನಚಿತ್ರ ಮತ್ತು ರಂಗಭೂಮಿಯ ನಟನಟಿಯರು ಸೇರಿದ್ದಾರೆ. ವ್ಯಕ್ತಿಗಳಿಗೆ ಸಮರ್ಪಿಸಿದ ಅಭಿನಂದನ ಗ್ರಂಥಗಳಲ್ಲಿ ಅವುಗಳ ಪ್ರಾರಂಭದ ಪುಟಗಳಲ್ಲಿ ಆಯಾ ವ್ಯಕ್ತಿಗಳು ತಮ್ಮ ಜೀವನ ವೃತ್ತಾಂತವನ್ನು ನಿರೂಪಿಸಿದ್ದಾರೆ. ಕನ್ನಡದಲ್ಲಿ ಅಭಿನಂದನ ಗ್ರಂಥಗಳ ಒಂದು ಪರಂಪರೆಯೇ ಇರುವುದನ್ನು ನಾವು ಮರೆಯುವಂತಿಲ್ಲ. ಕನ್ನಡದ ಕೆಲವು ಮುಖ್ಯ ಆತ್ಮಕಥೆಗಳನ್ನು ಈ ಮುಂದೆ ಹೆಸರಿಸಲಾಗಿದೆ. ರಾವ್ ಬಹುದ್ದೂರರ ಮರೆಯದ ನೆನಪುಗಳು (1959), ಡಿವಿಜಿಯವರ ಜ್ಞಾಪಕ ಚಿತ್ರಶಾಲೆ (1967-74), ರಾಜಕುಮಾರ್ ಅವರ ನಟಸಾರ್ವಭೌಮ (1970), ವಿ.ಸೀತಾರಾಮಯ್ಯನವರ ಕಾಲೇಜು ದಿನಗಳು (1971) ಮತ್ತು ಮುಂಬಯಿ ವಾಸದ ನೆನಪುಗಳು (1976), ಅನಕೃ ಅವರ ಬರಹಗಾರನ ಬದುಕು (1972), ಅಲೂರು ವೆಂಕಟರಾಯರ ನನ್ನ ಜೀವನ ಸ್ಮೃತಿಗಳು (1973), ಕೋ.ಚೆನ್ನಬಸಪ್ಪನವರ ನನ್ನ ಮನಸ್ಸು ನನ್ನ ನಂಬುಗೆ (1973), ಎಚ್.ಕೆ.ವೀರಣ್ಣಗೌಡರ ಬದುಕು-ಮೆಲಕು (1974), ಆರ್.ನಾಗೇಂದ್ರರಾವ್ ಅವರ ಇದು ನನ್ನ ಕಥೆ (1974), ಮಳವಳ್ಳಿ ಸುಂದರಮ್ಮನವರ ಅಭಿನಯಶಾರದೆ (1975), ಬಸವರಾಜ ಕಟ್ಟೀಮನಿ ಅವರ ಕುಂದರನಾಡಿನ ಕಂದ (1976) ಮತ್ತು ಕಾದಂಬರಿಕಾರನ ಕಥೆ (1981), ಬೀಚಿಯವರ ನನ್ನ ಬಯಾಗ್ರಫಿ (1976), ಶಾರದ ವಿ.ಗೋಕಾಕ್ ಅವರ ಒಲವೆ ನನ್ನ ಬದುಕು (1977), ಶ್ರೀರಂಗರಾಜು ಅವರ ನಾನು ತುಳಿದ ಹಾದಿ (1978), ಇ.ಎ.ಎಸ್.ಪ್ರಸನ್ನರ ಪ್ರಸನ್ನ ಜೀವನ ಒಂದು ಆತ್ಮಕಥೆ (1978), ಕೆದಂಬಾಡಿ ಜತ್ತಪ್ಪ ರೈ ಅವರ ಬೇಟೆಯ ನೆನಪುಗಳು (1978-79), ಬಿ.ಜಿ.ಎಲ್.ಸ್ವಾಮಿ ಅವರ ಪ್ರಾಧ್ಯಾಪಕನ ಪೀಠದಲ್ಲಿ (1979), ಬಿ.ಜಯಮ್ಮನವರ ಅಭಿನೇತ್ರಿ (1979), ಡಿ.ಕೆಂಪರಾಜ ಅರಸ್ ಅವರ ಅರವತ್ತು ವರ್ಷಗಳು (1980), ಕುವೆಂಪು ಅವರ ನೆನಪಿನ ದೋಣಿಯಲ್ಲಿ (1980), ಶೇ.ಗೋ.ಕುಲಕರ್ಣಿ ಅವರ ನಾನು ಕಂಡ ಗೆಳೆಯರ ಗುಂಪು (1980), ರಂ.ಶ್ರೀ.ಮುಗಳಿಯವರ ಜೀವನ ರಸಿಕ (1982), ಮಲ್ಲಿಕಾರ್ಜುನ ಮನ್ಸೂರರ ನನ್ನ ರಸಯಾತ್ರೆ (1983), ಎನ್ಕೆ ಕುಲಕರ್ಣಿಯವರ ನಾನಿಯ ನೆನಪುಗಳು (1983), ಚಿ.ನ.ಮಂಗಳಾ ಅವರ ಅಧ್ಯಾಪಕಿಯಾಗಿ ಇಪ್ಪತ್ತೈದು ವರ್ಷ ಮತ್ತು ಸ್ನೇಹಸಿಂಧು (1985), ಅನುಪಮಾ ನಿರಂಜನರ ನೆನಪು ಸಿಹಿ ಕಹಿ (1985) ಮತ್ತು ಬರಹಗಾರ್ತಿಯ ಬದುಕು (1990), ಜಿ.ಎಸ್.ಶಿವರುದ್ರಪ್ಪ ಅವರ ಚದುರಂಗ (1986), ತ.ಸು.ಶಾಮರಾಯರ ಮೂರುತಲೆಮಾರು (1987), ಸ.ಸ.ಮಾಳವಾಡರ ದಾರಿ ಸಾಗಿದೆ (1989). ಅಂಬುಜಾ ತ.ರಾ.ಸು. ಅವರ ಹಿಂತಿರುಗಿ ನೋಡಿದಾಗ (1990), ಎ.ಎನ್.ಮೂರ್ತಿರಾವ್ ಅವರ ಸಂಜೆಗಣ್ಣಿನ ಹಿನ್ನೋಟ (1990), ಬಿ.ಡಿ.ಜತ್ತಿ ಅವರ ನನಗೆ ನಾನೇ ಮಾದರಿ (1990), ಸಮೇತನಹಳ್ಳಿ ರಾಮರಾಯರ ಕೋಟು ಕೊಟ್ಟಮನೆ (1991), ತ.ಸು.ಶಾಮರಾಯರ ನೆನಪಿನ ಅಲೆಗಳು (1991), ಉತ್ತಂಗಿ ಚನ್ನಪ್ಪನವರ ಆತ್ಮಚರಿತ್ರೆ (1991), ಕು.ಶಿ.ಹರಿದಾಸಭಟ್ಟರ ನಿವೇದನೆ (1992), ಎಸ್.ಆರ್.ಗುಂಜಾಳ ಅವರ ನಾನು (1992), ನಂಜುಂಡಸ್ವಾಮಿಯವರ ಅಜ್ಞಾತ ಅಧ್ಯಾಪಕನ ಆತ್ಮಚರಿತ್ರೆ (1994), ಪೆರ್ಲ ಕೃಷ್ಣಭಟ್ಟರ ಬದುಕಿ ಫಲವೇನು (1994), ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ (1994), ಪಿ.ಲಂಕೇಶರ ಹುಳಿಮಾವು (1997), ಆರ್.ಸಿ.ಹಿರೇಮಠ ಅವರ ಉರಿ ಬರಲಿ ಸಿರಿ ಬರಲಿ (1995), ಎಚ್.ನರಸಿಂಹಯ್ಯನವರ ಹೋರಾಟದ ಹಾದಿ (1995), ಜಿ.ಎಂ.ಪಾಟೀಲರ ನೆನಪಿನಂಗಳದಲ್ಲಿ (1995), ಕೆರೆಮನೆ ಶಿವರಾಮ ಹೆಗಡೆಯವರ ನೆನಪಿನ ರಂಗಸ್ಥಳ (1996), ಕಯ್ಯಾರಕಿಞ್ಞಣ್ಣರೈ ಅವರ ದುಡಿಮೆಯೇ ನನ್ನ ದೇವರು (1996), ಸೇಡಿಯಾಪು ಕೃಷ್ಣಭಟ್ಟರ ಈಶ್ವರ ಸಂಕಲ್ಪ ಅಥವಾ ದೈವಲೀಲೆ (1996), ಸಿದ್ಧಲಿಂಗಯ್ಯನವರ ಊರು ಕೇರಿ

(1996), ಎಸ್.ಎಲ್.ಭೈರಪ್ಪನವರ ಭಿತ್ತಿ (1996), ಎಚ್.ಎಲ್.ನಾಗೇಗೌಡರ ನಾಗಸಿರಿ (1996 ನಾಲ್ಕು ಸಂಪುಟಗಳು) ಪಿ.ಲಂಕೇಶರ ಹುಳಿಮಾವಿನ ಮರ (1998), ಕೆ.ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ (2001), ಸಿ.ಜಿ.ಕೃಷ್ಣಸ್ವಾಮಿ ಅವರ ಕತ್ತಾಲೆ ಬೆಳದಿಂಗಳೊಳಗೆ (2002), ಹಿರಿಯಡಕ ಗೋಪಾಲರಾಯರ, ಮದ್ದಳೆಯ ಮಾಯಾಲೋಕ, ಬಿ.ವಿ.ಕಾರಂತರ ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ (2003), ಎಚ್.ಎಸ್.ಶಿವಪ್ರಕಾಶ್ ಅವರ ಬತ್ತೀಸರಾಗ (2003), ಸ.ಜ.ನಾಗಲೋಟಿಮಠ ಅವರ ಬಿಚ್ಚಿದ ಜೋಳಿಗೆ (2003), ಇಂಥ ಸ್ವತಂತ್ರ ಕೃತಿಗಳಲ್ಲದೆ ಕನ್ನಡಕ್ಕೆ ಅನೇಕ ಆತ್ಮಕಥೆಗಳು ಅನುವಾದಗೊಂಡಿವೆ. ಇವುಗಳಲ್ಲಿ ಹೆಚ್ಚಿನವು ಭಾರತೀಯ ಮತ್ತು ವಿದೇಶೀಯ ರಾಷ್ಟ್ರನಾಯಕರ, ವಿಜ್ಞಾನಿಗಳ ಮತ್ತು ಸಾಹಿತಿಗಳ ಆತ್ಮಕಥೆಗಳಾಗಿವೆ. ಸತ್ಯಶೋಧನ ಪ್ರಕಟಣ ಮಂದಿರದವರ ಸತ್ಯಶೋಧನೆ ಅಥವಾ ಗಾಂಧೀಜಿ ಅವರ ಆತ್ಮಕಥೆ ಮತ್ತು ಸಿದ್ಧವನಹಳ್ಳಿ ಕೃಷ್ಣಶರ್ಮರ ಗಾಂಧೀಜಿ ಆತ್ಮಕಥೆ (ಸಂಕ್ಷಿಪ್ತ) ಪ್ರಕಟವಾಗಿವೆ. ಜವಾಹರಲಾಲ್ ನೆಹರೂ ಅವರ ಆತ್ಮಕಥೆಯನ್ನು ಗುರುನಾಥ ಜೋಶಿ ಅವರು ನನ್ನ ಕಥೆ ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ (1958). ಗಾಂಧಿ ಮತ್ತು ನೆಹರೂ ಅವರ ಆತ್ಮಕಥೆಗಳು ಅಂತಾರಾಷ್ಟ್ರೀಯ ಮನ್ನಣೆಯನ್ನು ಪಡೆದಿರುವುದು ಮಾತ್ರವಲ್ಲದೆ ಅನೇಕರು ತಮ್ಮ ಆತ್ಮಕಥೆಯನ್ನು ಬರೆಯಲು ಪ್ರೇರಣೆಯನ್ನುಂಟುಮಾಡಿವೆ. ಕೃಷ್ಣ ಹತೀಸಿಂಗ್ ಅವರ ವಿತ್ ನೋ ರಿಗ್ರೆಟ್ಸ್ ಎಂಬ ಆತ್ಮಕಥೆಯನ್ನು ದೇ.ಜ.ಗೌ, ಅವರು ನೆನಪು ಕಹಿಯಲ್ಲ ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇದು ನೆಹರೂ ತಂಗಿಯ ಆತ್ಮಕಥೆಯಾದರೂ ಇಲ್ಲಿ ಸಮಸ್ತ ನೆಹರೂ ಮನೆತನದ ಅರ್ಧ ಶತಮಾನದ ತ್ಯಾಗಭೋಗಗಳ ಜೀವನದ ಕಥೆಯಿದೆ. ಸಿದ್ಧವನಹಳ್ಳಿ ಕೃಷ್ಣಶರ್ಮರು ಬಾಬು ರಾಜೇಂದ್ರ ಪ್ರಸಾದರ ಸ್ವವೃತ್ತಾಂತವನ್ನು ರಾಜೇಂದ್ರ ಪ್ರಸಾದ್ ಆತ್ಮಕಥೆ ಎಂಬ ನಾಮಾಂಕಿತದಲ್ಲಿ ಕನ್ನಡಕ್ಕೆ ತಂದಿದ್ದಾರೆ (1959). ಸ್ವಾತಂತ್ರ್ಯಯೋಧ ದೇಶಭಕ್ತನ ರೋಮಾಂಚಕಾರಿಯಾದ ಈ ಕಥೆ 866 ಪುಟಗಳಲ್ಲಿ ಹೊರಬಂದಿರುವ ಬೃಹತ್ ಗ್ರಂಥ. ಗೌರೀಶಂಕರದ ತುತ್ತತುದಿಗೇರಿ ಹೊಸ ದಾಖಲೆಯೊಂದನ್ನು ಸ್ಥಾಪಿಸಿದ ತೇನ್‌ಸಿಂಗನ ಆತ್ಮಕಥೆಯನ್ನು ಎವರೆಸ್ಟ್ ವೀರ ಎಂಬ ಹೆಸರಿನಲ್ಲಿ ಕೂಡಲಿ ಚಿದಂಬರಂ ಮತ್ತು ಜನಾರ್ದನ ಗುರ್ಕಾರ್ ಅವರು ಸುಂದರವಾಗಿ ಅನುವಾದಿಸಿದ್ದಾರೆ (1957). ಟಾಲ್‌ಸ್ಟಾಯ್ ಅವರ ಸುಪ್ರಸಿದ್ಧ ಆತ್ಮಚರಿತ್ರೆಯನ್ನು ಲಿಯೊ ಟಾಲ್‌ಸ್ಟಾಯ್ ಎಂಬ ಶೀರ್ಷಿಕೆಯಲ್ಲಿ ಆನಂದರು ಕನ್ನಡಕ್ಕೆ ತಂದಿದ್ದಾರೆ (1958). 388 ಪುಟಗಳ ಈ ಕೃತಿಯಲ್ಲಿ ಟಾಲ್‌ಸ್ಟಾಯ್ ಅವರ ಬಾಲ್ಯ ಮತ್ತು ಯೌವನಗಳ ಜೀವನಪರಿಚಯವಿದೆ.

ಲೋಕವಿಖ್ಯಾತ ವಿಜ್ಞಾನಿ ಚಾರಲ್ಸ್ ಡಾರ್ವಿನ್ನರ ಆತ್ಮಕಥೆಯನ್ನು ಶ್ರೀಮತಿ ಜೀವೂಬಾಯಿ ಲಕ್ಷ್ಮಣರಾವ್ ಅವರು ಚಾರಲ್ಸ್ ಡಾರ್ವಿನ್ನನ ಆತ್ಮಕಥೆ ಎಂಬ ಹೆಸರಿನಲ್ಲಿ ಅನುವಾದಿಸಿದ್ದರು (1969). ಸುಪ್ರಸಿದ್ಧ ರಾಜಕಾರಣಿ ಬೆಂಜಮಿನ್ ಫ್ರಾಂಕ್ಲಿನ್ ಆತ್ಮಕಥೆ ಅದೇ ಹೆಸರಿನಿಂದ ಜನಾರ್ದನ ಗುರ್ಕಾರ್ ಅವರಿಂದ ಕನ್ನಡಕ್ಕೆ ಬಂದಿದೆ (1958). ಪ್ರಖ್ಯಾತ ಮಹಿಳೆ ಹೆಲನ್ ಕೆಲ್ಲರಳ ಆತ್ಮಕಥೆಯನ್ನು ಚಿ.ನ. ಮಂಗಳ ಅನುವಾದಿಸಿದ್ದಾರೆ. ಅಮೆರಿಕದ ಅಧ್ಯಕ್ಷರಾಗಿದ್ದ ರೂಸ್ವೆಲ್ಟ್ ಅವರ ಪತ್ನಿ ಎಲೀನರ್ ರೂಸ್‌ವೆಲ್ಟ್ ಅವರ ಆತ್ಮಕಥೆ ಸವಿನೆನಪು ಎಂಬ ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ. ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ ಎಚ್.ಎಲ್.ನಾಗೇಗೌಡರಿಂದ ಅನುವಾದಿತವಾಗಿರುವ ಇನ್ನೊಂದು ಆತ್ಮಕಥಾಗ್ರಂಥ ಮರಾಠಿಯಿಂದ ಅನೇಕ ದಲಿತ ಆತ್ಮಕಥೆಗಳು ಕನ್ನಡಕ್ಕೆ ಅನುವಾದಗೊಂಡು ಕನ್ನಡ ದಲಿತ ಸಂವೇದನೆಗಳನ್ನು ಈ ನೆಲೆಯಲ್ಲಿ ಉನ್ಮೀಲನಗೊಳಿಸಿ ಹೊಸ ಬಗೆಯ ಬರವಣಿಗೆಗೆ ಹಾದಿ ಮಾಡಿಕೊಟ್ಟಿವೆ. ಅಕ್ರಮಸಂತಾನ, ಉಚಲ್ಯಾ (ಅನು: ದು.ನಿಂ. ಬೆಳಗಲಿ), ಇವು ದಲಿತ ಬದುಕಿನ ಭೀಕರವಾದ ಹಾಗೂ ಬೆರಗಿನ ಲೋಕವನ್ನು ತೆರೆದಿಟ್ಟಿವೆ. ಪಂಜಾಬಿ ಲೇಖಕಿ ಅಜಿತ್ ಕೌರ್ ಅವರ ಆತ್ಮಚರಿತ್ರೆ ಲವ್‌ಲೀನ್ ಜಾಲಿ (2003). ಅಲೆಮಾರಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಗೊಂಡಿದೆ. (ಅನು: ವಿಜಯಲಕ್ಷ್ಮೀಅರಸ್) ಕನ್ನಡ ಆತ್ಮಕಥಾ ಸಾಹಿತ್ಯ ಅನುವಾದಗಳೂ ಸೇರಿದಂತೆ ಶ್ರೀಮಂತವಾಗುತ್ತಿದೆ. *

**ಕನ್ನಡದಲ್ಲಿ ದಾಸ ಸಾಹಿತ್ಯ :** ಕನ್ನಡಕ್ಕೆ ಹರಿದಾಸರ ಕೊಡುಗೆ ಅಪಾರ. ಅನೇಕಾನೇಕ ಹಾಡುಗಳಾಗಿ, ಭಗವದ್ಭಕ್ತರ ಜೀವನಕಥನಗಳಾಗಿ, ವಚನರೂಪದ ಸುಳಾದಿ ಉಗಾಭೋಗಗಳಾಗಿ ಅದು ಬೆಳೆದಿದೆ. ತತ್ತ್ವಬೋಧೆಯನ್ನು ರಮ್ಯವಾಗಿ ಸುಲಭಗ್ರಾಹ್ಯವಾಗಿ ಹೇಳುವಲ್ಲಿ, ಆಡುಮಾತನ್ನೂ ಕನ್ನಡ ಛಂದಸ್ಸುಗಳನ್ನೂ ಬಳಸುವಲ್ಲಿ ಅದರ ವೈಶಿಷ್ಟ್ಯವನ್ನು ಕಾಣಬಹುದು. 13ನೆಯ ಶತಮಾನದ ವೇಳೆಗೆ ದ್ವೈತಸಿದ್ಧಾಂತವನ್ನು ಸಾರಿದ ಮಧ್ವಾಚಾರ್ಯರು ಹರಿದಾಸ ಪಂಥ'ಕ್ಕೆ ಮೂಲಪ್ರೇರಕರು. ಅವರ ದ್ವಾದಶಸ್ತೋತ್ರ ಹರಿದಾಸರಿಗೆ ಸ್ಫೂರ್ತಿಯ ಸೆಲೆ. ಅವರ ದ್ವೈತಸಿದ್ಧಾಂತ ಹರಿದಾಸರ ಸಿದ್ಧಾಂತವೂ ಹೌದು. ಮಧ್ವಮತದ ತತ್ತ್ವಗಳನ್ನೊಪ್ಪಿ, ಅವುಗಳ ಪ್ರತಿಪಾದನೆಯೊಂದಿಗೆ ತಮ್ಮ ಭಕ್ತಿ ಸಾಧನೆಯನ್ನೂ ಮೇಳವಿಸಿದ್ದಾರೆ ಹರಿದಾಸರು. ಇತ್ತೀಚೆಗೆ ದೊರೆತಿರುವ ಕನ್ನಡ ಭಾಷೆಯ ಒಂದು ಓಲೆಗ್ರಂಥದ ನಾಲ್ಕೇನಾಲ್ಕು ಓಲೆಗರಿಗಳಲ್ಲಿ ಅಚಲಾನಂದರನ್ನು ಕುರಿತ ಕೆಲವು ಸಂಗತಿಗಳಿವೆ. ಆ ಪ್ರಕಾರ ಸು.9ನೆಯ ಶತಮಾನದಲ್ಲಿ ಒಬ್ಬರು ಅಚಲಾನಂದರು ಇದ್ದರು. ಅವರು ಮಠಾಧಿಪತಿಗಳಾಗಿದ್ದುದಲ್ಲದೆ ಪಾಂಡುರಂಗ, ಕಳಸ, ವಿದ್ಯಾನಗರ, ಪೆನುಗೊಂಡೆ, ರಾಮೇಶ್ವರ, ಕಾಶಿ, ಕೆಳದಿ, ಬಿದನೂರುಗಳಲ್ಲಿ ಒಂದೊಂದು ಮಠವನ್ನು ಸ್ಥಾಪಿಸಿದರು. ಆದರೆ ಅವರದೆನ್ನಲಾಗಿರುವ ಕೃತಿಗಳ ಭಾಷೆ 9ನೆಯ ಶತಮಾನದ್ದಲ್ಲ; 15-16ನೆಯ ಶತಮಾನದ ಕನ್ನಡ. ಈ ಸಂದಿಗ್ಧವನ್ನು ಗಮನಿಸಿ ಬೇರೆ ಬೇರೆ ಕಾಲಕ್ಕೆ ಸೇರಿದ ಇಬ್ಬರು ಅಚಲಾನಂದರು ಇದ್ದಿರಬೇಕು ಎಂದು ಹೇಳಿದ ವರದರಾಜರಾಯರ ಊಹೆ ನಿಜವಾದುದು. ಇವರ ಈ ಊಹೆಗೆ 1722ರ ತೊಣ್ಣೂರು ದೇವಾಲಯದ ತಾಮ್ರಶಾಸನವೊಂದು ಪೂರಕ ಮಾಹಿತಿ ನೀಡುತ್ತದೆ. ಮೈಸೂರಿನ ದೊರೆ ಒಂದನೆಯ ಕೃಷ್ಣರಾಜ ತೊಂಡೂರು, ಅತ್ತಿಕುಪ್ಪೆ ಹಳ್ಳಿಗಳನ್ನು ಅಗ್ರಹಾರವನ್ನಾಗಿ ಮಾಡಿ, ಅದನ್ನು ವೃತ್ತಿಗಳಾಗಿ ವಿಭಜಿಸಿ, ಹೊರನಾಡುಗಳಿಂದ ಆಹ್ವಾನಿತರಾಗಿ ಬಂದ ಬ್ರಾಹ್ಮಣರಿಗೆ ಅಲ್ಲಿಯೇ ನೆಲೆಸಲೆಂದು ಹಂಚಿಕೊಟ್ಟ ವಿಚಾರ ಅದರಲ್ಲಿದೆ.

................. ಅಚಲಾನನ್ದದಾಸಾಖ್ಯ  
ವಿಷ್ಣುಕುಲೋದ್ಭವಃ ಆಶ್ವಲಾಯನ  
ವಾಸಿಷ್ಠ ಋಕ್ಶಾಖ್ಯಪ್ಪಣ ಪುತ್ರಜಃ ವೃತ್ತಿಂ  
ನೃಸಿಂಹಜೋ ತ್ರೈಕಾಂ ಹರಿದಾಸಸ್ಸಮಶ್ನುತೇ

ವೃತ್ತಿಗಳನ್ನು ಪಡೆದ 112 ಜನರಲ್ಲಿ ವೈಷ್ಣವ ಮನೆತನದಲ್ಲಿ ಹುಟ್ಟಿದ, ನೃಸಿಂಹನ ಮಗನೂ ಅಪ್ಪಣನ ಮೊಮ್ಮಗನೂ ಆದ, ವಾಸಿಷ್ಠಗೋತ್ರ ಆಶ್ವಲಾಯನ ಸೂತ್ರ ಋಕ್ ಶಾಖಾಧ್ಯಾಯಿ ಅಚಲಾನಂದದಾಸರೂ ಒಬ್ಬರು. ಅಚಲಾನಂದರನ್ನು ಹೆಸರಿಸುವ ಇನ್ನೊಂದು ಶಾಸನ 15-16ನೆಯ ಶತಮಾನಕ್ಕೆ ಸೇರಿದ ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ನಲ್ಲೂರು ಶಾಸನ. ಈ ಶಾಸನದಲ್ಲಿ 'ಶ್ರೀ ಅಚಲಾನಂದನ ವಿಠಲ' ಎಂಬ ಬರೆಹವಿದೆ. ಈ ಎಲ್ಲ ದಾಖಲೆಗಳನ್ನು ಗಮನಿಸಿದಾಗ ದೊರೆತಿರುವ ಅಚಲಾನಂದ ವಿಠಲಾಂಕಿತ ಕೀರ್ತನೆಗಳು 9ನೆಯ ಶತಮಾನದ ಮಠಾಧಿಪತಿ ಅಚಲಾನಂದರದಲ್ಲ 16ನೆಯ ಶತಮಾನದ ಹರಿದಾಸ ಅಚಲಾನಂದರದು ಎಂಬುದು ಸ್ಪಷ್ಟ. ಹೀಗಾಗಿ ಹರಿದಾಸಪಂಥ'ಕ್ಕೆ ಅಚಲಾನಂದ ದಾಸರು ಮೊದಲಿಗರೆನ್ನುವ ವಾದವನ್ನು ಒಪ್ಪಲಾಗುವುದಿಲ್ಲ.

ಬೇಲೂರು ಕೇಶವದಾಸರು ಮತ್ತು ಎ.ಟಿ.ಪಾಟೀಲರು ಸು.9ನೆಯ ಶತಮಾನದಲ್ಲಿದ್ದರೆನ್ನಲಾದ ಅಚಲಾನಂದದಾಸರೇ ಹರಿದಾಸಪಂಥ'ಕ್ಕೆ ಮೊದಲಿಗರೆಂದು ಅಭಿಪ್ರಾಯಪಟ್ಟಿದ್ದಾರೆ. ಅಚಲಾನಂದವಿಠಲ ಎಂಬ ಅಂಕಿತದಲ್ಲಿರುವ ಕೀರ್ತನೆ, ಉಗಾಭೋಗಗಳ ಭಾಷೆ 15ನೆಯ ಶತಮಾನದ್ದಾಗಿ ಕಾಣುವುದರಿಂದಲೂ ಅಚಲಾನಂದರು ಮಧ್ವಮತದ ವಿಷಯವನ್ನೆತ್ತಿರುವುದರಿಂದಲೂ ಇವರ ಕಾಲ 13ನೆಯ ಶತಮಾನದಿಂದ ಈಚಿನದಾಗುತ್ತದೆ ಎಂದು ಆರ್.ಎಸ್.ಪಂಚಮುಖಿ, ಕೆ.ಎಂ.ಕೃಷ್ಣರಾವ್, ಎಚ್.ಕೆ.ವೇದವ್ಯಾಸಾಚಾರ್ಯ, ಜಿ.ವರದರಾಜರಾವ್, ರಂ.ಶ್ರೀ.ಮುಗಳಿ ಮೊದಲಾದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

13ನೆಯ ಶತಮಾನದ ಮಧ್ವಾಚಾರ್ಯರ ನೇರಶಿಷ್ಯರಾದ ನರಹರಿತೀರ್ಥರೇ ಹರಿದಾಸ ಪಂಥ'ದ ಆದ್ಯಪ್ರವರ್ತಕರೆಂಬ ಒಂದು ವಾದವೂ ಇದೆ. ಅವರವೆಂದು ಹೇಳಲಾಗಿರುವ ಕೇವಲ ಮೂರೇ ಮೂರು

ಕೀರ್ತನೆಗಳು ದೊರೆತಿವೆ. ಈ ವಾದದ ಬಗ್ಗೆ ಚರ್ಚಿಸಿದವರಲ್ಲಿ ಆರ್.ಎಸ್.ಪಂಚಮುಖಿ, ಗೋರಬಾಳ ಹನುಮಂತರಾವ್, ಕೆ.ಎಂ.ಕೃಷ್ಣರಾವ್ ಮುಖ್ಯರು. ಅವರ ವಾದದ ಸಾರಾಂಶವಿಷ್ಟು: ದೊರೆತಿರುವ ಮೂರು ಕೀರ್ತನೆಗಳಲ್ಲೂ ಅಂಕಿತ ನಿರ್ದಿಷ್ಟವಾಗಿಲ್ಲ. ನರಹರಿತೀರ್ಥರ ಶಿಷ್ಯಪರಂಪರೆಯಿಲ್ಲ; ಹರಿದಾಸ ಪರಂಪರೆಯನ್ನು ಕುರಿತ ವಂದನಾ ಶ್ಲೋಕದಲ್ಲಿ ಅವರ ಹೆಸರಿಲ್ಲ; ಅವರ ಮಾತೃಭಾಷೆ ಕನ್ನಡವಲ್ಲ. ಈ ಕೆಲವು ಅಂಶಗಳನ್ನು ಗಮನಿಸಿ ನರಹರಿತೀರ್ಥರು ದಾಸಸಾಹಿತ್ಯಕ್ಕೆ ಮೊದಲಿಗರೆಂದು ಒಪ್ಪುವುದು ಕಷ್ಟ. ಈ ಎಲ್ಲ ವಿಚಾರಗಳನ್ನು ಗಮನಿಸಿ ಜಿ.ವರದರಾಜರಾಯರು ಅವುಗಳ ಜೊತೆಗೆ ನರಹರಿತೀರ್ಥರ ಕೃತಿಗಳಲ್ಲಿ ಕಂಡುಬರುವ ಅನುಪಲ್ಲವಿಯ ಪ್ರಯೋಗ ಆ ಕಾಲದ ಸಂಗೀತಶಾಸ್ತ್ರ ನಿಯಮಗಳಿಗೆ ವಿರುದ್ಧವಾದುದೂ ಐತಿಹಾಸಿಕವಾಗಿಯೂ ಅಸಂಗತ ಎಂಬ ವಿಚಾರಗಳನ್ನು ಎತ್ತಿ ತೋರಿಸಿ ಶ್ರೀಪಾದರಾಜರೇ ಕನ್ನಡ ಹರಿದಾಸಸಾಹಿತ್ಯದ ಆದ್ಯಪ್ರವರ್ತಕರೆಂಬುದನ್ನು ಸಾಧಾರವಾಗಿ ಸ್ಥಾಪಿಸಿದ್ದಾರೆ.

ನರಹರಿತೀರ್ಥರ ಬಳಿಕ ಸುಮಾರು ಒಂದು ಶತಮಾನದ ಅನಂತರ ನಮಗೆ ಶ್ರೀಪಾದರಾಯರ ಹೆಸರು ಸಿಕ್ಕುತ್ತದೆ. ಇವರು 15ನೆಯ ಶತಮಾನದಲ್ಲಿದ್ದ ಖ್ಯಾತ ಮಠಾಧಿಪತಿ, ಹರಿದಾಸಸಾಹಿತ್ಯದ ಪ್ರಮುಖರಲ್ಲೊಬ್ಬರು. ಚನ್ನಪಟ್ಟಣದ ಬಳಿಯಿರುವ ಅಬ್ಬೂರು ಇವರ ಜನ್ಮಸ್ಥಳ. ರಂಗವಿಠಲ ಎಂಬ ಅಂಕಿತದಿಂದ ಕೃತಿರಚನೆ ಮಾಡಿದ್ದಾರೆ. ಸಂಸ್ಕೃತದ ಬಲವಿದ್ದರೂ ಕನ್ನಡದ ಒಲವನ್ನು ಕೃತಿಗಳಲ್ಲಿ ತೋರಿದ್ದಾರೆ. ಅನೇಕ ವರ್ಷಗಳ ಕಾಲ ಶ್ರೀರಂಗದಲ್ಲಿದ್ದು, ತಮಿಳಿನ ಆಳ್ವಾರರ ಕೃತಿಗಳು ಸಾಮಾನ್ಯ ಜನರ ಮೇಲೆ ಬೀರಿದ್ದ ಪ್ರಭಾವವನ್ನು ಕಣ್ಣಾರೆ ಕಂಡಿದ್ದವರು. ನರಹರಿತೀರ್ಥರ ಮೇಲ್ಪಂಕ್ತಿಯೊಂದಿಗೆ ಶಿವಶರಣರ ಪ್ರಭಾವವೂ ಸೇರಿ ಇವರ ಕೃತಿರಚನೆಗೆ ಪುಷ್ಟಿ ದೊರೆತಂತೆ ಕಾಣುತ್ತದೆ. ಹರಿದಾಸ ಸಾಹಿತ್ಯವಾಹಿನಿ ಇವರಲ್ಲಿ ವೈವಿಧ್ಯಪೂರ್ಣವಾಗಿ, ಬಹುಮುಖವಾಗಿ ವಿಕಸಿಸಿದೆ. ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತಭಾವಗಳ ಮೂಲಕ ಭಕ್ತಿ ಇಲ್ಲಿ ಹೊನಲಿಟ್ಟಿದೆ. ಜೋಗುಳದ ಹಾಡಿನಲ್ಲಿ ಹರಿಯ ದಶಾವತಾರಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಒಂದು ಪ್ರಸಂಗ ಅಥವಾ ಸಂದರ್ಭವನ್ನು ಆರಿಸಿಕೊಂಡು ನೀಳವಾದ ಕೀರ್ತನೆ ರಚಿಸಿರುವುದು ಇವರ ಇನ್ನೊಂದು ವೈಶಿಷ್ಟ್ಯ. ಶ್ರೀ ರುಕ್ಮಿಣಿಸತ್ಯಭಾಮ ವಿಲಾಸವನ್ನು ನಿದರ್ಶನವಾಗಿ ಹೆಸರಿಸಬಹುದು. ಇವರಲ್ಲಿ ಭಾಗವತಕ್ಕೆ ಹೆಚ್ಚು ಪ್ರಾಶಸ್ತ್ಯ ದೊರೆತಿದೆ. ಈ ಎಲ್ಲ ಕಾರಣಗಳಿಂದಾಗಿ ಹರಿದಾಸ ಸಾಹಿತ್ಯದ ಮುನ್ನಡೆಗೆ ಶ್ರೀಪಾದರಾಯರೇ ಮೊದಲಿಗರೆನ್ನಬಹುದು. ಕೀರ್ತನೆ, ಸುಳಾದಿ, ಉಗಾಭೋಗಗಳೊಂದಿಗೆ ದಂಡಕ, ವೃತ್ತನಾಮಗಳನ್ನೂ ಇವರು ಬಳಸಿಕೊಂಡಿದ್ದಾರೆ. ಇವರ ಅನಂತರದ ಹರಿದಾಸರಿಗೆ ಇವರ ಕೃತಿಗಳು ಸಾಂಪ್ರದಾಯಕವಾಗಿ ಪರಿಣಮಿಸಿದುವು. ಇವರ ಆತ್ಮಸಾಧನೆ ಉಳಿದವರಿಗೆ ಮಾರ್ಗದರ್ಶಕವಾಯಿತು.

ಶ್ರೀಪಾದರಾಯರ ಅನಂತರ ಇವರ ಶಿಷ್ಯೋತ್ತಮರಾದ ವ್ಯಾಸರಾಯರನ್ನು ಹೆಸರಿಸಬೇಕು. ಇವರು ಸು.1447ರಲ್ಲಿ ವಹ್ನಿಪುರದಲ್ಲಿ (ಈಗಿನ ಬನ್ನೂರು) ಜನಿಸಿದರು. ವಿಜಯನಗರದ ಕೃಷ್ಣದೇವರಾಯನ ಸಮಕಾಲೀನರೂ ರಾಜಮರ್ಯಾದೆಗೆ ಪಾತ್ರರೂ ಆಗಿದ್ದ ಗಣ್ಯ ಮಠಾಧಿಪತಿ ಇವರು. ಶ್ರೀಕೃಷ್ಣ ಎಂಬ ಅಂಕಿತದಿಂದ ಕೃತಿರಚನೆ ಮಾಡಿದ್ದಾರೆ. ಇವರ ಮತ್ತು ಇವರ ಶಿಷ್ಯರಿಂದ ಹರಿದಾಸರ ಒಂದು ಒಕ್ಕೂಟ ಪ್ರಾರಂಭವಾಯಿತು. ಪುರಂದರದಾಸ, ಕನಕದಾಸ, ವಾದಿರಾಜರು ದಾಸಕೂಟದ ಪ್ರಮುಖ ಸ್ತಂಭಗಳು, ಪ್ರತಿನಿಧಿಗಳು. ಶ್ರೀಪಾದರಾಯರಲ್ಲಿ ಕಂಡುಬರುವ ದೃಷ್ಟಿ ಭಾವಾದಿಗಳು ಇವರಲ್ಲಿ ಇನ್ನೂ ಬೆಳೆವಣಿಗೆ ಹೊಂದಿವೆ. ಅಪೂರ್ವವಾದ ಕೆಲವು ಭಾವನೆಗಳನ್ನು ಇವರಲ್ಲಿ ಕಾಣಬಹುದು. ಆದಿಕವಿ ಪಂಪ ಬನವಾಸಿಯಲ್ಲಿ ಮರುಹುಟ್ಟು ಬಯಸಿದಂತೆ ವ್ಯಾಸರಾಯರು ಬೃಂದಾವನದಲ್ಲಿ ಮತ್ತೊಮ್ಮೆ ಹುಟ್ಟಬೇಕೆಂದು ಹಂಬಲಿಸುತ್ತಾರೆ. ಕೃಷ್ಣನನ್ನು ಕುರಿತು 'ಏನಬೇಡಲೊ ನಿನ್ನ ದೇವಾಧಿದೇವ' ಎಂದು ಪ್ರಶ್ನಿಸುತ್ತ 'ವನಿತೆಯರ ಬೇಡಲೆ ಬ್ರಹ್ಮಚಾರಿ' ಎಂದು ಉದ್ಗರಿಸುತ್ತಾರೆ. ವಾಮನಾವತಾರದಲ್ಲಿ ವಟುವಾಗಿ ಬಂದ ಆ ಕೃಷ್ಣನನ್ನು ವ್ಯಾಸರಾಯರು ಪ್ರಶ್ನಿಸಿರುವ ರೀತಿ ಇದು. ದಾಸಕೂಟದ ಮೇಲ್ವಿಚಾರಕರ ಸ್ಥಾನದಲ್ಲಿರುವ ಇವರನ್ನು ಕುರಿತು ಗುರುವೆಂದೂ ಜ್ಞಾನಿಗಳ ಅರಸನೆಂದೂ ಪುರಂದರದಾಸರು ಹೊಗಳಿದ್ದಾರೆ.

ವ್ಯಾಸರಾಯರ ಶಿಷ್ಯಪರಂಪರೆಯಲ್ಲಿ ಕರ್ನಾಟಕದ ಮನೆ ಮನೆಯಲ್ಲಿಯೂ ಕೇಳಿಬರುವ ಹೆಸರೆಂದರೆ ಪುರಂದರದಾಸರದು (ನೋಡಿ). ತಮ್ಮ ಅಪಾರ ಕೃತಿರಾಶಿಯಿಂದ ಇವರು ಕನ್ನಡಿಗರಿಗೆ ಚಿರ ಪರಿಚಿತರಾಗಿದ್ದಾರೆ. ಇವರು ಸು.1484ರಲ್ಲಿ ಪುರಂದರಗಡ ಎಂಬಲ್ಲಿ ಜನಿಸಿದರು. ಪೂರ್ವಾಶ್ರಮದ ಹೆಸರು ಶ್ರೀನಿವಾಸನಾಯಕ, ಹೆಂಡತಿ ಸರಸ್ವತಿ. ದಾಸದೀಕ್ಷೆಯನ್ನು ಕೈಗೊಳ್ಳುವ ಮೊದಲು ಅತ್ಯಂತ ಶ್ರೀಮಂತರಾಗಿ ವೈಭವದಿಂದ ಮೆರೆದವರು. ಮೂಗುತಿಯ ಕಾರಣದಿಂದ ಮನಃ ಪರಿವರ್ತನೆಯಾದ ಮೇಲೆ, ಐಶ್ವರ್ಯವನ್ನೆಲ್ಲ ದಾನಮಾಡಿ ವ್ಯಾಸರಾಯರ ಬಳಿ ಬಂದು ದಾಸದೀಕ್ಷೆಯನ್ನು ಕೈಗೊಂಡರು ಇತ್ಯಾದಿ ವಿಚಾರಗಳು ಪ್ರಚಲಿತವಾಗಿವೆ. ಆದರೆ ಕಮಲಾಪುರದ ತಾಮ್ರಶಾಸನದಿಂದ (1526 ಫೆಬ್ರವರಿ 24) ಅಧಿಕೃತವಾಗಿ ತಿಳಿದಿರುವ ಅಂಶಗಳು ಹೀಗಿವೆ. ಪುರಂದರದಾಸರು ವಸಿಷ್ಠಗೋತ್ರದ ಯಜುಶ್ಶಾಖೆಯವರು. ಇವರಿಗೆ ಲಕ್ಷ್ಮಣದಾಸ, ಹೇಬಣದಾಸ ಮತ್ತು ಮಧ್ವಪದಾಸ ಎಂಬ ಮೂವರು ಮಕ್ಕಳಿದ್ದರು. ಪುರಂದರದಾಸರು ಬದುಕಿದ್ದಾಗಲೇ ವಿಜಯನಗರದ ಅರಸ ಕೃಷ್ಣದೇವರಾಯನಿಂದ ಹೊರಟ ಶಾಸನವಿದು. ಇವರು ವ್ಯಾಸರಾಯರ ಶಿಷ್ಯರಾಗಿದ್ದುದು ಇವರ 'ವ್ಯಾಸರಾಯರ ಚರಣಕಮಲದರುಶನ .............' ಎಂಬ ಕೀರ್ತನೆಯಿಂದಲೇ ಸ್ಪಷ್ಟವಾಗುತ್ತದೆ. ಅವರಿಂದಲೇ ದಾಸದೀಕ್ಷೆ ಪಡೆದು ಪುರಂದರವಿಠಲ ಎಂಬ ಅಂಕಿತದಿಂದ ಕೃತಿರಚನೆ ಮಾಡಿದರು. ಹೆಂಡತಿಯ ಮೂಲಕ ಭಕ್ತಿಯೆಡೆಗೆ ತಿರುಗಿದ ಮನಸ್ಸು ಗುರುಮುಖೇನ ದೀಕ್ಷೆಯನ್ನು ಪಡೆಯಿತು. ಪಂಚಭಾವಗಳ ಮೂಲಕ ಭಗವಂತನನ್ನು ಇವರು ಬಗೆಬಗೆಯಾಗಿ ಸ್ತುತಿಸಿದ್ದಾರೆ. ವಾತ್ಸಲ್ಯಭಾವಕ್ಕೆ ಇವರಲ್ಲಿ ಹೆಚ್ಚಿನ ಪ್ರಾಮುಖ್ಯ ದೊರೆತಿದೆ. ಭಕ್ತಿಸಾಧನೆಯೊಂದಿಗೆ ಸಮಾಜದ ರೀತಿ ನೀತಿಗಳನ್ನು ಸರಿಪಡಿಸುವ ಹೊಣೆಯನ್ನು ಹೊತ್ತು ನಿರ್ವಹಿಸಿದ್ದಾರೆ. ನಡೆದಂತೆ ನುಡಿಯುತ್ತ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ವೈದ್ಯನಂತೆ ನೋಡುತ್ತ ಅದರ ಸರಿತಪ್ಪುಗಳನ್ನು ಎತ್ತಿ ಆಡಿದ್ದಾರೆ. ಇವರು ಶುಷ್ಕ ನೀತಿಬೋಧಕರಲ್ಲ, ಜನರೊಡನೆ ಬೆರೆತು, ಅವರ ಕಷ್ಟ ಸುಖಗಳನ್ನು ಹಂಚಿಕೊಂಡು ಅವರಿಗೆ ಮುಕ್ತಿ ಪಥವನ್ನು ತೋರಿಸಿಕೊಟ್ಟು ದಿಟ್ಟರು. ಮಧ್ವಮತ ತತ್ತ್ವ, ವೇದಾಂತಸಾರಗಳನ್ನು ಕನ್ನಡದಲ್ಲಿ ಸಾರಿದ ಹರಿಕಾರರು. ವ್ಯಾಸರಾಯರು ಇವರ ಕೃತಿಗಳನ್ನು ಒಟ್ಟಾಗಿ ಪುರಂದರೋಪನಿಷತ್ತು ಎಂದು ಕರೆದು ಶ್ಲಾಘಿಸಿದ್ದಾರೆ. ಅದರಲ್ಲಿ ಕೀರ್ತನೆಗಳು ಮಾತ್ರವಲ್ಲ, ಅನುಭವದ ರಸಗಟ್ಟಿಗಳಾದ ಉಗಾಭೋಗಗಳೂ ತತ್ತ್ವಭೂಯಿಷ್ಠವಾದ ಸುಳಾದಿಗಳೂ ಅಡಕವಾಗಿವೆ. ಆತ್ಮಚರಿತ್ರೆ, ಆಧ್ಯಾತ್ಮಿಕದೃಷ್ಟಿ ಹಾಗೂ ಲೋಕಚರಿತ್ರೆ ಈ ದೃಷ್ಟಿಗಳಿಂದಲೂ ಇವರ ಕೃತಿಗಳು ವಿಶಿಷ್ಟವಾಗಿವೆ. ಜನಸಾಮಾನ್ಯರ ಬದುಕನ್ನು ಅನಂತರೀತಿಯಲ್ಲಿ ನೋಡುವ ಒಂದು ವಿಸ್ತಾರ ದೃಷ್ಟಿ ಇವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸಾರ್ವಜನಿಕ ಹಾಗೂ ಸಾರ್ವಕಾಲಿಕ ಧರ್ಮಸತ್ಯಗಳನ್ನು ಎತ್ತಿಹಿಡಿಯುವುದರಲ್ಲಿ ಹರಿದಾಸ ಸಾಹಿತ್ಯದಲ್ಲಿ ಕನಕದಾಸರನ್ನು ಬಿಟ್ಟರೆ ಉಳಿದವರಾರೂ ಇವರ ಸಮಕ್ಕೆ ಬರಲಾರರು. ಸಾಹಿತ್ಯ, ಸಂಗೀತ ಮತ್ತು ಪಾರಮಾರ್ಥಿಕಗಳ ಸಮ್ಮಿಲನ ಇವರ ಕೃತಿಗಳಲ್ಲಿದೆ. ಕೃಷ್ಣನ ವಿವಿಧ ಲೀಲೆಗಳನ್ನು ದಶಾವತಾರಗಳನ್ನು ಬಗೆಬಗೆಯಾಗಿ ವರ್ಣಿಸುವ ಅಸಂಖ್ಯಾತ ಕೃತಿಗಳು ಶ್ರೇಷ್ಠ ಭಾವಗೀತೆಗಳಾಗಿವೆ. ಧರ್ಮವೇ ಜಯವೆಂಬ ದಿವ್ಯಮಂತ್ರ ಎಂಬ ಹಾಡಿನಲ್ಲಿ ಧರ್ಮಜೀವನದ ತುತ್ತತುದಿಯ ಆದರ್ಶವನ್ನು ಬಹು ಸೊಗಸಾಗಿ ವರ್ಣಿಸಿದ್ದಾರೆ. ಶಾಸ್ತ್ರೀಯ ಸಂಗೀತದ ಆರಂಭದ ಅಭ್ಯಾಸಿಗಳಿಗೆ ಪಿಳ್ಳಾರಿಗೀತೆಗಳನ್ನು ರಚಿಸಿಕೊಟ್ಟಿದ್ದಾರೆ. ಇವರು ನಾರದಾಂಶಸಂಭೂತರೆಂದು ಪ್ರತೀತಿ. ಕರ್ನಾಟಕ ಸಂಗೀತಕ್ಕೆ ಭದ್ರವಾದ ತಳಪಾಯವನ್ನು ಹಾಕಿದವರೇ ಇವರು. ಶಾಸ್ತ್ರೀಯ ಸಂಗೀತಕ್ಕೆ ಹೊಂದುವ ಕನ್ನಡ ಹಾಡುಗಳನ್ನು ರಚಿಸಿರುವುದು ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ. ದಾಸರೆಂದರೆ ಪುರಂದರದಾಸರಯ್ಯ ಎಂದು ಗುರು ವ್ಯಾಸರಾಯರೇ ಇವರನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ.

ಪುರಂದರದಾಸರ ಸಮಕಾಲೀನರೂ ವ್ಯಾಸರಾಯರ ಶಿಷ್ಯರೂ ಆದ ಮತ್ತೊಬ್ಬ ದಾಸಶ್ರೇಷ್ಠರು ಕನಕದಾಸರು. ಇಂದಿನ ಹಾವೇರಿ ಜಿಲ್ಲೆಯ ಬಂಕಾಪುರದ ಬಳಿ ಇರುವ ಬಾಡ ಎಂಬಲ್ಲಿ ಜನಿಸಿದರು (ಸು.1500) ಜಾತಿಯಲ್ಲಿ ಕುರುಬರು. ಹೆಸರು ತಿಮ್ಮ, ಚಿಕ್ಕಂದಿನಲ್ಲೇ ತಂದೆ-ತಾಯಿಗಳು ತೀರಿಕೊಂಡರು. ಬಾಲಕ ತಿಮ್ಮನಿಗೆ ಬೇಟೆ, ಕತ್ತಿವರಸೆ, ಕಾಳಗಗಳಲ್ಲಿ

ವಿಶೇಷ ಆಸಕ್ತಿ ಮೂಡಿತು. ಅನೇಕ ಗ್ರಾಮಗಳ ಢಣಾಯಕನಾದ. ನಿಧಿಯೊಂದು ಸಿಕ್ಕಿದ್ದರಿಂದ ಕನಕನಾಯಕನೆಂದು ಪ್ರಸಿದ್ಧನಾದ. ಪುರಂದರರಂತೆ ವೈರಾಗ್ಯದ ಕಡೆ ತಿರುಗಿ ವ್ಯಾಸರಾಯರ ಗುರುತ್ವದಲ್ಲಿ, ಆದಿಕೇಶವ ಎಂಬ ಅಂಕಿತದಲ್ಲಿ ಕೃತಿರಚನೆ ಮಾಡಿ ಕನಕದಾಸರಾದರು. ಇವರದು ಶ್ರೀವೈಷ್ಣವ ಸಂಪ್ರದಾಯವೋ ಮಾಧ್ವ ಸಂಪ್ರದಾಯವೋ ಎಂಬ ಬಗ್ಗೆ ಏಕಾಭಿಪ್ರಾಯವಿಲ್ಲ. ಇವರ ಕಾವ್ಯಗಳಲ್ಲೊಂದಾದ ಮೋಹನ ತರಂಗಿಣಿಯಿಂದ ಇವರು ಶ್ರೀವೈಷ್ಣವಸಂಪ್ರದಾಯಸ್ಥರೆನ್ನಲು ಅವಕಾಶವಿದೆ. ವ್ಯಾಸರಾಯರ ಶಿಷ್ಯರಾಗಿ ಮಧ್ವಮತ ತತ್ತ್ವಗಳನ್ನೂ ಬೋಧಿಸಿದ್ದಾರೆ. ಹರಿ ಹರ ಸಾಮರಸ್ಯದೃಷ್ಟಿ ಮೋಹನ ತರಂಗಿಣಿಯಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಇವರ ಸಾಮರಸ್ಯದೃಷ್ಟಿ ಭಿನ್ನಧರ್ಮದ ನಾಯಕ ನಾಯಿಕೆಯರನ್ನು ವಿವಾಹಬಂಧನದ ಮೂಲಕ ಒಟ್ಟುಗೂಡಿಸುವವರೆಗೂ ಚಾಚಿದೆ. ಇವರ ಕ್ರಾಂತಿಕಾರಕ ಮನೋಭಾವಕ್ಕೆ ಇದೊಂದು ನಿದರ್ಶನ. ಸಮಾಜದ ರೀತಿನೀತಿಗಳನ್ನು ಕಟುವಾಗಿ ಟೀಕಿಸಬಲ್ಲ ಎದೆಗಾರಿಕೆ ಇವರದು. ಡೊಂಕುಬಾಲದ ನಾಯಕರೆ ನೀವೇನೂಟವ ಮಾಡಿದಿರಿ ಎಂಬ ಹಾಡಿನಲ್ಲಿ ಸಾಮಾಜಿಕ ವಿಡಂಬನೆ ಕಾಣುತ್ತದೆ. ಕನಕನ ಕಿಂಡಿಯು ಕಲ್ಪಿತ ಕಥೆ ಮಾರ್ಮಿಕವಾಗಿ ಅಂದಿನ ಸಾಮಾಜಿಕ ನಡೆವಳಿಕೆಯನ್ನೂ ಕನಕದಾಸರ ಭಕ್ತಿಪಾರಮ್ಯವನ್ನೂ ಸೂಚಿಸುತ್ತದೆ. ಲೋಕ ಹೇಗೆ ತಿಳಿಯಲಿ ವ್ಯಾಸರಾಯರು ಕನಕರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು, ಪುರಂದರದಾಸರು ಸ್ನೇಹಿತರಾಗಿ ಕಂಡರು. ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯಚರಿತ್ರೆ, ಹರಿಭಕ್ತಿ ಸಾರ -ಈ ಕಾವ್ಯಗಳನ್ನು ರಚಿಸಿ, ಹರಿದಾಸ ಪಂಥದಲ್ಲಿ ಕವಿಯೆನಿಸಿ ಕೊಂಡಿದ್ದಾರೆ. ಪದ, ಸುಳಾದಿ, ಉಗಾಭೋಗಗಳೊಂದಿಗೆ ಮುಂಡಿಗೆಗಳನ್ನೂ ರಚಿಸಿದ ವೈಶಿಷ್ಟ್ಯ ಇವರದು.

ಕನಕದಾಸರ ಬಳಿಕ ವ್ಯಾಸರಾಯರ ಪ್ರಮುಖ ಶಿಷ್ಯರಲ್ಲೊಬ್ಬರಾದ ವಾದಿರಾಜರು. ಸೋದೆಮಠದ ಅಧಿಪತಿಯಾಗಿದ್ದ (1480-1600) ಇವರ ಹುಟ್ಟು ಹೆಸರು ವರಾಹ. ವಾದದಲ್ಲಿ ಇವರು ನಿಸ್ಸೀಮರು. ಸಂಸ್ಕೃತ, ಕನ್ನಡಗಳಲ್ಲಿ ಪಾಂಡಿತ್ಯ ಪಡೆದಿದ್ದ ಸವ್ಯಸಾಚಿ, ಉಡುಪಿಯ ಅಷ್ಟಮಠಗಳನ್ನು ಒಂದು ವ್ಯವಸ್ಥೆಗೆ ತಂದು, ಪರ್ಯಾಯದ ಏರ್ಪಾಡು ಮಾಡಿದವರು. ಇಷ್ಟದೈವ ಇವರಿಗೆ ಕುದುರೆಯ ರೂಪದಲ್ಲಿ ದರ್ಶನಕೊಟ್ಟಿತಂತೆ. ಹಯವದನ ಎಂಬ ಅಂಕಿತದಿಂದ ಕೃತಿರಚನೆ ಮಾಡಿದ್ದಾರೆ. ಶಾಸ್ತ್ರೀಯ ವಿಚಾರಗಳತ್ತ ಇವರಿಗೆ ಗಮನ ಹೆಚ್ಚು. ಸಂಭಾಷಣಾರೂಪದಲ್ಲಿ ಕೃತಿರಚನೆ ಮಾಡಿರುವುದು ಇವರ ವೈಶಿಷ್ಟ್ಯ. ಮಹಾಭಾರತದ ಕೀಚಕವಧೆಯ ಪ್ರಸಂಗವನ್ನು ಮನೋಹರವಾಗಿ ಚಿತ್ರಿಸಿದ್ದಾರೆ. ಕೀರ್ತನೆಯನ್ನು ಕಟ್ಟುತ್ತಿದ್ದ ದಾಸರದೃಷ್ಟಿ ಇಲ್ಲಿ ಕಥನಕವನದ ಘಟ್ಟವನ್ನು ಮುಟ್ಟಿದೆ. ಸ್ವಪ್ನಪದ, ಲಕ್ಷ್ಮೀಶೋಭಾನೆ, ವೈಕುಂಠ ವರ್ಣನೆಗಳಂಥ ಖಂಡಕಾವ್ಯಗಳೆನ್ನಬಹುದಾದ ಕೃತಿಗಳನ್ನೂ ರಚಿಸಿದ್ದಾರೆ. ವೈಕುಂಠವರ್ಣನೆ ನಾಲ್ಕು ಸಂಧಿಗಳಲ್ಲಿ ಅಡಕವಾಗಿರುವ ಸಾಂಗತ್ಯ ಕೃತಿ. ಕನ್ನಡಿಯಂತಿರುವ ಪೂರ್ಣಪ್ರಜ್ಞರ ಮತದ ಸಾರವನ್ನು ಕನ್ನಡಿಸುವುದೇ ತನ್ನ ಕರ್ತವ್ಯವೆಂದು ಒಂದು ಕಡೆ ಹೇಳಿಕೊಂಡಿದ್ದಾರೆ. ಉಭಯ ಭಾಷಾವಿಶಾರದರಾದ ಇವರ ಈ ಸಂಕಲ್ಪ ಕನ್ನಡಿಗರಿಗೆ ನಿಜಕ್ಕೂ ಒಂದು ವರವಾಗಿ ಪರಿಣಮಿಸಿದೆ. ತತ್ತ್ವ ಪ್ರಕಾಶಿಕಾ, ಭಗವದ್ಗೀತಾಟಿಪ್ಪಣಿ, ಮಹಾಭಾರತಟೀಕಾ ಮೊದಲಾದ ಸಂಸ್ಕೃತಗ್ರಂಥಗಳನ್ನು ರಚಿಸಿದ್ದಾರೆ. ನೂರಿಪ್ಪತ್ತು ವರ್ಷಗಳ ತುಂಬುಬಾಳನ್ನು ಬಾಳಿದ ಇವರು ಅನೇಕ ಕೀರ್ತನೆಗಳು, ಉಗಾಭೋಗಗಳು, ಸುಳಾದಿಗಳನ್ನು ರಚಿಸಿದ್ದಾರೆ. 'ತಾಳುವಿಕೆಗಿಂತ ತಪವು ಇಲ್ಲ' ಎಂಬುದು ಇವರು ನೀಡಿದ ಸಂದೇಶ.

ವಿಜಯದಾಸರು, ಗೋಪಾಲದಾಸರು ಮತ್ತು ಜಗನ್ನಾಥದಾಸರು ದಾಸಸಾಹಿತ್ಯ ಪರಂಪರೆಯನ್ನು ಮುಂದುವರಿಸಿದವರು. ಕಾವ್ಯಮಯವಾದ ದೃಷ್ಟಿಕೋನದಿಂದ ಶಾಸ್ತ್ರಭೂಯಿಷ್ಠವಾಗಿ ಪರಿಣಮಿಸಿದ ಹರಿದಾಸ ಸಾಹಿತ್ಯದ ಒಂದು ತಿರುವನ್ನು ವಿಜಯದಾಸರ ಕೃತಿಗಳಲ್ಲಿ ಗುರುತಿಸಬಹುದು. 18ನೆಯ ಶತಮಾನದಲ್ಲಿ ಚೀಕಲಪರಿವೆ ಎಂಬಲ್ಲಿ ಇವರು ಜನಿಸಿದರು. ಸ್ವಪ್ನದಲ್ಲಿ ಪುರಂದರದಾಸರ ಅನುಗ್ರಹವಾಯಿತು. ವಿಜಯವಿಠಲ ಎಂಬ ಅಂಕಿತ ದೊರೆಯಿತು. ಇವರು ಕೀರ್ತನೆಗಳಲ್ಲಿ ತಮ್ಮ ಪರೋಕ್ಷ ಗುರುವನ್ನು ನಾನಾವಿಧವಾಗಿ ಸ್ತುತಿಸಿದ್ದಾರೆ. ಇವರಲ್ಲಿ ಭಾವ ವೈವಿಧ್ಯ, ಲಾಲಿತ್ಯ, ಕಡಿಮೆ, ತತ್ತ್ವಗಳ ನಿರೂಪಣೆಗೆ ಅನುಗುಣವಾಗಿ ಸುಳಾದಿಯಂಥ ಬಿಗುಬಂಧ ರೂಪುಗೊಂಡಿದೆ. ಗಹನತತ್ತ್ವಗಳನ್ನು ಸರಳವಾಗಿ ನಿರೂಪಿಸಿರುವ ಕೌಶಲ ಮೆಚ್ಚುವಂಥದು. ಹರಿ ಸರ್ವೋತ್ತಮತ್ವ, ಬಿಂಬರೂಪಿ ಪರಮಾತ್ಮನನ್ನು ಒಲಿಸಿಕೊಳ್ಳುವ ಬಗೆ, ಜ್ಞಾನ - ಭಕ್ತಿ - ವೈರಾಗ್ಯಗಳ ಸಂಪಾದನೆ, ಪ್ರಾಣದೇವರಸ್ತುತಿ, ಮಾನವ ಜನ್ಮದಲ್ಲಿ ಕರ್ಮದ ಪಾತ್ರ ಇತ್ಯಾದಿ ಅನೇಕ ಗಹನ ತತ್ತ್ವಗಳನ್ನು ತೆಗೆದುಕೊಂಡು ಅವನ್ನು ವಿವರಿಸಲೆತ್ನಿಸಿದ್ದಾರೆ. ಇವರ ಶಿಷ್ಯ ಗೋಪಾಲದಾಸರು, ಇವರ ಪೂರ್ವಾಶ್ರಮದ ಹೆಸರು ಭಾಗಣ್ಣ, ಭಕ್ತಿಯಲ್ಲಿ ಭಾಗಣ್ಣ ಎಂಬ ಜನಪ್ರಿಯೋಕ್ತಿಯೊಂದಿದೆ. ದಾಸಚತುಷ್ಟಯ ಎಂದು ಪ್ರಸಿದ್ಧರಾಗಿರುವವರಲ್ಲಿ ಪುರಂದರ, ವಿಜಯ ಹಾಗೂ ಜಗನ್ನಾಥದಾಸರೊಂದಿಗೆ ಇವರೂ ಒಬ್ಬರು. ವಿಜಯದಾಸರಿಂದ ದೀಕ್ಷೆಪಡೆದು 'ಗೋಪಾಲವಿಠಲ' ಎಂಬ ಅಂಕಿತದಲ್ಲಿ ಕೃತಿರಚನೆ ಮಾಡಿದ್ದಾರೆ.

ಅನಂತರದ ಹರಿದಾಸ ಪೀಳಿಗೆಯಲ್ಲಿ ಜಗನ್ನಾಥದಾಸರು ಮುಖ್ಯರು. ವಿಜಯದಾಸರಲ್ಲಿ ಕಾಣುವ ಶಾಸ್ತ್ರಪ್ರಾವೀಣ್ಯ ಇವರಲ್ಲಿ ಇನ್ನೂ ಹೆಚ್ಚಿನ ಪಕ್ವತೆ ಪಡೆದಿದೆ. ಸು.1727ರಲ್ಲಿ ಮಾನ್ವಿ ತಾಲ್ಲೂಕಿನ ಬ್ಯಾಗವಟ್ಟದಲ್ಲಿ ಜನಿಸಿದರು. ಮೊದಲ ಹೆಸರು ಶ್ರೀನಿವಾಸ. ಅಂಕಿತ ಜಗನ್ನಾಥವಿಠಲ. ಹರಿಕಥಾಮೃತಾಸಾರ ಇವರ ತಾತ್ತ್ವಿಕ ಉದ್ಗ್ರಂಥ. ಇದರಲ್ಲಿ ಶುಷ್ಕವೈದಿಕ ತತ್ತ್ವಬೋಧನೆ ಮಾತ್ರವಿರದೆ ಸರಳವಾಗಿ, ಅರ್ಥವಾಗುವಂತಿರುವುದು ಇದರ ವೈಶಿಷ್ಟ್ಯ. ಈ ಕೃತಿಯಲ್ಲಿ 32 ಸಂಧಿಗಳಿವೆ. ಭಾಮಿನೀಷಟ್ಪದಿಯಲ್ಲಿ ರಚಿತವಾಗಿರುವ ಶುದ್ಧಕಾವ್ಯವಿದಲ್ಲ ಎಂದು ಕವಿಯೇ ಹೇಳಿಬಿಟ್ಟಿದ್ದಾರೆ. ಶಾಸ್ತ್ರದಲ್ಲಿ ಅಭಿರುಚಿ, ಧರ್ಮದಲ್ಲಿ ಶ್ರದ್ಧೆ, ಪರಮಾತ್ಮನಲ್ಲಿ ಪ್ರೀತಿಯಿರುವ ಎಲ್ಲರಿಗೂ ಈ ಗ್ರಂಥ ಒಂದು ಸವಿಯುಣಿಸಾಗಬಲ್ಲುದು. ಇದರೊಂದಿಗೆ ಅನೇಕ ಕೀರ್ತನೆಗಳನ್ನೂ ಸುಳಾದಿಗಳನ್ನೂ ಇವರು ರಚಿಸಿದ್ದಾರೆ. ಸುವ್ವಾಲಿಗಳ ರಚನೆ ಇವರ ಮತ್ತೊಂದು ವೈಶಿಷ್ಟ್ಯ.

ವಾತ್ಸಲ್ಯ ಭಾವದ ಪ್ರತಿಪಾದನೆಯ ದೃಷ್ಟಿಯಿಂದ ಜಗನ್ನಾಥದಾಸರ ಸಮಕಾಲೀನರಾದ ಪ್ರಸನ್ನ ವೆಂಕಟದಾಸರನ್ನು ಗಮನಿಸಬೇಕಾಗುತ್ತದೆ. ವಾತ್ಸಲ್ಯ ಭಾವದ ಪ್ರತಿಪಾದನೆ ಎಲ್ಲ ದಾಸರಲ್ಲೂ ಸಾಮಾನ್ಯವಾಗಿ ಕಂಡುಬಂದರೂ ಇವರಲ್ಲಿ ವಿಶೇಷವಾಗಿದೆ. ಕೃಷ್ಣಾದಿಗಳ ಬಾಲಭಾಷೆಯನ್ನು ಬಳಸಿ ಕೊಂಡಿರುವುದು ಇವರ ವೈಶಿಷ್ಟ್ಯ. ಹೀಗೆ ಹರಿದಾಸ ಪರಂಪರೆಯನ್ನು ಗಮನಿಸಿದರೆ ಪ್ರಾಣೇಶವಿಠಲರು (ಸು.1736-1822), ಗುರುಶ್ರೀಶವಿಠಲರು (ಸು.1740-1840), ಶ್ರೀದವಿಠಲರು (ಸು.1800), ಹರಪನಹಳ್ಳಿ ಭೀಮವ್ವ (ಸು.1823-1903), ಗುರುಜಗನ್ನಾಥವಿಠಲರು (ಸು.1841-1930) ಮೊದಲಾದ ಸುಮಾರು ಮೂರುನೂರಾ ಐವತ್ತು ಮಂದಿ ದಾಸರು ಆಗಿಹೋಗಿದ್ದಾರೆ.

ಹರಿದಾಸ ಸಾಹಿತ್ಯವನ್ನು ಒಟ್ಟಾಗಿ ಪರಿಶೀಲಿಸಿದಾಗ ಕೆಲವು ವಿಶಿಷ್ಟ ಗುಣಗಳನ್ನು ಗುರುತಿಸಬಹುದು. ಮಧ್ವಾಚಾರ್ಯರ ಹನುಮ, ಭೀಮ, ಮಧ್ವ - ಈ ಅವತಾರಾತ್ರಯದಲ್ಲಿ ಹರಿದಾಸರೆಲ್ಲರಿಗೂ ನಂಬಿಕೆಯಿದೆ. ಹರಿಯ ದಶಾವತಾರಗಳನ್ನೊಪ್ಪಿಕೊಂಡ ವಿಷ್ಣುಪಂಥೀಯರಿವರು. ಹನುಮನಿಗೆ ಗುರುಪದವಿಯನ್ನು ಕೊಟ್ಟಿರುವ ದ್ವೈತಿಗಳು. ಈ ಹಿನ್ನೆಲೆಯಲ್ಲಿ, ವಿಷ್ಣುಭಕ್ತಿಯ ಆಗರಗಳಾದ ರಾಮಾಯಣ, ಮಹಾಭಾರತ, ಭಾಗವತಗಳನ್ನು ತಮ್ಮ ತತ್ತ್ವಪ್ರತಿಪಾದನೆಗಳಲ್ಲಿ ಧಾರಾಳವಾಗಿ ಇವರು ಬಳಸಿಕೊಂಡಿದ್ದಾರೆ. ಹನುಮನ ಸ್ವಾಮಿಭಕ್ತಿದ್ಯೋತಕವಾಗಿರುವ ರಾಮಾಯಣ, ಭೀಮನ ಪರಾಕ್ರಮದ ಪ್ರತೀಕವಾಗಿರುವ ಮಹಾಭಾರತ, ವಿಷ್ಣುವಿನ ಲೀಲಾಕಥನವೇ ಆದ ಭಾಗವತ - ಇವು ಅನುಸರಣೀಯವಾದುದರಲ್ಲಿ ಆಶ್ಚರ್ಯವಿಲ್ಲ. ತಮ್ಮ ನಂಬಿಕೆಗಳನ್ನು ಧ್ರುವ, ಅಜಾಮಿಳ, ಪ್ರಹ್ಲಾದ, ಗಜೇಂದ್ರ, ಬಲಿ, ಅಂಬರೀಷ ಮೊದಲಾದವರ ಉದಾಹರಣೆಗಳ ಮೂಲಕ ನಮಗೆ ಮತ್ತೆ ಮತ್ತೆ ದಾಸರು ಸ್ಪಷ್ಟಪಡಿಸುತ್ತಾರೆ. ಅಂತೆಯೇ ಪೂತನಿ, ಕಂಸ, ಶಕಟಾಸುರ, ಕಾಳಿಂಗನೇ ಮೊದಲಾದ ದುಷ್ಟರ ನಿಗ್ರಹ ದಾಸರಿಗೆ ಮಾದರಿಯಾಗಿದೆ. ಭಾಗವತದ ದಶಮಸ್ಕಂದವನ್ನಂತೂ ದಾಸರ ಪದಗಳಿಂದಲೇ ಪುನಾರಚಿಸಬಹುದು. ಪ್ರತಿಯೊಬ್ಬ ದಾಸರೂ ಗುರುಮುಖೇನ ಅಂಕಿತವನ್ನು ಪಡೆದಿರುವುದು ಸ್ಪಷ್ಟವಿದೆ.

ಸಾಮಾನ್ಯ ಜನರ ಉದ್ಧಾರಕ್ಕೆ ಕಂಕಣಬದ್ಧರಾಗಿ ನಿಂತಂಥ ಹರಿದಾಸರು ಆ ಜನರ ಪ್ರತಿನಿತ್ಯದ ಜೀವನದ ಕಡೆಗೂ ತಮ್ಮ ದೃಷ್ಟಿಯನ್ನು ಹರಿಸಿರುವುದು ಸ್ತುತ್ಯರ್ಹ. ಲೌಕಿಕ ಘಟನೆಗಳನ್ನು ಬಣ್ಣಿಸಿ

ಅದಕ್ಕೆ ಒಂದು ಪಾರಮಾರ್ಥಿಕ ಅರ್ಥವನ್ನಳವಡಿಸಿರುವುದು ಹರಿದಾಸರ ವೈಶಿಷ್ಟ್ಯಗಳಲ್ಲೊಂದು. ಜೀವನದಲ್ಲಿ ಅಂಟಿಯೂ ಅಂಟದಂತೆ ಬಾಳಬೇಕೆಂಬುದೇ ಹರಿದಾಸರ ಉಪದೇಶದ ಸಾರ. ಮಾನವಧರ್ಮವನ್ನು ಕಟ್ಟುವ ಪ್ರಯತ್ನ ಅವರದು. ಸಮಾಜದಲ್ಲಿದ್ದ ಸಣ್ಣತನ, ಮತ್ಸರ, ಮೋಹ, ಭ್ರಮೆ, ಅಂಧಶ್ರದ್ಧೆ, ಕುರುಡುನಿಷ್ಠೆ- ಇತ್ಯಾದಿ ರೋಗಾಣುಗಳನ್ನೆಲ್ಲ ತಮ್ಮ ಸಾಹಿತ್ಯವೆಂಬ ಸಿದ್ಧೌಷಧದಿಂದ ನಾಶಪಡಿಸಲೆತ್ನಿಸಿದರು. ತಮ್ಮದು ನ್ಯಾಯಮಾರ್ಗವೆಂಬ ಪ್ರಜ್ಞೆಯನ್ನು ಎಲ್ಲಿಯೂ ಅವರು ಮರೆತಂತಿಲ್ಲ. ಆ ಧೈರ್ಯದಿಂದಲೇ ಅವರು ಭಗವಂತನೊಡನೆ ವಾದ ಮಾಡಲು ಶಕ್ತರಾದುದು. ಪರಮಾತ್ಮನ ಸ್ವರೂಪ, ಗುಣಾದಿ ವಿಷಯಗಳಿಗೆ ಬಂದಾಗಲಂತೂ ಅವರ ಸರಳ ಸುಂದರ ನಿರೂಪಣೆಗಳು ಅಚ್ಚರಿಯನ್ನುಂಟುಮಾಡುತ್ತವೆ. ವೇದೋಪನಿಷತ್ತುಗಳ ಸಾರವನ್ನೇ ಕನ್ನಡಕ್ಕವರು ಭಟ್ಟಿಯಿಳಿಸಿಕೊಟ್ಟಿದ್ದಾರೆ.

ಇಡೀ ಭಾರತದಲ್ಲೇ ಧರ್ಮಜಾಗೃತಿಯ ಕಾಲವಾಗಿದ್ದ ಆ ಪರ್ವಕಾಲದಲ್ಲಿ, ಕರ್ನಾಟಕದಲ್ಲಿ ಧರ್ಮ ಹಾಗೂ ವಿಷ್ಣುಭಕ್ತಿಗಳನ್ನು ಪುನರುಜ್ಜೀವನಗೊಳಿಸಿದ ಕೀರ್ತಿ ಹರಿದಾಸರದು. ತಮ್ಮ ನಾದಮಯ ಪದಸೃಷ್ಟಿಯನ್ನು ತಂಬೂರಿಯ ಶ್ರುತಿಯೊಂದಿಗೆ ಮೇಳವಿಸಿ, ಕಾಲಿಗೆ ಗೆಜ್ಜೆಕಟ್ಟಿಕೊಂಡು ನರ್ತಿಸುತ್ತ ಹಾಡಿ, ಮನೆ ಮನೆಗೂ ಸಂಗೀತ, ಸಾಹಿತ್ಯ, ನೃತ್ಯಗಳ ರಸಾನುಭವವನ್ನು ಮುಟ್ಟಿಸಿದರು.

ದಾಸಸಾಹಿತ್ಯದಲ್ಲಿ ನಿರೂಪಣಾ ಮಾಧ್ಯಮಗಳು ವೈವಿಧ್ಯ ಪೂರ್ಣವಾಗಿವೆ. ಕೀರ್ತನೆ, ಉಗಾಭೋಗ, ಸುಳಾದಿ, ದಂಡಕ, ಸುವ್ವಾಲಿ, ವೃತ್ತನಾಮ ಮೊದಲಾದ ಪ್ರಕಾರಗಳಲ್ಲಿ ಅವು ಹೊರಹೊಮ್ಮಿವೆ. ಕೆಲವು ಉದಾಹರಣೆಗಳನ್ನು ಈ ಮುಂದೆ ಕೊಟ್ಟಿದೆ.

ಕೀರ್ತನೆ:

ಈಸಬೇಕು ಇದ್ದು ಜಯಿಸಬೇಕು
ಹೇಸಿಕೆ ಸಂಸಾರದಲ್ಲಿ | ಆಸೆ ಲೇಶ ಇಡದ್ಹಾಂಗೆ

ತಾಮರಸಜಲದಂತೆ | ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮ ಎನುತ ಪಾಡಿ | ಕಾಮಿತ ಕಯ್ಗೊಂಬರೆಲ್ಲ

ಗೇರುಹಣ್ಣಿನಲ್ಲಿ ಬೀಜ | ಸೇರಿದಂತೆ ಸಂಸಾರದಿ
ಮೀರಿಯಾಸೆ ಮಾಡದಲೆ | ಧೀರ ಕೃಷ್ಣನ ಭಕುತರೆಲ್ಲ

ಮಾಂಸದಾಸೆಗೆ ಮತ್ಸ್ಯಸಿಲುಕಿ | ಹಿಂಸೆ ಪಟ್ಟಪರಿಯಂತೆ
ಮೋಸ ಹೋಗದ್ಹಾಂಗೆ | ಜಗದೀಶ ಪುರಂದರ ವಿಠಲನ ನೆನೆದು

ಉಗಾಭೋಗ :

ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ತಂದೆ ಎನಗುಂಟು ನಿನಗಿಲ್ಲ

ನೀನೆ ಪರದೇಶಿ ನಾನೆ ಸ್ವದೇಶಿ
ನಿನ್ನರಸಿ ಲಕುಮಿ ಎನ್ನ ತಾಯಿ
ನಿನ್ನ ತಾಯ ತೋರೋ ಶ್ರೀ ಪುರಂದರವಿಠಲ

ಸುಳಾದಿ :

ಒಡೆಯ ಹಾವಿಗೆ ಮೆಟ್ಟಿ ಹಾವಿಗೆಯವ ನಾನು
ಒಡೆಯ ಮೆಲ್ಲಡಿಯಿಡಲು ಕಟ್ಟಿಗೆಯವ ನಾನು
ಕಡೆಯ ತಾಂಬೂಲವನುಗುಳುವ ವೇಳ್ಯಗಳಲ್ಲಿ ಕಾಳಾಂಜಿಯವ ನಾನು

ಒಡೆಯನೊಡ್ಡೋಲಗದಲ್ಲಿ ಚಿತ್ತೈಸಿರೆ
ಛತ್ರ ಚಾಮರ ಕನ್ನಡಿ ಪಿಡಿವವ ನಾನೊಡೆಯಗೆ
ಒಡೆಯ ಪುರಂದರವಿಠಲರಾಯನ ಉಗುರು ಬಿದ್ದಲ್ಲಿ
ಯೆನ್ನ ಶಿರವ ಕೊಡುವೆ ನಾನೊಡೆಯಗೆ

ಮಠ್ಯತಾಳ

ಹರಿಯನೋಲೈಸುವೆಂಬಣ್ಣಗಳಿರ ಕೇಳಿರೊ
ಶರಧಿಯ ಕಟ್ಟಿಟ್ಟು ಕುಲಂಕೆಯ ಮುಟ್ಟಿ
ಕುರಾವಣಾದಿಗಳ ಕೂಡೆ ಇರಿದಾಡುತಿರಬೇಕು
ಪುರಂದರ ವಿಠಲನೋಲಗದೊಳೀಗ ಘನಾ

ಅಟ್ಟತಾಳ

ಚಂದ್ರಮ ನೀನಿನ್ನು ನಿಂದಿರೆ ತೆರವಿಲ್ಲ
ಸೂರೆಯಗೈಯಿನ್ನು ತಿರುಗದಲೆ ಹೊತ್ತು
ಇಂದ್ರಾದಿಗಳಿಗೆಲ್ಲ ಹರಿಹರಿ ನಿಂದು ತಲೆ
ಯನು ತುರಿಸಲು ಹೊತ್ತಿಲ್ಲ
ಬೊಮ್ಮಾದಿಗಳಿಗೂ ಒಮ್ಮೆಯೂ ತೆರಪಿಲ್ಲ
ಈ ದೇವರೆಲ್ಲರೊಳೊಬ್ಬನೆ ಮೆಟ್ಟಿ
ಆಡುವ ನಮ್ಮ ಪುರಂದರವಿಠಲ ಕಟ್ಟಾಳು ಕಾಣಿರೊ

ಆದಿತಾಳ

ಧರೆಯಂಜುತಲಿದೆ ಗಿರಿಗಳಂಜುತಲಿವೆ
ಮರಬಳ್ಳಿಗಳಂಜಿ ಫಲವನೀವುತಲಿವೆ
ಸರಿತು ಸಮುದ್ರಗಳಂಜಿ ಬೆಚ್ಚುತಲಿವೆ
ಪುರಂದರವಿಠಲ ನೀನೆಂಥ ಅರಸೂ

ಜತೆ

ನಾ ಘನ ನೀ ಘನ ತಾ ಘನಯೆನಬೇಡಾ|
ಪುರಂದರವಿಠಲನೊಬ್ಬನೆ ಘನ

ಸಂಖ್ಯಾಬಾಹುಳ್ಯದಿಂದ ನೋಡುವುದಾದರೆ ಪದ ಅಥ'ವಾ ಕೀರ್ತನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕುತ್ತವೆ. ಅನಂತರ ಸುಳಾದಿಗಳು, ಬಳಿಕ ಉಗಾಭೋಗಗಳು, ದಂಡಕ, ವೃತ್ತನಾಮ, ಸುವ್ವಾಲಿಗಳು ಅಲ್ಲಲ್ಲಿ ಕಾಣಸಿಗುತ್ತವೆ.

ಹರಿದಾಸಸಾಹಿತ್ಯವನ್ನು ಸಂಗ್ರಹಿಸಿ, ಪರಿಷ್ಕರಿಸಿ ಪ್ರಕಟಿಸುವ ಕಾರ್ಯ ಹಲವಾರು ವ್ಯಕ್ತಿ, ಸಂಸ್ಥೆ ಮತ್ತು ಸರ್ಕಾರದಿಂದ ಕರ್ನಾಟಕದಲ್ಲಿ ನಿರಂತರವಾಗಿ ನಡೆದಿದೆ. ವ್ಯಕ್ತಿ ಹಂತದಲ್ಲಿ ಸುಬೋಧ ರಾಮರಾಯರು, ಗೋರಬಾಳ ಹನುಮಂತರಾವ್, ಪಾವಂಜೆ ಗುರುರಾಯರನ್ನು ಹೆಸರಿಸಬಹುದು. ಅಂತೆಯೇ ಕನಕದಾಸರ ನಾಲ್ಕನೆಯ ಶತಮಾನೋತ್ಸವ ಸಮಿತಿಯವರು ಕನಕದಾಸರ ಕೃತಿಗಳನ್ನೂ ಅಖಿಲ ಕರ್ನಾಟಕ ಪುರಂದರದಾಸರ 400ನೆಯ ವರ್ಷದ ಉತ್ಸವಮಂಡಳದವರು (ಧಾರವಾಡ) ಪುರಂದರದಾಸರ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಆಶ್ರಯದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹರಿದಾಸಸಾಹಿತ್ಯ ವಿಭಾಗ 'ಹರಿದಾಸಸಾಹಿತ್ಯ ಮಾಲೆ'ಯಾಗಿ ದಾಸಸಾಹಿತ್ಯದ ಸಂಪಾದನ ಕಾರ್ಯವನ್ನು ಕೈಗೊಂಡು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದೆ. ಇದುವರೆಗೆ ಈ ಮಾಲೆಯಲ್ಲಿ 14 ಕೃತಿಗಳು ಪಂಡಿತ ಹಾಗೂ ಜನಪ್ರಿಯ ಆವೃತಿಗಳಲ್ಲಿ ಪ್ರಕಟವಾಗಿವೆ. ದಾಸ ಸಾಹಿತ್ಯ ಪ್ರಕಟಣ ಯೋಜನೆಯನ್ನು ಇತ್ತೀಚೆಗೆ ಕರ್ನಾಟಕ ಸರ್ಕಾರ ಸಮಗ್ರ ದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಯ ಕಾರ್ಯವಾಗಿ ಕೈಗೆತ್ತಿಕೊಂಡು ಐವತ್ತು ಸಂಪುಟಗಳಲ್ಲಿ ಹೊರತಂದಿದೆ.

ಕನ್ನಡದಲ್ಲಿ ದಾಸಸಾಹಿತ್ಯ ಕುರಿತ ಸಂಶೋಧನೆ ಸಾಕಷ್ಟು ನಡೆದಿದ್ದು ಅನೇಕ ಕೃತಿಗಳು ಹೊರಬಂದಿವೆ. ಪ್ರಸನ್ನ ವೆಂಕಟಾದಾಸರು ಮತ್ತು ಅವರ ಕೃತಿಗಳು (ಎ.ಟಿ.ಪಾಟೀಲ), ಕರ್ನಾಟಕದ ಹರಿದಾಸರು (ಎಚ್.ಕೆ.ವೇದವ್ಯಾಸಾಚಾರ್ಯ), ಜಗನ್ನಾಥದಾಸರು (ಕೆ.ಎಂ.ಕೃಷ್ಣರಾವ್), ಪ್ರಸಾದಯೋಗ (ವಿ.ಎ.ದಿವಾಣಜಿ), ಶ್ರೀವಿಜಯದಾಸರು ಜೀವನ ಮತ್ತು ಕೃತಿಗಳ ಸಮೀಕ್ಷೆ (ಕೆ.ಗೋಕುಲನಾಥ್), ಹರಿದಾಸರ ಭಕ್ತಿ ಸ್ವರೂಪ (ಟಿ.ಎನ್.ನಾಗರತ್ನ), ಶ್ರೀವಾದಿರಾಜರ ಕನ್ನಡ ಕೃತಿಗಳು (ಎಚ್.ಜಿ. ಲೋಕೂರ), ಪುರಂದರದಾಸರ ಮತ್ತು ಅನ್ನಮಾಚಾರ್ಯರ ಕೀರ್ತನೆಗಳ ಸಾಂಸ್ಕೃತಿಕ ಅಧ್ಯಯನ (ಅಕ್ಕಮಹಾದೇವಿ), ಬಸವೇಶ್ವರ ಮತ್ತು

ಪುರಂದರದಾಸ (ಬಸವರಾಜ ಸಬರದ), ಹರಿದಾಸ ಆಂದೋಲನ - ಒಂದು ಅಧ್ಯಯನ (ಎಸ್.ಕೆ.ರಾಮಶೇಷನ್), ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು- ಒಂದು ಅಧ್ಯಯನ (ಆರ್.ಸುನಂದಮ್ಮ), ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯ (ಅನಂತ ಪದ್ಮನಾಭರಾವ್) - ಇವು ದಾಸಸಾಹಿತ್ಯ ಕ್ಷೇತ್ರದಲ್ಲಿ ಡಾಕ್ಟೊರೇಟ್ ಪಡೆದಿರುವ ಮಹಾಪ್ರಬಂಧಗಳು.

ಆರ್.ಎಸ್.ಪಂಚಮುಖಿಯವರ ಕರ್ನಾಟಕದ ಹರಿದಾಸ ಸಾಹಿತ್ಯ, ಬೇಲೂರು ಕೇಶವದಾಸರ ಕರ್ನಾಟಕ ಭಕ್ತವಿಜಯ, ಆರ್.ಆರ್.ದಿವಾಕರರ ಹರಿಭಕ್ತಿಸುಧೆ, ಜಿ.ವರದರಾಜರಾಯರ ಹರಿದಾಸ ಹೃದಯ ಇವು ದಾಸಸಾಹಿತ್ಯವನ್ನು ಕುರಿತ ಕೆಲವು ಮೌಲಿಕ ಕೃತಿಗಳು. ಈ ಶತಮಾನದಲ್ಲೂ ದಾಸಪರಂಪರೆಯನ್ನುಳಿಸಿಕೊಂಡು ಕೃತಿರಚನೆಯಲ್ಲಿ ತೊಡಗಿರುವವರಲ್ಲಿ ಚಿತ್ರದುರ್ಗದ ರಾಮಚಂದ್ರರಾವ್ (ತಂದೆ ವೆಂಕಟೇಶ ವಿಠಲ), ಮೈಸೂರಿನ ಎಂ.ಆರ್.ಗೋವಿಂದರಾವ್ (ಗುರುಗೋವಿಂದ ವಿಠಲ) ಮತ್ತು ಜೀವೂಬಾಯಿ (ಕಮಲನಾಭವಿಠಲ) ಮೊದಲಾದವರನ್ನು ಹೆಸರಿಸಬಹುದು. ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನ ಸಾಹಿತ್ಯ ಐದುನೂರು ವರ್ಷಗಳಲ್ಲಿ ಸಮೃದ್ಧವಾಗಿ ಬೆಳೆದಿದೆ. ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಕೀರ್ತನೆಗಳು ರಚಿತವಾಗಿವೆ. ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ತ್ವಪೂರ್ಣ ಭಾಗವಾದ ದಾಸಸಾಹಿತ್ಯ ವಾಹಿನಿ ಇಂದಿಗೂ ಜೀವಂತವಾಗಿ ಮುಂದುವರಿದಿದೆ. (ಟಿ.ಎನ್.ಎನ್.)

**ಕನ್ನಡದಲ್ಲಿ ನವ್ಯಕಾವ್ಯ :** ನವೋದಯ ಕಾವ್ಯದಂತೆ ನವ್ಯಕಾವ್ಯವೂ ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದಲೇ ಹುಟ್ಟಿಕೊಂಡದ್ದು. ನವ್ಯಕಾವ್ಯ ಇಂಗ್ಲಿಷಿನ ಮಾಡರ್ನ್ ಪೊಯಿಟ್ರಿಗೆ ಸಂವಾದಿಯಾದ ಪದ. ನವೋದಯ ಕಾವ್ಯಕ್ಕೆ ಆಧುನಿಕ ಕಾವ್ಯ ಎಂಬ ಇನ್ನೊಂದು ಹೆಸರೂ ಬಳಕೆಯಲ್ಲಿ ಇದ್ದಿತಾದ್ದರಿಂದ ಇಂಗ್ಲಿಷಿನ ಮಾಡರ್ನ್ ಪೊಯಿಟ್ರಿಯಿಂದ ಪ್ರೇರಣೆಪಡೆದ ಕನ್ನಡ ಕಾವ್ಯವನ್ನು ಆಧುನಿಕ ಕಾವ್ಯ ಎಂದು ಕರೆಯುವಂತಿರಲಿಲ್ಲ. ಆದ್ದರಿಂದ ಅದನ್ನು ಕನ್ನಡದ ಸಂದರ್ಭದಲ್ಲಿ ನವ್ಯಕಾವ್ಯ ಎಂದು ಕರೆಯಬೇಕಾಗಿ ಬಂದಿತೆಂದು ತೋರುತ್ತದೆ. ನವೋದಯ ಕಾವ್ಯಕ್ಕಿಂತ ಭಿನ್ನರೀತಿಯ ಕಾವ್ಯಪ್ರಕಾರವಿದು ಎಂದು ನಿರ್ದೇಶಿಸುವ ಅನುಕೂಲಕ್ಕಾಗಿ ಬಳಸಿದ ಪಾರಿಭಾಷಿಕ ಪದವೆಂದು ಮಾತ್ರ ಇದನ್ನು ತಿಳಿಯಬೇಕಾಗುತ್ತದೆ. ಶ್ರೇಷ್ಠಕಾವ್ಯ ಯಾವ ಕಾಲಕ್ಕೂ ನವ್ಯವಾಗಿಯೆ ಇರುತ್ತದೆ. ಇದು ನವ್ಯ ಎಂದಕೂಡಲೆ ಎಲ್ಲ ರೀತಿಯಿಂದಲೂ ನವ್ಯ-ನ ಭೂತೋ ನ ಭವಿಷ್ಯತಿ ಎಂದು ಅರ್ಥ ಹಚ್ಚಬೇಕಾಗಿಲ್ಲ ಎಂಬ ಗೋಪಾಲಕೃಷ್ಣ ಅಡಿಗರ ಮಾತನ್ನು ಇಲ್ಲಿ ನೆನೆಯಬಹುದು (ಹೊಸ ಕವಿತೆಯನ್ನು ಕುರಿತು, 1953). ನವ್ಯಕಾವ್ಯ ಎಂಬ ಕಾವ್ಯ ಪ್ರಕಾರಕ್ಕೆ ಆ ಹೆಸರನ್ನು ಕೊಟ್ಟವರು ವಿ.ಕೃ. ಗೋಕಾಕರು.

ಕನ್ನಡದ ನವೋದಯ ಕಾವ್ಯ 19ನೆಯ ಶತಮಾನದ ಇಂಗ್ಲೆಂಡಿನ ರೊಮ್ಯಾಂಟಿಕ್ ಕಾವ್ಯ ಸಂಪ್ರದಾಯದಿಂದ ಪ್ರೇರಣೆ ಪಡೆದದ್ದಾಗಿತ್ತು. ನಮ್ಮಲ್ಲಿ 20ನೆಯ ಶತಮಾನದ ಪೂರ್ವಾರ್ಧದಲ್ಲಿ ಅದರ ಪ್ರಭಾವ ಗಾಢವಾಗಿತ್ತು. ಆ ಹೊತ್ತಿಗಾಗಲೇ ಇಂಗ್ಲೆಂಡಿನಲ್ಲಿ ತೀವ್ರತರವಾದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳ ಬದಲಾವಣೆಗಳಿಂದಾಗಿ ಕಾವ್ಯ ಕ್ಷೇತ್ರದಲ್ಲಿಯೂ ಅಪೂರ್ವವಾದ ಬದಲಾವಣೆಗಳು ಆಗತೊಡಗಿದ್ದವು. ರೊಮ್ಯಾಂಟಿಕ್ ಯುಗ ಮುಗಿದು ವಿಕ್ಟೋರಿಯನ್ ಯುಗವೂ ಕಳೆದು ಟಿ.ಇ.ಹ್ಯೂಮ್ ಮುಂತಾದವರು ಕಾವ್ಯ ಅಭಿವ್ಯಕ್ತಿ ತಂತ್ರ ಮತ್ತು ಧೋರಣೆಗಳಿಗೆ ಸಂಬಂಧಿಸಿದಂತೆ ಭಿನ್ನ ನಿಲವನ್ನು ಪ್ರತಿಪಾದಿಸಿ ಪ್ರತಿಮಾನಿಷ್ಠ ಆಂದೋಲನಕ್ಕೆ ಕಾರಣರಾಗಿದ್ದರು. ಎಜ್ರಾ ಪೌಂಡ್ ಕವಿಯೂ ಅದನ್ನು ಬೆಂಬಲಿಸಿದ್ದ. ಮುಂದೆ ಟಿ.ಎಸ್.ಎಲಿಯಟ್ ಪ್ರತಿಮಾನಿಷ್ಠ ಕಾವ್ಯ ರೀತಿಯೊಂದಿಗೆ ಅನುಭಾವ ಪಂಥ ಮತ್ತು ಫ್ರೆಂಚ್ ಸಂಕೇತನಿಷ್ಠ ಕಾವ್ಯಗಳ ಉತ್ತಮಾಂಶಗಳನ್ನೂ ಸಮನ್ವಯಗೊಳಿಸಿ ಹೆಚ್ಚು ಸಂಕೀರ್ಣವೂ ಸಮಗ್ರವೂ ಆದ ಕಾವ್ಯ ರೀತಿಯನ್ನೂ ವಿಮರ್ಶಾ ವಿಧಾನವನ್ನೂ ಬೆಳೆಸಿದ. ಈ ಮಧ್ಯೆ ಯೇಟ್ಸ್ ಕವಿಯೂ ತನ್ನ ಕೊನೆಗಾಲದ ಕವನಗಳಲ್ಲಿ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಂಥ' ನವ್ಯಕಾವ್ಯವನ್ನು ಬರೆಯುತ್ತಿದ್ದ. ಎಲಿಯಟ್‌ನ ವೇಸ್ಟ್‌ಲ್ಯಾಂಡ್ ಕಾವ್ಯ ಪ್ರಕಟವಾಗುವುದಕ್ಕಿಂತ ನಾಲ್ಕು ವರ್ಷ ಮೊದಲು (1918) ಹಾಪ್‌ಕಿನ್ಸ್‌ನ ಕವನಗಳ ಸಂಗ್ರಹವನ್ನು ಆತನ ಮರಣೋತ್ತರಕಾಲದಲ್ಲಿ ರಾಬರ್ಟ್ ಬ್ರಿಡ್ಜಸ್ ಎಂಬುವನು ಪ್ರಕಟಿಸಿದ್ದ. ಹಾಪ್‌ಕಿನ್ಸ್ ತನ್ನ ಕಾವ್ಯದಲ್ಲಿ ಭಾಷೆ ಮತ್ತು ಛಂದೋರೂಪಗಳಿಗೆ ಸಂಬಂಧಿಸಿದಂತೆ ಹೊಸ ಬಗೆಯ ಪ್ರಯೋಗಗಳನ್ನು ನಡೆಸಿದ್ದ. ಮುಂದೆ ಬಂದ ತರುಣ ಪೀಳಿಗೆಯ ಆಡೆನ್, ಸಿ.ಡೇ.ಲೂಯಿ, ಸ್ಟೀಫನ್ ಸ್ಪೆಂಡರ್, ಡಿಲಾನ್ ಥಾಮಸ್ ಮುಂತಾದ ಕವಿಗಳು ಹಾಪ್‌ಕಿನ್ಸ್ ಮತ್ತು ಎಲಿಯಟ್ ಈ ಇಬ್ಬರ ಕಾವ್ಯಗಳ ಪ್ರಭಾವಕ್ಕೂ ಒಳಗಾದರು. ಮುಂದೆ ರಾಜಕೀಯವಾಗಿ ವಾಮಪಂಥೀಯ ಒಲವನ್ನು ಬೆಳೆಸಿಕೊಳ್ಳುವುದರ ಮೂಲಕ ಹಾಪ್‌ಕಿನ್ಸ್ ಮತ್ತು ಎಲಿಯಟರ ಪ್ರಭಾವದಿಂದಲೂ ಬಿಡಿಸಿಕೊಳ್ಳಲು ತರುಣ ಕವಿಗಳು ಹಾತೊರೆದರು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಹಿಟ್ಲರ್ ಮತ್ತು ರಷ್ಯ ನಡುವಿನ ಒಡಂಬಡಿಕೆಯಾಗಿ ಅವರ ವಾಮಪಂಥೀಯ ಧೋರಣೆ ಕರಗಿಹೋಗುವಂತಾಯಿತು. ಅನಂತರದ ಕಾಲದ ಇಂಗ್ಲೆಂಡಿನ ಕವಿಗಳ ಧೋರಣೆ ತಮ್ಮ ತಮ್ಮ ವೈಯಕ್ತಿಕ ಋಜುತ್ವವನ್ನು (ಇಂಟೆಗ್ರಿಟಿ) ಉಳಿಸಿಕೊಳ್ಳುವುದರಲ್ಲಿ ಮತ್ತು ಘೋರವಾದ ಯುದ್ಧಗಳನ್ನು ತಡೆಯುವುದರ ಮೂಲಕ ಹೇಗೆ ತಮ್ಮನ್ನೂ ಪ್ರಪಂಚವನ್ನೂ ಉಳಿಸಿಕೊಳ್ಳಬೇಕೆಂಬುದರಲ್ಲಿ ಕೇಂದ್ರೀಕೃತವಾಗುವಂತಾಗಿತ್ತು. ಇಂಗ್ಲಿಷ್ ನವ್ಯ ಕಾವ್ಯದ ಈ ಅವಸ್ಥಾಂತರಗಳ ವಿವರವಾದ ಹಿನ್ನೆಲೆಯನ್ನು ಬಲ್ಲವರಾಗಿದ್ದ ವಿ.ಕೃ.ಗೋಕಾಕರು ಮತ್ತು ಗೋಪಾಲಕೃಷ್ಣ ಅಡಿಗರು ತಮ್ಮದೇ ಆದ ಒಲವು ವ್ಯಾಖ್ಯಾನಗಳಿಗೆ ಅನುಗುಣವಾಗಿ ನವ್ಯಕಾವ್ಯವನ್ನು ಕನ್ನಡದಲ್ಲಿ ಹುಟ್ಟುಹಾಕಲು, ಬೆಳೆಸಲು ಸಿದ್ಧರಾದರು. ಭಾರತದಲ್ಲಿಯೂ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಆದ ತೀವ್ರತರವಾದ ರಾಜಕೀಯ, ಸಾಮಾಜಿಕ ಪರಿವರ್ತನೆಗಳು, ಜನಸಮಷ್ಟಿಯ ಆಶೋತ್ತರಗಳು, ವಾಸ್ತವ ಪರಿಸ್ಥಿತಿಗಳು ಅವರ ಕಾವ್ಯಧೋರಣೆಗಳನ್ನು ರೂಪಿಸುವುದರಲ್ಲಿ ಪೋಷಕಾಂಶಗಳಾದವು.

ವಿ.ಕೃ.ಗೋಕಾಕರು ಸಮುದ್ರಗೀತೆಗಳು (1940), ಅಭ್ಯುದಯ (1946), ನವ್ಯಕವಿಗಳು (1950) ಎಂಬ ಕವನ ಸಂಕಲನಗಳಲ್ಲಿ ಅವರದೇ ಆದ ಬಗೆಯಲ್ಲಿ ನವ್ಯಕಾವ್ಯ ಪ್ರಯೋಗಗಳನ್ನು ನಡೆಸುತ್ತಿದ್ದರಾದರೂ ಆ ಬಗೆಯ ಕಾವ್ಯ ರೀತಿಗೆ ಒಂದು ತಾತ್ತ್ವಿಕ ಹಿನ್ನೆಲೆಯನ್ನು ರೂಪಿಸಿಕೊಂಡಿರಲಿಲ್ಲ; ಇಲ್ಲವೆ ಬಹಿರಂಗವಾಗಿ ಪ್ರತಿಪಾದಿಸಿರಲಿಲ್ಲ. 1950ರಲ್ಲಿ ಮುಂಬಯಿಯಲ್ಲಿ ನಡೆದ 34ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕಗೋಷ್ಠಿಯ ಅಧ್ಯಕ್ಷಭಾಷಣದಲ್ಲಿ ಆ ಕೆಲಸವನ್ನು ಅವರು ಮಾಡಿದರು. ಆ ಭಾಷಣ ಮುಂದೆ ನವ್ಯತೆ ಹಾಗೂ ಕಾವ್ಯಜೀವನ ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಧಾರವಾಡದ ಬಾನುಲಿ ಕೇಂದ್ರದಿಂದ ಅವರು ಪ್ರಸಾರ ಮಾಡಿದ ನವ್ಯ ಕಾವ್ಯದ ರೀತಿ ಎಂಬ ಭಾಷಣದಲ್ಲಿಯೂ ಚೆನ್ನವೀರ ಕಣವಿಯವರ ಜೊತೆಯಲ್ಲಿ ಸಂಪಾದಿಸಿದ 'ನವ್ಯ ಧ್ವನಿ' (1956) ಎಂಬ ಬೇರೆ ಬೇರೆ ಕವಿಗಳ ನವ್ಯ ಕವನಗಳ ಸಂಚಯದ ಮುನ್ನುಡಿಯಲ್ಲಿಯೂ ನವ್ಯಕಾವ್ಯವನ್ನು ಕುರಿತಂಥ ಗೋಕಾಕರ ವಿಚಾರ, ವಿವರಣೆಗಳಿವೆ.

ಗೋಕಾಕರು ನವ್ಯಕಾವ್ಯ ಮತ್ತು ಕನ್ನಡದಲ್ಲಿ ಅದರ ಆವಶ್ಯಕತೆಯನ್ನು ಕುರಿತಂತೆ ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಗಮನಿಸಬಹುದಾಗಿದೆ. ನವ್ಯಕಾವ್ಯವೆಂದರೆ ಆಧುನಿಕ ಕಾವ್ಯಕ್ಕಿಂತ ಬೇರೆಯಾದ ಕಾವ್ಯ. ವಿಶೇಷ ತಂತ್ರ ವಿಧಾನಗಳನ್ನು ಪಡೆದ ಕಾವ್ಯ. ಮುದ್ದಣನ ಕಾಲದಿಂದ ಬೆಳೆದು ಬಂದ ಆಧುನಿಕ ಕಾವ್ಯವು ಆಧುನಿಕ ಕಾವ್ಯ ಪ್ರಕಾರಗಳನ್ನು ಕಾವ್ಯವಸ್ತುಗಳನ್ನು ಕನ್ನಡಕ್ಕೆ ತಂದಿತು. ಈ ಕಾವ್ಯಪ್ರಕಾರ - ವಸ್ತುಗಳಿಗೆ ಉಚಿತವಾದ ಶೈಲಿ - ಛಂದಸ್ಸುಗಳನ್ನು ನಿರ್ಮಾಣ ಮಾಡಿತು. ವ್ಯಕ್ತಿತ್ವ ನಿರೂಪಣೆಯನ್ನು ಸಾಧಿಸಿತು. ಈಗ ಆಧುನಿಕ ಕಾವ್ಯದ ಪರಂಪರೆಯೊಂದು ನಿರ್ಮಿತವಾಗಿದೆ. ಒಂದು ಪರಂಪರೆ ಪೂರ್ಣವಾದಾಗ ಇನ್ನೊಂದು ಹೊಳಹನ್ನು ಹಾಕದೆ ಉಕ್ತಿಗೆ ಸಮಗ್ರತೆಯೂ ಕಾಂತಿಯೂ ಬರುವುದು ಕಠಿಣ. ಅಂತೇ ಇಂದು ನವ್ಯ ಕಾವ್ಯ ಆವಶ್ಯಕತೆಯೂ ಉಂಟಾಗಿದೆ. ಒಂದು ಪರಂಪರೆ ತನ್ನ ಸಿದ್ಧಿಯನ್ನು ಮುಟ್ಟಿದಾಗ ಇನ್ನೊಂದು ಸಿದ್ಧತೆಯು ತನ್ನ ಸಿದ್ಧಿಯ ದಾರಿಯನ್ನು ಹುಡುಕುತ್ತಿರುತ್ತದೆ. ಇಂಥ ಆಂತರಿಕ ಆವಶ್ಯಕತೆಯಿಂದ ಪ್ರಚೋದನೆಗೊಂಡ ಬಂಗಾಲಿ ಹಾಗೂ ಮರಾಠಿ ಕಾವ್ಯಗಳೂ ನವ್ಯಕಾವ್ಯದ ದಾರಿಯನ್ನು ನೇರವಾಗಿ ತುಳಿಯಹತ್ತಿವೆ. ಆಧುನಿಕ ಕನ್ನಡ ಕಾವ್ಯವೂ ತನ್ನ ಪರಂಪರೆಯ ಸಿದ್ಧಿಯನ್ನು ಮುಟ್ಟಿದಾಗ-ಮುಂದೇನೆಂಬ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಗೆ ಉತ್ತರ ನವ್ಯ ಕಾವ್ಯ; ಚಂಪೂ, ಷಟ್ಪದಿ, ವಚನ, ಸಾಂಗತ್ಯ, ತ್ರಿಪದಿ- ಹೀಗೆ ಅನೇಕ ರೂಪಗಳನ್ನು ತಾಳಿದ ಕನ್ನಡ ಕಾವ್ಯ ಇಲ್ಲಿಯವರೆಗೆ ಆಧುನಿಕವಾಗಿ

ಬೆಳೆಯಿತು. ಅದು ನವ್ಯವಾಗುವುದೂ ಒಂದು ಬಗೆಯ ಚಂದ. ಈ ನವೀನ ಪರಿಸ್ಥಿತಿಯೂ ಒಂದು ಪರಂಪರೆಯ ಕೃತಕೃತ್ಯತೆಯೂ ನವ್ಯಕಾವ್ಯದ ಅಗತ್ಯವನ್ನು ಸೂಚಿಸುತ್ತಿವೆ.

ಬಳಕೆಮಾತು, ಛಂದಸ್ಸಿನಲ್ಲಿಯ ನವೀನ ಪ್ರಯೋಗ, ಪ್ರತಿಮಾ, ಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕ ಶೈಲಿ, ವಸ್ತುವಿನ ಆಯ್ಕೆಯಲ್ಲಿಯ ಸ್ವಾತಂತ್ರ್ಯ, ಬುದ್ಧಿ ಪ್ರಧಾನತೆ, ವ್ಯಕ್ತ್ಯತೀತ ಮೌಲ್ಯಗಳಿಗೆ ಪ್ರಧಾನತೆ - ಈ ಎಂಟು ನವ್ಯಕಾವ್ಯದ ಲಕ್ಷಣಗಳೆಂದು ಗೋಕಾಕರು ಪಟ್ಟಿಮಾಡಿ ವಿವರಿಸಿದ್ದಾರೆ. ಅವರು ಮೊದಲಿನ ಐದು ಲಕ್ಷಣಗಳಲ್ಲಿ ಆಧುನಿಕ ಕಾವ್ಯವೂ ಕ್ರಮೇಣ ಆಸ್ಥೆ ವಹಿಸಿದೆಯೆಂದೂ ಅವೆಲ್ಲವುಗಳ ಸಮಯೋಚಿತ ಪ್ರಜ್ಞೆಯನ್ನು ನವ್ಯಪ್ರಜ್ಞೆಯೆಂದು ಕರೆಯಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ, ಗೋವಿಂದ ಪೈ ಅವರ ಕವನಗಳು, ಬೇಂದ್ರೆ ಅವರ ಕರಿಮರಿನಾಯಿ, ಕೈಗಲ್ಲ, ನರಬಲಿ, ಕೆ.ವಿ.ಪುಟ್ಟಪ್ಪನವರ ಕೋಗಿಲೆ ಮತ್ತು ಸೋವಿಯೆತ್ ರಷ್ಯಾ, ಜಿ.ಪಿ.ರಾಜರತ್ನಂ ಅವರ ಎಂಡ್ಕುಡ್ಕ ರತ್ನ, ವಿ.ಸೀ. ಅವರ ಗಡಿದಾಟು, ಕ್ರೋಧಕೇತನ, ಗೋಪಾಲಕೃಷ್ಣ ಅಡಿಗರ ಹಿಮಗಿರಿಯ ಕಂದರ, ಗೊಂದಲಪುರ, ರಾಮಚಂದ್ರ ಶರ್ಮರ ಏಳುಸುತ್ತಿನ ಕೋಟೆ, ಚೆನ್ನವೀರಕಣವಿ, ಸು.ರಂ.ಎಕ್ಕುಂಡಿ, ವಿ.ಜಿ.ಭಟ್ಟ ಮೊದಲಾದವರ ಸಾಮಾಜಿಕ ಕವನಗಳು - ಇವೆಲ್ಲವನ್ನೂ ನವ್ಯಕಾವ್ಯ ಪ್ರಕಾರಕ್ಕೆ ಗೋಕಾಕರು ಸೇರಿಸಿದ್ದಾರೆ (ನವ್ಯಕಾವ್ಯದ ರೀತಿ). ಚೆನ್ನವೀರ ಕಣವಿಯವರೊಂದಿಗೆ ಸಂಪಾದಿಸಿದ ನವ್ಯಧ್ವನಿ ಎಂಬ ನವ್ಯಕಾವ್ಯ ಸಂಚಯದ ಕವನಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ ಪ್ರಗತಿಪರ, ಉಪನವ್ಯ, ನವ್ಯ, ವ್ಯಂಗ್ಯನವ್ಯ ಎಂದು ಗೋಕಾಕರು ಕರೆದಿದ್ದಾರೆ. ಇನ್ನೊಂದು ಕಡೆ ನವ್ಯಕಾವ್ಯದ ಆದ್ಯಗುರು ಸರ್ವಜ್ಞ ಎಂದು ಹೇಳುತ್ತಾರೆ. ನವ್ಯಕಾವ್ಯದ ಕೆಲವು ವಿಶೇಷಗುಣಗಳನ್ನು ಹಾಪ್‌ಕಿನ್ಸ್, ಅರವಿಂದ ಹಾಗೂ ತಮ್ಮ ಕಾವ್ಯಗಳಿಂದ ಉದಾಹರಿಸಿ ತೋರಿಸಿದ್ದಾರೆ. ನವ್ಯಕಾವ್ಯದ ರಹಸ್ಯವನ್ನು ಅರವಿಂದರ ಮಾತುಗಳನ್ನು ಉದ್ಧರಿಸುವುದರ ಮೂಲಕವೇ ತಿಳಿಸಿದ್ದಾರೆ (ನವ್ಯಕಾವ್ಯ ರೀತಿ), ಇವೆಲ್ಲವನ್ನು ವಿವರವಾಗಿ ಪರಿಶೀಲಿಸುತ್ತ ಹೋದಂತೆ ನವ್ಯಕಾವ್ಯವನ್ನು ಕುರಿತ ಗೋಕಾಕರ ಅಭಿಪ್ರಾಯಗಳ ಹಿಂದಿರುವ ಏಕಸೂತ್ರತೆಯನ್ನು ಕಂಡುಕೊಳ್ಳುವುದು ಸುಲಭವಾಗುವುದಿಲ್ಲ.

1950ರ ಅನಂತರದ ಕಾಲದಲ್ಲಿ ಗೋಕಾಕರು ಉಗಮ, ಊರ್ಣನಾಭ, ಚಿಂತನ, ದ್ಯಾವಾಪೃಥಿವೀ ಮುಂತಾದ ಕವನಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವರ ಕಾವ್ಯವನ್ನೂ ನವ್ಯಕಾವ್ಯದ ಸೈದ್ಧಾಂತಿಕ ಪ್ರತಿಪಾದನೆಯನ್ನೂ ಒಟ್ಟಿನಲ್ಲಿ ನೋಡಿದಾಗ, ಭಾಷೆ ಮತ್ತು ಛಂದೋರೂಪಗಳಲ್ಲಿ ಅವರು ಬದಲಾವಣೆ, ಬಗೆಬಗೆಯ ಪ್ರಯೋಗಮಾಡಿದ್ದು ಕಂಡುಬರುತ್ತದೆ. ಛಂದೋರೂಪಗಳಲ್ಲಿ ಮಾಡಿದ ಪರಿವರ್ತನೆಯನ್ನು ಮುಕ್ತಛಂದಸ್ಸು ಎಂದು ಕರೆಯಲಾಗಿದೆ. ತಂತ್ರವಿಧಾನದಲ್ಲಿ ಪ್ರತಿಮಾನಿಷ್ಠತೆ, ಸಾಂಕೇತಿಕತೆಗಳನ್ನು ಅಳವಡಿಸಿಕೊಳ್ಳುವ ಬಗೆಯಲ್ಲಿಯೂ ಹೊಸತನ ಕಾಣುತ್ತದೆ. ಕಾವ್ಯ ಧೋರಣೆಗೆ ಸಂಬಂಧಿಸಿದಂತೆ ನವೋದಯುದವರೊಂದಿಗೆ ಹೇಳಿಕೊಳ್ಳುವಂಥ' ಭಿನ್ನತೆ ಇದ್ದಂತೆ ತೋರುವುದಿಲ್ಲ. ಭಾರತೀಯ ಮತ್ತು ಜಾಗತಿಕ ವಿದ್ಯಮಾನಗಳ ಸಂದರ್ಭದಲ್ಲಿ ಒಟ್ಟು ಮಾನವ ಸಮಷ್ಟಿಯ ಕ್ಷೇಮಚಿಂತನೆಗೆ ಅರವಿಂದರ ಅಂತಃಪ್ರಜ್ಞೆಯ (ಇಂಟ್ಯೂಷನ್) ನೆರವಿನಿಂದ ಸಮನ್ವಯ ಸಂಜೀವಿನಿ ಸೂತ್ರವೊಂದನ್ನು ರೂಪಿಸಿಕೊಳ್ಳುವುದರ ಕಡೆಗೆ ಹೆಚ್ಚಾದ ಆಶಾವಾದದಿಂದ ನೋಡುವ ಒಲವು, ಒತ್ತು ಇರುವುದು ಕಾಣುತ್ತದೆ. ಆದ್ದರಿಂದ ನವೋದಯುದವರ ಕನಸುಗಾರಿಕೆ, ದಿವ್ಯ ಆದರ್ಶ, ಭಾರತೀಯವಾದುದರ ಬಗೆಗಿನ ಭಾವನಾತ್ಮಕವಾದ ಆರಾಧನಾಭಾವಗಳು ಇವರಲ್ಲಿಯೂ ಕಾಣುತ್ತವೆ. ಲೋಕದ ವಿಲಯವನ್ನು ತಪ್ಪಿಸುವ ಹೊಣೆಗಾರಿಕೆಯನ್ನು ಸ್ವಯಂ ಆರೋಪಿಸಿಕೊಂಡ ನೆಹರೂ ರೀತಿಯ ಆದರ್ಶಕ್ಕೆ ಕಾವ್ಯದಲ್ಲಿ ನುಡಿಗೊಡುವ ಹಂಬಲವೂ ಅದರೊಟ್ಟಿಗೆ ಸೇರಿಕೊಂಡಿದೆ. ಅಭಿಜಾತಕಾವ್ಯ ಪ್ರತಿಭೆಗಿಂತ ವ್ಯುತ್ಪತ್ತಿ ಪ್ರಧಾನವಾದ ಕಾವ್ಯಮೀಮಾಂಸೆ, ಆಧ್ಯಾತ್ಮಿಕ ವಿಚಾರಗಳೇ ಅವರ ಕಾವ್ಯವನ್ನು ನಡೆಸಿಕೊಂಡು ಹೋದದ್ದರಿಂದ ಗೋಕಾಕರ ಈ ಮೇಲಿನ ಹೊಸ ಪ್ರಯೋಗಗಳು, ಸದ್ಭಾವನೆ ಸದುದ್ದೇಶಗಳು ಎಷ್ಟೇ ಪ್ರಾಮಾಣಿಕವಾಗಿದ್ದರೂ ಶ್ರೇಷ್ಠ ಕಾವ್ಯವಾಗಿ ಅಭಿವ್ಯಕ್ತಿಪಡೆದು ಸಾರ್ಥಕಗೊಳ್ಳುವುದರಲ್ಲಿ ನಿರೀಕ್ಷಿತ ಯಶಸ್ಸನ್ನು ಪಡೆಯಲಾಗಲಿಲ್ಲ.

ಗೋಕಾಕರ ಕಾವ್ಯ ಮತ್ತು ಸಾಹಿತ್ಯ ಚಿಂತನದ ಪ್ರಭಾವಕ್ಕೆ ಒಳಗಾಗಿಯೂ ತಮ್ಮ ದನಿವಿಶಿಷ್ಟತೆಯನ್ನು ಬೆಳೆಸಿಕೊಂಡವರಲ್ಲಿ ಮುಖ್ಯರಾದವರು ಗಂಗಾಧರ ಚಿತ್ತಾಲ, ಸು.ರಂ.ಎಕ್ಕುಂಡಿ, ಶಂಕರ ಮೊಕಾಶಿ ಪುಣೇಕರ ಮತ್ತು ಎಂ.ಅಕಬರ ಅಲಿ. ಗಂಗಾಧರ ಚಿತ್ತಾಲರ ಮನುಕುಲದ ಹಾಡು, ಹರಿವ ನೀರಿದು ಎಂಬ ಸಂಕಲನಗಳಲ್ಲಿ ಬದುಕು ಮತ್ತು ಸಾವಿನ ಗೂಢದ ಬಗೆಗೆ ಚಿಂತನೆಯಿದೆ. ಮನುಷ್ಯ ಸಂಬಂಧದ ಸುಖದ ಕ್ಷಣಗಳ ಉತ್ಕರ್ಷಭಾವವಿದೆ. ಆತ್ಮೀಯರ ಸಾವು ತಂದ ದುರಂತ ವೇದನೆಯಿದೆ. ಅವರ ಬರೆವಣಿಗೆಯಲ್ಲಿ ಬೌದ್ಧಿಕ ಮತ್ತು ಭಾವನಾತ್ಮಕ ದ್ರವ್ಯದ ಕೊರತೆಯಿಲ್ಲ. ಆದರೆ, ಧ್ವನಿಶಕ್ತಿಯ ಕೊರತೆಯಿರುವುದು ಕಾಣುತ್ತದೆ. ಕವನಗಳ ಲಯಗತಿಯಲ್ಲಿ ಮುದತರುವ ಗುಣವಿದೆ. ಪ್ರಯೋಗಶೀಲತೆಯಿದೆ. ಸಮುದ್ರವನ್ನು ಕುರಿತ ಗೀತಗಳಲ್ಲಿ ತನ್ಮಯತೆ ಇದೆ. ಮನುಷ್ಯ ಸಂಬಂಧಗಳಲ್ಲಿ ಹೆಚ್ಚಿನ ಗೌರವ, ಆತ್ಮೀಯತೆ, ಅಂತಃಕರಣ ಇದೆ. ಸಂತಾನ, ಹಾವಾಡಿಗರ ಹುಡುಗ, ನೆರಳು, ಮತ್ಸ್ಯಗಂಧಿ ಕವನ ಸಂಕಲನಗಳನ್ನು ಪ್ರಕಟಿಸಿದ ಎಕ್ಕುಂಡಿಯವರ ಕಾವ್ಯದಲ್ಲಿ ನವೋದಯ ರೀತಿಯ ಛಂದೋರೂಪ, ಗೇಯತೆಯ ಅಂಶ ಹೆಚ್ಚಾಗಿದೆ. ಸಮರ್ಥವಾಗಿದೆ. ಭಾವಗೀತೆಯ ಗುಣ ಸಮೃದ್ಧವಾಗಿದೆ. ಅವರ ಭಾಗವತ ಧೋರಣೆ ಪುರಾಣದ ವಸ್ತು, ಪ್ರತಿಮೆಗಳ ಮೂಲಕ ಅಭಿವ್ಯಕ್ತಗೊಳ್ಳುವ ಬಗೆ ಅನನ್ಯವಾಗಿದೆ. ಕಾವ್ಯಪ್ರತಿಮೆಗಳ ಬಳಕೆಯ ಕ್ರಮವೂ ವಿಶಿಷ್ಟವಾಗಿದೆ. ಕಾವ್ಯವಸ್ತುವಿನ ಸಹಜ, ನೇರನಿರೂಪಣೆಯೊಂದಿಗೆ ಸದ್ದಿಲ್ಲದೆ ಧ್ವನಿಪರಿವೇಷವನ್ನು ಕಟ್ಟುತ್ತ ಸಾಗಿ ಕವನದ ಕೊನೆಗೆ ಬಂದು ಮುಟ್ಟಿದಾಗ, ಅನುಭವ ಸಮಸ್ತವೂ ಒಂದು ಕಾವ್ಯಪ್ರತಿಮೆಯ ಹಿಡಿಯಲ್ಲಿ ಇಡಿಯಾಗಿ ದೀಪ್ತಗೊಳ್ಳುವಂತೆ ಮಾಡುವ ಬಗೆ, ಯಶಸ್ವಿಯಾದ ಪ್ರಯತ್ನ ಹಾವಾಡಿಗರ ಹುಡುಗ, ಅತಿಥಿ ಮುಂತಾದ ಕೆಲವು ಕವನಗಳಲ್ಲಿ ಕಾಣುತ್ತದೆ. ಒಟ್ಟಿನಲ್ಲಿ ಎಕ್ಕುಂಡಿಯವರ ಕಾವ್ಯ ಭಾವಪ್ರಧಾನವಾದದ್ದು. ಬುದ್ಧಿ ಪ್ರಧಾನವಾದದ್ದಲ್ಲ. ಮೊಕಾಶಿಯವರ ಕವನಸಂಕಲನ ಮಾಯಿಯ ಮೂರು ಮುಖಗಳು. ಅವರು ಪ್ರಯೋಗಪ್ರಿಯರು. ಸೀಮಂತಿನೀಕೋಪಾಖ್ಯಾನ ಕಂದ ಮತ್ತು ಚಂಪೂಗದ್ಯಗಳಿಂದ ಕೂಡಿದ ಕವನವಾದರೆ (ಗೋಕಾಕರೂ ಇಂದಿಲ್ಲ ನಾಳೆಯಲ್ಲಿ ಚಂಪೂ ರೀತಿಯನ್ನು ಬಳಸಿದ್ದಾರೆ) 'ಸಂಸ್ಕೃತಿ' ಅಷ್ಟಷಟ್ಪದಿ ಮತ್ತು ಹೊಸಗನ್ನಡದ ಗದ್ಯದ ನಿರೂಪಣೆಯನ್ನು ಬಳಿಸಿಕೊಂಡಿರುವ ಬರೆವಣಿಗೆಯಾಗಿದೆ. ಈ ಬಗೆಯ ಬರೆವಣಿಗೆಗಳು ತಮ್ಮ ವಿಚಿತ್ರ ರೀತಿಯಿಂದಾಗಿ ಗಮನ ಸೆಳೆಯುತ್ತವೆ; ಕಾವ್ಯ ಗುಣಗಳಿಂದಲ್ಲ; ಗಂಧಕೊರಡು, ನೆರಳು ಬೆಳಕು, ಅಪಸ್ವರದಂಥ ಕವನಗಳು ಮೊಕಾಶಿಯವರ ಕಾವ್ಯಪ್ರತಿಭೆ ಇನ್ನೂ ಹೆಚ್ಚು ಗಂಭೀರವಾದದ್ದನ್ನು ಬರೆಯಬಹುದಾದ ಸಾಮರ್ಥ್ಯವುಳ್ಳದ್ದೆಂಬ ಅನಿಸಿಕೆಯನ್ನು ಓದುಗನಲ್ಲಿ ಹುಟ್ಟಿಸುತ್ತದೆ. ಮಾಯಿಯ ಮೂರು ಮುಖಗಳು ಎಂಬ ಕವನದ ಯಶಸ್ಸು ಈ ಅನಿಸಿಕೆ ಹುಸಿಯಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. 'ನನ್ನ ಕಾವ್ಯ ಜೀವನಕ್ಕೆ ಆವಶ್ಯಕವಾದ ಅಂತಃಕರಣದ ಮಾರ್ಗದರ್ಶನ ನೀಡಿದವರು ಗೋಕಾಕರು' ಎಂದು ಹೇಳಿಕೊಂಡಿದ್ದರೂ ಎಂ.ಅಕಬರ ಅಲಿಯವರು ಗೋಕಾಕರನ್ನು ಕಣ್ಣುಮುಚ್ಚಿ ಅನುಕರಿಸದೆ ನವಚೇತನ, ಸುಮನ ಸೌರಭ, ಗಂಧ ಕೇಸರ ಎಂಬ ಸಂಕಲನಗಳಲ್ಲಿ ಅಭಿವ್ಯಕ್ತಿಯಲ್ಲಿ ತನ್ನತನದ ಹುಡುಕಾಟದಲ್ಲಿರುವುದು ಕಾಣುತ್ತದೆ. ಕಾವ್ಯಸತ್ತ್ವದ ದೃಷ್ಟಿಯಿಂದ ಇನ್ನೂ ಮಹತ್ವ ಪೂರ್ಣವಾದ ಅನನ್ಯವಾದ ದನಿಯನ್ನು ರೂಢಿಸಿಕೊಳ್ಳಬಹುದಾದ ಸಾಧ್ಯತೆಗಳು ಅವರ ಕಾವ್ಯದಲ್ಲಿ ಕಾಣುತ್ತವೆಯಾದರೂ ತನ್ನೊಳಗಿನ ನಿಜದನಿಯನ್ನು ಮೈಚಳಿ ಬಿಟ್ಟು ಎಬ್ಬಿಸಲಾರದ ಸಂಕೋಚದ ಪೊರೆಯೊಂದು ಉದ್ದಕ್ಕೂ ಆವರಿಸಿಕೊಂಡಿರುವಂತೆ ತೋರುತ್ತದೆ. ಆಶಾವಾದಿತ್ವವಿದ್ದರೂ ಜೀವನದ ವಾಸ್ತವವನ್ನು ನಿರಾಕರಿಸದೆ, ಹೀಗಳೆಯದೆ ಅದರ ಅಸ್ತಿತ್ವ ಮತ್ತು ಅದರ ಪ್ರಾಣಶಕ್ತಿಯನ್ನು ಒಪ್ಪಿಕೊಂಡು ಪರವನ್ನು ಅರಸಬೇಕೆಂಬ ಆರೋಗ್ಯಕರವಾದ ಧೋರಣೆ ಅವರಲ್ಲಿರುವುದು ಕಾಣುತ್ತದೆ. ಹಾವು ಹೆಡೆ ಬಿಡಿಸಿದಾಗ, ಲೋಕವೇ ಸಾಕ್ಷಿಯಂಥ ಕೆಲವು ಕವನಗಳು ಈ ಮಾತಿಗೆ ನಿದರ್ಶನಗಳಾಗಿವೆ.

ಗೋಪಾಲಕೃಷ್ಣ ಅಡಿಗರು ತಮ್ಮ ನಡೆದು ಬಂದ ದಾರಿ (1952) ಕವನ ಸಂಕಲನದ ಸಹೃದಯರಿಗೆ ಎಂಬ ತಲೆಬರೆಹವುಳ್ಳ ಮುನ್ನುಡಿ ರೂಪದ ಮಾತುಗಳಲ್ಲಿ ಹೊಸ ಕಾವ್ಯದ ಅಗತ್ಯವನ್ನೂ ಅನಿವಾರ್ಯತೆಯನ್ನೂ ವಿವರಿಸಿದರು. ಅದುವರೆಗೆ ನವೋದಯ ಕಾವ್ಯ ರೀತಿಯಲ್ಲಿ ಭಾವತರಂಗ, ಕಟ್ಟುವೆವು ನಾವು ಕವನಸಂಗ್ರಹಗಳನ್ನು ಪ್ರಕಟಿಸಿ

ಸತ್ತ್ವಶಾಲಿ ಕವಿಯೆಂದು ಪ್ರಸಿದ್ಧಿ ಪಡೆದಿದ್ದರಾದರೂ ಆ ಬಗೆಯ ಕಾವ್ಯರಚನೆಯನ್ನು ಇನ್ನು ಮುಂದೆ ಮಾಡುವುದಿಲ್ಲ. ಮಾಡುವುದರಲ್ಲಿ ಅರ್ಥವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅವರ ಮಾತುಗಳಲ್ಲಿಯೇ ಅವರ ಅಭಿಪ್ರಾಯಗಳನ್ನು ನೋಡಬಹುದು.

"ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟ ಕಳೆದು ಈಗ ಇನ್ನೊಂದು ಘಟ್ಟ ಮೊದಲಾಗುತ್ತಿದೆ. ಕಾವ್ಯರೂಪದಲ್ಲಿ ಬದಲಾವಣೆ ಆಗಬೇಕಾದ ಕಾಲ ಆಗಲೇ ಬಂದುಬಿಟ್ಟಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ತನಕ ಇದ್ದ ವಾತಾವರಣ ಈಗ ಸಮೂಲ ಪರಿವರ್ತನೆಗೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದ ಉತ್ಸಾಹ, ಉದ್ವೇಗ, ಆದರ್ಶಪರವಶತೆಯ ಹಾರಾಟ ಮುಗಿದು ಈಗ ನಮ್ಮ ಮನಸ್ಸು ಮತ್ತೆ ನೆಲಕ್ಕಿಳಿದಿದೆ. ಮೋಡವಾಗಿ ಮೇಲೇರಿದ ಮನಸ್ಸು ಮಳೆಯಾಗಿ ಬಿದ್ದು ಮತ್ತೆ ಹಳ್ಳಕೊಳ್ಳಗಳಲ್ಲಿ ತುಂಬಿಕೊಂಡಿದೆ. ತಳದಲ್ಲಿ ಕೂತಿದ್ದ ಕೊಳೆ ಕಸ ರಾಡಿಯೆಲ್ಲ ಈಗ ಮೇಲೆದ್ದು ಬಂದು ಕನ್ನಡಿಯಂಥ ನೀರು ಕಲಕಿದೆ. ಹೊಸ ಆದರ್ಶಕ್ಕಾಗಿ ಹೊಸ ಕನಸಿಗಾಗಿ ದೇಶದ ಮನಸ್ಸು ಹಸಿದು ಕಾಯುತ್ತಿದೆ. ಇಂಥ ವಾತಾವರಣ ಸುತ್ತುಮುತ್ತಲೂ ಇರುವಾಗ, ಜೀವನಾವಲಂಬಿಯಾದ ಕಾವ್ಯವೂ ಪರಿವರ್ತನೆಗೊಳ್ಳುವುದು ಸಹಜ. ಗಾಂಧಿಯುಗದಲ್ಲಿ ಬರೆದ ರೀತಿಯಲ್ಲೇ ಇನ್ನೂ ಬರೆದರೆ ಬಹುಶಃ ಅದು ಕಾವ್ಯಾಭಾಸವಾಗುತ್ತದೆ. ಇಲ್ಲವೇ ಸತ್ವಹೀನ ಕಾವ್ಯವಾಗುತ್ತದೆ. ಚರ್ವಿತಚರ್ವಣವಾಗುತ್ತದೆ. ಆಗ ಭಾವವನ್ನು ಕೊಲ್ಲುವ ಮಾತು ಬೇತಾಳದಂತೆ ನಮ್ಮ ಬೆನ್ನು ಹತ್ತಿ ಸಮಾಜದ ಬೆಳೆವಣಿಗೆಗೆ ಮಾರಕವಾಗುತ್ತದೆಂದು ನನಗೆ ತೋರುತ್ತದೆ. ಆದ ಕಾರಣ ಈಗ ಕಾಣುತ್ತಿರುವ ಹೊಸ ಮನೋಧರ್ಮವನ್ನು ವ್ಯಕ್ತಪಡಿಸಲು ಹೊಸ ನಾಲಗೆ, ಹೊಸ ನುಡಿಕಟ್ಟು, ರೂಪುಗೊಳ್ಳಬೇಕಾಗಿದೆ. ಈಗ ಬರೆಯುತ್ತಿರುವ ಕವಿಗಳೆಲ್ಲ ಈ ಕುರಿತು ಯೋಚನೆ ಮಾಡಬೇಕಾದದ್ದು ಅನಿವಾರ್ಯ, ಹೊಸ ಹೊಸತಾಗಿ ಬರೆಯುತ್ತಿರುವ ತರುಣ ಕವಿಗಳಂತೂ ಈ ಸಮಸ್ಯೆಯನ್ನು ಎದುರಿಸದೆ ಗತ್ಯಂತರವಿಲ್ಲ. ನಮ್ಮ ಹಿರಿಯ ಕವಿಗಳ ದಾರಿಯಲ್ಲಿ ನಡೆಯುವುದರಿಂದಲೂ ಅಷ್ಟು ಕವಿತೆ ಬಂದೀತು. ಆದರೆ ಅದಕ್ಕೆ ಜೀವ ಕೊಡುವ ಸತ್ವವಾಗಲೀ ಹೊಸ ಸಮಾಜದ ವಾಣಿಯಾಗುವ ಸಾಮರ್ಥ್ಯವಾಗಲೀ ಖಂಡಿತ ಬರಲಾರದು; ನಮ್ಮ ಹಿರಿಯ ಕವಿಗಳು ಆಧುನಿಕ ಕಾವ್ಯಕ್ಕೆ ತಕ್ಕ ಭಾಷೆಯನ್ನು ಸಿದ್ಧಗೊಳಿಸಿ ಅದರಲ್ಲಿ ಅಮೋಘವಾದ ಕೆಲಸವನ್ನು ಮಾಡಿದ್ದಾರೆ. ಆದರೆ ಅದೇ ರೀತಿ ಅಮೋಘವಾದ ಕೆಲಸವನ್ನು ಹೊಸ ತಲೆಮಾರಿನವರೂ ಮಾಡಿ ತೋರಿಸಬೇಕಾಗಿದೆ....... ಗತಕಾಲದ ಭಾಷೆಭಾವವನ್ನು ಕೊಲ್ಲುತ್ತದೆ; ಮನಸ್ಸನ್ನು ಮಂಕಾಗಿಸುತ್ತದೆ. ಅರ್ಥಕ್ಕಿಂತ ಶಬ್ದಗಳ ಹಾರಾಟವೇ ಹೆಚ್ಚಿ ಅರ್ಥ ಮರೆಯಾಗುತ್ತದೆ. ಸಂಕೇತ ಮೂಲರೂಪವನ್ನು ಮರಸುತ್ತದೆ; ಉತ್ಸವಮೂರ್ತಿ ತಾನೇ ಮೂಲವಿಗ್ರಹವೆಂದು ವಿಜೃಂಭಿಸುತ್ತದೆ. ಆದಕಾರಣವೇ ಹೊಸ ಜೀವನ ಭಾವನೆಗಳಿಗೆ ತಕ್ಕ ರೀತಿ ರೂಪುಗೊಳ್ಳಬೇಕಾದ ಕಾಲ ಈಗ ಸಾಹಿತಿಗಳನ್ನು ಎದುರಿಸಿ ನಿಂತಿದೆ; ಹತ್ತೊಂಬತ್ತನೆಯ ಶತಮಾನದ ಆಂಗ್ಲಕವಿಗಳಾದ ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್ ಮುಂತಾದ ರೊಮ್ಯಾಂಟಿಕ್ ಕವಿಗಳಿಂದ ಪ್ರೇರಿತವಾದ ನಮ್ಮ ಆಧುನಿಕ ಕನ್ನಡ ಕಾವ್ಯ ಆ ಸಂಪ್ರದಾಯದಲ್ಲಿ ತಾನು ಮಾಡಬಹುದಾದಷ್ಟು ಕೆಲಸವನ್ನು ಮಾಡಿ ಮುಗಿಸಿದೆ. ಆ ಸಂಪ್ರದಾಯದ ಸತ್ವ ಈಗ ತೀರಿದೆ. ಅದಕ್ಕೆ ಅವನತಿ ಬಂದಿದೆ. ಅದರ ದೋಷಗಳೆಲ್ಲ ಈಗ ಎದ್ದು ಕಾಣಿಸುತ್ತಿವೆ. ನೆಲದ ಮೇಲೆ ಕಾಲೂರಿನಿಂತೇ ನಕ್ಷತ್ರವನ್ನು ತುಡುಕುತ್ತಿದ್ದುದು ಈಗ ನೆಲಬಿಟ್ಟು ಮೇಲೇರಿ ವೇದಾಂತದ ಮಂಜಿನಲ್ಲಿ ಮರೆಯಾಗಿ ಹೋಗುತ್ತಿದೆ. ಶಬ್ದಗಳು ಅರ್ಥದ ಸ್ಥಾನವನ್ನು ಆಕ್ರಮಿಸುತ್ತಿವೆ. ಪ್ರತಿಯೊಂದು ಭಾವವೂ ಅನುಭವವೂ ಅತಿಸರಳವಾಗಿ ಸತ್ಯದಿಂದ ದೂರದೂರ ಹೋಗುತ್ತಿವೆ. ಇಂಥ ಕಾಲದಲ್ಲಿ ಕಾವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು. ಕಾವ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು. ಈ ಜಗತ್ತನ್ನು ಬಿಟ್ಟು ಕಾವ್ಯ ಬದುಕಲಾರದು, ಎಂಬುದನ್ನು ಮತ್ತೆ ಕವಿಗಳು ಅರಿಯಬೇಕಾಗುತ್ತದೆ. ನಿಜವಾದ ಕವಿ ಈ ಮಾತನ್ನು ಎಂದೂ ಮರೆಯುವುದಿಲ್ಲ. ಮರೆಯಲಾರ, ಆದರೆ ಕೇವಲ ವಾಸ್ತವ ಇಂದ್ರಿಯಗಮ್ಯವಾದುದು ಮಾತ್ರವೇ ಕಾವ್ಯದ ವಸ್ತುವಾಗಲಾರದು. ಈ ಜಗತ್ತಿನಲ್ಲಿ ನಮ್ಮ ಸುತ್ತ ಕಾಣುವ ವಸ್ತುಗಳು ಎಷ್ಟು ನಿಜವೋ ಆ ವಸ್ತುಗಳ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ಹುಟ್ಟುವ ಭಾವಗಳೂ ಅಷ್ಟೇ ನಿಜ. ಪಂಚಭೌತಿಕವಾದದ್ದು ಕಾವ್ಯಕ್ಕೆ ಎಷ್ಟು ಅಗತ್ಯವೋ ಅಷ್ಟೇ ನಮ್ಮ ಆದರ್ಶವೂ ಕಲ್ಪನೆಯೂ ಕನಸೂ ಅಗತ್ಯ.ಈ ಎರಡೂ ಸೇರಿ ಆದ ಪಾಕವೇ ಕಾವ್ಯ. ವಿದ್ಯಮಾನಗಳ, ಅನುಭವಗಳ ಆದರ್ಶ ಸ್ವರೂಪದ ಕನಸಿನ ಒಂದಂಶ ಸೇರದೆ ಇದ್ದದ್ದು ಕಾವ್ಯವಾಗಲಿ ಸಾಹಿತ್ಯವಾಗಲಿ ಆಗಲಾರದು. ಈ ದೃಷ್ಟಿಯಿಂದ ಆಧುನಿಕ ಇಂಗ್ಲಿಷ್ ಕಾವ್ಯದ ಪ್ರಸಿದ್ಧ ಕವಿಗಳಾದ ಈಲಿಯಟ್, ಆಡೆನ್ ಮುಂತಾದವರಿಂದ ನಾವು ಇನ್ನು ಮುಂದೆ ಸ್ಫೂರ್ತಿ ಪಡೆಯಬೇಕಾದದ್ದು ಅತ್ಯಗತ್ಯ. ಆದರೆ ನಮ್ಮ ಹೊಸ ಕವಿತೆ ಆ ಇಂಗ್ಲಿಷ್ ಕವಿಗಳ ಕಾವ್ಯದಂತೆಯೇ ರೂಪುಗೊಳ್ಳಲಾರದು. ಆ ಕವಿಗಳ ಅಂಧಾನುಕರಣೆಯಿಂದ ಹೊಸತನ ಬಂದೀತು. ಆದರೆ ಅದು ಕಾವ್ಯವಾಗಲಾರದು. ನಮ್ಮ ಹೊಸ ಕಾವ್ಯ ನಮ್ಮ ನಾಡಿನ ಹೊಸ ವಾತಾವರಣಕ್ಕೂ ನಮ್ಮ ಜನಜೀವನಕ್ಕೂ ನಮ್ಮ ಹೊಸಭಾಷೆಯ ಪರಿಪಾಕದ ಪರಿಮಿತಿಗೂ ಒಳಪಟ್ಟಿದೆ ಎಂಬುದನ್ನು ನಾವು "ಮರೆಯತಕ್ಕದ್ದಲ್ಲ".

ಇಲ್ಲಿ ಅಡಿಗರ ಹೊಸ ಕಾವ್ಯವನ್ನು ಕುರಿತಂಥ ಅಲೋಚನ ಕ್ರಮದಲ್ಲಿ ನಿರ್ದಿಷ್ಟತೆ ಇದೆ, ಖಚಿತತೆ ಇದೆ. ಹೊಸ ಕವಿತೆಯನ್ನು ಕುರಿತು (1953), ಇಂದಿನ ಜೀವನ ಕ್ಲಿಷ್ಟ ಎಂದರೇನು (1954), ಸಾಕ್ಷಿ (1962), ಕಳೆದ ಹತ್ತು ವರ್ಷಗಳ ಕನ್ನಡ ಕಾವ್ಯ (1965), ಮಣ್ಣಿನ ವಾಸನೆ, ನವ್ಯಕವಿತೆಯಲ್ಲಿ ಪ್ರತಿಮಾ ವಿಧಾನ (1967)- ಈ ಲೇಖನಗಳಲ್ಲಿ ವಿಚಾರಪಥ' ಗ್ರಂಥ'ದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಇರುವ ಲೇಖನಗಳಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ಹರಡಿಕೊಂಡಿರುವ ಸಾಹಿತ್ಯವನ್ನು ಕುರಿತಂಥ ವಿಚಾರಸರಣಿಗಳು ಈ ಮೇಲೆ ಉದ್ಧರಿಸಿದಂಥ ಮಾತುಗಳಿಗೆ ಇನ್ನಷ್ಟು ಸ್ಪಷ್ಟವಾದ ಪ್ರಬುದ್ಧವಾದ ವಿವರಣೆ, ವ್ಯಾಖ್ಯಾನಗಳಾಗಿವೆಯೇ ಹೊರತು 'ನಡೆದು ಬಂದ ದಾರಿ'ಯ ಮುನ್ನುಡಿ ರೂಪದ ಮಾತುಗಳಿಗೆ ವ್ಯತಿರಿಕ್ತವಾದ ಮಾತುಗಳಾಗಿಲ್ಲ ಎಂಬುದು ಮುಖ್ಯವಾದ ಸಂಗತಿಯಾಗಿದೆ. ಅಡಿಗರ ಹೊಸ ಕಾವ್ಯದ ಕಲ್ಪನೆ ಪ್ರಥಮ ದರ್ಜೆಯ ಕಾವ್ಯಸತ್ವವುಳ್ಳ ಕವಿಯೊಬ್ಬನ ಅಂತರಂಗದ ನಿಜದನಿಗೆ ನುಡಿ ಕೊಟ್ಟದ್ದಾಗಿತ್ತು. ಹೊಸತು ಬೇಕೆಂಬ ಕೇವಲ ತೋರಿಕೆಯ ಅನಿಸಿಕೆಯ ಮಾತಾಗಿರಲಿಲ್ಲ ಎಂಬುದನ್ನು ಮುಂದಿನ ಅವರ ಚಂಡೆ ಮದ್ದಳೆ, ಭೂಮಿಗೀತ, ವರ್ಧಮಾನ, ಇದನ್ನು ಬಯಸಿರಲಿಲ್ಲ ಎಂಬ ಕವನ ಸಂಕಲನಗಳು ಸಿದ್ಧಪಡಿಸಿ ತೋರಿಸಿವೆ. ಅಷ್ಟೇ ಅಲ್ಲದೆ, ಮುಂದೆ ಸುಮಾರು ಕಾಲು ಶತಮಾನಗಳ ಕಾಲ ಅವರಿಗಿಂತ ಕಿರಿಯ ತಲೆ ಮಾರಿನವರ ಕಾವ್ಯದ ಮೇಲೆ ಮಾತ್ರವಲ್ಲ ಹಿರಿಯ ತಲೆಮಾರಿನ ಮತ್ತು ಓರಗೆಯ ತಲೆಮಾರಿನ ಕವಿ, ಸಾಹಿತಿಗಳ ಮೇಲೆ ಹಾಗೂ ಬೇರೆ ಬೇರೆ ಸಾಹಿತ್ಯ ಪ್ರಕಾರಗಳ ಮೇಲೆ ಅವರ ಕಾವ್ಯ ಮತ್ತು ಸಾಹಿತ್ಯ ಚಿಂತನೆ ಬೀರಿದ ಪ್ರಭಾವ, ಒಡ್ಡಿದ ಸವಾಲು ಕನ್ನಡ ಸಾಹಿತ್ಯ ಚರಿತ್ರೆಯ ಮುಖ್ಯ ಅಧ್ಯಾಯಗಳಲ್ಲೊಂದಾಗಿದೆ. ಅಡಿಗರ ಕಾವ್ಯ ಮತ್ತು ಸಾಹಿತ್ಯಿಕ ಚಿಂತನೆಗಳು ಕಳೆದ ಕಾಲು ಶತಮಾನದಿಂದಲೂ ಪ್ರಬಲವಾದ ವಿರೋಧಿ ಮತ್ತು ಪ್ರಬಲವಾದ ಸಮರ್ಥನೆ ಎರಡನ್ನೂ ಎದುರಿಸಿಕೊಂಡು ಕುದುರಿಸಿಕೊಂಡು ಬೆಳೆದು ಬಂದದ್ದಾಗಿದೆ.

ಗೋಕಾಕರ ರೀತಿಯು ನವ್ಯಕಾವ್ಯದಂತೆ ಅಡಿಗರ ರೀತಿಯು ನವ್ಯಕಾವ್ಯದಲ್ಲಿಯೂ ಸಂಕೇತ ನಿಷ್ಠತೆ, ಪ್ರತಿಮಾ ಪ್ರಧಾನತೆ, ನವೋದಯ ರೀತಿಯ ನಿಯತ ಛಂದಸ್ಸಿನ ಉಲ್ಲಂಘನೆ, ಬುದ್ಧಿ ಪ್ರಧಾನತೆಗಳ ಮೇಲೆ ಒತ್ತು ಬಿದ್ದದ್ದು ಕಾಣುತ್ತದೆ. ಗೋಕಾಕರಂತೆ ಅಡಿಗರಲ್ಲಿಯೂ ಅಧ್ಯಾತ್ಮದ ತುಡಿತವಿರುವುದು ಕಾಣುತ್ತದೆ. ಗೋಕಾಕರು ಅರವಿಂದರ ದರ್ಶನದ ಬಗೆಗೆ ಬೆಳೆಸಿಕೊಂಡ ನಂಬಿಕೆ, ಶ್ರದ್ಧೆಗಳ ಮೂಲಕ ಲೋಕದ ವಿದ್ಯಮಾನಗಳನ್ನು ಅಧಿಮಾನಸ, ವಿಶ್ವಮಾನವತಾವಾದಗಳ ಪರಿಕಲ್ಪನೆಯ ಸಂದರ್ಭದಲ್ಲಿಟ್ಟು ಧೇನಿಸುತ್ತಾರೆ, ವ್ಯಾಖ್ಯಾನಿಸುತ್ತಾರೆ. ಅಡಿಗರು ಸ್ವಾನುಭವದ ನಿಜದನಿಗಳನ್ನು ಆಪ್ತವಾಗಿ ಕೇಳಿಸಿಕೊಂಡು ಗುಣಾತ್ಮಕ ನಿರಪೇಕ್ಷತೆಯಲ್ಲಿ ಪರಿಭಾವಿಸಿ ಅದರೆಲ್ಲ ದ್ವಂದ್ವ, ಸಂಕೀರ್ಣತೆಗಳಲ್ಲಿ ಅದಕ್ಕೆ ಭಾಷೆಯಲ್ಲಿ ಆಕಾರ ಕೊಡುವ ವ್ರತನಿಷ್ಠ ಮನೋಭಾವದ ಕವಿಯಾಗಿದ್ದಾರೆ. ಆದ್ದರಿಂದ ವಿಶ್ವಮಾನವ ಪ್ರಜ್ಞೆಯ ಆದರ್ಶವು ಆರೋಪಿತಭಂಗಿ, ಪಾತ್ರಾಭಿನಯದ ನಿಲುವು ಎಂದು ಅವರಿಗೆ ತೋರಿದರೆ ಆಶ್ಚರ್ಯವಿಲ್ಲ. ವ್ಯಕ್ತಿಪ್ರಜ್ಞೆ ನಿಷ್ಠೂರ ವಾಸ್ತವದ ನೆಲೆಯಲ್ಲಿ ಶೋಧನೆಗೊಳಗಾದಾಗ ಮನುಷ್ಯನ

ದೌರ್ಬಲ್ಯ, ಸಣ್ಣತನಗಳನ್ನೂ ಅದು ಎತ್ತಿ ತೋರಿಸುವುದರಿಂದ ಅಂಥ ಕಾವ್ಯ ಮಾನವ ಚೈತನ್ಯದ ಔನ್ನತ್ಯದ ಬಗೆಗೆ ಆತ್ಮವಿಶ್ವಾಸ, ಆಶಾವಾದಿತ್ವ, ಮಹತ್ವಾಕಾಂಕ್ಷೆಗಳನ್ನು ಕುದುರಿಸದೆ ಓದುಗನಲ್ಲಿ ವಿಷಾದದ, ನಿರಾಶಾವಾದದ, ಸಿನಿಕತನದ ಧೋರಣೆಯನ್ನೇ ಹೆಚ್ಚಾಗಿ ಪೋಷಿಸೀತೆಂಬ ದಿಗಿಲು ಗೋಕಾಕರಿಗೂ ಇದ್ದರೆ ಆಶ್ಚರ್ಯವಿಲ್ಲ. ಒಟ್ಟಿನಲ್ಲಿ ಈ ಇಬ್ಬರೂ ಭಿನ್ನ ಪ್ರಕೃತಿಯ, ಭಿನ್ನ ದೃಷ್ಟಿಕೋನದ ಕವಿಗಳೆಂಬುದೂ ನವ್ಯಕಾವ್ಯದ ಎರಡು ಪ್ರಧಾನ ಪ್ರವೃತ್ತಿಗಳ ಪ್ರವರ್ತಕರೆಂಬುದೂ ಮುಖ್ಯವಾದ ಸಂಗತಿಯಾಗಿದೆ.

ಅಡಿಗರ ನವ್ಯಮಾರ್ಗದಿಂದ ಪ್ರಭಾವಿತರಾಗಿ ತಮ್ಮ ಕಾವ್ಯಜೀವನವನ್ನು ರೂಪಿಸಿಕೊಂಡ ಕವಿಗಳ ಸಂಖ್ಯೆ ಹೇರಳವಾಗಿದೆ. ಯುವತಲೆಮಾರಿನ ಪ್ರತಿಭಾಶಾಲಿ ಕವಿಗಳಲ್ಲಿ ಹಲವರು ಈ ಮಾರ್ಗಕ್ಕೆ ಸೇರುತ್ತಾರೆ. ಬಿ.ಸಿ.ರಾಮಚಂದ್ರಶರ್ಮರದು ನವ್ಯಕಾವ್ಯದ ಆರಂಭದ ಕಾಲದಲ್ಲಿ ಅಡಿಗರ ಜೊತೆ ಜೊತೆಯಲ್ಲೇ ಕೇಳಿಬರುತ್ತಿದ್ದ ಹೆಸರಾಗಿತ್ತು. ಏಳುಸುತ್ತಿನ ಕೋಟೆ (1953), ಬ್ರಾಹ್ಮ ನೀಡಿದ ಸ್ಫೂರ್ತಿ, ಹೇಸರಗತ್ತೆ ಇವು ಅವರ ನವ್ಯಕಾವ್ಯ ಸಂಕಲನಗಳು. ಲೈಂಗಿಕ ವಸ್ತುವಿನಲ್ಲಿಯೇ ಹೆಚ್ಚಾದ ಲೋಲುಪತೆ ತೋರಿಸಿದ ಶರ್ಮರು ಅಭಿವ್ಯಕ್ತಿ ವಿಧಾನದ ಹೊಸತನ ಮತ್ತು ಕಸುವಿನಿಂದಾಗಿ ತುಂಬ ಭರವಸೆ ಹುಟ್ಟಿಸಿದ್ದರು. ಮುಂದೆ ಅವರ ಕಾವ್ಯಜೀವನ ಪ್ರವರ್ಧಮಾನವಾಗದೆ ಇಳಿಮುಖವಾಗಿರುವುದಕ್ಕೆ ಅವರ ಹೇಸರಗತ್ತೆ ಕವನ ಸಂಕಲನ ನಿದರ್ಶನವಾಗಿದೆ. ಮುಂದೆ ಶರ್ಮರಂತೆ ಕಾಮವೇ ಪ್ರಧಾನವಸ್ತುವಾಗಿ ಉಳ್ಳ ಕವನಗಳನ್ನು ಹೆಚ್ಚಾಗಿ ಬರೆದು ಶರ್ಮರನ್ನು ನೆನಪಿಗೆ ತಂದವರು ಕಾಮಿ, ಆಮೆ ಸಂಕಲನಗಳ ಎಚ್.ಎಂ.ಚನ್ನಯ್ಯನವರು. ಭಾಷೆಯ ಉಪಯೋಗ ಮತ್ತು ಲಯಗತಿಯಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಅವರು ರೂಢಿಸಿದರು. ಯು.ಆರ್.ಅನಂತಮೂರ್ತಿಯವರ 'ಬಾವಲಿ' ಸಂಕಲನವೇ ಇನ್ನೂ ಕೆಲವು ಕವನಗಳನ್ನೊಳಗೊಂಡು 15 ಪದ್ಯಗಳು ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಭಿಕ್ಷುಕರು, ಕಿಳ್ಳೇಕ್ಯಾತರ ಹುಡುಗಿ, ರಾಜನ ಹೊಸ ವರ್ಷದ ಬೇಡಿಕೆಗಳಂಥ ಉತ್ತಮ ಕವನಗಳು ಅದರಲ್ಲಿವೆ. ಪಿ.ಲಂಕೇಶರು ಬಿಚ್ಚು, ತಲೆಮಾರು ಎಂಬ ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ ಪ್ರಥಮ ಸಂಕಲನವಾದ ಬಿಚ್ಚುವಿನಲ್ಲಿ ಹಲವು ಉತ್ತಮ ಕವನಗಳಿವೆ. ಅಡಿಗರಿಗೆ ಭಿನ್ನವಾದ ಲಯಸಾಧ್ಯತೆಗಳ ಹುಡುಕಾಟವಿದೆ. ಕವಿಯ ವಿಶಿಷ್ಟವೂ ಸತ್ವಪೂರ್ಣವೂ ಆದ ದನಿಯ ಮುದ್ರೆ ಇದೆ. ಅವರ ಅವ್ವ ಕನ್ನಡದ ಅತ್ಯುತ್ತಮ ಕವನನಗಳಲ್ಲೊಂದೆಂದು ಸುಪ್ರಸಿದ್ಧವಾಗಿದೆ. ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಸಂಕಲನದ ಅನಂತರ ಪೂರ್ಣಚಂದ್ರ ತೇಜಸ್ವಿಯವರು ಕವನಗಳನ್ನು ಹೆಚ್ಚು ಬರೆಯಲಿಲ್ಲ.

ಚಂದ್ರಶೇಖರ ಪಾಟೀಲರು ಬಾನುಲಿ, ಮಧ್ಯಬಿಂದು, ಹತ್ತೊಂಬತ್ತು ಕವನಗಳು ಮುಂತಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಮಕಾಲೀನ ಪ್ರಜ್ಞೆ, ಜೀವನದ ಬಗ್ಗೆ ಲವಲವಿಕೆ, ವಿಡಂಬನೆಯ ಮಾತುಗಾರಿಕೆ, ಅರ್ಥಭಾರವನ್ನು ಹಗುರಾಗಿ ತೇಲಿಸುವ ಜಾಣ್ಮೆ, ಅಭಿವ್ಯಕ್ತಿಯ ವ್ಯಂಗ್ಯಪೂರ್ಣತೆ ಇವು ಎಲ್ಲ ಕವಿತೆಗಳ ಸಾಮಾನ್ಯ ಲಕ್ಷಣಗಳು ಎಂದು ಹತ್ತೊಂಬತ್ತು ಕವನಗಳು ಸಂಗ್ರಹದ ಹಿನ್ನುಡಿಯಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಹೇಳಿದ ಮಾತು ಪಾಟೀಲರ ಒಟ್ಟು ಕಾವ್ಯಕ್ಕೇ ಅನ್ವಯವಾಗಬಹುದಾದ ಮಾತಾಗಿದೆ. ಚಂದ್ರಶೇಖರ ಕಂಬಾರರ ಹೇಳತೇನ ಕೇಳ, ತಕರಾರಿನವರು ನವ್ಯಕಾವ್ಯ ಸಂಕಲನಗಳಾಗಿವೆ. ಜನಪದ ಭಾಷೆಯ ಬಳಕೆ ಮತ್ತು ಕಲ್ಪಕತೆಯ ಸಮೃದ್ಧಿ ಪ್ರಥಮ ದರ್ಜೆಯದಾಗಿದೆ. ನವ್ಯಧೋರಣೆ ಮತ್ತು ಅಭಿವ್ಯಕ್ತಿ ತಂತ್ರಕ್ಕೆ ಜನಪದದ ಜೀವಂತ ಆಡುಭಾಷೆಯನ್ನು ಕಸಿಗೊಳಿಸುವುದರಲ್ಲಿ ಅವರ ಸಾಧನೆ ಅಪೂರ್ವವಾದದ್ದಾಗಿದೆ. ಜನ್ಮಜಾತ ಕವಿಪ್ರತಿಭೆಯ ಪುಟಿತ ಇವರಷ್ಟು ಸಹಜ ಸಮೃದ್ಧಿಯಲ್ಲಿ ಅಡಿಗರ ಅನಂತರದ ಇನ್ನಾವ ನವ್ಯಕವಿಯಲ್ಲಿಯೂ ಕಾಣುವುದಿಲ್ಲ. ಕಂಬಾರರು ಅಡಿಗರ ಪ್ರಭಾವದಿಂದ ಬಿಡಿಸಿಕೊಳ್ಳಬೇಕೆಂಬ ತಮ್ಮ ಅನಿಸಿಕೆಯನ್ನು ಇತರರೊಂದಿಗೆ ತಾವು ಸಂಪಾದಿಸಿದ 'ಅಕಾವ್ಯ' ಎಂಬ ಪತ್ರಿಕೆಯಲ್ಲಿ 'ಏನೇನೋ ಮಾಡಿ ಸುದ್ದಿಯಲ್ಲಿರುವ ಗತ್ತಲ್ಲ 'ಅಕಾವ್ಯ'. ಅಥವಾ ಜಾತೀಯತೆಯ ಕಿಡಿಗೇಡಿ ರಾಜಕೀಯವೂ ಅಲ್ಲ. ನಮಗೂ ಗಂಭೀರ ಕಾಳಜಿಗಳಿವೆ. ಘೋಷಣೆಗಳಿಂದ ಹೊಸ ಕಾವ್ಯ ಹುಟ್ಟಬಾರದೆಂದೇನು ನಿಯಮವಿದೆಯೇ? ಅಕಾವ್ಯ ನಮಗೆ ನಾವೇ ಹಾಕಿಕೊಂಡ ಸವಾಲು, ಅದಕ್ಕೆ ಜವಾಬು ಹುಡುಕುವುದು ನಮ್ಮ ಜವಾಬ್ದಾರಿ. ಸತ್ವವಿದ್ದರೆ ಅದನ್ನು ಗುರುತಿಸುವುದು ಗುಣಪಕ್ಷಪಾತಿಗಳಾದ ಸಹೃದಯರ ಜವಾಬ್ದಾರಿ' ಎಂದು ದಿಟ್ಟತನದಿಂದ ಪ್ರತಿಪಾದಿಸಿದ್ದುಂಟು.

ನಿಮ್ಮ ಪ್ರೇಮಕುಮಾರಿಯ ಜಾತಕ, ಕಪ್ಪು ದೇವತೆ ಮತ್ತು ಲೀಲಾರಾಮರ ಕವನಗಳು ಎಂಬ ಸಂಕಲನಗಳ ಸುಮತೀಂದ್ರ ನಾಡಿಗರು ಪದ್ಯ ಕಟ್ಟುವುದರಲ್ಲಿ ತೋರುವ ಚಾಕಚಕ್ಯತೆ, ಸಹಜತೆಗಳು ಮನಸೆಳೆಯುವಂತಿವೆ. ಎಲ್ಲ ಕವನಗಳಿಗೂ ತಮ್ಮನ್ನು ಓದಿಸಿಕೊಳ್ಳುವ ಗುಣ ಇದ್ದೇ ಇದೆ. ಕಪ್ಪು ದೇವತೆ ಬಹುಶಃ ಅವರ ಅತ್ಯುತ್ತಮ ಕವನವಾಗಿದೆ. ಪದ್ಯ ಕಟ್ಟುವ ಚಾಕಚಕ್ಯತೆಯಲ್ಲಿ, ಸಹಜತೆಯಲ್ಲಿ ಸುಮತೀಂದ್ರರನ್ನೂ ಮೀರಿಸುವಂತಿರುವ ನಿಸಾರ್ ಅಹಮದ್ ಅವರು ಮನಸ್ಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ಸುಮುಹೂರ್ತ, ಸಂಜೆ ಐದರ ಮಳೆ, ನಾನೆಂಬ ಪರಕೀಯ ಮುಂತಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ವೃತ್ತ, ಸುಳಿ, ನಿನ್ನೆಗೆ ನನ್ನ ಮಾತು ಮುಂತಾದ ಹಲವಾರು ಸಂಕಲನಗಳನ್ನು ಪ್ರಕಟಿಸಿರುವ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರೂ ಹೇಳುವುದನ್ನು ಪರಿಷ್ಕಾರವಾಗಿ ರುಚಿಕರವಾಗಿ ಹೇಳುವುದರ ಮೂಲಕ ಓದುಗನನ್ನು ಮುಟ್ಟುವ ಕವಿ. ರಸಗಂಗೆ, ಉತ್ತರ, ಚಿತ್ರವಿಚಿತ್ರ ಎಂಬ ಸಂಕಲನಗಳನ್ನು ಪ್ರಕಟಿಸಿರುವ ಜಿ.ಎಸ್.ಸಿದ್ದಲಿಂಗಯ್ಯನವರೂ ಅಂಜೂರ, ನದಿಯ ಮೇಲಿನ ಗಾಳಿ ಸಂಕಲನಗಳನ್ನು ಪ್ರಕಟಿಸಿರುವ ಕ.ವೆಂ.ರಾಜಗೋಪಾಲರೂ ಯಾವ ಅತಿಗೂ ಹೋಗದೆ ಕಾವ್ಯ ರಚಿಸಬೇಕೆಂಬ ಹಂಬಲವಿರುವವರು. ರಾಜಗೋಪಾಲರ ಮನಸ್ಸಿಗೆ ಮೃದುವಾಗುವ, ಕರಗುವ ಗುಣ ಇದೆ. ಸಿದ್ದಲಿಂಗಯ್ಯನವರ ಮನಸ್ಸು ಸರಿ ತಪ್ಪುಗಳ ಬಗೆಗೆ ಹೆಚ್ಚಿನ ಆತ್ಮವಿಶ್ವಾಸದಿಂದ ವ್ಯವಹರಿಸುತ್ತದೆ. ಅವರ 'ಮಿಥಿಲೆಗಿಲ್ಲಿಂದಲೇ ಮಾರ್ಗವೇನು ಗುರು' ಸಾಕಷ್ಟು ಪ್ರಸಿದ್ಧಿಪಡೆದ ಕವನವಾಗಿದೆ.

ಕೆ.ವಿ.ತಿರುಮಲೇಶರು ಮುಖವಾಡಗಳು, ವಠಾರ, ಮಹಾಪ್ರಸ್ಥಾನ ಮುಂತಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಭಾಷೆ ಮತ್ತು ಲಯದ ದೃಷ್ಟಿಯಿಂದ ನೋಡಿದಾಗ ಅವರು ಅನನ್ಯತೆಯನ್ನು ಪ್ರಕಟಿಸಿರುವುದು ಕಂಡು ಬರುತ್ತದೆ. ಕೊಕ್ಕೊಡುತ್ತ ಹರಿಯುವ ಲಯಗತಿ ಅವರ ಕಾವ್ಯದ ಲಯವಿಧಾನದಲ್ಲಿ ಹೆಚ್ಚಾಗಿ ಕಾಣುತ್ತದೆ. ಮಹಾಪ್ರಸ್ಥಾನ ಅವರ ಕಾವ್ಯ ಗಂಭೀರವಾದ ಆಯಾಮವನ್ನು ಮೈಗೂಡಿಸಿಕೊಳ್ಳುತ್ತ ಬೆಳೆಯುತ್ತಿದೆ ಯೆಂಬುದಕ್ಕೆ ಸಾಕ್ಷಿ ನುಡಿಯುವಂತಿದೆ. ಶ್ರೀಕೃಷ್ಣ ಆಲನಹಳ್ಳಿಯವರ ಮಣ್ಣಿನ ಹಾಡು, ಕಾಡುಗಿಡದ ಹಾಡು ಪಾಡು ಸಂಕಲನಗಳ ಕವನಗಳು ತಮ್ಮ ಕಸುವು ಮತ್ತು ಜೀವನಾನುರಕ್ತಿಯಿಂದಾಗಿ ಮನಸೆಳೆಯುತ್ತವೆ. ಗೋಪಿ ಮತ್ತು ಗಾಂಡಲೀನ ಸಂಕಲನದ ಬಿ.ಆರ್.ಲಕ್ಷ್ಮಣರಾವ್ ಅವರ ಬರವಣಿಗೆಗೆ ತನ್ನದೇ ಆದ ಧಾಟಿ ಧೋರಣೆಗಳಿವೆ.

ಅನನ್ಯ ರೀತಿಗಳಲ್ಲಿ ಆಡುಭಾಷೆಯ ಪ್ರಯೋಗ ನಡೆಸುವುದರ ಮೂಲಕ ನವ್ಯಕಾವ್ಯಕ್ಕೆ ವೈವಿಧ್ಯವನ್ನೂ ಹೊಸ ಆಯಾಮವನ್ನೂ ತಂದುಕೊಟ್ಟವರು 'ಹೊಕ್ಕುಳಲ್ಲಿ ಹೂವಿಲ್ಲ' ಸಂಕಲನದ ಎ.ಕೆ.ರಾಮಾನುಜನ್ ಮತ್ತು ಶಿಲಾಲತೆ, ಮನೆಯಿಂದ ಮನೆಗೆ ಸಂಕಲನಗಳ ಕೆ.ಎಸ್.ನರಸಿಂಹ ಸ್ವಾಮಿಯವರು. ಅಡಿಗರು ಹೆಚ್ಚು ಸಂಕೀರ್ಣವೂ ವೈವಿಧ್ಯಪೂರ್ಣವೂ ಆದ ಬಗೆಯಲ್ಲಿ ಕನ್ನಡ ಭಾಷೆಯ ಸಾಧ್ಯತೆಯನ್ನು ಸೂರೆಮಾಡಿದ್ದು ನಿಜ. ಆದರೆ ಈ ಇಬ್ಬರೂ ಕೇವಲ ಶಿಷ್ಟ ಕನ್ನಡ ನುಡಿಯನ್ನು ಶ್ರುತಿಗೊಳಿಸುವುದರ ಮೂಲಕವೇ ಎಂಥೆಂಥ ಲಯವಿನ್ಯಾಸ, ಏನೆಲ್ಲ ಪಲುಕು, ಸೂಕ್ಷ್ಮಗಳನ್ನು ದುಡಿಸಿಕೊಳ್ಳಬಹುದೆಂಬುದನ್ನು ಅತ್ಯುತ್ತಮ ಮಟ್ಟದಲ್ಲಿ ತಮ್ಮದೇ ಆದ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ನಾಗರಿಕ (ಅರ್ಬನ್) ಭಾಷೆಯಲ್ಲಿಯೇ ವಿವಿಧ ಲಯ ಸಾಧ್ಯತೆಗಳನ್ನು ಲಂಕೇಶರೂ ಅನಂತರದ ತಿರುಮಲೇಶರೂ ತೆರೆದು ತೋರಿಸಿ ಆಡುನುಡಿಗೆ ಲಯವೈವಿಧ್ಯವನ್ನು ತಂದದ್ದು ಉಂಟಾದರೂ ಅವರಿಬ್ಬರ ಆ ಪ್ರಯೋಗಗಳಲ್ಲಿಯೂ ಲಯ ಗತಿಯ ವೇಗ, ತುಯ್ತಗಳು ಜಾಸ್ತಿಯಾಗಿದ್ದವು. ಚಂದ್ರಶೇಖರ ಕಂಬಾರರೂ ಜನಪದ ಆಡುಭಾಷೆಯನ್ನು ಬಳಸಿದಲ್ಲೆಲ್ಲ ಅದನ್ನು ಹೊಸ ಸಂವೇದನೆಗೆ ಒಗ್ಗಿಸುವುದರ ಮೂಲಕ ನವ್ಯಕಾವ್ಯರೀತಿಗೆ ಹೊಸ ವೈವಿಧ್ಯ, ಆಯಾಮ ತಂದಿದ್ದಾರೆ. ಆದರೆ ರಾಮಾನುಜನ್ ಮತ್ತು ಕೆ.ಎಸ್.ನ ಅವರು ಆಡುನುಡಿಯ ನಡಿಗೆಯನ್ನು ನಿಧಾನಗೊಳಿಸಿ ಗದ್ಯಗತಿಗೆ ಪದ್ಯದ ಲಯಗತಿಯನ್ನು ಎಷ್ಟು ಹತ್ತಿರ ತಂದು ಕಾವ್ಯವನ್ನು ಸೃಷ್ಟಿಸಬಹುದೆಂಬುದನ್ನು ಕನ್ನಡದಲ್ಲಿ ಅದರ ಆತ್ಯಂತಿಕ ಸ್ಥಿತಿಯಲ್ಲಿ ತೋರಿಸಿಕೊಟ್ಟವರೆಂಬುದನ್ನು ಮರೆಯುವಂತಿಲ್ಲ. ರಾಮಾನುಜನ್

ಅವರ ಮೇಲೆ ಅಡಿಗರ ಪ್ರಭಾವ ತೋರಿಸುವುದು ಕಷ್ಟ. ಅವರದು ಶುದ್ಧವಾಗಿ ಹೊಸದನಿ. ಕೆ.ಎಸ್.ನರಸಿಂಹಸ್ವಾಮಿಯವರು ಮೈಸೂರು ಮಲ್ಲಿಗೆ, ಇರುವಂತಿಗೆ ಮುಂತಾದ ಕವನಸಂಕಲನಗಳಲ್ಲಿ ನವೋದಯದ ರೀತಿಯಲ್ಲಿ ಸುಕುಮಾರವಾಗಿ, ಅಚ್ಚುಕಟ್ಟಾಗಿ ಬರೆಯುತ್ತಿದ್ದವರು. ಶಿಲಾಲತೆಯಿಂದ ಮುಂದಿನ ಕಾವ್ಯದಲ್ಲಿ ಸೌಕುಮಾರ್ಯ, ಅಚ್ಚುಕಟ್ಟುಗಳು ಇಲ್ಲವೆಂದಲ್ಲ. ಆದರೆ ಅವು ಬದುಕಿನ ಗಂಭೀರ ಆಳಗಳನ್ನು ಬಗೆಯುವಲ್ಲಿ ಬಳಕೆಯಾದ ರೀತಿ ಅನನ್ಯವಾಗಿದೆ. ರಾಮಾನುಜನ್ ಅವರ ಬರೆವಣಿಗೆಯ ಪ್ರಭಾವ ಕೆಲವು ಎಳೆಯ ಕವಿಗಳ ಮೇಲೆ ಆದಂತೆ ನರಸಿಂಹಸ್ವಾಮಿಯವರ ಪ್ರಭಾವ ಅಷ್ಟಾಗಿ ಆದಂತೆ ತೋರುವುದಿಲ್ಲ. ರಾಮಾನುಜನ್ ಅವರನ್ನು ಅನುಕರಿಸಿದವರಿಗೂ ರಾಮಾನುಜನ್ ಅವರ ಶಿಷ್ಟ ನಾಜೂಕನ್ನು (ಸೊಫಿಸ್ಟಿಕೇಷನ್) ರೂಢಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಆದ್ದರಿಂದ ಉಳಿದವರಲ್ಲಿ ಹೆಚ್ಚು ಕಡೆಗಳಲ್ಲಿ ಲಯದ ಕಸರತ್ತುಗಳಾಗಿಯೇ ಕಾಣಿಸುವಂತಾಯಿತು.

ಜಿ.ಎಸ್.ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿಯವರು ತಮ್ಮ ಕವಿ ಜೀವನದ ಪ್ರಥಮ ಹಂತದಲ್ಲಿ ನವೋದಯದ ಸೌಂದರ್ಯಾರಾಧಕ ಮನೋಭಾವವನ್ನು ಬೆಳೆಸಿಕೊಂಡಿದ್ದವರು. ಶಿವರುದ್ರಪ್ಪನವರ ಸಾಮಗಾನ, ಚೆಲುವು - ಒಲವು, ದೇವಶಿಲ್ಪಗಳೂ ಕಣವಿಯವರ ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ಮಧುಚಂದ್ರಗಳೂ ಆ ರೀತಿಯ ಮನೋಭಾವವನ್ನೂ ಪ್ರತಿನಿಧಿಸುತ್ತವೆ. ಶಿವರುದ್ರಪ್ಪನವರ ದೀಪದ ಹೆಜ್ಜೆ ಕವನಸಂಕಲನ ಅವರ ಕಾವ್ಯಜೀವನದ ಮಹತ್ತ್ವದ ಘಟ್ಟವನ್ನು ಸೂಚಿಸಿತು. ಅವರ ಕಾವ್ಯಶಕ್ತಿ ಹೊಸ ಚೈತನ್ಯವನ್ನು ರೂಢಿಸಿಕೊಳ್ಳುತ್ತದೆ ಎಂಬ ಭರವಸೆಯನ್ನೂ ಹುಟ್ಟಿಸಿತು. ಆದರೆ ಮುಂದೆ ಬಂದ ಕಾರ್ತೀಕ, ಅನಾವರಣ, ತೆರೆದ ದಾರಿ, ಗೋಡೆ ಸಂಕಲನಗಳು ನಿರೀಕ್ಷಿತ ಬೆಳವಣಿಗೆಯನ್ನು ತೋರಿಸದಿದ್ದುದು ಆಶ್ಚರ್ಯ. ಕಣವಿಯವರ ಮಣ್ಣಿನ ಮೆರವಣಿಗೆ, ನೆಲಮುಗಿಲು, ಎರಡು ದಡಗಳಲ್ಲಿ ಮಹತ್ವಾಕಾಂಕ್ಷೆಯ ಬರೆವಣಿಗೆ ಕಾಣುತ್ತದೆ. ಈ ಇಬ್ಬರು ಕವಿಗಳನ್ನು 'ಸಮನ್ವಯ' ಕವಿಗಳೆಂದು ಕರೆಯುವ ಪರಿಪಾಠ ಬಂದುಹೋಗಿದೆ. ನವೋದಯ ನವ್ಯಗಳ ನಡುವೆ ತಮ್ಮದೇ ಆದ ವಿಶಿಷ್ಟ ಬಗೆಯ ಸೃಜನಾತ್ಮಕ ಭಾವಸಂಬಂಧ ಸ್ಥಾಪಿಸಲು ಹೆಣಗುವುದರಲ್ಲಿ ಅವರಿಬ್ಬರಲ್ಲಿ ಕಂಡುಬರುತ್ತಿರುವ ಸಾಮ್ಯವೇ ಅವರನ್ನು ಹಾಗೆ ಕರೆಯುವುದಕ್ಕೆ ಕಾರಣವಾಗಿರುವಂತಿದೆ. ಇಲ್ಲಿಯೇ ಹೆಸರಿಸಬಹುದಾದ ಇನ್ನಿಬ್ಬರು ಕವಿಗಳು ನಾಣ್ಯಯಾತ್ರೆ, ಮಂಗಳಾರತಿ, ಕುಂಡಗಳೇ ಸಾಕು ಸಂಕಲನಗಳ ಸುಜನಾ (ಎಸ್.ನಾರಾಯಣ ಶೆಟ್ಟಿ) ಮತ್ತು ತಾರಾಸಖ, ಅನಂತ ಪೃಥ್ವೀ, ಪ್ರಕೃತಿ, ವರ್ತಮಾನ, ಸಂಕಲನಗಳ ಸಿ.ಪಿ.ಕೆ. (ಸಿ.ಪಿ.ಕೃಷ್ಣಕುಮಾರ್).

ನವೋದಯ ಕಾವ್ಯರೀತಿಗೆ ಭಿನ್ನವಾದ ರೀತಿಯ ಕಾವ್ಯಸೃಷ್ಟಿಯಲ್ಲಿ ತೊಡಗಿದ ಮೊದಲಿಗರಲ್ಲಿ ದಿವಂಗತ ಪೇಜಾವರ ಸದಾಶಿವರಾಯ ಮತ್ತು ವಿ.ಜಿ.ಭಟ್ಟರನ್ನು ಮರೆಯುವಂತಿಲ್ಲ. ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಇಟಲಿಯಲ್ಲಿ ತೀರಿಹೋದ ಶಿಲ್ಪಶಾಸ್ತ್ರ ತಜ್ಞರೂ ಕವಿಯೂ ಆದ ಪೇಜಾವರ ಸದಾಶಿವರಾಯರ ವರುಣ ಎಂಬ ಸಂಕಲನ ಅವರ ಮರಣಾನಂತರ 1952ರಲ್ಲಿ ಪ್ರಕಟವಾದರೂ ನವ್ಯಕಾವ್ಯದ ಅಧಿಕೃತ ಘೋಷಣೆಯಾಗುವುದಕ್ಕಿಂತ ಹಿಂದೆಯೇ ಅಂದರೆ 1950ಕ್ಕಿಂತ ಮೊದಲೇ ಅವರು ನಾಟ್ಯೋತ್ಸವ, ವರುಣದಂಥ' ಕವನಗಳನ್ನು ಬರೆದಿದ್ದಂತೆ ತಿಳಿದುಬರುತ್ತದೆ. ನಾಟ್ಯೋತ್ಸವ ಇಂದಿಗೂ ತನ್ನ ಜೀವನೋತ್ಸಾಹ, ಲಯ ವೈವಿಧ್ಯ, ಹೊಸತನಗಳಿಂದಾಗಿ ಮನಸೆಳೆಯುವಂತಿದೆ. ಪಲಾಯನ, ರಕ್ತಾಂಜಲಿ, ತುಂಟನ ಪದಗಳು, ಕಾವ್ಯ ವೇದನೆ, ಕಿಷ್ಕಿಂದೆ ಸಂಕಲನಗಳ ವಿ.ಜಿ.ಭಟ್ಟರು ಸೂತ್ರಗಳಿಗೆ ಸಿಲುಕದೆ ಸುಸೂತ್ರವಾಗಿ ಬದುಕಲು ಆಗುವುದೆಂಬ ವಿಶ್ವಾಸವುಳ್ಳವರೆಂದು ತಾವೇ ಹೇಳಿಕೊಂಡಿದ್ದಾರೆ. ಸೂತ್ರಗಳಿಗೆ ಸಿಗದ ಸ್ವತಂತ್ರಮನೋಧರ್ಮ ಅವರದೆಂಬುದರಲ್ಲಿ ಅನುಮಾನಕ್ಕೆ ಎಡೆಯಿಲ್ಲ. ಆದರೆ 'ಸುಸೂತ್ರ' ಎಂಬ ಮಾತಿಗೆ ಸಲೀಸಾಗಿ ಎಂಬ ಸಾಮಾನ್ಯಾರ್ಥ ಮಾಡಿದರೆ ಅವರೂ ಒಪ್ಪಲಿಕ್ಕಿಲ್ಲ. ಏಕೆಂದರೆ ಅವರಿಗೆ ಬದುಕಿನ ಸಲೀಸುತನದಲ್ಲಿ ನಂಬಿಕೆಯಿಲ್ಲ. ಒಳ್ಳೆಯ ಸೂತ್ರವೊಂದು ತಮ್ಮ ಕಾವ್ಯದಲ್ಲಿದೆ ಎಂಬರ್ಥದಲ್ಲಿ ಅವರು ಸುಸೂತ್ರ ಎಂಬ ಪದ ಬಳಸಿದ್ದರೆ ಅದರಲ್ಲಿ ಆತ್ಮಪ್ರತ್ಯಯ ಕಂಡುಬಂದರೂ ಸತ್ಯಾಂಶವಿದೆ. ಇಲ್ಲಿಯೇ ಹೆಸರಿಸಬೇಕಾದವರು ನಂದನ, ನಾಯಿಕೊಡೆ ಸಂಕಲನಗಳ ಎಚ್.ಎಸ್.ಬಿಳಿಗಿರಿಯವರು. ವಿ.ಜಿ.ಭಟ್ಟರಂತೆ ಅವರೂ ಯಾವ ಸೂತ್ರಕ್ಕೂ ಸಿಲುಕದ ಕವಿ. ವಿಡಂಬನ ಬರೆವಣಿಗೆಗೆ ಹೆಸರಾದವರು. ಅವರ ವಿಡಂಬನೆಯಲ್ಲಿ ಮೊನಚಿದ್ದರೂ ಪರೋಕ್ಷವಾದ ಆತ್ಮಪ್ರಶಂಸೆಯಿಲ್ಲದ ನಿರ್ಲಿಪ್ತ ಮನೋಭಾವವಿದೆ. ಭಟ್ಟರಿಗೂ ಬಿಳಿಗಿರಿಯವರಿಗೂ ತಮ್ಮ ಬರೆವಣಿಗೆಯಿಂದ ಲೋಕ ತಿದ್ದುತ್ತೇವೆಂಬ ಭಂಗಿಯನ್ನು ಆರೋಪಿಸಿಕೊಳ್ಳುವ ಉಮೇದಿಲ್ಲ. ನೇರವಾಗಿ ಸೂಕ್ಷ್ಮವಾಗಿ ನೋಡುವ ಚುರುಕು ಆಸಕ್ತಿಯಿದೆ.

ಕಾವ್ಯಾರ್ಪಣ, ಮಾಯಾವಿ, ಜರಾಸಂಧ- ಸಂಕಲನಗಳನ್ನು ಪ್ರಕಟಿಸಿದ ಆರವಿಂದ ನಾಡಕರ್ಣಿ; 'ಹಸಿರು ದೀಪ'ದ ಸುಂದರ ನಾಡಕರ್ಣಿ; 'ಶೂದ್ರ'ದ ಹಾ. ಮ. ಪಟೇಲ; 'ರಂಗದಿಂದೊಂದಿಷ್ಟು ದೂರ'ದ ಜಯಂತ ಕಾಯ್ಕಿಣಿ; 'ಮನುಷ್ಯ'ದ ಆರ್ಯ; 'ಬೆಂಕಿಬಳ್ಳಿ', 'ಹೊಕ್ಕಳು'ಗಳ ಜಿ.ಎಸ್.ಅವಧಾನಿ,; 'ನೀನಾ', 'ಔರಂಗಜೇಬ'ದ ಸಿದ್ಧಲಿಂಗ ಪಟ್ಟಣಶೆಟ್ಟಿ; 'ರಸವಂತಿ', 'ಮರ್ಲಿನ್ ಮನ್ರೋ ಮತ್ತು ಇತರ ಪದ್ಯಗಳು' ಕಾವ್ಯದ ಗಿರಡ್ಡಿ ಗೋವಿಂದರಾಜ; 'ಹೂವು ಚೆಲ್ಲಿದ ಹಾದಿಯಲ್ಲಿ'ಯ ಕೆ.ವಿ.ಸುಬ್ಬಣ್ಣ; 'ನಂದಿಕೋಲು'ನ ಚಂದ್ರಕಾಂತ ಕುಸನೂರ; ಮುಸುಕು ನಸುಕು ಜೀವಜೀವಂತ ಸಂಕಲನಗಳ ವೇಣುಗೋಪಾಲ ಸೊರಬ 'ವಿದಾಯ'ದ (ದಿ) ಯರ್ಮುಂಜ ರಾಮಚಂದ್ರ; 'ಬೆಂಕಿ', 'ಗಂಡಹೆಂಡಿರ ಜಗಳ ಗಂಧ ತೀಡಿದ್ಹಾಂಗ'ಗಳ ಸೋಮಶೇಖರ ಇಮ್ರಾಪುರ; ಪರಿವೃತ್ತ, ಬಾಗಿಲು ಬಡಿವ ಜನ, ಮೊಖ್ತಾ ಸಂಕಲನಗಳ ಎಚ್.ಎಸ್.ವೆಂಕಟೇಶಮೂರ್ತಿ; 'ಅಜ್ಜಗಾವಲು'ನ ಶಾಮಸುಂದರ ಬಿದರಕುಂದಿ; ಜಗಲಿ ಹತ್ತಿ ಇಳಿದು, ಕಣ್ಣು ನಾಲಗೆ ಕಡಲು, ನಾಡಾಡಿ ಸಂಕಲನಗಳ ದೊಡ್ಡರಂಗೇಗೌಡ, ಇಲ್ಲದ್ದು, ಇನ್ನಾದರೂ ಬದುಕಬೇಕು ಸಂಕಲನಗಳ ಜಯಸುದರ್ಶನ,; 'ತುಡುಗಿ'ಯ.ಎಚ್.ಎಸ್. ಭೀಮನಗೌಡರ; 'ಕಿಸ್ಮಿ'ಯ ಸಿಂಹ ಕೊಳ್ಳೇಗಾಲ; 'ಗದ್ಯದಿಂದ ಪದ್ಯಕ್ಕೆ' ಸಂಕಲನದ ಜಾಗೋ; ಏಕಾಂತ, ಉತ್ತರ ಧ್ರುವಗಳ ಕಾವ್ಯದ ಕೆ.ಎನ್.ಶಿವಪ್ಪ; ಋತಗೀತಾಮೃತ, ರಾಮದಾಸರ ಕವನಗಳು ಸಂಕಲನಗಳ ರಾಮದಾಸ್; (ಪ್ರೇಮಸೋದರ); 'ಅಭೀಪ್ಸೆ'ಯ ಸಣ್ಣಗುಡ್ಡಯ್ಯ; 'ಯಾತ್ರೆ'ಯ ರಾಗೌ; 'ತಾಕಲಾಟ'ದ ಬಿ.ಎಸ್.ಜಗದೀಶ; 'ಮರಕುಟಿಗ'ದ ಬರಗೂರು ರಾಮಚಂದ್ರಪ್ಪ,; 'ಮುಕ್ತ'ದ ಜೈರಾಮ ಹೆಗ್ಗಡೆ; 'ಇರುತ್ತವೆ'ಯ ಡಿ.ವಿಜಯ; 'ತೆರೆ'ಯ ಸುಬ್ರಾಯ ಚೊಕ್ಕಾಡಿ; 'ಅಸ್ತವ್ಯಸ್ತ'ದ ವಿ.ಮ.ಜಗದೀಶ; 'ಕಲೈಡೋಸ್ಕೋಪ'ದ ಎಂ.ಎಲ್.ಚೆನ್ನಕೇಶವಶಾಸ್ತ್ರಿ; 'ಶಾಪ'ದ ಬಿ.ಸೋಮಶೇಖರ; ಮೊದಲು ತೊದಲು ಸಂಕಲನದ ಸಂ.ವಾ.ದ; ನಕ್ಷತ್ರಗಳು ಸಂಕಲನದ ನಾಗಭೂಷಣಸ್ವಾಮಿ,; 'ಪಿಸುಗುಟ್ಟಿತು ಬಯಕೆ'ಯ ಪರಮೇಶ, 'ಅಕ್ಟೋಪಸ್'ದ ಎಸ್.ಜಿ.ಶಿವಶಂಕರ್; ದಾರಿ ಮಗ್ಗುಲಹಾಡು ಸಂಕಲನದ ಮು. ಶಿವನಂಜಯ್ಯ; 'ನಾಲ್ಕು ಹಿಡಿಬೆಂಕಿ'ಯ ದೇಶಪಾಂಡೆ ಸುಬ್ಬರಾಯ; 'ಕರೀತೆಲಿ ಮಾನವನ ಜೇಪದ'ದ ಚೆನ್ನಣ್ಣ ವಾಲೀಕಾರ; 'ಚಿಗಳಿ'ಯ ಸಿದ್ಧಲಿಂಗ ದೇಸಾಯಿ; 'ನಸುಕು ಹರಿಯುವ ಮುನ್ನ'ದ ಎಂ.ಬಿ.ನಟರಾಜ; 'ಹುಲ್ಲು ಹೆಜ್ಜೆ' 'ಶಬ್ದರಕ್ತಮಾಂಸ'ದ ಬುದ್ದಣ್ಣ ಹಿಂಗಮಿರೆ; ಹತ್ತರ ಕೂಡ ಹನ್ನೊಂದು ಸಂಕಲನದ ಶಿವಶರಣ ಜಾವಳಿ; ಪ್ರಣಯ ಚೈತ್ರ, ವಿಷಾದನಕ್ಷೆಗಳ ವೀಚಿ; ನೆರಳು ಸಂಕಲನದ ಗಂಗಾಧರ ಭಟ್; 'ಕಾರವಾನ'ದ ವಿಷ್ಣುಮೂರ್ತಿ; ಗರಿ ಮುರಿದ ಹಕ್ಕಿಗಳು ಸಂಕಲನದ ವೇಣುಗೋಪಾಲಕಾಸರಗೋಡು; 'ಸಾರಂಗ'ದ ವಿ.ಎನ್.ನಾಯಕ; ಹೊಲೆಮಾದಿಗರ ಹಾಡು ಸಂಕಲನದ ಸಿದ್ಧಲಿಂಗಯ್ಯ; 'ಮೂಡಲದನಿ'ಯ ಸಿ.ವೀರಣ್ಣ; 'ಹಿಪ್ಪೆಮರ'ದ ಸತ್ಯನಾರಾಯಣ ರಾವ್ ಅಣತಿ; ಬೆತ್ತಲೆ ಪದ್ಯಗಳು ಸಂಕಲನದ ಹೊ.ಮ. ಪಂಡಿತಾರಾಧ್ಯ; ಕೆಲವು ಕವನಗಳು ಸಂಕಲನದ ಪ್ರಭುಸ್ವಾಮಿಮಠ, 'ರುದ್ರಾಕ್ಷಿ'ಯ ರಾಜಶೇಖರ, 'ಮೊರೆಮೊರೆ'ತದ ರಾಧಾಕೃಷ್ಣ, 'ಕಲ್ಲುತೋಟ'ದ ಜೆ.ಎಂ.ಹನಸೋಗೆ, ಮಂಗೇಶ ನಾಡಕರ್ಣಿ, ಭೈರವಮೂರ್ತಿ, ರಾಮಚಂದ್ರದೇವ, ದೇವನೂರ ಮಹಾದೇವ, ಕಮಲಾ ಹೆಮ್ಮಿಗೆ, ಎಸ್.ಮಾಲತಿ, ಎಸ್.ಉಷಾ, (ತೊಗಲು ಗೊಂಬೆಯ ಆತ್ಮಕತೆ) ಉಮಾದೇವಿ, ಚ.ಸರ್ವಮಂಗಳಾ (ಅಮ್ಮನ ಗುಡ್ಡ) ಲಕ್ಷ್ಮೀಶ ತೋಳ್ಪಾಡಿ, ಕಾಳೇಗೌಡ ನಾಗವಾರ, ಕೆ.ಎನ್.ಶಿವತೀರ್ಥನ್ (ಬೆಸ್ತ), ಅಬ್ದುಲ್ ಮಜೀದ್ ಖಾನ್, ಯು.ಕೆ.ವಿ.ಆಚಾರ್ಯ, ಗಂಗಾಧರಮೂರ್ತಿ, ಬೀ.ಪ.ಹನುಮಕ್ಕ, ಎ.ಎನ್.ಪ್ರಸನ್ನ, ಎಂ.ಎನ್.ಜೈಪ್ರಕಾಶ್, ಶ್ರೀಕಂಠಕೂಡಿಗೆ, ಅಲ್ಲಮಪ್ರಭು ಬೆಟ್ಟದೂರು, ಶಿವಳ್ಳಿ ಕೆಂಪೇಗೌಡ, ಜಿ.ಎಸ್.ಭಟ್ಟ ಉಬರಡ್ಕ, ಕಿರಣ, ಜಂಬಣ್ಣ ಅಮರಚಿಂತ, ಶಾಂತರಸ, ನಾಗಭೂಷಣರಾವ್ ಸಿಂಧೆ, ಬನ್ನಂಜೆ ಗೋವಿಂದಾಚಾರ್ಯ, ವಿ.ಎನ್.ಲಕ್ಷ್ಮೀನಾರಾಯಣ, ಬಿ.ಎನ್.ನಾಗರಾಜಭಟ್, ನಳಿನೀ ದೇಶಪಾಂಡೆ, ಶಾಂತಾರಾಮಹಿಚ್ಕಡ

ಮೊದಲಾದ ಕವಿಗಳು ಕಾವ್ಯರಚನೆಯಲ್ಲಿ ತೊಡಗಿದ್ದಾರೆ. ಕೆಲವರಲ್ಲಿ ಉತ್ತಮಮಟ್ಟದ ಪ್ರತಿಭೆಯ ಲಕ್ಷಣಗಳು ಕಂಡುಬಂದರೆ, ಇನ್ನು ಹಲವರಲ್ಲಿ ಆ ಮಟ್ಟದ ಪ್ರತಿಭೆ ಕಂಡುಬರುವುದಿಲ್ಲ.

ಕನ್ನಡದಲ್ಲಿ ನವ್ಯಕಾವ್ಯವನ್ನು ಕುರಿತ ಈ ಬರೆವಣಿಗೆಯಲ್ಲಿ ನವೋದಯ ಕಾವ್ಯ ರೀತಿಗೆ ಭಿನ್ನವಾದ ದನಿಗಳಾಗಿ ಬಂದ ಕಳೆದ ಕಾಲು ಶತಮಾನದ ಕಾವ್ಯ ರಾಶಿಯನ್ನು ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ. ಗೋಕಾಕರ ನವ್ಯಕಾವ್ಯ ಮಾರ್ಗ, ಅಡಿಗರ ನವ್ಯಕಾವ್ಯ ಮಾರ್ಗಗಳು ಪ್ರಮುಖವಾದ ನವ್ಯಕಾವ್ಯ ಮಾರ್ಗಗಳಾಗಿವೆ. ಅದರಲ್ಲೂ ಅಡಿಗರ ನವ್ಯಕಾವ್ಯ ಮಾರ್ಗದ ಪ್ರಭಾವಕ್ಕೆ ಬಂದ ಕವಿಗಳ ಸಂಖ್ಯೆ ಹೇರಳವಾಗಿದೆ. ಈ ಮಧ್ಯೆ ರಾಮಾನುಜನ್ ಅವರದೇ ಆದ ಹೊಸದನಿಯ ನವ್ಯಕಾವ್ಯ ಸದ್ದಿಲ್ಲದೆ ಕೆಲವು ಕವಿಗಳ ಮೇಲೆ ಪ್ರಭಾವ ಬೀರುತ್ತಿದೆ. ಅಡಿಗರ ಮತ್ತು ಗೋಕಾಕರ ಕಾವ್ಯಮಾರ್ಗಕ್ಕೆ ಪ್ರತಿಕ್ರಿಯೆಯಾಗಿ ನವೋದಯ ಕಾವ್ಯದ ಜಾಡಿನಲ್ಲಿಯೇ ಹೊಸತನ ರೂಢಿಸಬಹುದೆಂದು ಪ್ರಯತ್ನಿಸಿದ ಶಿವರುದ್ರಪ್ಪ, ಕಣವಿಯವರ ಸಮನ್ವಯ ಕಾವ್ಯ ಕೆಲಕಾಲ ಪ್ರತ್ಯೇಕವಾಗಿ ಬೆಳೆದಂತೆ ಕಂಡುಬಂದರೂ ಇತ್ತೀಚೆಗೆ ಗೋಕಾಕರ ರೀತಿಗೆ ಹೆಚ್ಚು ಹತ್ತಿರವಾಗುತ್ತಿರುವಂತೆ ಗೋಕಾಕರೂ ಸಮನ್ವಯದವರೊಟ್ಟಿಗೇ ಸೇರಿ ಹೋಗುತ್ತಿರುವಂತೆ ಕಾಣುತ್ತಿದೆ. ಅಥವಾ ಸಮನ್ವಯದವರೇ ಅವರೊಟ್ಟಿಗೆ ಸೇರಿಕೊಂಡಿದ್ದಾರೆ. ಅಡಿಗರ ಪ್ರಭಾವಕ್ಕೆ ಒಳಗಾಗಿ ಬರೆಯುತ್ತಿದ್ದ ಲಂಕೇಶ್, ಕಂಬಾರ, ತೇಜಸ್ವಿ, ಚಂದ್ರಶೇಖರ ಪಾಟೀಲ ಮುಂತಾದವರು ಅಡಿಗರ ಕಾವ್ಯರೀತಿಗೆ ಭಿನ್ನವಾದ ರೀತಿಯ ಕಾವ್ಯದ ಆವಶ್ಯಕತೆಯನ್ನು ಪ್ರತಿಪಾದಿಸಿದರು. ಅವರಿಗಿಂತ ಇನ್ನೂ ಎಳೆಯ ತಲೆಮಾರಿನ ಕವಿಗಳಲ್ಲಿ ಕೆಲವರು ಈವರೆಗೆ ಹೊಸಗನ್ನಡದಲ್ಲಿ ನವೋದಯವನ್ನೂ ಸೇರಿಸಿಕೊಂಡು ಬೆಳೆದು ಬಂದ ಕಾವ್ಯಮಾರ್ಗಗಳ ಬಗೆಗೆ ಅಸಹನೆಯನ್ನು ತೋರಿಸುತ್ತಿದ್ದಾರೆ. ಹೊಸ ಕಾವ್ಯರೀತಿಯ ಹುಡುಕಾಟದಲ್ಲಿ ತೊಡಗುವ ಸಂಕಲ್ಪ ತೊಟ್ಟಂತೆ ತೋರಿಬರುತ್ತಿದೆ. ಒಟ್ಟಿನಲ್ಲಿ ಸಾರಾಂಶವಿಷ್ಟೆ: ನವ್ಯಕಾವ್ಯಕ್ಕಿಂತ ಭಿನ್ನವಾದ ಹೊಸ ಕಾವ್ಯ ರೀತಿ ಮೈಮುರಿದೇಳಲು ತವಕಿಸುತ್ತಿದೆ. ಹೀಗೆ ಆಗುವುದರಲ್ಲಿ ತಪ್ಪೂ ಇಲ್ಲ, ಅದು ಸೋಜಿಗದ ಸಂಗತಿಯೂ ಅಲ್ಲ. ಜೀವಂತವಾದ ಜನಾಂಗದ ಲಕ್ಷಣ ಯಾವಾಗಲೂ ಮುಂದೆ ನೋಡುತ್ತ ಹೋಗುವುದಾಗಿದೆ. ಉಢಾಫೆಗಿಂತ ವಿವೇಕ ಈ ನೋಟಕ್ಕೆ ಪ್ರೇರಕ ಶಕ್ತಿಯಾದಾಗ ಜನಾಂಗ ಹೊಸ ಜೀವಂತಿಕೆ ಲವಲವಿಕೆಯಿಂದ ಕಳಕಳಿಸುತ್ತದೆ. ಇಂಥ ಸಂಧಿಕಾಲದಲ್ಲಿ ಹೊಸದೆಲ್ಲವನ್ನೂ ಉಢಾಫೆಯಿಂದೇ ನೋಡುವ ದೃಷ್ಟಿಯನ್ನು ಬಿಟ್ಟು, ವಸ್ತುನಿಷ್ಠವಾಗಿ ತೆರೆದ ಮನಸ್ಸಿನಿಂದ ಹೊಸ ಬದಲಾವಣೆ, ಹೊಸ ಪ್ರಯೋಗಗಳನ್ನು ಗಮನಿಸುತ್ತ, ಬೆಲೆ ಕಟ್ಟಲು ಪ್ರಯತ್ನಿಸುತ್ತ ಸಾಗಬೇಕಾದದ್ದು ಸಹೃದಯರ ಮತ್ತು ವಿಮರ್ಶಕರ ಹೊಣೆಗಾರಿಕೆಯಾಗಿದೆ. ಸದ್ಯಕ್ಕೆ ಇನ್ನೂ ಒಂದು ತಲೆಮಾರಿನ ತನಕವಾದರೂ ಉತ್ತಮಕಾವ್ಯ ರೊಮ್ಯಾಂಟಿಕ್ ಸಂಪ್ರದಾಯಕ್ಕೆ ತೀರ ವಿರುದ್ಧವಾದ ದಿಕ್ಕಿನಲ್ಲೇ ಹರಿದೀತು ಎಂದು ತೋರುತ್ತದೆ. ಯಾವ ಸಂಪ್ರದಾಯದ್ದೇ ಆಗಲಿ, ಉತ್ತಮ ಕವಿತೆ ಯಾವಾಗಲೂ ಉತ್ತಮ ಕವಿತೆಯೇ. ಆದರೆ ಅದು ರಚಿತವಾದ ಕಾಲದಲ್ಲಿ ಅದು ಎಷ್ಟು ಉತ್ತಮ ಎಂದು ತಿಳಿದಿದ್ದರೋ ಅಷ್ಟು ಉತ್ತಮ ಅದಲ್ಲ, ಅದು ಉತ್ತಮವಾಗಿರುವ ರೀತಿ ಈಗ ಸಲ್ಲ ಎಂದು ಮುಂದಿನ ತಲೆಮಾರು ನಿರ್ಧರಿಸಬಹುದು. ಹಾಗೆಯೇ ಇನ್ನೂ ಮುಂದಿನ ತಲೆಮಾರಿನಲ್ಲಿ ಅದೇ ಉತ್ತಮ ಕವಿತೆ, ಆ ರೀತಿಯೇ ರೀತಿ ಈಗ ಸಲ್ಲ ಎಂದು ಮುಂದಿನ ತಲೆಮಾರಿನಲ್ಲಿ ಅದೇ ಉತ್ತಮ ಕವಿತೆ, ಆ ರೀತಿಯೇ ರೀತಿ ಎಂತಲೂ ಮತ್ತೊಮ್ಮೆ ವಿಚಾರ ಕ್ರಾಂತಿಯಾಗಬಹುದು ಎಂಬ ಅಡಿಗರ ಮಾತು (ಹೊಸ ಕವಿತೆಯನ್ನು ಕುರಿತು 1953) ಈ ಸಂದರ್ಭದಲ್ಲಿಯೂ ಮನನೀಯವಾಗಿದೆ.

ಕೊನೆಯದಾಗಿ, ನವ್ಯಕಾವ್ಯದ ಬೆಳೆವಣಿಗೆಯಲ್ಲಿಯೂ ನವೋದಯ ಕಾವ್ಯದ ಬೆಳೆವಣಿಗೆಯಲ್ಲಿ ಎಂತೋ ಅಂತೆ ಅನೇಕ ದಿನ, ವಾರ, ಮಾಸ, ದ್ವೈಮಾಸಿಕ, ತ್ರೈಮಾಸಿಕ, ಅನಿಯತಕಾಲಿಕ ಪತ್ರಿಕೆಗಳು ಕವನಗಳ ಪ್ರಕಟನೆ, ಕೃತಿಗಳ ವಿಮರ್ಶೆ, ಅವಲೋಕನ, ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸುವುದು ಮುಂತಾದ ಬಗೆಯಲ್ಲಿ ತಮ್ಮ ಪಾಲಿನ ಕಾಣಿಕೆ ಸಲ್ಲಿಸಿವೆ. ಸಾಕ್ಷಿ, ಲಹರಿ, ಸಮೀಕ್ಷಕ, ಸಂಕೀರ್ಣ, ಸಮನ್ವಯ, ಸಂಕ್ರಮಣ, ರುಜುವಾತು, ಕವಿತಾ ಮುಂತಾದ ಪತ್ರಿಕೆಗಳು ನವ್ಯಸಾಹಿತ್ಯಕ್ಕಾಗಿಯೇ ಮೀಸಲಾದ ಪತ್ರಿಕೆಗಳಾಗಿವೆ. ನವ್ಯಧ್ವನಿ, ನಡೆದು ಬಂದ ದಾರಿ-1, ಅಕ್ಷರ ಹೊಸ ಕಾವ್ಯ, ಹೊಸ ಜನಾಂಗದ ಕವಿತೆಗಳು, ಸಂಕ್ರಮಣ ಕಾವ್ಯ- ಇವು ನವ್ಯಕಾವ್ಯದ ಮಹತ್ವದ ಸಂಚಯಗಳಾಗಿವೆ.

(ಜಿ.ಎಚ್.ಎಸ್.)

**ಕನ್ನಡದಲ್ಲಿ ನಾಟಕ ಸಾಹಿತ್ಯ :** ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು ಶ್ರೀಮಂತವಾಗಿರುವಂತೆ, ನಾಟಕ ಪ್ರಕಾರವೂ ಶ್ರೀಮಂತವಾಗಿದೆ. ಆದರೆ ಇದರ ಹುಟ್ಟನ್ನು ಬೆಳೆವಣಿಗೆಯನ್ನು ಗುರುತಿಸಲು ಹೊರಟರೆ 1680ರ ಸುಮಾರಿನಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನಕವಿ ಸಿಂಗರಾರ್ಯನಿಂದ ರಚಿತವಾದ ಮಿತ್ರವಿಂದಾ ಗೋವಿಂದ ಕನ್ನಡದ ಮೊಟ್ಟಮೊದಲ ನಾಟಕವೆಂದು ಕಂಡುಬರುತ್ತದೆ. ಇದು ಶ್ರೀಹರ್ಷನಿಂದ ಸಂಸ್ಕೃತದಲ್ಲಿ ರಚಿತವಾದ ರತ್ನಾವಳಿ ನಾಟಕದ ಕನ್ನಡ ಅನುವಾದ. ಅನುವಾದವಾದರೂ ಒಂದು ರೀತಿಯಲ್ಲಿ ಸ್ವತಂತ್ರ ಕೃತಿ ಎನ್ನುವಂತೆ ನಾಟಕಕಾರ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಆದ್ದರಿಂದ ಇದನ್ನು ರೂಪಾಂತರವೆನ್ನಲೂಬಹುದು. ಮೂಲದ ಕಥೆ ಉದಯನನ್ನು ಕುರಿತದ್ದಾಗಿದ್ದು, ಈ ನಾಟಕದ ಕಥೆ ಶ್ರೀ ಕೃಷ್ಣನ ಕಥೆಯನ್ನು ಹೇಳುತ್ತದೆ. ಜೊತೆಗೆ ಇಲ್ಲಿನ ಪಾತ್ರಗಳ ಹೆಸರುಗಳಲ್ಲೂ ಘಟನೆಗಳಲ್ಲೂ ಒಂದೆರಡು ಸಣ್ಣಪುಟ್ಟ ಬದಲಾವಣೆಗಳಾಗಿವೆ. ಭಾಗವತದಲ್ಲಿರುವ ಕೃಷ್ಣನ ಕಥೆ ಮಿತ್ರವಿಂದಾ ಗೋವಿಂದ ನಾಟಕಕ್ಕೆ ಮೂಲ. ನಾಟಕದ ಭಾಷೆ ಹಳಗನ್ನಡ. ಹಲವರ ಅಭಿಪ್ರಾಯದಂತೆ ಈ ನಾಟಕ ಮೂಲ ರತ್ನಾವಳಿಯಷ್ಟು ತೃಪ್ತಿ ಕೊಡುವುದಿಲ್ಲವಾದರೂ ದೊರೆತ ಕನ್ನಡ ನಾಟಕಗಳಲ್ಲಿ ಮೊದಲನೆಯದೆಂಬ ದೃಷ್ಟಿಯಿಂದ ಇದಕ್ಕೆ ಐತಿಹಾಸಿಕ ಮಹತ್ತ್ವವಿದೆ.

ದುರ್ಗಸಿಂಹನು ನೆನೆದ ಕನ್ನಮಯ್ಯ ಬರೆದ ಮಾಲತೀಮಾಧವ, ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಸೂಚಿತವಾದ ಸುಭದ್ರಾಹರಣ ಮತ್ತು ಪ್ರಬೋಧಚಂದ್ರ ಇವು ಕನ್ನಡ ನಾಟಕಗಳಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ ಒಂದು ಪದ್ಯವೂ ಶ್ರೀಹರ್ಷನ ನಾಗಾನಂದ ಹಾಗೂ ಭವಭೂತಿಯ ಮಾಲತೀಮಾಧವ ಈ ನಾಟಕಗಳ ಕೆಲವು ಪದ್ಯಗಳೂ ಕನ್ನಡಕ್ಕೆ ಬಂದಿವೆ. ಇದರಿಂದ ಅಂದಿನ ಕಾಲಕ್ಕಾಗಲೇ ಸಂಸ್ಕೃತ ನಾಟಕಗಳು ಕನ್ನಡಕ್ಕೆ ಅನುವಾದಗೊಂಡಿರಬಹುದೆಂದು ಸಂಶೋಧಕರು ಊಹಿಸುತ್ತಾರೆ.

ಕನ್ನಡ ನಾಟಕ ಸಾಹಿತ್ಯ ಪರಂಪರೆಯನ್ನು ವಿವೇಚಿಸುವಾಗ ಮಿತ್ರವಿಂದಾ ಗೋವಿಂದ ನಾಟಕಕ್ಕೆ ಮೊದಲು ಕನ್ನಡದಲ್ಲಿ ನಾಟಕಗಳಿರಲ್ಲಿಲ್ಲವೇ ಎಂಬ ಪ್ರಶ್ನೆ ವಿದ್ವಾಂಸರನ್ನು ಬಹಳಷ್ಟು ಕಾಡಿದೆ. ಇದಕ್ಕೆ ಉತ್ತರವಾಗಿ ನಾಟಕಗಳಿದ್ದರೂ ಈ ರೂಪದಲ್ಲಿ ಇದ್ದಿರುವುದಕ್ಕೆ ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಹಿಂದಿನ ಕನ್ನಡ ಕಾವ್ಯಗಳಲ್ಲಿ ನಾಟಕಶಾಲೆ, ನಾಟಕ ಇವೇ ಮೊದಲಾದ ಪದ ಪ್ರಯೋಗಗಳು ಕಂಡುಬರುವುದರಿಂದ, ಅಭಿನಯಕ್ಕೆ ಸಂಬಂಧಿಸಿದಂತೆ ರಾಜಾಸ್ಥಾನಗಳಲ್ಲಿ ದೃಶ್ಯರೂಪಕಗಳು ಇದ್ದಿರಬೇಕು. ಅಭಿನಯ ನೃತ್ಯಗಳು ಇದ್ದಿರಲೂಬಹುದು. ಇದರಿಂದ ಅಂದಿನ ಅರಮನೆಗಳಲ್ಲಿ ನಾಟಕಶಾಲೆಗಳು ಇದ್ದಿರಬೇಕು ಎನ್ನುವುದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಮೈಸೂರಿನ ಕಂಠೀರವ ನರಸರಾಜರ ಅರಮನೆಯಲ್ಲಿ ನಾಟಕಶಾಲೆ ಇದ್ದಿತೆಂದು ಕಂಠೀರವ ನರಸರಾಜವಿಜಯದಿಂದ ತಿಳಿದುಬರುತ್ತದೆ. ಕೆಳದಿಯ ವೆಂಕಟಪ್ಪ ನಾಯಕ (1582-1629) ತನ್ನ 'ಇಕ್ಕೇರಿಯರಮನೆಯೊಳ್ವಿಚಿತ್ರತರ ರಚನಾ ಕೌಶಲದಿಂ ನಾಟಕಶಾಲೆಯಂ ನಿರ್ಮ್ಮಣಗೈಯ್ಸಿದನ್' ಎಂದು - ಕೆಳದಿನೃಪ ವಿಜಯದಲ್ಲಿ ಹೇಳಿದೆ. ರತ್ನಾಕರವರ್ಣಿ ತನ್ನ ಭರತೇಶವೈಭವದಲ್ಲಿ ನಾಟಕ ಎಂಬ ಪದವನ್ನು ಬಳಸಿದ್ದಾನೆ. ನಾಟಕಶಾಲೆಯ ವರ್ಣನೆಗಳನ್ನು ಮಾಡಿದ್ದಾನೆ. ಅಲ್ಲದೆ ಅವನ ಕಾವ್ಯದಲ್ಲಿ ಪೂರ್ವನಾಟಕ, ಉತ್ತರನಾಟಕ ಎಂಬ ಎರಡು ಸಂಧಿಗಳಿವೆ. ಕೃಷ್ಣದೇವರಾಯನ ರಾಜಧಾನಿಯಲ್ಲಿ ಪಟ್ಟದ ನಾಟಕಶಾಲೆಯೂ ಇಕ್ಕೇರಿ, ಮೊದಲಾದೆಡೆಗಳಲ್ಲಿ ರತ್ನಖಚಿತವಾದ ಅಲಂಕಾರಗಳನ್ನು ಹೊಂದಿದ್ದ ನಾಟಕಶಾಲೆಗಳೂ ನಿರ್ಮಾಣವಾಗಿದ್ದಿತೆಂದು ಕಂಡುಬರುತ್ತದೆ. ಧಾರವಾಡದ ಸಮೀಪದ ಮುಗದ ಗ್ರಾಮದಲ್ಲಿರುವ ಹನ್ನೊಂದನೆಯ ಶತಮಾನದ ಶಿಲಾಫಲಕದಲ್ಲಿ ಶ್ರೀಮನ್ಮಹಾಸಾಮನ್ತಂ ಮಾರ್ತಾನ್ಡಯಂ ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ

ನಾಟಕಶಾಲೆಯಂ ಮಾಡಿಸಿ, ತನ್ನ ಕೀರ್ತಿ ಶಿಲಾಸ್ತಂಭಮಂ ಆಚಂದ್ರಾರ್ಕತಾರಾಂಬರಂ ನಿಲಿಸಿದಂ ಎಂದಿದೆ. ಬಸವಪುರಾಣ, ಶೃಂಗಾರರತ್ನಾಕರ, ವಿವೇಕಚೂಡಾಮಣಿ, ಕಂಠೀರವವಿಜಯ, ಕರ್ಣಾಟ ಭಾರತ ಕಥಾಮಂಜರಿ ಮೊದಲಾದ ಕಾವ್ಯಗಳಲ್ಲಿ ನಾಟಕ ಎನ್ನುವ ಮಾತು ಬಂದಿದೆ. ದುರ್ಗಸಿಂಹನ ಪಂಚತಂತ್ರದಲ್ಲಿ ನಾಟಕ ಎಂಬ ಮಾತಿನ ಬಳಕೆಯಾಗಿದೆ. ಹೊಯ್ಸಳ ದೊರೆ ವೀರಬಲ್ಲಾಳ ಒಬ್ಬ ಶ್ರೇಷ್ಠ ನಟನಾಗಿದ್ದನೆಂದು ಸೊರಬದ ಶಿಲಾಶಾಸನದಲ್ಲಿ ವರ್ಣಿತವಾಗಿದೆ. ಪಂಪ, ಪೊನ್ನ, ರನ್ನ ಇವರುಗಳೂ ನಾಟಕ ಹಾಗೂ ನಾಟಕಕ್ಕೆ ಸಂಬಂಧಿಸಿದ ಹಲವು ಮಾತುಗಳನ್ನು ತಮ್ಮ ಕಾವ್ಯಗಳಲ್ಲಿ ಆಡಿದ್ದಾರೆ. ಪಂಪ 'ಕೃತಾನುಕರಣಮೆ ನಾಟಕಂ' ಎಂದಿದ್ದಾನೆ. ಹಿಂದಿನ ಕವಿಗಳು ಕಾವ್ಯಗಳನ್ನೆ ರಚಿಸಿದರೂ ಅವರ ದೃಷ್ಟಿ ನಾಟಕದ ಕಡೆಗೆ ಇದ್ದಿತು ಎನ್ನುವುದಕ್ಕೆ ರನ್ನನ ಗದಾಯುದ್ಧ ಹಾಗೂ ರಾಘವಾಂಕನ ಹರಿಶ್ಚಂದ್ರಕಾವ್ಯಗಳಲ್ಲಿ ಬರುವ ನಾಟಕೀಯ ಸನ್ನಿವೇಶಗಳ ಸಂಭಾಷಣೆಯ ಚತುರತೆ ಸಾಕ್ಷಿಯಾಗಿದೆ. ಹದಿನೇಳನೆಯ ಶತಮಾನದಲ್ಲಿ ಕನ್ನಡದ ಮೊದಲ ನಾಟಕ ನಮಗೆ ದೊರೆತರೂ ಹತ್ತನೆಯ ಶತಮಾನದಿಂದಲೆ ನಾಟಕ ಎಂಬ ಹೆಸರಿನ ಸಾಹಿತ್ಯ ಪ್ರಕಾರ ಇದ್ದಿತು ಎಂಬ ವಿಷಯ ಮೇಲಿನ ವಿವರಣೆಗಳಿಂದ ಸ್ಪಷ್ಟಪಡುತ್ತದೆ. ಹಾಗಾದರೆ ಕನ್ನಡದಲ್ಲಿ ನಾಟಕಗಳೇಕೆ ಆ ಕಾಲದಲ್ಲಿ ರಚಿತವಾಗಲಿಲ್ಲ ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಉತ್ತರವಾಗಿ ಅಂದು ಸಂಸ್ಕೃತ ಭಾಷೆಯ ಪ್ರಾಬಲ್ಯ ಬಹಳವಾಗಿದ್ದುದರಿಂದ, ಕನ್ನಡ ಭಾಷೆಯಲ್ಲಿ ಸ್ವತಂತ್ರ ನಾಟಕಗಳು ರಚಿತವಾಗಲಿಲ್ಲ ಎಂದು ಊಹಿಸಲು ಸಾಧ್ಯವಿದೆ.

ಕನ್ನಡದಲ್ಲಿ ನಾಟಕ ಸಾಹಿತ್ಯದ ನಿರಂತರಧಾರೆ 19ನೆಯ ಶತಮಾನದ ಅಂತ್ಯದಿಂದ ಹೊಸತಾಗಿ ಪ್ರಾರಂಭವಾಯಿತೆಂದು ಹೇಳಬಹುದು. ಮೈಸೂರಿನ ಚಾಮರಾಜ ಒಡೆಯರ ಆಳಿಕೆಯ ಕಾಲದಲ್ಲಿ (1881-94) ಪಾರಸೀ ಕಂಪನಿಯೊಂದು ಕನ್ನಡ ನಾಡಿಗೆ ಬಂದು ಕೆಲವು ನಾಟಕಗಳನ್ನು ಪ್ರಯೋಗಿಸಿತು. ಈ ನಾಟಕಗಳಲ್ಲಿನ ಅಭಿನಯ, ರಂಗಸಾಧ್ಯತೆ, ರಂಗಪರಿಕರಗಳು ಕನ್ನಡಿಗರನ್ನು ಆಕರ್ಷಿಸಿದವು. ಕಲೆಗೆ ಆಶ್ರಯಸ್ಥಾನವಾಗಿದ್ದ ಅರಮನೆ 1882ರಲ್ಲಿ ತನ್ನದೇ ಆದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂಬ ನಾಟಕ ಸಂಸ್ಥೆಯನ್ನು ಸ್ಥಾಪಿಸಿತು. ಒಡೆಯರ ಆಸ್ಥಾನಕವಿಯಾಗಿದ್ದ ಬಸವಪ್ಪಶಾಸ್ತ್ರಿಗಳು ಈ ಸಭೆಗಾಗಿ ನಾಟಕಗಳನ್ನು ಬರೆಯಲು ಸಿದ್ಧರಾದರು. ಇದರಿಂದಾಗಿ ಶಾಕುಂತಲಾ, ವಿಕ್ರಮೋರ್ವಶೀಯ, ರತ್ನಾವಳಿ, ಉತ್ತರರಾಮಚರಿತೆ, ಮಾಲತೀಮಾಧವ, ಚಂಡಕೌಶಿಕ ಮೊದಲಾದ ನಾಟಕಗಳು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಗೊಂಡವು. ಇವರು ಇಂಗ್ಲಿಷ್ ನಾಟಕಗಳ ಕಡೆಗೂ ಗಮನ ಹರಿಸಿ ಷೇಕ್ಸ್‌ಪಿಯರನ ಒಥೆಲೊ ಶೂರಸೇನ ಚರಿತ್ರೆಯಾಗಿ ಕನ್ನಡಕ್ಕೆ ಬಂತು. ಇವರ ಷೇಕ್ಸ್‌ಪಿಯರ್ ನಾಟಕದ ಅನುವಾದ ಅಷ್ಟಾಗಿ ಉತ್ತಮವಾಗಿಲ್ಲ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿರುವುದಾದರೂ ಸಂಸ್ಕೃತ ಅನುವಾದಗಳು ಹೆಚ್ಚಿನ ಪ್ರಶಂಸೆಗೆ ಪಾತ್ರವಾದವು. ಅದರಲ್ಲೂ ಶಾಕುಂತಲಾ ಒಂದು ಉತ್ಕೃಷ್ಟ ಅನುವಾದ ಎಂಬ ಖ್ಯಾತಿಪಡೆಯಿತು. ಮೂಲ ನಾಟಕದ ತಿರುಳು, ಸೌಂದರ್ಯ, ಆಳ, ಔನ್ನತ್ಯಗಳು ಅನುವಾದದಲ್ಲೂ ಮೂಡಿಬಂದಿವೆ. ಈ ಅನುವಾದ ಕನ್ನಡದ್ದೇ ಎಂಬಷ್ಟರ ಮಟ್ಟಿಗೆ ಸಮರ್ಪಕವಾಗಿದೆ. ಭಾಷಾಂತರ ಕಲೆಗೆ ಈ ನಾಟಕ ಒಂದು ಉತ್ತಮ ನಿದರ್ಶನವಾಯಿತು. ಭಾಷಾಂತರದ ಕೆಲಸದಲ್ಲಿ ಎದ್ದುಕಾಣುವ ಮತ್ತೊಂದು ಹೆಸರು ಅಳಸಿಂಗರಾಚಾರ್ಯರದು. ಇವರು ಹೆಚ್ಚಾಗಿ ಅನುವಾದ ಮಾಡಿಲ್ಲವಾದರೂ ಇವರ ಭಾಸನ ಸ್ವಪ್ನವಾಸವದತ್ತ ಹಾಗೂ ಪಂಚರಾತ್ರ - ಈ ಎರಡು ನಾಟಕಗಳು ಹೆಸರುಗಳಿಸಿವೆ. ಭಾಸನ ನಾಟಕಗಳಲ್ಲೆಲ್ಲ ಉತ್ತಮ ನಾಟಕ ಎಂದು ಪ್ರಶಂಸೆ ಹೊಂದಿದ ಸ್ವಪ್ನವಾಸವದತ್ತವನ್ನು ಮೂಲಕ್ಕೆ ಲೋಪವಾಗದಂತೆ ಇವರು ಕನ್ನಡಕ್ಕೆ ತಂದರು. ಹಾಗೆಯೇ ಪಂಚರಾತ್ರ ರೂಪಕವೂ ಮನೋಜ್ಞವಾಗಿ ಅನುವಾದಗೊಂಡಿತು.

ಶ್ರೀಹರ್ಷನ ನಾಗಾನಂದ ನಾಟಕ ಕನ್ನಡಕ್ಕೆ ಅನುವಾದಗೊಂಡಿರುವ ಶ್ರೇಷ್ಠ ಸಂಸ್ಕೃತ ನಾಟಕಗಳಲ್ಲಿ ಒಂದು. ಇದನ್ನು ಮೈಸೂರಿನ ಅನಂತನಾರಾಯಣಶಾಸ್ತ್ರಿ ಮೊದಲಿಗೆ ಅನುವಾದ ಮಾಡಿದರು. ಇವರ ಅನುವಾದದ ಭಾಷೆ, ಶೈಲಿ ಚೆನ್ನಾಗಿದ್ದು ಮೂಲವನ್ನು ಚಾಚೂ ತಪ್ಪದೆ ಅನುಸರಿಸಿದೆ. ಶೂದ್ರಕನಿಂದ ರಚಿತವಾದ ಮೃಚ್ಛಕಟಿಕ ಕನ್ನಡಕ್ಕೆ ಬಂದಿರುವ ಮುಖ್ಯ ನಾಟಕಗಳಲ್ಲೊಂದು. ಇದನ್ನು ಹಲಕೆಲವು ಬದಲಾವಣೆಗಳೊಂದಿಗೆ ನಂಜನಗೂಡು ಸುಬ್ಬಾಶಾಸ್ತ್ರಿಗಳು ಕನ್ನಡಕ್ಕೆ ಅನುವಾದಿಸಿದರು. ಇವರು ಮೂಲದ ಕೆಲವು ಶ್ಲೋಕಗಳನ್ನು ಗದ್ಯದಲ್ಲಿ ಬರೆದಿದ್ದಾರೆ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡಿದ್ದರೂ ಇದು ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಒಳ್ಳೆಯ ಅನುವಾದ ಎನ್ನಬಹುದು.

ಮೇಲೆ ಹೇಳಿದ ಅನುವಾದಗಳೆಲ್ಲವೂ ಬಹಳ ಹಿಂದೆಯೇ ಸಂಸ್ಕೃತದಿಂದ ಕನ್ನಡಕ್ಕೆ ಬಂದವು. ಈ ಕೆಲಸ ಇಂದಿಗೂ ಸಾಗುತ್ತಿದೆ. ಮೂಲ ಕೃತಿಗಳು ಶ್ರೇಷ್ಠ ಕೃತಿಗಳಾಗಿದ್ದಲ್ಲಿ ಅನುವಾದಕರಿಗೆ ಯಾವುದೋ ಒಂದು ಕೃತಿಯಲ್ಲಿ ಮಹತ್ತು ಕಂಡಲ್ಲಿ ಅಂಥ'ದನ್ನು ಅನುವಾದಕ್ಕೆ ಎತ್ತಿಕೊಂಡರು. ಹೀಗಾಗಿ ಕಾಳಿದಾಸ, ಭಾಸ, ಭಟ್ಟನಾರಾಯಣ, ಶೂದ್ರಕ, ಶ್ರೀಹರ್ಷ ಮೊದಲಾದವರ ಸಂಸ್ಕೃತ ನಾಟಕಗಳನ್ನು ಎಲ್.ಗುಂಡಪ್ಪ, ಕೆ.ಕೃಷ್ಣಮೂರ್ತಿ, ಎಸ್.ವಿ.ಪರಮೇಶ್ವರಭಟ್ಟ, ಸಿ.ಪಿ.ಕೆ., ಎಂ.ವಾಸುದೇವ ಭಟ್ಟ, ಗಣಪತಿ ಮೊಳಿಯಾರ್, ಪಂಡಿತ ಕವಲಿ ಮೊದಲಾದವರು ಕನ್ನಡಕ್ಕೆ ತಂದಿದ್ದಾರೆ. ಹಾಗೆ ಮಾಡುವಲ್ಲಿ ಕೆಲವರು ಹೊಸ ಹೊಸ ಛಂದಸ್ಸಿನಲ್ಲಿ ಮೂಲ ಶ್ಲೋಕಗಳನ್ನು ಅನುವಾದ ಮಾಡಿದರು. ಆಳವಾದ ಅಭ್ಯಾಸ, ಭಾಷಾಪ್ರೌಢಿಮೆ, ಸದಭಿರುಚಿ ಹಾಗೂ ಗ್ರಂಥದ ಮೂಲ ಉದ್ದೇಶಕ್ಕೆ ಭಂಗ ತಾರದ ನಿರೂಪಣೆ ಈ ಅನುವಾದಕರಲ್ಲಿ ಕಾಣಬಹುದಾದ ಶ್ರೇಷ್ಠ ಗುಣಗಳು.

ಸಂಸ್ಕೃತದಿಂದ ನಾಟಕಗಳು ಅನುವಾದಗೊಂಡಂತೆ ಇಂಗ್ಲಿಷ್‌ನಿಂದಲೂ ನಾಟಕಗಳು ಕನ್ನಡಕ್ಕೆ ಅನುವಾದಗೊಂಡವು. ಇಲ್ಲಿ ಕೆಲವರು ಮೂಲದಲ್ಲಿದ್ದಂತೆ ಅನುವಾದ ಮಾಡಿದರೆ ಕೆಲವರು ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅನುವಾದ ಮಾಡಿದರು, ರೂಪಾಂತರ ಮಾಡಿದರು. 1890ರ ಸುಮಾರಿನಲ್ಲೇ ಎಂ.ಎಲ್.ಶ್ರೀಕಂಠೇಶ ಗೌಡರು ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ಹಾಗು ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ನಾಟಕಗಳನ್ನು ಪ್ರತಾಪರುದ್ರದೇವ ಹಾಗೂ ಪ್ರಮೀಳಾರ್ಜುನೀಯ ಎಂಬ ಹೆಸರುಗಳಿಂದ ಕನ್ನಡಕ್ಕೆ ತಂದರು. ಪ್ರತಾಪರುದ್ರದೇವ ನಾಟಕದಲ್ಲಿ ಅನುವಾದ ಮಾಡುವಾಗ, ಅಲ್ಲಿನ ಪಾತ್ರಗಳ ಹೆಸರುಗಳನ್ನೆಲ್ಲ ಬದಲಾಯಿಸಿದ್ದಾರೆ. ಆದರೆ ಮೂಲದ ಭಾವಗಳನ್ನು ಬದಲಾಯಿಸಿರುವುದಿಲ್ಲ. ಹೀಗಾಗಿ ಅಲ್ಲಿನ ಘಟನೆಗಳು ಅಸ್ವಾಭಾವಿಕ ಅನಿಸುತ್ತದೆ. ಪ್ರಮೀಳಾರ್ಜುನೀಯದಲ್ಲಿಯೂ ಮೂಲವನ್ನೂ ಹಾಗೆಯೇ ಇಟ್ಟುಕೊಂಡು, ಹೆಸರುಗಳಲ್ಲಿ ಹಾಗೂ ಸಂಭಾಷಣೆಗಳಲ್ಲಿ ತಮ್ಮತನವನ್ನು ತೋರಿದ್ದಾರೆ. ಈ ಎರಡೂ ನಾಟಕಗಳನ್ನು ನೋಡಿದಾಗ ಗೌಡರು, ರಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿರುವಂತೆ ಕಾಣುತ್ತದೆ. ಮ್ಯಾಕ್‌ಬೆತ್ ನಾಟಕ ಡಿ.ವಿ.ಜಿ. ಅವರಿಂದ ಮೂಲದಲ್ಲಿದ್ದಂತೆಯೇ ಕಾವ್ಯವಿದ್ದಲ್ಲಿ ಕಾವ್ಯ, ಗದ್ಯವಿದ್ದಲ್ಲಿ ಗದ್ಯ ಹೀಗೆ ಅನುವಾದಗೊಂಡಿದೆ. ಇದೊಂದು ಒಳ್ಳೆಯ ಅನುವಾದ.

ಈ ಸಾಲಿನಲ್ಲಿ ಬಿ.ಎಂ.ಶ್ರೀ. ಅವರ ಪಾರಸಿಕರು, ಎಸ್.ಜಿ.ಶಾಸ್ತ್ರಿ ಅವರ ಸಾಕ್ರಟೀಸನ ಕೊನೆಯ ದಿನಗಳು, ಆರ್ಯಕ ಮತ್ತು ಸೂತ್ರದ ಬೊಂಬೆ -ಇವುಗಳನ್ನು ಒಳ್ಳೆಯ ಅನುವಾದಗಳೆಂದು ಹೆಸರಿಸಬಹುದು. ಸಾಕ್ರಟೀಸನ ಕೊನೆಯ ದಿನಗಳು ನಾಟಕದಲ್ಲಿ ಅವನ ಮನಸ್ಸಾಮರ್ಥ್ಯ ಅದ್ಭುತವಾಗಿ ಪ್ರದರ್ಶಿತಗೊಂಡಿದೆ. ಆರ್ಯಕ ನಾಟಕದಲ್ಲಿ ನಾರ್ವೆ ದೇಶದ ಪ್ರಾಚೀನ ಜನರಲ್ಲಿ ನೆಲಸಿದ್ದ ಸಮುದ್ರಯಾನ ಜೀವನ, ಆ ಜನದ ಕ್ರೌರ್ಯಶೌರ್ಯಗಳೂ, ಮಾನಾಭಿಮಾನಗಳೂ ವರ್ಣಿತವಾಗಿವೆ. ನೋರಾ, ಹೆಲ್ಮರ್ ಮತ್ತು ಇವರ ಮೂರು ಮಕ್ಕಳ ಒಂದು ಸಂಸಾರ ಹೆಲ್ಮರನಿಗೆ ಸಿಕ್ಕಿರುವ ಒಂದು ಕೆಲಸ. ಬರಲಿರುವ ಕ್ರಿಸ್‌ಮಸ್ ಹಬ್ಬ ಈ ಮನೋಹರವಾದ ವಾತಾವಣದಲ್ಲಿ ಆರಂಭವಾದ ಈ ನಾಟಕ ನೋರಾಳ ಗೃಹತ್ಯಾಗದೊಡನೆ ಮುಗಿಯುತ್ತದೆ.

ಗುಂಡೋ ಕೃಷ್ಣ ಚುರುಮುರಿಯವರಿಂದ ಅನುವಾದಿತವಾದ ಷೇಕ್ಸ್‌ಪಿಯರನ ಒಥೆಲೊ ನಾಟಕ, ಸಿ.ಆನಂದರಾಯರು ಅನುವಾದ ಮಾಡಿರುವ ರಾಮವರ್ಮ ಲೀಲಾವತಿ (ರೋಮಿಯೋ ಜ್ಯೂಲಿಯಟ್). ಇವುಗಳಲ್ಲಿ ಕಥೆ ಭಾಷಾಂತರಗೊಂಡು, ಅಲ್ಲಿನ ಪಾತ್ರಗಳ ಹೆಸರು ರೂಪಾಂತರಗೊಂಡಿದೆ. ರಾಮವರ್ಮ ಲೀಲಾವತಿ ನಾಟಕ ಮಾತ್ರ ರಂಗಭೂಮಿಯ ಮೇಲೆ ಬಹಳ ಜನಪ್ರಿಯವಾಗಿತ್ತೆಂದು ತಿಳಿದುಬರುತ್ತದೆ.

ಒಥೆಲೊ ಮಾಸ್ತಿಯವರಿಂದ ಶೂರಸೇನೆ ಎಂಬ ಹೆಸರಿನಲ್ಲೂ ಬರ್ನಾರ್ಡ್‌ಷಾನ ಪಿಗ್‌ಮೇಲಿಯನ್ ಅದೇ ಹೆಸರಿನಲ್ಲಿ ವಿ.ಸೀತಾರಾಮಯ್ಯನವರಿಂದಲೂ ಅನುವಾದಗೊಂಡಿವೆ.

ಷೇಕ್ಸ್‌ಪಿಯರನ ಟೆಂಪೆಸ್ಟ್ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಬಿರುಗಾಳಿ ಎಂದು ಹೆಸರು ಹೊತ್ತು ಕುವೆಂಪು ಅವರಿಂದ ಒಂದು ಒಳ್ಳೆಯ ಅನುವಾದವಾಗಿದೆ. ಹ್ಯಾಮ್ಲೆಟ್ ನಾಟಕ ಆಧರಿಸಿ ಬರೆದ ರಕ್ತಾಕ್ಷಿ ಕನ್ನಡದ ಅತ್ಯುತ್ತಮ ಐತಿಹಾಸಿಕ ನಾಟಕಗಳಲ್ಲಿ ಒಂದಾಯಿತು.

ಪಿ.ಲಂಕೇಶ್ ಅವರ ಈಡಿಪಸ್ ಹಾಗೂ ಅಂತಿಗೊನೆ, ಕನ್ನಡ ನಾಟಕಗಳ ಅನುವಾದಗಳಲ್ಲಿ ಮುಖ್ಯವಾದದ್ದು. ಇಲ್ಲಿನ ಭಾಷೆ ಆಡುಮಾತಿಗೆ ಹತ್ತಿರವಾಗಿ, ಸಂವೇದನೆಯ ದೃಷ್ಟಿಯಿಂದ ಇದು ಮೂಲಕ್ಕೆ ಹತ್ತಿರವಾಗಿದೆ ಅನಿಸುತ್ತದೆ. ಈ ಹಿಂದೆ ಕೆ.ವಿ.ರಾಘವಾಚಾರ್ಯರಿಂದ ಆದ ಅಂತಿಗೊನೆ ಅನುವಾದ ಹಳಗನ್ನಡದ್ದು. ಎಚ್.ಕೆ.ರಾಮಚಂದ್ರಮೂರ್ತಿ ಅವರಿಂದ ಟೆನಿಸಿ ವಿಲಿಯಮ್‌ನ ಗ್ಲಾಸ್‌ಮೆನಾಜಂ ಕನ್ನಡಕ್ಕೆ ಗಾಜಿನ ಗೊಂಬೆ ಎಂದು ಹೆಸರು ಪಡೆದು ಬಂದಿದೆ. ರೂಪಾಂತರದಂತೆ ಕಂಡರೂ ಇದು ಅನುವಾದವೇ. ಭಾಷೆ ಮೂಲಕ್ಕೆ ಹತ್ತಿರವಾಗಿದ್ದು ಮೂಲಕ್ಕೂ ಅನ್ವಯವಾಗದೆ ಕನ್ನಡದ ಸ್ವತಂತ್ರ ಕೃತಿಯಂತೆ ರೂಪುಗೊಂಡಿದೆ. ಎಮಿಡ್‌ಸಮ್ಮರ್ ನೈಟ್ಸ್ ಡ್ರೀಮ್‌ನ ಅನುವಾದ ಅದೇ ಹೆಸರಿನಲ್ಲಿ ಕೆ.ಎಸ್.ನಿಸಾರ್ ಅಹಮದ್ ಅವರಿಂದ ಆಗಿದೆ.

ಅನುವಾದಗಳಂತೆಯೇ ಪ್ರಪಂಚದ ಬೇರೆಬೇರೆ ಸಾಹಿತ್ಯದಿಂದ ರೂಪಾಂತರಗೊಂಡು ಹಲವು ಸಾಹಿತ್ಯಕೃತಿಗಳು ಕನ್ನಡಕ್ಕೆ ಬಂದಿವೆ. ರೂಪಾಂತರಗೊಳ್ಳುವಲ್ಲಿ ಮೂಲದ ಚೌಕಟ್ಟು ಹಾಗೆಯೇ ಇದ್ದು, ವಸ್ತು ಮತ್ತು ಪಾತ್ರಗಳು ನಮ್ಮದಾಗಿವೆ. ಹೀಗೆ ರೂಪಾಂತರಗೊಂಡಾಗ ಇವುಗಳ ಮೂಲ ಚೌಕಟ್ಟೂ ಇತರರದ್ದಲ್ಲ ಎನಿಸುವಷ್ಟು ಕನ್ನಡದ್ದಾಗಿದೆ. ಹೀಗೆ ಈ ಹಿಂದೆ ರೂಪಾಂತರಗೊಂಡ ಸಾಮಾಜಿಕ ನಾಟಕಗಳಲ್ಲಿ ಎ.ಎನ್. ಮೂರ್ತಿರಾಯರ ಆಷಾಢಭೂತಿ, ಪರ್ವತವಾಣಿ ಅವರ ಬಹದ್ದೂರ್ ಗಂಡ, ವಾರ್ಷಿಕೋತ್ಸವ, ಉಂಡಾಡಿ ಗುಂಡ ಮೊದಲಾದವು ಮುಖ್ಯವಾಗಿ ಹೆಸರಿಸಬೇಕಾದಂಥ ನಾಟಕಗಳು.

ಕನ್ನಡದಲ್ಲಿ ಮೊದಲಿಗೆ ಕಂಡುಬಂದ ನಾಟಕಗಳು ಏನಿದ್ದರೂ ಪೌರಾಣಿಕ ವಸ್ತುಗಳನ್ನುಳ್ಳ ಸಂಸ್ಕೃತದಿಂದ ಅನುವಾದಗೊಂಡು ಬಂದ ನಾಟಕಗಳು. ಸ್ವತಂತ್ರ ನಾಟಕಗಳನ್ನು ರಚಿಸುವಾಗಲೂ ಲೇಖಕರಿಗೆ ಈ ಅನುವಾದಗಳ ಮಾದರಿಯೇ ಆದರ್ಶವಾಯಿತು. ಹೊಸದಾಗಿ ನಾಟಕ ರಚಿಸ ಹೊರಟವರು ಸಾಮಾಜಿಕ ವಸ್ತುಗಳನ್ನು ಕೈಗೆತ್ತಿಕೊಳ್ಳದೆ ಹೆಚ್ಚಾಗಿ ಪೌರಾಣಿಕ ವಸ್ತುಗಳನ್ನೇ ಆಯ್ಕೆಮಾಡಿಕೊಂಡರು. ಇದಕ್ಕೆ ಕಾರಣ ಇಂದಿನ ಸಮಸ್ಯೆಗಳೇ ರೂಪಾಂತರಹೊಂದಿ ಸಾರ್ವಕಾಲಿಕ ಸಮಸ್ಯೆಗಳಾಗಿ ಪರಿಣಮಿಸುತ್ತವೆ ಎಂಬ ದೃಷ್ಟಿಯಿದ್ದುದರಿಂದ ಎಂದು ತೋರುತ್ತದೆ.

ಕೆಲವುರು ಸ್ವತಂತ್ರವಾಗಿ ಪೌರಾಣಿಕ ನಾಟಕಗಳನ್ನು ರಚಿಸಿದರು. ಈ ರಚನೆಗಳಿಗೆ ಕಾರಣ ಕನ್ನಡ ಅಭಿಮಾನ ಹಾಗೂ ಕನ್ನಡ ರಂಗಭೂಮಿಯನ್ನು ಜೀವಂತಗೊಳಿಸಬೇಕೆಂಬ, ಪ್ರಚಾರಗೊಳಿಸಬೇಕೆಂಬ ಹಂಬಲ. ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕಗಳು ಪ್ರದರ್ಶಿತವಾಗುತ್ತಿದ್ದಾಗ, ಕನ್ನಡ ಜನ ಅವುಗಳಿಗೆ ಮಾರುಹೋಗುತ್ತಿದ್ದಾಗ, ಕನ್ನಡ ರಂಗಭೂಮಿ ನಶಿಸಿಹೋಗಬಾರದು ಎಂಬ ಅಭಿಮಾನದಿಂದ ಮೊದಲಿಗೆ ಸ್ವತಂತ್ರ ಕನ್ನಡನಾಟಕ ರಚಿತವಾಯಿತು ಎಂದು ಹೇಳಬಹುದು. ಹೀಗೆ ಮೊದಲು ರಚಿಸಿದವರು ಶಾಂತಕವಿಗಳು. ಇವರ ನಾಟಕಗಳು ಬಯಲಾಟಗಳಿಗೂ ನಾಟಕಗಳಿಗೂ ನಡುವೆ ಬರುತ್ತವೆ. ಇವರ ಎಲ್ಲ ನಾಟಕಗಳಲ್ಲಿ ಬಯಲಾಟದ ಮಾದರಿ ಕಂಡುಬರುತ್ತದೆ. ಗಿರಿಜಾಕಲ್ಯಾಣ, ಉಷಾಹರಣ, ವತ್ಸಲಾಹರಣ - ಈ ಮಾದರಿಯಲ್ಲಿ ರಚಿತವಾದ ಇವರ ಮುಖ್ಯ ನಾಟಕಗಳು. ಇವರು ಪುರಾಣ ವಸ್ತುಗಳನ್ನು ನಾಟಕಕ್ಕೆ ಬಳಸಿಕೊಳ್ಳುವಾಗ ಯಾವುದೇ ಹೊಸ ದೃಷ್ಟಿಕೋನವಾಗಲಿ, ಸಂವಿಧಾನ ಕೌಶಲವಾಗಲಿ ಕಂಡುಬರುವುದಿಲ್ಲ. ಆದರೂ ಕನ್ನಡದಲ್ಲಿ ಮೊದಲು ಬಂದ ಸ್ವತಂತ್ರ ರಂಗಕೃತಿಗಳೆಂಬ ದೃಷ್ಟಿಯಿಂದ ಇವು ಗಮನಾರ್ಹವಾಗುತ್ತವೆ.

ರಂಗಭೂಮಿಗಾಗಿಯೇ ನಾಟಕ ಬರೆಯಲು ಹೊರಟವರಲ್ಲಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು ಮುಖ್ಯರು. ಸಾಹಿತ್ಯಕವಾಗಿಯಾಗಲಿ, ಸಂವಿಧಾನ ಕೌಶಲದೃಷ್ಟಿಯಿಂದಾಗಲಿ ಇವರ ರಚನೆಗಳಲ್ಲಿ ಹೊಸತನ ಕಂಡುಬರುವುದಿಲ್ಲವಾದರೂ ಇವರ ನಾಟಕಗಳು ರಂಗಭೂಮಿಯ ಮೇಲೆ ಯಶಸ್ವೀ ಪ್ರಯೋಗಗಳಾದವು. ಕೃಷ್ಣಲೀಲಾ, ಶ್ರೀಕೃಷ್ಣಪಾರಿಜಾತ, ರುಕ್ಮಿಣೀಸ್ವಯಂವರ, ಮಾರ್ಕಂಡೇಯ, ತುಕಾರಾಂ - ಇವು ಇವರ ಮುಖ್ಯ ರಂಗನಾಟಕಗಳು.

ಇದೇ ಹಾದಿಯಲ್ಲಿ ಮುಂದೆ ನಡೆದ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಶಕ್ತಿವಂತರು. ಇವರಿಗಿದ್ದ ಪಾಂಡಿತ್ಯ ಹೆಚ್ಚಿನದು ಅನ್ನುವುದು ಇವರ ರಚನೆಗಳಲ್ಲಿ ಕಂಡುಬರುತ್ತದೆ. ಸೀತಾಪರಿಣಯ, ಸೀತಾ ಸ್ವರ್ಣಮೃಗ, ಅಭಿಜ್ಞಾನ ಪ್ರಧಾನ, ರಾಜಸೂಯಯಾಗ ಮೊದಲಾದವು ಇವರು ರಚಿಸಿರುವ ಹಲವಾರು ನಾಟಕಗಳಲ್ಲಿ ಮುಖ್ಯ ನಾಟಕಗಳು.

ಈ ಮೂವರಿಗಿಂತಲೂ ಸ್ವಲ್ಪ ಭಿನ್ನವಾದವರು ಬಿ.ಪುಟ್ಟಸ್ವಾಮಯ್ಯ. ಇವರೂ ರಂಗಭೂಮಿಗಾಗಿಯೇ ಕೆಲವು ನಾಟಕಗಳನ್ನು ರಚಿಸಿದವರು. ಅವುಗಳಲ್ಲಿ ಮುಖ್ಯವಾದವು ಸತಿತುಳಸಿ, ಅಕ್ಕಮಹಾದೇವಿ, ಕುರುಕ್ಷೇತ್ರ, ದಶಾವತಾರ, ಗೌತಮಬುದ್ಧ, ಷಹಜಹಾನ್. ಈ ನಾಟಕಗಳ ವಸ್ತು ಪೌರಾಣಿಕ ಹಾಗೂ ಐತಿಹಾಸಿಕವಾದರೂ ಇವರ ರಚನೆಗಳಲ್ಲಿ ಹೊಸ ದೃಷ್ಟಿಯನ್ನು ಕಾಣಬಹುದು. ಮೊದಲಿನಂತೆ ನಾಟಕಗಳಲ್ಲಿ ಪುರಾಣ ಪುಣ್ಯಕಥೆಗಳನ್ನು ಕೇಳಿಹೋಗಲು ಪ್ರೇಕ್ಷಕರನ್ನು ಬಿಡದೆ ಅವರ ದೃಷ್ಟಿಯನ್ನು ಬದಲಾಯಿಸಲು ನಾಟಕಗಳ ಮುಖಾಂತರ ಪ್ರಯತ್ನಿಸಿದ್ದಾರೆ. ಉಳಿದಂತೆ ಸಾಂಪ್ರದಾಯಿಕ ನಾಟಕಗಳ ಸಂವಿಧಾನ ಕೌಶಲವನ್ನೇ ಉಳಿಸಿಕೊಂಡಿದ್ದಾರೆ.

ಭಾಷಾಂತರ ಕಲೆಯಲ್ಲಿ ಮುಂದುವರಿದ ಕನ್ನಡ ನಾಟಕ ರಚನೆ ಕಾಲಾನಂತರದಲ್ಲಿ ಬದಲಾವಣೆ ಹೊಂದಿತು. ಇಂಗ್ಲಿಷ್, ಗ್ರೀಕ್ ಮೊದಲಾದ ಸಾಹಿತ್ಯಗಳ ಅಭ್ಯಾಸ ಮಾಡಿದವರು ಆ ಸಾಹಿತ್ಯಗಳ ಪ್ರಭಾವಕ್ಕೆ ಒಳಗಾದರು. ಇದರ ಪರಿಣಾಮವಾಗಿ ಕನ್ನಡದಲ್ಲಿ ಓದಲೂ ಆಡಲೂ ಸಾಧ್ಯವಾಗುವಂಥ ಕೆಲವು ನಾಟಕಗಳು ಬಂದವು. ಇವುಗಳಲ್ಲಿ ರೂಪಾಂತರಗಳೂ ಅನುವಾದಗಳೂ ಸ್ವತಂತ್ರ ಕೃತಿಗಳೂ ಇವೆ. ಈ ಹಿಂದೆ ನೋಡಿದ ರಚನೆಗಳೊಡನೆ ಹೋಲಿಸಿದಾಗ ಇದು ಕನ್ನಡ ನಾಟಕ ಪರಂಪರೆಯಲ್ಲಿ ಮಹತ್ವದ ಹೆಜ್ಜೆ ಎಂಬುದು ಸ್ಪಷ್ಟವಾಗುತ್ತದೆ. ಈ ಸಾಲಿನಲ್ಲಿ ಬಿ.ಎಂ.ಶ್ರೀ., ಕುವೆಂಪು, ಮಾಸ್ತಿ, ಡಿ.ವಿ.ಜಿ., ವಿ.ಸೀ., ಎಲ್.ಗುಂಡಪ್ಪ, ಜಿ.ಪಿ.ರಾಜರತ್ನಂ, ಕಡೆಂಗೋಡ್ಲು ಶಂಕರಭಟ್ಟ ಮೊದಲಾದವರನ್ನು ಗಮನಿಸಬಹುದು. ಬಿ.ಎಂ.ಶ್ರೀ. ಅವರ ಇಂಗ್ಲಿಷ್, ಗ್ರೀಕ್ ಹಾಗೂ ಕನ್ನಡ ಸಾಹಿತ್ಯದ ಆಳವಾದ ಅಭ್ಯಾಸದ ಫಲ ಗದಾಯುದ್ಧ, ಅಶ್ವತ್ಥಾಮನ್ ಮತ್ತು ಪಾರಸಿಕರು. ಗದಾಯುದ್ಧ ನಾಟಕದಲ್ಲಿ ನೇರವಾಗಿ ಗ್ರೀಕ್ ನಾಟಕದ ಪ್ರಭಾವವಿರದಿದ್ದರೂ ಆ ಸಾಹಿತ್ಯದ ಅಭ್ಯಾಸದ ಲಕ್ಷಣಗಳನ್ನು ಗುರುತಿಸಬಹುದು. ರನ್ನನ ಕಾವ್ಯದ ಗಾಢ ಪ್ರಭಾವ, ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದಾದ ಪ್ರೇರಣೆ ಇವುಗಳಿಂದ ಕನ್ನಡಕ್ಕೆ ಒಂದು ಆಧುನಿಕ ನಾಟಕ ದೊರೆಯಿತು. ಅಶ್ವತ್ಥಾಮನ್ ನಾಟಕ ಸಾಫೊಕ್ಲಿಸನ ಅಯಾಸ್ ನಾಟಕದ ರೂಪಾಂತರ. ಈ ರೂಪಾಂತರ ಸಾಧ್ಯವಾದದ್ದು ಗ್ರೀಕ್ ಪುರಾಣ ಕಥೆಗಳಿಗೂ ನಮ್ಮ ಪುರಾಣ ಕಥೆಗಳಿಗೂ ಸಾಮ್ಯವಿರುವುದರಿಂದ. ಇದು ರೂಪಾಂತರವಾದರೂ ಕನ್ನಡ ನೆಲಕ್ಕೆ ಸೇರಿದ್ದು ಎನ್ನುವಷ್ಟು ಸ್ವತಂತ್ರ ಕೃತಿಯಾಗಿದೆ. ಅಶ್ವತ್ಥಾಮನನ್ನು ಚಿರಂಜೀವಿ ಎಂದು ತೋರಿಸಿದ ಈ ನಾಟಕ ಒಂದು ಕಾಲಕ್ಕೆ ಕ್ರಾಂತಿಯ ರಚನೆಯಾಯಿತು. ಪಾರಸಿಕರು ಮೂಲ ಗ್ರೀಕ್ ನಾಟಕ ಇದ್ದಂತೆಯೇ ಅನುವಾದಗೊಂಡಿದೆ. ಗ್ರೀಕ್ ಸಾಹಿತ್ಯದ ವಾಸನೆ ಇಲ್ಲಿ ಸಂಪೂರ್ಣವಾಗಿ ಇದೆ. ಈ ನಾಟಕದಿಂದ ಈಸ್ಕಲಸ್‌ನ ಪರಿಚಯ ಕನ್ನಡಿಗರಿಗೆ ಸ್ವಲ್ಪಮಟ್ಟಿಗೆ ಆಯಿತು.

ಜಗತ್ತಿನ ಶ್ರೇಷ್ಠ ಕೃತಿಗಳು ಕನ್ನಡಕ್ಕೆ ಅನುವಾದಗೊಂಡು ರೂಪಾಂತರಗೊಂಡು ರಂಗಭೂಮಿಯ ಮೇಲೆ ಬರುತ್ತಿದ್ದಂತೆಯೇ ಕನ್ನಡ ರಂಗಭೂಮಿಯ ಮೇಲೆ ಸ್ವತಂತ್ರ ಕೃತಿಗಳೂ ಕಾಣಿಸಿಕೊಂಡವು. ಉತ್ತರ ಕನ್ನಡ ಜಿಲ್ಲೆಯಲ್ಲಿ, ಹವ್ಯಕರು ಮಾತನಾಡುವ ಕನ್ನಡದಲ್ಲಿ ರಚಿತವಾದ ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಮೊದಲ ಸಾಮಾಜಿಕ ನಾಟಕ

ಎನ್ನುವ ಐತಿಹಾಸಿಕ ಮಹತ್ತ್ವ ಪಡೆದಿದೆ. ಈ ದಿಶೆಯಲ್ಲಿ ಕೆಲಸ ಮಾಡಿದ ಮೊದಲಿಗರೆಂದರೆ ಟಿ.ಪಿ.ಕೈಲಾಸಂ ಹಾಗೂ ಶ್ರೀರಂಗ. ಕೈಲಾಸಂ ಅವರು ಬರ್ನಾರ್ಡ್ ಷಾ, ಇಬ್ಸನ್ ಮೊದಲಾದವರ ಮಾದರಿಯಲ್ಲಿ ನಾಟಕಗಳನ್ನು ರಚಿಸತೊಡಗಿದರು. ಇವರ ನಾಟಕಗಳಲ್ಲಿ ಹೆಚ್ಚಾಗಿ ಮಧ್ಯಮವರ್ಗದ ಜನರ ಜೀವನ ಚಿತ್ರಿತವಾಯಿತು. ಸಮಸ್ಯೆಗಳೂ ಅವರವೇ. ಗೇಲಿ, ಅನುಕಂಪ, ವ್ಯಂಗ್ಯ, ಟೀಕೆಗಳ ಮೂಲಕ ಸಮಾಜವನ್ನು ತಿದ್ದಲು ತೊಡಗಿದರು. ಮಧ್ಯಮವರ್ಗದ ಮನೆಮಾತು ರಂಗಭಾಷೆಯಾಯಿತು. ಅಹೋಬ್ಳು, ಗಂಗಣ್ಣ, ಸಾವಿತ್ರಮ್ಮ, ಸುಬ್ಬಣ್ಣ, ಪಾರ್ವತಮ್ಮ ಇವರುಗಳಿಗೆ ರಂಗದ ಮೇಲೆ ಸ್ಥಾನ ದೊರಕಿತು. ಈ ಎಲ್ಲ ದೃಷ್ಟಿಯಿಂದ ರಂಗಭೂಮಿಯಲ್ಲಿ ಕ್ರಾಂತಿಯಾಯಿತೆಂದು ಹೇಳಬಹುದು. ಕೈಲಾಸಂ ನಾಟಕಗಳು ಒಂದೇ ಮನೆ ಪ್ರಯೋಗವಾದುವು. ಇಂಥ ನಾಟಕಗಳ ಪ್ರಯೋಗ ಮಾಡುವುದು ಸಣ್ಣ ಸಣ್ಣ ಗುಂಪುಗಳಿಗೆ ಕಷ್ಟವಾಗುತ್ತಿರಲಿಲ್ಲ. ರಂಗಸಜ್ಜಿಕೆ, ಬೆಳಕು, ಉಡುಗೆ ತೊಡುಗೆ ಹಾಗೂ ರಂಗಪರಿಕರಗಳ ಬಗ್ಗೆ ನಾಟಕವಾಡುವವರು ಅಷ್ಟಾಗಿ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಹೀಗೆ ರಚನೆಗೊಂಡ ನಾಟಕಗಳಲ್ಲಿ ಮುಖ್ಯವಾದವು ಟೊಳ್ಳುಗಟ್ಟಿ, ಬಂಡ್ವಾಳ್ವಿಲ್ಲದ್ಬಡಾಯಿ, ಹುತ್ತದಲ್ಲಿ ಹುತ್ತ, ಪಾತೂ ತೌರ್ಮನೆ, ಸಾತೂ ತೌರ್ಮನೆ, ಬಹಿಷ್ಕಾರ ಮೊದಲಾದವು. ಇವರ ಕೀಚಕ, ಮಹಾಭಾರತದಲ್ಲಿ ಒಂದು ಪಾತ್ರವನ್ನು ಆಧರಿಸಿ ಬರೆದ ಹೊಸ ರೀತಿಯ ನಾಟಕ. ಕೈಲಾಸಂ ಅವರಂತೆಯೇ ಶ್ರೀರಂಗರೂ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡರೂ ಇವರ ವಿಮರ್ಶೆ ಹರಿತವಾಗಿದೆ. ಸಮಾಜ ಪುನರ್ನಿರ್ಮಾಣವಾಗಬೇಕೆಂಬ ದೃಷ್ಟಿಯಿಂದ ಇವರು ನಾಟಕ ರಚನೆಗೆ ಕೈಹಾಕಿದರು. ಹಳತು-ಹೊಸತು, ಮುಪ್ಪು-ಯೌವನ, ಪ್ರಾಮಾಣಿಕತೆ-ಕುತಂತ್ರ, ನ್ಯಾಯ-ಅನ್ಯಾಯ - ಇವುಗಳನ್ನೆಲ್ಲ ಚಿತ್ರಿಸಿದರು. ಈ ದೃಷ್ಟಿಯಿಂದ ಹರಿಜನ್ವಾರ ನಾಟಕ ಒಂದು ಗಮನಾರ್ಹ ಕೃತಿಯಾಗಿದೆ. ಅಂತೆಯೇ ಇವರ ಸಂಸಾರಿಗ ಕಂಸ, ನರಕದಲ್ಲಿ ನರಸಿಂಹ, ಪ್ರಪಂಚ ಪಾಣಿಪತ್ತು ಮೊದಲಾದ ನಾಟಕಗಳೂ ಮುಖ್ಯವಾಗುತ್ತವೆ. ಇತ್ತೀಚೆಗೆ ಶ್ರೀರಂಗರ ಬರೆವಣಿಗೆಯ ಧೋರಣೆ ಬದಲಾಗಿದೆ. ಹೆಚ್ಚಿಗೆ ಅವು ಬುದ್ಧಿನಾಟಕಗಳಾಗಿವೆ. ಮಾತಿನ ಜಾಣತನ, ರಂಗಸಜ್ಜಿಕೆ, ಬೆಳಕು, ಉಡುಗೆ-ತೊಡುಗೆ ಇವುಗಳಲ್ಲಿ ರಂಗಸಾಧ್ಯತೆಗಳನ್ನು ತರಲು ಹೋಗಿದ್ದಾರೆ. ಅಲ್ಲದೆ ಪ್ರೇಕ್ಷಕ ಹಾಗೂ ನಾಟಕಕಾರನಿಗೆ ಒಂದು ಮಹತ್ತರ ಸ್ಥಾನವನ್ನು ನಾಟಕಗಳಲ್ಲಿ ತಂದುಕೊಟ್ಟಿದ್ದಾರೆ. ಇವರ ಕತ್ತಲೆ-ಬೆಳಕು, ಏನ ಬೇಡಲಿ ನಿನ್ನ ಬಳಿಗೆ ಬಂದು, ಯಾರಿಗೆ ಮಾಡ್ತೀ ಮ್ಯಾಂ ಮೊದಲಾದವು ಈ ಮಾದರಿಯ ಕೃತಿಗಳು. ಇವರ ನಾಟಕಗಳಲ್ಲಿ ಎದ್ದುಕಾಣುವ ನ್ಯೂನತೆ ಎಂದರೆ ಒಂದು ವಿಚಾರ ಹಲವು ನಾಟಕಗಳಲ್ಲಿ ಬೇರೆಬೇರೆ ರೀತಿಯಲ್ಲಿ ಬಂದಿರುವುದು. ಇಷ್ಟಾದರೂ ಶ್ರೀರಂಗರು ರಂಗಭೂಮಿಯ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಹೇಳಬಹುದು.

ಕೈಲಾಸಂ, ಶ್ರೀರಂಗರು ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡು ಬರೆಯಲು ಪ್ರಾರಂಭಿಸಿದ ಮೇಲೆ ಹಲವಾರು ನಾಟಕಕಾರರು ಬಂದರು. ಇವರಲ್ಲಿ ಮುಖ್ಯರಾದವರೆಂದರೆ ಪರ್ವತವಾಣಿ. ಇವರಿಂದ ರಚಿತವಾದ ಹಲವು ನಾಟಕಗಳು ರೂಪಾಂತರವಾದರೂ ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಡುವ ದೃಷ್ಟಿಯಿಂದ ಇವುಗಳಿಗೆ ಒಂದು ಮುಖ್ಯ ಸ್ಥಾನವಿದೆ. ಇವರ ಮುಖ್ಯ ನಾಟಕಗಳೆಂದರೆ ಬಹದ್ದೂರ್ ಗಂಡ, ಉಂಡಾಡಿ ಗುಂಡ, ವಾರ್ಷಿಕೋತ್ಸವ, ಹಣಹದ್ದು ಮೊದಲಾದವು. ಇನ್ನೂ ಕೆಲವರು ನಾಟಕಕಾರರು ಪ್ರಹಸನಗಳನ್ನು ರಚಿಸಿದರು. ಹೀಗೆ ಬರೆದಾಗ ಹಲವರು ಹವ್ಯಾಸಿ ರಂಗಭೂಮಿಯನ್ನೇ ದೃಷ್ಟಿಯಿಟ್ಟುಕೊಂಡು ಬರೆದರು ಎನ್ನುವುದೂ ಕಂಡುಬರುತ್ತದೆ. ಈ ದಿಕ್ಕಿನಲ್ಲಿ ದಾಶರಥಿ ದೀಕ್ಷಿತ್, ಎ.ಎಸ್.ಮೂರ್ತಿ, ಎನ್ಕೆ.ನಾ.ಕಸ್ತೂರಿ, ಕೆ.ಎನ್.ಸುಬ್ಬನರಸಿಂಹ, ಗುಂಡಣ್ಣ ಮೊದಲಾದವರು ಶ್ರಮಿಸಿದರು. ಎ.ಎಸ್.ಮೂರ್ತಿ ಅವರ ಬರೆವಣಿಗೆಯಲ್ಲಿ ಬದಲಾವಣೆಯನ್ನು ಗುರುತಿಸಬಹುದು. ಆಯ್ಯಾ ನಾನು ಯಾರು, ಸುಳಿಯಲ್ಲಿ ಸಿಕ್ಕಾಗ ಮೊದಲಾದವುಗಳಲ್ಲಿ ಪ್ರವೃತ್ತಿಯ ಬದಲಾವಣೆ ಕಂಡುಬುರತ್ತದೆ.

ಈ ಕಾಲದಲ್ಲೇ ಇಂಗ್ಲಿಷ್‌ನ ಅಪೇರಾ ಮಾದರಿಯ ನಾಟಕಗಳು ಗೀತರೂಪಕಗಳು ಎಂಬ ಹೆಸರಿನಿಂದ ಕನ್ನಡಕ್ಕೆ ಬಂದವು. ಈ ಕ್ಷೇತ್ರದಲ್ಲಿ ದುಡಿದವರೆಂದರೆ ಶಿವರಾಮ ಕಾರಂತ ಹಾಗೂ ಪು.ತಿ.ನ. ಇವರುಗಳ ಗೀತನಾಟಕಗಳು ರಚನೆಯಲ್ಲಿ ಭಿನ್ನವಾಗಿವೆ. ಕಾರಂತರು ತಮ್ಮ ಗೀತನಾಟಕಗಳಲ್ಲಿ ಜನಪದ ದೇಸಿಯನ್ನು ಉಪಯೋಗಿಸಿದರೆ ಪು.ತಿ.ನ. ತಮ್ಮ ನಾಟಕಗಳಿಗೆ ಪುರಾಣಗಳಿಂದ ವಸ್ತುಗಳನ್ನು ಆಯ್ದು ಸ್ವತಂತ್ರ ಕೃತಿಗಳನ್ನು ರಚಿಸಿದರು. ಇಂಥ ನಾಟಕಗಳಲ್ಲಿ ಕಾರಂತರ ಗೀತನಾಟಕಗಳು, ಪು.ತಿ.ನ. ಅವರ ಅಹಲ್ಯೆ, ಗೋಕುಲ ನಿರ್ಗಮನ, ಹಂಸದಮಯಂತಿ ಮತ್ತು ಇತರ ರೂಪಕಗಳು ಮುಖ್ಯವಾದವು. ಕೀರ್ತಿನಾಥ' ಕುರ್ತು ಕೋಟಿಯವರು ಈ ರಂಗದಲ್ಲಿ ಕೆಲಸ ಮಾಡಿ ಸ್ವಪ್ನದರ್ಶಿ ಮತ್ತು ಇತರ ಗೀತನಾಟಕಗಳು ಎಂಬ ಕೃತಿಯನ್ನು ನೀಡಿದ್ದಾರೆ.

ರೇಡಿಯೋಕ್ಕಾಗಿಯೇ ಬರೆದ ನಾಟಕಗಳು, ರಂಗಭೂಮಿಗಾಗಿ ಬರೆದ ನಾಟಕಗಳಿಗಿಂತ ಬೇರೆಯಾಗಿವೆ. ಈ ದೃಷ್ಟಿಯಿಂದ ರಚನೆಯಾದ ನಾಟಕಗಳಲ್ಲಿ ಹೆಸರಿಸಬಹುದಾದುವೆಂದರೆ ಬೀಚಿ ಅವರ ರೇಡಿಯೋ ನಾಟಕಗಳು. ಎಚ್.ಕೆ.ರಂಗನಾಥ ಅವರ ದುರಂತ ಮತ್ತು ಇತರ ಪ್ರಸಾರ ನಾಟಕಗಳು, ಎಸ್.ಎನ್.ಶಿವಸ್ವಾಮಿ ಅವರ ಹೃದಯಾಂತರಾಳ, ವಸಂತಕವಲಿ ಅವರ ಪುರಂದರದರ್ಶನ ಮೊದಲಾದುವುಗಳು.

ಪ್ರಬುದ್ಧರಿಗಾಗಿ ನಾಟಕಗಳು ರಚನೆಯಾದಂತೆ ಮಕ್ಕಳಿಗಾಗಿಯೂ ರಚನೆಗೊಂಡಿವೆ. ಆದರೂ ಈ ದಿಶೆಯಲ್ಲಿನ ಸಾಹಿತ್ಯ ರಚನೆ ಕಡಿಮೆ ಎಂದೇ ಹೇಳಬೇಕು. ಕೆಲವು ಅನುವಾದಗಳೂ ಕಥೆಗಳನ್ನು ಆಧರಿಸಿ ರಚಿಸಿದ ಕೃತಿಗಳೂ ಬಂದಿವೆ. ಮಕ್ಕಳಿಗಾಗಿ, ಮಕ್ಕಳಿಂದ ಮಕ್ಕಳಿಗಾಗಿ ದೊಡ್ಡವರಿಂದ ನಾಟಕಗಳು ರಂಗಭೂಮಿಯಲ್ಲಿ ಕಾಣಿಸಿಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಕೆಲವು ಪ್ರಯೋಗಗಳು ಗಮನಾರ್ಹವಾಗಿವೆ. ಈ ರಂಗದಲ್ಲಿ ಉತ್ಸಾಹದಿಂದ ದುಡಿದವರೆಂದರೆ ಹೊಯಿಸಳರು. ಇವರ ಅಗಿಲಿನ ಮಗಳು. ಪ್ರಸಾದ, ವಾತಾಪಿ ಮೊದಲಾದ ನಾಟಕಗಳು ಮಕ್ಕಳ ಮನಸ್ಸನ್ನು ಸೆರೆಹಿಡಿಯುತ್ತವೆ. ಈ ನಿಟ್ಟಿನಲ್ಲಿ ಕುವೆಂಪು ಅವರ ಪ್ರಯತ್ನವೂ ಸ್ತುತ್ಯರ್ಹವಾದದ್ದು. ಇವರ ಮೋಡಣ್ಣನ ತಮ್ಮ, ನನ್ನ ಗೋಪಾಲ ಎಂಬ ನಾಟಕಗಳು ಭಾಷಾದೃಷ್ಟಿಯಿಂದ, ರಚನೆ ಹಾಗೂ ಪ್ರಯೋಗ ದೃಷ್ಟಿಗಳಿಂದ ಗಮರ್ನಾಹವಾಗಿವೆ. ಇತ್ತೀಚೆಗೆ ಈ ಪ್ರಕಾರ ಚೆನ್ನಾಗಿ ಬೆಳೆಯುತ್ತಿದೆ. ಹೊಸ ರೀತಿಯ ರಂಜನೆಯನ್ನುಂಟುಮಾಡುವ ನಾಟಕಗಳಲ್ಲಿ ಕೆ.ವಿ.ಸುಬ್ಬಣ್ಣನವರ ಕಾಡಿನಲ್ಲಿ ಕಥೆ, ಬಿ.ವಿ.ಕಾರಂತರ ಪಂಜರಶಾಲೆ ಮೊದಲಾದವುಗಳನ್ನು ಇಲ್ಲಿ ಹೆಸರಿಸಬಹುದು.

ಸಾಹಿತ್ಯದೃಷ್ಟಿಯಿಂದ ಹಾಗೂ ರಂಗಭೂಮಿಯ ದೃಷ್ಟಿಯಿಂದ ಕೆಲವು ನಾಟಕಗಳು ಬಹಳ ಮುಖ್ಯವಾಗಿವೆ. ಮಾಸ್ತಿ ಅವರ ಕಾಕನಕೋಟೆ ಒಂದು ಗಮನಾರ್ಹ ಕೃತಿ. ರಂಗದ ಮೇಲೂ ಯಶಸ್ವಿ ಪ್ರಯೋಗವನ್ನು ಕಂಡಿದೆ. ಕುವೆಂಪು ಅವರ ಬೆರಳ್‌ಗೆ ಕೊರಳ್‌ನ ಸರಳ ರಚನೆ ಪಾತ್ರನಿರ್ವಹಣೆಯಲ್ಲಿ ಹೆಚ್ಚು ಸಹಾಯವಾಗಿದೆ. ದೃಶ್ಯವಿನ್ಯಾಸವೂ ಅಷ್ಟೇ ಚೆನ್ನಾಗಿದೆ. ಸ್ಮಶಾನ ಕುರುಕ್ಷೇತ್ರ ಭಾರತದ ಕಥೆಗೆ ಹೊಸ ದೃಷ್ಟಿಕೋನ ನೀಡಿದೆ. ಕನ್ನಡದ ಇನ್ನೊಬ್ಬ ಪ್ರಮುಖ ನಾಟಕಕಾರರೆಂದರೆ ಜಡಭರತರು (ಜಿ.ಬಿ.ಜೋಶಿ). ಇವರ ಕದಡಿದ ನೀರು, ಆ ಊರು ಈ ಊರು ನಾಟಕಗಳು ಭಾಷಾದೃಷ್ಟಿಯಿಂದ, ಸಾಹಿತ್ಯದೃಷ್ಟಿಯಿಂದ ಮುಖ್ಯವಾಗಿವೆ. ಇವರ ಸತ್ತವರ ನೆರಳು, ಸಮಾಜದ ಒಂದು ಪಂಗಡದಲ್ಲಿ, ಆಚಾರದ ನೆವದಲ್ಲಿ ಆಗುವ ಶೋಷಣೆ ಹಾಗೂ ಮೌಢ್ಯವನ್ನು ಚಿತ್ರಿಸುವ ಗಮನಾರ್ಹ ಕೃತಿಯಾಗಿದೆ. ಸಂಸ ಅವರ ನಾಟಕಗಳು ತಮ್ಮಷ್ಟಕ್ಕೆ ತಾವೇ ಪ್ರತ್ಯೇಕವಾಗಿವೆ. ಇವರ ಎಲ್ಲ ಐತಿಹಾಸಿಕ ನಾಟಕಗಳೂ ಹೆಚ್ಚಾಗಿ ಮೈಸೂರು ಇತಿಹಾಸಕ್ಕೆ ಸಂಬಂಧಪಟ್ಟವು. ಭಾಷಾ ಬಳಕೆ ಹಾಗೂ ಪ್ರಯೋಗ ದೃಷ್ಟಿಯಿಂದ ಗಮನಾರ್ಹವಾಗಿವೆ. ವಿಗಡ ವಿಕ್ರಮರಾಯ, ಬಿರುದೆಂತೆಂಬರ ಗಂಡ -ಇವುಗಳನ್ನು ಇಲ್ಲಿ ಹೆಸರಿಸಬಹುದು. ಬೇಂದ್ರೆ, ಗೋಕಾಕ, ಕುರ್ತುಕೋಟಿ, ವಿ.ಸೀ., ಶಿವರಾಮ ಕಾರಂತ ಮೊದಲಾದವರ ಕೃತಿಗಳು ಸಾಹಿತ್ಯ ಇಲ್ಲವೇ ರಂಗಭೂಮಿಯ ದೃಷ್ಟಿಯಿಂದ ಮುಖ್ಯ ಕೃತಿಗಳಾಗುತ್ತವೆ. ಕೀರ್ತಿನಾಥರ ಆ ಮನಿ, ಕಾರಂತರ ಗರ್ಭಗುಡಿ ಒಳ್ಳೆಯ ನಾಟಕಗಳು. ಆ ಮನಿಯಲ್ಲಿ ಸಾಂಕೇತಿಕತೆ ದಟ್ಟವಾಗಿದೆ. ಗರ್ಭಗುಡಿ ಸಾಮಾಜಿಕ ಸಮಸ್ಯೆಯೊಂದನ್ನು ಪ್ರಭಾವಪೂರ್ಣವಾಗಿ ಚಿತ್ರಿಸುತ್ತದೆ. ಎಂ.ಆರ್.ಶ್ರೀ., ಅವರ ಧರ್ಮದುರಂತ ಐತಿಹಾಸಿಕ ನಾಟಕಗಳಲ್ಲಿ ಹೆಸರಿಸಬೇಕಾದ ಮಹತ್ತ್ವ ಪಡೆದಿದೆ.

ವಸ್ತು, ಪಾತ್ರ, ರಚನೆ, ರಂಜನೆ -ಇವುಗಳನ್ನೇ ಗಮನದಲ್ಲಿಟ್ಟುಕೊಂಡು ಬಂದ ಸಾಂಪ್ರದಾಯಿಕ ನಾಟಕಗಳು ರಚನೆಯಾಗುತ್ತಿದ್ದಂತೆಯೇ ಕನ್ನಡ ರಂಗಭೂಮಿಯ ಮೇಲೆ ಹೊಸ ಗಾಳಿ ಬೀಸತೊಡಗಿತು. ಪಾಶ್ಚಾತ್ಯ ಸಾಹಿತ್ಯ ಹಾಗೂ ರಂಗಭೂಮಿಯ ಪರಿಚಯ ಪ್ರಭಾವ ನಮ್ಮ ಬುದ್ಧಿಜೀವಿಗಳ ಮೇಲೆ ದಟ್ಟವಾದ ಪ್ರಭಾವ ಬೀರಿದವು. ಜೀವನದ ಮೌಲ್ಯಗಳಲ್ಲಾದ ಏರುಪೇರು, ಪಟ್ಟಭದ್ರರ ಮೇಲುಗೈ, ರಾಜಕೀಯ ದೊಂಬರಾಟ ಹಾಗೂ ಅವರುಗಳ ಮೇಲುಗೈ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಉಂಟಾದ ಧಕ್ಕೆ, ಜೀವನದ ಅಸಾಂಗತ್ಯ - ಇವುಗಳು ಬುದ್ಧಿಜೀವಿಗಳನ್ನು ಕೆಣಕಿ ಕಾಡಿದವು. ಸಾಂಪ್ರದಾಯಿಕ ಜಾಡಿನಲ್ಲಿ ರಚನೆಯಾದ ನಾಟಕಗಳು ಅವರಿಗೆ ಬೇಡಾದವು. ಇವರು ಅವನ್ನು ವಿರೋಧಿಸುವುದರ ಜೊತೆಗೆ ಕ್ರಿಯಾತ್ಮಕವಾಗಿ ಹೊಸ ದಾರಿ ತುಳಿದರು. ಇದರ ಪರಿಣಾಮವಾಗಿ ಹೊಸ ಸಂವೇದನೆಯ ನಾಟಕಗಳು ರಚಿತವಾದವು. ಈ ಜಾಡಿನ ನಾಟಕಗಳೇ ಅಸಂಗತ ನಾಟಕಗಳು. ಕನ್ನಡಕ್ಕೆ ಇದೊಂದು ವಿಶಿಷ್ಟ ಕೊಡುಗೆ. ಈ ದಿಕ್ಕಿನಲ್ಲಿ ಮೊಟ್ಟಮೊದಲು ಅಯನಸ್ಕೋವಿನ ಬಾಲ್ಡ್‌ಸೊಪ್ರಾನೋ ಸುಮತೀಂದ್ರ ನಾಡಿಗರಿಂದ ಬೋಕ್ಕತಲೆಯ ನರ್ತಕಿಯಾಗಿ ಕನ್ನಡಕ್ಕೆ ಬಂದಿತು. ಇದಕ್ಕೆ ಐತಿಹಾಸಿಕ ಮಹತ್ವವಿದೆ. ಇವರು ಮುಂದೆ ಈ ಮಾದರಿಯ ನಾಟಕಗಳನ್ನು ರಚಿಸಲಿಲ್ಲ. ಅನಂತರ ಪಿ.ಲಂಕೇಶ್, ನ.ರತ್ನ, ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ ಪಾಟೀಲ, ಚಂದ್ರಶೇಖರ ಕಂಬಾರ, ಚಂದ್ರಕಾಂತ ಕುಸನೂರ, ರಾಮಚಂದ್ರ ಶರ್ಮ, ಚದುರಂಗ ಮೊದಲಾದವರು ಈ ಪ್ರಕಾರದಲ್ಲಿ ಹೆಚ್ಚು ಕೆಲಸ ಮಾಡಿದರು. ವ್ಯಕ್ತಿಗಳ ವ್ಯಕ್ತಿತ್ವದ ಅಂತರಂಗ ಹಾಗೂ ಬಹಿರಂಗಗಳ ಸ್ವರೂಪ ಹಾಗೂ ಸಂಬಂಧಗಳನ್ನು ವಿಶ್ಲೇಷಿಸುವುದೆ ಲಂಕೇಶರ ತೆರೆಗಳು ನಾಟಕದ ಉದ್ದೇಶವಾಗಿದೆ. ನ.ರತ್ನರ ಎಲ್ಲಿಗೆ ನಾಟಕದಲ್ಲಿ ಜೀವನದ ಅಸಾಂಗತ್ಯ ಧ್ವನಿಪೂರ್ಣವಾಗಿ ಚಿತ್ರಿತವಾಗಿರವುದನ್ನು ನೋಡಬಹುದು. ವ್ಯಕ್ತಿಯ ಅನ್ವೇಷಣೆಯಲ್ಲಿನ ಅಸಾಧ್ಯತೆಯನ್ನು ವ್ಯಂಗ್ಯವಾಗಿ ನೋಡುವ ನಾಟಕ ಇದು. ಪೂರ್ಣಚಂದ್ರ ತೇಜಸ್ವಿ ಅವರ ಯಮಳಪ್ರಶ್ನೆಯಲ್ಲಿ ಯಂತ್ರಕ್ಕೆ ಸಿಗುವ ಪ್ರಾಮುಖ್ಯತೆ ಮಾನವನಿಗೆ ಸಿಗುವುದಿಲ್ಲ ಎನ್ನುವ ಜೀವನದ ವ್ಯಂಗ್ಯ ನಾಟಕದ ವಸ್ತುವಾಗಿದೆ. ಚಂದ್ರಶೇಖರ ಪಾಟೀಲರ ಅಪ್ಪ ನಾಟಕದಲ್ಲಿ ಬರುವ ಬಸವ ಸಮಾಜದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಪಡುವ ಪ್ರಯತ್ನ ಅವನದೇ ಆಗಿರದೆ ಸಮಾಜದ ಯಾವ ಒಬ್ಬ ವ್ಯಕ್ತಿಯದೂ ಆಗುತ್ತದೆ. ಚಂದ್ರಶೇಖರ ಕಂಬಾರರ ಚಾಳೇಶದಲ್ಲಿ ವ್ಯಕ್ತಿತ್ವಗಳ ನಡುವೆ, ಸುಳ್ಳು ಮತ್ತು ಸತ್ಯಗಳ ನಡುವೆ, ಕನಸು ಮತ್ತು ಎಚ್ಚರಗಳ ನಡುವೆ ಇರುವ ದ್ವಂದ್ವವನ್ನು (ವ್ಯಕ್ತಿಯ ಸಂಕಟ) ನೋಡಬಹುದು. ಇಲಿ ಬೋನು, ಹಳ್ಳಾಕೊಳ್ಳಾ ನೀರು, ಕೊಡೆಗಳು ಮೊದಲಾದ ನಾಟಕಗಳಲ್ಲಿ ಜೀವನದ ಅಸಂಗತತೆಯ ಚಿತ್ರಣ ಸಾಂದ್ರತರವಾಗಿ ಅಭಿವ್ಯಕ್ತವಾಗಿದೆ. ಋಷ್ಯಶೃಂಗ, ಸಂಕ್ರಾಂತಿ ನಾಟಕಗಳಲ್ಲಿನ ಇತಿಹಾಸಕ್ಕೆ ಹೊಸ ಅರ್ಥ ಬರುತ್ತದೆ. ಎಚ್.ಎಂ.ಚನ್ನಯ್ಯನವರ ಎಲ್ಲರಂಥವನಲ್ಲ ನನ ಗಂಡ, ಚಂದ್ರಶೇಖರ ಕಂಬಾರರ ಜೋಕುಮಾರಸ್ವಾಮಿ, ಚಂದ್ರಶೇಖರ ಪಾಟೀಲರ ಗೋಕರ್ಣದ ಗೌಡಶಾನಿ- ಈ ನಾಟಕಗಳು ರಚನೆಯ ದೃಷ್ಟಿಯಿಂದ ಪ್ರತ್ಯೇಕವಾಗಿವೆ - ಇವು ಎಪಿಕ್ ನಾಟಕದ ಮಾದರಿಯ ನಾಟಕಗಳು. ಎಲ್ಲರಂಥವನಲ್ಲ ನನ ಗಂಡ ಹಾಗೂ ಜೋಕುಮಾರಸ್ವಾಮಿ ಪ್ರಯೋಗದ ದೃಷ್ಟಿಯಿಂದ ಗಮನಾರ್ಹ ಕೃತಿಗಳಾಗಿವೆ.

ಗಿರೀಶ್ ಕಾರ್ನಾಡರು ಐತಿಹಾಸಿಕ, ಪೌರಾಣಿಕ ವಸ್ತುಗಳನ್ನು ಎತ್ತಿಕೊಂಡು ಅವಕ್ಕೆ ಹೊಸ ವ್ಯಾಖ್ಯಾನ ಮಾಡಿ ನಾಟಕಗಳನ್ನು ರಚಿಸುತ್ತ ಬಂದಿದ್ದಾರೆ. ಯಯಾತಿ, ತುಘಲಕ್, ಹಯವದನ, ಅಗ್ನಿ ಮತ್ತು ಮಳೆ ಇವರ ಮುಖ್ಯ ಕೃತಿಗಳು. ಯಯಾತಿಯಲ್ಲಿ ಹೊಸ ಪಾತ್ರಗಳೂ ಸೇರಿದಂತೆ ಹೊಸ ವ್ಯಾಖ್ಯಾನವಿದ್ದರೆ, ತುಘಲಕ್ ನಾಟಕದಲ್ಲಿ ತುಘಲಕನ ಪಾತ್ರದಲ್ಲಿ ಅಸಾಂಗತ್ಯವಿದೆ. ಈ ನಾಟಕ ಕಾಮುವಿನ ಕ್ಯಾಲಿಗುಲಕ್ಕೆ ಬಹಳಷ್ಟು ಋಣಿಯಾಗಿದೆ. ಹಯವದನ ಬಹಳ ತಂತ್ರಗಳುಳ್ಳ ನಾಟಕ. ಪಾತ್ರಗಳ ವಿಶ್ಲೇಷಣೆಯ ದೃಷ್ಟಿಯಿಂದ, ತಂತ್ರದ ದೃಷ್ಟಿಯಿಂದ ಹೊಸತು-ಹಳತುಗಳ ಬೆಸುಗೆಯಿಂದ ಇವರ ನಾಟಕಗಳು ಮುಖ್ಯವಾಗುತ್ತವೆ.

ಇಂಥ ಸ್ವತಂತ್ರ ಕೃತಿಗಳ ರಚನೆಯ ಜೊತೆಗೆ ಪ್ರಪಂಚದ ಹಾಗೂ ಭಾರತದ ಇತರ ಭಾಷೆಯ ಹೊಸ ಸಂವೇದನೆಯ ಕೃತಿಗಳು ಕನ್ನಡಕ್ಕೆ ಅನುವಾದಗೊಳ್ಳುತ್ತಿವೆ. ಬಂಗಾಲಿ, ಮರಾಠಿ, ಹಿಂದಿ ಮೊದಲಾದ ಭಾಷೆಗಳಿಂದ ಕೆಲವು ಗಮನಾರ್ಹ ಕೃತಿಗಳು ಅನುವಾದಗೊಂಡಿವೆ. ಮರಾಠಿಯಿಂದ ವಿಜಯ ತೆಂಡೂಲ್ಕರ್ ಅವರ ಶಾಂತತಾ ಕೋರ್ಟ್ ಚಾಲು ಹೈ ಕನ್ನಡದಲ್ಲಿ ಸದ್ದು ವಿಚಾರಣೆ ನಡೀತಾ ಇದೆ ಎಂದೂ ಬಾದಲ್ ಸರ್ಕಾರ್ ಅವರ ಪಗಲಾ ಘೋಡಾ ಹಾಗೂ ಬಾಕಿ ಇತಿಹಾಸ್ ಎನ್.ಎಸ್.ವೆಂಕಟರಾಂ ಅವರಿಂದ ಹುಚ್ಚು ಕುದುರೆ ಹಾಗೂ ಬಾಕಿ ಇತಿಹಾಸ ಎಂದೂ ಬಿ.ವಿ.ಕಾರಂತರಿಂದ ಏವಂ ಇಂದ್ರಜಿತ್ ಅದೇ ಹೆಸರಿನಲ್ಲೂ ಮೋಹನ್ ರಾಕೇಶ್ ಅವರ ಆಷಾಢ್ ಕೆ ಏಕ್ ದಿನ್ ಸಿದ್ಧಲಿಂಗಪಟ್ಟಣ ಶೆಟ್ಟಿ ಅವರಿಂದ ಆಷಾಢದಲ್ಲಿ ಒಂದು ದಿನ ಎಂದೂ ಅನುವಾದಗೊಂಡಿವೆ. ಬರ್ನಾರ್ಡ್ ಷಾ ಅವರ 'ಆರಮ್ಸ್ ಅಂಡ್ ದಿ ಮ್ಯಾನ್' ನಾಟಕವನ್ನು 'ಚಾಕೊಲೇಟ್ ಸಿಪಾಯಿ' ಎಂದು ಎಚ್.ಎ.ರಾಮಕೃಷ್ಣ ಅನುವಾದ ಮಾಡಿದ್ದಾರೆ. ಈ ಮೇಲಿನ ವಿವರಣೆಗಳು ಸಾಹಿತ್ಯಕೃತಿಗಳ ದೃಷ್ಟಿಯಿಂದ, ರಂಗಭೂಮಿಯ ದೃಷ್ಟಿಯಿಂದ ಕನ್ನಡ ನಾಟಕ ಸಂಪತ್ತು ಚೆನ್ನಾಗಿಯೇ ಬೆಳೆಯುತ್ತ ಬಂದಿದೆ ಎಂಬುದನ್ನು ವಿಶದಪಡಿಸುತ್ತದೆ.

ಅನುವಾದ, ರೂಪಾಂತರ, ಸ್ವತಂತ್ರ ರಚನೆ - ಹೀಗೆ ವೈವಿಧ್ಯಮಯವಾಗಿ ಬೆಳೆದುಕೊಂಡು ಬಂದ ಕನ್ನಡ ನಾಟಕ-ರಂಗಭೂಮಿಯ ಮೇಲೆ ಆಗಾಗ್ಗೆ ಪಾಶ್ಚಾತ್ಯ ಗಾಳಿ ಬೀಸಿದೆ. ನಾಟಕಗಳು ರಚನೆ ದೃಷ್ಟಿ ಹಾಗೂ ಮೌಲ್ಯಗಳ ದೃಷ್ಟಿಯಿಂದ ಒಂದು ಹಂತವನ್ನು ಮುಟ್ಟಿವೆ. ಕನ್ನಡ ವೃತ್ತಿ ರಂಗಭೂಮಿ ನಾಟಕ ಸಾಹಿತ್ಯರಚನೆಗೆ ಸ್ಫೂರ್ತಿ ನೀಡಿದೆ. ಹವ್ಯಾಸಿ ರಂಗಭೂಮಿ ಸಾಹಿತ್ಯರಚನೆಯ ದೃಷ್ಟಿಯಿಂದ ಹಾಗೂ ಪ್ರಯೋಗದ ದೃಷ್ಟಿಯಿಂದ ಮುಖ್ಯವಾಗಿದೆ. ಎಪ್ಪತ್ತರ ದಶಕದಲ್ಲಿ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿಗೆ ಸಿಕ್ಕಿದ್ದಷ್ಟೇ ಪ್ರಾಮುಖ್ಯತೆ ನಾಟಕ ರಚನೆ ಮತ್ತು ರಂಗಭೂಮಿ ಪ್ರದರ್ಶನಗಳಿಗೂ ಸಿಕ್ಕಿತು. ಕನ್ನಡದಲ್ಲಿ ನಾಟಕಗಳಿಲ್ಲ ಎಂಬ ಗೊಣಗಾಟದ ನಡುವೆಯೇ ಗಣನೀಯವಾದ ಸಂಖ್ಯೆಯಲ್ಲಿ ನಾಟಕಗಳು ರಚಿತವಾದವು. ಹಾಗೆಯೇ ಗಣನೀಯವಾದ ಸಂಖ್ಯೆಯಲ್ಲಿ ಬೇರೆಬೇರೆ ಭಾಷೆಗಳಿಂದ ನಾಟಕಗಳು ಕನ್ನಡಕ್ಕೆ ಅನುವಾದಗೊಂಡವು. ಅತಿ ಹೆಚ್ಚಿನ ನಾಟಕಗಳು ರಚನೆಯಾಗುವುದಕ್ಕೆ ಕಾರಣ ರಂಗಭೂಮಿಯ ಸ್ವರೂಪದಲ್ಲಿ ಆದ ಬದಲಾವಣೆಗಳು. ಎಪ್ಪತ್ತರ ದಶಕದಲ್ಲಿ ರಂಗಭೂಮಿ ಅತ್ಯಂತ ಕ್ರಿಯಾಶೀಲವಾಗಿ ಕೆಲಸ ಮಾಡತೊಡಗಿತು. ಅದರಿಂದಾಗಿ ನಾಟಕ ಎಂಬ ಪ್ರಕಾರವನ್ನು ನೋಡುವ ದೃಷ್ಟಿಯೇ ಬದಲಾಗತೊಡಗಿತು. ನಾಟಕವನ್ನು ಏಕಕಾಲದಲ್ಲಿ 'ಲಿಖಿತ ಕೃತಿ'ಯನ್ನಾಗಿಯೂ 'ರಂಗಕೃತಿ'ಯನ್ನಾಗಿಯೂ ಪರಿಭಾವಿಸುವ ದೃಷ್ಟಿ ಹುಟ್ಟಿಕೊಂಡಿತು. (ಎಸ್.ಎ.)

ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡ ಕೆಲವು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳವಳಿಗಳು ನಾಟಕ ರಚನೆಯ ಮೇಲೆ ಅಗಾಧವಾದ ಪರಿಣಾಮ ಬೀರಿದವು. ದಲಿತ ಸಂಘರ್ಷ ಸಮಿತಿ, ರೈತ ಸಂಘಟನೆ, ಎಡಪಂಥೀಯ ಸಂಘಟನೆ ಮತ್ತು ಬಂಡಾಯ ಸಾಹಿತ್ಯ ಸಂಘಟನೆ ತಮ್ಮ ಪ್ರಖರವಾದ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನೆಗಳ ಹಿನ್ನೆಲೆಯಲ್ಲಿ ಇಡೀ ಸಮಾಜದ ಚಾರಿತ್ರಿಕ ದ್ವಂದ್ವಮಾನ ಮತ್ತು ಗತಿತಾರ್ಕಿಕತೆಯನ್ನು ವಿಶ್ಲೇಷಿಸತೊಡಗಿದ್ದವು. ಈ ಎಲ್ಲಾ ಪ್ರಭಾವಗಳೂ ನಾಟಕ ಬರವಣಿಗೆಯ ಮೇಲೆ ನೇರ ಪ್ರಭಾವ ಬೀರತೊಡಗಿದವು. ಇದರಿಂದ ರಾಜಕೀಯ ನೆಲೆಯ ಅನೇಕ ಆಯಾಮಗಳನ್ನು ವಿಶ್ಲೇಷಿಸುವ ನಾಟಕಗಳು ಬರತೊಡಗಿದವು. ಅಲ್ಲಿಯವರೆಗೆ ನಾಟಕ ಬರೆಯುತ್ತಿದ್ದ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಜಿ.ಬಿ.ಜೋಷಿ ಮೊದಲಾದ ನಾಟಕಕಾರರ ಮೇಲೂ ಇದರ ಪ್ರಭಾವ ಕಂಡುಬರತೊಡಗಿತು.

ಎಪ್ಪತ್ತೈದರ ಹಿಂದೆ ವಾಸ್ತವವಾದದ ನೆಲೆಯಲ್ಲಿ, ಅಸಂಗತವಾದದ ನೆಲೆಯಲ್ಲಿ ಹಾಗೂ ಅಭಿವ್ಯಕ್ತಿವಾದದ ನೆಲೆಯಲ್ಲಿ ನಾಟಕ ಬರೆಯುತ್ತಿದ್ದ ಕೈಲಾಸಂ, ಶ್ರೀರಂಗ, ಲಂಕೇಶ್, ಜಡಭರತ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಮೊದಲಾದವರು ಎಪ್ಪತ್ತಾರರ ಅನಂತರ ನಾಟಕ ಬರೆಯಲು ಪ್ರಾರಂಭಿಸಿದ ನಾಟಕಕಾರರಿಗೂ ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಸಾಕಷ್ಟು ವ್ಯತ್ಯಾಸಗಳಿವೆ. ಎಪ್ಪತ್ತಾರರ ಹೊತ್ತಿಗಾಗಲೇ ಜರ್ಮನಿಯ ನಾಟಕಕಾಕರ ಬರ್ಟೋಲ್ಟ್ ಬ್ರೆಕ್ಟ್‌ನ "ಎಪಿಕ್ ತಂತ್ರ" ರಂಗಭೂಮಿಯನ್ನು ಪ್ರವೇಶಿಸಿಯಾಗಿತ್ತು. ನಾಟಕದ ವಸ್ತು ಸೈದ್ಧಾಂತಿಕ ನೆಲೆಯಲ್ಲಿ ರೂಪುಗೊಳ್ಳುತ್ತಿತ್ತು. ಜಾತಿ ಸಂಘರ್ಷ, ವರ್ಗ ಸಂಘರ್ಷ, ರಾಜಕೀಯ ಶಿಥಿಲತ್ವ, ಸಾಮಾಜಿಕ ಅಸಮಾನತೆ - ಹೀಗೆ ಸಮಕಾಲೀನ ವೈರುಧ್ಯಗಳು ನಾಟಕದ ವಸ್ತುಗಳಾಗಿ ಕಾಣಿಸಿಕೊಳ್ಳತೊಡಗಿದವು.

ಈ ಅವಧಿಯಲ್ಲಿ ಹಿರಿಯ ತಲೆಮಾರಿನ ಅನೇಕ ನಾಟಕಕಾರರು ತಮ್ಮ ನಾಟಕದ ಬರೆವಣಿಗೆಯನ್ನು ಮುಂದುವರೆಸಿದರು. ಅವರ ಜೊತೆ ಜೊತೆಗೇ ಅನೇಕ ಹೊಸಪೀಳಿಗೆಯ ನಾಟಕಕಾರರೂ ಹುಟ್ಟಿಕೊಂಡರು. ಹಿರಿಯ ನಾಟಕಕಾರರ ನಾಟಕಗಳು ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಸಾಕಷ್ಟು ಬದಲಾವಣೆಗೂ ಒಳಪಟ್ಟವು. ಗಿರೀಶ್ ಕಾರ್ನಾಡ್ ಅವರು ತಲೆದಂಡ, ನಾಗಮಂಡಲ, ಅಗ್ನಿ ಮತ್ತು ಮಳೆ ಎಂಬ ನಾಟಕಗಳನ್ನು ರಚಿಸಿದರು. ತಲೆದಂಡ ಹನ್ನೆರಡನೆಯ ಶತಮಾನದ ಶರಣ ಚಳವಳಿಯ ಹಿನ್ನೆಲೆಯ ನಾಟಕ. ಧರ್ಮ ಮತ್ತು ರಾಜಕೀಯದ ಮಧ್ಯದ ಸಂಘರ್ಷದ ಕಥೆ. 'ನಾಗಮಂಡಲ' ಜನಪದ ಕಥೆಯನ್ನಾಧರಿಸಿದ ನಾಟಕ. ಗಿರೀಶರನ್ನು ಅಪಾರವಾಗಿ ಕಾಡಿದ ಸೀಳು ವ್ಯಕ್ತಿತ್ವದ ಕತೆ ಇಲ್ಲಿದೆ. 'ಅಗ್ನಿ ಮತ್ತು ಮಳೆ' ಮಹಾಭಾರತದ ಉಪಾಖ್ಯಾನವೊಂದನ್ನು ಆಧರಿಸಿದ ನಾಟಕ. ವೈದಿಕಾಚರಣೆಗಳ ಶುಷ್ಕತೆ ಹಾಗೂ ದೇಸೀ ಮೂಲಗಳ ಫಲವತ್ತತೆಯನ್ನು ಅತ್ಯಂತ ಸಂಕೀರ್ಣವಾಗಿ ಹಿಡಿದಿಡುವ ನಾಟಕ. ಶತಮಾನದ ಕಡೆಯಲ್ಲಿ ಗಿರೀಶರು ಟಿಪ್ಪು ಕಂಡ ಕನಸು ಎಂಬ ಇನ್ನೊಂದು ನಾಟಕ ಬರೆದರು. ಇದು ಮುಖ್ಯವಾಗಿ ಸಾಮ್ರಾಜ್ಯಶಾಹಿ ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪು ಸುಲ್ತಾನನ ಆಶೋತ್ತರಗಳನ್ನು ಪ್ರತಿಫಲಿಸುತ್ತದೆ. ಆದರೆ ಇದು ಗಿರೀಶರ ಮಿಕ್ಕ ನಾಟಕಗಳಷ್ಟು ಪರಿಣಾಮಕಾರಿಯಾಗಿ ಮೂಡಿ ಬಂದಿಲ್ಲ. ಈ ಅವಧಿಯಲ್ಲಿಯೂ ಗಿರೀಶ್ ಕಾರ್ನಾಡ್ ಕನ್ನಡದ ಮಹತ್ವದ ನಾಟಕಕಾರರಾಗಿಯೇ ಉಳಿದಿದ್ದಾರೆ ಎಂಬುದು ಗಮನಾರ್ಹ. ಪಿ.ಲಂಕೇಶ್ ಈ ಅವಧಿಯಲ್ಲಿ ಗುಣಮುಖ ನಾಟಕ ಬರೆದರು. ಇದು ಭಾರತದ ಮೇಲೆ ಆಕ್ರಮಣ ಮಾಡಿದ ಪರ್ಷಿಯನ್ ದೊರೆ ನಾದಿರ್‌ಶಾ ದೈಹಿಕವಾಗಿ ಮತ್ತು ಮಾನಸಿಕವಾಗಿ ಅಸ್ವಸ್ಥನಾದುದರ ಹಿನ್ನೆಲೆ ಹೊಂದಿದೆ. ನಾಟಿವೈದ್ಯನೊಬ್ಬನ ಮಾನವೀಯ ಚಿಕಿತ್ಸೆಯಿಂದ ಅವನು ಸ್ವಸ್ಥನಾಗುತ್ತಾ ಹೋಗುತ್ತಾನೆ. ನಾಟಕವನ್ನು ಪ್ರಧಾನ ಸೃಜನಶೀಲ ಅಭಿವ್ಯಕ್ತಿಯಾಗಿ ಮುಂದುವರೆಸಿದ ಇನ್ನೊಬ್ಬ ಪ್ರಮುಖ ನಾಟಕಕಾರರೆಂದರೆ ಚಂದ್ರಶೇಖರ ಕಂಬಾರ. ಇವರು ಹುಲಿಯ ನೆರಳು, ಸಾಂಬಶಿವ ಪ್ರಹಸನ, ಹರಕೆಯ ಕುರಿ, ಜೈಸಿದನಾಯ್ಕ, ಸಿರಿಸಂಪಿಗೆ, ತುಕ್ರನ ಕನಸು, ನಾಯಿಕತೆ, ಮಹಾಮಾಯಿ ಮುಂತಾದ ನಾಟಕಗಳನ್ನು ರಚಿಸಿದರು. ಹರಕೆಯ ಕುರಿ ಮತ್ತು ಜೈಸಿದನಾಯ್ಕ ಮುಖ್ಯವಾಗಿ ಸಮಕಾಲೀನ ರಾಜಕೀಯ ನಾಟಕಗಳು. 'ತುಕ್ರನ ಕನಸು' ಚೀನಿ ಕತೆಯೊಂದರಿಂದ ಪ್ರೇರಿತವಾದ ಸಮಕಾಲೀನ ವಸ್ತುವನ್ನು ಉಳ್ಳದ್ದು. ಕಂಬಾರರ ನಿಜವಾದ ನಾಟ್ಯ ಪ್ರತಿಭೆ ಉಜ್ವಲವಾಗಿ ಬೆಳಗಿರುವುದು ಅವರ ಜಾನಪದೀಯ ಹಿನ್ನೆಲೆಯ ನಾಟಕಗಳಲ್ಲಿ. ಅದ್ಭುತವಾದ ಹಾಸ್ಯಪ್ರಜ್ಞೆ, ಜಾನಪದೀಯ ಮತ್ತು ಪೌರಾಣಿಕ ರೂಪಗಳನ್ನು ಸಮಕಾಲೀನವಾಗಿ ವ್ಯಾಖ್ಯಾನಗೊಳಿಸುವ ಇವರ ಪ್ರತಿಭೆ ಬೆರುಗುಗೊಳಿಸುವಂಥದ್ದು. ಇವರು ಕನ್ನಡ ನಾಟಕ ಸ್ವರೂಪಕ್ಕೆ ಬೆರಗಿನ ಬೆಡಗನ್ನು ನೀಡಿದವರು. ಇವರು ಮಕ್ಕಳ ನಾಟಕಗಳನ್ನೂ ಅಷ್ಟೇ ಯಶಸ್ವಿಯಾಗಿ ರಚಿಸಿದ್ದಾರೆ. ಇವರ ಕಿಟ್ಟಿಕಥೆ, ಪುಷ್ಪರಾಣಿ, ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು, ಮಕ್ಕಳ ನಾಟಕದ ಪರಿಕಲ್ಪನೆಯನ್ನು ವಿಸ್ತರಿಸುವಲ್ಲಿ ದೊಡ್ಡಪಾತ್ರ ವಹಿಸಿವೆ. ಕನ್ನಡ ನಾಟಕ ಸಾಹಿತ್ಯವನ್ನು ಸಮೃದ್ಧಿಗೊಳಿಸಿದ ಶ್ರೀರಂಗರು ಈ ಅವಧಿಯಲ್ಲಿ ನೀವೇ ಹೇಳಿರಿ ಮತ್ತು ಅಗ್ನಿಸಾಕ್ಷಿ ಎಂಬ ಎರಡು ನಾಟಕಗಳನ್ನು ಪ್ರಕಟಿಸಿದ್ದಾರೆ. ಜಿ.ಬಿ.ಜೋಷಿಯವರು ನಾನೇ ಬಿಜ್ಜಳ, ಪರಿಮಳದವರು ಎಂಬ ನಾಟಕಗಳನ್ನು ಪ್ರಕಟಿಸಿದ್ದಾರೆ.

ಎಂಬತ್ತರ ದಶಕದಲ್ಲಿ ಕನ್ನಡ ನಾಟಕ ಸಾಹಿತ್ಯದಲ್ಲಿ ಹೊಸದೊಂದು ರೀತಿಯ ಬೆಳವಣಿಗೆ ಕಾಣತೊಡಗಿತು. ಅನೇಕ ಜನ ಯುವ ನಾಟಕಕಾರರು ನಾಟಕ ಬರೆಯಲು ಆರಂಭಿಸಿದರು. ಈ ರೀತಿ ಯುವ ನಾಟಕಕಾರರು ದೊಡ್ಡ ಸಂಖ್ಯೆಯಲ್ಲಿ ನಾಟಕಕಾರರಾಗಿ ಹೊರಹೊಮ್ಮುವುದಕ್ಕೆ ಮುಖ್ಯ ಕಾರಣ ರಂಗಭೂಮಿಯಲ್ಲಾದ ಬದಲಾವಣೆ, ಎಡಪಂಥೀಯ ಚಳವಳಿ, ರೈತ ಸಂಘಟನೆ, ದಲಿತ-ಬಂಡಾಯ ಸಂಘಟನೆಗಳು ತಮ್ಮ ಪ್ರಖರ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನೆಗಳನ್ನು ಬರೆವಣಿಗೆಯ ಮೂಲಕ ಅಭಿವ್ಯಕ್ತಿಸಲು ತೊಡಗಿದವು. ಅಂಥ'ವರಿಗೆ ರಂಗಭೂಮಿ ಬಹಳ ಮುಖ್ಯವಾದ ಮಾಧ್ಯಮವಾಗಿ ಕಂಡುಬಂದಿತು. ಇದರ ಫಲವಾಗಿ ರಾಜಕೀಯ ವಸ್ತುವಿನ, ಸಾಮಾಜಿಕ ಬದ್ಧತೆಯ ಹಿನ್ನೆಲೆಯ ನಾಟಕಗಳು ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದವು. ನಾಟಕ ಮತ್ತು ರಂಗಭೂಮಿಯ ಮೂಲಕ ಸಾಮಾಜಿಕ ಜಾಗೃತಿಯನ್ನುಂಟುಮಾಡುವ ಉದ್ದೇಶ ಇದರ ಹಿನ್ನೆಲೆಗಿತ್ತು. ಬದ್ಧತೆಯೊಂದಿಗೆ ನಾಟಕ ಬರೆಯುವುದರ ಜೊತೆಗೆ, ಬದ್ಧತೆಯ ವಸ್ತುವನ್ನುಳ್ಳ ಕಥೆ, ಕಾದಂಬರಿಗಳನ್ನು ನಾಟಕಗಳನ್ನಾಗಿ ಪರಿವರ್ತಿಸ ತೊಡಗಿದರು. ಹಾಗೆಯೇ ಬೇರೆ ಬೇರೆ ಭಾಷೆಗಳಿಂದ ನಾಟಕಗಳನ್ನು ಭಾಷಾಂತರಿಸತೊಡಗಿದರು. ಇಲ್ಲಿಯವರೆಗೆ ಅಷ್ಟಾಗಿ ಕನ್ನಡದಲ್ಲಿ ಪರಿಚಯವಿರದ ಅನೇಕ ಭಾಷಾನೆಲೆಯ ನಾಟಕಕಾರರು ಕನ್ನಡಕ್ಕೆ ಪ್ರವೇಶಿಸಿದರು. ಮಕ್ಕಳ ನಾಟಕಗಳೂ ಈ ಅವಧಿಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡವು. ರಾಷ್ಟ್ರೀಯ ನಾಟಕ ಶಾಲೆ (ಎನ್.ಎಸ್.ಡಿ.), ಹೆಗ್ಗೋಡಿನ ನೀನಾಸಂ ನಾಟಕ ಶಾಲೆ, ಹಾಗೂ ಅನೇಕ ರಂಗತರಬೇತಿ ಶಿಬಿರಗಳಲ್ಲಿ ತರಬೇತಿ ಪಡೆದುಕೊಂಡ ರಂಗನಿರ್ದೇಶಕರು ಈ ರೀತಿಯ ನಾಟಕಗಳ ಹುಟ್ಟಿಗೆ ಕಾರಣರಾದರೆಂಬುದು ಮುಖ್ಯ ವಿಷಯ. ಪ್ರಧಾನಧಾರೆಯ ನಾಟಕಗಳ ಜೊತೆಗೆ ಬೀದಿನಾಟಕಗಳ ಹುಟ್ಟು ಕೂಡಾ ಇದೇ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಆಯಿತು.

ಈ ಅವಧಿಯಲ್ಲಿ ಬಂದ ಪ್ರಮುಖ ನಾಟಕಕಾರರೆಂದರೆ ಬಿ.ವಿ.ವೈಕುಂಠರಾಜು, ಎಚ್.ಎಸ್.ಶಿವಪ್ರಕಾಶ್, ಪ್ರಸನ್ನ, ಲಿಂಗದೇವರು ಹಳೆಮನೆ, ಸಿದ್ಧಲಿಂಗಯ್ಯ, ಹೂಲಿಶೇಖರ್, ಟಿ.ಎನ್.ಸೀತಾರಾಮ್, ಕೆ.ವಿ.ಸುಬ್ಬಣ್ಣ, ಕೆ.ವಿ.ಅಕ್ಷರ, ಎಚ್.ಎಸ್.ವೆಂಕಟೇಶಮೂರ್ತಿ, ಗೋಪಾಲ ವಾಜಪೇಯಿ, ನಿಸರ್ಗಪ್ರಿಯ, ಕಿ.ರಂ.ನಾಗರಾಜ ಮೊದಲಾದವರು.

ಬಿ.ವಿ.ವೈಕುಂಠರಾಜು ಅವರು ಸಂದರ್ಭ, ಸನ್ನಿವೇಶ ಮತ್ತು ಕಾನನ್‌ದೇವಿ ಎಂಬ ನಾಟಕಗಳನ್ನು ಬರೆದಿದ್ದಾರೆ. ಇವರ ನಾಟಕಗಳು ಸಮಕಾಲೀನ ರಾಜಕೀಯ ವಸ್ತುಗಳನ್ನಾಧರಿಸಿವೆ. ಕೆ.ವಿ.ನಾರಾಯಣ ಅವರು ಸಂಸರ 'ವಿಗಡ ವಿಕ್ರಮರಾಯ' ನಾಟಕವನ್ನು ಆಧರಿಸಿ ಹುತ್ತವ ಬಡಿದರೆ ಎಂಬ ನಾಟಕವನ್ನು ರಚಿಸಿದ್ದಾರೆ. ಬರ್ಟೋಲ್ಟ್ ಬ್ರೆಕ್ಟ್‌ನ ಎಪಿಕ್‌ತಂತ್ರವನ್ನು ಅತ್ಯಂತ ಯಶಸ್ವಿಯಾಗಿ ಅಳವಡಿಸಿಕೊಂಡಿರುವ ಈ ನಾಟಕ ಇತಿಹಾಸವನ್ನು ಸಮಕಾಲೀನವಾಗಿ ಅರ್ಥೈಸುವ ಹೊಸದೊಂದು ಕ್ರಮವನ್ನು ಪರಿಚಯಿಸಿತ್ತು. ಟಿ.ಎನ್.ಸೀತಾರಾಮ್ ಅವರ ಆಸ್ಫೋಟ, ನಮ್ಮೊಳಗೊಬ್ಬ ನಾಜೂಕಯ್ಯ ಎಂಬ ನಾಟಕಗಳು ಕನ್ನಡದಲ್ಲಿ ಬಂದ ಅತ್ಯಂತ ಸಶಕ್ತ ರಾಜಕೀಯ ನಾಟಕಗಳು. ಇವು ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸಂಬಂಧಗಳನ್ನು ಅವುಗಳ ಸಂಕೀರ್ಣ ಸ್ತರದಲ್ಲಿ ಹಿಡಿದಿಡಬಲ್ಲ ಅಪರೂಪದ ನಾಟಕಗಳು. ದಲಿತಕವಿ ಸಿದ್ಧಲಿಂಗಯ್ಯನವರು ಪಂಚಮ, ನೆಲಸಮ ಮತ್ತು ಏಕಲವ್ಯ ಎಂಬ ನಾಟಕಗಳನ್ನು ಬರೆದಿದ್ದಾರೆ. ದಲಿತರ ಸ್ಥಿತಿ, ನೋವು, ಅವಮಾನ ಮತ್ತು ಜಾಗೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದ ನಾಟಕಗಳಿವು. ದಲಿತ ಸಾಹಿತ್ಯಕ್ಕೆ ಸಂದ ಮಹತ್ವದ ಕೊಡುಗೆಗಳು. ಬಹುಮುಖ್ಯವಾಗಿ 'ಏಕಲವ್ಯ' ನಾಟಕದಲ್ಲಿ ಅವರು ಏಕಲವ್ಯ ಬಲಗೈ ಹೆಬ್ಬೆರಳನ್ನು ಕಳೆದುಕೊಂಡರೂ ಎಡಗೈ ಹೆಬ್ಬೆರಳಿನ ಮೂಲಕ ಧನುರ್ವಿದ್ಯೆಯನ್ನು ಮುಂದುವರೆಸುವ ರೀತಿಯ ಬದಲಾವಣೆಯ ಮೂಲಕ ದಲಿತರ ಕಲಿಯುವ ಛಲವನ್ನು ಅತ್ಯಂತ ಪ್ರಖರವಾಗಿ ಚಿತ್ರಿಸಿದ್ದಾರೆ.

ಈ ತಲೆಮಾರಿನ ನಾಟಕಕಾರರಲ್ಲಿ ಅತಿ ಹೆಚ್ಚಿನ ಮತ್ತು ಅತಿಮಹತ್ವದ ನಾಟಕಗಳನ್ನು ಬರೆದಿರುವವರು ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಸುಲ್ತಾನ್ ಟಿಪ್ಪು, ಮಾದಾರಿ ಮಾದಯ್ಯ, ಮಂಟೇಸ್ವಾಮಿ ಕಥಾಪ್ರಸಂಗ, ಷೇಕ್ಸ್‌ಪಿಯರನ ಸ್ವಪ್ನನೌಕೆ, ಮಧುರೆಕಾಂಡ, ಮಾಧವಿ ಮಾತೃಕಾ ಇವು ಇವರು ಬರೆದ ನಾಟಕಗಳು. 'ಮಹಾಚೈತ್ರ' ಹನ್ನೆರಡನೆಯ ಶತಮಾನದ ವಚನ ಚಳವಳಿಯನ್ನು ದುಡಿಯುವ ವರ್ಗದ ನೆಲೆಯಲ್ಲಿ ಕಂಡಿರುವ ನಾಟಕ. 'ಸುಲ್ತಾನ್ ಟಿಪ್ಪು' ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪುವಿನ ಹಿನ್ನೆಲೆ ಒಳಗೊಂಡಿದೆ. 'ಮಾದಾರಿಮಾದಯ್ಯ ಮತ್ತು ಮಂಟೇಸ್ವಾಮಿ ಕಥಾ ಪ್ರಸಂಗ' ನಮ್ಮ ಪ್ರಸಿದ್ಧ ಜನಪದ ಮಹಾಕಾವ್ಯಗಳನ್ನು ಆಧರಿಸಿದ ನಾಟಕಗಳು. ತಮಿಳು ಮಹಾಕಾವ್ಯ 'ಶಿಲಪ್ಪದಿಗಾರಂ' ಆಧರಿಸಿದ ತ್ರಿವಳಿ ನಾಟಕಗಳು - ಮಧುರೆಕಾಂಡ, ಮಾಧವಿ ಮತ್ತು ಮಾತೃಕಾ ಚರಿತ್ರೆ. ಪುರಾಣಗಳ ದ್ವಂದ್ವಮಾನ ವೈರುಧ್ಯಗಳನ್ನು ಸಮಕಾಲೀನವಾಗಿ ಚಿತ್ರಿಸುವಲ್ಲಿ ಶಿವಪ್ರಕಾಶರು ಹೆಚ್ಚು ಆಸಕ್ತಿ ತೋರುತ್ತಾರೆ. ಮೂಲತಃ ಕವಿಯಾದ ಇವರು ತಮ್ಮ ನಾಟಕ ರಚನಾ ಶೈಲಿಯಲ್ಲಿ ವಸ್ತುವನ್ನು ವಿಶ್ಲೇಷಿಸುವ ಕ್ರಮದಲ್ಲಿ

ಬೇರೆ ಎಲ್ಲಾ ನಾಟಕಕಾರರಿಗಿಂತ ಅನನ್ಯವಾಗಿ ಎದ್ದುಕಾಣುತ್ತಾರೆ. ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ನಾಟಕವನ್ನು ಆಧರಿಸಿ 'ಮಾರನಾಯಕ' ಎಂಬ ನಾಟಕವನ್ನು ಕನ್ನಡದ್ದೇ ಸ್ವಂತ ಕೃತಿ ಎಂಬಂತೆ ರಚಿಸಿದ್ದಾರೆ. ಪ್ರಸನ್ನ ಈ ಅವಧಿಯ ಇನ್ನೊಬ್ಬ ಮಹತ್ವದ ನಾಟಕಕಾರರು. ರಂಗನಿರ್ದೇಶಕರೂ ಆದ ಇವರು ತಮ್ಮ ನಾಟಕಗಳನ್ನು ರಂಗನಿರ್ಮಿತಿಯ ದೃಷ್ಟಿಕೋನವಿಟ್ಟುಕೊಂಡು ರಚಿಸಿದ್ದಾರೆ. ಇವರ ಒಂದು ಲೋಕ ಕಥೆ, ದಂಗೆಯ ಮುಂಚಿನ ದಿನಗಳು, ತದ್ರೂಪಿ, ಮಹಿಮಾಪುರ, ಹದ್ದುಮೀರಿದ ಹಾದಿ ಮತ್ತು ಜಂಗಮದ ಬದುಕು ಇವು ಇವರ ಪ್ರಮುಖ ನಾಟಕಗಳು. ಸಮಾಜದ ಶಿಥಿಲತ್ವವನ್ನೂ ಅವನತಿಯನ್ನೂ ಚಿತ್ರಿಸುವುದರಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ. ವ್ಯಕ್ತಿ ಮತ್ತು ಸಮಾಜದ ಮಧ್ಯದ ಸಂಬಂಧಗಳು ಕಲುಷಿತಗೊಳ್ಳುವ ನೆಲೆಗಳನ್ನು ಅನ್ವೇಷಿಸುವ ಪ್ರಯತ್ನವನ್ನು ಇವರು ತಮ್ಮ ಬಹುತೇಕ ನಾಟಕಗಳಲ್ಲಿ ಮಾಡಿದ್ದಾರೆ. ಲಿಂಗದೇವರು ಹಳೆಮನೆಯವರ ಚಿಕ್ಕದೇವಭೂಪ, ಹೈದರ್, ಅಂತೆಂಬರಗಂಡ - ಇವು ಮೈಸೂರಿನ ಇತಿಹಾಸದ ನೆಲೆಯಲ್ಲಿ ಎಡಪಂಥೀಯ ದೃಷ್ಟಿಕೋನದಿಂದ ಬರೆದ ನಾಟಕಗಳು. ಇತಿಹಾಸ ಇರುವುದು ಪುನರ್ ಸೃಷ್ಟಿಸುವುದಕ್ಕಲ್ಲ ಪುನರ್‌ಪ್ರತಿಪಾದಿಸುವುದಕ್ಕೆ ಎಂಬ ಧೋರಣೆಯನ್ನು ಇವು ಎತ್ತಿ ಹಿಡಿಯುತ್ತವೆ. ಕಿ.ರಂ.ನಾಗರಾಜ ಅವರು ನೀಗಿಕೊಂಡ ಸಂಸ, ಕಾಲಜ್ಞಾನಿ ಕನಕ ಎಂಬ ಎರಡು ಮಹತ್ವದ ನಾಟಕಗಳನ್ನು ಬರೆದಿದ್ದಾರೆ. ನೀಗಿಕೊಂಡ ಸಂಸ ಕನ್ನಡದ ಖ್ಯಾತ ನಾಟಕಕಾರರಾದ ಸಂಸ ಅವರ ಬದುಕನ್ನು ಕುರಿತದ್ದು. ಕಾಲಜ್ಞಾನಿ ಕನಕ ಕನಕದಾಸರನ್ನು ಕುರಿತದ್ದು. ಈ ಇಬ್ಬರು ವ್ಯಕ್ತಿಗಳ ಸಂಕೀರ್ಣ ವ್ಯಕ್ತಿತ್ವವನ್ನು ಅತ್ಯಂತ ವಿಶಿಷ್ಟ ರೀತಿಯಲ್ಲಿ ನಾಟಕವಾಗಿಸಲಾಗಿದೆ. ಟಿ.ಎನ್.ನರಸಿಂಹನ್ ಅವರು ಕೈಲಾಸಂ ಜೀವನವನ್ನಾಧರಿಸಿ ಟಿಪಿಕಲ್ ಟಿ.ಪಿ.ಕೈಲಾಸಂ ಎಂಬ ಏಕವ್ಯಕ್ತಿ ಪ್ರಸ್ತುತಿಯ ನಾಟಕವನ್ನು ರಚಿಸಿದ್ದರು. ಅದಕ್ಕಿಂತ ಭಿನ್ನವಾಗಿ ನಿಲ್ಲುವ ಸಂಸರ ನಾಟಕವನ್ನು ಕಿ.ರಂ.ನಾಗರಾಜ ರಚಿಸಿರುವುದು ವಿಶೇಷವಾಗಿ ಉಲ್ಲೇಖಾರ್ಹ. ನಿಸರ್ಗಪ್ರಿಯ ಅವರು ಪುರಾಣ ಮತ್ತು ಜನಪದ ಕಥೆಗಳನ್ನು ಆಯ್ಕೆಮಾಡಿಕೊಂಡು ನಾಟಕಗಳನ್ನು ಬರೆದಿದ್ದಾರೆ. ಚೋರಪುರಾಣ, ತಿರುಕರಾಜ, ವ್ಯವಸ್ಥೆ, ಶುನಶ್ಯೇಪ, ಯಶೋಧರ ಚಕ್ರವರ್ತಿ, ಜುಂಜಪ್ಪ ಇವು ಇವರು ರಚಿಸಿದ ನಾಟಕಗಳು. ಸರಸಮಯವಾದ ಕಥಾ ನಿರೂಪಣೆ, ಲವಲವಿಕೆಯ ಸಂಭಾಷಣೆ, ಸರಳವಾದ ಪಾತ್ರರಚನೆ ನಿಸರ್ಗಪ್ರಿಯರ ನಾಟಕಗಳ ಲಕ್ಷಣ.

ಉತ್ತರ ಕರ್ನಾಟಕದಿಂದ ಬಂದ ಯುವಪೀಳಿಗೆಯ ನಾಟಕಕಾರರಲ್ಲಿ ಹೂಲಿಶೇಖರ ಮುಖ್ಯರು. ಇವರು ಕಲ್ಯಾಣದಲ್ಲಿ ಕ್ರಾಂತಿ, ಹಾವು ಹರಿದಾಡತಾವ, ಅರಗಿನ ಬೆಟ್ಟ ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಸಮಕಾಲೀನ ಸಾಮಾಜಿಕ ಸಮಸ್ಯೆಯನ್ನು ಜಾನಪದ ಚೌಕಟ್ಟಿನಲ್ಲಿ ಅತ್ಯಂತ ಆಕರ್ಷಣೀಯವಾಗಿ ಹೇಳುವ ನಾಟಕೀಯತೆ ಹೂಲಿ ಶೇಖರ್‌ರವರಿಗೆ ಸಿದ್ಧಿಸಿದೆ. ಆದರೆ ಸಮಸ್ಯೆಯನ್ನು ಇವರು ನೋಡುವ ಸರಳ ದೃಷ್ಟಿಯಿಂದಾಗಿ ಇವರ ನಾಟಕಗಳು ಗಾಢವಾಗಿ ತಟ್ಟುವುದಿಲ್ಲ. ಎಚ್.ಎಸ್.ವೆಂಕಟೇಶಮೂರ್ತಿಯವರು ಅಗ್ನಿವರ್ಣ, ಚಿತ್ರಪಟ ಮತ್ತು ಉರಿಯ ಉಯ್ಯಾಲೆ ಎಂಬ ಮೂರು ನಾಟಕಗಳನ್ನು ಪುರಾಣದ ವಸ್ತುಗಳನ್ನಾಧರಿಸಿ ಮರು ಸೃಷ್ಟಿಸಿದ್ದಾರೆ. ಆಕರ್ಷಕ ಮಾತುಗಾರಿಕೆ ಈ ನಾಟಕಗಳ ಪ್ರಮುಖ ಆಕರ್ಷಣೆ. ಉರಿಯ ಉಯ್ಯಾಲೆ ಸ್ತ್ರೀವಾದಿ ನೆಲೆಯಲ್ಲಿ ದ್ರೌಪದಿಯನ್ನು ಚಿತ್ರಿಸಿರುವ ನಾಟಕ.

ಒಂದೋ ಎರಡೋ ನಾಟಕಗಳನ್ನು ಬರೆದು ಕನ್ನಡ ನಾಟಕ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆ ನೀಡಿರುವ ಅನೇಕ ಯುವ ನಾಟಕಕಾರರಿದ್ದಾರೆ. ಅವರಲ್ಲಿ ಕೆಲವರನ್ನು ಇಲ್ಲಿ ಹೆಸರಿಸಬೇಕು. ಗೋಪಾಲ ವಾಜಪೇಯಿಯವರ 'ದೊಡ್ಡಪ್ಪ' ದೇವದಾಸಿ ಪದ್ಧತಿಯ ಹಿಂದಿರುವ ಶೋಷಣೆಯನ್ನಾಧರಿಸಿದ ನಾಟಕ. ಚಿ.ಶ್ರೀನಿವಾಸರಾಜು ಅವರ ಮೂರು ಏಕಾಂಕಗಳು, ಅಸಂಗತ ನಾಟಕಗಳನ್ನು ನೆನಪಿಸುವ ಮನುಷ್ಯನ ಉದ್ದೇಶ ರಹಿತ ಕ್ರೌರ್ಯವನ್ನು ತೋರುವ ನಾಟಕಗಳು. ಕೆ.ವಿ.ಅಕ್ಷರ ಅವರು ಪರಿಸರ ನಾಶದ ಸಮಸ್ಯೆಯನ್ನು ಎತ್ತಿಕೊಂಡು ಸಹ್ಯಾದ್ರಿಕಾಂಡ ಎಂಬ ನಾಟಕವನ್ನೂ ಕೋಮು ಸಮಸ್ಯೆಯನ್ನು ಎತ್ತಿಕೊಂಡು ಚೂರಿ ಕಟ್ಟೆ ಅರ್ಥಾತ್ ಕಲ್ಯಾಣಪುರ ಎಂಬ ಎರಡು ಮಹತ್ವದ ನಾಟಕಗಳನ್ನು ರಚಿಸಿದ್ದಾರೆ.

ಕನ್ನಡಕ್ಕೆ ಬೇರೆ ಬೇರೆ ಭಾಷೆಯಿಂದ ಸಮೃದ್ಧವಾಗಿ ನಾಟಕಗಳು ಅನುವಾದಗೊಂಡು ಬಂದಿವೆ. ಸಂಸ್ಕೃತ ರಂಗಭೂಮಿಯ ಪ್ರಸಿದ್ಧ ನಾಟಕಗಳನ್ನು ಕೆ.ವಿ.ಸುಬ್ಬಣ್ಣ ಅವರು ಕನ್ನಡದ ಪರಿಸರದಲ್ಲಿ ಪುನರ್‌ರಚಿಸುವ ಕೆಲಸವನ್ನು ಮಾಡಿದ್ದಾರೆ. ಭಗವದುಜ್ಜುಕೀಯ, ಅಭಿಜ್ಞಾನಶಾಕುಂತಲ, ಮುದ್ರಾರಾಕ್ಷಸ ಮತ್ತು ಮಾಲವಿಕಾಗ್ನಿಮಿತ್ರ ಈ ನಾಟಕಗಳನ್ನು ಸೂಳೆ ಮತ್ತು ಸನ್ಯಾಸಿ, ಲೋಕಶಾಕುಂತಲ, ಚಾಣಕ್ಯ ಪ್ರಪಂಚ ಮತ್ತು ವಿದಿಶೆಯ ವಿದೂಷಕ ಎಂದು ಪರಿವರ್ತಿಸಿದ್ದಾರೆ. ಇವುಗಳನ್ನು ಇವರು ಕನ್ನಡದ ಪರಿಸರಕ್ಕೆ ಹೊಂದಿಸಿರುವ ರೀತಿ ಅನನ್ಯವಾದುದು. ಬರ್ಟೋಲ್ಟ್ ಬ್ರೆಕ್ಟ್‌ನ ಅನೇಕ ನಾಟಕಗಳು ಈ ಅವಧಿಯಲ್ಲಿ ಕನ್ನಡಕ್ಕೆ ಬಂದಿವೆ. ಸಿ.ವೀರಣ್ಣ ಮದರ್ ನಾಟಕವನ್ನೂ ಕೆ.ವಿ.ಸುಬ್ಬಣ್ಣ, ಲಿಂಗದೇವರು ಹಳೆಮನೆ, ರಂಶಾ ಅವರು ಪ್ರತ್ಯೇಕವಾಗಿ ಗುಡ್‌ವುಮೆನ್ ಆಫ್ ಸೆಜುವಾನ್ ನಾಟಕವನ್ನೂ ಜೆ.ಆರ್.ಲಕ್ಷ್ಮಣರಾವ್ ಮತ್ತು ರಾಮಚಂದ್ರಮೂರ್ತಿ ಅವರು ಗೆಲಿಲಿಯೋ ನಾಟಕವನ್ನೂ, ಗೋಪಾಲ ವಾಜಪೇಯಿ, ಜೆ.ಆರ್.ಲಕ್ಷ್ಮಣ್‌ರಾವ್ ಅವರು ಕಕೇಷಿಯನ್ ಚಾಕ್ ಸರ್ಕಲ್ ನಾಟಕವನ್ನೂ ಲಿಂಗದೇವರು ಹಳೆಮನೆ ಅವರು ಮದರ್‌ಕರೇಜ್ ನಾಟಕವನ್ನೂ ಅನುವಾದಿಸಿದ್ದಾರೆ. ಷೇಕ್ಸ್‌ಪಿಯರನ ಅನೇಕ ನಾಟಕಗಳು ಈ ಅವಧಿಯಲ್ಲಿ ಮತ್ತೆ ಕನ್ನಡಕ್ಕೆ ಭಾಷಾಂತರಗೊಂಡಿವೆ. ಎಚ್.ಎಸ್.ಶಿವಪ್ರಕಾಶ್, ಕೆ.ಎಸ್.ಭಗವಾನ್, ನಿಸಾರ್ ಅಹಮದ್, ರಾಮಚಂದ್ರದೇವ ಪ್ರಮುಖವಾಗಿ ಈ ಭಾಷಾಂತರಗಳನ್ನು ಮಾಡಿದ್ದಾರೆ. ಸ್ಟ್ರಿಂಡ್‌ಬರ್ಗ್, ಗೊಗಲ್, ಚೆಕಾಫ್, ಲೋರ್ಕ, ಇಬ್ಸೆನ್ ಮೊದಲಾದವರ ಪ್ರಸಿದ್ಧ ನಾಟಕಗಳೂ ಕನ್ನಡಕ್ಕೆ ಬಂದಿವೆ. ಹಾಗೆಯೇ ಹಿಂದಿ, ಮರಾಠಿ ಮತ್ತು ಬೇರೆ ಭಾರತೀಯ ಭಾಷೆಗಳಿಂದಲೂ ಅನೇಕ ನಾಟಕಗಳು ಅನುವಾದಗೊಂಡಿವೆ.

ಮಕ್ಕಳ ನಾಟಕಗಳ ರಚನೆ ಹೊಸ ರೂಪವನ್ನು ಈ ಅವಧಿಯಲ್ಲಿ ಪಡೆದುಕೊಂಡಿತು. ಬೇಸಗೆ ಶಿಬಿರ ಮತ್ತು ಮಕ್ಕಳ ಶಿಬಿರಗಳಿಂದಾಗಿ ಮಕ್ಕಳ ನಾಟಕ ರಚನೆಗೆ ವಿಶೇಷ ಪ್ರೋತ್ಸಾಹ ದೊರಕಿತು. ಇದರಿಂದಾಗಿ ಅನೇಕ ಹಿರಿಯಕಿರಿಯ ನಾಟಕಕಾರರು ಮಕ್ಕಳಿಗಾಗಿಯೇ ಬರೆಯತೊಡಗಿದರು. ಬಿ.ವಿ.ಕಾರಂತ, ಕೆ.ವಿ.ಸುಬ್ಬಣ್ಣ, ಚಂದ್ರಶೇಖರ ಕಂಬಾರ, ಅಬ್ದುಲ್ ರೆಹಮಾನ್ ಪಾಷ, ಪ್ರೇಮಕಾರಂತ, ವೈದೇಹಿ ಮೊದಲಾದವರು ಮಕ್ಕಳಿಗಾಗಿ ಉತ್ತಮ ನಾಟಕಗಳನ್ನು ಬರೆದಿದ್ದಾರೆ. ಬಿ.ವಿ.ಕಾರಂತರ ಪಂಜರಶಾಲೆ, ನೀಲಿಕುದುರೆ, ಹೆಡ್ಡಾಯಣ - ಇವು ಕನ್ನಡ ಮಕ್ಕಳ ನಾಟಕ ಸಾಹಿತ್ಯಕ್ಕೆ ಸ್ಫೂರ್ತಿತಂದ ನಾಟಕಗಳು. ಕೆ.ವಿ.ಸುಬ್ಬಣ್ಣನವರ ಜಯಂಟ್‌ಮಾಮ, ಬೆಟ್ಟಕ್ಕೆ ಚಳಿಯಾದರೆ, ಅಬ್ದುಲ್ ರೆಹಮಾನ್ ಪಾಷ ಅವರ ಬೆಳೆದವರು, ನಕ್ಕಳಾ ರಾಜಕುಮಾರಿ, ನೀ ನನಗಿದ್ದರೆ ನಾ ನಿನಗೆ, ವೈದೇಹಿಯವರ ಧಾಂ ಧೂಂ ಸುಂಟರಗಾಳಿ, ಸೂರ್ಯಬಂದ, ಮೂಕನ ಮಕ್ಕಳು ಮುಂತಾದವು ಮಕ್ಕಳ ರಂಗಭೂಮಿಯ ಸಾಧ್ಯತೆಗಳನ್ನು ವಿಸ್ತರಿಸಿವೆ. ಎಂ.ಎಸ್.ಮೂರ್ತಿ, ಎಚ್.ಎಸ್.ವೆಂಕಟೇಶಮೂರ್ತಿ, ಕೃಷ್ಣಮೂರ್ತಿ ಬಿಳಿಗೆರೆ ಮೊದಲಾದವರು ಈಗಲೂ ವಸ್ತು ವೈವಿಧ್ಯದ ಮಕ್ಕಳ ನಾಟಕಗಳನ್ನು ರಚಿಸುತ್ತಿದ್ದಾರೆ.

ಕನ್ನಡದ ಪ್ರಮುಖ ಕಥೆಗಳು ಮತ್ತು ಕಾದಂಬರಿಗಳು ನಾಟಕದ ರೂಪವನ್ನು ತಳೆಯಲಾರಂಭಿಸಿದ್ದು ಈ ಅವಧಿಯ ಇನ್ನೊಂದು ಪ್ರಮುಖ ಅಂಶವೆನ್ನಬಹುದು. ದೇವನೂರು ಮಹಾದೇವ ಅವರ ಕಥೆಗಳು ಮತ್ತು ಕಾದಂಬರಿಗಳು, ಪೂರ್ಣಚಂದ್ರ ತೇಜಸ್ವಿಯವರ ಕಥೆಗಳು ಮತ್ತು ಶಿವರಾಮ ಕಾರಂತರ ಕಾದಂಬರಿಗಳು ನಾಟಕದ ಸ್ವರೂಪವನ್ನು ತಳೆದವು. ಹಾಗೆಯೇ ಕನ್ನಡ ಪ್ರಮುಖ ಕಾವ್ಯಗಳೂ ರಂಗ ಪ್ರದರ್ಶನಕ್ಕೆ ಅಣಿಯಾದವು. ಬಹುಮುಖ್ಯವಾಗಿ ದೇವನೂರು ಮಹಾದೇವ ಅವರ ದ್ಯಾವನೂರು, ಒಡಲಾಳ ಮತ್ತು ಕುಸುಮಬಾಲೆ ಇವು ರಂಗಕೃತಿಯಾಗಿ ಹೊಸದೊಂದು ಟ್ರೆಂಡ್‌ಅನ್ನೇ ಸೃಷ್ಟಿಸಿದವು. ಶಿವರಾಮ ಕಾರಂತರ 'ಚೋಮ', ತೇಜಸ್ವಿಯವರ ಕುಬಿ ಮತ್ತು ಇಯಾಲ, 'ಕಿರಗೂರಿನ ಗಯ್ಯಾಳಿಗಳು' ಕುಂ.ವೀರಭದ್ರಪ್ಪನವರ 'ಬೇಲಿ ಮತ್ತು ಹೊಲ' ಈ ನಿಟ್ಟಿನಲ್ಲಿ ಮೂಡಿ ಬಂದ ನಾಟಕಗಳು.

ಬೀದಿ ನಾಟಕ ಒಂದು ಪ್ರಮುಖ ರಂಗಮಾಧ್ಯಮವಾಗಿ ಹೊರಹೊಮ್ಮಿದ್ದೂ ಈ ಅವಧಿಯಲ್ಲಿಯೇ. ಎ.ಎಸ್.ಮೂರ್ತಿಯವರ ಬಂದ್ರಪ್ಪೋ ಬಂದ್ರು, ಚಂದ್ರಶೇಖರ ಪಾಟೀಲ ಅವರ ಜಗದಂಬೆಯ ಬೀದಿ ನಾಟಕ, ಸಿ.ಜಿ.ಕೃಷ್ಣಸ್ವಾಮಿಯವರ ಬೆಲ್ಚಿ ಮುಂತಾದವು ಬೀದಿನಾಟಕದ

ಸ್ವರೂಪಕ್ಕೊಂದು ಸ್ಪಷ್ಟ ಸ್ವರೂಪ ನೀಡಿರುವ ನಾಟಕಗಳು. ಈಗಲೂ ಬೀದಿ ನಾಟಕಗಳು ತತ್‌ಕ್ಷಣದ ಪ್ರತಿಕ್ರಿಯೆಯಾಗಿ ಹುಟ್ಟಿಕೊಳ್ಳುತ್ತಲೇ ಇವೆ.

ಹೀಗೆ ಕನ್ನಡ ನಾಟಕ ಸಾಹಿತ್ಯ ಬಹುಮುಖವಾದ ಬೆಳವಣಿಗೆಯನ್ನು ತೋರಿದ ಅವಧಿ ಇದು. ಕನ್ನಡದಲ್ಲಿಯೇ ಸ್ವಂತ ನಾಟಕಗಳು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಯಾದದ್ದರ ಜೊತೆಜೊತೆಗೇ ಬಹುಸಂಖ್ಯೆಯ ಹೊರಗಿನ ನಾಟಕಗಳೂ ಕನ್ನಡಕ್ಕೆ ಬಂದವು. ಹಾಗೆಯೇ ಕನ್ನಡದ ಬಹಳಷ್ಟು ನಾಟಕಗಳು ಬೇರೆ ಬೇರೆ ಭಾಷೆಗಳಿಗೂ ಅನುವಾದಗೊಂಡವು. ಈ ದೃಷ್ಟಿಯಿಂದ ಇಪ್ಪತ್ತನೆಯ ಶತಮಾನದ ಕೊನೆಯ ಎರಡೂವರೆ ದಶಕಗಳು ಕನ್ನಡ ನಾಟಕ ಸಾಹಿತ್ಯದ ಅತ್ಯಂತ ಫಲಪ್ರದ ದಶಕಗಳೆನ್ನಬಹುದು. (ಎಲ್.ಎಚ್.)

**ಕನ್ನಡದಲ್ಲಿ ಪತ್ತೇದಾರಿ ಸಾಹಿತ್ಯ :** ಸಮಾಜ ವಿರೋಧಿಯಾದ ಕೊಲೆ ಸುಲಿಗೆ ಮೊದಲಾದ ಕಾನೂನುಬಾಹಿರ ಕೆಲಸಗಳನ್ನು ಎಸಗಿ ತಲೆ ತಪ್ಪಿಸಿಕೊಂಡವರನ್ನು ಪತ್ತೆ ಹಚ್ಚುವ ಕಥಾವಿಷಯಗಳ ಸಾಹಿತ್ಯ ಪ್ರಕಾರ (ಡಿಟೆಕ್ಟಿವ್ ಫಿಕ್ಷನ್). ಕೊಲೆಗಾರ ಯಾರು ಎಂಬ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಪತ್ತೇದಾರನ ಚಿಂತನೆ, ತರ್ಕ, ಸಾಹಸ, ಅಪಾಯ, ಸಂದಿಗ್ಧ ಪರಿಸ್ಥಿತಿ-ಇವುಗಳಲ್ಲಿ ವಾಚಕರು ಕುತೂಹಲದಿಂದ ಪಾಲುಗೊಳ್ಳುತ್ತಾರೆ. ವಾಚಕರ ಬುದ್ಧಿವಂತಿಕೆಗೆ ಸವಾಲೊಡ್ಡುವುದರ ಜೊತೆಗೆ ಭಾವೋದ್ರೇಕಗೊಳಿಸುವ ತಂತ್ರ ಇಂಥ ಕಥೆಗಳಲ್ಲಿ ಹೇರಳ. ಸಮಸ್ಯೆ ಬಹಿರಂಗವಾಗುವವರೆಗೆ ವಾಚಕರು ಕಾದಂಬರಿಯನ್ನು ಕುತೂಹಲದಿಂದ ಓದುತ್ತಾರೆ. ಕೊಲೆಯನ್ನು ಪತ್ತೆ ಹಚ್ಚುವುದರಲ್ಲಿ ಕಾದಂಬರಿ ನೀಡುವ ಬೌದ್ಧಿಕ ವ್ಯಾಯಾಮದಿಂದ ವಾಚಕರಿಗೆ ತೃಪ್ತಿಯುಂಟಾಗುತ್ತದೆ.

ಎಲ್ಲ ಜನಪ್ರಿಯ ಕಲೆಗಳಂತೆ ಪತ್ತೇದಾರಿ ಕಾದಂಬರಿಯೂ ಬಲು ಪ್ರಾಚೀನವಾದುದು. ಬೈಬಲಿನ ಹಳೆಯ ಒಡಂಬಡಿಕೆಯ ಕೆಲವು ಕಥೆಗಳಲ್ಲಿ ಆದಿಕಾಲದ ಅಪರಾಧ ಶೋಧನೆಯ ನಿದರ್ಶನಗಳಿವೆ. ಉದಾ ಸುಸಾನ್ನಳ ವಿರುದ್ಧ ಸುಳ್ಳು ಸಾಕ್ಷ್ಯನೀಡಿದ ಹಿರಿಯರಿಗೆ ಡ್ಯಾನಿಯಲ್ ಅಡ್ಡ ಪ್ರಶ್ನೆಗಳನ್ನು ಹಾಕಿ ಅವಳನ್ನು ಬಿಡಿಸುವುದು ಹಾಗೂ ಡ್ಯಾನಿಯಲ್ ಬೆಲ್ ದೇವತೆಯ ಪುರೋಹಿತರ ಮೋಸವನ್ನು ಕಂಡುಹಿಡಿಯುವದು. ಪತ್ತೇದಾರಿ ಕಥೆಗಳಲ್ಲಿ ಒಗ್ಗೂಡಿಸುವ ಆಶಯುಗಳೆಲ್ಲ ಪ್ರಾಚೀನ ಮಾನವನ ಕಲ್ಪನೆಗಳಿಗೆ ಅನುಗುಣವಾಗಿವೆ. ಪತ್ತೇದಾರಿ ಕಥೆಗೂ ಜಾನಪದವೇ ಮೂಲವೆಂದು ವಿದ್ವಾಂಸರ ಅಭಿಪ್ರಾಯ. ಪತ್ತೇದಾರಿ ಕಥೆಯ ಕೊಲೆಯ ಸಮಸ್ಯೆ ಅಥವಾ ಒಗಟಿನ ಆಶಯ ಜನಪದ ಕಥೆಗಳಿಂದ ಬಂದಿದೆ. ದುಷ್ಟರನ್ನು ಪತ್ತೆ ಹಚ್ಚಿ ಶಿಕ್ಷಿಸುವ ಆಶಯ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ಭಾರತೀಯ ಸಾಹಿತ್ಯದಲ್ಲಿ ಹೆಸರುಗಳಿಸಿರುವ ಬೃಹತ್‌ಕಥೆಯಲ್ಲಿ ಅಂಥ ಉದಾಹರಣೆಗಳು ಹೇರಳವಾಗಿವೆ. ಈ ಆಶಯುಗಳೆಲ್ಲ ಸಾಹಿತ್ಯಪೂರ್ವ ಕಾಲದವು. ಆಧುನಿಕ ಪತ್ತೇದಾರಿ ಕಥೆಗೆ ಮೂಲವಸ್ತು ಒದಗಿರುವುದು ಈಸೋಪ್, ಹೀರಡಟಸ್, ಸಿಸಿರೊ, ವರ್ಜಿಲ್ ಮೊದಲಾದ ಪ್ರಾಚೀನ ಲೇಖಕರಿಂದ. ಪಾರಸಿ, ತುರ್ಕಿ ಮತ್ತು ಸಂಸ್ಕೃತ ಗ್ರಂಥಗಳಲ್ಲಿ ಪತ್ತೇದಾರಿ ಮಾದರಿಯ ಕಥೆಗಳಿವೆ. ಪತ್ತೇದಾರಿ ಅಂಶಗಳು ಹೆಚ್ಚಾಗಿ ಕಾಣುವುದು ಅರೇಬಿಯನ್ ನೈಟ್ಸ್ ಕಥೆಗಳಲ್ಲಿ. 14ನೆಯ ಶತಮಾನದಲ್ಲಿ ಬೊಕಚಿಯೊ ಬರೆದ ಕಥೆಗಳಲ್ಲಿ ಸಹ ಪತ್ತೇದಾರಿ ಅಂಶವಿದೆ. 18ನೆಯ ಶತಮಾನದಲ್ಲಿ ವಾಲ್ಟೇರ್ ಬರೆದ ಜಾಡಿಗ್ ಎಂಬ ಗ್ರಂಥದ ಅಧ್ಯಾಯವೊಂದರಲ್ಲಿ ದಾರ್ಶನಿಕ ಕಥಾನಾಯಕ ಕಳೆದು ಹೋದ ಹಾಗೂ ತಾನು ಕಂಡಿಲ್ಲದ ಕುದುರೆ ಮತ್ತು ನಾಯಿಗಳನ್ನು ಶಾಸ್ತ್ರೀಯವಾಗಿ ವರ್ಣಿಸುವ ವಿಧಾನ 19ನೆಯ ಶತಮಾನದ ಪತ್ತೇದಾರಿ ಲೇಖಕರಿಗೆ ಸ್ಫೂರ್ತಿನೀಡಿತು.

ಪತ್ತೇದಾರಿ ಕಥೆ ಆಧುನಿಕ ಸಾಹಿತ್ಯ ಪ್ರಕಾರವೆಂದು ಗುರುತಿಸಿಕೊಂಡು ತನ್ನ ಶತಮಾನೋತ್ಸವವನ್ನು 1941ರಲ್ಲಿ ಆಚರಿಸಿತು. ಪತ್ತೇದಾರಿಯ ವರ್ಗದ ಪ್ರಪ್ರಥಮ ಕಥೆ ಏಪ್ರಿಲ್ 1841ರಲ್ಲಿ ಅಮೆರಿಕದ ಫಿಲಿಡೆಲ್ಫಿಯ ನಗರದ ಗ್ರಹಾಮ್ಸ್ ಮ್ಯಾಗಜೀನ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರ ಲೇಖಕ ಎಡ್ಗರ್ ಲೇನ್ ಪೋ. ಕಥೆಯ ಹೆಸರು ದಿ ಮರ್ಡರ್ ಇನ್‌ದಿರೂಮೊರ್ಗ್. ಡೊರೊತಿ ಎಲ್ ಸೇಯರಾಳ ಅಭಿಪ್ರಾಯದಲ್ಲಿ ಈ ಕಥೆ ಪತ್ತೇದಾರಿ ಕಾದಂಬರಿಯ ಸಿದ್ಧಾಂತ ಮತ್ತು ರಚನೆಯ ಕೈಪಿಡಿಯಂತಿದೆ. ಅಂದಿನಿಂದ ಪ್ರಪಂಚದ ಎಲ್ಲ ಕಡೆ ಪತ್ತೇದಾರಿ ಸಾಹಿತ್ಯ ವಿಪುಲವಾಗಿ ಬೆಳೆದಿದೆ.

ಭಾರತೀಯರಲ್ಲಿ ಬೃಹತ್ಕಥಾಕೋಶ, ಕಥಾಸರಿತ್ಸಾಗರ ಮೊದಲಾದ ಸಂಸ್ಕೃತ ಗ್ರಂಥಗಳಿಂದ ಆಳವಡಿಸಿಕೊಂಡ ಪತ್ತೇದಾರಿ ಅಂಶದ ಕೆಲವು ಕಥೆಗಳು ಹಾಗೂ ಚೋರನಾಯಕರ ಸಾಹಸಗಳು 20ನೆಯ ಶತಮಾನದ ಪ್ರಾರಂಭದವರೆಗೆ ಮನರಂಜನೆ ನೀಡುತ್ತಿದ್ದುವು. ಪಾಶ್ಚಾತ್ಯ ಮಾದರಿಯ ಪತ್ತೇದಾರಿ ಕಾದಂಬರಿಗಳ ರಚನೆ ವಿಲ್ಕಿ ಕಾಲಿನ್ಸ್, ಕಾನನ್ ಡಾಯಲ್ ಮೊದಲಾದವರ ಪ್ರಭಾವದಿಂದ, ಭಾರತದಲ್ಲಿ ಹೆಚ್ಚಾಗಿ ಪ್ರಕಟವಾಗುತ್ತಿರುವುದು ಎರಡನೆಯ ಮಹಾಯುದ್ಧದ ತರುವಾಯ. ಪ್ರಕಾಶಕರು ಸಾಮಾಜಿಕ ಕಾದಂಬರಿಗಳಿಗೆ ಹೆಚ್ಚು ಗಮನ ನೀಡುತ್ತಿರುವಲ್ಲಿ, ಅಗ್ಗದ ಕಾಗದದಲ್ಲಿ ಪತ್ತೇದಾರಿ ಕಾದಂಬರಿಗಳನ್ನು ಪ್ರಕಟಿಸುವ ಪ್ರಕಾಶನ ಸಂಸ್ಥೆಗಳು ಇಡೀ ಭಾರತದಲ್ಲಿ ಹುಟ್ಟಿಕೊಂಡಿವೆ. ತಮಿಳು, ಮಲಯಾಳಂ ಮತ್ತು ತೆಲುಗು ಭಾಷೆಗಳಲ್ಲಿ ಇವು ಹೇರಳ. ತಮಿಳಿನ ಕಲ್ಕಿ, ಆನಂದವಿಗಡನ್, ಕಲ್ಕಂಡು, ದಿನಮಣಿ ಕದಿರ್ ಮೊದಲಾದ ಪತ್ರಿಕೆಗಳಲ್ಲಿ ಸಹ ಪತ್ತೇದಾರಿ ಕಥೆಗಳು ಪ್ರಕಟವಾಗುತ್ತವೆ. ತೆಲುಗು ಭಾಷೆಯಲ್ಲಿ ಭಾಷಾಂತರಿತ ಪತ್ತೇದಾರಿ ಕಾದಂಬರಿಗಳು ಹೆಚ್ಚು. ಪೂರ್ವಘಟ್ಟದ ಪರ್ವತವಾಸಿಗಳು ಹಾಗೂ ಕಳ್ಳರು ಅನೇಕ ಸ್ವತಂತ್ರ ಪತ್ತೇದಾರಿ ಕಾದಂಬರಿಗಳ ನಾಯಕರು. ರೋಮಾಂಚಕ ಪತ್ತೇದಾರಿ ಕಾದಂಬರಿಗಳು ಅಸ್ಸಾಮಿ ಭಾಷೆಯಲ್ಲಿ ಅಧಿಕ. ಹಿಂದಿಯಲ್ಲಿ ಗೋಮಲ್ ರಾಂ ಗಹಮಾರಿ ಅನೇಕ ಪತ್ತೇದಾರಿ ಕಾದಂಬರಿಗಳನ್ನು ರಚಿಸಿದರು. ಬಂಗಾಲಿಯಲ್ಲಿ ಉತ್ತಮ ಕಾದಂಬರಿಗಳು ಪ್ರಕಟವಾಗಿವೆ.

ಕನ್ನಡದಲ್ಲಿ ಪತ್ತೇದಾರಿ ಸಾಹಿತ್ಯದ ಬೇರುಗಳನ್ನು ವಡ್ಡಾರಾಧನೆಯ ಕಾಲದಿಂದಲೇ (ಸು.920) ಗುರುತಿಸಬಹುದು. ಈ ಕೃತಿಯಲ್ಲಿ ಬರುವ ವಿದ್ಯುತ್ ಚೋರ ರಿಸಿಯ ಕಥೆ ಒಂದು ರೋಮಾಂಚಕಾರಿಯಾದ ಅತ್ಯುತ್ತಮ ಪತ್ತೇದಾರಿ ಕಥೆಯಾಗಿದೆ. ಆದರೆ ಆಧುನಿಕ ರೂಪದಲ್ಲಿ ಕನ್ನಡದಲ್ಲಿ ಪತ್ತೇದಾರಿ ಕಾದಂಬರಿಗಳು 20ನೆಯ ಶತಮಾನದ ಎರಡನೆಯ ದಶಕದಿಂದ ಪ್ರಕಟವಾಗತ್ತಿದ್ದವು. ಪಾಂಚಕೋಡಿ ಡೋ ಅವರ ಹತ್ಯಾಕಾರಿ ಎಂಬ ಬಂಗಾಲಿ ಕಾದಂಬರಿಯ ಕಥೆಯನ್ನು ಅವಲಂಬಿಸಿ ಕುಮುದಿನಿ ಕಾದಂಬರಿ ರಚಿತವಾಯಿತು (1911). ಬಾಲಸರಸ್ವತಿ ಅವರು ನರಬಲಿ, ಗುರುತುಕಂಡ ಕಳ್ಳ, ಚಿತ್ರಗುಪ್ತನ ದಫ್ತರಗಳು ಮೊದಲಾದವನ್ನು ಬರೆದರು. ಬಿ.ವೆಂಕಟಾಚಾರ್ಯರ ಪರಿಮಳಾ ಕನ್ನಡ ಪತ್ತೇದಾರಿ ಕಾದಂಬರಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು. ಅದರಲ್ಲಿ ಪತ್ತೇದಾರ ಸಂಜೀವಬಾಬು ತನ್ನ ಸಾಹಸಗಳಿಂದ ವಾಚಕರನ್ನು ಆಕರ್ಷಿಸುತ್ತಾನೆ. ಈಗಿನ ಪ್ರತೀಕ್ಷಾಜನ್ಯ ಕಾದಂಬರಿಯ ಲಕ್ಷಣಗಳನ್ನು ಈ ಕಾದಂಬರಿ ಹೊಂದಿದೆ. ಶಿವರಾಮ ಕಾರಂತರು ವಿಚಿತ್ರಕೂಟ, ದೇವದು ನರಸಿಂಹಶಾಸ್ತ್ರಿ, ಕಳ್ಳರ ಕೂಡ ಎಂಬ ಕಾದಂಬರಿಗಳನ್ನು ಬರೆದರು. ವೆಂಕಟಾದ್ರಿ ಶಾಸ್ತ್ರಿಗಳು ಮಾಯಾವಿ, ಮನೋರಮ ಕಾದಂಬರಿಗಳನ್ನು ರಚಿಸಿದರು. ದಾಸುರಾವ್ ಅವರು ಧನ್ವಂತ ಎಂಬ ಲೇಖನಾಮದಲ್ಲಿ ಎಡ್ಗರ್ ಅಲೆನ್ ಪೋನ ದಿ ಮರ್ಡರ್ ಇನ್‌ದಿರೂಮೊರ್ಗ್ ಕಥೆಯನ್ನು ಕನ್ನಡಕ್ಕೆ ರೂಪಾಂತರಿಸಿ ಅದನ್ನು ಸಾವಿಗೆ ಮುಂಚೆ ಸಮಾಧಿ ಎಂಬ ಹೆಸರಿನಲ್ಲಿ ಪ್ರಕಟಿಸಿದರು. ನಗುವನಂದ ಮಾಸಪತ್ರಿಕೆ ಫೆಬ್ರವರಿ 1934ರಿಂದ ಫೆಬ್ರವರಿ 1935ರವರೆಗೆ ರಘುಪತಿ ಅವರ ಕಲವಾಣಿ ಎಂಬ ಪತ್ತೇದಾರಿ ಕಾದಂಬರಿಯನ್ನು ಧಾರಾವಾಹಿಯಾಗಿ ಪ್ರಕಟಿಸಿತು. ಇದೇ ಮಾಸಪತ್ರಿಕೆಯಲ್ಲಿ ವಿ.ಜಿ.ಕೃಷ್ಣಮೂರ್ತಿ ಅವರ ಸಣ್ಣ ಪತ್ತೇದಾರಿ ಕಥೆ ಹನುಮಂತರಾವ್, ಸಿ.ಐ.ಡಿ. ಅಚ್ಚಾಯಿತು (1935). ಎಚ್ಚೆಸ್ಕೆ ಅವರ ಅರಿಂದಮನ ಸಾಹಸ ಎಂಬ ಪತ್ತೇದಾರಿ ಕಾದಂಬರಿ 1938ರಲ್ಲಿ ಪ್ರಕಟವಾಯಿತು.

ಎರಡನೆಯ ಮಹಾಯುದ್ಧದ ತರುವಾಯ ಇಂಗ್ಲಿಷ್ ಪತ್ತೇದಾರಿ ಪುಸ್ತಕಗಳ ಹಾಗೂ ಸಿನಿಮಾಗಳ ಪ್ರಭಾವದಿಂದ ಕನ್ನಡದಲ್ಲಿ ಪತ್ತೇದಾರಿ ಕಾದಂಬರಿಗಳ ಪ್ರಕಟಣೆ ಹೆಚ್ಚಿತು. 1945ರ ನಡುವೆ ಇಂಥ ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದವರಲ್ಲಿ ಭಿ.ಪ.ಕಾಳೆ, ಎಂ.ರಾಮಮೂರ್ತಿ, ವಿ.ಜಿ.ಕೃಷ್ಣಮೂರ್ತಿ, ಎನ್.ನರಸಿಂಹಯ್ಯ, ಗುರುರಾಜಾಚಾರ್ಯ, ಗುಂಡಾಶಾಸ್ತ್ರಿ, ನಾಗೇಶ, ಬಿ.ಕೆ.ಸುಂದರರಾವ್ ಮಾ.ಭಿ.ಶೇ., ಎಂ.ಶಿವಾಜಿರಾವ್ ಮೊದಲಾದವರು ಪ್ರಮುಖರು.

ಭಿ.ಪ.ಕಾಳೆ ತಮ್ಮ ಧಾರವಾಡದ ಶೇಷಾಚಲ ಗ್ರಂಥಮಾಲೆಯ ಮೂಲಕ 1946-61ರ ನಡುವೆ ಪತ್ತೆದಾರಿ ಕಾದಂಬರಿಗಳನ್ನು ಬರೆದು ಪ್ರಕಟಿಸಿದರು. ಕಾಲಸರ್ಪ (1946), ಘಾತಕ ಶಿತಿಕಂಠ (1946), ಭಗವಾನ್ ದಾಸ (1946), ಕಂಕಣ ಚೋರ (1950), ನನ್ನ ಗತಿ (1951), ಅಂಬಿಕೆ (1961), ನಾಲ್ವರು ಸಾಕ್ಷಿಗಳು (1961) ಮೊದಲಾದವುಗಳನ್ನು ಹೆಸರಿಸಬಹುದು. ನಾಗೇಶ ಅವರ ಮಾಯಾವಿನಿ ಕಾದಂಬರಿ ಭಿ.ಪ.ಕಾಳೆಯವರ ಶೇಷಾಚಲ ಗ್ರಂಥ'ಮಾಲೆಯಲ್ಲಿಯೇ ಪ್ರಕಟವಾಯಿತು (1950).

ಎಂ.ರಾಮಮೂರ್ತಿ 1940ರ ದಶಕದಲ್ಲಿ ಪತ್ತೆದಾರಿ ಕಾದಂಬರಿ ರಚನೆಗೆ ಕೈಹಾಕಿ ತಮ್ಮ ಗ್ರಂಥಗಳಲ್ಲಿ ಅನೇಕವನ್ನು ತಮ್ಮ ವಿನೋದಿನಿ ಪ್ರಕಟನಾಲಯದಿಂದ ಪ್ರಕಟಿಸಿದರು. ಅವರು ಅಗಾತ ಕ್ರಿಸ್ಟಿ, ಪೀಟರ್ ಚೇನಿ ಮೊದಲಾದವರ ಕಾದಂಬರಿಗಳಿಂದ ಸ್ಫೂರ್ತಿಗೊಂಡು ಕೆಲವು ಕಾದಂಬರಿಗಳನ್ನು ಬರೆದರು. ಪಾಕಿಸ್ತಾನ ಗುಪ್ತಚಾರ, ಕಾಲುವೆ ಮನೆ, ವೈಯ್ಯಾಳಿ ಕಾವಲ್, ನೀಲಕಮಲ, ಮೆಟ್ಟಿಲ ಕೆಳಗೆ, ಪತ್ತೆ ಮಾಡಬೇಡಿ, ಇಬ್ಬರು ಗೆಳೆಯರು (1956), ಜುಲೇಖಾ (1958), ಕಡೆಯ ಮೀನು (1960), ತಪ್ಪಿಸಿಕೊಂಡ ಗಂಡು (1960), ಚೂರಿ ಹಿಡಿದ ದಸ್ಯುಕನ್ಯೆ (1960), ಪುನ್ಯ ಜಲೇಖಾ (1960), ವಜ್ರದ ಹರಳು (1960), ಒಂಟಿಯಾಗಿದ್ದ ಹೆಂಗಸು (1962), ಅವಳೇನಾದಳು (1962), ಕಣ್ಮರೆಯಾದ ಪ್ರೇಯಸಿ (1961), ಕೈಕೊಟ್ಟ ಪ್ರೇಮಪತ್ರ (1962), ವ್ಯಭಿಚಾರಿಣಿಯ ಮಗಳು (1962), ಪಾಪಿಯ ಮಗ (1963), ನೆನೆಸಿದ್ದೇ ಬೇರೆ (1964), ಬಯಕೆ ಈಡೇರಲಿಲ್ಲ (1968), ಮುತ್ತಿನ ಬಳೆಯವಳು (1968), ಎರಡು ಚೂರಿಗಳು (1972) ಇವು ಅವರ ಕೆಲವು ಜನಪ್ರಿಯ ರಚನೆಗಳು.

1948-54ರ ನಡುವೆ ಕಥಾವಳಿ ಮಾಸಪತ್ರಿಕೆ ಸಂಶೋಧನ ಸಮಸ್ಯೆ ಎಂಬ ಅಂಕಣದಲ್ಲಿ ಪ್ರಕಟಿಸುತ್ತಿದ್ದ ವಿ.ಜಿ. ಕೃಷ್ಣಮೂರ್ತಿಯವರ ಪತ್ತೆದಾರಿ ಸಣ್ಣಕಥೆಗಳು ಜನಪ್ರಿಯವಾಗಿದ್ದುವು. ಈ ಕಥೆಗಳಲ್ಲಿ ಕೆಲವು: ವಾಲ್ಟರ್ ಮೊಕದ್ದಮೆ (1948), ಜಪಮಾಲೆ ಮೊಕದ್ದಮೆ ರಹಸ್ಯ (1949) ಕತ್ತರಿಸಿದ ಬೆರಳು (1949), ವಾಷಿಂಗ್‌ಟನ್ ವಜ್ರದಾಭರಣ (1949), ಸಂಶಯದ ಸಮಸ್ಯೆ (1949), ಮಂಜಿನಲ್ಲಿ ಮೃತ್ಯು (1949), ಅಪರಾಧಿ ಯಾರು? (1950), ಫ್ರಾಂಕ್ ಜೆನಿಯ ಕೊಲೆ (1950), ಕಣಿವೆಯಲ್ಲಿ ಕಂಬನಿ (1950), ಟ್ಯಾಕ್ಸಿಯವರ ಸಮಸ್ಯೆ (1950), ಒಡೆಯದ ಕಾಗದ (1950), ರಕ್ತ ಸರೋವರ (1950), ವಿಷದ ಸೀಸೆ (1950), ರತ್ನದಲ್ಲಿ ರಕ್ತ (1950), ಹಿಮದಲ್ಲಿ ಶವ (1960), ನಿದ್ರ ಸಂಚಾರಿ (1950), ಕ್ರೂರ ರಾತ್ರಿ (1950) ಬಂಗಲೆಯಲ್ಲಿ ಭೀಕರ ಕೊಲೆ (1951). ಇದೇ ಲೇಖಕರ ಸೇಡಿನ ಸಂಘ ಎಂಬ ಪತ್ತೆದಾರಿ ಕಾದಂಬರಿಯನ್ನು ಕಥಾವಳಿ 1954ರಲ್ಲಿ ಧಾರವಾಹಿಯಾಗಿ ಪ್ರಕಟಿಸಿತು. 1955ರಲ್ಲಿ ಪ್ರಕಟವಾದ ಇವರ ಗೈಟಾಯಾಮಿನಿ ಕಾದಂಬರಿಯಲ್ಲಿ ಹೊಸ ತಂತ್ರವಿದೆ. ಇವರ ಸಮಾಧಿಯ ಸುರಂಗ (1960) ಕಾದಂಬರಿ ಬಲು ಜನಪ್ರಿಯವಾಯಿತು. ಇವರ ಇತರ ಪತ್ತೆದಾರಿ ಕಾದಂಬರಿಗಳು: ರಕ್ಕಸಿಯರ ರಹಸ್ಯ (1955), ನಾಗರ ನಂಜು (1961), ನೀಲ ನಕಾಶೆ (1967), ಚೋರನಾವೆ (1968), ದರೋಡೆ (1972), ಕಣಿವೆಯ ಮನೆ (1973), ಎರಡು ಬೀಗದ ಬಾಗಿಲು (1974), ಹಿಂದೆ ಬಂದ ನೆರಳು (1974), ಬಂಧನದಿಂದ ಬಯಲಿಗೆ.

ಎನ್.ನರಸಿಂಹಯ್ಯನವರು 1952ರಲ್ಲಿ ಬರೆಯಲು ಪ್ರಾರಂಭಿಸಿ ನೂರಾರು ಪತ್ತೆದಾರಿ ಕಾದಂಬರಿಗಳನ್ನು ಬರೆದಿದ್ದಾರೆ. ಕನ್ನಡ ಪತ್ತೆದಾರಿ ಕಾದಂಬರಿಕಾರರಾಗಿ ಖ್ಯಾತಿ ಪಡೆದವರಲ್ಲಿ ಇವರೂ ಒಬ್ಬರು. ಪ್ರೈಮರಿ ಶಾಲೆಯ ಶಿಕ್ಷಣ ಮುಗಿದು ದರ್ಜಿ, ಬಸ್ ಕ್ಲೀನರ್ ಮತ್ತು ಕಂಡಕ್ಟರ್ ಕೆಲಸಗಳಲ್ಲಿ ಸ್ವಲ್ಪ ಕಾಲವಿದ್ದು ಕಾದಂಬರಿ ರಚನೆಗೆ ಇಳಿದರು. 1952-62ರ ನಡುವೆ ಇವರ ಬರೆವಣಿಗೆ ತೀವ್ರವಾಯಿತು. ಅನೇಕ ಕಾದಂಬರಿಗಳು ಒಳ್ಳೆಯ ಹೆಸರು ಮಾಡಿದವು. ಸಮಕಾಲೀನ ಸ್ಥಿತಿಕೂಡ ಇವರ ಕೃತಿ ರಚನೆಗೆ ಸಹಾಯ ಒದಗಿಸಿತು. ನರಸಿಂಹಯ್ಯ ಅವರಿಗೆ ಸ್ಫೂರ್ತಿ ಒದಗಿದ್ದು ಸಮಕಾಲೀನ ಕಾದಂಬರಿಕಾರರಿಂದ. ಪತ್ತೆದಾರಿವಸ್ತುವನ್ನು ಸಂಗ್ರಹಿಸಲು ಇವರು ಕ್ರಿಮಿನಲ್ ಕೋರ್ಟುಗಳಿಗೆ ಭೇಟಿ ಕೊಡುತ್ತಿದ್ದರು. ಇವರ ಕೆಲವು ಜನಪ್ರಿಯ ಕಾದಂಬರಿಗಳು: ಪತ್ತೆದಾರಿ ಪುರಷೋತ್ತಮ (1952), ವಿಚಿತ್ರ ಕೊಲೆಗಾರ (1954), ಭಯಂಕರ ಭೈರಾಗಿ, (1955) ಅರಮನೆಯ ಚೋರ (1956), ಕೆರಳಿದ ಕೇಸರಿ (1958), ಮಾಟಗಾತಿಯ ಮಗಳು (1961), ಅಡವಿಯ ರಾಜ (1969), ಪಂಜರದ ಪಿಶಾಚಿ (1971), ಎರಡು ದೆವ್ವಗಳು (1972), ಪತ್ತೆದಾರಿ ಕಥೆಗಳು (1976).

ಎಸ್.ಎನ್.ಗುರುರಾಜಾಚಾರ್ಯರ ಕಾದಂಬರಿಗಳೂ ಉತ್ತಮ ವಾಚನವನ್ನು ನೀಡಿವೆ. ಅವರು ಬರೆದ ಕಾದಂಬರಿಗಳಲ್ಲಿ ಕೆಲವು: ಉಮಾಕಾಂತನ ಉಯಿಲು, ಮಾಲತಿ, ತಾರಾಮೋಹಿನಿ (1954), ವಂಚಕಿಯಾದ ವಿಮಲೆ (1954), ಸೌಭಾಗ್ಯಸುಂದರಿ. ಎನ್.ಗುಂಡಾಶಾಸ್ತ್ರಿ, ಅವರ ಕಾದಂಬರಿಗಳು ಪಂಜಿನ ಕಳ್ಳರು (1958), ಕಡಲ್ಗಳ್ಳರು, ಅಳುವ ನಾಯಿ (1962), ಇನ್‌ವೆಸ್ಟಿಗೇಷನ್ (1964). ಎಂ.ಶಿವಾಜಿರಾವ್ ಅವರ ಅಂದಮಾನಿನಲ್ಲಿ ಖೈದಿ (1976), ಮಾ.ಭೀ.ಶೇ. ಅವರ ರಹಸ್ಯ ಪತ್ರ; ಬಿ.ಕೆ.ಸುಂದರರಾವ್ ಅವರ ಅಪರಾಧಿಯ ಹಂಬಲ ಮೊದಲಾದವು ವಾಚಕರನ್ನು ಆಕರ್ಷಿಸಿವೆ. ಜಿಂದೆ ನಂಜುಂಡಸ್ವಾಮಿ ಅವರು ನಾನೇ ಕೊಲೆಗಾರ ಮೊದಲಾದ ಕಾದಂಬರಿಗಳನ್ನು ಬರೆದುದಲ್ಲದೆ 1972-74ರ ನಡುವೆ ಮದರಾಸಿನಿಂದ ರಹಸ್ಯಚಾರ ಎಂಬ ಪತ್ತೆದಾರಿ ಹಾಗೂ ಗೂಢಚಾರ ಕಥೆಗಳಿಗೆ ಮೀಸಲಾದ ಮಾಸಪತ್ರಿಕೆಯನ್ನು ಪ್ರಕಟಿಸಿದರು. ಈ ಪತ್ರಿಕೆ 12 ಸಂಚಿಕೆಗಳ ಅನಂತರ ನಿಂತುಹೋಯಿತು.

ಟಿ.ಕೆ.ರಾಮರಾವ್ ಅವರು ಪತ್ತೆದಾರಿ ಸಾಹಿತ್ಯ ಲೇಖಕರಾಗಿಯೂ ಪ್ರಸಿದ್ಧರು. ಕಪ್ಪುನಾಯಿ, ಶಕುನಪಕ್ಷಿ (1974), ತೋರು ಬೆರಳು (1973) ಮುಂತಾದ ಕಾದಂಬರಿಗಳನ್ನು ಬರೆದು ಉತ್ತಮ ಲೇಖಕರೆನಿಸಿಕೊಂಡಿದ್ದಾರೆ. ಈ ಕಾಲದ ಇತರ ಲೇಖಕರಲ್ಲಿ ಕೆಲವರು: ಎಸ್.ರಾಜರತ್ನಂ (ನಾನು ನಿನ್ನ ಹಿಂದೆ ಬರಲಾರೆ), ಎಂ.ವಾಮನ ಮಲ್ಯ (ಮುಯ್ಯಕ್ಕೆ ಮುಯ್ಯ), ಯಂ.ಶೇಷಪ್ಪ ಶೆಟ್ಟಿ (ನಿಗೂಢ ಕೊಲೆ, 1976), ಬಿ.ಎಸ್.ಸಂಜೀವ ಮೂರ್ತಿ, (ಪ್ರಳಯ ಮೋಹಿನಿ), ಎಚ್.ವೆಂಕಟೇಶ್ (ರೈಲಿನ ರೂಪಸಿ 1972), ಗಸ್ಪರನುಜ (ಬೇಹುಗಾರ ಮುದ್ದಣ), ವಸಂತ (ಸೇಡಿನ ಸರ್ಪ), ಎಲ್.ಎಸ್.ಇನಾಂದಾರ (ಮೃತ್ಯುವಿನ ಮಡಿಲಲ್ಲಿ), ಕುಂದಾನಿ ಸತ್ಯನ್ (ಹಗೆ ತೀರಿತು), ನವಗಿರಿನಂದ (ಹಂತಕನು ಯಾರು?, ಕಾಲಾಬಜಾರ್), ವಿಜಯಲತ (ಗುರಿಯಿಲ್ಲದ ಪಯಣ), ವೈ.ಎನ್.ನಾಗೇಶ್ (ಚತುರ ಚೋರ), ರವೀಂದ್ರ (ನೀಲಿ ತೋಳ), ಎಸ್.ಶಿವಕುಮಾರ್ (ಬಂಗಾರದ ರಹಸ್ಯ), ಮಾ.ಬಾ.ಕುಲಕರ್ಣಿ (ಗುಪ್ತ ಪೋಲಿಸರ ಗಂಡ), ಭಟ್ಟ ಸದಾಶಿವಶರ್ಮ (ಭಯಂಕರ ಸೇಡು), ಜಿ.ಎಸ್.ಪ್ರಭಾಕರ (ನಾನು ಕೊಲೆಗಾರನೆ?), ವಿಜಯಾ ಸುಧಾಕರ್ (ಮಾಯವಾದ ಹೆಣ್ಣು, ಕಾಡು ಬೆಕ್ಕು, ನಕಲಿ ನೆಕ್ಲೇಸ್), ಟಿ.ಎಲ್.ಸತ್ಯಮೂರ್ತಿ (ಪಾಷಾಣ ಕನ್ಯೆ, ಅದ್ಭುತ ಕೊಲೆಗಾರ), ಜಿ.ಕೆ.ಮೂರ್ತಿ (ಬೆದರಿಕೆ ಪತ್ರ, ಪತ್ತೆದಾರ ರಮೇಶ್), ಜಿ.ಮಲ್ಲಾರಿ ಭಟ್ (ಭೀಕರ ಕೊಲೆ), ಬಿ.ಎಚ್.ಸಂಜೀವ ಭಟ್ (ಅವಳು ಯಾರು?), ಬೇಲೂರು ಸ.ಶ್ರೀನಿವಾಸನ್ (ಪಾತಾಳ ಬೈರಾಗಿ, ಕೆರಳಿದ ಸುಂದರಿ), ಟಿಂಪೊರಾವ್ (ಗಗನ ಸಖಿ ಭಾಗ1,2,) ವಿ.ಸುಬ್ರಹ್ಮಣ್ಯಂ (ರಹಸ್ಯ ಕೊಲೆಗಾರ), ಕೆ.ಶಿವರಾಜ (ಸಿ.ಐ.ಡಿ.), ಆರ್.ಜಿ.ಕುಮಟಾ (ಕಪಟ ವ್ಯೂಹ), ನಾರಾಯಣ ಶಿಡೆನೋರ (ದರೋಡೆಕಾರ ಗರ್ಬಾಲ್ ಸಿಂಗ್), ಪಿ.ರಾಜು (ಸಕ್ಕರೆ ಗೊಂಬೆ, ಮೃತ್ಯುವಿಗೆ ಮೆಟ್ಟಿಲೆಷ್ಟು?), ರಮೇಶ (ಬ್ಲಾಕ್ ಕ್ಯಾಟ್: ಕೊಂದವರು ಯಾರು?) ಶಾಮೂ (ಬಲಿಗುಡಿ), ಕಾಕೋಳು ರಾಮಯ್ಯ (ರಕ್ಕಸರ ವರ್ಮ), ಮಾಯಾರಾಜ್ (ಸುರಂಗದಲ್ಲಿ ಸಮಾಧಿ), ಜಿ.ಎಸ್.ಮಾಧವ, (ಸ್ಮಗ್ಲರ್), ಆರ್.ಸೂರ್ಯನಾರಾಯಣಮೂರ್ತಿ, (ಕ್ಷಣಕ್ಕೊಂದು ಕೊಲೆ), ಬಿ.ಆರ್.ಶಂಕರ (ಕೊಲೆಯ ರಹಸ್ಯ), ಚಂದ್ರಕಾಂತ ಕುಸನೂರ (ಚರ್ಚ್‌ಗೇಟ್), ಎಚ್.ಕೆ.ಅನಂತರಾವ್ (ಅಂತ), ಮನು (ಚಕ್ರವ್ಯೂಹ).

ಈಗ ಇತರ ಪ್ರಕಾರಗಳಲ್ಲಿ ಕೃತಿ ರಚಿಸುತ್ತಿರುವವರೂ ಪತ್ತೆದಾರಿ ಸಾಹಿತ್ಯ ಬರೆಯುತ್ತಿದ್ದಾರೆ. ಹೀಗೆಯೇ ಬೇರೆ ಭಾಷೆಯ ಪ್ರಸಿದ್ಧ ಪತ್ತೆದಾರಿ ಕಾದಂಬರಿಗಳ ಅನುವಾದಗಳೂ ಪ್ರಕಟವಾಗುತ್ತಿವೆ. ಪತ್ತೆದಾರಿ ಸಾಹಿತ್ಯ ಆಯಾ ಕಾಲದ ವೈಜ್ಞಾನಿಕ ಬೆಳೆವಣಿಗೆಯಿಂದ ಅನೇಕ ನವೀನ ಸಂಗತಿಗಳನ್ನು ಬಳಸಿಕೊಳ್ಳುತ್ತ ಬೆಳೆದುಬರುತ್ತಿದೆ. ಸಾಮಾಜಿಕ ಪತ್ತೆದಾರಿ

ಕಾದಂಬರಿಗಳಂತೆ ವೈಜ್ಞಾನಿಕ ವಿಚಾರಗಳನ್ನೊಳಗೊಂಡ ಕೃತಿಗಳೂ ಪ್ರಕಟವಾಗಿವೆ. ರಾಜಶೇಖರ ಭೂಸನೂರಮಠ ಅವರ ಕಾದಂಬರಿಗಳು ಈ ನಿಟ್ಟಿನಲ್ಲಿ ಅಪಾರ ಜನಮನ್ನಣೆಗಳಿಸಿವೆ. ಕೆಲವು ಪತ್ತೆದಾರಿ ಕಾದಂಬರಿಗಳು ಚಲನಚಿತ್ರಗಳಾಗಿಯೂ ಪ್ರಸಿದ್ಧವಾಗಿವೆ. ಎಚ್.ಕೆ.ಅನಂತರಾವ್ ಅವರ 'ಅಂತ' ಕಾದಂಬರಿಯಾಧಾರಿತ ಚಲನಚಿತ್ರ ಕನ್ನಡ ಚಲನಚಿತ್ರರಂಗದಲ್ಲಿ ಹೊಸ ದಾಖಲೆಯನ್ನು ನಿರ್ಮಿಸಿತು. ಅಂಬರೀಷ್ ಅವರ ಅಭಿನಯ ಬದುಕಿನಲ್ಲಿ ಈ ಚಿತ್ರ ಒಂದು ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ರಾಜಕುಮಾರ್ ಅವರು ಅಭಿನಯಿಸಿದ ಪತ್ತೆದಾರಿ ಕಾದಂಬರಿಯಾಧಾರಿತ ಅನೇಕ ಚಿತ್ರಗಳು ಪ್ರಸಿದ್ಧಿ ಪಡೆದಿವೆ. ಪತ್ತೆದಾರಿ ಕಥೆ ಕಾದಂಬರಿಗಳಿಗೆ ಈಗ ಇತರ ಬಗೆಯ ಕಥೆ ಕಾದಂಬರಿಗಳ ಸ್ಥಾನಮಾನ ದೊರಕಿದೆ. ಎಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಈ ಪ್ರಕಾರಕ್ಕೆ ಹೆಚ್ಚು ಜನಪ್ರಿಯತೆ ಇರುವುದರಿಂದ ಈ ಮಾಧ್ಯಮವನ್ನು ಜನತೆಯಲ್ಲಿ ಓದುವ ಹವ್ಯಾಸವನ್ನು ಬೆಳೆಸಲು, ಕೊಲೆ ಸುಲಿಗೆ ಅತ್ಯಾಚಾರಗಳಿಂದ ಏನೂ ಲಾಭವಿಲ್ಲ ಎಂಬ ನೀತಿಯನ್ನು ಹರಡಲು ಬಳಸಿಕೊಳ್ಳಬಹುದು. ಒಳ್ಳೆಯ ಪತ್ತೆದಾರಿಕಥೆಯಲ್ಲಿ ಮನ ಒಪ್ಪುವ, ಕಾನೂನು ಒಪ್ಪುವ ತರ್ಕವಿರಬೇಕು. ಕಥೆಯ ವಸ್ತು ಜನಜೀವನಕ್ಕೆ ಹತ್ತಿರವಾದುದೂ ಸಹಜವಾದುದೂ ಆಗಿರಬೇಕು. ಕಥೆಯಲ್ಲಿನ ವರ್ಣನೆ ಅಸಹಜವಾಗಬಾರದು. ಸಂಭಾಷಣೆಯಲ್ಲಿ ಚತುರತೆ ಇರಬೇಕು. ಇಡೀ ಬರವಣಿಗೆ ಕಳ್ಳನಾರು ಎಂಬ ಕುತೂಹಲವನ್ನು ಬೆಳೆಸುವಂತಿರಬೇಕು. ಕಥೆಯಲ್ಲಿ ತನಿಖೆಯ ವ್ಯವಹಾರಗಳು, ಕ್ರಿಮಿನಲ್ ಕೋರ್ಟಿನ ವ್ಯವಹಾರಗಳು ಅಷ್ಟೇ ನೈಜವಾಗಿರಬೇಕು. ಕಥೆಯಲ್ಲಿ ಸಾಮಾಜಿಕ ರಾಜಕೀಯ ಸಾಂಸಾರಿಕ ಜೀವನ ಚಿತ್ರಗಳಲ್ಲಿ ಒಂದೊ ಎರಡೊ ಬಂದರೆ ಇನ್ನೂ ಮೇಲು. ಕನ್ನಡದಲ್ಲಿ ಇಂಥ ಅಂಶಗಳನ್ನೊಗೊಂಡ ಕೃತಿಗಳ ರಚನೆಗೆ ವಿಪುಲ ಅವಕಾಶವಿದೆ. *

**ಕನ್ನಡದಲ್ಲಿ ಪ್ರಬಂಧ ಸಾಹಿತ್ಯ :** ಆಧುನಿಕ ಸಾಹಿತ್ಯದ ಇತರ ಪ್ರಕಾರಗಳಂತೆ ಕನ್ನಡ ಪ್ರಬಂಧವೂ ರಚನಾವಿಧಾನ ದೃಷ್ಟಿಯಿಂದ ಇಂಗ್ಲಿಷ್ ಪ್ರಬಂಧದಿಂದ ಪ್ರಭಾವಿತವಾಗಿದ್ದರೂ ನಮ್ಮ ನುಡಿನೆಲದಲ್ಲಿ ಹುಟ್ಟಿ ಬೆಳೆದದ್ದು ಎಂಬಂತೆ ಸ್ವಂತ ಸತ್ವದಿಂದ ಶೋಭೆ ಪಡೆದಿದೆ. ಸಾಹಿತ್ಯಗುಣ ಸಿದ್ಧಿಸುವಂತೆ ವಿಶಿಷ್ಟ ಪದಬಂಧಗಳಿಂದ ನಿರ್ಮಾಣವಾದ ಯಾವ ಸಾಹಿತ್ಯ ಕೃತಿಯನ್ನಾದರೂ ಪ್ರಬಂಧ ಎಂದು ಹೇಳಬಹುದು. ಪ್ರಬಂಧ ಎಂಬ ಮಾತು ಬಹಳ ಹಳೆಯದು. ಕನ್ನಡದ ಅನೇಕ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳನ್ನು 'ಪ್ರಬಂಧ' ಎಂದು ಕರೆದಿರುವುದೂ ಉಂಟು. ಆದರೆ ಪ್ರಾಚೀನರ ದೃಷ್ಟಿಯಲ್ಲಿ ಪ್ರಬಂಧ ಎಂದರೆ ಕಾವ್ಯ ಎಂದರ್ಥ.

ನಮ್ಮಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಪ್ರಾರಂಭವಾದಮೇಲೆ ಶಾಲಾಕಾಲೇಜುಗಳ ಶಿಕ್ಷಣ ಕ್ರಮದಲ್ಲಿ 'ಪ್ರಬಂಧ' ಎಂಬ ಮಾತಿಗೆ ಒಂದು ನಿರ್ದಿಷ್ಟ ವಿಷಯದ ಮೇಲೆ ಬರೆದ ಸಂಕ್ಷೇಪವಾದ ಗದ್ಯರಚನೆ ಎಂಬ ಅರ್ಥ ಬಂತು. ಪ್ರಬಂಧ ರಚನೆ ಅಭ್ಯಾಸವಿಷಯವಾಯಿತು. ಇಂಗ್ಲಿಷಿನ ಎಸ್ಸೆ ಕನ್ನಡದಲ್ಲಿ ಪ್ರಬಂಧ, ಲಘು ಪ್ರಬಂಧ, ನಿಬಂಧ, ಹರಟೆ, ನ್ಯಾಸ, ಪ್ರಸಂಗ, ಲಲಿತ ಪ್ರಸಂಗ ಎಂಬ ಬೇರೆ ಬೇರೆ ಹೆಸರುಗಳಲ್ಲಿ ಅವತರಿಸಿತು. ಈ ಎಸ್ಸೆ ಎಂಬ ಇಂಗ್ಲಿಷ್ ಪದವನ್ನೇ ಈ ಪ್ರಕಾರಕ್ಕೆ ಕನ್ನಡದಲ್ಲೂ ಬಳಸಿದವರೂ ಬಳಸುತ್ತಿರುವವರೂ ಉಂಟು. ಸಂಕ್ಷಿಪ್ತತೆ ಮತ್ತು ಅಸಮಗ್ರತೆಯಲ್ಲಿಯೂ ಪರಿಪೂರ್ಣತೆಯ ತೋರಿಕೆ ಈ ಬರೆಹದ ವಿಶಿಷ್ಟ ಲಕ್ಷಣ. ನಮ್ಮ ವಿಮರ್ಶಕರು ಬಳಸುವ ಭಾವಪ್ರಬಂಧ, ಲಲಿತಪ್ರಬಂಧ, ಲಘುಪ್ರಬಂಧ ಎಂಬ ಪದಗಳಲ್ಲಿನ ವಿಶೇಷಣಗಳು ಪ್ರಬಂಧದ ಕಾವ್ಯಗುಣವನ್ನೂ ಶೈಲಿಯ ಸೊಬಗನ್ನೂ ಸಂಕ್ಷಿಪ್ತವೂ ಹಗುರವೂ ಆದ ನಿರೂಪಣಾ ಕ್ರಮವನ್ನೂ ಸೂಚಿಸುತ್ತವೆ. ಸ್ವಂತ ಭಾವನೆಗಳನ್ನೂ ಆಲೋಚನೆಗಳನ್ನೂ ಇನ್ನೊಬ್ಬರಿಗೆ ಆತ್ಮೀಯವಾಗಿ ಹೇಳುವ ಪ್ರಬಂಧದ ವ್ಯಕ್ತಿನಿಷ್ಠ ಕಥನಕ್ರಮದಲ್ಲಿ ಹರಟೆಯ ಧೋರಣೆ ಇದ್ದರೂ ಪ್ರಬಂಧ ಹೆಚ್ಚು ಗಂಭೀರವಾದದ್ದು. ಆದರೂ ಕನ್ನಡದ ಮಟ್ಟಿಗೆ, ಪ್ರಬಂಧ - ಹರಟೆಗಳನ್ನು ಒಂದೇ ಸಾಹಿತ್ಯಪ್ರಕಾರದ ಅವಳಿಜವಳಿಗಳೆಂದು ಎಣಿಸಬಹುದು.

ವಿಜ್ಞಾನ, ತತ್ತ್ವಜ್ಞಾನ, ಸಾಹಿತ್ಯ ವಿಮರ್ಶೆ ಮುಂತಾದ ನಾನಾ ಶಾಸ್ತ್ರಗಳ ತೂಕದ ವಿಷಯಗಳನ್ನು ಕುರಿತು ಒಳ್ಳೆಯ ರಂಜಕ ಶೈಲಿಯಲ್ಲಿ ಬರೆದ ಲೇಖನಗಳನ್ನೂ ಪ್ರಬಂಧಗಳೆಂದೇ ಕರೆಯಬಹುದು. ಆದರೆ, ಅವುಗಳ ಗುರಿ ತಿಳಿವಳಿಕೆ ನೀಡುವುದೇ ಹೊರತು ಮನೋಲ್ಲಾಸವಲ್ಲ. ಇವುಗಳನ್ನು ಶುದ್ಧ ಎಸ್ಸೆಯಿಂದ ಬೇರ್ಪಡಿಸಿ, 'ವಿಚಾರ ಪ್ರಬಂಧ' ಎಂದು ಕರೆಯಬಹುದು.

ಕನ್ನಡ ಪ್ರಬಂಧ ಅನುಕರಣಶೀಲವಾಗದೆ ಸ್ವತಂತ್ರವಾಗಿಯೇ ಬೆಳೆದು ಬಂದಿದ್ದರೂ ಇಂಗ್ಲಿಷ್ ಪ್ರಬಂಧದಿಂದ ಭಿನ್ನವಾದ ಲಕ್ಷಣಗಳನ್ನೇನೂ ಹೊಂದಿಲ್ಲ. ಕನ್ನಡದ ಪ್ರಬಂಧಗಳನ್ನೇ ಬಹುಮಟ್ಟಿಗೆ ಅಧಿಕರಿಸಿ ಪ್ರಬಂಧದ ಸಾಮಾನ್ಯ ಲಕ್ಷಣಗಳನ್ನು ವಿವರಿಸುವ ಲೇಖನಗಳು ಪ್ರಬಂಧ ಸಂಗ್ರಹಗಳ ಮುನ್ನುಡಿಗಳ ರೂಪದಲ್ಲಿಯೂ ಪ್ರತ್ಯೇಕವಾಗಿಯೂ ಪ್ರಕಟವಾಗಿವೆ. ದ.ರಾ.ಬೇಂದ್ರೆ, ವಿ.ಕೃ.ಗೋಕಾಕ, ವಿ.ಸೀ., ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಿ.ವೆಂಕಟಸುಬ್ಬಯ್ಯ, ಎ.ಎನ್.ಮೂರ್ತಿರಾವ್ ಮುಂತಾದವರ ಮುನ್ನುಡಿಗಳು ವಿಮರ್ಶಾತ್ಮಕ ಸಮೀಕ್ಷೆಗಳನ್ನು ಒಳಗೊಂಡಿವೆ. ವರದರಾಜ ಹುಯಿಲಗೋಳರು ಲಲಿತ ಪ್ರಬಂಧಗಳು ಎಂಬ ಸಮೀಕ್ಷಾ ಗ್ರಂಥವನ್ನೇ ಬರೆದಿದ್ದಾರೆ. ಎ.ಎನ್.ಮೂರ್ತಿರಾಯರ ಹರಟೆ ಮತ್ತು ಪ್ರಬಂಧ, ಎಚ್ಚೆಸ್ಕೆ ಅವರ ಕನ್ನಡದಲ್ಲಿ ಹರಟೆಯ ಸ್ಥಾನ ಎಂಬ ಲೇಖನಗಳು ಪ್ರಬಂಧದ ಸ್ವರೂಪವನ್ನು ಚೆನ್ನಾಗಿ ತಿಳಿಸಿಕೊಡುತ್ತವೆ. ಹೊಸಗನ್ನಡ ಪ್ರಬಂಧ ಸಂಕಲನದ (1961) ಸಂಪಾದಕರಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಕೆಲವು ಮಾತುಗಳನ್ನು ಕನ್ನಡ ಪ್ರಬಂಧಕ್ಕೆ ಸಂಬಂಧಪಟ್ಟಂತೆ ಇಲ್ಲಿ ಉಲ್ಲೇಖಿಸಬಹುದು.

"ಲಘುಪ್ರಬಂಧಕ್ಕೆ ವಿಷಯ ಇಂತಹುದೇ ಆಗಬೇಕೆಂಬ ನಿಯಮವಿಲ್ಲ. ಸಣ್ಣ ವಿಷಯ, ದೊಡ್ಡ ವಿಷಯ, ಯಾವುದು ಬೇಕಾದರೂ ಆಗಬಹುದು. .......... ಲಘು ಪ್ರಬಂಧವನ್ನು ಓದಿದ ಕೂಡಲೇ ಒಂದು ತೃಪ್ತಿಯ ಮನೋಭಾವ ಉಂಟಾಗಬೇಕು. ಹೇಳುವುದನ್ನೆಲ್ಲ ಹೇಳಿಯಾಯಿತು ಎಂಬಂತೆ ಇರಬಾರದು .......... ಒಂದು ದೃಷ್ಟಿಯಿಂದ ಪೂರ್ಣವಾಗಿ ತೋರಿದರೂ ಮತ್ತೊಂದು ದೃಷ್ಟಿಯಿಂದ ಹೆಚ್ಚಿನ ಜ್ಞಾನಕ್ಕೆ ಅದು ಸೋಪಾನವಾಗಬೇಕು. ಉತ್ತಮವಾದ ಎಸ್ಸೆ ನಮ್ಮನ್ನು ನಲಿಸಲೂ ಬೇಕು, ತಿದ್ದಲೂ ಬೇಕು ......... ಭಾವನೆಗಳು ಅನುಭವಗಳು ಹಾಸ್ಯನಗೆ ಇವು ಉದ್ದಕ್ಕೂ ಮಿಂಚುತ್ತಿರಬೇಕು ......... ಗುರಿ ಮುಟ್ಟುವುದೊಂದೇ ಮುಖ್ಯವಲ್ಲ ಮಾರ್ಗಪ್ರಯಾಣವೂ ಆಕರ್ಷಕವಾಗಿರಬೇಕು". ಈ ಮಾತುಗಳು ಪ್ರಬಂಧದ ವಿಷಯ, ಉದ್ದೇಶ, ವ್ಯಾಪ್ತಿ, ಗುಣ ಇವುಗಳ ಬಗ್ಗೆ ಸಂಪೂರ್ಣ ಜ್ಞಾನ ನೀಡುತ್ತವೆ.

ವಿ.ಕೃ.ಗೋಕಾಕರು ಇಂಗ್ಲಿಷ್ ಹಾಗೂ ಕನ್ನಡ ಪ್ರಬಂಧ ಸಾಹಿತ್ಯವನ್ನು ಅನುಲಕ್ಷಿಸಿ ನಿಬಂಧ ಹಾಗೂ ಹರಟೆಯ ವಿಭಾಗಗಳು ಅನೇಕ ಸಲ ಬೆರೆಯುವುದುಂಟೆಂದೂ ಅವುಗಳ ಬೆರಕೆಯಿಂದ ಸಣ್ಣಪುಟ್ಟ ಭೇದಗಳು ಹುಟ್ಟುವುದೆಂದೂ ಹೇಳಿ ಅಂತಹ ಉಪಭೇದಗಳನ್ನು ಹೀಗೆ ಒಕ್ಕಣಿಸಿದ್ದಾರೆ: ಚಿಂತನಪರ (ಮಾಸ್ತಿಯವರ ಶಾಂತಿ); ಚಾರಿತ್ರಿಕ (ಸಿದ್ಧವನಹಳ್ಳಿ ಕೃಷ್ಣಶರ್ಮರ ಕನ್ನಡ ಕಿಡಿಗಳು); ಐತಿಹಾಸಿಕ (ಆಲೂರ ವೆಂಕಟರಾಯರ ಕರ್ನಾಟಕ ಗತವೈಭವದ ಲೇಖನಗಳು); ವೈಜ್ಞಾನಿಕ (ಕನ್ನಡ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳು); ವಿಮರ್ಶಾತ್ಮಕ ಇಲ್ಲವೇ ವಿವೇಚನಾತ್ಮಕ (ಸಾಹಿತ್ಯ, ಕಲೆ ಮುಂತಾದುವನ್ನು ಕುರಿತವು); ಸ್ವಭಾವ ವಿಭಜನಾತ್ಮಕ (ಕೆ.ಎಸ್.ಕಾರಂತರ ಮುಂದಾಳುಗಳು - ಮಂದಾಳುಗಳು); ಲಘು ಕಥಾತ್ಮಕ (ಗೊರೂರು ರಾಮಸ್ವಾಮಿ ಅಯ್ಯಂಗಾರರ ವಿಮೆ ಯಮನನ್ನೇ ಹೆದರಿಸಿತು); ವರ್ಣನಪರ (ವಿ.ಜಿ. ಕುಲಕರ್ಣಿ ಅವರ ಮಾವು); ಪತ್ರಪ್ರಬಂಧ ಇಲ್ಲವೇ ಹರಟೆಯೋಲೆ (ಸಿ.ಕೃಷ್ಣರ ಮುಗುದೆಯರ ಪತ್ರಗಳು); ಹರಟೆ (ರಂ.ಶ್ರೀ.ಮುಗಳಿಯವರ ನಾದುರಸ್ತು). ಇವುಗಳ ಜೊತೆಗೆ ವ್ಯಕ್ತಿಚಿತ್ರಗಳನ್ನೂ (ಎಚ್ಚೆಸ್ಕೆ ಅವರ ಎತ್ತರದ ವ್ಯಕ್ತಿಗಳು) ಮತ್ತು ಸ್ಮೃತಿ ಚಿತ್ರಗಳನ್ನೂ (ಡಿ.ವಿ.ಜಿ. ಅವರ ಜ್ಞಾಪಕ ಚಿತ್ರಶಾಲೆ) ನಾವು ಸೇರಿಸಬಹುದು. ಈ ಎಲ್ಲ ಪ್ರಭೇದಗಳನ್ನೂ ಒಟ್ಟಿನ ಮೇಲೆ, ವರ್ಣನಾತ್ಮಕ, ಚಿಂತನಾತ್ಮಕ, ವಿಚಾರಾತ್ಮಕ ಅಥವಾ ವಿವೇಚನಾತ್ಮಕ, ಲಘುಪ್ರಬಂಧ ಅಥವಾ ಹರಟೆ (ವಿನೋದಾತ್ಮಕ ಮತ್ತು ವಿಡಂಬನಾತ್ಮಕ) ಎಂದು ನಾಲ್ಕೈದು ಸ್ಥೂಲ ಪ್ರಭೇದಗಳಲ್ಲಿ ಅಡಕ ಮಾಡಬಹುದು.

ಬಂಕಿಮಚಂದ್ರರ ಬಂಗಾಲಿ ಪ್ರಬಂಧಗಳ ಕನ್ನಡ ಅನುವಾದ, ಲೋಕರಹಸ್ಯ ಬಿ.ವೆಂಕಟಾಚಾರ್ಯರಿಂದ 1898ರಲ್ಲಿ ಪ್ರಕಟವಾಯಿತೆನ್ನಲಾದ ಇದು ಕನ್ನಡದ ಮೊದಲ ಪ್ರಬಂಧ ಸಂಕಲನ. ಅನಂತರ ಪ್ರಕಟವಾದ ಆರ್.ಶ್ರೀನಿವಾಸರಾವ್ ಅವರ ವಿವೇಕಮಂಜರಿ (1912) ಕನ್ನಡ ಪ್ರಬಂಧ

ಸಂಕಲನಗಳಲ್ಲಿ ಎರಡನೆಯದು. ಬಿ.ವೆಂಕಟಾಚಾರ್ಯರಿಂದ ರಚಿತವಾದ ದಾಡಿಯ ಹೇಳಿಕೆ ಕನ್ನಡದಲ್ಲಿ ಪ್ರಕಟವಾದ ಸ್ವತಂತ್ರ ಲಲಿತ ಪ್ರಬಂಧ. ಚಿತ್ರವಿಚಿತ್ರಾವಳಿ ಇದೇ ಲೇಖಕರ ಇನ್ನೊಂದು ಪ್ರಬಂಧ ಸಂಕಲನ. ಕೆ.ಲಕ್ಷ್ಮಣರಾವ್ ಅವರ ಕಲಿಯುಗ ಸುಧನ್ವ ಇದೇ ಕಾಲದ್ದಾಗಿದ್ದು, ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವ್ಯಕ್ತಿಯೊಬ್ಬನ ಸ್ವಾನುಭವ ಚಿತ್ರಣ ಇದರಲ್ಲಿ ಮೂಡಿಬಂದಿದೆ. ಸ್ವಲ್ಪಕಾಲದ ಅನಂತರ ಪ್ರಕಟವಾದ ಬಾಳಾಜಿ ಕೃಷ್ಣಪೇಟೆಯವರ ಎಲ್ಲಿದೆ ಸ್ತ್ರೀ ಸೌಂದರ್ಯವು (1923), ಸಳಕೆರೆ ಜಯರಾವ್ ಅವರ ಒಂದು ಗಳಿಗೆಯ ಮೋಜು (1925), ರಾಘವೇಂದ್ರರಾವ್ ತಡಸ ಅವರ ಇತ್ಯಾದಿಯ ಆತ್ಮವೃತ್ತ ಕಥನ (1927) - ಪ್ರಮುಖವಾದವುಗಳು. 1930ರ ದಶಕವನ್ನು ಗಮನಿಸಿ ಹೇಳುವುದಾದರೆ ರಚಿತವಾದ ಪ್ರಬಂಧಗಳ ಸಂಖ್ಯೆ ಕಡಿಮೆಯಷ್ಟೇ ಅಲ್ಲದೆ ಅವುಗಳನ್ನು ರಚಿಸಿದ ಯಾರೂ ಪ್ರಮುಖ ಪ್ರಬಂಧಕಾರರೆಂಬ ಹೆಸರು ಗಳಿಸಲಿಲ್ಲ. ಈ ಕಾಲವನ್ನು ಕನ್ನಡ ಪ್ರಬಂಧಗಳ ಬಾಲ್ಯಾವಸ್ಥೆಯ ಕಾಲವೆಂದು ಹೇಳಬಹುದು.

ಕಾಲಮಾನ ದೃಷ್ಟಿಯಿಂದ 1931 ಲಲಿತ ಪ್ರಬಂಧಗಳ ಇತಿಹಾಸದಲ್ಲಿ ಎರಡನೆಯ ಘಟ್ಟದ ಆರಂಭವೆನ್ನಬಹುದು. ಇಂಗ್ಲಿಷ್ ಪ್ರಬಂಧದ ಜಾಡನ್ನು ಮೊತ್ತಮೊದಲಿಗೆ ಹಿಡಿಯಲು ಯತ್ನಿಸಿದ ಬರೆಹ ಎಂದರೆ, ಎಂ.ಜಿ. ವೆಂಕಟೇಶಯ್ಯನವರ ಪುಲ್ಲಯ್ಯನ ಪ್ರಬಂಧಗಳು. ಇದು ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಜೈಲ್ದರ್ಶನ, ಶೈಲಿ, ಮೀಸೆ, ಮುಖಸ್ತುತಿ ಇವು ಇವರ ಉತ್ತಮ ಪ್ರಬಂಧಗಳು. ಅನಂತರದಲ್ಲಿ ಸಂಪದ್ಗಿರಿರಾಯರ ಇಜಾರ, ವಿ.ಸೀತಾರಾಮಯ್ಯನವರ ಮೈಸೂರು ರುಮಾಲು ಹಾಗೂ ಖಾಯಿಲೆಗಳು ಎಂಬ ಪ್ರಬಂಧಗಳು ಸಾಹಿತ್ಯ ರಸಿಕರ ಮನಸ್ಸನ್ನು ಸೆಳೆದು, ಕನ್ನಡ ಪ್ರಬಂಧದ ಬೆಳವಣಿಗೆಗೆ ಮಾರ್ಗದರ್ಶಕವಾದುವು. ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ ಮುಂತಾದ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಬಂಧಗಳು ಕ್ರಮವಾಗಿ ಪ್ರಕಟವಾಗತೊಡಗಿದುವು. ಸ್ವಲ್ಪ ಒರಟು ಎನ್ನಿಸಿದರೂ ಹಾಸ್ಯದ ಬರೆಹಕ್ಕೆ ಹಾದಿ ತೆರೆದಿದ್ದು ವಿಕಟ ವಿನೋದಿನಿ, ದ.ರಾ.ಬೇಂದ್ರೆಯವರು ಹೊರತಂದ ಹರಟೆಗಳು (ಪ್ರಥಮ ಪ್ರಾತಿನಿಧಿಕ ಹರಟೆಗಳ ಸಂಕಲನ), ವಿ.ಕೃ.ಗೋಕಾಕರ ಮುನ್ನುಡಿಯುಳ್ಳ ಸುಳುವು ಹೊಳವು (ಪ್ರಾತಿನಿಧಿಕ ಪ್ರಬಂಧ ಸಂಕಲನ). ಇವು ಹೊರಬರುವ ವೇಳೆಗೆ (ಸು.1938-39) ಆ.ನ.ಕೃಷ್ಣರಾಯರ ಹೊಸ ಹುಟ್ಟು, ಎ.ಎನ್.ಮೂರ್ತಿರಾಯರ ಹಗಲುಗನಸುಗಳು, ಕೆ.ವಿ.ಪುಟ್ಟಪ್ಪನವರ ಮಲೆನಾಡಿನ ಚಿತ್ರಗಳು, ಪು.ತಿ.ನರಸಿಂಹಾಚಾರ್ಯರ ರಾಮಾಚಾರಿಯ ನೆನಪು ಮುಂತಾದ ಪ್ರಬಂಧ ಸಂಗ್ರಹಗಳು ಪ್ರಕಟವಾಗಿ ಕನ್ನಡ ಪ್ರಬಂಧ ಸಾಹಿತ್ಯದ ಆಶಾದಾಯಕ ಬೆಳವಣಿಗೆಗೆ ನಿದರ್ಶನಗಳಾಗಿದ್ದವು. ಸಣ್ಣಕಥೆ, ಕಾದಂಬರಿ ಸಾಹಿತ್ಯ ಪ್ರಕಾರಗಳಷ್ಟು ಜನಪ್ರಿಯವಲ್ಲದ ಪ್ರಬಂಧ ಸಾಹಿತ್ಯ ಪ್ರಕಾರ ಕೆಲವು ಕಾಲ ಹಿಂದೆ ಸರಿದಂತೆ ಕಂಡುಬಂದದ್ದೂ ಉಂಟು. ಆದರೆ ಈಚಿನ ದಶಕಗಳಲ್ಲಿ ಅನೇಕ ಹೊಸ ಪ್ರಬಂಧಕಾರರೂ ನಗೆಬರೆಹಗಾರರೂ ಬೆಳಕಿಗೆ ಬಂದು ಕೃಷಿ ಮಾಡಿದ್ದರಿಂದ ಕನ್ನಡ ಪ್ರಬಂಧ ಸಾಹಿತ್ಯದ ಪರಂಪರೆ ಅವಿಚ್ಛಿನ್ನವಾಗಿ ಮುಂದುವರಿದುಕೊಂಡು ಬಂದಿದೆ. ಅದರ ಗುಣಮಟ್ಟ ಇಳಿಯದೆ, ವೈವಿಧ್ಯಪೂರ್ಣವಾದ ಬಾಹುಳ್ಯ ಬೆಳೆಯಲು ಅವಕಾಶವಾಗಿದೆ. ಈ ಬೆಳವಣಿಗೆಗೆ ಇಂಗ್ಲೆಂಡಿನಂತೆ ಇಲ್ಲಿಯೂ ನಿಯತಕಾಲಿಕ ಪತ್ರಿಕೆಗಳು ತುಂಬ ಸಹಕಾರಿಯಾಗಿವೆ.

ಕೆಲವು ಕನ್ನಡ ಪ್ರಬಂಧಗಳ ಹೆಸರುಗಳನ್ನು ಗಮನಿಸಿದರೆ, ಕನ್ನಡ ಪ್ರಬಂಧ ಸಾಹಿತ್ಯದ ವಿಷಯವೈವಿಧ್ಯ ವೈಶಿಷ್ಟ್ಯ ಸ್ಪಷ್ಟವಾಗುತ್ತದೆ. ಶಾಂತಿ (ಶ್ರೀನಿವಾಸ), ಬರೆಹಗಾರನ ಹಣೆಬರಹ (ಗೋವಿಂದ ಪೈ), ಕೋಗಿಲ (ವಿ.ಕೃ.ಗೋಕಾಕ), ವ್ಯಾಸಂಗದ ಹವ್ಯಾಸ (ಡಿ.ಎಲ್.ನರಸಿಂಹಾಚಾರ್), ಸಾವಿನ ಕೂಡ ಸರಸ (ದ.ರಾ.ಬೇಂದ್ರೆ), ಹೋಟೆಲುಗಳು (ಎ.ಎನ್.ಮೂರ್ತಿರಾವ್), ಅಜ್ಜಯ್ಯನ ಅಭ್ಯಂಜನ (ಕೆ.ವಿ.ಪುಟ್ಟಪ್ಪ), ತುಂಬೆಯ ಹೂ (ಎಂ.ವಿ.ಸೀತಾರಾಮಯ್ಯ), ನನ್ನ ಬೆನ್ನು (ನಾ.ಕಸ್ತೂರಿ), ನೆಗಡಿ, ತಿಗಣೆ, (ತೀ.ನಂ.ಶ್ರೀಕಂಠಯ್ಯ), ನನ್ನ ಸ್ವಂತ ಶ್ರಾದ್ಧ (ಶ್ರೀರಂಗ), ಮಂಕರು ಬೆಪ್ಪರು (ರಾ.ಶಿ) ಇತ್ಯಾದಿ.

ಕರ್ನಾಟಕದ ಪ್ರಸಿದ್ಧ ಲೇಖಕರೆಲ್ಲರೂ ಒಂದೋ ಎರಡೋ ಹಲವೋ ಕೆಲವೋ ಪ್ರಬಂಧಗಳನ್ನು ಬರೆದಿರುವರಾದರೂ ಪ್ರಬಂಧಕಾರರೆಂದು ಹೆಸರು ಮಾಡಿರುವವರ ಸಂಖ್ಯೆಯೂ ಕಡಮೇಯೆನಲ್ಲ. ಇವರ ಕೊಡುಗೆಯಿಂದಾಗಿ ಕನ್ನಡ ಪ್ರಬಂಧಸಾಹಿತ್ಯ ನಮಗೆ ಹೆಚ್ಚು ಪರಿಚಿತವಾದ ಇಂಗ್ಲಿಷ್ ಪ್ರಬಂಧ ಸಾಹಿತ್ಯಕ್ಕೆ ಸರಿದೊರೆಯಾಗಿ ನಿಲ್ಲಬಲ್ಲ ಯೋಗ್ಯತೆಯನ್ನು ಪಡೆದಿದೆ. ಪ್ರಸಿದ್ಧರಾದ ಪ್ರಬಂಧಕಾರರಲ್ಲಿ ಒಬ್ಬೊಬ್ಬರದ್ದು ಒಂದೊಂದು ವೈಶಿಷ್ಟ್ಯ. ಎ.ಎನ್.ಮೂರ್ತಿರಾಯರ (ಹಗಲುಗನಸುಗಳು, ಅಲೆಯುವ ಮನ, ಮಿನುಗು ಮಿಂಚು) ಹೂವರಳಿದಂತೆ ಅರಳುವ ಮಧುರಭಾವಗಳ ಮೋಹಕತೆ ಹಾಗೂ ಲಲಿತಶೈಲಿ, ವಿ.ಸೀ. ಅವರ (ಬೆಳುದಿಂಗಳು, ಸೀಕರಣೆ) ರಸಿಕ ಹೃದಯದಿಂದ ಹೊಮ್ಮುವ ಭಾವುಕತೆಯೊಂದಿಗೆ ಬೆರೆತ ತೆಳು ವಿಚಾರಧಾರೆ, ಪು.ತಿ.ನ. ಅವರ (ರಥಸಪ್ತಮಿ ಮತ್ತು ಇತರ ಚಿತ್ರಗಳು, ಈಚಲುಮರದ ಕೆಳಗೆ, ಧೇನುಕಪುರಾಣ) ಸಂಸ್ಕೃತ ಭೂಯಿಷ್ಠ ಪ್ರೌಢ ಶೈಲಿಯ ವಸ್ತುನಿಷ್ಠ ವೈಚಾರಿಕತೆ ಮತ್ತು ಭಾವಸಾಂದ್ರತೆ, ತೀ.ನಂ.ಶ್ರೀ.ಯವರ (ನಂಟರು) ಅಚ್ಚುಕಟ್ಟಾದ ಒಪ್ಪ ಓರಣದ ಸಮಗ್ರ ದೃಷ್ಟಿಯ ಗಂಭೀರತೆಯ ವಿಷಯ ವಿವೇಚನೆ, ರಾ.ಕುಲಕರ್ಣಿ ಅವರ (ಗಾಳಿಪಟ, ದೇವಕನ್ಯೆ), ಕಾವ್ಯಪ್ರಪಂಚಕ್ಕೂ ವಾಸ್ತವ ಜಗತ್ತಿಗೂ ಗಂಟುಹಾಕಿ ವಿವಿಧ ಕೋನಗಳಿಂದ ವಸ್ತುದರ್ಶನ ಮಾಡಿಸುವ ವಿಶಿಷ್ಟ ತಂತ್ರದ ಬಳಕೆ, ಎಂ.ವಿ.ಸೀ. ಅವರ (ಧೂಮಲೀಲೆ ಮತ್ತು ಮುಗಿಲುಗಳು) ಹದವಾದ ಗದ್ಯಶಿಲ್ಪದಲ್ಲಿ ಮೂಡಿಬಂದಿರುವ ಚಿತ್ರವಿನ್ಯಾಸ, ಜಿಜ್ಞಾಸೆಯ ಬಲೆಯನ್ನು ಹೆಣೆಯುವ ಕ್ರಮ, ಎನ್.ಪ್ರಹ್ಲಾದರಾವ್ ಅವರ (ರಥರಥಿಕ, ಮಧುವ್ರತ, ಮುತ್ತಿನ ಹಾರ) ಆತ್ಮಾಭಿವ್ಯಕ್ತಿಯ ಭಾವಲಹರಿಗಳ ಆತ್ಮೀಯತೆ, ಶುಚಿಯಾದ ಹಾಸ್ಯ, ಹಾ.ಮಾ.ನಾಯಕರ (ನಮ್ಮ ಮನೆಯ ದೀಪ) ಮಕ್ಕಳ ಜಗತ್ತಿನ ಮುಗ್ಧ ರಮ್ಯತೆ ಎಚ್.ಎಲ್.ನಾಗೇಗೌಡರ (ನನ್ನೂರು) ಆಡುಮಾತಿನ ಲಯಬದ್ಧ ಗ್ರಾಮ್ಯ ಬರೆವಣಿಗೆ ಇವು ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಎತ್ತರಬಿತ್ತರಗಳನ್ನೂ ವೈವಿಧ್ಯಪೂರ್ಣ ಸೌಂದರ್ಯವನ್ನೂ ನೀಡಿವೆ. ಈ ಪ್ರಬಂಧಕಾರರ ಸಾಲಿನಲ್ಲಿ ನಿಲ್ಲತಕ್ಕ ಅರ್ಹತೆಯನ್ನು ಹೊಂದಿರುವ ಹಿರೇಮಲ್ಲೂರ ಈಶ್ವರನ್ (ಶಿವನ ಬುಟ್ಟಿ), ಕಲ್ಯಾಣಸುಂದರ (ಸ್ನೇಹದೃಷ್ಟಿ), ಆನಂದ (ಆನಂದಲಹರಿ), ರಮಾನಂದರಾವ್, (ಹುಚ್ಚು ಬೆಳದಿಂಗಳಿನ ಹೂಬಾಣ), ಎನ್.ಎಸ್.ಗದಗಕರ (ಒಡೆದ ಕನ್ನಡಿ), ಬಿ.ಆರ್.ವಾಡಪ್ಪಿ (ಸುಳಿಗಾಳಿ), ಎಚ್ಚೆಸ್ಕೆ (ಜೇಡನ ಬಲೆ), ಎಂ.ರಾಮರಾವ್ (ನಮ್ಮ ಅರಣ್ಯಯಾತ್ರೆ), ಎಸ್.ಮಂಜುನಾಥ್ (ಪುಸ್ತಕವನ್ನು ಬಿಡು), ಅ.ನ.ಕೃ. (ಪೊರಕೆ), ಡಿ.ಎಸ್.ಕರ್ಕಿ (ನಾಲ್ದೆಸೆಯ ನೋಟ), ಶ್ರೀಧರಮೂರ್ತಿ (ಲಂಚ ಪ್ರಪಂಚ), ದ.ಬಾ.ಕುಲಕರ್ಣಿ (ಸಾವಧಾನ, ಬದುಕಿದ ಬಾಳು), ರಾ.ಯ. ಧಾರವಾಡಕರ (ಧೂಮ್ರವಲಯ), ಎಸ್.ಅನಂತನಾರಾಯಣ (ಇಂಥವರೂ ಇದ್ದಾರೆ), ಕೆ.ವೆಂಕಟರಾಯಪ್ಪ (ವಿಚಾರಲಹರಿ), ಸದಾಶಿವ ಒಡೆಯರ (ಜೀವನಕಥೆ) - ಮುಂತಾದವರು ತಮ್ಮ ಕೊಡುಗೆಗಳಿಂದ ಪ್ರಬಂಧದ ಪರಿಧಿಯನ್ನು ವಿಸ್ತರಿಸಿದ್ದಾರೆ.

ಪ್ರಬಂಧದ ಕಕ್ಷೆಯಲ್ಲೆ ಬಂದರೂ ವಿನೋದ, ವ್ಯಂಗ್ಯ, ವಿಡಂಬನೆ ಮುಂತಾದ ವಿಭಿನ್ನ ಗುಣಗಳಿಂದ ಪ್ರತ್ಯೇಕ ಗಣ್ಯತೆಗೆ ಅರ್ಹವಾದ ಹರಟೆಯ ಪ್ರಕಾರ ಅನೇಕ ಪ್ರತಿಷ್ಠಿತ ಸಾಹಿತಿಗಳನ್ನೂ ಹೊಸ ಬರೆಹಗಾರರನ್ನೂ ಆಕರ್ಷಿಸಿದೆ. ಇವರಲ್ಲಿ ನಾ.ಕಸ್ತೂರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಹೇಮಾವತಿಯ ತೀರದಲ್ಲಿ, ನಮ್ಮೂರಿನ ರಸಿಕರು), ರಾ.ಶಿ.ಶ್ರೀರಂಗ, ಶಿವರಾಮ ಕಾರಂತ, (ಮೈಲಿಕಲ್ಲಿನೊಡನೆ ಮಾತುಕತೆ), ಬೀಚಿ (ತಿಮ್ಮನ ತಲೆ), ನಾಡಿಗೇರ ಕೃಷ್ಣರಾಯ (ಮೊಲ್ಲೋಗರ), ಜಿ.ಪಿ.ರಾಜರತ್ನಂ, ಲಾಂಗೂಲಾಚಾರ್ಯ ಮುಂತಾದವರು ವಿವಿಧ ಕೃತಿಗಳ ಮೂಲಕ ನಗೆಬರೆಹಗಳ ಹೆದ್ದಾರಿ ಹಾಕಿದರು. ಇದೇ ದಾರಿಯಲ್ಲಿ ನಡೆದು ಪ್ರಬಂಧ ಸಾಹಿತ್ಯಕ್ಕೆ ವಿನೋದ ವಿಡಂಬನೆಗಳ ಮುಖವನ್ನು ಕೊಟ್ಟವರಲ್ಲಿ - ಅ.ರಾ.ಸೇ. (ಸುಳಿನಗು), ದಾಶರಥಿ ದೀಕ್ಷಿತ್ (ಗಾಂಪರ ಹರಟೆಗಳು), ಅಷ್ಟಾವಕ್ರ, ಎನ್ಕೆ (ಮುಂಗಾಲ್ ಪುಟಿಗೆ), ನಾಡಿಗೇರ ಗೋವಿಂದರಾವ್ (ನಗೆಬರಹಗಳು), ಕುಡ್ಡಿ ವಾಸುದೇವ ಶೆಣೈ (ಕಸದ ಡಬ್ಬಿಗಳು), ಅ.ರಾ.ಮಿತ್ರ (ಯಾರೋ ಬಂದಿದ್ದರು) ಇವರುಗಳು ಗಮನಾರ್ಹರು. ಇವರಲ್ಲದೆ ಎಚ್.ಕೆ.ರಂಗನಾಥ (ವೈದ್ಯನಲ್ಲದ ಗಂಡ), ಉಮಾಪತಿ (ಅಡಿಗೆಮನೆ), ಎ.ಕೃಷ್ಣಮೂರ್ತಿ, ಎ.ಎಸ್.ರಾಮಕೃಷ್ಣ (ಹುಟ್ಟೂರಿನ ಮೋಹ), ಅಶ್ವತ್ಥ, ಸಚ್ಚಿದಾನಂದ ಶಿರೋಡ್ಕರ್, ಸದಾಶಿವ ಎಣ್ಣೆಹೊಳೆ (ಸನ್ಮಾನ), ಎಚ್.ಎಲ್.ಕೇಶವ ಮೂರ್ತಿ (ನೀನ್ಯಾಕೊ ನಿನ್ನ ಹಂಗ್ಯಾಕೊ,

ಹ್ಯಂಗಾರ ಟಿಕೇಟ್ ಕೊಡಿ) ಮೊದಲಾದ ಬರೆಹಗಾರರು ಪ್ರಬಂಧ ಸಾಹಿತ್ಯದ ಗಮನಾರ್ಹ ಲೇಖಕರಾಗಿದ್ದಾರೆ. ಹರಟೆಗಾರರ ಬಳಗ ಬೆಳೆಯುತ್ತಲೇ ಇದ್ದು, ಹರಟೆ ಕನ್ನಡ ಸಾಹಿತ್ಯದಲ್ಲಿ ಹಾಸ್ಯದ ಕೊರತೆಯನ್ನು ಬಹುಮಟ್ಟಿಗೆ ಹೋಗಲಾಡಿಸಿದೆ. ಬಿಗುವಿನ ಪ್ರಬಂಧಕ್ಕಿಂತ ನಗುವಿನ ಹರಟೆ ಜನಪ್ರಿಯ ಎನಿಸಿದೆ. ಇಂಗ್ಲಿಷ್‌ನ ಕೆಲವು ಪ್ರಸಿದ್ಧ ಪ್ರಬಂಧಗಳನ್ನು ಎಸ್.ಮಂಜುನಾಥ್, ಎಂ.ರಾಮರಾವ್, ಎನ್.ಎಸ್.ರಾಮಚಂದ್ರಯ್ಯ, ಎಸ್.ವಿ.ಪರಮೇಶ್ವರಭಟ್ಟ ಮುಂತಾದವರು ಭಾಷಾಂತರಮಾಡಿ ಕನ್ನಡಕ್ಕೆ ಒಳ್ಳೆಯ ಮಾದರಿಗಳನ್ನು ಒದಗಿಸಿದ್ದಾರೆ. (ಎಂ.ವಿ.ಎಸ್.)

ನವ್ಯ ಸಾಹಿತ್ಯದ ಪ್ರಖರತೆ ಕಡಿಮೆಯಾದ ಅನಂತರದಲ್ಲಿ ದಲಿತ ಬಂಡಾಯ ಸಾಹಿತ್ಯದ ನೆರಳಿನಲ್ಲಿ ಲಲಿತ ಪ್ರಬಂಧ ಪ್ರಕಾರ ಹೊಸಹುಟ್ಟನ್ನು ಪಡೆದಿರುವುದನ್ನು ಕಾಣಬಹುದಾಗಿದೆ. ನವ್ಯದ ಸಂದರ್ಭ ಒಬ್ಬನೇ ಒಬ್ಬ ಪ್ರಬಂಧಕಾರನನ್ನು ಸೃಜಿಸಲಿಲ್ಲ. ನವ್ಯದ ತಾತ್ತ್ವಿಕತೆಯ ಮಂದಶ್ರುತಿಯ ಭಾವಗೀತೆಯೆನಿಸಿದ ಪ್ರಬಂಧ ಪ್ರಕಾರವನ್ನು ಇಡಿಯಾಗಿ ತಿರಸ್ಕರಿಸಿತು. ಹೀಗೆಂದ ಮಾತ್ರಕ್ಕೆ ನವ್ಯದ ಕಾಲದಲ್ಲಿ ಪ್ರಬಂಧಗಳೇ ರಚಿತವಾಗಿಲ್ಲವೆಂದಲ್ಲ. ಕು.ಶಿ.ಹರಿದಾಸಭಟ್ಟ, ಹಾ.ಮಾ.ನಾಯಕ, ಪಾ.ವೆಂ.ಆಚಾರ್ಯ, ಪ್ರಭುಶಂಕರ, ಸಿ.ಪಿ.ಕೆ., ದೇಜಗೌ, ಜಿ.ಶಂ.ಪ., ಟಿ.ಸುನಂದಮ್ಮ ಮುಂತಾದವರೆಲ್ಲ ಪ್ರಬಂಧಗಳನ್ನು ರಚಿಸಿದ್ದಾರೆ. ಆದರೆ ನಿಜವಾದ ತಾತ್ತ್ವಿಕವಾಗಿ ಇವರು ನವೋದಯಕ್ಕೆ ಬದ್ಧರಾದವರು.

ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಜಗತ್ತನ್ನು ಕಾಣುವ ನವ್ಯರ ಪರಿಭಾಷೆಯನ್ನು ನಿರಾಕರಿಸಿ ಕಾವ್ಯ ಹೇಗೆ ಸಂಗೀತದ ಸಾಹಚರ್ಯವನ್ನು ಮೈಗೂಡಿಸಿಕೊಂಡು ಮರುಜೀವವನ್ನು ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಪಡೆಯಿತೋ ಹಾಗೆ, ಲಲಿತ ಪ್ರಬಂಧವೂ ಸಾಹಿತ್ಯ ಮತ್ತು ಸಾಹಿತ್ಯೇತರ ಕಾರಣಗಳಿಂದ ಮರುಹುಟ್ಟನ್ನು ಪಡೆಯಿತು. ಸಮಷ್ಟಿಯೊಂದಿಗಿನ ಮುಖಾಮುಖಿ, ಸಾಹಿತಿಗಳ ಸಾಮಾಜಿಕ ಕಳಕಳಿ, ಹರಟುವ ಲಕ್ಷಣ ತೀವ್ರಗತಿಯಲ್ಲಿ ಪುನಃ ಸ್ಥಾಪನೆಗೊಂಡಿದ್ದು ಸಾಹಿತ್ಯಕ ಲಕ್ಷಣಗಳಾದರೆ, ಸಾಹಿತ್ಯ ಅಕಾಡೆಮಿಯಂಥ ಸಾಹಿತ್ಯ ಸಂಘಟನೆ ಈ ಪ್ರಕಾರವನ್ನು ಪೋಷಿಸಿದ್ದು ಸಾಹಿತ್ಯೇತರ ಕಾರಣ. ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಅನೇಕ ಪ್ರಬಂಧಕಾರರು ಪ್ರಬಂಧಗಳನ್ನು ಬರೆಯತೊಡಗಿದರು.

ಹಿರಿಯ ಪ್ರಬಂಧಕಾರರಲ್ಲಿ ಗೊರೂರರ 'ಹಳೆಯ ಪಳೆಯ ಮುಖಗಳು' ಶಿವರಾಮಕಾರಂತರ 'ಅಳಿದುಳಿದ ನೆನಪುಗಳು' ಈ ಎರಡರಲ್ಲೂ ಹಳೆಯ ಪ್ರಬಂಧಗಳಲ್ಲಿ ಚಿತ್ರಿತವಾಗದಿರುವ ಸ್ಮೃತಿಗಳಿವೆ. ಪು.ತಿ.ನ ಅವರ 'ಯದುಗಿರಿಯಲ್ಲಿ ಗೆಳೆಯರು' (1981) 'ರಥಸಪ್ತಮಿ ಮತ್ತು ಇತರ ಚಿತ್ರಗಳು' ಕೃತಿಯ ಬಂಧದ ವಿಷಯಕ್ಕೆ ಸೇರುವಂಥವು. 'ರಾಮಾಚಾರಿಯ ನೆನಪು'ವಿನ ಶಿವ ಇಲ್ಲಿಯೂ ಕಾಣಿಸಿಕೊಳ್ಳುತ್ತಾನೆ. ಇಲ್ಲಿನ 'ಗೆಳೆಯರು' ಕಾಲ್ಪನಿಕರು. ಗೊರೂರು, ಕಾರಂತ ಮತ್ತು ಪು.ತಿ.ನ. ಅವರ ಲಲಿತ ಪ್ರಬಂಧದ ಕೊನೆಯ ರೇಖೆಗಳನ್ನಿಲ್ಲಿ ಕಾಣಬಲ್ಲೆವು.

ಎ.ಎನ್.ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧಗಳು' ಕ್ಷಿಪ್ರಗತಿಯಲ್ಲಿ ಮರುಮುದ್ರಣ ಕಂಡಿರುವುದು ಇವರ ಪ್ರಬಂಧಗಳು ಜನಮನವನ್ನು ಇಂದಿಗೂ ಆಕರ್ಷಿಸಿರುವುದನ್ನು ಸೂಚಿಸುತ್ತದೆ. ಈ ಹಿಂದೆಯೇ ಪ್ರಕಟವಾಗಿದ್ದ (ಹಗಲುಗನಸುಗಳು, ಅಲೆಯುವ ಮನ ಮತ್ತು ಮಿನುಗುಮಿಂಚು) ಮೂರು ಸಂಕಲನಗಳ ಜೊತೆಗೆ, ಸಂಕಲಿತ ಪ್ರಬಂಧಗಳು ಎಂಬ ಶೀರ್ಷಿಕೆಯಡಿ ಒಂಬತ್ತು ಪ್ರಬಂಧಗಳನ್ನು ಹೊಸದಾಗಿ ಸೇರಿಸಿದ್ದಾರೆ. ತೀ.ನಂ.ಶ್ರೀ.ಯವರಿಗೆ ಪಂಪಪ್ರಶಸ್ತಿ ಲಭಿಸಿದಾಗ ಮಾಡಿದ ಅಭಿನಂದನಾ ಭಾಷಣ ಹಾಗೂ 'ನಮಗೆ ಬೇಕಾದ ಸಾಹಿತ್ಯ' ಮತ್ತು 'ಸಾಹಿತ್ಯ ಮತ್ತು ಸಮಾಜ' ಎಂಬೆರಡು ಬರೆಹಗಳೂ ಈ ಸಮಗ್ರಸಂಕಲನದಲ್ಲಿ ಸೇರಿವೆ. 'ಚಿತ್ರಗಳು ಪತ್ರಗಳು' ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಪರೂಪದ ಬರೆಹವೆನಿಸಿದೆ.

ಎರಡನೆಯ ತಲೆಮಾರಿನ ಪ್ರಬಂಧಕಾರರಲ್ಲಿ ಪ್ರಮುಖರಾದ ಅ.ರಾ. ಮಿತ್ರ ಅವರ ಎಪ್ಪತ್ತೊಂಬತ್ತು ಪ್ರಬಂಧಗಳನ್ನು 'ಅ.ರಾ.ಮಿತ್ರರ ಸಮಗ್ರ ಲಲಿತ ಪ್ರಬಂಧಗಳು' ಎಂಬ ಹೆಸರಿನಲ್ಲಿ ಹೊರತರಲಾಗಿದೆ. ಎಂ.ಎಚ್.ಕೃಷ್ಣಯ್ಯನವರ ಮೌಲಿಕವಾದ ಪ್ರಸ್ತಾವನೆ ಪ್ರಬಂಧಗಳಿಗೆ ಉತ್ತಮ ಪ್ರವೇಶಿಕೆಯನ್ನು ಕಲ್ಪಿಸಿದೆ. "ಅ.ರಾ.ಮಿತ್ರರು ತಮ್ಮ ಪ್ರಬಂಧಗಳಲ್ಲಿ ಮಾನವ ಸ್ವಭಾವದ ಅರೆಕೊರೆಗಳನ್ನು ವ್ಯಕ್ತಪಡಿಸುವ ರೀತಿ ಅನನ್ಯವಾಗಿದೆ. ನಯನಾಜೂಕಿನ ಭಾಷೆ ವಸ್ತುವನ್ನು ಸಮರ್ಥಿಸುತ್ತಿದ್ದರೂ ಅದನ್ನು ನಿಜವಾಗಿಯೂ ಖಂಡಿಸುತ್ತಿದ್ದಾರೆ ಎಂದು ನಂಬಿಕೆ ಹುಟ್ಟಿಸುವ ಶೈಲಿ, ವಸ್ತುವನ್ನು ವಿವಿಧ ಮಗ್ಗಲುಗಳಿಂದ ನೋಡಿ ಅದರಲ್ಲಿ ಹರಿಗಡಿಯದ ಏಕಸೂತ್ರತೆಯ ರೀತಿ ಹಾಗೂ ಪ್ರಸನ್ನ ಮನೋಧರ್ಮಗಳನ್ನು ವ್ಯಕ್ತಪಡಿಸುತ್ತಾ ಅ.ರಾ.ಮಿತ್ರರು ತಮ್ಮ ಪ್ರಬಂಧಗಳಲ್ಲಿ ಹಿರಿದಾದ ಯಶಸ್ಸನ್ನು ಪಡೆದಿದ್ದಾರೆ" ಎಂಬ ವೀರೇಂದ್ರ ಸಿಂಪಿಯವರ ಮಾತುಗಳು ಗಮನಾರ್ಹವಾದುದು.

'ರಾ.ಕು.' ಅವರ ಪ್ರಬಂಧಗಳಲ್ಲಿ ವ್ಯಂಗ್ಯೋಕ್ತಿ, ಕಟೋಕ್ತಿ, ತರ್ಕ, ಜಿಜ್ಞಾಸೆ, ಹಳೆಗನ್ನಡ ಕಾವ್ಯದ ಸಾಲುಗಳು, ಉಪಮೆಗಳು, ವಿಚಾರಗಳು - ಇವುಗಳನ್ನು ಬೆರೆಸಿರುವ ಬಗೆ ಆಕರ್ಷಣೀಯವೆನಿಸಿದೆ. 'ಗಾಳಿಪಟ' ಹಾಗೂ 'ದೇವಕನ್ಯೆ' ಇವೆರಡೂ ರಾ.ಕು. ಅವರ ಮಹತ್ತ್ವದ ಸಂಕಲನಗಳು. ಹಾ.ಮಾ. ನಾಯಕರು ಹೇಳುವಂತೆ ರಾ.ಕು. ಅವರ ಪ್ರಬಂಧಗಳಲ್ಲಿ 'ತತ್ತ್ವಶಾಸ್ತ್ರೀಯ ಚಿಂತನವೂ ಕವಿಯ ಕಲ್ಪನಾ ವಿಲಾಸವೂ ಸಮರಸವಾಗಿ ಬೆರೆತುಕೊಂಡಿದೆ'.

ಮುಂಗಾಲ್ ಪುಟಿಗೆ (1945) ಎಂಬ ಸಂಕಲನದ ಮೂಲಕ ಗಮನಸೆಳೆದಿದ್ದ ಎನ್.ಕೆ.ಕುಲಕರ್ಣಿ (ಎನ್ಕೆ) ಯವರ ಎಂಬತ್ತೊಂದು ಬರೆಹಗಳಿರುವ ಎನ್ಕೆ ಲಲಿತ ಪ್ರಬಂಧಗಳು ಇತ್ತೀಚೆಗೆ ಪ್ರಕಟಗೊಂಡಿರುವ ಬೃಹತ್ ಸಂಪುಟ. ವೈವಿಧ್ಯಪೂರ್ಣವಾದ ಪ್ರಬಂಧಗಳನ್ನಿಲ್ಲಿ ಕಾಣಬಹುದು. ಈ ಸಂಪುಟ ಇವರ ಸಮಗ್ರ ಪ್ರಬಂಧ ಸಂಪುಟವಲ್ಲ ಎಂಬುದನ್ನು ಗಮನಿಸಬೇಕು. ಈ ಸಂಕಲನದಲ್ಲಿರುವ ಎರಡೂವರೆಪಟ್ಟು ಲೇಖನಗಳು ಸಂಕಲಿತವಾಗದೆ ಉಳಿದಿವೆ.

ಟಿ.ಸುನಂದಮ್ಮನವರ 'ಸಮಗ್ರ' ಸಂಕಲನ ಈ ಕಾಲಮಾನದಲ್ಲಿ ಪ್ರಕಟಗೊಂಡಿರುವ ಬೃಹತ್ ಸಂಪುಟ. ಹಾಸ್ಯ ಹರಟೆಯ ಪ್ರಸಂಗಗಳೇ ಹೆಚ್ಚಾಗಿರುವ ಇಲ್ಲಿನ ಬರೆಹಗಳಲ್ಲಿ ಲಲಿತವಾದುವು ತೀರ ವಿರಳ.

ಕರ್ನಾಟಕ ಸಾಹಿತ್ಯ ಅಕಾಡೆಮಿ ದಶವಾರ್ಷಿಕ ಪ್ರಬಂಧ ಹಾಗೂ ವಾರ್ಷಿಕ ಪ್ರಬಂಧಗಳನ್ನು ಪ್ರಕಟಿಸುವ ಮೂಲಕ ಲಲಿತ ಪ್ರಬಂಧ ಸಂಕಲನಗಳ ಹೊಸಶಕೆಯನ್ನೇ ಆರಂಭಿಸಿತು. ದಶವಾರ್ಷಿಕ ಪ್ರಬಂಧಗಳು (1974-83) ಅತ್ಯಂತ ಮಹತ್ವದ ಸಂಕಲನ. ಈ ಅವಧಿಯಲ್ಲಿ ಸರಿಸುಮಾರು ಎಂಟನೂರು ಲಲಿತ ಪ್ರಬಂಧಗಳು ಪ್ರಕಟಗೊಂಡಿರುವ ಉಲ್ಲೇಖ ಇಲ್ಲಿದೆ. ಹಿರಿಯ ಕಿರಿಯ ಪ್ರಬಂಧಗಳೂ ಸೇರಿದಂತೆ, ಐವತ್ತಾರು ಪ್ರಬಂಧಗಳು ಈ ಸಂಕಲನದಲ್ಲಿ ಸೇರಿವೆ. ಸಂಖ್ಯೆಯ ದೃಷ್ಟಿಯಿಂದಲ್ಲದೆ ಗುಣಮಟ್ಟದ ದೃಷ್ಟಿಯಿಂದಲೂ ವಿಪುಲವಾದ ಪ್ರಬಂಧಗಳು ಈ ಅವಧಿಯಲ್ಲಿ ಪ್ರಕಟಗೊಂಡಿವೆ. ಭಾರತದ ಬೇರೆ ಭಾಷೆಗಳ ಯಾವುದೇ ಅಕಾಡೆಮಿ ಕೈಗೊಳ್ಳದ ಅನನ್ಯ ಪ್ರಯತ್ನ ಇದಾಗಿದೆ. ಪ್ರತಿವರ್ಷವೂ ವಾರ್ಷಿಕ ಪ್ರಬಂಧಗಳನ್ನು ಅಕಾಡೆಮಿ ಪ್ರಕಟಿಸುತ್ತಿರುವುದು ಆಯಾ ವರ್ಷದಲ್ಲಿ ಪ್ರಬಂಧ ಸೃಷ್ಟಿಯ ಹರಹನ್ನು ದಾಖಲಿಸುವ ಪ್ರಯತ್ನವಾಗಿದೆ. ಪ್ರಬಂಧ 1976 (ಸಂ.ಅನಂತನಾರಾಯಣ), 1981 (ಸಂ.ಪ್ರಭುಶಂಕರ), 1987 (ಸಂ.ಡಿ.ಆರ್.ನಾಗರಾಜ್), 1988 (ಸಂ.ಪುರುಷೋತ್ತಮ ಬಿಳಿಮಲೆ) ಗಮನಾರ್ಹವಾದ ಸಂಕಲನಗಳು. ನಾಗರಾಜ್ ಹಾಗೂ ಬಿಳಿಮಲೆಯವರ ಪ್ರಸ್ತಾವನೆಗಳು ಆ ತಲೆಮಾರು ಪ್ರಬಂಧ ಸಾಹಿತ್ಯವನ್ನು ಗ್ರಹಿಸಿರುವ ಬಗೆಗಿನ ದಾಖಲೆಯಾಗಿದೆ ಎನ್ನಬಹುದು.

ಹಿರಿಯ ಲಲಿತ ಪ್ರಬಂಧಕಾರರಲ್ಲಿ ಒಬ್ಬರಾದ ರಾ.ಯ. ಧಾರವಾಡಕರರಿಗೆ ಎಪ್ಪತ್ತು ವರ್ಷ ತುಂಬಿದಾಗ ಅರ್ಪಿಸಿರುವ 'ಪ್ರಬಂಧ ಪ್ರಪಂಚ' ಎಂಬ ಅಭಿನಂದನಗ್ರಂಥ (ಸಂ.ಎಚ್.ವಿ.ನಾಗೇಶ) ಪ್ರಬಂಧ ಸಾಹಿತ್ಯವನ್ನು ಕುರಿತು ಅದುವರೆವಿಗೆ ನಡೆದಿರುವ ಅಧ್ಯಯನಗಳನ್ನು ಒಂದೆಡೆ ಸಂಕಲಿಸಿದೆ. ಈ ಗ್ರಂಥದ ವಿಶೇಷವೆಂದರೆ ಪ್ರಬಂಧ ವಿಸ್ತಾರ ಎಂಬ ವಿಭಾಗ. ಇಲ್ಲಿ ಎನ್.ಬಾಲಸುಬ್ರಮಣ್ಯರ ಫ್ರೆಂಚ್ ಮೂಲ, ಮಾಂಟೇನನ ಪ್ರಬಂಧಗಳು ಎಂಬ ಲೇಖನದಿಂದ ತೊಡಗಿ ಹಿಂದಿ ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ ಮತ್ತು ಮರಾಠಿ ಭಾಷೆಗಳಲ್ಲಿ ಪ್ರಬಂಧ ಸಾಹಿತ್ಯ ಪ್ರಕಾರ ಬೆಳೆದು ಬಂದಿರುವ ಹೆಜ್ಜೆಗಳನ್ನು ಗುರುತಿಸುವ

ಪ್ರಯತ್ನವಿದೆ. ಇದು ಉಲ್ಲೇಖಾರ್ಹ ದಾಖಲೆ. ಭಾರತೀಯ ಲಲಿತ ಪ್ರಬಂಧಗಳ ಎಡೆಯಲ್ಲಿ ಕನ್ನಡ ಪ್ರಬಂಧಗಳ ಅನನ್ಯತೆಯನ್ನು ಅಧ್ಯಯನ ಮಾಡಲು ದಾರಿದೀಪವಾಗಿದೆ. ಇದರೊಂದಿಗೆ ವಿ.ಕೃ.ಗೋಕಾಕ, ಗೊರೂರರು ಪ್ರಬಂಧ ಸಂಕಲನಗಳಿಗೆ ಬರೆದಿರುವ ಪ್ರಸ್ತಾವನೆಯೂ ಸೇರಿದಂತೆ, ಬೇಂದ್ರೆ, ಪಂಜೆ, ಪಡುಕೋಣೆ, ವಿಸೀ, ಪ್ರಹ್ಲಾದರಾವ್, ಮಾಸ್ತಿ, ತೀನಂಶ್ರೀ, ಕಡೆಂಗೋಡ್ಲು, ಮೂರ್ತಿರಾವ್, ಬೀಚಿ, ಪು.ತಿ.ನ., ಗೊರೂರು, ಕುವೆಂಪು, ಕಾರಂತ, ಎಂ.ವಿ.ಸೀ., ಪಾವೆಂ., ಹಾಮಾನಾ., ಮಿತ್ರ, ಸಿಂಪಿ ಲಿಂಗಣ್ಣ, ಎನ್ಕೆ, ರಾ.ಕು. ಪ್ರಬಂಧ ಸಾಹಿತ್ಯದ ಸಮೀಕ್ಷೆ ಇದೆ. ಒಟ್ಟಿನಲ್ಲಿ ಲಲಿತಪ್ರಬಂಧದ ಬಗ್ಗೆ ಆಸಕ್ತ ಅಧ್ಯಯನಕಾರರಿಗೆ ಪ್ರಬಂಧ ಪ್ರಪಂಚ ಕೈಮರವಿದ್ದಂತೆ. ಈ ಕೃತಿಯ ಯೋಜನೆಯ ಮೂಲಕ ಸಂಪಾದಕರಾದ ಎಚ್.ವಿ.ನಾಗೇಶ್ ಅಗತ್ಯ ದಾಖಲೆಯನ್ನು ಕನ್ನಡ ಸಾಹಿತ್ಯ ಚರಿತ್ರೆಗೆ ಕೊಟ್ಟಿದ್ದಾರೆ.

ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಶತಮಾನದ ಲಲಿತ ಪ್ರಬಂಧಗಳು' (ಸಂ.ಗುರುಲಿಂಗ ಕಾಪಸೆ, 2000) ಲಲಿತ ಪ್ರಬಂಧ ನಡೆದು ಬಂದ ದಾರಿಯನ್ನು ಅತ್ಯಂತ ಸಮರ್ಪಕವಾಗಿ ಪರಿಚಯಿಸುವ ಸಂಕಲನವಾಗಿದೆ. ಗೋವಿಂದ ಪೈ, ಪಂಜೆಮಂಗೇಶರಾಯರಿಂದ ತೊಡಗಿ ಇಂದಿನ ಮಹತ್ವದ ಪ್ರಬಂಧಕಾರರಾದ ಚಂದ್ರಶೇಖರ ಆಲೂರು, ಬಿ.ಚಂದ್ರೇಗೌಡ ಮೊಗಳ್ಳಿ ಗಣೇಶ, ಈರಪ್ಪ ಎಂ.ಕಂಬಳಿ, ಗುರುದೇವಿ ಹುಲೆಪ್ಪನವರ ಮುಂತಾದವರೆಗೆ ಸರಿಸುಮಾರು ಎಂಬತ್ತು ತೊಂಬತ್ತು ವರ್ಷಗಳಲ್ಲಿ ವಿಕಾಸಗೊಂಡಿರುವ ಲಲಿತ ಪ್ರಬಂಧ ಸಾಹಿತ್ಯದ ಹಾಸನ್ನು ಈ ಸಂಕಲನ ಸಮರ್ಥವಾಗಿ ಪ್ರತಿನಿಧಿಸಿದೆ. ಗುರುಲಿಂಗ ಕಾಪಸೆಯವರ 'ಪ್ರಸ್ತಾವನೆ' ಅಭ್ಯಾಸಯೋಗ್ಯವಾದುದು.

ಕಳೆದ ಎರಡು ಮೂರು ದಶಕಗಳಲ್ಲಿ ಅನೇಕ ಗಮನಾರ್ಹ ಕೃತಿಗಳು ಪ್ರಕಟಗೊಂಡಿವೆ. ಮಹತ್ವದ ಕೃತಿಗಳನ್ನು ಗಮನಿಸುವುದಾದರೆ ಪು.ತಿ.ನ. ಅವರ ಯದುಗಿರಿಯಲ್ಲಿ ಗೆಳೆಯರು, ಶಿವರಾಮಕಾರಂತರ, ಅಳಿದುಳಿದ ನೆನಪುಗಳು, ಹಾ.ಮಾ.ನಾಯಕರ ಸೃಜನ, ಸೂಲಂಗಿ ಮತ್ತು ಸಂಗತಿ, ಕು.ಶಿ.ಹರಿದಾಸಭಟ್ಟರವರ ಲೋಕಾಭಿರಾಮ, ಸ.ಸ.ಮಾಳವಾಡರ ದೃಷ್ಟಿಕೋನ, ಗೀತಾಕುಲಕರ್ಣಿಯವರ 'ಹುರಿಗಾಳು', ಪ್ರಭುಶಂಕರರ 'ಜನಮನ', ಟಿ.ವಿ.ವೆಂಕಟಾಚಲಶಾಸ್ತ್ರೀಯವರ ಸದ್ದಂತೆಂಬರ ಗಂಡ, ಎಚ್ಚೆಸ್ಕೆಯವರ ಮೇಘಲಹರಿ, ಹವಳದ ಸರ, ಡಿ.ಕೆ.ರಾಜೇಂದ್ರ ಅವರ 'ಮಾತಿನ ಮಲ್ಲರು', ಘಟನೆಗಳು, ರಾ.ಕು. ಅವರ ಸಲ್ಲಾಪ, ರಾಶಿಯವರ ಕೊರವಂಜಿ ಕಂಡ ಸಮಾಜ, ಸುನಂದಾ ಬೆಳಗಾಂವಕರರ 'ಕಜ್ಜಾಯ', ಮ.ಸು.ಕೃಷ್ಣ ಮೂರ್ತಿಯವರ ಚಂಕ್ರಮಣ, ಹಂಪನಾ ಅವರ ಹೆಸರಿನ ಸೊಗಸು, ಅನಂತ ಕುಲಕರ್ಣಿಯವರ ತಳಿರು, ಎಂ.ಎಸ್.ವೇಣುಗೋಪಾಲರ ಆತ್ಮೀಯ, ವೀರೇಂದ್ರ ಸಿಂಪಿಯವರ ಭಾವಮೈದುನ, ಬಿ.ಆರ್.ವಾಡಪ್ಪಿ ಯವರ 'ಗಾಳಿಗುದುರಿ', ಕಾಂತರಾಜು ಮಿರ್ಲೆಯವರ 'ಪ್ರೇಮದರ್ಶನ', ಪಿ.ಎಸ್.ರಾಮಾನುಜಂ ಅವರ 'ಪ್ರಬಂಧ ವಿಹಾರ', ಬಿ.ಶಾಮಸುಂದರ ಅವರ ಮುಖಗಳು, ರಸ್ತೆ ಹಾಗೂ ಇತರ ಪ್ರಬಂಧಗಳು, ವೈದೇಹಿಯವರ ಮಲ್ಲಿನಾಥನ ಧ್ಯಾನ, ಚಂದ್ರಶೇಖರ ಆಲೂರರ 'ಒಲಿದಂತೆ ಹಾಡುವೆ' ಹೀಗೆ ಅನೇಕವನ್ನು ಹೆಸರಿಸಬಹುದು.

ಈಚಿನ ದಶಕಗಳಲ್ಲಿ ಲಂಕೇಶರ 'ಟೀಕೆ ಟಿಪ್ಪಣಿ'ಯ ಲಂಕೇಶ್ ಪತ್ರಿಕೆಯ ಸಂಗ್ರಹಗಳಲ್ಲಿರುವ ರಾಮು ಎಂಬ ಹುಡುಗ, ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ ಹಾಗೂ 'ಗುಬ್ಬಚ್ಚಿ ಗೂಡು' ಇತ್ಯಾದಿ ಪ್ರಬಂಧಗಳು ಕನ್ನಡ ಗದ್ಯ ಸಾಹಿತ್ಯಕ್ಕೆ ಸಂದ ಅನನ್ಯ ಕೊಡುಗೆಗಳು. ಲಂಕೇಶ್ ಪತ್ರಿಕೆಯಲ್ಲಿ ಎಸ್.ಮಂಜುನಾಥ್‌ರ ಇಪ್ಪತ್ತಕ್ಕೂ ಹೆಚ್ಚು ಪ್ರಬಂಧಗಳು ಪ್ರಕಟಗೊಂಡಿವೆ. ಇವಿನ್ನೂ ಸಂಕಲನ ರೂಪದಲ್ಲಿ ಪ್ರಕಟವಾಗಿಲ್ಲ.

ಹೊಸ ತಲೆಮಾರಿನ ಪ್ರಬಂಧಕಾರರಲ್ಲಿ ಚಂದ್ರಶೇಖರ ಆಲೂರು ವೈದೇಹಿ ಮೊಗಳ್ಳಿ ಗಣೇಶ ಉತ್ತಮ ಕಥನ ಪ್ರಬಂಧಗಳನ್ನು ರಚಿಸುತ್ತಿದ್ದಾರೆ. ಇವರು ರಚಿಸುತ್ತಿರುವ ಪ್ರಬಂಧಗಳ ವಸ್ತು, ನಿರೂಪಣೆ ಹಿಂದೆಂದಿಗಿಂತಲೂ ಭಿನ್ನವೆನಿಸಿದೆ. ಅಂತರಂಗ ನಿರೀಕ್ಷಣೆ ಈ ಪ್ರಬಂಧಗಳಲ್ಲಿ ಎದ್ದು ಕಾಣುವ ಗುಣ. ಜಯಂತ ಕಾಯ್ಕಿಣಿಯವರ 'ಬೊಗಸೆಯಲ್ಲಿ ಮಳೆ' ಹಾಗೂ 'ಶಬ್ದತೀರ' ಶೀರ್ಷಿಕೆಯಡಿ ಪ್ರಕಟಗೊಂಡಿರುವ ಪ್ರಬಂಧಗಳು ವಿಶಿಷ್ಟ ಸಂವೇದನೆಗಳನ್ನು ಅಂತರ್ಗತವಾಗಿಸಿಕೊಂಡಿವೆ. ಬಿ.ಆರ್.ಲಕ್ಷ್ಮಣರಾಯರ 'ಇತ್ಯಾದಿ' ಕೃತಿ ಗಮನಾರ್ಹವಾದುದು.

ವಿವಿಧ ನಿಯತ ಕಾಲಿಕೆಗಳಲ್ಲಿ ಬೆಳಕು ಕಾಣುತ್ತಿರುವ ಹೊಸ ಪ್ರಬಂಧಕಾರರಲ್ಲಿ ಎಂ.ಆರ್.ಮಂದಾರವಲ್ಲಿ, ನಂದಾ. ಡಿ., ನರೇಂದ್ರ ರೈ ದೇರ್ಲ, ವಸುಮತಿ ಉಡುಪ, ಭಾರತೀ ಕಾಸರಗೋಡು, ಆರ್.ನಿರ್ಮಲ, ಜಯಾ ಯಾಜಿ, ಶಿರಾಲಿ, ಶೈಲಾ ಛಬ್ಬಿ, ಸೂರಿ ಹಾರ್ದಳ್ಳಿ, ಪ.ರಾಮಕೃಷ್ಣ ಶಾಸ್ತ್ರಿ, ಶ್ರೀನಿವಾಸ ಚಲವಾದಿ, ಹ.ಶಿ.ಭೈರವಟ್ಟಿ, ಜಾನಕಿ ಸುಂದರೇಶ, ಲೀಲಾ ದಾಮೋದರ, ಭುವನೇಶ್ವರಿ ಹೆಗಡೆ, ಪ್ರತಿಭಾ ನಂದಕುಮಾರ್, ರವಿ ಬೆಳಗೆರೆ ಮುಂತಾದವರು ಲಲಿತ ಪ್ರಬಂಧಗಳನ್ನು ಸೃಷ್ಟಿಸುತ್ತಿದ್ದಾರೆ.

ಕನ್ನಡ ವಿಮರ್ಶೆ 'ಲಲಿತ ಪ್ರಬಂಧ' ಪ್ರಕಾರವನ್ನು ಅಷ್ಟಾಗಿ ಗಮನಿಸಿಲ್ಲ. ಈ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳು ಬಿಡಿ ಬಿಡಿಯಾಗಿ ಪ್ರಬಂಧಕಾರರನ್ನು ಅಲ್ಲಲ್ಲಿ ಅನುಲಕ್ಷಿಸಿರುವುದನ್ನು ಬಿಟ್ಟರೆ ಸಮಗ್ರವಾದ ಸಮಾಜೋ - ಸಾಂಸ್ಕೃತಿಕ ಗ್ರಹಿಕೆಗಳನ್ನು ಅಭ್ಯಸಿಸಲು ವಿಪುಲವಾದ ಅವಕಾಶಗಳಿವೆ. (ಎಚ್.ಎಸ್.ಎಸ್.)

**ಕನ್ನಡದಲ್ಲಿ ಪ್ರವಾಸ ಸಾಹಿತ್ಯ :** ಕನ್ನಡ ಪ್ರವಾಸ ಸಾಹಿತ್ಯ 19ನೆಯ ಶತಮಾನದಲ್ಲಿಯೇ ಆರಂಭವಾಯಿತು. ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರು (ನೋಡಿ) 1890ರಲ್ಲಿ ದಕ್ಷಿಣ ಭಾರತ ಯಾತ್ರೆ ಎಂಬ ಪ್ರವಾಸ ಗ್ರಂಥವನ್ನು ಪ್ರಕಟಿಸಿದರು. ಮುಂದೆ 35 ವರ್ಷಗಳ ಕಾಲ ಯಾವ ಪ್ರವಾಸ ಗ್ರಂಥವೂ ಬರಲಿಲ್ಲ. 1920ರಲ್ಲಿ ವಿ.ಸೀ.ಯವರ ಪಂಪಾಯಾತ್ರೆ ಪ್ರಕಟವಾಯಿತು. ಈ ವಿಭಾಗದಲ್ಲಿ ಇದು ಆದ್ಯ ಹಾಗೂ ಮೇರುಕೃತಿ. ಲೇಖಕರು ತಮ್ಮ ಮಿತ್ರರೊಂದಿಗೆ ಹಂಪೆಗೆ ಹೋಗಿ, ಅಲ್ಲಿನ ಪಾಳು ಹಂಪೆಯನ್ನು ಕಂಡು ತಮಗಾದ ಅನುಭವವನ್ನು ಈ ಗ್ರಂಥದಲ್ಲಿ ಪಡಿಮೂಡಿಸಿದ್ದಾರೆ. ಇದೊಂದು ರಸಭರಿತ ಪ್ರಬಂಧ. ಇಲ್ಲಿ ಲೇಖಕರ ಅಗಾಧವಾದ ಲೋಕಾನುಭವ, ತತ್ತ್ವಚಿಂತನ ಮತ್ತು ಜೀವನ ದೃಷ್ಟಿಗಳ ತ್ರಿವೇಣೀಸಂಗಮವನ್ನು ಕಾಣಬಹುದು. ಎರಡು ದಿನಗಳ ಅಲ್ಪಾವಧಿಯಲ್ಲಿ ಇನ್ನೂರ ಐವತ್ತು ವರ್ಷಗಳ ಚರಿತ್ರೆಯನ್ನು ಸ್ವತಃ ಲೇಖಕರು ಇಲ್ಲಿ ಅನುಭವ ಮಾಡಿಸಿಕೊಡುತ್ತಾರೆ. ಸುಖ ದುಃಖಗಳೆರಡನ್ನೂ ಓದುಗರಿಗೆ ಉಣಬಡಿಸುತ್ತಾರೆ. ಕೊನೆಯಲ್ಲಿ ಬರುವ ಸ್ವಪ್ನ ಮಾಲಿಕೆಗಳಲ್ಲಿ ಗತಕಾಲದ ವೈಭವ, ವಿನಾಶಗಳು ಹೃದಯವಿದ್ರಾವಕವಾಗಿ ನಿರೂಪಿತವಾಗಿವೆ. ಕವಿಯ ಅನುಭವಕ್ಕೆ ಐತಿಹಾಸಿಕ ದೃಷ್ಟಿಯೂ ಉಜ್ವಲ ಅಭಿಮಾನವೂ ಬೆಸೆದುಕೊಂಡಿವೆ.

ಬಿ.ಪುಟ್ಟಯ್ಯನವರ ಅಭಿವೃದ್ಧಿ ಸಂದೇಶ ಪಶ್ಚಿಮ ದೇಶದಲ್ಲಿಯ ಪ್ರವಾಸದ ಪ್ರಥಮ ಗ್ರಂಥ. ವಿ.ಕೃ.ಗೋಕಾಕರ ಸಮುದ್ರದಾಚೆಯಿಂದ, ಇಂದಲ್ಲ ನಾಳೆ ಮತ್ತು ಸಮುದ್ರದೀಚೆಯಿಂದ ಗ್ರಂಥಗಳು ಕನ್ನಡ ಪ್ರವಾಸ ಸಾಹಿತ್ಯದ ಗಮನಾರ್ಹ ಕೃತಿಗಳು. 1936-37ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋದ ತಮ್ಮ ಅನುಭವಗಳನ್ನು ಪತ್ನಿ ಹಾಗೂ ಸ್ನೇಹಿತರನ್ನು ಸಂಬೋಧಿಸಿ ಬರೆದ ಪತ್ರಗಳ ಸಂಕಲನವೇ ಸಮುದ್ರದಾಚೆಯಿಂದ ಎಂಬ ಗ್ರಂಥ. ಇಂದಲ್ಲ ನಾಳೆ ಎಂಬ ಗ್ರಂಥದಲ್ಲಿ ಅಮೆರಿಕದ ಗಡಿಬಿಡಿಯ ಬದುಕು, ನಿರಾಸಕ್ತಿ, ನಾಗರಿಕತೆಗಳ ಚಿತ್ರಣ ಕಾವ್ಯಮಯವಾಗಿ ಮೂಡಿಬಂದಿದೆ. ಇಲ್ಲಿನ ನವೀನ ಚಂಪೂ ಶೈಲಿ ವಸ್ತು ನಿರೂಪಣೆಯ ಹೊಸತೊಂದು ಮಾರ್ಗವನ್ನು ತೆರೆದಿದೆ. 1967ರಲ್ಲಿ ಪಿ.ಇ.ಎನ್. ಸಮ್ಮೇಳನಕ್ಕಾಗಿ ಜಪಾನಿಗೆ ಹೋದಾಗಿನ ಅನುಭವ ಸಮುದ್ರದೀಚೆಯಿಂದ ಎಂಬ ಗ್ರಂಥದಲ್ಲಿ ಮೂಡಿವೆ. ಒಟ್ಟಿನಲ್ಲಿ ಗೋಕಾಕರಿಗೆ ಕಾವ್ಯದ ಮುಖ್ಯ ಪ್ರೇರಣೆಯೇ ಪ್ರವಾಸ ಎನ್ನುವ ಜಿ.ಎಸ್.ಶಿವರುದ್ರಪ್ಪನವರ ಮಾತು ಒಪ್ಪತಕ್ಕುದಾಗಿದೆ.

ಶಿವರಾಮ ಕಾರಂತರ ಅಪೂರ್ವ ಪಶ್ಚಿಮ (1953) ಪ್ರವಾಸ ಸಾಹಿತ್ಯದ ಬಹುಮುಖ್ಯ ಕೃತಿ. ಇದೊಂದು ಕಲೆಗಾರನ ಅನುಭವದ ಕಥೆ. ಇಲ್ಲಿ ಭಾವದ ಕಾವೂ ಆಲೋಚನೆಯ ತೀಕ್ಷ್ಣತೆಯೂ ಮಿಳಿತವಾಗಿವೆ. ಪಾಶ್ಚಾತ್ಯ ಪ್ರವಾಸದ ಅನುಭವಗಳು ಇಲ್ಲಿ ವಿಸ್ತಾರವಾಗಿ ಸವಿವರವಾಗಿ ಬಂದಿವೆ. ಕಾರಂತರ ಆತ್ಮಕಥನವಾದ ಹುಚ್ಚು ಮನಸ್ಸಿನ ಹತ್ತು ಮುಖಗಳು ಎಂಬ ಗ್ರಂಥದಲ್ಲೂ ಆಳನಿರಾಳದಂಥ ಅವರ ಬಹುಪಾಲು ಕಾದಂಬರಿಗಳಲ್ಲೂ ಪ್ರವಾಸಾನುಭವ ಕಥೆಯೊಂದಿಗೆ ಮಿಳಿತವಾಗಿ ಬಂದಿದೆ.

ದಿನಕರ ದೇಸಾಯಿಯವರ ನಾ ಕಂಡ ಪಡುವಣ, ಮನೋಹರ ಗ್ರಂಥಮಾಲೆಯವರ ನಡೆದು ಬಂದ ದಾರಿಯ ಮೂರನೆಯ ಸಂಪುಟದಲ್ಲಿ ಅಚ್ಚಾಗಿದೆ. ದೇಸಾಯಿಯವರು ಭಾರತದ ಪ್ರತಿನಿಧಿಯಾಗಿ ಅಂತಾರಾಷ್ಟ್ರೀಯ ಕೂಲಿಕಾರ ಪರಿಷತ್ತಿನಲ್ಲಿ ಭಾಗವಹಿಸಲು ಪ್ರವಾಸಮಾಡಿದಾಗಿನ ಅನುಭವಮಾಲಿಕೆಯೇ ಈ ಕೃತಿ. ಈ ಗ್ರಂಥದಲ್ಲಿ ದೇಸಾಯಿಯವರು ಕೂಲಿಕಾರರ ಸಂಘಟನೆ, ಸಾರಿಗೆ ವ್ಯವಸ್ಥೆ, ಶಿಸ್ತು, ಪಾಕಶಾಸ್ತ್ರ ಮುಂತಾದವುಗಳ ಬಗ್ಗೆ ಕಥೆಯ ರೀತಿಯಲ್ಲಿ ತಮ್ಮ ಅನುಭವಗಳನ್ನು ನೀಡಿದ್ದಾರೆ. ಅಮೆರಿಕವನ್ನು ಕುರಿತು ಬಂದ ಗ್ರಂಥಗಳಲ್ಲಿ ಬಿ.ಜಿ.ಎಲ್. ಸ್ವಾಮಿಯವರ ಅಮೆರಿಕದಲ್ಲಿ ನಾನು ಎಂಬುದು ಅತ್ಯುತ್ತಮ ಗ್ರಂಥ. ಸ್ವಾಮಿಯವರು ಸಸ್ಯವಿಜ್ಞಾನದಲ್ಲಿ ಸಂಶೋಧನೆ ನಡೆಸಲು ಅಮೆರಿಕಕ್ಕೆ ಹೋಗಿ ಆರು ವರ್ಷಗಳ ಕಾಲ ಅಲ್ಲಿದ್ದು, ಅಲ್ಲಿನ ಜನಜೀವನ ಸಂಸ್ಕೃತಿ ವ್ಯವಹಾರ ಸ್ವಭಾವ ಧರ್ಮ ಹಾಗೂ ಭಾರತೀಯ ಮತ್ತು ಅಮೆರಿಕದ ಜೀವನದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಕುರಿತು ಬರೆದಿದ್ದಾರೆ. 'ನಮ್ಮಂತೆಯೇ ಅಮೆರಿಕನ್ನರು ಅಮೆರಿಕನ್ನರಂತೆಯೇ ನಾವು' ಎಂಬುದು. ಅವರ ಅನುಭವ: ಕೃಷ್ಣಾನಂದ ಕಾಮತರ ನಾನೂ ಅಮೆರಿಕೆಗೆ ಹೋಗಿದ್ದೆ ಎಂಬುದು ಅಮೆರಿಕ ಪ್ರವಾಸವನ್ನು ವಿವರಿಸುವ ಮತ್ತೊಂದು ಉತ್ತಮ ಕೃತಿ. ಹೋಗುವ ಮುಂಚೆ ಹಲವು ಕಲ್ಪನೆಗಳನ್ನು ಕಟ್ಟಿಕೊಂಡು ಹೋಗಿ ಅಲ್ಲಿ ಹೋದ ಬಳಿಕ ತಾವು ಎದುರಿಸಿದ ಸಮಸ್ಯೆಗಳನ್ನು ಲೇಖಕರು ಹೊಸಬಗೆಯಲ್ಲಿ ವಿವರಿಸಿದ್ದಾರೆ.

ಶ್ರೀರಂಗರ ಶ್ರೀರಂಗಯಾತ್ರೆ ಮತ್ತೊಂದು ಉತ್ತಮ ವಿದೇಶಿ ಪ್ರವಾಸ ಗ್ರಂಥ'. ಯುರೋಪಿನ ಈ ಪ್ರವಾಸಕಥ'ನ ಕುತೂಹಲ ಭರಿತವಾಗಿದೆ. ಶ್ರೀರಂಗ, ನೆಗಳೂರು ರಂಗನಾಥ, ಎಚ್.ಎಲ್.ಪಾಟೀಲ -ಈ ಮೂವರೂ ಕೂಡಿ ಹಳೇಬೀಡು, ಬೇಲೂರು, ಶ್ರವಣಬೆಳಗೊಳ ಮುಂತಾದ ದಕ್ಷಿಣ ಮೈಸೂರಿನ ಪ್ರದೇಶಗಳಲ್ಲಿ ಮಾಡಿದ ಪ್ರವಾಸಕಥನ ಮುಕ್ಕಣ್ಣಯಾತ್ರೆ ಎಂಬ ಪುಸ್ತಕದಲ್ಲಿ ರಮ್ಯವಾಗಿ ಚಿತ್ರಿತವಾಗಿದೆ (1946).

ನವರತ್ನರಾವ್ ಬರೆದ ಪ್ಯಾರಿಸ್ಸಿನಿಂದ ಪ್ರೇಯಸಿಗೆ ಎಂಬ ಪುಸ್ತಕ ಆಕರ್ಷಕ ಶೈಲಿ ಹಾಗೂ ಸುಂದರ ಸನ್ನಿವೇಶಗಳಿಂದ ಕೂಡಿದೆ. ಪ್ಯಾರಿಸ್ಸಿನ ಸ್ವಚ್ಛಂದ ಪ್ರೇಮ ವಾತಾವರಣವನ್ನು ಚಿತ್ರಿಸುವುದರಲ್ಲಿ ರಾಮ್ ಯಶಸ್ವಿಯಾಗಿದ್ದಾರೆ. ವಕೀಲರಾದ ಕೆ.ಆರ್.ಕಾರಂತರು ಯುರೋಪಿನಲ್ಲಿ ಪ್ರವಾಸಮಾಡಿ ಪ್ರವಾಸಿಯ ಪತ್ರಗಳು (1951) ಎಂಬ ಗ್ರಂಥ'ವನ್ನು ರಚಿಸಿದ್ದಾರೆ. ಇದರಲ್ಲಿ ರಾಜಕೀಯದ ಮತ್ತು ಪ್ರಜಾಪ್ರಭುತ್ವದ ವಿಶ್ಲೇಷಣೆ ವಿಶೇಷವಾಗಿ ಬಂದಿದೆ. ಸಾಗರದಾಚೆ ಮತ್ತು ನಮ್ಮ ಕಾಗದಗಳು ಎಂಬೆರಡು ಹೊತ್ತಗೆಗಳಲ್ಲಿ ನಾಡಿಗ ಕೃಷ್ಣಮೂರ್ತಿಯವರು ಪತ್ರಿಕೋದ್ಯಮದ ವಿಷಯ ಸಂಗ್ರಹಣೆಗಾಗಿ ಅಮೆರಿಕದಲ್ಲಿ ಪ್ರವಾಸ ಮಾಡಿದಾಗಿನ ತಮ್ಮ ಅನುಭವಗಳನ್ನು ವ್ಯಕ್ತಪಡಿಸಿದ್ದಾರೆ. ಎಂ.ವೀರಪ್ಪನವರ ಸಯೋನರ ಜಪಾನ್, ಜಪಾನ್ ಪ್ರವಾಸದ ಅನುಭವಗಳನ್ನು ತಿಳಿಸುವ ಪತ್ರರೂಪದ ಕಥನ.

ವಿದೇಶಗಳಲ್ಲಿ ನಾಲ್ಕು ವಾರ ಎಂಬುದು ದೇಜಗೌ ಅವರ ಮೊದಲ ಪ್ರವಾಸ ಗ್ರಂಥ. ಈ ಕ್ಷೇತ್ರದ ಉತ್ತಮ ಕೃತಿಗಳಲ್ಲೊಂದು. 1970ರ ಅಕ್ಟೋಬರ್- ನವೆಂಬರ್ ತಿಂಗಳುಗಳಲ್ಲಿ ರಷ್ಯದ ಕೀವ್ ವಿಶ್ವವಿದ್ಯಾಲಯದಲ್ಲಿ ಲೆನಿನ್ ಪ್ರಶಸ್ತಿ ಸ್ವೀಕರಿಸಲೂ ಆಸ್ಟ್ರಿಯ, ಜರ್ಮನಿ ಹಾಗೂ ಲಂಡನ್ ವಿಶ್ವವಿದ್ಯಾಯಲಯಗಳನ್ನು ವೀಕ್ಷಿಸಲೂ ಕೈಗೊಂಡ ಪ್ರವಾಸ ಸಮಯದಲ್ಲಿನ ತಮ್ಮ ಅನುಭವಗಳ ದಿನಚರಿಯನ್ನು ಇಲ್ಲಿ ಕೊಡಲಾಗಿದೆ. 'ನನ್ನ ನಾಡು ಬಡವಾಗಿದ್ದರೂ ಅದೇ ನನಗೆ ಮೆಚ್ಚು; ನನ್ನ ಜನ ಹರಕು ಚಿಂದಿಯಲ್ಲಿದ್ದರೂ ಅವರೇ ನನಗೆ ಹೆಚ್ಚು; ನನ್ನ ನೆಲ ನನಗೆ ಹುಚ್ಚು. ಬೇರೆಯವರ ಬಗೆಗೆ ದ್ವೇಷವಿಲ್ಲ. ಅಷ್ಟೇ ಅಲ್ಲ ಅವರ ಬಗೆಗೆ, ಅವರು ಸಾಧಿಸಿರುವ ಸಿದ್ಧಿಯ ಬಗೆಗೆ ನನಗೆ ಅಪಾರ ಗೌರವ. ನಮ್ಮ ಸಂಸ್ಕೃತಿಗೆ ಬಾಧಕವಾಗದಂತೆ ಅದರ ಪ್ರಗತಿಯ ದೃಷ್ಟಿಯಿಂದ ಅನ್ಯ ಸಂಸ್ಕೃತಿಯ ಶ್ರೇಷ್ಠ ಗುಣಗಳನ್ನು ಅಳವಡಿಸಿಕೊಳ್ಳಬೇಕೆಂಬುದೇ ನನ್ನ ಸ್ಪಷ್ಟ ನಿಲುವು' ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಈ ಗ್ರಂಥದಲ್ಲಿ ಅವರು ಪ್ರವಾಸ ಮಾಡಿದ ದೇಶಗಳ ಜನರ ವಾಸ್ತವ ಚಿತ್ರಣ ನೈಜವಾಗಿ ಮೂಡಿಬಂದಿದೆ. ವಿದೇಶಿಯರ ಗುರಿ ನಿಲುವು ಕರ್ತವ್ಯ ಶ್ರದ್ಧೆ ತಾಯ್ನಾಡು ಮತ್ತು ತಾಯ್ನುಡಿಗಳ ಬಗ್ಗೆ ಅವರಿಗಿರುವ ಕಾಳಜಿಗಳು ಗ್ರಂಥದುದ್ದಕ್ಕೂ ಮಿನುಗುತ್ತವೆ.

ವಿದೇಶ ಯಾತ್ರೆಯನ್ನು ಕುರಿತ ಈ ಗ್ರಂಥ'ಗಳಲ್ಲದೆ ಹಲವು ಪತ್ರಿಕೆಗಳಲ್ಲಿ ಸಾಪ್ತಾಹಿಕ, ಮಾಸಿಕಗಳಲ್ಲಿ ಹಾಗೂ ಪ್ರಬಂಧ ಸಂಕಲನಗಳಲ್ಲಿ ಪ್ರಕಟವಾದ ಪ್ರವಾಸ ಸಾಹಿತ್ಯ ಲೇಖನಗಳಂತೂ ಅಸಂಖ್ಯಾತವಾಗಿವೆ. ಬಹುಪಾಲು ಉತ್ತಮ ಲೇಖನಗಳು ಹೀಗೆ ಚೆಲ್ಲಾಪಿಲ್ಲಿಯಾಗಿವೆ. ರಂ.ಶ್ರೀ.ಮುಗಳಿ, ಎಸ್.ಪಿ.ಭಟ್ಟ, ಬಸವರಾಜ ಕಟ್ಟೀಮನಿ, ಸ.ಸ.ಮಾಳವಾಡ, ಬಿ.ವಿ.ರಾಮನ್, ಭಾಸ್ಕರ್ ರಾವ್ ಮಾಲೂರ್ಕರ್, ಸಿದ್ಧವನಹಳ್ಳಿ ಕೃಷ್ಣಶರ್ಮ, ತೀ.ನಂ.ಶ್ರೀಕಂಠಯ್ಯ, ಪ.ಸು.ಭಟ್ಟ, ಆರ್.ಸಿ.ಹಿರೇಮಠ, ಹಾ.ಮಾ.ನಾಯಕ, ಸರೋಜಿನಿಮಹಿಷಿ, ಮತ್ತೀಹಳ್ಳಿ ನಾಗರಾಜರಾವ್, ಸಿಸು ಸಂಗಮೇಶ- ಮುಂತಾದವರ ಹೆಸರುಗಳನ್ನು ಉದ್ಧರಿಸಬಹುದು.

ಸರ್ಕಾರದ ಉನ್ನತ ಹುದ್ದೆಯಲ್ಲಿದ್ದು ವಿಶ್ವದಲ್ಲಿ ಹಲವು ಬಾರಿ ಸಂಚರಿಸಿ ಹಲವು ದೇಶದ ಹಲವು ಜನರ ಜೀವನ ಸಂಸ್ಕೃತಿಗಳನ್ನು ತುಂಬ ಹತ್ತಿರದಿಂದ ಕಂಡು ವಿದೇಶೀಯರ ಬಗೆಗೆ ಅತ್ಯಂತ ನೈಜವಾಗಿ ರಚಿತವಾಗಿರುವ ಗ್ರಂಥವೆಂದರೆ ಕೆ.ಪಿ.ಎಸ್.ಮೆನನ್ ಅವರ ವಿಶ್ವಪರ್ಯಟನೆ. ಇಂಗ್ಲಿಷಿನಲ್ಲಿರುವ ಈ ಗ್ರಂಥವನ್ನು ಮಾ.ಭೀ.ಶೇಷಗಿರಿರಾವ್‌ರವರು ಕನ್ನಡಕ್ಕೆ ಅನುವಾದಿಸಿ ಕನ್ನಡ ಪ್ರವಾಸ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆ ಕೊಟ್ಟಿದ್ದಾರೆ.

ಕನ್ನಡದಲ್ಲಿ ಪ್ರಕಟವಾಗಿರುವ ಪ್ರವಾಸ ಕಥನಗಳಲ್ಲಿ ಅರ್ಧಕ್ಕಿಂತ ಹೆಚ್ಚು ಗ್ರಂಥ'ಗಳು ಕ್ಷೇತ್ರ ಪರಿಚಯವನ್ನು ಮಾಡಿ ಕೊಡುವಂಥವು. ಭಾರತದ ಹಾಗೂ ಕರ್ನಾಟಕದ ಹಲವು ಕ್ಷೇತ್ರಗಳನ್ನು ಪರಿಚಯಿಸುವ ಈ ಗ್ರಂಥಗಳಲ್ಲಿ ಸಾಹಿತ್ಯ ಮೌಲ್ಯಕ್ಕಿಂತ ಹೆಚ್ಚಾಗಿ ಕ್ಷೇತ್ರ ಪರಿಚಯವೇ ಮುಖ್ಯ ಗುರಿಯಾಗಿದೆ. ಇಂಥ ಕೆಲವು ಗ್ರಂಥಗಳಲ್ಲಿ ಕ್ಷೇತ್ರಮಹಿಮೆಯನ್ನು ಕುರಿತು ರಚಿತವಾಗಿರುವ ಹಾಡುಗಳಲ್ಲಿ ಸಾಹಿತ್ಯಾಂಶವನ್ನು ಕಾಣಬಹುದಾಗಿದೆ. ಬಹುಪಾಲು ಗ್ರಂಥ'ಗಳು ಸಚಿತ್ರವಾಗಿರುವುದರಿಂದ ಆಕರ್ಷಕವಾಗಿವೆ. ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಬಹುದು.

ಕೃಷ್ಣ ನಾರಾಯಣ ಗೋಸಾಮಿ ಅವರ ಹಿಮಾಲಯ ದರ್ಶನ, ಕೈಲಾಸ - ಮಾನಸ ಸರೋವರ ಯಾತ್ರೆ ಮತ್ತು ಬದರಿಯಾತ್ರೆ, ಭಾರದ್ವಾಜರ ಸಚಿತ್ರ ಭಾರತಯಾತ್ರೆ, ಶ್ರೀನಿವಾಸ ಕಂಪನಿಯವರ ಸಚಿತ್ರ ವಿಜಯನಗರ, ನ.ರಾ.ಗಲಗಲಿಯವರ ಬದರಿನಾರಾಯಣ ದರ್ಶನ, ಜಿ.ವೆಂಕಟಯ್ಯನವರ ಚಿನ್ನದ ಗಿರಿ ಯಾತ್ರೆ, ಬನದ ಸೆರಗು, ಸೋಮನಾಥಾನಂದರ ಅಮರನಾಥ' ಯಾತ್ರೆ ಮತ್ತು ಹೈಮಾಚಲ ಸಾನ್ನಿಧ್ಯದಲ್ಲಿ, ಬಿ.ಶಿವಮೂರ್ತಿಶಾಸ್ತ್ರಿಗಳ ಕರ್ನಾಟಕ ಸಂದರ್ಶನ, ಯು.ರಾಘವೇಂದ್ರ ಭಟ್ಟರ ರಜತಪೀಠದಿಂದ ರಜತಾದ್ರಿಗೆ, ಮಹದೇವಿಯಮ್ಮನವರ ದೇವತಾತ್ಮ, ಪಿ.ಆರ್.ಜಯಲಕ್ಷ್ಮಮ್ಮನವರ ಬದರೀ ಯಾತ್ರೆ, ಮ.ನ.ಮೂರ್ತಿಯವರ ನಮ್ಮ ಪ್ರವಾಸ ಮತ್ತು ನಾವು ಕಂಡ ಬೆಂಗಳೂರು, ಡಿ.ಟಿ.ರಂಗಸ್ವಾಮಿಯವರ ಭಾರತ ಯಾತ್ರೆ, ಎಚ್.ಆರ್.ನಾಗರಾಜ್‌ರವರ ಹಿಮಾಚಲ ಪ್ರದೇಶ, ಜೆ.ವಿ.ನರಸಿಂಹಮೂರ್ತಿಯವರ ಆಸೇತುಹಿಮಾಚಲ ಯಾತ್ರೆ, ಎಂ.ವೆಂಕಟಾಚಲ ಭಟ್ಟರ ಕಾಶ್ಮೀರ ಅಮರನಾಥ' ಯಾತ್ರೆ, ಕೋ.ಚೆನ್ನಬಸಪ್ಪನವರ ದಕ್ಷಿಣೇಶ್ವರ ದರ್ಶನ, ಗುರುನಾಥ' ಜೋಶಿಯವರ ಪ್ರವಾಸ, ಭದ್ರಗಿರಿ ಕೇಶವದಾಸರ ದಾಸ ಕೀರ್ತನೆ ಮಂಡಳಿಯ ಪ್ರಥಮ ಯಾತ್ರೆ, ಕೆ.ಗಣೇಶಮಲ್ಯರ ಶರಾವತಿಯಿಂದ ಗೋದಾವರಿವರೆಗೆ, ಶ್ರೀರಂತಶಾಸ್ತ್ರೀಯವರ ಮಾನಸ ಸರೋವರ ಮತ್ತು ಕೈಲಾಸ ಕ್ಷೇತ್ರ ಪ್ರಕರಣ, ಟಿ.ಚಂದ್ರರಾಜ ಶೆಟ್ಟಿಯವರ ಮಂಗಳೂರಿನಿಂದ ಮಧುರೆಗೆ, ಕೆ.ಗೋಪಾಲಕೃಷ್ಣರಾಯರ ತಿರುಪತಿ ಯಾತ್ರೆ, ಎಂ.ಎನ್.ಶೇಷಾದ್ರಿ ಅಯ್ಯಂಗಾರ್ ಅವರ ಧರ್ಮಸ್ಥಳದ ಯಾತ್ರೆ, ವಿ.ನಾ.ಅವರ ಯಾತ್ರಿಕನ ಪತ್ರಗಳು, ಕೆ.ಕೊಟ್ಟುರಗೌಡರ ನಮ್ಮ ಪ್ರವಾಸ, ಎಸ್.ರಜತಾದ್ರಿಯವರ ಪಶ್ಚಿಮದ ಹೊಂಬೆಳಕು ಮುಂತಾದ ಗ್ರಂಥಗಳು ಒಂದೇ ಮಾಲಿಕೆಯಲ್ಲಿ ಬರಬಹುದಾದ ಕೃತಿಗಳಾಗಿವೆ.

ಇವೇ ಅಲ್ಲದೆ ಬಾಲಕನೊಬ್ಬ ಬಾಲಕರಿಗಾಗಿ ಬರೆದ ಅಜಿತಕುಮಾರನ ನನ್ನ ಪ್ರವಾಸ ಕಥನ, ಎಸ್.ವಿ.ಕೃಷ್ಣಮೂರ್ತಿರಾಯರ ದಿಲ್ಲಿಯ ಪತ್ರಗಳು, ಎಚ್.ವಿ.ಶ್ರೀರಂಗರಾಜು ಅವರ ಸೋವಿಯೆಟ್ ದಿನಚರಿ, ಗೊರೂರು

ರಾಮಸ್ವಾಮಿ ಅಯ್ಯಂಗಾರ್ ಅವರ ಮಹಾತ್ಮಾ ಗಾಂಧಿಯವರ ದಕ್ಷಿಣ ಯಾತ್ರೆ, ಗುಂಡ್ಮಿ ಚಂದ್ರಶೇಖರ ಐತಾಳರ ಸೌಂದರ್ಯದ ಸಾನ್ನಿಧ್ಯದಲ್ಲಿ, ಮಿರ್ಜಿ ಅಣ್ಣಾರಾಯರ ನಾ ಕಂಡ ನಾಡು, ಎಚ್.ಜಿ.ಜೋಶಿಯವರ ಶಿಲಾಹೃದಯ, ವೆಂ.ಮು.ಜೋಶಿಯವರ ಸೈನಿಕ ಉವಾಚ, ಎಸ್.ಎಸ್.ಗದಗಕರ್‌ರವರ ಗೋವಾಯಾತ್ರೆ, ಟಿ.ಚಂದ್ರರಾಜ ಶೆಟ್ಟಿ ಅವರ ಭಾರತದ ಮಹಾನಗರಗಳು, ಎ.ಎಂ.ಅಣ್ಣಿಗೇರಿಯವರ ಕರ್ನಾಟಕದ ಸಾಂಸ್ಕೃತಿಕ ಸ್ಥಳಗಳು, ಹಿರೇಮಲ್ಲೂರು ಈಶ್ವರನ್ ಅವರ ಕವಿ ಕಂಡ ನಾಡು - ಕನ್ನಡ ಪ್ರವಾಸ ಸಾಹಿತ್ಯಕ್ಕೆ ಕೊಟ್ಟ ಮಹತ್ವದ ಕೊಡುಗೆಗಳಾಗಿವೆ.

ಕ್ಷೇತ್ರ ಪರಿಚಯ ಗ್ರಂಥಗಳಲ್ಲಿ ಶಿವರಾಮ ಕಾರಂತರ ಅಬುವಿನಿಂದ ಬರಾಮಕ್ಕೆ ಒಂದು ಅಪೂರ್ವ ಕೃತಿ. ಅಬು, ಅಜ್ಮೀರ, ಪುಷ್ಕರ, ಜಯಪುರ, ಸಿಮ್ಲಾ, ಆಗ್ರ, ಕಾಶಿ, ಡಾಲ್ಮಿಯಾ, ಕಲ್ಕತ್ತ ಮತ್ತು ಬರಾಮಗಳಲ್ಲಿ ಸಂಚರಿಸಿ ಅಲ್ಲಿನ ನಿಸರ್ಗ ಮತ್ತು ಸಂಗೀತ, ಸಾಹಿತ್ಯ, ಜನಜೀವನಾದಿಗಳನ್ನು ಈ ಗ್ರಂಥದಲ್ಲಿ ಕಂಡರಿಸಿದ್ದಾರೆ. ಕೆ.ಬಿ. ಪ್ರಭುಪ್ರಸಾದರ ದೇಗುಲಗಳ ದಾರಿಯಲ್ಲಿ ಎಂಬುದು ಒಂದು ಉತ್ತಮ ಗ್ರಂಥ. ಸಹಜವಾಗಿ, ನೇರವಾಗಿ, ಸರಳವಾಗಿ ತಮ್ಮ ಅನುಭವಗಳನ್ನು ಲೇಖಕರು ಇಲ್ಲಿ ಮೂಡಿಸಿದ್ದಾರೆ. ಹ.ರಾ.ಪುರೋಹಿತರ ರಾಮೇಶ್ವರ ಕನ್ಯಾಕುಮಾರಿ ದರ್ಶನ ಮತ್ತು ಬದರಿ ಕೇದಾರನಾಥ ದರ್ಶನಗಳು ಭಕ್ತಿ ಭಾವದಿಂದ ಬರೆದ ಗ್ರಂಥಗಳಾಗಿವೆ.

1943ರಲ್ಲಿ ಶಿವಮೊಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಿತ್ರರೊಂದಿಗೆ ಹೋಗಿದ್ದ ಮಾಸ್ತಿ ನರಸಿಂಗರಾಯರು ತಮ್ಮ ಮತ್ತು ಮಿತ್ರರ ಅನುಭವಗಳನ್ನು ಕನ್ನಡ ಯಾತ್ರೆಯಲ್ಲಿ ತಂದುಕೊಟ್ಟಿದ್ದಾರೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ವಾರ್ಧಾಯಾತ್ರೆಯಲ್ಲಿ ಕಥನ ಕೌಶಲ, ವರ್ಣನೆ, ವಿನೋದ ವಿಲಾಸ ಮೊದಲಾದ ಅನೇಕ ಗುಣಗಳು ಕೃಷ್ಣಶರ್ಮರ ಮನಃ ಶಕ್ತಿಗಳ ಪರಿಪಾಕದೊಡನೆ ಇದರಲ್ಲಿ ಸ್ವಚ್ಛಂದವಾಗಿ ಬಂದಿವೆ ಎಂದು ಬೇಂದ್ರೆಯವರು ಅಭಿಪ್ರಾಯಪಟ್ಟಿದ್ದಾರೆ. ಇವರ ಭೂದಾನಯಜ್ಞ ಯಾತ್ರೆ ಉತ್ತರ ಭಾರತ ಪ್ರವಾಸದ ವಿವರವನ್ನೊಳಗೊಂಡ ಮತ್ತೊಂದು ಕೃತಿ. ಒಕ್ಕಲುತನದ ಪ್ರವಾಸ ಗ್ರಂಥಗಳಲ್ಲಿ ವೀ.ಚ.ಹಿತ್ತಲಮನಿಯವರ ಶರಾವತಿಯಿಂದ ಸಾಬರಮತಿ, ವಿ.ಪುರಂದರ ರೈರವರ ನಮ್ಮ ಪ್ರವಾಸಾನುಭವ ಗಣನೀಯ ಕೃತಿಗಳು.

ಜಿ.ಪಿ.ರಾಜರತ್ನಂ ಅವರ ಚೀನಾದೇಶದ ಬೌದ್ಧ ಯಾತ್ರಿಕರು, ಫಾಹಿಯಾನನ ಕ್ಷೇತ್ರಯಾತ್ರೆ ಎಂಬುವು ವಿದೇಶೀ ಯಾತ್ರಿಕರ ಅನುಭವಗಳನ್ನು ಕುರಿತ ಅನುವಾದ ಗ್ರಂಥಗಳು. ಪ್ರಾಚೀನ ಕಾಲದಿಂದಲೂ ಭಾರತಕ್ಕೆ ಬಂದು ಹೋದ ನೂರಾರು ಪ್ರವಾಸಿಗಳ ಪ್ರವಾಸ ಕಥನವನ್ನು ಸಮಗ್ರವಾಗಿ ಕನ್ನಡಕ್ಕೆ ತಂದುಕೊಟ್ಟ ಕೀರ್ತಿ ಎಚ್.ಎಲ್.ನಾಗೇಗೌಡರಿಗೆ (ನೋಡಿ) ಸಲ್ಲುತ್ತದೆ. ಮಾರ್ಕೋಪೋಲೋನ ಪ್ರವಾಸ ಕಥನವನ್ನು ಮೊದಲು ಕನ್ನಡಕ್ಕೆ ತಂದು, ಈ ಅನುವಾದದಿಂದ ಪ್ರೋತ್ಸಾಹಿತರಾಗಿ, ದಶಕಗಳಷ್ಟು ಕಾಲ ಇಡೀ ಭಾರತದಲ್ಲಿ ಸಂಚರಿಸಿ ಹಲವು ಪ್ರಾಚ್ಯ ಕೋಶಾಗಾರಗಳಲ್ಲೂ ಗ್ರಂಥ ಹಾಗೂ ವಸ್ತು ಸಂಗ್ರಹಾಲಯಗಳಲ್ಲೂ ಹುದುಗಿದ್ದ ವರದಿಗಳನ್ನು ಹೆಕ್ಕಿ ತಂದು ಅವುಗಳ ಸಾರವನ್ನು ಭಟ್ಟಿ ಇಳಿಸಿ ಸು.200 ಜನ ವಿದೇಶೀಪ್ರವಾಸಿಗರ ಪ್ರವಾಸ ಕಥನವನ್ನು ಕನ್ನಡದಲ್ಲಿ ಪ್ರವಾಸಿ ಕಂಡ ಇಂಡಿಯಾ ಎಂಬ ಹೆಸರಿನಲ್ಲಿ ಐದು ಬೃಹತ್ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಈ ಗ್ರಂಥಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅತ್ಯಮೂಲ್ಯ ಕಾಣಿಕೆ ಕೊಟ್ಟು ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ರಾವಬಹಾದ್ದೂರ ಅವರ ನಾನು ಕಂಡ ಬಾಂಗ್ಲಾದೇಶ (1972) ಕೃಷ್ಣಾನಂದ ಕಾಮತರ ವಂಗದರ್ಶನ (1972), ಜಿ.ಎಸ್.ಶಿವರುದ್ರಪ್ಪನವರ ವಿದೇಶಗಳಲ್ಲಿ ಇಪ್ಪತ್ತೆರಡು ದಿನ (1973), ದೇಜಗೌ ಅವರ ಪ್ರವಾಸಿಯ ದಿನಚರಿ (1974), ಹ.ವೆಂ.ನಾಗರಾಜರಾವ್ ಅವರ ನವರಷ್ಯದ ನೋಟ (1974), ಶಾಂತಾದೇವಿ ಮಾಳವಾಡ ಅವರ ಶ್ರೀಗಿರಿಯಿಂದ ಹಿಮಗಿರಿಗೆ (1974)- ಇವು ಇತರ ಕೆಲವು ಮುಖ್ಯ ಪ್ರವಾಸ ಗ್ರಂಥಗಳು.

ಶಾಂತಾದೇವಿ ಮಾಳವಾಡರ ಶ್ರೀಗಿರಿಯಿಂದ ಹಿಮಗಿರಿಗೆ ಹಾಗೂ ರುಕ್ಮಿಣಿ ಗಿರಿಮಾಜಿಯವರ ಬೆಂಗಳೂರಿಂದ ಬದರಿನಾಥಕ್ಕೆ (1974), ಎಂಬ ಕೃತಿಯು ತೀರ್ಥಯಾತ್ರೆಯು ನೆಪದಲ್ಲಿ ಭಾರತದ ಹಲವು ಪ್ರದೇಶಗಳ ಸಾಂಸ್ಕೃತಿಕ ಬದುಕಿನ ಪದರಗಳನ್ನು ಚಿತ್ರಿಸುತ್ತವೆ. ಹ.ವೆಂ.ನಾಗರಾಜರಾವ್ ಅವರ ನವರಷ್ಯದ ನೋಟ (1974) ಲೆನಿನ್ ನಾಯಕತ್ವದ ಮಹಾಕ್ರಾಂತಿಯ ಅನಂತರದ ರಷ್ಯದ ವಿವಿಧ ರೀತಿಯ ಸ್ಥಿತ್ಯಂತರಗಳನ್ನು ದಾಖಲಿಸುತ್ತದೆ.

ಜವಹರಲಾಲ್ ನೆಹರೂರವರು ಕೆ.ಪಿ.ಎಸ್.ಮೆನೆನ್‌ರವರ ಗ್ರಂಥಕ್ಕೆ ಮುನ್ನುಡಿ ಬರೆಯುತ್ತ ಹೀಗೆ ಹೇಳಿದ್ದಾರೆ: 'ಪ್ರವಾಸ ಮಾಡುವುದು ಒಳ್ಳೆಯದು; ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ'. ಕನ್ನಡಿಗರು ಈ ಹವ್ಯಾಸ ಬೆಳೆಸಿಕೊಳ್ಳಲು ಸಾಕಷ್ಟು ಸರಕಿದೆ. ಪ್ರವಾಸ ಸಾಹಿತ್ಯದ ಬೆಳೆ 80 ಮತ್ತು 90ರ ದಶಕದಲ್ಲಿ ಅಪೂರ್ವವೂ ಸಾಹಿತ್ಯ ಶ್ರೀಮಂತವೂ ಆಗಿದೆಯೆಂದು ಅಭಿಮಾನದಿಂದಲೇ ಹೇಳಬಹುದಾದಷ್ಟು ವಿಪುಲ ಸಂಖ್ಯೆ, ಭಿನ್ನ ವಿಭಿನ್ನ ದೃಷ್ಟಿಕೋನ ಹಾಗೂ ಅನುಭವದ ಪ್ರವಾಸ ಕೃತಿಗಳು ಪ್ರಕಟವಾಗಿರುವುದನ್ನು ನೋಡಬಹುದಾಗಿದೆ. ಪ್ರತಿಯೊಬ್ಬ ಲೇಖಕನೂ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಹೊಸ ನಾಡಿನ ಹೊಸ ಕತೆಯೊಂದನ್ನು ಕೊಟ್ಟಿದ್ದಾನೆ. ಕೆಲವೊಂದು ಕಥನಗಳಂತೂ ಜಾಗತಿಕ ಪ್ರವಾಸ ಸಾಹಿತ್ಯ ಕೃತಿಗಳ ಮಟ್ಟಕ್ಕೆ ನಿಲ್ಲುವಷ್ಟು ಚೆನ್ನಾಗಿವೆ. ಶೈಕ್ಷಣಿಕ ಮಹತ್ವ ಹಾಗೂ ವಿಭಿನ್ನ ಅನುಭವದ ನೆಲೆಗಳು ಇಂದು ಪ್ರವಾಸ ಸಾಹಿತ್ಯದ ಒಳಸೂತ್ರವಾಗಿ ನಿಂತಿವೆ. ಪ್ರವಾಸಾನುಭವ ಕಥನ, ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ- ಹೀಗೆ ಭಿನ್ನ ಕೋನಗಳಿಂದ ಅನ್ಯ ಸಂಸ್ಕೃತಿಯನ್ನು ಸಾಂದ್ರವಾಗಿ ತಾಗುವ ದಿಕ್ಕಿನಲ್ಲಿ ಸಾಗಿದೆ. ಈ ಪ್ರಯತ್ನದ ಹಾದಿಯಲ್ಲಿ ಪ್ರವಾಸ ಸಾಹಿತ್ಯದ ಸಂಖ್ಯೆಯೂ ಮಹಿಳಾ ಬರೆಹಗಾರ್ತಿಯರ ಸಂಖ್ಯೆಯೂ ವೃದ್ಧಿಸಿದೆ. ಸ್ವಾತಂತ್ರ್ಯೋತ್ತರ ಕಾಲದಿಂದ ಇಲ್ಲಿಯವರೆಗೆ 50ಕ್ಕೂ ಹೆಚ್ಚು ಮಹಿಳಾ ಪ್ರವಾಸ ಕಥನಗಳು ದೊರಕುತ್ತವೆ. ಪ್ರವಾಸಕ್ಕಾಗಿ ಒದಗುತ್ತಿರುವ ಕಾರಣಗಳೂ ಗಮನಾರ್ಹವಾಗಿ ಹೆಚ್ಚಾಗಿವೆ. ಯುನೆಸ್ಕೋ ಸೇವೆಗಾಗಿಯೋ ವಿವಿಧ ಸಾಹಿತ್ಯ ಸಂಘಗಳ ಮೂಲಕವೋ ಸಾಂಸ್ಕೃತಿಕ ತಂಡಗಳ ಪರವಾಗಿಯೋ ಅಕಾಡೆಮಿಗಳ ನೆರವಿನಿಂದಲೋ ಕೆಲವೊಮ್ಮೆ ಸ್ವಂತ ಖರ್ಚಿನಿಂದಲೋ ದೇಶೀಯ ಹಾಗೂ ವಿದೇಶೀಯ ಸ್ಥಳಗಳ ಪ್ರವಾಸ ಸಮೃದ್ಧವಾಗಿದೆ. (ಜಿ.ಎಸ್.ಪಿ.ಎಂ.)

ಹೊ.ಶ್ರೀನಿವಾಸಯ್ಯನವರ ನಾ ಕಂಡ ಜರ್ಮನಿ (1975), ದೇಜಗೌ ಅವರ ಆಫ್ರಿಕಾ ಯಾತ್ರೆ (1975) ಸಾಂಸ್ಕೃತಿಕ ಹಾಗೂ ಜನಪದೀಯ ನೆಲೆಗಳನ್ನು ಕುರಿತ ಅಧ್ಯಯನ ಶೀಲ ದೃಷ್ಟಿಕೋನವನ್ನು ಹೊಂದಿವೆ. ಆಶಾ ಪೋತೆದಾರ್ ಅವರ ಪೌರ್ವಾತ್ಯ ದೇಶಗಳ ಹಕ್ಕಿನೋಟ (1977) ಎಂಬ ಕೃತಿಯಲ್ಲಿ ಜಪಾನ್, ಹಾಂಕಾಂಗ್, ಥಾಯ್‌ಲೆಂಡ್‌ಗಳಲ್ಲಿ ಕಾರ್ಖಾನೆಗಳ ಕುರಿತ ಕುತೂಹಲಗಳಿವೆ. ವಿವಿಧ ಸ್ಥಳಗಳ ದರ್ಶನ ಮಾಡಿಸುವ ಅನುಪಮಾ ನಿರಂಜನ ಅವರ ಸ್ನೇಹಯಾತ್ರೆ (1978), ಕೊಡತ್ತೂರು ನಯನಾಭಿರಾಮ ಉಡುಪರ ಔತ್ತರೇಯ ಖಂಡ ದರ್ಶನ (1978), ರಾಗು ಜೋಶಿಯವರ ರಾಯಚೂರಿನಿಂದ ರಾಮೇಶ್ವರದಾಟ (1978) - ಇವುಗಳನ್ನು ಹೆಸರಿಸಬಹುದು. ಶ್ರೀ ಮೂಜಗಂ ಅವರ ನಮ್ಮ ವಿದೇಶಯಾತ್ರೆ (1979), ಉ.ಕಾ.ಸುಬ್ಬರಾಯಚಾರ್ ಅವರ ಸೋವಿಯತ್ ನಾಡಿನಲ್ಲಿ ಹತ್ತುದಿನಗಳು (1980), ಎಂ.ಕೆ.ಇಂದಿರಾ ಅವರ ಅನುಭವ ಕುಂಜ (1980) ಕೃತಿಗಳೂ ಇದೇ ಸಾಲಿನಲ್ಲಿ ಬರುವಂಥವು.

ಇಲ್ಲಿ ವಿಶೇಷವಾಗಿ ದಾಖಲಿಸಬೇಕಾದ ಎರಡು ಮುಖ್ಯ ಕೃತಿಗಳೆಂದರೆ ಎ.ಎನ್.ಮೂರ್ತಿರಾಯರ ಅಪರವಯಸ್ಕನ ಅಮೆರಿಕಾ ಯಾತ್ರೆ (1979) ಹಾಗೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅಮೆರಿಕದಲ್ಲಿ ಗೊರೂರು (1979). ಶೈಕ್ಷಣಿಕ ಮೌಲ್ಯವುಳ್ಳ ಪರಸಂಸ್ಕೃತಿ, ಜೀವನ ಸಂಪ್ರದಾಯಗಳನ್ನು ಅತ್ಯಂತ ನಿಕಟವೆಂಬಂತೆ ಪರಿಚಯಿಸುವ ಶೈಲಿ ಈ ಕೃತಿಗಳ ವೈಶಿಷ್ಟ್ಯ. ಹಾಸ್ಯದ ಲೇಪನವುಳ್ಳ ಅಮೆರಿಕದಲ್ಲಿ ಗೊರೂರು ನಮ್ಮನ್ನು ಹೆಚ್ಚು ಆಕರ್ಷಿಸುತ್ತದೆ. ಈ ಎರಡೂ ಕೃತಿಗಳಲ್ಲಿ ಸಾಮ್ಯವಿದೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ದೇಶಗಳ ಸಂಸ್ಕೃತಿಗಳನ್ನು ಹೋಲಿಕೆಯ ಮಾನದಂಡದಿಂದ ವಿಶ್ಲೇಷಿಸದೆ ಸಣ್ಣಸಣ್ಣ ಸಂಗತಿಗಳನ್ನೂ ನಿರ್ಲಕ್ಷಿಸದೆ,

ಹೇಗೆ ಬೃಹತ್ತಾಗಿ ಬೆಳೆದಿವೆ ಎಂಬ ಪರಿಶೀಲನಾ ದೃಷ್ಟಿಯಿದೆ. ಪ್ರವಾಸ ಸಾಹಿತ್ಯಗಳ ಸಾಲಿನಲ್ಲಿ ಈ ಕೃತಿಗಳು ಭಿನ್ನವಾಗಿ ನಿಲ್ಲುವುದೇ ಈ ವೈಶಿಷ್ಟ್ಯದಿಂದ.

ಸೀತಮ್ಮ ನಂಜೇಗೌಡ ಅವರ ನಾ ಕಂಡ ಅಮೆರಿಕಾ (1981), ಸರೋಜಾ ಚಾಮರಾಜರ ಉತ್ತರ ಭಾರತ ಪ್ರವಾಸ ಕುರಿತ ಸಿಂಹಾಚಲದಿಂದ ಹೈಮಾಚಲದವರೆಗೆ (1981), ಕು.ಶಿ.ಹರಿದಾಸಭಟ್ಟರ ಜಗದಗಲ (1981), ಸರೋಜಾ ಗೋಪಾಲ್ ಅವರ ಭೂಪ್ರದಕ್ಷಿಣೆ (1982)- ಈ ಕೃತಿಗಳು ಸಾಂಸ್ಕೃತಿಕ ಭಿನ್ನತೆಗಳನ್ನು ವಿವಿಧ ನೆಲೆಗಳಲ್ಲಿ ಪರಿಚಯಿಸಿಕೊಡುತ್ತವೆ. ಎಚ್.ವಿ.ಶ್ರೀನಿವಾಸರಾವ್ ಅವರ ವೇಲ್ಸ್ ದಿನಚರಿಯಿಂದ (1982) ಹಾಗೂ ಜಿ.ಗೋಪಾಲ್ ಅವರ ಮೈಸೂರಿನಿಂದ ಮೆಕ್ಸಿಕೋಗೆ (1982) ಕೃತಿಗಳೂ ಭಿನ್ನ ಭಿನ್ನ ಸಾಂಸ್ಥಿಕ ಯೋಜನೆಗಳ ರೀತಿನೀತಿಗಳನ್ನು ಪರಿಶೀಲಿಸಿವೆ.

ಯುನೆಸ್ಕೋ ಪ್ರವಾಸದ ಈಜಿಪ್ಟ್, ಇರಾನ್, ನೈಜೀರಿಯ, ಘಾನಾ, ರೊಮೇನಿಯ, ಫಿಲಿಪ್ಪೈನ್ಸ್, ಇಂಡೋನೇಷ್ಯಗಳ ಸಾಂಸ್ಕೃತಿಕ ವರದಿ ನೀಡುವ ಎಚ್.ಕೆ.ರಂಗನಾಥ'ರ ಪರದೇಶಿಯಾದಾಗ (1983), ಕು.ಶಿ.ಹರಿದಾಸಭಟ್ಟರ ಒಮ್ಮೆ ರಷಿಯಾ ಒಮ್ಮೆ ಇತಾಲಿಯಾ (1983), ವಿ.ಪುಟ್ಟಮಾದಪ್ಪನವರ ನೆಮ್ಮೆಗೆಯ ನಾಡು, ಅನುಪಮಾ ನಿರಂಜನರ ಅಂಗೈಯಲ್ಲಿ ಯುರೋ ಅಮೆರಿಕಾ (1984), ಎಡಿನ್‌ಬರೋದಲ್ಲಿನ ವೈದ್ಯಕೀಯ ವ್ಯವಸ್ಥೆಯನ್ನೂ ಆಸ್ಪತ್ರೆಯ ನಿಯಮಾವಳಿಗಳನ್ನೂ ದಾಖಲಿಸುವ ಹಾಗೂ ಆ ಹಿನ್ನೆಲೆಯಲ್ಲಿ ಅಲ್ಲಿನ ಸಾಮಾಜಿಕ ಎತ್ತರ ಬಿತ್ತರಗಳನ್ನು ಪರಿಶೀಲಿಸುವ ಜಿ.ಗೋಪಾಲರ ವೈದ್ಯನ ವಿದೇಶ ಯಾತ್ರೆ (1984) ಮುಂತಾದ ಕೃತಿಗಳು ಭಿನ್ನ ಭಿನ್ನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಐತಿಹಾಸಿಕ ದೃಷ್ಟಿಕೋನಗಳಿಂದ ಆಯಾ ದೇಶಗಳನ್ನು ವಿಮರ್ಶಿಸುವ ಕೃತಿಗಳಾಗಿವೆ. ಈ ನಿಟ್ಟಿನಲ್ಲಿ ರಂಜನಭಟ್ಟ ಅವರ ಕುಬೇರ ರಾಜ್ಯದ ಚಿತ್ರವಿಚಿತ್ರ (1983) ಕೃತಿಯನ್ನು ಗಮನಿಸಬೇಕು. ಅಮೆರಿಕದ ವ್ಯಾಪಾರೀಕರಣದ ಗುಣ ಆ ಸಮಾಜದಲ್ಲಿ ಸೃಷ್ಟಿಸಿರುವ ಚಿತ್ರ ವಿಚಿತ್ರಗಳು, ಮೃತ್ಯುವಿನ ಸಮ್ಮುಖದಲ್ಲಿ ಮನುಷ್ಯನ ಭಾವ ಭಾವನೆಗಳ ಚಿತ್ರ, ಅಮೆರಿಕೆಯ ಜೀವನ ವ್ಯವಸ್ಥೆಯ ಒಳಚಿತ್ರಗಳ ಪರಿಚಯವನ್ನು ಈ ಕೃತಿ ನೀಡುತ್ತದೆ. ಅಲ್ಲಲ್ಲಿ ಬರುವ ಅಮೆರಿಕದ ನಿಸರ್ಗ ನಿರ್ಜನವಾದುದು, ಬರ್ಕಲಿ ಹೂವಿಲ್ಲದ ಹಕ್ಕಿಯಿಲ್ಲದ ಊರು ಎಂಬ ಮಾತುಗಳು ಕುಬೇರ ರಾಜ್ಯದ ನಿರ್ಜೀವ ಪರಿಸರವನ್ನು ದಾಖಲಿಸುತ್ತದೆ.

ಶಿರಂಗಲ್ಲು ಈಶ್ವರಭಟ್ಟರ ಅಮರನಾಥ' ದರ್ಶನ (1984), ದೊಡ್ಡೇರಿ ವೆಂಕಟರಾವ್ ಅವರ ಏಕಾಕಿ ಪ್ರವಾಸಿ (1984), ನಾ ಕಂಡ ಪಡುವಣ, ಎಚ್.ಎಸ್.ಹರಿಶಂಕರ್ ಅವರ ಸುಂದರ ಮಾಸ್ಕೋ ಸುಂದರ ರಶಿಯಾ (1985), ಗೌತಮರ ನಯಾಗರಾಕ್ಕೆ ಐದು ಮೈಲಿ, ಜಿ.ಗೋಪಾಲರ ಬೆಂಗಳೂರಿಂದ ಬಾರ್ಸೆಲೋನಾಕ್ಕೆ- ಇವು ಗಮನಿಸಬೇಕಾದಂತಹ ಕೃತಿಗಳು. ನೀಳಾದೇವಿಯವರ ನಾ ಕಂಡ ಆ ಖಂಡ (1985) ಅಮೆರಿಕದ ಶ್ರೀಮಂತಿಕೆಗೆ ಕಾರಣವಾಗುವ ಅವರ ಜೀವನಶ್ರದ್ಧೆ, ಅಪಾರ ಪರಿಶ್ರಮದ ಜೀವನವನ್ನು ವ್ಯವಸ್ಥಿತ ಸಾಮಾಜಿಕ ಬದುಕು, ಕಾಲವನ್ನು ಬಳಸಿಕೊಳ್ಳುವಲ್ಲಿನ ಶಿಸ್ತು- ಇವುಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸುತ್ತದೆ. ಇದೇ ಸಾಲಿನಲ್ಲಿ ಬರುವ ನಭ ಅವರ ಕ್ಯಾಮರೂನಿನ ಬಣಗಳೊಡನೆ (1985) ಎಂಬ ಕೃತಿಯಲ್ಲಿ ಆಫ್ರಿಕದ ಕ್ಯಾಮರೂನನ್ನು ಅಲ್ಲಿಯ ಜನ ದೇವತೆಗಳ ರಥ' ಎಂದು ಬಣ್ಣಿಸಿರುವುದನ್ನು ವಿವರಿಸಲಾಗಿದೆ. ಎಚ್.ಎಸ್.ರಾಘವೇಂದ್ರರಾಯರ ಜನಗಣಮನ ಎಂಬ ಕೃತಿಯಲ್ಲಿ ಪಶ್ಚಿಮ ಬಂಗಾಲವನ್ನು ಅತೀ ವ್ಯಾವಹಾರಿಕ ಜಗತ್ತು ಎಂದೂ ಅಲ್ಲಿನ ಅರಾಜಕತೆಯ ಹಿಂದೆ ಒಂದು ಜೀವಂತಿಕೆಯೂ ನಿಗೂಢ' ಚೆಲುವಿಕೆಯೂ ಇರುವುದನ್ನು ಗುರುತಿಸಿದ್ದಾರೆ. ನಭ ಅವರು ಯುನೆಸ್ಕೋ ಸೇವೆಯಲ್ಲಿ (1985) ಎಂಬ ಕೃತಿಯಲ್ಲಿ ಇಂಡೊನೇಷ್ಯದ ಪ್ರಸಿದ್ಧ ಬೋರಾಂ ಬೋದೂರಿನ ಒಂಬತ್ತು ಅಂತಸ್ತುಗಳ ಬೌದ್ಧ ಸ್ತೂಪವನ್ನು ವಿಶಿಷ್ಟವಾಗಿ ವರ್ಣಿಸಿದ್ದಾರೆ. ಬೆಂಗಳೂರಿಂದ ಬಾರ್ಸೆಲೋನಾಕ್ಕೆ ಕೃತಿಯಲ್ಲಿ ಜಿ.ಗೋಪಾಲರು ಬಾರ್ಸೆಲೋನಾದ ಜನಪದ ನೃತ್ಯ, ಸಂಗೀತ ರಚನೆ, ಕೊಲಂಬಸ್ ಹಡಗಿನ ಕುತೂಹಲ ಈ ಎಲ್ಲವನ್ನೂ ವೈದ್ಯಕೀಯ ಹಾಗೂ ಸಾಮಾಜಿಕ ಗ್ರಹಿಕೆಗಳೊಂದಿಗೆ ಪರಿಭಾವಿಸಿದ್ದಾರೆ. ನಾ ಕಂಡ ಜರ್ಮನಿಯಲ್ಲಿ ಹೊ.ಶ್ರೀನಿವಾಸಯ್ಯನವರು ದಾಖಲಿಸುವ ಕೈರೋ ಮ್ಯೂಸಿಯಂ, ಟುಟುನ್ ಖಾಮೆನ್ ಕಾಲದ ಖಡ್ಗಗಳು, ಮಮ್ಮಿಗಳು, ಸ್ತ್ರೀ ಮುಖ ಮತ್ತು ಸಿಂಹದ ಮೈ ಹೊಂದಿರುವ ಸ್ಫಿಂಕ್ಸ್ - ಇವುಗಳು ವಿಶೇಷ ಅಧ್ಯಯನ ಮೂಲದ ದೃಷ್ಟಿಕೋನಗಳಾಗಿವೆ. ಇದೇ ಹಂತದಲ್ಲಿ ಬಿ.ಜಿ.ಎಲ್. ಸ್ವಾಮಿಯವರ ಹಸಿರು ಹೊನ್ನು ಕೃತಿಯನ್ನೂ (1983) ನೆನೆಯಬೇಕು. ಅಧ್ಯಯನಶೀಲತೆಯೇ ಪ್ರಧಾನ ಎಂಬಂತೆ ಸಸ್ಯಕ್ಷೇತ್ರದ ಅನ್ವೇಷಣೆಯ ದಾಖಲಾತಿ ಇದಾಗಿದೆ. ಪ್ರವಾಸ ಸಾಹಿತ್ಯದ ಹಿಂದಿರುವ ಸಿದ್ಧಾಂತಗಳ ನೆಲೆಗೊಂದು ಭಿನ್ನ ಒಳನೋಟವನ್ನು ಈ ಕೃತಿ ನೀಡುತ್ತದೆ.

90ರ ದಶಕದಲ್ಲಿ ಅನೇಕ ಮಹತ್ವದ ಪ್ರವಾಸ ಸಾಹಿತ್ಯ ಕೃತಿಗಳು ಪ್ರಕಟಗೊಂಡಿವೆ. ಲತಾಗುತ್ತಿಯವರ ಯುರೋನಾಡಿನಲ್ಲಿ (1986), ರುಕ್ಮಿಣಿಕುಮಾರಿಯವರ ಸುವರ್ಣ ಮಧುಚಂದ್ರ (1988), ವ್ಯಾಸರಾಯ ಬಲ್ಲಾಳರ ನಾನೊಬ್ಬ ಭಾರತೀಯ ಪ್ರವಾಸಿ (1989), ಸುಶೀಲಾ ಕೊಪ್ಪರ ಅವರ ಪಡುವಣ ಪತ್ರಮಾಲೆ (1989), ವಿ.ಕೃ.ಗೋಕಾಕರ ಪ್ರವಾಸ ಸಾಹಿತ್ಯ (1988), ರಾ.ಯ.ಧಾರವಾಡಕರರ ನಾಕಂಡ ಅಮೆರಿಕೆ (1988), ಜಿ.ಎಸ್.ಕಾಪಸೆ ಅವರ ಶಾಲ್ಮಲೆಯಿಂದ ಗೋದಾವರಿವರೆಗೆ (1989), ನಭ ಅವರ ನಾ ಕಂಡ ಕೆನ್ಯಾ (1986) ಮುಂತಾದುವುಗಳನ್ನು ಹೆಸರಿಸಬಹುದು.

ಯಜ್ಞಾವತಿ ಕೇಶವ ಕಂಗೆನ್ ಅವರ ಸ್ಮರಣೀಯ ಪ್ರವಾಸ (1991), ಹೇಮಲತಾ ಮಹಿಷಿ ಅವರ ಯುರೋದರ್ಶನ (1991), ಶಮಂತರ ನೇಪಾಳದ ಹಿಮಾಲಯ ಚಾರಣ ಅನುಭವ ನೀಡುವ ಗಿರಿಸ್ನೇಹ (1992), ಶಿವಲಿಂಗಮ್ಮ ಕಟ್ಟಿಯವರ ಲಂಡನ್ ಭೇಟಿ ಕುರಿತ ಪಡುವಣ ಪಯಣ (1993), ಪದ್ಮಾಶೆಣೈ ಅವರ ಅಮೆರಿಕವಾಸ - ಪ್ರವಾಸ (1993), ಬಿ.ಕೆ.ನರ್ಮದ ಅವರ ಸುಂದರಸ್ವಪ್ನ, ಅನಸೂಯಾ ರಾವ್ ಅವರ ಸುಂದರ ಕರ್ನಾಟಕ, ಜಯಾ ರಾಜಶೇಖರ ಅವರ ಶ್ರೀಲಂಕಾ - ಇಂಗ್ಲೆಂಡ್ ಅಮೆರಿಕಾ ಪ್ರವಾಸ ಕುರಿತ ಮರಳಿ ಬಂದ ಮಧುರ ಮಾಸ, ಟಿ.ಆರ್.ನಾಗಪ್ಪನವರ ದೇಶ ನೋಡು ಕೋಶ ಓದು (1992), ಜಾನಕಿ ಬ್ರಹ್ಮಾವರ ಅವರ ತಿರುಗಾಟದ ತಿರುಳು, ನನ್ನ ಪ್ರವಾಸ ಕಥ'ನ ಮೊದಲಾದವು ಪ್ರವಾಸ ಸಾಹಿತ್ಯ ಪಟ್ಟಿಯಲ್ಲಿನ ಪ್ರಮುಖ ಸೇರ್ಪಡೆಗಳು.

ಉಳಿಯ ದನಿ ಕಡಲಮೊರೆ (1994) ಪಿ.ವಿ.ನಾರಾಯಣ ಅವರ ಒರಿಸ್ಸ ರಾಜ್ಯ ಪ್ರವಾಸ ಕುರಿತದ್ದು. ಎಚ್.ಎಸ್.ಮುಕ್ತಾಯಕ್ಕನವರ ಮದಿರೆಯ ನಾಡಿನಲ್ಲಿ ಎಂಬ ಕೃತಿಯಲ್ಲಿ ಗೋವೆಯ ಭೇಟಿಯ ಚಿತ್ರಣವಿದೆ. ದೇವಕೀ ಮೂರ್ತಿ ಅವರ ಯುರೋ-ಅಮೆರಿಕಾದ ಇಣುಕುನೋಟ (1994), ಪದ್ಮಗುರುರಾಜ್ ಅವರ ಕಾಂಗರೂಗಳ ನಾಡಿನಲ್ಲಿ (1995), ಲೀಲಾ ಮಿರ್ಲೆಯವರ ಪ್ರವಾಸ (1995), ಆರ್.ನಂಜುಂಡೇಗೌಡರ ಕೆರೆಬಿಯನ್ ಪ್ರವಾಸ, (1996)- ಈ ಕೃತಿಗಳು ನಮ್ಮ ಕುತೂಹಲವನ್ನು ತಣಿಸುತ್ತವೆ. ಕೆರೆಬಿಯನ್ ದ್ವೀಪದ ಸೊಬಗು, ಕಪ್ಪುಜನರ ಬದುಕು, ಕಾರ್ನಿವಾಲ್ ಹಬ್ಬ, ಉತ್ತರ ಮತ್ತು ದಕ್ಷಿಣ ಅಮೆರಿಕಗಳ ನಡುವಣ ಭಾಗದ ಈ ದ್ವೀಪ ಸಮುಚ್ಚಯದಲ್ಲಿ ರೂಪುಗೊಂಡ ಬಗೆಯನ್ನು ಕೆರೆಬಿಯನ್ ಪ್ರವಾಸ ಎಂಬ ಕೃತಿ ಮನೋಜ್ಞವಾಗಿ ವಿಶ್ಲೇಷಿಸುತ್ತದೆ. ಹಿ.ಚಿ.ಬೋರಲಿಂಗಯ್ಯನವರ ಗಿರಿಜನ ನಾಡಿಗೆ ಪಯಣ (1991) ಕೃತಿ ಭಾರತದ ಎಲ್ಲೆಕಟ್ಟಿನೊಳಗೆ ಕರಾವಳಿಯ ಸುಂದರ ಗಿರಿಶಿಖರ ಶ್ರೇಣಿಗಳು, ಹಸುರು, ಸಾಗರ ನಡುಗಡ್ಡೆಯ ಸೊಬಗು, ಹವಳ ಕಣಿವೆಯ ಸೌಂದರ್ಯ, ಗೊಂಡರ ಜೀವನ-ಸಂಸ್ಕೃತಿ-ಪರಿಚಯ- ಹೀಗೆ ಅನೇಕ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ಜನಪದ ಮಾಹಿತಿಯ ದಾಖಲೆಯಾಗಿದೆ.

ಜಿ.ಎನ್.ಮೋಹನ ಅವರ ನನ್ನೊಳಗಿನ ಹಾಡು ಕ್ಯೂಬಾ (2000) ಒಂದು ವಿಶಿಷ್ಟ ರೀತಿಯ ಪ್ರವಾಸ ಕೃತಿ. ಹೊಟ್ಟೆಯಲ್ಲಿ ಅಳುವಿಟ್ಟುಕೊಂಡು ಸದಾ ನಾದದ ಅಲೆಗಳ ಮೇಲೆ ನಿಂತಿರುವ ದೇಶ ಕ್ಯೂಬಾ ಎಂದು ಲೇಖಕರು ಹೇಳುವ ಮಾತು ಅರ್ಥಪೂರ್ಣವಾಗಿದೆ. ಕ್ರಾಂತಿ ನಮ್ಮನ್ನು ಮನುಷ್ಯರನ್ನಾಗಿ ಮಾಡುತ್ತದೆ ಎಂದಿದ್ದ ಚೆಗೆವಾರನ ಮಾತಿನಂತೆ ಸೋಲುಗಳನ್ನು ಏಣಿ ಮಾಡಿಕೊಂಡು ಮೇಲೇರಿದ ಕ್ಯೂಬಾದ ದಣಿವಿನ ಕತೆಯನ್ನು ಇಲ್ಲಿ ಲೇಖಕರು ಆಪ್ತ ಧಾಟಿಯಲ್ಲಿ ವರ್ಣಿಸಿದ್ದಾರೆ.

ಕೆ.ಅನಂತರಾಮು ಅವರ ದಕ್ಷಿಣದ ಸಿರಿನಾಡು (1997), ಇಸ್ರೇಲಿನ ಸಾಧನೆಗಳ ರೋಚಕ ಇತಿಹಾಸವನ್ನೊಳಗೊಂಡ ಮತ್ತಿಹಳ್ಳಿ ನಾಗರಾಜರ ಮರುಭೂಮಿ ಚಿಗುರಿತು (2000), ಎಸ್.ಎಲ್.ಕುಲಕರ್ಣಿ ಯವರ ಭಾರತ ದರ್ಶನ (2000), ಭಾರತಿ ಭಟ್ ಅವರ ನನ್ನ ಬೆಲ್ಜಿಯಂ ಪ್ರವಾಸ (2000), ಕೆ.ಜಿ.ಗುರುಮೂರ್ತಿ ಅವರ ಅಮೆರಿಕೆಯಲ್ಲಿ ಪ್ರವಾಸ (2000), ವಿಜಯಾ ಸುಬ್ಬರಾಜ್‌ರ ಸ್ವರ್ಗ ದ್ವೀಪದ ಕನಸಿನ ಬೆನ್ನೇರಿ ಮುಂತಾದ ಕೃತಿಗಳು ವಿಷಯನಿರೂಪಣೆ, ಕುತೂಹಲದ ವರ್ಣನೆಗಳಿಂದ ನಮ್ಮ ಗಮನವನ್ನು ಸಾಕಷ್ಟು ಸೆಳೆಯುತ್ತವೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ (1990) ಎಂಬ ಕೃತಿಗಳು ಪ್ರವಾಸ ಸಾಹಿತ್ಯದ ಏಕಮುಖ ಏಕತಾನವನ್ನು ಮೀರಿದ ಕೃತಿಗಳು. ಇಲ್ಲಿನ ಕಥನತಂತ್ರ ಹೊಸ ರೀತಿಯ ವಸ್ತು, ಶೋಧನೆ, ಅನುಭವದ ಆಳ ವಿಸ್ಮಯಗೊಳಿಸುವಂಥವು. ಜಿ.ಟಿ.ನಾರಾಯಣರಾಯರ ಸಪ್ತ ಸಾಗರದಾಚೆಯೆಲ್ಲೋ (1999) ವಿಜ್ಞಾನ ವಾಙ್ಮಯದ ಮತ್ತೊಂದು ಮಗ್ಗುಲಿನ ಪರಿಶೋಧನೆಯೇ ಆಗಿದೆ. ಎಸ್.ಸಂಧ್ಯಾ ಅವರು ಹಲವು ಕಾಲಗಳ ನಾಡು- ಗುಜರಾತು (1997), ಕಾಶ್ಮೀರದ ತಲ್ಲಣದ ಚಿತ್ರ ನೀಡುವ ಶಮಂತ ಅವರ ಹಿಮದಗ್ನಿ (1996), ಜಯಾ ಕಲ್‌ಬಾಗಲ್ ಅವರ ಅಮೆರಿಕದಲ್ಲಿ 67ರ ಹುಟ್ಟುಹಬ್ಬ, ಸಿದ್ಧರಾಮ ಹೊನ್ನಲ್ ಅವರ ಪಂಜಾಬು ಕುರಿತ ಪಂಚನದಿಗಳ ನಾಡಿನಲ್ಲಿ (1996), ಶಂಕರ ಪಾಟೀಲರ ಹಿಮಾಚಲದ ಹಿನ್ನೆಲೆಯಲ್ಲಿ (1997), ಪಿ.ವಿ.ಕೃಷ್ಣಮೂರ್ತಿಯವರ ವಿಂಧ್ಯ ನರ್ಮದೆಯರ ನಾಡಿನಲ್ಲಿ (1999), ಎಚ್.ಎಸ್.ಗೋಪಾಲರಾವ್ ಅವರ ಗೋದಾವರಿಯ ಆಸುಪಾಸಿನಲ್ಲಿ (1999), ದೇಜಗೌ ಅವರ ಸ್ವಿಟ್ಸರ್ಲೆಂಡ್ ಕುರಿತ ನಿಚ್ಚ ಹಸುರಿನ ನಾಡಿನಲ್ಲಿ, ವಸಂತೀ ಚಂದ್ರರ ಕನಕಕ್ಷೇತ್ರ-ಕರ್ನಾಟಕ ಭಾಗ-1 (1999), ನೀಳಾದೇವಿಯರ ಮಕ್ಕಳಿಗೆಂದೇ ಬರೆದ ಸಬಲನ ವಿದೇಶ ಪ್ರವಾಸ (1997), ಕುಲಶೇಖರಿ ಅವರ ಅಮೆರಿಕ ಕುರಿತ ಬೊಗಸೆ ಬುತ್ತಿ, ಶ್ವೇತಾಕೋಟಿ ಅವರ ಪುಟಾಣಿಯ ಕಂಗಳಲ್ಲಿ ನೂರು ಬಣ್ಣಗಳು (1997), ವಿಜಯಾದಬ್ಬೆ ಅವರ ಒರಿಸ್ಸ ಕುರಿತ ಉರಿಯ ಚಿಗುರ ಉತ್ಕಲೆ (1998), ದೊಡ್ಡಿ ಸಾರಾಬಾಯಿ ಅವರ ತೀರ್ಥಕ್ಷೇತ್ರ ಮಹಿಮೆ (1998), ಬಿ.ಎನ್.ಸುಮಿತ್ರಾಬಾಯಿ ಅವರ ಅಸ್ಸಾಂ ಕುರಿತ ಬ್ರಹ್ಮಪುತ್ರದ ಕಣಿವೆಯಲ್ಲಿ, ವನಜ ರಾಜನ್ ಅವರ ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮ (1998), ಶಿವಲಿಂಗಮ್ಮ ಕಟ್ಟಿ ಅವರ ಬೆಳಕಿನೆಡೆಗೆ (1998), ಲೀಲಾವತಿ ದೇವದಾಸರ ಏಸುವಿನ ತಾಣವಾದ ಇಸ್ರೇಲ್ ಕುರಿತಾದ ಪವಿತ್ರನಾಡಿನಲ್ಲಿ ಪ್ರವಾಸ (1999), ಶಾರದಾ ಹೆಮ್ಮಿಗೆ ಅವರ ಕರ್ನಾಟಕದ ಒಂದು ನಿರ್ದಿಷ್ಟ ದಿಕ್ಕಿನ ಹಳ್ಳಿಯ ಸುತ್ತಮುತ್ತ (1999), ನೇಮಿಚಂದ್ರರು ಹೇಮಲತಾ ಮಹಿಷಿಯವರೊಂದಿಗೆ ಕೈಗೊಂಡ ಯುರೋಪಿನ ಪ್ರವಾಸ ವಿಶೇಷವಾಗಿ ಮಹಿಳಾ ಸಾಹಿತಿ, ವಿಜ್ಞಾನಿ, ಕಲೆಗಾರರುಗಳ ಬಗೆಗಿನ ವಿವರಗಳನ್ನೂ ಒಳಗೊಂಡ ಒಂದು ಕನಸಿನ ಪಯಣ (1999), ವಸಂತೀ ಚಂದ್ರರ ಅಮೆರಿಕ ಕುರಿತ ಭೋಗಭೂಮಿಯ ಮಡಿಲಲ್ಲಿ ಭಾಗ-1 (1999), ಪ್ರವೀಣ್ ಫರ್ನಾಂಡಿಸ್ ಅವರ ಜಪಾನ್ ಕುರಿತ ಕಣ್ಣು ಕುಕ್ಕುವ ಜಪಾನ್ (1998), ಎಸ್.ವಿ.ಶ್ರೀನಿವಾಸರಾವ್ ಅವರ ಅಮೆರಿಕ ಕುರಿತ ಇಣುಕು ನೋಟ (1997), ಲತಾಗುತ್ತಿ ಅವರ ನಾ ಕಂಡ ಅರೇಬಿಯಾ (1995) ಎಸ್.ಕೇಶವಮೂರ್ತಿ ಅವರ ನೇಪಾಳ ಯಾತ್ರೆ (2000), ವಿಜಯಾ ಸುಬ್ಬರಾವ್ ಅವರ ಅಂಡಮಾನಿನ ಪ್ರವಾಸ ಕುರಿತ ಸ್ವರ್ಗದ್ವೀಪದ ಕನಸಿನ ಬೆನ್ನೇರಿ (2000), ಇಂದಿರಾ ಶಿವಣ್ಣ ಅವರ ಹಾಲೆಂಡ್‌ನಿಂದ ಲಂಡನ್‌ವರೆಗೆ (2001), ಎಸ್.ಕೇಶವಮೂರ್ತಿ ಅವರ ಉತ್ತರಾಖಂಡದ ಯಾತ್ರೆ (2000), ಬಿ.ವಿ.ನಾಗರಾಜರ ಕೆನಡಾದಲ್ಲಿ ಬಿ.ವಿ.ದಿನಚರಿ (1999), ದೇಜಗೌ ಅವರ ಅಲಾಸ್ಕ ಪ್ರವಾಸ ಕುರಿತ ಜಗತ್ತಿನ ನಡುನೆತ್ತಿಯ ಮೇಲೆ (1999), ಮುಂತಾದ ಕೃತಿಗಳನ್ನು ಗಮನಿಸಿದರೆ ವಿಶೇಷವಾಗಿ ಈ ಅವಧಿಯಲ್ಲಿ ಬಂದ ಮಹಿಳಾ ಪ್ರವಾಸ ಕಥನಕಾರರ ಸಂಖ್ಯೆ, ಸಾಧನೆ, ಕೌಶಲ ಗಮನಸೆಳೆಯುವಂಥದ್ದು.

2001-2003ರ ಅವಧಿಯಲ್ಲಿಯೂ ಹಲವು ಕೃತಿಗಳು ಈ ಕ್ಷೇತ್ರದಲ್ಲಿ ಪ್ರಕಟವಾಗಿವೆ. ರಹಮತ್ ತರೀಕೆರೆ ಅವರ ಅಂಡಮಾನ್ ಕನಸು (2001), ಬಿ.ಎಸ್.ಸಣ್ಣಯ್ಯನವರ ನಾನೂ ಹೋಗಿದ್ದೆ ಅಮೆರಿಕೆಗೆ (2001), ಜಲಜಾ ಗಂಗೂರ್‌ರವರ ಅವನಿಯ ಅಪ್ಸರೆ ಅಮೆರಿಕ (2001), ಸುಧಾಮೂರ್ತಿ ಅವರ ಕಾವೇರಿಯಿಂದ ಮೆಕಾಂಗಿಗೆ (2001), ಹಕ್ಕಿಯ ತೆರದಲಿ (2001), ಆರ್ಯಾಂಬ ಪಟ್ಟಾಭಿ ಅವರ ವಿದೇಶ ಪ್ರವಾಸ (2001), ಸಾರಾ ಅಬೂಬಕರ್ ಅವರ ಐಷಾರಾಮದ ಆಳದಲ್ಲಿ (2001), ಪಿ.ಎಂ.ಹೆಗ್ಗಡೆಯವರ ಆಲ್ಮನೆಯಿಂದ ಆ್ಯನ್ ಆರ್ಬರ್‌ಗೆ (2002), ಚಂದ್ರಶೇಖರ ಆಲೂರರ ಅಮೆರಿಕಾದಲ್ಲಿ ಆಲೂರು (2002), ಕೃಷ್ಣಾನಂದ ಕಾಮತರ ನಾನೂ ಅಮೆರಿಕೆಗೆ ಹೋಗಿದ್ದೆ (2002), ಕೆ.ರಾಮಣ್ಣ ಅವರ ಜಗವ ಸುತ್ತಿ ನಲಿ - ಜನರ ನೋಡಿ ಕಲಿ (2002), ಶಾಂತಾ ನಾಗರಾಜರ ಸಿಂಗಾಪುರ, ಮಲೇಷಿಯಾ ಕುರಿತ ಯಾನ ಸಂಸ್ಕೃತಿ (2002)- ಅಜ್ಜಂಪುರ ಕೃಷ್ಣಸ್ವಾಮಿಯವರ ಜಪಾನ್ (2002), ಸುಮನಾ ವಿಶ್ವನಾಥ್‌ರವರ ಮತ್ತೂರರೊಂದಿಗೆ ಕಾಶಿಯಾತ್ರೆ (2002), ಕೆ.ಸಿ.ಲಕ್ಷ್ಮೀನರಸಿಂಹಯ್ಯ ಅವರ ನಾ ಕಂಡ ಭಾರತ (ವಿಸ್ತೃತ-2002), ಜಗದಂಬಾ ಮಲ್ಲದೇವರು ಅವರ ಪಯಣಿಗಳಾಗಿ ಪಶ್ಚಿಮದೆಡೆಗೆ (2002), ನಾಗತಿಹಳ್ಳಿ ಚಂದ್ರಶೇಖರ ಅವರ ಅಮೆರಿಕಾ ಅಮೆರಿಕಾ (2002), ಪಿ.ವಿ.ನಾರಾಯಣ ಅವರ ಭುವಿಯ ಬಸಿರಿಗೆ ಪಯಣ (2002), ವಾಣಿರಾವ್ ಅವರ ಹಿಮಗಿರಿಯ ಶಿಖರದ ಮೇಲೆ (2002), ಡಿ.ವಿ.ಗುರುಪ್ರಸಾದರ ಯೂರೋಪಿನಿಂದ ಆಸ್ಟ್ರೇಲಿಯಾವರೆಗೆ ವಿಶ್ವಪರ್ಯಟನಾ ದಿನಚರಿ (2002), ಕೆ.ಮರುಳಸಿದ್ಧಪ್ಪ ಅವರ ನೋಟ ನಿಲುವು (2002), ಪ್ರಭಾಮೂರ್ತಿಯವರ ಹಸಿರು ಹವಳ (2002), ಜೀ.ವಿ.ಕುಲಕರ್ಣಿಯವರ ಜೀವಿ ಕಂಡ ಅಮೆರಿಕ (2002), ಸಿದ್ಧರಾಮ ಹೊನ್ಕಲ್ ಅವರ ಕನ್ಯಾಕುಮಾರಿಯಿಂದ ಹಿಮಾಲಯದೆಡೆಗೆ (2002), ಎಸ್.ಪಿ.ಪದ್ಮಪ್ರಸಾದ್ ಅವರ ರಾಜಾಸ್ಥಾನದ ಜೈನ ಮಂದಿರಗಳು (2002), ವೆಂಕಟೇಶ ಮಾಚಕನೂರು ಅವರ ಥೇಮ್ಸ್‌ನಿಂದ ಟೈಬರ್‌ವರೆಗೆ (2002), ಸುನೀತಾ ಎಂ.ಶೆಟ್ಟಿ ಅವರ ಪ್ರವಾಸಿಯ ಹೆಜ್ಜೆಗಳು (2002), ವಸಂತರಾಜ್.ಎನ್.ಕೆ. ಅವರ ಅಮೆರಿಕಾದೊಳಗೊಂದು ಇಣುಕು (2001), ಮೀನಾ ಮೈಸೂರು ಅವರ ಫ್ರಾನ್ಸ್‌ಪ್ರವಾಸದ ಎತ್ತಣಿಂದೆತ್ತ (2003), ಮೊಳಕಾಲ್ಮೂರು ಶ್ರೀನಿವಾಸಮೂರ್ತಿಯವರ ಬುದ್ಧನೊಡನೆ ಇಪ್ಪತ್ತು ದಿನಗಳು (2003) ಎಚ್.ಎಂ.ನಾಗರಾಜುರವರ ಸೂರ್ಯ ಮುಳುಗದ ಸಾಮ್ರಾಜ್ಯದಲ್ಲಿ ಮೊದಲಾದ ಕೃತಿಗಳು ನಿರಂತರವಾಗಿ ಹುಲುಸಾಗಿ ಬೆಳೆಯುತ್ತ ಸಾಗಿರುವ ಪ್ರವಾಸ ಸಾಹಿತ್ಯದ ದಿಕ್ಸೂಚಿಯಾಗಿದೆ ಎನ್ನಬಹುದು.

ಪ್ರವಾಸ ಸಾಹಿತ್ಯದ ಹಲವು ಉತ್ತಮ ಅನುವಾದ ಗ್ರಂಥಗಳು ಕನ್ನಡಕ್ಕೆ ಬಂದಿವೆ. ಬಂಗಾಲಿ ಲೇಖಕ ಪ್ರಬೋಧಕುಮಾರ ಸನ್ಯಾಲರ ಪ್ರವಾಸ ಪ್ರಬಂಧವನ್ನು ಎಂ.ಕೆ.ಭಾರತೀರಮಣಾಚಾರ್ಯರು ಮಹಾಪ್ರಸ್ಥಾನದ ಪಥದಲ್ಲಿ ಎಂಬ ಹೆಸರಿನಿಂದ ಕನ್ನಡಕ್ಕೆ ತಂದಿದ್ದಾರೆ. ಇದು ಒಂದು ಉತ್ತಮ ಕಾದಂಬರಿಯಂತಿದೆ. ಸಾಮ್ಯುಯಲ್ ಎಲಿಯೆಟ್ ಮಾರಿಸನ್‌ರವರ ನಾವಿಕ ಕ್ರಿಸ್ಟೊಫರ್ ಕೊಲಂಬಸ್ ಗ್ರಂಥವನ್ನು ಎಚ್.ವಿ.ನಾರಾಯಣ ರಾಯರು, ಥಾರ್ ಹೆಯರ್ ಡಾಹಾಲ್‌ರ ಕಾಂಟಕಿಯ ಸಾಹಸವನ್ನು ಎಚ್.ಎನ್.ಮಾಧವರಾವ್ ಅವರೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಸ್ವಾಮಿ ವಿವೇಕಾನಂದರ ಕೊಲಂಬೊ ಇಂದ ಆಲ್ಮೋರಕ್ಕೆ ಮತ್ತು ಜವಹರಲಾಲ್ ನೆಹರುರವರ ಮಗಳಿಗೆ ತಂದೆಯ ಓಲೆಗಳು ಎಂಬೆರಡು ಕೃತಿಗಳು ಕೂಡ ಕನ್ನಡದಲ್ಲಿ ಪ್ರಕಟವಾಗಿದ್ದು ಪ್ರವಾಸ ಸಾಹಿತ್ಯದ ಹರವಿಗೂ ಬರಬಹುದಾದ ಗ್ರಂಥಗಳಾಗಿವೆ. ಪ್ರದೀಪ ಕೆಂಜಿಗೆಯವರ ಅದ್ಭುತಯಾನ (1995), ಬಿ.ಜಿ.ಎಲ್.ಸ್ವಾಮಿ ಅವರ ನಡೆದಿಹೆ ಬಾಳೌ ಕಾವೇರಿ (2001) ಎಂಬ ಕೃತಿಗಳನ್ನು ಈ ನಿಟ್ಟಿನಲ್ಲಿ ಉಲ್ಲೇಖಿಸಬಹುದು. (ಜಿ.ಎನ್.)

**ಕನ್ನಡದಲ್ಲಿ ಬೇಟೆ ಸಾಹಿತ್ಯ :** ಮಾನವನ ಬದುಕಿನೊಂದಿಗೆ ಹತ್ತಿರದ ಸಂಬಂಧ ಪಡೆದುಕೊಂಡಿದ್ದ, ಇತಿಹಾಸದುದ್ದಕ್ಕೂ ಏಳುಬೀಳುಗಳನ್ನು ಕಂಡ 'ಬೇಟೆ' ಮಾನವನ ಸೃಜನಶೀಲ ಅಭಿವ್ಯಕ್ತಿಗಳಾದ ಕಲೆ, ಸಾಹಿತ್ಯ, ನೃತ್ಯ, ನಾಟಕ, ಸಂಗೀತ ಮೊದಲಾದವುಗಳೊಂದಿಗೆ ಸಹಭಾಗಿಯಾಗಿರುವುದು ಕುತೂಹಲದಾಯಕ ವಿಚಾರವಾಗಿದೆ.

ಬೇಟೆಯನ್ನು ಪ್ರಧಾನ ಅಥವಾ ಆನುಷಂಗಿಕವಾಗಿ ಒಳಗೊಂಡ ಬರೆಹಗಳನ್ನು 'ಮೃಗಯಾ ಸಾಹಿತ್ಯ' ಎಂಬ ಸಾಹಿತ್ಯ ಪ್ರಕಾರವಾಗಿ ವಿಭಾಗಿಸಿ ಅಧ್ಯಯನ ಮಾಡಲಾಗುತ್ತದೆ. ಕನ್ನಡದ ಮೃಗಯಾ ಸಾಹಿತ್ಯ ವಿಶಾಲ ಅರ್ಥದಲ್ಲಿ ಬಹು ವ್ಯಾಪಕವಾಗಿದ್ದು ಕನ್ನಡದ ಮೊದಲ ಕೃತಿ

ಕವಿರಾಜಮಾರ್ಗದಿಂದ ಇಂದಿನವರೆಗಿನ ಕಾಲಘಟ್ಟದ ವಿವಿಧ ಕೃತಿಗಳಲ್ಲಿ ದಾಖಲಾಗಿರುವುದು ಅಧ್ಯಯನ ಯೋಗ್ಯವಾಗಿದೆ.

ಹಿಂದಿನ ದೊರೆಗಳು ತಮ್ಮ ಪ್ರಜಾಪರಿಪಾಲನೆ ಕರ್ತವ್ಯದ ಅಂಗವಾಗಿಯೂ ಸಾಹಸ ಪ್ರದರ್ಶನ, ಮನರಂಜನೆಯ ಗೀಳಿನಲ್ಲಿಯೂ ಆಗಾಗ ವನ್ಯಜೀವಿಗಳ ಬೇಟೆಯಾಡುತ್ತಿದ್ದುದುಂಟು. ಕವಿಗಳಿಗೆ ಅಷ್ಟಾದಶವರ್ಣನೆಗಳಲ್ಲಿ ಬೇಟೆಯೂ ಒಂದು. ತಮ್ಮ ಕೃತಿಗಳಲ್ಲಿ ಬೇಟೆ ಪ್ರಸಂಗಗಳನ್ನು ಉತ್ಸುಕತೆಯಿಂದ ವರ್ಣಿಸುತ್ತಿದ್ದರು. ಆಧುನಿಕ ಸಂದರ್ಭದಲ್ಲಿ ಬಹುಮಟ್ಟಿಗೆ ಇಂಗ್ಲಿಷ್ ಸಾಹಿತ್ಯದಲ್ಲಿನ ಬೇಟೆ ಅನುಭವಗಳ ವರ್ಣರಂಜಿತ ನಿರೂಪಣೆಗಳ ಪ್ರೇರಣೆಗಳಿಂದ ಹೊಸಗನ್ನಡದಲ್ಲಿಯೂ ಪೂರ್ಣ ಪ್ರಮಾಣದ ಮೃಗಯಾ ಸಾಹಿತ್ಯ ಸೃಷ್ಟಿಯಾಗತೊಡಗಿತ್ತು.

ಕನ್ನಡ ಮೃಗಯಾ ಸಾಹಿತ್ಯದ ಕೃತಿಗಳನ್ನು ಅಧ್ಯಯನ ಸೌಲಭ್ಯಕ್ಕಾಗಿ ಪ್ರಧಾನವಾಗಿ ಎರಡು ಗುಂಪುಗಳಾಗಿ ವರ್ಗೀಕರಿಸಿ ಕೊಳ್ಳಬಹುದು:

- I ಪ್ರಾಚೀನ ಕೃತಿಗಳು
  - 1 ಕಾವ್ಯ, ಪುರಾಣ, ನಾಟಕ
  - 2 ಶಾಸನಗಳು
  - 3 ಚಾರಿತ್ರಿಕ ಬರೆಹಗಳು, ಪ್ರವಾಸ ಕಥನ, ಪತ್ರವ್ಯವಹಾರಗಳು
  - 4 ಜನಪದ ಸಾಹಿತ್ಯ
- II ಆಧುನಿಕ ಕೃತಿಗಳು
  - 1 ಬೇಟೆ ಅನುಭವಗಳ ನಿರೂಪಣೆ
    - ಕನ್ನಡಕೃತಿಗಳು
      - ಸ್ವಯಂನಿರೂಪಣೆ
      - ಅನ್ಯನಿರೂಪಣೆ
    - ಅನುವಾದಗಳು
  - 2 ಬೇಟೆ ಅಧ್ಯಯನಗಳು

**ಪ್ರಾಚೀನ ಕೃತಿಗಳು :** ಕನ್ನಡದ ಪ್ರಾಚೀನ ಕವಿಗಳಲ್ಲಿ ಕೆಲವರಿಗೆ 'ಬೇಟೆ' ಸ್ವಾನುಭವದ್ದಾಗಿರಬಹುದಾದರೂ ಕೆಲವರು ಇತರ ಕವಿಗಳಿಂದ ಪ್ರೇರಿತರಾಗಿ, ಅಷ್ಟಾದಶವರ್ಣನೆಗೆ ಕಟ್ಟುಬಿದ್ದು ಬೇಟೆ ವರ್ಣನೆಗೆ ಇಳಿದಂತೆ ಭಾಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕರ್ನಾಟಕದ ವನ್ಯ ಪ್ರದೇಶದಲ್ಲಿ ಸಾಮಾನ್ಯವಾಗಿ ಇರದ ಸಿಂಹ ಅಥವಾ ಶರಭ, ಗಂಡಭೇರುಂಡಗಳಂತಹ ಕೇವಲ ಕವಿಸಮಯದ - ಪೌರಾಣಿಕ ಪ್ರಪಂಚದ - ವನ್ಯ ಮೃಗಗಳು ಸಹಜವಾಗಿ ಕಂಡಂತೆ ವರ್ಣಿತವಾಗಿವೆ.

ಜೈನ, ವೀರಶೈವ, ಬ್ರಾಹ್ಮಣ ಕವಿಗಳು ಸ್ವತಃ ಅಹಿಂಸಾ ಧರ್ಮ ಪಾಲಕರಾದರೂ ತಾವೂ ಸ್ವತಃ ಬೇಟೆಗಾರರಾಗಿದ್ದಂತೆ ಬೇಟೆಯ ವರ್ಣನೆಯಲ್ಲಿ ತೊಡಗಿರುವುದೂ ಚಿಂತನಾರ್ಹವಾಗಿದೆ. ಕಾವ್ಯ ಕರ್ಮಪಾಲನೆಯಲ್ಲಿ ಇದು ಅವರಿಗೆ ಅನಿವಾರ್ಯವಾದುದು ಆಗಿತ್ತು. ಯುದ್ಧದಂತೆ ಬೇಟೆಯಲ್ಲಿಯೂ ಇದ್ದಿರಬಹುದಾದ ವಿನಾಯಿತಿಯೂ ಈ ಮನೋಭಾವಕ್ಕೆ ಕಾರಣ ಆಗಿರಬಹುದು. ನಮ್ಮ ಕೆಲ ಕವಿಗಳು 'ಸವ್ಯಸಾಚಿ' ಗಳಾಗಿದ್ದರೆಂಬುದೂ ಇಲ್ಲಿ ಸ್ಮರಣೀಯ. ಕನಕದಾಸರಂತಹ ಕವಿಗಳಿಗೆ ಬೇಟೆ ಸಹಜ ಅನುಭವವಾಗಿರಬಹುದು. ಶಿವತತ್ವಚಿಂತಾಮಣಿ ಬರೆದ ಲಕ್ಕಣ್ಣದಂಡೇಶನಿಗೆ ಗಜವೇಂಟೆಗಾರ ಎಂಬ ಬಿರುದು ಇದ್ದದ್ದೂ ಇಲ್ಲಿ ಉಲ್ಲೇಖನೀಯ.

ಇದೇ ಸಂದರ್ಭದಲ್ಲಿ ನಮ್ಮ ಪ್ರಾಚೀನ ಕಾವ್ಯಗಳ ಕಥಾವಿನ್ಯಾಸದ ಬಗೆಗೆ ಪ್ರಸ್ತಾಪಿಸುವುದು ಉಚಿತವಾಗಿದೆ. ಈ ಕಾವ್ಯಗಳ ಕಥಾಹಂದರ ಹೇಗಿರುತ್ತದೆ ಎಂದರೆ ಇವುಗಳ ಬಹುಪಾಲು ನಾಯಕರು ಕಥೆಯ ಆರಂಭದಲ್ಲಿಯೇ ಬೇಟೆಗೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮುಂದಿನ ಕತೆಗೆ ತಿರುವು ನೀಡುವ ಭೂಮಿಕೆಯಾಗಿಯೂ ಬೇಟೆ ಪ್ರಸಂಗ ಮಹತ್ವ ಪಡೆಯುತ್ತದೆ. ಇನ್ನೂ ವಿಶೇಷವೆಂದರೆ ಈ ಸಂದರ್ಭದ ಬೇಟೆಯಲ್ಲಿ ಕಥಾನಾಯಕ 'ಮಾಯಾವರಾಹ'ವನ್ನು ಬೆನ್ನತ್ತಿ ಬೇಟೆಯಾಡಬೇಕಾಗುತ್ತದೆ. ಎಲ್ಲ ಕಾವ್ಯಗಳಲ್ಲಿ ವರಾಹವೇ ಪ್ರಧಾನವಾಗಿ ಕಾಣಿಸಿಕೊಳ್ಳುವುದು ಏಕೆ ಎಂಬುದು ಕುತೂಹಲದ ಪ್ರಶ್ನೆ. ವನ್ಯಜೀವಿಗಳಲ್ಲಿ ಕಾಡುಹಂದಿ ಅತ್ಯಂತ ಬಲಿಷ್ಠವಾದ, ಅದನ್ನು ಇರಿದುಕೊಲ್ಲುವುದು ಮಹಾಬಿಲ್ಗಾರನಿಗೂ ಸವಾಲಿನ ಕಾರ್ಯ ಎಂಬುದು ಇದರ ಮುಖ್ಯ ಕಾರಣ ಇದ್ದಿರಬಹುದು. ಹುಲಿ, ಸಿಂಹಗಳಿಗಿಂತಲೂ ಕಾಡುಹಂದಿಗಳ ಉಪಟಳ ಪರಿಸರದಲ್ಲಿ ಬಹು ವ್ಯಾಪಕವಾಗಿದ್ದಿರಬಹುದು.

ಪ್ರಾಚೀನ ಕವಿಗಳು ಬೇಟೆಗೆ ಸಂಬಂಧಿಸಿದ ಕೆಲವು ಸಾಮಾನ್ಯ ವಿಷಯಗಳನ್ನು ಅನಿವಾರ್ಯವಾಗಿ ಹೇಳಿದ್ದರೂ ಸಾಂದರ್ಭಿಕವಾಗಿ ಬಹುಮಟ್ಟಿಗೆ ಪ್ರತಿಯೊಬ್ಬರೂ ತಲಾ ಒಂದಾದರೂ ಹೊಸ ಹೊಸ ವಿಷಯಗಳನ್ನು ದಾಖಲಿಸುವತ್ತ ಗಮನಕೊಟ್ಟಿರುವುದೂ ಉಂಟು. ನಿದರ್ಶನಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ 'ಸೌಗಂಧಿಕಾ ಪರಿಣಯ'ದಲ್ಲಿ ಬೇಟೆಯಲ್ಲಿ ಕುದುರೆಗಳು ಕೆನೆಯದಂತೆ ಅವುಗಳ ಬಾಯಿಗೆ ಕಟ್ಟು ಹಾಕುತ್ತಿದ್ದ ಬಗ್ಗೆ ಹೇಳಿದ್ದಾರೆ. ಬೇಟೆ ವಿಧಗಳ ಪ್ರಸ್ತಾಪವೂ ಅಲ್ಲಿ ಬಂದಿದೆ. ತಿರುಮಲಾರ್ಯನ 'ಚಿಕ್ಕದೇವರಾಜ ವಂಶಾಳಿ'ಯಲ್ಲಿ ಬೇಟೆಯ ಹುಚ್ಚಿನಿಂದ ರಾಜನು ತನ್ನ ರಾಜ್ಯವನ್ನೇ ಕಳೆದುಕೊಳ್ಳುವ, ಬೇಟೆಯಲ್ಲಿ ಬಂದೂಕು ಬಳಸಿದ ವಿವರಗಳು ಪ್ರಸ್ತಾಪವಾಗಿವೆ. ವಿರೂಪಾಕ್ಷ ಪಂಡಿತನ 'ಚೆನ್ನಬಸವಪುರಾಣ'ದಲ್ಲಿ ಪ್ರಾಣಿಗಳ ಮುಖವಾಡ ಧರಿಸಿ ಬೇಟೆಯಾಡುತ್ತಿದ್ದ ಅಪರೂಪದ ಮಾಹಿತಿ - ತಂತ್ರ ದಾಖಲಾಗಿವೆ.

ಪ್ರಾಚೀನ ಕವಿಗಳು ಬೇಟೆಯನ್ನು ನೆವ ಮಾಡಿಕೊಂಡು ವಿನೂತನ ಕಲ್ಪನೆ, ಚಮತ್ಕಾರದ ವರ್ಣನೆಗಳ ತಮ್ಮ ಪ್ರತಿಭಾ ಪ್ರದರ್ಶನದ ಮೂಲಕ ಕಾವ್ಯಾಸಕ್ತ ಸಹೃದಯರಿಗೆ ಮುದನೀಡಿರುವುದೂ ಉಂಟು. ಉದಾ: ಲಕ್ಷ್ಮೀಶನಲ್ಲಿ ಒಂದು ಚಮತ್ಕಾರದ ವರ್ಣನೆ ಹೀಗಿದೆ: ಬೇಡತಿಯೊಬ್ಬಳನ್ನು ಆನೆ ಎಂದು ತಿಳಿದ ಸಿಂಹವೊಂದು ಅವಳ ಮೇಲೆ ಬೀಳುವಾಗ, ಅವಳ ನಡುವನ್ನು ನೋಡಿ ಅದೊಂದು ಸಿಂಹವೆಂದು ಅರಿತು ಸುಮ್ಮನಾಗುವಾಗ, ಅವಳ ಕಣ್ಣುಗಳನ್ನು ನೋಡಿ ಅದು ಹರಿಣಿ ಎಂದು ತೀರ್ಮಾನಿಸಿ ಮತ್ತೆ ಅವಳ ಮೇಲೆ ಬಿದ್ದು ಹಿಡಿಯಲು ಎಳೆಸುತ್ತಿರುವಾಗ, ತೂರಿಬಂದ ಬೇಡನ ಬಾಣಕ್ಕೆ ತುತ್ತಾಗಿ ಪ್ರಾಣನೀಗುತ್ತದೆ. ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಬೇಟೆನಾಯಿಯೊಂದು ಪೂರ್ಣಚಂದ್ರನಲ್ಲಿನ ಮೊಲವನ್ನು ಕಂಡು ಮೊಗವೆತ್ತಿ ಬೊಗಳಿದ್ದು ಅತಿಶಯೋಕ್ತಿ ವರ್ಣನೆಯ ಇನ್ನೊಂದು ನಿದರ್ಶನವಾಗಿದೆ. ಹರಿಹರನ 'ಗಿರಿಜಾ ಕಲ್ಯಾಣ'ದಲ್ಲಿ ಬೇಟೆಯಾಡಿದ ಬೇಡರ ಮೈಮೇಲಿನ ಗೀಚು ಗಾಯಗಳ ಗುರುತನ್ನು ಕಂಡ ಬೇಡತಿಯರು ಅವು ಅನ್ಯ ಪ್ರೇಯಸಿಯರೊಂದಿಗೆ ರತಿಸುಖದಲ್ಲಿ ಮಾಡಿಕೊಂಡ ಗಾಯಗಳೆಂದು ಜಗಳ ತೆಗೆದ ಸನ್ನಿವೇಶದ ಚಿತ್ರಣವಿದೆ. ಕವಿ ರುದ್ರಭಟ್ಟನ 'ಜಗನ್ನಾಥ ವಿಜಯ'ದಲ್ಲಿ ನಿಜವಾಗಿಯೂ ಇನ್ನೊಬ್ಬಳೊಂದಿಗೆ ಕೂಡಿ ಸುಖಿಸಿದ ತರುಣ ಬೇಡನೊಬ್ಬ ಅದು ಹುಲಿಯ ಉಗುರಿನ ಗುರುತೆಂದು ತನ್ನ ಮಡದಿ ಭಾವಿಸಲೆಂದು ಒಂದು ಹುಲಿಯುಮರಿಯನ್ನು ಕಂಕುಳಲ್ಲಿ ಇರುಕಿಕೊಂಡು ಬರುವ ಚಿತ್ರಣವಿದೆ.

ಪಂಪನ 'ವಿಕ್ರಮಾರ್ಜುನ ವಿಜಯ'ದ ಎರಡು ಸನ್ನಿವೇಶಗಳಲ್ಲಿ ಬೇಟೆಯ ವರ್ಣನೆ ಬಂದಿದೆ. ಬೇಟೆಗೆ ಬರುವಂತೆ ಅರ್ಜುನನನ್ನು ವನಪಾಲಕರು ವಿನಂತಿಸುವ ಸಂದರ್ಭ ಹಾಗೂ ಇನ್ನೊಂದು ಪ್ರಸಿದ್ಧ ಇಂದ್ರಕೀಲ ಪ್ರಸಂಗ (5ನೆಯ ಆಶ್ವಾಸ). ಇವುಗಳಲ್ಲಿ ಮೊದಲನೆಯದು ಲೌಕಿಕನೆಲೆಯ ಬೇಟೆಯಾದರೆ ಎರಡನೆಯದು ಕಿರಾತವೇಷದ ಶಿವ ಹಾಗೂ ಮಾಯಾವರಾಹಗಳಿಂದಾಗಿ ಅಲೌಕಿಕನೆಲೆಗೂ ಏರುತ್ತದೆ. ಧಾರ್ಮಿಕವಾಗಿ ಜೈನನಾದ ಈ ಕವಿ ಸ್ವತಃ ಅನುಭವಿ ಬೇಟೆಗಾರನೆಂಬಂತೆ ಬೇಟೆಯ ಪ್ರಯೋಜನ (ಇದರಲ್ಲಿ ಕಾಳಿದಾಸನ ಪ್ರಭಾವ ಇದ್ದಿರಬಹುದು), ಬೇಟೆಗಾರನ ಲಕ್ಷಣ, ಬೇಟೆನಾಯಿ, ಪೆರ್ವೇಂಟೆ, ಕಿರುವೇಂಟೆ, ದೀಪದ ಬೇಟೆ, ಹಂದಿ ಬೇಟೆಯ ತಂತ್ರ - ವಿವರ, ಬೇಟೆಗೆ ಸೂಕ್ತವಾದ ಕಾಲ ಮೊದಲಾದವುಗಳ ಬಗೆಗೆ ನೀಡಿರುವ ಮಾಹಿತಿಗಳು ಅಪೂರ್ವವಾಗಿವೆ. ಹಂದಿಗಳ ಗುಂಪಿನಲ್ಲಿ ಹೆಣ್ಣು ಹಂದಿ, ತೆನೆಹಂದಿ, ಕುರುಡು ಕುಂಟು ಹಂದಿಯಂಥವುಗಳನ್ನು ಸೂಕ್ಷ್ಮವಾಗಿ ಗುರುತಿಸಿ ಅವುಗಳನ್ನು ಕೊಲ್ಲದಂತೆ ಎಚ್ಚರವಹಿಸಬೇಕೆಂದು ಹೇಳಿರುವುದು ಪಂಪನ ಜೀವದಯೆಯೊಂದಿಗೆ ಪರಿಸರದ ಅರಿವಿನ ಪ್ರತೀಕವೂ ಆಗಿದೆ.

ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಹರಿಶ್ಚಂದ್ರನ ಬಾಳಿನಲ್ಲಿ ಒಂದು ಮಹತ್ತರ ತಿರುವು ತರುವುದರ ಸಂಕೇತವಾಗಿ ಬೇಟೆ ಪ್ರಸಂಗ ಒದಗಿಬರುತ್ತದೆ. ಅವರೆಗೂ ದೊರೆ ಪ್ರಜೆಗಳ ರಕ್ಷಣೆಗೆ ವನ್ಯಮೃಗಗಳ ಬೇಟೆಯಾಡುವವನಾದರೆ ಅಂದಿನಿಂದ ವಿಶ್ವಾಮಿತ್ರ ಹರಿಶ್ಚಂದ್ರನನ್ನು (ಆತನ ಕುಟುಂಬವನ್ನು) 'ಬೇಟೆ' ಆಡುವುದು ಪರೋಕ್ಷವಾಗಿ ಚಿತ್ರಿತವಾಗಿದೆ. ಇಂತಹ ಒಂದು ಬಹುಮುಖ್ಯ ಪ್ರಸಂಗವನ್ನು ಕವಿ ಸಾಕಷ್ಟು ವಿಸ್ತಾರವಾಗಿ, ಪರಿಣಾಮಕಾರಿಯಾಗಿ ವರ್ಣಿಸಿದ್ದಾನೆ. ಈ ಸಂದರ್ಭದಲ್ಲಿ ಆತ ತಡಿಕೆವಲೆ, ತಟ್ಟಿವಲೆ, ಹಾಸುವಲೆ, ಬೀಸುವಲೆ ಮೊದಲಾದ 24 ಬಗೆಯ ಬಲೆಗಳು, ಕೋರವ, ಸೀಗಡಿ, ಗೆಂಡೆ ಮೊದಲಾದ ವಿವಿಧ ಜಾತಿ ಮೀನುಗಳು, ದೀಪದ ಬೇಟೆ, ದಿಗ್‌ಬಂಧನ ಬೇಟೆ, ಗೋರಿಬೇಟೆ, ಪಳಹರದ ಬೇಟೆ, ಪಟಬೇಟೆ, ಚಿತ್ರಬೇಟೆ ಮೊದಲಾದ ಎಂಟು ರೀತಿಯ ಬೇಟೆಗಳು, ಕಿರಾತರ ವೃತ್ತಿ ನೈಪುಣ್ಯ, ಬುತ್ತಿಗಂಟನ್ನು ಬೆನ್ನಿಗೆ ಕಟ್ಟಿಕೊಂಡು ಹೋಗುತ್ತಿದ್ದ ಬೇಡರು ಮೊದಲಾದ ಕುತೂಹಲಕರ ವಿವರಗಳನ್ನು ದಾಖಲಿಸಿದ್ದಾನೆ.

ಕುದುರೆ ಮೇಲೇರಿ ಬೇಟೆಯಾಡುವುದನ್ನು 'ಅಶ್ವಿನಾ' ಎಂದು ಕರೆಯುತ್ತಿದ್ದುದು 'ಸೌಗಂಧಿಕಾ ಪರಿಣಯ'ದಿಂದ ತಿಳಿದುಬರುತ್ತದೆ. ಹೀಗೆ ಕುದುರೆ ಮೇಲೆ ಕುಳಿತು ದೊರೆಯು ಹಂದಿ ಬೇಟೆಯಾಡಿದ ಪ್ರಸ್ತಾಪ ವಡ್ಡಾರಾಧನೆಯ 'ಚಿತಲಾಪುತ್ರ' ಕತೆಯಲ್ಲಿಯೂ ಬರುತ್ತದೆ. ಮುಂದೆ 'ನಳಚರಿತ್ರೆ'ಯಲ್ಲಿಯೂ ನಳರಾಜನು ಕುದುರೆ ಮೇಲೆ ಕುಳಿತು ಬೇಟೆಗೆ ಹೊರಟಿದ್ದಾಗಿ ಕವಿ ಚಿತ್ರಿಸಿದ್ದಾನೆ. 'ಮೋಹನ ತರಂಗಿಣಿ'ಯಲ್ಲಿ ಬೇಟೆಯ ಆಯಾಸ ಪರಿಹಾರಕ್ಕಾಗಿ ಕೊನೆಯಲ್ಲಿ ಬೇಡ ಬೇಡತಿಯರು ಸಾಂಪ್ರದಾಯಿಕ ನೃತ್ಯಮಾಡಿದ್ದೂ ವರ್ಣಿತವಾಗಿದೆ. ಚೌಂಡರಸ ತನ್ನ 'ದಶಕುಮಾರ ಚರಿತೆ'ಯಲ್ಲಿ ಬೇಟೆ ಬಳಿಕ ತಮ್ಮ ಬೀಡಿನಲ್ಲಿ ಬೇಡರು ಯಾವ ಯಾವ ಚಟುವಟಿಕೆಗಳಲ್ಲಿ ತೊಡಗಿರುತ್ತಿದ್ದರೆಂಬುದನ್ನು ಚಿತ್ರಿಸಿದ್ದಾನೆ. ಬೇಟೆ ಕೈಗೂಡಲೆಂದು ಜೀವಬಲಿ ನೀಡುತ್ತಿದ್ದ ಸಂಪ್ರದಾಯವನ್ನು ಈ ಕವಿ ದಾಖಲಿಸಿರುವುದು ಗಮನಾರ್ಹವಾಗಿದೆ. ನಂಜುಂಡ ಕವಿ ತನ್ನ 'ರಾಮನಾಥ ಚರಿತೆ'ಯಲ್ಲಿ ಬೇಟೆಯಲ್ಲಿ ಆದ ಗಾಯಗಳಿಗೆ ಬೇಡತಿಯರು ತಾಂಬೂಲದ ಕಟ್ಟು ಹಾಕುತ್ತಿದ್ದ ವಿಷಯವನ್ನು ದಾಖಲಿಸಿದ್ದು ಜನಪದ ವೈದ್ಯಪದ್ಧತಿಯ ಅಭ್ಯಾಸ ದೃಷ್ಟಿಯಿಂದಲೂ ಉಲ್ಲೇಖನೀಯವಾಗಿದೆ.

ಷಡಕ್ಷರ ಕವಿಯ 'ರಾಜಶೇಖರ ವಿಳಾಸ' ಹಾಗೂ 'ಶಬರಶಂಕರ ವಿಳಾಸ' ಕಾವ್ಯಗಳಲ್ಲಿಯೂ ಬೇಟೆ ಪ್ರಸಂಗ ಕಥಾಭಾಗವಾಗಿ ನಿರೂಪಿತವಾಗಿವೆ. ಕವಿ ಆ ಕಾಲದ ಕೆಲವು ಬೇಟೆ ತಂತ್ರಗಳ ಬಗೆಗೆ ಹೇಳುತ್ತಾನೆ. ಶಬರಶಂಕರ ವಿಳಾಸದಲ್ಲಿ 'ಭ್ರಾಂತಿಯನ್ನುಂಟುಮಾಡುವ ದೀಪ'ದ ತಂತ್ರ ಬಹುಶಃ ಪಂಪ ಉಲ್ಲೇಖಿಸಿರುವ 'ದೀಪದ ಬೇಟೆ'ಯೇ ಆಗಿರುವ ಸಾಧ್ಯತೆ ಇದೆ. ಆದರೆ ಆತ ಹೇಳಿರುವ ಇನ್ನೊಂದು ಬೇಟೆ ತಂತ್ರ 'ಮಂಕುಬೂದಿ ಎರಚಿ ಪ್ರಾಣಿಗಳನ್ನು ಸೆರೆ ಹಿಡಿಯುವುದು' ಇತರರಿಂದ ಅಷ್ಟಾಗಿ ಉಲ್ಲೇಖಗೊಳ್ಳದ ವಿಶಿಷ್ಟ ತಂತ್ರವಾಗಿ ಕಂಡುಬರುತ್ತದೆ. ಇದೇ ಕವಿಯ 'ವೃಷಭೇಂದ್ರ ವಿಜಯ'ದ 'ಶರಣ ಕಥಾ ವಿಜಯ' ಭಾಗದಲ್ಲಿ 'ಅಂಟು ಬಲೆ'ಯ ಪ್ರಸ್ತಾಪವೂ ಬಂದಿದೆ. ವೀರ, ಶೃಂಗಾರ, ಹಾಸ್ಯರಸಗಳ ನಿರೂಪಣೆಗೆ ಕವಿ ಬೇಟೆ ಪ್ರಸಂಗವನ್ನು ಒಂದು ಒಳ್ಳೆಯ ಅವಕಾಶವಾಗಿ ಬಳಸಿಕೊಂಡಿದ್ದರೂ ಆತ ಅಷ್ಟಕ್ಕೇ ಸಂಭ್ರಮಿತವಾಗದೆ ಬೇಟೆ ಒಂದು ಪಾಪಕೃತ್ಯ ಎಂದು ಖಂಡಿಸುವಲ್ಲಿ ಮೊದಲಿಗನಾಗಿರುವುದೂ ಇಲ್ಲಿ ವಿಶೇಷ ಉಲ್ಲೇಖನೀಯ ಅಂಶವಾಗಿದೆ.

ಕುಮಾರವಾಲ್ಮೀಕಿಯ 'ತೊರವೆ ರಾಮಾಯಣ'ದಲ್ಲಿ ಶಂಭಕಾಸುರನ ವಧೆಗಾಗಿ ಸ್ವತಃ ದೇವತೆಗಳೇ ಕಿರಾತರ ವೇಷಧರಿಸಿ ಬೇಟೆಗೆ ಬರುತ್ತಾರೆ. ಕರ್ಣಪಾರ್ಯನ ನೇಮಿನಾಥ ಪುರಾಣದಲ್ಲಿ ಕಿರಾತ ದಂಪತಿಗಳು ದಿಗಂಬರ ಯತಿಗಳನ್ನು ಅಪೂರ್ವಮೃಗವೆಂದು ತಿಳಿದು ಬೇಟೆಗೆ ಮುಂದಾದ ಅನಂತರ ಧರ್ಮಬೋಧೆ ಪಡೆದು ಪರಿವರ್ತಿತರಾದ ಕಥೆ ಬರುತ್ತದೆ. ನಂಜುಂಡಕವಿಯ ರಾಮನಾಥ ಚರಿತೆ, ಲಕ್ಷ್ಮೀಶನ ಜೈಮಿನಿ ಭಾರತ, ಜನ್ನನ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣ, ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿ, ಹರಿಹರನ ಗಿರಿಜಾಕಲ್ಯಾಣ, ದೇಪರಾಜನ ಸೊಬಗಿನ ಸೋನೆ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಬಾಹುಬಲಿ ಪಂಡಿತನ ಧರ್ಮನಾಥ ಪುರಾಣ, ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ, ಗೋವಿಂದ ಕವಿಯ ನಂದಿಮಹಾತ್ಮ್ಯ, ನೇಮಿಚಂದ್ರನ ಲೀಲಾವತೀ ಮಹಾಪ್ರಬಂಧ, ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ, ನಾಗವರ್ಮನ ಕರ್ನಾಟಕ ಕಾದಂಬರಿ, ಪರ್ವತೇಶನ ಚತುರಾಚಾರ್ಯ ಚಾರಿತ್ರ, ಪಾಯಣ್ಣನ ಸಮ್ಯಕ್ತ್ವ ಕೌಮುದಿ, ಪದ್ಮನಾಭನ ಜಿನದತ್ತ ಚರಿತೆ, ಮಲ್ಲಿಕಾರ್ಜುನನ ತೋಂಟದಾರ್ಯನ ಸಾಂಗತ್ಯ ಮುಂತಾದ ಕಾವ್ಯಗಳಲ್ಲಿ ಬೇಟೆ ಪ್ರಸ್ತಾಪಿತವಾಗಿರುವುದನ್ನೂ ವರ್ಣಿತವಾಗಿರುವುದನ್ನೂ ಗಮನಿಸಬಹುದಾಗಿದೆ.

**ಕಾವ್ಯ ಪುರಾಣ, ನಾಟಕಗಳು :** ಪುರಾಣ ಪ್ರಸಂಗಗಳನ್ನು ಆಧರಿಸಿ ರಚಿತವಾದ ಪೌರಾಣಿಕ ನಾಟಕಗಳಲ್ಲಿಯೂ ಬಹುಮಟ್ಟಿಗೆ ಬೇಟೆ ಒಂದು ಮುಖ್ಯ ಪ್ರಸಂಗವಾಗಿ ಬರುತ್ತದೆ. ದುಷ್ಯಂತನು ಶಕುಂತಲೆಯನ್ನು ಮೋಹಿಸಿ ವರಿಸುವುದೇ ಆತ ಬೇಟೆಗೆಂದು ಜಿಂಕೆಯೊಂದರ ಬೆನ್ನು ಹತ್ತಿ ಬಂದಾಗ. ನಮ್ಮ ಗ್ರಾಮೀಣರಲ್ಲಿ ಜನಪ್ರಿಯ ನಾಟಕಗಳಾದ ರಾಜಾಹರಿಶ್ಚಂದ್ರ, ನಳದಮಯಂತಿ ಅಥವಾ ನಳಚರಿತ್ರೆಯಂತಹ ನಾಟಕಗಳಲ್ಲಿಯೂ ಬೇಟೆ ಮುಖ್ಯ ಸಂದರ್ಭವಾಗಿದೆ. ಹಾವಳಿ ಮಾಡುತ್ತಿದ್ದ ವನ್ಯಜೀವಿಗಳ ನಿಯಂತ್ರಣಕ್ಕೆಂದು ವನಪಾಲಕರ ಕೋರಿಕೆಯಂತೆ ರಾಜ ಬೇಟೆಗೆ ಹೋದಾಗ ಎದಿರಾಗುವ ಹಂದಿಯನ್ನು ಅಡ್ಡಹಾಕಿ 'ನಿಲ್ಲಲೆ ನಿಲ್ಲಲೆ, ಎಲ್ಲಿಗೆ ಪೋಗುವೆ! ಹಂದಿಯೆ ನಿನ್ನಯ, ಹಲ್ಲನು ಮುರಿಯುವೆ' ಎಂಬಂತಹ ಹಾಡನ್ನು ಸೂಕ್ತ ರಾಗ ಮಟ್ಟಿನಲ್ಲಿ ಹಾಡುವುದನ್ನು ಸಾಮಾನ್ಯವಾಗಿ ಕೇಳುತ್ತೇವೆ. ಬೇಟೆಗೆ ಹೊರಡುವಾಗ ಬೇಟೆಗಾರರು ಬೇಟೆದೇವರು ಮಾಡುವುದು, ಆಗ ನಡೆಯುವ ವಿನೋದ ದೃಶ್ಯಗಳೂ ಪ್ರೇಕ್ಷಕರಲ್ಲಿ ಹಾಸ್ಯರಸಾನುಭವ ಉದ್ದೀಪಿಸುವಲ್ಲಿ ಯಶಸ್ವಿಯಾಗುವುದರೊಂದಿಗೆ ನಮ್ಮ ಗ್ರಾಮೀಣ ಜನರ ನಂಬಿಕೆ, ಸಂಪ್ರದಾಯ, ಸಾಮಾಜಿಕ ಬದುಕಿನ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ಮಾಡುತ್ತವೆ.

**ಶಾಸನಗಳು :** ಸಮಾಜದ ಹಿತಕ್ಕಾಗಿ ಹೋರಾಡಿ ಪ್ರಾಣತ್ಯಾಗಮಾಡಿದ ಅಥವಾ ಗೆದ್ದು ಸಾಹಸ ತೋರಿದ ವೀರರ ಸ್ಮರಣಾರ್ಥ ಶಾಸನ ಹಾಗೂ ವೀರಗಲ್ಲುಗಳನ್ನು ಗೆಯ್ಯಿಸುತ್ತಿದ್ದುದು ನಮ್ಮಲ್ಲಿ ವ್ಯಾಪಕವಾಗಿದ್ದ ಒಂದು ಪರಂಪರೆ. ಇಂಥ ವೀರರಲ್ಲಿ ಕ್ರೂರಪ್ರಾಣಿಗಳೊಂದಿಗೆ ಹೋರಾಡಿದ ಬೇಟೆಗಾರರೂ ಅವರ ನೆಚ್ಚಿನ ಬೇಟೆ ನಾಯಿಗಳೂ ಸೇರಿದ್ದು ಅಂಥ ಬೇಟೆಗಾರರ ಮತ್ತು ನಾಯಿಗಳ ನೆನಪಿಗಾಗಿಯೂ ಸ್ಮಾರಕಶಿಲೆ ನೆಡಿಸುತ್ತಿದ್ದುದುಂಟು. ಪ್ರಖ್ಯಾತವಾದ ಆತಕೂರಿನ ವೀರಗಲ್ಲಿನಲ್ಲಿ ಮಣಾಲನೆಂಬುವನು ತನ್ನ ಪ್ರೀತಿಪಾತ್ರವಾದ ಕಾಳಿ ಎಂಬ ನಾಯಿ ಬಲಶಾಲಿ ಹಂದಿಯೊಂದನ್ನು ಕೊಂದು ತಾನೂ ಸತ್ತದ್ದರ ನೆನಪಿಗಾಗಿ ಆ ವೀರಗಲ್ಲು ನೆಡಿಸಿದ ಕಥೆ ನಿರೂಪಿತವಾಗಿದೆ. ಲೋಕ ಮತ್ತು ದಳಗ ಎಂಬ ತನ್ನ ಎರಡೂ ನಾಯಿಗಳು ಬೇಟೆಯಲ್ಲಿ ಪ್ರಾಣಿಯೊಂದಿಗೆ ಹೋರಾಡಿ ಸತ್ತದ್ದರ ನೆನಪಿಗೆ ಪಿರಿಸಿಂದಿ ಎಂಬಾತ 975ರಲ್ಲಿ ವೀರಗಲ್ಲೊಂದನ್ನು ನೆಡಿಸಿದ. ರಾಷ್ಟ್ರಕೂಟ ಅರಸ ಮುಮ್ಮಡಿ ಗೋವಿಂದ ಬೇಟೆಗಾಗಿ ಹಂದಿ ಮೇಯಿಸಿದ್ದ ಸಂಗತಿ 804ರ ತಾಮ್ರಶಾಸನದಿಂದ ತಿಳಿದುಬರುತ್ತದೆ. ತಮ್ಮ ಗಾವುಣ್ಡ ಎಂಬಾತ ಹುಲಿಯೊಂದಿಗೆ ಹೋರಾಡಿ, ಅದನ್ನು ಕೊಂದು ತಾನೂ ಜೀವ ಬಿಟ್ಟಾಗ, ಅವನ ಸಾಹಸ ಮೆಚ್ಚಿ ಗಂಗ ಪೆರ್ಮಾಡಿ ಭೂಮಿಯನ್ನು ಉಂಬಳಿ ಬಿಟ್ಟದ್ದಕ್ಕೆ ವೀರಗಲ್ಲು ಸಾಕ್ಷಿಯಾಗಿದೆ. ಕೊಡಗಿನ ದೊರೆ ಲಿಂಗರಾಜೇಂದ್ರ ಒಡೆಯನ ಕಾಲದ ಒಂದು 'ಹುಕುಂನಾಮೆ' (ಸರ್ಕಾರದ ಆಜ್ಞೆ) ಪ್ರಕಾರ ಆ ಕಾಲದಲ್ಲಿ ಜನರು ನಿಗದಿ ಪಡಿಸಿದ ಒಂದು ದಿನ ಅರಮನೆಯ 'ಬಿಟ್ಟಿ' ಕೆಲಸವಾಗಿ ಬೇಟೆಗೆ ಹೋಗಬೇಕಾದುದು ಕಡ್ಡಾಯವಾಗಿತ್ತು. ಇಂಥ ವೀರಗಲ್ಲು, ಶಾಸನ ಹಾಗೂ ಹುಕುಂನಾಮೆಗಳು ಕನ್ನಡ ನಾಡಿನಲ್ಲಿ ಅಸಂಖ್ಯವಾಗಿವೆ.

**ಚಾರಿತ್ರಿಕ ಬರೆಹಗಳು, ಪ್ರವಾಸಕಥನ, ಪತ್ರ, ವ್ಯವಹಾರಗಳು :** ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಬರೆದ ಪ್ರವಾಸ ಕಥನಗಳು, ರಾಜರ ಆಸ್ಥಾನದಲ್ಲಿದ್ದ ಕವಿಗಳು, ಕಲಾವಿದರು, ಅಧಿಕಾರಿಗಳು ಮತ್ತಿತರರು

ನಡೆಸಿದ ಪತ್ರವ್ಯವಹಾರಗಳು ಮತ್ತಿತರ ಚಾರಿತ್ರಿಕ ದಾಖಲೆಗಳಲ್ಲಿಯೂ ಬೇಟೆಗೆ ಸಂಬಂಧಿಸಿದ ಅನೇಕ ಸಂಗತಿಗಳ ಪ್ರಸ್ತಾಪವಾಗಿರುವುದು ಅಧ್ಯಯನ ಯೋಗ್ಯವಾಗಿವೆ. ವಿಜಯನಗರಕ್ಕೆ ಭೇಟಿ ನೀಡಿದ್ದ (1441) ಅಬ್ದುಲ್ ರಜಾಕ್ ಎಂಬ ಪ್ರವಾಸಿ ಆಗ ಆನೆಗಳನ್ನು ಹಿಡಿಯುತ್ತಿದ್ದ ಕ್ರಮದ ಬಗ್ಗೆ ಬರೆದಿದ್ದಾನೆ. ಮೊಗಲರ ಕಾಲದ ಅನೇಕ ಚಿಕಣಿ ಚಿತ್ರಗಳಲ್ಲಿ ಆನೆ ಇತ್ಯಾದಿಗಳನ್ನು ಸುಲ್ತಾನರು ಬೇಟೆಯಾಡುತ್ತಿದ್ದ ಪ್ರಸಂಗಗಳು ಯಥಾವತ್ತು ಎಂಬಂತೆ ಆ ಕಾಲದ ಕಲಾವಿದರಿಂದ ಚಿತ್ರಿಕತವಾಗಿವೆ. ಕೊಡಗಿನ ಅರಸ ಚಿಕವೀರರಾಜೇಂದ್ರನ ಅನಾರೋಗ್ಯಕ್ಕೆ ಚಿಕಿತ್ಸೆ ನೀಡಲು ಬಂದಿದ್ದ ಜಾಫರ್‌ಸನ್ ಎಂಬ ವೈದ್ಯ, ಆ ಬಳಿಕ ದೊರೆಯೊಂದಿಗೆ ಕೊಡಗಿನ ಕಾಡುಗಳಲ್ಲಿ ಬೇಟೆಯಾಡಿದ ಬಗೆಗೆ, ದೊರೆಯ ಬೇಟೆ ಸಾಹಸ, ಲೈಟುಶಿಕಾರಿ ಇತ್ಯಾದಿಗಳ ಬಗೆಗೆ ತನ್ನ ಗೆಳೆಯನಿಗೆ ಬರೆದ ಪತ್ರದಲ್ಲಿ ವಿವರವಾಗಿ ದಾಖಲಿಸಿದ್ದು ಐತಿಹಾಸಿಕ ಮಹತ್ವದ ಬೇಟೆ ಕುರಿತ ದಾಖಲೆಯಾಗಿದೆ.

**ಜನಪದ ಸಾಹಿತ್ಯ :** ಬೇಟೆಯೊಂದಿಗೆ ನೇರ ಅನುಭವವುಳ್ಳ ನಮ್ಮ ಗ್ರಾಮೀಣರು ಜನಪದ ಕಥೆ, ಕಾವ್ಯ, ಗಾದೆ ಮೊದಲಾದ ಅಭಿವ್ಯಕ್ತಿ ಪ್ರಕಾರಗಳಲ್ಲಿ ಬೇಟೆ ಕುರಿತ ಅನೇಕ ಸಂಗತಿಗಳನ್ನು ದಾಖಲಿಸಿರುವುದು ಗಮನಿಸುವಂಥದ್ದು. ಕಥಾನಾಯಕನು ಮಹಾವೀರ, ಸಾಹಸಿ ಎಂಬುದನ್ನು ಮನವರಿಕೆ ಮಾಡಿಕೊಡಲು ಆತ ಹುಲಿ ಬೇಟೆಯಾಡಿದಂತೆ ಚಿತ್ರಿತವಾಗುವುದು ಕೆಲ ಕಥನಗೀತೆ/ಲಾವಣಿಗಳಲ್ಲಿ ಕಂಡುಬರುತ್ತದೆ. ಮಲೆಮಾದೇಶ್ವರನಂಥ ಆಧ್ಯಾತ್ಮಿಕ/ದೈವೀಶಕ್ತಿಯನ್ನು ತೋರ್ಪಡಿಸಲು ಆತ ಹುಲಿ ಏರಿಬರುವಂತೆ ಕಲ್ಪಿಸಲಾಗಿದೆ. ಬೇಟೆಗೆಂದು ಕಾಡಿಗೆ ಹೋದ ದೊರೆ ಅಲ್ಲಿ ಕಥಾನಾಯಕಿಯನ್ನು ಕಂಡು, ಅವಳನ್ನು ಅರಮನೆಗೆ ಕರೆತಂದು ವಿವಾಹವಾದ ಪ್ರಸಂಗಗಳು ಕೆಲವು ಕಥೆಗಳಲ್ಲಿ ಬರುತ್ತವೆ. ಬೇಟೆಯ ಸಂದರ್ಭದಲ್ಲಿ ಉತ್ಸಾಹ ಪ್ರಚೋದನೆಗಾಗಿ ಹಾಡುವ ಬೇಟೆ ಹಾಡುಗಳೂ ಇವೆ. ಬೇಟೆಯ ನಿರ್ದಯತೆಯನ್ನೂ ಅಮಾನವೀಯತೆಯನ್ನೂ ಟೀಕಿಸುವಂತಹ ಬಿಡಿಗೀತೆಗಳೂ ಜನಪದ ಸಾಹಿತ್ಯದಲ್ಲಿ ಕಂಡುಬರುತ್ತವೆ.

ಜನಪದ ಸಾಹಿತ್ಯ, ಸಂಪ್ರದಾಯಗಳ ಬಹುಮುಖತೆಯನ್ನು ಅದರ ಪರಂಪರೆ - ಪ್ರಸ್ತುತತೆಯನ್ನು ಅಧ್ಯಯನ ಮಾಡುವ, ದಾಖಲಿಸುವ ದೃಷ್ಟಿಯಿಂದ ಕೆಲವಾರು ಜಾನಪದ ಅಧ್ಯಯನಾಸಕ್ತರು ಬೇಟೆ ಕುರಿತ ಹಾಡು-ಆಚರಣೆ-ಸಂಪ್ರದಾಯ ಇತ್ಯಾದಿಗಳನ್ನು ಕ್ಷೇತ್ರಕಾರ್ಯದ ಮೂಲಕ ಅಭ್ಯಾಸಮಾಡಿ ಲೇಖನಗಳನ್ನೂ ಅಧ್ಯಯನ ಗ್ರಂಥಗಳನ್ನೂ ರಚಿಸಿರುವುದು ಗಮನಾರ್ಹವಾಗಿದೆ.

**ಆಧುನಿಕ ಕೃತಿಗಳು :** ಬೇಟೆಯನ್ನೇ ಕೇಂದ್ರವಾಗಿಟ್ಟುಕೊಂಡು ತಮ್ಮ ಅನುಭವಗಳು, ವಿವರಗಳು ಹಾಗೂ ಆಶಯಗಳನ್ನು ದಾಖಲಿಸುವ ಮತ್ತು ಅಭಿವ್ಯಕ್ತಿಸುವ ಪ್ರಯತ್ನಗಳು ಆಧುನಿಕ ಸಂದರ್ಭದಲ್ಲಿ ವಿಶೇಷವಾಗಿ ನಡೆದಿರುವುದು ಬದುಕಿನಲ್ಲಿ ಬೇಟೆ ಹೇಗೆ ವ್ಯಾಪಕ ಸಂಬಂಧವನ್ನು ಪಡೆದಿತ್ತು ಎಂಬುದರ ನಿದರ್ಶನವಾಗಿದೆ. ಇಂಗ್ಲಿಷ್ ಸಾಹಿತ್ಯಾಧ್ಯಯನದಿಂದ ವಿಶೇಷವಾಗಿ ನಮ್ಮಲ್ಲಿದ್ದ ಕೆಲವರು ಆಂಗ್ಲರು ಪ್ರಕಟಿಸಿದ ತಮ್ಮ ರೋಮಾಂಚಕ ಬೇಟೆ ಅನುಭವ ಕಥನಗಳಿಂದ ಪ್ರೇರಿತರಾದ ಕನ್ನಡಿಗ ಬೇಟೆಗಾರರೂ ತಮ್ಮ ಅನುಭವಗಳಿಗೆ ಶಬ್ದರೂಪ ಕೊಡಲು ಮುಂದಾದದ್ದು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಸಬಗೆಯ ಮೃಗಯಾ ಸಾಹಿತ್ಯ ನಿರ್ಮಾಣಕ್ಕೆ ಕಾರಣವಾಯಿತೆನ್ನಬಹುದು. ಇವರಲ್ಲಿ ಅಕ್ಷರಸ್ಥ ಬೇಟೆಗಾರರು ತಮ್ಮ ಅನುಭವ ಕಥನಗಳನ್ನು ಸ್ವಯಂ ನಿರೂಪಿಸಿದರೆ, ಬರೆಹ ಸಾಧ್ಯವಾಗದವರು ಇತರರಿಗೆ ಹೇಳಿ ಅಥವಾ ಆಸಕ್ತ ಲೇಖಕರು ಅಂತಹವರ ಅನುಭವ ಕೇಳಿ ಅವುಗಳಿಗೆ ಸಾಹಿತ್ಯಕ ನಿರೂಪಣೆ ನೀಡಿದ್ದು ನಡೆದಿದೆ. ಇನ್ನು ಕೆಲವರು ಇಂಗ್ಲಿಷ್‌ನಲ್ಲಿದ್ದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವ ಮೂಲಕ ಆಂಗ್ಲರ ಬೇಟೆಯ ಅನುಭವಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಕಾರ್ಯಮಾಡಿದ್ದೂ ಇದೆ.

ಜಿಮ್‌ಕಾರ್ಬೆಟ್, ಕೆನ್ನೆತ್ ಅಂಡರ್ಸನ್ ಮೊದಲಾದವರು ಮಾನವೀಯ ದೃಷ್ಟಿ ಮತ್ತು ಪರಿಸರ ಕಾಳಜಿಗಳಿಂದ ನರಭಕ್ಷಕ ಮೃಗಗಳನ್ನು ಮಾತ್ರ ಕೊಲ್ಲುವ ತತ್ತ್ವಕ್ಕೆ ಬದ್ಧರಾದ ನಿಪುಣ ಬೇಟೆಗಾರರಾಗಿದ್ದು ಅವರು ತಮ್ಮ ನೂರಾರು ಬೇಟೆ ಅನುಭವಗಳನ್ನು ಪುಸ್ತಕಗಳ ರೂಪದಲ್ಲಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಬಹಳಷ್ಟು ಕನ್ನಡಕ್ಕೂ ಅನುವಾದಗೊಂಡಿವೆ. ಬಿ.ಈಶ್ವರ ಭಟ್ ಅವರು 1962 ರಷ್ಟು ಹಿಂದೆಯೇ ಅಂಡರ್ಸನ್‌ನ 'ಶಿವನಿಪಳ್ಳಿಯ ಕಪ್ಪು ಚಿರತೆ' - ಕೃತಿಯ ಮೊದಲ ಐದು ಅಧ್ಯಾಯಗಳನ್ನು ಕನ್ನಡಕ್ಕೆ ತಂದಿದ್ದಾರೆ. ಮಾಗಡಿ ಬಳಿ ಆತ ಚಿರತೆಯೊಂದನ್ನು ಕೊಂದ ಪ್ರಸಂಗವೂ ಇಲ್ಲಿ ನಿರೂಪಿತವಾಗಿದೆ. ಅಂಡರ್ಸನ್ ಬೆಂಗಳೂರು ನಿವಾಸಿಯಾಗಿದ್ದ ಎಂಬುದೂ ಉಲ್ಲೇಖನೀಯ. ಅವನ ಈ ಕೃತಿ ಕೇವಲ ಬೇಟೆಗಾರನ ರೋಚಕ ಅನುಭವಗಳ ನಿರೂಪಣೆಯಾಗದೆ ಚಿರತೆ ಮತ್ತು ಹುಲಿಗಳ ಗುಣ ಸ್ವಭಾವ ಕುರಿತು ಆತ ನೀಡುವ ಸೂಕ್ಷ್ಮ ವಿವರಗಳು ಆತನನ್ನು ಒಬ್ಬ ಪ್ರಾಣಿವಿಜ್ಞಾನಿಯ ಮಟ್ಟಕ್ಕೂ ಕೊಂಡೊಯ್ಯುತ್ತವೆ. ಸುಂದರ ವನ್ಯಜೀವಿಗಳನ್ನು ಕೊಂದು, ಒಣಹುಲ್ಲು ತುಂಬಿ, ಗೊಂಬೆಗಳನ್ನು ಷೋಕೇಸಿನಲ್ಲಿ ಇಡುವುದಕ್ಕಿಂತಲೂ ಕ್ಯಾಮರಾದಲ್ಲಿ ಅವುಗಳ ಸುಂದರ ಚಿತ್ರಗಳನ್ನು 'ಷೂಟ್' ಮಾಡುವುದು ಅತ್ಯುತ್ತಮ ಕೆಲಸ ಎಂದು ಆತ ಅಭಿಪ್ರಾಯಪಟ್ಟಿರುವುದು ಮಾರ್ಮಿಕವಾದ, ಬೋಧಪ್ರದವಾದ ಕಿವಿಮಾತಾಗಿದೆ. ಇಂಗ್ಲಿಷಿನ 'ಬೆಂಗಾಳ ಊರು' (ಅವರೆ ಕಾಯಿಗಳ ನಗರ) ಎಂಬುದೇ ಕನ್ನಡದಲ್ಲಿ ಬೆಂಗಳೂರು ಆಗಿದೆ ಎಂಬುದು ಅವನ ಅಭಿಪ್ರಾಯವಾಗಿದೆ. ಈ ಪ್ರದೇಶದ ಅವರೆಕಾಯಿಗಳ ರುಚಿ ಬಲ್ಲವರೇ ಬಲ್ಲರು ಎಂದೂ ಆತ ಮೆಚ್ಚಿ ಬರೆದಿದ್ದಾನೆ.

ಪೂರ್ಣಚಂದ್ರ ತೇಜಸ್ವಿ ಅವರು ಇದೇ ಲೇಖಕರ 'ಜಾಲಹಳ್ಳಿಯ ಕುರ್ಕ', 'ಬೆಳ್ಳಂದೂರಿನ ನರಭಕ್ಷಕ', 'ಪೆದ್ದಚೆರುವಿನ ರಾಕ್ಷಸ' ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ (1999). ಹೊಸಗನ್ನಡದಲ್ಲಿ ಮೃಗಾಯಾ ಸಾಹಿತ್ಯವನ್ನೇ ಒಂದು ಪ್ರಕಾರವೆಂಬಂತೆ ಪರಿಗಣಿಸುವಷ್ಟು ಕೃತಿ ರಚನೆ ಮಾಡಿದವರು ಕೆದಂಬಾಡಿ ಜತಪ್ಪ ರೈ (ನೋಡಿ) ಬೇಟೆಯ ನೆನಪುಗಳು (1978), ಈಡೊಂದು ಹುಲಿಯೆರಡು (1979), ಬೇಟೆಯ ಉರುಳು (1982) ಹಾಗೂ ಬೆಟ್ಟದ ತಪ್ಪಲಿಂದ ಕಡಲ ತಡಿಗೆ - ಈ ನಾಲ್ಕು ಕೃತಿಗಳಲ್ಲಿ ಅವರು ಬೇಟೆ ಅನುಭವಗಳನ್ನು ಕುತೂಹಲ ಕೆರಳುವಂತೆ ಬರೆದಿದ್ದಾರೆ. ಬೇಟೆಯ ಉರುಳು ಎಂಬ ಕೃತಿಯಲ್ಲಿ ಆದಿಮಾನವನಿಂದ ಆಧುನಿಕನ ವರೆಗೆ ಬೇಟೆ ಬೆಳೆದುಬಂದ ಬಗೆಯನ್ನೂ ವಿವರಿಸಿರುವುದು ಲೇಖಕರ ಅಧ್ಯಯನಶೀಲತೆಯ ನಿದರ್ಶನವೂ ಆಗಿದ್ದು ಅಭ್ಯಾಸಿಗಳಿಗೆ ಆಕರ ಕೃತಿಯೂ ಆಗಿದೆ.

ಕಡಿದಾಳಿನ ಕೆ.ಎಸ್.ರಾಮಪ್ಪಗೌಡರ 'ಮಲೆನಾಡಿನ ಶಿಕಾರಿಯ ನೆನಪುಗಳು' ಸ್ವಾತಂತ್ರ್ಯ ಪೂರ್ವದ ಅವರ ಶಿಕಾರಿಯ ಅನುಭವಗಳನ್ನು ನಿರೂಪಿಸಿದರೆ, ಕೊಡಗಿನ ಸಂಪ್ರದಾಯದಂತೆ ಹುಲಿಮದುವೆ ಮಾಡಿಸಿಕೊಂಡ 'ಕಾಕೆಮಾನಿ' (ಬಿ.ಡಿ.ಸುಬ್ಬಯ್ಯ) ಅವರ 'ಬೇಟೆ ನೆನಪು' ಅಂಡಮಾನಿನಲ್ಲಿ ಅವರು ಆದಿವಾಸಿಗಳು ಬೇಟೆ ಆಡಿದ್ದನ್ನೂ ದಾಖಲಿಸುತ್ತದೆ. 'ಅರಣ್ಯಾಧಿಕಾರಿಯ ದಿನಚರಿ' ತಮ್ಮ ಮಿತ್ರರೊಬ್ಬರ ದಿನಚರಿ ಆಧರಿಸಿದ ಬೇಟೆ ಅನುಭವಗಳ ನಿರೂಪಣೆಯಾಗಿದೆ.

ಕೈಂತಜೆ ವಿಷ್ಣುಭಟ್ಟರು ತಮ್ಮ ಹಾಗೂ ತಮ್ಮ ಪರಿಸರದ ಇತರರ ಬೇಟೆ ಅನುಭವಗಳನ್ನು ಬೇಟೆಯ ಸುತ್ತ ಮುತ್ತ ಎಂಬ ಕೃತಿಯಲ್ಲಿ ಸ್ವಾರಸ್ಯಕರವಾಗಿ ಬರೆದಿದ್ದರೆ, ಶಶಿಧರ ವಿಶ್ವಾಮಿತ್ರ ಅವರ ಕಡೆಯ ಚಿರತೆ ಅನ್ಯ ಬೇಟೆಗಾರರ ಅನುಭವಗಳನ್ನು ಆಧರಿಸಿ ರಚಿಸಿದ್ದಾಗಿದೆ. ನೂರಾರು ಹುಲಿ, ಕಾಡುಕೋಣ ಮೊದಲಾದವುಗಳನ್ನು ಕೊಂದು ನಿಸ್ಸೀಮರೆನಿಸಿದ್ದ ಬಡ್ಡಡ್ಕ ಅಪ್ಪಯ್ಯಗೌಡರ ಅನುಭವಗಳಿಗೆ ಪ್ರಭಾಕರ ಶಿಶಿಲರು 'ಶಿಕಾರಿಯ ಸೀಳುನೋಟದಲ್ಲಿ' ಅಕ್ಷರರೂಪ ನೀಡಿದ್ದಾರೆ.

1948ರ ಹೊತ್ತಿನಲ್ಲಿ ಬೆಂಗಳೂರು ಚಾಮರಾಜಪೇಟೆಯ ಉಮಾ ಟಾಕೀಸಿನ ಬಳಿ ಚಿರತೆಯೊಂದನ್ನು ಕೊಂದ ಸಂಗತಿಯನ್ನು ಮೇಜರ್ ಎಚ್.ಸಿ.ವೇಣುಗೋಪಾಲ್ ಅವರು ತಮ್ಮ 'ನೆನಪು ಕೆದರಿದಾಗ' ಗ್ರಂಥದ ಒಂದೆಡೆ ಪ್ರಸ್ತಾಪಿಸಿದ್ದಾರೆ. ತೋವಿನಕೆರೆ ಸೀತಾರಾಮ ಜೋಯಿಸರೂ ತಮ್ಮ 'ನೆನಪಿನ ಅಂಗಳದ' ಒಂದು ಅಧ್ಯಾಯದಲ್ಲಿ ಗುಂಡಪ್ಪ ನಾಯಕ

ಎಂಬವನ ಬೇಟೆ ಅನುಭವ ನಿರೂಪಿಸಿದ್ದಾರೆ. ಜಿ.ವೆಂಕಟಯ್ಯ ಅವರು 'ಬನದಸಿರಿ'ಯಲ್ಲಿ ಬಿಳಿಗಿರಿರಂಗನಬೆಟ್ಟದ ಪರಿಸರ ಹಾಗೂ ಬೇಟೆಗೆ ಸಂಬಂಧಿಸಿದಂತೆ ಕೆಲವೊಂದು ಮಾಹಿತಿಗಳನ್ನು ಪ್ರಸ್ತಾಪಿಸಿದ್ದಾರೆ. ಹಾಗೆಯೇ ವೈ.ಎನ್.ಪುಟ್ಟಣ್ಣ ಅವರ 'ನಾನು ಕಂಡ ಮಲೆನಾಡು', ಡಿ.ಎನ್.ಕೃಷ್ಣಯ್ಯ ಅವರ 'ಕೊಡಗಿನ ಇತಿಹಾಸ' ಕೃತಿಗಳಲ್ಲಿ ಸಹ ಬೇಟೆ ವಿಷಯಗಳು ಸಾಂದರ್ಭಿಕವಾಗಿ ಪ್ರಸ್ತಾಪವಾಗಿವೆ.

ಅನೇಕ ಕಥೆ, ಕಾದಂಬರಿ, ಆತ್ಮಕಥೆ, ಜೀವನ ಚಿತ್ರ, ಪ್ರಬಂಧ ಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿಯೂ ಬೇಟೆಗೆ ಸಂಬಂಧಿಸಿದ ಸಂಗತಿಗಳು ಕಾಣಿಸಿಕೊಂಡಿವೆ. ಕುವೆಂಪು ಅವರ ಎರಡು ಕಾದಂಬರಿಗಳಾದ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಹಾಗೂ ಮಲೆನಾಡಿನ ಚಿತ್ರಗಳು ಎಂಬ ಕೃತಿಗಳಲ್ಲಿ ಬೇಟೆಯ ದಟ್ಟ ಅನುಭವಗಳು ದಾಖಲಾಗಿರುವುದನ್ನು ಗಮನಿಸಬಹುದಾಗಿದೆ. ಭಾರತೀಸುತರ 'ಹುಲಿಯ ಹಾಲಿನ ಮೇವು' ಮೊದಲಾದ ಕೃತಿಗಳಲ್ಲಿಯೂ ಬೇಟೆಯ ಚಿತ್ರಣ ಅಲ್ಲಲ್ಲಿ ಕಂಡುಬರುತ್ತದೆ. ವನ್ಯಜೀವಿಗಳು ಪರಸ್ಪರ ನಡೆಸುವ 'ಬೇಟೆ' ಕುರಿತ ಅನೇಕ ಕುತೂಹಲದ ಮಾಹಿತಿಗಳನ್ನು ಕುರಿತು ಬರೆದ ಆ ಮೂಲಕ ವನ್ಯಜೀವಿಗಳ ಬದುಕು ಸ್ವಭಾವದ ಮೇಲೆ ಬೆಳಕು ಚೆಲ್ಲುವ ಹಲವು ಕೃತಿಗಳೂ ಕನ್ನಡದಲ್ಲಿವೆ. ಪೂರ್ಣಚಂದ್ರ ತೇಜಸ್ವಿ (ಪರಿಸರದ ಕತೆ), ಉಲ್ಲಾಸ ಕಾರಂತ (ಕಾಡು ಪ್ರಾಣಿಗಳ ಜಾಡಿನಲ್ಲಿ), ಅಜ್ಜಂಪುರ ಕೃಷ್ಣಸ್ವಾಮಿ (ಖಗಸಿರಿ, ವನಸಿರಿ) ಮೊದಲಾದವರ ಕೃತಿಗಳನ್ನು ಇಲ್ಲಿ ಸ್ಮರಿಸಬಹುದು.

**ಬೇಟೆ ಅಧ್ಯಯನಗಳು :** ಸಂಸ್ಕೃತಿ, ಸಾಹಿತ್ಯ ಹಾಗೂ ಪರಿಸರ ಚಿಂತನೆಯ ಹಿನ್ನೆಲೆಯಲ್ಲಿ ವಿಶೇಷ ಗಮನ ಸೆಳೆದ 'ಬೇಟೆ'ಯನ್ನು ಕುರಿತು ವಿವಿಧ ನೆಲೆಯಲ್ಲಿ ಅಧ್ಯಯನ ಮಾಡುವ ಪ್ರಯತ್ನಗಳೂ ಆಧುನಿಕ ಸಂದರ್ಭದಲ್ಲಿ ಗಮನಾರ್ಹ ರೀತಿಯಲ್ಲಿ ನಡೆದಿವೆ. 'ಕನ್ನಡದಲ್ಲಿ ಬೇಟೆ ಸಾಹಿತ್ಯ' ಎಂಬುದು ನರೇಂದ್ರ ರೈ ದೇರ್ಲ ಅವರು ಎಂ.ಫಿಲ್.ಪದವಿಗಾಗಿ ನಡೆಸಿದ ಅಧ್ಯಯನವಾಗಿದ್ದು, ಈ ವಿಷಯದ ಉತ್ತಮ ಪರಾಮರ್ಶನ ಗ್ರಂಥವಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ 'ಬೇಟೆ: ಸಾಂಸ್ಕೃತಿಕ ಪದಕೋಶ' (ಸಂ.ಸ.ಚಿ.ರಮೇಶ್) ಎಂಬ ಕೃತಿ ಪ್ರಕಟಿಸಿದೆ. ಎಂ.ಪಿ.ಮಂಜಪ್ಪಶೆಟ್ಟಿ ಅವರ 'ಮಲೆನಾಡಿನ ಶಿಕಾರಿಗಳು' ಬೇಟೆಯನ್ನೇ ಕುರಿತ ವೈವಿಧ್ಯಮಯ ಮಾಹಿತಿಗಳನ್ನೊಳಗೊಂಡ ಕೃತಿಯಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ 'ಗ್ರಾಮೀಣ ಬೇಟೆಗಳು' ರಾಜ್ಯದ ವಿವಿಧ ಪ್ರದೇಶಗಳ ಬೇಟೆ ತಂತ್ರ, ಪದ್ಧತಿಗಳನ್ನು ಒಳಗೊಂಡ ಕೃತಿಯಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆಯಲ್ಲಿ ಪ್ರಕಟವಾದ ಬಹಳಷ್ಟು ಕೃತಿಗಳು ಬುಡಕಟ್ಟು ಹಾಗೂ ಅಲೆಮಾರಿ ಜನಾಂಗಗಳ ಬದುಕು ಮತ್ತು ಸಂಸ್ಕೃತಿಯ ಅಧ್ಯಯನಗಳಾಗಿದ್ದು ಅವುಗಳಲ್ಲಿ ಅವರ ಜೀವನ ವಿಧಾನವೂ ಆದ 'ಬೇಟೆ'ಯ ಬಗೆಗೂ ಮಾಹಿತಿಗಳು ಲಭ್ಯವಾಗುತ್ತವೆ. ಬಿ.ಪಿ.ರಾಮಯ್ಯ, ಎಂ.ಎಲ್.ಶಂಕರಲಿಂಗಪ್ಪ, ಟಿ.ಗೋವಿಂದರಾಜು ಮೊದಲಾದವರ ಬೇಟೆ ಕುರಿತ ಬಿಡಿ ಲೇಖನಗಳು ವಿವಿಧ ಪತ್ರಿಕೆಗಳಲ್ಲಿಯೂ ಸಂಸ್ಮರಣ ಗ್ರಂಥಗಳಲ್ಲಿಯೂ ಪ್ರಕಟವಾಗಿವೆ. ಕಾನೂನು ಬಾಹಿರ ಬೇಟೆ ಆಚರಣೆ ಬಗೆಗೆ ಜನತೆಯಲ್ಲಿ ಜಾಗೃತಿ ಮೂಡಿಸುವಂತಹ ಚಿತ್ರ ಲೇಖನಗಳು ಸಾಮಾನ್ಯವಾಗಿ ನಿಯತಕಾಲಿಕಗಳಲ್ಲಿ ಬೇಟೆ ಋತುವಿನಲ್ಲಿ ಪ್ರಕಟವಾಗುವುದು ಹೊಸ ಬೆಳೆವಣಿಗೆಯಾಗಿದೆ. (ಟಿ.ಜಿ.)

**ಕನ್ನಡದಲ್ಲಿ ಭಾವಗೀತೆ :** ಭಾವಗೀತೆ ಎಂಬ ಸಾಹಿತ್ಯ ರೂಪ ಮೂಲತಃ ಕನ್ನಡದ್ದಲ್ಲ. ಮೊದಲು ಗ್ರೀಕ್ ಭಾಷೆಯಲ್ಲಿ ಪ್ರಚುರವಾದ ಈ ಸಾಹಿತ್ಯರೂಪ ಅನೇಕ ಶತಮಾನಗಳ ಅನಂತರ ಇಂಗ್ಲಿಷ್ ಭಾಷೆಯಲ್ಲಿ ಸಮೃದ್ಧವಾಗಿ ಬೆಳೆಯಿತು. ಇಂಗ್ಲಿಷ್ ಸಾಹಿತ್ಯದ ಪ್ರಭಾವ ಕನ್ನಡದ ಮೇಲೆ ಆದಂತೆ ಅಲ್ಲಿ ಲಿರಿಕ್ ಎಂದು ಕರೆಯುತ್ತಿದ್ದ ಈ ವಿಧಾನವನ್ನು ಇಲ್ಲಿ ಸ್ವೀಕರಿಸಿ ಭಾವಗೀತೆ ಎಂದು ಕರೆಯಲಾಯಿತು. ಕನ್ನಡದ ಅನೇಕ ಪ್ರತಿಭಾಶಾಲಿ ಕವಿಗಳು ವಿಪುಲ ಸಂಖ್ಯೆಯಲ್ಲಿ ಶ್ರೇಷ್ಠಮಟ್ಟದ ಭಾವಗೀತೆಗಳನ್ನು ರಚಿಸಿದ್ದಾರೆ. ಕಾದಂಬರಿ ಕ್ಷೇತ್ರವನ್ನು ಬಿಟ್ಟರೆ ಇಷ್ಟು ಪುಷ್ಟವಾಗಿ ಬೆಳೆದ ಮತ್ತೊಂದು ಸಾಹಿತ್ಯ ಪ್ರಕಾರ ಹೊಸಗನ್ನಡದಲ್ಲಿ ಇಲ್ಲ.

ಕನ್ನಡಿಗರಿಗೆ ಈ ಸಾಹಿತ್ಯ ಪ್ರಕಾರವನ್ನು ಸ್ಫೂರ್ತಿದಾಯಕವಾದ ರೀತಿಯಲ್ಲಿ ಪರಿಚಯ ಮಾಡಿಸಿದ ಕೀರ್ತಿ ಐದಾರು ಜನ ಸಾಹಿತಿಗಳಿಗೆ ಸಲ್ಲುವುದಾದರೂ ಅವರಲ್ಲಿ ಅಗ್ರಗಣ್ಯರಾದವರು ಬಿ.ಎಂ. ಶ್ರೀಕಂಠಯ್ಯನವರು. ಅಭಿನಂದನೀಯವಾದ ಈ ಕಾರ್ಯದಲ್ಲಿ ತೊಡಗಿದ್ದ ಇತರ ಸ್ಮರಣೀಯ ವ್ಯಕ್ತಿಗಳೆಂದರೆ ಎಸ್.ಜಿ.ನರಸಿಂಹಾಚಾರ್ಯರು, ಪಂಜೆ ಮಂಗೇಶರಾಯರು, ಹಟ್ಟಿಯಂಗಡಿ ನಾರಾಯಣರಾಯರು, ಎಂ.ಗೋವಿಂದ ಪೈ ಅವರು ಹಾಗೂ ಡಿ.ವಿ.ಗುಂಡಪ್ಪನವರು. ಇವರಲ್ಲಿ ಅನೇಕರು ಅನುವಾದಕ್ಕೆ ಕನ್ನಡದ ಹಳೆಯ ಛಂದೋರೂಪಗಳನ್ನೇ ಬಳಸಿಕೊಂಡರು. ಇವರಲ್ಲಿ ಪ್ರಾಸತ್ಯಾಗದ ಧೀರ ನಿರ್ಧಾರವನ್ನು ಕೈಗೊಂಡವರು ಗೋವಿಂದ ಪೈ ಅವರು. 1911ರ ಸುಮಾರಿಗೆ ಅವರು ಪ್ರಾಸವನ್ನು ಬಿಡುವುದಾಗಿ ತೀರ್ಮಾನಿಸಿದರು. ಅಂದಿನ ದಿನಕ್ಕೆ ಅದು ಸಾಹಸದ ಮಾತು. ಹೀಗೆ ಮಾಡಿದುದಕ್ಕೆ ಅವರು ಕೊಟ್ಟ ಕಾರಣ 'ಕನ್ನಡಕ್ಕೆ ಪ್ರಾಸವೇನು ವೇದವಾಕ್ಯವೂ ಅಲ್ಲ, ಶಾಶ್ವತವೂ ಅಲ್ಲ, ಅದನ್ನು ಬೇಕಾದಾಗ ಬೇಕಾದಂತೆ ಬಿಟ್ಟುಬಿಡಬಹುದು' ಎಂದು. ಈ ಪ್ರಾಸತ್ಯಾಗ ಕವಿಯ ಭಾವಗಳು ನಿರರ್ಗಳವಾಗಿ ಹರಿಯಲು ಅವಕಾಶ ಮಾಡಿಕೊಟ್ಟಿತು.

ಹಟ್ಟಿಯಂಗಡಿ ನಾರಾಯಣರಾಯರು 1900ಕ್ಕೆ ಮುಂಚೆಯೇ ಕಾಲಿನ್ಸ್, ಗ್ರೇ, ಟೈಲರ್, ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ಲಾಂಗ್‌ಫೆಲೋ, ವ್ಹಿಟ್ಟಿಯರ್ ಮತ್ತು ಎಮರ್ಸನ್ ಮುಂತಾದ ಕವಿಗಳ ಕವನಗಳನ್ನು ಅನುವಾದ ಮಾಡಿದ್ದರು. ಆದರೆ ಇವರ ಕವನಗಳು ಅಚ್ಚಾದದ್ದು ಮಾತ್ರ ಕೆಲವು ವರ್ಷಗಳ ಅನಂತರ. ಇವರಲ್ಲಿ ಮೂಲದ ಭಾವಗಳನ್ನು ಸಂಗ್ರಹಿಸುವ ಪ್ರವೃತ್ತಿ ಇದ್ದುದರಿಂದ ಮೂಲದ ಎಷ್ಟೋ ಸುಂದರವಾದ ಭಾವಗಳು ಅನುವಾದದಲ್ಲಿ ಹಾರಿಹೋಗಿವೆ. ಅನುವಾದ ಬಹುಮಟ್ಟಿಗೆ ವಿಫಲವಾಗಿದೆ. 'ಆದರೆ ಈ ಪ್ರಥಮ ಪ್ರಯತ್ನದ ಸೋಲಿಗೂ ಚಾರಿತ್ರಿಕವಾಗಿ ವಿಶೇಷವಾದ ಪ್ರಾಮುಖ್ಯತೆಯಿದೆ. ಇದರ ಹಿಂದೆ ಕನ್ನಡದ ಏಳಿಗೆಗಾಗಿ, ಕನ್ನಡದಲ್ಲಿ ನೂತನ ಮಾರ್ಗವನ್ನು ತೆರೆಯುವುದಕ್ಕಾಗಿ ಆಳವಾಗಿ ಆಲೋಚಿಸುವ ನಿರಂತರವೂ ಶ್ರಮಿಸುವ' ಚೇತನವೊಂದು ಇದೆ ಎಂಬುದನ್ನು ನಾವು ಮರೆಯುವಂತಿಲ್ಲ.

ಆಧುನಿಕ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸದೊಂದು ಹೆದ್ದಾರಿಯನ್ನು ತೆರೆದು ಚಿರಂಜೀವಿಯಾಗುವ ಸತ್ವವನ್ನು ತಳೆದಿರುವ ಕೃತಿ ಬಿ.ಎಂ.ಶ್ರೀ.ಅವರ ಇಂಗ್ಲಿಷ್ ಗೀತಗಳು. ಇಂಗ್ಲಿಷ್‌ನ ನ್ಯಾಷ್, ಬ್ರಿಡ್ಜಸ್, ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ಕೋಲ್‌ರಿಜ್, ಲೇಡಿ ಲಿಂಡ್ಸ್ ಮೊದಲಾದ ಕವಿಗಳ ಕವನಗಳನ್ನು ಸೊಗಸಾದ ರೀತಿಯಲ್ಲಿ ಶ್ರೀಯವರು ಅನುವಾದ ಮಾಡಿದ್ದಾರೆ. ಇಂಗ್ಲಿಷ್ ಗೀತಗಳು ಸಂಕಲನವನ್ನು ಸ್ವಾಗತಿಸುತ್ತ 'ಆಂಗ್ಲೇಯ ಸಾಹಿತ್ಯವನ್ನು ಕಾಣದೆ ಇರುವವರಿಗೆ ಆ ಸಾಹಿತ್ಯದ ಐಶ್ವರ್ಯವೆಂಥದೆಂದು ತಿಳಿಯುವುದಕ್ಕೆ ಕನ್ನಡದಲ್ಲಿ ಇಂಥ ಒಂದು ಭಾಷಾಂತರ ಬೇಕಾಗಿತ್ತು. ಈ ಅತ್ಯವಶ್ಯಕವಾದ ಕಾರ್ಯವನ್ನು ಕೈಗೊಂಡಿದ್ದಕ್ಕಾಗಿ ಕನ್ನಡಿಗರು ಗ್ರಂಥಕರ್ತರನ್ನು ವಂದಿಸಬೇಕಾಗಿದೆ. ಶ್ರೀಕಂಠಯ್ಯನವರು ಪ್ರಯೋಗಿಸಿರುವ ಛಂದೋರೂಪಗಳು ಸುಂದರವಾಗಿವೆ; ಕಾವ್ಯ ವಸ್ತುವಿಗೆ ಅನುಕೂಲವಾಗಿವೆ; ಕನ್ನಡದ ಮರ್ಯಾದೆಗೆ ಒಪ್ಪಿವೆ. ಮುಖ್ಯವಾಗಿ ಶೈಲಿಯಲ್ಲಿಯೂ ಛಂದಸ್ಸಿನಲ್ಲಿಯೂ ಶ್ರೀಕಂಠಯ್ಯನವರು ಮಾರ್ಗದರ್ಶಿಗಳು. ಇನ್ನು ಮೇಲೆ ಬರುವ ಕವಿಗಳು ಇವರು ತೋರಿಸಿಕೊಟ್ಟಿರುವ ದಾರಿಯಲ್ಲಿ ಹೆಚ್ಚು ಹೆಚ್ಚಾಗಿ ನಡೆಯುವರೆಂಬುದರಲ್ಲಿಯೂ ಇದರಿಂದ ನಮ್ಮ ಸಾಹಿತ್ಯವು ಪಂಡಿತರಿಗೆ ಮಾತ್ರವಲ್ಲದೆ ಈಗಿನದಕ್ಕಿಂತ ಹೆಚ್ಚಾಗಿ ಜನಸಾಮಾನ್ಯಕ್ಕೆ ನಿಲುಕುವಂತಾಗುತ್ತದೆಂಬುದರಲ್ಲಿಯೂ ಸಂದೇಹವಿಲ್ಲ' ಎಂದು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಬರೆದ ಮಾತುಗಳು ಈ ಕೃತಿಯ ಮಹತ್ತ್ವವನ್ನು ಸೂಚಿಸುತ್ತವೆ. 'ವಿಮರ್ಶಕರ ನಿರೀಕ್ಷೆ ನಿಷ್ಫಲವಾಗಲಿಲ್ಲ. ಕೃತಿಯ ಅಂತರ್ನಿಹಿತವಾದ ಶಕ್ತಿಯ ಪ್ರಭಾವದಿಂದಲೂ ಸಹೃದಯರ ಮತ್ತು ವಿಮರ್ಶಕರ ತೋಲನ ದಕ್ಷತೆಯಿಂದಲೂ ಕನ್ನಡದ ಅಗತ್ಯದಿಂದಲೂ ಮಾರ್ಗದರ್ಶನದ ಕಠಿಣ ಕಾರ್ಯವನ್ನು ಸಾಮಾನ್ಯ ಜನಮನದ ನಿರೀಕ್ಷಣೆಯನ್ನು ಮೀರಿದ ಮಹತ್ ಪ್ರಮಾಣದಲ್ಲಿ ಈ ಕೃತಿ ಸಾಧಿಸಿತು'.

ಕೆಲವು ಕನ್ನಡ ಕವಿಗಳು ಕಾವ್ಯಾಭಿವ್ಯಕ್ತಿಯ ಹೊಸ ಮಾಧ್ಯಮಕ್ಕಾಗಿ ಸ್ವಂತವಾಗಿ ಪ್ರಯೋಗಗಳನ್ನು ನಡೆಸುತ್ತಿದ್ದರು. ಇಂಗ್ಲಿಷ್

ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದ ಕುವೆಂಪು ಅವರೂ ಅಂಥವರಲ್ಲಿ ಒಬ್ಬರು. ತಾವು ಕೂಡ ನೂತನ ಛಂದೋವೈವಿಧ್ಯಗಳನ್ನು ಕುರಿತು ಸ್ವತಂತ್ರವಾಗಿ ಪ್ರಯೋಗಗಳಲ್ಲಿ ತೊಡಗಿದ್ದರೆಂದು ಅವರು ಹೇಳುತ್ತಾರೆ. ಆದರೂ ಎಲ್ಲರಿಗೂ ಸ್ಪಷ್ಟವಾದ ಒಂದು ಮಾರ್ಗದರ್ಶನ ಶ್ರೀಯವರ ಇಂಗ್ಲಿಷ್ ಗೀತಗಳಿಂದ ದೊರಕಿತು ಎಂಬುದರಲ್ಲಿ ಭಿನ್ನಾಭಿಪ್ರಾಯಗಳಿಲ್ಲ.

ಇಂಗ್ಲಿಷ್ ಗೀತಗಳು ಮುಖ್ಯವಾಗಿ ಸಾಧಿಸಿ ತೋರಿಸಿದ ಅಂಶಗಳು ಎರಡು. ಮೊದಲನೆಯದು, ಕನ್ನಡ ಅದುವರೆಗೆ ಕಾಣದಿದ್ದ ವಸ್ತು ವೈವಿಧ್ಯವನ್ನು ನಮ್ಮ ಜನದ ಮುಂದೆ ತೆರೆದಿಟ್ಟದ್ದು. ಎರಡನೆಯದು, ಹಳೆಯ ಮಾತ್ರಾಗಣಗಳನ್ನು ಆಧಾರವಾಗಿಟ್ಟುಕೊಂಡು ಹೊಸ ಹೊಸ ರೂಪವೈವಿಧ್ಯವನ್ನು ತರಬಹುದು ಎಂದು ತೋರಿಸಿದ್ದು.

ವಸ್ತುವಿನ ನೂತನತೆಯ ಬಗೆಗೆ ಒಂದು ಮಾತನ್ನು ಒತ್ತಿ ಹೇಳಬೇಕಾದ ಅಗತ್ಯವಿದೆ. ಈ ಶತಮಾನದ ಆದಿಯಲ್ಲಿ ಕೆಲವರಾದರೂ ಕವಿಗಳು ವಸ್ತುವಿನಲ್ಲಿ ನೂತನತೆಯನ್ನು ತರಲು ಪ್ರಯತ್ನಿಸಿದ್ದರು ಎಂಬುದಕ್ಕೆ ಆಧಾರಗಳಿವೆ.

ರೈಲನ್ನು ಕುರಿತು ಎಸ್.ಜಿ.ನರಸಿಂಹಾಚಾರ್ಯರು ಬರೆದ ಹೊಗೆಯಗಾಡಿ ಎಂಬ ಕವಿತೆ ಚೌಪದದಲ್ಲಿದೆ. ಅದರ ಕೆಲವು ಪಂಕ್ತಿಗಳು:

ನೊಗವನೆತ್ತಿನ ಕೊರಳೊಳಿಡುವ ಪಾಡಿಲ್ಲ
ಬಿಗಿದ ಕುದುರೆಯ ಹೂಡುವಾಯಾಸವಿಲ್ಲ
ಮಿಗೆ ಕಾದ ನೀರ ಹಬೆಯಿಂದ ಬಲುಬೇಗ
ಹೊಗೆಯ ಗಾಡಿಯು ನೋಡು ಹೋಗುತಿಹುದೀಗ

ರೈಲನ್ನು ಕುರಿತು ಆಸ್ಥಾನ ವಿದ್ವಾನ್ ಜಯರಾಯಾಚಾರ್ಯರು ಬರೆದ ರೈಲುಗಾಡಿ ಎಂಬ ಪದ್ಯ:

ಓಡುತಿರ್ಪುದು| ರೈಲು || ಪಲ್ಲವಿ ||
ನೋಡು ಕೂಡಿರುವ ಜನರ|
ಗಾಡಿಯನೊಳಕೊಂಡು ಬೇಗ || ಅನುಪಲ್ಲವಿ ||

ಮುಂದಿನಿಂಜಿನಲ್ಲಿ ಬೆಂಕಿ
ಯೊಂದೆಡೆಯೊಳಗಾ ಬೆಂಕಿ
ಯಿಂದ ನೀರು ಕಾಯ್ದು ಹಬೆಯು|
ಬಂದಪುದಾ ಹಬೆಯ ಬಲದಿ||

ಸಿದ್ದೇಶ್ವರ ಮಳೀಮಠ ಎಂಬವರು ಅತ್ಯಧಿಕ ಸಂತಸದಿಂದ ಇಪ್ಪತ್ತು ರೌಪ್ಯವ ಕೊಟ್ಟು ಕೊಂಡ ಕಾಲುಗಾಡಿ (ಸೈಕಲ್)ಯ ಸವಾರಿಯನ್ನು ಕುರಿತು ರಚಿಸಿರುವ ಒಂದು ಷಟ್ಪದಿ ಹೀಗಿದೆ:

ಬಲು ಭಯದಿ ಸುತ್ತಿರುವ ನರಗಳ
ಸೆಳೆದು ಬಿಗಿದನು ಕಚ್ಚಿ ದವಡೆಯ
ಉಲುಕದುಸುರನು ಬಿಡದಲೆದೆಯನು ಗಟ್ಟಿ ಪಿಡಿದಿಹನು
ನಿಲದೆ ಗಣಗಣ ಗಂಟೆ ಹೊಡೆಯುತ
ಹಲವು ಕುತ್ತನು ದಾಂಟಿ ಗುಡ್ಡದ
ಹೊಳಲ ಹೊರಗಿರ್ಪೆಳುಕಲಿನ ಮಾರ್ಗದಲಿ ನಡೆತಂದ

ಇವೆಲ್ಲ ಒಳ್ಳೆಯ ಭಾವಗೀತೆಗಳಿಗೆ ನಿದರ್ಶನ ಎಂದು ಭಾವಿಸುವಂತಿಲ್ಲ. ಆದರೆ ವಸ್ತುವಿನಲ್ಲಿ ನೂತನತೆಯನ್ನು ತರುವ ಪ್ರಯತ್ನ ನಡೆದಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಇಂಗ್ಲಿಷ್ ಕವನಗಳ ಅನುವಾದದಿಂದ ಕನ್ನಡ ಕಾವ್ಯ ಪ್ರಪಂಚವನ್ನು ಶ್ರೀಮಂತಗೊಳಿಸಲು ಶ್ರಮಿಸಿದ ಬಿ.ಎಂ.ಶ್ರೀಯವರೇ ಸ್ವಯಂ ಕವಿಗಳಾಗಿದ್ದು ಉತ್ತಮವಾದ ಕೆಲವು ಸ್ವತಂತ್ರ ಭಾವಗೀತೆಗಳನ್ನು ರಚಿಸಿದ್ದಾರೆ. ತಿಳಿಯಾದ ಕನ್ನಡದಲ್ಲಿ, ಹೇಳಬೇಕಾದುದನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಕಲೆ ಶ್ರೀಯವರಿಗೆ ಸಿದ್ಧಿಸಿತ್ತು. ಈ ಕೆಲವು ಪಂಕ್ತಿಗಳು ಅದಕ್ಕೆ ಸಾಕ್ಷಿ:

ಕನ್ನಡ ನುಡಿ, ನಮ್ಮ ಹೆಣ್ಣು
ನಮ್ಮ ತೋಟದಿನಿಯ ಹಣ್ಣು
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು

ಶ್ರೀಯವರು ರಚಿಸಿರುವ ಕನ್ನಡ ತಾಯನೋಟ, ಶುಕ್ರಗೀತೆ ಮತ್ತು ಶ್ರೀ ಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ ಎಂಬ ಮೂರು ಪ್ರಗಾಥಗಳು ಕನ್ನಡಕ್ಕೆ ಕವಿ ನೀಡಿರುವ ಉತ್ತಮ ಕಾಣಿಕೆಗಳು.

ಶ್ರೀಯವರಿಗಿಂತ ಹತ್ತು ಹದಿನೈದು ವರ್ಷಗಳ ಹಿಂದೆಯೇ ಅನುವಾದಗಳನ್ನು ಮಾಡಿ, ಸ್ವತಂತ್ರ ಕವನಗಳನ್ನು ರಚಿಸಿ ಕಾವ್ಯಕ್ಷೇತ್ರವನ್ನು ಸಮೃದ್ಧಗೊಳಿಸಲು ಪ್ರಯತ್ನಿಸಿದ್ದ ಮತ್ತೊಬ್ಬರು ಪಂಜೆ ಮಂಗೇಶರಾಯರು. 1893ಕ್ಕೆ ಮುಂಚಿನಿಂದಲೂ ಪಂಜೆಯವರು ಕವಿತೆಗಳನ್ನು ಬರೆಯುತ್ತಿದ್ದರು ಎಂದು ತೀರ್ಮಾನಿಸುವುದಕ್ಕೆ ಆಧಾರಗಳಿವೆ. ಅವರ ಕವಿತೆಗಳಲ್ಲಿ 'ಅದೊಂದು ಬಗೆಯ ದ್ರವಣವಿದೆ, ಮನೆವಳಿಕೆ ಇದೆ' ಎನ್ನುತ್ತಾರೆ ಗೋವಿಂದ ಪೈ. ಅವರ ಲಲಿತವಾದ ಶೈಲಿ ಮುಂದೆ ಕನ್ನಡದಲ್ಲಿ ಇತರರು ಅನುಕರಣ ಮಾಡಬೇಕಾದಂಥದು ಎನಿಸಿತು. ಅವರ ಹುತ್ತರಿ ಹಾಡು ಕೊಡಗರಿಗೆ ನಾಡಗೀತೆಯಾಯಿತು. ಕೊಡಗರ ಸಾಹಸವನ್ನು ಕೊಂಡಾಡುತ್ತ ಪಂಜೆಯವರು ನೀಡಿರುವ ಚಿತ್ರಗಳು ಭಯಮಿಶ್ರಿತ ರೋಮಾಂಚನವನ್ನು ಉಂಟುಮಾಡುವಂಥವು:

ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು,
ಕವಣೆ ತಿರಿ ಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು,
ಸವರಿ ಆನೆಯ ಸೊಂಡಲಿನ ರಣಕೊಂಬನಾರ್ ಭೋರ್ಗರೆದರೋ
ಸವೆದು ಸವೆಯದ ಸಾಹಸತ್ವದ ಕ್ಷಾತ್ರಬೇಟೆಯ ಮೆರೆದರೋ,
ಅವರೆ ಸೋಲ್ ಸಾವರಿಯರು !
ಅವರೆ ಕಡುಗಲಿ ಗರಿಯರು !
ಅವರೆ ಕೊಡಗಿನ ಹಿರಿಯರು !

ಇದೇ ತಲೆಮಾರಿನ ಕವಿಗಳಲ್ಲಿ ಗಮನೀಯರಾದವರು ಎಸ್.ಜಿ. ನರಸಿಂಹಾಚಾರ್ಯರು. ಇವರು ಅನೇಕ ಇಂಗ್ಲಿಷ್ ಕವನಗಳನ್ನು ತುಂಬ ಸೊಗಸಾಗಿ ಅನುವಾದ ಮಾಡಿದ್ದಾರೆ. ಇವರ ಕನ್ನಡದ ಹದಕ್ಕೆ ಈ ಕೆಳಗಿನ ಉದಾಹರಣೆ: ವರ್ಡ್ಸ್‌ವರ್ತ್ ಕವಿಯ ಟು ದಿ ಕಕೂ ಎಂಬ ಕವನದ ಪಂಕ್ತಿಗಳ ಅನುವಾದ ಇದು:

ಬಾರೊ ಬಸಂತದ ಕಂದಾ ಬಾ ಬಾರೊ
ಹಾರುವ ಹಕ್ಕಿ ನೀನಲ್ಲ
ಸಾರುವ ದನಿ, ಮಾಯದಗಂಟು|, ಕಣ್ಣಿಗೆ
ತೋರದ ಹುರುಳಾಗಿ ಸುಳಿವೆ

ಅನುವಾದಗಳಲ್ಲದೆ ಸ್ವತಂತ್ರ ಕವನಗಳ ರಚನೆಯನ್ನು ನೋಡಿದರೆ ನರಸಿಂಹಾಚಾರ್ಯರು ಹುಟ್ಟುಕವಿ. ಕನ್ನಡ ಭಾಷೆ ಇವರ ಕೈಯಲ್ಲಿ ಹೊಸ ಹದವನ್ನು ಕಂಡಿತು ಎಂದು ಹೇಳಬೇಕಾಗುತ್ತದೆ. ಅದಕ್ಕೆ ನಿದರ್ಶನ 'ನೋಡು ಕಾವೇರಿಯು ನಾಡಿನ ಜನರಿಗೆ ಬೇಡಿದ ಫಲಗಳ ನೀಡುತ ಪೊರೆವಳು', 'ಬಾರೋ ಸಾವಾಡುವ ಬಾರೋ, ಸಾರಿತು ಸುಗ್ಗಿಯ ತಿಂಗಳಿದು' ಎಂದು ಆರಂಭವಾಗುವ ಕವನಗಳು ಹಳೆಯ ಷಟ್ಪದಿ ಛಂದಸ್ಸಿನಲ್ಲಿ ರಚಿತವಾದುದಾದರೂ ನಮ್ಮ ಭಾಷೆಗೆ ಹೊಸದು ಎನ್ನುವಂಥ ಶೋಕಗೀತೆಯೊಂದನ್ನು ರಚಿಸಿದವರು ಇವರೇ. 1894ರಲ್ಲಿ ಚಾಮರಾಜ ಒಡೆಯರು ತೀರಿಕೊಂಡಾಗ ಬರೆದ ಚರಮಗೀತೆ ಅದು. ಸಂಗೀತ ನಾಟಕಗಳಿಗೆ ಆಶ್ರಯ ಕೊಟ್ಟಿದ್ದ ಪ್ರಭು ಅವರು. ಅವರೇ ತೀರಿಕೊಂಡಮೇಲೆ ಇನ್ನೆಲ್ಲಿ ಆ ಕಲೆಗಳಿಗೆ ಉಳಿವು ಎಂಬ ಭಾವ ಹೀಗೆ ಬಂದಿದೆ:

ವೀಣೆಗಳು ಮುಸುಕಿಟ್ಟು ಮೌನದಿ
ಕೋಣೆಯೊಳಡಗಿದುವು ಬಿನ್ನನೆ
ಜಾಣಳಿದು ನಾಟಕಗಳುಳಿದುವು ತೆರೆಯ ಮರೆಯೊಳಗೆ ||

1918ಕ್ಕೆ ಮುಂಚೆಯೇ ಸ್ವತಂತ್ರವಾದ ಕವನಗಳನ್ನು ರಚಿಸಿ ಭಾವಗೀತೆಯ ಪಂಥಕ್ಕೆ ಒಳ್ಳೆಯ ಬುನಾದಿಯನ್ನು ಹಾಕಿದ ಮತ್ತೊಬ್ಬ ಗಣ್ಯರು ಬಾಳಾಚಾರ್ಯ ಗೋಪಾಳಾಚಾರ್ಯ ಸಕ್ಕರಿ (ಶಾಂತಕವಿ). ಕನ್ನಡಿಗರನ್ನು ಎಚ್ಚರಿಸಲು ಬರೆದ ಒಂದು ಕವನದ ಕೆಲವು ಪಂಕ್ತಿಗಳು ಇವು:

ಏಳು ಸಾಯಣ ಕಟ್ಟು ಗ್ರಂಥವ
ನೇಳು ಪಂಪಾಕ್ಷೇತ್ರಕೆ
ಗಾಳಿಗಂಟುಗಳೋದಿದೇತಕೆ
ಏಳು ಈ ಕ್ಷಣಮಾತ್ರಕೆ

ಶ್ರೀಯವರು ತೆರೆದ ನೂತನ ಕಾವ್ಯಮಾರ್ಗವನ್ನು ವಿಸ್ತರಿಸುತ್ತ ಹೋದ ಕವಿಗಳಲ್ಲಿ ಮುಖ್ಯರಾದವರು ಡಿ.ವಿ.ಗುಂಡಪ್ಪನವರು. ಹಳೆಯ ವಸ್ತು, ಛಂದಸ್ಸುಗಳನ್ನು ಉಳಿಸಿಕೊಂಡು ಹೊಸದರ ಕಡೆಗೆ ಕಣ್ಣು ಹಾಯಿಸಿದ್ದು ಇವರ ಕವನಗಳ ವೈಶಿಷ್ಟ್ಯ. ಸೀಸ, ವೃತ್ತ, ಕಂದ, ಖಂಡಭೋಗ ಷಟ್ಪದಿ ಮುಂತಾದ ಛಂದೋರೂಪಗಳನ್ನು ಇವರು ಬಳಸಿಕೊಂಡರು. ಸಂಗೀತದ ಕಡೆಗೆ ಒಲವು ಹೆಚ್ಚಾಗಿರುವ ಈ ಕವಿ ಗಡುಸಾದ, ಆದರೆ ಇಂಪಾದ ಅನೇಕ ಕವನಗಳನ್ನು ರಚಿಸಿದ್ದಾರೆ. ವನಸುಮ ಎಂಬುದು ಸುಮಾರು ನಾಲ್ಕು ದಶಕಗಳ ಕಾಲ ಕನ್ನಡನಾಡಿನ ಜನರೆಲ್ಲರ ಕಿವಿ ಮನಗಳನ್ನು ತುಂಬಿದ ಕವನ. ಎಸ್.ಅನಂತನಾರಾಯಣ ಅವರು ಹೇಳುವಂತೆ ಇವರ ಹೆಚ್ಚಿನ 'ಗೀತೆಗಳೆಲ್ಲ ಜೀವಂತ ಕಳೆ ಪಡೆಯುವುದು ಹಾಡಿದಾಗ ............ ಇಲ್ಲಿಯ ಲಾಲಿತ್ಯ, ಪದಗಳನ್ನು ಜೋಡಿಸುವ ಕೌಶಲ್ಯ, ನೃತ್ಯಲಯ - ಇವುಗಳು ಅಂತಃಪುರಗೀತೆ (1950)ಯಲ್ಲಿ ಪರಿಪೂರ್ಣ ಪಾಕವನ್ನು ಪಡೆದಿವೆ.' ಅನೇಕ ಕವಿಗಳಿಗೆ ಸ್ಫೂರ್ತಿದಾಯಕರಾಗಿದ್ದು, ಆಚಾರ್ಯ ಸ್ಥಾನದಲ್ಲಿ ನಿಂತ ಡಿ.ವಿ.ಜಿ. ಅವರ ಕವನಗಳಲ್ಲಿ ಕನ್ನಡ ಕಬ್ಬವೆಣ್ಣು ಸನಾತನ ಮತ್ತು ನೂತನಗಳ ಮಧ್ಯೆ ಹೊಸ್ತಿಲಮೇಲೆ ನಿಂತಂತಿದೆ. ಅನೇಕ ಪದ್ಯಗಳು ವೃತ್ತಕಂದ ರೂಪವಾಗಿವೆ. ಆತ್ಮವು ನೂತನವಾದರೂ ವೇಷವು ಪುರಾತನವಾದುದು ಎಂಬುದು ಕುವೆಂಪು ಅವರ ಅಭಿಪ್ರಾಯ. ಡಿ.ವಿ.ಜಿ. ಅವರಂತೆಯೇ ಗಡುಸಾಗಿಯೂ ಚಿಂತನಾಂಶಗಳಿಂದ ಕೂಡಿದುವೂ ಆದ ಭಾವಗೀತೆಗಳನ್ನು ರಚಿಸಿದವರು ಮಂಜೇಶ್ವರ ಗೋವಿಂದ ಪೈ ಅವರು. ಇವರು ಶ್ರೀಯವರಂತೆಯೇ ಅನೇಕ ಇಂಗ್ಲಿಷ್ ಕವನಗಳನ್ನು ಸಮರ್ಥವಾಗಿ ಕನ್ನಡಕ್ಕೆ ತಂದಿರುವುದಲ್ಲದೆ ಸ್ವತಂತ್ರವಾಗಿಯೂ ಕವನಗಳನ್ನು ರಚಿಸಿ ಯಶಸ್ಸು ಗಳಿಸಿದ್ದಾರೆ. ಈ ದಿಕ್ಕಿನಲ್ಲಿ ಇವರ ಗಿಳಿವಿಂಡು (1930) ಗಮನಾರ್ಹವಾದ ಸಂಕಲನ.

1925 ರಿಂದ 1950ರ ವರೆಗಿನ ಇಪ್ಪತ್ತೈದು ವರ್ಷಗಳು ಕನ್ನಡ ಭಾವಗೀತೆಯ ಇತಿಹಾಸದಲ್ಲಿ ಸುವರ್ಣಯುಗ. ಕೆ.ವಿ.ಪುಟ್ಟಪ್ಪ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಪು.ತಿ.ನರಸಿಂಹಾಚಾರ್, ವಿ.ಸೀತಾರಾಮಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜಿ.ಪಿ.ರಾಜರತ್ನಂ, ಕೆ.ಎಸ್.ನರಸಿಂಹಸ್ವಾಮಿ, ಎಂ.ಗೋಪಾಲಕೃಷ್ಣ ಅಡಿಗ ಮುಂತಾದ ಪ್ರತಿಭಾಶಾಲಿ ಕವಿಗಳು ಭಾವಗೀತೆಯ ಕ್ಷೇತ್ರದಲ್ಲಿ ಸಮೃದ್ಧವಾದ ಸುಗ್ಗಿಯನ್ನು ತಂದರು. ಪ್ರಕೃತಿ, ಪ್ರೇಮ, ದೇಶಭಕ್ತಿ, ಸಮಾಜ, ಸಂಸಾರ ಎಲ್ಲವೂ ಈ ಕವಿಗಳಿಗೆ ವಸ್ತುವಾದುವು. ಕನ್ನಡದಲ್ಲಿ ಇದುವರೆಗೆ ಕಾಣದಿದ್ದ ವಸ್ತುವೈವಿಧ್ಯವನ್ನು ಭಾವಗೀತಕಾರರು ಪ್ರದರ್ಶಿಸಿದರು. ಜೊತೆ ಜೊತೆಗೇ ಕನ್ನಡ ಭಾಷೆ ಹೆಚ್ಚು ಸತ್ತ್ವಪೂರ್ಣವಾದ ಅಭಿವ್ಯಕ್ತಿಗೆ ಪಾತ್ರವಾಗುವಂತೆ ಮಾಡಲು ಶ್ರಮಿಸಿದರು. ವಸ್ತುವೈವಿಧ್ಯದಂತೆಯೇ ಛಂದೋ ವೈವಿಧ್ಯವೂ ಪ್ರದರ್ಶಿತವಾಯಿತು. ಒಟ್ಟಿನಲ್ಲಿ ಭಾವಗೀತಕಾರರಿಂದ ಕನ್ನಡದ ಕಾವ್ಯ ಪ್ರಕಾರ ಸಂಪದ್ಭರಿತವಾಯಿತು.

ಭಾವಗೀತೆಯ ಸಮೃದ್ಧಿಗೆ ಕಾರಣರಾದ ಕವಿಗಳಲ್ಲಿ ಪ್ರಧಾನರಾದವರು ಕುವೆಂಪು. ಕೊಳಲು, ನವಿಲು, ಪಕ್ಷಿಕಾಶಿ, ಅಗ್ನಿಹಂಸ, ಪ್ರೇಮಕಾಶ್ಮೀರ, ಇಕ್ಷುಗಂಗೋತ್ರಿ, ಚಂದ್ರಮಂಚಕೆ ಬಾ ಚಕೋರಿ, ಜೇನಾಗುವಾ, ಕೋಗಿಲೆ ಮತ್ತು ಸೋವಿಯಟ್ ರಷ್ಯಾ ಮುಂತಾದ ಕವನ ಸಂಕಲನಗಳಲ್ಲಿ ಪ್ರಕಟವಾಗಿರುವ ಇವರ ಭಾವಗೀತೆಗಳ ವಸ್ತು ಪ್ರಕೃತಿ ವರ್ಣನೆ, ಅಧ್ಯಾತ್ಮ, ಪ್ರೇಮ, ಸಾಮಾಜಿಕ ಚಿಂತನೆ, ಕುಟುಂಬಜೀವನದ ರಸನಿಮಿಷಗಳು ಇತ್ಯಾದಿ. ಪ್ರಕೃತಿ ಮತ್ತು ಅಧ್ಯಾತ್ಮಗಳು ಈ ಭಾವಗೀತಕಾರರ ಶ್ವಾಸಕೋಶಗಳು. ಮನೋಹರವಾದ ಪ್ರಕೃತಿಯ ವಿವಿಧ ಅಂಶಗಳು, ಬಿಳಿ ಮಳಲ ರಾಶಿ, ಕಾಡಿನ ಹಸುರೆಲೆಯ ಸಾಗರ ಮುಂತಾದುವು ಕವಿಯ ದೃಷ್ಟಿಗೆ ಆವೇಶ ಭಾವಗಳು; ವಿಶ್ವರೂಪಿಯಾದ ಭಗವಂತನ ಶರೀರದ ಚಿನ್ಮಯವಾದ ಅಂಗಗಳು; ಬ್ರಹ್ಮದ ಮಹಾಚಿತ್ತ ಶರಧಿಯ ಅಲೆಗಳು, ವರ್ಡ್ಸ್‌ವರ್ತನಿಗೆಂತೋ ಅಂತು ಮನಸ್ಸಿನ ಚಿಂತೆಗಳಾಗಿ, ನಾಡಿಯಲ್ಲಿ ಹರಿಯುವ ರಕ್ತಬಿಂದುಗಳಾಗಿ ಅವು ಪರಿವರ್ತನೆ ಹೊಂದಿವೆ. ತಾವು ಉಸಿರಾಡಿದರೆ ಮೋಡಗಳು ಉಸಿರಾಡುತ್ತವೆ ಎನ್ನುವ ತಾದಾತ್ಮ್ಯ ದೊರೆತಿದೆ ಈ ಕವಿಗೆ. ಪ್ರಕೃತಿಸಾಧನೆಯ ವಿಷಯಕವಾದ ಕವಿಯ ಜೀವನ ಮಂತ್ರ ಇದು. ಪ್ರಕೃತಿಯಾರಾಧನೆಯೇ ಪರಮನಾರಾಧನೆ. ಈ ಭಾವದಿಂದ ಕವಿಯ ಪ್ರಕೃತಿಯ ಆರಾಧನೆ ಮುಂದುವರಿದಿದೆ. ಇವರ ಪ್ರಕೃತಿಯ ಕಲ್ಪನೆ 'ಉದಯಾಸ್ತಗಳು, ವನಗಿರಿಗಳು, ತಂಗಾಳಿ, ರುದ್ರವರ್ಷ, ತಿಂಗಳು, ಹಿಮಮಣಿಗಳು, ಕಾಜಾಣ, ಕಾಮಳ್ಳಿ, ಕೋಗಿಲೆ, ಗಿಳಿಗಳನ್ನು ಮಾತ್ರ ಒಳಗೊಂಡು ಮುಕ್ತಾಯವಾಗಿಲ್ಲ. ಮಾನವ ಸೌಂದರ್ಯ, ಒಲುಮೆ, ಸ್ನೇಹಗಳನ್ನೂ ಅದು ವ್ಯಾಪಿಸಿದೆ. ಆ ಎಲ್ಲದರಲ್ಲಿ ತಮ್ಮ ಇಷ್ಟದೇವತೆಯ ಗುಡಿಯನ್ನು ಕಟ್ಟಿ ಕವಿ ಪೂಜೆಯಲ್ಲಿ ತಲ್ಲೀನರಾಗಿದ್ದಾರೆ'. ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ ಎಂದು ಈ ಕವಿ ಹಾಡಿದರು. ಹೀಗೆಯೇ ಪ್ರೇಮ, ಅಧ್ಯಾತ್ಮಗಳನ್ನು ಕುರಿತ ಇವರ ಕವನಗಳೂ ಸಹೃದಯರ ಮೆಚ್ಚುಗೆಯನ್ನು ಗಳಿಸಿದುವು.

ಕುವೆಂಪು ಅವರ ಸಾಮಾಜಿಕ ಗೀತೆಗಳು ಇಂದಿನ ಕ್ರಾಂತಿಯನ್ನು ಮೂರು ನಾಲ್ಕು ದಶಕಗಳಷ್ಟು ಮುಂಚೆಯೇ ನಿರೀಕ್ಷಿಸಿದ್ದವು. ಇವರ ಕಲ್ಕಿ ಅತ್ಯಂತ ಶಕ್ತಿಪೂರ್ಣವಾದ ಒಂದು ಸಾಮಾಜಿಕ ಗೀತೆ. ಅಪಾರವಾದ ಧ್ವನಿ ಪ್ರಪಂಚವನ್ನು ಮಾತ್ರವಲ್ಲದೆ ನಾಳೆಯನ್ನು ಇಂದೇ ತೆರೆದು ತೋರಿಸಿದ ಆ ಕವನದ ಕೆಲವು ಪಂಕ್ತಿಗಳು ಇವು:

ಬಡಬಗ್ನಿರ ಜಠರಾಗ್ನಿಯು ಎದ್ದು,
ಗುಡಿಸಲುಗಳಿಗೇ ಬೆಂಕಿಯು ಬಿದ್ದು,
ಧಗಧಗ ಧಗಧಗ ಹೊತ್ತಿದುದು
ಭುಗಿಭುಗಿಲೆನ್ನುತ ಮುತ್ತಿದುದು
ಮುಗಿಲಿನವರೆಗೂ ಬಾನಿನವರೆಗೂ
ದಿಕ್ಕುದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ
ಶ್ರೀಮಂತರನಪ್ಪಿತು ಬಾಚಿ

ಸಾಮಾನ್ಯವಾದ ಅಗ್ನಿಯಲ್ಲ ಅದು, 'ಅದರ ಮುಂದೆ ಬಡಬಾಗ್ನಿಯು ತಲೆ ತಗ್ಗಿತು ನಾಚಿ'.

ಜನಪದ ಛಂದಸ್ಸು ಲಯಗಳನ್ನು ಬಳಸಿಕೊಂಡು ಉತ್ತರ ಕರ್ನಾಟಕದ ಜನರ ಆಡುಭಾಷೆಯಲ್ಲಿ ತುಂಬ ಸತ್ತ್ವಪೂರ್ಣವಾದ ಅನೇಕ ಭಾವಗೀತೆಗಳನ್ನು ರಚಿಸಿದವರು ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು. ಗರಿ, ಉಯ್ಯಾಲೆ, ನಾದಲೀಲೆ, ಸಖೀಗೀತ, ಮೂರ್ತಿ ಮತ್ತು ಕಾಮಕಸ್ತೂರಿ, ಗಂಗಾವತರಣ, ನಾಕುತಂತಿ ಮುಂತಾದ ಕವನ ಸಂಕಲನಗಳ ಮೂಲಕ ಭಾವಗೀತೆಯ ಪ್ರಕಾರಕ್ಕೆ ಈ ಕವಿ ಅಮರವಾದ ಕಾಣಿಕೆಯನ್ನು ನೀಡಿದ್ದಾರೆ. ನಾದದ ಗುಂಗು, ಭಾವದ ಸೊಗಸು, ಮಾತಿನ ಮೋಡಿ - ಇವು ಇವರ ಕವನಗಳ ವಿಶಿಷ್ಟಲಕ್ಷಣಗಳು. ಭಾವ ತೀವ್ರವಾಗಿ, ಗಾನ ಪ್ರಧಾನವಾಗಿ ಅನನ್ಯ ಮನೋಹರತೆಯಿಂದ ವಿಶಿಷ್ಟತೆಯನ್ನು ಪಡೆದಿವೆ ಇವರ ಕವನಗಳು. ಬೆಳಗು ಬೆಳುದಿಂಗಳುಗಳ ವರ್ಣನೆ ಇವರಿಂದ ಕನ್ನಡ ಕಾವ್ಯದಲ್ಲಿ ಹೊಚ್ಚ ಹೊಸದಾಗಿ ಉಳಿದಿವೆ.

ಈ ಕೆಲವು ದಶಕಗಳಲ್ಲಿ ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವ, ಸರ್ವಜನ ಮೋಹಕವಾಗಿರುವ ಇವರ ಕವನ 'ಬೆಳಗು', ಅತ್ಯಂತ ಸರಳವಾದ, ಅಚ್ಚಗನ್ನಡ ಪದಗಳಿಂದ ಅತ್ಯಪೂರ್ವವಾದ ವರ್ಣನೆ, ಅನುಭವಗಳನ್ನು ಒಳಗೊಂಡಿರುವ ಈ ಕವನ ಆ ಕಾರಣಗಳಿಗಾಗಿಯೇ ಸರ್ವಜನಪ್ರಿಯತೆಯನ್ನು ಪಡೆದಿದೆ. ಅದರ ಆರಂಭದ ಸಾಲುಗಳು ಹೀಗಿವೆ:

ಮೂಡಲ ಮನೆಯಾ ಮುತ್ತಿನ ನೀರಿನ
ಎರಕವ ಹೊಯ್ದಾ
ನುಣ್ಣ - ನ್ನೆರಕವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ - ಜಗವೆಲ್ಲಾ ತೊಯ್ದಾ

ಸೂಕ್ಷ್ಮವಾದ ಕವಿಕಲ್ಪನೆ ಪ್ರಕೃತಿಯ ವರ್ಣನೆಯಲ್ಲೇ ತನ್ನನ್ನು ಮುಗಿಸಿಕೊಂಡಿಲ್ಲ. ಸಾಮಾಜಿಕ ಅನ್ಯಾಯಗಳ ಖಂಡನೆ, ದೇಶಭಕ್ತಿ ಮುಂತಾದ ಅನೇಕ ಭಾವಗಳು ಸುಂದರ ಪ್ರತಿಮಾ ಕವನಗಳ (ಕುರುಡು ಕಾಂಚಾಣಾ, ಪುಟ್ಟ ವಿಧವೆ, ಮೂವತ್ತು ಮೂರು ಕೋಟಿ) ರಚನೆಗೆ ಕಾರಣವಾಗಿವೆ.

ಚಿಂತನಪ್ರಧಾನವಾದ, ಚಿಂತನೆಯ ಸಾಣೆಗೆ ಭಾವವನ್ನು ಒಡ್ಡಿ ಹರಿತಗೊಳಿಸಿದ ಅನೇಕ ಅಮೂಲ್ಯವಾದ ಕವನಗಳನ್ನು ರಚಿಸಿರುವ ಅಗ್ರಪಂಕ್ತಿಯ ಮತ್ತೊಬ್ಬ ಕವಿ ಪು.ತಿ.ನರಸಿಂಹಾಚಾರ್ಯರು. ಹಣತೆ, ಮಾಂದಳಿರು, ಶಾರದಯಾಮಿನೀ, ಗಣೇಶದರ್ಶನ, ರಸಸರಸ್ವತಿ, ಮಲೆದೇಗುಲ ಮುಂತಾದ ಕವನಸಂಕಲನಗಳಲ್ಲಿ ಮಾತ್ರವಲ್ಲದೆ ಗೋಕುಲನಿರ್ಗಮನ, ಅಹಲ್ಯೆ ಮುಂತಾದ ಗೀತರೂಪಕಗಳಲ್ಲೂ ಇವರ ಅತ್ಯುತ್ಕೃಷ್ಟವಾದ ಭಾವಗೀತೆಗಳಿವೆ. ಪ್ರಕೃತಿಯ ಆಸ್ವಾದನೆಯಂತೆಯೇ ಭಕ್ತಿ, ಪ್ರಪತ್ತಿಗಳ ಪ್ರತಿಪಾದನೆಯೂ ಕಾವ್ಯಕ್ಕೆ ನೂತನತೆಯ ಸೊಗಡನ್ನು ತರುವ ವಸ್ತುವಾಗಬಹುದು ಎಂಬುದನ್ನು ಪು.ತಿ.ನ. ತೋರಿಸಿದ್ದಾರೆ. ಜಗತ್ತಿನ ಚೆಲುವನ್ನು ಗುರುತಿಸುವುದೂ ಅದನ್ನು ಆಹ್ವಾನಿಸುವುದೂ ಭಗವಂತನ ಅಹೇತುಕ ಕರುಣೆಯಿಂದಲೇ ಎನ್ನುವುದು ಈ ಕವಿಯ ಅಚಲವಿಶ್ವಾಸ. 'ಜಗ ಚೆಲುವೆನ್ನುವ ಬಗೆಯನುರಣನೆ ವಿಶ್ವಾತ್ಮನ ನಿಹೇತುಕ ಕರುಣೆ', ಜಗದ ಚೆಲುವಿನ ಒಂದು ಮುಹೂರ್ತದ ಆಸ್ವಾದನೆಯಿಂದ ತೃಪ್ತಿಪಡೆದ ಇವರ ಮನಸ್ಸು ಮರುಗಳಿಗೆಯೆ ಆಲೋಚನಾಮಗ್ನವಾಗುತ್ತದೆ. ಚಿಂತನೆ ಇವರ ಕವನಗಳಲ್ಲಿ ಭಾವದ ಅವಿನಾಸಂಗಿ, ಜೊತೆಗೆ ಆಶ್ಚರ್ಯ ಇವರ ಕವನಗಳ ಇನ್ನೊಂದು ಲಕ್ಷಣ. ಸೊಗವು ತೋರಬೇಕಾದಲ್ಲಿ ಅಳಲು ತೋರುವುದು, ವಿಷಾದದ ಛಾಯೆಯಲ್ಲಿ ಲೀನವಾಗುವುದು ಇವರ ಕೆಲವು ಮುಖ್ಯ ಕವನಗಳಲ್ಲಿ ಎದ್ದು ಕಾಣುವ ಮತ್ತೊಂದು ಅಂಶ. ಒಂದು ಸಂಜೆ ಎಂಬ ಇವರ ಪುಟ್ಟ ಕವನವೊಂದು ಇವರ ಕಾವ್ಯದ ಲಕ್ಷಣಗಳಿಗೆಲ್ಲ ಸುಂದರವಾದ ನಿದರ್ಶನ:

ಹೊತ್ತು ಮುಳುಗಿತು - ಮಾಸಿಹೋಯಿತು
  ಭೂಮಿ ಹೊರಳುತ ನಸುಕೊಳು,
ತಾಯಿ ಕಣ್ಮರೆಯಾಗೆ ಧೂಳಿನೊ -
  ಳಾಡಿ ಮಾಸುವ ಮಗುವೊಲು
ಕತ್ತಲಾಯಿತು ಹೊಳೆದುವಿದುಗೋ
  ಮೇಲೆ ಚುಕ್ಕಿಗಳಂದದಿ
ಅಂಧಕಾರದ ತೆರೆಗಳಾವುದೊ
  ಬೆಳಕ ಬಿಂಬಿಸುವಂದದಿ
ತಲದಿ ನಾನಿಹೆನೀ ಪುರಾತನ
  ತಮರು ತಾರೆಗು ಮೋಹಿಸಿ,
ನಿಜ ವಿಷಾದದೊಳಲ್ಲಿಗಲ್ಲಿಗೆ
  ಹೊಳೆವ ಭಾವಕೆ ಹೋಲಿಸಿ

ಅರುಣ, ಬಿನ್ನಹ, ತಾವರೆ - ಇವು ಮಾಸ್ತಿವೆಂಕಟೇಶ ಅಯ್ಯಂಗಾರ್ಯರ ಭಾವಗೀತೆಗಳ ಸಂಕಲನಗಳು. ಭಗವಂತನ ಅನುಗ್ರಹಕ್ಕಾಗಿ ಕಾತರತೆ, ಚೆಲುವಿನ ಬಗೆಗೆ ನವುರಾದ ವಿಸ್ಮಯ - ಇವು ಇವರ ಕವನಗಳ ಪ್ರಧಾನ ವಸ್ತು. ಸತ್ವದಲ್ಲಿ ಇವರ ಸಣ್ಣಕಥೆಗಳ ಮಟ್ಟಕ್ಕೆ ಬರುವ ಸಾಮರ್ಥ್ಯ ಇವರ ಕವನಗಳಿಗಿಲ್ಲ. ಆದರೆ ಸಂಖ್ಯೆಯಲ್ಲಿ ಇವು ವಿಪುಲವಾಗಿವೆ.

ಕನ್ನಡದ ಮತ್ತೊಬ್ಬ ಪ್ರಮುಖ ಭಾವಗೀತಕಾರರು ವಿ.ಸೀತಾರಾಮಯ್ಯನವರು. ಬಹುಮುಖ ಪ್ರತಿಭೆಯ ಈ ಕವಿ ಭಾವಗೀತಕಾರನ ಕರ್ತವ್ಯವೇನು ಎಂಬುದನ್ನು ಸೂಚಿಸಿದರು. 'ಕವಿಯು ಪ್ರಪಂಚವನ್ನು ಕಣ್ಣುತುಂಬ ನೋಡಲಿ ತನ್ನ ಆದೇಶಗಳು ಒಂದು ಹದಕ್ಕೂ ಪಾಕಕ್ಕೂ ಬರುವಂತೆ ಮನಸ್ಸನ್ನು ನಿರಂತರವಾಗಿ ಒಂದು ಶಾಖದಲ್ಲಿಟ್ಟುಕೊಳ್ಳಲಿ: ತನ್ನ ವ್ಯಕ್ತಿತ್ವದ ಮುದ್ರೆಯನ್ನು ಕವಿತೆಯ ಮೇಲೆ ಹಾಕಲಿ (ಅವನು ನಿಜವಾಗಿ ವ್ಯಕ್ತಿಯಾದರೆ ಆ ಮುದ್ರೆ ಬಿದ್ದೇ ಅವನ ವಾಣಿ ಕೇಳುವುದು); ಪ್ರಪಂಚಕ್ಕೆ ಒಂದು ಹೊಸ ದೃಷ್ಟಿಯನ್ನೂ ಸಾತ್ವಿಕದಿಂದ ಮಿಡಿಯುವ ಒಂದು ಮೃದು ಜೀವನವನ್ನೂ ಕಾಣಿಕೆಯಾಗಿ ಅರ್ಪಿಸಲಿ; ಅದರಿಂದ ಪ್ರಪಂಚದ ಸತ್ಯವು ಬೆಳೆಯುವಂತಾಗಲಿ'. ಗೀತಗಳು, ದೀಪಗಳು, ನೆಳಲು-ಬೆಳಕು, ದ್ರಾಕ್ಷಿ ದಾಳಿಂಬೆ, ಹೆಜ್ಜೆ ಪಾಡು, ಅರಲು ಬರಲು - ಇವು ವಿ.ಸೀ. ಅವರ ಕವನಸಂಕಲನಗಳು. ಸೊಗಸಾದ ಕನ್ನಡ ಪದಗಳು, ಮುಗಿಲಿನವರೆಗೂ ಬೀಸುವ ಭಾವ, ಹೃದಯದ ಆಳದವರೆಗೂ ಇಳಿಯುವ ಸಂವೇದನೆ, ಇವೆಲ್ಲದರೊಡನೆ ಹದವಾಗಿ ಬೆರೆಯುವ ಸೂಕ್ಷ್ಮ ಸಂವೇದನೆ, ಕೆಲವೊಮ್ಮೆ ಹದವಾದ ಸಂಗೀತ ಗುಣ - ಇವು ವಿ.ಸೀ. ಅವರ ಭಾವಗೀತೆಯ ಲಕ್ಷಣಗಳು. ವಿಶ್ವಾಸ ಎನ್ನುವ ಕವನದ ಎರಡು ಪಂಕ್ತಿಗಳು ಇವು:

ಮಾನವನೆತ್ತರ ಆಗಸದೇರಿಗೆ ಏರುವವರೆಗೂ ಏರೇವು;
ಮಾನವಹೃದಯಕೆ ವಿಶ್ವವಿಶಾಲತೆ ಹಾಯುವವರೆಗೂ ಹಾರೇವು,

ಕನ್ನಡದ ಅತಿಶ್ರೇಷ್ಠ ಭಾವಗೀತೆಗಳ ಪಂಕ್ತಿಯಲ್ಲಿ ನಿಲ್ಲುವ ಕವನ ವಿ.ಸೀ.ಅವರ ಮನೆ ತುಂಬಿಸುವುದು, ಜಿ.ಎಸ್.ಶಿವರುದ್ರಪ್ಪನವರ ಮಾತಿನಲ್ಲಿ 'ಮುಟ್ಟಿದರೆಲ್ಲಿ ಮಾಸುವುದೋ ಎಂಬಂತೆ ಥಳಥಳಿಸುವ ಇಬ್ಬನಿಯಂತೆ ಇದರ ಚೆಲುವು'. ಆ ಕವನದ ಮೊದಲ ಪಂಕ್ತಿಗಳು:

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನ್ನು ತುಂಬಲೊಪ್ಪಿಸುವೆವು

ಸಾಮಾನ್ಯಾತಿಸಾಮಾನ್ಯರು ಆಡುವ ಮಾತಿನ ಸೊಗಡನ್ನು ಕಾವ್ಯಕ್ಕೆ ಕನ್ನಡದಲ್ಲಿ ಬಹುಶಃ ಮೊಟ್ಟಮೊದಲ ಬಾರಿಗೆ ತಂದು ಅನೇಕ ಶ್ರೇಷ್ಠ ಭಾವಗೀತೆಗಳನ್ನು ರಚಿಸಿದ ಕವಿ ಜಿ.ಪಿ.ರಾಜರತ್ನಂ. ರತ್ನನ ಪದಗಳು ಮತ್ತು ನಾಗನ ಪದಗಳು ಇವರು ಕನ್ನಡ ಕಾವ್ಯಕ್ಕೆ ನೀಡಿರುವ ಅಪೂರ್ವ ಕಾಣಿಕೆಗಳು. ಪ್ರಕೃತಿಯ ಸೊಬಗು, ಕೌಟುಂಬಿಕ ಜೀವನದ ಹತ್ತು ಹಲವು ರಸನಿಮಿಷಗಳು, ಕನ್ನಡದ ಉತ್ಕಟಪ್ರೇಮ - ಇವೆಲ್ಲಕ್ಕೂ ಆಡುಭಾಷೆ ಅಭಿವ್ಯಕ್ತಿಮಾಧ್ಯಮವಾಗಬಲ್ಲದು ಎಂಬುದನ್ನು ರಾಜರತ್ನಂ ಯಶಸ್ವಿಯಾಗಿ ತೋರಿಸಿಕೊಟ್ಟಿದ್ದಾರೆ. ತಾಯಿ ಮಗುವನ್ನು ಎತ್ತಿಕೊಂಡಂತೆ, ಒಂದು ಮತ್ತೊಂದನ್ನು ಕೂಡಿ ಅಂಟಿಕೊಂಡಂತೆ ಮಡಿಕೇರಿಯನ್ನು ಎತ್ತಿಕೊಂಡಿದ್ದ ಮಂಜಿನ ಶುಭ್ರತೆಯನ್ನು ಸೂಚಿಸುವ ವರ್ಣನೆ ಇದು:

ಮಲಗಾಕ್ ಸೊಳ್ಳೇಪರದೆ ಕಟ್ಟಿ
ಒದಿಯಾಕ್ ಒಗದಿದ್ ದುಪಟಿ ಕೊಟ್ಟಿ
ಪಕ್ದಾಗ್ ಗಂದದ್ ದೂಪ ಆಕ್ದಂಗ್
ಮಡಿಕೇರೀಮೇಲ್ ಮಂಜು!

ಸೂರ್ಯನನ್ನು ಹೆಂಡಕುಡುಕನಿಗೆ ಹೋಲಿಸಿ ಬರೆದಿರುವ ಸಮಾಧಾನ ಎಂಬ ಕವನ ಇವರ ಇನ್ನೊಂದು ಉತ್ತಮ ಪದ್ಯ. ಕವಿಯ ಕನ್ನಡ ಪ್ರೇಮ ಎಷ್ಟು ಉತ್ಕಟವಾದುದು ಎಂಬುದನ್ನು ತೋರಿಸುವ ಪಂಕ್ತಿಗಳು:

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ -
ಮೂಗ್ನಲ್ ಕನ್ನಡ್ ಪದವಾಡ್ತೇನಿ!
ನನ್ ಮನಸನ್ ನೀ ಕಾಣೆ!

ತೀ.ನಂ.ಶ್ರೀಕಂಠಯ್ಯನವರ ಒಲುಮೆ (1932) ಕನ್ನಡ ನವೋದಯ ಸಾಹಿತ್ಯದಲ್ಲಿ ಪ್ರೇಮಕವನಗಳ ಪ್ರಥಮ ಸಂಕಲನ. 1930ರಲ್ಲಿ ಪ್ರಕಟವಾದ ಕುವೆಂಪು ಅವರ ಕೊಳಲು ಸಂಕಲನದಲ್ಲಿಯೇ ಕೆಲವು ಮುಗ್ಧವಾದ ಪ್ರೇಮಗೀತೆಗಳಿವೆ. ಆದರೂ ಪ್ರೇಮಗೀತೆಗಳೇ ಒಂದು ಸಂಕಲನವಾಗಿ ಪ್ರಕಟವಾದುದು ತೀ.ನಂ.ಶ್ರೀ. ಅವರ ಒಲುಮೆಯಲ್ಲೇ. ಸ್ವಲ್ಪವೂ ಆಡಂಬರವಿಲ್ಲದ ಸಹಜವಾದ ಸರಳ ಶೈಲಿಯಲ್ಲಿ ಶುಚಿಯಾದ ಸಾಂಸಾರಿಕ ಪ್ರೇಮವನ್ನು ವರ್ಣಿಸಿದ ಕೀರ್ತಿ ತೀ.ನಂ.ಶ್ರೀ. ಅವರ ಕವನಗಳಿಗೆ ಸಲ್ಲುತ್ತದೆ. ಮೊದಲ ದಿನ ತಮ್ಮ ಜೀವನ ಸಂಗಾತಿಯನ್ನು ಕಂಡ ಸಂದರ್ಭವನ್ನು ನಮ್ಮ ಸಾಮಾಜಿಕ ಸಂಪ್ರದಾಯದ ಹಿನ್ನೆಲೆಯಲ್ಲಿ ಕವಿ ವರ್ಣಿಸಿರುವ ರೀತಿ ಇದು:

ಬಾರೆ ತಾಯಿ, ಮಾವನವರಿ
ಗೆರಗು ಎಂದ ಮಾತಿಗೆ -
ತೋರಿ, ಮೆಲ್ಲನೊಳಗಿನಿಂದ
ನಡೆದು ಬಂದ ಮಿಂಚಿದು,
ಅವಳ ಮುಗುಳುನಗೆಯ ಹೊನಲು
ಮನೆಯನೆಲ್ಲ ತುಂಬಿತು.
ಅವಳ ಕಣ್ಣ ಬೆಳಕಿನಲ್ಲಿ
ಹಗಲ ಮಂಕು ಚೆದರಿತು.

ಪ್ರೇಮಗೀತೆಗಳನ್ನೇ ಗಮನಿಸಿ ಹೇಳುವುದಾದರೆ ಭಾವಗೀತೆಗಳ ಇತಿಹಾಸದಲ್ಲಿ ಕೆ.ಎಸ್.ನರಸಿಂಹಸ್ವಾಮಿಯವರಿಗೆ ವಿಶಿಷ್ಟವಾದ ಒಂದು ಸ್ಥಾನವಿದೆ. ಪ್ರೇಮದ ತೋಟದಲ್ಲಿ ಕೃಷಿ ಮಾಡಿ, ಮಲ್ಲಿಗೆ, ಇರುವಂತಿಗೆಗಳನ್ನು ಅರಳಿಸಿದವರು ಇವರು. ಕರ್ನಾಟಕದಾದ್ಯಂತ ಮನೆಮನೆಗಳಲ್ಲೂ ಇವರ ಹೆಸರು ಅನುರಣಿಸುವಂತೆ ಮಾಡಿದ ಕವನ ಸಂಕಲನ 'ಮೈಸೂರು ಮಲ್ಲಿಗೆ'. ಇವರದು ಮಲ್ಲಿಗೆ ಶೈಲಿ. ಅಚ್ಚಕನ್ನಡದ ಪದಗಳು, ನವುರಾದ ಭಾವ, ಸುಂದರವಾದ ಸ್ವಪ್ನಲೋಕವನ್ನು ಸೃಷ್ಟಿಸುವ ಉಪಮೆಗಳು ಇವರ ಭಾವಗೀತೆಗಳ ಲಕ್ಷಣಗಳು. ತಮ್ಮ 'ಗೃಹಲಕ್ಷ್ಮಿ'ಯನ್ನು ವರ್ಣಿಸುವ ಇವರ ಕವನದ ಕೆಲವು ಪಂಕ್ತಿಗಳು ಇವು:

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ;
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವು
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ಗಿರಿಯ ಮೇಲೆ
ಇಳಿದಂತೆ ಇರುಳ ಮಾಲೆ

ಉಂಗುರ, ಇರುವಂತಿಗೆ, ದೀಪದ ಮಲ್ಲಿ, ಐರಾವತ - ಇವು ಕೆ.ಎಸ್.ನರಸಿಂಹಸ್ವಾಮಿಯವರ ಇತರ ಕವನ ಸಂಕಲನಗಳು. ಹೆಣ್ಣಿನ ಹೃದಯದ ನಿಕಟವಾದ ಪರಿಚಯ, ಅವಳ ಹೂ ಮನಸಿನ ಹೊಂಗನಸುಗಳ ಚಿತ್ರಣ, ಸಂಸಾರದ ಮಧುರ ನಿಮಿಷಗಳ ಕಲಾತ್ಮಕ ಅಭಿವ್ಯಕ್ತಿ, ಉಪಮೆಗಳ ನೂತನತೆ, ಶೈಲಿಯ ಮಾರ್ದವತೆ - ಈ ಎಲ್ಲ ಲಕ್ಷಣಗಳೂ ಇವರ ಅನೇಕ ಕವನಗಳಲ್ಲಿ ಎದ್ದು ಕಾಣುತ್ತವೆ. ಮಣ್ಣಿನಂತೆ ಕಾಣುವ ಜೀವನದ ಹೊನ್ನನ್ನು ಅನನ್ಯವಾದ ರೀತಿಯಲ್ಲಿ ತೆರೆದು ತೋರಿಸುವ ಈ ಕವಿ ಜನತೆಗೆ ತೀರ ಹತ್ತಿರ, ತುಂಬ ಪ್ರಿಯ.

ನವೋದಯ ಭಾವಗೀತಕಾರರಾಗಿ ಪ್ರಾರಂಭವಾಗಿ ನವ್ಯ ಪಂಥದ ಕವಿಗಳಾಗಿ ಪರ್ಯವಸಾನಗೊಂಡ ಎಂ.ಗೋಪಾಲಕೃಷ್ಣ ಅಡಿಗರು ಭಾವತರಂಗ ಮತ್ತು ಕಟ್ಟುವೆವು ನಾವು ಕವನಸಂಕಲನಗಳಲ್ಲಿ ಕೆಲವು ಮಹತ್ತ್ವದ ಭಾವಗೀತೆಗಳನ್ನು ನೀಡಿದ್ದಾರೆ. ಇವರ 'ಮೋಹನ - ಮುರಲಿ', ಒಂದು ಸುಂದರ, ಶಕ್ತಿಪೂರ್ಣ ಕಲಾಸೃಷ್ಟಿ. ಪ್ರಾಸ, ಅನುಪ್ರಾಸಗಳು ಮರುಕಳಿಸಿ, ರಹಸ್ಯಪೂರ್ಣವಾದ, ಆದರೆ ನಮ್ಮ ಅಂತರಂಗ ಜಗತ್ತಿನಲ್ಲಿ ಅಸ್ತಿತ್ವದಲ್ಲಿದೆ ಎನ್ನುವಂಥ ವಾಸ್ತವ ಭಾವಗಳನ್ನು ಮೂರ್ತರೂಪದಲ್ಲಿ ನೀಡುವ ಶಕ್ತಿ ಅಡಿಗರಿಗೆ ಸಿದ್ಧಿಸಿದೆ. ಇವರ ಮೋಹನ - ಮುರಲಿಯ ಕೆಲವು ಪಂಕ್ತಿಗಳು ಇವು:

ಹೂವು ಹಾಸಿಗೆ, ಚಂದ್ರ ಚಂದನ, ಬಾಹುಬಂಧನ, ಚುಂಬನ;
ಬಯಕೆ ತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ
ಒಲಿದ ಮಿದುವೆದೆ ರಕ್ತಮಾಂಸದ ಬಿಸಿದು ಸೋಂಕಿನ ಪಂಜರ;
ಇಷ್ಟೆ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ?

ಸಾಮಗಾನ, ಸಂಜೆದಾರಿ, ಚೆಲುವು- ಒಲವುಗಳ ಮೂಲಕ ಭಾವಗೀತೆಯ ಕ್ಷೇತ್ರದಲ್ಲಿ ತಮ್ಮ ಸ್ಥಾನವನ್ನು ಸ್ಥಾಪಿಸಿದ ಕವಿ ಜಿ.ಎಸ್.ಶಿವರುದ್ರಪ್ಪ. ಸರಳವಾದ ಮಾತುಗಳಲ್ಲಿ ಸಾಮಾನ್ಯ ಎಂದು ನಮಗೆ ತೋರುವಂಥ ವಿಷಯಗಳಲ್ಲಿ ಕೂಡ ಆಶ್ಚರ್ಯವನ್ನು ವ್ಯಕ್ತಪಡಿಸಿ, ಮೋಹಕವಾದ ವರ್ಣನೆಯಿಂದ, ನಮ್ಮ ಮನಸ್ಸನ್ನು ಸೆರೆಹಿಡಿಯುವ ಶಕ್ತಿ ಈ ಕವಿಯ ಶೈಲಿಯಲ್ಲುಂಟು. ಬಯಲನ್ನು - ಅದೂ ಬರಿಯ ಬಯಲನ್ನು ಕಂಡು ಕೂಡ ಕವಿ ರೋಮಾಂಚನಗೊಳ್ಳುತ್ತಾರೆ 'ಎರಡು ಬಯಲ ಬೇಟಕಾಗಿ ಇರುಳು ತೆರೆಯ ಕಟ್ಟಿದೆ, ಮೌನವೊಂದೇ ಹಾಡಿದೆ'. ಮಲ್ಲಿಗೆ, ಜಡೆ, ಮುಂಬಯಿ ಜಾತಕ, ಮಬ್ಬಿನಿಂದ ಮಬ್ಬಿಗೆ, ಸಂಜೆದಾರಿ ಮುಂತಾದ ಇವರ ಕವನಗಳು ಭಾವಗೀತೆಯ ಕ್ಷೇತ್ರಕ್ಕೆ ಕವಿ ನೀಡಿರುವ ಅಮರವಾದ ಕಾಣಿಕೆಗಳು. ಪು.ತಿ.ನ. ಅವರು ಇವರ ಜಡೆ ಎಂಬ ಕವನವನ್ನು 'ಭಾವೋಪಮಾಪೂರ್ಣವಾದದ್ದು' ಎಂದು ಕರೆದಿದ್ದಾರೆ. ಭವಪ್ರಪಂಚದಲ್ಲಿ ಆರಂಭವಾಗಿ ಭಾವಪ್ರಪಂಚದಲ್ಲಿ ವಿಹರಿಸಿ ಭವ್ಯತಾಪ್ರಪಂಚದ ಸೀಮೆಯಲ್ಲಿ ಲೀನವಾಗಿದೆ ಕವನ. ಕಣ್ಣಿಗೆ ಕಾಣುವ ಹೆಣ್ಣಿನ ಜಡೆಗಳ ವೈವಿಧ್ಯದಿಂದ ಪ್ರಾರಂಭವಾಗಿ, ಪುರಾಣಪ್ರಪಂಚದ ಪ್ರಖ್ಯಾತ ಜಡೆಗಳನ್ನು ನೆನೆದು ಓ ಓ ಈ ಜಡೆಗೆಲ್ಲಿ ಕಡೆ ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿ ಅನಂತರ ಪ್ರಕೃತಿಯ ವಿವಿಧ ಮುಖಗಳಲ್ಲಿ ಹೆಣೆದುಕೊಂಡಿರುವ ಜಡೆಗಳನ್ನು ವರ್ಣಿಸುವ ಪಂಕ್ತಿಗಳು ಇವು:

ಸಂಜೆಯಲಿ ಹಗಲು ಕೆದರುವ ಕತ್ತಲೆಯ
ಕಾಳಜಡೆ
ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯ
ಬೆಳಕು ಜಡೆ
ಒಮ್ಮೊಮ್ಮೆ ಮುಗಿಲಿನಲಿ ತೇಲುತ್ತ ಬರುವಂಥ
ಬೆಳ್ಳಕ್ಕಿಗಳ ಜಡೆ,
ಕೊಂಚೆಗಳ ಜಡೆ
ಮರಮರದಿ ಬಳಕುತ್ತ ಹೂ ಬಿಟ್ಟ ಬಳ್ಳಿ ಜಡೆ
ಕಾಡು ಬಯಲಿನ ಹಸರು ಹಸರದಲಿ ಹರಿಹರಿದು
ಮುನ್ನಡೆವ ಹೊಳೆಯ ಜಡೆ;
ಶ್ರೇಣಿ ಶ್ರೇಣಿಗಳಾಗಿ ಹರಿದಿರುವ ಗಿರಿಯ ಜಡೆ

ಚೆನ್ನವೀರ ಕಣವಿಯವರೂ ಪ್ರಕೃತಿಯನ್ನು ಮೆಚ್ಚಿ ಆರಾಧಿಸಿದ ಕವಿ. ಕಾವ್ಯಾಕ್ಷಿ, ಆಕಾಶಬುಟ್ಟಿ, ಭಾವಜೀವಿ, ಮಧುಚಂದ್ರ, ನೆಲ ಮುಗಿಲು ಮುಂತಾದ ಕವನಸಂಕಲನಗಳ ಅನೇಕ ಕವನಗಳು ಇವರ ಕಾವ್ಯಪ್ರತಿಭೆಯನ್ನು ಎತ್ತಿ ಸಾರುತ್ತಿವೆ. ನಿಯಮೋಲ್ಲಂಘನ ಎಂಬುದು ಇವರ ಅತ್ಯುತ್ತಮ ಕವನಗಳಲ್ಲಿ ಒಂದು. ಅದರ ಒಂದು ಚರಣ ಹೀಗಿದೆ:

ತರುಲತಾದಿಗಳಲ್ಲಿ ಚಿಗುರಿಲ್ಲ ಹೊಗರಿಲ್ಲ-
ಅಸ್ಥಿಪಂಜರವಾಗಿ ಸವೆಯುತಿಹವು
ಎಲ್ಲೊ ಅಂಗೈಯಗಲ ಹಸಿರು ಕಂಡರೆ ಸಾಕು
ಮನದ ಆಸೆಗಳಲ್ಲಿ ಸೇರುತಿಹವು

'ಕಾಲ' ಚೆನ್ನವೀರ ಕಣವಿಯವರ ಇನ್ನೊಂದು ಉತ್ತಮ ಕವನ.

ಈ ಸಮೀಕ್ಷೆಯಲ್ಲಿ ಸಾಂಕೇತಿಕವಾಗಿ ಕನ್ನಡದ ಕೆಲವು ಪ್ರಮುಖ ಕವಿಗಳ ಕಾವ್ಯಶೈಲಿಯನ್ನು ತೋರಿಸಲಾಗಿದೆ. ಇವರಲ್ಲದೆ ಇನ್ನೂ ನೂರಾರು ಜನ ಭಾವಗೀತಕಾರರು ತಮ್ಮ ಕವನಸಂಕಲನಗಳ ಮೂಲಕ ಭಾವಗೀತೆಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಅವರಲ್ಲಿ ಪ್ರಮುಖರಾದ ಕೆಲವರು: ಪೇಜಾವರ ಸದಾಶಿವರಾಯರು, ಎಂ.ವಿ.ಸೀತಾರಾಮಯ್ಯ, ಸಿದ್ಧಯ್ಯ ಪುರಾಣಿಕ, ರಂಗನಾಥ ಎಕ್ಕುಂಡಿ, ಎಸ್.ಐ.ಇಂಚಲ, ಡಿ.ಎಸ್.ಕರ್ಕಿ, ಕುಸುಮಾಕರ ದೇವರಗೆಣ್ಣೂರ, ಸೇಡಿಯಾಪು ಕೃಷ್ಣಭಟ್ಟ, ಕಯ್ಯಾರ ಕಿಞ್ಞಣ್ಣ ರೈ, ಗಣಪತಿರಾವ್ ಪಾಂಡೇಶ್ವರ, ಜಿ.ಗುಂಡಣ್ಣ, ಗಂಗಾಧರ ಚಿತ್ತಾಲ, ಮಧುರಚೆನ್ನ, ದಿನಕರ ದೇಸಾಯಿ, ಎಸ್.ವಿ.ಪರಮೇಶ್ವರಭಟ್ಟ, ರಂ.ಶ್ರೀ.ಮುಗಳಿ, ಬ.ಗಿ.ಯಲ್ಲಟ್ಟಿ, ಸಾಲಿ ರಾಮಚಂದ್ರರಾಯರು, ಜಿ.ವರದರಾಜರಾವ್, ಅರ್ಚಕ ವೆಂಕಟೇಶ, ಅಕಬರ ಅಲಿ, ಹಿ.ಮ.ನಾಗಯ್ಯ.

ಭಾವಗೀತೆಗಳ ಇತಿಹಾಸ ಸುಮಾರು ಅರ್ಧ ಶತಮಾನಗಳ ಅವಧಿಯದ್ದು, ಈ ಐವತ್ತು ವರ್ಷಗಳಲ್ಲಿ ರಚಿತವಾಗಿರುವ ಭಾವಗೀತೆಗಳು ಗುಣದಲ್ಲೂ ಸಂಖ್ಯೆಯಲ್ಲೂ ಯಾವುದೇ ಸಾಹಿತ್ಯಕ್ಕೂ ಹೆಮ್ಮೆ ಸಮಾಧಾನಗಳನ್ನು ತರುವ ಅಂತಸ್ಸತ್ವವನ್ನು ಉಳ್ಳವು ಎಂಬ ಅಂಶ ಗಮನಾರ್ಹವಾದದ್ದು. ಈ ಭಾವಗೀತ ಪ್ರಕಾರವೇ ಮುಂದೆ ನವ್ಯಕಾವ್ಯದ ಜನನಕ್ಕೆ ಬೀಜಾಂಕುರವಾಯಿತು.

(ಪಿ.ಎಸ್.)

**ಕನ್ನಡದಲ್ಲಿ ಭಾಷಾಂತರಗಳು** : ಕನ್ನಡ ಸಾಹಿತ್ಯ ತನ್ನ ಸಾವಿರದ ಮುನ್ನೂರು ವರ್ಷಗಳ ಇತಿಹಾಸದಲ್ಲಿ ಉದ್ದಕ್ಕೂ ಭಾಷಾಂತರಗಳಿಂದ ಪುಷ್ಟವಾಗಿದೆ. ಈ ಭಾಷಾಂತರ ಪರಂಪರೆಯನ್ನು ಕವಿರಾಜಮಾರ್ಗದ ಕಾಲದಿಂದಲೂ ಗುರುತಿಸಬಹುದು. ಹಿಂದೆ ಸಂಸ್ಕೃತ ಪ್ರಾಕೃತಗಳಿಂದ, ಆಧುನಿಕ ಕಾಲದಲ್ಲಿ ವಿಶೇಷವಾಗಿ ಇಂಗ್ಲಿಷಿನಿಂದ ಭಾಷಾಂತರಗಳು ಬಂದಿವೆ. ಪ್ರಾಚೀನ ಕನ್ನಡ ಸಾಹಿತ್ಯವೆಲ್ಲ ಭಾಷಾಂತರವೆಂದು ಹೇಳುವುದುಂಟು. ಇದು ಪೂರ್ಣ ಸತ್ಯವಲ್ಲ. ಹಿಂದಿನ ಕನ್ನಡ ಕವಿಗಳು ಸಂಸ್ಕೃತ ಪ್ರಾಕೃತಗಳಿಂದ ವಸ್ತುವನ್ನು ಸ್ವೀಕರಿಸುತ್ತಿದ್ದರೆಂಬ ಬಹು ಸ್ಥೂಲವಾದ ಅರ್ಥದಲ್ಲಿ ಅವರ ಕೃತಿಗಳನ್ನು ಭಾಷಾಂತರಗಳೆನ್ನಬಹುದು. ಆದರೆ ಅವರು ಪ್ರತಿಭೆ, ಸ್ವೋಪಜ್ಞತೆಗಳನ್ನು ತಮ್ಮ ಕಾವ್ಯಗಳಲ್ಲಿ ಮೇಳವಿಸುತ್ತಿದ್ದರು. ಅವರಲ್ಲಿ ಭಾಷಾಂತರ ಎನ್ನುವುದು ಕೇವಲ ಒಂದು ಅಂಗವಾಗಿತ್ತಷ್ಟೆ. ಆದ್ದರಿಂದ ಹಿಂದಿನ ಕನ್ನಡ ಕಾವ್ಯಗಳನ್ನು ಬರಿಯ ಭಾಷಾಂತರಗಳೆನ್ನದೆ ಸ್ವತಂತ್ರ ಕೃತಿಗಳೆಂದೇ ಪರಿಗಣಿಸಬೇಕಾಗುತ್ತದೆ. ಪಂಪ, ಕುಮಾರವ್ಯಾಸರ ಭಾರತಗಳನ್ನು ಒಂದರ್ಥದಲ್ಲಿ ಭಾಷಾಂತರಗಳೆನ್ನಬಹುದಾದರೂ ಮತ್ತೊಂದು ದೃಷ್ಟಿಯಿಂದ ಅವು ಸ್ವತಂತ್ರ ಕಾವ್ಯಗಳೇ. ಇಂದು ಭಾಷಾಂತರವೆಂದರೆ ಯಾವ ನಿಷ್ಕೃಷ್ಟವಾದ ಖಚಿತವಾದ ಕಲ್ಪನೆಯಿದೆಯೋ ಅದು ಹಿಂದಿನವರಿಗಿರಲಿಲ್ಲ. ಭಾಷಾಂತರಿಸುವುದು ಅವರ ಉದ್ದೇಶವಲ್ಲ. ಆದರೆ ಇಂದಿನ ಅರ್ಥದಲ್ಲಿ ಕೂಡ ಭಾಷಾಂತರದ ಅಂಶಗಳನ್ನು ಪ್ರಾಚೀನ ಕನ್ನಡ ಸಾಹಿತ್ಯ ವಿಪುಲವಾಗಿ ತೋರಿಸಿಕೊಡುತ್ತಿದೆ ಎಂಬುದು ಗಮನಾರ್ಹ ಸಂಗತಿ. ರೂಪಾಂತರ, ಭಾವಾನುವಾದ, ಸಂಗ್ರಹಾನುವಾದ, ವಿಸ್ತಾರಾನುವಾದ, ನಿಕಟಾನುವಾದ ಮುಂತಾದ ಬಗೆಗಳಿಗೆಲ್ಲ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಿದರ್ಶನಗಳಿವೆ. ನಮ್ಮ ಹಿಂದಿನ ಕವಿಗಳು ಯಾವುದೋ ಒಂದು ಆಕರವನ್ನು ಆಧಾರವಾಗಿಟ್ಟುಕೊಂಡಿದ್ದರೂ ಅದಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ ವರ್ಣನಾವಸರದಲ್ಲಿ ನಾನಾ ಮೂಲಗಳಿಂದ ಅನುವಾದಿಸುವುದೂ ಉಂಟು. ಒಟ್ಟಿನಲ್ಲಿ ಪ್ರಾಚೀನ ಕನ್ನಡ ಕೃತಿಗಳು ಸ್ಥೂಲವಾಗಿ ಅಂಶತಃ ಭಾಷಾಂತರಗಳಾಗಿವೆ. ನಿಯತವಾದ ಅರ್ಥದಲ್ಲಿ ಅಪ್ಪಟ ಭಾಷಾಂತರಗಳನ್ನು ನಾವು ನೋಡುವುದು ಆಧುನಿಕ ಕಾಲದಲ್ಲೇ.

ಹಳಗನ್ನಡದಲ್ಲಿ ಕಂಡುಬರುವ ಕೆಲವು ಭಾಷಾಂತರ ನಿದರ್ಶನಗಳನ್ನು ಮೊದಲು ನೋಡಬಹುದು. ದಂಡಿಯ ಕಾವ್ಯಾದರ್ಶವನ್ನು ಬಹುಮಟ್ಟಿಗೆ ಅವಲಂಬಿಸಿರುವ ಕವಿರಾಜಮಾರ್ಗದ ಪ್ರಾರ್ಥನಾಪದ್ಯವೇ ಭಾಷಾಂತರವಾಗಿದೆ. ಜನ್ನನ ಯಶೋಧರಚರಿತೆ ಕಾವ್ಯವೆಲ್ಲ ಬಹುಮಟ್ಟಿಗೆ ವಾದಿರಾಜನ ಸಂಸ್ಕೃತ ಯಶೋಧರ ಚರಿತದ ನಿಕಟಾನುವಾದವಾಗಿದೆ.

ಹೊಸಗನ್ನಡ ಸಾಹಿತ್ಯ ಭಾಷಾಂತರಗಳಿಗೆ ಬಹಳ ಋಣಿಯಾಗಿದೆ. 16ನೆಯ ಶತಮಾನದ ಅನಂತರ ಮಡುಗಟ್ಟಿ ನಿಂತ ನೀರಾಗಿದ್ದ ಕನ್ನಡ ಸಾಹಿತ್ಯವಾಹಿನಿಗೆ 19-20ನೆಯ ಶತಮಾನಗಳಲ್ಲಿ ಹೊಸ ಪಾತ್ರವನ್ನು ನಿರ್ಮಿಸಿದ ಶ್ರೇಯಸ್ಸು ಭಾಷಾಂತರಗಳದು. ಅದರಲ್ಲೂ ಇಂಗ್ಲಿಷಿನಿಂದಾದ ಭಾಷಾಂತರಗಳದು. ವಿಲಿಯಂ ಕೇರಿಯ ಬೈಬಲಿನ ಭಾಷಾಂತರ 1829ರಲ್ಲೇ ಪ್ರಕಟವಾಯಿತು. ಮುದ್ರಾಮಂಜೂಷವನ್ನು ಬಿಟ್ಟರೆ ಇದೇ ಹೊಸಗನ್ನಡದಲ್ಲಿ ಮೊದಲು ಅನುವಾದವಾದ ಗದ್ಯಗ್ರಂಥ.

ಕನ್ನಡದಲ್ಲಿ ಆಗಿರುವ ಭಾಷಾಂತರಗಳಲ್ಲಿ ನಾಟಕಗಳು ಬಹುಸಂಖ್ಯೆಯಲ್ಲಿವೆ. ಕನ್ನಡದಲ್ಲಿ ನಮಗೆ ಮೊದಲು ಸಿಕ್ಕುವ ನಾಟಕ 17ನೆಯ ಶತಮಾನದಲ್ಲಿ ರಚಿತವಾದ ಸಿಂಗರಾರ್ಯನ ಮಿತ್ರವಿಂದಾಗೋವಿಂದ. ಇದು ಸಂಸ್ಕೃತ ರತ್ನಾವಳಿಯ ಅನುವಾದ. ಮುಂದೆ 19-20ನೆಯ ಶತಮಾನಗಳಲ್ಲಿ ಮುಖ್ಯ ಸಂಸ್ಕೃತ ನಾಟಕಗಳೆಲ್ಲ ಕನ್ನಡಕ್ಕೆ ಬಂದುವು. ಬಸವಪ್ಪಶಾಸ್ತ್ರಿಗಳು ಶಾಕುಂತಲ, ವಿಕ್ರಮೋರ್ವಶೀಯ, ರತ್ನಾವಳಿ, ಉತ್ತರರಾಮಚರಿತೆ ಮತ್ತು ಚಂಡಕೌಶಿಕ ನಾಟಕಗಳನ್ನು ಭಾಷಾಂತರಿಸಿದರು. ಅವರ ಶಾಕುಂತಲದ ಅನುವಾದ ಶ್ರೇಷ್ಠವೆನಿಸಿದೆ. ಅವರಿಗಿಂತ ಮೊದಲೆ ಚುರಮುರಿ ಶೇಷಗಿರಿರಾಯರು ಶಾಕುಂತಲವನ್ನು ಹಾಡಿನ ರೂಪದಲ್ಲಿ ಅನುವಾದಿಸಿದ್ದರು. ಬಿ.ಕೃಷ್ಣಪ್ಪನವರು ಅದನ್ನು ಗದ್ಯದಲ್ಲಿ ಪರಿವರ್ತಿಸಿದ್ದರು. ಧೋಂಡೊ ನರಸಿಂಹ ಮುಳಬಾಗಿಲರು ಉತ್ತರರಾಮಚರಿತೆ, ಮಾಲವಿಕಾಗ್ನಿಮಿತ್ರ, ಮೃಚ್ಛಕಟಿಕ, ವೇಣೀಸಂಹಾರಗಳನ್ನು ಭಾಷಾಂತರಿಸಿದ್ದಾರೆ. ಅಳಸಿಂಗಾಚಾರ್ಯರಿಂದ ಸ್ವಪ್ನವಾಸವದತ್ತ, ಪಂಚರಾತ್ರಗಳು, ಮೈಸೂರು ಸೀತಾರಾಮಶಾಸ್ತ್ರಿಗಳಿಂದ ಪ್ರತಿಮಾನಾಟಕ, ನಂಜನಗೂಡು ಸುಬ್ಬಾಶಾಸ್ತ್ರಿಗಳಿಂದ ಮೃಚ್ಛಕಟಿಕ, ಅನಂತನಾರಾಯಣಶಾಸ್ತ್ರಿಗಳಿಂದ ನಾಗಾನಂದ ಅನುವಾದಗೊಂಡಿವೆ. ವೇಣೀಸಂಹಾರವನ್ನು ಸೀತಾರಾಮಶಾಸ್ತ್ರಿಗಳೂ ಜಯರಾಯಾಚಾರ್ಯರೂ ಭಾಷಾಂತರಿಸಿದ್ದಾರೆ. ಈ ಎಲ್ಲ ಭಾಷಾಂತರಗಳೂ ಕಂದವೃತ್ತಗಳ ರೂಪದಲ್ಲಿವೆ. ಹೊಸಗನ್ನಡ ಛಂದಸ್ಸಿನಲ್ಲೂ ಸಂಸ್ಕೃತ ನಾಟಕಗಳನ್ನು ಅನುವಾದಿಸಲಾಗಿದೆ. ಎಸ್.ವಿ.ಪರಮೇಶ್ವರಭಟ್ಟರು ಕಾಳಿದಾಸ, ಭಾಸರ ಎಲ್ಲ ನಾಟಕಗಳನ್ನೂ ಕೆ.ಕೃಷ್ಣಮೂರ್ತಿಯವರು ಪ್ರತಿಮಾನಾಟಕ, ಉತ್ತರರಾಮಚರಿತೆ, ಯಜ್ಞಫಲ, ಆಶ್ಚರ್ಯ ಚೂಡಾಮಣಿಗಳನ್ನೂ ಕನ್ನಡಿಸಿದ್ದಾರೆ. ಎಲ್.ಗುಂಡಪ್ಪನವರು ಭಾಸನ ಏಕಾಂಕ ನಾಟಕಗಳನ್ನೂ ಪ್ರತಿಜ್ಞಾ ಯೌಗಂಧರಾಯಣ ನಾಟಕ, ಸ್ವಪ್ನವಾಸವದತ್ತ ನಾಟಕಗಳನ್ನೂ ಅನುವಾದಿಸಿದ್ದಾರೆ. ತೀ.ನಂ.ಶ್ರೀಯವರ ರಾಕ್ಷಸನ ಮುದ್ರಿಕೆ ಸಂಸ್ಕೃತ ಮುದ್ರಾರಾಕ್ಷಸದ ಸಂಗ್ರಹಾನುವಾದ. ಸಿ.ಪಿ.ಕೆ.ಅವರಿಂದ ಸ್ವಪ್ನವಾಸವದತ್ತ, ಪ್ರತಿಜ್ಞಾಯೌಗಂಧರಾಯಣ, ರತ್ನಾವಳಿ, ನಾಗಾನಂದ, ವೇಣೀಸಂಹಾರಗಳು ಭಾಷಾಂತರಗೊಂಡಿವೆ.

ಇಂಗ್ಲಿಷಿನಿಂದ ನಾಟಕಗಳನ್ನು ಅನುವಾದಿಸಿದವರಲ್ಲಿ ಎಂ.ಎಲ್. ಶ್ರೀಕಂಠೇಶಗೌಡರು ಮೊದಲಿಗರು. ಅವರು ಷೇಕ್ಸ್‌ಪಿಯರನ ಮ್ಯಾಕ್‌ಬೆತ್, ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ನಾಟಕಗಳನ್ನು ಅನುಕ್ರಮವಾಗಿ ಪ್ರತಾಪರುದ್ರದೇವ, ಪ್ರಮೀಳಾರ್ಜುನೀಯ ಎಂದು ಕನ್ನಡಕ್ಕೆ ತಂದಿದ್ದಾರೆ. ಚುರಮುರಿಯವರು ಒಥೆಲೊ ನಾಟಕವನ್ನು ರಾಘವೇಂದ್ರರಾವ್ ನಾಟಕ ಎಂದೂ ಸಿ.ಆನಂದರಾಯರು ರೋಮಿಯೊ ಅಂಡ್ ಜೂಲಿಯಟ್ ನಾಟಕವನ್ನು ರಾಮವರ್ಮ ಲೀಲಾವತಿ ಎಂದೂ ಪರಿವರ್ತಿಸಿದ್ದಾರೆ. ಮ್ಯಾಕ್‌ಬೆತ್ ನಾಟಕವನ್ನು ಡಿ.ವಿ.ಜಿ.ಯವರು ಸೊಗಸಾಗಿ ಕನ್ನಡಿಸಿದ್ದಾರೆ. ಕುವೆಂಪು ಅವರ ರಕ್ತಾಕ್ಷಿ ಮತ್ತು ಬಿರುಗಾಳಿ ಷೇಕ್ಸ್‌ಪಿಯರನ ನಾಟಕಗಳ ರೂಪಾಂತರಗಳು. ಷೇಕ್ಸ್‌ಪಿಯರನ ಕೆಲವು ನಾಟಕಗಳು ಮಾಸ್ತಿಯವರಿಂದಲೂ ಅನುವಾದಗೊಂಡಿವೆ. ಕೆ.ಎಸ್.ಭಗವಾನ್ ಅವರಿಂದ ಜೂಲಿಯಸ್ ಸೀಸರ್, ಮ್ಯಾಕ್‌ಬೆತ್, ಒಥೆಲೋಗಳು ತರ್ಜುಮೆಗೊಂಡಿವೆ. ಬರ್ನಾರ್ಡ್‌ಷಾನ ಪಿಗ್ಮೇಲಿಯನ್ ಮತ್ತು ಮೇಜರ್ ಬಾರ್ಬರಾಗಳನ್ನು ವಿ.ಸೀ.ಕನ್ನಡಿಸಿದ್ದಾರೆ.

ಗ್ರೀಕ್ ಸಾಹಿತ್ಯದಿಂದ ಅನೇಕ ನಾಟಕಗಳು ಕನ್ನಡಕ್ಕೆ ಬಂದಿವೆ. ಪಾರಸಿಕರು, ಅಂತಿಗೊನೆ, ಏಜಾಕ್ಸ್, ದೊರೆ ಈಡಿಪಸ್, ಕಪ್ಪೆಗಳು, ಬದ್ಧಪ್ರಮಿತ್ಯೂಸ್, ಮೀಡಿಯಾ ಇವುಗಳನ್ನು ಕನ್ನಡಕ್ಕೆ ತಂದಿರುವವರು ಬಿ.ಎಂ.ಶ್ರೀ., ಕೆ.ವಿ.ರಾಘವಾಚಾರ್, ಸುಜನಾ, ಟಿ.ವಿ.ವೆಂಕಟಾಚಲಶಾಸ್ತ್ರೀ ಮತ್ತು ಕೆ.ಎಸ್.ನರಸಿಂಹಸ್ವಾಮಿ. ಇಬ್ಸನ್ನನ ಕೆಲವು ನಾಟಕಗಳನ್ನು ಎಸ್.ಜಿ.ಶಾಸ್ತ್ರೀ, ಅಡಿಗ, ಶ್ರೀರಂಗರು ಕನ್ನಡಿಸಿದ್ದಾರೆ. ಮೋಲಿಯರನ ಎರಡು ನಾಟಕಗಳನ್ನು ಎ.ಎನ್.ಮೂರ್ತಿರಾಯರು ಅನುವಾದಿಸಿದ್ದಾರೆ. ಗಯಟೆಯ ಫೌಸ್ಟ್ ನಾಟಕದ ಪ್ರಥಮ ಭಾಗ ಪು.ತಿ.ನ.ಅವರಿಂದ ಭಾಷಾಂತರವಾಗಿದೆ. ಪಿ.ಲಂಕೇಶರ 'ದೊರೆ ಈಡಿಪಸ್ ಮತ್ತು ಅಂತಿಗೊನೆ' ಇತ್ತೀಚಿನ ಸಮರ್ಥ ಅನುವಾದ ಗ್ರಂಥ'. ಷೇಕ್ಸ್‌ಪಿಯರನ ಎ.ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ನಾಟಕವನ್ನು ನಿಸಾರ್ ಅಹಮದ್ ಕನ್ನಡಕ್ಕೆ ಅದೇ ಹೆಸರಿನಲ್ಲಿ ಅನುವಾದಿಸಿದ್ದಾರೆ. ಆಲ್ಬರ್ಟ್ ಕಾಮುವಿನ ಎರಡು ನಾಟಕಗಳನ್ನು (ಕಾಲಿಗುಲ; ತಪ್ಪಿದ ಎಳೆ) ಡಿ.ಎ.ಶಂಕರ್, ಅ.ರಾ.ಮಿತ್ರ ಅನುವಾದಿಸಿದ್ದಾರೆ.

ಹೊಸಗನ್ನಡ ಕವಿತೆ ಭಾಷಾಂತರಗಳಿಂದಲೇ ಮೊದಲಾಯಿತು. 19ನೆಯ ಶತಮಾನದ ಮಧ್ಯಭಾಗದಲ್ಲಿ ಇಂಗ್ಲಿಷ್, ಜರ್ಮನ್ ಮುಂತಾದ ಭಾಷೆಗಳಿಂದ ಕ್ರಿಶ್ಚಿಯನ್ ಮಿಷನರಿಗಳು ಕವಿತೆಗಳನ್ನೂ ಗೀತೆಗಳನ್ನೂ ಅನುವಾದಿಸಿ ಪ್ರಕಟಿಸಿದ್ದರು. ಕಳೆದ ಶತಮಾನದ ಕಡೆಯಲ್ಲಿ ಮತ್ತು ಈ ಶತಮಾನದ ಮೊದಲ ಎರಡು ದಶಕಗಳಲ್ಲಿ ಈ ಅನುವಾದಕಾರ್ಯ ವ್ಯಾಪಕವಾಗಿ ನಡೆಯಿತು. ಈ ಕ್ಷೇತ್ರದಲ್ಲಿ ಹಟ್ಟಿಯಂಗಡಿ ನಾರಾಯಣರಾಯ, ಎಸ್.ಜಿ.ನರಸಿಂಹಾಚಾರ್ಯ, ಜಯರಾಯಾಚಾರ್ಯ, ಪಂಜೆ ಮಂಗೇಶರಾಯ, ಗೋವಿಂದ ಪೈ, ಬಿ.ಎಂ.ಶ್ರೀಕಂಠಯ್ಯನರು ಮುಖ್ಯರು. 1921ರಲ್ಲಿ ಪ್ರಕಟವಾದ ಶ್ರೀಯವರ ಇಂಗ್ಲಿಷ್ ಗೀತಗಳು ಹೊಸಗನ್ನಡ ಕಾವ್ಯದ ಚರಿತ್ರೆಯಲ್ಲಿ ಒಂದು ಮೈಲುಗಲ್ಲು. ಅದು ಕನ್ನಡ ಕವಿಗಳಿಗೆ ಹೊಸ ಹೊಸ ವಸ್ತುಗಳನ್ನು ತೋರಿಸಿಕೊಟ್ಟಿತಲ್ಲದೆ ಹೊಸ ಲಯಗಳನ್ನು ರೂಪಿಸಿ, ಭಾವಗೀತೆಗಳ ಯುಗಕ್ಕೆ ನಾಂದಿಯಾಯಿತು. ಕುವೆಂಪು ಅವರ ದೇವಕೇತು (ಹೌಂಡ್ ಆಫ್ ಹೆವನ್), ಬೊಮ್ಮನಹಳ್ಳಿಯ ಕಿಂದರಿಜೋಗಿ,

ಎಲ್.ಗುಂಡಪ್ಪನವರ ಸೊಹ್ರಾಬ್-ರುಸ್ತುಂ, ಅಡಿಗರ ಹುಲ್ಲಿನ ದಳಗಳು (ಲೀವ್ಸ್ ಆಫ್ ಗ್ರಾಸ್) ಇತ್ಯಾದಿ ಅನುವಾದಗಳನ್ನು ಈ ಕ್ಷೇತ್ರದಲ್ಲಿ ಹೆಸರಿಸಬಹುದು. ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳು ಎಲ್.ಎಸ್.ಶೇಷಗಿರಿರಾವ್ ಹಾಗೂ ಜಿ.ಎ.ರೆಡ್ಡಿಯವರಿಂದ ಗದ್ಯರೂಪದಲ್ಲಿ ಕನ್ನಡಕ್ಕೆ ತರ್ಜುಮೆಗೊಂಡಿವೆ. ಏಟ್ಸ್ ಕವಿಯ 50 ಕವನಗಳನ್ನು ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ ಅನುವಾದಿಸಿ ಚಿನ್ನದ ಹಕ್ಕಿ ಎಂಬ ಸಂಕಲನವನ್ನು ತಂದಿದ್ದಾರೆ. ವೆರಿಯರ್ ಎಲ್ವಿನ್‌ರ ಕೃತಿಯನ್ನು ಕಾಡಿನ ಹಾಡುಗಳು ಎಂಬ ಶೀರ್ಷಿಕೆಯಲ್ಲಿ ಸಿ.ಪಿ.ಕೆ.ಯವರು ಕನ್ನಡಿಸಿದ್ದಾರೆ.

ಸಂಸ್ಕೃತದಿಂದ ಕೆಲವು ಕಾವ್ಯಗಳನ್ನು ಕನ್ನಡಕ್ಕೆ ತರಲಾಗಿದೆ. ಎ.ಆರ್.ಕೃಷ್ಣಶಾಸ್ತ್ರಿಗಳ ವಚನ ಭಾರತ ಹಾಗೂ ಕಥಾಮೃತ ಇವು ಗಣ್ಯವಾದ ಕೃತಿಗಳು. ಶ್ರೀ ಮನ್ಮಹಾಭಾರತ ಸಂಪುಟಗಳು ಸುಬ್ರಹ್ಮಣ್ಯ ಕೌಶಿಕರು ಕನ್ನಡಕ್ಕೆ ತಂದ ಸರಳಾನುವಾದಗಳು. ಎನ್.ರಂಗನಾಥಶರ್ಮರು. ಶ್ರೀಮದ್ವಾಲ್ಮೀಕಿ ರಾಮಾಯಣಮ್ ಕೃತಿಯನ್ನು ಅನುವಾದಿಸಿದ್ದಾರೆ. ಚುರಮುರಿಯವರಿಂದ ಬಾಣನ ಕಾದಂಬರಿ ಅನುವಾದಗೊಂಡಿದೆ. ಎಸ್.ವಿ.ಪರಮೇಶ್ವರ ಭಟ್ಟರು ಗೀತಗೋವಿಂದ, ಗಾಥಾಸಪ್ತಶತಿ, ಅಮರಶತಕ, ಭರ್ತೃಹರಿಶತಕ, ಬುದ್ಧಚರಿತಗಳನ್ನು ಕನ್ನಡಿಸಿದ್ದಾರೆ. ಅಶ್ವಘೋಷನ ಬುದ್ಧಚರಿತೆ ಹಾಗೂ ಸೌಂದರನಂದ ಕೃತಿಗಳನ್ನು ಇತ್ತೀಚೆಗೆ ಎಲ್.ಬಸವರಾಜು ಅವರು ಅನುವಾದಿಸಿದ್ದಾರೆ. ಬೇಂದ್ರೆಯವರ ಮೇಘದೂತದ ಅನುವಾದ ಶ್ಲಾಘ್ಯವಾಗಿದೆ. ಎಂ.ಜಿ.ನಂಜುಂಡಾರಾಧ್ಯರು ಶಿಶುಪಾಲವಧವನ್ನು, ಕಡವ ಶಂಭುಶರ್ಮರು ಸೌಂದರನಂದವನ್ನು, ವೈ.ನಾಗೇಶಶಾಸ್ತ್ರಿಗಳು ರಘುವಂಶವನ್ನು, ಅಮ್ಮೆಂಬಳ ಶಂಕರನಾರಾಯಣರು ಕುಮಾರಸಂಭವವನ್ನು, ಸಿ.ಪಿ.ಕೆ.ಯವರು ಯಶೋಧರಚರಿತೆ, ಸೌಂದರ್ಯ ಲಹರಿಗಳನ್ನು, ಮೇವುಂಡಿ ಮಲ್ಲಾರಿಯವರು ಶಿವಾನಂದಲಹರಿಯನ್ನು, ಕೆ.ಕೃಷ್ಣಮೂರ್ತಿ ಅವರು ಕಿರಾತಾರ್ಜುನೀಯದ ಕೆಲವು ಸರ್ಗಗಳನ್ನು ಅನುವಾದಿಸಿದ್ದಾರೆ. ತೀ.ನಂ.ಶ್ರೀ.ಯವರ ಬಿಡಿಮುತ್ತು ಸಂಸ್ಕೃತ ಸುಭಾಷಿತಗಳ ಚೆಲುವಾದ ಭಾಷಾಂತರ.

ಅರಿಸ್ಟಾಟಲ್ ಮತ್ತು ಹೊರೇಸನ ಕಾವ್ಯಮೀಮಾಂಸೆ ಎನ್.ಬಾಲಸುಬ್ರಹ್ಮಣ್ಯಂ ಅವರಿಂದ, ಷೆಲ್ಲಿಯ ಡಿಫೆನ್ಸ್ ಆಫ್ ಪೊಯಟ್ರಿ (ಕಾವ್ಯಸಮರ್ಥನೆ) ಸಿ.ಮಹದೇವಪ್ಪನವರಿಂದ ಹಡ್ಸನ್, ಅಬರ್‌ಕ್ರಾಂಬಿ ಅವರ ಕೃತಿಗಳು ಸಿ.ಪಿ.ಕೆ. ಅವರಿಂದ, ಎಲಿಯಟ್ಟನ ಕೆಲವು ಬರೆಹಗಳು ಆರ್.ನಾಗರಾಜ ಮತ್ತು ಸಿ.ಪಿ.ಕೆ ಅವರಿಂದ ಭಾಷಾಂತರಗೊಂಡಿವೆ. ಪ್ರಮುಖವಾದ ಸಂಸ್ಕೃತ ಅಲಂಕಾರಗ್ರಂಥಗಳನ್ನೆಲ್ಲ ಕೆ.ಕೃಷ್ಣಮೂರ್ತಿಯವರೂ ಧನಂಜಯನ ದಶರೂಪಕವನ್ನು ಕೆ.ವಿ.ಸುಬ್ಬಣ್ಣನವರೂ ಕನ್ನಡಿಸಿದ್ದಾರೆ.

ಕಥೆಕಾದಂಬರಿಗಳ ರಂಗದಲ್ಲಿಯೂ ಕೆಲವು ಭಾಷಾಂತರಗಳಿವೆ. ರೆ.ವೆಗಲ್ ಮಾಡಿದ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್ ಗ್ರಂಥದ ಭಾಷಾಂತರ ಯಾತ್ರಿಕನ ಸಂಚಾರ ಎಂಬ ಹೆಸರಿನಲ್ಲಿ 1847ರಲ್ಲಿ ಪ್ರಕಟವಾಯಿತು. ಮುದ್ರಾಮಂಜೂಷವನ್ನು ಬಿಟ್ಟರೆ ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಭಾಷಾಂತರಗೊಂಡಿರುವುದು ಇದೇ ಮೊದಲನೆಯದು. ಬಿ.ವೆಂಕಟಾಚಾರ್ಯರು ಬಂಗಾಲಿಯಿಂದ ಅನುವಾದಿಸಿದ ಮತ್ತು ಗಳಗನಾಥರು ಮರಾಠಿಯಿಂದ ರೂಪಾಂತರಿಸಿದ ಕಾದಂಬರಿಗಳು ಕನ್ನಡ ಕಾದಂಬರಿ ಪ್ರಪಂಚಕ್ಕೆ ತಳಹದಿ ಹಾಕಿದುವು. ದೇವದಾಸಿ ಜೀವನ ಚಿತ್ರಿಸುವ ಮರಾಠಿಯ ಜೋಗವ್ವವನ್ನು ಶಾ.ಮಂ.ಕೃಷ್ಣರಾಯರು ಕನ್ನಡಕ್ಕೆ ತಂದಿದ್ದಾರೆ. ವೆಂಕಟಾಚಾರ್ಯರು ಬಂಕಿಮಚಂದ್ರರನ್ನೂ ಗಳಗನಾಥರು ಹರಿನಾರಾಯಣ ಆಪ್ಟೆಯವರನ್ನೂ ಕನ್ನಡಕ್ಕೆ ತಂದರು. ಈಚೆಗೆ ಇಂಗ್ಲಿಷಿನಿಂದ ಅನೇಕ ಕಥೆಕಾದಂಬರಿಗಳು ಕನ್ನಡಕ್ಕೆ ಬಂದಿವೆ.

ವಾಲ್ಟರ್ ಸ್ಕಾಟ್‌ನ ಕೆನಿಲ್‌ವರ್ತ್‌ಅನ್ನು ನಾಗೇಗೌಡರು, ಸ್ಟೀವನ್‌ಸನ್ನನ ಡಾ.ಜೆಕಿಲ್ ಅಂಡ್ ಮಿ.ಹೈಡನ್ನು ಆನಂದರು (ಪುರುಷಾಮೃಗ), ಚಾರಲ್ಸ್ ಡಿಕನ್ಸ್‌ನ ಡೇವಿಡ್ ಕಾಪರ್‌ಫೀಲ್ಡನ್ನು ಎ.ಪಿ.ಸುಬ್ಬಯ್ಯನವರು, ಜೇನ್ ಆಸ್ಟೆನ್ನಳ ಪ್ರೈಡ್ ಅಂಡ್ ಪ್ರಿಜುಡಿಸ್ ಅನ್ನು ದೇಜಗೌ ಅವರು (ಹಮ್ಮು-ಬಿಮ್ಮು), ಜಾರ್ಜ್ ಎಲಿಯಟ್ಟಳ ಸೈಲಾಸ್ ಮಾರ್ನರನ್ನು ಎಂ.ರಾಮರಾಯರು, ರೈಡರ್ ಹಗಾರ್ಡನಷಿ ಅನ್ನು ಎ.ಮೈಲಾರಿರಾಯರು (ಆಷಾ) ಭಾಷಾಂತರಿಸಿದ್ದಾರೆ. ಥೋರೋನ ವಾಲ್ಡನ್ ದೇವುಡು ನರಸಿಂಹಶಾಸ್ತ್ರಿಗಳಿಂದ, ಹೆಮಿಂಗ್ವೇಯ ಓಲ್ಡ್ ಮ್ಯಾನ್ ಅಂಡ್ ದಿ ಸೀ, ಪಂಕಜ ಅವರಿಂದ (ಗೆದ್ದು ಸೋತವನು), ಹಾಥಾರ್ನನ ಹೌಸ್ ಆಫ್ ಸೆವನ್ ಗೇಬಲ್ಸ್ ಎಂ.ವಿ.ಸೀತಾರಾಮಯ್ಯನವರಿಂದ (ಏಳು ಇಪ್ಪಾರಿನ ಮನೆ) ಕನ್ನಡಿಸಲ್ಪಟ್ಟಿವೆ. ಥಾಮಸ್ ಹಾರ್ಡಿಯ ಮೇಯರ್ ಆಫ್ ಕ್ಯಾಸ್ಟರ್‌ಬ್ರಿಡ್ಜನ್ನು ಆನಂದರಾಯರು ಸಂಗ್ರಹಾನುವಾದ ಮಾಡಿದ್ದಾರೆ (ಪರಿಳಿತ). ಇದೇ ಲೇಖಕನ ಎರಡು ಕಾದಂಬರಿಗಳನ್ನು ಗೌರೀಶ ಕಾಯ್ಕಿಣಿ ಅನುವಾದಿಸಿದ್ದಾರೆ. ರಿಟರ್ನ್ ಆಫ್ ದಿ ನೇಟೀವ್ ಮತ್ತು ಟೆಸ್ ಆಫ್ ದ ಡಿ ಅರ್ಬರ್ ವಿಲೆ, ಕಾದಂಬರಿಗಳನ್ನು ವಿ.ನಾಗರಾಜರಾವ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಆಲ್ಬರ್ಟ್ ಕಾಮುವಿನ ದಿ ಔಟ್ ಸೈಡರ್ (ಅನ್ಯ) ಡಿ.ಎ.ಶಂಕರ್ ಅವರಿಂದ ಅನುವಾದವಾಗಿದೆ. ಅವರೇ ಮುಲ್ಕ್ ರಾಜ್ ಆನಂದರ ಅನ್‌ಟಚಬಲ್ಸ್ ಕೃತಿಯನ್ನು ಅಸ್ಪೃಶ್ಯ ಎಂಬ ಹೆಸರಿನಲ್ಲಿ ಕನ್ನಡೀಕರಿಸಿದ್ದಾರೆ. ಆರ್.ಕೆ.ನಾರಾಯಣ್, ಮಾಳಗಾಂವಕರ್ ಮೊದಲಾದ ಭಾರತೀಯ ಇಂಗ್ಲಿಷ್ ಲೇಖಕರ ಕೆಲವು ಕಾದಂಬರಿಗಳೂ ಕನ್ನಡಕ್ಕೆ ಬಂದಿವೆ. ಎ.ಎನ್.ಮೂರ್ತಿರಾಯರು ಅನೇಕ ಪಾಶ್ಚಾತ್ಯ ಕಥೆಗಳನ್ನು ಯೋಧನ ಪುನರಾಗಮನ ಮತ್ತು ಪಾಶ್ಚಾತ್ಯ ಸಣ್ಣಕಥೆಗಳು ಎಂಬೆರಡು ಸಂಕಲನಗಳಲ್ಲಿ ಕೊಟ್ಟಿದ್ದಾರೆ. ಸಿ.ಪಿ.ಕೆ. ಅವರ ಹನ್ನೊಂದು ಹೊರಗಿನ ಕತೆಗಳನ್ನೂ ಇಲ್ಲಿ ಹೆಸರಿಸಬಹುದು. ಎರಿಕ್ ಫ್ರಾಮ್‌ನ ಮನೋವೈಜ್ಞಾನಿಕ ಕೃತಿಯನ್ನು 'ಪ್ರೀತಿಸುವುದೆಂದರೆ' ಎಂದು ಕೆ.ವಿ.ನಾರಾಯಣ ಅವರು ಅನುವಾದಿಸಿದ್ದಾರೆ.

ಇತರ ಭಾಷೆಗಳ ಕೆಲವು ಕೃತಿಗಳು ಇಂಗ್ಲಿಷಿನ ಮೂಲಕ ಕನ್ನಡಕ್ಕಿಳಿದಿವೆ. ವಿಕ್ಟರ್ ಹ್ಯೂಗೋವಿನ ಲೆ ಮಿಸರಬಲ್ ಕಾದಂಬರಿಯನ್ನು ಎ.ಪಿ.ಸುಬ್ಬಯ್ಯ ಮತ್ತು ನಾ.ಕಸ್ತೂರಿ ಅನುವಾದಿಸಿದ್ದಾರೆ. ಡ್ಯೂಮಾನ ತ್ರೀ ಮಸ್ಕೆಟೀರ್ಸನ್ನು ಮಾಧವ ಬಾಳಿಗರು, ವಾಲ್ಟೇರನ ಕ್ಯಾಂಡಿಡ್ ಅನ್ನು ಜಿ.ಪಿ.ರಾಜರತ್ನಂ ಭಾಷಾಂತರಿಸಿದ್ದಾರೆ. ಲಿಯೊ ಟಾಲ್‌ಸ್ಟಾಯ್ ಅವರ ರಷ್ಯನ್ ಕಾದಂಬರಿ ರಿಸರಕ್ಷನ್ ದೇಜಗೌ ಅವರಿಂದ ಪುನರುತ್ಥಾನವಾಗಿ ಕನ್ನಡಕ್ಕೆ ಲಭಿಸಿದೆ. ಅದೇ ಸಾಹಿತಿಯ ವಾರ್ ಅಂಡ್ ಪೀಸ್ ಎಂಬ ಕೃತಿಯನ್ನು ಸಮರ ಮತ್ತು ಶಾಂತಿ ಎಂದು ಅನುವಾದಿಸಿದ ದೇಜಗೌ ಅವರೇ ಅನ್ನ ಕರೇನಿನ ಕೃತಿಯನ್ನು ಕನ್ನಡಕ್ಕೆ ನೀಡಿದ್ದಾರೆ. ಟಾಲ್‌ಸ್ಟಾಯ್‌ನ ಕೆಲವು ಕಥೆಗಳನ್ನು ಎಲ್.ಗುಂಡಪ್ಪನವರೂ ಅಲೆಕ್ಸಿ ಟಾಲ್‌ಸ್ಟಾಯ್ ಅವರ ಆರ್ಡಿಯಲನ್ನು ಆನಂದರೂ ಗಾರ್ಕಿಯ ಆತ್ಮಕಥೆಯನ್ನು ನಿರಂಜನರೂ ಭಾಷಾಂತರಿಸಿದ್ದಾರೆ. ಗೊರೂರು, ಮ.ಶ್ರೀಧರಮೂರ್ತಿ, ತ.ರಾ.ಸು., ಅನಕೃ ಮೊದಲಾದವರು ರಷ್ಯನ್ ಕೃತಿಗಳನ್ನು ಅನುವಾದಿಸಿಕೊಟ್ಟಿದ್ದಾರೆ. ಬುದ್ದಣ್ಣಹಿಂಗಮಿರೆ ಅವರು ಪುಷ್ಕಿನ್ ಕವಿತೆಗಳು ಎಂಬ ಹೆಸರಿನಲ್ಲಿ 41 ಕವಿತೆಗಳನ್ನು ಅನುವಾದಿಸಿದ್ದಾರೆ. ಶಾ.ಬಾಲೂರಾಯರು ಆ್ಯನ್ನಾ ಆದ್ಮತೋವ ಎಂಬ ಕವಯಿತ್ರಿಯ ನೂರು ಕವನಗಳನ್ನು ಕನ್ನಡಕ್ಕೆ ತಂದಿದ್ದಾರೆ. ಸಿ.ಪಿ.ಕೆ. ಅವರು ಟಾಲ್‌ಸ್ಟಾಯ್‌ನ ಕಲೆ ಕುರಿತ ಗ್ರಂಥವನ್ನು ಕನ್ನಡಿಸಿದ್ದಾರೆ.

ಎಸ್.ವಿ.ಪರಮೇಶ್ವರ ಭಟ್ಟ, ಎಂ.ರಾಮರಾವ್ ಮತ್ತು ರಾಮಚಂದ್ರಯ್ಯನವರು ಅನೇಕ ಇಂಗ್ಲಿಷ್ ಪ್ರಬಂಧಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ಲೇಟೋವಿನ ರಿಪಬ್ಲಿಕ್ ಕೆ.ವೆಂಕಟರಾಮಪ್ಪನವರಿಂದ, ಮ್ಯಾಕಿಯವೆಲ್ಲಿಯ ರಾಜನೀತಿ ನವರತ್ನ ರಾಮರಾಯರಿಂದ ಭಾಷಾಂತರಗೊಂಡಿವೆ. ಎಚ್.ಎಲ್.ನಾಗೇಗೌಡರ ಪ್ರವಾಸಿ ಕಂಡ ಇಂಡಿಯಾದ ಸಂಪುಟಗಳು ಪ್ರವಾಸ ಸಾಹಿತ್ಯದ ಅನುವಾದ. ಲೂಯಿ ಫಿಶರ್, ಲಾರೆನ್ಸ್ ಬನ್ಯನ್ ಮೊದಲಾದವರು ಬರೆದ ಜೀವನ ಚರಿತ್ರೆಗಳೂ ಕೆಲವು ಆತ್ಮಕಥೆಗಳೂ ಕನ್ನಡಕ್ಕೆ ಬಂದಿವೆ. ಗಾಂಧೀ, ನೆಹರು, ವಿವೇಕಾನಂದ, ಅರವಿಂದ, ಟಾಗೂರ್, ಕೃಷ್ಣಾ ಹಥೀಸಿಂಗ್, ರಾಜಾಜಿ ಮೊದಲಾದ ಭಾರತೀಯ ಲೇಖಕರ ಸಾಹಿತ್ಯ ಕನ್ನಡದಲ್ಲಿ ಸಿಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಗಾಂಧೀಭವನಗಳು ಹಾಗೂ ಭಾರತೀಯ ವಿದ್ಯಾಭವನ ಕೇಂದ್ರವೂ ಮಹಾತ್ಮಗಾಂಧೀಜಿಯವರ ಕೃತಿಗಳನ್ನೂ ಬರೆಹ, ಭಾಷಣಗಳನ್ನೂ ಜೀವನ ಚರಿತ್ರೆಗಳನ್ನೂ ಕನ್ನಡಕ್ಕೆ ಸಮಗ್ರವಾಗಿ ತಂದಿವೆ. ಆನಂದರು ಟಾಲ್‌ಸ್ಟಾಯ್‌ನ ಆತ್ಮಕಥೆಯ ಮೂರು ಭಾಗಗಳನ್ನು ಅನುವಾದಿಸಿದ್ದಾರೆ. ನೆಹರು ಅವರ ಡಿಸ್ಕವರಿ ಆಫ್ ಇಂಡಿಯಾ ಭಾರತದರ್ಶನ ಎಂಬ ಹೆಸರಿನಿಂದ ಅನುವಾದಗೊಂಡಿದೆ. ಬರ್ಟ್ರೆಂಡ್ ರಸಲ್‌ನ ಇಂಪ್ಯಾಕ್ಟ್ ಆಫ್ ಸೈನ್ಸ್ ಆನ್ ಸೊಸೈಟಿ ಸಮಾಜದ ಮೇಲೆ ವಿಜ್ಞಾನದ ಪ್ರಭಾವ ಎಂಬ ಹೆಸರಿನಿಂದ ಭಾಷಾಂತರಗೊಂಡಿದೆ.

ನೂರಾರು ವಿಜ್ಞಾನ ಗ್ರಂಥಗಳು ಇಂಗ್ಲಿಷ್ ಹಾಗೂ ಇತರ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡಿವೆ ಎಂದು ಅಂದಾಜಿಸಲಾಗಿದೆ.

ಇವನ್ನು ಪಠ್ಯಪುಸ್ತಕಗಳು, ಜನಪ್ರಿಯ ಗ್ರಂಥಗಳು, ಆಕರ ಗ್ರಂಥಗಳು ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. 1969ರ ವರೆಗೂ ಪ್ರಕಟಗೊಂಡಿರುವ ಅನುವಾದ ಗ್ರಂಥಗಳು ಬಹುಪಾಲು ಮೊದಲಿನ ಎರಡು ವಿಭಾಗಗಳಿಗೇ ಸೀಮಿತವಾಗಿವೆ. ಈಗ ಸಿಕ್ಕಿರುವ ಮೊದಲ ಅನುವಾದಿತ ಗ್ರಂಥದ ಹೆಸರು ಅಂಕಗಣಿತವು (ಇಂಗ್ಲಿಷಿನಿಂದ ಅನುವಾದಿಸಿದವರು ಚನ್ನಬಸಪ್ಪಾ ಬಸಲಿಂಗಪ್ಪಾ ಧಾರವಾಡಕರ, 1873). 1969ರಿಂದ ಈಚೆಗೆ ಮುಖ್ಯವಾಗಿ ವಿಶ್ವವಿದ್ಯಾಲಯಗಳ ನೆರವಿನಿಂದ ಆಕರ ಗ್ರಂಥಗಳ ಕನ್ನಡ ಅನುವಾದಗಳು ಬರತೊಡಗಿವೆ. ಕನ್ನಡ ಬೋಧನ ಮಾಧ್ಯಮವಾಗಲು ಈ ಬಗೆಯ ಶಾಸ್ತ್ರಗ್ರಂಥಗಳ ಅನುವಾದ ಅಗತ್ಯವೆನಿಸಿದೆ. ಈ ಕಾರ್ಯ ಬಹು ತ್ವರೆಯಿಂದ ಜರುಗುತ್ತಿದ್ದು ಆಧಾರ ಗ್ರಂಥಗಳೆಲ್ಲವುಗಳ ಅನುವಾದ ನಡೆಯುತ್ತಿದೆ.

ಹಿಂದಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಮರಾಠಿ, ಉರ್ದು, ಪಂಜಾಬಿ ಮುಂತಾದ ಭಾರತೀಯ ಭಾಷೆಗಳೂ ಕನ್ನಡಕ್ಕೆ ಕೊಡುಗೆಗಳನ್ನಿತ್ತಿವೆ. ಈ ದಿಶೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್‌ಗಳು ಮಹತ್ತ್ವದ ಪಾತ್ರವಹಿಸಿವೆ. ಹಿಂದಿಯಿಂದ ರಾಮಚರಿತಮಾನಸ, ಅಂಸೂ ಮುಂತಾದ ಕಾವ್ಯಗಳೂ ಪ್ರೇಮಚಂದ್, ಯಶಪಾಲ್, ವೃಂದಾವನಲಾಲವರ್ಮ, ಹಜಾರಿಪ್ರಸಾದ್‌ದ್ವಿವೇದಿ, ದೇವಕಿನಂದನ ಖತ್ರಿ, ಜಯಶಂಕರ ಪ್ರಸಾದ್, ಮೊದಲಾದವರ ಕಥೆ ಕಾದಂಬರಿ ನಾಟಕ ಪ್ರಬಂಧಗಳೂ ಭಾಷಾಂತರಗೊಂಡಿವೆ. ದ.ಕೃ.ಭಾರದ್ವಾಜ, ಗುರುನಾಥ ಜೋಶಿ, ಕುಮುದಪ್ರಿಯ, ಎಂ.ಎಸ್.ಕೃಷ್ಣ ಮೂರ್ತಿ, ಮೇ.ರಾಜೇಶ್ವರಯ್ಯ, ಪ್ರಧಾನ್ ಗುರುದತ್ತ, ತಿಪ್ಪೇಸ್ವಾಮಿ ಮೊದಲಾದವರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಬಂಗಾಲಿಯಿಂದ ಶರಚ್ಚಂದ್ರ, ಟಾಗೂರ್ ಮೊದಲಾದವರ ಕೃತಿಗಳನ್ನು ಅಹೋಬಲ ಶಂಕರ, ಎಚ್.ಕೆ.ವೇದವ್ಯಾಸಾಚಾರ್ಯ, ಶಂಕರಾನಂದ ಸರಸ್ವತಿ, ಎಚ್.ವಿ.ಸಾವಿತ್ರಮ್ಮ ಮೊದಲಾದವರು ಕನ್ನಡಿಸಿದ್ದಾರೆ. ಟಾಗೂರರ ಪ್ರಬಂಧಗಳು ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿಯವರಿಂದ ಅನುವಾದಿತ ವಾಗಿವೆ. ತಮಿಳಿನಿಂದ ಮತ್ತೂರು ಕೃಷ್ಣಮೂರ್ತಿ, ಎಲ್.ಗುಂಡಪ್ಪ, ಕೆ.ಸಂಪದ್ಗಿರಿರಾವ್ ಮೊದಲಾದವರೂ ತೆಲುಗಿನಿಂದ ಕೆ.ವೆಂಕಟರಾಮಪ್ಪ, ಕೋ.ಚೆನ್ನಬಸಪ್ಪ, ವೀರಭದ್ರ, ಆರ್.ವಿ.ಎಸ್.ಸುಂದರಂ ಮೊದಲಾದವರೂ ಮಲಯಾಳಂನಿಂದ ನಾ.ಕಸ್ತೂರಿ, ಕರುಣಾಕರನ್, ಬಿ.ಕೆ.ತಿಮ್ಮಪ್ಪ ಮೊದಲಾದವರೂ ಮರಾಠಿಯಿಂದ ಬಾಲಚಂದ್ರ ಫಾಣೇಕರ, ವಿ.ಎಂ.ಇನಾಂದಾರ್, ಸರಸ್ವತಿಗಜಾನನರಿಸಬೂಡ ಶಾ.ಮಂ.ಕೃಷ್ಣರಾಯ, ಮೊದಲಾದವರೂ ಭಾಷಾಂತರಿಸಿದ್ದಾರೆ. ಮರಾಠಿಯ ಛಾಯಾದಾತಾರ್‌ರ ಸ್ತ್ರೀ ಪುರುಷ ಕೃತಿ ಸರಸ್ವತಿಯವರಿಂದ ಕನ್ನಡೀಕರಣಗೊಂಡಿದೆ. ಪರ್ಷಿಯನ್ ಕವಿ ರೂಮಿಯನ 64 ಕವಿತೆಗಳನ್ನು ಡಿ.ಆರ್.ನಾಗರಾಜ್‌ರವರು ವಸಂತಸ್ಮೃತಿ ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ. ಹಿಂದಿಯ ನಿರ್ಮಲ್‌ವರ್ಮಾ ಅವರ ಕಾದಂಬರಿ ವೇದಿನ್ ಕನ್ನಡಕ್ಕೆ ಆ ದಿನಗಳು ಎಂಬ ಹೆಸರಿನಲ್ಲಿ ಅನುವಾದಗೊಂಡಿದೆ (ತಿಪ್ಪೇಸ್ವಾಮಿ).

ಸಂಸ್ಕೃತದಿಂದ ವೇದ, ಉಪನಿಷತ್, ಗೀತೆ, ಪುರಾಣ, ರಾಮಾಯಣ, ಭಾರತಾದಿಗಳೂ ಹಲವಾರು ಶಾಸ್ತ್ರಕೃತಿಗಳೂ ಕನ್ನಡಕ್ಕೆ ಬಂದಿವೆ. ಈ ದಿಶೆಯಲ್ಲಿ ಮೈಸೂರು ಅರಮನೆಯಿಂದ ಪ್ರಕಟವಾಗಿರುವ ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲೆಯಲ್ಲಿ 34 ಸಂಪುಟಗಳು ಅನುವಾದಗೊಂಡು ಬೆಳಕು ಕಂಡಿವೆ. ಎಚ್.ಪಿ.ವೆಂಕಟರಾವ್ ಅವರು ಋಗ್ವೇದ ಸಂಹಿತೆ ಸಂಪುಟಗಳನ್ನು ಅನುವಾದಿಸಿದ್ದಾರೆ. ಟಿಳಕರ ಶ್ರೀಮದ್ಭಗವದ್ಗೀತಾ ರಹಸ್ಯ ಕೃತಿಯನ್ನು ವೆಂಕಟೇಶ ಭೀಮರಾವ್ ಆಲೂರ ಮತ್ತು ವಿ.ಎಸ್.ಕೆರೂರು ಅವರು ಅನುವಾದಿಸಿದ್ದಾರೆ.

ಭಾಷಾಂತರ ಪ್ರಕಾರ ದಿನೇ ದಿನೇ ಹೆಚ್ಚು ಮಹತ್ತ್ವವನ್ನು ಪಡೆದುಕೊಳ್ಳುತ್ತಿದೆ. ಹೊರಗಿನ ಸಾಹಿತ್ಯ ಕೃತಿಗಳನ್ನು ಪರಿಚಯಿಸಿಕೊಳ್ಳಲು ಹಾಗೂ ವಿಜ್ಞಾನ, ಮಾನವಿಕ, ಶಾಸ್ತ್ರಗ್ರಂಥಗಳು ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯನ್ನು ತಿಳಿಯಲು ಭಾಷಾಂತರಕ್ಕೆ ಮೊರೆ ಹೋಗಲಾಗುತ್ತಿದೆ. ಇತ್ತೀಚಿನ ಅನುವಾದಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು. ಕೆ.ಎಂ.ಜಾರ್ಜ್ ಸಂಪಾದಿಸಿರುವ ಕಂಪ್ಯಾರಿಟಿವ್ ಇಂಡಿಯನ್ ಲಿಟರೇಚರ್ ಸಂಪುಟಗಳು ಕನ್ನಡಕ್ಕೆ ತರ್ಜುಮೆಗೊಂಡಿವೆ. ಇವನ್ನು ಎಲ್.ಎಸ್.ಶೇಷಗಿರಿರಾವ್ ಸಂಪಾದಿಸಿದ್ದು ಭಾರತೀಯ ಸಾಹಿತ್ಯ ಸಮೀಕ್ಷೆ ಎಂಬ ಶೀರ್ಷಿಕೆಯಡಿ ಹೊರತರಲಾಗಿದೆ. ಗ್ರೀಕ್ ಮೂಲದ ಲಾಂಜಿನಸ್‌ನ ಕೃತಿಯನ್ನು ಔನ್ನತ್ಯ ವಿಚಾರ ಚರ್ಚೆ ಎಂಬ ಶೀರ್ಷಿಕೆಯಲ್ಲಿ ಎನ್.ಬಾಲಸುಬ್ರಹ್ಮಣ್ಯರವರು ಕನ್ನಡಿಸಿದ್ದಾರೆ. ಜಾರ್ಜ್ ಆರ್‌ವೆಲ್‌ರ ನೈನ್‌ಟೀನ್ ಎಯ್ಟಿಫೋರ್ ಎಂಬ ಕಾದಂಬರಿಯನ್ನು ಎಚ್.ಎಚ್.ಅಣ್ಣಯ್ಯ ಗೌಡರು ಕನ್ನಡಕ್ಕೆ ತಂದಿದ್ದಾರೆ (1984).

ಸಂಸ್ಕೃತ ಕೃತಿಗಳು ಮತ್ತೆ ಮತ್ತೆ ಭಾಷಾಂತರಗೊಂಡಿರುವುದನ್ನು ಕಾಣಬಹುದು. ಉದಾಹರಣೆಗೆ ಜಯದೇವ ಕವಿಯ ಗೀತಗೋವಿಂದ ಕೃತಿ ಬಿ.ಶ್ರೀನಿವಾಸಮೂರ್ತಿಯವರಿಂದ ಭಾಷಾಂತರಗೊಂಡಿದೆ. ಬಿ.ಗೋಪಾಲರಾವ್ ಅವರು ಕಾಳಿದಾಸ ಭಾಸಾದಿಗಳ ವಿವಿಧ ಕೃತಿಗಳನ್ನು ಕನ್ನಡಕ್ಕೆ ಮೂಲ ಮತ್ತು ಅರ್ಥವ್ಯಾಖ್ಯೆ ಸಹಿತ ಅನುವಾದಿಸಿ ಪ್ರಕಟಿಸಿದ್ದಾರೆ. ಕಾಳಿದಾಸ ವಿರಚಿತ ಕುಮಾರ ಸಂಭವ ಮಹಾಕಾವ್ಯ (1999) ಅಂತಹವುಗಳಲ್ಲಿ ಒಂದು. ಕಲ್ಹಣನ ರಾಜತರಂಗಿಣಿಯನ್ನು ನಿರ್ಪಾಜೆ ಭೀಮಭಟ್ಟರು ಭಾಷಾಂತರಿಸಿದ್ದಾರೆ (1994). ಶೇಷ ನವರತ್ನರಿಂದ ನಾಲ್ಕು ವೇದಗಳು ಎಂಬ ಸಂಪುಟಗಳು ಹೊರಬಂದಿವೆ. ಶ್ರೀಮಧ್ವಾಚಾರ್ಯರ ದ್ವೈತ ವೇದಾಂತ ದರ್ಶನ ಎಂಬ ಶೀರ್ಷಿಕೆಯಲ್ಲಿ ಸುರೇಂದ್ರನಾಥ್ ದಾಸಗುಪ್ತರ ಆಂಗ್ಲ ಕೃತಿಯನ್ನು ಆರ್.ಜಿ.ಕುಲಕರ್ಣಿಯವರು ಕನ್ನಡೀಕರಿಸಿದ್ದಾರೆ.

ಇಂಗ್ಲಿಷೇತರ ಐರೋಪ್ಯ ಸಾಹಿತ್ಯವನ್ನು ಪರಿಚಯಿಸುವ ವಿವಿಧ ಭಾಷಾಂತರ ಗ್ರಂಥಗಳ ಪ್ರಕಟಣೆ ಮುಂದುವರೆದಿದೆ. ಕೆ.ಎಲ್.ಗೋಪಾಲ ಕೃಷ್ಣರಾವ್‌ರವರು ತೊಲ್‌ಸ್ತೋಯ್ ನೀಳ್ಗತೆಗಳು ಎಂಬುದರಲ್ಲಿ ರಷ್ಯನ್ ಮಹಾಕವಿ ಟಾಲ್‌ಸ್ಟಾಯ್‌ರವರ ಕಥಾಸಾಹಿತ್ಯವನ್ನು ಅನುವಾದಿಸಿದ್ದಾರೆ. ಜಾನ್ ರೀಡ್‌ರ ಟೆನ್ ಡೇಸ್ ದಟ್ ಷುಕ್ ದ ವರ್ಲ್ಡ್ ಎಂಬ ರಷ್ಯದ ಕ್ರಾಂತಿ ಕುರಿತ ಕೃತಿಯನ್ನು ಎಚ್.ಎಸ್.ಹರಿಶಂಕರ ಅವರು ಕನ್ನಡೀಕರಿಸಿದ್ದಾರೆ. ಪ.ವಿ.ಚಂದ್ರಶೇಖರ್ ರಷ್ಯಾದ ಸಣ್ಣ ಕಥೆಗಳು ಎಂಬ ಆಯ್ದ ಕಥೆಗಳ ಸಂಕಲನವನ್ನು ಕನ್ನಡಕ್ಕೆ ತಂದಿದ್ದಾರೆ. ಜರ್ಮನ್ ಮೂಲದ ಜಾರ್ಜ್ ಬುಶ್ನರ್‌ರ ಕೃತಿಯನ್ನು ವಾಯ್‌ಜೆಕ್ ಎಂಬ ಶೀರ್ಷಿಕೆಯಲ್ಲಿ ಕೆ.ವಿ.ಸುಬ್ಬಣ್ಣ ಅನುವಾದಿಸಿದ್ದಾರೆ. (ಸಿ.ಪಿ.ಕೆ.)

ಮರಾಠಿ ಸಾಹಿತ್ಯ ಅನುವಾದಕರ ಗಮನವನ್ನು ಹೆಚ್ಚಾಗಿ ಸೆಳೆದಿದೆ. ದುರ್ಗಾಭಾಗವತರ ವ್ಯಾಸಪರ್ವ ಕೃತಿ ಗೌರೀಶ ಕಾಯ್ಕಿಣಿಯವರಿಂದ ತರ್ಜುಮೆಗೊಂಡಿದೆ. ಅಶೋಕ ಪ್ರಭಾಕರರ ಮರಾಠಿ ಕೃತಿ ಕ್ಷಿತಿಜ ಅಂಕೋಲಾರಿಂದ ಕನ್ನಡಕ್ಕೆ ಲಭ್ಯವಾಗಿದೆ. ರಘುನಾಥ ಬಿಡೆಯವರ ಮರಾಠಿಯ ವಾಲ್ಮೀಕಿ ರಾಮಾಯಣದಲ್ಲಿ ಶಾಪ ಮತ್ತು ವರ (ಅನು. ಸರಸ್ವತಿ ಗಜಾನನ ರಿಸಬೂಡ), ಮಹಾಭಾರತದಲ್ಲಿ ಕುಮಾರ ಸಂಭವ (ಅನು. ವಿರೂಪಾಕ್ಷ ಕುಲಕರ್ಣಿ) ಕನ್ನಡಕ್ಕೆ ಬಂದಿವೆ. ಅಶೋಕ ನೀಲಗಾರರು ಶಿವಾಜಿ ಸಾವಂತರ ಮರಾಠಿ ಕೃತಿ ಮೃತ್ಯುಂಜಯವನ್ನು ಅನುವಾದಿಸಿದ್ದಾರೆ. ನರೇಂದ್ರ ಪಾಲ್ ಸಿಂಘರ ಪಂಜಾಬಿ ಮೂಲದ ಕೃತಿಯನ್ನು ಕತ್ತಲೆಯಿಂದ ಕಗ್ಗತ್ತಲೆಗೆ ಎಂಬ ಶೀರ್ಷಿಕೆಯಲ್ಲಿ ಪಿ.ಶಶಿಕಲಾ ಅನುವಾದಿಸಿದ್ದಾರೆ. ಚಂದ್ರಕಾಂತ ಪೋಕಳೆ ಅವರಿಂದ ಮರಾಠಿಯ ಮಹಾನಂದ ಕಾದಂಬರಿ ಮಾನು ಎಂಬ ಹೆಸರಿನಲ್ಲಿ ಕನ್ನಡೀಕರಣಗೊಂಡಿದೆ. ಅದೇ ಭಾಷೆಯ ಶರಣಕುಮಾರ ಲಿಂಬಾಳೆಯವರ ಕೃತಿಯನ್ನು ಅಕ್ರಮ ಸಂತಾನ ಎಂದು ದು.ನಿಂ.ಬೆಳಗಲಿ ಭಾಷಾಂತರಿಸಿದ್ದಾರೆ. ಮರಾಠಿಯಿಂದ ಲಕ್ಷ್ಮಣಗಾಯಕ್‌ವಾಡರ. ಉಚಲ್ಯಾ ಎಂಬ ಕಾದಂಬರಿಯನ್ನು ಇವರೇ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರೇಮಚಂದರ ನಿರ್ಮಲಾ ಎಂಬ ಕಾದಂಬರಿಯ ಕನ್ನಡ ಅವತರಣಿಕೆಯನ್ನು ತಿಪ್ಪೇಸ್ವಾಮಿಯವರು ತಂದಿದ್ದಾರೆ. ಒರಿಯ ಮೂಲದ ನಿಶ್ಶಬ್ದದಲ್ಲಿ ಕವಿ ಎಂಬ ಸೀತಾಕಾಂತ ಮಹಾಪಾತ್ರರ ಒಂದು ಕೃತಿ ಸಿ.ಪಿ.ಕೆ.ಯವರಿಂದ ಕನ್ನಡಕ್ಕೆ ಬಂದಿದೆ. ಹೀಗೆ ತೆಲುಗು, ತಮಿಳು, ಬಂಗಾಲಿ, ಮರಾಠಿ ಮೊದಲಾದ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ.

ವಿವಿಧ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳು ಹಾಗೂ ಧಾರ್ಮಿಕ ಕೇಂದ್ರಗಳು ಭಾಷಾಂತರ ಕೃತಿಗಳನ್ನು ಹೊರತರುವಲ್ಲಿ ನಿರತವಾಗಿವೆ. ಇದರಿಂದಾಗಿ ಬೇರೆ ಬೇರೆ ಅಧ್ಯಯನ ಶಿಸ್ತುಗಳಲ್ಲಿ ಅನುವಾದ ಕೃತಿಗಳು ಬರುತ್ತಿವೆ. ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಇತಿಹಾಸಗಳಿಗೆ ಪೂರಕವಾದ ಗಂಭೀರ ಕೃತಿಗಳೂ ಭಾಷಾಂತರ

ಗೊಳ್ಳುತ್ತಿರುವುದನ್ನು ಕಾಣಬಹುದು. ಹಿಂದೂಧರ್ಮವನ್ನು ಕುರಿತ ಗ್ರಂಥಗಳಂತೆಯೇ ಜೈನ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಸಂಬಂಧವಾದ ಕೃತಿಗಳು ಆಯಾ ಧಾರ್ಮಿಕ ಕೇಂದ್ರಗಳಿಂದ ಭಾಷಾಂತರಗೊಳ್ಳುತ್ತಿವೆ. ಬೌದ್ಧ ಸಾಹಿತ್ಯದ ಕೃತಿಗಳು ಬೆಳಕು ಕಾಣುತ್ತಿರುವುದು ಒಂದು ವಿಶೇಷ ವಿದ್ಯಮಾನವಾಗಿದೆ. ಎಚ್.ವಿ.ಶ್ರೀರಂಗರಾಜು ಅವರು ದೀಘ್ನನಿಕಾಯವನ್ನು ಅನುವಾದಿಸಿದ್ದಾರೆ (1984). ಬಿ.ನಂ.ಚಂದ್ರಯ್ಯನವರ ಬುದ್ಧನ ಜಾತಕ ಕಥೆಗಳು ಈ ಕ್ಷೇತ್ರದಲ್ಲಿ ಉಲ್ಲೇಖಾರ್ಹ ಕೃತಿ. ಕೆ.ಎಸ್.ಭಗವಾನ್ ರವರ ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಎಂಬ ಅನುವಾದ ಕೃತಿಯ ಮೂಲ ಲೇಖಕರು ಸ್ವಾಮಿ ಧರ್ಮತೀರ್ಥರು.

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಯುಗಯಾತ್ರೀ ಭಾರತೀಯ ಸಂಸ್ಕೃತಿ ಎಂಬ ಅನುವಾದ ಸಂಪುಟಗಳು ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ ಕೃತಿ ಸರಣಿಯ ಅನುವಾದ; ವಿವಿಧ ಲೇಖಕರು ಅನುವಾದ ಮಾಡಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪಿ.ವಿ.ಕಾಣೆಯವರ ಹಿಸ್ಟರಿ ಆಫ್ ಧರ್ಮಶಾಸ್ತ್ರ ಎಂಬ ಕೃತಿಯ ಮೊದಲ ಸಂಪುಟವನ್ನು ಅನುವಾದಿಸಿ ಎರಡು ಭಾಗಗಳಲ್ಲಿ ಧರ್ಮಶಾಸ್ತ್ರದ ಇತಿಹಾಸ ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಭಾರತೀಯ ವಿದ್ಯಾಭವನದ ಬೆಂಗಳೂರು ಕೇಂದ್ರ ಅದೇ ಸಂಸ್ಥೆಯ ಹಿಸ್ಟರಿ ಅಂಡ್ ಕಲ್ಚರ್ ಆಫ್ ಇಂಡಿಯನ್ ಪೀಪಲ್ ಎಂಬ ಇತಿಹಾಸ ಸರಣಿ ಕೃತಿಗಳ ಅನುವಾದ ಮತ್ತು ಪ್ರಕಟಣೆಯಲ್ಲಿ ತೊಡಗಿಕೊಂಡಿದೆ. ಅದೇ ಸಂಸ್ಥೆಯು ಮಹಾತ್ಮ ಗಾಂಧೀಜಿಯವರ ಸಮಗ್ರ ಸಾಹಿತ್ಯದ ಅನುವಾದ ಕಾರ್ಯ ಕೈಗೆತ್ತಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಗಾಂಧೀಭವನಗಳು ಮಹಾತ್ಮರಿಗೆ ಸಂಬಂಧಿಸಿದ ಅನೇಕ ಕೃತಿಗಳನ್ನು ಅನುವಾದಿಸಿವೆ. ನೆಹರು, ಅಂಬೇಡ್ಕರ್, ಲಾಲ್‌ಬಹದ್ದೂರ್ ಶಾಸ್ತ್ರಿ, ಸರ್ವೇಪಲ್ಲಿ ರಾಧಾಕೃಷ್ಣನ್ ಮೊದಲಾದ ರಾಷ್ಟ್ರನಾಯಕರ ಜೀವನ ಚರಿತ್ರೆಗಳು ಅನುವಾದದ ಮೂಲಕ ಕನ್ನಡಿಗರಿಗೆ ಲಭ್ಯವಿವೆ.

ಕನ್ನಡ ಭಾಷಾಂತರಗಳು ಒಂದು ಕಾಲದಲ್ಲಿ ಮುಖ್ಯವಾಗಿ ಕಥೆ, ಕಾದಂಬರಿಗಳ ಕ್ಷೇತ್ರದಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದುವು. ಅನಂತರದ ದಿನಗಳಲ್ಲಿ ಭಾಷಾಂತರ ಇತರ ಗಂಭೀರ ಸಾಹಿತ್ಯದತ್ತಲೂ ಮುಖ ಮಾಡಿತು. ಮುಖ್ಯವಾಗಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಇಂಥ ಕೆಲಸಕ್ಕೆ ಚಾಲನೆ ನೀಡಿದುವು. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯವೂ ಪ್ರತ್ಯೇಕ ಪ್ರಕಟಣಾ ಶಾಖೆಯನ್ನು ಪ್ರಾರಂಭಿಸಿ ಈ ನಿಟ್ಟಿನಲ್ಲಿ ಗಮನ ಹರಿಸಿದೆ. ಹಂಪೆಯ ಕನ್ನಡ ವಿಶ್ವವಿದ್ಯಾನಿಲಯ ಪ್ರತ್ಯೇಕ ಭಾಷಾಂತರ ವಿಭಾಗವನ್ನೇ ಸ್ಥಾಪಿಸಿದೆ. ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಅನುವಾದ ಕೃತಿಗಳನ್ನು ಹೊರತಂದಿವೆ. ಕನ್ನಡ ಭಾಷೆಯ ಸತ್ವ ಹೆಚ್ಚಲು ಮತ್ತು ಬೋಧನೆಯಲ್ಲಿ ಅದು ಪರಿಣಾಮಕಾರಿಯಾದ ಮಾಧ್ಯಮವಾಗಲು ಅತ್ಯಾಧುನಿಕ ತಂತ್ರಜ್ಞಾನ ಕ್ಷೇತ್ರದಿಂದ ಹಿಡಿದು ವಿವಿಧ ಜ್ಞಾನ ಶಾಖೆಗಳಲ್ಲಿ ಭಾಷಾಂತರ ಕೃತಿಗಳು ಹೊರಬರಬೇಕೆಂದು ನಿರೀಕ್ಷಿಸಲಾಗಿದೆ.

ಇಂದು ಭಾಷಾಂತರ ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳಿಂದ ಮಾನ್ಯತೆ ಪಡೆದಿರುವ ಸಾಹಿತ್ಯ ಪ್ರಕಾರವಾಗಿದೆ. ಕನ್ನಡ ಅನುವಾದಕರಲ್ಲಿ ಕೆಲವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿರುವುದು ಹೆಮ್ಮೆಯ ವಿಷಯ. ಎಸ್.ವಿ.ಪರಮೇಶ್ವರ ಭಟ್ಟ, ಪ್ರಧಾನ ಗುರುದತ್ತ, ತಿಪ್ಪೇಸ್ವಾಮಿ, ಎಚ್.ಎಸ್.ವೆಂಕಟೇಶಮೂರ್ತಿ, ನೀರ್ಪಾಜೆ ಭೀಮಭಟ್ಟ, ಶೇಷನಾರಾಯಣ, ಕೀರ್ತಿನಾಥ ಕುರ್ತಕೋಟಿ, ಬಿ.ಆರ್.ನಾರಾಯಣ, ಹಮೀದ್ ಅಲ್ಮಾಸ್, ಉಮಾ ವಿರೂಪಾಕ್ಷ ಕುಲಕರ್ಣಿ ಮೊದಲಾದವರು ಈ ಪ್ರಶಸ್ತಿಗೆ ಸೇರಿದ್ದಾರೆ. *

ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ ಈ ಎರಡೂ ಸಂಸ್ಥೆಗಳು ಅನುವಾದ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಕಟಣೆಗಳನ್ನು ಕೈಗೊಂಡಿವೆ. ಕೇಂದ್ರ ಸರ್ಕಾರದ ನೆರವಿನಿಂದ ನಡೆಯುತ್ತಿರುವ ಈ ಸಂಸ್ಥೆಗಳು ಭಾರತೀಯ ಭಾಷೆಗಳ ಅಭಿವೃದ್ಧಿಗಾಗಿ ಮತ್ತು ವಿವಿಧ ಭಾಷೆಗಳ ಸಾಹಿತ್ಯವನ್ನು ಪರಸ್ಪರ ಪರಿಚಯಿಸುವುದಕ್ಕಾಗಿ ವಿವಿಧ ಮಾಲಿಕೆಗಳನ್ನು ಪ್ರಾರಂಭಿಸಿ ಲೇಖಕರನ್ನು ಗುರುತಿಸಿ ಅನುವಾದ ಕಾರ್ಯವನ್ನು ಕೈಗೊಂಡಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ದಕ್ಷಿಣ ಪ್ರಾದೇಶಿಕ ಕಛೇರಿ ಬೆಂಗಳೂರಿನಲ್ಲಿದೆ. ಅದು ವಿವಿಧ ಮಾಲೆಗಳಲ್ಲಿ ಕನ್ನಡ ಅನುವಾದ ಗ್ರಂಥಗಳನ್ನು ಪ್ರಕಟಿಸಿದೆ.ಕಾದಂಬರಿಗಳು, ಕಥಾ ಸಂಕಲನ, ಕಾವ್ಯ, ಜಾನಪದ, ನಾಟಕ, ಭಾರತೀಯ ಸಾಹಿತ್ಯ ನಿರ್ಮಾಣಕಾರರು ಮೊದಲಾದ ಶೀರ್ಷಿಕೆಗಳ ಅಡಿಯಲ್ಲಿ ಕೃತಿಗಳು ಪ್ರಕಟವಾಗಿವೆ. ಮರಾಠಿಯ ಹರಿನಾರಾಯಣ ಆಪ್ಟೆಯವರ ಯಾರು ಲಕ್ಷಿಸುವರು? ಎಂಬ ಕಾದಂಬರಿ (ಲೀಲಾ ಕಾರಂತ ಮತ್ತು ಶಿವರಾಮ ಕಾರಂತ), ಗುಜರಾತಿಯ ಕುಂದನಿಕಾ ಕಪಾಡಿಯಾ ಅವರ ಗೋಡೆಗಳಿಂದ ಆಚೆ ಆಕಾಶ ಎಂಬ ಕಾದಂಬರಿ (ಎಸ್.ಕೆ.ರಮಾದೇವಮ್ಮ ಮತ್ತು ಲಿಂಗರಾಜು) ಅನುವಾದಗೊಂಡಿವೆ. ಮಲಯಾಳಂ ಮೂಲದ ಪಿ.ಕೆ.ಬಾಲಕೃಷ್ಣನ್ ರಚಿಸಿರುವ 'ನಾನಿನ್ನು ನಿದ್ರಿಸುವೆ' ಕೃತಿಯ ಅನುವಾದಕರು ಸಾರಾ ಅಬೂಬಕರ್. ಅಸ್ಸಾಮಿ ಮೂಲದ ಬೀರೇಂದ್ರ ಕುಮಾರ್ ರಚಿಸಿದ ಜನತೆಯ ರಾಜ್ಯ ಎಂಬ ಕಾದಂಬರಿಯನ್ನು ಕೆ.ಪುಟ್ಟರಾಜು ಕನ್ನಡಿಸಿದ್ದಾರೆ.

ಜಾನಕೀರಾಮನ್‌ರ ತಮಿಳು ಕೃತಿ ಶಕ್ತಿವೈದ್ಯ ಎಂಬ ಕಥಾಸಂಕಲನವನ್ನು ಶೇಷನಾರಾಯಣರು ಕನ್ನಡಕ್ಕೆ ತಂದಿದ್ದಾರೆ. ಒರಿಯಾ ಮೂಲದ ಕಾಣೆಯಾದ ಟೋಪಿಯ ರಹಸ್ಯ ಮತ್ತಿತರ ಕಥೆಗಳು ಎಂಬ ಸಂಕಲನದ ಅನುವಾದಕರು ಎಂ.ಎಸ್.ಕೆ.ಪ್ರಭು. ಇಂಗ್ಲಿಷಿನಲ್ಲಿರುವ ಶಿವ್ ಕೆ.ಕುಮಾರ್ ಅವರ 'ಕಾವ್ಯ ದೇವರ ಸ್ವಗತ' ಎಂಬ ಹೆಸರಿನಲ್ಲಿ (ಬಿ.ಸಿ.ರಾಮಚಂದ್ರ ಶರ್ಮ) ಕನ್ನಡಕ್ಕೆ ಬಂದಿದೆ. ಇಂಗ್ಲಿಷ್‌ನ ವಾಲ್ಟ್‌ವಿಟ್‌ಮನ್‌ನ ಕೃತಿಯನ್ನು ಗೋಪಾಲಕೃಷ್ಣ ಅಡಿಗರು 'ಹುಲ್ಲಿನ ದಳಗಳು' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ರವೀಂದ್ರನಾಥ ಠಾಕೂರರ 'ನೂರೊಂದು ಕವನ' ಕೃತಿಯನ್ನು ದ.ರಾ.ಬೇಂದ್ರೆ ಮತ್ತು ನಾರಾಯಣ ಸಂಗಮ ಅನುವಾದಿಸಿದ್ದಾರೆ. ಮರಾಠಿ ಮೂಲದ ಎ.ಆರ್.ದೇಶಪಾಂಡೆಯವರ ಕೃತಿ 'ಭಗ್ನಮೂರ್ತಿ' ಎಂಬ ಹೆಸರಿನಲ್ಲಿ ದ.ರಾ.ಬೇಂದ್ರೆಯವರಿಂದ ಕನ್ನಡಕ್ಕೆ ಬಂದಿದೆ. ಪಂಜಾಬಿ ಮೂಲದ ಭಾಯಿವೀರ್ ಸಿಂಗ್‌ರ ಕಾವ್ಯ ನನ್ನ ಪ್ರಿಯತಮನೇ ಬಾಳು ಎಂಬ ಕೃತಿ ಎನ್.ಮಾಲತಿಯವರಿಂದ ಅನುವಾದಗೊಂಡಿದೆ.

ಗ್ರೀಕ್, ಇಂಗ್ಲಿಷ್, ಸಂಸ್ಕೃತ ನಾಟಕ ಕೃತಿಗಳೂ ಕನ್ನಡದಲ್ಲಿ ಪ್ರಕಟವಾಗಿವೆ. ಮುದ್ದುಕೃಷ್ಣ ಸಂಪಾದಿಸಿರುವ 'ತೆಲುಗು ಏಕಾಂಕ ನಾಟಕಗಳು' ಕೃತಿಯನ್ನು ಲಕ್ಷ್ಮಿ ಜಿ.ಎ.ರೆಡ್ಡಿ ಮತ್ತು ಜಿ.ಎ.ರೆಡ್ಡಿ ಕನ್ನಡಿಸಿದ್ದಾರೆ. ಎ.ಎನ್.ಮೂರ್ತಿ ರಾಯರು ಮೋಲಿಯೇರನ ಎರಡು ನಾಟಕಗಳನ್ನು ಭಾಷಾಂತರಿಸಿದ್ದಾರೆ. ಪ್ರಬಂಧ ಸಾಹಿತ್ಯ ಮತ್ತಿತರ ಪ್ರಕಾರದ ಕೃತಿಗಳ ಅನುವಾದಗಳನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ರವೀಂದ್ರನಾಥ ಠಾಕೂರರ ನಿಬಂಧಮಾಲಾ-I ಸ್ವಾಮಿ ಶಂಕರಾನಂದ ಸರಸ್ವತಿಯವರಿಂದ ಕನ್ನಡದಲ್ಲಿ ಬೆಳಕು ಕಂಡಿದೆ. ಹಿಂದಿ ಮೂಲದ ಮೋತಿಚಂದ್ರ ವಿರಚಿತ ಸಾರ್ಥವಾಹವನ್ನು ಎಚ್.ಎಸ್.ಪಾಟೀಲರು ಅನುವಾದಿಸಿದ್ದಾರೆ. ಭಾರತೀಯ ಸಾಹಿತ್ಯ ನಿರ್ಮಾಣಕಾರರು ಎಂಬ ಮಾಲಿಕೆಯಲ್ಲಿ ಜಯಶಂಕರ್ ಪ್ರಸಾದ್, ಮಹಾಕವಿ ಉಳ್ಳೂರ್, ಗಾಲಿಬ್, ಈಶ್ವರಚಂದ್ರ ವಿದ್ಯಾಸಾಗರ, ಯಶ್‌ಪಾಲ್ ಮೊದಲಾದವರ ಬಗೆಗೆ ಬಂದಿರುವ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ.

ನ್ಯಾಷನಲ್ ಬುಕ್ ಟ್ರಸ್ಟ್ ಕೂಡ ಭಾರತ ದೇಶ ಮತ್ತು ಜನ ಮಾಲೆ, ತರುಣ ಭಾರತೀ, ಜನಪ್ರಿಯ ವಿಜ್ಞಾನ ಮಾಲೆ, ಅಂತರ ಭಾರತೀಯ ಪುಸ್ತಕಮಾಲೆ, ಜಾನಪದ ಮಾಲೆ, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ನವಸಾಕ್ಷರತೆ ಸಾಹಿತ್ಯ ಮಾಲೆ, ಸತತ ಶಿಕ್ಷಣ ಪುಸ್ತಕ ಮಾಲೆ, ಏಷ್ಯಾ ಪೆಸಿಫಿಕ್ ಸಹ ಪ್ರಕಾಶನ, ಭಾರತೀಯ ಸಾಹಿತ್ಯ ನಿಧಿ, ಸೃಜನಶೀಲ ಕಲಿಕೆ, ಹೊಸ ಕಾರ್ಯಕ್ಷೇತ್ರ ಮೊದಲಾದ ಮಾಲೆಗಳಲ್ಲಿ ಪ್ರಕಟಣೆಯನ್ನು ಕೈಗೊಂಡಿದ್ದು ಅವುಗಳಲ್ಲಿ ಹೆಚ್ಚಿನವು ಭಾಷಾಂತರಗಳು.

ಸಿ.ಶಿವರಾಮಮೂರ್ತಿಯವರ ಭಾರತೀಯ ಚಿತ್ರಕಲೆ ಎಂಬ ಕೃತಿಯನ್ನು ಪಿ.ಆರ್.ತಿಪ್ಪೇಸ್ವಾಮಿಯವರು ಅನುವಾದಿಸಿದ್ದಾರೆ. ಬಂಗಾಲಿ ರಂಗಭೂಮಿ ಕೃತಿಯ ಅನುವಾದಕರು ಎಚ್.ಕೆ.ರಂಗನಾಥ್. ಮಹಾತ್ಮಾ ಗಾಂಧಿಯವರ ಹಿಂದೂಧರ್ಮ ಎಂದರೇನು ಎಂಬ ಕೃತಿಯ ಅನುವಾದಕರು ಎನ್.ಬಾಲಸುಬ್ರಹ್ಮಣ್ಯ. ಬಸವರಾಜ ಪುರಾಣಿಕರು ಕೆಲವು ಉರ್ದು

ಕಥೆಗಳನ್ನು ಕನ್ನಡೀಕರಿಸಿದ್ದಾರೆ. ಪಠಾಣಿ ಪಟ್ನಾಯಕ್‌ರ 'ಒರಿಯಾ ಕಥೆಗಳು' ಎಸ್.ವಿ.ಶ್ರೀನಿವಾಸರಾವ್‌ರಿಂದ ಅನುವಾದಗೊಂಡಿವೆ. ಎ.ಎಂ.ರಾವಲ್‌ರ ಗುಜರಾತಿ 'ಏಕಾಂಕಗಳು' ಪ್ರೇಮಾಕಾರಂತರಿಂದ ಅನುವಾದಗೊಂಡಿದೆ. ಎಂ.ಟಿ.ವಾಸುದೇವನ್ ನಾಯರ್‌ರ ಮಲಯಾಳಂ ಕೃತಿ 'ಚೌಕಟ್ಟಿನ ಮನೆ' ಬಿ.ಕೆ.ತಿಮ್ಮಪ್ಪನವರಿಂದ ಅನುವಾದವಾಗಿದೆ. ಹರಭಜನ್‌ಸಿಂಗ್‌ರ ಪಂಜಾಬಿ ಕಥೆಗಳು ಎಂಬ ಕೃತಿಯನ್ನು ಗೌರೀಶ ಕಾಯ್ಕಿಣಿಯವರು ಕನ್ನಡಿಸಿದ್ದಾರೆ. ಚಂದ್ರಗುಪ್ತ ವಿದ್ಯಾಲಂಕಾರರ ಹಿಂದಿ ಏಕಾಂಕ ಕೃತಿ ಎಸ್.ಬಿ.ಕೊಡದರಿಂದ ಅನುವಾದಗೊಂಡಿದೆ. ಆರ್.ಕೆ.ನಾರಾಯಣ್‌ರ 'ಸ್ವಾಮಿ ಮತ್ತು ಅವನ ಸ್ನೇಹಿತರು' ಎಂಬ ಕೃತಿಯನ್ನು ಎಚ್.ವೈ.ಶಾರದಾಪ್ರಸಾದ್ ಕನ್ನಡಿಸಿದ್ದಾರೆ. ವಿವಿಧ ಲೇಖಕರ ಹದಿಮೂರು ಶ್ರೇಷ್ಠ ಕಥೆಗಳು ಎಂಬ ಕೃತಿಯನ್ನು ಎಲ್.ಎಸ್.ಶೇಷಗಿರಿರಾವ್ ಅನುವಾದಿಸಿದ್ದಾರೆ. ಏಷ್ಯಾದ ಆಯ್ದ ಕಥೆಗಳು ಎಂಬ ಕೃತಿಯನ್ನು ಎಸ್.ಕೆ.ರಮಾದೇವಮ್ಮ ಕನ್ನಡೀಕರಿಸಿದ್ದಾರೆ.

ಜಾನಪದ ಕ್ಷೇತ್ರದಲ್ಲಿಯೂ ಅನೇಕ ಅನುವಾದ ಕೃತಿಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಬಿ.ರಾಮರಾಜರ 'ಆಂಧ್ರ ಜಾನಪದ' (ಆರ್ವಿಯಸ್ ಸುಂದರಂ), ಡಿ.ಆರ್.ಅಹುಜ 'ರಾಜಾಸ್ಥಾನದ ಜಾನಪದ' (ಸಿ.ಪಿ.ಕೃಷ್ಣ ಕುಮಾರ್) ಅನುವಾದಗೊಂಡಿವೆ. ಶಾಂತಾ ರಂಗಾಚಾರಿಯವರ 'ಎಲ್ಲಾ ಕಾಲಕ್ಕೂ ಬರುವ ಕಥೆಗಳು', ಎಂಬುದನ್ನು ಕೆ.ವಿ.ಸುಬ್ಬಣ್ಣ ಅನುವಾದಿಸಿದ್ದಾರೆ. ಮನೋಜ್‌ದಾಸ್‌ರ, 'ಸಾರ್ವಕಾಲಿಕ ಪುಸ್ತಕಗಳು' ಎಂ.ಗೋಪಾಲಕೃಷ್ಣ ಅಡಿಗರಿಂದ ಅನುವಾದಗೊಂಡಿದೆ. ಲೀಲಾವತಿ ಭಾಗವತ್‌ರ 'ಸ್ವರ್ಗಕ್ಕೆ ಸವಾರಿ ಮತ್ತು ಇತರ ಕಥೆಗಳು' ಎಂಬ ಕೃತಿಯನ್ನು ಯು.ಆರ್.ಅನಂತಮೂರ್ತಿ ಕನ್ನಡಿಸಿದ್ದಾರೆ. ಲೀಲಾ ಜಾರ್ಜ್‌ರ 'ಸತ್ಯಶೋಧನೆ' ಜಿ.ಆರ್.ರಂಗಸ್ವಾಮಯ್ಯನವರಿಂದ ಅನುವಾದಗೊಂಡಿದೆ. ಅನುವಾದ ಆಧುನಿಕ ಕಾಲದಲ್ಲಿ ಹೆಚ್ಚು ಹೆಚ್ಚು ಮಹತ್ವ ಪಡೆದುಕೊಂಡಿದ್ದು ಅದು ಸೃಜನಾತ್ಮಕ ಪ್ರಕಾರವನ್ನಷ್ಟೇ ಅಲ್ಲದೆ ಜ್ಞಾನದ ಎಲ್ಲ ಶಾಖೆಗಳನ್ನೂ ವ್ಯಾಪಿಸಿದೆ. *

**ಕನ್ನಡದಲ್ಲಿ ಮಕ್ಕಳ ಸಾಹಿತ್ಯ :** ಮಕ್ಕಳ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಸಾಹಿತ್ಯವನ್ನು ಮಕ್ಕಳ ಸಾಹಿತ್ಯವೆನ್ನಬಹುದು. ಮಕ್ಕಳ ಸಾಹಿತ್ಯ ಕಿವಿಯ ಮೂಲಕ ಗ್ರಹಿಸುವ ಲಾಲಿ ಹಾಡುಗಳಿಂದಲೇ ಮೊದಲಿಟ್ಟಿರಬಹುದು. ಅನಂತರ ಕಥೆಗಳಿಂದ ಬೆಳೆದಿರಬಹುದು. ಹಾಡುವ ಹಾಗೂ ಕಥೆ ಹೇಳುವವರ ಹಾವ ಭಾವಗಳನ್ನು ನೋಡಿಯೂ ಮಗು ಗ್ರಹಿಸಿರಬಹುದು. ಈ ಕಾರಣದಿಂದ ಮಾನವನ ಸಾಹಿತ್ಯದ ಬುನಾದಿ ಇದಾಗಿದೆ ಎಂದರೆ ತಪ್ಪಾಗಲಾರದು. ಇದರ ಮೂಲ ಜಾನಪದವಾಗಿರಬಹುದು. ಜಗತ್ತಿನಲ್ಲಿ ಇದು ಹೇಗೇ ಪ್ರಾರಂಭವಾಗಿರಲಿ ಮಕ್ಕಳಿಗೆ ಅತ್ಯಗತ್ಯವಾದುದು, ಉಪಯುಕ್ತವಾದುದು ಎನ್ನುವುದಕ್ಕೆ ಎರಡನೆಯ ಮಾತಿಲ್ಲ. ಹಿರಿಯರೂ ಇದನ್ನು ಸವಿಯಬಹುದು ಎನ್ನುವುದು ಇದರ ಒಂದು ವಿಶೇಷ ಲಕ್ಷಣ.

ಮಕ್ಕಳ ಸಾಹಿತ್ಯ ಮಕ್ಕಳಿಗೆ ನಲಿವು, ತಿಳಿವು ಎರಡನ್ನೂ ಕೊಡಬೇಕು. ಸಂಸ್ಕೃತಿ, ಶಿಕ್ಷಣ, ಕುಟುಂಬ, ಪರಿಸರ ಈ ನಾಲ್ಕರ ಪ್ರಭಾವವೂ ಅದರಲ್ಲಿ ಬರಬೇಕು. ಮಕ್ಕಳ ಮಾನಸಿಕ, ಬೌದ್ಧಿಕ, ಸಾಮಾಜಿಕ ಮತ್ತು ಭಾಷಿಕ ಬೆಳವಣಿಗೆಗೆ ಸಹಾಯಕವಾಗಬೇಕು ಮೊದಲಾದ ಅನೇಕ ಅಭಿಪ್ರಾಯಗಳು ಈ ಸಾಹಿತ್ಯ ಕುರಿತು ವ್ಯಕ್ತವಾಗಿವೆ. ಒಟ್ಟಾರೆ ಮಕ್ಕಳ ಸಾಹಿತ್ಯ ಮಕ್ಕಳಿಗೆ ಸಂತೋಷ ನೀಡಬೇಕು, ಭಾಷೆಯನ್ನು ಕಲಿಸಬೇಕು, ಆಲೋಚನಾ ಶಕ್ತಿಯನ್ನು ಬೆಳೆಸಬೇಕು, ಜೊತೆಗೆ ಬದುಕುವ ವಿವೇಕವನ್ನು ಹೊಳೆಯಿಸಬೇಕು. ಆಗ ಅದು ಸಾರ್ಥಕವಾದೀತು.

ಕಾವ್ಯ ಜಗತ್ತಿನಲ್ಲೇ ಮಕ್ಕಳ ಪದ್ಯಗಳನ್ನು ಫ್ರಾನ್ಸ್ ದೇಶದ ಪೆಕಾಟ್ ಎನ್ನುವಾತ ಮೊದಲು ಪ್ರಕಟಿಸಿದನೆಂದು ನಂಬಲಾಗಿದೆ. 'ಸಾಂಗ್ಸ್ ಆಫ್ ನರ್ಸರಿ' 1717ರಲ್ಲಿ ಪ್ರಕಟವಾಯಿತೆಂದು ತಿಳಿದುಬರುತ್ತದೆ. ಕನ್ನಡದಲ್ಲಿ 1862ರಲ್ಲಿ ಹೊರಬಂದ ಬಾಲ ಗೀತೆಗಳು ಎನ್ನುವ ಮೊದಲ ಸಂಕಲನವನ್ನು ಸಿದ್ಧಪಡಿಸಿದವರು ಜಿ.ಮ್ಯಾಕ್ ಅವರು (ಈ ಕೃತಿ ಅಲಭ್ಯ). ಕೆರೋಡಿ ಸುಬ್ಬರಾಯರು, ಎಸ್.ಜಿ.ನರಸಿಂಹಾಚಾರ್ಯರು ಇಂಗ್ಲಿಷ್ ಭಾಷೆಯಿಂದ ಮಕ್ಕಳಿಗಾಗಿ ಕೆಲವು ಕವಿತೆಗಳನ್ನು ಅನುವಾದಿಸಿದ್ದಾರೆ. ಇವುಗಳಲ್ಲಿ ಭಾಷೆ, ಛಂದಸ್ಸುಗಳು ಹಳೆಯ ಶೈಲಿಯಲ್ಲಿದ್ದರೂ ಇವು ಮೊದಲ ಪ್ರಯತ್ನಗಳಾಗಿವೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮಕ್ಕಳಿಗೆಂದೇ ಸಿದ್ಧಪಡಿಸಿದ ಪಠ್ಯ ಹಾಗೂ ಕ್ರಮಿಕ ಪುಸ್ತಕಗಳಲ್ಲಿ, ವಾಚಿಕೆಗಳಲ್ಲಿ ಮಕ್ಕಳ ಕವಿತೆಗಳು ಕಂಡುಬರುತ್ತವೆ. ಈ ಪ್ರಯತ್ನಗಳಲ್ಲಿ ಕ್ರೈಸ್ತ ಮಿಷನರಿಗಳದು ಶ್ಲಾಘನೀಯ ಪಾತ್ರ. ಮೊದಮೊದಲಿಗೆ ದೇವರ ಪ್ರಾರ್ಥನೆ, ಆದರ್ಶಗಳ ಬೋಧನೆ ಇಂಥವು, ಜೊತೆಗೆ ಕ್ಲಿಷ್ಟವಾದ ಪದಗಳ ಸಂಯೋಜನೆಗಳು ಕಾಣಿಸಿಕೊಂಡವು. ಬರಬರುತ್ತ ಸರಳವಾದ, ಸೊಗಸಾದ ರಚನೆಗಳು ಬಂದಿರುವುದು ಈಗ ಇತಿಹಾಸವಾಗಿದೆ. ಮುದ್ರಣಾಲಯಗಳು ಪ್ರಾರಂಭವಾದ ಮೇಲೆ ಹೊಸ ಕ್ರಾಂತಿಯೇ ನಡೆಯಿತು. ಜಯರಾಯಾಚಾರ್ಯರ ಅನುಕರಣ ಗೀತಗಳು, ಸೋಸಲೆ ಅಯ್ಯಾಶಾಸ್ತ್ರಿಗಳ ಪದ್ಯಗಳು ಗಮನ ಸೆಳೆಯುತ್ತವೆ. ಇಂಥವರು ಅನೇಕರು ಮಕ್ಕಳ ಕಾವ್ಯದ ಬೆಳೆಗಾಗಿ ನೆಲವನ್ನು ಹದ ಮಾಡಿದರು. ವಸ್ತು, ಭಾಷೆ, ತಂತ್ರಗಳಲ್ಲಿ ಪ್ರಯೋಗಗಳು ನಡೆಯುತ್ತ ಹೋದವು.

ಪಂಜೆ ಮಂಗೇಶರಾಯ, ಹೊಯಿಸಳ, ಜಿ.ಪಿ.ರಾಜರತ್ನಂ ಇವರು ಮೂವರನ್ನೂ ಮಕ್ಕಳ ಸಾಹಿತ್ಯದ ರತ್ನತ್ರಯರು ಎನ್ನಬಹುದು. ಕುವೆಂಪು, ಶಿವರಾಮ ಕಾರಂತ, ದಿನಕರ ದೇಸಾಯಿ, ರಾಘವ, ಎಲ್.ಗುಂಡಪ್ಪ, ಮೇವುಂಡಿ ಮಲ್ಲಾರಿ, ಸಿದ್ದಯ್ಯ ಪುರಾಣಿಕ, ತೋನ್ಸೆ ಮಂಗೇಶ ರಾವ್, ಸಿ.ಫ.ಕಟ್ಟೀಮನಿ ಮೊದಲಾದವರು ಕವಿತೆಗಳನ್ನು ರಚಿಸಿ ಮಕ್ಕಳನ್ನು ಖುಷಿ ಪಡಿಸಿದರು. ಜಿ.ಪಿ.ರಾಜರತ್ನಂ ಅವರ ಒಂದು ಚುಟುಕ ಹೀಗಿದೆ:

ಗಡಗಡ ಓಡಿತು ರೈಲು!
ನಿಮಿಷಕೆ ಸಾವಿರ ಮೈಲು!
ಸಾವಿರ ಮೈಲನ್ನು!
ಮೀರುತ ಹೋಗಲು!
ಆಗದು ರೈಲಿನ ಕೈಲು!

ಅವರ ರಚನೆಗಳಲ್ಲಿ ಇಂತಹ ಚೋಟಾರಿ ಮೋಟಾರಿ ಚುಟುಕಗಳ ಜೊತೆಗೆ ಮಕ್ಕಳನ್ನು ಕುಣಿಸಿ, ತಣಿಸಬಲ್ಲ ಪದ್ಯಗಳಿವೆ. ಇಂಥ ಹಿರಿಯರೆಲ್ಲ ಬಿತ್ತಿದ ನೆಲಕ್ಕೆ ನೀರೆರೆದು ಗೊಬ್ಬರ ಹಾಕಿದವರು ಮುಂದಿನ ಹಂತದ ಕವಿಗಳು. ಶಂ.ಗು.ಬಿರಾದಾರ, ಕಯ್ಯಾರ ಕಿಞ್ಞಣ್ಣ ರೈ, ಸಿಸು ಸಂಗಮೇಶ, ಬಿ.ಎ.ಸನದಿ, ರಸಿಕ ಪುತ್ತಿಗೆ, ಶಶಿಕುಮಾರ, ಪಳಕಳ ಸೀತಾರಾಮ ಭಟ್ಟ, ಮುಂಡಾಜೆ ರಾಮಚಂದ್ರ ಭಟ್ಟ, ಶ್ರೀನಿವಾಸ ಶೆಟ್ಟಿ, ಈಶ್ವರ ಕಮ್ಮಾರ, ಚನ್ನವೀರ ಕಣವಿ, ಕಂಚ್ಯಾಣಿ ಶರಣಪ್ಪ, ಎಂ.ವಿ.ಸೀತಾರಾಮಯ್ಯ, ನೀ.ರೇ ಹಿರೇಮಠ ಮೊದಲಾದವರು ಈ ಸಾಲಿಗೆ ಸೇರುತ್ತಾರೆ. ತಲೆಯೆತ್ತಿದ ಸಸಿಗೆ ಆಧಾರ ನೀಡಿ ಅದನ್ನು ಪೋಷಿಸುತ್ತಿರುವವರು ಹಲವಾರು ಕವಿಗಳು. ಎಚ್.ಎಸ್.ವೆಂಟೇಶಮೂರ್ತಿ, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಟಿ.ಎಸ್.ನಾಗರಾಜ ಶೆಟ್ಟಿ, ಎನ್.ಶ್ರೀನಿವಾಸ ಉಡುಪ, ಸಿ.ಎಂ.ಗೋವಿಂದ ರೆಡ್ಡಿ, ಸುಮತೀಂದ್ರ ನಾಡಿಗ, ಆರ್.ಕೆ.ಶಾನಭೋಗ, ಬಿ.ತಿಪ್ಪೇರುದ್ರಪ್ಪ ಮೊದಲಾದವರನ್ನು ಹೆಸರಿಸಬಹುದು.

ಮುಪ್ಪಿನ ಷಡಕ್ಷರಿಯ (ಸು.1500) ತಿರುಕನ ಕನಸು, ಹಳೆಯದಾದರೂ ಅತ್ಯಂತ ಆಕರ್ಷಕವೂ ಅರ್ಥಪೂರ್ಣವೂ ಆದ ಗೋವಿನ ಹಾಡು, ಕುವೆಂಪು ಅವರ ಬೊಮ್ಮನ ಹಳ್ಳಿಯ ಕಿಂದರಿ ಜೋಗಿ, ಎನ್.ಶ್ರೀನಿವಾಸ ಉಡುಪರ ಕುಂಭಕರ್ಣನ ನಿದ್ದೆ ಶ್ರೇಷ್ಠಮಟ್ಟದ ಕಥನ ಕವನಗಳು. ಎಚ್.ಎಸ್.ವೆಂಕಟೇಶ ಮೂರ್ತಿಯವರ ಘಟ್ಟದ ಯೋಗಿ ಕೂಡ ಚೆನ್ನಾಗಿದೆ.

ಕುವೆಂಪು ಅವರ ಬೊಮ್ಮನಹಳ್ಳಿಯ ಕಿಂದರಿ ಜೋಗಿಯ ಕೆಲವು ಸಾಲುಗಳು:

ಇಲಿಗಳು! ಇಲಿಗಳು! ಇಲಿಗಳ ಹಿಂಡು!
ಬಳಬಳ ಬಂದುವು ಇಲಿಗಳ ದಂಡು!
ಅನ್ನದ ಮಡಕೆಯನಗಲಿದುವು!
ಟೋಪಿಯ ಗೂಡನು ತ್ಯಜಿಸಿದುವು!
ಬಂದುವು ಅಂಗಿಯ ಜೇಬನು ಬಿಟ್ಟು,

ಮಕ್ಕಳ ಕಾಲಿನ ಚೀಲವ ಬಿಟ್ಟು,
ಹಾರುತ ಬಂದುವು, ಓಡುತ ಬಂದುವು,
ನೆಗೆಯುತ ಬಂದುವು, ಕುಣಿಯುತ ಬಂದುವು,
ಜೋಗಿಯು ಬಾರಿಸೆ ಕಿಂದರಿಯ!

ಈ ಕವಿತೆ ಇಂಗ್ಲಿಷ್ ಕವಿ ರಾಬರ್ಟ್ ಬ್ರೌನಿಂಗನ ದಿ ಪೈಡ್ ಪೈಪರ್ ಆಫ್ ಹ್ಯಾಮೆಲಿನ್ ಎನ್ನುವ ಕವನದ ಭಾವಾನುವಾದವಾಗಿದೆ.

ನಮ್ಮ ನೆನಪಿನಲ್ಲಿ ಚಿರಕಾಲ ಉಳಿದು ಅನುರಣಿಸುವ ಗುಣಮಟ್ಟದ ಕವಿತೆಗಳು ಒಟ್ಟಾರೆ ಬಹಳ ಕಡಮೆಯಾಗಿವೆ ಎನ್ನದೆ ವಿಧಿಯಿಲ್ಲ. ಇತ್ತೀಚಿನ ಕೆಲವು ಕವಿಗಳ ರಚನೆಗಳು ಆಶಾದಾಯಕವಾಗಿವೆ. ಕೆ.ಚಿದಾನಂದರ ವಿಜ್ಞಾನ ಪದ್ಯಗಳು ವಿಜ್ಞಾನವನ್ನು ಮಕ್ಕಳಿಗೆ ಕವಿತೆಯ ಮೂಲಕ ತಿಳಿಸುವ ಸರಳ ಸುಂದರ ಕೊಡುಗೆ. ಕವಿಯ ಒಟ್ಟಾರೆಯ ಕವಿತೆಗಳು ಒಂದೆಡೆ ಸಿಗುವಂತೆ ಕೆಲವು ಸಂಪುಟಗಳು ಬಂದಿವೆ: ಪಂಜೆಯವರ ಪದ್ಯಗಳು, ಜಿ.ಪಿ.ರಾಜರತ್ನಂ ಅವರ ಕಂದನ ಕಾವ್ಯ ಮಾಲೆ, ಟಿ.ಎಸ್.ನಾಗರಾಜಶೆಟ್ಟಿ ಅವರ ಸಮಗ್ರ ಮಕ್ಕಳ ಕವಿತೆಗಳು, ಕಂಚ್ಯಾಣಿ ಶರಣಪ್ಪ ಅವರ ಆಯ್ದ ನೂರೊಂದು ಕವಿತೆಗಳು, ಎಂ.ಡಿ.ಗೋಗೇರಿ ಅವರ ಪುಟ್ಟನ ಪರಿಸರ.

**ಕತೆ :** ಪಂಚತಂತ್ರ, ಕಥಾ ಸರಿತ್ಸಾಗರ, ಹಿತೋಪದೇಶ, ಇಂಥ ಕತೆಗಳು ಭಾರತದಲ್ಲಿ ಹುಟ್ಟಿ ಪ್ರಸಿದ್ಧವಾಗಿವೆ. ಪಂಚತಂತ್ರದ ಕತೆಗಾರಿಕೆ, ಚಮತ್ಕಾರ, ಬುದ್ಧಿವಂತಿಕೆ, ವ್ಯವಹಾರ, ಜ್ಞಾನ ಮುಂತಾದ ಗುಣಗಳು ಶ್ರೇಷ್ಠ ಕತೆಗಳ ಮಾದರಿಯೇ ಸರಿ. ಕತೆ ಎಂದರೆ ಸಾಕು ಮಕ್ಕಳ ಕಿವಿ ನೆಟ್ಟಗಾಗುತ್ತದೆ. ಅವರು ಕತೆ ಹೇಳಲು ಹಿರಿಯರನ್ನು ಪೀಡಿಸುವುದೂ ಉಂಟು. ನಮ್ಮ ಇಂದಿನ ಹಿರಿಯರು ಕುತೂಹಲ ಕೆರಳಿಸುವ, ಅವರ ಕಲ್ಪನಾ ಲೋಕದ ಬಾಗಿಲು ತೆರೆಯುವ, ಮನಸ್ಸಿಗೆ ಮುದ ನೀಡುವ ಕತೆಗಳನ್ನು ಹೆಣೆದು ಹೇಳಿದ್ದಾರೆ. ಪಂಜೆ ಮಂಗೇಶರಾಯ (ಇಲಿಗಳ ತಕ್ಕಥೈ, ಗುಡುಗುಡು ಗುಮ್ಮಟ ದೇವರು, ಸೀಗಡಿ ಯಾಕೆ ಒಣಗಲಿಲ್ಲ), ಹೊಯಿಸಳ (ಹೂವಿನ ಹಾಸಿಗೆ, ಪಠಾಕ್ಷಿ, ಪುಟ್ಟರಸು, ಪೋರಿ), ದೇವುಡು (ಬುದ್ಧಿಯ ಕತೆಗಳು, ಮಂಗಪ್ಪಾಜಿಯ ಪುರಾಣ), ಶಿವರಾಮ ಕಾರಂತ (ಗಜರಾಜ), ಜಿ.ಪಿ.ರಾಜರತ್ನಂ, ಟಿ.ಎಂ.ಆರ್.ಸ್ವಾಮಿ, ಮೇವುಂಡಿ ಮಲ್ಲಾರಿ, ಎಂ.ಎಸ್.ಪುಟ್ಟಣ್ಣ (ನೀತಿ ಚಿಂತಾಮಣಿ), ಸುಬೋಧ ರಾಮರಾಯರು, ಆನವಟ್ಟಿ ರಾಮರಾಯರು (ಬಾಲಕರ ನೀತಿ ಕಥಾವಳಿ) ಹೆಸರಿಸಬಹುದಾದ, ಮೊಟ್ಟ ಮೊದಲ ಮಕ್ಕಳ ಕಥೆಗಳ ಲೇಖಕರಾಗಿದ್ದಾರೆ. ಕತೆಗಳಲ್ಲಿ ಜಾನಪದ ಕತೆಗಳು, ಸಾಹಸದ ಕತೆಗಳು, ಪುರಾಣ ಕತೆಗಳು, ವೈಜ್ಞಾನಿಕ ಕತೆಗಳು, ಪ್ರಾಣಿ ಕತೆಗಳು, ಸಾಮಾಜಿಕ ಕತೆಗಳು ಮುಂತಾದ ಪ್ರಕಾರಗಳು ಕಂಡುಬರುತ್ತವೆ. ಇವೆಲ್ಲವೂ ಮಕ್ಕಳನ್ನು ಸದಾ ರಂಜಿಸಿವೆ. ಅವರಿಗೆ ವಿವಿಧ ವಿಷಯಗಳನ್ನು ತಿಳಿಸಿವೆ, ಕಲಿಸಿವೆ.

ನಾ.ಡಿಸೋಜ, ಸಿಸು ಸಂಗಮೇಶ (ನರಿಯ ಫಜೀತಿ), ರಸಿಕ ಪುತ್ತಿಗೆ (ಸುಕ್ಕಿನುಂಡೆ ಸುಬ್ಬ), ಟಿ.ಎಸ್.ನಾಗರಾಜ ಶೆಟ್ಟಿ (ಕರಡಿ ರಸಾಯನ) ಮತ್ತೂರು ಸುಬ್ಬಣ್ಣ (ಅಂಶು ಮತ್ತು ರಾಬೋಟ್), ಕೃ.ನಾರಾಯಣರಾವ್ (ದಿನಕ್ಕೊಂದು ಕತೆ), ಎಂ.ಜಿ.ಗೋವಿಂದರಾಜು (ಆಕಾಶದ ಅಂಚು), ರಾಜಶೇಖರ ಭೂಸನೂರಮಠ (ವೈಜ್ಞಾನಿಕ ಕತೆಗಳು) ಮೊದಲಾದವರು ಈಚಿನ ಕತೆಗಾರರು. ಇತ್ತೀಚೆಗೆ ಅಪಾರ ಸಂಖ್ಯೆಯ ಕತೆಗಳ ರಚನೆಗೊಂಡಿವೆ.

ಬಹುತೇಕ ಸಮಕಾಲೀನ ಮಕ್ಕಳ ಕತೆಗಳಲ್ಲಿ ಭಾವನೆಗಳನ್ನು ದುಡಿಸಿಕೊಳ್ಳುವ ಪ್ರಯತ್ನವಿದೆಯೇ ಹೊರತು ಅವರ ಬುದ್ಧಿಯನ್ನು ದುಡಿಸಿಕೊಂಡು ಯೋಚನೆ ಮಾಡುವಂತೆ ಪ್ರಚೋದಿಸುವ ಕತೆಗಳು ಕೆಲವೇ. ಹೆಚ್ಚು ಕಡಿಮೆ ಸಮಕಾಲೀನ ಬರೆಹಗಾರರಲ್ಲಿ ಯಾವುದೇ ಹೊಸ ಪ್ರಯೋಗ ಕಡಿಮೆ. ಬಹುಶಃ ಪ್ರಯೋಗ ನಡೆಸುವಷ್ಟು ಒತ್ತಡ ಕಂಡುಕೊಳ್ಳದಿರುವುದು ಅವರ ಸೃಜನಶೀಲತೆಯಲ್ಲಿ ಇರುವ ಕೊರತೆ ಎನಿಸುತ್ತದೆ. ಅಂದರೆ ಬದಲಾಗುತ್ತಿರುವ ಬದುಕಿನ, ಮಕ್ಕಳ ಪ್ರಪಂಚದ ರೀತಿ ನೀತಿಗಳಿಗೆ ನಮ್ಮ ಶಿಶು ಸಾಹಿತಿಗಳು ಸ್ಪಂದಿಸಿಲ್ಲ ಎಂದು ಎನ್.ಎಸ್.ರಘುನಾಥ್ ಅಭಿಪ್ರಾಯಪಟ್ಟಿದ್ದಾರೆ. ಸಮಕಾಲೀನತೆಗೆ ಸ್ಪಂದಿಸುವ (ಕಂಪ್ಯೂಟರ್ ಯುಗ) ಕತೆಗಳು ಇನ್ನೂ ಬರಬೇಕಾಗಿದೆ.

ಅನುಪಮಾ ನಿರಂಜನ ಅವರು ಮಕ್ಕಳಿಗಾಗಿ ಸಂಪಾದಿಸಿ ಕೊಟ್ಟಿರುವ ದಿನಕ್ಕೊಂದು ಕತೆ ಸಂಪುಟಗಳು ಒಂದು ಅಮೂಲ್ಯ ಕೊಡುಗೆ. ಬೇರೆ ಬೇರೆ ದೇಶಗಳ, ಭಾಷೆಗಳ ಕತೆಗಳೂ ಇದರಲ್ಲಿ ಸೇರಿವೆ. ಸಿಸು ಸಂಗಮೇಶರ ಆಯ್ದ ಕತೆಗಳು, ಟಿ.ಎಸ್.ನಾಗರಾಜ ಶೆಟ್ಟಿ ಅವರ ಕರಡಿ ರಸಾಯನ (ಇಪ್ಪತ್ತೈದು ಕತೆಗಳು) ಈ ಸಂಕಲನಗಳನ್ನು ಇಲ್ಲಿ ಹೆಸರಿಸಬಹುದು. ಬಿಡಿಬಿಡಿಯಾದ ಮಕ್ಕಳ ಕತೆಗಳ, ಕವಿತೆಗಳ ಪುಸ್ತಕಗಳನ್ನು ತರುವಲ್ಲಿ ಅನೇಕ ಸಂಸ್ಥೆಗಳು ದುಡಿದಿವೆ. ನವಕರ್ನಾಟಕ ಪ್ರೈ.ಲಿ., ಸ್ವಪ್ನ ಬುಕ್ ಹೌಸ್, ಟಿ.ನಾರಾಯಣ ಅಯ್ಯಂಗಾರ್ ಪ್ರಕಾಶನ, ಬಿಜಾಪುರದ ಭಾರತಿ ಪ್ರಕಾಶನ, ತಿಪಟೂರಿನ ನಿರ್ಮಲ ಪ್ರಕಾಶನ, ಮಿತ್ತಬೈಲಿನ ಶಿಶು ಸಾಹಿತ್ಯ ಮಾಲೆ, ಬೆಂಗಳೂರಿನ ಇಂಡಿಯ ಬುಕ್‌ಹೌಸ್ (ಅಮರ ಚಿತ್ರ ಕಥಾ ಮಾಲಿಕೆ), ಗುಬ್ಬಚ್ಚಿ ಪುಸ್ತಕ ಮಾಲೆ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಮೈಸೂರು ರಾಜ್ಯದ ಶಿಕ್ಷಣ ಇಲಾಖೆ, ಮೈಸೂರಿನ ಕಾವ್ಯಾಲಯ ಪ್ರಕಾಶನ ಇತ್ಯಾದಿ ನೂರಾರು ಪ್ರಕಾಶಕರ ಸೇವೆ ಸ್ಮರಣೀಯವಾದುದು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರತಿ ವರ್ಷವೂ ಕನ್ನಡದ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಮಕ್ಕಳ ಕತೆ, ಕವನಗಳನ್ನು ಸಂಪಾದನೆ ಮಾಡಿಸಿ ಪ್ರಕಟಿಸುತ್ತಿದೆ. ಅಲ್ಲದೆ ಕಾಲು ಶತಮಾನದ ಸಾಹಿತ್ಯ ಮಾಲಿಕೆಯಲ್ಲಿ ಕತೆ ಹಾಗೂ ಕವಿತೆಗಳ ಒಂದೊಂದು ಸಂಪುಟವನ್ನು ಪ್ರತ್ಯೇಕವಾಗಿ ಪ್ರಕಟಿಸಿದೆ. ಇತ್ತೀಚೆಗೆ ಎನ್.ಎಸ್.ರಘುನಾಥ್ ಅವರ ಸಂಪಾದಕತ್ವದಲ್ಲಿ ಶತಮಾನದ ಮಕ್ಕಳ ಸಾಹಿತ್ಯ ಎಂಬ ಸಂಪುಟವನ್ನು ಹೊರತಂದಿದೆ. ಇದರಲ್ಲಿ ಆಯ್ದ 101 ಕವಿತೆಗಳು, 104 ಕತೆಗಳು ಮತ್ತು 19 ನಾಟಕಗಳು ಸೇರಿವೆ.

**ನಾಟಕ :** ಅಭಿನಯ, ಸಂಭಾಷಣೆ, ಹಾಡು, ವಿಶೇಷ ವಸ್ತ್ರ ವಿನ್ಯಾಸ, ದೃಶ್ಯ ವೈಭವ ಮುಂತಾದ ಹಲವು ಮಿಶ್ರಕಲೆಗಳ ಸಂಯೋಜನೆಯಾದ ನಾಟಕ ಎಲ್ಲರನ್ನು ಆಕರ್ಷಿಸುವ ಕಲೆ. ನೋಡಿ ಸಂತೋಷಿಸುವ ಹಾಗೆಯೇ ಓದಿಯೂ ಆನಂದಿಸಬಹುದು. ಈ ದಿಸೆಯಲ್ಲಿ ಆಲೋಚಿಸಿ ಬರೆದವರೆಂದರೆ ನಾರಾಯಣಸ್ವಾಮಿ (ಪೃಥ್ವೀರಾಜ ಜಯಚಂದ್ರ, ಹುಲಿ ಶಿಕಾರಿ, 1925), ಕುವೆಂಪು (ಮೋಡಣ್ಣನ ತಮ್ಮ, 1926), ಎಂ.ಎನ್.ಕಾಮತ್, ಪಂಜೆ ಮಂಗೇಶರಾಯ, ಎಂ.ಎಸ್.ಪುಟ್ಟಣ್ಣ, ಹೊಯಿಸಳ (ಮಕ್ಕಳ ಮಂಟಪ, ಚಂದ್ರಹಾಸ), ಚಿ.ಸದಾಶಿವಯ್ಯ, ಬೆಂ.ಶ್ರೀ.ಪಾಂಡುರಂಗರಾಯ (ಸುಳ್ಳಿನ ಸೋಲು 1940), ಶಿವರಾಮ ಕಾರಂತ (ಹೊಟ್ಟೆಯ ಹಾಡು, ನಾಲ್ಕನೆಯ ಪಿಶಾಚಿ), ಜಿ.ಪಿ.ರಾಜರತ್ನಂ (ಬೆಳೆಯುವ ಪೈರು, ಧ್ವಜ ವಂದನೆ) ಮೊದಲಾದವರನ್ನು ಹೆಸರಿಸಬಹುದು. ಕಾಲ ಕ್ರಮೇಣ ನಾಟಕಗಳ ರಚನೆಯ ಸಂಖ್ಯೆ ಹೆಚ್ಚಾಯಿತು. ವಿವಿಧತೆಯ ಜೊತೆಗೆ ಗುಣಮಟ್ಟ ಹೆಚ್ಚಿರುವ ನಾಟಕಗಳೂ ಬಂದುವು.

ಕೀರ್ತಿನಾಥ ಕುರ್ತಕೋಟಿಯವರ ಆ ಮನಿ ಮಕ್ಕಳ ಲೋಕವನ್ನು ಅದರ ಎಲ್ಲ ಗುಣಗಳೊಂದಿಗೆ ಕಣ್ಣೆದಿರು ತೆರೆದಿಡುವುದು ಆಕರ್ಷಕವಾಗಿದೆ. ಕುವೆಂಪು ಅವರ ಮೋಡಣ್ಣನ ತಮ್ಮ ಗೀತರೂಪಕವಾಗಿದ್ದು ಮಕ್ಕಳಲ್ಲಿ ನಿಸರ್ಗ ಪ್ರೀತಿಯನ್ನು ಮೂಡಿಸಬಲ್ಲುದು. ಆರ್ಯ ಅವರ ಮಳೆ ಬಂತು, ಚಂದ್ರಶೇಖರ ಕಂಬಾರರ ಅಲೀಬಾಬಾ ಮತ್ತು ನಲವತ್ತು ಮಂದಿಕಳ್ಳರು, ಪುಷ್ಪರಾಣಿ ಎನ್.ಎಸ್.ವೆಂಕಟರಾಮ್ ಅವರ ಹಿಮಾನಿ ಮತ್ತು ಏಳು ಜನ ಕಳ್ಳರು, ಅಬ್ದುಲ್ ರೆಹಮಾನ್ ಪಾಷ ಅವರ ನಕ್ಕಳಾ ರಾಜಕುಮಾರಿ ಜಾನಪದ ಸತ್ವವನ್ನು ಮೈಗೂಡಿಸಿಕೊಂಡಿವೆ. ಮೇವುಂಡಿ ಮಲ್ಲಾರಿ ಅವರ ಮಯೂರ ವರ್ಮ, ನಾರಾಯಣ ಸ್ವಾಮಿ ಅವರ ಶಿವಾಜಿ, ಎಂ.ವಿ.ಸೀತಾರಾಮಯ್ಯ ಅವರ ಕರುಣೆಯ ಕುಡಿ, ಶ್ರೀನಿವಾಸ ಅವರ ಬೈಲಂಗಡಿಯ ರಾಣಿ, ರಘುಸುತ ಅವರ ಹೊಸ ಬೆಳಕು ಮುಂತಾದವು ಐತಿಹಾಸಿಕ ನಾಟಕಗಳಾಗಿದ್ದು ಮಕ್ಕಳಲ್ಲಿ ಸಾಹಸಪ್ರಿಯತೆ, ಆದರ್ಶಗಳ ಬಗೆಗಿನ ಒಲವನ್ನು ಹೆಚ್ಚಿಸುವುದರ ಜೊತೆಗೆ ವಾಸ್ತವವಾಗಿ ನೆಲೆಸಿದ್ದ ಮಹಾನ್ ಸಾಧಕರ ಬಗೆಗಿನ ಕುತೂಹಲವನ್ನು ತಣಿಸಬಲ್ಲವು.

ಹೆಗ್ಗೋಡಿನ ಅಕ್ಷರ ಪ್ರಕಾಶನ ಹೊರತಂದಿರುವ ಅನೇಕ ಮಕ್ಕಳ ನಾಟಕಗಳು (ಬಿ.ವಿ.ಕಾರಂತರ ಪಂಜರ ಶಾಲೆ, ಕಂಬಾರರ ಕಿಟ್ಟೀ ಕಥೆ, ಪ್ರಸನ್ನ ಅವರ ಒಂದಾನೊಂದು ಕಾಡಿನಲ್ಲಿ, ಕೆ.ವಿ.ಸುಬ್ಬಣ್ಣ ಅವರ ಬೆಟ್ಟಕ್ಕೆ ಚಳಿಯಾದರೆ, ನೀಲಿ ಕುದುರೆ) ಹೊಸ ಶೈಲಿಯಲ್ಲಿ ರಚನೆಯಾಗಿದ್ದು ರಂಗ ಪ್ರಯೋಗಗಳಾಗಿಯೂ ಅಪಾರ ಯಶಸ್ಸನ್ನು ಪಡೆದಿವೆ. ಇವುಗಳ ಜೊತೆಗೆ ವೈದೇಹಿ ಅವರ ಕೆಲವು ನಾಟಕಗಳೂ ಗುಣಮಟ್ಟದ ದೃಷ್ಟಿಯಿಂದ ಮೇಲು ಮಟ್ಟದವು. ಮಕ್ಕಳನ್ನು ಅಪಾರವಾಗಿ ರಂಜಿಸಬಲ್ಲವು ಕೂಡ. ಅದ್ಭುತ ರಮ್ಯತೆಯನ್ನು, ಪೌರಾಣಿಕ ಕತೆಗಳನ್ನು, ವಿಜ್ಞಾನ ಮನೋವಿಜ್ಞಾನಗಳನ್ನು ಬಳಸಿಕೊಂಡಿರುವ ನಾಟಕಗಳೂ ಇವೆ. ಸೂ.ಸುಬ್ರಹ್ಮಣ್ಯಂ ಅವರ ನಕ್ಕಿತು ನಕ್ಷತ್ರ - ನಕ್ಷತ್ರಗಳನ್ನು ಕುರಿತು ಹೊಸ ತಂತ್ರದ ಮೂಲಕ ತಿಳಿಯಪಡಿಸುವ ವಿಶಿಷ್ಟವಾದ ನಾಟಕವಾಗಿದೆ. ಈಚೆಗೆ ಪ್ರಕಟವಾಗಿರುವ ಆರ್.ಕೆ.ಶಾನಭೋಗರ ಅಪೂರ್ವ ಹಾಗೂ ಉಪ್ಪಿನ ಕಾಯಿಯ ಅತ್ತೆ, ಬಿಳಿಗೆರೆ ಕೃಷ್ಣಮೂರ್ತಿ ಅವರ ಮಳೆ ಹುಚ್ಚ ಮತ್ತು ನವಿಲೂರಿನ ಕತೆ, ಗ.ಸು.ಭಟ್ಟ ಅವರ ನಲಿಯಿತು ನವಿಲು ಆಕರ್ಷಕ ಭಾಷೆಯಿಂದ ಕೂಡಿರುವ ಲವಲವಿಕೆಯ ನಾಟಕಗಳಾಗಿವೆ. ನಾಟಕಗಳ ಸಾರ್ಥಕತೆ ಇರುವುದು ರಂಗಾಭಿನಯದಲ್ಲಿ, ಪ್ರದರ್ಶನದಲ್ಲಿ. ಹೀಗೆ ನಾಟಕಗಳನ್ನು ಪ್ರದರ್ಶಿಸುವುದರಲ್ಲಿ ಹೆಗ್ಗೋಡಿನ ನೀನಾಸಂ, ತಿಪಟೂರಿನ ಅಭಿನಯ, ಬೆಂಗಳೂರಿನ ಬಿಂಬ, ಮೈಸೂರಿನ ರಂಗಾಯಣ, ತಮರಿಯ ಕಿನ್ನರ ಮೇಳ ಮುಂತಾದ ತಂಡಗಳು ಸಾಕಷ್ಟು ಆಸಕ್ತಿಯಿಂದ ದುಡಿಯುತ್ತಿವೆ.

**ಕಾದಂಬರಿ :** ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಬಂದಿರುವುದು ಕತೆಗಳೇ. ಅನಂತರ ಜೀವನ ಚರಿತ್ರೆ, ವಿಜ್ಞಾನ ಮತ್ತಿತರ ವಿಷಯಕ ವಸ್ತುಗಳ ಕೃತಿಗಳು ಬಹಳವಾಗಿವೆ. ಕಾವ್ಯದ್ದು ಮೂರನೆಯ ಸ್ಥಾನ ಇರಬಹುದು. ನಾಟಕಗಳೂ ಬಹಳ ಕಡಿಮೆ. ಕಾದಂಬರಿಗಳ ಸಂಖ್ಯೆಯಂತೂ ಮತ್ತೂ ಕಡಿಮೆ. ಕಾದಂಬರಿ ಬಹು ಕಾಲದ ಓದುವ ಸಹನೆಯನ್ನು ಅಪೇಕ್ಷಿಸುತ್ತದೆ. ಬೆಳೆದ ಮಕ್ಕಳು (ಹನ್ನೆರಡು ವರ್ಷಗಳಿಗಿಂತ ದೊಡ್ಡವರು) ಮಾತ್ರ ಓದಬಲ್ಲರೆಂದು ಕಾಣುತ್ತದೆ. ಕನ್ನಡದಲ್ಲಿ ವಯಸ್ಸಿಗನುಗುಣವಾಗಿ ಸಾಹಿತ್ಯ ರಚನೆ ಆಗಿಲ್ಲ. ಇಂಗ್ಲಿಷಿನಲ್ಲಿ ಅಂಥ' ಪ್ರಯತ್ನಗಳಾಗಿವೆ. ಐದರಿಂದ ಎಂಟು ವರ್ಷದ ವಯೋಮಾನದವರು, ಒಂಬತ್ತರಿಂದ ಹನ್ನೆರಡು ವಯಸ್ಸಿನ ಮಕ್ಕಳು, ಹದಿಮೂರರಿಂದ ಹದಿನೈದರವರೆಗಿನವರು ಎಂದು ಮಕ್ಕಳ ಸಾಹಿತ್ಯವನ್ನು ವಿಂಗಡಿಸಿದ್ದಾರೆ. ಆಯಾ ವಯಸ್ಸಿನ ಮಕ್ಕಳ ಸ್ವಭಾವ, ಸಾಮರ್ಥ್ಯ, ಅಗತ್ಯಗಳನ್ನು ಅನುಸರಿಸಿ ಸಾಹಿತ್ಯ ರಚನೆ ಆಗಬೇಕೆನ್ನುವುದು ಮನೋವಿಜ್ಞಾನಿಗಳ ಅಭಿಪ್ರಾಯ.

ಕಾದಂಬರಿ ಕ್ಷೇತ್ರದಲ್ಲಿ ಸಾಹಸ ಪ್ರಧಾನ ವಸ್ತುವಿನ ರಚನೆಗಳು ಮೇಲುಗೈ ಸಾಧಿಸಿವೆ. ರಸಿಕ ಪುತ್ತಿಗೆ ಅವರ ಕೆಂಪು ಕಾರು, ಎಂ.ಪಿ.ಮನೋಹರ ಚಂದ್ರನ್ ಅವರ ಪೂಪ ಕಾಡಿನಲ್ಲಿ ಪಾಪು, ಎಚ್.ಎಸ್.ವೆಂಕಟೇಶಮೂರ್ತಿ ಅವರ ಅಮಾನುಷರು, ಅಗ್ನಿಮುಖಿ, ಸುಮತೀಂದ್ರ ನಾಡಿಗರ ಸಾಹಸ, ಬಿ.ಎಲ್.ವೇಣು ಅವರ ಗುಹೆ ಸೇರಿದವರು, ಟಿ.ಕೆ.ರಾಮರಾವ್ ಅವರ ದಿಬ್ಬದ ಮನೆ ಇವುಗಳನ್ನು ಹೆಸರಿಸಬಹುದು. ಹುಡುಗ ಹುಡುಗಿಯರ ಮನಸ್ಸಿನ ಕುತೂಹಲ ತಣಿಸುವಲ್ಲಿ, ಅವರನ್ನು ತುದಿಗಾಲಲ್ಲಿ ನಿಲ್ಲಿಸಿ ರೋಮಾಂಚನ ಗೊಳಿಸುವುದರಲ್ಲಿ, ಅನಿರೀಕ್ಷಿತ ತಿರುವುಗಳ ಮೂಲಕ ಬೆರಗು ಮೂಡಿಸುವುದರಲ್ಲಿ ಈ ಕೃತಿಗಳು ಯಶಸ್ವಿಯಾಗಿವೆ. ಆನಂದ ಪಾಟೀಲರ ಬೆಳದಿಂಗಳು, ಎನ್.ವಿ.ಶ್ರೀನಿವಾಸರಾವ್ ಅವರ ಹಾರೋ ಹನುಮ - ಈ ಕೃತಿಗಳು ಅದ್ಭುತ ರಮ್ಯತೆಯನ್ನು ಬಹಳ ಚೆನ್ನಾಗಿ ದುಡಿಸಿಕೊಂಡಿವೆ. ಆರ್.ವಿ.ಭಂಡಾರಿ ಅವರ ಬಿರುಗಾಳಿ ಒಂದು ವಿಶಿಷ್ಟ ಕಾದಂಬರಿ. ಜಂಬುನಾಥ ಕಂಚ್ಯಾಣಿ ಅವರ ಮಿಡಿದ ಕರುಳು ಮಕ್ಕಳಲ್ಲಿ ಭಾವೈಕ್ಯತೆಯ ಭಾವನೆ ಮೂಡಿಸುವುದರ ಜೊತೆಗೆ ರಂಜನೆಯನ್ನು ನೀಡಬಲ್ಲದು. ಗೀತಾ ಕುಲಕರ್ಣಿ ಅವರ ನೇಜಿ ಗುಬ್ಬಚ್ಚಿ ಕೂಡ ಬಹಳ ಅಪರೂಪದ ಕೃತಿ. ರಾಜಶೇಖರ ಭೂಸನೂರಮಠ ಅವರು ರಾಕ್ಷಸ ದ್ವೀಪ, ಅಟ್ಲಾಂಟಿಸ್ ಮುಂತಾದ ಮನಸೂರೆಗೊಳ್ಳುವ ಅನೇಕ ವೈಜ್ಞಾನಿಕ ಕಾದಂಬರಿಗಳನ್ನು ಹೆಣೆದು ಮಕ್ಕಳ ಕೈಗೆ ಇತ್ತಿದ್ದಾರೆ.

ಪಾತಾಳದಲ್ಲಿ ಪಾಪಚ್ಚಿ (ನಾ.ಕಾಸ್ತೂರಿ), ಪಿನೋಕಿಯೋ (ಅನು: ಎನ್.ಪ್ರಹ್ಲಾದರಾವ್), ಭೂಗರ್ಭ ಯಾತ್ರೆ, ಬನದ ಮಕ್ಕಳು, (ಎಂ.ಗೋಪಾಲ ಕೃಷ್ಣ ಅಡಿಗ), ಸಮುದ್ರ ತಳದಲ್ಲಿ ಇಪ್ಪತ್ತು ಸಾವಿರ ಯೋಜನೆಗಳು (ಅನು: ವಾಸುದೇವ ರಾವ್) ಮುಂತಾದ ಒಳ್ಳೆಯ ಹಲವು ಅನುವಾದಿತ ಕೃತಿಗಳೂ ಬಂದಿವೆ. ಕೆ.ನಟರಾಜ್ ಅವರ ಚಂದ್ರಲೋಕಕೆ ಹೋಗೋಣು ಬಾರಾ, ಪುಟಾಣಿ ಕಂಡ ಪರಮಾಣು ಲೋಕ, ಆರ್.ಕೆ.ಶಾನಭೋಗ ಅವರ ಅಂಟಾರ್ಕಟಿಕಾ - ಇವು ಉತ್ತಮ ವೈಜ್ಞಾನಿಕ ಕಾದಂಬರಿಗಳು. ಮಕ್ಕಳ ಕಾದಂಬರಿಕ್ಷೇತ್ರ ಸಾಧಿಸಬೇಕಾದದ್ದು ಇನ್ನೂ ಇದೆ. ಇದಕ್ಕೆ ಅವಕಾಶವೂ ಅಪಾರವಾಗಿದೆ.

ಕನ್ನಡ ಪತ್ರಿಕೋದ್ಯಮ ಕ್ಷೇತ್ರ ಮಕ್ಕಳ ಸಾಹಿತ್ಯ ಸೃಷ್ಟಿಗೆ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಮೊದಲಾದ ನಿಯತಕಾಲಿಕಗಳಲ್ಲಿ ಮಕ್ಕಳ ಸಾಹಿತ್ಯ ಸೃಷ್ಟಿ ಸಾಕಷ್ಟು ನಡೆದಿದೆ. ಹೀಗೆಯೇ ಮಕ್ಕಳ ಸಾಹಿತ್ಯ ಪ್ರಕಟಣೆಗೇ ಮೀಸಲಾದ ಮಕ್ಕಳ ಪತ್ರಿಕೆಗಳು ಕೂಡ ಮಕ್ಕಳ ಸಾಹಿತ್ಯದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿವೆ, ಶ್ರಮಿಸುತ್ತಿವೆ; 'ಮಕ್ಕಳ ಪುಸ್ತಕ' ಕನ್ನಡದ ಮೊತ್ತ ಮೊದಲ ಮಕ್ಕಳ ಪತ್ರಿಕೆ (1926). ಅಶ್ವತ್ಥ ನಾರಾಯಣರಾಯ ಎಂಬವರು ಇದನ್ನು ಹುಟ್ಟು ಹಾಕಿದರು. ಅನಂತರ ಇದನ್ನು ದ.ಕೃ.ಭಾರದ್ವಾಜ, ದೇವುಡು ಅವರು ಸಂಪಾದಕರಾಗಿ ಮುನ್ನಡೆಸಿದರು. ದೇವುಡು ಅವರು ಅನಂತರ ನಮ್ಮ ಪುಸ್ತಕ ಎಂಬ ಒಂದು ಸ್ವತಂತ್ರ ಪತ್ರಿಕೆಯನ್ನೂ ನಡೆಸಿದರು. ಬಾಲವನ (ಶಿವರಾಮ ಕಾರಂತ), ಬಾಲಚಂದ್ರ (ಉಳ್ಳಾಲ ಮಂಗೇಶರಾಯ), ಕಂದಮಾಸಿಕ (ಆರ್.ಎಸ್.ಮೈಲಾರಯ್ಯ ಮತ್ತು ಡಿ.ಆರ್.ನಾಥ್), ತುತ್ತೂರಿ (ರಾ.ಮೋ.ವಿಶ್ವಾಮಿತ್ರ), ವಿಶ್ವಾಮಿತ್ರ (ಪದ್ಮನಾಭ ನಾಯಕ), ಮಕ್ಕಳ ಪತ್ರಿಕೆ (ಶಿವರಾಮ ಕಾರಂತ), ಕನ್ನಡ ಕಂದ (ಮೇವುಂಡಿ ಮಲ್ಲಾರಿ), ಬೆಂಗಳೂರಿನ ಮಕ್ಕಳ ಕೂಟ ಮಕ್ಕಳ ಬಾವುಟ (ಮೈಸೂರಿನ ಚಿಲ್ಡ್ರನ್ ಬುಕ್ ಕೌನ್ಸಿಲ್), ಬಾಲ ಭಾರತಿ (ಸಿಸು ಸಂಗಮೇಶ), ಮಕ್ಕಳ ಮನೆ (ಈಶ್ವರ ಕಮ್ಮಾರ) ಇವೆಲ್ಲ ಕೆಲ ಕಾಲ ನಡೆದು ನಿಂತು ಹೋದ ಪತ್ರಿಕೆಗಳು. ಬೆಂಗಳೂರಿನಿಂದ ಹೊರಟ ಪತ್ರಿಕೆಗಳಲ್ಲಿ ಪಾಪಚ್ಚಿ, ಸಂತೃಪ್ತಿ, ಪುಟಾಣಿ, ಚಂಪಕ - ಒಳ್ಳೆಯ ಪ್ರಯತ್ನಗಳು. ಕೇರಳದ ಮಂಗಳ ಪ್ರಕಾಶಕರು ಬಾಲ ಮಂಗಳ ಎಂಬ ಪಾಕ್ಷಿಕವನ್ನು ಹೊರತರುತ್ತಿದ್ದಾರೆ. ಮಣಿಪಾಲದ ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ತುಂತುರು ಎಂಬ ಮಾಸ ಪತ್ರಿಕೆಯನ್ನು ಸುಂದರವಾಗಿ ಮುದ್ರಿಸುತ್ತಿದ್ದಾರೆ. ಮದರಾಸಿನಿಂದ ಬರುತ್ತಿದ್ದ ಚಂದಮಾಮ ಮತ್ತು ಬಾಲಮಿತ್ರ ಪತ್ರಿಕೆಗಳು ಕೆಲಕಾಲ ಸ್ಥಗಿತಗೊಂಡಿದ್ದು ಇದೀಗ ಮತ್ತೆ ಪ್ರಾರಂಭವಾಗಿವೆ. ಬೊಂಬೆ ಮನೆ ಇಂಥದೇ ಮತ್ತೊಂದು ಪತ್ರಿಕೆ. ಕರ್ನಾಟಕ ವಿಜ್ಞಾನ ಪರಿಷತ್ತು ಬಾಲ ವಿಜ್ಞಾನ ಎಂಬ ಬಹಳ ಉಪಯುಕ್ತವಾದ ವೈಜ್ಞಾನಿಕ ಮಾಸಿಕವನ್ನು ಹೊರಡಿಸುತ್ತಿದೆ. ಅಂಗಳ ಎಂಬ ಒಂದು ವಾರ ಪತ್ರಿಕೆ ಬೆಂಗಳೂರಿನಿಂದ ಹೊರಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳಿಗಾಗಿ ಜೀವನ ಚರಿತ್ರೆಗಳು, ಮಾಹಿತಿ ಪುಸ್ತಕಗಳು, ವಿಜ್ಞಾನ ವಿಚಾರಗಳು ಅಪಾರ ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ. ರಾಷ್ಟ್ರೋತ್ಥಾನ ಪರಿಷತ್ತು 'ಭಾರತ ಭಾರತಿ' ಪುಸ್ತಕ ಮಾಲಿಕೆಯಲ್ಲಿ 510 ಪುಸ್ತಕಗಳನ್ನು ಪ್ರಕಟಿಸಿದೆ. ಐಬಿಎಚ್ ಪ್ರಕಾಶನ ಸಂಸ್ಥೆ ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಮಾಲೆಯಲ್ಲಿ ಅನೇಕ ಕೃತಿಗಳನ್ನು ಪ್ರಕಟಿಸಿದೆ.

ಕನ್ನಡದಲ್ಲಿ ಮಕ್ಕಳ ಕಾಮಿಕ್ಸ್‌ಗಳಿಗೂ ಬರವಿಲ್ಲ. ಐ.ಬಿ.ಎಚ್.ನ. ಅಮರ ಚಿತ್ರಕಥಾಮಾಲಿಕೆಯಲ್ಲಿ ಪುರಾಣ ಪುಣ್ಯ ಪುರುಷರ ಕಥೆಗಳು ಅರ್ಥಪೂರ್ಣ ಚಿತ್ರಗಳೊಂದಿಗೆ ಅಚ್ಚಾಗಿವೆ. ಕಾಮಿಕ್ಸ್ ಲೋಕ ಮಕ್ಕಳ ಕಲ್ಪನಾ ರಮ್ಯತೆಯನ್ನು (ಫ್ಯಾಂಟಸಿ) ಗರಿಗೆದರಿಸುವಲೋಕ. ಅನೇಕ ಇಂಗ್ಲಿಷ್ ಕಾಮಿಕ್ಸ್ ಕಥಾಮಾಲಿಕೆಗಳು ಕನ್ನಡಕ್ಕೆ ಅನುವಾದಗೊಂಡು ಜನಪ್ರಿಯವಾಗಿವೆ. ಫ್ಯಾಂಟಮ್, ಮಾಡಸ್ಟಿಬ್ಲೇಸ್, ಮೋಗ್ಲಿ, ಮಾಂಡ್ರೇಕ್ ಮೊದಲಾದ ಕಥಾಮಾಲಿಕೆಗಳು ಮಕ್ಕಳನ್ನು ರಂಜಿಸಿವೆ.

ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ವಕೋಶ ಮಾದರಿಯ ಪರಾಮರ್ಶನ ಗ್ರಂಥಗಳನ್ನು ಸಿದ್ಧಪಡಿಸುವ ಕಾರ್ಯವೂ ಕನ್ನಡದಲ್ಲಿ ಸಾಗಿದೆ. ಶಿವರಾಮ ಕಾರಂತರ ಬಾಲ ಪ್ರಪಂಚ (ಮೂರು ಸಂಪುಟ), ವಿಜ್ಞಾನ ಪ್ರಪಂಚ (ನಾಲ್ಕು ಸಂಪುಟ) ಮೊದಲ ಗಟ್ಟಿ ಪ್ರಯತ್ನಗಳು. ನಿರಂಜನರ

ಸಂಪಾದಕತ್ವದಲ್ಲಿ ಪ್ರಕಟಗೊಂಡ ಜ್ಞಾನ ಗಂಗೋತ್ರಿ (ಏಳು ಸಂಪುಟ) ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಮೈಲುಗಲ್ಲೆನ್ನಬಹುದು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕಿರಿಯರಿಗಾಗಿ ಪ್ರಕಟಿಸಿರುವ ಕಿರಿಯರ ಕರ್ನಾಟಕ ವಿಶ್ವಕೋಶವನ್ನೂ ಇಲ್ಲಿ ಸ್ಮರಿಸಬಹುದು. ನವಕರ್ನಾಟಕ ಪ್ರಕಾಶನದವರು ಪ್ರಕಟಿಸಿರುವ ಜ್ಞಾನ ವಿಜ್ಞಾನ ಕೋಶ (ನಾಲ್ಕು ಸಂಪುಟ) ಮಕ್ಕಳ ವಿಜ್ಞಾನ ಕ್ಷೇತ್ರದ ಅದ್ವಿತೀಯ ಕೊಡುಗೆಯಾಗಿದೆ. ಇದೇ ಪ್ರಕಾಶನದ ವಿಜ್ಞಾನ ಪದವಿವರಣಕೋಶ ಕೂಡ ಉಲ್ಲೇಖನೀಯ ಕೃತಿಯಾಗಿದ್ದು ಉಪಯುಕ್ತವಾಗಿದೆ. ಚಿತ್ತಾಕರ್ಷಕ ಬಣ್ಣದ ಚಿತ್ರಗಳ, ಉತ್ತಮ ಗುಣಮಟ್ಟದ ಕಾಗದದ ಬಳಕೆಯ, ಉತ್ಕೃಷ್ಟ ಖಚಿತಜ್ಞಾನದ ಈ ಬಗೆಯ ಉತ್ಪಾದನೆ ಕನ್ನಡದ ಮಟ್ಟಿಗೆ ಹೇಳುವುದಾದರೆ ಮೊದಲ ಮಾದರಿ ಎನ್ನಬಹುದು. ಇಂಥ ಚಿತ್ತಾಕರ್ಷಕವಾದ, ಕಣ್ಮನಗಳನ್ನು ತಣಿಸಬಲ್ಲ ವಿವಿಧ ವಿಷಯಕ ವಿಶ್ವಕೋಶಗಳ ಅಗತ್ಯ ಕನ್ನಡದ ಮಕ್ಕಳಿಗೆ ಇನ್ನೂ ಇದೆ.

ಮಕ್ಕಳ ಸಾಹಿತ್ಯ ಕುರಿತಂತೆ ವಿಮರ್ಶಾತ್ಮಕ ಹಾಗೂ ವಿಶ್ಲೇಷಣಾತ್ಮಕವಾದ ಕೆಲವು ಕೃತಿಗಳೂ ಬಂದಿವೆ. ನಿರುಪಮಾ ಅವರ ನಿಮ್ಮ ಮಕ್ಕಳಿಗೆಂತಹ ಸಾಹಿತ್ಯ ಬೇಕು, ಟಿ.ಎಸ್.ನಾಗರಾಜ ಶೆಟ್ಟಿ ಅವರ ಮಕ್ಕಳ ಸಾಹಿತ್ಯ, ಏಕೆ ಬೇಕು? ಸಿಸು ಸಂಗಮೇಶ ಅವರ ಮಕ್ಕಳ ಸಾಹಿತ್ಯ ನಾನು ಕಂಡಂತೆ ಅಂಥವುಗಳಲ್ಲಿ ಪ್ರಮುಖವಾದವು. ಮಕ್ಕಳ ಪುಸ್ತಕಗಳ ವಿಷಯ ವೈವಿಧ್ಯ, ರಚನೆ, ಉತ್ಪಾದನೆ, ಮಾರಾಟ ಈ ಎಲ್ಲ ಕ್ಷೇತ್ರಗಳಲ್ಲಿಯೂ ಸಾಕಷ್ಟು ಸುಧಾರಣೆಗಳು ನಡೆಯಬೇಕಾಗಿದೆ. (ಟಿ.ಎಸ್.ಎನ್.)

**ಕನ್ನಡದಲ್ಲಿ ಮಹಿಳಾ ಸಾಹಿತ್ಯ :** ಸಾವಿರದ್ದೆನೂರು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ 20ನೆಯ ಶತಮಾನಕ್ಕೆ ಕಾಲಿರಿಸುವವರೆಗೆ ಮಹಿಳೆಯರೇ ರಚಿಸಿದ ಸಾಹಿತ್ಯ, ಮಹಿಳಾ ಸಾಹಿತ್ಯವೆಂಬ ಹೆಸರಿನಲ್ಲಿ ಗುರುತಿಸಬಹುದಾದಂಥದ್ದು ಹೆಚ್ಚು ಕಂಡುಬರುವುದಿಲ್ಲ. ಸ್ತ್ರೀಯರು ವಿದ್ಯೆಯಿಂದ ವಂಚಿತರಾದದ್ದು, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗದೇ ಹೋದದ್ದು, ಸ್ವಾತಂತ್ರ್ಯವಿರದ ಅವಲಂಬನೆಯ ಜೀವನವೇ ಪ್ರಧಾನವಾದದ್ದು - ಇಂಥ ಅನೇಕ ಕಾರಣಗಳಿಂದಾಗಿ ಮಹಿಳೆ ಕನ್ನಡ ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಬಹುಕಾಲದವರೆಗೆ ಅನನ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದಗಳಿರಬಹುದು. ಗುರುತಿಸುವಂಥ ಸೃಜನಶೀಲತೆ ನಮಗೆ ಕಾಣುವುದು 20ನೆಯ ಶತಮಾನದಲ್ಲಿಯೇ ಎನ್ನಬಹುದು.

ಸಾತವಾಹನರ ಕಾಲದಿಂದಲೂ ಆಡಳಿತ, ರಾಜ್ಯಭಾರ ಇತ್ಯಾದಿ ಕ್ಷೇತ್ರಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಶಕ್ತಿಸಾಮರ್ಥ್ಯಗಳನ್ನು ಪ್ರದರ್ಶಿಸಿದ ಕೆಲ ಮಹಿಳೆಯರು ಪ್ರತಿಭೆಗೆ ಉದಾಹರಣೆಯಾಗಿ ಕಾಣಸಿಗುತ್ತಾರೆ. ಬಾದಾಮಿ ಚಳುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯ (ಸು.610-42) ಎರಡನೆಯ ಮಗನಾದ ಚಂದ್ರಾದಿತ್ಯನ ಪ್ರಿಯ ಮಹಿಷಿ 'ವಿಜ್ಜಿಕೆ' ಎಂದು ಹೆಸರಾದ ವಿಜಯಮಹಾದೇವಿ ಸಂಸ್ಕೃತ ಪಂಡಿತೆಯೂ ಉತ್ತಮ ಕವಯಿತ್ರಿಯೂ ಆಗಿದ್ದು ಕೌಮುದೀ ಮಹೋತ್ಸವ ಎಂಬ ಸಂಸ್ಕೃತ ನಾಟಕವನ್ನು ರಚಿಸಿದಳೆಂದು ತಿಳಿದುಬರುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಅತ್ತಿಮಬ್ಬೆ ಎಂಬ ಜೈನ ಮಹಿಳೆಯ ಹೆಸರು ಪ್ರಸಿದ್ಧವಾದದ್ದು. ಈಕೆ ಸಾವಿರದೈನೂರು ಜಿನ ಬಸದಿಗಳನ್ನು ನಿರ್ಮಿಸಿ, ಜಿನ ಪ್ರತಿಮೆಗಳನ್ನು ಮಾಡಿಸಿ ದಾನ ಚಿಂತಾಮಣಿ ಎಂಬ ಬಿರುದು ಗಳಿಸಿದ್ದವಳು. ಕವಿ ರನ್ನನಿಂದ ಅಜಿತ ಪುರಾಣ ಕಾವ್ಯವನ್ನು ಬರೆಸಿ, ಪೊನ್ನ ಬರೆದ ಶಾಂತಿಪುರಾಣದ ಸಹಸ್ರ ಪ್ರತಿಗಳನ್ನು ಮಾಡಿಸಿ ದಾನ ಮಾಡಿದವಳು. ಸು.1100ರಲ್ಲಿದ್ದಳೆಂದು ಭಾವಿಸಲಾಗಿರುವ ಕಂತಿ (ನೋಡಿ) ಕನ್ನಡದ ಪ್ರಪ್ರಥಮ ಕವಯಿತ್ರಿ. ಈಕೆಗೆ ಅದ್ಭುತ ಕವಿತಾ ಸಾಮರ್ಥ್ಯವಿತ್ತೆಂದೂ ಅಭಿನವ ವಾಗ್ದೇವಿ, ಅಧಿಕ ಕವೀಶ್ವರಿ ಇತ್ಯಾದಿ ಬಿರುದುಗಳಿದ್ದವೆಂದೂ ಕಂತಿ ಹಂಪನ ಸಮಸ್ಯೆಗಳು ಎಂಬ ಕೃತಿಯನ್ನು ಬರೆದಿರುವಳೆಂದೂ ತಿಳಿದುಬರುತ್ತದೆ.

ಕಂತಿಯ ಅನಂತರ 12ನೆಯ ಶತಮಾನದಲ್ಲಿ ಹಲವಾರು ವಚನಕಾರ್ತಿಯರು ಕನ್ನಡದಲ್ಲಿ ವಚನಗಳನ್ನು ರಚಿಸಿ ಒಂದು ಚಳವಳಿಯನ್ನೇ ನಡೆಸಿದರು. ಮಹಿಳೆಯರು ತಮ್ಮ ಸಾಹಿತ್ಯದಲ್ಲಿ ಸಮಾಜದ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ, ಸಾಹಿತ್ಯ ರಚಿಸತೊಡಗಿದ್ದನ್ನು ನಾವು ಕೆಲವು ಹಂತಗಳಲ್ಲಿ ಗುರುತಿಸಬಹುದು. ಮೊದಲನೆಯದು ಹನ್ನೆರಡನೆಯ ಶತಮಾನದ ವಚನಕಾರ್ತಿಯರ ಕಾಲದಲ್ಲಿ; ಎರಡನೆಯ ಹಂತ, ದೇಶದ ಸ್ವಾತಂತ್ರ್ಯ ಚಳವಳಿಗಳು ನಡೆಯತೊಡಗಿ, ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿ ಮಹಿಳೆಯರು ಶಿಕ್ಷಣದ ಮಹತ್ತ್ವದ ಬಗ್ಗೆ ಅರಿವು ಮೂಡಿಸಿಕೊಂಡಾಗ; ಮೂರು ಮತ್ತು ನಾಲ್ಕನೆಯ ಹಂತ, ಇಪ್ಪತ್ತನೆಯ ಶತಮಾನದ ಎಪ್ಪತ್ತು - ಎಂಬತ್ತರ ದಶಕದಲ್ಲಿ, ದಲಿತ - ಬಂಡಾಯ ಹಾಗೂ ಸ್ತ್ರೀಶೋಷಣೆಯ ಅಥವಾ ಸ್ತ್ರೀವಾದದ ಹೊಸ ಎಚ್ಚರ, ಹೊಸ ಅರಿವು ಮೂಡಿದಾಗ. ಈ ಸಂದರ್ಭಗಳಲ್ಲೆಲ್ಲ ಮಹಿಳೆಯರು ಸಮಾಜದ ಸಮಸ್ಯೆಗಳ ಬಗ್ಗೆ, ಅವುಗಳನ್ನು ತೊಡೆಯಲು ಆಗಬೇಕಾದ ಸುಧಾರಣೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಿ ಸಾಹಿತ್ಯ ರಚಿಸಿದ್ದಾರೆ. ಇವೆಲ್ಲದರ ಜೊತೆ ಜೊತೆಗೇ ಪ್ರತ್ಯೇಕವಾಗಿ ಹರಿದು ಬಂದ ಜನಪದ ಸಾಹಿತ್ಯವನ್ನೂ ನಾವು ಮರೆಯುವಂತಿಲ್ಲ.

ಹನ್ನೆರಡನೆಯ ಶತಮಾನದಲ್ಲಿ ಶರಣರು ಧಾರ್ಮಿಕ ಬದಲಾವಣೆಯ ಮೂಲಕ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದರು. ಸಾಮಾಜಿಕ, ಸಾಹಿತ್ಯಕ ಆಂದೋಲನವನ್ನು ರೂಪಿಸಿದರು. ಮೊದಲ ಬಾರಿಗೆ ಮಹಿಳೆಯರೂ ಸಾಹಿತ್ಯ ಸೃಷ್ಟಿಗೆ ಹಾಗೂ ಸಾಂಸ್ಕೃತಿಕ ಬದಲಾವಣೆಗೆ ಸ್ಪಂದಿಸಿದರು. ಕನ್ನಡ ಮಹಿಳಾ ಸಾಹಿತ್ಯದ ಆರಂಭದ ಕುರುಹುಗಳನ್ನು ನಾವು ವಚನ ಚಳವಳಿಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ವಚನ ಸಾಹಿತ್ಯದ ಮೂಲಕ ಸಾಹಿತ್ಯ ಆರಂಭಗೊಂಡಿದೆ. ಅಕ್ಕಮಹಾದೇವಿ, (ಚನ್ನಮಲ್ಲಿಕಾರ್ಜುನ), ಅಕ್ಕಮ್ಮ (ರಾಮೇಶ್ವರ ಲಿಂಗ), ರೆಮ್ಮವ್ವೆ (ಗುಮ್ಮೇಶ್ವರ), ಗಂಗಮ್ಮ, ಲಕ್ಕಮ್ಮ ಮೊದಲಾದ ವಚನಕಾರ್ತಿಯರು ವಚನ ರಚನೆಯಲ್ಲಿ ಪಾಲುದಾರರಾದರು. ಮೂವತ್ತಾರಕ್ಕೂ ಹೆಚ್ಚು ಶಿವಶರಣೆಯರು ವಚನಗಳನ್ನು ರಚಿಸಿದ್ದು ಸೂಳೆ ಸಂಕವ್ವೆ, ಹೊಲತಿ ಗುಡ್ಡವ್ವೆ, ಉರಿಲಿಂಗ ಪೆದ್ದಿಯ ಪತ್ನಿ ಕಾಳವ್ವೆ, ಕುಂಬಾರ ಕೇತಲದೇವಿ, ಲಕ್ಕವ್ವೆ ಮೊದಲಾದ ದಲಿತ ಸ್ತ್ರೀಯರೂ ವಚನಗಳಲ್ಲಿ ಮಾತನಾಡಿದ್ದು ಆ ಕಾಲಕ್ಕೆ ಪವಾಡಸದೃಶ ಸಂದರ್ಭವಾಗಿತ್ತು. ಹೀಗೆ ವಚನಕಾರ್ತಿಯರು ವಚನ ಸಾಹಿತ್ಯಕ್ಕೆ ತಮ್ಮ ಅಮೂಲ್ಯ ಕಾಣಿಕೆ ನೀಡಿದರು. ಸಮಾಜದ ರೀತಿ-ನೀತಿಗಳನ್ನು ಜಾತಿ ಭೇದಗಳನ್ನು ಲಿಂಗ ಭೇದಗಳನ್ನು ತೊಡೆದು ಹಾಕುವ ಚಿಂತನೆ ಮಾಡಿದರು. ಇಂದಿನ ಮಹಿಳಾವಾದಕ್ಕೆ, ದಲಿತ ವಾದಕ್ಕೆ ಸಮಾಜದಲ್ಲಿ ಸಮಾನತೆ ಬೇಕೆಂಬ ಆಲೋಚನೆ ಮತ್ತು ಬೇಡಿಕೆಗಳಿಗೆ, ಇತಿಹಾಸದಲ್ಲಿ ಈ ವಚನಕಾರ್ತಿಯರು ಮೊದಲ ಮೆಟ್ಟಿಲನ್ನು ಕಟ್ಟಿಕೊಟ್ಟಿದ್ದಾರೆ ಎಂದು ಹೇಳಬಹುದು. ಅಕ್ಕಮಹಾದೇವಿಯನ್ನು ಕನ್ನಡ ಸಾಹಿತ್ಯದ ಮೊದಲ ಬಂಡಾಯ ಲೇಖಕಿ ಎಂದು ನಾವು ಗುರುತಿಸಬಹುದು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕಂಪಣನ ರಾಣಿಯಾದ ಗಂಗಾಂಬಿಕೆ ಮಧುರಾವಿಜಯವನ್ನು (ವೀರ ಕಂಪಣರಾಯ ಚರಿತೆ) ಸಂಸ್ಕೃತದಲ್ಲಿ ಬರೆದಳು. ಅಚ್ಯುತರಾಯನ ಹಿರಿಯ ರಾಣಿ ತಿರುಮಲಾಂಬೆ ಪತಿಯ ಎರಡನೆಯ ವಿವಾಹವನ್ನು ವಸ್ತುವಾಗಿಟ್ಟುಕೊಂಡು ವರದಾಂಬಿಕಾ ಪರಿಣಯ ಎಂಬ ಕೃತಿಯನ್ನು ರಚಿಸಿದಳು. ಅಭಿರಾಮ ಕಾಮಾಕ್ಷಿ ಎಂಬಾಕೆ ಅಭಿನವ ರಾಮಾಭ್ಯುದಯವನ್ನೂ ರಾಮಭದ್ರಾಂಬ ಎಂಬಾಕೆ ರಘುನಾಥ ಅಭ್ಯುದಯವನ್ನೂ ರಚಿಸಿರುವುದಾಗಿ ಹೇಳಲಾಗಿದೆ. ರಘುನಾಥ ನಾಯಕನ ಆಸ್ಥಾನದಲ್ಲಿ ಮಧುರವಾಣಿ ಎಂಬ ಕವಯಿತ್ರಿ ಇದ್ದಳೆಂದು ತಿಳಿದುಬರುತ್ತದೆ.

ಚಿಕ್ಕದೇವರಾಜ ಒಡೆಯರ (1672-1704) ಆಸ್ಥಾನದಲ್ಲಿ ಸಂಚಿಯ ಹೊನ್ನಮ್ಮ, ಶೃಂಗಾರಮ್ಮ ಎಂಬ ಕವಯಿತ್ರಿಯರಿದ್ದರು. ಸಂಚಿಯ ಹೊನ್ನಮ್ಮ (ನೋಡಿ) ಹದಿಬದೆಯ ಧರ್ಮ ಎಂಬ ಕಾವ್ಯವನ್ನು ಸಾಂಗತ್ಯದಲ್ಲಿ ರಚಿಸಿದ್ದಾಳೆ. ಈಕೆ ಸಮಾಜದಲ್ಲಿಯ ಪುರುಷ ಪ್ರಾಧಾನ್ಯವನ್ನು ಸಂಪೂರ್ಣ ಒಪ್ಪಿಕೊಂಡು, ಪುರುಷನ ಸುಖ- ಸಂತೋಷಗಳಿಗಾಗಿ ಹೆಣ್ಣು ದುಡಿದರೆ, ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಸುಖ-ನೆಮ್ಮದಿಗಳಿರುತ್ತವೆ ಎಂಬ ಅಭಿಪ್ರಾಯವನ್ನೇ ತನ್ನ ಕೃತಿಯ ಉದ್ದಕ್ಕೂ ಹೇಳಿಕೊಂಡು ಬಂದಿದ್ದಾಳೆ. ಈಕೆ ಸ್ತ್ರೀ ಪ್ರಗತಿಯ ಚಿಂತಕಿಯೂ ಅಲ್ಲ, ಪುರುಷ

ಪ್ರಾಧಾನ್ಯವನ್ನು ಪ್ರಶ್ನಿಸಿದವಳೂ ಅಲ್ಲ. ಕುವರನಾದರೆ ಬಂದ ಗುಣವೇನದರಿಂದ ಕುವರಿಯಾದೊಡೆ ಕುಂದೇನು; ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು; ಪೆಣ್ಣು ಪೆತ್ತವರು ಪೆಚ್ಚುರ್ವರು; ಪೆಣ್ಣ ನಿಂದಿಸಲೇಕೆ ಪೆರರು; ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು - ಹೀಗೆ ಸ್ತ್ರೀಪರವಾದ ಚಿಂತನೆಯ, ಹೆಣ್ಣು ಕೀಳಲ್ಲ ಎಂಬ ಭಾವನೆಯ ತಣ್ಣಗಿನ, ಮೆಲುದನಿಯ ಪ್ರತಿಭಟನೆಯ ದನಿಯನ್ನು ನಾವು ಇವಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಶೃಂಗಾರಮ್ಮ (ನೋಡಿ) ಬರೆದ ಪದ್ಮಿನೀ ಕಲ್ಯಾಣ ಸಾಂಗತ್ಯ ರೂಪದ ಒಂದು ಸಾಮಾನ್ಯ ಕಾವ್ಯ. ದೊಡ್ಡ ಕೃಷ್ಣರಾಜ ಒಡೆಯರ (1713-32) ಪಟ್ಟ ಮಹಿಷಿಯಾಗಿದ್ದ ಚೆಲುವಾಂಬೆ (ನೋಡಿ) ವರನಂದೀ ಕಲ್ಯಾಣ ಎಂಬ ಕೃತಿಯನ್ನು ರಚಿಸಿದ್ದಾಳೆ. ವೆಂಕಟಾಚಲ ಮಾಹಾತ್ಮ್ಯ ಲಾಲಿಪದ, ಅಲಮೇಲುಮಂಗೈ ಲಾಲಿಪದ, ತಲಕಾವೇರಿ ಮಹಾತ್ಮ್ಯ ಟೀಕೆ - ಇವು ಈಕೆ ರಚಿಸಿದ ಇತರ ಕೃತಿಗಳು. ಹೆಳವನಕಟ್ಟೆ ಗಿರಿಯಮ್ಮ (ನೋಡಿ) ಚಂದ್ರಹಾಸನ ಕಥೆ, ಸೀತಾ ಕಲ್ಯಾಣ, ಉದ್ದಾಳಿಕನ ಕಥೆ, ಬ್ರಹ್ಮ ಕೊರವಂಜಿ ಮುಂತಾದ ಹಾಡುಗಬ್ಬಗಳನ್ನು ರಚಿಸಿದ್ದಾಳೆ. ಚಂದ್ರಹಾಸನ ಕಥೆಗೆ ಲಕ್ಷ್ಮೀಶನ ಜೈಮಿನೀ ಭಾರತ ಮೂಲ ಆಧಾರವೆಂದು ಈಕೆ ಹೇಳಿಕೊಂಡಿದ್ದಾಳೆ. ದಾಸ ಸಾಹಿತ್ಯದ ಸಂದರ್ಭದಲ್ಲಿಯೂ ಅನೇಕ ಸ್ತ್ರೀಯರು ಕೀರ್ತನೆಗಳನ್ನೂ ರಚಿಸಿದ್ದಾರೆ. ರುಕ್ಮೀಣೀಬಾಯಿ, ವಿಜಾಪುರದ ಪ್ರಯಾಗಬಾಯಿ, ಗಲಗಲಿ ಅವ್ವ, ಹರಪನಹಳ್ಳಿ ಭೀಮವ್ವ ಮೊದಲಾದವರು ಹಲವಾರು ಕೀರ್ತನೆಗಳನ್ನು ರಚಿಸಿದ್ದಾಗಿ ತಿಳಿದುಬಂದಿದೆ. ಗೋಪಾಲಕೃಷ್ಣ ವಿಠಲ ಎಂಬ ಅಂಕಿತ ಪಡೆದು 400ಕ್ಕೂ ಹೆಚ್ಚು ಹಾಡುಗಳನ್ನೂ ದ್ವಿಪದಿ ಛಂದಸ್ಸಿನ ರಾಮಾಯಣವನ್ನೂ ಬರೆದ ಚಿತ್ರದುರ್ಗದ ಅಂಬಾಬಾಯಿಯ (ಸು.1902) ಜೀವನ ವಿವರಗಳು ಇತ್ತೀಚೆಗೆ ದೊರಕಿದ್ದು ಆಕೆಯ ಹಾಡಿನ ಕ್ಯಾಸೆಟ್‌ಗಳು ಬಿಡುಗಡೆಯಾಗಿವೆ (2003).

ಜನಪದ ಗೀತೆಗಳ ರಚನೆಯಲ್ಲಿ ಮಹಿಳೆಯರದೇ ಸಿಂಹಪಾಲು. ಆದರೆ ಇಂಥವರ ರಚನೆಗಳು ಕಳೆದುಹೋಗಿರುವುದೇ ಹೆಚ್ಚು. ಸೀತಾ ಪರಿತ್ಯಾಗ, ರುಕ್ಮಿಣೀ ಕಲ್ಯಾಣ, ಚಂದ್ರಾವಳಿ ಮುಂತಾದ ಕೃತಿಗಳ ಲೇಖಕಿ ಯಶೋದಾಬಾಯಿ, ಜನಪದ ಛಂದಸ್ಸನ್ನು ಬಳಸಿ ಕೀರ್ತನ ರಾಮಾಯಣ ಬರೆದ ಬೊಮ್ಮಸಂದ್ರದ ಭಾಗೀರಥಮ್ಮ ಇಂಥ ಅಲ್ಲೊಬ್ಬ ಇಲ್ಲೊಬ್ಬರ ರಚನೆಗಳು ಅಕಸ್ಮಾತ್ ಉಳಿದುಬಂದಿರುವುದನ್ನು ನಾವು ಕಾಣಬಹುದು.

ಮೈಸೂರು ಅರಸರ ಕಾಲದ ಅನಂತರ ಹತ್ತೊಂಬತ್ತನೆಯ ಶತಮಾನದವರೆಗೆ-ಹೊಸಗನ್ನಡದ ಅರುಣೋದಯದ ಕಾಲದವರೆಗೆ - ಸಾಹಿತ್ಯ ರಚನೆ ಅಷ್ಟಾಗಿ ಕಂಡುಬರುವುದಿಲ್ಲ. ಹತ್ತೊಂಬತ್ತನೆಯ ಶತಮಾನದಲ್ಲಿ, ಸಾಂಸ್ಕೃತಿಕ ವಾತಾವರಣದಲ್ಲಿ ಸ್ತ್ರೀಪರ ಆಲೋಚನೆಗಳು ಕಾಣಿಸಿಕೊಳ್ಳ ತೊಡಗಿದ್ದವು. ರಾಷ್ಟ್ರೀಯ ಪುನರುತ್ಥಾನ ಆಂದೋಲನದಲ್ಲಿ ಸ್ತ್ರೀಯರ ಉದ್ಧಾರದ ಕಳಕಳಿಯೂ ಸೇರಿಕೊಂಡಿತ್ತು. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ, ಶಾಲಾ ಶಿಕ್ಷಣ ಪಡೆದ ಮತ್ತು ಸಾಹಿತ್ಯದಲ್ಲಿ ಒಂದಿಷ್ಟು ಆಸಕ್ತಿ ಹೊಂದಿದ ಸ್ತ್ರೀಯರು ಅಲ್ಲಲ್ಲಿ ಕಾಣ ಸಿಕ್ಕರೂ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುವ ಧೈರ್ಯ ಮಾಡಿರಲಿಲ್ಲ. ಮಹಿಳೆಯರ ಪರವಾಗಿ ಪುರುಷರೇ ಬರೆಯಬೇಕಾದ ಸಂದರ್ಭವಿತ್ತು. ಆ ಕಾಲದ ಕೆಲವು ಪತ್ರಿಕೆಗಳು ಮತ್ತು ಸಂಘ-ಸಂಸ್ಥೆಗಳು, ಹೆಣ್ಣು ಮಕ್ಕಳ ಬರವಣಿಗೆಗೆ ಪ್ರಚೋದನೆ ನೀಡುವ ಉದ್ದೇಶದಿಂದ ಮಹಿಳೆಯರ ಬರೆಹಗಳಿಗೆ ಬಹುಮಾನಗಳನ್ನಿಟ್ಟು ಸ್ಪರ್ಧೆಗಿಳಿಸಿದವು. ಹೀಗೆ ಸ್ಪರ್ಧೆಗೆ ಬರೆಯುವ ಮೂಲಕ, ಬರವಣಿಗೆಯ ಬದುಕು ಆರಂಭಿಸಿದ ಶಾಂತಾಬಾಯಿ ನೀಲಗಾರ, ತಿರುಮಲಾಂಬಾ, ಸರಸ್ವತಿ ದೇವಿಗೌಡರ ಮೊದಲಾದವರು, ನಿಬಂಧ, ಕಾದಂಬರಿ ಅಥವಾ ಲೇಖನಗಳನ್ನು ಬರೆದು ಬಹುಮಾನಗಳನ್ನೂ ಪಡೆದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಇಂಥ ನಿಬಂಧವನ್ನು ಆಹ್ವಾನಿಸಿದಾಗ, ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ್ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಶಾಂತಾಬಾಯಿ ನೀಲಗಾರ ಎಂಬ ಮಹಿಳೆ ಸದ್ಗುಣಿ ಕೃಷ್ಣಾಬಾಯಿ (ಉತ್ತಮ ಗೃಹಿಣಿ) ಎಂಬ ಕೃತಿಯನ್ನು ಬರೆದರು. ಇದು ವಾಗ್ಭೂಷಣ ಗ್ರಂಥಮಾಲೆಯಲ್ಲಿ ಪ್ರಕಟವಾಯಿತು (1908). ಇದು ಆಧುನಿಕ ಕಾಲದಲ್ಲಿ ಮಹಿಳೆಯೊಬ್ಬರು ಬರೆದ ಮೊತ್ತ ಮೊದಲ ಕಾದಂಬರಿ. ಶಾಂತಾಬಾಯಿ ನೀಲಗಾರರೇ ಮೊದಲ ಕಾದಂಬರಿಕಾರ್ತಿ. ಈ ಕೃತಿಯಲ್ಲಿ ಆ ಕಾಲದ ಸಮಾಜದಲ್ಲಿ ಮಹಿಳೆಯರ ಶಿಕ್ಷಣದ ಬಗ್ಗೆ ಇದ್ದ ಆತಂಕ ಮತ್ತು ಅನುಮಾನಗಳನ್ನು ದೂರಮಾಡುವ ಪ್ರಯತ್ನವಿದೆ. 'ಜ್ಞಾನವು ಎಲ್ಲ ಹೆಂಗಸರಿಗೂ ಗಂಡಸರಿಗೂ ಸರಿಯಾಗಿಯೇ ಅಗತ್ಯವಾದದ್ದು. ವಿದ್ಯೆ ಕಲಿತ ಹೆಂಗಸರೇ ವಿದ್ಯೆ ಕಲಿತ ಗಂಡಸರ ಮನಸ್ಸಿಗೆ ತಮ್ಮ ಭಾಷಣ ಮುಂತಾದ್ದರಿಂದ ಆನಂದಪಡಿಸುವರಲ್ಲದೆ ಮೂಢ ಹೆಂಗಸರು ಪಡಿಸಲಾರರು. ವಿದ್ಯೆ ಕಲಿಯದ ಹೆಂಡಂದಿರು, ಸುಶಿಕ್ಷಿತ ಗಂಡಂದಿರಿಗೆ, ಕೇವಲ ವಂಶಾಭಿವೃದ್ಧಿಯ ಕೆಲಸದಲ್ಲಿ ಮಾತ್ರ ಉಪಯೋಗವಾಗುವರು. ಸುಶಿಕ್ಷಿತ ಸ್ತ್ರೀಯರು ಮಕ್ಕಳಿಗೂ ಗಂಡಂದಿರಿಗೂ ಗುರುಹಿರಿಯರಿಗೂ ಉಪಯುಕ್ತರಾಗಿ ದೇಶೋನ್ನತಿಗೆ ಸಹ ಕಾರಣರಾಗುತ್ತಾರೆ' ಎಂಬಂತಹ ವಿಚಾರ ನೀತಿಸಂಹಿತೆಯಂತೆ ಕಂಡರೂ ಸಂಸ್ಕೃತಭೂಯಿಷ್ಠ ಶೈಲಿ ಅನಿಸಿದರೂ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕಾದ ಅಗತ್ಯದ ಬಗ್ಗೆ ಆಲೋಚನೆ ಮಾಡುವಂತೆ ಮಾಡಿದರು.

ಶಾಂತಾಬಾಯಿಯವರ ಕಾದಂಬರಿ ದೊರಕುವವರೆಗೆ ನಂಜನಗೂಡು ತಿರುಮಲಾಂಬಾ ಅವರೇ ಆಧುನಿಕ ಕನ್ನಡದ ಮೊತ್ತಮೊದಲ ಕಾದಂಬರಿಕಾರ್ತಿ ಎಂದೂ ಅವರು ಪ್ರಕಟಿಸಿದ ಸುಶೀಲೆ (1913) ಕಾದಂಬರಿಯೇ ಮೊದಲ ಮಹಿಳಾ ಕಾದಂಬರಿ ಎಂದೂ ಪರಿಗಣಿಸಲಾಗಿತ್ತು. ತಿರುಮಲಾಂಬಾ ಮತ್ತು ಆರ್.ಕಲ್ಯಾಣಮ್ಮನವರು ಸ್ವತಃ ನವೋದಯದ ಲೇಖಕರಿಗಿಂತ ಹೆಚ್ಚು ಹಳೆಯ ಪೀಳಿಗೆಯವರ ಸುಧಾರಣಾ ಮನೋಭಾವ, ವಿಚಾರ ಮತ್ತು ಭಾಷೆಗಳನ್ನು ತಮ್ಮ ಆದರ್ಶವಾಗಿಸಿಕೊಂಡವರು. ಸ್ವತಃ ವಿಧವೆಯರಾಗಿದ್ದು ವಿದ್ಯಾಭ್ಯಾಸ ಮಾತ್ರವಲ್ಲದೆ, ಕೇಶಮುಂಡನ ಸಮಸ್ಯೆ, ಅಸಮ ವಿವಾಹ, ಬಾಲ್ಯ ವಿವಾಹ, ವಿಧವಾ ವಿವಾಹ ಮುಂತಾದ ಸುಧಾರಣಾ ಅಂಶಗಳ ಬಗ್ಗೆ ಆಲೋಚನೆ ನಡೆಸಿದರು. ಸಮಾಜದ ಮನಸ್ಸನ್ನೂ ಸ್ತ್ರೀಯರ ಸ್ಥಾನಮಾನವನ್ನೂ ತಿದ್ದಲು ಬೇಕಾದಂತಹ ಪಾತ್ರಸನ್ನಿವೇಶಗಳನ್ನು ತಮ್ಮ ಕೃತಿಗಳಲ್ಲಿ ತಂದು ಕಥೆ, ಕಾದಂಬರಿ, ನಾಟಕ, ಲೇಖನ ಇತ್ಯಾದಿ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದರು. ತಿರುಮಲಾಂಬಾರವರು ಸತೀಹಿತೈಷಿಣಿ ಗ್ರಂಥಮಾಲೆ ಎಂಬ ಪ್ರಕಟಣಾ ಸಂಸ್ಥೆಯನ್ನೂ (1913) ಕರ್ನಾಟಕ ನಂದಿನಿ ಎಂಬ ಪತ್ರಿಕೆಯನ್ನೂ ಆರಂಭಿಸಿದ್ದರು (1916). ತಿರುಮಲಾಂಬಾರವರಿಗಿಂತ ಹೆಚ್ಚು ನಿಖರವಾದ ನಿಲುವುಳ್ಳ ಆರ್.ಕಲ್ಯಾಣಮ್ಮನವರು 'ಶ್ರೀ ಶಾರದಾ ಸ್ತ್ರೀ ಸಮಾಜ' (1913) ಆರಂಭಿಸಿದುದಲ್ಲದೆ ಸ್ತ್ರೀ ಸಮಸ್ಯೆಗಳು, ಸ್ತ್ರೀ ಜಗತ್ತಿನ ವಿವಿಧ ವಿಷಯಗಳು, ಜ್ಞಾನಾಭಿವೃದ್ಧಿ ಅಂಕಣಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿ, ಕೌಟುಂಬಿಕ ಸಲಹೆ ಇತ್ಯಾದಿ ವಿಷಯಗಳನ್ನೊಳಗೊಂಡ ಸರಸ್ವತಿ ಎಂಬ ಪತ್ರಿಕೆಯನ್ನು ಆರಂಭಿಸಿ (1917) ಸು.43 ವರ್ಷಗಳ ಕಾಲ ನಡೆಸಿದರು. ಇದೇ ಪತ್ರಿಕೆಯ ಮಕ್ಕಳ ಬಾವುಟ ವಿಭಾಗ ಮಕ್ಕಳ ಬರೆಹಗಳನ್ನು ಪ್ರಕಟಿಸಿ, ಆ ಕಾಲದಲ್ಲಿ ಮಕ್ಕಳಲ್ಲಿ ಸಾಹಿತ್ಯ ರಚನೆಯನ್ನೂ ಅಧ್ಯಯನದ ಅಭಿಲಾಷೆಯನ್ನೂ ಮೂಡಿಸುವಲ್ಲಿ ನೆರವಾಯಿತು. ಪೌರ ಸಾಮಾಜಿಕ ಕಾರ್ಯಗಳಿಗೂ ತಮ್ಮ ಜವಾಬ್ದಾರಿಯನ್ನು ಹೆಂಗಸರು ವಿಸ್ತರಿಸಲು ಅನುವಾಗುವಂತೆ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವ ರೀತಿಯಲ್ಲಿ ಸ್ತ್ರೀಯರಿಗೆ ವಿದ್ಯೆಯಾಗಬೇಕು ಎಂಬುದನ್ನು ಇವರು ಪ್ರತಿಪಾದಿಸಿದರು. ಸಾಮಾಜಿಕ ವಾತಾವರಣ ಬದಲಾಗುತ್ತ ಹೋದಂತೆ ತಮ್ಮ ಬರೆಹದ ಧಾಟಿ, ಧೋರಣೆಗಳನ್ನೂ ಇವರು ಬದಲಾಯಿಸಿಕೊಂಡರು.

ಭಾರತ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಅನೇಕ ಮಹಿಳೆಯರು ಭಾಗವಹಿಸಿದರು. ಅದುವರೆಗೆ ಅಡುಗೆಮನೆಯನ್ನು ದಾಟದವರಿಗೆ, ದೇಶದ ಸ್ವಾತಂತ್ರ್ಯದ ಪರಿಕಲ್ಪನೆಯೊಂದಿಗೆ ಶಿಕ್ಷಣದ ಪರಿಕಲ್ಪನೆ ಮೂಡಿತು. ಸಮಾಜವೆಂದರೆ ಕೇವಲ ಪುರುಷರಲ್ಲ, ಅದರಲ್ಲಿ ಸ್ತ್ರೀಯೂ ಸೇರಿದ್ದಾಳೆ ಎಂಬ ಭಾವನೆ ಬೆಳೆಯಲಾರಂಭವಾಯಿತು. ಸ್ತ್ರೀಗೂ ಶಿಕ್ಷಣ ಬೇಕು, ಆಗಲೇ ಸಮಾಜದ ಅಭಿವೃದ್ಧಿ ಸಾಧ್ಯ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆದವು. ತಿ.ತಾ.ಶರ್ಮರ ಪತ್ನಿ ತಿರುಮಲೆ ರಾಜಮ್ಮ (ಸು.1900) ನವರು ಭಾರತಿ ಎಂಬ ಕಾವ್ಯನಾಮದಿಂದ ಕಾವ್ಯ, ನಾಟಕ, ವ್ಯಕ್ತಿಚಿತ್ರ, ರೂಪಕ ಮುಂತಾದ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದರು. ಮಹಾತ್ಮಾ ಗಾಂಧೀಜಿಯವರನ್ನು ತಮ್ಮ ಸಂಗೀತದಿಂದ ಪ್ರಭಾವಿಸಿದರು. ಇವರು ಬರೆದ ತಪಸ್ವಿನಿ, ಮಹಾಸತಿ, ವಾತ್ಸಲ್ಯ, ತರಂಗಲೀಲ ಎಂಬ ನಾಟಕಗಳು; ಸ್ವರ್ಗ ನಿರಸನ, ದುಂದುಭಿ ಮುಂತಾದ ಕೃತಿಗಳು; ಜೀವನ ಜಿಜ್ಞಾಸೆ, ಅಂತರವಾಣಿ ಮುಂತಾದ ಕವಿತೆಗಳು,

ವಿಮರ್ಶೆ, ಪ್ರಬಂಧ, ಮಕ್ಕಳ ಸಾಹಿತ್ಯ - ಇವು ಇವರು ಕನ್ನಡಕ್ಕೆ ನೀಡಿದ ಉತ್ತಮ ಕೊಡುಗೆಗಳು. ಇವರು ರಚಿಸಿದ 'ಜೈ ಭಾರತ ಭೂಮಿಗೆ ಮಾತೆಗೆ ಜೈ ಪಾವನ ಮೂರ್ತಿಗೆ ಜೈ' ಎಂಬುದು ಆ ಕಾಲದ ಅತ್ಯಂತ ಜನಪ್ರಿಯ ದೇಶಭಕ್ತಿ ಗೀತೆಯಾಗಿತ್ತು.

ಇವರ ಅನಂತರದ ಪೀಳಿಗೆಯವರಾದ ಶ್ಯಾಮಲಾದೇವಿಯವರು (1910) ಮಿಸೆಸ್ ಬಿ.ಟಿ.ಜಿ.ಕೃಷ್ಣ ಎಂಬ ಹೆಸರಿನಿಂದ ಕಥೆಗಳನ್ನು ಬರೆದರು. ಕೊಡಗಿನ ಗೌರಮ್ಮ (1912-39), ಗಿರಿಬಾಲೆ (ಸರಸ್ವತಿಬಾಯಿ ರಾಜವಾಡೆ, 1913), ಎಚ್.ವಿ.ಸಾವಿತ್ರಮ್ಮ (1913) - ಇವರು ಆಧುನಿಕ ಶಿಕ್ಷಣ, ಸುಧಾರಣೆಯ ಮನೋಧರ್ಮಗಳನ್ನು ಹೊಂದಿದ್ದು, ಮುಂದುವರೆದ ನೆಲೆಯಲ್ಲಿ ತಮ್ಮ ಚಿಂತನೆ ಮತ್ತು ಬರಹಗಳಿಗೆ ತೊಡಗಿದರು. ಸ್ತ್ರೀಯರ ಮತ್ತು ಬಡವರ ಶೋಷಣೆಯ ಸಮಸ್ಯೆಗಳನ್ನು ವಸ್ತುವಾಗಿಟ್ಟುಕೊಂಡು ಇವರೆಲ್ಲರೂ ಕೃತಿ ರಚನೆ ಮಾಡಿದ್ದಾರೆ. 'ಕಂಬನಿ' ಕೊಡಗಿನ ಗೌರಮ್ಮನವರ (ನೋಡಿ) ಸಣ್ಣಕಥೆಗಳ ಸಂಕಲನ, ಅವರ ನಿಧನಾನಂತರ ಪ್ರಕಟವಾಯಿತು. ಗಿರಿಬಾಲೆಯವರು ಕ್ರೌರ್ಯ, ಸ್ವಾರ್ಥ, ಬಡತನ, ಡಾಂಭಿಕತೆ, ಮೌಢ್ಯಗಳನ್ನು ತೀಕ್ಷ್ಣವಾಗಿ ತರ್ಕಬದ್ಧವಾಗಿ ತಮ್ಮ ಹರಿತವಾದ ಭಾಷೆಯಲ್ಲಿ ಚಿತ್ರಿಸಿದರು. ಅನ್ಯಾಯದ ವಿರುದ್ಧ ಬಂಡೇಳಬಲ್ಲ ಗಟ್ಟಿತನ, ವಿಚಾರಶಕ್ತಿಗಳು ಇವರ ಕೃತಿಗಳಲ್ಲಿವೆ. ಹೂ ಬಿಸಿಲು (1936), ಹೊಂಬಿಸಿಲು (1943) ಎಂಬ ಕಥಾಸಂಕಲನಗಳ ಕರ್ತೃವಾದ ಶ್ಯಾಮಲಾದೇವಿ ಬೆಳಗಾಂವಕರ್ ಅವರು ಸಾಮಾಜಿಕ ಸಮಸ್ಯೆಗಳಿಗೆ ಕಲಾತ್ಮಕ ರೂಪ ಕೊಟ್ಟವರು. ತಮ್ಮ ಪತಿಯೊಂದಿಗೆ ಜಯ ಕರ್ನಾಟಕ ಪತ್ರಿಕೆಯನ್ನು ನಡೆಸಲು ಎಲ್ಲ ರೀತಿಯಲ್ಲಿ ನೆರವಾದವರು. ಎಚ್.ವಿ.ಸಾವಿತ್ರಮ್ಮನವರು ಸೀತೆ-ರಾಮ-ರಾವಣ, ವಿಮುಕ್ತಿ ಎಂಬ ಕಾದಂಬರಿಗಳಲ್ಲಿ ರಾಮಾಯಣದ ಕಥೆಯಲ್ಲೇ ಜಾಗೃತ ಸ್ತ್ರೀ ಪಾತ್ರಗಳನ್ನು ಕೆತ್ತಿದ್ದಾರೆ. ಸಂಕಷ್ಟ ಪರಿಸ್ಥಿತಿಯಲ್ಲಿ ಪುರುಷರ ಪಲಾಯನವಾದ, ಸ್ವಾರ್ಥ, ಅವಿಶ್ವಾಸಗಳನ್ನು ಈ ಕೃತಿಗಳು ಗಮನಕ್ಕೆ ತರುತ್ತವೆ. ಈ ಎಲ್ಲ ಲೇಖಕಿಯರು ಸ್ತ್ರೀ ಸಂವೇದನೆಯ ಕೃತಿಗಳನ್ನು ರಚಿಸಿದವರು.

ಬೆಳಗೆರೆ ಜಾನಕಮ್ಮನವರು (1912) ಕಲ್ಯಾಣ ಎಂಬ ಒಂದೇ ಕವನ ಸಂಕಲನ ತಂದರೂ ಇದು ಸ್ತ್ರೀವಾದಿ ದೃಷ್ಟಿಯಿಂದ ಮಹತ್ತ್ವದ ಕೃತಿಯಾಗಿದೆ. ಸ್ತ್ರೀ ಪರ ಕಾಳಜಿಯುಳ್ಳ ಕೃತಿ ರಚಿಸಿದ ಮೊದಲಿಗರಲ್ಲಿ ಇವರೂ ಒಬ್ಬರು. ಆ ಕಾಲದ ಸ್ತ್ರೀಯರ ಬವಣೆಗಳ ಬಗ್ಗೆ, ಬಂಧನ ಮತ್ತು ಕಟ್ಟುಪಾಡುಗಳ ಬಗ್ಗೆ, ಪಾರತಂತ್ರ್ಯದ ಬಗ್ಗೆ ಇವರ ಕವನಗಳು ನಮ್ಮ ಗಮನ ಸೆಳೆಯುತ್ತವೆ.

ಹೆಣ್ಣಿನ ಮುಕ್ತಿಗೆ, ಸುಖಕ್ಕೆ ಮದುವೆ-ಮಕ್ಕಳು ಬಿಟ್ಟು ಬೇರೆ ಪ್ರಪಂಚವೂ ಕಾರ್ಯರಂಗವೂ ಇದೆ, ಉಪಯುಕ್ತ ಸೇವೆಗಳಿವೆ ಎಂಬ ಹೊಸ ಮಾತನ್ನು ಹೇಳಿದ ವಿಶಿಷ್ಟ ಕತೆಗಾರ್ತಿ ಎಚ್.ಎಸ್.ಕಾತ್ಯಾಯನಿ (1923-95). ರಸಪಾಕದಿಂದ ಹಿಡಿದು ಶೂರರಾಣಿ ಕೆಳದಿಯ ಚೆನ್ನಮ್ಮಾಜಿಯಂತಹ ಸಂಶೋಧನಾತ್ಮಕ ಕೃತಿಗಳನ್ನೊಳಗೊಂಡಂತೆ ಇಪ್ಪತ್ತಾರಕ್ಕೂ ಹೆಚ್ಚು ವಿವಿಧ ವಿಷಯಗಳ ಕುರಿತು ಕೃತಿ ರಚಿಸಿದ ಶಾಂತಾದೇವಿ ಮಾಳವಾಡ (1922), ಸ್ತ್ರೀ ಸಂಬಂಧದ ಪರಂಪರಾಗತ ಮೌಲ್ಯಗಳು ಹಾಗೂ ಧೋರಣೆಗಳನ್ನು ಒರೆಗೆ ಹಚ್ಚಿ ನೋಡುವ ಹೊಸ ಕೆಲಸವನ್ನು ತಮ್ಮ ಹಲವಾರು ನಾಟಕ, ಸಣ್ಣಕತೆ, ಕಾವ್ಯ, ಪ್ರಬಂಧಗಳ ಮೂಲಕ ಮಾಡಿದ ಸರಸ್ವತೀ ದೇವಿಗೌಡರ (1923-73), ಸ್ತ್ರೀಯನ್ನು ಕನಿಕರದಿಂದ ಕಾಣದೆ ಸಮಾನ ಭಾವನೆಯಿಂದ ಕಾಣಬೇಕೆಂದು ಪ್ರತಿಪಾದಿಸಿ ಸಣ್ಣಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯಗಳ ಪ್ರಕಾರದಲ್ಲಿ ಕೊಡುಗೆ ನೀಡಿದ ಗೀತಾ ಕುಲಕರ್ಣಿ (1927-86) ಇವರುಗಳ ಕೊಡುಗೆಯೂ ಈ ನಿಟ್ಟಿನಲ್ಲಿ ಗಮನಾರ್ಹವಾದುದು.

ಹಿಂದಿ, ಕೊಂಕಣಿ ಮತ್ತು ಕನ್ನಡದಲ್ಲಿ ಕೃತಿಗಳನ್ನು ರಚಿಸಿದ ಸೀತಾದೇವಿ ಪಡುಕೋಣೆ (1903), ಸಾಕಷ್ಟು ಸಂಕಷ್ಟಗಳ ನಡುವೆಯೂ ಸ್ವಂತ ಕೃತಿಗಳನ್ನೂ ಹಿಂದಿಯಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಹಿಂದಿಗೆ ಭಾಷಾಂತರಿಸಿದ ರಚನೆಗಳನ್ನು ಹೊರತಂದ ವಾಸಂತಿ ಪಡುಕೋಣೆ (1908-95), ನೈತಿಕ ನಿಲುವಿನಲ್ಲಿಯೇ ಮಹಿಳೆಯರ ಪ್ರಗತಿಯ ಬಗ್ಗೆಯೂ ಯೋಚಿಸಿ ಗ್ರಾಮೋದ್ಧಾರಕ ರಾಮಚಂದ್ರ, ಕುಮುದಿನಿ, ಕೃಪಾಶಂಕರ್, ಚಂಚಲೆ, ಪರಿಮಳೆ, ಜೀವನದ ಕರೆ ಮುಂತಾಗಿ ತಮಿಳು ಮತ್ತು ಕನ್ನಡಗಳಲ್ಲಿ ಕಥೆ, ಕಾದಂಬರಿ, ಮತ್ತಿತರ ಪ್ರಕಾರದಲ್ಲಿ ಸಾವಿರಕ್ಕೂ ಹೆಚ್ಚು ಲೇಖನ ಹಾಗೂ ಕಥೆಗಳನ್ನು ರಚಿಸಿದ (ಸರೋಜ ಕಾವ್ಯನಾಮದ) ಜಯಲಕ್ಷ್ಮಿ ಶ್ರೀನಿವಾಸನ್ (1911), ಸಂಪ್ರದಾಯಗಳ ದಾರಿಯಲ್ಲಿ, ಸಿದ್ಧರಾಮೇಶ್ವರ ಪುರಾಣ, ತಾಯಿಯ ಪದಗಳು, ಜಯಗೀತ, ಬಂದೇವು ಕಲ್ಯಾಣಕೆ ಮುಂತಾದ ಧಾರ್ಮಿಕ ನೆಲೆಯ ಕೃತಿಗಳನ್ನು ರಚಿಸಿ, ಕನ್ನಡದ ಉಳಿವಿಗೆ ಸೊಲ್ಲಾಪುರ ಪ್ರದೇಶದಲ್ಲಿ ಹೋರಾಟ ನಡೆಸಿದ ಜಯದೇವಿತಾಯಿ ಲಿಗಾಡೆ (1912-86), ಸೋದರಿ ಎಂಬ ವಾರಪತ್ರಿಕೆಯ ಮೂಲಕ ಹಲವು ಮಹಿಳೆಯರ ಅರಿವಿಗೆ ಹಾಗೂ ಪ್ರಗತಿಗೆ ಅಗತ್ಯ ಸಾಮಗ್ರಿಗಳನ್ನೊದಗಿಸಿ, ಹಲವರನ್ನು ಬರೆಹಕ್ಕೆ ತೊಡಗಿಸಿದ ಎಂ.ಆರ್.ಲಕ್ಷ್ಮಮ್ಮ (1913), ಹಾಸ್ಯ ಕ್ಷೇತ್ರದಲ್ಲಿ ಲೇಖಕಿಯಾಗಿ ನವಿರು ಹಾಸ್ಯದ ಉತ್ತಮ ಕೃತಿಗಳನ್ನು ಕೊಟ್ಟ ಟಿ.ಸುನಂದಮ್ಮ (1917), ಸಂಪ್ರದಾಯಗಳ ಬೇರಿಗೆ ಅಂಟಿಕೊಳ್ಳದೆ, ಕ್ರಿಸ್ತನಲ್ಲೇ ರಾಮನನ್ನು ಕಾಣುತ್ತ ವಿಜಾತೀಯರಲ್ಲಿ ಮತ್ತು ವಿದೇಶೀಯರಲ್ಲಿ ಮಾನವೀಯ ಅಂಶಗಳನ್ನು ಗಮನಿಸಿ ತಮ್ಮವರಾಗಿ ಕಾಣುವ ವಿಶಾಲ ಮನೋಭಾವನೆಯಿಂದ ಲೇಖಕನ ಹೆಂಡತಿ ಮತ್ತು ಇತರ ಕಥೆಗಳು, ಕಣ್ಮುಚ್ಚಿ ನೋಡಿದಾಗ ಮೊದಲಾದ ಕೃತಿಗಳನ್ನು ಹೊರ ತಂದ ಸುಶೀಲಾ ಕೊಪ್ಪರ್ (1924), ಜೀವನಪ್ರೀತಿಯನ್ನು ತೋರುವ ಕಥೆಗಳನ್ನು ಬರೆಯುತ್ತಿದ್ದ ರಾಜೇಶ್ವರಿ ನರಸಿಂಹಮೂರ್ತಿ (1916-73), ಗಂಗರಸ ದುರ್ವಿನೀತ, ಶಪ್ತವಾಪಿ ಎಂಬ ಉತ್ತಮ ಚಾರಿತ್ರಿಕ ಕಾದಂಬರಿಗಳನ್ನು ಬರೆದ ಮೊದಲ ಕನ್ನಡ ಮಹಿಳೆ ಸಿ.ಎನ್.ಜಯಲಕ್ಷ್ಮೀದೇವಿ (1925-95), ವೀರಮಾತೆ ಎಂಬ ಪತ್ರಿಕೆಯ ಸಂಪಾದಕಿಯೂ ಸಮರ್ಥ ಮಂತ್ರಿಯೂ ಮುಳ್ಳು ಗುಲಾಬಿ, ನವಿಲು, ಇಂಚರ ಎಂಬ ಶಿಶುಸಾಹಿತ್ಯವನ್ನೂ ಕಾವ್ಯ ಕೃತಿಗಳನ್ನೂ ಕರ್ನಾಟಕದ ಕವಯಿತ್ರಿಯರು ಎಂಬ ಸಂಶೋಧನಾ ನಿಬಂಧವನ್ನೂ ಹಲವಾರು ಲೇಖನಗಳನ್ನೂ ರಚಿಸಿದ ಅಪಾರ ವಿದ್ವತ್ ಪ್ರತಿಭೆಯ ಸರೋಜಿನಿ ಮಹಿಷಿ ಮೊದಲಾದವರು ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿದ್ದಾರೆ. ಮಂಡ್ಯದ ಶೃಂಗಾರಮ್ಮನವರು ಶ್ರೀದೇವಿ ಎಂಬ ಕಾವ್ಯನಾಮದಲ್ಲಿ ಆಗಮ ಶಾಸ್ತ್ರಗಳ ಬಗ್ಗೆ ಪುಸ್ತಕಗಳನ್ನು ಬರೆದ ಮೊದಲ ಲೇಖಕಿಯಾಗಿ ಕಂಡುಬರುತ್ತಾರೆ.

ತ್ರಿವೇಣಿ (1928-65) ಕಾವ್ಯನಾಮದ ಅನಸೂಯ ಮಹಿಳಾ ಕಾದಂಬರಿಕಾರ್ತಿಯರಲ್ಲಿ ದೊಡ್ಡ ಹೆಸರು. ಇವರು ಇಪ್ಪತ್ತನೆಯ ಶತಮಾನದ 50-60ರ ದಶಕದಲ್ಲಿ ಲೇಖಕಿಯರ ಸುಧಾರಣಾ ಸಾಹಿತ್ಯ ಮಾರ್ಗವನ್ನೂ ಅ.ನ.ಕೃ., ಕಾರಂತ ಮೊದಲಾದವರು ಸಿದ್ಧಪಡಿಸಿಟ್ಟ ಕಾದಂಬರಿಯ ವೇದಿಕೆಯನ್ನೂ ಮನೋವೈಜ್ಞಾನಿಕ ಸೂತ್ರಗಳನ್ನು ಬಳಸಿಕೊಂಡು ಮಹಿಳೆಯರ ವಿವಿಧ ಬಗೆಯ ಸಮಸ್ಯೆಗಳನ್ನು ವಸ್ತುವಾಗಿಟ್ಟುಕೊಂಡು, ಆಕರ್ಷಕ ಶೈಲಿ, ಸುಂದರ ಭಾಷೆ ಮತ್ತು ನಿರೂಪಣೆಯ ಜಾಣ್ಮೆಯಿಂದ ಒಂದು ದಶಕದ ಅವಧಿಯಲ್ಲಿ ಇಪ್ಪತ್ತನಾಲ್ಕು ಕಥೆ-ಕಾದಂಬರಿಗಳನ್ನು ರಚಿಸಿ ಅಪಾರ ಜನಪ್ರಿಯತೆ ಗಳಿಸಿದರು. ಕಾದಂಬರಿ ಪ್ರಕಾರದ ಮಹತ್ತ್ವವನ್ನೂ ಓದುಗರ ಸಂಖ್ಯೆಯನ್ನೂ ಇವರ ರೀತಿ ಬರೆಯುವ ಲೇಖಕಿಯರ ಸಂಖ್ಯೆಯನ್ನೂ ಹೆಚ್ಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಹಣ್ಣೆಲೆ ಚಿಗುರಿದಾಗ, ಬೆಳ್ಳಿಮೋಡ, ಶರಪಂಜರ, ಹೂವು ಹಣ್ಣು ಕನ್ನಡದಲ್ಲೂ ಬೆಕ್ಕಿನ ಕಣ್ಣು ಮಲೆಯಾಳಂನಲ್ಲೂ ಚಲನಚಿತ್ರಗಳಾಗಿ ಭರ್ಜರಿ ಯಶಸ್ಸುಗಳಿಸಿದ ಕಾದಂಬರಿಗಳು. ದೂರದ ಬೆಟ್ಟ, ಹಣ್ಣೆಲೆ ಚಿಗುರಿದಾಗ, ಸೋತು ಗೆದ್ದವಳು, ಕೀಲುಗೊಂಬೆ ಮುಂತಾದವು ಹೆಚ್ಚಿನ ಜನಮೆಚ್ಚುಗೆ ಪಡೆದ ಇತರ ಕಾದಂಬರಿಗಳು (ನೋಡಿ: ತ್ರಿವೇಣಿ).

ತ್ರಿವೇಣಿಯವರ ಅನಂತರದ ಮಹತ್ತ್ವದ ಹೆಸರು ಎಂ.ಕೆ.ಇಂದಿರಾ (1917). ತಮ್ಮ 44ನೆಯ ವಯಸ್ಸಿನಲ್ಲಿ ಬರೆಹಕ್ಕೆ ತೊಡಗಿ ಮೊದಲ ಕಾದಂಬರಿಯಾದ ತುಂಗಭದ್ರದಿಂದ ಜನಪ್ರಿಯರಾದವರು. ಸಾಮಾಜಿಕ ಜೀವನವನ್ನು ಸಂಪ್ರದಾಯಪರ ನಿಲುವಿನಲ್ಲಿಯೇ ಚಿತ್ರಿಸಿದರೂ ಸಮಾಜದ ವಿವಿಧ ಬಗೆಯ ಸಾಮಾಜಿಕ ಸಮಸ್ಯೆಗಳನ್ನೂ ಸ್ತ್ರೀಯರ ಜಗತ್ತಿನಲ್ಲಿ ಆಗುತ್ತಿರುವ ಶೋಷಣೆಯ ಸೂಕ್ಷ್ಮ ಎಳೆಗಳನ್ನೂ ಕಂಡರಿಸಿದ್ದರೆ, ತಪೋವನ ಎಂಬ ಕಾದಂಬರಿಯಲ್ಲಿ ದೇವರು, ಭಕ್ತಿ ಇತ್ಯಾದಿಗಳ ಬೂಟಾಟಿಕೆಗಳನ್ನು ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಗೆಜ್ಜೆಪೂಜೆಯಲ್ಲಿ ವಿವಾಹದ ದಾರಿಯಲ್ಲಿ ಹೋಗಬೇಕೆಂದು ಬಯಸುವ ವೇಶ್ಯೆಯೊಬ್ಬಳ ಮಗಳು ಎದುರಿಸುವ

ಸಮಸ್ಯೆಗಳ ಬಗ್ಗೆ ಚಿತ್ರಣವಿದೆ. ವೇಶ್ಯೆಯ ಸಮಸ್ಯೆಯ ಬಗ್ಗೆ ಸಮಾಜ ಯೋಚಿಸುವಂತೆ ಮಾಡಿದ ಕೃತಿಯಿದು. ವಿಧವಾ ಸಮಸ್ಯೆಯನ್ನು ಕುರಿತ ಇವರ ಫಣಿಯಮ್ಮ ಕಾದಂಬರಿ ಚಲನಚಿತ್ರವಾಗಿಯೂ ಹೆಸರು ಗಳಿಸಿದೆ. ಪ್ರೇಮಾಕಾರಂತರು ಈ ಕಾದಂಬರಿಯನ್ನು ಯಶಸ್ವೀ ಚಲನಚಿತ್ರವಾಗಿ ತೆರೆಗೆ ತಂದಿದ್ದಾರೆ. ಗೆಜ್ಜೆಪೂಜೆ ಕಾದಂಬರಿಯೂ ಚಲನಚಿತ್ರವಾಗಿ ಪ್ರಸಿದ್ಧವಾಗಿದೆ.

1970ರ ಅನಂತರ ದಲಿತ, ಬಂಡಾಯ ಸಾಹಿತ್ಯದ ದನಿ ಕೇಳಲಾರಂಭಿಸಿತು. ದಲಿತರ ಮೇಲೆ ನಡೆಯುವ ದೌರ್ಜನ್ಯ, ಶೋಷಣೆಗಳ ಚಿತ್ರಣ ಮೊದಲಿಗೆ ಕಾವ್ಯದಲ್ಲಿ, ಅನಂತರ ಗದ್ಯ ಸಾಹಿತ್ಯದಲ್ಲಿ ಗಟ್ಟಿಯಾಗಿ ಕಾಣಿಸಿಕೊಳ್ಳಲು ಆರಂಭವಾಯಿತು. ಆಗ ಕೆಲವು ಲೇಖಕಿಯರೂ ಬರೆಯತೊಡಗಿದರು. ಅವರ ಬರೆವಣಿಗೆ ಈ ದಲಿತ ಬಂಡಾಯದಿಂದ ಇನ್ನಷ್ಟು ಪ್ರಖರಗೊಳ್ಳಲು ಸಾಧ್ಯವಾಯಿತು. ಗೀತಾ ನಾಗಭೂಷಣ, ಬಿ.ಟಿ.ಲಲಿತಾನಾಯಕ್, ಬಿ.ಟಿ.ಜಾಹ್ನವಿ, ಸರಸ್ವತಿ ಚಿಮ್ಮಲಗಿ, ಸುಕನ್ಯಾ ಮಾರುತಿ ಮುಂತಾದವರು ದಲಿತ ಸಮಾಜವನ್ನೂ ಅವರ ಸಮಸ್ಯೆಗಳನ್ನೂ ಬಹು ಸೂಕ್ಷ್ಮವಾಗಿ ಸಾಹಿತ್ಯದಲ್ಲಿ ಚಿತ್ರಿಸತೊಡಗಿದರು. ಗೀತಾ ನಾಗಭೂಷಣರವರ ಹಸಿ ಮಾಂಸ ಮತ್ತು ಹದ್ದುಗಳು, ಮಾಪುರ ತಾಯಿ ಮಕ್ಕಳು, ಬದುಕು, ಬಿ.ಟಿ.ಲಲಿತಾನಾಯಕ್‌ರವರ ಹಬ್ಬ ಮತ್ತು ಬಲಿ ಮುಂತಾದ ಕೃತಿಗಳು ಕೆಳವರ್ಗದಲ್ಲಿ ನಡೆಯುವ ಜೀವನ ಸಂಗತಿಗಳನ್ನು ಸಮಾಜದ ಗಮನಕ್ಕೆ ಸಾಹಿತ್ಯದ ಮೂಲಕ ತರಲು ಪ್ರಯತ್ನ ಮಾಡಿದವು. ದಲಿತಪರ ಕಾಳಜಿಯಿಂದ ತಮ್ಮ ಚಿಂತನೆಯನ್ನು ದಲಿತೇತರ ಬರೆಹಗಾರ್ತಿಯರೂ ಮಾಡಿದರು. ವೈದೇಹಿ (ಅಸ್ಪೃಶ್ಯರು), ಅನುಪಮಾ ನಿರಂಜನ (ಘೋಷ), ಎಂ.ಎಸ್.ವೇದಾ (ಪಾಲು), ಕೆ.ಎಂ.ವಿಜಯಲಕ್ಷ್ಮೀ (ಭೇದವಿಲ್ಲದ ಆಸೆಗಳು), ಎಚ್.ನಾಗವೇಣಿ (ನಾಕನೇ ನೀರು, ಗಾಂಧಿ ಬಂದ) ಮೊದಲಾದವರ ಕೃತಿಗಳಲ್ಲಿ ಕೆಳವರ್ಗದವರ ಸಮಸ್ಯೆ ಮತ್ತು ನೋವುಗಳ ಬಗ್ಗೆ ತುಡಿತವಿರುವುದನ್ನು ನಾವು ಗುರುತಿಸಬಹುದು.

ದಲಿತ ಬಂಡಾಯದ ಜೊತೆ ಜೊತೆಗೆ ನಡೆದ ಇನ್ನೊಂದು ಚಳವಳಿ ಎಂದರೆ ಸ್ತ್ರೀಯರ ಹೊಸ ಎಚ್ಚರದ ಮತ್ತು ಗಂಭೀರ ಚಿಂತನೆಯನ್ನು ಹೊಂದಿದ ಸ್ತ್ರೀವಾದಿ ಚಳವಳಿ. 1975ರ ಅಂತಾರಾಷ್ಟ್ರೀಯ ಮಹಿಳಾ ವರ್ಷದಿಂದ ಈ ಚಳವಳಿ ಪ್ರಾರಂಭಗೊಂಡಿತೆನ್ನಬಹುದು. ಗಮನಾರ್ಹ ಪ್ರಮಾಣದಲ್ಲಿ ಕನ್ನಡ ಸಾಹಿತಿಗಳು ಸ್ತ್ರೀವಾದಕ್ಕೆ ತೆರೆದುಕೊಳ್ಳತೊಡಗಿದರು. 'ಸಮಾಜ, ಉದ್ಯೋಗ ಮತ್ತು ಕುಟುಂಬಗಳಲ್ಲಿ ಮಹಿಳೆಯರ ತುಳಿತ ಹಾಗೂ ಶೋಷಣೆಯ ಬಗ್ಗೆ ಅರಿವು ಮೂಡಿಸಿ, ಈ ಪರಿಸ್ಥಿತಿಯನ್ನು ಪರಿವರ್ತಿಸಲು ಪುರುಷರು ಮತ್ತು ಸ್ತ್ರೀಯರು ಸೇರಿ ನಡೆಸುವ ಪ್ರಜ್ಞಾಪೂರ್ವಕ ಕ್ರಿಯೆಯೇ ಸ್ತ್ರೀವಾದ' ಎಂದು ಸ್ತ್ರೀವಾದಿ ನೆಲೆಯನ್ನು ವ್ಯಾಖ್ಯಾನಿಸಲಾಯಿತು. ಎಂಬತ್ತರ ದಶಕದಲ್ಲಿ ಸ್ತ್ರೀವಾದಿ ನೆಲೆಯ ಚಿಂತನೆ ಪ್ರಖರವಾಯಿತು. ಪುರುಷ ಪ್ರಧಾನ ವ್ಯವಸ್ಥೆಯನ್ನು ಅರ್ಥಪೂರ್ಣವಾಗಿ ಪ್ರಶ್ನಿಸುವ ಈ ಒಳ ಬಂಡಾಯದ ದನಿ ಕನ್ನಡ ಸಾಹಿತ್ಯ ರಚನೆಗೆ ಹೊಸ ಆಯಾಮವನ್ನು ಸೇರಿಸಿತು. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಸಾಹಿತ್ಯದ ನೆಲೆಯಿಂದ ಮಹಿಳೆಯರು ಸಾಹಿತ್ಯ ರಚನೆಯ ಕಾರ್ಯದಲ್ಲಿ ಆಯಾ ಸಾಹಿತ್ಯ ಸಿದ್ಧಾಂತಗಳ ಹಿನ್ನೆಲೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದುಂಟು. ಆವರೆಗೆ ಹೆಣ್ಣಿಗಾಗುತ್ತಿದ್ದ ಅನ್ಯಾಯಗಳನ್ನು ಖಂಡಿಸಿ, ಆ ಬಗ್ಗೆ ಸಮಾಜ ಆಲೋಚಿಸಬೇಕಾದಂತಹ ಕೃತಿಗಳನ್ನು ಅತ್ಯಂತ ಸಂಕೀರ್ಣತೆಯಲ್ಲಿ ಸಾಹಿತ್ಯಕವಾಗಿ ಹೃದಯಕ್ಕೆ ಮುಟ್ಟುವಂತೆ ತರತೊಡಗಿದರು. ವೀಣಾ ಶಾಂತೇಶ್ವರ ಮತ್ತು ರಾಜಲಕ್ಷ್ಮೀ ಎನ್.ರಾವ್ ಅವರು ನವ್ಯದ ಸಂದರ್ಭದಲ್ಲಿ ಹೊಸ ವಿಧಾನದಲ್ಲಿ ಅಭಿವ್ಯಕ್ತಿಸಿದವರು. ರಾಜಲಕ್ಷ್ಮೀಯವರ ಸಂಗಮ, ವೈಶಾಖ ಶುದ್ಧ ಪೂರ್ಣಿಮ, ಕಲ್ಯಾಣೀ ಮುಂತಾದ ಕಥೆಗಳು ಉಲ್ಲೇಖನೀಯವಾಗಿವೆ. ಸ.ಉಷಾ, ಚ.ಸರ್ವಮಂಗಳಾ, ಶಶಿಕಲಾವಸ್ತ್ರದ, ಜಯ ಭಾಗ್ಯಸುದರ್ಶನ, ಎನ್.ವಿ.ಭಾಗ್ಯಲಕ್ಷ್ಮೀ, ಶೈಲಜಾ ಉಡಚಣ, ಎಚ್.ಎಲ್.ಪುಷ್ಪ, ಸರಸ್ವತಿಗೌಡ ಮುಂತಾದ ಕವಯಿತ್ರಿಯರು ತಮ್ಮ ವ್ಯಕ್ತಿ ವಿಶಿಷ್ಟತೆಯನ್ನು, ಈ ಹೊಸ ಧೋರಣೆಯನ್ನು ಕಾವ್ಯ ಮಾಧ್ಯಮದಲ್ಲಿ ಅತ್ಯಂತ ಶಕ್ತಿಯುತವಾಗಿ ಅಭಿವ್ಯಕ್ತಿಸತೊಡಗಿದರು. ಸ.ಉಷಾ ಅವರ ತೊಗಲು ಗೊಂಬೆಯ ಆತ್ಮಕಥೆ (1973), ವಿಜಯಾದಬ್ಬೆಯವರ ಇರುತ್ತವೆ (1975), ಚ.ಸರ್ವಮಂಗಳಾ ಅವರ ಅಮ್ಮನಗುಡ್ಡ ಎಂಬ ಕವನ ಸಂಕಲನಗಳೂ ಶಾಂತಾದೇವಿ ಕಣವಿಯವರ ಬಯಲು ಆಲಯ, ಜಾತ್ರೆ ಮುಗಿದಿತ್ತು, ವೀಣಾ ಶಾಂತೇಶ್ವರರ ಗಂಡಸರು (1978), ಎನ್.ವಿ.ಭಾಗ್ಯಲಕ್ಷ್ಮೀಯವರ ಬೆರಳಸಂದಿಯ ಬದುಕು (1976), ಅನುಪಮಾ ನಿರಂಜನರ ಮಾಧವಿ (1976), ಭಾಗ್ಯ ಜಯಸುದರ್ಶನ ಅವರ ಬದುಕಿನ ತೆಕ್ಕೆಯಲ್ಲಿ (1978), ಶಾಂತಾ ಜಗದೀಶ್ ಅವರ ಎರಡು ಸೆಳೆ (1977), ಕೊಪ್ಪುಮನೆ ವಿಜಯಲಕ್ಷ್ಮಿಯವರ ಕೆಂಪು ಹೂ (1978) ಮೊದಲಾದ ಹಲವಾರು ಕೃತಿಗಳು ಈ ದಶಕದಲ್ಲಿ ಪ್ರಕಟವಾದುವು.

ಮಹಿಳೆಯರ ಬದುಕಿನ ವಿವಿಧ ಬರೆಹ ಕುರಿತು ಮಹಿಳೆಯರೇ ರಚಿಸಿರುವ 23 ಕೃತಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟವಾದುವು (1975). ಈ ಪ್ರಕಟಣೆಗಳು ಮಹಿಳೆಯರ ಆತ್ಮವಿಶ್ವಾಸಕ್ಕೆ ಹಾಗೂ ಮುಂದಿನ ಬರೆವಣಿಗೆಗೆ ಪ್ರೇರಕವಾದವೆನ್ನಬಹುದು. ಈಗ ಕನ್ನಡದಲ್ಲಿ ಮಹಿಳೆಯರು ರಚಿಸುತ್ತಿರುವ ಸಾಹಿತ್ಯ ವಿಪುಲವಾಗಿ ಪ್ರಕಟವಾಗುತ್ತಿದೆ. ಅನೇಕರು ಈ ಕ್ಷೇತ್ರದಲ್ಲಿ ಸಾಧನೆಯ ಪಥದಲ್ಲಿದ್ದಾರೆ. ಪ್ರತಿಭಾ ನಂದಕುಮಾರ್, ಹೇಮಾ ಪಟ್ಟಣಶೆಟ್ಟಿ, ಮಾಲತಿ, ಮಮತಾ ಜಿ.ಸಾಗರ, ಸವಿತಾ ನಾಗಭೂಷಣ, ಎಚ್.ಎಸ್.ಮುಕ್ತಾಯಕ್ಕ, ಆರ್.ಸುನಂದಮ್ಮ, ಮೊದಲಾದ ಲೇಖಕಿಯರು ಸ್ತ್ರೀವಾದಿ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕಾವ್ಯ, ಕಥೆ, ಕಾದಂಬರಿ, ವಿಚಾರ ಮೊದಲಾದ ಪ್ರಕಾರಗಳಲ್ಲಿ ಕಲಾತ್ಮಕವಾಗಿ ಕೃತಿ ರಚನೆ ಮಾಡುತ್ತಿದ್ದಾರೆ.

ಹೊಸ ತಲೆಮಾರಿನ ವೀಣಾ ಶಾಂತೇಶ್ವರರ ಸ್ತ್ರೀವಾದಿ ಅಂಶಗಳನ್ನೊಳಗೊಂಡ ಗಂಡಸರು (1978) ಕಾದಂಬರಿ ಹೆಚ್ಚಿನ ಚರ್ಚೆಗೆ ಒಳಪಟ್ಟ ಕೃತಿ. ಅನುಪಮಾನಿರಂಜನರು ಪ್ರಗತಿಶೀಲ ಪಂಥದ ಜೊತೆ ತಮ್ಮ ಸಾಹಿತ್ಯಕ ನಿಲವನ್ನು ಗುರುತಿಸಿಕೊಂಡ ಬಳಿಕ ಬಂದ ಕೃತಿಗಳಾದ ಒಂದು ಗಿಣಿಯ ಕಥೆ, ಒಂದು ಘಟನೆ ಮತ್ತು ಆ ನಂತರ, ಮಾಧವಿ ಮತ್ತು ಎಳೆಗಳಲ್ಲಿ ವ್ಯಕ್ತಿಯ ಆಂತರಿಕ ತಳಮಳ ಮತ್ತು ಬಾಹ್ಯ ಪರಿಸರದ ವಾಸ್ತವಗಳನ್ನು ಸ್ತ್ರೀ ಶೋಷಣೆಯನ್ನು ಅದರಾಚೆಗೆ ಹಾರುವ ಸ್ತ್ರೀ ಪ್ರತೀಕಗಳನ್ನು ಸೃಷ್ಟಿಸಿದರು. ವಿಜಯಾ ಅವರು ಎಲ್ಲಿದ್ದೇವೆ ನಾವು ಎಲ್ಲಿದ್ದೇವೆ ಎಂಬಂತಹ ಬೀದಿ ನಾಟಕಗಳಲ್ಲಿ, ಹೆಣ್ಣು ಮತ್ತು ಗಂಡು ಮಕ್ಕಳನ್ನು ಬೆಳೆಸುವ ವಿಧಾನದಲ್ಲಿಯೇ ಇರುವ ತಾರತಮ್ಯಗಳನ್ನು ಎತ್ತಿ ತೋರಿಸುವ ಕೆಲಸ ಮಾಡಿದರು. ಸಾರಾ ಅಬೂಬಕರ್ ಶೋಷಿತ ಮುಸಲ್ಮಾನ ಮಹಿಳೆಯರ ನಿರಂತರ ನೋವುಗಳನ್ನು ತಮ್ಮ ಕಾದಂಬರಿ, ಕತೆಗಳಲ್ಲಿ ತಂದರು (ಚಂದ್ರಗಿರಿಯ ತೀರದಲ್ಲಿ). ವೈದೇಹಿ ಅತ್ಯಂತ ಸೂಕ್ಷ್ಮ ಮತ್ತು ಹೆಪ್ಪುಗಟ್ಟಿಸುವ ರೀತಿಯಲ್ಲಿ ಸ್ತ್ರೀವಾದಿ ನೆಲೆಯ ಕೃತಿಗಳನ್ನು ನೀಡಿದರು. ನೇಮಿಚಂದ್ರರವರು ಸ್ತ್ರೀ ಸಂವೇದನೆಯನ್ನು ತಮ್ಮ ಕೃತಿಗಳಲ್ಲಿ ತಂದರು. ವಿಜಯಾ ದಬ್ಬೆ, ಬಿ.ಎನ್.ಸುಮಿತ್ರಾಬಾಯಿ, ಪ್ರೀತಿ ಶುಭಚಂದ್ರ, ಚಂದ್ರಮತಿ ಸೋಂದಾ ಮೊದಲಾದವರು ಸ್ತ್ರೀ ವಾದಿ ದೃಷ್ಟಿಕೋನದಿಂದ ಕನ್ನಡದ ಪ್ರಮುಖ ಕೃತಿಗಳನ್ನು ವಿಮರ್ಶಿಸತೊಡಗಿದರು.

ಈಗ ಸ್ತ್ರೀ ಜಗತ್ತಿನ ಆಲೋಚನೆಗಳನ್ನು ಮಂಡಿಸಿ, ಹೊಸ ಅನುಭವವನ್ನೂ ಹೊಸ ದೃಷ್ಟಿಯನ್ನೂ ಒದಗಿಸಿ ಕೊಡುವ ಕಲಾತ್ಮಕ ಕೃತಿಗಳನ್ನು ಅನೇಕರು ರಚಿಸುತ್ತಿದ್ದಾರೆ. ಎಚ್.ಎಸ್.ಪಾರ್ವತಿ, ಗಂಗಾ ಪಾದೇಕಲ್, ಕಮಲಾ ಹೆಮ್ಮಿಗೆ, ವಿಜಯ ಸುಬ್ಬರಾಜ್, ಕೆ.ಎಂ.ವಿಜಯಲಕ್ಷ್ಮಿ (ಕೊಪ್ಪುಮನೆ), ಭಾಗೀರಥಿ ಹೆಗಡೆ, ಬಾನು ಮುಷ್ತಾಕ್, ಕೆ.ಆರ್.ಸಂಧ್ಯಾರೆಡ್ಡಿ, ಮಲ್ಲಿಕಾ ಘಂಟಿ, ಎಸ್.ವಿ.ಪ್ರಭಾವತಿ, ಸುನೀತಾ ಶೆಟ್ಟಿ, ಗಿರಿಜಾ ಶಾಸ್ತ್ರಿ, ತುಳಸಿ ವೇಣುಗೋಪಾಲ್ ಮೊದಲಾದವರು ಸ್ತ್ರೀವಾದೀ ಸಿದ್ಧಾಂತಗಳ ಅರಿವಿನ ಹಿನ್ನೆಲೆಯಲ್ಲಿ, ಶಕ್ತಿಯುತವಾಗಿ ಕೃತಿ ರಚಿಸುವ ಮತ್ತು ವಿಮರ್ಶಿಸುವ ಲೇಖಕಿಯರ ದೊಡ್ಡ ಪಡೆಯೇ ಇದೆ. ಕಜ್ಜಾಯ, ನಾಸು ಅಂತಹ ಶ್ರೇಷ್ಠ ಕೃತಿಗಳನ್ನು ಕೊಟ್ಟ ಸುನಂದಾ ಬೆಳಗಾಂವಕರ್, ಜೈನ ಸಾಹಿತ್ಯದಲ್ಲಿ ವಿಶೇಷ ಪರಿಣತಿ ಇರುವ ಕಮಲಾ ಹಂಪನಾ, ಹಲವು ಭಾಷೆಗಳ ಜ್ಞಾನವಿರುವ ಸಾಕಷ್ಟು ಸಾಹಿತ್ಯ ರಚಿಸಿರುವ ನಿರುಪಮಾ; ಹಲವಾರು ಉತ್ತಮ ಕಾದಂಬರಿಗಳನ್ನು ಕೊಟ್ಟಿರುವ ರೇಖಾ ಕಾಖಂಡಕಿ ಹಾಗೂ ವಸುಮತಿ ಉಡುಪ; ಕಥೆಗಾರ್ತಿ ಪ್ರೇಮಾಭಟ್, ಎಂ.ಎಸ್.ವೇದಾ, ಮೊದಲಾದವರು ಯಾವುದೇ ವಾದಕ್ಕೆ ಅಂಟಿಕೊಳ್ಳದೆ ಬರೆಯುವಂಥ' ಸಮರ್ಥ ಲೇಖಕಿಯರು. ಮಹಿಳಾ

ಚಳವಳಿಯ ತಾತ್ತ್ವಿಕತೆಯನ್ನು ಕುರಿತಂತೆ ಬಿ.ಎಸ್.ವೆಂಕಟಲಕ್ಷ್ಮಿ, ಎನ್.ಗಾಯತ್ರಿ ನಾವಡ, ಧರಣೀದೇವಿ ಮಾಲಗತ್ತಿ, ಪ್ರೀತಿ ಶುಭ ಚಂದ್ರ, ಎಚ್.ಎಸ್.ಶ್ರೀಮತಿ ಮೊದಲಾದವರು ಕೃತಿಗಳನ್ನು ಹೊರತಂದಿದ್ದಾರೆ.

ಕರ್ನಾಟಕದಲ್ಲಿ ಸ್ತ್ರೀವಾದವನ್ನು ಚಳವಳಿಯಾಗಿ ರೂಪಿಸುವಲ್ಲಿ ಬಹಳಷ್ಟು ಶ್ರಮ ವಹಿಸಿದ ಬೆಂಗಳೂರಿನ ಕರ್ನಾಟಕ ಲೇಖಕಿಯರ ಸಂಘದ (1979) ಸಾಧನೆ ಕೂಡ ಗಮನಾರ್ಹವಾದದ್ದು. ಈ ಸಂಘ ಮಹಿಳೆಯರನ್ನು ಸಂಘಟಿಸುವ ಕೆಲಸವನ್ನು ಆರಂಭಿಸಿ, ಮಹಿಳೆಯರ ದನಿಗೆ ಪ್ರತ್ಯೇಕ ವೇದಿಕೆಯನ್ನು ಒದಗಿಸಿಕೊಟ್ಟಿದ್ದಲ್ಲದೆ ಸ್ತ್ರೀವಾದದ ಉದ್ದೇಶ, ಅರ್ಥ, ಚಿಂತನೆ, ಅದರ ಅವಶ್ಯಕತೆ ಇತ್ಯಾದಿಗಳ ಬಗ್ಗೆಯೇ ಹೆಚ್ಚು ಒತ್ತುಕೊಟ್ಟು ಹಲವಾರು ಕಾರ್ಯಕ್ರಮಗಳನ್ನೂ ವಿಚಾರ ಸಂಕಿರಣಗಳನ್ನೂ ಕಾರ್ಯಾಗಾರಗಳನ್ನೂ ನಡೆಸಿತು. ಈ ಸಂಘ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನಗಳನ್ನೂ ನಡೆಸಿದೆ. ಬೆಂಗಳೂರಿನಲ್ಲಿ ಸರೋಜಿನಿ ಮಹಿಷಿಯವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಪ್ರಥಮ ಸಮ್ಮೇಳನ ನಡೆಯಿತು (1985). ಅನಂತರ ಪದ್ಮಾ ಶೆಣೈರವರ ಅಧ್ಯಕ್ಷತೆಯಲ್ಲಿ ದ್ವಿತೀಯ ಸಮ್ಮೇಳನ (1988), ಧಾರವಾಡದಲ್ಲಿ ಶಾಂತಾದೇವಿ ಮಾಳವಾಡರ ಅಧ್ಯಕ್ಷತೆಯಲ್ಲಿ ಮೂರನೆಯ ಸಮ್ಮೇಳನ (1993), ಮಂಗಳೂರಿನಲ್ಲಿ ಎಚ್.ಎಸ್.ಪಾರ್ವತಿಯವರ ಅಧ್ಯಕ್ಷತೆಯಲ್ಲಿ ನಾಲ್ಕನೆಯ ಸಮ್ಮೇಳನ (1996), ವೀಣಾ ಶಾಂತೇಶ್ವರರ ಅಧ್ಯಕ್ಷತೆಯಲ್ಲಿ ಐದನೆಯ ಸಮ್ಮೇಳನ ನಡೆದುವು. ಸ್ತ್ರೀ ಸಾಹಿತ್ಯ ಚರಿತ್ರೆಗೆ ಉಪಯುಕ್ತವಾಗುವ ಹಲವು ಪುಸ್ತಕಗಳನ್ನೂ ಈ ಸಂಘ ಪ್ರಕಟಿಸಿದೆ. ಈ ಸಂಘದ ಪ್ರಭಾವ ಮತ್ತು ಪ್ರೋತ್ಸಾಹಗಳಿಂದ ಉತ್ತರ ಕರ್ನಾಟಕ ಲೇಖಕಿಯರ ಸಂಘ (1985), ದಕ್ಷಿಣ ಕನ್ನಡ ಮತ್ತು ಕಾಸರಗೋಡು ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ (1987) ಸ್ಥಾಪನೆಯಾಗಿ ಸ್ತ್ರೀವಾದಕ್ಕೆ ಬೆಂಬಲ ನೀಡಿದುವು.

ಯಾವುದೇ ಸಾಹಿತ್ಯದ ಚಳವಳಿಯ ಪ್ರಭಾವ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ಚಿ.ನಾ.ಮಂಗಳಾ ಅವರಿಂದ 1987ರಲ್ಲಿ 'ಮಹಿಳಾ ಅಧ್ಯಯನ' ಎಂಬ ಹೊಸ ವಿಷಯ ಬಿ.ಎ. ವಿದ್ಯಾರ್ಥಿನಿಯರಿಗಾಗಿ ಆರಂಭಗೊಂಡು, ಈಗ ಹೆಚ್ಚು ಕಡಿಮೆ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಲಾಗಿದೆ. ಸ್ತ್ರೀವಾದದ ಪ್ರಭಾವದಿಂದಾಗಿ, ಕನ್ನಡದ ಕೆಲ ಮಹಿಳೆಯರು ವಿಶ್ವವಿದ್ಯಾಲಯಗಳಲ್ಲಿ, ಕಾನೂನು ಕ್ಷೇತ್ರ, ವೈದ್ಯಕೀಯ, ವೈಜ್ಞಾನಿಕ ಕ್ಷೇತ್ರ-ಹೀಗೆ ತಾವು ದುಡಿಯುವ ಕ್ಷೇತ್ರಗಳಲ್ಲಿ, ಮಹಿಳೆಯರ ಸ್ಥಾನಮಾನವನ್ನು ಹೆಚ್ಚಿಸಲು ಒಂದಲ್ಲ ಒಂದು ರೀತಿಯಲ್ಲಿ ಶ್ರಮಿಸುತ್ತಿದ್ದಾರೆ.

ಮಾನವತಾವಾದದ ಒಂದು ಅಂಗವಾದ ಈ ಸ್ತ್ರೀವಾದ ಈಗ ಸರ್ವಮಾನ್ಯವಾಗಿದೆ. ಕೇವಲ ಲೇಖಕಿಯರ ಬರೆಹಗಳಲ್ಲಷ್ಟೇ ಅಲ್ಲದೆ ಲೇಖಕರ ಸಾಹಿತ್ಯ ಕೃತಿಗಳಲ್ಲಿಯೂ ಸ್ತ್ರೀವಾದಿ ನೆಲೆಯನ್ನು ನಾವು ಇತ್ತೀಚಿನ ದಿನಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. (ಕೆ.ಎಂ.ವಿ.)

**ಕನ್ನಡದಲ್ಲಿ ಮುಕ್ತಕ ಸಾಹಿತ್ಯ :** ಸಂಸ್ಕೃತ ಸಾಹಿತ್ಯದಲ್ಲಿ ಲೋಕೋಕ್ತಿ, ಶೋಕಗೀತೆ, ಚರಮಗೀತೆ, ಚಾಟುಪದ್ಯ, ಸೂಕ್ತಿ, ಸುಭಾಷಿತ ಮುಂತಾದ ಎಲ್ಲ ಬಗೆಯ ಲಘು ಪದ್ಯಗಳನ್ನೂ ಒಟ್ಟಾಗಿ ಮುಕ್ತಕಗಳು ಎಂಬ ಹೆಸರಿನಿಂದ ಕರೆಯುವುದು ರೂಢಿಯಲ್ಲಿದೆ. ಕನ್ನಡದಲ್ಲಿ ಕೂಡ ಈ ಬಗೆಯ ಲಘು ಪದ್ಯಗಳು ಪೂರ್ವದಿಂದಲೂ ರಚಿತವಾಗುತ್ತಲೇ ಬಂದಿವೆ. ಪ್ರಾಚೀನ ಕನ್ನಡದಲ್ಲಿ ಇವನ್ನು ಇಡುಕುಂಗಬ್ಬ, ಮುಕ್ತಕ, ವಚನ, ಚಾಟುಪದ್ಯ, ಶೋಕಗೀತೆ ಮುಂತಾಗಿ ಕರೆದರೆ ಹೊಸಗನ್ನಡದಲ್ಲಿ ನಾಟುನುಡಿ, ಹನಿಗವನ, ಮಿನಿಗವನ, ಚುಟುಕ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹಾಗೆಯೇ ತೆಲುಗಿನಲ್ಲಿ ಚಾಟುಪದ್ಯ ಎಂದೂ ತಮಿಳಿನಲ್ಲಿ ನಾಟುನುಡಿ ಎಂದೂ ಉರ್ದುವಿನಲ್ಲಿ ಶಾಯಿರಿ ಎಂದೂ ಪ್ರಾಕೃತದಲ್ಲಿ ಗಾಹೆ ಎಂದೂ ಜಪಾನೀ ಭಾಷೆಯಲ್ಲಿ ಹೈಕು ಎಂದೂ ಕರೆಯುತ್ತಾರೆ. ಪಾಶ್ಚಿಮಾತ್ಯ ಸಾಹಿತ್ಯದಲ್ಲಿಯಂತೂ ಈ ಕಾವ್ಯ ಪ್ರಕಾರದ ಮಹಾಪೂರವೇ ಹರಿದಿದೆ. ಇಂಗ್ಲಿಷ್‌ನಲ್ಲಿ ಎಪಿಗ್ರಮ್, ಲಿಮೆರಿಕ್, ಎಪಿಗ್ರಮ್ಯಾಟಿಕ್, ಎಲಿಜಿ, ನಾನ್‌ಸೆನ್ಸ್ ಪೊಯೆಮ್ಸ್ ಮುಂತಾಗಿ ಕರೆಯಲ್ಪಡುವ ರಚನೆಗಳು ನಮ್ಮ ಮುಕ್ತಕವನ್ನು ಹೋಲುವ ಪದ್ಯಗಳೇ ಆಗಿವೆ.

ಮುಕ್ತಕ ಆಕಾರದಲ್ಲಿ ಅತ್ಯಂತ ಸಣ್ಣದಾದ, ಒಂದೇ ಒಂದು ಭಾವವನ್ನು ಅರ್ಥಗರ್ಭಿತವಾಗಿ ಅಭಿವ್ಯಕ್ತಿಸುವ ಒಂದು ಬಿಡಿಪದ್ಯ. ಭಾವಕ್ಕೆ ಸೂಕ್ತ ಭಾಷೆಯಲ್ಲಿ ಅಭಿವ್ಯಕ್ತಗೊಂಡು ಮಿಂಚಿನಂತೆ ಕೋರೈಸುವ ಗುಣವುಳ್ಳದ್ದು. ಕಾವ್ಯ ಪ್ರಕಾರಗಳಲ್ಲಿಯೇ ಮುಕ್ತಕ ಅತ್ಯಂತ ಸಣ್ಣದಾದದ್ದೂ ಸುಂದರವಾದದ್ದೂ ಹೌದು.

ಮುಕ್ತಕದ ಪ್ರಾಚೀನತೆಯನ್ನು ಗುರುತಿಸುವುದು ಸುಲಭವಲ್ಲ. ಈಗ ತಿಳಿದಿರುವ ಮಟ್ಟಿಗೆ ವೇದಗಳೇ ಅತ್ಯಂತ ಪ್ರಾಚೀನತಮ ಕೃತಿಗಳಾಗಿರುವುದರಿಂದ ಸದ್ಯದ ಮಟ್ಟಿಗೆ ಇವೇ ಮುಕ್ತಕ ಪರಂಪರೆಯ ತಲಕಾವೇರಿಗಳೆಂದು ಹೇಳಬಹುದು. ಆದರೆ ವೇದಗಳಿಗಿಂತಲೂ ಮೊದಲು ಜನಪದರಲ್ಲಿ, ಜನಪದ ಗೀತೆಗಳ ರೂಪದಲ್ಲಿ ಈ ಮುಕ್ತಕಗಳು ಸೃಷ್ಟಿಗೊಂಡಿರಬಹುದೆಂದು ಹೇಳಬಹುದು.

ವೇದಗಳಲ್ಲದೆ ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತಗಳಲ್ಲಿಯೂ ಮುಕ್ತಕ ರೂಪಗಳು ದೊರೆಯುತ್ತವೆ. ಸಂಸ್ಕೃತ ಸಾಹಿತ್ಯವಂತೂ ಮುಕ್ತಕಗಳ ಉಗ್ರಾಣವೇ ಆಗಿದೆ. ಅಲ್ಲಿ ಮುಕ್ತಕಗಳು ಮಹಾಕಾವ್ಯ, ಪುರಾಣ, ಐತಿಹಾಸಿಕ ಕಾವ್ಯ, ನಾಟಕ, ಕಥೆ, ಖಂಡಕಾವ್ಯ, ಶಾಸನ ಮುಂತಾದ ಕೃತಿಗಳ ನಡುನಡುವೆ ಬಿಡಿಯಾಗಿ ದೊರೆಯುತ್ತವೆ. ಅಲ್ಲದೆ ಬರಿಯ ಮುಕ್ತಕಗಳನ್ನೇ ಸಂಕಲನ ರೂಪದಲ್ಲಿ ಹೊಂದಿರುವ ಸಾಹಿತ್ಯ ರಾಶಿಯೇ ಸಂಸ್ಕೃತದಲ್ಲಿದೆ. ಪ್ರಾಕೃತ ಭಾಷೆಯಲ್ಲಿಯೂ ಮುಕ್ತಕಗಳು ವಿಶೇಷವಾಗಿ ರಚನೆಯಾಗಿವೆ. ಗಾಥಾಸಪ್ತಶತಿ, ತಂದುಲವೇಯಾಲಿಯಾ, ಭಕ್ತಪರಿಣ್ಣಾಯ, ವಜ್ಜಾಲಗ್ಗಂ, ಗಾಥಾಕೋಶೊ ಮುಂತಾದವು ಪ್ರಸಿದ್ಧ ಮುಕ್ತಕ ಸಂಕಲನಗಳು.

ಕನ್ನಡದಲ್ಲಿಯೂ ಮುಕ್ತಕಗಳು ಅಪಾರ ಸಂಖ್ಯೆಯಲ್ಲಿ ರಚಿತವಾಗಿವೆ. ಕನ್ನಡ ಶಾಸನಗಳು ಮತ್ತು ಪ್ರಾಚೀನ ಕನ್ನಡ ಕಾವ್ಯಗಳ ನಡುನಡುವೆ ಮುಕ್ತಕಗಳು ಸೇರಿಕೊಂಡಿರುವುವಲ್ಲದೆ ಹಲವು ಬಗೆಯ ಮುಕ್ತಕ ಸಂಕಲನಗಳೂ ಸಂಕಲಿತವಾಗಿವೆ.

ಕನ್ನಡದ ಸುಪ್ರಸಿದ್ಧ ಸಂಕಲನ ಗ್ರಂಥಗಳಾದ ಸೂಕ್ತಿ ಸುಧಾರ್ಣವ ಮತ್ತು ಕಾವ್ಯಸಾರ, ತಾತ್ತ್ವಿಕ ಗ್ರಂಥಗಳಾದ ಹದಿಬದೆಯ ಧರ್ಮ, ಅನುಭವ ಮುಕುರ, ಅನುಭವಸಾರ, ದ್ವಾದಶಾನುಪ್ರೇಕ್ಷೆ, ಅನುಭವಾಮೃತ, ಸಮಯ ಪರೀಕ್ಷೆ ಮುಂತಾದ ಕೃತಿಗಳಲ್ಲಿ ವಿಪುಲವಾಗಿ ಮುಕ್ತಕ ರೂಪದ ಪದ್ಯಗಳು ದೊರೆಯುತ್ತವೆ. ಪ್ರಾಚೀನ ಕನ್ನಡದ ವಿವಿಧ ಲಕ್ಷಣ ಗ್ರಂಥಗಳಾದ ಕವಿರಾಜಮಾರ್ಗ, ಛಂದೋಂಬುಧಿ, ಉದಯಾದಿತ್ಯಾಲಂಕಾರ, ಶೃಂಗಾರ ರತ್ನಾಕರ, ಶಬ್ದಮಣಿದರ್ಪಣ, ಕಾವ್ಯಾವಲೋಕನ, ರಸರತ್ನಾಕರ, ಛಂದಸ್ಸಾರ ಮುಂತಾದ ಕೃತಿಗಳಲ್ಲಿಯೂ ಮುಕ್ತಕಗಳು ದೊರೆಯುತ್ತವೆ. ವೈಯಾಕರಣರು, ಆಲಂಕಾರಿಕರು, ಛಾಂದಸರು ಮೊದಲಾದ ಲಾಕ್ಷಣಿಕರು ತಮ್ಮ ಲಕ್ಷಣ ಗ್ರಂಥಗಳಲ್ಲಿ ಬೇರೆ ಬೇರೆ ಕಾವ್ಯಗಳಿಂದಾಯ್ದು ಇಂಥ ಪದ್ಯಗಳನ್ನು ಸಂದರ್ಭವರಿತು ಉದಾಹರಿಸಿರುತ್ತಾರೆ. ಇದೇ ರೀತಿ ಕನ್ನಡದಲ್ಲಿ ವಿಶೇಷವಾಗಿ ರಚನೆಯಾಗಿರುವ ಅಷ್ಟಕಗಳು ಮತ್ತು ಶತಕಗಳು ಸಹ ಶ್ರೇಷ್ಠಮಟ್ಟದ ಮುಕ್ತಕಗಳನ್ನು ಒಳಗೊಂಡಿವೆ.

ಕನ್ನಡ ಸಾಹಿತ್ಯಕ್ಕೆ ಸಾವಿರಾರು ಸಂಖ್ಯೆಯಲ್ಲಿ ಅಮೂಲ್ಯ ಮುಕ್ತಕಗಳನ್ನು ಒದಗಿಸಿದ ಇನ್ನೊಂದು ಸಾಹಿತ್ಯವೆಂದರೆ ಅದು ವಚನ ಸಾಹಿತ್ಯ. ಕನ್ನಡದ ಅತ್ಯಂತ ಜನಪ್ರಿಯ ಕವಿ ಸರ್ವಜ್ಞನ ಖ್ಯಾತಿಗೆ ಅವನ ಸರಳಸುಂದರ ವಚನಗಳೇ ಕಾರಣವಾಗಿವೆ. ಅವನ ಪ್ರತಿಯೊಂದು ವಚನವೂ ಒಂದು ಅಪೂರ್ವ ಮುಕ್ತಕವಾಗಿದ್ದು, ಸರ್ವಜ್ಞ ಕನ್ನಡ ಮುಕ್ತಕ ಸಾಮ್ರಾಜ್ಯದ ಸಾಮ್ರಾಟ ಎಂಬ ಖ್ಯಾತಿಗೂ ಪಾತ್ರನಾಗಿದ್ದಾನೆ.

ಕನ್ನಡ ಜನಪದ ಸಾಹಿತ್ಯ ಮುಕ್ತಕ ಸಾಹಿತ್ಯದ ಗಣಿಯಿದ್ದಂತೆ. ಏಳೆ, ದ್ವಿಪದಿ, ತ್ರಿಪದಿ ಮತ್ತು ಸಾಂಗತ್ಯ ರೂಪದಲ್ಲಿ ರಚಿತವಾಗಿರುವ ಈ ಮುಕ್ತಕಗಳು ಜನಪದರ ಅನುಭವದ ರಸಘಟ್ಟಿಗಳಾಗಿ ರಾರಾಜಿಸುತ್ತಿವೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದೊರೆಯುವ ಮುಕ್ತಕಗಳಿಗೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಒಂದು ಶೃಂಗಾರ ಮುಕ್ತಕ:

ನೆನೆಯಲು ಬೇಗುದಿಗೊಳಿಸುವಳು
ಕಾಣಲು ಹುಚ್ಚನು ಹಿಡಿಸುವಳು
ಮುಟ್ಟಲು ಮೂರ್ಛೆಗೆ ಸಲಿಸುವಳು
ಪ್ರೇಯಸಿ ಎಂತಿವಳು

ಪ್ರೇಯಸಿಯೊಬ್ಬಳು ತನ್ನ ಪ್ರಿಯತಮನ ಮೇಲೆ ಬೀರುವ ಗಾಢ ಪ್ರಭಾವವನ್ನು ಈ ಮುಕ್ತಕ ವರ್ಣಿಸುತ್ತದೆ.

ಕನ್ನಡ ಕಾವ್ಯ ಹೇಗೆ ವಿಭಿನ್ನ ರಸಿಕರನ್ನು ರಂಜಿಸಬೇಕೆಂಬುದನ್ನು ಬಯಸುವ ಕವಿಯೊಬ್ಬನ ಅನಿಸಿಕೆಯ ರೂಪ ಹೀಗಿದೆ:

ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
ರಯ್ಯಾ ಮಂಚಿದಿಯೆನೆ ತೆಲುಗಾ
ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು
ಮೆಯ್ಯುಬ್ಬಿ ಕೇಳಬೇಕಣ್ಣ (ರತ್ನಾಕರವರ್ಣಿ)

ಧನಮದದಿಂದ ಮೆರೆಯುವವರನ್ನು ವಿಡಂಬಿಸುವ ವಚನಸಾಹಿತ್ಯದ ಒಂದು ಮುಕ್ತಕ:

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರು ನೋಡಾ ಕೂಡಲ ಸಂಗಮದೇವ (ಬಸವಣ್ಣ)

ಸ್ತ್ರೀ ಪುರುಷರು ಪರಸ್ಪರ ಪ್ರೀತಿಸಿ ಮದುವೆಯಾಗುವುದರ ಮಹತ್ತ್ವವನ್ನು ಸಾರುವ ಸರ್ವಜ್ಞನ ಒಂದು ಸುಂದರ ಮುಕ್ತಕ ಹೀಗಿದೆ:

ಮನಬಂದ ಹೆಣ್ಣನ್ನು ವಿನಯದಲಿ ಕರೆದಿತ್ತು
ಮನ ಮುಟ್ಟಿ ಬಾಳ್ವೆ ಮಾಡಿದರೆ ಅಮೃತದ
ಕೆನೆಯ ಸವಿದಂತೆ ಸರ್ವಜ್ಞ

ಹೆತ್ತು ಹೊತ್ತ ತಂದೆ ತಾಯಿಗಳ ಹಿರಿಮೆಯನ್ನು ವರ್ಣಿಸುವ ಒಂದು ಜನಪದ ಮುಕ್ತಕ:

ತಂದೀನ ನೆನೆದರೆ ತಂಗೂಳು ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ನ ನೆನೆದರೆ
ಮಾಸೀದ ತಲೆಯು ಮಡಿಯಾಯ್ತು

ಹೊಸಗನ್ನಡದಲ್ಲಿಯೂ ವಿಪುಲವಾಗಿ ಮುಕ್ತಕಗಳು ರಚನೆಗೊಂಡಿವೆ. ಸಂಸ್ಕೃತ, ಪ್ರಾಕೃತ, ಹಿಂದಿ, ಇಂಗ್ಲಿಷ್ ಹಾಗೂ ಇತರ ಭಾರತದ ಮತ್ತು ವಿದೇಶೀಯ ಭಾಷೆಗಳ ಪ್ರಭಾವದಿಂದಾಗಿ ಹೊಸಗನ್ನಡ ಕವಿಗಳು ಮುಕ್ತಕಧಾರೆಯನ್ನೇ ಹರಿಸಿದ್ದಾರೆ. ಅವುಗಳಲ್ಲಿ ನಾನಾಛಂದಸ್ಸು, ನಾನಾಲಯ ಹಾಗೂ ವಸ್ತುಗಳು ಮೈಗೂಡಿಕೊಂಡಿವೆ. ಹಳಗನ್ನಡ, ನಡುಗನ್ನಡ, ಜನಪದ ಮತ್ತು ಹೊಸಗನ್ನಡದ ಮಿಕ್ಕ ಶೈಲಿಗಳಲ್ಲಿ ಈ ಮುಕ್ತಕಗಳು ರಚಿತವಾಗಿವೆ. ಹಿಂದೆಂದೂ ಕಾಣದಂಥ ಮುಕ್ತಕ ವೈವಿಧ್ಯವನ್ನು ನಾವು ಇಂದಿನ ಮುಕ್ತಕ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಹೊಸಗನ್ನಡದಲ್ಲಿ ಮುಕ್ತಕ ರಚನೆ ಯಾರಿಂದ ಮೊದಲಾಯಿತೆಂದು ಖಚಿತವಾಗಿ ಹೇಳುವುದಕ್ಕೆ ಬರುವುದಿಲ್ಲವಾದರೂ ನಮಗೆ ದೊರಕುವ ಆಧಾರದ ಮೇಲೆ ಆ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ. ಅವರು 1928ರಿಂದಲೇ ಇವುಗಳ ರಚನೆಗೆ ತೊಡಗಿದರು. ತೀ.ನಂ.ಶ್ರೀ ಅವರೂ ಸುಮಾರು ಇದೇ ಸಮಯದಲ್ಲಿ ಬಿಡಿ ಪದ್ಯಗಳ ರಚನೆಗೆ ತೊಡಗಿದರು. 1932ರಲ್ಲಿ ಪ್ರಕಟವಾದ ಅವರ ಒಲುಮೆ ಕವನ ಸಂಕಲನದಲ್ಲಿ ಅಂಥ ಕೆಲವು ಮುಕ್ತಕಗಳನ್ನು ಸೇರಿಸಿ ಪ್ರಕಟಿಸಿ, ಹೊಸಗನ್ನಡದಲ್ಲಿ ಈ ಕಾವ್ಯ ಪ್ರಕಾರ ಬೆಳೆಯುವುದಕ್ಕೆ ಅಂಕುರಾರ್ಪಣ ಮಾಡಿದರು. ಇವರ ಅನಂತರ 1938ರಲ್ಲಿ ಬಿ.ಶ್ರೀಕಂಠಯ್ಯ ಎಂಬವರು ಸೂಕ್ತಿಸುಧೆ ಎಂಬ ಸ್ವತಂತ್ರ ಮುಕ್ತಕ ಸಂಕಲನವನ್ನು ಪ್ರಕಟಿಸಿದರು. ಅದಾದ ಮೇಲೆ 1940ರಲ್ಲಿ ಜಿ.ಪಿ.ರಾಜರತ್ನಂ ಅವರು ತಮ್ಮ ನೂರು ಪುಟಾಣಿ ಎಂಬ ಸಂಕಲನವನ್ನೂ ಅನಂತರ ಚುಟಕ ಎಂಬ ಸಂಕಲನವನ್ನೂ ಪ್ರಕಟಿಸಿ ಮುಕ್ತಕ ರಚನೆಗೆ ಚಾಲನೆ ನೀಡಿದರು.

ಹೊಸಗನ್ನಡದ ಸಂದರ್ಭದಲ್ಲಿ ಅನೇಕ ಕವಿಗಳು ಸಾವಿರಾರು ಮುಕ್ತಕಗಳನ್ನು ರಚಿಸಿದ್ದಾರೆ. ಅಂಥವರಲ್ಲಿ ವಿ.ಜಿ.ಭಟ್ಟ, ಡಿ.ವಿ.ಜಿ., ಅಕಬರ ಆಲಿ, ತೋಫಖಾನೆ ಶ್ರೀನಿವಾಸ, ಎಸ್.ವಿ.ಪರಮೇಶ್ವರಭಟ್ಟ, ದಿನಕರ ದೇಸಾಯಿ, ಸಿಪಿಕೆ, ಗುಂಡ್ಮಿ ಚಂದ್ರಶೇಖರ ಐತಾಳ, ಎನ್.ಪ್ರಹ್ಲಾದರಾವ್, ದ್ವಾರಕಾನಾಥ್ ಕಬಂಡಿ, ನಾ.ಕಸ್ತೂರಿ, ಇಟಗಿ ಈರಣ್ಣ, ದುಂಡಿರಾಜ್. ವಿಡಂಬಾರಿ, ಸಿದ್ಧಯ್ಯ ಪುರಾಣಿಕ, ಬಿ.ಆರ್.ಲಕ್ಷ್ಮಣರಾವ್, ಸದಾಶಿವ ಎಣ್ಣೆಹೊಳೆ, ಸುಜನಾ, ಡಿ.ವಿ.ಬಡಿಗೇರ, ಚಿತ್ರಲಿಂಗಯ್ಯ, ಜರಗನಹಳ್ಳಿ ಶಿವಶಂಕರ, ದೊಡ್ಡರಂಗೇಗೌಡ, ಬೆಮೆಲ್ ಕಂಪ್ಲಪ್ಪ, ಕೆ.ವಿ.ರಾಜೇಶ್ವರಿ ಮೊದಲಾದವರನ್ನು ಹೆಸರಿಸಬಹುದು. ಮುಕ್ತಕೇ ಕವಯೋನಂತಾಃ (ಮುಕ್ತಕ ಕವಿಗಳಿಗೆ ಲೆಕ್ಕವಿಲ್ಲ) ಎಂದಂತೆ ಇಂದು ನೂರಾರು ಮಂದಿ ಕವಿಗಳು ಮುಕ್ತಕ ರಚನೆಯಲ್ಲಿ ತೊಡಗಿದ್ದಾರೆ. ಹೊಸಗನ್ನಡ ಮುಕ್ತಕಗಳಿಗೆ ಕೆಲವು ಉದಾಹರಣೆಗಳು ಹೀಗಿವೆ:

ಮಾನವ ತನ್ನ ಜೀವನದಲ್ಲಿ ಅಮೂಲ್ಯವಾದ ಕಾಲವನ್ನು ಹೇಗೆ ಅಳವಡಿಸಿಕೊಳ್ಳಬೇಕೆಂಬುದನ್ನು ಬಲು ಸ್ವಾರಸ್ಯಪೂರ್ಣವಾಗಿ ಹೇಳುವ ಒಂದು ಮುಕ್ತಕ:

ಒಮ್ಮೆ ಹೂದೋಟದಲಿ ಒಮ್ಮೆ ಕೆಳೆಕೂಟದಲಿ
ಒಮ್ಮೆ ಸಂಗೀತದಲಿ ಒಮ್ಮೆ ಶಾಸ್ತ್ರದಲಿ
ಒಮ್ಮೆ ಸಂಸಾರದಲಿ ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೊ ಮಂಕುತಿಮ್ಮ (ಡಿ.ವಿ.ಜಿ.)

ಮಡದಿ ಮನೆಯಲ್ಲಿಲ್ಲದಿರುವಾಗಿನ ವಿರಹವೇದನೆಯನ್ನು ಚಿತ್ರಿಸುವ ಒಂದು ಮುಕ್ತಕ:

ಮಲ್ಲಿಗೆಯ ಹೂವಿಂದೆ ಮನೆಯೆಲ್ಲ ಘಂ
ಮುಡಿಯುವವಳಿಲ್ಲದೆಯೆ ಮನ ಬಿಕೋ ಬಿಂ (ಕುವೆಂಪು)

ಒಲವಿಲ್ಲದ ಹೆಣ್ಣಿನ ಸಹವಾಸವನ್ನು ಬಿಟ್ಟುಬಿಡುವುದೇ ಲೇಸು, ಇಲ್ಲವಾದರೆ ಗಂಡಾಂತರ ತಪ್ಪಿದ್ದಲ್ಲ ಎಂಬುದನ್ನು ಸಾರುವ ಒಂದು ಮುಕ್ತಕ:

ಮನೆ ಬಿಟ್ಟ ಹೆಣ್ಣನು ನೆಲೆ ಬಿಟ್ಟ ಬಸ್ಸನು
ಹಿಡಿಯುವೆನೆಂದೋಡಬೇಡ
ಮತ್ತೊಂದು ಮಾರಿಯ ಮತ್ತೊಂದು ಲಾರಿಯ
ಬಾಯಿಗೆ ಸಿಕ್ಕೀಯೆ ನೋಡ (ಎಸ್.ವಿ.ಪರಮೇಶ್ವರಭಟ್ಟ)

ಹಟಮಾರಿ ಗಂಡನ ನಿರ್ಬಂಧಕ್ಕೆ ಸಿಲುಕಿಕೊಂಡು ತೊಳಲುವ ಹೆಂಡತಿಯ ಕರುಣಾಜನಕ ಸ್ಥಿತಿಯನ್ನು ಚಿತ್ರಿಸುವ ಒಂದು ಮುಕ್ತಕ:

ಮನೆಯಲ್ಲೂ ನೆರೆಯಲ್ಲೂ ಹಾಲಿಲ್ಲವೆಂದರೂ
ಗಂಡ ಒದರಿದ ಬೇಕೇ ಬೇಕು ಕಾಫೀ
ಎಂತೆಂತೋ ಮಾಡಿದಳು ಕಾಫಿಯನು, ಮಗು ಅತ್ತು
ಹಾಲಿಲ್ಲ ಅಂದಿತ್ತು ಮೊಲೆಯ ಸೀಪಿ (ವಿ.ಜಿ.ಭಟ್ಟ)

ಬೂಟಾಟಿಕೆಯ ಜನರನ್ನು ವಿಡಂಬಿಸುವ ಒಂದು ಮುಕ್ತಕ:

ಗಾಂಧಿ ಜಯಂತಿಯಂದು ಮಾಂಸವನ್ನು ತಿನ್ನಬಹುದೇ ಎಂಬ
ಪ್ರಶ್ನೆಯೊಮ್ಮೆ ಮನಸ್ಸಿಗೆ ಬಂತು, ಮರು ಕ್ಷಣದಲ್ಲಿ
ಮನಸ್ಸು ಹೇಳಿತು ಅಯ್ಯೊ ಹುಚ್ಚ! ಗಾಂಧಿಯನ್ನೆ
ತಿಂದಿದ್ದೇವೆ, ಇನ್ನು ಮಾಂಸದಲ್ಲೇನಿದೆ (ಸಿ.ಪಿ.ಕೆ.)

ತಾಯಿ ವಾತ್ಸಲ್ಯದ ಮಹಿಮೆ ಅಪಾರವಾದುದು, ಅವ್ಯಾಜವಾದುದು ಎಂಬುದನ್ನು ಬಲು ಮಾರ್ಮಿಕವಾಗಿ ಅಭಿವ್ಯಕ್ತಿಸುವ ಒಂದು ಮುಕ್ತಕ:

ತಾಯಿ ತೋಳಿಂದೊಮ್ಮೆ ನನ್ನನ್ನು ನೇವರಿಸಿದಳು
ಓ, ತಿಂಗಳ ಮುಡಿದವನೇ
ಸಾವಿರಾರು ಪುಟ ಹೇಳದ ವಾತ್ಸಲ್ಯವನು
ಅವಳ ಬೆರಳುಗಳು ತಿಳಿಸಿದುವು (ಗುಂಡ್ಮಿ ಚಂದ್ರಶೇಖರ ಐತಾಳ)

ಹೀಗೆ ಕನ್ನಡಲ್ಲಿ ಮುಕ್ತಕ ಸಾಹಿತ್ಯದ ಬೆಳೆ ಹುಲುಸಾಗುತ್ತ ಸಾಗಿದೆ.

(ಎಂ.ಪಿ.ಎಂ.)

**ಕನ್ನಡದಲ್ಲಿ ವಚನ ಸಾಹಿತ್ಯ :** ವಚನ ಕನ್ನಡದ ವಿಶಿಷ್ಟ ಸಾಹಿತ್ಯ ಪ್ರಕಾರ; ವೀರಶೈವಸಾಹಿತ್ಯದ ಮೊದಲ ಬೆಳೆ. ಈ ಸಾಹಿತ್ಯವನ್ನು ಐತಿಹಾಸಿಕವಾಗಿ ಬಸವಪೂರ್ವಯುಗ, ಬಸವಯುಗ, ಬಸವೋತ್ತರಯುಗ ಎಂದು ವಿಭಾಗಿಸಲಾಗುತ್ತದೆ.

ಶಂಕರದಾಸಿಮಯ್ಯ, ಜೇಡರದಾಸಿಮಯ್ಯ, ಕೊಂಡಗುಳಿ ಕೇಶಿರಾಜ ಮೊದಲಾದವರು ಬಸವಪೂರ್ವಯುಗದ ಶರಣರು. ಇವರಲ್ಲಿ ಚಾಳುಕ್ಯ 2ನೆಯ ಜಯಸಿಂಹನ (1015-44) ಅರಸಿ ಸುಗ್ಗಲೆಯ ಗುರುವಾದ ಜೇಡರದಾಸಿಮಯ್ಯನ ವಚನಗಳು ಲಭಿಸಿವೆ. 10ನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿರಬಹುದಾದ ಈತನ ಗುರು ಶಂಕರದಾಸಿಮಯ್ಯನೂ ವಚನಗಳನ್ನು ರಚಿಸಿರಬಹುದು. ಜೇಡರ ದಾಸಿಮಯ್ಯನ ಹದಗೊಂಡ ಶೈಲಿಯೂ ಈ ಹೇಳಿಕೆಗೆ ಪುಷ್ಟಿ ನೀಡುತ್ತದೆ. ಅದಕ್ಕಾಗಿ ಈ ಸಾಹಿತ್ಯಪ್ರಕಾರದ ಪ್ರಾಚೀನತೆ 10ನೆಯ ಶತಮಾನದಷ್ಟು ಹಿಂದೆ ಸರಿಯಬಹುದಾಗಿದೆ. ಈ ಕಾಲದ ವಚನಗಳು ಅಲ್ಲಲ್ಲಿ ಅಂಶಲಯ ಒಳಪ್ರಾಸಯುಕ್ತವಾಗಿದ್ದು ಗಾತ್ರದಲ್ಲಿ ಚಿಕ್ಕವಾಗಿವೆ. ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದಿಪ್ಪುದೆ, ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ, ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ, ನಾನೊಂದು ಸುರಿಗೆಯನೇನೆಂದು ಹಿಡಿಯುವೆನು ಇತ್ಯಾದಿಯಾದ ಜೇಡರದಾಸಿಮಯ್ಯನ ವಚನಗಳು ಇದಕ್ಕೆ ನಿದರ್ಶನ. ಮುಂದಣ ಯುಗದ ವಚನಸಾಹಿತ್ಯದ ಮೇಲೆ ಇವುಗಳ ಪ್ರಭಾವ ಕೆಲಮಟ್ಟಿಗೆ ತೋರಿಬರುತ್ತದೆ. ಈ ಯುಗದ ವಚನ ಸಾಹಿತ್ಯ ಈಗ ಕಡಿಮೆ ಪ್ರಮಾಣದಲ್ಲಿ ಸಿಕ್ಕಿದ್ದರೂ ಶೋಧಿಸಿದಲ್ಲಿ ಹೊಸ ವಚನಗಳು, ವಚನಕಾರರು ಹೊರಬರುವ ಸಂಭವವಿದೆ.

ಬಸವಯುಗ ವಚನಸಾಹಿತ್ಯದ ಸುಗ್ಗಿಕಾಲ. 12ನೆಯ ಶತಮಾನದ ಮಧ್ಯ ಭಾಗದಲ್ಲಿ ಮೈಮುರಿದು ಎದ್ದ ವೀರಶೈವ ಆಂದೋಲನ ಕನ್ನಡ ಸಮಾಜಕ್ಕೆ ಹೊಸ ತಿರುವು ಕೊಟ್ಟಿತು. ಆಚಾರ-ವಿಚಾರ, ಭಾಷೆ-ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳಲ್ಲಿ ಹೊಸತನ್ನು ತುಂಬಿತು. ಬಸವಣ್ಣ, ಚೆನ್ನಬಸವ, ಪ್ರಭುದೇವ, ಅಕ್ಕಮಹಾದೇವಿ, ಸಿದ್ಧರಾಮ - ಇವರು ಸುಪ್ರಸಿದ್ಧ ವಚನಕಾರರು. ಈ ಕಾಲದ ವಚನಸಂಖ್ಯೆ ಹಲವು ಸಾವಿರ, ಹಲವು ಲಕ್ಷ, ಕೋಟಿ ಎಂಬ ಹೇಳಿಕೆಗಳಿವೆ. ಕನ್ನಡ ಭಾಷೆಯ ಅಭಿವ್ಯಕ್ತಿ ಸಾಧ್ಯತೆಯನ್ನು ತಳಮುಟ್ಟ ಕೈವಶಮಾಡಿಕೊಂಡ ವಚನಕಾರರು ಆ ಸಾಧ್ಯತೆಯನ್ನು ಇನ್ನೂ ಹಿಗ್ಗಿಸಿದರು. ಅನುಭವ ಹಾಗೂ ಅಭಿವ್ಯಕ್ತಿಗಳಲ್ಲಿ ಪ್ರಾಮಾಣಿಕತೆಯನ್ನು ಸಾಧ್ಯಮಾಡಿ ತೋರಿಸಿದರು. ಈ ಆಂದೋಲನದ ಅಧಿನಾಯಕ ಬಸವಣ್ಣ, ಕಾರ್ಯಚಟುವಟಿಕೆಗಳ ಕೇಂದ್ರಸ್ಥಳ ಕಲ್ಯಾಣ.

ಅಂದಿನ ಅನುಭವಮಂಟಪದ ಅಧ್ಯಕ್ಷನಾಗಿ ಮೆರೆದವನೆಂದರೆ ಅಲ್ಲಮಪ್ರಭು. ಈತ ಹಿರಿಯ ಆತ್ಮಜ್ಞಾನಿ, ನಿಜವಾದ ವೈರಾಗ್ಯವನ್ನು ಪಡೆದವ. ತನಗಿಂತ ಕಿರಿಯರಾದ ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಮೊದಲಾದವರ ಧ್ಯೇಯ ಧೋರಣೆಗಳಲ್ಲಿನ ಇತಿಮಿತಿಗಳನ್ನು ಎತ್ತಿ ತೋರಿಸಿ ಅವರನ್ನು ಸರಿಯಾದ ಮಾರ್ಗಕ್ಕೆ ಕೊಂಡೊಯ್ದು ಹಿರಿಯ. ಈತ ತನ್ನ ವಚನಗಳಲ್ಲಿ ತಾನು ಕಂಡ ಸತ್ಯವನ್ನು ತನಗೆ ಹಿಡಿಸದ ಆಚಾರ-ವಿಚಾರಗಳನ್ನು ತೀಕ್ಷ್ಣವಾಗಿ ಪ್ರಸ್ತಾಪಿಸಿದ್ದಾನೆ. ಇವನಿಗೆ ತನ್ನವರು ಪರರು ಎಂಬ ಹಂಗಿಲ್ಲ. ಅನಾಚಾರವನ್ನು ಎಲ್ಲೇ ಕಾಣಲಿ ಈತ ಟೀಕಿಸುತ್ತಾನೆ. ವಚನಸಾಹಿತ್ಯದಲ್ಲೆಲ್ಲ ಈತನ ವಚನಗಳು ಅತಿ ಕಠಿಣವೆನಿಸಿವೆ. ಈತನ ಬೆಡಗಿನ ವಚನಗಳಂತೂ ಪಾರಿಭಾಷಿಕ ಸಂಕೇತಗಳಿಂದ ಕೂಡಿ ಭೇದಿಸಲಸಾಧ್ಯವಾಗಿವೆ:

> ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದೊಡೇನು?
> ಹಸಿವು ಹೋಹುದೇ? ಅಂಗದ ಮೇಲೆ ಲಿಂಗಸ್ವಾಯತವಾದರೇನು?
> ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ ಆ ಕಲ್ಲು ಲಿಂಗವೆ?
> ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ? ಇಂತಪ್ಪವರ
> ಕಂಡಡೆ ನಾನು ನಾಚುವೆನಯ್ಯ ಗುಹೇಶ್ವರಾ

> ಮುನಿಯದಿರಿ, ಮುನಿಯದಿರಿ, ನಿಮಗೊಂದು ಯುಕ್ತಿಯ
> ಹೇಳುವೆನು. ಅದೆಂತೆಂದೊಡೆ ನೀವೆನ್ನ ವಂಶೀಭೂತರಾದ
> ಕಾರಣ ನಿಮ್ಮ ಹೆಚ್ಚು ಕುಂದು ಎನ್ನದಾಗಿ, ನಿಮ್ಮ ಅಸ್ತಿ ನಾಸ್ತಿ
> ಎನ್ನದಾಗಿ, ನಿಮ್ಮ ಹಾನಿ ವೃದ್ಧಿ ಎನ್ನದಾಗಿ ಹಾವ ಹಿಡಿದವರು
> ಬೇಲಿಯ ಹೊಗದೆ ಹೋಹರೇ ಅಯ್ಯ? ವ್ಯಾಧನು ಸೂಸಲ
> ಚೆಲ್ಲಿ, ಜಂತ್ರವ ಹಣ್ಣಿ, ಅಡಿಗಲ್ಲನೊಡ್ಡಿ ಹೋದ ಬಳಿಕ,
> ಸೂಸಲ ಕಂಪಿಂಗೆ ಹೆಗ್ಗಣ ಬಂದು ಬಿದ್ದಂತೆ ಬಿದ್ದಿರಲ್ಲಾ
> ಮಾಯದ ಬಲೆಯಲ್ಲಿ! ಕೋಪವೆಂಬ ರಾಡನೊಡ್ಡಿ, ತಾಪವೆಂಬ
> ಅರೆಗಲ್ಲನಿರಿಸಿ, ಹುಸಿ ಎಂಬ ಮೀಟುಗವಣೆಯ ಜಂತ್ರಿಸಿ,
> ಹೊನ್ನು ಹೆಣ್ಣು ಮಣ್ಣೆಂಬ ಅಡಿಗಲ್ಲನೊಡ್ಡಿ ಕೆಡಹಿದನಲ್ಲಾ
> ನಿಃಕರುಣೆ ಮುಕ್ಕಣ್ಣವ್ಯಾಧನು! ಹೊನ್ನು ಹೆಣ್ಣು ಮಣ್ಣೆ
> ನಾಶೆಯ ಬಿಟ್ಟು, ಕೋಪ ತಾಪವಂ ಬಿಟ್ಟು, ಭ್ರಾಂತಿ
> ಭ್ರಮೆಯುಂ ಬಿಟ್ಟು, ಜಂಗಮವಾಗಬೇಕು ಕಾಣಿರೋ
> ಮರುಳುಗಳಿರಾ! ಇಂತೀ ಷಡುಲೋಭದ ರುಚಿಯ
> ಹಿಂಗಿ ಜಂಗಮನಾದಲ್ಲದೆ ಭವ ಹಿಂಗದು ಕಾಣಾ ಗುಹೇಶ್ವರಾ

ಅಲ್ಲಮನ ವಚನಗಳು ಬಸವಣ್ಣ ಅಥವಾ ಮಹಾದೇವಿಯಕ್ಕನ ವಚನಗಳಷ್ಟು ಜನಪ್ರಿಯವಾಗಿರದಿದ್ದರೂ ತಮ್ಮ ಆಳವಾದ ತತ್ತ್ವಸಾರದಿಂದ, ಶೈಲಿಯಿಂದ, ಕಾವ್ಯತ್ವದಿಂದ ಕಾಂತಿಯುಕ್ತವಾಗಿವೆ. ಉಳಿದವರಲ್ಲಿನ ಅತಿರೇಕಗಳಾವುವೂ ಅಲ್ಲಮನಲ್ಲಿ ಕಾಣವು. ಈ ದೃಷ್ಟಿಯಿಂದ ಇವನ ವಚನಗಳು ವ್ಯಾಸಂಗಯೋಗ್ಯವಾಗುತ್ತವೆ.

ಭಕ್ತಿಭಂಡಾರಿ ಎಂಬ ಕೀರ್ತಿಗೆ ಭಾಜನನಾದ ಬಸವಣ್ಣನ ವಚನಗಳಲ್ಲಿ ಭಕ್ತಿಯ ಅತಿರೇಕವನ್ನು ಕಾಣುತ್ತೇವೆ. ಹೆಂಗರುಳಿನ ಸಹಾನುಭೂತಿಯನ್ನು ಕಾಣುತ್ತೇವೆ. ಒಂದು ದೇಶದ ಮಹಾಮಂತ್ರಿ ಯಾಗಿದ್ದರೂ ಈತ ಅಹಂಕಾರಪಟ್ಟವನಲ್ಲ. ಜಂಗಮಸೇವೆಯೇ ಲಿಂಗದ ಸೇವೆ ಎಂದು ತನ್ನ ತನುಮನಧನಗಳನ್ನು ಜಂಗಮ ದಾಸೋಹಕ್ಕಾಗಿ ಮುಡಿಪಾಗಿಟ್ಟ ಭಕ್ತಶ್ರೇಷ್ಠನೀತ. ಅನುಕಂಪ, ಜೀವನಾನುಭವದ ಸಾರ, ರಸಾರ್ದ್ರಹೃದಯ, ಲೋಕಹಿತಸಾಧನೆಯ ಉದ್ದೇಶ - ಇವು ಕ್ಷಣಕ್ಷಣಕ್ಕೂ ಈತನ ವಚನಗಳಲ್ಲಿ ಕಾಣುತ್ತವೆ. ಮತೋಪದೇಶಕ್ಕೆಂದೇ ಕಟ್ಟಿದವಾದರೂ ಈತನ ವಚನಗಳಲ್ಲಿ ಹೃದ್ಯವಾದ ರಸಭಾವ ಮಿಡಿವ ಮಾತುಗಳು ಉದ್ದಕ್ಕೂ ಬರುತ್ತವೆ:

> ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ!
> ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ!
> ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ!
> ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು
> ಕೂಡಲಸಂಗಮದೇವ

> ನಾದಪ್ರಿಯನಲ್ಲ, ವೇದಪ್ರಿಯನಲ್ಲ ಭಕ್ತಿಪ್ರಿಯ ನಮ್ಮ
> ಕೂಡಲಸಂಗಮದೇವ

> ಸಂಸಾರಸಾಗರ ತೆರೆಕೊಬ್ಬಿ, ಮುಖದ ಮೇಲೆ ಅಲೆವುತ್ತಲಿದ್ದುದೇ?
> ಸಂಸಾರಸಾಗರ ಉರದುದ್ದವೇ ಹೇಳಾ?
> ಸಂಸಾರಸಾಗರ ಕೊರಳುದ್ದವೇ ಹೇಳಾ?
> ಸಂಸಾರಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯ? ಅಯ್ಯಾ
> ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ ಕೂಡಲಸಂಗಮದೇವಯ್ಯ
> ನಾನೇವೆನಯ್ಯ

> ಕಾಂಚನವೆಂಬ ನಾಯ ನಚ್ಚಿ ನಿಮ್ಮ ನಾನು ಮರೆದೆನಯ್ಯ!
> ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ ಹಡಕಿಗೆ
> ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ
> ಕೂಡಲಸಂಗಮದೇವ

ಹೀಗೆ ಬಸವಣ್ಣನಿಂದ ನೂರಾರು ಉತ್ತಮ ವಚನಗಳನ್ನು ಎತ್ತಿ ತೋರಿಸಬಹುದು. ಷಟ್ಪದಿಕಾರರಲ್ಲಿ ಕುಮಾರವ್ಯಾಸ, ದಾಸರಲ್ಲಿ ಪುರಂದರದಾಸ ಇರುವಂತೆ ವಚನಕಾರರಲ್ಲಿ ಬಸವಣ್ಣ ಬಹುಜನಪ್ರಿಯ.

ವಚನಸಾಹಿತ್ಯ ಪ್ರಧಾನವಾಗಿ ಅನುಭಾವಸಾಹಿತ್ಯ, ಭಕ್ತಿ ಸಾಹಿತ್ಯ. ಅಂಥ'ದರಲ್ಲಿ ಜ್ಞಾನಮಾರ್ಗವನ್ನೇ ಹೆಚ್ಚಾಗಿ ಎತ್ತಿಹಿಡಿದವನೆಂದರೆ ಚೆನ್ನಬಸವಣ್ಣ. ಮುಕ್ತಿ ಸಾಧನೆಯ ಮಾರ್ಗಗಳಲ್ಲೆಲ್ಲ ಇದು ಕಠಿಣತಮವಾದುದು:

ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ
ಅಹಂಕಾರ ಪ್ರಬೋಧೆಗೆಳೇಕಯ್ಯ? ಕಾಮ ಕ್ರೋಧ ಲೋಭ
ಮೋಹ ಮದ ಮತ್ಸರಂಗಳನಿಕ್ಕಿ ಎನ್ನ ಮಾಡಿದಿರಿ, ಎನ್ನ
ಬಾಧಿಸಲಿಂತು ಲಿಂಗಯ್ಯ ತಂದೆ? ಆದಿ ವ್ಯಾಧಿಗಳೆಲ್ಲವ
ಕಳೆದು ನಿರ್ವಾಣವಪ್ಪ ಪದವ ಕರುಣಿಸಯ್ಯ
ಕೂಡಲಚೆನ್ನಸಂಗಮದೇವ

ತಾಳು ಬೋಳು ಕಪ್ಪರವೆಂತೆಂಬರು, ತಾಳಾವುದು, ಬೋಳಾವುದು,
ಕಪ್ಪರವಾವುದೆಂದರಿಯರು, ಕಾಯದ ಕಳವಳದ ಗುಣವ
ತಾಳಬಲ್ಲಡೆ ತಾಳು, ಸಂಸಾರವಿಷಯವ ಬೋಳಿಸಬಲ್ಲಡೆ
ಬೋಳು, ಪರದಲ್ಲಿ ಪರಿಣಾಮಿಸಬಲ್ಲಡೆ ಕಪ್ಪರ, ಇಂತಿಲ್ಲ
ದಿದ್ದಡೆ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಡೊಂಬರ ಬೋಳು.

ಬಸವಣ್ಣನವರೇ ತನ್ನ ಗುರುವೆಂದೂ ಇಷ್ಟಲಿಂಗವನ್ನು ದಯಪಾಲಿಸಿ ತನ್ನನ್ನು ಉದ್ಧರಿಸಿದ ಮಹಾತ್ಮರೆಂದೂ ಹೇಳಿಕೊಂಡ ಚೆನ್ನಬಸವಣ್ಣ ಶುದ್ಧ ಜ್ಞಾನಮಾರ್ಗದ ಬೋಧಕನಾಗಿ ಹೆಸರು ಪಡೆದಿದ್ದಾನೆ.

ಸಿದ್ಧರಾಮಯೋಗಿ ಕರ್ಮಯೋಗಿ, ಪರೋಪಕಾರ, ವಿದ್ಯಾಪ್ರಸಾರ ಮೊದಲಾದ ಸಮಾಜಸೇವೆಯೇ ತನ್ನ ಜೀವನದ ಧ್ಯೇಯವೆಂದು ಸಾರಿದಾತ. ಕೆರೆ ಕಟ್ಟಿಸುವುದು, ಮಠಾದಿಗಳನ್ನು ನಿರ್ಮಿಸುವುದು ಮುಂತಾದ ಕೆಲಸಗಳಲ್ಲಿ ನಿರತನಾಗಿದ್ದವ. ಇವನ ಉಪದೇಶವನ್ನು ಮೆಚ್ಚಿದ ಸಹಸ್ರಾರು ಶಿಷ್ಯರು ಇವನೊಡನೆ ಸೇರಿ ಕಾಯಕನಿರತರಾಗಿದ್ದರು:

ಕೃಷಿಯ ಮಾಡಿ ಉಣ್ಣದೆ, ಹಸಿವು ಹರಿವ ಪರಿ ಇನ್ನೆಂತೋ?
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ?
ಬೇಯದೆ ಅಶನನುಂಬ ಠಾವಾವುದು ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಕ್ಕೆ?

ಮಹಾದೇವಿಯಕ್ಕ ಬಸವಣ್ಣನಂತೆ ಬಹು ಜನಪ್ರಿಯಳಾದ ವಚನಕಾರ್ತಿ. ವೈರಾಗ್ಯವನ್ನೂ ಶರಣಸತಿ ಲಿಂಗಪತಿ ಎಂಬ ತತ್ತ್ವವನ್ನೂ ಜೀವನದಲ್ಲಿ ಅನುಸರಿಸಿದಳಲ್ಲದೆ ವಚನಗಳಲ್ಲಿ ಬೋಧಿಸಿದಳು. ದೇವರ ಹಂಬಲವನ್ನೇ ವಸ್ತುವನ್ನಾಗುಳ್ಳ ಈಕೆಯ ವಚನಗಳು ಉತ್ತಮ ಕಾವ್ಯಗುಣವನ್ನು ಪಡೆದಿವೆ:

ಹಸಿವಾದಡೆ ಭಿಕ್ಷಾನ್ನಗಳುಂಟು, ತೃಷೆಯಾದಡೆ ಕೆರೆ ಹಳ್ಳಬಾವಿ
ಗಳುಂಟು, ಶಯನಕ್ಕೆ ಹಾಳು ದೇಗುಲಗಳುಂಟು, ಚೆನ್ನಮಲ್ಲಿಕಾರ್ಜುನಯ್ಯ,
ಆತ್ಮಸಂಗಾತಕ್ಕೆ ನೀನೆನಗುಂಟು

ವನವೆಲ್ಲನೀವೆ ವನದೊಳಗಣ ದೇವತರುವೆಲ್ಲ ನೀವೆ, ತರುವಿನೊಳ
ಗಾಡುವ ಖಗಮೃಗವೆಲ್ಲನೀವೆ. ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ
ಮುಖದೋರ

ವಚನಸಾಹಿತ್ಯದ ಹಿರಿಮೆಯನ್ನು ಶ್ರುತಪಡಿಸಲು ಇಲ್ಲಿ ಹೀಗೆ ಕೆಲವು ಉದಾಹರಣೆಗಳನ್ನು ಮಾತ್ರ ಕೊಡಲಾಗಿದೆ. ನಿಜವಾಗಿ ವಚನಸಾಹಿತ್ಯದ ಮುತ್ತು ರತ್ನಗಳನ್ನೆಲ್ಲ ಆಯ್ದು ಒಂದೆಡೆ ಇಟ್ಟು ನೋಡಿದಲ್ಲಿ ಅವುಗಳ ಯೋಗ್ಯತೆ, ಹಿರಿಮೆ ತಿಳಿಯುತ್ತದೆ. ಅಂದಿನಿಂದ ಇಂದಿನವರೆಗೂ ಅವುಗಳ ಕಾಂತಿ ಮಾಸಿಲ್ಲ.

13-14ನೆಯ ಶತಮಾನಗಳಲ್ಲಿ ವೀರಶೈವ ಶರಣರು ಆಂಧ್ರ ಪ್ರದೇಶದ ಓರಂಗಲ್ಲು, ಶ್ರೀಶೈಲ; ಮಧ್ಯಕರ್ನಾಟಕದ ಉಳವಿ, ಹಂಪೆ, ದ್ವಾರಸಮುದ್ರಗಳಲ್ಲಿ ನೆಲೆನಿಂತರು. ವಚನರಚನೆ ಇಳಿಮುಖವಾಯಿತು. ವಚನಕಾರರ ಬದುಕನ್ನು ಬರೆಹಕ್ಕೆ ಇಳಿಸುವ ಕೆಲಸ ಪ್ರಾರಂಭವಾಯಿತು. ವೀರಶೈವ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣಗಳ ಯುಗ ಪ್ರಾರಂಭವಾಯಿತು. ಆದರೂ ವೀರಶೈವಕ್ಕೆ ಸ್ಥಿರನೆಲೆ ಸಿಕ್ಕಿದ್ದು ನೂರೊಂದು ವಿರಕ್ತರು ಬಾಳಿದ ಪ್ರೌಢದೇವರಾಯನ ಕಾಲದಲ್ಲಿ. ವಿಪ್ಲವಕ್ಕೆ ಗುರಿಯಾಗಿ ನಷ್ಟಗೊಳ್ಳುತ್ತಿದ್ದ ಮತ್ತು ಪುರಾಣರಚನೆಯಿಂದ ಅಲಕ್ಷಿಸಲ್ಪಟ್ಟ ಹಿಂದಣ ವಚನಸಾಹಿತ್ಯದ ಸಂಗ್ರಹ, ಸಂಕಲನ, ಸಂಪಾದನಕಾರ್ಯ ಪ್ರಾರಂಭವಾಯಿತು. ಈ ಕಾರ್ಯವನ್ನು ನಿರ್ವಹಿಸಿದವರಲ್ಲಿ ಮಹಲಿಂಗ ಮೊದಲಾದವರೂ ಪ್ರೇರಣೆ ಕೊಟ್ಟವರಲ್ಲಿ ಲಕ್ಕಣದಂಡೇಶ ಮುಂತಾದವರೂ ಪ್ರಮುಖರು. ಇವರ ಪ್ರಯತ್ನದಿಂದಾಗಿ ಸಕಲಪುರಾತನರ ವಚನ, ಏಕೋತ್ತರಶತಸ್ಥಲ, ಲಿಂಗಲೀಲಾ ವಿಲಾಸಚಾರಿತ್ರ ಮೊದಲಾದ ಗ್ರಂಥಗಳಲ್ಲಿ ವಚನಗಳು ತತ್ತ್ವದ ತಳಹದಿಯ ಮೇಲೆ ಸೂತ್ರಬದ್ಧವಾಗಿ ಹೆಣೆಯಲ್ಪಟ್ಟವು. ಹೀಗೆ ವಚನಸಾಹಿತ್ಯ ಹೊಸ ರೂಪವನ್ನು ರೂಪಿಸಿಕೊಂಡು ಮುನ್ನಡೆಯಿತು. ಶಿವನಿಷ್ಠೆಯ ಸಂಗಮವಂಶ ಕೊನೆಗೊಂಡ ಹದಿನೈದನೆಯ ಶತಮಾನದಲ್ಲಿ ನಡೆದ ವಚನಸಾಹಿತ್ಯ ಸಂಬಂಧವಾದ ಆಂದೋಲನದ ಕೇಂದ್ರವ್ಯಕ್ತಿ ತೋಂಟದ ಸಿದ್ಧಲಿಂಗ; ಷಟ್‌ಸ್ಥಲದ ಇತಿಹಾಸದಲ್ಲಿ ಎರಡನೆಯ ಚೆನ್ನಬಸವಣ್ಣನೆನಿಸಿದ. ಈತನ ದೈವೀಬಲದಿಂದ ವಚನಗಳ ಸಂಕಲನ, ಸಂಪಾದನೆ ಇನ್ನೂ ತೀವ್ರಗೊಂಡಿತು. ಈ ಜಾಗೃತ ಸಮಯದಲ್ಲಿ ಹುಟ್ಟಿದ ನಾಲ್ಕು ಶೂನ್ಯಸಂಪಾದನೆಗಳಲ್ಲಿ ಕೊನೆಯವೆರಡು ಈತನ ಶಿಷ್ಯವರ್ಗದವರಿಂದ ರಚನೆಗೊಂಡುದು ಗಮನಿಸಬೇಕಾದ ಸಂಗತಿ. ಸಾಲದುದಕ್ಕೆ ಈತನ ಶಿಷ್ಯರಲ್ಲಿ ಸಂಪಾದನೆಯ ಒಂದು ಶಿಷ್ಯಪರಂಪರೆಯೇ ಮುಂದುವರಿಯಿತು. ಈ ಸಂಪ್ರದಾಯಕ್ಕೆ ಸಂಬಂಧಿಸಿದ ಸಂಪಾದನೆಯ ಚೆನ್ನಂಜೆದೇವ, ಸಂಪಾದನೆಯ ಬೋಳಬಸವದೇವ, ಸಂಪಾದನೆಯ ಗುರುಶಾಂತದೇವ, ಸಂಪಾದನೆಯ ಸಿದ್ಧವೀರಣಾರ್ಯ ಮೊದಲಾದವರು ಕಾರಣವಾಗಿ ಲಿಂಗವಿಕಳಾವಸ್ಥೆಯ ವಚನ, ಮಿಶ್ರ ಸ್ತೋತ್ರದ ವಚನ, ಆಚರಣೆಯ ವಚನ, ಬಸವಸ್ತೋತ್ರದ ವಚನ, ಶರಣಸ್ತೋತ್ರದ ವಚನ - ಇತ್ಯಾದಿ ಹೊಸ ಹೊಸ ವಚನಸಂಕಲನ ಗ್ರಂಥಗಳು ಹೊರಬಂದುವು. ಹೀಗೆ ಬಸವಣ್ಣನ ತರುವಾಯದ ಅವಧಿ ವಚನಗಳ ಸಂಕಲನ, ಸಂಪಾದನೆಗಳ ಯುಗವೆನಿಸಿದರೂ ತೋಂಟದ ಸಿದ್ಧಲಿಂಗ, ಘನಲಿಂಗಿದೇವ, ಕಾಡಸಿದ್ಧ, ಷಣ್ಮುಖಸ್ವಾಮಿ ಮೊದಲಾದವರು ವಚನಗಳನ್ನೂ ರಚಿಸಿದ್ದಾರೆ. ಗುಣ, ಗಾತ್ರ ಎರಡು ದೃಷ್ಟಿಯಿಂದಲೂ ಇವರ ವಚನಗಳು ಬಸವಯುಗದ ವಚನಗಳ ಎತ್ತರಕ್ಕೆ ಬಾರವು.

ಶರಣರು ತ್ರಿವಿಧಿ, ಮಂತ್ರಗೋಪ್ಯ, ಕರಣಹಸಿಗೆ, ವಿವಿಶ್ರಾರ್ಪಣ ಇತ್ಯಾದಿ ಪ್ರಕಾರಗಳನ್ನು ನಿರ್ಮಿಸಿದ್ದರೂ ವಚನ ಪ್ರಕಾರ ಅವರ ವ್ಯಕ್ತಿಸಿದ್ಧಿಯ ಪತಾಕೆ. ಇದರಲ್ಲಿ ವಚನ, ಸ್ವರವಚನವೆಂದು ಎರಡು ವಿಧಗಳುಂಟು. ಒಂದು ಅನುಭಾವದ ಗದ್ಯ ಪ್ರಕಾರ, ಇನ್ನೊಂದು ಅನುಭಾವದ ಗೀತಪ್ರಕಾರ. ವಚನಗಳು ತಮ್ಮ ಉಜ್ವಲ ಸಾಹಿತ್ಯದಿಂದ, ಸ್ವರವಚನಗಳು ತಮ್ಮ ಗೇಯ ಗುಣದಿಂದ ಸಮಸ್ತ ಸಹೃದಯರನ್ನೂ ಆಕರ್ಷಿಸಿವೆ.

ಪ್ರತಿಯೊಬ್ಬ ಶರಣನ ವಚನ ಮತ್ತು ಸ್ವರವಚನಗಳ ಕೊನೆಗೆ ಕೃತಿಕಾರನನ್ನು ಸೂಚಿಸುವ, ಆರಾಧ್ಯದೈವನಾಮಾಂಕಿತವಾದ ಮುದ್ರೆ ಇರುತ್ತದೆ. ಕೂಡಲ ಸಂಗಮದೇವ, ಕೂಡಲಚೆನ್ನಸಂಗಮದೇವ ಹೀಗೆ ಒಂದೊಂದು ದೇವತೆಯ ಸುತ್ತ ಇರುವ ಕೆಲವು ಅಂಕಿತಗಳು ಒಂದೊಂದು ವರ್ಗವನ್ನು ನಿರ್ಮಿಸುತ್ತವೆ.

ಗಾತ್ರದೃಷ್ಟಿಯಿಂದ ವಚನ ಒಂದು ಬಿಡಿ ಮುಕ್ತಕ. ಸ್ವರವಚನ 3-5, 7-9 ನುಡಿಗಳ ಒಂದು ಪುಂಜ. ಹಾಡುಗಬ್ಬಗಳಾದ ಈ ಸ್ವರವಚನಗಳು ಬಸವ ಮೊದಲಾದವರಿಂದ ಪ್ರವೃತ್ತವಾಗಿದ್ದು ಮುಂದೆ ಬಂದ ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾಮಹಾಂತ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಮೈಲಾರದ ಬಸವಲಿಂಗ ಶರಣ ಮೊದಲಾದವರ ಕೈಯಲ್ಲಿ ಉಚ್ಛ್ರಾಯಸ್ಥಿತಿಗೇರಿದುವು. ವಚನಸಾಹಿತ್ಯದ ಈ ರಮ್ಯ ಮಾರ್ಗ ವಿಕಾಸಗೊಂಡು ಹಲವು ಬಗೆಯಾಗಿ ಬೆಳೆದಿರುವುದನ್ನು ಮುಂದಿನ ದಾಸಸಾಹಿತ್ಯದಲ್ಲೂ ಇಸ್ಲಾಮೀ ಅನುಭಾವ ಸಾಹಿತ್ಯದಲ್ಲೂ ಕಾಣಬಹುದಾಗಿದೆ.

ವಚನಗಳು ಚರಿತ್ರೆ, ತತ್ತ್ವ, ಸಾಹಿತ್ಯ ದೃಷ್ಟಿಗಳಿಂದ ಅಮೂಲ್ಯವೆನಿಸಿವೆ. ತಾವು ಸತ್ಯವನ್ನು ಕಂಡ ಉಂಡ ಅನುಭವವನ್ನು ಅಭಿವ್ಯಕ್ತಗೊಳಿಸುವಲ್ಲಿ ಕೆಲವು ಸಲ ಶರಣರ ವ್ಯಕ್ತಿಗತ ಅಂಶಗಳೂ ವಚನಗಳಲ್ಲಿ ನುಸುಳಿಬಂದಿವೆ. 'ಆರು ಜನ್ಮದವ ಬಸವಣ್ಣನೆಂಬರು ಈ ಗಾರುಮಾತ ಕೇಳಲಾಗದು, ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ, ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ ಒಬ್ಬ ಜಂಗಮದ ಅಭಿಮಾನದಿಂದ, ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳ ಚಲುವೆ' ಇಂಥ ಅಂಶಗಳು ಶರಣರ ಚರಿತೆ ಬರೆಯುವಲ್ಲಿ ಪ್ರಮಾಣಗಳಾಗಿ ನಿಲ್ಲುತ್ತವೆ.

ವಚನಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಸಮಕಾಲೀನ ಸಮಾಜ ಚಿತ್ರ ಮೂಡಿದೆ. 'ಮಾರಿಕವ್ವೆಯನೊಂತು ಕೊರಳಲ್ಲಿ ಕಟ್ಟಿಕೊಂಬರು, ಮರನ

ಗೋಟಿಗೆ ಬರ್ಪ ಕಿರುಕುಳದೈವಕ್ಕೆ ಕುರಿಯನಿತ್ತಿಹೆವೆಂದು ನಲಿನಲಿದಾಡುವರು, ವಿಷ್ಣುವ ಪೂಜಿಸಿ ಮುಡಿಹ ಸುಡಿಸಿಕೊಂಬುದ ಕಂಡೆ, ಜಿನನ ಪೂಜಿಸಿ ಬತ್ತಲೆಯಪ್ಪುದ ಕಂಡೆ, ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದ ಕಂಡೆ' ಇಂಥ ಈ ವ್ಯಕ್ತಿಗತ ಸಂಗತಿ ಮತ್ತು ಸಮಾಜ ಚಿತ್ರಣಗಳಿಗಿಂತ ಶರಣರಿಗೆ ಮುಖ್ಯವಾದುದು ವೀರಶೈವಧರ್ಮದ ತತ್ತ್ವ ಮತ್ತು ಆಚರಣೆಗಳ ಪ್ರತಿಪಾದನೆ. ಹೀಗಾಗಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಇತ್ಯಾದಿಗಳ ತಾತ್ತ್ವಿಕ ವಿವೇಚನೆ ಅಲ್ಲಿ ವಸ್ತುವಾಗಿ ನಿಂತಿತು. ಕಾಯಕ, ಜಾತಿಭೇದ ನಿರ್ಮೂಲನ, ಸ್ತ್ರೀಪುರುಷ ಸಮಾನತೆ - ಮುಂತಾದ ಆಚರಣೆಗಳು ಅಲ್ಲಿ ಪ್ರತಿಪಾದಿಸಲ್ಪಟ್ಟು ಕಾಯಕವೇ ಕೈಲಾಸ, ಸಕಲ ಜೀವಾತ್ಮರಿಗೆ ಲೇಸ ಬಯಸುವನೇ ಕುಲಜ, ದಯವೇ ಧರ್ಮದ ಮೂಲ, ಅರಿವೇ ಗುರು, ದೇವನೊಬ್ಬ ನಾಮ ಹಲವು ಕೂಡಲಸಂಗನ ಒಲಿಸಲು ಬಂದ ಪ್ರಸಾದಕಾಯವ ಕೆಡಿಸಲಾಗದು, ಭಕ್ತಿ ಪ್ರಿಯ ನಮ್ಮ ಕೂಡಲಸಂಗಮ ದೇವ, ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂಬ ಲೋಕಮಾನ್ಯ ವಿಚಾರಗಳು ಆವಿರ್ಭವಿಸಿದುವು. ಹೀಗೆ ಹೊಸ ಆಚಾರ ಹೊಸ ವಿಚಾರಗಳನ್ನು ತುಂಬಿಕೊಂಡ ವಚನಗಳು ಹೊಸ ಭಾಷೆ ಹೊಸ ಸಾಮಗ್ರಿ ಹೊಸ ಸಂವೇದನೆಗಳನ್ನು ಹೊತ್ತು ಹೊರಬಂದುವು. ಇದರ ಫಲವಾಗಿ ಕಮ್ಮಟ, ಗಂಜಳ, ಹನ್ನಿಬ್ಬರು, ಉಳ್ಳವರು, ಮೇಳಾಪ, ತುಯ್ಯಲ ಇತ್ಯಾದಿ ದೇಶೀಪದಗಳು ಸಾಹಿತ್ಯದಲ್ಲಿ ಸಾರ್ಥಕಗೊಂಡುವು. ಬದುಕಿನ ಹಂಚು ಹರಳು ಇತ್ಯಾದಿ ವಸ್ತುಕೋಟಿಯೆಲ್ಲ ಅವರ ಕೈಯಲ್ಲಿ ಹದವಾಗಿ ಬಳಕೆಗೊಂಡುವು. ಅವರವರ ಕಾಯಕಗಳು ವಚನಗಳಲ್ಲಿ ರೂಪಕ ರೂಪತಾಳಿ ಶೋಭಿಸಿದುವು. ಇದರಿಂದ ಕನ್ನಡ ಭಾಷೆಯ ಅಭಿವ್ಯಕ್ತಿ, ಸತ್ತ್ವ ಸಾವಿರ ಪಾಲು ವಿಸ್ತಾರಗೊಂಡಿತು.

ಸಾಮಾನ್ಯವಾಗಿ ವಚನ ಸಾಹಿತ್ಯವೆಂದರೆ ಸ್ವಾನುಭವ ಲೋಕಾನುಭವಗಳ ಸಂಗಮ. ಶೈಲಿದೃಷ್ಟಿಯಿಂದ ಈ ಸಾಹಿತ್ಯವನ್ನು ಪ್ರಸನ್ನಶೈಲಿ, ಬೆಡಗಿನ ಶೈಲಿ, ಶಾಸ್ತ್ರಶೈಲಿಯೆಂದು ವಿಭಾಗಿಸಬಹುದು. ಪ್ರಸನ್ನಕ್ಕೆ ಬಸವ, ಬೆಡಗಿಗೆ ಪ್ರಭುದೇವ, ಶಾಸ್ತ್ರಕ್ಕೆ ಚೆನ್ನಬಸವ ಇವರ ವಚನಗಳು ಮಾದರಿ. ಆಡುಮಾತಿನ ಕೆಚ್ಚು, ಕಮನೀಯತೆ, ಅನುಭವದ ಪ್ರಾಮಾಣಿಕತೆ, ಅಭಿವ್ಯಕ್ತಿಯ ತೀವ್ರಪರಿಣಾಮ - ಇವು ಗುಣವಿಶೇಷಗಳು. ಹೀಗಾಗಿ ಇದು ಕನ್ನಡದ ಅನುಪಮ ಅನುಭಾವಸಾಹಿತ್ಯ, ವಿಶ್ವವಾಙ್ಮಯಕ್ಕೆ ಕನ್ನಡ ನೀಡಿದ ವಿಶಿಷ್ಟ ಸಾಹಿತ್ಯ ಎಂಬ ಕೀರ್ತಿ ಗಳಿಸಿದೆ.

ವಚನಶಾಸ್ತ್ರ ಪಿತಾಮಹರೆನಿಸಿದ ಫ.ಗು.ಹಳಕಟ್ಟಿಯವರು ಪ್ರಥಮತಃ ವಚನ ಸಾಹಿತ್ಯವನ್ನು ಸಂಗ್ರಹಿಸಿ ಮುದ್ರಿಸಿದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯವೂ ಬೆಂಗಳೂರಿನ ಬಸವ ಸಮಿತಿಯೂ ವಚನ ಸಾಹಿತ್ಯವನ್ನು ಪರಿಷ್ಕರಿಸಿ ಮುದ್ರಿಸುವ ಕೆಲಸವನ್ನು ಮಾಡಿವೆ. ಎಂ.ಆರ್.ಶ್ರೀನಿವಾಸಮೂರ್ತಿ, ಬಿ.ಶಿವಮೂರ್ತಿಶಾಸ್ತ್ರೀ, ಆರ್.ಸಿ.ಹಿರೇಮಠ, ಭೂಸನೂರುಮಠ, ಸ.ಸ.ಮಾಳವಾಡ, ಎಲ್.ಬಸವ ರಾಜು, ಎಂ.ಎಂ.ಕಲಬುರ್ಗಿ ಮೊದಲಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಗಣ್ಯ ಕೆಲಸ ಮಾಡಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿಯೂ ವಚನ ಕನ್ನಡ ಸಾಹಿತ್ಯಕ್ಕೇ ವಿಶಿಷ್ಟವಾದ ಒಂದು ಸಾಹಿತ್ಯಪ್ರಕಾರ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಶಿವಶರಣರ ವಚನ ವಾಙ್ಮಯ ಲೋಕದ ಅನುಭಾವಸಾಹಿತ್ಯಕ್ಕೆ ಒಂದು ಶ್ರೀಮಂತ ಕೊಡುಗೆ. ಸುಮಾರು ಹನ್ನೆರಡನೆಯ ಶತಮಾನದ ಹೊತ್ತಿಗೆ ಯಶಸ್ಸಿನ ತುದಿಯನ್ನೇರಿದ ಈ ಸಾಹಿತ್ಯಪ್ರಕಾರ ಬರಬರುತ್ತಾ ತನ್ನ ಉಜ್ಜ್ವಲ ಕಾಂತಿಯನ್ನು ಕಳೆದುಕೊಂಡು ಕೊನೆಗೊಮ್ಮೆ ನಿಂತೇ ಹೋಯಿತು. ನಡುವೆ ಒಂದು ಸಲ ಅದರ ಪುನರುಜ್ಜೀವನದ ಪ್ರಯತ್ನ ನಡೆದಿರುವುದಕ್ಕೇನೋ ಸಾಹಿತ್ಯಚರಿತ್ರೆಯಲ್ಲಿ ಉಲ್ಲೇಖಗಳಿವೆ. ಆದರೆ ಯಶಸ್ಸಿನ ದಾಖಲೆಗಳಿಲ್ಲ. ಬಸವಣ್ಣ, ಅಕ್ಕಮಹಾದೇವಿ ಮೊದಲಾದವರು ಈ ಅಭಿವ್ಯಕ್ತಿಮಾಧ್ಯಮದಲ್ಲಿ ತೋರಿದ ಕೌಶಲವೇ ಒಂದು ಜಲಚಿಹ್ನೆಯಾಗಿ ನಿಂತು ಹೋಯಿತು. ಇದನ್ನು ಅನುಸರಿಸಿದವರು, ಅನುಕರಿಸಿದವರು ಅನೇಕರು; ಆದರೆ ಮೀರಿದವರು ಮಾತ್ರ ಒಬ್ಬರೂ ಇಲ್ಲ. ಸರಳವಾದ ಮಾತುಗಳಲ್ಲಿ ಅನುಭವ ತೀವ್ರತೆಯನ್ನು ಪ್ರಾಮಾಣಿಕ ಆತ್ಮವಿಮರ್ಶೆಯಲ್ಲಿ ದಿಟ್ಟತನವನ್ನು, ಅಲಂಕಾರ ಭಾರವಿಲ್ಲದ ರಚನೆಯಲ್ಲಿ ಕಲೆಗಾರಿಕೆಯನ್ನು ಹೊಮ್ಮಿಸುವುದು ಮುಂದಿನವರಿಗೆ ಹೆಚ್ಚು ಸಾಧ್ಯವಾಗಲಿಲ್ಲ. ಆದರೂ ಪ್ರಯೋಗಪ್ರಿಯರಿಗೆ ವಚನಗಳ ಮಾದರಿ ಯಾವಾಗಲೂ ಒಂದು ಆಹ್ವಾನವಾಗಿ ಉಳಿದದ್ದರಲ್ಲಿ ಆಶ್ಚರ್ಯವಿಲ್ಲ. ವಿಚಾರಧಾರೆ, ಆವೇಶ, ಉತ್ಸಾಹಗಳು ಛಂದಸ್ಸಿನ ಚೌಕಟ್ಟಿನಲ್ಲಿ ಸಿಕ್ಕಿ ಸೊರಗದಿರಬೇಕಾದರೆ ವಚನದಂಥ' ಒಂದು ಮಾಧ್ಯಮ ಎಲ್ಲ ಕಾಲಕ್ಕೂ ಸಮರ್ಪಕವಾಗಿ ಅಗತ್ಯವಾಗಿ ತೋರಿದ್ದರಲ್ಲಿಯೇ ಈ ಪ್ರಕಾರದ ಮಹತ್ತ್ವವಿದೆ. ಅಂತೆಯೇ ಹೊಸ ಸಾಹಿತ್ಯದಲ್ಲಿಯೂ ವಚನ ಪ್ರಕಾರ ಒಂದು ಪ್ರೇರಣೆಯ ಸೆಲೆಯಾಗಿದೆ; ಅನುಕರಣೆಗೆ ಮಾದರಿಯಾಗಿದೆ.

ಸಾಹಿತ್ಯಚರಿತ್ರೆಯ ಪರಿಭಾಷೆಯಲ್ಲಿ ನಮಗೆ ಪರಿಚಿತರಾಗಿರುವಂಥ ವಚನಕಾರರು ಇಂದು ಇಲ್ಲ. ಆದರೆ ಸಾಹಿತ್ಯಕ್ಷೇತ್ರದ ಬೇರೆ ಬೇರೆ ಪ್ರಕಾರಗಳಲ್ಲಿ ಇಂದು ಕೆಲಸ ಮಾಡುತ್ತಿರುವ ಅನೇಕರು ವಚನಗಳನ್ನು ರಚಿಸಿದ್ದಾರೆ. ಈ ಗದ್ಯಗೀತ ಪ್ರಕಾರದ ರೂಪಾಂಶಕ್ಕೆ ಹೊಸ ಲೇಖಕರಿಗೆ ಅನ್ಯಮೂಲಗಳ ಸ್ಫೂರ್ತಿಯೂ ಲಭಿಸಿದೆ. ವಾಲ್ಟ್ ವಿಟ್‌ಮನ್ನನ ಹುಲ್ಲಿನ ದಳಗಳು, ರವೀಂದ್ರನಾಥ ಠಾಕೂರರ ಕವಿತೆಗಳ ಇಂಗ್ಲಿಷ್ ಅನುವಾದಗಳು ಈ ನಿಟ್ಟಿನಲ್ಲಿ ಒಡನೆಯೇ ನೆನಪಿಗೆ ಬರುವ ಮೂಲಗಳು.

ಸಮಕಾಲೀನರು ಅನೇಕರು ವಚನಗಳನ್ನು ಇಲ್ಲವೇ ರೂಪಾಂಶದಲ್ಲಿ ವಚನಗಳಿಗೆ ತೀರ ಹತ್ತಿರವಾದ ಕೃತಿಗಳನ್ನು ರಚಿಸಿದ್ದಾರೆ. ಸುಮಾರು ಇಪ್ಪತ್ತೆರಡು ಜನ ಲೇಖಕರು ಮೂವತ್ತಕ್ಕೂ ಹೆಚ್ಚು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹದಿನೆಂಟು ಜನರ ವಚನಗಳು, ಬೇರೆ ಬೇರೆ ಗ್ರಂಥಗಳಲ್ಲಿ ಪತ್ರಿಕೆಗಳಲ್ಲಿ ಅಚ್ಚಾಗಿವೆ ಅಥವಾ ಹಸ್ತಪ್ರತಿಯ ರೂಪದಲ್ಲಿವೆ. ಈ ಲೇಖಕರಲ್ಲಿ ಮೂರೇ ಮೂರು ವಚಗಳನ್ನು ಬರೆದ ತೀ.ನಂ.ಶ್ರೀಕಂಠಯ್ಯನವರೂ ಮೂರು ಸಾವಿರದ ಐದುನೂರು ವಚನಗಳನ್ನು ಬರೆದು ಪ್ರಖ್ಯಾತರಾದ ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಚೆನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳೂ (ಜಚನಿ) ಸೇರಿದ್ದಾರೆ; ಶಂಕರಮ್ಮ, ಓಂಕಾರಮ್ಮನವರ ಹಾಗೆ ವಾಚಕರಿಗೆ ಪರಿಚಯವೇ ಇಲ್ಲದವರೂ ನಾಡಿನಲ್ಲಿ ಮನೆಮಾತಾಗಿರುವ ಕುವೆಂಪು, ಬೇಂದ್ರೆಯವರೂ ಇದ್ದಾರೆ; ರಂಗಣ್ಣ, ದಿವಾಕರರಂಥ ಹಿರಿಯರೂ ಚಂದ್ರಶೇಖರ ಐತಾಳ, ಭೈರವಮೂರ್ತಿ ಯಂಥವರೂ ಸಿಂಪಿ ಲಿಂಗಣ್ಣನವರಂಥ ಮಾಸ್ತರರೂ ಸದಾಶಿವ ಶಿವಾಚಾರ್ಯರು, ಗಂಗಾಧರ ಶಿವಾಚಾರ್ಯರಂಥ' ಮಠಾಧೀಶರೂ ಜೋಳದರಾಶಿ ದೊಡ್ಡನಗೌಡರಂಥ' ಗಮಕಿಗಳೂ ಈ ಪಟ್ಟಿಯಲ್ಲಿ ಬರುತ್ತಾರೆ. ಈ ಎಲ್ಲ ಲೇಖಕರು ಬರೆದಿರುವ ವಚನಗಳ ಸಂಖ್ಯೆ ಒಂದು ಅಂದಾಜಿನಂತೆ ಸುಮಾರು ಹತ್ತು ಸಾವಿರವಾಗುತ್ತದೆ. ಇದೇನು ಸಾಮಾನ್ಯವಾದ ಸಾಧನೆಯಲ್ಲ.

ರಚನೆಯ ವಿನ್ಯಾಸದ ದೃಷ್ಟಿಯಿಂದಲೂ ವಸ್ತುವೈವಿಧ್ಯದ ದೃಷ್ಟಿಯಿಂದಲೂ ಈ ವಚನಗಳು ನಾನಾ ಬಗೆಯಾಗಿವೆ. ಇವುಗಳಲ್ಲಿ ಪ್ರಾಚೀನ ಸಂಪ್ರದಾಯವಿದೆ, ಆಧುನಿಕ ವಿಚಾರಧಾರೆಯಿದೆ, ಆತ್ಮ ಶೋಧನೆಯಿದೆ, ಪ್ರಕೃತಿವರ್ಣನೆಯಿದೆ, ಭಕ್ತಿ ಇದೆ, ರಾಜಕೀಯವಿದೆ, ಭಾವುಕತೆಯಿದೆ, ವೈಚಾರಿಕತೆಯಿದೆ, ಪರದ ಆದರ್ಶವಿದೆ, ಇಹದ ವಾಸ್ತವಿಕತೆಯಿದೆ, ಮರಗಟ್ಟಿಕೊಂಡ ಪ್ರತಿಭೆಯೊಡನೆ ಕುಡಿಯೊಡೆದ ಪ್ರಜ್ಞೆಯಿದೆ. ಇಲ್ಲಿ ಅರಳಿದ ವಚನಗಳಿವೆ, ಕರುಳಿನ ವಚನಗಳಿವೆ; ಅನುಕರಿಸಿದ ವಚನಗಳಿಗೂ ಸೋಗಿನ ವಚನಗಳಿಗೂ ಬರವಿಲ್ಲ. ಈ ಆಧುನಿಕ ವಚನಸಾಹಿತ್ಯ ಮೈದಾಳಿರುವ ರೀತಿ, ಅದರ ಮುಖ್ಯ ಒಲವು ನಿಲುವುಗಳು, ಪ್ರವೃತ್ತಿಗಳು ವಿಸ್ತಾರವಾದ ಪ್ರತ್ಯೇಕ ಅಧ್ಯಯನಕ್ಕೆ ಅರ್ಹವಾಗಿವೆ.

ಆಧುನಿಕ ವಚನಕಾರರಲ್ಲಿ ಮೊದಲು ಗಮನ ಸೆಳೆಯುವ ಹೆಸರು ಎಸ್.ವಿ.ರಂಗಣ್ಣನವರದು. ಜಚನಿ ಅವರನ್ನು ಬಿಟ್ಟರೆ ರಂಗಣ್ಣನವರೇ ಅತಿ ಹೆಚ್ಚಿನ ಸಂಖ್ಯೆಯ ವಚನಗಳನ್ನು ಬರೆದಿದ್ದಾರೆ. ರಂಗಬಿನ್ನಪ ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಇವರ ವಚನಗಳು ಆಧುನಿಕ ಸಾಹಿತ್ಯದಲ್ಲಿ ಮೊತ್ತಮೊದಲಿಗೆ ವಚನಗಳನ್ನು ಬರೆಯುನ್ನು ಕೀರ್ತಿ ಇವರಿಗೆ ತಂದುಕೊಟ್ಟಿವೆ. 1925ರ ಅಕ್ಟೋಬರ್ ತಿಂಗಳಿನಲ್ಲಿ ಅವರು ತಮ್ಮ ಪ್ರಥಮ ವಚನವನ್ನು ಬರೆದುದಾಗಿ ಹೇಳಿಕೊಂಡಿದ್ದಾರೆ. ಸುಮಾರು ಹತ್ತು ವರ್ಷಗಳ ಅನಂತರ (1934) ಇವರ ಹದಿನೈದು ವಚನಗಳನ್ನು ರಂಗಯ್ಯನ ವಚನಗಳು ಎಂಬ ಶೀರ್ಷಿಕೆಯಲ್ಲಿ ಪ್ರಬುದ್ಧ ಕರ್ನಾಟಕ ಮೊದಲ ಬಾರಿಗೆ

ಪ್ರಕಟಿಸಿತು. ಆಧುನಿಕರಲ್ಲಿ ಇದಕ್ಕಿಂತ ಮೊದಲು ಬೇರೊಬ್ಬರು ವಚನಗಳನ್ನು ಪ್ರಕಟಿಸಿರುವುದು ಗಮನಕ್ಕೆ ಬಂದಿಲ್ಲ. ಐತಿಹಾಸಿಕವಾಗಿ ಆಧುನಿಕ ವಚನಕಾರರಲ್ಲಿ ರಂಗಣ್ಣನವರು ಮೊದಲಿಗರಾಗಿರುವುದು ಮಾತ್ರವಲ್ಲದೆ ಈ ಸಾಹಿತ್ಯಪ್ರಕಾರಕ್ಕೆ ರಾಷ್ಟ್ರದ ಅತ್ಯುಚ್ಚ ಪ್ರಶಸ್ತಿಯನ್ನು ಗಳಿಸಿ ಸಫಲತೆಯನ್ನು ಪಡೆದಿದ್ದಾರೆ.

ಒಂದು ದೃಷ್ಟಿಯಿಂದ ದ.ರಾ.ಬೇಂದ್ರೆಯವರೇ ರಂಗಣ್ಣನವರಿಗಿಂತ ಮೊದಲು ವಚನಗಳನ್ನು ರಚಿಸಿದವರು ಎನ್ನಬೇಕು. ಇವರ ಪ್ರಖ್ಯಾತವಾದ ಕರುಳಿನ ವಚನಗಳು ಜಯ ಕರ್ನಾಟಕದಲ್ಲಿ 1931ರಲ್ಲಿ ಪ್ರಕಟವಾದರೂ ಅವನ್ನು ಪೂರ್ಣಗೊಳಿಸಿದ್ದು 1942ರಲ್ಲಿಯೇ ಎಂದೂ ಅವರೇ ಹೇಳಿದ್ದಾರೆ. ಆದರೆ ರಂಗಣ್ಣನವರ ವಚನಗಳು ರಚನಾವಿನ್ಯಾಸದಲ್ಲಿ ವಚನಗಳ ಚೌಕಟ್ಟಿನಲ್ಲಿ ಬರುವ ಹಾಗೆ ಬೇಂದ್ರೆಯವರ ವಚನಗಳು ಬರುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಬೆಂದ್ರೆಯವರ ವಚನಗಳು ಹೆಚ್ಚು ಕಡಿಮೆ ಮುಕ್ತಛಂದಸ್ಸಿ ಸ್ವಚ್ಛಂದ ಗೀತೆಗಳೇ ಸರಿ. ಪ್ರಾಚೀನರ ವಚನಗಳು ಶುದ್ಧ ಪಾರಮಾರ್ಥಿಕ ಸಾಧನೆಯ ಮಾರ್ಗದೊಳಗಿನವು. ಕರುಳಿನ ವಚನಗಳೊ ಲೌಕಿಕ ಭಾವದ ಪ್ರಕಟನೆಗೆ ಬಳಸಿಕೊಂಡಂಥ'ವು ಎಂಬ ಬೇಂದ್ರೆಯವರ ಮಾತುಗಳು ಸಹಜವಾಗಿ ವಸ್ತುವನ್ನುದ್ದೇಶಿಸುತ್ತವೆ. ರೂಪಾಂಶದಲ್ಲಿ ಅವು ಪ್ರಾಚೀನರ ವಚನಗಳಿಗಿಂತಲೂ ವಿಟ್‌ಮನ್, ಠಾಕೂರರ ಕೃತಿಗಳಿಗೆ ಹತ್ತಿರವಾದ ಗದ್ಯಗೀತಗಳು. ಕುವೆಂಪು ಅವರ ಕಿಂಕಿಣಿಗೂ ದಿವಾಕರರ ಅಂತರಾತ್ಮನಿಗೆ ಕೃತಿಗೂ ಈ ಮಾತುಗಳೇ ಅನ್ವಯವಾಗುತ್ತವೆ.

ರಂಗಣ್ಣನವರ ವಚನಗಳಲ್ಲಿ ಪ್ರಾಚೀನ ವಚನಗಳ ಪ್ರತಿಧ್ವನಿಯನ್ನು ಸ್ಪಷ್ಟವಾಗಿ ಕೇಳಬಹುದಾಗಿದೆ. ಇದು ಆ ಸಾಹಿತ್ಯ ಪ್ರಕಾರ ಹೊಸ ಕಾಲದ ಲೇಖಕರ ಮೇಲೆ ಪ್ರಭಾವ ಬೀರಿರುವುದಕ್ಕೆ ಒಂದು ಉದಾಹರಣೆಯೂ ಹೌದು. ಎಂಟುನೂರು ವರ್ಷಗಳಷ್ಟು ಹಿಂದಿನ ಆ ವಚನಗಳು ರೂಪಗೊಂಡ ಅನ್ಯಾದೃಶ ಸೊಗಸಿಗೆ, ಅವುಗಳಲ್ಲಿ ಅಭಿವ್ಯಕ್ತಗೊಂಡ ನಿಚ್ಚಳ ಪ್ರಾಮಾಣಿಕತೆಗೆ, ತುಯ್ತ ತುಡಿತಗಳಿಗೆ ರಂಗಣ್ಣನವರ ಪ್ರತಿಭೆ ಸ್ಪಂದಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಹೊಸ ಕಾಲಕ್ಕೆ ತಕ್ಕಂತೆ ಸಾಹಿತ್ಯವೂ ಹೊಸ ರೂಪವನ್ನು ಪಡೆಯುವುದು ಅನಿವಾರ್ಯವಾದುದರಿಂದ, ಈ ವಚನಗಳಾದರೂ ಪ್ರಾಚೀನದ ಪ್ರತಿರೂಪವಾದರೆ ಹೆಚ್ಚಿನದೇನನ್ನೂ ಸಾಧಿಸುವಂತಿರಲಿಲ್ಲ. ಆಗಲೇ ವಚನಸಾಹಿತ್ಯಸೃಷ್ಟಿಯ ಎರಡನೆಯ ಆವರ್ತದಲ್ಲಿಯೆ ವಚನಗಳ ಬಣ್ಣ ಅಳಿಸಿರುವುದು, ಕಾವು ಕಳೆದಿರುವುದು, ದನಿ ಮಾಸಿರುವುದು ಸಾಹಿತ್ಯಚರಿತ್ರೆಯ ವಿದ್ಯಾರ್ಥಿಗಳಿಗೆ ತಿಳಿದಿದೆ. ಬದಲಾದ ಮೌಲ್ಯಗಳು ಸಾಹಿತ್ಯನಿರ್ಮಾಣದಲ್ಲಿ ಸ್ಪಂದಿಸದೆ ಹೋದರೆ ಎಲ್ಲ ಕಾಲದ ಕಥೆಯೂ ಹೀಗಾಗುತ್ತದೆ. ಹೊಸ ಕಾಲದ ವಚನ ಹೀಗಾಗಬಾರದೆಂಬುದನ್ನು ಆರಂಭಕ್ಕೇ ರಂಗಣ್ಣನವರು ಅರಿತುಕೊಂಡರು. ಅವರಿಗೆ ವಚನಕಾರರ ಸೃಷ್ಟಿಯ ಸೀಮೆಯ ಪರಿಚಯವಿತ್ತು, ಸೀಮಿತಗಳ ತಿಳಿವಳಿಕೆಯಿತ್ತು. ವಚನ ಅದೇ ರೂಪದಲ್ಲಿ ಉಳಿಯುವುದು ಸಾಧ್ಯವಿಲ್ಲ ಎನ್ನುವುದೂ ಅವರಿಗೆ ಖಚಿತವಾಯಿತು. ಆಧುನಿಕ ವಚನ ಯಾವ ರೂಪ ತಾಳಬೇಕೆಂಬುದಕ್ಕೆ ಅವರು ವಿವಿಧ ಪ್ರಯೋಗಗಳನ್ನು ನಡೆಸಿದರು. ಹೊಸ ಕಾಲದ ಲೇಖಕರ ಈ ನಿಟ್ಟಿನ ಎಲ್ಲ ಪ್ರಯತ್ನಗಳಿಗೂ ಅವರು ಆಚಾರ್ಯರಾದರು. ಕೆಲವು ಉದಾಹರಣೆಗಳು ಹೀಗಿವೆ:

ಕರ್ನಾಟಕ ಜನಪದವಿಂದು ಕುರಿಮಂದೆ, ನರಿಬಳಗ, ಹೆಬ್ಬಾವು ಸಂಸಾರ, ಎಮ್ಮೆ ದೊಡ್ಡಿ, ತಟ್ಟು ಕೊಟ್ಟಿಗೆ, ಇರುವೆ ಗೂಡು; ಎಲ್ಲವನ್ನು ಎಲ್ಲರನ್ನು ಎಚ್ಚರಿಸಿ ಇದಿರು ನಿಲ್ಲಿಸಿಕೊಂಡು, ಆಣತಿ ಪಾಲಿಸಯ್ಯ; ಕನ್ನಡವ ಕಾಪಿಡಲು ಸಂಕಲ್ಪ ತಿಳಿಸಯ್ಯ, ಕೌಸಲ್ಯ ಕಲಿಸಯ್ಯ.

ಏಳನೆಯ ಮಾಸದಲ್ಲಿ ಬಸುರಿ ಬಲಬಾಹುವಿಗೆ ಕನ್ನಡ ರಕ್ಷೆ ಕಟ್ಟಬೇಕು. ಶಿಶು ಜನಿಸಿದ ಒಡನೆ ತಿನ್ನಿಸುವ ಬಜೆಬೆಣ್ಣೆಯ ಜೊತೆಗೆ ಕನ್ನಡವ ಬೆರೆಸುವುದ ಮರೆಯಬಾರದು. ಅನ್ಯಭಾಷೆಯ ಅನ್ಯಾಯ ಕಾಮವೆನ್ನುವ ಸಾಂಕ್ರಾಮಿಕ ಜಾಡ್ಯ ಸೋಂಕದಿರಲು, ಆರು ತಿಂಗಳು ತೀರುವುದರೊಳಗೆ ಕನ್ನಡ ಸಿಡುಬು ಹಾಕಿಸಬೇಕು. ಆಮೇಲೆ ಸಮಸಂವತ್ಸರ ನಡೆಯುವಾಗ ಕತ್ತರಿಸಲಯ್ಯ ಕನ್ನಡಕೆ ಮುಡಿಯ, ಓನಾಮ ಹಬ್ಬಕ್ಕೆ ಸ್ವಾಮಿಯಾಗಿರಲಿ ಕನ್ನಡದಿಂದ ಮಾಡಿದ ಸಿದ್ಧಿವಿಘ್ನೇಶ. ವಿದ್ಯಾಭ್ಯಾಸ ಆಗಬೇಕು ಕನ್ನಡ ಹಲಗೆ ಬಳಪ ಬಾಲಬೋಧೆಗಳ ಬಳಸುತ್ತ. ಮುಂಜಿಯಲಿ ಕನ್ನಡ ಜನಿವಾರ ಕನ್ನಡ ಗಾಯತ್ರಿ; ಮದುವೆಯಲ್ಲಿ ಕನ್ನಡ ಬಾಸಿಂಗ, ಕನ್ನಡ ಮಾಂಗಲ್ಯ, ಕನ್ನಡ ಸಂಕಲಿಕೆ ಕನ್ನಡ ಧಾರೆಯಸೀರೆ. ತರುವಾಯ ಮನೆ ಕಟ್ಟಬೇಕು ಕನ್ನಡ ಇಟ್ಟಿಗೆ ದೂಲ ಹೆಂಚುಗಳಿಂದ; ಮೇಲೆ ಏರಿಸಬೇಕು ಕನ್ನಡ ಬಾವುಟವ. ದಿನದಿನವು ಕನ್ನಡದ ಆಹಾರ, ಕನ್ನಡದ ವಿಹಾರ, ಕನ್ನಡದಲ್ಲಿ ಶಯನ; ಎದ್ದೊಡನೆ ಕನ್ನಡದ ಸ್ಮರಣೆ, ಮಧ್ಯಾಹ್ನ ಕನ್ನಡ ಪೂಜೆ. ಈ ನಾಡು ಆ ನಾಡು ನುಡಿಗಳೆಲ್ಲ ನೆಮ್ಮದಿಯ ದಾಸದಾಸಿಯರಾಗಿ ಓಡಾಡಿ ಗೆಯ್ಮೆ ದುಡಿದು ತಂದು ತುಂಬಿಸಲಿ ಕನ್ನಡ ಕುಟುಂಬದುಗ್ರಾಣವನ್ನು, ಕನ್ನಡ ಕುಲವ ಭಾರಿಯದಾಗಿ ಬೆಳೆಸಿ ಏಳಿಸಲಿ.

ಇಂಥ ಬಾಲ ಪದ್ಧತಿಯೆ ಕನ್ನಡಿಗನಿಗೆ ಸವಿ ಸಾರ್ಥಕವಾದ ನರಜನುಮದಾನಂದ ದೀಕ್ಷೆ; ಅಪ್ಪಣೆಯ ಹಾಡಯ್ಯ, ಅನುಕೂಲ ಮಾಡಯ್ಯ, ವಿಧಿಕೂಸ ಹೊಕ್ಕಳಲಿ ಹೆತ್ತವನೆ ರಂಗಯ್ಯ

ಹಾಗೆ ಕನಸಾಯ್ತು:
ನೆನ್ನೆ ಮೊನ್ನೆ ಸರ್ಕಾರದಾಶ್ರಯದಲ್ಲಿ
ಒಂದು ಗುಮಾಸ್ತಿಕೆಗಾಗಿ
ಪರೀಕ್ಷೆ ತೆಗೆದುಕೊಂಡ ವಾಲ್ಮೀಕಿ.
ಆ ವರ್ಷ ಸಾಹಿತ್ಯ ಪ್ರಶ್ನಪತ್ರಿಕೆಯಲ್ಲಿ
ರಾಮಾಯಣವ ಕುರಿತು ಕೆಲವ ಕೇಳಿತ್ತು
ವಾಲ್ಮೀಕಿ ತೇರ್ಗಡೆಯಾಗಲಿಲ್ಲ!
ಏತಕ್ಕೆ ಆಗಲಿಲ್ಲ?
ಗೋವಿಂದರಾಜ ತಿಲಕ ಮಹೇಶ್ವರ ತೀರ್ಥ
ಯಾವೊಂದು ವ್ಯಾಖ್ಯಾನವನು ಅವ ಓದಿಯೇ ಇರಲಿಲ್ಲ
ಎನ್ನಜ್ಞಾನ, ರಂಗ ಸರ್ವಜ್ಞ!

ಇಂದಿನ ವಚನಗಳಿಗೂ ಹಿಂದಣ ವಚನಗಳಿಗೂ ಕೆಲವು ವಿಚಾರಗಳಲ್ಲಿ ಸಾದೃಶ್ಯ ವೈದೃಶ್ಯಗಳಿರುವುದನ್ನು ನಾವು ಗಮನಿಸಬಹುದು: ಹಿಂದಿನ ವಚನಗಳ ತಿರುಳು ಭಕ್ತಿ, ವಿಚಾರ ಮತ್ತು ವಿಮರ್ಶೆ. ಹೊಸ ಕಾಲದ ವಚನಗಳು ವಿಚಾರವಿಮರ್ಶೆಗಳ ಜೊತೆಗೆ ಆರಿಸಿಕೊಂಡದ್ದು ವಚನರಚನೆಯ ವಿಧಾನವನ್ನು. ವಚನಗಳ ಒಂದು ಸಾಮಾನ್ಯ ಲಕ್ಷಣ ಅವುಗಳಲ್ಲಿ ಕಂಡುಬರುವ ಲಯಬದ್ಧತೆ. ಯಾವುದೇ ಬದ್ಧತೆ ಮುಕ್ತತೆಗಳಿಂದ ಬೇರೆಯಾಗಿ ವಚನಗಳು ಗದ್ಯಪದ್ಯದ ಒಂದು ನಡುವಣ ಸ್ಥಿತಿಯಲ್ಲಿವೆ. ವಚನಗಳ ಲಯದ ಪ್ರಾಸಾದಿಕತೆ ಅವುಗಳ ಉಗಮವನ್ನು ಹಾಡುಗಳಲ್ಲೊ ತ್ರಿಪದಿಗಳಲ್ಲೊ ಕಾಣುವಂತೆ ಅನೇಕ ವಿದ್ವಾಂಸರನ್ನು ಪ್ರಚೋದಿಸಿದೆ. ಒಂದು ನಿರ್ದಿಷ್ಟವಾದ ಛಂದಸ್ಸಿನ ಚೌಕಟ್ಟಿನಿಂದ ವಚನವನ್ನು ಹೊರಗೆಳೆಯಬೇಕಾಗಿಲ್ಲ. ಭಾವಭರಿತವಾದ, ಆವೇಶಯುಕ್ತವಾದ ಮಾತು ತನಗೆ ತಾನೇ ಲಯಬದ್ಧವೂ ನಾದಮಯವೂ ಆಗುತ್ತದೆ. ಭಾಷೆ ಆರಂಭಗೊಂಡಾಗ ಅದು ನಾದಯುಕ್ತವಾಗಿತ್ತೆಂದೇ ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಂದಿನ ವೃತ್ತಪತ್ರಿಕೆಗಳ ವರದಿರೂಪದ ಬರೆಹಗಳಲ್ಲಿಯೂ ಭಾಷೆಯ ಅನಿವಾರ್ಯ ಅಂಶವಾದ ಲಯಗುಣವನ್ನು ಗುರುತಿಸಬಹುದು. ಆದುದರಿಂದ ವಚನಗಳಲ್ಲಿ ಭಾಷೆಯ ಈ ಸಹಜ ಲಯ, ಭಾವತೀವ್ರತೆ ಅನುಭವತೀವ್ರತೆಗಳಿಂದಾಗಿ ಮಿಕ್ಕ ಕಡೆಗಳಿಗಿಂತ ಸ್ಪಷ್ಟವಾಗಿ ಮೈದೋರಿದೆಯೆಂಬುದನ್ನು ಗಮನಿಸಿದರೆ ಸಾಕು. ಈ ದೃಷ್ಟಿಯಿಂದ ಇಂದಿನ ವಚನಗಳನ್ನು ಹಳೆಯ ವಚನಗಳೊಂದಿಗೆ ಹೋಲಿಸಿ ಪರಿಶೀಲಿಸಿದಾಗ, ಇಂದಿನ ವಚನಗಳ ಬಂಧದಲ್ಲಿ ಒಂದು ಬಗೆಯ ಶಿಥಿಲತೆ ಕಾಣಿಸುತ್ತದೆ. ಹಳೆಯ ವಚನಗಳಲ್ಲಿ ಹಾಡುಗಬ್ಬಗಳ ಒಲವಿದ್ದರೆ ಇಂದಿನವು ಓದುಗಬ್ಬಗಳಾಗಿವೆ. ಅಂದಿನ ವಚನಗಳಲ್ಲಿ ಅಲ್ಲಲ್ಲಿ ತ್ರಿಪದಿಗಳೇ ಹುದುಗಿಕೊಂಡಿದ್ದರೆ, ಇಂದಿನ ವಚನಗಳಲ್ಲಿ ಎಷ್ಟೋ ಕಡೆ ತೆಳುವಾದ ಒರಟು ಗದ್ಯವಿದೆ.

ತಂತ್ರದ ದೃಷ್ಟಿಯಿಂದ ಇನ್ನೊಂದು ಸಾಮಾನ್ಯ ಅಂಶವೆಂದರೆ, ಪ್ರಾಚೀನ ವಚನಗಳು ಬರೆದವರ ಗುಪ್ತ ಅಂಕಿತಗಳನ್ನೊಳಗೊಂಡಿರುವುದು. ಮಧ್ಯಕಾಲದ ಭಕ್ತಿ ಸಾಹಿತ್ಯದ ಒಂದು ಪ್ರಧಾನ ಲಕ್ಷಣ ಇದು. ಹೆಚ್ಚು ಕಡಿಮೆ ಇಂದಿನ ವಚನಕಾರರೆಲ್ಲ ಈ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ. ಕುವೆಂಪು, ಬೇಂದ್ರೆ ಅವರಿಗೆ ವಚನ ಬರೆಹ ಕೇವಲ ಒಂದು

ಕಾವ್ಯವಿಧಾನ, ಅಷ್ಟೆ. ಅವರಂತೆಯೆ ಸಿಂಪಿ ಲಿಂಗಣ್ಣ, ವಾಮನ ಭಟ್ಟ ಮೊದಲಾದವರಿಗೆ ಅಂಕಿತದ ಅಗತ್ಯ ತೋರಲಿಲ್ಲ. ಆರ್.ಬಾಳ ಮೊದಲಾದ ಇನ್ನೂ ಕೆಲವರಿಗೆ ಇದರಲ್ಲಿ ಯಾವುದೇ ವಿಧದ ಕಟ್ಟುನಿಟ್ಟಿಲ್ಲ. ರಂಗಣ್ಣ, ಜಚನಿ, ಪರಮೇಶ್ವರ ಭಟ್ಟ ಅವರಂಥವರಿಗೆ ಇದು ತಾಂತ್ರಿಕ ಅನಿವಾರ್ಯತೆ. ದಿವಾಕರರ ಒಳನುಡಿಗಳಲ್ಲಿಯೂ ಅಂತರಾತ್ಮನನ್ನು ಕುರಿತು ಸಂಬೋಧನೆಯಿದೆ.

ಮತಾತೀತವಾದ ಭಕ್ತಿಯನ್ನೂ ಲೌಕಿಕ ಜೀವನದ ವಿವಿಧ ನಿಲವುಗಳನ್ನೂ ಅಭಿವ್ಯಕ್ತಗೊಳಿಸಿರುವುದು ಆಧುನಿಕ ವಚನಗಳ ಒಂದು ಸಾಧನೆಯಾಗಿದೆ. ಜಚನಿ ಅವರನ್ನುಳಿದು ಇತರ ವೀರಶೈವ ಮಠಾಧೀಶರು ರಚಿಸಿದ ವಚನಗಳು ತೀರ ಸೀಮಿತವಾದ ಧಾರ್ಮಿಕ ಪರಿಸರದಲ್ಲಿ ಸುಂದರವಾಗಿ ಅರಳದೆ ಹೋಗಿವೆ. ಜಚನಿ ಅವರ ಆರಂಭದ ವಚನಗಳನ್ನು ಅವರ ಈಚಿನ ವಚನಗಳೊಂದಿಗೆ ಹೋಲಿಸಿದಾಗ ವೈವಿಧ್ಯ ಕುಂದಿರುವುದು ಸ್ಪಷ್ಟವಾಗುತ್ತದೆ. ದೊಡ್ಡನಗೌಡರು, ಜೀರಿಗೆಕಟ್ಟೆ ಬಸಪ್ಪನವರು ಮೊದಲಾದವರು ಸಂಪ್ರದಾಯದ ವಚನಗಳಿಂದ ಸಂಪೂರ್ಣವಾಗಿ ಪ್ರಭಾವಿತರಾಗಿದ್ದರೂ ಲೌಕಿಕವನ್ನು ಕಡೆಗಣಿಸುವುದಿಲ್ಲ. ದಿವಾಕರ ಹಾಗೂ ಸಿಂಪಿಯವರ ವಚನಗಳಲ್ಲಿ ಅತೀಂದ್ರಿಯ ಪ್ರಜ್ಞೆಯ ಪುಣ್ಯಸ್ಪರ್ಶದಿಂದ ಪುಳಕಿತಗೊಳ್ಳುವ ಕವಿಚೇತನದ ಕಂಪನವಿದೆ:

ವಿಜ್ಞಾನಿಗಳಿಗೆ ಅಜ್ಞಾನವಾಗಿ ಕಾಡಿತ್ತು ಮಾಯೆ
ಸತ್ಯರಿಗೆ ಅಸತ್ಯವಾಗಿ ಕಾಡಿತ್ತು ಮಾಯೆ
ಸಾಹಿತಿಗಳಿಗೆ ಸಂಪ್ರದಾಯವಾಗಿ ಕಾಡಿತ್ತು ಮಾಯೆ
ವಿರಾಗಿಗೆ ಅನುರಾಗವಾಗಿ ಕಾಡಿತ್ತು ಮಾಯೆ
ಹಿರಿಯರಿಗೆ ಕಿರುಕುಳವಾಗಿ ಕಾಡಿತ್ತು ಮಾಯೆ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ
ಮಾಯಾ ಮೋಹಕೆ ಮರುಳಾಗದವರ ಕಾಣೆನಯ್ಯ

ಹೊಟ್ಟೆಯ ಪಾಡಿಂಗೆ ಪಟ್ಟಕ್ಕೇರುವವರಿಗೆ
ನುಡಿಸೇವೆಯ ಮಾತೇಕೆ, ನಾಡಸೇವೆಯ ದಂದುಗವೇಕೆ?
ವಂದನೆಗೆ ಆಶಿಸುವರು; ಪರನಿಂದೆಗೆ ಆನಂದಿಸುವರು
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರನ
ಸುಖಸಾರಾಯವು ಅವರಿಗೆ ರುಚಿಸದು
ಸೀಮೆ ರಾಜನಿಗಲ್ಲದೆ ರಸಜ್ಞನಿಗುಂಟೆ?
ಸೀಮೆ ವಾರಿಧಿಗಲ್ಲದೆ ವಾಙ್ಮಯಕ್ಕುಂಟೆ?
ಸೀಮೆ ರಸಾನ್ನಕ್ಕುಂಟಲ್ಲದೆ ರಸೋಕ್ತಿಗುಂಟೆ?
ಶ್ರೀನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ
ಸೀಮಾತೀತ ಸಾಹಿತಿ; ಸೀಮಾತೀತ ಸಾಹಿತ್ಯ

ಬೇಂದ್ರೆಯವರ ಕರುಳಿನ ವಚನಗಳಲ್ಲಿ ವಾತ್ಸಲ್ಯಭಾವ ಮಡುಗಟ್ಟಿದ್ದರೆ, ಕುವೆಂಪು ಅವರು ಕಿಂಕಿಣಿಯ ನಾದದಲ್ಲಿ ಆತ್ಮಶೋಧನೆಗೆ ತೊಡಗುತ್ತಾರೆ. ರಂಗಣ್ಣನವರ ವಿಮರ್ಶನ ಪ್ರಜ್ಞೆ ವಿಶ್ವವ್ಯಾಪಕವಾದುದು: ಪರಮೇಶ್ವರ ಭಟ್ಟರು ಸಮಕಾಲೀನ ಜೀವನದ ಸಣ್ಣಪುಟ್ಟ ಸಂಗತಿಗಳಿಗೆ ವಿಲಕ್ಷಣವಾದ ತಿರುವು ಕೊಡುತ್ತಾರೆ. ಚಂದ್ರಶೇಖರ ಐತಾಳರ ವಚನಗಳ ಕೇಂದ್ರಬಿಂದು ತಾಯಿ, ತಾಯಿತನ. ಮೊತ್ತದಲ್ಲಿ ಇಂದಿನ ವಚನ ಸೆಕ್ಯುಲರ್ ಆಗಿದೆ. ಅಂದಮಾತ್ರಕ್ಕೆ ಅದು ಆರ್ತತೆಯನ್ನು, ಆತ್ಮನಿರೀಕ್ಷಣೆಯನ್ನು, ಆನಂದಾನುಭವವನ್ನು ಕಡೆಗಣಿಸಿದೆ ಎಂದು ಅರ್ಥವಲ್ಲ. ಹಿಂದಿನ ವಚನಗಳಲ್ಲಿ ಒಂದೇ ಸಮನೆ ಕೇಳಿಸುತ್ತಿದ್ದುದು, ಪರಮಾತ್ಮನನ್ನು ಅರಸುತ್ತಿದ್ದ ಆತ್ಮದ ಕರೆ, ಈ ಹಾದಿಯಲ್ಲಿ ಕಲ್ಲು ಮುಳ್ಳು ಕಸ ಇರಬಾರದೆಂದು ಪದೇ ಪದೇ ಒತ್ತಿಹೇಳುವ ಶುಚಿಜೀವನದ ಸಂದೇಶ. ಇಂದಿನ ವಚನಗಳಿಗಾದರೊ ಬೇಲಿಯಿಲ್ಲ. ಜೀವನದ ವಿಸ್ತಾರವನ್ನೆಲ್ಲ ಅವು ಆವರಿಸುತ್ತವೆ. ಸಂಕೀರ್ಣ ಬದುಕಿನ ಎಲ್ಲ ಪದರಗಳನ್ನೂ ವರ್ಣಿಸಲು ಅವು ಸಮರ್ಥವಾಗಿವೆ. ಅಂದರೆ ಹನ್ನೆರಡನೆಯ ಶತಮಾನದಲ್ಲಿ ವಚನ ಸಾಧಿಸಿದುದನ್ನೆಲ್ಲ ಇಂದು ಸಾಧಿಸಲಾಗದು. ಅದನ್ನು ನಿರೀಕ್ಷಿಸುವುದೂ ಸಾಧ್ಯವಿಲ್ಲ; ಸಾಧುವೂ ಅಲ್ಲ. ಅಂದಿನವರೆದುರಿಗಿದ್ದುದು ಒಂದೇ ಧ್ಯೇಯ: ಕಾವ್ಯ ಶುದ್ಧ ಜೀವನ ಸಂಹಿತೆ. ಇಂದಿನ ಲೇಖಕನೋ ಸಂಕೀರ್ಣತೆಯ ಶಿಶು. ಭಾಷೆಯಾದರೋ ಅಂದಿನವರು ನಡೆದುದೆ ದಾರಿ: ಇಂದು ಮಾರ್ಗನಿರ್ಮಾಣ ಸುಲಭವಲ್ಲ.

ಪರಮೇಶ್ವರಭಟ್ಟರು ವಚನಗಳನ್ನು ಬರೆದವರಲ್ಲಿ ಅತ್ಯಂತ ಮುಖ್ಯರು. ಜಚನಿ ಹಾಗೂ ರಂಗಣ್ಣನವರನ್ನುಳಿದರೆ ಭಟ್ಟರೇ ಹೆಚ್ಚು ಸಂಖ್ಯೆಯ ವಚನಗಳನ್ನು ಬರೆದಿರುವವರು. ಅವರ ಉಪ್ಪು ಕಡಲು ಸಂಗ್ರಹದಲ್ಲಿ 705 ವಚನಗಳಿವೆ. ಇದು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳಲ್ಲೊಂದು. ಭಟ್ಟರ ಪರಿಣತ ಕೃತಿಯೂ ಹೌದು. ಯಶಸ್ಸಿನ ದೃಷ್ಟಿಯಿಂದಲಂತೂ ಅವರ ರಚನೆಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾದವು. ಇವನ್ನು ಹೋಲಿಸಬಹುದಾದರೆ ಕೇವಲ ರಂಗಣ್ಣನವರ ವಚನಗಳೊಂದಿಗೆ ಮಾತ್ರ. ಹಾಗೆ ಮಾಡಿದರೂ ರಂಗಣ್ಣನವರ ವಚನಗಳಲ್ಲಿ ಅಷ್ಟಾಗಿ ಕಾಣಿಸದ ಕೆಲವು ಗುಣಗಳೂ ಭಟ್ಟರ ವಚನಗಳಲ್ಲಿ ಕಾಣಿಸುತ್ತವೆ.

ರಂಗಣ್ಣನವರು ಪ್ರಧಾನವಾಗಿ ಪಂಡಿತರು, ವಿಮರ್ಶಕರು. ಅವರ ವಚನಗಳಾದರೂ ಪಾಂಡಿತ್ಯವಿಮರ್ಶೆಯಿಂದಲೇ ತುಂಬಿವೆ ಎನ್ನಬಹುದು. ರಂಗಣ್ಣನವರ ಜೀವನಾನುಭವದೊಡನೆ ಅವರ ವ್ಯಾಪಕವಾದ ಅಧ್ಯಯನ ಸ್ಪರ್ಧಿಸುತ್ತಿರುವಂತೆ ಕಾಣುತ್ತದೆ. ಭಟ್ಟರು ಕೇವಲ ವಿಮರ್ಶಕರಲ್ಲ, ಕವಿಗಳೂ ಹೌದು. ಅವರ ವಚನಗಳಲ್ಲಿ ಯಥೇಚ್ಛವಾಗಿ ಕಾವ್ಯ ಹೊಳಪು ಹಾಕಿದೆ. ತಾಂತ್ರಿಕವಾಗಿ ಇಬ್ಬರೂ ಪ್ರಾಚೀನ ವಚನಗಳಿಗೆ ಸರಿಸಮನಾದ ರಚನೆಗಳನ್ನು ಮಾಡಿದ್ದಾರೆ. ಆದರೆ ಭಟ್ಟರ ವಚನಗಳಲ್ಲಿ ವಚನರೂಪ ಖಚಿತಗೊಂಡಿರುವ ಹಾಗೆ ರಂಗಣ್ಣನವರ ವಚನಗಳಲ್ಲಿ ಕಾಣಿಸುವುದಿಲ್ಲ. ಸದಾಶಿವ ಗುರುವಿಗೆ ಭಟ್ಟರು ಮೊರೆ ಹೋಗುವುದರಲ್ಲಿ ಅಭಿವ್ಯಕ್ತವಾಗುವ ಆರ್ತತೆ ಉತ್ಕಟತೆಗಳು ರಂಗಣ್ಣನವರು ಮಾವಿನಕೆರೆಯ ಅಧಿದೈವಕ್ಕೆ ಪ್ರಾರ್ಥನೆ ಸಲ್ಲಿಸುವಾಗ ತೋರುವುದಿಲ್ಲ. ರಂಗಬಿನ್ನಪದ ವೈಚಾರಿಕತೆ ಭಾಷಣಾತ್ಮಕವಾದುದ್ದು; ಉಪ್ಪುಕಡಲಿನ ವೈಚಾರಿಕತೆ ನಿವೇದನಾತ್ಮಕವಾದದ್ದು, ಮೊದಲನೆಯದರಲ್ಲಿ ನಿರೂಪಣೆ; ಎರಡನೆಯದರಲ್ಲಿ ತೋಡಿಕೆ. ರಂಗಯ್ಯ ಆತ್ಮವನ್ನು ಮರೆಯದಿದ್ದರೂ ಲೋಕಕ್ಕೆ ಸನಿಹದವನು; ಸದಾಶಿವಗುರು ಲೋಕವನ್ನು ಕಡೆಗಾಣದಿದ್ದರೂ ಆತ್ಮಕ್ಕೆ ಹತ್ತಿರದವನು.

ಈ ವಚನಗಳಲ್ಲಿ ಕಡಲಿನ ಆಳ ವೈಶಾಲ್ಯ ವೈವಿಧ್ಯಗಳನ್ನು ವರ್ಣಿಸುವ ನೆಪದಲ್ಲಿ ಕವಿ ಮನುಷ್ಯನ ಅಲ್ಪತೆಗಳನ್ನೆಲ್ಲ ಎತ್ತಿ ಆಡಿದ್ದಾನೆ. ಈ ವಚನಗಳು ಕಡಲಿನ ಒಂದು ವರ್ಣಮಯ ಆಲ್ಬಂ. ಇಲ್ಲಿಯ ಕಡಲಿನ ಮೊರೆತ ಮಾನವಹೃದಯದ ತುಯಿತ; ಇದು ಅಪ್ಪಳಿಸುವುದಿಲ್ಲ, ಸ್ಪರ್ಶಿಸುತ್ತದೆ; ಭೋರ್ಗರೆಯುವುದಿಲ್ಲ ಪಿಸುಗುಡುತ್ತದೆ. ಕಡಲ ಕಥನಕ್ಕೆ ಮೀಸಲಾದ ಈ ವಚನಗಳ ಜೀವನದ ವಿಮರ್ಶೆಯಿದೆ; ಅನುಭವದ ತುಡಿತವಿದೆ; ಆತ್ಮವಿಮರ್ಶೆಯ ಕೆಚ್ಚಿದೆ. ಬದುಕಿನ ನಾನಾಮುಖಗಳಲ್ಲಿ ಕಂಡು ಉಂಡ ಅನುಭವ ಈ ವಚನಗಳಲ್ಲಿ ತೊಟ್ಟಿಕ್ಕುತ್ತದೆ. ಇವುಗಳ ವಸ್ತು ನಿತ್ಯಜೀವನ. ಇವುಗಳ ನಿರ್ವಹಣೆಯಲ್ಲಿ ಪ್ರತಿಭೆಯಿದೆ, ಪಾಂಡಿತ್ಯವಿದೆ, ವ್ಯುತ್ಪತ್ತಿಯಿದೆ. ಇಲ್ಲಿಯ ಎಷ್ಟೋ ಸಂಗತಿಗಳು ಪರಮೇಶ್ವರ ಭಟ್ಟರ ಮಿಕ್ಕ ಕೃತಿಗಳನ್ನು ಬಲ್ಲವರಿಗೆ ಹೊಸವಲ್ಲ. ಅವರ ಅನೇಕ ವಿಚಾರಗಳು ಇಲ್ಲಿ ರೂಪಾಂತರಗೊಂಡಿರುವುದನ್ನು ಗಮನಿಸಬಹುದು. ಪ್ರತಿಮೆ ಉಪಮೆ ಹೋಲಿಕೆ ಮೊದಲಾದ ಈ ವಚನಗಳ ಪರಿಕರಗಳು ಬಹುವಾಗಿ ಸಮಕಾಲೀನ ಜೀವನದಿಂದ ಎತ್ತಿಕೊಂಡವು. ಸ್ಕೂಟರ್ ಮೇಲೆ ಹೋಗುತ್ತಿರುವ ಗಂಡಹೆಂಡಿರು ಆಧುನಿಕ ದಾಂಪತ್ಯಕ್ಕೆ ಅದ್ಭುತ ಸಂಕೇತವಾಗಬಲ್ಲರು:

ಸ್ಕೂಟರು ನಡೆಸುವ ಗಂಡನ ಮುಖ ಪಯಣದ ದಿಕ್ಕಿಗೆ
ಮನೆಯ ಕಡೆಗೆ!
ಹಿಂದೆ ಕುಳಿತ ಹೆಂಡತಿಯ ಮುಖ ಬೀದಿಯ ದಿಕ್ಕಿಗೆ
ಅಂಗಡಿಯ ಕಡೆಗೆ!
ಹೀಗೆ ಪತಿಯ ಮುಖ ಅತ್ತ ಸತಿಯ ಮುಖ ಇತ್ತ!
ಆದರೇನು ಒಮ್ಮುಖವಾದರೆ ಚಿತ್ತಸುಖವದುವೆ ಸದಾಶಿವಗುರು

ಇಲ್ಲಿನ ಮಾತುಗಳು ಒಡೆಯುವುದಕ್ಕೂ ಸಂಕೇತ, ಕೂಡುವುದಕ್ಕೂ ಸಂಕೇತ. ಎರಡೇ ಸಾಲುಗಳಲ್ಲಿ ಭಾರತ ದೇಶದ ಸ್ವಾತಂತ್ರ್ಯೋತ್ತರ ಪರಿಸ್ಥಿತಿಯನ್ನು ವರ್ಣಿಸಿರುವ ರೀತಿ:

ನಮ್ಮ ದೇಶಕ್ಕೆ ಸ್ವಾತಂತ್ರ್ಯದ ಜತೆಗೆ ಸ್ವೈರ ಬಂತು
ಮಗುವಿಗೆ ಮಾತಿನ ಜತೆಗೆ ಉಗ್ಗು ಬಂದಂತೆ ಸದಾಶಿವಗುರು

ಬದುಕಿನ ಹೊಣೆಗಾರಿಕೆಯನ್ನು ಆತ್ಮವಿಶ್ವಾಸವನ್ನು ಹೇಳುವ ಹೊಸ ವಿಧಾನ:

ಬ್ರೇಕಿಲ್ಲದ ಬೆಲ್ಲಿಲ್ಲದ ಲೈಟಿಲ್ಲದ ಲೈಸೆನ್ಸಿಲ್ಲದ ಸೈಕಲ್ಲನು ಮೆಟ್ಟೆಂದೆ
ಟಾರಿಲ್ಲದ ಕಲ್ಲಿಲ್ಲದ ಈ ಹೊಳ್ಳದೆ ಈ ಕೊಳ್ಳದೆ ನಡೆಯೆಂದೆ
ಆದರೂ ನಾನೆದೆಗೆಡದೆಯೆ ಎಡೆಬಿಡದೆಯೆ ಪೆಡಲೊತ್ತುವೆ
ಮುಂದಾಗುವೆ ಗುರಿಮುಟ್ಟುವೆ ಸದಾಶಿವಗುರು

ಒಂದು ಪಂಕ್ತಿಯಿಂದ ಹಿಡಿದು ಮುಕ್ಕಾಲು ಪುಟದವರೆಗೆ ಸಾಮಾನ್ಯವಾಗಿ ಇವರ ವಚನಗಳ ವ್ಯಾಪ್ತಿ. ಅವುಗಳ ರಚನಾವಿನ್ಯಾಸ ಎಲ್ಲ ವಿವರಗಳಲ್ಲಿಯೂ ಸಂಪೂರ್ಣವಾಗಿ ಪ್ರಾಚೀನದ ಶ್ರೇಷ್ಠ ವಚನಗಳನ್ನು ನೆನಪಿಗೆ ತರುತ್ತವೆ. ರೂಪಾಂಶದ ದೃಷ್ಟಿಯಿಂದ ಎಷ್ಟೋ ಸಂದರ್ಭಗಳಲ್ಲಿ ಈ ವಚನಗಳನ್ನು ಹಳೆಯ ವಚನಗಳಿಂದ ಬೇರ್ಪಡಿಸುವುದು ಕೂಡ ಸಾಧ್ಯವಾಗುವುದಿಲ್ಲ. ಭಟ್ಟರ ಪ್ರಾಸಪ್ರಯೋಗಗಳು ವಿಚಿತ್ರ ರೀತಿಯಲ್ಲಿ ಪರಿಣಾಮವನ್ನುಂಟುಮಾಡುತ್ತವೆ. ಪರಿಚಿತ ಪ್ರಸಂಗಗಳಿಗೆ, ಮಾತುಗಳಿಗೆ ಭಟ್ಟರು ತರುವ ಅನಿರೀಕ್ಷಿತ ತಿರುವಿನಿಂದಲೆ ಒಂದು ಸ್ವಾರಸ್ಯ ಉಂಟಾಗುತ್ತದೆ. ಹಳೆಯ ಗಾದೆಯ ಮಾತುಗಳಿಗೆ ಅವರು ವಿಲಕ್ಷಣ ಪ್ರತಿಕ್ರಿಯೆಯನ್ನೊದಗಿಸುತ್ತಾರೆ. ಪದಗಳಲ್ಲಿ ತೀರ ಹೊಸ ಅರ್ಥವನ್ನು ಅವರು ಒಮ್ಮೊಮ್ಮೆ ಹೊಮ್ಮಿಸಬಲ್ಲರು. ಆತ್ಮವಿಮರ್ಶೆ ಈ ವಚನಗಳಲ್ಲಿ ತಾನೇ ತಾನಾಗಿ ತುಂಬಿಕೊಂಡಿದೆ. ಒಟ್ಟಿನಲ್ಲಿ ಆಧುನಿಕ ವಚನಸಾಹಿತ್ಯದ ಬೆಳಸು ಆಶಾದಾಯಕವಾಗಿದೆ ಎನ್ನಬಹುದು. ಇಂದು ವಚನ ಸಾಹಿತ್ಯ ಸಾಕಷ್ಟು ಹೊಸ ವಿಚಾರಗಳನ್ನು ತೆಗೆದುಕೊಂಡು ಬೆಳೆಯುತ್ತಿದೆ. ಮಾತೆ ಮಹಾದೇವಿಯವರಿಂದ ಹಿಡಿದು ಹಲವು ಹತ್ತು ಕವಿಗಳು ಕವಯಿತ್ರಿಯರು ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಿದ್ದಾರೆ. *

**ಕನ್ನಡದಲ್ಲಿ ವಿಚಾರ ಸಾಹಿತ್ಯ :** ವಿಚಾರ ಸಾಹಿತ್ಯವೆಂದು ಕರೆಯಬಹುದಾದ ಚರ್ಚೆ, ಶಾಸ್ತ್ರ, ಮೀಮಾಂಸೆಯ ಒಂದು ಸಾಹಿತ್ಯ ಪ್ರಕಾರ ಕನ್ನಡದಲ್ಲಿ ಬಹಳ ಹಿಂದಿನಿಂದಲೂ ಸಮೃದ್ಧವಾಗಿ ಬೆಳೆದುಬಂದಿದೆ. ಆದರೆ ಶುದ್ಧ ವೈಚಾರಿಕ ಕೃತಿಗಳು ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿದ್ದು ಮಾತ್ರ 20ನೆಯ ಶತಮಾನದಲ್ಲಿ. ಶಾಸನಗಳಲ್ಲೂ ವೈಚಾರಿಕ ಅಂಶಗಳು ಕಂಡುಬರುತ್ತವೆಯಾದರೂ ಅವು ಸಾಹಿತ್ಯ ಪ್ರಕಾರಕ್ಕೆ ಹೆಚ್ಚಾಗಿ ಸೇರುವುದಿಲ್ಲ. 10-11ನೆಯ ಶತಮಾನದವರೆಗೆ ಜೈನಸಾಹಿತ್ಯ ತನ್ನ ದಾರ್ಶನಿಕ ರಂಗದಲ್ಲಿಯೂ ವಿಕಾಸಗೊಂಡಿತ್ತು. ಅಂದಿನ ಸಾಹಿತ್ಯದಲ್ಲಿ ಜ್ಞಾನ ಮತ್ತು ಭಾವ (ರಸ) ಎಂಬ ಎರಡು ಪ್ರಕಾರಗಳನ್ನು ಕಲ್ಪಿಸಿದರೆ ಜ್ಞಾನಸಾಹಿತ್ಯದ ಅಂಗವಾಗಿ ವ್ಯಾಕರಣ, ಛಂದಸ್ಸು, ಕಾವ್ಯರೀತಿ ಲಕ್ಷಣಾದಿಗಳಷ್ಟಕ್ಕೆ ಮಾತ್ರ ಕನ್ನಡ ವಿಚಾರ ಸಾಹಿತ್ಯ ಸೀಮಿತವಾಗಿತ್ತು. ಇದಕ್ಕೆ ಕವಿರಾಜಮಾರ್ಗ ಸಾಕ್ಷಿ. ಅನಂತರ ಬಂದ ಕೇಶಿರಾಜನ ಶಬ್ದಮಣಿದರ್ಪಣ, ಭಟ್ಟಾಕಳಂಕನ ಶಬ್ದಾನುಶಾಸನ ಅಲ್ಲದೆ ಆಯುರ್ವೇದ, ಜ್ಯೋತಿಷ ಮುಂತಾದವುಗಳನ್ನು ಕುರಿತ ಗ್ರಂಥಗಳು ಆ ಯುಗದ ವೈಚಾರಿಕ ವಾಙ್ಮಯದ ಉದಾಹರಣೆಗಳು (ನೋಡಿ-ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯ). ಅನಂತರ 12ನೆಯ ಶತಮಾನದಲ್ಲಿ ವೀರಶೈವ ಸಾಹಿತ್ಯಧಾರೆ ಹರಿಯತೊಡಗಿತ್ತು. ಅಂದಿನ ವಿಚಾರಸರಣಿ ಅನಿವಾರ್ಯವಾಗಿ ಮತೀಯ ಸಂಪ್ರದಾಯದ ಹಿನ್ನೆಲೆಯಲ್ಲಿ ಮುಂದುವರಿದರೂ ಸ್ವತಂತ್ರ ವಿಚಾರಗಳು, ಆಲೋಚನೆಗಳ ಮಥನಕ್ರಿಯೆ ನಡೆಯಿತು. ವಚನಸಾಹಿತ್ಯ ಭಕ್ತಿ ಜ್ಞಾನ ವೈರಾಗ್ಯ ಶರಣಾರ್ಥಿ ಅನುಭಾವ ನೀತಿ ಧರ್ಮಗಳ ಪ್ರಚಾರ ಪುರಸ್ಕಾರಗಳ ಧ್ವನಿಯಾಯಿತು.

ಅಂದಿನಿಂದ ಇಂದಿನವರೆಗೆ ಬಹುಮುಖವಾಗಿ ಹರಿದುಬಂದ ಕನ್ನಡ ಸಾಹಿತ್ಯವಾಹಿನಿಯಲ್ಲಿ ಒಟ್ಟಾರೆ ವಿಚಾರ ಸಾಹಿತ್ಯದ ಮೊತ್ತ ಕಡಿಮೆಯೇ. ವಿಚಾರ ಸಾಹಿತ್ಯದ ಪ್ರಧಾನ ಕ್ಷೇತ್ರಗಳೆಂದರೆ ಶಾಲಾಕಾಲೇಜುಗಳ ಪಠ್ಯಪುಸ್ತಕಗಳ ಹಾಗೂ ಪ್ರಾಧ್ಯಾಪಕರ ಲೇಖನಪ್ರಪಂಚ ಮತ್ತು ವಿಶ್ವವಿದ್ಯಾಲಯಗಳ ಪ್ರಚಾರೋಪನ್ಯಾಸಗಳ ವ್ಯಾಸಂಗ ವಿಸ್ತರಣೆಯ ಫಲವಾದ ಜನಪ್ರಿಯ ಶಾಸ್ತ್ರೀಯ ಗ್ರಂಥ ನಿರ್ಮಿತಿ. ಕರ್ನಾಟಕದ ಬಹುಪಾಲು ವಿಶ್ವವಿದ್ಯಾಲಯಗಳು ವಿಚಾರ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿವೆ. ಇಲ್ಲಿ ಮೌಲಿಕ ಸಂಶೋಧನೆ ಇದ್ದರೂ ಅದರ ಪರಿಮಾಣ ಕಡಿಮೆ. ಸಂಗ್ರಹ ಸಂಪಾದನೆಗಳೇ ಹೆಚ್ಚು. ಒಂದು ಮಾತು ನಿಜ, ಮೂಲಭೂತವಾದ ಶಾಸ್ತ್ರವಿಷಯಗಳನ್ನು ಶುದ್ಧ ಕನ್ನಡದ ಮೂಲಕ ಜನಸಾಮಾನ್ಯರಿಗೂ ಒದಗಿಸಿದ ಕೀರ್ತಿ ಈ ಪ್ರಕಟನೆಗಳಿಗೆ ಸಲ್ಲುತ್ತದೆ. ಇದರಿಂದ ಜನತೆಯಲ್ಲಿ ವೈಚಾರಿಕ ಮನೋಧರ್ಮ ಅಂಕುರಿಸಿ ಬೆಳೆಯಲು ಆಸ್ಪದವಾಯಿತು ಎನ್ನಬಹುದು.

ಆಧುನಿಕ ಯುಗದ ಆರಂಭದ ದಶಕಗಳಲ್ಲಿ ವಚನಶಾಸ್ತ್ರದ ಮೇಲೆ ಬೆಳಕು ಚೆಲ್ಲಿದವರು ಫ.ಗು.ಹಳಕಟ್ಟಿ. ಉತ್ತಂಗಿ ಚನ್ನಪ್ಪನವರು ಸರ್ವಜ್ಞನನ್ನು ಬೆಳಕಿನಲ್ಲಿ ತಂದಿರಿಸಿದರೆ ಆರ್ಯದ್ರಾವಿಡ ಕಂದಮಿಳು ಜನಾಂಗದ ಮೂಲ ಮತ್ತು ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆಯನ್ನು ಕುರಿತು ಅಗಾಧ ಪರಿಶ್ರಮದಿಂದ ಸಂಶೋಧನೆ ಸಾಗಿಸಿದವರು ಶಂ.ಬಾ.ಜೋಶಿ. ಶೂನ್ಯಸಂಪಾದನೆಯನ್ನು ಕುರಿತು ಗ್ರಂಥ ರಚಿಸಿರುವ ಎಚ್.ತಿಪ್ಪೇರುದ್ರಸ್ವಾಮಿ, ಛಂದೋವಿಕಾಸವನ್ನು ಬರೆದ ಡಿ.ಎಸ್.ಕರ್ಕಿ ಇಂಥ ಮಹನೀಯರನ್ನು ಇಲ್ಲಿ ಸ್ಮರಿಸಬೇಕು. ಹಾಗೆಯೇ ಒಂದು ತಲೆಮಾರಿನ ಇತಿಹಾಸ ಪ್ರಜ್ಞೆಯನ್ನು, ಸ್ವಾಭಿಮಾನವನ್ನು ಬಡಿದೆಬ್ಬಿಸಿದ ಕರ್ನಾಟಕ ಗತವೈಭವದ ಲೇಖಕರಾದ ಆಲೂರವೆಂಕಟರಾಯರು ಕನ್ನಡದ ಕುಲಪುರೋಹಿತರೆಂದು ಹೆಸರಾದವರು. ಪ್ರಾಚೀನ ಕವಿಗಳ ಕಾಲನಿರ್ಣಯದಲ್ಲಿ ಕವಿ ಗೋವಿಂದ ಪೈಗಳು ಧನ್ಯಸೇವೆ ಸಲ್ಲಿಸಿದ್ದಾರೆ. ಇತಿಹಾಸ ಸಂಶೋಧನೆಯಲ್ಲಿ ಪಾಂಡುರಂಗರಾವ್ ದೇಸಾಯಿ, ತಿರುಮಲೆ ತಾತಾಚಾರ್ಯ ಶರ್ಮ ಮೊದಲಾದವರು ಗಣ್ಯ ಕೆಲಸ ಮಾಡಿದ್ದಾರೆ.

ಭಾವ(ರಸ)ಸಾಹಿತ್ಯವಿಮರ್ಶನಕ್ಷೇತ್ರದಲ್ಲಿ ತೀ.ನಂ.ಶ್ರೀಕಂಠಯ್ಯನವರ ಭಾರತೀಯ ಕಾವ್ಯಮೀಮಾಂಸೆ, ದ.ರಾ.ಬೇಂದ್ರೆಯವರ ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯದ ವಿರಾಟ್ ಸ್ವರೂಪ, ಗೋಪಾಲಕೃಷ್ಣ ಅಡಿಗರ ಮಣ್ಣಿನ ವಾಸನೆ, ಬಿ.ಎಚ್.ಶ್ರೀಧರರ ಕಾವ್ಯಸೂತ್ರ (ಅನಂತರ ಜ್ಞಾನಸೂತ್ರ), ರಂ.ಶ್ರೀ.ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ, ಶಿವರುದ್ರಪ್ಪನವರ ವಿಮರ್ಶೆಯ ಪೂರ್ವ ಪಶ್ಚಿಮ ಹಾಗೂ ಸೌಂದರ್ಯಸಮೀಕ್ಷೆ, ಕೀರ್ತಿನಾಥ ಕುರ್ತಕೋಟಿಯವರ ಕನ್ನಡ ಸಾಹಿತ್ಯ ಪ್ರಕಾರಗಳನ್ನು ವಿಮರ್ಶಿಸುವ ಇತಿಹಾಸ ಲೇಖನಗಳು - ಇವೇ ಕೆಲವು ಈ ಕ್ಷೇತ್ರದಲ್ಲಿಯ ವೈಚಾರಿಕ ಪ್ರಗತಿಯ ಮೈಲುಗಲ್ಲುಗಳು. ಶಿವರಾಮ ಕಾರಂತರ ವಿಚಾರ ಸಾಹಿತ್ಯ ನಿರ್ಮಾಣವೆಂಬ ಪುಸ್ತಕ ಮಹತ್ತ್ವಪೂರ್ಣವಾಗಿದೆ. ಅಷ್ಟೇ ಮಹತ್ತ್ವಪೂರ್ಣವಾದ ಇನ್ನೊಂದು ಕೃತಿ ಬಿಡಿ ಬರೆಹಗಳು. ಅದೇ ರೀತಿ ವಿ.ಸೀತಾರಾಮಯ್ಯನವರ ಸಾಹಿತ್ಯ ಸಂಪ್ರದಾಯ ಮತ್ತು ಹೊಸ ಮಾರ್ಗ, ಸತ್ಯ ಮತ್ತು ಮೌಲ್ಯ, ಮುಗಳಿಯವರ ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ಪ್ರಾಚೀನ ಸಾಹಿತ್ಯದ ಕೆಲವು ಪ್ರಕಾರಗಳು ಮೊದಲಾದುವು ವೈಶಿಷ್ಟ್ಯಪೂರ್ಣವಾಗಿವೆ.

ಡಿ.ವಿ.ಜಿ. ಅವರ ಜೀವನ ಸೌಂದರ್ಯ ಮತ್ತು ಸಾಹಿತ್ಯ ಕನ್ನಡದ ವೈಚಾರಿಕ ಪ್ರಜ್ಞೆಗೆ ಒಂದು ನಿದರ್ಶನವಾಗಿದೆ. ಎಸ್.ವಿ.ರಂಗಣ್ಣ ನವರ ರುಚಿ, ಶ್ರೀರಂಗರ ನಗೆ, ಸುಂಕಾಪುರ ಅವರ ಹೆಬ್ಬೊತ್ತಗೆ ಕನ್ನಡ ಸಾಹಿತ್ಯದಲ್ಲಿ ಹಾಸ್ಯ, ಅ.ನ.ಕೃ. ಅವರ ಸಾಹಿತ್ಯ ಮತ್ತು ಕಾಮ ಪ್ರಚೋದನೆ, ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ವಿ.ಸೀ.ಅವರ ಹಣಪ್ರಪಂಚ, ಶ್ರೀರಂಗರ ಶಾರದೆಯ ಸಂಸಾರ, ರಂಗನಾಥ ದಿವಾಕರರ ಗಾಂಧೀವಾದ, ಗೌರೀಶ ಕಾಯ್ಕಿಣಿ ಅವರ ಮಾರ್ಕ್ಸ್‌ವಾದ, ವಿಚಾರವಾದ, ಎಸ್.ಎಲ್. ಭೈರಪ್ಪನವರ ಸತ್ಯ ಮತ್ತು ಸೌಂದರ್ಯ, ಹಾಲಪ್ಪನವರ ರಾಜಕಾರಣ ಮೂಲಸೂತ್ರಗಳು, ಎನ್.ಆರ್. ರಾವ್‌ರವರ ರಾಜಕೀಯ ಜಿಜ್ಞಾಸೆ, ಅಡಿಗರ ಲೋಹಿಯಾ ಇತಿಹಾಸ ಚಕ್ರ (ಅನುವಾದ), ವಿಚಾರಪಥ, ಕನ್ನಡ ಅಭಿಮಾನ ಮತ್ತು ಇತರ ಲೇಖನಗಳು ಇವೆಲ್ಲ ತತ್ತ್ವವಿವೇಚನೆಯ ಗಮನಾರ್ಹ ಗ್ರಂಥಗಳೆಂದು ಗುರುತಿಸಬಹುದು.

ಮತೀಯ ಸಿದ್ಧಾಂತಗಳನ್ನು ಕುರಿತು ಅನೇಕ ಗ್ರಂಥಗಳು ಪ್ರಕಟವಾಗಿವೆ. ಆದರೆ ಅವು ಹೆಚ್ಚಾಗಿ ವಿವರಣಾತ್ಮಕಗಳೇ ಹೊರತು ವಿಶ್ಲೇಷಣೆ, ತೌಲನಿಕ ವಿಮರ್ಶೆ ಮಾಡುವಂಥವಲ್ಲ. ಜೈನಮತ ತತ್ತ್ವಗಳ ಬಗೆಗೆ ಮಿರ್ಜಿ ಅಣ್ಣಾರಾಯರ ಗ್ರಂಥ ಜೈನಧರ್ಮ ಉಲ್ಲೇಖನೀಯವಾಗಿದೆ. ಹಾಗೆಯೇ ಸಂ.ಶಿ.ಭೂಸನೂರಮಠ ಅವರ ಶೂನ್ಯಸಂಪಾದನೆಯ ಪರಾಮರ್ಶೆ ಹೆಸರಿಸಬೇಕಾದ ಪ್ರಮುಖ ಗ್ರಂಥ. ನಿಜವಾದ ವಿಚಾರ ಸಾಹಿತ್ಯವೆಂಬ ದೃಷ್ಟಿಯಿಂದ ಸ್ವಾನುಭವ ಸ್ವೋಪಜ್ಞತೆಯಿಂದ ಬದುಕಿನ ಮರ್ಮವನ್ನರಿತ ತನ್ನ ವಿಚಾರಧಾರೆಯನ್ನು ಕಾರಂತರು ಬಾಳ್ವೆಯ ಬೆಳಕು, ಡಿ.ವಿ.ಜಿ.ಯವರು ಬಾಳಿಗೊಂದು ನಂಬಿಕೆ ಈ ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ಆದರೂ ಇಂಥ ಬರೆಹದ ಕೊರತೆ ಕನ್ನಡದಲ್ಲಿ ಬಹಳವಾಗಿದೆ.

ಪ್ರಾಚೀನ ಕಾವ್ಯಕೃತಿಗಳ ಪುನರ್ವಿಮರ್ಶೆ, ಮೌಲ್ಯಮಾಪನಗಳು ಕನ್ನಡದಲ್ಲಿ ಸಾಕಷ್ಟು ಆಗಿವೆ. ಸಿ.ಕೆ.ವೆಂಕಟರಾಮಯ್ಯನವರು ಭಾಸನ

ನಾಟಕಗಳ ಬಗೆಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಆದಿಕವಿ ವಾಲ್ಮೀಕಿ ಮತ್ತು ಮಹಾಭಾರತದ ಬಗೆಗೂ ಎ.ಆರ್.ಕೃಷ್ಣಶಾಸ್ತ್ರಿಗಳು ಸಂಸ್ಕೃತ ನಾಟಕಗಳ ಬಗೆಗೂ ಎಸ್.ವಿ.ರಂಗಣ್ಣನವರು ಕಾಳಿದಾಸ ಮತ್ತು ಪಾಶ್ಚಾತ್ಯ ಗಂಭೀರ ನಾಟಕಗಳ ಬಗೆಗೂ ವಿ.ಸೀ.ಯವರು ಕರ್ನಾಟಕ ಕಾದಂಬರಿಯ ಬಗೆಗೂ ಮಹತ್ತ್ವದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಶ್ರೀರಂಗರ ಗೀತಾಗಾಂಭೀರ್ಯ, ಡಿ.ವಿ.ಜಿಯವರ ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ, ಬೇಂದ್ರೆಯವರ ಕನ್ನಡ ಸಾಹಿತ್ಯದ ನಾಲ್ಕು ನಾಯಕರತ್ನಗಳು, ಶಂ.ಬಾ.ಜೋಶಿ ಅವರ ಕರ್ಣನ ಮೂರು ಚಿತ್ರಗಳು, ಕುವೆಂಪು ಅವರ ತಪೋನಂದನ, ದ್ರೌಪದಿಯ ಶ್ರೀಮುಡಿ, ರಸೋ ವೈಸಃ ಕಾವ್ಯ ವಿಹಾರ, ಮುಗಳಿಯವರ ತವನಿಧಿ, ದೇಜಗೌ ಅವರ ಕೆಲವು ಕೃತಿಗಳನ್ನು ಇಲ್ಲಿ ಎತ್ತಿಹೇಳಬಹುದು. ಇದೇ ಜಾಡಿನಲ್ಲಿ ಆರ್.ಆರ್.ದಿವಾಕರರ ವಚನಶಾಸ್ತ್ರರಹಸ್ಯ, ಉಪನಿಷದ್ರಹಸ್ಯ, ಎಂ.ಆರ್.ಶ್ರೀನಿವಾಸಮೂರ್ತಿಯವರ ವಚನಧರ್ಮಸಾರ, ಹಲಸಂಗಿ ಚನ್ನಮಲ್ಲಪ್ಪನವರ ಕಾಳರಾತ್ರಿ ಮತ್ತು ಅರವಿಂದರ ಪೂರ್ಣಯೋಗದ ಪರಿಚಯ ಮಾಡಿಕೊಡುವ ಅನುಭಾವೀ ಬರೆಹಗಳೂ ವಿಚಾರಣೀಯವಾಗಿವೆ. ಹಾಗೆಯೇ ಬೆಂಗಳೂರಿನ ಕನ್ನಡ ಅಧ್ಯಯನ ಕೇಂದ್ರ ಪ್ರಕಟಿಸಿರುವ ಪಂಪ ಒಂದು ಅಧ್ಯಯನ, ಮೂರು ಸಂಪುಟಗಳ ವಿಚಾರಸಾಹಿತ್ಯ, ಎಂ.ಎಂ.ಕಲಬುರ್ಗಿಯವರ ಕವಿರಾಜಮಾರ್ಗ ಕಾಲಪರಿಸರದ ಕನ್ನಡ ಸಾಹಿತ್ಯ, 'ಮಾರ್ಗ' ಸಂಪುಟಗಳು, ಎಸ್.ವಿ.ರಂಗಣ್ಣನವರ ಹಳಗನ್ನಡ ಕವಿಗಳನ್ನು ಕುರಿತ 'ಶೈಲಿ' ಮುಂತಾದ ಬರೆಹಗಳು ಉಲ್ಲೇಖನೀಯವಾದವು.

ಪ್ರಗತಿಶೀಲ ಸಾಹಿತ್ಯದ ಚಳವಳಿಯಿಂದಾಗಿ ಅ.ನ.ಕೃ., ತ.ರಾ.ಸು., ಬಸವರಾಜ ಕಟ್ಟೀಮನಿ, ನಿರಂಜನ ಮುಂತಾದವರು ತಮ್ಮ ಲೇಖನಗಳಲ್ಲಿ ಆರ್ಥಿಕ ರಾಜಕೀಯ ಪ್ರಜ್ಞೆಯ ವೈಚಾರಿಕತೆಯನ್ನು ತುಂಬಿದರು. ಒಂದನೆಯ ಮಹಾಯುದ್ಧದ ಅನಂತರ ಹೊಸ ಸಾಹಿತ್ಯ ಹುಟ್ಟಿತು. ಎರಡನೆಯ ಮಹಾಯುದ್ಧದ ಅನಂತರ ಹೊಸ ವಿಮರ್ಶೆ ಹುಟ್ಟಿಬಂದಿತು. ಮೂವತ್ತರ ದಶಕದಲ್ಲಿ ಮಾರ್ಕ್ಸ್‌ವಾದಿ ದೃಷ್ಟಿ ತೆರೆದರೆ 50ರ ದಶಕದಲ್ಲಿ ಮನೋವೈಜ್ಞಾನಿಕ ದೃಷ್ಟಿ ಬೆಳಗಿತು. ಸಾಂಪ್ರದಾಯಿಕ ವಿಚಾರವನ್ನು ಆಧುನಿಕ ಭಾಷೆಯಲ್ಲಿ ದೇವುಡು ನರಸಿಂಹಶಾಸ್ತ್ರಿಗಳಂಥವರು ಯಶಸ್ವಿಯಾಗಿ ಕೊಡಲು ಯತ್ನಿಸಿದರು. ಗಾಂಧೀವಾದವನ್ನು ಸಿದ್ದವನಹಳ್ಳಿ ಕೃಷ್ಣಶರ್ಮರು ತಮ್ಮದೇ ಆದ ಲಲಿತ ಮಧುರ ಶೈಲಿಯಲ್ಲಿ ಕನ್ನಡಕ್ಕೆ ನೀಡಿದರು. ಹಾಗೆಯೇ ರವೀಂದ್ರನಾಥ ಠಾಕೂರ್ ಹಾಗೂ ಸರೋಜಿನಿ ನಾಯ್ಡು ಅವರನ್ನು ಕುರಿತು ಎಸ್.ಎಸ್.ಒಡೆಯರು ಎರಡು ಸಮಾಲೋಚನಾತ್ಮಕ ಪುಸ್ತಕಗಳನ್ನು ನೀಡಿದ್ದಾರೆ. ಚನ್ನವೀರಕಣವಿಯವರೂ ಸಾಹಿತ್ಯಚಿಂತನೆಯನ್ನು ಚಿಂತನೀಯವಾಗಿ ಮಾಡಿದ್ದಾರೆ. ಅದೇ ರೀತಿ ಧಾರವಾಡಕರ, ಎನ್ಕೆ, ಆರ್.ಕೆ.ಕುಲಕರ್ಣಿ, ಗೊರೂರು, ಗದಗಕರ ಮೊದಲಾದವರ ಹರಟೆಗಳಲ್ಲಿಯೂ ವೈಚಾರಿಕ ಅಂಶ ಒಡೆದೆದ್ದು ಕಾಣಿಸುವುದೂ ಇದೆ.

ಅನುವಾದ ರಂಗದಲ್ಲಿ ಅರವಿಂದರ ಭಾರತೀಯ ನವಜನ್ಮವನ್ನು ಬೇಂದ್ರೆಯವರೂ ಭಾರತೀಯ ರಾಜಧರ್ಮ ಮತ್ತು ಜಾನ್ ಸ್ಟೂವರ್ಟ್ ಮಿಲ್ಲನ ಲಿಬರ್ಟಿಯನ್ನು (ಸ್ವಾತಂತ್ರ್ಯ) ಎನ್.ಸಿ.ಆರ್. ಮತ್ತು ಬಿ.ಎಚ್.ಶ್ರೀಧರರೂ ಧ್ವನ್ಯಾಲೋಕ ಮತ್ತು ಕಾವ್ಯಪ್ರಕಾಶಾದಿಗಳನ್ನು ಕೆ.ಕೃಷ್ಣಮೂರ್ತಿಯವರೂ ದಶರೂಪಕವನ್ನು ಕೆ.ವಿ.ಸುಬ್ಬಣ್ಣನವರೂ ಆಡ್ಲರನ ವ್ಯಕ್ತಿಮನೋವಿಜ್ಞಾನವನ್ನು (ಬಾಳಿನ ಗುಟ್ಟು) ಗೌರೀಶ ಕಾಯ್ಕಿಣಿಯವರೂ ಕನ್ನಡದಲ್ಲಿ ನೀಡಿದ್ದಾರೆ. ರಘುನಾಥಬಿಡೆ ಅವರ ವಾಲ್ಮೀಕಿ ರಾಮಾಯಣದಲ್ಲಿ ಶಾಪ ಮತ್ತು ವರ ಮರಾಠಿಯಿಂದ ಕನ್ನಡಕ್ಕೆ ಅನುವಾದಗೊಂಡಿವೆ.

ಮನೋವಿಜ್ಞಾನ ರಂಗದಲ್ಲಿ ಕುಪ್ಪುಸ್ವಾಮಿ ಅವರ ಮನೋವಿಜ್ಞಾನ, ಹನುಮಂತರಾಯರ ಮಾನಸದರ್ಪಣ, ಸಿ.ಆರ್.ಚಂದ್ರಶೇಖರ ಅವರ ನಿದ್ರೆ ಮತ್ತು ಕನಸುಗಳು, ಕೆ.ವಾರಿಜಾ ಅವರ ನಿಮ್ಮ ಮನಸ್ಸು, ಗೌರೀಶ ಕಾಯ್ಕಿಣಿಯವರ ಮನೋವಿಜ್ಞಾನದ ರೂಪರೇಖೆಗಳು, ಗಂಡು, ಹೆಣ್ಣು ಮತ್ತು ಪ್ರೀತಿ, ವಿಚಾರವಾದ, ಎಂ.ಶಿವರಾಮ್ ಅವರ ಮನಮಂಥನ, ಮೀನಗುಂಡಿ ಸುಬ್ರಹ್ಮಣ್ಯಂ ಅವರ ಮನಸ್ಸು ಇಲ್ಲದ ಮಾರ್ಗ, ಈ ವರ್ತನೆಗಳು ನಿಮ್ಮಲ್ಲಿ ಎಷ್ಟಿವೆ, ವಿಚಾರವಾದಿ ಕೋವೂರರ ದೇವರು, ದೆವ್ವ ವಿಜ್ಞಾನ - ಇವೇ ಮುಂತಾದವನ್ನು ಹೆಸರಿಸಬಹುದು.

ವಿಜ್ಞಾನರಂಗದಲ್ಲೂ ಅನೇಕ ಗ್ರಂಥಗಳು ಪ್ರಕಟವಾಗಿವೆ. ಆದರೆ ವಿಜ್ಞಾನವನ್ನು ಕುರಿತು ಸಮುನ್ನತ ವೈಚಾರಿಕ ಕಾಣಿಕೆಯನ್ನು ದೊಡ್ಡ ಮೊತ್ತದಲ್ಲಿ ತಮ್ಮ ವಿಜ್ಞಾನಕೋಶದ ಮೂರು ಸಂಪುಟಗಳಲ್ಲಿ ಸಲ್ಲಿಸಿದವರು ಶಿವರಾಮ ಕಾರಂತರು.

ಪುರಂದರದಾಸರ ಕನಕದಾಸರ ಚತುಶ್ಶತಮಾನೋತ್ಸವಗಳ ನಿಮಿತ್ತ ಉಭಯದಾಸರ ಭಕ್ತಿಕಾವ್ಯದ ಬಗೆಗೆ ಅನೇಕ ಲೇಖನಸಂಗ್ರಹಗಳ ಸುಗ್ಗಿಯೇ ಬೆಳೆದು ಬಂದಿತು. ಹಾಗೆಯೇ ಷೇಕ್‌ಸ್ಪಿಯರನ ಆರನೆಯ ಶತಮಾನೋತ್ಸವದ ನಿಮಿತ್ತ ಹೊಸ ದಿಲ್ಲಿಯಲ್ಲಿ ಕನ್ನಡ ಭಾರತೀ ಸಂಸ್ಥೆಯವರು ಒಂದು ಉತ್ಕೃಷ್ಟ ಪರಿಸಂವಾದಾತ್ಮಕ ಗ್ರಂಥ'ವನ್ನು (ಷೇಕ್‌ಸ್ಪಿಯರನಿಗೆ ನಮಸ್ಕಾರ) ಪ್ರಕಟಿಸಿದ್ದಾರೆ. ಎ.ಎನ್.ಮೂರ್ತಿರಾಯರು ಷೇಕ್‌ಸ್ಪಿಯರನ ಕೃತಿಗಳನ್ನು ಕುರಿತು ಒಂದು ಪರಿಚಯ ಗ್ರಂಥವನ್ನು ಬರೆದಿದ್ದಾರೆ. ಮುಂದೆ ಗಾಂಧೀ ಶತಾಬ್ದಿಯ ನಿಮಿತ್ತವೂ ಗಾಂಧೀತತ್ತ್ವ ವಿಚಾರಗಳ ಅನೇಕ ಲೇಖನ-ಉಪನ್ಯಾಸ ಸಂಗ್ರಹಗಳು ಬೆಳಕಿಗೆ ಬಂದಿವೆ. ಇದಲ್ಲದೆ ಎಚ್.ನರಸಿಂಹಯ್ಯನವರ ಆತ್ಮಕಥೆ ತೆರೆದ ಮನ, ಪಂಡಿತ ತಾರಾನಾಥರ ಧರ್ಮಸಂಭವ, ಸ.ಜ.ನಾಗಲೋಟಿಮಠ ಅವರ ಸತ್ತ ಮೇಲೆ ಸಮಾಜಸೇವೆ - ಇವೆಲ್ಲವನ್ನು ವಿಚಾರಸಾಹಿತ್ಯದಲ್ಲಿ ಉಲ್ಲೇಖಿಸಬಹುದು.

ಧಾರವಾಡದ ಮಿಂಚಿನಬಳ್ಳಿ ಪ್ರಕಾಶನ ಸಂಸ್ಥೆ ಬುರ್ಲಿ ಬಿಂದುಮಾಧವ ಅವರ ನೇತೃತ್ವದಲ್ಲಿ ಕಾಲುಶತಮಾನವನ್ನು ಮೀರಿ ಕೇವಲ ವಿಚಾರಸಾಹಿತ್ಯವನ್ನೆ ಪಂಥ ತೊಟ್ಟು ಪ್ರಕಟಿಸುತ್ತ ಬಂದಿರುವುದನ್ನು ಇಲ್ಲಿ ನೆನೆಯಲೇಬೇಕು. ಹಾಗೆಯೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ಣಾಟಕ ಮತ್ತು ಅದರ ವಿಸ್ತರಣೆಗಳಾದ ವಿಜ್ಞಾನ ಕರ್ಣಾಟಕ ಮತ್ತು ಮಾನವಿಕ ಕರ್ಣಾಟಕ, ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯದ ಸಾಧನೆ ಮುಂತಾದ ನಿಯತಕಾಲಿಕಗಳೂ ಕನ್ನಡದಲ್ಲಿರುವ ವೈಚಾರಿಕ ವಾಙ್ಮಯ ಪ್ರಕಾಶನಕ್ಕೆ ಆಧಾರವಾಗಿವೆ. ಹೊಸ ವಿಮರ್ಶೆಯ ಪ್ರತಿಕ್ರಿಯಾಮಾಲೆಯೆಂಬಂತೆ ಸಾಕ್ಷಿ, ಸಂಕ್ರಮಣ, ಮನ್ವಂತರ, ಪರಂಪರೆ ಇತ್ಯಾದಿ ನಿಯತಾನಿಯತ ಕಾಲಿಕಗಳು ಕೇವಲ ಸಾಹಿತ್ಯ ಚರ್ಚೆಗಾಗಿಯೇ ಮೀಸಲಾಗಿ ಹೊರಟಿದ್ದು ಶ್ಲಾಘನೀಯ ಸಾಹಸ.

ವಸ್ತುತಃ ವಿಚಾರಸಾಹಿತ್ಯ ವಿಸ್ತಾರವಾಗಿ ಬರಬೇಕಾದದ್ದು ಸಾಮಾಜಿಕ ವಿಚಾರ ಕ್ಷೇತ್ರದಲ್ಲಿ. ಇಂದು ಸ್ಥಿತ್ಯಂತರಗೊಳ್ಳುತ್ತಿರುವ ಸಾಮಾಜಿಕ ಜೀವನದ ಬಗೆಗೆ ಆರ್ಥಿಕ, ಮನೋವೈಜ್ಞಾನಿಕ, ಮಾನವವಂಶಶಾಸ್ತ್ರೀಯ, ಸಾಂಸ್ಕೃತಿಕ - ಹೀಗೆ ನೂರು ಮುಖವಾಗಿ ವಿಚಿಕಿತ್ಸೆ ನಡೆಯಬೇಕು. ನಾಗರಿಕನ ಅಸಹಾಯಕತೆ, ಏಕಾಂಗಿ ವ್ಯಕ್ತಿತ್ವ, ನಾಯಕತ್ವ, ಬಹುರಾಷ್ಟ್ರ ನಾಗರಿಕತ್ವ, ಬಹುಭಾಷಿಕ ರಾಷ್ಟ್ರೀಯತ್ವ, ಜಾತೀಯತೆ, ವಿಕಾಸಾಭಿವೃದ್ಧಿಯ ಸಾಂಸ್ಕೃತಿಕ ಫಲಿತಾಂಶ, ಪಕ್ಷಪದ್ಧತಿ, ಜನಾಭಿಪ್ರಾಯ ನಿರ್ಮಿತಿ, ಯುವಜನರ ಸಮಸ್ಯೆ-ಇಂಥ' ವಿವಿಧ ಯಕ್ಷಪ್ರಶ್ನೆಗಳನ್ನು ಪರಿಶೀಲಿಸಿ ಪರಿಷ್ಕರಿಸುವುದಿರಲಿ,ಆ ಕುರಿತು ಪ್ರಜ್ಞೆಯನ್ನು ಜಾಗೃತಗೊಳಿಸಲು ಪರಿಸಂವಾದಗಳನ್ನು ಆರಂಭಿಸಬಲ್ಲ ಸಾಹಿತ್ಯ ಗುಣದಲ್ಲಿಯೂ ಗಾತ್ರದಲ್ಲಿಯೂ ತುಸು ಬೆಳೆದುಬರಬೇಕು. ಇಂಥ' ಸಾಮಾಜಿಕ ವಿಚಾರದಲ್ಲಿ ಶಂ.ಬಾ.ಜೋಶಿಯವರ ಸಮಾಜದರ್ಶನದ ಅನಂತರ ಶಾಸ್ತ್ರೀಯ ವಿಚಿಕಿತ್ಸೆಗೆ ಕೈಹಾಕಿದ ಪುಸ್ತಕಗಳೆಂದರೆ ಎಚ್.ಎಂ.ಮರುಳಸಿದ್ದಯ್ಯನವರ ಸಮಾಜಕಾರ್ಯ ಮತ್ತು ಸಮಾಜ ಶಾಸ್ತ್ರದ ಕೆಲವು ಪಾಠಗಳು, ಎನ್.ಆರ್.ರಾವ್ ಅವರ ಜನಾಭಿಪ್ರಾಯ, ಪ್ರಚಲಿತ ಸಾರ್ವಜನಿಕ ಚರಿತ್ರೆಯನ್ನು ಕುರಿತ ಕಾಣಿಕೆಯೆಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರರ ಜೀವನ ಪತ್ರಿಕೆಯ ಸಂಪಾದಕೀಯಗಳ ಲೋಕಚರಿತವೆಂಬ ಸಂಕಲನ. ಈ ಮಾದರಿಯ ಬರೆಹ ಕನ್ನಡಕ್ಕೆ ಅಪೂರ್ವವೆನ್ನಬಹುದು. ಎ.ಎನ್.ಮೂರ್ತಿರಾಯರ ದೇವರು ಎಂಬ ಕೃತಿ ಇಲ್ಲಿ ಉಲ್ಲೇಖನೀಯ. ಕುವೆಂಪು ಅವರ ವಿಚಾರ ಕ್ರಾಂತಿಗೆ ಆಹ್ವಾನ ಎಂಬ ವೈಚಾರಿಕ ಲೇಖನಗಳನ್ನು ಮರೆಯುವಂತಿಲ್ಲ. ನಿರಂಕುಶಮತಿಗಳಾಗಿ, ಷಷ್ಟಿನಮನ, ಮನುಜಮತ ವಿಶ್ವಪಥ' ಮುಂತಾದ ಕೃತಿಗಳೂ ವಿಶೇಷವಾಗಿ ಇಲ್ಲಿ ಉಲ್ಲೇಖಾರ್ಹ. ಕುವೆಂಪು ಅವರ ದಾರ್ಶನಿಕ ಕಾವ್ಯಮೀಮಾಂಸೆ ಆ ಕ್ಷೇತ್ರದ ಒಂದು ಮಹತ್ತ್ವದ ಕೃತಿ, ಸ್ವೋಪಜ್ಞ ಚಿಂತನೆಯ ಫಲ, ಎಚ್.ತಿಪ್ಪೇರುದ್ರಸ್ವಾಮಿಯವರ 'ಕುವೆಂಪು ಅವರ ವೈಚಾರಿಕತೆ' ಎಂಬುದು ಆ ಕವಿಯ ವ್ಯಾಪಕ ಚಿಂತನೆಯ ಎಲ್ಲ ಮಗ್ಗುಲುಗಳ ದರ್ಶನ ಮಾಡಿಕೊಡಲು ಹವಣಿಸುವ ಕೃತಿಯಾಗಿದೆ.

ವಿಚಾರ ಸಾಹಿತ್ಯವೆಂಬ ಒಂದು ಪ್ರತ್ಯೇಕ ಪ್ರಕಾರದ ಕಕ್ಷೆಯೊಳಕ್ಕೆ ಎಂಥ ಕೃತಿಗಳು ಬರುವುವೆಂಬ ಜಿಜ್ಞಾಸೆ ಬಹಳ ಕಷ್ಟದ್ದು; ವೈಚಾರಿಕತೆ ಇಲ್ಲದ ಕೃತಿ ಇಲ್ಲವೇ ಇಲ್ಲವೆಂದು ಹೇಳಬೇಕು. ಸೃಜನಶೀಲ ಎಂಬ ಕೃತಿಯಲ್ಲೂ ಹಿನ್ನೆಲೆಯಲ್ಲಿ ವೈಚಾರಿಕತೆ ಇದ್ದೇ ಇರುತ್ತದೆ. ಆದರೆ ಅದು ಸುಪ್ತವಾಗಿ ಕಂಡೂ ಕಾಣದಂತೆ, ಹಾಲಿನಲ್ಲಿ ಸಕ್ಕರೆ ಬೆರೆತಂತೆ ವ್ಯಾಪಿಸಿರುತ್ತದೆ. ಕಾವ್ಯಮೀಮಾಂಸಕಾರರ ಪ್ರಕಾರ ಕಾವ್ಯದಲ್ಲಿ (ಸ್ಥೂಲವಾಗಿ ಎಲ್ಲ ಸೃಜನ ಸಾಹಿತ್ಯದಲ್ಲಿ) ಪ್ರತಿಭೆ ಮತ್ತು ಪ್ರಜ್ಞೆ - ಈ ಎರಡೂ ಅಂಶಗಳಿರುತ್ತವೆ. ಪ್ರತಿಭೆ ಹೃದಯಸಂಬಂಧಿಯಾದ್ದು, ಚಿತ್ತವೃತ್ತಿ ಪ್ರಧಾನವಾಗಿದ್ದಾಗ ಹೊಮ್ಮುವಂಥದ್ದು, ಪ್ರತಿಭೆ ಎಂದರೆ ಹೊಳಹು ಎನ್ನುತ್ತಾರೆ ತೀನಂಶ್ರೀ. ಪ್ರಜ್ಞೆ ಬುದ್ಧಿಸಂಬಂಧಿ ಎನ್ನಬಹುದು. ಇದು ಮುಖ್ಯವಾಗಿ ಸ್ಮೃತಿ ಬುದ್ಧಿ ಮತ್ತು ಮತಿ ಇವನ್ನೊಳಗೊಳ್ಳುತ್ತವೆ. ಹಿಂದೆ ಆದದ್ದನ್ನು ನೆನೆಯುವುದು ಸ್ಮೃತಿ, ಈಗ ನಡೆಯುವುದನ್ನು ಪರಿಶೀಲಿಸುವುದು ಬುದ್ಧಿ; ಮುಂದೆ ಆಗುವುದನ್ನು ಊಹಿಸುವುದು ಮತಿ. ಈ ಮೂರೂ ವಿಚಾರ ಸಾಹಿತ್ಯದಲ್ಲಿ ಎದ್ದು ಕಾಣುತ್ತವೆ. ಅದರಲ್ಲೂ ರಂಜನೆಯ ಅಂಶ ಇರಬೇಕು, ಆದರೆ ಅದು ಸಂಯಮದಿಂದ ಕೂಡಿದ್ದು ಹಿನ್ನೆಲೆಯಲ್ಲಿರುತ್ತದೆ. ಹನ್ನೆರಡನೆಯ ಶತಮಾನದ ವೀರಶೈವ ವಚನಕಾರರ ವಚನಗಳಲ್ಲಿ ವಿಚಾರ ಪ್ರಾಧಾನ್ಯವನ್ನು ಗಮನಿಸಬಹುದು. ಅವು ಮುಖ್ಯವಾಗಿ ಆಧ್ಯಾತ್ಮಿಕ ಎನ್ನಬಹುದಾದರೂ ಜಗತ್ತು, ಸಮಾಜ ಮುಂತಾದ ವಿಚಾರಗಳ ವಿವೇಚನೆಯೂ ಪ್ರಧಾನವಾಗಿರುತ್ತದೆ.

ಸೃಜನ ಪ್ರಧಾನ ಸಾಹಿತ್ಯ ಸಾಮಾನ್ಯವಾಗಿ ಸಂಶ್ಲೇಷಣಾತ್ಮಕವಾದ್ದು ಎನ್ನುವುದಾದರೆ ವಿಚಾರ ಸಾಹಿತ್ಯ ವಿಶ್ಲೇಷಣಾತ್ಮಕವಾದ್ದು. ಯಾವುದೇ ವಿಷಯವನ್ನು ಕುರಿತಂತೆ ಪ್ರಯೋಗಪೂರ್ವಕವಾಗಿ ಚಿಕಿತ್ಸಕ ದೃಷ್ಟಿಯನ್ನು ಬೀರಿ ಅದರ ಸತ್ತ್ವವನ್ನು ಗುರುತಿಸಿ, ಸಂಗ್ರಹಿಸಿದ ಮಾಹಿತಿಯನ್ನೆಲ್ಲ ವಿಂಗಡಿಸಿ ವಿವೇಚಿಸಿ ಕರಾರುವಾಕ್ಕು ಎನಿಸುವಂತೆ ನಿರ್ಣಯ ನೀಡುವ ದಿಕ್ಕಿನಲ್ಲಿ ಮುಂದುವರಿಯುವುದು ವಿಚಾರ ಸಾಹಿತ್ಯದ ರೀತಿ ಎನ್ನುವುದಾದರೆ, ನಮ್ಮಲ್ಲಿ ಸೃಷ್ಟಿಯಾಗಿರುವ ಎಲ್ಲ ಸ್ವೋಪಜ್ಞ ಚಿಂತನಶೀಲ ವಿವೇಚನೆ ಹಾಗೂ ಇದಮಿತ್ಥಂ ಎಂಬ ನಿಲುವೂ ವಿಚಾರ ಸಾಹಿತ್ಯದ ಕಕ್ಷೆಯೊಳಗೆ ಬರುತ್ತವೆ. ಮುಖ್ಯವಾಗಿ ಯಾವುದೋ ಒಂದು ನಿಶ್ಚಿತ ವಿಷಯದ ಬಗ್ಗೆ ಸಂಶೋಧನೆ, ಅದರ ಫಲವಾದ ಜ್ಞಾನದ ದಾಖಲೆ, ಅನುಶೀಲನೆ, ನಿರ್ಣಯಗಳಿಂದ ಕೂಡಿದ್ದು ವಿಚಾರ ಸಾಹಿತ್ಯ ಎನಿಸಿಕೊಳ್ಳುತ್ತದೆ. ವಿಜ್ಞಾನ, ಮಾನವಿಕ, ಸಮಾಜ ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ನಡೆಯುವ ಸಂಶೋಧನೆಯ ಫಲಶ್ರುತಿಗಳು ನಿಬಂಧ ರೂಪದಲ್ಲಿ ಬಂದಾಗ ಅವು ಆಧಾರಭೂತ ವಿಚಾರಸಾಹಿತ್ಯ ಎನಿಸಿಕೊಳ್ಳುತ್ತವೆ. ವಿದ್ವಾಂಸರ ಅಥವಾ ಆಯಾ ಕ್ಷೇತ್ರದ ತಜ್ಞರ ಹಾಗೂ ಜ್ಞಾನಾರ್ಥಿಗಳ ಗಮನವನ್ನು ಸೆಳೆಯುವ ಅಂಥ ನಿಬಂಧಗಳ ಆಧಾರದ ಮೇಲೆ ಇತರರಿಗೆ, ಅನಂತರ ಸಾಮಾನ್ಯರಿಗೆ- ಹೀಗೆ ಮೂರು ಹಂತಗಳಲ್ಲಿ ವಿಚಾರ ಸಾಹಿತ್ಯ ಪ್ರವಹಿಸಬೇಕು. ಆದರೆ ಈ ನಿಟ್ಟಿನಲ್ಲಿ ಸೆಮಿನಾಲ್- ಬೀಜಸ್ವರೂಪಿ- ಎಂಬ ಕೃತಿಗಳು ಕನ್ನಡದಲ್ಲಿ ಬಹಳ ಕಡಿಮೆ. ಆಧುನಿಕ ಕಾಲದವರೆಗೂ ಸಂಸ್ಕೃತ ಪ್ರಾಕೃತ ಗ್ರಂಥ'ಗಳಲ್ಲಿಯ ಮೂಲಭೂತ ಚಿಂತನೆಯ ಕೃತಿಗಳನ್ನೇ ಆಧ'ರಿಸಿ ರಚನೆಯಾಗುತ್ತ ಬಂದ ಕನ್ನಡ ಕೃತಿಗಳಲ್ಲಿ ಸ್ವೋಪಜ್ಞತೆಯ ಅಂಶ ಬಹಳ ಕಡಿಮೆ.

ಬೀಜಸ್ವರೂಪಿ ಕೃತಿ ರಚನೆ ಇಲ್ಲದೆ ಮುಂದಿನ ಎರಡು ಹಂತಗಳಲ್ಲಿ ವಿಚಾರ ಹರಿದು ಬರುವುದೆಂದು ನಿರೀಕ್ಷಿಸುವುದು ತಪ್ಪು. ಆದರೂ ವಿರಳವಾಗಿಯಾದರೂ ಅಂಥ' ಕೃತಿಗಳು ಬರುತ್ತಿವೆಯೆಂದು ಸಮಾಧಾನಪಟ್ಟುಕೊಳ್ಳಬೇಕು. ಹಿಂದೆ ಹೇಳಿದ ಮಹಾನ್ ಲೇಖಕರ ಕೃತಿಗಳಲ್ಲದೆ ಈಚಿನ ವರ್ಷಗಳಲ್ಲಿ ಮುಖ್ಯವಾಗಿ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಈ ಪ್ರಯತ್ನ ಮುಂದುವರಿದಿದೆ. ತುಂಬ ವ್ಯಾಪಕವಾದ ಕ್ಷೇತ್ರ ಇದಾದ್ದರಿಂದ ಕೆಲವು ದಿಕ್ಸೂಚಿಗಳನ್ನಷ್ಟೆ ಇಲ್ಲಿ ನೀಡಬಹುದು. ಆದರೂ ಇದು ಸಮಸ್ತ ಎನಿಸಲಾರದು. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಇವುಗಳ ಕೆಲವು ಪ್ರಕಟಣೆಗಳು ಈ ಪ್ರಕಾರಕ್ಕೆ ಸೇರುತ್ತವೆ. ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟವಾದ ಕೆಲವು ಮಹತ್ತ್ವದ ಕೃತಿಗಳು ಪುನರ್ಮುದ್ರಣಗಳಾದರೂ ಉಲ್ಲೇಖಾರ್ಹ.

ನವ ಕರ್ನಾಟಕ ಪ್ರಕಾಶನ ಸಂಸ್ಥೆ ಅನೇಕ ವಿಚಾರ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದೆ. ಸಂಪ್ರದಾಯ, ವಿಜ್ಞಾನ ಮತ್ತು ಸಮಾಜ (ಎಸ್.ಬಾಲಚಂದ್ರರಾವ್), ವೈಜ್ಞಾನಿಕ ಮನೋಧರ್ಮ (ಜಿ.ಟಿ.ನಾರಾಯಣ ರಾವ್), ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ (ಅನು: ಎಸ್.ಆರ್.ಭಟ್), ಧರ್ಮ ಮತ್ತು ವೈಚಾರಿಕತೆ (ಬಿ.ವಿ.ವೀರಭದ್ರಪ್ಪ), ನಾನೇಕೆ ನಾಸ್ತಿಕ (ಅನು: ಎನ್.ಗಾಯತ್ರಿ) ಮೊದಲಾದ ಕೆಲವು ಕೃತಿಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಈ ಸಂದರ್ಭದಲ್ಲಿ ಎಚ್ಚೆಸ್ಕೆ ಅವರ ವಿಚಾರ ವಿಹಾರ, ಕನ್ನಡದ ಸ್ಥಿತಿಗತಿ, ಶಿಕ್ಷಣ ಸಂಸ್ಕೃತಿ, ಸರ್ವಾರ್ಥ ಸಾಧನೆ - ಈ ಕೃತಿಗಳು ವಿಚಾರ ಸಾಹಿತ್ಯದ ಹಲವು ಪ್ರಕಾರಗಳ ವಿಹಂಗಮ ನೋಟ ನೀಡುತ್ತವೆ. ಪ್ರಾಧಿಕಾರದ ಜಾಗತಿಕ ಚಿಂತಕರ ಮಾಲೆ, ವಿಜ್ಞಾನ ಶಿಕ್ಷಣ ಮಾಲೆ, ಅನುವಾದ ಮಾಲೆ, ಮೂಲ ಭೂತ ಶೈಕ್ಷಣಿಕ ಮಾಲೆ, ವಿಜ್ಞಾನದೀಪ ಮಾಲೆ- ಇವು ಸಾಮಾನ್ಯರ ಜ್ಞಾನದ ಪರಿಧಿಯನ್ನು ವಿಸ್ತರಿಸುವ ಪ್ರಯತ್ನಗಳಾಗಿ ಸ್ವಾಗತಾರ್ಹವೆನಿಸುತ್ತವೆಯಾದರೂ ಸ್ವೋಪಜ್ಞತೆಯಿಂದ ಕೂಡಿದ್ದೆನ್ನಲಾದ ಆಚಾರ್ಯ ಕೃತಿಗಳು ಬಹುತೇಕ ಇಲ್ಲವೇ ಇಲ್ಲವೆನ್ನಬೇಕು.

ತನ್ಮಯತೆ ಮತ್ತು ತಾಟಸ್ಥ್ಯ, ತಪಶೀಲು ಮತ್ತು ತಾತ್ತ್ವಿಕತೆ- ಇವುಗಳ ನಡುವೆ ಒಂದು ತೂಕದ ತಕ್ಕ ಸಮನ್ವಯ ಸಾಧಿಸುವ ಪ್ರಜ್ಞಾ ಪರಿಷ್ಕಾರ ನಮ್ಮ ಸುಶಿಕ್ಷಿತ ವರ್ಗಗಳಲ್ಲಿ ಸ್ಥಿರವಾಗುವ ತನಕ ದೊಡ್ಡ ಪ್ರಮಾಣದ ವಿವಿಧ ಪ್ರಕಾರದ ವಿಚಾರ ಸಾಹಿತ್ಯಕ್ಕಾಗಿ ನಾವು ಕಾಯಬೇಕು. ಈ ಕ್ಷೇತ್ರದ ಈವರೆಗಿನ ಕೃಷಿಯಿಂದ ವಿಚಾರ ಸಾಹಿತ್ಯ ಸ್ವತಂತ್ರವಾಗಿ ಸಮೃದ್ಧವಾಗಿ ಬೆಳೆಯಬಹುದೆಂಬ ಭರವಸೆಯನ್ನು ತಾಳಬಹುದು. (ಜ.ಕೆ.)

**ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ :** ಜನಸಾಮಾನ್ಯರೆಡೆಗೆ ವೈಜ್ಞಾನಿಕ ಮಾಹಿತಿಗಳನ್ನು ಸಾಗಿಸುವುದು ಮತ್ತು ಸಮಾಜದಲ್ಲಿ ವಿಜ್ಞಾನ - ತಂತ್ರಜ್ಞಾನಗಳ ಪ್ರಗತಿಗೆ ತಕ್ಕ ವಾತಾವರಣವನ್ನು ನಿರ್ಮಿಸುವುದು - ಇವು 20ನೆಯ ಶತಮಾನದ ಆರಂಭದಲ್ಲಿ ಕನ್ನಡ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿಸಿಕೊಂಡವರ ಮುಖ್ಯ ಉದ್ದೇಶಗಳಾಗಿದ್ದುವು. 20ನೆಯ ಶತಮಾನದ ನಾಲ್ಕನೆಯ ಮತ್ತು ಐದನೆಯ ದಶಕಗಳಲ್ಲಿ ಪ್ರೌಢಶಾಲಾ ಶಿಕ್ಷಣ ಮಾಧ್ಯಮವಾಗಿ ಕನ್ನಡ ಬರತೊಡಗಿತು. ಕನ್ನಡ ಮಾಧ್ಯಮವನ್ನು ಆರಿಸುವ ಸ್ವಾತಂತ್ರ್ಯ ಆರನೆಯ ದಶಕದ ಕೊನೆಗೆ ಕಾಲೇಜು ವಿದ್ಯಾರ್ಥಿಗಳಿಗೂ ಸಿಕ್ಕಿತು. ಇದರಿಂದ ಕನ್ನಡದಲ್ಲಿ ವಿಜ್ಞಾನ ಪಠ್ಯಗಳನ್ನೂ ಪ್ರೌಢ ಗ್ರಂಥಗಳನ್ನೂ ಜನಪ್ರಿಯ ಕೃತಿಗಳನ್ನೂ ಪ್ರಕಟಣೆಗೆ ಎತ್ತಿಕೊಳ್ಳುವ ಪ್ರವೃತ್ತಿ ಬೆಳೆಯಿತು. ಕ್ರಮೇಣ ಮಕ್ಕಳ ವಿಜ್ಞಾನ ಪುಸ್ತಕಗಳು, ವಿಜ್ಞಾನ ಪತ್ರಿಕೆ, ಕೈಪಿಡಿ, ವಿಶ್ವಕೋಶ, ನಿಘಂಟುಗಳು ಪ್ರಕಟವಾಗತೊಡಗಿದುವು. ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಆಸಕ್ತ ಬರೆಹಗಾರರು ಮತ್ತು ಖಾಸಗಿ ಪ್ರಕಾಶಕರು ವಿಜ್ಞಾನ ಕೃತಿಗಳ ಪ್ರಕಟಣೆಯಲ್ಲಿ ಪಾಲುಗೊಂಡರು.

1997ರಲ್ಲಿ ಕನ್ನಡ ವಿಜ್ಞಾನ ಗ್ರಂಥ ಸೂಚಿಯನ್ನು ತಯಾರಿಸುವ ಒಂದು ಯೋಜನೆಯನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕೈಗೆತ್ತಿಕೊಂಡಿತು. ಇದರಿಂದಾಗಿ ರಾಜ್ಯದ ಹಾಗೂ ಹೊರ ರಾಜ್ಯಗಳ ಅನೇಕ ಗ್ರಂಥ'ಭಂಡಾರಗಳಲ್ಲಿ ನಡೆಸಿದ ಸಮೀಕ್ಷೆಯಿಂದ ಸು.3000 ಪ್ರಕಟಿತ ಕೃತಿಗಳನ್ನು ಗುರುತಿಸಲು ಸಾಧ್ಯವಾಯಿತು. ಕಾಲಾನುಕ್ರಮದಲ್ಲಿ ಪ್ರಕಟಣೆಗಳ ಸಂಖ್ಯೆ ಹೀಗಿದೆ: 130 (1900ರವರೆಗೆ), 160 (1901-30), 460 (1931-60), 1830 (1961-90), 840 (1991-95ರವರೆಗೆ). ವರ್ಷಗಳು ಕಳೆದಂತೆ ವಿಜ್ಞಾನ ಸಾಹಿತ್ಯ ಕೃತಿಗಳ ಸಂಖ್ಯೆ ಹೆಚ್ಚಾದುದು ಇದರಿಂದ ಸ್ಪಷ್ಟವಾಗುತ್ತದೆ. ಸು.40 ವಿಭಾಗಗಳಲ್ಲಿ ಈ ಪುಸ್ತಕಗಳು ಹಂಚಿಹೋಗಿವೆ. ವೈದ್ಯವಿಜ್ಞಾನ (900), ಪಠ್ಯ ಪುಸ್ತಕಗಳು (450), ಸಾಮಾನ್ಯ ವಿಜ್ಞಾನ (440), ಕೃಷಿ (415), ಭೌತವಿಜ್ಞಾನ (214), ಜೀವನ ಚರಿತ್ರೆ (211), ಪ್ರಾಣಿವಿಜ್ಞಾನ (195), ಸಸ್ಯವಿಜ್ಞಾನ (115), ಗಣಿತ (110), ಖಗೋಳ (99), ಪಶುಪಾಲನೆ (80), ರಸಾಯನ ವಿಜ್ಞಾನ (70), ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ (62), ಪರಿಸರ, ವಾಸ್ತು, ಕಂಪ್ಯೂಟರ್, ಭೂವಿಜ್ಞಾನ, ಶಕ್ತಿ, ಅರಣ್ಯ ವಿಜ್ಞಾನ, ಅನುವಂಶೀಯತೆ, ಗೃಹವಿಜ್ಞಾನ, ತೋಟಗಾರಿಕೆ, ಸಂಖ್ಯಾಕಲನ ಮೊದಲಾದ ಶಾಖೆಗಳಲ್ಲಿ ಕೃತಿಗಳು ರಚನೆಯಾಗಿವೆ.

ವಿಜ್ಞಾನವನ್ನು ಜನಪ್ರಿಯಗೊಳಿಸುವ ಮತ್ತು ವೈಜ್ಞಾನಿಕ ಮನೋಭಾವದ ಪ್ರಸಾರ ಇವನ್ನು ಮುಖ್ಯ ಉದ್ದೇಶಗಳಾಗಿಟ್ಟುಕೊಂಡು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಸ್ಥಾಪಿತವಾಯಿತು. ಕರ್ನಾಟಕದ ನೂರಾರು ಊರುಗಳಲ್ಲಿ ಇದರ ಘಟಕಗಳಿವೆ. ಜನರಿಗೆ ಉಪಯುಕ್ತವಾದ ನೂರಕ್ಕಿಂತಲೂ ಅಧಿಕ ವಿಜ್ಞಾನ ಕೃತಿಗಳನ್ನು ಪ್ರಕಟಿಸದ್ದಷ್ಟೇ ಅಲ್ಲದೆ ತನ್ನ ಉದ್ದೇಶ ಸಾಧನೆಗಾಗಿ ಇದು ಜನವಿಜ್ಞಾನ ಜಾಥಾ ಮತ್ತು ಕಲಾಮಾಧ್ಯಮಗಳನ್ನು ಬಳಸಿಕೊಂಡುದರಿಂದ ಹಾಡಬಹುದಾದ ವಿಜ್ಞಾನ ಗೀತೆಗಳೂ ಆಡಬಹುದಾದ ವೈಜ್ಞಾನಿಕ ಹಿನ್ನೆಲೆಯ ನಾಟಕಗಳೂ ಸೃಷ್ಟಿಯಾದುವು. ಪ್ರಯೋಗ ಮತ್ತು ವೈಜ್ಞಾನಿಕ ವೀಕ್ಷಣೆಗಳಿಗೆ ಅನುಕೂಲವಾದ ಕೈಪಿಡಿಗಳೂ ಪ್ರಕಟವಾದುವು. ಹಲವು ಸ್ಥಳೀಯ ಘಟಕಗಳೂ ವಿಜ್ಞಾನ ಕೃತಿಗಳ ಪ್ರಕಟಣೆ ಮತ್ತು ಪ್ರಸಾರದಲ್ಲಿ ಸಕ್ರಿಯವಾಗಿ ಪಾಲುಗೊಂಡುವು. ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಪುಸ್ತಕ ಪ್ರಾಧಿಕಾರ, ವೈದ್ಯವಿಜ್ಞಾನ ಸಾಹಿತ್ಯ ಪರಿಷತ್ತು ನವಕರ್ನಾಟಕ ಪ್ರಕಾಶನ. ಇವು ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿದ ಇತರ ಸಂಸ್ಥೆಗಳಲ್ಲಿ ಮುಖ್ಯವಾದುವು.

**ವಿಜ್ಞಾನ ಪತ್ರಿಕೆಗಳು :** 1978ರ ಮೊದಲೇ ಪ್ರಕಟವಾಗುತ್ತಿದ್ದ ವಿಜ್ಞಾನ ಲೋಕ, ವಿಜ್ಞಾನ ಕರ್ನಾಟಕ ಮೊದಲಾದ ವಿಜ್ಞಾನ ಪತ್ರಿಕೆಗಳ ನಿಯತಕಾಲಿಕ ಪ್ರಕಾಶನಕ್ಕೆ ತೊಂದರೆಯಾದರೂ ಅನಂತರದ ಕೆಲವು ಪತ್ರಿಕೆಗಳಿಗೆ ಹಾಗಾಗಲಿಲ್ಲ. 1978 ನವೆಂಬರ್ 1ರಂದು 'ಬಾಲವಿಜ್ಞಾನ' ಮಾಸಿಕದ (ಕರಾವಿಪದಿಂದ ಪ್ರಕಟಿತ) ಮೊದಲ ಸಂಚಿಕೆ ಪ್ರಕಟವಾಯಿತು. ಮುಂದಿನ ಎರಡು ದಶಕಗಳಲ್ಲಿ ಸುಮಾರು ಎರಡೂವರೆ ಸಾವಿರಗಳಿಗೂ ಅಧಿಕ ಸಂಖ್ಯೆಯ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ವಿದ್ಯಾರ್ಥಿಗಳು ನಡೆಸಬಹುದಾದ ವಿಜ್ಞಾನ ಪ್ರಯೋಗಗಳು, ಪಠ್ಯಪೂರಕ ವಿಷಯಗಳು, ವಿಜ್ಞಾನದ ಮುನ್ನಡೆ, ವಿಜ್ಞಾನ ಕೌತುಕ, ಪಾರಿಭಾಷಿಕ ಪದ ಸಂಪದ, ವಿಜ್ಞಾನಿಗಳ ಪರಿಚಯ, ಪ್ರಶ್ನೋತ್ತರ, ವಿಜ್ಞಾನ ಪದಬಂಧ ಇವೆಲ್ಲ ಮುಖ್ಯ ಲೇಖನಗಳೊಂದಿಗೆ ಸ್ಥಿರಶೀರ್ಷಿಕೆಗಳಾಗಿ ಅಥ’ವಾ ಆವರ್ತ ಶೀರ್ಷಿಕೆಗಳಾಗಿ ವಿವಿಧ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ.

ವಿಜ್ಞಾನ ಸಂಗಾತಿ, ಕನ್ನಡ ವಿಶ್ವವಿದ್ಯಾಲಯ (ಹಂಪಿ) ಅಡಿಕೆ ಪತ್ರಿಕೆ (ಬೆಳೆಗಾರರೇ ಪ್ರಕಾಶಕರು), ಸುಜಾತ, ಮೋಟಿವಿದ್ಯೆ, ನಮ್ಮ ಪರಿಸರ, (ಕರಾವಿಪ), ಜೀವನಾಡಿ (ದಿಕ್ಸೂಚಿ ಬಳಗ), ಮಕ್ಕಳ ವಿಜ್ಞಾನ ಮಾಸಿಕ, ಪುಟಾಣಿ ವಿಜ್ಞಾನ - ಇವೆಲ್ಲ 1978ರ ಅನಂತರ ಬೆಳಕು ಕಂಡಂಥ ಇತರ ಪತ್ರಿಕೆಗಳು. ಸಂಶೋಧಕ, ವಿಜ್ಞಾನ ವಾಹಿನಿ ಈ ಬಗೆಯ ಕೆಲವು ಪತ್ರಿಕೆಗಳು ವೈಯಕ್ತಿಕ ಆಸಕ್ತಿ ಮತ್ತು ಪ್ರಯತ್ನಗಳಿಂದ ಹುಟ್ಟಿದ್ದರೂ ದೀರ್ಘಕಾಲ ಬಾಳಲಿಲ್ಲ. ವಯಸ್ಕರ ಶಿಕ್ಷಣ ಸಮಿತಿಯ ವತಿಯಿಂದ ಪ್ರಕಟವಾಗುತ್ತಿದ್ದ ಪುಸ್ತಕ ಪ್ರಪಂಚದಲ್ಲಿ ಪ್ರಕಟವಾಗಿರುವ ವಿಜ್ಞಾನ ಸಂಬಂಧ ಲೇಖನಗಳನ್ನು ನಾವು ಗಮನಿಸಬೇಕು. ವಿಜ್ಞಾನ ಪತ್ರಿಕೆಗಳಿಂದಾಗಿ ನೂರಾರು ವಿಜ್ಞಾನ ಬರೆಹಗಾರರಿಗೆ ಬರೆಯಲು ಆಸ್ಪದ ದೊರಕಿದ್ದಷ್ಟೇ ಅಲ್ಲ, ವಿದ್ಯಾರ್ಥಿ - ಅಧ್ಯಾಪಕ ಕಾರ್ಯನಿರತ ವಿಜ್ಞಾನಿಗಳೊಂದಿಗೆ ಆಸಕ್ತ ನಾಗರಿಕರೂ ಲಿಖಿತ ಮಾಧ್ಯಮದ ಮೂಲಕ ವಿಜ್ಞಾನ ವಿಚಾರಗಳ ಬಗ್ಗೆ ಅಂತರ್ವರ್ತಿಸುವಂತಾಯಿತು.

**ಅಂಕಣ ಬಿಡಿಬರೆಹಗಳು:** ಕನ್ನಡದಲ್ಲಿ ಸಾಮಾನ್ಯ ದಿನಪತ್ರಿಕೆ, ವಾರಪತ್ರಿಕೆ ಮತ್ತು ಮಾಸಿಕಗಳ ಸಂಖ್ಯೆಯೂ 1978ರ ಅನಂತರ ಹೆಚ್ಚಿದೆ. ಸ್ಥಳೀಯ ಅಥ’ವಾ ಪ್ರಾದೇಶಿಕ ವ್ಯಾಪ್ತಿಯ ಪತ್ರಿಕೆಗಳೂ ನಗರ ಕೇಂದ್ರಿತವಾಗಿ ಹೆಚ್ಚಿವೆ. ಇವುಗಳಲ್ಲಿ ಸಚಿತ್ರ ಬಿಡಿಬರೆಹಗಳ ರೂಪದಲ್ಲಾಗಲೀ ನಿಶ್ಚಿತ ಶೀರ್ಷಿಕೆಯನ್ನು ಹೊತ್ತು ವರ್ತಮಾನ ಕಾಲದ ವಿಜ್ಞಾನ ವಿಷಯಗಳನ್ನು ತಿಳಿಸಿ ಚರ್ಚಿಸುವ ಅಂಕಣಗಳಲ್ಲಾಗಲೀ ಪ್ರಕಟವಾಗುವ ವಿಜ್ಞಾನ ಸಾಹಿತ್ಯದ ಪ್ರಮಾಣ ಗಮನಾರ್ಹವಾದುದು. ಉದಾಹರಣೆಗೆ ವಿಜ್ಞಾನ ವಿಶೇಷ (ಪ್ರಜಾವಾಣಿ), ವಿಜ್ಞಾನ ವಿಹಾರ (ಕನ್ನಡ ಪ್ರಭ) - ಈ ಅಂಕಣಗಳು ಲಲಿತ ಶೈಲಿಯಲ್ಲಿ ವಿಜ್ಞಾನ ಕ್ಷೇತ್ರದ ಬೆಳೆವಣಿಗೆಗಳ ಬಗ್ಗೆ ವಾರ ವಾರವೂ ಬೆಳಕು ಚೆಲ್ಲುತ್ತವೆ. ನಭೋಮಂಡಲ (ಹೊಸತು), ನೆಟ್‌ನೋಟ (ವಿಜ್ಞಾನ ಸಂಗಾತಿ) ಎಂಬ ಅಂಕಣಗಳು ರಾತ್ರಿ ಆಕಾಶದ ವೀಕ್ಷಣೆ, ಇಂಟರ್‌ನೆಟ್‌ನ ಬೆಳೆವಣಿಗೆಯಂಥ’ ವಿಶೇಷ ಆಸಕ್ತಿಗಳನ್ನು ತಣಿಸಬಲ್ಲುವಾದುವು. ದಿನಪತ್ರಿಕೆಗಳ ವಿಶೇಷ ಪುರವಣಿಗಳಲ್ಲೂ ವಿಶೇಷ ವಿಜ್ಞಾನ ಲೇಖನಗಳು ಪ್ರಕಟವಾಗುವ ಪ್ರವೃತ್ತಿ ಬೆಳೆಯಿತು.

**ಆಕರ ಗ್ರಂಥಗಳು :** ಬರೆಹಗಾರರ ವೈಯಕ್ತಿಕ ಒಲವು ಮತ್ತು ಕನ್ನಡದ ಪ್ರಾದೇಶಿಕ ಭಿನ್ನತೆಗಳಿಂದಾಗಿ ಇಂಗ್ಲಿಷಿನ ಒಂದು ನಿರ್ದಿಷ್ಟ ಪಾರಿಭಾಷಿಕ ಪದಕ್ಕೆ ಎರಡು ಅಥ’ವಾ ಹೆಚ್ಚು ಸಮಾನ ಪದಗಳು ಹಿಂದೆ ಬಳಕೆಯಾಗುತ್ತಿದ್ದುವು. ಒಂದು ಶಬ್ದದ ಏಕರೂಪ ಬಳಕೆಯ ವಿಚಾರವಾಗಿ ವಿಜ್ಞಾನ ಬರೆಹಗಾರರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿದ್ದುವು. 1984 ಮೇ ತಿಂಗಳಲ್ಲಿ ಧಾರವಾಡದಲ್ಲಿ ನಡೆದ ಮೊದಲನೆಯ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನದಲ್ಲಿ ಈ ಸಮಸ್ಯೆಯ ಬಗ್ಗೆ ಚರ್ಚಿಸಲಾಯಿತು. ಬಳಿಕ ರಾಜ್ಯದ ವಿವಿಧ ಪ್ರದೇಶಗಳನ್ನು ಪ್ರತಿನಿಧಿಸುವ ವಿದ್ವಾಂಸರ ಮತ್ತು ವಿಜ್ಞಾನಿಗಳ ಸಹಾಯದಿಂದ ವಿಜ್ಞಾನ ಶಬ್ದಕೋಶದ ಯೋಜನೆಯನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕೈಗೆತ್ತಿಕೊಳ್ಳಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು. ಅದರಂತೆ ಇಂಗ್ಲಿಷ್ - ಕನ್ನಡ ವಿಜ್ಞಾನ ಶಬ್ದಕೋಶ ಸಿದ್ಧವಾಯಿತು (1990). ಈ ಶಬ್ದಕೋಶ ರಚನೆಯಲ್ಲಿ ಯಾವ ಬಗೆಯ ಪಾರಿಭಾಷಿಕ ಪದಗಳನ್ನು ನೇರವಾಗಿ ಇಂಗ್ಲಿಷಿನಿಂದ ಪಡೆಯಬಹುದು, ಯಾವ ಬಗೆಯ ಪದಗಳಿಗೆ ಸಮಾನ ಪದಗಳನ್ನು ಸೃಷ್ಟಿಸಬಹುದು ಹಾಗೂ ಸೃಷ್ಟಿಸುವಾಗ ಅನುಸರಿಸುವ ಮಾರ್ಗಗಳಾವುವು ಎಂಬುದರ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ ಅನ್ವಯಿಸಲಾಯಿತು. ಸಮಾನ ಶಬ್ದಕಾಂಡ ಮತ್ತು ಪ್ರತ್ಯಯಗಳ ಪಟ್ಟಿಯನ್ನೂ ನೀಡಲಾಯಿತು. ಈ ಜಾಡಿನಲ್ಲೇ ಮುಂದುವರಿದು ನವಕರ್ನಾಟಕ ಪ್ರಕಾಶನವು ವಿಜ್ಞಾನ ಪದ ವಿವರಣ ಕೋಶವನ್ನು ಪ್ರಕಟಿಸಿತು (2001). ಇದರಲ್ಲಿ ಕನ್ನಡ ಪಾರಿಭಾಷಿಕ ಪದಗಳನ್ನು ಅಕಾರಾದಿಯಾಗಿ ನೀಡಿ, ಅವುಗಳ ಇಂಗ್ಲಿಷ್ ಸಮಾನ ಪದಗಳೊಂದಿಗೆ ಕನ್ನಡದಲ್ಲಿ ವಿವರಣೆಯನ್ನೂ ಇಂಗ್ಲಿಷ್ ಪಾರಿಭಾಷಿಕ ಪದಗಳಿಗೆ ಕನ್ನಡ ಸಮಾನ ಪದಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ನೀಡಲಾಯಿತು. ಇದರಿಂದ ಬರೆಹಗಾರರಿಗಷ್ಟೇ ಅಲ್ಲದೆ ಓದುಗರಿಗೂ ಅನುಕೂಲವಾಯಿತು. ಹಾಗೆಯೇ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟುವಿನ ಪರಿಷ್ಕರಣವೂ ಒಂದು ಮುಖ್ಯ ಹೆಜ್ಜೆ. 1946 ರಿಂದಲೂ ಪಾರಿಭಾಷಿಕ ಪದಗಳನ್ನು ಆರಿಸುವಲ್ಲಿ ಈ ನಿಘಂಟು ಒಂದು ಮುಖ್ಯ ಆಕರವಾಗಿತ್ತು. ಈ ನಿಘಂಟನ್ನು ಪರಿಷ್ಕರಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ 1989ರಲ್ಲಿ ಆರಂಭವಾಗಿ ಈಗ ಮುಗಿದಿದೆ (2004).

ಕನ್ನಡ ವಿಜ್ಞಾನ ಸಾಹಿತ್ಯ ನಿರ್ಮಾಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ಕೊಡುಗೆಯೂ ಗಮನಾರ್ಹ. 14 ಸಂಪುಟಗಳ ಈ ಯೋಜನೆ ಈಗ ಪೂರ್ಣಗೊಂಡಿದೆ (2004). 1970ರ ದಶಕದಲ್ಲಿ ಪ್ರಕಟವಾಗಿದ್ದ ಏಳು ಸಂಪುಟಗಳ ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯ ಪ್ರತಿಗಳು ಈಗ ಅಲಭ್ಯ. ಈ ಸನ್ನಿವೇಶದಲ್ಲಿ ಕೇವಲ ವಿಜ್ಞಾನಕ್ಕೆ ಮೀಸಲಾದ ನವಕರ್ನಾಟಕ ಜ್ಞಾನ ವಿಜ್ಞಾನ ಕೋಶ (ನವಕರ್ನಾಟಕ ಪ್ರಕಾಶನ 1998) ಕನ್ನಡ ಓದುಗರಿಗೆ ನೀಡಿದ ವಿಶಿಷ್ಟ ಕೊಡುಗೆಯಾಯಿತು. ಅಂದವಾದ ಮುದ್ರಣ ಮತ್ತು ಪುಟಪುಟಗಳಲ್ಲಿ ಪಠ್ಯಕ್ಕೆ ಪೂರಕವಾದ ವರ್ಣಮಯ ಚಿತ್ರಗಳಿಂದಾಗಿಯೂ ಈ ಪ್ರಕಟಣೆ ದಾಖಲೆ ನಿರ್ಮಿಸಿತು. ಹಂಪಿ ಕನ್ನಡ ವಿಶ್ವವಿದ್ಯಾಲಯವು ವೈದ್ಯವಿಜ್ಞಾನದ ವಿಶ್ವಕೋಶವನ್ನು ಪ್ರಕಟಿಸಿದ್ದರಿಂದ ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಮತ್ತೊಂದು ಆಕರ ಗ್ರಂಥದ ಸೇರ್ಪಡೆಯಾದಂತಾಯಿತು.

ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳು 20ನೆಯ ಶತಮಾನದ ಎಂಟನೆಯ ದಶಕದಲ್ಲಿ ಸ್ನಾತಕ ವಿದ್ಯಾರ್ಥಿಗಳಿಗೆ ಅಗತ್ಯವಾದ ಅನೇಕ ವಿಜ್ಞಾನ ಪಠ್ಯಗಳನ್ನೂ ಪರಾಮರ್ಶನ ಗ್ರಂಥಗಳನ್ನೂ ಪ್ರಕಟಿಸಿದ್ದುವು. ಆದರೆ ಸ್ನಾತಕ ಮಟ್ಟದಲ್ಲಿ ಕನ್ನಡ ಮಾಧ್ಯಮಕ್ಕೆ ಪ್ರೋತ್ಸಾಹ ಸಿಗದಿದ್ದಾಗ ಇಂಥ ಪ್ರಕಟಣೆಗಳು ಮುಂದುವರಿಯಲಿಲ್ಲ. ಇದಕ್ಕೆ ಅಪವಾದ ಎಂಬಂತೆ ಇಂಥ ಪ್ರಕಟಣೆಗಳು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ 1990ರ ದಶಕದಲ್ಲೂ ಮುಂದುವರಿದುವು. ಕನ್ನಡ ಮಾಧ್ಯಮದಲ್ಲಿ ಓದಿ ಬಿ.ಎಸ್‌ಸಿ. (ಕೃಷಿ) ಪದವಿ ಪಡೆದ ವಿದ್ಯಾರ್ಥಿಗಳು ಯಾವುದೇ ಕೀಳರಿಮೆಗೆ ತುತ್ತಾಗದೆ ಆಡಳಿತ ಮತ್ತು ಕೃಷಿ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನೂ ಸ್ನಾತಕೋತ್ತರ ಕೋರ್ಸುಗಳಿಗೆ ಕಾಲಿರಿಸಿ ಯಶಸ್ವಿಯಾಗುತ್ತಿರುವುದನ್ನೂ, ಕೃಷಿ

ವಿಶ್ವವಿದ್ಯಾಲಯ ಅಧಿಕೃತವಾಗಿ ಸಾರಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಪದವಿಪೂರ್ವ ತರಗತಿಗಳಿಗಾಗಿ ವಿಜ್ಞಾನ ಪಠ್ಯ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿದೆ. ಪಠ್ಯಪುಸ್ತಕಗಳಲ್ಲಿ ಸಂಗ್ರಹವಾಗಿ ನಿರೂಪಿಸಿರುವ ವಿಷಯಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ನೆರವಾಗುವ ಪುಸ್ತಕಗಳು ಕನ್ನಡದಲ್ಲಿ ದೊರೆಯಬೇಕೆಂಬ ಇರಾದೆಯಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಮೂಲಭೂತ ಶೈಕ್ಷಣಿಕ ಪುಸ್ತಕ ಮಾಲೆ'ಯಲ್ಲಿ ಹಲವು ವಿಜ್ಞಾನ ಕೃತಿಗಳನ್ನು ಪ್ರಕಟಿಸಿದೆ. ವಿಜ್ಞಾನ ದೀಪಮಾಲೆ, ಜನಪ್ರಿಯ ಪುಸ್ತಕ ಮಾಲೆಯಲ್ಲಿಯೂ ವಿಜ್ಞಾನ ಕೃತಿಗಳು ಬಂದುವು. ಹೀಗಿದ್ದರೂ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಿಗುವ ವಿಜ್ಞಾನ ಪಠ್ಯಗಳೂ ಪ್ರತಿ ವರ್ಷವೂ ಒಂದಲ್ಲ ಒಂದು ಬಗೆಯ ಟೀಕೆಗೆ ಒಳಗಾಗುತ್ತಿವೆ. ಎಳೆಯ ವಿದ್ಯಾರ್ಥಿಗಳ ಮೇಲೆ ಆಳ ಪರಿಣಾಮ ಬೀರಬಲ್ಲ ವಿಜ್ಞಾನ ಪಠ್ಯಗಳಲ್ಲಿ ಪರಿಕಲ್ಪನೆ, ಸತ್ಯಾಂಶ, ವ್ಯಾಕರಣ, ಚಿತ್ರ ಮತ್ತು ಮುದ್ರಣಕ್ಕೆ ಸಂಬಂಧಿಸಿದ ದೋಷಗಳನ್ನು ನಿವಾರಿಸಲು ಬೇಕಾದ ವ್ಯವಸ್ಥೆಯನ್ನು ಕೆಲವೊಮ್ಮೆ ರೂಪಿಸಲು ಸಾಧ್ಯವಾಗದಿರುವುದೇ ಇದಕ್ಕೆ ಕಾರಣವಾಗಿದೆ.

ಇತ್ತೀಚೆಗೆ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನಗಳಂಥ ಸಾಂಪ್ರದಾಯಿಕ ವಿಭಾಗಗಳಷ್ಟೇ ಅಲ್ಲದೆ ಕಂಪ್ಯೂಟರ್, ಜೀವಿವೈವಿಧ್ಯ, ಪರಿಸರ, ಜೀವರಸಾಯನ ವಿಜ್ಞಾನ, ಸಾವಯವ ಕೃಷಿಯಂಥ ವಿಷಯಗಳೂ ಹೆಚ್ಚು ಹೆಚ್ಚಾಗಿ ಲೇಖಕರ ಗಮನ ಸೆಳೆಯುತ್ತಿವೆ. ಗ್ರಹಣ, ಧೂಮಕೇತು, ಅಂತರ್ಜಾಲ, ತ್ಯಾಜ್ಯವಸ್ತು ನಿರ್ವಹಣೆ, ಮಳೆನೀರಿನ ಸಂಗ್ರಹ, ಮೂಢನಂಬಿಕೆ, ಪವಾಡ ಪ್ರದರ್ಶನ, ಪ್ರಳಯ, ಫಲಜ್ಯೋತಿಷ್ಯ, ವಾಸ್ತುಗಳಂಥ ವಿಚಾರಗಳನ್ನು ವಸ್ತುನಿಷ್ಠವಾಗಿ ತಿಳಿಯಬೇಕೆನ್ನುವ ಕನ್ನಡದ ಓದುಗರಿಗೆ ಅವಶ್ಯವಾದ ಕೃತಿಗಳಿಗೆ ಈಗ ಅಭಾವವಿಲ್ಲ. ಉತ್ತಮ ವಿಜ್ಞಾನ ಕೃತಿಗಳು ಓದುಗರನ್ನು ಅಪಾರವಾಗಿ ಆಕರ್ಷಿಸುತ್ತಿವೆ. (ಜೆ.ಆರ್‌ಎಲ್.)

ವಿಜ್ಞಾನ ಸಾಹಿತ್ಯದಲ್ಲಿ ಬೇರೆ ಬೇರೆ ಪ್ರಕಾರಗಳುಂಟು. ವಿವಿಧ ಪ್ರಕಾರಗಳ ವಿಜ್ಞಾನ ಸಾಹಿತ್ಯದ ಆವಶ್ಯಕತೆ ಮತ್ತು ಅವುಗಳ ಪೂರೈಕೆ ಸಮಾಜದಲ್ಲಿ ಹೇಗೆ ಬೆಳೆಯುತ್ತದೆ ಎಂಬುದನ್ನು ವಿಶಾಲವಾಗಿ ಪರಿಶೀಲಿಸಿ ಕನ್ನಡ ಭಾಷೆಯಲ್ಲಿ ವಿಜ್ಞಾನ ಸಾಹಿತ್ಯದ ಬೆಳವಣಿಗೆಯನ್ನು ಸಮೀಕ್ಷಿಸಲಾಗಿದೆ.

ಕಾರ್ಯನಿರತ ವಿಜ್ಞಾನಿಗಳು ಸಾಮಾನ್ಯವಾಗಿ ವಿಜ್ಞಾನ ಸಾಹಿತ್ಯ ಎಂದು ಕರೆಯುವುದು ಸಂಶೋಧನೆಯ ಫಲಿತಾಂಶಗಳನ್ನು ಪ್ರಚುರಪಡಿಸುವ ಕೃತಿಗಳನ್ನು. ಆಧುನಿಕ ವಿಜ್ಞಾನ ಇಂದಿನ ರೂಪದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಜನ್ಮತಾಳಿದ ಹೊಸದರಲ್ಲಿ, ಸಂಶೋಧನ ವರದಿಗಳ ಪ್ರಕಟಣೆಗೇ ಮೀಸಲಾದ ವಿಜ್ಞಾನ ಪತ್ರಿಕೆಗಳು ಇನ್ನೂ ಹೆಚ್ಚಾಗಿ ಇಲ್ಲದಿದ್ದ ಕಾಲದಲ್ಲಿ, ವಿಜ್ಞಾನಿಗಳು ತಮ್ಮ ಸಂಶೋಧನೆಯ ಫಲಿತಾಂಶಗಳನ್ನು ಸಹ ಪುಸ್ತಕಗಳ ರೂಪದಲ್ಲಿ ಪ್ರಚುರಪಡಿಸುತ್ತಿದ್ದರು. ಕೊಪರ್ನಿಕಸ್‌ನ ಡಿ ಆರ್ಬಿಯಂ ಸೆಲೆಸ್ಟಿಯಂ ರೆವಲ್ಯೂಷನಿಬಸ್, ಡಾರ್ವಿನ್ನನ ಆರಿಜಿನ್ ಆಫ್ ಸ್ಪೀಷೀಸ್, ನ್ಯೂಟನ್ನನ ಪ್ರಿನ್ಸಿಪಿಯ, ರಾಬರ್ಟ್ ಬಾಯಿಲನ ಸ್ಕೆಪ್ಟಿಕಲ್ ಕೆಮಿಸ್ಟ್- ಇವೆಲ್ಲವೂ ಅಂಥ ಪುಸ್ತಕಗಳೇ. ಇಂದು ಸಾಮಾನ್ಯವಾಗಿ ಸಂಶೋಧನೆಯ ವರದಿಗಳೆಲ್ಲವೂ ಪ್ರಕಟವಾಗುವುದು ಅದಕ್ಕೇ ಮೀಸಲಾಗಿರುವ ಅನೇಕಾನೇಕ ನಿಯತಕಾಲಿಕ ಪತ್ರಿಕೆಗಳಲ್ಲಿ. ವಿಜ್ಞಾನಿಗಳು ಪರಿಮಿತ ಅರ್ಥದಲ್ಲಿ ಸಾಹಿತ್ಯ ಎಂಬ ಶಬ್ದವನ್ನು ಬಳಸುವುದು ಈ ಪ್ರಕಾರದ ಸಾಹಿತ್ಯಕ್ಕೆ. ಕನ್ನಡದಲ್ಲಿ ಈ ಬಗೆಯ ಸಾಹಿತ್ಯ ಇಲ್ಲವೇ ಇಲ್ಲ ಎನ್ನಬಹುದು. ಇದಕ್ಕೆ ಕಾರಣ ಶತಮಾನಗಳ ಕಾಲ ದಾಸ್ಯದಲ್ಲಿ ಸಿಕ್ಕಿದ್ದ ಭಾರತದಲ್ಲಿ ಆಧುನಿಕ ವಿಜ್ಞಾನ ಯುರೋಪ್ ದೇಶಗಳಲ್ಲಿ ವಿಕಾಸಗೊಂಡಂತೆ ಸ್ವಾಭಾವಿಕವಾಗಿ ವಿಕಾಸಗೊಳ್ಳಲು ಸಾಧ್ಯವಾಗಲಿಲ್ಲ. ಕಳೆದ ಒಂದು ಶತಮಾನದಲ್ಲಿ ಯುರೋಪಿನಿಂದ ಇಲ್ಲಿಗೆ ಬಂದ ವಿಜ್ಞಾನ, ಇಂಗ್ಲಿಷ್ ಭಾಷೆಯ ಮೂಲಕ ಬಂತು. ಆದ್ದರಿಂದ ಈಚೆಗೆ ಸ್ವತಂತ್ರ ಸಂಶೋಧನೆಗಳನ್ನು ಕೈಗೊಂಡ ವಿಜ್ಞಾನಿಗಳು ಸಹಜವಾಗಿಯೇ ತಮ್ಮ ಫಲಿತಾಂಶಗಳನ್ನು ವಿದೇಶಿ ಭಾಷೆಗಳ ಮೂಲಕವೇ ವರದಿಮಾಡುತ್ತ ಬಂದಿದ್ದಾರೆ.

ವಿದ್ಯಾರ್ಥಿಗಳಿಗೆ ಅವಶ್ಯವಾದ ಪಠ್ಯಪುಸ್ತಕಗಳು, ಪ್ರಕರಣ ಗ್ರಂಥಗಳು (ಟ್ರೀಟೈಸಸ್), ಏಕಪ್ರಬಂಧಗಳು (ಮೊನೊಗ್ರಾಫ್ಸ್) ಮುಂತಾದವು ಇನ್ನೊಂದು ಬಗೆಯವು. ಕನ್ನಡ ಮಾಧ್ಯಮದಲ್ಲಿ ಬೋಧನೆ ನಡೆದು,ಈ ಬಗೆಯ ಸಾಹಿತ್ಯಕ್ಕೆ ಬೇಡಿಕೆ ಒದಗಿಬಂದರೆ ಅವು ತಾವಾಗಿಯೇ ಬೆಳಕು ಕಾಣುತ್ತವೆ. ಐವತ್ತು ವರ್ಷಗಳ ಹಿಂದೆ ಮಾಧ್ಯಮಿಕ ಶಾಲೆಯಲ್ಲಿ ಸಹ ಇಂಗ್ಲಿಷ್ ಮಾಧ್ಯಮವೇ ಬಳಕೆಯಲ್ಲಿದ್ದ ಕಾಲದಲ್ಲಿ ಬಹುಶಃ ಆಧುನಿಕ ವಿಜ್ಞಾನದ ಅಧ್ಯಯನಕ್ಕೆ ಬೇಕಾಗುವ ಪಠ್ಯಪುಸ್ತಕಗಳ ಹೆಸರೇ ಇರಲಿಲ್ಲವೆಂದು ಕಾಣುತ್ತದೆ. 1930-40ರ ದಶಕದಲ್ಲಿ ನಮ್ಮ ಪ್ರೌಢಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತಂದಮೇಲೆ ಆ ಮಟ್ಟಕ್ಕೆ ತಯಾರಿಸಿದ ವಿಜ್ಞಾನ ಪಠ್ಯಪುಸ್ತಕಗಳು ಹೇರಳವಾಗಿ ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾನಿಲಯ ಕೈಗೊಂಡಿರುವ ಕನ್ನಡ ಗ್ರಂಥ ಸೂಚಿ (ಬಿಬ್ಲಿಯೊಗ್ರಫಿ) ಯೋಜನೆಯ ಅಂಗವಾಗಿ ಪ್ರಕಟವಾಗಿರುವ (1971) ಅದರ ಮೊದಲನೆಯ ಸಂಪುಟದ ಪುಟಗಳ ಮೇಲೆ ಕಣ್ಣು ಹಾಯಿಸಿದರೆ ಈ ಮಾತು ಸತ್ಯವೆಂಬುದು ಸ್ಪಷ್ಟವಾಗುತ್ತದೆ. ಈ ಸಂಪುಟದಲ್ಲಿ ಗಣಿತ ಮತ್ತು ವಿವಿಧ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಪಠ್ಯಪುಸ್ತಕಗಳಿಂದ ಪ್ರೌಢಗ್ರಂಥಗಳವರೆಗೆ, ಉಪಯುಕ್ತ ಕೋಷ್ಟಕ ಕೈಪಿಡಿಗಳಿಂದ ಜನಪ್ರಿಯ ವಿಜ್ಞಾನ ಪುಸ್ತಕಗಳವರೆಗೆ ಇದುವರೆಗೆ ಅಚ್ಚಾಗಿರುವ ಎಲ್ಲ ಕನ್ನಡ ಗ್ರಂಥಗಳನ್ನೂ ಪಟ್ಟಿ ಮಾಡುವ ಯತ್ನ ನಡೆದಿದೆ. ಈಗ ಸಿಕ್ಕಿರುವ 1 ಪೈಯಿಂದ 1,000 ರೂಪಾಯಿವರೆಗೆ ಅಸಲಿಗೆ 1 ದಿವಸದಿಂದ 100 ವರ್ಷಪರ್ಯಂತ 100ಕ್ಕೆ 12ರ ಪ್ರಕಾರ ಆಗುವ ಬಡ್ಡಿಯ ಪಟ್ಟಿಗಳು (ಮಂಗಳೂರು ಜರ್ಮನ್ ಮಿಶನ್ ಪ್ರೆಸ್, 1858) ಎಂಬ ಮೊತ್ತಮೊದಲ ಪುಸ್ತಕದಿಂದ 1968ರ ವರೆಗೆ ಪ್ರಕಟವಾಗಿರುವ 1,449 ಮುದ್ರಿತ ಗ್ರಂಥಗಳ ವಿವರಗಳನ್ನು ಈ ಸಂಪುಟದಲ್ಲಿ ಕಾಣಬಹುದು (ಬಹಶಃ ಒಟ್ಟು ಸಂಖ್ಯೆಯ ಸೇ.20 ಪುಸ್ತಕಗಳು ಲೆಕ್ಕಕ್ಕೆ ಸಿಕ್ಕಿರದೆ ಹೋಗಿರಬಹುದುದೆಂದು ಇದರ ಸಂಪಾದಕ ಮಂಡಳಿಯ ಅಂದಾಜು). ಇದರಲ್ಲಿ ಹೆಸರಿರುವ 422 ಗಣಿತ ಗ್ರಂಥಗಳಲ್ಲಿ ಹತ್ತಿಪ್ಪತ್ತು ವಿನಾ ಉಳಿದ ಎಲ್ಲವೂ ಅಂಥ ಪಠ್ಯಪುಸ್ತಗಳೇ. ಭೌತವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನಗಳ ಬಗ್ಗೆಯೂ ಇದೇ ಮಾತು ಹೇಳಬಹುದು.

ಕಾಲೇಜು ಮಟ್ಟದಲ್ಲಿ ಕನ್ನಡ ಮಾಧ್ಯಮ ಬಳಸಲು ಮೊತ್ತಮೊದಲು ಪ್ರಯತ್ನ ನಡೆದದ್ದು 1957ರಲ್ಲಿ. ವಿಶ್ವವಿದ್ಯಾನಿಲಯಗಳು ಕನ್ನಡದಲ್ಲಿ ಬೋಧನೆಗೆ ಏರ್ಪಾಡು ಮಾಡಿ ಕನ್ನಡದಲ್ಲಿ ಪಠ್ಯಪುಸ್ತಕ ರಚನೆಗೆ ಉತ್ತೇಜನ ನೀಡಿದುವು. ಒಂದೊಂದು ವಿಜ್ಞಾನ ವಿಭಾಗದಲ್ಲೂ ಹಲವಾರು ಪಠ್ಯಪುಸ್ತಕಗಳು ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಉತ್ಕೃಷ್ಟ ಇಂಗ್ಲಿಷ್ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದೆ. ಸ್ವಂತವಾಗಿ ಸ್ನಾತಕಮಟ್ಟದ ಪಠ್ಯಪುಸ್ತಕಗಳನ್ನು ರಚಿಸುವವರಿಗೆ ಉತ್ತೇಜನ ನೀಡುವುದಕ್ಕಾಗಿ ಹಿಂದೆ ಒಂದು ಸ್ಪರ್ಧೆಯನ್ನೂ ಏರ್ಪಡಿಸಲಾಗಿತ್ತು. 1970ರಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ ಭೌತವಿಜ್ಞಾನ, ರಸಾಯನವಿಜ್ಞಾನ ಮತ್ತು ಮನಶ್ಶಾಸ್ತ್ರದ ಪುಸ್ತಕಗಳು ವಿಷಯ ನಿರೂಪಣೆ, ಆಧುನಿಕತೆ ಮತ್ತು ಪ್ರೌಢಿಮೆಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವ ಆ ವಿಷಯಗಳನ್ನು ಕುರಿತ ಅತ್ಯುತ್ತಮ ಗ್ರಂಥಗಳಿಗೆ ಸರಿಸಮಾನವಾಗಿವೆಯೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪಠ್ಯಪುಸ್ತಕಗಳ ತಯಾರಿಕೆಗೆ ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳೂ ವಿಶೇಷ ಆದ್ಯತೆ ಕೊಟ್ಟು ಈಗಾಗಲೇ ಹಲವಾರು ಪುಸ್ತಕಗಳನ್ನು ಹೊರತಂದಿವೆ. ಸ್ನಾತಕಮಟ್ಟದ ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲ ವಿಜ್ಞಾನ ವಿಭಾಗಗಳ ಪಠ್ಯಪುಸ್ತಕಗಳು ಈಗ ದೊರೆಯುತ್ತವೆ.

ವಿಜ್ಞಾನ ಸಾಹಿತ್ಯದ ಇನ್ನೊಂದು ಪ್ರಕಾರ ಜನಪ್ರಿಯ ವಿಜ್ಞಾನ. ತಜ್ಞರಲ್ಲದ ಓದುಗರನ್ನು ಉದ್ದೇಶಿಸಿ ವಿಜ್ಞಾನದ ಸಾಧನೆಗಳನ್ನು ವಿವರಿಸುವುದು, ಜನತೆಯಲ್ಲಿ ವಿಜ್ಞಾನ ವಿಧಾನ ಮತ್ತು ವಿಜ್ಞಾನ ಮನೋಧರ್ಮವನ್ನು ಹರಡುವುದು ಈ ಬಗೆಯ ಸಾಹಿತ್ಯದ ಗುರಿ. ವಿಜ್ಞಾನ ಸಾಹಿತ್ಯದ ಈ ಒಂದು ಪ್ರಕಾರ ಕನ್ನಡದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ಸ್ಥೂಲವಾಗಿ ಸಮೀಕ್ಷಿಸಬಹುದು.

ಸಂಶೋಧನ ಕೃತಿಗಳಂತೆ ಮತ್ತು ಪಠ್ಯಪುಸ್ತಕಗಳಂತೆ ಜನಪ್ರಿಯ ವಿಜ್ಞಾನ ಸಾಹಿತ್ಯವೂ ಜನತೆಯ ಆವಶ್ಯಕತೆ ಮತ್ತು ಬೇಡಿಕೆಗಳನ್ನನುಸರಿಸಿ ತಾನೇ ತಾನಾಗಿ ಬೆಳೆಯುವುದೆಂದು ಹೇಳುವ ಹಾಗಿಲ್ಲ. ಜನತೆಗೆ ಏನು ಬೇಕು ಎಂಬ ಬಗ್ಗೆ ತಜ್ಞರಲ್ಲಿ ಮೂಡುವ ಪ್ರಜ್ಞೆ, ವಿಜ್ಞಾನದ ಪರಿಭಾಷೆಯನ್ನು ಆದಷ್ಟು ಕಡಿಮೆ ಮಾಡಿ ಜನಸಾಮಾನ್ಯರ ಭಾಷೆಯಲ್ಲಿ ಅದನ್ನು ಒದಗಿಸಬೇಕೆಂಬ ಪ್ರೇರಣೆ, ಅದಕ್ಕೆ ಬೇಕಾದ ಸಾಮರ್ಥ್ಯ - ಇವು ಬೆಳೆಯುವವರೆಗೂ ಜನಪ್ರಿಯ ವಿಜ್ಞಾನ ಸಾಹಿತ್ಯ ಬೆಳೆಯಲಾರದು.

ಪಾಶ್ಚಾತ್ಯ ಭಾಷೆಗಳಲ್ಲಿ, ಮುಖ್ಯವಾಗಿ ಇಂಗ್ಲಿಷ್ ಭಾಷೆಯಲ್ಲಿ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದವರೆಗೆ, ಅಂದರೆ ಆಧುನಿಕ ವಿಜ್ಞಾನಕ್ಕೆ ಇಂದಿನ ರೂಪ ಕೊಟ್ಟವರಲ್ಲಿ ಮೊದಲಿಗರೆನ್ನಬಹುದಾದ ಗೆಲಿಲಿಯೊ, ನ್ಯೂಟನ್ ಮೊದಲಾದವರ ಸಂಶೋಧನೆಗಳ ಫಲವಾಗಿ ವಿಜ್ಞಾನ ಮನುಷ್ಯನ ಜ್ಞಾನಾನ್ವೇಷಣೆಯ ಒಂದು ವಿಶೇಷ ಶಾಖೆಯಾಗಿ ಬೆಳೆಯಲು ಪ್ರಾರಂಭಿಸಿದ ನೂರಿನ್ನೂರು ವರ್ಷಗಳವರೆಗೆ, ಜನಪ್ರಿಯ ವಿಜ್ಞಾನ ಎಂದು ಕರೆಯಬಹುದಾದ ಸಾಹಿತ್ಯ ಪ್ರಕಾರ ಜನ್ಮತಾಳಲಿಲ್ಲ. ಡಾರ್ವಿನ್ನನ ಅನುಯಾಯಿಗಳಲ್ಲಿ ಪ್ರಮುಖನಾದ ಥಾಮಸ್ ಹಕ್ಸ್ಲಿಯನ್ನು ಜನಪ್ರಿಯ ವಿಜ್ಞಾನದ ಆದ್ಯಪ್ರವರ್ತಕ ಎನ್ನಬಹುದು. ಡಾರ್ವಿನ್ನನ ವಿಕಸನವಾದದ ಪರಿಣಾಮವಾಗಿ ಕ್ರೈಸ್ತಮತಾವಲಂಬಿಗಳ ಕೆಲವು ಮುಖ್ಯ ನಂಬಿಕೆಗಳಿಗೆ ಪೆಟ್ಟು ಬಿದ್ದ ಕಾರಣ ಯುರೋಪ್ ದೇಶಗಳಲ್ಲಿ ವಿಕಾಸವಾದವನ್ನು ಕುರಿತು ದೊಡ್ಡ ವಿವಾದವೆದ್ದಿತು. ಆಗ ವಿಜ್ಞಾನದ ಒಳ ವ್ಯವಹಾರಗಳು ಹೊರಗಿನವರ ಗಮನ ಸೆಳೆದುವು. ವಿಜ್ಞಾನದ ಬಗ್ಗೆ ಸಾಮಾನ್ಯ ಜನತೆಗೆ ತಿಳಿವಳಿಕೆ ಕೊಡಬೇಕಾದ ಅಗತ್ಯ ವಿಜ್ಞಾನಿಗಳಿಗೆ ಮನವರಿಕೆಯಾಯಿತು. ಆ ಕೆಲಸವನ್ನು ಹಕ್ಸ್ಲಿ ಅತ್ಯಂತ ಸಮರ್ಥವಾಗಿ ನೆರವೇರಿಸಿದ. ವಿಜ್ಞಾನದ ಇತಿಹಾಸವನ್ನು ಸ್ಥೂಲವಾಗಿ ಅವಲೋಕಿಸಿದರೆ ವಿಜ್ಞಾನದ ಬಗ್ಗೆ ನಿರ್ಲಿಪ್ತ ಭಾವನೆ ತಾಳಿದ್ದ ಸಾಮಾನ್ಯ ಜನತೆಯನ್ನು ಹೊಡೆದೆಬ್ಬಿಸಿದ ಇಂಥ ಹಲವಾರು ನಿದರ್ಶನಗಳನ್ನು ಕಾಣಬಹುದು. ಐನ್‌ಸ್ಟೈನನ ಸಾಪೇಕ್ಷತಾವಾದದ ಪ್ರಕಟಣೆ, ಹಿರೋಷಿಮದಲ್ಲಿ ಸಿಡಿದ ಪರಮಾಣು ಬಾಂಬು, ರಷ್ಯನರು ಹಾರಿಬಿಟ್ಟ ಮೊದಲನೆಯ ಸ್ಪೂತ್ನಿಕ್ ಮುಂತಾದ - ಈ ಘಟನೆಗಳಿಂದ ವಿಜ್ಞಾನದ ಬಗ್ಗೆ ಜನರ ಆಸಕ್ತಿ ಹೆಚ್ಚಾದಂತೆ ಜನಪ್ರಿಯ ವಿಜ್ಞಾನ ಸಾಹಿತ್ಯ ಪಾಶ್ಚಾತ್ಯ ಭಾಷೆಗಳಲ್ಲಿ ವಿಪುಲವಾಗಿ ಬೆಳೆಯಿತು.

ಭಾರತದಲ್ಲಿ ಆಧುನಿಕ ವಿಜ್ಞಾನದ ಅಧ್ಯಯನಕ್ಕೆ ಆಸ್ಪದ ದೊರೆತದ್ದು ಬಹಳ ತಡವಾಗಿ. ಪಾಶ್ಚಾತ್ಯ ಶಿಕ್ಷಣ ಪದ್ಧತಿಯನ್ನು ಭಾರತಕ್ಕೆ ತಂದ ಬ್ರಿಟಿಷರು ನಮಗೆ ವಿಜ್ಞಾನ ಶಿಕ್ಷಣವನ್ನು ಒದಗಿಸುವ ಬಗ್ಗೆ ಆಸಕ್ತಿ ತೋರಲಿಲ್ಲ. ಅವರು ನೀಡಿದ ಶಿಕ್ಷಣದ ಉದ್ದೇಶ ತಮಗೆ ಬೇಕಾದ ಗುಮಾಸ್ತರನ್ನೂ ಆಡಳಿತಗಾರರನ್ನೂ ತಯಾರುಮಾಡುವುದಕ್ಕಷ್ಟೇ ಆಗಿತ್ತು. ಆದರೆ ನಮ್ಮ ದೇಶದ ನೈಸರ್ಗಿಕ ಸಂಪತ್ತಿನ ಪೂರ್ಣ ಪ್ರಯೋಜನ ಪಡೆಯುವುದಕ್ಕಾಗಿ ಆಧುನಿಕ ವಿಧಾನಗಳನ್ನು ಬಳಸಬೇಕಾಗಿ ಬಂದು, ಅದಕ್ಕೆ ಅವಶ್ಯವೆನಿಸುವ ತಾಂತ್ರಿಕರನ್ನೂ ಇಲ್ಲಿಯೇ ತಯಾರುಮಾಡಬೇಕಾಗಿ ಬಂದುದರಿಂದ ಅಲ್ಪ ಪ್ರಮಾಣದಲ್ಲಿಯಾದರೂ ವಿಜ್ಞಾನ ಶಿಕ್ಷಣವನ್ನು ಪ್ರಾರಂಭಿಸಬೇಕಾಯಿತು. ಹೀಗಾಗಿ ನಮ್ಮ ಜನತೆಗೆ ಆಧುನಿಕ ವಿಜ್ಞಾನದ ಸಂಪರ್ಕ ಒದಗಿಬಂದದ್ದು ಬಹು ನಿಧಾನವಾಗಿ ಮತ್ತು ಬಹು ಕಡಿಮೆ ಪ್ರಮಾಣದಲ್ಲಿ. ಆದ್ದರಿಂದ ಇತ್ತೀಚಿನವರೆಗೂ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ಜನತೆಯಿಂದ ಬೇಡಿಕೆ ಬರುವ ಸಂಭವವೇ ಇರಲಿಲ್ಲ. ಅಂಥ ಸಾಹಿತ್ಯವೇನಾದರೂ ಸೃಷ್ಟಿಯಾಗುವುದಿದ್ದರೆ ಅದರ ಪ್ರಯೋಜನವನ್ನು ಮನಗಂಡ ದೂರದೃಷ್ಟಿಯುಳ್ಳ ಹಲಕೆಲವು ತಜ್ಞರ ಪ್ರಯತ್ನದಿಂದ ಮಾತ್ರ ಸಾಧ್ಯವಾಗಬಹುದಿತ್ತು.

ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿದವರಲ್ಲಿ ಮೊದಲಿಗರೆನ್ನಬಹುದಾದ ಬೆಳ್ಳಾವೆ ವೆಂಕಟನಾರಣಪ್ಪ ಮತ್ತು ನಂಗಪುರಂ ವೆಂಕಟೇಶ ಅಯ್ಯಂಗಾರ್ಯರ ದೂರದರ್ಶಿತ್ವದ ಬಗ್ಗೆ ವಿಸ್ಮಯ ಉಂಟಾಗುವುದು ಸಹಜ.

1917ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾಗಿ ಕೇವಲ ಒಂದು ವರ್ಷವಾಗಿತ್ತು. ಮೈಸೂರು ರಾಜ್ಯದಲ್ಲಿದ್ದ ಒಂದೇ ಒಂದು ಕಾಲೇಜಾದ ಸೆಂಟ್ರಲ್ ಕಾಲೇಜಿನಲ್ಲಿ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿದ್ದರು. ವಿದ್ಯಾವಂತರೆನಿಸಿಕೊಂಡವರು ಕನ್ನಡದಲ್ಲಿ ಮಾತನಾಡಿದರೆ ಅಥವಾ ಬರೆದರೆ ಅವಮಾನವೆಂಬ ಭಾವನೆಯಿದ್ದ ಆ ಕಾಲದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರೂ ಮೈಸೂರು ಸರ್ಕಾರದ ಪವನಶಾಸ್ತ್ರ ವೀಕ್ಷಣಾಲಯದ ಮುಖ್ಯಸ್ಥರಾಗಿದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರೂ ವಿಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಜನತೆಯಲ್ಲಿ ಹರಡುವ ಆವಶ್ಯಕತೆಯನ್ನು ಮನಗಂಡರು. ಕರ್ನಾಟಕ ವಿಜ್ಞಾನ ಪ್ರಚಾರಿಣಿ ಸಮಿತಿ ಎಂಬ ಒಂದು ಸಂಸ್ಥೆಯನ್ನು ಕಟ್ಟಿ ಅದರ ವತಿಯಿಂದ ವಿಜ್ಞಾನ ಎಂಬ ಒಂದು ಮಾಸಪತ್ರಿಕೆಯನ್ನು ಹೊರಡಿಸುವ ಸಾಹಸ ಮಾಡಿದರು. ಅದರ ಸಂಪಾದಕತ್ವವನ್ನು ಅವರಿಬ್ಬರೂ ವಹಿಸಿಕೊಂಡರು. ಪತ್ರಿಕೆಯ ಧ್ಯೇಯೋದ್ದೇಶಗಳ ಬಗ್ಗೆ ಅವರಿಗೆ ಖಚಿತವಾದ ಮತ್ತು ಸ್ಪಷ್ಟವಾದ ಅಭಿಪ್ರಾಯವಿತ್ತೆಂಬುದು ಪತ್ರಿಕೆಯ ಮೊದಲ ಸಂಚಿಕೆಯಲ್ಲಿನ ಅವತರಣಿಕೆಯಿಂದ ವ್ಯಕ್ತವಾಗುತ್ತದೆ. ಈಗ ಸುಮಾರು ಅರವತ್ತು ಎಪ್ಪತ್ತು ವರ್ಷಗಳಿಂದಲೂ ಆಂಗ್ಲ ಭಾಷಾಭ್ಯಾಸ ನಮ್ಮ ದೇಶದಲ್ಲಿ ದಿನೇ ದಿನೇ ಅಭಿವೃದ್ಧಿಯಾಗುತ್ತಿದ್ದರೂ ವಿಜ್ಞಾನದ ವಿಷಯವಾಗಿ ಮಾತ್ರ ವಿಶೇಷ ಶ್ರದ್ಧೆ ತೋರಿಬಂದಿಲ್ಲ. ಆ ಭಾಗದಲ್ಲಿ ಈಗೀಗ ಕಣ್ಣು ಬಿಡುತ್ತಿದ್ದೇವೆ. ಜನ ಸಾಮಾನ್ಯರಲ್ಲೆಲ್ಲ ವಿಜ್ಞಾನವನ್ನು ಹರಡದ ಹೊರತು ದೇಶ ಅಭಿವೃದ್ಧಿ ಸ್ಥಿತಿಗೆ ಬರಲಾರದು. ಇದಕ್ಕಾಗಿ ಆಂಗ್ಲ ಭಾಷೆಯಲ್ಲಿ ವಿಜ್ಞಾನ ಪರಿಶ್ರಮವುಳ್ಳ ದೇಶಾಭಿಮಾನಿಗಳು ಸಾವಕಾಶ ಮಾಡದೆ ಈ ಕೆಲಸವನ್ನು ಮಾಡಲು ತೊಡಗಬೇಕೆಂದು ನಮ್ಮ ಪ್ರಾರ್ಥನೆ ಎಂದು ಅವರು ಕೇಳಿಕೊಂಡಿದ್ದಾರೆ.

ಅಂದಿನ ಪರಿಸ್ಥಿತಿಯಲ್ಲಿ ಅಂಥದೊಂದು ಪತ್ರಿಕೆಗೆ ಲೇಖನಗಳನ್ನೂ ಇತರ ಸಾಮಗ್ರಿಯನ್ನೂ ಒದಗಿಸುವುದು ಅತ್ಯಂತ ಪ್ರಯಾಸಕರ ವಾಗಿದ್ದಿರಬೇಕು. ಆದ್ದರಿಂದಲೇ ಅದರ ಜೀವಿತಕಾಲದಲ್ಲಿ ಹೊರಬಂದ ಎಲ್ಲ ಸಂಚಿಕೆಗಳಲ್ಲಿ ಪ್ರಕಟವಾದ ಒಟ್ಟು ಸುಮಾರು 40 ಲೇಖನಗಳಲ್ಲಿ ಅರ್ಧ ಭಾಗದಷ್ಟು ಲೇಖನಗಳಿಗೆ ವೆಂಕಟನಾರಣಪ್ಪನವರೇ ಲೇಖಕರು, ಇಲ್ಲವೇ ಸಹ ಲೇಖಕರು. ಉಳಿದವುಗಳಲ್ಲಿ ಆರೇಳು ಲೇಖನಗಳು ವೆಂಕಟೇಶ ಅಯ್ಯಂಗಾರ್ಯರು ಬರೆದವು. ಅವರಿಬ್ಬರಲ್ಲದೆ ಇತರ ಹತ್ತು ಹದಿನೈದು ಜನ ತಜ್ಞರನ್ನು ಅವರೇ ಪ್ರೇರೇಪಿಸಿ, ಅವರಿಂದಲೂ ಲೇಖನಗಳನ್ನು ಬರೆಸಿ ಪ್ರಕಟಸಿರುವುದು ಕಂಡುಬರುತ್ತದೆ. ವಿಜ್ಞಾನ ಲೇಖನಗಳಲ್ಲದೆ ವಿವಿಧ ವಿಜ್ಞಾನ ವಿಷಯ ಸಂಗ್ರಹ ಎಂಬ ಶೀರ್ಷಿಕೆಯಲ್ಲಿ ಹೊಸ ವೈಜ್ಞಾನಿಕ ಸಂಶೋಧನೆಗಳೇ ಮೊದಲಾದ ಸುದ್ದಿಗಳನ್ನು ನೇಚರ್, ಸೈಂಟಿಫಿಕ್ ಅಮೆರಿಕನ್ ಮುಂತಾದ ಪ್ರಸಿದ್ಧ ವಿಜ್ಞಾನ ಪತ್ರಿಕೆಗಳಿಂದ ಆಯ್ದು ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟಿಸುತ್ತಿದ್ದರು.

ಪತ್ರಿಕೆಗೆ ಸಾಮಗ್ರಿಯನ್ನೊದಗಿಸುವುದರಲ್ಲಿ ಎಷ್ಟೇ ಕಷ್ಟಗಳಿದ್ದರೂ ಅವುಗಳನ್ನೆದುರಿಸಿ ಮಾಸಪತ್ರಿಕೆಯನ್ನು ನಡೆಸಿಕೊಂಡು ಬರಲು ಅಗತ್ಯವಾದ ಶ್ರದ್ಧೆ ಉತ್ಸಾಹಗಳು ಸಂಪಾದಕರಲ್ಲಿದ್ದುವಾದರೂ ವಿಜ್ಞಾನಕ್ಕೇ ಮೀಸಲಾದ ಪತ್ರಿಕೆಯೊಂದು ಅಭಿವೃದ್ಧಿ ಹೊಂದಲು ಕಾಲವಿನ್ನೂ ಪಕ್ವವಾಗಿರಲಿಲ್ಲ. ಜನತೆಯಿಂದ ಅದಕ್ಕೆ ಆಸರೆ ದೊರೆಯಲಿಲ್ಲ. ಹನ್ನೆರಡು ಸಂಚಿಕೆಗಳ ಒಂದು ಸಂಪುಟ ಮುಗಿಸಿ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು.

ಕರ್ನಾಟಕ ವಿಜ್ಞಾನ ಪ್ರಚಾರಿಣಿ ಸಮಿತಿಯ ಚಟುವಟಿಕೆ ವಿಜ್ಞಾನ ಪತ್ರಿಕೆಯ ನಿರ್ವಹಣೆಗೆ ಮಾತ್ರ ಮೀಸಲಾಗಿರಲಿಲ್ಲ. ಸಮಿತಿಯ ಆಶ್ರಯದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ವಿಜ್ಞಾನ ವಿಷಯಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸ ಮಾಲೆಗಳು ನಡೆದುವೆಂದೂ ಅದಕ್ಕೆ ಮೈಸೂರು ಸರ್ಕಾರದ ನೆರವನ್ನು ಸಂಪಾದಿಸಿಕೊಳ್ಳಲಾಗಿತ್ತೆಂದೂ ಸಮಿತಿಯ ಗೌರವ ಕಾರ್ಯದರ್ಶಿಯಾಗಿದ್ದ ವೆಂಕಟನಾರಣಪ್ಪನವರೇ ನೀಡಿದ ಮೊದಲ ಉಪನ್ಯಾಸಕ್ಕೆ ಆಗಿನ ದಿವಾನರಾಗಿದ್ದ ಎಂ.ವಿಶ್ವೇಶ್ವರಯ್ಯನವರು ಬಂದು ಕನ್ನಡದಲ್ಲಿ ಉದ್ಘಾಟನ ಭಾಷಣ ಮಾಡಿದರೆಂದೂ ವಿಜ್ಞಾನದ ಸಂಚಿಕೆಯೊಂದರಿಂದ ತಿಳಿದುಬರುತ್ತದೆ.

ವಿಜ್ಞಾನ ಪ್ರಚಾರಿಣಿ ಸಮಿತಿ ಕೆಲಕಾಲದ ತರುವಾಯ ಅನಿವಾರ್ಯವಾಗಿ ತನ್ನ ಚಟುವಟಿಕೆಗಳನ್ನು ನಿಲ್ಲಿಸಿತ್ತೆಂದು ಕಾಣುತ್ತದೆ. ಆದರೆ

ಸಮಿತಿಯ ಪ್ರಮುಖ ಕಾರ್ಯಕರ್ತರಾಗಿದ್ದ ವೆಂಕಟನಾರಣಪ್ಪನವರೂ ವೆಂಕಟೇಶ ಅಯ್ಯಂಗಾರ್ಯರೂ ತಮ್ಮ ಗುರಿ ಸಾಧನೆಗಾಗಿ ಬೇರೆ ಮಾರ್ಗಗಳನ್ನವಲಂಬಿಸಿ ದುಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಮೈಸೂರು ಯುವರಾಜರೂ ಆಗಿದ್ದ ಕಂಠೀರವ ನರಸಿಂಹರಾಜ ಒಡೆಯರ್ ಅವರಿಂದ ಸಹಾಯದ್ರವ್ಯ ಪಡೆದು ಅವರ ಹೆಸರಿನಲ್ಲಿ ಒಂದು ವಿಜ್ಞಾನ ಗ್ರಂಥಮಾಲೆಯನ್ನು ಪ್ರಾರಂಭಿಸಿ, ಅದರ ಮೊದಲ ಕುಸುಮವಾಗಿ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರ ಜ್ಯೋತಿರ್ವಿನೋದಿನಿ ಎಂಬ ಪುಸ್ತಕವನ್ನು 1931ರಲ್ಲಿ ಹೊರಡಿಸಿದರು. ಇದು ಫ್ರೆಂಚ್ ವಿಜ್ಞಾನ ಲೇಖಕ ಕೆಮಿಲ್ ಫ್ಲಮೇರಿಯೋನ ಅಸ್ಟ್ರಾನಮಿ ಫಾರ್ ವಿಮೆನ್ ಎಂಬ ಪುಸ್ತಕದ ಇಂಗ್ಲಿಷ್ ಅನುವಾದದ ಪುನರನುವಾದ. ಇದಕ್ಕೆ ಬೆಳ್ಳಾವೆ ವೆಂಕಟನಾರಣಪ್ಪನವರು ಮುನ್ನುಡಿ ಬರೆದಿದ್ದಾರೆ. ಅಲ್ಲಿಂದ ಎಂಟು ವರ್ಷಗಳ ತರುವಾಯ (1939) ವಿಶ್ವವಿದ್ಯಾನಿಲಯದಿಂದ ನಿವೃತ್ತರಾದ ಹಲವು ವರ್ಷಗಳ ಮೇಲೆ, ವೆಂಕಟನಾರಣಪ್ಪನವರು ಜೀವವಿಜ್ಞಾನವೆಂಬ 350ಪುಟಗಳ ಪುಸ್ತಕವನ್ನು ಬರೆದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಪ್ರಕಟಿಸಿದರು. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯವನ್ನು ನಿರ್ಮಿಸುವುದರಲ್ಲಿ ಈ ಇಬ್ಬರು ಮಹನೀಯರು ತಳೆದ ಆಸ್ಥೆ, ಅದರ ಬೆಳೆವಣಿಗೆಯಲ್ಲಿ ಅವರು ವಹಿಸಿದ ಪಾತ್ರ ಬಹು ಹಿರಿದು ಮತ್ತು ಸ್ತುತ್ಯರ್ಹವಾದುದು.

ಕನ್ನಡ ವಿಜ್ಞಾನ ಸಾಹಿತ್ಯದ ಬೆಳೆವಣಿಗೆಯಲ್ಲಿ ಮಹತ್ತರ ಪಾತ್ರವಹಿಸಿದ ಇನ್ನೊಬ್ಬ ವ್ಯಕ್ತಿ ಶಿವರಾಮ ಕಾರಂತರು ಸ್ವತಃ ವಿಜ್ಞಾನಿಯಲ್ಲ, ಶಾಲಾ ಕಾಲೇಜುಗಳಲ್ಲಿ ಕ್ರಮಬದ್ಧವಾಗಿ ವಿಜ್ಞಾನವನ್ನು ವ್ಯಾಸಂಗ ಮಾಡಿದವರೂ ಅಲ್ಲ. ಆದರೆ ಅವರು ಆಸಕ್ತಿವಹಿಸದಿದ್ದ ವಿಷಯವಿಲ್ಲ. ಕಾರ್ಯಾಚರಣೆಗೆ ಕೈ ಹಾಕದ ಕ್ಷೇತ್ರವಿಲ್ಲ. ಬಹುಮುಖ ವ್ಯಕ್ತಿತ್ವದ ಈ ಮೇಧಾವಿ ಕನ್ನಡ ಜನತೆಯಲ್ಲಿ ತಾಯ್ನುಡಿಯ ಮೂಲಕವೇ ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸುವ ಅಗತ್ಯವನ್ನು ಕಂಡುಕೊಂಡರು. ಆ ಕಾರ್ಯವನ್ನು ಕೈಗೊಳ್ಳಲು ಅವಶ್ಯವಾದ ವಿಜ್ಞಾನ ಶಿಕ್ಷಣವನ್ನು ಪಡೆದಿರದಿದ್ದರೂ ಸ್ವಂತ ಶ್ರಮದಿಂದ ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಂಡರು. ಇಂಗ್ಲಿಷ್ ಭಾಷೆಯಲ್ಲಿ ಹೇರಳವಾಗಿ ದೊರೆಯುವ ಜನಪ್ರಿಯ ವಿಜ್ಞಾನ ಸಾಹಿತ್ಯವನ್ನು ಆಳವಾಗಿ ಮತ್ತು ವಿಸ್ತಾರವಾಗಿ ಅಭ್ಯಾಸಮಾಡಿ ತಾವು ಪಡೆದ ಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಕನ್ನಡಿಗರಿಗೆ ನೀಡುವ ಪ್ರಯತ್ನ ಮಾಡಿದರು. 1931ರಲ್ಲಿ ಅವರು ಹೊರತಂದ ಬಾಲ ಪ್ರಪಂಚ ಎಂಬ ಮೂರು ಸಂಪುಟಗಳ ವಿಶ್ವಕೋಶದಲ್ಲಿ ವಿಜ್ಞಾನವನ್ನು ಕುರಿತ ಲೇಖನಗಳಿಗೆ ಗಣನೀಯ ಸ್ಥಾನವನ್ನು ಕೊಟ್ಟಿದ್ದಾರೆ. ತರುವಾಯ 1959-64ರ ಅವಧಿಯಲ್ಲಿ ವಿಜ್ಞಾನಕ್ಕೆ ಮೀಸಲಾದ ನಾಲ್ಕು ಸಂಪುಟಗಳ ವಿಜ್ಞಾನ ಪ್ರಪಂಚ ಎಂಬ ವಿಜ್ಞಾನ ವಿಶ್ವಕೋಶವನ್ನು ಪ್ರಕಟಿಸಿದ್ದಾರೆ. ಅಲ್ಲದೆ ಒಳ್ಳೆಯ ಇಂಗ್ಲಿಷ್ ಪುಸ್ತಕಗಳನ್ನು ಆಯ್ದುಕಂಡು ಅನುವಾದ ಮಾಡಿ ಪ್ರಕಟಿಸಿದ್ದಾರೆ. ನುರಿತ ವಿಜ್ಞಾನಿಯ, ವಿಜ್ಞಾನ ಬೋಧಕನ ನಿಖರತೆ ನಿಷ್ಕೃಷ್ಟತೆಗಳು ಅವರ ಬರೆಹಗಳಲ್ಲಿ ಕಂಡುಬರದಿರಬಹುದು; ಆದರೆ ವಿಜ್ಞಾನವನ್ನು ಜನಪ್ರಿಯಗೊಳಿಸಬಲ್ಲ ಸಾಹಿತ್ಯವನ್ನು ಅವರಷ್ಟು ಅಗಾಧ ಪ್ರಮಾಣದಲ್ಲಿ ಸೃಷ್ಟಿಮಾಡಿ ಕನ್ನಡ ನಾಡಿನ ವಿವಿಧ ಪ್ರಾಂತ್ಯದ ಓದುಗರನ್ನು ತಲುಪಿಸಿರುವ ಬೇರೊಬ್ಬ ಲೇಖಕನಿಲ್ಲ.

ವಿಜ್ಞಾನ ಅತ್ಯಧಿಕ ವೇಗದಲ್ಲಿ ಬೆಳೆಯುತ್ತಿರುವ ಇಂದಿನ ಯುಗದಲ್ಲಿ ಹಿಂದೆ ಬೀಳದೆ ವಿಜ್ಞಾನದ ಪ್ರಗತಿಯನ್ನು ಗಮನದಲ್ಲಿರಿಸಿ ಕೊಂಡು ಅತ್ಯಾಧುನಿಕ ವಿಷಯಗಳೆಲ್ಲವನ್ನೂ ಕನ್ನಡ ಭಾಷೆಯ ಮೂಲಕ ನಿಷ್ಕೃಷ್ಟವಾಗಿ ತಿಳಿಯಹೇಳುವ ಪ್ರಯತ್ನ ಮಾಡಿ ಯಶಸ್ಸು ಗಳಿಸಿದ ಲೇಖಕರೆಂದರೆ ಆರ್.ಎಲ್.ನರಸಿಂಹಯ್ಯ. ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿದ್ದು ನಿವೃತ್ತರಾದ ಅನಂತರ ಬೆಂಗಳೂರಿನ ನ್ಯಾಷನಲ್ ಕಾಲೇಜು ಮತ್ತು ಆಚಾರ್ಯ ಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಇವರು ಕಾರ್ಯನಿರತ ವಿಜ್ಞಾನಿ ಮತ್ತು ವಿಜ್ಞಾನ ಬೋಧಕರಾಗಿದ್ದರು. ಶಕ್ತಿ, ಜಗತ್ತುಗಳ ಹುಟ್ಟು ಮತ್ತು ಸಾವು, ನಕ್ಷತ್ರ ದರ್ಶನ ಮುಂತಾದ ಉತ್ತಮ ಗ್ರಂಥಗಳನ್ನು ರಚಿಸಿದರು. ಎರಡು ಒಳ್ಳೆಯ ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಅನುವಾದಿಸಿದರು. ಪ್ರಬುದ್ಧ ಕರ್ಣಾಟಕದಲ್ಲಿಯೂ ವಿವಿಧ ದಿನಪತ್ರಿಕೆ ವಾರಪತ್ರಿಕೆಗಳಲ್ಲಿಯೂ ನಲವತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದರು. ನರಸಿಂಹಯ್ಯನವರ ವಿಷಯ ನಿರೂಪಣೆ ನಿಖರ; ಭಾಷೆ ಮತ್ತು ಶೈಲಿ ಬಿಗಿ. ಪಾರಿಭಾಷಿಕ ಶಬ್ದಗಳ ವಿಷಯದಲ್ಲಿ ಇವರು ಒಂದು ನಿರ್ದಿಷ್ಟ ನಿಲುವನ್ನು ತಳೆದಿದ್ದರು. ಪದಾರ್ಥಗಳು, ಸಲಕರಣೆಗಳು ಮುಂತಾದವುಗಳ ಹೆಸರುಗಳನ್ನು ಇಂಗ್ಲಿಷ್ ಭಾಷೆಯಿಂದ ಎರವಲು ಪಡೆಯುವುದು ಮತ್ತು ತತ್ತ್ವನಿಯಮ, ಪರಿಣಾಮಗಳಿಗೆ ಸಂಬಂಧಿಸಿದ ಶಬ್ದಗಳಿಗೆ ಸಮಾನ ಪದಗಳನ್ನು ಸಂಸ್ಕೃತದ ಸಹಾಯದಿಂದ ಕನ್ನಡದಲ್ಲಿ ಟಂಕಿಸುವುದು ಸರಿಯಾದ ಮಾರ್ಗವೆಂಬ ಇವರ ಅಭಿಪ್ರಾಯಕ್ಕೆ ಅನುಸಾರವಾಗಿ ಅತ್ಯಂತ ಔಚಿತ್ಯಪೂರ್ಣವಾದ ಪದಗಳನ್ನು ಸೃಷ್ಟಿಮಾಡಿ ಇವರು ತಮ್ಮ ಬರೆವಣಿಗೆಯಲ್ಲಿ ಬಳಸುತ್ತಿದ್ದರು. ಆದರೆ ಅವು ಸಾಕಷ್ಟು ಚಲಾವಣೆಗೆ ಬರಲಿಲ್ಲವಾದ್ದರಿಂದ ಇವರ ಬರೆವಣಿಗೆ ಕೆಲವು ವೇಳೆ ಸ್ವಲ್ಪ ಭಾರವಾಗಿ ಕಾಣಿಸುತ್ತಿದ್ದುದ್ದು ನಿಜ. ಆದರೆ ಇವರು ಮಾಡುತ್ತಿದ್ದ ಉಪನ್ಯಾಸಗಳು ಅತ್ಯಂತ ಜನಾಕರ್ಷಣೀಯವಾಗಿದ್ದುವು.

ಜನಪ್ರಿಯ ವಿಜ್ಞಾನ ಸಾಹಿತ್ಯದ ಬೆಳೆವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಂಘಸಂಸ್ಥೆಗಳಲ್ಲಿ ಮೈಸೂರು ವಿಶ್ವವಿದ್ಯಾಯನಿಲಯವನ್ನೂ ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಆಶ್ರಯದಲ್ಲಿ ಜನ್ಮವೆತ್ತಿ (1919) ಈಗ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ಪ್ರಬುದ್ಧ ಕರ್ಣಾಟಕ ಪತ್ರಿಕೆಯನ್ನೂ ಮೊದಲು ಹೆಸರಿಸಬೇಕು.

ಬಹುಶಃ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಮೊತ್ತಮೊದಲ ಕನ್ನಡ ವಿಜ್ಞಾನ ಗ್ರಂಥವೆಂದರೆ 1924ರಲ್ಲಿ ಪ್ರಕಟವಾದ ಎಸ್.ಎನ್.ನರಸಿಂಹಯ್ಯನವರ ಖಗೋಳಶಾಸ್ತ್ರ. ಕಾಲಕಾಲದ ಮೇಲೆ ವಿಶ್ವವಿದ್ಯಾನಿಲಯದ ಪ್ರಕಟಣ ಶಾಖೆಯ ಚಟುವಟಿಕೆಗಳು ಬೆಳೆದು ವಿವಿಧ ಗ್ರಂಥಮಾಲೆಗಳಿಗೆ ಸೇರಿದಂತೆ ಅನೇಕ ವಿಜ್ಞಾನ ಪುಸ್ತಕಗಳು ಬೆಳಕು ಕಂಡಿವೆ. ಈ ಗ್ರಂಥಮಾಲೆಗಳ ಪೈಕಿ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ನಡೆಸಿರುವ ಕೆಲಸ ಗಮನಾರ್ಹವಾದುದು. ಜಿ.ಹನುಮಂತರಾಯರ ನೇತೃತ್ವದಲ್ಲಿ ರೂಪುಗೊಂಡ ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘ ಗ್ರಾಮಾಂತರ ಪ್ರದೇಶಗಳಲ್ಲಿ ಸಂಘದ ಸದಸ್ಯರಿಂದ ಉಪನ್ಯಾಸಗಳನ್ನು ನಡೆಸುವುದು, ತರುವಾಯ ಈ ಉಪನ್ಯಾಸಗಳ ಸಾರಾಂಶವನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸುವುದು ಈ ಕಾರ್ಯವನ್ನು ನಡೆಸುತ್ತಿತ್ತು. ಈ ಕೆಲಸಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗವೆಂಬ ಒಂದು ಸಂಸ್ಥೆಯನ್ನೇ ಸ್ಥಾಪಿಸಿದೆ. ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಕಟವಾಗಿರುವ ವಿಜ್ಞಾನ ಪುಸ್ತಕಗಳು ಅತ್ಯಂತ ಜನಪ್ರಿಯತೆಯನ್ನು ಗಳಿಸಿವೆಯೆಂದು ಧಾರಾಳವಾಗಿ ಹೇಳಬಹುದು. ಅವುಗಳಲ್ಲಿ ಹಲವು ಮೂರು ನಾಲ್ಕು ಬಾರಿ ಅಚ್ಚಾಗಿ ಹೊರಬಿದ್ದಿರುವುದೂ ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಇದೇ ಮಾದರಿಯನ್ನನುಸರಿಸಿ ಕಿರುಹೊತ್ತಗೆಗಳನ್ನು ಹೊರತರುತ್ತಿರುವುದೂ ಅವುಗಳ ಜನಪ್ರಿಯತೆಗೆ ಸಾಕ್ಷಿ.

ಕನ್ನಡದಲ್ಲಿ ಉತ್ತಮ ಸಾಹಿತಿಗಳನ್ನು ಗುರುತಿಸಿ ಅಂಥ ಅನೇಕರಿಗೆ ಪ್ರೋತ್ಸಾಹ ನೀಡಿ ಅವರನ್ನು ಬೆಳಕಿಗೆ ತಂದ ಕೀರ್ತಿ ಪಡೆದಿರುವ ಪ್ರಬುದ್ಧ ಕರ್ಣಾಟಕ ಪತ್ರಿಕೆ ವಿಜ್ಞಾನ ಲೇಖಕರನ್ನು ತಯಾರಿಸುವುದರಲ್ಲಿಯೂ ಪ್ರಮುಖ ಪಾತ್ರ ವಹಿಸಿದೆ. ಪ್ರಾರಂಭದಲ್ಲಿ ಪ್ರಬುದ್ಧ ಕರ್ಣಾಟಕ ಕೇವಲ ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಯಾಗಿತ್ತು. ಆದರೆ ವಿಜ್ಞಾನ ಸಾಹಿತ್ಯ ಜೊತೆಯಲ್ಲಿಯೇ ಬೆಳೆಯದೆ ಹೋದಲ್ಲಿ ಭಾಷೆಯ ಮತ್ತು ಸಾಹಿತ್ಯದ ಸರ್ವತೋಮುಖ ಪ್ರಗತಿ ಸಾಧ್ಯವಿಲ್ಲ ಎಂಬುದನ್ನು ಬಹು ಬೇಗನೆ ಈ ಪತ್ರಿಕೆ ಅರಿತುಕೊಂಡು 1923ರಲ್ಲಿಯೇ ಅಂದರೆ ಅದರ ಐದನೆಯ ಸಂಪುಟದ ಮೊದಲ ಸಂಚಿಕೆಯಲ್ಲಿಯೇ ವಿಜ್ಞಾನ ಲೇಖನಗಳಿಗೆ ಅವಕಾಶ ಕಲ್ಪಿಸಿಕೊಟ್ಟಿತು. ಅಲ್ಲಿಂದ ಮುಂದೆ ಕ್ರಮೇಣ ವಿಜ್ಞಾನ ಲೇಖನಗಳು ಹೆಚ್ಚು ಹೆಚ್ಚಾಗಿ ಬರಲು ಪ್ರಾರಂಭಿಸಿದುದರಿಂದ 1963ರ ವೇಳೆಗೆ ಪ್ರಬುದ್ಧ ಕರ್ಣಾಟಕ ಆರು ತಿಂಗಳಿಗೊಮ್ಮೆ ಒಂದು ವಿಜ್ಞಾನ ವಿಶೇಷಾಂಕವನ್ನು ಪ್ರಕಟಿಸಬೇಕಾಯಿತು. ಇದುವರೆಗೆ ಈ ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳ ಸಂಖ್ಯೆ ಸುಮಾರು 300ಕ್ಕೂ ಹೆಚ್ಚು. ಈ ಪತ್ರಿಕೆ ಹಲವಾರು ಹೊಸ ವಿಜ್ಞಾನ ಲೇಖಕರನ್ನು ಗುರುತಿಸಿ ಅವರಿಗೆ ಉತ್ತೇಜನ ನೀಡಿದೆ.

1969ರಲ್ಲಿ ಪ್ರಬುದ್ಧ ಕರ್ಣಾಟಕ ಅದರ ಚಿನ್ನದ ಹಬ್ಬವನ್ನಾಚರಿಸಿದ ಸಂದರ್ಭದಲ್ಲಿ ಹೊರತಂದ ಚಿನ್ನದ ಸಂಚಿಕೆಯ ವಿಜ್ಞಾನ ವಿಭಾಗ ಕನ್ನಡ ವಿಜ್ಞಾನ ಸಾಹಿತ್ಯದ ಬೆಳೆವಣಿಗೆಯ ಮಾರ್ಗದಲ್ಲಿ ಒಂದು ಪ್ರಮುಖ ಮೈಲುಗಲ್ಲು. 1600 ಪುಟಗಳ ಈ ಸಂಚಿಕೆ ಐವತ್ತೇಳು ಮಂದಿ ವಿಜ್ಞಾನ ಲೇಖಕರ ಸಹಕಾರದಿಂದ ರೂಪುಗೊಂಡಿತ್ತು. ವಿಜ್ಞಾನದ ಇತಿಹಾಸದ ಮುಖ್ಯ ಘಟ್ಟಗಳೆನ್ನಬಹುದಾದ ಮಹತ್ತರ ಸಂಶೋಧನೆಗಳನ್ನು ಮತ್ತು ಅವಕ್ಕೆ ಕಾರಣರಾದ ಮಹಾವಿಜ್ಞಾನಿಗಳನ್ನು ಕುರಿತ ಲೇಖನಗಳನ್ನು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಿವಿಧ ವಿಜ್ಞಾನ ವಿಭಾಗಗಳಲ್ಲಿ ಆಗಿರುವ ಪ್ರಗತಿಯ ಸಮೀಕ್ಷೆಗಳು, ಇಂದು ಬಹುಪಾಲು ವಿಜ್ಞಾನಿಗಳ ಆಸಕ್ತಿಯನ್ನು ಕೆರಳಿಸಿರುವ ಸಂಶೋಧನ ಕ್ಷೇತ್ರಗಳು, ಭಾರತದಲ್ಲಿ ವಿಜ್ಞಾನದ ಪ್ರಗತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಒಟ್ಟು ಐವತ್ತೇಳು ಲೇಖನಗಳಿಂದ ಕೂಡಿದ ಈ ದೊಡ್ಡ ಸಂಚಿಕೆ ಕನ್ನಡ ವಿಜ್ಞಾನ ಸಾಹಿತ್ಯ ಪ್ರಬುದ್ಧವಾಗಿದೆ ಎಂಬುದರ ಕುರುಹು. ಪ್ರಬುದ್ಧ ಕರ್ಣಾಟಕದ ಚಿನ್ನದ ಸಂಚಿಕೆಯ ಯಶಸ್ಸಿನಿಂದ ಪ್ರೇರಿತರಾಗಿ ಮೈಸೂರು ವಿಶ್ವವಿದ್ಯಾನಿಲಯ ವಿಜ್ಞಾನಕ್ಕೆ ಮೀಸಲಾದ ಪ್ರತ್ಯೇಕ ಪತ್ರಿಕೆ ವಿಜ್ಞಾನ ಕರ್ಣಾಟಕವನ್ನು ಪ್ರಾರಂಭಿಸಿತು (1969). ಇದು ನಿಯತಕಾಲಿಕವಾಗಿ ಪ್ರಕಟವಾಗುತ್ತಿದೆ. ನಾಲ್ಕು ದಶಕಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿ ನೋಡಿದರೆ ಈಗ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಗಾತ್ರದಲ್ಲಿ ಹಿರಿದಾಗಿ ಬೆಳೆದಿದೆ. ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಕಟವಾಗುತ್ತಿರುವ ವಿಜ್ಞಾನ ಕರ್ಣಾಟಕವಲ್ಲದೆ ದಕ್ಷಿಣ ಕನ್ನಡದ ಶ್ರೀನಿವಾಸ ನಗರದಿಂದ ವಿಜ್ಞಾನ ಸಂಘದವರು ವಿಜ್ಞಾನ ಲೋಕವೆಂಬ ಇನ್ನೊಂದು ಪತ್ರಿಕೆಯನ್ನು 1967 ಅಕ್ಟೋಬರದಿಂದ ಎರಡು ವರ್ಷಗಳ ಕಾಲ ತ್ರೈಮಾಸಿಕವಾಗಿಯೂ 1969ರ ನವೆಂಬರ್ ಅನಂತರ ಮಾಸಿಕವಾಗಿಯೂ ಪ್ರಕಟಿಸಿದ್ದಾರೆ. ವಿಜ್ಞಾನಕ್ಕೆ ಮೀಸಲಾದ ಖಾಸಗಿ ಪತ್ರಿಕೆಯೊಂದು ನಾಲ್ಕೈದು ವರ್ಷಗಳ ಕಾಲ ತ್ರೈಮಾಸಿಕವಾಗಿ ಜೀವಂತವಾಗಿ ಉಳಿದದ್ದು ಒಂದು ದೊಡ್ಡ ವಿಷಯ. ಸುಮಾರು 45 ವರ್ಷಗಳ ಕೆಳಗೆ ಬಿ.ವಿ.ಸುಬ್ಬರಾಯಪ್ಪನವರ ಸಂಪಾದಕತ್ವದಲ್ಲಿ ಪ್ರಾರಂಭವಾದ ವಿಜ್ಞಾನ ಯುಗ ಒಂದು ವರ್ಷ ತುಂಬುವುದರಲ್ಲಿ ಅಳಿದುಹೋದದ್ದನ್ನು ನೆನಸಿಕೊಂಡರೆ ವಾತಾವರಣ ವಿಶೇಷವಾಗಿ ಬದಲಾಯಿಸಿರುವುದು ಸ್ಪಷ್ಟವಾಗುತ್ತದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ವಿಜ್ಞಾನ ಸಂಗಾತಿ ಎಂಬ ತ್ರೈಮಾಸಿಕ ಪ್ರಕಟವಾಗುತ್ತಿದೆ. ವಿಜ್ಞಾನಕ್ಕೆ ಮೀಸಲಾದ ಇನ್ನೊಂದು ಪತ್ರಿಕೆ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದವರು ಪ್ರಕಟಿಸುತ್ತಿರುವ ಆಹಾರ ವಿಜ್ಞಾನ. ಈ ಪತ್ರಿಕೆಗಳಲ್ಲದೆ ವಾರಪತ್ರಿಕೆಗಳು, ಮಾಸಿಕಗಳು ಮತ್ತು ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳು ಸಾಮಾನ್ಯವಾಗಿ ಪ್ರತಿಯೊಂದು ಸಂಚಿಕೆಯಲ್ಲೂ ವಿಜ್ಞಾನ ಲೇಖನಗಳನ್ನು ಪ್ರಕಟಿಸುತ್ತಿರುವುದನ್ನು ಕಾಣಬಹುದು.

ಇದೆಲ್ಲದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ವಿಜ್ಞಾನ ಜನಜೀವನಕ್ಕೆ ಸಂಬಂಧವಿಲ್ಲದ, ತಜ್ಞರಿಗೆ ಮಾತ್ರ ಸಂಬಂಧಪಟ್ಟ ಪ್ರತ್ಯೇಕ ವಿಷಯವೆಂಬ ಭಾವನೆ ಕ್ರಮೇಣ ಕಡಿಮೆಯಾಗುತ್ತಿದೆ. ವಿಜ್ಞಾನದಲ್ಲಿ ಪರಿಶ್ರಮ ಉಳ್ಳವರು ಕನ್ನಡದಲ್ಲಿ ಬರೆಯಲು ಮುಂದೆ ಬರುತ್ತಿದ್ದಾರೆ. ಆದರೆ ಗಾತ್ರದಲ್ಲಿ ಬೆಳೆಯುತ್ತಿರುವ ಈ ಸಾಹಿತ್ಯ ಗುಣದಲ್ಲಿಯೂ ಅದೇ ಪ್ರಮಾಣದಲ್ಲಿ ಬೆಳೆಯುತ್ತಿಲ್ಲವೆಂಬ ದೂರೂ ಕೇಳಿಬರುತ್ತಿದೆ. ಈಗ ಇದರಲ್ಲಿ ಹೆಚ್ಚಿನ ಸತ್ಯಾಂಶವಿಲ್ಲ. ಕನ್ನಡ ವಿಜ್ಞಾನ ಸಾಹಿತ್ಯ ನಿರ್ಮಾಣ ಅರ್ಥಪೂರ್ಣವಾದ ದಿಕ್ಕಿನಲ್ಲಿ ಸಾಗಿದೆ. (ಎ.ಕೆ.ಬಿ.)

**ಕನ್ನಡದಲ್ಲಿ ವಿಡಂಬನ ಸಾಹಿತ್ಯ :** ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿಡಂಬನಕ್ಕೇನೂ ಕೊರತೆಯಿಲ್ಲ. ಆದರೆ ವಿಡಂಬನವೆಂಬ ಸಾಹಿತ್ಯಪ್ರಕಾರ ಮೈ ತಳೆದು ಬೆಳೆದದ್ದು ಇಪ್ಪತ್ತನೆಯ ಶತಮಾನದಲ್ಲೇ. ಈ ಪ್ರಕಾರಕ್ಕೇ ಅಷ್ಟಾಗಿ ಪ್ರಾಮುಖ್ಯವಿಲ್ಲದಿದ್ದ ಹಿಂದಿನ ಕಾಲದಲ್ಲಿ ವಿಡಂಬನವನ್ನೆ ಮುಖ್ಯೋದ್ದೇಶವಾಗಿ ಕೈಕೊಂಡು ಕೃತಿರಚನೆ ಮಾಡಿದ ಕವಿಯಂತೂ ಯಾರೂ ಇಲ್ಲ. ಶೃಂಗಾರ, ವೀರ, ಕರುಣಾದಿ ರಸಗಳ ಮೇಲೆ ಕಣ್ಣಿಟ್ಟ ಕವಿಗಳು ಆಗಾಗ್ಗೆ ಶೃಂಗಾರಕ್ಕೊ, ವೀರಕ್ಕೊ, ಕರುಣಕ್ಕೊ ಹೆಚ್ಚಿನ ಪ್ರಾಧಾನ್ಯ ಕೊಟ್ಟದ್ದುಂಟು. ವಿಡಂಬನ ಸಾಹಿತ್ಯವೆಂಬ ವಿಶಿಷ್ಟ ಪ್ರಕಾರವಂತೂ ಅವರ ಯೋಚನೆಯ ಪರಿಧಿಯೊಳಕ್ಕೆ ಬಂದೇ ಇರಲಿಲ್ಲ. ಮಾತು ಎಷ್ಟು ಸಹಜವೋ ಅಷ್ಟೇ ಸಹಜವಾಗಿ ಅದರೊಂದಿಗೆ ಅಂಟಿಕೊಂಡ ವಿಡಂಬನದ ಮೆಟ್ಟಿಲುಗಳನ್ನು ಎಣಿಸಿ ಪಟ್ಟಿಮಾಡಲು ಯಾರೂ ಪ್ರಯತ್ನಿಸಲಿಲ್ಲ. ಆದರೆ ಪಾತ್ರಾಪಾತ್ರಗಳ ನಡುವಣ ಕಟಕಿ, ನಿಂದೆ, ಮೂದಲೆ, ಅಪಹಾಸ್ಯ, ವಕ್ರೋಕ್ತಿ,ಪರಿಹಾಸ ಮುಂತಾದವಕ್ಕೂ ಸಮಾಜ ಅಥವಾ ಸನ್ನಿವೇಶಜನ್ಯವಾದ ಜುಗುಪ್ಸೆ, ವಿನೋದ, ಕ್ರೋಧ, ಅಸಮಾಧಾನಗಳನ್ನು ನಗೆಯ ಉಬ್ಬು ಕನ್ನಡಿಯಿಂದ ಕಂಡಾಗ ಧ್ವನಿಯುಕ್ತವಾದ ಸಾಹಿತ್ಯಕ್ಕೆ ಕನ್ನಡದಲ್ಲಿ ಕೊರತೆಯಿಲ್ಲ ಎನ್ನಬಹುದು. ಶಾಸನದಿಂದ ಸರ್ವಜ್ಞನ ವರೆಗೆ ಹಳೆಯ ಸಾಹಿತ್ಯದಲ್ಲಿ ಎಲ್ಲೆಲ್ಲೂ ವಿಡಂಬನದ ನೂರಾರು ಉದಾಹರಣೆಗಳು ದೊರಕುತ್ತವೆ. ತುರುಗೋಳು ಗಡಿಕಾಳಗಗಳಲ್ಲಿ ಜೀವ ತೆತ್ತವರನ್ನು ಗೌರವಿಸಿ ನೆಟ್ಟ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ವಿಡಂಬನದ ತವರುಗಳು. ಕಟ್ಟಿದ ಸಿಂಘಮನ್ ಕೆಟ್ಟೋದೇನಮಗೆನ್ದು ಬಿಟ್ಟವೋಲ್ ಕಲಿಗೆ ವಿಪರೀತಂಗಹಿತರ್ಕ್ಕಳ್ ಕೆಟ್ಟರ್ ಮೇಣ್ ಸತ್ತರ ವಿಚಾರಂ - ಎಂಬುದಾಗಿ ಕಲಿಯುಗವಿಪರೀತನಾದ ಕಪ್ಪೆ ಅರಭಟ್ಟನ ಪ್ರತಾಪವನ್ನು ಕುರಿತ ಬಾದಾಮಿ ಶಾಸನದಲ್ಲಿ (ಸು.700) ಅವನನ್ನು ಕೆಣಕುವವರ ಬಗ್ಗೆ ಅಪಹಾಸ್ಯವಿದೆ. ಇಂಥ ಎಷ್ಟೋ ಉದಾಹರಣೆಗಳನ್ನು ಶಾಸನಗಳಲ್ಲಿ ಕಾಣಬಹುದು. ಹಿಂದಿನ ಕಾಲದ ಪ್ರತಿಯೊಬ್ಬ ಕವಿಯೂ ಸಾಮಾನ್ಯವಾಗಿ ಮಾಡುತ್ತಿದ್ದ ಪ್ರಶಂಸೆ, ಅನ್ಯಕವಿನಿಂದೆಗಳು ಈ ಬಗೆಯ ವಿಡಂಬನಕ್ಕೆ ಸೂಕ್ತ ಉದಾಹರಣೆಗಳು. ಗೂಡಾರದ ಕವಿಯಂತಿರೆ ಮುಚ್ಚಿಪೋದ ಕವಿಯುಂ ಕವಿಯೇ ಎಂದೋ ಹಱಿಗವಿಗಳ ಕಬ್ಬಂಗಳ ಹೊಱಗಳಿಯಕ್ಕರದ ಹೊಲಿಗೆ, ಬಿರ್ಚಿದೊಡೆಲ್ಲಂ ಬಱಿತಾಱಗ ಬೀಱಗವೆತ್ತತತ್ತರವೆಕ್ಕಸಕ್ಕಮುಸ್ತವ್ಯಸ್ತಂ ಎಂದೋ ಅಪಹಾಸ್ಯ ಮಾಡಿದ್ದಾರೆ. ನೇರವಾಗಿ ಧಿಕ್ಕರಿಸುವುದೂ ಒಂದು ಮಾರ್ಗ. ಧರೆಯೊಳ್ ಮೇಣ್ ಪುಟ್ಟಿ ಪುಟ್ಟುತ್ತುರುರ್ವ್ವ ನರರ ಮೇಲುರ್ಬಿ ಕಬ್ಬಂಗಳಂ ಬಿತ್ತರಿಸುತ್ತುಂ ಸಪ್ರಯಾಸಂ ಕೆಲಕೆಲರಕಟಾ ಕಬ್ಬಿಗರ್ ಕೆಟ್ಟುಪೋದರ್ ಎಂಬ ಪಾರಮಾರ್ಥಿಕವಾದ ಮರುಕ ದೃಷ್ಟಿ ಮತ್ತೊಂದು ಮಾರ್ಗ.

ಒಬ್ಬ ಒಂದು ಒಳ್ಳೆಯ ಕೃತಿ ಬರೆದಾಗ ಇತರರು ಅವನ ಶೈಲಿಯನ್ನೋ ಕಥೆಯನ್ನೋ ಅನುಕರಿಸಿ ಬರೆಯತೊಡಗುತ್ತಿದ್ದುದೂ ವಿಡಂಬನೆಗೆ ತುತ್ತಾಗದಿರಲಿಲ್ಲ. ರಾಮಾಯಣಗಳು ಅತಿಯಾದಾಗ ಮಿಡಿದ ಕುಮಾರವ್ಯಾಸ ಕವಿಯ ಹಾಸ್ಯದ ಮೊನೆ ತೀಕ್ಷ್ಣವಾದದ್ದು. ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ, ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ ಎಂದು ಆತ ಬರೆದ. ಇದು ರಾಮಾಯಣಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಮಹಾಭಾರತವನ್ನು ಹೊತ್ತು ಮುಲುಗಾಡಿದ ಅಳಿಗವಿಗಳಿಗೂ ಅನ್ವಯಿಸುತ್ತದೆ.

ಕವಿ-ವಾಚಕ-ವಿಮರ್ಶಕರ ಸಂಬಂಧವನ್ನು ಕುರಿತಾದ ವಿಡಂಬನೆಗೂ ಹಳಗನ್ನಡ ಸಾಹಿತ್ಯದಲ್ಲಿ ಕೊರತೆಯಿಲ್ಲ. ಇರುಮರುಳೆ ಶುಷ್ಕ ವೈಯಾಕರಣಂಗಂ ಶುಷ್ಕ ತಾರ್ಕಿಕಂಗಂ ಬೆಳ್ಪಕ್ಕರಿಗಂಗಂ ವಿಷಯವೆ ಕಾವ್ಯರತ್ನಮತಿಚತುರಕವಿ-ಕದಂಬಕ ವಿಷಯಂ ಎನ್ನುತ್ತಾನೆ ಪಂಪ. ಆರಾರೇರರ್ ಶಾಸ್ತ್ರ ಶ್ರೀರೋಹಣಗಿರಿಯನಲ್ಲಿ ನವಕವಿತಾ ಚಿಂತಾರತ್ನಂ ದೊರೆಗುಮೇ ಮಾರಾರಿಯ ಕೃಪೆಯಿಲ್ಲದಂಗೆ ಧರಣೀ ತಳದೊಳ್ ಎಂಬುದು ಷಡಕ್ಷರಿಯ ಚಿರಂತನ ಪ್ರಶ್ನೆ. ಎನಿತನೊಱಲ್ದು ಪೇಟ್ಟಿ ಕವಿಯೇವನ್? ಅದಂ ಪೆಸರಿಟ್ಟು ಮೆಚ್ಚಬಲ್ಲವನನಱಸಲ್ಕೆವೇಟ್ಬುದು, ಕಟ್ಟಿಯುಮೇನೊ ಮಾಲೆಗಾಱನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ? ಎಂಬುದು ಜನ್ನನ ಅಳಲು. ಆದರೆ ಇದನ್ನರಿಯಲಾರದ ಅನೇಕರು ಎಲ್ಲ ಕಾಲಕ್ಕೂ ಇದ್ದಾರೆ. ಇಂಥವರನ್ನು ಅನೇಕ ಕವಿಗಳು ವಿಡಂಬಿಸಿದ್ದಾರೆ. ಕುಱಿಗಳೋಪಾದಿಯಲ್ಲಿ ಕಬ್ಬಿನ ಹೊಱಗಣೆಲೆಯನು ಮೇದಕ ಮೇಲುಕಿಱುವು ತಲ್ಪಸುಖಕ್ಕೆ ಸೋಲಬಾರದೆಂಬುದು ಚಾಮರಸನ ಚುಚ್ಚುನುಡಿ.

ಪ್ರಾಚೀನವಾದ ಕನ್ನಡ ಭಾಷೆಯ ಮೇಲೆ ಆದ ಸಂಸ್ಕೃತದ ಪ್ರಭಾವದಿಂದಾಗಿ ಕನ್ನಡದ ಶಬ್ದಭಂಡಾರ ಇನ್ನಷ್ಟು ಸಮೃದ್ಧವಾಗಿ ಬೆಳೆಯಿತೆಂಬುದು ನಿಜವಾದರೂ ಸಂಸ್ಕೃತದ ಬಗ್ಗೆ ಹಲವರು ತಳೆದ ಅತಿಯಾದ ಮೋಹವನ್ನೂ ಕನ್ನಡಕ್ಕಿಂತ ಸಂಸ್ಕೃತವೇ ಉತ್ತಮವಾದುದೆಂಬ ಅವರ ಮನೋಭಾವವನ್ನೂ ಅನೇಕ ಕವಿಗಳು ವಿಡಂಬನದ ಕತ್ತಿಯಿಂದ

ಕತ್ತರಿಸಲು ಯತ್ನಿಸಿದ್ದಾರೆ. ಪಟಿಗನ್ನಡದೆ ಪುದುಂಗೊಳೆ ಕೋೞಿಸಕ್ಕದಮಂ ತಗುಳ್ಚಿ ಜಾಣ್ ಕಿಡೆ ಮುತ್ತುಂ ಮೆಣಸುಂಗೋದಂತಿರೆ ಪೇೞ್ವೞಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ ಎಂಬುದು ಈ ಬಗ್ಗೆ ಕವಿಯ ಉದ್ಗಾರ. ಸಂಸ್ಕೃತದಲ್ಲಿ ಹೇಳುವುದಾದರೆ ಸಂಸ್ಕೃತದಲ್ಲೇ ಹೇಳಿ, ಶುದ್ಧ ಕನ್ನಡದಲ್ಲಿ ಸಂಸ್ಕೃತವನ್ನು ತರುವುದೇಕೆ? ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ಎಂಬ ನಯಸೇನನ ಮಾತಿನ ನಂಜು ಬಲು ತೀವ್ರ. ಆದರೂ ಇದು ಸಕ್ಕದದೊಂದು ಚೆಲ್ವು ಎಂದು ಸಂಸ್ಕೃತಕ್ಕೆ ಜೋತುಬಿದ್ದವರನೇಕರ ಮನೋಧರ್ಮವನ್ನು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿದ್ದ ಮುದ್ದಣ ಕವಿ ಮನೋರಮೆಯ ಬಾಯಲ್ಲಿ ವಿಡಂಬಿಸಿದ್ದಾನೆ. ಸಂಸ್ಕೃತ ಕನ್ನಡಗಳು ಪರಸ್ಪರ ಪೂರಕವಾಗಿ ಬೆರೆಯಬೇಕೆಂಬುದಾಗಿ ಆತ ತೀರ್ಪು ನುಡಿದಿದ್ದಾನೆ.

**ಪಂಪಯುಗ** : 10ನೆಯ ಶತಮಾನದಲ್ಲಿದ್ದ ಪಂಪನ ಆದಿಪುರಾಣವಾಗಲಿ, ವಿಕ್ರಮಾರ್ಜುನವಿಜಯವಾಗಲಿ ವಿಡಂಬನಕಾವ್ಯಗಳಲ್ಲ. ಆದರೂ ವಿಡಂಬನದ ಹಲವು ಪ್ರಸಂಗಗಳು ಈ ಕಾವ್ಯಗಳಲ್ಲಿ ಕಂಡುಬರುತ್ತವೆ. ಒಂದು ಪಾತ್ರ ಇನ್ನೊಂದು ಪಾತ್ರವನ್ನು ಕುರಿತಾಡುವ ವಿಡಂಬನವೇ ಇಲ್ಲಿ ಹೆಚ್ಚು. ರಾಜಸೂಯಯಾಗದಲ್ಲಿ ಕೃಷ್ಣನಿಗೆ ಅಗ್ರಪೂಜೆಯ ಮರ್ಯಾದೆಯೆಂಬುದು ತಿಳಿದಾಗ ಶಿಶುಪಾಲ ಗಳಪುವ ನುಡಿ ಒಂದು ಉದಾಹರಣೆ. ತನ್ನಂಥ ದನುಜ ಪುಟ್ಟದ್ದರಿಂದ ಕೃಷ್ಣನಿಗೆ ದನುಜಾಂತಕನೆಂಬ ಬಿರುದು ಲಭ್ಯವಾಯಿತೆಂದು ಆತ ಮೂದಲಿಸುತ್ತಾನೆ. ಕೃಷ್ಣ ಸಂಧಾನಕ್ಕೆ ಬಂದಿದ್ದಾಗ, ದುರ್ಯೋಧನನಿಗೆ ಆತ ಬುದ್ಧಿವಾದವನ್ನು ಹೇಳಿದಾಗ ದುರ್ಯೋಧನ ಕೊಡುವ 'ನಾವೆಲ್ಲರು ಒಂದೆ ಗರುಡಿಯೊಳ್ ಓದಿದ ಮಾನಸರು. ನೀನು ಸುಮ್ಮನೆ ಬಳಲಬೇಡ, ಇರದೆ ಅಡಿ ಎತ್ತು' ಎಂದ ಮಾತು ವ್ಯಂಗ್ಯಕ್ಕೆ ಸುಂದರವಾದ ಉದಾಹರಣೆಯಾಗಿದೆ. ಭೀಷ್ಮನಿಗೆ ಸೇನಾಧಿಪತ್ಯ ದೊರಕಿದ ಸಂದರ್ಭದಲ್ಲಿ ಕರ್ಣನನ್ನು ಹೀನಕುಲಜನೆಂದು ದ್ರೋಣಾಚಾರ್ಯ ಹೇಳಿದಾಗ ಕರ್ಣ ನೀಡುವ ಉತ್ತರ ಸಮಾಜ ವಿಡಂಬನಕ್ಕೊಂದು ಉದಾಹರಣೆ. ಕುಲಮನೆ ಮುನ್ನಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂತು ಮಾರ್ಮಲೆವನನಟ್ಟಿ ತಿಂಬುವೆ, ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಂ ಅಭಿಮಾನಂ ಕುಲಂ - ಎಂಬುದು ಕರ್ಣನ ಕಟಕಿ. ಇಲ್ಲಿ ಸಮಾಜದ ಕಟ್ಟಳೆಯ ಬಗ್ಗೆ ನಂಜುನಗೆಯಿದೆ. ಅಶ್ವತ್ಥಾಮನು ಕರ್ಣನನ್ನು ಬಯ್ದಾಗ ಕರ್ಣ ಅಶ್ವತ್ಥಾಮನನ್ನು ಕುರಿತು ಹೇಳುವ ನೆಟ್ಟನೆ ವಿಷಮೊಳ್ಳೆಗುಳ್ದೊಡಂ ಒಳ್ಳೆ ಒಳ್ಳೆಯೆ ಕಾಳಿಯನಾಗನಾಗದು ಎಂಬ ಮಾತಿನಲ್ಲಿ ಅಶ್ವತ್ಥಾಮನ ಶೌರ್ಯವನ್ನು ಕುರಿತ ವಿಡಂಬನೆ ಮೊನಚಾಗಿದೆ.

ರನ್ನನ ಗದಾಯುದ್ಧದಲ್ಲೂ ಕಟಕಿ ನಿಂದೆ ಅಪಹಾಸ್ಯ ಮೂದಲೆಗಳಿಗೆ ಕೊರತೆಯಿಲ್ಲ. ಇವಕ್ಕೆ ಕಾವು ಹೆಚ್ಚು. ಮೊನೆ ಅಧಿಕ. ಎಲ್ಲವನ್ನೂ ಸೋತು, ವೈಶಂಪಾಯನ ಸರೋವರವನ್ನು ಹೊಕ್ಕು ಕುಳಿತ ದುರ್ಯೋಧನನನ್ನು ಅರಸಿ ಹೊರಟಿದ್ದಾರೆ ಕೃಷ್ಣ, ಭೀಮ. ಆ ಸಂದರ್ಭದಲ್ಲಿ ಬರುವ ಕುರುಧರೆಯೊಳ್ ಕುರುಪತಿಯನಱಿಸಿದಂ ಪವನಸುತಂ, ಇದೊಂದು ಲಜ್ಜೆಯಾಯ್ತು ಭರತಕುಲಕ್ಕೆ, ರಾಜ್ಯಲಕ್ಷ್ಮಿ ಪೇಸಿ ಬಿಸುಟ್ಟವನು ದುರ್ಯೋಧನ, ನೀರೊಳಗೆಸಡಿರ್ಕುಂ ಮೀನಿರ್ಕುಂ ಇರ್ಪರೆ ಗಂಡರ್? ಎಂಬ ಮಾತುಗಳು ಕೌರವನ ಕಡೆಗೆ ಎಸೆದ ಮೂದಲಿಕೆಯ ಕೂರಂಬುಗಳು. ಆದರೆ ಪಾಂಡವರಿಗೂ ಈ ಬಗೆಯ ಬಿರುದುಗಳನ್ನು ಪಡೆಯಲು ಅರ್ಹತೆಯಿಲ್ಲವೆ ನಾಟ್ಕಿಡಿಗಳೆದುಱುಬೇರಂ ಬಿಟ್ಕಿಯುಮಂ ತಿಂದು ವನದೊಳಗಿದ್ದವರು ಪಾಂಡವರು. ಇನ್ನು ಭೀಮಸೇನನ ಕೆಚ್ಚನ್ನೇನೆಂದು ಹೇಳೋಣ ಸಟ್ಟುಗಂ ಬಿಸುಟ್ಟು ಗದೆಗೊಂಡೊಟ್ಟೆಸುವಂಥದು! ದುರ್ಯೋಧನ, ಧರ್ಮಜಂ ಕೃಪೆಯಿಂದೊಳ್ಪಿತಂ ಪೇಳ್ದಪಂ - ಈಗಳುಂ ಕೇಳ್ದು ಬರ್ದುಕು - ಎಂದು ಉಪದೇಶ ಮಾಡಿದರೆ ಅವನಿಗೆ ಎಷ್ಟು ಉರಿಯಾಗಬೇಡ? ಕೊನೆಗೆ ಆತ ತೊಡೆಯೊಡೆದು ಬಿದ್ದ. ಇಡೆ ತೊಡೆಯನುಡಿದು ನೆಟ್ಟಗೆ ಕಡೆಯುತ್ತುಂ ಕರ್ಚೆ ನೆಲನಾನದನೆಂತುಂ ಬಿಡೆನ್ -ಎಂದು ಹಟದಿಂದ ಭೂಮಿಯನ್ನಪ್ಪಿದ್ದಾನೆ. ಆತ ಈ ಸಂಗರಾಧ್ವರದಲ್ಲಿ ಅರಸನೇ ದೀಕ್ಷಿತ, ಉಳಿದ ನಾಲ್ವರು ಋತ್ವಿಜರು, ಮುರಹರನೇ ಉಪದೇಶಕ, ದ್ರೌಪದಿಯೇ ಗೃಹೀತವ್ರತಾಚರಣವ್ಯಾಪಿಕೆ, ಪರಿಭವವೇ ಸಂಚಾರಕ, ಕೌರವೇಶ್ವರನೇ ಪಶು. ವಿದೂಷಕನ ಈ ನಂಜು ಕೊರಳನ್ನು ಕೊಯ್ಯುವಂಥದು. ಭೀಮ, ದುರ್ಯೋಧನರ ಗದಾಯುದ್ಧ ಸಂದರ್ಭದಲ್ಲಿ ಬರುವ ಮಾತುಗಳು ವ್ಯಂಗ್ಯಕ್ಕೆ ಹಾಸ್ಯಕ್ಕೆ ವಿಡಂಬನೆಗೆ ಸಾಕ್ಷಿಗಳಾಗಿವೆ.

**ನಯಸೇನ, ಬ್ರಹ್ಮಶಿವ, ವೃತ್ತವಿಲಾಸ** : ಒಂದು ಪಾತ್ರದ ಮೇಲೆ ಪ್ರಯೋಗಿಸುತ್ತಿದ್ದ ವಿಡಂಬನಕ್ಕೆ ಸಮಾಜವೀಕ್ಷಣೆಯ ಕಣ್ಣು ದೊರೆತದ್ದೂ ಅನ್ಯ ಮತಗಳನ್ನೆ ಗುರಿಯಾಗಿಟ್ಟುಕೊಂಡು ಅವುಗಳನ್ನು ಪ್ರಹರಿಸುವ ಅಭ್ಯಾಸ ಬೆಳೆದದ್ದೂ ಮುಂದಿನ ಜೈನಕವಿಗಳ ಕಾವ್ಯಗಳಲ್ಲಿ. ನಯಸೇನ, ಬ್ರಹ್ಮಶಿವ, ವೃತ್ತವಿಲಾಸರು ಇದರಲ್ಲಿ ಅಗ್ರಗಣ್ಯರು. ಅನ್ಯಮತಾನುಯಾಯಿಗಳು ಜೈನರ ಉಪದೇಶದಿಂದ ಅವರ ಧರ್ಮಕ್ಕೆ ಪರಿವರ್ತನೆಗೊಳ್ಳುವ ಕಥೆಗಳೇ ಹಲವಾರು:

ಕಡುಮೂರ್ಖರ್ ತಮ್ಮಿಚ್ಚೆಗೆ
ಪಿಡಿದುದೆ ಪಿರಿದೆಂಬರಣ್ಣ ಜಿನಮಾರ್ಗದೊಳೇಂ
ನಡೆಯಲ್ ಬರ್ಕುಮೆ ಬಾರದು
ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೇ

- ಎಂಬುದಾಗಿ ಜೈನಧರ್ಮದ ಹಿರಿಮೆಯನ್ನು ಇವು ಬೋಧಿಸುತ್ತವೆ.

ಕಲಿತನದಿಂದಂ ಲೋಗರ್
ಪುಲಿಯಂ ಪಿಡಿದೊಡಮದೇಂ ಬಿಡೆಂಬರ್ ತಾಮೊಂ
ದಿಲಿಯಂ ಪಿಡಿದೊಡಮದು ಪೆ
ರ್ಬುಲಿಯೆಂಬರ್ ದುರ್ಜನರ್ಗೆ ತಾನಿದು ಸಹಜಂ

- ಎಂಬುದು ಎಲ್ಲ ಕಾಲದಲ್ಲೂ ಕಾಣಬರುವ ಲೋಕರೂಢಿಯ ವಿಡಂಬನೆ.

ಕನ್ನಡಿಯಂ ತೋಱಿದೊಡತ್ಯುನ್ನತ
ಸಲ್ಲಕ್ಷಣಂಗೆ ಮುಳಿಸಾಗದು ಮ
ತ್ತೆನ್ನದೆ ಮೂಕೊಱೆಯಂಗಾ
ಕನ್ನಡಿಯಂ ತೋಱೆ ಬಡಿಗುಮಿರಿಗುಂ ಕೊಲ್ಗುಂ

- ಎಂಬ ಇನ್ನೊಂದು ಪದ್ಯದಲ್ಲಿ ವಿಡಂಬನಕ್ಕೆ ಒಳಗಾಗಿರುವ ಮಾನವ ಸ್ವಭಾವವಾದರೂ ಸಾರ್ವಕಾಲಿಕ, ಸಾರ್ವದೇಶಿಕ.

ಆಗಿನ ವೈದಿಕ ಮತದ ಅಂಧಾಚಾರವನ್ನು ಅಪಹಾಸ್ಯ ಮಾಡುವ ಪದ್ಯಗಳಿಗಂತೂ ಲೆಕ್ಕವೇ ಇಲ್ಲ. ಇದೊಂದು ಉದಾಹರಣೆ. ಹೋಮಮಂ ಮಾಡುವ ಬ್ರಾಹ್ಮಣಂ ನೊಣವು ಬೆನ್ನನೂಱಿದೊಡೆ ಸೈರಿಸಲಾಱದೆ ಬೆನ್ನಂ ಪೊಯ್ದುಕೊಳ್ವುದುಂ ಕೆಲದೊಳಿರ್ದವರೆಲ್ಲಂ ಕೊಡನ ತುಪ್ಪದೊಳ್ ಕೈಯನದ್ದಿ ತಮ್ಮ ಬೆನ್ಗಳಂ ಪೊಯ್ದುಕೊಂಡರ್.

ಅಂಧಾನುಕರಣೆಯ ಶುಷ್ಕತೆ ಅಪಾಯಗಳನ್ನು ತೆಗಳಿ ಮಾಡಬಹುದಾದ ಹಲವಾರು ಉಪನ್ಯಾಸಗಳಿಗಿಂತ ಇಂಥ ಒಂದು ವಿಡಂಬನದ ತುಣುಕು ಹೆಚ್ಚು ಮಾರ್ಮಿಕ, ಸಾರ್ಥಕ. ನಯಸೇನನ ಧರ್ಮಾಮೃತದಲ್ಲಿಯ ಹಲವಾರು ಕಥೆಗಳು ವಿಡಂಬನ ಸಾಹಿತ್ಯಕೃತಿಗಳೆಂದೇ ಹೇಳಬಹುದು. ವಿಡಂಬನದ ವಿವಿಧ ಮೊಗವಾಡಗಳಾದ ಬಿಸಿನಗೆ ಹುಸಿನಗೆ ನಂಜುನಗೆ ರಸನಗೆಗಳ ಮೆರವಣಿಗೆಯೇ ಇಲ್ಲಿ ನಡೆದಿದೆ.

ಇದೇ ಪೀಳಿಗೆಯ ಇನ್ನೊಬ್ಬ ಸಮರ್ಥನೆಂದರೆ ಬ್ರಹ್ಮಶಿವ. ಇವನ ಸಮಯ ಪರೀಕ್ಷೆಯಲ್ಲಿಯ ವಿಡಂಬನದ ಸರಳುಗಳು ಬಲು ತೀಕ್ಷ್ಣ. ಇವನ ದೃಷ್ಟಿಯಲ್ಲಿ ವಿಷ್ಣು ಸರ್ವೋತ್ತಮ ಎನ್ನುವುದು ಹಾಸ್ಯಾಸ್ಪದ. ಧರೆಗೊಡೆಯಂ ಚಕ್ರೇಶಂ ತಿರಿವನೆ ಬಲಿಯಲ್ಲಿ ಬೇಡಿ ಮೂರಡಿ ನೆಲನಂ? ವಿಶ್ವವನ್ನೇ ಹೊಟ್ಟೆಯಲ್ಲಿಟ್ಟುಕೊಂಡು ರಕ್ಷಿಸುವ ಆತ, ಅದರೊಳಗೇ ಇದ್ದ ರಾಕ್ಷಸರನ್ನೇಕೆ ಕೊಂದ? ತರ್ಕಬದ್ಧವೆನಿಸುವ ಈ ಪ್ರಶ್ನೆಗಳಿಗೆ ಏನುತ್ತರ? ಆದರೆ ಸ್ವ ಮತಗಳ ಬಗ್ಗೆ ಈ ಕವಿ ಮತ್ತು ಇಂಥ ಕವಿಗಳು ಪಕ್ಷಪಾತಿಗಳು. ಇವರ ತರ್ಕವನ್ನೇ ಇತರರೂ ಅನ್ವಯಿಸುವರೆಂಬುದನ್ನು ಇವರು ಮರೆಯುತ್ತಾರೆ. ಇದು ಹೇಗಾದರೂ ಇರಲಿ, ಅನ್ಯಮತ ವಿಡಂಬನಕ್ಕೆಳಸಿದ ಎಲ್ಲ ಮತಗಳ ಕವಿಗಳಿಗೂ ಅನ್ವಯಿಸುವ ಮಾತು ಇದು. ಜಗಮಂ ಸುಡುವೊಡೆ ರುದ್ರಂ ಜನದೊಳಗಿರ್ದಾತ್ಮ ಭಕ್ತರೆಲ್ಲರುಮಂ ಮೆಲ್ಲಗೆ ತೆಗೆದು ಬೇಱೆ ಪೊಱ ಗಿಕ್ಕುಮೋ ಮೇಣ್ ಕೂಡೆ ಸುಟ್ಟು ಕಳೆಗುಮೊಪೇೞಿಂ? ಎಂದು ಆತ

ಪ್ರಶ್ನೆ ಹಾಕಿದಾಗ ಇಂಥ ಕಲ್ಪನೆಯ ಚಿನ್ನಗಳಿಗೆ ತರ್ಕಮಣಿ ತಾಕಿ ಅವು ಕಬ್ಬಿಣದ ತುಂಡುಗಳಾಗಿ ಮಾರ್ಪಡುವುದಂತೂ ನಿಜ. ಈ ಚಮತ್ಕಾರದಿಂದ ಯಾರಿಗೆ ತಾನೆ ನಗೆ ಹೊಮ್ಮುವುದಿಲ್ಲ? ನಗೆಯ ಬಾಂಬೆಸೆದ ಜನರ ನಂಬಿಕೆಗಳ ಹೆಬ್ಬಂಡೆಗಳನ್ನು ಘಳಾರನೇ ಸೀಳಿಸುವುದು ವಿಡಂಬನ ಕೃತಿಗಳ ಉದ್ದೇಶ.

ಬಗೆವೊಡದೇನಾನುಂ ಬಾ
ಟ್ತಿಗಲ್ಲವೆನಿಪರಳಿಗೊಲ್ದು ಪೊಡೆಮಡುವವನಾ
ಚಿಗುರುಂ ಪೂವುಂ ಕಾಯುಂ
ಸೊಗಯಿಪ ಮಾವಿಂಗೆ ಪುಣಿಸೆಗೆಱಗಲ್ವೇಡಾ

ಏನು ಉತ್ತರ ಹೇಳಬೇಕು ಇದಕ್ಕೆ? ನಯಸೇನ ಬ್ರಹ್ಮಶಿವರಂತೆಯೇ ಅನ್ಯಮತಗಳ ಅಂಧಸಂಪ್ರದಾಯಗಳನ್ನು ಗೇಲಿಗೆ ಗುರಿಪಡಿಸಿದವನು ವೃತ್ತವಿಲಾಸ. ಮನೋವೇಗ ಪವನವೇಗರೆಂಬ ರಾಜಕುಮಾರರು ಪಾಟಲೀಪುತ್ರಕ್ಕೆ ಹೋಗಿ ಜೈನಧರ್ಮವನ್ನು ಮೆರೆದದ್ದು ಧರ್ಮಪರೀಕ್ಷೆಯ ಕಥೆ. ಇಲ್ಲಿಯ ವಿಡಂಬನದ ಚುರುಕು ಮುಟ್ಟಿನೋಡಿ ಕೊಳ್ಳುವಂಥದು. ಪುರಾಣಗಳೆಲ್ಲ ಸುಳ್ಳಿನ ಕಂತೆ. ದೇವರುಗಳಿಗೇನೂ ಶಕ್ತಿಯಿಲ್ಲ. ಕುರುಡು ಭಕ್ತಿಯಲ್ಲಿ ಫಲವಿಲ್ಲ- ಹೀಗೆಂದೆಲ್ಲ- ಸ್ಥಾಪಿಸಲು ಈತ ಅವಲಂಬಿಸಿರುವುದೂ ಗೇಲಿಯ ವಿಧಾನವೇ! ಮುಂದಿನದೊಂದು ಉದಾಹರಣೆ:

ಅಜ್ಞಾನಿಗಳ್ ಇಟ್ಟಿವರುಂಗಳಂ ಒಟ್ಟಿದ ಕಲ್ಗಳಂ ದೈವಮೆಂದು ಪೆಸರಿಟ್ಟು ಕೊಂಡಾಡಿ ವರಮೀಗುಮೆಂಬಾಸೆಯಿಂ ತಮ್ಮೊಳರ್ಥಮಂ ಬಱಿಸೊಳೆಗೈವರ್. ಆ ದೈವಂ ವರಮನೀವಂದಂ ಎಂತುಟೆಂದೊಡೆ, ಬಂಜೆಯ ಪೆರ್ಮಗಂ ಮೃಗತೃಷ್ಣಾಂಬುವಂ ಮಿಂದು, ಕಲ್ನಾರ ಸೀರೆಯನುಟ್ಟು ಆಗಸವೂದುಱುಂಬಿ, ಮೊಲದ ಕೋಡ ಬಿಲ್ವಿಡಿದು ಬರುತ್ತಿರ್ಪುದಂ ಪುಟ್ಟುಂಗುರುಡಂ ಅಂಧಕಾರದ ನಟ್ಟನಡುವಿರುಳೊಳ್ ಕಂಡನ್ ಎಂಬಂತೆ ನಿಷ್ಫಲಂ ಕ್ಲೇಶಂ ದುರ್ಗತಿ ದುಃಖವೇ ಅಕ್ಕುಂ. ಆ ದೈವಂ ಪೆಱರ್ಗೀವುದುಂ ಕಾವುದುಂ ಅಂತಿರ್ಕೆ. ತಮಗೆಂದು ಸಂಕಲ್ಪಿಸಿದ ವಸ್ತುವಂ ಕಾಯಲಾಱರ್.

ಈ ಮಾತಿನ ಚಮತ್ಕಾರ, ವಾದವೈಖರಿ, ಅಪಹಾಸ್ಯ - ಇವು ಅದ್ಭುತ. ಯಾವ ಮತಪ್ರಚಾರಕನೂ ಇದಕ್ಕಿಂತ ಚೆನ್ನಾಗಿ ಅನ್ಯಮತದ ವಿಡಂಬನೆ ಮಾಡಲಾರ.

ಈ ವಿಡಂಬನ ತ್ರಿಮೂರ್ತಿಗಳಿಗೂ ಮುಂಚೆ, ಎಂದರೆ ಸು.1031ರಲ್ಲಿ ಸಂಸ್ಕೃತದಿಂದ ಕನ್ನಡಕ್ಕೆ ಬಂದ ಗ್ರಂಥವೊಂದನ್ನು ಇಲ್ಲಿ ಉಲ್ಲೇಖಿಸುವುದು ಮುಖ್ಯವೆನಿಸುತ್ತದೆ. ಅದು ಪಂಚತಂತ್ರ, ಅನುವಾದಕ ದುರ್ಗಸಿಂಹ. ತನ್ನ ಮೂವರು ದಡ್ಡ ಮಕ್ಕಳಿಗೆ ವಿದ್ಯೆ ಕಲಿಸುವ ದಾರಿ ಕಾಣದೆ ನಿರಾಶೆಗೊಂಡಿದ್ದ ದೊರೆಯೊಬ್ಬನಿಗೆ ಸಿಕ್ಕ ಬ್ರಾಹ್ಮಣನು ಹೇಳಿದ ಪ್ರಾಣಿಕಥೆಗಳಿಂದ ಆ ಮಕ್ಕಳು ವಿವೇಕ ಪಡೆಯುತ್ತಾರೆ. ಅಡಕವಾಗಿ ನಾಟಕೀಯವಾಗಿ ಹಾಸ್ಯಬದ್ಧವಾಗಿರುವ ಈ ಕಥೆಗಳ ಪಾತ್ರಗಳಾದ ಪ್ರಾಣಿಗಳು, ಮಾನವರ ಸ್ವಭಾವಗಳ ಪ್ರತೀಕಗಳು. ವೇದ ಕೂಡ ಅವಕ್ಕೆ ಗೊತ್ತುಂಟು. ಪಂಚತಂತ್ರವೊಂದು ಅದ್ಭುತ ವಿಡಂಬನ ಗ್ರಂಥ. ಇದರ ಧ್ವನಿಶಕ್ತಿ ಅದ್ಭುತ ಪ್ರಚಂಡ ಪರಿಣಾಮಕಾರಿ.

**ವಚನಕಾರರು :** ಕನ್ನಡ ನಾಡಿನಲ್ಲಿ ಒಂದು ವ್ಯಾಪಕವಾದ ಧಾರ್ಮಿಕ ಸಾಮಾಜಿಕ ಕಾಂತ್ರಿಯನ್ನೇ ಪ್ರಾರಂಭಿಸಿದ ವೀರಶೈವ ವಚನಕಾರರು ಸಮಾಜ ವಿಮರ್ಶಕರು. ತಮ್ಮ ಸುತ್ತಮುತ್ತಣ ಜನರಲ್ಲಿದ್ದ ಹಲವೆಂಟು ಕುಂದುಗಳನ್ನೂ ಡಂಭಾಚಾರಗಳನ್ನೂ ಕಂಡು ಸಿಡಿಮಿಡಿಗೊಂಡು ವಿಂಡಬನದ ನೆರವಿನಿಂದ ಸಮಾಜವನ್ನು ಶುದ್ಧೀಕರಿಸಲು ಯತ್ನಿಸಿದರು. ವಚನಕಾರರಲ್ಲಿ ಹಿರಿಯರೆನಿಸಿಕೊಂಡವರಿಗಂತೂ ಪೂರ್ವಾಗ್ರಹವಿನಿತೂ ಇಲ್ಲ. ಅವರಿಗೆ ತಮ್ಮ ನಾಡವರಲ್ಲಿ ಪ್ರೀತಿ. ಅವರ ವಚನಗಳಲ್ಲಿ ಕಟಕಿ, ಮೂದಲೆ, ಅಪಹಾಸ್ಯಗಳಿಗಿಂತ ಪರಿಹಾಸ, ಚತುರೋಕ್ತಿಗಳಿಗೆ ಹೆಚ್ಚು ಮೌಲ್ಯ. ಆದರೆ ಸಾಂದರ್ಭಿಕವಾಗಿ ಮೂದಲೆ, ಕಟಕಿ, ನಿಂದೆಗಳಲ್ಲೂ ಅವರು ತೊಡಗದವರಲ್ಲ. ಬಸವಣ್ಣನವರಿಗಿಂತ ಮುಂಚೆ ಇದ್ದ ಸಕಲೇಶ ಮಾದರಸನ ಜನಮೆಚ್ಚೆ ಶುದ್ಧನಲ್ಲದೆ ಮನಮೆಚ್ಚೆ ಶುದ್ಧನಲ್ಲಯ್ಯಾ, ವೇಷ ಮೋಷದಲ್ಲಧಿಕನಲ್ಲದೆ ಭಾಷೆಯಲ್ಲಧಿಕನಲ್ಲಯ್ಯಾ, ನುಡಿಯ ಜಾಣನಲ್ಲದೆ ನಡೆಯ ಜಾಣನಲ್ಲಯ್ಯಾ, ಧನದೊರೆಯದಿರ್ದೊಡೆ ನಿಃಪ್ರಿಯನಲ್ಲದೆ ಧನ ದೊರೆತು ನಿಃಪ್ರಿಯನಲ್ಲಯ್ಯಾ, ಏಕಾಂತದ್ರೋಹಿ, ಗುಪ್ತಪಾತಕಿ, ಯುಕ್ತಿಹೀನರಿಗೆ ಸಕಲೇಶ್ವರದೇವ ಎಂತೊಲಿವ? ಎಂಬ ವಚನದಲ್ಲಿ ವಚನಕಾರರ ಸಮಾಜವೀಕ್ಷಣೆಯ ವಿಶಿಷ್ಟ ದೃಷ್ಟಿ ಆ ವೇಳೆಗಾಗಲೇ ಪ್ರಕಟವಾಗಿತ್ತು.

ಬಸವಣ್ಣನವರು ಕಲ್ಯಾಣದಲ್ಲಿ ನೆಲಸುವ ವೇಳೆಗೆ ಹಲವರು ಶಿವಶರಣರು ಅಲ್ಲಿಗೆ ಬಂದು ಸೇರಿದ್ದರು. ವೈರಾಗ್ಯ ಜ್ಞಾನನಿಧಿ ಅಲ್ಲಮ, ಯೋಗಿ ಚೆನ್ನಬಸವಣ್ಣ, ಕರ್ಮದ ನೆಲೆ ಸಿದ್ಧರಾಮ, ಶರಣೆ ಮಹಾದೇವಿಯಕ್ಕ- ಇಂಥವರೆಲ್ಲ ಒಂದೆಡೆ ಸೇರಿದಾಗ ನಿರ್ದಾಕ್ಷಿಣ್ಯವಾಗಿ ಟೀಕಿಸುವ ಹಾದಿ ಇವರದು. ಇವರ ಕ್ರೋಧ ಸಾತ್ವಿಕದಿಂದ ಕೂಡಿದ್ದು.

ಶಿವಶರಣರ ವಚನಗಳು ನಾನಾ ತೆರ. ತಮ್ಮ ಸಾಧನೆಯಲ್ಲಿ ಸಿದ್ಧಿ ದೊರಕದುದಕ್ಕಾಗಿ ದೇಹವನ್ನೇ ವಿಡಂಬಿಸುವ ವಚನಗಳದು ಒಂದು ಗುಂಪು. ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಆಚರಣೆಯಲ್ಲಿದ್ದ ಮೂಢ ನಂಬಿಕೆಗಳನ್ನೂ ಅನ್ಯಾಯಗಳನ್ನೂ ಬಯಲಿಗೆಳೆದವು ಇನ್ನೊಂದು ಗುಂಪು. ಈ ಜೀವನ ನಿತ್ಯವಲ್ಲ - ಎಂಬುದು ಮೂರನೆಯ ಗುಂಪು. ಐಹಿಕ ಸುಖೋದ್ದೇಶದಿಂದ ವೀರಶೈವಮತ ಸ್ವೀಕಾರಮಾಡಿ, ಆ ಮತಕ್ಕೇ ಕಳಂಕ ತರುತ್ತಿದ್ದವರನ್ನು ಉದ್ದೇಶಿಸಿ ಆಡಿದ ವಚನಗಳದು ನಾಲ್ಕನೆಯ ಗುಂಪು. ವೀರಶೈವಮತದ ಮುನ್ನಡೆಯನ್ನು ಕಂಡು ಅಸೂಯೆಗೊಂಡು ಅವನ್ನು ತೆಗಳಿದವರಿಗೆ ಉತ್ತರ ರೂಪವಾಗಿ ಬಂದವು ಎಷ್ಟೋ ವಚನಗಳು. ಮತ, ಧರ್ಮ, ಭಕ್ತಿ, ಸಾಧನೆ - ಮುಂತಾದವುಗಳಿಗೆ ಸಂಬಂಧಿಸಿದ ವಚನಗಳೂ ಅಸಂಖ್ಯಾತವಾಗುಂಟು. ಕೊನೆಯವನ್ನು ಬಿಟ್ಟು ಉಳಿದೆಲ್ಲ ವಚನಗಳಲ್ಲೂ ವಿಡಂಬನೆಯ ನಾನಾ ಪ್ರಕಾರಗಳನ್ನು ಕಾಣಬಹುದು.

ಭಕ್ತನಾದಾತ ದೇವರ ಒಲುಮೆಯನ್ನು ಗುರಿಯಾಗಿಟ್ಟುಕೊಂಡು ಸಾಧನೆ ಮಾಡಿದಾಗ ಅವನನ್ನು ದೇವರು ನಾನಾ ವಿಧವಾಗಿ ಪರೀಕ್ಷಿಸುತ್ತಾನೆ. ಎಲ್ಲದರಲ್ಲೂ ಗೆದ್ದ ಮೇಲೆಯೇ ದೇವರ ಅನುಗ್ರಹ. ಆದರೆ ಭಕ್ತನಿಗೆ ಅಸಹನೆ, ದುಗುಡ, ದೇವರ ಒಳ್ಳೆಯತನದಲ್ಲೇ ಸಂದೇಹ. ಆಗ ಹೊರಡುತ್ತದೆ ಅವನ ಬಾಯಿಂದ ವಿಡಂಬನೆ - ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟರೆ ನಿಮ್ಮ ನಗುವರಯ್ಯ.

ಆದರೆ ದೇವರ ಒಲುಮೆಗಾಗಿ ದೃಢಚಿತ್ತದಿಂದ ಸಾಧನೆ ಮುಂದುವರಿಸುವವರಾದರೂ ಎಷ್ಟು ಮಂದಿ? ಅನೇಕರದು ಬರಿಯ ತೋರಿಕೆಯ ಭಕ್ತಿ. ಏತ ತಲೆವಾಗಿದರೇನು, ಗುರುಭಕ್ತನಾಗಬಲ್ಲುದೇ? ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೇ? ಗಿಳಿಯೋದಿದರೇನು, ಲಿಂಗವೇದಿಯಾಗಬಲ್ಲುದೇ? ಈ ರೀತಿ ಆಡಂಬರದ ಭಕ್ತಿ ತೋರಿ, ಇಹವನ್ನೇ ಶಾಶ್ವತವೆಂದು ನಂಬಿ ಫಲವೇನು? ನೀರ ಬೊಬ್ಬುಳಿಗೆ ಕಬ್ಬುನದ ಕಟ್ಟ ಕೊಟ್ಟು ಸುರಕ್ಷಿತ ಮಾಡುವ ಭರ ಇದು. ಅದಕ್ಕೇ ಒಬ್ಬ ವಚನಕಾರ 'ಭಕ್ತಿ ಎಂಬುದು ತೋರುಂಬ ಲಾಭ' ಎಂದು ಕರೆದದ್ದು.

ಆಗಿನ ಕಾಲದ ಮತವಾದರೂ ಅಷ್ಟೇ. ಆಡುವುದೊಂದು, ಮಾಡುವುದೊಂದು. ಕಲ್ಲ ನಾಗರಕ್ಕೆ ಹಾಲನೆರೆಯುವುದು, ದಿಟದ ನಾಗರ ಕಂಡರೆ ಕೊಲ್ಲೆಂಬುದು, ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬೀದಿಯ ದೂಳವ ಹೊಯ್ದು ಬೊಬ್ಬಿಟ್ಟೆಲ್ಲರ ಕರೆಯುವುದು.

ಆದರೆ ವೀರಶೈವ ಧರ್ಮಾವಲಂಬಿಗಳೆಲ್ಲರೂ ಶಿವವಿಜ್ಞಾನಿಗಳಲ್ಲ. ಅವರಲ್ಲಿ ಜಳ್ಳೂ ಉಂಟು ಕಾಳೂ ಉಂಟು. ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದರೆ ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಹುದೊ.

ವಚನಕಾರರು ಎಲ್ಲರೂ ಒಂದೇ ತೆರನಲ್ಲ. ಒಬ್ಬೊಬ್ಬರ ವಚನ ಒಂದೊಂದು ರೀತಿಯದು. ಬಸವಣ್ಣನವರದು ತಿಳಿ ಮನಸ್ಸು. ಅವರಿಗೆ ಬೆಳ್ಳಗಿರುವುದೆಲ್ಲ ಹಾಲು. ಅಲ್ಲಮಪ್ರಭು ಬೇರೆ ತೆರ: ನಿರ್ದಾಕ್ಷಿಣ್ಯಪರ. ಲಿಂಗೈಕಶರಣರೆಂದು ತಿಳಿದಾಗ ಅವರಿಗೆ ಪ್ರಭುವಿನ ಪುರಸ್ಕಾರ. ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು ಲಿಂಗವಾರ್ತೆಯ ನುಡಿವರಯ್ಯ ಎಂದು ನೇರವಾಗಿ ಹೇಳುವುದವರ ಸ್ವಭಾವ, ಗುಹೇಶ್ವರಾ. ನೀನು ಕಲ್ಲಾದರೆ ನಾನೇನಪ್ಪೆನಯ್ಯಾ? ಎಂಬ ದಾಸಿಮಯ್ಯನ ವಚನದ ಧ್ವನಿ ಬಲು ಹರಿತ.

ಚೆನ್ನಬಸವಣ್ಣ ಮನೆವಾರ್ತೆಯ ಯಜಮಾನ, ಅಕ್ಕಮಹಾದೇವಿಯದು ಭಾವಾವೇಶ. ಅಂಬಿಗರ ಚೌಡಯ್ಯನದು ರಜೋದೃಷ್ಟಿ. ಇವರೆಲ್ಲ ಒಂದು ಕಡೆ ಸೇರಿ ಸಮಾಜದ ಮುಖಕ್ಕೆ ಉಬ್ಬುತಗ್ಗಿನ ಕನ್ನಡಿ ಹಿಡಿದು ಅದರ ವಕ್ರತೆಗಳನ್ನೆತ್ತಿ ತೋರಿದರು.

**ಹರಿಹರ ಯುಗ :** ಹರಿಹರ ವಿಡಂಬನಕ್ಕೂ ಕೈ ಎತ್ತಿದ ಕವಿ. ಇವನ ಹಲವು ರಗಳೆಗಳಲ್ಲಿ ಅನ್ಯಮತ ವಿಡಂಬನ ಧಾರಾಳವಾಗಿ ಹರಿದಿದೆ. ಜಯಸಿಂಹರಾಯನ ರಾಜಧಾನಿಯಲ್ಲಿದ್ದ ವಿಷ್ಣುಗೃಹ ಕೋಳಿಯ ಗೂಡಿನಂತೆ ಇತ್ತು, ಶಂಕರದಾಸಿಮಯ್ಯ ತನ್ನ ನೊಸಲ ಕಣ್ಣು ತೆರೆದೊಡನೆ ಬೆಂಕಿ ಘುಳು ಘುಳಿಸಿ ಸುಳಿದು, ಧಗಿಲ್‌ಭುಗಿಲೆಂದು ಭೋಂಕನೆ ನೆಗೆದು, ಮುಂಗಾಣಿಸಿ ಪರಿದು, ನೃಸಿಂಹ ಪ್ರತಿಮೆಯಂ ನೆರೆದುರುಪಿತು. ಆಗ ಜಯಸಿಂಹರಾಯನುಂ ವೈಷ್ಣವರುಂ ವಾದಿಗಳುಂ ಉರಿದು ಮೊಗಂಗೆಡೆ ಪರಸಮಯಿಗಳ್ಮೊರೆಯಿಟ್ಟು ಹಲ್ಲು ಕಿರಿದು ಹುಲ್ಲು ಕರ್ಚಿದರು. ಪದ್ಮಾವತಿಯ ಪಿತನಾದ ಜೈನ ಪಾರಿಷ ಪಂಡಿತಂ ಮೇರೆಗೆಟ್ಟ ಮತಿಹೀನಂ ಕೋಪಣದಿಂ ಬಂದ ಹೊಸ ಋಷಿಯರು.... ನೀಚರುಂ.... ಬರಿಯ ಭಂಡರುಂ ಲೋಚಿನ ತಾಲ್ಯರುಂ ಬೆತ್ತಲೆಯ ಭ್ರಷ್ಟರುಂ ಕುಂಚದ ಖೂಳರುಂ ತಟ್ಟುಗಳ ಅಜ್ಞಾನಿಗಳುಂ ನಾಋವಾಯ ನರಕಿಗಳುಂ ಸರ್ವಮಲ ಭಾಂಡರುಂ ಎಂದು ಮೊದಲಾಗಿ ಬರೆಯುತ್ತಾನೆ. ಹರಿಹರ ಹಿರಿಯ ಕವಿಯಾದರೂ ತನ್ನ ಧರ್ಮದ ಹಿರಿಮೆ ಸಾಧಿಸುವ ವಿಚಾರ ಬಂದಾಗ ಆತ ಹಿಂದೆ ಮುಂದೆ ನೋಡುವುದಿಲ್ಲ. ಅನ್ಯಮತಗಳ ನಿಂದೆಯನ್ನೇ ನೇಯುತ್ತಾನೆ. ಔಚಿತ್ಯಪ್ರಜ್ಞೆ ತಪ್ಪಿತೇನೋ ಎನಿಸಿದರೂ ಕಾವ್ಯಾವೇಶದ ದೃಷ್ಟಿಯಿಂದ ಆ ಕುಂದನ್ನು ಮರೆಯತಕ್ಕದ್ದು. ವಿಡಂಬನದ ಎಷ್ಟೊಂದು ಪ್ರಕಾರಗಳು ಎಷ್ಟೊಂದು ತೀವ್ರವಾಗಿ ಬಂದಿವೆಯೆಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಹರಿಹರನಿಂದೀಚೆಗೆ ಇತಿಹಾಸದಲ್ಲಿ ಬಹುದೂರ ಮುಂದೆ ಬಂದಿರುವ ಈ ಶತಮಾನದ ಜನಕ್ಕೆ ಆಗಿನ ವಾತಾವರಣದ ಇಣುಕು ನೋಟ ಪಡೆಯಲು ಇಂಥ ಪರಮತ ವಿಡಂಬನೆಗಳೂ ಒಂದು ಸಾಧನ. ಹರಿಹರನ ರಗಳೆಗಳ ಇನ್ನು ಕೆಲವು ಸಾಲುಗಳನ್ನೂ ನೋಡಬಹುದು. ಕರ್ಮಲತೆಯಂತಿದ್ದ ಜನ್ನಿವಾರಮಂ ಕಳೆದು ಬಿಸುಟು, ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪಱಿದು ಬಿಸುಟು, ನವ್ಯ ದುಕೂಲಮಂ ತೆಗೆದುಟ್ಟು, ಬಸವಣ್ಣನವರು ಬಾಗೇವಾಡಿಯಿಂದ ಕಪ್ಪಡಿಸಂಗಮಕ್ಕೆ ಹೋದರು. ಬಿಜ್ಜಳನ ಗುರುಗಳು ಕಾಗೆಗಳಂತಱಚಿ, ಗೂಗೆಗಳಂತೆ ಪಲುಂಬಿ, ಕತ್ತೆಗಳಂತೆ ತೊಟಲಿ, ಕೋಡಗಗಳಂತೆ ಪಲುಗಿರಿದು, ನರಿಗಳಂತೆ ಜಿನುಗಿ ಮಾತಾಡುವರು. ಶರಣರನ್ನು ನಿಂದಿಸುತ್ತಿದ್ದವರಂತೂ ಛಾಂದಸರು, ವೇದಜಡರು, ಬೈಟ್ಟಿಯ ಮರುಳ್ಗಳು, ಹೆಬ್ಬೇಳಿಗಳು, ದರ್ಭೆಯ ನಿರ್ಭಾಗ್ಯರು, ಹರಿಹರನ ಮುಗುಳದಲ್ಲೂ ಮಂತ್ರಶಕ್ತಿಯುಂಟು. ಅವನ ಶಬ್ದಗಳ ಆಯ್ಕೆ ಅಮೋಘ. ಹರಿಹರನ ಭರ್ತ್ಸನೆಗೆ ಈಡಾಗುವಂಥ ವ್ಯವಸ್ಥೆಯೊಂದಿದ್ದುದರಿಂದಲೆ ಈ ಎಲ್ಲ ವಾಕ್‌ಪ್ರವಾಹ, ನಿಂದೆ ಮೊದಲೆಗಳ ಚಂಡೆಮದ್ದಳೆ, ನಯಸೇನ 'ಬ್ರಹ್ಮಶಿವ' ವೃತ್ತವಿಲಾಸರ ಚತುರೋಕ್ತಿ ಇಲ್ಲಿ ಕಡಿಮೆಯಾದರೂ ಕಟಕಿಗೇನೂ ಕೊರತೆಯಿಲ್ಲ. ಚತುರತೆಯ ಅರಕೆಯನ್ನು ಇವನ ಆವೇಶ ಭರ್ತಿ ಮಾಡುತ್ತದೆ.

ಷಟ್ಪದಿಯ ಪಿತ ರಾಘವಾಂಕನ ಸೋಮನಾಥ ಚರಿತ್ರೆಯಲ್ಲಿ ಜೈನಮತ ಹೆಚ್ಚಾಗಿ ವಿಡಂಬನೆಗೆ ಈಡಾಗಿದೆ. ನರನೊಬ್ಬನ ಸತ್ಯವ್ರತವನ್ನು ಹೊಗಳಹೊರಟ ಹರಿಶ್ಚಂದ್ರಕಾವ್ಯದಲ್ಲಿ ಉದಾತ್ತ ವಿಡಂಬನೆಯನ್ನು ಎರಡು ಕಡೆಗಳಲ್ಲಿ ಕಾಣಬಹುದು. ವಸಿಷ್ಠ ವಿಶ್ವಾಮಿತ್ರರ ಸಂವಾದ ಮತ್ತು ಹರಿಶ್ಚಂದ್ರ ಗಾಯಕಿಯರ ಮಾತಿನ ಚಕಮಕಿಗಳು ಕಟಕಿ ಮೊದಲೆ ಅಪಹಾಸ್ಯ ಚತುರೋಕ್ತಿ ವಕ್ರನುಡಿಗಳ ಚಕ್ರಬಂಧವೆನಿಸುತ್ತದೆ.

ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಕಾಣುವುದು ನವುರಾದ ವಿಡಂಬನೆ, ಕವಿಯದು ವ್ಯಂಗ್ಯಾನುಭೂತಿ. ಈ ಕೃತಿ ಸತ್ತವರ ಕಥೆಯಲ್ಲ, ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲುಕುವವರ ಸೀಮೆಯ ಮಾತು ತಾನಲ್ಲ, ಹೊತ್ತು ಹೋಗದ ಪುಂಡರಾಲಿಪ ಮತ್ತಮತಿಗಳ ಗೋಷ್ಠಿಯಲ್ಲ. ಈ ಕೃತಿಯಲ್ಲಿ ಕಾಣುವುದು ಪಾರಮಾರ್ಥಿಕ ವಿಡಂಬನೆ, ಮಾನವ ದೇವತ್ವಕ್ಕಡರಲು ಅಡ್ಡವಾಗಿ ಬರುವ ಕೊಳೆಯನ್ನು ಕಳೆಯಲು ವಿಡಂಬನವೊಂದು ಮೃದುವಾದ ಪೊರಕೆ. ಮಾಯೆ ಅರಣ್ಯವನ್ನು ಹೊಕ್ಕಾಗ ತಪಸ್ವಿಗಳು ಆಕೆಯನ್ನು ಕಂಡು ತಮ್ಮ ಕಂತೆ ಕಚ್ಚಟಗಳನ್ನೂ ವಿಭೂತಿಯ ಬುಟ್ಟಿಗಳನ್ನೂ ಎತ್ತಿಕೊಂಡು ಎದ್ದೋಡಿದರು ಹುಲಿಗ್ದಂಡ ಹುಲ್ಲೆಗಳಂತೆ ದೆಸೆದೆಸೆಗೆ. ಅಲ್ಲಮಪ್ರಭು ಕಂಡ ಸಿದ್ಧರಾಮನದು ಮೂಢಭಕ್ತಿ, ದೇವರನ್ನು ತನ್ನೊಳಗೇ ಕಂಡುಕೊಳ್ಳುವ ಬದಲು, ಸಕಲ ಕಲ್ಲನು ಕಡಿದು ಕಲ್ಲಿಗೆ ಶಿಖರ ದೇಗುಲವೆಂದು ಮಾಡಿಸಿ ಅಲ್ಲಿ ದೇವರನ್ನು ಹುಡುಕುತ್ತಿದ್ದಾನೆ. ಅವನ ಆಗಮ ಯುಕುತಿಯೆಲ್ಲ ಪಾಷಾಣಕ್ಕೆ ಬಂದುದು. ಗೋರಕ್ಷನ ಕಥೆಯಲ್ಲಿ ಉದ್ದಕ್ಕೂ ಧರ್ಮನೀತಿಗಳೊಡನೆ ವಿಡಂಬನದ ಅಂತರ್ಗತ ಪ್ರವಾಹ ಹರಿದಿದೆ.

ಕುಮಾರವ್ಯಾಸನ ಭಾರತ ವಿಡಂಬನ ಕಾವ್ಯವಲ್ಲ. ಈತನದು ವಿಡಂಬನ ಸಾಹಿತ್ಯವೂ ಅಲ್ಲ. ಆದರೆ ಕೆಲವು ಕಡೆ ಕಥೆಯ ಹಂದರದ ಮೇಲೆ ವಿಡಂಬನದ ನಾನಾ ಬಗೆಯ ಬಳ್ಳಿಗಳನ್ನೇ ಈತ ಹಬ್ಬಿಸಿದ್ದಾನೆ. ಬೇಂದ್ರೆಯವರೆಂದಿರುವಂತೆ ಕಟಕಿ, ಬಿರುನುಡಿ, ಕಿರುನುಡಿ, ವ್ಯಂಗ್ಯ ಸರಸ, ವಕ್ರೋಕ್ತಿ, ಜಾಣ್ನುಡಿ, ಪರಿಹಾಸ- ಎಲ್ಲವೂ ಅವನ ಬತ್ತಳಿಕೆಯಲ್ಲಿವೆ. ಯುದ್ಧಭೀರುವನ್ನು ಯುದ್ಧವೀರನ ಸೋಗಿನಲ್ಲಿ ಕುಣಿಸಿರುವ ಉತ್ತರನ ಪಾತ್ರವೊಂದು ಉದಾಹರಣೆ. ಧನು ತನಗೆ ನೆಗಹಲ್ಕೆ ಕೃಷ್ಣಾಜಿನವೊ ಸಾಲಗ್ರಾಮದೇವರೊ ವಿನುತ ತುಳಸಿಯೊ ಕುಶವೊ ದರ್ಭೆಯೊ ಸಮಿಧೆಗಳ ಹೊರೆಯೋ- ಎಂದು ಮುಂತಾಗಿ ದ್ರೌಪದೀ ಸ್ವಯಂವರ ಕಾಲದಲ್ಲಿ ಬ್ರಾಹ್ಮಣ ವೇಷದ ಅರ್ಜುನನ ಬಗ್ಗೆ ಆಡಿಸಿರುವ ಮಾತು ಅಪಹಾಸ್ಯದ ಹುಚ್ಚುಹೊಳೆ. ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು - ಎಂದು ದ್ರೌಪದಿಯಾಡುವ ಮಾತು ಕಟಕಿಯ ಕೂರ್ಗಣೆ. ಹಿರಿಯರಿಲ್ಲದ ಸಭೆ ನೆರವಿಯದು ಸಭೆಯಲ್ಲ- ಎಂಬುದರ ಅರ್ಥ ಆ ಶಬ್ದಗಳಿಗೂ ಮೀರಿದ್ದು. ಕವಿತಾಗೌರವಕ್ಕೆ ಕುಂದಿಲ್ಲದಂತೆ ಅಲ್ಲಲ್ಲಿ ವಿಡಂಬನದ ಹರಳುಗಳನ್ನು ತನ್ನ ಮಹಾಭಾರತದ ಕುಂದಣದಲ್ಲಿಟ್ಟಿದ್ದಾನೆ ಕುಮಾರವ್ಯಾಸ.

**ದಾಸಯುಗ :** ಭಕ್ತಿಪ್ರಧಾನವಾದ ದಾಸಸಾಹಿತ್ಯದಲ್ಲಿ ವಿಡಂಬನಕ್ಕೇನೂ ಕೊರತೆಯಿಲ್ಲ. ವಚನ ಸಾಹಿತ್ಯದ ಮನೋಧರ್ಮವನ್ನೇ ಇಲ್ಲೂ ಕಾಣಬಹುದು. ಸಮಯದಲ್ಲಿ ಕೈಕೊಡುತ್ತಿದ್ದ ದೇವರನ್ನು ಕುರಿತು - ಆರು ಬದುಕಿದರಯ್ಯಾ ಹರಿ ನಿನ್ನ ನಂಬಿ ತೋರು ಈ ಜಗದೊಳಗೆ ಒಬ್ಬರನ್ನು ಕಾಣೆ ಎನ್ನುತ್ತಾರೆ ದಾಸರು. ದೇವರನ್ನು ಬಿಟ್ಟು ಮಾನವರ ಬಳಿಗೆ ಬಂದರೂ ಅವರಲ್ಲೂ ಹಲವೊಮ್ಮೆ ಹೃದಯದ ಅಭಾವ. ಭಾರತ ರಾಮಾಯಣ ಪಂಚರಾತ್ರಾಗಮ ಸಾರತತ್ವದ ಬಿಂದು ಒಳಗೆ ಬಿದ್ದೀತೆಂದು ಗಯ್ಯಾಳಿ ಮೂಳೀ ಕದವನಿಕ್ಕಿದಳಿದಕೊ, ಪದುಮನಾಭನಲಿ ಲೇಶಭಕುತಿಯಿಲ್ಲ ಉದರವೈರಾಗ್ಯವಿದು, ಮಡಿಮಡಿಮಡಿಯೆಂದು ಮೂರು ಮಾರು ಹಾರುತಿ ಮಡಿಯೆಲ್ಲಿ ಬಂತೆ ಬಿಕನಾಶಿ? ಶಿವೋಹಂ ಎಂದು ಕಣ್ಣು ಮುಚ್ಚಿ ಕೂತ ಬೂಟಕರನ್ನೂ ದಾಸರು ಬಿಟ್ಟಿಲ್ಲ. ಶಿವ ನೀ ಹೇಗಾದೊ? ಶಿವ ನೀನಾದರೆ ಶಿವನರ್ಧಾಂಗಿಗೆ ಧವನಾದೆಯಲ್ಲೊ ಅವಿವೇಕಿ ಮೂಢ ಎನ್ನುತ್ತಾರೆ.

**ರಾಮಧಾನ್ಯಚರಿತೆ :** ಕನಕದಾಸರ ರಾಮಧಾನ್ಯಚರಿತೆ ಒಂದು ವಿಡಂಬನ ಕಾವ್ಯ. ಇದರಲ್ಲಿ ರಾಗಿ ಬತ್ತಗಳ ನಡುವೆ ತಂತಮ್ಮ ಹಿರಿಮೆಗಳ ಬಗ್ಗೆ ನಡೆದ ವಾಗ್ವಾದ ಮನೋಜ್ಞವಾಗಿದೆ. ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ ಎಂದು ಬತ್ತದಿಂದ ರಾಗಿಯ ಬಗ್ಗೆ ತಿರಸ್ಕಾರ. ಕ್ಷಿತಿಯಮರ ರೂಪ ನಮನದಲಿ ಸುವ್ರತ ಸುಭೋಜನ ಪರಮ ಮಂತ್ರಾಕ್ಷತೆಗಳಲ್ಲಿ ......... ದೇವರಿಗತಿಶಯದ ನೈವೇದ್ಯ ತಾನಹೆನೆಂದು ಬತ್ತಕ್ಕೆ ಜಂಬ, ಹೆತ್ತ ಬಾಣಂತಿಯರು ರೋಗಿಗೆ ಪತ್ಯ ನೀನಹೆ; ಹೆಣದ ಬಾಯಿಗೆ ತುತ್ತು ನೀನಹೆ; ಎಳ್ಳು ದರ್ಭೆಗೆ ತೆತ್ತಿಗನು ನೀನಾದೆ ಎಂದು ರಾಗಿ ಅಕ್ಕಿಯನ್ನು ಹೀಯಾಳಿಸುತ್ತದೆ. ಶ್ರೀಮಂತರ ಮತ್ತು ಬಡವರ ನಡುವಿನ ಅಂತರದ ಚಿತ್ರ ಈ ಕಥೆಯಲ್ಲಿ ವಿಡಂಬನಾತ್ಮಕವಾಗಿ ಮೂಡಿಬಂದಿದೆ. ಬಿಂಕಗುಳಿಗಳ, ಮದಾಂಧರ ಮತ್ತು ಪಟ್ಟಭದ್ರ ಹಿತಾಸಕ್ತರ ಶಕ್ತರ ಮೂಗು ಕೆತ್ತಿ, ಅವರ ಓರೆಕೋರೆಗಳನ್ನು ತಿದ್ದಬೇಕೆಂಬುದೇ ಕವಿಯ ಪ್ರತಿಜ್ಞೆಯಾಗಿದೆ; ಜೊತೆಗೆ ಈ ಓರೆಕೋರೆಗಳು ಸಾಮಾನ್ಯರಿಗೆ ಗ್ರಹಿಕೆಯಾಗಿ ಅವರು ಎಚ್ಚೆತ್ತುಕೊಳ್ಳಬೇಕೆಂಬುದು ಅವನ ಆಶಯವಾಗಿದೆ. ಸತ್ಯಾಸತ್ಯಗಳ ನಡುವೆ ರಾಜಿಯ ಸೂತ್ರ ಸಲ್ಲದೆಂಬುದು ಕವಿಯ ದೃಢನಿಲುವಾಗಿದೆ. ಅವನ ಗ್ರಾಮೀಣ ಸ್ವಭಾವಕ್ಕೆ ಅವನ ರೂಕ್ಷ ಪ್ರತಿಜ್ಞೆಗೆ ಉಪಾಯ ಹುನ್ನಾರುಗಳಾಗಲೀ, ಮಂತ್ರ ತಂತ್ರಗಳಾಗಲೀ ಮರೆಮೋಸಗಳಾಗಲೀ ನುಣ್ಣನೆಯ ಬೆಣ್ಣೆ ಮಾತುಗಳಾಗಲೀ ಒಗ್ಗುವಂತಿಲ್ಲ. ಒರಟುತನ,

ನಿಷ್ಕಾಪಟ್ಯ, ತತ್ತ್ವನಿಷ್ಠೆ, ಶ್ರದ್ಧೋತ್ಸಾಹಗಳು ಅವನ ಪ್ರವೃತ್ತಿ ಜಾಯಮಾನಗಳಿಗೆ ಪೋಷಕವಾಗಿರುವ ದ್ರವ್ಯ ವಿಶೇಷಗಳು. ಆದ್ದರಿಂದ ಅವನ ವಿಡಂಬನೆಯಲ್ಲಿ ಕಹಿಯಿದೆ ವಿಷವಿಲ್ಲ. ಮೊನಚಿದೆ ನೋವಿಲ್ಲ. ಹಠವಿದೆ, ದ್ವೇಷವಿಲ್ಲ. ಕಾವಿದೆ, ತಾಪವಿಲ್ಲ. ಕೋಪವಿದೆ, ವೈರವಿಲ್ಲ. ಚುರುಕಿದೆ ಉರಿಯಿಲ್ಲ. ಎಲ್ಲಿಯೂ ಬ್ರಹ್ಮಶಿವ, ವೃತ್ತವಿಲಾಸರ ಮತಾಂಧತೆಯ ದೋಷಲೇಪವಿಲ್ಲ. ಕರ್ತವ್ಯಪ್ರಜ್ಞೆ, ಸತ್ಯನಿಷ್ಠೆ, ಲೋಕಕಾರುಣ್ಯ, ನೈತಿಕಶ್ರದ್ಧೆ ಮೇಲಾಗಿ ಧರ್ಮಕೋಪ - ಇವು ಈ ವಿಡಂಬನೆಯ ಹಿಂದಿರುವ ಮೂಲಭೂತವಾದ ಪ್ರೇರಕ ಪ್ರವೃತ್ತಿಗಳು - ಎಂದು ದೇಜಗೌ ಹೇಳಿರುವ ಮಾತುಗಳು ವಿಡಂಬನ ಕಾವ್ಯಕ್ಷೇತ್ರದಲ್ಲಿ ರಾಮಧಾನ್ಯ ಚರಿತ್ರೆಗಿರುವ ಭದ್ರಸ್ಥಾನದ ಬಗ್ಗೆ ನೀಡಲಾಗಿರುವ ನಿರ್ಣಯ.

**ಸರ್ವಜ್ಞ :** ಸರ್ವಜ್ಞ ವಿಡಂಬನದ ಸಾರ್ವಭೌಮ. ಆಡುಮುಟ್ಟದ ಸೊಪ್ಪಿಲ್ಲ. ಹಾಗೇ ದೈವನಂಬಿಕೆಯಿಂದ ರಾಜಕಾರಣದವರೆಗೆ ಎಲ್ಲ ವಿಷಯಗಳೂ ಇವನ ಸೊತ್ತೇ. ತ್ರಿಪದಿಗೆ ಹೊಸ ಬೆಡಗನ್ನೂ ಚುರುಕನ್ನೂ ನೀಡಿ ಸಾಸಿವೆಯ ಗಾತ್ರದಲ್ಲಿ ಬ್ರಹ್ಮಾಂಡದ ಶಕ್ತಿಯನ್ನು ತುಂಬಿರುವ ಸರ್ವಜ್ಞನ ವಚನಗಳಲ್ಲಿ ವಿಡಂಬನದ ಹಲವು ಶ್ರೇಣಿಗಳನ್ನು ಕಾಣಬಹುದು

ಒಂದಾಡ ತಿಂದಾತ ಹೊಂದಿದೆಡೆ ಸ್ವರ್ಗವನು
ಎಂದೆಂದು ಅಜನ ಕಡಿತಿಂಬ ಕಟುಕ ತಾ
ನಿಂದ್ರನೇಕಾಗ ಸರ್ವಜ್ಞ

ಎಂಬುದು ಈತನ ವಿಡಂಬನ ವಿಧಾನ. ವಿಪರ್ಯಯವೆನಿಸುವಂಥ ಎರಡು ಸನ್ನಿವೇಶಗಳನ್ನು ಮೂರೇ ಸಾಲಿನಲ್ಲಿ ಒಟ್ಟಿಗಿಟ್ಟು ಸಾಧಿಸಿರುವ ಪರಿಣಾಮ ಅದ್ಭುತ.

**ಇತರ ಕೃತಿಗಳು :** ಮುಪ್ಪಿನ ಷಡಕ್ಷರಿ ಬರೆದಿರುವ ಹಲವಾರು ಹಾಡು ಗಳಲ್ಲಿ ವಿಡಂಬನವಿಲ್ಲದೆ ಇಲ್ಲ. ಇದರ ಉದ್ದೇಶವೂ ಸಾಮಾನ್ಯವಾಗಿ ಪಾರಮಾರ್ಥಿಕ. ಈತ ಬರೆದಿರುವ ತಿರುಕನ ಕನಸು ಒಂದು ಉತ್ತಮ ವಿಡಂಬನ ಕೃತಿ. ಕನ್ನಡ ಜನಪದ ಸಾಹಿತ್ಯದಲ್ಲೂ ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ಮುಂತಾದ ಕಾವ್ಯಗಳಲ್ಲೂ ನೀತಿ, ನಗೆ, ಕನಸು, ನನಸುಗಳೊಂದಿಗೆ ವಿಡಂಬನವೂ ಬೆರೆತುಕೊಂಡಿದೆ. ಗಾದೆಗಳಂತೂ ವಿಡಂಬನದ ಹುತ್ತ. ದುಡ್ಡಿನ ಆಸೆಗೆ ಬೆಲ್ಲ ಮಾರಿ ಗೋಣೀಚೀಲ ನೆಕ್ಕಿದ, ಅಳ್ತಾ ಹೋದ ನಾಯಿ ಮೊಲ ಹಿಡ್ದಾತೇ, ಇತ್ತಿತ್ತ ಬಾ ಅಂದರೆ ಇದ್ದ ಗೋಡೇನೂ ಕಿತ್ತುಕೊಂಡು ಬಂದ, ಅಜ್ಜಿಗರಿವೆ ಕಾಟ ಮಗಳಿಗೆ ಮಿಂಡನ ಕಾಟ, ಯಾಕಳ್ತಿಯಾ ಮಗಳೆ ಅಂದ್ರೆ ಲೋಕ ಮೆಚ್ಚಾಕೆ ಮೊದಲಾದ ಸಾವಿರಾರು ಗಾದೆಗಳಲ್ಲಿ ವಿಡಂಬನೆಯ ವಿಶ್ವರೂಪದರ್ಶನವನ್ನು ಮಾಡಬಹುದು. ಒಂದೇ ಒಂದು ವಾಕ್ಯದಲ್ಲಿ ಅರ್ಥಶ್ರೀಮಂತಿಕೆಯನ್ನು ತುಂಬಿಕೊಂಡು ಹೊಳೆಯುವ ಈ ಗಾದೆಗಳು ವಿಡಂಬನ ಸಾಹಿತ್ಯದ ಭಂಡಾರಗಳು.

**ಇಪ್ಪತ್ತನೆಯ ಶತಮಾನ :** ಈ ಶತಮಾನದಲ್ಲಿ ವಿಡಂಬನ ಸಾಹಿತ್ಯ ಸಾಕಷ್ಟು ಬೆಳೆದಿದೆ. ಸಾಮಾಜಿಕ ವಿಡಂಬನ, ರಾಜಕೀಯ ವಿಡಂಬನ, ಸಾಹಿತ್ಯಕ ವಿಡಂಬನ ಮುಂತಾದ ನಾನಾ ಪ್ರಕಾರಗಳು ಹುಟ್ಟಿಕೊಂಡಿವೆ. ವಿಡಂಬನಾತ್ಮಕ ಸಣ್ಣಕಥೆ, ಕಾದಂಬರಿ, ಪದ್ಯ, ಚುಟುಕ, ಪ್ರಬಂಧಗಳಿಗೇನೂ ಕಡಿಮೆಯಿಲ್ಲ. ದಿನೇ ದಿನೇ ಬೆಳೆಯುತ್ತಿರುವ ಈ ಸಾಹಿತ್ಯದಲ್ಲಿ ಗಟ್ಟಿಯಾದ್ದನ್ನು ಆರಿಸಿ ಪಟ್ಟಿಮಾಡಿ ಪಠಿಸುವುದು ಇನ್ನೂ ಸ್ವಲ್ಪ ಕಾಲ ಸರಿದ ಮೇಲೆ. ಮುದ್ರೆಯೊತ್ತಿರುವ ಕೆಲವು ಲೇಖಕರ ಮತ್ತು ಕೃತಿಗಳ ಆನೆಹೆಜ್ಜೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಕನ್ನಡಕ್ಕೊಬ್ಬರೇ ಎಂದು ಕೀರ್ತಿ ಗಳಿಸಿರುವ ಟಿ.ಪಿ.ಕೈಲಾಸಂ ಹಾಸ್ಯಚಕ್ರವರ್ತಿ, ವಿಡಂಬನ ಪ್ರವೀಣ. ನಡೆ, ನುಡಿ, ನಾಟಕ ಎಲ್ಲಕ್ಕೂ ಹಾಸ್ಯದ ಉಡುಪು, ಒಡ್ಯಾಣ. ಮೊನೆಮಾತು ಎಸೆದು ಚುಚ್ಚಿ ಕೊಲ್ಲುವುದಕ್ಕಿಂತ ಹಾಸ್ಯದ ಹೊಳೆ ಹರಿಸಿ ಕೊಚ್ಚಿ ಬಿಸಾಡುವುದು ಇವರ ವಿಧಾನ. ಬಂಡ್ವಾಳ್ವಿಲ್ಲದ್ಬಡಾಯಿ, ಹೋಂ ರೂಲು, ಅಮ್ಮಾವ್ರ ಗಂಡ, ನಮ್ಬ್ರಾಹ್ಮಣ್ಕೆ, ಗಂಡಸ್ಕತ್ರಿ ಮುಂತಾದ ನಾಟಕಗಳಲ್ಲಿ ಸಮಾಜದ ವಿಡಂಬನೆ ಸಮರ್ಥವಾಗಿ ಮೂಡಿಬಂದಿದೆ. ಪುಟ್ಟು, ಮಾಧು, ನಾಗತ್ತೆ ಥಳಕಿನ ಪುತ್ಥಳಿ ಪಾತೂ, ಮಗಳ ಮದುವೆಗಾಗಿ ಅಂಚೆಯವನಿಗೆ ಕೂಡಾ ಕಾಸು ಕೊಡದೆ ಹಣ ಕೂಡಿಡುತ್ತಿದ್ದ ಲಾಯರ್ ನರಸಿಂಹಯ್ಯ, ದೊಡ್ಡ ಮನುಷ್ಯನ ಸೋಗು ಹಾಕಿ ಸಮಾಜದ ರಕ್ತ ಹೀರುವ ಜಿಗಣೆ ರಂಗಣ್ಣ, ರಾಮಣ್ಣ, ವಿ.ಸಿ. (ವರಪೂಜೆ ಛಾಂಪಿಯನ್), ಬಂಡ್ವಾಳ್ವಿಲ್ಲದ್ಬಡಾಯಿಗಾರ ಬುಳ್ಳಾಪುರದ ಲಾಯರಿ ಅಹೋಬ್ಲು- ಇವರೆಲ್ಲ ನಮ್ಮ ಸಮಾಜದ ವ್ಯಕ್ತಿಗಳೇ. ಇವರೇ ವಿಡಂಬನಕ್ಕೆ ಇಲ್ಲಿ ಆಹಾರ. ಇಬ್ಸನ್‌ದು ಇನಿವಾತು, ಗ್ಯಾಲ್ಸ್‌ವರ್ದೀದು ಗೆಳೆವಾತು, ಷಾನದು ಸುಡೋ ಮಾತು, ಕೈಲಾಸಂದು ಕೊಡಲಿಪೆಟ್ಟು- ಇದು ಕೈಲಾಸಂ ಅಭಿಪ್ರಾಯ. ಟೊಳ್ಳುತನಕ್ಕೆ ಪೆಟ್ಟುಕೊಟ್ಟು ಉರುಳಿಸುವುದರಲ್ಲಿ ಕೈಲಾಸಂ ಪ್ರವೀಣ. ಪ್ರಾಸ, ಶ್ಲೇಷೆ, ವಕ್ರೋಕ್ತಿ, ಚತುರೋಕ್ತಿ, ವಿಕಟಹಾಸ್ಯ- ಇವೇ ಇವರ ಸೇನೆ. ಆದರೆ ಇದಕ್ಕೆ ದ್ವೇಷ ಅಥವಾ ಕ್ರೋಧ ಮೂಲವಲ್ಲ; ಸಹಾನುಭೂತಿಯೇ ಇದರ ಜೀವಾಳ. ಆದ್ದರಿಂದ ಇವರ ನಗುವಿನ ಹಿಂದೆಯೇ ಅಳು ಮಡುಗಟ್ಟಿ ನಿಂತೇ ಇರುತ್ತದೆ.

ಕಿರಿ ಆಳದ ನಗೆನೀರಿನ ಮೇಲೆ
ತಿರುಗುತ ಬಹು ವೇಳೆ
ಕಣ್ಣೀರಿನ ಕಡಲಿನ ಪಾಲು
ಹಾಸ್ಯದ ಹರಿಗೋಲು

ಎಂಬುದು ಅವರ ಮಾತು. ಬಂಡ್ವಾಳ್ವಿಲ್ಲದ್ಬಡಾಯಿಯ ಒಂದು ಪಾತ್ರವಾದ ಚೋರನನ್ನು ಕುರಿತು, ಬೀದೀಲೇನಾದ್ರೂ ಬಿಡಿಗಾಸು ಬಿದ್ದಿದೇಂತ ಬಗ್ನೋಡ್ತ ಬರ್‍ತಿದೀಯೇನೋ ಬಕ್ವೇ ಎಂದು ಅಹೋಬ್ಲು ಆಡುವ ಪ್ರಾಸಬದ್ಧ ಕಿರಿಚಾಟದ ತಕ್ಷಣದ ಪ್ರತಿಕ್ರಿಯೆಯೆಂದರೆ ಕೇಕೆ ನಗು. ಆದರೆ ಅದರ ಹಿಂದೆಯೇ ಬಡತನದ ದಾರುಣ ಚಿತ್ರವನ್ನು ನೆನೆದು ಕಣ್ಣೀರು, ಅಹೋಬ್ಲುವಿನ ಟೊಳ್ಳು ಜಂಬದ ಬಗ್ಗೆ ಮರುಕ. ಇದು ಕೈಲಾಸಂ ವಿಡಂಬನದ ಪರಿಣಾಮ.

ನಾಟಕ ಪ್ರಪಂಚದ ಇನ್ನೊಬ್ಬ ವಿಡಂಬನಕಾರರು ಶ್ರೀರಂಗ. ಇವರ ಮಾತು ಹೆಚ್ಚು ಮಾರ್ಮಿಕ. ಎಂ.ವಿ.ಸೀತಾರಾಮಯ್ಯನವರು ಶ್ರೀರಂಗರ ಬಗ್ಗೆ ಬರೆಯುತ್ತ ಅವರ ಹರಿತವಾದ ಬುದ್ಧಿಶಕ್ತಿ, ವ್ಯಂಗ್ಯ, ಕಟುಹಾಸ್ಯ, ವಿಡಂಬನೆ, ಮಾರ್ಮಿಕವಾದ ಮಾತುಗಾರಿಕೆ, ಹದಿರುನುಡಿಯ ಹೆಕ್ಕಳ ಮತ್ತು ಅವರ ವಿಚಾರಸರಣಿ, ವ್ಯಕ್ತಿತ್ವ- ಇವುಗಳೆಲ್ಲ ಅವರ ನಾಟಕಗಳಲ್ಲಿ ಚೆನ್ನಾಗಿ ಹೊಮ್ಮಿವೆ. ಬರಿಯ ವಿನೋದಕ್ಕಾಗಿ ಇಲ್ಲ ಇವರ ನಾಟಕಗಳು, ಅವು ವಿಚಾರಕ್ಕಾಗಿ ವಿಕಾಸಕ್ಕಾಗಿ- ವಿಡಂಬನ ವಿನೋದಗಳ ಮೂಲಕ ಎಂದು ಹೇಳಿದ್ದಾರೆ. ಕಟ್ಟಿದ ಮನೆಯನ್ನು ರಿಪೇರಿ ಮಾಡುವುದು ಎಷ್ಟು ಮೂರ್ಖತನವೋ ಸಮಾಜವನ್ನು ಸುಧಾರಿಸುವುದೂ ಅಷ್ಟೇ ಮೂರ್ಖತನ. ಚಿರಕಾಲ ಬಾಳಬೇಕಾದರೆ ಹೊಸ ಸಮಾಜವನ್ನೇ ರೂಪಿಸಬೇಕು- ಎಂಬ ಭಾವನೆಯಿಂದ ಹೊರಟ ಇವರ ಈಗಿನ ಹಲವಾರು ಕೃತಿಗಳು ಭ್ರಮನಿರಸನದ ಪ್ರತೀಕಗಳಾಗಿವೆ. ನಮ್ಮ ಸ್ವರ್ಗೀಯ ಶತ್ರುಗಳು ಎಂಬ ಪ್ರಬಂಧಗಳಲ್ಲಿ ದೇವತೆಗಳನ್ನು ಕೋರ್ಟಿಗೆಳೆದಿರುವ ಶ್ರೀರಂಗರ ಕೃತಿಗಳಲ್ಲಿ ಭಾವದ ಕಾವಿಗಿಂತ ಕ್ರೋಧದ ನೋವು ಹೆಚ್ಚು. ಇವರ ನಗೆ ಬಲು ಹರಿತ. ವಿಶ್ವಾಮಿತ್ರನ ಸೃಷ್ಟಿ ಕಾದಂಬರಿಯಲ್ಲಿ ಬರುವ ಹೋಟಲು ಮಾಲಿಕನ ಚಿತ್ರವಿದು. 'ಕ್ಷೀರಸಾಗರದಲ್ಲಿ ಒರಗಿದ ವಿಷ್ಣುವಿಗೆ ಒಲಿದ ಲಕ್ಷ್ಮಿಯು ಚಹದಂಗಡಿಯವನಿಗೆ ಒಲಿಯುವುದು ಆಶ್ಚರ್ಯವೇ? ಇದ್ದಷ್ಟು ಕ್ಷೀರವನ್ನೇ ಸಾಗರವನ್ನಾಗಿ ಮಾಡುವ ಮಹಾಮಾಯಿಯಿವನು. ಲಕ್ಷ್ಮಿಯು ಅವನ ದಾಸಿಯಾಗಿದ್ದಾಳೆ; ಎರಡೂ ಕಿವಿಗಳಿಂದ ಜೋತುಬಿದ್ದಿದ್ದಾಳೆ; ಎರಡೂ ಕೈಗಳಲ್ಲಿ ಕುಣಿಯುತ್ತಿದ್ದಾಳೆ; ಬೆರಳುಗಳಲ್ಲಿ ಬಳುಕುತ್ತಲಿದ್ದಾಳೆ ಮಾಲಿಕನ ಲಕ್ಷ್ಮಿ'.

ಬೇಂದ್ರೆಯವರು ವಿಡಂಬನ ಕೃತಿಗಳನ್ನು ರಚಿಸದೆ ಇಲ್ಲ. ಇವರ ಅವರ್ಣನೀಯ, ಅರ್ವಾಚೀನ ಸೌಂದರ್ಯ, ಶೂನ್ಯ ಮುಂತಾದ ಹಲವು ಪದ್ಯಗಳಲ್ಲಿ ಕಾವ್ಯದ ಕಾವು ಕಡಿಮೆಯಾಗಿ ವಿಡಂಬನದ ಮೊನೆಯ ಅನುಭವವಾಗುತ್ತದೆ. ಬೇಂದ್ರೆಯವರು ರಾಜಕೀಯವನ್ನೂ ವಿಡಂಬನಕ್ಕೆ ತುತ್ತಾಗಿಸಿದ್ದಾರೆ. ಅವರ ಜಾತ್ರೆಯಿಂದ ಒಂದು ಉದಾಹರಣೆಯಿದು:

ಯಾರೆಂದರು ಪ್ಲೇಗೆಂದು? ಈ ಅರಮನೆಯಲ್ಲಿ
ನನ್ನ ಅಪ್ಪಣೆಯಿಲ್ಲದೆ ಪ್ಲೇಗೂ ಬರಕೂಡದು
ಯಾರೂ ಬರಕೂಡದು. ನಾನು ಪ್ಲೇಗಿದೆ ಎನ್ನುವ
ವರೆಗೆ ಯಾರೂ ಪ್ಲೇಗು ಎಂಬ ಮಾತೂ ಎತ್ತಕೂಡದು.

ಶಿವರಾಮ ಕಾರಂತರ ಕೃತಿಗಳಲ್ಲಿ ಕಂಡುಬರುವ ಮುಖ್ಯ ಸೂತ್ರಗಳಲ್ಲಿ ವಿಡಂಬನವೂ ಒಂದು. ಇದು ಒಮ್ಮೆ ಹಾಸ್ಯದ ಕಡೆಗೂ ಇನ್ನೊಮ್ಮೆ ಕ್ರೋಧದ ಕಡೆಗೂ ಮತ್ತೊಮ್ಮೆ ವಿಷಾದದ ಕಡೆಗೂ ಓಲುತ್ತದೆ. ಅವರ ಗ್ನಾನ, ದೇವದೂತರು, ಹಳ್ಳಿಯ ಹತ್ತು ಸಮಸ್ತರು, ಮೈಲಿಕಲ್ಲಿನೊಡನೆ ಮಾತುಕತೆ ಇವೇ ವಿಡಂಬನ ಕೃತಿಗಳು. ಅವರ ಅನೇಕ ಕಾದಂಬರಿಗಳಲ್ಲೂ ವಿಡಂಬನೆ ಮೂಡಿಬಂದಿದೆ.

ಕುವೆಂಪು ಅವರ ಶ್ರೀರಾಮಾಯಣದರ್ಶನದಲ್ಲಿ, ಶೂದ್ರ ತಪಸ್ವಿಯಲ್ಲಿ, ಬೆರಳ್‌ಗೆ ಕೊರಳ್ ನಾಟಕದಲ್ಲಿ, ಕಾನೂರು ಹೆಗ್ಗಡತಿಯಲ್ಲಿ, ಅವರು ಬರೆದಿರುವ ನೂರಾರು ಕವನಗಳಲ್ಲಿ ವಿಡಂಬನಕ್ಕೇನೂ ಕೊರತೆಯಿಲ್ಲ. ರಕ್ತಾಕ್ಷಿ ನಾಟಕದಲ್ಲಿ ಬರುವ ಸಾಮಾನ್ಯ ಪಾತ್ರಗಳಲ್ಲಿ ಹೊಮ್ಮುವ ಅಸಾಮಾನ್ಯ ವಿಡಂಬನವನ್ನು ಕಂಡಾಗ, ಅವರ ಕವನಗಳಲ್ಲಿ ಬರುವ ವಿಡಂಬನೆಗಳನ್ನು ನೋಡಿದಾಗ ವಿಡಂಬನ ಸಾಹಿತ್ಯದಲ್ಲಿಯೂ ಅವರು ಸಮರ್ಥರು ಎಂಬ ಅಂಶ ವ್ಯಕ್ತವಾಗದಿರದು.

ಪ್ರಬಂಧಕಾರರ ಪೈಕಿ ಗೊರೂರರದು ಸಕ್ಕರೆ ಹಚ್ಚಿದ ಕಹಿಗುಳಿಗೆಗಳ ರೀತಿ. ವಿಡಂಬನಕ್ಕೆ ತುತ್ತಾದ ವ್ಯಕ್ತಿಗಳ ಪೈಕಿ ಇವರಿಗೆ ಎಳ್ಳಷ್ಟೂ ಅಗೌರವವಿಲ್ಲ. ಇವರದು ವಿಡಂಬನದ ಸರಳಮಾರ್ಗ. ಇವರ ಶಾಲುಸಾಬಿ, ಜೋಡಿದಾರರು, ಶೀನಪ್ಪ, ರಂಗೇಗೌಡ- ಮುಂತಾದವರು ನಮಗೂ ಹತ್ತಿರದವರಾಗುತ್ತಾರೆ. ರಾಶಿಯವರ ತುಟಿಮೀರಿ ಹೊಮ್ಮುವ ಹಾಸ್ಯದ್ದು ವಿವಿಧ ಮುಖ. ಅದಕ್ಕೆ ನಗರದ ಸಂಸ್ಕಾರವಿದೆ; ಅದು ಸೌಮ್ಯವಾಗಿ ಕೆಲಸ ಮಾಡುವ ಅಗ್ನಿ ಪರ್ವತ. ರಾಶಿಯವರ ಗರಡಿಯಲ್ಲಿ ತಯಾರಾದವರ ಪೈಕಿ ಸುನಂದಮ್ಮ, ದಾಶರಥಿ ದೀಕ್ಷಿತ್ ಇವರ ಕೃತಿಗಳಲ್ಲಿ ನಗೆಯ ಅಂಶ ಹೆಚ್ಚು. ಅ.ರಾ.ಸೇ. ಬಲು ಚುರುಕು. ದೀಕ್ಷಿತರ ಕನ್ನಡದ ಗಾಡಿಯಲ್ಲಿ ಅವರ ವೈಶಿಷ್ಟ್ಯ ವ್ಯಕ್ತವಾಗುತ್ತದೆ. ಅವರ ಗಾಂಪರ ಗುಂಪು ನಗೆಗಡಲಿನ ತಮ್ಮ, ರಾಶಿಯವರ ಉರಿಗಾಳು, ಅರವಾಮೊದ್ದು, ಕೊರವ, ಹೆಬ್ಬಿ ಗುಬ್ಬಾಲೆಯ ಜನ- ಎಲ್ಲ ಚಿರಂಜೀವಿಗಳು. ಶ್ರೀರಂಗರ ಹಾದಿಯಲ್ಲಿ ನಡೆದ ಎನ್ಕೆ ಕುಲಕರ್ಣಿ ಇನ್ನೊಬ್ಬ ವಿಡಂಬನಕಾರ. ಶ್ರೀನಿವಾಸರನ್ನು ವಿಡಂಬನಕಾರರ ಪಟ್ಟಿಯಲ್ಲಿ ಸೇರಿಸುವುದಾಗುವುದಿಲ್ಲವಾದರೂ ಅವರ ಡೂಬಾಯಿ ಪಾದ್ರಿಯ ಪಾತ್ರದಂಥ ಹಲವು ಪ್ರಬಂಧಗಳಲ್ಲಿ ಮೃದುಮಧುರ ವಿಡಂಬನವಿದೆ.

ಬೀಚಿ ವಿಡಂಬನಬ್ರಹ್ಮ. ಅವರ ತಿಂಮನ ತಲೆ, ಚಿನ್ನದ ಕಸ ಕನ್ನಡದಲ್ಲಿ ಹಾಸ್ಯ ವಿಡಂಬನೆಯ ಉತ್ತಮ ಬರೆಹಗಳು. ಪ್ರತಿಯೊಂದು ಸನ್ನಿವೇಶದಲ್ಲೂ ಹಾಸ್ಯವನ್ನು ಕಾಣುವ ಕಣ್ಣು ಬೀಚಿಯವರಿಗಿದೆ. ನಾಡಿಗೇರರ ನಗೆಬರೆಹಗಳ ಹಿಂದೆಯೂ ವ್ಯಂಗ್ಯನೋಟದ ಕೊಂಡಿಯಿದೆ.

ಹಿಂದಿನ ತಲೆಮಾರಿನವರ ಪೈಕಿ ಹಾಸ್ಯವನ್ನೇ ತಮ್ಮ ಖಾಯಂ ಹವ್ಯಾಸವಾಗಿ ಮಾಡಿಕೊಂಡ ಕಸ್ತೂರಿ ಅವರ ನಗೆಪದ್ಯಗಳಲ್ಲೂ ಅಣಕವಾಡುಗಳಲ್ಲೂ ಲಘುಪ್ರಬಂಧಗಳಲ್ಲೂ ನಗರಜೀವಿಗಳ ಅಷ್ಟಾವಕ್ರದ ಹಾಸ್ಯನೋಟವಿದೆ. ಆಧುನಿಕ ಸಾಹಿತ್ಯದಲ್ಲಿ ಹಾಸ್ಯಕ್ಕೆಂದೇ ಹಲವು ಅಂತಸ್ತುಗಳ ಮಹಲೊಂದನ್ನು ಕಟ್ಟಿದವರು ನಾ. ಕಸ್ತೂರಿ. ಉದಾಹರಣೆಗಾಗಿ ಅವರ 'ಅನರ್ಥ ಕೋಶ'ದ ಶಬ್ದಗಳ ಪೈಕಿ ಎರಡನ್ನಿಲ್ಲಿ ಕೊಟ್ಟಿದೆ:

ಕನ್ಯಾರ್ಥಿ - ಕಾಲೇಜು ವಿದ್ಯಾರ್ಥಿ. ತನಗಿಂತ ಹೆಚ್ಚು ಸೌಂದರ್ಯ, ಕಡಿಮೆ ವಿದ್ಯೆ ಇರುವ ಹೆಣ್ಣನ್ನೇ ಹುಡುಕುವವ.

ಮೂಗು - ಅನೇಕರ ನಶ್ಯದ ಡಬ್ಬಿ, ಕನ್ನಡಕ ಧರಿಸಲು ಅತ್ಯಾವಶ್ಯಕವಾದ ಅಂಗ. ಇದರ ನೇರಕ್ಕೆ ನಡೆವವರೇ ಹೆಚ್ಚು, ಧ್ಯಾನಕ್ಕೆ ಇದರ ತುದಿ ತುಂಬ ಅನುಕೂಲ. ಇದರ ಕೊಂಕನ್ನು ತಿದ್ದುವುದು ಬಲು ಕಷ್ಟ. ದೇವರಿಂದಲೂ ಅಸಾಧ್ಯ. ನಮಗೆ ಇದೊಂದು ಸಂಗೀತೋಪಕರಣ, ನೆಗಡಿಯ ನೆಲವೀಡು.

ಇತ್ತೀಚೆಗೆ ಈ ಕ್ಷೇತ್ರದಲ್ಲಿ ಅನೇಕರು ಕೃಷಿ ನಡೆಸಿದ್ದಾರೆ. ಸಿ.ಕೆ.ಎನ್.ರಾಜ, ಎಂ.ಪಿ.ಮನೋಹರ ಚಂದ್ರನ್, ಪಿ.ಎಸ್.ರಾಮಾನುಜಂ, ಎಸ್.ಎನ್.ಶಿವಸ್ವಾಮಿ, ಎಂ.ಎಸ್.ನರಸಿಂಹಮೂರ್ತಿ, ಟಿ.ಸುನಂದಮ್ಮ, ಪ್ರಭುಶಂಕರ, ಬಿ.ಜಿ.ಎಲ್.ಸ್ವಾಮಿ. ಎಚ್.ಎಲ್.ಕೇಶವಮೂರ್ತಿ, ಎಚ್.ಢುಂಡಿರಾಜ್, ಭುವನೇಶ್ವರಿ ಹೆಗಡೆ, ಬಿ.ಚಂದ್ರೇಗೌಡ, ಎಚ್.ಆನಂದರಾಯಮೂರ್ತಿ ಮುಂತಾದ ಅನೇಕ ಲೇಖಕರೂ ಸಾಕಷ್ಟು ವಿಡಂಬನ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ.

ಪಾಶ್ಚಾತ್ಯರಲ್ಲಿ ಸಾಹಿತ್ಯ ವಿಡಂಬನವೆಂಬ ವಿಶಿಷ್ಟ ಪ್ರಕಾರವೊಂದು ಬೆಳೆದು ಬಂದಿದೆ. ಸಾಹಿತ್ಯದಲ್ಲಿ ಕಂಡುಬರುವ ನಾನಾ ವಿಚಾರಗಳನ್ನೂ ಅರ್ಥವಿಲ್ಲದ ಸಂಪ್ರದಾಯಗಳನ್ನೂ ಗೇಲಿ ಮಾಡುವುದು ಇದರ ಉದ್ದೇಶ. ಅಣಕವೇ ಇದರ ಅಸ್ತ್ರ. ವಿಡಂಬನಕ್ಕೆ ತುತ್ತಾದ ಕೃತಿಗಳಲ್ಲಿ ಎದ್ದು ಕಾಣುವ ಮಾತಿನ ಚಟಾಕಿಗಳನ್ನೇ ಎತ್ತಿ ಹಾಸ್ಯಕ್ಕೀಡು ಮಾಡುವುದು ಇದರ ವಿಧಾನ. ಆದರೆ ಅಣಕಿಸುವುದು ಅಷ್ಟೇನೂ ಸುಲಭವಲ್ಲ. ಅಣಕಿಸುವವನಿಗೆ ಮೂಲದ ಕೃತಿಯ ಲೇಖಕನಷ್ಟೇ, ಹಲವೇಳೆ ಅದಕ್ಕಿಂತ ಹೆಚ್ಚಾಗಿ ಶಕ್ತಿ ಇರಬೇಕು.

ಕನ್ನಡದಲ್ಲಿ ವಿಡಂಬನೆ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದದ್ದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ, ಇಂಗ್ಲಿಷ್‌ನ ಸೆಟೈರ್ ಕನ್ನಡ ವಿಡಂಬನ ಸಾಹಿತ್ಯಕ್ಕೆ ಪ್ರೇರಣೆ ನೀಡಿತು. ಪದ್ಯ ಮತ್ತು ಗದ್ಯ ಈ ಎರಡೂ ರೂಪಗಳಲ್ಲಿ ಕನ್ನಡದಲ್ಲಿ ವಿಡಂಬನೆ ಕಾಣಿಸಿಕೊಂಡಿದೆ. ಕಾವ್ಯ ಕ್ಷೇತ್ರದಲ್ಲಿ ಹೆಚ್ಚಾಗಿ ಬಿಡಿ ಪದ್ಯಗಳು ರಚನೆಗೊಂಡಿವೆ. ನಮ್ಮಲ್ಲಿ ಪೂರ್ಣ ಪ್ರಮಾಣದ ವಿಡಂಬನ ಕಾವ್ಯಗಳು ಕಡಿಮೆ. ಕೆರೋಡಿ ಸುಬ್ಬರಾಯರ ಅನುಕೂಲಸಿಂಧು (1926) ಕನ್ನಡದ ಮೊದಲ ವಿಡಂಬನ ಕಾವ್ಯ. ಜಿ.ಪಿ.ರಾಜರತ್ನಂ ಅವರ ಮಹಾಕವಿ ಪುರುಷಸರಸ್ವತಿ (1940) ಇದೇ ಬಗೆಯ ಇನ್ನೊಂದು ಮಹತ್ವದ ಕೃತಿ. ಕರ್ಣಾಟಕವೆಂಬ ಪದ ಸರಿಯೋ, ಕರ್ನಾಟಕ ಸರಿಯೋ ಎಂಬ ವಾದದ ಬಿರುಗಾಳಿ ನಾಡಿನಲ್ಲಿ ಬೀಸಿದಾಗ ಪುರುಷಸರಸ್ವತಿ ಹುಟ್ಟಿಕೊಂಡದ್ದು. ಕನ್ನಡ ಕವಿಗಳಲ್ಲಿ ಪರಂಪರೆಯಾಗಿ ಬಂದ ಕುಕವಿನಿಂದೆ, ಸ್ವಪ್ರತಿಷ್ಠೆಯ ಸ್ಥಾಪನೆ, ಅಲಂಕಾರಪ್ರಿಯತೆ, ಪ್ರಾಸದ ಪೂಜೆ, ನಾಯಕನ ವರ್ಣನೆ, ನಾಯಕ ನಿವಾಸ ವರ್ಣನೆ, ನಿರ್ಜೀವ ವಸ್ತು ಸಂಭಾಷಣೆ, ಬಲವಂತದ ಉಪಮಾನ ಜೋಡಣೆ ಮುಂತಾದ ಇಡೀ ಕಾವ್ಯ ಪರಂಪರೆಯನ್ನೇ ರಾಜರತ್ನಂ ಇಲ್ಲಿ ಗೇಲಿ ಮಾಡಿದ್ದಾರೆ. ಮೇಲೆ ಹೇಳಿದ ಎರಡೂ ಕೃತಿಗಳಲ್ಲಿ ಕನ್ನಡಾಂಗ್ಲ ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಲಾಗಿದೆ. ಆಧುನಿಕ ವಿಡಂಬನ ಕಾವ್ಯ ಮಾದರಿಗೆ ಎರಡು ಪದ್ಯಗಳನ್ನು ಈ ಮುಂದೆ ಕೊಟ್ಟಿದೆ.

ಆಧುನಿಕ ವಿದ್ಯಾಭ್ಯಾಸದ, ವಿದ್ಯಾರ್ಥಿಯ ಆಡಂಬರದ ವಿಡಂಬನೆ ಹೀಗಿದೆ:

ಫೆಲ್ಟ್‌ಕ್ಯಾಪ್ ತೊಗಲಂ ತಲೆಯೊಳ್
ಬೆಲ್ಟಿನ ಮೃದುತೊಗಲ ಟೊಂಕದೊಳ್ ಬಲಗೈಯೊಳ್
ಗಿಲ್ಟೆಡ್ ವಾಚಿನ ತೊಗಲಂ
ಚಾಲ್ತಿಯೊಳಳವಡುವುದೊಂದು ವಿದ್ಯಾಭ್ಯಾಸಂ (ಕೆರೋಡಿ ಸುಬ್ಬರಾವ್)

ಕಾವ್ಯಾರಂಭದಲ್ಲಿ ಗಣಪತಿಯನ್ನು ಸ್ಮರಿಸುವ ಸಂಪ್ರದಾಯವನ್ನೂ ಪ್ರಾಸಪ್ರಿಯತೆಯನ್ನೂ ವಿಡಂಬಿಸಿರುವ ನವೀನ ರೀತಿ ಹೀಗಿದೆ:

ಕಳ್ಟು ಕಾವ್ಯದ ಮಸಿಯ ಕುಡಿಕೆಯ
ಟಿಳ್ಟು ಮಾಡುವ ಮೊದಲು ಹಾವಿನ
ಬೆಲ್ಟು ಹಾಕಿದ ಗಣಪನನು ಹಾಡುವುದು ನಮ್ಮವರ
ಫಾಳ್ಟು ಮೀರಿದರಿದನು ಸಿವಿಯರ್
ಜೋಳ್ಟು ತಪ್ಪದು ಸತ್ಯ ಥಂಡರ್
ಬೋಳ್ಟು ಬಿದ್ದಂತೆಂದು ದೇಫೋರ್ೀರ್ ಗಣಪತಿಯ ನೆನೆವೆ
(ಜಿ.ಪಿ.ರಾಜರತ್ನಂ)

ಮಾತಿಗೆ ಅರ್ಥ ಹೇಗೋ ಹಾಗೆ ನಗೆಯೊಂದಿಗೆ ಸಾಮಾನ್ಯವಾಗಿ ಜನ್ಮವೆತ್ತುವ ವಿಡಂಬನದ್ದು ಸರ್ವಾಂತರ್ಯಾಮಿ ಗುಣ. ಕನ್ನಡ ಸಾಹಿತ್ಯದಲ್ಲೂ ಇದು ಓತಪ್ರೋತವಾಗಿ ಹರಿದಿರುವುದಷ್ಟೇ ಅಲ್ಲ, ಪೂರ್ತಿಯಾಗಿ ವಿಡಂಬನವೇ ಮೈಯಾಂತ ಕೃತಿಗಳು ಹೊರಬರುತ್ತಲೇ ಇವೆ.

(ಎಚ್.ಎಸ್.ಕೆ.)

**ಕನ್ನಡದಲ್ಲಿ ವಿಮರ್ಶೆ :** ಸಾಹಿತ್ಯ ವಿಮರ್ಶೆ ಕನ್ನಡದಲ್ಲಿ ಒಂದು ಪ್ರತ್ಯೇಕವಾದ ಅಧ್ಯಯನ ಶಿಸ್ತಾಗಿ ಬೆಳೆದದ್ದು ಈ ಶತಮಾನದಲ್ಲಿಯೇ. ಇದರ ಉಗಮ ಮತ್ತು ಬೆಳೆವಣಿಗೆಗಳಿಗೆ ಕಾರಣ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಕನ್ನಡದ ಸಾಹಿತ್ಯಾಭ್ಯಾಸಿಗಳ ಮೇಲೆ ಬೀರಿದ ಪ್ರಭಾವ. ಪಶ್ಚಿಮದಲ್ಲಿ ತೀಕ್ಷ್ಣಮತಿಗಳೂ ಪ್ರಕಾಂಡ ಪಂಡಿತರೂ ಸೂಕ್ಷ್ಮ ಸಂವೇದನಾಶೀಲರೂ ಆದ ಅನೇಕ ವಿಮರ್ಶಕರೂ ಕವಿ ವಿಮರ್ಶಕರೂ ಈ ಕ್ಷೇತ್ರದಲ್ಲಿ ದುಡಿದು ನೂರಾರು ಆಚಾರ್ಯ ಕೃತಿಗಳನ್ನು ರಚಿಸಿದ್ದಾರೆ. ಇಂಗ್ಲಿಷ್ ಭಾಷೆ, ಸಾಹಿತ್ಯ, ವಿಮರ್ಶೆಗಳನ್ನು ಆಸ್ಥೆಯಿಂದ ಅಧ್ಯಯನ ಮಾಡಿದ ಕನ್ನಡದ ವಿದ್ವಾಂಸರು ಪಶ್ಚಿಮದ ವಿಮರ್ಶೆಯ ವೈಪುಲ್ಯವನ್ನೂ ಪ್ರಖರತೆಯನ್ನೂ ಕಂಡು ಬೆರಗಾಗಿ, ಅನಂತರ ಅದನ್ನು ಆಳವಾಗಿ ಅಧ್ಯಯನ ಮಾಡಿ, ಅದರ ಮೂಲತತ್ತ್ವಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಜೊತೆಗೆ ಆ ಮೂಲತತ್ತ್ವಗಳನ್ನು ಕನ್ನಡದಲ್ಲಿ ಸಾಹಿತ್ಯ ಕೃತಿಗಳಿಗೆ ಅನ್ವಯಮಾಡಿ ವಿಮರ್ಶೆ ನಡೆಸಿದ್ದಾರೆ. ಮುಂದೆ ಇಲ್ಲಿ ಸೃಷ್ಟಿಯಾಗಿರುವ ಕೃತಿಗಳಿಗೆ ಅನ್ವಯವಾಗಬೇಕಾದ ಮಾನದಂಡಗಳು ಯಾವುವು ಎಂಬುದನ್ನು ಕುರಿತು ಚರ್ಚೆ ನಡೆಸಿದ್ದಾರೆ. ಅಲ್ಲದೆ ನಮ್ಮಲ್ಲಿ ಮಹತ್ತಾದವು ಎಂದು ಪ್ರಖ್ಯಾತವಾಗಿರುವ ಕೃತಿಗಳನ್ನು ಜಗತ್ತಿನ ಇತರ ಮಹಾಕೃತಿಗಳೊಂದಿಗೆ ಹೋಲಿಸಿ ನೋಡಿದ್ದಾರೆ. ಇದೆಲ್ಲದರ ಫಲವಾಗಿ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ವಿಸ್ತಾರವಾಗಿಯೂ ವಿಪುಲವಾಗಿಯೂ ಬೆಳೆದಿದೆ. ಅನೇಕ ವಿಮರ್ಶಕರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಿಮರ್ಶೆಯ ಗ್ರಂಥಗಳು ಪ್ರಕಟವಾಗುತ್ತಿವೆ. ಸಾಹಿತ್ಯ ಸಂಪ್ರದಾಯಗಳು ಬದಲಾದಂತೆಲ್ಲ ಕನ್ನಡ ವಿಮರ್ಶೆಯೂ ಕಾಲಕ್ಕೆ ಅನುಗುಣವಾಗಿ ಹೊಸ ಹೊಸ ಮಾನದಂಡಗಳನ್ನು ರೂಪಿಸಿಕೊಳ್ಳುತ್ತ ಸಾಗಿದೆ.

ಮೊದಲಿಗೆ ನಮ್ಮಲ್ಲಿದ್ದ ವಿಮರ್ಶಾ ವಿಧಾನ ಯಾವ ರೀತಿಯದು ಎಂಬುದನ್ನು ಪರಿಶೀಲಿಸಬಹುದು. ಪ್ರಾಚೀನರು ಅಲಂಕಾರ ಗ್ರಂಥಗಳಲ್ಲಿ ಕಾವ್ಯದ ಗುಣಗಳಿಗೂ ದೋಷಗಳಿಗೂ ಉದಾಹರಣೆ ನೀಡುವಾಗ ಇದು ಒಳ್ಳೆಯ ಕಾವ್ಯ ಭಾಗ, ಇದು ಅಲ್ಲ ಎಂದು ಸೂಚಿಸುತ್ತಿದ್ದರಷ್ಟೆ. ಅದರಿಂದ ಅವರು ಇದು ಸಾಹಿತ್ಯ ವಿಮರ್ಶೆ ಎಂದು ಸ್ಪಷ್ಟವಾಗಿ ಹೇಳದೆ ಒಂದು ರೀತಿಯಲ್ಲಿ ವಿಮರ್ಶೆ ಮಾಡುತ್ತಿದ್ದರು ಎಂದು ಹೇಳಬಹುದು. ಎರಡನೆಯದಾಗಿ, ಕವಿಗಳು ಕಾವ್ಯದ ಮೊದಲಲ್ಲಿಯೋ ಕೊನೆಯಲ್ಲಿಯೋ ಸತ್ಕಾವ್ಯದ ಪ್ರಶಂಸೆಯನ್ನು, ಕೆಟ್ಟ ಕಾವ್ಯದ ನಿಂದೆಯನ್ನು ಮಾಡುವಲ್ಲಿ ಮತ್ತೊಂದು ರೀತಿಯಲ್ಲಿ ವಿಮರ್ಶೆಯ ಕಾರ್ಯ ನಡೆಯುತ್ತಿತ್ತು. ಆದರೆ ಇವು ಯಾವುವೂ ಕ್ರಮಬದ್ಧವಾದ ಶಾಸ್ತ್ರೀಯವಾದ ವಿಮರ್ಶೆ ಎನ್ನಿಸಿಕೊಳ್ಳುವುದಿಲ್ಲ.

ಕನ್ನಡ ವಿಮರ್ಶೆಯ ಉಗಮ ಸಂಸ್ಕೃತ ಕೃತಿಗಳು ಮತ್ತು ಪ್ರಾಚೀನ ಕನ್ನಡ ಗ್ರಂಥಗಳ ಪರಿಚಯದಲ್ಲಿ ಎನ್ನಬಹುದು. ಈ ದಿಕ್ಕಿನಲ್ಲಿ ಬಹುಶಃ ಮೊತ್ತಮೊದಲ ಕೃತಿ ಮಂ.ಆ.ರಾಮಾನುಜ ಅಯ್ಯಂಗಾರ್ ಅವರ ಕವಿ ಚಕ್ರವರ್ತಿ ಕವಿ ರನ್ನನ ಜೀವನ ಚರಿತ್ರೆ, ಗ್ರಂಥವಿಮರ್ಶೆ ಇತ್ಯಾದಿ (1895). ಈ ಗ್ರಂಥ'ದಲ್ಲಿ ಲೇಖಕರು ರನ್ನನ ಜೀವನ ಚರಿತ್ರೆಯ ಜೊತೆಗೆ ಅವನ ಕೃತಿಗಳ ಪರಿಚಯಾತ್ಮಕ ವಿಮರ್ಶೆಯನ್ನೂ ಒದಗಿಸಿದ್ದಾರೆ. ಈ ಕೃತಿಯನ್ನು ಗಮನಕ್ಕೆ ತಂದುಕೊಂಡು ಹೇಳುವುದಾದರೆ ಕನ್ನಡ ವಿಮರ್ಶೆಯ ಉಗಮ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲೇ ಎಂದು ಹೇಳಬಹುದು. ಐತಿಹಾಸಿಕ ದೃಷ್ಟಿಯಿಂದ ಮುಖ್ಯವಾದ ಇನ್ನೊಂದು ಕೃತಿ ಬಿ.ಕೃಷ್ಣಪ್ಪನವರ ರಾಮಚಂದ್ರಚರಿತಪುರಾಣ ವಿಮರ್ಶೆ (1923). ಮುಂದೆ ಜಿ.ಪಿ. ರಾಜರತ್ನಂ ಅವರು ಶ್ರೀ ಕವಿ ಪಂಪ (1931) ಎಂಬುದರಲ್ಲಿ ಪಂಪನನ್ನು ಕುರಿತು ತಕ್ಕ ಮಟ್ಟಿಗೆ ವಿಸ್ತಾರವಾದ ವಿಮರ್ಶೆಯನ್ನು ನೀಡಿದರು. ತೀ.ನಂ.ಶ್ರೀ ಅವರ ಪಂಪ (1939) ಎಂಬ ಕಿರು ಹೊತ್ತಗೆ ಮಹಾಕವಿಯೊಬ್ಬನನ್ನು ಅಚ್ಚುಕಟ್ಟಾದ ರೀತಿಯಲ್ಲಿ ಪರಿಚಯ ಮಾಡಿಕೊಡಲು ನಡೆದಿರುವ ಒಂದು ಸ್ತುತ್ಯ ಪ್ರಯತ್ನ. ಎಸ್.ವಿ.ರಂಗಣ್ಣನವರ ಕುಮಾರವ್ಯಾಸ (1962) ಕೂಡ ಇಂಥ'ದೇ ಇನ್ನೊಂದು ಗ್ರಂಥ. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ತಮ್ಮ ಪ್ರಚಾರ ಪುಸ್ತಕ ಮಾಲೆಗಳಲ್ಲಿ ಅನೇಕ ಕನ್ನಡ, ಸಂಸ್ಕೃತ, ತೆಲುಗು, ಹಿಂದಿ ಕವಿಗಳನ್ನು ಕುರಿತು ಕಿರು ಹೊತ್ತಗೆಗಳನ್ನು ತಂದಿವೆ. ಅವುಗಳಲ್ಲೆಲ್ಲ ಅಲ್ಲಲ್ಲಿ ಒಳ್ಳೆಯ ವಿಮರ್ಶೆ ಪ್ರತಿಬಿಂಬಗೊಂಡಿದೆ.

ಪ್ರಾಚೀನ ಕನ್ನಡ ಕವಿಗಳ ಕೃತಿಗಳನ್ನು ಸಹೃದಯರಿಗೆ ಪರಿಚಯ ಮಾಡಿಕೊಡುವ ಕೆಲವು ಗ್ರಂಥಗಳಲ್ಲಿ ವಿಮರ್ಶೆ ತನ್ನ ಬೆಳೆವಣಿಗೆಯನ್ನೂ ಕಂಡಿದೆ. ರಂ.ಶ್ರೀ.ಮುಗಳಿಯವರ ರನ್ನನ ಕೃತಿರತ್ನ (1946), ಜಿ.ಎಸ್.ಮುರಿಗಾರಾಧ್ಯರ ಷಡಕ್ಷರದೇವಂ (1906), ಡಿ.ವಿ.ಶೇಷಗಿರಿರಾಯರ ಪಂಪ ರಾಮಾಯಣ ಕಾವ್ಯ ಪರಿಚಯ (1950), ನಾಗಚಂದ್ರನ ಕಾವ್ಯಗಳು (1950), ವಿ.ಶಿವಾನಂದ ಅವರ ಸೀಮಾಪುರುಷ ಷಡಕ್ಷರದೇವ (1966), ಚನ್ನಬಸವಪ್ಪ ಕವಲಿ ಮತ್ತು ಸಂ.ಮರಿದೇವಸ್ವಾಮಿ ಅವರ (ದೇವಕವಿಯ ಮರುಳಸಿದ್ಧ ಕಾವ್ಯದ ವಿಮರ್ಶೆಯನ್ನುಳ್ಳ) ಮರುಳಸಿದ್ಧಾಂಕ (1949)- ಇವೆಲ್ಲ ಈ ಗುಂಪಿನವೇ. ಕಾಲದ ದೃಷ್ಟಿಯಿಂದ ಇವೆಲ್ಲಕ್ಕಿಂತ ಮೊದಲು ಪ್ರಕಟವಾದ ಮುಳಿಯ ತಿಮ್ಮಪ್ಪಯ್ಯನವರ ನಾಡೋಜ ಪಂಪ (1938) ಒಂದು ಅಸಾಮಾನ್ಯವಾದ ಕೃತಿ. ಹತ್ತಿರ ಹತ್ತಿರ ಆರು ನೂರು ಪುಟಗಳ ವಿಸ್ತಾರವಾದ ಹರವಿನಲ್ಲಿ ತಿಮ್ಮಪ್ಪಯ್ಯನವರು ಪಂಪನನ್ನು ಕುರಿತ ಆಳವಾದ ಅಧ್ಯಯನವನ್ನೂ ಅಂದಿಗೆ ಹೊಸತು ಎನಿಸುವ ಚಾರಿತ್ರಿಕ ದೃಷ್ಟಿಯನ್ನೂ ಅವನ ಕೃತಿಗಳನ್ನು ಕುರಿತಂತೆ ಹಿತಮಿತವಾದ ವಿಮರ್ಶೆಯನ್ನೂ ನೀಡಿದ್ದಾರೆ. ಪಂಪನನ್ನು ಕುರಿತು ವಿಸ್ತಾರವಾದ ಇಂಥ ಒಂದು ಅಧ್ಯಯನ, ಆದರೆ ಇನ್ನೂ ಹರಿತವಾದ, ಹೃದಯಂಗಮವಾದ, ವಿಚಾರಪೂರ್ಣವಾದ ವಿಮರ್ಶೆ ಕನ್ನಡ ವಾಚಕರಿಗೆ ದೊರೆತದ್ದು ವಿ.ಸೀತಾರಾಮಯ್ಯನವರ ಮಹಾಕವಿ ಪಂಪ (1975) ಎಂಬ ಕೃತಿಯಿಂದ. ಈ ಕೃತಿ ವಿ.ಸೀ.ಅವರ ಅರ್ಧ ಶತಮಾನದ ಅಧ್ಯಯನ, ಪೂರ್ವ ಪಶ್ಚಿಮಗಳ ಕಾವ್ಯತತ್ತ್ವಗಳ ನಿಕಟವಾದ ಪರಿಚಯ, ಪಕ್ವವಾದ ಜೀವನಾನುಭವ, ಹೃದಯಸ್ಪರ್ಶಿಯಾದ ರಸದೃಷ್ಟಿ, ನಮ್ಮ ಜೀವನ ಮಾರ್ಗಕ್ಕೆ ತೀರ ಪರಿಚಿತವಾದ ಜೀವನ ನೋಟ ಇವುಗಳೆಲ್ಲವನ್ನೂ ಒಳಗೊಂಡಿರುವ ತೂಕವಾದ ವಿಮರ್ಶೆಗೆ ಸಾರ್ವಕಾಲಿಕವಾದ ಆದರ್ಶವಾಗಿದೆ.

ತಮ್ಮ ಬರೆಹಗಳ ಬಾಹುಳ್ಯದಿಂದ ಜನಸಾಮಾನ್ಯರಿಗೆ ತುಂಬ ಪ್ರಿಯವಾಗುವ ಪದ್ಯಗಂಧಿಯಾದ ಶೈಲಿಯಿಂದ ಜನಪ್ರಿಯರಾಗಿರುವ ನಿಡುಮಾಮಿಡಿ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ (ಜ.ಚ.ನಿ.) ಅವರು ತಮ್ಮ ಹೆಮ್ಮೆಗಳು (1948) ಎಂಬ ಕೃತಿಯಲ್ಲಿ ಮುಪ್ಪಿನ ಷಡಕ್ಷರಿಯ ಹಾಡುಗಳ ವಿವರಣೆ ವಿಮರ್ಶೆಗಳನ್ನೂ ಅಲ್ಲಯ್ಯನ ಬೆಳಕು (1950) ಎಂಬ ಕೃತಿಯಲ್ಲಿ ಅಲ್ಲಮ ಪ್ರಭುವಿನ ವಚನಗಳ ವಿಮರ್ಶೆಯನ್ನೂ ನೀಡಿದ್ದಾರೆ.

ಕನ್ನಡದ ಹಿಂದಿನ ಕವಿಗಳನ್ನು ಕುರಿತು ಪ್ರಕಟಿಸಿದ ಅನೇಕ ಸಂಭಾವನಾ ಗ್ರಂಥಗಳು ಸ್ತುತಿ ಪರವಾಗಿದ್ದು ಒಳ್ಳೆಯ ವಿಮರ್ಶೆಗೆ ನಿದರ್ಶನಗಳಲ್ಲವಾದರೂ ಆಯಾ ಕವಿಗಳನ್ನು ಸಹೃದಯರಿಗೆ ಪರಿಚಯ ಮಾಡಿಕೊಡುವ ಗ್ರಂಥ'ಗಳಾಗಿ ಉಪಯುಕ್ತವಾದ ಕೆಲಸ ಮಾಡಿದವು. ಅವುಗಳಲ್ಲಿ ಮುದ್ದಣ (1926), ರನ್ನಕವಿ ಪ್ರಶಸ್ತಿ (1928), ಅಭಿನವ ಪಂಪ (1934), ಕುಮಾರವ್ಯಾಸ ಪ್ರಶಸ್ತಿ (1940), ಹರಿಹರದೇವ (1937), ಶ್ರೀ ಶಿವಯೋಗಿ ನಿಜಗುಣರ ಸ್ವರೂಪ ದರ್ಶನ (1954), ಕವಿ ಲಕ್ಷ್ಮೀಶ (1933), ಮಹಾತ್ಮ ಕನಕದಾಸ ಪ್ರಶಸ್ತಿ (1965) ಮುಂತಾದವು ಇಂಥ'ವು. ಇವುಗಳ ಜೊತೆಗೆ ಅನೇಕ ಲೇಖಕರು ತಮ್ಮ ಪ್ರಬಂಧ ಸಂಕಲನಗಳಲ್ಲಿ ಪ್ರಾಚೀನ ಕವಿಗಳನ್ನು ಕುರಿತು ತಮ್ಮ ದೃಷ್ಟಿಕೋನಗಳನ್ನು ಮಂಡಿಸಿದ್ದಾರೆ. ಇವುಗಳಲ್ಲಿ ಹೆಸರಿಸಬೇಕಾದ ಕೃತಿಗಳು ಟಿ.ಎಸ್.ವೆಂಕಣ್ಣಯ್ಯನವರ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು (1938), ತೀ.ನಂ.ಶ್ರೀಕಂಠಯ್ಯನವರ ಕಾವ್ಯಸಮೀಕ್ಷೆ (1947) ಮತ್ತು ಸಮಾಲೋಕನ (1958), ಜಿ.ಎಸ್.ಶಿವರುದ್ರಪ್ಪನವರ ಪರಿಶೀಲನ (1967) ಮತ್ತು ಗತಿಬಿಂಬ (1969), ಚೆನ್ನವೀರ ಕಣವಿಯವರ ಸಾಹಿತ್ಯ ಚಿಂತನ (1966). ಸುಜನಾ ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಎಸ್.ನಾರಾಯಣಶೆಟ್ಟರ ಹೃದಯ ಸಂವಾದ (1964) ನಮ್ಮ ವಿಮರ್ಶೆ ಏರಬಲ್ಲ ಎತ್ತರಗಳನ್ನೂ ವ್ಯಾಪಿಸಬಲ್ಲ ಹರಹನ್ನೂ ಸೂಚಿಸುತ್ತದೆ. ವಿಮರ್ಶೆಯ ಕ್ಷೇತ್ರದಲ್ಲಿ ದೇಜಗೌ ಅವರದು ಮುಖ್ಯ ಹೆಸರು. ಇವರು ಹಲವು ಗ್ರಂಥ'ಗಳಿಗೆ ಬರೆದ ಅನೇಕ ಮುನ್ನುಡಿಗಳಲ್ಲಿ ತೂಕವಾದ ವಿಮರ್ಶೆ, ಕಸುವುಳ್ಳ ಭಾಷೆಯ ಬಳಕೆ ಕಂಡುಬರುತ್ತದೆ. ಇವರ ನಂಜುಂಡ ಕವಿ, ಷಡಕ್ಷರದೇವ ಆಯಾ ಕವಿಗಳನ್ನು ಕುರಿತ ವಿಮರ್ಶಾ ಗ್ರಂಥಗಳಾಗಿವೆ.

ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯ ದಿಕ್ಕುದೆಸೆಗಳನ್ನೇ ಬದಲಿಸಲು ಪ್ರಯತ್ನಿಸಿದ ಇಬ್ಬರು ಮಹನೀಯರು ಇಲ್ಲಿ ಪ್ರತ್ಯೇಕವಾಗಿ ಉಲ್ಲೇಖಾರ್ಹರು. ಮೊದಲನೆಯವರು ಎಸ್.ವಿ.ರಂಗಣ್ಣನವರು. ಇವರ 'ಶೈಲಿ' (1944) ಕನ್ನಡ ವಿಮರ್ಶೆಯ ಜಗತ್ತಿಗೆ ಹೊಸ ಆಯಾಮವನ್ನು ತಂದ ಮೊದಲ ಕೃತಿ. ಶೈಲಿಯ ಸ್ವರೂಪವನ್ನೂ ಮಧ್ಯಮ ಶೈಲಿ, ಸಾಧಾರಣ ಶೈಲಿ ಎಂದರೇನು ಎಂಬುದನ್ನೂ ಶೈಲಿಯಲ್ಲಿ ಮಹತ್ತ್ವ ಭವ್ಯತೆಗಳ ಸ್ವರೂಪವನ್ನೂ ನಮ್ಮ ಜನತೆಗೆ ಮೊದಲಬಾರಿಗೆ ಪರಿಚಯ ಮಾಡಿಕೊಟ್ಟವರು ಇವರು. ಪಂಪ, ರನ್ನ, ರಾಘವಾಂಕ, ಕುಮಾರವ್ಯಾಸ, ಜನ್ನ, ರತ್ನಾಕರವರ್ಣಿ, ರುದ್ರಭಟ್ಟ, ಹರಿಹರ, ಲಕ್ಷ್ಮೀಶ, ನಾಗಚಂದ್ರ, ನಯಸೇನ, ಆಂಡಯ್ಯ, ಪುರಂದರದಾಸ, ಕನಕದಾಸ, ಕುಮಾರ ವಾಲ್ಮೀಕಿ, ಸರ್ವಜ್ಞ, ಹೊನ್ನಮ್ಮ, ಷಡಕ್ಷರದೇವ- ಈ ಕವಿಗಳ ಶೈಲಿಯಸ್ವರೂಪವನ್ನೂ ಅವರ ಏಳು ಬೀಳುಗಳನ್ನೂ ಧೀರ ರೀತಿಯಿಂದ ಚರ್ಚಿಸಿದ ಕೀರ್ತಿ ರಂಗಣ್ಣನವರದು. ಇಂಗ್ಲಿಷ್ ಭಾಷಾ ಸಾಹಿತ್ಯಗಳ ಪ್ರಕಾಂಡ ಪಾಂಡಿತ್ಯ, ಕನ್ನಡ ಕವಿಗಳ ಆಳವಾದ ಅಧ್ಯಯನ ಇವರ ವಾಣಿಗೆ ಅಧಿಕಾರವನ್ನೂ ದೃಷ್ಟಿಗೆ ತೀಕ್ಷ್ಣತೆಯನ್ನೂ ಒದಗಿಸಿದುವು. ಇವರ ಹೊನ್ನ ಶೂಲ (1959) ಅದುವರೆಗೆ ಅತಿ ಪ್ರಶಂಸೆಯಿಂದ ಬೀಗಿ ಬಿರಿಯುತ್ತಿದ್ದ ಅನೇಕ ಕವಿಗಳನ್ನು, ಅದರಲ್ಲೂ ಕನ್ನಡದ ಮುದ್ದಣ, ಸಂಸ್ಕೃತದ ಕಾಳಿದಾಸ- ಇವರನ್ನು ಅವರವರ ಸ್ಥಾನಗಳಿಗೆ ಕೂರಿಸಿತು.

ಎರಡನೆಯವರು ಈ ಯುಗದ ಮಹಾಕವಿಯಾದ ಕುವೆಂಪು ಅವರು. ಇವರು ಕವಿಯು ಕಣ್ಣು ಕಾವ್ಯದ ದರ್ಶನದಲ್ಲಿ ಎಂದು ಸಾರಿದರು. ವಿಮರ್ಶೆಯಲ್ಲಿ ಕಾವ್ಯ ಒಡಗೂಡುವಂತೆ ಮಾಡಿದರು. ಇವರ ಕಾವ್ಯವಿಹಾರ, ತಪೋನಂದನ (1950), ವಿಭೂತಿಪೂಜೆ (1953), ದ್ರೌಪದಿಯ ಶ್ರೀಮುಡಿ (1960), ರಸೋ ವೈ ಸಃ (1962)- ಇವು ಅಂತಃಸತ್ವದಲ್ಲಿ ಮಹಾಕವಿಯಾದವನು ಮಾತ್ರ ನಿರೂಪಿಸಬಲ್ಲ ಕಾವ್ಯ ತತ್ತ್ವಗಳನ್ನು, ನೂತನ ವಿಮರ್ಶೆಯನ್ನು ಒಳಗೊಂಡಿವೆ - ಸರೋವರದ ಸಿರಿಗನ್ನಡಿಯಲ್ಲಿ, ಪಂಪನಲ್ಲಿ ಭವ್ಯತೆ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ - ಇವು ಜಗತ್ತಿನ ಇತರ ಸಾಹಿತ್ಯಗಳಿಗೂ ಕೊಡುಗೆಯಾಗಬಲ್ಲಂಥ ವಿಮರ್ಶಾ ಪ್ರಬಂಧಗಳು. ಇವರದು ದರ್ಶನ ವಿಮರ್ಶೆ ಎಂದರೆ, ಇತರರು ಕಾಣದ ಲಾಲಿತ್ಯ ಭವ್ಯತೆಗಳನ್ನೂ ಮಹಿಮೆ ಮಾರ್ದವತೆಗಳನ್ನೂ ಕಾವ್ಯಮಯವಾಗಿ ನಿರೂಪಿಸುವ ವಿಮರ್ಶೆ.

ಪ್ರಾಚೀನ ಕವಿಗಳನ್ನು ಕುರಿತ ವಿಮರ್ಶೆ ಹಲವು ಕಾವ್ಯ ಸಂಗ್ರಹಗಳ ಮುನ್ನುಡಿಗಳಲ್ಲಿ ಹಂಚಿಹೋಗಿದೆ. ಆದಿಪುರಾಣ ಸಂಗ್ರಹದಲ್ಲಿ ಎಲ್.ಗುಂಡಪ್ಪನವರು, ಪಂಪ ರಾಮಾಯಣ ಸಂಗ್ರಹದಲ್ಲಿ ಡಿ.ಎಲ್.ನರಸಿಂಹಾಚಾರ್ಯರು, ಹರಿಶ್ಚಂದ್ರಕಾವ್ಯಸಂಗ್ರಹದಲ್ಲಿ ಎ.ಆರ್.ಕೃಷ್ಣ ಶಾಸ್ತ್ರಿಗಳು, ಭರತೇಶವೈಭವ ಸಂಗ್ರಹದಲ್ಲಿ ತ.ಸು. ಶಾಮರಾಯರು ಆಯಾ ಕವಿಗಳ ಕಾವ್ಯಶಕ್ತಿಯನ್ನು ಅಳೆದು ತೂಗಿದ್ದಾರೆ. ಆಧುನಿಕರ ಕೃತಿಗಳಿಗೆ ಬರೆದ ಮುನ್ನುಡಿಗಳಲ್ಲಿಯೂ ಇಂಥ ವಿಮರ್ಶೆ ಅಡಗಿದ್ದು ಮಾಸ್ತಿಯವರ ಪೂಜನ, ಪು.ತಿ.ನ. ಅವರ ಕಾವ್ಯ ಕುತೂಹಲ ಸಂಕಲನಗಳಾಗಿ ಪ್ರಕಟಗೊಂಡಿವೆ. ಅಭಿನವಗುಪ್ತ, ಮಿಡ್ಲ್‌ಟನ್ ಮರ್ರಿ ಮುಂತಾದವರಂತೆ ಸ್ವತಂತ್ರವಾಗಿ ಪ್ರತಿಭಾ ಪೂರ್ಣವಾಗಿ ಕಾವ್ಯಮೀಮಾಂಸೆಯ ಮೂಲತತ್ತ್ವಗಳನ್ನು ನೂತನವಾಗಿ ನಿರೂಪಿಸಬಲ್ಲ ಪು.ತಿ.ನ. ಅವರ ಶಕ್ತಿ ಕಾವ್ಯಕುತೂಹಲದ ಪುಟಗಳಲ್ಲಿ ಮಡುಗಟ್ಟಿ ನಿಂತಿದೆ.

ಒಂದು ಕೃತಿಯನ್ನು ಕುರಿತು ಅಪೂರ್ವವಾದ ರೀತಿಯಲ್ಲಿ ಒಬ್ಬ ಲೇಖಕರು ವಿಚಾರ ನಡೆಸಿರುವ ಒಂದು ಮಹತ್ತ್ವದ ಕೃತಿ ಎಂದರೆ ಸಂ.ಶಿ.ಭೂಸನೂರಮಠ ಅವರ ಶೂನ್ಯಸಂಪಾದನೆಯ ಪರಾಮರ್ಶೆ (1969). ಇದು ಕನ್ನಡ ವಿಮರ್ಶೆಯ ಕ್ಷೇತ್ರದಲ್ಲಿ ಮೂಲವನ್ನು ಪ್ರವೇಶಿಸಿ, ಅದನ್ನು ಮತ್ತೆ ಹೊಸದಾಗಿ ಸೃಷ್ಟಿಸಿ, ರಸಾನುಭವವನ್ನು ಅನುಭಾವದ ಅನುಭೂತಿಯನ್ನು ಸಹೃದಯರಿಗೆ ಒದಗಿಸುವ ಕೃತಿ.

ವಿಮರ್ಶೆಯ ಕ್ಷೇತ್ರವನ್ನು ಶ್ರೀಮಂತಗೊಳಿಸುವುದರಲ್ಲಿ ನೆರವಾದ ಒಂದು ಉದ್ಯಮ ಎಂದರೆ ಸಂಸ್ಕೃತ ಕವಿಗಳನ್ನೂ ಅವರ ಕೃತಿಗಳನ್ನೂ ಪರಿಚಯ ಮಾಡಿಕೊಡಲು ನಡೆದ ಪ್ರಯತ್ನ. ಈ ಗುಂಪಿನಲ್ಲಿ ಆಚಾರ್ಯಕೃತಿ ಎ.ಆರ್.ಕೃಷ್ಣಶಾಸ್ತ್ರಿಗಳ ಸಂಸ್ಕೃತ ನಾಟಕ. ಸಂಸ್ಕೃತ ನಾಟಗಳನ್ನು ಕುರಿತು ಇಂಥ ಒಂದು ಕೃತಿ ಇಂಗ್ಲಿಷ್‌ನಲ್ಲಾಗಲೀ ಬೇರಾವುದೇ ದೇಶಭಾಷೆಗಳಲ್ಲಾಗಲಿ ಪ್ರಕಟವಾಗಿಲ್ಲ ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಅವರದೇ 'ಭಾಸಕವಿ' (1933) ಕೂಡ ಈ ಗುಂಪಿಗೆ ಸೇರುವಂಥದ್ದು. ಇತರ ಕೃತಿಗಳು ಸಿ.ಕೆ.ವೆಂಕಟರಾಮಯ್ಯನವರ ಕಾಳಿದಾಸ ಮಹಾಕವಿ (1966), ನಾರಾಯಣ ವೆಂಕಟೇಶ ಕುರಡಿಯವರ ಶ್ರೀಹರ್ಷನ ನಾಟಕಗಳು (1930), ಎಂ.ಸುಬ್ರಾಯನ್ ಅವರ ವಿಶ್ವಕವಿ ಕಾಳಿದಾಸ ಕೃತಿದರ್ಶನ, ಸಿ.ಆರ್.ಹೊಸಲಯ್ಯನವರ ಸಂಸ್ಕೃತಿ (1955), ಎಂ.ರಾಜಗೋಪಾಲ ಆಚಾರ್ಯ ಅವರ ಕಾಳಿದಾಸನ ಉಪಮೆಗಳು (1967). ವಿ.ಸೀ. ಅವರು ತಮ್ಮ ಅಭಿಜ್ಞಾನ ಶಾಕುಂತಲ (1943) ಗ್ರಂಥದಲ್ಲಿ ಕಾಳಿದಾಸನ ಶಾಕುಂತಲದ ಬಗ್ಗೆ ಸಮಗ್ರ ವಿಮರ್ಶೆಯನ್ನೂ ಕೆ.ಕೃಷ್ಣಮೂರ್ತಿಗಳು ಕಾಳಿದಾಸನ ನಾಟಕಗಳು ಮತ್ತು ಭವಭೂತಿ ಎಂಬ ಎರಡು ಪುಟ್ಟ ಪುಸ್ತಕಗಳಲ್ಲಿ ಆ ಕವಿಗಳ ಕೃತಿಗಳಿಗೆ ಪ್ರವೇಶವನ್ನೂ ದೊರಕಿಸಿಕೊಟ್ಟಿದ್ದಾರೆ.

ಮಾಸ್ತಿಯವರ 'ಆದಿಕವಿ ವಾಲ್ಮೀಕಿ' ಒಂದು ರಸಸೃಷ್ಟಿ, ಇಲ್ಲಿ ವಿಮರ್ಶೆ ಕಾವ್ಯವಾಗಿ ಹರಿದಿದೆ. ವಾಲ್ಮೀಕಿ ರಾಮಾಯಣದ ಶಿಖರಗಳನ್ನೂ ವಾಲ್ಮೀಕಿಯ ಪ್ರತಿಭೆಯ ನೂರಾರು ಮುಖಗಳನ್ನೂ ಆ ಮಹಾಕವಿಯ ಹೃದಯದ ನವಿರು ಕೋಮಲತೆಗಳನ್ನೂ ಮನೋಜ್ಞವಾದ ರೀತಿಯಲ್ಲಿ ಮಾಸ್ತಿಯವರು ಪರಿಚಯ ಮಾಡಿಕೊಟ್ಟಿದ್ದಾರೆ. ವಾಲ್ಮೀಕಿ ರಾಮಾಯಣವನ್ನು ಕುರಿತ ಇನ್ನೊಂದು ಕೃತಿ ವಿ.ಸೀತಾರಾಮಯ್ಯನವರದು.

ಎಸ್.ವಿ. ರಂಗಣ್ಣನವರು ಶಾಕುಂತಲ ನಾಟಕದ ವಿಮರ್ಶೆ ಮತ್ತು ವಿಕ್ರಮೋರ್ವಶೀಯ ನಾಟಕದ ವಿಮರ್ಶೆ (1960)- ಈ ಗ್ರಂಥಗಳಲ್ಲಿ ಕವಿಕುಲಗುರು ಎಂಬ ಕಾಳಿದಾಸನ ಪ್ರಶಸ್ತಿಯನ್ನು ತರ್ಕಬದ್ಧವಾಗಿ ಪ್ರಶ್ನಿಸಿದ್ದಾರೆ. ಸೊಗಸಾದ ವಾದವೈಖರಿಯಿಂದಲೂ ಉದಾರವಾದರೂ ತೀಕ್ಷ್ಣವಾದ ವಿಮರ್ಶನ ಶಕ್ತಿಯಿಂದಲೂ ಕಾಳಿದಾಸನ ಮೌಲ್ಯಮಾಪನ ಮಾಡಿದ್ದಾರೆ. ವಿಮರ್ಶೆಯ ಮೇಲೆ ಹಿಡಿತವುಳ್ಳ ಇವರ ಬರವಣಿಗೆ ಮೆಚ್ಚುವಂಥದ್ದು.

ವಿಮರ್ಶೆಯ ಮೂಲತತ್ತ್ವಗಳನ್ನು ಕುರಿತು ಅತ್ಯಗತ್ಯವಾದ ಪರಿಚಯ ಕೃತಿಗಳನ್ನು ಕೆಲವರು ನೀಡಿದ್ದಾರೆ. ವಿಮರ್ಶೆ ಎಂದರೆ ಏನು ಎಂಬುದನ್ನು ಸರಳವಾದ ಮಾತುಗಳಲ್ಲಿ ನಮಗೆ ತಿಳಿಯಹೇಳಿದ ಮೊದಲಿಗರು ಮಾಸ್ತಿಯವರು. 1926ರಲ್ಲಿ ಪ್ರಕಟವಾದ ಇವರ ವಿಮರ್ಶೆ ಎಂಬ ಗ್ರಂಥದಲ್ಲಿ ಸಾಹಿತ್ಯ ವಿಮರ್ಶೆಯ ಕಾರ್ಯ ಎಂಬ ಲೇಖನವಿದೆ. ಪೂರ್ವ ಪಶ್ಚಿಮಗಳ ಸಾಹಿತ್ಯ ಮತ್ತು ವಿಮರ್ಶೆಯ ಆಳವಾದ ಪಾಂಡಿತ್ಯವುಳ್ಳ ಈ ಹಿರಿಯರು ತಮ್ಮ ಕವಿಸಹಜವಾದ ದೃಷ್ಟಿಯಿಂದ ಅನನುಕರಣೀಯವಾದ ಸರಳ ಶೈಲಿಯಲ್ಲಿ ವಿಮರ್ಶೆಯ ಮೂಲತತ್ತ್ವಗಳನ್ನು ಅಡಕವಾಗಿ ಆ ಪ್ರಬಂಧದಲ್ಲಿ ನಿರೂಪಿಸಿದ್ದಾರೆ. ಅನಂತರದ ವರ್ಷಗಳಲ್ಲಿ ಎಷ್ಟೋ ಬಗೆಯ ವಿಮರ್ಶೆಗಳು ಬೆಳೆದರೂ ವಿಮರ್ಶೆಯ ಮೂಲ ತತ್ತ್ವಗಳನ್ನು ಕುರಿತ ಗ್ರಂಥಗಳು ನಮ್ಮಲ್ಲಿ ಕಡಮೆ. ಇದುವರೆಗೆ ನಮ್ಮಲ್ಲಿ ಪ್ರಕಟವಾಗಿರುವ ವಿಮರ್ಶೆಯ ಮುಕ್ಕಾಲು ಮೂರು ವೀಸ ಪಾಲು ಆನ್ವಯಿಕ ವಿಮರ್ಶೆ. ವಿಮರ್ಶೆಯ ಸಿದ್ಧಾಂತಗಳನ್ನು ತಿಳಿಸುವುದಕ್ಕೆಂದು ಹೊರಟಿರುವ ಕೆಲವು ಪುಸ್ತಕಗಳು ಇವು - ವಿ.ಕೃ.ಗೋಕಾಕರ ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು (1946), ಸ.ಸ.ಮಾಳವಾಡರ ಪುಸ್ತಕ ಪ್ರಪಂಚ (1956), ಮಿರ್ಜಿ ಅಣ್ಣಾರಾಯರ ವಿಮರ್ಶೆಯ ಸ್ವರೂಪ (1959), ಜಿ.ಎಸ್.ಶಿವರುದ್ರಪ್ಪನವರ ವಿಮರ್ಶೆಯ ಪೂರ್ವಪಶ್ಚಿಮ (1961), ಎಚ್.ತಿಪ್ಪೇರುದ್ರಸ್ವಾಮಿಗಳ ಸಾಹಿತ್ಯ ವಿಮರ್ಶೆಯ ಮೂಲತತ್ತ್ವಗಳು (1970), ರಂ.ಶ್ರೀ.ಮುಗಳಿಯವರ ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು (1969).

ವಿಮರ್ಶೆಯ ಶಾಸ್ತ್ರೀಯವಾದ ವಿವೇಚನೆ ಮೊಟ್ಟಮೊದಲ ಬಾರಿಗೆ ಪ್ರಶಂಸನೀಯವಾದ ರೀತಿಯಲ್ಲಿ ಸಮಗ್ರವಾಗಿ ಪುಸ್ತಕರೂಪದಲ್ಲಿ ಪ್ರಕಟವಾದದ್ದು ಜಿ.ಎಸ್.ಶಿವರುದ್ರಪ್ಪನವರ ವಿಮರ್ಶೆಯ ಪೂರ್ವ ಪಶ್ಚಿಮದಲ್ಲಿ. ಈ ಲೇಖಕರಿಗೆ ಅನೇಕ ರೀತಿಯ ಅನುಕೂಲತೆಗಳು ದೊರೆತಿದ್ದವು. ಮೊದಲನೆಯದು ಪಾಶ್ಚಾತ್ಯ ಮತ್ತು ಪೌರ್ವಾತ್ಯ ಕಾವ್ಯಮೀಮಾಂಸೆಗಳ ಶಾಸ್ತ್ರೀಯವಾದ ಅಧ್ಯಯನ, ಕುವೆಂಪು ಅವರಂಥ ಸಮರ್ಥ ಗುರುಗಳ ಬೋಧನ, ಮಾರ್ಗದರ್ಶನ; ಜೊತೆಗೆ ತಾವೇ ಕವಿಗಳಾದುದರಿಂದ ಕವಿಮನಸ್ಸು ಕೆಲಸ ಮಾಡುವ ರೀತಿಯ ನಿಕಟವಾದ

ಪರಿಚಯ, ಇವೆಲ್ಲದರ ಜೊತೆಗೆ ಆಕರ್ಷಕವಾದ ಶೈಲಿ - ಹೀಗಾಗಿ ಈ ಕೃತಿ ಕಾಲದಲ್ಲಿ ಹೇಗೋ ಹಾಗೆ ಗುಣದಲ್ಲೂ ವಿಮರ್ಶೆಯ ಮೂಲತತ್ತ್ವಗಳಿಗೆ ಅನುಗುಣವಾಗಿದೆ. ಭಾರತೀಯಕಾವ್ಯಮೀಮಾಂಸೆಯ ವಿಸ್ತಾರವಾದ ಹಿನ್ನೆಲೆಯಲ್ಲಿ ಪಾಶ್ಚಾತ್ಯ ವಿಮರ್ಶೆಯ ಮೂಲಭೂತ ಸಿದ್ಧಾಂತಗಳನ್ನು ತಿಪ್ಪೇರುದ್ರಸ್ವಾಮಿಯವರು ತಮ್ಮ ಗ್ರಂಥದಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಈ ಇಬ್ಬರ ಕೃತಿಗಳ ವೈಶಿಷ್ಟ್ಯವೆಂದರೆ ಇಬ್ಬರೂ ಆಧುನಿಕ ಮನಶ್ಶಾಸ್ತ್ರದ ಬೆಳಕಿನಲ್ಲಿ ವಿಮರ್ಶೆಯ ನಡೆಯನ್ನು ಗುರುತಿಸಿರುವುದು.

ವಿಮರ್ಶೆಯ ಮೂಲತತ್ತ್ವಗಳಿಗೆ ಸಂಬಂಧಿಸಿದಂತೆ ವಿಶೇಷವಾಗಿ ಉಲ್ಲೇಖಿಸಬೇಕಾದ ಇನ್ನೊಂದು ಕೃತಿ. ಬಿ.ಎಚ್.ಶ್ರೀಧರರ ಕಾವ್ಯಸೂತ್ರ (1968). ಪ್ಲೇಟೋ, ಲಾಂಜೈನಸ್, ಉಲ್ಫ್‌ಡೋವರ್ ವಿಲ್ಸನ್, ಹೊರೇಸ್, ಡೆಮಿಟ್ರಿಯಸ್, ಐ.ಎ.ರಿಚರ್ಡ್ಸ್ ಮುಂತಾದವರ ವಿಮರ್ಶೆಯ ಪ್ರಕ್ರಿಯೆಗಳಿಂದ ಹಿಡಿದು ಮಾರ್ಕ್ಸ್‌ವಾದೀಯ ವಿಮರ್ಶೆ, ಮನೋವಿಶ್ಲೇಷಣಾತ್ಮಕ ವಿಮರ್ಶೆ, ಭಾಷಾಶಾಸ್ತ್ರೀಯ ಶೈಲಿ, ವಿವೇಚನಾತ್ಮಕ ವಿಮರ್ಶೆ- ಇವೆಲ್ಲವನ್ನೂ ಅತ್ಯಾಧುನಿಕ ಪಾಶ್ಚಾತ್ಯ ವಿಮರ್ಶಕರ ವಾದಗಳನ್ನೂ ತಮ್ಮದೇ ಆದ ಶಾಸ್ತ್ರೀಯ ಶೈಲಿಯಲ್ಲಿ ಶ್ರೀಧರರು ಮಂಡಿಸಿದ್ದಾರೆ. ಇತರ ವಿಮರ್ಶಕರ ದೃಷ್ಟಿಗಳನ್ನು ನಿರೂಪಿಸಿ ಕೈಬಿಟ್ಟು ಬಿಡದೆ ಅವುಗಳನ್ನು ಅರಗಿಸಿಕೊಂಡು ಶ್ರೀಧರರು ಸ್ವತಂತ್ರವಾಗಿ ಆಲೋಚಿಸಬಲ್ಲ ಶಕ್ತಿಯನ್ನು ತೋರಿಸಿದ್ದಾರೆ. ಒಂದು ರೀತಿಯಿಂದ ಈ ಕೃತಿಯನ್ನು ವಿಮರ್ಶೆಯ ಸಿದ್ಧಾಂತಗಳ ಕಿರಿಯ ವಿಶ್ವಕೋಶ ಎನ್ನಬಹುದು.

ಸಾಹಿತ್ಯ ವಿಮರ್ಶೆ ಗಟ್ಟಿಯಾದ ತಳಹದಿಯ ಮೇಲೆ ನಿಂತು ಸರ್ವತೋಮುಖವಾಗಿ ಬೆಳೆಯಬೇಕಾದರೆ ಪ್ರಪಂಚದ ಪ್ರಬುದ್ಧ ಸಾಹಿತ್ಯಗಳನ್ನು ವಿಶ್ಲೇಷಣೆಗೆ ಗುರಿಪಡಿಸಿರುವ ಮೀಮಾಂಸಕಾರರು ನಿರೂಪಿಸಿದ ತತ್ತ್ವಗಳನ್ನು ಪರಿಚಯ ಮಾಡಿಕೊಳ್ಳಬೇಕಾದದ್ದು ಅಗತ್ಯ. ಈ ದೃಷ್ಟಿಯಿಂದ ಅರಿಸ್ಟಾಟಲನ ಕಾವ್ಯಮೀಮಾಂಸೆ (1959) ಮತ್ತು ಹೊರೇಸನ ಸಾಹಿತ್ಯ ವಿಮರ್ಶೆ (1969)- ಈ ಎರಡೂ ಎನ್.ಬಾಲಸುಬ್ರಹ್ಮಣ್ಯ ಅವರು ಕನ್ನಡಕ್ಕೆ ನೀಡಿದ ಅಪೂರ್ವ ಕಾಣಿಕೆಗಳು. ತಮ್ಮ ಪ್ರಕಾಂಡ ಪಾಂಡಿತ್ಯ, ನಿಷ್ಕೃಷ್ಟವಾದ ನಿರೂಪಣೆ, ಪ್ರಖರವಾದ ವಿಮರ್ಶನ ಶಕ್ತಿಗಳನ್ನು ಹಾಳತವಾಗಿ ಬೆರಸಿ, ಈ ಪ್ರಾಚೀನರ ಆಚಾರ್ಯಕೃತಿಗಳನ್ನು ಮೋಹಕವಾದ ಕನ್ನಡ ಶೈಲಿಯಲ್ಲಿ ನೀಡಿ ಬಾಲಸುಬ್ರಹ್ಮಣ್ಯ ಅವರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಹಾಗೆಯೇ ಅಬರಕ್ರಾಂಬಿಯ ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ ಗ್ರಂಥವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಸಾಹಿತ್ಯ ವಿಮರ್ಶೆಯ ತತ್ತ್ವಗಳು (1964) ಎಂಬ ಹೆಸರಿನಿಂದಲೂ ವಿಲಿಯಂ ಹೆನ್ರಿ ಹಡ್ಸನನ ಇಂಟ್ರೋಡಕ್ಷನ್ ಟು ದಿ ಸ್ಟಡಿ ಆಫ್ ಲಿಟರೇಚರ್ ಎಂಬ ಕೃತಿಯನ್ನು ಸಾಹಿತ್ಯಪ್ರವೇಶ (1965) ಎಂಬ ಹೆಸರಿನಿಂದಲೂ ಅನುವಾದ ಮಾಡಿಕೊಟ್ಟಿದ್ದಾರೆ. ಇವರ ಪಾಶ್ಚಾತ್ಯ ಕಾವ್ಯಚಿಂತನ (1970) ಎಂಬ ಗ್ರಂಥದಲ್ಲಿ ಲೀ ಹಂಟ್, ಎಮರ್ಸನ್, ಜಾನ್ ಸ್ಟುಯರ್ಟ್ ಮಿಲ್, ಜೇವರ್ಸ್, ರಸೆಲ್ ಲೊವೆಲ್, ಮ್ಯಾಥ್ಯೂ ಆರ್ನಾಲ್ಡ್, ಜಾರ್ಜ್ ಸಂತಾಯನ ಮತ್ತು ಎ.ಸಿ.ಬ್ರಾಡ್ಲೆ ಅವರ ಕಾವ್ಯಚಿಂತನೆಗಳ ಅನುವಾದ ಇದೆ. ಈ ಅನುವಾದಗಳ ಸಾಲಿನಲ್ಲೇ ಹೆಸರಿಸಬೇಕಾದ ಇತರ ಕೃತಿಗಳು ಇನ್ನೂ ಕೆಲವಿವೆ. ಜಿ.ಗುಂಡಣ್ಣನವರು ವರ್ಡ್ಸ್‌ವರ್ತ್ ಕವಿಯ 'ಲಿರಿಕಲ್ ಬ್ಯಾಲೆಡ್ಸ್' ಮುನ್ನುಡಿಯನ್ನು ಕಾವ್ಯ ಮತ್ತು ಶಬ್ದದ ರೀತಿ (1961) ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಜಿ.ಗುಂಡಣ್ಣನವರು ಮತ್ತು ಸಿ.ಮಹಾದೇವಪ್ಪನವರು ಷೆಲ್ಲಿಯ ಡಿಫೆನ್ಸ್ ಆಫ್ ಪೊಯೆಟ್ರಿಯನ್ನು ಕಾವ್ಯ ಸಮರ್ಥನೆ (1956) ಎಂಬ ಹೆಸರಿನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಅನುವಾದ ಮಾಡಿದ್ದಾರೆ (ಈ ಕೃತಿಯ ಸರಳಾನುವಾದವನ್ನು ಬಹಳ ಹಿಂದೆಯೇ 1930ರ ಸುಮಾರಿನಲ್ಲಿ ಕುವೆಂಪು ಅವರು ಮಾಡಿದ್ದರು). ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಷೋಪೆನ್ ಹೋವರನ ನಾಲ್ಕು ಸಾಹಿತ್ಯ ಪ್ರಬಂಧಗಳ ಅನುವಾದಗಳನ್ನು ಸಾಹಿತ್ಯದ ಜೀವಾಳ ಎಂಬ ಹೆಸರಿನಲ್ಲಿ ಪ್ರಕಟಿಸಿದರು (1942). ಎಸ್.ಬ್ರಾಡ್‌ಬ್ರೂಕನ ಟಿ.ಎಸ್.ಎಲಿಯಟ್ ಎಂಬ ಗ್ರಂಥ'ವನ್ನು ಬಿ.ಎಚ್.ಶ್ರೀಧರ ಅವರು ಅನುವಾದ ಮಾಡಿದ್ದಾರೆ.

ವಿಮರ್ಶೆಯನ್ನು ಬೆಳೆಸುವುದರಲ್ಲಿ ನೆರವಾದ ಕೆಲವು ಡಾಕ್ಟೊರೇಟ್ ಪ್ರಬಂಧಗಳನ್ನು ಹೆಸರಿಸಬಹುದು. ಪ್ರಭುಶಂಕರರ ಕನ್ನಡದಲ್ಲಿ ಭಾವಗೀತೆ (1966), ಜಿ.ಎಸ್.ಶಿವರುದ್ರಪ್ಪನವರ ಸೌಂದರ್ಯ ಸಮೀಕ್ಷೆ (1965), ಎಚ್.ತಿಪ್ಪೇರುದ್ರಸ್ವಾಮಿಯವರ ಶರಣರ ಅನುಭಾವ ಸಾಹಿತ್ಯ (1963) ಇಂಥವು. ಪದವಿಗಾಗಿ ಬರೆದ ಮಹಾ ಪ್ರಬಂಧಗಳಲ್ಲಿ ತ.ಸು.ಶಾಮರಾಯರ ಕನ್ನಡನಾಟಕ (1961) ಒಂದು ಗಮನಾರ್ಹ ಕೃತಿ.

ಇದೇ ಗುಂಪಿನಲ್ಲಿ ಎದ್ದುನಿಲ್ಲುವ ಒಂದು ಉತ್ತಮ ಕೃತಿ ಎಸ್.ಅನಂತನಾರಾಯಣ ಅವರ ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ (1962). ಕನ್ನಡದ ವಿವಿಧ ಕಾವ್ಯಪ್ರಕಾರಗಳ ಮೇಲೆ ಇಂಗ್ಲಿಷ್ ಕಾವ್ಯ ಬೀರಿರುವ ಪ್ರಭಾವವನ್ನು ಅನಂತನಾರಾಯಣ ಅವರು ಅಭಿನಂದನೀಯವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಅವರದ್ದೇ ಕಾರಂತರ ಕಾದಂಬರಿಗಳು (1948) ಮತ್ತು ಪ್ರಸಿದ್ಧ ವಿದ್ವಾಂಸರಾದ ಎಲ್.ಎಸ್.ಶೇಷಗಿರಿರಾಯರ ಕಾದಂಬರಿ - ಸಾಮಾನ್ಯ ಮನುಷ್ಯ (1952)- ಇವು ಒಂದು ಸಾಹಿತ್ಯ ರೂಪದ ಅಭ್ಯಾಸದ ದಾರಿಯನ್ನು ತೆರೆದ ಕೃತಿಗಳು.

ಹೊರಭಾಷೆಯ ಸಾಹಿತ್ಯಗಳ ವಿಮರ್ಶೆಗೆ ಸಂಬಂಧಿಸಿದಂತೆ ಅಭಿಮಾನ ಪಡಬಹುದಾದ ಎರಡು ಕೃತಿಗಳನ್ನು ಹೆಸರಿಸಬೇಕು. ಒಂದು ಎ.ಆರ್.ಕೃಷ್ಣಶಾಸ್ತ್ರಿಗಳ ಬಂಕಿಮಚಂದ್ರ (1960), ಬಂಗಾಲಿ ಭಾಷೆಯಲ್ಲೂ ಆ ಪ್ರಸಿದ್ಧ ಕಾದಂಬರಿಕಾರರನ್ನು ಕುರಿತು ಇಂಥ ವಿಸ್ತಾರವಾದ ಸಮರ್ಥ ವಿಮರ್ಶಾ ಗ್ರಂಥ ಪ್ರಕಟವಾಗಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ. ಎರಡನೆಯದು ಎ.ಎನ್.ಮೂರ್ತಿರಾಯರ ಷೇಕ್ಸ್‌ಪಿಯರ್ (ಅಪೂರ್ಣ), ಅಪೂರ್ವವಾದ ವಿದ್ವತ್ತು, ಅಭಿನಂದನೀಯವಾದ ಸಹೃದಯತೆಗಳು ಎಂಥ ತೂಕವಾದ ವಿಮರ್ಶೆಯನ್ನು ನೀಡಬಲ್ಲುವು ಎಂಬುದಕ್ಕೆ ಮೂರ್ತಿರಾಯರ ಕೃತಿ ನಿದರ್ಶನ. ವಿಮರ್ಶೆಯಲ್ಲಿ ಒಂದು ಮೇರುಕೃತಿ ಎಸ್.ವಿ.ರಂಗಣ್ಣನವರ ಪಾಶ್ಚಾತ್ಯಗಂಭೀರ ನಾಟಕಗಳು (1970). ಗಂಭೀರನಾಟಕಗಳ ಬೆಳವಣಿಗೆಯನ್ನು ಗ್ರೀಕ್ ಯುಗದಿಂದ ಇಂದಿನವರೆಗೆ ಸಾವಿರದ ಇನ್ನೂರು ಪುಟಗಳ ಹರವಿನಲ್ಲಿ ಚಿತ್ರಿಸಿರುವ ರಂಗಣ್ಣನವರು ತಮ್ಮ ಅರ್ಧಶತಮಾನದ ಅಧ್ಯಯನದ ಫಲವನ್ನೂ ಪರಿಣತ ವಿಮರ್ಶಾದೃಷ್ಟಿಯ ಸಾಧನೆಯನ್ನೂ ಈ ಗ್ರಂಥದಲ್ಲಿ ಏಕತ್ರ ಸಂಗಮಗೊಳಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ವಿಮರ್ಶೆಯ ಇತಿಹಾಸದಲ್ಲಿ ಕೀರ್ತಿನಾಥ' ಕುರ್ತುಕೋಟಿಯವರಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಸಾಹಿತ್ಯದ ಮುಖ್ಯ ಪ್ರಕಾರಗಳನ್ನೆಲ್ಲ ಪರಿಶೀಲಿಸಿ ವಿಮರ್ಶಿಸ ಹೊರಟಿರುವ ಇವರ ಧೈರ್ಯ ಅಪಾರವಾದದ್ದು. ಇವರ ಅಧ್ಯಯನದ ವ್ಯಾಪ್ತಿ ಹಿರಿದು. ಇವರು ಹೇಳುವ ಎಲ್ಲ ಮಾತನ್ನೂ ಎಲ್ಲರೂ ಒಪ್ಪುವುದು ಸಾಧ್ಯವಿಲ್ಲ ಎಂಬುದು ಇವರ ವಿಮರ್ಶೆಗೆ ಮಾತ್ರವಲ್ಲದೆ ಎಲ್ಲ ವಿಮರ್ಶೆಗೂ ಅನ್ವಯಿಸುವಂಥ' ಮಾತು. ಇವರ ಯುಗಧರ್ಮ ಹಾಗೂ ಸಾಹಿತ್ಯ (1963) ದರ್ಶನವಿಚಾರಕ್ಕೆ, ವಿಮರ್ಶೆಗೆ ವಿಶೇಷ ಆಸ್ಪದ ನೀಡಿರುವ ವಿಮರ್ಶಾಕೃತಿ.

ನವ್ಯ ಸಾಹಿತ್ಯ ಆರಂಭವಾದ ಮೇಲೆ ಹೊಸ ವಿಮರ್ಶೆಯ ರೀತಿಯೂ ಕನ್ನಡಕ್ಕೆ ಬಂತು. ಎಲ್.ಎಸ್.ಶೇಷಗಿರಿರಾಯರು ಹೇಳುತ್ತಾರೆ: ಈ ಸಾಹಿತ್ಯ ವಿಮರ್ಶೆಯಲ್ಲಿ ಕೃತಿಯೇ ಸರ್ವಸ್ವವಾದ್ದರಿಂದ ಕೃತಿಕಾರ ಏನನ್ನೇ ಹೇಳಬೇಕಾದರೂ ಭಾಷೆಯ ಮೂಲಕ ಮಾತ್ರ ಹೇಳಬಲ್ಲ ಎಂಬ ನಂಬಿಕೆ ಇರುವುದರಿಂದ ಕೃತಿಯ ವಿವರವಾದ, ಸೂಕ್ಷ್ಮವಾದ ಅಧ್ಯಯನ ಮುಖ್ಯವಾಯಿತು. ಒಂದು ಕವನ, ನಾಟಕ ಅಥವಾ ಕಾದಂಬರಿ ಸಾವಯವ ಶಿಲ್ಪ. ಹೇಗೆ ಮನುಷ್ಯನ ಅಂಗಾಂಗಗಳೆಲ್ಲ ಸೇರಿ ದೇಹವಾಗಿದೆಯೋ ಹಾಗೆ ವಸ್ತು, ಪಾತ್ರ, ಆವರಣ, ತಂತ್ರ ಎಲ್ಲ ಸೇರಿ ಕೃತಿ. ಮೊದಲು ಭಾವ, ಅನಂತರ ಭಾಷೆ, ತಂತ್ರಗಳ ಆಯ್ಕೆ ಎನ್ನುವುದಿಲ್ಲ. ಇದನ್ನು ಸದಾ ಲಕ್ಷ್ಯದಲ್ಲಿಟ್ಟುಕೊಂಡೇ ವಿಮರ್ಶಕ ಕೃತಿಯ ಅರ್ಥ'ವನ್ನು ಗ್ರಹಿಸಲು ಪ್ರಯತ್ನಿಸುತ್ತಾನೆ. ನವ್ಯ ವಿಮರ್ಶೆಯ ಕೃತಿ ವಿಶ್ಲೇಷಣಾ ರೀತಿಯನ್ನು ಅದರ ವೈವಿಧ್ಯವನ್ನು ಜಿ.ಎಸ್.ಶಿವರುದ್ರಪ್ಪನವರೂ ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟರೂ ಸಂಪಾದಿಸಿರುವ ಪ್ರಾಯೋಗಿಕ ವಿಮರ್ಶೆ ಎಂಬ ಗ್ರಂಥದಿಂದ ಪರಿಚಯ ಮಾಡಿಕೊಳ್ಳಬಹುದು.

ಎಂ.ಗೋಪಾಲಕೃಷ್ಣ ಅಡಿಗರ ನಡೆದು ಬಂದ ದಾರಿ ಸಂಗ್ರಹಕ್ಕೆ ಬರೆದ ಮುನ್ನುಡಿಯಿಂದ ಪ್ರಾರಂಭವಾದ ನವ್ಯವಿಮರ್ಶೆ ಸಾಕ್ಷಿ, ಸಂಕ್ರಮಣ

ಪತ್ರಿಕೆಗಳ ನೆರವಿನಿಂದಲೂ ಅನೇಕ ವಿಮರ್ಶಕರಿಂದಲೂ ಬೆಳೆಯುತ್ತ ಬಂದಿದೆ. ಯು.ಆರ್.ಅನಂತಮೂರ್ತಿ, ಎಂ.ಜಿ.ಕೃಷ್ಣಮೂರ್ತಿ, ಪಿ.ಲಂಕೇಶ್, ಗಿರಡ್ಡಿ ಗೋವಿಂದರಾಜ, ಜಿ.ಎಚ್.ನಾಯಕ, ಎಚ್.ಎಂ.ಚನ್ನಯ್ಯ, ಬರಗೂರು ರಾಮಚಂದ್ರಪ್ಪ, ರಾಮಚಂದ್ರದೇವ, ಮಾಧವ ಕುಲಕರ್ಣಿ - ಇವರೆಲ್ಲ ಈ ಕ್ಷೇತ್ರದಲ್ಲಿ ಕೃಷಿ ಮಾಡಿದ ಅನೇಕ ವಿಮರ್ಶಕರಲ್ಲಿ ಕೆಲವರು. ಯು.ಆರ್.ಅನಂತಮೂರ್ತಿಯವರ ಪ್ರಜ್ಞೆ ಮತ್ತು ಪರಿಸರ (1971), ಎಂ.ಜಿ.ಕೃಷ್ಣಮೂರ್ತಿಯವರ ಆಧುನಿಕ ಭಾರತೀಯ ಸಾಹಿತ್ಯ (1970), ಜಿ.ಎಚ್.ನಾಯಕರ ಸಮಕಾಲೀನ (1974), ಎಚ್.ಎಂ.ಚನ್ನಯ್ಯನವರ ಜಿಜ್ಞಾಸೆ (1975), ಎಸ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಹೊರಳು ದಾರಿಯಲ್ಲಿ ಕಾವ್ಯ, ಜಿ.ಎಸ್.ರಂಗನಾಥರಾವ್ ಅವರ ಹೊಸ ತಿರುವು, ಗಿರಡ್ಡಿ ಗೋವಿಂದರಾಜರ ಸಣ್ಣಕತೆಯ ಹೊಸ ಒಲವುಗಳು- ಇವೆಲ್ಲ ಗಮನಿಸಬೇಕಾದ ವಿಮರ್ಶೆಯ ಕೃತಿಗಳು. ಗೋಪಾಲಕೃಷ್ಣ ಅಡಿಗರನ್ನು ಕುರಿತು ಬರೆದ ಸುಮತೀಂದ್ರ ನಾಡಿಗರ ಗೋಪಾಲಕೃಷ್ಣ ಅಡಿಗ ಒಂದು ಕಾವ್ಯಾಭ್ಯಾಸ ಅಡಿಗರ ಕಾವ್ಯಧೋರಣೆಯನ್ನು ಅರ್ಥಮಾಡಿಕೊಳ್ಳಲು ಉತ್ತಮ ಪ್ರವೇಶಿಕೆಯಾಗಿದೆ. ವಿಮರ್ಶಕರಾಗಿ ಪ್ರಖ್ಯಾತರಾಗಿರುವ ಸಿ.ಪಿ.ಕೃಷ್ಣಕುಮಾರ್ ಅವರು ಅನೇಕ ವಿಮರ್ಶಾ ಸಂಕಲನಗಳನ್ನು ಹೊರತಂದಿದ್ದಾರೆ. ಕನ್ನಡ ಚತುರ್ಮುಖ, ಪರಿಭಾವನೆ, ಆಲೋಚನ ಮುಂತಾದ ಕೃತಿಗಳಲ್ಲಿ ಇವರು ಉತ್ತಮ ವರ್ಣನಾತ್ಮಕ ವಿಮರ್ಶೆಯನ್ನು ನೀಡಿದ್ದಾರೆ.

ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳು ವಿಸ್ತಾರವಾಗಿ ಪ್ರಕಟಿಸುತ್ತಿರುವ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಕಟಿತ ಸಂಪುಟಗಳನ್ನು ನೋಡಿದರೆ ಕನ್ನಡದ ವಿಮರ್ಶೆ ವಿಪುಲವಾಗಿ ಬೆಳೆಯುವ ಶುಭಲಕ್ಷಣಗಳು ಕಾಣುತ್ತಿವೆ. ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿರುವ ಗೃಹಸರಸ್ವತೀ ಗ್ರಂಥಮಾಲೆಯಲ್ಲಿ ಪ್ರಭುಶಂಕರರ ಖಲೀಲ್ ಗಿಬ್ರಾನ್ (1970), ಎಚ್.ಕೆ.ರಾಮಚಂದ್ರ ಮೂರ್ತಿಯವರ ಮೋಲಿಯರ್ (1973), ಎಲ್.ಎಸ್.ಶೇಷಗಿರಿರಾಯರ ಆಲಿವರ್ ಗೋಲ್ಡ್ ಸ್ಮಿತ್ (1972)- ಇವು ಗಮನಿಸಬೇಕಾದ ಕೃತಿಗಳು. ಕೊನೆಯ ಎರಡರಲ್ಲಿ ಆಯಾ ಕವಿಗಳ ಕೃತಿಗಳ ಸೊಗಸಾದ ವಿಮರ್ಶೆಯಿದೆ.

ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಅವುಗಳಲ್ಲಿ ಓದಿದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿವೆ. ಇವು ವಿಮರ್ಶೆಗೆ ಶ್ರೇಷ್ಠವಾದ ಕಾಣಿಕೆಗಳು. ಇವುಗಳಲ್ಲಿ ಕೆಲವು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಸುವರ್ಣ ಸಂಚಯ (1967), ಚಿನ್ನದ ಗರಿ (1974), ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ,ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಕನ್ನಡ ವಿಮರ್ಶೆಯ ನೆಲೆ ಬೆಲೆ, ಪಂಪ ಒಂದು ಅಧ್ಯಯನ; ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ದಾಸ ಸಾಹಿತ್ಯ, ಕನ್ನಡ ರಂಗಭೂಮಿ ಅಂದು -ಇಂದು - ಇವೆಲ್ಲ ಮೌಲಿಕ ವಿಮರ್ಶೆಗಳನ್ನು ಒಳಗೊಂಡಿವೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಕೂಡ ಒಂದು ಉತ್ತಮ ಸಂಕಲನ. (ಪಿ.ಎಸ್.)

ಕರ್ನಾಟಕದಲ್ಲಿ ಕಳೆದ ನಾಲ್ಕು ದಶಕಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾದವು. ಕನ್ನಡ ಸಾಹಿತ್ಯಕ್ಕೆ ಇವುಗಳ ಪ್ರೇರಣೆಯೂ ಆಯಿತು. ನವೋದಯ ಸಾಹಿತ್ಯ (1920-45) ಚಳವಳಿಯಲ್ಲಿ ಪಾಶ್ಚಾತ್ಯ ಕಾವ್ಯದ ಅನುಸರಣೆಯೂ ಸೇರಿದಂತೆ ನಮ್ಮ ಸಂದರ್ಭದ ಆಸೆ ಆಕಾಂಕ್ಷೆಗಳು ಅಭಿವ್ಯಕ್ತಗೊಳ್ಳಲು ಕಾರಣವಾಯಿತು. ಅನಂತರ ವ್ಯಕ್ತಿ ಪ್ರಜ್ಞೆಯ ಕೇಂದ್ರ ನೆಲೆಯಾದ ನವ್ಯ ಸಾಹಿತ್ಯ (1950 ರಿಂದ) ರೂಪುಗೊಂಡರೆ ಪ್ರಗತಿಶೀಲ ಸಾಹಿತ್ಯಕ್ಕೆ (1945-50) ಮಾರ್ಕ್ಸ್‌ವಾದದ ನೆಲೆಗಟ್ಟು ಕಾರಣವಾಯಿತು. ಆಮೇಲೆ ಸ್ಥಗಿತ ಮೌಲ್ಯಗಳನ್ನು ಪ್ರಶ್ನಿಸಲೆಂದು ಶೂದ್ರ ಬರಹಗಾರರ ಒಕ್ಕೂಟ ಹುಟ್ಟಿಕೊಂಡಿತು. ದಲಿತರ ಮೇಲಿನ ಆಕ್ರಮಣವನ್ನು, ಶೋಷಣೆಯನ್ನು ತಪ್ಪಿಸಿ ಸಮಾನತೆ ಹಾಗೂ ಸ್ವಾಭಿಮಾನವನ್ನುಂಟುಮಾಡುವುದಕ್ಕಾಗಿ ದಲಿತ ಬಂಡಾಯ ಚಳವಳಿ (1979) ಹುಟ್ಟಿಕೊಂಡದ್ದಲ್ಲದೆ ಇವುಗಳ ಪ್ರತ್ಯುತ್ಪನ್ನವಾಗಿ ದಲಿತ ಬಂಡಾಯ ಸಾಹಿತ್ಯವು ರಚನೆಗೊಂಡಿತು. ಈ ಬಗೆಯ ಸಾಹಿತ್ಯದಲ್ಲಿ ಅಸಮಾನತೆಯ ನಿವಾರಣೆಗಾಗಿ, ತಮ್ಮ ಹಕ್ಕುಗಳ ಈಡೇರಿಕೆಗಾಗಿ ಜನಪರವಾದ ದನಿ ಸ್ಫೋಟವಾಯಿತು. ಸಾಹಿತ್ಯ ಕೃತಿಯನ್ನು ಕೇವಲ ಸಾಹಿತ್ಯ ಕೃತಿಯನ್ನಾಗಿ ನೋಡದೆ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡುವ, ಮೌಲ್ಯಮಾಪನ ಮಾಡುವ ಪರಿಪಾಠ ಬೆಳೆದದ್ದರಿಂದ ಅದಕ್ಕೆ ಸಂಬಂಧಿಸಿದ ವಿಮರ್ಶನ ಮಾದರಿಗಳು, ಕ್ರಮಗಳು ರೂಢಿಗೆ ಬಂದವು. ಹಾಗಾಗಿ ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ವ್ಯಾಖ್ಯಾನಿಸುವ, ವಿಶ್ಲೇಷಿಸುವ ಕೆಲಸದಲ್ಲಿ ವಿಮರ್ಶಕರು ಮುಂದಾದರು. ವರ್ತಮಾನದಲ್ಲಿ ಇದ್ದು ಭೂತವನ್ನು ಅವಲೋಕಿಸುವ ಕೆಲಸದಲ್ಲಿ ತೊಡಗಿದರು. ಅಂದರೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜನಪರ ಆಶಯಗಳನ್ನು, ದುಡಿಯುವ ವರ್ಗದ ದನಿಗಳನ್ನು, ದಲಿತ ಬಂಡಾಯದ ಆಶಯಗಳನ್ನು, ಅನ್ವೇಷಿಸುವ ಕೆಲಸದಲ್ಲಿ ವಿಮರ್ಶನ ಕಾರ್ಯ ಜರುಗಿತು. ಹೀಗಾಗಿ ನವೋದಯ ಮತ್ತು ನವ್ಯ ವಿಮರ್ಶೆಗಿಂತ ಭಿನ್ನವಾದ ಶೈಲಿ ವ್ಯಕ್ತವಾಯಿತು. ಕನ್ನಡ ಸಾಹಿತ್ಯ ಪರಂಪರೆಯ ಜೊತೆ ಜೊತೆಯಲ್ಲಿಯೇ ವಿಮರ್ಶೆಯೂ ಬೆಳೆಯುತ್ತಾ ಬಂದಿರುವಂತೆ, ಕಾಲಕಾಲಕ್ಕೂ ಅದರ ಪರಿಭಾಷೆಯಲ್ಲೂ ಅಲ್ಪಸ್ವಲ್ಪ ಬದಲಾವಣೆಗಳೂ ಉಂಟಾಗಿರುವುದನ್ನು ಗಮನಿಸಬಹುದು. ಬರಗೂರು ರಾಮಚಂದ್ರಪ್ಪನವರು ಹೇಳುವಂತೆ "ಸಾಹಿತ್ಯ ಮತ್ತು ವಿಮರ್ಶೆಗಳ ಮುಖಾ ಮುಖಿ ಒಂದು ಉತ್ತಮ ಅಂತರ್‌ಕ್ರಿಯೆಗೆ ಕಾರಣವಾದಾಗ ಆರೋಗ್ಯಕರ ಸಾಂಸ್ಕೃತಿಕ ಪರಿಸರದ ನಿರ್ಮಾಣವಾಗುತ್ತದೆ." ದಲಿತ ಬಂಡಾಯ ಸಂದರ್ಭದ ವಿಮರ್ಶೆ ಈ ಬಗೆಯದಾಗಿದೆ.

ಗಾಂಧಿ, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಸಿದ್ಧಾಂತಗಳು ಸಾಹಿತ್ಯ ವಿಮರ್ಶೆಯಲ್ಲಿ ಸಂವಾದದಲ್ಲಿ ಪ್ರಮುಖವಾದವು. ದಲಿತ ಬಂಡಾಯ ಸಾಹಿತ್ಯದ ಪ್ರಭಾವದಿಂದಾಗಿ ಈ ಬಗೆಯ ಸಂವೇದನೆಗಳ ಅಧ್ಯಯನಕ್ಕೆ ಕಾರಣವಾಯಿತು. ಈ ಸಂದರ್ಭದಲ್ಲಿ ಕನ್ನಡ ವಿಮರ್ಶೆ ಸಾಹಿತ್ಯವನ್ನು ರಾಜಕೀಯ ಸಿದ್ಧಾಂತ, ವರ್ಗ ಸಂಘರ್ಷಗಳ ಹಿನ್ನೆಲೆಯಲ್ಲಿ ಮೌಲ್ಯಮಾಪನ ಮಾಡತೊಡಗಿತು. ಜನಪರ ದನಿ ಪರಿಶೀಲನೆಗೆ ಬಳಸುವ ಸಾಮಾಜಿಕ ಮಾನದಂಡ, ಎಡಪಂಥೀಯ ಸೈದ್ಧಾಂತಿಕತೆ, ನಿರ್ದಿಷ್ಟವಾದ ಪರಿಭಾಷೆ ಇವೆಲ್ಲ ದಲಿತ ಬಂಡಾಯ ಸಾಹಿತ್ಯ ವಿಮರ್ಶೆಯ ಅಂತಃ ಸತ್ವಗಳಾದುವು. ಹಾಗಾಗಿ ವಿಮರ್ಶೆಯಲ್ಲಿ ಸಾಮಾಜಿಕ ಸಂದರ್ಭ ಮುಖ್ಯವಾಯಿತು. ಕನ್ನಡ ವಿಮರ್ಶೆ ಪರಂಪರೆಯೊಂದಿಗೆ ಅನುಸಂಧಾನದಲ್ಲಿ ತೊಡಗುತ್ತಲೇ ಬಂತು. ಈ ನಡುವೆ ವಿಮರ್ಶೆಯಲ್ಲಿ ಸಾಂಸ್ಕೃತಿಕ ಜವಾಬ್ದಾರಿ ಹೆಚ್ಚಿತು. ಅನ್ಯಜ್ಞಾನ ಶಿಸ್ತುಗಳ ಅಧ್ಯಯನ, ಪೂರಕ ಸಾಹಿತ್ಯದ ಬಗೆಗಿನ ಕಾಳಜಿಗಳು - ಇವು ನವ್ಯೋತ್ತರ ವಿಮರ್ಶೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಸೂಕ್ಷ್ಮಗೊಂಡ ಈ ವಿಮರ್ಶೆ ಪ್ರಬುದ್ಧತೆಯತ್ತಲೂ ಸಾಗಿತು. ಅಲ್ಲದೆ ಪಾಶ್ಚಾತ್ಯ ವಿಮರ್ಶನ ಮಾದರಿಗಳ ಬಗ್ಗೆ ತಾತ್ಸಾರ ಹುಟ್ಟಿಸುತ್ತಲೇ ಕನ್ನಡ ಸಾಹಿತ್ಯ ಪರಂಪರೆ ಸಂಸ್ಕೃತಿಗಳಲ್ಲಿ ಅಂತರ್ಗಾಮಿಯಾಗಿರುವ ಸಾಂಸ್ಕೃತಿಕ ವಿನ್ಯಾಸಗಳನ್ನು, ದೇಸೀ ನೆಲೆಗಳನ್ನು ಅರಸತೊಡಗಿತು. ನವ್ಯವಿಮರ್ಶೆ ಓದುಗ ಸಂವೇದನೆಯನ್ನು ಕಡೆಗಣಿಸಿದರೂ ಬಂಡಾಯ ಸಾಹಿತ್ಯ ಆ ಕೃತಕ ಕಂದಕವನ್ನು ಮುಚ್ಚುವ ಕೆಲಸ ಮಾಡಿತು.

ಆದರೆ ನವ್ಯ ವಿಮರ್ಶೆಯಲ್ಲಿ ಸಾಂಸ್ಕೃತಿಕ ಕಾಳಜಿಗಳಿಲ್ಲದೆ ಶುಷ್ಕವಾಗತೊಡಗಿದಾಗಲೂ ಅನಂತಮೂರ್ತಿ, ಚನ್ನಯ್ಯನಂಥವರು ಸಮಾಜವಾದಿ ಹಿನ್ನೆಲೆಯಲ್ಲಿ ಬರೆಯತೊಡಗಿದ್ದರು. ನರಹಳ್ಳಿ ಬಾಲಸುಬ್ರಹ್ಮಣ್ಯ, ಎಚ್.ಎಸ್. ರಾಘವೇಂದ್ರರಾವ್, ಜಿ.ಎಚ್. ನಾಯಕ, ಕೆ.ವಿ.ತಿರುಮಲೇಶ ಮೊದಲಾದವರಂತೂ ನವ್ಯೋತ್ತರ ಸಾಹಿತ್ಯದ ಹೊಸಸಂವೇದನೆಗಳನ್ನು ಕುತೂಹಲದಿಂದ ಗಮನಿಸಿ ಪ್ರತಿಕ್ರಿಯಿಸತೊಡಗಿದ್ದು ಗಮನಾರ್ಹ ಸಂಗತಿ.

ಇನ್ನೂ ಕೆಲ ವಿಮರ್ಶಕರು ದಲಿತ ಬಂಡಾಯ ಕೃತಿಗಳನ್ನು ನವ್ಯ ವಿಮರ್ಶೆಯ ಮಾನದಂಡಗಳಿಂದಲೇ ಅಳೆಯತೊಡಗಿದ್ದರು. ಇದರ ಪರಿಣಾಮವಾಗಿ ಕೃತಿಯ ಮೌಲ್ಯಮಾಪನಕ್ಕಿಂತ ಅದನ್ನು ಸಾರಾಸಗಟಾಗಿ ತಳ್ಳಿಹಾಕುವ ನಿಲುವು ಬಹಿರಂಗವಾಯಿತು. ಆಕ್ರೋಶ, ಅಬ್ಬರ, ಸರಳತೆ, ಘೋಷಿತ ಬಂಡಾಯ - ಇವೆಲ್ಲಾ ಸಾಹಿತ್ಯಕ ಮೌಲ್ಯಗಳೇ ಅಲ್ಲ ಎಂಬ ನಿರ್ಧಾರಕ್ಕೆ ಬಂದದ್ದುಂಟು. ಅನಂತರ ಬಂದ ಬಂಡಾಯ ಸಾಹಿತ್ಯ ವಿಮರ್ಶಕರು ಇವುಗಳನ್ನೇ ನಿಜವಾದ ಸಾಹಿತ್ಯಕ ಮೌಲ್ಯಗಳೆಂದು ಪರಿಗಣಿಸಿ ಕೃತಿ ವಿಮರ್ಶೆಗೆ ತೊಡಗಿದರು. ಯಾರು ಬರೆದದ್ದು ದಲಿತ ಸಾಹಿತ್ಯ

ಎಂಬ ಪ್ರಶ್ನೆ ಹುಟ್ಟಿತು. ದಲಿತರು ಬರೆದದ್ದು ದಲಿತಸಾಹಿತ್ಯವೆಂದೂ ಅದು ಮಹತ್ವದ್ದೇ ಆಗಿರುತ್ತದೆಂದೂ ಭಾವಿಸಲಾಯಿತು. ದಲಿತ ವಿಮರ್ಶೆ ಎಂಬುದು ಪ್ರತ್ಯೇಕವಾಗಿ ಬೆಳೆದಿಲ್ಲವಾದರೂ ಪಿ.ಕೃಷ್ಣಪ್ಪ, ದೇವಯ್ಯಹರವೆ ಮುಂತಾದವರು ಆರಂಭದ ದಿನಗಳಲ್ಲಿ ವಿಮರ್ಶನ ವಲಯದಲ್ಲಿ ಭರವಸೆ ಮೂಡಿಸಿದ್ದರು. ಅನಂತರ ಮ.ನ. ಜವರಯ್ಯ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ, ಮೊಗಳ್ಳಿಗಣೇಶ ಮುಂತಾದವರ ಬರೆಹಗಳು ಗಮನಾರ್ಹವೆನಿಸಿದುವು.

ಪ್ರಜಾವಾಣಿಯ ಸಾಹಿತ್ಯ ಸಂವಾದದಲ್ಲಿ ಪ್ರಕಟವಾದ ವಿ.ಮುನಿವೆಂಕಟಪ್ಪನವರ 'ದಲಿತ ಸಾಹಿತ್ಯ ಎತ್ತ ಸಾಗಿದೆ' ಮುಳ್ಳೂರು ನಾಗರಾಜರ 'ದಲಿತ ಸಾಹಿತಿಗಳ ಏಕಾಂತ ದಂತ ಗೋಪುರ' ಮುಂತಾದ ಬರೆಹಗಳು ಏಕಮುಖವಾದ ವಿಮರ್ಶೆಯ ಬಗ್ಗೆ ಕಿಡಿಕಾರಿದವು. ಅದಕ್ಕಾಗಿ ಸುಬ್ಬು ಹೊಲೆಯಾರ್ 'ದಲಿತ ಸಾಹಿತಿಗಳಿಗೆ ಅಸಹಾಯಕತೆ ಬೇಡ' ಎಂದು ಸಮಾಧಾನಪಡಿಸಿದ್ದೂ ಉಂಟು. ಹೀಗೆ ಕೆಲ ದಲಿತ ಸಾಹಿತಿಗಳು ವೈಯಕ್ತಿಕ ಕೊರಗನ್ನು ತೋಡಿಕೊಳ್ಳುತ್ತಲೇ ತಮ್ಮ ಹಾಗೂ ತಮ್ಮಂಥವರ ಕೃತಿಗಳಿಗೆ ವಿಮರ್ಶನ ಕ್ಷೇತ್ರದಲ್ಲಿ ಆಗುತ್ತಿರುವ ತಾರತಮ್ಯಗಳನ್ನು ಬಹಿರಂಗಗೊಳಿಸಿದರು. ಮುಸುಕಿನ ಗುದ್ದಾಟದಂತೆ ಸಂವಾದದಲ್ಲಿ ತೊಡಗಿದ್ದವರ ಚರ್ಚೆಯೂ ಒಂದು ರೀತಿಯಲ್ಲಿ ದಲಿತ ಸಾಹಿತ್ಯ ವಿಮರ್ಶೆಯ ಏರುಪೇರಿನ ಮೌಲ್ಯಮಾಪನವೂ ಆಗಿತ್ತು. ಇಂಥ ವಿಮರ್ಶೆಗೆ ಮುಖ್ಯಕಾರಣ ವಿಮರ್ಶಾವಲಯದಲ್ಲಿ ಬರೆಯುವವರೆಲ್ಲಾ ಶೈಕ್ಷಣಿಕ ವಲಯದಲ್ಲಿರುವ ದಲಿತ ಲೇಖಕರನ್ನು ಅವರ ಕೃತಿಗಳನ್ನು ವೈಭವೀಕರಿಸಿದ್ದು ಮತ್ತು ನಾನ್ ಅಕಾಡೆಮಿಕ್ ವಲಯದ ದಲಿತ ಲೇಖಕರ ಬಗ್ಗೆ ಅನಾದರ ತೋರಿಸಿದ್ದು. ಅಕಸ್ಮಾತ್ ಬರೆದರೂ 'ಈ ಸಾಲು ಸಪ್ಪೆಯಾಗಿದೆ ಈ ಪಂಕ್ತಿ ಖಾರವಾಗಿದೆ' ಎಂದು ಊಟದ ಪರಿಭಾಷೆಯಲ್ಲಿ ದಲಿತ ಸಾಹಿತ್ಯದ ಪರಿಶೀಲನಾಕಾರ್ಯ ನಡೆದುದ್ದುಂಟು. ಇದನ್ನೆಲ್ಲಾ ಗಮನಿಸಿದವರಿಗೆ ವಿಮರ್ಶೆಯಲ್ಲಿ ಸಾಮಾಜಿಕ ಪರಿಭಾಷೆ ರೂಪುಗೊಳ್ಳುವವರೆಗೆ ದಲಿತ ಸಾಹಿತ್ಯಕ್ಕೆ ನ್ಯಾಯದೊರಕುವುದಿಲ್ಲ ಎನಿಸಿತು. ಪಾಶ್ಚಾತ್ಯ ಸಾಹಿತ್ಯದ ಮಾನದಂಡಗಳನ್ನಿಟ್ಟುಕೊಂಡು ವಿಮರ್ಶಿಸುವದರಿಂದಾಗಾಲೀ, ಗತ ಇತಿಹಾಸದ ಅಥವಾ ಪರಂಪರೆಯನ್ನು ತಪ್ಪಾಗಿ ಗ್ರಹಿಸುವುದರಿಂದಾಗಲೀ ಕಾವ್ಯಕ್ಕೆ ರಸವೇ ಪ್ರಧಾನ ಎಂಬುದರಿಂದಾಗಲೀ, ವ್ಯಾಕರಣವೇ ಪ್ರಧಾನ ಎನ್ನುವವರಿಂದಾಗಲೀ ದಲಿತ ಸಾಹಿತ್ಯದ ವಿಮರ್ಶೆ ಸಾಧ್ಯವಾಗದು ಎಂಬುದು ಇದರ ಮೀಮಾಂಸಕರ ವಾದವಾಯಿತು. ದಲಿತ ಪ್ರಜ್ಞೆಯ ಆಂತರ್ಯಕ್ಕೆ ಸ್ಪಂದಿಸಿದವರಿಂದ ಮಾತ್ರ ಇದರ ವಸ್ತುನಿಷ್ಠ ವಿಮರ್ಶೆ ಸಾಧ್ಯ ಎಂಬ ತೀರ್ಮಾನಕ್ಕೆ ಬಂದು ಘೋಷಣಾಮೂಲವಾದ ಕಾವ್ಯವೂ ಶ್ರೇಷ್ಠವೆಂದು ಪ್ರಶಂಸೆ ಮಾಡುತ್ತಾಬಂದದ್ದರಿಂದ ಕಲಾತ್ಮಕವಲ್ಲದ ಕಾವ್ಯಸೃಷ್ಟಿಗೂ ಕಾರಣವಾಗಬೇಕಾಯಿತು.

ವಿಮರ್ಶೆಯ ಹೆಸರಿನಲ್ಲಿ ನಡೆಯುವ ಹಲ್ಲೆಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಬರಗೂರು ರಾಮಚಂದ್ರಪ್ಪನವರು ಬಂಡಾಯ ಸಾಹಿತ್ಯ ವಿಮರ್ಶೆಗೆ ಪ್ರತ್ಯೇಕವಾದ ಮಾನದಂಡಗಳ ಅಗತ್ಯವಿದೆ ಎಂದು ಹೇಳಿ ಬಂಡಾಯ ಸಾಹಿತ್ಯ ಮೀಮಾಂಸೆಯನ್ನು ಪ್ರಕಟಿಸಿದರು. ಆವರೆಗಿನ ವಿಮರ್ಶೆಯ ಪಕ್ಷಪಾತದ ಆರೋಪಕ್ಕೆ ಬದಲಾಗಿ ವಿಮರ್ಶೆಯ ಸ್ವರೂಪದ ವಿಮರ್ಶೆಗೆ ಹೆಚ್ಚು ಕಾಳಜಿ ವಹಿಸಿದರು. ವಿಮರ್ಶಕರಾಗಿ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳಿಗೆ ಹೊಸ ತಿರುವು ನೀಡಿದರು. ಸಾಹಿತ್ಯದಲ್ಲಿ ರಾಜಕೀಯಪ್ರಜ್ಞೆಯ ಅಗತ್ಯವನ್ನು ಪ್ರತಿಪಾದಿಸಿದರು. ಸಾಹಿತ್ಯ ಮತ್ತು ರಾಜಕಾರಣದಲ್ಲಿ ಇಂಥ ಮಹತ್ವದ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು.

2001ರಲ್ಲಿ ಹೊರಬಂದ ಬರಗೂರರ ಆಯ್ದ ವಿಚಾರ ವಿಮರ್ಶಾ ಲೇಖನಗಳ ಸಂಕಲನ 'ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ'ಯಲ್ಲಿ ಸಂಸ್ಕೃತಿಜನ್ಯದ ಹಿಂದಿರುವ ಶ್ರಮ ಹಾಗೂ ಸೃಜನಶೀಲತೆಯಲ್ಲಿ ಕಾರ್ಯವೈಖರಿಯನ್ನು ವಸ್ತುನಿಷ್ಠವಾಗಿ ವಿಮರ್ಶಿಸಲಾಗಿದೆ. ಬಂಡಾಯ ಸಾಹಿತ್ಯವನ್ನು ವಿಮರ್ಶಿಸಬೇಕಾದ ಮಾನದಂಡಗಳ ಚರ್ಚೆ ನಡೆಯುತ್ತಿರುವಾಗಲೇ ಆಯಾ ವರ್ಗದವರಿಂದ ಬಂದಂಥ ಬರೆಹಗಾರರಲ್ಲಿ ಮಾತ್ರ ಅವರವರ ಬದುಕಿನ ವಿವರಗಳಿರುತ್ತವೆಂಬ ಅಭಿಪ್ರಾಯ ಮೂಡಿತು ಹಾಗೂ ಆ ಸಂದರ್ಭದಲ್ಲಿ ಮೂರು ಮುಖ್ಯ ವಿಮರ್ಶನ ಪರಿಕಲ್ಪನೆಗಳನ್ನು ಗುರುತಿಸಲು ಸಾಧ್ಯವಾಯಿತು. ಅವೆಂದರೆ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ ಮತ್ತು ಸ್ತ್ರೀ ಸಂವೇದನೆ.

ಈ ಮೊದಲು ಪ್ರಸ್ತಾಪಿಸಿದಂತೆ ಪ್ರಗತಿಶೀಲ ಲೇಖಕರು ತಮ್ಮ ಕೃತಿಗಳಲ್ಲಿ ಸಾಮಾಜಿಕವಾದ ವೈರುಧ್ಯಗಳನ್ನು ಎತ್ತಿಹಿಡಿದರು, ನಿಜ. ಆ ಕಾಲದ ವಿಮರ್ಶೆಯು ಇದನ್ನು ಗುರುತಿಸುತ್ತಾ ಸಮಾಜದ ವೈರುಧ್ಯಗಳಿಗೆ ಮುಖ ಮಾಡಿತು. ಪ್ರಗತಿಶೀಲ ವಿಮರ್ಶೆ ಸಂಸ್ಕೃತಿಯನ್ನು ಸ್ಪರ್ಶಿಸದೆ ಇದ್ದುದರಿಂದ ಶುಷ್ಕತೆಗೆ ಕಾರಣವಾಯಿತು. ಆದರೆ ದಲಿತ ಬಂಡಾಯದ ಸಂದರ್ಭದಲ್ಲಿ ಆ ಕೊರತೆ ನಿವಾರಣೆಯಾಯಿತು. ಆಯಾ ಜನವರ್ಗಗಳ ಹಿನ್ನೆಲೆಯಲ್ಲಿ ಕೃತಿವಿಮರ್ಶೆ ಮಾಡುವ ಧಾಟಿ ವ್ಯಕ್ತವಾಯಿತು. ಈ ದೃಷ್ಟಿಯಿಂದ ದಲಿತ ಲೇಖಕನ ಆತ್ಮಕಥನ ಆತನ ವಿವರಗಳನ್ನೆಲ್ಲ ಒದಗಿಸುತ್ತದೆಂದಾದ ಮೇಲೆ ಅದು ಆತನ ಬಗ್ಗೆ ಚರಿತ್ರೆಯೂ ಆಗುತ್ತದೆ. ಇತರ ಸಂಗತಿಗಳ ಬಗ್ಗೆ ವಿಮರ್ಶೆಯೂ ಆಗತೊಡಗಿತು. ಅಲ್ಲದೆ ಜಾತಿ ವ್ಯವಸ್ಥೆ, ಮಡಿವಂತಿಕೆ, ಆಹಾರ ಪದ್ಧತಿ, ಅಸಮಾನತೆ ಇತ್ಯಾದಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುವುದರಿಂದ ಅದೊಂದು ವಿಮರ್ಶೆಯೂ ಆಗಿಬಿಟ್ಟಿತು. ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ, ಸಿದ್ಧಲಿಂಗಯ್ಯನವರ ಊರು ಕೇರಿ, ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ, ರಾಮಯ್ಯನವರ ಮಣೆಗಾರ - ಇವು ಈ ದೃಷ್ಟಿಯಿಂದ ಮುಖ್ಯವೆನಿಸಿದ್ದವು. ಈ ಮಧ್ಯೆ ಮಹಿಳಾ ಬರೆಹಗಳ ಕುರಿತ ಅಧ್ಯಯನ ವಿಶೇಷವಾಗಿ ಜರುಗಿತ್ತು. ಸ್ತ್ರೀವಾದಿ ವಿಮರ್ಶೆಯಲ್ಲಿ ವಿಜಯಾದಬ್ಬೆ, ನೇಮಿಚಂದ್ರ, ವಿಜಯಶ್ರೀ, ಪ್ರತಿಭಾ ನಂದಕುಮಾರ್, ಎನ್.ಗಾಯತ್ರಿ, ತೇಜಸ್ವಿನಿ ನಿರಂಜನ, ಸುಮಿತ್ರಾಬಾಯಿ, ಬಿ.ಎಂ.ರೋಹಿಣಿ ಮುಂತಾದವರು ವಿಶೇಷವಾಗಿ ಕೆಲಸ ಮಾಡಿದರು.

ಸ್ತ್ರೀವಾದಿ ಸಾಹಿತ್ಯ ವಿಮರ್ಶೆ (1994) (ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ) 1995ರಲ್ಲಿ ಬಂದ ಸ್ತ್ರೀವಾದಿ ಪ್ರವೇಶಿಕೆ (ಬಿ.ಎನ್.ಸುಮಿತ್ರಾಬಾಯಿ, ಎನ್.ಗಾಯಿತ್ರಿ), 1993ರಲ್ಲಿ ಹೊರಬಂದ 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ' (ಸಂ:ಬರಗೂರು ರಾಮಚಂದ್ರಪ್ಪ), 1992ರಲ್ಲಿ ಹೊರಬಂದ ಕೇಶವಶರ್ಮರ 'ಕ್ರಿಯೆ- ಪ್ರತಿಕ್ರಿಯೆ', ಡಿ.ಆರ್.ನಾಗರಾಜರ 'ಸಾಹಿತ್ಯ ಕಥನ', ರಹಮತ್ ತರೀಕೆರೆ ಅವರ 'ಮರದೊಳಗಣ ಕಿಚ್ಚು', ವಿಜಯಾದಬ್ಬೆ ಅವರ 'ಮಹಿಳೆ ಸಾಹಿತ್ಯ ಸಮಾಜ' (1989), ಗಾಯಿತ್ರಿ ನಾವಡ ಅವರ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' (1999), ಧರಣೀದೇವಿ ಅವರ ಭಾರತೀಯತೆ ಮತ್ತು ಸ್ತ್ರೀವಾದ ಮುಂತಾದ ಕೃತಿಗಳು ಸ್ತ್ರೀವಾದಿ ಚಿಂತನೆಯ ದೃಷ್ಟಿಯಿಂದ ಗಮನಾರ್ಹವೆನಿಸಿದವು. ಒಟ್ಟಾರೆ 70ರ ದಶಕದಿಂದೀಚಿನ ಕನ್ನಡ ವಿಮರ್ಶೆಯನ್ನು ಗಮನಿಸಿದರೆ ಹಿಂದಿಗಿಂತಲೂ ಸಾಕಷ್ಟು ಬೆಳೆವಣಿಗೆಯನ್ನು ಹೊಂದಿದೆ ಎಂದೇ ಹೇಳಬಹುದು. ಕೃತಿಕೇಂದ್ರಿತ ವಿಮರ್ಶೆ, ಸಮಾಜ ಕೇಂದ್ರಿತ ವಿಮರ್ಶೆ, ಕರ್ತೃ ಕೇಂದ್ರಿತ ವಿಮರ್ಶೆ, ವಾಚಕ ಕೇಂದ್ರಿತ ವಿಮರ್ಶೆ ಇತ್ಯಾದಿ ಪಾಶ್ಚಾತ್ಯ ಮಾರ್ಗಗಳ ಪ್ರಭಾವಗಳಿಗೆ ಆಂತರ್ಯದಲ್ಲಿ ಸಂಘರ್ಷವನ್ನು ಒಡ್ಡುತ್ತಲೇ ಇತ್ತೀಚಿನ ವಿಮರ್ಶೆ ಬೆಳೆಯ ತೊಡಗಿತು. ನವ್ಯ ಮತ್ತು ಬಂಡಾಯದ ವಿಭಿನ್ನ ನೆಲೆಗಳಲ್ಲಿ ಇತಿಮಿತಿಗಳನ್ನು ಅಭಿವ್ಯಕ್ತಿಸುತ್ತಲೇ ಆರೋಗ್ಯಕರ ನಿಲುವುಗಳನ್ನು ವಿಮರ್ಶನ ವಲಯದಲ್ಲಿ ಸಾದರಪಡಿಸುವ ಪ್ರಯತ್ನಗಳೂ ಜರುಗಿದವು. ಶಾಂತಿನಾಥ ದೇಸಾಯಿ, ಕೆ.ವಿ.ನಾರಾಯಣ, ರಾಜೇಂದ್ರ ಚೆನ್ನಿ, ಜಿ.ರಾಜಶೇಖರ, ಜಿ.ಎಚ್.ನಾಯಕ, ಸಿ.ಎನ್.ರಾಮಚಂದ್ರನ್ ಮುಂತಾದವರು ವಿಮರ್ಶೆಯಲ್ಲಿ ಅಗತ್ಯ ನೆಲೆಗಳನ್ನು ಒದಗಿಸಿದರು. ಅನ್ಯ ಶಿಸ್ತುಗಳ ಅಧ್ಯಯನದಿಂದಲೂ ಕನ್ನಡ ವಿಮರ್ಶೆ ಅನುಕೂಲ ಪಡೆಯಿತು. ಕನ್ನಡ ವಿಮರ್ಶೆಯಲ್ಲಿ ಗಮನಾರ್ಹ ಕೆಲಸ ಮಾಡಿದವರು ಡಿ.ಆರ್.ನಾಗರಾಜ್. ಚರಿತ್ರೆ, ಸಮಾಜ, ಕೃತಿ, ಕೃತಿಕಾರ ಮುಂತಾದ ಪರಿಕಲ್ಪನೆಗಳ ಮೂಲಕ ಸೈದ್ಧಾಂತಿಕ ಚರ್ಚೆಗೆ ತೊಡಗಿದ ಇವರು ಸಂಸ್ಕೃತಿ ಮತ್ತು ಸಾಹಿತ್ಯದ ಚಲನಶೀಲತೆಗೆ ಕಾರಣರಾದರು. ಅಮೃತ ಮತ್ತು ಗರುಡ (1983), ಶಕ್ತಿ ಶಾರದೆಯ ಮೇಳ (1987), ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ (1990) ಇವುಗಳಲ್ಲಿ ಇವರ ವಿಮರ್ಶಾ ಪ್ರತಿಭೆ ಮೆರೆದಿದೆ.

ಸಿ.ಎನ್.ರಾಮಚಂದ್ರನ್ ಅವರು ಪಾಶ್ಚಾತ್ಯ ವಿಮರ್ಶೆಯ ಸಂದರ್ಭದಲ್ಲಿ ಸಾಹಿತ್ಯಾಧ್ಯಯನದ ಬೇರೆ ಬೇರೆ ವಿಧಾನ ಪರಿಕಲ್ಪನೆಗಳನ್ನು ಕನ್ನಡ ವಿಮರ್ಶೆಗೆ ಒದಗಿಸಿದರು. 'ಸೀತಾಯಣ' ವಿಮರ್ಶಾ ಕೃತಿಯ ಮೂಲಕ ಪೋಲಂಕಿ ರಾಮಮೂರ್ತಿಯವರು ಚಿಂತನೆಯಲ್ಲಿ ಹೊಸ

ವಿವಾದ, ಎಚ್ಚರಗಳನ್ನು ಹುಟ್ಟು ಹಾಕಿದರು. ಅದರ ಮುಖಾಂತರ ದಲಿತ ಬಂಡಾಯದ ಪರ ನಿಲುವುಗಳನ್ನು ತಾಳಿದರು. ಸಾಹಿತ್ಯ ಸಂಪರ್ಕ (1986) ಮತ್ತು ಸಾಹಿತ್ಯ ಸಂದರ್ಭ (1991) ಗಳಲ್ಲಿ ಟಿ.ಪಿ.ಅಶೋಕ ಅವರು ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕೃತಿಯ ಸಾಧ್ಯಾಸಾಧ್ಯತೆಗಳನ್ನು ವಿಮರ್ಶಿಸಿದರು. ಹಾಗೆಯೇ ಎಚ್.ಎಸ್.ರಾಘವೇಂದ್ರರಾವ್ ಅವರ ನಿಲುವು (1989), ಹಾಡೆ ಹಾದಿಯ ತೋರಿತು (1998), ಅರವಿಂದ ಮಾಲಗತ್ತಿ ಯವರ 'ದಲಿತ ಯುಗ ಮತ್ತು ಕನ್ನಡ ಸಾಹಿತ್ಯ' (1999) ರಹಮತ್ ತರೀಕೆರೆ ಅವರ ಪ್ರತಿಸಂಸ್ಕೃತಿ, ಜಿ.ಎಸ್.ಆಮೂರರ ಸಮಕಾಲೀನ ಕತೆ ಕಾದಂಬರಿ- ಹೊಸ ಪ್ರಯೋಗಗಳು (1981), ಅರ್ಥಲೋಕ (1988), ಸಿ.ಪಿ.ಸಿದ್ಧಾಶ್ರಮ ಅವರ ಹೊಸ ಅಲೆ (1978), ನಿಕಷ (1987), ಕೆ.ವಿ.ನಾರಾಯಣರ ಬೇರು, ಕಾಂಡ, ಚಿಗುರು (1996), ಮಲ್ಲೇಪುರಂ ಜಿ.ವೆಂಕಟೇಶ್ ಅವರ ತಿಳಿವ ತೇಜದ ಮುಂದೆ (1996), ಬಿ.ದಾಮೋದರರಾವ್ ಅವರ ಆಯಾಮಗಳು (1992), ಓ.ಎಲ್.ನಾಗಭೂಷಣಸ್ವಾಮಿ ಅವರ ಇಂದಿನ ಹೆಜ್ಜೆ (1998), ಜಿ.ರಾಮಕೃಷ್ಣ ಅವರ ಆಯತನ (1984), ಸಿ.ಎನ್.ರಾಮಚಂದ್ರನ್ ಅವರ ವಸಾಹತೋತ್ತರ ಚಿಂತನೆ (1999), ತೌಲನಿಕ ಸಾಹಿತ್ಯ (1998), ಪುರುಷೋತ್ತಮ ಬಿಳಿಮಲೆಯವರ ಶಿಷ್ಟ ಪರಿಶಿಷ್ಟ, ಗಿರಡ್ಡಿ ಗೋವಿಂದರಾಜರ ವಚನ ವಿನ್ಯಾಸ (1997), ಜಿ.ಎಸ್.ಆಮೂರರ ಭುವನದ ಭಾಗ್ಯ (1991), ಜಿ.ಎಚ್.ನಾಯಕರ ನಿರಪೇಕ್ಷ (1984), ನಿಜದನಿ (1988), ಲಕ್ಷ್ಮೀಪತಿ ಕೋಲಾರ ಅವರ ಕಾಲುದಾರಿ (2001), ಚಂದ್ರಶೇಖರ ನಂಗಲಿ ಅವರ ನಾನಿಮ್ಮೊಳಗು (2001), ನಾ ನಿಲ್ಲುವಳಲ್ಲ, ಜಿ.ಆರ್.ತಿಪ್ಪೇಸ್ವಾಮಿ ಅವರ ಅಭಿಮುಖ (2000), ಕನ್ನಡ ದಲಿತ ಸಾಹಿತ್ಯದ ನೆಲೆ (2001), ಅರ್ಥ ಸುಗಂಧ (2003), ರಂಗಾರೆಡ್ಡಿ ಕೋಡಿರಾಂಪುರ ಅವರ 'ಬಂಡಾಯ ಜಾನಪದ', ಶಿವರಾಮಯ್ಯನವರ ಸಾಹಿತ್ಯ ಪರಿಸರ (1993), 'ಉರಿಯ ಉಯ್ಯಾಲೆ' (2002), ಆರ್.ಲಕ್ಷ್ಮೀನಾರಾಯಣರ ಆಹ್ಲಾದ (2002) ಮೊದಲಾದ ಕೃತಿಗಳು ಕನ್ನಡ ಸಾಹಿತ್ಯ ವಿಮರ್ಶೆ ತುಂಬ ಶಕ್ತಿಶಾಲಿಯಾಗಿ, ಬಹುಮುಖಿಯಾಗಿ ಮೂಡಿಬಂದಿದೆ ಎಂಬುದನ್ನು ಸಾಬೀತುಪಡಿಸುತ್ತವೆ.

ದಲಿತ ಬಂಡಾಯ ಸಾಹಿತ್ಯ ಚಳವಳಿಯ ಸೃಜನಶೀಲ ಕೃತಿಗಳಲ್ಲಿ ಸಾಮಾಜಿಕ ದೃಷ್ಟಿಕೋನ ಅಭಿವ್ಯಕ್ತವಾದರೆ, ಅದರ ವಿಮರ್ಶೆಯಲ್ಲಿ ಪ್ರತಿಸಂಸ್ಕೃತಿ ದೃಷ್ಟಿಕೋನ ಪ್ರಮುಖವಾಗಿ ಕೆಲಸ ಮಾಡಿತು. ಪ್ರಸ್ತುತ ಸಾಹಿತ್ಯವನ್ನು ಬಹುಶಿಸ್ತೀಯ ಅಧ್ಯಯನಕ್ಕೆ ಒಳಗುಮಾಡುವ ಕೆಲಸವೂ ನಡೆಯಿತು. ಸಾಹಿತ್ಯದ ಪುನರ್ ಮೌಲ್ಯೀಕರಣ ಪ್ರಕ್ರಿಯೆಗಳೂ ಜರುಗಿದಂತೆ ವಿಮರ್ಶೆ ಹೊಸ ಓದಿನತ್ತ ಮುಂದುವರಿದಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದ ಪುನರ್ ಮೌಲ್ಯೀಕರಣ ಯೋಜನೆಯ ಹನ್ನೆರಡು ಪುಸ್ತಕಗಳು ನಿರ್ದಿಷ್ಟ ಪರಿಕಲ್ಪನೆಗಳ ನೆಲೆಯಿಂದ ನಡೆಸುವ ಅನ್ವೇಷಣೆಗೆ ಮಾದರಿಗಳಾಗಿವೆ. ಈ ರೀತಿಯ ಪುನರ್ ಮೌಲ್ಯೀಕರಣ ಶೋಧ ನಿರಂತರವಾಗಿ ಸಾಗತೊಡಗಿದೆ.

ತಮ್ಮ ತಮ್ಮ ತಾತ್ವಿಕ ನಿಲುವುಗಳನ್ನು ಬಿಟ್ಟುಕೊಡದೆ ಸಾಹಿತ್ಯ ಪಂಥಗಳ ನಡುವೆ ವಾದ ವಿವಾದಗಳು ಜರುಗುತ್ತಲೇ ಇವೆ. ಆದರೆ ತಮ್ಮ ಪಂಥದ ಹೊರಗಿನ ಸಾಹಿತ್ಯದ ಬಗೆಗೂ ಚಿಂತನ ಮಂಥನ ಮಾಡುವ ಆರೋಗ್ಯಕರ ಬೆಳವಣಿಗೆಗಳೂ ಕಾಣಿಸಿಕೊಂಡವು. ನವೋದಯ, ನವ್ಯ ಬರೆಹಗಾರರನೇಕರ ಬಗೆಗೆ ಇತ್ತೀಚೆಗೆ ಅನೇಕ ವಿಮರ್ಶನ ಬರೆಹಗಳು ಪ್ರಕಟವಾಗಿವೆ. ಮಾಸ್ತಿ, ಬೇಂದ್ರೆ, ಕುವೆಂಪು, ನರಸಿಂಹಸ್ವಾಮಿ, ತರಾಸು, ನಿರಂಜನ, ಚದುರಂಗ, ಅಡಿಗ, ಅನಂತಮೂರ್ತಿ, ತೇಜಸ್ವಿ, ಶ್ರೀರಂಗ, ಸಿದ್ಧಲಿಂಗಯ್ಯ, ಕಾರ್ನಾಡ್, ಶಿವಪ್ರಕಾಶ್, ಗದ್ದರ್, ದೇವನೂರು, ಮಹಾದೇವ ಮುಂತಾದವರ ಸಾಹಿತ್ಯದ ಬಗೆಗೆ ವಿಮರ್ಶೆ ಹೆಚ್ಚಾಗಿ ನಡೆದಿದೆ. ಪ್ರಾಚೀನ ವಚನಕಾರರ ಬಗೆಗಿನ ಶೋಧವೂ ಗಮನಾರ್ಹವಾದುದು. ಕೆ.ಜಿ.ನಾಗರಾಜಪ್ಪನವರ 'ಮರುಚಿಂತನ' ದಲ್ಲಿ ತೊಡಗಿ ವೀರಶೈವಧರ್ಮ ಹಾಗೂ ಕನ್ನಡಸಾಹಿತ್ಯದ ಬಗೆಗೆ ಇದ್ದ ಪರಂಪರಾಗತವಾದ ಆಲೋಚನೆಗಳನ್ನು ನಿಕಷಕ್ಕೆ ಒಡ್ಡಿದರು. ಸಾಂಪ್ರದಾಯಿಕ ಆಲೋಚನೆಗಳನ್ನು ಬದಲಾಯಿಸಿದರು. ಬಸವರಾಜ ಕಲ್ಗುಡಿಯವರು ವಚನಕಾರರ ವಿಭಿನ್ನ ಆಶಯಗಳ ಹಿನ್ನೆಲೆಯಲ್ಲಿ ಮಧ್ಯಕಾಲೀನ ಸಾಹಿತ್ಯವನ್ನು ಶೋಧಿಸುವ ಗಮನಾರ್ಹ ಕೆಲಸ ಮಾಡಿದರು. ಅದರ ಫಲವಾಗಿ ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ (1985) ಎಂಬ ಮೌಲಿಕ ಗ್ರಂಥಗಳನ್ನು ಹೊರತಂದರು. ಈ ನಡುವೆ ಅಮೃತ ಮತ್ತು ಗರುಡ (ಡಿ.ಆರ್.ನಾಗರಾಜು), ಕಾಗೋಡು ಸತ್ಯಾಗ್ರಹ, ಬ್ರೆಕ್ಟ್ (ಜಿ.ರಾಜಶೇಖರ), ಮುನ್ನೋಟ (ಜಿ.ರಾಮಕೃಷ್ಣ), ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಹನ್ನೆರಡನೆಯ ಶತಮಾನದ ಕಾಯಕ ಜೀವಿಗಳ ಚಳವಳಿ (ಸಿ.ವೀರಣ್ಣ), ಸಂಸ್ಕೃತಿ, ಉಪಸಂಸ್ಕೃತಿ (ಬರಗೂರು ರಾಮಚಂದ್ರಪ್ಪ), ಮಾರ್ಕ್ಸ್‌ವಾದದ ವಿಮರ್ಶೆ (ಚಂದ್ರಶೇಖರ ನಂಗಲಿ), ಅನ್ವೇಷಣೆ (ಆರ್ಕೆ ಮಣಿಪಾಲ) ಮುಂತಾದ ಮಾರ್ಕ್ಸ್‌ವಾದಿ ಧೋರಣೆಯ ವಿಮರ್ಶಾ ಸಂಕಲನಗಳೂ ಹೊರಬಂದವು.

ಆಧುನಿಕ ಕನ್ನಡಸಾಹಿತ್ಯದ ಎಲ್ಲ ಮಾದರಿಗಳೂ ಸೃಜನಶೀಲತೆಯಲ್ಲಿ ಗೋಚರವಾದಂತೆ ಆಯಾ ಕಾಲಘಟ್ಟದಲ್ಲಿ ಬಳಕೆಗೆ ಬಂದ ವಿಮರ್ಶನ ಪದ್ಧತಿಗಳೂ ಹೆಚ್ಚು ಕಡಿಮೆ ಬಳಕೆಯಲ್ಲಿವೆ. ತಾತ್ವಿಕ ವಿಮರ್ಶೆ, ರಸವಿಮರ್ಶೆ, ಆನ್ವಯಿಕ ವಿಮರ್ಶೆ, ವಿವರಣಾತ್ಮಕ ವಿಮರ್ಶೆ, ವಸ್ತುನಿಷ್ಠ ವಿಮರ್ಶೆ, ಚಾರಿತ್ರಿಕ ವಿಧಾನ ವಿಮರ್ಶೆ, ಸಾಮಾಜಿಕ ವಿಮರ್ಶೆ, ಮಾರ್ಕ್ಸ್‌ವಾದಿ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ, ಪ್ರಾಯೋಗಿಕ ವಿಮರ್ಶೆ, ಮನಶ್ಶಾಸ್ತ್ರೀಯ ವಿಮರ್ಶೆ ಮುಂತಾದವುಗಳೆಲ್ಲವೂ ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಹೆಚ್ಚು ಕಡಿಮೆ ಬಳಕೆಯಾಗುತ್ತಲೇ ಇವೆ. ಕಾವ್ಯ ಮೀಮಾಂಸೆಯ ಮೂಲತತ್ತ್ವಗಳ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಪತ್ರಿಕಾ ವಿಮರ್ಶೆ, ಪ್ರೌಢ ಪ್ರಬಂಧದ ವಿಮರ್ಶೆಗಳೂ ಇಂದಿನ ಕನ್ನಡ ವಿಮರ್ಶೆಯಲ್ಲಿ ಅಡಕಗೊಳ್ಳುತ್ತಿವೆ.

ಹಿರಿಯ ಬರೆಹಗಾರರಿಗೆ ವಿಶೇಷ ಸಂದರ್ಭಗಳಲ್ಲಿ ಅಭಿನಂದನ ಗ್ರಂಥಗಳನ್ನು, ಸ್ಮರಣ ಗ್ರಂಥಗಳನ್ನು ಸಮರ್ಪಿಸುವ ಪದ್ಧತಿ ರೂಢಿಯಲ್ಲಿದೆ. ಸಂಬಂಧಿಸಿದವರ ಬದುಕು ಬರೆಹಗಳನ್ನು ಕುರಿತ ಬರೆಹಗಳು ಅದರಲ್ಲಿ ಅಡಕವಾಗಿರುತ್ತವೆ. ಬದುಕಿನ ವಿವರಗಳನ್ನು ಕುರಿತ ಬರೆಹಗಳಲ್ಲಿ ಪ್ರಶಂಸೆಯ, ಆರಾಧನೆಯ ಮನೋಧರ್ಮಗಳೇ ಅಧಿಕವಾಗಿರುತ್ತದೆ. ಲೇಖಕನ ಸಾಹಿತ್ಯ ಕೃತಿಗಳನ್ನು ಕುರಿತಂತೆ ಮೂಡಿ ಬಂದ ಬರೆಹಗಳಲ್ಲಿ ವಿಮರ್ಶೆಯ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಬಿ.ಎಂ.ಶ್ರೀಕಂಠಯ್ಯನವರಿಗೆ ಸಮರ್ಪಿಸಿದ ಸಂಭಾವನೆ (1941) ಈ ಪಂಕ್ತಿಯಲ್ಲಿ ಮೊದಲನೆಯದು. ಎ.ಆರ್.ಕೃಷ್ಣಶಾಸ್ತ್ರೀ, ಪಂಜೆ ಮಂಗೇಶರಾಯ, ಡಿ.ಎಲ್.ನರಸಿಂಹಾಚಾರ್, ತ.ಸು.ಶಾಮರಾಯ, ಸ.ಸ.ಮಾಳವಾಡ, ಮಂಜಯ್ಯ ಹೆಗ್ಗಡೆ, ಕುವೆಂಪು, ಮಾಸ್ತಿ, ಬೇಂದ್ರೆ, ವಿ.ಸೀ., ಕೆ.ಎಸ್.ನರಸಿಂಹಸ್ವಾಮಿ, ಸಿದ್ಧವ್ವನಹಳ್ಳಿ ಕೃಷ್ಣಶರ್ಮ, ವಿ.ಕೃ.ಗೋಕಾಕ್, ಶಿವರಾಮಕಾರಂತ, ಎಸ್.ವಿ.ರಂಗಣ್ಣ, ಬೆಟಗೇರಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ದಿನಕರ ದೇಸಾಯಿ, ತಿರುಮಲೆ ರಾಜಮ್ಮ, ಶಂ.ಬಾ.ಜೋಶಿ, ಎಂ.ಚಿದಾನಂದ ಮೂರ್ತಿ, ಹಂಪನಾ, ಜಿ.ಎಸ್.ಶಿವರುದ್ರಪ್ಪ, ದೇ.ಜ.ಗೌ., ಎಚ್.ತಿಪ್ಪೇರುದ್ರಸ್ವಾಮಿ, ಸಿದ್ಧಲಿಂಗಯ್ಯ, ಕೆ.ಆರ್.ಲಿಂಗಪ್ಪ, ಎಂ.ಎಸ್.ಸುಂಕಾಪುರ, ಸೋಮಶೇಖರ ಇಮ್ರಾಪೂರ, ಬಸವರಾಜ ಕಟ್ಟೀಮನಿ, ನಿರಂಜನ, ಹಾ.ಮಾ.ನಾಯಕ, ಎಸ್.ಎಲ್.ಭೈರಪ್ಪ, ಕಮಲಾ ಹಂಪನಾ ಮುಂತಾದವರಿಗೆ ಅಭಿನಂದನ ಗ್ರಂಥಗಳು ಸಮರ್ಪಿತವಾಗಿವೆ. ಪಂಜೆ ಮಂಗೇಶರಾಯ, ಎ.ಕೆ.ರಾಮಾನುಜನ್, ಶಾಂತಿನಾಥ ದೇಸಾಯಿ, ಮೂರ್ತಿರಾವ್ ಮೊದಲಾದವರಿಗೆ ಸ್ಮರಣ ಸಂಪುಟಗಳು ಹೊರಬಂದಿವೆ.

ವಿಮರ್ಶೆಯನ್ನು ಪ್ರಕಟಿಸುವಲ್ಲಿ ಸಂವಾದಗಳನ್ನು ಏರ್ಪಡಿಸುವಲ್ಲಿ ಕನ್ನಡ ಪತ್ರಿಕೆಗಳು ಸಕ್ರಿಯವಾಗಿ ಪಾತ್ರವಹಿಸುತ್ತಿವೆ. ಜೊತೆಗೆ ವಿಮರ್ಶೆಯನ್ನು ಬೆಳೆಸುವ ವಾತಾವರಣವೂ ವಿಸ್ತೃತವಾಗುತ್ತಿದೆ. ವಿವಿಧ ಅಕಾಡೆಮಿಗಳು, ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಮೊದಲಾದ ಸಂಸ್ಥೆಗಳು ಸಂವಾದಗಳಿಗೆ, ಸಂಶೋಧನೆಗೆ ಅವಕಾಶ ಮಾಡಿಕೊಡುತ್ತಿವೆ. ಮಂಡಿಸಲ್ಪಟ್ಟ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಜವಾಬ್ದಾರಿಯನ್ನೂ ಹೊತ್ತಿವೆ. ಸಾಹಿತ್ಯ ಅಕಾಡೆಮಿ ಶತಮಾನದ ಸಾಹಿತ್ಯ ವಿಮರ್ಶೆ ಪ್ರಕಟಿಸಿದೆ. ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಸುವರ್ಣ ಸಂಚಯ, ಚಿನ್ನದ ಗರಿ, ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಬೆಂಗಳೂರು ವಿಶ್ವವಿದ್ಯಾಲಯ

ಪ್ರಕಟಿಸಿರುವ ಶ್ರೀ ಸಾಮಾನ್ಯನಿಗೆ ಕನ್ನಡ ಸಾಹಿತ್ಯ ಚರಿತ್ರೆ, ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ ಮೊದಲಾದ ಕೃತಿಗಳು ಗಮನಾರ್ಹವಾಗಿವೆ. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಕನ್ನಡ ವಿಮರ್ಶೆಯ ನೆಲೆ ಬೆಲೆ, ಕವಿ ಬೇಂದ್ರೆ, ಪ್ರಾಯೋಗಿಕ ವಿಮರ್ಶೆ ಮೊದಲಾದ ಕೃತಿಗಳು ಗಮನಾರ್ಹವಾಗಿವೆ.

ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ದಾಸ ಸಾಹಿತ್ಯ, ಕನ್ನಡ ರಂಗಭೂಮಿ ಅಂದು - ಇಂದು, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಆಯಾ ವರ್ಷದ ಸಾಹಿತ್ಯ ವಿಮರ್ಶೆ ಸಂಕಲನಗಳು, ಪುನರ್ ಮೌಲ್ಯೀಕರಣ ಯೋಜನೆಯ ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಚಿನ್ನದ ಬೆಳಸು, ಜೊತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗಳಲ್ಲಿ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಅಮೂಲ್ಯ ಗ್ರಂಥಗಳಿವೆ.

ಸಾಮಾಜಿಕ ಬದಲಾವಣೆಯ ಸಂದರ್ಭದಲ್ಲಿ ನಿಜವಾದ ಬರೆಹಗಾರ ಎದುರಿಸುವ ಸಮಸ್ಯೆ ಸವಾಲುಗಳು ಹಲವಾರು. ಅಭಿವ್ಯಕ್ತಿ ವಿಧಾನದಲ್ಲೂ ಬದಲಾವಣೆ ಅನಿವಾರ್ಯ. ಸಾಹಿತ್ಯವನ್ನು ಬೇರೆ ಬೇರೆ ಶಾಸ್ತ್ರ ವಿಜ್ಞಾನ ವಿಚಾರಗಳ ಹಿನ್ನೆಲೆಯಲ್ಲಿ ನೋಡುವ ಪರಿಪಾಠವೂ ಬೆಳೆಯುತ್ತಿದೆ. 19ನೆಯ ಶತಮಾನದ ಕಡೆಯ ವೇಳೆಗೆ ಕನ್ನಡ ಸಾಹಿತ್ಯ ವಿಮರ್ಶೆ ಆರಂಭವಾಗಿ, 20ನೆಯ ಶತಮಾನದಲ್ಲಿ ಅನೇಕ ಪ್ರಭಾವಗಳಿಗೆ ಒಳಗಾಗುತ್ತಲೇ ಬಂದು, ಅದು 21ನೆಯ ಶತಮಾನದಲ್ಲೂ ಮುಂದುವರಿದಿದೆ. ವಿಮರ್ಶೆಯಲ್ಲಿ ಇನ್ನೂ ಹೊಸ ಮಟ್ಟದ ವೈಚಾರಿಕತೆಗೆ ಒತ್ತು ಬೀಳಬೇಕಾಗಿದೆ. (ಜಿ.ಆರ್.ಟಿ.)

**ಕನ್ನಡದಲ್ಲಿ ವಿಶ್ವಕೋಶಗಳು :** ಜ್ಞಾನದ ವಿವಿಧ ಶಾಖೆಗಳ ವ್ಯಾಪಕ ವಿವೇಚನೆಯನ್ನುಳ್ಳ ವಿಶ್ವಕೋಶಗಳ ರಚನೆ ಕರ್ನಾಟಕದಲ್ಲಿ ಹಿಂದಿನಿಂದ ಸಾಗಿ ಬಂದಿದೆ. ಪ್ರಬುದ್ಧ ಸಮಾಜಕ್ಕೆ ಅಗತ್ಯವೆನಿಸಿದ ಹಲವಾರು ಶಾಸ್ತ್ರಗಳ ಸಾರವನ್ನು ಒಂದೇ ಗ್ರಂಥವಾಗಿ ರಚಿಸುವ ಬಗೆಗಿನ ಇಂಥ ಪ್ರಯತ್ನ ಸು.800 ವರ್ಷಗಳಿಂದ ಒಂದಾದ ಮೇಲೊಂದು ನಡೆದಿದೆ. ಈ ವಿಷಯದಲ್ಲಿ ಕಲ್ಯಾಣದ ಚಾಳುಕ್ಯ ಚಕ್ರವರ್ತಿ 3ನೆಯ ಸೋಮೇಶ್ವರನ (1127-39) ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥಚಿಂತಾಮಣಿ, ಕೆಳದಿಯ ಒಂದನೆಯ ಬಸವಪ್ಪ ನಾಯಕನ (1697-1714) ಶಿವತತ್ತ್ವರತ್ನಾಕರ- ಇವು ಸಂಸ್ಕೃತದಲ್ಲಿ ರಚಿತವಾದ ವಿಶ್ವಕೋಶದಂಥ ಗ್ರಂಥಗಳು.

ನಿಜಗುಣಶಿವಯೋಗಿಯ ವಿವೇಕ ಚಿಂತಾಮಣಿ (ಸು.1500) ಕನ್ನಡದ ಮೊಟ್ಟಮೊದಲ ಜ್ಞಾನಕೋಶ. ಈ ಗ್ರಂಥವನ್ನು ಸಾತಾರಾ ಜಿಲ್ಲೆಯ ಸಿಂಘಣಾಪುರದ ಕಾಂತೇಶ್ವರ ಎಂಬ ಕವಿ 16ನೆಯ ಶತಮಾನದಲ್ಲಿ ಮರಾಠಿಗೂ ತಮಿಳುನಾಡಿನಲ್ಲಿ 17ನೆಯ ಶತಮಾನದಲ್ಲಿ ಪ್ರಸಿದ್ಧನಾಗಿದ್ದ ಶಿವಪ್ರಕಾಶನೆಂಬ ಕವಿ ತಮಿಳು ಭಾಷೆಗೂ 18ನೆಯ ಶತಮಾನದಲ್ಲಿ ಮೈಸೂರು ಭಾಗದ ಹರಪುರದ ಲಿಂಗರಾಜ ಸಂಸ್ಕೃತ ಭಾಷೆಗೂ ಭಾಷಾಂತರಿಸಿದರೆಂಬುದು ಈ ಗ್ರಂಥದ ಮಹತ್ವಕ್ಕೆ ನಿದರ್ಶನಗಳಾಗಿವೆ. ವೇದಪುರಾಣಶಾಸ್ತ್ರದೊಳ್ ನೇಮಿಸಿ ತೋರ್ಪ ವಿಶ್ವವಿಷಯಂಗಳ ಸಂಸ್ಥಿತಿಯಂ ವಿವೇಕಚಿಂತಾಮಣಿ ಎಂಬ ಪೆಸರಿಟ್ಟು ಪ್ರೇಮದಿ ಪೇಳ್ವೆಂ ಎಂಬುದಾಗಿ ಕವಿ ಗ್ರಂಥವನ್ನು ಪ್ರಾರಂಭಿಸಿದ್ದಾನೆ. ಈ ಗ್ರಂಥವನ್ನು 10 ಪರಿಚ್ಛೇದಗಳಾಗಿ ವಿಭಾಗಿಸಲಾಗಿದೆ. 535 ವಿವಿಧ ವಿಷಯಗಳನ್ನು ಕುರಿತು ಇಲ್ಲಿ ಹೇಳಲಾಗಿದೆ. ವೇದ, ವೇದಾಂಗ, ಉಪನಿಷತ್ತು, ಸ್ಮೃತಿಗಳು, ಕರ್ಮಗಳು, ವರ್ಣಧರ್ಮಗಳು, ಗಣಿತ, ತೂಕ, ಪ್ರಮಾಣ, ಪುರಾಣಗಳು, ಇತಿಹಾಸಗಳು, ಚಾರ್ವಾಕ, ಬೌದ್ಧ, ಕೌಳಯಾಮಲ, ಶಾಕ್ತೇಯ, ಪಾಂಚರಾತ್ರ, ವೈದಿಕ - ಲೌಕಿಕ ಶಾಸ್ತ್ರಗಳು, ಮೀಮಾಂಸೆ, ವೈಶೇಷಿಕ, ಸಾಂಖ್ಯ, ಪಾತಂಜಲ, ಮೋಕ್ಷಪ್ರತಿಪಾದನೆ, ಸೂತ್ರ, ಭಾಷ್ಯ, ವ್ಯಾಖ್ಯಾನ, ಲಕ್ಷಣಗಳು - ಇತ್ಯಾದಿ ವಿಷಯಗಳಿಂದ ಈ ಗ್ರಂಥ ಮುಂದುವರಿದಿದೆ. ಆಗಮಭೇದ, ಆಗಮಸಂಖ್ಯೆ, ಆಗಮಸಾರ, ಶೈವ ಭೇದಗಳು; ವಿಭೂತಿ, ರುದ್ರಾಕ್ಷಿ, ಲಿಂಗ, ಮಂತ್ರ ಸಾಧನೆಗಳು; ಸೃಷ್ಟಿಸ್ವರೂಪ, ಅಷ್ಟದಿಗ್ಗಜಗಳು, ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಭೂಕೈಲಾಸ, ಹೇಮಕೂಟ, ಸಿದ್ಧವಟ, ಭರತವರ್ಷ, ರಾಜಲಕ್ಷಣ, ಛಂದಸ್ಸು, ಅಲಂಕಾರ, ಮಹಾಕಾವ್ಯ, ಗಮಕಿ, ವಾದಿ, ವಾಗ್ಮಿ, ಪುಣ್ಯಕ್ಷೇತ್ರಗಳು, ಅಹೋರಾತ್ರಿಗಳ ಕಲ್ಪನೆಗಳು, ನಕ್ಷತ್ರಮಂಡಲ, ಮರಣಸೂಚನೆ, ಉತ್ತಮಲೋಕ ಪ್ರಾಪ್ತಿ, ಪಾಪಿಷ್ಠರಿಗೆ ದುರ್ಗತಿ, ಚತುರ್ಯುಗಗಳು, ಶಾಸ್ತ್ರ ಪ್ರಯೋಜನ - ಇತ್ಯಾದಿ ವಿಷಯಗಳನ್ನು ಕುರಿತು ಗ್ರಂಥಕಾರ ಹೃದಯಂಗಮವಾಗಿ ವಿವೇಚಿಸಿದ್ದಾನೆ. ನಿಜವಾಗಿಯೂ ಇದು ಕನ್ನಡದ ಒಂದು ಜ್ಞಾನ ಭಂಡಾರವೆಂದು ಹೇಳಬಹುದು. ಮೊಟ್ಟಮೊದಲು ಸಂಗೀತಶಾಸ್ತ್ರವನ್ನು ಕುರಿತು ವಿಸ್ತಾರವಾಗಿ ಹೇಳಿರುವುದು ಈ ಗ್ರಂಥದಲ್ಲಿ ಮಾತ್ರ ಎಂಬುದು ಇಲ್ಲಿ ಸ್ಮರಣಾರ್ಹವಾಗಿದೆ.

ಇದಲ್ಲದೆ 2ನೆಯ ಚಾವುಂಡರಾಯನ ಲೋಕೋಪಕಾರ (ಸು.1150), ಲಕ್ಕಣ್ಣದಂಡೇಶನ ಶಿವತತ್ತ್ವಚಿಂತಾಮಣಿ (ಸು.1424), ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಪುರಾಣ (ಸು.1513), ಮೈಸೂರು ವೀರರಾಜನ ಸಕಲವೈದ್ಯ ಸಂಹಿತಾಸಾರಾರ್ಣವ (ಸು.1720) ಎಂಬ ಗ್ರಂಥಗಳು ವಿಶ್ವಕೋಶವನ್ನು ರಚಿಸುವವರಿಗೆ ಹೆಚ್ಚು ವಿಷಯಗಳನ್ನು ಒದಗಿಸಿಕೊಡುವ ಮಹತ್ವದ ಗ್ರಂಥಗಳಾಗಿವೆ.

ಜ್ಞಾನಭಂಡಾರಗಳೆನಿಸಿದ ಇಂಥ ಗ್ರಂಥಗಳ ರಚನೆ ಈಚಿನ ವಿಶ್ವಕೋಶಗಳಿಗೆ ತಳಹದಿಯಾಯಿತೆನ್ನಬಹುದು. ಶಾಸ್ತ್ರೀಯವಾದ ವಿಶ್ವಕೋಶ ರಚನೆ ಪ್ರಾರಂಭವಾದುದು ಈಚೆಗೆ - ಇಪ್ಪತ್ತನೆಯ ಶತಮಾನದ ಎರಡು ಮೂರು ದಶಕಗಳು ಕಳೆದಮೇಲೆ.

**ಬಾಲ ಪ್ರಪಂಚ :** ಶಿವರಾಮ ಕಾರಂತರಿಂದ ರಚಿತವಾದ ಮೂರು ಸಂಪುಟಗಳ ಮೊದಲ ವಿಶ್ವಕೋಶ (1931). ಸಚಿತ್ರವಾದ ಈ ಗ್ರಂಥ ಮಕ್ಕಳಿಗಾಗಿ ಸೃಷ್ಟಿಯಾದುದು. ಇಲ್ಲಿ ವಿಜ್ಞಾನ ವಿಷಯಗಳು ಬರುತ್ತವೆ. ನಡುನಡುವೆ ಕಥೆ, ಕವನ ಮುಂತಾದ ರಂಜಕ ವಿಷಯಗಳು ಬರುವುದರಿಂದ ಮಕ್ಕಳು ಆಸಕ್ತಿಯಿಂದ ಇವನ್ನು ಓದಲು ಅನುಕೂಲವೇರ್ಪಟ್ಟಿದೆ. ಇದು ಇಂಗ್ಲಿಷಿನಲ್ಲಿ ಆರ್ಥರ್ ಮೀ ಎಂಬಾತ ಮೊದಲು ಮಕ್ಕಳಿಗಾಗಿ ರಚಿಸಿದ ವಿಶ್ವಕೋಶದ ಮಾದರಿಯಲ್ಲಿದೆ.

**ವಿಜ್ಞಾನ ಪ್ರಪಂಚ :** ಶಿವರಾಮ ಕಾರಂತರಿಂದ ನಾಲ್ಕು ಸಂಪುಟಗಳಲ್ಲಿ ರಚಿತವಾದ (1959-1964) ವಿಜ್ಞಾನ ವಿಷಯ ವಿಶ್ವಕೋಶ. ಮೊದಲ ಭಾಗವಾದ 'ಈ ಜಗತ್ತು' ಎಂಬುದರಲ್ಲಿ ಖಗೋಳ, ಭೂಗೋಳ, ಸಾಗರ, ವಾತಾವರಣ ಮುಂತಾದ ವಿಷಯಗಳೂ ಎರಡನೆಯ ಭಾಗವಾದ 'ಜೀವ, ಜೀವನ'ದಲ್ಲಿ ಜೀವವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಗ್‌ಜೀವ ವಿಜ್ಞಾನ, ಆರೋಗ್ಯ ಶಾಸ್ತ್ರ, ಮನೋವಿಜ್ಞಾನ, ಪ್ರಕೃತಿ ವಿಜ್ಞಾನಗಳೂ ಮೂರನೆಯ ಭಾಗವಾದ 'ವಸ್ತು ಚೈತನ್ಯ'ದಲ್ಲಿ ವಿಜ್ಞಾನದ ಇತಿಹಾಸ, ಪರಮಾಣುಚರಿತ್ರೆ, ರಸಾಯನ ವಿಜ್ಞಾನ, ಭೌತವಿಜ್ಞಾನ, ಸಾಪೇಕ್ಷ ಸಿದ್ಧಾಂತ ಮೊದಲಾದ ವಿಷಯಗಳೂ ನಾಲ್ಕನೆಯ ಭಾಗವಾದ ವಿಜ್ಞಾನ ಸಾಧನದಲ್ಲಿ ಎಲೆಕ್ಟ್ರಾನಿಕ್ಸ್, ಎಂಜಿನಿಯರಿಂಗ್, ಬದುಕಿನ ಸಮಸ್ಯೆಗಳು, ಸಾಹಸಗಳು, ವಿಜ್ಞಾನಿಗಳು- ಮುಂತಾದ ವಿಷಯಗಳೂ ಬಂದಿವೆ. ಪ್ರೌಢಶಾಲೆಯ ಕೊನೆಯ ಹಂತದಲ್ಲಿರುವ ವಿದ್ಯಾರ್ಥಿ ಶ್ರಮವಿಲ್ಲದೆ ನೇರವಾಗಿ ಕನ್ನಡದ ಮೂಲಕ ವಿಜ್ಞಾನ ವಿಷಯಗಳನ್ನು ತಿಳಿಯಲು ಈ ಗ್ರಂಥಗಳು ಉತ್ತಮ ಸಾಧನಗಳಾಗಿವೆ. ಪಾರಿಭಾಷಿಕ ಶಬ್ದಗಳನ್ನು ಆಯುವಲ್ಲಿ, ಶಾಸ್ತ್ರೀಯ ವಿಷಯವನ್ನು ಪ್ರತಿಪಾದಿಸುವಲ್ಲಿ ಉದ್ದಕ್ಕೂ ಲೇಖಕರೂ ತಮ್ಮ ಸಹಜ ಸರಳ ಮನೋಧರ್ಮವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಉದಾಹರಣೆಗಳು ಕೇವಲ ವಿದೇಶೀಯವಾಗಿಲ್ಲ. ಬೇಕಾದಷ್ಟು ದೇಶೀಯ ನಿದರ್ಶನಗಳೂ ಬರುತ್ತವೆ. ಹತ್ತು ಕಡೆಯಿಂದ ಸಂಗ್ರಹಿಸಿದ ವಿಷಯಗಳನ್ನು ವಿಚಾರದ ಒರೆಗಲ್ಲಿನಲ್ಲಿ ಸಾಣೆ ಹಿಡಿದು ನಿರೂಪಿಸಲಾಗಿದೆ. ಈ ಸಂಪುಟಗಳಲ್ಲಿ ವಿಜ್ಞಾನದ ಸಮಗ್ರವಾದ ಆದರೆ ಸಂಕ್ಷೇಪ ನಿರೂಪಣೆಯನ್ನು ಕಾಣಬಹುದಾಗಿದೆ. ವಿಷಯಕ್ಕೆ ಒಪ್ಪುವ ಹಲವಾರು ಚಿತ್ರಗಳಿವೆ. ಇದೆಲ್ಲವೂ ಒಬ್ಬ ವ್ಯಕ್ತಿಯ ಸಾಧನೆ ಎಂಬ ವಿಷಯವನ್ನು ನೆನೆದಾಗ ಹತ್ತು ಮುಖಗಳ ಕಾರಂತರ ಬಗ್ಗೆ ಓದುಗರ ಮನಸ್ಸಿನಲ್ಲಿ ಕೃತಜ್ಞತೆ ಮೂಡುತ್ತದೆ.

**ಅನುವಾದಿತ ವಿಶ್ವಕೋಶ :** ಕನ್ನಡ ವಿಶ್ವಕೋಶ ಚರಿತ್ರೆಯಲ್ಲಿ ಗಮನಾರ್ಹವಾದ ಒಂದು ಗ್ರಂಥ 1927ರಲ್ಲಿ ಪ್ರಕಟವಾಯಿತು. ಬೆಂಗಳೂರಿನ

ಟ್ರ್ಯಾಕ್ ಅಂಡ್ ಬುಕ್ ಸೊಸೈಟಿಯವರು ಪ್ರಕಟಿಸಿರುವ ಈ ಎರಡು ಸಂಪುಟಗಳ ಹೆಸರು 'ಹೊಸ ಒಡಂಬಡಿಕೆಯ ವೇದಕೋಶ' ಎಂದು. ಸಂಪಾದಕರು ಚಿಂತಾಮಣಿ ಕೇಲೆಬ್ ಮತ್ತು ಇ ಸ್ಟಾಂಲೆ ಎಡ್ವರ್ಡ್ಸ್. ಇದರಲ್ಲಿ ಕ್ರೈಸ್ತಧರ್ಮ, ಪುರಾಣ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಅಕಾರಾದಿಯಾಗಿ ಕೊಡಲಾಗಿದೆ. ತಮಿಳಿನಲ್ಲಿ ಇದು ಮೊದಲು ಅಚ್ಚಾಗಿದ್ದು ಅನಂತರ ಹೆಚ್ಚಿನ ವಿವರಗಳೊಂದಿಗೆ ಕನ್ನಡಕ್ಕೆ ಅನುವಾದಗೊಂಡಿದೆ. ಇವನ್ನು ಬಾಲಪಾಠಗಳು ಎನ್ನಲಾಗಿದೆ. ಅಂದರೆ ಕ್ರೈಸ್ತಧರ್ಮಾದಿಗಳನ್ನು ತಿಳಿಯಬಯಸುವವರಿಗೆ ಇದು ಪ್ರವೇಶವಿದ್ದಂತೆ. ಇಲ್ಲಿಯ ಲೇಖನಗಳು ಅಧಿಕೃತವಾಗಿವೆ. ಭಾಷೆ ಲಲಿತವಾಗಿದೆ. ಪ್ರತಿವಿಷಯಕ್ಕೂ ವಿಪುಲವಾಗಿ ಆಧಾರಗಳನ್ನು ಕೊಡಲಾಗಿದೆ. ಭಾಷಾದೃಷ್ಟಿಯಿಂದಲೂ ಈ ಗ್ರಂಥ ವಿಚಾರಯೋಗ್ಯವಾಗಿದೆ.

**ಕನ್ನಡ ವಿಶ್ವಕೋಶ :** 14 ಸಂಪುಟಗಳ ಸಾಮಾನ್ಯ ವಿಶ್ವಕೋಶ. ಈ ಯೋಜನೆಯಂತೆ ಈಗ ಎಲ್ಲ ಸಂಪುಟಗಳೂ ಪ್ರಕಟವಾಗಿವೆ (2005). 1969ರ ನವೆಂಬರ್ 21ರಂದು ಮೊದಲ ಸಂಪುಟ ಬಿಡುಗಡೆಯಾಯಿತು. 20 ಮಾರ್ಚ್ 2005ರಂದು 14ನೆಯ ಸಂಪುಟ ಬಡುಗಡೆಯಾಯಿತು. ಇದರ ಸಂಕ್ಷಿಪ್ತ ಚರಿತ್ರೆ ಮತ್ತು ವಿವರಗಳು ಹೀಗಿವೆ:

1954ರಷ್ಟು ಹಿಂದೆಯೇ ಕೆ.ವಿ.ಪುಟ್ಟಪ್ಪನವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಈ ಬಗ್ಗೆ ಯೋಜನೆಯೊಂದನ್ನು ಸಿದ್ಧಪಡಿಸಿ ಮೈಸೂರು ಸರ್ಕಾರಕ್ಕೆ ಒಪ್ಪಿಸಿತು. ಈ ಯೋಜನೆಯ ಪೂರೈಕೆಗೆ ವಿದ್ಯಾಭ್ಯಾಸ ಇಲಾಖೆಯ ಅಂಗವಾಗಿ ಒಂದು ಪ್ರತ್ಯೇಕ ಭಾಗವನ್ನೆ ಸರ್ಕಾರ ತೆರೆಯಿತಾದರೂ ಈ ಕೆಲಸ ನಿಧಾನಗತಿಯಲ್ಲಿ ನಡೆದಿತ್ತು. ಹತ್ತು ವರ್ಷ ಕಳೆದ ಮೇಲೂ ಪ್ರಥಮ ಸಂಪುಟ ಬಿಡುಗಡೆಯಾಗುವ ಚಿಹ್ನೆಗಳೇ ಇರಲಿಲ್ಲ. ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾದದ್ದು 1968ರಲ್ಲಿ.

ಅದೇ ವರ್ಷ ಮೇ ತಿಂಗಳಿನಲ್ಲಿ ದೇ.ಜವರೇಗೌಡರ ನೇತೃತ್ವದಲ್ಲಿ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಕನ್ನಡ ವಿಶ್ವಕೋಶದ ಕಾರ್ಯ ವ್ಯವಸ್ಥಿತವಾಗಿ ಆರಂಭವಾಯಿತು. ಮೊದಲ ಕೆಲವು ತಿಂಗಳುಗಳಲ್ಲಿ ಎದುರಾದ ವಿಘ್ನಗಳು ಅನೇಕ. ಕಾರ್ಯ ಕೈಗೊಳ್ಳಲು ಅಗತ್ಯವಾದ ಸೂಕ್ತ ಸಿಬ್ಬಂದಿಯ ಅಭಾವ, ವಿಷಯಗಳ ಮತ್ತು ಲೇಖಕರ ಆಯ್ಕೆ, ವಿಶ್ವಕೋಶದ ಸ್ವರೂಪ ನಿಷ್ಕರ್ಷೆ, ಚಿತ್ರರಚನೆ, ಲೇಖನಗಳ ಬೆರಳಚ್ಚು, ಮುದ್ರಣಕಾರ್ಯ ಇವು ಪರಿಹಾರವಾಗಬೇಕಾಗಿದ್ದ ಕೆಲವು ಸಮಸ್ಯೆಗಳು. ಒಟ್ಟಿನಲ್ಲಿ ವಿಶ್ವಕೋಶ ತನ್ನದೇ ಆದ ವಿಧಾನವೊಂದನ್ನು ರೂಪಿಸಿಕೊಳ್ಳುವುದು ಅವಶ್ಯವಾಗಿತ್ತು. ಆ ವರ್ಷ ಕಳೆಯುವುದರೊಳಗೆ ಕಾರ್ಯದ ಸಮಗ್ರ ಯೋಜನೆ ಸಿದ್ಧವಾಯಿತು. 1969 ಅಂತ್ಯವಾಗುವ ಮುನ್ನವೇ ವಿಶ್ವಕೋಶದ ಪ್ರಥಮ ಸಂಪುಟವನ್ನು ಜನತೆಯ ಕೈಯಲ್ಲಿಡಬಹುದೆಂಬ ಭರವಸೆ ಮೂಡಿದ್ದು ಆಗ.

ಕನ್ನಡ ವಿಶ್ವಕೋಶದ ಮೊದಲ ಸಂಪುಟದ ಪ್ರಕಟಣೆ ಕನ್ನಡ ಭಾಷೆಯ ಇತಿಹಾಸದಲ್ಲೊಂದು ಮಹೋಜ್ವಲ ಘಟನೆ ಈ ಕೋಶ ಮತ್ತೊಂದು ವಿಚಾರವನ್ನೂ ಸ್ಪಷ್ಟಪಡಿಸಿದೆ. ವೈಜ್ಞಾನಿಕ, ಮಾನವಿಕ, ತಾಂತ್ರಿಕ ಯಾವುದೇ ವಿಷಯವನ್ನಾದರೂ ಕನ್ನಡದಲ್ಲಿ ಸರಳವಾಗಿ, ಸುಲಭವಾಗಿ ಹೃದಯವೇದ್ಯವಾಗುವಂತೆ ಹೇಳಬಹುದೆಂಬುದಕ್ಕೆ ಈ ಸಂಪುಟ ಸಾಕ್ಷೀಭೂತವಾಗಿದೆ. ಕನ್ನಡ ವಿಜ್ಞಾನಭಾಷೆಯಾಗಿ ಬೆಳೆದಿಲ್ಲವೆಂಬ ಸೊಲ್ಲು ಎಷ್ಟು ನಿರರ್ಥಕವಾದುದೆಂಬುದನ್ನು ಈ ಸಂಪುಟ ಪ್ರಮಾಣೀಕರಿಸುತ್ತದೆ ಎಂದು ಆಗ ಪ್ರಧಾನ ಸಂಪಾದಕರಾಗಿದ್ದ ದೇ. ಜವರೇಗೌಡ ಅವರು ಪೀಠಿಕೆಯಲ್ಲಿ ಬರೆದಿದ್ದಾರೆ.

**ಸಂಪುಟಗಳ ಮುಖ್ಯ ಲಕ್ಷಣಗಳಿವು :** ಗ್ರಂಥದ ಆಕಾರ ಡೆಮಿ ಚತುರ್ಥಾಕಾರದ ಸು.1000 ಪುಟ, 10 ಪಾಯಿಂಟ್ ಅಕ್ಷರದಲ್ಲಿ ಆಕರ್ಷಕ ಮುದ್ರಣ. ಕನ್ನಡ ವರ್ಣಮಾಲೆಯ ಅಕಾರದಿಂದಾರಂಭವಾಗಿ ಳಕಾರದ ವರೆಗೆ ವಿವಿಧ ವಿಷಯಗಳ ಮೇಲೆ ಲೇಖನಗಳು. ಅವಶ್ಯವಿದ್ದೆಡೆಯಲ್ಲೆಲ್ಲ ಚಿತ್ರ. ಇವುಗಳಲ್ಲಿ ಹಲವು ಹೊಳಪು ಕಾಗದದ ಮೇಲೆ ಅಚ್ಚಾಗಿರುವುದಲ್ಲದೆ ಕೆಲವು ವರ್ಣರಂಜಿತ. ಇಂಗ್ಲಿಷಿನ ಬ್ರಿಟಾನಿಕ ವಿಶ್ವಕೋಶದ ಮಾದರಿಯಲ್ಲೆ ಇದರ ವಿನ್ಯಾಸ.

ಸಾಮಾನ್ಯ ವಿಶ್ವಕೋಶದಲ್ಲಿ ಈ ಶಾಸ್ತ್ರಗಳೆಲ್ಲ ಅಡಕವಾಗಿವೆ: ಸೌಂದರ್ಯ ತತ್ತ್ವ, ಪಾಶ್ಚಾತ್ಯಸಾಹಿತ್ಯ, ಪೌರಸ್ತ್ಯಸಾಹಿತ್ಯ, ಜನಪದಕಲೆ, ಜೀವನ, ಅರ್ಥಶಾಸ್ತ್ರ, ತತ್ತ್ವ ಮತ್ತು ಧರ್ಮ, ಸಮಾಜ ವಿಜ್ಞಾನ, ಪ್ರಾಕ್ತನಶಾಸ್ತ್ರ, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ವಾಣಿಜ್ಯ, ವ್ಯಾಪಾರ, ಶಿಕ್ಷಣ, ಸಮರ ವಿಜ್ಞಾನ, ನ್ಯಾಯಶಾಸ್ತ್ರ, ಮನೋವಿಜ್ಞಾನ, ಲಲಿತಕಲೆ, ಉಪಯುಕ್ತ ಕಲೆ, ಸಂಸ್ಕೃತ ಭಾಷೆ, ಸಾಹಿತ್ಯ, ಕನ್ನಡ ಭಾಷೆ, ಸಾಹಿತ್ಯ, ಭಾಷಾ ವಿಜ್ಞಾನ, ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ಭೂವಿಜ್ಞಾನ, ವೈದ್ಯ, ಆಯುರ್ವೇದ, ಯುನಾನಿ, ಹೋಮಿಯೋಪತಿ, ಕೃಷಿ, ತೋಟಗಾರಿಕೆ, ಪಶುವೈದ್ಯ, ಶಿಲ್ಪ, ಕ್ರೀಡೆ, ಪತ್ರಿಕೋದ್ಯಮ, ಗ್ರಂಥಾಲಯ ವಿಜ್ಞಾನ, ಮುದ್ರಣ ವಿಜ್ಞಾನ, ಸಂಖ್ಯಾಶಾಸ್ತ್ರ, ಅರಣ್ಯ ವಿಜ್ಞಾನ ಇತ್ಯಾದಿ.

ಕನ್ನಡ ವಿಶ್ವಕೋಶ ಕಚೇರಿಯ ಕಾರ್ಯವಿಧಾನದ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿಬರೆಯಬಹುದು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ವಿಶ್ವಕೋಶದ ಅಧಿಕಾರ ಪ್ರಯುಕ್ತ (ಎಕ್ಸ್ - ಅಫಿಷಿಯೋ) ಪ್ರಧಾನ ಸಂಪಾದಕರು. ಈ ಕಾರ್ಯ ನಿರ್ವಹಣೆಯಲ್ಲಿ ಇವರಿಗೆ ನೆರವು ನೀಡುವವರು ನಾಲ್ವರು ಸಂಪಾದಕರು. ವಿಜ್ಞಾನಕ್ಕಾಗಿ ಒಬ್ಬರು, ಮಾನವಿಕ ವಿಭಾಗಕ್ಕೊಬ್ಬರು, ಇಡೀ ಸಂಪಾದನ ಕಾರ್ಯದ ಸಂಯೋಜನಕ್ಕಾಗಿ ಒಬ್ಬರು, ಯೋಜನೆಯ ಕಾರ್ಯನಿರ್ವಹಣೆಗಾಗಿ ಒಬ್ಬರು, ಸಹ ಸಂಪಾದಕರು ಒಬ್ಬರು, ಇವರ ಜೊತೆಗೆ ಮೂವರು ಸಹಾಯಕ ಸಂಪಾದಕರು ಮತ್ತು ಐವರು ಉಪಸಂಪಾದಕರು. ಈಗ ಈ ವ್ಯವಸ್ಥೆಯಲ್ಲಿ ಕಾಲಾನುಕ್ರಮದಲ್ಲಿ ಅನೇಕ ಬದಲಾವಣೆಗಳಾಗಿವೆ. ಲೇಖನಗಳನ್ನು ಬರೆಯುವ ಕಾರ್ಯವನ್ನು ವಿವಿಧ ಕ್ಷೇತ್ರಗಳಲ್ಲಿ ಸಮರ್ಥ ವಿದ್ವಾಂಸರಿಗೆ ಒಪ್ಪಿಸಲಾಗುತ್ತದೆ. ಈ ಲೇಖನಗಳನ್ನು ಅವರು ಕನ್ನಡದಲ್ಲೇ ಬರೆಯಬೇಕೆಂಬ ಕಡ್ಡಾಯವೇನೂ ಇಲ್ಲ. ಆಧುನಿಕ ವಿಷಯಗಳನ್ನು ಸರಳ ಶೈಲಿಯಲ್ಲಿ ನಿಷ್ಪಕ್ಷವಾಗಿ ನಿರೂಪಿಸಬೇಕೆಂಬುದು ವಿಶ್ವಕೋಶಗಳ ಮುಖ್ಯ ಉದ್ದೇಶ. ಹೀಗೆ ಸಿದ್ಧವಾದ ಲೇಖನಗಳನ್ನು ಸಂಪಾದಕರು, ಪರಿಶೀಲಿಸುವರಲ್ಲದೆ ಸಂಬಂಧಪಟ್ಟ ಕೆಲವನ್ನು ಗೌರವ ಸಮಾಲೋಚಕರ ಅವಗಾಹನೆಗಾಗಿಯೂ ಕಳುಹಿಸಲಾಗುವುದು. ವಿಷಯದ ಹೂರಣ, ಅಭಿವ್ಯಕ್ತಿ, ಚಿತ್ರಗಳು, ಆವಶ್ಯವಾದ ಹಾಗೂ ಲಭ್ಯವಿರುವ ಹೊಸ ವಿಚಾರಗಳ ಅಡಕ, ಶೈಲಿ ಮತ್ತು ತಾಂತ್ರಿಕ ಶಬ್ದಗಳ ಏಕರೂಪತೆ, ಸೂಕ್ತ ಸ್ವರೂಪ ಇವು ಸಂಪಾದಕರು ಮುಖ್ಯವಾಗಿ ಗಮನಿಸುವ ವಿಚಾರ. ಲೇಖಕರಿಂದ ತರಿಸಿದ ಲೇಖನಗಳೇ ಅಲ್ಲದೆ ಹೊಸ ಲೇಖನಗಳನ್ನೂ ಸಂಪಾದಕ ವರ್ಗದವರು ಬರೆಯುತ್ತಾರೆ. ಸದಾ ಕಣ್ಣಿಟ್ಟು ವಿಷಯ ವೈವಿಧ್ಯವನ್ನೂ ಅದರ ವಿಭಿನ್ನ ಮುಖಗಳನ್ನೂ ಒದಗಿಸುವುದು ಸಂಪಾದಕ ವರ್ಗದ ವಿಶಿಷ್ಟ ಕಾರ್ಯಭಾಗ.

ಹೀಗೆ ಶಾಸ್ತ್ರೀಯವಾಗಿ ವೈಜ್ಞಾನಿಕವಾಗಿ ಸಿದ್ಧವಾದ ವಿಶ್ವಕೋಶದ ಒಂದೊಂದು ಹೊಸ ಸಂಪುಟದ ಬಿಡುಗಡೆಯೊಂದಿಗೆ ಕನ್ನಡ ಭಾಷೆಗೆ ಒಂದೊಂದು ಹೊಸ ಆಯಾಮ ಲಭ್ಯವಾಗಿ ಭಾಷೆಗೆ ದೊರಕಿದ ಈ ಹೊಸ ಸತ್ತ್ವಸಂಪತ್ತಿಯಿಂದ ಕೋಶದ ಮುಂದಿನ ಸಂಪುಟಗಳು ಮತ್ತಷ್ಟು ಶ್ರೀಮಂತಗೊಂಡಿವೆ.

**ಕನ್ನಡ ವಿಷಯ ವಿಶ್ವಕೋಶ :** ಸಾಮಾನ್ಯ ವಿಶ್ವಕೋಶಗಳು ಗಳಿಸಿದ ಯಶಸ್ಸಿನ ದೃಷ್ಟಿಯಿಂದ ವಿಷಯ ವಿಶ್ವಕೋಶಗಳನ್ನು ಹೊರತರಲು ಬೃಹದ್ಯೋಜನೆಯೊಂದನ್ನು ತಯಾರಿಸಲಾಯಿತು. ಪ್ರಾಣಿವಿಜ್ಞಾನ, ಗಣಿತವಿಜ್ಞಾನ, ವೈದ್ಯವಿಜ್ಞಾನ ಮುಂತಾದ 16 ವಿಜ್ಞಾನ ವಿಷಯಗಳು; ಕರ್ನಾಟಕ, ಇತಿಹಾಸ, ತತ್ತ್ವಶಾಸ್ತ್ರ, ಭಾಷಾವಿಜ್ಞಾನ ಮುಂತಾದ 14 ಮಾನವಿಕ ಶಾಸ್ತ್ರ ವಿಷಯಗಳು - ಹೀಗೆ ಒಟ್ಟು 30 ಸ್ವತಂತ್ರ ಸಂಪುಟಗಳನ್ನು ಹೊರತರುವ ಯೋಜನೆ ಇದಾಗಿದೆ. ಇಡೀ ಯೋಜನೆಯ ವೆಚ್ಚ ಸು.90ಲಕ್ಷ ರೂಪಾಯಿಗಳು. ಕರ್ನಾಟಕ ಸರ್ಕಾರ ಈ ಯೋಜನೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಈ ಹೊಣೆಯನ್ನೂ ಮೈಸೂರು ವಿಶ್ವವಿದ್ಯಾನಿಲಯಕ್ಕೇ ವಹಿಸಿಕೊಟ್ಟಿತ್ತು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಪ್ರಾರಂಭವಾದ ಈ ಕೆಲಸದಲ್ಲಿ ವಿಷಯ ವಿಶ್ವಕೋಶ ಯೋಜನೆಯ ಮೊದಲ ಸಂಪುಟವಾಗಿ ಕರ್ನಾಟಕ -ವಿಷಯ ವಿಶ್ವಕೋಶ ಪ್ರಕಟಿಸಲಾಯಿತು (1979). ಸುದೀರ್ಘ ಇತಿಹಾಸದ ಶ್ರೀಮಂತ ಸಂಸ್ಕೃತಿಯ ಬಹುಮುಖ

ಪ್ರಗತಿಯ ಕರ್ನಾಟಕವನ್ನು ತಿಳಿಯಲು ಈ ವಿಶ್ವಕೋಶವೊಂದು ಅಧಿಕೃತ ಆಕರವಾಗಿದೆ. ಈ ವಿಶ್ವಕೋಶ ವಿಷಯದ ಆಯ್ಕೆ, ನಿರೂಪಣೆ ಮತ್ತು ತಾಂತ್ರಿಕತೆಯ ದೃಷ್ಟಿಯಿಂದ ಸಾಮಾನ್ಯವಿಶ್ವಕೋಶಕ್ಕಿಂತ ಭಿನ್ನವಾಗಿದೆ. 1790 ಲೇಖನಗಳನ್ನೊಳಗೊಂಡ ಈ ಹೆಬ್ಬೊತ್ತಿಗೆ ಕನ್ನಡ ಪ್ರಕಟಣೆಯಲ್ಲಿ ಒಂದು ಮೈಲಿಗಲ್ಲು. ಕರ್ನಾಟಕ ವಿಷಯ ವಿಶ್ವಕೋಶದ ಪ್ರತಿಗಳೆಲ್ಲ ಮಾರಾಟವಾಗಿ ಅದರ ಪುನರ್‌ಮುದ್ರಣ ಮತ್ತು ಪರಿಷ್ಕರಣೆಗೆ ಬೇಡಿಕೆ ಹೆಚ್ಚಿರುವುದನ್ನು ಮನಗಂಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಈ ಸಂಪುಟದ ಪರಿಷ್ಕರಣೆ ಹಾಗೂ ಪುನರ್ ಮುದ್ರಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಬೃಹತ್‌ಗಾತ್ರದ ಈ ಸಂಪುಟವನ್ನು ಎರಡು ಭಾಗಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದ್ದು ಪ್ರಸ್ತುತ ಸಂಪುಟ ಕರ್ನಾಟಕ ವಿಷಯ ವಿಶ್ವಕೋಶದ ಮೊದಲ ಭಾಗವಾಗಿದೆ.

ಈಗ ಜಾನಪದ, ಪ್ರಾಣಿವಿಜ್ಞಾನ, ಇತಿಹಾಸ ಮತ್ತು ಪ್ರಾಕ್ತನ, ಸಸ್ಯವಿಜ್ಞಾನ ಎಂಬ ವಿಷಯ ವಿಶ್ವಕೋಶ ಸಂಪುಟಗಳ ಸಿದ್ಧತೆಯ ಕಾರ್ಯ ನಡೆದಿದೆ. ಇದರ ಜೊತೆಗೆ ಕನ್ನಡ ವಿಶ್ವಕೊಶದ 14 ಸಂಪುಗಳನ್ನು ಅಡಕತಟ್ಟೆಯಲ್ಲಿ (ಸಿಡಿ) ತರುವ ಹಾಗೂ ಪರಿಷ್ಕರಿಸಿ ಪುನರ್ ಮುದ್ರಿಸುವ ಕೆಲಸವೂ ನಿರಂತರವಾಗಿ ನಡೆದಿದೆ.

**ಜ್ಞಾನಗಂಗೋತ್ರಿ :** ಏಳು ಸಂಪುಟಗಳ ಕಿರಿಯರ ವಿಶ್ವಕೋಶ. ಕನ್ನಡ ವಿಶ್ವಕೋಶ ರಚನೆಯ ಹೊಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ ವಹಿಸಿಕೊಂಡ ಸರಿಸುಮಾರಿನಲ್ಲೆ (1968) ಇದರ ಯೋಜನೆಯೂ ಆರಂಭವಾಯಿತು. ಬೆಂಗಳೂರಿನ ಕರ್ನಾಟಕ ಸಹಕಾರಿ ಪ್ರಕಾಶನದವರಿಗೆ ಈ ಯೋಜನೆಯನ್ನು ವಹಿಸಿಕೊಟ್ಟ ಸರ್ಕಾರ ಈ ಕಾರ್ಯಕ್ಕಾಗಿ 34 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತ್ತು. ಜ್ಞಾನಗಂಗೋತ್ರಿಯ ಸಂಪಾದಕ ಮಂಡಳಿಗೆ ದೇಜಗೌ ಅಧ್ಯಕ್ಷರೂ ನಿರಂಜನರು ನಿಯಂತ್ರಕರೂ ಹಾಗೂ ಪ್ರಧಾನ ಸಂಪಾದಕರೂ ಆಗಿದ್ದರು. ಇವರಲ್ಲದೆ ಉಪಸಂಪಾದಕರೂ ವ್ಯವಸ್ಥಾಪಕ ಸಂಪಾದಕರೂ ಆಡಳಿತಾಧಿಕಾರಿಗಳೂ ಇದ್ದರು. ಮನುಕುಲದ ಕಥೆ; ಜೀವಜಗತ್ತು; ಭೌತಜಗತ್ತು; ಯಂತ್ರ ಜಗತ್ತು; ಕಲೆ, ಸಾಹಿತ್ಯ; ಕ್ರೀಡೆ, ಮನೋಲ್ಲಾಸ; ಭಾರತದ ಕಥೆ ಎಂಬ ಏಳು ಸಂಪುಟಗಳು ಪ್ರಕಟಗೊಂಡಿವೆ (1970-1974). ಒಂದೊಂದು ಸಂಪುಟದ ಬೆಲೆ ಐವತ್ತು ರೂಪಾಯಿ. ಏಳೂ ಸಂಪುಟಗಳ ಒಟ್ಟು ಬೆಲೆ 350 ರೂಪಾಯಿ. ಮನುಕುಲದ ಕಥೆಯಲ್ಲಿ ನವಜೀವನದಿಂದ ಚಂದ್ರಯಾನದ ತನಕ, ನಾಗರಿಕತೆಗಳು, ಧರ್ಮಗಳು, ತತ್ತ್ವಜ್ಞಾನಿಗಳು, ರಾಜ್ಯಗಳ ಉದಯ, ರಾಜಕೀಯ ವ್ಯವಸ್ಥೆಗಳು, ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಭೂಗೋಳ, ಇತಿಹಾಸ ಪ್ರಸಿದ್ಧ ಸ್ತ್ರೀ ಪುರುಷರು - ಈ ವಿಷಯಗಳಿಗೆ ಸಂಬಂಧಪಟ್ಟಂತೆ ಲೇಖನಗಳಿವೆ. ಜೀವಜಗತ್ತಿನಲ್ಲಿ ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಶರೀರವಿಜ್ಞಾನ, ಮನೋವಿಜ್ಞಾನ, ವೈದ್ಯಕೀಯ, ಶಸ್ತ್ರಚಿಕಿತ್ಸೆ, ಕೃಷಿ, ಮತ್ಸ್ಯೋದ್ಯಮ, ತೋಟಗಾರಿಕೆ, ವಿಖ್ಯಾತ ಜೀವವಿಜ್ಞಾನಿಗಳು - ಇವುಗಳ ವಿಷಯ ನಿರೂಪಿತವಾಗಿದೆ. ಭೌತಜಗತ್ತಿನಲ್ಲಿ ಭೌತವಿಜ್ಞಾನ, ರಸಾಯನ ವಿಜ್ಞಾನ, ಖಗೋಳ ವಿಜ್ಞಾನ, ಗಣಿತ, ಭೂವಿಜ್ಞಾನ, ಪವನ ವಿಜ್ಞಾನ, ವ್ಯೋಮಯಾನ, ಗ್ರಹಾಂತರ ಯಾನ, ಈ ಕ್ಷೇತ್ರದ ಪ್ರಸಿದ್ಧ ವಿಜ್ಞಾನಿಗಳು ಮೊದಲಾದ ವಿಷಯಗಳಿವೆ. ಯಂತ್ರಜಗತ್ತು ಇದರಲ್ಲಿ ಎಂಜಿನಿಯರಿಂಗ್, ಮಿಲಿಟರಿ, ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ತಾಂತ್ರಿಕತೆ, ಘನ, ಲಘು, ಬೃಹತ್ ಪ್ರಮಾಣದ ಕೈಗಾರಿಕೋದ್ಯಮಗಳು, ದೂರ ಸಂಪರ್ಕಸಾಧನ, ಎಲೆಕ್ಟ್ರಾನಿಕ್, ಈ ಕ್ಷೇತ್ರಗಳ ಕೀರ್ತಿಶಾಲಿಗಳು- ಈ ವಿಷಯಗಳಿವೆ. ಕಲೆ ಸಾಹಿತ್ಯದಲ್ಲಿ ನೃತ್ಯ, ಸಂಗೀತ, ನಾಟಕ ಕಲೆ, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ಸಾಹಿತ್ಯ, ಆರಂಭದ ನಾಗರಿಕತೆಯಿಂದ ಆಧುನಿಕ ಅವಧಿಯತನಕ, ಭಾರತೀಯ ಮತ್ತು ಗ್ರೀಕ್ ಮಹಾಕಾವ್ಯಗಳು, ಕರ್ನಾಟಕದ, ಭಾರತದ, ವಿದೇಶಗಳ ಖ್ಯಾತ ಕಲಾವಿದರು, ಸಾಹಿತಿಗಳು ಈ ವಿವಿಧ ವಿಷಯಗಳು ತುಂಬ ಸೊಗಸಾಗಿ ಪ್ರತಿಪಾದಿತವಾಗಿವೆ. ಕ್ರೀಡೆ, ಮನಲ್ಲಾಸದಲ್ಲಿ ಜಗತ್ತಿನ ಕ್ರೀಡೆಗಳು, ಆಟಗಳು, ಶರೀರ ಶಿಕ್ಷಣ, ಪ್ರಸಿದ್ಧ ಕ್ರೀಡಾಪಟುಗಳು, ಒಲಿಂಪಿಕ್ ವೀರರು, ಹವ್ಯಾಸಗಳು, ಮನೋರಂಜನೆಯ ವಿಷಯಗಳು ಇವೆ. ಭಾರತದ ಕಥೆಯು ಚರಿತ್ರ ಪೂರ್ವ ಕಾಲಾವಧಿಯಿಂದ ಗಾಂಧೀ ಯುಗದ ತನಕ, ಪ್ರವಾಸಿಗರು ಕಂಡ ಭಾರತ, ಪ್ರಾಚೀನ ಭಾರತದಲ್ಲಿ ವಿಜ್ಞಾನ ಸಾಹಿತ್ಯ, ಪುರಾಣ ವ್ಯಕ್ತಿಗಳು, ಧರ್ಮೋಪದೇಶಕರು, ರಾಷ್ಟ್ರನಿರ್ಮಾಪಕರು, ಮಹಾನ್ ಆಡಳಿತಗಾರರು, ದಾಸ್ಯ-ಸ್ವಾತಂತ್ರ್ಯ, ಭಾರತದ ಭೂಗೋಳ, ಕೃಷಿ, ಕೈಗಾರಿಕೋದ್ಯಮ, ಭಾರತ ಮತ್ತು ವ್ಯೋಮಯುಗ, ವಿವಿಧತೆಯಲ್ಲಿ ಏಕತೆ - ಈ ಮೊದಲಾದ ವಿಷಯಗಳಿಂದ ತುಂಬಿದೆ. ಒಟ್ಟು ಏಳು ಸಂಪುಟಗಳಲ್ಲಿ 17 ಲಕ್ಷ ಪದಗಳೂ 3782 ಲೇಖನಗಳೂ 3800 ರೇಖಾಚಿತ್ರಗಳೂ 3750 ಛಾಯಾಚಿತ್ರಗಳೂ 291 ವರ್ಣಚಿತ್ರಗಳೂ ಸಂದರ್ಭಸೂಚಿಯ ಪದಗಳೂ ಇವೆ. ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಕನ್ನಡ ನಾಡಿನ ಅನೇಕ ಪ್ರಸಿದ್ಧ ಲೇಖಕರಿಂದ ಮೂಲ ಸಾಹಿತ್ಯವನ್ನೂ ಸಿದ್ಧ ಲೇಖನಗಳನ್ನೂ ತರಿಸಿಕೊಳ್ಳಲಾಗಿದೆ. 11 ರಿಂದ 18 ವರ್ಷ ವಯಸ್ಸಿನವರನ್ನು ಉದ್ದೇಶದಲ್ಲಿಟ್ಟುಕೊಂಡು ಸಿದ್ಧಮಾಡಿದ ಈ ಗ್ರಂಥಗಳಲ್ಲಿ ವಿಷಯ ವೈವಿಧ್ಯ, ಅವುಗಳ ಆಯ್ಕೆ, ನಿರೂಪಣೆ, ವಿಶ್ಲೇಷಣೆ, ಸಂಯೋಜನೆ, ವಿವರಣೆ ಉತ್ಕೃಷ್ಟತೆಯಿಂದ ಕೂಡಿದೆ. ಕನ್ನಡ ಜ್ಞಾನ ಸಾಹಿತ್ಯದ ಇತಿಹಾಸದಲ್ಲಿ ಜ್ಞಾನಗಂಗೋತ್ರಿಗೆ ಒಂದು ಗಣನೀಯ ಸ್ಥಾನ ದೊರಕುತ್ತದೆ ಎಂಬುದನ್ನು ಈ ಸಂಪುಟಗಳು ಸಿದ್ಧಪಡಿಸಿ ತೋರುತ್ತವೆ.

**ಕನ್ನಡ ಜಾನಪದ ವಿಶ್ವಕೋಶ :** ಕನ್ನಡ ಸಾಹಿತ್ಯ ಪರಿಷತ್ತು ಹೆಸರಾಂತ ಜಾನಪದ ವಿದ್ವಾಂಸ ಚಂದ್ರಶೇಖರ ಕಂಬಾರ (ನೋಡಿ) ಅವರ ಸಂಪಾದಕತ್ವದಲ್ಲಿ ಕನ್ನಡ ಜಾನಪದ ವಿಶ್ವಕೋಶವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ (1985). ಕನ್ನಡ ನಾಡಿನ ನಂಬಿಕೆ, ಹಾಡು, ಸಂಪ್ರದಾಯ, ಕಥೆ, ಪುರಾಣ, ಗಾದೆ, ಬಯಲಾಟಗಳಂತಹ ಜಾನಪದ ಪ್ರಕಾರಗಳನ್ನು ಕುರಿತಂತೆ ಈ ಸಂಪುಟದಲ್ಲಿ ವಿಶ್ಲೇಷಿಸಲಾಗಿದೆ. ಜನಪದ ಆಚರಣೆಗಳು, ಆಟಗಳು, ಒಡಪುಗಳು, ಒಗಟುಗಳು, ಐತಿಹ್ಯಗಳು, ಶಕುನಗಳು, ಪ್ರಾಣಿಪಕ್ಷಿಗಳು, ಖನಿಜಗಳು, ಮಳೆ-ಗಾಳಿ, ನಕ್ಷತ್ರಗಳು, ಲಾವಣಿಗಳು, ಹಬ್ಬ-ಜಾತ್ರೆಗಳು, ಆಹಾರ ಸಂಪ್ರದಾಯಗಳು ವಿವಿಧ ಜನಾಂಗಗಳು, ಶವಸಂಸ್ಕಾರ ಪದ್ಧತಿಗಳು - ಮುಂತಾದ ಹತ್ತಾರು ವಿಷಯಗಳನ್ನು ಕುರಿತಂತೆ ಇದರಲ್ಲಿ ಲೇಖನಗಳಿವೆ. ಜಾನಪದ ವಿದ್ಯಾರ್ಥಿಗಳನ್ನಷ್ಟೇ ಅಲ್ಲದೆ ಈ ಕ್ಷೇತ್ರದಲ್ಲಿ ಆಸಕ್ತಿ ಇರುವ ಸಾಮಾನ್ಯರನ್ನೂ ಗಮನದಲ್ಲಿಟ್ಟುಕೊಂಡು ಜಾನಪದಕ್ಕೆ ಸಂಬಂಧಪಟ್ಟ ಲೇಖನ, ಕಲ್ಪನೆಗಳನ್ನು, ಸಿದ್ಧಾಂತಗಳನ್ನು, ವಿದೇಶಗಳ ಜಾನಪದ ಸ್ವರೂಪವನ್ನು ಅವುಗಳ ಅಧ್ಯಯನ ಸಾಧನೆಗಳನ್ನು ಇಲ್ಲಿ ವಿಶದವಾಗಿ ನಿರೂಪಿಸಲಾಗಿದೆ.

**ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶಗಳು :** ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿವಿಧ ವಿಶ್ವಕೋಶಗಳು ಎಂಬ ಹನ್ನೆರಡು ಸಂಪುಟಗಳ ಯೋಜನೆಯೊಂದನ್ನು ಕೈಗೆತ್ತಿಕೊಂಡಿದೆ. ಈಗಾಗಲೆ 8 ವಿಷಯಗಳಿಗೆ ಸಂಬಂಧಿಸಿದಂತೆ ಕೃತಿಗಳನ್ನು ಪ್ರಕಟಿಸಿದೆ: ವೈದ್ಯ, ಜನಪದ ಕಲೆ, ಸಮಾಜಕಾರ್ಯ, ಭಾಷೆ, ಧರ್ಮ, ಕರಕುಶಲ ಕಲೆ. ಈ ವಿಶ್ವಕೋಶಗಳು ವಿಷಯ ವೈವಿಧ್ಯತೆಯಿಂದ ಕೂಡಿದ್ದು ನಾಡಿನ ಹೆಸರಾಂತ ವಿದ್ವಾಂಸರು ಲೇಖನಗಳನ್ನು ಬರೆದಿದ್ದಾರೆ.

**ಕಿರಿಯರ ಕರ್ನಾಟಕ ವಿಶ್ವಕೋಶ :** ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಸಂಪೂರ್ಣ ಚಿತ್ರಣವನ್ನು ಕನ್ನಡ ನಾಡಿನ ಕಿರಿಯರಿಗೆ ನೀಡುವ ಉದ್ದೇಶದಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯ ಕಿರಿಯರ ಕರ್ನಾಟಕ ವಿಶ್ವಕೋಶವನ್ನು ಪ್ರಕಟಿಸಿದೆ. 12 ರಿಂದ 17 ವರ್ಷದ ವಯೋಮಾನದವರನ್ನು ದೃಷ್ಟಿಯಲ್ಲಿರಿಸಿಕೊಂಡು ಈ ಸಚಿತ್ರ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಕರ್ನಾಟಕದ ಇತಿಹಾಸ, ಭಾಷೆ, ಸಾಹಿತ್ಯ, ಪತ್ರಿಕೋದ್ಯಮ, ಕೃಷಿ, ಕೈಗಾರಿಕೆ, ಉದ್ಯೋಗ, ಜಾನಪದ, ಶಿಕ್ಷಣ ಮೊದಲಾದ ವಿಷಯಗಳನ್ನು ಕುರಿತು ಸರಳ ನಿರೂಪಣೆ ಇದೆ. *

**ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ :** ಕನ್ನಡ ವೈದ್ಯ ಸಾಹಿತ್ಯ ಪರಂಪರೆ ಅತ್ಯಂತ ಪ್ರಾಚೀನವಾದುದು. ಕನ್ನಡ ಜನಪದ ಸಾಹಿತ್ಯದಲ್ಲಿ ಇದರ ಉಗಮವನ್ನು ನಾವು ಕಾಣಬಹುದಾಗಿದೆ. ಎಲ್ಲ ವೈದ್ಯ ಪದ್ಧತಿಗೂ ಜನಪದ ವೈದ್ಯವೇ ಮೂಲವೆಂದು ಹೇಳಬಹುದು. ಕನ್ನಡ ಜನಪದ ಸಾಹಿತ್ಯದಲ್ಲಿ ವೈದ್ಯಕೀಯ ವಿಚಾರಗಳು ಸಾಕಷ್ಟು ಪ್ರಕಟವಾಗಿವೆ. ಮಗುವಿಗೆ ಎದೆಹಾಲು ಕೊಡುವುದರ ಶ್ರೇಷ್ಠತೆಯನ್ನು, ಅದರ ಮಹತ್ತ್ವವನ್ನು ಒಂದು ತ್ರಿಪದಿಯಲ್ಲಿ ಹಿಡಿದಿಟ್ಟ ರೀತಿಯಿದು:

ಹಣ್ಣುಹಾಲಿಗಿಂತ ಬೆಣ್ಣೆತುಪ್ಪಕ್ಕಿಂತ
ಚೆನ್ನಾಗಿ ಕಳಿತ ರಸಬಾಳೆ ಹಣ್ಣಿಂತ
ಶ್ರೇಷ್ಠ ತಾಯಿಯ ಎದೆಹಾಲು

ವ್ಯಭಿಚಾರದಿಂದ ಅನೇಕ ಗುಹ್ಯ ರೋಗಗಳು ಬರುತ್ತವೆ. ಸಂಸಾರ ಹಾಳಾಗುತ್ತದೆ ಎನ್ನುವ ವಿಚಾರವನ್ನು ಜನಪದರು ಬಹಳ ಮಾರ್ಮಿಕವಾಗಿ ವ್ಯಕ್ತಪಡಿಸಿದ್ದಾರೆ. ಅಂಗೀಮೇಲಂಗಿ ಚಂದೇನೋ ನನರಾಯ ಎಂಬ ಮಾತಾಗಲೀ ಸೂಳಿಗೋದವನ ಸುಡು ಅವನ ಜನುಮವ ನಾಳೆ ನೋಡವನ ಬರ್ವಣೇಯ ಎಂಬ ಮಾತಾಗಲೀ

ಸೂಳೇಗೆ ಹೋದಾತ ಏನಾದ ಎಂತಾದ
ಕಾಡುನಾಯಾದ ಕಪಿಯಾದ
ಎಲೆಮುರವ ಸೂಳೆಯ ಕಾಲಿಗೆ ಕೆರವಾದ

ಎಂಬ ತ್ರಿಪದಿಯಾಗಲಿ ವೇಶ್ಯಾಗಮನದ ಪರಾಕಾಷ್ಠತೆಯನ್ನು ಚಿತ್ರಿಸುತ್ತವೆ.

ನಮ್ಮ ಶರೀರದ ರಚನೆ, ಅದರ ವಿವಿಧ ಅಂಗಗಳು ಕೆಲಸ ಮಾಡುವ ರೀತಿ, ಅವು ರೋಗಗ್ರಸ್ತವಾಗಲು ಕಾರಣಗಳು, ಅವುಗಳ ನಿವಾರಣೆಯಲ್ಲಿ ವೈದ್ಯರ, ರೋಗಿಯ ಹಾಗೂ ಮನೆಯವರ ಪಾತ್ರ, ಯಾವ ಬಗೆಯ ಜೀವನಶೈಲಿಯನ್ನು ಅಳವಡಿಸಿಕೊಂಡರೆ, ಪರಿಸರ ಹೇಗಿದ್ದರೆ ಯಾವ ಚಟುವಟಿಕೆಗಳನ್ನು ಹಮ್ಮಿಕೊಂಡರೆ ವ್ಯಕ್ತಿಗಳ ಆರೋಗ್ಯ ವೃದ್ಧಿಸುತ್ತದೆ ಎಂಬುದರ ಬಗ್ಗೆಯೂ ತಿಳುವಳಿಕೆ ಇರಬೇಕು. ಈ ಎಲ್ಲ ಮಾಹಿತಿ ಜನರಿಗೆ ಅರ್ಥವಾಗುವ ಭಾಷೆಯಲ್ಲಿರಬೇಕು. ಇದೇ ವೈದ್ಯ ಸಾಹಿತ್ಯ. ಭಾರತೀಯ ವೈದ್ಯ ಶಾಸ್ತ್ರಜ್ಞರಾದ ಧನ್ವಂತರಿ, ಚರಕ, ಶುಶ್ರುತ ಮೊದಲಾದವರ ಗ್ರಂಥ'ಗಳು ಬಹು ಹಿಂದೆಯೇ ಕನ್ನಡಕ್ಕೆ ಭಾಷಾಂತರಗೊಂಡಿವೆ. ಈ ಬಗೆಯ ಸುಮಾರು ಮೂವತ್ತು ಗ್ರಂಥಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದೊರೆತಿವೆ. 10ನೆಯ ಶತಮಾನದಲ್ಲಿದ್ದ ಪಂಪ ತನ್ನ ಆದಿಪುರಾಣದಲ್ಲಿ ವೈದ್ಯ ಸಾಹಿತ್ಯದ ತುಣುಕುಗಳನ್ನು ನಮಗೆ ಕಾಣಿಸಿದ್ದಾನೆ. ಗರ್ಭಧಾರಣೆಯ ಅದ್ಭುತ ಘಳಿಗೆಯನ್ನು ಗರ್ಭಾವಾಸದೊಳ್ ಶುಕ್ತಿ ಪ್ರಮೋದರ ವರ್ತಿಯಪ್ಪ ನಿರ್ಮಲೋದಕ ಬಿಂದುವಿನಂತೆ ಸಂಕ್ರಮಿಸೆ ಗರ್ಭಮಂ ತಾಳ್ದು ಎಂದು ಸುಂದರವಾಗಿ ವಿವರಿಸುತ್ತಾನೆ. ಗರ್ಭಸ್ಥ ಮಗುವಿನ ಬೆಳವಣಿಗೆಯನ್ನು ವರ್ಣಿಸಿದ ಮೇಲೆ ಗರ್ಭಿಣಿಯರ ಬಯಕೆಯನ್ನು ವರ್ಣಿಸುತ್ತಾನೆ. ಅವಳ ನಾನಾ ಬಯಕೆಗಳಲ್ಲಿ ಷಟ್ಖಂಡ ಕ್ಷೇತ್ರ ಮೃತ್ತಿಕೆಯನೆ ಸವಿನೋಡಲುಂ, ಎಂಬ ಮಾತಿನಲ್ಲಿ ಗರ್ಭಿಣಿ ಮಣ್ಣು ತಿನ್ನುವುದೂ ಸೇರಿದೆ. ಮುಪ್ಪು ಹೆದರುವ ಕಾಲವಲ್ಲ. ನಮ್ಮ ಜೀವನವನ್ನು ಸರಿಯುತ್ತಿರುವ ಕಾಲಕ್ಕೆ ಹೊಂದಿಸಿಕೊಳ್ಳುವ ಸಮಯ. ಅರಸನು ತನ್ನ ಕೂದಲಲ್ಲಿ ನೆರೆ ಕಂಡೊಡನೆಯೇ 'ಪೋದುದು ಜವ್ವನಂ, ಕ್ರಮದಿನಾದುದು ಮುಪ್ಪು' ಎಂದು ತಿಳಿದು ತನ್ನ ಜೀವನವನ್ನು ಅದಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುತ್ತಾನೆ.

ಪಂಪ ಔಷಧಿಗುಣವುಳ್ಳ ಮೂಲಿಕೆಗಳ ಉದ್ದ ಪಟ್ಟಿಯನ್ನೇ ಕೊಟ್ಟು, ಅವು ವಿರಳವಾದಾಗ ಮಾನವರು ಆಧಿವ್ಯಾಧಿ ಬಾಧಿಪ ಶರೀರರಾದರು ಎನ್ನುತ್ತಾನೆ. ಪ್ರೀತಿಯಿಲ್ಲದೆ ಗಂಡಹೆಂಡಿರು ಕೂಡ ಬಾರದು ಎನ್ನುತ್ತ 'ರಾಗಮಿಲ್ಲದ ಸುಸಿಲ'ವನ್ನು ಖಂಡಿಸುತ್ತಾನೆ. ನಮ್ಮ ಸಮಗ್ರ ಆರೋಗ್ಯಕ್ಕೆ 'ಆಹಾರ ಅಭಯ, ಭೈಷಜ್ಯ, ಶಾಸ್ತ್ರ'ಗಳು ಆಡಿಪಾಯವೆನ್ನುತ್ತಾನೆ.

ಸು.1100ರಲ್ಲಿ ರಚಿತವಾದ ಕೀರ್ತಿವರ್ಮನ (ನೋಡಿ) 'ಗೋವೈದ್ಯ' ಕನ್ನಡದಲ್ಲಿ ರಚಿತವಾದ ಮೊತ್ತಮೊದಲ ವೈದ್ಯಗ್ರಂಥ. ಸು.1500ರಲ್ಲಿ ಬರೆಯಲಾದ ಶ್ರೀಧರದೇವನ 'ವೈದ್ಯಾಮೃತ', ಸು.1750ರಲ್ಲಿ ಹೊರಬಂದ ತಿಮ್ಮರಾಜನ 'ಸ್ತ್ರೀವೈದ್ಯ, ಬಾಲವೈದ್ಯ, ವ್ರಣವೈದ್ಯ', ವೈದ್ಯ ಸಾಹಿತ್ಯದ ಬೆಳವಣಿಗೆಯ ದಿಟ್ಟ ಹೆಜ್ಜೆಗಳು. ಸು.1360ರಷ್ಟು ಹಿಂದೆಯೇ ವೈದ್ಯ ಸಾಹಿತ್ಯದ ಅಗತ್ಯವನ್ನು ಒಂದನೆಯ ಮಂಗರಾಜ ಹೀಗೆ ಹೇಳಿದ್ದಾನೆ: "ಮರ, ಗಾಳಿ, ಸೂಳೆ, ಬೇಟೆ ಮುಂತಾದವುಗಳನ್ನು ಹೊಗಳಿ ಕಾವ್ಯ ಬರೆಯುವುದಕ್ಕಿಂತ, ಸರ್ವಜನೋಪಕಾರಿಯಾದ ವೈದ್ಯಶಾಸ್ತ್ರವನ್ನು ಹೇಳುವುದರಿಂದ ಜನರಿಗೆ ಹೆಚ್ಚು ಉಪಕಾರವಾಗುತ್ತದೆ". ರೋಗಿಗಳಿಗೆ ಚಿಕಿತ್ಸೆ ಮಾಡಿದಾಗ ಅವರಿಗಷ್ಟೇ ಉಪಕಾರ. ರೋಗಗಳ ಬಗ್ಗೆ, ಚಿಕಿತ್ಸೆಯ ಬಗ್ಗೆ ಬರೆದರೆ ಬಹಳಷ್ಟು ಜನರಿಗೆ ಉಪಕಾರವಾಗುತ್ತದೆ. ವಚನ ಸಾಹಿತ್ಯ, ದಾಸ ಸಾಹಿತ್ಯ ಮತ್ತು ಸರ್ವಜ್ಞನ ತ್ರಿಪದಿಗಳಲ್ಲಿ ಶರೀರ, ಮನಸ್ಸು, ಆಹಾರ ಸೇವನೆ, ಆರೋಗ್ಯಕರ ಜೀವನ ಶೈಲಿಯ ಬಗ್ಗೆ ಇಂದಿಗೂ ಪ್ರಸ್ತುತವಾದ ಮಾಹಿತಿಯನ್ನು ಕಾಣುತ್ತೇವೆ. ಆರೋಗ್ಯವಂತನ ಲಕ್ಷಣಗಳನ್ನು ವಿವರಿಸಿರುವ ಒಂದು ವಚನ ಹೀಗಿದೆ:

ಅಂತರಂಗದಲ್ಲಿ ಶಿವಾಚಾರಿ, ಬಹಿರಂಗದಲ್ಲಿ ಸದಾಚಾರಿಯಾಗಿರಬೇಕು;
ಸಕಲ ಜೀವಾತ್ಮರಿಗೆ ಲೇಸ ಬಯಸುತ್ತಾ ವಿಶ್ವಕಲ್ಯಾಣಕ್ಕೆ ಶ್ರಮಿಸಬೇಕು;
ಕ್ರೋಧ, ಕ್ಷುದ್ರ, ಕುಟಿಲ, ಕುಹಕ, ಹುಸಿ ವಿಷಯ ದೂರವಿರಬೇಕು;
ದುಡಿಮೆಯಲಿ ಬಂದ ಕೆಲ ಅಂಶವನ್ನು ಸತ್ಪಾತ್ರಕ್ಕೆ ಸಮರ್ಪಿಸಬೇಕು;
ಗುರು ಲಿಂಗ ಜಂಗಮ ಸಮಾಜ ಶರಣರು ಅಧಿಕವೆಂದು ಅರಿತು
ಶಿಷ್ಟಾಚಾರದಿಂದ ವರ್ತಿಸಬೇಕು, ಸೇವೆಯಲ್ಲಿ ತೊಡಗಬೇಕು ಮಾತಿನಲಿ
ಮೃದು, ಮನಸ್ಸಿನಲ್ಲಿ ಸದಾ ವಿನಯ ತುಂಬಿರಬೇಕು.

ಹಿರಿದಾದ ನಾಡಿನಲ್ಲಿ ಹಿಂಡನಗಲಿದ ಗಜದಂತೆ ತಿರುಗಿದ ಜನತಾ ಕವಿ ಸರ್ವಜ್ಞ ವೈದ್ಯಕೀಯ ವಿಚಾರಗಳನ್ನು ತ್ರಿಪದಿಗಳ ಮೂಲಕ ಹಸಿಗೋಡೆಯಲ್ಲಿ ಹರಳಿಟ್ಟಂತೆ ಸ್ಪಷ್ಟವಾಗಿ ಹೇಳಿದ್ದಾನೆ. ಆಹಾರದ ಬಗ್ಗೆ ಮೊಸರಿಲ್ಲದ ಊಟ ....... ಬೇಸಿಗೆಯ ಬಿಸಿಲು ಕಾದಂತೆ ಎಂದು ಹೇಳಿರುವುದು ಸಾರ್ವಕಾಲಿಕ ಸತ್ಯ. ಹಸಿವಾದಾಗ ನಮ್ಮ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಹೇಳಿರುವ ರೀತಿಯಿದು.

ನೇತ್ರಗಳು ಕಾಣಿಸವು, ಶ್ರೋತೃಗಳು ಕೇಳಿಸವು
ಗಾತ್ರಗಳು ಎದ್ದು ಕುಣಿಯುವವು ಕೂಳು
ಒಪ್ಪತ್ತು ತಪ್ಪಿದರೆ ಸರ್ವಜ್ಞ

ನಾವು ಯಾವಾಗ ಉಣ್ಣಬೇಕು ಎಂಬುದನ್ನು ಬಹು ಮಾರ್ಮಿಕವಾಗಿ ಹೀಗೆ ಮನಮುಟ್ಟುವಂತೆ ಹೇಳಿದ್ದಾನೆ.

ಹಸಿವಿಲ್ಲದುಣಬೇಡ, ಹಸಿದು ಮತ್ತಿರಬೇಡ
ಬಿಸಿಗೂಡಿ ತಂಗಳುಣಬೇಡ ವೈದ್ಯನ
ಬೆಸಸಲೇಬೇಡ ಸರ್ವಜ್ಞ

ಅಲೋಪತಿ ವೈದ್ಯದ ಬಗ್ಗೆ ಮೈಸೂರು ಸಂಸ್ಥಾನದ ಸೇವೆಯಲ್ಲಿದ್ದ ಎಂ.ಗುರುರಾವ್ ಅವರು 1904ರಲ್ಲಿ ಆಂಗ್ಲೇಯ ವೈದ್ಯ ಶಾಸ್ತ್ರವನ್ನು ರಚಿಸಿದರು. ಅದೇ ವೇಳೆಯಲ್ಲಿ ಪ್ಲೇಗಿನ ಚರಿತ್ರೆ, ಸಚಿತ್ರ ಸಂಕ್ಷೇಪ ಕರ್ನಾಟಕ ಮನುಷ್ಯ ಶಾಸ್ತ್ರ, ಇಂದ್ರಿಯ ವಿಜ್ಞಾನ ಹಾಗೂ ಆರೋಗ್ಯ ಶಾಸ್ತ್ರ ಪ್ರಕಟವಾದವು. 1928ರಲ್ಲಿ ದಾಂಪತ್ಯ ವಿಜ್ಞಾನ, ಸಂತಾನ ವಿಜ್ಞಾನ ಮತ್ತು ಜನನ ನಿಯಂತ್ರಣ, ಆಹಾರ ವಿಜ್ಞಾನ ಎಂಬ ಪುಸ್ತಕಗಳನ್ನು ಬರೆದು ಜನಪ್ರಿಯರಾದ ಡಿ.ಕೆ.ಭಾರದ್ವಾಜರು ಈ ದಿಶೆಯಲ್ಲಿ ಯುಗಪ್ರವರ್ತಕರೆನ್ನಬಹುದು. ಇದೇ ಸಮಯದಲ್ಲಿ ಪ್ರಖ್ಯಾತ ಆಯುರ್ವೇದ ವೈದ್ಯರಾಗಿದ್ದ ಪಂಡಿತ ತಾರಾನಾಥರು ಪ್ರೇಮ ಎಂಬ ಮಾಸಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಅವರು ಬರೆದ ತಾಯಂದಿರಿಗಾಗಿ ಎಂಬ ಗ್ರಂಥ' ಉಲ್ಲೇಖನೀಯ. 1936ರಿಂದ1942ರ ಅವಧಿಯಲ್ಲಿ ಧಾರವಾಡದಲ್ಲಿದ್ದ ಎಂ.ಗೋಪಾಲಕೃಷ್ಣರಾಯರು ಪ್ರೇಮಕಲಾ, ಪೌರುಷ, ಗರ್ಭನಿರೋಧ, ಕಾಮದ ಗುಟ್ಟು, ಆಯುರ್ವೇದ, ಪ್ರಕೃತಿ ಚಿಕಿತ್ಸೆ ಎಂಬ ಹಲವಾರು ಪುಸ್ತಕಗಳನ್ನು ಪ್ರಕಟಿಸಿದರು. ಇದೇ ಅವಧಿಯಲ್ಲಿ ಉಡುಪಿಯ ಕಲಿಯುಗ ಎಂಬ ಮಾಸಪತ್ರಿಕೆ ಅನೇಕ ಆರೋಗ್ಯ ಲೇಖನಗಳನ್ನು ಪ್ರಕಟಿಸಿತು. ಆಧುನಿಕ ಕನ್ನಡ ವೈದ್ಯ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರಾದ ದೊಡ್ಡೇರಿ ವೆಂಕಟಗಿರಿರಾವ್ ಅವರು 1943ರಲ್ಲಿ ಬರೆದ ವಿಕೃತಕಾಮ ಇದುವರೆಗೆ ಏಳು ಮುದ್ರಣಗಳನ್ನು ಕಂಡಿದೆ. ಮೇಲುಸ್ತರದಲ್ಲಿ ಅತ್ಯಂತ ಮಡಿವಂತಿಕೆ ತೋರಿಸುತ್ತಿದ್ದ ಅಂದಿನ ಸಾಮಾಜಿಕ ಪರಿಸರದಲ್ಲಿ ಲೈಂಗಿಕ ವೈದ್ಯ ವಿಜ್ಞಾನವನ್ನು ಜನಸಾಮಾನ್ಯರಿಗೆ ಮುಟ್ಟಿಸಿದ ಕೀರ್ತಿ ದೊಡ್ಡೇರಿ ಅವರಿಗೆ ಸಲ್ಲುತ್ತದೆ. ಕಾಮಶಿಕ್ಷಣ (1944), ಪ್ರಸವ ವಿಜ್ಞಾನ (1945), ಸಂತಾನ ನಿಯಮ (1946) ಎಂಬ ಪುಸ್ತಕಗಳನ್ನಲ್ಲದೇ 1951 ರಿಂದ ಐದು ವರ್ಷಗಳ ಕಾಲ ದಾಂಪತ್ಯ ಜೀವನ ಎಂಬ ಆರೋಗ್ಯ ಮಾಸಪತ್ರಿಕೆಯನ್ನೂ ಇವರು ಪ್ರಕಟಿಸಿದರು. ಇವರ 'ಪ್ರಸವ ವಿಜ್ಞಾನ' ದಾದಿಯರಿಗೆ ಉತ್ತಮ ಮಾರ್ಗದರ್ಶಕ ಕೈಪಿಡಿಯಾಗಿತ್ತು. ಇದಕ್ಕೆ ಮದರಾಸು ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿಯ ಪ್ರಶಸ್ತಿ ಲಭಿಸಿತ್ತು.

ಇದೇ ಅವಧಿಯಲ್ಲಿ ಪಾಂಡುರಂಗ ಕುಲಕರ್ಣಿಯವರು ಸಚಿತ್ರ ಇಂಜೆಕ್ಷನ್ ವಿಜ್ಞಾನ, ಅಲೋಪತಿಕ್ ಔಷಧಿ ಗುಣ ರಹಸ್ಯ, ಐಚ್ಛಿಕ ಸಂತಾನ, ರೋಗೋಪಚಾರ ಎಂಬ ಪುಸ್ತಕಗಳನ್ನು ರಚಿಸಿದರು. ಮದರಾಸ್ ಬುಕ್ ಅ್ಯಂಡ್ ಲಿಟರೇಚರ್ ಸೊಸೈಟಿಯಿಂದ ಬಹುಮಾನವನ್ನೂ ಪಡೆದರು. ಇವರ ಸಮಕಾಲೀನರಾಗಿ ವೈದ್ಯ ಸಾಹಿತ್ಯ ಸೃಷ್ಟಿಸಿದವರೆಂದರೆ ಕೆ.ಆರ್. ಉಡುಪ, ಎಸ್.ರಾಮರಾಜ್, ಎಚ್.ಟಿ.ದೇವರಾಜ್, ಶಾಮರಾವ್ ಚಿತ್ರಗಾರ, ಎನ್.ಟಿ.ಪುಟ್ಟಣ್ಣ, ರಾಮಸ್ವಾಮಿ ವೈದ್ಯ ಮೊದಲಾದವರು.

ವೈದ್ಯಕೀಯ ಸಾಹಿತ್ಯಕ್ಕೆ ಜನಪ್ರಿಯತೆಯನ್ನು, ಸಾಹಿತ್ಯ ಲೋಕದ ಮನ್ನಣೆಯನ್ನು ದೊರಕಿಸಿಕೊಟ್ಟವರೆಂದರೆ ಕೊರವಂಜಿ ಪತ್ರಿಕೆಯ ಜನಕ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದ ಸ್ಥಾಪಕ ಸದಸ್ಯರಾದ ಎಂ.ಶಿವರಾಮ್ (ನೋಡಿ). ಅನಂತರ ತ್ರಿವೇಣಿ ಮತ್ತು ಸೃಜನಶೀಲ ಸಾಹಿತಿ ಜನಪ್ರಿಯ ವೈದ್ಯೆ ಅನುಪಮಾ ನಿರಂಜನ ಅವರು. ಪ್ರಜಾವಾಣಿ ಪತ್ರಿಕೆಯಲ್ಲಿ, ಸುಧಾ ವಾರಪತ್ರಿಕೆಯಲ್ಲಿ, ಆರೋಗ್ಯದ ಅಂಕಣವನ್ನು ಪ್ರಾರಂಭಿಸಿದ ಅನುಪಮಾ ನಿರಂಜನ (ನೋಡಿ) ಅವರು ಹತ್ತು ವೈದ್ಯಕೀಯ ಪುಸ್ತಕಗಳನ್ನು ಬರೆದರು. ಇವರ ಪುಸ್ತಕ 'ತಾಯಿ ಮತ್ತು ಮಗು' ಎಲ್ಲ ಸ್ತ್ರೀಯರ ಬೈಬಲ್ ಆಯಿತು. ದಾಂಪತ್ಯ ದೀಪಿಕೆ, ಕೇಳು ಕಿಶೋರಿ, ವಧುವಿಗೆ ಕಿವಿಮಾತು-ಇವು ನವದಂಪತಿಗಳಿಗೆ ಹದಿಹರೆಯದವರಿಗೆ ಕೈಪಿಡಿಯಾಗಿವೆ. ಒತ್ತಡದ ಬೇನೆಗಳು, ಕ್ಯಾನ್ಸರ್ ಜಗತ್ತು - ಇವು ಕನ್ನಡ ವೈದ್ಯ ಸಾಹಿತ್ಯಕ್ಕೆ ಮಾದರಿ ಕೊಡುಗೆಗಳಾಗಿವೆ. ತಮ್ಮ ಅಪೂರ್ವವಾದ ಹಾಸ್ಯ ಪ್ರಜ್ಞೆ ಮತ್ತು ಲಲಿತ ಶೈಲಿಯ ಬರೆಹದಿಂದ ಖ್ಯಾತರಾದ ಶಿವರಾಮ್ ಬರೆದ ಮನಮಂಥನ (1964) ಈ ಕ್ಷೇತ್ರದ ಅತ್ಯಂತ ಶ್ರೇಷ್ಠ ಕೃತಿ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿರುವುದು ಕನ್ನಡ ವೈದ್ಯ ಸಾಹಿತ್ಯದಲ್ಲಿ ಇಂದಿಗೂ ಮುರಿಯದ ದಾಖಲೆ. ಮನೋವೈದ್ಯಕೀಯ ವಿಷಯಗಳಲ್ಲಿ ಜನಪ್ರಿಯ ತಾರಾಮೌಲ್ಯವನ್ನು ಪಡೆದ ಕಾದಂಬರಿಗಳನ್ನು ಬರೆದ ತ್ರಿವೇಣಿ ಈ ಕ್ಷೇತ್ರಕ್ಕೆ ಬೆಲೆಯುಳ್ಳ ಕಾಣಿಕೆ ನೀಡಿದ್ದಾರೆ.

ವೈದ್ಯಕೀಯ ಸಾಹಿತ್ಯ ರಚನೆಯ ಸಂದರ್ಭದಲ್ಲಿ ಡಿ.ಎಸ್. ಶಿವಪ್ಪನವರದು ದೊಡ್ಡ ಹೆಸರು. ಇವರ ವೈದ್ಯಪದಕೋಶ ಒಂದು ಮಹತ್ತ್ವದ ಕೃತಿ. ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದ ಆರೋಗ್ಯ ಮಾಲೆಯ 16 ಪುಸ್ತಕಗಳ ಪ್ರಧಾನ ಸಂಪಾದಕರಾಗಿ, ವಿವಿಧ ವೈದ್ಯಕೀಯ ಪುಸ್ತಕಗಳನ್ನು ಇವರು ಹೊರತಂದಿದ್ದಾರೆ. ಇವರ 'ವೈದ್ಯಕ ಪದಗಳ ಗುಟ್ಟು ರಚನೆ' ಗ್ರಂಥ ಪ್ರತಿಯೊಬ್ಬ ವೈದ್ಯ ಮತ್ತು ವೈದ್ಯ ಲೇಖಕರು ಗಮನಿಸಬೇಕಾದ ಕೃತಿ. ವೈದ್ಯಕೀಯ ಸಾಹಿತ್ಯವನ್ನು ಕನ್ನಡಕ್ಕೆ ತರುವ ಇವರ ಕಳಕಳಿಯನ್ನು ಇವರ ಈ ಮಾತುಗಳಿಂದ ತಿಳಿಯಬಹುದು: ತಮ್ಮ ಆರೋಗ್ಯವನ್ನು ತಾವೇ ಕಾಪಾಡಿಕೊಳ್ಳುವಂತೆ ರೋಗಿಗಳಿಗೆ ಚೆನ್ನಾಗಿ ಹೇಳಿಕೊಡಬೇಕೆಂದು ಹಿಪೊಕ್ರೇಟಿಸ್ (ಕ್ರಿ.ಪೂ.430-360) ಶತಮಾನಗಳ ಹಿಂದೆಯೇ ಹೇಳಿರುವನು. ಆದರೂ ಈಚಿನ ತನಕ ರೋಗಿಗಳನ್ನು ಅವರ ರೋಗ, ಚಿಕಿತ್ಸೆಗಳ ವಿಚಾರದಲ್ಲಿ ಆದಷ್ಟೂ ಅಜ್ಞಾನಿಗಳಾಗಿ ಇರಿಸುವುದೇ ಸರಿಯೆಂಬ ಭಾವನೆ ಬಹುಪಾಲು ವೈದ್ಯರಲ್ಲಿತ್ತು.......ರೋಗವಿಲ್ಲದೇ ಆರೋಗ್ಯ ಎನ್ನುವ ಕಾಲ ಹೋಯಿತು. ಈಗ ಸಂಪೂರ್ಣ ದೈಹಿಕ, ಮಾನಸಿಕ ಇಲ್ಲವೇ ಸಾಮಾಜಿಕ ಹದುಳತೆಯೇ ಆರೋಗ್ಯ ಎನಿಸಿಕೊಂಡಿದೆ. ಇದರ ಸಾಧನೆಗೆ ರೋಗಿ ಮತ್ತು ವೈದ್ಯ ಇವರ ನಡುವೆ ನಿಕಟ ಸಂಪರ್ಕ ಇರಬೇಕಾಗುತ್ತದೆ. ಇದಕ್ಕಾಗಿ ಜನರಿಗೆ ಆರೋಗ್ಯ ಸಾಧನೆ ರೋಗ ಚಿಕಿತ್ಸೆಗಳ ವಿಷಯವಾಗಿ ಸಾಕಷ್ಟು ತಿಳುವಳಿಕೆಯನ್ನು ಕೊಟ್ಟರೆ ಮಾತ್ರ ಕೈಗೂಡುವುದು. ಇದನ್ನು ನೀಡಲು ಜನರ ತಾಯಿ ನುಡಿಗಿಂತಲೂ ಒಳ್ಳೆಯ ಮಾಧ್ಯಮ ಇನ್ನೊಂದಿರಲಾರದು.

ಪಿ.ಎಸ್.ಶಂಕರ್ ಅವರು ತಜ್ಞ ವೈದ್ಯರಾಗಿ, ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ 40ಕ್ಕೂ ಹೆಚ್ಚು ವೈದ್ಯಕೀಯ ಪುಸ್ತಕಗಳನ್ನು ಬರೆದಿದ್ದಾರೆ. ವೈದ್ಯರು ಹಾಗೂ ವೈದ್ಯ ಸಿಬ್ಬಂದಿಗೆ ತರಬೇತಿಯಲ್ಲಿ ಆಕರ ಗ್ರಂಥವಾಗಬಲ್ಲ ಮಾನವ ಶರೀರ ರಚನಾ ಶಾಸ್ತ್ರ ಮತ್ತು ಶರೀರ ಕ್ರಿಯಾಶಾಸ್ತ್ರ (ಅನುವಾದ) ಇವು ಉಲ್ಲೇಖನೀಯ. ಇವರ ಸಂಪಾದಕತ್ವದಲ್ಲಿ ಸಿದ್ಧವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ 'ವೈದ್ಯ ವಿಶ್ವಕೋಶ' ಕನ್ನಡ ವೈದ್ಯ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ. ಇವರು 80ಕ್ಕೂ ಹೆಚ್ಚು ವೈದ್ಯಕೀಯ ಲೇಖನಗಳನ್ನು ಬರೆದಿರುವುದಲ್ಲದೇ 200ಕ್ಕೂ ಹೆಚ್ಚು ವೈದ್ಯಕೀಯ ವಿಚಾರಗಳ ರೇಡಿಯೋ ಭಾಷಣಗಳನ್ನು ಮಾಡಿ ವೈದ್ಯಕೀಯ ಮಾಹಿತಿಯನ್ನು ಜನಸಾಮಾನ್ಯರಿಗೆ ತಲುಪಿಸಿದ್ದಾರೆ.

ಕನ್ನಡದಲ್ಲಷ್ಟೇ ಅಲ್ಲ ಇಡೀ ಭಾರತದಲ್ಲಿ ಅತ್ಯಧಿಕ ಸಂಖ್ಯೆಯ ವೈದ್ಯಕೀಯ ಪುಸ್ತಕಗಳನ್ನು ಬರೆದವರು ಸಿ.ಆರ್.ಚಂದ್ರಶೇಖರ್. ಈ ಪ್ರಕಾರದ ಸಾಹಿತ್ಯಕ್ಕೆ ಇವರು ಅಪೂರ್ವ ಕೊಡುಗೆ ನೀಡಿದ್ದಾರೆ. ಇವರು ಇದುವರೆಗೆ 100 ಕನ್ನಡ ವೈದ್ಯಕೀಯ ಪುಸ್ತಕಗಳನ್ನೂ 720ಕ್ಕೂ ಹೆಚ್ಚಿನ ವೈದ್ಯಕೀಯ ಲೇಖನಗಳನ್ನೂ ನಾಲ್ಕು ವೈದ್ಯಕೀಯ ನಾಟಕಗಳನ್ನೂ ಬರೆದಿದ್ದಾರೆ. ಮನೋವೈದ್ಯ ವಿಷಯಗಳ ಬಗ್ಗೆ ಅನೇಕ ಉಪನ್ಯಾಸಗಳನ್ನೂ ರೇಡಿಯೋ, ದೂರದರ್ಶನ ಭಾಷಣಗಳನ್ನೂ ಮಾಡಿದ್ದಾರೆ.

ಕನ್ನಡ ವೈದ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಪ್ರಮುಖರಾದವರೆಂದರೆ ಸ.ಜ.ನಾಗಲೋಟಿಮಠ, ಎ.ನಾರಾಯಣಪ್ಪ, ಎಂ.ಬಸವರಾಜೇಅರಸ್, ಎಚ್.ಡಿ.ಚಂದ್ರಪ್ಪಗೌಡ, ಸಿ.ಅನ್ನಪೂರ್ಣಮ್ಮ, ಲೀಲಾವತಿದೇವದಾಸ, ಕರವೀರಪ್ರಭು ಕ್ಯಾಲಕೊಂಡ, ಎಚ್.ಎಸ್.ಮೋಹನ್, ಅಶೋಕ ಪೈ, ಎಸ್.ಪಿ.ಯೋಗಣ್ಣ, ಬಿ.ಎಂ.ಹೆಗಡೆ, ಡಿ.ಕೆ.ಮಹಾಬಲರಾಜು, ಟಿ.ಎಸ್.ಸತ್ಯನಾರಾಯಣರಾವ್, ಶಮಂತಕಮಣಿ, ಆರ್.ಸಿ.ಅಗಡಿ, ವಸಂತ ಕುಲಕರ್ಣಿ, ಕೆ.ಆರ್.ಶ್ರೀಧರ್, ಎಚ್.ಗಿರಿಜಮ್ಮ, ಸುನಂದಾ ಕುಲಕರ್ಣಿ, ವಸುಂಧರಾ ಭೂಪತಿ, ನಾ.ಸೋಮೇಶ್ವರ, ಎಸ್.ಎಸ್.ಪಾಟೀಲ, ಎನ್.ವಿಶ್ವರೂಪಾಚಾರ್, ರಮೇಶ ಉಪಾಧ್ಯಾಯ, ಮೀನಗುಂಡಿ ಸುಬ್ರಹ್ಮಣ್ಯಂ, ಶರತ್ ಕುಮಾರ್, ಎಂ.ವಿ.ನರಸಿಂಹಯ್ಯ, ಪದ್ಮಿನಿ ಪ್ರಸಾದ್, ಛಬ್ಬಿ ಮೊದಲಾದ ಅನೇಕ ವೈದ್ಯರನ್ನೂ ವೈದ್ಯೇತರ ಲೇಖಕರನ್ನೂ ಇಲ್ಲಿ ಉಲ್ಲೇಖಿಸಬಹುದು. ಇಂದು ಪುಸ್ತಕ ಮಾರುಕಟ್ಟೆಯಲ್ಲಿ ನೂರಾರು ವೈದ್ಯಕೀಯ ಪುಸ್ತಕಗಳು ಓದುಗರಿಗೆ ಲಭ್ಯವಿವೆ ಎನ್ನುವುದು ಸಮಾಧಾನದ ಸಂಗತಿ. ವೈದ್ಯ ಸಾಹಿತ್ಯ ಕ್ಷೇತ್ರದಲ್ಲಿ ಪ್ರತಿವರ್ಷ ಇಪ್ಪತ್ತರಿಂದ ಇಪ್ಪತ್ತೈದು ಪುಸ್ತಕಗಳು ಪ್ರಕಟಗೊಳ್ಳುತ್ತವೆ. ಜನಪ್ರಿಯ ಲೇಖಕರ ಕೃತಿಗಳು ಏಳು ಎಂಟು ಮರು ಮುದ್ರಣಗಳನ್ನು ಕಂಡಿವೆ. ವೈಚಾರಿಕ ಸಾಹಿತ್ಯದ ಮಾರಾಟದಲ್ಲಿ ಆರೋಗ್ಯ ಸಾಹಿತ್ಯದ್ದು ಸಿಂಹಪಾಲು. ಕಥೆ, ಕಾದಂಬರಿಗಳಷ್ಟೇ ವೇಗವಾಗಿ ವೈದ್ಯಕೀಯ ಪುಸ್ತಕಗಳು ಮಾರಾಟವಾಗುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ವೈದ್ಯ ಸಾಹಿತ್ಯ ಸೃಷ್ಟಿಗೆ ಮತ್ತು ಅದನ್ನು ಜನರಿಗೆ ಮುಟ್ಟಿಸಲು ನಾಡಿನ ಬಹುತೇಕ ಪತ್ರಿಕೆಗಳು ನೆರವಾಗುತ್ತಿವೆ. ವೈದ್ಯ ಲೇಖನಗಳನ್ನಷ್ಟೇ ಅಲ್ಲದೆ, ಕ್ರಮವಾಗಿ ವೈದ್ಯಕೀಯ ಅಂಕಣಗಳನ್ನೇ ಪ್ರಕಟಿಸುತ್ತಿವೆ. ಅನೇಕ ಪತ್ರಿಕೆಗಳು ತಮ್ಮ ಈ ಅಂಕಣಗಳಿಂದ ಹೆಚ್ಚು ಜನಪ್ರಿಯವಾಗಿವೆ ಎಂಬುದು ಸ್ವಾಗತಾರ್ಹ ಸಂಗತಿ. ಪತ್ರಿಕೆಗಳಲ್ಲಿ ಆರೋಗ್ಯದ ಬಗ್ಗೆ ಲೇಖನಗಳು ಮತ್ತು ಅಂಕಣಗಳು ಜನಪ್ರಿಯವಾಗಿರುವುದನ್ನು ಕಂಡು ಕೆಲವು ವೈದ್ಯರು ಮತ್ತು ವೈದ್ಯೇತರರು ವೈದ್ಯಕೀಯ ಸಾಹಿತ್ಯಕ್ಕೆ ಮೀಸಲಾದ ಮಾಸಪತ್ರಿಕೆಗಳನ್ನು ಹೊರತಂದಿದ್ದಾರೆ. ಓರಿಯಂಟಲ್ ವಾಜ್‌ಮನ್ ಪಬ್ಲಿಷಿಂಗ್ ಹೌಸ್ (ಪುಣೆ) ಪ್ರಕಟಿಸುವ ಆರೋಗ್ಯವಾಣಿ, ಮೈಸೂರಿನ ಎಸ್.ಪಿ.ಯೋಗಣ್ಣ ಅವರು ಹೊರತಂದ ಆರೋಗ್ಯಯೋಗ, ಧಾರವಾಡದ ಆರ್.ಸಿ.ಅಗಡಿಯವರ ಆರೋಗ್ಯ ರಕ್ಷಕ, ಸೊರಬದಿಂದ ಹೊರಬರುತ್ತಿರುವ ಎಂ.ಕೆ.ಭಟ್ ಅವರ ಆರೋಗ್ಯ ಸಂಪತ್ತು, ಹುಬ್ಬಳ್ಳಿಯಿಂದ ಹೊರಡುವ ಸೌಂದರ್ಯ ಮತ್ತು ಆರೋಗ್ಯ ಭಾಗ್ಯ, ಎಲ್ಲರಿಗೂ ಆರೋಗ್ಯ, ಸವದತ್ತಿಯಿಂದ ಹೊರಡುವ ಆರೋಗ್ಯ ಭಾಗ್ಯ, ಬೆಂಗಳೂರಿನ ಜೀವನಾಡಿ, ಆರೋಗ್ಯ ತರಂಗ (ಈಗ ನಿಂತುಹೋಗಿದೆ), ಆರೋಗ್ಯ ಅನುರಾಗ, ಆದರ್ಶ ಗಂಡ ಹೆಂಡತಿ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇಲಾಖೆಯ ಗೋಡೆ ಪತ್ರಿಕೆ ಕುಟುಂಬ - ಇವು ನಮ್ಮ ಗಮನ ಸೆಳೆಯುತ್ತವೆ. ಲೈಂಗಿಕ ವಿಜ್ಞಾನವನ್ನು ಜನರಿಗೆ ಮುಟ್ಟಿಸುತ್ತೇವೆಂದು ಪ್ರಾರಂಭದಲ್ಲಿ ವೈಜ್ಞಾನಿಕ ರೀತಿಯಲ್ಲಿ ಬಂದು, ಕ್ರಮೇಣ ಪ್ರಚೋದಕ ಸಾಹಿತ್ಯದಿಂದಾಗಿ ಜನರ ಮತ್ತು ಕಾನೂನಿನ ಕೆಂಗಣ್ಣಿಗೆ ಒಳಗಾಗಿ ಉಸಿರು ನಿಂತ ಪತ್ರಿಕೆಗಳು ಹಲವಾರು ಅದರಲ್ಲಿ ರತಿವಿಜ್ಞಾನವೂ ಒಂದು.

ಇತ್ತೀಚೆಗೆ ವೈದ್ಯಸಾಹಿತಿಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ ಬರೆವಣಿಗೆಯಲ್ಲಿ ಸಮತೋಲನ ಕಾಪಾಡಿಕೊಳ್ಳಬೇಕಾಗಿದೆ. ಓದುಗರಲ್ಲಿ

ಗೊಂದಲ ಮೂಡಿಸದೆ ಸ್ಪಷ್ಟತೆಗೆ ಆದ್ಯತೆ ನೀಡಬೇಕಾಗಿದೆ. ಭಯವೇ ಇಲ್ಲದವರಲ್ಲಿ ಸ್ವಲ್ಪ ಭಯ ಮೂಡಿಸಬೇಕು - ಭಯದಿಂದ ತತ್ತರಿಸುವವರಲ್ಲಿ ಧೈರ್ಯ ಮೂಡಿಸಬೇಕು - ಇದು ವೈದ್ಯ ಸಾಹಿತಿಗಳ ಮುಖ್ಯ ಕರ್ತವ್ಯ. ಜನಸಾಮಾನ್ಯರು ಆರಂಭದಲ್ಲಿಯೇ ತಜ್ಞರ ಬಳಿಗೆ ಬಂದು ತಮ್ಮ ತೊಂದರೆಗಳನ್ನು ಹೇಳಿಕೊಳ್ಳುವಂತೆ ಅವರಿಗೆ ಎಚ್ಚರಿಕೆ ನೀಡುವುದು, ಅವರ ದೇಹದ ಬಗ್ಗೆ, ದೈಹಿಕ ಕ್ರಿಯೆಗಳ ಬಗ್ಗೆ ಅವರಿಗೆ ಮಾಹಿತಿ ತಿಳಿಸುವುದು, ಅವರ ಮೂಢನಂಬಿಕೆಗಳನ್ನು ತೊಡೆದು ಹಾಕುವುದು ವೈದ್ಯ ಸಾಹಿತಿಗಳ ಹಾಗೂ ವೈದ್ಯಸಾಹಿತ್ಯದ ಪ್ರಮುಖ ಗುರಿಯಾಗಬೇಕು.

1986ರಲ್ಲಿ ಪ್ರಾರಂಭಗೊಂಡ ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು ಈ ಎಲ್ಲ ಸಮಸ್ಯೆಗಳನ್ನು ನಿಭಾಯಿಸಲು ಕಾರ್ಯೋನ್ಮುಖವಾಗಿದೆ. ರಾಜ್ಯ ಮಟ್ಟದಲ್ಲಿ ಪ್ರತಿವರ್ಷ ವೈದ್ಯ ಸಾಹಿತ್ಯ ಸಮ್ಮೇಳನವನ್ನು ನಡೆಸಿಕೊಂಡು ಬಂದಿದೆ. ಕುವೆಂಪು ಅವರ ಹೆಸರಿನಲ್ಲಿ ಪ್ರತಿವರ್ಷ ಉತ್ತಮ ಕೃತಿಗೆ ಪುರಸ್ಕಾರವನ್ನು ನೀಡಲಾಗುತ್ತಿದೆ. ಕೆ.ಎಚ್.ಕೃಷ್ಣಮೂರ್ತಿಯವರ ದೃಷ್ಟಿಪರಿಚಯ, ಎಚ್.ಡಿ. ಚಂದ್ರಪ್ಪಗೌಡರ ಕ್ಯಾನ್ಸರ್ ಲೋಕ, ವಸಂತ ಕುಲಕರ್ಣಿಅವರ ಅನ್ನಮಾರ್ಗದಲ್ಲಿ ಏಳು ದಿನಗಳ ಪಯಣ, ಸ.ಜ.ನಾಗಲೋಟಿಮಠ ಅವರ ಶ್ರೀಸಾಮಾನ್ಯ ಮತ್ತು ವೈದ್ಯ, ಕರವೀರಪ್ರಭು ಕ್ಯಾಲಕೊಂಡ ಅವರ ಮಕ್ಕಳ ಮಾರಕ ರೋಗಗಳು, ಕೆ.ಆರ್.ಶ್ರೀಧರ್ ಅವರ ಮಾನಸಿಕ ಒತ್ತಡ ಎಂಬ ಕೃತಿಗಳಿಗೆ ಈ ಪುರಸ್ಕಾರ ಸಂದಿದೆ. ಪರಿಷತ್ತು ಈವರೆಗೆ 15 ವೈದ್ಯ ಪುಸ್ತಕಗಳನ್ನು ಹೊರತಂದಿದೆ. ಹೊಸ ವೈದ್ಯ ಲೇಖಕರಿಗೆ ಕಮ್ಮಟಗಳನ್ನು ಏರ್ಪಡಿಸುತ್ತಿದೆ. ಬೆಂಗಳೂರು, ಕೋಲಾರ, ದಾವಣಗೆರೆ, ಬಿಜಾಪುರ, ಬಾಗಲಕೋಟೆಗಳಲ್ಲಿ ಕಮ್ಮಟಗಳನ್ನು ನಡೆಸಿದೆ. ಪರಿಷತ್ತಿನ ಜಿಲ್ಲಾ ಘಟಕಗಳೂ ವೈದ್ಯ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿವೆ.

ಮಾಧ್ಯಮಗಳು ಕೂಡ ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡುತ್ತಿವೆ. ಆಕಾಶವಾಣಿ ಜನರಿಗೆ ವೈದ್ಯಕೀಯ ಮಾಹಿತಿಗಳನ್ನು ಮುಟ್ಟಿಸುವ ನಿಟ್ಟಿನಲ್ಲಿ ಪ್ರಶಂಸನೀಯ ಸೇವೆ ಸಲ್ಲಿಸುತ್ತಿದೆ. ಆಕಾಶವಾಣಿಯ ಬೆಳಗಿನ ನಾಲ್ಕೇ ನಿಮಿಷದ ರೇಡಿಯೋ ಡಾಕ್ಟರ್, ಹತ್ತು ನಿಮಿಷಗಳ ಅವಧಿಯ ತಜ್ಞರನ್ನು ಭೇಟಿ ಮಾಡಿ ಕಾರ್ಯಕ್ರಮಗಳು ಜನಪ್ರಿಯವಾಗಿವೆ. ದೂರದರ್ಶನ ವಾಹಿನಿಗಳೂ ವಿವಿಧ ಮಾನಸಿಕ ಮತ್ತು ದೈಹಿಕ ರೋಗಗಳ ಬಗ್ಗೆ ವೈದ್ಯಕೀಯ ತಜ್ಞರಿಂದ ಸಲಹೆ-ಸೇವೆಯ ಪ್ರಸಾರ ಮಾಡುತ್ತಿವೆ. ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಸಲಹೆ ನೀಡುವ ಕಾರ್ಯಕ್ರಮಗಳಲ್ಲಿ ಪರಿಣತ ವೈದ್ಯರು ಭಾಗವಹಿಸುತ್ತಿದ್ದಾರೆ. ಒಟ್ಟಾರೆ ಜನತೆಯಲ್ಲಿ ಮೂಡುತ್ತಿರುವ ವೈದ್ಯಕೀಯ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಹಸಿವು ಇನ್ನೂ ತಣಿಯಬೇಕಾಗಿದೆ.

(ಕೆ.ಪಿ.ಕೆ.)

**ಕನ್ನಡದಲ್ಲಿ ಶತಕ ಸಾಹಿತ್ಯ :** ಕನ್ನಡದ ಚಂಪೂ, ಷಟ್ಪದಿ, ವಚನ, ತ್ರಿಪದಿ, ಸಾಂಗತ್ಯ ಮೊದಲಾದ ಸಾಹಿತ್ಯ ಪ್ರಕಾರಗಳಂತೆ ಶತಕ ಸಾಹಿತ್ಯವೂ ಒಂದು. ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕ ಎಂಬ ಹೆಸರಿನಿಂದ ಕರೆಯುತ್ತಾರೆ. ಕಂದ, ವೃತ್ತ, ಷಟ್ಪದಿ, ಸಾಂಗತ್ಯ ಮೊದಲಾದ ಛಂದಸ್ಸಿನಲ್ಲಿ ರಚಿತವಾಗಿರುತ್ತವೆ. ಇದು ಆತ್ಮನಿಷ್ಠವಾದ, ಭಾವನಿಷ್ಠವಾದ ಒಂದು ಕಾವ್ಯ ಪ್ರಕಾರ. ಮಹಾಕಾವ್ಯ, ಖಂಡಕಾವ್ಯಗಳಂತೆ ವಸ್ತುನಿಷ್ಠವಲ್ಲ, ಕಥಾವಸ್ತುವನ್ನೊಳಗೊಂಡಿರುವುದಿಲ್ಲ. ಕವಿಯ ಮನೋಲಹರಿ ಹರಿದಂತೆ ಹಲವಾರು ಸಂದರ್ಭಗಳಲ್ಲಿ ರಚಿತವಾದ ಪದ್ಯಗಳು ಒಂದು ವಿಷಯದ ಏಕಸೂತ್ರಕ್ಕೆ ಒಳಗಾಗಿರುತ್ತವೆ. ಆದುದರಿಂದ ಶತಕಗಳನ್ನು ಪ್ರಾಚೀನ ಕಾಲದ ಭಾವಗೀತೆಗಳು ಎನ್ನಬಹುದು. ಭಕ್ತಿ, ಜ್ಞಾನ, ವೈರಾಗ್ಯ, ನೀತಿಗಳನ್ನು ಪ್ರತಿಪಾದಿಸುವುದು ಶತಕಗಳ ಸಾಮಾನ್ಯ ಲಕ್ಷಣ ಎನ್ನಬಹುದು. ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕವೆಂದು ಕರೆವ ವಾಡಿಕೆ ಇದ್ದರೂ ಕನ್ನಡದಲ್ಲಿ 100 ರಿಂದ 128 ಪದ್ಯಗಳಿರುವ ಶತಕಗಳೂ ಕಂಡುಬರುತ್ತವೆ.

ಕನ್ನಡದ ಶತಕ ಸಾಹಿತ್ಯಪ್ರಕಾರ ಸಂಸ್ಕೃತ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು. ಸಂಸ್ಕೃತದಲ್ಲಿ ನ್ಯಾಯಶತಕ, ಭರ್ತೃಹರಿಯ ಶತಕತ್ರಯ, ಮಯೂರನ ಸೂರ್ಯಶತಕ ಮೊದಲಾದವು ಪ್ರಸಿದ್ಧವಾಗಿವೆ. ಕನ್ನಡದಲ್ಲಿ ನಾನೂರಕ್ಕೂ ಹೆಚ್ಚು ಶತಕಗಳಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಇವುಗಳಲ್ಲಿ ಕೆಲವು ಶತಕಗಳ ಕರ್ತೃಗಳು ಯಾರೆಂದು ತಿಳಿಯುವುದಿಲ್ಲ.

ನಾಗವರ್ಮಾಚಾರ್ಯನ (ಸು.1071) ಚಂದ್ರಚೂಡಾಮಣಿ ಶತಕ ಕನ್ನಡದ ಮೊತ್ತಮೊದಲನೆಯ ಶತಕ ಗ್ರಂಥ. ಇದಕ್ಕೆ ಜ್ಞಾನಸಾರ ಎಂಬ ಹೆಸರೂ ಇದೆ. ಕೃತಿಯ ವಸ್ತು ವೈರಾಗ್ಯ ಪ್ರತಿಪಾದನೆ. ಬಂಧ ಲಲಿತವಾಗಿಯೂ ಗಂಭೀರವಾಗಿಯೂ ಇದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅನಂತರ ಕೊಂಡುಗುಳಿ ಕೇಶಿರಾಜನ (ಸು.1160) ಷಡಕ್ಷರಕಂದ ಕಂಡುಬರುತ್ತದೆ. ಇದೇ ಕಾಲದಲ್ಲಿ ಕವಿಕಾಮ (ಸು.1200) ಸ್ತನಶತಕವೆಂಬ ಗ್ರಂಥವನ್ನು ರಚಿಸಿರುವುದಾಗಿ ಪಾರ್ಶ್ವನಾಥ ಪುರಾಣದಿಂದ ತಿಳಿದುಬರುತ್ತದೆ. ಆದರೆ ಗ್ರಂಥ ಉಪಲಬ್ಧವಿಲ್ಲ. ಇದು ಬಹುಶಃ ಸಂಸ್ಕೃತದ 'ವಕ್ಷೋಜಶತಕ'ದ ಹಾಗೆ ವರ್ಣನಾತ್ಮಕವಾಗಿರಬೇಕು.

ಕನ್ನಡದ ಶತಕ ಸಾಹಿತ್ಯದಲ್ಲಿ ಹರಿಹರನ ಪಾತ್ರ ಪ್ರಮುಖವಾದದ್ದು. ಇವನ ಪಂಪಾಶತಕ, ರಕ್ಷಾಶತಕಗಳು ಉನ್ನತ ಕಾವ್ಯಗುಣಗಳಿಂದ, ಭಾವಗೀತೆಯ ಲಕ್ಷಣಗಳಿಂದ ಕೂಡಿದ್ದು ಸಹೃದಯರ ಮನಸೆಳೆದಿವೆ. ಪಂಪಾಶತಕದಲ್ಲಿ ಈ ಕವಿಯ ಹೃದಯ ತುಡಿದಿರುವಷ್ಟು, ವಿರೂಪಾಕ್ಷನನ್ನು ಸ್ತುತಿಸಿರುವಷ್ಟು, ಆತ್ಮವನ್ನು ಅರ್ಪಿಸಿ ಹಿಗ್ಗಿರುವಷ್ಟು ಮತ್ತಾವ ಕವಿಯ ಹೃದಯವೂ ತುಡಿದಿಲ್ಲ, ಸ್ತುತಿಸಿಲ್ಲ, ಹಿಗ್ಗಿಲ್ಲ. ರಕ್ಷಾಶತಕದಲ್ಲಿ ಕವಿ ತನ್ನ ತಪ್ಪುಒಪ್ಪುಗಳನ್ನೆಲ್ಲ ತೋಡಿಕೊಂಡು ನಿರ್ಲಿಪ್ತನಾಗಿ, ಶಾಂತನಾಗಿ ತನ್ನ ಅಂತರಂಗವನ್ನೆಲ್ಲ ಶೋಧಿಸಿಕೊಂಡಿದ್ದಾನೆ. ಸಂಸಾರದ ಸುಳಿಗೆ ಸಿಕ್ಕ ಜೀವ ಅದರಿಂದ ಹೊರಬರಲು ನಡೆಸಿರುವ ಮನಸ್ಸಿನ ಹೋರಾಟ ಸೂಕ್ಷ್ಮವಾಗಿ ಇದರಲ್ಲಿ ಪ್ರಕಟಗೊಂಡಿದೆ.

ಸು.16ನೆಯ ಶತಮಾನಕ್ಕೆ ಸೇರಿದ ಪುಲಿಗೆರೆ ಸೋಮನ 'ಸೋಮೇಶ್ವರ ಶತಕ' ಕನ್ನಡ ನೀತಿಶತಕಗಳಲ್ಲಿ ಅಗ್ರಸ್ಥಾನವನ್ನು ಪಡೆದು ಜನಪ್ರಿಯವಾಗಿದೆ. ನೀತಿ ಪ್ರತಿಪಾದನೆ ಕೆಲವೆಡೆ ಕಾವ್ಯಾತ್ಮಕವಾಗಿ ನಿರೂಪಿತವಾಗಿರುವುದು ಈ ಶತಕದ ಹೆಗ್ಗಳಿಕೆಗೆ ಕಾರಣವಾಗಿದೆ. ಕೆಲವಂ ಬಲ್ಲವರಿಂದ ಕಲ್ತು, ರವಿಯಾಕಾಶಕೆ ಭೂಷಣಂ, ಚರಿಪಾರಣ್ಯದ ಪಕ್ಷಿಗೊಂದು ತರುಗೊಡ್ಡಾಗಲ್ ಮುಂತಾದ ಪದ್ಯಗಳು ಜನಮನದಲ್ಲಿ ನೆಲಸಿವೆ. ಶೈಲಿ ಅನುಭವದ ನುಡಿಗಳಿಂದ, ಗಾದೆ ಮಾತುಗಳಂಥ ಸೂಕ್ತಿಗಳಿಂದ, ಜನಸಾಮಾನ್ಯರ ಹೃದಯಕ್ಕೆ ನೇರವಾಗಿ ತಾಗುವಂತಿವೆ

ದೇಪರಾಜ (ಸು.1410) ಪರಿವರ್ಧಿನೀ ಷಟ್ಪದಿಯಲ್ಲಿ ಸಂಸ್ಕೃತ ಅಮರುಕವನ್ನು ಕನ್ನಡಿಸಿದ್ದಾನೆ. ಇದೇ ಅಮರುಕವನ್ನು ಚಿಕುಪಾಧ್ಯಾಯ (ಸು.1672) ಅನುವಾದ ಮಾಡಿದ್ದಾನೆ. ಚಂದ್ರಕವಿ (ಸು.1430) ಗುರುಮೂರ್ತಿ ಶಂಕರಶತಕವನ್ನು ರಚಿಸಿದ್ದಾನೆ. ಮಗ್ಗೆಯ ಮಾಯಿದೇವನ (ಸು.1430) ಶಿವಾಧವ, ಶಿವಾವಲ್ಲಭ, ಮಹದೈಪುರೀಶ್ವರ ಶತಕಗಳು ಕ್ರಮವಾಗಿ ಭಕ್ತಿ, ಜ್ಞಾನ, ವೈರಾಗ್ಯವನ್ನು ಪ್ರತಿಪಾದಿಸುತ್ತವೆ. ಈ ಶತಕತ್ರಯ ಜನಪ್ರಿಯವಾಗಿದ್ದರೂ ಶಾಸ್ತ್ರ ಮತ್ತು ಪಾಂಡಿತ್ಯ ಭಾರದಿಂದ ಕುಸಿಯುತ್ತವೆ. ಹರಿಹರನಲ್ಲಿ ಕಾಣುವಂತೆ ಭಾವತೀವ್ರತೆಯಾಗಲೀ ಕಲ್ಪನಾಶಕ್ತಿಯಾಗಲೀ ಸರಳವಾದ ರಮ್ಯಶೈಲಿಯಾಗಲೀ ಇವನಲ್ಲಿ ಕಂಡುಬರುವುದಿಲ್ಲ. ಆದರೆ ಜನತೆಯ ಆಚಾರವಿಚಾರ ಹೇಳುವೆಡೆ ಮಾತ್ರ ಸೊಗಸು ಕಂಡುಬರುತ್ತದೆ.

ಹತ್ತಕ್ಕೂ ಹೆಚ್ಚು ಶತಕಗಳು 16ನೆಯ ಶತಮಾನದಲ್ಲಿ ರಚಿತವಾಗಿವೆ. ಗುಮ್ಮಟಾರ್ಯ (ಸು.1500), ಸಿರಿನಾಮಧೇಯ (ಸು.1550), ಚೆನ್ನಮಲ್ಲಿಕಾರ್ಜುನ (ಸು1560) - ಇವರು ಒಂದೊಂದು ಶತಕವನ್ನೂ ವೀರಭದ್ರರಾಜ (ಸು.1530) ಐದು ಶತಕಗಳನ್ನೂ ರಚಿಸಿದ್ದಾರೆ. ರತ್ನಾಕರವರ್ಣಿ ಈ ಶತಮಾನದ ಪ್ರಮುಖ ಶತಕ ಕರ್ತೃ. ಇವನು ರತ್ನಾಕರ ಶತಕ, ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕಗಳನ್ನು ರಚಿಸಿದ್ದಾನೆ. ರತ್ನಾಕರ ಶತಕದಲ್ಲಿ ನೀತಿಬೋಧೆಗಿಂತ ಹೆಚ್ಚು ವೈರಾಗ್ಯಬೋಧೆ ಕಂಡುಬರುತ್ತದೆ. ಕೆಲವು ವೃತ್ತಗಳ ಬಂಧ ಮಧುರವಾಗಿದೆ. ಅಪರಾಜಿತೇಶ್ವರ ಶತಕದಲ್ಲಿ ಜೈನದೃಷ್ಟಿ ಪ್ರಧಾನವಾಗಿದ್ದರೂ ಆರ್ತಭಕ್ತನ ವಾಣಿ ನುಡಿಯುತ್ತದೆ. ಅನುಭವ ಭಾವರೂಪಿಯಾಗಿ ತೀವ್ರತೆಯಿಂದ ಹೊಮ್ಮುತ್ತದೆ. ಈತನ ತ್ರಿಲೋಕ ಶತಕ ಜೈನಾಗಮದಲ್ಲಿ ಹೇಳಿರುವ ಭೂಗೋಳ ವಿವರಗಳಿಂದ ಕೂಡಿದೆ. ಕನಕದಾಸರ ಹರಿಭಕ್ತಿಸಾರ ವಿಷ್ಣುಸ್ತುತಿ ಪರವಾದ ಶತಕ. ಭಕ್ತಿ ಪ್ರತಿಪಾದನೆ ಈ ಶತಕದ ವಸ್ತು.

17ನೆಯ ಶತಮಾನದಲ್ಲಿ ಶಾಂತವೀರದೇಶಿಕ, ಶಂಕರದೇವ, ಹಿರಿಯೂರುರಂಗ, ತಿರುಮಲಾರ್ಯ ಮೊದಲಾದವರು ಶಕತಗಳನ್ನು ರಚಿಸಿದ್ದಾರೆ. ಸಮಾಧಿ ಸಿದ್ಧೇಶ್ವರನೆಂಬುವನ ಶಿಷ್ಯ ಶಾಂತಾಚಾರ್ಯ (ಸು.1700) ಸ್ಕಾಂದಪುರಾಣದ ಆಧಾರದ ಮೇಲೆ ಮರಣಮಣಿದರ್ಪಣ ಶತಕ ಎಂಬ ಕೃತಿಯನ್ನು ರಚಿಸಿದ್ದಾನೆ. ಚಿಕುಪಾಧ್ಯಾಯನ ಶೃಂಗಾರಶತಕ ಸಾಂಗತ್ಯ, ರಂಗಧಾಮಶತಕ ಸಾಂಗತ್ಯಗಳು ಸಾಂಗತ್ಯ ಛಂದಸ್ಸಿನಲ್ಲಿರುವುದು ಗಮನಾರ್ಹ.

18 ಮತ್ತು 19ನೆಯ ಶತಮಾನಗಳಲ್ಲಿ ವೃತ್ತಕಂದಗಳಲ್ಲಿ ಮಾತ್ರವಲ್ಲದೆ ಬಗೆಬಗೆಯ ಷಟ್ಪದಿಗಳಲ್ಲೂ ಹೇರಳವಾಗಿ ಶತಕಗಳು ರಚಿತವಾದುವು. ಕೇಶವನು ತಿರುವೇಂಗಡಾಚಾರ್ಯಶತಕ ಎಂಬ ಪಂಚಶತಕವನ್ನು ಬರೆದಿದ್ದಾನೆ. ಇದರಲ್ಲಿ 597 ಪದ್ಯಗಳಿವೆ. ಶಾಲ್ಯದ ಕೃಷ್ಣರಾಜನು ಸದಾಶಿವಶತಕ, ಅಪ್ರಸ್ತುತಪ್ರಶಂಸಾಶತಕಗಳನ್ನು ರಚಿಸಿದ್ದಾನೆ. ದೇವಲಾಪುರದನಂಜುಂಡನು ಕೃಷ್ಣರಾಜಶೃಂಗಾರಶತಕ, ತಿಪ್ಪಾಂಬಿಕಾಶತಕಗಳನ್ನು ರಚಿಸಿದ್ದಾನೆ. ಅಳಿಯ ಲಿಂಗರಾಜನ ಮಹಾಲಿಂಗಶತಕ, ಮುಮ್ಮಡಿ ಕೃಷ್ಣಭೂಪಾಲನ ಸಿರಿನಂಜುಂಡಶತಕ ಸರಳಸುಂದರವಾಗಿವೆ. ಕಪ್ಪಿನಿಯ (ಸು.1800) ನಂಜುಂಡಶತಕ ಕಂದದಲ್ಲಿ ರಚಿತವಾಗಿದೆ. ಚಾಮಸೂನು ಶ್ರೀಕಂಠಕಲಕಂಠಶತಕವನ್ನೂ ಪರ್ವತಕವಿ ಚಂದ್ರಲೇಖಾವಸಂತಶತಕವನ್ನೂ ರಚಿಸಿದ್ದಾರೆ. 19 ಮತ್ತು 20ನೆಯ ಶತಮಾನದ ಆದಿಯಲ್ಲಿ ಗುರುಗಳ, ರಾಜರ ಜೀವನವನ್ನು ನಿರೂಪಿಸುವ ಇನ್ನೊಂದು ಬಗೆಯ ಶತಕಗಳನ್ನು ಕಾಣಬಹುದು. ಕೃಷ್ಣರಾಜವರ್ಧಂತಿಶತಕ, ಚಾಮರಾಜಶತಕ, ಮುಳಬಾಗಿಲರ ಚರಿತ್ರಶತಕ, ಶ್ರೀಮದ್ಯುವರಾಜ ಕಂಠೀರವ ಕಲ್ಯಾಣಶತಕಂ - ಇವು ಇಂಥ ಕೃತಿಗಳು. ಕೆ.ರಾಮಸ್ವಾಮಿ ಅಯ್ಯಂಗಾರ್ ಅವರ ದಾರಿದ್ರ್ಯಶತಕ, ಕೆರೋಡಿ ಸುಬ್ಬರಾಯರ ಗಂಭೀರ ಶೃಂಗಾರಶತಕ- ಇವು ಗಮನಾರ್ಹವಾದವು. ಭರ್ತೃಹರಿಯ ಶತಕತ್ರಯವನ್ನು ಬಸವಪ್ಪಶಾಸ್ತ್ರಿಗಳು ಕನ್ನಡದಲ್ಲಿ ಪ್ರೌಢವಾಗಿ ಭಾಷಾಂತರಿಸಿದ್ದಾರೆ. ಭರ್ತೃಹರಿಯನ್ನು ಎಸ್.ವಿ.ಪರಮೇಶ್ವರಭಟ್ಟ ಹಾಗೂ ಎ.ಕೆ.ಪುಟ್ಟರಾಮು ಕನ್ನಡಕ್ಕೆ ಅನುವಾದಿಸಿದ್ದಾರೆ. ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ, ಪರಮೇಶ್ವರ ಭಟ್ಟರ ಇಂದ್ರಚಾಪ ಮೊದಲಾದವು ನೂರರ ಮಿತಿಯುಳ್ಳ ಶತಕಗಳಲ್ಲದಿದ್ದರೂ ಸಪ್ತಶತಿಯಂತೆ ಶತಕಸಾಹಿತ್ಯದಲ್ಲಿ ಸೇರಿಸಬಹುದು.

ಶತಕಸಾಹಿತ್ಯ ಕನ್ನಡದಲ್ಲಿ ಒಂದು ಸಾವಿರ ವರ್ಷದ ಹರಹನ್ನು ಪಡೆದಿದೆ. ನಾನೂರಕ್ಕೂ ಹೆಚ್ಚು ಶತಕಗಳಿದ್ದರೂ ಜನಪ್ರಿಯವಾದವು, ಉತ್ತಮವಾದವು ಕೆಲವು ಮಾತ್ರ. ನೂರು ಪದ್ಯವಿದ್ದರೆ ಸಾಕು, ಏನು ಬರೆದರೂ ಸಲ್ಲುತ್ತದೆ ಎಂದು ಹೊರಟ ಕಾರಣ ಶತಕವೆಂದರೆ ಶುಷ್ಕ ಎಂಬ ಭಾವನೆ ಬೆಳೆದಿದೆ. ಶೃಂಗಾರ ಶತಕಗಳು ಒಂದೆರಡು ಮಾತ್ರ ಇವೆ. ಬಹುಪಾಲು ಕನ್ನಡ ಶತಕಗಳು ಸ್ತೋತ್ರ, ದೈವನಾಮಾವಳಿಗಳಿಂದ ತುಂಬಿ ಸಾಹಿತ್ಯವೆಂಬ ಹೆಸರಿಗೆ ಹೊರತಾಗಿವೆ. ಹರಿಹರ, ರತ್ನಾಕರವರ್ಣಿಯಂಥ ಒಬ್ಬಿಬ್ಬರು ಮಾತ್ರ ಸಂಸ್ಕೃತ ಶತಕಸಾಹಿತ್ಯಕ್ಕೆ ಹೆಗಲೆಣೆಯಾಗಿ ನಿಲ್ಲಬಲ್ಲ ಕವಿಗಳಾಗಿದ್ದಾರೆ. (ಎಂ.ಎಚ್.ಕೆ.)

**ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯ :** ಸಂಸ್ಕೃತ ಆಲಂಕಾರಿಕ ರಾಜಶೇಖರ ಕಾವ್ಯಕವಿ, ಶಾಸ್ತ್ರಕವಿ, ಉಭಯಕವಿ ಎಂಬ ಮೂರು ಬಗೆಯ ಕೃತಿಕಾರರನ್ನು ಗುರುತಿಸುತ್ತಾನೆ: ಕಾವ್ಯಕವಿ ರಮಣೀಯವಾಗಿ ಬರೆಯಬಲ್ಲನೇ ಹೊರತು ಖಚಿತತೆ ಪ್ರಧಾನ ಲಕ್ಷಣವಾದ ಶಾಸ್ತ್ರಭಾಗಗಳನ್ನು ಬರೆಯುವಲ್ಲಿ ಅವನು ಸೋತುಬಿಡಬಹುದು. ಶಾಸ್ತ್ರಕವಿ ಶಾಸ್ತ್ರಭಾಗಗಳನ್ನು ತರ್ಕಬದ್ಧವಾಗಿ ನಿರೂಪಿಸಬಲ್ಲವನಾದರೂ ಕಾವ್ಯಭಾಗಗಳನ್ನು ಬರೆಯುವಾಗ ನೀರಸವಾಗಿಬಿಡಬಹುದು. ಉಭಯಕವಿ ಮಾತ್ರ ಕಾವ್ಯ ಶಾಸ್ತ್ರಗಳೆರಡನ್ನೂ ಅವುಗಳಿಗೆ ಅಪಚಾರವೆಸಗದಂತೆ ಬರೆಯುವ ಸಮರ್ಥ ಎಂದು ರಾಜಶೇಖರ ಅಂಥವನನ್ನು ಹೊಗಳಿದ್ದಾನೆ.

ಈ ರೀತಿಯ ವಿಶ್ಲೇಷಣೆಯಿಂದ ಧ್ವನಿತವಾಗುವ ಸಂಗತಿಗಳು ಎರಡು - ಒಂದು, ಕಾವ್ಯ ಮತ್ತು ಶಾಸ್ತ್ರಗಳೆರಡೂ ಬೇರೆ ಬೇರೆ. ಎರಡು; ಕಾವ್ಯ ಅನುಭವ ಪ್ರಪಂಚಕ್ಕೆ ಸೇರಿದ್ದು, ಶಾಸ್ತ್ರ ಆಲೋಚನಾ ಪ್ರಪಂಚಕ್ಕೆ ಸೇರಿದ್ದು. ಅನುಭವ ಮತ್ತು ಆಲೋಚನೆ ಇವು ಮನುಷ್ಯನ ಪ್ರವೃತ್ತಿಗಳು. ಆದ್ದರಿಂದಲೇ ಒಂದು ಪ್ರಧಾನವಾಗಿರುವ ಕಡೆಯಲ್ಲಿಯೂ ಇನ್ನೊಂದು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಪಂಪನ ಆದಿಪುರಾಣದಂಥ ಕಾವ್ಯದಲ್ಲಿ ಶಾಸ್ತ್ರ ಎಂದು ಕರೆಯಿಸಿಕೊಳ್ಳುವ ಎಷ್ಟೋ ಭಾಗಗಳಿವೆ. ಕೇಶಿರಾಜನ ಶಬ್ದಮಣಿದರ್ಪಣದಂಥ ವ್ಯಾಕರಣದಲ್ಲಿ ವ್ಯಾಕರಣ ಪ್ರಕ್ರಿಯೆಗಳನ್ನು ನಿರೂಪಿಸುವಾಗ, ಪ್ರಯೋಗಗಳನ್ನು ಕೊಡುವಾಗ ಕೃತಿಕಾರನ ರಸಪ್ರಜ್ಞೆ ವ್ಯಕ್ತವಾಗುತ್ತದೆ. ಹಾಗೆ ನೋಡಿದರೆ ಯಾವುದೇ ಉತ್ತಮ ಕೃತಿಯಲ್ಲಿ ಕಾವ್ಯಾಂಶವೂ ಶಾಸ್ತ್ರಾಂಶವೂ ಇರಬಹುದು. ಒಟ್ಟಿನ ದೃಷ್ಟಿಯಲ್ಲಿ ಒಂದು ಕೃತಿ ಕಾವ್ಯವೇ ಶಾಸ್ತ್ರವೇ ಎಂಬುದನ್ನು ನಿರ್ಣಯಿಸುವುದು ಅದರ ಮೂಲೋದ್ದೇಶವನ್ನು ಅವಲಂಬಿಸಿರುತ್ತದೆ.

ನಮ್ಮ ಹಿಂದಿನವರ ಪ್ರಕಾರ ಶಾಸ್ತ್ರ ಕಾವ್ಯಕ್ಕೆ ಬಿಗಿ, ತೂಕ, ಗಹನತೆಗಳನ್ನು ತಂದುಕೊಟ್ಟರೆ, ಕಾವ್ಯ ಶಾಸ್ತ್ರಕ್ಕೆ ಚೆಲುವನ್ನೂ ಓದಿಸಿಕೊಂಡು ಹೋಗುವ ಗುಣವನ್ನೂ ಮಾನವೀಯ ಸ್ಪರ್ಶವನ್ನೂ ತಂದುಕೊಡುತ್ತದೆ.

ಹಿಂದೆ ಕನ್ನಡದ ಕವಿಯಾಗಲಿ, ಶಾಸ್ತ್ರಕಾರನಾಗಲಿ ಸಾಧ್ಯವಾದಷ್ಟು ಕ್ಷೇತ್ರಗಳಲ್ಲಿ ಪಾಂಡಿತ್ಯವನ್ನು ಪಡೆಯಬೇಕಾಗಿತ್ತು. ಈ ದೃಷ್ಟಿಯಿಂದ ಪಂಪ ವರ್ಣಿಸುವ ಅರ್ಜುನನ(ಅರಿಕೇಸರಿ) ವಿದ್ಯಾಭ್ಯಾಸ ಹೀಗಿದೆ: ಅಂತು ಪಂಚಾಂಗ ವ್ಯಾಕರಣದ ವೃತ್ತಿಭೇದಮಪ್ಪ ಛಂದೋವೃತ್ತಿಯೊಳಂ ಶಬ್ದಾಲಂಕಾರನಿಷ್ಠಿತಮಪ್ಪಲಂಕಾರದೊಳಂ ವ್ಯಾಸ ವಾಲ್ಮೀಕಿ ಕಶ್ಯಪ ಪ್ರಭೃತಿ ವಿರಚಿತಂಗಳಪ್ಪ ಮಹಾಕಾವ್ಯಂಗಳೊಳಂ ನಾಂದೀ ಪ್ರರೋಚ[ನಾ]ಪ್ರಸ್ತಾವ [ನೇ]ತಿವೃ[ತ್ತ] ಸಂಧಿಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ ಪದಿನೆಂಟು ಧರ್ಮಶಾಸ್ತ್ರಂಗಳೊಳಂ ನಾಲ್ಕು ವೇದದೊಳಮಾಱಂಗದೊಳಮಯ್ದುತೆಱದ ಮಂತ್ರಂಗಳೊಳ[ಮಾ]ಱುಂ ದರ್ಶನದೊಳಂ ಪ್ರತ್ಯಕ್ಷಾನುಮಾನ ಪ್ರಮಾಣಂಗಳೊಳಂ ಭರತಪ್ರಣೀತ ನೃತ್ಯಶಾಸ್ತ್ರದೊಳಂ ನಾರದಾದಿ ಪ್ರಣೀತ ಗಾಂಧರ್ವ ವಿದ್ಯಾವಿಶೇಷಂಗಳೊಳಂ ಗಜಾಗಮಜ್ಞ ರಾಜಪುತ್ರ ಗೌತಮ ವಾದ್ವಾಕಿ ಪಾಳಕಾಪ್ಯಪ ಸುಪತಿ ಶ್ರೀ ಹರ್ಷಾದಿ ಪುರಾಣಪುರುಷ ವಿರಚಿತಂಗಳಪ್ಪ ಹಸ್ತಿಶಾಸ್ತ್ರಂಗಳೊಳಂ ಚಿತ್ರಕರ್ಮ ಪತ್ರಚ್ಛೇದ ಗೃಹಗಣಿತ ರತ್ನಪರೀಕ್ಷೆಗಳೊಳಂ ದಾರುಕರ್ಮ ವಾಸ್ತುವಿದ್ಯಾಪೂರ್ವಯಂತ್ರಪ್ರಯೋಗ ವಿ[ಷಾ]ಪಹರಣ ಸರಭೇದ ರತಿತಂತ್ರೇಂದ್ರಜಾಲ ವಿವಿಧ ವಿದ್ಯೆಗಳೊಳಮನೇಕಾಕ್ಷರ ಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಳ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಮತಿ ಪ್ರವೀಣ[ನು] ಮಾರೂಢಸರ್ವಜ್ಞ ಮಹೇಂದ್ರಜಾಣ[ನು]ಮಾಗಿ. ಇದು ಹತ್ತನೆಯ ಶತಮಾನದ ವಿದ್ಯಾಭ್ಯಾಸದ ಚಿತ್ರವೂ ಆಗಿರಬಹುದು. ಇಲ್ಲಿ ಕಾವ್ಯ, ಶಾಸ್ತ್ರಗಳ ಸಂಗಮವನ್ನು ಗುರುತಿಸಬೇಕು. ಕವಿಗೆ ಪ್ರತಿಭೆ ಎಷ್ಟು ಆವಶ್ಯಕವೋ ಕಾವ್ಯ ವಿದ್ಯಾಪ್ರಚಯ ಪರಿಚಯವೂ ಅಷ್ಟೇ ಅಗತ್ಯವಾಗಿದ್ದಿತು. ಶಾಸ್ತ್ರಕಾರರಂತೂ ತಮ್ಮ ತಮ್ಮ ಶಾಸ್ತ್ರ ವಿಷಯಗಳಲ್ಲಿ ನಿಪುಣರಾಗಿದ್ದಂತೆಯೇ ಉಳಿದ ಶಾಸ್ತ್ರಗಳಲ್ಲಿಯೂ ತಕ್ಕ ಪರಿಣತಿಯನ್ನು ಪಡೆದಿರುತ್ತಿದ್ದರು. ಕಾಮಶಾಸ್ತ್ರ ಸಂಬಂಧಿ ಗ್ರಂಥ ಬರೆದಿರುವ ಚಂದ್ರರಾಜ ತಾನು ಕಾಮಶಾಸ್ತ್ರದಲ್ಲಲ್ಲದೆ ವ್ಯಾಕರಣ ಅರ್ಥಶಾಸ್ತ್ರ ಗಣಿತ ಅಲಂಕಾರ ಕಾವ್ಯ ನಾಟಕ ಹಯಶಾಸ್ತ್ರ ಅದ್ವೈತ ಸಂಗೀತ ಇತ್ಯಾದಿ ವಿಷಯಗಳಲ್ಲಿ ನೈಪುಣ್ಯವನ್ನು ಪಡೆದಿರುವುದಾಗಿ ಹೇಳಿಕೊಂಡಿದ್ದಾನೆ.

ಕನ್ನಡದಲ್ಲಿ ಹುಟ್ಟಿರುವ ಶಾಸ್ತ್ರ ಗ್ರಂಥಗಳಲ್ಲಿ ಆಯಾ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಮುಖ ಗ್ರಂಥಗಳನ್ನು ಮಾತ್ರ ಕೆಳಗೆ ಲಕ್ಷಿಸಲಾಗಿದೆ.

**ಅಲಂಕಾರಶಾಸ್ತ್ರ :** ಶ್ರೀ ವಿಜಯನ (ಸು.850) ಕವಿರಾಜಮಾರ್ಗ ಕನ್ನಡದಲ್ಲಿ ಉಪಲಬ್ಧವಾದ ಅತ್ಯಂತ ಪ್ರಾಚೀನ ಅಲಂಕಾರ ಗ್ರಂಥ. ಇದು ದಂಡಿಯ ಕಾವ್ಯಾದರ್ಶದ ಮಾದರಿಯಲ್ಲಿ ರಚಿತವಾಗಿದೆ. ಇದರಲ್ಲಿ ಮೂರು ಅಧ್ಯಾಯವಿದೆ. ಕಾವ್ಯಕ್ಕೆ ಸೌಂದರ್ಯವನ್ನು ತಂದುಕೊಡುವ ಎಲ್ಲವೂ ಅಲಂಕಾರವೆಂದು ಇವನ ಅಭಿಪ್ರಾಯ. ರಸಗಳಲ್ಲಿ ಇವನು ಶಾಂತವನ್ನು ಹೇಳಿರುವುದು ಗಮನಾರ್ಹವಾಗಿದೆ. ಈ ಗ್ರಂಥದಲ್ಲಿ ಕನ್ನಡ ನಾಡು, ನುಡಿಗಳ ಬಗ್ಗೆ, 850ಕ್ಕಿಂತ ಹಿಂದಿನ ಕನ್ನಡ ಸಾಹಿತ್ಯದ ಬಗ್ಗೆ, ಅನೇಕ ಕಾವ್ಯ ಪ್ರಕಾರಗಳ ಬಗ್ಗೆ ಹಲವು ಸ್ವಾರಸ್ಯಕರವಾದ ಹೇಳಿಕೆಗಳಿವೆ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ (ಸು.1042) ಐದು ಪರಿಚ್ಛೇದಗಳಿದ್ದು ಕೊನೆಯ ನಾಲ್ಕು ಅಲಂಕಾರ ಶಾಸ್ತ್ರಕ್ಕೆ ಮೀಸಲಾಗಿವೆ. ಇವನು ವಾಮನ, ರುದ್ರಟ, ಭಾಮಹ, ದಂಡಿ ಮುಂತಾದ ಸಂಸ್ಕೃತ ಅಲಂಕಾರಿಕರಿಂದ ವಿಷಯ ಸಂಗ್ರಹಿಸಿದ್ದಾನೆ. ಕವಿಸಮಯದ ಭಾಗಕ್ಕೆ

ರಾಜಶೇಖರನಿಗೆ ಋಣಿಯಾಗಿರುವಂತೆ ತೋರುತ್ತದೆ. ಈತ ಧ್ವನಿಯು ಮಾತೆತ್ತಿದ್ದರೂ ಅದೂ ಒಂದು ಅಲಂಕಾರ ಎಂದಿದ್ದಾನೆ. ಕವಿಕಾಮನ ಶೃಂಗಾರರತ್ನಾಕರ (ಸು.1200) ರಸದ ವಿಷಯವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಮೊದಲ ಕನ್ನಡ ಗ್ರಂಥ. ರಸವೇ ಮೊದಲ್ ಕವಿತೆಗೆ ಎಂದೀತ ಹೇಳಿದ್ದಾನೆ. ಮಾಧವನ ಮಾಧವಾಲಂಕಾರ ಸಂಸ್ಕೃತ ಕಾವ್ಯಾದರ್ಶದ ಸರಳಾನುವಾದ. ಸಾಳ್ವನ ರಸರತ್ನಾಕರದಲ್ಲಿ (ಸು.1550) ವಿಸ್ತಾರವಾದ ರಸದ ಪ್ರತಿಪಾದನೆ ಇದೆ. ಇವನ ಇನ್ನೊಂದು ಗ್ರಂಥ ಶಾರದಾವಿಲಾಸದಲ್ಲಿ ಧ್ವನಿಯು ಬಗ್ಗೆ ಮೊತ್ತಮೊದಲು ವಿಸ್ತೃತ ಚರ್ಚೆ ದೊರೆಯುತ್ತದೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿದ್ದ ತಿರುಮಲಾರ್ಯ ತನ್ನ ಅಪ್ರತಿಮವೀರಚರಿತದಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರಗಳ ವಿವರಣೆಗಳನ್ನಿತ್ತಿದ್ದಾನೆ. ಜಾಯೇಂದ್ರ (1734) ಅಪ್ಪಯ್ಯ ದೀಕ್ಷಿತನ ಸಂಸ್ಕೃತ ಕುವಲಯಾನಂದವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಇವನ ಇನ್ನೊಂದು ಸ್ವಕೃತಿ ರಸಮಂಜರಿಯಲ್ಲಿ ನಾಯಕ, ನಾಯಿಕೆಯರ ಪ್ರಭೇದಗಳನ್ನು ವಿವರಿಸಲಾಗಿದೆ. ತಿಮ್ಮ ತನ್ನ ನವರಸಾಲಂಕಾರದಲ್ಲಿ (ಸು.1600 ಗ್ರಂಥ ಪ್ರಕಟವಾಗಿಲ್ಲ) ಮುಖ್ಯವಾಗಿ ಪೂರ್ವಗ್ರಂಥಗಳಿಂದ, ಅದರಲ್ಲೂ ವಿಶೇಷವಾಗಿ ಸಾಳ್ವನ ರಸರತ್ನಾಕರ ಮತ್ತು ಕವಿಕಾಮನ ಶೃಂಗಾರ ರತ್ನಾಕರಗಳಿಂದ ರಸಲಕ್ಷಣಗಳನ್ನು ಇದ್ದಕ್ಕಿದ್ದಂತೆ ಎತ್ತಿಕೊಂಡು ಸಂಕಲನ ಗ್ರಂಥವೆನ್ನುವ ರೀತಿಯಲ್ಲಿ ಬರೆದಿದ್ದಾನೆ. ಇದರ ಒಂದು ಗಮನಾರ್ಹ ವೈಶಿಷ್ಟ್ಯವೆಂದರೆ ಕೇವಲ ಚಂಪೂಕಾವ್ಯದ ಉದಾಹರಣೆಗಳನ್ನು ಕೊಡದೆ ಎರಡು ಷಟ್ಪದಿ ಹಾಗೂ ಒಂದು ತ್ರಿಪದಿಯನ್ನು ಉದಾಹರಿಸಿರುವುದು. ಅಳಿಯ ಲಿಂಗರಾಜನ ನರಪತಿಚರಿತ (ಸು.1867) ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ಹೇಳುವಲ್ಲಿ ಸಂಸ್ಕೃತ ಕುವಲಯಾನಂದವನ್ನು ಅನುಸರಿಸಿದೆ. ಅದೇ ಶತಮಾನದ ಉತ್ತರಾರ್ಧದಲ್ಲಿದ್ದ ಚಾವಲಿರಾಮಸ್ವಾಮಿಶಾಸ್ತ್ರಿಗಳ 'ಕರ್ನಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ ಸಂಗ್ರಹ' ಛಂದಸ್ಸು ಹಾಗೂ ಅಲಂಕಾರ ಶಾಸ್ತ್ರಗಳ ಕೈಪಿಡಿಯಾಗಿದೆ. ಕನ್ನಡ ಕೈಪಿಡಿ, ತೀ.ನಂ.ಶ್ರೀಕಂಠಯ್ಯ ನವರ ಭಾರತೀಯ ಕಾವ್ಯಮೀಮಾಂಸೆ, ಕೆ.ಕೃಷ್ಣಮೂರ್ತಿಯವರ ಕನ್ನಡದಲ್ಲಿ ಕಾವ್ಯತತ್ತ್ವ, ದ.ರಾ.ಬೇಂದ್ರೆಯವರ ಸಾಹಿತ್ಯ ಮತ್ತು ವಿಮರ್ಶೆ, ಕುವೆಂಪು ಅವರ ರಸೋ ವೈ ಸಃ, ಡಿ.ವಿ.ಜಿ. ಅವರ ಸಾಹಿತ್ಯಶಕ್ತಿ, ವಿ.ಸೀ. ಅವರ ಸಾಹಿತ್ಯ ಸಂಪ್ರದಾಯ ಮತ್ತು ಹೊಸ ಮಾರ್ಗ, ಬಿ.ಎಚ್.ಶ್ರೀಧರ ಅವರ ಕಾವ್ಯಸೂತ್ರ ಜಿ.ಎಸ್.ಶಿವರುದ್ರಪ್ಪ ಅವರ ಕಾವ್ಯಾರ್ಥಚಿಂತನೆ ಎಚ್.ತಿಪ್ಪೇರುದ್ರಸ್ವಾಮಿಯವರ ತೌಲನಿಕಕಾವ್ಯಮೀಮಾಂಸೆ ಮುಂತಾದ ಗ್ರಂಥಗಳಲ್ಲಿ ಕನ್ನಡ ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಸಾಕಷ್ಟು ಸಾಮಗ್ರಿ ಚರ್ಚಿತವಾಗಿದೆ.

**ವ್ಯಾಕರಣ ಗ್ರಂಥಗಳು :** ಕವಿರಾಜಮಾರ್ಗ ಮುಖ್ಯವಾಗಿ ಅಲಂಕಾರ ಗ್ರಂಥ ವಾದರೂ ಕನ್ನಡ ಭಾಷೆ, ಉಪಭಾಷೆ, ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ಸ್ವಾರಸ್ಯವಾದ ಸಂಗತಿಗಳನ್ನು ಇದರಲ್ಲಿ ಹೇಳಿದೆ. ರನ್ನ (ಸು.993), ನಯಸೇನರು (ಸು.1112) ವ್ಯಾಕರಣಗಳನ್ನು ಬರೆದಿರುವರೆಂಬ ಊಹೆ ಇದ್ದರೂ ಅವರ ಕೃತಿಗಳು ನಮಗೆ ಉಪಲಬ್ಧವಿಲ್ಲ. ಎರಡನೆಯ ನಾಗವರ್ಮ (ಸು.1042) ಈಗ ತಿಳಿದಮಟ್ಟಿಗೆ ಮೊಟ್ಟ ಮೊದಲ ವ್ಯಾಕರಣಕಾರ. ಇವನ ಕಾವ್ಯಾವಲೋಕನ ಪ್ರಧಾನವಾಗಿ ಅಲಂಕಾರಶಾಸ್ತ್ರ ಗ್ರಂಥವಾಗಿದ್ದರೂ ಮೊದಲನೆಯ ಅಧ್ಯಾಯ ಶಬ್ದಸ್ಮೃತಿಯನ್ನು ವ್ಯಾಕರಣಕ್ಕೆ ಮೀಸಲಾಗಿಟ್ಟಿದ್ದಾನೆ. ಇವನ ಭಾಷಾಭೂಷಣ ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣ. ಸೂತ್ರ ವೃತ್ತಿಗಳು ಸಂಸ್ಕೃತದಲ್ಲಿವೆ. ಉದಾಹರಣೆಗಳನ್ನು ಪೂರ್ವಕವಿಗಳ ಕನ್ನಡ ಗ್ರಂಥಗಳಿಂದ ಕೊಟ್ಟಿದ್ದಾನೆ. ಕೇಶಿರಾಜನ (ಸು.1260) ಶಬ್ದಮಣಿದರ್ಪಣ ಹಳಗನ್ನಡದ ಶ್ರೇಷ್ಠ ಗ್ರಂಥಗಳಲ್ಲೊಂದು. ಇದರಲ್ಲಿ ಶಬ್ದಸ್ಮೃತಿಯಲ್ಲಿರುವಂತೆಯೇ ಸೂತ್ರಗಳು ಕಂದಪದ್ಯದಲ್ಲಿವೆ. ಆದರೆ ತನ್ನ ಸೂತ್ರಗಳಿಗೆ ತಾನೇ ಗದ್ಯದಲ್ಲಿ ವೃತ್ತಿಯನ್ನು ಬರೆದು, ಬೇರೆ ಕಡೆಗಳಿಂದ ಲಕ್ಷ್ಯಗಳನ್ನು ಉದಾಹರಿಸಿದ್ದಾನೆ. ಶಬ್ದಮಣಿದರ್ಪಣಕ್ಕೆ ಲಿಂಗಣಾರಾಧ್ಯ, ನಿಟ್ಟೂರು ನಂಜಯ್ಯ (ಸು.1725) ಇವರು ಟೀಕೆ ಬರೆದಿದ್ದಾರೆ. ಭಟ್ಟಾಕಳಂಕನ (ಸು.1604) ಶಬ್ದಾನುಶಾಸನ ಭಾಷಾಭೂಷಣದಂತೆಯೇ ಸಂಸ್ಕೃತದಲ್ಲಿರುವ ಕನ್ನಡ ಪ್ರೌಢವ್ಯಾಕರಣ. ಈತ ತನ್ನ ಕೃತಿಗೆ ಸಂಸ್ಕೃತದಲ್ಲಿ ಭಾಷಾಮಂಜರಿ ಎಂಬ ವೃತ್ತಿಯನ್ನೂ ಮಂಜರೀ ಮಕರಂದವೆಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. 19ನೆಯ ಶತಮಾನದ ಅನೇಕ ಪಾದ್ರಿಗಳು, ಐರೋಪ್ಯ ಮತ್ತು ದೇಶೀಯ ವಿದ್ವಾಂಸರು ಕನ್ನಡ ಭಾಷೆಗೆ ವ್ಯಾಕರಣಗಳನ್ನು ಬರೆದರು. ರೆ.ಕೇರಿಯವರ ಎ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್ (1817), ಜಿ.ಎಂ.ಮೆಕೆರಲ್ ಅವರ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್ (1820), ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ ಹೊಸಗನ್ನಡ ನುಡಿಗನ್ನಡಿ (1838), ಥಾಮಸ್ ಹಡ್ಸನ್ ಅವರ ವ್ಯಾಕರಣ (1859), ಸಿ.ಕ್ಯಾಂಪ್‌ಬೆಲ್ ಅವರ ಕನ್ನಡ ವ್ಯಾಕರಣಸಾರ, ಧೋಂಡೊ ಮುಳಬಾಗಿಲ ಅವರ ನುಡಿಗಟ್ಟು (1842), ವೆಂಕಟರಂಗೋಕಟ್ಟಿಯವರ ಕನ್ನಡ ಲಘುವ್ಯಾಕರಣ (1880), ಆರ್.ರಘುನಾಥರಾಯರ ಕರ್ನಾಟಕ ಭಾಷಾ ವ್ಯಾಕರಣೋಪನ್ಯಾಸ ಮಂಜರಿ (1894), ಬಿ.ಮಲ್ಲಪ್ಪನವರ ಶಬ್ದಾದರ್ಶ (1894), ತೀ.ನಂ.ಶ್ರೀ. ಅವರ ಹೊಸಗನ್ನಡ ವ್ಯಾಕರಣ ಮುಂತಾದ ವ್ಯಾಕರಣ ಗ್ರಂಥಗಳು ಪ್ರಕಟವಾಗಿವೆ.

**ನಿಘಂಟುಗಳು :** ರನ್ನನ ರನ್ನಕಂದ ಈಗ ದೊರೆತಿರುವ ಮೊದಲ ನಿಘಂಟು. ಹಳಗನ್ನಡದ ಶಬ್ದಗಳಿಗೆ ಅರ್ಥ ಹೇಳುವ ಈ ಕೃತಿಯ 11 ಕಂದ ಪದ್ಯಗಳು ಮಾತ್ರ ದೊರಕಿವೆ. ಕೇಶಿರಾಜನ ಶಬ್ದಮಣಿದರ್ಪಣ ವ್ಯಾಕರಣ ಗ್ರಂಥವಾದರೂ ಅದರಲ್ಲಿ ಅನೇಕ ಅಪೂರ್ವ ಪದಗಳಿಗೆ ಅರ್ಥವನ್ನು ಕೊಡಲಾಗಿದೆ. ಸು.1400ರಲ್ಲಿ ರಚಿತವಾದ ಗದ್ಯರೂಪದ ಕರ್ನಾಟಕ ಶಬ್ದಸಾರ, ಸುಮಾರು ಅದೇ ಕಾಲದ ಕರ್ನಾಟಕ ನಿಘಂಟುವಿನಲ್ಲಿ ಕಂದ, ವೃತ್ತಗಳಲ್ಲಿ ಅನೇಕ ಕನ್ನಡ ಪದಗಳಿಗೆ ಅರ್ಥ ಹೇಳಿದೆ. ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ (ಸು.1530) ವಾರ್ಧಕ ಷಟ್ಪದಿ ರೂಪವಾದ ಪ್ರಸಿದ್ಧ ನಿಘಂಟು. ಶೃಂಗಾರ ಕವಿಯ (ಸು.1600) ಕರ್ನಾಟಕ ಸಂಜೀವನದಲ್ಲಿ ಕುಳಕ್ಷಳ ಶಬ್ದಗಳಿಗೆ, ಸೂರ್ಯಕವಿಯ (ಸು.1640) ಕವಿ ಕಂಠಾಹಾರದಲ್ಲಿ ಹಳಗನ್ನಡ ಪದಗಳಿಗೆ ಅರ್ಥವಿವರಣೆ ಬಂದಿದೆ. 2ನೆಯ ನಾಗವರ್ಮನ ಅಭಿಧಾನ ವಸ್ತುಕೋಶ, 2ನೆಯ ಮಂಗರಾಜನ ಅಭಿನವ ನಿಘಂಟು (ಸು.1398), ಕರ್ತೃ ಗೊತ್ತಿಲ್ಲದ ಶಬ್ದರತ್ನಾಕರ (ಸು.1600), ಚೆನ್ನಕವಿಯ ನಾನಾರ್ಥ ಕಂದ (ಸು.1600), ದೇವೋತ್ತಮನ ನಾನಾರ್ಥರತ್ನಾಕರ (ಸು.1600), ಏಕಾಕ್ಷರ ನಿಘಂಟು ಇತ್ಯಾದಿಗಳಲ್ಲಿ ಸಂಸ್ಕೃತ ಪದಗಳಿಗೆ ಅರ್ಥ ಹೇಳಿದೆ. ಹಲಾಯುಧನ ಸಂಸ್ಕೃತ ಅಭಿಧಾನ ರತ್ನಮಾಲಾ, ಅಮರಕೋಶ ಇವುಗಳಿಗೆ ಕನ್ನಡ ಟೀಕೆಗಳು ದೊರೆಯುತ್ತವೆ. ಅಮೃತನಂದಿಯ ಅಕಾರಾದಿ ವೈದ್ಯ ನಿಘಂಟು (ಸು.1300), ಕರ್ತೃ ಗೊತ್ತಿಲ್ಲದ ಧನ್ವಂತರೀಯ ನಿಘಂಟು (ಸು.1500), ಇಂದ್ರ ದೀಪಿಕಾ ನಿಘಂಟು, ಮದನಾರಿ ವೈದ್ಯ ನಿಘಂಟು - ಇವುಗಳಲ್ಲಿ ವೈದ್ಯಕ್ಕೆ ಸಂಬಂಧಿಸಿದ ಸಂಸ್ಕೃತ ಪದಗಳಿಗೆ ಅರ್ಥ ಹೇಳಿದೆ. ಚತುರಾಸ್ಯ ಬೊಮ್ಮರಸನ ಚತುರಾಸ್ಯ ನಿಘಂಟು (ಸು.1450), ವಿರಕ್ತ ತೋಂಟದಾರ್ಯನ ಕರ್ನಾಟಕ ಶಬ್ದಮಂಜರಿ (ಸು.1560) ಇವುಗಳಲ್ಲಿ ದೇಶ್ಯ, ತತ್ಸಮ, ತದ್ಭವ ಶಬ್ದಗಳಿಗೆ ಅರ್ಥ ಹೇಳಿದೆ. ಕರ್ನಾಟಕ ಶಬ್ದಮಂಜರಿಗೆ ನಾಲ್ಕು ಬೇರೆ ಬೇರೆ ಟೀಕೆಗಳು ದೊರೆಯುತ್ತವೆ. ಕರ್ತೃ ತಿಳಿಯದ ಭಾರತ ನಿಘಂಟು (ಸು.1600) ಎಂಬ ಕೃತಿಯಲ್ಲಿ ಕುಮಾರವ್ಯಾಸ ಭಾರತದಲ್ಲಿನ ದೇಶ್ಯ ಶಬ್ದಗಳಿಗೆ 67 ಕಂದಪದ್ಯಗಳಲ್ಲಿ ಅರ್ಥ ಹೇಳಿದೆ. ಮುಮ್ಮಡಿ ಕೃಷ್ಣರಾಜನ ಚಾಮುಂಡಿಕಾ ಲಘು ನಿಘಂಟು (ಸು.1848) ಎಂಬ ಕೃತಿಯಲ್ಲಿ ದೇವತೆಗಳು ಮೊದಲಾದವರು ಹಸ್ತದಲ್ಲಿ ಧರಿಸುವ ಆಯುಧಗಳು, ಹಸ್ತ ವಿಶೇಷಗಳು, ಮೃಗನಾಮಾವಳಿ ಇವುಗಳಿಗೆ ಸಂಬಂಧಿಸಿದ ಸಂಸ್ಕೃತ ಶಬ್ದಗಳಿಗೆ ಪ್ರತಿಪದ ಕನ್ನಡ ಟೀಕನ್ನು ಕೊಟ್ಟಿದೆ. 19ನೆಯ ಶತಮಾನದಿಂದೀಚೆಗೆ ಅನೇಕ ಪಾದ್ರಿಗಳು, ದೇಶೀಯ ವಿದ್ವಾಂಸರು ನಿಘಂಟುಗಳನ್ನು ಬರೆದಿದ್ದಾರೆ. ಅವುಗಳಲ್ಲಿ ರೆವರೆಂಡ್ ಎಫ್. ಕಿಟ್ಟೆಲರ ಕನ್ನಡ-ಇಂಗ್ಲಿಷ್ ನಿಘಂಟು (1894) ಅತ್ಯಂತ ಶ್ರೇಷ್ಠವಾದುದು. ಕನ್ನಡದ ಪ್ರೌಢ ವಿದ್ಯಾರ್ಥಿಗಳಿಗೆ ಪಂಡಿತರಿಗೆ ವಿದ್ವಾಂಸರಿಗೆ ಇದು ಇಂದಿಗೂ ಮಾರ್ಗದರ್ಶಿಯಾಗಿದೆ. ಇದರಲ್ಲಿ ಕನ್ನಡ ಪದಗಳಿಗೆ ಸಂವಾದಿಯಾದ ಇತರ ದ್ರಾವಿಡ ಭಾಷೆಯ ಪದಗಳನ್ನು ಕೊಟ್ಟಿರುವುದಲ್ಲದೆ, ಸಂಸ್ಕೃತ ಮತ್ತು ತದ್ಭವ ಪದಗಳಿಗೆ ಅರ್ಥವನ್ನು ಕೊಟ್ಟಿದೆ. ಸಾಧ್ಯವಾದಷ್ಟು ಕಡೆ ಪ್ರಯೋಗಗಳನ್ನು ಸೂಚಿಸಿದೆ. 20ನೆಯ ಶತಮಾನದಲ್ಲಿಯೂ ಅನೇಕ ನಿಘಂಟುಗಳು ರಚಿತವಾಗಿವೆ. ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶ (ಸು.1940) ಚೆ.ಎ.ಕವಲಿಯವರ ಸಚಿತ್ರ ಕನ್ನಡ-ಕನ್ನಡ ಕಸ್ತೂರೀ ಕೋಶ (1957)- ಆರ್.ಎಸ್.ರಾಮರಾವ್ ಅವರ ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟು ಮುಂತಾದುವನ್ನು ಇಲ್ಲಿ ಹೆಸರಿಸಬಹುದು.

ಒಬ್ಬ ಕವಿಯನ್ನು ಕುರಿತಂತೆ ಅವನು ಉಪಯೋಗಿಸುವ ಪದಗಳಿಗೆ ಅರ್ಥ ವಿವರಣೆ ಕೊಡುವ ನಿಘಂಟುಗಳೂ ಕನ್ನಡದಲ್ಲಿ ರಚಿತವಾಗಿವೆ. ಅವುಗಳಲ್ಲಿ ಕುಮಾರವ್ಯಾಸ ನಿಘಂಟು ಹೆಸರಿಸಬಹುದಾದ್ದು.

ಈಗ ಪ್ರಕಟವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ನಿಘಂಟು ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. ಕನ್ನಡ ಭಾಷೆಯಲ್ಲಿನ ಎಲ್ಲ ತೆರನ ಸಾಹಿತ್ಯವನ್ನು ಈ ನಿಘಂಟುವಿನಲ್ಲಿ ಬಳಸಿಕೊಳ್ಳಲಾಗಿದೆ. ಹಲ್ಮಿಡಿ ಶಾಸನದಿಂದ (ಸು.450) ಹಿಡಿದು 18ನೆಯ ಶತಮಾನದ ವರೆಗಿನ ಪ್ರಕಟಿತ, ಅಪ್ರಕಟಿತ ಶಾಸನಗಳ ಸಾಮಗ್ರಿಯನ್ನೂ ಕವಿರಾಜಮಾರ್ಗದಿಂದ ಶ್ರೀ ರಾಮಾಯಣದರ್ಶನಂ ವರೆಗಿನ, ಇನ್ನೂ ಇತ್ತೀಚಿನ ಸಾಹಿತ್ಯ ಸಾಮಗ್ರಿಯನ್ನೂ ಕನ್ನಡದಲ್ಲಿ ಬಳಕೆಯಾಗಿರುವ, ಬಳಕೆಯಾಗುತ್ತಿರುವ ಎಲ್ಲ ಪದಗಳಿಗೂ ಭಾಷಾ ವಿಜ್ಞಾನದ ನಿಯಮಗಳಿಗನುಸಾರವಾಗಿ ಚಾರಿತ್ರಿಕ ವಿವರಣೆಯೊಂದಿಗೆ ಅರ್ಥವನ್ನು ಕೊಡಲಾಗಿದೆ. ಇದು ಪ್ರಧಾನವಾಗಿ ಕನ್ನಡ ನಿಘಂಟಾದರೂ ಕನ್ನಡ ಭಾಷೆಯಲ್ಲಿ ಸೇರಿಹೋಗಿರುವ ದೇಶ್ಯ, ತದ್ಭವ, ತತ್ಸಮ, ಅನ್ಯದೇಶ್ಯ ಮುಂತಾದ ಶಬ್ದಗಳೂ ಧಾರ್ಮಿಕ, ಲೌಕಿಕ, ವ್ಯಾವಹಾರಿಕ, ಪಾರಿಭಾಷಿಕ ಮುಂತಾದ ಶಬ್ದಗಳೂ ಇಲ್ಲಿ ಸೇರಿವೆ. ಯಾವುದಾದರೂ ಒಂದು ಶಬ್ದ ಅಪೂರ್ವವಾಗಿದ್ದರೆ, ವಿಶೇಷಾರ್ಥವುಳ್ಳದ್ದಾಗಿದ್ದರೆ ಅಥವಾ ಶಾಸ್ತ್ರ ಪರಿಭಾಷೆಯಾಗಿದ್ದರೆ ಅದರ ಅರ್ಥವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಉಚಿತವರಿತು ಪ್ರಯೋಗಗಳನ್ನು ಕೊಡಲಾಗುವುದು. ಪ್ರತಿಯೊಂದು ಶಬ್ದದ ಅರ್ಥ ನಿರ್ಣಯಕ್ಕೂ ಪ್ರಯೋಗಗಳನ್ನೇ ಮುಖ್ಯ ಆಧಾರವಾಗಿಟ್ಟುಕೊಳ್ಳಲಾಗಿದೆ. ಪ್ರತಿಯೊಂದು ಮುಖ್ಯ ಶಬ್ದಕ್ಕೂ ನಿಷ್ಪತ್ತಿಯನ್ನು ಸೂಚಿಸಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಜೀವಂತ ಪ್ರತೀಕದಂತಿರುವ ಚಾರಿತ್ರಿಕ ಕ್ರಮದ ಎಂಟು ಸಂಪುಟಗಳ ಈ ನಿಘಂಟು ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ವಿಧದಲ್ಲಿ ರಚಿತವಾಗಿ ಪ್ರಕಟವಾಗುತ್ತಿರುವುದು (1995) ಇದೇ ಮೊದಲು.

**ಛಂದೋಗ್ರಂಥಗಳು :** ಒಂದನೆಯ ನಾಗವರ್ಮನ (ಸು.990) ಛಂದೋಂಬುಧಿ ದೊರೆತ ಛಂದೋಗ್ರಂಥಗಳಲ್ಲಿ ಪ್ರಾಚೀನವಾದುದು. ಆದರೆ ಇದಕ್ಕಿಂತ ಹಿಂದೆ 9ನೆಯ ಶತಮಾನದಲ್ಲಿ ಗುಣಗಾಂಕೀಯ ಎಂಬ ಛಂದೋಗ್ರಂಥವಿದ್ದಿತೆಂದು ಊಹಿಸಲು ಅವಕಾಶವಿದೆ. ಕವಿರಾಜಮಾರ್ಗದಲ್ಲಿ ಛಂದಸ್ಸಿಗೆ ಸಂಬಂಧಿಸಿದ ಅನೇಕ ಮುಖ್ಯ ಸಂಗತಿಗಳಿವೆ. ಆದರೂ ಛಂದೋಂಬುಧಿ ಕನ್ನಡದ ಏಕೈಕ, ಅಧಿಕೃತ ಪ್ರಾಚೀನ ಲಕ್ಷಣಗ್ರಂಥ (ನೋಡಿ: ನಾಗವರ್ಮ I). ಜಯಕೀರ್ತಿಯ ಛಂದೋನುಶಾಸನ (ಏಳನೆಯ ಅಧ್ಯಾಯ), 3ನೆಯ ಸೋಮೇಶ್ವರನ ಮಾನಸೋಲ್ಲಾಸ, ಶಾರ್ಙ್ಗದೇವನ ಸಂಗೀತರತ್ನಾಕರ ಮುಂತಾದ ಸಂಸ್ಕೃತ ಗ್ರಂಥಗಳಲ್ಲಿ ಕನ್ನಡ ಛಂದಸ್ಸಿಗೆ ಸಂಬಂಧಿಸಿದ ಅನೇಕ ಸಂಗತಿಗಳು ಪ್ರತಿಪಾದಿತವಾಗಿವೆ. 2ನೆಯ ನಾಗವರ್ಮನ ಛಂದೋವಿಚಿತಿ ಎಂಬ ಗ್ರಂಥ ಉಪಲಬ್ಧವಿಲ್ಲ. ಈಶ್ವರಕವಿಯ (ಸು.1500) ಕವಿಜಿಹ್ವಾಬಂಧನ, ಗುಣಚಂದ್ರನ ಛಂದಸ್ಸಾರ (ಸು.1650), ಶಾಲ್ಯದ ಕೃಷ್ಣರಾಜನ ಷಟ್ಪ್ರತ್ಯಯ (1748), ವೀರಭದ್ರ ಕವಿಯ ನಂದಿ ಛಂದಸ್ಸು ಮುಂತಾದ ಛಂದೋಗ್ರಂಥಗಳಲ್ಲಿಯೂ ಕನ್ನಡ ಛಂದಸ್ಸಿನ ವಿಷಯಗಳು ಸ್ವಲ್ಪಮಟ್ಟಿಗೆ ನಿರೂಪಿತವಾಗಿವೆ.

**ವೈದ್ಯಶಾಸ್ತ್ರ :** ಜಗದ್ದಳ ಸೋಮನಾಥನ ಕರ್ನಾಟಕ ಕಲ್ಯಾಣಕಾರಕ (ಸು.1175) ಈಗ ದೊರೆತಿರುವ ಮೊದಲನೆಯ ಕನ್ನಡ ಆಯುರ್ವೇದ ಗ್ರಂಥ. ಇದು ಪೂಜ್ಯಪಾದನ ಸಂಸ್ಕೃತ ಕಲ್ಯಾಣಕಾರಕದ ಅನುವಾದ. ದೇವೇಂದ್ರಮುನಿ ಬಾಲಗ್ರಹ ಚಿಕಿತ್ಸೆ (ಸು.1200) ಎಂಬ ಗ್ರಂಥವನ್ನು ಬರೆದಿದ್ದಾನೆ. 1ನೆಯ ಮಂಗರಾಜನ ಖಗೇಂದ್ರಮಣಿದರ್ಪಣ (ಸು.1360) ಮುಖ್ಯವಾಗಿ ಒಂದು ವಿಷವೈದ್ಯಗ್ರಂಥ. ಇವನ ಗ್ರಂಥಕ್ಕೆ ಮೂಲ ಪೂಜ್ಯಪಾದನ ವೈದ್ಯಗ್ರಂಥದ ಸ್ಥಾವರವಿಷಪ್ರಕ್ರಿಯೆ. ಕನ್ನಡದ ಇತರ ವೈದ್ಯಗ್ರಂಥಗಳು ಹೀಗಿವೆ: ಶ್ರೀಧರದೇವನ ವೈದ್ಯಾಮೃತ (ಸು.1500), ಸಾಳ್ವನ ವೈದ್ಯಸಾಂಗತ್ಯ (ಸು.1500), ಚೆನ್ನರಾಜನ ವೈದ್ಯಸಾರ ಸಂಗ್ರಹ (ಸು.1570), ನಂಜನಾಥ ಭೂಪಾಲನ ವೈದ್ಯಸಾರ ಸಂಗ್ರಹ (ಸು.1700), ವೀರರಾಜನ ಸಕಲವೈದ್ಯಸಂಹಿತಾ ಸಾರಾರ್ಣವ (ಸು.1700), ಬ್ರಹ್ಮನ ವೈದ್ಯಕಂದ (ಸು.1750), ತಿಮ್ಮರಾಜಗೌಡನ ಸ್ತ್ರೀವೈದ್ಯ (ಸು.1750).

**ಪಶುವೈದ್ಯ :** ಕೀರ್ತಿವರ್ಮನ (ಸು.1100) ಗೋವೈದ್ಯ ಕನ್ನಡ ವೈದ್ಯ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುದು. ಇದರಲ್ಲಿ ಗೋವುಗಳ ವ್ಯಾಧಿಗಳಿಗೆ ಔಷಧ, ಯಂತ್ರ ಕಟ್ಟುವುದು, ಬರೆಹಾಕುವುದು ಇತ್ಯಾದಿ ವಿಷಯಗಳನ್ನು ಹೇಳಿದೆ. ಅಭಿನವಚಂದ್ರ (ಸು.1400) ಅಶ್ವಶಾಸ್ತ್ರವನ್ನು ಬರೆದ ಮೊದಲ ಕನ್ನಡ ಕೃತಿಕಾರ. ಈ ಕೃತಿಯಲ್ಲಿ ಕುದುರೆಗಳ ಸರ್ವಾಂಗ ಪರೀಕ್ಷೆ, ವರ್ಣ, ಸುಳಿ, ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ಚಿಕಿತ್ಸೆ ಇತ್ಯಾದಿ ವಿಷಯಗಳಿವೆ. ಬಾಚರಸನ ಅಶ್ವವೈದ್ಯ (ಸು.1500) ಕುದುರೆಗಳ ಕಾಯಿಲೆಗಳಿಗೆ ಸಂಬಂಧಿಸಿದ್ದು. ರಾಮಚಂದ್ರ (ಸು.1625) ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಗದ್ಯದಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಪದ್ಮಣಪಂಡಿತನು ಹಯಸಾರ ಸಮುಚ್ಚಯ (ಸು.1627) ಎಂಬ ಗ್ರಂಥವನ್ನು ಬರೆದಿದ್ದಾನೆ. ಗಂಗರ ದೊರೆ ಶಿವಮಾರನ ಗಜಾಷ್ಟಕ (8ನೆಯ ಶತಮಾನ) ಕನ್ನಡದ ಪ್ರಾಚೀನ ಗಜಶಾಸ್ತ್ರ ಗ್ರಂಥ. ಈ ಪುಟ್ಟಕೃತಿ (8 ಪದ್ಯ) ಉಪಲಬ್ಧವಾಗಿಲ್ಲದಿದ್ದರೂ ಒನಕೆವಾಡಾಗುವಷ್ಟು ಜನ ಪ್ರಿಯತೆಯನ್ನು ಪಡೆದಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ವೀರಭದ್ರರಾಜ (ಸು.1600) ಪಾಲಕಾಪ್ಯನ ಹಸ್ತ್ಯಾಯುರ್ವೇದಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾನೆ.

**ಜ್ಯೋತಿಷ್ಯ, ಗಣಿತ, ಸೂಪ, ನೀತಿ, ವೃಷ್ಟಿ ಮತ್ತು ರತ್ನಶಾಸ್ತ್ರ :** ಶ್ರೀಧರಾಚಾರ್ಯನ ಜಾತಕತಿಲಕ (ಸು.1049) ಕನ್ನಡದ ಮೊದಲ ಜ್ಯೋತಿಷ್ಯ ಗ್ರಂಥ. ಇದರಲ್ಲಿ ಗ್ರಹಣಗಳು, ಮುಹೂರ್ತಗಳು, ಉತ್ಪಾತಗಳು ಮತ್ತು ಅವುಗಳ ಫಲಾಫಲಗಳು ಇತ್ಯಾದಿ ಸಂಗತಿಗಳು ನಿರೂಪಿತವಾಗಿವೆ. ಈತ ವರಾಹಮಿಹಿರನ ಬೃಹಜ್ಜಾತಕ ಮತ್ತು ಲಘುಜಾತಕಗಳು, ಕಲ್ಯಾಣವರ್ಮನ ಸಾರಾವಳಿ ಇತ್ಯಾದಿಗಳಿಂದ ವಿಷಯ ಸಂಗ್ರಹಸಿದ್ದಾನೆ. ಗಣಿತಶಾಸ್ತ್ರಕ್ಕೆ ಸಂಬಂಧಿಸಿದಂತೆ ರಾಜಾದಿತ್ಯ (ಸು.1190) ಕನ್ನಡದಲ್ಲಿ ವ್ಯವಹಾರಗಣಿತ, ಕ್ಷೇತ್ರಗಣಿತ, ವ್ಯವಹಾರರತ್ನ ಲೀಲಾವತಿ, ಚಿತ್ರಹಸುಗೆ, ಜೈನಗಣಿತ ಸೂತ್ರ ಟೀಕೋದಾಹರಣ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಆ ಕಾಲದ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ತನ್ನ ಗ್ರಂಥದಲ್ಲಿ ಈತ ತಿಳಿಸಿದ್ದಾನೆ. ಭಾಸ್ಕರ (ಸು.1650) ಬೇಹಾರಗಣಿತವೆಂಬ ಕೃತಿಯನ್ನು ರಚಿಸಿರುವನು. ತಿಮ್ಮರಸನ ಕ್ಷೇತ್ರಗಣಿತ (ಸು.1700) ಹೊಲಗಳನ್ನು ಅಳೆಯುವ ಬೇರೆ ಬೇರೆ ಮಾನಗಳ ವಿವರಗಳನ್ನು ಕೊಡುವುದರಿಂದ ಒಂದು ಸ್ವಾರಸ್ಯ ಗ್ರಂಥವಾಗಿದೆ. ದೈವಜ್ಞವಲ್ಲಭ (ಸು.1700) ಮಹಾವೀರಾಚಾರ್ಯನ ಗಣಿತಕ್ಕೆ ಕನ್ನಡ ವ್ಯಾಖ್ಯಾನವನ್ನು ರಚಿಸಿದ್ದಾನೆ. ಬಾಲವೈದ್ಯದ ಚೆಲುವನ (ಸು.1785) ಕನ್ನಡ ಲೀಲಾವತಿಯಲ್ಲಿ ಸಾಧಾರಣ ಮತ್ತು ಕ್ಷೇತ್ರಗಣಿತ ಎರಡನ್ನೂ ನಿರೂಪಿಸಲಾಗಿದೆ. ಕನ್ನಡದಲ್ಲಿ ಅನೇಕ ಶಕುನ ಗ್ರಂಥಗಳು ರಚಿತವಾಗಿವೆ. ಶುಭಚಂದ್ರನ ನರಪಿಂಗಳಿ (ಸು.1500), ಲಕ್ಷ್ಮಣಾಂಕನ ಶಕುನಸಾರ, ಚಾಕರಾಜನ ಶಕುನಪ್ರಪಂಚ, ಮಾಧವದೇವನ ನರಪಿಂಗಲಿ (ಸು.1650), ದೇವನ ಶಕುನಪ್ರಪಂಚ (ಸು.1725 ಉಪಲಬ್ಧವಿಲ್ಲ) - ಇವು ಶಕುನ ಗ್ರಂಥಗಳಲ್ಲಿ ಮುಖ್ಯವಾದವು. ಸೂಪಶಾಸ್ತ್ರ ಗ್ರಂಥಗಳಲ್ಲಿ 3ನೆಯ ಮಂಗರಸನ ಸೂಪಶಾಸ್ತ್ರ (ಸು.1508) ಅತ್ಯಂತ ಪ್ರಸಿದ್ಧವಾದುದು. ಇದರಲ್ಲಿ ಹಲವಾರು ರೀತಿಯ ಅಡುಗೆಗಳ ಸ್ವಾರಸ್ಯಕರವಾದ ನಿರೂಪಣೆಯಿದೆ. ಇವನ ಸಮ್ಯಕ್ತ್ವ ಕೌಮುದಿ ಎಂಬ ಕಾವ್ಯದಲ್ಲಿ ಒಂದು ಭೋಜನಸಮಾರಂಭದ ವಿನೋದ ವರ್ಣನೆ ಇದೆ. 2ನೆಯ ಚಾವುಂಡರಾಯನ (ಸು.1025) ಲೋಕೋಪಕಾರ ಎಂಬ ಗ್ರಂಥದಲ್ಲಿ ಸೂಪಶಾಸ್ತ್ರ ಎಂಬ ಒಂದು ಪ್ರತ್ಯೇಕ ಅಧ್ಯಾಯವಿದ್ದು ಈ ಅಧ್ಯಾಯಕ್ಕೆ ಕನ್ನಡದಲ್ಲಿ ಒಂದು ಟೀಕೂ ದೊರೆಯುತ್ತದೆ. ದುರ್ಗಸಿಂಹನ ಪಂಚತಂತ್ರ (ಸು.1031) ಕಾವ್ಯ, ನೀತಿ ಇವೆರಡರ ಸಾರಭೂತ ಕೃತಿ. ವಸುಭಾಗಭಟ್ಟನ ಸಂಸ್ಕೃತ ಮೂಲ ಕನ್ನಡ ಪಂಚತಂತ್ರಕ್ಕೆ ಆಕರವೆಂದು ತಿಳಿದುಬರುತ್ತದೆ. ಇದರಲ್ಲಿ ಪ್ರಾಣಿಗಳ ಕಥೆಯ ಮೂಲಕ ರಾಜನೀತಿ ನಿರೂಪಣೆಗೊಂಡಿದೆ. ಚಿಕುಪಾಧ್ಯಾಯ (ಸು.1672) ಸಂಸ್ಕೃತ ಕಾಮಂದಕ ನೀತಿಗೆ ಗದ್ಯರೂಪವಾದ ಟೀಕೆಯೊಂದನ್ನು ಬರೆದಿದ್ದಾನೆ. ರಟ್ಟಕವಿಯ ರಟ್ಟಮತ (ಸು.1300) ವೃಷ್ಟಿಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಇದರಲ್ಲಿ ಮಳೆಯ ಕುರುಹು, ಶಕುನಗಳು, ಬಿತ್ತುವುದು, ಭೂಜಲವನ್ನು ತೆಗೆಯುವುದು, ಕ್ಷಾಮ ಇತ್ಯಾದಿ ವಿಷಯಗಳಿವೆ. ಬಾಲವೈದ್ಯದ ಚೆಲುವನ ರತ್ನಶಾಸ್ತ್ರದಲ್ಲಿ ಬೇರೆ ಬೇರೆ ಜಾತಿಯ ರತ್ನಗಳು ಅವುಗಳ ಗುಣದೋಷಗಳು, ಕೃತ್ರಿಮರತ್ನದ ಲಕ್ಷಣ ಇತ್ಯಾದಿ ಸಂಗತಿಗಳಿವೆ.

**ಸಂಗೀತಶಾಸ್ತ್ರ ಇತ್ಯಾದಿ :** ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ವಿಸ್ತಾರವಾದ ನಿರೂಪಣೆ ನಿಜಗುಣಶಿವಯೋಗಿಗಳ ವಿವೇಕಚಿಂತಾಮಣಿಯ ನಾಲ್ಕನೆಯ ಅಧ್ಯಾಯದಲ್ಲಿ ದೊರಕುತ್ತದೆ. ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಂಗೀತ ರತ್ನಾಕರ ಎಂಬ ಒಂದು ಗ್ರಂಥವೂ ಪ್ರಕಟವಾಗಿದೆ (ಸಂಸ್ಕೃತ ಕೃತಿಯ ಅನುವಾದವಲ್ಲ). ಇದಲ್ಲದೆ ಕನ್ನಡದ ಅನೇಕ ಕಾವ್ಯಗಳಲ್ಲಿ ಸಂಗೀತ ಹಾಗೂ ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ವರ್ಣನೆಗಳು ವಿಪುಲವಾಗಿ ದೊರೆಯುತ್ತವೆ. ಸಿಂಹಭೂಪಾಲನ (16ನೆಯ ಶತಮಾನ) ಲಾಸ್ಯರಂಜನಂ ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ಒಂದು ದೊಡ್ಡ ಗ್ರಂಥ. (ನೋಡಿ: ಕರ್ನಾಟಕ ಸಂಗೀತ)

**ಕಾಮಶಾಸ್ತ್ರ :** 'ಮದನತಿಲಕ' ಚಂದ್ರರಾಜನಿಂದ (ಸು.1025) ರಚಿತವಾದ ಕನ್ನಡದ ಮೊತ್ತಮೊದಲ ಕಾಮಶಾಸ್ತ್ರಗ್ರಂಥ. ಪುರುಷಾರ್ಥಗಳಲ್ಲಿ ಕಾಮವೂ ಒಂದಾದ್ದರಿಂದ ಅದು ನಿಂದನೀಯವಾದುದಲ್ಲ ಎಂಬುದು ಕೃತಿಕಾರನ ಮತ. ಮದನತಿಲಕ ಕಾಮಶಾಸ್ತ್ರ ಗ್ರಂಥವಾದರೂ ಇದಕ್ಕೆ ಪ್ರಸಿದ್ಧಿ ದೊರೆತಿರುವುದು ಛಂದಸ್ಸಿನ ದೃಷ್ಟಿಯಿಂದ. ಇದರಲ್ಲಿ ಕನ್ನಡದ ಅನೇಕ ಅಪೂರ್ವ ವೃತ್ತಗಳು ಬಳಕೆಯಾಗಿವೆ. ಇವನು ವಾತ್ಸ್ಯಾಯನ, ವೈಶಿಕ, ಚಾರಾಯಣ, ಸ್ವರ್ಣನಾಭ ಮುಂತಾದ ಹಿಂದಿನ ಲೇಖಕರಿಂದ ವಿಷಯ ಸಂಗ್ರಹಿಸಿ ಕೃತಿರಚನೆ ಮಾಡಿದ್ದಾನೆ. ಜನ್ನನ 'ಅನುಭವಮುಕುರ' ಸುಂದರಿಯರು, ಅವರ ಸೌಂದರ್ಯ, ಪ್ರೇಮಗಳನ್ನು ಕುರಿತಾದ ಗ್ರಂಥ. ಕಲ್ಲರಸನ (ಸು.1430) ಜನವಶ್ಯದಲ್ಲಿ ವಾತ್ಸ್ಯಾಯನ ಮುಂತಾದವರ ಮತಗಳನ್ನು ಸಂಗ್ರಹಿಸಲಾಗಿದೆ. ಪಂಪ, ನೇಮಿಚಂದ್ರ, ಷಡಕ್ಷರಿ, ರತ್ನಾಕರವರ್ಣಿ, ಕವಿಲಿಂಗ ಮುಂತಾದ ಕವಿಗಳ ಕಾವ್ಯಗಳಲ್ಲಿ ಕಾಮಶಾಸ್ತ್ರಕ್ಕೆ ಸಂಬಂಧಪಟ್ಟ ಹಲವಾರು ಸಂಗತಿಗಳು ನಿರೂಪಿತವಾಗಿರುವುದು ಕಂಡುಬರುತ್ತದೆ.

**ಧಾರ್ಮಿಕಶಾಸ್ತ್ರ ಗ್ರಂಥಗಳು :** ಇಂತಹ ಗ್ರಂಥಗಳಲ್ಲಿ ಕಾವ್ಯಾಂಶವೂ ಶಾಸ್ತ್ರಾಂಶವೂ ಕೂಡಿರಬಹುದು. ಪಂಪನ ಆದಿಪುರಾಣದಂಥ ಜೈನಪುರಾಣಗಳಲ್ಲಿ ಕಾವ್ಯವೂ ಶಾಸ್ತ್ರವೂ (ಧರ್ಮ ಪ್ರಕ್ರಿಯೆಗಳೂ) ಕೂಡಿಯೇ ನಿರೂಪಿತವಾಗಿದೆ. ವೀರಶೈವ ಪುರಾಣಗಳಲ್ಲೂ ವಚನ ಸಾಹಿತ್ಯದಲ್ಲೂ ಹರಿದಾಸ ಸಾಹಿತ್ಯದ ಅನೇಕ ಭಾಗದಲ್ಲೂ ಕಾವ್ಯಾಂಶ ಶಾಸ್ತ್ರಾಂಶ ಬೆಸುಗೆಯಾಗಿರುವುದನ್ನು ಕಾಣಬಹುದು. ಆದರೂ ಇಂಥ ಕೃತಿಗಳನ್ನುಳಿದು ಕೇವಲ ವಿಷಯ ನಿರೂಪಣೆಯೇ ಮುಖ್ಯವಾಗಿರುವ ಗ್ರಂಥಗಳನ್ನು ಮಾತ್ರ ಇಲ್ಲಿ ವಿಚಾರ ಮಾಡಲಾಗಿದೆ.

ಅನೇಕ ಜೈನ ವಿದ್ವಾಂಸರು ಕನ್ನಡದಲ್ಲಿ ಹಲವಾರು ಸಂಸ್ಕೃತ, ಪ್ರಾಕೃತ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ದಿವಾಕರನಂದಿ (ಸು.1062) ಗೃಧ್ರಪಿಂಛಾಚಾರ್ಯನ ತತ್ತ್ವಾರ್ಥಸೂತ್ರಕ್ಕೆ ಕನ್ನಡ ವೃತ್ತಿ ಬರೆದಿದ್ದಾನೆ. ವೀರನಂದಿ (ಸು.1153) ತನ್ನದೇ ಆಚಾರಸಾರಕ್ಕೆ ಕನ್ನಡ ವ್ಯಾಖ್ಯಾನ ಬರೆದಿದ್ದಾನೆ. ಅಭಿನವಶ್ರುತಮುನಿ (ಸು.1365) ಮಲ್ಲಿಷೇಣನ ಸಜ್ಜನಚಿತ್ತವಲ್ಲಭಕ್ಕೂ ಕಮಲಪಂಡಿತ ಸಮಂತಭದ್ರನ ರತ್ನಕರಂಡಕಕ್ಕೂ ಟೀಕೆ ಬರೆದಿದ್ದಾರೆ. ಚಂದ್ರಕೀರ್ತಿಯ (ಸು.1400) ಪರಮಾಗಮಸಾರ ಜೈನಧರ್ಮದ ತಿರುಳನ್ನು ಹೇಳುತ್ತದೆ. ಇದಲ್ಲದೆ ಇನ್ನೂ ಅನೇಕ ಗ್ರಂಥಗಳು ಜೈನಧರ್ಮವನ್ನು ಕುರಿತು ರಚಿತವಾಗಿವೆ.

ವೀರಶೈವ ವಿದ್ವಾಂಸರೂ ತಮ್ಮ ಧರ್ಮಸಂಬಂಧಿಯಾದ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅಂಥ ವ್ಯಾಖ್ಯಾನಗಳಲ್ಲಿ ಮಹಾಲಿಂಗದೇವನ ಏಕೋತ್ತರಶತಸ್ಥಲ (ಸು.1425) ಮತ್ತು ಪ್ರಭುದೇವರ ಷಟ್ಸ್ಥಲಜ್ಞಾನ ಚಾರಿತ್ರ ವಚನದ ಟೀಕೆಗಳು, ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ (ಸು.1430), ಜಕ್ಕಣಾರ್ಯನ ಏಕೋತ್ತರಶತಸ್ಥಲ (ಸು.1430) ಇವನ್ನು ಹೆಸರಿಸಬಹುದು. ಗುಬ್ಬಿಯ ಮಲ್ಲಣ್ಣ (ಸು.1475) ತನ್ನ ಗಣಭಾಷಿತ ರತ್ನಮಾಲೆಯಲ್ಲಿ ನೂರೊಂದು ಸ್ಥಲಗಳ ವಿವರಣೆಯನ್ನು ಕೊಟ್ಟಿದ್ದಾನೆ. ಅನೇಕ ಶೈವಾಗಮಗಳಿಗೆ ಮತ್ತು ಇತರ ಗ್ರಂಥಗಳಿಗೆ ವೀರಶೈವ ವಿದ್ವಾಂಸರು ಬರೆದ ಟೀಕೆಗಳು ದೊರೆಯುತ್ತವೆ. ವೀರಶೈವ ಸಿದ್ಧಾಂತವನ್ನು ಪ್ರತಿಪಾದನೆ ಮಾಡುವ ಕನ್ನಡ ಗ್ರಂಥಗಳಲ್ಲಿ ಮಗ್ಗೆಯ ಮಾಯಿದೇವನ ಅನುಭವಸೂತ್ರ, ಗುರುಬಸವನ ಸಪ್ತಕಾವ್ಯಗಳು, ನಿಜಗುಣಶಿವಯೋಗಿಯ ಕೃತಿಗಳು - ಇವುಗಳನ್ನು ಹೆಸರಿಸಬಹುದು.

ಪರಂಜ್ಯೋತಿಯ (ಸು.1450) ಅನುಭವಮುಕುರ, ರಂಗನಾಥನ (ಸು.1675) ಅನುಭವಾಮೃತ, ಚಿದಾನಂದನ (ಸು.1725) ಚಿದಖಂಡಾನುಭವಸಾರ, ಚಿದಾನಂದಾವಧೂತನ (ಸು.1750) ಜ್ಞಾನಸಿಂಧು ಇವು ಅದ್ವೈತವೇದಾಂತ ಪರವಾದ ಗ್ರಂಥಗಳು.

ಜಗನ್ನಾಥದಾಸರ ಹರಿಕಥಾಮೃತಸಾರ ದ್ವೈತವೇದಾಂತಬೋಧಕವಾಗಿದೆ. ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯನಿರ್ಣಯಕ್ಕೆ ವಾದಿರಾಜರು (ಸು.1570) ಕನ್ನಡದಲ್ಲಿ ಟೀಕೆ ಬರೆದಿದ್ದಾರೆ. ರಂಗರಾಜನ (ಸು.1660) ಸಾತ್ವಿಕ ಬ್ರಹ್ಮವಿದ್ಯಾವಿಲಾಸ ವಿಶಿಷ್ಟಾದ್ವೈತ ಸಿದ್ಧಾಂತವನ್ನು ನಿರೂಪಿಸುತ್ತದೆ. ಚಿಕ್ಕದೇವರಾಜ ಒಡೆಯರ (1673-1704) ಚಿಕದೇವರಾಜ ಬಿನ್ನಪದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತದ ಸಾರವನ್ನು ಕೊಟ್ಟಿದೆ. ಚಿಕುಪಾಧ್ಯಾಯನ ತಿರುವಾಯ್ಮೊಳಿ ಟೀಕೆ ನಮ್ಮಾಳ್ವಾರರ ತಮಿಳು ಪ್ರಬಂಧಕ್ಕೆ ಬರೆದ ವ್ಯಾಖ್ಯಾನವಾಗಿದೆ.

**ಜ್ಞಾನಕೋಶಗಳು :** ಕನ್ನಡದಲ್ಲಿ ವಿಶ್ವಕೋಶಗಳಂಥ ಕೆಲವು ಗ್ರಂಥಗಳು ಹುಟ್ಟಿವೆ. ಅವು ಬೇರೆ ಬೇರೆ ವಿಷಯಗಳ ಸಂಗ್ರಹರೂಪಗಳಾಗಿವೆ. (ನೋಡಿ: ಕನ್ನಡದಲ್ಲಿ ವಿಶ್ವಕೋಶಗಳು). (ಎಂ.ಸಿ.,ಕೆ.ಕೆ.,ಎನ್.ಬಿ.)

## ಕನ್ನಡದಲ್ಲಿ ಷಟ್ಪದಿ ಕಾವ್ಯಗಳು :

ಷಟ್ಪದಿ ಎನ್ನುವುದು ಆರು ಸಾಲಿನ ಪದ್ಯಜಾತಿಯೊಂದನ್ನು ನಿರ್ದೇಶಿಸುತ್ತದೆ. ಅದರಲ್ಲಿ 1, 2, 4, 5ನೆಯ ಪಾದಗಳು ಒಂದು ರೀತಿಯಾಗಿಯೂ 3, 6ನೆಯ ಪಾದಗಳು ಒಂದು ರೀತಿಯಾಗಿಯೂ ಇರುತ್ತವೆ. ಷಟ್ಪದಿ ಆರು ಬಗೆಯಾಗಿದೆ. ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ. ಈ ಷಟ್ಪದಿಗಳು ಮಾತ್ರಾಗಣಗಳಿಂದ ಕೂಡಿದುವಾಗಿರುವುದರಿಂದ ಇವನ್ನು ಮಾತ್ರಾಷಟ್ಪದಿಗಳೆಂದು ಕರೆಯಬಹುದು. ಈ ಎಲ್ಲ ಮಾತ್ರಾಷಟ್ಪದಿಗಳಿಗೆ ಮೂಲವಾಗಿ ಒಂದು ಷಟ್ಪದಿಯಿತ್ತು. ಅದನ್ನು ಮೂಲಷಟ್ಪದಿ ಎಂದೋ ಅಂಶಷಟ್ಪದಿ ಎಂದೋ ಅಥವಾ ತೀ.ನಂ.ಶ್ರೀಕಂಠಯ್ಯನವರನ್ನನುಸರಿಸಿ ಷಟ್ಪದ ಎಂದೋ ನಿರ್ದೇಶಿಸಬಹುದು. ಈ ಮೂಲಷಟ್ಪದಿ ಅಥವಾ ಷಟ್ಪದ ಅಂಶಗಣಗಳಿಂದ ಕೂಡಿದ್ದು, ಈ ಲಕ್ಷಣವನ್ನು ಪಡೆದಿದ್ದಿತು (ವಿ- ವಿಷ್ಣುಗಣ : ರು- ರುದ್ರಗಣ).

| | | | | | |
|---|---|---|---|---|---|
| ವಿ | \| | ವಿ | \| | | |
| ವಿ | \| | ವಿ | \| | | |
| ವಿ | \| | ವಿ | \| | ರು | ‖ |
| ವಿ | \| | ವಿ | \| | | |
| ವಿ | \| | ವಿ | \| | | |
| ವಿ | \| | ವಿ | \| | ರು | ‖ |

ನಾಗವರ್ಮ, ಜಯಕೀರ್ತಿಗಳು ತಮ್ಮ ಲಕ್ಷಣಗ್ರಂಥಗಳಲ್ಲಿ ಷಟ್ಪದಿಯ ಗುಣ ಲಕ್ಷಣಗಳನ್ನು ವರ್ಣಿಸಿರುವರಲ್ಲದೆ ಅದು ಅನೇಕ ಶಾಸನಗಳಲ್ಲೂ (ಉದಾ: ಅಮ್ಮಿನಬಾವಿ ಶಾಸನ) ಅನೇಕ ಚಂಪೂ ಕಾವ್ಯಗಳಲ್ಲಿಯೂ (ಉದಾ: ಸುಕುಮಾರ ಚರಿತೆ) ಕಾಣಿಸಿಕೊಂಡಿದೆ. ಚಾಳುಕ್ಯ ಚಕ್ರವರ್ತಿ 3ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿಯೂ (ಸು.1130) ಅಂಶಗಣ ಘಟಿತವಾದ ಷಟ್ಪದ ಕಾಣಿಸಿಕೊಳ್ಳುತ್ತದೆ. ಆ ಕಾಲಕ್ಕಾಗಲೇ ಷಟ್ಪದರೂಪವಾದ ಕಥೆಗಳು ಹುಟ್ಟಿದ್ದುವೆಂಬುದಕ್ಕೆ ಆ ಕೃತಿಯಲ್ಲಿಯೇ ಆಧಾರವಿರುವುದಾದರೂ ನಮಗೆ ಷಟ್ಪದರೂಪದ ಯಾವ ಕಾವ್ಯವೂ ದೊರಕಿಲ್ಲ. ಎಂದರೆ ಹನ್ನೆರಡನೆಯ ಶತಮಾನದ ಮಧ್ಯದವರೆಗೆ ದೊರಕಿರುವ ಷಟ್ಪದಗಳೆಲ್ಲವೂ ಶಾಸನಗಳಲ್ಲಿ, ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಬಿಡಿಪದ್ಯಗಳಾಗಿವೆ.

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಅಂಶಗಣಗಳ ಸ್ಥಾನದಲ್ಲಿ ಮಾತ್ರಾಗಣಗಳನ್ನು ತರುವ ರೂಢಿ ಪ್ರಬಲವಾದ ಮೇಲೆ ಮೂಲಷಟ್ಪದಿ ಅಥವಾ ಷಟ್ಪದ ಆರು ರೀತಿಯ ಮಾತ್ರಾಷಟ್ಪದಿಗಳಾಗಿ ವಿಕಾಸ ಹೊಂದಿತು. ಅವನ್ನೇ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕಗಳೆಂದು ಕರೆದಿರುವುದು. ಆಯಾ ಷಟ್ಪದಿಗಳ ಮೊದಲ ಪಾದದ ಲಕ್ಷಣ ಹೀಗಿರುತ್ತದೆ (ಮೂರನೆಯ ಪಾದ ಅದರ ಒಂದೂವರೆಯಷ್ಟು + 1 ಗುರು ಆಗಿರುತ್ತದೆ).

| | | |
|---|---|---|
| ಶರ (4 + 4) | = 8 | ಮಾತ್ರೆಗಳು |
| ಕುಸುಮ (5 + 5) | = 10 | ಮಾತ್ರೆಗಳು |
| ಭೋಗ (3 + 3 + 3 + 3) | = 12 | ಮಾತ್ರೆಗಳು |
| ಭಾಮಿನಿ (3 + 4 + 3 + 4) | = 14 | ಮಾತ್ರೆಗಳು |
| ಪರಿವರ್ಧಿನಿ (4 + 4 + 4 + 4) | = 16 | ಮಾತ್ರೆಗಳು |
| ವಾರ್ಧಕ (5 + 5 + 5 + 5) | = 20 | ಮಾತ್ರೆಗಳು |

ಇವುಗಳಲ್ಲಿ ಭಾಮಿನಿ, ವಾರ್ಧಕಗಳು ಹೆಚ್ಚು ಪ್ರಚಾರದಲ್ಲಿದ್ದು, ಕನ್ನಡದ ಕೆಲವು ಅತ್ಯಂತ ಶ್ರೇಷ್ಠ ಕಾವ್ಯಗಳು ರಚಿತವಾಗಿವೆ.

ಷಟ್ಪದಿ ಕಾವ್ಯಗಳ ಸಮಗ್ರ ಇತಿಹಾಸವನ್ನು ಕೊಡುವುದು ಇಲ್ಲಿ ಸಾಧ್ಯವಿಲ್ಲವಾದುದರಿಂದ ಕೆಲವು ಪ್ರಮುಖ ಕಾವ್ಯಗಳ ಪರಿಚಯುವನ್ನು ಮಾತ್ರ ಕಾಲಾನುಕ್ರಮದಲ್ಲಿ ಕೊಡಲು ಪ್ರಯತ್ನಿಸಿದೆ.

1224ರ ಹರಿಹರದ ಶಾಸನದಲ್ಲಿ ಪೋಲಾಳ್ವದಂಡನಾಥನೆಂಬಾತ ಹರಿಚಾರಿತ್ರವೆಂಬ ಕಾವ್ಯವನ್ನು ಷಟ್ಪದಿರೂಪವಾಗಿ ರಚಿಸಿದನೆಂದು ಹೇಳಿದೆ. ಆ ಕಾವ್ಯ ದೊರೆತಿಲ್ಲವಾದ್ದರಿಂದ ಅದರ ಬಗ್ಗೆ ಇನ್ನೇನೂ ಹೇಳಲು ಸಾಧ್ಯವಿಲ್ಲ. ಆದಕಾರಣ ಅವನ ಸಮಕಾಲೀನನಾದ ರಾಘವಾಂಕನಿಂದ (ಸು.1230) ಷಟ್ಪದಿಕಾವ್ಯಗಳ ಇತಿಹಾಸವನ್ನು ಆರಂಭಿಸಬಹುದು.

ರಾಘವಾಂಕನ ಒಟ್ಟು ನಾಲ್ಕು ಕಾವ್ಯಗಳು ದೊರಕಿವೆ. ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣ, ಸೋಮನಾಥ ಚಾರಿತ್ರ ಮತ್ತು ವೀರೇಶಚರಿತೆ (ಅವನ ಶರಭಚಾರಿತ್ರ ಮತ್ತು ಹರಿಹರ ಮಹತ್ತ್ವಗಳು ಅಲಭ್ಯ). ಇವುಗಳಲ್ಲಿ ಮೊದಲ ಮೂರು ವಾರ್ಧಕಷಟ್ಪದಿಯಲ್ಲಿದ್ದರೆ (5+5+5+5) ವೀರೇಶಚರಿತೆ ಉದ್ದಂಡ ಷಟ್ಪದಿಯಲ್ಲಿದೆ (4+4+4+4) ತನ್ನ ಬಹು ಶ್ರೇಷ್ಠ ಕೃತಿಗಳಿಂದಲೂ ನಮಗೆ ತಿಳಿದಮಟ್ಟಿಗೆ ಮೊದಲ ಷಟ್ಪದಿ ಕಾವ್ಯಗಳನ್ನು ಬರೆದ ಕವಿ ಆಗಿರುವುದರಿಂದಲೂ ರಾಘವಾಂಕ ಷಟ್ಪದಿ ಸಂಪ್ರದಾಯದ ಪ್ರವರ್ತಕನೆಂದು ಹೇಳಬಹುದು.

ರಾಘವಾಂಕನ ಅನಂತರ ಷಟ್ಪದಿ ಕಾವ್ಯಗಳು ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲಾರಂಭಿಸುತ್ತವೆ. ಸು.1250-60ರಲ್ಲಿದ್ದ ಕುಮಾರಪದ್ಮರಸ ರಾಘವಾಂಕನ ಸಮಕಾಲೀನನೂ ತನ್ನ ತಂದೆಯೂ ಆದ ಕೆರೆಯಪದ್ಮರಸನ ಸಂಸ್ಕೃತ ಕೃತಿ ಸಾನಂದಚರಿತೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಇದರಲ್ಲಿ ಅನೇಕ ಬಗೆಯ ಷಟ್ಪದಿಗಳಿದ್ದರೂ ಕುಸುಮಷಟ್ಪದಿಯ ಬಾಹುಳ್ಯವನ್ನು ಇಲ್ಲಿ ಕಾಣಬಹುದು. ಸು.1275ರಲ್ಲಿದ್ದ ಕುಮುದೇಂದುವಿನ ಕುಮುದೇಂದು ರಾಮಾಯಣದಲ್ಲಿ ಶರ, ಭೋಗಗಳನ್ನು ಬಿಟ್ಟರೆ ಉಳಿದೆಲ್ಲ ಷಟ್ಪದಿಗಳೂ ಬಳಕೆಯಾಗಿವೆ. ಜೈನ ಸಂಪ್ರದಾಯದ ರಾಮಾಯಣದ ಕಥೆ ಇಲ್ಲಿ ಬಂದಿದೆ. ಕವಿ ತನಗಿಂತ ಹಿಂದಿದ್ದ ನಾಗಚಂದ್ರನನ್ನು ಯಥೇಷ್ಟವಾಗಿ ಅನುಕರಿಸಿರುವುದು ಕಂಡುಬರುತ್ತದೆ. ಸು.1369ರಲ್ಲಿದ್ದ ಭೀಮಕವಿಯ ಬಸವಪುರಾಣ ಒಂದು ಪ್ರಮುಖ ಕೃತಿ. ಬಸವಣ್ಣನವರನ್ನು ಕುರಿತಾದ ಕನ್ನಡ ಕಾವ್ಯಗಳಲ್ಲಿ ಇದು ಅತ್ಯಂತ ಜನಪ್ರಿಯವಾದುದು. ವಾಸ್ತವವಾಗಿ ಇದು ಸ್ವತಂತ್ರ ಕೃತಿಯಲ್ಲ. ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣದ ಪ್ರಾಮಾಣಿಕವಾದ ಕನ್ನಡ ಅನುವಾದವಷ್ಟೆ. ಇದು ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಮೊಟ್ಟಮೊದಲ ಸಮಗ್ರ ಗ್ರಂಥ. ಸು.1400ರಲ್ಲಿದ್ದ ಪದ್ಮಣಾಂಕನ ಪದ್ಮರಾಜ ಪುರಾಣವೂ ಒಂದು ಗಮನಾರ್ಹ ಕೃತಿ. ವಾರ್ಧಕಷಟ್ಪದಿಯ ಈ ಕಾವ್ಯಕ್ಕೆ ಕೆರೆಯಪದ್ಮರಸನೇ ಕಥಾವಸ್ತು. ಹೀಗೆ ತಮಗಿಂತ ಹಿಂದೆ ಮನುಷ್ಯರಂತೆಯೇ ಬದುಕಿ, ಶಿವನ ಕೃಪೆಯನ್ನು ಪಡೆದ ಭಕ್ತರ ಕಥೆಗಳನ್ನು ಆರಿಸಿಕೊಂಡು ಕಾವ್ಯಗಳನ್ನು ರಚಿಸುವ ಹರಿಹರನ ಸಂಪ್ರದಾಯ ವಿಶೇಷವಾಗಿ ವೀರಶೈವಕವಿಗಳಲ್ಲಿ ಬೆಳೆದುಕೊಂಡು ಬಂದಿರುವುದು ಒಂದು ಮುಖ್ಯ ಸಂಗತಿಯಾಗಿದೆ.

ಕುಮಾರವ್ಯಾಸ (ಸು.1400) ಕನ್ನಡದ ಅತ್ಯಂತ ಶ್ರೇಷ್ಠ ಕವಿಗಳಲ್ಲೊಬ್ಬ. ಇವನ ಕನ್ನಡ ಭಾರತ ಕನ್ನಡದ ಅತಿ ಜನಪ್ರಿಯ ಕಾವ್ಯಗಳಲ್ಲೊಂದು. ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡಕ್ಕೆ ಭಾಮಿನಿ ಷಟ್ಪದಿಗಳಲ್ಲಿ ಈತ ಯಶಸ್ವಿಯಾಗಿ ತಂದಿದ್ದಾನೆ. ಕುಮಾರವ್ಯಾಸನ ಪ್ರಭಾವ ಮುಂದಿನ ಕವಿಗಳ ಮೇಲೆ ಅಪರಿಮಿತವಾಗಿದೆ. ಉದಾಹರಣೆಗೆ 1424ರಲ್ಲಿದ್ದ ಭಾಸ್ಕರ ಎಂಬ ಜೈನಕವಿ ತನ್ನ ಜೀವಂಧರಚರಿತೆಯೆಂಬ ಭಾಮಿನಿ ಷಟ್ಪದಿ ಕಾವ್ಯದಲ್ಲಿ ಕುಮಾರವ್ಯಾಸನನ್ನು ಅನೇಕ ಕಡೆಗಳಲ್ಲಿ ಅನುಕರಿಸಿರುವುದು ಸುಸ್ಪಷ್ಟವಾಗಿದೆ.

ಚಾಮರಸನ (ಸು.1430) ಪ್ರಭುಲಿಂಗಲೀಲೆ ಅಲ್ಲಮಪ್ರಭುವನ್ನು ವಸ್ತುವಾಗಿ ಉಳ್ಳ ಶ್ರೇಷ್ಠ ಕಾವ್ಯ. ಇವನು ಭಾಮಿನಿಷಟ್ಪದಿಗಳನ್ನು ಬಳಸುವುದರಲ್ಲಿ, ಸೊಗಸಾದ ರೂಪಕಗಳನ್ನು ನಿರ್ಮಿಸುವುದರಲ್ಲಿ ಕುಮಾರವ್ಯಾಸನನ್ನು ಹೋಲುತ್ತಾನೆ. ಇವನ ಸಮಕಾಲೀನನಾಗಿದ್ದ ಲಕ್ಕಣ್ಣದಂಡೇಶ ಪ್ರೌಢದೇವರಾಯನ ಮಂತ್ರಿಯಾಗಿದ್ದು ಶಿವತತ್ತ್ವ ಚಿಂತಾಮಣಿಯೆಂಬ ವಾರ್ಧಕ ಷಟ್ಪದಿ ಕಾವ್ಯವನ್ನು ಬರೆದಿದ್ದಾನೆ. ಇದರಲ್ಲಿ ಅನೇಕ ಪುರಾತನ ಹಾಗೂ ನೂತನ ಶಿವಭಕ್ತರ ಕಥೆಗಳು ದೊರೆಯುತ್ತವೆ. ಇದೇ ಕಾಲದ ಗುರುಬಸವನ ಏಳುಕಾವ್ಯಗಳು ಸಪ್ತಕಾವ್ಯಗಳೆಂದು ಪ್ರಸಿದ್ಧವಾಗಿವೆ. ಅವುಗಳಲ್ಲಿ ಶಿವಯೋಗಾಂಗಭೂಷಣ ಪರಿವರ್ಧಿನಿಯಲ್ಲಿಯೂ ವೃಷಭಗೀತೆ ಭೋಗಷಟ್ಪದಿಯಲ್ಲಿಯೂ ಮನೋವಿಜಯಕಾವ್ಯ ಕುಸುಮಷಟ್ಪದಿಯಲ್ಲಿಯೂ ರಚಿತವಾಗಿವೆ. ಅದೇ ಕಾಲದ ಬತ್ತಲೇಶ್ವರ ಎಂಬ ವೀರಶೈವ ಕವಿ ಬತ್ತಲೇಶ್ವರ ರಾಮಾಯಣವನ್ನು ಬರೆದಿದ್ದಾನೆ. ಷಟ್ಪದಿ ಕಾವ್ಯಗಳನ್ನು ಬರೆದ ಈ ಶತಮಾನದ ಇತರ ವೀರಶೈವ ಕವಿಗಳು - ಬೊಮ್ಮರಸ (ಸು.1450, ಸೌಂದರ ಪುರಾಣ); ನೀಲಕಂಠಾಚಾರ್ಯ (ಸು.1485, ಆರಾಧ್ಯ ಚಾರಿತ್ರ); ಚತುರ್ಮುಖ ಬೊಮ್ಮರಸ (ಸು.1500, ರೇವಣಸಿದ್ಧೇಶ್ವರ ಕಾವ್ಯ); ಸಿಂಗಿರಾಜ (ಸು.1500, ಅಮಲಬಸವಚಾರಿತ್ರ ಅಥವಾ ಸಿಂಗಿರಾಜ ಪುರಾಣ. ಇದರಲ್ಲಿ ಬಸವಣ್ಣನವರ ಕತೆ ನಿರೂಪಿತವಾಗಿದೆ. ಇದು ಬಸವಣ್ಣನವರ ಪವಾಡಗಳ ಬಗ್ಗೆ ಹೆಚ್ಚು ಒಲವನ್ನು ತೋರಿರುವ ಕೃತಿಯಾಗಿದೆ).

ಹದಿನೈದನೆಯ ಶತಮಾನದ ಜೈನಕವಿಗಳಲ್ಲಿ ಕಲ್ಯಾಣಕೀರ್ತಿ (1439) ಮತ್ತು ತೆರಕಣಾಂಬಿ ಬೊಮ್ಮರಸ (ಸು.1485) ಉಲ್ಲೇಖಾರ್ಹರು. ಬೊಮ್ಮರಸನ ಸನತ್ಕುಮಾರಚರಿತೆ ಭಾಮಿನಿ ಷಟ್ಪದಿಯ ಕಾವ್ಯ. ವಡ್ಡಾರಾಧನೆಯಲ್ಲಿ ಗದ್ಯರೂಪವಾಗಿ ಕಾಣಿಸಿಕೊಂಡಿದ್ದ ಸನತ್ಕುಮಾರನ ಕಥೆಯನ್ನು ಇಲ್ಲಿ ಕಾವ್ಯರೂಪದಲ್ಲಿ ಸೊಗಸಾಗಿ ನಿರೂಪಿಸಲಾಗಿದೆ.

ಕುಮಾರವ್ಯಾಸನ ಸಂಪ್ರದಾಯದಲ್ಲಿ ರಾಮಾಯಣವನ್ನು ವಸ್ತುವನ್ನಾಗಿ ಮಾಡಿಕೊಂಡು ಕಾವ್ಯರಚನೆ ಮಾಡಿದ ನರಹರಿ ಅಥವಾ ಕುಮಾರವಾಲ್ಮೀಕಿಯ (ಸು.1500) ತೊರವೆ ರಾಮಾಯಣ ಅಂಥ ಉತ್ತಮ ಕಾವ್ಯವಲ್ಲದಿದ್ದರೂ ಕಥಾವಸ್ತುವಿನಿಂದಾಗಿ ಅತ್ಯಂತ ಜನಪ್ರಿಯ ಕೃತಿಗಳಲ್ಲೊಂದಾಗಿದ್ದಿತು.

ಮೂರನೆಯ ಮಂಗರಸನ (1508) ಜಯನೃಪಕಾವ್ಯ ಪರಿವರ್ಧಿನಿಯಲ್ಲಿದೆ. ಗುಬ್ಬಿಮಲ್ಲಣಾರ್ಯನ (1513) ಭಾವಚಿಂತಾರತ್ನ ಚಮತ್ಕಾರಗಳಿಂದ ಕೂಡಿದ ಪ್ರೌಢರಚನೆಯ ಕಾವ್ಯ. ಪಂಚಾಕ್ಷರೀ ಮಂತ್ರದ ಮಹಿಮೆಯನ್ನು ಸಾರುವ ಸುಪ್ರಸಿದ್ಧ ಸತ್ಯೇಂದ್ರಚೋಳನ ಕಥೆ ಇದರ ವಸ್ತು. ಇವನ ವೀರಶೈವಾಮೃತ ಮಹಾಪುರಾಣ ದೊಡ್ಡ ಗಾತ್ರದ ವಾರ್ಧಕ ಷಟ್ಪದಿ ಕಾವ್ಯ. ಸು.1550ರಲ್ಲಿದ್ದ ಗುರುಲಿಂಗವಿಭುವಿನ ಭಿಕ್ಷಾಟನ ಚರಿತೆಯಲ್ಲಿನ ಶಿವನ ಅದೇ ಹೆಸರಿನ ಲೀಲೆಯೊಂದನ್ನು ನಿರೂಪಿಸಿದೆ. ಅವನ ಸಮಕಾಲೀನನಾದ ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣದಲ್ಲಿ ಅಕ್ಕಮಹಾದೇವಿಯ ಕಥೆ ಹಲವು ಬಗೆಯ ಷಟ್ಪದಿಗಳಲ್ಲಿ ವರ್ಣಿತವಾಗಿದೆ.

ಈ ಶತಮಾನದ ಪ್ರಮುಖ ಷಟ್ಪದಿ ಕವಿಗಳೆಂದರೆ ಲಕ್ಷ್ಮೀಶ (ಸು.1550), ಕನಕದಾಸ (ಸು.1550) ಮತ್ತು ವಿರೂಪಾಕ್ಷಪಂಡಿತ (1584). ಕುಮಾರವ್ಯಾಸ ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಕನ್ನಡಕ್ಕೆ ತಂದಿದ್ದರೆ, ತಿಮ್ಮಣ್ಣ (ಸು.1510) ಅದರ ಮುಂದಿನ ಎಂಟು ಪರ್ವಗಳನ್ನು ಕನ್ನಡದಲ್ಲಿ ನಿರೂಪಿಸಿದ. ಲಕ್ಷ್ಮೀಶನ ಜೈಮಿನಿಭಾರತ ಕೌರವನ ಸಾವಿನ ಬಳಿಕ ಪಾಂಡವರು ರಾಜ್ಯದಲ್ಲಿ ಪ್ರತಿಷ್ಠಿತರಾದ ಮೇಲಿನ ಕಥೆಯನ್ನು ವಸ್ತುವಾಗಿ ಪಡೆದ ಒಂದು ಅತ್ಯಂತ ಜನಪ್ರಿಯ ಕಾವ್ಯ. ಕನಕದಾಸ ಮನೋಹರವಾದ ಕೀರ್ತನೆಗಳನ್ನು ರಚಿಸಿದ ಭಕ್ತಶ್ರೇಷ್ಠ. ಇವನ ರಾಮಧಾನ್ಯಚರಿತೆ ರಾಗಿಯ ಶ್ರೇಷ್ಠತೆಯನ್ನು ಸ್ಥಾಪಿಸಲಿಕ್ಕಾಗಿ ಹುಟ್ಟಿದ ಕಾಲ್ಪನಿಕ ಕಥೆಯೊಂದನ್ನು ಹೇಳುತ್ತದೆ. ಇವನ ನಳಚರಿತ್ರೆ ಕನ್ನಡದ

ಜನಪ್ರಿಯ ಕಾವ್ಯಗಳಲ್ಲೊಂದು. ವಾರ್ಧಕ ಷಟ್ಪದಿಗಳನ್ನು ಬರೆಯುವುದರಲ್ಲಿ ಲಕ್ಷ್ಮೀಶನಿಗೆ ಹೆಗಲೆಣೆಯಾದ ಕವಿ ವಿರೂಪಾಕ್ಷಪಂಡಿತ. ಇವನ ಚನ್ನಬಸವಪುರಾಣ ನೆಪಕ್ಕೆ ಮಾತ್ರ ಚನ್ನಬಸವಣ್ಣನ ಕಥೆಯನ್ನು ಆಶ್ರಯಿಸಿದೆ. ಆದರೆ ಅದರ ತುಂಬ ಶಿವನ ಅನೇಕ ಲೀಲೆಗಳು, ವೀರಶೈವ ಧರ್ಮದ ತತ್ತ್ವಗಳು, ಕಾಲಜ್ಞಾನಗಳು ಸೇರಿಕೊಂಡು ಕಾವ್ಯವನ್ನು ಹಿಗ್ಗಿಲವೆ. ಇದೇ ಶತಮಾನದ ಇನ್ನೊಬ್ಬ ಉಲ್ಲೇಖಾರ್ಹನಾದ ಕವಿಯೆಂದರೆ ಕನ್ನಡ ಭಾಗವತವನ್ನು ಬರೆದ ಚಾಟುವಿಠ್ಠಲನಾಥ (ಸು.1530). ಈ ಕೃತಿ ತೊರವೆ ರಾಮಾಯಣದಂತೆಯೇ ಕೇವಲ ಕಥಾವಸ್ತುವಿನ ಕಾರಣದಿಂದಾಗಿ ಜನಪ್ರಿಯತ್ವವನ್ನು ಪಡೆದಿದ್ದ ಇನ್ನೊಂದು ಕಾವ್ಯ.

ಹದಿನಾರನೆಯ ಶತಮಾನಕ್ಕೆ ಉತ್ತಮ ಷಟ್ಪದಿ ಕಾವ್ಯಗಳ ಕಾಲ ಮುಗಿಯಿತೆಂದು ಭಾವಿಸಬಹುದು. ರಕ್ಕಸತಂಗಡಿ ಯುದ್ಧದಲ್ಲಿ (ಸು.1565) ವಿಜಯನಗರ ಸಾಮ್ರಾಜ್ಯ ಒಡೆದ ಮೇಲೆ ಸಾಹಿತ್ಯಕ್ಕಿದ್ದ ರಾಜಾಶ್ರಯ ತಪ್ಪಿತು. ಜನಜೀವನ ಅಸ್ತವ್ಯಸ್ತವಾಯಿತು. ಮುಂದೆ ಮೈಸೂರು, ಕೆಳದಿ ಮುಂತಾದ ಅರಸರು ಆಶ್ರಯವನ್ನು ಕೊಟ್ಟರೂ ಒಟ್ಟಿನಲ್ಲಿ ಯಾವುದೇ ರೀತಿಯ ಶ್ರೇಷ್ಠ ಕಾವ್ಯಗಳ ಕಾಲ ಅಲ್ಲಿಗೆ ಮುಗಿಯಿತೆಂದೂ ಅಲ್ಲಿಂದ ಏನಿದ್ದರೂ ಆಧುನಿಕ ಯುಗಕ್ಕೆ ಬಂದಾಗಲೇ ಉತ್ತಮ ಕೃತಿಗಳನ್ನು ಕಾಣಲು ಸಾಧ್ಯವೆಂದೂ ಹೇಳಬಹುದು. ಹದಿನೇಳನೆಯ ಶತಕದಿಂದೀಚೆಗೆ ಹುಟ್ಟಿದ ಕೆಲವು ಕೃತಿಗಳು ಹೀಗಿವೆ: ಸು.1606ರಲ್ಲಿದ್ದ ಎಳಂದೂರ ಹರೀಶರನು ಪ್ರಭುದೇವರ ಪುರಾಣವನ್ನು ಬರೆದಿದ್ದಾನೆ. ಇದರಲ್ಲಿ ಅಲ್ಲಮಪ್ರಭುವಿನ ಕಥೆಯ ಜೊತೆಗೆ ಬೇರೆ ಭಕ್ತರ ಕಥೆಗಳೂ ದೊರಕುತ್ತವೆ. ಸು.1650ರಲ್ಲಿದ್ದ ಸಿದ್ಧನಂಜೇಶ ಅಥವಾ ಚಿಕ್ಕ ನಂಜೇಶನ ಎರಡು ವಾರ್ಧಕ ಷಟ್ಪದಿ ರೂಪದ ಕೃತಿಗಳಿವೆ: ಗುರುರಾಜ ಚಾರಿತ್ರ ಮತ್ತು ರಾಘವಾಂಕ ಚರಿತೆ. ಕವಿ ರಾಘವಾಂಕನ ಬಗ್ಗೆ ನಮಗೆ ತಿಳಿದಿರುವ ಸಂಗತಿಗಳಿಗೆ ಇದು ಮುಖ್ಯ ಆಕರ. ಜೊತೆಗೆ, ಸಿದ್ಧನಂಜೇಶ ರಾಘವಾಂಕನ ಎಲ್ಲ ಕಾವ್ಯಗಳ ಸಾರಾಂಶವನ್ನು ಕೊಡುವಂತೆ ಹರಿಹರಮಹತ್ತ್ವ ಎಂಬ ಕೃತಿಯು ಸಾರಾಂಶವನ್ನೂ ಕೊಟ್ಟಿದ್ದಾನೆ. ರಾಘವಾಂಕನ ಈ ಕೃತಿ ಇಂದು ಅಲಭ್ಯವಾಗಿದೆಯಾದರೂ ಅದರ ಕಥಾ ಸಾರಾಂಶ ನಮಗೆ ದೊರಕುವುದರಿಂದಾಗಿ, ಹರಿಹರನ ವೈಯಕ್ತಿಕ ಜೀವನದ ಕೆಲವಾದರೂ ಪ್ರಮುಖ ಘಟನೆಗಳು ತಿಳಿದುಬರುವುದು ಇದರಿಂದ ಸಾಧ್ಯವಾಗಿದೆ. ಗೋವಿಂದ (ಸು.1650, ನಂದಿ ಮಾಹಾತ್ಮ್ಯ), ಲಕ್ಷ್ಮಕವಿ(1723, ಭಾರತ), ಬಬ್ಬೂರುರಂಗ (1750, ಅಂಬಿಕಾವಿಜಯ), ಕೋನಯ್ಯ (ಸು.1750, ಗಯಚರಿತ್ರೆ)- ಇವರೆಲ್ಲರೂ ಕುಮಾರವ್ಯಾಸನಿಂದ ಪ್ರಭಾವಿತರಾದ ಕವಿಗಳು. ಸಹ್ಯಾದ್ರಿಖಂಡ ತೀರ್ಥಕ್ಷೇತ್ರಗಳ ಮಹಿಮೆಯನ್ನು ಭಾಮಿನಿಷಟ್ಪದಿಯಲ್ಲಿ ನಿರೂಪಿಸುವ ಒಂದು ಬೃಹತ್ಕಾವ್ಯ. ಮಹಲಿಂಗರಂಗನ (ಸು.1675) ಅನುಭವಾಮೃತ ಅದ್ವೈತ ತತ್ತ್ವಗಳನ್ನು ಸುಲಭಶೈಲಿಯಲ್ಲಿ ಬೋಧಿಸುವ ಒಂದು ಜನಪ್ರಿಯ ಕೃತಿ. ದ್ವೈತ ತತ್ತ್ವಗಳನ್ನು ಬೋಧಿಸುವ ಜಗನ್ನಾಥದಾಸರ (ಸು.1775) ಹರಿಕಥಾಮೃತಸಾರ ಇನ್ನೊಂದು ಜನಪ್ರಿಯ ಗ್ರಂಥವಾಗಿದೆ.

ಷಟ್ಪದಿ ಗ್ರಂಥಗಳ ಮಾಲಿಕೆಯಲ್ಲಿ ಕೊನೆಯದಾಗಿ ಮುದ್ದಣನ (1869-1901) ಹೆಸರನ್ನು ಹೇಳಬಹುದು. ಇವನು ಹಳೆಯ ಮತ್ತು ಹೊಸ ಸಾಹಿತ್ಯಗಳ ಸಂಧಿಕಾಲದಲ್ಲಿದ್ದ ಕವಿ. ಇವನ ಗದ್ಯಕೃತಿಗಳಾದ ರಾಮಾಶ್ವಮೇಧ ಮತ್ತು ಅದ್ಭುತರಾಮಾಯಣಗಳು ಪ್ರಖ್ಯಾತವಾಗಿವೆ. ಅಷ್ಟೊಂದು ಪ್ರಸಿದ್ಧವಲ್ಲದ ಇವನ ಕೃತಿ ಶ್ರೀರಾಮಪಟ್ಟಾಭಿಷೇಕ ವಾರ್ಧಕದಲ್ಲಿ ರಚಿತವಾಗಿರುವ ಸುಂದರ ಕಾವ್ಯ. ಮುದ್ದಣನಾದ ಮೇಲೂ ಹಲವರು ಷಟ್ಪದಿ ಕಾವ್ಯಗಳನ್ನು ಮುಂದುವರಿಸಿದ್ದುಂಟು. ಬಹು ಹಿಂದಿನಿಂದ ಷಟ್ಪದಿ ಕಾವ್ಯಗಳು ಅತ್ಯಂತ ಜನಪ್ರಿಯವಾಗಿವೆ. ರಾಘವಾಂಕನ ಹರಿಶ್ಚಂದ್ರಕಾವ್ಯ, ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಭಾರತಗಳು, ಕನಕದಾಸರ ನಳಚರಿತ್ರೆ ಇವು ಇದಕ್ಕೆ ಉದಾಹರಣೆಗಳು. ಇವನ್ನು ಇಂದಿಗೂ ಗಮಕಿಗಳು ವಾಚನಮಾಡಿ ಶ್ರೋತೃಗಳನ್ನು ತಣಿಸುತ್ತಾರೆ. ಇವು ಕವಿತೆಯ ದೃಷ್ಟಿಯಿಂದಲೂ ಉನ್ನತಮಟ್ಟದವು ಎಂಬುದರಲ್ಲಿ ಸಂದೇಹವಿಲ್ಲ. ಇವುಗಳ ವಸ್ತು ಸುಪ್ರಸಿದ್ಧ; ಭಾಷೆ ಸರಳ, ಜೊತೆಗೆ ರಾಗವಾಗಿ ಹಾಡಲೂ ಅನುಕೂಲ. ಅನುಭವಾಮೃತದಂಥ ವೇದಾಂತ ಗ್ರಂಥವೂ ಷಟ್ಪದೀರೂಪವಾಗಿದೆಯೆಂಬುದನ್ನು ಇಲ್ಲಿ ಸ್ಮರಿಸಬಹುದು.

ಇಪ್ಪತ್ತನೆಯ ಶತಮಾನದಲ್ಲಿ ಷಟ್ಪದಿ ರಚನೆಯನ್ನು ಬಹುಯಶಸ್ವಿಯಾಗಿ ಬಳಸಿಕೊಂಡವರೆಂದರೆ ಜಿ.ಪಿ.ರಾಜರತ್ನಂ. ಇವರು ತಮ್ಮ ಮಹಾಕವಿ ಪುರುಷ ಸರಸ್ವತಿ ಎಂಬ ವಿಡಂಬನ ಗ್ರಂಥದಲ್ಲಿ ಹೊಸ ಮಾದರಿಯಲ್ಲಿ ಷಟ್ಪದಿ ರಚನೆಯನ್ನು ಕನ್ನಡಾಂಗ್ಲಭಾಷಾ ಮಿಶ್ರಣದಲ್ಲಿ ವಿಶಿಷ್ಟವಾಗಿ ಬಳಸಿಕೊಂಡಿದ್ದಾರೆ. ಮಹಾಕವಿ ಪುರುಷ ಸರಸ್ವತಿಯ ಗುಣಕಥನ ಮಾಡುವಾಗಲಾಗಲಿ, ಕುಕವಿನಿಂದೆ, ಸತ್ಕವಿಪ್ರಶಂಸೆ ಮಾಡುವಾಗಲಾಗಲಿ, ಹಾರ್ಮೋನಿಯಂ ಹರಣದಂತೆ ಕರ್ಣಕಥೆಯನ್ನು ಹೇಳುವಾಗಲಾಗಲಿ ತನಿಯಾದ ಹಾಸ್ಯ ವ್ಯಂಗ್ಯ ಬಹು ಸಹಜವಾಗಿ, ಅದ್ಭುತವಾಗಿ ಮೂಡಿನಿಂತಿದೆ. *

**ಕನ್ನಡದಲ್ಲಿ ಸಂಕಲನ ಗ್ರಂಥಗಳು :** ಸಂಕಲನವೆಂದರೆ ಇತರರ ರಚನೆಗಳಿಂದ ಆಯ್ದ ಅವತರಣಿಕೆಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಅಳವಡಿಸಿಕೊಡುವ ಸಂದರ್ಭ ಗ್ರಂಥ. ಇದರಲ್ಲಿ ಆಯ್ಕೆ, ಸಂಯೋಜನೆಗಳು ಮಾತ್ರ ಸಂಕಲನಕಾರನ ಮುಖ್ಯ ಕೆಲಸ; ಟೀಕೆಟಿಪ್ಪಣಿಗಳನ್ನು ಯಥೋಚಿತವಾಗಿ ಸೇರಿಸಲು ಅವಕಾಶವಿರುವುದಾದರೂ ಕೇಂದ್ರಸ್ಥಾನವೆಲ್ಲ ಮೂಲ ಲೇಖಕರಿಗೆ. ಇಂಥ ಗ್ರಂಥಗಳನ್ನು ಒಂದು ಭಾಷಾಸಾಹಿತ್ಯದ ವೈಭವಗಳ ದಿಗ್ದರ್ಶಿಕೆಗಳೆನ್ನಬಹುದು.

ಮಲ್ಲಿಕಾರ್ಜುನನ (13ನೆಯ ಶತಮಾನ) ಸೂಕ್ತಿಸುಧಾರ್ಣವ (ಕಾವ್ಯಸಾರ) ಕನ್ನಡದ ಪ್ರಥಮ ಸಂಕಲನ ಗ್ರಂಥ. ಪಂಪ, ರನ್ನ, ಜನ್ನ, ಪೊನ್ನ ಮುಂತಾದ ಪ್ರಸಿದ್ಧ ಮಹಾಕವಿಗಳಿಂದಷ್ಟೇ ಅಲ್ಲದೆ, ಈಗ ಅನುಪಲಬ್ಧ ಕೃತಿಗಳ ಕರ್ತೃಗಳಾದ ಗುಣನಂದಿ, ಗುಣವರ್ಮ ಮುಂತಾದ ಪ್ರಾಚೀನರಿಂದಲೂ ಇವನು ಪದ್ಯಗಳನ್ನು ಆಯ್ದಿದ್ದಾನೆ ಎಂಬ ಕಾರಣದಿಂದ ಗ್ರಂಥದ ಮಹತ್ತ್ವ ಹೆಚ್ಚಿದೆ. ಇದರಲ್ಲಿ ಕಾವ್ಯದ ಹದಿನೆಂಟು ಅಂಗಗಳಿಗೂ ಒಂದೊಂದು ಆಶ್ವಾಸ ಮೀಸಲಾಗಿರಿಸಿದ್ದು ಪ್ರತಿಯೊಂದು ಆಶ್ವಾಸದಲ್ಲೂ ಪೂರ್ವ ಕವಿಗಳ ಉತ್ತಮ ವರ್ಣನಾಪದ್ಯಗಳ ಸಂಕಲನವಿದೆ. ಸಂಕಲನಕಾರ ಜೈನನಾದರೂ ಶಿವ, ವಿಷ್ಣು, ಗಣಪತಿ ಸ್ತೋತ್ರಗಳನ್ನು ಪೀಠಿಕಾ ಭಾಗದಲ್ಲಿ ಸೇರಿಸಿದ್ದಾನೆ. ತಾನು ಆಯ್ದ ಪದ್ಯಗಳನ್ನು ಬರೆದ ಕವಿಗಳ ಹೆಸರನ್ನು ಹೇಳದೆ ಇರುವುದು ಈ ಗ್ರಂಥದ ದೊಡ್ಡ ಕೊರತೆಯಾಗಿದೆ.

ಸೂಕ್ತಿ ಸುಧಾರ್ಣವದಂತೆಯೇ ಪ್ರಸಿದ್ಧವಾಗಿರುವ ಇನ್ನೊಂದು ಕೃತಿ ಅಭಿನವವಾದಿವಿದ್ಯಾನಂದನಿಂದ (16ನೆಯ ಶತಮಾನ) ಸಂಕಲಿತವಾದ ಕಾವ್ಯಸಾರ. ಇದರಲ್ಲಿ ಕವಿಗಳ ಹಾಗೂ ಉದಾಹೃತ ಕಾವ್ಯಗಳ ಹೆಸರಿರುವುದರಿಂದ ಗ್ರಂಥ' ಹೆಚ್ಚು ಪ್ರಯೋಜನಕಾರಿಯಾಗಿದೆ. ಸೂಕ್ತಿಸುಧಾರ್ಣವದಲ್ಲಿ ಕಂಡುಬರದ ಮುಂದಿನ ಕವಿಗಳಿಗೂ ಅನೇಕ ಮುಕ್ತಕಗಳು ಹಾಗೂ ಚಾಟುಪದ್ಯಗಳಿಗೂ ಇಲ್ಲಿ ಸ್ಥಾನ ದೊರತಿದೆ.

ಇದೇ ಕಾಲದಲ್ಲಿ ವೀರಶೈವರು ತಮ್ಮ ಧಾರ್ಮಿಕ ಸಾಹಿತ್ಯದ ವಚನಗಳನ್ನು ಶ್ರದ್ಧೆಯಿಂದ ಸಂಕಲನ ಮಾಡುವ ಮಹಾಕಾರ್ಯ ನಡೆಯಿತು. ಜೈನರ (ಪದ್ಯ) ಸಂಕಲನಗಳು ಸಾಹಿತ್ಯ ದೃಷ್ಟಿಯಿಂದ ಹೆಚ್ಚು ಪ್ರೇರಿತವಾದಂತೆ ವೀರಶೈವರ (ಗದ್ಯ ವಚನ) ಸಂಕಲನಗಳು ಭಕ್ತಿಯಿಂದ ಪ್ರೇರಿತವಾದವು. ಜಕ್ಕಣಾರ್ಯನ ಏಕೋತ್ತರ ಶತಸ್ಥಲ, ಕಲ್ಲಮಠದ ಪ್ರಭುದೇವರ ಲಿಂಗಲೀಲಾವಿಲಾಸಚಾರಿತ್ರ, ಚೆನ್ನಂಜೇದೇವನ ಬಸವಸ್ತೋತ್ರದ ವಚನ, ವೀರಶೈವ ಚಿಂತಾಮಣಿ, ವಿಶೇಷಾನುಭವ ಷಟ್ಸ್ಥಲ ಮುಂತಾದ ಎಷ್ಟೋ ವಚನ ಸಂಕಲನಗಳು ಹುಟ್ಟಿದ್ದುವು.

ಇವುಗಳಲ್ಲೆಲ್ಲ ಶೂನ್ಯಸಂಪಾದನೆ ಮುಖ್ಯವಾದುದೆನ್ನಬಹುದು. ಈಗ ಪ್ರಸಿದ್ಧವಾಗಿರುವ ಶೂನ್ಯಸಂಪಾದನೆ ಗೂಳೂರ ಸಿದ್ಧವೀರಣ್ಣೊಡೆಯನ ಸಂಕಲನ. ಆದರೆ ಇದಕ್ಕೂ ಮುಂಚೆಯೇ ಶಿವಗಣಪ್ರಸಾದಿ ಮಹದೇವಯ್ಯ, ಕೆಂಚವೀರಣ್ಣೊಡೆಯ, ಹಲಗೆಯ ದೇವರು, ಗುಮ್ಮಳಾಪುರದ ಸಿದ್ಧಲಿಂಗಯತಿ ಮುಂತಾದವರಿಂದ ಶೂನ್ಯಸಂಪಾದನೆ ಎಂಬ ಹೆಸರಿನಲ್ಲಿ ಬೇರೆ ಸಂಕಲನಗ್ರಂಥಗಳಿದ್ದುವೆಂದು ತಿಳಿದುಬರುತ್ತದೆ. ಇವುಗಳಲ್ಲಿ ಅಲ್ಲಮಪ್ರಭು, ಬಸವೇಶ್ವರ, ಅಕ್ಕಮಹಾದೇವಿ ಮುಂತಾದ ಶಿವಶರಣ ಶರಣೆಯರ ವಚನಗಳನ್ನು ನಾಟಕೀಯವಾಗಿ ಸಂವಾದರೂಪದಲ್ಲಿ ಅಳವಡಿಸಿರುವುದು ಸಂಕಲನಕಾರನ ವೈಶಿಷ್ಟ್ಯವಾಗಿದೆ. ಒಮ್ಮೊಮ್ಮೆ ವಚನಗಳ ವ್ಯಾಖ್ಯಾನವೂ ಈ ಗ್ರಂಥಗಳಲ್ಲಿ ಕಾಣಬರುತ್ತದೆ.

ಅನಂತರ ಇಪ್ಪತ್ತನೆಯ ಶತಮಾನದ ಆರಂಭದವರೆಗೂ ಸಂಕಲನ ಗ್ರಂಥಗಳ ಹುಟ್ಟು ಹೆಚ್ಚಾಗಿ ಕಾಣಿಸದು. ಮೊದಲಿಗೆ ಪ್ರೌಢಶಾಲಾ ಕಾಲೇಜುಗಳ ಪಾಠಕ್ಕೆ ಉಪಯೋಗವಾಗುವಂತೆ ಪದ್ಯಸಾರ ಮುಂತಾದ ಪ್ರಕಟನೆಗಳು ಬಂದುವು. ಆದರೆ ಹೊಸದಾಗಿ ಕನ್ನಡ ಭಾಷಾಭಿಮಾನ ಉಕ್ಕುವಂತೆ ಬಿ.ಎಂ.ಶ್ರೀಕಂಠಯ್ಯನವರಿಂದ ಸಂಕಲಿತವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಕನ್ನಡ ಬಾವುಟ ಆಧುನಿಕ ಕನ್ನಡ ಸಂಕಲನ ಗ್ರಂಥಗಳಿಗೆ ನಾಂದಿ ಹಾಡಿತೆನ್ನಬಹುದು. ಹಾಗೆಯೇ ಇಂಗ್ಲಿಷ್‌ನಿಂದ ಅನುವಾದ ಮಾಡಲಾದ ಕನ್ನಡ ಕವಿತೆಗಳನ್ನೇ ಒಳಗೊಂಡಿದ್ದರೂ ಕನ್ನಡ ಕವಿತಾರಚನೆಗೆ ಛಂದಸ್ಸು, ತಂತ್ರಗಳ ನೂತನ ದೃಷ್ಟಿಯನ್ನೊದಗಿಸಿ, ವಿನೂತನ ಕಾವ್ಯ ಸಂಪ್ರದಾಯಕ್ಕೆ ನಾಂದಿ ಹಾಡಿದ ಶ್ರೀ ಅವರ ಇಂಗ್ಲಿಷ್ ಗೀತಗಳು ಕೂಡ ಇಲ್ಲಿ ಉಲ್ಲೇಖನೀಯ. ಮುಂದೆ ರೊಮ್ಯಾಂಟಿಕ್ ಸಂಪ್ರದಾಯದಲ್ಲಿ ಬರೆದ ಕವನ ಸಂಕಲನಗಳು ತಳಿರು ಮೊದಲಾದವು ಪ್ರಕಟವಾಗುವ ಪರಿಪಾಠ ಬೆಳೆದುದನ್ನು ಕಾಣುತ್ತೇವೆ. ಕೆ.ಡಿ.ಕುರ್ತಕೋಟಿ ಮತ್ತು ಜಿ.ಬಿ.ಜೋಶಿ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ (1959) ನಡೆದು ಬಂದ ದಾರಿ ವಿಶೇಷ ಮಹತ್ತ್ವಪಡೆದ ಒಂದು ಸಂಕಲನಗ್ರಂಥವಾಗಿದೆ. ಇದರಲ್ಲಿ ಹೊಸಗನ್ನಡ ಕಾವ್ಯ, ವಿಮರ್ಶೆ, ನಾಟಕ, ಕಾದಂಬರಿ, ಸಣ್ಣಕಥೆ ಈ ಸಾಹಿತ್ಯ ಪ್ರಕಾರಗಳ ವಿಷಯ ನಿರೂಪಿತವಾಗಿದೆ.

'ನವ್ಯ-ಧ್ವನಿ' ಒಂದು ವಿಶಿಷ್ಟ ಕಾವ್ಯಮಾರ್ಗದ ದಿಗ್ದರ್ಶನದ ದೃಷ್ಟಿಯಿಂದಲೇ ಹೊರಟ ಮೊದಲ ಕಾವ್ಯಸಂಕಲನ (ಧಾರವಾಡ 1956). ಇದರ ಸಂಪಾದಕರಾದ ವಿ.ಕೆ.ಗೋಕಾಕ ಮತ್ತು ಚೆನ್ನವೀರ ಕಣವಿ ಅವರು ರೊಮ್ಯಾಂಟಿಕ್ ಪರಂಪರೆಯ ಕವಿಗಳಿಗಿಂತ ಭಿನ್ನವಾದ ಕಾವ್ಯಸ್ವರೂಪವನ್ನು ಗುರುತಿಸಿ ಕನ್ನಡ ಕಾವ್ಯದ ನೂತನ ದಿಗಂತವನ್ನು ಕೈಮಾಡಿ ತೋರಿಸಲು ಯತ್ನಿಸಿದರು. ಇದರಲ್ಲಿ ಗೋಕಾಕ, ಅಡಿಗ, ಕಣವಿ, ರಾಮಚಂದ್ರಶರ್ಮ, ಶಂಕರಮೊಕಾಶಿಪುಣೇಕರ ಮೊದಲಾದವರ ಹೊಸ ಕಾವ್ಯ ಧೋರಣೆಯನ್ನು ಕಾಣುತ್ತೇವೆ. ಧಾರವಾಡದಿಂದ ಪ್ರಕಟವಾದ ಮತ್ತೊಂದು ಕವನ ಸಂಕಲನ - ಸಂಕ್ರಮಣ ಕಾವ್ಯ (1965). ಇದರ ಸಂಪಾದಕರು ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣ ಶೆಟ್ಟಿ. ಇದರಲ್ಲಿ ಹಿಂದಿನವರ ಜೊತೆಗೆ ಕೆ.ಎಸ್.ನರಸಿಂಹಸ್ವಾಮಿ, ಲಂಕೇಶ್, ರಾಮಾನುಜನ್ ಮುಂತಾದವರ ನೂತನ ರಚನೆಗಳೂ ಸೇರಿವೆ.

ಪಿ.ಲಂಕೇಶ್ ಅವರಿಂದ ಸಂಪಾದಿತವಾಗಿ ಪ್ರಕಟವಾದ ಅಕ್ಷರ ಹೊಸ ಕಾವ್ಯ (1970) ಕನ್ನಡ ನವ್ಯ ಸಾಹಿತ್ಯದ ಸಮಗ್ರ ಸ್ವರೂಪವನ್ನು ದಿಗ್ದರ್ಶಿಸುವ ಪ್ರಯತ್ನವುಳ್ಳ ಅತ್ಯಂತ ಗಮನಾರ್ಹ ಸಂಕಲನ ಗ್ರಂಥ. ಇಂಗ್ಲಿಷಿನಲ್ಲಿ ಪ್ರಕಟವಾದ ಫೇಬರ್ ಬುಕ್ ಆಫ್ ಮಾಡ್ರನ್ ವರ್ಸ್ ಈ ಗ್ರಂಥಕ್ಕೆ ಮಾದರಿ. ಅಕ್ಷರ ಹೊಸ ಕಾವ್ಯದಲ್ಲಿ ಸುಮಾರು 34 ಜನ ಕನ್ನಡದ ಪ್ರತಿಭಾವಂತ ಕವಿಗಳಿಗೆ ಎಡೆ ದೊರಕಿದೆ. 4000 ಪದ್ಯಗಳನ್ನು ಓದಿ ಆಯಾ ಕವಿಯ ಒಟ್ಟು ಜೀವನ ದೃಷ್ಟಿ, ಧೋರಣೆಗಳನ್ನು ಪ್ರತಿಬಿಂಬಿಸುವಂತೆ ಕವನಗಳನ್ನು ಆಯ್ಕೆ ಮಾಡಲಾಗಿದೆ. ನವ್ಯಕಾವ್ಯದ ಗಟ್ಟಿ ನೆಲವಾದ ಎಂ.ಗೋಪಾಲಕೃಷ್ಣ ಅಡಿಗರಿಂದ ಹಿಡಿದು ಬಿ.ಆರ್.ಲಕ್ಷ್ಮಣ ರಾವ್, ಶ್ರೀ ಕೃಷ್ಣ ಆಲನಹಳ್ಳಿ, ಕೆ.ವಿ.ತಿರುಮಲೇಶ್, ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟ ಮೊದಲಾದ ಕವಿಗಳ ಕವನಗಳು ಸಂಕಲನಗೊಂಡಿವೆ. ಹೊಸ ಜನಾಂಗದ ಕವಿತೆಗಳು (1971) ಅಕ್ಷರ ಹೊಸ ಕಾವ್ಯದ ಮಾದರಿಯಲ್ಲಿ ರಚಿತವಾದ ಇನ್ನೊಂದು ಸಂಕಲನ ಗ್ರಂಥ. ಬುದ್ದಣ್ಣ ಹಿಂಗಮಿರೆ ಇದರ ಸಂಪಾದಕರು. ಈ ಗ್ರಂಥದಲ್ಲಿ ಅಕ್ಷರ ಹೊಸ ಕಾವ್ಯದಲ್ಲಿ ಸೇರದೆ ಇರುವ ಕವಿಗಳ ಕವನಗಳು ಸಂಕಲನಗೊಂಡಿವೆ. ಸಂಪಾದಕರ ಪ್ರಶ್ನೆಗಳಿಗೆ ಕವಿಗಳಿಂದ ಬಂದ ಉತ್ತರಗಳು ಈ ಗ್ರಂಥದ ಪ್ರಮುಖ ಆಕರ್ಷಣೆ. ಈ ಪ್ರಶ್ನೋತ್ತರ ಸಂವಾದ ಆಯಾ ಕವಿಯ ಕಾವ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಸಾಕಷ್ಟು ಸಹಾಯವನ್ನೊದಗಿಸುತ್ತದೆ.

ಹಳಗನ್ನಡದಿಂದ ಆರಂಭಿಸಿ ಆಧುನಿಕ ಕಾಲದ ವರೆಗೂ ಪ್ರಸಿದ್ಧ ಕವಿಗಳ ಕಾವ್ಯ ರಚನೆಗಳಿಂದ ಆಯ್ದು ಸಿದ್ಧಪಡಿಸಿದ ಸಂಕಲನ ಗ್ರಂಥಗಳಲ್ಲಿ ರಂ.ಶ್ರೀ.ಮುಗಳಿಯವರ ಸಂಪಾದಕತ್ವದಲ್ಲಿ ಹೊರಬಂದ ಕಾವ್ಯ ಸಂಚಯ ಬಹುಮುಖ್ಯವಾದುದು. ಇದು ಸಾಹಿತ್ಯ ಅಕಾಡೆಮಿಯಿಂದ ಪ್ರಕಟಗೊಂಡಿದೆ (1970).

ಬೆನ್ನಹಿಂದಿನ ಬೆಳಕು (1972) ಬಳ್ಳಾರಿ, ಗುಲ್ಬರ್ಗ, ರಾಯಚೂರು, ಬೀದರ್- ಈ ಭಾಗದ ಸುಮಾರು 27 ಜನ ಕವಿಗಳನ್ನೊಳಗೊಂಡ ಸಂಕಲನ ಗ್ರಂಥ. ಶಾಂತರಸ ಈ ಸಂಕಲನದ ಸಂಪಾದಕರು.

ಕವಿತಾ ಸಂಕಲನಗಳಂತೆಯೇ ಸಣ್ಣಕಥೆಗಳ, ಲಘುಪ್ರಬಂಧಗಳ, ಏಕಾಂಕ ನಾಟಕಗಳ ಕೆಲವು ಸಂಕಲನ ಗ್ರಂಥಗಳೂ ಈ ಕಾಲದಲ್ಲೇ ಪ್ರಕಟಗೊಂಡಿವೆ. ಇನ್ನಷ್ಟು ಹೊಸ ಕತೆಗಳು (ಮನೋಹರ ಗ್ರಂಥಮಾಲೆ) ಸಣ್ಣಕಥೆಗಳ ಒಂದು ಗಮನಾರ್ಹ ಸಂಕಲನ.

ವಿದ್ವತ್ಪೂರ್ಣವಾದ ಗಂಭೀರ ಪ್ರಬಂಧಗಳ ಹಾಗೂ ವ್ಯಕ್ತಿತ್ವದ್ಯೋತಕ ಪ್ರಬಂಧಗಳ ಸಂಕಲನವನ್ನು ಸುಂದರವಾದ ಬೃಹತ್ಸಂಪುಟಗಳಲ್ಲಿ ಮಾಡುವ ಒಂದು ನೂತನ ಕ್ರಮವನ್ನು ಇಲ್ಲಿ ನಿರ್ದೇಶಿಸದೆ ಕೈಬಿಡುವಂತಿಲ್ಲ. ಕನ್ನಡ ನಾಡು - ನುಡಿಗಳ ಉನ್ನತಿಗಾಗಿ ದುಡಿದ ಅನೇಕ ಮಹನೀಯರ ಹಾಗೂ ಸಂಸ್ಥೆಗಳ ಸಂಸ್ಮರಣಾರ್ಥವಾಗಿ ಕಾಲದಿಂದ ಕಾಲಕ್ಕೆ ಅಭಿನಂದನ ಗ್ರಂಥಗಳೆಂಬ ಹೆಬ್ಬೊತ್ತಿಗೆಗಳು ಈಗಾಗಲೆ ಗಣನೀಯ ಪ್ರಮಾಣದಲ್ಲಿ ಬಂದಿವೆ. ಇಲ್ಲಿ ಆತ್ಮೀಯರಿಂದ ಬರೆಯಲಾದ ವ್ಯಕ್ತಿ ಚಿತ್ರಣಗಳ ಜೊತೆಜೊತೆಗೆ ಕನ್ನಡ ಸಾಹಿತ್ಯ, ಸಂಸ್ಕೃತಿಗಳ ವಿಶಿಷ್ಟಾಂಶಗಳ ಬಗೆಗೆ ವಿಶೇಷಜ್ಞರಿಂದ ಬರೆಯಿಸಲಾದ ಸಂಶೋಧನ ಪ್ರಬಂಧಗಳೂ ಸೇರಿರುತ್ತವೆ. ಈ ಮಾಲಿಕೆಯಲ್ಲಿ ಬಿ.ಎಂ.ಶ್ರೀ. ಅವರಿಗೆ ಅರ್ಪಿಸಲಾದ ಸಂಭಾವನೆ ಮೊದಲನೆಯದೆನ್ನಬಹುದು. ಇದಾದ ಮೇಲೆ ಸುಮಾರು 100ಕ್ಕೂ ಮೇಲ್ಪಟ್ಟು ಅಭಿನಂದನ ಗ್ರಂಥಗಳು ಪ್ರಕಟಗೊಂಡಿವೆ. ಇವುಗಳಲ್ಲಿ ವಚನ ಪಿತಾಮಹ (ಫ.ಗು.ಹಳಕಟ್ಟಿ), ಜ್ಞಾನೋಪಾಸಕ ಮತ್ತು ಉಪಾಯನ (ಡಿ.ಎಲ್. ನರಸಿಂಹಾಚಾರ್), ಗಂಗೋತ್ರಿ ಮತ್ತು ಸಹ್ಯಾದ್ರಿ (ಕುವೆಂಪು), ದೀವಿಗೆ (ಗೋವಿಂದ ಪೈ), ಸವಿನೆನಪು (ಟಿ.ಎಸ್.ವೆಂಕಣ್ಣಯ್ಯ), ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್), ಚಂದನ (ಕೆ.ಎಸ್. ನರಸಿಂಹಸ್ವಾಮಿ), ಕಾದಂಬರೀ ದರ್ಶನ (ಕೃಷ್ಣಮೂರ್ತಿ ಪುರಾಣಿಕ), ದೇವಗಂಗೆ (ಬಿ.ಶಿವಮೂರ್ತಿಶಾಸ್ತ್ರೀ), ಅಂತಃಕರಣ, ನಮ್ಮ ನಾಡೋಜ (ದೇಜಗೌ), ಗೊರೂರು ಗೌರವಗ್ರಂಥ (ಗೊರೂರು ರಾಮಸ್ವಾಮಿ ಅಯ್ಯಂಗಾರ್), ರಸಚೇತನ (ಅ.ನ.ಕೃ.), ವಿನಾಯಕ ವಾಙ್ಮಯ (ವಿ.ಕೃ.ಗೋಕಾಕ), ವಿ.ಸೀ-75 (ವಿ.ಸೀತಾರಾಮಯ್ಯ), ಅಭಿನಂದನೆ (ಎ.ಆರ್.ಕೃಷ್ಣಶಾಸ್ತ್ರೀ), ಪೂರ್ಣಕುಂಭ (ಎಸ್.ವಿ.ಪರಮೇಶ್ವರ ಭಟ್ಟ), ಕಬ್ಬಿನ ಹಾಲು (ಕೆ.ವಿ.ಶಂಕರಗೌಡ), ಅಧ್ಯಯನ (ಶಂ.ಬಾ.ಜೋಶಿ), ಚೆಂಬೆಳಕು (ಚೆನ್ನವೀರಕಣವಿ), ಯದುಗಿರಿ (ಪು.ತಿ.ನ), ಕಾವ್ಯಾನಂದ (ಸಿದ್ಧಯ್ಯ ಪುರಾಣಿಕ), ಎಚ್ಚೆಸ್ಕೆಯವರ ಆಯ್ದ ಬರಹಗಳು (ಎಚ್ಚೆಸ್ಕೆ), ಸಿದ್ಧಗಂಗಾಶ್ರೀ (ಶಿವಕುಮಾರ ಮಹಾಸ್ವಾಮಿ), ಕಲಾಗೌರವ (ಆರ್.ಜಿ.ರಾಯಕರ), ತ.ರಾ.ಸು. ಬದುಕು ಬರಹ (ತ.ರಾ.ಸು), ಜಾನಪದ ಸಂಪದ (ಎಂ.ಎಸ್.ಸುಂಕಾಪುರ), ಬೆಳುವಲ (ಬೆಟಗೇರಿ ಕೃಷ್ಣಶರ್ಮ), ನಾಡಿಗರ ಬರಹಗಳು (ನಾಡಿಗ ಕೃಷ್ಣಮೂರ್ತಿ), ಗಮಕಶಾರದೆ (ಶಕುಂತಲಾಬಾಯಿ ಪಾಂಡುರಂಗರಾವ್), ರಸರಾಜ (ಚಿಟ್ಟಾಣಿ ರಾಮಚಂದ್ರ ಹೆಗಡೆ), ಸ್ವಸ್ತಿ (ತ.ಸು.ಶಾಮರಾಯ), ಮಾನ (ಹಾ.ಮಾ.ನಾಯಕ), (ಎಸ್.ಎಲ್.ಭೈರಪ್ಪ) ವ್ಯಾಸಂಗನೆ, ಪ್ರಶಾಂತ (ಶಾಂತಾದೇವಿ ಮಾಳವಾಡ), ನಾನೀಕಾಕಾ ಎನ್ಕೆ ಬದುಕು, (ಎನ್ಕೆ ಕುಲಕರ್ಣಿ), ಇಂಚರ (ಪಂಡಿತ ಬಸವರಾಜ ರಾಜಗುರು), ಜಿ.ನಾರಾಯಣ ವಿಚಾರ (ಜಿ.ನಾರಾಯಣ), ನಾಟಕ (ಬೇಲೂರು ಕೃಷ್ಣಮೂರ್ತಿ), ಅರವಿಂದ (ಪಂಡಿತ ಶೇಷಾದ್ರಿ ಗವಾಯಿ), ಕಟ್ಟೀಮನಿ, ಬದುಕ ಬರಹ (ಬಸವರಾಜ ಕಟ್ಟೀಮನಿ), ನಿರಂಜನ ಅಭಿನಂದನಾ ಗ್ರಂಥ (ನಿರಂಜನ), ಅನುಪಮಾ ಅಭಿನಂದನಾ (ಅನುಪಮಾ ನಿರಂಜನ), ಚದುರಂಗ ವ್ಯಕ್ತಿ ಅಭಿವ್ಯಕ್ತಿ (ಚದುರಂಗ), ಶಿವಚಿಂತನ (ಎಚ್.ತಿಪ್ಪೇರುದ್ರಸ್ವಾಮಿ), ಲೋಕಮಿತ್ರ (ಕು.ಶಿ.ಹರಿದಾಸ ಭಟ್ಟ), ಅಭಿನಂದನ (ರಾಮಚಂದ್ರ ಉಚ್ಚಿಲ), ಸಾರ್ಥಕ (ಸಿ.ಪಿ.ಕೆ.), ಜ್ಞಾನದೇಗುಲ (ಪುಟ್ಟರಾಜ ಗವಾಯಿ), ಶ್ರೀಮುಖ (ಟಿ.ವಿ.ವೆಂಕಟಾಚಲಶಾಸ್ತ್ರೀ), ಅಭಿಜ್ಞಾನ (ಕೆ.ಕೃಷ್ಣಮೂರ್ತಿ), ಸಂಶೋಧನೆ (ಚಿದಾನಂದಮೂರ್ತಿ), ಹೊನ್ನಹೊಂಬಾಳೆ (ಡಿ.ಕೆ.ರಾಜೇಂದ್ರ), ವಜ್ರಕುಸುಮ (ಬಿ.ಬಿ.ಸಾಸನೂರ), ಸಿರಸಂಪದ (ಬ.ವಿ.ಶಿರೂರ), ಉನ್ಮೀಲನ (ಆರ್ಯಾಂಬಪಟ್ಟಾಭಿ), ಅಕ್ಕಕೇಳವ್ವ (ಸರೋಜನಿ ಶಿಂತ್ರಿ), ವಾಙ್ಮಯತಪಸ್ವಿ (ಕಡೆಂಗೋಡ್ಲು ಶಂಕರಭಟ್ಟ), ತುಂಬಿದ ಕೊಡ (ಕಾಶಿವಿಶ್ವನಾಥ ಶೆಟ್ಟಿ), ಸಾರ್ಥಕ

(ಎಂ.ಮರಿಯಪ್ಪಭಟ್ಟ) (ಎಂ.ಎಂ.ಕಲಬುರ್ಗಿ) ಮಹಾಮಾರ್ಗ ಮೊದಲಾದವುಗಳನ್ನು ಹೆಸರಿಸಬಹುದು.

ಇತ್ತೀಚಿನ ದಿನಗಳಲ್ಲಿ ಒಬ್ಬ ಲೇಖಕನ ಸಮಗ್ರ ಕೃತಿಗಳನ್ನು ಒಂದೆಡೆ ಸಂಕಲಿಸಿ ಪ್ರಕಟಿಸುವ ಪರಿಪಾಠ ಆರಂಭವಾಗಿದೆ. ಸಮಗ್ರ ಗದ್ಯ, ಪದ್ಯ, ಕಾವ್ಯ, ಕಥೆಗಳು ಮೊದಲಾದ ಶೀರ್ಷಿಕೆಯಡಿಯಲ್ಲಿ ಕನ್ನಡದ ಅನೇಕ ಲೇಖಕರ ಕೃತಿಗಳು ಪ್ರಕಟವಾಗಿವೆ, ಪ್ರಕಟವಾಗುತ್ತಿವೆ. ಉತ್ತಮ ಮಕ್ಕಳ ಕವಿತೆಗಳನ್ನು ಒಂದೆಡೆ ಸಂಕಲಿಸಿ ಕೊಡುವ ಪ್ರಯತ್ನವನ್ನು ಬೋಳುವಾರು ಮಹಮದ್ ಕುಂಞ ರಚಿಸಿದ್ದು, 'ತಟ್ಟು ಚಪ್ಪಾಳೆ ಪುಟ್ಟ ಮಗು' ಒಂದು ಮಹತ್ವದ ಸಂಕಲನವಾಗಿದೆ. ಕನ್ನಡ ಸಣ್ಣಕಥೆಗಳು (ಜಿ.ಎಚ್. ನಾಯಕ) ಇನ್ನೊಂದು ಗಮನಾರ್ಹ ಸಣ್ಣಕಥೆಗಳ ಸಂಕಲನ. ಅಕಾಡೆಮಿಗಳು, ಅನೇಕ ಸಾಹಿತ್ಯಕ ಸಂಸ್ಥೆಗಳು ಸಂಕಲನ ಗ್ರಂಥಗಳನ್ನು ಪ್ರಕಟಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ 2001ರಲ್ಲಿ ಪ್ರಕಟಿಸಿರುವ ಶತಮಾನದ ಕಾವ್ಯ (ಸಂ. ಎಚ್.ಎಸ್.ವೆಂಕಟೇಶಮೂರ್ತಿ), ಶತಮಾನದ ಸಣ್ಣಕತೆ (ಸಂ. ಬೋಳುವಾರು ಮಹಮದ್ ಕುಂಞ), ಶತಮಾನದ ಸಾಹಿತ್ಯ ವಿಮರ್ಶೆ (ಸಂ. ಎಚ್.ಎಸ್.ರಾಘವೇಂದ್ರರಾವ್), ಶತಮಾನದ ಸಂಶೋಧನೆ (ಸಂ. ಎನ್.ಎಸ್.ತಾರಾನಾಥ್) ಶತಮಾನದ ಲಲಿತ ಪ್ರಬಂಧ (ಸಂ. ಗುರುಲಿಂಗ ಕಾಪಸೆ), ಶತಮಾನದ ಮಕ್ಕಳ ಸಾಹಿತ್ಯ (ಸಂ. ಎನ್.ಎಸ್.ರಘುನಾಥ್) ಇವು ಉಲ್ಲೇಖನೀಯ ಗ್ರಂಥಗಳು. (ಕೆ.ಕೆ.)

**ಕನ್ನಡದಲ್ಲಿ ಸಣ್ಣಕಥೆಗಳು :** ಕಾದಂಬರಿಯ ತರುವಾಯ ಸಣ್ಣ ಕಥೆಯೇ ಅತ್ಯಂತ ಜನಪ್ರಿಯವಾದ ಪ್ರಕಾರ. ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಾಳಿದುದು ಸುಮಾರು ನೂರು ವರ್ಷಗಳ ಹಿಂದೆ. ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಕಥೆಗಾರರ ಸಣ್ಣಕಥೆಗಳ ಸಂಖ್ಯೆಯನ್ನು ಪಟ್ಟಿ ಮಾಡುವುದು ಪ್ರಯಾಸದ ಕೆಲಸ. ವಾರಪತ್ರಿಕೆ, ದಿನಪತ್ರಿಕೆ, ಮಾಸಪತ್ರಿಕೆಗಳಲ್ಲಿ ಹೊಸ ಹೊಸ ಕಥೆಗಳು ಪ್ರಕಟವಾಗುತ್ತಲೇ ಇವೆ. ಇದರ ತಂತ್ರ, ವ್ಯಾಪ್ತಿ, ಬರವಣಿಗೆಯ ರೀತಿ, ಒಟ್ಟಂದದ ಪರಿಣಾಮ, ರೂಪಗಳನ್ನು ಮಾತ್ರ ಇಲ್ಲಿ ಸ್ಥೂಲವಾಗಿ ಗಮನಿಸಿದೆ.

ಕನ್ನಡದಲ್ಲಿ ಸಣ್ಣಕಥೆಗೆ ವಿಶಿಷ್ಟ ರೂಪ ಕೊಟ್ಟವರು, ಚಾರಿತ್ರಿಕವಾಗಿ ಮೊಟ್ಟ ಮೊದಲು ಕಥೆಗಳನ್ನು ಬರೆದವರು ಯಾರು ಎಂಬ ಬಗ್ಗೆ ಜಿಜ್ಞಾಸೆಯಿದೆ. ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ.ಎನ್.ಕಾಮತರು ಇವರೆಲ್ಲ ಆರಂಭದಲ್ಲಿ ಸಣ್ಣ ಕಥೆಗಳನ್ನು ಬರೆದವರು. ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾದ ಪಂಜೆ ಮಂಗೇಶರಾಯರ ನನ್ನ ಚಿಕ್ಕತಾಯಿ (1900) ಕನ್ನಡದ ಮೊದಲ ಸಣ್ಣ ಕಥೆ ಎಂದು ಭಾವಿಸಲಾಗಿದೆ. ಅನಂತರದಲ್ಲಿ ಅವರು ನನ್ನ ಚಿಕ್ಕ ತಂದೆ (1902), ಭಾರತ ಶ್ರವಣ (1902), ಕಮಲಪುರದ ಹೋಟ್ಲಿನಲ್ಲಿ (1902) ಮೊದಲಾದ ಉತ್ತಮ ಕಥೆಗಳನ್ನು ಪ್ರಕಟಿಸಿದರು. ಆದರೆ ಇವರಾರೂ ಅದೊಂದು ಸಾಹಿತ್ಯ ಪ್ರಕಾರವೆಂಬ ಪ್ರಜ್ಞೆಯನ್ನು ಮೂಡಿಸಿರಲಿಲ್ಲ. ಆ ಪ್ರಜ್ಞೆಯನ್ನು ಮೂಡಿಸಿ ಅದನ್ನೇ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಶ್ರೀನಿವಾಸರು (ಮಾಸ್ತಿ) ಮೊದಲಿಗರು. ಇವರು ಸಣ್ಣಕಥೆಯ ಜನಕರೆಂಬ ಹೆಸರಿಗೆ ಪಾತ್ರರಾದವರು. ಇವರ ವಸ್ತುವಿನ ಆಯ್ಕೆ, ದೃಷ್ಟಿ, ತಿಳಿಹಾಸ್ಯ, ಸರಳಶೈಲಿ - ಇವು ಕನ್ನಡ ಕಥಾಲೋಕಕ್ಕೆ ಮಾರ್ಗದರ್ಶಕವಾಗಿವೆ. ಇವರ ಕಥೆಗಳು ಅನೇಕ ಸಂಪುಟಗಳಲ್ಲಿವೆ. ರಂಗಪ್ಪನ ದೀಪಾವಳಿಯಿಂದ ಹಿಡಿದು ಇವರ ಎಲ್ಲ ಕಥೆಗಳಲ್ಲಿ ಕಾಣುವುದು ಸಾಮಾನ್ಯ ಘಟನೆಗಳನ್ನು ಉತ್ಪ್ರೇಕ್ಷೆಯಿಲ್ಲದೆ ಹೇಳುವ ಕಲೆ. ಇವರ ಕಥೆಗಳಲ್ಲಿ ಆವೇಶವಿಲ್ಲ, ಚಮತ್ಕಾರವಿಲ್ಲ, ವಿಸ್ಮಯವಿಲ್ಲ; ಉದಾತ್ತಗುಣಗಳಿಂದ ತುಂಬಿದ ಆತ್ಮದ ಒಂದು ಚೇತನವನ್ನು ಕಾಣುತ್ತೇವೆ. ಇವರ ಇಂದಿರೆಯೋ ಅಲ್ಲವೋ? ಬೀದಿಯಲ್ಲಿ ಹೋಗುವ ನಾರಿ, ನಮ್ಮ ಮೇಷ್ಟ್ರು, ರಂಗಸ್ವಾಮಿಯ ಅವಿವೇಕ ಇವುಗಳಲ್ಲಿ ಸಣ್ಣಕಥೆಯ ಎಲ್ಲ ಸಲ್ಲಕ್ಷಣಗಳನ್ನೂ ಕಾಣಬಹುದು. ಇವರಲ್ಲಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಎಲ್ಲ ಬಗೆಯ ಕಥೆಗಳೂ ಇವೆ. ಸಾಮಾಜಿಕ ಕಥೆಗಳಲ್ಲಿ ಜೀವನಶ್ರದ್ಧೆ ಕಂಡರೆ ಐತಿಹಾಸಿಕ, ಪೌರಾಣಿಕ ಕಥೆಗಳಲ್ಲಿ ಗುಪ್ತಗಾಮಿನಿಯಾಗಿ ಹರಿಯುವ ಸಂಸ್ಕೃತಿ ಪ್ರವಾಹವನ್ನು ಕಾಣಬಹುದು. ಬಾದಷಹನ ದಂಡನೆ, ಪಂಡಿತನ ಮರಣಶಾಸನ ಇವುಗಳಲ್ಲಿ ರಾಜಕೀಯ ಜೀವನ ಕಂಡರೆ ನಿಜಗಲ್ಲಿನ ರಾಣಿ, ಗೊಂಡೆಯ ಕೃಷ್ಣಮೂರ್ತಿ ಕಥೆಗಳಲ್ಲಿ ನಾಡಿನ ಹೆಣ್ಣುಮಕ್ಕಳ ಧೀರೋದಾತ್ತ ಚಿತ್ರಗಳನ್ನು ಕಾಣಬಹುದು. ಆಚಾರ್ಯರ ಪತ್ನಿ, ಹೇಮಕೂಟದಿಂದ ಬಂದಮೇಲೆ, ಮಸುಮತಿ, ಗೌತಮಿ ಹೇಳಿದ ಕಥೆ ಇವುಗಳಲ್ಲಿ ವಸ್ತುವಿನ ಆಯ್ಕೆಯ ಅನನ್ಯತೆಯನ್ನು ಕಾಣಬಹುದು.

ಶ್ರೀನಿವಾಸರ ಮಾರ್ಗದಲ್ಲಿ ಬೆಳೆದು ಬಂದ ಕೆಲವು ಕಥೆಗಾರರಲ್ಲಿ ಮುಖ್ಯರೆಂದರೆ ಆನಂದರು (ಎ.ಸೀತಾರಾಂ). ಭವತಿ ಭಿಕ್ಷಾಂ ದೇಹಿ ಇವರ ಮೊದಲ ಕಥೆ. ವಾರದ ಹುಡುಗನ ದುಃಖಮಯ ಜೀವನ ಇಲ್ಲಿ ಚಿತ್ರಿತವಾಗಿದೆ. ಆನಂದರು ಕಥೆಗಾರರೆಂದು ಹೆಸರಾದುದು ಶೃಂಗಾರ ಹಾಗೂ ಪ್ರಣಯ ಕಥೆಗಳಿಂದ. ಹೆಂಡತಿಯ ಕಾಗದ, ಪದ್ಮಪಾಕ, ರಾಧೆಯ ಕ್ಷಮೆ, ನಾವು ಹಾಗೆಯೇ - ಇವು ಪ್ರಣಯ ಜೀವನದ ನಯನಾಜೂಕುಗಳನ್ನು ಚಿತ್ರಿಸುತ್ತವೆ. ಗಂಡಹೆಂಡತಿಯರ ಸಂಭಾಷಣೆಯನ್ನು ಅತ್ಯಂತ ನವುರಾಗಿ ಮಾರ್ಮಿಕವಾಗಿ, ಯಥಾವತ್ತಾಗಿ ಇವರ ಕಥೆಗಳಲ್ಲಿ ಕಾಣಬಹುದು. ನಾನು ಕೊಂದ ಹುಡುಗಿ ಇವರ ಅತ್ಯುತ್ತಮ ಕೃತಿ. ಒಂದು ಸುಂದರ ಜಗತ್ತನ್ನೇ ಕಥೆಯ ಪ್ರಾರಂಭದಲ್ಲಿ ಸೃಷ್ಟಿಸಿಬಿಡುತ್ತಾರೆ. ಕಥೆಯ ಕೊನೆಯೂ ಅತಿ ರಮ್ಯವಾದುದು. ಇಲ್ಲಿ ಯಾವ ಭಾವಾತಿರೇಕಕ್ಕೂ ಎಡೆಗೊಟ್ಟಿಲ್ಲ. ಹೆಂಡತಿಯ ಕಾಗದ ಇವರ ಕಥಾರಚನಾ ಕೌಶಲ್ಯಕ್ಕೆ ಮತ್ತೊಂದು ಸಾಕ್ಷಿ. ಇವರ ಕಥೆಗಳು ಶೈಲಿಯ ದೃಷ್ಟಿಯಿಂದಲೂ ಕನ್ನಡ ಗದ್ಯ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳಾಗಿವೆ.

ಶ್ರೀಸ್ವಾಮಿ ಹಾಗೂ ಕೆ.ಗೋಪಾಲಕೃಷ್ಣರಾಯರನ್ನೂ ಇದೇ ಗುಂಪಿಗೆ ಸೇರಿಸಬಹುದು. ಗೋಪಾಲಕೃಷ್ಣರಾಯರು ತಮ್ಮ ಕಥೆಗಳಲ್ಲಿ ವ್ಯಕ್ತಿಯ ಬಾಳಿನ ರೀತಿನೀತಿ, ಗುರಿಗಳತ್ತ ತಮ್ಮ ದೃಷ್ಟಿಹಾಯಿಸಿದ್ದಾರೆ. ಇವರ ಜಟಕಾ ಸಾಹೇಬು, ಮಾಗಡಿ ರಂಗ ಇವು ಮಾನವ ಸ್ವಭಾವದ ಸುಪ್ತ ಹಿರಿಮೆಯ ದ್ಯೋತಕಗಳಾಗಿವೆ. ಸುಶೀಲಾ ಸಂಕೇತ್ ಸೊಗಸಾದ ಕಥೆ; ಹೆಣೆದಿರುವ ರೀತಿ ಮನೋಹರವಾದುದು. ಶ್ರೀಸ್ವಾಮಿಯವರು ಸುಂದರ ಕಥೆಗಳನ್ನು ಬರೆಯಬಲ್ಲರು. ಪುಷ್ಪಮಾಲೆ, ನಂಜಮ್ಮ, ಗೋಧೂಳೀ ಲಗ್ನ ಕಥೆಗಳಲ್ಲಿ ಭಾವನೆಗಳಲ್ಲದೆ ಪಾತ್ರಸೃಷ್ಟಿಯೂ ಹಿತವಾಗಿದೆ. ಪತಿಪರಾಯಣೆ, ಬೀಬಿ ನಾಚ್ಚಿಯಾರ್ ಅಂಥ ಕಥೆಗಳನ್ನು ಆಸಕ್ತಿಯಿಂದ ಓದಬಹುದು.

ಎ.ಆರ್.ಕೃಷ್ಣಶಾಸ್ತ್ರಿಗಳ 'ಕಥೆಗಳು' ಸೊಗಸಾದ ಕಥಾಸಂಕಲನ. ಇವರ ಕಥೆಗಳಲ್ಲಿ ಜೀವನದ ಒಂದು ದರ್ಶನ, ಮೌಲ್ಯಗಳ ಸೂಚನೆ ಅಂತರ್ಗತವಾಗಿ ಬರುತ್ತದೆ. ಇತರರು ಹತ್ತು ಮಾತಿನಲ್ಲಿ ಹೇಳುವುದನ್ನು ಶಾಸ್ತ್ರಿಗಳು ಒಂದೇ ಮಾತಿನಲ್ಲಿ ಖಚಿತವಾಗಿ ಮರೆಯದಂತೆ ಹೇಳಬಲ್ಲರು. ಊಟದಲ್ಲಿ ಉಪಚಾರ, ಅಗ್ಗದ ಮನೆ ಇವುಗಳಲ್ಲಿ ಹಾಸ್ಯವಿದ್ದರೆ ಶ್ಯಾನುಭೋಗನ ಪುಣ್ಯದಲ್ಲಿ ಹಳ್ಳಿಯ ಕಲಕಿದ ರಾಜಕೀಯವಿದೆ. ಇವರ ಎಲ್ಲ ಕಥೆಗಳಲ್ಲೂ ಕನ್ನಡತನ ಎದ್ದು ಕಾಣುತ್ತದೆ.

ಎಸ್.ಜಿ.ಶಾಸ್ತ್ರಿಗಳ ಕಥೆಗಳನ್ನು (ಇದ್ದರೂ ಇರಬಹುದು) ಬೇರೊಂದು ಗುಂಪಿಗೆ ಸೇರಿಸಬಹುದು. ಮಧ್ಯಮ ವರ್ಗದವರ ಜೀವನದ ಹೊಳಪು ಇವರ ಕಥೆಗಳಲ್ಲಿ ಎದ್ದು ಕಾಣುತ್ತದೆ. ಕಥೆಗಳ ಸೊಗಸು, ಭಾವಗಳು ಚೆನ್ನಾಗಿ ಪ್ರಖರವಾಗಿವೆ. ಪರಪುರುಷದಲ್ಲಿ ರಚನಾವೈವಿಧ್ಯವನ್ನು ಕಾಣಬಹುದು. ತುಂಟಮರಿಯಲ್ಲಿ ಮನಕರಗಿಸುವ ಚಿತ್ರವಿದೆ, ನೈಸರ್ಗಿಕ ಕಲಾವಂತಿಕೆಯಿದೆ.

ನವರತ್ನ ರಾಮರಾಯರ ಕಥೆಗಳಲ್ಲಿ ಕುತೂಹಲಕ್ಕೆ ವಿಪುಲ ಆದ್ಯತೆಯಿದೆ. ಲಕ್ಷ್ಮಣರಾಯರ ಭಾಗ್ಯದಲ್ಲಿ ಲಕ್ಷ್ಮಣರಾಯ ದೇವಿಯ ಮಂದಿರಕ್ಕೆ ಸೇರಿ ಮಂಗಮಾರಿ ಸಾಹೇಬರನ್ನು ಕಂಡು ಬಹುಮಾನ ಪಡೆಯುವವರೆಗೆ ಪತ್ತೇದಾರಿ ಕಾದಂಬರಿಯಂತೆ ಕುತೂಹಲ ಕೆರಳುತ್ತಿರುತ್ತದೆ. ಹೆಣ್ಣು ಹೃದಯ ಉತ್ತಮ ಕಥೆ. ಮಾತಿನ ಧೋರಣೆಯಲ್ಲಿ ಸನ್ನಿವೇಶ ರಚನೆಯಲ್ಲಿ ಕಾಣುವ ಕಛೇರಿ ವಾತಾವರಣ ಇವರ ಕೃತಿಗಳಿಗೆ ವಿಶಿಷ್ಟ ಸೊಗಸು ತಂದಿದೆ.

ಉತ್ತರ ಕರ್ನಾಟಕದ ಭಾಗದಿಂದಲೂ ಸಣ್ಣಕಥಾಸಾಹಿತ್ಯ ವಿಪುಲವಾಗಿ ಬೆಳೆಯಿತು. ಆನಂದಕಂದರ ಕಥೆಗಳು ಇಂದಿಗೂ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡಿವೆ. ಅಲ್ಲಿನ ಹಳ್ಳಿಗಳಲ್ಲಿಯ ಜೀವನವೇ ಇವರ ಕಥಾವಸ್ತು. ಇವರ ಕಥೆಗಳಲ್ಲಿ ಭಾವನಾಪರವಶತೆ ಮಾಯವಾಗಿ ವಾಸ್ತವ ದೃಷ್ಟಿ ಹರಿದಿದೆ. ಇಬ್ಬಣದ ದಿಬ್ಬಣದಲ್ಲಿ ಶುದ್ಧ ವಾಸ್ತವತೆಯನ್ನು ಕಾಣಬಹುದು. ಭಾಷೆಯ ಬಳಕೆಯಲ್ಲೂ ಆನಂದಕಂದರ ಕೈ ಮಿಗಿಲಾದುದು. ಸೀಮೆಯ

ಕಲ್ಲಿನ ಶಾಸನದ ಭಾಷೆ, ಜೋಗತಿಕಲ್ಲಿನಲ್ಲಿ ಧರಮಣ್ಣನ ಕೆಚ್ಚು ತುಂಬಿದ ಕನ್ನಡ, ಕಂಕಣದ ಕೈಯ ಐತಿಹಾಸಿಕತೆ ಹೊರಸೂಸುವ ಭಾಷೆ ಇವರ ಭಾಷಾಪ್ರಭುತ್ವವನ್ನು ಸಾರುತ್ತವೆ. ಇನ್ನೊಬ್ಬ ಪ್ರಮುಖ ಕಥೆಗಾರರೆಂದರೆ ಕೃಷ್ಣಕುಮಾರ ಕಲ್ಲೂರ. ಇವರ ಮೊದಲ ಸಂಗ್ರಹವಾದ ಬಿಸಿಲುಗುದುರೆಯಲ್ಲಿ ಭಾಷೆ ಕಾವ್ಯಮಯವಾಗಿದ್ದರೂ ಅನುಭವದ ದೃಷ್ಟಿಯಿಂದ ಇನ್ನೂ ಮಾಗಬೇಕಾದ ಕಥೆಗಳೆನಿಸಿದರೂ ಇವರ ಎರಡನೆಯ ಸಂಕಲನ ಜೀವನ ಎಂಬುದರಲ್ಲಿ ಉತ್ತಮ ಕಥೆಗಳಿವೆ. ಇವರ ಕಥೆಗಳಲ್ಲಿ ಗೆಳೆತನ ಹಾಗೂ ಆದರ್ಶಪ್ರಿಯತೆಗಳು ವೈಚಾರಿಕವಾಗಿ ಬಂದಿವೆ. ಜೀವನ ಎಂಬ ಕಥೆಯಲ್ಲಿನ ರಮಾಬಾಯಿಯ ಪಾತ್ರಸೃಷ್ಟಿ ಅದ್ಭುತವಾದುದು. ಇದು ಇವರ ಕಲಾವಂತಿಕೆಗೆ ಸಾಕ್ಷಿಯಾಗಿದೆ. ಇವರ ಕೆಲವು ಕಥೆಗಳನ್ನು ನೋಡಿದಾಗ ಕಥಾವಸ್ತುವಿನ ಆಯ್ಕೆಯಿಂದ ಹಿಡಿದು ಅದರ ನಿರ್ವಹಣೆಯವರೆಗೆ ಕಂಡು ಬರುವ ಕಲೆಗಾರಿಕೆ ಮೆಚ್ಚುವಂಥದು.

ಗಂಗೆಯ ಗುತ್ತಿಗೆಯನ್ನು ಬರೆದು ಪ್ರಸಿದ್ಧರಾದ ಟೇಂಗ್ಸೆ ಗೋವಿಂದರಾಯರ ಕೈಯಲ್ಲಿ ಸಣ್ಣಕಥೆ ಹೊಸ ರೂಪು ತಳೆಯಿತು. ಟೇಂಗ್ಸೆಯವರ ಗಂಗೆಯ ಗುತ್ತಿಗೆ ಹಾಗೂ ಛಪ್ಪರಬಂಧ ಪ್ರತಿಭೆಯ ಎರಡು ಮುಖಗಳು. ಮೊದಲನೆಯದರಲ್ಲಿ ವಿನೋದದ ಆವರಣವಿದ್ದರೆ ಎರಡನೆಯದರಲ್ಲಿ ಬಡತನದ ವಿಷಮತೆಯಿದೆ. ಪರಿಣಾಮದ ದೃಷ್ಟಿಯಿಂದ ಛಪ್ಪರಬಂಧ ಯಶಸ್ವೀ ಕಥೆ.

ರಂ.ಶ್ರೀ.ಮುಗಳಿಯವರ ಕನಸಿನ ಕೆಳದಿ ಸಂಕಲನದಲ್ಲಿ ಉತ್ತಮವಾದ ಕಥೆಗಳಿವೆ. ಸುಸಂಬದ್ಧವಾದ ಕಥಾರಚನೆ, ಗುರಿ ತಪ್ಪದ ಪರಿಣಾಮ ಇವರ ಕಥೆಗಳ ವೈಶಿಷ್ಟ್ಯ - ಮಧ್ಯಮವರ್ಗದ ಜನರ ಅನೇಕ ತೊಂದರೆ ತೊಡಕುಗಳು ಹೃದಯಂಗಮವಾಗಿ ಚಿತ್ರಿತವಾಗಿವೆ. ವಿತಂತು ವೇಶ್ಯೆಯಲ್ಲಿ ಉತ್ತಮ ಕಥೆಯ ಎಲ್ಲ ಗುಣಗಳೂ ಇವೆ. ದುರ್ದೈವಿ ಹೆಣ್ಣೊಬ್ಬಳ ಹೃದಯವಿದ್ರಾವಕ ಚಿತ್ರಣ ಈ ಕಥೆಯ ವಸ್ತು. ಇದರ ಶೈಲಿ ನಿರರ್ಗಳವಾಗಿ ಹರಿಯುತ್ತದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹಾಗೂ ಪಡುಕೋಣೆ ರಮಾನಂದರಾಯರ ಕಥೆಗಳನ್ನು ಪ್ರತ್ಯೇಕವಾಗಿಯೇ ನೋಡಬೇಕು. ಇಬ್ಬರೂ ಹೆಸರಾದ ನಗೆಗಾರರು. ಇವರ ಹಾಸ್ಯ, ವ್ಯಕ್ತಿಗಳ ವಿಕ್ಷಿಪ್ತತೆ ಹಾಗೂ ಘಟನೆಗಳ ಚಮತ್ಕಾರಗಳಿಂದಾಗಿ ಕಳೆಗೂಡಿ ನಿಲ್ಲುತ್ತದೆ. ತಾಂತ್ರಿಕವಾಗಿ ಇವರ ಬರೆಹಗಳಲ್ಲಿ ಸಣ್ಣಕಥೆಯ ಅಂಶಗಳು ಕಡಿಮೆಯಿದ್ದರೂ ಕಥನ ರೀತಿ ದೃಢವಾದುದು. ರಮಾನಂದರಾಯರ ಹುಚ್ಚು ಬೆಳುದಿಂಗಳಿನ ಹೂಬಾಣಗಳು ಎಂಬ ಆಧಾರಿತ ಸಂಗ್ರಹದಲ್ಲಿ ಸಣ್ಣಕಥೆಗಳೆನಿಸುವ ಕೃತಿಗಳಿದ್ದರೂ ಅವು ಚೆಲ್ಲುವ ಹಾಸ್ಯದಿಂದಾಗಿ ನಗೆಬರೆಹಗಳು ಎಂದೇ ಪ್ರಸಿದ್ಧವಾಗಿವೆ. ಗೊರೂರರ ಎಲ್ಲ ಬರೆಹಗಳಿಂದಲೂ ಕೆಲವು ಕಥೆಗಳನ್ನು ಆರಿಸಬಹುದು. ವೈಯಾರಿ, ಗರುಡಗಂಬದ ದಾಸಯ್ಯ, ಬೆಸ್ತರ ಕರಿಯ, ಶಿವರಾತ್ರಿ ಈ ಸಂಗ್ರಹಗಳಲ್ಲಿ ಹಲವು ಉತ್ತಮ ಕಥೆಗಳಿವೆ. ಆದರೆ ಗೊರೂರರ ಹಾಸ್ಯ ಪ್ರತಿಭೆಯಲ್ಲಿ ಕಥಾಂಶ ಮಸುಕಾಗುತ್ತದೆ. ಹಾಸ್ಯರಸ ಹೊನಲಾದಾಗ ಇವರ ಕಥೆಗಳು ಉಪಕಥೆಗಳ ಗೊಂಚಲಾಗುತ್ತವೆ. ಹಾರುವಯ್ಯ ಹಜಾಮನಾದದ್ದು, ಆಚಾರ ಕೆಟ್ಟರೂ ಆಕಾರ ಕೆಡಬಾರದು, ಬೂತಯ್ಯನ ಮಗ ಅಯ್ಯು, ಡೊಂಕು ಬಾಲ - ಇಂಥ ಉಜ್ವಲ ಕಥೆಗಳೂ ಈ ಸಂಕಲನಗಳಲ್ಲಿವೆ. ಗೊರೂರರ ಕಥೆಗಳು ಹೆಚ್ಚು ಚಿತ್ರಮಯವೂ ಆ ಚಿತ್ರಗಳು ಹಾಸ್ಯಮಯವೂ ಆಗಿವೆಯೆನ್ನಬಹುದು. ವಾಸ್ತವತೆಯ ಒಂದು ಕಾರ್ಯವಾದ ಜೀವನ ಚಿತ್ರಣದಲ್ಲಿ ಗೊರೂರರು ಯಶಸ್ವಿಯಾಗಿದ್ದಾರೆ ಎನ್ನಬಹುದು.

ಕೊಡಗಿನ ಗೌರಮ್ಮನವರ ಹೆಸರು ಸಣ್ಣಕಥೆಯೊಂದಿಗೆ ನಿಕಟಸಂಬಂಧವನ್ನು ಬೆಸೆದುಕೊಂಡಿದೆ. ಹೆಣ್ಣಿನ ಬಾಳಿನ ನೋವುನಲಿವುಗಳನ್ನು ತಮ್ಮ ಕಥೆಗಳ ಮೂಲಕ (ಕಂಬನಿ) ಇವರು ಚಿತ್ರಿಸಿದ್ದಾರೆ. ಮರದ ಬೊಂಬೆ ಕಥೆಯಲ್ಲಿ ಕಾಣುವ ಹೆಣ್ಣು ಜೀವನದ ದೃಷ್ಟಿಕೋನ ಇವರು ಒಳ್ಳೆಯ ಕಥೆಗಾರ್ತಿ ಎಂಬುದಕ್ಕೆ ಸಾಕ್ಷಿಯಾಗಿದೆ. ಇವರ ಜೊತೆಗೇ ಹೇಳಬೇಕಾದ ಇನ್ನೊಂದು ಹೆಸರೆಂದರೆ ಶ್ಯಾಮಲಾದೇವಿಯವರದು. ಇವರ ಹೂಬಿಸಿಲು, ಹೊಂಬಿಸಿಲು ಎಂಬ ಎರಡು ಕಥಾಸಂಗ್ರಹಗಳಲ್ಲೂ ಮಧ್ಯಮವರ್ಗದ ಕೌಟುಂಬಿಕ ಜೀವನ ಚಿತ್ರಿತವಾಗಿದೆ. ಹೀಗೆಯೇ ಸರಸ್ವತಿಬಾಯಿ ರಾಜವಾಡೆ (ಗಿರಿಬಾಲೆ) ಅವರ ಕಥನ ಪ್ರಪಂಚ ಸ್ತ್ರೀ ಕೇಂದ್ರಿತವಾದಂಥದ್ದು. ಇವರ ಕಥೆಗಳಲ್ಲಿ ಕೌಟುಂಬಿಕ ನೆಲೆ ಪ್ರಧಾನವಾಗಿದೆ. ಮಹಿಳೆಯರು ಒಳಗಿನಿಂದ ಕಾಣಬಹುದಾದ ಕೌಟುಂಬಿಕ ಸೂಕ್ಷ್ಮಗಳು, ವಿವರಗಳು, ವೈಪರೀತ್ಯಗಳು, ಸುಖದುಃಖಗಳು ಸಹಜವಾಗಿ ಇವರ ಕಥೆಗಳಲ್ಲಿ ಪಡಿಮೂಡಿವೆ.

ಸಣ್ಣಕಥೆಗಳಲ್ಲಿ ಹೆಸರಿಸಬೇಕಾದ ಇನ್ನೊಂದು ಹೆಸರು ದೇವುಡು. ಪಾತ್ರಗಳ ಕ್ರಮಬದ್ಧ ವಿಕಾಸ, ಕಥೆ ಪಡೆಯುವ ಏರಿಳಿತಗಳು, ಸನ್ನಿವೇಶಗಳ ಯಥಾರ್ಥತೆಗಳಿಂದಾಗಿ ದೇವುಡು ಅವರ ಕಥೆಗಳು ಮಹತ್ತ್ವದ್ದಾಗಿವೆ. ಕವಿಗಳಾದ ಬೇಂದ್ರೆ, ಕುವೆಂಪು, ಪುತಿನ ಇವರು ಕಥೆಗಳನ್ನು ಬರೆದಿದ್ದಾರೆ. ಸಣ್ಣಕಥೆ ತನ್ನ ಸ್ವಭಾವದಲ್ಲಿ ಭಾವಗೀತೆಗೆ ಸಮೀಪವಾಗಿರುವುದರಿಂದ ಇವರು ಬರೆದ ಕಥೆಗಳು ಪ್ರಮಾಣದಲ್ಲಿ ಅಲ್ಪವಾದರೂ ಹಿರಿಮೆಯಲ್ಲಿ ಮಹತ್ತ್ವಪೂರ್ಣವಾಗಿವೆ. ಬೇಂದ್ರೆಯವರ ಪಾಲಾ ಪೂ, ಹಿರಿದ ಕತ್ತಿ, ಏಕಾಕಿನಿ ಉತ್ತಮವಾದ ಕಥೆಗಳಾಗಿವೆ. ಇವರ ಶೈಲಿ ಈ ಕೃತಿಗಳಲ್ಲಿ ಸಂಗೀತದ ನಾದಲೋಲುಪತೆಯನ್ನು ಪಡೆದಿದೆ. ಆದರ್ಶವಾದ ಸಮಾಜವನ್ನು ತಿದ್ದುವ ಬಯಕೆ ಕುವೆಂಪು ಅವರಲ್ಲಿದ್ದರೂ ನಿಸರ್ಗಪ್ರಿಯರಾದ ಇವರ ಕಥೆಗಳಲ್ಲಿ ಸುಧಾರಣಾಮನೋಭಾವ ಹಿನ್ನೆಲೆಯಲ್ಲಿ ಉಳಿದಿದೆ. ನನ್ನ ದೇವರು, ಸನ್ಯಾಸಿ ಮುಂತಾದ ಕಥೆಗಳಲ್ಲಿ ಆದರ್ಶತ್ವವನ್ನು ಕಂಡರೆ, ಧನ್ವಂತರಿಯ ಚಿಕಿತ್ಸೆ ಎಂಬ ಕಥೆಯಲ್ಲಿ ಸಾಮಾಜಿಕ ಕ್ರಾಂತಿಯ ಒಲವನ್ನು ಕಾಣಬಹುದು. ಮೀನಾಕ್ಷಿಯ ಮನೆ ಮೇಷ್ಟ್ರು ಕಥೆಯಲ್ಲಿ ಕಥೆಗಾರರನ್ನು ಆಕರ್ಷಿಸುವ ವಸ್ತುವಿನ ವಿಶಿಷ್ಟ ನಿರೂಪಣೆಯನ್ನು ಕಾಣಬಹುದು. ಇಲ್ಲಿನ ವಸ್ತು ಚಿರಪರಿಚಿತ ಭಗ್ನ ಪ್ರಣಯ, ಸುಂದರವಾಗಿ ನಿರೂಪಿತವಾಗಿದೆ. ಯಾರೂ ಅರಿಯದ ವೀರ ಎಂಬ ಕಥೆಯಲ್ಲಿ ಉತ್ತಮ ಕಥೆಗಾರಿಕೆಯ ಮಟ್ಟವನ್ನು ಗುರುತಿಸಬಹುದು. ಇವರ ಶೈಲಿ ಭಾವಗೀತೆಯಂತಿದ್ದರೂ ಮಹಾಕಾವ್ಯದ ಸನ್ನಿವೇಶವೊಂದರ ಪ್ರಭಾವವನ್ನು ಬೀರುತ್ತದೆ. ಪುತಿನ ಅವರ ಧ್ವಜರಕ್ಷಣೆಯಲ್ಲಿ ಕೆಲವು ಸತ್ತ್ವಪೂರ್ಣ ಕಥೆಗಳಿವೆ. ಧ್ವಜರಕ್ಷಣೆಯ ವಸ್ತು ರಾಜಕೀಯಕ್ಕೆ ಸಂಬಂಧಿಸಿದ್ದರೂ ಆದರ್ಶಪ್ರಿಯ ಯುವಕನ ಅಂತರಂಗದ ತುಮುಲವನ್ನೂ ಚಿತ್ರಿಸುತ್ತದೆ.

ಇವರುಗಳಲ್ಲದೆ ಮೊದಲ ತಲೆಮಾರಿನ ಇನ್ನೂ ಅನೇಕರು ಕಥೆಗಳನ್ನು ಬರೆದರು. ಭಾರತೀಪ್ರಿಯರ ವೀಣೆ ಹಾಗೂ ಒಂದು ಹಳೆಯ ಕಥೆ ಕನ್ನಡದ ಜನ ಎಂದೂ ಮರೆಯಲಾರದಂಥ ಕೃತಿಗಳು. ಇವರ ಕಥೆಗಳಲ್ಲಿ ಸನ್ನಿವೇಶವನ್ನು ಮನಸ್ಸಿನಲ್ಲಿ ಕೆತ್ತಿ ನಿಲ್ಲಿಸುವಂತೆ ಮಾಡುವ ಮೋಡಿಯಿದೆ. ರಾಹೂ, ನಾದನಾಮಕ್ರಿಯಾ, ಸಾಧನೆ ಮೊದಲಾದ ಕಥೆಗಳಲ್ಲಿ ಹೊಳಪಿನ ಶೈಲಿಯನ್ನು ಕಂಡರೆ ಮೋಚಿಯಲ್ಲಿ ನಿರಾಡಂಬರವಾದ ಶೈಲಿಯಿದೆ. ಮೋಚಿ ಇವರ ಪ್ರಾತಿನಿಧಿಕ ಕಥೆಯಲ್ಲದಿದ್ದರೂ ಒಂದು ಉತ್ತಮ ಕಥೆ. ವೈನಾಡಿನ ಸ್ಥಾನಿಕ ಸೌಂದರ್ಯವನ್ನಲ್ಲದೆ ಅಲ್ಲಿಯ ಜನರ ವಿಚಿತ್ರ ನಡೆವಳಿಕೆಗಳನ್ನೂ ಇವರ ಕಥೆಗಳಲ್ಲಿ ಕಾಣಬಹುದು.

ಕ್ಷೀರಸಾಗರರ ನಮ್ಮೂರಿನ ಪಶ್ಚಿಮಕ್ಕೆ, ಭಾವಪೂರ್ಣತೆ ಹಾಗೂ ರಸೋತ್ಕರ್ಷಗಳಿಗೆ ಮಾದರಿಯಾದ ಕಥೆ. ಎಂ.ವಿ.ಸೀತಾರಾಮಯ್ಯನವರ ಹುಟ್ಟಿನ ಹಂಬಲು ಹೃದಯವೇದಕವಾದ ಕಥೆ. ಹೀಗೆಯೇ ಶಂಕರಭಟ್ಟರ ಅದ್ದಿಟ್ಟು, ಜಡಭರತರ ಡೂಗಜ್ಜನ ಬಹಿಷ್ಕಾರ ಮೊದಲಾದ ಕಥೆಗಳೂ ಉತ್ತಮ ಕಥೆಗಳಾಗಿವೆ. ಸೇಡಿಯಾಪು ಕೃಷ್ಣಭಟ್ಟರ ಕಥೆಗಳ ಸ್ವರೂಪ ವಡ್ಡಾರಾಧನೆಯ ಕಥೆಗಳನ್ನು ಕಸಿ ಮಾಡಿದಂತಿದೆ. ನಾಗರಬೆತ್ತ ಇವರ ಉತ್ತಮ ಕಥೆಗಳಲ್ಲೊಂದು. ಮೇವುಂಡಿಯವರೂ ಅಚ್ಚಗನ್ನಡದ ಬಿಗುವು ತೊಟ್ಟು ಹಲವು ಕಥೆಗಳನ್ನು ನೀಡಿದರು. ಕಾದಂಬರಿ ಕ್ಷೇತ್ರದಲ್ಲಿ ಹಸನಾದ ಕೆಲಸ ಮಾಡಿರುವ ಶಿವರಾಮ ಕಾರಂತರು ತಮ್ಮ ಹಸಿವು ಮತ್ತು ಹಾವು ಎಂಬ ಎರಡು ಸಂಕಲನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಡತನದ ಬಾಳನ್ನು ಮನಕರಗುವಂತೆ ಚಿತ್ರಿಸಿದ್ದಾರೆ. ಹಳ್ಳಿಯ ಹತ್ತು ಸಮಸ್ತರು ಒಂದು ರೀತಿಯ ಕಥಾಸಂಕಲನವೇ ಆಗಿದೆ. ಎಕ್ಕುಂಡಿಯವರು ತಮ್ಮ ಕಥೆಗಳಲ್ಲಿ ಪೌರಾಣಿಕ ಸನ್ನಿವೇಶಗಳನ್ನು ಉಜ್ವಲವಾಗಿ ಹಿಡಿದಿಟ್ಟಿದ್ದಾರೆ.

1920-40ರ ಅವಧಿಯ ಸಣ್ಣಕಥೆಯ ಮಜಲನ್ನು ಇಲ್ಲಿ ನೋಡಿದ್ದಾಯಿತು. ಆದರೂ ಸಣ್ಣಕಥಾಸಾಹಿತ್ಯ ನಿರೀಕ್ಷಿಸಿದಷ್ಟು ಬೆಳೆಯಲಿಲ್ಲ. ಹೊಸಗನ್ನಡದ ಓದುಗರು ಕಾದಂಬರಿಗೆ ಮನತೆತ್ತರು. ಕಥೆಗಳಿಗಾಗಿಯೇ

ಮೀಸಲಾದ ಪತ್ರಿಕೆಗಳು ಕ್ರಮೇಣ ನಿಂತುಹೋದುವು. ಮೊದಲಿಗೆ ಮಿಂಚಿನಬಳ್ಳಿ ಪ್ರಕಾಶನ ಸಂಸ್ಥೆ ಕನ್ನಡದಲ್ಲಿ ಸತ್ತ್ವಶಾಲಿಯಾದ ಕಥೆಗಳು ಹೊರಬರಲು ಕಾರಣವಾಯಿತು. ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಆಗ ಹೊರಡುತ್ತಿದ್ದ ಪ್ರಬುದ್ಧ ಕರ್ಣಾಟಕ ತ್ರೈಮಾಸಿಕ ಸಣ್ಣಕಥೆಯ ಸಾಹಿತ್ಯ ಪ್ರಕಾರವನ್ನು ಕನ್ನಡಿಗರಿಗೆ ಕೊಡಲು ತುಂಬ ಆಸ್ಥೆ ವಹಿಸಿತು. ಅ.ನ.ಕೃಷ್ಣರಾಯರು ಹೊರಡಿಸುತ್ತಿದ್ದ ಕಥಾಂಜಲಿ ಅನೇಕ ತರುಣ ಕಥೆಗಾರರನ್ನೂ ಬೆಳಕಿಗೆ ತಂದಿತು. ಧಾರವಾಡದ ಜಯಂತಿ, ಜಯಕರ್ನಾಟಕ ವಿಪುಲವಾಗಿ ಸಣ್ಣಕಥೆಗಳನ್ನು ಪ್ರಕಟಿಸಿದುವು.

ಆಧುನಿಕ ಕನ್ನಡ ಸಾಹಿತ್ಯ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಹೀಗೆ ಅವಸ್ಥಾಂತರಗಳನ್ನು ಕಂಡಂತೆ ಕನ್ನಡ ಸಣ್ಣ ಕಥಾಪ್ರಪಂಚವೂ ಇದಕ್ಕೆ ಹೊಂದಿಕೊಂಡಂತೆ ವಿಸ್ತರಿಸುತ್ತಾ ಹೋಯಿತು. ಆಯಾ ಕಾಲದ ಸ್ಪಂದನಕ್ಕೆ ಜೀವಂತವಾಗಿ ಉಳಿಯಿತು. ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲತೆಯ ಚಳವಳಿ ಸಣ್ಣಕಥೆಯಿಂದಲೇ ಆರಂಭವಾಯಿತು ಎನ್ನಬೇಕು. 1936-42ರವರೆಗೆ ನಡೆದ ರಾಜಕೀಯ ಆಂದೋಲನಗಳು, ಪತ್ರಿಕೆಗಳಲ್ಲಿ ನಡೆಯುತ್ತಿದ್ದ ಪ್ರಗತಿಶೀಲತೆಯ ಪ್ರಚಾರ, ರಷ್ಯದ ಹಾಗೂ ಹಿಂದಿ ಕಥೆಗಳ ಅನುವಾದ ಇವೆಲ್ಲ ಪ್ರಭಾವಗಳಿಂದ ಕನ್ನಡ ಸಾಹಿತ್ಯದಲ್ಲಿ ಹಲವು ಬದಲಾವಣೆಗಳುಂಟಾಗಿ ಬರೆಹಗಾರರು ಎಲ್ಲ ವಿಧದಲ್ಲೂ ಸತ್ತ್ವಯುತ ಸಾಹಿತ್ಯರಚನೆ ಮಾಡಿದರೆನ್ನುವ ಮಾತನ್ನು ಮರೆಯಲಾಗದು. ಅ.ನ.ಕೃ. ಅವರ ನೇತೃತ್ವದಲ್ಲಿ ತ.ರಾ.ಸು., ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ ಮುಂತಾದ ಲೇಖಕರು ಸಣ್ಣಕಥೆಯಲ್ಲಿ ವಿಶೇಷವಾಗಿ ಪ್ರಗತಿಶೀಲತೆಯನ್ನು ತಂದರು. ದಲಿತವರ್ಗಗಳ ಬಗ್ಗೆ ಸಹಾನುಭೂತಿ, ಶೋಷಣೆಯ ವಿರುದ್ಧ ಆಕ್ರೋಶ, ಸಾಮಾಜಿಕ ವೈಷಮ್ಯಗಳ ಬಗ್ಗೆ ಅಸಮಾಧಾನ ಇವರ ಪ್ರಮುಖ ದೃಷ್ಟಿಕೋನಗಳಾದುವು. ನವೋದಯದ ಲೇಖಕರನ್ನು ಪ್ರತಿಗಾಮಿಗಳೆಂದು ಕರೆದು, ಸಮಾಜದ ಡಂಭಾಚಾರವನ್ನು ಎತ್ತಿ ತೋರಿಸಿದರು. ವಾಸ್ತವತಾವಾದ ಇವರ ಕೈಯಲ್ಲಿ ಅತಿರೇಕಕ್ಕೆ ಹೋಯಿತು. ಸಾಮ್ಯವಾದ ಈ ದೇಶಕ್ಕೆ ಅಕಾಲಿಕವಾಗಿದ್ದುದರಿಂದಲೋ ಅಥವಾ ವೈಚಾರಿಕತೆ ಪ್ರಗತಿಶೀಲರ ಮನೋಧರ್ಮದಲ್ಲೇ ಸರಿಯಾಗಿ ಆಗಿರಲಿಲ್ಲವೆಂದೋ ಈ ಪ್ರಗತಿಶೀಲ ಬಿರುಗಾಳಿ ಕ್ರಮೇಣ ಸ್ತಬ್ಧವಾಯಿತು. ಪರಸ್ಪರ ಕೊಳುಕೊಡುಗೆಗಳು ಹೆಚ್ಚಿದುದರಿಂದ ಪ್ರಗತಿಶೀಲರಿಗೂ ನವೋದಯ ಲೇಖಕರಿಗೂ ವಿಶೇಷ ಅಂತರವೇನೂ ಕಾಣಬರುವುದಿಲ್ಲ.

ಪ್ರಗತಿಶೀಲತೆಯಿಂದ ಕನ್ನಡ ಸಣ್ಣಕಥೆಯಲ್ಲಿ ಕೆಲವು ಬದಲಾವಣೆಗಳಾದವು. ವಸ್ತು ಸಮಾಜಸಮ್ಮುಖವಾಗಿ ವೈಯುಕ್ತಿಕ ತೀವ್ರತೆಯನ್ನು ಕಳೆದುಕೊಂಡಿತು. ವಸ್ತುವಿನ ಆಯ್ಕೆ ಸೀಮಿತವಾಯಿತು. ಆದರೆ ಬರೆವಣಿಗೆಗೆ ಹೆಚ್ಚು ವೇಗ, ಮೊನಚು ಬಂತು. ಒಂದು ಬಗೆಯ ಅತೃಪ್ತ ವಾತಾವರಣ ಹುಟ್ಟಿಕೊಂಡಿತು. ಸಂಭಾಷಣೆಗಳಲ್ಲಿ ಆಡುಮಾತಿನ ಬಳಕೆ ಹೆಚ್ಚಾಯಿತು. ಈ ಪ್ರಕಾರದಲ್ಲಿ ಅ.ನ.ಕೃ. ಸಿದ್ಧಹಸ್ತರು. ಅವರಿಗೆ ಕಥೆ ಹೇಳುವ ಕಲೆ ಅದ್ಭುತವಾಗಿ ಸಾಧಿಸಿದೆ. ಅವರ ಶೈಲಿ ತುಂಬಿ ಹರಿಯುವ ತೊರೆಯಂತೆ. ಕಥೆಗಳಲ್ಲಿ ಕಲಾವಂತಿಕೆ ಹಿಂದೆ ಬಿದ್ದರೂ ಶೈಲಿಯಿಂದ ಎಂಥ ಕಳಪೆಯ ವಿಷಯವನ್ನಾದರೂ ರಸಭರಿತವಾಗಿ ಮಾಡುವ ಮೋಡಿಯಿದೆ. ಮಣ್ಣಿನ ಮಗ ಒಂದು ಉತ್ತಮ ಕೃತಿ. ಅನ್ನವಿತ್ತ ನೆಲವನ್ನು ನಿರ್ಲಕ್ಷಿಸಿದವನಿಗೆ ಮೋಕ್ಷವಿಲ್ಲ ಎಂಬ ಆಶಯವನ್ನು ಹೊತ್ತ ನಾಯಕನ ಪ್ರತಿಬಿಂಬ ಆ ಕೃತಿ. ಇವರ ಅಗ್ನಿಕನ್ಯೆ ಸಂಕಲನದಲ್ಲಿ ಹಲವು ಪ್ರಗತಿಶೀಲ ಕಥೆಗಳಿವೆ. ಇವರ ಕೆಲವು ಕಥೆಗಳಲ್ಲಿ ಲೈಂಗಿಕ ಜೀವನದ ವಿಶ್ಲೇಷಣೆಯನ್ನೂ ಕಾಣಬಹುದು.

ಅ.ನ.ಕೃ. ಅವರ ಪ್ರಗತಿಶೀಲತೆಯ ವಾದ ಉಳಿದವರ ಮೇಲೆ ಹೆಚ್ಚು ಪರಿಣಾಮವನ್ನು ಉಂಟುಮಾಡಿತು. ಇವರ ಪ್ರಭಾವ ಎರಡು ಮೂರು ಪೀಳಿಗೆಗಳ ಲೇಖಕರ ಮೇಲೆ ಬಿದ್ದಿದೆ. ತ.ರಾ.ಸು., ನಿರಂಜನ, ಚದುರಂಗ, ಬಸವರಾಜ ಕಟ್ಟೀಮನಿ, ಅರ್ಚಕ ವೆಂಕಟೇಶ, ವೆಂಕಟರಾಜ ಪಾನಸೆ ಮೊದಲಾದವರು ಸಾಹಿತ್ಯವನ್ನು ಸಮಾಜದ ಕನ್ನಡಿಯಲ್ಲಿ ನೋಡಲು ಯತ್ನಿಸಿದರು. ತ.ರಾ.ಸು. ಅವರು ಕಾದಂಬರಿಗಳ ಜೊತೆಗೆ ಕೆಲವು ಅತ್ಯುತ್ತಮ ಸಣ್ಣಕಥೆಗಳನ್ನೂ ನೀಡಿದ್ದಾರೆ. 0-0-9 ಎಕ್ಸ್, ಇನ್ನೊಂದು ಮುಖ - ಇವು ತಂತ್ರದ ದೃಷ್ಟಿಯಿಂದ ಯಶಸ್ವಿಯಾದ ಕಥೆಗಳು. ಇವರ ಜೊತೆಯಲ್ಲಿಯೇ ನೆನೆಯಬೇಕಾದ ಇನ್ನೊಂದು ಹೆಸರೆಂದರೆ ನಿರಂಜನರದು. ನಿರಂಜನರು ಪರಿಣಾಮಕಾರಿಯಾಗಿ ಕಥೆ ಹೇಳುವಕಲೆ ಸಾಧಿಸಿಕೊಂಡಿದ್ದಾರೆ. ಜೀವನಾನುಭವದ ಆಳದಲ್ಲಿ ಮುಳುಗಿ ಅಲ್ಲಿಯ ನೋವು ನಲಿವುಗಳನ್ನು ಖಂಡತುಂಡವಾಗಿ ಇವರು ಚಿತ್ರಿಸಬಲ್ಲರು. ಇವರದು ಹರಿತವಾದ ಶೈಲಿ. ಕೊನೆಯ ಗಿರಾಕಿ ಇವರ ಅತ್ಯುತ್ತಮ ಪ್ರಾತಿನಿಧಿಕ ಕಥೆ. ಹೆಣ್ಣನ್ನು ಭೋಗದ ವಸ್ತುವಾಗಿ ಅಸಹ್ಯವಾಗಿ, ಕ್ರೂರವಾಗಿ ಬಳಸಲೆತ್ನಿಸುವ ಜಗತ್ತಿನ ರೌದ್ರ ವಾಸ್ತವಿಕತೆ ಕಥೆಯ ಪರಿಣಾಮಕ್ಕೆ ತೀವ್ರತೆಯನ್ನು ತಂದಿದೆ.

ಕನ್ನಡ ಕಥಾಪ್ರಪಂಚದಲ್ಲಿ ಮರೆಯಲಾಗದ ಇನ್ನೊಂದು ಹೆಸರು ಬಸವರಾಜ ಕಟ್ಟೀಮನಿ. ಇವರು ಕೊಳೆ ಇರುವ ಕಡೆ ಬೆಂಕಿಯನ್ನು ಉಗುಳುವ ಕನ್ನಡದ ಜೀವಂತ ಜ್ವಾಲಾಮುಖಿ. ಅನ್ಯಾಯಗಳ ವಿರುದ್ಧ ನಿಲ್ಲುವುದೇ ಇವರ ಸ್ವಭಾವ. ಮೊದಮೊದಲು ಇವರ ಕಥೆಗಳಲ್ಲಿ ರಾಜಕೀಯತನ ತುಂಬಿದ್ದರೂ ಅನಂತರದ ಕಥೆಗಳಲ್ಲಿ ಸಾಮಾಜಿಕತೆಯೇ ಹೆಚ್ಚು. ಗಿರಿಜಾ ಕಂಡ ಸಿನಿಮಾ, ಬೂಟ್ ಪಾಲಿಷ್, ರಕ್ತಧ್ವಜ, ನೀಲಗಂಗಾ, ನಾಗಪಂಚಮಿಗೆ ಬಂದದ್ದು, ಜೀವನ ಕಲೆ - ಇವು ಇವರ ಉತ್ತಮ ಕಥೆಗಳಲ್ಲಿ ಕೆಲವು. ಕಟ್ಟೀಮನಿಯವರಲ್ಲಿ ಕಥೆಗಾರನಿಗಿರಬೇಕಾದ ಎಲ್ಲ ನೈಜಗುಣಗಳೂ ಇವೆ. ಭಾಷೆಯನ್ನೂ ಸಜೀವವಾಗಿ ಇವರು ಉಪಯೋಗಿಸಬಲ್ಲರು.

ಕೋ. ಚೆನ್ನಬಸಪ್ಪನವರು ಕಟ್ಟೀಮನಿಯವರಂತೆ ಹಳ್ಳಿಯ ಜೀವನವನ್ನು ಚೆನ್ನಾಗಿ ಅರಿತವರು. ಇವರದು ಶಕ್ತಿಪೂರ್ಣ ಶೈಲಿ. ನಮ್ಮೂರಿನ ದೀಪ, ಉಂಗುರದ ಉರುಲು ಇವರ ಉತ್ತಮ ಕಥೆಗಳು. ಒಕ್ಕಲಿಗನ ಬಾಳಿನ ಪ್ರತಿ ಎಳೆಯನ್ನು ಬಿಡಿಸಿ ತೋರಿಸುವ ಆಸಕ್ತಿ ಇವರ ಕಥೆಗಳಲ್ಲಿ ಕಂಡುಬರುತ್ತದೆ.

ಸಂಪ್ರದಾಯ, ಪ್ರಗತಿಶೀಲ ಮನೋಭಾವಗಳ ಮಧ್ಯವರ್ತಿಯ ವಿಧಾನವನ್ನು ತುಳಿದ ಕಥೆಗಾರರ ಪಂಗಡವೊಂದುಂಟು. ಜೀವನದ ವೈವಿಧ್ಯವೇ ಇವರ ಪ್ರಥಮ ಆಕರ್ಷಣೆ. ಇವರಿಗೆ ಸಮಾಜ ಸುಧಾರಣೆಯ ಬಯಕೆಯುಂಟು. ಈ ಮಾರ್ಗದಲ್ಲಿ ನಡೆದ ಎಂ.ವಿ.ಸೀತಾರಾಮಯ್ಯ, ಅಶ್ವತ್ಥ, ಎಸ್.ಅನಂತನಾರಾಯಣ, ನರೇಂದ್ರಬಾಬು, ಎಚ್.ಪಿ.ಜೋಶಿ, ದ.ಬಾ.ಕುಲಕರ್ಣಿ, ರಾಮಚಂದ್ರ ಕೊಟ್ಟಲಗಿ, ವರದರಾಜ ಹುಯಿಲಗೋಳ, ಎಲ್.ಎಸ್.ಶೇಷಗಿರಿರಾವ್, ಹಿರೇಮಲ್ಲೂರ ಈಶ್ವರನ್, ವರಗಿರಿ, ಶ್ರೀಕಂಠ ಪುತ್ತೂರು, ಮಿರ್ಜಿ ಅಣ್ಣಾರಾಯ, ವಿ.ಜಿ.ಭಟ್ಟ, ರಾ.ವೆಂ.ಶ್ರೀನಿವಾಸ, ಕೊ.ಸು.ಸೀತಾರಾಮ್, ಜೀ.ಶಂ.ಪರಮಶಿವಯ್ಯ, ಸುಧಾಕರ, ನಂಜರಾಜೇ ಅರಸು, ಉಮಾಶಂಕರ, ಚಿದಂಬರಾನಂದ, ಬೆಸಗರಹಳ್ಳಿ ರಾಮಣ್ಣ, ಶೇಷನಾರಾಯಣ, ಜನಾರ್ದನ ಗುರ್ಕಾರ, ಶ್ರೀನಿವಾಸ ಉಡುಪ, ಶ್ರೀಕಾಂತ, ಕ.ವೆಂ. ರಾಜಗೋಪಾಲ್, ಶಾಂತರಸ, ನಾರಾಯಣ ಬಲ್ಲಾಳ, ಸೇವ ನಮಿರಾಜಮಲ್ಲ, ಆರ್.ಬಸವರಾಜ, ವೆಂ.ಮು.ಜೋಶಿ, ವೀರಭದ್ರ, ಎನ್.ಎಸ್.ಚಿದಂಬರರಾವ್, ಪ.ಸು.ಭಟ್ಟ, ಟಿ.ಕೆ.ರಾಮರಾವ್, ದಯಾನಂದ ತೊರ್ಕೆ, ಶಾಂತಾರಾಮ ಸೋಮಯಾಜಿ ಮುಂತಾದವರು ಉತ್ತಮ ಕಥೆಗಳನ್ನು ಸೃಷ್ಟಿಸಿದ್ದಾರೆ. ಸುಧಾಕರ (ಕಣ್ಣೆ ಕಿತ್ತ ಹಸು, ಗರಿಕೆ ಬೇರು), ಬೆಸಗರಹಳ್ಳಿ ರಾಮಣ್ಣ (ನೆಲದ ಒಡಲು, ಗರ್ಜನೆ), ಜೀಶಂಪ (ಕಾವಲುಗಾರ ಮತ್ತು ಇತರ ಕಥೆಗಳು, ಮಬ್ಬು ಜಾರಿದ ಕಣಿವೆಯಲ್ಲಿ) - ಇವರ ಕಥೆಗಳು ಹಳ್ಳಿಯ ಜೀವನವನ್ನು ದಟ್ಟವಾಗಿ ಮೈಗೂಡಿಸಿಕೊಂಡು, ಆಡುಭಾಷೆಯ ಒರಟುತನ, ನಯನಾಜೂಕು, ಸೊಗಡನ್ನು ಭಾಷೆಯ ಬಳಕೆಯಲ್ಲಿ ಹದಗೊಳಿಸಿ, ಅನುಭವದ ತೀವ್ರತೆಯಿಂದ ಬರೆದಂಥವು. ಗ್ರಾಮಜೀವನದ ವಿವಿಧ ಮುಖಗಳ ಚಿತ್ರಣ ಇವರ ಕಥೆಗಳಲ್ಲಿ ಜೀವಂತವಾಗಿ ಮೂಡಿಬಂದಿದೆ.

ಅನೇಕ ಲೇಖಕಿಯರು ಉತ್ತಮ ಕಥೆಗಳನ್ನು ರಚಿಸಿದ್ದಾರೆ. ತ್ರಿವೇಣಿ, ವಾಣಿ, ಅನುಪಮಾ ನಿರಂಜನ, ಆರ್ಯಾಂಬಾ ಪಟ್ಟಾಭಿ, ಗೀತಾ ಕುಲಕರ್ಣಿ, ವೀಣಾ ಶಾಂತೇಶ್ವರ, ಈಚನೂರು ಶಾಂತ, ಎಚ್.ವಿ.ಸಾವಿತ್ರಮ್ಮ, ಜಯಲಕ್ಷ್ಮಿ ಶ್ರೀನಿವಾಸನ್, ಎಂ.ಕೆ.ಜಯಲಕ್ಷ್ಮಿ, ಶಾಂತಾದೇವಿ ಕಣವಿ, ಆನಂದಿ ಸದಾಶಿವರಾವ್, ಎಚ್.ಎಸ್.ಕಾತ್ಯಾಯಿನಿ, ರಾಜಲಕ್ಷ್ಮಿ ಎನ್.ರಾವ್, ಶಾಂತಾದೇವಿ ಮಾಳವಾಡ, ಚಂಪಾ ಮಹಿಷಿ, ಸುಶೀಲಾ ಕೊಪ್ಪರ, ಎಚ್.ಎಸ್.ಪಾರ್ವತಿ, ಚಿತ್ರಲೇಖ, ನಿರುಪಮಾ,

ಮಲ್ಲಿಕಾ, ಎಚ್.ಆರ್.ಲೀಲಾವತಿ, ಲಲಿತಾಂಬ ಚಂದ್ರಶೇಖರ್, ಕುಸುಮಾ ಎಸ್. ಕುಲಗಾಣ, ವಿಶಾಲಾಕ್ಷಿ ಲಕ್ಷ್ಮಣಗೌಡ, ನೀಳಾದೇವಿ, ಪ್ರೇಮಾಭಟ್, ಎ.ಪಿ.ಮಾಲತಿ, ವೈದೇಹಿ, ಎಂ.ಎಸ್.ವೇದಾ, ಸಾರಾ ಅಬೂಬಕರ್, ಗೀತಾ ನಾಗಭೂಷಣ, ಬಾನು ಮುಷ್ತಾಕ್, ಭಾಗೀರಥಿ ಹೆಗಡೆ, ಹೇಮಾ ಪಟ್ಟಣಶೆಟ್ಟಿ, ಗಂಗಾ ಪಾದೇಕಲ್ ಮುಂತಾದವರು ಸೊಗಸಾದ ಕಥೆಗಳನ್ನು ರಚಿಸಿದ್ದಾರೆ.

ಸ್ವಾತಂತ್ರ್ಯ ಬಂದ ಕೆಲವೇ ವರ್ಷಗಳಲ್ಲಿ ಕನ್ನಡದಲ್ಲಿ ನವ್ಯ ಪಂಥವೊಂದು ಉದಯವಾಯಿತು. ನವೋದಯ ಹಾಗೂ ಅನಂತರ ಬಂದ ಪ್ರಗತಿಶೀಲ ಪಂಥಕ್ಕೆ ಇವರು ಸ್ವಲ್ಪ ಭಿನ್ನರಾದರು. ಮನಸ್ಸಿನ ಬೆನ್ನು ಹತ್ತಿ ಅದರ ಸಂಕೀರ್ಣತೆಗಳನ್ನು ಬಿಚ್ಚಿ ತೋರಿಸುವ ಸಾಹಸ ಮಾಡಿದರು. ಇದರಿಂದಾಗಿ ಹಲವು ಮನೋವೈಜ್ಞಾನಿಕ ಕಥೆಗಳು ಹುಟ್ಟಿಬಂದುವು. ಕಥಾ ಪ್ರಪಂಚದಲ್ಲೂ ನವ್ಯತೆ ಮೂಡಿತು. ಈ ದಿಶೆಯಲ್ಲಿ ರಾಮಚಂದ್ರ ಶರ್ಮರು ಸಂಗಮ, ಏಳನೆಯ ಜೀವ, ಸೆರಿಗಿನ ಕೆಂಡ ಇಂಥ ಕೆಲವು ಮಾದರಿಯ ನವ್ಯಕಥೆಗಳನ್ನು ಬರೆದರು. ಯು.ಆರ್.ಅನಂತಮೂರ್ತಿಯವರ ಎಂದೆಂದೂ ಮುಗಿಯದ ಕಥೆ ನವ್ಯ ಕಥೆಗಳ ಪ್ರಾತಿನಿಧಿಕ ಸಂಗ್ರಹ. ಅನಂತರ ಪ್ರಶ್ನೆ, ಮೌನಿ ಸಂಕಲನಗಳು ಪ್ರಕಟಗೊಂಡಿವೆ. ಶಾಂತಿನಾಥ ದೇಸಾಯಿ (ಮಂಜುಗಡ್ಡೆ, ಕ್ಷಿತಿಜ, ದಂಡೆ), ಯಶವಂತ ಚಿತ್ತಾಲ (ಸಂದರ್ಶನ, ಆಬೋಲಿನ, ಆಟ, ಕತೆಯಾದಳು ಹುಡುಗಿ), ಪಿ.ಲಂಕೇಶ್, (ನಾನಲ್ಲ, ಕೆರೆಯ ನೀರನು ಕೆರೆಗೆ ಚೆಲ್ಲಿ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ), ಕೆ.ಸದಾಶಿವ (ತುಣುಕುಗಳು, ನಲ್ಲಿಯಲ್ಲಿ ನೀರು ಬಂತು), ಟಿ.ಜಿ.ರಾಘವ (ಜ್ವಾಲೆ ಆರಿತು), ಕಾಮರೂಪಿ (ಒಂದು ತೊಲ ಪುನುಗು ಮತ್ತು ಇತರ ಕಥೆಗಳು), ಗಿರಡ್ಡಿ ಗೋವಿಂದರಾಜ (ಆ ಮುಖಾ ಈ ಮುಖಾ), ಪೂರ್ಣಚಂದ್ರ ತೇಜಸ್ವಿ (ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟ್ ಆಫೀಸು) ಮುಂತಾದವರು ಹಲವಾರು ಉತ್ತಮ ನವ್ಯಕಥೆಗಳನ್ನು ನೀಡಿದ್ದಾರೆ.

80ರ ದಶಕ ಕನ್ನಡ ಕಥಾದಿಗಂತ ವಿಸ್ತರಿಸಿದ ಕಾಲವಾಗಿದ್ದು ಕನ್ನಡದ ಸಣ್ಣಕಥೆಗಳ ಸುಗ್ಗಿಯನ್ನೇ ಕಾಣಬಹುದಾಗಿದೆ. ಈ ಅವಧಿಯಲ್ಲಿ ಅನೇಕ ಉತ್ತಮ ಕಥೆಗಾರರು ಸೃಷ್ಟಿಯಾದರು. ನವ್ಯಕಥೆಯ ಮುಂದುವರಿದ ಕೊಂಡಿಯಾಗಿ, ಅದಕ್ಕಿಂತ ಭಿನ್ನವಾಗಿ ಸಣ್ಣಕಥೆ ರೂಪತಾಳತೊಡಗಿತು. ಶ್ರೀಕೃಷ್ಣ ಆಲನಹಳ್ಳಿ, (ತಪ್ತ, ಫೀನಿಕ್ಸ್), ಬರಗೂರು ರಾಮಚಂದ್ರಪ್ಪ (ಸುಂಟರಗಾಳಿ), ಟಿ.ಎಂ.ಸುಬ್ಬರಾಯ, ಹಿ.ಮ.ಬಸವಯ್ಯ, (ಗಂಟು), ಎಂ.ಜಿ.ಈಶ್ವರ್, ಲಕ್ಷ್ಮಣ ಕೊಡಸೆ, ರಾಮದಾಸ್ (ಸೇಡು), ಈಶ್ವರ ಚಂದ್ರ, ಜಯಂತ ಕಾಯ್ಕಿಣಿ, ಬಿ.ವಿ.ವೈಕುಂಠರಾಜು, ರಾಮಚಂದ್ರದೇವ (ದಂಗೆಯ ಪ್ರಕರಣ), ಜಿ.ಎಸ್.ಸದಾಶಿವ (ಮೀಸೆಯವರು) ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ನವ್ಯತೆ ಕನ್ನಡ ಸಣ್ಣಕಥೆಯ ವಸ್ತು, ಶೈಲಿಯಲ್ಲಿ ಬದಲಾವಣೆ ತಂದಿತು. ತಂತ್ರದಲ್ಲೂ ಅನೇಕ ಬದಲಾವಣೆಗಳನ್ನು ಮೂಡಿಸಿತು. ಭಾಷೆಯ ಬಳಕೆಯ ದೃಷ್ಟಿಯಿಂದ ಈ ಕಥೆಗಾರರು ಅಗಾಧವಾದ ಕೆಲಸ ಮಾಡಿದ್ದಾರೆ. ಇವರ ಕೃತಿಗಳಲ್ಲಿ ತಂತ್ರ, ಅಭಿವ್ಯಕ್ತಿ ಅನಿವಾರ್ಯವಾಗಿವೆ. ಅನುಭವವನ್ನು ಅರಗಿಸಿಕೊಂಡು ಅದರಿಂದ ದೂರ ನಿಂತು ತಾದಾತ್ಮ್ಯವನ್ನು ಸಾಧಿಸಿ ವಿಮರ್ಶಕಪ್ರಜ್ಞೆಯನ್ನು ಇಟ್ಟುಕೊಂಡು ಕೃತಿರಚನೆಗೆ ತೊಡಗಿದರು. ವೀರ್ಯವತ್ತಾದ ಶೈಲಿ ಇವರದು. ನವೋದಯ ಹಾಗೂ ಪ್ರಗತಿಶೀಲ ಕಥೆಗಾರರಿಗಿದ್ದಂತೆ ವಿರೋಧಿಸಲಿಕ್ಕೆ ನಿಶ್ಚಿತ ಮೌಲ್ಯಗಳಿರಲಿಲ್ಲ. ಜೀವನದಲ್ಲಿ ಮಾರ್ಗದರ್ಶಕವಾಗುವ ಸಾಮಾನ್ಯ ಮೌಲ್ಯಗಳು ಉಂಟೆ ಎಂಬುದೇ ಇವರ ಪ್ರಶ್ನೆ. ಆದ್ದರಿಂದ ಇಡಿಯ ಸಮಾಜದ ಸಮಸ್ಯೆಗಳಿಗಿಂತ ವೈಯಕ್ತಿಕ ಸಮಸ್ಯೆಗಳಿಗೇ ಇವರ ಕಥೆಗಳಲ್ಲಿ ಹೆಚ್ಚು ಒತ್ತು ಬಿತ್ತು. ಇಂಥ ವೈಯಕ್ತಿಕ ಆಲೋಚನೆಗಳು, ಅನುಭವದ ಉತ್ಕಟತೆಯ ಮೂಲಕ ಸಾರ್ವತ್ರಿಕವಾಗಬಲ್ಲುದೆಂಬುದು ಇವರ ಆಶಯವಾಗಿತ್ತು. ಸಾಮಾಜಿಕ ಬದಲಾವಣೆಗಳನ್ನು ಇವರು ವ್ಯಕ್ತಿಯ ಸಂವೇದನೆಯ ಮೇಲಾಗುವ ಪರಿಣಾಮಗಳಲ್ಲಿ ಗ್ರಹಿಸಿದರು. ವ್ಯಕ್ತಿಯ ಮನಸ್ಸಿನ ಹೊಯ್ದಾಟ ತುಯ್ದಾಟಗಳ ರಹಸ್ಯಗಳನ್ನು ಸಂಕೋಚವಿಲ್ಲದೆ ಚಿತ್ರಿಸಿದರು. ಪ್ರಜ್ಞೆಯ ಬೆಲೆಯುಳ್ಳ ಸ್ಥಿತಿಗಳನ್ನು ಹಿಡಿದಿಡುವುದು ಇವರ ಉದ್ದೇಶ. ಇಂಥ ಸೂಕ್ಷ್ಮ ಹಾಗೂ ಸಂಕೀರ್ಣ ಉದ್ದೇಶಗಳಿಗೆ ತೆತ್ತುಕೊಂಡ ಇವರ ಬರೆವಣಿಗೆಯೂ ಒಮ್ಮೊಮ್ಮೆ ಜಟಿಲತೆಯನ್ನು ಪಡೆದುಕೊಂಡಿತು. ಕುತೂಹಲ ಕೆರಳಿಸುವ ನಿರೂಪಣಾಕ್ರಮವನ್ನು ಬಿಟ್ಟು ಕೊಟ್ಟು ಘಟನೆಗಳ ಹಿಂದಿನ ಧ್ವನಿಯ ಮೇಲೆ, ಅನುಭವದ ಅರ್ಥವಿಶ್ಲೇಷಣೆಯ ಮೇಲೆ ಈ ಕಥೆಗಾರರು ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಈ ಪ್ರಯತ್ನದಲ್ಲಿ ಘಟನೆಗಳ ತಾರ್ಕಿಕ ಹೊಂದಾಣಿಕೆಯನ್ನು ಉದ್ದೇಶಪೂರ್ವಕವಾಗಿ ನಿರಾಕರಿಸಿದ್ದರು. ಪ್ರಜ್ಞಾಪ್ರವಾಹ ತಂತ್ರದ ಮೂಲಕ ಘಟನೆ ಹಾಗೂ ಪರಿಸರದ ವಿವರಗಳನ್ನೆಲ್ಲ, ಸಾಂಕೇತಿಕವಾಗಿ ಬಳಸಿಕೊಂಡು ಅನುಭವ, ಅರ್ಥದ ಪದರುಗಳನ್ನು ವಿಸ್ತರಿಸಿದರು. ಹೀಗಾಗಿ ಸಣ್ಣಕಥೆ ಕವಿತೆಗೆ ತೀರಾ ಹತ್ತಿರವಾಯಿತು. ಭಾಷೆಯನ್ನು ಅತ್ಯಂತ ಕಾಳಜಿಯಿಂದ ಬಳಸತೊಡಗಿದರು. ಅನುಭವದ ದೃಷ್ಟಿಯಿಂದಲೂ ಸರಳಗೊಳಿಸದೆ ಅದರ ಪರ ವಿರೋಧಗಳನ್ನು ಕಥೆಯ ಹಾಸಿನಲ್ಲೇ ನಿರೀಕ್ಷಿಸಿ ವಿವೇಚಿಸಿದ್ದರು. ವಾಸ್ತವವಾದದ ನಿರ್ಬಂಧವನ್ನು ಮುರಿದು ಮಾನವಶಾಸ್ತ್ರ ಹಾಗೂ ಅಸ್ತಿತ್ವವಾದಗಳ ಪ್ರಭಾವವನ್ನು ಕಥೆಗಳಲ್ಲಿ ಮೂಡಿಸಿದರು. ನವ್ಯ ಕಥೆಗಾರರು ತಮ್ಮ ಅನುಭವ ಕ್ಷೇತ್ರಗಳನ್ನು ಸಂಕುಚಿತಗೊಳಿಸುತ್ತಿದ್ದಾರೆಂದೂ ಕಾಮಕ್ಕೆ ಅವಾಸ್ತವ ಮಹತ್ತ್ವ ಕೊಟ್ಟು ಅಶ್ಲೀಲವಾಗಿ ಬರೆಯುತ್ತಾರೆಂದೂ ಸಾಮಾನ್ಯ ಓದುಗರಿಗೆ ಇವರ ಕಥೆಗಳು ಅರ್ಥವಾಗುವುದಿಲ್ಲವೆಂದೂ ಟೀಕೆಗಳು ಬಂದವು. ಆದರೂ ನವ್ಯ ಕಥೆಗಳ ಬರೆವಣಿಗೆ ವಿಪುಲವಾಗಿ ಸಾಗಿಬಂತು. ಕನ್ನಡ ಗದ್ಯ ಅನನ್ಯತೆಯನ್ನು ಪಡೆದ ಸಂದರ್ಭವಿದು. ಗದ್ಯವೂ ಕಾವ್ಯಮಯವಾಗಬಲ್ಲದೆಂಬ ಸಂಗತಿಯನ್ನು ನವ್ಯಕಥೆಗಾರರು ತೋರಿಸಿಕೊಟ್ಟರು.

ದೇವನೂರು ಮಹಾದೇವ ಅವರ ದ್ಯಾವನೂರು ಕಥಾ ಸಂಕಲನದ ಪ್ರಕಟಣೆಯ ಅನಂತರ ದಲಿತ ಸಂವೇದನೆಗಳ ಹೊಸ ದನಿಯೊಂದು ಕನ್ನಡ ಸಣ್ಣಕಥಾವಾಹಿನಿಯನ್ನು ಸೇರಿಕೊಂಡಿತು. ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ, ತುಳಿತಕ್ಕೊಳಗಾದವರ, ಅದುವರೆಗೂ ಅನಾವರಣವಾಗದಿದ್ದ ಬದುಕು, ಆ ಬದುಕಿನ ಸಂಕೀರ್ಣಗಳು ಕಥೆಯಲ್ಲಿ ಮೈಪಡೆಯತೊಡಗಿದವು. ಹೊಸ ಸಂವೇದನೆಗಳು, ಹೊಸ ಅನುಭವಗಳು, ವಿಶಿಷ್ಟವಾದ ದೇಸಿಯ ಅಭಿವ್ಯಕ್ತಿ, ಆಡುಭಾಷೆಯ ಬಳಕೆಯಿಂದಾಗಿ ಸಣ್ಣಕಥೆ ಹೊಸ ಆಯಾಮವನ್ನು ಪಡೆದುಕೊಂಡಿತು. ಕುಂ.ವೀರಭದ್ರಪ್ಪ, ಮೊಗಳ್ಳಿಗಣೇಶ್, ಅಮರೇಶ ನುಗಡೋಣಿ ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ದಲಿತಸಂವೇದನೆಯ ಇನ್ನೊಂದು ಮುಖವೇ ಆದ ಬಂಡಾಯ ಸಂವೇದನೆಯ ಕಥೆಗಳೂ ಅನಂತರದಲ್ಲಿ ಕನ್ನಡದಲ್ಲಿ ಪ್ರಕಟಗೊಂಡವು. ಕನ್ನಡದ ಸಂದರ್ಭದಲ್ಲಿ ಮುಸ್ಲಿಂ ಸಂವೇದನೆಯ ಅನೇಕ ಕಥೆಗಾರರೂ ಕನ್ನಡ ಸಣ್ಣಕಥೆಯ ಕ್ಷಿತಿಜವನ್ನು ಹಿಗ್ಗಿಸುವಲ್ಲಿ ತಮ್ಮ ಪಾಲಿನ ಕಾಣಿಕೆಯನ್ನು ಸಲ್ಲಿಸಿದರು. ಹೀಗೆ ಕನ್ನಡ ಸಣ್ಣಕಥಾ ಪ್ರಪಂಚ ಹೊಸ ಸಂವೇದನೆಗಳನ್ನು ಆಯಾ ಕಾಲ ಸಂದರ್ಭದ ಯುಗಧರ್ಮವನ್ನು ಒಳಗೊಳ್ಳುತ್ತ ಶ್ರೀಮಂತವಾಗುತ್ತ ಸಾಗಿದೆ.

ಸಣ್ಣಕಥೆಯ ಕ್ಷೇತ್ರದಲ್ಲಿ ಅನೇಕ ಕಥೆಗಾರರು ತಮ್ಮ ಸೃಜನಶೀಲತೆಯಿಂದ ಗಮನ ಸೆಳೆದಿದ್ದಾರೆ. ಅಂಥವರ ಹೆಸರುಗಳಲ್ಲಿ ಕೆಲವನ್ನು ಹೀಗೆ ಪಟ್ಟಿ ಮಾಡಬಹುದು: ಕಾಳೇಗೌಡ ನಾಗವಾರ, ರಾಜಶೇಖರ ನೀರಮಾನ್ವಿ, ಎಂ.ಎಸ್.ಕೆ.ಪ್ರಭು, ರಾಘವೇಂದ್ರ ಖಾಸನೀಸ, ಎಸ್.ದಿವಾಕರ, ಶಾಂತರಸ, ವೀರಭದ್ರ, ಕರೀಗೌಡ ಬೀಚನಹಳ್ಳಿ, ಕೆ.ಸತ್ಯನಾರಾಯಣ, ರಾಘವೇಂದ್ರ ಪಾಟೀಲ, ವಿವೇಕ ಶಾನಭಾಗ, ಕೆ.ವಿ.ತಿರುಮಲೇಶ್, ನಾ.ಡಿಸೋಜ, ಬಿ.ಶಾಮಸುಂದರ, ರಮೇಶ ಹುಲ್ಲುಕೆರೆ, ಕ್ಯಾತನಹಳ್ಳಿ ರಾಮಣ್ಣ, ಜವರನಹಳ್ಳಿ ಸಿದ್ದಪ್ಪ, ಕಾ.ತ.ಚಿಕ್ಕಣ್ಣ, ಬೊಳವಾರು ಮಹಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಅಬ್ದುಲ್ ರಶೀದ್, ಬಿ.ಎಂ.ಬಷೀರ್, ರಫೀಕ್‌ಉಪ್ಪಿನಂಗಡಿ, ಕುಕ್ಕರಹಳ್ಳಿ ಬಸವರಾಜು, ಕೇಶವರೆಡ್ಡಿ ಹಂದ್ರಾಳ ಮೊದಲಾದವರು.

ಪಂಜೆಯವರು, ಶ್ರೀನಿವಾಸರಿಂದ ಹಿಡಿದು ಇಂದಿನವರೆಗೆ ಸುಮಾರು ನೂರು ವರುಷಗಳ ಕಥೆಗಾರರ ಕೃತಿಗಳು ಕನ್ನಡ ಸಣ್ಣಕಥೆ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಹಾಗೆಂದ ಮಾತ್ರಕ್ಕೆ ಸಣ್ಣಕಥಾ ಪ್ರಪಂಚ ಪರಿಪೂರ್ಣವಾಗಿದೆ ಎಂದಲ್ಲ. ಇತ್ತೀಚೆಗೆ ಇತರ ಭಾಷೆಗಳಿಂದ ಅನೇಕ ಕಥೆಗಳು ಅನುವಾದವಾಗಿ ಬರುತ್ತಿರುವುದು ಒಂದು ಸಂತೋಷದಾಯಕ ಸಂಗತಿ. ನವಕರ್ನಾಟಕ ಪ್ರಕಾಶನ ನಿರಂಜನರ ಸಂಪಾದಕತ್ವದಲ್ಲಿ ವಿಶ್ವಕಥಾಕೋಶ ಮಾಲಿಕೆಯಲ್ಲಿ ಅನುವಾದಿತ ಕಥೆಗಳ 25 ಸಂಪುಟಗಳನ್ನು ಪ್ರಕಟಿಸಿರುವುದು ಭಾರತೀಯ ಭಾಷೆಗಳಲ್ಲಿಯೇ ಒಂದು ದಾಖಲೆ. ಹಾಗೆಯೇ

ಕನ್ನಡದ ಅನೇಕ ಉತ್ತಮ ಕಥೆಗಳು ಭಾರತೀಯ ಹಾಗೂ ಹೊರ ದೇಶಗಳ ಭಾಷೆಗೆ ಅನುವಾದವಾಗಿರುವುದು ಗಮನಿಸಬೇಕಾದ ಅಂಶ. ಇದೆಲ್ಲವನ್ನೂ ಗಮನಿಸಿದಾಗ ಕನ್ನಡ ಸಣ್ಣಕಥೆಗಳಿಗೆ ಉಜ್ವಲ ಭವಿಷ್ಯವಿದೆ ಎನ್ನಬಹುದು.

ಕನ್ನಡದಲ್ಲಿ ಸಣ್ಣಕಥೆಗಳು ಕೇವಲ ಪತ್ರಿಕೆಗಳಲ್ಲಿ ಕಾಣುತ್ತಿದ್ದ ಕಾಲವೊಂದಿತ್ತು. ಈಗ ಅವು ಹಲವಾರು ರೂಪದ ಸಂಗ್ರಹದಲ್ಲಿ ಕಾಣುತ್ತಿವೆ. ಲೇಖಕರು ಹೊರತರುವ ಸಂಗ್ರಹಗಳಲ್ಲದೆ ಪ್ರಸಿದ್ಧ ಲೇಖಕರ ಪ್ರಾತಿನಿಧಿಕ ಕಥೆಗಳ ಸಂಗ್ರಹಗಳೇ ಹೊರಬರುತ್ತಿವೆ. ಕನ್ನಡ ಸಾಹಿತ್ಯ ಪರಿಷತ್ತು ಉತ್ತಮ ಕಥೆಗಳನ್ನು ಆಯ್ದು ಪ್ರಕಟಿಸಿದೆ. ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ ಉತ್ತಮ ಸಣ್ಣಕಥೆಗಳ ಸಂಗ್ರಹಗಳನ್ನು ತಂದಿವೆ. ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಶತಮಾನದ ಸಣ್ಣಕಥೆಗಳು ಎಂಬ ಸಂಕಲನ ಗ್ರಂಥವನ್ನು ಪ್ರಕಟಿಸಿದೆ (2001). ಸಾಲದ್ದಕ್ಕೆ ಒಬ್ಬನೇ ಲೇಖಕನ ಆಯ್ದ ಕಥೆಗಳ ಸಂಕಲನಗಳೂ ಬರುತ್ತಿವೆ. ವಿವಿಧ ಲೇಖಕರ ಕಥೆಗಳನ್ನೊಳಗೊಂಡ ಬೃಹತ್ ಕಥಾಸಂಕಲನಗಳೂ ಈಚೆಗೆ ಬೆಳಕು ಕಂಡಿವೆ. ಇದಲ್ಲದೆ ಕನ್ನಡ ನಾಡಿನ ವಿವಿಧ ಲೇಖಕಿಯರ ಕಥೆಗಳ ಸಂಕಲನಗಳೂ ಹೊರಬಂದಿವೆ.

ಪತ್ರಿಕೆಗಳ ಪ್ರೋತ್ಸಾಹವೂ ಮುಂದುವರಿದಿದೆ. ಇಂದು ಯಾವ ಪತ್ರಿಕೆಯೂ ಕಥೆಗಳನ್ನು ಪ್ರಕಟಿಸದೆ ಇಲ್ಲ. ಎಲ್ಲ ಪತ್ರಿಕೆಗಳಲ್ಲೂ ಸಣ್ಣ ಕಥಾ ವಿಭಾಗ ಇದ್ದೇ ಇದೆ. ಒಂದು ದೃಷ್ಟಿಯಿಂದ ಸಣ್ಣಕಥೆಗಳು ಇಷ್ಟೊಂದು ಸಂಖ್ಯೆಗಳಲ್ಲಿ ಹೊರಬರಲು ನಾಡಿನ ಪತ್ರಿಕೆಗಳು ಮಹತ್ತ್ವಪೂರ್ಣಪಾತ್ರ ವಹಿಸಿವೆ. ಕೆಲವು ಪತ್ರಿಕೆಗಳು ವಿಶೇಷ ಸಂದರ್ಭಗಳಲ್ಲಿ (ದೀಪಾವಳಿ ವಿಶೇಷಾಂಕ, ಯುಗಾದಿ ವಿಶೇಷಾಂಕ ಇತ್ಯಾದಿ) ಆಕರ್ಷಕ ಮೊತ್ತದ ಬಹುಮಾನಗಳನ್ನಿಟ್ಟು ಉತ್ತಮ ಸಣ್ಣಕಥೆಗಳನ್ನು ಆಹ್ವಾನಿಸುತ್ತಿವೆ. ಅಲ್ಲದೆ ಹಲವಾರು ಸಾಹಿತ್ಯಕ ಸಂಘಸಂಸ್ಥೆಗಳು ಆಗಾಗ್ಗೆ ಸ್ಪರ್ಧೆಯನ್ನು ಏರ್ಪಡಿಸಿ ಸಣ್ಣಕಥೆಗಳನ್ನು ಆಹ್ವಾನಿಸುತ್ತಿವೆ. ಈ ಎಲ್ಲ ಕಾರಣಗಳಿಂದ ಸಣ್ಣ ಕಥಾಪ್ರಪಂಚ ಸಮೃದ್ಧವಾಗುತ್ತ ಸಾಗಿದೆ. (ಟಿ.ಎಚ್.ಎಚ್.,ಜಿ.ಜಿ.)

**ಕನ್ನಡದಲ್ಲಿ ಸಾಂಗತ್ಯ ಕಾವ್ಯ** : ಕನ್ನಡದಲ್ಲಿ ಸಾಂಗತ್ಯಕೃತಿಗಳು ವಿಪುಲವಾಗಿವೆ. ಸಾಂಗತ್ಯದ ಪ್ರಾಚೀನತೆಯ ಬಗೆಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಕರ್ನಾಟಕ ಕವಿಚರಿತೆಕಾರರು ಸು.1233ರ ಶಿಶುಮಾಯಣನೇ ಪ್ರಥಮ ಸಾಂಗತ್ಯಕಾರನೆಂದು ಹೇಳಿದ್ದಾರೆ. ಆದರೆ ಈತನ ಕಾಲ ಹದಿನೈದನೆಯ ಶತಮಾನದ ಕಡೆಯ ಭಾಗ ಎಂದು ತರುವಾಯದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸದ್ಯದಲ್ಲಿ ಸು.1410ರಲ್ಲಿದ್ದ ದೇಪರಾಜನ ಸೊಬಗಿನ ಸೋನೆಯೇ ಪ್ರಥಮ ಸಾಂಗತ್ಯಕೃತಿ.

ಸಾಂಗತ್ಯ ಅಂಶಗಣಗಳಿಂದ ಸಂಘಟಿತವಾದುದು. ಇದರಲ್ಲಿ ಒಟ್ಟು ಹದಿನಾಲ್ಕು ಗಣಗಳಿರುತ್ತವೆ. ಅದರ ಒಂದು ಮತ್ತು ಮೂರನೆಯ ಪಾದಗಳು ಒಂದು ಸಮನಾಗಿಯೂ ಎರಡು ಮತ್ತು ನಾಲ್ಕನೆಯ ಪಾದಗಳು ಮತ್ತೊಂದು ಸಮನಾಗಿಯೂ ಇರುತ್ತವೆ. ಒಂದು ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ನಾಲ್ಕು ವಿಷ್ಣುಗಣಗಳೂ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಎರಡೆರಡು ವಿಷ್ಣುಗಣಗಳೂ ಕೊನೆಯಲ್ಲಿ ಒಂದು ಬ್ರಹ್ಮಗಣವೂ ಇರುತ್ತವೆ. ಮಾದರಿಗಾಗಿ ಒಂದು ಪದ್ಯವನ್ನು ನೋಡಬಹುದು.

ವಿ ವಿ ವಿ ವಿ
ಪರಮಪ | ರಂಜ್ಯೋತಿ | ಕೋಟಿಚಂ | ದ್ರಾದಿತ್ಯ
ವಿ ವಿ ಬ್ರ
ಕಿರಣಸು | ಜ್ಞಾನಪ್ರ | ಕಾಶ |
ವಿ ವಿ ವಿ ವಿ
ಸುರರಮ | ಕುಟಮಣಿ | ರಂಜಿತ | ಚರಣಾಬ್ದ
ವಿ ವಿ ಬ್ರ
ಶರಣಾಗು | ಪ್ರಥಮಜಿ | ನೇಶ (ಭರತೇಶವೈಭವ)

ಸಾಂಗತ್ಯ ಹಾಡುಗಬ್ಬದ ಜಾತಿಗೆ ಸೇರಿದುದು. ಆದುದರಿಂದ ಅರ್ಥ ಸ್ವಾರಸ್ಯಕ್ಕಾಗಿ, ಹಾಡಿನ ಸೌಲಭ್ಯಕ್ಕಾಗಿ ವಿಷ್ಣುಗಣದ ಸ್ಥಾನದಲ್ಲಿ ಬ್ರಹ್ಮವೋ ರುದ್ರವೋ ಬ್ರಹ್ಮಗಣದ ಸ್ಥಾನದಲ್ಲಿ ವಿಷ್ಣುವೋ ರುದ್ರವೋ ಪರ್ಯಾಯವಾಗಿ ಬರುವುದುಂಟು. ಒಂದು ಉದಾಹರಣೆ:

ಬ್ರ ವಿ ರು ವಿ
ಕುರುರಾ | ಯನಮೈದು | ನನಕೊಲೆಗೆ | ಧರ್ಮಜ
ವಿ ವಿ ಬ್ರ
ನರನಕ | ಳುಪುವತೆ | ಐದೊಳು |
ವಿ ವಿ ವಿ ವಿ
ನರಪತಿ | ಯೊಡಬಟ್ಟು | ಕಳುಹಿದ | ರಾಮನ
ವಿ ವಿ ಬ್ರ
ಪರಬಲ | ಜಲನಿಧಿ | ಯೆಡೆಗೆ | (ರಾಮನಾಥಚರಿತೆ)

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಆದಿಪ್ರಾಸ ಒಂದು ಅಪರಿಹಾರ್ಯವಾದ ಅಂಶ. ಸಾಂಗತ್ಯಕಾರರೂ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಆದರೆ ಕೆಲವು ಸಾಂಗತ್ಯಕೃತಿಗಳಲ್ಲಿ ಪ್ರಾಸೋಲ್ಲಂಘನೆಯಾಗಿರುವುದನ್ನು ಕಾಣಬಹುದು.

ಸಮಯ ಕಾಲವನರಿತು ಗೆಲಬೇಕು ವೈರಿಯ
ಮುಳುಗು ಮುಗ್ಗಿದ ಕಾಲದೊಳಗೆ
ನರಿ ಬಂದು ಗುಂಡಿಯ ಕೆಡೆದಾಗ ಜನಕೊಂದು
ಯಿಡಬೇಕು ಕಲ್ಲೆಂಬ ಗಾದೆ

(ಕುಮಾರರಾಮನ ಸಾಂಗತ್ಯಗಳು)

ಪ್ರಾಚೀನ ಕನ್ನಡ ಛಂದಃಕಾರರು ಸಾಂಗತ್ಯದ ಲಕ್ಷಣವನ್ನು ಹೇಳಿಲ್ಲ. ನಾಗವರ್ಮನ ಛಂದೋಂಬುಧಿಯಲ್ಲೂ ಜಯಕೀರ್ತಿಯ ಛಂದೋನುಶಾಸನದಲ್ಲೂ ಈಚಿನ ಇತರ ಕನ್ನಡ ಛಂದೋಗ್ರಂಥಗಳಲ್ಲಿಯೂ ಈಶ್ವರ ಕವಿಯ ಕವಿಜಿಹ್ವಾಬಂಧನದಲ್ಲೂ ನಂದಿಯ ನಂದಿಛಂದಸ್ಸಿನಲ್ಲೂ ಸಾಂಗತ್ಯದ ಉಲ್ಲೇಖವಿಲ್ಲ. ಕನ್ನಡ ಸಾಹಿತ್ಯದ ಪ್ರಥಮ ಸಾಂಗತ್ಯಕೃತಿಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವ ದೇಪರಾಜನ ಸೊಬಗಿನ ಸೋನೆ ಒಂದು ವಿಶಿಷ್ಟ ರೀತಿಯದು. ಈ ಕೃತಿಯಲ್ಲಿನ ಪ್ರತಿಯೊಂದು ಪದ್ಯದಲ್ಲಿಯೂ ಬ್ರಹ್ಮಗಣಗಳಿಗೆ ಪರ್ಯಾಯವಾಗಿ ವಿಷ್ಣುಗಣಗಳನ್ನು ಬಳಸಲಾಗಿದೆ. ಕೆಲವು ವಿದ್ವಾಂಸರು ಇದನ್ನು ಬ್ರಹ್ಮಗಣ ಮತ್ತು ಒಂದು ಅಂಶ ಎಂದು ಅಭಿಪ್ರಾಯ ಪಡುತ್ತಾರೆ.

ಸೊಬಗಿನ | ಸೋನೆಯ | ನೊಲಿದಾ | ಲಿಸಿ ಕೇಳೆ
ಸೊಬಗಿನೀ | ಸೋನೆಯೆ | ನಿಪಂ ಪ್ರಿಯೆ
ಕಬರಿಯಿಂ | ದೆಸೆವಕಂ | ಜರಿಮಾಳ | ವನವರಿ
ಸಬಲೆ ನೀ | ನೆಂದ ವಿ | ಕ್ರಮನೆಂದು

(ಸೊಬಗಿನ ಸೋನೆ)

ಆಧುನಿಕ ವಿದ್ವಾಂಸರಲ್ಲಿ ಕೆಲವರು ಗೀತಿಕೆಯ ಎರಡು ಪದಗಳ ರೂಪಾಂತರವೆ ಸಾಂಗತ್ಯವಾಗಿ ತೋರುವುದು (ಕನ್ನಡ ಕೈಪಿಡಿ) ಎಂದೂ ಸಾಂಗತ್ಯ ತ್ರಿಪದಿಯಿಂದ ಹೊರಟ ಮಟ್ಟೆಂದೂ ತ್ರಿಪದಿಯ ಚರಣವನ್ನು ಆವೃತ್ತಿ ಮಾಡಿ ಹಾಡುವ ರೂಢಿ ಸಾಂಗತ್ಯದ ರೂಪನಿರ್ಮಾಣಕ್ಕೆ ದಾರಿಯನ್ನು ಮಾಡಿತು (ಕನ್ನಡ ಛಂದೋವಿಕಾಸ) ಎಂದೂ ಅಭಿಪ್ರಾಯ ಪಟ್ಟಿದ್ದಾರೆ. ಗೀತಿಕೆಯಿಂದಾಗಲಿ, ತ್ರಿಪದಿ ಅಥವಾ ಪಿರಿಯಕ್ಕರದಿಂದಾಗಲಿ ಸಾಂಗತ್ಯ ಆವಿರ್ಭವಿಸಿತೆಂದು ಹೇಳುವುದು ಅಷ್ಟು ಸಮಂಜಸವಾಗಿ ತೋರುವುದಿಲ್ಲ. ಏಕೆಂದರೆ ಅದನ್ನು ಸಾಧಿಸುವುದು ಕಷ್ಟ. ಸಾಂಗತ್ಯ ಶುದ್ಧ ದೇಶೀಯ ಮಟ್ಟು. ಅಂಶಗಣ ಘಟಿತವಾದ ಸಾಂಗತ್ಯಕ್ಕಿಂತಲೂ ಪ್ರಾಚೀನವಾದ ತ್ರಿಪದಿ, ಕಾಲಕ್ರಮದಲ್ಲಿ ಮಾತ್ರಾಗಣಕ್ಕೆ ತಿರುಗಿದ್ದರೂ ಸಾಂಗತ್ಯ ಇಂದಿಗೂ ಅಂಶಗಣಘಟಿತವಾಗಿಯೇ ಉಳಿದುಕೊಂಡು ಬಂದಿರುವುದರಿಂದ ಇದಕ್ಕೆ ಪ್ರತ್ಯೇಕ ಅಸ್ತಿತ್ವವಿದ್ದಿತೆಂದು ಭಾವಿಸುವುದಕ್ಕೆ ಅವಕಾಶವುಂಟು.

ಕನ್ನಡ ಸಾಹಿತ್ಯದ ಸಾಂಗತ್ಯಚರಿತ್ರೆಯಲ್ಲಿ ಬಸವೇಶ್ವರ ವಿರಚಿತ ಕಾಲಜ್ಞಾನವೇ ಪ್ರಥಮ ಕೃತಿಯೆಂದು ಹೇಳಿ ಕರ್ಕಿಯವರು ಕವಿಚರಿತ್ರೆಯಿಂದ ಒಂದು ಪದ್ಯವನ್ನು ಉದಾಹರಿಸಿದ್ದಾರೆ:

ಮಳೆಯಿಲ್ಲ ಬೆಳೆಯಿಲ್ಲ ಹೊಳೆಯಿಲ್ಲ ಕೆರೆಯಿಲ್ಲ
ನೆಳಲಿಲ್ಲ ಉದಕ ಮುನ್ನಿಲ್ಲ
ಮೊಳೆಯಿಲ್ಲ ಸೂರ್ಯನ ಕಳೆಯಿಲ್ಲ ಗೆಲವಿಲ್ಲ
ಉಳಿವಿಲ್ಲ ಆ ಪಾಪಿಗಳಿಗೆ

(ಕನ್ನಡ ಛಂದೋವಿಕಾಸ)

ಈ ಪದ್ಯದಲ್ಲಿ ಪ್ರಧಾನವಾಗಿ ಎದ್ದುಕಾಣುವ ಅಂಶವೆಂದರೆ ಅಂಶಗಣಗಳಿಗೆ ಬದಲಾಗಿ ಮಾತ್ರಾಗಣಗಳು ಬಂದಿರುವುದು. ಪ್ರಥಮ ಸಾಂಗತ್ಯಕೃತಿಯೆಂದು ಭಾವಿಸಲಾಗಿರುವ ಈ ಕಾಲಾಜ್ಞಾನವಚನ ಬಸವೇಶ್ವರರ ಹೆಸರಿಗೆ ಆರೋಪಿಸಲ್ಪಟ್ಟಿರುವ ಪ್ರಕ್ಷಿಪ್ತ ಕೃತಿಯಾಗಿರಬಹುದು. ತರುವಾಯ ಕಾಣಿಸಿಕೊಳ್ಳುವ ಸಾಂಗತ್ಯಕಾರ ಕಾಲದ ದೃಷ್ಟಿಯಿಂದ ಸಂದಿಗ್ಧತೆಗೊಳಗಾಗಿರುವ ಶಿಶುಮಾಯಣ. ಆತನ ಕೃತಿಗಳು ತ್ರಿಪುರದಹನಸಾಂಗತ್ಯ ಮತ್ತು ಅಂಜನಾಚರಿತ್ರೆ, ಗುಣದ ದೃಷ್ಟಿಯಿಂದಲೂ ಗಾತ್ರದ ದೃಷ್ಟಿಯಿಂದಲೂ ಇವು ಮಿಗಿಲಾಗಿವೆ. ಅಂಜನಾಚರಿತ್ರೆ ಸಾಹಿತ್ಯ ಮತ್ತು ಐತಿಹಾಸಿಕ ದೃಷ್ಟಿಗಳಿಂದ ಉಲ್ಲೇಖಾರ್ಹವಾಗಿದೆ.

ಹದಿನಾರನೆಯ ಶತಮಾನದಲ್ಲಿ ಶ್ರೇಷ್ಠ ಸಾಂಗತ್ಯಕೃತಿಗಳು ಸೃಷ್ಟಿಯಾದವು. ಈ ಶತಮಾನದಲ್ಲಿ ಸುಮಾರು ಇಪ್ಪತ್ತೆಂಟು ಸಾಂಗತ್ಯಕೃತಿಗಳು ಹುಟ್ಟಿಕೊಂಡಿವೆ. ಮೂರನೆಯ ಮಂಗರಸನ ನೇಮಿಜಿನೇಶ ಸಂಗತಿ, ಪ್ರಭಂಜನಚರಿತೆ, ಶ್ರೀಪಾಲ ಚರಿತೆಗಳು, ನಂಜುಂಡನ ರಾಮನಾಥಚರಿತೆ, ಕನಕದಾಸರ ಮೋಹನತರಂಗಿಣಿ, ರತ್ನಾಕರವರ್ಣಿಯ ಭರತೇಶವೈಭವ, ರಾಮರಸ ವಿರೂಪಾಕ್ಷ, ಬೊಂಬೆಯ ಲಕ್ಕ, ಹಲಗ, ಓದುವಗಿರಿಯ ಇವರ ಸಾಂಗತ್ಯಕೃತಿಗಳು ಹೆಸರಿಸತಕ್ಕವು. ಈ ಶತಮಾನದ ಮತ್ತೊಂದು ಕೃತಿ ಕಿಕ್ಕೇರಿಯಾರಾಧ್ಯ ನಂಜುಂಡ ವಿರಚಿತ ಭೈರವೇಶ್ವರಕಾವ್ಯ. ಇದು ಛಂದಸ್ಸಿನ ದೃಷ್ಟಿಯಿಂದ ವಿದ್ವಾಂಸರ ಗಮನವನ್ನು ಸೆಳೆದಿದೆ. ಇದರ ಸಂಪಾದಕರು ಈ ಕಾವ್ಯವನ್ನು ಷಟ್ಪದಿಯೆಂದು ನಿರ್ಧರಿಸಿ ಪ್ರತಿಪದ್ಯವನ್ನೂ ಆರು ಪಾದಗಳಾಗಿ ವಿಂಗಡಿಸಿ ಅಚ್ಚುಮಾಡಿದ್ದಾರೆ. ಅವರ ಅಭಿಪ್ರಾಯದಂತೆ ಪ್ರತಿ ಪದ್ಯದ ಒಂದು ಎರಡು ನಾಲ್ಕು ಮತ್ತು ಐದನೆಯ ಪಾದಗಳು ಶರಷಟ್ಪದಿಯಲ್ಲೂ ಮೂರು ಮತ್ತು ಆರನೆಯ ಪಾದಗಳು ಕುಸುಮಷಟ್ಪದಿಯಲ್ಲೂ ರಚಿತವಾಗಿವೆ. ಒಂದು ಪದ್ಯದ ಬೇರೆ ಬೇರೆ ಪಾದಗಳು ಬೇರೆ ಬೇರೆ ಛಂದಸ್ಸಿನಲ್ಲಿ ರಚಿತವಾಗಿರುವುದು ಕನ್ನಡ ಸಾಹಿತ್ಯದಲ್ಲಿ ಎಲ್ಲೂ ಕಂಡುಬರುವುದಿಲ್ಲ. ವಾಸ್ತವವಾಗಿ ಈ ಕಾವ್ಯದ ಛಂದಸ್ಸು ಸಾಂಗತ್ಯ, ಷಟ್ಪದಿಯಲ್ಲ. ಪ್ರತಿ ಪದ್ಯದಲ್ಲೂ ಖಂಡ ಪ್ರಾಸವಿರುವುದೇ ಈ ಭ್ರಾಂತಿಗೆ ಕಾರಣ. ಈ ರೀತಿ ಖಂಡಪ್ರಾಸವನ್ನು ಒಳಕೊಂಡಿರುವ ಕೃತಿಗಳು ಇನ್ನೂ ಕೆಲವು ಕಂಡುಬರುತ್ತವೆ.

ಹದಿನೇಳನೆಯ ಶತಮಾನದಲ್ಲಿ ಸುಮಾರು ಅರವತ್ತು ಸಾಂಗತ್ಯ ಕೃತಿಗಳು ಹುಟ್ಟಿಕೊಂಡಿವೆ. ಸಂಖ್ಯಾದೃಷ್ಟಿಯಿಂದ ಈ ಶತಮಾನದ ಕೃತಿಗಳು ವಿಪುಲವಾಗಿದ್ದರೂ ಕಾವ್ಯಗುಣದ ದೃಷ್ಟಿಯಿಂದ ಹೇಳಿಕೊಳ್ಳುವಂಥವು ಹೆಚ್ಚಾಗಿಲ್ಲ. ಪಂಚಬಾಣನ ಭುಜಬಲಿಚರಿತೆ, ಶಾಂತಮಲ್ಲನ ಅನುಭವಮುದ್ರೆ, ಶೇಷಕವಿಯ ರುಕ್ಮಾಂಗದ ಚರಿತೆ, ತಿರುಮಲಾರ್ಯನ ಕರ್ಣವೃತ್ತಾಂತ ಕಥೆ, ಚಿಕುಪಾಧ್ಯಾಯನ ಯಾದವಗಿರಿ ಮಹಾತ್ಮೆ, ಪಶ್ಚಿಮರಂಗ ಮಹಾತ್ಮೆ, ರಂಗಧಾಮಸ್ತುತಿ ಸಾಂಗತ್ಯ, ರಂಗಧಾಮ ಪುರುಷ ವಿರಹ ಸಾಂಗತ್ಯ, ಚಿತ್ರಶತಕ ಸಾಂಗತ್ಯ, ರಂಗನಾಯಕ ರಂಗನಾಯಕೀ ಸ್ತುತಿ ಸಾಂಗತ್ಯ, ನೇಮಿವ್ರತಿಯ ಸುವಿಚಾರಚರಿತೆ, ಧರಣಿಪಂಡಿತನ ಬಿಜ್ಜಳರಾಯಚರಿತೆ, ಚಂದ್ರಮನ ಕಾರ್ಕಳದ ಗೋಮ್ಮಟೇಶ್ವರಚರಿತೆ, ಪದ್ಮನಾಭನ ಪದ್ಮಾವತೀ ಚರಿತೆ, ಜಿನದತ್ತರಾಯನ ಚರಿತೆ, ಬಸವಕವಿಯ ರೇಣುಕಾಚಾರ್ಯಚರಿತೆ, ಚೆನ್ನಮಲ್ಲೇಶನ ದೀಪದಕಲಿಯರ ಕಾವ್ಯ, ಸಿದ್ಧಕವಿಯ ಸಿರುಮನ ಸಾಂಗತ್ಯ, ಚಾಮಯ್ಯನ ದೇವರಾಜೇಂದ್ರಸಾಂಗತ್ಯ ಇವು ಹೆಸರಿಸತಕ್ಕವು. ಗೋವಿಂದ ವೈದ್ಯನ ಕಂಠೀರವ ನರಸರಾಜವಿಜಯ ಒಂದು ಅಪೂರ್ವಕೃತಿ. ಈ ಕವಿ ವೀರರಸ ಪ್ರತಿಪಾದನೆಗೆ ಸಾಂಗತ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿದ್ದಾನೆ. ಈ ಶತಮಾನದ ವೈಶಿಷ್ಟ್ಯವೆಂದರೆ ಸ್ತ್ರೀಯರು ಸಾಂಗತ್ಯರಚನೆಗೆ ತೊಡಗಿದ್ದು. ಚಿಕ್ಕದೇವರಾಜನ ಆಸ್ಥಾನದಲ್ಲಿದ್ದ ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ಒಂದು ಉತ್ಕೃಷ್ಟ ಕೃತಿ. ಶೃಂಗಾರಮ್ಮ ಪದ್ಮಿನೀ ಪರಿಣಯವನ್ನು ಬರೆದಿದ್ದಾಳೆ.

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಸಾಂಗತ್ಯದ ಬೆಳಸು ಅಷ್ಟೊಂದು ಹುಲುಸಾಗಿದ್ದಂತೆ ಕಂಡುಬರುವುದಿಲ್ಲ. ಹದಿನೆಂಟನೆಯ ಶತಮಾನದಲ್ಲಿ ಕೇವಲ ಹದಿನೇಳು ಸಾಂಗತ್ಯಕೃತಿಗಳೂ ಹತ್ತೊಂಬತ್ತನೆಯ ಶತಮಾನದಲ್ಲಿ ಕೇವಲ ಎಂಟು ಸಾಂಗತ್ಯಕೃತಿಗಳೂ ಹೊರಬಂದಿವೆ. ಹದಿನೆಂಟನೆಯ ಶತಮಾನದಲ್ಲಿ ಗೋಪಾಲಾಚಾರ್ಯ ಶಿಷ್ಯನ ಜೀವೇಶ್ವರ ಸಾಂಗತ್ಯ, ತತ್ತ್ವದ ಸೊಬಗಿನ ಸೋನೆ, ಗುರುಸಿದ್ದಪ್ಪನ ಮಾದೇಶ್ವರ ಸಾಂಗತ್ಯ, ಚಲುವ ಕವಿಯ ಮಡಿವಾಳಯ್ಯನ ಚರಿತೆ, ದೇಪನ ದೇವಾಂಗಪುರಾಣ, ನೂರೊಂದಯ್ಯನ ಸೌಂದರಕಾವ್ಯ, ಪಾಯಣ್ಣನ ಅಹಿಂಸಾ ಚರಿತೆ, ಪದ್ಮನಾಭನ ರಾಮಚಂದ್ರಚರಿತೆ, ತರಳ ಚಲಪತಿಯ ಗಂಗೆಗೌರಿ ಸಂವಾದ -ಇವು ಮುಖ್ಯವಾದುದು. 1750ರಲ್ಲಿದ್ದ ಹೆಳವನಕಟ್ಟೆ ಗಿರಿಯಮ್ಮ ಚಂದ್ರಹಾಸನ ಕಥೆ, ಉದ್ದಾಳಿಕನಕಥೆ ಮೊದಲಾದ ಭಕ್ತಿ ಮತ್ತು ನೀತಿಪ್ರದವಾದ ಕೃತಿಗಳನ್ನು ರಚಿಸಿದ್ದಾಳೆ. ಮತ್ತೊಬ್ಬ ಕವಯಿತ್ರಿ ಚೆಲುವಾಂಬೆ ವರನಂದಿ ಕಲ್ಯಾಣ ಎಂಬ ಕೃತಿಯನ್ನು ರಚಿಸಿದ್ದಾಳೆ.

ಇಪ್ಪತ್ತನೆಯ ಶತಮಾನದಲ್ಲೂ ಸಾಂಗತ್ಯದ ರಚನೆ ಮುಂದುವರಿದುಕೊಂಡು ಬಂದಿದೆ. ಬಿ.ಎಂ.ಶ್ರೀಕಂಠಯ್ಯ, ಬೇಂದ್ರೆ, ಪು.ತಿ.ನರಸಿಂಹಾಚಾರ್, ಎಸ್.ವಿ.ಪರಮೇಶ್ವರಭಟ್ಟ ಮೊದಲಾದವರು ಸಾಂಗತ್ಯದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಪರಮೇಶ್ವರಭಟ್ಟರು ನೀಳವಾದ ತಮ್ಮ ಆತ್ಮವೃತ್ತವನ್ನು ಹೇಳುವುದಕ್ಕೂ ಬಿಡಿ ಮುಕ್ತಕ ರಚನೆಗೂ ಸಾಂಗತ್ಯವನ್ನು ಬಳಸಿದ್ದಾರೆ. ಪರಿಮಾಣ ಮತ್ತು ಯೋಗ್ಯತೆ ಎರಡು ದೃಷ್ಟಿಯಿಂದಲೂ ಇವರ ಸಾಂಗತ್ಯ ಕೃತಿಗಳು ಗಮನಾರ್ಹವಾಗಿವೆ. ಉದಾಹರಣೆಗೆ ಎರಡು ಸಾಂಗತ್ಯ ಪದ್ಯಗಳು:

ಕಳೆವುದು ಸಾಬೂನು ಬಟ್ಟೆಯ ಕೊಳೆಯನು
ಕಳೆವುದು ಸೀಗೆ ಎಣ್ಣೆಯನು
ಪ್ರಾರ್ಥನೆ ತೊಡೆವುದು ಮನದ ಕಿಲ್ಬಿಷವನು
ಆ ಸೋಪು ಸೀಗೆಗಳಂತೆ

(ಚಂದ್ರವೀಧಿ)

ಸ್ಕೂಟರು ಹೆಳವನಿಗೇನುಪಯೋಗವು
ಬೋಳನಿಗೇಕೆ ಬಾಚಣಿಗೆ
ಅರಸಿಕನಿಗೆ ಏಕೆ ಕಾವ್ಯದ ಗಮಕವು
ಟ್ರಾನ್ಸಿಸ್ಟರೇಕೆ ಕೆಪ್ಪನಿಗೆ

(ಇಂದ್ರಚಾಪ)

ಪ್ರಾಚೀನ ಕಾವ್ಯಪರಂಪರೆಯಲ್ಲಿ ಪ್ರಮುಖವಾದ ಚಂಪೂ, ಷಟ್ಪದಿ, ತ್ರಿಪದಿ ಮುಂತಾದ ಛಂದೋಬಂಧಗಳಲ್ಲಿ ನಿರೂಪಿತವಾಗಿದ್ದ ಕಾವ್ಯ, ಶಾಸ್ತ್ರ ಧರ್ಮ ಪ್ರತಿಪಾದನೆ ಮೊದಲಾದ ನಿಗೂಢ ವಿಷಯಗಳು ಜನಸಾಮಾನ್ಯಕ್ಕೆ ಸುಲಭವಾಗಿ ನಿಲುಕುವಂತೆ ಶುದ್ಧ ದೇಶೀಯ ಛಂದಸ್ಸಿನಲ್ಲಿ ಹೊರಬರುವುದಕ್ಕೆ ವಾಹಕವಾದುದು ಎಂದರೆ ಒಂದು ಸಾಂಗತ್ಯ, ಇನ್ನೊಂದು ಷಟ್ಪದಿ (ನೋಡಿ: ಕನ್ನಡದಲ್ಲಿ ಷಟ್ಪದಿ ಕಾವ್ಯಗಳು). ಕನ್ನಡ ಛಂದಶ್ಶಾಸ್ತ್ರದ ಇತಿಹಾಸದಲ್ಲಿ ಬೇರಾವ ಛಂದೋಪ್ರಕಾರಕ್ಕೂ ಇಲ್ಲದ ವೈಶಿಷ್ಟ್ಯ ಸಾಂಗತ್ಯಕ್ಕಿದೆ. ಇದು ತನ್ನ ಗೇಯತೆ ಮತ್ತು ಸೌಲಭ್ಯಗಳಿಂದ ಜನಪ್ರಿಯತೆಯನ್ನು ಗಳಿಸಿರುವುದೇ ಅಲ್ಲದೆ ಕನ್ನಡ ಸಾಹಿತ್ಯಕ್ಕೆ ಮಕುಟಪ್ರಾಯವಾದ ಕೃತಿಗಳನ್ನು ಒದಗಿಸಿದೆ. *

**ಕನ್ನಡದಲ್ಲಿ ಹಾಸ್ಯ ಸಾಹಿತ್ಯ :** ಹಳಗನ್ನಡ ಸಾಹಿತ್ಯದಲ್ಲಿ ಹಾಸ್ಯವನ್ನೇ ಪ್ರಧಾನವಾಗಿ ವಸ್ತುವಾಗುಳ್ಳ ಕೃತಿರಚನೆಯ ಪ್ರಯತ್ನ ನಡೆದಿಲ್ಲವಾದರೂ ಹಾಸ್ಯದ ಸನ್ನಿವೇಶಗಳು ಕೃತಿಯ ಒಡಲಲ್ಲಿ ಬಂದಾಗ ಕವಿಗಳು ತಮ್ಮ ಹಾಸ್ಯ ಪ್ರೌಢಿಮೆಯನ್ನು ಮೆರೆದಿದ್ದಾರೆ. ಕಾವ್ಯದ ಪ್ರಸ್ತಾವನಾ ಭಾಗದಲ್ಲಿ ಬರುವ ಕುಕವಿನಿಂದೆಯಂಥ ಸಿದ್ಧ ಬರೆಹರೂಪಗಳಲ್ಲಿ, ಶೃಂಗಾರ ಸನ್ನಿವೇಶಗಳಲ್ಲಿ, ರಾಜರ ಸುಖಸಂಕಥಾವಿನೋದಗಳಲ್ಲಿ, ಸಾಮಯಿಕ ಚತುರೋಕ್ತಿಗಳಲ್ಲಿ, ಯುದ್ಧಪ್ರಸಂಗಗಳಲ್ಲಿ, ವೀರರ ಮೂದಲಿಕೆಯ ಮಾತುಗಳಲ್ಲಿ, ವಾಗ್ವಾದದ ಸಂದರ್ಭಗಳಲ್ಲಿ ಇಂಥ ಹತ್ತಾರು ಕಡೆ ಹಾಸ್ಯ ರಚನೆಗೆ ಅವರು ಅವಕಾಶ ಮಾಡಿಕೊಂಡಿದ್ದಾರೆ. ಕನ್ನಡದ ಅಸಂಖ್ಯಾತ ಶಾಸನಗಳಲ್ಲಿ ಹಾಸ್ಯ ಪ್ರಸಂಗಗಳು ಅಲ್ಲಲ್ಲಿ ಮಿಂಚುವುದನ್ನು ಕಾಣಬಹುದು. ಅಂಥ ಒಂದು ಶಾಸನದ ನಾಯಕ ವಿಕ್ರಮಸಾಂತ. ರಣರಂಗದಲ್ಲಿ ಇವನ

ಪ್ರತಾಪ ಅಷ್ಟಿಷ್ಟಲ್ಲ. ಈತ ಕೊಂದ ಶತ್ರುಗಳ ಹೆಣಗಳನ್ನುಂಡ ಮರುಳುಗಳಿಗೆ ಹಬ್ಬ, ಅಜೀರ್ಣ. ಅವು ವೈದ್ಯ ಮರುಳಿನ ಬಳಿಗೆ ಹೋದಾಗ ಆ ವೈದ್ಯ ಸೂಚಿಸಿದ ಔಷಧವಾದರೂ ಮರುಳುಗಳಿಗೆ ಮಾತ್ರವೇ ಉಚಿತ. ಅಜೀರ್ಣವಾದಾಗ ಆನೆ ನುಂಗುವುದೇ ಮದ್ದು. ಮರುಳುಗಳು ಹಾಗೆಯೇ ಮಾಡಿದುವು. ರೋಗ ವಾಸಿಯಾಯ್ತು. ವಿಸಂಗತ ವಿಚಾರದಿಂದ ಮಿನುಗುವ ಹಾಸ್ಯಕ್ಕೆ ಇದೊಂದು ಉತ್ತಮ ದೃಷ್ಟಾಂತ.

ಕನ್ನಡದ ಪ್ರಥಮ ಗ್ರಂಥ ಕವಿರಾಜಮಾರ್ಗದಲ್ಲಿ ವ್ಯಾಕರಣ, ಛಂದಸ್ಸು, ಭಾಷೆ ಮುಂತಾದವನ್ನು ಕುರಿತ ವಿವೇಚನೆಯ ನಡುನಡುವೆ ಉದಾಹರಣೆಗಾಗಿ ಕೊಟ್ಟಿರುವ ಪೂರ್ವಕವಿ ಕೃತಿ ಖಂಡಗಳಲ್ಲಿ ಅಲ್ಲಲ್ಲಿ ಬಗೆಬಗೆಯ ಹಾಸ್ಯ ಮಿನುಗುತ್ತದೆ. ಕವಿರಾಜಮಾರ್ಗಕಾರನಿಗೆ ಹಿಂದೆ ಇದ್ದ ಕವಿಗಳು ಹಾಸ್ಯವೇ ಪ್ರಧಾನವಾದ ಕೃತಿಗಳ ರಚನೆ ಮಾಡದಿದ್ದರೂ ಹಾಸ್ಯದ ನಾನಾ ಪ್ರಕಾರಗಳನ್ನವರು ಅರಿಯದವರಾಗಿರಲಿಲ್ಲವೆಂಬುದು ಇವುಗಳಿಂದ ವೇದ್ಯವಾಗುತ್ತದೆ. ಕವಿರಾಜಮಾರ್ಗಕಾರನಿಗೂ ಹಾಸ್ಯವನ್ನು ಗುರುತಿಸುವ ಶಕ್ತಿಯಿತ್ತು. ಅದನ್ನು ಸಾರಿಕೊಳ್ಳುವ ಉದ್ದೇಶವಿಲ್ಲದಿದ್ದರೂ ಅಂಥ ಹಾಸ್ಯ ಪ್ರಸಂಗಗಳ ಮೇಲೆ ಆತ ಬೆರಳಿಟ್ಟು ತೋರಿದ್ದಾನೆ ಎನ್ನಬಹುದು.

ಪಂಪಕವಿಯ ಎರಡೂ ಕಾವ್ಯಗಳಲ್ಲಿ ಹಾಸ್ಯದ ಹಲವಾರು ಪ್ರಸಂಗಗಳಿವೆ. ವಿಕ್ರಮಾರ್ಜುನವಿಜಯ ಕೌರವಪಾಂಡವರ ಕಥೆಯಾದ್ದರಿಂದ ಅಲ್ಲಿ ಬರುವ ಹಲವು ಸನ್ನಿವೇಶಗಳಲ್ಲಿ ಹಾಸ್ಯದ ನಾನಾ ಪ್ರಕಾರಗಳಿಗೆ ಧಾರಾಳವಾಗಿ ಅವಕಾಶವುಂಟು. ಹಾಸ್ಯ ಸನ್ನಿವೇಶಗಳನ್ನೊಳಗೊಂಡ ಇಡೀ ಭಾಗಗಳೂ ಹಾಸ್ಯ ಪಾತ್ರಗಳೂ ಅನೇಕ. ಬರಿಯ ಸರಸವೇ ಅಲ್ಲ, ಕಟಕಿ, ಮೂದಲೆ, ಅಪಹಾಸ್ಯ, ನಿಂದೆ, ಹೊಗೆಯ ನಗೆ - ಎಲ್ಲ ಉಂಟು. ಬಾಲ್ಯದಲ್ಲಿ ಕೌರವ ಪಾಂಡವರು ಮರಗೆರಸೆಯಾಡುತ್ತಿದ್ದಾಗ (ಮರಕೋತಿ) ಮರವೇರಿ ಕುಳಿತು ಹಂಗಿಸಿದ ಕೌರವರಿಗೆ ಬುದ್ಧಿ ಕಲಿಸುವ ಸಲುವಾಗಿ ಭೀಮಸೇನ ಆ ಮರವನ್ನೇ ಅಳ್ಳಾಡಿಸಿ ಅಷ್ಟು ಜನರನ್ನೂ ಕೆಳಗೆ ಉದುರಿಸಿದನಂತೆ. ಈ ಕೊರಚಾಟ ದಾಯಾದಿಮತ್ಸರವನ್ನೇ ಬೆಳೆಸಿದ ಚುಚ್ಚು ಹಾಸ್ಯ. ದ್ರುಪದನ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ದ್ರೋಣಾಚಾರ್ಯ ತಮ್ಮ ಶಿಷ್ಯನಿಂದ ದ್ರುಪದನನ್ನು ಹಿಡಿತರಿಸಿ ಮಂಚದ ಕಾಲಿಗೆ ಕಟ್ಟಿಸಿ ಅವನ ತಲೆಯ ಮೇಲೆ ಕಾಲಿಟ್ಟಾಗಿನ ಸನ್ನಿವೇಶವೂ ರೋಚಕವಾಗಿದೆ. ಇಲ್ಲಿ ಒಂದು ಕಡೆ ದ್ರೋಣರ ಕೆಚ್ಚು ಇನ್ನೊಂದೆಡೆ ದ್ರುಪದನ ಅಸಹಾಯಕತೆ ಕಣ್ಣಿಗೆ ಕಟ್ಟುತ್ತದೆ. ಗೆದ್ದು ತಂದ ಭೀಷ್ಮ ತನ್ನನ್ನು ವರಿಸಲೊಲ್ಲದೆ ಹೋದಾಗ ಅಂಬೆಯೆಂಬುವಳು ಸಾಲ್ವನಲ್ಲಿಗೆ ಹೋಗಿ ತನ್ನನ್ನು ವರಿಸಬೇಕೆಂದು ಬೇಡಿದಾಗ ಅವನು ತುಂಟನಗೆ ನಕ್ಕು ಭೀಷ್ಮ ನನ್ನನ್ನು ಓಡಿಸಿ ನಿನ್ನನ್ನು ಕೊಂಡೊಯ್ದ, ಆದ್ದರಿಂದ ನಾನೂ ಅವನ ಹೆಂಡತಿಯೆ ಆದ ಹಾಗಾಯಿತು, ಪೆಂಡಿರ್ ಪೆಂಡಿರೊಳದೆಂತು ಬೆರೆಸುವರಬಲೇ ಎಂದನಂತೆ. ಇದು ನುಡಿಯ ಚಮತ್ಕಾರದಿಂದ ಉದಿಸುವ ಹಾಸ್ಯ. ಇಂಥ ನುಡಿಗಳಲ್ಲಿ ಪಂಪನ ನಿಶಿತ ಹಾಸ್ಯಪ್ರಜ್ಞೆಯನ್ನು ಗುರುತಿಸಬಹುದು. ದ್ರೌಪದೀಸ್ವಯಂವರದ ಸಂದರ್ಭದಲ್ಲಿ ಬರುವ ವಿವಿಧ ರಾಜಕುಮಾರರ ಹಾಸ್ಯಪೂರ್ಣವಾದ ನಡೆವಳಿಕೆಗಳು ಪಂಪನ ಹಾಸ್ಯಪ್ರಜ್ಞೆಗೆ ಸಾಕ್ಷಿಯಾಗಿವೆ. ಆದರೆ ದುರ್ಯೋಧನನನ್ನು ಹಂಗಿಸುವ ದ್ರೌಪದಿಯ ಹಲವಾರು ಮಾತುಗಳು ಶುದ್ಧ ಹಾಸ್ಯವಲ್ಲ. ಅದೂ ಇರಲಿ, ಸತ್ತವರನ್ನೂ ಪಂಪ ನಗಿಸದೆ ಬಿಟ್ಟಿಲ್ಲ. ಯುದ್ಧಭೂಮಿಯಲ್ಲಿ ಮರುಳುಗಳ ಆಟವನ್ನು ನೋಡಿ ವೀರಭಟರ ಪಂದಲೆಗಳು ಮುಗುಳ್ನಗೆ ನಕ್ಕುವಂತೆ.

ರನ್ನನ ಸಾಹಸಭೀಮವಿಜಯವೂ ಮಹಾಭಾರತವನ್ನೇ ಆಧರಿಸಿ ರಚಿಸಿದ ಕೃತಿಯಾದ್ದರಿಂದ ಇದರಲ್ಲಿ ಅಲ್ಲಲ್ಲಿ ಮಿಂಚುವ ಹಾಸ್ಯ ಕೂಡ ಸನ್ನಿವೇಶ ಮತ್ತು ಪಾತ್ರಗಳನ್ನೇ ಅವಲಂಬಿಸಿದ್ದು. ಇಲ್ಲಿಯ ಹಾಸ್ಯ ಗೌಣ. ಆದರೆ ಸಂಸ್ಕೃತ ನಾಟಕಗಳಲ್ಲಿರುವಂತೆ ವಿದೂಷಕನ ಪಾತ್ರವನ್ನು ನಿರ್ಮಿಸಿರುವುದು ರನ್ನನ ಕೃತಿಯ ವೈಶಿಷ್ಟ್ಯ. ಕೌರವ ಪಾಂಡವರ ನಡುವೆ ಸಂಧಾನ ಫಲಿಸಬಹುದೆಂಬ ಸೂಚನೆ ಬಂದಾಗ ಎಲ್ಲರಿಗಿಂತ ಆತಂಕಗೊಂಡವಳು ದ್ರೌಪದಿ. ಸಂಧಿ ಏರ್ಪಡಬಾರದು, ಹಾಗಾದರೆ ಪಾಂಡವರಿಗೆ ನೆಲೆ ತಪ್ಪುತ್ತದೆ, ತನಗೆ ಜೀವನ ಬೇಡವಾಗುತ್ತದೆ ಎಂದು ಆಕೆ ಭೀಮನಲ್ಲಿಗೆ ಬಂದು ಅಳುತ್ತಾಳೆ. ದುರ್ಯೋಧನನ ತೊಡೆ ಮುರಿಯುವುದಾಗಿ ಆಗ ಭೀಮ ಪ್ರತಿಜ್ಞೆ ಮಾಡಿದ. ಇಂಥ ಗಂಭೀರ ಪರಿಸ್ಥಿತಿಯಲ್ಲಿ ಬರುತ್ತವೆ ವಿದೂಷಕನ ನಗೆಮಾತು. ದೇವಾಸುರ ಯುದ್ಧಕ್ಕೆ ಕರಗಂಬೊತ್ತ ಡಾವರ ಡಾಕಿನಿಯೇ ಪಾಂಚಾಲಿ ಎಂಬುದು ಅವನ ವರ್ಣನೆ. ಅಲ್ಲದೆ

> ಕುರುಕುಲಮಂ ನುಂಗಿದೆಯಿನ್ನರೆಬರುಮಂ ನುಂಗಲಿರ್ಪೆ ಕುರುಪತಿಯುಮನಿ
> ನ್ನೆರಡನೆಯ ಹಿಡಂಬಿಯನೆಮ್ಮರಸಂ ರಕ್ಕಸಿಯನೆಲ್ಲಿ ತಂದನೊ ನಿನ್ನಂ
> ಮಾರುತಿ ನಿಜವೇಣೀಸಂಹಾರಂ ಮಾಡಿದೊಡೆ ಮಾಳ್ಪುದೆನಗಂ ನಿನಗಂ
> ಪೂರಣಿಗೆ ಜಠರ ಪಿಠರಕ ಪೂರಣೆಗೇಂ ಮಾಡದೆಂತು ಕರೆವೆಂ ನಿನ್ನಂ

ಎಂದು ಅಳುತ್ತ ಬಂದ ತನ್ನನ್ನು ನಗುತ್ತ ಹೋಗುವಂತೆ ವಿದೂಷಕ ಸಂತೋಷಪಡಿಸಿದುದಕ್ಕೆ ಒಡಂಬಟ್ಟು ಚಾರುಹಾಸಿನಿ (ದ್ರೌಪದಿ) ನಿಜನಿವಾಸಕ್ಕೆ ಹೋದಳು. ಇದು ರನ್ನನ ಹಾಸ್ಯವಿಧಾನ. ರೌದ್ರ, ವೀರ ರಸಗಳನ್ನು ಸಮರ್ಥವಾಗಿ ಪ್ರತಿಪಾದಿಸುವಂತೆ, ಹಾಸ್ಯರಸ ಪ್ರತಿಪಾದನೆಯಲ್ಲೂ ರನ್ನನದು ಮೇಲುಗೈ. ಅಭಿನವ ಪಂಪನ (ನಾಗಚಂದ್ರ) ಸಮಕಾಲೀನಳೆನ್ನಲಾದ ಕಂತಿಯೆಂಬ ಕವಯಿತ್ರಿಗೂ ಅಭಿನವಪಂಪನಿಗೂ ನಡೆದ ವಾಗ್ವಾದಗಳು, ಕಂತಿಹಂಪನ ಸಮಸ್ಯೆಗಳೆಂದು ಪ್ರಸಿದ್ಧವಾಗಿರುವ ಈ ಪದ್ಯಗಳಲ್ಲಿ ಸಂಸ್ಕೃತದ ಚತುರೋಕ್ತಿಗಳೂ ನೆನಪಿಗೆ ಬರುತ್ತವೆ. ಇವು ಶ್ಲೇಷೆ ವಿಚಿತ್ರ ಪದಜೋಡಣೆ ಮತ್ತು ಸರಸ ಹಾಸ್ಯಗಳಿಂದ ಕೂಡಿದ್ದು ಓದುಗರಿಗೆ ಹಾಸ್ಯರಂಜನೆಯನ್ನುಂಟುಮಾಡುವ ಗುಣಗಳನ್ನು ಪಡೆದಿವೆ.

ಮತೀಯ ವಿಕಾರ, ಪುರಾಣ ಕಲ್ಪನೆ, ತತ್ತ್ವಕ್ಕೂ ಆಚರಣೆಗೂ ನಡುವಣ ಭೇದ ಇವನ್ನು ಸ್ವಾರಸ್ಯವೂ ಹಾಸ್ಯಪೂರ್ಣವೂ ಆದ ಕಥನರೂಪದಲ್ಲಿ ವರ್ಣಿಸುವ ಕಲೆಯಲ್ಲಿ ಜೈನಕವಿಗಳಾದ ನಯಸೇನ, ಬ್ರಹ್ಮಶಿವ ಮತ್ತು ವೃತ್ತವಿಲಾಸ ಸಮರ್ಥರು. ಇವರ ಕಾವ್ಯಗಳಲ್ಲಿ ಬರುವುದು ಶುದ್ಧ ಹಾಸ್ಯವಲ್ಲ; ನಂಜುನಗೆ, ವಿಡಂಬನ, ವೈದಿಕಮತದ ಅಂಧಶ್ರದ್ಧೆಯನ್ನು ಅವಹೇಳನ ಮಾಡುವಾಗ ಈ ಬಗೆಯ ನಗೆ ಹೊಮ್ಮುತ್ತದೆ. ಅಲ್ಲಲ್ಲಿ ಲೋಕವೀಕ್ಷಣೆಯ ಫಲವಾದ ಸರಸ ಹಾಸ್ಯವೂ ಹರಿಯುವುದುಂಟು. ಒಬ್ಬ ಮುದುಕನ ಮದುವೆಯ ಹುಚ್ಚನ್ನು ವೃತ್ತವಿಲಾಸ ವರ್ಣಿಸಿರುವ ಪರಿಯಿದು:

> ನೆರೆದಲೆ ಜೋಲ್ದ ಪುರ್ಬು ಕುಟಿದಕ್ಷಿಯುಗಂ ತುಟಿಯರ್ತ ಬೋಡಬಾಯ್
> ತೆರೆಮಸಗಿರ್ದಮೋರೆಯುಡುಗಿರ್ದುರಮಕ್ಕುಳಿಸಿರ್ದ ಪೊಟ್ಟೆ ಮೇ
> ಲ್ಸಿರೆಮಸಗಿರ್ದ ಕಾಲ್ ಮುಜಿದ ಬೆನ್ನುಜೆ ಕಂಪಿಪ ಹಸ್ತಮಸ್ತಕಂ
> ಪರಿಕಿಸೆ ತಾಪಸಂಗೆನಗೆ ಪೇಸದೆ ಕನ್ನೆಯನ್ನೀಯಬಲ್ಲರೆ

ರುದ್ರಭಟ್ಟ ಕವಿಯು ಜಗನ್ನಾಥ ವಿಜಯದಲ್ಲಿ ಹಾಸ್ಯರಸ ಕೋಡಿವರಿದಿದೆ. ಕೃಷ್ಣನನ್ನು ರಮಿಸಲು ಅವನ ತಾಯಿ ಕಥೆ ಹೇಳಿದ ಪರಿಯಿದು

> ಕಥೆಯಂ ಕೇಳೆಲೆ ಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನ
> ಸ್ಥಿತನಾದಂ ಗುರು ಪೇಟಿ ಹುಂ ದಶಶಿರಂ ಕೊಂಡೊಯ್ದನಾ ರಾಮನಾ
> ಸತಿಯಂ ತಾನೆನೆ ಪೂರ್ವಮಂ ನೆನೆಯುತು ಹುಂಕೊಳ್ಳದುತ್ಕೋಪ ಹುಂ
> ಕೃತಿಯಂ ಮಾಡುತುಮೌಂಡುಗರ್ಚೆ ಕಿಸುಗಣ್ಮಿಟ್ಟಚ್ಯುತಂ ರಂಜಿಕುಂ

- ಈ ಮಾತುಗಳಲ್ಲಿ ಹಾಸ್ಯರಸದ ಛಾಯೆಯನ್ನು ಗುರುತಿಸಬಹುದು.

ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳು ಮೃದುಹಾಸ್ಯ ಮತ್ತು ವಿಡಂಬನಗಳ ತವರು. ಸಾಮಾನ್ಯರ ಬಗೆಗೂ ನಿಲುಕುವಂತೆ ಚಮತ್ಕಾರದಿಂದ ಹೇಳುವುದರಲ್ಲಿ ವಚನಕಾರರು ಅಸಾಮಾನ್ಯರು. ಏತ ತಲೆವಾಗಿದರೇನು, ಭೃತ್ಯಾಚಾರಿಯಾಗಬಲ್ಲುದೇ ಅಯ್ಯ, ಇಕ್ಕುಳ ಕೈಮುಗಿದರೇನು, ಲಿಂಗವೇದಿಯಾಗಬಲ್ಲದೇ ಅಯ್ಯ ಎನ್ನುವುದು ಬಸವಣ್ಣನವರ ನಗೆಯ ರೀತಿ ನೀತಿ. ಗುಡಿ ಕೆರೆ ಕಟ್ಟಿಸಿ, ಪರಮಾರ್ಥದ ತೃಪ್ತಿ ಪಡೆದೆನೆನ್ನುತ್ತಿದ್ದ ಸಿದ್ಧರಾಮನನ್ನು ಹಿರಿಯ ಒಡ್ಡನೆಂದು ಪರಿಹಾಸ ಮಾಡಿದ ಅಲ್ಲಮಪ್ರಭುವಿನದು ನಿರ್ದಾಕ್ಷಿಣ್ಯ ದೃಷ್ಟಿ. ಕಲಿಕಂಭನೆಂಬ ಶರಣನಿಗೆ ಭಕ್ತರನ್ನು ನಗಿಸುವುದೇ ಕಾಯಕ. ವಿಕೃತ ವೇಷಭೂಷಣಗಳನ್ನು ನೋಡಿ ನಗೆಯಾಡುವುದು ಹಲವು ವಚನಕಾರರ ಸಹಜ ಪ್ರವೃತ್ತಿ. ಹೀಗೆ ವಚನಕಾರರ ಕೃತಿಗಳಲ್ಲಿ ನಗೆ, ಸಹಾನುಭೂತಿ, ಚುಚ್ಚು ನುಡಿಗಳು ಕೂಡಿ ಹರಿದಿವೆ.

ರಗಳೆಗಳನ್ನು ಪ್ರಚಾರಕ್ಕೆ ತಂದು ಹೊಸ ಕಾವ್ಯ ಪ್ರಕಾರವೊಂದರ ಪ್ರವರ್ತಕನಾದ ಹರಿಹರನ ಕೃತಿಗಳು ಭಕ್ತಿಪ್ರಧಾನವಾದರೂ ಅವುಗಳಲ್ಲೂ ಹಾಸ್ಯಕ್ಕೇನೂ ಕೊರತೆಯಿಲ್ಲ. ಬಸವರಾಜದೇವರ ರಗಳೆಯಲ್ಲಿ ಶಿವನ ಒಡ್ಡೋಲಗದ ರಸ ಸನ್ನಿವೇಶದಲ್ಲಿ ಬಂದಿರುವ ಭೃಂಗಿಯ ನಗೆಯ ನೃತ್ಯ ಒಂದು ಉದಾಹರಣೆಯಾಗಿದೆ. ಅವತಾರ ಪುರುಷನಾದ ನಂಬಿಯಣ್ಣನ ರಗಳೆಯಲ್ಲಿ ಅಲ್ಲಲ್ಲಿ ಮಿಂಚುವ ಹಾಸ್ಯ ಇನ್ನೊಂದು ಉದಾಹರಣೆ. ನಂಬಿಯಣ್ಣನಿಗೆ ಆಗಲಿದ್ದ ಮದುವೆಯನ್ನು ತಪ್ಪಿಸಿ, ಆತ ಇನ್ನೊಬ್ಬಳನ್ನು ಲಗ್ನವಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಶಿವನೇ ವೃದ್ಧ ಮಾಹೇಶ್ವರನ ವೇಷ ಧರಿಸಿ ಬಂದಾಗಿನ ಸನ್ನಿವೇಶದ ತುಂಬ ನಗೆಯೇ ಹಾಸು ಹೊಕ್ಕಾಗಿದೆ. ಕಯ್ಯ ಕೊಡೆಯಿಂ, ಮಯ್ಯ ತೆರೆಯಿಂ, ಜೋಲ್ವ ಪುರ್ವಿಂ, ನೇಲ್ವ ತೋಳ ತೊವಲಿಂ, ಇಟ್ಟ ವಿಭೂತಿಯಿಂ, ಊಜಿದ ಯಷ್ಟಿಯ ಕೋಲಿಂ, ಪಿಡಿದ ಕಮಂಡಲದಿಂದಿಳಿದ ಬೆಳುಗಡ್ಡದಿಂ, ನಡುಗುವ ನರೆದಲೆಯಿಂ, ನರೆತು ಸಡಿಲ್ವ ಸರ್ವಾಂಗದಿಂ, ಪುಣ್ಯಂ ಪಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತೊಮ್ಮೊಮ್ಮೆ ಗೊಹೆ ಗೊಹೆಗುಟ್ಟುತುಂ, ಶಿಥಿಲಾಕ್ಷರಂಗಳಿಂ ನಮಃ ಶಿವಾಯಯೆನುತ್ತೆನಲಾಜಿದಂತೆ ನಡುಗುತ್ತುಂ ಬಂದ ಶಿವ ಹೆಂಗಸರ ನಡುವೆ ನಡೆದು, ವಿಪ್ರರ ಸಮೂಹವನ್ನು ಬಳಸಿ, ಮನಸ್ಸಿನಲ್ಲೇ ನಗುತ್ತ, ಕೋಲನೂಱುತೆ ಕೆಮ್ಮಿ ಕುಮ್ಮುತ್ತೆ ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳ್ ನಾಲ್ಕೆರಡನೆಡಹಿ ನಮಃಶಿವಾಯ ಎಂಬ ವೃದ್ಧ ಧ್ವನಿ ಪುಟ್ಟೆ ಕೊಡಂಗಳ ಮೇಲೊಡೆಬೀಳ್ದು ಕುಳ್ಳಿರ್ದರ ಮುಖದೊಳಂ, ಕಣ್ಗೊಳಂ ಮಯ್ಯೊಳಂ ತುಪ್ಪಂ ಚೆಲ್ಲೆ ಎಲ್ಲರೆರ್ದುಮಲ್ಲಳಿಗೊಂಡು ಘೊಳ್ಳೆಂದು ಬಿಳ್ದ ವೃದ್ಧ ಮಾಹೇಶ್ವರನಂ ಮುತ್ತಿಕೊಂಡೆತ್ತಲನುವಾಗಿ ಮೆಲ್ಲನೆ ನೆಗಪಿ ಹೊರಗೆ ತಂದು ಬಿಡುತ್ತಾರೆ. ಈ ಸಂದರ್ಭದಲ್ಲಿ ಹಾಸ್ಯರಸ ಹೊನಲಾಗಿ ಹರಿದಿದೆ. ಹೀಗೆ ಮಧುರ ಹಾಸ್ಯಗಳಿಂದ ಹಿಡಿದು ಪರಸಮಯಿಗಳನ್ನು ಕೆರಳಿಸುವ ಚುಚ್ಚುನುಡಿಯವರೆಗೆ ಹಾಸ್ಯದ ನಾನಾ ಪ್ರಕಾರಗಳು ಹರಿಹರನ ಕೃತಿಗಳಲ್ಲಿ ಯಥೇಷ್ಟವಾಗಿವೆ.

ಅಹಿಂಸಾವ್ರತದ ಮಹಿಮೆಯನ್ನು ಸಾರುವುದೇ ಜನ್ನನ ಯಶೋಧರ ಚರಿತೆಯ ಮುಖ್ಯೋದ್ದೇಶವಾದರೂ ಈತ ಸರಸ ಹಾಸ್ಯಗಾರ ಕೂಡ. ವಿಸಂಗತ ಸನ್ನಿವೇಶಗಳನ್ನು ತಂದೊಡ್ಡಿ ಹಾಸ್ಯದ ಬುಗ್ಗೆ ಹೊಮ್ಮಿಸುವುದೇ ಈತ ಇಲ್ಲಿ ಅನುಸರಿಸಿರುವ ವಿಧಾನ. ಅರಮನೆಯ ಸಕಲ ಭೋಗಭಾಗ್ಯಗಳೂ ಅಮೃತಮತಿಗೆ ಇದ್ದರೂ ಆಕೆಗೆ ಪಱೆದಲೆ, ಕುಱಿ ನೊಸಲು, ಅಱೆಗಣ್ಣು, ಹಪ್ಪಳಿಕೆ ಮೂಗೂ ಟೊಂಕ ಮುಱಿದ ಕತ್ತೆಯ ಕಾಲಂ ಮಱೆಯಿಸುವ ಕಾಲೂ ಇದ್ದ ಬಧಿರನಲ್ಲಿ ಕಾಮ, ಅವನಿಗೋ ಇವಳೊಮ್ಮೆ ತಡವಾಗಿ ಹೋದಾಗ ಕ್ರೋಧಕೆರಳಿ ಹೊಡೆಯುತ್ತಾನೆ. ಆಗ ತಡವಾದುದುಂಟು ನಲ್ಲನೆ ಬಿಡು ಮುಳಿಯದಿರ್ ಎಂದು ಆಕೆ ಅಂಗಲಾಚುತ್ತಾಳೆ. ಇದು ಬೇರೆಲ್ಲೂ ಸಿಗದ ವಿಕೃತ ಹಾಸ್ಯ ಸನ್ನಿವೇಶ.

ಷಟ್ಪದಿಯನ್ನು ರಚಿಸಿದ ಕವಿಗಳ ಕೃತಿಗಳಲ್ಲೂ ಅಲ್ಲಲ್ಲಿ ಹಾಸ್ಯಕ್ಕೇನೂ ಕೊರತೆಯಿಲ್ಲ. ವಿಶ್ವಾಮಿತ್ರನ ವಿಚಿತ್ರ ಪ್ರತಿಜ್ಞೆಯಿಂದ ಆರಂಭವಾಗಿ ಹರಿಶ್ಚಂದ್ರನ ಸತ್ಯ ಸ್ಥಾಪನೆಯಲ್ಲಿ ಕೊನೆಗೊಳ್ಳುವ ಹರಿಶ್ಚಂದ್ರ ಕಾವ್ಯದ ಕರ್ತೃವಾದ ರಾಘವಾಂಕನ ಶಬ್ದಚಮತ್ಕೃತಿಯಲ್ಲಿ ಬರುವ ಹಾಸ್ಯ ವಿಶಿಷ್ಟವಾದದ್ದು. ಗರಳಗೊರಳವನರಳಸರಳಂಗೆ ಮುನಿವಂತೆ ಎಂಬ ಮಾತು ಒಂದು ಉದಾಹರಣೆ. ಮಕ್ಕಳು ಮಾಡುವ ಅಕ್ಷರಗಳ ದೊಂಬರಾಟವನ್ನಿಲ್ಲಿ ಕಾಣಬಹುದು. ಇಂಥ'ವನ್ನು ರಾಘವಾಂಕನೇ ಅಲ್ಲದೆ ಅನೇಕರು ಹೊಸೆದಿದ್ದಾರೆ. ಆದರೆ ಹಾಸ್ಯ ಖಂಡಗಳನ್ನೇ ಕಾವ್ಯದಲ್ಲಿ ನೆಯ್ದಿರುವ ಷಟ್ಪದಿಕಾರರಲ್ಲಿ ಕುಮಾರವ್ಯಾಸ ಅಗ್ರಗಣ್ಯ. ಬಕಾಸುರನ ಹೊಟ್ಟೆಬಾಕತನ, ದ್ರೌಪದೀ ಸ್ವಯಂವರದ ಕಾಲದಲ್ಲಿ ಹಾಜರಿದ್ದ ಅರ್ಜುನನ ಬ್ರಾಹ್ಮಣವೇಷ, ಉತ್ತರನ ಪೌರುಷ - ಇವೆಲ್ಲ ಕುಮಾರವ್ಯಾಸನ ಹಾಸ್ಯದೃಷ್ಟಿಯನ್ನು ಪ್ರತಿಪಾದಿಸುವ ಪ್ರಸಂಗಗಳು. ಕಟಕಿ 'ನಿಂದೆ' ಮೂದಲೆಗಳೇ ಮುಂತಾದ ವಿಡಂಬನೆಯ ನಾನಾ ಪ್ರಕಾರಗಳಿಗೂ ಕುಮಾರವ್ಯಾಸನ ಕೃತಿಯಲ್ಲಿ ಕೊರತೆಯಿಲ್ಲ. ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಕಾಣುವುದು ಸಹಾನುಭೂತಿ ಮಿಶ್ರಿತ ತಿಳಿಹಾಸ್ಯ. ಲಘು ವಿಡಂಬನೆ, ತೀವಿದ ಎಳನಗೆಯ ಬೆಳುದಿಂಗಳನ್ನು ಪಸರಿಸುವ ದೇವಪುರ ಲಕ್ಷ್ಮೀರಮಣನ ಆಸ್ಯ ಚಂದ್ರದ ಆನಂದದಲ್ಲಿ ಮಿಂದ ಲಕ್ಷ್ಮೀಶನ ಹಾಸ್ಯ ಅವನಿಗೇ ವಿಶಿಷ್ಟವಾದದ್ದು. ಧರ್ಮರಾಜ ಅಶ್ವಮೇಧ ಮಾಡುವ ಪ್ರಸ್ತಾಪ ಬಂದಾಗ ಭೀಮ-ಕೃಷ್ಣರ ನಡುವೆ ನಡೆಯುವ ಹುಸಿ ಜಗಳ, ಷಡ್ರಸಾನ್ನದ ಆರೋಗಣೆಯಲ್ಲಿರುವ ಕೃಷ್ಣನೊಂದಿಗೆ ಹೆಂಡತಿಯ ಸರಸ ವಿನೋದ, ಬೀಗರು ಪರಸ್ಪರವಾಗಿ ಮಾಡುವ ಹುಚ್ಚು ಹಾಸ್ಯ, ಚಂಡಿಯ ಕಥೆಯ ವಿಧಿಯ ವಿಕೃತ ಹಾಸ್ಯ, ಅಲ್ಲಲ್ಲಿ ಮೊಗದೋರುವ ವ್ಯಂಗ್ಯ, ಕಟಕಿ, ನಿಂದೆ, ಮೂದಲೆ - ಇವು ಲಕ್ಷ್ಮೀಶನನ್ನು ನಗೆ ಗಾರನನ್ನಾಗಿಮಾಡಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಹೇಳಿರುವ ಹಾಗೆ, ಲಕ್ಷ್ಮೀಶ ಹಾಸ್ಯಕ್ಕಾಗಿಯೇ ಆಭಾಸಪೂರ್ಣವಾದ ಪದ್ಯಗಳನ್ನು ಹೆಣೆದು ಸೇರಿಸಿಲ್ಲ. ಅವನ ಕೃತಿಯಲ್ಲಿ ಕಾಣುವುದು ಬಲಾತ್ಕಾರದ ಕಚಕುಳಿಯ ನಗೆಯಲ್ಲ. ಔಚಿತ್ಯ, ಗಾಂಭೀರ್ಯ, ಹಿತಮಿತಗಳಿಂದ ಕೂಡಿದ ಸಹಜಹಾಸ್ಯ.

ಸಾಂಗತ್ಯಕಾರ ರತ್ನಾಕರವರ್ಣಿಯಲ್ಲಿ ಹಾಸ್ಯದ ಒರತೆಯನ್ನೇ ಕಾಣಬಹುದಾಗಿದೆ. ರಾಗರಸಿಕ ಮತ್ತು ವೀತರಾಗರಸಿಕನಾದ ರತ್ನಾಕರವರ್ಣಿ ಸರಸ ವಿನೋದಿ. ಬಿಸುನಗೆ ಯಾವುದು, ತಣ್ಣಗೆ ಯಾವುದು, ಹುಸಿನಗೆ ಮುಗುಳುನಗೆಗಳು, ರಸನಗೆಯೆಳನಗೆಯೆಂಬವೆಂತಿಹವು ಎಂದು ಈತ ಬಲ್ಲ. ಕುಸುಮಾಜಿಯ ತಂಗಿ ಮಕರಂದಾಜಿಗೂ ಭರತನಿಗೂ ನಡೆಯುವ ಸಂಭಾಷಣೆ, ಗಿಳಿನುಡಿಯ ಮಾತುಗಳು ಮೊದಲಾದ ಸಂದರ್ಭಗಳಲ್ಲಿ ಹಾಸ್ಯ ರಸ ತನಿಯಾಗಿದೆ. ಇನ್ನೊಂದು ಸನ್ನಿವೇಶ: ಭರತೇಶನೊಮ್ಮೆ ಬಾಹುಬಲಿಯ ಮೇಲೆ ಯುದ್ಧಕ್ಕೆ ಹೊರಟಿದ್ದ. ಅವನ ಸೈನಿಕರಲ್ಲಿ ಕೆಲವರು ಅವನನ್ನು ಹೊಗಳಿಯೂ ಇನ್ನು ಕೆಲವರು ಹಗುರವಾಗಿಯೂ ಮಾತಾಡಿಕೊಳ್ಳುತ್ತಿದ್ದರು. ಭರತನಿಗೆ ಈ ವಿಷಯ ಕಿವಿಗೆ ಬಿದ್ದು ಆತ ಕೋಪಗೊಳ್ಳಲಿಲ್ಲ. ಅವರಿಗೆ ತನ್ನ ಶಕ್ತಿಯ ಮನವರಿಕೆ ಮಾಡಲು ಒಂದು ಉಪಾಯ ಹೂಡಿದ. ಕಿರುಬೆರಳಿಗೆ ಬೇನೆ ಬಂದು ಅದು ಡೊಂಕಾದಂತೆ ನಟಿಸಿದ. ಯಾರ್ಯಾರು ಏನೇನು ತಂತ್ರಮಂತ್ರ ಮದ್ದು ಮಾಡಿದರೂ ವಾಸಿಯಾಗಲಿಲ್ಲ. ಜಟ್ಟಿಗಳು ಚಿನ್ನದ ಸರಪಳಿ ಕಟ್ಟಿ ಜಗ್ಗಿದರೂ ಬೆರಳು ನೆಟ್ಟಗಾಗಲಿಲ್ಲ. ಒಮ್ಮೆ ಹೀಗೆ ಜಗ್ಗುತ್ತಿದ್ದಾಗ ವಿನೋದಕ್ಕಾಗಿ ಭರತೇಶ ಬೆರಳು ಸಡಿಲಬಿಟ್ಟ. ಸರಪಳಿ ಹಿಡಿದೆಳೆಯುತ್ತಿದ್ದವರೆಲ್ಲ ದಿಂಡುರುಳಿ ಹೊರಳಿದರು. ಎಲ್ಲರಿಗೂ ನಗೆ. ಭರತೇಶನೆಂಥ ಪರಾಕ್ರಮಿಯೆಂದು ಎಲ್ಲರಿಗೂ ದಿಗ್ಭ್ರಮೆ. ಇದು ರತ್ನಾಕರನ ಹಾಸ್ಯದ ಒಂದು ತುಣುಕು.

ತ್ರಿಪದಿಯನ್ನು ಅಪ್ರತಿಮವಾದ ರೀತಿಯಲ್ಲಿ ಬಳಸಿರುವ ಸರ್ವಜ್ಞನ ಹಾಸ್ಯದ್ದು ನಿರ್ದಾಕ್ಷಿಣ್ಯದ ಬಣ್ಣ. ಬೊಮ್ಮವನು ಅರಿದಿಹರೆ ಸುಮ್ಮನಿದ್ದಿರಬೇಕು, ಬೊಮ್ಮವನರಿದು ಉಸುರಿದರೆ ಕಳಹೋಗಿ ಕೆಮ್ಮಿದಂತಕ್ಕು ಹೋಲಿಕೆಯ, ಸಹಜ ಹಾಸ್ಯವಿದೆ. ಗಣೆಕೆಯ ಮೂಗಿನಲಿ ಮೊಣಕಾಲು ಹುಟ್ಟಿಹುದು ಎಂಬಲ್ಲಿ ತೃಣನುಂಡು ನೀರಣುಗಲೊಲ್ಲದಂತದಕೆ ಎಣಿಕೆಯಿಲ್ಲ ಎಂಬುದರಲ್ಲಿ ಒಗಟೆಯ ಚಮತ್ಕಾರವನ್ನು ಕಾಣಬಹುದು. ಆಲದಾ ಬಿಳಲಂತೆ ಜೋಲು ಜಡೆಗಳ ಬಿಟ್ಟು ನಾಲಗೆ, ಕೌಪ ಶುದ್ಧಿಲ್ಲ ಮರಿನಾಯ ಬಾಲದಂತಕ್ಕು- ಎಂಬುದು ಬೂಟಾಟಿಕೆಯ ಜನರ ಬಗ್ಗೆ ಹಾಸ್ಯಬೆರೆತ ಭರ್ತ್ಸನೆ. ತೊಗೆಯಿಲ್ಲದೂಟ ಸಂಪಿಗೆಯಿಲ್ಲದೆಲೆತೋಟ ನಗೆಯಿಲ್ಲದವಳ ಒಡನಾಟ ಬೆರಣಿಯ ಹೊಗೆಯ ಕುಡಿದಂತೆ - ಎಂಬುದು ಸರ್ವಜ್ಞನ ನಿರ್ಣಯ. ನಗೆಯ ಎಲ್ಲ ಮೆಟ್ಟಿಲುಗಳನ್ನೂ ವಿಡಂಬನೆಯ ಎಲ್ಲ ಸೋಪಾನವನ್ನೂ ನಾವು ಸರ್ವಜ್ಞನಲ್ಲಿ ಕಾಣಬಹುದು.

ಹರಿದಾಸ ಸಾಹಿತ್ಯ ತರಂಗಿಣಿಯಲ್ಲಿ ಹಾಸ್ಯದ್ದೇ ಒಂದು ದೊಡ್ಡ ಕವಲು. ಹಾಸ್ಯ ವಿಡಂಬನಗಳ ಎಲ್ಲ ಪ್ರಕಾರಗಳೂ ಇಲ್ಲಿ ಮೈವೆತ್ತಿವೆ. ರಾಗಿ ತಂದೀರ್ಯಾ, ಭಿಕ್ಷಕ್ಕೆ ರಾಗಿ ತಂದೀರ್ಯಾ? ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು ಎಂಬುದರಲ್ಲಿನ ಶ್ಲೇಷೆ ಅಸದೃಶ. ತುರುಕರು ಕರೆದರೆ ಉಣಬಹುದಣ್ಣಾ, ತುರುಕರು ಕರೆದರೆ ಅತಿ ಪುಣ್ಯವಣ್ಣಾ ಎಂಬುದರಲ್ಲಿ ಧ್ವನಿಯೂ ಉಂಟು. ನಿಂದಕರಿರಬೇಕು, ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧವೋ ಹಾಂಗೆ ಎನ್ನುವ ಮಾತಿನಲ್ಲಿ ಚುರುಕು ಹೆಚ್ಚು. ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ ಎಂಬುದು ಸರಸ ಬೆರೆತ ಸವಾಲು. ದಾಸರ ಹಾಸ್ಯ ಬಲು ವಿಸ್ತಾರ.

ಕನ್ನಡದ ಹಳೆ-ಹೊಸ ಹುಟ್ಟುಗಳ ನಡುಗಡ್ಡೆಯ ಮೇಲೆ ನಿಂತಿರುವ ಮುದ್ದಣ ಹಾಸ್ಯಪ್ರಿಯ. ಬಾಳಿನ ನೋವನ್ನು ನುಂಗಿ ನಗುವುದು ಇವನ ಸ್ವಭಾವ. ರಾಮಾಶ್ವಮೇಧದ ಪುಟಪುಟದಲ್ಲೂ ಪುಟಿಯುವ ಮುದ್ದಣ ಮನೋರಮೆಯರ ಸರಸ ಸಂಭಾಷಣೆಯಲ್ಲಿ ಮೃದುಹಾಸ್ಯವನ್ನು ಯಥೇಷ್ಟವಾಗಿ ಸವಿಯಬಹುದು. ಅನ್ಯಥಾ ನೀರಸವೆನಿಸಬಹುದಾದ ಆ ಗದ್ಯಕಾವ್ಯಕ್ಕೆ

ಹೊಸತನದ ಮೆರುಗು ತಂದಿರುವುದು ಹಾಸ್ಯವೇ, ಅದರೊಳಗೂ ಭವತಿ ಭಿಕ್ಷಾಂದೇಹಿ ಎಂಬ ಸಪ್ತಾಕ್ಷರೀ ಮಂತ್ರದ ಪ್ರಸಂಗದಲ್ಲಿ ಬೆಡಗೂ ಚಮತ್ಕಾರವೂ ಇವೆ; ಆಧುನಿಕ ಸಣ್ಣಕಥೆಯಲ್ಲಿನಂತೆ ಕೊನೆಯ ವರೆಗೂ ಬೆಳೆಸುವ ಕುತೂಹಲದ ಮಾದರಿಯ ತಂತ್ರವಿದೆ. ಮುದ್ದಣ ತನ್ನ ಪ್ರಿಯತಮೆಯಾದ ಮನೋರಮೆಯನ್ನು ಕೊನೆಯ ತನಕವೂ ಕಾಡಿಸಿ ಯಥಾಸಾವಕಾಶವಾಗಿ ಆಕೆಯ ಕುತೂಹಲವನ್ನು ತಣಿಸುವ ಉತ್ತರ ನೀಡಿದಾಗ ಹುಸಿಗೋಪ ಬೆರೆತ ನಗುವಿನ ಅಲೆಗಳೇ ಅಪ್ಪಳಿಸುತ್ತವೆ. ಇಂಥ ಹಾಸ್ಯದಲ್ಲಿ ಮುದ್ದಣನಿಗೆ ಯಾರೂ ಸಾಟಿಯಿಲ್ಲ.

ಜನಪದ ಸಾಹಿತ್ಯಕ್ಕೂ ಸರಸಹಾಸ್ಯಕ್ಕೂ ನಿತ್ಯಗಂಟು. ದೇಹದ ವಿಕಾರ, ಸನ್ನಿವೇಶದ ವೈಪರೀತ್ಯ, ಲೋಕಾಚಾರ, ಸಂಸಾರದ ಸೊಬಗು ಮುಂತಾದ ನಾನಾ ಸಂದರ್ಭಗಳಿಗೊಪ್ಪುವ ಹಾಸ್ಯದ ಹಾಡುಗಳು ಇಲ್ಲಿ ಅಸಂಖ್ಯಾತ. ಗಾದೆಗಳಲ್ಲಂತೂ ನಗೆಯ ನಾನಾ ಪ್ರಕಾರಗಳನ್ನೇ ಕಾಣಬಹುದು. ಅಂಗೈಯಲ್ಲಿ ಕೈಲಾಸವನ್ನು ತೋರುವ ಸಾಹಸಪ್ರಯತ್ನಗಳಿವು.

ಹಿಂದಿನ ಕೃತಿಕಾರರಲ್ಲಿ ಹಾಸ್ಯ ಅಲ್ಲೊಮ್ಮೆ ಇಲ್ಲೊಮ್ಮೆ ಇಣುಕು ಹಾಕುತ್ತಿತ್ತು ಅಷ್ಟೆ. ನವರಸಗಳಲ್ಲಿ ಹಾಸ್ಯವೂ ಒಂದಾದ್ದರಿಂದ, ಜೀವನದಲ್ಲಿ ಹಾಸ್ಯವೂ ಬೆರೆತಿರುವುದರಿಂದ ಅದೂ ಪ್ರಕಟವಾಗಬೇಕಾದ್ದು ಅನಿವಾರ್ಯ. ಆದರೆ ಶೃಂಗಾರವೀರಕರುಣಾದ್ಭುತಗಳೇ ಮುಂತಾದ ರಸಗಳನ್ನು ಮುಖ್ಯೋದ್ದೇಶವಾಗಿಟ್ಟುಕೊಂಡು ರಚಿಸಿದ ಕೃತಿಗಳು ಇದ್ದಂತೆ ಹಾಸ್ಯ ಪ್ರಧಾನವಾದ ಕೃತಿಗಳು ಹಿಂದೆ ಇರಲಿಲ್ಲವೆಂದೇ ಹೇಳಬೇಕು. ಹಾಸ್ಯಭರಿತ ಸನ್ನಿವೇಶವನ್ನೋ ವ್ಯಕ್ತಿಯನ್ನೋ ಕಂಡು ಚಿತ್ರಿಸುತ್ತಿದ್ದುದುಂಟಾದರೂ ಪ್ರತಿಯೊಂದು ಸನ್ನಿವೇಶದಲ್ಲೂ ಹಾಸ್ಯವನ್ನು ಕಾಣುವ ದೃಷ್ಟಿಗೇ ಅಷ್ಟಾಗಿ ಪ್ರಾಧಾನ್ಯ ನೀಡಲಿಲ್ಲ. ಕಾದಂಬರಿ, ಕಥೆ, ಹರಟೆ, ಕವನಗಳೇ ಮುಂತಾದವು ಹಲವು ಪ್ರಕಟವಾಗಿವೆ. ದಿನ, ವಾರ, ಮಾಸಪತ್ರಿಕೆಗಳೂ ಹಲವು ಪ್ರಕಟನ ಸಂಸ್ಥೆಗಳೂ ಅಚ್ಚಿನ ಮನೆಯ ನೆರವಿನಿಂದ ಹಲವಾರು ಲೇಖಕರ ಕೃತಿಗಳನ್ನು ಹೊರತರುತ್ತಿರುವ ಈ ಕಾಲದಲ್ಲಿ ಇವನ್ನೆಲ್ಲ ವೈಜ್ಞಾನಿಕವಾಗಿ ವಿಂಗಡಿಸಿ, ವಿಶ್ಲೇಷಣೆ ಮಾಡಿ ವಿವೇಚನೆ ನಡೆಸುವುದು ಕಷ್ಟ ಸಾಧ್ಯವೇ ಸರಿ. ಇಲ್ಲಿ ಮುಖ್ಯವಾಗಿ ಪ್ರಮುಖ ಹಾಸ್ಯ ಲೇಖಕರನ್ನೂ ಅವರ ಹಾಸ್ಯ ಪ್ರವೃತ್ತಿಗಳನ್ನೂ ಗುರುತಿಸಬಹುದಾಗಿದೆ.

ಕನ್ನಡದಲ್ಲಿ ಮೊಟ್ಟ ಮೊದಲು ಸ್ವತಂತ್ರ ಕಾದಂಬರಿಯನ್ನು ಸೃಷ್ಟಿಸಿದವರಲ್ಲಿ ಎಂ.ಎಸ್. ಪುಟ್ಟಣ್ಣನವರೊಬ್ಬರು. ಇವರ ಮಾಡಿದ್ದುಣ್ಣೋ ಮಹಾರಾಯದಲ್ಲಿ ಲೇಖಕರಿಗೆ ಹಾಸ್ಯ ಹಸ್ತಗತವಾಗಿದೆ. ಸ್ವಭಾವ ವೈಚಿತ್ರ್ಯ, ಕುರೂಪ, ಅಸಂಬದ್ಧ ಸನ್ನಿವೇಶ ಇವುಗಳ ಸುತ್ತಲೂ ಹಾಸ್ಯದ ತರತಮಗಳೂ ವ್ಯಂಗ್ಯವೈವಿಧ್ಯಗಳೂ ಮಾಲೆಮಾಲೆಯಾಗಿ ಹಬ್ಬಿವೆ. ಈ ಕಾದಂಬರಿಯ ಒಂದು ಪಾತ್ರವಾದ ನಕಲಿ ನಾರಣಪ್ಪನಿಗೆ ನಗಿಸುವುದೇ ನಿರಂತರ ಹವ್ಯಾಸ. ಆತನ ಪಂಚಾಂಗ ವೀಕ್ಷಣೆಯ ಪ್ರಮಾದ ಒಂದು ಉದಾಹರಣೆ. ಪ್ರಮಾದ ಸಂವತ್ಸರವಾದ್ದರಿಂದ ಪ್ರಮಾದಗಳು ನಡೆಯುವಂಥಾದ್ದು; ಮಾರ್ಗಶಿರ ಬಹುಳ ಪಂಚಮಿಯಾದ್ದರಿಂದ ಮಾರ್ಗ ದಾರಿಯಲ್ಲಿ ಹೋಗತಕ್ಕವರ ತಲೆಯು ಬಹುಳ ಎಂದರೆ ವಿಶೇಷವಾಗಿ, ಪಂಚಮಿ ಎಂದರೆ ಪಂಚತ್ವ ಅಥವಾ ಮರಣವನ್ನು ಹೊಂದುವುದು. ಇಲ್ಲಿ ಶಬ್ದಗಳನ್ನೇ ಅರೆದು, ವಿಚಿತ್ರಾರ್ಥಗಳನ್ನು ಹೊರಡಿಸಿ, ಹಾಸ್ಯವನ್ನು ಹಿಂಡುವ ಪ್ರಯತ್ನವನ್ನು ಕಾಣಬಹುದು. ಆದರೂ ಆಧುನಿಕ ಕನ್ನಡ ಗದ್ಯಸಾಹಿತ್ಯದಲ್ಲಿ ಮೊಟ್ಟ ಮೊದಲಿಗೆ ಹಾಸ್ಯಕ್ಕೂ ಎತ್ತರದ ಸ್ಥಾನವನ್ನು ಕಲ್ಪಿಸಿಕೊಟ್ಟ ಕೀರ್ತಿ ಪುಟ್ಟಣನವರದು.

ಆರ್.ನರಸಿಂಹಾಚಾರ್ಯರು ಕರ್ನಾಟಕ ಕವಿಚರಿತೆಗಷ್ಟೇ ಪ್ರಸಿದ್ಧರಲ್ಲ. ಅವರು ಬರೆದ ನಗೆಗಡಲಿನ ವಸ್ತುವೇನೆಂಬುದು ಅದರ ಹೆಸರಿನಲ್ಲೆ ವ್ಯಕ್ತವಾಗುತ್ತದೆ. ಗಾಂಪರೊಡೆಯರ ಮತ್ತು ಅವರ ಶಿಷ್ಯರ ಪ್ರತಾಪಗಳಲ್ಲಿ ಕಾಣುವುದು ಹುಚ್ಚು ಹಾಸ್ಯ, ಚುಚ್ಚು ಹಾಸ್ಯ, ಪೆದ್ದು ತನದ ಲೇವಡಿ. ಜನಪದ ಸಾಹಿತ್ಯದಲ್ಲಿಯ ಜಂತದಕ್ಕಯ್ಯ ಕಥೆ, ಮಂಕುಭಟ್ಟನ ಕಥೆ, ಕಪಿ ಹಾರಿದ ಕಥೆ, ಹೆಂಟೆಗೊದ್ದನ ಕಥೆ ಮುಂತಾದುವುಗಳ ಪರಂಪರೆಗೆ ಇದು ಸೇರಿದ್ದೆನ್ನಬಹುದು. ಅಂತೆಯೇ ತೆನಾಲಿ ರಾಮಕೃಷ್ಣ ಮತ್ತು ಬೀರಬಲ್ಲನದೆನ್ನಲಾದ ಹಲವಾರು ಕಥೆಗಳು ಇಂಥ ಹಾಸ್ಯವನ್ನು ಕನ್ನಡಿಸಿವೆ. ಇವು ಸಂಬಂಧಪಟ್ಟ ವ್ಯಕ್ತಿಗಳನ್ನು ಕುರಿತ ಚತುರೋಕ್ತಿ ಸನ್ನಿವೇಶಗಳು.

ಪಂಜೆ ಮಂಗೇಶರಾಯರು ಮಕ್ಕಳಿಗೆಂದು ಬರೆದ ಕಥೆಗಳಲ್ಲಿ ತಿಳಿಹಾಸ್ಯವನ್ನು ಕಾಣಬಹುದು. ಹಳೆಯ ಸಬ್ ಎಸಿಸ್ಟಾಂಟನ ಸುಳ್ಳು ಡೈರಿಯಿಂದ ಎಂಬ ಇವರ ಒಂದು ಕಥೆ ಅತ್ಯುತ್ತಮ ಹಾಸ್ಯಕಥೆಗೆ ನಿದರ್ಶನವಾಗಿದೆ. ಶ್ರೀನಿವಾಸಕೃತ ರಂಗಪ್ಪನ ಕಥೆಗಳಂಥ ಹಲವಾರು ಕಥಾ ಶ್ರೇಣಿಗಳು ತಿಳಿ ಹಾಸ್ಯದ ಹೊನಲುಗಳು. ಈ ಹಾಸ್ಯ ಹಲವು ವೇಳೆ ಕಣ್ಣೀರು ಬೆರೆತಿದ್ದೂ ಆಗಿರುವುದುಂಟು. ವಿಡಂಬನೆಗೂ ಇಲ್ಲಿ ಕೊರತೆಯಿಲ್ಲ. ಕಥನ ಕವನಗಳಲ್ಲೂ ಭಾವಗೀತೆಗಳಲ್ಲೂ ಮಿಂಚುವುದು ಲಲಿತ ಮಧುರ ಹಾಸ್ಯ, ಶೀಲವಂತ ಜೀವಿ ಕಾಣುವ ಚೊಕ್ಕನುಡಿ. ಸನ್ನಿವೇಶ ಸಂಭಾವಿತರಲ್ಲೂ ಸುಳಿಯುವ ದುಷ್ಟ ಆಲೋಚನೆಗಳಿಗೆ ಯಥೋಚಿತ ಮುಚ್ಚುಮರೆ. ತಡೆತಡೆದು ಪುಟ್ಟ ಕಂತುಗಳಲ್ಲಿ ಹೊರಬೀಳುವ ನಗೆಯಿಂದ ಅಜೀರ್ಣವೆಂದೂ ಸಾಧ್ಯವಿಲ್ಲ.

ಕುವೆಂಪು ಅವರ ವಿಪುಲ ಸಾಹಿತ್ಯದಲ್ಲಿ ಹಾಸ್ಯಕ್ಕೇನೂ ಕೊರತೆಯಿಲ್ಲ. ಇವರ ಕಥೆ, ಕವನ, ಕಾದಂಬರಿ, ಸಣ್ಣಕಥೆ, ಪ್ರಬಂಧ, ಮಹಾಕಾವ್ಯಗಳಲ್ಲಿ ಹಾಸ್ಯ ರಸ ಹೆಚ್ಚು ಕಾವ್ಯಾತ್ಮಕವಾಗಿ ಪ್ರತಿಪಾದಿತವಾಗಿದೆ. ಮಲೆನಾಡಿನ ಚಿತ್ರಗಳು ಹಾಸ್ಯ ಕುತೂಹಲಗಳನ್ನು ಕೊನೆಯವರೆಗೂ ಕಾದಿರಿಸುವ ಪ್ರಬಂಧ ಸಂಕಲನ. ಬೊಮ್ಮನಹಳ್ಳಿ ಕಿಂದರಿಜೋಗಿ, ಮಕ್ಕಳಿಗಷ್ಟೇ ಅಲ್ಲ ದೊಡ್ಡವರಿಗೂ ಹಾಸ್ಯರಸವನ್ನು ಉಣಬಡಿಸುತ್ತದೆ. ಹೆಂಡತಿ ಹೊಲಿಯುತ್ತಿರುವ ಅಂಗಿಯನ್ನು ಕಂಡಾಗ ಕವಿ ಆಡುವ ಮಾತುಗಳು ಈ ರೀತಿ ಇವೆ:

ಬರಲಿರುವ ಕಂದಂಗೊ
ಬಂದ ಕಂದಂಗೊ
ಹೊಲಿಯುತಿರುವೀ ಅಂಗೀ
ಅರಿಗರ್ಧಾಂಗಿ

- ಈ ಮಾತುಗಳು ಕವಿಯ ಹಾಸ್ಯವಿಧಾನ ಯಾವ ಮಟ್ಟದ್ದು ಎಂಬುದಕ್ಕೆ ಹೆಗ್ಗುರುತಾಗಿದೆ. ಮಹಾಕಾವ್ಯವಾದ ಶ್ರೀ ರಾಮಾಯಣ ದರ್ಶನಂನಲ್ಲಿ ಹಾಸ್ಯಕ್ಕೆ ಮೀಸಲಾದ ಪುಟಗಳ ಸಂಖ್ಯೆಯಂತೂ ಲೆಕ್ಕವಿಲ್ಲ. ನೆಲದಂತರಾಳದಲ್ಲಿ ಹರಿಯುತ್ತಿರುವ ಹೊನಲು ಅಲ್ಲಲ್ಲಿ ಮೇಲೆದ್ದು ಬಂದಂತೆ ಈ ಕಾವ್ಯದುದ್ದಕ್ಕೂ ಕಂಗೊಳಿಸುವ ಹಾಸ್ಯ ಪ್ರಕಾಗಳನ್ನೆಲ್ಲ ಪಟ್ಟಿಮಾಡಿದರೆ, ಈ ಕ್ಷೇತ್ರದಲ್ಲೂ ಕವಿಯ ಪ್ರತಿಭೆ ಎಂಥ'ದೆಂದು ವೇದ್ಯವಾಗುತ್ತದೆ. ಆಗಸದ ಚಂದ್ರ ಬೇಕೆಂದು ಹಟ ಹಿಡಿದು ಅಳುತ್ತಿದ್ದ ಪುಟ್ಟ ರಾಮನ ಮುಖಕ್ಕೆ ಮುದುಕಿಯೊಬ್ಬಳು ಕನ್ನಡಿಯನ್ನು ಹಿಡಿದು ಚಂದ್ರನನ್ನು ತೋರಿಸಿದ ಪ್ರಸಂಗದ ತಿಳಿಹಾಸ್ಯ, ಆ ಕನ್ನಡಿಯಂತುಟಾಕೆಯುಂ ಪ್ರತಿಬಿಂಬರೀತಿಯಂ ಕೈಗೊಂಡಳಾ ಜನದ ಮನದ ವಿಕೃತಿಗೆ ತನ್ನ ಮೆಯ್ ವಿಡಂಬನಮಪ್ಪವೋಲ್ ಎಂಬುದಾಗಿ ಕವಿ ಹೇಳಿರುವ ಮಂಥರೆಯ ವಿಕೃತಿ ವಕ್ರತೆಯ ರೂಪಿನ ಬಣ್ಣನೆಯಿಂದ ಉದ್ಭವಿಸುವಂಥ' ವಿಕಟಹಾಸ್ಯ, ರಾಮಲಕ್ಷ್ಮಣಸೀತೆಯರು ಚಿತ್ರಕೂಟದಲ್ಲಿದ್ದಾಗ ಬರುವ ನಗೆಗೆ ಮೀರಿದುದಾ ಧೂಮದೃಶ್ಯಂ ಎಂಬ ಸನ್ನಿವೇಶ - ಇವೆಲ್ಲ ಹಾಸ್ಯರಂಜಕವಾಗಿವೆ. ಇನ್ನು ಅವರ ಸರಳರಗಳೆಗಳಲ್ಲೂ ಕಥನಕವನಗಳಲ್ಲೂ ಭಾವಗೀತೆಗಳಲ್ಲೂ ಹಾಸ್ಯ ತೊರೆಯಾಗಿ ಹರಿದಿದೆ, ಮಡುಗಟ್ಟಿ ನಿಂತಿದೆ.

ಬೇಂದ್ರೆಯವರ ಹಾಸ್ಯದ್ದು ಇನ್ನೊಂದು ಪೀಳಿಗೆ. ಅದರಲ್ಲಿ ಅವರ ವ್ಯಕ್ತಿತ್ವದ ಮುದ್ರೆ ಹೆಚ್ಚು ನಿಚ್ಚಳ. ಬಿಚ್ಚುಮನದಿಂದ ಹಾಸ್ಯ ಕೊಚ್ಚುವುದು ಅವರ ಸ್ವಭಾವ. ಹಲವೊಮ್ಮೆ ಅದು ವಾಚ್ಯವೂ ಹರಿತವೂ ಆದೀತು. ಜನಪದದ ಮೆರುಗು ಈ ಹಾಸ್ಯದ ಇನ್ನೊಂದು ವೈಶಿಷ್ಟ್ಯ. ಹುಬ್ಬಳ್ಳಿಯವನಿನ್ನೂ ಬರಲಿಲ್ಲವೆಂದು ಕಾದು ಕುಳಿತ ಹೆಣ್ಣು, ಬಳಿಯಲ್ಲಿ ನಲ್ಲನಿಲ್ಲದಾಗ ಕೈ ಗಲ್ಲ ಹಚ್ಚಿ ಕೂತ ಕನ್ಯೆ ಮುಂತಾದ ಕವನಗಳ ಕಾಮುಕಸ್ತೂರಿಯ ಸೊನೆ ಬೆರೆತ ನಗೆಯುಂತಿರಲಿ, ಹರಟೆಗಳಲ್ಲೂ ಅಣಕ ವಾಡುಗಳಲ್ಲೂ ಹರಿದಿರುವ ಹಾಸ್ಯಕ್ಕೂ ತುಂಬುಹೊಳೆಯ ಆವೇಶ. ಅವರ ನಿರಾಭರಣ ಸುಂದರಿಯೆಂಬುದು ಬಹುತೇಕ ಹಾಸ್ಯ ಬರೆಹಗಳೇ ಇರುವ ಪುಸ್ತಕ. ಕುಯ್ಗುಡುವ ಭಟ್ಟರ ನಾಯಿಯ ವರ್ಣನೆ, ಕೇರಿಗೊಂದು ಕೆಮ್ಮುವ ಮುದುಕಿ ಇರಲೇಬೇಕೆಂಬ ವಿಚಿತ್ರ ವಾದ, ಈ ಜಗದ ಶುದ್ಧೀಕರಣಕ್ಕೆಂದು ಧ್ವಜವೆತ್ತಿ ಮೇಲಕ್ಕೆ ಹೊರಟಿರುವ ಕಸಪೊರಕೆ, ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಕವನವನ್ನು ತಾವೇ ಅಣಕಿಸಿ ಬೆಕ್ಕು ಹಾರುತಿದೆ ನೋಡಿದಿರಾ? ಎಂದು ಕಟ್ಟಿದ ಪದ್ಯದ ಅಪ್ಪಟ ಹಾಸ್ಯ

ಇವುಗಳದೊಂದು ತೂಕವಾದರೆ, ಅವರ ಹುಚ್ಚಾಟ ಮತ್ತು ನಗೆಯ ಹೊಗೆ ನಾಟಕಗಳ ನಂಜುನಗೆಯದು ಇನ್ನೊಂದು ತೂಕ. ವಿಡಂಬನದ ನಾನಾ ಪದರಗಳನ್ನಿಲ್ಲಿ ಕಾಣಬಹುದು. ಕಾರಂತರ ಹಲವಾರು ಕಾದಂಬರಿಗಳಲ್ಲಿ ಸನ್ನಿವೇಶಜನ್ಯವಾದ ಹಾಸ್ಯದ ನೆಲೆಯೇ ಇದೆ. ಆದರೆ ದೇವದೂತರು, ಗ್ನಾನ ಮುಂತಾದವುಗಳಲ್ಲಿ ಜನರ ನಡೆನುಡಿಗಳಿಗೆ ಅವರು ನಗೆಯ ರಾವುಗನ್ನಡಿಯನ್ನೇ ಹಿಡಿದಿದ್ದಾರೆ. ಇಲ್ಲಿ ಬರುವ ಹಾಸ್ಯ ಬಲು ಹರಿತ. ಈ ವಿಡಂಬನ ನಗೆಹಲ್ಲಿಗೆ ತಮ್ಮ ಕತ್ತನೇ ಒಡ್ಡಿಕೊಂಡಿದ್ದರೂ ನಗುನಗುತ್ತಲೇ ಬಲಿಯಾಗುತ್ತಾರೆ. ವಿಡಂಬನಕ್ಕೆ ಹಾಸ್ಯಕ್ಕೆ ಇನ್ನೊಂದು ಹೆಸರು ಶ್ರೀರಂಗ. ಇವರ ಕೃತಿಗಳಲ್ಲಿ ಮಾತಿನ ಮಸೆದಾಟದಿಂದ, ಚತುರೋಕ್ತಿಯಿಂದ, ಶ್ಲೇಷೆಯ ಬಲದಿಂದ ಉಕ್ಕಿಬರುವ ಹಾಸ್ಯವೂ ಉಂಟು.

ಇದುವರೆಗೆ ಕನ್ನಡದ ಕೆಲವು ಪ್ರಧಾನ ಲೇಖಕರ ಕೃತಿಗಳಲ್ಲಿಯ ಹಾಸ್ಯವನ್ನು ಕುರಿತ ವಿವೇಚನೆ ಮಾಡಲಾಯಿತು. ಆದರೆ ಹಾಸ್ಯವನ್ನೇ ಪ್ರಧಾನ ಉದ್ಯೋಗವಾಗಿ ಮಾಡಿಕೊಂಡ ಲೇಖಕರ ಸಂಖ್ಯೆಗೇನೂ ಕನ್ನಡದಲ್ಲಿ ಕೊರತೆಯಿಲ್ಲ. ಕೈಲಾಸಂ ಅಂಥ'ವರಿಗೆ ಆದ್ಯಪುರುಷ. ತಿಪ್ಪಾರಳ್ಳಿಯ ಬೋರ, ಕೋಳೀಕೆ ರಂಗ ಮುಂತಾದ ನಗೆವಾಡುಗಳ ದೊಗಲೆ ಬಗಲೆಯನ್ನೂ ಟೊಳ್ಳು ಗಟ್ಟಿ, ಅಮ್ಮಾವ್ರ ಗಂಡ, ನಂಬ್ರಾಹ್ಮಣ್ಕೇ, ಬಂಡ್ವಾಳ್ವಿಲ್ಲದ್ಬಡಾಯಿ, ಹುತ್ತದಲ್ಲಿ ಹುತ್ತ ಮುಂತಾದ ನಾಟಕಗಳಲ್ಲಿ ಮಧ್ಯಮ ವರ್ಗದ ಒಂದು ಪಂಗಡದ ಜನರ ಮೇಲೆ ಹರಿಸಿದ ಹಾಸ್ಯದ ದೃಷ್ಟಿಯನ್ನೂ ನೋಡಿದಾಗ ಕೈಲಾಸಂ ಎಂಬುದು ಹಾಸ್ಯಕ್ಕೆ ಪರ್ಯಾಯ ಪದವೆಂದೇ ಹೇಳಬೇಕು. ಆಗಿನ ಕಾಲದ ವಿದ್ಯಾವಂತರೆನಿಸಿಕೊಂಡವರ ವೃತ್ತಗಳಲ್ಲಿ ಅತಿಯಾಗಿ ಬೆಳೆದಿದ್ದ ಇಂಗ್ಲಿಷ್ ಮೋಹವನ್ನೂ ಡಾಂಭಿಕತನವನ್ನೂ ಸಂಪ್ರದಾಯ ಮೌಢ್ಯವನ್ನೂ ದಾಸ್ಯ ಮನೋವೃತ್ತಿಯನ್ನೂ ಇವರಂತೆ ಬಯಲಿಗೆಳೆದವರು ಇನ್ನೊಬ್ಬರಿಲ್ಲ. ತಾವರೆಕೆರೆ ಪ್ರಬಂಧ ಸಂಕಲನದಲ್ಲೂ ಹಾಸ್ಯದ ಮೆರವಣಿಗೆಯೇ ನಡೆದಿದೆ. ಇವರ ಅನೇಕ ಬಿಡಿನುಡಿಗಳೂ ಹಾಸ್ಯದ ಊಟೆಗಳೇ. ಎಕ್ಕಡದಂತೆ ಇದ್ದೂ ಬೂಟ್ಸಿನಂತೆ ಕಟ್ಟಬಹುದಾದ ಚಪ್ಪಲಿಗೆ ಎಕ್ಕಡದ ಎಲಿಗೆನ್ಸೂ ಬೂಟ್ಸಿನ ಬಡಾಯಿಯೂ ಇದೆಯೆಂದು ವರ್ಣಿಸಿರುವ ಕೈಲಾಸಂ ಅವರ ನಗೆಗೆ ತುತ್ತಾಗಿರುವುದೆಲ್ಲ ಬಹಳ ಮಟ್ಟಿಗೆ ಈ ಬಗೆಯ ಮನಃಪ್ರವೃತ್ತಿಯೇ. ಅಳು-ನಗುಗಳ ನಡುಗೆರೆ ಎಷ್ಟು ಸಪೂರವೆಂಬುದನ್ನೂ ಕೈಲಾಸಂ ಅರಿತಿದ್ದವರು. ಆದ್ದರಿಂದಲೆ ಇವರ ನಗೆಯಲ್ಲಿ ವ್ಯಂಗ್ಯದ್ದು ನೂರಕ್ಕೆ ನಲವತ್ತು ಪಾಲಾದರೆ ಸಹಾನುಭೂತಿಯದು ಅರವತ್ತು ಪಾಲು. ಓದುಗರು ಸ್ವಲ್ಪ ಹೆಚ್ಚು ಹೊತ್ತು ತಮ್ಮ ಮನಸ್ಸನ್ನು ತಂಗಿಸಿದರೆ ಕಾಣುವುದು ನಗೆಯಲ್ಲ, ಕವಿಯ ಕಣ್ಣೀರು. ಹಲವೊಮ್ಮೆ ಇವರ ಹಾಸ್ಯಒರಟಾಗುವುದೂ ಉಂಟು. ಅತಿಯಾದ ಪ್ರಾಸ ಪ್ರಯೋಗವೂ ತಿಣುಕೂ ಬೇಸರ ಬರಿಸಬಹುದು. ಆದರೂ ಕೈಲಾಸಂ ಕನ್ನಡದ ಹಾಸ್ಯಚಕ್ರವರ್ತಿ. ಹಿಂದಿನ ನಾಟಕಗಳಲ್ಲಿ ವಿದೂಷಕನ ಸೆರಗಿಗೆ ಕಟ್ಟಿದ್ದ ಹಾಸ್ಯವನ್ನು ಬಿಡಿಸಿ ಭದ್ರಾಸನದ ಮೇಲೆ ಕುಳ್ಳಿರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕೈಲಾಸಂ ಪೀಳಿಗೆ ಬಲು ದೊಡ್ಡದು. ಇವರ ಅನಂತರ ಬಂದ ಅನೇಕ ನಾಟಕಕಾರರು ಇವರ ಪ್ರಭಾವದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಅತಿಯೆನಿಸುವ ಮಟ್ಟಿಗೆ ಇವರು ಹಳೆಯ ಪ್ರಯೋಗಗಳನ್ನೇ ಬೆಳೆಸಿದರು. ಆದರೂ ತಮ್ಮತನವನ್ನೂ ಉಳಿಸಿಕೊಂಡ ಕೆಲವರ ಹೆಸರನ್ನಾದರೂ ಇಲ್ಲಿ ಹೇಳಬಹುದು. ಕ್ಷೀರಸಾಗರ, ಪರ್ವತವಾಣಿ, ಎ.ಎಸ್.ಮೂರ್ತಿ - ಇವು ಮೂರು ಹೆಸರುಗಳು. ಇದೇ ರೀತಿ ಶ್ರೀರಂಗರಿಂದ ಪ್ರಭಾವಿತರಾದವರೆಂದರೆ ಎನ್ಕೆ.ಕುಲಕರ್ಣಿ ಮತ್ತು ಬೇಂದ್ರೆ ಲಕ್ಷ್ಮಣರಾವ್.

ನಗೆಯನ್ನೇ ತಮ್ಮ ಲೇಖನದ ಕಸಬನ್ನಾಗಿ ಮಾಡಿಕೊಂಡ ಇನ್ನೊಬ್ಬರು ನಾ.ಕಸ್ತೂರಿ. ಇವರು ಹರಟೆಗಳನ್ನು ಹೊಸೆದಿದ್ದಾರೆ. ನಾಟಕಗಳನ್ನು ಬರೆದಿದ್ದಾರೆ. ಕವನಗಳನ್ನು ಕಟ್ಟಿದ್ದಾರೆ. ಪಡಿನುಡಿಗಳನ್ನು ಎರಚಾಡಿದ್ದಾರೆ. ಇಂಗ್ಲಿಷ್ ಹಾಸ್ಯದ ವಿಶ್ವರೂಪವನ್ನು ಕಂಡು ಅನುಭವಿಸಿ ಅದನ್ನು ಕನ್ನಡಿಸಿದ್ದಲ್ಲದೆ ಕನ್ನಡದಲ್ಲಿಯ ಹಾಸ್ಯಜಾಯಮಾನವನ್ನು ಗುರುತಿಸಿ ಇದನ್ನೂ ಅದನ್ನೂ ಸೇರಿಸಿ ಕಸಿ ಮಾಡಿ ಹೊಸದೊಂದು ಜಾತಿಯನ್ನೇ ಸೃಷ್ಟಿಸಿದ್ದಾರೆ. ಇವರು ಬರೆದ ಅಣಕವಾಡುಗಳೂ ಹಾಸ್ಯ ಪದ್ಯಗಳೂ ಅನೇಕ. ಇವರ ಅನರ್ಥಕೋಶ ಅತ್ಯಂತ ಪ್ರಸಿದ್ಧವಾಗಿದೆ.

ಹಾಸ್ಯಕ್ಕೇ ತಮ್ಮ ಲೇಖನಿಯನ್ನು ಮುಡಿಪು ಮಾಡಿದ ರಾ.ಶಿ. ಅವರು ಸ್ವತಃ ಕೃತಿರಚನೆ ಮಾಡಿದ್ದಲ್ಲದೆ ಹಾಸ್ಯ ಬರೆಹಗಾರರ ದೊಡ್ಡ ಪಡೆಯನ್ನೇ ಕಟ್ಟಿದರು. ಇವರು ಇಪ್ಪತ್ತೈದು ವರ್ಷ ನಡೆಸಿದ ಪತ್ರಿಕೆ ಕೊರವಂಜಿ ಇಂಗ್ಲಿಷ್‌ನ ಪಂಚ್ ಮಾದರಿಯದು. ದಾಶರಥಿ ದೀಕ್ಷಿತ್, ಟಿ.ಸುನಂದಮ್ಮ, ಅ.ರಾ.ಸೇ., ಅಷ್ಟಾವಕ್ರ, ಹಾ.ರಾ.ಮುಂತಾದ ಹಲವರು ಕೊರವಂಜಿಯ ಗರಡಿಯಲ್ಲಿ ತಯಾರಾದವರು. ವಿಕಟ ವಿನೋದಿನಿ, ವಿನೋದ ಇವು ಹಾಸ್ಯಕ್ಕೆ ಮೀಸಲಾದ ಇನ್ನೆರಡು ಪತ್ರಿಕೆಗಳು.

ರಾಜರತ್ನಂ, ನಾಡಿಗೇರ ಕೃಷ್ಣರಾಯ, ಬೀಚಿ ಅವರ ಹೆಸರು ಹೇಳದೆ ಕನ್ನಡ ಹಾಸ್ಯಸಾಹಿತ್ಯದ ಅವಲೋಕನ ಸಂಪೂರ್ಣವಾಗುವುದಿಲ್ಲ. ರತ್ನನ ಪದಗಳಲ್ಲಿ ಅಲ್ಲಲ್ಲಿ ಹಾಸ್ಯದ ಹರಳುಗಳನ್ನು ಚೆಲ್ಲಿರುವ ರಾಜರತ್ನಂ ಅವರ ನರಕದ ನ್ಯಾಯವೆಂಬ ನಾಟಕ ಹಳ್ಳಿಗರ ಮಾತಿನಲ್ಲಿ ಹೆಣೆದು ನೀಡಿದ ಹುಚ್ಚುಹಾಸ್ಯ. ಸತ್ಯವಾನ್ ಸಾವಿತ್ರಿಯರ ಕಥೆಯನ್ನು ರಾಜರತ್ನಂ ಇಲ್ಲಿ ಹಾಸ್ಯಗನ್ನಡಿಯಿಂದ ನೋಡಿದ್ದಾರೆ. ಸಾಹಿತ್ಯದ ನಾನಾ ವಕ್ರ ಬೆಳವಣಿಗೆಗಳನ್ನೂ ಅರ್ಥವಿಲ್ಲದ ಸಂಪ್ರದಾಯಗಳನ್ನೂ ಗೇಲಿ ಮಾಡಿರುವ ಮಹಾಕವಿ ಪುರುಷ ಸರಸ್ವತಿಯೊಂದು ವಿಡಂಬನ ಕೃತಿ. ಅರುಣೋದಯದ ಆದ್ಯ ಲೇಖಕರಲ್ಲೊಬ್ಬರಾದ ಕೆರೋಡಿ ಸುಬ್ಬರಾಯರ ಅನುಕೂಲ ಸಿಂಧು (1926) ಇನ್ನೊಂದು ವಿಡಂಬನ ಕಾವ್ಯ. ಇವರು ಬರೆದ ನಾಟಕದಲ್ಲಿ ಕೈಲಾಸಂ ಅವರಿಗೂ ಮೊದಲು 'ಕನ್ನಡಾಂಗ್ಲ' ಹಾಸ್ಯ ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ನಾಡಿಗೇರರು ತಮ್ಮ ನಗೆಬರಹಗಳಲ್ಲಿ ತಮ್ಮನ್ನೇ ಆದರೂ ಹಾಸ್ಯಕ್ಕೆ ಒಡ್ಡಿಕೊಂಡು ಓದುಗರನ್ನು ನಗೆಯ ಅಲೆಯಡಿಯಲ್ಲಿ ಮುಳುಗಿಸಿ ತೇಲಿಸುವ ಹವ್ಯಾಸದಲ್ಲಿ ತೊಡಗಿದ್ದಾರೆ. ಬೀಚಿಯವರ ಹಾಸ್ಯ ಹಲವೊಮ್ಮೆ ಹೆಚ್ಚು ಮಾರ್ಮಿಕ. ಅವರು ಬಣ್ಣಿಸುವ ತಿಂಮನ ತಲೆ ಯಾರದಾದರೂ ಆಗಿರಬಹುದು. ಅವರು ಸಿಡಿಸಿರುವ ಹಲವಾರು ನಗೆಹನಿಗಳಲ್ಲೂ ಹಾಸ್ಯಚಟಾಕಿಗಳಲ್ಲೂ ಕುಹಕ ಕಟಕಿ ಬೆಡಗು ಚುರುಕು ಚತುರತೆಗಳು ತುಂಬಿವೆ. ದಿನಕರ ದೇಸಾಯಿ, ಜಿ.ಪಿ.ರಾಜರತ್ನಂ, ಪರಮೇಶ್ವರಭಟ್ಟ, ಅಕಬರ ಅಲಿ, ವಿ.ಜಿ.ಭಟ್ಟ, ಎಚ್.ಎಸ್.ಬಿಳಿಗಿರಿ, ಬಿ.ಆರ್.ಲಕ್ಷ್ಮಣರಾವ್, ಎಚ್.ದುಂಡಿರಾಜ್, ಜರಗನಹಳ್ಳಿ ಶಿವಶಂಕರ್, ಮುಂತಾದವರು ಬರೆದಿರುವ ಚುಟುಕುಗಳು ಹನಿಗವನಗಳು, ಮಿನಿಗವನಗಳು, ಪದ್ಯಗಳು ಸಂಸ್ಕೃತದ ಚಾಟೂಕ್ತಿಗಳಂತೆ ಸರ್ವಜ್ಞನ ವಚನಗಳಂತೆ, ಇಂಗ್ಲಿಷಿನ ಎಪಿಗ್ರಾಂಗಳಂತಿವೆ. ಇವರಲ್ಲದೆ ಇತ್ತೀಚೆಗೆ ಕನ್ನಡದಲ್ಲಿ ಹಲವಾರು ಸಮರ್ಥ ಹಾಸ್ಯ ಲೇಖಕರೂ ಲೇಖಕಿಯರೂ ಸೃಷ್ಟಿಗೊಳ್ಳುತ್ತಿದ್ದಾರೆ. ಹಾಸ್ಯ ಸಾಹಿತ್ಯ ಹೆಚ್ಚು ವಿಪುಲವಾಗಿ ವೈವಿಧ್ಯತೆಯನ್ನು ಹೊಂದಿ ಬೆಳೆಯುತ್ತಿದೆ ಎಂಬುದು ಸಮಾಧಾನ ತರುವ ಸಂಗತಿಯಾಗಿದೆ.

ಕನ್ನಡದ ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ನಗೆಹನಿಗಳು, ಪ್ರಬಂಧಗಳು, ರಾಜಕೀಯ ಟೀಕೆ ಟಿಪ್ಪಣಿಗಳನ್ನೊಳಗೊಂಡ ಲಘು ಬರೆಹಗಳು, ಪ್ರಶ್ನೋತ್ತರಗಳು, ಕುಹಕಡಿಗಳು, ಉರಿಗಾಳುಗಳು - ಇವುಗಳಲ್ಲಿ ಹಾಸ್ಯದಂದು ವಿಸ್ತೃತ ಶಬ್ದ ಭಂಡಾರವೇ ದಿನದಿನವೂ ಸೃಷ್ಟಿಯಾಗುತ್ತಿದೆ. ಆಧುನಿಕ ಕನ್ನಡದ ಹಾಸ್ಯ ಸಾಹಿತ್ಯ ಬಲು ದೊಡ್ಡ ಕುಟುಂಬ ಎಂಬ ಅಂಶ ಈ ಸಂಗತಿಗಳಿಂದ ಮನದಟ್ಟಾಗದಿರದು. (ನೋಡಿ: ಕನ್ನಡದಲ್ಲಿ ವಿಡಂಬನ ಸಾಹಿತ್ಯ). (ಎ.ಆರ್.ಎಂ.,ಎಚ್.ಎಸ್.ಕೆ.)

**ಕನ್ನಡ ನುಡಿ :** ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ ಕನ್ನಡದ ಚಳವಳಿಗಾಗಿ ಮೀಸಲಾದ ಮಾಸ ಪತ್ರಿಕೆ.

ಬಿ.ಎಂ.ಶ್ರೀಯವರ ಅಪೇಕ್ಷೆಯಂತೆ 1938 ಅಕ್ಟೋಬರ್ ತಿಂಗಳಲ್ಲಿ ಅ.ನ.ಕೃ. ಅವರ ಸಂಪಾದಕತ್ವದಲ್ಲಿ ಕನ್ನಡ ನುಡಿ ವಾರಪತ್ರಿಕೆಯಾಗಿ ಜನ್ಮ ತಾಳಿತು. 1949ರಲ್ಲಿ ಪಕ್ಷಪತ್ರಿಕೆಯಾಯಿತು. 1950 ಆಗಸ್ಟ್‌ನಿಂದ ಮಾಸಪತ್ರಿಕೆಯಾಗಿ ಪರಿವರ್ತಿತವಾಯಿತು. 1969 ನವೆಂಬರಿನಿಂದ ಮತ್ತೆ ಪಕ್ಷಪತ್ರಿಕೆಯಾಯಿತು. 1991ರಿಂದ ಪುನಃ ಮಾಸಪತ್ರಿಕೆಯಾಗಿ ಪ್ರಕಟಗೊಳ್ಳುತ್ತಿದೆ. ಅ.ನ.ಕೃಷ್ಣರಾಯ, ಬಿ.ವೆಂಕೋಬ ರಾವ್, ಬಿ.ಎಂ.ಶ್ರೀ., ಎಂ.ಜಿ.ನಂಜುಂಡಾರಾಧ್ಯ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಎಸ್.ಕೃಷ್ಣಶರ್ಮ, ಡಿ.ಸಿ.ಸುಬ್ಬರಾಯಪ್ಪ, ವಿ.ಸೀ., ಸಿ.ಕೆ.ವೆಂಕಟರಾಮಯ್ಯ, ಎಂ.ಆರ್.ಶ್ರೀ., ಎಂ.ವಿ.ಸೀತಾರಾಮಯ್ಯ, ಬಿ.ಶಿವಮೂರ್ತಿಶಾಸ್ತ್ರೀ, ಡಿ.ಆರ್.ರಾಮಯ್ಯ, ಜಿ.ವೆಂಕಟಸುಬ್ಬಯ್ಯ, ಹಿ.ಮ.ನಾಗಯ್ಯ, ಅನಂತ ಪದ್ಮನಾಭರಾವ್, ರಾಮಣ್ಣ ಕೋಡಿಹೊಸಹಳ್ಳಿ, ಡಿ.ವಿ.ನಾಗರಾಜು, ಸಿ.ಸಿದ್ಧಲಿಂಗಪ್ಪ, ಚಂದ್ರಕಾಂತ ಪಡೇಸೂರ,

ಜಿ.ವಿ.ಶಿವಸ್ವಾಮಿ, ಅ.ರಾ.ಚಂದ್ರಹಾಸಗುಪ್ತ, ಐ.ಎಂ.ವಿಠ್ಠಲಮೂರ್ತಿ, ಸಾ.ಶಿ.ಮರುಳಯ್ಯ, ವಿಜಯಾಸುಬ್ಬರಾಜ್, ನಲ್ಲೂರು ಪ್ರಸಾದ, ಅಗ್ರಹಾರ ಕೃಷ್ಣಮೂರ್ತಿ, ಟಿ.ಸಿ.ಪೂರ್ಣಿಮಾ, ಎಚ್.ಎಸ್.ಪಾರ್ವತಿ, ಸಿ.ಕೆ.ಪರಶು ರಾಮಯ್ಯ, ಎಚ್.ಪಿ.ಫಿಲೋಮಿನಾ, ವರದಾ ಶ್ರೀನಿವಾಸ್, ಎಸ್.ವಿ.ಶ್ರೀನಿವಾಸರಾವ್ ಮೊದಲಾದವರು ಕನ್ನಡ ನುಡಿಯ ಸಂಪಾದಕರಾಗಿದ್ದರು. ಮಹದೇವ ಪ್ರಕಾಶ್ ಈಗಿನ ಸಂಪಾದಕರು (2005).

ಕನ್ನಡ ನುಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸರ್ವಜನೋಪಯುಕ್ತ ಲೇಖನಗಳು ಬರುತ್ತವೆ. ಪರಿಷತ್ತು ನಡೆಸುವ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಪ್ರಬಂಧಗಳೂ ಸಣ್ಣಕಥೆಗಳೂ ಏಕಾಂಕ ನಾಟಕಗಳೂ ಪ್ರಕಟವಾಗುತ್ತವೆ. ದತ್ತಿಗಳಿಂದಲೂ ವಿಶೇಷೋತ್ಸವಗಳಲ್ಲೂ ನಡೆಯುವ ಉಪನ್ಯಾಸಗಳ ಸಂಗ್ರಹವನ್ನು ಕೊಡಲಾಗುತ್ತದೆ. ಪ್ರಾಚೀನ ಸಾಹಿತ್ಯದ ಉದ್ಗ್ರಂಥಗಳ ಪರಿಚಯ, ಆಧುನಿಕ ಸಾಹಿತ್ಯದ ಉತ್ತಮ ಕೃತಿಗಳ ಪರಿಚಯ, ವೈಜ್ಞಾನಿಕ ವಿಚಾರ, ಕಾವ್ಯಾವಲೋಕನ, ಅಂಗಸಂಸ್ಥೆಗಳಾದ ಕರ್ನಾಟಕ ಸಂಘಗಳ ಕಾರ್ಯಕಲಾಪಗಳ ಸುದ್ದಿಗಳಿರುತ್ತವೆ. ಮಾಸ್ತಿಯವರು ಕನ್ನಡ ನುಡಿ ಪರಿಷತ್ತಿನ ತಕ್ಕುದೊಂದು ಮುಖವಾಗಬೇಕೆಂದೂ ಬಿ.ಎಂ.ಶ್ರೀಯವರು ಅದು ಕರ್ನಾಟಕದ ಗೆಸೆಟಿಯರ್ ಆಗಬೇಕೆಂದೂ ಆಶಿಸಿದ್ದರು. ಅದರಂತೆ ಕನ್ನಡ ನುಡಿಯ ಅನೇಕ ಸಂಪುಟಗಳು ಹೊರಬಂದಿವೆ.

ದ.ಕೃ. ಭಾರದ್ವಾಜ, ಸ.ಸ.ಮಾಳವಾಡ, ಬಿ.ಶಿವಮೂರ್ತಿಶಾಸ್ತ್ರೀ, ವೆಂಕಟೇಶ ಸಾಂಗಲಿ ಮೊದಲಾದವರು ಕೀರ್ತಿವಂತ ಕನ್ನಡಿಗರು, ಕನ್ನಡನುಡಿಯ ಭಕ್ತರು ಮುಂತಾದ ಶೀರ್ಷಿಕೆಗಳ ಅಡಿಯಲ್ಲಿ ಚಿತ್ರಿಸಿರುವ ವ್ಯಕ್ತಿಚಿತ್ರಗಳು, ಶಿಲಾಶಾಸನ, ಕನ್ನಡಿಗರ ಜೀವನ ಕುರಿತ ತಿ.ತಾ. ಶರ್ಮರ ಲೇಖನಗಳು, ಅ.ನ.ಕೃ. ಬರೆದ ಸಂಗೀತಗಾರರ ಮತ್ತು ಚಿತ್ರಕಲಾವಿದರ ನೆನಪುಗಳು, ರೋರಿಕ್ ಸಂದರ್ಶನಾರ್ಥ ಎಂಬ ಲೇಖನ ಮಾಲಿಕೆ, ನನ್ನ ಜೀವನ ದರ್ಶನ ಎಂಬ ಶೀರ್ಷಿಕೆಯಲ್ಲಿ ಜಿ.ಪಿ.ರಾಜರತ್ನಂ ಹಾಗೂ ಅಡಿಗರ ಲೇಖನಗಳು ವಿಚಾರಪೂರ್ಣವಾಗಿವೆ. ಭಾಷಾವಿಹಾರ, ಪದಶುದ್ಧಿ ಎಂಬ ಶಿರೋನಾಮೆಯ ಬರೆಹಗಳಲ್ಲಿ ಡಿ.ಎಲ್.ನರಸಿಂಹಾಚಾರ್, ಪಿ.ಬಿ.ದೇಸಾಯಿ, ಶಂ.ಬಾ.ಜೋಶಿ, ದ.ರಾ.ಬೇಂದ್ರೆ, ಎ.ಕೆ.ಪುಟ್ಟರಾಮು ಮೊದಲಾದವರು ಶಬ್ದಜಿಜ್ಞಾಸೆ ನಡೆಸಿದ್ದಾರೆ. ಮುದ್ರಣನಿಗೆ ಸಂಬಂಧಿಸಿದಂತೆ 1944ರಲ್ಲಿ ಪ್ರಕಟಗೊಂಡಿರುವ ಎರಡು ಹೇಳಿಕೆಗಳು, 1947ರಲ್ಲಿ ಕನ್ನಡ ಲಿಪಿ ಸುಧಾರಣೆಯ ವಿಷಯವಾಗಿ ಬಿ.ಎಂ.ಶ್ರೀ., ದೇವುಡು, ಕಾಶಿಯ ಜಂಗಮವಾಡಿ ಮಠದ ಶರ್ಮರು ನಡೆಸಿರುವ ಚರ್ಚೆ, ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದಿರುವ ಕನ್ನಡದ ಊರುಗಳು ಎಂಬ ಲೇಖನಗಳೂ ಸೀಬಯ್ಯ, ಬಿ.ಆರ್.ಶೇಷಾಚಾರ್ ಮೊದಲಾದವರ ವಿಜ್ಞಾನ ಲೇಖನಗಳೂ ಕನ್ನಡ ನುಡಿಯಲ್ಲಿ ಪ್ರಕಟವಾಗಿ ಜನಪ್ರಿಯತೆ ಗಳಿಸಿವೆ.




ಕನ್ನಡ ನುಡಿಯ ವಿಶೇಷ ಸಂಚಿಕೆಗಳಲ್ಲಿ 1957ರ ಸನ್ಮಾನೋತ್ಸವ ಸಂಚಿಕೆ ಮತ್ತು 1963ರಲ್ಲಿ ಪ್ರಕಟವಾದ ಒಂದು ನೂರು ಪುಟಗಳ ಬೆಳ್ಳಿ ಸಂಚಿಕೆ, ರವೀಂದ್ರ ಸಂಚಿಕೆ, ಕುವೆಂಪು ಲೇಖನಮಾಲೆ, ಎಂ.ಆರ್.ಶ್ರೀ ಬಾಷ್ಪಾಂಜಲಿ ಸಂಚಿಕೆ (1953), ತೀ.ನಂ.ಶ್ರೀ. ಸ್ಮರಣ ಸಂಚಿಕೆ (1966), ಡಿ.ಎಲ್.ಎನ್.ಸ್ಮರಣ ಸಂಚಿಕೆ (1971), ತಿ.ತಾ.ಶರ್ಮ ಮತ್ತು ಸಿದ್ದವನಹಳ್ಳಿ ಕೃಷ್ಣಶರ್ಮರ ಸ್ಮರಣ ಸಂಚಿಕೆ (1974)- ಇವು ಮುಖ್ಯವಾದವು. ಸಾಹಿತ್ಯ ಸಮ್ಮೇಳನಗಳ ನೆನಪಿಗೆ ಪ್ರಕಟವಾಗುವ ಕನ್ನಡ ನುಡಿಯ ವಿಶೇಷಾಂಕಗಳು ವೈಶಿಷ್ಟ್ಯ ಪೂರ್ಣವಾಗಿವೆ.

(ಎ.ಆರ್.ಎಂ.)

**ಕನ್ನಡ ಪುಸ್ತಕ ಪ್ರಾಧಿಕಾರ :** ಕರ್ನಾಟಕ ಸರ್ಕಾರದಿಂದ 1993 ಅಕ್ಟೋಬರ್ 20ರಂದು ಅಸ್ತಿತ್ವಕ್ಕೆ ಬಂದ ಸ್ವಾಯತ್ತ ಸಂಸ್ಥೆ. ಪುಸ್ತಕ ಸಂಸ್ಕೃತಿಯನ್ನು ಹುಟ್ಟುಹಾಕುವುದು, ಬೆಳೆಸುವುದು ಹಾಗೂ ಪರಿಚಲನೆಗೊಳಿಸುವುದು ಇದರ ಉದ್ದೇಶ. ವಿಶೇಷವಾಗಿ ಕನ್ನಡದಲ್ಲಿ ಲೇಖಕ, ಪ್ರಕಾಶಕ, ಮಾರಾಟಗಾರ ಹಾಗೂ ಓದುಗರ ನಡುವಿನ ಸಂಬಂಧವನ್ನು ಹೆಚ್ಚಿಸುವುದೂ ನಾಡಿನಾದ್ಯಂತ ವಾಚಕರಿಗೆ ಒಳ್ಳೆಯ ಗ್ರಂಥಗಳು ಸುಲಭ ಬೆಲೆಗೆ ದೊರೆಯುವಂತೆ ನೋಡಿಕೊಳ್ಳುವುದೂ ಈ ಮೂಲಕ ಕನ್ನಡ ಪುಸ್ತಕೋದ್ಯಮ ಪ್ರಪಂಚವನ್ನು ಜನಪರಗೊಳಿಸುವುದೂ ಇದರ ಆಶಯಗಳು. ಕನ್ನಡ ಪುಸ್ತಕ ಪ್ರಕಾಶಕರ ಆರ್ಥಿಕ ಹಾಗೂ ಬೌದ್ಧಿಕ ಶ್ರಮಕ್ಕೆ ನೆರವಾಗುವ ಸಲುವಾಗಿ ಆಯಾ ವರ್ಷ ಪ್ರಕಟಗೊಂಡ ಪುಸ್ತಕಗಳ ಸಗಟು ಖರೀದಿ ಮಾಡುವುದು, ಖರೀದಿಸಿದ ಕೃತಿಗಳನ್ನು ನಾಡಿನ ಸಾರ್ವಜನಿಕ ಗ್ರಂಥಾಲಯಗಳಿಗೂ ಶಾಲೆ-ಕಾಲೇಜು ಹಾಗೂ ಸಂಘ ಸಂಸ್ಥೆಗಳಿಗೂ ವಿತರಿಸುವುದು, ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ವಿಜ್ಞಾನ, ಮಾನವಿಕ ಮುಂತಾದ ವಿವಿಧ ಜ್ಞಾನ ಶಿಸ್ತುಗಳಲ್ಲಿ ಪರಿಣತರಾದ ವಿದ್ವಾಂಸರಿಂದ ಪುಸ್ತಕಗಳನ್ನು ಬರೆಸುವುದು, ಯುವ ಪ್ರತಿಭೆಗಳನ್ನು ಗುರುತಿಸಿ ಅವರ ಕೃತಿಗಳ ಪ್ರಕಟಣೆಗಾಗಿ ಧನಸಹಾಯ, ಸಾಲ, ಅನುದಾನ ಹಾಗೂ ಬಹುಮಾನಗಳನ್ನು ನೀಡಿ ಅವರಿಗೆ ಉತ್ತೇಜನ ನೀಡುವುದು, ಸರ್ಕಾರಿ, ಅರೆ ಸರ್ಕಾರಿ, ವಿಶ್ವವಿದ್ಯಾಲಯ ಹಾಗೂ ಖಾಸಗಿ ಸಂಘಸಂಸ್ಥೆಗಳ ಸಹಕಾರದೊಂದಿಗೆ ಪುಸ್ತಕೋದ್ಯಮದ ಆಂದೋಲನಕ್ಕೆ ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸಿ ಈ ಉದ್ಯಮವನ್ನು ವಿಸ್ತರಿಸುವುದೂ ಪ್ರಾಧಿಕಾರದ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಕೆಲವು ಯೋಜನೆಗಳನ್ನು ರೂಪಿಸಿಕೊಂಡಿದೆ.

**1 ಪುಸ್ತಕ ಪ್ರಕಟಣೆ:** ವಿಷಯದ ಸಂವಹನದ ದೃಷ್ಟಿಯಿಂದ ಕೃತಿ ಸರಳ ವಾಗಿದ್ದು ಅದನ್ನು ಕೊಂಡು ಓದುವ ಹಾಗೆ ಮಾಡಬೇಕೆಂಬ ದೃಷ್ಟಿಯಿಂದ ಅಗ್ಗದ ಬೆಲೆಯಲ್ಲಿ ಸುಲಭವಾಗಿ ದೊರೆಯುವಂತೆ ಮಾಡುವ ಜನಪ್ರಿಯ ಪುಸ್ತಕ ಮಾಲೆ, ಎಲ್ಲರೂ ಕಡ್ಡಾಯವಾಗಿ ತಿಳಿದುಕೊಳ್ಳಲೇ ಬೇಕಾದ ವಿಷಯಗಳನ್ನೊಳಗೊಂಡ ಮೂಲಭೂತ ಶೈಕ್ಷಣಿಕ ಮಾಲೆ, ವೈಜ್ಞಾನಿಕ ವಿಚಾರಗಳನ್ನು ಒಳಗೊಂಡ ವಿಜ್ಞಾನ ದೀಪಮಾಲೆ, ವಿಶೇಷವಾಗಿ ಮಕ್ಕಳ ಮನಸ್ಸನ್ನು ಅರಳಿಸಬಲ್ಲ ಹಾಗೂ ಅವರ ಪ್ರತಿಭೆಯನ್ನು ಉದ್ದೀಪನಗೊಳಿಸಬಲ್ಲ ಮಕ್ಕಳ ಪುಸ್ತಕ ಮಾಲೆ, ಪಂಪ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಕೃತಿಗಳನ್ನು ಪ್ರಕಟಿಸುವ ಪಂಪ ಪ್ರಶಸ್ತಿ ಕೃತಿ ಮಾಲೆ, ನೋಬೆಲ್ ಪುರಸ್ಕೃತ ಸಾಹಿತ್ಯಮಾಲೆ, ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಜಾನಪದ ಮಾಲೆಗಳು ಈ ನಿಟ್ಟಿನಲ್ಲಿ ಕೆಲವು ಮುಖ್ಯ ಪ್ರಯತ್ನಗಳು. ಗ್ರಾಮ ಸಂಸ್ಕೃತಿ ಮಾಲೆ, ಸಾಮಾನ್ಯರಿಗೆ ಕಾನೂನು ಮಾಲೆಗಳ ಅಡಿಯಲ್ಲಿ ಅನೇಕ ಕೃತಿಗಳನ್ನೂ ಅನುವಾದಗಳನ್ನೂ ಪ್ರಕಟಿಸಲಾಗುತ್ತಿದೆ.

**2 ಪುಸ್ತಕ ಸಗಟು ಖರೀದಿ ಮತ್ತು ಕೊಡುಗೆ:** ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಪ್ರಥಮಾವೃತ್ತಿ ಗ್ರಂಥಗಳನ್ನು ಸಗಟಾಗಿ ಖರೀದಿಸಿ ಲೇಖಕ ಪ್ರಕಾಶಕರಿಗೆ ನೆರವು ನೀಡುವುದು, ಹೀಗೆ ಖರೀದಿಸಿದ ಗ್ರಂಥಗಳನ್ನು ನಾಡಿನ ಸಾರ್ವಜನಿಕ ಗ್ರಂಥಾಲಯಗಳಿಗೂ ದಲಿತ ಮತ್ತು ಹಿಂದುಳಿದ ವರ್ಗಗಳು ಹಾಗೂ ಗ್ರಾಮೀಣ ಪ್ರದೇಶದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಸಾಹಿತ್ಯ ಪರಿಷತ್ತಿನ ಗ್ರಂಥಾಲಯಕ್ಕೂ ಹೊರನಾಡಿನ ಕನ್ನಡ ಸಂಘ ಸಂಸ್ಥೆಗಳು ಸ್ಥಾಪಿಸಿದ ಗ್ರಂಥಾಲಯಗಳಿಗೂ ಉಚಿತವಾಗಿ ವಿತರಿಸುವುದು ಈ ಯೋಜನೆಯ ಮೂಲೋದ್ದೇಶ.

**3 ಪುಸ್ತಕ ಪ್ರಕಟಣೆ ಸಹಾಯ :** ಉದಯೋನ್ಮುಖ ಬರೆಹಗಾರರಿಗೆ ಮತ್ತು ಉತ್ತಮ ಲೇಖಕರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಲೇಖಕರ ಮೊದಲ ಪುಸ್ತಕ ಪ್ರಕಟಣೆಗಾಗಿ ಆರ್ಥಿಕ ನೆರವು ನೀಡಲಾಗುತ್ತದೆ. ಅಪರೂಪವೂ ಅಲಭ್ಯವೂ ಆದ ಗ್ರಂಥಗಳನ್ನೂ ಮಕ್ಕಳ ಕೃತಿಗಳನ್ನೂ ಪ್ರಾಧಿಕಾರವೇ ಪ್ರಕಟಿಸುವುದರ ಜೊತೆಗೆ ಖಾಸಗಿ ಪ್ರಕಾಶಕರಿಗೆ ವಿವಿಧ ರೂಪದ ಆರ್ಥಿಕ ಸಹಾಯ ನೀಡಲಾಗುತ್ತದೆ. ಹಾಗೆಯೇ ಸೃಜನೇತರ ಸಾಹಿತ್ಯ ಪ್ರಕಾರಗಳಾದ ಜಾನಪದ, ವಿಜ್ಞಾನ, ಇತಿಹಾಸ, ಸಂಶೋಧನಾತ್ಮಕ ಕೃತಿಗಳಿಗೆ ಸಹಾಯಧನ ನೀಡುವ ಯೋಜನೆಯೂ ರೂಪುಗೊಂಡಿದೆ.

**4 ಪುಸ್ತಕಗಳ ಪ್ರಚಾರ ಹಾಗೂ ಮೇಳ :** ವಿವಿಧ ಸಂಘ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಪುಸ್ತಕ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಹಾಗೂ ಗಡಿಭಾಗಗಳಲ್ಲಿ ಪುಸ್ತಕ ಮಾರಾಟ ಆಂದೋಲನದ ಅಂಗವಾಗಿ ಒಂದುವಾರಕಾಲ ವಾರ್ಷಿಕ ಪುಸ್ತಕ ಮೇಳವನ್ನು ನಡೆಸಲಾಗುತ್ತದೆ. ಇದರಲ್ಲಿ ಎಲ್ಲ ಪುಸ್ತಕ ಪ್ರಕಾಶಕರನ್ನು ಬರಮಾಡಿಕೊಂಡು ಪುಸ್ತಕೋದ್ಯಮದ ಸಾಧಕ -ಬಾಧಕಗಳನ್ನು ಮನನ ಮಾಡಿಕೊಡುವುದೂ ಈ ಯೋಜನೆಯ ಉದ್ದೇಶವಾಗಿದೆ.

**5 ಸಂಚಾರಿ ಹಾಗೂ ಗ್ರಂಥ ಸರಸ್ವತಿ ಮಳಿಗೆಗಳು :** ರಾಜ್ಯದ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಕನ್ನಡ ಪುಸ್ತಕಗಳ ಮಾರಾಟ ಹಾಗೂ ಪ್ರದರ್ಶನಕ್ಕಾಗಿ ಸಂಚಾರಿ ಪುಸ್ತಕ ಮಳಿಗೆಗಳನ್ನೂ ರಾಜ್ಯದ ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಗ್ರಂಥ ಸರಸ್ವತಿ ಹೆಸರಿನ ಮಳಿಗೆಗಳನ್ನೂ ಅನುಷ್ಠಾನಗೊಳಿಸಲಾಗಿದೆ. ಈಗಾಗಲೇ ದಾವಣಗೆರೆ ಬಸ್ ನಿಲ್ದಾಣದಲ್ಲಿ ಮಳಿಗೆ ಆರಂಭವಾಗಿದೆ. ಹಾಸನದಲ್ಲಿ ಸಂಸತ್ ಸದಸ್ಯರ ಅನುದಾನದಿಂದ ಮಳಿಗೆ ನಿರ್ಮಿಸುವ ಪ್ರಯತ್ನಗಳು ನಡೆಸಿವೆ. ಈ ಯೋಜನೆಯಿಂದ ಪುಸ್ತಕಗಳನ್ನು ವಾಚಕರಿಗೆ ಸುಲಭವಾಗಿ ಒದಗಿಸುವುದರ ಜೊತೆಗೆ ಕೆಲವರಿಗೆ ಸ್ವಾವಲಂಬಿ ಉದ್ಯೋಗಾವಕಾಶವನ್ನು ದೊರಕಿಸಿಕೊಡುತ್ತಿದೆ.

**6 ಪುಸ್ತಕ ಸಂಸ್ಕೃತಿ ಪ್ರಸಾರ ಪ್ರೋತ್ಸಾಹ :** ರಾಜ್ಯಾದ್ಯಂತ ವಿಚಾರ ಸಂಕಿರಣಗಳು, ಕಮ್ಮಟಗಳು, ಸಭೆಸಮಾರಂಭಗಳು ಹಾಗೂ ಸಂವಾದಗಳನ್ನು ಏರ್ಪಡಿಸುವುದರ ಮೂಲಕ ಪುಸ್ತಕ ಸಂಸ್ಕೃತಿಯ ಮಹತ್ವದ ಪರಿಚಯ ಮಾಡಿಕೊಡಲಾಗುತ್ತಿದೆ. ಸಗಟು ಹಾಗೂ ವಿಶೇಷ ಖರೀದಿ ಯೋಜನೆಯಡಿಯಲ್ಲಿ ಲೇಖಕ - ಪ್ರಕಾಶಕರಿಗೆ ಸಹಾಯ ಮಾಡುವುದು, ಅತ್ಯುತ್ತಮ ಪ್ರಕಾಶಕರನ್ನು ಗುರುತಿಸಿ 25 ಸಾವಿರ ರೂಪಾಯಿಗಳ ಮೊತ್ತ ಪ್ರಶಸ್ತಿ ನೀಡುವುದು - ಇವು ಕೂಡ ಪ್ರಾಧಿಕಾರದ ಕಾರ್ಯಭಾಗವಾಗಿದೆ. ಇದುವರೆಗೆ ಈ ಪ್ರಶಸ್ತಿಯನ್ನು ಬೆಂಗಳೂರಿನ ಕ್ರೈಸ್ಟ್ ಕಾಲೇಜು ಕನ್ನಡ ಸಂಘ (1998), ಮೈಸೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಪ್ರತಿಷ್ಠಾನ (1999), ಬೆಂಗಳೂರಿನ ಸಪ್ನಾ ಬುಕ್ ಹೌಸ್ (2000) ಮೈಸೂರಿನ ಸಂವಹನ ಮತ್ತು ಬಳ್ಳಾರಿಯ ಲೋಹಿಯಾ ಪ್ರಕಾಶನ ಸಂಸ್ಥೆಗಳು ಪಡೆದುಕೊಂಡಿವೆ (2003). ಅಚ್ಚುಕಟ್ಟಾಗಿ ಮುದ್ರಣಗೊಂಡ ಹಾಗೂ ಸೊಗಸಾದ ಮುಖಪುಟ ವಿನ್ಯಾಸವುಳ್ಳ ಕೃತಿಗಳಿಗೆ 15 ಸಾವಿರ ರೂಗಳ ಮೊದಲನೆಯ, 10 ಸಾವಿರ ರೂಗಳ ಎರಡನೆಯ ಹಾಗೂ 5 ಸಾವಿರ ರೂಗಳ ಮೂರನೆಯ ಬಹುಮಾನ ನೀಡಲಾಗುತ್ತಿದೆ. 5 ಸಾವಿರ ರೂಪಾಯಿಗಳ ಮೊತ್ತದ ಬಹುಮಾನವನ್ನು ವಿಶೇಷವಾಗಿ ಮಕ್ಕಳ ಪುಸ್ತಕಗಳಿಗಾಗಿಯೇ ಮೀಸಲಿರಿಸಲಾಗಿದೆ.

**7 ಪ್ರಾಧಿಕಾರದ ಪದಾಧಿಕಾರಿಗಳು :** ಒಬ್ಬರು ಅಧ್ಯಕ್ಷರು, ಹದಿಮೂರು ಮಂದಿ ಸದಸ್ಯರು ಮತ್ತು ಒಬ್ಬರು ಸಂಚಾಲಕರನ್ನು ಒಳಗೊಂಡಂತೆ ಪದಾಧಿಕಾರಿಗಳ ಸಮಿತಿಯ ರಚನೆಯಾಗಿರುತ್ತದೆ. ಪ್ರತಿ ಮೂರು ವರ್ಷಗಳ ಅವಧಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕಮಾಡಲಾಗುತ್ತದೆ. ಪುಸ್ತಕ ಚಿಂತಕರು, ಪುಸ್ತಕ ಪ್ರೇಮಿಗಳು ಹಾಗೂ ವಿದ್ವಾಂಸರನ್ನೊಳಗೊಂಡಂತೆ ಸರಕಾರದ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಕರ್ನಾಟಕ ಪುಸ್ತಕ ಪ್ರಕಾಶಕರ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಇದರ ಸಂಚಾಲಕತ್ವವನ್ನು ಪ್ರಾಧಿಕಾರದ ಆಡಳಿತಾಧಿಕಾರಿಗಳಿಗೆ ವಹಿಸಿಕೊಡಲಾಗಿರುತ್ತದೆ.

*

**ಕನ್ನಡ ಪ್ರಭ :** ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ದಿನಪತ್ರಿಕೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಗುಂಪಿನ ಪ್ರದೇಶ ಭಾಷಾ ಪತ್ರಿಕೆ. 4 ನವೆಂಬರ್ 1967ರಂದು ಬೆಂಗಳೂರಿನಲ್ಲಿ ಆರಂಭವಾಯಿತು. ಎನ್.ಎಸ್.ಸೀತಾರಾಮಶಾಸ್ತ್ರೀ ಮೊದಲ ಸಂಪಾದಕರು. ಅನಂತರ ಕ್ರಮವಾಗಿ ಕೆ.ಎಸ್.ರಾಮಕೃಷ್ಣಮೂರ್ತಿ, ಖಾದ್ರಿ ಶಾಮಣ್ಣ, ವೈ.ಎನ್.ಕೃಷ್ಣಮೂರ್ತಿ, ಕೆ.ಸತ್ಯನಾರಾಯಣ ಸಂಪಾದಕರಾಗಿದ್ದರು. ಕೆಲಕಾಲ ವಿ.ಎನ್.ಸುಬ್ಬರಾವ್ ಅವರು ಸಂಪಾದಕತ್ವ ನಿರ್ವಹಿಸಿದರು. ವೆಂಕಟನಾರಾಯಣ ಅವರು ಈಗಿನ ಸಂಪಾದಕರು (4 ನವೆಂಬರ್ 2001ರಿಂದ).

ಪತ್ರಿಕೆಯು ಪ್ರಥಮ ಸಂಚಿಕೆಯಲ್ಲಿ ತನ್ನ ಧ್ಯೇಯೋದ್ದೇಶಗಳನ್ನು ಕುರಿತು ಹೀಗೆ ಹೇಳಿದೆ: ನಾವು ಯಾವ ಪಕ್ಷಕ್ಕೂ ಸೇರಿದವರಲ್ಲ. ಜನಸಾಮಾನ್ಯರ ಬದುಕನ್ನು ಹಸನುಗೊಳಿಸಲು ಪ್ರಯತ್ನಪಡುವ ಎಲ್ಲರೊಡನೆ ನಾವು ಸಹಕರಿಸುತ್ತೇವೆ. ಜನಸಾಮಾನ್ಯರ ಯೋಗಕ್ಷೇಮ ಪಾಲನೆಯಲ್ಲಿ ನಿರತರಾಗುವವರೆಲ್ಲರ ಜತೆ ಶ್ರಮಿಸುತ್ತೇವೆ. ಇದಕ್ಕಿಂತ ಹಿರಿದಾದ, ಶ್ರೇಯಸ್ಕರವಾದ ಜನಸೇವೆಯಿಲ್ಲ, ನಾಡಸೇವೆಯಿಲ್ಲ, ಇದೇ ಪ್ರಜಾಧರ್ಮ. ಒಟ್ಟಿನ ಒಳಿತಿಗಾಗಿ ವ್ಯಕ್ತಿಯ ಹಿತವನ್ನಾಗಲಿ, ವ್ಯಕ್ತಿಯ ಹಿತಕ್ಕಾಗಿ ಒಟ್ಟಿನ ಒಳಿತನ್ನಾಗಲಿ ಕಡೆಗಣಿಸಲು ನಾವು ಒಪ್ಪೆವು. ಒಂದರಿಂದ ಮತ್ತೊಂದು ಸಾಧನೆಯಾಗಬೇಕು. ಒಂದು ಮತ್ತೊಂದಕ್ಕೆ ದಾರಿಯಾಗಬೇಕು. ಈ ಸಮಷ್ಟಿ ವ್ಯಷ್ಟಿಗಳ ಸಮರಸವನ್ನು ಎತ್ತಿ ಹಿಡಿಯಲು ನಾವು ಉದ್ಯುಕ್ತರಾಗುತ್ತೇವೆ.

'ಕನ್ನಡಪ್ರಭ'ಕ್ಕೆ ವಿಶ್ವದಾದ್ಯಂತ ವ್ಯಾಪಕವಾದ 'ಎಕ್ಸ್‌ಪ್ರೆಸ್ ನ್ಯೂಸ್ ಸರ್ವಿಸ್'ನ ವಿಶೇಷ ವ್ಯವಸ್ಥೆ ಹಾಗೂ ಅನುಕೂಲವಿದೆ. ದೈನಿಕ ಧಾರಾವಾಹಿ, ಕಾದಂಬರಿ, ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಿದ್ಯಾರ್ಥಿ ಮಾರ್ಗದರ್ಶಿಯನ್ನು ಪ್ರಾರಂಭಿಸಿದ ಮೊದಲ ಪತ್ರಿಕೆಯಿದು. ಕಿರಿಯರಿಗಾಗಿ ದೈನಿಕ 'ಜ್ಞಾನಪ್ರಭ', ಮಹಿಳೆಯರಿಗಾಗಿ 'ಮಹಿಳಾಪ್ರಭ' ಕೂಡ ಮೊದಲಿಗೆ ಪ್ರಾರಂಭಿಸಿದ್ದು 'ಕನ್ನಡಪ್ರಭ'ದ ಹೆಮ್ಮೆ. ಸುದ್ದಿಗೆ ಕೊಡುವಷ್ಟೇ ಪ್ರಾಮುಖ್ಯವನ್ನು ವಿಚಾರಕ್ಕೂ ಕೊಡುತ್ತ ಬಂದಿರುವುದು ಇದರ ವೈಶಿಷ್ಟ್ಯ.

ಸಿನಿಮಾ ರಂಗದ ವಿಚಾರಗಳಿಗಾಗಿಯೇ ವಿಶಿಷ್ಟ ಪುರವಣಿ 'ಚಿತ್ರಪ್ರಭ'ವನ್ನು ಕನ್ನಡ ಪತ್ರಿಕಾರಂಗದಲ್ಲಿ ಪ್ರಥಮವಾಗಿ ಕೊಟ್ಟಿದ್ದು ಕನ್ನಡ ಪ್ರಭವೇ. ಚಲನಚಿತ್ರೋದ್ಯಮದಲ್ಲಿ ಪ್ರಚಂಡ ಪರಿಣಾಮ ಬೀರಿದ ಪುರವಣಿ ಇದು. ಆರ್ಥಿಕ ಪುರವಣಿ, ವಿತ್ತಪ್ರಭ, ಜ್ಯೋತಿಷ್ಯವಿಚಾರ ಕುರಿತ ಜ್ಯೋತಿಷ್ಯಪ್ರಭ, ಕಾಲೇಜುರಂಗ, ಕರ್ನಾಟಕ ಕನ್ನಡಿ, ಉದ್ಯೋಗಪ್ರಭ, ಆರೋಗ್ಯ ವಿಶೇಷ ಪುಟಗಳು ಪ್ರಕಟವಾಗುತ್ತವೆ. ಸಾಪ್ತಾಹಿಕಪ್ರಭ ಅತ್ಯಂತ ಜನಪ್ರಿಯ ವಾರದ ಪುರವಣಿ. ಕನ್ನಡ ಪತ್ರಿಕಾರಂಗದಲ್ಲಿ ಪ್ರಥಮಬಾರಿಗೆ ಸಾಹಿತ್ಯ ವಿಮರ್ಶೆ ಕುರಿತ ಅಂಕಣ ಸಾಹಿತ್ಯಲೋಕ ಪ್ರಕಟಿಸಿದ ಕೀರ್ತಿ ಈ ಪತ್ರಿಕೆಯದು. ಧರ್ಮಜ್ಯೋತಿ, ಹತ್ತುದಿಕ್ಕು- ನೂರು ದನಿ, ನುಡಿ-ಕಿಡಿ, ಪತ್ರಕರ್ತರ ಡೈರಿ, ವರದಿಗಾರರ ಡೈರಿ, ಮುಖಾಬಿಲೆ, ಹಳ್ಳಿಕಟ್ಟೆ, ವಾರ್ಡ್ ವಾಚ್, ಬೆಳ್ಳಿತೆರೆ, ನೃತ್ಯ, ಸಮೀಪ ದರ್ಶನ, ಲೋಕ ಸಂಚಾರ, ಉತ್ತರ ದಿಕ್ಕು, ವಿಜ್ಞಾನ ವಿಹಾರ, ಗ್ರಾಹಕ ಜಾಗೃತಿ, ಸುದ್ದಿಮನೆ ಸಂವಾದ, ಸಮಕಾಲೀನ -ಇವು ಪ್ರಮುಖ ಅಂಕಣಗಳು. ಜನಸಾಮಾನ್ಯರಿಗಾಗಿ ನೀವು ಮತ್ತು ಕಾನೂನು ಅಂಕಣ ಆರಂಭಿಸಿದ ಮೊದಲ ಪತ್ರಿಕೆಯಿದು. ಇದೀಗ ಈ ಅಂಕಣಕ್ಕೆ 37 ವರ್ಷಗಳ ದೀರ್ಘ ಇತಿಹಾಸ. ಹೆಸರಾಂತ ನ್ಯಾಯವಾದಿ ಕೆ.ಪಿ.ರಾವ್ ಈ ಅಂಕಣಕಾರರು.

ಕಾಳಾವರ ನರಸಿಂಹಶೆಟ್ಟಿಯವರು ಬರೆಯುತ್ತಿದ್ದ ಓದು ಜನಮೇಜಯ, ಹಾ.ಮಾ.ನಾಯಕರ ಸಾಹಿತ್ಯಸಲ್ಲಾಪ, ವೈ.ಎನ್.ಕೆ. ಅವರ 'ವಂಡರ್ ಕಣ್ಣು', ಎನ್.ಎಸ್.ರಾಮಪ್ರಸಾದರ 'ದೆಹಲಿಯ ದಂತಗೋಪುರದಿಂದ', ಕೆ.ಸತ್ಯನಾರಾಯಣ ಅವರ 'ನಗರ ಪ್ರದಕ್ಷಿಣೆ' ಜನಪ್ರಿಯತೆ ಗಳಿಸಿದ್ದ ಇತರ ಅಂಕಣಗಳು. ವಿದ್ಯಾರ್ಥಿಗಳಿಗೆ ಉಪಯುಕ್ತವಾದ 'ವಿದ್ಯಾಕುಸುಮ', ಆರೋಗ್ಯ ಕುರಿತ ವಿಶೇಷ ಮಾಹಿತಿ ಒಳಗೊಂಡ 'ಆರೋಗ್ಯಭಾಗ್ಯ' ಹಾಗೂ ದೀಪಾವಳಿ ವಿಶೇಷಾಂಕಗಳು 'ಕನ್ನಡ ಪ್ರಭ'ದ ವಿಶೇಷ ಸಂಚಿಕೆಗಳು.

ಈ ಪತ್ರಿಕೆಯ ಪ್ರಸಾರ ಸಂಖ್ಯೆ ಸಾಮಾನ್ಯ ದಿನಗಳಲ್ಲಿ ಸು.82,000. ಭಾನುವಾರಗಳಂದು ಈ ಸಂಖ್ಯೆ 1,10,000 ದಾಟುತ್ತದೆ. ಈಗ ಬೆಳಗಾಂವಿ, ಶಿವಮೊಗ್ಗ ಹಾಗೂ ಮಂಗಳೂರು ಆವೃತ್ತಿಗಳು ಪ್ರಕಟವಾಗುತ್ತಿವೆ. (ಬಿಎಚ್‌ಎ.)

**ಕನ್ನಡ ಬೆರಳಚ್ಚು :** ಕನ್ನಡ ಬೆರಳಚ್ಚು ಯಂತ್ರವನ್ನು ರೂಪಿಸುವಲ್ಲಿ, ಇದರ ನಮೂನೆಯನ್ನು ತಯಾರಿಸಲು ಪ್ರಯತ್ನಪಟ್ಟವರಲ್ಲಿ ಬೆಂಗಳೂರಿನ ಮ.ನ.ಮೂರ್ತಿ, ಶಿವಮೊಗ್ಗದ ಕೆ.ಅನಂತಸುಬ್ಬರಾಯ, ಮೈಸೂರಿನ ನಾರಾಯಣಾಚಾರ್ಯ, ಕೇಶವ, ಚಿಕ್ಕಮಗಳೂರಿನ ಟಿ.ಎಲ್.ನಾರಾಯಣ ರಾಯ, ಚಿಟಗುಪ್ಪಿ, ಭದ್ರಾವತಿಯ ಎ.ನಾಗರಾಜರಾಯ, ಎಸ್.ಸುಬ್ಬರಾಯ ಮತ್ತು ಹೈದರಾಬಾದಿನ ತಿವಾರಿ ಎಂಬುವರ ಹೆಸರುಗಳನ್ನು ಉಲ್ಲೇಖಿಸಬಹುದು.



ಸು.1933ನೆಯ ಅಕ್ಟೋಬರ್‌ನಲ್ಲಿ ಮ.ನ.ಮೂರ್ತಿಯವರು ತಯಾರಿಸಿದ ಕನ್ನಡ ಬೆರಳಚ್ಚು ಯಂತ್ರ ಸರ್. ಎಂ.ವಿಶ್ವೇಶ್ವರಯ್ಯ ಮೊದಲಾದವರಿಂದ ಪ್ರಶಂಸೆಯನ್ನೂ ಬಹುಮಾನಗಳನ್ನೂ ಗಳಿಸಿತಾದರೂ ಅದರಲ್ಲಿ ಕೆಲವೊಂದು ದೋಷಗಳಿದ್ದುದರಿಂದ ಸುಧಾರಣೆ ಆವಶ್ಯವಿತ್ತು. ಆಗಲೇ ಎಸ್.ಸುಬ್ಬರಾಯರು, ಕೆ.ಅನಂತಸುಬ್ಬರಾಯರು, ಚಿಟಗುಪ್ಪಿಯವರು ಮತ್ತು ಎ.ನಾಗರಾಜರಾಯರು ಬೇರೆ ಬೇರೆಯಾಗಿ ಬೆರಳಚ್ಚು ಯಂತ್ರಗಳನ್ನು ತಯಾರಿಸಿದ್ದರು. ಈ ಮಧ್ಯೆ ದೋಷರಹಿತ ಪರಿಪೂರ್ಣ ಬೆರಳಚ್ಚು ಯಂತ್ರವನ್ನು ತಯಾರಿಸಲು ಲಿಪಿ ಸುಧಾರಣೆಯಾಗಬೇಕೆಂದು ತಜ್ಞರು ಅಭಿಪ್ರಾಯಪಟ್ಟರು. 1936ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬಿ.ಎಂ.ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಲಿಪಿ ಸುಧಾರಣೆಯ ಬಗ್ಗೆ ಸಲಹೆ ನೀಡಲು ಒಂದು ಸಮಿತಿಯನ್ನು ರಚಿಸಿತ್ತು. ಆದರೆ ಕಾರಣಾಂತರದಿಂದ ಈ ದಿಕ್ಕಿನ ಕಾರ್ಯ ಮುಂದುವರಿಯಲಿಲ್ಲ.

ಸ್ವಾತಂತ್ರ್ಯ ಬಂದ ಅನಂತರ ರಾಜ್ಯ ಸರ್ಕಾರ ಬೆರಳಚ್ಚು ಯಂತ್ರ ನಿರ್ಮಾಣದಲ್ಲಿ ಆಸಕ್ತಿ ವಹಿಸಿತು. ಕೆ.ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ತಿ.ತಾ.ಶರ್ಮರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ ಸಲಹೆಗಳನ್ನು ಕೇಳಿತು. ಬೆರಳಚ್ಚು ಯಂತ್ರದ ತಯಾರಿಕೆಯ ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಸಮಿತಿ ಸಂಗ್ರಹಿಸಿತು. ಅನಂತರ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಲಿಪಿಸುಧಾರಣೆ ಇಲ್ಲದೆ ದೋಷರಹಿತವಾದ ಬೆರಳಚ್ಚು ಯಂತ್ರವನ್ನು ನಿರ್ಮಿಸುವುದು ಅಸಾಧ್ಯ ಎಂದು ಸಮಿತಿ ಅಭಿಪ್ರಾಯಪಟ್ಟಿತು. ಆದರೆ ಲಿಪಿ ಸುಧಾರಣೆ ಬಗ್ಗೆ ಸಾರ್ವಜನಿಕರಿಂದ ಪ್ರತಿಭಟನೆ ವ್ಯಕ್ತವಾದ್ದರಿಂದ ಸರ್ಕಾರ ಆ ಪ್ರಯತ್ನವನ್ನು ಕೈಬಿಟ್ಟಿತು. ಮುಂದೆ ಸರ್ಕಾರ ಕೆಲವೊಂದು ಕನ್ನಡ ಬೆರಳಚ್ಚುಗಳನ್ನು ಪರಿಶೀಲಿಸಿ 1958ರಲ್ಲಿ ಅನಂತಸುಬ್ಬರಾಯರು ನಿರ್ಮಿಸಿದ ಕನ್ನಡ ಬೆರಳಚ್ಚು ಮಾದರಿಯನ್ನು ಅಂಗೀಕರಿಸಿತು. ಸರ್ಕಾರದ ಕೋರಿಕೆಯ ಮೇರೆ ಸ್ವೀಡನ್ನಿನ ಹಾಲ್ಡಾ ಕಂಪನಿ ತಯಾರಿಸಿದ ಮೊದಲ ಕನ್ನಡ ಬೆರಳಚ್ಚು ಯಂತ್ರ 16 ಜೂನ್ 1961ರಂದು ಚಾಲನೆಗೆ ಬಂತು. ಇದರಲ್ಲಿ ಉಪಯೋಗಿಸಿದ ಕನ್ನಡ ಬೆರಳಚ್ಚಿನ ಫಲಕಕ್ಕೆ ಅನಂತ ಕೀ ಬೋರ್ಡ್ ಎಂದು ಹೆಸರಿಸಲಾಯಿತು. ಅನಂತ ಕೀ ಬೋರ್ಡ್ ಆಂಗ್ಲ ಬೆರಳಚ್ಚಿನ ಫಲಕದ ಆಧಾರದ ಮೇಲೆ ನಿರ್ಮಿಸಿರುವುದರಿಂದ ಮತ್ತು ಇದರಲ್ಲಿ 3 ಅಚಲಿತ ಕೀಗಳು ಮಾತ್ರ ಅಳವಡಿಸಿರುವುದರಿಂದ ಬಹಳ ಸುಲಭವಾಗಿ ಶೀಘ್ರವಾಗಿ ಕಲಿಯಲು ಅನುಕೂಲವಿದೆ.

ಸರ್ಕಾರ 1967ರಿಂದ ಕನ್ನಡ ಬೆರಳಚ್ಚಿನ ಪರೀಕ್ಷೆಗಳನ್ನು ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ಕರ್ನಾಟಕದ ಅನೇಕ ವಾಣಿಜ್ಯ ಶಾಲೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಇಂದು ಕನ್ನಡ ಬೆರಳಚ್ಚಿನ ತರಬೇತು ಲಭ್ಯವಾಗಿದೆ. ಹಾಲ್ಡಾ, ರೆಮಿಂಗ್‌ಟನ್ ಕಂಪನಿಯವರು ಈಗಾಗಲೇ ಅನೇಕ ಕನ್ನಡ ಬೆರಳಚ್ಚು ಯಂತ್ರಗಳನ್ನು ತಯಾರಿಸಿದ್ದು ಅವು ಉಪಯೋಗದಲ್ಲಿವೆ. ಗೋದ್ರೆಜ್ ಕಂಪನಿಯವರೂ ತಯಾರಿಕೆಯನ್ನು ಕೈಗೊಂಡಿದ್ದರು. ಆಡಳಿತದ ಎಲ್ಲ ಹಂತಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ತರುವ ಉದ್ದೇಶದಿಂದ ಅದಕ್ಕೆ ಪೂರಕವಾಗಿ ರಾಜ್ಯದಲ್ಲೇ ಕನ್ನಡ ಬೆರಳಚ್ಚು ಯಂತ್ರವನ್ನು ತಯಾರಿಸುವತ್ತ ಕರ್ನಾಟಕ ಸರ್ಕಾರ ಕಾರ್ಯೋನ್ಮುಖವಾಗಿತ್ತು. ಆದರೆ ಡಿ.ಟಿ.ಪಿ. ಮುದ್ರಣ ವ್ಯವಸ್ಥೆ ಆವಿಷ್ಕಾರಗೊಂಡ ಮೇಲೆ, ಕಂಪ್ಯೂಟರ್ ಬಳಕೆಗೆ ಬಂದ ಮೇಲೆ ಬೆರಳಚ್ಚು ಯಂತ್ರಗಳ ಬಳಕೆ ಕ್ಷೀಣಿಸಿದೆ. (ಎಸ್.ಆರ್.ಎಸ್.)

**ಕನ್ನಡ ಭಾಷೆ :** ಭಾರತ ಸಂವಿಧಾನದ 8ನೆಯ ಅನುಚ್ಛೇದದಲ್ಲಿ ಮಾನ್ಯತೆ ಪಡೆದ 18 ಭಾಷೆಗಳಲ್ಲಿ (1992) ಒಂದಾಗಿಯೂ ಕರ್ನಾಟಕದ ಮನೆಮಾತಾಗಿಯೂ ಇರುವ ಕನ್ನಡ ಭಾಷೆ ದ್ರಾವಿಡ ಭಾಷಾ ಪರಿವಾರದ ನಾಲ್ಕು ಪ್ರಮುಖ ಭಾಷೆಗಳಲ್ಲೊಂದು. ಸುಮಾರು ಒಂದೂವರೆಸಾವಿರ ವರ್ಷಗಳ ಸಾಹಿತ್ಯ ಹಾಗೂ ಶಿಲಾಶಾಸನಗಳ ಚರಿತ್ರೆಯನ್ನು ಹೊಂದಿರುವ ಈ ಭಾಷೆ ಸುಸಂಸ್ಕೃತ ಜನಾಂಗವೊಂದರ ಆಡುನುಡಿಯಾಗಿಯೂ ಸಾಹಿತ್ಯ ರಚನೆಗೆ ಮಾಧ್ಯಮವಾಗಿಯೂ ವಿಕಾಸಗೊಂಡು ವಿಶ್ವಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಗಳನ್ನು ಸಲ್ಲಿಸಿದೆ.

1991ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ 2,97,75,374 ಜನರ ಮಾತೃಭಾಷೆ ಕನ್ನಡ. ಭಾರತದಲ್ಲಿ 3,25,90,177 ಜನರಿಗೆ ಇದು ಮಾತೃಭಾಷೆ. ಕರ್ನಾಟಕದಲ್ಲೇ ಅಲ್ಲದೆ ಕರ್ನಾಟಕದ ಗಡಿಯಾಚೆಗಿರುವ ಕಾಸರಗೋಡು, ಮಂಜೇಶ್ವರ, ಸೊಲ್ಲಾಪುರ, ಅಕ್ಕಲಕೋಟೆ, ಹೊಸೂರು, ತಾಳವಾಡಿ, ಆದವಾನಿ ಮುಂತಾದ ಪ್ರದೇಶಗಳಲ್ಲಿಯೂ ಮುಂಬಯಿ, ಚೆನ್ನೈ, ದೆಹಲಿ, ಕೋಲ್ಕತ, ಹೈದರಾಬಾದು ಮುಂತಾದ ಪ್ರಮುಖ ಪಟ್ಟಣಗಳಲ್ಲಿಯೂ ಕನ್ನಡವನ್ನು ಮಾತೃಭಾಷೆಯನ್ನಾಗುಳ್ಳವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇದಲ್ಲದೆ ಇತರ ಮಾತೃಭಾಷೆಗಳನ್ನಾಡುವ ಜನರಲ್ಲೂ ಸಾಕಷ್ಟು ಜನ ಕನ್ನಡವನ್ನು ತಮ್ಮ ಎರಡನೆಯ ಭಾಷೆಯಾಗಿ ಮಾತನಾಡುವವರಿದ್ದಾರೆ. ಈ ಲೇಖನದಲ್ಲಿ ಕನ್ನಡ ಭಾಷೆಯ ವೈಶಿಷ್ಟ್ಯವನ್ನೂ ಅದು ಚಾರಿತ್ರಿಕವಾಗಿ ಕಾಲಘಟ್ಟಗಳಲ್ಲಿ ಬೆಳೆದು ಬಂದ ಬಗೆಯನ್ನೂ ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ಕನ್ನಡ ಎಂಬ ಶಬ್ದ ಈ ಭಾಷೆಯ ಹೆಸರನ್ನು ಸೂಚಿಸುವಂತೆ ಈ ಭಾಷೆಯನ್ನಾಡುವ ಜನ ವಾಸಿಸುವ ಪ್ರದೇಶವನ್ನೂ ಸೂಚಿಸುತ್ತಿತ್ತೆಂದು ಹಲವು ಆಧಾರಗಳಿಂದ ತಿಳಿದುಬರುತ್ತದೆ. ಈ ಶಬ್ದದ ರೂಪನಿಷ್ಪತ್ತಿಯ ವಿಚಾರದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ (ನೋಡಿ: ಕರ್ನಾಟಕ, ಪದವ್ಯುತ್ಪತ್ತಿ). ಕನ್ನಡ ಭಾಷೆ ಮೂಲದ್ರಾವಿಡದಿಂದ ಕವಲೊಡೆದು ಯಾವ ಶತಮಾನದಿಂದ ಸ್ವತಂತ್ರಭಾಷೆಯಾಗಿ ಪರಿವರ್ತನೆಗೊಂಡಿತು ಎಂದು ನಿಶ್ಚಿತವಾಗಿ ಹೇಳುವುದು ಸಾಧ್ಯವಿಲ್ಲ. ವೇದಗಳ ಕಾಲದಿಂದಲೂ ಕನ್ನಡ ಭಾಷೆ ಪ್ರಚಾರದಲ್ಲಿತ್ತೆಂದು ಊಹಿಸಲು ಕೆಲವು ಆಧಾರಗಳುಂಟು. ಛಾಂದೋಗ್ಯ ಉಪನಿಷತ್ತಿನಲ್ಲಿರುವ ಚೆನ್ (ಚಂದ್ರ), ಮಟಚಿ (ಮಿಡತೆ) ಮೊದಲಾದ ಶಬ್ದಗಳು ಕನ್ನಡದವೆಂದು ಕೆಲವಿದ್ವಾಂಸರ ತಿಳಿವಳಿಕೆ. ಪದ್ಮ ಹಾಗೂ ಮಾರ್ಕಂಡೇಯ ಪುರಾಣಗಳಲ್ಲಿ ಕರ್ನಾಟಕದ ಪ್ರಸ್ತಾಪವಿದೆ. ಭಾರತದ ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಾದಿ ಗ್ರಂಥಗಳಲ್ಲಿ ಬರುವ ವಿವರಗಳಿಂದಲೂ ಕ್ರಿಸ್ತಶಕ ಎರಡನೆಯ ಶತಮಾನದ ಶಿಲಪ್ಪದಿಗಾರಂ ಎಂಬ ತಮಿಳು ಗ್ರಂಥದಲ್ಲಿ ಬರುವ ಕರುನಾಡರ್ ಎಂಬ ಪ್ರಯೋಗದಿಂದಲೂ ಕ್ರಿಸ್ತಶಕದ ಆರಂಭಕ್ಕಿಂತ ಮುಂಚೆಯೇ ಕನ್ನಡ ಭಾಷೆ ಈ ಪ್ರಾಂತ್ಯದ ಜನರ ಆಡುನುಡಿಯಾಗಿತ್ತೆಂದು ಊಹಿಸಬಹುದು. ಮೊಹೆಂಜೋದಾರೊ ಮತ್ತು ಹರಪ್ಪಗಳ ಅವಶೇಷಗಳ ಸಂಶೋಧನೆಯಿಂದ ಈ ಊಹೆಗೆ ಮತ್ತಷ್ಟು ಪುಷ್ಟಿ ದೊರಕಿದೆ. ಅಲ್ಲಿ ಕಾಣಬರುವ ಸಂಸ್ಕೃತಿ ಆರ್ಯರಿಗೂ ಹಿಂದಿದ್ದ ದ್ರಾವಿಡ ಸಂಸ್ಕೃತಿ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಕ್ರಿಸ್ತಶಕ ಎರಡನೆಯ ಶತಮಾನದ್ದೆನ್ನಲಾದ ಒಂದು ಗ್ರೀಕ್ ಪ್ರಹಸನದಲ್ಲಿ ಕನ್ನಡದ ಕೆಲವು ಮಾತುಗಳಿರುವುವೆಂದೂ ಆದ್ದರಿಂದ ಎರಡನೆಯ ಶತಮಾನಕ್ಕಿಂತ ಮುಂಚೆಯೇ ದಕ್ಷಿಣ ಕನ್ನಡದ ಸಮುದ್ರ ತೀರದಲ್ಲಿ ಕನ್ನಡ ವ್ಯವಹಾರದಲ್ಲಿತ್ತು ಎಂದೂ ಗೋವಿಂದ ಪೈ ಮುಂತಾದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಅನಂತರ ಶಾಸನಗಳಿಗೆ ಬಂದರೆ ಬ್ರಾಹ್ಮೀಲಿಪಿಯಲ್ಲಿರುವ ಅಶೋಕನ (ಕ್ರಿ.ಪೂ. 3ನೆಯ ಶತಮಾನ) ಪ್ರಾಕೃತ ಶಾಸನಗಳು ಕರ್ನಾಟಕದ ಅತ್ಯಂತ ಪ್ರಾಚೀನ ಬರೆಹಗಳಾಗಿವೆ. ಈ ಶಾಸನಗಳಲ್ಲಿ ಬ್ರಹ್ಮಗಿರಿಯ ಶಾಸನವೊಂದರಲ್ಲಿ ಕಾಣಸಿಗುವ 'ಇಸಿಲ' ಎಂಬ ಪದ ತೇದಿಯುಳ್ಳ ಪ್ರಾಚೀನತಮ ಕನ್ನಡ ಪದವೆಂದೂ ಇನ್ನೂ ಕೆಲವು ಆಧಾರಗಳನ್ನು ಗಮನಿಸಿ ಕನ್ನಡ ಭಾಷೆ ಕ್ರಿ.ಪೂ.250 ರಿಂದಲೂ ಅಸ್ತಿತ್ವದಲ್ಲಿದ್ದಿತೆಂದೂ ಕ್ರಿ.ಪೂ.2-3ನೆಯ ಶತಮಾನಗಳಲ್ಲಿ ಇದಕ್ಕೆ ಲಿಪಿಯೊಂದು ಉಂಟಾಗಿ ಅದು ಗ್ರಂಥಸ್ಥವಾಗುವುದಕ್ಕೆ ವೊದಲಿಟ್ಟಿತೆಂದೂ ಡಿ.ಎಲ್.ನರಸಿಂಹಾಚಾರ್ ಅಭಿಪ್ರಾಯಪಡುತ್ತಾರೆ.

450ರ ಹಲ್ಮಿಡಿ ಶಾಸನ ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ದಾಖಲೆ. ಈ ಶಾಸನದ ಭಾಷಾವೈಲಕ್ಷಣ್ಯಗಳನ್ನು ಗವುನಿಸಿದರೆ ಆ ಸಮಯಕ್ಕಾಗಲೇ ಕನ್ನಡದಲ್ಲಿ ಪ್ರೌಢವಾದ ಗದ್ಯದ ಬಳಕೆಯಿತ್ತೆಂದೂ ಸಂಸ್ಕೃತ ಭಾಷೆಯ ಪ್ರಭಾವ ಕನ್ನಡದ ಮೇಲೆ ಸಾಕಷ್ಟಾಗಿತ್ತೆಂದೂ ತಿಳಿಯಬಹುದು. ಆ ತರುವಾಯ ಒಂಬತ್ತನೆಯ ಶತಮಾನದಿಂದ ಮುಂದೆ ಸಿಕ್ಕುವ ಕವಿರಾಜಮಾರ್ಗ, ಪಂಪಭಾರತ, ಆದಿಪುರಾಣ, ಶಾಂತಿಪುರಾಣ, ಅನಂತನಾಥಪುರಾಣ, ಗದಾಯುದ್ಧ ಮುಂತಾದ ಗ್ರಂಥಗಳಲ್ಲಿ ಹಿಂದಿನ ಕವಿಗಳನ್ನು ಕಾವ್ಯ ಪ್ರಕಾರಗಳನ್ನು ಸ್ಮರಿಸಿರುವುದರಿಂದಲೂ ಕವಿರಾಜಮಾರ್ಗಕಾರ ತನಗಿಂತ ಹಿಂದಿದ್ದ ಕನ್ನಡವನ್ನು ಹಳಗನ್ನಡ ಎಂದು ಕರೆದಿರುವುದರಿಂದಲೂ ಈ ಕವಿಗಳಿಗಿಂತಲೂ ಎಷ್ಟೋ ಶತಮಾನಗಳ ಹಿಂದೆಯೇ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಕೃಷಿಯಾಗಿತ್ತೆಂದು ಹೇಳಬಹುದು. ಹೀಗಾಗಿ ಕ್ರಿಸ್ತಶಕದ ಆರಂಭಕಾಲದಿಂದಲೇ ಕನ್ನಡ ಭಾಷೆ ಸುಸಂಸ್ಕೃತರಾದ ಕನ್ನಡಿಗರ ಆಡುನುಡಿಯಾಗಿತ್ತೆಂದೂ ಅವರು ಅದನ್ನು ಸಾಹಿತ್ಯ ಶಾಸನಾದಿಗಳನ್ನು ಬರೆಯಲು ಬಳಕೆ ಮಾಡುತ್ತಿದ್ದರೆಂದೂ ಹೇಳಬಹುದು.

ಹೀಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಆಡುನುಡಿಯಲ್ಲಿ ಅದರ ಇತಿಹಾಸದುದ್ದಕ್ಕೂ ನಡೆದ ಮಾರ್ಪಾಡುಗಳನ್ನು ಗುರುತಿಸಲು ಬೇರೆ ಬೇರೆ ಶತಮಾನಗಳ ಆಡುನುಡಿಯ ಸ್ವರೂಪಕ್ಕೆ ದಾಖಲೆಗಳಿಲ್ಲ. ಆದರೆ ಲಿಖಿತಭಾಷೆಯ ಸ್ವರೂಪವನ್ನು ತಿಳಿಯಲು ಕನ್ನಡ ಕವಿಗಳ ಶಾಸನಗಳೂ ಕಾವ್ಯಗಳೂ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕರು ಬರೆದ ವ್ಯಾಕರಣ ಗ್ರಂಥಗಳೂ ಸಹಾಯಕವಾಗಿವೆ. ಭಾಷೆಯ ವಿಕಾಸದ ಆಧಾರದ ಮೇಲೆ ಕನ್ನಡ ಭಾಷೆಯಲ್ಲಿ ನಡೆದ ಪರಿವರ್ತನೆಯನ್ನು ಪ್ರಮುಖವಾಗಿ ನಾಲ್ಕು ಘಟ್ಟಗಳಲ್ಲಿ ಗುರುತಿಸಬಹುದು. ಆರಂಭದಿಂದ 9ನೆಯ ಶತಮಾನದವರೆಗಿನ ಶಾಸನದ ಭಾಷೆಯನ್ನು ಪೂರ್ವದ ಹಳಗನ್ನಡ ಎಂದೂ ಅಲ್ಲಿಂದ ಹನ್ನೆರಡನೆಯ ಶತಮಾನದವರೆಗಿನ ಕಾವ್ಯ ಹಾಗೂ ಶಾಸನಗಳ ಭಾಷೆಯನ್ನು ಹಳಗನ್ನಡ ಎಂದೂ ಅಲ್ಲಿಂದ ಹದಿನಾರು, ಹದಿನೇಳನೆಯ ಶತಮಾನಗಳವರೆಗಿನ ವೀರಶೈವ ಹಾಗೂ ವೈಷ್ಣವ ಸಾಹಿತ್ಯದ ಭಾಷೆಯನ್ನು ನಡುಗನ್ನಡವೆಂದೂ ಅಲ್ಲಿಂದೀಚೆಗಿನ ಸಾಹಿತ್ಯದ ಭಾಷೆಯನ್ನು ಹೊಸಗನ್ನಡ ಎಂದೂ ಹೇಳಬಹುದು. ಹೊಸಗನ್ನಡದ ಆಡುಮಾತನ್ನು ಭೌಗೋಳಿಕ ಹಾಗೂ ಸಾಮಾಜಿಕ ಪ್ರಭೇದಗಳಾಗಿ ವಿಂಗಡಿಸಿ ಅವುಗಳ ಸ್ವರೂಪವನ್ನು ತಿಳಿಯಲು ಸಾಧ್ಯ (ನೋಡಿ: ಕನ್ನಡದ ಉಪಭಾಷೆಗಳು). (ಯು.ಪಿ.ಯು.)

**ಪೂರ್ವದ ಹಳಗನ್ನಡ :** ಕವಿರಾಜಮಾರ್ಗಕ್ಕೂ ಹಿಂದಿನ ಶಾಸನಗಳ ಭಾಷೆಯನ್ನು ಗಮನಿಸಿದರೆ, ಈಗ ನಾವು ಹಳಗನ್ನಡವೆಂದು ಕರೆಯುವ ಭಾಷೆಯಲ್ಲಿಲ್ಲದ ಹಲವಾರು ವಿಶಿಷ್ಟ ಲಕ್ಷಣಗಳು ಕಾಣಬರುತ್ತಿದ್ದು ಹಳಗನ್ನಡಕ್ಕಿಂತ ಹಿಂದಿನ ಒಂದು ಅವಸ್ಥೆ ಕನ್ನಡಕ್ಕಿತ್ತು, ಅದು ರೂಪಾಂತರ ಹೊಂದುತ್ತ ಬಂದು ಹಳಗನ್ನಡವಾಗಿ ಮಾರ್ಪಡುತ್ತಿತ್ತು ಎನ್ನಲು ಅವಕಾಶವಿದೆ.

ಈ ಕಾಲದ ಭಾಷೆಯಲ್ಲಿ ಕಂಡುಬರುವ ಕೆಲವು ಪ್ರಯೋಗಗಳನ್ನು ಈ ಮುಂದಿನ ಉದಾಹರಣೆಗಳಲ್ಲಿ ಕಾಣಬಹುದು.

1 ವಿಭಕ್ತಿ ಪ್ರತ್ಯಯ, ಆಖ್ಯಾತ ವಿಭಕ್ತಿ ಪ್ರತ್ಯಯ, ನಿಷೇಧಾರ್ಥ ಪ್ರತ್ಯಯದ ಸ್ವರ ದೀರ್ಘವಾಗಿರುವುದು. ಉದಾ: ಮೂಟಿವಳ್ಳಿಉಂ ಕೊಟ್ಟಾರ್ (450, ಹಲ್ಮಿಡಿ ಶಾಸನ), ರಾಜಶ್ರಾವಿತಮಾಗೆ ಪ್ರಸಾದಂ ಕೆಯ್ದಾರ್ (685, ಶಿಕಾರಿಪುರ ಶಾಸನ), ಅವರ್ ಸ್ವರ್ಗಾಗ್ರಮನೇಱಿದಾರ್ (700, ಶ್ರವಣಬೆಳಗೊಳ ಶಾಸನ).

2 ಅನ್ ಪ್ರತ್ಯಯದ ಬದಲು ಆನ್,ಒನ್, ಓನ್‌ಗಳ ಬಳಕೆ. ಉದಾ: ಶೌರ್ಯೋದ್ಯಮಭರಿತೋನ್, ಕಳ್ದೋನ್ ಮಹಾಪಾತಕನ್ (450, ಹಲ್ಮಿಡಿ), ಪಟಂ ಸೂಡಿದೋರ್, ಇದಾನಟಿದೋನ್ (6ನೆಯ ಶತಮಾನ, ಸಿರಿಗುಂದ), ಎತ್ತಿ ಕೊಳ್ವೋನ್ ದೇಗುಲವಾನ್ ಅಟಿದೋರ್, (700,ಕಿಗ್ಗ).

3 ಸಪ್ತಮೀ ವಿಭಕ್ತಿಯಲ್ಲಿ 'ಉಳ್' ಪ್ರತ್ಯಯದ ಪ್ರಯೋಗ. ಉದಾ: ನರಿದಾವಿ(ಳೆ)ನಾಡುಳ್ (450, ಹಲ್ಮಿಡಿ), (ಸಂ)ಕಟದುಳ್ (675, ಉದ್ಯಾವರ), ಕಟ್ವಿಪ್ಪಿನಾವೆಟ್ಟದುಳ್ (700, ಶ್ರವಣಬೆಳಗೊಳ).

4 ನಿಷೇಧಾರ್ಥಕ ಪದಗಳಲ್ಲಿ ಸ್ವರ ದೀರ್ಘವಾಗಿರುವುದು. ಉದಾ: ಆ ವಿತ್ತಿದಲ್ಲಿ ವೆಳೆಯಾದೆ ಕೆಡುಗ (685, ಶಿಕಾರಿಪುರ), ಸಿದ್ಧಸಮಯನ್ ತಪ್ಪಾದೆ ನೋಂತು (700, ಶ್ರವಣಬೆಳಗೊಳ), ಇದನ್ ವಕ್ರಮ್ ಇಲ್ಲಾದೆ ಕಾದು (730-50, ಉದ್ಯಾವರ).

5 ಬಿಂದುವಿನ ಸ್ಥಾನದಲ್ಲಿ ನಕಾರವನ್ನು ಬಳಸುವುದು. ಉದಾ: ಸುತನ್ಗೆ, ಸೇನ್ದ್ರಕ, ಕಳ್ದೋನ್ ಮಹಾಪಾತಕನ್ (450 ಹಲ್ಮಿಡಿ), ನಿರ್ವ್ವಿನೀತರಾ ಕಿಱಿಯಾ ಮಗಿನ್ದಿರ್ (6ನೆಯ ಶತಮಾನ, ಸಿರಿಗುಂದ), ಚಿತ್ರವಾಹನ ಪಿನ್ದುವ್ವಾಳೆ (675, ಕಿಗ್ಗ), ಒನ್ದು (709, ಐಹೊಳೆ).

6 ದ್ವಿತೀಯಾ ವಿಭಕ್ತಿ ಪ್ರತ್ಯಯ ದೀರ್ಘವಾಗುವುದು. ಉದಾ: ಅರ್ಧವೀಸದಿ ಇತ್ತೊದಾನ್ (578, ಬಾದಾಮಿ), ಈನಿತ್ತಧರ್ಮಮಾನ್ (675, ಕಿಗ್ಗ), ಇದಾನ್ ಕೊಳೆ (685, ಶಿಕಾರಿಪುರ), ಕೊಡಂಗೆಯನ್ (692, ಸೊರಬ), ಮಹಾದೇವಿಯರಾ ದೇಗುಲವಾನ್ (733, ಪಟ್ಟದಕಲ್ಲು), ಕಂಚಿಯಾನ್, ಧನಮಾನ್, ಅಕ್ಷರಂಗಳುಮಾನ್ ಅಟಿವಾರ್ ........ಮಹಾಜನಮಾನ್ ಕೊಂದಾರ್ (733, ಕಂಚಿ), ಇದಾನ್ (793, ಲಕ್ಷ್ಮೇಶ್ವರ).

7 ಷಷ್ಠೀ ವಿಭಕ್ತಿ ಹಾಗೂ ಗುಣವಾಚಕಗಳನ್ನು ದೀರ್ಘಗೊಳಿಸಿರುವುದು. ಉದಾ: ಭಟರಿಯಾ ಪ್ರೇಮಾಲಯ ಸುತನ್ಗೆ (450, ಹಲ್ಮಿಡಿ), ಮಂಗಳೀಸನಾ ಕಲ್ಮನೆಗೆ, ಏಟಿನೆಯಾ ನರಕದಾ ಪುೞಿಅಕುಮ್ (578, ಬಾದಾಮಿ), ಪೊರವಟಿ ಗೋಸಾಸಿಗರಾ ಮಾೞು (709, ಐಹೊಳೆ), ನವಿಲೂರಾ ಸಿರಿಸಂಗದಾಜಿಗಣದಾ ರಾಜೀಮತಿಗಂತಿಯಾರ್ (700, ಎ.ಕ. 11-97). ಗುರುವಡಿಗಳಾ ಶಿಷ್ಯರ್ (700, ಎ.ಕ.11-24)

8 ಇಂದು 'ಬ' ಕಾರ ಇರುವ ಸ್ಥಾನದಲ್ಲಿ 'ವ' ಕಾರ ಕಂಡುಬರುವುದು. ವಿಟ್ಟಾರ್ (450 ಹಲ್ಮಿಡಿ), ನನ್ದಿಯಾಲರಾ ವಿಟ್ಟದು (6ನೆಯ ಶತಮಾನ, ಸಿರಿಗುಂದ), ಆ ವಿತ್ತಿದಲ್ಲಿ ವೆಳೆಯಾದೆ ಕೆಡುಗ (685 ಶಿಕಾರಿಪುರ), ಕಟ್ವಿಪ್ಪಿನಾ ವೆಟ್ಟದುಳ್ (700 ಶ್ರವಣಬೆಳಗೊಳ).

9 ಈಗ 'ಇ' ಕಾರ ಬಳಕೆಯಾಗುವ ಸ್ಥಾನದಲ್ಲಿ 'ಎ' ಕಾರವನ್ನು ಬಳಸಿರುವುದು ಉದಾ: ಕೇಕಯಪಲ್ಲವರಂ ಕಾದೆಱಿದು (450, ಹಲ್ಮಿಡಿ), ಮುಡಿಯರಾ ಮಗನ್ ಪಲಿಪಱುಎಱುದು (675,ಉದ್ಯಾವರ).

10 ರೇಫದ ಹಿಂದೆ ವ್ಯಂಜನದ್ವಿತ್ವವನ್ನು ಬಳಸಿರುವುದು. ಉದಾ: ಶ್ರೀ ನಿರ್ವ್ವಿನೀತರಾ (6ನೆಯ ಶತಮಾನ, ಸಿರಿಗುಂದ), ಸಾಸಿರ್ವ್ವರ್ ಪ್ಪಾರ್ವರುಂ (709, ಐಹೊಳೆ), ಧರ್ಮ್ಮನಾಯಗನ್ ....... ಸ್ವರ್ಗ್ಗಾಲಯಕ್ಕೆ (780, ನರೇಗಲ್ಲ).

11 ವಿಧ್ಯರ್ಥದಲ್ಲಿ ಗ ಅಥವಾ ಕ ಪ್ರತ್ಯಯದ ಪ್ರಯೋಗ. ಉದಾ: ಕೊಳ್ಗ, ಕೆಡುಗ, ಪುಟ್ಟಲ್ಕ, ರಕ್ಷಿಕ ಇತ್ಯಾದಿ.

ಈ ಕಾಲದಲ್ಲಿ ಕಂಡುಬರುವ ಶಾಸನಗಳಲ್ಲಿ ತಮಿಳಿನ ಛಾಯೆಯನ್ನೂ ಸ್ಪಷ್ಟವಾಗಿ ಗುರುತಿಸಬಹುದು. ಉದಾ: ಮಕನ್, ನರಗ, ನಾಯಗನ್ (ಮಗನ್, ನರಕ, ನಾಯಕನ್) ಇತ್ಯಾದಿ.

ಪೂರ್ವದ ಹಳಗನ್ನಡದ ಕಾಲದಲ್ಲಿ ಱ, ೞ ಅಕ್ಷರಗಳ ಉಚ್ಚಾರಣೆ ಪ್ರಯೋಗದಲ್ಲಿತ್ತು. ಒಂಬತ್ತನೆಯ ಶತಮಾನದ ಹೊತ್ತಿಗೆ ೞ ಕಾರ ಬದಲಾಗಲು ಪ್ರಾರಂಭಿಸಿ ಬೇರೆ ಬೇರೆ ಧ್ವನಿಗಳಾಗಿ ಪರಿವರ್ತಿತವಾಗುತ್ತಿರುವುದು ಕಂಡುಬರುತ್ತದೆ. ಕ್ರಮೇಣ ಜನರ ಮಾತಿನಲ್ಲಿ, ಉಚ್ಚಾರಣೆಯಲ್ಲಿ ಬದಲಾವಣೆ ಕಾಣಿಸಿಕೊಳ್ಳಲು ಪ್ರಾರಂಭವಾಗಿತ್ತೆಂಬುದನ್ನು

ಹರಿಹರನ ಮಾತುಗಳಿಂದಲೂ ಉಚ್ಚಾರಣೆ ಹಾಗೂ ಪ್ರಯೋಗಗಳನ್ನು ಉಳಿಸಿಕೊಳ್ಳಲು ಕೇಶಿರಾಜ ಪಟ್ಟಿರುವ ಶ್ರಮದಿಂದಲೂ ಊಹಿಸ ಬಹುದಾಗಿದೆ. ಪ ಕಾರ ಹ ಕಾರವಾಗದೆ ಈ ಕಾಲಕ್ಕೆ ಹಾಗೆಯೇ ಉಳಿದುಕೊಂಡು ಬಂದಿರುವುದನ್ನು ಈ ಶಾಸನಗಳಲ್ಲಿ ಕಾಣಬಹುದು. ಪೂರ್ವದ ಹಳಗನ್ನಡದ ಕಾಲದಲ್ಲಿಯೇ ಪರಿವರ್ತನೆಗಳು ಪ್ರಾರಂಭವಾಗಿ, ಅದರ ಜೊತೆಯಲ್ಲಿಯೇ ಹಳಗನ್ನಡದ ವಿಶಿಷ್ಟ ಪ್ರಯೋಗಗಳೆನಿಸಿ ಕೊಳ್ಳಬಹುದಾದ ಉಚ್ಚಾರಣೆ ಪ್ರಯೋಗಗಳು 9ನೆಯ ಶತಮಾನದ ಹೊತ್ತಿಗೆ ಹಲವು ವೇಳೆ ಒಂದೇ ಶಾಸನದಲ್ಲೆ ಕಂಡುಬಂದು ಕ್ರಮೇಣ ಪೂರ್ವದ ಹಳಗನ್ನಡದ ಪ್ರಯೋಗಗಳು ವಿರಳವಾಗುತ್ತ ಬಂದು ಪೂರ್ಣವಾಗಿ ಹಳಗನ್ನಡದ ಅವಸ್ಥೆ ಕಾಣಿಸಿಕೊಂಡಿತು. (ಬಿ.ಎಸ್.ಪಿ.)

**ಹಳಗನ್ನಡ :** ಕನ್ನಡ ಭಾಷೆಯ ಚರಿತ್ರೆಯಲ್ಲಿ ಹತ್ತನೆಯ ಶತಮಾನ ಒಂದು ಮುಖ್ಯ ಘಟ್ಟ. ಈ ಕಾಲದಲ್ಲಿ ವಿಪುಲವಾಗಿದ್ದ ಕನ್ನಡದ ದೇಶಿ ಪ್ರಭೇದಗಳ ಕೆಲವು ವೈಲಕ್ಷಣ್ಯಗಳನ್ನು ಕಳೆದುಕೊಂಡು ಏಕರೂಪತೆಯನ್ನು ಪಡೆದಿದ್ದ ಕನ್ನಡ ಭಾಷೆ ಪಂಡಿತವರ್ಗದಲ್ಲಿ ಪ್ರಚಾರದಲ್ಲಿತ್ತು. ಪಂಡಿತ ಕವಿಗಳಿಂದ ಮಾನ್ಯವಾದ ಈ ಶಿಷ್ಟಭಾಷೆ ಸಾಹಿತ್ಯ ಮತ್ತು ಶಾಸ್ತ್ರಗಳ ಮಾಧ್ಯಮವಾಗಿತ್ತು. ಈ ಭಾಷೆಯನ್ನೇ ನಾವು ಇಂದು ಹಳಗನ್ನಡವೆಂದು ಕರೆಯುವುದು. 'ರಾಜದ್ರಾಜಕಮೆನಿಸಿದ ಸಾಜದ ಪುಲಿಗೆಱೆಯ ತಿರುಳ ಕನ್ನಡದೊಳ್' ಎಂಬುದಾಗಿ ಪಂಪನೂ ಕನ್ನಡಮೆರಡಱುನೂಱಱ ಕನ್ನಡ ಮಾತಿರುಳಕನ್ನಡಂ ಎಂದು ರನ್ನನೂ ಹೇಳಿದ್ದಾರೆ.

ಹಳಗನ್ನಡ ಭಾಷೆಯ ಕೆಲವು ವೈಶಿಷ್ಟ್ಯಗಳನ್ನು ಕೆಳಕಂಡಂತೆ ಗುರುತಿಸಬಹುದು.

1 ಪೂರ್ವದ ಹಳಗನ್ನಡದ ವಿಭಕ್ತಿ ಪ್ರತ್ಯಯ, ಆಖ್ಯಾತ ಪ್ರತ್ಯಯ, ನಿಷೇಧಾರ್ಥ ಪ್ರತ್ಯಯಗಳಲ್ಲಿ ಆದಿ 'ಆ' ಕಾರ ಹಳಗನ್ನಡದಲ್ಲಿ ಹ್ರಸ್ವವಾಗುತ್ತದೆ (ಆ>ಅ). ಉದಾ: ಇದಾನ್>ಇದನ್, ನರಕದಾ>ನರಕದ, ಸಂದಾನ್>ಸಂದನ್, ಏಱೆದಾರ್>ಏಱೆದರ್, ತಪ್ಪಾದೆ>ತಪ್ಪದೆ ಇತ್ಯಾದಿ.

2 ಪೂರ್ವದ ಹಳಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯ ಉಳ್ ಗೆ ಹಳಗನ್ನಡದಲ್ಲಿ ಒಳ್ ಎಂಬ ರೂಪ ಬಳಕೆಯಾಗಿದೆ. ಉದಾ: ಆಹವದುಳ್>ಆಹವದೊಳ್, ವೆಟ್ಟದುಳ್>ಬೆಟ್ಟದೊಳ್ ಇತ್ಯಾದಿ.

3 ಪೂರ್ವದ ಹಳಗನ್ನಡದ ಒನ್, ಒರ್, ಒಳ್ ಎಂಬ ಆಖ್ಯಾತ ಪ್ರತ್ಯಯಗಳಿಗೆ ಹಳಗನ್ನಡದಲ್ಲಿ ಅನುಕ್ರಮವಾಗಿ ಅನ್, ಅರ್, ಅಳ್ ರೂಪಗಳಿವೆ. ಉದಾ: ಬರ್ಪೊನ್>ಬರ್ಪನ್, ಅವೊನ್>ಅವನ್, ಮಾಡಿದೊರ್>ಮಾಡಿದರ್, ಎಂಬೊಳ್>ಎಂಬಳ್ ಇತ್ಯಾದಿ.

4 ಪೂರ್ವದ ಹಳಗನ್ನಡದ ಪದಾದಿಯ 'ವ' ಕಾರ ಹಳಗನ್ನಡದಲ್ಲಿ 'ಬ' ಆಯಿತು. ಉದಾ: ವೆಟ್ಟ>ಬೆಟ್ಟ, ವೆಳೆ>ಬೆಳೆ, ವಿತ್ತು>ಬಿತ್ತು ಇತ್ಯಾದಿ.

5 ಪೂರ್ವದ ಹಳಗನ್ನಡದ ಕೆಲವು ಧಾತುಗಳ ಮೊದಲ 'ಎ' ಮತ್ತು 'ಒ' ಸ್ವರಗಳು ಹಳಗನ್ನಡದಲ್ಲಿ ಅನುಕ್ರಮವಾಗಿ 'ಇ' ಮತ್ತು 'ಉ' ಗಳಾಗಿ ಮಾರ್ಪಟ್ಟಿವೆ (ಎ>ಇ, ಒ>ಉ). ಉದಾ: ಕೆಡು>ಕಿಡು, ಕೊಡು>ಕುಡು, ತೊಡು>ತುಡು ಇತ್ಯಾದಿ.

6 ಈ ಕಾಲದಲ್ಲಿ ಱ ಮತ್ತು ೞ ಕಾರಗಳು ಸ್ವತಂತ್ರ ವರ್ಣಗಳಾಗಿದ್ದುವು. ಉದಾ: ಅಱೆ=ತಿಳಿ, ಅಱಿ=ಕತ್ತರಿಸು, ಬಾೞ್=ಜೀವನ, ಬಾಳ್=ಖಡ್ಗ ಇತ್ಯಾದಿ.

ಆದರೆ ೞ ವರ್ಣ ವ್ಯಂಜನಗಳ ಮುಂದೆ ರ ಕಾರವಾಗಿ ಮಾರ್ಪಟ್ಟಿದೆ. ಉದಾ: ಕೞ್ಚು=ಕರ್ಚು, ಗೞ್ದೆ = ಗರ್ದೆ ಇತ್ಯಾದಿ

7 ಒಂದು ಪೂರ್ಣ ಕ್ರಿಯಾಪದ ಒಂದು ವಾಕ್ಯವಾಗಿ ಪ್ರಯೋಗವಾಗುತ್ತದೆ. ಉದಾ: (ನೀನ್) ಬಾ; (ಆನ್) ಅಱೆವೆನ್, (ಅವಳ್) ಅಱೆವಳ್, (ಅವನ್) ಈಗೆ, (ನೀನ್) ಪೇೞ್ ಇತ್ಯಾದಿ.

8 ಒಂದು ಸರ್ವನಾಮ ಒಂದು ನಾಮಪದ ಸೇರಿ ಕ್ರಿಯಾಪದವಿಲ್ಲದೆ ವಾಕ್ಯವಾಗುತ್ತದೆ. ಉದಾ: ಇದು ಕೈಲಾಸಂ, ಇದು ಚಕ್ರವ್ಯೂಹಂ, ಅವನ್ ಕಲಿ, ಅದು ಬನಂ ಇತ್ಯಾದಿ.

9 ಸಮುಚ್ಚಯದ 'ಉಂ' 'ಅಂ' ಗಳ, ಎನ್ ಕ್ರಿಯಾಪದದ 'ಎಂದ' 'ಎಂಬ' 'ಎಂದುದು' 'ಎಂಬುದು' ಈ ರೂಪಗಳ ಮತ್ತು ಅಪೂರ್ಣ ಕ್ರಿಯಾಪದಗಳ ಸಹಾಯದಿಂದ ಹಳಗನ್ನಡದಲ್ಲಿ ಸಂಶ್ಲಿಷ್ಟ ವಾಕ್ಯಗಳನ್ನು ರಚಿಸಿಕೊಳ್ಳಲಾಗುತ್ತದೆ.

10 ಅಪೂರ್ಣ ಕ್ರಿಯಾಪದಗಳಲ್ಲಿ ಭೂತ ನ್ಯೂನ ರೂಪಗಳು (ತಿಂದು, ನೋಡಿ, ಕೊಟ್ಟು ಇತ್ಯಾದಿ), ವರ್ತಮಾನ ರೂಪಗಳು (ನೋಡುತ್ತೆ, ಬರುತ್ತೆ ಇತ್ಯಾದಿ), ನಿಷೇಧ ನ್ಯೂನ ರೂಪಗಳು (ತಿನ್ನದೆ, ಬಾರದೆ, ನೋಡದೆ ಇತ್ಯಾದಿ) ವಾಕ್ಯದಲ್ಲಿ ಕ್ರಿಯಾವಿಶೇಷಣಗಳ ಕಾರ್ಯವನ್ನು ನಿರ್ವಹಿಸುತ್ತವೆ. ತಿಂದ, ತಿಂಬ, ನುಡಿದ, ನುಡಿವ, ಮಾಡದ, ಅಱೆಯದ ಮೊದಲಾದ ಕೃದಂತ ರೂಪಗಳು ಮತ್ತು ನಾಮಪದಗಳ ಷಷ್ಠಿ ವಿಭಕ್ತಿ ರೂಪಗಳು ವಾಕ್ಯದಲ್ಲಿ ವಿಶೇಷಣಗಳ ಕಾರ್ಯವನ್ನು ನಿರ್ವಹಿಸುತ್ತವೆ. (ಬಿ.ಆರ್.)

**ನಡುಗನ್ನಡ** : ಹನ್ನೆರಡನೆಯ ಶತಮಾನದಿಂದ ಹದಿನಾರು, ಹದಿನೇಳನೆಯ ಶತಮಾನದವರೆಗಿನ ಅವಧಿಯನ್ನು ಸ್ಥೂಲವಾಗಿ ನಡುಗನ್ನಡದ ಕಾಲವೆಂದು ಹೇಳಬಹುದು. ಈ ಅವಧಿಯಲ್ಲಿ ಚಂಪೂ ಶೈಲಿ ತೆಳುವಾಗಿ, ವಚನ ಹಾಗೂ ಷಟ್ಪದಿ (ವಿರಳವಾಗಿ ಸಾಂಗತ್ಯ, ತ್ರಿಪದಿ) ಕನ್ನಡ ಬರೆಹದ ಆಧಾರವಾಗಿ ಒದಗುತ್ತವೆ. ಇಷ್ಟರ ಹೊರತು ನಡುಗನ್ನಡದ ಇತರ ಸಾಮಾಜಿಕ ಪ್ರಭೇದಗಳ ಹಾಗೂ ಅವುಗಳಲ್ಲಿನ ವ್ಯತ್ಯಾಸಗಳ ಸ್ವರೂಪ ಖಚಿತವಾಗಿ ತಿಳಿಯದು. ಇದರಿಂದಾಗಿ ನಡುಗನ್ನಡ ಭಾಷೆಯಲ್ಲಿನ ಎಲ್ಲ ಬದಲಾವಣೆಗಳನ್ನೂ ನಿಖರವಾಗಿ ಹೇಳಲು ಸಾಧ್ಯವಿಲ್ಲವಾಗಿದೆ.

ನಡುಗನ್ನಡಕ್ಕೆ ಒಂದು ಚಾರಿತ್ರಿಕ ಗಡುವನ್ನು ಕಲ್ಪಿಸಿ ಕೊಂಡಿರುವುದರಿಂದ ಅಂದು ರೂಢಿಯಲ್ಲಿದ್ದ ವ್ಯಾವಹಾರಿಕ ಕನ್ನಡದ ಪ್ರಭೇದಗಳಲ್ಲಿ ಬರೆಹದ ಭಾಷೆಯಾಗಿ ಮನ್ನಣೆಗಳಿಸಿಕೊಂಡು ಉಳಿದುಬಂದಿರುವ ಅವಶೇಷಗಳಿಗಷ್ಟೇ ಭಾಷಾನಿಯಮಗಳನ್ನು ಕಂಡು ಕೊಳ್ಳಬಹುದು. ಹಳಗನ್ನಡದ ಸ್ವರೂಪವೆಂದು ಸ್ಥೂಲವಾಗಿ ಗುರುತಿಸಲಾದ ಲಕ್ಷಣಗಳಿಂದ ಇದರ ಸ್ವರೂಪವನ್ನು ಕಲ್ಪಿಸಿಕೊಳ್ಳುವುದು ವಾಡಿಕೆ. ಮೂಲ ಕನ್ನಡವೆಂದು ಒಂದನ್ನು ಉಪಲಬ್ಧ ತೌಲನಿಕ ಆಧಾರದಿಂದ ಕಲ್ಪಿಸಿಕೊಂಡು ಇದರಿಂದ ಕೂಡ ನಡುಗನ್ನಡವನ್ನು ಸಾಧಿಸಬಹುದು.

ನಡುಗನ್ನಡ ಕಾಲಕ್ಕೆ ಹಿಂದೆಯೇ ಕನ್ನಡ ಭಾಷೆಯಲ್ಲಿ ಪಡುವಣ-ಮೂಡಣ ವಿಭಜನೆ ಘಟಿಸಿತು. ಕರಾವಳಿಯ ಕನ್ನಡ ಪಡುವಣ ಪ್ರಭೇದದ ಪ್ರತಿನಿಧಿ. ಬಡಗ ಕನ್ನಡ, ಹವ್ಯಕ ಕನ್ನಡ - ಈ ಹಂತದಲ್ಲಿ ನಿಂತ ಪ್ರಭೇದಗಳು. ಈ ಕಾಲದಲ್ಲಿ ಮೂಡಣ ಕಡೆಯ ಕನ್ನಡ ಪ್ರಭೇದದಲ್ಲಿ ಬಡಗಣ, ತೆಂಕಣ ಎಂಬ ಭೌಗೋಳಿಕವಾದ ಭಾಷಾ ಪ್ರಭೇದಗಳು ತಲೆದೋರಿದುವು. ತೆಂಕಣದ ಕನ್ನಡ ಪ್ರಭೇದ ಕನ್ನಡದ ಶಿಷ್ಟಭಾಷೆಯಾದದ್ದು ನಡುಗನ್ನಡಾನಂತರದ ಅವಧಿಯಲ್ಲಿ, ಮೈಸೂರು ರಾಜರ ಆಶ್ರಯ ದೊರೆತಾಗ. ಬಡಗಣ ಕನ್ನಡ ಪ್ರಭೇದ ನಡುಗನ್ನಡ ಕಾಲದಲ್ಲಿ ಹೆಚ್ಚು ಬರೆವಣಿಗೆಯ ಮನ್ನಣೆ ಪಡೆದಿತ್ತು. ಆದರೂ ವ್ಯಾಪಕಾರ್ಥದಲ್ಲಿ ನಡುಗನ್ನಡ ಎಂಬುದು ನಾಲ್ಕು ಶತಮಾನಗಳ ಕನ್ನಡ ಭಾಷೆಯ ಹಲವು ಪ್ರಭೇದಗಳನ್ನೊಳಗೊಂಡ ಒಂದು ಅವಸ್ಥೆ.

ನಡುಗನ್ನಡ ಭಾಷೆಯ ಲಕ್ಷಣಗಳೆಂದು ಹೇಳ ಬಹುದಾದಂಥವುಗಳಲ್ಲಿ ಕೆಲವನ್ನು ಸುಲಭವಾಗಿ ಗುರುತಿಸಬಹುದು. ಈ ಹಂತದಲ್ಲಿ ಕೆಲವು ಧ್ವನಿ ವ್ಯತ್ಯಾಸಗಳು ಘಟಿಸಿದ್ದುವು. ಇದರ ಫಲವಾಗಿ ಶಬ್ದಗಳ ಉಚ್ಚಾರಣೆಯಲ್ಲಿಯೂ ಬದಲಾವಣೆಗಳುಂಟಾಗಿದ್ದುವು. ಕೆಲವು ಶಬ್ದಗಳು ಬಳಕೆಯಿಂದ ಬಿದ್ದು ಹೋಗಿದ್ದುವು. ಮತ್ತೆ ಕೆಲವು ಶಬ್ದಗಳ ಅರ್ಥದಲ್ಲಿ ವ್ಯತ್ಯಾಸಗಳುಂಟಾಗಿದ್ದುವು. ನೆರೆಹೊರೆಯ ಭಾಷೆಗಳಿಂದ ಕೆಲವು ಶಬ್ದಗಳು ಹೊಸದಾಗಿ ಬಂದು ಸೇರಿದ್ದುವು (ಮರಾಠಿ ಭಾಷೆಯಿಂದ ಶಬ್ದಗಳ ಸ್ವೀಕರಣ ಆರಂಭವಾದದ್ದು ಈ ಕಾಲದಲ್ಲೆ. ಜನ್ನ ಮತ್ತು ಕುಮಾರವ್ಯಾಸರಲ್ಲಿ ಇದಕ್ಕೆ ಸ್ಪಷ್ಟ ದಾಖಲೆಗಳು ಸಿಗುತ್ತವೆ). ಇದೇ ಅವಧಿಯಲ್ಲಿ ಹೆಚ್ಚಾಗಿ ಅರಬ್ಬೀ ಪಾರಸೀ ಭಾಷೆಗಳ ಅನೇಕ ಶಬ್ದಗಳು ಸೇರಿದುವು. ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಶಬ್ದ ಸ್ವೀಕಾರ ಈ ಕಾಲದಲ್ಲಿ ಅಷ್ಟಾಗಿ ನಡೆಯಲಿಲ್ಲವೆನ್ನಬಹುದು.

ಇದೇ ಅವಧಿಯಲ್ಲಿ ಕೆಲವು ವ್ಯಾಕರಣ ವ್ಯತ್ಯಾಸಗಳೂ ಸಂಭವಿಸಿದ್ದುವು. ಉತ್ತಮ ಪುರುಷ ಬಹುವಚನ ಸರ್ವನಾಮ ವ್ಯವಸ್ಥೆಯಲ್ಲಿ ಹಳಗನ್ನಡದಲ್ಲಿದ್ದ ವ್ಯಾವರ್ತಕ ಹಾಗೂ ಅವ್ಯಾವರ್ತಕ ವ್ಯತ್ಯಾಸಗಳು ಮರೆಯಾದುವು. ಕ್ರಿಯಾಪದಗಳಲ್ಲಿ ಸೇರುವ ವರ್ತಮಾನ- ಭವಿಷ್ಯದ್ವಾಚಕ ಪ್ರತ್ಯಯ ಪ್ ಒಮ್ಮೊಮ್ಮೆ ಹ್ ಆಗುವುದೂ ಕಂಡುಬಂತು (ಬಂದಪನ್>ಬಂದಹನ್). ಬಹುವಚನ ಬದ್ಧಾಕೃತಿಯಲ್ಲಿನ- ನ್ಗಳ್ ಎಂಬಲ್ಲಿ ಅನುನಾಸಿಕತ್ವ ಮರೆಯಾಯಿತು (ಮರಂಗಳ್>ಮರಗಳು). ಹಳಗನ್ನಡ ಸಬಿಂದು ಶಬ್ದಗಳಲ್ಲಿ ಕೆಲವು ಅಬಿಂದುಗಳಾದುವು. ವ್ಯಂಜನಾಂತ ಶಬ್ದಗಳು ಸ್ವರಾಂತಗಳಾದುವು: ಕಾಣ್>ಕಾಣು, ಕೇಳ್>ಕೇಳು. ಲ ಕಾರಾಂತಗಳು ಳ ಕಾರಾಂತಗಳಾದುವು: ಬೆರಲ್>ಬೆರಳ್, ಕೊರಲ್>ಕೊರಳ್. ಸ್ತ್ರೀ ವಾಚಕ ಪ್ರತ್ಯಯ (ಸಂ.>ಸ್ತ್ರೀ ಪ್ರಾ. ಇತ್ಥೀ>ಕ. ಇತ್ತಿ>ಇತಿ)- ತಿ ಎಂದಾಗಿತ್ತು. ನಾಮಪದ, ಸಂಖ್ಯಾವಾಚಕ, ಸರ್ವನಾಮ, ಗುಣವಚನಗಳಿಗೆ ನೇರವಾಗಿ ಎನ್,ಎವು,ಎಯ್, ಇರ್ ಮೊದಲಾದ ಆಖ್ಯಾತ ವಿಭಕ್ತಿಗಳು ನೇರವಾಗಿ ಸೇರಿ ಕ್ರಿಯಾರ್ಥಕ ಶಬ್ದಗಳಾಗುತ್ತಿದ್ದುವು. ಹಳಗನ್ನಡದಲ್ಲಿದ್ದ ಕೇಶವನೆಂ, ಪೆೞುವು, ಒರ್ವರಿರ್, ಒಳ್ಳಿದರ್ ಎಂಬ ಈ ಬಗೆಯ ವ್ಯವಸ್ಥೆ ಈ ಕಾಲದಲ್ಲಿ ತಪ್ಪಿಹೋಯಿತು (ಈ ಅವಸ್ಥೆಯ ಆರಂಭದ ವೇಳೆಗೆ ಬಹುಶಃ ಕೊಡಗು ಭಾಷೆ ಉಪಭಾಷಾ ಪ್ರಭೇದವಾಗಿರದೆ ಕನ್ನಡದಿಂದ ಸ್ಪಷ್ಟವಾಗಿ ಬೇರ್ಪಟ್ಟು ಒಂದು ಸ್ವತಂತ್ರ ಭಾಷೆಯಾಗಿ ಪರಿಣಮಿಸಿತ್ತು ಎಂದು ಹೇಳಬಹುದು).

ನಡುಗನ್ನಡ ಕಾಲದ ಹರಹಿನಲ್ಲಿ ಘಟಿಸಿದ ಧ್ವನಿವ್ಯತ್ಯಾಸಗಳಲ್ಲಿ ಮೂರನ್ನು ಇಲ್ಲಿ ಉಲ್ಲೇಖಿಸಬಹುದು. ಅವುಗಳು ೞ್ ಱ್ ಮತ್ತು ಪ್, ಹಳಗನ್ನಡದಲ್ಲಿ ಱ ಳ ೞ ಪ ಮತ್ತು ಹ (ಸ್ವೀಕರಣ ಶಬ್ದಗಳಲ್ಲಿ) ಇವು ಧ್ವನಿಮಾಗಳಾಗಿದ್ದು, ಪ್ರಸಾರದ ದೃಷ್ಟಿಯಿಂದ ಪರಸ್ಪರ ಉಪಯುಕ್ತ (ಸಾರ್ಥಕ) ವ್ಯತ್ಯಾಸಗಳನ್ನು ಪಡೆದಿದ್ದುವು. ಈ ಅವಧಿಯಲ್ಲಿ ಈ ವೈದೃಶ್ಯ ಕಡಮೆಯಾಗುತ್ತ ಬಂದು ಕಡೆಗೆ ಅದೃಶ್ಯವಾಯಿತು. ಱ ಕಾರ ವ್ಯಂಜನ ವರ್ಣಗಳ ಪೂರ್ವದಲ್ಲಿದ್ದಾಗ ರೇಫವಾಯಿತು. ಉಳಿದ ಕಡೆಗಳಲ್ಲಿ, ಅಂದರೆ ಸ್ವರಮಧ್ಯದಲ್ಲಿ ಇಲ್ಲವೆ ಶಬ್ದಾಂತ್ಯದಲ್ಲಿ ಳ ಕಾರವಾಯಿತು (ಏಕೆಂದರೆ ಮೂಲದ್ರಾವಿಡ ಧ್ವನಿ ವ್ಯವಸ್ಥೆಯಂತೆ ಶಬ್ದದ ಪರಿಸರದೊಳಗೆ, ಶಬ್ದಾದಿಯಲ್ಲಿ ಱ್ ಧ್ವನಿಮಾ ಬರುವುದಿಲ್ಲ). ಈ ಎರಡೂ ಬಗೆಯ ವಿಲೀನ ಕಾರ್ಯ ಏಕಕಾಲಕ್ಕೆ ಹಾಗೂ ಒಂದು ಇನ್ನೊಂದಕ್ಕೆ ಪೂರಕವಾಗುವಂತೆ ಘಟಿಸಿದೆ. ಬಹುಶಃ ಈ ಧ್ವನಿ ಬದಲಾವಣೆ ಹಳಗನ್ನಡದ ಕಾಲಾವಧಿಯಲ್ಲೆ ಅಂಕುರಗೊಂಡು, ನಡುಗನ್ನಡದ ಅವಸ್ಥೆಯಲ್ಲಿ ಸ್ಥಾಯಿಯಾಯಿತೆಂದು ತಿಳಿಯಬಹುದು. ಇದರಂತೆ ಶಕಟರೇಫ ಕೂಡ ಸಾಮಾನ್ಯ ರೇಫದಲ್ಲಿ ಸೇರಿತು. ನಡುಗನ್ನಡದ ಅವಧಿ ಮುಗಿಯುವ ಹೊತ್ತಿಗೆ ಈ ವ್ಯತ್ಯಾಸ ಪೂರ್ಣವಾಗಿ ನಡೆದಿತ್ತು. ವ್ಯಂಜನ ಗುಚ್ಛಗಳಲ್ಲಿರುವ ೞ ಱ ಳ ಧ್ವನಿಗಳು ದೀರ್ಘಸ್ವರಗಳಿಗೆ ಪರವಾದಾಗ ಲೋಪವಾದುವು. ಕನ್ನಡದ ಪ್ರಭೇದಗಳಲ್ಲಿ ಒಂದಾದ ಸೋಲಿಗರ ಕನ್ನಡದಲ್ಲಿ ಮಾತ್ರ ಇಂದಿಗೂ ಇವು (ೞ್ ಮತ್ತು ರ್) ತಮ್ಮ ಸಾರ್ಥಕ ವ್ಯತ್ಯಾಸವನ್ನು ಕಾಪಾಡಿಕೊಂಡಿವೆ. ಇೞು (ಇರುವೆ, ಚೀಮೆ), ಇರು (= ಇರುವುದು ಕ್ರಿಯಾಪದ). ಉಚ್ಚಾರದ ರಳಕುಳಗಳಲ್ಲಿನ ಹಾಗೂ ಶಕಟರೇಫ ಮತ್ತು ಸಾಮಾನ್ಯ ರೇಫಗಳಲ್ಲಿನ ವ್ಯತ್ಯಾಸಗಳು ಕರಗಿದ್ದರೂ ಬರೆವಣಿಗೆಯಲ್ಲಿ ಮಾತ್ರ ಕೆಲವರು ನಡುಗನ್ನಡದುದ್ದಕ್ಕೂ ಉಳಿಸಿಕೊಂಡು ಬಂದಿರುವುದು ಗೋಚರಿಸುತ್ತದೆ.

ಶಬ್ದದ ಆದಿಯ ಪ ಕಾರ ಹ ಕಾರವಾಗುವ ವ್ಯತ್ಯಾಸ ಕೂಡ ಚಾರಿತ್ರಿಕವಾಗಿ ಒಂಬತ್ತು ಮತ್ತು ಹತ್ತನೆಯ ಶತಮಾನದ (ಹಳಗನ್ನಡದ) ಅವಧಿಯಲ್ಲೆ ಆರಂಭವಾಗಿ ಈ ಅವಧಿಯಲ್ಲಿ ಇದರ ಪರಿವರ್ತನೆ ಸಂಪೂರ್ಣವಾಗಿ ನಡೆಯಿತು. ದೇಶ್ಯದಂತೆ ಅನ್ಯದೇಶ್ಯ ಶಬ್ದಗಳಲ್ಲೂ ಇದು ಸಾರ್ವತ್ರಿಕವಾಗಿ ವ್ಯಾಪಿಸಿತು. ಕಾಕಲ್ಯಘರ್ಷಧ್ವನಿ ಹ್ ನಡುಗನ್ನಡದಲ್ಲಿ ಸ್ಥಾಯಿತ್ವ ಪಡೆಯಿತು. ಆದರೂ ಈ ಅವಧಿ ಮುಗಿಯುವ ವೇಳೆಗೆ ಕನ್ನಡದ ಕೆಲವು ಸಾಮಾಜಿಕ ಪ್ರಭೇದಗಳಲ್ಲಿ ವಿಶೇಷವಾಗಿ ಶಬ್ದಾದಿಯ ಹ್ ಲೋಪವಾಯಿತು. ಈ ವ್ಯತ್ಯಾಸ ಇಂದಿಗೂ ಒಂದು ಸಾಮಾಜಿಕ ಪ್ರಭೇದ ಸೂಚಕವಾಗಿದೆ. ಪ್>ಹ್ ಆಗುವ ಈ ವ್ಯತ್ಯಾಸ ಶಬ್ದಾದಿಯಲ್ಲಿ ಮೊದಲು ಆರಂಭವಾದರೂ ಶಬ್ದದ ನಡುವೆ ಕೂಡ ಘಟಿಸಿತು. (ಗೋಪುರ>ಗೋಹುರ). ಅನುನಾಸಿಕ ಧ್ವನ್ಯುಕ್ತ ಶಬ್ದಗಳಲ್ಲಿ ಪ್ ಅಬಾಧಿತದಂತೆ ಕಂಡುಬರುತ್ತದೆ: ಕಂಪು, ತಂಪು, ಸೊಂಪು, ಪೆಂಪು. ಆದರೆ ನೋಂಪಿ>ನೋಹಿ ಆಗಿರುವುದು ಕುತೂಹಲವನ್ನುಂಟುಮಾಡುತ್ತದೆ. ಪ್ ಸಜಾತೀಯ ವ್ಯಂಜನ ಗುಚ್ಛವಾಗಿ ನಿಂತಾಗ ಕಾಕಲ್ಯಘರ್ಷಕವಾಗುವುದಿಲ್ಲ: ಉಪ್ಪು, ಕಪ್ಪು, ಒಪ್ಪು ಇತ್ಯಾದಿ.

ನಡುಗನ್ನಡದ ಉತ್ತರ ಪ್ರಭೇದದಲ್ಲಿ ನಾಮಪದಗಳ ಕಡೆಯ ಸ್ವರ ಎ>ಇ ಆಯಿತು. ಉದಾ ತಲೆಮನೆ>ತಲಿಮನಿ, ಶಬ್ದಾಂತ್ಯದ ಉ ಅ ಆಯಿತು. ಉದಾ: ಆಳು>ಆಳ, ಎತ್ತು>ಎತ್ತ, ಕಾವಲು>ಕಾವಲ, ಕಾಳು>ಕಾಳ ಚ್ ಹಾಗೂ ಜ್ ಧ್ವನಿಗಳು ವರ್ತ್ಸ್ಯ ಮತ್ತು ತಾಲವ್ಯ ಎಂದು ಇರ್ತೆರನಾಗಿ ವಿಭಜಿತವಾದುವು. ಇವಲ್ಲದೆ ಇನ್ನಿತರ ಹಲವು ವ್ಯತ್ಯಾಸಗಳು ನಡುಗನ್ನಡದಲ್ಲೆ ಸಂಭವಿಸಿರುವುದನ್ನು ಕಾಣುವುದು ಸಾಧ್ಯವಿದೆ. ಹದಿನಾರನೆಯ ಶತಮಾನದ ಹರಿದಾಸರ ಕೀರ್ತನೆಗಳನ್ನೂ ಈ ವ್ಯಾಪ್ತಿಯು ತೆಕ್ಕೆಗೆ ತಂದುಕೊಂಡಾಗ ಈ ಕಾಲದ ಹರವು ದೊಡ್ಡದಾಗುವುದಲ್ಲದೆ ಇನ್ನೂ ಕೆಲವು ವ್ಯತ್ಯಾಸಗಳನ್ನು ಕನ್ನಡ ಭಾಷೆಯಲ್ಲಿ ಗುರುತಿಸುವುದು ಸಾಧ್ಯವಾಗುತ್ತದೆ. ಕೇಶಿರಾಜ ನಡುಗನ್ನಡ ಕಾಲದ ನಟ್ಟನಡುವೆ ನಿಂತೂ ತನ್ನ ಸಮಕಾಲೀನ ನಡುಗನ್ನಡ ಭಾಷೆಗೆ ವರ್ಣನಾತ್ಮಕ ವ್ಯಾಕರಣ ಬರೆಯದೆ ಗತ ಇತಿಹಾಸದತ್ತ (ಹಳಗನ್ನಡದತ್ತ) ನೋಟ ಹರಿಸಿ ಬರೆದರೂ ಶಬ್ದಮಣಿದರ್ಪಣದಲ್ಲಿ ನಡುಗನ್ನಡದ ಕೆಲವು ಲಕ್ಷಣಗಳಿಗೆ ಸುಳಿವುಗಳಿವೆ ಎಂಬ ಅಂಶ ಆ ಗ್ರಂಥದ ಅಧ್ಯಯನದಿಂದ ತಿಳಿಯುತ್ತದೆ. (ಎಚ್.ಪಿ.ಎನ್.)

**ಹೊಸಗನ್ನಡ :** ಈ ಭಾಷಾ ಘಟ್ಟ 14ನೆಯ ಶತಮಾನದಿಂದ ಆರಂಭವಾಯಿತೆಂದೂ 16, 17ನೆಯ ಶತಮಾನಗಳಿಂದ ಆರಂಭವಾಯಿತೆಂದೂ ಅಭಿಪ್ರಾಯಗಳಿವೆ. ಕೈಪಿಡಿಕಾರರು ಚಂಪೂಕಾವ್ಯಗಳ ಭಾಷೆ ಹಳಗನ್ನಡ, ಷಟ್ಪದಿ ಕಾವ್ಯಗಳ ಭಾಷೆ ನಡುಗನ್ನಡ ಮತ್ತು ಈಗಿನ ಗದ್ಯ ಬರೆವಣಿಗೆಯ ಭಾಷೆ ಹೊಸಗನ್ನಡವೆಂದು ವಿಂಗಡಿಸುತ್ತಾರೆ. ಆದರೆ ಕಾಲಮಾನದಿಂದ ನಿಖರವಾಗಿ ಇಂತಿಂಥ ಶತಮಾನಗಳಿಂದ ಇಂತಿಂಥ ಕನ್ನಡಗಳು ಎಂದು ಹೇಳುವುದು ಅಷ್ಟು ಸುಲಭವೂ ಅಲ್ಲ, ಸಮಂಜಸವೂ ಅಲ್ಲ. ಏಕೆಂದರೆ ಒಂದೇ ಕಾಲದಲ್ಲಿ ಹಳೆ-ನಡು-ಹೊಸಕನ್ನಡ ಪ್ರಭೇದಗಳ ಪ್ರಕ್ರಿಯೆಗಳು ಕಾಣಿಸಿಕೊಳ್ಳುವುದಿದೆ. ಸ್ಥೂಲವಾಗಿ 17ನೆಯ ಶತಮಾನದಿಂದ ಈಚೆಗಿನ ಭಾಷೆಯನ್ನು ಹೊಸಗನ್ನಡವೆಂದು ಇಲ್ಲಿ ಇಟ್ಟುಕೊಳ್ಳಬಹುದು.

ಹೊಸಗನ್ನಡ ಕಾಲದಲ್ಲಿ ಹಲವು ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳು ಕನ್ನಡದಲ್ಲಿ ಕಂಡುಬರುತ್ತವೆ. ಪ್ರಾದೇಶಿಕವಾಗಿ ಇಂದು ಮಂಗಳೂರು, ಮೈಸೂರು, ಧಾರವಾಡ ಕನ್ನಡಗಳೆಂಬ ಪ್ರಭೇದಗಳಿರುವುದು ತಿಳಿದ ಸಂಗತಿ. ಕೆಲವೇಳೆ ಇವುಗಳೊಳಗೆ ತುಂಬ ಅಂತರ ಕಂಡುಬರುತ್ತದೆ. ಅರ್ಥಕ್ಲಿಷ್ಟತೆ, ಅಪಾರ್ಥಕ್ಕೆಡೆಯಾಗುವಿಕೆ ಹಾಗೂ ಒಬ್ಬರ ಮಾತು ಇನ್ನೊಬ್ಬರಿಗೆ ಹಾಸ್ಯಾಸ್ಪದವಾಗಿ ಕಾಣುವ ಸಂದರ್ಭಗಳು ಅಪರೂಪವಲ್ಲ. ಸಾಮಾಜಿಕವಾಗಿ ಕನ್ನಡದಲ್ಲಿ ಹವ್ಯಕ, ಗೌಡ, ಹಾಲಕ್ಕಿ, ಒಕ್ಕಲಿಗ, ಜೇನುಕುರುಬ, ಗುಲ್ಬರ್ಗ ಬ್ರಾಹ್ಮಣ, ಬಾರಕೂರು ಬ್ರಾಹ್ಮಣ ಮುಂತಾದ ಪ್ರಭೇದಗಳು ಪ್ರಚಲಿತವಾಗಿವೆ. ಇವು ಕೂಡ ಕಾಲಮಾನದ ದೃಷ್ಟಿಯಿಂದ ಹೇಳುವುದಾದರೆ ಹೊಸಗನ್ನಡವೆಂಬ ಹೆಸರಿಗೆ ಅರ್ಹವಾಗಿವೆ. ಆದರೆ ಇವು ಒಂದು ಸಮಾಜದ ಇಲ್ಲವೇ ಪ್ರದೇಶದ ಪರಿಮಿತಿಗೆ ಒಳಪಡುವುದರಿಂದ ಇವಕ್ಕೆ ಸಾರ್ವತ್ರಿಕತೆಯಿಲ್ಲ. ಆದುದರಿಂದ ಸಹಜವಾಗಿ ಯಾವುದೊಂದು ಪ್ರದೇಶದ ಅಥವಾ ವರ್ಗದ ಮಾತಾಗಿಯೂ ಇಲ್ಲದ ಆದರೆ ಎಲ್ಲ ಆಧುನಿಕ ಕನ್ನಡಿಗರ ವ್ಯವಹಾರೋಪಯುಕ್ತವಾಗಿರುವಂಥ ಪ್ರಭೇದವನ್ನು ಹೊಸಗನ್ನಡವೆಂದು ಕರೆಯಬಹುದು. ಈ ಪ್ರಭೇದದಲ್ಲಿ ಸಂಸ್ಕೃತ ಮಾತ್ರವಲ್ಲದೆ ಇತರ ಭಾಷೆಗಳಿಂದಲೂ ಶಬ್ದಗಳು ಎರವಲಾಗಿ ಬಂದಿವೆ. ಈ ದೃಷ್ಟಿಯಿಂದ ಪರೀಕ್ಷಿಸಿದಾಗ ಹೊಸಗನ್ನಡಕ್ಕೆ ಬೇಕಾದ ಧ್ವನಿಮಾಗಳ ಪಟ್ಟಿ ಹೀಗಿದೆ:

ಅ ಆ ಇ ಈ ಉ ಊ ಋ ಎ ಏ ಐ ಒ ಓ

ಕ ಖ ಗ ಘ

ಚ ಛ ಜ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಅನುಸ್ವಾರ (ಂ)

ಯ ರ ಲ ವ ಶ ಷ ಸ ಹ ಳ

ಋ ಎಂಬುದು ಋಷಿ, ಕೃಷಿ, ಕೃತಿ, ಕರ್ತೃ ಮುಂತಾದ ಸಂಸ್ಕೃತದಿಂದ ಬಂದು ಕನ್ನಡದಲ್ಲಿ ಪ್ರಯೋಗವಾಗುವ ಪದಗಳಲ್ಲಿ ಬರುವ ಧ್ವನಿ. ಸಂಸ್ಕೃತ ವರ್ಣಮಾಲೆಯ ಪದ್ಧತಿಯಲ್ಲಿ ಇದು ಕನ್ನಡ ಸ್ವರ ಸಮುದಾಯದೊಡನೆ ಮೇಳಗೊಂಡಿದೆ. ಕನ್ನಡ ವರ್ಣಮಾಲೆಯಲ್ಲಿ ಙ, ಞ ಗಳಿಗೆ ಸಂಜ್ಞೆಯಿದ್ದರೂ ಅವು ನಿಗದಿತ ಸ್ಥಾನಗಳಲ್ಲಿ ಮಾತ್ರ ಧ್ವನಿಸುತ್ತವೆ ಹೊರತು ಅರ್ಥವ್ಯತ್ಯಾಸಕ್ಕೆ ಕಾರಣವಾಗುವ ಸ್ವತಂತ್ರ ಧ್ವನಿಮಾಗಳಾಗಿಲ್ಲವಾದುದರಿಂದ ಅವನ್ನು ಧ್ವನಿಮಾ ಪಟ್ಟಿಯಿಂದ ಬಿಡಬಹುದು. ಝ ಎಂಬುದು ಸಂಸ್ಕೃತದಿಂದ ಬಂದ ಕೆಲವು ಅಪೂರ್ವ ಪದಗಳಲ್ಲಿ ಬಳಕೆಯಾಗುತ್ತದೆ. ಅದು ಕನ್ನಡದಲ್ಲಿ ಉಳಿದ ಮಹಾಪ್ರಾಣಗಳಂತೆ ಸಹಜವಾಗಿಯೂ ಪ್ರಬಲವಾಗಿಯೂ ಇಲ್ಲ. ಹೀಗಾಗಿ ಅದನ್ನೂ ಧ್ವನಿಮಾ ಪಟ್ಟಿಯಿಂದ ತೆಗೆಯಬೇಕಾಗುತ್ತದೆ. ಆದರೆ ಇದರ ಬದಲಿಗೆ ಇಂಗ್ಲಿಷಿನ Zoo ಮತ್ತು presence ಗಳಲ್ಲಿನ Z ಮತ್ತು S ಗಳ ಉಚ್ಚಾರಣೆಯನ್ನು ಕನ್ನಡದಲ್ಲಿ ತರಲು ಸಕಾರದ ಕೆಳಗೆ ಎರಡು ಚುಕ್ಕಿ ಇಟ್ಟು ಅದನ್ನೇ ಬಳಸಬಹುದು (ಸ). ಇದೇ ರೀತಿ 'ಫ' ಕ್ಕೆ ತಳದಲ್ಲಿ ಎರಡು ಚುಕ್ಕೆ ಇಟ್ಟು (ಫ) ಇಂಗ್ಲಿಷಿನ F ಉಚ್ಚಾರಣೆಯನ್ನು ತಂದುಕೊಳ್ಳಬಹುದು. ತಾತ್ಪರ್ಯವಿಷ್ಟು: ಉಚ್ಚಾರಣಾ ಚಿಹ್ನೆಗಳ ಬಳಕೆಯಿಂದ ಯಾವ ಪದವನ್ನಾದರೂ ಕನ್ನಡದಲ್ಲಿ ಬರೆಯಲು ಸಾಧ್ಯ. ಪದಾಂತ್ಯದಲ್ಲಿ ಹಾಗೂ ಯ, ರ, ಲ, ವ, ಶ, ಸ, ಹ ಗಳ ಪೂರ್ವದಲ್ಲಿ ಮಾತ್ರ ಅನುಸ್ವಾರವೆಂದು ಕರೆಯಲಾದ ಬಿಂದು ಸಂಸ್ಕೃತದಲ್ಲಿ ಬಳಕೆಯಲ್ಲಿದ್ದಂತೆ ಕನ್ನಡಕ್ಕೂ ಬಂದುದು ಬರೆವಣಿಗೆಯ ಸೌಲಭ್ಯಕ್ಕೋ ಎಂಬಂತೆ ವರ್ಗವ್ಯಂಜನಗಳ ಪೂರ್ವಸ್ಥಾನದಲ್ಲಿ ಬರುವ ವರ್ಗಾನುನಾಸಿಕಗಳ ಸ್ಥಾನವನ್ನಾಕ್ರಮಿಸತೊಡಗಿ, ಆ ಐದು ಅನುನಾಸಿಕಗಳಿಗೂ ಏಕಚಿಹ್ನೆಯಾಗಿ ನಿಂತಿತು. ಇದರ ಆಕ್ರಮಣ ಹಳಗನ್ನಡ ಮತ್ತು ನಡುಗನ್ನಡ ಕಾಲದಲ್ಲಿ ಸತತವಾಗಿ ನಡೆದು ಹೊಸಗನ್ನಡದಲ್ಲಿ ಭದ್ರವಾಯಿತು. ಹೊಸಗನ್ನಡ ಕಾಲದಲ್ಲಿ ವರ್ಗವ್ಯಂಜನಪೂರ್ವದಲ್ಲಿ ವರ್ಗಾನುನಾಸಿಕವನ್ನು ಬರೆಯುವುದು ಇಲ್ಲವೇ ಇಲ್ಲ. ಕಿಟ್ಟೆಲರ ಕೋಶದಲ್ಲಿ ಮಾತ್ರ ಙ ಮತ್ತು ಞ ಗಳನ್ನು ಅನುಸ್ವಾರದೊಡನೆ ಸಮೀಕರಿಸಿ ಉಳಿದೆಡೆಯಲ್ಲೆಲ್ಲ ವರ್ಗಾನುನಾಸಿಕ + ವರ್ಗವ್ಯಂಜನದ ಸಂಯುಕ್ತ ರೂಪವನ್ನೇ ಕೊಡಲಾಗಿದೆ. ಪರಿಷ್ಕೃತ ದ್ವಿತೀಯ ಮುದ್ರಣದಲ್ಲೂ ಇದೇ ಕ್ರಮವನ್ನು ಅನುಸರಿಸಲಾಗಿದೆ. ನಡುಗನ್ನಡ ಕಾಲದಿಂದ ಅನುನಾಸಿಕ ದ್ವಿತ್ವಗಳನ್ನು ಬರೆಯುವಲ್ಲಿಯೂ ಅನುಸ್ವಾರವನ್ನು ಮೊದಲ ಅನುನಾಸಿಕ ಸ್ಥಾನದಲ್ಲಿ ಬರೆಯುವ ಕ್ರಮವಿದ್ದುದು- ಉದಾ: ಅಂಣ (= ಅಣ್ಣ), ಚೆಂನ (= ಚೆನ್ನ), ತಂಮ (= ತಮ್ಮ) ಈಗ ಆಯಾ ಅನುನಾಸಿಕಗಳಿಂದಲೇ (ಕಂಸದಲ್ಲಿ ಕೊಟ್ಟಂತೆ) ಬರೆಯಲಾಗುತ್ತದೆ.

ಮಹಾಪ್ರಾಣ ಸಾಧಾರಣವಾಗಿ ಬ್ರಾಹ್ಮಣರ ಹಾಗೂ ಕಲಿತವರ ಮಾತಿನಲ್ಲಿ ಮಾತ್ರ ಕಂಡುಬರುತ್ತದೆ. ಅಪ್ರಬುದ್ಧ ಬರೆವಣಿಗೆಯಲ್ಲಿ ಮಹಾಪ್ರಾಣ ಅಲ್ಪಪ್ರಾಣಗಳ ವ್ಯತ್ಯಯವಾಗುವುದೂ ಕಂಡುಬರುವುದಿದೆ. ಬರೆವಣಿಗೆಯಲ್ಲಿ ನಿರ್ದಿಷ್ಟ ಸ್ಥಾನದಲ್ಲಿ ಬರುವುದಾದರೂ ಉಚ್ಚಾರಣೆಯಲ್ಲಿ ವ್ಯತ್ಯಸ್ತವಾಗುವ ಧ್ವನಿಯುಗ್ಮ ಶ ಮತ್ತು ಷ. ಎರಡನೆಯದು ಮೂರ್ಧನ್ಯ ಧ್ವನಿಯಾದರೂ ಅಷ್ಟು ನಿಖರವಾಗಿ ಅದು ಮೂರ್ಧನ್ಯವಾಗದೆ ಮೊದಲನೆಯ ತಾಲವ್ಯ ಊಷ್ಮಕ್ಕೆ ಸಮೀಪವಾಗಿ ಕಾಣುತ್ತದೆ. ಪ>ಹ ಪರಿವರ್ತನೆ, ೞ>ಳ, ಱ>ರ ವಿಲೀನಕ್ರಿಯೆ ನಡುಗನ್ನಡದಲ್ಲಿಯೇ ಆಗಿಹೋಗಿದೆ.

ಹಳಗನ್ನಡದಲ್ಲಿ ವ್ಯಂಜನಾಂತಗಳಾಗಿದ್ದ ಪದಗಳೆಲ್ಲ ನಡುಗನ್ನಡ ಮತ್ತು ಹೊಸಗನ್ನಡದಲ್ಲಿ ಉಕಾರಾಂತವಾಗುತ್ತವೆ. ಕಾಲ್>ಕಾಲು; ಕಾಣ್>ಕಾಣು ಇತ್ಯಾದಿ ನಡುಗನ್ನಡದಲ್ಲಿ ಕಲು, ಹಲು, ಹುಲು, ಕಣು ಎಂಬಿತ್ಯಾದಿ ಸರಳ ವ್ಯಂಜನಯುಕ್ತ ಪದಗಳು ಹೊಸಗನ್ನಡದಲ್ಲಿ ದ್ವಿತ್ವ ವ್ಯಂಜನಯುಕ್ತವಾಗಿವೆ: ಕಲ್ಲು, ಹಲ್ಲು, ಹುಲ್ಲು, ಕಣ್ಣು ಇತ್ಯಾದಿ. ಸಂಯುಕ್ತ ವ್ಯಂಜನಗಳಾಗಿದ್ದ ಅನೇಕ ಪದಗಳು ಹೊಸಗನ್ನಡದಲ್ಲಿ ವಿರಳಗೊಂಡಿವೆ. ಆರ್ಗೆ>ಯಾರಿಗೆ, ಕಾಣ್ಕೆ>ಕಾಣಿಕೆ, ಊರ್ಗೆ>ಊರಿಗೆ ಇತ್ಯಾದಿ. ಆದರೆ ಮಾತಿನಲ್ಲಿ ಹಲವು ಪ್ರಭೇದಗಳಲ್ಲಿ ಪದದೊಳಗಣ ಸ್ವರ ಲೋಪಗೊಂಡು, ಹಲವು ಸಂಯುಕ್ತ ವ್ಯಂಜನಗಳು ಬರೆಹದಲ್ಲಿರುವದಕ್ಕಿಂತ ಹೆಚ್ಚಾಗಿವೆ. ಹೊರಟು>ಹೊರ್ಟು, ಬರಲಿಲ್ಲ>ಬರ್ಲಿಲ್ಲ, ಅಡಕೆ>ಅಡ್ಕೆ ಇತ್ಯಾದಿ

ಹಳಗನ್ನಡದ ದೀರ್ಘಸಮಾಸಗಳು ಹೊಸಗನ್ನಡದಲ್ಲಿ ಕಡಿಮೆ, ಮಾತಿನಲ್ಲಂತೂ ಪದಪದಗಳು ಬೇರೆ ಬೇರೆಯಾಗಿ ನಿಲ್ಲುತ್ತವೆ. ಉದಾ: ಕ್ರಮದಪ್ಪು > ಕ್ರಮ ತಪ್ಪು, ಕೌತುಕಂದಾಳ್ > ಕೌತುಕ ತಾಳು ಇತ್ಯಾದಿ. ಆದರೆ ಅಂಗಾಲು, ಕೊನೆಗಾಣು, ಗರಿಗೆದರು ಇತ್ಯಾದಿ ಕೆಲವು ಸಮಾಸ ಪದಗಳು ಹೊಸಗನ್ನಡದಲ್ಲಿ ಹಾಗೇ ಉಳಿದಿವೆ.

ಪ್ರಥಮಪುರುಷ ಸರ್ವನಾಮದಲ್ಲಿ ಪುಲ್ಲಿಂಗ ಪ್ರತ್ಯಯ ಅನು ಎಂಬುದು ಆ ಎಂದು ಹೊಸಗನ್ನಡದಲ್ಲಿ ಬರುವುದು ಸರ್ವ ಸಾಮಾನ್ಯವಾಗಿದೆ. ಉದಾ: ಅವನು>ಅವ, ಇವನು>ಇವ: ಕ್ರಿಯಾಪದದಲ್ಲೂ ಇದು ಕಂಡುಬರುತ್ತದೆ. ಬಂದನು>ಬಂದ, ತಿಂದನು>ತಿಂದ ಇತ್ಯಾದಿ. ಹಳಗನ್ನಡ ಮತ್ತು ನಡುಗನ್ನಡಗಳಲ್ಲಿ ಭೂತ ಮತ್ತು ಭವಿಷ್ಯತ್ಕಾಲ ಕ್ರಿಯಾರೂಪಗಳು ಮಾತ್ರವಿದ್ದುವು. ವರ್ತಮಾನ ಕಾಲದ ಕ್ರಿಯೆ ಭೂತ ಮತ್ತು ಭವಿಷ್ಯತ್ಕಾಲ ರೂಪಗಳ ಸಂಯುಕ್ತ ರೂಪದಿಂದ (ಉದಾ: ಬಂದು+ ಅಪೆನ್=ಬಂದಪೆನ್>ಬಂದಹೆನ್) ವ್ಯಕ್ತವಾಗುತ್ತಿತ್ತು. ಹೊಸಗನ್ನಡದಲ್ಲಿ ವರ್ತಮಾನ ಕ್ರಿಯೆಗೆ ಏನೆ, ಏವೆ, ಈ, ಈರಿ, ಆನೆ, ಆಳೆ, ಆರೆ, ಅದೆ, ಇದೆ ಅವೆ, ಇವೆ ಎಂಬ ಸರ್ವನಾಮ ಪ್ರತ್ಯಯಗಳೆಂದು ಈಗ ಪರಿಗಣಿತವಾಗಿರುವ ರೂಪಗಳು ಉತ್ತ ಎಂಬ ಕಾಲವಾಚಕ ಪ್ರತ್ಯಯದ ಅನಂತರ ಬಂದು ವರ್ತಮಾನ ಪೂರ್ಣಕ್ರಿಯಾಪದ ನಿರ್ದೇಶವಾಗುತ್ತದೆ. ಅಲ್ಲದೆ ಭವಿಷ್ಯತ್ಕಾಲ ಪೂರ್ಣ ಕ್ರಿಯಾಪದದ ಸ್ಥಾನವನ್ನು ಇದು ಪ್ರಬಲವಾಗಿ ಆಕ್ರಮಿಸುತ್ತಿದ್ದು, ಕಾಲಸೂಚಕ ಕ್ರಿಯಾವಿಶೇಷಣಗಳಾದ ನಾಳೆ, ನಾಡಿದ್ದು ಅಥವಾ ಬರಲಿರುವ ಕಾಲನಿರ್ದೇಶಕ ನಾಮಪದಗಳು ವಾಕ್ಯದಲ್ಲಿ ಪ್ರಯೋಗವಾಗಿ, ಭವಿಷ್ಯದರ್ಥದಲ್ಲಿ ಇದರ ವ್ಯಾಪ್ತಿ ಹೆಚ್ಚಾಗಿದೆ. ನಿಷೇಧ ಕ್ರಿಯೆ ಹಳಗನ್ನಡದಲ್ಲಿ ಪೂರ್ಣ ಕ್ರಿಯಾಪದಕ್ಕೆ ಇಲ್ಲ ಎಂಬುದು ಸೇರಿ ನಿರ್ದೇಶಿತವಾಗುತ್ತಿತ್ತು. ನಿಷೇಧ ಕ್ರಿಯೆಯಲ್ಲಿ ಕಾಲಸೂಚನೆ ಇಲ್ಲ ಎಂಬುದರ ಪೂರ್ವದಲ್ಲಿ ಬರುವ ಪೂರ್ಣ ಕ್ರಿಯಾಪದದ ಮೂಲಕ ನಡೆಯುತ್ತಿತ್ತು. ಕ್ರಿಯಾಧಾತು ಮತ್ತು ಸರ್ವನಾಮ ಪ್ರತ್ಯಯ ಸೇರಿದ, ಕಾಲ ಸೂಚನೆಯೇ ಇರದ ನಿಷೇಧ ಕ್ರಿಯೆಯೂ ಇರುತ್ತಿತ್ತು. ನಡುಗನ್ನಡ ಮತ್ತು ಹೊಸಗನ್ನಡಗಳಲ್ಲಿ ಇದು ಬದಲಾಗಿ, ಎರಡನೆಯದು ಅಪೂರ್ವವಾಗಿ, ಕೊಡೆ, ಬಿಡೆ, ಮಾಡೆ ಎಂದು ಪ್ರಯೋಗವಾಗುತ್ತದಾದರೂ ಮೊದಲನೆಯದರ ರೀತಿಯಲ್ಲಿ (i) ನಪುಂಸಕ ಸರ್ವನಾಮ ಪ್ರತ್ಯಯವುಳ್ಳ ಪೂರ್ಣಕ್ರಿಯೆಗೆ 'ಇಲ್ಲ' ಎಂಬುದು ಸೇರಿ (ಬಂದುದು + ಇಲ್ಲ = ಬಂದುದಿಲ್ಲ. ಬರುವುದು + ಇಲ್ಲ = ಬರುವುದಿಲ್ಲ). (ii) ಸತಿ ಸಪ್ತಮಿಗೆ ಇಲ್ಲ ಎಂಬುದು ಸೇರಿ ಭೂತಕಾಲದ ಅರ್ಥದಲ್ಲಿ (ಬರಲ್ + ಇಲ್ಲ = ಬರಲಿಲ್ಲ, ಕೊಡಲ್ + ಇಲ್ಲ = ಕೊಡಲಿಲ್ಲ) ಅಥವಾ (iii) ಭೂತಕೃದ್ವಾಚಿ ರೂಪಕ್ಕೆ ಇಲ್ಲ ಎಂಬುದು ಸೇರಿ (ಬಂದು+ ಇಲ್ಲ= ಬಂದಿಲ್ಲ, ಕೊಟ್ಟು + ಇಲ್ಲ = ಕೊಟ್ಟಿಲ್ಲ) ನಿಷೇಧರೂಪದ ಕಾಲ ವ್ಯಕ್ತವಾಗುತ್ತದೆ.

ಸಂಖ್ಯಾನಾಮರೂಪಗಳಾದ ಓರ್ವನ್, ಇರ್ವರ್, ಮೂವರ್, ನಾಲ್ವರ್ ಎಂಬಿತ್ಯಾದಿ ಹಳಗನ್ನಡ ಮತ್ತು ನಡುಗನ್ನಡಗಳಲ್ಲಿದ್ದ ರೂಪಗಳು ನಡುಗನ್ನಡ ಕಾಲದಿಂದಾರಂಭಿಸಿ, ಹೊಸಗನ್ನಡದಲ್ಲಿ ಸಂಖ್ಯಾವಾಚಿ ಮಂದಿ ಅಥವಾ ಜನ ಎಂಬ ವರ್ಗವಾಚಿ ಪದಗಳು ಸೇರಿ ಸಂಖ್ಯೆ ಎರಡರ ಅನಂತರದವುಗಳಲ್ಲಿ ಪ್ರಯೋಗವಾಗುತ್ತದೆ (ಒಬ್ಬ, ಇಬ್ಬರು, ಮೂರು ಮಂದಿ, ಮೂರು ಜನ, ನಾಲ್ಕುಮಂದಿ, ನಾಲ್ಕುಜನ ಇತ್ಯಾದಿ). ಈ ವರ್ಗವಾಚಿ ಮಾಗಧಿ ಭಾಷೆಗಳಿಂದಾರಂಭಿಸಿ ಮರಾಠಿಗೆ ಹರಿದು, ಅಲ್ಲಿಂದ ದ್ರಾವಿಡ ಭಾಷೆಗಳಿಗೂ ಬಂದಿತೆಂದು ಭಾಷಾ ವಿಜ್ಞಾನಿಗಳು ಹೇಳುತ್ತಾರೆ. ತೌಲನಿಕವಾಗಿ ಹೋಲಿಕೆಯಿಂದ ನೋಡಿದರೆ, ಹೊಸಗನ್ನಡವು ಹಳಗನ್ನಡದ ಸಂಶ್ಲಿಷ್ಟರೂಪದಿಂದ ಸರಳ ರೂಪಕ್ಕೆ ತಿರುಗಿದುದಾಗಿ ಕಾಣುತ್ತದೆ.

(ಕೆ.ಕೆಯು.ಜಿ.)

**ವರ್ಣಮಾಲೆ :** ಕನ್ನಡ ವರ್ಣಮಾಲೆಯಲ್ಲಿ ಒಟ್ಟು 47 ಅಕ್ಷರಗಳಿವೆ. ಸಂಸ್ಕೃತ ವರ್ಣಮಾಲೆಯ 52 ಅಕ್ಷರಗಳಲ್ಲಿ ಋ, ೠ, ಎಂಬ ಸ್ವರಗಳು, ಶ, ಷ, ಳ (ಕ್ಷಳ) ಎಂಬ ವ್ಯಂಜನಗಳು, ಮೂರು ಯೋಗವಾಹಗಳು ಸೇರಿ ಹತ್ತು ಅಕ್ಷರಗಳು ಕನ್ನಡದಲ್ಲಿಲ್ಲ. ಅವಕ್ಕೆ ಬದಲಾಗಿ ಎ, ಒ, ಱ , ೞ, ಳ (ಕುಳ) ಎಂಬ ಐದು ದೇಶೀಯ ಅಕ್ಷರಗಳನ್ನು ಸೇರಿಸಿದರೆ 47 ಅಕ್ಷರಗಳಾಗುತ್ತವೆ. ಈ ನಲವತ್ತೇಳರಲ್ಲೂ ಹತ್ತು ಮಹಾಪ್ರಾಣಗಳು ಸಂಸ್ಕೃತ ತತ್ಸಮ ಪದಗಳಲ್ಲಿ ಮಾತ್ರ ಕಂಡುಬರುವುದರಿಂದ ಇವು ಕನ್ನಡದ ಜಾಯಮಾನಕ್ಕೆ ಸೇರಿದವುಗಳಲ್ಲ ಎನ್ನಬಹುದು. ಕನ್ನಡದ ಒಂದೆರಡು ಸಂಖ್ಯಾವಾಚಕ ಶಬ್ದಗಳಲ್ಲಿ ಹಾಗೂ ಅನುಕರಣ ವಾಚಕಗಳಲ್ಲಿ ಮಾತ್ರ

ಮಹಾಪ್ರಾಣಗಳು ಕಾರಣಾಂತರದಿಂದ ಸೇರಿ ಹೋಗಿವೆ. ಐ ಔ ಗಳೂ ಕನ್ನಡಕ್ಕೆ ಅವಶ್ಯವಿಲ್ಲ. ಅವುಗಳನ್ನು ಅಯ್, ಅವ್ ಎಂದೂ ಬರೆಯಬಹುದು. ಸಂಸ್ಕೃತ ಶಬ್ದಗಳನ್ನು ಬರೆಯಲು ಋ ಎಂಬ ಸ್ವರವನ್ನು ಶ,ಷ ವಿಸರ್ಗ ಮುಂತಾದ ವ್ಯಂಜನಗಳನ್ನು ಸೇರಿಸಬೇಕಾಗುತ್ತದೆ. ಆಧುನಿಕ ಕನ್ನಡದಲ್ಲಿ ಇಂಗ್ಲಿಷ್ ಮತ್ತು ಇತರ ಭಾಷೆಗಳಿಂದ ಅಪೂರ್ವ ಉಚ್ಚಾರಣೆಗಳನ್ನುಳ್ಳ ಅನೇಕ ಪದಗಳನ್ನು ಬಳಸುತ್ತಿರುವ ಕಾರಣ ಅವುಗಳ ಸ್ವರೂಪವನ್ನು ಧ್ವನಿಯನ್ನು ಸರಿಯಾಗಿ ಸೂಚಿಸಲು ಯುಕ್ತ ಉಚ್ಚಾರಣ ಚಿಹ್ನೆಗಳನ್ನು ಬಳಸಿಕೊಳ್ಳಬಹುದು. ಈ ವಿಷಯವನ್ನು ಈ ಲೇಖನದಲ್ಲಿ ಹಿಂದೆಯೇ ತಿಳಿಸಲಾಗಿದೆ.

**ವ್ಯಾಕರಣ ವ್ಯವಸ್ಥೆ :** ಕನ್ನಡದ ನಾಮಪದಗಳಲ್ಲಿ ಲಿಂಗ, ವಚನ, ವಿಭಕ್ತಿಗಳ ವಿವಕ್ಷೆಯಿದೆ. ನಾಮಪದಕ್ಕೆ ಲಿಂಗ, ವಚನಗಳನ್ನು ಸೂಚಿಸುವ ಪ್ರತ್ಯಯ ಮತ್ತು ವಿಭಕ್ತಿ ಪ್ರತ್ಯಯ ಸೇರುತ್ತವೆ. ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳೆಂಬ ಮೂರು ಲಿಂಗಗಳೂ ಏಕವಚನ, ಬಹುವಚನಗಳೆಂಬ ಎರಡು ವಚನಗಳೂ ಐದು ವಿಭಕ್ತಿಗಳೂ ಇವೆ. ಉತ್ತಮಪುರುಷ ಹಾಗೂ ಮಧ್ಯಮಪುರುಷ ಸರ್ವನಾಮಗಳಲ್ಲಿ ಲಿಂಗ ವಿವಕ್ಷೆ ಇಲ್ಲ. ಪ್ರಥಮಪುರುಷ ಸರ್ವನಾಮ ಹಾಗೂ ಇತರ ನಾಮಪದಗಳಲ್ಲಿ ಮಹತ್, ಅಮಹತ್ ಅಥವಾ ಮೇಲು ಜಾತಿ, ಕೀಳು ಜಾತಿ ಎಂಬ ಭೇದವನ್ನು ಕಾಣಬಹುದು. ಮನುಷ್ಯವಾಚಕ ಮತ್ತು ವಿವೇಚನಾಶಕ್ತಿಯುಳ್ಳ ಜೀವಿಗಳನ್ನು ಹೇಳುವ ಶಬ್ದಗಳನ್ನು ಮೇಲುಜಾತಿ ಎಂದೂ ಇತರ ಪ್ರಾಣಿವಾಚಕ ಹಾಗೂ ನಿರ್ಜೀವ ವಸ್ತುಗಳನ್ನು ದ್ಯೋತಿಸುವ ಶಬ್ದಗಳನ್ನು ಕೀಳುಜಾತಿ ಎಂದೂ ಕರೆಯಬಹುದು. ಮಹತ್ ಶಬ್ದಗಳಲ್ಲಿ ನೈಸರ್ಗಿಕ ಲಿಂಗಭೇದಕ್ಕನುಸಾರವಾಗಿ ಪುಲ್ಲಿಂಗ, ಸ್ತ್ರೀಲಿಂಗವೆಂಬ ಭೇದವಿದೆ. ಅಮಹತ್ ಶಬ್ದ ಯಾವಾಗಲೂ ನಪುಂಸಕಲಿಂಗವಾಗಿರುತ್ತದೆ. ಪುಂಸ್ತ್ರೀಭೇದವನ್ನು ಏಕವಚನದಲ್ಲಿ ಅನ್ ಅಳ್ ಪ್ರತ್ಯಯಗಳೂ ಬಹುವಚನದಲ್ಲಿ ಅರ್,ಇರ್, ದಿರ್,ವಿರ್ ಪ್ರತ್ಯಯಗಳೂ ಸೂಚಿಸುತ್ತವೆ. ನಪುಂಸಕಲಿಂಗಸೂಚಕವಾಗಿ ಕೆಲವೊಮ್ಮೆ ಅಮ್ ಪ್ರತ್ಯಯವೂ ಬಹುವಚನದಲ್ಲಿ ಗಳ್ ಪ್ರತ್ಯಯವೂ ಸೇರುತ್ತವೆ. ಸರ್ವನಾಮದಲ್ಲಿ ನಪುಂಸಕಲಿಂಗ ಪ್ರತ್ಯಯಗಳು ಏಕವಚನ ಬಹುವಚನಗಳಲ್ಲಿ ಅನುಕ್ರಮವಾಗಿದ್ದುವು ಎಂದಿರುತ್ತವೆ. ಆಧುನಿಕ ಕನ್ನಡ ನಾಮಪದಗಳಲ್ಲಿ ಏಕವಚನ ಪ್ರತ್ಯಯವೂ ನಪುಂಸಕಲಿಂಗದಲ್ಲಿ ಬಹುವಚನ ಪ್ರತ್ಯಯವೂ ಲೋಪವಾಗುತ್ತವೆ.

ಕನ್ನಡದಲ್ಲಿ ಐದು ವಿಭಕ್ತಿಗಳಿವೆ. ಸಂಸ್ಕೃತದ ಪ್ರಥಮಾ ಮತ್ತು ಪಂಚಮೀ ಕನ್ನಡದಲ್ಲಿಲ್ಲ ಎನ್ನಬಹುದು. ಪ್ರಥಮಾ ವಿಭಕ್ತಿಯ ಅರ್ಥದಲ್ಲಿ ಪ್ರತ್ಯಯವಾವುದೂ ಬರದೆ ಪ್ರಕೃತಿ ಮಾತ್ರವೇ ಪ್ರಯೋಗದಲ್ಲಿದೆ. ಪಂಚಮೀ ವಿಭಕ್ತಿಯ ಅರ್ಥದಲ್ಲಿ ಪ್ರತ್ಯೇಕವಾದ ವಿಭಕ್ತಿ ಪ್ರತ್ಯಯವಿರದೆ ದೆಸೆ, ಅತ್ತಣ್ ಎಂಬ ಶಬ್ದಗಳನ್ನು ಸೇರಿಸಿ ಅದರ ಮೇಲೆ ತೃತೀಯಾ ವಿಭಕ್ತಿ ಪ್ರತ್ಯಯವಾದ 'ಇಂದ' ವನ್ನು ಸೇರಿಸುವುದು ವಾಡಿಕೆ. ಹಳಗನ್ನಡದ ಮ್ ಎಂಬುದನ್ನು ಪ್ರಥಮಾ ವಿಭಕ್ತಿ ಪ್ರತ್ಯಯವೆಂದು ಪರಿಗಣಿಸಿದ್ದರೂ ಅದು ವಿಭಕ್ತಿ ಪ್ರತ್ಯಯವಲ್ಲವೆಂದೂ ಲಿಂಗಸೂಚಕವೆಂದೂ ಹೇಳಬಹುದು. ಹೊಸಗನ್ನಡದಲ್ಲಿ ಅದು ಕೂಡ ಲೋಪವಾಗಿದೆ. ದ್ವಿತೀಯಾವಿಭಕ್ತಿ ಪ್ರತ್ಯಯದ ರೂಪ ಹಳಗನ್ನಡದಲ್ಲಿ ಆಂ, ಅಂ ಎಂದೂ ನಡುಗನ್ನಡದಲ್ಲಿ ಅನ, ಅನು ಎಂದೂ ಆಗುತ್ತದೆ. ತೃತೀಯಾ ವಿಭಕ್ತಿ ಪ್ರತ್ಯಯವನ್ನು ಹಳಗನ್ನಡ ನಡುಗನ್ನಡದಲ್ಲಿ ಇಂ, ಇದು ಎಂದೂ ಹೊಸಗನ್ನಡದಲ್ಲಿ ಇಂದ ಎಂದೂ ಕಾಣುತ್ತೇವೆ. ಚತುರ್ಥೀ ವಿಭಕ್ತಿ ಪ್ರತ್ಯಯ ಕೆ ಅಥವಾ ಗೆ, ಷಷ್ಠೀ ವಿಭಕ್ತಿಪ್ರತ್ಯಯ ಅ, ಸಪ್ತಮೀ ವಿಭಕ್ತಿ ಪ್ರತ್ಯಯ ಒಳ್, ಒಳಗೆ ಅಥವಾ ಅಲ್ಲಿ - ಈ ವಿಭಕ್ತಿ ಪ್ರತ್ಯಯಗಳೆಲ್ಲ ಮೊದಲು ಸ್ವತಂತ್ರ ಶಬ್ದಗಳಾಗಿದ್ದುವೆಂದೂ ಕಾಲಕ್ರಮದಲ್ಲಿ ಪ್ರತ್ಯಯಗಳಾಗಿ ಮಾರ್ಪಟ್ಟುವೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಉತ್ತಮಪುರುಷ ಸರ್ವನಾಮಗಳು ಹಳಗನ್ನಡದಲ್ಲಿ ಆನ್, ಆಮ್ ಎಂದಿದ್ದು ನಡುಗನ್ನಡದ ಕಾಲಕ್ಕೆ ನಾನ್, ನಾವ್ ಎಂದೂ ಹೊಸಗನ್ನಡದಲ್ಲಿ ನಾನು, ನಾವು ಎಂದೂ ಆದುವು. ಮಧ್ಯಮ ಪುರುಷ ಸರ್ವನಾಮಗಳು ನೀನ್ ಮತ್ತು ನೀಮ್, ಪ್ರಥಮಪುರುಷ ಸರ್ವನಾಮಗಳು ಅ, ಇ, ಉ ಎಂಬ ಸ್ಥಾನ ನಿರ್ದೇಶಿಗಳಿಗೆ ಪುಲ್ಲಿಂಗ ಸ್ತ್ರೀಲಿಂಗ ನಪುಂಸಕಲಿಂಗ ಪ್ರತ್ಯಯಗಳು ಸೇರಿ ಅವನ್, ಇವನ್, ಉವನ್ ಇತ್ಯಾದಿ ರೂಪಗಳು ಸಿದ್ಧಿಸಿವೆ. ಅ ಎಂಬುದು ದೂರವನ್ನೂ ಇ ಎಂಬುದು ಸಮೀಪವನ್ನೂ ಉ ಎಂಬುದು ಎರಡಕ್ಕೂ ಮಧ್ಯವನ್ನೂ ನಿರ್ದೇಶಿಸುತ್ತವೆ. ಉಕಾರದಿಂದ ಪ್ರಾರಂಭವಾಗುವ ಸರ್ವನಾಮಗಳು ಹಳಗನ್ನಡದಲ್ಲಿ ಕೆಲವೆಡೆ ಮಾತ್ರ ಪ್ರಯೋಗದಲ್ಲಿದ್ದು ಆಮೇಲೆ ಕಾಣಬರುವುದಿಲ್ಲ. ಉದಾ: ಆತ, ಈತ, ಊತ; ಆಕೆ, ಈಕೆ ಊಕೆ; ಅದು, ಇದು, ಉದು; ಪ್ರಶ್ನಾರ್ಥಕ ಸರ್ವನಾಮಗಳು ಆವನ್, ಆವಳ್ ಇತ್ಯಾದಿಗಳಾಗಿದ್ದು ಹೊಸಗನ್ನಡದಲ್ಲಿ ಅವುಗಳ ಆದಿ ಆ ಕಾರದ ಮುಂದೆ ಯ ಕಾರ ಬಂದು ಯಾವನ್, ಯಾವಳ್ ಇತ್ಯಾದಿಗಳಾಗಿವೆ.

ಕನ್ನಡ ಭಾಷೆಯ ಕ್ರಿಯಾಪದಗಳು ಗುಣವಾಚಕ ವಿಶೇಷಣಗಳಾಗಿಯೂ ನಾಮಪದಗಳಾಗಿಯೂ ಉಪಯೋಗಿಸಲ್ಪಡುತ್ತವೆ. ಕ್ರಿಯಾಪದಕ್ಕೆ ಹತ್ತುವ ಪುರುಷ - ವಚನ ಸೂಚಕ ಪ್ರತ್ಯಯಗಳೂ ಸರ್ವನಾಮಗಳ ರೂಪಗಳೇ ಎಂಬುದನ್ನು ಗಮನಿಸಬಹುದು. ಉತ್ತಮಪುರುಷ ಏಕವಚನ ಎನ್, ಎನು ಮತ್ತು ಎ; ಬಹುವಚನ ಎಮ್, ಎವು; ಮಧ್ಯಮಪುರುಷ ಏಕವಚನ ಅಯ್, ಎ; ಬಹುವಚನ ಇರ್, ಇರಿ; ಪ್ರಥಮ ಪುರುಷ ಏಕವಚನ ಅನ್, ಅಳ್; ಬಹುವಚನ ಅರ್; ನಪುಂಸಕಲಿಂಗ ಏಕವಚನ ಉದು, ಉತ್ತು; ಬಹುವಚನ ಉವು. ಈ ಎಲ್ಲ ಪ್ರತ್ಯಯಗಳೂ ಮೇಲೆ ಹೇಳಿದ ಸರ್ವನಾಮಗಳ ಸವೆದ ರೂಪಗಳೆಂದು ತೋರಿಸುವುದು ಕಷ್ಟವಲ್ಲ. ಈ ಪ್ರತ್ಯಯಗಳನ್ನು ಧಾತುವಿನ ಕೃದ್ವಾಚಿಗಳಿಗೆ ಸೇರಿಸಿ ಬೇರೆ ಬೇರೆ ಕ್ರಿಯಾ ರೂಪಗಳನ್ನು ಸಿದ್ಧಿಸಿಕೊಳ್ಳಬಹುದು. ಕನ್ನಡದ ಕ್ರಿಯಾಪದಗಳಲ್ಲಿ ಭೂತ ಮತ್ತು ಭವಿಷ್ಯದ್ವರ್ತಮಾನ ಎಂಬ ಎರಡೇ ಕಾಲಗಳಿವೆ. ಭೂತ ಕಾಲದಲ್ಲಿ ಧಾತುವಿಗೆ ದ ಪ್ರತ್ಯಯ ಮತ್ತು ಭವಿಷ್ಯತ್ಕಾಲದಲ್ಲಿ ಪ, ಬ, ಅಥವಾ ವ ಪ್ರತ್ಯಯ ಸೇರುತ್ತವೆ. ಹಳಗನ್ನಡದ ವರ್ತಮಾನ ಕಾಲ ಪ್ರತ್ಯಯದಲ್ಲಿ ಕಾಣಬರುವ ದಪ್ಪ ಅಥವಾ ದಪ ಪ್ರತ್ಯಯದಲ್ಲಿನ ಅಪ್ಪ, 'ಅಪ' ಎಂಬ ರೂಪ ಆಗು ಧಾತುವಿನ ಭವಿಷ್ಯದ್ರೂಪ. ಹೀಗೆ ಸಿದ್ಧಿಸಿದ ರೂಪ ವರ್ತಮಾನ ಹಾಗೂ ಭವಿಷ್ಯದರ್ಥವನ್ನೂ ಸಂದೇಹಾರ್ಥವನ್ನೂ ಸೂಚಿಸುತ್ತಿತ್ತು. ನಡುಗನ್ನಡದಲ್ಲಿ ಈ ದಪ್ಪ ದಹ ಆಯಿತು. ಹೊಸಗನ್ನಡದಲ್ಲಿ ಈ ರೀತಿಯ ವರ್ತಮಾನಕಾಲ ರೂಪ ಮಾಯವಾಗಿ ಉತ್ತ ಎನ್ನುವ ಕೃದ್ವಾಚಿಗೆ ಪುರುಷವಾಚಕ ಪ್ರತ್ಯಯಗಳನ್ನು ಸೇರಿಸಿ ಮಾಡಿದ ಹೊಸತೊಂದು ರೀತಿಯ ವರ್ತಮಾನಕಾಲ ರೂಪಗಳು ಪ್ರಚಾರಕ್ಕೆ ಬಂದುವು. ಆದರೆ ಈ ಉತ್ತ ಪ್ರತ್ಯಯಕ್ಕೆ ಸೇರುವ ಪುರುಷವಾಚಕ ಪ್ರತ್ಯಯಗಳಲ್ಲಿ ಹಲಕೆಲವು ಮಾರ್ಪಾಡುಗಳಾಗಿವೆ ಎಂಬುದನ್ನು ಗಮನಿಸಬಹುದು.

ಧಾತುವಿಗೆ ಅ ಅಥವಾ ಅದೆ ಪ್ರತ್ಯಯ ಸೇರುವುದರಿಂದಲೂ ಕ್ರಿಯಾಪದಕ್ಕೆ, ಅಲ್ಲ ಇಲ್ಲ ರೂಪಗಳನ್ನು ಸೇರಿಸುವುದರಿಂದಲೂ ನಿಷೇಧಕ್ರಿಯೆ ಸಿದ್ಧಿಸುತ್ತದೆ. ಧಾತುವಿನ ಮೂಲರೂಪ ವಿಧ್ಯರ್ಥಕ ಮಧ್ಯಮಪುರುಷ ಏಕವಚನವಾಗಿ ಬಳಸಲ್ಪಡುತ್ತದೆ. ಇದರ ಬಹುವಚನ ರೂಪ ಸಿದ್ಧಿಸಲು ಹಳಗನ್ನಡದಲ್ಲಿ ಇಮ್ ಪ್ರತ್ಯಯವೂ ನಡುಗನ್ನಡ ಹೊಸಗನ್ನಡಗಳಲ್ಲಿ ಇ, ಇರಿ ಪ್ರತ್ಯಯಗಳೂ ಸೇರುತ್ತವೆ. ವಿಧ್ಯರ್ಥಕ ಉತ್ತಮಪುರುಷ ಬಹುವಚನ ಸಿದ್ಧಿಸಲು ಹಳಗನ್ನಡದಲ್ಲಿ ವಮ್ ಅಥವಾ ಅಮ್ ಪ್ರತ್ಯಯವನ್ನೂ ಹೊಸಗನ್ನಡದಲ್ಲಿ ಓಣ ಪ್ರತ್ಯಯವನ್ನೂ ಸೇರಿಸುತ್ತಾರೆ. ಪ್ರಥಮಪುರುಷ ರೂಪ ಸಿದ್ಧಿಸಲು ಹಳಗನ್ನಡದಲ್ಲಿ ಕೆ,ಗೆ ಪ್ರತ್ಯಯವನ್ನೂ ಹೊಸಗನ್ನಡದಲ್ಲಿ ಅಲಿ ಪ್ರತ್ಯಯವನ್ನೂ ಸೇರಿಸುತ್ತಾರೆ. ವರ್ತಮಾನಕಾಲವಾಚಕ ಕೃದ್ವಾಚಿ ಅಥವಾ ಅಸಂಪೂರ್ಣ ಕ್ರಿಯಾಧಾತುವಿಗೆ ಉತ್ ಸೇರಿಸುವುದರಿಂದಲೂ ಭೂತಕಾಲವಾಚಕ ಅಸಂಪೂರ್ಣ ಕ್ರಿಯೆ ದು ಅಥವಾ ಮ ಸೇರುವುದರಿಂದಲೂ ಸಿದ್ಧಿಸುತ್ತವೆ. ಉಕಾರಾಂತ ಧಾತುಗಳಿಗೆ ಮಾತ್ರ ದು ಅಥವಾ ತು ಪ್ರತ್ಯಯ ಬರುವುದಿಲ್ಲ. ಅದಕ್ಕೆ ಬದಲಾಗಿ ಧಾತುವಿನ ಅಂತ್ಯ ಉಕಾರ ಲೋಪವಾಗಿ ಇ ಕಾರ ಸೇರುತ್ತದೆ (ಮಾಡಿ, ಹೋಗಿ ಇತ್ಯಾದಿ). (ಯು.ಪಿ.ಯು.)

**ಶಬ್ದರಚನೆ - ಅದರ ಇತಿಹಾಸ :** ಕನ್ನಡದ ಶಬ್ದರಚನೆಯನ್ನು ಶಾಸ್ತ್ರೀಯವಾಗಿ ವಿವೇಚಿಸುವ ಶಬ್ದಶಾಸ್ತ್ರ ಗ್ರಂಥಗಳು ಆರನೆಯ ಶತಮಾನದಿಂದಲೆ ಆರಂಭವಾಗಿರಬೇಕೆಂದು ಊಹಿಸಲು ಅವಕಾಶವಿದೆ. ಗಂಗರಾಜ ದುರ್ವಿನೀತನ (6ನೆಯ ಶತಮಾನ) ಶಬ್ದಾವತಾರ ಕನ್ನಡ ನುಡಿಗೆ ಬರೆದಿರುವ ವ್ಯಾಕರಣ ಗ್ರಂಥವಾಗಿದ್ದ ಪಕ್ಷದಲ್ಲಿ ಅದೇ ಶಬ್ದಶಾಸ್ತ್ರವನ್ನು ಪ್ರತಿಪಾದಿಸುವ ಮೊದಲನೆಯ ಗ್ರಂಥವಾಗುತ್ತದೆ. ಅನಂತರ ಕನ್ನಡ ನುಡಿಗಳ

ಪ್ರಸ್ತಾಪ ಕವಿರಾಜಮಾರ್ಗದಲ್ಲಿ ಬಂದಿದೆ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಮೊದಲನೆಯ ಅಧಿಕರಣವಾದ ಶಬ್ದಸ್ಮೃತ್ಯಧಿಕರಣದಲ್ಲಿ ಮತ್ತು ಅವನಿಂದಲೆ ರಚಿತವಾದ ಕರ್ಣಾಟಕ ಭಾಷಾಭೂಷಣದಲ್ಲಿ ಕನ್ನಡದ ಶಬ್ದ ರಚನೆಯನ್ನು ಕುರಿತು ವಿಸ್ತಾರವಾದ ವಿವೇಚನೆ ಇದೆ. ಕರ್ನಾಟಕ ಲಕ್ಷಣ ಶಬ್ದಶಾಸ್ತ್ರವಾದ ಕೇಶಿರಾಜನ ಶಬ್ದಮಣಿದರ್ಪಣ ಹಳಗನ್ನಡ ವ್ಯಾಕರಣ ಗ್ರಂಥಗಳಿಗೆ ತಿಲಕಪ್ರಾಯವಾದುದು. ಭಟ್ಟಾಕಳಂಕನ ಶಬ್ದಾನುಶಾಸನ ಸಂಸ್ಕೃತ ಸೂತ್ರ ಪದ್ಧತಿಯಲ್ಲಿ ಇನ್ನೂ ವಿಸ್ತಾರವಾಗಿ ಕರ್ನಾಟಕ ಶಬ್ದಶಾಸ್ತ್ರವನ್ನು ಪ್ರತಿಪಾದಿಸುವ ಗ್ರಂಥವಾಗಿದೆ.

ಸಾಮಾನ್ಯವಾಗಿ ಎಲ್ಲ ಭಾಷೆಗಳಲ್ಲೂ ಶಬ್ದಕ್ಕೆ ಸಮಾನಾರ್ಥಕವಾದ ಮಾತುಗಳಿರುತ್ತವೆ. ಕನ್ನಡದಲ್ಲಿ ಶಬ್ದಕ್ಕೆ ಪರ್ಯಾಯವಾಗಿ ಪದ, ನುಡಿ ಎಂಬ ಮಾತುಗಳು ಬಳಕೆಯಲ್ಲಿವೆ. ಧಾತು ಪ್ರಾತಿಪದಿಕ ಪ್ರತ್ಯಯಾದಿಗಳು ವೈಯಾಕರಣರ ಕಲ್ಪನೆ. ಕನ್ನಡದ ಶಬ್ದಗಳಲ್ಲಿ ಪ್ರಧಾನ ಅರ್ಥಬೋಧಕವಾದ ಒಂದು ಕೇಂದ್ರ ಇರುತ್ತದೆ. ಇದು ಪ್ರತ್ಯಯರಹಿತವಾಗಿರಬಹುದು ಇಲ್ಲವೆ ಒಂದು ಅಥವಾ ಹೆಚ್ಚು ಪ್ರತ್ಯಯಗಳಿಂದ ಕೂಡಿರಬಹುದು. ಪದರಚನಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಥವತ್ತಾದ ಅವಿಭಾಜ್ಯ ಅಂಶಗಳನ್ನು ಪದಾಂಗಗಳೆನ್ನಬಹುದು. ಇವುಗಳನ್ನು ಧಾತುಗಳೆಂದೂ ಪ್ರತ್ಯಯಗಳೆಂದೂ ಎರಡು ವರ್ಗಗಳಾಗಿ ವಿಂಗಡಿಸಬಹುದು. ಒಂದು ಶಬ್ದದ ಪ್ರಧಾನ ಅರ್ಥವಾಹಕ ಕೇಂದ್ರವಾಗಿ ಭಾಗವಹಿಸುವ ಏಕೈಕ ಪದಾಂಗವೇ ಧಾತು (ಪ್ರಕೃತಿ). ಕನ್ನಡದ ಧಾತುಗಳು ಯಾವಾಗಲೂ ಪದಾದಿಯಲ್ಲಿಯೇ ಇರುತ್ತವೆ. ಧಾತುಗಳಿಗೆ ಸ್ವತಂತ್ರ ಪ್ರಯೋಗಾರ್ಹತೆ ಇರಬಹುದು (ಉದಾ: ಮರ, ತಿನ್ನು, ಮಾಡು ಇತ್ಯಾದಿ) ಅಥವಾ ಇಲ್ಲದಿರಬಹುದು (ಉದಾ: ಬರಲ್, ಬೆಯೆ, ಕೆನ್ದಳಿರ್, ಒಳ್ನುಡಿ ಇತ್ಯಾದಿ ಪದಗಳಲ್ಲಿರುವ ಬರ್, -ಬೇ -ಕೆನ್, ಒಳ್ ಧಾತುಗಳು) - ಶಬ್ದದಲ್ಲಿ ಧಾತುವಿಗೆ ಅನುಬಂಧಗಳಾಗಿಯೇ ಸೇರುವ ಪದಾಂಗಗಳು ಪ್ರತ್ಯಯಗಳು. ಇವುಗಳಿಗೆ ಸ್ವತಂತ್ರ ಪ್ರಯೋಗಾರ್ಹತೆ ಇಲ್ಲ. ಇವು ಯಾವಾಗಲೂ ಬದ್ಧರೂಪಗಳಾಗಿಯೇ ಪ್ರಯೋಗವಾಗುತ್ತವೆ. ಅರ್ಥದಲ್ಲಿ ಯಾವ ಬದಲಾವಣೆಯೂ ಇಲ್ಲದೆ ಪರಿಸರಭೇದಗಳಿಗನುಗುಣವಾಗಿ ತೋರಿಬರುವ ಒಂದು ಪದಾಂಗದ ರೂಪಾಂತರಗಳನ್ನು ಸಪದಾಂಗಗಳೆನ್ನಬಹುದು. ಉದಾ: ಬರಲು, ಬನ್ದು, ಬಾ, ಬನ್ನಿ ಮೊದಲಾದ ಪದಗಳಲ್ಲಿ ಕಂಡುಬರುವ ಧಾತುವಿನ ಬರ್, ಬನ್, ಬಾ, ಬನ್ನಿ - ಎಂಬ ರೂಪಾಂತರಗಳೂ ಕಲ್ತು, ತಿನ್ದು, ಕಣ್ಡು ಎಂಬ ಪದಗಳಲ್ಲಿ ಕಂಡುಬರುವ ಭೂತಕಾಲ ಪ್ರತ್ಯಯದ ತ್,ದ್, ಡ್ ಎಂಬ ರೂಪಾಂತರಗಳೂ ಅನುಕ್ರಮವಾಗಿ ಬರ್ ಮತ್ತು ತ್ ಪದಾಂಗಗಳ ರೂಪಾಂತರಗಳಾಗಿವೆ.

ಶಬ್ದಗಳ ಪ್ರಧಾನ ಅರ್ಥವಾಹಕ ಕೇಂದ್ರ ಎರಡು ಅಥವಾ ಹೆಚ್ಚು ಧಾತುಗಳಿಂದ ಕೂಡಿಕೊಂಡಿದ್ದರೆ ಅಂಥವುಗಳನ್ನು ಸಮಸ್ತ ಪದಗಳೆನ್ನುತ್ತಾರೆ. ಉದಾ: ಮನೆಬಾಗಿಲಿಗೆ, ತಾಯಿತಂದೆಗಳನ್ನು, ಕೆಂದಳಿರ್ವಾಸಿನ, ಬೀಳ್ಕೊಂಡನು ಇತ್ಯಾದಿ.

ಪ್ರತ್ಯಯಗಳಲ್ಲಿ ಉತ್ಪಾದಕ ಪ್ರತ್ಯಯಗಳೆಂದೂ ನಿಷ್ಪಾದಕ ಪ್ರತ್ಯಯಗಳೆಂದೂ ಎರಡು ವಿಧ. ಉತ್ಪಾದಕ ಪ್ರತ್ಯಯಗಳು ಧಾತುಗಳಿಗೆ ಸೇರಿ ಹೊಸ ಹೊಸ ಅರ್ಥಗಳನ್ನು ಕೊಡುವ ಪದನಿರ್ಮಾಣ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತವೆ. ತದ್ಧಿತ ಪ್ರತ್ಯಯಗಳು: ಉದಾ: ಅಲು (ಒಕ್ಕಲು), ಇಗ (ಒಕ್ಕಲಿಗ), ತನ (ಬಡತನ), ಮೆ (ಹಿರಿಮೆ) ಇತ್ಯಾದಿ; ಪ್ರೇರಣಾರ್ಥದಲ್ಲಿ ಬರುವ ಇಸು ಪ್ರತ್ಯಯ: ಉದಾ: ಮಾಡಿಸು, ಆನಂದಿಸು ಇತ್ಯಾದಿ. ಕ್ರಿಯಾವಿಶೇಷಣಗಳಲ್ಲಿ ಬರುವ ಆನೆ, ಆಗೆ ಪ್ರತ್ಯಯಗಳು. ಉದಾ: ಮೆಲ್ಲನೆ, ಮೆಲ್ಲಗೆ, ತಣ್ಣನೆ ಇತ್ಯಾದಿ. ವಿಶೇಷಣಗಳಲ್ಲಿ ಬರುವ ಯ ಪ್ರತ್ಯಯ- ಉದಾ: ಹಿರಿಯ, ಇನಿಯ ಇತ್ಯಾದಿ.

ಪದನಿಷ್ಪತ್ತಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರತ್ಯಯಗಳೇ ನಿಷ್ಪಾದಕ ಪ್ರತ್ಯಯಗಳೆನಿಸುತ್ತವೆ. ನಾಮ ವಿಭಕ್ತಿ ಪ್ರತ್ಯಯಗಳು - ಉದಾ: ಅನ್ನು, ಇಂದ, ಗೆ, ಇತ್ಯಾದಿ; ಏಕವಚನ ನಾಮಪದಗಳಲ್ಲಿ ನಾಮವಿಭಕ್ತಿಗಳ ಪೂರ್ವದಲ್ಲಿ ಬರುವ ಆಗಮಗಳು - ಉದಾ: ಇನ್ (ಊರಿನ), ಅದ್ (ಮರದಿಂದ) ಇತ್ಯಾದಿ. ಆಖ್ಯಾತ ವಿಭಕ್ತಿ ಪ್ರತ್ಯಯಗಳು- ಉದಾ: ಎನ್,ಎವು, ಅಯ್, ಇರ್ ಇತ್ಯಾದಿ. ಕಾಲವಾಚಕ ಪ್ರತ್ಯಯಗಳು - ಉದಾ: ದ್,ವ್ ಇತ್ಯಾದಿ.

ಮನೆಯನ್ನು (ಮನೆ-ಯ್-ಅನ್ನು), ಕರುವನ್ನು (ಕರು-ವ್-ಅನ್ನು) ಎಂಬೀ ಪದಗಳಲ್ಲಿ ಬರುವ ಯ್ ಮತ್ತು ವ್ ಆಗಮಗಳನ್ನು ಅರ್ಥಶೂನ್ಯ ಪದಾಂಗಗಳೆಂದು ಪರಿಗಣಿಸಬಹುದು.

ಮಾಡನು (ಮಾಡ್-ಅ-ನು), ಮಾಡರು (ಮಾಡ್-ಅ-ರು), ಮಾಡದು (ಮಾಡ್-ಅ-ದು) ಈ ಮೊದಲಾದ ಪದಗಳಲ್ಲಿ ನಿಷೇಧಾರ್ಥವನ್ನು ಬೋಧಿಸುವ ಆ ಪ್ರತ್ಯಯಕ್ಕೆ ಅರಿಯೆನು (ಅರಿಯ್-೦-ಎನು), ಮಾಡೆವು (ಮಾಡ್-೦-ಎವು) ಎಂಬ ಪದಗಳಲ್ಲಿ ರೂಪಶೂನ್ಯ ಸಪದಾಂಗವನ್ನು ಗುರುತಿಸಬಹುದು.

ಒಂದೇ ಪದದಲ್ಲಿ ಉತ್ಪಾದಕ ಮತ್ತು ನಿಷ್ಪಾದಕ ಪ್ರತ್ಯಯಗಳು ಬಂದಾಗ ನಿಷ್ಪಾದಕ ಪ್ರತ್ಯಯ ಯಾವಾಗಲೂ ಉತ್ಪಾದಕ ಪ್ರತ್ಯಯದ ಪರದಲ್ಲಿಯೇ ಬರುತ್ತದೆ. ಉದಾ: ಬಡತನವನ್ನು, ಹಾಡಿಸಿದೆ ಎಂಬ ಪದಗಳಲ್ಲಿ ಬಡ, ಹಾಡು ಇವು ಧಾತುಗಳು. ತನ, ಇಸು ಇವು ಉತ್ಪಾದಕ ಪ್ರತ್ಯಯಗಳು; ಅನ್ನು, ಇದ್,ಎ ಗಳು ನಿಷ್ಪಾದಕ ಪ್ರತ್ಯಯಗಳು. ನಾಮ ವಿಭಕ್ತಿ ಮತ್ತು ಆಖ್ಯಾತ ವಿಭಕ್ತಿ ಪ್ರತ್ಯಯಗಳು ಪದವನ್ನು ಮುಕ್ತಾಯಗೊಳಿಸುತ್ತವೆ. ಅವುಗಳ ಪರದಲ್ಲಿ ಬೇರೆ ಪ್ರತ್ಯಯಗಳು ಸೇರುವುದಿಲ್ಲ.

ಚಾರಿತ್ರಿಕವಾಗಿ ಕನ್ನಡದ ಶಬ್ದರಚನೆಯಲ್ಲಿ ನಾವು ನಾಲ್ಕು ಅವಸ್ಥಾ ಭೇದಗಳನ್ನು ಗುರುತಿಸಬಹುದು.

| **ಪೂರ್ವದ ಹಳಗನ್ನಡ** | **ಹಳಗನ್ನಡ** | **ನಡುಗನ್ನಡ** | **ಹೊಸಗನ್ನಡ** |
|---|---|---|---|
| ಇದಾನ್ | ಇದನ್ | ಇದನು | ಇದನ್ನು |
| ಏಟಿನೆಯಾ | ಏಟಿನೆಯ | ಏಳನೆಯ | ಏಳನೆಯ |
| ಮಾಡಿದೊರ್ | ಮಾಡಿದರ್ | ಮಾಡಿದರು | ಮಾಡಿದರು |
| ವೆಟ್ಟದುಳ್ | ಬೆಟ್ಟದೊಳ್ | ಬೆಟ್ಟದೊಳು | ಬೆಟ್ಟದಲ್ಲಿ |
| ಎಜೆದು | ಇಱಿದು | ಇಱಿದು | ಇರಿದು |
| | ಇನಿತು | ಇನಿಸು(ಈಸು) | ಇಷ್ಟು |
| | ಅಪ್ಪುದು | ಅಹುದು | ಹಉದು(ಹೌದು) |
| | ಪೊಱಮಟ್ಟು | ಹೊರವಣ್ಟು | ಹೊರಟು(ಹೊಣ್ಟು) |

ಹಳಗನ್ನಡದಲ್ಲಿಲ್ಲದ ವರ್ತಮಾನ ಕ್ರಿಯೆಯನ್ನು ಸೂಚಿಸುವ ಒಂದು ಪೂರ್ಣ ಕ್ರಿಯಾಪದದ ರಚನೆ ಹೊಸಗನ್ನಡದಲ್ಲಿ ಏರ್ಪಟ್ಟಿದೆ. ಉದಾ: ಮಾಡುತ್ತೇನೆ, ಹೋಗುತ್ತಾನೆ, ಬರುತ್ತಾರೆ ಇತ್ಯಾದಿ.

**ಶಬ್ದಸಮೂಹ :** ಕನ್ನಡದ ಶಬ್ದಸಂಪತ್ತು ವಿಪುಲವಾದದ್ದು. ಈ ಭಾಷೆ ತನ್ನ ಬೆಳೆವಣಿಗೆಯ ನಾನಾ ಹಂತದಲ್ಲಿ ತನ್ನದೇ ಆದ ದೇಶ್ಯ ಶಬ್ದ ಸಾಮಗ್ರಿಯಿಂದ ಶಬ್ದಸಂಪತ್ತನ್ನು ಬೆಳೆಸಿಕೊಂಡಿರುವುದಲ್ಲದೆ ತನ್ನ ಬೆಳೆವಣಿಗೆಗೆ ಪೋಷಕವಾಗಿ ತನ್ನತನಕ್ಕೆ ಯಾವ ಭಂಗವೂ ಬಾರದಂತೆ ಅನ್ಯ ಭಾಷೆಗಳಿಂದ ಧಾರಾಳವಾಗಿ ಶಬ್ದಗಳನ್ನು ಸ್ವೀಕರಿಸಿಕೊಂಡು, ಅವುಗಳನ್ನು ತನ್ನದನ್ನಾಗಿಸಿಕೊಂಡಿದೆ.

ಉದಾಹರಣೆಗೆ ಉತ್ಪಾದಕ (ತದ್ಧಿತ) ಪ್ರತ್ಯಯಗಳ ಮೂಲಕ: ಹಣವಂತ, ಪುಣ್ಯವಂತ, ಕಲಿತನ, ಕಲಿಕೆ, ಕಲ್ಪಿ, ಹಡಪಿಗ, ಒಕ್ಕಲಿಗ, ಹಿರಿಮೆ, ಒಲುಮೆ, ಬಲ್ಮೆ, ಕಪ್ಪು, ಬೆಳ್ಪು, ತಣ್ಪು, ಬಿಣ್ಪು, ನುಣ್ಪು, ಬಲ್ಪು, ಮಡಿವಳ, ಪಡೆವಳ, ಉಡುಗೆ, ತುಡುಗೆ, ಬಿಸುಗೆ, ಬಲೆಗಾರ, ಸಾಲಗಾರ, ಕಮ್ಮಾರ, ಕುಂಬಾರ, ಸಂತೋಷಿಸು, ಭಾವಿಸು, ಶೋಭಿಸು, ಸೊಗಯಿಸು, ಪೂಡಿಸು, ಅಲಂಕರಿಸು ಇತ್ಯಾದಿ. ಸಮಾಸ ವಿಧಾನಗಳಿಂದ- ಉದಾ: ಪೂಗೊಳ, ಪೂಗಣೆ, ಕೆನ್ನೀರ್, ಬೆನ್ನೀರ್, ಪನ್ನೀರ್, ಮುನ್ನೀರ್, ತಣ್ಣೀರ್, ಅಲರ್ವಾಸು, ಕೆಂದಳಿರ್ವಾಸು, ಕಣ್ಬೇಟ, ಕಂಗೊಳಿಸು, ಕಂಗೆಡು, ಕೈಕೊಳ್, ಕಯ್‍ಗೆಯ್, ಕೈಕೊಡು ಇತ್ಯಾದಿ.

ವ್ಯವಸಾಯ, ನೇಯ್ಗೆ, ವಾಸ್ತುಶಿಲ್ಪ, ಮೀನುಗಾರಿಕೆ, ಬೇಟೆ, ಕೈಗಾರಿಕೆ ಮೊದಲಾದ ವೃತ್ತಿಗಳಿಗೆ ಸಂಬಂಧಿಸಿದ, ಜನಪದ ಕಲೆಗಳಿಗೆ ಸಂಬಂಧಿಸಿದ, ಸಾಮಾಜಿಕ ರೀತಿನೀತಿ, ಆಚಾರವ್ಯವಹಾರ, ಕಟ್ಟುಕಟ್ಟಳೆ, ಮದುವೆ ಮುಂಜಿ, ಹಬ್ಬಹುಣ್ಣಿಮೆಗಳಿಗೆ ಸಂಬಂಧಿಸಿದ, ಸಾಮಾಜಿಕ ಮತ್ತು ಪ್ರಾದೇಶಿಕ ಉಪಭಾಷೆಗಳಲ್ಲಿ ವಿಶಿಷ್ಟವಾಗಿರುವ ಎಷ್ಟೋ ಪದಗಳು ಇನ್ನೂ ನಿಘಂಟುಗಳಲ್ಲಿ ಸೇರದೆ ಹಾಗೆಯೇ ಉಳಿದಿರಬಹುದು ಅಥವಾ ಕೆಲವು ನಷ್ಟವಾಗಿಹೋಗಿರಲೂಬಹುದು.

ಕನ್ನಡ ಮತ್ತು ಸಂಸ್ಕೃತದ ಸಂಪರ್ಕ ಹಾಗೂ ಬಾಂಧವ್ಯ ಬಹಳ ಪ್ರಾಚೀನವಾದುದು. ಸಂಸ್ಕೃತ ಪದಗಳು ಕನ್ನಡದ ಧ್ವನಿವ್ಯವಸ್ಥೆಗನುಗುಣವಾಗಿ ಪ್ರಾಕೃತದ ಮೂಲಕ (ಉದಾ - ಸಂ. ಸ್ನೇಹ, ಪ್ರಾ. ನೇಹ, ಕ. ನೇಹ. ಸಂ. ಆಜ್ಞಾ, ಪ್ರಾ. ಆಣಾ, ಕ. ಆಣೆ ಇತ್ಯಾದಿ) ಅಥವಾ ನೇರವಾಗಿ ತದ್ಭವಗಳಾಗಿ (ಅಪಭ್ರಂಶ) ಕನ್ನಡದಲ್ಲಿ ದೇಶ್ಯಪದಗಳೊಡನೆ ಸೇರಿಕೊಂಡಿವೆ. ಶಬ್ದಶಾಸ್ತ್ರಜ್ಞರು ತಿಳಿಸದೆ ಹೋದರೆ ತದ್ಭವಗಳನ್ನು ಅನ್ಯಭಾಷೆಯಿಂದ ಬಂದಿರುವ ಪದಗಳೆಂಬುದಾಗಿ ಗುರುತಿಸುವುದಕ್ಕೂ ಕಷ್ಟವಾಗುತ್ತದೆ. ಉದಾ- ಸಂತೆ (ಸಂ. ಸಂಸ್ಥಾ), ದೋಣಿ (ಸಂ. ದ್ರೋಣಿ), ಹೋಳಿಗೆ (ಸಂ. ಸ್ಫೋಟಿಕ) ಇತ್ಯಾದಿ. ಕೇಶಿರಾಜ ಶಬ್ದಮಣಿದರ್ಪಣದಲ್ಲಿ ಇಂಥ ಸುಮಾರು 800 ಅಪಭ್ರಂಶ ಪದಗಳನ್ನು ಗುರುತಿಸಿದ್ದಾನೆ.

ಎಷ್ಟೋ ಸಂಸ್ಕೃತ ಪದಗಳು ಇದ್ದಕ್ಕಿದ್ದಂತೆಯೇ ಕನ್ನಡದಲ್ಲಿ ಸೇರಿಕೊಂಡಿವೆ. ಉದಾ: ಸ್ತ್ರೀ, ನದಿ, ಪರ್ವತ, ನಗರ, ದಾನ, ಧರ್ಮ, ಪಾಪ, ಪುಣ್ಯ ಇತ್ಯಾದಿ. ಇನ್ನು ಕೆಲವು ಸಂಸ್ಕೃತ ಪದಗಳು ಅರ್ಥವ್ಯತ್ಯಾಸ ಹೊಂದಿ ಸೇರಿವೆ. ಉದಾ: ವಿಪರೀತ, ಅವಸರ, ಅಪರೂಪ, ಭದ್ರ ಇತ್ಯಾದಿ.

ಹಲವಾರು ಸಂಸ್ಕೃತ ಪದಗಳು ತಮ್ಮ ಪದಾಂತ ಧ್ವನಿಗಳಲ್ಲಿ ಕನ್ನಡ ದೇಶ್ಯಪದಾಂತ್ಯಗಳಿಗೆ ಸರಿಹೋಗುವಂತೆ ಮಾರ್ಪಾಡು ಹೊಂದಿ, ಕನ್ನಡ ನಾಮವಿಭಕ್ತಿ ಪ್ರತ್ಯಯಗಳನ್ನು ಪಡೆದು ಕನ್ನಡದಲ್ಲಿ ರೂಪ ನಿಷ್ಪತ್ತಿಯನ್ನು ಪಡೆಯುತ್ತವೆ. ಮಾಲಾ(ಸಂ.) > ಮಾಲೆ(ಕ.), ಅಭಿಲಾಷಾ(ಸಂ.) > ಅಭಿಲಾಷೆ(ಕ.), ಗೌರೀ(ಸಂ.) > ಗೌರಿ(ಕ.), ಸರಯೂ(ಸಂ.) > ಸರಯು(ಕ.) ಇತ್ಯಾದಿ. ಇಂಥ ಪದಗಳನ್ನು ಕೇಶಿರಾಜ ಸಮಸಂಸ್ಕೃತವೆಂದು ಕರೆದಿದ್ದಾನೆ. ಇವುಗಳನ್ನು ತತ್ಸಮಗಳೆಂದು ಕರೆಯುವುದೂ ಉಂಟು. ಆದರೆ ಕೇಶಿರಾಜ ಮಾತ್ರ ಮಣಿ, ಮಂಚಂ, ಪಟ್ಟ, ತೋರಣ ಇತ್ಯಾದಿ 21 ಶಬ್ದಗಳನ್ನು ತತ್ಸಮಗಳೆಂದು ನಿರ್ದೇಶಿಸಿದ್ದಾನೆ. ಇವು ಅರಿಸಮಾಸ ದೋಷಕ್ಕೆ ಒಳಗಾಗದೆ ಕನ್ನಡ ಮತ್ತು ಸಂಸ್ಕೃತ ಪದಗಳ ಜತೆಯಲ್ಲಿ ಸಮಾಸಗಳಾಗುತ್ತವೆ. ಉದಾ: ದಿನಮಣಿ, ಉಡೆಮಣಿ, ಕಾಂಸ್ಯತೋರಣಂ, ತಳಿರ್ದೋರಣಂ ಇತ್ಯಾದಿ.

ಸಂಸ್ಕೃತವನ್ನು ಬಿಟ್ಟರೆ ಕನ್ನಡದ ಮೇಲೆ ವಿಶೇಷ ಪ್ರಭಾವವನ್ನು ಬೀರಿದ ಭಾಷೆ ಇಂಗ್ಲಿಷ್. ದಿನನಿತ್ಯದ ಬಳಕೆಯಲ್ಲಿರುವ ಎಷ್ಟೋ ಪದಗಳನ್ನು ಕನ್ನಡ ಈ ಭಾಷೆಯಿಂದ ಸ್ವೀಕರಿಸಿದೆ. ರೈಲು, ಬಸ್ಸು, ಕೋರ್ಟು, ರೋಡು, ಪೇಪರು, ಟಿಕೀಟು, ಬ್ಯಾಂಕು, ಕಾಲೇಜು, ಟೈಮು ಇತ್ಯಾದಿ.

ಸಂಸ್ಕೃತ, ಇಂಗ್ಲಿಷ್ ಭಾಷೆಗಳನ್ನು ಬಿಟ್ಟರೆ ಮಿಕ್ಕ ಅನ್ಯ ಭಾಷಾ ಶಬ್ದಗಳು ಕನ್ನಡದಲ್ಲಿ ಕಡಿಮೆ ಪ್ರಮಾಣದಲ್ಲಿ ಆಯಾ ಕಾಲದಲ್ಲಿ ಸೇರಿಕೊಂಡಿವೆ. ಉದಾ: ದ್ರಮ್ಮ(ಡ್ರಾಕ್ಮಾ), ದೀನಾರ (ಡಿನೇರಿಯಸ್) ಮೊದಲಾದ ನಾಣ್ಯಗಳನ್ನು ಸೂಚಿಸುವ ಗ್ರೀಕ್ ಶಬ್ದಗಳು; ಚೌ-ಚೌ ಎಂಬ ಚೀನೀ ಶಬ್ದ; ಅಂದಾಜು, ಅಬ್ಕಾರಿ, ಆಮದು, ಖಯಾಲು, ತರಕಾರಿ ಮೊದಲಾದ ಪಾರಸೀ ಪದಗಳು, ಅಮಲ್, ಅಸಲು, ಅಮೀನ, ಕದೀಮ ಗರೀಬ, ಖಜಾನೆ ಮೊದಲಾದ ಅರಬ್ಬೀ ಶಬ್ದಗಳು; ಚಮಚ, ತುಪಾಕಿ, ಬೇಗಮ್ ಮೊದಲಾದ ತುರ್ಕಿ ಶಬ್ದಗಳು; ಅನಾನಸು, ಜಂಗಲ್ಲು, ತಂಬಾಕು, ಬಟಾಟೆ, ಪಪ್ಪಾಯಿ, ಮೇಜು, ಸಾಬೂನು ಮೊದಲಾದ ಪೋರ್ಚುಗೀಸ್ ಶಬ್ದಗಳು; ಕರಾರು, ಗಿರಾಕಿ, ಸರಕಾರ, ಚಾಳೀಸು, ಖರೀದಿ, ಕಛೇರಿ ಮೊದಲಾದ ಹಿಂದುಸ್ಥಾನೀ ಶಬ್ದಗಳು; ಬತ್ತೀಸ್, ತೆತ್ತೀಸ್, ದೀಡ್, ಮಂಜರ, ಬೈಲ, ಜೇವಣ, ಸೂತಿ ಮೊದಲಾದ ಮರಾಠಿ ಶಬ್ದಗಳು; ಇವಲ್ಲದೆ ಕಾಪುರ, ಪೆದ್ದ, ಸಪುರ, ಚೆದರು, ಅರಸು ಮೊದಲಾದ ಸೋದರ ದ್ರಾವಿಡ ಭಾಷಾ ಪದಗಳೂ ಕನ್ನಡದಲ್ಲಿ ಸೇರಿಕೊಂಡಿವೆ.

ಇದುವರೆಗೆ ಸೂಚಿಸಿದ ಪದಗಳಲ್ಲದೆ ವಿಕಾಸಪಥ'ದಲ್ಲಿ ಮುಂದುವರಿಯುವ ಜನ ಜೀವನದ ಸಾಂಸ್ಕೃತಿಕ ಆವಶ್ಯಕತೆಗಳಿಗನುಸಾರವಾಗಿ ಹೊಸಹೊಸ ಶಬ್ದಗಳನ್ನು ಕನ್ನಡ ಭಾಷೆ ಪೂರೈಸುತ್ತ ಇದೆ. ವಿದ್ಯುತ್, ಪರಮಾಣುಬಾಂಬು, ವಿಶ್ವವಿದ್ಯಾಲಯ, ಬಾನುಲಿ, ಆಕಾಶವಾಣಿ, ಅಂಚೆ, ತಂತಿ, ದೂರವಾಣಿ, ಕಲ್ಲೆಣ್ಣೆ, ವೃತ್ತಪತ್ರಿಕೆ, ಸಣ್ಣಕಥೆ, ಕಾದಂಬರಿ, ಕಲ್ಲಿದ್ದಲು, ಬೆಂಕಿಪೆಟ್ಟಿಗೆ ಇತ್ಯಾದಿ ಪದಗಳನ್ನು ಸೇರಿಸಿಕೊಂಡು ಕನ್ನಡ ಭಾಷೆ ತನ್ನ ಶಬ್ದಸಂಪತ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದೆ. (ಬಿ.ಆರ್.)

**ಅರ್ಥಪರಿವರ್ತನೆ** : ಕಾಲ, ದೇಶ ಮತ್ತು ಪರಿಸ್ಥಿತಿಗಳಲ್ಲುಂಟಾಗುವ ವ್ಯತ್ಯಾಸಗಳಿಗನುಗುಣವಾಗಿ ಜನಬಳಕೆಯ ಭಾಷೆಯಲ್ಲಿ ಬದಲಾವಣೆ ಯುಂಟಾಗುವುದು ಸ್ವಾಭಾವಿಕ. ಯಾವುದೇ ಭಾಷೆಯ ಚರಿತ್ರೆಯಲ್ಲಿನ ಎರಡು ಭಿನ್ನ ಕಾಲಗಳಲ್ಲಿ ಆ ಭಾಷೆಯ ಸ್ವರೂಪವನ್ನು ಪರಸ್ಪರ ಹೋಲಿಸಿ ನೋಡಿದಾಗ ಆ ಭಾಷೆಯಲ್ಲಿ ಉಂಟಾಗಿರುವ ಮಾರ್ಪಾಡುಗಳು ಗೋಚರವಾಗುತ್ತವೆ. ಲಿಖಿತ ರೂಪಕ್ಕಿಳಿಸಲ್ಪಡದ ಭಾಷೆಗಳಲ್ಲಿ ಕೇವಲ ಆಧುನಿಕ ರೂಪಗಳು ದೊರಕುವುದರಿಂದ ಅವುಗಳಲ್ಲುಂಟಾಗಿರುವ ಬದಲಾವಣೆಗಳು ತಿಳಿಯದೆ ಹೋಗುತ್ತವೆ. ಆದ್ದರಿಂದ ಮಾತನಾಡುವ ಇಂದಿನ ಭಾಷೆ ಮತ್ತು ಗ್ರಂಥಸ್ಥವಾಗಿರುವ ಹಿಂದಿನ ಭಾಷೆ - ಹೀಗೆ ಎರಡೂ ಸ್ವರೂಪಗಳು ಕಾಣಸಿಗುವ ಭಾಷೆಗಳಲ್ಲಿ ಮಾತ್ರ ಮೇಲೆ ಹೇಳಿದ ಪರಿವರ್ತನೆಗಳನ್ನು ಅಭ್ಯಸಿಸಲು ಅನುಕೂಲವಾಗುತ್ತದೆ. ಕನ್ನಡ ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ನಡೆದಿರುವ ಬದಲಾವಣೆಯನ್ನು ಗಮನಿಸಿದರೆ ಅರ್ಥ ಪರಿವರ್ತನೆ ಸ್ಪಷ್ಟವಾಗಿ ಗೋಚರವಾಗುತ್ತದೆ.

ಹಳಗನ್ನಡದ ತುಡು, ಕುಡು ಇತ್ಯಾದಿ ರೂಪದ ಪದಗಳು ಹೊಸಗನ್ನಡದಲ್ಲಿ ತೊಡು, ಕೊಡು ಎಂದಾಗಿರುವುದನ್ನು ನೋಡಿದರೆ ಪದಗಳ ಉಚ್ಚಾರಣೆಯಲ್ಲಿ ವ್ಯತ್ಯಾಸವಾಗಿರುವುದು ಕಂಡುಬರುತ್ತದೆ. ಒಂದು ಕುಲಕ್ಕೆ ಸೇರಿದ ಭಾಷೆಗಳನ್ನಾಗಲಿ ಅಥವಾ ಒಂದೇ ಭಾಷೆಯ ಉಪಭಾಷೆಗಳನ್ನಾಗಲಿ ಪರಸ್ಪರ ಹೋಲಿಸಿ ನೋಡಿದಾಗ ಕೂಡ ಈ ರೀತಿಯ ಬದಲಾವಣೆ ಗಳಾಗಿರುವುದನ್ನು ನೋಡಬಹುದು. ಕನ್ನಡದಲ್ಲಿನ ಮಗ ಎಂಬುದರ ಜ್ಞಾತಿರೂಪವಾದ ತೆಲುಗಿನ ಮಗುಡು ಎಂಬುದರ ಅರ್ಥ ಗಂಡ ಎಂದಿದೆ. ಅರ್ಥ ಪರಿವರ್ತನೆಯ ನಿಯಮವನ್ನನುಸರಿಸಿ ಕನ್ನಡದಲ್ಲಿ ಈ ಪದಕ್ಕಿರುವ ಅರ್ಥವೇ ಮೂಲಾರ್ಥವೆಂದೂ (ತಮಿಳಿನಲ್ಲಿ ಕೂಡ ಮಗನ್ ಎಂಬ ಜ್ಞಾತಿರೂಪಕ್ಕೆ ಇದೇ ಅರ್ಥ'ವಿದೆ) ತೆಲುಗಿನಲ್ಲಿ ಈ ಅರ್ಥ' ಮಾರ್ಪಾಡಾಗಿದೆ ಎಂದೂ ಹೇಳಲು ಸಾಧ್ಯವಿದೆ.

ಯಾವುದೆ ಭಾಷೆಯಲ್ಲಿನ ಪದಗಳ ಅರ್ಥದಲ್ಲಿ ತೋರಿಬರುವ ವ್ಯತ್ಯಾಸಗಳನ್ನು ಅರ್ಥಸಂಕೋಚ, ಅರ್ಥವಿಸ್ತಾರ ಮತ್ತು ಅರ್ಥಾಂತರವೆಂದು ಮೂರು ಪ್ರಭೇದಗಳಲ್ಲಿ ಪರಿಶೀಲಿಸಬಹುದು. ಮೊದಲಿಗೆ ಹೆಚ್ಚು ಪರಿಸರಗಳಲ್ಲಿ ಉಪಯೋಗವಾಗುತ್ತಿದ್ದ ಪದ ಕಾಲಕ್ರಮೇಣ ಸೀಮಿತ ಪರಿಸರಗಳಲ್ಲಿ ಉಪಯೋಗವಾಗುವಂತಾದಾಗ ಆ ಪದದ ಅರ್ಥವ್ಯಾಪ್ತಿಯಲ್ಲಿ ಸಂಕೋಚವಾಯಿತೆನ್ನಬಹುದು. ಶ್ರಾದ್ಧ ಎಂದರೆ ಶ್ರದ್ಧೆಯಿಂದ ಮಾಡುವ ಕೆಲಸ. ಆದರೆ ಈಗ ಈ ಪದದ ಅರ್ಥ ಪಿತೃದೇವತೆಗಳನ್ನು ಕುರಿತಾದ ಪೂಜಾಕರ್ಮ ಎಂದಷ್ಟೇ ಆಗಿದೆ. ಪ್ರಾಣ ಅಥ'ವಾ ಜೀವದಿಂದಿರುವ ಯಾವುದನ್ನೂ ಪ್ರಾಣಿ ಎನ್ನಬಹುದಾಗಿತ್ತು. ಈಗ ಪ್ರಾಣಿ ಎಂಬ ಪದ ಮಾನವೇತರಜೀವಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಅದನ್ನೆ ವಿಶದೀಕರಿಸುವಂತೆ ಮೂಕಪ್ರಾಣಿ ಎಂದೂ ಮನುಷ್ಯನಿಗನ್ವಯಿಸುವಾಗ ಹಸುವಿನಂಥ' ಪ್ರಾಣಿ ಎಂದೂ ಉಪಯೋಗವಾಗುತ್ತಿರುವುದನ್ನು ಗಮನಿಸಬಹುದು. ನೆಯ್ ಎಂಬ ಪದದ ಅರ್ಥ ಮೊದಲಿಗೆ ಜಿಡ್ಡು ಎಂದಿತ್ತು. ಬೆಣ್ಣೆ, ಎಣ್ಣೆ ಇತ್ಯಾದಿ ರೂಪಗಳಲ್ಲಿ ಈ ಅರ್ಥ' ಕಾಣಬರುತ್ತದೆ. ಇಂದಿನ ಆಡುಭಾಷೆಯಲ್ಲಿ ಈ ಪದದ ಅರ್ಥವ್ಯಾಪ್ತಿ ಸಂಕುಚಿತಗೊಂಡಿದೆ.

ಅರ್ಥ'ಸಂಕೋಚದಲ್ಲಿ ಕಾಣಬರುವ ವ್ಯತ್ಯಾಸಕ್ಕೆ ವಿರುದ್ಧವಾದ ಬದಲಾವಣೆ ಅರ್ಥವಿಸ್ತಾರದಲ್ಲಿ ಕಂಡುಬರುತ್ತದೆ. ಮೊದಲಿಗೆ ನಿಯತ ಪರಿಸರದಲ್ಲಿ ಉಪಯೋಗದಲ್ಲಿದ್ದ ಪದಗಳು ಹೆಚ್ಚು ಪರಿಸರಗಳಲ್ಲಿ ಉಪಯೋಗವಾಗಲಾರಂಭಿಸಿದಾಗ ಅವುಗಳ ಅರ್ಥ'ವಾಪ್ತಿಯಲ್ಲಿ ವಿಸ್ತಾರವಾಯಿತೆನ್ನಬಹುದು. ಮೊದಲಿಗೆ ಚೆಂಬು ಎಂದರೆ ತಾಮ್ರದ ಪಾತ್ರೆ ಎಂದಿತ್ತು (ಚೆನ್+ಪೊನ್=ಚೆಂಬೊನ್>ಚೆಂಬು=ಕೆಂಪು ಲೋಹ). ಆಗ ವಿಶಿಷ್ಟ ಅರ್ಥದಲ್ಲಿ ಉಪಯೋಗವಾಗುತ್ತಿದ್ದ ಈ ಪದ ಈಗ ಬೆಳ್ಳಿಯ ಚೆಂಬು, ಹಿತ್ತಾಳೆ ಚೆಂಬು ಎಂದು ಸಮಾನಾರ್ಥ ಪಡೆದಿರುವುದನ್ನು ಗಮನಿಸಬಹುದು.

ಹೀಗೆಯೇ ಎಳ್ಳಿನಿಂದ ತೆಗೆದ ಜಿಡ್ಡಿಗೆ ಮಾತ್ರ ಎಣ್ಣೆ (ಎಳ್ + ನೆಯ್) ಎನ್ನುತ್ತಿದ್ದರು. ಈಗ ಹರಳೆಣ್ಣೆ, ಕೊಬ್ಬರಿ ಎಣ್ಣೆ, ಕಡಲೆಕಾಯಿ ಎಣ್ಣೆ ಮೊದಲಾದ ರೂಪಗಳಲ್ಲಿ ಈ ಪದವನ್ನು ಉಪಯೋಗಿಸಲಾರಂಭಿಸಿದ ಮೇಲೆ ಎಳ್ಳೆಣ್ಣೆ ಎನ್ನುವುದು ತನ್ನ ಮೊದಲಿನ ಅರ್ಥವನ್ನು ಕಳೆದುಕೊಂಡು ಯಾವುದೇ ಎಣ್ಣೆಯನ್ನು ಸೂಚಿಸುವ ಪದವಾಯಿತು. ಬಾಣಕವಿಯ ಸಂಸ್ಕೃತ ಗದ್ಯಕಾವ್ಯದ

ಹೆಸರು ಕಾದಂಬರಿ ಎಂದು, ಈಗ ಕನ್ನಡದಲ್ಲಿ 'ಕಾದಂಬರಿ' ಎಂಬ ಪದ ಒಂದು ಬಗೆಯ ಸಾಹಿತ್ಯ ಪ್ರಕಾರದ ಅರ್ಥವನ್ನು ಒಳಗೊಂಡಿದೆ.

ಅರ್ಥಸಂಕೋಚ ಮತ್ತು ಅರ್ಥವಿಸ್ತಾರಗಳಲ್ಲಿ ಪಾಕ್ಷಿಕ ಬದಲಾವಣೆಯಾಗುತ್ತದೆಯಾದರೆ ಅರ್ಥಾಂತರ ಪ್ರಭೇದದಲ್ಲಿ ಮೊದಲಿನ ಅರ್ಥಕ್ಕೆ ಭಿನ್ನವಾದ ಬೇರೊಂದು ಅರ್ಥ ಸ್ಫುರಿಸುವುದು ಕಂಡುಬರುತ್ತದೆ. ಬೇರೆ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಪದಗಳಲ್ಲಿ ಈ ರೀತಿಯ ಅರ್ಥಬದಲಾವಣೆಯನ್ನು ಸುಲಭವಾಗಿ ಗಮನಿಸಲು ಸಾಧ್ಯ. ಸಮಯ ಎಂಬರ್ಥದಲ್ಲಿ ಸಂಸ್ಕೃತದಲ್ಲಿ ಬಳಕೆಯಾಗುತ್ತಿದ್ದ ಅವಸರ ಎಂಬ ಪದ ಕನ್ನಡದಲ್ಲಿ ಆತುರ ಎಂಬರ್ಥದಲ್ಲಿ ಉಪಯೋಗದಲ್ಲಿದೆ. ಹಳ್ಳಿಯವನು ಎಂಬರ್ಥದ ಗವಾರ್ ಎಂಬ ಆರ್ಯಭಾಷೆಯ ಪದಕ್ಕೆ ಕನ್ನಡದಲ್ಲಿ ಬುದ್ಧಿ ಕಡಿಮೆಯವನು ಎಂಬರ್ಥ ಕಲ್ಪಿತವಾಗಿದೆ. ಇದನ್ನೇ ಪುಷ್ಟೀಕರಿಸುವ ಅರ್ಥದಲ್ಲಿ ಹಳ್ಳಿಗವಾರ್ ಎಂಬ ಪ್ರಯೋಗ ಕೂಡ ಇದೆ. ದೆವ್ವ (ದೈವ, ಸಂಸ್ಕೃತ) ಎಂದರೆ ದೇವರು, ಈಗ ಪಿಶಾಚಿ ಎಂಬರ್ಥದಲ್ಲಿ ಬಳಕೆಯಾಗುತ್ತಿದೆ. ಹಾಗೆಯೇ ದೇವಾಲಯ ಎಂಬರ್ಥದಲ್ಲಿ ದೇಗುಲ ಎಂಬ ಪದ ಉಪಯೋಗದಲ್ಲಿತ್ತು. ಈಗ ಅದರ ಪ್ರಯೋಗ 'ಹಾಳಾಗಿರುವ ಪ್ರದೇಶ' ಎಂಬರ್ಥದಲ್ಲಿ ಬಳಕೆಯಲ್ಲಿದೆ.

ಕೆಲವು ಪದಗಳನ್ನು ಕೆಲವು ಪರಿಸರಗಳಲ್ಲಿ ಉಪಯೋಗಿಸಬಾರದೆಂಬ ಕಟ್ಟುಪಾಡಿನಿಂದಾಗಿ ಆ ಪದಗಳ ಅರ್ಥ ಸಂಕೋಚವಾಗಿರುವುದು ಕಂಡುಬರುತ್ತದೆ. ಕುಂಕುಮ ಇಲ್ಲ ಎಂದು ಹೇಳುವ ಸಂದರ್ಭದಲ್ಲಿ ಕುಂಕುಮ ಹೆಚ್ಚಿದೆ ಎನ್ನುವುದು, ದೀಪವನ್ನು ಆರಿಸು ಎಂದು ಹೇಳದೆ ದೀಪವನ್ನು ತುಂಬು ಎನ್ನುವುದು, ಬೀಳ್ಕೊಂಡು ಹೋಗುವಾಗ ಹೋಗುತ್ತೇನೆ ಎನ್ನುವ ಬದಲು ಹೋಗಿಬರುತ್ತೇನೆ ಎನ್ನುವುದು ವಾಡಿಕೆ. ಕೆಲವುಕಡೆ ಉಪ್ಪನ್ನು ಬಡಿಸು ಎಂದು ಹೇಳುವಲ್ಲಿ ಸಕ್ಕರೆ ಬಡಿಸು ಎನ್ನುವುದು, ನಾಗರಹಾವು ಎಂದು ಹೇಳದೆ ಯಜಮಾನ ಮತ್ತು ಹಾವು ಎನ್ನುವ ಸಾಮಾನ್ಯ ಪದಕ್ಕೆ ಹುಳು ಎಂದು ಹೇಳುವುದು ಕಂಡುಬರುತ್ತದೆ.

ಆಲಂಕಾರಿಕ ಪ್ರಯೋಗಗಳಿಂದಾಗಿ ಕೆಲವೊಮ್ಮೆ ಪದಗಳು ಉಪಯೋಗವಾಗುತ್ತಿದ್ದ ಪರಿಸರಗಳಲ್ಲಿ ಹೆಚ್ಚುವರಿ ಉಂಟಾಗಿ ಅರ್ಥವಿಸ್ತಾರವಾಗುತ್ತದೆ ಎನ್ನಬಹುದು. ಕುರ್ಚಿಯ ಕಾಲುಗಳು, ಸೂಜಿಯ ಕಣ್ಣು, ಗಡಿಯಾರದ ಕೈಗಳು ಎಂಬಲ್ಲಿ ಕಾಲು, ಕಣ್ಣು, ಕೈ ಎಂಬ ಪದಗಳ ಅರ್ಥದಲ್ಲಿ ವಿಸ್ತಾರವಾಗಿದೆ ಎನ್ನಲು ಸಾಧ್ಯ. ಹೀಗೆ ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆ ನಡೆಯುತ್ತಿರುವಂತೆಯೇ ಅರ್ಥದಲ್ಲಿಯೂ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಇದೊಂದು ನಿರಂತರ ಪ್ರಕ್ರಿಯೆ. (ಎಚ್.ಎಸ್.ಎ.)

**ಕನ್ನಡ ಮತ್ತು ಮೂಲದ್ರಾವಿಡ :** ಕನ್ನಡ ಭಾಷೆಯ ವ್ಯಾಕರಣ ವ್ಯವಸ್ಥೆಯ ಸ್ಥೂಲವಾದ ಪರಿಚಯವನ್ನು ಮಾಡಿಕೊಂಡಮೇಲೆ ಈಗ ಈ ಭಾಷೆ ಮೂಲದ್ರಾವಿಡದಿಂದ ಬೇರ್ಪಟ್ಟಾಗ ಏನೇನು ಬದಲಾವಣೆಗಳು ನಡೆದಿವೆ ಎಂಬುದನ್ನು ಪರಿಶೀಲಿಸಬಹುದು. ಕನ್ನಡದಲ್ಲಿ ಮೂಲದ್ರಾವಿಡದಲ್ಲಿದ್ದಂತೆ ಅ ಇ ಉ ಎ ಒ ಎಂಬ ಐದು ಹ್ರಸ್ವಸ್ವರಗಳೂ ಅವುಗಳ ದೀರ್ಘರೂಪಗಳೂ ಇವೆ. ಆದರೆ ಅವು ಬರಬಹುದಾದ ಸನ್ನಿವೇಶಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಕಾಣಬಹುದು. ಮೂಲದ್ರಾವಿಡದಲ್ಲಿ ಪದಾಂತ್ಯದಲ್ಲಿ ಅ ಇ ಉ ಗಳು ಮಾತ್ರ ಬರಬಲ್ಲವು. ಆದರೆ ಕನ್ನಡದಲ್ಲಿ ಪದಾಂತ್ಯದಲ್ಲಿ ಎ ಕೂಡ ಬರಬಹುದು. ಮೂಲ ದ್ರಾವಿಡದಲ್ಲಿ ಶಬ್ದದ ಆದ್ಯಕ್ಷರದಲ್ಲಿ ಬರುವ ಇ ಉ ಕಾರಗಳು ಕನ್ನಡದಲ್ಲಿ ಅವುಗಳ ಮುಂದೆ ಒಂದು ವ್ಯಂಜನವಿದ್ದು ಆಮೇಲೆ ಪ್ರಕೃತಿಸಾಧಕವಾದ ಮತ್ತು ಆ ಕಾರದಿಂದ ಪ್ರಾರಂಭವಾಗುವ ಪ್ರತ್ಯಯ ಪರವಾದಾಗ ಅನುಕ್ರಮವಾಗಿ ಎ ಒ ಕಾರಗಳಾಗುತ್ತವೆ. ಉದಾ: ಇರ್ ಎರಡು, ಸುಡು ಸೊಡರು ಇತ್ಯಾದಿ. ಇದೇ ರೀತಿ ಇಯಲ್ ಉಡಲ್ ಮುಂತಾದ ಶಬ್ದಗಳ ಆದಿ ಈ, ಉ ಕಾರಗಳು ಎ, ಒ ಕಾರಗಳಾಗಿ ಎಯಲು, ಒಡಲು ಎಂದಾಗಿರುವುದನ್ನು ಗಮನಿಸಬಹುದು. ಮೂಲ ದ್ರಾವಿಡದಲ್ಲಿ ಕ, ಚ, ಟ, ತ ಪ ಮತ್ತು ಱ (ವರ್ತ್ಸ್ಯಸ್ಪರ್ಶ) ಎಂಬ ಆರು ಸ್ಪರ್ಶ ವ್ಯಂಜನಗಳೂ ಞ, ಣ, ನ, ಮ ಎಂಬ ನಾಲ್ಕು ಅನುನಾಸಿಕಗಳೂ ರ ಎಂಬ ರೇಫವೂ ಲ, ಳ ಎಂಬ ಎರಡು ಪಾರ್ಶ್ವಿಕಗಳೂ ವ, ೞ, ಯ ಎಂಬ ಮೂರು ಅಂತಸ್ಥಗಳೂ ಸೇರಿ ಹದಿನಾರು ವ್ಯಂಜನಗಳಿದ್ದುವು (ಇದರ ಜೊತೆಗೆ ಆಯ್ದಂ ಎಂಬ ಮತ್ತೊಂದು ಧ್ವನಿಯೂ ಇತ್ತೆಂಬ ಕಲ್ಪನೆಗೂ ಅವಕಾಶವಿದೆ). ಕನ್ನಡದಲ್ಲಿ ಕ, ಚ, ಟ, ತ, ಪ ಎಂಬ ಐದು ಸ್ಪರ್ಶಗಳು ಘೋಷ ಮತ್ತು ಅಘೋಷಗಳಾಗಿ ಒಡೆದು ಹತ್ತು ಸ್ಪರ್ಶಗಳಾಗಿವೆ. ಮೂಲ ದ್ರಾವಿಡದಲ್ಲಿ ಈಗ ತಮಿಳಿನಲ್ಲಿರುವಂತೆ ಈ ಘೋಷ-ಅಘೋಷ ಭೇದ ಸನ್ನಿವೇಶಬದ್ಧ ಮಾತ್ರವಾಗಿತ್ತು. ಕನ್ನಡದಲ್ಲಿ ಕ, ಚ, ಟ, ತ, ಪ ಇವುಗಳಲ್ಲದೆ ಗ, ಜ, ಡ, ದ, ಬ ಇವುಗಳೂ ಪ್ರತ್ಯೇಕ ಧ್ವನಿಗಳಾದುವು. ವರ್ತ್ಸ್ಯ ಸ್ಪರ್ಶವೆನ್ನಲಾದ ಱ ಎಂಬ ವಿಶಿಷ್ಟ ಧ್ವನಿ ಸ್ವರಮಧ್ಯದಲ್ಲಿ ಶಕಟರೇಫವಾಗಿಯೂ ಉಳಿದೆಡೆಗಳಲ್ಲಿ ಮುಂದೆ ಬರುವ ಧ್ವನಿಗೆ ಅನುಸಾರವಾಗಿ ಕ, ದ ಅಥವಾ ರ ಆಗಿಯೂ ಬದಲಾವಣೆ ಹೊಂದಿದೆ. ಮೂಲ ದ್ರಾವಿಡದಲ್ಲಿ ಪದಮಧ್ಯದಲ್ಲಿ ಬರುವ ಸ್ಪರ್ಶಗಳು ಕನ್ನಡದಲ್ಲಿ ಘೋಷಸ್ಪರ್ಶಗಳಾಗಿಯೇ ಉಳಿದಿವೆ. ಆದರೆ ಪದಮಧ್ಯದ ಚ ಕಾರ ಸ ಕಾರವಾಗಿಯೂ ಪ ಕಾರ ವ ಕಾರವಾಗಿಯೂ ಪರಿಣಮಿಸಿವೆ ಎಂದು ಬೀಸು, ಕವುಚು ಮುಂತಾದ ಉದಾಹರಣೆಗಳಿಂದ ತಿಳಿಯಬಹುದು. ಅನುನಾಸಿಕಕ್ಕೆ ಪರವಾಗಿ ಬರುವ ಸ್ಪರ್ಶಗಳೂ ಮೂಲದ್ರಾವಿಡದಂತೆ ಕನ್ನಡದಲ್ಲಿಯೂ ಘೋಷವಾಗಿಯೇ ಉಳಿದಿವೆ. ಆದರೆ ಱ ಕಾರ ಮಾತ್ರ ಈ ಸನ್ನಿವೇಶದಲ್ಲಿ ದ ಕಾರವಾಗಿದೆ. ಒನ್ ಎಂಬುದು ಒಂದು ಎಂದಾಗಿದೆ. ಮೂಲದ್ರಾವಿಡದ ಸ್ಪರ್ಶವ್ಯಂಜನಗಳಲ್ಲಿ ಪ, ತ, ಚ ಮತ್ತು ಕ ಗಳು ಮಾತ್ರ ಶಬ್ದದ ಆದಿಯಲ್ಲಿ ಬಂದು ಅಘೋಷಗಳಾಗಿ ಉಚ್ಚಾರವಾಗುತ್ತಿದ್ದವು. ಕನ್ನಡದಲ್ಲಿಯೂ ಇವುಗಳಲ್ಲಿ ಹೆಚ್ಚಿನವು ಅಘೋಷಗಳಾಗಿಯೇ ಉಳಿದರೂ ಕೆಲವು ಮಾತ್ರ ಘೋಷಗಳಾಗಿಯೂ ಬದಲಾವಣೆಗೊಂಡಿವೆ. ಉದಾಹರಣೆಗೆ ದಟ್ಟ, ಜಾರು, ಗಂಡು ಮುಂತಾದ ಶಬ್ದಗಳನ್ನು ಗಮನಿಸಬಹುದು. ಆದಿ ಚ ಕಾರ ಮಾತ್ರ ಕೆಲವೆಡೆ ಸ ಕಾರವಾಗಿಯೂ (ಸೂಡು, ಸಾಲು ಇತ್ಯಾದಿ) ಕೆಲವೆಡೆ ಲೋಪವಾಗಿಯೂ ಪರಿಣಾಮಹೊಂದಿದೆ (ಉಪ್ಪು, ಆರು ಇತ್ಯಾದಿ ಶಬ್ದಗಳಲ್ಲಿ ಆದಿ ಚ ಕಾರವಿತ್ತೆಂದು ವಿದ್ವಾಂಸರ ಅಭಿಪ್ರಾಯ). ಮೂಲದ ದ್ವಿಸ್ಪರ್ಶಗಳು ಕನ್ನಡದಲ್ಲಿ ದೀರ್ಘಸ್ವರಕ್ಕೆ ಪರವಾಗಿ ಬಂದಾಗ ದ್ವಿತ್ವವನ್ನು ಕಳೆದುಕೊಂಡಿವೆ. ಹೀಗಾಗಿ ಆಟ್ಟಂ ಇದ್ದುದು ಆಟ ಆಗಿದೆ. ವರ್ತ್ಸ್ಯಸ್ಪರ್ಶವಾದ ಱ ಮೂಲದಲ್ಲಿ ದ್ವಿತ್ವ ರೂಪದಲ್ಲಿದ್ದುದು ಕನ್ನಡಕ್ಕೆ ಬರುವಾಗ ಹ್ರಸ್ವಸ್ವರದ ಪದದಲ್ಲಿ ದ್ವಿತ್ವ ಕ ಕಾರವಾಗಿಯೂ ದೀರ್ಘಸ್ವರಕ್ಕೆ ಪರವಾದಾಗ ಏಕ ತ ಕಾರವಾಗಿಯೂ ಪರಿಣಮಿಸಿದೆ. ಎ ಱೆ ಎಂದಿದ್ದುದು ಎತ್ತು ಎಂದು ಏ ಱ್ಱು ಎಂದಿದ್ದುದು ಏತ ಎಂದೂ ಆಗಿವೆ. ಮೂಲ ಯ ಕಾರ ಶಬ್ದಾದಿಯಲ್ಲಿ ಲೋಪವಾಗಿದೆ. ಯಾನಯ್ ಇದ್ದುದು ಆನೆಯಾಗಿದೆ. ಈ ಉದಾಹರಣೆಯಿಂದಲೇ ಶಬ್ದಾಂತ್ಯದಲ್ಲಿರುವ ಯ ಕಾರ ಲೋಪವಾಗಿ ಅದಕ್ಕೆ ಹಿಂದಿನ ಆ ಕಾರ ಎ ಕಾರವಾಗಿದೆ ಎಂದೂ ತಿಳಿಯಬಹುದು.

ಮೂಲದ್ರಾವಿಡದ ಕ್ರಿಯಾಧಾತುಗಳು ಏಕಾಕ್ಷರಿಗಳಾಗಿದ್ದು ಕನ್ನಡದಲ್ಲಿ ಅವುಗಳಲ್ಲಿ ಕೆಲವು ಏಕಾಕ್ಷರಿಗಳಾಗಿಯೇ ಉಳಿದು ಇನ್ನು ಕೆಲವು ಉಚ್ಚಾರಣಾ ಸೌಕರ್ಯಕ್ಕಾಗಿ ಸೇರಿದ ಉ ಕಾರದಿಂದಾಗಿಯೂ ಕೆಲವು ಪ್ರಕೃತಿಸಾಧಕ ಪ್ರತ್ಯಯಗಳನ್ನು ಸೇರಿಸಿದ್ದರಿಂದಲೂ ಎರಡು ಅಥವಾ ಮೂರು ಅಕ್ಷರಗಳನ್ನು ಪಡೆದಿವೆ. ಏಕಾಕ್ಷರಿಗಳಿಗೆ ಉದಾಹರಣೆಯಾಗಿ ತಿನ್ ಆಳ್ ಎಂಬ ಧಾತುಗಳನ್ನೂ ದ್ವ್ಯಕ್ಷರಿಗೆ ಆಡು ಕಟ್ಟು ಇತ್ಯಾದಿಗಳನ್ನೂ ತ್ರ್ಯಕ್ಷರಿಗೆ ತಿರುಗು ತುಱುಕು ಇತ್ಯಾದಿಗಳನ್ನೂ ನೋಡಬಹುದು. ಮೂಲದ್ರಾವಿಡ ಕ್ರಿಯಾಧಾತುಗಳಲ್ಲಿ ಸಕರ್ಮಕ ಅಕರ್ಮಕದ ವಿವಕ್ಷೆ ಇತ್ತೆಂದೂ ಅಕರ್ಮಕ ಪ್ರಕೃತಿಯಲ್ಲಿರುವ ಅನುನಾಸಿಕಯುಕ್ತ ಸ್ಪರ್ಶವ್ಯಂಜನ ಸಕರ್ಮಕವಾದಾಗ ದ್ವಿಸ್ಪರ್ಶವಾಗುತ್ತದೆಯೆಂದೂ ಹೇಳಬಹುದು. ಈ ಪ್ರವೃತ್ತಿ ಕನ್ನಡದಲ್ಲಿ ಸುಂದು, ಸುತ್ತು ಮುಂತಾದ ಕೆಲವು ಧಾತುಗಳಲ್ಲಿ ಉಳಿದುಕೊಂಡಿದ್ದರೂ ಹೆಚ್ಚಿನಕಡೆ ಈ ಭೇದ ಕಂಡುಬರುವುದಿಲ್ಲ. ಕ್ರಿಯಾಧಾತುಗಳಿಗೆ ಮೂಲದ್ರಾವಿಡದಲ್ಲಿ ಭೂತ ಮತ್ತು ಭವಿಷ್ಯದರ್ಥವನ್ನು ಸೂಚಿಸುವ ಎರಡು ಪ್ರತ್ಯಯಗಳಿದ್ದಿರಬೇಕು. ಅವುಗಳಲ್ಲಿ ಭವಿಷ್ಯತ್‌ಸೂಚಕಪ್ರತ್ಯಯ ಕನ್ನಡದಲ್ಲಿ ವ, ಪ ಮತ್ತು ಬ ಎಂದು ಬೇರೆ ಬೇರೆ ರೂಪದಲ್ಲಿ ಬರುತ್ತದೆ. ಕನ್ನಡದಲ್ಲಿ ಪ್ರತ್ಯೇಕವಾದ ವರ್ತಮಾನ ಕಾಲ ಹುಟ್ಟಿಕೊಂಡ ಬಗೆಯನ್ನು ಆಗಲೇ ಸೂಚಿಸಿದೆ. ಉತ್ತಮಪುರುಷ ಬಹುವಚನ ಸರ್ವನಾಮದಲ್ಲಿ ವ್ಯಾವರ್ತಕ (ಯಾರೊಡನೆ ಮಾತನಾಡುತ್ತಿರುವೆವೋ ಅವರನ್ನು ಸೇರಿಸಿ) ಮತ್ತು ಅವ್ಯಾವರ್ತಕ (ಮಾತನಾಡುತ್ತಿರುವವರನ್ನು ಬಿಟ್ಟು) ಎಂಬ ರೂಪಗಳಿದ್ದು ಕನ್ನಡದಲ್ಲಿ ಈ ವ್ಯತ್ಯಾಸ ಲೋಪವಾಗಿದೆ. (ಯು.ಪಿ.ಯು.)

**ಕನ್ನಡ ಲಿಪಿ :** ಕನ್ನಡ ಲಿಪಿ ಭಾರತ ದೇಶದ ಇತರ ಲಿಪಿಗಳಂತೆ ಕ್ರಿ.ಪೂ.3ನೆಯ ಶತಮಾನದ ಅಶೋಕನ ಬ್ರಾಹ್ಮೀ ಲಿಪಿಯಿಂದ ಉದ್ಭವಿಸಿದೆ. ಈ ಬ್ರಾಹ್ಮೀ ಲಿಪಿ ಭಾರತದಲ್ಲಿ ಇದುವರೆಗೆ ಓದಿ ಗುರುತಿಸಲ್ಪಟ್ಟಿರುವ ಅತ್ಯಂತ ಪ್ರಾಚೀನ ಲಿಪಿಯಾಗಿದೆ. ಇದಕ್ಕಿಂತ ಪ್ರಾಚೀನವಾದ ಸಿಂಧುಕೊಳ್ಳದ ಮುದ್ರೆಗಳ ಲಿಪಿಯನ್ನು ಇದುವರೆಗೆ ವಿದ್ವಾಂಸರು ಸಮರ್ಪಕವಾಗಿ ಓದಿ ಅರ್ಥ ಮಾಡಿರುವುದಿಲ್ಲ. ಅಶೋಕನ ಬ್ರಾಹ್ಮೀಲಿಪಿ ಉತ್ತರಕ್ಕೆ ಕಾಲಸಿ ಮತ್ತು ಭಾರತ-ನೇಪಾಲ ಗಡಿಯಲ್ಲಿರುವ ರುಮ್ಮಿಂದೈಯಿಂದ ದಕ್ಷಿಣಕ್ಕೆ ಕರ್ನಾಟಕದವರೆಗೂ ಪೂರ್ವಕ್ಕೆ ಒರಿಸ್ಸಾದಿಂದ ಪಶ್ಚಿಮಕ್ಕೆ ಜುನಾಗಡ ಮತ್ತು ಮುಂಬಯಿವರೆಗೂ ದೊರೆತ ಅಶೋಕನ ಧರ್ಮಶಾಸನಗಳಲ್ಲಿ ಕಂಡುಬರುತ್ತದೆ. ಕರ್ನಾಟಕದಲ್ಲಿ ಅಶೋಕನ ಬ್ರಾಹ್ಮೀಲಿಪಿಯ ಶಾಸನಗಳು ಬ್ರಹ್ಮಗಿರಿ (ಚಿತ್ರದುರ್ಗ ಜಿಲ್ಲೆ), ನಿಟ್ಟೂರು ಮತ್ತು ಉದೆಗೊಳ್ಳಂ (ಬಳ್ಳಾರಿಜಿಲ್ಲೆ), ಸನ್ನತಿ (ಗುಲ್ಬರ್ಗ ಜಿಲ್ಲೆ), ಮಸ್ಕಿ ಮತ್ತು ಕೊಪ್ಪಳ (ರಾಯಚೂರು ಜಿಲ್ಲೆ) ಈ ಸ್ಥಳಗಳಲ್ಲಿ ದೊರೆತಿವೆ. ಅಶೋಕನ ಶಾಸನಗಳ ಲಿಪಿ ಈ ಕಾಲಕ್ಕಾಗಲೇ ಪರಿಪೂರ್ಣತೆಯನ್ನು ಪಡೆದಿದ್ದು ಪ್ರಾಕೃತ ಭಾಷೆಯ ಪ್ರತಿಯೊಂದು ಶಬ್ದ ಅಥವಾ ಧ್ವನಿಗೆ ಪ್ರತ್ಯೇಕವಾದ ಅಕ್ಷರ ಅಥವಾ ಸಂಜ್ಞೆಯನ್ನು ಅದರಲ್ಲಿ ಕಲ್ಪಿಸಲಾಗಿದೆ. ಈ ಲಿಪಿ ಎಡದಿಂದ ಬಲಕ್ಕೆ ಬರೆಯಲ್ಪಟ್ಟಿದ್ದು ಅದರಲ್ಲಿಯ ಸರಳ, ಸುಂದರ ಅಕ್ಷರಗಳು ಸುಲಭವಾಗಿ ಗುರುತಿಸುವಂತಿವೆ. ಈ ಅಕ್ಷರಗಳಿಗೆ ತಲೆಕಟ್ಟು ಇರುವುದಿಲ್ಲ. ಥ, ಪ, ಮ, ವ, ಲ, ಹ ಮುಂತಾದ ಅಕ್ಷರಗಳ ಬುಡಕಟ್ಟು ದುಂಡಾಗಿರುತ್ತವೆ. ಸಂಸ್ಕೃತ ಭಾಷೆಯ ಋಕಾರ, ವಿಸರ್ಗ, ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯಗಳನ್ನು ನಿರ್ದೇಶಿಸುವ ಸಂಜ್ಞೆಗಳಿರುವುದಿಲ್ಲ. ಅದರಂತೆ ಪದಾದಿಯ ದೀರ್ಘ ಈ ಕಾರವಿಲ್ಲ.

ಅಶೋಕನ ಬ್ರಾಹ್ಮೀ ಲಿಪಿ ಮುಂದೆ 3ನೆಯ ಶತಮಾನದವರೆಗೆ ಶುಂಗ, ಕುಷಾಣ, ಕ್ಷತ್ರಪ, ಸಾತವಾಹನ ಮುಂತಾದ ಅರಸರ ಶಾಸನಗಳಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ವಿಕಾಸ ಹೊಂದಿರುತ್ತದೆ. ಕುಷಾಣ ಕಾಲದ ಲಿಪಿಯ ಅಕ್ಷರಗಳು ಕಡಿಮೆ ಎತ್ತರವಾಗಿಯೂ ಅಗಲವಾಗಿಯೂ ದಪ್ಪವಾಗಿಯೂ ಇರುತ್ತವೆ. ಕ್ಷತ್ರಪ ಹಾಗೂ ಸಾತವಾಹನರ ಕಾಲದ ಲಿಪಿಗಳೂ ಹೆಚ್ಚು ಕಡಿಮೆ ಇವೇ ವೈಶಿಷ್ಟ್ಯಗಳನ್ನೊಳಗೊಂಡಿವೆ.

ಕರ್ನಾಟಕದಲ್ಲಿ ಬ್ರಾಹ್ಮೀ ಲಿಪಿಯ ಮುಂದಿನ ಹಂತವನ್ನು 2-3ನೆಯ ಶತಮಾನದ ಮಳವಳ್ಳಿ ಮತ್ತು ಬನವಾಸಿಯ ಸಾತಕರ್ಣಿಯ ಶಾಸನಗಳಲ್ಲಿ ಹಾಗೂ ಮ್ಯಾಕದೋನಿಯಾ (ಬಳ್ಳಾರಿ ಜಿಲ್ಲೆ) ಪುಳುಮಾವಿಯ ಶಾಸನದಲ್ಲಿ ಕಾಣುತ್ತೇವೆ. ಇಲ್ಲಿಯೂ ಕೆಲವು ಅಕ್ಷರಗಳ ಎತ್ತರ ಕಡಿಮೆಯಾಗಿದ್ದು ಕೆಲವು ಅಕ್ಷರಗಳಿಗೆ ತ್ರಿಕೋಣಾಕೃತಿಯುಳ್ಳ ತಲೆಕಟ್ಟು ಇರುತ್ತದೆ. ಅಗಲವಾದ ತುದಿಯುಳ್ಳ ಲೇಖನಿಯನ್ನು ಉಪಯೋಗಿಸಿದ್ದರಿಂದ ಇಂಥ ತಲೆಕಟ್ಟುಗಳು ತಲೆದೋರಿವೆಯೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಅ, ಕ, ರ ಮುಂತಾದ ಅಕ್ಷರಗಳ ಲಂಬ ರೇಖೆಯ ಕೆಳಭಾಗ ವೃತ್ತಾಕಾರವಾಗಿ ಎಡಗಡೆ ಹೊರಳಿದೆ. ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬ ಸ್ಥಳದಲ್ಲಿ ದೊರೆತ 3ನೆಯ ಶತಮಾನದ ಶಾಸನಗಳಲ್ಲಿಯ ಕೆಲವು ಅಕ್ಷರಗಳು ಆಂಧ್ರ ಪ್ರದೇಶದ ನಾಗಾರ್ಜುನಕೊಂಡದ ಇಕ್ಷ್ವಾಕು ಅರಸರ ಶಾಸನಗಳ ಅಕ್ಷರಗಳಂತೆ ಸುಂದರವಾಗಿಯೂ ಅಲಂಕಾರಯುತವಾಗಿಯೂ ಇವೆ.

4-5ನೆಯ ಶತಮಾನದ ಕದಂಬ ಅರಸರ ಶಾಸನಗಳಲ್ಲಿ ಕಂಡುಬರುವ ಕನ್ನಡ ಲಿಪಿ ಮುಂದಿನ ಬೆಳೆವಣಿಗೆಗೆ ತಳಹದಿಯಾಗಿದೆಯೆಂದು ಹೇಳಬಹುದು. ಈ ಕಾಲದಿಂದ ಕರ್ನಾಟಕದಲ್ಲಿ ಬಾಳಿ ಬೆಳಗಿದ ಗಂಗ, ಬಾದಾಮಿಯ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ಕಳಚುರಿ, ಯಾದವ, ಹೊಯ್ಸಳ ಮತ್ತು ವಿಜಯನಗರದ ಅರಸರ ಸಾವಿರಾರು ಶಾಸನಗಳು ದೊರೆತಿದ್ದರಿಂದ ಕನ್ನಡ ಲಿಪಿಯ ಅವಿಚ್ಛಿನ್ನವಾದ ಬೆಳೆವಣಿಗೆಯನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಕದಂಬ ಕಾಲದ ಲಿಪಿಯ ಮುಖ್ಯವಾದ ವೈಶಿಷ್ಟ್ಯವೆಂದರೆ ಕೆಲವು ಶಾಸನಗಳ ಅಕ್ಷರಗಳಲ್ಲಿ ಕಂಡುಬರುವ ಚೌಕಾಕೃತಿಯ ತಲೆಕಟ್ಟು, ಇಂಥ ತಲೆಕಟ್ಟು ಇದೇ ಕಾಲದ ಗುಪ್ತ ಅರಸರ ಮಾಳವದಲ್ಲಿರುವ ಶಾಸನಗಳಲ್ಲೂ ವಾಕಾಟಕ ಅರಸರ ಮಧ್ಯಪ್ರದೇಶದಲ್ಲಿರುವ ಶಾಸನಗಳಲ್ಲೂ ಕಂಡುಬರುತ್ತದೆ. ಈ ತಲೆಕಟ್ಟು ಪೆಟ್ಟಿಗೆಯ ಆಕಾರದ್ದಿರುವುದರಿಂದ ಇಂಥ ಅಕ್ಷರಗಳಿಗೆ ಪೆಟ್ಟಿಗೆಯ ತಲೆಕಟ್ಟುಳ್ಳ ಅಕ್ಷರಗಳೆಂದು ಹೇಳುವುದುಂಟು. ಕದಂಬ ಲಿಪಿಯ ಅಕ್ಷರಗಳು ಎತ್ತರದಲ್ಲಿ ಕಡಿಮೆಯಿದ್ದು ಹೆಚ್ಚಿಗೆ ದುಂಡಾಗುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಇದರಲ್ಲಿ ಸಂಸ್ಕೃತ ಭಾಷೆಯ ವಿಸರ್ಗ, ಜಿಹ್ವಾಮೂಲೀಯ, ಉಪಧ್ಮಾನೀಯ ಮುಂತಾದುವನ್ನು ಸೂಚಿಸುವ ಸಂಜ್ಞೆಗಳನ್ನೂ ಕನ್ನಡ ಭಾಷೆಯ ಱ ೞ ಮುಂತಾದುವನ್ನು ಸೂಚಿಸುವ ಸಂಜ್ಞೆಗಳನ್ನೂ ಸೇರಿಸಲಾಗಿದೆ. 6-8ನೆಯ ಶತಮಾನದಲ್ಲಾಳಿದ ಬಾದಾಮಿ ಚಳುಕ್ಯರ ಶಾಸನಗಳಲ್ಲಿ ಕನ್ನಡ ಲಿಪಿಯ ಮುಂದಿನ ಬೆಳೆವಣಿಗೆಯನ್ನು ಕಾಣುತ್ತೇವೆ. ಈ ಲಿಪಿಯಲ್ಲಿ ಅಕ್ಷರಗಳ ತಲೆಕಟ್ಟು ಬಹು ಚಿಕ್ಕದಾದ ಸರಳರೇಖೆಯಿಂದೊಡಗೂಡಿರುತ್ತದೆ. ಕೆಲವು ಶಾಸನಗಳಲ್ಲಿ ಕ ಮತ್ತು ರ ಅಕ್ಷರಗಳ ಲಂಬರೇಖೆಯ ಎಡಭಾಗ ಮೇಲಕ್ಕೆ ಹೋಗಿ ಮೇಲ್ಭಾಗದ ಅಡ್ಡಗೆರೆಗೆ ಹೊಂದಿಕೊಂಡಿರುತ್ತದೆ. 8-10ನೆಯ ಶತಮಾನದ ರಾಷ್ಟ್ರಕೂಟರ ಶಾಸನಗಳಲ್ಲಿ ಪದಾದಿಯ ಅ ಮತ್ತು ಇ ಅಕ್ಷರಗಳು ಹೆಚ್ಚಿನ ಬೆಳೆವಣಿಗೆಯನ್ನು ವ್ಯಕ್ತಪಡಿಸುತ್ತವೆ.

ಕನ್ನಡ ಲಿಪಿ 10-12ನೆಯ ಶತಮಾನಗಳಲ್ಲಿ ಕಲ್ಯಾಣದ ಚಾಳುಕ್ಯರ ಶಾಸನಗಳಲ್ಲಿ ವಿಶೇಷ ಬದಲಾವಣೆಯನ್ನು ಹೊಂದಿತು. ಇದು ಲಿಪಿ ಬೆಳೆವಣಿಗೆಯ ಒಂದು ಮುಖ್ಯವಾದ ಹಂತ. ಈ ಕಾಲದ ಅಕ್ಷರಗಳು ಇನ್ನಷ್ಟು ದುಂಡಾಗಿದ್ದು ಆಧುನಿಕ ಕನ್ನಡ ಲಿಪಿಯ ಅಕ್ಷರಗಳ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ. ಉದಾಹರಣೆಗಾಗಿ ಕ ರ ಯ ಮುಂತಾದ ಅಕ್ಷರಗಳ ಮೈಕಟ್ಟು ಹೆಚ್ಚುಕಡಿಮೆ ಈಗಿನಂತೆಯೇ ಇದೆ. ಕೆಲವು ಅಕ್ಷರಗಳ ತಲೆಕಟ್ಟು ಕೋನಾಕೃತಿಯುಳ್ಳದ್ದಾಗಿದೆ. ಚ ವ ಮ ಮುಂತಾದ ಅಕ್ಷರಗಳ ತಲೆಕಟ್ಟಿನ ಭಾಗ ಎರಡು ಭಾಗವಾಗಿ ಬೇರ್ಪಡೆಯಾಗಿದ್ದು ತಲೆಕಟ್ಟು ಬಲಭಾಗದ ರೇಖೆಗೆ ಹೊಂದಿಕೊಂಡಿರುತ್ತದೆ. ಅನೇಕ ಅಕ್ಷರಗಳ ತಲೆಕಟ್ಟು ಸ್ವಲ್ಪವಾಗಿ ಎದ್ದು ಕಾಣುವಂತಿದೆ.

ಮುಂದೆ 12-13ನೆಯ ಶತಮಾನಗಳಲ್ಲಿ ಹೊಯ್ಸಳ ಅರಸರ ಅನೇಕ ಶಾಸನಗಳನ್ನು ನುಣುಪಾದ ಕಲ್ಲಿನ ಹಲಗೆಗಳ ಮೇಲೆ ಅಲಂಕಾರಯುತವಾಗಿಯೂ ಕಲಾತ್ಮಕವಾಗಿಯೂ ಬರೆಯಲಾಗಿದ್ದು ಅಲ್ಲಿಯ ಅಕ್ಷರಗಳು ಬಹು ಸುಂದರವಾಗಿ ಕಾಣುತ್ತವೆ. ಈ ಅಕ್ಷರಗಳನ್ನು ಸ್ಪಷ್ಟವಾಗಿಯೂ ಹೆಚ್ಚು ದುಂಡಾಗಿಯೂ ಬರೆಯಲಾಗಿದೆ. ಇಲ್ಲಿ ಕನ್ನಡ ಲಿಪಿ ಊರ್ಜಿತಾವಸ್ಥೆಯನ್ನು ಹೊಂದಿದೆಯೆಂದು ಹೇಳಬಹುದು. ಆದರೆ ಮುಂದಿನ ಎರಡು ಮೂರು ಶತಮಾನಗಳ ಕಾಲದಲ್ಲಿ ಅಂದರೆ 14-16ನೆಯ ಶತಮಾನಗಳ ವಿಜಯನಗರ ಅರಸರ ಶಾಸನಗಳಲ್ಲಿ ಅಕ್ಷರಗಳನ್ನು ಡೊಂಕುಡೊಂಕಾಗಿ ಬರೆಯಲಾಗಿದ್ದು ಅವುಗಳ ಜೋಡಣೆಯ ವಿಷಯದಲ್ಲಿ ಅಷ್ಟು ಗಮನವನ್ನಿತ್ತಿಲ್ಲ. ಆದುದರಿಂದ ಕಲ್ಯಾಣದ ಚಾಳುಕ್ಯ ಹಾಗೂ ಹೊಯ್ಸಳರ ಕಾಲದ ಲಿಪಿಯ ಅಕ್ಷರಗಳಂತೆ ವಿಜಯನಗರ ಕಾಲದ ಲಿಪಿಯ ಅಕ್ಷರಗಳು ಅಂದವಾಗಿ ಕಾಣುವುದಿಲ್ಲ. ಆದರೂ ಈ ಕಾಲದ ಲಿಪಿಯ ಅಕ್ಷರಗಳು ಕನ್ನಡ ಲಿಪಿಯ ಬೆಳೆವಣಿಗೆಯ ದೃಷ್ಟಿಯಿಂದ ಗಮನಾರ್ಹವಾಗಿವೆ. ಅ ಇ ಣ ಷ ಳ ಮುಂತಾದ ಅಕ್ಷರಗಳು ಈಗಿನ ರೂಪುಗಳನ್ನು ಹೆಚ್ಚಾಗಿ ಹೋಲುತ್ತವೆ. ದ ಡ ಪ ಮುಂತಾದ ಅಲ್ಪಪ್ರಾಣದ ಅಕ್ಷರಗಳಿಗೆ ಕೆಳಗಡೆ ಒಂದು ರೇಖೆಯನ್ನು ಸೇರಿಸಿ ಧ ಢ ಫ ಮುಂತಾದ ಮಹಾಪ್ರಾಣಗಳ ಸಂಜ್ಞೆಗಳನ್ನು ಸೂಚಿಸಲಾಗಿದೆ. ಇದುವರೆಗೆ ಅಕ್ಷರಗಳ ಮೇಲ್ಭಾಗದಲ್ಲಿ ಒಂದು ಚುಕ್ಕೆ ಅಥವಾ ಚಿಕ್ಕ ಬಿಂದುವಿನಿಂದ ಸೂಚಿಸಲ್ಪಡುತ್ತಿದ್ದ ಅನುಸ್ವಾರವನ್ನು ಆಯಾ ಅಕ್ಷರಗಳ ಬಲಗಡೆಗೆ ಅಕ್ಷರಗಳಷ್ಟೇ ಗಾತ್ರದ ಸೊನ್ನೆಯಿಂದ ತೋರಿಸಲಾಗಿದೆ.

18ನೆಯ ಶತಮಾನದಲ್ಲಿ ಮೈಸೂರು ಅರಸರ ಕಾಲದಲ್ಲಿ ಕನ್ನಡ ಲಿಪಿ ವಿಜಯನಗರ ಕಾಲದ ಅಕ್ಷರಗಳ ಕೆಲವು ಲಕ್ಷಣಗಳನ್ನು ಉಳಿಸಿಕೊಂಡಿದ್ದರೂ ಆಧುನಿಕ ಕನ್ನಡ ಲಿಪಿಗೆ ಬಹಳ ಹತ್ತಿರವಾಗಿ ತೋರುತ್ತದೆ.

ಇತ್ತೀಚೆಗೆ ಮುದ್ರಣ ಬಂದ ಮೇಲೆ ಇತರ ಲಿಪಿಗಳಂತೆ ಕನ್ನಡ ಲಿಪಿಯೂ ಒಂದು ಸ್ಥಿರತೆಯನ್ನು ಹೊಂದಿದ್ದರಿಂದ ಹೆಚ್ಚಿನ ವಿಕಾಸಕ್ಕೆ ಆಸ್ಪದವಿಲ್ಲದಂತಾಗಿದೆ. ಆದರೂ ಮುದ್ರಣದ ಲಿಪಿಯಲ್ಲಿ ಸಹ ಕಾಲಕಾಲಕ್ಕೆ ಕೆಲವು ಸುಧಾರಣೆಗಳನ್ನು ಮಾಡಿಕೊಂಡು ಹೆಚ್ಚಿನ ಅಂದವಾದ ಅಕ್ಷರಗಳನ್ನು ಅಚ್ಚುಹಾಕುತ್ತಿರುವುದನ್ನು ನೋಡಬಹುದು.

ಕನ್ನಡ ಲಿಪಿಯ ಒಂದು ವೈಶಿಷ್ಟ್ಯವೆಂದರೆ ಪ್ರಾಚೀನ ಕಾಲದಿಂದಲೂ ಕಾಗುಣಿತಾಕ್ಷರದ ಹ್ರಸ್ವ ಮತ್ತು ದೀರ್ಘ ಎ ಮತ್ತು ಏಕಾರಗಳನ್ನು ಹಾಗೂ


ರಾಜವಂಶ
ಕಾಲ
ಅ ಆ ಇ ಈ ಉ ಎ ಏ ಒ ಔ ಕ ಖ ಗ ಘ ಚ ಛ ಜ ಝ ಞ ಟ
1 ಕ್ರಿ.ಪೂ. ಸು. 450
2 ಮೌರ್ಯ ಕ್ರಿ.ಪೂ. 250
3 ಕ್ರಿ.ಪೂ. 200
4 ಕ್ಷತ್ರಪ ಕ್ರಿ.ಪೂ. 150
5 ಕಳಿಂಗ ಕ್ರಿ.ಪೂ. 150
6 ಕ್ರಿ.ಪೂ. 150
7 ಆಂಧ್ರ
8 ಕ್ಷತ್ರಪ 150
9 ಆಂಧ್ರ 150
10 ಕದಂಬ 1ನೆಯ ಶತಮಾನ
11 ಆಂಧ್ರ 150
12 ಕದಂಬ 250
13 ಗುಪ್ತ ಸು. 375
14 ಕದಂಬ 450
15 ಕದಂಬ ಸು. 450
16 ಗಂಗ ಸು. 550
17 ಚಳುಕ್ಯ 543
18 ಚಳುಕ್ಯ 578
19 ಚಳುಕ್ಯ 634
20 ಚಳುಕ್ಯ ಸು. 740
21 ಗಂಗ 726
22 ಗಂಗ 750
23 ರಾಷ್ಟ್ರಕೂಟ 812
24 ರಾಷ್ಟ್ರಕೂಟ 881
25 ಗಂಗ 921
26 ನೊಳಂಬ
27 ಚಾಳುಕ್ಯ 1094
28 ಹೊಯ್ಸಳ 1117
29 ಹೊಯ್ಸಳ 1224
30 ವಿಜಯನಗರ 1368
31 ವಿಜಯನಗರ 1538
32 ಪಾಳೇಗಾರ 1698
33 ಮೈಸೂರು 1724
34 ಮೈಸೂರು 1825

ಕನ್ನಡಲಿಪಿಯ ವಿಕಾಸ




ಆಧಾರ: ಕರ್ನಾಟಕ ಪರಂಪರೆ

ಒ ಮತ್ತು ಓ ಕಾರಗಳನ್ನು ಒಂದೇ ಸಂಜ್ಞೆಯಿಂದ ಸೂಚಿಸುತ್ತಿದ್ದು ಅವುಗಳಲ್ಲಿಯ ಹ್ರಸ್ವ ಮತ್ತು ದೀರ್ಘ ವರ್ಣಗಳ ಭೇದವನ್ನು ಸಂದರ್ಭಾನುಸಾರವಾಗಿ ತಿಳಿದುಕೊಳ್ಳಬೇಕಾಗಿತ್ತು. ಇತ್ತೀಚೆಗೆ ಅಂದರೆ 17-18ನೆಯ ಶತಮಾನದಿಂದೀಚೆಗೆ ಮಾತ್ರ ಕಾಗುಣಿತಾಕ್ಷರದ ದೀರ್ಘ ಏ ಕಾರ, ದೀರ್ಘ ಓ ಕಾರ ಮತ್ತು ದೀರ್ಘ ಈ ಕಾರಗಳನ್ನು ಆಯಾ ಅಕ್ಷರಗಳ ಬಲಗಡೆ ಕೊಂಡಿಯುಳ್ಳ ಒಂದು ರೇಖೆಯಿಂದ ಸೂಚಿಸಲಾಗಿದೆ.

4-5ನೆಯ ಶತಮಾನದಿಂದ 13-14ನೆಯ ಶತಮಾನದವರೆಗೆ ಕರ್ನಾಟಕ ಮತ್ತು ಆಂಧ್ರಪ್ರದೇಶದ ಶಾಸನಗಳಲ್ಲಿ ಸುಮಾರು ಒಂದೇ ಮಾದರಿಯ ಲಿಪಿಯನ್ನು ಉಪಯೋಗಿಸಿದ್ದುದರಿಂದ ಇವೆರಡೂ ಭಾಗದ ಲಿಪಿಗಳಿಗೆ ಕನ್ನಡ-ತೆಲುಗು ಲಿಪಿಯೆಂದು ಹೇಳುವುದುಂಟು. ಅದರಲ್ಲೂ ವಿಶೇಷವಾಗಿ ಬಾದಾಮಿಯ ಚಳುಕ್ಯ, ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಳುಕ್ಯರ ಕಾಲದ ಕನ್ನಡ-ತೆಲುಗು ಲಿಪಿ ಒಂದೇ ಸ್ವರೂಪದ್ದಾಗಿದೆಯೆಂದು ಹೇಳಬಹುದು. 14-15ನೆಯ ಶತಮಾನಗಳಲ್ಲಿ ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಕೆಲವು ವ್ಯತ್ಯಾಸಗಳು ತಲೆದೋರಿದ್ದು ಮುಂದಿನ ಎರಡು ಮೂರು ಶತಮಾನಗಳಲ್ಲಿ ಗಮನಾರ್ಹವಾದ ಭೇದಗಳು ಕಂಡುಬರುತ್ತವೆ. ಆದರೂ ಅಲ್ಪ ಪ್ರಯತ್ನದಿಂದ ಕನ್ನಡಿಗರು, ತೆಲುಗು ಲಿಪಿಯನ್ನೂ ಅದರಂತೆ ಆಂಧ್ರರು ಕನ್ನಡ ಲಿಪಿಯನ್ನೂ ಸುಲಭವಾಗಿ ತಿಳಿಯಬಹುದು. ಬಾದಾಮಿಯ ಚಳುಕ್ಯರ ಕಾಲದಲ್ಲಿ ಕನ್ನಡ ಲಿಪಿ ಮಹಾರಾಷ್ಟ್ರ ಮತ್ತು ಗುಜರಾತ್ ಪ್ರಾಂತ್ಯಗಳಲ್ಲಿಯೂ ಪ್ರಚಲಿತವಿದ್ದು ಮುಂದೆ ನಾಗರೀಲಿಪಿ ಅಲ್ಲಿ ಬಳಕೆಗೆ ಬಂತು.

ಕನ್ನಡ ಲಿಪಿ ಸುಮಾರು ಎರಡು ಸಾವಿರ ವರ್ಷಕ್ಕೂ ಹೆಚ್ಚಿನ ಪರಂಪರೆಯುಳ್ಳದ್ದು. ಒಂದು ಲಿಪಿಯ ಹುಟ್ಟು ಮತ್ತು ಬೆಳವಣಿಗೆ ಅದನ್ನು ಉಪಯೋಗಿಸುವ ಜನರ ಸಂಸ್ಕೃತಿಯ ಪ್ರತೀಕವಾಗಿರುತ್ತದೆ. ಒಂದು ಆದರ್ಶ ಲಿಪಿಯಲ್ಲಿ ಪ್ರತಿಯೊಂದು ಶಬ್ದದ ಉಚ್ಚಾರಣೆಗೆ ಅಸಂದಿಗ್ಧವಾದ ಸಂಜ್ಞೆಯಿರಬೇಕು. ಬರೆದಂತೆ ಓದುವಂತಿರಬೇಕು. ಓದಿದಂತೆ ಬರೆಯುವಂತೆಯೂ ಇರಬೇಕು. ಅಂದರೆ ಉಚ್ಚಾರಿತ ಅಕ್ಷರ ಹಾಗೂ ಲಿಖಿತ ವರ್ಣ ಇವುಗಳ ಸಂಬಂಧ ಸಂಪೂರ್ಣವಿರಬೇಕು. ಈ ದೃಷ್ಟಿಯಿಂದ ವಿಚಾರಿಸಿದರೆ ಕನ್ನಡ ಲಿಪಿ ಪರಿಪೂರ್ಣತೆಯನ್ನು ಪಡೆದಿದೆಯೆಂದು ಹೇಳಬಹುದು. ಈ ಲಿಪಿಯಲ್ಲಿ ಸ್ವರ ಮತ್ತು ವ್ಯಂಜನಗಳು ಪೂರ್ಣವಾಗಿದ್ದು ಆರ್ಯ ಮತ್ತು ದ್ರಾವಿಡ ಭಾಷೆಗಳ ಧ್ವನಿಗಳನ್ನು ಕೊರತೆಯಿಲ್ಲದೆ ಸೂಚಿಸಲಿಕ್ಕೆ ಉಪಯುಕ್ತವಾದ ಸಂಕೇತಗಳಿವೆ. ವ್ಯಂಜನಾಕ್ಷರಗಳೊಡನೆ ಸ್ವರಗಳ ಸುಂದರವಾದ ಸಂಯೋಗವಿದೆ. ಹೀಗೆ ಕನ್ನಡ ಲಿಪಿ ಅಶೋಕನ ಬ್ರಾಹ್ಮೀಲಿಪಿಯಿಂದ ಉದ್ಭವಿಸಿ ಕಾಲಕ್ರಮದಲ್ಲಿ ಅನೇಕ ಮಾರ್ಪಾಟುಗಳನ್ನು ಹೊಂದಿ ವೈವಿಧ್ಯಪೂರ್ಣವಾದ ವಿಕಾಸವನ್ನು ಪಡೆದು ಸಾಹಿತ್ಯ ಸಂಸ್ಕೃತಿಗಳ ಹಿರಿಮೆಯನ್ನು ವ್ಯಕ್ತಪಡಿಸುತ್ತದೆ. ಈಚೆಗೆ ಪರಭಾಷೆಯ ಪದಗಳನ್ನು ಎರವಲಾಗಿ ತೆಗೆದುಕೊಳ್ಳಬೇಕಾದ ಅಗತ್ಯ ಒದಗಿಬಂದುದರಿಂದ father, faisal, zoo ಮೊದಲಾದವನ್ನು ಬರೆಯಲು ವಿಶಿಷ್ಟ ಸಂಜ್ಞೆಗಳನ್ನು ಬಳಸಲಾಗುತ್ತಿದೆ. ಉದಾ: ಫಾದರ್, ಫೈಸಲ್, ಜೂ, ಹೀಗೆ. (ಜಿ.ಎಸ್.ಜಿ.)

**ಕನ್ನಡ ವಾಮನ :** ಸು.1870-1925. ಹೊಸಗನ್ನಡ ಸಾಹಿತ್ಯದ ಉದಯ ಕಾಲದ ಒಬ್ಬ ಕವಿ. ಪೂರ್ಣ ಹೆಸರು ಉಪೇಂದ್ರ ಹಣಮಂತ ಕುಲಕರ್ಣಿ. ಇವರು ಬಾಗಲಕೋಟೆಯ ಹತ್ತಿರದ ತೋಳಮಟ್ಟಿಯವರು. ಇವರ ಆರಾಧ್ಯದೈವ ಬಾಗಲಕೋಟೆಯ ಹತ್ತಿರದ ಯಲಗುಂದದ ಶ್ರೀ ಹಣಮಂತ ದೇವರು. ಆ ಕಾಲಕ್ಕೆ ಮರಾಠಿಯಲ್ಲಿ ಪ್ರಸಿದ್ಧವಾದ ಯಮಕ್ಯಾ ವಾಮನ ಎಂಬವನನ್ನು ಅನುಸರಿಸಿ ಇವರು ಕನ್ನಡ ವಾಮನ ಎಂದು ಹೆಸರಿಟ್ಟುಕೊಂಡಂತೆ ಕಾಣುತ್ತದೆ. ಇವರು ಧಾರವಾಡದ ಶಿಕ್ಷಣ ತರಬೇತಿ ಕಾಲೇಜಿನಲ್ಲಿ ಶಿಕ್ಷಣ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾದರು. ಕೆಲವು ಕಾಲ ಬಾಗಲಕೋಟೆಯ ಹತ್ತಿರದ ಮುರನಾಳದಲ್ಲಿ ಕನ್ನಡ ಶಾಲಾಶಿಕ್ಷಕರೂ ಅಲ್ಲಿಯ ಸಹಕಾರಿ ಸಂಘದ ಕಾರ್ಯದರ್ಶಿಗಳೂ ಆಗಿದ್ದರು. ಇವರು ಹಲವು ಗದ್ಯ ಪ್ರಬಂಧಗಳನ್ನೂ ಹೆಚ್ಚಾಗಿ ಬಿಡಿಕವನಗಳನ್ನೂ ಬರೆದರು. ಪ್ರಾಸರಹಿತವಾದ 1000 ಪದ್ಯಗಳನ್ನೂ ಪ್ರಾಸಸಹಿತವಾದ 2000 ಪದ್ಯಗಳನ್ನೂ ತಾವು ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ಇವರ ಕವನಗಳು ಹೆಚ್ಚಾಗಿ ಶುಭೋದಯ, ಸಚಿತ್ರ ಭಾರತ, ಕರ್ನಾಟಕ ವೈಭವ, ಶಾಲಾಪತ್ರಕ, ವಾಗ್ಭೂಷಣ, ಪ್ರಭಾತ, ಕರ್ನಾಟಕ ವೃತ್ತ, ಕರ್ನಾಟಕ ಧನಂಜಯಗಳಲ್ಲಿ ಪ್ರಕಟವಾಗಿವೆ.

ಇವರು ಕಾವ್ಯ ಪ್ರಪಂಚಕ್ಕೆ ಸಲ್ಲಿಸಿದಸೇವೆ ಮೂರು ವಿಧದಲ್ಲಿ ಮನನೀಯವಾಗಿದೆ. 1 ಪ್ರಾಸರಹಿತವಾಗಿ ಕಾವ್ಯವನ್ನು ಬರೆಯಲು ಬರುತ್ತದೆಂಬುದನ್ನು ಹಿಂದೆಯೇ ತೋರಿಸಿಕೊಟ್ಟದ್ದು. ಇವರು ಬರೆದ ಪೃಥ್ವೀರಾಜ ಎಂಬ ಖಂಡಕಾವ್ಯ ಪ್ರಾಸರಹಿತವಾಗಿದೆ. 2 ಕಾವ್ಯ ರಚನೆಗೆ ವಿಶಿಷ್ಟವಾದ ಕಾವ್ಯವಸ್ತುಗಳೇ ಬೇಕೆಂದೇನಿಲ್ಲ. ಇವರು ಕಲ್ಲಿಮೀಸೆ, ಪಂಚೆ, ಗ್ರಾಮೀಣ ಜನರಾದ ಗೌಡ ಕುಲಕರಣಿಯರ ಬಗ್ಗೆ ಕವನಗಳನ್ನು ರಚಿಸಿದ್ದಾರೆ. 3 ಪ್ರಾಯಶಃ ಹಳೆಯ ತಲೆಮಾರಿನಲ್ಲಿ ಪ್ರಾದೇಶಿಕ ಉಲ್ಲೇಖಗಳನ್ನು ತಂದವರೂ ಇವರೇ ಎಂದು ಕಾಣುತ್ತದೆ. ತೋಳಮಟ್ಟಿ, ಯಲಗುರ, ಬಾಗಲಕೋಟೆ ಮೊದಲಾದ ಸ್ಥಳಗಳ ವರ್ಣನೆಗಳೂ ಸೊಲಬಣ್ಣ ಮೊದಲಾದ ವ್ಯಾಪಾರಸ್ಥರ ಉಲ್ಲೇಖಗಳೂ ಇವರ ಕವನದಲ್ಲಿ ಬರುತ್ತವೆ. ಇವರು ಕೆರೂರ ವಾಸುದೇವಾಚಾರ್ಯರ ನಿಧನದ ಕಾಲಕ್ಕೆ ಬರೆದ ಒಂದು ಕವಿತೆ ಭಾವಪೂರ್ಣವಾಗಿದೆ. (ಆರ್.ವೈ.ಡಿ.)

**ಕನ್ನಡ ವಿಶ್ವವಿದ್ಯಾಲಯ :** ಕನ್ನಡ ನಾಡು, ನುಡಿ, ಸಂಸ್ಕೃತಿಗಳ ವಿಶೇಷ ಅಧ್ಯಯನಕ್ಕಾಗಿ 1991ರಲ್ಲಿ ಸ್ಥಾಪಿತವಾದ ಒಂದು ವಿಶ್ವವಿದ್ಯಾಲಯ. ಕನ್ನಡದ ಕೆಲಸಗಳು ವಿವಿಧ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಕೇಂದ್ರಗಳು, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿವಿಧ ಅಕಾಡೆಮಿಗಳ ಮೂಲಕ ನಡೆಯುತ್ತಿದ್ದರೂ ಕನ್ನಡ ನಾಡುನುಡಿಯ ಬಗ್ಗೆ, ಕನ್ನಡ ಭಾಷಾ ಪುರೋಭಿವೃದ್ಧಿಯ ಬಗ್ಗೆ ಆಳವಾದ ಕೆಲಸ ಕಾರ್ಯಗಳು ನಡೆಯಬೇಕೆಂಬ ಮಹೋದ್ದೇಶದಿಂದ ಕರ್ನಾಟಕ ಸರ್ಕಾರ ಈ ವಿಶ್ವವಿದ್ಯಾಲಯವನ್ನು ಅಸ್ತಿತ್ವಕ್ಕೆ ತಂದಿತು. ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಮಹತ್ತ್ವವುಳ್ಳ ಹಂಪೆಯ ಪರಿಸರದಲ್ಲಿ ಈ ವಿಶ್ವವಿದ್ಯಾಲಯ ನೆಲೆಗೊಂಡಿದೆ. ಹಂಪಿಯ ಹೊರವಲಯದಲ್ಲಿರುವ ಈ ವಿಶ್ವವಿದ್ಯಾಲಯದ ಆವರಣಕ್ಕೆ ವಿದ್ಯಾರಣ್ಯವೆಂದು ಹೆಸರಿದೆ. ವಿಜಯನಗರ ಕಾಲದ ವಿಶಿಷ್ಟ ವಾಸ್ತುಶೈಲಿಯಲ್ಲಿ ಕಟ್ಟಡಗಳನ್ನು ರೂಪಿಸಲಾಗಿದೆ. ಇಲ್ಲಿನ ಕಟ್ಟಡಗಳನ್ನು ರೂಪಿಸಿದವರು ವಾಸ್ತುಶಿಲ್ಪಿ ಲಾರಿ ಬೇಕರ್ ಅವರ ಶಿಷ್ಯ ಗೋವಾದ ಡಿಕುನ್ಹಾ ಮತ್ತು ಗುಲ್ಬರ್ಗದ 'ಆಕೃತಿ' ವಾಸ್ತುಶಿಲ್ಪಿಗಳು. ಇವರೊಂದಿಗೆ ನವದೆಹಲಿಯ ವಿನ್ಯಾಸ್ ಆರ್ಕಿಟೆಕ್ಟ್ಸ್‌ನ ಕಬೀರ್ ವಾಜಪೇಯಿ, ತಮಿಳುನಾಡಿನ ಸ್ಥಪತಿ ಗಣಪತಿಯವರ ಶಿಷ್ಯವರ್ಗದವರು ಕನ್ನಡ ವಿಶ್ವವಿದ್ಯಾಲಯದ ಬೇರೆ ಬೇರೆ ವಿನ್ಯಾಸ ರಚನೆಗೆ ಕಾರಣರಾಗಿದ್ದಾರೆ.

ಗಿರಿಸೀಮೆಯ ಚಾವಡಿ

ಸು.650 ಎಕರೆ ಪ್ರದೇಶವನ್ನೊಳಗೊಂಡ ವಿಸ್ತಾರವಾದ ಆವರಣವನ್ನು ಹೊಂದಿರುವ ಕನ್ನಡ ವಿಶ್ವವಿದ್ಯಾಲಯ ತಂಜಾವೂರಿನ ತಮಿಳು ವಿಶ್ವವಿದ್ಯಾಲಯ ಹಾಗೂ ಹೈದರಾಬಾದಿನ ತೆಲುಗು ವಿಶ್ವವಿದ್ಯಾಲಯಗಳ ಅಂತಃಪ್ರೇರಣೆಯಿಂದ ರೂಪಿತಗೊಂಡಿತು. ಕನ್ನಡದ ಅತ್ಯಂತ ಪ್ರಾಚೀನ ಶಾಸನವೆನಿಸಿರುವ ಹಲ್ಮಿಡಿ ಶಾಸನದ ಮೇಲ್ಭಾಗದ ಮಾದರಿಯ ಕೆತ್ತನೆಯನ್ನು ಬಳಸಿ ವಿಶ್ವವಿದ್ಯಾಲಯದ ಲಾಂಛನವನ್ನು ರೂಪಿಸಲಾಗಿದೆ. ಮಾತೆಂಬುದು ಜ್ಯೋತಿರ್ಲಿಂಗ ಈ ಲಾಂಛನದ ಧ್ಯೇಯ ವಾಕ್ಯ.

ಕರ್ನಾಟಕ ಸಂಸ್ಕೃತಿಯ ಶೋಧನೆ, ಪ್ರಸಾರ ಹಾಗೂ ಸಂರಕ್ಷಣೆ ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ. ಮೇಲ್ನೋಟಕ್ಕೆ ಇದು ಕರ್ನಾಟಕದ ಭೌಗೋಳಿಕ ವ್ಯಾಪ್ತಿಗೆ ಸೀಮಿತ ಅನ್ನಿಸಿದರೂ ಕನ್ನಡ ಭಾಷೆ ಮತ್ತು ಸಂಸ್ಕೃತಿ ಕುರಿತಾದ ಯಾವುದೇ ವಿಷಯವೂ ಈ ವಿಶ್ವವಿದ್ಯಾಲಯದ ಪರಿಧಿಯಲ್ಲಿ ಬರುತ್ತದೆ. ಸಮಗ್ರ ಕನ್ನಡ ಸಂಸ್ಕೃತಿಯ ಅಧ್ಯಯನ, ಸಂಶೋಧನೆ ಹಾಗೂ ಪ್ರಕಟಣೆ ವಿಶ್ವವಿದ್ಯಾಲಯದ ಮುಖ್ಯ ಗುರಿ. ಇಲ್ಲಿ ಇತರ ವಿಶ್ವವಿದ್ಯಾಲಯಗಳಲ್ಲಿರುವಂತೆ ಬೋಧನೆ ಇರುವುದಿಲ್ಲ. ಸಂಶೋಧನೆಯೇ ಪ್ರಧಾನ. ಸಂಶೋಧನೆಗೆ ಒತ್ತು ನೀಡಿರುವಂತೆಯೇ ಎಂ.ಫಿಲ್; ಡಿ.ಲಿಟ್ ಹಾಗೂ ಪಿಎಚ್.ಡಿ.; ಎಂ.ಎ.ಪಿಎಚ್.ಡಿ. ಗಳಂಥ ಸಂಶೋಧನ ಪದವಿಗಳನ್ನೂ ಪ್ರದಾನ ಮಾಡಲಾಗುತ್ತದೆ. ಕನ್ನಡ ನಾಡುನುಡಿಗೆ ವಿಶೇಷವಾಗಿ ಶ್ರಮಿಸಿದವರನ್ನು ಗುರುತಿಸಿ ನಾಡೋಜ ಗೌರವ ಪದವಿಯನ್ನೂ ನೀಡಲಾಗುತ್ತಿದೆ. ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮವನ್ನು ನುಡಿಹಬ್ಬ ಎಂದು ಕರೆಯಲಾಗುತ್ತದೆ. ಅಧ್ಯಯನ, ಸಂಶೋಧನೆ, ಆಡಳಿತ ಮುಂತಾದ ಉದ್ದೇಶಗಳಿಗೆ ಪ್ರತ್ಯೇಕ ಕಟ್ಟಡಗಳಿದ್ದು ಅವುಗಳನ್ನು ಪರಂಪರೆಯ ವಿಶಿಷ್ಟ ಹೆಸರುಗಳಿಂದ ಕರೆಯಲಾಗಿದೆ. 'ಕ್ರಿಯಾಶಕ್ತಿ' ಆಡಳಿತ ಕಟ್ಟಡವಾಗಿದ್ದರೆ, 'ಕೂಡಲ ಸಂಗಮ' ಭಾಷಾಂತರ ಹಾಗೂ ದ್ರಾವಿಡ ಸಂಸ್ಕೃತಿ ಅಧ್ಯಯನ ಕಟ್ಟಡ. ಕನ್ನಡ ಭಾಷಾಭಿವೃದ್ಧಿ, ಶಾಸನ ವಿಭಾಗಗಳು 'ತುಂಗಭದ್ರಾ'ದಲ್ಲಿದೆ. ಮಹಿಳಾ ಅಧ್ಯಯನ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಗಳು 'ತ್ರಿಪದಿ' ಕಟ್ಟಡದಲ್ಲಿವೆ. ಪುಸ್ತಕ ಪ್ರಕಟಣಾಲಯಕ್ಕೆ 'ಕಾರ್ಯಕ'ವೆನ್ನಲಾಗಿದೆ. ಗ್ರಂಥಾಲಯವನ್ನು 'ಅಕ್ಷರ'ವೆಂದೂ ಇತಿಹಾಸ, ಪುರಾತತ್ತ್ವ ವಿಭಾಗಗಳಿಗೆ 'ಘಟಿಕಾಲಯ'ವೆಂದೂ ವಿಚಾರ ಸಂಕಿರಣ, ಸಂಗೀತ, ನೃತ್ಯ ಪ್ರದರ್ಶನ ಸ್ಥಳಕ್ಕೆ 'ಭುವನ ವಿಜಯ'ವೆಂದೂ ನಾಟಕದ ಬಯಲು ರಂಗಭೂಮಿಗೆ 'ನವರಂಗ'ವೆಂದೂ ಅಧ್ಯಯನಾಂಗಕ್ಕೆ 'ಜಕ್ಕಣ ಮಂಟಪ'ವೆಂದೂ ಹೆಸರಿಸಿದೆ. 'ಮಾನಸೋಲ್ಲಾಸ' ಕುಲಪತಿಗಳ ನಿವಾಸದ ಹೆಸರಾಗಿದ್ದರೆ 'ನಿತ್ಯೋತ್ಸವ' ಅಧ್ಯಾಪಕರ ವಸತಿ ಸಂಕೀರ್ಣದ ಹೆಸರಾಗಿದೆ. ಅತಿಥಿ ಗೃಹಕ್ಕೆ 'ಶ್ರೀಶೈಲ' ವೆಂದು ಹೆಸರು. ವಿವಿಧ ಬುಡಕಟ್ಟುಗಳ ವಾಸ್ತುವಿನ್ಯಾಸವನ್ನು ಅಳವಡಿಸಿಕೊಂಡಿರುವ ಅಧ್ಯಯನ ವಿಭಾಗಗಳಿವೆ. ಗಿರಿಸೀಮೆ, ಚಾವಡಿ, ಹಾಲಕ್ಕಿ, ಒಕ್ಕಲಿಗರ ಮನೆ, ದೀವರ ಮನೆ, ಸಿದ್ದಿಯರ ಮನೆ, ಕುಣಬಿಯರ ಮನೆ, ಗೊಂಡರ ಮನೆ, ಸೋಲಿಗರ ಮನೆ, ಕಾಡು ಮತ್ತು ಜೇನು ಕುರುಬರ ಮನೆ, ಮಲೆಕುಡಿಯರ ಮನೆ ಮುಂತಾದವು ಆಯಾ ಬುಡಕಟ್ಟುಗಳ ವಿಶಿಷ್ಟ ಮನೆ ಮಾದರಿಗಳ ಪ್ರತಿರೂಪಗಳಾಗಿವೆ.

ವಿಶ್ವವಿದ್ಯಾಲಯದಲ್ಲಿ ದಾನಿಗಳಿಂದ ದತ್ತಿ ಪಡೆದು ವಿವಿಧ ವಿಷಯಗಳಲ್ಲಿ ಅಧ್ಯಯನ ನಡೆಸಲಾಗುತ್ತಿದೆ. ಇವುಗಳಲ್ಲಿ ಶಂಬಾ ಜೋಶಿ ಅಧ್ಯಯನ ಪೀಠ, ರಾಮಮನೋಹರ ಲೋಹಿಯಾ ಅಧ್ಯಯನ ಪೀಠ, ದಲಿತ ಸಂಸ್ಕೃತಿ ಅಧ್ಯಯನ ಪೀಠ, ಪುರಂದರದಾಸ ಅಧ್ಯಯನ ಪೀಠ, ಕೆ.ವಿ.ತಿರುಪಾಲಕ್ಷಪ್ಪ ದತ್ತಿ ಪೀಠ, ಶ್ರೀಮತಿ ಅಲ್ಲಂ ಸುಮಂಗಳಮ್ಮ ಮತ್ತು ಶ್ರೀ ಅಲ್ಲಂ ಕರಿಬಸಪ್ಪ ದತ್ತಿ ನಿಧಿ, ಕೆ.ಎಲ್.ಇ. ಸೊಸೈಟಿ, ದತ್ತಿ ನಿಧಿ, ಬೆಳಗಾಂವಿ, ಹಿರೇಹಾಳ್ ಇಬ್ರಾಹಿಂ ದತ್ತಿ ನಿಧಿ, ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ ದತ್ತಿ ನಿಧಿ ಹಾಗೂ ಶ್ರೀಮತಿ ಉಮಾದೇವಿ ಕಲಬುರ್ಗಿ ಮಹಿಳಾ ಕ್ಷೇಮನಿಧಿ ಮುಖ್ಯವಾದವು. ಇವುಗಳ ಮೂಲಕ ದತ್ತಿ ಉಪನ್ಯಾಸಗಳು, ಪ್ರಕಟಣೆ, ಶೈಕ್ಷಣಿಕ, ಸಾಂಸ್ಕೃತಿಕ ವ್ಯಕ್ತಿಗಳಿಗೆ ಸನ್ಮಾನ ಮುಂತಾದವನ್ನು ನಡೆಸಲಾಗುತ್ತದೆ.

ದೂರಶಿಕ್ಷಣ ಕಾರ್ಯಕ್ರಮವನ್ನೂ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದು ಇದರಲ್ಲಿ ಕರ್ನಾಟಕ ಅಧ್ಯಯನ, ಕ್ರಿಯಾತ್ಮಕ ಕನ್ನಡ, ದಲಿತ ಅಧ್ಯಯನ, ಪುರಾತತ್ತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಮತ್ತು ಮಹಿಳಾ ಅಧ್ಯಯನಗಳನ್ನು ಸ್ನಾತಕೋತ್ತರ ಡಿಪ್ಲೊಮಾಗಳೆಂದೂ ಆಡಳಿತ ಕನ್ನಡ, ಜನಪದ ಕಲೆಗಳು ಇವನ್ನು ಮೆಟ್ರಿಕ್ ಅನಂತರದ ಡಿಪ್ಲೊಮಾಗಳೆಂದೂ ನಡೆಸಲಾಗುತ್ತಿದೆ.

ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಪುರಾತತ್ತ್ವ, ಜಾನಪದ, ಬುಡಕಟ್ಟು ಮುಂತಾದವನ್ನು ಪ್ರದರ್ಶಿಸುವ ಇಲ್ಲಿನ ವಸ್ತುಸಂಗ್ರಹಾಲಯವನ್ನು 1994ರಲ್ಲಿ ಆರಂಭಿಸಲಾಯಿತು. ಬಿತ್ತರ ಎಂಬ ಮಾಹಿತಿಕೇಂದ್ರ ಕನ್ನಡ ಪತ್ರಿಕೆಗಳಿಗೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹೊಂದಿದೆ. ವಿಶ್ವವಿದ್ಯಾಲಯದ ಪ್ರಸಾರಾಂಗ ಕಳೆದ ಹತ್ತು ವರ್ಷಗಳಲ್ಲಿ 550ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ (2003). ಜೊತೆಗೆ ಪುಸ್ತಕ ಮಾಹಿತಿ, ಚೆಲುವ ಕನ್ನಡ, ವಿಜ್ಞಾನ ಸಂಗಾತಿ, ಕನ್ನಡ ಅಧ್ಯಯನ ಹಾಗೂ ಮಹಿಳಾ ಅಧ್ಯಯನ ಎಂಬ ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ. ವಿಶ್ವವಿದ್ಯಾಲಯದ ಮುಖ್ಯ ಪ್ರಕಟಣೆಗಳಲ್ಲಿ ವೃತ್ತಿಪದಕೋಶ, ಬುಡಕಟ್ಟು ಹಾಗೂ ಜನಪದ ಮಹಾಕಾವ್ಯಗಳು, ಶಾಸನ ಸಂಪುಟಗಳು, ಬಿಡಿ ವಿಶ್ವಕೋಶಗಳು, ಕರ್ನಾಟಕ ಚರಿತ್ರೆಯ ಸಂಪುಟಗಳು, ದೇವಾಲಯ ಕೋಶಗಳು ಮುಖ್ಯವಾದವು.

ಜ್ಞಾನ ಪ್ರಸಾರ ಕಾರ್ಯಕ್ಕೆ ಅನುಕೂಲವಾಗುವಂತೆ ಮಂಟಪ ಮಾಲೆ, ವಿಶೇಷ ಉಪನ್ಯಾಸ ಮಾಲೆ, ಮೂಲಭೂತ ಉಪನ್ಯಾಸ ಮಾಲೆ ಹಾಗೂ ಉಪೇಕ್ಷಿತ ಸಾಹಿತ್ಯ ಮಾಲೆಗಳಂಥ ಉಪನ್ಯಾಸ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗಾಗಿ ವಿಶ್ವವಿದ್ಯಾಲಯ ಆಯೋಜಿಸಿದೆ. 'ನವಸಾಕ್ಷರ ಮಾಲೆ' ಅಕ್ಷರ ಕಲಿಸುವ ಪ್ರಯತ್ನವಾಗಿದೆ. ಪುಸ್ತಕ ಪ್ರೀತಿಯನ್ನು ಜನರಲ್ಲಿ ಹುಟ್ಟಿಸುವ ಕಾರಣದಿಂದ ಪುಸ್ತಕ ಸಂಸ್ಕೃತಿ ಯಾತ್ರೆಯನ್ನು ಕೈಗೊಳ್ಳುವ ವಿಶ್ವವಿದ್ಯಾಲಯ ಜನರ ಬಳಿಗೆ ವಿಚಾರ ಸಾಮಗ್ರಿಯನ್ನು ಒಯ್ಯುತ್ತದೆ. ಅಧ್ಯಯನ ಕಮ್ಮಟ, ಶಿಬಿರ, ವಿಶೇಷ ಉಪನ್ಯಾಸ, ವಿಚಾರ ಸಂಕಿರಣಗಳನ್ನು ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ಮುಂತಾದ ಎಲ್ಲ ವಿಷಯಗಳಲ್ಲೂ ಹಮ್ಮಿಕೊಂಡು ಕರ್ನಾಟಕದ ವೈವಿಧ್ಯಮಯ ಸಮಾಜ, ಸಂಸ್ಕೃತಿ ಹಾಗೂ ಬಹುಮುಖ ಜ್ಞಾನವನ್ನು ಒಂದು ಸೂರಿನ ಅಡಿಯಲ್ಲಿ ಜಗತ್ತಿಗೆ ಪರಿಚಯಿಸುತ್ತಿದೆ. 2001ರಲ್ಲಿ ವಿಶ್ವವಿದ್ಯಾಲಯ ದಶ ಮಾನೋತ್ಸವವನ್ನು ಆಚರಿಸಿಕೊಂಡಿತು. ಗಡಿನಾಡ ಕನ್ನಡ, ನೆಲ ಜಲ ಸಂರಕ್ಷಣೆ, ಅಖಂಡ ಕರ್ನಾಟಕದ ಕಲ್ಪನೆ, ಪರಿಸರ ಜಾಗೃತಿ, ಕನ್ನಡ ಪ್ರಜ್ಞೆಯ ಜಾಗೃತಿ ಮುಂತಾದವುಗಳ ಬಗ್ಗೆ ಕನ್ನಡ ವಿಶ್ವವಿದ್ಯಾಲಯ ಗಂಭೀರ ಪ್ರಯತ್ನಗಳನ್ನು ನಡೆಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿ ಚಂದ್ರಶೇಖರ ಕಂಬಾರ (1991-97). ಅನಂತರ ಎಂ.ಎಂ.ಕಲಬುರ್ಗಿ (1997-99), ಎಚ್.ಜೆ.ಲಕ್ಕಪ್ಪಗೌಡ ಕುಲಪತಿಗಳಾಗಿದ್ದರು (1999-03). ಬಿ.ಎ.ವಿವೇಕ ರೈ ಈಗಿನ ಕುಲಪತಿ (2004). (ಎಸ್.ಬಿಎಚ್.ಎ.)

**ಕನ್ನಡ ಶೀಘ್ರಲಿಪಿ :** ಕನ್ನಡ ಶೀಘ್ರಲಿಪಿ ಇಂಗ್ಲಿಷ್ ಶೀಘ್ರಲಿಪಿಯಂತೆಯೇ ಕನ್ನಡ ಬೆರಳಚ್ಚಿನ ಯಂತ್ರಗಳು ಬಳಕೆಗೆ ಬರುವುದಕ್ಕಿಂತ ಬಹಳ ಹಿಂದಿನಿಂದಲೇ ರೂಢಿಯಲ್ಲಿತ್ತು.




ಕನ್ನಡ ಶೀಘ್ರಲಿಪಿಯ ನಮೂನೆ

ಇದರ ಇತಿಹಾಸ ಸು.1906ರಿಂದ ಪ್ರಾರಂಭವಾಗುತ್ತದೆ. ಆ ವರ್ಷದಲ್ಲಿ ರೆವರೆಂಡ್ ಬಿ.ಲೂಥಿ ಎಂಬುವರು 'ಕನ್ನಡ ಹಿಡಿನುಡಿ' ಎಂಬ ಸಂಕ್ಷಿಪ್ತ ಲಿಪಿಕ್ರಮವನ್ನು ರೂಢಿಸಿ, ಮಂಗಳೂರಿನ ಬಾಸೆಲ್ ಮಿಷನ್ ಬುಕ್

ಮತ್ತು ಟ್ರ್ಯಾಕ್ಟ್ ಡಿಪಾಸಿಟರಿ ಸಂಸ್ಥೆಯ ವತಿಯಿಂದ ಪ್ರಕಟಿಸಿದ್ದರೆಂದೂ ಆದರೆ ಪ್ರಯೋಗದಲ್ಲಿ ಅದರಿಂದ ಕನ್ನಡ ಭಾಷಣಗಳನ್ನು ಮಾತನಾಡುವ ವೇಗಕ್ಕನುಸಾರವಾಗಿ ಬರೆದುಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲವಾಗಿ ಅದು ಜನಪ್ರಿಯವಾಗಲಿಲ್ಲವೆಂದೂ ತಿಳಿದುಬರುತ್ತದೆ.

ಸು.1924ರಲ್ಲಿ ಚತುರ್ಭಾಷಾ ಶೀಘ್ರಲಿಪಿವಿಶಾರದರಾದ ವೆಲ್ಲೂರಿನ ರಾವ್ ಸಾಹೇಬ್ ಶ್ರೀನಿವಾಸರಾಯರು ಕ್ಯಾನರೀಸ್ ಶಾರ್ಟ್‌ಹ್ಯಾಂಡ್ ಮ್ಯಾನ್ಯುಯಲ್ ಎಂಬ ಪ್ರಥಮ ಪುಸ್ತಕವನ್ನು ಪ್ರಕಟಿಸಿದರು.

ಸ್ವಾತಂತ್ರ್ಯ ಸಂಗ್ರಾಮ ಪ್ರಖರವಾಗುತ್ತಿದ್ದ ಆ ಕಾಲದಲ್ಲಿ ಹಲವು ದೇಶಭಕ್ತರು ದೇಶಪ್ರೇಮದ ವಿಷಯದಲ್ಲಿ ಕೆಲವು ವೇಳೆ ಬ್ರಿಟಿಷರ ವಿರುದ್ಧ ಮಾಡುತ್ತಿದ್ದ ಭಾಷಣಗಳನ್ನು ವರದಿ ಮಾಡಬೇಕಾಗಿದ್ದುದರಿಂದ ಆಗಿನ ಮೈಸೂರು, ಹೈದರಾಬಾದು ಮತ್ತು ಬೊಂಬಾಯಿ ಸರ್ಕಾರದವರು, ಪೊಲೀಸ್ ಅಧಿಕಾರಿಗಳನ್ನು ವೆಲ್ಲೂರಿನ ಪೊಲೀಸ್ ತರಬೇತಿ ಶಾಲೆಗೆ ಕಳುಹಿಸುತ್ತಿದ್ದರು. ಅಲ್ಲಿ ಶ್ರೀನಿವಾಸರಾವ್ ಅವರಿಂದ ರಚಿತವಾದ ಕನ್ನಡ ಶೀಘ್ರಲಿಪಿಯನ್ನು ಬೋಧಿಸಲಾಗುತ್ತಿತ್ತು. ಅವರ ಶೀಘ್ರಲಿಪಿ ಕ್ರಮ ಇಂಗ್ಲಿಷ್ ಭಾಷೆಗೆ ಸೂಕ್ತವಾದ ಪಿಟ್‌ಮನ್‌ರ ಕ್ರಮದಂತೆಯೇ ಇತ್ತು. ಅಲ್ಲದೆ ಕನ್ನಡಕ್ಕೆ ಹೊಂದಿಸಲು ವಿಪುಲಸೂತ್ರಗಳನ್ನು ರೂಪಿಸಿ ಕೊಂಡಿದ್ದರೂ ಕೆಲವು ಪದಗಳ ಶೀಘ್ರಲಿಪಿಯ ವಿನ್ಯಾಸ ತೊಡಕಾಗಿದ್ದರಿಂದ ಕನ್ನಡ ಭಾಷಣಗಳನ್ನು ಪೂರ್ಣವಾಗಿ ಅಕ್ಷರಶಃ ಬರೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ವೇಗ ಸಾಲುತ್ತಿರಲಿಲ್ಲ. ಈ ಕಾರಣದಿಂದ 1933ರಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮುಖ್ಯ ವರದಿಗಾರರಾಗಿದ್ದ ಎಸ್. ದೇವರಾವ್ ಅವರು ಪಿಟ್‌ಮನ್ ಪದ್ಧತಿಯಿಂದ ಭಿನ್ನವಾದ ತಮ್ಮದೆ ಆದ ಶೀಘ್ರಲಿಪಿಯನ್ನು ರಚಿಸಿ, ಕೆಲವರಿಗೆ ಬೋಧಿಸಿ, ತರಪೇತು ಕೊಟ್ಟರು. ಮೈಸೂರು ಮತ್ತು ಬೊಂಬಾಯಿ ಸರ್ಕಾರಗಳು ಇದಕ್ಕೆ ಮನ್ನಣೆ ಇತ್ತುವು. ದೇವರಾಯರು ರಚಿಸಿದ 'ಎ ಮ್ಯಾನ್ಯುಯಲ್ ಆಫ್ ಕನ್ನಡ ಶಾರ್ಟ್‌ಹ್ಯಾಂಡ್' ಪುಸ್ತಕವನ್ನು ಮೈಸೂರು ಸರ್ಕಾರ ಪ್ರಕಟಿಸಿತು. ಈ ಶೀಘ್ರಲಿಪಿ ಮೈಸೂರು ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆ ಮೊದಲಾದೆಡೆಗಳಲ್ಲಿ ಬಳಕೆಯಾಗುತ್ತಿತ್ತು.

ದೇವರಾಯರ ಶೀಘ್ರಲಿಪಿಯನ್ನು ಕಲಿತವರು ಇಂಗ್ಲಿಷ್ ಶೀಘ್ರಲಿಪಿಯನ್ನು ಕಲಿಯಲು ಸಾಧ್ಯವಾಗುತ್ತಿರಲಿಲ್ಲ. ಕಾರಣವೇನೆಂದರೆ ಪಿಟ್‌ಮನ್ನರ ಇಂಗ್ಲಿಷ್ ಶೀಘ್ರಲಿಪಿಯ ಅಕ್ಷರಗಳಿಗೂ ದೇವರಾಯರ ಕನ್ನಡ ಶೀಘ್ರಲಿಪಿಯ ಅಕ್ಷರಗಳಿಗೂ ಬಹಳ ವ್ಯತ್ಯಾಸವಿತ್ತು. ಇಂಗ್ಲಿಷ್ ಶೀಘ್ರಲಿಪಿಯ ಪ ಅಕ್ಷರ ದೇವರಾಯರ ಶೀಘ್ರಲಿಪಿಯ ಪ್ರಕಾರ ಷ ಕಾರವನ್ನು ಸೂಚಿಸುವುದು. ಹೀಗೆ ಅಕ್ಷರಗಳಲ್ಲಿಯೇ ಅನೇಕ ವ್ಯತ್ಯಾಸಗಳಿದ್ದವು. ಈ ನ್ಯೂನತೆಯನ್ನು ಮನಗಂಡು, ಬ್ರೈಟ್ ವಾಣಿಜ್ಯ ವಿದ್ಯಾ ಕಾಲೇಜಿನ ಪ್ರಿನ್ಸಿಪಾಲರಾದ ಕೆ.ಸೀತಾರಾಮರಾವ್ ಮತ್ತು ಅವರ ಸಹೋದರರಾದ ಎಸ್.ಸುಬ್ಬರಾವ್ ಅವರು ಇಂಗ್ಲಿಷ್ ಶೀಘ್ರಲಿಪಿಯಷ್ಟೇ ವೇಗವನ್ನು ಗಳಿಸಬಹುದಾದ ಒಂದು ಪದ್ಧತಿಯನ್ನು ರಚಿಸಲು ಉದ್ದೇಶಿಸಿದರು. ಸು.1944ರ ವೇಳೆಗೆ ಸೀತಾರಾಮರಾವ್ ಅವರು ಸುಪ್ರಸಿದ್ಧ ಪಿಟ್‌ಮನ್ ಪದ್ಧತಿಯನ್ನು ಮೂಲಾಧಾರವಾಗಿಟ್ಟುಕೊಂಡು ಇಂಗ್ಲಿಷ್ ಒಕ್ಕಣೆಯನ್ನೊಳಗೊಂಡ ಕನ್ನಡ ಶೀಘ್ರಲಿಪಿ ಪುಸ್ತಕವೊಂದನ್ನು ಪ್ರಕಟಿಸಿದರು. ಈ ಪದ್ಧತಿ ಆ ಕಾಲಕ್ಕೆ ಕೊರತೆಯಿಂದ ಮುಕ್ತವಾಗಿದ್ದರೂ ಹಲವರು ಅಭ್ಯಾಸಮಾಡಿ ಆಚರಣೆಗೆ ತಂದಿದ್ದರೂ ಪ್ರೋತ್ಸಾಹದ ಅಭಾವದಿಂದಾಗಿ ವ್ಯಾಪಕವಾಗಿರಲಿಲ್ಲ. ನಲವತ್ತರ ದಶಕದ ಅಂತ್ಯದ ಹೊತ್ತಿಗೆ ಅಂದಿನ ಮೈಸೂರು ಸರ್ಕಾರದ ಪ್ರಜಾಪ್ರತಿನಿಧಿಸಭೆ ಸೀತಾರಾಮರಾಯರ ಪದ್ಧತಿಯನ್ನು ಅನುಸರಿಸುವ ಕನ್ನಡ ಶೀಘ್ರಲಿಪಿಕಾರರನ್ನೂ ನೇಮಿಸಿಕೊಳ್ಳಬಹುದೆಂದು ಒಂದು ನಿರ್ಣಯವನ್ನು ಕೈಕೊಂಡಿತ್ತು. ಅಂದಿನಿಂದ ಸೀತಾರಾಮರಾಯರ ಕನ್ನಡ ಶೀಘ್ರಲಿಪಿ ದಿನೇ ದಿನೇ ಪ್ರಾಮುಖ್ಯಕ್ಕೆ ಬರಲು ಪ್ರಾರಂಭವಾಯಿತು. ತತ್ಪರಿಣಾಮವಾಗಿ ಕನ್ನಡ ಶೀಘ್ರಲಿಪಿಗೆ ಸಂಬಂಧಿಸಿದ ಪುಸ್ತಕಗಳು ಅಲ್ಲೊಂದು ಇಲ್ಲೊಂದರಂತೆ ಇಣುಕತೊಡಗಿದ್ದವು. 1969 ಮತ್ತು 1972ರ ವೇಳೆಗೆ ಬೆಂಗಳೂರಿನ ಸಿದ್ಧರಾಜು ಮತ್ತು ಹೆಬ್ಬಾರ್ ಅವರು ತಮ್ಮ ಪುಸ್ತಕಗಳನ್ನು ಈ ದಿಶೆಯಲ್ಲಿ ಕ್ರಮವಾಗಿ ಹೊರತಂದರು.

1974ರಲ್ಲಿ ಸೀತಾರಾಮರಾಯರು ತಮ್ಮ ಕನ್ನಡ ಶೀಘ್ರಲಿಪಿಯ ಪುಸ್ತಕದ ಸರ್ವ ಹಕ್ಕನ್ನೂ ಕರ್ನಾಟಕ ವಾಣಿಜ್ಯ ವಿದ್ಯಾಶಾಲೆಗಳ ಸಂಘಕ್ಕೆ ಮಾರಿಬಿಟ್ಟರು. ಈ ಸಂಘ ಹೆಬ್ಬಾರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ, ಕನ್ನಡ ಶೀಘ್ರಲಿಪಿಯ ಪಠ್ಯಪುಸ್ತಕವನ್ನು ರಚಿಸಿ ಪ್ರಕಟಿಸಿತು. ರಾಜ್ಯದ ಹಲವು ವಾಣಿಜ್ಯ ಶಿಕ್ಷಣ ಸಂಸ್ಥೆಗಳು ಈ ಪದ್ಧತಿಯನ್ನು ಅನುಸರಿಸಿದವು. ವಿದ್ಯಾಇಲಾಖೆ ಪ್ರತಿವರ್ಷವೂ ಮೂರು ಹಂತಗಳಲ್ಲಿ ಪರೀಕ್ಷೆ ನಡೆಸುತ್ತಿದೆ. (ಎಸ್.ಆರ್.,ಬಿ.ಎಸ್.ಬಿ.)

**ಕನ್ನಡ ಸಂಶೋಧನ ಸಂಸ್ಥೆ :** ಹಿಂದಿನ ಬೊಂಬಾಯಿ ಪ್ರಾಂತ್ಯದ ಕನ್ನಡ ಜಿಲ್ಲೆಗಳಾಗಿದ್ದ ಬೆಳಗಾಂವಿ, ಬಿಜಾಪುರ, ಧಾರವಾಡ ಮತ್ತು ಉತ್ತರಕನ್ನಡ ಪ್ರದೇಶಗಳ ಇತಿಹಾಸ, ಸಂಸ್ಕೃತಿ, ಸಾಹಿತ್ಯಗಳ ಅಭ್ಯಾಸ ಮತ್ತು ಸಂಶೋಧನೆಯ ಕಾರ್ಯಗಳಿಗಾಗಿ 1939 ಏಪ್ರಿಲ್ 13ರಂದು ಧಾರವಾಡದಲ್ಲಿ ಸ್ಥಾಪಿತವಾದ ಸಂಸ್ಥೆ.

**ಇತಿಹಾಸ :** ಕನ್ನಡ ಸಂಶೋಧನ ಸಂಸ್ಥೆ ಸ್ಥಾಪಿತವಾಗುವ ವೇಳೆಗಾಗಲೇ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿಗಳು (ಕರ್ನಾಟಕ ಹಿಸ್ಟಾರಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) ಧಾರವಾಡದಲ್ಲಿದ್ದರೂ ಅವುಗಳ ಕಾರ್ಯಕ್ಷೇತ್ರ ಸೀಮಿತವಾಗಿತ್ತು. ಆದ್ದರಿಂದ ಇಂಥ ವ್ಯಾಪಕೋದ್ದೇಶವುಳ್ಳ ಸಂಸ್ಥೆಯೊಂದರ ಆವಶ್ಯಕತೆಯನ್ನು ಮನಗಂಡು ಜನತೆಯ ಆಶೋತ್ತರವನ್ನು ಪೂರೈಸುವ ಸಲುವಾಗಿ ಆಗಿನ ಮುಂಬಯಿ ಸರ್ಕಾರ 1938ರಲ್ಲಿ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲ್ ಎ.ಸಿ.ಫ್ಯಾರನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಕನ್ನಡ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಬೇಕೆಂದೂ ಅದು ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನಕ್ಕೆ ಸಹಾಯಕವಾದ ಮೂಲಸಾಮಗ್ರಿಗಳನ್ನು ಸಂಗ್ರಹಿಸಿ, ಅಭ್ಯಸಿಸುವ ಕಾರ್ಯದಲ್ಲಿ ತೊಡಗಬೇಕೆಂದೂ ಆ ಸಮಿತಿ ಸಲಹೆಮಾಡಿತು. ಈ ಸಲಹೆಗೆ ಅನುಗುಣವಾಗಿ ಅಸ್ತಿತ್ವಕ್ಕೆ ಬಂದ ಕನ್ನಡ ಸಂಶೋಧನ ಸಂಸ್ಥೆಗೆ ಆರ್.ಎಸ್.ಪಂಚಮುಖಿ ನಿರ್ದೇಶಕರಾಗಿ ನೇಮಕವಾದರು. ಬೊಂಬಾಯಿ ಸರ್ಕಾರದಿಂದ ಸಂಸ್ಥೆಗೆ ಮಂಜೂರಾದ ಸಹಾಯಧನ ವರ್ಷಕ್ಕೆ 12,000 ರೂಪಾಯಿಗಳು; ಜೊತೆಗೆ ಮೊದಲನೆಯ ವರ್ಷಕ್ಕೆ 8,000 ರೂ.ಗಳ ಅಧಿಕ ಧನವೂ ದೊರೆಯಿತು. ನಿರ್ದೇಶಕರಿಗೆ ಸೂಕ್ತಸಲಹೆಗಳನ್ನು ನೀಡಲು ಒಂದು ಸಲಹಾಸಮಿತಿಯನ್ನು ರಚಿಸಲಾಯಿತು. ಎಸ್.ಸಿ.ನಂದೀಮಠ, ಕೆ.ಜಿ.ಕುಂದಣಗಾರ, ಡಿ.ಪಿ.ಕರಮರ್‌ಕರ್, ದ.ರಾ.ಬೇಂದ್ರೆ, ವಿ.ಕೆ.ಗೋಕಾಕ್, ಎಸ್.ಎಸ್.ಮಾಳವಾಡ, ಎ.ಡಿ.ಧೋಪೇಶ್ವರಕರ -ಇವರು ಈ ಮೊಟ್ಟಮೊದಲ ಸಮಿತಿಯಲ್ಲಿ ಸದಸ್ಯರು. ಈ ಸಂಸ್ಥೆ ಮೊದಲ ಎರಡೂ ವರ್ಷಗಳ ಕಾಲ ಕರ್ನಾಟಕ ಕಾಲೇಜಿನ ಕಟ್ಟಡದಲ್ಲೂ ಅನಂತರ ಸುಮಾರು 1947ರವರೆಗೆ ಸಾರಸ್ವತಪುರದಲ್ಲೂ 1947 ರಿಂದ 1959ರವರೆಗೆ ಮಾಳಮಡ್ಡಿಯ ಧಾರಾಮಹಲಿನಲ್ಲೂ ಇತ್ತು. 1953ರವರೆಗೂ ಪಂಚಮುಖಿ ನಿರ್ದೇಶಕರಾಗಿದ್ದರು. ತರುವಾಯ ಎಸ್.ಎಸ್.ಮಾಳವಾಡ, ಬಿ.ಎ.ಸಾಲೆತೊರೆ, ಪಿ.ಬಿ.ದೇಸಾಯಿ, ಶ್ರೀನಿವಾಸರಿತ್ತಿ, ಬಿ.ಎಸ್.ಕುಲಕರ್ಣಿ, ಎಸ್.ಎಂ.ವೃಷಭೇಂದ್ರಸ್ವಾಮಿ, ಎಂ.ಬಿ.ಕೊಟ್ರಶೆಟ್ಟಿ, ಎಂ.ಎಂ.ಕಲಬುರ್ಗಿ, ಎಚ್.ಆರ್.ರಘುನಾಥಭಟ್ ಮೊದಲಾದ ವಿದ್ವಾಂಸರು ಸಂಸ್ಥೆಯನ್ನು ಮುನ್ನಡೆಸಿದರು.

1956ರಲ್ಲಿ ವಿಶಾಲ ಮೈಸೂರು ರಾಜ್ಯವಾದಾಗ ಉತ್ತರ ಕರ್ನಾಟಕದ ಜಿಲ್ಲೆಗಳು ಮೈಸೂರಿಗೆ ಸೇರಿದುವು. ಅದುವರೆವಿಗೂ ಬೊಂಬಾಯಿ ಸರ್ಕಾರದ ಅಧೀನದಲ್ಲಿದ್ದ ಈ ಸಂಸ್ಥೆ ಮೈಸೂರು ಸರ್ಕಾರಕ್ಕೆ ಸೇರಿತು. ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾಗಿ ಆರು ವರ್ಷಗಳಾಗಿದ್ದುವು. ಕರ್ನಾಟಕ ವಿಶ್ವವಿದ್ಯಾಲಯವೇ ಈ ಸಂಸ್ಥೆಯನ್ನು ನಡೆಸಿಕೊಂಡು ಹೋಗಲು ಮೈಸೂರು ಸರ್ಕಾರ ಒಪ್ಪಿ ಇದನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿತು. ಆ ವೇಳೆಗಾಗಲೇ ಸಂಸ್ಥೆ ಹಿರಿದಾಗಿ ಬೆಳೆದಿತ್ತು. ಅನೇಕ ಶಾಸನಗಳ ಪಡಿಯಚ್ಚುಗಳು, ಹಸ್ತಪ್ರತಿಗಳು, ಶಿಲಾ ಹಾಗೂ ತಾಮ್ರ ಶಾಸನಗಳು, ಪ್ರಾಚ್ಯವಸ್ತು ಶೋಧನದಲ್ಲಿ ಸಂಗ್ರಹಿಸಲಾದ ಇತರ ಅವಶೇಷಗಳು, ನಾಣ್ಯಗಳು, ಕಲ್ಲಿನಿಂದ ನಿರ್ಮಿತವಾದ ಸುಂದರ ಮೂರ್ತಿಗಳು ಮತ್ತು ವೀರಗಲ್ಲುಗಳು ಸಂಸ್ಥೆಯಲ್ಲಿ ಸಂಗ್ರಹವಾಗಿದ್ದು, ಅವನ್ನು ವ್ಯವಸ್ಥಿತ ರೀತಿಯಲ್ಲಿ ಪ್ರದರ್ಶಿಸಲು ಒಂದು ವಸ್ತುಸಂಗ್ರಹಾಲಯ ಆವಶ್ಯಕವಾಗಿತ್ತು. ಧಾರಾಮಹಲಿನ ಆವರಣದಲ್ಲಿ ಸಣ್ಣದಾದ ಒಂದು

ಸಂಗ್ರಹಾಲಯವನ್ನು ರೂಪಿಸಿದ್ದರೂ ಅದು ಸಾಕಾಗಿರಲಿಲ್ಲ. ಈ ಸಂಸ್ಥೆಗಾಗಿ ಸುಮಾರು 3 ಲಕ್ಷ ರೂ.ಗಳ ವೆಚ್ಚದಲ್ಲಿ ಒಂದು ಪ್ರತ್ಯೇಕ ಭವನವನ್ನು ಕಟ್ಟಿಸಲಾಯಿತು. ವಿಶ್ವವಿದ್ಯಾಲಯದ ಪ್ರಮುಖ ಕಟ್ಟಡಕ್ಕೆ ಹೊಂದಿದಂತೆ ನಿರ್ಮಿಸಲಾದ ತನ್ನದೇ ಆದ ಕಲೆ ಮತ್ತು ಪುರಾತತ್ತ್ವಶಾಸ್ತ್ರ ವಸ್ತು ಸಂಗ್ರಹಾಲಯದ (ಮ್ಯೂಸಿಯಮ್ ಆಫ್ ಆರ್ಟ್ ಅಂಡ್ ಆರ್ಕಿಯಾಲಜಿ) ಕಟ್ಟಡವನ್ನು ಈ ಸಂಸ್ಥೆ ಪ್ರವೇಶಿಸಿದ್ದು 1964ರಲ್ಲಿ. ವಿಶ್ವವಿದ್ಯಾಲಯ 1962ರಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನ ವಿಭಾಗವನ್ನು ಆರಂಭಿಸಿತು. ಅದು ಕನ್ನಡ ಸಂಶೋಧನ ಸಂಸ್ಥೆಯೊಡನೆ ಕೂಡಿ ಕೆಲಸ ಮಾಡತೊಡಗಿತು. ಈಗ ಸಂಸ್ಥೆ ತನ್ನ ಕಾರ್ಯವ್ಯಾಪ್ತಿಯ ಆಯಾಮವನ್ನು ವಿಸ್ತರಿಸಿಕೊಂಡಿದೆ. ಶಾಸನ ವಿಜ್ಞಾನದಲ್ಲಿ ಸ್ನಾತಕೋತರ ಡಿಪ್ಲೊಮಾ ಶಿಕ್ಷಣ; ಎಂ.ಫಿಲ್ ಮತ್ತು ಪಿಎಚ್.ಡಿ. ಪದವಿಗಳನ್ನು ನೀಡುವ ಉನ್ನತ ಸಂಶೋಧನಾ ಶಿಕ್ಷಣ ನೀಡಲಾಗುತ್ತಿದೆ. ಕನ್ನಡ ಸಂಶೋಧನ ಸಂಸ್ಥೆಯ ಕಾರ್ಯಕ್ಷೇತ್ರ ವರ್ಷೇ ವರ್ಷೇ ವಿಸ್ತರಿಸುತ್ತಿದೆ. ವಿಶ್ವವಿದ್ಯಾಲಯದ ಅಂಗವಾಗಿ ಈ ಸಂಸ್ಥೆ ಕಾರ್ಯನಿರ್ವಹಣೆ ಮುಂದುವರಿಸಿದಾಗ ಇದರ ಕಾರ್ಯಕ್ಷೇತ್ರದಲ್ಲೂ ಬದಲಾವಣೆಗಳಾಗಿವೆ. ಆರಂಭದಲ್ಲಿ ಕರ್ನಾಟಕ ಇತಿಹಾಸವಲ್ಲದೆ ಸಾಹಿತ್ಯ, ಸಂಸ್ಕೃತಿ ಮತ್ತು ಜನಪದ ಸಾಹಿತ್ಯಗಳಲ್ಲೂ ಈ ಸಂಸ್ಥೆ ಆಸಕ್ತಿ ವಹಿಸಿತ್ತು. ಇತಿಹಾಸ, ಕನ್ನಡ ಮತ್ತು ಸಮಾಜಶಾಸ್ತ್ರಗಳ ಅಧ್ಯಯನ, ಅಧ್ಯಾಪನಗಳಿಗೆ ಇಲ್ಲಿ ಅನುಕೂಲ ಕಲ್ಪಿಸಲಾಗಿತ್ತು. ಈ ಸಂಸ್ಥೆ ವಿಶ್ವವಿದ್ಯಾಲಯ ಸೇರಿದ ಮೇಲೆ ಸಮಾಜಶಾಸ್ತ್ರ ಹಾಗೂ ಕನ್ನಡ ವಿಭಾಗಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸತೊಡಗಿದ್ದರಿಂದ ಕರ್ನಾಟಕದ ಮತ್ತು ಭಾರತದ ಇತಿಹಾಸ, ಸಂಸ್ಕೃತಿ, ಕಲೆ ಮತ್ತು ಪ್ರಾಕ್ತನಶಾಸ್ತ್ರಗಳಿಗೆ ಸಂಬಂಧಿಸಿದಂತೆ ಇದರ ಕಾರ್ಯಕ್ಷೇತ್ರ ಈಗ ಸೀಮಿತಗೊಂಡಿದೆ.

ವಸ್ತುಸಂಗ್ರಹಾಲಯದಲ್ಲಿರುವ ಅಡಕೆ ಕತ್ತರಿಸುವ ಕಲಾತ್ಮಕ ಕತ್ತರಿ (ಅಡಕೊತ್ತು)

**ಸಾಧನೆಗಳು :** ಈ ಸಂಸ್ಥೆ ನಾಡಿಗೆ ಬಹುಮುಖ ಸೇವೆ ಸಲ್ಲಿಸಿದೆ. ಕರ್ನಾಟಕದ ಈ ಭಾಗದಲ್ಲಿನ ಸಾವಿರಾರು ಶಾಸನಗಳ ಪ್ರತಿಗಳನ್ನು ಪಡೆದು, ಅವನ್ನು ಪ್ರಕಟಿಸುವುದು ಇದರ ಹೊಣೆಗಳಲ್ಲಿ ಒಂದು. 1500ಕ್ಕೂ ಹೆಚ್ಚು ಶಾಸನಗಳ ಪ್ರತಿಗಳು ಸಂಸ್ಥೆಯಲ್ಲಿದು. ಇದನ್ನು ಸಂಸ್ಥೆಯ ವಾರ್ಷಿಕ ವರದಿಗಳಲ್ಲಿ ಸೂಕ್ಷ್ಮವಾಗಿ ಅವಲೋಕಿಸಲಾಗಿದೆಯಲ್ಲದೆ ಶಾಸನಗಳ ಪಾಠ, ಸಾರಾಂಶ, ಮಹತ್ತ್ವದ ವಿವೇಚನೆ ಇವನ್ನು ಕರ್ನಾಟಿಕ್ ಇನ್‌ಸ್ಕ್ರಿಪ್ಷನ್ಸ್ ಎಂಬ ಸಂಪುಟಗಳಲ್ಲಿ ಪ್ರಕಟಿಸುತ್ತ ಬರಲಾಗಿದೆ. ಇದುವರೆಗೆ ಹೊರಬಿದ್ದಿರುವ ಇಂಥ ಸಂಪುಟಗಳು ಆರು. ಮೊದಲ ಮೂರಕ್ಕೆ ಪಂಚಮುಖಿಯವರೂ ನಾಲ್ಕನೆಯದಕ್ಕೆ ಎಂ.ಎಂ.ಅಣ್ಣಿಗೇರಿಯವರೂ ಐದು ಮತ್ತು ಆರನೆಯದಕ್ಕೆ ಬಿ.ಆರ್.ಗೋಪಾಲರೂ ಸಂಪಾದಕರು. ಉತ್ತರ ಕರ್ನಾಟಕಕ್ಕೆ ಸೇರಿದ ಗುಲ್ಬರ್ಗ, ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಅನೇಕ ಶಾಸನಗಳಿವೆ. ಸಂಸ್ಥೆ ಅವನ್ನು ಪ್ರತಿಮಾಡಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದೆ. ಒಟ್ಟು 6 ಸಂಪುಟಗಳನ್ನು ಪ್ರಕಟಿಸಿದೆ.

ಸಂಸ್ಥೆ ಕಂಡುಹಿಡಿದ ಶಾಸನಗಳಲ್ಲಿ ಅತಿ ಪ್ರಾಚೀನವಾದದ್ದು ವಡಗಾಂವ ಮಾಧವಪುರದಲ್ಲಿ ದೊರೆತ ಷಟ್ಕೋಣಾಕಾರದ ಸ್ತಂಭಶಿಲಾಲಿಪಿ. ಇದರದು ಪ್ರಾಕೃತ ಭಾಷೆ, ಬ್ರಾಹ್ಮೀಲಿಪಿ. ಶಾಸನದ ಕಾಲ ಕ್ರಿ.ಪೂ.1ನೆಯ ಶತಮಾನ. ಬಾದಾಮಿಯಲ್ಲಿ ಬಂಡೆಗಲ್ಲಿನ ಮೇಲೆ ಕೊರೆಯಲಾದ ಶಕವರ್ಷ 456ರ (543) ಮೊದಲನೆಯ ಪುಲಕೇಶಿಯ ಶಾಸನ ಇನ್ನೊಂದು ಮಹತ್ತ್ವದ ಶೋಧ. ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬ ಗ್ರಾಮದಲ್ಲಿ ಕೈಕೊಂಡ ಅನ್ವೇಷಣೆಯಲ್ಲಿ 2ನೆಯ ಶತಮಾನಕ್ಕೆ ಸೇರಿದ ಬೌದ್ಧ ಸಂಸ್ಕೃತಿಯ ಅವಶೇಷಗಳೂ ಕೆಲವು ಬ್ರಾಹ್ಮೀ ಲಿಪಿಯ ಶಾಸನಗಳೂ ದೊರೆತಿವೆ. ಚಾಳುಕ್ಯ ಮಂಗಳೇಶನ ಮತ್ತು ಗಂಗವಂಶದ ಮಾರಸಿಂಗನ ತಾಮ್ರಪಟಗಳು ಐತಿಹಾಸಿಕ ದೃಷ್ಟಿಯಲ್ಲಿ ಬಹಳ ಮುಖ್ಯವಾದವು. ಮಂಗಳೇಶನ ಶಾಸನದ ರಾಜಮುದ್ರೆಯಲ್ಲಿ ತನ್ನ ಮರಿಗೆ ಹಾಲು ಕುಡಿಸುತ್ತಿರುವ ಹೆಣ್ಣುಹುಲಿಯ ಆಕೃತಿ ಇದೆ. ಇದುವರೆಗೆ ದೊರೆತ ಎಲ್ಲ ತಾಮ್ರಶಾಸನಗಳಲ್ಲಿ ಇದು ಅಪೂರ್ವವಾದದ್ದು. 7ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಆಳಿದ ಸಾಮಂತ ಅರಸರಾದ ಮೌರ್ಯ ಮತ್ತು ಭೋಜಮನೆತನಗಳ ಅರಸರ ತಾಮ್ರಪಟಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಪುರಾತತ್ತ್ವ ಶೋಧನೆಯಲ್ಲಿ ಈ ಸಂಸ್ಥೆ ಸಾಕಷ್ಟು ಕೆಲಸಮಾಡಿದೆ. ಪ್ರಾಚೀನ ಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ (ಧಾತುಯುಗ)ಗಳಿಗೆ ಸೇರಿದ ಅನೇಕ ನಿವೇಶನಗಳನ್ನು ಗುರುತಿಸಲಾಗಿದೆ. ಮಲಪ್ರಭಾ, ಘಟಪ್ರಭಾ, ಮತ್ತು ಕೃಷ್ಣಾನದಿಗಳ ತೀರಗಳಲ್ಲಿ ದೊರೆತ ಅನೇಕ ಶಿಲಾಯುಧಗಳನ್ನು ಸಂಗ್ರಹಿಸಲಾಗಿದೆ. ಕೆಲವು ನಿವೇಶನಗಳಲ್ಲಿ ಉತ್ಖನನ ಕಾರ್ಯ ನಡೆದಿದೆ.

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿನ ಮಹಾಲಕ್ಷ್ಮೀ ದೇವಾಲಯದ ಸಮೀಪದ ಬ್ರಹ್ಮಪುರಿ ಒಂದು ಪ್ರಾಚೀನ ನಿವೇಶನ. ಈ ಸ್ಥಳದಲ್ಲಿ ಮೊದಲ ಬಾರಿ ಕನ್ನಡ ಸಂಶೋಧನ ಸಂಸ್ಥೆ ಅನ್ವೇಷಣೆ ನಡೆಸಿ ಅನೇಕ ಮಹತ್ತ್ವದ ಐತಿಹಾಸಿಕ ವಿಷಯಗಳನ್ನು ಬೆಳಕಿಗೆ ತಂದಿತು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿರುವ ಸಂಶೋಧನ ಸಂಸ್ಥೆಯೊಡನೆ ಕೂಡಿಕೊಂಡು ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟ ಗ್ರಾಮದಲ್ಲಿ ಉತ್ಖನನ ಕಾರ್ಯವನ್ನು ಕೈಗೊಳ್ಳಲಾಯಿತು. ಹಾಗೆಯೇ ಧಾರವಾಡ ಜಿಲ್ಲೆಯ ಹಳ್ಳೂರಿನಲ್ಲೂ ಒಂದು ನಿವೇಶನವನ್ನು ಉತ್ಖನನ ಮಾಡಲಾಗಿದೆ. ಈ ಅಗೆತಗಳಿಂದ ಕರ್ನಾಟಕದ ನವಶಿಲಾಸಂಸ್ಕೃತಿಗೆ ಸಂಬಂಧಿಸಿದ ಅನೇಕ ಹೊಸ ವಿಷಯಗಳು ಗೋಚರವಾಗಿವೆ.

ಕರ್ನಾಟಕದ ಕಲೆ ವಾಸ್ತುಶಿಲ್ಪಗಳ ಅಭ್ಯಾಸಕ್ಕಾಗಿ ಅನೇಕ ವಿಗ್ರಹಗಳನ್ನೂ ವೀರಗಲ್ಲು, ಮಕರತೋರಣ ಮುಂತಾದವನ್ನೂ ಸಂಸ್ಥೆ ತನ್ನ ಸಂಗ್ರಹಾಲಯದಲ್ಲಿ ಪ್ರದರ್ಶಿಸಿದೆ. ಜೈನ ತೀರ್ಥಂಕರರ ವಿಗ್ರಹಗಳನ್ನು ಇಲ್ಲಿ ಕಾಣಬಹುದು. ಇವುಗಳೆಲ್ಲಲ್ಲ ಬಹಳ ಮುಖ್ಯವಾದುದು ಪಟ್ಟದಕಲ್ಲಿನಲ್ಲಿ ದೊರೆತ ನಟರಾಜನ ವಿಗ್ರಹ. ಕೆಂಪು ಶಿಲೆಯ ಈ ವಿಗ್ರಹ ಸಾಮಾನ್ಯವಾಗಿ ಕಾಣಬರುವ ಇಂಥ ಮೂರ್ತಿಗಳಿಗಿಂತ ಭಿನ್ನವಾದದ್ದು. ಅನೇಕ ಶಿಲಾಶಾಸನಗಳೂ ಇಲ್ಲಿವೆ. ಬಸವೇಶ್ವರರನ್ನು ಕುರಿತ ಖಚಿತವಾದ ಶಾಸನಾಧಾರವೆನಿಸಿದ ಅರ್ಜುನವಾಡದ ಶಿಲಾಶಾಸನ ಈಗ ಈ ಸಂಸ್ಥೆಯಲ್ಲುಂಟು. ಇಲ್ಲಿಯ ವಸ್ತುಸಂಗ್ರಹಾಲಯವನ್ನು ಇತ್ತೀಚೆಗೆ ಆಧುನಿಕ ರೀತಿಯಲ್ಲಿ ಪುನರ್ ರೂಪಿಸಲಾಗಿದೆ. ಹರಪ್ಪ, ಮೊಹೆಂಜೊದಾರೋಗಳಲ್ಲಿ ದೊರೆತ ಅವಶೇಷಗಳಲ್ಲಿ ಕೆಲವನ್ನೂ ಕೆಲವು ಪ್ರತಿಕೃತಿಗಳನ್ನು (ಪ್ಲ್ಯಾಸ್ಟರ್ ಕ್ಯಾಸ್ಟ್) ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಶಿಲಾಯುಧಗಳು, ಮಡಕೆಗಳು, ಕಬ್ಬಿಣದ ಆಯುಧಗಳು ಮುಂತಾದುವನ್ನೂ ಇಲ್ಲಿ ಕಾಣಬಹುದು. ಕನ್ನಡಲಿಪಿಯ ಬೆಳವಣಿಗೆಯನ್ನು ತೋರಿಸುವ ಮೂಲಶಾಸನ ಪ್ರತಿಗಳನ್ನೂ ಚಿತ್ರಗಳನ್ನೂ ಅಲ್ಲದೆ ಕರ್ನಾಟಕದ ಕಲೆಯನ್ನು ರೂಪಿಸುವ ಚಿತ್ರಗಳನ್ನೂ ಇಲ್ಲಿ ಪ್ರದರ್ಶಿಸಲಾಗಿದೆ. ಇಲ್ಲಿನ ವಸ್ತು ಸಂಗ್ರಹಾಲಯ ಉತ್ತಮ ಗುಣ ಮೌಲ್ಯ ಹೊಂದಿದೆ ಎಂಬ ಕೀರ್ತಿಗೆ ಪಾತ್ರವಾಗಿದೆ.

ಸಂಸ್ಥೆಯಲ್ಲಿ ಅನೇಕ ವಿದ್ಯಾರ್ಥಿಗಳು ಸಂಶೋಧನ ಕಾರ್ಯದಲ್ಲಿ ತೊಡಗಿದ್ದಾರೆ. ಅವರಿಗೂ ಇತರರಿಗೂ ಸಹಾಯವಾಗುವಂತೆ ಪ್ರತಿವರ್ಷ

ಪಂಡಿತರಿಂದ ವಿವಿಧ ವಿಷಯಗಳ ಮೇಲೆ ಪಾಂಡಿತ್ಯಪೂರ್ಣ ಸಂಶೋಧನ ಉಪನ್ಯಾಸಗಳನ್ನೇರ್ಪಡಿಸಿ ಅನಂತರ ಅವನ್ನು ಪ್ರಕಟಿಸುವುದು ಈ ಸಂಸ್ಥೆಯ ಕಾರ್ಯಗಳಲ್ಲಿ ಒಂದು. ಈಗ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ತಲಾ 8 ಉಪನ್ಯಾಸಗಳು ಪ್ರಕಟವಾಗಿವೆ.

ಕರ್ನಾಟಕದಲ್ಲಿ ಅನೇಕ ಕಡೆ ಮಠಗಳಲ್ಲೂ ವಿದ್ವಾಂಸರ ಪುರಾತನ ಮನೆತನಗಳಲ್ಲೂ ಓಲೆಗರಿಯಲ್ಲಿ ಬರೆದ ಗ್ರಂಥಗಳು ಸಿಗುತ್ತವೆ. ಇವುಗಳಲ್ಲಿ ಪ್ರಾಚೀನ ಸಾಹಿತ್ಯಗ್ರಂಥಗಳನೇಕವಿವೆ. ಸರಿಯಾದ ರಕ್ಷಣೆಯಿಲ್ಲದೆ ನಾಶವಾಗುತ್ತಿರುವ ಈ ಗ್ರಂಥಗಳನ್ನು ಸಂಗ್ರಹಿಸಿ ಸುಸ್ಥಿತಿಯಲ್ಲಿ ಕಾಪಾಡುವ ಕಾರ್ಯವನ್ನು ಸಂಸ್ಥೆ ಕೈಕೊಂಡಿದೆ. ಈಗ ಸಂಸ್ಥೆಯಲ್ಲಿ ಇಂಥ ಸುಮಾರು 2000 ಗ್ರಂಥಗಳಿವೆ. ಇವನ್ನು ಪರೀಕ್ಷಿಸಿ ವ್ಯಾಕರಣ, ನಿಘಂಟು, ಪುರಾಣ ಮತ್ತು ಕಾವ್ಯ, ಜೀವನ ವೃತ್ತಾಂತ, ವೇದಾಂತ, ಧರ್ಮಶಾಸ್ತ್ರ, ತತ್ತ್ವಜ್ಞಾನ, ಲೌಕಿಕಶಾಸ್ತ್ರಗಳು, ಐತಿಹಾಸಿಕ ಹೀಗೆ ವಿಷಯಾನುಗುಣವಾಗಿ ವಿಂಗಡಿಸಿ ಈ ಗ್ರಂಥಗಳ ವಿವರಣಾತ್ಮಕ ಗ್ರಂಥಸೂಚಿಗಳನ್ನು (ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ಸ್) ಪ್ರಕಟಿಸಲಾಗುತ್ತಿದೆ. ಇಂಥ ಒಂಬತ್ತು ಸಂಪುಟಗಳು ಈಗಾಗಲೇ ಪ್ರಕಟವಾಗಿವೆ. ಐದು ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಲಾಗಿದೆ. ಕವಿಜಿಹ್ವಾಬಂಧನ, ಮದನತಿಲಕ, ಐರಾವತ, ವಿರೂಪಾಕ್ಷ ವಸಂತೋತ್ಸವ ಚಂಪೂ ಮತ್ತು ಸಮಯಪರೀಕ್ಷೆ ಇವೇ ಆ ಗ್ರಂಥಗಳು. ಕಲೆ, ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನಾತ್ಮಕವಾದ 11 ಪ್ರಬಂಧಗಳನ್ನೂ ಪ್ರಕಟಿಸಲಾಗಿದೆ.

ಕರ್ನಾಟಕದ ಇತಿಹಾಸವನ್ನು ಆಧಾರಭೂತವಾಗಿ ಸವಿಸ್ತಾರವಾಗಿ 12 ಸಂಪುಟಗಳಲ್ಲಿ ರಚಿಸಬೇಕೆಂಬುದು ಸಂಸ್ಥೆಯ ಯೋಜನೆ. ಈ ದಿಶೆಯಲ್ಲಿ ಮೊದಲ ಹೆಜ್ಜೆಯಾಗಿ, ಸಾಮಾನ್ಯ ಓದುಗರಿಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಸಮಗ್ರ ಇತಿಹಾಸಗ್ರಂಥವೊಂದನ್ನು ಹೊರತರಲಾಗಿದೆ. ಪಿ.ಬಿ.ದೇಸಾಯಿಯ ನಿರ್ದೇಶನದಲ್ಲಿ ಬಿ.ಆರ್.ಗೋಪಾಲ್ ಮತ್ತು ಶ್ರೀನಿವಾಸ ರಿತ್ತಿಯವರು ಕೂಡಿ ಈ ಗ್ರಂಥವನ್ನು ಬರೆದಿದ್ದಾರೆ.

ಕರ್ನಾಟಕದ ಪ್ರತಿ ಗ್ರಾಮದಲ್ಲೂ ಸಾಮಾನ್ಯವಾಗಿ ಒಂದೆರಡಾದರೂ ಶಿಲಾ ಶಾಸನಗಳು ಸಿಗುತ್ತವೆ. ಕನ್ನಡ ನಾಡಿನ ಇತಿಹಾಸ ಸಂಸ್ಕೃತಿಗಳನ್ನು ಅರಿಯಲು ಇವು ಮೂಲಾಧಾರ. ಸಂಶೋಧನೆಯಲ್ಲಿ ತೊಡಗಿರುವವರು ಮೂಲಶಾಸನಗಳನ್ನು ತಾವೇ ಓದಿಕೊಳ್ಳಬಹುದೆಂಬ ಆಶಯದಿಂದ 1965ರಲ್ಲಿ ಲಿಪಿಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ಶಿಕ್ಷಣತರಗತಿಯನ್ನು (ಡಿಪ್ಲೊಮ ಕೋರ್ಸ್ ಇನ್ ಎಪಿಗ್ರಫಿ) ತೆರೆಯಲಾಯಿತು. ಅನೇಕ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇಲ್ಲಿನ ಗ್ರಂಥಾಲಯದಲ್ಲಿ ಇತಿಹಾಸ, ಕಲೆ, ಸಂಸ್ಕೃತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸುಮಾರು 10,000ಕ್ಕೂ ಹೆಚ್ಚು ಗ್ರಂಥಗಳಿವೆ. *

**ಕನ್ನಡ ಸಾಹಿತ್ಯ :** ಶ್ರೀಮಂತವೂ ವೈವಿಧ್ಯಪೂರ್ಣವೂ ಆದ ಕನ್ನಡ ಸಾಹಿತ್ಯಕ್ಕೆ ಸಾವಿರದೈನೂರು ವರ್ಷಗಳಿಗೂ ಮೇಲ್ಪಟ್ಟ ಸುದೀರ್ಘ ಇತಿಹಾಸವಿದೆ. ಅಧ್ಯಯನದ ದೃಷ್ಟಿಯಿಂದ ಕನ್ನಡ ಸಾಹಿತ್ಯವನ್ನು ಮತ ಪ್ರಾಬಲ್ಯ, ಭಾಷೆಯ ಅವಸ್ಥೆಗಳು, ಪ್ರಮುಖ ಕವಿಗಳು, ಸಾಹಿತ್ಯ ರೂಪಗಳು, ಆಯಾ ಯುಗಮನೋಧರ್ಮ, ಶತಮಾನಾನುಪೂರ್ವಿ - ಈ ಮೊದಲಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅನೇಕ ವಿಧದಲ್ಲಿ ವಿಭಾಗಿಸಿ ವಿಶ್ಲೇಷಿಸುವ ಕಾರ್ಯ ಇದುವರೆಗೆ ಸಾಕಷ್ಟು ನಡೆದಿದೆ. ಮತೀಯ ದೃಷ್ಟಿಯನ್ನನುಸರಿಸಿ ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗವೆಂದೂ ಪ್ರಮುಖ ಕವಿಗಳನ್ನಾಧರಿಸಿ ಪಂಪಯುಗ, ಬಸವಯುಗ, ಹರಿಹರಯುಗ, ಕುಮಾರವ್ಯಾಸಯುಗವೆಂದೂ ಸಾಹಿತ್ಯ ರೂಪಗಳನ್ನಾಧರಿಸಿ ಚಂಪೂ, ವಚನ, ರಗಳೆ, ತ್ರಿಪದಿ, ಸಾಂಗತ್ಯ ಯುಗಗಳೆಂದೂ ಭಾಷಾವಸ್ಥೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪೂರ್ವದ ಹಳಗನ್ನಡಕಾಲ, ಹಳಗನ್ನಡಕಾಲ, ನಡುಗನ್ನಡಕಾಲ, ಹೊಸಗನ್ನಡಕಾಲವೆಂದೂ ಆಯಾ ಯುಗಮನೋಧರ್ಮ ಮತ್ತು ಕವಿಕರ್ಮಕ್ಕೆ ಸಿಕ್ಕ ಮೂಲ ಪ್ರಚೋದನೆಯನ್ನು ಮುಖ್ಯವಾಗಿ ಆಧರಿಸಿ ಕ್ಷಾತ್ರಯುಗ, ಮತಪ್ರಚಾರಯುಗ, ಸಾರ್ವಜನಿಕಯುಗ, ಆಧುನಿಕಯುಗವೆಂದೂ ಶತಮಾನಾನುಪೂರ್ವಿಯನ್ನನುಸರಿಸಿ ಹತ್ತನೆಯ ಶತಮಾನದ ಸಾಹಿತ್ಯ, ಹನ್ನೊಂದನೆಯ ಶತಮಾನದ ಸಾಹಿತ್ಯ - ಇತ್ಯಾದಿಯಾಗಿಯೂ -ಹೀಗೆ ಒಬ್ಬೊಬ್ಬ ವಿದ್ವಾಂಸರು ಒಂದೊಂದು ಕ್ರಮವನ್ನನುಸರಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕನ್ನಡ ಸಾಹಿತ್ಯದ ಪ್ರಾಚೀನತೆ, ಪಂಪಯುಗ, ವಚನಯುಗ, ಹರಿಹರಯುಗ, ಕುಮಾರವ್ಯಾಸಯುಗ, ಆಧುನಿಕಯುಗ ಎಂಬ ಶೀರ್ಷಿಕೆಗಳ ಅಡಿಯಲ್ಲಿ ಕನ್ನಡ ವಾಙ್ಮಯವನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳು ಮುಖ್ಯ ಕವಿಗಳನ್ನು ಕುರಿತ ಪ್ರತ್ಯೇಕ ಲೇಖನಗಳಲ್ಲಿ, ರಾಜವಂಶಗಳನ್ನು ಕುರಿತಾದ (ಉದಾ: ಚಾಳುಕ್ಯವಂಶ, ರಾಷ್ಟ್ರಕೂಟವಂಶ) ಸಮೀಕ್ಷಾ ಲೇಖನಗಳಲ್ಲಿ ಮತ್ತು ಈ ಕೆಳಕಂಡ ಸಮೀಕ್ಷಾ ಲೇಖನಗಳಲ್ಲಿ ನಿರೂಪಿತವಾಗಿವೆ. ಕನ್ನಡದಲ್ಲಿ ಕಾದಂಬರಿ ಸಾಹಿತ್ಯ; ಕನ್ನಡದಲ್ಲಿ ಗದ್ಯ ಸಾಹಿತ್ಯ; ಕನ್ನಡದಲ್ಲಿ ಗಾಂಧೀ ಸಾಹಿತ್ಯ; ಕನ್ನಡದಲ್ಲಿ ಗ್ರಂಥಸಂಪಾದನೆ; ಕನ್ನಡದಲ್ಲಿ ಜೀವನ ಚರಿತ್ರೆಗಳು; ಕನ್ನಡದಲ್ಲಿ ನವ್ಯಕಾವ್ಯ; ಕನ್ನಡದಲ್ಲಿ ನಾಟಕ ಸಾಹಿತ್ಯ; ಕನ್ನಡದಲ್ಲಿ ಪ್ರಬಂಧ ಸಾಹಿತ್ಯ; ಕನ್ನಡದಲ್ಲಿ ಪ್ರವಾಸ ಸಾಹಿತ್ಯ; ಕನ್ನಡದಲ್ಲಿ ಭಾವಗೀತೆ; ಕನ್ನಡದಲ್ಲಿ ಭಾಷಾಂತರಗಳು; ಕನ್ನಡದಲ್ಲಿ ಮಕ್ಕಳ ಸಾಹಿತ್ಯ; ಕನ್ನಡದಲ್ಲಿ ವಿಚಾರ ಸಾಹಿತ್ಯ; ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ; ಕನ್ನಡದಲ್ಲಿ ವಿಡಂಬನ ಸಾಹಿತ್ಯ; ಕನ್ನಡದಲ್ಲಿ ವಿಮರ್ಶೆ; ಕನ್ನಡದಲ್ಲಿ ವಿಶ್ವಕೋಶಗಳು; ಕನ್ನಡದಲ್ಲಿ ಶತಕ ಸಾಹಿತ್ಯ; ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯ; ಕನ್ನಡದಲ್ಲಿ ಸಂಕಲನ ಗ್ರಂಥಗಳು; ಕನ್ನಡದಲ್ಲಿ ಸಣ್ಣಕಥೆಗಳು; ಕನ್ನಡದಲ್ಲಿ ಹಾಸ್ಯ ಸಾಹಿತ್ಯ; ಕನ್ನಡ ಭಾಷೆ; ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿ.

**ಕನ್ನಡ ಸಾಹಿತ್ಯದ ಪ್ರಾಚೀನತೆ :** ಕನ್ನಡ ಸಾಹಿತ್ಯ ಕ್ರಿಸ್ತಶಕದಷ್ಟೇ ಪ್ರಾಚೀನ ವಾಗಿದ್ದಿರಬೇಕೆಂಬುದು ಹಲವು ವಿದ್ವಾಂಸರ ಅಭಿಮತ. ಬೌದ್ಧರು ಕನ್ನಡದ ಆದಿಕವಿಗಳೆಂದೂ ಬೌದ್ಧಧರ್ಮದ ನಾಶದೊಂದಿಗೇ ಬೌದ್ಧ ಗ್ರಂಥಗಳೂ ನಾಶವಾಗಿದ್ದಿರಬೇಕೆಂದೂ ವಿದ್ವಾಂಸರು ಊಹಿಸಿದ್ದಾರೆ. ಕನ್ನಡ ಭಾಷೆ ಸಾಹಿತ್ಯದ ಗದ್ದುಗೆಯೇರಿ ಬರೆಹ ರೂಪದಲ್ಲಿ ಪ್ರಪ್ರಥಮವಾಗಿ ಕಾಣಿಸಿಕೊಂಡಿರುವುದು ಸದ್ಯಕ್ಕೆ ತಿಳಿದಿರುವಂತೆ ಹಲ್ಮಿಡಿಯ ಶಾಸನದಲ್ಲಿ. ಇದರ ಮಂಗಳ ಶ್ಲೋಕ ಸಂಸ್ಕೃತದಲ್ಲಿದ್ದು, ಉಳಿದುದೆಲ್ಲ ಕನ್ನಡ ಲಿಪಿಯಲ್ಲಿ ಗದ್ಯ ರೂಪದಲ್ಲಿದೆ. ಭಾಷಾ ಶೈಲಿ ಸಂಸ್ಕೃತ ಪ್ರಚುರವಾಗಿ ಪ್ರೌಢವಾಗಿದೆ. ಇದನ್ನು ನೋಡಿದರೆ, ಇದಕ್ಕೂ ಪೂರ್ವದಲ್ಲಿಯೇ ಕನ್ನಡ ಸಾಹಿತ್ಯ ಸಾಕಷ್ಟು ಬೆಳೆದಿರಬೇಕೆಂದೂ ಈ ಶಾಸನ ಹುಟ್ಟುವ ವೇಳೆಗೆ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಗಾಢವಾಗಿದ್ದಿರಬೇಕೆಂದೂ ಊಹಿಸಲು ಅವಕಾಶವಿದೆ.

ಹಾಗೆಯೇ ಪ್ರಾಚೀನಕಾಲದ ಇತರ ಹಲವು ಶಾಸನಗಳೂ ಅತ್ಯಂತ ಕಾವ್ಯಮಯವಾಗಿವೆ. ಸು.7ನೆಯ ಶತಮಾನದ ಬಾದಾಮಿಯ ಶಾಸನ ಕಪ್ಪೆ ಅರಭಟ್ಟ ಎಂಬ ಕಲಿಯ ಶಕ್ತಿ ಸಾಹಸಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಅಚ್ಚಕನ್ನಡ ಛಂದಸ್ಸಾದ ತ್ರಿಪದಿಯಲ್ಲಿರುವ ಈ ಶಾಸನ ಭಾವಭಾಷೆಗಳ ವಿದ್ಯುದಾಲಿಂಗನದಿಂದ ಉದಿಸಿದ ಸುಂದರ ಭಾವಗೀತೆಯಂತಿದೆ. ಸುಮಾರು ಇದೇ ಕಾಲದಲ್ಲಿಯೇ ಹುಟ್ಟಿದ ಶ್ರವಣಬೆಳಗೊಳದ ಶಾಸನವೊಂದು ನಂದಿಸೇನನೆಂಬ ಜೈನಮುನಿಯ ವೈರಾಗ್ಯವನ್ನು ಹೃದಯಂಗಮವಾಗಿ ವರ್ಣಿಸುತ್ತದೆ. ಕವಿಹೃದಯವುಳ್ಳ ಇಂಥ ಶಾಸನಕರ್ತೃಗಳು ಕಾವ್ಯಕರ್ತೃಗಳಾಗಿಯೂ ಇದ್ದಿರಬಹುದು.

ಈಗ ದೊರಕಿರುವ ಕೆಲವು ಕನ್ನಡ ಗ್ರಂಥಗಳಲ್ಲಿ ಹಲವು ಕನ್ನಡ ಕೃತಿಕಾರರ ಪ್ರಸ್ತಾಪ ದೊರಕುತ್ತದೆ. ಅಂಥ ಕೆಲವು ಕೃತಿಕಾರರನ್ನು 7, 8, 9ನೆಯ ಶತಮಾನದವರೆಂದು ತೀರ್ಮಾನಿಸಬಹುದು. ಆದರೆ ಅವರ ಗ್ರಂಥಗಳು ಯಾವುವೂ ದೊರಕಿಲ್ಲ. ಈ ಸಂದರ್ಭದಲ್ಲಿ ತುಂಬಲೂರಾಚಾರ್ಯರು ಬರೆದ ಚೂಡಾಮಣಿ ಎಂಬ ತತ್ತ್ವಾರ್ಥ ಮಹಾಶಾಸ್ತ್ರದ ಮೇಲಿನ ವ್ಯಾಖ್ಯಾನ ಗ್ರಂಥವೂ ಗುಣಗಾಂಕಿಯಂ ಎಂಬ ಛಂದಶ್ಶಾಸ್ತ್ರದ ಗ್ರಂಥವೂ ಉಲ್ಲೇಖಾರ್ಹವಾದುವು. ತುಂಬಲೂರಾಚಾರ್ಯರ ಗ್ರಂಥ ತೊಂಬತ್ತಾರು ಸಹಸ್ರ ಗ್ರಂಥ ಪರಿಮಿತಿಯುಳ್ಳದ್ದೆಂದು ಭಟ್ಟಾಕಳಂಕನಿಂದ ತಿಳಿದುಬರುತ್ತದೆ. ಇಂಥ ಬೃಹತ್ತಾದ ಶಾಸ್ತ್ರಗ್ರಂಥವೊಂದು ಹುಟ್ಟಬೇಕಾದರೆ ಅದಕ್ಕೂ ಪೂರ್ವದಲ್ಲಿ ಸಾಹಿತ್ಯ ಸಮೃದ್ಧವಾಗಿ ಬೆಳೆದು ಬಂದಿರಬಹುದು. 'ಗುಣಗಾಂಕಿಯಂ' ಕವಿರಾಜಮಾರ್ಗದ ಸಮಕಾಲೀನ

ವಾದುದೆಂದೂ ನಾಗವರ್ಮನ ಛಂದೋಂಬುಧಿಗೆ ಮಾದರಿಯೆಂದೂ ತಿಳಿದುಬರುತ್ತದೆ. ಇದು ಶಾಸ್ತ್ರಗ್ರಂಥವಾದುದರಿಂದ ಇದಕ್ಕೂ ಪೂರ್ವದಲ್ಲಿ ಸಾಹಿತ್ಯ ಬೆಳೆದಿರಬೇಕು. ತುಂಬಲೂರಾಚಾರ್ಯನ ಸಮಕಾಲೀನನಾದ ಶ್ಯಾಮಕುಂದಾಚಾರ್ಯ ಕನ್ನಡದಲ್ಲಿ ಪ್ರಾಭೃತವನ್ನು ರಚಿಸಿದನೆಂದು ತಿಳಿದುಬಂದಿದೆ. ಗಂಗರಾಜನಾದ ಸೈಗೊಟ್ಟ ಶಿವಮಾರ (ಸು.788-812) ಗಜಾಷ್ಟಕವನ್ನು ಕನ್ನಡದಲ್ಲಿ ಬರೆದಿದ್ದನೆಂದೂ ಅದು ಓವನಿಗೆಯೂ ಒನಕೆವಾಡೂ ಆಗಿದ್ದು ಜನಪ್ರಿಯವಾಗಿತ್ತೆಂದೂ ತಿಳಿದುಬರುತ್ತದೆ. ಇದು ದಾಖಲೆಗೊಂಡಿರುವ ಮೊಟ್ಟಮೊದಲ ಕನ್ನಡ ಜನಪದ ಕಾವ್ಯ.

ಈಗ ನಮಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಕವಿರಾಜಮಾರ್ಗ ಮೊಟ್ಟಮೊದಲನೆಯದು. ನೃಪತುಂಗನ ಆಸ್ಥಾನಕವಿ ಶ್ರೀ ವಿಜಯ ಇದರ ಕರ್ತೃ. ಇದು ಕನ್ನಡ ಭಾಷೆ ವ್ಯಾಕರಣ ಅಲಂಕಾರಗಳನ್ನು ನಿರೂಪಿಸುವ ಬಹುಮುಖ್ಯವಾದ ಲಕ್ಷಣ ಗ್ರಂಥವಾಗಿದ್ದು ಕನ್ನಡಿಗರ ಕೈಪಿಡಿಯಂತಿದೆ. ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಇದರ ಕರ್ತೃ ಆಡಿರುವ ನುಡಿಗಳು ಅತ್ಯಮೂಲ್ಯವಾಗಿವೆ. ಕವಿರಾಜ ಮಾರ್ಗಕಾರ ಕೊಡುವ ಕೆಲವು ಉದಾಹರಣ ಪದ್ಯಗಳು ಕಾವ್ಯಮಯ ವಾಗಿವೆಯಾಗಿ ಶಾಸ್ತ್ರಗ್ರಂಥವೊಂದು ಆ ರೀತಿ ಇರಬೇಕಾದರೆ ಆ ವೇಳೆಗೆ ಸಾಹಿತ್ಯ ಸಾಕಷ್ಟು ಬೆಳೆದು, ಪಳಗಿ ಹದಗೊಂಡಿರಬೇಕೆಂಬುದು ಸ್ವಯಂವೇದ್ಯ ವಾಗುತ್ತದೆ. ಆದ್ದರಿಂದ ಕನ್ನಡ ಸಾಹಿತ್ಯ ಕವಿರಾಜಮಾರ್ಗಕ್ಕಿಂತಲೂ ನಾಲ್ಕೈದು ಶತಮಾನಗಳಷ್ಟಾದರೂ ಪ್ರಾಚೀನವಾಗಿರಬೇಕು. ಕವಿರಾಜಮಾರ್ಗಕಾರ ತನ್ನ ಗ್ರಂಥಗಳಲ್ಲಿ ತನಗಿಂತ ಹಿಂದಿನ ಅನೇಕ ಕವಿಗಳನ್ನು ಹೆಸರಿಸಿದ್ದಾನೆ. ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರೂ ಗದ್ಯಕವಿಗಳೆಂದೂ ಪರಮ ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಪದ್ಯಕವಿಗಳೆಂದೂ ಹೇಳಿದ್ದಾನೆ. ಇವನ ಮಾತಿನ ಧೋರಣೆಯನ್ನು ನೋಡಿದರೆ ಈತ ಹೆಸರಿಸಿರುವ ಕವಿಗಳೆಲ್ಲರೂ ಪ್ರಸಿದ್ಧ ಕವಿಗಳಾಗಿದ್ದಂತೆ ತೋರುತ್ತದೆ. ಆದರೆ ಅವರು ಬರೆದ ಕಾವ್ಯಗಳಾವುವೆಂಬುದನ್ನು ಈತ ಹೇಳಿಲ್ಲ; ಅವರ ಗ್ರಂಥಗಳಾವುವೂ ಈಗ ನಮಗೆ ಸಮಗ್ರವಾಗಿ ದೊರೆತಿಲ್ಲ. ಆದರೂ ಇವರಲ್ಲಿ ಕೆಲವರ ಹೆಸರು ನಮಗೆ ಪರಿಚಿತವಾಗಿದೆ. ಗದ್ಯಕವಿಗಳಲ್ಲಿ ಒಬ್ಬನಾದ ದುರ್ವಿನೀತ (ಸು.529-79) ಗಂಗವಂಶದ ದೊರೆಯೆಂದೂ ಈತ ಬಹುಶ್ರುತನೂ ಮೇಧಾವಿಯೂ ಆಗಿದ್ದನೆಂದೂ ಶಾಸನಗಳಿಂದ ತಿಳಿಯುತ್ತದೆ. ಕಿರಾತಾರ್ಜುನೀಯದ ಹದಿನೈದನೆಯ ಸರ್ಗಕ್ಕೆ ಇವನು ಕನ್ನಡ ಟೀಕನ್ನು ಬರೆದಿರುವಂತೆ ತಿಳಿದುಬರುತ್ತದೆ. ಪೈಶಾಚೀ ಭಾಷೆಯಲ್ಲಿದ್ದ ಬೃಹತ್ಕಥೆಯನ್ನು ವಡ್ಡಕಥಾ ಎಂಬ ಹೆಸರಿನಿಂದ ಈತ ಕನ್ನಡಕ್ಕೆ ತಂದಿದ್ದಾನೆಂದೂ ಊಹೆ. ಕವಿರಾಜಮಾರ್ಗದಲ್ಲಿ ಹೇಳಿರುವ ಪದ್ಯಕವಿಗಳಲ್ಲಿ ಚಂದ್ರನನ್ನು ಹಲವು ಕನ್ನಡ ಕವಿಗಳು ಸ್ತುತಿಸಿದ್ದಾರೆ. ಇಷ್ಟೇ ಅಲ್ಲ, ಕವಿರಾಜಮಾರ್ಗದಲ್ಲಿ ಉದಾಹರಿಸಿರುವ ಹಲವಾರು ಪದ್ಯಗಳು ಎಲ್ಲಿಂದ ಎತ್ತಿಕೊಂಡವುಗಳೆಂಬ ವಿಷಯ ಗೊತ್ತಾಗುವುದಿಲ್ಲ. ಇವುಗಳಲ್ಲಿ ಹತ್ತಾರು ಪದ್ಯಗಳು ರಾಮಾಯಣದ ಹಲವಾರು ಸನ್ನಿವೇಶಗಳನ್ನು ಸೂಚಿಸುವುದರಿಂದ, ಆ ಕಾಲಕ್ಕಾಗಲೇ ಒಂದು ರಾಮಾಯಣ ಕನ್ನಡದಲ್ಲಿ ಹುಟ್ಟಿದ್ದಿತೆಂದು ಊಹಿಸಲವಕಾಶವಿದೆ. ಇದೇ ಗ್ರಂಥದಲ್ಲಿ ಕನ್ನಡ ಕಾವ್ಯ ಪ್ರಕಾರಗಳಲ್ಲಿ ಉನ್ನತ ಗುಣವುಳ್ಳ ಗದ್ಯಪದ್ಯ ಸಂಮಿಶ್ರಣದ ಪ್ರಕಾರವನ್ನು 'ಗದ್ಯ ಕಥೆ' ಎಂಬ ಹೆಸರಿನಿಂದ ಪ್ರಾಚೀನ ಆಚಾರ್ಯರು ರಚಿಸಿದ್ದಾರೆ ಎಂದು ಹೇಳಿದೆ. ಅಲ್ಲದೆ ಕನ್ನಡಕ್ಕೇ ವಿಶಿಷ್ಟವಾದ ಚತ್ತಾಣ ಮತ್ತು ಬೆದಂಡೆಗಳಂಥ ಪದ್ಯಕಾವ್ಯಪ್ರಕಾರಗಳಿದ್ದುವೆಂದೂ ಇದರಲ್ಲಿ ಪ್ರಾಚೀನರಾದ ಕವಿಗಳು ಕೃತಿರಚನೆ ಮಾಡಿದ್ದರೆಂದೂ ತಿಳಿಯುತ್ತದೆ.

ಕವಿರಾಜಮಾರ್ಗ ಹುಟ್ಟಿದ ಹಿಂಚುಮುಂಚಿನಲ್ಲಿಯೇ ಅಸಗ, ಗುಣನಂದಿ ಮತ್ತು ಗುಣವರ್ಮ ಎಂಬ ಮೂವರು ಕವಿಗಳು ಕಾಣಬರುತ್ತಾರೆ. ಅಸಗನ ವರ್ಧಮಾನ ಚರಿತಂ ಎಂಬ ಸಂಸ್ಕೃತ ಗ್ರಂಥದಿಂದ ಈತ ಸು.853ರಲ್ಲಿ ಇದ್ದನೆಂಬುದು ಮಾತ್ರವಲ್ಲದೆ ಶ್ರೀ ಅಸಗಭೂಪಕೃತೇ ಎಂಬ ಅಲ್ಲಿನ ಹೇಳಿಕೆಯಿಂದ ಈತ ರಾಜನೂ ಆಗಿದ್ದಿರಬೇಕೆಂದು ಭಾವಿಸುವುದಕ್ಕೂ ಅವಕಾಶವಿದೆ. ಕನ್ನಡದ ಹಲವಾರು ಕವಿಗಳು ಈತನನ್ನು ಸ್ತುತಿಸಿದ್ದಾರೆ. ಈತನ 'ಕರ್ನಾಟ ಕುಮಾರಸಂಭವ' ಕನ್ನಡ ಕಾವ್ಯವೆಂದು ಜಯಕೀರ್ತಿಯ ಗ್ರಂಥದಿಂದ ತಿಳಿಯುತ್ತದೆ. ಗುಣನಂದಿಯನ್ನು ಭಟ್ಟಾಕಳಂಕ ಬಹು ಭಕ್ತಿಯಿಂದ ಭಗವಾನ್ ಗುಣನಂದಿ ಎಂದು ಕರೆದು ಗೌರವಿಸಿದ್ದಾನೆ. ಈತನ ಕಾವ್ಯದ ತುಣುಕೊಂದು ಕೇಶಿರಾಜನ ವ್ಯಾಕರಣದಲ್ಲಿದೆ. ಅದನ್ನು ನೋಡಿದರೆ ಈತ ಉತ್ತಮ ಕವಿಯೆಂದು ಭಾಸವಾಗುತ್ತದೆ. ಈತನ ಗ್ರಂಥವಾವುದೂ ಸಿಕ್ಕಿಲ್ಲ. ಗುಣವರ್ಮನು ಹರಿವಂಶ, ಶೂದ್ರಕ ಎಂಬ ಎರಡು ಉದ್ಗ್ರಂಥಗಳ ಕರ್ತೃವೆಂದು ಹೇಳುವುದಕ್ಕೆ ಅವಕಾಶವಿದೆ. ನಾಗವರ್ಮ, ಕೇಶಿರಾಜರು ಈತನ ಕಾವ್ಯಗಳನ್ನು ಹೆಸರಿಸಿದ್ದಾರೆ. ಮಲ್ಲಿಕಾರ್ಜುನ ಕವಿಯ ಸೂಕ್ತಿ ಸುಧಾರ್ಣವದಲ್ಲಿ ಗುಣವರ್ಮನ ಶೂದ್ರಕ ಕಾವ್ಯದ ಭಾಗಗಳು ದೊರೆಯುತ್ತವೆ. ಮೇಲಿನ ವಿವರಣೆಯಿಂದ ಕನ್ನಡ ಸಾಹಿತ್ಯ ಬಹುಶಃ ಕ್ರಿಸ್ತಶಕದ ಆರಂಭದಲ್ಲಿ ಪ್ರಾರಂಭವಾಗಿ ಐದು ಆರು ಶತಮಾನಗಳ ವೇಳೆಗಾಗಲೇ ಸಮೃದ್ಧಿಯಾಗಿ ಬೆಳೆದುಕೊಂಡು ಬಂದಿರಬಹುದೆಂದು ಹೇಳಬಹುದಾಗಿದೆ.

**ಪಂಪಯುಗ :** ಸು.900-1150. ಕನ್ನಡ ಸಾಹಿತ್ಯದ ಪ್ರಥಮ ಘಟ್ಟ ಪಂಪ ಯುಗ. ಪಂಪನಿಂದ ಬಸವಣ್ಣನವರೆಗೆ ಈ ಯುಗದ ವ್ಯಾಪ್ತಿಯಿದೆ. ಕನ್ನಡ ಸಾಹಿತ್ಯ ವಿಚ್ಛಿತ್ತಿಯಿಲ್ಲದೆ ಹರಿದುಕೊಂಡು ಹೋಗಿರುವುದು ಹತ್ತನೆಯ ಶತಮಾನದಿಂದ ಮುಂದೆ. ಈ ಯುಗದ ಪ್ರಮುಖ ಕೊಡುಗೆಯೆಂದರೆ ಚಂಪೂಕಾವ್ಯಗಳು. ಈ ಯುಗದಲ್ಲಿ ಪಂಪ, ರನ್ನ, ಪೊನ್ನ- ಈ ಮೂವರು ಮಹಾಕಾವ್ಯಗಳನ್ನು ರಚಿಸಿ ಮಹಾಕವಿಗಳು ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. 10ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಪಂಪ ಕನ್ನಡದ ಆದಿಕವಿಯೆಂದು ಪ್ರಸಿದ್ಧನಾಗಿದ್ದಾನೆ. ಚಾಳುಕ್ಯ ಅರಿಕೇಸರಿಯ ಆಸ್ಥಾನದಲ್ಲಿ ಕವಿಯೂ ಕಲಿಯೂ ಆಗಿದ್ದ ಈತ ಕಾಲದ ದೃಷ್ಟಿಯಿಂದ ಮಾತ್ರವಲ್ಲ, ಯೋಗ್ಯತೆಯ ದೃಷ್ಟಿಯಿಂದಲೂ ಕನ್ನಡದ ಆದಿಕವಿ. ಚಂಪೂ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿ ಅದು ಸುಮಾರು ಎರಡು ಮೂರು ಶತಮಾನಗಳ ಕಾಲ ಪ್ರಭಾವೀ ಸಾಹಿತ್ಯ ಮಾಧ್ಯಮವಾಗಿ ಬಳಕೆಯಾಗುವಂತೆ ಮಾಡಿದವನು ಈತ. ಚಂಪೂ ಪರಂಪರೆಯಲ್ಲಿ ಲೌಕಿಕ ಧಾರ್ಮಿಕ ಎಂಬ ಎರಡು ರೀತಿಯ ಕಾವ್ಯಮಾರ್ಗಗಳಿಗೆ ಪಂಪನೇ ಸದ್ಯಕ್ಕೆ ಮೊದಲಿಗನೆನ್ನಬಹುದು. ಈತನ ಎರಡು ಕಾವ್ಯಗಳಾದ ವಿಕ್ರಮಾರ್ಜುನ ವಿಜಯ ಹಾಗೂ ಆದಿಪುರಾಣಗಳಿಗೆ ಕ್ರಮವಾಗಿ ವ್ಯಾಸರ ಮಹಾಭಾರತ ಮತ್ತು ಜಿನಸೇನಾಚಾರ್ಯರ ಪೂರ್ವಪುರಾಣ ಆಕರ ಗ್ರಂಥಗಳು. ವಿಕ್ರಮಾರ್ಜುನ ವಿಜಯದಲ್ಲಿ ತನ್ನ ಆಶ್ರಯದಾತ ಅರಿಕೇಸರಿಯನ್ನು ಮಹಾಭಾರತದ ಅರ್ಜುನನೊಂದಿಗೆ ಸಮೀಕರಿಸಿ ಪೌರಾಣಿಕ, ಐತಿಹಾಸಿಕ ಅಂಶಗಳನ್ನು ಸ್ವಾರಸ್ಯವಾಗಿ ಹೊಂದಿಸಿ ಮಹಾಭಾರತದ ಕಥೆಯನ್ನು ಮೆಯ್ಗುಂದಲೀಯದೆ ನಿರೂಪಿಸಿದ್ದಾನೆ. ಆದಿಪುರಾಣ ಪ್ರಥಮಜಿನನಾದ ವೃಷಭನಾಥನ ಕಥೆಯನ್ನೊಳಗೊಂಡ, ಕಾವ್ಯಧರ್ಮ ಹಾಗೂ ಧರ್ಮ ಎರಡೂ ಸಮರಸವಾಗಿ ಬೆರೆತಿರುವ ಧಾರ್ಮಿಕ ಕಾವ್ಯ. ವಸ್ತು, ಭಾಷೆ, ಭಾವ, ಶೈಲಿ ಈ ಎಲ್ಲ ರೀತಿಯಿಂದ ಪಂಪನ ಕಾವ್ಯಗಳು ಕನ್ನಡ ಭಾಷೆಗೆ ಕೊಟ್ಟ ಅದ್ವಿತೀಯ ಕೊಡುಗೆಗಳಾಗಿವೆ.

ಪಂಪನಿಂದ ಮುಂದೆ ಸುಮಾರು ಎರಡು ಶತಮಾನಗಳಷ್ಟು ಕಾಲ ಕಾವ್ಯಕರ್ಮಕ್ಕೆ ಕೈಹಾಕಿದವರೆಲ್ಲರೂ ವಸ್ತು ರೀತಿಗಳಲ್ಲಿ, ಭಾವ ಭಾಷೆಗಳಲ್ಲಿ ಪಂಪನನ್ನೇ ಅನುಕರಿಸಿದ್ದಾರೆ; ಅನುಸರಿಸಿದ್ದಾರೆ. ಆದ್ದರಿಂದ ಈ ಕಾಲಮಾನವನ್ನು ಪಂಪಯುಗವೆಂದೇ ಕರೆಯುತ್ತಾರೆ. ಈ ಕಾಲದ ಸಾಹಿತ್ಯ ಅತ್ಯಂತ ಪ್ರೌಢವಾಗಿ, ಸತ್ತ್ವಯುಕ್ತವಾಗಿ, ರಸವತ್ತಾಗಿ ಇರುವುದರಿಂದ ಇದನ್ನು ಕನ್ನಡ ಸಾಹಿತ್ಯದ ಸುವರ್ಣಯುಗ ಎಂದೂ ಕರೆಯುವುದುಂಟು. ಈ ಯುಗದಲ್ಲಿ ಚಂಪೂಕಾವ್ಯಗಳು ಪ್ರಚುರವಾಗಿರುವುದರಿಂದ ಚಂಪೂಯುಗವೆಂದೂ ಈ ಕಾವ್ಯಗಳಲ್ಲಿ ಸಾಮಾನ್ಯವಾಗಿ ವೀರರಸ ನೊರೆಗಟ್ಟಿ ಹರಿಯುತ್ತಿರುವುದರಿಂದ ವೀರಯುಗವೆಂದೂ ಹೆಸರಿಸುವ ವಾಡಿಕೆಯಿದೆ. ಈ ಯುಗದ ಕವಿಗಳೆಲ್ಲರೂ ಬಹುಮಟ್ಟಿಗೆ ರಾಜಾಶ್ರಿತರು.

ಪಂಪನಂತೆಯೇ ಜೈನಧರ್ಮಾನುಯಾಯಿಗಳಾದ ಮತ್ತಿಬ್ಬರು ಕವಿಗಳು ಪೊನ್ನ ಮತ್ತು ರನ್ನ. ಇಬ್ಬರೂ ರಾಜಪೂಜಿತರಾದ ಆಸ್ಥಾನಕವಿಗಳು. ಪಂಪನಂತೆಯೇ ತಮ್ಮ ಕಾವ್ಯಗಳಲ್ಲಿ ಒಂದನ್ನು ಧರ್ಮಕ್ಕೂ ಮತ್ತೊಂದನ್ನು ಲೌಕಿಕಕ್ಕೂ ಮೀಸಲು ಮಾಡಿದ್ದಾರೆ. ಲೌಕಿಕ ಕಾವ್ಯಗಳಲ್ಲಿ ಆಯಾ ಕವಿಗಳ ಪೋಷಕರು ಪುರಾಣಪುರುಷರ ವೇಷವನ್ನು ಧರಿಸಿ, ಆಯಾ ಕಾವ್ಯಗಳ ನಾಯಕರಾಗಿ ಮೆರೆದಿದ್ದಾರೆ. ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ಆಸ್ಥಾನಕವಿಯಾಗಿದ್ದ, ಕವಿಚಕ್ರವರ್ತಿ ಎಂಬ ಬಿರುದನ್ನು ಹೊಂದಿದ್ದ ಪೊನ್ನನ ಶಾಂತಿಪುರಾಣ ಜೈನ ಧಾರ್ಮಿಕ ಗ್ರಂಥ. ಈತನ

'ಭುವನೈಕರಾಮಾಭ್ಯುದಯ' ಈಗ ಉಪಲಬ್ಧವಿಲ್ಲ. ಇದು ರಾಮಾಯಣದ ಕಥೆಯನ್ನು ಆಧರಿಸಿ ರಚಿತವಾದ ಲೌಕಿಕ ಕಾವ್ಯವೆಂದು ಊಹಿಸಲು ಅವಕಾಶವಿದೆ.

ರನ್ನನೂ ಪಂಪನ ಮೇಲ್ಪಂಕ್ತಿಯಲ್ಲಿ ಕಾವ್ಯರಚನೆ ಮಾಡಿದವನಾದರೂ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಈತನ ಸಾಹಸಭೀಮವಿಜಯಕ್ಕೆ (ಗದಾಯುದ್ಧ) ಪಂಪನ ಕೃತಿಯೇ ಪ್ರಮುಖ ಆಕರವಾದರೂ ರನ್ನನ ವ್ಯಕ್ತಿತ್ವದ ಅಚ್ಚು ಈ ಕಾವ್ಯದಲ್ಲಿ ಮೂಡಿಬಂದಿದೆ. ಕಥಾವಸ್ತು ಭೀಮ-ದುರ್ಯೋಧನರ ಗದಾಯುದ್ಧವಾದರೂ ಇಡೀ ಭಾರತದ ಕಥೆಯೇ ಸಿಂಹಾವಲೋಕನಕ್ರಮದಿಂದ ಇಲ್ಲಿ ದಿಗ್ದರ್ಶಿತವಾಗಿದೆ. ಇದಕ್ಕೆ ವಾಹಕವಾಗಿರುವ ನಾಟಕೀಯ ಶೈಲಿ ರನ್ನ ಕನ್ನಡಕ್ಕಿತ್ತಿರುವ ಕಾಣಿಕೆ. ಈತನ ಅಜಿತಪುರಾಣಕ್ಕೆ ಜೈನಧಾರ್ಮಿಕ ಕಾವ್ಯಗಳಲ್ಲಿ ಪಂಪನ ಆದಿಪುರಾಣವನ್ನು ಬಿಟ್ಟರೆ ಉನ್ನತಸ್ಥಾನ ದೊರಕಿದೆ.

ವಡ್ಡಾರಾಧನೆ ಇದೇ ಕಾಲದಲ್ಲಿ ರಚಿತವಾದ ಒಂದು ವಿಶಿಷ್ಟ ಕೃತಿ. ಶಿವಕೋಟ್ಯಾಚಾರ್ಯ (ಸು.920) ಇದರ ಕರ್ತೃ. ಗದ್ಯದಲ್ಲಿರುವ ಈ ಕೃತಿ ಈಗ್ಗೆ ಸಹಸ್ರ ವರ್ಷಗಳ ಹಿಂದಿನ ಭಾಷಾಸ್ವರೂಪಕ್ಕೂ ಜನಜೀವನಕ್ಕೂ ಕನ್ನಡಿ ಹಿಡಿಯುತ್ತದೆ. ಸರಳ ಸುಂದರ ಶೈಲಿ, ಪ್ರಾಸಾದಿಕ ಗುಣ, ಕಥನಕಲೆ- ಇವು ಈ ಕೃತಿಯ ವೈಶಿಷ್ಟ್ಯಗಳು. ಕನ್ನಡ ಗದ್ಯ ಇತಿಹಾಸದಲ್ಲಿ ವಡ್ಡಾರಾಧನೆ ಒಂದು ಮೈಲಿಗಲ್ಲು.

ಈ ಯುಗದ ಮತ್ತೊಬ್ಬ ಹಿರಿಯ ಕವಿ ಒಂದನೆಯ ನಾಗವರ್ಮ. ಕರ್ನಾಟಕ ಕಾದಂಬರಿ, ಛಂದೋಂಬುಧಿಗಳು ಈತನ ಗ್ರಂಥಗಳು. ಈತನೂ ಪಂಪನಂತೆಯೇ ತನ್ನ ಸ್ವಾಮಿ ಚಂದ್ರರಾಜನನ್ನು ಕಾವ್ಯದ ಕಥಾನಾಯಕನೊಡನೆ ಸಮೀಕರಿಸಿ, ತನ್ನ ಕರ್ನಾಟಕ ಕಾದಂಬರಿಯನ್ನು ರಚಿಸಿದನೆಂದು ತೋರುತ್ತದೆ. ಆದರೆ ಇದನ್ನು ಸ್ಪಷ್ಟಪಡಿಸುವಷ್ಟು ಸಾಧನಗಳಿಲ್ಲ. ಈತನ ಛಂದೋಂಬುಧಿ ಕನ್ನಡದ ಮೊಟ್ಟ ಮೊದಲ ಛಂದೋಗ್ರಂಥ. ಕರ್ನಾಟಕ ಕಾದಂಬರಿ ಬಾಣಭಟ್ಟನ ಸಂಸ್ಕೃತ ಕಾದಂಬರಿಯ ಅನುವಾದ. ಮೂಲವನ್ನು ಕವಿ ಕನ್ನಡ ಚಂಪೂರೂಪಕ್ಕೆ ತಿರುಗಿಸಿದ್ದಾನೆ. ಮೂಲದ ಪದಗಳು ಕನ್ನಡ ರೂಪಾಂತರದಲ್ಲಿ ಕಂಡುಬರುವುವಾದರೂ ನಾಗವರ್ಮ ಬರಿಯ ಭಾಷಾಂತರಕಾರನಲ್ಲ. ಸಂಸ್ಕೃತದ ಉತ್ತಮ ಕಾವ್ಯವೊಂದನ್ನು ಸ್ವತಂತ್ರ ಕೃತಿಯೆಂಬಂತೆ ಕನ್ನಡದಲ್ಲಿ ರಚಿಸಿ, ಅದೊಂದು ಸಂಪ್ರದಾಯವನ್ನು ಬೆಳೆಸಿದವರಲ್ಲಿ ಈತ ಮೊದಲಿಗ.

ಈ ಯುಗದಲ್ಲಿ ಹನ್ನೊಂದನೆಯ ಶತಮಾನದ ಕನ್ನಡ ಸಾಹಿತ್ಯ ಹಿಂದಿನದರಷ್ಟು ಉಜ್ಜ್ವಲವಾಗಿಲ್ಲ. ಆದರೆ ಹೆಚ್ಚು ವೈವಿಧ್ಯಮಯವಾಗಿದೆ. ಕಾವ್ಯಗಳ ಜೊತೆಯಲ್ಲಿ ಇಲ್ಲಿ ಹಲವು ಶಾಸ್ತ್ರ ಗ್ರಂಥಗಳೂ ಕಾಣಿಸಿಕೊಂಡಿವೆ. ಅನೇಕ ವೇಳೆ ಈ ಶಾಸ್ತ್ರಗ್ರಂಥಗಳು ಕಾವ್ಯಮಯ ವಾಗಿಯೂ ಇರುತ್ತವೆ. ಚಾವುಂಡರಾಯನ (ಸು.1025) ಲೋಕೋಪಕಾರ ಇಂಥ ಒಂದು ಗ್ರಂಥ. ಜೋತಿಷ್ಯದಿಂದ ವಿಷವೈದ್ಯದವರೆಗೆ ಹಲವಾರು ವಿಷಯಗಳನ್ನು ಒಳಗೊಂಡ ಈ ಗ್ರಂಥ ತನ್ನ ಹೆಸರನ್ನು ಸಾರ್ಥಕ ಪಡಿಸಿಕೊಂಡಿದೆ. ಚಂದ್ರರಾಜನ (ಸು.1025) ಮದನತಿಲಕ ಎಂಬ ಕಾಮಶಾಸ್ತ್ರವೂ ಶ್ರೀಧರಾಚಾರ್ಯನ (ಸು.1049) ಜಾತಕತಿಲಕವೆಂಬ ಜೋತಿಷ್ಯ ಗ್ರಂಥವೂ ಇದೇ ಜಾತಿಗೆ ಸೇರಿದ ಶಾಸ್ತ್ರಗ್ರಂಥಗಳು. ಇವೆಲ್ಲವೂ ಚಂಪೂ ಶೈಲಿಯಲ್ಲಿವೆ. ನಾಗವರ್ಮಾಚಾರ್ಯನ (ಸು.1071) ಚಂದ್ರಚೂಡಾಮಣಿಶತಕ ಕನ್ನಡದ ಮೊಟ್ಟಮೊದಲ ಶತಕ ಗ್ರಂಥವಾಗಿದೆ. ಮೇಲಿನ ಕವಿಗಳಲ್ಲಿ ಶ್ರೀಧರಾಚಾರ್ಯನನ್ನು (ಜೈನಕವಿ) ಬಿಟ್ಟರೆ ಉಳಿದವರೆಲ್ಲ ವೈದಿಕ ಕವಿಗಳೆಂಬುದು ಗಮನಾರ್ಹ.

ಒಂದನೆಯ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿಯಾಗಿದ್ದ ದುರ್ಗಸಿಂಹ (ಸು.1031) ಪಂಚತಂತ್ರವೆಂಬ ಕಾವ್ಯವನ್ನು ಬರೆದಿದ್ದಾನೆ. ಇದು ಸಂಸ್ಕೃತದಲ್ಲಿ ಬರೆದ ಪಂಚತಂತ್ರದ ಕನ್ನಡ ಅನುವಾದ, ಚಂಪೂರೂಪದಲ್ಲಿದೆ. ಹಲವು ಉಪಕಥೆಗಳು ಇಲ್ಲಿ ಗದ್ಯರೂಪದಲ್ಲಿ ಕಾಣಿಸಿಕೊಂಡಿವೆ. ಕನ್ನಡ ಗದ್ಯ ಸಾಹಿತ್ಯದ ಇತಿಹಾಸದಲ್ಲಿ ದುರ್ಗಸಿಂಹನಿಗೆ ಒಂದು ಪ್ರಮುಖ ಸ್ಥಾನ ಸಲ್ಲುತ್ತದೆ.

ಹೊಯ್ಸಳ ಒಂದನೆಯ ಬಲ್ಲಾಳನ ಆಸ್ಥಾನ ಕವಿಯಾಗಿದ್ದನೆನ್ನಲಾದ ನಾಗಚಂದ್ರ ಈ ಯುಗದಲ್ಲಿ ಕೃತಿರಚನೆ ಮಾಡಿದ ಇನ್ನೊಬ್ಬ ಅತ್ಯುತ್ತಮ ಕವಿ. ತನ್ನನ್ನು ಅಭಿನವಪಂಪನೆಂದು ಕರೆದುಕೊಂಡಿರುವ ಈತ ಮಲ್ಲಿನಾಥಪುರಾಣ, ರಾಮಚಂದ್ರಚರಿತಪುರಾಣ ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ಎರಡೂ ಧರ್ಮಗ್ರಂಥಗಳೇ. ಮೊದಲನೆಯದು 19ನೆಯ ತೀರ್ಥಂಕರನ ಕಥೆಯನ್ನೂ ಎರಡನೆಯದು ಜೈನ ಪುರಾಣಾನುಸಾರಿಯಾದ ರಾಮಾಯಣ ಕಥೆಯನ್ನೂ ನಿರೂಪಿಸುತ್ತದೆ. ಇಲ್ಲಿನ ಧರ್ಮನಿರೂಪಣೆ ಅತ್ಯಂತ ಕಾವ್ಯಮಯವಾಗಿದ್ದು ಅಭಿನವಪಂಪನ ಆತ್ಮಸಾರ ಎಂಬ ಕೀರ್ತಿಗೆ ಪಾತ್ರವಾಗಿದೆ.

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಸಾಹಿತ್ಯದಲ್ಲಿ ಹೊಸ ತಿರುವು ಕಾಣಿಸಿಕೊಂಡಿತು. ನಯಸೇನ, ಬ್ರಹ್ಮಶಿವ ಮೊದಲಾದ ಜೈನಕವಿಗಳು ಸಂಸ್ಕೃತ ಭೂಯಿಷ್ಠವಾದ ಮಾರ್ಗೀ ಶೈಲಿಯನ್ನು ಪ್ರತಿಭಟಿಸಿ, ಸುಲಲಿತ ದೇಶೀ ಶೈಲಿಯಲ್ಲಿ ಕೃತಿರಚನೆ ಮಾಡತೊಡಗಿದರು. ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯ ಪರೀಕ್ಷೆ ಈ ಮಾದರಿಯಲ್ಲಿ ರಚಿತವಾದ ಮುಖ್ಯ ಗ್ರಂಥಗಳು. ಇವರ ಕಾವ್ಯಗಳಲ್ಲಿ ಪಂಪ ಹಾಕಿಕೊಟ್ಟ ಮಾರ್ಗದ ಪ್ರಭಾವವಿದ್ದರೂ ಇವರು ಭಾಷಾದೃಷ್ಟಿಯಿಂದ ಹೊಸದನ್ನು ಕಾವ್ಯದಲ್ಲಿ ತರಬೇಕೆಂದು ಹೊರಟು ಕಥೆಗಳ ಮೂಲಕ ತಮ್ಮ ಧರ್ಮಪ್ರಸಾರ ಮಾಡಿದರು. ಇವರ ಕಾವ್ಯಗಳಲ್ಲಿ ಪರಮತ ವಿಡಂಬನೆ ಎದ್ದು ಕಾಣುತ್ತದೆ. ಇದು ಬುದ್ಧಿಪೂರ್ವಕವಾದುದಾದರೂ ವಿವೇಚನಾ ರಹಿತವಾದುದಲ್ಲ.

ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ರಾಜಾದಿತ್ಯನ ವ್ಯವಹಾರ ಗಣಿತ, ಕೀರ್ತಿವರ್ಮನ ಗೋವೈದ್ಯ, ಜಗದ್ದಳ ಸೋಮನಾಥನ ಕಲ್ಯಾಣಕಾರಕ, ಉದಯಾದಿತ್ಯನ ಉದಯಾದಿತ್ಯಾಲಂಕಾರ, ಎರಡನೆಯ ನಾಗವರ್ಮನ ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ, ವಸ್ತುಕೋಶ ಮೊದಲಾದ ಗಮನಾರ್ಹ ಶಾಸ್ತ್ರಗ್ರಂಥಗಳು ರಚಿತವಾದವು. ಎರಡನೆಯ ನಾಗವರ್ಮನ ವರ್ಧಮಾನಪುರಾಣ ಎಂಬ ಕಾವ್ಯ ಸಿಕ್ಕಿದೆ.

**ವಚನ ಯುಗ :** ಹನ್ನೆರಡನೆಯ ಶತಮಾನದ ಉತ್ತರಾರ್ಧ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ನಡೆದ ದೊಡ್ಡದೊಂದು ವಿಪ್ಲವವನ್ನು ಒಳಗೊಂಡಿದೆ. ಇಲ್ಲಿಂದ ಮುಂದೆ ಕನ್ನಡ ಸಾಹಿತ್ಯ ಚರಿತ್ರೆಯು ನೂತನ ಯುಗವೊಂದು ಪ್ರಾರಂಭವಾಗುತ್ತದೆ. ಇಲ್ಲಿಯವರೆಗೆ ಕಾವ್ಯಕರ್ಮಕ್ಕೆ ಕೈಹಾಕಿದವರೆಲ್ಲರೂ ಬಹುಮಟ್ಟಿಗೆ ರಾಜಾಶ್ರಯದಲ್ಲಿದ್ದವರು. ಇವರ ಹೆಗ್ಗುರಿ ರಾಜಾನುಗ್ರಹ ಮತ್ತು ರಾಜಾಸ್ಥಾನ ಪಂಡಿತರ ಮೆಚ್ಚುಗೆ. ಇವರ ಕಾವ್ಯರಚನೆಗೆ ಸಂಸ್ಕೃತ ಕಾವ್ಯಗಳು ಆಧಾರ. ವಸ್ತುರೀತಿಗಳಲ್ಲಿ, ಭಾವ ಭಾಷೆಗಳಲ್ಲಿ ಇವರದು ಸಂಸ್ಕೃತ ಕಾವ್ಯಗಳ ಅನುಕರಣ. ಪಾಂಡಿತ್ಯ ಹೆಪ್ಪುಗಟ್ಟಿ ಕುಳಿತಿದ್ದ ಈ ಕಾವ್ಯಗಳು ಶ್ರೀಸಾಮಾನ್ಯನಿಗೆ ಎಟುಕುವಂತಿರಲಿಲ್ಲ. ಅವುಗಳ ಭಾಷಾಶೈಲಿಗಳಲ್ಲಿ ಪರಿಷ್ಕರಣವಾಗಬೇಕೆಂಬ ಕೂಗು ಕವಿರಾಜಮಾರ್ಗ ಕರ್ತೃವಿನ ಕಾಲದಿಂದಲೂ ಇತ್ತು. ಅದನ್ನು ಕಾರ್ಯತಃ ನೆರವೇರಿಸಿ, ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯನ್ನುಂಟುಮಾಡಿದ ಕೀರ್ತಿ ವೀರಶೈವ ಕವಿಗಳಿಗೆ ಸಲ್ಲಬೇಕು. ಈ ಕವಿಗಳಿಗೆ ಸ್ಫೂರ್ತಿಯನ್ನು ನೀಡಿದವರು ವೀರಶೈವ ವಚನಕಾರರು.

ವಚನವಾಙ್ಮಯದ ಹುಟ್ಟಿಗೆ ಅಂದಿನ ಕಾಲದ ಸಾಮಾಜಿಕ ಸ್ಥಿತಿಯೂ ಬಹುಮಟ್ಟಿಗೆ ಕಾರಣವಾಗಿದೆ. ಈ ವೇಳೆಗಾಗಲೇ ಕನ್ನಡ ನಾಡಿನಲ್ಲಿ ಜೈನಮತ ಅವನತಿ ಹೊಂದುತ್ತಿತ್ತು. ಅನಾದಿಕಾಲದಿಂದಲೂ ಹರಿದು ಬಂದಿದ್ದ ವೈದಿಕಮತ ತನ್ನ ಸತ್ತ್ವವನ್ನು ಕಳೆದುಕೊಂಡು ಮೂಢನಂಬಿಕೆ, ಅಂಧಶ್ರದ್ಧೆ, ಡಾಂಭಿಕತೆ, ಜಾತೀಯತೆ, ಮಡಿವಂತಿಕೆಗಳಲ್ಲಿ ಮುಳುಗಿಹೋಗಿತ್ತು. ಇದನ್ನು ಪ್ರತಿಭಟಿಸಿ ಸರ್ವಸಮಾನತೆ, ಮಾನವಪ್ರೇಮ, ದೈವಭಕ್ತಿ, ನೈತಿಕ ಜೀವನಗಳಿಗೆ ಸ್ಥಾನಕೊಡುವ ಹೊಸ ಸಮಾಜವೊಂದರ ಸೃಷ್ಟಿ ಅತ್ಯವಶ್ಯವಾಗಿತ್ತು. ಇದರ ಪೂರೈಕೆಯೋ ಎಂಬಂತೆ ಕರ್ನಾಟಕದಲ್ಲಿ ವೀರಶೈವ ಧರ್ಮ ಕಾಣಿಸಿಕೊಂಡಿತು. ಆಧ್ಯಾತ್ಮ ಜ್ಞಾನವೆಲ್ಲ ಸಂಸ್ಕೃತದಲ್ಲಿದ್ದುದರಿಂದ ಅದು ಶ್ರೀಸಾಮಾನ್ಯನ ಸ್ವತ್ತಾಗುವಂತೆ ಮಾಡಲು ವಚನವಾಙ್ಮಯ ಹುಟ್ಟಿಕೊಂಡಿತು.

ಅಧ್ಯಾತ್ಮ, ಧರ್ಮ, ನೀತಿಗಳ ನಿರೂಪಣೆ ವಚನಗಳ ತಿರುಳು. ಚಿಲುಮೆಯಿಂದ ನೀರು ಉಕ್ಕುವಂತೆ ಸಂತರ ಅನುಭವದಿಂದ ಅಭಿವ್ಯಕ್ತವಾಗುವ ಈ ವಾಙ್ಮಯಕ್ಕೆ ಪುರಸ್ಕಾರ ದೊರೆತಿರುವುದು ಇಲ್ಲಿನ

ಪಾಂಡಿತ್ಯದಿಂದಲ್ಲ. ಧರ್ಮ ದರ್ಶನದಿಂದ ಮಹಾತತ್ತ್ವಗಳು ತಿಳಿಯಾದ ಭಾಷೆಯಲ್ಲಿ ಕಾಣಿಸಿಕೊಂಡಿರುವ ವಚನ ವಾಙ್ಮಯಕ್ಕೆ ಕನ್ನಡದ ಉಪನಿಷತ್ತುಗಳೆಂಬ ಹೆಸರೂ ಬಂದಿದೆ. ಸರಳ ಹಾಗೂ ಶಕ್ತಿಯುತವಾದ ಈ ವಾಙ್ಮಯ ಕನ್ನಡಕ್ಕೇ ಮೀಸಲಾದ, ಕನ್ನಡಕ್ಕೆ ಹೆಗ್ಗಳಿಕೆಯನ್ನು ತಂದುಕೊಟ್ಟಿರುವ, ಕನ್ನಡಿಗರ ಹಿರಿಯ ಸ್ವತ್ತು. ಇದರ ವಸ್ತು ರೀತಿಗಳು ಭಾವಭಾಷೆಗಳು ಕನ್ನಡ ನೆಲದಲ್ಲಿ ಹುಟ್ಟಿ ಅಪ್ಪಟ ಕನ್ನಡತನದಿಂದ ತುಂಬಿವೆ. ಈ ಕಾಲವನ್ನು ಕನ್ನಡ ಸಾಹಿತ್ಯದ ಪ್ರಜಾಪ್ರಭುತ್ವದ ಕಾಲ ಎಂದು ಕರೆದರೆ ತಪ್ಪಾಗಲಾರದು. ಸರ್ವಸಮತೆಯನ್ನು ಸಾರಿದ ವೀರಶೈವಧರ್ಮ ಎಲ್ಲ ಜಾತಿ, ಮತ, ಪಂಥದ ಜನರಿಗೂ ತನ್ನ ಧರ್ಮಧ್ವಜದ ಅಡಿಯಲ್ಲಿ ಎಡೆಯಿತ್ತಿತು. ಗಂಡು ಹೆಣ್ಣುಗಳೆಂಬ ಭೇದಭಾವವಿಲ್ಲದೆ ಎಲ್ಲರೂ ಸತ್ಯ ಸಾಕ್ಷಾತ್ಕಾರಕ್ಕೆ ಅವಕಾಶ ಪಡೆದರು. ಬ್ರಾಹ್ಮಣನಿಂದ ಶೂದ್ರನವರೆಗೆ ಎಲ್ಲರೂ ಅನುಭಾವಿಗಳಾಗಿ ತಮಗೆ ಸ್ಫುರಿಸಿದುದನ್ನು ವಚನರೂಪದಲ್ಲಿ ಅಭಿವ್ಯಕ್ತಿಸಿದರು. ನೂರಾರು ಜನ ವಚನಕಾರರು ಏಕಕಾಲದಲ್ಲಿ ಕಾಣಿಸಿಕೊಂಡರು. ಇವರು ಕಾಯಕಕ್ಕೆ ಮನ್ನಣೆಯನ್ನು ಕೊಟ್ಟರೇ ಹೊರತು ಜಾತಿಗಲ್ಲ, ಐಶ್ವರ್ಯಕ್ಕಲ್ಲ, ಅಧಿಕಾರಕ್ಕಲ್ಲ. ಶೂನ್ಯಸಿಂಹಾನದ ಮೇಲೆ ಮಂಡಿಸಿದ್ದ ಪ್ರಭುದೇವನ ಅನುಭವಮಂಟಪದಲ್ಲಿ ಈ ವಚನಗಳು ಒಪ್ಪಿಗೆಯ ಮುದ್ರೆಯನ್ನು ಪಡೆದವು. ಈ ವಚನಕಾರರೆಲ್ಲರ ಆದರ್ಶ ಆಶೋತ್ತರಗಳು ಒಂದೇ ಆಗಿದ್ದರೂ ಅವರ ಬುದ್ಧಿ, ಜ್ಞಾನ, ಸಂಸ್ಕಾರ, ಸಂಸ್ಕೃತಿ, ಪ್ರತಿಭೆಗಳಲ್ಲಿ ಸಾಕಷ್ಟು ಏರುಪೇರುಗಳಿರುವುದು ಸಹಜವಾಗಿಯೆ ಇದೆ. ಆದ್ದರಿಂದ ವಚನವಾಙ್ಮಯದಲ್ಲಿ ಸಾಕಷ್ಟು ಭಾಗ ಸಂಪ್ರದಾಯಶೀಲವಾಗಿ, ಅನುಕರಣ ಲೋಲವಾಗಿ ಚರ್ವಿತಚರ್ವಣವಾಗಿದೆ.

ಮಾದಾರ ಚನ್ನಯ್ಯ, ಡೋಹರಕಕ್ಕಯ್ಯ ಕೊಂಡುಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ ಇವರು ಆದ್ಯವಚನಕಾರರೆಂದು ಕೇಳಿಬರುತ್ತದೆ. ದೇವರ ದಾಸಿಮಯ್ಯನ ವಚನಗಳ ಮುಖ್ಯ ಲಕ್ಷಣ ಪ್ರಾಸಾದಿಕ ಗುಣ. ಬಸವಣ್ಣನ ಸಮಕಾಲೀನನಾದರೂ ಆತನಿಗಿಂತ ಹಿರಿಯನೆನಿಸಿದ ಸಕಲೇಶ ಮಾದರಸನ ವಚನಗಳು ಹೆಚ್ಚು ಸೂತ್ರಬದ್ಧವಾಗಿ ಮಾರ್ಮಿಕವಾಗಿವೆ. ವಚನಕಾರರ ಸಾಲಿನಲ್ಲಿ ಪ್ರಭುದೇವ ಅತ್ಯುನ್ನತ ಸ್ಥಾನವನ್ನು ಗಳಿಸಿದ್ದಾನೆ. ಈತನ ನುಡಿಗಳು ಪ್ರಾಮಾಣಿಕವಾದುವು, ಸತ್ಯನಿಷ್ಠವಾದುವು, ನಿರ್ದಾಕ್ಷಿಣ್ಯವಾದವು. ಬಸವಣ್ಣ ಈ ಯುಗದ ಮಹತ್ತ್ವದ ವಚನಕಾರ. ಈತ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಕ್ರಾಂತಿಯ ನೇತಾರನೂ ಹೌದು. ಪ್ರಭುದೇವನದು ಜ್ಞಾನಮಾರ್ಗವಾದರೆ ಬಸವಣ್ಣನದು ಭಕ್ತಿಮಾರ್ಗ. ಮಾನವ ಬಯಸಬಹುದಾದ ಅಧಿಕಾರ, ಐಶ್ವರ್ಯ, ಕಾಮಿನಿ, ಕೀರ್ತಿ, ರೂಪು, ಯೌವನ, ವೈಭವಗಳ ಮಧ್ಯದಲ್ಲಿಯೂ ಈತನ ಚೇತನ ಊರ್ಧ್ವಮುಖವಾಯಿತು. ಸಾಧನೆಯ ಹೆದ್ದಾರಿಯಲ್ಲಿ ಹೆಜ್ಜೆ ಹೆಜ್ಜೆಯಾಗಿ ಮುಂದುವರೆದು ಈತ ಹೇಗೆ ದೇವಮಾನವನಾದನೆಂಬುದು ಈತನ ವಚನಗಳಲ್ಲಿ ಒಡಮೂಡಿದೆ. ಸಮಾಜದ ಕೊಳೆಕಸಗಳನ್ನು, ಅಂಧಕಾರ ಅಜ್ಞಾನಗಳನ್ನು, ಓರೆಕೋರೆಗಳನ್ನು ಕಂಡು ಬಸವಣ್ಣ ಕನಿಕರಯುಕ್ತವಾದ ರೋಷ ಉಕ್ಕಿ ಅವುಗಳನ್ನು ಖಂಡಿಸಿದ್ದಾನೆ. ಈತನ ಬೋಧನಾವಿಧಾನ ಸುಂದರವಾದ ಸಾಹಿತ್ಯದ ರೂಪದಲ್ಲಿದೆ.

ವೀರಶೈವ ಧರ್ಮದ ಉದಾರ ತತ್ತ್ವದಿಂದ ಮೂಡಿಬಂದ ಹಲವು ವಚನಕಾರ್ತಿಯರಲ್ಲಿ ಮಹಾದೇವಿಯಕ್ಕ ಅಗ್ರಗಣ್ಯಳು. ಬಸವಣ್ಣನ ವಚನಗಳಂತೆ ಈಕೆಯ ವಚನಗಳೂ ಸತ್ತ್ವಯುಕ್ತವಾಗಿ ಸಾಹಿತ್ಯಮಯವಾಗಿ, ಭಾವಗೀತೆಯ ಮಾಧುರ್ಯದಿಂದ ತುಂಬಿವೆ. ಮುಕ್ತಾಯಕ್ಕ, ಮಹಾದೇವಿಯಮ್ಮ, ಲಕ್ಕಮ್ಮ ಮೊದಲಾದ ವಚನಕಾರ್ತಿಯರ ಹೆಸರುಗಳೂ ಇಲ್ಲಿ ಸ್ಮರಣಾರ್ಹವಾದುವು.

ಈ ಯುಗದಲ್ಲಿ ವಚನ ರಚನೆಗೆ ಕೈಹಾಕಿದ ವಚನಕಾರರ ಸಂಖ್ಯೆ ಅಪರಿಮಿತ. ಅವರಲ್ಲಿ ಚೆನ್ನಬಸವಣ್ಣ, ಆದಯ್ಯ, ಹಡಪದ ಅಪ್ಪಣ, ಮಡಿವಾಳ ಮಾಚಯ್ಯ, ಸೊಡ್ಡಳಬಾಚರಸ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ, ಮೇದರ ಕೇತಯ್ಯ, ಕೋಲ ಶಾಂತಯ್ಯ ಮೊದಲಾದ ಸಂತರು ತಮ್ಮ ವಚನ ರಚನೆಯಿಂದ ಕನ್ನಡದ ಆಧ್ಯಾತ್ಮಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

**ಹರಿಹರಯುಗ :** ಹನ್ನೆರಡನೆಯ ಶತಮಾನದ ಉತ್ತರಾರ್ಧದಿಂದ ಮುಂದಕ್ಕೆ ನಡೆದ ಸಾಹಿತ್ಯ ಸೃಷ್ಟಿಯಲ್ಲಿ ವಚನಕಾರರ ಪ್ರಭಾವ ನಿಚ್ಚಳವಾಗಿ ಕಂಡುಬರುತ್ತದೆ. ಇದೇ ಕಾಲದಲ್ಲಿ ಪಂಪ ಹರಿಯಬಿಟ್ಟ ಚಂಪುವಿನ ಚಕ್ರ ಮುಂದುವರಿಯುತ್ತ ಹೋಯಿತಾದರೂ ಶುದ್ಧ ಕನ್ನಡದ ದೇಶೀ ಶೈಲಿಯಲ್ಲಿ ಕನ್ನಡ ಕಾವ್ಯರಚನೆಯನ್ನು ಮಾಡುವ ಒಂದು ಹೊಸ ಹೆದ್ದಾರಿಯೂ ಆಗ ಹುಟ್ಟಿಕೊಂಡಿತು. ಭಾವ ಭಾಷೆ ವಸ್ತು ರೀತಿಗಳಲ್ಲಿ ಹಿಂದಿನ ಕಾವ್ಯಗಳಿಂದ ಭಿನ್ನವಾಗಿ ಸರ್ವತಂತ್ರಸ್ವತಂತ್ರವಾದ ಚಿರನೂತನತೆಯನ್ನು ಮೆರೆದು ಅದ್ಭುತ ಕ್ರಾಂತಿಯೊಂದನ್ನು ನಡೆಸಿ ಕನ್ನಡ ಸಾಹಿತ್ಯದ ಸ್ವತಂತ್ರಯುಗವೊಂದನ್ನು ಸ್ಥಾಪಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾ ಕಲ್ಯಾಣ, ಶಿವಶರಣರ ರಗಳೆಗಳು ಇವು ಈತನ ಕಾವ್ಯಗಳು.

'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಅಕ್ಕಟಾ ತನತನಗಿಂದ್ರಚಂದ್ರರವಿಕರ್ಣದಧೀಚಿಬಲೀಂದ್ರರೆಂದು ಮೇಣ್ ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ ನೆನೆ ಪೊಗಳರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ' ಎಂಬ ಮಾತುಗಳಲ್ಲಿ ಊಳಿಗದಲ್ಲಿ ಈತನಿಗಿದ್ದ ಜಿಹಾಸೆಯೊಡನೆ ಪಂಪಯುಗದ ಸಾಹಿತ್ಯ ಸ್ವರೂಪದ ಖಂಡನೆಯೂ ಕಂಡುಬರುತ್ತದೆ. ಈತನ ಸ್ವತಂತ್ರ ಮನೋವೃತ್ತಿ ಇಲ್ಲಿ ಸೂಚಿತವಾಗಿದೆ. ರಾಜಮಹಾರಾಜರನ್ನು ಕುರಿತು, ಮಹಾಕವಿಗಳನ್ನು ಕುರಿತು ನಡೆಯುತ್ತಿದ್ದ ಕಾವ್ಯರಚನೆ ಸಾಮಾನ್ಯವ್ಯಕ್ತಿಗಳನ್ನು ಕುರಿತು ನಡೆಯುವಂತಾದುದು ಹರಿಹರನಿಂದ. ಈತನ ಗಿರಿಜಾಕಲ್ಯಾಣದ ಕಥಾವಸ್ತು ಮತ್ತು ನಿರೂಪಣಾ ವಿಧಾನಗಳು ಹಳೆಯವಾದರೂ ಸಂಪ್ರದಾಯಕ್ಕೆ ವಿರುದ್ಧವಾಗಿ, ಸಿಡಿದೆದ್ದಿರುವ ಆತನ ಸ್ವತಂತ್ರ ಮನೋವೃತ್ತಿ ಇಲ್ಲಿ ಕಂಡುಬರುತ್ತದೆ. ಈತನ ಈ ಸ್ವತಂತ್ರ ಮನೋವೃತ್ತಿ ಸಂಪೂರ್ಣ ಅರಳಿರುವುದು ಇವನ ರಗಳೆಗಳಲ್ಲಿ.

ಹರಿಹರ ಬಳಸಿದ ರಗಳೆಯ ಛಂದಸ್ಸು ಒಂದು ರೀತಿಯಲ್ಲಿ ಅಚ್ಚ ಕನ್ನಡದ್ದು. ಸಾಹಿತ್ಯದಲ್ಲಿ ಕ್ವಚಿತ್ತಾಗಿ ಬಳಕೆಯಲ್ಲಿದ್ದ ಆ ಛಂದಸ್ಸನ್ನು ಸಮಗ್ರ ಗ್ರಂಥರಚನೆಗೆ ಬಳಸಿಕೊಂಡ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ರಗಳೆಗಳನ್ನು ಸ್ಥೂಲವಾಗಿ ಭಾವಗೀತಾತ್ಮಕ ಮತ್ತು ಕಥನಾತ್ಮಕ ಎಂದು ವಿಭಾಗಿಸಬಹುದು. ಕವಿಯ ಭಾವಗೀತಾತ್ಮಕ ರಗಳೆಗಳಲ್ಲಿ ವಿಭೂತಿ, ರುದ್ರಾಕ್ಷಿ ಮೊದಲಾದವುಗಳ ಮಹಾತ್ಮೆಗಳು ವಸ್ತುನಿಷ್ಠ. ಪಿಂಡೋತ್ಪತ್ತಿ, ಪುಷ್ಪ ಇತ್ಯಾದಿ ಕೆಲವು ವ್ಯಕ್ತಿನಿಷ್ಠ. ಈ ವ್ಯಕ್ತಿನಿಷ್ಠವಾದವುಗಳಲ್ಲಿ ಹರಿಹರನ ಆತ್ಮಕಥೆ ಸ್ವಲ್ಪಮಟ್ಟಿಗೆ ಸೇರಿಕೊಂಡಿದೆ. ಕಥನಾತ್ಮಕವಾದ ರಗಳೆಗಳು ವೀರಶೈವ ಧರ್ಮದ ಅರುವತ್ತುಮೂವರು ಪುರಾತನರ ಕಥೆಗಳನ್ನೂ ಬಸವಾದಿ ಪ್ರಮಥರ ಕಥೆಗಳನ್ನೂ ಒಳಗೊಂಡಿದೆ. ಈತನ ಕಥನಾತ್ಮಕ ರಗಳೆಗಳಲ್ಲಿ ಕಾಣಬರುವ ಜಗತ್ತು ವಿಶಾಲವಾಗಿ, ವೈವಿಧ್ಯಮಯವಾಗಿದೆ. ಅಮಿತ ಉತ್ಸಾಹದಿಂದ ಹೊರಹೊಮ್ಮಿದ ಕಥಾಪ್ರವಾಹ ಉತ್ಸಾಹಶೈಲಿಯ ತುಂಬುನೆಲೆಯಲ್ಲಿ ಓದುಗರನ್ನು ಸೆಳೆದೊಯ್ಯುತ್ತದೆ. ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ ಮೊದಲಾದವುಗಳಲ್ಲಿ ಬರುವ ಭಕ್ತಿಯ ವರ್ಣನೆ ನಮ್ಮನ್ನು ಭವ್ಯತೆಗೆ ಒಯ್ಯುತ್ತದೆ. ಕಥೆ ದೀರ್ಘವಾದಾಗ ಅದನ್ನು ಸ್ಥಲಗಳಾಗಿ ವಿಂಗಡಿಸಿ ಒಂದು ಸ್ಥಲವನ್ನು ರಗಳೆಯಲ್ಲೂ ಮತ್ತೊಂದನ್ನು ಗದ್ಯದಲ್ಲೂ ಬರೆಯುತ್ತಾನೆ. ಈತನ ಗದ್ಯವೆಂದರೆ ಚಂಪೂ ಗದ್ಯವಲ್ಲ; ವಚನಕಾರರು ಬಳಸಿರುವ ಹೃದ್ಯವಾದ ಗದ್ಯ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗದ್ಯ ಬಳಕೆಯಲ್ಲಿ ಈತನೊಂದು ಮೈಲಿಗಲ್ಲು.

ಸ್ವತಂತ್ರಯುಗಪ್ರವರ್ತಕನಾದ ಹರಿಹರನ ಕಾರ್ಯವನ್ನು ಅತ್ಯಂತ ಸಮರ್ಥವಾಗಿ ಮುಂದುವರಿಸಿದ ಕೀರ್ತಿ ಈತನ ಸೋದರಳಿಯನೂ ಶಿಷ್ಯನೂ ಆದ ರಾಘವಾಂಕನಿಗೆ (ಸು.1225) ಸಲ್ಲುತ್ತದೆ. ರಾಘವಾಂಕನಿಗಿಂತಲೂ ಮುಂಚೆಯೇ ಷಟ್ಪದಿ ಛಂದಸ್ಸಿನ ಬಳಕೆ ಕ್ವಚಿತ್ತಾಗಿ ಕಂಡುಬರುತ್ತಿದ್ದಿತಾದರೂ ಶುದ್ಧ ದೇಶೀಯ ಛಂದಸ್ಸಾದ ಇದರಲ್ಲಿ ಅಖಂಡ ಕಾವ್ಯಸೃಷ್ಟಿ ಮಾಡ ಹೊರಟವರಲ್ಲಿ ರಾಘವಾಂಕನೇ ಮೊದಲಿಗ. ಈತನ ಹರಿಶ್ಚಂದ್ರ ಕಾವ್ಯ ಈ ಯುಗದಲ್ಲಿ ಮೂಡಿಬಂದ ಒಂದು ಉತ್ಕೃಷ್ಟ ಕೃತಿ. ಈ ಕಾವ್ಯದಿಂದ ರಾಘವಾಂಕ ಷಟ್ಪದಿಯುಗಕ್ಕೆ ನಾಂದಿ ಹಾಡಿದನೆನ್ನಬಹುದು. ಮುಂದೆ ಬಂದ ಕವಿಗಳು ಈತನಿಂದ ಪ್ರಭಾವಿತರಾಗಿ ಇವನನ್ನು ಅನುಸರಿಸಿರುವುದು ಕಂಡುಬರುತ್ತದೆ.

ಹರಿಹರ ಹರಿಯಬಿಟ್ಟ ದೇಶೀಯ ಛಂದಸ್ಸು ಹದಿನೈದನೆಯ ಶತಮಾನದವರೆಗೆ ಹೆಚ್ಚು ವೇಗವನ್ನು ಪಡೆಯಲಿಲ್ಲ. ರಗಳೆಯ ಛಂದಸ್ಸಿನಲ್ಲಿ ಹರಿಹರ ಅದ್ವಿತೀಯನಾದಂತೆ ಮುಂದಿನ ಯಾವನೇ ಕವಿ ಆಗಲು ಸಾಧ್ಯವಾಗಲಿಲ್ಲ. ರಗಳೆ ಅಂದಿನ ಸಾಹಿತ್ಯ ಪ್ರಕಾರದಲ್ಲಿ ವಿಶಿಷ್ಟವಾಗಿಯೇ ಉಳಿಯಿತು. ಆದರೆ ಷಟ್ಪದಿಯಲ್ಲಿ ಹಲವಾರು ಗ್ರಂಥಗಳು ರಚನೆಗೊಂಡವು. ಕುಮಾರ ಪದ್ಮರಸ (ಸು.1180) ಸಾನಂದ ಚರಿತೆಯನ್ನು ಕುಸುಮ, ಭಾಮಿನೀಷಟ್ಪದಿಗಳಲ್ಲಿ ಬರೆದ. ಪಾಲ್ಕುರಿಕೆ ಸೋಮನಾಥ (ಸು.1200) ಹಲವು ಸ್ತೋತ್ರರೂಪದ ಪುಟ್ಟ ಕೈಹೊತ್ತಿಗೆಗಳನ್ನು ರಗಳೆಯಲ್ಲಿ ಬರೆದಿದ್ದಾನೆ. ಕುಮುದೇಂದು (ಸು.1275) ಎಂಬ ಜೈನಕವಿ ಮೊಟ್ಟಮೊದಲ ಬಾರಿಗೆ ತನ್ನ ರಾಮಾಯಣವನ್ನು ಷಟ್ಪದಿಯಲ್ಲಿ ಬರೆದ. ಈಗ ಉಪಲಬ್ಧವಾಗಿರುವ ಈ ಕಾವ್ಯದ ನಾಲ್ಕು ಸಂಧಿಗಳಲ್ಲಿ ಒಂದೊಂದೂ ಒಂದೊಂದು ಬಗೆಯಾದ ಷಟ್ಪದಿಯಲ್ಲಿವೆ. ಭೀಮಕವಿ (ಸು.1370) ಪಾಲ್ಕುರಿಕೆ ಸೋಮನಾಥನ ಬಸವಪುರಾಣವನ್ನು ಭಾಮಿನೀಷಟ್ಪದಿಯಲ್ಲಿ ಕನ್ನಡಕ್ಕೆ ತಂದುಕೊಟ್ಟ ಲಲಿತವಾದ ಶೈಲಿಯಲ್ಲಿರುವ ಈ ಗ್ರಂಥ ಮುಂದಿನ ವೀರಶೈವ ಪುರಾಣಕರ್ತೃಗಳಿಗೆ ಮಾರ್ಗದರ್ಶಕವಾಯಿತು. ಈತ ನೂರೆಂಟು ಚರಣಗಳ ಭೀಮೇಶ್ವರ ರಗಳೆಯನ್ನೂ ಬರೆದಿದ್ದಾನೆ. ಪದ್ಮಣಾಂಕನ (ಸು.1420) ಪದ್ಮರಾಜಪುರಾಣ ಕೆರೆಯ ಪದ್ಮರಸನ ಜೀವನಕಥೆಯನ್ನೊಳಗೊಂಡಿದ್ದು ವಾರ್ಧಕ ಷಟ್ಪದಿಯಲ್ಲಿದೆ. ಆದರೆ ದೇಶೀ ಛಂದಸ್ಸಿನಲ್ಲಿರುವ ಈ ಗ್ರಂಥದಲ್ಲಿ ಮಾರ್ಗೀಶೈಲಿಯ ಬಳಸಲಾಗಿದೆ.

ಈ ಯುಗದಲ್ಲಿ ಕಾಣಿಸಿಕೊಂಡ ಮತ್ತೊಂದು ಸಾಹಿತ್ಯ ಪ್ರಕಾರವಾದ ದಾಸವಾಙ್ಮಯ ಹಲವು ದೃಷ್ಟಿಯಿಂದ ಗಮನಾರ್ಹವಾದುದು. ಹನ್ನೆರಡನೆಯ ಶತಮಾನದ ಧಾರ್ಮಿಕ ಕ್ರಾಂತಿ ಸನಾತನವಾದ ವೈದಿಕಧರ್ಮವನ್ನು ಬುಡಮಟ್ಟ ಅಲ್ಲಾಡಿಸಿದಾಗ ಜನ ಸಾಮಾನ್ಯರು ತಂಡತಂಡವಾಗಿ ವೀರಶೈವಧರ್ಮವನ್ನು ಅವಲಂಬಿಸಿದರು; ಅದನ್ನು ಕಂಡು ವೈದಿಕಮತ ಅಳಿದು ಹೋಗುವುದೆಂಬ ಭಯ ವೈದಿಕರಿಗೆ ಹುಟ್ಟಿರಬೇಕು. ವೀರಶೈವಧರ್ಮ ತನ್ನ ಅನುಭವಮಂಟಪ, ಶೂನ್ಯ ಸಿಂಹಾಸನಗಳ ಸ್ಥಾಪನೆಯಿಂದ ಸಂಘಟಿತವಾಗಿ ವಚನಗಳ ಪ್ರಚಾರ ಪ್ರಸಾರಗಳ ಮೂಲಕ ಜನಮನವನ್ನು ಆಕರ್ಷಿಸಿದುದನ್ನು ಕಂಡು, ಅಂಥದೆ ಒಂದು ಉಪಾಯದಿಂದ ಹರಿವ ಹೊಳೆಗೆ ಅಡ್ಡಗಟ್ಟೆ ಹಾಕುವ ಕಾರ್ಯ ವೈದಿಕರಿಗೆ ಅಗತ್ಯವೆನಿಸಿರಬೇಕು. ಇದರ ಫಲವೆ ದಾಸವಾಙ್ಮಯದ ಉದಯ. ವಚನಗಳಲ್ಲಿ ಹರಪಾರಮ್ಯ, ದಾಸರ ಹಾಡುಗಳಲ್ಲಿ ಹರಿಪಾರಮ್ಯ; ಅಲ್ಲಿನಂತೆ ಇಲ್ಲಿಯೂ ಭಕ್ತಿಗೆ ಪ್ರಥಮಸ್ಥಾನ; ಧರ್ಮಪ್ರಚಾರಕ್ಕೆ ಎರಡು ಕಡೆಯೂ ಜನರ ನುಡಿಯೇ ವಾಹಕ; ಅಲ್ಲಿ ಕಾವ್ಯಮಯವಾದ ಗದ್ಯದಲ್ಲಿ ವಚನಗಳನ್ನು ಹಾಡಿದರೆ, ಇಲ್ಲಿ ಕೀರ್ತನೆ ನರ್ತನಗಳು; ಶೂನ್ಯಸಿಂಹಾಸನ ಅನುಭವ ಮಂಟಪಗಳಿಗೆ ಬದಲು ವ್ಯಾಸಕೂಟ ದಾಸಕೂಟಗಳು ನಿರ್ಮಾಣಗೊಂಡವು. ವಚನಕಾರರಂತೆ ಹರಿದಾಸರೂ ತಮ್ಮ ಇಷ್ಟದೈವವನ್ನು ಕೃತಿಗಳಲ್ಲಿ ಅಂಕಿತವಾಗಿ ಬಳಸಿದರು; ಎರಡರ ಹೆಗ್ಗುರಿಯೂ ಮತತತ್ತ್ವ ಪ್ರತಿಪಾದನೆ ಮತ್ತು ಪ್ರಚಾರ; ಸಂಸ್ಕೃತದಲ್ಲಿದ್ದ ಆಧ್ಯಾತ್ಮಿಕ ತತ್ತ್ವಗಳನ್ನು ಜನರ ಮಾತಿನಲ್ಲಿ ಅಳವಡಿಸಿಕೊಂಡು ಮನೆ ಮನೆಗೂ ಕೊಂಡೊಯ್ದು ಹಂಚುವ ಸತ್ಕಾರ್ಯದಲ್ಲಿ ಈ ಎರಡೂ ಬಗೆಯ ವಾಙ್ಮಯಗಳಿಗೆ ಸಮಾನವಾದ ಪ್ರಶಸ್ತಿ ಸಲ್ಲುತ್ತದೆ. ದ್ವೈತಮತ ಸ್ಥಾಪಕರಾದ ಮಧ್ವಾಚಾರ್ಯರೆ ದಾಸಪಂಥಕ್ಕೆ ಮೂಲಪುರುಷರೆಂದು ಹೇಳಲಾಗುತ್ತದೆ. ಅವರು ಪಶ್ಚಿಮ ಸಮುದ್ರತೀರದಿಂದ ಚಂದನದ ಗೆಡ್ಡೆಗಳನ್ನು ಉಡುಪಿಗೆ ಹೊತ್ತು ತರುತ್ತ ಆನಂದ ಮುಕುಂದ ಅರವಿಂದ ನಯನ ಇತ್ಯಾದಿಯಾಗಿ ಹಾಡಿದ ದ್ವಾದಶಸ್ತೋತ್ರಗಳೇ ದಾಸವಾಙ್ಮಯದ ಮೂಲವೆಂಬ ಅಭಿಪ್ರಾಯವಿದೆ. ಕನ್ನಡದಲ್ಲಿ ಕೀರ್ತನೆಗಳನ್ನು ಮೊದಲು ಕಟ್ಟಿ ಹಾಡಿದವರು ನರಹರಿತೀರ್ಥರು (ಸು.1280). ಇವರ ಎರಡು ಕೃತಿಗಳು ಮಾತ್ರ ಈಗ ಉಪಲಬ್ಧವಾಗಿವೆ.

ಹರಿಹರ ದೇಶೀ ಶೈಲಿಯ ಹೊಸ ಹೆದ್ದಾರಿಯೊಂದನ್ನು ನಿರ್ಮಿಸುತ್ತಿರುವಾಗಲೇ ಹೆಚ್ಚು ಕಡಿಮೆ ಆತನ ಸಮಕಾಲೀನರೆನಿಸಿದ ನೇಮಿಚಂದ್ರ (12ನೆಯ ಶತಮಾನ), ರುದ್ರಭಟ್ಟ (ಸು.1185), ಅಗ್ಗಳ (12ನೆಯ ಶತಮಾನ), ಆಚಣ್ಣ (ಸು.1200), ಕವಿಕಾಮ (ಸು.1200), ಬಂಧುವರ್ಮ (ಸು.1200) ಮೊದಲಾದ ಕವಿಗಳು ಚಂಪೂ ಸಂಪ್ರದಾಯವನ್ನು ಮುಂದುವರಿಸುತ್ತಿದ್ದರು. ಇವರೆಲ್ಲರೂ ರಾಜಾಶ್ರಿತರೇ. ನೇಮಿಚಂದ್ರ ರಟ್ಟವಂಶದ ಲಕ್ಷ್ಮಣರಾಜನ ಆಶ್ರಯದಲ್ಲಿ ಲೀಲಾವತಿಯನ್ನೂ ಬಲ್ಲಾಳರಾಜನ ಪಡೆವಳ ಪದ್ಮನಾಭನ ಆಶ್ರಯದಲ್ಲಿ ನೇಮಿನಾಥ ಪುರಾಣವನ್ನೂ ಬರೆದ. ರುದ್ರಭಟ್ಟ ವೀರಬಲ್ಲಾಳನ ಮಂತ್ರಿ ಚಂದ್ರಮೌಳಿಯನ್ನು ಆಶ್ರಯಿಸಿ ಜಗನ್ನಾಥ ವಿಜಯವನ್ನು ಬರೆದಿದ್ದಾನೆ. ಶ್ರೀಕೃಷ್ಣನ ಜನನದಿಂದ ಬಾಣಾಸುರನ ವಧೆಯವರೆಗಿನ ಭಾಗವತ ಕಥೆ ಇಲ್ಲಿದೆ. ರುದ್ರಭಟ್ಟ ರಸಾಸ್ವಾದನೆಗಿಂತ ಪಾಂಡಿತ್ಯಾರ್ಜನೆಗೆ ಹೆಚ್ಚು ಗಮನ ನೀಡಿದ್ದಾನೆ. ನಿರ್ವಾಣ ಲಕ್ಷ್ಮೀಪತಿ ನಕ್ಷತ್ರಮಾಲಿಕೆ, ಗೊಮ್ಮಟಸ್ತುತಿ ಎಂಬ ಜಿನಸ್ತೋತ್ರಗಳನ್ನು ಬೊಪ್ಪಣಪಂಡಿತ ಬರೆದಿದ್ದಾನೆ. ಇವುಗಳಲ್ಲಿ ಅಸಾಧಾರಣವಾದ ಕವಿತಾಶಕ್ತಿ ಕಂಡುಬರುವುದರಿಂದ ಈತ ಉದ್ಗ್ರಂಥಗಳನ್ನೂ ಬರೆದಿರಬಹುದು. ಆದರೆ ಅವು ಉಪಲಬ್ಧವಾಗಿಲ್ಲ. ಅಗ್ಗಳ ಕವಿಯ ಚಂದ್ರಪ್ರಭಪುರಾಣ ಮತ್ತು ಆಚಣ್ಣನ ವರ್ಧಮಾನಪುರಾಣ ಇವೆರಡೂ ಸಂಸ್ಕೃತ ಭೂಯಿಷ್ಠವಾಗಿ ಪ್ರೌಢವಾಗಿವೆ. ಇವೆರಡೂ ತೀರ್ಥಂಕರರ ಕಥೆಗಳೆಂದು ಗೌರವಾರ್ಹವಾದವು. ಕವಿಕಾಮನ ಶೃಂಗಾರರತ್ನಾಕರ ಅಥವಾ ರಸವಿವೇಕ ರಸಪ್ರಕರಣವನ್ನು ವಿವರಿಸಹೊರಟ ಮೊದಲ ಗ್ರಂಥ. ಹರಿವಂಶಾಭ್ಯುದಯ, ಜೀವಸಂಬೋಧನೆಗಳನ್ನು ಬಂಧುವರ್ಮ ಬರೆದಿದ್ದಾನೆ. ಹರಿವಂಶಾಭ್ಯುದಯ ಇಪ್ಪತ್ತೆರಡನೆಯ ತೀರ್ಥಂಕರನ ಕಥೆ. ಕಥೆ ಹಳೆಯದಾದರೂ ನಿರೂಪಣೆ ನವೀನವಾಗಿದೆ. ಜೀವಸಂಬೋಧನೆ ದ್ವಾದಶಾನುಪ್ರೇಕ್ಷೆಗಳ ಕನ್ನಡ ನಿರೂಪಣೆ. ಇದು ವೈರಾಗ್ಯ ಬೋಧಕವಾದರೂ ಲಲಿತಸುಂದರವಾಗಿದೆ.

ಹದಿಮೂರನೆಯ ಶತಮಾನದ ಕವಿಗಳಲ್ಲಿ ಜನ್ನ (ಸು.1300) ಅಗ್ರಗಣ್ಯನಾದವನು. ಈತನ ಅನಂತನಾಥಪುರಾಣ ಜೈನಪುರಾಣಗಳ ಹಾದಿಯಲ್ಲೇ ಸಾಗುವ ಪ್ರೌಢಕಾವ್ಯವಾದರೂ ಗ್ರಂಥದ ಅಂತ್ಯದಲ್ಲಿ ಬರುವ ಸುನಂದೆ ಚಂಡಶಾಸನರ ಉಪಾಖ್ಯಾನ ಕಾವ್ಯದೃಷ್ಟಿಯಿಂದ ಅತ್ಯಂತ ರಮ್ಯವಾಗಿದೆ. ಈತನ ಮತ್ತೊಂದು ಕಾವ್ಯ ಯಶೋಧರಚರಿತೆ. ವಾದಿರಾಜನ ಸಂಸ್ಕೃತ ಯಶೋಧರಚರಿತೆ ಇದಕ್ಕೆ ಆಕರ. ಸಂಪೂರ್ಣವಾಗಿ ಕಂದದಲ್ಲಿ ರಚಿತವಾಗಿರುವ ಈ ಕೃತಿ ಜಿನಮತದ ಮುಖ್ಯ ತತ್ತ್ವವಾದ ಪ್ರಾಣಿದಯೆಯನ್ನು ಬೋಧಿಸುತ್ತದೆ. ಜನ್ನನ ವರ್ಣನಾ ಕೌಶಲ, ಸನ್ನಿವೇಶ ರಚನಾಸಾಮರ್ಥ್ಯ, ಪಾತ್ರಸೃಷ್ಟಿಯಲ್ಲಿ ಕಾಣಬರುವ ಕವಿಪ್ರತಿಭೆ ಇವನ ಕವಿಚಕ್ರವರ್ತಿಯೆಂಬ ಬಿರುದನ್ನು ಸಾರ್ಥಕಗೊಳಿಸಿವೆ. ಈ ಧರ್ಮಗ್ರಂಥಗಳೆರಡರಲ್ಲಿಯೂ ಪ್ರಣಯಜೀವನದ ಎರಡು ಮುಖಗಳು ಉಜ್ವಲವಾಗಿ ಚಿತ್ರಿತವಾಗಿವೆ. ಅಮೃತಮತಿ ಮನ್ಮಥನಂಥ ಗಂಡ ಯಶೋಧರನನ್ನು ಬಿಟ್ಟು ಅಷ್ಟಾವಂಕನಂಥ ಪರಮಕುರೂಪಿಯಲ್ಲಿ ಅನುರಕ್ತಳಾಗಿ ದುರಂತವನ್ನು ಅಪ್ಪಿದರೆ, ಚಂಡಶಾಸನ ತನ್ನ ಪ್ರಿಯಸ್ನೇಹಿತ ವಸುಷೇಣನ ಹೆಂಡತಿ ಸುನಂದೆಯಲ್ಲಿ ಮೋಹಗೊಂಡು ಅವಳನ್ನು ಕದ್ದೊಯ್ದು ದುರಂತಕ್ಕೀಡಾಗುತ್ತಾನೆ. ಈ ಎರಡೂ ಕಾವ್ಯಗಳಲ್ಲಿರುವ ಮೂಲತತ್ತ್ವ ಒಂದೇ 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎಂಬುದು. ಕಾವ್ಯಧರ್ಮ ಹಾಗೂ ಧರ್ಮದ ಪ್ರತಿಪಾದನೆಯಲ್ಲಿ ಯಶೋಧರ ಚರಿತೆ ಕನ್ನಡದ ಮಹತ್ತ್ವಪೂರ್ಣ ಕಾವ್ಯಗಳಲ್ಲೊಂದಾಗಿದೆ.

ಎರಡನೆಯ ಗುಣವರ್ಮನ (ಸು.1215) ಪುಷ್ಪದಂತ ಪುರಾಣ, ಕಮಲಭವನ (ಸು.1235) ಶಾಂತೀಶ್ವರ ಪುರಾಣ ಇದೇ ಕಾಲದಲ್ಲಿ ರಚಿತವಾದ ಪಾಂಡಿತ್ಯ ಪೂರ್ಣವಾದ ಉದ್ಧೃಕೃತಿಗಳು. ಎರಡರಲ್ಲಿಯೂ ಪರಂಪರಾಗತವಾದ ವಸ್ತುವಿನ ಚರ್ವಿತಚರ್ವಣವಿದೆ. ಇದರ ಬೇಸರವನ್ನು ನೀಗುವಂತೆ ಇದೇ ಕಾಲದಲ್ಲಿದ್ದ ಆಂಡಯ್ಯ ಕಬ್ಬಿಗರಕಾವವನ್ನು ಬರೆದಿದ್ದಾನೆ. ಕನ್ನಡ ಕವಿಗಳು ಸಂಸ್ಕೃತವನ್ನು ಬಳಸದೆ ಕಾವ್ಯಸೃಷ್ಟಿ ಮಾಡಲಾರರೆಂಬ ಅಪವಾದವನ್ನು ನಿವಾರಿಸುವುದಕ್ಕಾಗಿ ಹುಟ್ಟಿದ ಈ ಕಾವ್ಯಕ್ಕೆ ಕಬ್ಬಿಗರ ಕಾವ (ಕವಿಗಳ ರಕ್ಷಕ) ಎಂದು ನಾಮಕರಣ ಮಾಡಿರುವುದು ಅರ್ಥವತ್ತಾಗಿದೆ. ಇದರಲ್ಲಿ ಸಂಸ್ಕೃತ ಪದಗಳ ಬಳಕೆ ಇಲ್ಲ, ಆದರೆ ತದ್ಭವಗಳು ಹೇರಳವಾಗಿವೆ. ಕವಿಯ ಸ್ವಕಪೋಲಕಲ್ಪಿತವಾದ ಈ ಕಾವ್ಯಕಥೆಯಲ್ಲಿ ಕನ್ನಡ ಭಾಷೆಯ ಬಗ್ಗೆ ಕವಿ ತಾಳಿದ ಅಭಿಮಾನ ಕೆಚ್ಚು ಮೆಚ್ಚುವಂಥದ್ದು.

ವೀರಶೈವಕವಿಯೊಬ್ಬನು ಸ್ವತಂತ್ರ ಯುಗದಲ್ಲಿ ಚಂಪೂಕಾವ್ಯವನ್ನು ರಚಿಸಹೊರಟಿದ್ದು ಸಂಪ್ರದಾಯದ ಮಹತ್ತನ್ನು, ಪ್ರಭಾವವನ್ನು ಸೂಚಿಸುತ್ತದೆ. ಸೋಮರಾಜನ ಉದ್ಭಟದೇವನ ಕಥೆ ಇದಕ್ಕೆ ಉದಾಹರಣೆ. ಇದರ ಶೈಲಿ ಲಲಿತವಾಗಿದ್ದು ವರ್ಣನೆ ನವೀನವಾಗಿದೆ. ಅಲ್ಲಮಪ್ರಭುವನ್ನು

ಸ್ತೋತ್ರ ಮಾಡುವ ಸಮಯದಲ್ಲಿ ಕವಿ ಧರ್ಮಸಮನ್ವಯ ದೃಷ್ಟಿಯನ್ನು ಮರೆದಿದ್ದಾನೆ.

ಇದೇ ಅವಧಿಯಲ್ಲಿ ಜೀವಿಸಿದ್ದ ಮಲ್ಲಿಕಾರ್ಜುನ (ಸು.1240), ಕೇಶಿರಾಜ (ಸು.1260) ಈ ಇಬ್ಬರೂ ಕನ್ನಡಕ್ಕೆ ಸಲ್ಲಿಸಿರುವ ಸೇವೆ ಅಮೂಲ್ಯವಾದದ್ದು. ಮಲ್ಲಿಕಾರ್ಜುನಕವಿ ತನ್ನ ಕಾಲದವರೆಗೆ ಬೆಳೆದು ಬಂದಿದ್ದ ಕನ್ನಡ ಸಾಹಿತ್ಯದಿಂದ ಹದಿನೆಂಟು ಬಗೆಯಾದ ವರ್ಣನೆಗಳಿಗೆ ಸಂಬಂಧಿಸಿದ ಉತ್ತಮವಾದ ಪದ್ಯಗಳನ್ನು ಹದಿನೆಂಟು ಅಧ್ಯಾಯಗಳಲ್ಲಿ ಸೂಕ್ತಿಸುಧಾರ್ಣವ ಎಂಬ ಹೆಸರಿನಿಂದ ನೀಡಿದ್ದಾನೆ. ಇನ್ನೂ ಅಜ್ಞಾತವಾಗಿರಬಹುದಾದ ಎಷ್ಟೋ ಕವಿಗಳ ಕಾವ್ಯಭಾಗಗಳು ಇಲ್ಲಿ ದೊರೆಯುತ್ತವೆ. ಇದರಿಂದ ಕನ್ನಡ ಸಾಹಿತ್ಯ ಚರಿತ್ರೆಯ ನಿರ್ಮಾಣಕ್ಕೆ ಅಮೂಲ್ಯವಾದ ಸಾಧನಸಾಮಗ್ರಿ ದೊರೆತಂತಾಗಿದೆ. ಮಲ್ಲಿಕಾರ್ಜುನನಲ್ಲಿದ್ದ ಈ ಕವಿಕಾವ್ಯ ಸಂಪತ್ತನ್ನು ಸದುಪಯೋಗಪಡಿಸಿಕೊಂಡು ಕೇಶಿರಾಜ ಶಬ್ದಮಣಿದರ್ಪಣ ಎಂಬ ಸಪ್ರಮಾಣವಾದ ಹಳಗನ್ನಡ ವ್ಯಾಕರಣ ಗ್ರಂಥವನ್ನು ನೀಡಿದ್ದಾನೆ.

ಈ ಶತಮಾನದ ಕಡೆಯ ಭಾಗದಲ್ಲಿ ಕಾಣಬರುವ ಚೌಂಡರಸ (ಸು.13ನೆಯ ಶತಮಾನ) ಅಭಿನವದಶಕುಮಾರಚರಿತೆ, ನಳಚರಿತೆ ಎಂಬ ಕಾವ್ಯಗಳನ್ನು ಬರೆದಿದ್ದಾನೆ. ಇವನ ಕೃತಿಗಳಿಗೆ ಸಂಸ್ಕೃತ ಕೃತಿಗಳೆ ಮೂಲ. ದಶಕುಮಾರಚರಿತೆಯಲ್ಲಿ ಹತ್ತು ಜನ ರಾಜಕುಮಾರರ ಕಾಮರಾಜ್ಯ ವಿಹಾರ ವರ್ಣಿತವಾಗಿದೆ. ಮೂಲದಲ್ಲಿ ಸಂಕ್ಷೇಪವಾಗಿರುವುದನ್ನು ಚೌಂಡರಸ ಹಿಗ್ಗಲಿಸಿದ್ದಾನೆ. ಇಲ್ಲಿನ ಕಥೆಗಳು ಬಿಡಿಬಿಡಿಯಾಗಿ ರಮ್ಯವಾಗಿವೆ.

ಹದಿನಾಲ್ಕನೆಯ ಶತಮಾನದಲ್ಲಿ ಕಾಣಬರುವ ನಾಗರಾಜ (ಸು.1331) ತನ್ನ ಪುಣ್ಯಾಸ್ರವದಲ್ಲಿ ಸ್ವರ್ಗಾಪವರ್ಗವನ್ನು ಪಡೆದ ಹಲವು ಪುಣ್ಯಪುರುಷರ ಕಥೆಗಳನ್ನು ಚಿತ್ರಿಸಿದ್ದಾನೆ. ವಡ್ಡಾರಾಧನೆಯಲ್ಲಿ ಬರುವ ಕೆಲವು ಕಥೆಗಳೂ ಇಲ್ಲಿವೆ. ಲಲಿತವಾದ ಶೈಲಿ, ನೈಜವಾದ ವರ್ಣನೆ, ನಿರೂಪಣಾಕೌಶಲದಿಂದ ಈ ಗ್ರಂಥ ಆದರಣೀಯವಾಗಿದೆ. ಬಾಹುಬಲಿ ಪಂಡಿತ (ಸು.1352), ಮಧುರಕವಿ (ಸು.1385) ಈ ಇಬ್ಬರೂ ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಪುರಾಣವನ್ನು ಬರೆದಿದ್ದಾರೆ. ಈ ಶತಮಾನದ ಕವಿಗಳಲ್ಲಿ ಖಗೇಂದ್ರಮಣಿದರ್ಪಣ ಎಂಬ ವಿಷವೈದ್ಯಗ್ರಂಥವನ್ನು ಬರೆದ ಒಂದನೆಯ ಮಂಗರಸ (ಸು.1350) ಕವಿ ಮಂಗಾಭಿದಾನವೆಂಬ ನಿಘಂಟನ್ನು ಬರೆದ ಎರಡನೆಯ ಮಂಗರಸ (ಸು.1398) - ಇವರೂ ಉಲ್ಲೇಖಾರ್ಹರು.

**ಕುಮಾರವ್ಯಾಸ ಯುಗ** : 15ನೆಯ ಶತಮಾನದಿಂದ 19ನೆಯ ಶತಮಾನದ ಅಂತ್ಯದವರೆಗೆ ಅಂದರೆ ಆಧುನಿಕ ಯುಗದ ಆರಂಭಕಾಲದವರೆಗೆ ಈ ಯುಗದ ವ್ಯಾಪ್ತಿಯಿದೆ.ಹರಿಹರ ಸಾಹಿತ್ಯಕ್ಷೇತ್ರದಲ್ಲಿ ಬಿತ್ತಿದ ಹೊಸ ಬೆಳೆ ಅತ್ಯಂತ ಹುಲುಸಾಗಿ ಬೆಳೆದು ಫಲಭರಿತವಾದುದು 15ನೆಯ ಶತಮಾನದಲ್ಲಿ. ಈ ಶತಮಾನದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡ ಕುಮಾರವ್ಯಾಸನು ಮಹಾಕವಿ ಎಂಬ ಹೆಸರಿಗೆ ಪಾತ್ರನಾದವನು. ಈತನಿಂದ ಮುಂದೆ ಆಧುನಿಕ ಕನ್ನಡ ಸಾಹಿತ್ಯ ಉದಿಸುವವರೆಗೆ ಬಂದ ಎಲ್ಲ ಕವಿಗಳೂ ಈತನ ಪ್ರಭಾವಕ್ಕೆ ಒಳಗಾಗಿದ್ದಾರೆ. ಈ ಯುಗದಲ್ಲಿ ಎಲ್ಲ ಧರ್ಮದ ಕವಿಗಳೂ ಕಾಣಿಸಿಕೊಂಡಿರುವುದು ಇನ್ನೊಂದು ವೈಶಿಷ್ಟ್ಯ. ಹಾಗೆಯೇ ಷಟ್ಪದಿ, ಸಾಂಗತ್ಯ, ತ್ರಿಪದಿ - ಈ ಎಲ್ಲ ಬಗೆಯ ಛಂದಸ್ಸೂ ಬಳಕೆಯಾಗಿದೆ. ಆದ್ದರಿಂದ ಇದನ್ನು ಸಂಕೀರ್ಣಯುಗ ಎಂದೂ ಕರೆಯುವುದುಂಟು. ಈ ಯುಗದಲ್ಲಿ ದೇಶೀಯ ಛಂದಸ್ಸಾದ ಷಟ್ಪದಿಗೆ ಅಗ್ರಮಾನ್ಯತೆ ದೊರೆತಿರುವುದರಿಂದ ಇದನ್ನು ಷಟ್ಪದಿ ಯುಗವೆಂದೂ ಕರೆಯುವುದುಂಟು. ಷಟ್ಪದಿಯ ಜೊತೆಗೆ ಸಾಂಗತ್ಯವೂ ಈ ಯುಗದಲ್ಲಿ ಪ್ರಮುಖ ಕಾವ್ಯ ಮಾಧ್ಯಮವಾಗಿ ರತ್ನಾಕರವರ್ಣಿಯಲ್ಲಿ ತನ್ನ ಉನ್ನತಿಕೆಯನ್ನು ಕಂಡುಕೊಂಡಿತು.

ಕುಮಾರವ್ಯಾಸ (ಸು.1400) ಈ ಯುಗದ ಪ್ರತಿನಿಧಿ. ಈತ ಸಂಸ್ಕೃತ ಮಹಾಭಾರತವನ್ನು ಸಂಗ್ರಹಿಸಿ ಅದರ ಮೊದಲ ಹತ್ತು ಪರ್ವಗಳನ್ನು 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಹೆಸರಿನಿಂದ ಕನ್ನಡಿಸಿದ್ದಾನೆ. ಪಂಪನ ಪ್ರಭಾವ ಇವನ ಮೇಲೆ ಆಗಿರುವಂತೆ ಕಂಡುಬಂದರೂ ಇಬ್ಬರ ದೃಷ್ಟಿಕೋನಗಳೂ ಜೀವನದ ಬಗ್ಗೆ ಅವರು ತಾಳುವ ಧೋರಣೆಗಳೂ ವಿಭಿನ್ನವಾಗಿವೆ. ಇವನು ಮಹಾಭಾರತದ ಕಥೆಯನ್ನು ಹೇಳಹೊರಟಿದ್ದರೂ ತನ್ನ ಕಾವ್ಯ ಕೃಷ್ಣಕಥೆ ಎಂದಿದ್ದಾನೆ. ಇವರ ಭಾಷಾಶೈಲಿಗಳು ಅದ್ವಿತೀಯವಾದುವು ಮತ್ತು ಅನನುಕರಣೀಯವಾದುವು. ಇವನ ಕಾವ್ಯದಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ; ಭಾಮಿನೀಷಟ್ಪದಿ ಹೆಚ್ಚು ಜೀವಂತವಾಗಿದೆ.

ಈ ಯುಗದ ಕನ್ನಡ ಸಾಹಿತ್ಯ ಸಾಕಷ್ಟು ಹುಲುಸಾಗಿ ಬೆಳೆಯಲು ಕಾರಣರಾದವರು ಬಹುಮಟ್ಟಿಗೆ ವೀರಶೈವ ವಚನಕಾರರು ಮತ್ತು ಪುರಾಣಕರ್ತೃಗಳು. ಹನ್ನೆರಡನೆಯ ಶತಮಾನದ ಕೊನೆಯಲ್ಲಿ ಇದ್ದಕ್ಕಿದ್ದಂತೆಯೆ ಇಂಗಿಹೋಗಿದ್ದ ವಚನವಾಙ್ಮಯದ ಹೊಳೆ ವಿಜಯನಗರದ ಪ್ರೌಢದೇವರಾಯ (ಸು.1424-46) ಮತ್ತು ತೋಂಟದ ಸಿದ್ಧಲಿಂಗಯತಿ (ಸು.1530) ಇವರ ಅರಮನೆ ಗುರುಮನೆಗಳ ದಂಡೆಯನ್ನು ಆಶ್ರಯಿಸಿ ಮತ್ತೆ ಹರಿಯತೊಡಗಿತು. ಪ್ರೌಢದೇವರಾಯನ ದಂಡನಾಯಕನಾದ ಜಕ್ಕಣಾರ್ಯನೂ ರಾಜಕೃಪಾಪೋಷಿತರಾದ ನೂರೊಂದು ವಿರಕ್ತರೂ ವೀರಶೈವ ಧರ್ಮದ ಪ್ರಚಾರದಲ್ಲಿ ಪ್ರವೃತ್ತರಾಗಿ, ವಚನವಾಙ್ಮಯದ ಪುರುಜ್ಜೀವನಕ್ಕಾಗಿ ಶ್ರಮಿಸಿದರು. ಹೊಸ ವಚನಗಳ ಸೃಷ್ಟಿಗಿಂತಲೂ ಹಳೆಯ ವಚನಗಳ ಸಂಕಲನ ಸಂಪಾದನೆಗಳೂ ಅವುಗಳ ಟೀಕೆ ಟಿಪ್ಪಣಿ ವ್ಯಾಖ್ಯಾನಗಳೂ ಹುಟ್ಟಿಕೊಂಡಿದ್ದು ಈ ಕಾಲದ ವೈಶಿಷ್ಟ್ಯ. ಮಹಲಿಂಗದೇವ (ಸು.1425), ಕುಮಾರ ಬಂಕನಾಥ (ಸು.1430), ಕಲ್ಲುಮಠದ ಪ್ರಭುದೇವ (ಸು.1430), ಗುಬ್ಬಿಯ ಮಲ್ಲಣ್ಣ (ಸು.1475) ಇವರು ಪುರಾತನ ವಚನಗಳ ಸಂಗ್ರಹಕಾರರು ಅಥವಾ ಭಾಷ್ಯಕಾರರು, ಈ ಕಾಲದ ಕಿರೀಟಪ್ರಾಯ ಕೃತಿಯಾಗಿ ಶೂನ್ಯಸಂಪಾದನೆ ಕಾಣಿಸಿಕೊಂಡಿತು. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಶರಣರ ಗೋಷ್ಠಿ ನಡೆಯುತ್ತಿದ್ದ ಅನುಭವಮಂಟಪವನ್ನು ಮುನ್ನೂರು ವರ್ಷಗಳ ಆಚೆ ನಿಂತು ಛಾಯಾಚಿತ್ರ ತೆಗೆದುಕೊಳ್ಳುವ ಕಾರ್ಯ ಇಲ್ಲಿ ನಡೆದಿದೆ. ಶೂನ್ಯಸಿಂಹಾಸನದಲ್ಲಿ ಪ್ರಭುದೇವ, ಬಸವಣ್ಣ ಮೊದಲಾದ ಅಸಂಖ್ಯಾತ ಶಿವಶರಣರು, ಅವರ ವಿಚಾರದಲ್ಲಿ ಮೂಡಿರುವ ಸತ್ಯದ ನವನೀತ - ಇದು ಈ ಗ್ರಂಥದ ತಿರುಳು. ವೀರಶೈವ ಧರ್ಮಯಾತ್ರಿಕರಿಗೆ ಬೆಳಗುಗಂಬದಂತಿರುವ ಈ ಗ್ರಂಥವನ್ನು 15ನೆಯ ಶತಮಾನದಲ್ಲಿದ್ದ ಶಿವಗಣಪ್ರಸಾದಿ ಮಹಾದೇವಯ್ಯ ರಚಿಸಿದ. ಹಲವು ಹಿರಿಯ ಶರಣರ ವಚನಗಳನ್ನು ಸಂಕಲಿಸಿ ಈ ಕೃತಿ ರಚನೆಯಾಗಿದೆ. ತೋಂಟದ ಸಿದ್ಧಲಿಂಗಯತಿ ಹಾಗೂ ಆತನ ಶಿಷ್ಯರಲ್ಲಿ ಕೆಲವರು ಸ್ವತಂತ್ರವಾಗಿ ವಚನ ರಚನೆ ಮಾಡಿದ್ದಾರೆ. ಇವುಗಳಲ್ಲಿ ಭಕ್ತನ ನಿಷ್ಠೆ, ಶ್ರದ್ಧಾಭಾವಗಳಿಗೆ ಲೋಪವಿಲ್ಲವಾದರೂ ಪುರಾತನ ವಚನಗಳ ಸಾಹಿತ್ಯಗುಣ, ಕಾವು, ಸ್ವಾರಸ್ಯಗಳು ಅಷ್ಟಾಗಿ ಕಂಡುಬರುವುದಿಲ್ಲ.

ಈ ಶತಮಾನದಲ್ಲಿ ಹುಟ್ಟಿದ ವೀರಶೈವ ಗ್ರಂಥಗಳೆಲ್ಲವೂ ಬಹುಮಟ್ಟಿಗೆ ಪುರಾಣಗಳೆ. ಈ ನಿಯಮಕ್ಕೆ ಹೊರತಾದುದೆಂದರೆ ದೇಪರಾಜನ (ಸು.1410) ಸೊಬಗಿನ ಸೋನೆ. ಸಾಂಗತ್ಯದಲ್ಲಿ ರಚಿತವಾದ ಮೊಟ್ಟಮೊದಲನೆಯ ಗ್ರಂಥವೆಂಬ ದೃಷ್ಟಿಯಿಂದ ಇದಕ್ಕೆ ಪ್ರಾಮುಖ್ಯತೆ ದೊರಕಿದೆ. ಇದೇ ಕಾಲದಲ್ಲಿ ರಚಿತವಾದ ಷಟ್ಪದಿ ಕಾವ್ಯಗಳಲ್ಲಿ ಲಕ್ಕಣ್ಣದಂಡೇಶನ ಶಿವತತ್ತ್ವಚಿಂತಾಮಣಿ, ಚಾಮರಸನ ಪ್ರಭುಲಿಂಗಲೀಲೆ ಗಮನಾರ್ಹವಾದುವು. ಚಾಮರಸನಲ್ಲಿ ಅದ್ಭುತವಾದ ಕವಿತಾಶಕ್ತಿಯಿದೆ. ಪ್ರಭುಲಿಂಗಲೀಲೆ ಅಲ್ಲಮನ ಜೀವನಚರಿತ್ರೆಯನ್ನು ಆದರ್ಶಯುತವಾಗಿ ಚಿತ್ರಿಸಹೊರಟ ಮಹಾಗ್ರಂಥ. ಅತ್ಯಂತ ಜನಪ್ರಿಯವಾದ ಈ ಕಾವ್ಯ ತೆಲುಗು, ತಮಿಳು, ಮರಾಠಿ, ಸಂಸ್ಕೃತಗಳಿಗೆ ಭಾಷಾಂತರವಾಗಿದೆ. ಕಾವ್ಯ ಧರ್ಮ, ಧರ್ಮಗಳು ಸಮರಸವಾಗಿ ಬೆರೆತು ಸಾಗುವ ಈ ಕಥಾಪ್ರವಾಹ ಇತರ ಪುರಾಣಕರ್ತರ ಕಾವ್ಯಗಳಂತೆ ಕವಲೊಡೆದು ಕಥಾಕೋಶವಾಗದೆ, ನೇರವಾಗಿ ಹರಿದು ಹೆಗ್ಗುರಿಯನ್ನು ಮುಟ್ಟುತ್ತದೆ. ಹಿತಮಿತವಾದ ವರ್ಣನೆ, ಸಜೀವವಾದ ಪಾತ್ರರಚನೆ, ಸರಳವಾದರೂ ಶಿಥಿಲವಲ್ಲದ ಧೀರಗಂಭೀರ ಶೈಲಿ - ಇವುಗಳಿಂದ ಕೂಡಿದ ಈತನ ಭಾಮಿನೀಷಟ್ಪದಿ ಹಿತವಾಗಿದೆ, ಮನೋಹರವಾಗಿದೆ.

ಸೌಂದರಪುರಾಣವನ್ನು ಬರೆದ ಬೊಮ್ಮರಸ (ಸು.1450), ಆರಾಧ್ಯ ಚಾರಿತ್ರವನ್ನು ಬರೆದ ನೀಲಕಂಠಾಚಾರ್ಯ (ಸು.1488), ರೇವಣಸಿದ್ಧೇಶ್ವರ ಪುರಾಣವನ್ನು ಬರೆದ ಚತುರ್ಮುಖ ಬೊಮ್ಮರಸ (ಸು.1500). ಅಮಲಬಸವಚಾರಿತ್ರ್ಯ ಅಥವಾ ಸಿಂಗಿಪುರಾಣವನ್ನು ಬರೆದ ಸಿಂಗಿರಾಜ (ಸು.1500), ಇವರು ಈ ಶತಮಾನದ ಪುರಾಣಕರ್ತರಲ್ಲಿ ಪ್ರಮುಖರಾದವರು. ಸುರಂಗನನ್ನು ಬಿಟ್ಟು ಉಳಿದವರೆಲ್ಲ ವಾರ್ಧಕಷಟ್ಪದಿಯ

ಛಂದಸ್ಸಿನಲ್ಲಿ ತಮ್ಮ ಕಾವ್ಯಗಳನ್ನು ಬರೆದಿದ್ದಾರೆ. ತ್ರಿಷಷ್ಟಿಪುರಾತನಚರಿತೆ ಚಂಪೂರೂಪದಲ್ಲಿದೆ, ಅರುವತ್ತುಮೂರು ಪುರಾತನರ ಕಥೆಗಳು ಅರುವತ್ತು ಮೂರು ಅಧ್ಯಾಯಗಳಲ್ಲಿ ಕಾಣಿಸಿಕೊಂಡಿವೆ. ಇಲ್ಲಿನ ಕಥೆಗಳು ರಮ್ಯವಾಗಿವೆ.

ಈ ಶತಮಾನದ ಉಳಿದ ವೀರಶೈವ ಕವಿಗಳಲ್ಲಿ ಮಗ್ಗೆಯ ಮಾಯಿದೇವ, ಗುರುಬಸವ, ನಿಜಗುಣಶಿವಯೋಗಿ ಇವರು ಮುಖ್ಯರು. ಮಗ್ಗೆಯ ಮಾಯಿದೇವ ನಾನಾ ಛಂದಸ್ಸಿನಲ್ಲಿ ಹಲವಾರು ಗ್ರಂಥಗಳನ್ನು ರಚಿಸಿರುವನೆಂದು ತಿಳಿದುಬಂದಿದೆಯಾದರೂ ಈಗ ಉಪಲಬ್ಧವಾಗಿರುವುದು ಮೂರು ಶತಕಗಳು ಮಾತ್ರ. ಗುರುಬಸವ (ಸು.1430) ಕವಿಯೂ ಗುರುಶಿಷ್ಯಸಂವಾದ ರೂಪದಲ್ಲಿರುವ ಕೆಲವು ವೇದಾಂತ ಗ್ರಂಥಗಳನ್ನು ಷಟ್ಪದಿಗಳಲ್ಲಿ ರಚಿಸಿದ್ದಾನೆ. ನಿಜಗುಣಶಿವಯೋಗಿಯ ಗ್ರಂಥಗಳು ವಸ್ತುರೀತಿಗಳಲ್ಲಿ ವೈವಿಧ್ಯಮಯವಾಗಿವೆ. ತ್ರಿಪದಿ, ಸಾಂಗತ್ಯ, ರಗಳೆ, ಹಾಡು, ಗದ್ಯಗಳಲ್ಲಿ ಈತನ ಅಧ್ಯಾತ್ಮಜ್ಞಾನ ಹೊರಹೊಮ್ಮಿದೆ. ಈತನ ಗ್ರಂಥಗಳಲ್ಲೆಲ್ಲ ವಿವೇಕಚಿಂತಾಮಣಿ ವಿಶ್ವಕೋಶದ ಮಾದರಿಯಲ್ಲಿರುವ ಅತ್ಯಮೂಲ್ಯವಾದ ಗ್ರಂಥ. ಈತನ ಸಮಕಾಲೀನನಾದ ಮುಪ್ಪಿನ ಷಡಕ್ಷರಿಯ (ಸು.1500) ಸಂಬೋಧನಸಾರದಲ್ಲಿರುವ ಹಾಡುಗಳು ಸುಂದರವಾದ ಭಾವಗೀತೆಗಳಾಗಿದ್ದು ಧರ್ಮಸಮನ್ವಯದಿಂದ ಕೂಡಿದವುಗಳಾಗಿವೆ. ಹದಿನಾರನೆಯ ಶತಮಾನದ ವೀರಶೈವ ಕವಿಗಳಲ್ಲಿ ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ ಭಕ್ತಿರಸ ಭರಿತವಾಗಿದ್ದು ಪ್ರೌಢವಾಗಿದೆ.

ಈ ಕಾಲದಲ್ಲಿ ರಚಿತವಾದ ಸಾಂಗತ್ಯಗ್ರಂಥಗಳಲ್ಲಿ ನಂಜುಂಡಕವಿಯ (ಸು.1525) ರಾಮನಾಥ ಚರಿತೆ ಅಥವಾ ಕುಮಾರರಾಮನ ಸಾಂಗತ್ಯ ಒಂದು ವಿಶಿಷ್ಟ ಐತಿಹಾಸಿಕ ಕಾವ್ಯ. ದೆಹಲಿಯ ಸುಲ್ತಾನನಾದ ಮಹಮ್ಮದ್ ಬಿನ್ ತುಗಲಕನ ಸೈನ್ಯದೊಡನೆ ಹೋರಾಡಿ ಮಡಿದ ದುರಂತ ವೀರನೊಬ್ಬನ ಕಥೆ ಇದರ ವಸ್ತು. ಒಬ್ಬ ಸಾಮಾನ್ಯ ವ್ಯಕ್ತಿಯನ್ನು (ಐತಿಹಾಸಿಕ ವೀರನನ್ನು ಕುರಿತು) ಕಾವ್ಯರಚನೆಯಾದುದು ಇದೇ ಮೊದಲು. ಕವಿಯ ವರ್ಣನೆಗಳು ಮನೋಹರವಾಗಿದ್ದು ಅಂದಿನ ಇತಿಹಾಸದ ಮೇಲೂ ಜನಜೀವನದ ಮೇಲೂ ಬೆಳಕನ್ನು ಚೆಲ್ಲುತ್ತವೆ. ಪಾಂಚಾಳಗಂಗನ (ಸು.1650) ಚನ್ನರಾಮನ ಸಾಂಗತ್ಯ ನಂಜುಂಡನ ಕಾವ್ಯಕ್ಕಿಂತ ಐತಿಹಾಸಿಕ ದೃಷ್ಟಿಯಿಂದ ಹೆಚ್ಚು ವಾಸ್ತವಿಕವಾಗಿಯೂ ಆತ್ಮೀಯವಾಗಿಯೂ ಇದೆ. ಆದರೆ ಕಾವ್ಯಶಕ್ತಿಯಲ್ಲಿ ನಂಜುಂಡನದೇ ಮೇಲುಗೈ.

ಹದಿನಾರನೆಯ ಶತಮಾನದ ಕವಿಗಳಲ್ಲಿ ಚೇರಮಾಂಕ, ವೀರಭದ್ರ ಕವಿ, ಗುರುಲಿಂಗವಿಭು, ಕಿಕ್ಕೇರಿ ಆರಾಧ್ಯ ನಂಜುಂಡ, ಶಾಂತೀಶ, ಅದೃಶ್ಯಕವಿ, ವಿರೂಪಾಕ್ಷ ಪಂಡಿತ - ಇವರು ಮುಖ್ಯರು. ಕಿಕ್ಕೇರಿ ಆರಾಧ್ಯ ನಂಜುಂಡನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ನೂರಿಪ್ಪತ್ತೇಳು ಸಾಂಗತ್ಯ ಪದ್ಯಗಳ ಚಿಕ್ಕ ಕಾವ್ಯ. ವೀರಶೈವ ಪುರಾಣವೊಂದನ್ನು ಸಾಂಗತ್ಯದಲ್ಲಿ ಬರೆದ ಕವಿಗಳಲ್ಲಿ ಈತ ಅಗ್ರಗಣ್ಯ. ಕಾವ್ಯದೃಷ್ಟಿಗಿಂತಲೂ ಪುರಾಣ ದೃಷ್ಟಿಯಿಂದ ಇದಕ್ಕೆ ಮಹತ್ತ್ವ ಹೆಚ್ಚು. ಶಾಂತೇಶ ಭಾಮಿನೀಷಟ್ಪದಿಯಲ್ಲಿ ಸಿದ್ಧೇಶ್ವರ ಪುರಾಣವನ್ನು ಬರೆದಿದ್ದಾನೆ. ಅದೃಶ್ಯಕವಿಯ ಪ್ರೌಢರಾಯನ ಕಾವ್ಯ ಹಲವು ಶಿವಶರಣರ ಕಥೆಗಳನ್ನು ಒಳಗೊಂಡಿದೆ. ಪ್ರೌಢರಾಯನ ಕಾಲದ ಸಾಹಿತ್ಯೇತಿಹಾಸದ ಮೇಲೆ ಇಲ್ಲಿ ಸಾಕಷ್ಟು ಬೆಳಕು ಬಿದ್ದಿದೆ. ಈ ಶತಮಾನದ ಕವಿಗಳಲ್ಲಿ ಕಡೆಯವನಾದ ವಿರೂಪಾಕ್ಷಪಂಡಿತ ವಾರ್ಧಕಷಟ್ಪದಿಯಲ್ಲಿ ರಚಿಸಿರುವ ಚೆನ್ನಬಸವಪುರಾಣ ಹಲವು ದೃಷ್ಟಿಗಳಿಂದ ಗಮನಾರ್ಹವಾದುದು. ಇದು ಬರಿಯ ಚೆನ್ನಬಸವಣ್ಣನ ಜೀವನ ಚರಿತ್ರೆಯನ್ನಲ್ಲದೆ, ಹಲವಾರು ಶರಣರ ಕಥೆಗಳನ್ನೂ ವೀರಶೈವಧರ್ಮದ ಆಚಾರಗಳನ್ನೂ ಒಳಗೊಂಡಿದೆ. ವೀರಶೈವ ಪುರಾತನರ ಮತ್ತು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೆ ಈ ಗ್ರಂಥ ಬಹು ಉಪಯುಕ್ತವಾಗಿದೆ.

ಹದಿನೇಳನೆಯ ಶತಮಾನದಲ್ಲಿ ಸಿದ್ಧನಂಜೇಶ (ಸು.1650), ಷಡಕ್ಷರದೇವ (ಸು.1655), ಸರ್ವಜ್ಞ (ಸು.1700) ಎಂಬ ಮೂವರು ದೊಡ್ಡಕವಿಗಳು ಕಂಡುಬರುತ್ತಾರೆ. ಸಿದ್ಧನಂಜೇಶನ ರಾಘವಾಂಕಚಾರಿತ್ರ, ಗುರುರಾಜಚಾರಿತ್ರಗಳು ವಾರ್ಧಕಷಟ್ಪದಿಯಲ್ಲಿವೆ. ಇವುಗಳಲ್ಲಿ ಕಾವ್ಯಾಂಶಕ್ಕಿಂತ ವೀರಶೈವ ಧರ್ಮಬೋಧನೆಯೇ ಹೆಚ್ಚಾಗಿದೆ. ಕವಿಯ ಕಾವ್ಯಗಳೆರಡೂ ಸಾಹಿತ್ಯ ಚರಿತ್ರೆಗೆ ತುಂಬ ಸಹಾಯಕವಾಗಿವೆ. ಹಲವಾರು ಕವಿಗಳು ಇಲ್ಲಿ ಸ್ತುತ್ಯರಾಗಿರುವುದರಿಂದ ಕವಿಕಾಲ ನಿರ್ಧಾರಕ್ಕೆ ಈ ಕಾವ್ಯಗಳು ಒಂದು ಗಡಿಕಲ್ಲನ್ನು ಒದಗಿಸಿಕೊಟ್ಟಿವೆ.

ಷಡಕ್ಷರದೇವ ಬಳಕೆ ತಪ್ಪಿಹೋಗಿದ್ದ ಚಂಪೂವನ್ನು ಮತ್ತೆ ಬಳಕೆ ಮಾಡಿ ಅದಕ್ಕೆ ಹೊಸ ಶಕ್ತಿಯನ್ನು ತಂದುಕೊಟ್ಟವನು. ಈತ ಕನ್ನಡ ಸಂಸ್ಕೃತಗಳೆರಡರಲ್ಲಿಯೂ ಕಾವ್ಯರಚನೆ ಮಾಡಿದ್ದಾನೆ. ಈತನ ಕೃತಿಗಳಲ್ಲಿ ರಾಜಶೇಖರವಿಲಾಸ ಒಂದು ಉತ್ಕೃಷ್ಟಕೃತಿ.

ವಚನಸಾಹಿತ್ಯದ ಬಗ್ಗೆ ಹೇಳುವಾಗ ಸರ್ವಜ್ಞ ಅದ್ವಿತೀಯನಾಗಿ ನಿಲ್ಲುತ್ತಾನೆ. ಆಡುಭಾಷೆಯನ್ನು ಬಳಸಿಕೊಂಡು ವಚನ ರಚನೆ ಮಾಡಿ ತ್ರಿಪದಿ ಛಂದಸ್ಸಿಗೆ ಹೆಚ್ಚಿನ ಪ್ರಸಿದ್ಧಿ ದೊರಕೊಳ್ಳುವಂತಾದುದು ಈತನಿಂದ. ಈತನ ಪದ್ಯಗಳಲ್ಲಿ ಕಾಣಬರುವ ವಸ್ತುವಿಪುಲತೆ, ಸರಳತೆ, ಸೌಲಭ್ಯಗಳಂತೆಯೆ ಈತನ ವಾಗ್ಧಾರೆ, ಅಪಾರ ಜ್ಞಾನ, ನಿಶಿತಮತಿಗಳು ಅದ್ವಿತೀಯವಾದುವು.

ಕುಮಾರವ್ಯಾಸಯುಗದ ವೀರಶೈವ ಕವಿಗಳಲ್ಲಿ ಬೊಂಬೆಯ ಲಕ್ಕನ ಹರಿಶ್ಚಂದ್ರ ಸಾಂಗತ್ಯ, ಓದುವಗಿರಿಯನ (ಸು.1525) ಸಾನಂದಗಣೇಶ ಸಾಂಗತ್ಯ, ಹರಿಶ್ಚಂದ್ರ ಸಾಂಗತ್ಯ, ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ಅಣ್ಣಾಜಿಯ (17ನೆಯ ಶತಮಾನ) ಸೌಂದರ್ಯವಿಳಾಸ, ಉತ್ತರದೇಶದ ಬಸವಲಿಂಗನ (ಸು.1600) ಬಸವೇಶ್ವರ ಪುರಾಣದ ಕಥಾಸಾಗರ, ಭೈರವೇಶ್ವರ ಕಾವ್ಯದ ಕಥಾಸಾಗರ ಮತ್ತು ಉಚಿತ ಕಥೆಗಳು, ಹರೀಶ್ವರ ಕವಿಯ (ಸು.1606) ಪ್ರಭುದೇವರ ಪುರಾಣ, ಚನ್ನಣ್ಣನ (ಸು.1650) ವೀರೇಶ್ವರ ಚರಿತೆ ಇವು ಗಮನಾರ್ಹವಾಗಿವೆ.

ನರಹರಿತೀರ್ಥರ ಅನಂತರ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಸ್ಥಗಿತಗೊಂಡಿದ್ದ ದಾಸಪಂಥ ಹದಿನೈದನೆಯ ಶತಮಾನದಲ್ಲಿ ಮತ್ತೆ ಮೇಲೆದ್ದು ದಾಂಗುಡಿಯಿಟ್ಟು, ಹಬ್ಬಿ ಹರಡಿತು. ಅದನ್ನು ಮುಂದುವರಿಸಿದ ಕೀರ್ತಿ ಶ್ರೀಪಾದರಾಜರದು (ಸು.1450). ಇವರ ಕೀರ್ತನಾಭಿಮಾನ ಸ್ತುತ್ಯವಾದುದು. ಇವರು ಕನ್ನಡ ಗೀತೆಗಳಿಗೆ ಆಧ್ಯಾತ್ಮಿಕ ತತ್ತ್ವಗಳ ಸ್ಥಾನಮಾನಗಳನ್ನು ಕಲ್ಪಿಸಿದರು. ಹಾಡುವುದರ ಜೊತೆಗೆ ನರ್ತನವನ್ನೂ ಅಳವಡಿಸಿದವರು ಇವರೇ. ನರ್ತನಕ್ಕಾಗಿಯೆ ವಿಶಿಷ್ಟವಾದ ಕೃತಿಗಳನ್ನು ಸಹ ಇವರು ರಚಿಸಿದ್ದಾರೆ. ಇವರ ಶಿಷ್ಯ ವ್ಯಾಸರಾಯರು ಮಠದ ಸ್ವಾಮಿಯಾಗಿದ್ದು ರಾಜಗುರುವಾಗಿದ್ದು ಅನೇಕ ಸಂಸ್ಕೃತ ಗ್ರಂಥಗಳನ್ನೂ ನೂರಾರು ಕನ್ನಡ ಕೀರ್ತನೆಗಳನ್ನೂ ರಚಿಸಿದ್ದಾರೆ. ಕೊಳಲನೂದುವ ಚದುರನಾರೆ ಪೇಳಮ್ಮಯ್ಯ ಎಂಬ ಸುಪ್ರಸಿದ್ಧ ಕೀರ್ತನೆ ಇವರದೇ. ಮುಂದೆ 16ನೆಯ ಶತಮಾನದಲ್ಲಿ ವ್ಯಾಸರಾಯರ ನೇತೃತ್ವದಲ್ಲಿ ಪುರಂದರದಾಸರು, ಕನಕದಾಸರು, ವಾದಿರಾಜರು ಮೊದಲಾದವರು ದಾಸವಾಙ್ಮಯವನ್ನು ಉಳಿಸಿ ಬೆಳೆಸಿದರು. ಪುರಂದರದಾಸ ಕನಕದಾಸರಂತೂ ದಾಸವಾಙ್ಮಯದಲ್ಲಿ ಅದ್ವಿತೀಯರಾಗಿ ನಿಂತರು. ಪುರಂದರದಾಸರ ಲೋಕಾನುಭವ ಆಳವಾದುದು, ವಿಸ್ತಾರವಾದುದು. ಇವರ ಕೀರ್ತನೆಗಳಲ್ಲಿ ವೈವಿಧ್ಯವಿದ್ದು ಅವು ರಸಸ್ಯಂದಿಯಾಗಿವೆ. ಸಂಗೀತಶಾಸ್ತ್ರಕ್ಕೆ ಇವರು ನೀಡಿರುವ ಕೊಡುಗೆಯೂ ಅಸಾಮಾನ್ಯವಾದುದು. ಪಿಳ್ಳಾರಿಗೀತಗಳೆಂದು ಪ್ರಸಿದ್ಧವಾಗಿರುವ ಕೀರ್ತನೆಗಳು ಇವರವೇ. ಸಂಗೀತಕ್ಕೆ ಭಕ್ತಿಯುಕ್ತವಾದ ಸಾಹಿತ್ಯವನ್ನು ಒದಗಿಸಿದುದಲ್ಲದೆ ಅದಕ್ಕೆ ಕರ್ಣಾಟಕ ಸಂಗೀತ ಎಂಬ ಕೀರ್ತಿಯ ಕೋಡನ್ನೂ ಇವರು ಮೂಡಿಸಿದರು. ಅದ್ವಿತೀಯ ಕೀರ್ತನಕಾರರಾದ ತ್ಯಾಗರಾಜರಿಗೆ ಪ್ರೇರಣೆ ಪೋಷಣೆಗಳನ್ನು ನೀಡಿದ ಕೀರ್ತಿಯೂ ಇವರದೇ. ಇವರ ಸಮಕಾಲೀನರೇ ಆಗಿದ್ದ ಕನಕದಾಸರು ಹಲವು ಕೀರ್ತನೆಗಳನ್ನು ಮಾತ್ರವೇ ಅಲ್ಲದೆ, ಮೋಹನ ತರಂಗಿಣಿ (ಸಾಂಗತ್ಯ), ರಾಮಧಾನ್ಯ ಚರಿತ್ರೆ (ಭಾಮಿನೀಷಟ್ಪದಿ), ನಳಚರಿತ್ರೆ (ಭಾಮಿನೀಷಟ್ಪದಿ), ಹರಿಭಕ್ತಿಸಾರ (ಭಾಮಿನೀ ಷಟ್ಪದಿ) ಎಂಬ ಕಾವ್ಯಗಳನ್ನು ರಚಿಸಿದ್ದಾರೆ. ಇವರ ಕಾವ್ಯಗಳ ನಿರೂಪಣೆ ತಿಳಿಯಾಗಿ, ಸರಳವಾಗಿ, ಹೃದಯಸ್ಪರ್ಶಿಯಾಗಿದೆ; ಹಿತಮಿತವಾದ ವರ್ಣನೆಗಳಿಂದ ಕೂಡಿ ಸರಸವಾಗಿದೆ.

ವಾದಿರಾಜರು ಹಯವದನ ಎಂಬ ಅಂಕಿತದಿಂದ ಕೀರ್ತನೆಗಳನ್ನು ರಚಿಸಿರುವರಲ್ಲದೆ ವೈಕುಂಠವರ್ಣನೆ, ಸ್ವಪ್ನಗದ್ಯ, ಲಕ್ಷ್ಮಿಯ ಶೋಭಾನೆ, ಭಾರತತಾತ್ಪರ್ಯನಿರ್ಣಯಟೀಕೆ ಮೊದಲಾದ ಗ್ರಂಥಗಳನ್ನೂ ರಚಿಸಿದ್ದಾರೆ.

ಇವೆಲ್ಲದರ ಹೆಗ್ಗುರಿಯೂ ದ್ವೈತಮತ ತತ್ವನಿರೂಪಣೆಯೇ. ವಾದಿರಾಜರು ಮೇಧಾವಿಯಾದ ತಾರ್ಕಿಕರು. ಇವರ ಕವಿತೆಯೂ ತರ್ಕಬದ್ಧವಾದುದೇ ಇವರ ಸಮಕಾಲೀನರಾದ ವೈಕುಂಠದಾಸರು ಶ್ರೀವೈಷ್ಣವರಾದರೂ ದಾಸಪಂಥಕ್ಕೆ ಸೇರಿ ವೈಕುಂಠಕೇಶವ ಎಂಬ ಅಂಕಿತದಿಂದ ಹಲವು ಹಾಡುಗಳನ್ನು ಬರೆದಿದ್ದಾರೆ. ಇಲ್ಲಿಂದ ಮುಂದೆ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರತಿಭಾಶಾಲಿಗಳಾಗಿ ಅಪರೋಕ್ಷ ಜ್ಞಾನಿಗಳಾದ ದಾಸರಾರೂ ಕಾಣಿಸಿಕೊಳ್ಳುವುದಿಲ್ಲ. ಮಂತ್ರಾಲಯದ ರಾಯರು ಎಂದು ಪ್ರಸಿದ್ಧರಾಗಿರುವ ರಾಘವೇಂದ್ರತೀರ್ಥರೂ ಪ್ರಸನ್ನ ವೆಂಕಟದಾಸ, ವಿಜಯದಾಸ, ಗೋಪಾಲದಾಸ ಮೊದಲಾದವರೂ ದಾಸಸಾಹಿತ್ಯದ ಹೊಳೆ ತಡೆಯಿಲ್ಲದೆ ಹರಿದುಕೊಂಡು ಹೋಗಲು ಸಹಾಯಕರಾದರು. ಈ ಹರಿದಾಸರ ಸಾಲಿನಲ್ಲಿ ಕಾಣಬರುವ ಕಡೆಯ ಹಿರಿಯ ಹೆಸರೆಂದರೆ ಜಗನ್ನಾಥದಾಸರದು (ಸು.1728-1809). ಇವರು ಕೀರ್ತನೆಗಳನ್ನಲ್ಲದೆ ಹರಿಕಥಾಮೃತಸಾರವೆಂಬ ಷಟ್ಪದಿ ಗ್ರಂಥವನ್ನು ಬರೆದಿದ್ದಾರೆ. ಹರಿದಾಸ ಕೀರ್ತನೆಯ ರಚನೆ ಅಂದಿನಿಂದ ಇಂದಿನವರೆಗೆ ಬಂದು ಇಂದು ಕೂಡ ವಿಚ್ಛಿತ್ತಿಯಿಲ್ಲದೆ ಹರಿದುಕೊಂಡು ಹೋಗುತ್ತಿದೆ.

ಕುಮಾರವ್ಯಾಸ ಯುಗದ ವೈದಿಕ ಕವಿಗಳಲ್ಲಿ ಕುಮಾರವ್ಯಾಸನನ್ನು ಬಿಟ್ಟರೆ ನಮಗೆ ಕಾಣಬರುವ ಪ್ರಮುಖ ಕವಿ ಕುಮಾರವಾಲ್ಮೀಕಿಯೊಬ್ಬನೆ. ಈತ ರಾಮಾಯಣ ಕಥೆಯನ್ನು ಸರಳವಾದ ಭಾಷೆಯಲ್ಲಿ ನಿರರ್ಗಳವಾಗಿ ನಿರೂಪಿಸಿದ್ದಾನೆ. ಈತ ಕುಮಾರವ್ಯಾಸನಿಂದ ಸಾಕಷ್ಟು ಪ್ರಭಾವಿತನಾಗಿದ್ದಾನೆ. ಆದರೆ ಕುಮಾರವ್ಯಾಸನ ದರ್ಶನ, ಧ್ವನಿಗಳು ಇವನಲ್ಲಿ ಕಂಡುಬರುವುದಿಲ್ಲ. ಭಾಸ್ಕರ ಕವಿ (ಸು.1424) ಜೀವಂಧರಚರಿತೆ ಎಂಬ ಗ್ರಂಥವನ್ನು ಬರೆದಿದ್ದಾನೆ. ಈತನ ಕಾವ್ಯದ ಮೇಲೆ ಕುಮಾರವ್ಯಾಸನ ಪ್ರಭಾವ ನಿಚ್ಚಳವಾಗಿ ಬಿದ್ದಿದೆ. ಕಲ್ಯಾಣಕೀರ್ತಿ (ಸು.1439) ಎಂಬುವನು ಜ್ಞಾನಚಂದ್ರಾಭ್ಯುದಯ, ಕಾಮನ ಕಥೆ ಮೊದಲಾದ ಗ್ರಂಥಗಳನ್ನು ದೇಶೀ ಛಂದಸ್ಸಿನಲ್ಲಿ ರಚಿಸಿದ್ದಾನೆ.

ವಿಜಯನಗರದ ಕೃಷ್ಣದೇವರಾಯನ ಆಶ್ರಯದಲ್ಲಿದ್ದ ತಿಮ್ಮಣ್ಣಕವಿ (ಸು.1550) ಕುಮಾರವ್ಯಾಸ ಬರೆಯದೇ ಬಿಟ್ಟ ವ್ಯಾಸಭಾರತದ ಭಾಗವನ್ನು ಕೃಷ್ಣರಾಯ ಭಾರತ ಕಥಾಮಂಜರೀ ಎಂಬ ಹೆಸರಿನಿಂದ ಬರೆದಿದ್ದಾನೆ. ಷಟ್ಪದಿಯಲ್ಲಿ ಬರೆದಿದ್ದರೂ ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುವ ಎತ್ತರ ಬಿತ್ತರಗಳು ಇವನಲ್ಲಿ ಕಂಡುಬರುವುದಿಲ್ಲ.

ಷಟ್ಪದಿ ಕಾವ್ಯಗಳಲ್ಲಿ ಲಕ್ಷ್ಮೀಶನ (ಸು.1550) ಜೈಮಿನಿ ಭಾರತಕ್ಕೆ ಒಂದು ಪ್ರಮುಖ ಸ್ಥಾನ ಸಂದಿದೆ. ಈತ ಸಂಸ್ಕೃತದ ಜೈಮಿನಿ ಭಾರತದ ಕಥೆಯನ್ನು ಕನ್ನಡದಲ್ಲಿ, ವಾರ್ಧಕ ಷಟ್ಪದಿಯಲ್ಲಿ ಸುಂದರವಾಗಿ ಬರೆದಿದ್ದಾನೆ. ಈತನ ಕಾವ್ಯ ನವರಸಭರಿತವಾಗಿದ್ದು ಕಥನಕಲೆಗೆ, ವಾರ್ಧಕ ಷಟ್ಪದಿಯ ಉತ್ಕೃಷ್ಟ ಶೈಲಿಗೆ ಉದಾಹರಣೆಯಾಗಿದೆ. ಈತನ ವರ್ಣನೆಗಳಲ್ಲಿ ಕಣ್ಣಿಗೆ ಕಟ್ಟಬಲ್ಲ ಚಿತ್ರಕಾರನ ಕಲಾಕುಶಲತೆಯ ಜೊತೆಗೆ ಕಿವಿಗೆ ಹಿತವನ್ನುತರುವ ಸಂಗೀತಗಾರನ ಸ್ವರಜ್ಞಾನವೂ ಸೇರಿದೆ. ಮನೋಜ್ಞವಾದ ಉಪಮೆಗಳ ಬಳಕೆಯಿಂದ ಈತ ಉಪಮಾಲೋಲನೆಂಬ ಕೀರ್ತಿಗೆ ಪಾತ್ರನಾಗಿದ್ದಾನೆ.

ಹದಿನಾರನೆಯ ಶತಮಾನದ ಉಳಿದ ಕವಿಗಳೆಂದರೆ ಶ್ರೀರಂಗಮಹಾತ್ಮ್ಯವನ್ನು ಬರೆದ ರಂಗಾಚಾರ್ಯ (ಸು.1570), ನಂದಿಮಾಹಾತ್ಮ್ಯ ಮತ್ತು ಚಿತ್ರಭಾರತ ಎಂಬ ಎರಡು ಬೃಹದ್ಗ್ರಂಥಗಳನ್ನು ರಚಿಸಿರುವ ಗೋವಿಂದಕವಿ, ಶಿವಗೀತೆಯನ್ನು ವಾರ್ಧಕ ಷಟ್ಪದಿಯಲ್ಲಿ ಬರೆದ ತಿರುಮಲಭಟ್ಟ, ಅಕ್ರೂರಚರಿತೆಯನ್ನು ಭಾಮಿನೀಷಟ್ಪದಿಯಲ್ಲಿ ಬರೆದ ಸೋಮನಾಥಕವಿ (ಸು.1600). ರಂಗಾಚಾರ್ಯ ಕನ್ನಡದಲ್ಲಿ ಕಾವ್ಯರಚನೆ ಮಾಡಹೊರಟ ಶ್ರೀವೈಷ್ಣವರಲ್ಲಿ ಮೊದಲನೆಯವನು. ಗೋವಿಂದನ ಕಾವ್ಯಬಂಧ ಪ್ರೌಢ, ಬಿಗಿ, ಬಿರುಸು. ಈತನ ಚಿತ್ರಭಾರತ ದೈವಭಕ್ತಿಯಿಂದ ತುಂಬಿದೆ. ತಿರುಮಲಭಟ್ಟನ ಕವಿತೆ ಪ್ರಸಾದಗುಣದಿಂದ ತುಂಬಿದೆ. ಸೋಮನಾಥನ ಅಕ್ರೂರ ಚರಿತೆಯಲ್ಲಿ ಅಕ್ರೂರನ ಕಥೆಗಿಂತ ಶ್ರೀಕೃಷ್ಣನ ಕಥೆಯೇ ಪ್ರಮುಖವಾಗಿದೆ. ಕಾವ್ಯವನ್ನು ಮನೋಹರವಾಗಿ ಬರೆಯಲು ಸಾಕಷ್ಟು ರಸಸ್ಥಾನಗಳಿದ್ದರೂ ಅದಕ್ಕೆ ಅಗತ್ಯವಾದ ಪ್ರತಿಭೆ ಕಲ್ಪನಾ ಶಕ್ತಿಗಳು ಈ ಕವಿಗಳಲ್ಲಿ ಇಲ್ಲ.

ಹದಿನೇಳನೆಯ ಶತಮಾನದ ವೈದಿಕ ಕವಿಗಳಲ್ಲಿ ಭಾಮಿನೀ ಷಟ್ಪದಿಯಲ್ಲಿ ಪ್ರಹ್ಲಾದ ಚರಿತೆಯನ್ನು ಬರೆದ ನರಹರಿ (ಸು.1650), ವೆಂಕಟೇಶ್ವರ ಪ್ರಬಂಧವನ್ನು ಚಂಪೂವಿನಲ್ಲಿ ಬರೆದ ವೆಂಕಕವಿ (ಸು.1650), ಭಗವದ್ಗೀತೆಯನ್ನು ವಾಸುದೇವ ಕಥಾಮೃತ ಎಂಬ ಹೆಸರಿನಿಂದ ಭಾಮಿನೀ ಷಟ್ಪದಿಯಲ್ಲಿ ಬರೆದ ನಾಗರಸ ಮುಖ್ಯರು. ಮಹಲಿಂಗರಂಗ (ಸು.1675) ಇದೇ ಅವಧಿಯಲ್ಲಿ ಗ್ರಂಥರಚನೆ ಮಾಡಿದ ಇನ್ನೊಬ್ಬ ಪ್ರಮುಖ ಕವಿ. ಇವನ ಅನುಭವಾಮೃತ ಭಾಮಿನೀಷಟ್ಪದಿಯಲ್ಲಿದೆ. ಇದರಲ್ಲಿ ಅಖಿಲ ವೇದಾಂತಾರ್ಥವನ್ನು ಸಂಗ್ರಹಿಸಿಕೊಟ್ಟಿದ್ದಾನೆ. ಈತನ ಕನ್ನಡಾಭಿಮಾನ ಸ್ತೋತ್ರಾರ್ಹವಾದುದು. ಸುಲಿದ ಬಾಳೆಯ ಹಣ್ಣಿನಂದದಿ ಅತ್ಯಂತ ಸುಲಭವಾದ, ಮನೋಹರವಾದ ಕನ್ನಡದಲ್ಲಿ ಆತ್ಮಜ್ಞಾನವನ್ನು ಪಡೆದುಕೊಂಡರೆ ಸಾಲದೇನು ಸಂಸ್ಕೃತದಲ್ಲಿನ್ನೇನು ಎಂದು ಸವಾಲು ಹಾಕಿದ ಮಹಲಿಂಗರಂಗ ಒಳ್ಳೆಯ ಕವಿಹೃದಯವುಳ್ಳವನು. ವಸ್ತು ಮತ್ತು ನಿರೂಪಣೆ ಎರಡರಲ್ಲೂ ಕವಿಯು ಅಪೂರ್ವವಾದ ಪ್ರತಿಭೆಪಾಂಡಿತ್ಯಗಳನ್ನು ಮೆರೆದಿದ್ದಾನೆ. ಬಾಲಕೃಷ್ಣ ಬ್ರಹ್ಮಾನಂದ ಯೋಗಿ ಎಂಬುವರು ಈ ಕಾವ್ಯವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾರೆ.

ಬೊಬ್ಬೂರು ರಂಗ (ಸು.1750) ಮತ್ತು ಚಿದಾನಂದಾವಧೂತ (ಸು.1750) ಹೆಸರಿಸಬೇಕಾದ ಮತ್ತಿಬ್ಬರು ಕವಿಗಳು. ಬೊಬ್ಬೂರು ರಂಗ ಭಾಮಿನೀಷಟ್ಪದಿಯಲ್ಲಿ ಅಂಬಿಕಾವಿಜಯವನ್ನೂ ವಾರ್ಧಕದಲ್ಲಿ ಪರಶುರಾಮ ರಾಮಾಯಣವನ್ನು ಬರೆದಿದ್ದಾನೆ. ಚಿದಾನಂದಾವಧೂತ ಜ್ಞಾನಸಿಂಧು ಎಂಬ ಗ್ರಂಥದಲ್ಲಿ ಅದ್ವೈತ ವೇದಾಂತವನ್ನು ಪ್ರತಿಪಾದಿಸಿದ್ದಾನೆ. ಈ ಗ್ರಂಥ ಮಹಲಿಂಗರಂಗನ ಅನುಭವಾಮೃತವನ್ನು ಬಹುಮಟ್ಟಿಗೆ ಅನುಸರಿಸಿರುವುದಲ್ಲದೆ ಅದರಂತೆಯೇ ಲಲಿತವಾಗಿದೆ. ಇದು ಭಾಮಿನೀ ಷಟ್ಪದಿಯಲ್ಲಿದೆ. ಈತ ಇನ್ನು ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಇದೇ ಅವಧಿಯಲ್ಲಿ ಲಿಂಗಣ್ಣ ಕವಿ (ಸು.1750) ಚಂಪೂ ರೂಪದಲ್ಲಿ ಕೆಳದಿ ನೃಪವಿಜಯವನ್ನು ಬರೆದಿದ್ದಾನೆ. ಇದರಲ್ಲಿ ಕಾವ್ಯಾಂಶಕ್ಕಿಂತ ಚರಿತ್ರಾಂಶವೆ ಹೆಚ್ಚು.

ವಿಜಯನಗರ ಪತನಾನಂತರ ಮೈಸೂರೊಡೆಯರ ಕಾಲದಲ್ಲಿ ಸಾಹಿತ್ಯ ರಚನೆಗೆ ಹೆಚ್ಚಿನ ಆಶ್ರಯ ದೊರಕಿತು. ಈ ಕಾಲದಲ್ಲಿ ಹಳೆಯ ಚಂಪೂಶೈಲಿಯನ್ನೂ ಹಳಗನ್ನಡ ಗದ್ಯವನ್ನೂ ಪುನರುಜ್ಜೀವಿಸುವ ಕಾರ್ಯ ನಡೆಯಿತು. ರಾಜಒಡೆಯರ ಕಾಲದಲ್ಲಿ ಅವರ ದಂಡನಾಯಕನಾದ ತಿರುಮಲಾರ್ಯ ಕರ್ಣವೃತ್ತಾಂತ ಕಥೆಯನ್ನು ಸಾಂಗತ್ಯದಲ್ಲಿ ಬರೆದ. ರಾಜ ಒಡೆಯರ ಅನಂತರ ಪಟ್ಟಕ್ಕೆ ಬಂದ ಚಾಮರಾಜ ಒಡೆಯರು (1617-37) ಸ್ವತಃ ಕವಿಯಾಗಿದ್ದು ಚಾಮರಾಜೋಕ್ತಿ ವಿಳಾಸ, ಮಣಿಪ್ರಕಾಶ ಎಂಬೆರಡು ಗ್ರಂಥಗಳನ್ನು ಬರೆದಂತೆ ಪ್ರತೀತಿ. ಈ ರಾಜನ ಆಸ್ಥಾನದಲ್ಲಿದ್ದ ರಾಮಚಂದ್ರನೆಂಬ ಕವಿ ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಗದ್ಯರೂಪದಲ್ಲಿ ಕನ್ನಡಕ್ಕೆ ಭಾಷಾಂತರಿಸಿದ. ರಾಜನ ಮತ್ತೊಬ್ಬ ಆಶ್ರಿತನಾದ ಪದ್ಮಣಪಂಡಿತ ಚಾಮರಾಜೀಯ ಎಂಬ ಹೆಸರಿನಿಂದ ಹಯಸಾರ ಸಮುಚ್ಚಯವನ್ನು ಕಂದದಲ್ಲಿ ಬರೆದಿದ್ದಾನೆ. ಕಂಠೀರವ ನರಸರಾಜ (1638-1659) ಕವಿ, ಗಮಕಿ, ವಾದಿ, ವಾಗ್ಮಿಗಳಿಗೆ ಆಶ್ರಯದಾತನಾಗಿದ್ದ. ಈತನ ಆಸ್ಥಾನ ಕವಿಯಾದ ಭಾಸ್ಕರಕವಿ ಬೇಹಾರಗಣಿತವನ್ನು ರಚಿಸಿದ. ಮತ್ತೊಬ್ಬ ಕವಿ ಗೋವಿಂದವೈದ್ಯ ಕಂಠೀರವನರಸರಾಜವಿಜಯವನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಇದರಲ್ಲಿ ಕನ್ನಡ ಭಾಷೆಯ ಮೇಲೆ ಉರ್ದು ಭಾಷೆಯ ಪ್ರಭಾವ ಬಿದ್ದಿರುವುದನ್ನು ಕಾಣಬಹುದು.

ಚಿಕ್ಕದೇವರಾಜ ಒಡೆಯರ (1673-1704) ಕಾಲ ಮೈಸೂರಿನ ಇತಿಹಾಸದಲ್ಲಿ, ಒಡೆಯರ ಕಾಲದ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸುವರ್ಣಯುಗ. ಸಂಗೀತ ಸಾಹಿತ್ಯಗಳೆರಡರಲ್ಲಿಯೂ ಅಪಾರವಾದ ಆದರ, ಅಭಿರುಚಿ, ಪರಿಶ್ರಮಗಳಿದ್ದ ಇವರು ಕನ್ನಡದಲ್ಲಿ ಚಿಕದೇವರಾಯ ಬಿನ್ನಪ, ಗೀತಗೋಪಾಲ, ಭಾರತ, ಭಾಗವತ, ಶೇಷಧರ್ಮ ಎಂಬ ಗ್ರಂಥಗಳನ್ನು ಬರೆದಿರುವರೆಂದು ಪ್ರತೀತಿ.

ಚಿಕ್ಕದೇವರಾಜ ಒಡೆಯರ ಆಶ್ರಯದಲ್ಲಿ ತಿರುಮಲಾರ್ಯ, ಚಿಕುಪಾಧ್ಯಾಯ, ಸಿಂಗರಾರ್ಯ, ತಿಮ್ಮಕವಿ, ಮಲ್ಲಿಕಾರ್ಜುನ, ವೇಣುಗೋಪಾಲ, ವರಪ್ರಸಾದ ಕವಿ, ಚಿದಾನಂದ, ಮಲ್ಲರಸ ಮೊದಲಾದವರು ಕಾವ್ಯರಚನೆ ಮಾಡಿದರು. ಇದೇ ಸಂದರ್ಭದಲ್ಲಿ ಹೊನ್ನಮ್ಮ, ಶೃಂಗಾರಮ್ಮ ಮೊದಲಾದ ಕಬ್ಬಿಗಿತ್ತಿಯರೂ ಸಾಹಿತ್ಯ

ರಚನೆಯಲ್ಲಿ ಕೈಹಾಕಿದ್ದು ಗಮನಾರ್ಹವಾದ ಸಂಗತಿ. ತಿರುಮಲಾರ್ಯನು ಚಿಕದೇವರಾಜವಿಜಯ, ಚಿಕದೇವರಾಜ ವಂಶಾವಳಿ, ಚಿಕದೇವರಾಜಶತಕ, ಅಪ್ರತಿಮವೀರ ಚರಿತೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಅಪ್ರತಿಮವೀರ ಚರಿತೆ ನಾಲ್ಕು ಪ್ರಕರಣಗಳನ್ನುಳ್ಳ ಒಂದು ಅಲಂಕಾರ ಗ್ರಂಥ. ಚಿಕುಪಾಧ್ಯಾಯ ಚಿಕ್ಕದೇವರಾಜನ ಕರಣಿಕಾಗ್ರೇಸರನೂ ಮಂತ್ರಿಯೂ ಆಗಿದ್ದವನು. ಈತ ಗದ್ಯ ಪದ್ಯಗಳಲ್ಲಿ ವಿಪುಲ ಗ್ರಂಥರಚನೆ ಮಾಡಿದ್ದಾನೆ. ಈತನ ಕಾವ್ಯವಸ್ತುವಿನಲ್ಲಿ, ಛಂದಸ್ಸಿನಲ್ಲಿ ವೈವಿಧ್ಯ ಕಂಡುಬರುತ್ತದೆ. ಇವನ ಕೃತಿಗಳು ವೈಷ್ಣವ ಧರ್ಮವನ್ನು ಕುರಿತವು. ಈತನ ಗದ್ಯ ಮನೋಹರವಾಗಿದೆ. ಕನ್ನಡ ಗದ್ಯಚರಿತ್ರೆಯಲ್ಲಿ ಈತನಿಗೆ ಒಂದು ಪ್ರಮುಖಸ್ಥಾನ ಸಲ್ಲುತ್ತದೆ.

ಸಿಂಗರಾರ್ಯ ಬರೆದಿರುವ ಮಿತ್ರವಿಂದಾಗೋವಿಂದ ಕನ್ನಡದ ಮೊಟ್ಟಮೊದಲ ನಾಟಕವೆಂಬ ಪ್ರಶಸ್ತಿಗೆ ಪಾತ್ರವಾಗಿದೆ. ರಾಜನ ಸಂಚಿಯ ಊಳಿಗದವಳಾಗಿದ್ದ ಹೊನ್ನಮ್ಮನ ಹದಿಬದೆಯ ಧರ್ಮ ಸರಳ ಸುಂದರವಾದ ಸಾಂಗತ್ಯಕಾವ್ಯ. ನೀತಿಬೋಧೆಯನ್ನು ಗುರಿಯಾಗಿಟ್ಟುಕೊಂಡು ಕಾವ್ಯರಚನೆಮಾಡಿದ ಕವಯಿತ್ರಿಯರಲ್ಲಿ ಈಕೆ ಅಗ್ರಗಣ್ಯಳಾಗಿದ್ದಾಳೆ. ಶೃಂಗಾರಮ್ಮನ ಪದ್ಮಿನೀಕಲ್ಯಾಣ ಸಾಂಗತ್ಯದಲ್ಲಿದೆ. ದೊಡ್ಡಕೃಷ್ಣರಾಜನ (1713-32) ಆಳಿಕೆಯಲ್ಲಿ ರಚಿತವಾದ ಶಾಸ್ತ್ರಗ್ರಂಥಗಳಲ್ಲಿ ಬಾಲವೈದ್ಯದ, ಚೆಲುವನ ಕನ್ನಡ ಲೀಲಾವತೀ ಎಂಬ ಗಣಿತಶಾಸ್ತ್ರ (ಕಂದ ಮತ್ತು ವಾರ್ಧಕ), ರತ್ನಶಾಸ್ತ್ರ ಷಟ್ಪದಿ ಪ್ರಮುಖವಾದವುಗಳು. ರಾಜನ ಪಟ್ಟಮಹಿಷಿಯಾದ ಚೆಲುವಾಂಬೆ ಎಂಬ ಕವಯಿತ್ರಿ ಇದೇ ಕಾಲದಲ್ಲಿ ವರನಂದೀ ಕಲ್ಯಾಣವನ್ನು ರಚಿಸಿದ್ದಾಳೆ. ಈಕೆಯ ಶೈಲಿ ಲಲಿತಮಧುರವಾಗಿದೆ.

ದೊಡ್ಡಕೃಷ್ಣರಾಜನ ಅನಂತರ ಕೆಲಕಾಲ ಮಂಕಾಗಿದ್ದ ಸಾಹಿತ್ಯರಚನೆ 19ನೆಯ ಶತಮಾನದ ಆದಿಭಾಗದಲ್ಲಿ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಮತ್ತೆ ಪ್ರಜ್ವಲಿಸಿತು. ಮುಮ್ಮಡಿ ಕೃಷ್ಮರಾಜ ಸ್ವತಃ ಕವಿಯಾಗಿದ್ದು ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಈತನ ಆಶ್ರಯದಲ್ಲಿದ್ದ ಅನೇಕ ಕವಿಗಳು ಸಂಸ್ಕೃತ ಕನ್ನಡಗಳಲ್ಲಿ ನೂರಾರು ಗ್ರಂಥಗಳನ್ನು ಬರೆದಿದ್ದಾರೆ. ಅಂದಿನ ಕೃತಿಗಳಲ್ಲಿ ಕೆಂಪುನಾರಾಯಣನ ಮುದ್ರಾಮಂಜೂಷ ಎಂಬ ಗದ್ಯಕೃತಿ ಅತ್ಯಂತ ಜನಪ್ರಿಯವಾಗಿದ್ದು ಗಮನಾರ್ಹವಾದುದಾಗಿದೆ. ನಡುಗನ್ನಡ ಹೊಸಗನ್ನಡವಾಗಿ ಮಾರ್ಪಾಟಾಗುತ್ತಿದ್ದ ಸಂಕ್ರಮಣಕಾಲವನ್ನು ಈ ಕೃತಿ ಪ್ರತಿನಿಧಿಸುತ್ತದೆ. ಈ ಕೃತಿಯ ಗದ್ಯ ಪ್ರೌಢವಾದರೂ ಲಲಿತವಾಗಿ ಶಕ್ತಿಯುತವಾಗಿ ಸಾರವತ್ತಾಗಿದೆ. ಗದ್ಯಸಾಹಿತ್ಯದ ಬೆಳವಣಿಗೆಯಲ್ಲಿ ಆಧುನಿಕ ಸಾಹಿತ್ಯದ ಹಿಂದಿನ ಮಜಲೇ ಮುದ್ರಾಮಂಜೂಷವೆಂದು ಹೇಳಬಹುದು.

ಇದೇ ಕಾಲದಲ್ಲಿ ಅಳಿಯ ಲಿಂಗರಾಜ ಸುಮಾರು ಐವತ್ತು ಗ್ರಂಥಗಳನ್ನು ಬರೆದಿದ್ದಾನೆ. ವಿವಿಧ ಛಂದಸ್ಸಿನಲ್ಲಿರುವ ಈ ಗ್ರಂಥಗಳು ಕವಿಯ ಸರ್ವತೋಮುಖವಾದ ಪ್ರತಿಭೆಗೆ ಸಾಕ್ಷಿಯಾಗಿವೆ. ಈತನ ನರಪತಿಚರಿತೆ ಒಂದು ಅಲಂಕಾರ ಗ್ರಂಥ. ಮುಮ್ಮಡಿ ಕೃಷ್ಣರಾಜ ಒಡೆಯರ ಅನಂತರ ಪಟ್ಟಕ್ಕೆ ಬಂದ ಚಾಮರಾಜರ ಕಾಲದಲ್ಲಿ ಕನ್ನಡ ಸಾಹಿತ್ಯದ ಆಧುನಿಕ ಯುಗ ಪ್ರಾರಂಭವಾಯಿತು.

ಕುಮಾರವ್ಯಾಸ ಯುಗದ ಜೈನಕವಿಗಳು ಈ ಯುಗದಲ್ಲಿ ಯುಗಧರ್ಮಕ್ಕೆ ಶರಣಾಗಿ ದೇಶೀಯ ಛಂದಸ್ಸಿನಲ್ಲಿ ಕಾವ್ಯಸೃಷ್ಟಿಯನ್ನು ಕೈಕೊಂಡರು. ಪಾಂಡಿತ್ಯ ಪ್ರಚುರವಾಗಿ ರಾಜಸಭೆಯ ಮನ್ನಣೆ ಪಡೆಯುತ್ತಿದ್ದ ಅವರ ಕಾವ್ಯಶಕ್ತಿ ಅಂದು ಷಟ್ಪದಿ ಸಾಂಗತ್ಯಗಳ ಧಾಟಿಯನ್ನು ಪಡೆದು ಜನಸಾಮಾನ್ಯರ ಸ್ವತ್ತಾಯಿತು. ಈ ಯುಗದಲ್ಲಿ ಜೈನಕವಿಗಳ ಪ್ರಭಾವ ಇತರ ಕವಿಗಳ ಮೇಲಾಗುವುದಕ್ಕಿಂತ, ಇತರ ಕವಿಗಳ ಪ್ರಭಾವ ಇವರ ಮೇಲೆ ಬಿದ್ದಿದೆ. ಈ ಯುಗದಲ್ಲಿ ಜೈನಕವಿಗಳ ಸಂಖ್ಯೆ ಕಡಿಮೆ. ಅವರಲ್ಲಿಯೂ ಕೆಲವರನ್ನು ಬಿಟ್ಟರೆ ಉಳಿದವರೆಲ್ಲ ಕಾವ್ಯರಚನೆಯ ದೃಷ್ಟಿಯಿಂದ ಸಾಮಾನ್ಯರು.

ಈ ಯುಗದ ಜೈನಕವಿಗಳಲ್ಲಿ ರತ್ನಾಕರವರ್ಣಿ (16ನೆಯ ಶತಮಾನ) ಅದ್ವಿತೀಯನಾದವನು. ಈತನ ಭರತೇಶ ವೈಭವ ಸಾಂಗತ್ಯದಲ್ಲಿ ರಚಿತವಾದ ಕನ್ನಡದ ಮಹಾಕಾವ್ಯಗಳಲ್ಲೊಂದು. ಭೋಗಮೂಲವಾದ ಶೃಂಗಾರವೂ ಯೋಗಮೂಲವಾದ ತ್ಯಾಗವೂ ಇಲ್ಲಿ ಪರಸ್ಪರ ವಿರುದ್ಧವಾಗದೆ ಭೋಗಯೋಗಗಳ ಸಮನ್ವಯ ತತ್ತ್ವ ಈ ಕಾವ್ಯದಲ್ಲಿ ಪ್ರತಿಪಾದಿತವಾಗಿದೆ. ಇಲ್ಲಿ ಬರುವ ನಿರ್ದಿಷ್ಟ ಶೃಂಗಾರ ಚಿತ್ರಣವೂ ಸಂಗೀತ ನರ್ತನಗಳ ವರ್ಣನೆಯೂ ಕನ್ನಡದಲ್ಲಿಯೆ ಅದ್ವಿತೀಯವಾದುವು.

ಶಿಶುಮಾಯಣನ (ಸು.1472) ಅಂಜನಾಚರಿತ್ರೆ, ತ್ರಿಪುರದಹನ ಸಾಂಗತ್ಯಗಳೆರಡೂ ಸಾಂಗತ್ಯದಲ್ಲಿವೆ. ಸಾಂಗತ್ಯದ ಇತಿಹಾಸದಲ್ಲಿ ಈ ಕವಿಗೆ ಒಂದು ಉನ್ನತ ಸ್ಥಾನವಿದೆ. ತೆರಕಣಾಂಬಿಯ ಬೊಮ್ಮರಸ (ಸು.1485) ಸನತ್ಕುಮಾರ ಚರಿತೆ ಮತ್ತು ಜೀವಂಧರ ಚರಿತೆಗಳ ಕರ್ತೃ. ಮೊದಲನೆಯದು ಭಾಮಿನೀ ಷಟ್ಪದಿಯಲ್ಲೂ ಎರಡನೆಯದು ಸಾಂಗತ್ಯದಲ್ಲೂ ಇದೆ.

ಹದಿನಾರನೆಯ ಶತಮಾನದ ಆರಂಭದಲ್ಲಿ ಕಾಣಬರುವ ಮೂರನೆಯ ಮಂಗರಸ (ಸು.1508) ಜಯನೃಪಕಾವ್ಯ, ಸೂಪಶಾಸ್ತ್ರಗಳನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ. ಇವನ ಉಳಿದಗ್ರಂಥಗಳು ಸಾಂಗತ್ಯದಲ್ಲಿವೆ. ಜಯನೃಪಕಾವ್ಯದಲ್ಲಿ ಕಥೆಗಿಂತಲೂ ವರ್ಣನೆ ಹೆಚ್ಚು.

ಅಭಿನವವಾದಿವಿದ್ಯಾನಂದನ (ಸು.1533) ಕಾವ್ಯಸಾರ, ಸಾಳ್ವಕವಿಯ (ಸು.1560) ಸಾಳ್ವ ಭಾರತ ಈ ಕಾಲದ ಪ್ರಮುಖ ಗ್ರಂಥಗಳು. ಸಾಳ್ವಭಾರತ ಭಾಮಿನೀಷಟ್ಪದಿಯಲ್ಲಿದೆ. ಸಾಳ್ವನು ರಸರತ್ನಾಕರ, ವೈದ್ಯಸಾಂಗತ್ಯ ಎಂಬ ಇನ್ನೆರಡು ಗ್ರಂಥಗಳನ್ನು ಬರೆದಿದ್ದಾನೆ. ರಸರತ್ನಾಕರ ರಸಪ್ರಕ್ರಿಯೆಯನ್ನು ಪ್ರತಿಪಾದಿಸುವ ಒಂದು ಅಲಂಕಾರ ಗ್ರಂಥ. ಈ ಗ್ರಂಥದಲ್ಲಿ ನವರಸಗಳ ಸ್ವರೂಪವನ್ನು ದಿಗ್ದರ್ಶಿಸಿದ್ದಾನೆ. ದೊಡ್ಡಯ್ಯ (ಸು.1550) ಮತ್ತು ಬಾಹುಬಲಿ (ಸು.1560) ಕ್ರಮವಾಗಿ ಚಂದ್ರಪ್ರಭಚರಿತೆ, ನಾಗರಕುಮಾರಚರಿತೆ ಎಂಬ ಗ್ರಂಥಗಳನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ.

ಹದಿನೇಳನೆಯ ಶತಮಾನದಿಂದ ಮುಂದಕ್ಕೆ ಜೈನಕವಿಗಳು ಕಾವ್ಯಕರ್ಮಕ್ಕೆ ಕೈಹಾಕಿರುವುದು ವಿರಳವಾಗಿ ಕಂಡುಬರುತ್ತದೆ. ಇದೇ ಶತಮಾನದ ಜೈನಗ್ರಂಥಕರ್ತರಲ್ಲಿ ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕ ಬಹುಮುಖ್ಯನಾದವನು. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ದೇವಚಂದ್ರ (ಸು.1770-1841) ರಾಜಾವಳೀ ಕಥೆಯನ್ನು ಬರೆದಿದ್ದಾನೆ. ಇದರಲ್ಲಿ ಜೈನಮತಕ್ಕೆ ಸಂಬಂಧಿಸಿದ ಹಲವು ಇತಿಹಾಸಗಳೂ ರಾಜರ ಮತ್ತು ಕವಿಗಳ ಚರಿತೆಗಳೂ ಇವೆ. ಮೈಸೂರು ರಾಜರ ವಂಶಾವಳಿಯೂ ಇಲ್ಲಿ ಸಂಗ್ರಹವಾಗಿ ಬಂದಿದೆ. ಕವಿ ಚರಿತ್ರೆಯ ದೃಷ್ಟಿಯಿಂದ ಇದು ಬಹುಮುಖ್ಯವಾದುದು.

**ಆಧುನಿಕ ಯುಗ :** ಕನ್ನಡ ಸಾಹಿತ್ಯವಾಹಿನಿ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಬತ್ತಿಯೇ ಹೋಗುವುದೇನೊ ಎನ್ನುವಷ್ಟು ತೆಳುವಾಯಿತು. ಆ ವೇಳೆಗಾಗಲೇ ಕರ್ನಾಟಕ ಬ್ರಿಟಿಷರ ಆಳಿಕೆಗೆ ಸೇರಿಹೋಗಿತ್ತು. ಇಂಗ್ಲಿಷ್ ಶಿಕ್ಷಣದ ಮೂಲಕ ಕನ್ನಡ ಭಾಷೆಯ ಅಭ್ಯಾಸ ಕುಂಠಿತಗೊಂಡಿತು. ಬುದ್ಧಿಜೀವಿಗಳ ಮಾತೃಭಾಷಾಪ್ರೇಮ ಇಂಗ್ಲಿಷ್ ಭಾಷೆಯ ಮೋಹದಲ್ಲಿ ಮುಳುಗಿ ಹೋಯಿತು. ಆದರೆ ಅದೇ ಇಂಗ್ಲಿಷ್ ಭಾಷೆ ಸಾಹಿತ್ಯಗಳ ಅಧ್ಯಯನವೇ ಕನ್ನಡ ಜನರ ಆತ್ಮಾಭಿಮಾನವನ್ನು ಕೆರಳಿಸಿ, ದೇಶಭಾಷೆಗಳ ಅದ್ಭುತ ಕ್ರಾಂತಿಗೂ ಮೂಲವಾಯಿತು. ಇಂಗ್ಲಿಷ್ ಸಾಹಿತ್ಯದಲ್ಲಿನ ಸ್ವಾತಂತ್ರ್ಯ, ಸೌಲಭ್ಯ, ರೀತಿ, ರಸಪುಷ್ಟಿಗಳನ್ನು ಕಂಡು ಕನ್ನಡದಲ್ಲಿಯೂ ಅಂಥ ಸಾಹಿತ್ಯವನ್ನು ಸೃಷ್ಟಿಸಬೇಕೆಂಬ ಉತ್ಸಾಹ ಮೂಡಿತು. ಮೊದಲಿಗೆ ಈ ಕಾರ್ಯ ಅನುವಾದಗಳ ಮೂಲಕ ನಡೆಯಿತು. ಕಾಲಕ್ರಮದಲ್ಲಿ ಕನ್ನಡ ಸಾಹಿತ್ಯದೊಡನೆ ಅದನ್ನು ಸಮನ್ವಯಗೊಳಿಸಿಕೊಳ್ಳುವ ಶಕ್ತಿ ಪರಿಣತಗೊಂಡು, ಅರ್ಧ ಶತಮಾನದಿಂದ ಈಚೆಗೆ ಉತ್ತಮ ಕಾವ್ಯಗಳು ರಚನೆಗೊಳ್ಳುತ್ತ ಬಂದಿವೆ.

ಆಧುನಿಕ ಕನ್ನಡ ಸಾಹಿತ್ಯದ ಆರಂಭದೆಸೆಯಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ಕನ್ನಡಕ್ಕೆ ದೊರೆತ ಪ್ರೇರಣೆ, ಪ್ರಯೋಜನಗಳು ಚಿರಸ್ಮರಣೀಯವಾದುವು. ಇವರು ಕರ್ನಾಟಕದ ಜನಜೀವನದಲ್ಲಿ ಸಮರಸವಾಗಿ ಬೆರೆತು, ಇಲ್ಲಿನ ಸಾಹಿತ್ಯ ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಲವು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ

ಪ್ರಕಟಿಸಿದುದಲ್ಲದೆ, ಕನ್ನಡ ಭಾಷಾಸ್ವರೂಪವನ್ನು ದಿಗ್ದರ್ಶಿಸಬಲ್ಲ ವ್ಯಾಕರಣ, ಛಂದಸ್ಸು, ನಿಘಂಟು ಮೊದಲಾದ ಗ್ರಂಥಗಳ ರಚನೆಗೆ ಕೈಹಾಕಿದರು. ಜಾನ್‌ಹ್ಯಾಂಡ್, ವಿಲಿಯಂ ರೀವ್, ಕಿಟ್ಟೆಲ್, ಜೀಗ್ಲರ್, ಬಿ.ಎಲ್.ರೈಸ್, ಇ.ಪಿ.ರೈಸ್ ಮೊದಲಾದವರಿಂದ ಕನ್ನಡ ಭಾಷಾಸಾಹಿತ್ಯಗಳಿಗೆ ಆಗಿರುವ ಸೇವೆ ಅಪಾರ. ಪಾದ್ರಿಗಳು ಕನ್ನಡ ಸಾಹಿತ್ಯದ ಹಲವು ಹೊಸಮುಖಗಳಿಗೆ ಅಂಕುರಾರ್ಪಣೆ ಮಾಡಿದರು: ವಸ್ತುನಿಷ್ಠವಾದ ಆಧುನಿಕ ಸಾಹಿತ್ಯ ವಿಮರ್ಶೆಗೆ ತಳಹದಿ ಹಾಕಿದರು. ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದ ಕೀರ್ತಿ ಇ.ಪಿ.ರೈಸ್ (ಮೊದಲ ಮುದ್ರಣ 1915), ಅವರಿಗೆ ಸಲ್ಲುತ್ತದೆ. ಕನ್ನಡ ಶಾಸನಗಳನ್ನು ಕಲೆಹಾಕಿದ ಕೀರ್ತಿ ಫ್ಲೀಟ್ (ಮೊದಲ ಮುದ್ರಣ 1878) ಅವರದಾದರೆ, ಮೈಸೂರು ಗೆಜೆಟಿಯರಿನ ಎರಡು ಸಂಪುಟಗಳನ್ನೂ ಎಪಿಗ್ರಾಫಿಯ ಕರ್ನಾಟಿಕದ ಹನ್ನೆರಡು ಸಂಪುಟಗಳನ್ನೂ ಹೊರತಂದ ಕೀರ್ತಿ ಬಿ.ಎಲ್.ರೈಸ್ ಅವರಿಗೆ ಸಲ್ಲುತ್ತದೆ. ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣ ನೀಡಿದ ಕಾಲ್ಡ್‌ವೆಲ್ಲರು ಹಲವು ದೃಷ್ಟಿಗಳಿಂದ ಚಿರಸ್ಮರಣೀಯರು.

ಆಧುನಿಕ ಸಾಹಿತ್ಯದ ಅಂಕುರಾರ್ಪಣೆಗೆ ಮೈಸೂರು ಅರಸರಿಂದ ದೊರೆತ ಸಹಾಯವೂ ಬಹುಮುಖ್ಯವಾದದ್ದು. ಚಾಮರಾಜ ಒಡೆಯರು ತಮ್ಮ ಆಶ್ರಯದಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾವನ್ನು ಸ್ಥಾಪಿಸಿ, ತಮ್ಮ ಆಸ್ಥಾನಪಂಡಿತರನ್ನು ನಾಟಕ ರಚನೆಗೆ ಕೈ ಹಾಕುವಂತೆ ಪ್ರೋತ್ಸಾಹಿಸಿದರು. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳು ಶಾಕುಂತಲ ಮೊದಲಾದ ಸಂಸ್ಕೃತ ನಾಟಕಗಳ ಭಾಷಾಂತರಗಳನ್ನೂ ಶೂರಸೇನಚರಿತೆ ಎಂಬ ಹೆಸರಿನಿಂದ ಒಥೆಲೊ ಎಂಬ ಇಂಗ್ಲಿಷ್ ನಾಟಕದ ಭಾಷಾಂತರವನ್ನೂ ಕನ್ನಡಕ್ಕೆ ಕೊಟ್ಟರು. ಆಸ್ಥಾನಕವಿಗಳಾದ ಜಯರಾಯಾಚಾರ್ಯ, ಸುಬ್ಬಾಶಾಸ್ತ್ರಿ, ಅನಂತನಾರಾಯಣ ಶಾಸ್ತ್ರಿ ಮೊದಲಾದವರೂ ಈ ಕಾರ್ಯರಂಗದಲ್ಲಿ ದುಡಿದು ಕೀರ್ತಿಶೇಷ ರಾದರು. ಚಾಮರಾಜರ ಅನಂತರ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜರು ಆಧುನಿಕ ಕನ್ನಡದ ಸ್ವರ್ಣಯುಗಕ್ಕೆ ತಳಹದಿ ಹಾಕಿದವರೆಂದು ಹೇಳಬಹುದು. ಅವರ ಆಸ್ಥಾನಕವಿಗಳಾದ ಶ್ರೀಕಂಠಶಾಸ್ತ್ರಿಗಳೂ ನರಹರಿಶಾಸ್ತ್ರಿಗಳೂ ನೂರಾರು ಸ್ವತಂತ್ರ ನಾಟಕಗಳನ್ನು ರಚಿಸಿ ನಾಟಕ ರಂಗಸ್ಥಳಗಳ ದಿಗ್ವಿಜಯಕ್ಕೆ ಕಾರಣರಾದುದಲ್ಲದೆ ಹಲವು ಕಾವ್ಯಗಳ ಕರ್ತೃಗಳಾಗಿ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ಅದರಲ್ಲಿಯೂ ಶ್ರೀಕಂಠಶಾಸ್ತ್ರಿಗಳ ಬಹುಮುಖ ಪ್ರತಿಭೆ ಅಚ್ಚರಿಯನ್ನುಂಟುಮಾಡುತ್ತದೆ. ಹಲವು ಕಾದಂಬರಿಗಳು, ವ್ಯಂಗ್ಯಚಿತ್ರಗಳು, ವಿಡಂಬನಾತ್ಮಕ ಪ್ರಬಂಧಗಳು;' ಸಂಸ್ಕೃತ, ತೆಲುಗು, ಗ್ರಂಥ'ಗಳ ಅನುವಾದಗಳು ಇವರಿಂದ ಮೂಡಿಬಂದವು. ಇದೇ ಸಂದರ್ಭದಲ್ಲಿ ಶ್ರೀಕೃಷ್ಣರಾಜ ಒಡೆಯರು ಕನ್ನಡ ನವೋದಯಕ್ಕಾಗಿ ನೀಡಿದ ಎರಡು ಮುಖ್ಯ ಕಾಣಿಕೆಗಳೆಂದರೆ ಕನ್ನಡ ಸಾಹಿತ್ಯ ಪರಿಷತ್ತು (1915) ಮತ್ತು ಮೈಸೂರು ವಿಶ್ವವಿದ್ಯಾನಿಲಯ (1916). ಈ ಎರಡು ಸಂಸ್ಥೆಗಳಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂದಿರುವ ಸೇವೆ ಅಪಾರ.

ಕನ್ನಡ ಸಾಹಿತ್ಯದಲ್ಲಾದ ನವೋದಯ ಕ್ರಾಂತಿ ನಮಗೆ ನಿಚ್ಚಳವಾಗಿ ಕಾಣುವುದು 20ನೆಯ ಶತಮಾನದ ಆದಿಭಾಗದಿಂದ. ಈ ಕ್ರಾಂತಿ 12ನೆಯ ಶತಮಾನದಲ್ಲಿ ಆದ ಕನ್ನಡಸಾಹಿತ್ಯದ ಕ್ರಾಂತಿಯಿಂದ ಸಂಪೂರ್ಣ ಭಿನ್ನವಾದುದು. ಅಂದಿನ ಕ್ರಾಂತಿ ಬಹುಮುಖ್ಯವಾದ ಧರ್ಮಮೂಲವಾದುದಾಗಿದ್ದರೆ ಇಂದಿನದು ವಿಶ್ವವಿಶಾಲವಾದ ಲೌಕಿಕ ಜ್ಞಾನ ಸಾಧನೆಯನ್ನು ಹೆಗ್ಗುರಿಯಾಗಿಟ್ಟುಕೊಂಡಿತು. ಇದರ ಮುಖ್ಯ ಲಕ್ಷಣ ವೈಜ್ಞಾನಿಕ ಮನೋಭಾವನೆ. ಈ ಮನೋಭಾವನೆಗೆ ಬೀಜಭೂತವಾದುದು ಸ್ವತಂತ್ರ ವಿವೇಚನೆ. ಬುದ್ಧಿಗೆ ಇಲ್ಲಿ ಪ್ರಾಧಾನ್ಯ. ಮತಸೂಚಕ ಭಾವನೆಗಳಿಗೆ ಪ್ರಾಧಾನ್ಯತೆ ತಗ್ಗಿ ವಿಶಾಲ ಭಾವನೆಗಳಿಗೆ ಇಂಬು ದೊರಕಿತು. ನಮ್ಮ ಪ್ರಾಚೀನ ಸಾಹಿತ್ಯದ ಸತ್ತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡು ಹೊಸತು ಹಳತು, ನಮ್ಮದು ಹೆರರದು ಎಲ್ಲವನ್ನೂ ಹೊಂದಿಸಿಕೊಂಡು, ಸಮನ್ವಯಗೊಳಿಸಿ ಕೊಂಡು ಆಧುನಿಕ ಸಾಹಿತ್ಯ ಶ್ರೀಮಂತವಾಯಿತು. ಹಿಂದೆಂದೂ ಕಾಣಬರದಷ್ಟು ಅಪಾರ ಸಂಖ್ಯೆಯ ಕವಿಗಳೂ ಗ್ರಂಥ'ಕರ್ತರೂ ಈ ಯುಗದಲ್ಲಿ ಕಾಣಿಸಿಕೊಂಡರು. ಇಲ್ಲಿನ ಸಾಹಿತ್ಯದ ವೈಪುಲ್ಯ 'ವೈವಿಧ್ಯ'. ವೈಶಾಲ್ಯಗಳು ಚಕಿತಗೊಳ್ಳುವಷ್ಟು ಅಪಾರವಾದುವು. ಈ ಸಾಹಿತ್ಯ ರಾಶಿಯನ್ನು ಪದ್ಯ ಮತ್ತು ಗದ್ಯ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಹೊಸ ಸಾಹಿತ್ಯ ಬೆಳೆಯುವುದರ ಜೊತೆ ಜೊತೆಯಲ್ಲೇ ಸಂಪ್ರದಾಯಬದ್ಧವಾದ ಕಾವ್ಯಪ್ರಕಾರ - ವಸ್ತು, ರೀತಿಗಳಲ್ಲಿ ಪ್ರಾಚೀನ ಸಾಹಿತ್ಯವನ್ನು ಅನುಸರಿಸುತ್ತಿರುವ ಕಾವ್ಯಗಳು ಬೆಳೆದುಕೊಂಡು ಬಂದುವು. ಸೋಸಲೆ ಅಯ್ಯಾಶಾಸ್ತ್ರಿ, ಹೊಸಕೆರೆ ಚಿದಂಬರಯ್ಯ, ನಂಜನಗೂಡು ಶ್ರೀಕಂಠಶಾಸ್ತ್ರಿ, ಬೆಳ್ಳಾವೆ ನರಹರಿಶಾಸ್ತ್ರಿ, ಶ್ರೀನಿವಾಸ ರಂಗಾಚಾರ್ಯ, ಡಿ.ವಿ.ಗುಂಡಪ್ಪ, ಹೆಮ್ಮಿಗೆ ದೇಶಿಕಾಚಾರ್ಯ, ಘನಪಾಠಿ ನಾರಾಯಣ ಮೊದಲಾದವರು ಚಂಪೂಕಾವ್ಯಗಳನ್ನು ರಚಿಸಿದ್ದಾರೆ. ಮುದ್ದಣನ ಶ್ರೀ ರಾಮಪಟ್ಟಾಭಿಷೇಕ, ವೆಂಕಟಸುಬ್ಬಯ್ಯನವರ ವಿನಾಯಕವಿಜಯ, ಸೋಸಲೆ ಅಯ್ಯಾಶಾಸ್ತ್ರಿಗಳ ಶೇಷರಾಮಾಯಣಂ, ಮುಳಿಯ ತಿಮ್ಮಪ್ಪಯ್ಯನವರ ಸೊಬಗಿನ ಬಳ್ಳಿ, ಸೇಡಿಯಾಪು ಕೃಷ್ಣಭಟ್ಟರ ಕೃಷ್ಣಾಕುಮಾರಿ, ಮೈ.ಶೇ.ಅನಂತ ಪದ್ಮನಾಭರಾಯರ ಶ್ರೀಕೃಷ್ಣಾಚರಿತಾಮೃತಂ, ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರ ಶ್ರೀನಿವಾಸ ಲೀಲಾವಾಸ ಇತ್ಯಾದಿ ಗ್ರಂಥಗಳು ವಿವಿಧ ಷಟ್ಪದಿಗಳಲ್ಲಿವೆ. ಜಯದೇವಿತಾಯಿ ಲಿಗಾಡೆಯವರು ಸಿದ್ಧರಾಮಪುರಾಣವನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ. ಕಾವ್ಯಗುಣದ ದೃಷ್ಟಿಯಿಂದಲೂ ಇವು ಗಮನಾರ್ಹವಾಗಿವೆ. ಆಧುನಿಕ ಸಾಹಿತ್ಯಪ್ರಕಾರದಲ್ಲಿ ಬಹುಮಟ್ಟಿಗೆ ಭಾವಗೀತೆ ಪ್ರಮುಖವಾಯಿತು. ಖಂಡಕಾವ್ಯಗಳು, ಕಥ'ನಕವನಗಳು, ಗೀತನಾಟಕಗಳು ಇತ್ಯಾದಿ ಕಾವ್ಯಮುಖಗಳು ಕಾಣಿಸಿಕೊಂಡಿದ್ದರೂ ಅವುಗಳ ಸಂಖ್ಯೆ ಅಲ್ಪ. ವಸ್ತುರೀತಿಗಳಲ್ಲಿ ಹಿಂದಿನ ಕಾವ್ಯಗಳು ಅನುಸರಿಸಬೇಕಾಗಿದ್ದ ಕಠಿಣವಾದ ನಿಯಮಗಳ ಶೃಂಖಲೆಗಳನ್ನು ಈ ಸಾಹಿತ್ಯ ಪ್ರಕಾರ ಸಡಿಲಗೊಳಿಸಿತು. ಚ.ವಾಸುದೇವಯ್ಯ, ಶ್ರೀನಿವಾಸರಾವ್, ಎಸ್.ಜಿ.ನರಸಿಂಹಾಚಾರ್, ಪಂಜೆ ಮಂಗೇಶರಾವ್ ಮೊದಲಾದ ಕವಿಗಳು ಈ ಶತಮಾನದ ಆರಂಭ ಕಾಲದಲ್ಲಿಯೆ ಈ ಪ್ರಕಾರಕ್ಕೆ ಕೈಹಾಕಿದ್ದರೂ ಇವುಗಳ ಪ್ರಭಾವವನ್ನು ಜನರ ಮೇಲೆ ಅಚ್ಚೊತ್ತಿ, ಹೊಸ ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಬಿ.ಎಂ.ಶ್ರೀ ಅವರಿಗೆ ಸಲ್ಲುತ್ತದೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಕವನಗಳ ಭಾಷಾಂತರಗಳನ್ನು ಒಳಗೊಂಡ ಅವರ ಇಂಗ್ಲಿಷ್ ಗೀತಗಳು ಸ್ವಭಾವ ಸುಂದರವಾಗಿವೆ, ಲಲಿತ ರಮಣೀಯವಾಗಿವೆ. ಅಸಂಖ್ಯಾತ ಕವಿಗಳು ಈ ಪ್ರಕಾರಕ್ಕೆ ಕೈಹಾಕಿರುವರಾದರೂ ಕುವೆಂಪು, ಬೇಂದ್ರೆ ಇವರಿಬ್ಬರೂ ಆಧುನಿಕ ನವೋದಯ ಸಾಹಿತ್ಯಕ್ಕೆ ಒತ್ತುಕೊಟ್ಟ ಕವಿಗಳು. ಕುವೆಂಪು ಅವರು ಕನ್ನಡಕ್ಕೆ ನೀಡಿರುವ ಕೊಡುಗೆ ಅಸದೃಶವಾದುದು. ಅವರ ಶ್ರೀ ರಾಮಾಯಣದರ್ಶನಂ ಆಧುನಿಕ ಕನ್ನಡ ಸಾಹಿತ್ಯದ ಮೇರುಕೃತಿ. ಈ ಕಾವ್ಯದಲ್ಲಿ ಕುವೆಂಪು ಅವರ ಕಾವ್ಯಾಸಕ್ತಿ ಅಪೂರ್ವವಾದುದು. ಆಧುನಿಕ ಕನ್ನಡ ಕವಿಗಳಲ್ಲಿ ಅಗ್ರಗಣ್ಯರಾದ ಇವರ ಭಾವಗೀತೆಗಳನ್ನು ಕುರಿತು ವಿವೇಚಿಸುವಾಗ ಮಾತ್ರ ಇವರ ಕಾವ್ಯಶಕ್ತಿ ಇಂಗ್ಲಿಷ್‌ನಲ್ಲಿ ಮೊದಲು ಇಣಿಕಿ ಹಾಕಿ, ಆಮೇಲೆ ಕನ್ನಡದ ಭಾವಗೀತೆಗಳಲ್ಲಿ ಅಭಿವ್ಯಕ್ತವಾಗಿದೆ ಎನ್ನಬೇಕು. ಇವರ ಕವಿತೆಗಳಲ್ಲಿ ಸರ್ವತೋಮುಖವಾದ ಆಸಕ್ತಿ ಕಂಡುಬರುವುದಾದರೂ ಪ್ರಕೃತಿ ಪ್ರೇಮ, ಆಧ್ಯಾತ್ಮ, ಭಕ್ತಿ -ಇವು ಸ್ಥಾಯೀಭಾವವನ್ನು ಪಡೆದಿವೆ. ಇವರ ನಾಟಕಗಳು ಕೂಡ ಭಾವ ಗೀತಾತ್ಮಕವಾದುವು. ದ.ರಾ.ಬೇಂದ್ರೆಯವರು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ವಿಪುಲವಾಗಿ ಕವನಗಳನ್ನು ಬರೆದಿರುವವರು. ಇವರ ಕವನಗಳಲ್ಲಿ ವಿಷಯ ಮತ್ತು ಅದರ ನಿರೂಪಣೆಯಲ್ಲಿ ಕಾಣಬರುವ ವೈವಿಧ್ಯ, ಮಾತಿನ ಚಮತ್ಕಾರ, ಆಧ್ಯಾತ್ಮ ವಿಚಾರ ಲಹರಿ, ಜನಪದ ಧಾಟಿ, ನಾದಮಾಧುರ್ಯಗಳು ಅತ್ಯಂತ ಹೃದ್ಯವಾಗಿವೆ. ಇವರಿಬ್ಬರೂ ಆಧುನಿಕ ಕನ್ನಡ ಸಾಹಿತ್ಯದ ಎರಡು ವಿಶಿಷ್ಟ ಪಂಥಗಳ ನಿರ್ಮಾತೃಗಳು. ಪು.ತಿ.ನ. ಅವರು ಪ್ರಕೃತಿವರ್ಣನೆಯಲ್ಲಿ, ಭಕ್ತಿಪಾರಮ್ಯದಲ್ಲಿ, ಭಾರತಸಂಸ್ಕೃತಿಯ ದಿಗ್ದರ್ಶನದಲ್ಲಿ, ಭಾವಭಾಷೆಗಳ ಕುಸುರಿಗೆಲಸ ಮಾಡುವುದರಲ್ಲಿ ಅಗ್ರಗಣ್ಯರು. ವಿ.ಸೀ., ಡಿ.ವಿ.ಜಿ., ಶ್ರೀನಿವಾಸ, ವಿನಾಯಕ, ರಾಜರತ್ನಂ. ಕೆ.ಎಸ್.ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಚೆನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ, ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ ಮೊದಲಾದ ಹಿರಿಯ ಕಿರಿಯ ಕವಿಗಳು ಒಬ್ಬೊಬ್ಬರೂ ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡಿರುವ ಶ್ರೇಷ್ಠ ಕವಿಗಳಾಗಿದ್ದಾರೆ.

ಸು.1950ರ ಸುಮಾರಿನಿಂದ ಈಚೆಗೆ ನವ್ಯಕಾವ್ಯ ಎಂಬ ಹೆಸರಿನಿಂದ ಹೊಸದೊಂದು ಶಾಖೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. ಟಿ.ಎಸ್.ಎಲಿಯೆಟ್, ಆಡೆನ್, ಸೆಸಿಲ್ ಡೆ ಲೂಯಿ ಮೊದಲಾದ ಸಮಕಾಲೀನ ಇಂಗ್ಲಿಷ್ ಕವಿಗಳಿಂದ ಸ್ಫೂರ್ತಿಗೊಂಡ ಹಲವು ಕವಿಗಳು

ಹೊಸರೀತಿಯ ಪ್ರಯೋಗಗಳ ಮೂಲಕ ಹೊಸ ಹಾದಿಯೊಂದನ್ನು ನಿರ್ಮಿಸಲು ಹೊರಟರು. ವ್ಯಕ್ತಿನಿಷ್ಠವಾಗಿ ಹೊಸ ವಸ್ತು, ಹೊಸ ಭಾಷೆ, ಹೊಸ ಶೈಲಿ, ಹೊಸ ಧೋರಣೆಗಳಿಂದ ಹೊರಟಿರುವ ಈ ಕವಿ ಕಾವ್ಯಗಳಲ್ಲಿ ಕವಿಮನದ ಸಂಕೀರ್ಣತೆಯನ್ನು ಅಭಿವ್ಯಕ್ತಗೊಳಿಸಲು ಬಳಸುವ ರೂಪಕಗಳೂ ಸಾಮತಿಗಳೂ ಅನೇಕ ವೇಳೆ ಓದುಗರನ್ನು ಚಕಿತಗೊಳಿಸುತ್ತವೆ. ಸಾಂಕೇತಿಕವಾಗಿರುವ ಹಲವು ಮಾತುಗಳು ಅವುಗಳ ಪರಿಚಯವಿಲ್ಲದವರಿಗೆ ಕ್ಲಿಷ್ಟವೆನಿಸಿವೆ. ಈ ಪರಂಪರೆಯನ್ನು ಪ್ರಾರಂಭಿಸಿದ ಕೀರ್ತಿ ವಿ.ಕೃ. ಗೋಕಾಕರಿಗೆ ಸಲ್ಲುತ್ತದೆ. ಆದರೆ ಇವರ ಕವನಗಳಲ್ಲಿ ಸಂಪ್ರದಾಯ, ನವ್ಯತೆಗಳು ಸಮರಸವಾಗಿ ಬೆರೆತಿವೆ. ನವ್ಯಮಾರ್ಗದಲ್ಲಿ ಗೋಪಾಲಕೃಷ್ಣ ಅಡಿಗರ ಹೆಸರು ಅತ್ಯಂತ ಗಣ್ಯವಾದುದು. ಇವರ ಕವಿತೆಗಳು ಇವರ ಪ್ರತಿಭೆ, ಕಲ್ಪನಾಶಕ್ತಿಗಳ ಮಹತ್ತಿಗೆ ಸಾಕ್ಷಿಗಳಾಗಿವೆ. ಗಂಗಾಧರ ಚಿತ್ತಾಲ, ಶಂಕರ ಮೊಕಾಶಿ, ಕೆ.ಎಸ್.ನ., ರಾಮಚಂದ್ರ ಶರ್ಮ, ಎ.ಕೆ.ರಾಮಾನುಜನ್, ಜಿ.ಎಸ್.ಸಿದ್ಧಲಿಂಗಯ್ಯ, ಅರವಿಂದನಾಡಕರ್ಣಿ, ಪಿ.ಲಂಕೇಶ್, ಎಚ್.ಎಂ.ಚನ್ನಯ್ಯ, ಸುಮತೀಂದ್ರ ನಾಡಿಗ, ಕೆ.ಎಸ್.ನಿಸಾರ್ ಅಹಮದ್, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಶ್ರೀಕೃಷ್ಣ ಆಲನಹಳ್ಳಿ ಮೊದಲಾದವರು ನವ್ಯಕಾವ್ಯ ಜಗತ್ತಿನಲ್ಲಿ ಗಣ್ಯರಾದವರು. ನವ್ಯರೆಂದು ಮುದ್ರೆಯೊತ್ತದ ಕವಿ ಕುವೆಂಪು, ಬೇಂದ್ರೆ, ಪುತಿನ ಇವರಲ್ಲಿಯೂ ಈಚಿನ ಕೆಲವು ಕೃತಿಗಳಲ್ಲಿ ನವ್ಯತೆಯ ಸೊಗಡನ್ನು ಕಾಣಬಹುದು.

ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ನಮ್ಮಲ್ಲಿ ಜಾನಪದದತ್ತ ಆಸಕ್ತಿ ಮೂಡಿ ಜನಪದ ಸಾಹಿತ್ಯ ಸಂಗ್ರಹದ ಕೃಷಿ ಕಳೆದ ಏಳು ದಶಕಗಳ ಹಿಂದಿನಿಂದ ಪ್ರಾರಂಭವಾಯಿತು. ಹಲಸಂಗಿ ಸೋದರರಾದ ರೇವಪ್ಪ, ಮಧುರ ಚೆನ್ನ, ಸಿಂಪಿ ಲಿಂಗಣ್ಣ- ಈ ಮೂವರು ಹೊರತಂದ ಗರತಿಯ ಹಾಡು ಕನ್ನಡದ ಮೊಟ್ಟಮೊದಲ ಜನಪದ ಸಂಗ್ರಹ. ರೇವಪ್ಪನವರು ಹೊರತಂದ ಮಲ್ಲಿಗೆ ದಂಡೆ ಜನಪದ ಸಾಹಿತ್ಯದ ಎಲ್ಲ ಮುಖಗಳನ್ನೂ ಒಳಗೊಂಡ ಅಮೂಲ್ಯ ಸಂಗ್ರಹ. ಇವೆರಡೂ ತ್ರಿಪದಿಗಳಲ್ಲಿವೆ. ಸಿಂಪಿ ಲಿಂಗಣ್ಣ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ, ಗದ್ದಗಿಮಠ, ಕರಾಕೃ, ಜೀ.ಶಂ.ಪ., ರಾಗೌ, ಧವಳಶ್ರೀ, ಪಿ.ಕೆ.ರಾಜಶೇಖರ ಮೊದಲಾದ ನೂರಾರು ಜನ ತಮ್ಮ ಸಂಗ್ರಹಗಳಿಂದ ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕ್ಕೆ ಅವಕಾಶ ದೊರೆತು ಜಾನಪದ ವಸ್ತುಸಂಗ್ರಹಾಲಯವೂ ಸ್ಥಾಪನೆಯಾಗಿದ್ದು ಜಾನಪದದ ವೈಜ್ಞಾನಿಕ ಅಧ್ಯಯನ ನಡೆಯುತ್ತಿದೆ.

ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಉದಿಸಿದ ಆಧುನಿಕ ಕನ್ನಡ ಸಾಹಿತ್ಯದ ಇನ್ನೊಂದು ವಿಶೇಷ ಪ್ರಕಾರವೆಂದರೆ ಗದ್ಯಸಾಹಿತ್ಯ. ಪಾಶ್ಚಾತ್ಯ ಸಾಹಿತ್ಯದಲ್ಲಿ ಕಾಣಬರುವ ಎಲ್ಲ ಗದ್ಯಪ್ರಕಾರಗಳೂ - ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ನಾಟಕ, ವ್ಯಕ್ತಿಚಿತ್ರ, ಪ್ರಬಂಧ - ಹರಟೆ, ಪ್ರವಾಸ ಸಾಹಿತ್ಯ, ಪತ್ರ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಮರ್ಶೆ, ಹಾಸ್ಯ ಪ್ರಬಂಧ ಇತ್ಯಾದಿ - ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಬೆಳೆದು ನಿಂತಿವೆ. ಹೊಸಗನ್ನಡ ಗದ್ಯ ಸಾಹಿತ್ಯಕ್ಕೆ ಕೆಂಪುನಾರಾಯಣ (ಸು.1823) ತನ್ನ ಮುದ್ರಾಮಂಜೂಷದಿಂದ ನಾಂದಿ ಹಾಡಿದನೆಂದು ಹೇಳಬಹುದು. ಇದೇ ಸಂದರ್ಭದಲ್ಲಿ ಸಂಪ್ರದಾಯಕ್ಕೂ ಆಧುನಿಕತೆಗೂ ಕಟ್ಟಿದ ರಸಸೇತುವೆಯಂತಿರುವ ಮುದ್ದಣನನ್ನು ಹೆಸರಿಸಬಹುದು. ಈತ ಅದ್ಭುತ ರಾಮಾಯಣ, ರಾಮಾಶ್ವಮೇಧ ಎಂಬ ಎರಡು ಗದ್ಯಗ್ರಂಥಗಳನ್ನು ಬರೆದಿದ್ದಾನೆ. ಹಳಗನ್ನಡ-ನಡುಗನ್ನಡ ಬೆರೆತ ಇವನ ಗದ್ಯಶೈಲಿ ಹೊಸಗನ್ನಡಕ್ಕೆ ನಾಂದಿ ಹಾಡಿತೆಂದು ಹೇಳಬಹುದು. ಭಾಷಾಶೈಲಿಯ ದೃಷ್ಟಿಯಿಂದ ಈತನ ಗದ್ಯ ವಿಶಿಷ್ಟವಾಗಿದೆ. ಇವೆರಡರ ವಸ್ತುವೂ ಹಳೆಯದು. ಬಳಸಿರುವ ಭಾಷೆ ಹಳಗನ್ನಡ, ಆದರೆ ಕವಿಯ ಮನೋಭಾವ ಆಧುನಿಕ. ರಾಮಾಶ್ವಮೇಧದ ಮುದ್ದಣ ಮನೋರಮೆಯರ ಸಂಭಾಷಣೆ ಸ್ವಾರಸ್ಯಪೂರ್ಣವಾಗಿದೆ.

ಆಧುನಿಕ ಕನ್ನಡ ಗದ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದುದು. ಈ ಪ್ರಕಾರ ಕನ್ನಡದಲ್ಲಿ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿಯೆ ಕ್ವಚಿತ್ತಾಗಿ ಕಾಣಿಸಿಕೊಂಡಿತಾದರೂ ನಮ್ಮ ಜನರಲ್ಲಿ ಇದರ ವಾಚನಾಭಿರುಚಿಯನ್ನು ನೆಲೆಗೊಳಿಸಿದವರು ಬಿ.ವೆಂಕಟಾಚಾರ್ಯ ಮತ್ತು ಗಳಗನಾಥರು. ಗುಲ್ವಾಡಿ ವೆಂಟರಾಯ, ಬೋಳಾರ ಬಾಬುರಾಯ, ಕೆರೂರ ವಾಸುದೇವಾಚಾರ್ಯ ಮೊದಲಾದವರು ಸುಂದರವಾದ ಸ್ವತಂತ್ರ ಕಾದಂಬರಿಗಳನ್ನು ರಚಿಸಿದ್ದಾರೆ. ಅವು ಕೇವಲ ಒಂದೋ ಎರಡೋ ಅಷ್ಟೇ. ವಾಸ್ತವಿಕತೆಯನ್ನು ಕಾದಂಬರಿಯಲ್ಲಿ ತರುವ ಸಂಪ್ರದಾಯಕ್ಕೆ ಎಂ.ಎಸ್.ಪುಟ್ಟಣ್ಣನವರು ಆದ್ಯರಾದರು. 1930ರಿಂದ ಈಚೆಗೆ ಕಾದಂಬರಿಕಾರರ ಸಂಖ್ಯೆ ಅಪರಿಮಿತವಾಗಿದೆ. ಇವರ ಸಾಲಿನಲ್ಲಿ ಶಿವರಾಮ ಕಾರಂತ, ಕುವೆಂಪು, ರಾವಬಹಾದ್ದೂರ ಇವರ ಹೆಸರುಗಳು ಅಗ್ರಗಣ್ಯವಾದವು. ಆಧುನಿಕ ಕಾದಂಬರಿಕಾರರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳನ್ನು ಬರೆದವರಲ್ಲಿ ಅ.ನ.ಕೃ. ಪ್ರಸಿದ್ಧರು. ಅ.ನ.ಕೃ. ಅವರ ಪರಂಪರೆಗೆ ಸೇರಿದವರು ತ.ರಾ.ಸು. ಚಿತ್ರದುರ್ಗದ ಇತಿಹಾಸವನ್ನು ಆಧರಿಸಿ ಬರೆದಿರುವ ಇವರ ಐತಿಹಾಸಿಕ ಕಾದಂಬರಿಗಳು ಸುಪ್ರಸಿದ್ಧವಾಗಿವೆ. ವಿನಾಯಕ, ಮಿರ್ಜಿ ಅಣ್ಣಾರಾಯ, ಶ್ರೀರಂಗ, ಶ್ರೀನಿವಾಸ, ಕೆ.ವಿ.ಅಯ್ಯರ್, ಬಿ.ಪುಟ್ಟಸ್ವಾಮಯ್ಯ, ಕೃಷ್ಣಮೂರ್ತಿ ಪುರಾಣಿಕ, ಎಸ್.ಎಲ್.ಭೈರಪ್ಪ, ತ್ರಿವೇಣಿ, ಎಂ.ಕೆ.ಇಂದಿರಾ ಮೊದಲಾದ ಕಾದಂಬರಿಕಾರರು ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ.

ಹೊಸಗನ್ನಡ ಗದ್ಯಸಾಹಿತ್ಯದಲ್ಲಿ ಕಾದಂಬರಿಯನ್ನು ಬಿಟ್ಟರೆ ಎರಡನೆಯ ಸ್ಥಾನ ಸಣ್ಣಕಥೆಗೆ ಸಲ್ಲುತ್ತದೆ. ಈ ಪ್ರಕಾರದಲ್ಲಿ ಕೆಲಸ ಮಾಡಿರುವವರ ಸಂಖ್ಯೆಯೂ ಅಪಾರ. ಕನ್ನಡದಲ್ಲಿ ಸಣ್ಣಕಥೆಯನ್ನು ಆರಂಭಿಸಿದವರು ಯಾರೇ ಆಗಲಿ ಅದನ್ನು ಸ್ಥಾಯಿಯಾಗಿ ಮಾಡಿದವರು ಶ್ರೀನಿವಾಸರು. ಕೆರೂರ ವಾಸುದೇವಾಚಾರ್ಯ, ಎಂ.ಎನ್.ಕಾಮತ್, ಪಂಜೆಮಂಗೇಶರಾವ್ - ಇವರು ಶ್ರೀನಿವಾಸರ ಸಮಕಾಲೀನರು. ಈ ಪ್ರಕಾರವನ್ನು ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಚದುರಂಗ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಅಶ್ವತ್ಥ, ಅ.ನ.ಕೃ. ಗೌರಮ್ಮ, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ, ತೇಜಸ್ವಿ, ಸದಾಶಿವ, ದೇವನೂರು ಮಹಾದೇವ, ಮೊಗಳ್ಳಿಗಣೇಶ ಮೊದಲಾದವರು ಸಮರ್ಥವಾಗಿ ಮುಂದುವರಿಸಿದರು.

ಗದ್ಯಪ್ರಕಾರಗಳಲ್ಲಿ ಜೀವನಚರಿತ್ರೆ ಮತ್ತೊಂದು. ಕನ್ನಡದಲ್ಲಿ ಇದುವರೆಗೆ ಸುಮಾರು ಒಂದು ಸಾವಿರದಷ್ಟು ಜೀವನಚರಿತ್ರೆಗಳು ಪ್ರಕಟಗೊಂಡಿವೆ. ಈ ಸಾಹಿತ್ಯ ಪ್ರಕಾರ ಅತ್ಯಂತ ಹುಲುಸಾಗಿ ಬೆಳೆದಿದೆ. ಈ ಪ್ರಕಾರವನ್ನು ಜನಪ್ರಿಯವಾಗಿ ಮಾಡಿದವರು ಸುಬೋಧ ರಾಮರಾಯರು. ಡಿ.ವಿ.ಜಿ., ಕುವೆಂಪು, ಸಿ.ಕೆ.ವೆಂಕಟರಾಮಯ್ಯ, ದೇಜಗೌ. ಮೊದಲಾದ ಅನೇಕರು ಶ್ರೇಷ್ಠವಾದ ಜೀವನಚರಿತ್ರೆಗಳನ್ನು ಬರೆದಿದ್ದಾರೆ.

ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದ ಕನ್ನಡದಲ್ಲಿ ಕಾಣಿಸಿಕೊಂಡ ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಬಹುಮುಖ್ಯವಾದುದು. ಹತ್ತೊಂಬತ್ತನೆಯ ಶತಮಾನದ ಕಡೆಯ ಭಾಗದಿಂದ ಮುಂದೆ ಈ ಪ್ರಕಾರ ಅತ್ಯಂತ ಹುಲುಸಾಗಿ ಬೆಳೆಯುತ್ತಾ ಬಂದಿದೆ. ಮೊದಮೊದಲು ಸಂಸ್ಕೃತದಿಂದ ಭಾಷಾಂತರ ಮಾಡಿಕೊಳ್ಳುವ ಪರಿಪಾಠವಿದ್ದುದು ಈ ಶತಮಾನದ ಆರಂಭದಿಂದ ಸ್ವತಂತ್ರ ನಾಟಕ ರಚನೆಗೆ ಎಡೆಮಾಡಿಕೊಟ್ಟಿತು. ಶುದ್ಧ ಗದ್ಯದಲ್ಲಿ ಸಾಮಾಜಿಕ ನಾಟಕಗಳನ್ನು ರಚಿಸಿ, ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಕೈಲಾಸಂ ಅವರಿಗೆ ಸಲ್ಲುತ್ತದೆ. ನಾಟಕದ ಎಲ್ಲ ಪ್ರಕಾರಗಳಲ್ಲಿಯೂ ಗದ್ಯ ಬಳಕೆಯಾಗಿರುವ ನಾಟಕಗಳು ವಿಪುಲ ಸಂಖ್ಯೆಯಲ್ಲಿ ಈಗ ಕಾಣಿಸಿಕೊಂಡಿವೆ. ಶ್ರೀರಂಗ, ಕುವೆಂಪು, ಮಾಸ್ತಿ, ಶಿವರಾಮ ಕಾರಂತ, ಪರ್ವತವಾಣಿ, ಪು.ತಿ.ನ., ವಿ.ಸೀತಾರಾಮಯ್ಯ, ಎಚ್.ಕೆ.ರಂಗನಾಥ, ಗಿರೀಶಕಾರ್ನಾಡ ಮೊದಲಾದ ನಾಟಕ ಕರ್ತೃಗಳು ಪ್ರಸಿದ್ಧರಾಗಿದ್ದಾರೆ. (ಟಿ.ಎಸ್.ಎಸ್.)

**ಕನ್ನಡ ಸಾಹಿತ್ಯ ಪರಿಷತ್ತು :** ಕನ್ನಡ ಭಾಷೆ ಮತ್ತು ಸಾಹಿತ್ಯದ ಸರ್ವತೋಮುಖ ಬೆಳವಣಿಗೆ, ಕನ್ನಡದ ಸ್ಥಾನಮಾನ ಹಾಗೂ ಕನ್ನಡ ಏಕೀಕರಣ, ಕನ್ನಡ ಜನಜಾಗೃತಿ ಮೊದಲಾದ ಮಹತ್ಕಾರ್ಯಗಳನ್ನು ಕೈಗೊಂಡಿರುವ ಪ್ರಮುಖ ಸಂಸ್ಥೆ. ಸುಮಾರು 88 ವರ್ಷಗಳಿಂದಲೂ ಉದ್ದೇಶಿತ ಧ್ಯೇಯಸಾಧನೆಗೆ ಶ್ರಮಿಸುತ್ತಿರುವ ಈ ಸಂಸ್ಥೆ 1977ರಲ್ಲಿ ತನ್ನ ವಜ್ರಮಹೋತ್ಸವವನ್ನು ಆಚರಿಸಿಕೊಂಡಿತು. ಈ ಪರಿಷತ್ತಿನ ಹಿನ್ನೆಲೆ, ಕಾರ್ಯಕಲಾಪಗಳು ಮತ್ತು ಸಾಧನೆಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

**ಸ್ಥಾಪನೆ :** ಮೈಸೂರಿನ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ಏರ್ಪಟ್ಟಿದ್ದ ಸಂಪದಭ್ಯುದಯ ಸಮಾಜ ಕನ್ನಡದ ಏಳಿಗೆಯನ್ನು ಸಾಧಿಸುವ

ಉದ್ದೇಶದಿಂದ 1914ರಲ್ಲಿ ಕೂಡಿಸಿದ ವಾರ್ಷಿಕ ಸಮ್ಮೇಳನದಲ್ಲಿ ಭಾಷಾಸಂಸ್ಕರಣ ವಿಷಯವೂ ಕರ್ನಾಟಕ ಗ್ರಂಥಾವಳಿ ವೃದ್ಧಿ ವಿಷಯವೂ ಚರ್ಚಿತವಾದುವು. ಕರ್ನಾಟಕ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು ಮತ್ತು ಸರ್ಕಾರದವರು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ಎಲ್ಲ ಬಗೆಯ ಸಹಾಯವನ್ನೂ ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ತೀರ್ಮಾನವಾಯಿತು. ಈ ತೀರ್ಮಾನಕ್ಕೆ ಅನುಗುಣವಾಗಿ 1914 ಆಕ್ಟೋಬರ್ 31ರಂದು, ಕನ್ನಡ ನಾಡಿನ ಪ್ರಮುಖರನ್ನು ಬೆಂಗಳೂರಿಗೆ ಆಹ್ವಾನಿಸಿ ಕರ್ನಾಟಕ ಭಾಷಾ ಪರಿಷ್ಕರಣಕ್ಕೂ ಕರ್ನಾಟಕ ಗ್ರಂಥಾಭಿವೃದ್ಧಿಗೂ ಅನುಕೂಲವಾಗುವಂತೆ ಸಂಘವೊಂದನ್ನು ಏರ್ಪಡಿಸುವ ಕಾರ್ಯವನ್ನು ನಿರ್ವಹಿಸಲು ಒಂದು ಉಪಸಮಿತಿಯನ್ನು ಸಮಾಜದ ವಿದ್ಯಾವಿಷಯಕ ಮಂಡಲಿ ನೇಮಕಮಾಡಿತು. ಎಂ.ಶಾಮರಾವ್, ಕರ್ಪೂರ ಶ್ರೀನಿವಾಸರಾವ್, ಪಿ.ಎಸ್.ಅಚ್ಯುತರಾವ್ ಇವರು ಈ ಸಮಿತಿಯ ಸದಸ್ಯರು. ಉಪಸಮಿತಿಯ ಕೋರಿಕೆಯಂತೆ, ಮೇಲ್ಕಂಡ ಉದ್ದೇಶಸಾಧನೆಗೆ ಸಲಹೆಗಳನ್ನೊಳಗೊಂಡ 31 ಲೇಖನಗಳು ವಿದ್ವಾಂಸರಿಂದ ಬಂದುವು. ಉಪಸಮಿತಿಯ 22 ಮಾರ್ಚ್ 1915ರ ಸಭೆಯಲ್ಲಿ ಸಮ್ಮೇಳನ ಕಾರ್ಯ ಪ್ರಾರಂಭವಾಗಬೇಕೆಂದು ತೀರ್ಮಾನವಾಯಿತು. ಅದರಂತೆ 3 ಮೇ 1915ರಂದು ಬೆಂಗಳೂರು ಸರ್ಕಾರಿ ಪ್ರೌಢ ವಿದ್ಯಾಶಾಲೆಯಲ್ಲಿ ಸಮ್ಮೇಳನ ಪ್ರಾರಂಭವಾಯಿತು. ಧಾರವಾಡ, ಬಿಜಾಪುರ, ಬೆಳಗಾಂವಿ, ಉತ್ತರ ಕನ್ನಡ, ಮುಂಬಯಿ, ಬಳ್ಳಾರಿ, ದಕ್ಷಿಣ ಕನ್ನಡ, ಮೈಸೂರು ಸಂಸ್ಥಾನದ ಜಿಲ್ಲೆಗಳು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ವಿದ್ಯಾವ್ಯಾಸಂಗ ಸಮಾಜದ ಮುಂಬಯಿ ನಗರದ ಕಾಲೇಜು ಮತ್ತು ಹೈಸ್ಕೂಲುಗಳು -ಇವುಗಳ ಪ್ರತಿನಿಧಿಗಳೂ ಧಾರವಾಡದ ಕರ್ನಾಟಕ ವೃತ್ತ ಮತ್ತು ಕರ್ನಾಟಕ ಧನಂಜಯ, ಹುಬ್ಬಳ್ಳಿಯ ಸಚಿತ್ರ ಭಾರತ, ಮಂಗಳೂರಿನ ಸ್ವದೇಶಾಭಿಮಾನಿ, ಉಡುಪಿಯ ಶ್ರೀಕೃಷ್ಣಸೂಕ್ತಿ ಮತ್ತು ಮೈಸೂರು ಸಂಸ್ಥಾನದ ವೃತ್ತಾಂತ ಪತ್ರಿಕೆಗಳ ಸಂಪಾದಕರೂ ಹಾಜರಿದ್ದರು. ಆ ಪ್ರಥಮ ಸಮ್ಮೇಳನದ ಪ್ರಥಮ ಸಭೆಯ ಅಗ್ರಸ್ಥಾನಾಧಿಪತಿಯಾಗಿ ರಾಜಮಂತ್ರಪ್ರವೀಣ ಎಚ್.ವಿ. ನಂಜುಂಡಯ್ಯ ಅವರನ್ನು ಒಮ್ಮತದಿಂದ ಚುನಾಯಿಸಲಾಯಿತು. ಸಮ್ಮೇಳನ ನಾಲ್ಕು ದಿನ ನಡೆಯಿತು. ಮೂರನೆಯ ದಿನದ ಸಭೆಯಲ್ಲಿ ಪರಿಷತ್ತಿನ ರಚನಾಕ್ರಮ ಮತ್ತು ನಿಬಂಧನೆಗಳನ್ನು ಜಿಜ್ಞಾಸಾಪೂರ್ವಕವಾಗಿ ಹೀಗೆ ತೀರ್ಮಾನಿಸಲಾಯಿತು.

ಸಂಘಕ್ಕೆ ಕರ್ನಾಟಕ ಸಾಹಿತ್ಯ ಪರಿಷತ್ತು ಎಂದು ಹೆಸರಿಸ ತಕ್ಕದ್ದಲ್ಲದೆ ಪರಿಷತ್ತಿನ ಮುಖ್ಯ ಕಾರ್ಯಸ್ಥಾನ ಬೆಂಗಳೂರಿನಲ್ಲಿರತಕ್ಕದ್ದು. ಕರ್ನಾಟಕ ಭಾಷಾ ಪರಿಷ್ಕರಣ, ಭಾಷೋನ್ನತಿ, ಕರ್ನಾಟಕ ಗ್ರಂಥಾಭಿವೃದ್ಧಿ ಪರಿಷತ್ತಿನ ಮುಖ್ಯ ಉದ್ದೇಶಗಳು. ಈ ಮುಖ್ಯೋದ್ದೇಶಗಳನ್ನು ಸಾಧಿಸುವ ಮಾರ್ಗಗಳು: 1. ಕನ್ನಡ ವ್ಯಾಕರಣ, ಭಾಷಾಚರಿತ್ರೆ, ನಿಘಂಟುಗಳು- ಇವುಗಳ ರಚನೆ; ರಚನೆಗೆ ಸಹಾಯ. 2. ಕನ್ನಡ ಶಾಸ್ತ್ರಗ್ರಂಥಗಳ ಪಾರಿಭಾಷಿಕ ಶಬ್ದಕೋಶಗಳ ನಿರ್ಮಾಣ. 3. ತತ್ತ್ವವಿಚಾರ, ಭೌತಿಕಶಾಸ್ತ್ರ, ಚರಿತ್ರೆ, ಸಾಹಿತ್ಯಗ್ರಂಥಗಳ ಲೇಖನಕ್ಕೆ ಪ್ರೋತ್ಸಾಹ; ಅವುಗಳ ಪ್ರಕಟನೆ. 4. ಕನ್ನಡ ಭಾಷೆ, ಕನ್ನಡ ಗ್ರಂಥಗಳು - ಇವುಗಳ ವಿಷಯವಾಗಿ ಚರ್ಚೆ. ನಿರ್ಣಯಗಳ ಅಂಗೀಕಾರ. 5. ಇತರ ಭಾಷೆಗಳ ಉತ್ತಮ ಗ್ರಂಥಗಳ ಭಾಷಾಂತರಗಳ ಪ್ರಕಟಣೆ. 6. ಉತ್ಕೃಷ್ಟ ಪ್ರಾಚೀನ ಗ್ರಂಥಗಳ ಪ್ರಕಟನೆ, ಕನ್ನಡ ಸಂಸ್ಥಾನಗಳ ಚರಿತ್ರೆಗಳ ಸಂಗ್ರಹ, ಪ್ರಕಟನೆ, ಪ್ರಾಚೀನ ವಸ್ತು ಸಂಗ್ರಹಾಲಯ. 7. ಕರ್ನಾಟಕ ಭಾಷಾಸಂಸ್ಕರಣ, ಗ್ರಂಥಾಭಿವೃದ್ಧಿ ಈ ವಿಷಯಕ ಉಪನ್ಯಾಸಗಳನ್ನು ಒಳಗೊಂಡ ಪತ್ರಿಕೆಗಳ ಪ್ರಕಟನೆ, ಸ್ವಂತವಾಗಿ ಗ್ರಂಥ ಪ್ರಕಟನೆ. 8. ಗ್ರಂಥ ಪ್ರತಿಗಳನ್ನು ಅಥವಾ ಗ್ರಂಥ ಸ್ವಾಮ್ಯವನ್ನು ಕೊಳ್ಳುವ ಮೂಲಕ, ಸ್ವಂತವಾಗಿ ಗ್ರಂಥ ಪ್ರಕಟನೆಮಾಡುವ ಗ್ರಂಥಕರ್ತರಿಗೆ ಬಿರುದುಗಳನ್ನೋ ಸಂಭಾವನೆಯನ್ನೋ ಕೊಡುವ ಮೂಲಕ ಪ್ರೋತ್ಸಾಹ ನೀಡಿಕೆ. 9. ಕನ್ನಡ ಭಾಷಾಸಾಹಿತ್ಯ ಸಂಬಂಧವಾದ ಪರಿಶೋಧನ ಕಾರ್ಯನಿರತ ವಿದ್ವಾಂಸರಿಗೆ ಪಂಡಿತ ವೇತನ. 10. ಮೇಲ್ಕಂಡ ಮುಖ್ಯೋದ್ದೇಶ ಸಾಧನೆಗೆ ಆಯಾ ಸರ್ಕಾರದವರ ಸಹಾಯ ಸಂಪಾದನ. 11. ಕನ್ನಡ ಮಾತಾಡುವ ಪ್ರದೇಶಗಳಲ್ಲಿ ಕನ್ನಡ ವಾಚನಾಲಯ ಮತ್ತು ಪುಸ್ತಕ ಭಂಡಾರಗಳ ಏರ್ಪಾಡು. 12. ಕನ್ನಡ ನಾಡುಗಳ ಪ್ರಮುಖರ ಸಭೆಗಳನ್ನೂ ವಿದ್ವಾಂಸರ ಉಪನ್ಯಾಸಗಳನ್ನೂ ಏರ್ಪಡಿಸುವುದು. 13. ಉದ್ದೇಶಕ್ಕೆ ಸಾಧಕಗಳಾದ ಇತರ ಪ್ರಯತ್ನಗಳು.

**ಪರಿಷತ್ತಿನ ರಚನೆ:** ಪೋಷಕ, ಉಪಪೋಷಕ, ಪ್ರದಾತೃ, ಆಶ್ರಯದಾತ, ಆಜೀವ, ಸಾಮಾಜಿಕ, ಒಂದನೆಯ ಮತ್ತು ಎರಡನೆಯ ವರ್ಗದ ಸಾಮಾನ್ಯ ಸಾಮಾಜಿಕರು, ರಾಜ್ಯವನ್ನಾಳುವ ಉನ್ನತ ಪದವಿಯಲ್ಲಿರುವವರು, ಪ್ರಸಿದ್ಧ ವಂಶೀಯರು ಇವರು ಮಾತ್ರ ಪೋಷಕರೂ ಉಪಪೋಷಕರೂ ಆಗತಕ್ಕದ್ದು.

**ಕಾರ್ಯನಿರ್ವಾಹಕ ಮಂಡಲಿ:** ಒಟ್ಟು 30 ಮಂದಿ ಸದಸ್ಯರು : ಅಧ್ಯಕ್ಷರು, ಉಪಾಧ್ಯಕ್ಷರು, ಕೋಶಾಧ್ಯಕ್ಷರು, ಕಾರ್ಯದರ್ಶಿಗಳು. ಪ್ರಾತಿನಿಧ್ಯ: ಮೈಸೂರು ಸಂಸ್ಥಾನ (12 ಮಂದಿ); ಮುಂಬಯಿ ಅಧಿಪತ್ಯ (8); ಮದರಾಸು (5); ಹೈದರಾಬಾದು (2); ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು (2); ಕೊಡಗು (1). ವಾರ್ಷಿಕ ಸಮ್ಮೇಳನ ಕಾಲದಲ್ಲಿ ವಿದ್ವಾಂಸರ ಉಪನ್ಯಾಸಗಳನ್ನೂ ಪ್ರೌಢ ಲೇಖನಗಳ ವಾಚನವನ್ನೂ ಕಾರ್ಯನಿರ್ವಾಹಕ ಮಂಡಲಿಯವರು ಏರ್ಪಡಿಸತಕ್ಕದ್ದು. ಪ್ರಸಿದ್ಧ ಪಂಡಿತರನ್ನು ಪರಿಷತ್ತಿಗೆ ಸನ್ಮಾನ್ಯ ಸಾಮಾಜಿಕರನ್ನಾಗಿ ಸೇರಿಸಿಕೊಳ್ಳಲು ಪರಿಷತ್ತಿನ ಸಾಮಾನ್ಯ ಸಭೆಗೆ ಶಿಫಾರಸು ಮಾಡುವುದಕ್ಕೆ ಕಾರ್ಯನಿರ್ವಾಹಕ ಮಂಡಲಿಗೆ ಸ್ವಾತಂತ್ರ್ಯವಿರತಕ್ಕದ್ದು ಎಂಬಿವು ಇತರ ನಿಬಂಧನೆಗಳಲ್ಲಿ ಮುಖ್ಯವಾದುವು.

ಪ್ರಥಮ ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರವರ್ಗ ಇದು: ಅಧ್ಯಕ್ಷ- ರಾಜಮಂತ್ರ ಪ್ರವೀಣ ಎಚ್.ವಿ.ನಂಜುಂಡಯ್ಯ, ಉಪಾಧ್ಯಕ್ಷ- ಎಂ.ಶಾಮರಾವ್, ಕಾರ್ಯದರ್ಶಿ ಬಿ.ಕೃಷ್ಣಪ್ಪ, ಕೋಶಾಧಿಕಾರಿ ಪಿ.ಎಸ್.ಅಚ್ಯುತರಾವ್. ಅದರ ಸದಸ್ಯರಲ್ಲಿ ಕೆಲವರನ್ನು ಹೆಸರಿಸಬಹುದು: ಸರ್ದಾರ್ ಎಂ.ಕಾಂತರಾಜ ಅರಸು, ಕೆ.ಪಿ.ಪುಟ್ಟಣ್ಣಚೆಟ್ಟರು, ಕರ್ಪೂರ ಶ್ರೀನಿವಾಸರಾಯ, ಎಂ.ವೆಂಕಟಕೃಷ್ಣಯ್ಯ, ಆರ್.ನರಸಿಂಹಾಚಾರ್, ಆರ್.ರಘುನಾಥರಾಯ, ಬಾಪು ಸುಬ್ಬರಾಯ, ಚ.ವಾಸುದೇವಯ್ಯ, ಕವಿತಿಲಕ ಸೋಸಲೆ ಅಯ್ಯಾಶಾಸ್ತ್ರಿ, ಪಿ.ಜಿ.ಹಳಕಟ್ಟಿ, ಆಲೂರ ವೆಂಕಟರಾಯ, ಬೆನಗಲ್ ರಾಮರಾಯ, ಕಡೇಕಾರು ರಾಜಗೋಪಾಲ ಕೃಷ್ಣರಾಯ, ಎಂ.ಡಿ.ಅಳಸಿಂಗರಾಚಾರ್ಯ, ಎ.ವೆಂಕಟರಾವ್, ಆರ್.ತಾತಾ, ರಾಜಕಾರ್ಯಪ್ರಸಕ್ತ ಎಂ.ಮುತ್ತಣ್ಣ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ನಿಬಂಧನೆ ಅಂಗರಚನೆಗಳಲ್ಲಿ ಕಾಲಕಾಲಕ್ಕೆ ಕಾಲೋಚಿತವಾಗಿ ಮಾರ್ಪಾಡುಗಳಾಗಿವೆ. ಸಾಹಿತ್ಯ, ಸಂಗೀತ, ಗಮಕ ತರಗತಿಗಳ ಏರ್ಪಾಡು, ಕಲಾಪ್ರದರ್ಶನ, ಸಂಶೋಧನ ಶಾಖೆ (1987) ಫೆಬ್ರುವರಿ 24ರ ಅನಂತರ ಮೊದಲಾದ ಹೆಚ್ಚಿನ ಅಂಶಗಳು ಸೇರಿವೆ.

**ಮಾರ್ಪಾಡುಗಳು :** ಅಂಗರಚನೆಯ ದೃಷ್ಟಿಯಿಂದ, ಕಾಲಾನುಗುಣವಾದ ಮಾರ್ಪಾಡುಗಳು ಆಗಿವೆ. ಇವು ಮುಖ್ಯವಾಗಿ ಪರಿಷತ್ತಿನ

ಕಾರ್ಯವ್ಯಾಪ್ತಿಯನ್ನು ಕಾರ್ಯಕಾರಿಯಾಗಿ ಅಖಿಲ ಕರ್ನಾಟಕಕ್ಕೆ ಅನ್ವಯಿಸುವುದಕ್ಕೆ ಸಂಬಂಧಿಸಿದವು. ಧಾರವಾಡದಲ್ಲಿ ಪರಿಷತ್ತಿನ ಶಾಖೆಯೊಂದು ಆಗಬೇಕೆಂಬ ಸೂಚನೆ 1934ರಲ್ಲಿ ರಾಯಚೂರು ಸಮ್ಮೇಳನದ ಕಾಲದಲ್ಲಿ ನಡೆದ ಸದಸ್ಯ ಸಭೆಯಲ್ಲಿ ಚರ್ಚೆಗೆ ಬಂತು. ಇದು ಆಗ ಕಾರ್ಯಸಾಧ್ಯವಾಗಿ ಕಂಡುಬರಲಿಲ್ಲ. ಶಾಖಾ ರಚನೆಯ ಉದ್ದೇಶವನ್ನು, ಎಂದರೆ ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಪರಿಷತ್ತು ಕೇವಲ ಪಂಡಿತರ ಸಂಸ್ಥೆ ಎಂದೆನಿಸದೆ ಜನಸಾಮಾನ್ಯರಿಗೂ ಸೇರಿದ ಸಂಸ್ಥೆ ಎನಿಸುವ ಉದ್ದೇಶವನ್ನು ಕಾರ್ಯಗತ ಮಾಡಲು ಪ್ರಾಂತಸಮಿತಿಗಳನ್ನು ರಚಿಸಿ, ಸದಸ್ಯ ಸಂಪತ್ತನ್ನು ಹೆಚ್ಚಿಸುವ ಪ್ರಯತ್ನಗಳು ನಡೆದುವು.

ಇನ್ನೊಂದು ಮುಖ್ಯ ಮಾರ್ಪಾಡು, ಪರಿಷತ್ತಿನ ಹೆಸರಿನದು; ಕರ್ನಾಟಕ ಸಾಹಿತ್ಯ ಪರಿಷತ್ತು ಎಂದು ಇದ್ದದ್ದು ಬಳ್ಳಾರಿಯಲ್ಲಿ ನಡೆದ ಸದಸ್ಯ ಸಭೆಯಲ್ಲಿ ಬಹುಮತದಿಂದ ಕನ್ನಡ ಸಾಹಿತ್ಯ ಪರಿಷತ್ತು ಎಂದು ಮಾರ್ಪಾಡಾಯಿತು (1939).

**ಪರಿಷನ್ಮಂದಿರದ ನಿರ್ಮಾಣ :** ಪರಿಷತ್ತು ಸ್ಥಾಪಿತವಾದ ಮೇಲೆ ಹತ್ತಾರು ವರ್ಷಗಳ ವರೆಗೆ ಅದು ಬಾಡಿಗೆ ಕಟ್ಟಡಗಳಲ್ಲೇ ಕಾಲಕ್ಷೇಪ ಮಾಡಿತು. ಅಖಿಲ ಕರ್ನಾಟಕ ವ್ಯಾಪ್ತಿಯುಳ್ಳ ಪ್ರಮುಖ ಸಾಂಸ್ಕೃತಿಕ ಸಂಸ್ಥೆಯಾದ ಪರಿಷತ್ತಿಗೆ ಅದರ ಘನತೆಗನುಗುಣವಾದ ಸ್ವಂತ ಕಟ್ಟಡ ಇಲ್ಲದ್ದು ದೊಡ್ಡ ಕೊರತೆಯಾಗಿತ್ತು. ಈ ಅಂಶವನ್ನು ಮನಗಂಡು ಕಾರ್ಯೋನ್ಮುಖರಾದ ವರೆಂದರೆ, ಪರಿಷತ್ತಿನ ಸಂಸ್ಥಾಪಕ ಸದಸ್ಯರೂ 1920 ರಿಂದ ಹದಿಮೂರು ವರ್ಷಗಳ ಕಾಲ ಪರಿಷತ್ತಿನ ಉಪಾಧ್ಯಕ್ಷರೂ ಆಗಿದ್ದ ರಾಜ್ಯಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು. ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದ ಇವರು ಕಟ್ಟಡ ವಿನ್ಯಾಸ, ರಚನೆ ಮುಂತಾದ ಹಲವಾರು ವಿವರಗಳಿಗೆ ಸ್ವತಃ ಗಮನಕೊಟ್ಟು ಅವನ್ನು ನಿರ್ಧರಿಸಿದರು. ಕಟ್ಟಡದ ನಿರ್ಮಾಣಕ್ಕೆ ಆವಶ್ಯಕವಾಗಿದ್ದ ನಿವೇಶನ ಮತ್ತು ಹಣವನ್ನು ಸಂಗ್ರಹಿಸಿದರು. ಈ ಮಹನೀಯರ ಪರಿಶ್ರಮದ ಫಲವಾಗಿ ಈಗ ಪರಿಷತ್ತಿನ ಕಟ್ಟಡವಿರುವ ನಿವೇಶನ ಉಚಿತವಾಗಿ ದೊರೆಯಿತು. ಕಟ್ಟಡದ ನಿಧಿಗಾಗಿ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಐದು ಸಾವಿರ ರೂಪಾಯಿಗಳನ್ನು ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರವರು ಮೂರು ಸಾವಿರ ರೂಪಾಯಿಗಳನ್ನು ಅಂದು ಪರಿಷತ್ತಿನ ಅಧ್ಯಕ್ಷರಾಗಿದ್ದ ರಾಜಸೇವಾಧುರೀಣ ಎಂ.ಕಾಂತರಾಜ ಅರಸು ಅವರು ಐದು ಸಾವಿರ ರೂಪಾಯಿಗಳನ್ನೂ ದಾನ ಮಾಡಿದರು. ಮೈಸೂರು ಸರ್ಕಾರ ಹದಿನಾರು ಸಾವಿರ ರೂಪಾಯಿಗಳನ್ನು ಸಹಾಯಧನವಾಗಿ ಕೊಟ್ಟಿತು. ಈ ನಿಧಿಗೆ ಪರಿಷತ್ತು ತನ್ನ ಸಂಪನ್ಮೂಲಗಳಿಂದ ಮೂರು ಸಾವಿರ ರೂಪಾಯಿಗಳನ್ನು ಸೇರಿಸಿ ಕಟ್ಟಡವನ್ನು ನಿರ್ಮಿಸಿತು. 1931ರಂದು 12 ಏಪ್ರಿಲ್ ಕರ್ಪೂರ ಶ್ರೀನಿವಾಸರಾಯರೇ ಕಟ್ಟಡದ ಶಂಕುಸ್ಥಾಪನೆ ಮಾಡಿದರು. ಸಿದ್ಧವಾದ ಈ ಕಟ್ಟಡಕ್ಕೆ ಶ್ರೀಕೃಷ್ಣರಾಜ ಪರಿಷನ್ಮಂದಿರ ಎಂದು ನಾಮಕರಣಮಾಡಿ ಬಾಡಿಗೆ ಕಟ್ಟಡದಲ್ಲಿದ್ದ ಪರಿಷತ್ತಿನ ಕಚೇರಿಯನ್ನು 1933ರಲ್ಲಿ ಪರಿಷನ್ಮಂದಿರಕ್ಕೆ ವರ್ಗಾಯಿಸಲಾಯಿತು.

**ಪರಿಷತ್ತಿನ ಏಳಿಗೆ, ವ್ಯಕ್ತಿಗಳ ಸೇವೆ :** ಪರಿಷತ್ತು ತನ್ನ ಮೂಲೋದ್ದೇಶ ಗಳಿಗೆ ಅನುಗುಣವಾಗಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆಯಲ್ಲದೆ, ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಬರುತ್ತಿದೆ. ಒಂದು ದೇಶದ ಏಳಿಗೆ ಅದರ ನಾಯಕರನ್ನೂ ವ್ಯಕ್ತಿಮಹಿಮೆಯನ್ನೂ ಅವಲಂಬಿಸಿರುವಂತೆ, ಸಂಸ್ಥೆಯ ಏಳಿಗೆಯೂ ವ್ಯಕ್ತಿಯ ಸಾಮರ್ಥ್ಯವನ್ನವಲಂಬಿಸಿರುತ್ತದೆ. ಆ ವ್ಯಕ್ತಿಯಾದರೂ ಕಾಲಧರ್ಮಕ್ಕೆ ತಕ್ಕಂತೆ ಕಾರ್ಯ ನಡೆಸಿಕೊಂಡು ಹೋಗುವುದು ಅನಿವಾರ್ಯವಾಗುತ್ತದೆ. ಪರಿಷತ್ತಿನ ಚರಿತ್ರೆಯಲ್ಲೂ ಈ ಅಂಶ ವ್ಯಕ್ತಪಟ್ಟಿದೆ. 1933ರ ವರೆಗೆ ಪರಿಷತ್ತಿನ ಅಧ್ಯಕ್ಷರುಗಳೂ ಉಪಾಧ್ಯಕ್ಷರುಗಳೂ (ಮೈಸೂರಿನ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರು ಅಧ್ಯಕ್ಷರು; ಕರ್ಪೂರ ಶ್ರೀನಿವಾಸರಾಯರೂ ಎಂ.ಶಾಮರಾಯರೂ ಉಪಾಧ್ಯಕ್ಷರುಗಳು) ಕಾರ್ಯಚಟುವಟಿಕೆಯ ದೃಷ್ಟಿಯಿಂದ ಕೇವಲ ಸ್ಥಾನಗೌರವಕ್ಕೆ ಪಾತ್ರರಾಗಿದ್ದರು.

ಹತ್ತು ವರ್ಷಕ್ಕೆ ಮೇಲ್ಪಟ್ಟು ಉಪಾಧ್ಯಕ್ಷರಾಗಿದ್ದ ಕರ್ಪೂರ ಶ್ರೀನಿವಾಸರಾಯರು ಪರಿಷತ್ತಿನ ಭವನ ನಿರ್ಮಾಣ ಕಾರ್ಯದಲ್ಲಿ ಪ್ರಮುಖಪಾತ್ರ ವಹಿಸಿದ್ದರು. ಬೆಳ್ಳಾವೆ ವೆಂಕಟನಾರಣಪ್ಪನವರು ಒಂದೆರಡು ಸಲ ಕಾರ್ಯದರ್ಶಿಯಾಗಿದ್ದರಲ್ಲದೆ 1933ರ ವರೆಗೆ ಸತತವಾಗಿ ಗೌರವ ಕೋಶಾಧಿಕಾರಿಗಳಾಗಿದ್ದರು. ಮಾಸ್ತಿ ವೆಂಕಟೇಶ ಅಯ್ಯಂಗಾರರು ಹೇಳಿದಂತೆ, ಕಸ ಗುಡಿಸುವ ಕೆಲಸದಿಂದ ಹಿಡಿದು ಗ್ರಂಥ ಸಂಪಾದನಾಕಾರ್ಯದವರೆಗೆ ಪರಿಷತ್ತಿನ ಸಕಲ ಕಾರ್ಯಗಳನ್ನೂ ಬೆಳ್ಳಾವೆಯವರು ನಿರ್ವಹಿಸುತ್ತಿದ್ದರು. ಕಚೇರಿಯ ಕೆಲಸ, ಪರಿಷತ್ ಪತ್ರಿಕಾ ಸಂಪಾದನೆ, ಪ್ರಾಚೀನ ಗ್ರಂಥಗಳ ಸಂಪಾದನೆ, ವಾರ್ಷಿಕ ಸಮ್ಮೇಳನ ಸದಸ್ಯಾಧಿವೇಶನಗಳ ಸಿದ್ಧತೆ ಮುಂತಾದ ಸಕಲ ಕಾರ್ಯಗಳಿಗೂ ಅವರೇ ಹೃದಯ, ಮಿದುಳು, ಕೈಕಾಲು ಎಲ್ಲ. ಈ ಕಾಲದಲ್ಲಿ ಪಂಪಭಾರತ, ಪಂಪರಾಮಾಯಣ, ಚಾವುಂಡರಾಯಪುರಾಣ, ಸೋಮೇಶ್ವರ ಶತಕ, ಕುಸುಮಾವಳಿ ಕಾವ್ಯ ಇವುಗಳ ಸಂಪಾದನೆಯ ಕಾರ್ಯ ಅವರ ಸಂಪಾದಕತ್ವದಲ್ಲಿ ಮೇಲುಪಂಕ್ತಿಯಾಗುವಂತೆ ನಡೆಯಿತು. ಜ್ಯೋತಿರ್ವಿನೋದಿನಿ, ಜೇಮ್ಸ್ ಎಬ್ರಹಮ್ ಗಾರ್‌ಫೀಲ್ಡನ ಚರಿತ್ರೆ ಇವನ್ನು ಪ್ರಕಟಿಸಿ ಕಾವ್ಯೇತರ ಗದ್ಯ ಸಾಹಿತ್ಯ ಪ್ರಕಟನೆಗೆ ಮೇಲುಪಂಕ್ತಿ ಹಾಕಿದವರೂ ವೆಂಕಟನಾರಣಪ್ಪನವರೇ. ಇವರು ಬಹು ಶ್ರಮವಹಿಸಿ ಸಿದ್ಧಪಡಿಸಿದ ಷಟ್ಪದಿ ಕಾವ್ಯಗಳ ನಿಘಂಟು - ಒಂದು ವಿಧದಲ್ಲಿ ಪರಿಷತ್ತಿನ ನಿಘಂಟು ಕಾರ್ಯರಚನೆಗೆ ನಾಂದಿಯಾಯಿತೆನ್ನಬಹುದು. ಆ ಕಾಲದಲ್ಲಿ ಪರಿಷತ್ತಿನೊಂದಿಗೆ ಸಂಪರ್ಕವಿಟ್ಟುಕೊಂಡ ಜನ ಬಹುಮಟ್ಟಿಗೆ ಭಾಷಾ ಪಂಡಿತರು, ವಿದ್ವಾಂಸರು, ಸರ್ಕಾರದ ಉನ್ನತಾಧಿಕಾರಿಗಳು.

ಡಿ.ವಿ.ಗುಂಡಪ್ಪನವರು ಮೂರು ವರ್ಷ ಉಪಾಧ್ಯಕ್ಷರಾಗಿದ್ದರು (1934-37). ಇವರ ಕಾಲದಲ್ಲಿ ನೂತನ ಮಂದಿರದ ನೂತನ ಸಭಾಮಂಟಪದಲ್ಲಿ ಉಪನ್ಯಾಸ, ಕಾವ್ಯವಾಚನ, (ಗಮಕ), ಸಂಗೀತ, ನಾಟಕ, ನೃತ್ಯ ಇತ್ಯಾದಿ ಸಾಹಿತ್ಯ ಸಂಸ್ಕೃತಿ ಸಂಬಂಧವಾದ ಕಾರ್ಯಕಲಾಪಗಳೇ ಮೊದಲಾದವಲ್ಲಿ ಏನಾದರೊಂದು ಪ್ರತಿವಾರವೂ ನಡೆಯುತ್ತಿತ್ತು. ಪ್ರತಿವರ್ಷವೂ ಬೇಸಗೆಯ ರಜಾಕಾಲದಲ್ಲಿ ಆಧುನಿಕ ವಿಚಾರೋಪನ್ಯಾಸಗಳು ಹಾಗೂ ವಿವಿಧ ಮನರಂಜನೆಯ ಕಾರ್ಯಗಳನ್ನೊಳಗೊಂಡ ವಿಶೇಷ ಸಾಹಿತ್ಯೋತ್ಸವ ಎಂಬ ಜ್ಞಾನಪ್ರಸಾರ ಕಾರ್ಯಕ್ರಮ ಪ್ರಾರಂಭವಾಯಿತು. ಇದು ಈಗಲೂ (1936ರಿಂದ) ವಸಂತ ಸಾಹಿತ್ಯೋತ್ಸವ ಎಂಬ ಹೆಸರಿನಿಂದ ನಡೆದುಕೊಂಡು ಬರುತ್ತಿದೆ. ಗಮಕ ಕಲಾಶಿಕ್ಷಣ ತರಗತಿಗಳು ಪ್ರಾರಂಭವಾದದ್ದು ಇವರ ಕಾಲದಲ್ಲಿಯೇ. ಕರ್ನಾಟಕಕ್ಕೆ ವಿಶಿಷ್ಟವೆನ್ನಬಹುದಾದ ಗಮಕ ಕಲೆ ಪ್ರಾಚೀನ ಕನ್ನಡ ಕಾವ್ಯಗಳನ್ನು ಜನಪ್ರಿಯವಾಗಿ ಮಾಡಲು ಉತ್ತಮ ಸಾಧನ ಎಂಬುದನ್ನು ಮನಗಂಡ ಗುಂಡಪ್ಪನವರು ದೂರದೃಷ್ಟಿಯಿಂದ ಪ್ರಾರಂಭಿಸಿದ ಈ ಏರ್ಪಾಡು ಇಂದಿಗೂ ನಡೆದುಕೊಂಡು ಬರುತ್ತಿದ್ದು, ಉತ್ತಮ ಫಲವನ್ನು ಕೊಟ್ಟಿದೆ. ಗಮಕ ಶಿರೋಮಣಿ ಎಸ್.ಜಿ.ಬಿಂದೂರಾಯರು ಪ್ರಥಮ ಶಿಕ್ಷಕರಾಗಿ ನೇಮಕಗೊಂಡರು. ಈಗ ಜನಪ್ರಿಯರಾಗಿರುವ ಅನೇಕ ಮಂದಿ ಗಮಕಿಗಳು ಪರಿಷತ್ತಿನ ಗಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾದವರು.

ಸಮ್ಮೇಳನಗಳಿಗೂ ಪರಿಷತ್ತಿನ ವಾರ್ಷಿಕ ಸಭೆಗಳಿಗೂ ಪರಿಷತ್ತಿನ ಕಾರ್ಯಾಲಯಕ್ಕೂ ಈ ಕಾಲದಲ್ಲಿ ಹೆಚ್ಚು ವ್ಯವಸ್ಥಿತ ರೂಪ ಬಂತು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ವಿದ್ವತ್‌ಪೂರ್ಣವಾಗಿರುವುದರ ಜೊತೆಗೆ ವೈವಿಧ್ಯಪೂರ್ಣವೂ ಆಧುನಿಕ ವಿದ್ವತ್ ದೃಷ್ಟಿಯನ್ನು ಪ್ರತಿಬಿಂಬಿಸತಕ್ಕ ಮಾಧ್ಯಮವೂ ಆಗಿ ರೂಪುಗೊಂಡಿತು. ಇದರ ಶ್ರೇಯಸ್ಸು ಅದರ ಸಂಪಾದಕರಾಗಿದ್ದ ಎ.ಆರ್.ಕೃಷ್ಣಶಾಸ್ತ್ರಿಗಳಿಗೆ ಸಲ್ಲುತ್ತದೆ.

ಬಿ.ಎಂ.ಶ್ರೀಕಂಠಯ್ಯನವರು ಪರಿಷತ್ತಿನ ಉಪಾಧ್ಯಕ್ಷರಾದ ಮೇಲೆ ಪರಿಷತ್ತಿಗೂ ಸಾಮಾನ್ಯ ಪ್ರಜಾವರ್ಗಕ್ಕೂ ಸಂಪರ್ಕ ಇನ್ನಷ್ಟು ಬಲಪಟ್ಟಿತು; ವಿಸ್ತಾರಗೊಂಡಿತು. ಪರಿಷತ್ತಿನಲ್ಲಿ ಮಹಿಳೆಯರಿಗೆ ಸ್ಥಾನ ಕಲ್ಪಿಸಲು ಮಹಿಳಾ ಶಾಖೆ ಪ್ರಾರಂಭಿಸಿದರು (1938). ಬಿ.ಎಂ.ಶ್ರೀಯವರ ಗಮನಾರ್ಹ ಕೊಡುಗೆ ಎಂದರೆ ಕನ್ನಡ ಬಾವುಟದ ಕಲ್ಪನೆ. ಕನ್ನಡ ನಾಡಿನ ಭೂಪಟದ ಮುದ್ರಿಕೆಯ ಲಾಂಛನವೊಂದನ್ನು ಕಲ್ಪಿಸಿ, ಪರಿಷತ್ತಿನ ಪುಸ್ತಕ ಪ್ರಕಟನೆಗಳಲ್ಲಿ ಮುದ್ರಿಸುವ ಏರ್ಪಾಡು (ಈ ಲಾಂಛನವನ್ನು ಈಗ ಸ್ವಲ್ಪ ಮಾರ್ಪಡಿಸಿ ಮತ್ತೆ ಬಳಕೆಗೆ ತಂದಿದೆ). ಕನ್ನಡ ಬಾವುಟ ಎಂಬ ತಮ್ಮ ಕಲ್ಪನೆಗೆ ಅವರು ಜೀವ ತುಂಬಿ, ಆ ಹೆಸರಿನ ಕಾವ್ಯಸಂಕಲನವನ್ನು ಹೊರತಂದರು. ಕನ್ನಡ ನಾಡಿನ ಚರಿತ್ರೆಯನ್ನು ತಕ್ಕ ಲೇಖಕರಿಂದ ಬರೆಯಿಸಿ ಪ್ರಕಟಿಸಿದರು. ಕನ್ನಡ ನುಡಿ (ನೋಡಿ) ಎಂಬ ವಾರಪತ್ರಿಕೆಯನ್ನು 4 ಅಕ್ಟೋಬರ್ 1938ರ

ವಿಜಯದಶಮಿಯಂದು ಪ್ರಾರಂಭಿಸಿದರು. ಅ.ನ.ಕೃಷ್ಣರಾಯರು ಇದರ ಮೊದಲ ಸಂಪಾದಕರು. ಈ ಪತ್ರಿಕೆ ಈಗಲೂ ಪಕ್ಷಪತ್ರಿಕೆಯಾಗಿ ನಡೆದು ಬರುತ್ತಿದೆ. ಕನ್ನಡ ನುಡಿಯ ಪ್ರಕಟಣೆಗೆಂದೇ ಅವರು 6000 ರೂಪಾಯಿ ದಾನ ಮಾಡಿ ಸ್ಥಾಪಿಸಿದ ಅಚ್ಚುಕೂಟ ಈಗ ವಿಸ್ತಾರವಾಗಿ, ಪರಿಷತ್ತಿನ ಮುದ್ರಣಕಾರ್ಯವನ್ನು ನಿರ್ವಹಿಸುತ್ತಿದೆ. ಪರಿಷತ್ತಿನ ಅಖಿಲ ಕರ್ನಾಟಕ ಸ್ವರೂಪವನ್ನು ಪ್ರತಿಬಿಂಬಸಲೆಂದು ಪ್ರಾಂತ ಸಮಿತಿಗಳನ್ನು ಏರ್ಪಡಿಸಿ, ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ನಾಡಿಗೆಲ್ಲ ಶ್ರೀ ಅವರು ಹರಡಿದರು. ಕನ್ನಡ ಬಾವುಟವನ್ನು (ಸಾಂಕೇತಿಕವಾಗಿ) ಕೈಯಲ್ಲಿ ಹಿಡಿದು ನಾಡನ್ನೆಲ್ಲ ಸುತ್ತಾಡಿ, ಕನ್ನಡದ ಮತ್ತು ಪರಿಷತ್ತಿನ ಸಂದೇಶವನ್ನು ಎಲ್ಲೆಲ್ಲೂ ಹರಡಿ, ಕನ್ನಡಿಗರಿಗೆ ಕನ್ನಡ ತಾಯ ನೋಟವನ್ನು ಕಾಣಿಸಿದರು. ತಮ್ಮ ತನುಮನಧನವನ್ನರ್ಪಿಸಿ ಪರಿಷತ್ತಿನ ಸೇವೆ ಮಾಡಿದರು. ಪರಿಷತ್ತಿನ ಮೂಲೋದ್ದೇಶಗಳಲ್ಲಿ ಒಂದಾದ ಪಾಂಡಿತ್ಯಸಂವರ್ಧನೆಗಾಗಿ ಅವರು ಕೈಗೊಂಡ ಮುಖ್ಯ ಕಾರ್ಯಕ್ರಮ ಎಂದರೆ ಕನ್ನಡ ಸಾಹಿತ್ಯ ಪರೀಕ್ಷೆಗಳು (ಈ ಏರ್ಪಾಡು ಈಗಲೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ). ಶ್ರೀಯವರು ಉಪಾಧ್ಯಕ್ಷರಾಗಿದ್ದಾಗ 30 ಜೂನ್ - 1 ಜುಲೈ 1940 ಪರಿಷತ್ತಿನ ಬೆಳ್ಳಿಯ ಹಬ್ಬ ವಿಜೃಂಭಣೆಯಿಂದ ನಡೆಯಿತು. ಆಗ ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಉತ್ಸವವನ್ನು ಉದ್ಘಾಟಿಸಿದರು.

ಶ್ರೀಯವರ ಅನಂತರ ಉಪಾಧ್ಯಕ್ಷರಾದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು (1943-47). ಹಿಂದಿನ ಇಬ್ಬರು ಉಪಾಧ್ಯಕ್ಷರುಗಳು ಏರ್ಪಾಡು ಮಾಡಿದ್ದ ಎಲ್ಲ ಕಾರ್ಯಕ್ರಮಗಳನ್ನೂ ಇವರು ನಿಷ್ಠೆಯಿಂದ ಮುಂದುವರಿಸಿಕೊಂಡು ಬಂದರು. ಈ ಕಾಲದಲ್ಲಿ ಪರಿಷತ್ತಿನ ಸದಸ್ಯಸಂಪತ್ತು ಗಮನಾರ್ಹವಾಗಿ ಬೆಳೆಯಿತು. ಅನೇಕ ದತ್ತಿಗಳನ್ನು ಸಂಪಾದಿಸಿ, ದತ್ತಿ ಉಪನ್ಯಾಸಗಳು ಸಾರೋದ್ಧಾರವಾಗಿ ನಡೆಯುವಂತೆ ಇವರು ಏರ್ಪಾಡು ಮಾಡಿದರು. 1941ರಲ್ಲಿಯೇ ಕನ್ನಡ-ಕನ್ನಡ ನಿಘಂಟು ನಿರ್ಮಾಣದ ಸಂಕಲ್ಪವನ್ನು ಪರಿಷತ್ತು ಕೈಗೊಂಡಿತು. ಅದು ಕಾರ್ಯರೂಪಕ್ಕೆ ಬಂದು, ಅದಕ್ಕಾಗಿ ಪ್ರತ್ಯೇಕ ಕಾರ್ಯಾಲಯ ಆರಂಭವಾದದ್ದು ಇವರ ಕಾಲದಲ್ಲಿ. ಶ್ರೀಯವರಂತೆ ಮಾಸ್ತಿಯವರೂ ಕನ್ನಡ ನಾಡನ್ನೆಲ್ಲ ಸುತ್ತಾಡಿ ಪರಿಷತ್ತಿನ ಅಖಿಲ ಕರ್ನಾಟಕ ಸ್ವರೂಪವನ್ನು ಬಲಪಡಿಸಿದರು. ಕರ್ನಾಟಕ ಏಕೀಕರಣ ಚಳವಳಿಗೆ ಪುಷ್ಟಿ ಕೊಟ್ಟರು.

**ಅಧ್ಯಕ್ಷರುಗಳು :** ರಾಜಮನೆತನದವರು ಅಥವಾ ಉನ್ನತ ಪದವಿಯಲ್ಲಿರುವವರು ಪರಿಷತ್ತಿನ ಅಧ್ಯಕ್ಷರಾಗಬೇಕೆಂಬ ನಿಬಂಧನೆಗೆ ಅನುಗುಣವಾಗಿ ಎಚ್.ವಿ.ನಂಜುಂಡಯ್ಯ (1915-20), ಸರ್.ಎಂ.ಕಾಂತರಾಜ ಅರಸು (1920-23), ಕಂಠೀರವ ನರಸಿಂಹರಾಜ ಒಡೆಯರ್ (1923-40), ಜಯಚಾಮರಾಜ ಒಡೆಯರ್ (1940), ಒಂಟಮುರಿಯ ರಾಜಾ ಲಖಮನಗೌಡ ಸರದೇಸಾಯಿ (1941-46), ಲೋಕೂರ ನಾರಾಯಣರಾವ್ ಸ್ವಾಮಿರಾವ್ (1947) -ಇವರು ಕ್ರಮವಾಗಿ ಪರಿಷತ್ತಿನ ಅಧ್ಯಕ್ಷರುಗಳಾದರು. 1947ರಲ್ಲಿ, ವಾರ್ಷಿಕ ಸಮ್ಮೇಳನದ ಅಧ್ಯಕ್ಷರೇ ಪರಿಷತ್ತಿನ ಅಧ್ಯಕ್ಷರೂ ಆಗಿರಬೇಕೆಂದು ನಿಬಂಧನೆ ಮಾರ್ಪಾಡಾಯಿತು. ಇದರ ಮೇರೆಗೆ ತಿರುಮಲೆ ತಾತಾಚಾರ್ಯ ಶರ್ಮರೂ ಚನ್ನಪ್ಪ ಉತ್ತಂಗಿಯವರೂ ಒಂದು ವರ್ಷದ ಅವಧಿಗೆ ಅಧ್ಯಕ್ಷರಾಗಿದ್ದರು. ಎಂ.ಆರ್.ಶ್ರೀನಿವಾಸಮೂರ್ತಿಯವರು (1950ರಲ್ಲಿ) ಅಧ್ಯಕ್ಷರಾದಾಗ ನಿಬಂಧನೆ ಮತ್ತೆ ಮಾರ್ಪಾಡಾಗಿ ಅಧ್ಯಕ್ಷ ಪದವಿಯ ಅವಧಿ ಮೂರು ವರ್ಷ ಎಂದಾಯಿತು. ಈ ಹೊಸ ನಿಯಮದಂತೆ ಅಧ್ಯಕ್ಷರುಗಳಾಗಿ ಈ ಮುಂದಿನವರು ಕಾರ್ಯನಿರ್ವಹಿಸುದರು: ಎ.ಎನ್.ಮೂರ್ತಿರಾಯ (1954-56), ಬಿ.ಶಿವಮೂರ್ತಿ ಶಾಸ್ತ್ರಿ (1956-64), ಜಿ.ವೆಂಕಟಸುಬ್ಬಯ್ಯ (1964-69), ಜಿ.ನಾರಾಯಣ (1969-78), ಹಂಪ ನಾಗರಾಜಯ್ಯ (1978-86), ಎಚ್.ಬಿ.ಜ್ವಾಲನಯ್ಯ (1986-87), ಜಿ.ಎಸ್.ಸಿದ್ದಲಿಂಗಯ್ಯ (1989-92), ಗೊ.ರು.ಚನ್ನಬಸಪ್ಪ (1992-95), ಸಾ.ಶಿ.ಮರುಳಯ್ಯ (1995-98), ಎನ್.ಬಸವಾರಾಧ್ಯ (1998-2001), ಹರಿಕೃಷ್ಣ ಪುನರೂರು (2001). ಚಂದ್ರಶೇಖರ ಪಾಟೀಲ ಈಗಿನ ಅಧ್ಯಕ್ಷರು (2004).

**ಕನ್ನಡ ನಿಘಂಟು ಮತ್ತು ಇತರ ಕಾರ್ಯಗಳು :** ಎಂ.ಆರ್.ಶ್ರೀನಿವಾಸ ಮೂರ್ತಿಯವರು ಅಧ್ಯಕ್ಷರಾಗಿದ್ದಾಗ ನಿಘಂಟುವಿನ ರಚನಾಕಾರ್ಯಕ್ಕೆ ವ್ಯವಸ್ಥಿತರೂಪ ಬಂತು. ಹಸ್ತಪ್ರತಿ ಸಿದ್ಧವಾಗತೊಡಗಿದ ಮೇಲೆ ಮುದ್ರಣ ಕಾರ್ಯಕ್ಕೆ ಸರ್ಕಾರದಿಂದ ವಿಶೇಷ ಧನಸಹಾಯ ದೊರಕಿಸಿಕೊಟ್ಟವರು ಬಿ.ಶಿವಮೂರ್ತಿಶಾಸ್ತ್ರಿಗಳು. ಏಪ್ರಿಲ್ 26, 1964ರಂದು ಇದರ ಮೊದಲ ಸಂಚಿಕೆ ಪ್ರಕಟವಾಯಿತು. ನಿಘಂಟು ರಚನೆಯ ಕಾರ್ಯದ ಸಂಪಾದಕ ಮಂಡಲಿ ಅಖಿಲ ಕರ್ನಾಟಕ ಪ್ರಾತಿನಿಧ್ಯವುಳ್ಳದ್ದಾಗಿತ್ತು. ಎ.ಆರ್.ಕೃಷ್ಣಶಾಸ್ತ್ರೀ, ತೀ.ನಂ.ಶ್ರೀಕಂಠಯ್ಯ, ಡಿ.ಎಲ್.ನರಸಿಂಹಾಚಾರ್ ಇವರು ಅನುಕ್ರಮವಾಗಿ ಸಂಪಾದಕ ಮಂಡಲಿಯ ಅಧ್ಯಕ್ಷರಾಗಿದ್ದರು. ಡಿ.ಎಲ್.ನರಸಿಂಹಾಚಾರ್, ಎಲ್.ಗುಂಡಪ್ಪ, ಸ್ವಲ್ಪಕಾಲ ಎನ್.ಬಸವಾರಾಧ್ಯ ಮತ್ತು ಎಂ.ಮರಿಯಪ್ಪ ಭಟ್ಟ, ಜಿ.ವೆಂಕಟಸುಬ್ಬಯ್ಯ ಸಂಪಾದಕರಾಗಿದ್ದರು. ಪರಿಷತ್ತಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ (1970) 12 ಸಂಚಿಕೆಗಳುಳ್ಳ ಅದರ ಪ್ರಥಮ ಸಂಪುಟ ಪ್ರಕಟವಾಯಿತು. ನಿಘಂಟು ಆಧುನಿಕ ನಿಘಂಟುಶಾಸ್ತ್ರಕ್ಕೆ ಅನುಗುಣವಾಗಿ ಪ್ರಕಟವಾಗುತ್ತಿದೆ. 8 ಸಂಪುಟಗಳು. ಈ ಬಗೆಯ ಶಾಸ್ತ್ರೀಯವೂ ಸರ್ವಾಂಗ ಪರಿಪೂರ್ಣವೂ ಆದ ನಿಘಂಟು ಇತರ ಸಮಕಾಲೀನ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ. ಕೊನೆಯ ಸಂಪುಟ 1995ರಲ್ಲಿ ಪ್ರಕಟವಾಗಿದೆ.

1969ರಿಂದ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ.ನಾರಾಯಣ ಅವರು ಒಂದು ತ್ರೈವಾರ್ಷಿಕ ಯೋಜನೆಯನ್ನು ರೂಪಿಸಿದರು. ಎಂದಿನಿಂದಲೂ ಪರಿಷತ್ತಿಗೆ ಉದಾರವಾಗಿ ಧನಸಹಾಯ ಮಾಡಿಕೊಂಡು ಬರುತ್ತಿರುವ ಕರ್ನಾಟಕ ಸರ್ಕಾರ ತನ್ನ ಸಹಾಯವನ್ನು ಬಹುಗುಣವಾಗಿ ಹೆಚ್ಚಿಸಿದೆ. ತ್ರೈವಾರ್ಷಿಕ ಯೋಜನೆಯಂತೆ 1970ರ ಡಿಸೆಂಬರ್ 26ರಂದು ಪರಿಷತ್ತಿನ ಸುವರ್ಣ ಮಹೋತ್ಸವ ನಡೆಯಿತು. ಇದರ ಸವಿನೆನಪಿಗಾಗಿ ಚಿನ್ನದ ಬೆಳಸು ಎಂಬ ಬೃಹತ್ ಸ್ಮರಣಸಂಪುಟ ಪ್ರಕಟವಾಯಿತು. ಪರಿಷತ್ತಿನ ಆ ವರೆಗಿನ ಜೀವಿತಾವಧಿಯ 55 ವರ್ಷಗಳಲ್ಲಿ ಕನ್ನಡ ಭಾಷಾಸಾಹಿತ್ಯಗಳಲ್ಲಿ ಆದ ಬಹುಮುಖವಾದ ಬೆಳವಣಿಗೆಯನ್ನು ಪ್ರತಿಬಿಂಬಿಸುವ ಈ ಸಂಪುಟಕ್ಕೆ ಎಂ.ವಿ.ಸೀತಾರಾಮಯ್ಯ ಸಂಪಾದಕರು. ಉತ್ಸವದ ಅಂಗವಾಗಿ, ರಂ.ಶ್ರೀ.ಮುಗಳಿಯವರ ಸಂಪಾದಕತ್ವದಲ್ಲಿ 25 ಗ್ರಂಥಗಳು ಏಕಕಾಲದಲ್ಲಿ ಪ್ರಕಟಗೊಂಡದ್ದು ಇನ್ನೊಂದು ವಿಶೇಷ. ಇವುಗಳಲ್ಲದೆ ಪರಿಷತ್ತು ಸಾಹಿತ್ಯಪ್ರಸಾರ ಯೋಜನೆ ಮತ್ತು ಮಹಿಳಾ ವರ್ಷದಲ್ಲಿ ಮಹಿಳೆಯರಿಗಾಗಿಯೇ ರೂಪಿಸಿದ ಕೆಲವು ಯೋಜನೆಗಳನ್ನು ಕೈಗೊಂಡು ಯಶಸ್ವಿಯಾಗಿ ನೆರವೇರಿಸಿದೆ. ಈ ಸಂದರ್ಭಕ್ಕನುಗುಣವಾಗಿ ಮಹಿಳೆಯರ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಹಿಳೆಯರೇ ಬರೆದ 21 ಗ್ರಂಥಗಳನ್ನು ಏಕಕಾಲದಲ್ಲಿ ಪ್ರಕಟಿಸಿದೆ (1975). ಪರಿಷತ್ತು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 944 ಗ್ರಂಥಗಳನ್ನು ಪ್ರಕಟಿಸಿದೆ (2003).

ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಯಲ್ಲೂ ಕರ್ನಾಟಕ ಏಕೀಕರಣ ಕಾರ್ಯದಲ್ಲೂ ಪರಿಷತ್ತು ಸ್ಫೂರ್ತಿಕೇಂದ್ರವಾಗಿದ್ದುಕೊಂಡು, ತನ್ನ ವಾರ್ಷಿಕ ಸಭೆ ಸಮ್ಮೇಳನಗಳ ಮೂಲಕವೂ ಪತ್ರಿಕೆ ಪ್ರಕಟನೆಗಳ ಮೂಲಕವೂ ಅಧಿಕಾರಿ ವರ್ಗದ ಪ್ರವಾಸ ಪ್ರಚಾರಕಾರ್ಯಗಳ ಮೂಲಕವೂ ಪ್ರಮುಖ ಪಾತ್ರವನ್ನು ವಹಿಸಿದೆ. ಪರಿಷತ್ತಿನ ಸದಸ್ಯ ಬಲ 45ಸಾವಿರ (2003).

ಕಾಲಕ್ಕನುಗುಣವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಂಗರಚನೆಯಲ್ಲಿ, ಆಡಳಿತ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ 42 ಸದಸ್ಯರನ್ನೊಳಗೊಂಡಿತ್ತು (2003). ಕರ್ನಾಟಕದ ಎಲ್ಲ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಘಟಕಗಳ ಅಧ್ಯಕ್ಷರು, ಗಡಿರಾಜ್ಯ ಘಟಕಗಳ ಅಧ್ಯಕ್ಷರು, ಸಾಹಿತ್ಯ ಸಮ್ಮೇಳನಾಧ್ಯಕ್ಷರು, ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು, ವಿಶ್ವವಿದ್ಯಾನಿಲಯದ ಪ್ರತಿನಿಧಿಗಳು, ಮಹಿಳಾ ಪ್ರತಿನಿಧಿಗಳು ಹಾಗೂ ಪರಿಶಿಷ್ಟ ಜಾತಿಯ ಪ್ರತಿನಿಧಿಗಳು ಆಡಳಿತ ಮಂಡಳಿಯಲ್ಲಿದ್ದಾರೆ.

**ವಜ್ರಮಹೋತ್ಸವ :** 1977 ಏಪ್ರಿಲ್ ತಿಂಗಳಿನಲ್ಲಿ ವಜ್ರಮಹೋತ್ಸವ ಸಮಾರಂಭ ಆರು ದಿನಗಳ ಕಾಲ ನಡೆಯಿತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪ್ರಧಾನ ಸಮಾರಂಭವೂ ಈ ಸಂದರ್ಭದಲ್ಲಿ ನಡೆಯಿತು. ಮೊದಲ ಬಾರಿಗೆ ದೆಹಲಿಯಿಂದ ಹೊರಗೆ ಈ ಸಮಾರಂಭ

ನಡೆಯಲು ಪರಿಷತ್ತು ವೇದಿಕೆ ಕಲ್ಪಿಸಿತು. ವಜ್ರಮಹೋತ್ಸವದ ಸವಿನೆನಪಿಗಾಗಿ ಮೂರಂತಸ್ತಿನ ವಜ್ರಮಹೋತ್ಸವ ಕಟ್ಟಡ ನಿರ್ಮಿಸಲಾಯಿತು. ಕನ್ನಡ ಜಾನಪದ ವಿಶ್ವಕೋಶ, ಮಹಾಪುರಾಣ ಮೊದಲಾದ ಮಹತ್ವದ ಗ್ರಂಥಗಳಲ್ಲದೇ ನಲಿಯುವ ಮಕ್ಕಳ ಕಲಿಯುವ ಪುಸ್ತಕ ಮಾಲಿಕೆಯಲ್ಲಿ ವಿವಿಧ ವಿಷಯಗಳ ಬಗೆಗೆ 200 ಮಕ್ಕಳ ಪುಸ್ತಕಗಳು ಪ್ರಕಟವಾದುವು.

ಯುನೆಸ್ಕೋ ಘೋಷಿಸಿದ್ದ ಮಹಿಳಾ ವರ್ಷ, ಅಂತಾರಾಷ್ಟ್ರೀಯ ಮಕ್ಕಳ ವರ್ಷಗಳನ್ನು ಪರಿಷತ್ತು ಅರ್ಥಪೂರ್ಣವಾಗಿ ಆಚರಿಸಿತು. ಕನ್ನಡ ಬೆರಳಚ್ಚು ಶೀಘ್ರಲಿಪಿ ತರಗತಿಗಳು, ವಯಸ್ಕರ ಶಿಕ್ಷಣ ತರಗತಿಗಳು, ಕನ್ನಡ ಬಾರದವರಿಗಾಗಿ ಕನ್ನಡ ಕಲಿಕೆ ತರಗತಿಗಳು, ಕನ್ನಡ ಮಾಧ್ಯಮದ ಪತ್ರಿಕೋದ್ಯಮ ತರಗತಿಗಳು, ಜಾನಪದ ಹಾಗೂ ಶಾಸನ ತರಗತಿಗಳು - ಹೀಗೆ ಅನೇಕ ತರಗತಿಗಳನ್ನು ಪರಿಷತ್ತು ನಡೆಸಿದೆ. ಪ್ರಸ್ತುತ ಶಾಸನಶಾಸ್ತ್ರ ತರಗತಿಗಳು ಮಾತ್ರ ನಡೆಯುತ್ತಿವೆ.

**ಗೌರವ ಸದಸ್ಯತ್ವ :** ಕನ್ನಡ ನಾಡು, ನುಡಿಗೆ ದೀರ್ಘ ಕಾಲ ಶ್ರೇಷ್ಠ ಸೇವೆ ಸಲ್ಲಿಸಿರುವ ಗಣ್ಯರಿಗೆ ಗೌರವ ಸದಸ್ಯತ್ವ ಎಂಬ ಹೆಸರಿನಲ್ಲಿ ಫೆಲೋಷಿಪ್ ಮಾದರಿಯ ಶ್ರೇಷ್ಠ ಮನ್ನಣೆಯನ್ನು 1985ರಿಂದ ಪರಿಷತ್ತು ನೀಡುತ್ತಿದೆ.

**ಶಾಶ್ವತ ನಿಧಿ :** ಪರಿಷತ್ತಿನ ಕಾರ್ಯಕ್ರಮಗಳು ನಿರಂತರವಾಗಿ ನಡೆದುಕೊಂಡು ಹೋಗಲು ಅನುಕೂಲವಾಗುವಂತೆ ಅಮೃತನಿಧಿ, ಚೈತನ್ಯ ನಿಧಿ ಮೊದಲಾದ ಶಾಶ್ವತ ಆರ್ಥಿಕ ನಿಧಿಗಳನ್ನು ಸ್ಥಾಪಿಸಲಾಗಿದೆ. ಅದರ ಬಡ್ಡಿಯಿಂದ ನಿಗದಿತ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

**ಕನ್ನಡ ಪರೀಕ್ಷೆ :** ಈಗಾಗಲೇ ನಡೆಯುತ್ತಿರುವ ಕನ್ನಡ ಕಾವ, ಜಾಣ, ರತ್ನ ಪರೀಕ್ಷೆಗಳಿಗೆ ಪೂರಕವಾಗಿ ಕನ್ನಡ ಪ್ರವೇಶ ಎಂಬ ಪ್ರಾರಂಭಿಕ ಹಂತದ ಪರೀಕ್ಷೆಯನ್ನು (1990) ಪರಿಷತ್ತು ನಡೆಸುತ್ತಿದೆ. ಪರಿಷತ್ತಿನ ಸಾಹಿತ್ಯ ಪರೀಕ್ಷೆಗಳನ್ನು ಕರ್ನಾಟಕ ಸರ್ಕಾರ ಮಾನ್ಯ ಮಾಡಿದೆ. ಕನ್ನಡ ಕಾವ, ಜಾಣ, ರತ್ನ ಪರೀಕ್ಷೆಗಳಲ್ಲಿ ತೇರ್ಗಡೆಯಾದ ರಾಜ್ಯ ಸರ್ಕಾರಿ ನೌಕರರಿಗೆ ಇಲಾಖಾ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇದೆ.

**ಬಾವುಟ :** ಕನ್ನಡ ಸಾಹಿತ್ಯ ಪರಿಷತ್ತಿಗೆ ಅದರದೇ ಆದ ಬಾವುಟ (ಧ್ವಜ)ವನ್ನು ರೂಪಿಸಲಾಗಿದೆ. ಪರಿಷತ್ತಿನ ಅಧಿಕೃತ ಕಾರ್ಯಕ್ರಮಗಳಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ ಈ ಬಾವುಟವನ್ನು ಹಾರಿಸಲಾಗುತ್ತದೆ. ಹೊಸಗನ್ನಡ ಸಾಹಿತ್ಯದ ನಿರ್ಮಾಪಕರು ಮಾಲಿಕೆಯಲ್ಲಿ ವ್ಯಕ್ತಿಚಿತ್ರಣಗಳ ಪುಸ್ತಕಗಳು ಪ್ರಕಟವಾಗಿವೆ. ಕನ್ನಡದಲ್ಲಿ ಬಂದ ಅನೇಕ ಪಿಎಚ್.ಡಿ. ಗ್ರಂಥಗಳನ್ನು ಪರಿಷತ್ತು ಪ್ರಕಟಿಸಿದೆ. ಹೊಸದಾಗಿ ಓದುಕಲಿತ ವಯಸ್ಕರಿಗಾಗಿ ನವಸಾಕ್ಷರ ಮಾಲೆಯ ಅನೇಕ ಪುಸ್ತಕಗಳು ಪ್ರಕಟವಾಗಿವೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಕೈಗೊಳ್ಳಲಾದ ಹೊಸಶೋಧಗಳ ಬಗೆಗೆ ಪ್ರಬಂಧ ಮಂಡಿಸುವ ಹಾಗೂ ಸಮಕಾಲೀನ ವಿಷಯವೊಂದರ ಬಗೆಗೆ ಸಂಜೆ ಪ್ರತ್ಯೇಕ ವೇದಿಕೆಯಲ್ಲಿ ಸಾಹಿತ್ಯ ಸಂವಾದ ನಡೆಸುವ ಏರ್ಪಾಟು ಜಾರಿಗೆ ಬಂದಿದೆ.

**ಗೀತ ಸಂಗೀತ :** ಖ್ಯಾತ ಕವಿಗಳು ತಾವು ರಚಿಸಿದ ಹೊಸ ಕವನವನ್ನು ತಾವೇ ವಾಚಿಸುವುದು, ಅನಂತರ ಅದೇ ಕವನವನ್ನು ಸುಗಮ ಸಂಗೀತ ಹಾಡುಗಾರರು ಸಂಗೀತದೊಡನೆ ಹಾಡುವ ವೈಶಿಷ್ಟ್ಯಪೂರ್ಣವಾದ ಗೀತ ಸಂಗೀತ ಕಾರ್ಯಕ್ರಮ ಸಮ್ಮೇಳನದಲ್ಲಿ ಜನಪ್ರಿಯವಾಗಿದೆ.

**ಅಮೃತೋತ್ಸವ :** ಪರಿಷತ್ತಿಗೆ 75 ವರ್ಷ ಪೂರ್ಣಗೊಂಡ ನೆನಪಿಗೆ (1991) ಎಲ್ಲಾ ಜಿಲ್ಲಾ ಘಟಕಗಳೂ ಅಮೃತೋತ್ಸವ ಕಾರ್ಯಕ್ರಮಗಳನ್ನು ಆಚರಿಸಿವೆ.

ಪರಿಷತ್ತಿನ ನಿಯತಕಾಲಿಕೆ ಕನ್ನಡ ನುಡಿಗೆ 50 ವರ್ಷ ತುಂಬಿದ ನೆನಪಿಗಾಗಿ ಕನ್ನಡ ನುಡಿಯ ಸುವರ್ಣೋತ್ಸವ ಸಂಚಿಕೆಯನ್ನು ಪ್ರಕಟಿಸಲಾಗಿದೆ.

**ಅಮೃತನಿಧಿ ಚೀಟಿ :** ಒಬ್ಬ ಕನ್ನಡಿಗ ಒಂದು ರೂಪಾಯಿ ಘೋಷಣೆಯಡಿ ಶಾಶ್ವತನಿಧಿಗೆ ಹಣ ಸಂಗ್ರಹಿಸುವುದಕ್ಕಾಗಿ ಒಂದು ರೂಪಾಯಿ ಮುಖಬೆಲೆಯ ವರ್ಣಮಯ ಅಮೃತನಿಧಿ ಚೀಟಿಗಳನ್ನು ಮುದ್ರಿಸಿ ಮಾರಾಟಕ್ಕೆ ಬಿಡುಗಡೆ ಮಾಡಲಾಗಿದೆ.

ಸಾಹಿತ್ಯದ ಬೇರೆ ಬೇರೆ ಪ್ರಕಾರಗಳ ಬಗೆಗೆ ಚರ್ಚಿಸಲು, ವಿಚಾರ ವಿನಿಮಯ ಮಾಡಿಕೊಳ್ಳಲು ಅನುಕೂಲವಾಗುವಂತೆ ಪ್ರತ್ಯೇಕವಾಗಿ ಸಾಹಿತ್ಯ ಸಮಾವೇಶಗಳನ್ನು ಪರಿಷತ್ತು ಏರ್ಪಡಿಸಿದೆ.

**ಧ್ವನಿಸುರುಳಿ :** ಖ್ಯಾತ ಕವಿಗಳ ಭಾವಗೀತೆಗಳನ್ನೊಳಗೊಂಡ ಹಚ್ಚೇವು ಕನ್ನಡದ ದೀಪ ಎಂಬ ಧ್ವನಿಸುರುಳಿಯನ್ನು ಪರಿಷತ್ತು ಸಿದ್ಧಗೊಳಿಸಿ ಬಿಡುಗಡೆ ಮಾಡಿದೆ. ಇದೇ ರೀತಿ ಇನ್ನೆರಡು ಕ್ಯಾಸೆಟ್‌ಗಳು ಅನಂತರದಲ್ಲಿ ಬಂದಿವೆ.

**ಜಿಲ್ಲಾ ಸಾಹಿತ್ಯ ಭವನಗಳು :** ಪರಿಷತ್ತಿನ ಜಿಲ್ಲಾ ಘಟಕಗಳು ಸ್ವಂತ ನಿವೇಶನಗಳನ್ನು ಪಡೆದುಕೊಂಡು ಜಿಲ್ಲಾ ಸಾಹಿತ್ಯ ಭವನಗಳನ್ನು ನಿರ್ಮಿಸಿ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿವೆ. ಅಲ್ಲದೇ ಉಪಯುಕ್ತ ಗ್ರಂಥಗಳನ್ನೂ ಪ್ರಕಟಿಸುತ್ತಿವೆ.

'ಱ,ೞ', ನಿಘಂಟು, ಪಡೆನುಡಿ ಕೋಶ ಎಂಬ ಮೌಲಿಕ ನಿಘಂಟುಗಳು ಪ್ರಕಟವಾಗಿವೆ.

ಕನ್ನಡ-ಕನ್ನಡ ಬೃಹತ್ ನಿಘಂಟು ಯೋಜನೆಯನ್ನು ಪೂರ್ಣಗೊಳಿಸಿ ಕೊನೆಯದಾದ 8ನೆಯ ಸಂಪುಟವನ್ನು ಪ್ರಕಟಿಸಲಾಗಿದೆ (1995). ಕನ್ನಡ-ಕನ್ನಡ-ಇಂಗ್ಲಿಷ್ ಬೃಹತ್ ನಿಘಂಟು ಯೋಜನೆ ಆರಂಭವಾಗಿದ್ದು ಮೊದಲನೆಯ ಸಂಪುಟ ಪ್ರಕಟವಾಗಿದೆ (2002). ಪುಸ್ತಕ ಯೋಜನೆಯಡಿ ದತ್ತಿನಿಧಿಗಳ ಆಶ್ರಯದಲ್ಲಿ ಪ್ರತಿವರ್ಷ ಒಂದೊಂದು ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ.

ಆಧುನಿಕ ತಂತ್ರಜ್ಞಾನದ ಪ್ರಯೋಜನವನ್ನು ಪರಿಷತ್ತಿನ ಚಟುವಟಿಕೆಗಳಲ್ಲಿ ಪಡೆದುಕೊಳ್ಳಲು ಬಯಸಿ ಕಂಪ್ಯೂಟರ್‌ಗಳನ್ನು ಪರಿಷತ್ತಿನಲ್ಲಿ ಸ್ಥಾಪಿಸಲಾಗಿದೆ (1996). ಕನ್ನಡದ ಶ್ರೇಷ್ಠ ಗ್ರಂಥಗಳ ಸಿ.ಡಿ.ಯನ್ನು ಸಿದ್ಧಪಡಿಸಲಾಗುತ್ತಿದೆ. ಜೊತೆಗೆ ಪರಿಷತ್ತಿಗೆ ವೆಬ್‌ಸೈಟ್ (ಅಂತರ್ ಜಾಲ) ನಿರ್ಮಿಸಲಾಗಿದೆ.

ಇಪ್ಪತ್ತು ಸಾವಿರ ರೂಪಾಯಿ ನಗದು, ಪ್ರಶಸ್ತಿ ಫಲಕಗಳನ್ನೊಳಗೊಂಡ ಚಾವುಂಡರಾಯ ಪ್ರಶಸ್ತಿಯನ್ನು ಪರಿಷತ್ತು 1995-96ರಿಂದ ಪ್ರತಿವರ್ಷ ಕನ್ನಡದ ಶ್ರೇಷ್ಠ ಬರೆಹಗಾರರಿಗೆ ನೀಡುತ್ತಿದೆ. ಮಹಿಳೆಯರಿಗಾಗಿ ಹತ್ತುಸಾವಿರ ರೂಪಾಯಿ ನಗದು ಬಹುಮಾನವುಳ್ಳ 'ಪದ್ಮಭೂಷಣ ಬಿ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ'ಯನ್ನು 1997-98 ರಿಂದ ನೀಡಲಾಗುತ್ತಿದೆ.

ದತ್ತಿನಿಧಿ ಆಶ್ರಯದಲ್ಲಿ ಪ್ರತಿವರ್ಷ ಉತ್ತಮ ಸಾಹಿತ್ಯ ಕೃತಿಗಳಿಗೆ ಬಹುಮಾನಗಳನ್ನು ಕೊಡಲಾಗುತ್ತಿದೆ. ಕರ್ನಾಟಕ ಮಾತೆಯ ಸುಂದರ ತೈಲವರ್ಣ ಚಿತ್ರವನ್ನು ತಯಾರಿಸಲಾಗಿದೆ. ಅವುಗಳ ಪ್ರತಿಗಳನ್ನು ಮಾರಾಟ ಮಾಡಲಾಗುತ್ತಿದೆ.

(ಎಂ.ವಿ.ಎಸ್.)

**ಕನ್ನಡ ಸಾಹಿತ್ಯ ಸಮ್ಮೇಳನಗಳು :** ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿದ, 1915ರ ಮೇ 9ರಂದು ಬೆಂಗಳೂರಿನಲ್ಲಿ ಸೇರಿದ ಸಮ್ಮೇಳನವೇ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ.

ಸಾಮಾನ್ಯವಾಗಿ ಪ್ರತಿವರ್ಷವೂ ಕನ್ನಡ ನಾಡಿನ ಒಂದೊಂದು ಮುಖ್ಯಪಟ್ಟಣಗಳಲ್ಲಿ ಕನ್ನಡ ಭಾಷಾಭಿಮಾನಿಗಳ ಸಮ್ಮೇಳನಗಳನ್ನು ನಡೆಸುತ್ತ ಬರುವುದು ಕನ್ನಡ ಸಾಹಿತ್ಯ ಪರಿಷತ್ತಿನ ಮುಖ್ಯ ಕಾರ್ಯಗಳಲ್ಲೊಂದು. 2003ರವರೆಗೆ 71 ಸಮ್ಮೇಳನಗಳು ನಡೆದಿವೆ. ಸಮ್ಮೇಳನಗಳ ಕಾರ್ಯವಿವರಣೆ ಸ್ಥೂಲವಾಗಿ ಈ ರೀತಿಯಿದೆ: ಈ ಸಮ್ಮೇಳನಗಳ ಅಧ್ಯಕ್ಷತೆಗೆ ಪ್ರಮುಖರಾದ ಕನ್ನಡ ಭಾಷಾಭಿಮಾನಿಗಳಲ್ಲೊಬ್ಬರನ್ನು ಆರಿಸಲಾಗುತ್ತದೆ. ಅಧ್ಯಕ್ಷರಾಗಿ ಆಯ್ಕೆಯಾದವರು ಸಾಮಾನ್ಯವಾಗಿ ತಮ್ಮ ಭಾಷಣದಲ್ಲಿ ಕನ್ನಡ ಭಾಷೆಯ ಸದ್ಯದ ಪರಿಸ್ಥಿತಿಯನ್ನು ವಿವರಿಸಿ ಕನ್ನಡ ಭಾಷೆಯ ಮತ್ತು ದೇಶದ ಅಭಿವೃದ್ಧಿ ಸ್ಥಿತಿಯನ್ನು ಕುರಿತು ಕರ್ನಾಟಕದ ನಾನಾ ಭಾಗಗಳಲ್ಲಿಯ ಕನ್ನಡಿಗರಲ್ಲಿ ಸೌಹಾರ್ದ ಹುಟ್ಟುವಂತೆ ಉಪನ್ಯಾಸ

ಮಾಡುವರು. ಇದಲ್ಲದೆ ನಾನಾ ಪ್ರಾಂತ್ಯಗಳಿಂದ ಸಮ್ಮೇಳನಕ್ಕೆ ಬಂದ ಕನ್ನಡಿಗರು ಕನ್ನಡ ಭಾಷೆಯು ಮತ್ತು ದೇಶದ ಏಳಿಗೆಗಾಗಿ ಆವಶ್ಯಕವೆಂದು ತೋರುವ ಅನೇಕ ಗೊತ್ತುವಳಿಗಳನ್ನು ಮಾಡುವರು. ಇದನ್ನು ಪರಿಷತ್ತು ಆಯಾ ಅಧಿಕಾರಿಗಳಿಗೆ ತಿಳಿಯಪಡಿಸಿ ಅವರಿಂದ ಬಂದ ಉತ್ತರಗಳನ್ನು ಮುಂದಿನ ಸಮ್ಮೇಳನದ ಮುಂದೆ ಇಡುತ್ತದೆ. ಈ ಮೂರು ದಿನಗಳ ಸಮ್ಮೇಳನದಲ್ಲಿ ನಾನಾ ಪ್ರಾಂತಗಳಿಂದ ವಿದ್ವಾಂಸರು ಕನ್ನಡ ಸಾಹಿತ್ಯದ ಹಲವು ಪ್ರಕಾರಗಳನ್ನು ಕುರಿತು ವಿದ್ವತ್ಪೂರಿತ ಪ್ರಬಂಧಗಳನ್ನು ಬರೆದೋದುವರು. ಇದರ ಜೊತೆಗೆ ಕನ್ನಡ ಲೇಖಕರ ಗೋಷ್ಠಿ, ನಾಟಕ, ಗೋಷ್ಠಿ, ಇತಿಹಾಸ ಗೋಷ್ಠಿ, ಮಹಿಳಾ ಗೋಷ್ಠಿ, ವೃತ್ತ ಪತ್ರಿಕಾಕರ್ತರ ಗೋಷ್ಠಿ, ವಿಜ್ಞಾನ ಗೋಷ್ಠಿ ಮುಂತಾದ ಹಲವಾರು ಗೋಷ್ಠಿಗಳು ನಡೆಯುತ್ತವೆ. ಈ ಎಲ್ಲ ಗೋಷ್ಠಿಗಳಲ್ಲೂ ಸಮ್ಮೇಳನಾಧ್ಯಕ್ಷರು ಅಗ್ರಸ್ಥಾನದಲ್ಲಿರುತ್ತಾರೆ. ಸಮ್ಮೇಳನದ ಅಂಗವಾಗಿ ಕನ್ನಡ ಲಾವಣಿ, ಸಂಗೀತ, ನಾಟಕ ಮೊದಲಾದ ಮನರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

ಹಿಂದೆ ಸಮ್ಮೇಳನಾಧ್ಯಕ್ಷರಿಗೂ ಪರಿಷತ್ತಿನ ಕಾರ್ಯಕಾರಿ ಸಮಿತಿಗೂ ನಿಕಟ ಸಂಬಂಧವಿರಲಿಲ್ಲ. ಸಮ್ಮೇಳನದಲ್ಲಾದ ಗೊತ್ತುವಳಿಗಳನ್ನು ಆಚರಣೆಗೆ ತರುವುದರಲ್ಲಾಗಲಿ, ಪರಿಷತ್ತಿನ ಧೋರಣೆಯನ್ನು ರೂಪುಗೊಳಿಸುವುದರಲ್ಲಾಗಲಿ ಅಧ್ಯಕ್ಷರಿಗೆ ಸ್ಥಾನವಿರಲಿಲ್ಲ. ಈಚೆಗೆ ಈ ಸ್ಥಿತಿ ಮಾರ್ಪಟ್ಟಿದೆ. ಸಮ್ಮೇಳನದ ಅಧ್ಯಕ್ಷರು ಕಾರ್ಯಸಮಿತಿಯ ಸದಸ್ಯರಾಗಿರಬೇಕೆಂಬ ಒಂದು ತೀರ್ಮಾನವನ್ನು 1939ರಲ್ಲಿ ಅಂಗೀಕರಿಸಲಾಯಿತು. ಎರಡನೆಯದಾಗಿ ಪರಿಷತ್ತಿನ ಅಧ್ಯಕ್ಷರು ತಾವು ನಡೆಸುವ ಮುಖ್ಯ ಕಾರ್ಯಗಳ ವಿವರಗಳನ್ನು ಆಗಿಂದಾಗ್ಗೆ ಸಮ್ಮೇಳನಾಧ್ಯಕ್ಷರಿಗೆ ತಿಳಿಸಿ ಅವರ ಸಲಹೆ ಪಡೆಯುವುದು ರೂಢಿಗೆ ಬಂದಿದೆ. ಇವರು ಸ್ವತಂತ್ರವಾಗಿಯೋ ಅಧ್ಯಕ್ಷರ ಜೊತೆಯಲ್ಲಿಯೋ ನಾಡಿನಲ್ಲಿ ಪ್ರವಾಸ ಮಾಡಿ ಪರಿಷತ್ತಿನ ಧ್ಯೇಯಗಳನ್ನು ಜನಸಾಮಾನ್ಯರಲ್ಲಿ ಹರಡುತ್ತಿದ್ದಾರೆ.

ಸಮ್ಮೇಳನಗಳು ಕರ್ನಾಟಕದ ಎಲ್ಲ ಪ್ರಮುಖ ಸ್ಥಳಗಳಲ್ಲೂ ನಡೆದಿವೆ. ನಾಡಿನ ಸುಪ್ರಸಿದ್ಧ ಸಾಹಿತಿಗಳು ಅಧ್ಯಕ್ಷರಾಗಿದ್ದಾರೆ. ಸಹಸ್ರ ಸಂಖ್ಯೆಯಲ್ಲಿ ಜನ ಸೇರಿ ಸಮ್ಮೇಳನಗಳ ಕಾರ್ಯ ಕಲಾಪಗಳನ್ನು ವೀಕ್ಷಿಸಿದ್ದಾರೆ. ಜನತೆಯಲ್ಲಿ ಕನ್ನಡದ ಪ್ರಜ್ಞೆಯನ್ನು ಕುದುರಿಸುವಲ್ಲಿ ಈ ಸಮ್ಮೇಳನಗಳು ವಹಿಸಿದ ಪಾತ್ರ ಅಪೂರ್ವವಾದುದು. ಪ್ರತಿ ಸಮ್ಮೇಳನದಲ್ಲೂ ನಾಡು, ನುಡಿಗಳ ಏಳಿಗೆಯ ಬಗ್ಗೆ ಚರ್ಚೆ ನಡೆದು ಉಪಯುಕ್ತ ನಿರ್ಣಯಗಳಾಗಿವೆ. ಆದ ನಿರ್ಣಯಗಳಲ್ಲಿ ಬಹುಪಾಲು ಕಾರ್ಯರೂಪಕ್ಕೂ ಬಂದಿವೆ. ಮುಂದಿನ ಪಟ್ಟಿ ಅಧಿವೇಶನಗಳ ಬಗ್ಗೆ ಮಾಹಿತಿ ನೀಡುತ್ತದೆ.

### ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧಿವೇಶನಗಳು

| ಕ್ರ.ಸಂ. | ಅಧಿವೇಶನಸ್ಥಳ | ಅಧ್ಯಕ್ಷರು | ವರ್ಷ |
|---|---|---|---|
| 1 | ಬೆಂಗಳೂರು | ಎಚ್.ವಿ.ನಂಜುಂಡಯ್ಯ | 1915 |
| 2 | ಬೆಂಗಳೂರು | ಎಚ್.ವಿ.ನಂಜುಂಡಯ್ಯ | 1916 |
| 3 | ಮೈಸೂರು | ಎಚ್.ವಿ.ನಂಜುಂಡಯ್ಯ | 1917 |
| 4 | ಧಾರವಾಡ | ಆರ್.ನರಸಿಂಹಾಚಾರ್ | 1918 |
| 5 | ಹಾಸನ | ಕರ್ಪೂರ ಶ್ರೀನಿವಾಸರಾವ್ | 1919 |
| 6 | ಹೊಸಪೇಟೆ | ರೊದ್ದ ಶ್ರೀನಿವಾಸರಾಯ | 1920 |
| 7 | ಚಿಕ್ಕಮಗಳೂರು | ಕೆ.ಪಿ.ಪುಟ್ಟಣಚೆಟ್ಟಿ | 1921 |
| 8 | ದಾವಣಗೆರೆ | ಎಂ.ವೆಂಕಟಕೃಷ್ಣಯ್ಯ | 1922 |
| 9 | ಬಿಜಾಪುರ | ಸಿದ್ಧಾಂತಿ ಶಿವಶಂಕರಶಾಸ್ತ್ರಿ | 1923 |
| 10 | ಕೋಲಾರ | ಹೊಸಕೋಟೆ ಕೃಷ್ಣಶಾಸ್ತ್ರಿ | 1924 |
| 11 | ಬೆಳಗಾಂವಿ | ಬೆನಗಲ್ ರಾಮರಾವ್ | 1925 |
| 12 | ಬಳ್ಳಾರಿ | ಫ.ಗು.ಹಳಕಟ್ಟಿ | 1926 |
| 13 | ಮಂಗಳೂರು | ಆರ್.ತಾತಾಚಾರ್ಯ | 1927 |
| 14 | ಗುಲ್ಬರ್ಗ | ಬಿ.ಎಂ.ಶ್ರೀಕಂಠಯ್ಯ | 1928 |
| 15 | ಬೆಳಗಾಂವಿ | ಮಾಸ್ತಿ ವೆಂಕಟೇಶಅಯ್ಯಂಗಾರ್ | 1929 |
| 16 | ಮೈಸೂರು | ಆಲೂರ ವೆಂಕಟರಾಯ | 1930 |
| 17 | ಕಾರವಾರ | ಮುಳಿಯ ತಿಮ್ಮಪ್ಪಯ್ಯ | 1931 |
| 18 | ಮಡಿಕೇರಿ | ಡಿ.ವಿ.ಗುಂಡಪ್ಪ | 1932 |
| 19 | ಹುಬ್ಬಳ್ಳಿ | ವೈ.ನಾಗೇಶಶಾಸ್ತ್ರಿ | 1933 |
| 20 | ರಾಯಚೂರು | ಪಂಜೆ ಮಂಗೇಶರಾಯ | 1934 |
| 21 | ಮುಂಬಯಿ | ಎನ್.ಎಸ್.ಸುಬ್ಬರಾಯ | 1935 |
| 22 | ಜಮಖಂಡಿ | ಬೆಳ್ಳಾವೆ ವೆಂಕಟನಾರಣಪ್ಪ | 1937 |
| 23 | ಬಳ್ಳಾರಿ | ರಂ.ರಾ.ದಿವಾಕರ | 1938 |
| 24 | ಬೆಳಗಾಂವಿ | ಮುದವೀಡು ಕೃಷ್ಣರಾಯ | 1939 |
| 25 | ಧಾರವಾಡ | ವೈ.ಚಂದ್ರಶೇಖರಶಾಸ್ತ್ರೀ | 1940 |
| 26 | ಹೈದರಾಬಾದ್ | ಎ.ಆರ್. ಕೃಷ್ಣಶಾಸ್ತ್ರೀ | 1941 |
| 27 | ಶಿವಮೊಗ್ಗ | ದ.ರಾ.ಬೇಂದ್ರೆ | 1943 |
| 28 | ರಬಕವಿ | ಎಸ್.ಎಸ್.ಬಸವನಾಳ | 1944 |
| 29 | ಮದರಾಸು (ಚೆನ್ನೈ) | ಟಿ.ಪಿ.ಕೈಲಾಸಂ | 1945 |
| 30 | ಹರಪನಹಳ್ಳಿ | ಸಿ.ಕೆ.ವೆಂಕಟರಾಮಯ್ಯ | 1947 |
| 31 | ಕಾಸರಗೋಡು | ತಿರುಮಲೆತಾತಾಚಾರ್ಯಶರ್ಮ | 1948 |
| 32 | ಗುಲ್ಬರ್ಗ | ಉತ್ತಂಗಿ ಚನ್ನಪ್ಪ | 1949 |
| 33 | ಸೊಲ್ಲಾಪುರ | ಎಂ.ಆರ್.ಶ್ರೀನಿವಾಸಮೂರ್ತಿ | 1950 |
| 34 | ಬೊಂಬಾಯಿ(ಮುಂಬಯಿ) | ಎಂ.ಗೋವಿಂದ ಪೈ | 1950 |
| 35 | ಬೇಲೂರು | ಎಸ್.ಸಿ.ನಂದೀಮಠ | 1952 |
| 36 | ಕುಮಟ | ವಿ.ಸೀತಾರಾಮಯ್ಯ | 1954 |
| 37 | ಮೈಸೂರು | ಶಿವರಾಮ ಕಾರಂತ | 1955 |
| 38 | ರಾಯಚೂರು | ಆದ್ಯ ರಂಗಾಚಾರ್ಯ | 1955 |
| 39 | ಧಾರವಾಡ | ಕೆ.ವಿ.ಪುಟ್ಟಪ್ಪ | 1957 |
| 40 | ಬಳ್ಳಾರಿ | ವಿ.ಕೃ.ಗೋಕಾಕ | 1958 |
| 41 | ಬಿದರೆ (ಬೀದರ್) | ಡಿ.ಎಲ್.ನರಸಿಂಹಾಚಾರ್ | 1960 |
| 42 | ಮಣಿಪಾಲ | ಅ.ನ.ಕೃಷ್ಣರಾಯ | 1960 |
| 43 | ಗದಗ | ಕೆ.ಜಿ.ಕುಂದಣಗಾರ | 1961 |
| 44 | ಸಿದ್ಧಗಂಗಾ | ರಂ.ಶ್ರೀ.ಮುಗಳಿ | 1963 |
| 45 | ಕಾರವಾರ | ಕಡೆಂಗೋಡ್ಲು ಶಂಕರಭಟ್ಟ | 1965 |
| 46 | ಶ್ರವಣಬೆಳಗೊಳ | ಆ.ನೇ.ಉಪಾಧ್ಯೆ | 1967 |
| 47 | ಬೆಂಗಳೂರು | ದೇ.ಜವರೇಗೌಡ | 1970 |
| 48 | ಮಂಡ್ಯ | ಜಯದೇವಿತಾಯಿ ಲಿಗಾಡೆ | 1974 |
| 49 | ಶಿವಮೊಗ್ಗ | ಎಸ್.ವಿ.ರಂಗಣ್ಣ | 1976 |
| 50 | ನವದೆಹಲಿ | ಜಿ.ಪಿ.ರಾಜರತ್ನಂ | 1978 |
| 51 | ಧರ್ಮಸ್ಥಳ | ಎಂ.ಗೋಪಾಲಕೃಷ್ಣ ಅಡಿಗ | 1979 |
| 52 | ಬೆಳಗಾಂವಿ | ಬಸವರಾಜ ಕಟ್ಟೀಮನಿ | 1980 |
| 53 | ಚಿಕ್ಕಮಗಳೂರು | ಪು.ತಿ.ನರಸಿಂಹಾಚಾರ್ | 1981 |
| 54 | ಮಡಿಕೇರಿ | ಶಂ.ಬಾ.ಜೋಶಿ | 1981 |
| 55 | ಶಿರಸಿ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | 1982 |
| 56 | ಕೈವಾರ | ಎ.ಎನ್.ಮೂರ್ತಿರಾವ್ | 1984 |
| 57 | ಬೀದರ್ | ಹಾ.ಮಾ.ನಾಯಕ | 1985 |
| 58 | ಕಲಬುರ್ಗಿ | ಸಿದ್ಧಯ್ಯ ಪುರಾಣಿಕ | 1987 |
| 59 | ಹುಬ್ಬಳ್ಳಿ | ಆರ್.ಸಿ.ಹಿರೇಮಠ | 1990 |
| 60 | ಮೈಸೂರು | ಕೆ.ಎಸ್.ನರಸಿಂಹಸ್ವಾಮಿ | 1990 |
| 61 | ದಾವಣಗೆರೆ | ಜಿ.ಎಸ್.ಶಿವರುದ್ರಪ್ಪ | 1992 |
| 62 | ಕೊಪ್ಪಳ | ಸಿಂಪಿಲಿಂಗಣ್ಣ | 1992 |
| 63 | ಮಂಡ್ಯ | ಚದುರಂಗ | 1994 |
| 64 | ಮುಧೋಳ | ಎಚ್.ಎಲ್.ನಾಗೇಗೌಡ | 1995 |
| 65 | ಹಾಸನ | ಚೆನ್ನವೀರ ಕಣವಿ | 1996 |
| 66 | ಮಂಗಳೂರು | ಕಯ್ಯಾರ ಕಿಞ್ಞಣ್ಣ ರೈ | 1997 |
| 67 | ಕನಕಪುರ | ಎಸ್.ಎಲ್.ಭೈರಪ್ಪ | 1999 |
| 68 | ಬಾಗಲಕೋಟೆ | ಶಾಂತಾದೇವಿ ಮಾಳವಾಡ | 2000 |
| 69 | ತುಮಕೂರು | ಯು.ಆರ್.ಅನಂತಮೂರ್ತಿ | 2002 |
| 70 | ಬೆಳಗಾಂವಿ | ಪಾಟೀಲ ಪುಟ್ಟಪ್ಪ | 2003 |
| 71 | ಮೂಡಬಿದರೆ | ಕಮಲಾಹಂಪನ | 2003 |

*

**ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ :** ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಧಾನ ಮುಖಪತ್ರವಾಗಿ 1915ರಲ್ಲಿ ಸ್ಥಾಪಿತವಾಗಿ 1916ರ ಏಪ್ರಿಲ್‌ನಿಂದ ಪ್ರಕಟವಾಗುತ್ತಿದೆ. ಕನ್ನಡನಾಡು ನುಡಿ ಸಂಸ್ಕೃತಿಗಳ ಪುನರುಜ್ಜೀವನ, ಜ್ಞಾನಪ್ರಸಾರ, ಕನ್ನಡ ಏಕೀಕರಣದ ಪ್ರಸಾರ, ವಿದ್ವತ್ ಲೇಖನಗಳ ಪ್ರಕಟಣೆ - ಇವು ಪತ್ರಿಕೆಯ ಧ್ಯೇಯಗಳು. ಮೊದಲ ಹೆಸರು ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ. 1938ರಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಎಂದು ಬದಲಾಯಿತು. ಕೆಲವು ಕಾಲ ಪತ್ರಿಕೆ ತ್ರೈಮಾಸಿಕ ವಾಗಿತ್ತು. ಷಾಣ್ಮಾಸಿಕವಾಗಿ ಪ್ರಕಟವಾಗುತ್ತಿತ್ತು. ಅನಂತರ ಈಗ ತ್ರೈವಾರ್ಷಿಕ ಪತ್ರಿಕೆಯಾಗಿ ಪ್ರಕಟವಾಗುತ್ತಿದೆ.




ಪ್ರಾರಂಭದಲ್ಲಿ ಪತ್ರಿಕೆಯನ್ನು ಒಂದು ಸಂಪಾದಕ ಮಂಡಲಿ ನಡೆಸುತ್ತಿದ್ದು ಅನಂತರ ಮಂಡಲಿಯ ಜೊತೆಗೆ ಪ್ರತ್ಯೇಕ ಸಂಪಾದಕರನ್ನು ನೇಮಿಸಲಾಯಿತು. ಬೆಳ್ಳಾವೆ ವೆಂಕಟನಾರಣಪ್ಪ, ಎಂ.ಆರ್.ಶ್ರೀನಿವಾಸಮೂರ್ತಿ, ಡಿ.ಎಲ್.ನರಸಿಂಹಾಚಾರ್, ಡಿ.ಸಿ.ಸುಬ್ಬರಾಯಪ್ಪ, ಬಿ.ಶಿವಮೂರ್ತಿಶಾಸ್ತ್ರಿ, ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ, ಹಂಪನಾಗರಾಜಯ್ಯ, ಟಿ.ಕೇಶವಭಟ್ಟ, ಲಕ್ಷ್ಮಣಕೊಡಸೆ, ಗೊ.ರು.ಚನ್ನಬಸಪ್ಪ ಲಕ್ಷ್ಮಣ ತೆಲಗಾವಿ ಮೊದಲಾದವರು ಸಂಪಾದಕರಾಗಿದ್ದರು.

ಕವಿಚರಿತೆ, ವಡ್ಡಾರಾಧನೆ ಮುಂತಾದ ಅನೇಕ ಗ್ರಂಥಗಳು ಮೊದಲು ಈ ಪತ್ರಿಕೆಯಲ್ಲಿ ಲೇಖನ ರೂಪದಲ್ಲಿ ಬಿಡಿಯಾಗಿ ಬೆಳಕು ಕಂಡು ಅನಂತರ ಗ್ರಂಥರೂಪದಲ್ಲಿ ಪ್ರಕಟವಾಗಿವೆ. ಸಾಹಿತ್ಯದ ವಿವಿಧ ಪ್ರಕಾರ ಕುರಿತ ಬರೆಹಗಳು, ಟೀಕೆ ಟಿಪ್ಪಣಿ, ವಿಮರ್ಶೆ, ಸಾಹಿತ್ಯ ಸಮ್ಮೇಳನಗಳ ವರದಿ, ಭಾಷಣಗಳು, ನಿರ್ಣಯಗಳು ಮೊದಲಾದವು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಕನ್ನಡ ನಾಡಿನ ಹೊರಗಿನ ಭಾಷಾಪಂಡಿತರಿಗೆ ಅನುಕೂಲವಾಗಲೆಂದು ಪತ್ರಿಕೆಯ ಪ್ರಕಟಿತ ಲೇಖನಗಳ ಸಂಕ್ಷಿಪ್ತ ಇಂಗ್ಲಿಷ್ ಅನುವಾದವನ್ನು ಕೊಡಲಾಗುತ್ತಿತ್ತು. ವಿದ್ವತ್ ಪ್ರಪಂಚಕ್ಕೆ, ಸಂಶೋಧನ ವಿಭಾಗಕ್ಕೆ, ವಿಮರ್ಶೆಯ ಕ್ಷೇತ್ರಕ್ಕೆ ಈ ಪತ್ರಿಕೆ ಅಪಾರ ಸೇವೆ ಸಲ್ಲಿಸುತ್ತಿದೆ. (ಎಚ್.ಪಿ.ಎನ್.)

**ಕನ್ನಡೇತರ ಭಾಷೆಗಳು ಮತ್ತು ಸಾಹಿತ್ಯ :** ಕರ್ನಾಟಕದಲ್ಲಿ ಕನ್ನಡ ವಲ್ಲದೆ ಇತರ 165 ಭಾಷೆಗಳು ಪ್ರಚಲಿತವಾಗಿವೆ. ಆದರೆ ಇವುಗಳಲ್ಲಿ ಹೆಚ್ಚಿನವು (ಉದಾ:ಆರ್ಮೇನಿಯನ್,ಇಂಡೊನೇಷ್ಯನ್) ಉದ್ಯೋಗ ಇತ್ಯಾದಿಗಳಿಗಾಗಿ ಬೇರೆ ದೇಶಗಳಿಂದ ಬಂದು ನೆಲಸಿದ ಕೆಲವೇ ವ್ಯಕ್ತಿ ಅಥವಾ ಕುಟುಂಬಗಳಿಗಷ್ಟೇ ಸೀಮಿತವಾಗಿವೆ. ಹೆಚ್ಚಿನ ಜನರ ಮಾತೃಭಾಷೆಯಾಗುಳ್ಳ ಕನ್ನಡೇತರ ಭಾಷೆಗಳಿವು: ತಮಿಳು, ಕೊಂಕಣಿ, ಮಲಯಾಳಂ, ಲಂಬಾಣಿ, ಹಿಂದಿ, ಉರ್ದು, ಕೊಡವ, ಬಂಜಾರಿ, ಗುಜಕ್ಷತ್ರಿಯ, ಇಂಗ್ಲಿಷ್, ಮಾರ್ವಾರಿ, ಎರವ, ಟಿಬೆಟನ್, ಸಿಂಧಿ, ಬಂಗಾಲಿ, ಪಂಜಾಬಿ, ಅರಬ್ಬೀ, ಹಿಂದುಸ್ಥಾನೀ, ರಾಜಸ್ಥಾನೀ, ಕುರುಂಬ, ಕೊರಚ, ವಡರಿ, ಕೊರವ, ಕೊಂಗರ್, ವ್ರಜಭಾಷಾ, ನೇಪಾಲಿ.

ಬಹು ಹಿಂದಿನ ಕಾಲದಿಂದ ಸಂಸ್ಕೃತ, ಪ್ರಾಕೃತ ಮೊದಲಾದ ಭಾಷೆಗಳು ಕರ್ನಾಟಕದಲ್ಲಿ ಪ್ರಚಲಿತಗೊಂಡಿದ್ದುದಾಗಿ ಆಯಾ ಭಾಷೆಗಳ ಪ್ರಭಾವ ಕನ್ನಡದ ಮೇಲಾಗಿರುವುದಲ್ಲದೆ ಹಲವು ಸಂದರ್ಭಗಳಲ್ಲಿ ಕನ್ನಡದ ಪ್ರಭಾವ ಸಹ ಅವುಗಳ ಮೇಲಾಗಿದೆ. ಅಲ್ಲದೆ ಆ ಕನ್ನಡೇತರ ಭಾಷೆಗಳಲ್ಲಿ ಸಾಹಿತ್ಯಸೃಷ್ಟಿಯೂ ಸ್ವಲ್ಪಮಟ್ಟಿಗೆ ಕರ್ನಾಟಕದಲ್ಲಿ ಜರುಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಸ್ಥೂಲ ಸಮೀಕ್ಷೆಯನ್ನು ಇಲ್ಲಿ ಕೊಡಲಾಗಿದೆ. *

**ಪ್ರಾಕೃತ :** ಕರ್ನಾಟಕಕ್ಕೆ ಮೌರ್ಯ ಚಕ್ರವರ್ತಿ ಚಂದ್ರಗುಪ್ತನೊಡನೆ ಭದ್ರಬಾಹು ಶ್ರುತಕೇವಲಿ ಉತ್ತರಾಪಥದಿಂದ ಬಂದ ಕಾರಣ ಜೈನ ಧರ್ಮವೂ ಪ್ರಾಕೃತಭಾಷೆಯೂ ಇಲ್ಲಿ ಹರಡುವಂತಾಗಿರಬೇಕು. ಮೌರ್ಯ, ಸಾತವಾಹನರ ಕಾಲದಲ್ಲಿ ಕನ್ನಡನಾಡಿನಲ್ಲಿ ಪ್ರಾಕೃತಭಾಷೆ ಕೆಲಮಟ್ಟಿಗೆ ವ್ಯವಹಾರದಲ್ಲಿದ್ದ ಭಾಷೆಯಾಗಿದ್ದು ಅದಕ್ಕೆ ತಕ್ಕ ಮನ್ನಣೆಯೂ ಇದ್ದಿರಬಹುದು. ಕರ್ನಾಟಕದ ಬ್ರಹ್ಮಗಿರಿ, ಮಸ್ಕಿ, ಕೊಪ್ಪಳ - ಈ ಸ್ಥಳಗಳಲ್ಲಿ ಅಶೋಕನ (ಕ್ರಿ.ಪೂ.272-232) ಶಾಸನಗಳು ದೊರಕಿವೆ. ಇವೇ ಕರ್ನಾಟಕದಲ್ಲಿ ದೊರಕುವ ಅತ್ಯಂತ ಪ್ರಾಚೀನ ಪ್ರಾಕೃತ ದಾಖಲೆಗಳು. ಆ ಕಾಲದಲ್ಲಿ ಈ ಶಾಸನಗಳನ್ನು ಓದಿ ಅರ್ಥೈಸುವ ಜನ ಕನ್ನಡ ನಾಡಿನಲ್ಲಿ ಕೆಲವರಾದರೂ ಇದ್ದಿರಬಹುದೆಂದು ತಿಳಿಯುವುದು ಸಂಭವನೀಯವೇ ಆಗಿದೆ. ಕ್ರಿ.ಪೂ.2 ರಿಂದ ಕ್ರಿ.ಶ.3ನೆಯ ಶತಮಾನ ದವರೆಗೂ ಆಳಿದ ಸಾತವಾಹನ ಅರಸರ ಕಾಲದಲ್ಲಿ ಅವರ ರಾಜ್ಯದಲ್ಲಿ ಪ್ರಾಕೃತಭಾಷೆ ವಿಶೇಷವಾಗಿ ಪ್ರಚಲಿತವಾಗಿತ್ತು. ಕರ್ನಾಟಕದ ಸನ್ನತಿ, ವಡಗಾಂವ್-ಮಾಧವಪುರ, ಮಳವಳ್ಳಿ, ಬನವಾಸಿ - ಈ ಸ್ಥಳಗಳಲ್ಲಿ ಆ ಕಾಲದ ಪ್ರಾಕೃತ ಶಾಸನಗಳಿವೆ. ಮುಂದೆ ಕರ್ನಾಟಕದಲ್ಲಿ ರಾಜ್ಯವಾಳಿದ ಕದಂಬವಂಶದ ಆದ್ಯ ಮಯೂರಶರ್ಮನ ಒಂದು ಶಾಸನ ಸಹ ಚಂದ್ರವಳ್ಳಿಯಲ್ಲಿ ದೊರಕಿದೆ. ಬಹುಶಃ ಪ್ರಾಕೃತ ಆ ಕಾಲದಲ್ಲಿ ಆಡಳಿತಭಾಷೆಯಾಗಿಯೂ ಶಿಷ್ಟಭಾಷೆಯಾಗಿಯೂ ಇಲ್ಲಿ ಪ್ರಚಲಿತ ವಾಗಿದ್ದಿರಬಹುದು.

ಕನ್ನಡನಾಡಿನಲ್ಲಿ ಜೈನಧರ್ಮ ಉನ್ನತಸ್ಥಿತಿಯಲ್ಲಿದ್ದಾಗ ಪ್ರಾಕೃತ ಸಾಹಿತ್ಯಕ್ಕೆ ಒಳ್ಳೆಯ ಪೋಷಣೆ ದೊರೆಯಿತು. ಅಖಿಲಭಾರತ ಪ್ರಾಮುಖ್ಯದ ಪ್ರಾಕೃತಗ್ರಂಥಗಳ ರಚನೆ ನಡೆಯಿತು. ಪ್ರಾಕೃತ ಪಕ್ಷಪಾತಿಗಳಾಗಿದ್ದ ಸಾತವಾಹನರ ಕಾಲದಲ್ಲಿಯೇ ಗುಣಾಢ್ಯ (1ನೆಯ ಶತಮಾನ) ಬೃಹತ್ಕಥೆಯನ್ನು ಪೈಶಾಚೀಪ್ರಾಕೃತದಲ್ಲಿಯೂ ಹಾಲ (1ನೆಯ ಶತಮಾನ) ಗಾಥಾಸಪ್ತಶತಿಯನ್ನು ಮಹಾರಾಷ್ಟ್ರೀ ಪ್ರಾಕೃತದಲ್ಲಿಯೂ ರಚಿಸಿದರೆಂದು ತಿಳಿಯುವುದು. ಪ್ರಾಭೃತತ್ರಯಾದಿ ಗ್ರಂಥಗಳನ್ನು ರಚಿಸಿದ ಕುಂದಕುಂದಾ ಚಾರ್ಯ, ಭಗವತಿ ಆರಾಧನದ ಶಿವಕೋಟ್ಯಾಚಾರ್ಯ (ಶಿವಾರ್ಯ), ಮೂಲಾಚಾರವೆಂಬ ಶೌರಸೇನೀ ಪ್ರಾಕೃತ ಗ್ರಂಥದ ಕರ್ತೃ ವಟ್ಟಕೇರ, ಕರಕುಂಡಚರಿ ಎಂಬ ಅಪಭ್ರಂಶ ಗ್ರಂಥದ ಕರ್ತೃ ಕನಕಾಮರಮುನಿ - ಈ ಮೊದಲಾದವರು ಪ್ರಾಚೀನ ಕರ್ನಾಟಕದಲ್ಲಿದ್ದು ಕೃತಿರಚನೆ ಮಾಡಿದ ಪ್ರಾಕೃತ ಕವಿಗಳೆಂಬುದಾಗಿ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಕುಂದಕುಂದಾಚಾರ್ಯ, ವಟ್ಟಕೇರ, ಶಿವಾರ್ಯ ಮೊದಲಾದ ಕೆಲವರು ಪ್ರತ್ಯಕ್ಷವಾಗಿ ಕನ್ನಡನಾಡಿಗೆ ಸೇರಿದ್ದವರೆಂಬುದು ವಿವಾದಾಸ್ಪದವಾಗಿದ್ದರೂ ಅವರ ಕೃತಿಗಳು ಕನ್ನಡನಾಡಿನ ಜೈನಸಮುದಾಯಕ್ಕೆ ಪೂಜ್ಯವೂ ಪ್ರಿಯವೂ ಆಗಿದ್ದವೆಂಬುದರಲ್ಲಿ ಸಂದೇಹವಿಲ್ಲ.

ಸರ್ವನಂದಿಯ ಲೋಕ ವಿಭಾಗ ಮತ್ತು ಯತಿವೃಷಭನ ತಿಲೋಯಪಣ್ಣತ್ತಿ ಬಲುಮಟ್ಟಿಗೆ ಕನ್ನಡನಾಡಿನಲ್ಲಿಯೇ ರಚಿತವಾದವು. ಕುಂದುಕುಂದ, ಸಮಂತಭದ್ರ ಮತ್ತು ಬಪ್ಪದೇವರ ಸಂಸ್ಕೃತ ಪ್ರಾಕೃತ ವ್ಯಾಖ್ಯಾನ ಗ್ರಂಥಗಳೂ ಇಲ್ಲಿಯೇ ರಚನೆಗೊಂಡವು. ಕುಂದಕುಂದಾಚಾರ್ಯರ ಪ್ರಸಿದ್ಧ ಪ್ರಾಕೃತ ಗ್ರಂಥಗಳಿಗೆ ಸಂಸ್ಕೃತದಲ್ಲಿ ವ್ಯಾಖ್ಯೆಗಳನ್ನು ರಚಿಸಿರುವ ಬಾಲಚಂದ್ರ ಮತ್ತು ಪದ್ಮಪ್ರಭರು ಕರ್ನಾಟಕದವರು. ಯಾಪನೀಯಸಂಘಕ್ಕೆ ಸೇರಿದ್ದಂತೆ ತಿಳಿಯುವ ಅಪಭ್ರಂಶ ಕವಿ ಸ್ವಯಂಭುವಿಗೆ ಕರ್ನಾಟಕದೊಡನೆ ಸಂಬಂಧವಿತ್ತೆಂದು ತೋರುವುದು. ಆತನ ಬಂಧುಗಳ ಹೆಸರು ಇದನ್ನು ಎತ್ತಿ ತೋರಿಸುವಂತಿದೆ. ಸಿರಿಭೂವಲಯದ ಕರ್ತೃ ಕುಮುದೇಂದು (9ನೆಯ ಶತಮಾನ) ಕನ್ನಡನಾಡಿನ ಯಲವಳ್ಳಿಯೆಂಬ ಗ್ರಾಮದವನೆಂದು ಹೇಳಲಾಗಿದೆ. ಪ್ರಾಕೃತ ವೈಯಾಕರಣನಾದ ತ್ರಿವಿಕ್ರಮ (ಸು.1236) ಕೂಡ ಕನ್ನಡ ನಾಡಿನವನು. ಈತನ ವ್ಯಾಕರಣವಾದರೋ ದಾಕ್ಷಿಣಾತ್ಯ ಸಂಪ್ರದಾಯದ ಪ್ರಾಕೃತ ವ್ಯಾಕರಣಗಳಲ್ಲಿ ಆದ್ಯಕೃತಿ, ವರರುಚಿಯ ಪ್ರಾಕೃತ ಪ್ರಕಾಶದೊಡನೆ ಇಡೀ ದಕ್ಷಿಣದಲ್ಲಿ ಪ್ರಮಾಣಭೂತವಾದ ವ್ಯಾಕರಣವಾಗಿದೆ. ಅಪಭ್ರಂಶ ಭಾಷಾಕವಿ ಪುಷ್ಪದಂತ (ಸು.10ನೆಯ ಶತಮಾನ) ಮಾನ್ಯಖೇಟದಲ್ಲಿ ನಿಂತು ತನ್ನ ಮಹಾಪುರಾಣವನ್ನು ಬರೆದ. ಇದರಲ್ಲಿ ಹಲವು ಕನ್ನಡ ಶಬ್ದಗಳು ಬಳಕೆಯಾಗಿವೆಯೆಂದು ತಿಳಿಯುತ್ತದೆ.

ದಿಗಂಬರ ಜೈನಸಂಪ್ರದಾಯದ ಆಚಾರ್ಯರಾಗಿ ಪ್ರಸಿದ್ಧರಾಗಿರುವ ರಾಷ್ಟ್ರಕೂಟ ಚಕ್ರವರ್ತಿಗಳ ಆಳಿಕೆಯ ಕಾಲದಲ್ಲಿದ್ದ ವೀರಸೇನ, ಜಿನಸೇನ ಮತ್ತು ಗುಣಭದ್ರರೆಂಬ ಆಚಾರ್ಯರು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಕವಿಗಳೂ ವಿದ್ವಾಂಸರೂ ಆಗಿದ್ದವರು. ಸೇನಗಣದ ವೀರಸೇನ, ಜಿನಸೇನಾಚಾರ್ಯರು (9ನೆಯ ಶತಮಾನ) ದಿಗಂಬರರ ಮಹತ್ತ್ವಪೂರ್ಣ ಗ್ರಂಥವಾದ ಷಟ್ಖಂಡಾಗಮಕ್ಕೆ ಧವಲಾ (1816), ಜಯಧವಲಾ (837) ಮತ್ತು ಮಹಾಧವಲಾ ಎಂಬ ಪ್ರಖ್ಯಾತವಾದ ಟೀಕೆಗಳನ್ನು ಬರೆದಿದ್ದಾರೆ. ಇದರ ಸ್ವಲ್ಪಭಾಗ ಸಂಸ್ಕೃತದಲ್ಲಿಯೂ ಸ್ವಲ್ಪಭಾಗ ಪ್ರಾಕೃತದಲ್ಲಿಯೂ ರಚಿತವಾಗಿದೆ. ಈ ಟೀಕೆಗಳ ಅಭ್ಯಾಸದ ಮೂಲಕ ಕರ್ನಾಟಕ ದೇಶದ ಜೈನಯತಿಗಳಲ್ಲಿ ಪ್ರಾಕೃತ ಭಾಷೆ ರೂಢಿಯಲ್ಲಿತ್ತೆನ್ನಬಹುದು. ಎಷ್ಟೋ ಹಿಂದಿನಿಂದ ಜೈನಸೂತ್ರ ಗ್ರಂಥಗಳ ರಕ್ಷಣೆ ಮತ್ತು ಸಿದ್ಧಾಂತಗ್ರಂಥಗಳಿಗೆ ವ್ಯಾಖ್ಯಾನ ರಚನೆ ಕನ್ನಡನಾಡಿನಲ್ಲಿ ನಡೆದುಕೊಂಡು ಬಂದಿತ್ತೆನ್ನುವುದಕ್ಕೆ ಈ ಮಹಾಗ್ರಂಥಗಳೇ ಸಾಕ್ಷಿ. 12ನೆಯ ಶತಕದಷ್ಟು ಹಿಂದಿನದಾಗಿ ಹಳಗನ್ನಡ ಲಿಪಿಯಲ್ಲಿ ತಾಳೆಯೋಲೆಯ ಮೇಲೆ ಮಸಿಯಿಂದ ಬರೆಯಲ್ಪಟ್ಟಿರುವ ಈ ವ್ಯಾಖ್ಯಾನ ಗ್ರಂಥಗಳ ಹಸ್ತಪ್ರತಿಗಳು ಅನ್ಯತ್ರ ಅನುಪಲಬ್ಧವಾಗಿದ್ದಾಗ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಸಿದ್ಧಾಂತಬಸದಿಯಲ್ಲಿ ಮಾತ್ರವೇ ಸುರಕ್ಷಿತವಾಗಿ ನಿಕ್ಷಿಪ್ತವಾಗಿದ್ದುವು. ದಕ್ಷಿಣದಲ್ಲಿಯ ಜೈನಗ್ರಂಥಕಾರರು ಪ್ರಾಕೃತ ಭಾಷೆಯನ್ನು ಮುಖ್ಯವಾಗಿ ಧಾರ್ಮಿಕ ಗ್ರಂಥಗಳಲ್ಲಿಯೇ ಬಳಸಿದ್ದಾರೆ. ಭಾರತೀಯ ಜೈನ ಸಾಹಿತ್ಯಕ್ಕೆ ಈ ಕಾಲದಲ್ಲಿ ನಡೆದ ಕರ್ನಾಟಕದ ಸೇವೆ ಅಮೂಲ್ಯವಾದುದೆಂದು ಹೇಳಬಹುದಾಗಿದೆ.

ಒಂದನೆಯ ಚಾವುಂಡರಾಯನ ಗುರು ದೇಶಿಯಗಣದ ನೇಮಿಚಂದ್ರಯತಿ (10ನೆಯ ಶತಮಾನ) ಗೊಮ್ಮಟಸಾರ, ತ್ರಿಲೋಕಸಾರ ಮುಂತಾದ ಕೆಲವು ಪ್ರಾಕೃತ ಗ್ರಂಥಗಳನ್ನು ರಚಿಸಿ ಪ್ರಖ್ಯಾತನಾಗಿದ್ದಾನೆ. ಪ್ರಾಕೃತ ಸಾಹಿತ್ಯದಲ್ಲಿ ಈತನ ಗ್ರಂಥಗಳಿಗೆ ಮಹತ್ತ್ವದ ಸ್ಥಾನವಿದೆ. ಗೊಮ್ಮಟಸಾರದಲ್ಲಿಯ ಕರ್ಮಕಾಂಡದ ಕೆಲವು ಗಾದೆಗಳು ಚಾವುಂಡರಾಯನ ಚರಿತ್ರೆಯ ವಿಚಾರವಾಗಿ ಕೆಲವು ಉಪಯುಕ್ತ ಸಂಗತಿಗಳನ್ನು ತಿಳಿಸುತ್ತವೆ. ಚಾವುಂಡರಾಯನ ಪ್ರತಿಬೋಧನಾರ್ಥವಾಗಿ ರಚಿತವಾದಂತೆ ತಿಳಿಯುವ ಗೊಮ್ಮಟಸಾರಕ್ಕೆ ಚಾವುಂಡರಾಯ ಮತ್ತು ಕೇಶವವರ್ಣಿಗಳು ಕನ್ನಡದಲ್ಲಿ ಟೀಕೆಗಳನ್ನು ಬರೆದಿದ್ದಾರೆ. ಉಪಲಬ್ಧ ಟೀಕೆಗಳಲ್ಲಿ ಕೇಶವವರ್ಣಿಯದೇ ಪ್ರಾಚೀನವಾದುದು. ಈ ಕನ್ನಡ ಟೀಕೆಯನ್ನು ಸಾಳುವ ಮಲ್ಲಿರಾಯನ (16ನೆಯ ಶತಮಾನ) ಸಮಕಾಲೀನನಾದ ನೇಮಿಚಂದ್ರನೆಂಬೊಬ್ಬ ಕವಿ ಸಂಸ್ಕೃತಕ್ಕೆ ಪರಿವರ್ತಿಸಿದ್ದಾನೆ. ಚಾವುಂಡರಾಯನ ಗುರು ನೇಮಿಚಂದ್ರಯತಿಗೂ ದೇವಸೇನನೆಂಬೊಬ್ಬ ಪ್ರಾಕೃತ ಕವಿಗೂ ಮಾತೃಭಾಷೆ ಕನ್ನಡವಾಗಿದ್ದಿತೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಕನ್ನಡನಾಡಿನವರಾಗಿ ಕನ್ನಡದಲ್ಲಿ ಕೃತಿರಚನೆ ಮಾಡಿದವರಾಗಿ ತಿಳಿದುಬಂದಿರುವ ತುಂಬಲೂರಾಚಾರ್ಯ ಮತ್ತು ಶ್ಯಾಮಕುಂದಾಚಾರ್ಯ (ಸು.650) ಇವರು ಪ್ರಾಕೃತದಲ್ಲಿ ಸಿದ್ಧಾಂತ ಗ್ರಂಥಗಳನ್ನು ಬರೆದಿದ್ದರೆಂದು ಕೂಡ ತಿಳಿಯುತ್ತದೆ. ಉಭಯಭಾಷಾಕವಿ ಅಸಗನನ್ನು (ಸು.853) ಧವಲನೆಂಬ ಅಪಭ್ರಂಶ ಕವಿಯೊಬ್ಬ ತನ್ನ ಹರಿವಂಶಪುರಾಣದಲ್ಲಿ ಸ್ತುತಿಸಿರುವುದರಿಂದ ಅಸಗ ಪ್ರಾಕೃತಕವಿಗಳಿಂದಲೂ ಗಣ್ಯನಾಗಿದ್ದನೆಂಬ ವಿಷಯ ವಿಶದವಾಗುತ್ತದೆ. ಆತನ ಕೆಲವು ಕೃತಿಗಳು ಪ್ರಾಕೃತಕವಿಗಳಿಗೆ ಆಕರಗಳಾಗಿಯೋ ಮಾದರಿಗಳಾಗಿಯೋ ಇದ್ದಿರಬಹುದು.

ಅಂತೂ 10ನೆಯ ಶತಮಾನದವರೆಗಾದರೂ ಕನ್ನಡನಾಡು ಪ್ರಾಕೃತ ಸಾಹಿತ್ಯಕ್ಕೆ ಮಹತ್ತ್ವಪೂರ್ಣವಾದ ಕಾಣಿಕೆಯನ್ನು ಸಲ್ಲಿಸಿದೆಯೆಂಬುದು ಮೇಲಿನ ಕೆಲವಂಶಗಳಿಂದ ಸ್ಪಷ್ಟವಾಗುತ್ತದೆ.

ಇಂಥ ಹಿನ್ನೆಲೆಯಲ್ಲಿ ಕನ್ನಡನಾಡಿನಲ್ಲಿ ಪ್ರಾಕೃತಭಾಷೆ ಸಾಹಿತ್ಯಗಳಿಗೆ ದೊರೆತ ಸ್ಥಾನಮಾನಗಳಿಂದ ಕನ್ನಡಿಗರಾದ ಪ್ರಾಕೃತ ಕವಿಗಳ ಪರಿಶ್ರಮದಿಂದ ಪ್ರಾಕೃತ ಭಾಷೆಯ ಮರ್ಯಾದೆಗನುಸಾರವಾಗಿ ಕನ್ನಡ ಶಬ್ದಗಳು ಪ್ರಾಕೃತ ಭಾಷಾ ಸಾಹಿತ್ಯಗಳೊಳಗೆ ಕೆಲಮಟ್ಟಿಗೆ ಸೇರುವಂತಾಯಿತು. ಕೋಶಕಾರರು ಅವನ್ನು ದೇಶೀ ಶಬ್ದಗಳೆಂದು ನಿರ್ದೇಶಿಸಿದ್ದಾರೆ. ಹಾಲನ ಗಾಥಾಸಪ್ತಶತಿಯಲ್ಲಿ ಕಂಡುಬರುವ ಅತ್ತಾ, ತುಪ್ಪ, ಪೊಟ್ಟ, ಫಲಹಿ, ತೀರಣ ಎಂಬ ಪ್ರಾಕೃತ ಶಬ್ದಗಳು, ಅತ್ತೆ, ತುಪ್ಪ, ಪೊಟ್ಟೆ, ಪತ್ತಿ, ತೀರ ಎಂಬ ಕನ್ನಡ ಶಬ್ದಗಳ ಪ್ರತಿರೂಪಗಳೆಂದು ವಿದ್ವಾಂಸರು ಕಂಡುಹಿಡಿದಿದ್ದಾರೆ. ಹೇಮಚಂದ್ರನ ದೇಶೀನಾಮಮಾಲೆ ಮೊದಲಾದ ಕೋಶಗಳಲ್ಲಿ ಕಂಡುಬರುವ ಕೆಲವು ಕನ್ನಡ ಶಬ್ದಗಳನ್ನೂ ಹೀಗೆಯೇ ಗುರುತಿಸಲಾಗಿದೆ. ಒಂದು ಪಟ್ಟಿಯ ಪ್ರಕಾರ ಪ್ರಾಕೃತ ದೇಶೀಕೋಶಗಳಲ್ಲಿಯ ಅಕ್ಕಾ, ಉಡೂ, ಉಮ್ಮಲ್ಲೋ, ಉಲ್ಲೀ, ಊಲೋ, ಎತ್ತೊಪ್ಪಂ-ಇಲ್ತೊಪ್ಪಂ, ಒಕ್ಕಿಅ, ಒಪ್ಪಾ, ಕಲೀಂ, ಕುಂಡಿಓ-ಕೊಂಡಿಓ, ಕುರುಡ, ಕೋಲೋ-ಕುಲ್ಲ, ಖಡ್ಡಂ, ಚಿಕ್ಕ, ಣೇಸರೋ ತುಪ್ಪೋ, ಪಾವೋ, ಪಾಲೊ, ಪುಲ್ಲೀ, ಪೊಚ್ಚಂ, ಮರುಲೋ, ಸೂಲಾ - ಈ ಶಬ್ದಗಳು ಕ್ರಮವಾಗಿ ಪ್ರಾಯಃ ಅಕ್ಕ, ಉಡು, ಉಮ್ಮಳ, ಒಲೆ, ಉರುಳ್, ಎಂತಪ್ಪ ಇಂತಪ್ಪ, ಒಕ್ಕು, ಒಪ್ಪ, ಕಲಿ, ಗಾವುಂಡ - ಗೌಡ, ಕುರುಡ, ಕೊರಲ್, ಗಡ್ಡ, ಚಿಕ್ಕ, ನೇಸರ್, ತುಪ್ಪ, ಪಾವು, ಪಾವ್, ಪುಲಿ, ಪೊಚ್ಚ, ಮರುಳ್, ಸೂಳೆ -ಈ ಕನ್ನಡ ಶಬ್ದಗಳ ಪ್ರಾಕೃತ ರೂಪಗಳೆಂದು ತಿಳಿಯುತ್ತದೆ. ಇನ್ನೊಂದು ಪಟ್ಟಿಯ ಪ್ರಕಾರ (ಹೇಮಚಂದ್ರನ ದೇಶೀನಾಮಮಾಲೆ) ಕಂಡುಬರುವ ಆಲಂಬಂ (ನಾಯಿಕೊಡೆ), ಇಗ್ಗೋ, ಉಂಡಲಂ, (ಗಂಭೀರಮ್, ಉಬ್ಬುಕ್ಕಂ, ಸಂಕಟಮ್), ಕಾಹಲ್ಲೀ, ಕುಣಾ (ವೃತ್ತಿ ವಿವರಮ್ ಗುಳಿ), ತುಂಬಿಲ್ಲೀ ಈ ಶಬ್ದಗಳು ಕ್ರಮವಾಗಿ ಪ್ರಾಯಃ ಅಣಂಬೆ, ಎಗ್ಗ, ಹೊಂಡ, ಉಬ್ಬಸ, ಕಾವಲಿ, ಕುಣಿ ಕುಟಿ, ತುಂಬಿಯ ಇಲ್ ಈ ಕನ್ನಡ ಶಬ್ದಗಳ ಪ್ರಾಕೃತ ರೂಪಗಳೆಂದು ಭಾವಿಸಲಾಗಿದೆ. ಹೀಗೆಯೇ ಓಲಗ, ಕಾವರ, ಪೋಟ (ಪೊಟ್ಟೆ) ಶಬ್ದಗಳು ಪ್ರಾಕೃತ ದೇಶೀಕೋಶಗಳಲ್ಲಿ ಸೇರಿಕೊಂಡಿರುವ ಶಬ್ದಗಳು ಕೆಲವೊಮ್ಮೆ ನೇರವಾಗಿ ಕನ್ನಡದಿಂದ ಹೋಗಿದ್ದಿರಬಹುದು. ಇಲ್ಲವೆ ಯಾವ ದ್ರಾವಿಡ ಭಾಷಾಮೂಲದಿಂದಾದರೂ ಹೋಗಿರಬಹುದು. ಎಷ್ಟೋ ಶಬ್ದಗಳು ಬೇರೆ ಬೇರೆ ದ್ರಾವಿಡ ಭಾಷಾ ಮೂಲಗಳಿಂದ ಪ್ರಾಕೃತಕ್ಕೆ ಹೋಗಿರಬಹುದಾದರೂ ಕನ್ನಡದಿಂದಲೇ ನೇರವಾಗಿ ಹೋಗಿರುವ ಸಾಧ್ಯತೆಯಂತೂ ಇದ್ದೇ ಇದೆ.

(ಟಿ.ವಿ.ವಿ.)

ಕನ್ನಡದ ಬಗ್ಗೆ ಹೇಳುವುದಾದರೆ ದಕ್ಷಿಣಕ್ಕೆ ಬಂದ ಪ್ರಾಕೃತ ಮಾತನಾಡುವವರಾಗಿದ್ದ ಜೈನಮುನಿಗಳ ಸಂಪರ್ಕ ಕನ್ನಡಿಗರೊಡನೆ ಆದ ಕೂಡಲೇ ಭಾಷಿಕ ಕೊಡುಕೊಳ್ಳುವ ವ್ಯವಹಾರ ನಡೆದಿರಬೇಕು. ಹೊಸ ನಾಡಿಗೆ ಬಂದ ಜೈನಯತಿಗಳಿಗೆ ತಮ್ಮ ಧರ್ಮವನ್ನು ಕರ್ನಾಟಕದ ಜನತೆಗೆ ಬೋಧಿಸುವ ಪ್ರಸಂಗ ಬಂದಾಗ ಅವರು ಕನ್ನಡವನ್ನು ಕಲಿತು, ಅದರಲ್ಲಿ ಪ್ರಾಕೃತ ಶಬ್ದಗಳನ್ನು ಬೆರೆಸಿ ಮಾತನಾಡಲೂ ಆರಂಭಿಸಿರಬೇಕು. ಕಾಲಾಂತರದಲ್ಲಿ ಇವರಲ್ಲಿ ಕೆಲವರು ಕನ್ನಡಭಾಷೆಯ ಮೇಲೆ ಪ್ರಭುತ್ವವನ್ನು ಪಡೆದು, ಕನ್ನಡದಲ್ಲಿ ಧಾರ್ಮಿಕ ಗ್ರಂಥಗಳನ್ನು ಬರೆಯುವ ಪ್ರಯತ್ನ ಮಾಡಿರಬಹುದು. ಕನ್ನಡದ ಆರಂಭದ ಕಾವ್ಯಗಳು ಈ ಮಾತಿಗೆ ನಿದರ್ಶನ. ಕನ್ನಡ ಭಾಷೆಯಲ್ಲಿ ಪ್ರಚಲಿತವಾದ ಮತ್ತು ಹೊಸದೆಂದೆನಿಸುವ ಆಂಡಯ್ಯನ ಭಾಷಾ ಪ್ರವೃತ್ತಿಯ ಮೂಲಕ ಪ್ರಾಕೃತ ಭಾಷೆಗಳ ಒಲವಿನಿಂದಾದುದೆನ್ನಬಹುದು. ಕನ್ನಡ ವ್ಯಾಕರಣಕಾರರ ಮೇಲೆ ಪ್ರಾಕೃತ ವ್ಯಾಕರಣಗಳ ಪ್ರಭಾವ ಆಗಿತ್ತೆಂಬುದು ಕೇಶಿರಾಜ, ಭಟ್ಟಾಕಳಂಕರ ಕೃತಿಗಳಿಂದ ಸ್ಪಷ್ಟವಾಗುತ್ತದೆ. ಪ್ರಾಕೃತ ವ್ಯಾಕರಣವನ್ನು ಓದಿದವರಿಗೆ, ಕನ್ನಡ ವ್ಯಾಕರಣಗಳ ತದ್ಭವ ಪ್ರಕರಣಗಳನ್ನೂ ಕೃತ್ಪ್ರತ್ಯಯ ಮತ್ತು ತದ್ಧಿತಪ್ರತ್ಯಯಗಳನ್ನು ಓದುವಾಗ ಪ್ರಾಕೃತ ಭಾಷೆ ಕನ್ನಡಕ್ಕೆ ಎಷ್ಟು ಕಾಣಿಕೆಯಿತ್ತಿದೆಯೆಂಬ ಸಂಗತಿ ತಿಳಿಯುತ್ತದೆ. ವಡ್ಡಾರಾಧನೆ ಮತ್ತು ಕನ್ನಡದ ಇತರ ಹಲವಾರು ಜೈನಗ್ರಂಥಗಳಿಗೆ ಪ್ರಾಕೃತ ಕೃತಿಗಳು ಆಕರವಾಗಿರಬಹುದು. ಪ್ರಾಕೃತ ಛಂದಸ್ಸಿನ ಕೆಲವು ಪ್ರಕಾರಗಳ ಉಪಯೋಗ ಕನ್ನಡದಲ್ಲಿ ತೋರುತ್ತದೆ. ಕನ್ನಡದ ಮಾತ್ರಾವೃತ್ತಗಳು ಸಂಸ್ಕೃತ ಪ್ರಾಕೃತದಿಂದ ಹುಟ್ಟಿದವುಗಳು. ಸಂಸ್ಕೃತದ ಆರ್ಯಾಗೀತೆ, ಪ್ರಾಕೃತದಲ್ಲಿ ಸ್ಕಂದವಾಗಿ ಕನ್ನಡದಲ್ಲಿ ಕಂದವಾಯಿತು. ಪ್ರಾಕೃತದ ರಘಟಾ ಕನ್ನಡದ ರಗಳೆಯಾಯಿತು.

ಹಿಂದೆ ಪ್ರಾಕೃತ ಆಡಳಿತ ಭಾಷೆಯಾಗಿ ಪ್ರಚಲಿತವಾಗಿದ್ದ ಕಾಲದಿಂದಲೂ ಪ್ರಾಕೃತ ಶಬ್ದಗಳು ಕನ್ನಡಕ್ಕೆ ಸೇರ್ಪಡೆಯಾಗಿರಬೇಕು. ಕನ್ನಡದ ಪ್ರಾಚೀನ ಕಾವ್ಯಗಳನ್ನು ರಚಿಸಿದ ಪ್ರಾಕೃತ ಬಲ್ಲವರಾಗಿದ್ದ ಜೈನಕವಿಗಳ ಪರಿಶ್ರಮದಿಂದ ಹಾಗೂ ಆ ಕಾಲದಲ್ಲಿದ್ದ ಜೈನರ ಪ್ರಭಾವದಿಂದ ಪ್ರಾಕೃತ ಶಬ್ದಗಳ ಬಳಕೆ ಕನ್ನಡದಲ್ಲಿ ವಿಶೇಷವಾಗಿ ನಡೆದಿರಬೇಕು. ಹಲವು ಶಬ್ದಗಳು ಪ್ರಾಕೃತದಲ್ಲಿದ್ದಂತೆಯೇ ಕನ್ನಡಕ್ಕೆ ಬಂದಿವೆ. ಈ ಶಬ್ದಗಳು ಪ್ರಾಕೃತದಿಂದ ನೇರವಾಗಿ ಕನ್ನಡಕ್ಕೆ ಸೇರಿದುವೆಂಬ

ಮಾತು ಸ್ಪಷ್ಟವಾಗುತ್ತದೆ. ಉದಾ: ಅಜ್ಜ, ಅಯ್ಯ, ಸಮಣ, ಸರಿಸ, ಇಂಗಾಲ, ಕಸಾಯ, ನೇಹ, ರನ್ನ, ಜನ್ನ ಇತ್ಯಾದಿ. ಕನ್ನಡದಲ್ಲಿರುವ ತದ್ಭವ ಪದಗಳು ಸಂಸ್ಕೃತದಿಂದ ಬಂದವೆಂಬ ಕಲ್ಪನೆ ಇದೆಯಾದರೂ ಅವುಗಳಲ್ಲಿ ಸಾಕಷ್ಟು ಮಟ್ಟಿನ ಪದಗಳು ಪ್ರಾಕೃತ ಮೂಲದಿಂದಲೇ ರೂಪಾಂತರ ಹೊಂದಿ ಬಂದಿರಬಹುದೆಂದು ಅನೇಕ ವಿದ್ವಾಂಸರ ಊಹೆ. ಇದಲ್ಲದೆ ಆರಂಭ, ಪರಿಸಹ, ಪರಿಗ್ರಹ, ನಿಕ್ಖಮಣ, ಭಿಕ್ಖು, ಆಚಾರ್ಯ, ಚಕ್ರವರ್ತಿ, ತೀರ್ಥಂಕರ, ತಿತ್ಥ ಇತ್ಯಾದಿ ಅನೇಕ ಜೈನ ಪಾರಿಭಾಷಿಕ ಶಬ್ದಗಳನ್ನೂ ಕನ್ನಡದ ಜೈನಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆ.

ಪ್ರಾಕೃತ ವ್ಯಾಕರಣದೊಳಗಿನ ಧ್ವನಿಪರಿವರ್ತನೆಗೆ ಸಂಬಂಧಿಸಿದ ಕೆಲವು ನಿಯಮಗಳು ಕನ್ನಡ ವ್ಯಾಕರಣಗಳಲ್ಲಿ ಅಚ್ಚಳಿಯದೆ ಬಂದಿವೆ. ಈ ನಿಯಮಗಳು ಸ್ವರ, ವ್ಯಂಜನ, ಸಂಯುಕ್ತವ್ಯಂಜನ ಮೊದಲಾದುವುಗಳಿಗೆ ಅನ್ವಯಿಸುತ್ತವೆ. ಸಂಸ್ಕೃತದ ಋ ಸ್ವರ ಪ್ರಾಕೃತದಲ್ಲಿ ಅ,ಇ,ಉ ಮತ್ತು ರಿ ರೇಫಕ್ಕೆ ಬದಲಾಗುವಂತೆ ಕನ್ನಡದಲ್ಲಿಯೂ ಬದಲಾಗುವುದು. ಉದಾ: ತೃಣ > ತಿಣ, ಋಣ > ರಿಣ, ವೃಷಭ > ಬಸವ ಇತ್ಯಾದಿ. ಶಬ್ದದ ಆದಿ ಮತ್ತು ಅಂತ್ಯದ ಅ ಕಾರ ಅನುಕ್ರಮವಾಗಿ ಇ ಮತ್ತು ಎ ಅಥವಾ ಉ ಕಾರವಾಗುತ್ತದೆ. ಉದಾ: ಜೀರಕ > ಜೀರಿಗೆ, ಅಂಗಾರ > ಇಂಗಳ, ದಂಡ > ದಂಡು, ಐ ಮತ್ತು ಔ ಸಂಧ್ಯಕ್ಷರಗಳು ಎ ಮತ್ತು ಒ ಆಗುತ್ತವೆ. ಒಮ್ಮೊಮ್ಮೆ ಅ ಇ ಮತ್ತು ಅ ಉ ಆಗುವುದುಂಟು. ಉದಾ: ಸೈಂಧವ > ಸೆಂಧವ, ವೈದ್ಯ > ಬೆಜ್ಜ, ಕೌಂಗು > ಕವುಂಗು ಅಥವಾ ಕೊಂಗು, ಶ ಮತ್ತು ಷ ಗಳು ಸಕಾರವಾಗುತ್ತವೆ. ಶಶಿ > ಸಸಿ, ಶಂಕರ > ಸಂಕರ, ವಿಷಯ > ವಿಸಯ. ಆದಿ ಯಕಾರ ಜಕಾರವಾಗುತ್ತದೆ. ಉದಾ: ಯಮ > ಜಮ, ಯಜ್ಞ > ಜನ್ನ, ಯತ್ನ > ಜತನ ಇತ್ಯಾದಿ ಅನೇಕ ಉದಾಹರಣೆಗಳನ್ನು ಕೊಡಬಹುದು. ಸಮರೂಪಕರಣದ ಮುಖಾಂತರ ವಿಜಾತಿ ವ್ಯಂಜನಗಳಿಂದ ಉಂಟಾದ ಸಂಯುಕ್ತವ್ಯಂಜನಗಳು ಸಜಾತಿಯ ಸಂಯುಕ್ತ ವ್ಯಂಜನಗಳಾಗುವುದನ್ನು ಕನ್ನಡದಲ್ಲಿಯೂ ಕಾಣಬಹುದು. ಉದಾ: ಕಳ್ತೆ > ಕತ್ತೆ, ತರ್ಪು > ತಪ್ಪು, ರತ್ನ > ರನ್ನ ಇತ್ಯಾದಿ. ಕನ್ನಡದಲ್ಲಿ ಕಂಡುಬರುವ ಅನೇಕ ಪ್ರತ್ಯಯಗಳಲ್ಲಿ ಬಹಳಷ್ಟು ಪ್ರಾಕೃತದ ಪ್ರತ್ಯಯಗಳಾಗಿವೆ. ಉದಾ: - ತ, - ಗ, - ಇತ, - ಇಗ, - ತ್ತಾರ, - ತಾರ ಇತ್ಯಾದಿ. ಇವಲ್ಲದೆ ವಿಭಕ್ತಿಪ್ರತ್ಯಯಗಳಲ್ಲಿ - ಉ, - ಕ್ಕೆ, - ಗೆ, - ಎ ಇವು ಪ್ರಾಕೃತದಿಂದ ಕನ್ನಡಕ್ಕೆ ಬಂದಂತೆ ತೋರುತ್ತದೆ. (ಪಿ.ಬಿ.ಬಿ.)

**ಸಂಸ್ಕೃತ :** ಭಾರತದ ಪ್ರಾಚೀನ ಭಾಷೆಗಳಲ್ಲೊಂದಾದ ಸಂಸ್ಕೃತ ಕರ್ನಾಟಕದಲ್ಲಿ ಬಹು ಹಿಂದಿನಿಂದಲೂ ಪ್ರಚಾರದಲ್ಲಿದ್ದು ದೀರ್ಘವಾದ ಇತಿಹಾಸವನ್ನು ಹೊಂದಿದೆ. ಪ್ರತಿಷ್ಠಾನ ನಗರದಲ್ಲಿದ್ದ ಸಾತವಾಹನ ದೊರೆಗೆ ಸಂಬಂಧಿಸಿದ 'ಮೋದಕಂ ತಾಡಯ'ದ ಕಥೆ ಬಹುಶಃ ದಕ್ಷಿಣ ಭಾರತದಲ್ಲಿ ಸಂಸ್ಕೃತದ ಹರಡುವಿಕೆಯ ಪ್ರಾರಂಭವನ್ನು ಸೂಚಿಸುತ್ತದೆ. ಕರ್ನಾಟಕದ ಪ್ರಾಚೀನತಮ ಸಂಸ್ಕೃತ ಶಾಸನವೆಂದರೆ ಕುಬ್ಜ (ನೋಡಿ) ಬರೆದ ತಾಳಗುಂದ ಶಾಸನ (ಸು.450). ಇದರಲ್ಲಿರುವ ರಚನಾ ಪಾಂಡಿತ್ಯ ಆ ಕಾಲಕ್ಕಾಗಲೇ ಸಂಸ್ಕೃತ ಈ ನಾಡಿನಲ್ಲಿ ಚೆನ್ನಾಗಿ ಬೇರೂರಿರ ಬೇಕೆಂಬುದನ್ನು ತಿಳಿಸುವುದಲ್ಲದೆ, ಅದೇ ಕಾಲದ ಹಲ್ಮಿಡಿ ಶಾಸನದಿಂದ ಸಂಸ್ಕೃತ ಭಾಷೆ ಕನ್ನಡ ರಚನೆಗಳ ಮೇಲೂ ಪ್ರಭಾವ ಬೀರುವ ಸ್ಥಿತಿಯಲ್ಲಿದ್ದಿತೆಂಬುದನ್ನು ತೋರಿಸುತ್ತದೆ. ಇಲ್ಲಿಂದ ಮುಂದೆ ಸಂಸ್ಕೃತ ಶಿಷ್ಟಭಾಷೆಯಾಗಿ ಬೆಳೆದು ಉನ್ನತ ಸ್ಥಾನವನ್ನು ಗಳಿಸಿ ತತ್ಕಾಲದ ಉನ್ನತ ವರ್ಗಗಳಿಂದ ಪ್ರೋತ್ಸಾಹ ಗಳಿಸಿತು. ನೂರಾರು ಸಂಸ್ಕೃತ ಶಾಸನಗಳು ಕನ್ನಡದಲ್ಲಿ ರಚಿತವಾದವು. ಅನೇಕ ಕವಿಗಳು, ಶಾಸ್ತ್ರಕಾರರು ಈ ನಾಡಿನಲ್ಲಿ ಆಗಿಹೋದರು. ನೂರಾರು ಸಂಸ್ಕೃತ ಗ್ರಂಥಗಳ ರಚನೆಯಾಯಿತು. ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ ಗಣ್ಯವಾದುದು. ಹಾಗೆಯೇ ಸಂಸ್ಕೃತದ ಶ್ರುತಿ ಸ್ಮೃತಿ ಪುರಾಣ ಇತಿಹಾಸಗಳು ಕರ್ನಾಟಕದಲ್ಲಿ ಹರಡಿ ಅವು ಹಾಗೂ ಇತರ ಸಂಸ್ಕೃತ ಕೃತಿಗಳು ಕನ್ನಡ ದೇಶದ ಸಂಸ್ಕೃತಿ ಹಾಗೂ ನುಡಿಯ ಮೇಲೆ ಅಗಾಧ ಪ್ರಭಾವವನ್ನು ಬೀರುತ್ತ ಬಂದಿವೆ.

ಕರ್ನಾಟಕದ ಭಾಗಗಳನ್ನು ಆಳುತ್ತಿದ್ದ ಸಾತವಾಹನರ ಆಸ್ಥಾನಭಾಷೆ ಪ್ರಾಕೃತವಾಗಿದ್ದರೂ ಅವರು ಸಂಸ್ಕೃತ ಭಾಷೆಯನ್ನು ಕೂಡ ಪ್ರೋತ್ಸಾಹಿಸುತ್ತಿದ್ದಿರಬಹುದು. ಇವರ ಕಾಲದಲ್ಲೇ ರಾಮಾಯಣ ಮಹಾಭಾರತಗಳಷ್ಟು ಕವಿಜನಪ್ರಿಯವಾದ ಬೃಹತ್ಕಥೆ ಪೈಶಾಚೀ ಪ್ರಾಕೃತದಲ್ಲಿ ಗುಣಾಢ್ಯನೆಂಬಾತನಿಂದ ರಚಿತವಾದಂತೆ, ಮಹಾರಾಷ್ಟ್ರೀ ಪ್ರಾಕೃತದಲ್ಲಿ ಏಳುನೂರು ಮುಕ್ತಕಗಳ ಸಂಗ್ರಹವಾದ ಸತ್ತಸ ರಾಜನಾದ ಹಾಲನಿಂದಲೇ ಸಂಗ್ರಹಿತವಾದಂತೆ, ಅವನ ಆಸ್ಥಾನಪಂಡಿತನಾದ ಶರ್ವವರ್ಮನಿಂದ ಕಾತಂತ್ರವೆಂಬ ನೂತನ ಸಂಸ್ಕೃತ ವ್ಯಾಕರಣವೂ ನಿರ್ಮಿತವಾಯಿತು. ಮುಂದೆ ಬೃಹತ್ಕಥೆ ಸಂಸ್ಕೃತಕ್ಕೂ ಮೂರುನಾಲ್ಕು ರೂಪಾಂತರಗಳನ್ನು ಉತ್ತರದ ಕವಿಗಳಿಂದ ಪಡೆದುದನ್ನು ನೋಡುತ್ತೇವೆ. ಆದರೆ ಮೂಲ ಬೃಹತ್ಕಥೆ ದಕ್ಷಿಣದ್ದೇ; ಇದರ ಒಂದು ಅಂಶದ ರೂಪಾಂತರವೇ ಸುಪ್ರಸಿದ್ಧವಾದ ಪಂಚತಂತ್ರ ಕೂಡ. ಈ ಪಂಚತಂತ್ರದ ಒಂದು ಆವೃತ್ತಿಯ ಪ್ರವರ್ತಕ ಕೂಡ ಕರ್ನಾಟಕದ ವಸುಭಾಗಭಟ್ಟ (ಈ ಕೃತಿ ಬೃಹತ್ತರ ಭಾರತದ ಲೇಯಾಸ್ ಹಾಗೂ ಜಾವ ದ್ವೀಪದ ಭಾಷೆಗಳಲ್ಲಿಯೂ ಭಾಷಾಂತರಗೊಂಡಿದೆ).

ಭಾಸನ (ಸು.2ನೆಯ ಶತಮಾನ) ದ್ವಿತೀಯಾಕ್ಷರ ಪ್ರಾಸಗಳನ್ನು ಅನುಲಕ್ಷಿಸಿ ಆತ ಕನ್ನಡಿಗನಿದ್ದಿರಬೇಕೆಂದು ಯು.ವೆಂಕಟಕೃಷ್ಣರಾವ್ ಊಹಿಸಿದ್ದಾರೆ (ಈ ಊಹೆಗೆ ಹೆಚ್ಚಿನ ಸಮರ್ಥನೆ ಬೇಕಾಗಿದೆ).

ಪೂಜ್ಯಪಾದ (ಅಥ್‌ವಾ ದೇವನಂದಿ 5 ಅಥ್‌ವಾ 6ನೆಯ ಶತಮಾನ) ಪಾಣಿನಿಯ ಸೂತ್ರಗಳಿಗೆ ಶಬ್ದಾವತಾರವೆಂಬ ವ್ಯಾಖ್ಯಾನ ರಚಿಸಿದ್ದನೆಂದು ಶಾಸನಗಳಲ್ಲಿ ಹೇಳಲಾಗಿದೆ. ಈತ ಜೈನೇಂದ್ರ ವ್ಯಾಕರಣವೆಂಬ ಹೊಸ ವ್ಯಾಕರಣ ಪಂಥವನ್ನು ನಿರ್ಮಾಣ ಮಾಡಿದ. ಇದರಲ್ಲಿ ಪ್ರಾಯೋಗಿಕ ದೃಷ್ಟಿಯಿಂದ ಪಾಣಿನಿಯ ಸೂತ್ರಗಳನ್ನು ಸಂಗ್ರಹಿಸಲಾಗಿದೆ.

ಗಂಗರಾಜನಾದ ದುರ್ವಿನೀತ (6ನೆಯ ಶತಮಾನ) ಬೃಹತ್ಕಥೆಯ ಸಂಸ್ಕೃತ ರೂಪಾಂತರಕಾರರಲ್ಲಿ ಒಬ್ಬನೆಂದು ಕೆಲವು ಶಾಸನಗಳು ಹೇಳುತ್ತವೆ. ದುರ್ವಿನೀತನ ಸಮಕಾಲೀನನೂ ಸಂಸ್ಕೃತದ ಪ್ರಸಿದ್ಧ ಮಹಾಕಾವ್ಯವಾದ ಕಿರಾತಾರ್ಜುನೀಯದ ಕರ್ತೃವೂ ಆದ ಭಾರವಿ ದುರ್ವಿನೀತನ ಆಸ್ಥಾನದಲ್ಲಿಯೂ ಕೆಲಕಾಲ ಇದ್ದನೆಂಬ ಐತಿಹ್ಯವನ್ನು ಈಚೆಗೆ ದೊರೆತ ದಂಡಿಯ ಅವಂತಿಸುಂದರೀ ಕಥಾ ಎಂಬ ಗದ್ಯಕೃತಿ ಒಳಗೊಂಡಿದೆ. ದಂಡಿ ಸಹ ಕೆಲವು ಕಾಲ ದುರ್ವಿನೀತನ ಆಸ್ಥಾನದಲ್ಲಿ ಇದ್ದಿರಬೇಕು. ನಾಟಕಕಾರರಲ್ಲಿ ಪ್ರಸಿದ್ಧನಾದ ಮೃಚ್ಛಕಟಿಕಕಾರ ಶೂದ್ರಕನು ಗಂಗರಾಜ ಶಿವಮಾರನಿರಬೇಕೆಂದು ಸಾಲೆತೊರೆ ಎಂಬ ವಿದ್ವಾಂಸರ ಊಹೆ.

ಭಾರವಿ ಮತ್ತು ಕಾಳಿದಾಸ ಮಹಾಕವಿಗಳ ಸ್ಪಷ್ಟ ಶಿಲಾಶಾಸನೋಲ್ಲೇಖ ದೊರೆಯುವುದು ಬಾದಾಮಿ ಚಳುಕ್ಯ ವಂಶದ ಇಮ್ಮಡಿ ಪುಲಕೇಶಿಯ ಕಾಲದ ಐಹೊಳೆಯ ಶಾಸನದಲ್ಲಿ (634). ಆ ಶಾಸನದ ಕರ್ತೃ ರವಿಕೀರ್ತಿ ತನ್ನನ್ನು ಆ ಇಬ್ಬರು ಮಹಾಕವಿಗಳಿಗೆ ಸಮನೆಂದು ಹೊಗಳಿಕೊಂಡಿದ್ದಾನೆ. ಈ ಪ್ರಶಸ್ತಿ ಶಾಸನ ಇಮ್ಮಡಿ ಪುಲಕೇಶಿಯ ಪರಾಕ್ರಮಾದಿಗಳನ್ನು ಕಾವ್ಯಮಯ ಶೈಲಿಯಲ್ಲಿ ವರ್ಣಿಸುತ್ತದೆ. ಇದರ ಭಾಷೆ ಸರಾಗವಾಗಿ ಹರಿಯುತ್ತದೆ. ನಾನಾ ಬಗೆಯ ವೃತ್ತಗಳಲ್ಲಿ ರಚಿತವಾದ ಇದರಲ್ಲಿ ಕಾವ್ಯದ ಹಲವು ಲಕ್ಷಣಗಳು ಕಾಣಬರುತ್ತವೆ. ಇದಕ್ಕೂ ಮುಂಚಿನ ಮಂಗಲೀಶನ ಶಾಸನದಲ್ಲಿ (ಸು.600) ಒಂದನೆಯ ಕೀರ್ತಿವರ್ಮನ ದಿಗ್ವಿಜಯವನ್ನು ವರ್ಣಿಸುವಲ್ಲಿ ಕಾಳಿದಾಸನ ರಘುವಂಶದ ರಘು ದಿಗ್ವಿಜಯವನ್ನೇ ಮಾದರಿಯಾಗಿಟ್ಟುಕೊಳ್ಳಲಾಗಿದೆ. ಇಮ್ಮಡಿ ಪುಲಕೇಶಿಯ ಸೊಸೆ, ಚಂದ್ರಾದಿತ್ಯನ ರಾಣಿ ವಿಜಯಾ ಅಥವಾ ಬಿಜ್ಜಾ ಅಥ್‌ವಾ ಬಿಜ್ಜಿಕಾ (ವಿಜ್ಜಿಕೆ) ಪ್ರೌಢ ಪಾಂಡಿತ್ಯ ಪಡೆದಿದ್ದಳೆಂದು ತಿಳಿದುಬರುತ್ತದೆ. ಕೌಮುದೀ ಮಹೋತ್ಸವವೆಂಬ ನಾಟಕ ಬರೆದವಳು ಇವಳೇ ಎಂದು ವಿದ್ವಾಂಸರ ಅಭಿಪ್ರಾಯ.

ಬಾದಾಮಿಯ ಚಳುಕ್ಯರ ಕಾಲದಲ್ಲಿಯೇ ಶಂಕರಾಚಾರ್ಯರ ವೇದಾಂತ ಭಾಷ್ಯಗಳೂ ಹುಟ್ಟಿಕೊಂಡಿರಬಹುದು. ಸಮಂತಭದ್ರನ ತತ್ತ್ವಾರ್ಥ ಸೂತ್ರ ಮಹಾಭಾಷ್ಯ, ಆಪ್ತಮೀಮಾಂಸಾ ಮುಂತಾದ ಉದ್ದಾಮ ಧರ್ಮ ಗ್ರಂಥಗಳೂ ಈ ಕಾಲದಲ್ಲಿ ಬಂದವು. ತತ್ತ್ವಾರ್ಥಸೂತ್ರಕ್ಕೆ ಸರ್ವಾರ್ಥಸಿದ್ಧಿ

ವ್ಯಾಖ್ಯೆಯನ್ನು ಪೂಜ್ಯಪಾದ ರಚಿಸಿದ. ಮತ್ತೊಬ್ಬ ಜೈನ ಪಂಡಿತ ಅಕಲಂಕ ತತ್ತ್ವಾರ್ಥ ರಾಜವಾರ್ತಿಕ, ಅಷ್ಟಶತೀ, ನ್ಯಾಯವಿನಿಶ್ಚಯ ಮೊದಲಾದುವನ್ನು ರಚಿಸಿದ್ದಾನೆ.

ರಾಷ್ಟ್ರಕೂಟರ ಕಾಲದಲ್ಲಿ ಸಂಸ್ಕೃತಕ್ಕೆ ವಿಶೇಷ ಪ್ರೋತ್ಸಾಹ ದೊರಕಿತು. ಒಂದನೆಯ ಅಮೋಘ ವರ್ಷ (814-78) ಸ್ವಯಂ ಗ್ರಂಥಕಾರನಾಗಿದ್ದುದಲ್ಲದೆ (ಪ್ರಶ್ನೋತ್ತರ-ರತ್ನಮಾಲಿಕಾ ಇವನ ಕೃತಿಯೆನ್ನುತ್ತಾರೆ) ಜಿನಸೇನಾಚಾರ್ಯರು ಮಹಾಪುರಾಣ, ಪಾರ್ಶ್ವಾಭ್ಯುದಯ ಗಳೆಂಬ ಉದ್ಗ್ರಂಥ'ಗಳನ್ನು ಬರೆಯಲು ನೆರವಾದ. ಶಾಕಟಾಯನ ವ್ಯಾಕರಣವೆಂಬ ನವೀನ ಪ್ರಸ್ಥಾನವೂ ಈಗಲೇ ಉದಿಸಿತು. ಅದರ ವೃತ್ತಿಗೆ ಅಮೋಘ ವೃತ್ತಿಯೆಂದೇ ಹೆಸರಿದೆ. ಮಹಾವೀರನೆಂಬ ಪಂಡಿತ ಜ್ಯೋತಿಶಾಸ್ತ್ರದ ಗಣಿತಸಾರಸಂಗ್ರಹವನ್ನು ಬರೆದಿದ್ದಾನೆ.

ಮುಮ್ಮಡಿ ಇಂದ್ರನ (914-29) ಆಸ್ಥಾನ ಕವಿಯಾಗಿದ್ದ ತ್ರಿವಿಕ್ರಮಭಟ್ಟ ನಳಚಂಪೂ ಮತ್ತು ಮದಾಲಸಾಚಂಪೂ ಎಂಬ ಎರಡು ಕೃತಿಗಳನ್ನು ರಚಿಸಿದ. ಇವೆರಡು ಸಂಸ್ಕೃತ ಸಾಹಿತ್ಯದ ಚಂಪೂ ಪ್ರಕಾರದ ಉಪಲಬ್ಧ ಪ್ರಾಚೀನತಮ ಕೃತಿಗಳು. ಇವನ ಚಂಪೂಶೈಲಿಯಲ್ಲಿ ಬಾಣನ ಗದ್ಯವೈಭವ ಹಾಗೂ ನಾಟಕಕಾರರ ಪದ್ಯ ಪ್ರಾಗಲ್ಭ್ಯಗಳೆರಡೂ ರಸಮಯವಾಗಿ ಜೊತೆಗೂಡಿವೆ. ಇವನಿಗೆ ಮೊದಲೇ ದಂಡಿ ಚಂಪೂ ಪ್ರಭೇದವನ್ನು ಹೇಳಿ, ಅದರ ಸ್ವರೂಪವನ್ನು ತಿಳಿಸಿದ್ದನಾದರೂ ತ್ರಿವಿಕ್ರಮನಿಗೆ ಮೊದಲು ಯಾವ ಚಂಪೂ ಕೃತಿಯೂ ದೊರೆತಿಲ್ಲ. ಮುಮ್ಮಡಿ ಕೃಷ್ಣನೂ (939-67) ಸ್ವತಃ ವಿದ್ವಾಂಸನಾಗಿದ್ದು ಪಿಂಗಲನ ಛಂದಸ್ಸೂತ್ರದ ಮೇಲೆ ವ್ಯಾಖ್ಯಾನ ಬರೆದ. ಇವನ ಆಶ್ರಯದಲ್ಲಿ ಹಲಾಯುಧ ಒಂದು ಕೋಶವನ್ನೂ ಕವಿಗಳಿಗೆ ಉಪಯುಕ್ತವಾದ ಕೃತಿಗಳನ್ನೂ ರಚಿಸಿದ.

ಅದ್ವೈತವೇದಾಂತ ದೃಷ್ಟಿಯಿಂದ ರಾಷ್ಟ್ರಕೂಟರ ಕಾಲವನ್ನು ಸುವರ್ಣಯುಗವೆಂದು ಕರೆಯಬಹುದು. ಶಂಕರಾಚಾರ್ಯರ ಶಿಷ್ಯರಾದ ಪದ್ಮಪಾದ ಮತ್ತು ಸುರೇಶ್ವರರು ವೇದಾಂತ ಪ್ರಚಾರದಲ್ಲಿ ನಿರತರಾಗಿದ್ದರು. ಸುರೇಶ್ವರರ ಶಿಷ್ಯ ಸರ್ವಜ್ಞಾತ್ಮನ್ 'ಸಂಕ್ಷೇಪ ಶಾರೀರಕ' ವನ್ನು ರಚಿಸಿದ. ಇದೇ ಯುಗದಲ್ಲಿ ಯಾಜ್ಞವಲ್ಕ್ಯಸ್ಮೃತಿಗೆ ವಿಶ್ವರೂಪ ಬರೆದ 'ಬಾಲಕ್ರೀಡಾ ವ್ಯಾಖ್ಯೆ' ಬಹಳ ಪ್ರಸಿದ್ಧವಾಯಿತು.

ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಜೈನರೂ ಅಮೋಘ ಕಾಣಿಕೆಯನ್ನಿತ್ತಿದ್ದಾರೆ. ವೀರಸೇನ ಮತ್ತು ಜಿನಸೇನರು 1,00,000 ಶ್ಲೋಕಗಳ ವಿಸ್ತಾರವಾದ ಧವಲಾ, ಜಯಧವಲಾ ಮತ್ತು ಮಹಾಧವಲಾ ಎಂಬ ಷಟ್‌ಖಂಡಾಗಮ ವ್ಯಾಖ್ಯಾನವನ್ನು ಪೂರೈಸಿದರು. ಜಿನಸೇನರು ಆದಿಪುರಾಣ ಮತ್ತು ಪಾರ್ಶ್ವನಾಥಪುರಾಣಗಳನ್ನೂ ಬರೆದು ಪ್ರಸಿದ್ಧರಾದರು. ಅಸಗನಿಗೆ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಸಮಾನವಾದ ಕವಿತಾ ಸಾಮರ್ಥ್ಯವಿತ್ತು. ಸಂಸ್ಕೃತದಲ್ಲಿ ಈತ ವರ್ಧಮಾನಪುರಾಣವನ್ನು ರಚಿಸಿದ್ದಾನೆ. ವಿದ್ಯಾನಂದ ಎಂಬುವನು ಸಮಂತಭದ್ರನ ಆಪ್ತಮೀಮಾಂಸಾ, ಆಪ್ತಪರೀಕ್ಷಾ ಇತ್ಯಾದಿ ಗ್ರಂಥಗಳಿಗೆ ಅಷ್ಟಸಾಹಸ್ರೀ ಎಂಬ ಅದ್ಭುತವಾದ ವ್ಯಾಖ್ಯಾನ ರಚಿಸಿದ್ದಾನೆ.

ವೇಮುಲವಾಡದ ಚಾಳುಕ್ಯರ ಆಶ್ರಯದಲ್ಲಿದ್ದ ಸೋಮದೇವಸೂರಿ (ಸು.959) ಯಶಸ್ತಿಲಕಚಂಪೂ ಎಂಬ ಕೃತಿಯನ್ನೂ ನೀತಿವಾಕ್ಯಾಮೃತವೆಂಬ ಗ್ರಂಥವನ್ನೂ ರಚಿಸಿದ. ಯಶಸ್ತಿಲಕಚಂಪೂವಿನಲ್ಲಿ ಕವಿ ನಾನಾಶಾಸ್ತ್ರದಲ್ಲಿ, ತನಗಿದ್ದ ಪಾಂಡಿತ್ಯ ಹಾಗೂ ಜಾಣ್ಮೆಯನ್ನು ಪ್ರದರ್ಶಿಸಿಕೊಂಡಿದ್ದಾನೆ. ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಈ ಕೃತಿ ಅಮೂಲ್ಯವಾದುದಾಗಿದೆ. ನೀತಿವಾಕ್ಯಾಮೃತ ರಾಜನೀತಿಶಾಸ್ತ್ರದ ಕೈಪಿಡಿಯಂತಿದೆ. ಇದರಲ್ಲಿ ರಾಜಕೀಯ ವ್ಯವಹಾರಗಳ ಸೂಕ್ಷ್ಮ ನಿರೂಪಣೆಯ ಜತೆಗೆ ಜನಸಾಮಾನ್ಯರಿಗೂ ಸಂಬಂಧಿಸಿದ ನೀತಿಗಳನ್ನು ಎಲ್ಲರಿಗೂ ಅರ್ಥವಾಗುವ ಕ್ರಮದಲ್ಲಿ ನಿರೂಪಿಸಿದ್ದಾನೆ. ಸೋಮದೇವಸೂರಿ ಕವಿಯಷ್ಟೇ ಅಲ್ಲ ತತ್ತ್ವಶಾಸ್ತ್ರದಲ್ಲಿಯೂ ನಿಷ್ಣಾತನಾಗಿದ್ದ 'ಷಣ್ಣವತಿ ಪ್ರಕರಣ' ಇವನ ಕೊಡುಗೆ.

ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಬಂದರೆ ಎರಡನೆಯ ಜಯಸಿಂಹನ ಆಳಿಕೆಯಲ್ಲಿ (1015-1044) ವಾದಿರಾಜನ ಯಶೋಧರಚರಿತ ಮತ್ತು ಪಾರ್ಶ್ವನಾಥ ಚರಿತ ಎಂಬ ಸುಂದರ ಕಾವ್ಯಗಳು ಮೂಡಿಬಂದವು. ವಾದಿರಾಜನ ಪಾಂಡಿತ್ಯವನ್ನು ಅನೇಕ ಶಾಸನಗಳು ಕೊಂಡಾಡಿವೆ. ಅಕಲಂಕನ ಮಹಾಗ್ರಂಥವನ್ನು ಕುರಿತ ಸಮಗ್ರ ವ್ಯಾಖ್ಯಾನ 'ನ್ಯಾಯ ವಿನಿಶ್ಚಯ ಟೀಕೆ' ವಾದಿರಾಜನ ಮೇರು ಕೃತಿ. ಇವನು ಉತ್ತಮ ಬರೆಹಗಾರನಾಗಿದ್ದ, ಜೊತೆಗೆ ಸಮರ್ಥ ವಾಗ್ಮಿಯಾಗಿದ್ದನೆಂದು ತಿಳಿದುಬರುತ್ತದೆ. ಲಕುಲೀಶ ಪಂಡಿತ ಅಥವಾ ವಾದಿರುದ್ರಗುಣ ಮಹಾವಿದ್ವಾಂಸನೆಂದೂ ಜೈನ ವಾದಿರಾಜನನ್ನು ವಾದದಲ್ಲಿ ಸೋಲಿಸಿದನೆಂದೂ 1036ರ ಶಾಸನವೊಂದು ತಿಳಿಸುತ್ತದೆ. ವಾದಿರಾಜನ ಸಹಪಾಠಿ ಮತ್ತು ಮತಿಸಾಗರನ ಶಿಷ್ಯನಾದ ದಯಪಾಲ ಎಂಬುವನು ಶಾಕಟಾಯನ ವ್ಯಾಕರಣದ ಉಪಯುಕ್ತವಾದ ಪುನರ್ವಿಮರ್ಶಿತ ಕೈಪಿಡಿಯನ್ನು ಸಿದ್ಧಗೊಳಿಸಿದ. ರೂಪಸಿದ್ಧಿಯೆಂದು ಕರೆಯಲಾದ ಇದನ್ನು ಹಲವು ಶಾಸನಗಳಲ್ಲಿ ಹೊಗಳಲಾಗಿದೆ.

ಇದೇ ಕಾಲದಲ್ಲಿ ಕಾವ್ಯಾವಲೋಕನದ ಕರ್ತೃ ನಾಗವರ್ಮ ಸಂಸ್ಕೃತ ಕೋಶವೊಂದನ್ನು ರಚಿಸಿದ್ದನೆಂದು ತಿಳಿದುಬರುತ್ತದೆ. ಆದರೆ ಇದು ಉಪಲಬ್ಧವಿಲ್ಲ. ಈ ಕಾಲದಲ್ಲಿ ವಾದೀಭಸಿಂಹನ ಗದ್ಯಚಿಂತಾಮಣಿ, ಕ್ಷತ್ರಚೂಡಾಮಣಿ ಎಂಬ ಗದ್ಯಕಾವ್ಯಗಳು ಬಾಣನ ಮಾದರಿಯಲ್ಲಿ ನಿರ್ಮಿತವಾದವು. ಜಯಕೀರ್ತಿಯ ಛಂದೋನುಶಾಸನವೂ ಇದೇ ಕಾಲದ್ದು. ಚಾಳುಕ್ಯ ಆರನೆಯ ವಿಕ್ರಮಾದಿತ್ಯ (1076-1127), ಕರ್ಣ, ಭೋಜಾದಿಗಳ ಆಸ್ಥಾನಗಳನ್ನೆಲ್ಲ ಸುತ್ತಿ ಬಂದಿದ್ದ ಕಾಶ್ಮೀರದ ಬಿಲ್ಹಣ ಮಹಾಕವಿಗೆ ತನ್ನ ಆಸ್ಥಾನದಲ್ಲಿ ವಿದ್ಯಾಪತಿಯೆಂಬ ಪದವಿಯನ್ನಿತ್ತು ಅವನಿಂದ ವಿಕ್ರಮಾಂಕ ದೇವಚರಿತವೆಂಬ ಮನೋಹರ ಐತಿಹಾಸಿಕ ಕಾವ್ಯವನ್ನು ಬರೆಯಿಸಿದ. ಇದೇ ವಿಕ್ರಮಾದಿತ್ಯನ ಕಾಲದಲ್ಲಿ ವಿಜ್ಞಾನೇಶ್ವರ ಎಂಬ ಪಂಡಿತ ಧರ್ಮಶಾಸ್ತ್ರ ಸಾಹಿತ್ಯದಲ್ಲಿಯೇ ತುಂಬಾ ಮನ್ನಣೆಗಳಿಸಿರುವ ಮಿತಾಕ್ಷರಾ ವ್ಯಾಖ್ಯೆಯನ್ನು ಯಾಜ್ಞವಲ್ಕ್ಯಸ್ಮೃತಿಗೆ ಬರೆದ. ಚಾಳುಕ್ಯ ಅರಸ ಮೂರನೆಯ ಸೋಮೇಶ್ವರ ಭೂಲೋಕಮಲ್ಲ (1127-39) ಅಭಿಲಷಿತಾರ್ಥಚಿಂತಾಮಣಿ ಅಥವಾ ಮಾನಸೋಲ್ಲಾಸ ಎಂಬ ವಿಶ್ವಕೋಶವನ್ನು ರಚಿಸಿದ. ಇದರಲ್ಲಿ ಸಂಸ್ಕೃತ ಕಾವ್ಯ, ಶಾಸ್ತ್ರ, ಕಲೆ, ವಿಜ್ಞಾನ, ಧರ್ಮ ಮುಂತಾದ ಸಕಲ ವಿದ್ಯಾಪ್ರಕಾರಗಳೂ ಸಂಕ್ಷಿಪ್ತವಾಗಿ ಹಾಗೂ ಸಪ್ರಮಾಣವಾಗಿ ಅಂತರ್ಗತವಾಗಿವೆ. ವನಸ್ಪತಿಗಳು, ಪ್ರಾಣಿಗಳು, ಪುಷ್ಪರಚನೆ, ಶಕುನಗಳು, ಕಾಮಶಾಸ್ತ್ರ, ಚಿತ್ರ, ಸಂಗೀತ, ರಾಜನೀತಿ, ಭೂಗೋಳ, ಪಾಕಶಾಸ್ತ್ರ ಮುಂತಾದ ಲೌಕಿಕ ವಿದ್ಯೆಗಳಿಗೂ ಇಲ್ಲಿ ಸಮಾವೇಶ ದೊರೆತಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಇಡೀ ಸಂಸ್ಕೃತ ಸಾಹಿತ್ಯದಲ್ಲೇ ಇಂಥ ಗ್ರಂಥ ಮತ್ತೊಂದಿಲ್ಲ. ಈ ದೊರೆಯ ಆಶ್ರಯದಲ್ಲೇ ಇದ್ದ ಪಾರ್ಶ್ವದೇವ ಸಂಗೀತ ಸಮಯಸಾರವನ್ನು ರಚಿಸಿದ್ದಾನೆ. ಇಮ್ಮಡಿ ಜಗದೇಕಮಲ್ಲ (1139-49) ಸಂಗೀತಕ್ಕೆ ಸಂಬಂಧಿಸಿದಂತೆ ಸಂಗೀತ ಚೂಡಾಮಣಿ ಎಂಬ ಗ್ರಂಥವನ್ನು ಬರೆದಿದ್ದಾನೆ.

ಹೊಯ್ಸಳರ ರಾಜ್ಯದಲ್ಲಿಯ ಎರಡನೆಯ ವೀರಬಲ್ಲಾಳನ ಆಸ್ಥಾನಕವಿ ವಿದ್ಯಾಚಕ್ರವರ್ತಿಯ ರುಕ್ಮಿಣೀಕಲ್ಯಾಣನಾಟಕ ಹಾಗೂ ಅಲಂಕಾರಸರ್ವಸ್ವ ಸಂಜೀವಿನೀ ಮತ್ತು ಕಾವ್ಯಪ್ರಕಾಶ ಸಂಪ್ರದಾಯಪ್ರಕಾಶಿನೀ ಎಂಬ ಅಲಂಕಾರ ಶಾಸ್ತ್ರಗ್ರಂಥಗಳು ಮಹತ್ತ್ವದ್ದಾಗಿದೆ. ಇವನ ಮಗನಾದ ಸಕಲವಿದ್ಯಾಚಕ್ರವರ್ತಿ ಗದ್ಯಕರ್ಣಾಮೃತ ಎಂಬ ಗ್ರಂಥವನ್ನು ಬರೆದಿದ್ದಾನೆ.

ಕರ್ನಾಟಕದಲ್ಲಿಯೇ ಹುಟ್ಟಿಬೆಳೆದ ಮಧ್ವಾಚಾರ್ಯರು ವೇದಾಂತ ಪಂಥವೊಂದನ್ನು ಸ್ಥಾಪಿಸಿ ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನೂ ರಾಮಾಯಣ, ಮಹಾಭಾರತ, ಭಾಗವತಗಳ ತಾತ್ಪರ್ಯ ನಿರ್ಣಯ ಮೊದಲಾದ 37 ಗ್ರಂಥಗಳನ್ನೂ ರಚಿಸಿದರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಸಂಸ್ಕೃತ ವಾಙ್ಮಯ ಉನ್ನತಿಗೆ ಹೆಚ್ಚಿನ ಪ್ರಚೋದನೆ ನೀಡಿತು. ಸಾಮ್ರಾಜ್ಯ ಸ್ಥಾಪಕರಾದ ಮಾಧವ ವಿದ್ಯಾರಣ್ಯರು ಅವರ ಗುರುಗಳಾದ ಭಾರತೀತೀರ್ಥರು ಹಾಗೂ ಅವರ ತಮ್ಮಂದಿರಾದ ಸಾಯಣ ಮತ್ತು ಭೋಗನಾಥ ಇವರಿಂದ ಸಂಸ್ಕೃತ ವಾಙ್ಮಯದ ಎಲ್ಲ ಪ್ರಕಾರಗಳು ಸಮೃದ್ಧವಾದುವು. ತೈತ್ತೀರೀಯ ಸಂಹಿತೆ ಮೊದಲಾದ ನಾಲ್ಕು ವೇದ ಸಂಹಿತೆಗಳು, ಅವುಗಳ ಬ್ರಾಹ್ಮಣಗಳು ಹೀಗೆ 18 ವೇದಗ್ರಂಥಗಳಿಗೆ ಮಾಧವಾಚಾರ್ಯ (ವಿದ್ಯಾರಣ್ಯರ) ನೇತೃತ್ವದಲ್ಲಿ ಅನೇಕರ ನೆರವಿನಿಂದ ಸಾಯಣಾಚಾರ್ಯರು ಭಾಷ್ಯ ರಚಿಸಿದರು. ಇವುಗಳಲ್ಲಿ ಒಂದೊಂದು ಸಂಹಿತೆಯ ಪ್ರಾರಂಭದಲ್ಲಿಯೂ ಪೀಠಿಕೆಯಲ್ಲಿ ವೇದಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಪೂರ್ವಮೀಮಾಂಸಾ ಸೂತ್ರಗಳ

ಆಧಾರದ ಮೇಲೆ ವಿಸ್ತಾರವಾಗಿ ಚರ್ಚಿಸಲಾಗಿದೆ. ಸಾಯಣರ ಯಜ್ಞತಂತ್ರ ಸುಧಾನಿಧಿ ಮತ್ತು ಪ್ರಯೋಗ ರತ್ನಮಾಲಾ ಗ್ರಂಥಗಳು ಶ್ರೌತಯಜ್ಞಗಳ ಪ್ರಯೋಗವನ್ನು ಸ್ಪಷ್ಟಪಡಿಸುತ್ತವೆ.

ಸ್ಮೃತಿ ಕ್ಷೇತ್ರದಲ್ಲಿ ಪರಾಶರ ಸ್ಮೃತಿಗೆ ಮಾಧವೀಯ ವ್ಯಾಖ್ಯೆ ಮತ್ತು ವ್ಯವಹಾರದ ವಿಷಯದಲ್ಲಿ ಪರಾಶರಮಾಧವೀಯ ಗ್ರಂಥಗಳು ಹೊರಬಂದವು. ಪ್ರಾಯಶ್ಚಿತ್ತ ಸುಧಾನಿಧಿಯೂ ಇದೇ ವಿಭಾಗಕ್ಕೆ ಸೇರಿದ ಕೃತಿ. ದೇವಣ್ಣಭಟ್ಟ (ಸು.1145) ನಾನಾ ಸ್ಮೃತಿಗಳ ಆಧಾರದ ಮೇಲೆ ಸ್ಮೃತಿಚಂದ್ರಿಕೆಯನ್ನು ಮತ್ತು ನರಹರಿ ಎಂಬುವನು ಸ್ಮೃತಿಕೌಸ್ತುಭವನ್ನೂ ರಚಿಸಿದರು. ವ್ಯಾಕರಣದಲ್ಲಿ ಮಾಧವೀಯವಾದ ಧಾತುವೃತ್ತಿಯನ್ನು ಗಮನಿಸಬಹುದು.

ದರ್ಶನ ಪ್ರಪಂಚದಲ್ಲಿ ಮಾಧವ ವಿದ್ಯಾರಣ್ಯರ ಜೈಮಿನೀಯ ನ್ಯಾಯಮಾಲಾವಿಸ್ತರ ಮತ್ತು ವೈಯಾಸಿಕ ನ್ಯಾಯಮಾಲಾವಿಸ್ತರ ಮತ್ತು ಸಾಯಣಾಚಾರ್ಯರ ಸರ್ವದರ್ಶನಸಂಗ್ರಹ ಇವು ಮುಖ್ಯವಾದವು. ಪದ್ಮಪುರಾಣದ ಸೂತಸಂಹಿತೆಯ ವ್ಯಾಖ್ಯೆ ತಾತ್ಪರ್ಯ ದೀಪಿಕೆಯೂ ಇವರದು. ಅಲಂಕಾರಶಾಸ್ತ್ರಕ್ಕೆ ಸೇರಿದ ಅಲಂಕಾರಸುಧಾನಿಧಿಯೂ ಸಾಯಣರ ಹೆಸರಿನಲ್ಲಿದೆ. ಸಾಯಣರು ಸುಭಾಷಿತಸುಧಾನಿಧಿ ಎಂಬ ಸುಭಾಷಿತ ಸಂಗ್ರಹವನ್ನೂ ಸಿದ್ಧಪಡಿಸಿದರು. ಭೋಗನಾಥ ಉತ್ತಮ ಕವಿಯೆಂದೂ ಹಲವು ಕೃತಿಗಳನ್ನು ರಚಿಸಿದನೆಂದೂ ಉಲ್ಲೇಖವಿದೆ. ಆದರೆ ಆತನ ಕೃತಿಗಳು ಯಾವುವೂ ದೊರೆತಿಲ್ಲ.

ತನ್ನ ಪತಿ ಕಂಪಣ ಅಥವಾ ಕಂಪರಾಯ ಮಧುರೆಯನ್ನು ವಶಪಡಿಸಿಕೊಂಡುದನ್ನು ಕಣ್ಣಾರೆ ಕಂಡ ಗಂಗಾದೇವಿ, ಆ ವಿಜಯ ಯಾತ್ರೆಯನ್ನು ಮಧುರಾವಿಜಯ ಅಥವಾ ವೀರಕಂಪಣ ರಾಯಚರಿತವೆಂಬ ಹೆಸರಿನಲ್ಲಿ ಕಾವ್ಯವೊಂದನ್ನು ರಚಿಸಿದ್ದಾಳೆ (ಸು.1360). ವಿಜಯನಗರದ ವಿರೂಪಾಕ್ಷ ನರಕಾಸುರ ವಿಜಯವನ್ನು ರಚಿಸಿದ. ಈ ಕಾಲದಲ್ಲೇ ಮುಂದೆಯೂ ಸಾಲುವಾಭ್ಯುದಯ ಮೊದಲಾದ ಅನೇಕ ಕಾವ್ಯಗಳು ರಚಿತವಾದವು.

ವಿಜಯನಗರದ ಅನಂತರ ರಾಜಕೀಯ ಕೇಂದ್ರ ಹಂಚಿಹೋದಂತೆ ವಿದ್ಯಾಕೇಂದ್ರಗಳೂ ಹಂಚಿಹೋದವು. ಆದರೆ ಸಂಸ್ಕೃತಕ್ಕಿದ್ದ ಪ್ರೋತ್ಸಾಹ ಕುಂಠಿತವಾದರೂ ಅಳಿಸಿಹೋಗಲಿಲ್ಲ. ಕೆಳದಿಯ ದೊರೆ ಬಸವ ಭೂಪಾಲ ಸ್ವತಃ ಕವಿಯಾಗಿದ್ದ. ಸೋಮದೇವನ ಅಭಿಲಷಿತಾರ್ಥಚಿಂತಾಮಣಿಯ ಮಾದರಿಯನ್ನು ಅನುಸರಿಸಿ ಶಿವತತ್ತ್ವ ರತ್ನಾಕರ ಎಂಬ ಗ್ರಂಥವನ್ನು ಈತ ಸಿದ್ಧಪಡಿಸಿದ. ಇದು 108 ಅಧ್ಯಾಯಗಳುಳ್ಳ ಬೃಹದ್ಗ್ರಂಥ. ಇವನದೇ ಇನ್ನೊಂದು ಉದ್ಗ್ರಂಥ ಸುಭಾಷಿತ ಸುರದ್ರುಮ ಎಂಬ ಸೂಕ್ತಿಕೋಶ. ಶ್ರೀರಂಗಪಟ್ಟಣದ ದಳವಾಯಿ ನಂಜರಾಜ ನಂಜರಾಜಯಶೋಭೂಷಣ ಎಂಬ ಅಲಂಕಾರ ಗ್ರಂಥವನ್ನು ಬರೆದ. ಅಲ್ಲಿಯೇ ಪ್ರಧಾನಿಯಾಗಿದ್ದ ವೆಂಕಟಪ್ಪಯ್ಯ ಭೂಪತಿ ಅಥವಾ ವೆಂಕಾಮಾತ್ಯ ಹಲವಾರು ಗ್ರಂಥಗಳನ್ನು ರಚಿಸಿದ. ಇವನ ಅಲಂಕಾರಮಣಿದರ್ಪಣದಲ್ಲಿ ಅದುವರೆಗೆ ಅಲಂಕಾರ ಶಾಸ್ತ್ರದಲ್ಲಿ ನಡೆದ ಚರ್ಚೆಗಳನ್ನು ಸುಲಲಿತವಾಗಿ ಸಂಗ್ರಹಿಸಲಾಗಿದೆ. ಇವನ ಕುಶಲವವಿಜಯಚಂಪೂ ಭಟ್ಟಿಕಾವ್ಯದ ಮಾದರಿಯಲ್ಲಿ ವ್ಯಾಕರಣ ನಿಯಮಗಳಿಗೆ ಉದಾಹರಣೆಯಾಗಿರುವಂತೆ ರಚಿಸಲಾದ ಶಾಸ್ತ್ರಕಾವ್ಯ. ಈತ ಇವಲ್ಲದೆ ಹತ್ತು ಬಗೆಯ ರೂಪಕಗಳಿಗೂ ಒಂದೊಂದು ಉದಾಹರಣೆಯಾಗುವಂತೆ ಹತ್ತು ರೂಪಕಗಳನ್ನು ಬರೆದಿದ್ದಾನೆ.

19ನೆಯ ಶತಮಾನದಲ್ಲಿ ಹುಟ್ಟಿದ ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀತತ್ತ್ವನಿಧಿ ಒಂದು ಸಚಿತ್ರ ಗ್ರಂಥ. ಇದರಲ್ಲಿ ಸಂವತ್ಸರಾಭಿಮಾನಿ ದೇವತೆಗಳು ರಾಗಾಭಿಮಾನಿ ದೇವತೆಗಳೇ ಮೊದಲಾಗಿ ನಾನಾ ದೇವತೆಗಳ, ಶಿವವಿಷ್ಣುವಿನ ನಾನಾ ರೂಪಗಳ ಸಂಸ್ಕೃತದ ಧ್ಯಾನ ಶ್ಲೋಕಗಳೊಡನೆ ಅದಕ್ಕೆ ಅನುಗುಣವಾದ ವರ್ಣರಂಜಿತ ಚಿತ್ರಗಳನ್ನು ಕೊಡಲಾಗಿದೆ. ಸಂಖ್ಯಾರತ್ನಮಾಲಾ ಒಂದು ಬಗೆಯ ಕೋಶ. ಪ್ರಪಂಚದಲ್ಲಿ ಕೆಲವೊಂದು ಪದಾರ್ಥಗಳು ಒಂಟಿಯಾಗಿರಬಹುದು, ಜೊತೆಜೊತೆಯಾಗಿರಬಹುದು. ಇಲ್ಲವೇ ಮೂರು ಅಥವಾ ಅದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿನ ಗುಂಪುಗಳಲ್ಲಿರಬಹುದು. ಅಂಥ ಒಂಟಿ ಪದಾರ್ಥಗಳನ್ನೂ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಗುಂಪುಗಳಲ್ಲಿ ಸೇರಿದ ವಸ್ತುಗಳ ಹೆಸರುಗಳನ್ನೂ ಆಯಾ ಸಂಖ್ಯೆಯ ಕ್ರಮದಲ್ಲಿ ಕೊಡಲಾಗಿದೆ. ಹೀಗೆ 127 ಕೊನೆಯ ಸಂಖ್ಯೆ 'ಗ್ರಹಣದರ್ಪಣ' 1841 ರಿಂದ 1902ರ ವರೆಗಿನ ಅವಧಿಯಲ್ಲಿನ ಗ್ರಹಣದ ಬಗ್ಗೆ ಮಾಹಿತಿ ನೀಡುವ ಗ್ರಂಥ.

19ನೆಯ ಶತಮಾನದಲ್ಲಿ ನಡೆದ ಸಾಹಿತ್ಯ ಚಟುವಟಿಕೆಯಲ್ಲಿ ಇನ್ನೂ ಕೆಲವು ಹೆಸರುಗಳನ್ನು ಸೂಚಿಸಬಹುದು. ಯಾದವ ರಾಘವ ಪಾಂಡವೀಯ (1817) ಎಂಬ ತ್ರಿಸಂಧಾನ ಕಾವ್ಯವನ್ನು ಮೈಸೂರು ಅನಂತಾಚಾರ್ಯ ರಚಿಸಿದ್ದಾರೆ. ಭಾಗವತ, ರಾಮಾಯಣ ಹಾಗೂ ಮಹಾಭಾರತ ಕಥೆಗಳನ್ನು ಒಂದೇ ಬಾರಿಗೆ ಹೇಳುವ ಸಾಹಸ ಈ ಕಾವ್ಯದಲ್ಲಿ ನಡೆದಿದೆ. ಏಕಾಂಬರಶಾಸ್ತ್ರಿ ಎಂಬವರು ವೀರಭದ್ರವಿಜಯಚಂಪೂ ಎಂಬ ಕಾವ್ಯದಲ್ಲಿ ಬೆಂಗಳೂರು ಕೆಂಪೇಗೌಡನ ವಂಶದ ಚರಿತ್ರೆ ಹೇಳಲು ಅವಕಾಶ ಮಾಡಿಕೊಂಡಿದ್ದಾರೆ. ಮಲ್ಲಾರಿ ಆರಾಧ್ಯರು ಶಿವಲಿಂಗ, ಸೂರ್ಯೋದಯ ಎಂಬ ನಾಟಕವನ್ನು ಪ್ರಬೋಧ ಚಂದ್ರೋದಯದ ಮಾದರಿಯಲ್ಲಿ ರಚಿಸಿದ್ದರೆ, ಲಿಂಗಭಟ್ಟರು ಅಮರಕೋಶಕ್ಕೆ ಸಂಸ್ಕೃತ ಹಾಗೂ ಕನ್ನಡ ವಿವೃತ್ತಿಯನ್ನು ಬರೆದಿದ್ದಾರೆ. ಮಂಡಿಕಲ್ಲು ರಾಮಶಾಸ್ತ್ರೀ 'ಮೇಘ ಪ್ರತಿಸಂದೇಶ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಸತ್ಯಪ್ರಿಯತೀರ್ಥರು ವ್ಯಾಕರಣ ಮಹಾಭಾಷ್ಯಕ್ಕೆ ವ್ಯಾಖ್ಯಾನ ರಚಿಸಿದ್ದಾರೆ. ಇದರ ಭಾಗಗಳು ಮಾತ್ರ ದೊರೆತಿವೆ.

ಮೇಲುಕೋಟೆಯ ಜಗ್ಗೂ ಆಳ್ವಾರರು ನಿರ್ಮಿಸಿದ ಪ್ರತಿಜ್ಞಾಕೌಟಿಲ್ಯಂ, ಪ್ರಸನ್ನರಾಘವಂ, ಮಹೀಹರಣಂ ಮೊದಲಾದ ಅನೇಕ ಕಾವ್ಯಗಳು ಗಮನಾರ್ಹವಾಗಿವೆ. ಸಂಸ್ಕೃತ ಸಾಹಿತ್ಯ ಕೃತಿಗಳನ್ನು ಇಂಗ್ಲಿಷ್, ಕನ್ನಡ, ಹಿಂದಿಗಳಿಗೆ ಅನುವಾದಿಸಿ ಸಂಸ್ಕೃತ ಸಾಹಿತ್ಯವನ್ನು ಅನ್ಯರಿಗೆ ಪರಿಚಯ ಮಾಡಿಕೊಡುವಲ್ಲಿ ವಿದ್ವಾಂಸರಾದ ಕೆ. ಕೃಷ್ಣಮೂರ್ತಿ, ಎನ್. ರಂಗನಾಥಶರ್ಮ ತುಂಬಾ ಶ್ರಮಿಸಿದ್ದಾರೆ. ಇವರಂತೆಯೇ ಅನೇಕ ಆಧುನಿಕ ವಿದ್ವಾಂಸರು ತಮ್ಮದೇ ಆದ ಕೊಡುಗೆಯನ್ನು ಮೂಲ ಸಾಹಿತ್ಯಕ್ಕಾಗಲಿ ಅಥವಾ ಅನುವಾದ ಸಾಹಿತ್ಯಕ್ಕಾಗಲಿ ಅರ್ಪಿಸುತ್ತ ಬಂದಿದ್ದಾರೆ. ಅವುಗಳಲ್ಲಿ ಅನೇಕ ಕೃತಿಗಳು ಮಹತ್ಕೃತಿಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಹಿಂದು ಸೇವಾ ಪ್ರತಿಷ್ಠಾನದ ಸಂಸ್ಕೃತ ಶಾಖೆ ಸಂಸ್ಕೃತದ ಬೆಳವಣಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಶ್ರಮಿಸುತ್ತಿದೆ.

ವಿಜಯನಗರ ಕಾಲದಾರಭ್ಯ ಆಧುನಿಕ ಕಾಲದ ತನಕ ಸಂಸ್ಕೃತದಲ್ಲಿ ಸೃಜನಾತ್ಮಕ ಕಾರ್ಯ ಎಷ್ಟೊಂದು ಅಗಾಧವಾಗಿ ಸಾಗಿದೆಯೆಂದರೆ ದೊರೆಯುವ ಸಂಸ್ಕೃತ ಹಸ್ತಪ್ರತಿಗಳ ಸಂಖ್ಯೆ ಹತ್ತುಸಾವಿರಕ್ಕೂ ಹೆಚ್ಚಾಗುತ್ತದೆ. ಈ ಗ್ರಂಥಗಳಲ್ಲಿ ಹೆಚ್ಚಾಗಿ ಪೂರ್ವ ಮಹಾಕವಿಗಳ, ಸ್ತೋತ್ರಕಾರರ ಮಾದರಿಯಲ್ಲಿ ಬರೆದ ನೂತನ ರಚನೆಗಳು, ಇಲ್ಲವೆ ನಾನಾ ಶಾಸ್ತ್ರಗ್ರಂಥಗಳಿಗೆ ಟೀಕೆಟಿಪ್ಪಣಿಗಳು, ಇಲ್ಲವೆ ಧರ್ಮಶ್ರದ್ಧೆಯಿಂದ ಬರೆದ ಆಚಾರ್ಯ ಪುರುಷರ ದಿಗ್ವಿಜಯಗಳು, ಬಾಲೋಪಯೋಗಿ ಕಥಾನಕಗಳು ಮತ್ತು ಧರ್ಮಾಚರಣೆಗೆ ಉಪಯುಕ್ತವಾದ ಕೈಪಿಡಿಗಳು, ಮಂತ್ರ-ತಂತ್ರ ಪರಿಷ್ಕಾರಗಳು.

20ನೆಯ ಶತಮಾನದಲ್ಲಿಯೂ ಹಲವು ಕೃತಿಗಳು ಸಂಸ್ಕೃತದಲ್ಲಿ ರಚನೆಗೊಂಡವು. ಸುಂದರವಲ್ಲಿಯ (1900) ರಾಮಾಯಣ ಚಂಪೂ ಒಂದು ಗಮನಾರ್ಹ ಕೃತಿ. ಚಾಮರಾಜನಗರದ ಶ್ರೀಕಂಠಶಾಸ್ತ್ರೀ ಅವರು ಧಾತುರೂಪ ಪ್ರಕಾಶಿಕೆ ಎಂಬ ಗ್ರಂಥವನ್ನು ಬರೆದರಲ್ಲದೆ, ಯವನಯಾಮಿನೀವಿನೋದ ಕಥಾ ಎಂಬ ಹೆಸರಿನಲ್ಲಿ ಅರೇಬಿಯನ್ ನೈಟ್ಸ್ ಕಥೆಗಳನ್ನು ಸಂಸ್ಕೃತಕ್ಕೆ ಅನುವಾದ ಮಾಡಿದ್ದಾರೆ. ಶ್ರೀ ಕೃಷ್ಣಬ್ರಹ್ಮತಂತ್ರ ಪರಕಾಲ ಸ್ವಾಮಿಗಳು ಅಲಂಕಾರಮಣಿಹಾರ ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದು ಅಲಂಕಾರಗಳನ್ನು ವಿವರಿಸುವ ಗ್ರಂಥ. ಇದರ ಉದಾಹರಣೆಗಳೆಲ್ಲವೂ ಶ್ರೀನಿವಾಸ ದೇವರನ್ನು ಕುರಿತವು. ವೇದಾಂತಾಚಾರ್ಯರು ರಚಿಸಿದ ಕೃತಿ ರಸಾಸ್ವಾದನೆ. ಇದು ಹಂಸಸಂದೇಶದ ವ್ಯಾಖ್ಯೆ.

ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಭಗವದ್ಗೀತಾ ಪ್ರಬಂಧ ಮೀಮಾಂಸಾ (1902), ಮೀಮಾಂಸಾ ಭಾಷಾಭೂಷಣ (1928) ಮೊದಲಾದ ಹಲವು ಕೃತಿಗಳನ್ನು ರಚಿಸಿದ್ದಾರೆ. ಮೀಮಾಂಸಾ ಭಾಷಾಭೂಷಣ ಕುಮಾರಿಲಭಟ್ಟನ ತತ್ತ್ವಗಳನ್ನು ಪ್ರತಿಪಾದಿಸುವ ಗ್ರಂಥ. ದರ್ಶನೋದಯ (1933) ನಾನಾದರ್ಶನ ಪದ್ಧತಿಗಳ ವಿಷಯದೃಷ್ಟಿ ಮತ್ತು ವಿಮರ್ಶೆಯಿಂದ ಕೂಡಿದ ಲಲಿತ ಹಾಗೂ ಸ್ಪಷ್ಟ ನಿರೂಪಣೆಗಳನ್ನೊಳಗೊಂಡಿದೆ.

ಮೇಲುಕೋಟೆಯ ಜಗ್ಗು ವೆಂಕಟಾಚಾರ್ಯರ ಹೆಸರಿನಲ್ಲಿ ಹತ್ತಾರು ಕೃತಿಗಳಿವೆ. ಕಾರ್ಕಳದ ಪಂಡಿತೆ ರಮಾಬಾಯಿ ಅವರು ಸುಲಲಿತ ಸಂಸ್ಕೃತದಲ್ಲಿ ಗ್ರಂಥರಚಿಸಿ ಖ್ಯಾತಿಪಡೆದಿದ್ದಾರೆ.

ಮುತ್ತಯ್ಯ ಭಾಗವತರ್ ಹುಟ್ಟುಕನ್ನಡಿಗರಲ್ಲದಿದ್ದರೂ ಅವರ ಸಂಗೀತ ಕೃತಿಗಳ ರಚನೆ ಬಹುತೇಕವಾಗಿ ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ನಡೆಯಿತು. ಇಲ್ಲೇ ಮೈಸೂರಿನ ಪ್ರಸಿದ್ಧ ವಾಗ್ಗೇಯಕಾರರಾದ ವಾಸುದೇವಾಚಾರ್ಯರ ಹೆಸರನ್ನು ಹೇಳಬಹುದು. ಇವರಿಬ್ಬರ ಕೃತಿಗಳೂ ಜನಪ್ರಿಯತೆಯನ್ನೂ ಗಳಿಸಿವೆ.

ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಅವರ ಆಳ್ವಿಕೆಯಲ್ಲೂ ಸಂಸ್ಕೃತಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಇವರೇ ಸ್ವತಃ ಹಲವು ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ. ಇವರು ನಿಯೋಜಿಸಿದ ಪುರಾಣ, ವೇದ, ವೇದಾಂತ ಗ್ರಂಥಗಳನ್ನು ಮೂಲ ಮತ್ತು ಕನ್ನಡ ಅನುವಾದದೊಡನೆ ಪ್ರಕಟಿಸುವ ಮಹಾಯೋಜನೆಯಂತೆ 12 ಮಹಾ ಪುರಾಣಗಳು, 12 ಉಪಪುರಾಣಗಳು, 6 ಆಧ್ಯಾತ್ಮಿಕ ಗ್ರಂಥಗಳು (ಆನಂದ ಅಧ್ಯಾತ್ಮ ರಾಮಾಯಣಗಳು, ಯೋಗವಾಸಿಷ್ಠ, ಪ್ರಸ್ಥಾನತ್ರಯ ಭಾಷ್ಯಗಳು), ಒಂದೆರಡು ತಂತ್ರ ಗ್ರಂಥಗಳ ಋಕ್ಸಂಹಿತೆ, ಐತರೇಯ ಬ್ರಾಹ್ಮಣ ಮತ್ತು ಆರಣ್ಯಕ ಮತ್ತು ನಿರುಕ್ತ-ಈ ಗ್ರಂಥಗಳು ಸುಮಾರು 350 ಸಂಪುಟಗಳಲ್ಲಿ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಾಶಿತವಾಗಿವೆ. ಪುರಾಣಗಳ, ವೇದಾಂತ ಗ್ರಂಥಗಳ ಮೂಲ ಮತ್ತು ಅನುವಾದ ಪ್ರಕಟವಾಗಿದ್ದರೆ, ಸಂಹಿತೆ, ಬ್ರಾಹ್ಮಣ ಗ್ರಂಥಗಳು ಸಾಯಣ ಭಾಷ್ಯ ವಿಸ್ತಾರವಾದ ಕನ್ನಡ ವಿವರಣೆಯೊಂದಿಗೆ ಹೊರಬಂದಿವೆ. ನಿರುಕ್ತಕ್ಕೂ ವಿಸ್ತಾರವಾದ ವಿವರಣೆಯಿದೆ. ವೇದಗ್ರಂಥಗಳಿಗೆ ಇಂಗ್ಲಿಷ್ ಅನುವಾದವನ್ನು ಕೊಡಲಾಗಿದೆ. ಈ ಮಾಲೆಯ ಮೂಲಕ ಕನ್ನಡ ಸಾಹಿತ್ಯಕ್ಕೆ, ಸಂಸ್ಕೃತಿ ಪ್ರಚಾರಕ್ಕೆ, ಸಂಸ್ಕೃತ ಭಾಷಾಧ್ಯಯನಕ್ಕೆ ಒಡೆಯರ್ ಅವರು ಇತ್ತ ನೆರವು ಅಪಾರವಾದುದು. ಇತ್ತೀಚೆಗೆ ಜಯಚಾಮರಾಜೇಂದ್ರರ ಕೃತಿಗಳಾದ ಶ್ರೀತತ್ತ್ವನಿಧಿ ಮೊದಲಾದ ಒಂಬತ್ತು ಕೃತಿಗಳು ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಕನ್ನಡ ಇಂಗ್ಲಿಷ್ ಅನುವಾದಗಳೊಂದಿಗೆ ಪ್ರಕಟವಾಗಿವೆ.

ವಿದ್ಯಾಭ್ಯಾಸ ಹಾಗೂ ಸಂಸ್ಕೃತ ಪ್ರಚಾರ ಕ್ಷೇತ್ರದಲ್ಲಿಯೂ ಸಾಕಷ್ಟು ಕಾರ್ಯ ಕಳೆದ ಶತಮಾನದ ಕೊನೆಯಿಂದ ನಡೆದು ಬಂದಿದೆ. ಎಚ್. ಸುಬ್ಬರಾವ್ ರಚಿಸಿದ, 'ವಿದ್ಯಾಭ್ಯಾಸ ಪದ್ಧತಿ' ಹರ್ಬರ್ಟ್ ಸ್ಪೆನ್ಸರನ ಗ್ರಂಥದ ಅನುವಾದ. ಪೆರಿಸ್ವಾಮಿ ತಿರುಮಲಾಚಾರ್ ಸದ್ವಿದ್ಯಾ ಆಂಗ್ಲೋ-ಸಂಸ್ಕೃತ ಪಾಠಶಾಲೆಯ ಸ್ಥಾಪಕರಲ್ಲೊಬ್ಬರಾಗಿದ್ದು, ಬಾಲಬೋಧಗಳನ್ನು ಸಿದ್ಧಪಡಿಸಿದರು.

ಹಿಂದಿನಿಂದಲೂ ಉಡುಪಿ, ಶೃಂಗೇರಿ, ಕೂಡ್ಲಿ, ಸಂಕೇಶ್ವರಗಳಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಡೆಗಳಲ್ಲೂ ಸಂಸ್ಕೃತ ಪಾಠಶಾಲೆಗಳಿದ್ದವು. ಪರ್ದಲ, ಕಾರ್ಕಳಗಳಲ್ಲಿ ಮಹಾ ಪಾಠಶಾಲೆಗಳಿದ್ದವು (ಓರಿಯಂಟಲ್ ಕಾಲೇಜು). ಈಚೆಗೆ ಆಧುನಿಕ ವಿದ್ಯಾಭ್ಯಾಸದ ಏರ್ಪಾಡುಗಳಾದಂತೆ ಸಂಸ್ಕೃತ ವಿದ್ಯಾಭ್ಯಾಸ ಪ್ರಗತಿ ಸಾಧಿಸಿದೆ. ಶೃಂಗೇರಿ, ಉಡುಪಿ, ಕಾರ್ಕಳಗಳಲ್ಲಿದ್ದ ಪಾಠಶಾಲೆಗಳು ಸುವ್ಯವಸ್ಥಿತವಾಗಿವೆ. ಮೈಸೂರು, ಬೆಂಗಳೂರುಗಳಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ಉನ್ನತ ಮಟ್ಟದ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಲಾಗಿದೆ. ಶಾಲೆ, ಕಾಲೇಜು ಮತ್ತು ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಸಂಸ್ಕೃತ ಶಿಕ್ಷಣಕ್ಕೆ ಅವಕಾಶವಿದೆ.

ಸಂಸ್ಕೃತದಲ್ಲಿ ಪತ್ರಿಕೆ, ನಿಯತಕಾಲಿಕೆಗಳು ಪ್ರಕಟವಾಗುತ್ತಿವೆ. ಬೆಳಗಾಂವಿಯಿಂದ ಪ್ರಕಟವಾಗುತ್ತಿದ್ದ ಸಂಸ್ಕೃತ ಚಂದ್ರಿಕಾ ಮತ್ತು ಮಧುರವಾಣೀ ನಿಯತಕಾಲಿಕೆಗಳು ಬಹಳ ಪ್ರಭಾವವನ್ನು ಬೀರಿವೆ. ಇದರ ಏಳ್ಗೆಗಾಗಿ ಪಂಡರೀನಾಥ ಗಲಗಲಿಯವರು ಬಹಳ ಶ್ರಮವಹಿಸಿ ದುಡಿದಿದ್ದಾರೆ. ಅಮರ ಭಾರತೀ ನಿಯತಕಾಲಿಕೆ ವಾರಾಣಸಿಯಲ್ಲಿ ಪ್ರಕಾಶಿತವಾದರೂ ಅದರ ಸಂಪಾದಕರಾದ ನರಸಿಂಹಾಚಾರ್ ಕರ್ನಾಟಕದವರು. ಏಕಮಾತ್ರ ದೈನಿಕವಾದ ಸುಧರ್ಮಾ ಮೈಸೂರಿನಲ್ಲಿ ಕೆ.ಎಸ್.ವರದರಾಜ ಅಯ್ಯಂಗಾರ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು.

ಸಂಸ್ಕೃತ-ಕನ್ನಡ ಭಾಷೆಗಳೆರಡೂ ಸು.2000 ವರ್ಷಗಳಿಂದ ಜೊತೆಯಲ್ಲಿಯೇ ಬೆಳೆಯುತ್ತ ಬಂದಿವೆ; ಪರಸ್ಪರ ಪ್ರಭಾವಿತವಾಗಿವೆ. ಕನ್ನಡ ಭಾಷೆಯ ಪ್ರಭಾವವೂ ಸಂಸ್ಕೃತದ ಮೇಲೆ ಆಗಿದೆ ಎಂಬುದಕ್ಕೆ ಸಂಸ್ಕೃತ ಕನ್ನಡದಿಂದ ಎರವಲು ಪಡೆದಿರಬಹುದಾದ ಒಂದೆರಡು ಪದಗಳನ್ನು ಇಲ್ಲಿ ಉದಾಹರಣೆಗಾಗಿ ಹೇಳಬಹುದು. ಆರ್ಬಟ-ಆರ್ಭಟ, ಗುದ್ದಲಿ-ಕುದ್ದಾಲ, ಗೊಟರು-ಕೋಟಕ. ಹೆಂಟೆ-ಹೆಂಡೆ, ಪಿಂಡು-ಪಿಂಡ ಇತ್ಯಾದಿ. ಸಂಸ್ಕೃತ ಪದಗಳು ಕನ್ನಡದಲ್ಲಿ ಧಾರಾಳವಾಗಿ ಬಳಕೆಯಾಗುತ್ತಾ ಬಂದಿವೆ. ಇಂದಿನ ಪಾರಿಭಾಷಿಕ ಪದಗಳನ್ನು ರೂಪಿಸುವುದರಲ್ಲಿಯೂ ಸಂಸ್ಕೃತದ ಉಪಯೋಗ ಬಹಳಷ್ಟಿದೆ. ಆದರೆ ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವುದು ಹೆಚ್ಚು. ಸಂಸ್ಕೃತದಲ್ಲಿದ್ದ ವಿಜ್ಞಾನ, ಕಲೆ ಮತ್ತು ತತ್ತ್ವಶಾಸ್ತ್ರ ಮೊದಲಾದ ವಾಙ್ಮಯ ವಿಭಾಗಗಳ ಬಗೆಗಿನ ಗ್ರಂಥಗಳೆಲ್ಲವನ್ನೂ ಕ್ರಮೇಣ ಕನ್ನಡದಲ್ಲಿಯೂ ಬರೆಯಲಾಯಿತು. ಮೊದಮೊದಲಿಗೆ ವಿಷಯ ನಿರೂಪಣೆಯಲ್ಲಿ ಸಂಸ್ಕೃತ ಗ್ರಂಥಗಳ ಜಾಡನ್ನೇ ಕನ್ನಡ ಅನುಸರಿಸಿಕೊಂಡು ಬಂತು. (ಆರ್ಎಸ್ಎಸ್.;ಕೆ.ಕೆ.)

**ಉರ್ದು:** ಪಾರಸಿ ಭಾಷೆಯನ್ನು ಆಡುವವರ ಪ್ರಭುತ್ವ ಮತ್ತು ಸಂಪರ್ಕ ಉಂಟಾಯಿತು. ಸೈನಿಕರು, ವರ್ತಕರು ಪಾರಿಸಿ ಹಾಗೂ ಅರಬ್ಬೀ ಭಾಷೆಗಳನ್ನು ಸ್ಥಳೀಯ ಪ್ರಭಾವದಿಂದ ರೂಪಿಸಿದರು. ಅದು ದಖನೀ ಭಾಷೆಯ ಹುಟ್ಟಿಗೆ ಕಾರಣವಾಯಿತು. ಕನ್ನಡ ಮತ್ತು ಮರಾಠಿ ಪದಗಳೂ ಇದರಲ್ಲಿ ನುಸುಳಿದವು. ಈ ಸಂವಹನದಿಂದ ರೇಖ್ತಾ ಎಂಬ ಭಾಷೆ ಹುಟ್ಟಿತು. ಇದೇ ಮುಂದೆ ದಖ್ಖನೀ ಆಯ್ತು. ಈ ಭಾಷೆ ದಕ್ಷಿಣದಲ್ಲಿ ಪ್ರಸಿದ್ಧಿ ಪಡೆದುದರಿಂದ ಅದನ್ನು ದಖನೀಭಾಷೆಯೆಂದು ಕರೆದರು. ಇದು ಉರ್ದುಭಾಷೆಗೆ ಬೇರು.

ಉರ್ದು ಭಾಷೆಯ ವಿಶಿಷ್ಟತೆ ಎಂದರೆ ಅದು ಯಾವುದೇ ಮತ, ಜಾತಿ, ಪಂಥ ಪಂಗಡಗಳಿಗೆ ಸೇರಿದುದಲ್ಲ. ಈ ಭಾಷೆಯಲ್ಲಿ ಅರಬ್ಬೀ ಗಾಂಭೀರ್ಯ, ಪಾರಸಿ ಮಾಧುರ್ಯ, ಸಂಸ್ಕೃತದ ಹಿರಿತನ ಸಮ್ಮಿಲಿತವಾಗಿದೆ. ಈ ಭಾಷೆಯ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯುವುದು ರೂಢಿ.

ಕರ್ನಾಟಕದಲ್ಲಿ 14ನೆಯ ಶತಮಾನದಿಂದ ಇಲ್ಲಿಯವರೆಗೂ ಉರ್ದು ಸಾಹಿತ್ಯವ್ಯವಸಾಯ ನಡೆಯುತ್ತ ಬಂದಿದೆ. ಬಹಮನೀಸುಲ್ತಾನರು, ಮೊಗಲರು, ಹೈದರ್ಅಲಿ ಮತ್ತು ಟಿಪ್ಪುಸುಲ್ತಾನ್, ಮೈಸೂರು ಒಡೆಯರು, ಅನಂತರ ಆಧುನಿಕ ಲೇಖಕರು, ಅನುವಾದಕರು ಉರ್ದು ಸಾಹಿತ್ಯವನ್ನು ಬೆಳೆಸಿ ಪುಷ್ಟಿಗೊಳಿಸಿದ್ದಾರೆ.

14ನೆಯ ಶತಮಾನದಲ್ಲಿ ಗುಲ್ಬರ್ಗದ ಖ್ವಾಜಾಬಂದೇನವಾಜ್ ಅವರು ಅರಬ್ಬಿ, ಪಾರಸಿ ಹಾಗೂ ಸಂಸ್ಕೃತ ಭಾಷೆಯಲ್ಲಿ ದೊಡ್ಡ ವಿದ್ವಾಂಸರಾಗಿದ್ದರು. ಇವರು ಅರಬ್ಬಿ, ಪಾರಸಿಭಾಷೆ ತಿಳಿಯದ ಸಾಮಾನ್ಯ ಜನರಿಗೆ ಅವರಾಡುವ ಸರಳ ದಖನೀಭಾಷೆಯಲ್ಲಿ ಮಿರಾಜುಲ್ ಅಷಕೀನ್, ಹಿದಾಯತ್ ನಾಮಾ, ಷಿಕಾರನಾಮಾ ರಿಸಾಲಾ ಸೇಬಾರಾ ಮೊದಲಾದ ಗ್ರಂಥಗಳನ್ನು ರಚಿಸಿದರು. ಇವರೇ ದಖನೀ ಉರ್ದುವಿನ ಮೊದಲನೆಯ ಗದ್ಯ ಮತ್ತು ಪದ್ಯ ಲೇಖಕರು. ಇವರ ಕೃತಿಗಳೆಲ್ಲ ಸೂಫಿಪಂಥಕ್ಕೆ ಸಂಬಂಧಪಟ್ಟಿವೆ. ಇವರ ಮಗ ಸಯ್ಯದ್ ಮೊಹಮದ್ ಅಕ್ಬರ್ ಹುಸೇನಿ ಧರ್ಮಬೋಧನೆಗಾಗಿ ಸೂಫಿ ನೀತಿ ತತ್ತ್ವಗಳಿಗಾಗಿ ದಖ್ಖನೀ ಉರ್ದುವನ್ನೇ ಬಳಸಿದ. ಬಂದೇನವಾಜರ ಶಿಷ್ಯ ಹಫ್ತಅಸ್ಲೂಕ್ ತನ್ನ ಗುರುವಿನ ಉಕ್ತಿಗಳನ್ನು ಟೀಕಾಸಹಿತ ಸಂಗ್ರಹಿಸಿದ. ಇದು ಬಂದೇನವಾಜರ ಮೊಮ್ಮಗ ಅಬ್ದುಲ್ಲಾಹುಸೇನಿಯ ಅರಬ್ಬಿ ಗ್ರಂಥ ನಿಷಾತಉಲ್ಲಇಷ್ಕ್ ಎಂಬ ಕೃತಿಯ ಭಾಷಾಂತರ (ನೋಡಿ: ಬಂದೇನವಾಜ್ಖ್ವಾಜಾ).

ಬಿಜಾಪುರದ ಷಾಮಿರಾನ್ಜಿಷಮುಷುಲ್ಉಷ್ಶಾಕ್ ಹಾಗೂ ಅವನ ಪುತ್ರ ಬುರಹಾನುದ್ದೀನ್ ಖಾನಂ ಅನೇಕ ಗ್ರಂಥಗಳನ್ನು ರಚಿಸಿದರು. ಅವುಗಳಲ್ಲಿ ಜಲತರಂಗ, ಗುಲ್ದಾಸ್ ಮುಖ್ಯವಾದವು. ಮೀರಾನ್ಜೀಯ ಮಗಜೆ ಮರಗೂಬ್, ಚಹಾರ್ ಷಹಾದತ್ ಕೃತಿಗಳು ಪ್ರಸಿದ್ಧವಾಗಿವೆ. ಈ ಗ್ರಂಥಗಳನ್ನು ಇತ್ತೀಚೆಗೆ ಮೊಹಮದ್ ಹಾಷಿಮ್ ಅಲಿಯವರು ಸಂಪಾದಿಸಿ

ಕೊಟ್ಟಿದ್ದಾರೆ. ಮೀರಾನ್‌ಜೀಯ ಮಗ ಬುರಹಾನುದ್ದೀನ್ ಖಾನಂ ರಚಿಸಿದ 'ಕಲಮತ್ ಉಲ್ಲ ಹಿಕಾಯತ್' ಉರ್ದು ಸಾಹಿತ್ಯದ ಮೊಟ್ಟ ಮೊದಲನೆಯ ಅಧಿಕೃತ ಗದ್ಯಗ್ರಂಥ. ಇವನು ಇರಷಾದ್ ನಾಮಾ, ಸುಖ ಸಹೇಲಾ ಎಂಬ ಮಸ್ನವಿಗಳನ್ನು ಬರೆದಿದ್ದಾನೆ.

ಬಹಮನೀ ಸುಲ್ತಾನರಲ್ಲಿ ಕೆಲವರು ಸ್ವತಃ ಕವಿಗಳಲ್ಲದೆ ಕವಿಪೋಷಕರೂ ಆಗಿದ್ದರು. ಆದಿಲ್‌ಶಾಹೀ ಮನೆತನದ ಆರನೆಯ ಸುಲ್ತಾನ ಎರಡನೆಯ ಇಬ್ರಾಹಿಂ ಆದಿಲ್‌ಷಾ (1580-1627) ಉರ್ದು ಸಾಹಿತ್ಯದ ಮಹಾನ್ ಪೋಷಕನಾಗಿದ್ದ. ಇವನಿಗೆ ಸಾಹಿತ್ಯದಲ್ಲಿ ತುಂಬಾ ಆಸಕ್ತಿಯಿತ್ತು. ಕಾವ್ಯ ಮತ್ತು ಸಂಗೀತವೆಂದರೆ ಇವನಿಗೆ ಪಂಚಪ್ರಾಣ. ಇವನು ದೊಡ್ಡ ಕವಿ ಹಾಗೂ ಸಂಗೀತ ವಿದ್ವಾಂಸ. ಈತ ನೌರಸ್‌ನಾಮಾ (ಕಿತಾಬೆ ನವರಸ್) ಎಂಬ ಉರ್ದುಗ್ರಂಥ'ವನ್ನು ಸಂಗೀತದ ಬಗ್ಗೆ ರಚಿಸಿ ಲೋಕಪ್ರಖ್ಯಾತನಾದ (ನೋಡಿ: ಇಬ್ರಾಹೀಂ ಆದಿಲ್ ಷಾ II). ಇವನ ಕಾಲದಲ್ಲಿ ರುಸ್ತುಮ್ ಎಂಬ ಕವಿ ದ್ವಿಪದಿ ಕಾವ್ಯವನ್ನು ಬರೆದ. ಮೊಹಮ್ಮದ್ ನುಸರತ್ ಎಂಬಾತ ಆದಿಲ್‌ಷಾನ ಆಸ್ಥಾನಕವಿ. ಇವನ ಕಾವ್ಯನಾಮ 'ನುಸರತಿ'. ಇವನು ಮೂರು ದ್ವಿಪದಿ ಕಾವ್ಯಗಳನ್ನು ರಚಿಸಿದ. ಇವನ ಗುಲ್ಷನೆ ಇಷ್ಕ್ ಎಂಬ ಗ್ರಂಥದಲ್ಲಿ 8000 ಬೈತ್‌ಗಳಿವೆ. ಕನವರ ಮನೋಹರ್ ಮತ್ತು ಮಧುಮಾಲತಿಯ ಪ್ರಣಯ ಪ್ರಸಂಗವನ್ನು ಹೃದಯಂಗಮವಾಗಿ ವಿವರಿಸಿದ ಕಥೆಯಿದು. ನುಸರತಿಯ ಕಸೀದಾ ಅಂದರೆ ಜೀವಂತ ವ್ಯಕ್ತಿಗಳ ವರ್ಣನೆಗಳು ನಿರರ್ಗಳವಾಗಿ ಓದಿಸಿಕೊಂಡು ಹೋಗುವಂಥ' ಗ್ರಂಥ'. ಇವನು ರಚಿಸಿದ ಎರಡು ಪ್ರೇಮಕಥಾ ಸಂಕಲನಗಳಿವೆ. ಮಿರಾಜ್‌ನಾಮಾ ಇವನ ಮತ್ತೊಂದು ಪ್ರಸಿದ್ಧ ಕಾವ್ಯ. ಅಲಿನಾಮಾ ಇವನ ಇನ್ನೊಂದು ಕೃತಿ. ಆಗಿನ ಕಾಲದ ಸುಲ್ತಾನರ ಯುದ್ಧದ ವಿವರಣೆಯನ್ನು ತಿಳಿಸುವ ಚಾರಿತ್ರಿಕ ಗ್ರಂಥವಿದು. ಇದರಲ್ಲಿ 7000 ಮಸ್ನವಿ ಪದ್ಯಗಳಿವೆ. ಸುಲ್ತಾನರ ಕಾಲದಲ್ಲಿ ಮರಸಿಮಾ ಎಂಬ ಶೋಕಗೀತೆಗಳನ್ನು ಬರೆಯುವುದಕ್ಕೆ ಪ್ರಾರಂಭವಾಯಿತು. ನಿಜಾಮಿ, ಮುಷ್ತಾಕ್, ಲುತ್‌ಫಿ, ಅಜುರಿ, ವಜಹಿ, ಗವಾಸಿ, ಕುತುಬಿ, ಇಬ್ನೆನಿಷಾತಿ ಮೊದಲಾದ ಕವಿಗಳೂ ಉರ್ದು ಸಾಹಿತ್ಯ ಸೇವೆಯನ್ನು ಮಾಡಿದರು.

ಸುಲ್ತಾನರ ಆಸ್ಥಾನದಲ್ಲಿದ್ದ ಮುನ್ಷಿಗಳು ಪಾರಸಿ, ಉರ್ದು, ಕನ್ನಡ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಪತ್ರ ವ್ಯವಹಾರ ಆಯಾ ಭಾಷೆಯಲ್ಲಿ ನಡೆಯುತ್ತಿತ್ತು. ರಾಜರಿಗೂ ಸುಲ್ತಾನರಿಗೂ ಮೆಚ್ಚುಗೆಯಾದ ಭಾಷೆಯನ್ನು ಅಧಿಕಾರಿಗಳು, ಸಾಮಾನ್ಯ ಜನರು ಕಲಿಯುತ್ತ ಬಂದರು.ಹೀಗೆ ಉರ್ದು ಭಾಷೆ ಜನ ಸಾಮಾನ್ಯರ ಭಾಷೆಯಾಯಿತು.

ಔರಂಗಜೇಬನ ಆಶ್ರಯದಲ್ಲಿದ್ದ ಬಿಜಾಪುರದ ಜಸವಂತರಾಯ ಮುನ್ಷಿ ಎಂಬ ಅಧಿಕಾರಿ ಪಾರಸಿ ಮತ್ತು ಉರ್ದುವಿನಲ್ಲಿ ಶ್ರೇಷ್ಠಕವಿ. ಇವನಂತೆ ಅನೇಕ ಹಿಂದು ಜನರು ಉರ್ದು ಪಾರಸಿ ಭಾಷೆಗಳಲ್ಲಿ ಅಮೋಘ ಸೇವೆ ಸಲ್ಲಿಸಿದರು. ಈ ಕಾಲದಲ್ಲಿ ದಖ್ಖನೀ ಸಾಹಿತ್ಯಕ್ಕಿಂತ ಉರ್ದು ಸಾಹಿತ್ಯಕ್ಕೆ ಹೆಚ್ಚಿನ ಪ್ರಾಧಾನ್ಯ ದೊರೆಯಿತು. ಅದು ದಕ್ಷಿಣಕ್ಕಿಂತ ಉತ್ತರದಲ್ಲಿ ಹೆಚ್ಚು ಉನ್ನತಿ ಪಡೆಯಿತು. ರಾಯಚೂರಿನ ನೂರ್‌ದರ್ಯಾ ವಂಶಕ್ಕೆ ಸಂಬಂಧಪಟ್ಟ ಮೊಹಮ್ಮದ್ ಖಾದರಿ ಎಂಬಾತ ಅನೇಕ ಧಾರ್ಮಿಕ ಗ್ರಂಥಗಳನ್ನು ಉರ್ದುವಿನಲ್ಲಿ ರಚಿಸಿದ. 18ನೆಯ ಶತಮಾನದ ಆದಿಯಲ್ಲಿ ಉರ್ದು ಗದ್ಯ ಉತ್ತರ ಭಾರತದಲ್ಲಿ ಪ್ರಾರಂಭವಾಯಿತು. 1803ರಲ್ಲಿ ಷರೀಫ್ ಎಂಬಾತ ಪ್ರಥಮ ಬಾರಿಗೆ ಕುರಾನನ್ನು ಉರ್ದುವಿಗೆ ಅನುವಾದಿಸಿದ. ಇದರ ಭಾಷೆ ಸರಳ, ಸುಲಭ. ಹೈದರಾಬಾದ್, ಔರಂಗಾಬಾದ್, ಗುಲ್ಬರ್ಗ ಮೊದಲಾದ ಎಡೆಗಳಲ್ಲಿ ಉರ್ದು ಸಾಹಿತ್ಯಕ ಚಟುವಟಿಕೆಗಳು ತೀವ್ರಗೊಂಡವು. ಹೈದರಾಬಾದಿನ ನಿಜಾಮರ ಕಾಲದಲ್ಲೂ ಉರ್ದುಭಾಷೆಗೆ ರಾಜಾಶ್ರಯ ದೊರೆತು ಉರ್ದು ಸಾಹಿತ್ಯ ಉಚ್ಛ್ರಾಯ ಸ್ಥಿತಿಗೇರಿತು.

18ನೆಯ ಶತಮಾನದ ಉತ್ತರಾರ್ಧದಲ್ಲಿ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರು ಉರ್ದು ಸಾಹಿತ್ಯ ಹಾಗೂ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನಿತ್ತರು. ಹೈದರ್‌ಅಲಿ ವಿದ್ಯಾವಂತನಾಗಿರದಿದ್ದರೂ ಇವನ ಮಗ ಟಿಪ್ಪುಸುಲ್ತಾನ್ ಸ್ವತಃ ವಿದ್ವಾಂಸನಾಗಿದ್ದ. ಇವನ ಆಶ್ರಯದಲ್ಲಿ ಅನೇಕ ಪಾರಸಿ ಹಾಗೂ ಉರ್ದು ಕವಿಗಳಿದ್ದರು. ಹೈದರ್‌ಅಲಿಯ ಕಾಲದಲ್ಲಿದ್ದ ಲೇಖಕ ಷಾಮೊಹಮ್ಮದ್‌ಸದರುದ್ದೀನ್ ಎಂಬಾತ ನೆಲಮಂಗಲದವನು. ಮನ್‌ಲಗನ್, ಮಿರಾತುಜಕರ್, ಮಸ್ಬಹುಲ್ನೂರ್ ಇವನ ಕೃತಿಗಳು. ಮನ್‌ಲಗನ್ ಮಸ್ನವಿ ಛಂದಸ್ಸಿನಲ್ಲಿದೆ. ಲಾಲಾ ಮೆಹ್ತಾಬ್‌ರಾಯ್ ಮೈಸೂರು ನಿವಾಸಿ. ಇವನ ಕೃತಿ ಮೆಹ್ತಾಬೆಸುಖುನ್. ಇದರಲ್ಲಿ ಪ್ರೇಮ ಗೀತೆಗಳಿವೆ. ಇದು ಗಜಲ್. ನಜಮ್, ರುಬಾಯತ್, ಖಿತಾತ್ ಮೊದಲಾದವು ಪದ್ಯ ಸಂಕಲನಗಳು. ಖಾದಿಮ್ ಫಕೀರ್, ಷಹಬಾಜ್, ಷೀರಾನಿ, ಷಾಕಿರ್, ಕಮಲ್ ಮೊದಲಾದ ಇತರ ಪ್ರಸಿದ್ಧ ಕವಿಗಳೂ ಈ ಕಾಲದಲ್ಲಿದ್ದರು.

ಟಿಪ್ಪುವಿನ ಮುನ್ಷಿಯಾಗಿದ್ದ ಮೀರ್ ಜೈನುಲ್ ಆಬದೀನ್ ಷೋಸ್ತ್ರೀಯು ಫತಹುಲ್ ಮುಜಾಹಿದೀನ್, ಖುತ್ಬಾತೆ ಜುಮಾ, ಮೋಬಿದುಲ್ ಉಜಾಹಿದೀನ್ ಎಂಬ ಕೃತಿಗಳನ್ನು ಬರೆದಿದ್ದಾನೆ. ಫತಹುಲ್ ಮುಜಾಹಿದೀನ್ ಎಂಬ ಗ್ರಂಥ' ಗದ್ಯದಲ್ಲಿದೆ. ಇದರಲ್ಲಿ ಟಿಪ್ಪುವಿನ ರಾಜ್ಯ ವ್ಯವಸ್ಥೆಯನ್ನು ಹೇಳಲಾಗಿದೆ. ಹೈದರ್ ನಾಮಾ, ಬಹದ್ದೂರ್ ನಾಮಾ, ಫತೆ ನಾಮಾ ಎಂಬ ಗ್ರಂಥ'ಗಳು ಇದೇ ಕಾಲದಲ್ಲಿ ರಚನೆಗೊಂಡ ಐತಿಹಾಸಿಕ ಕೃತಿಗಳು. ಹುಸೇನ್ ಅಲಿ ಕಿರ್ಮಾನಿ ಈ ಕಾಲದ ಶ್ರೇಷ್ಠ ಚರಿತ್ರೆಕಾರ. ನಿಷಾನೆ ಹೈದರಿ ಎಂಬ ಪಾರಸಿ ಕೃತಿ ಉರ್ದುವಿಗೆ ತರ್ಜುಮೆಯಾಗಿದೆ. ಇದು ಐತಿಹಾಸಿಕ ವಿಷಯಗಳಿಂದ ಕೂಡಿದ ಗ್ರಂಥ. ತರಬ್ ಎಂಬಾತ ಬರೆದ ಫತೇನಾಮಾ ಎಂಬ ಕೃತಿಯಲ್ಲಿ ಮರಾಠರಿಗೂ ಟಿಪ್ಪುವಿಗೂ ನಡೆದ ಯುದ್ಧದ ಸಾಹಸ ಕಾರ್ಯಗಳನ್ನು ವರ್ಣಿಸಲಾಗಿದೆ. ಹಸನ್ ಅಲಿ ಇಜ್ಜತ್‌ನ ಮಫರುಲ್ಲ ಕಲೂಬ್, ಗಂಜಾಮಿನ ಷೇರ್‌ಮಿಯ್ಯಾ ಫಜಲ್‌ನ ಚಹಾರ್ ಕುರ್ಸಿ ತರೀಕತ್, ಅಬ್ದುಲ್ ಹಕ್‌ನ ಚೋಟಿ ಚಹಾರ್ ಕುರ್ಸಿ ಎಂಬ ಕೃತಿಗಳು ಪ್ರಸಿದ್ಧವಿದೆ. ಷಹರ್ ಬಾನು ಷಾಕಿರಾ 'ಬಯಾಜ್ ಷಾಕಿರಾ' ರಚಿಸಿದ ಮೈಸೂರಿನ ಮೊದಲ ಮಹಿಳೆ.

ಹೈದರ್ ಅಲಿ ಮತ್ತು ಟಿಪ್ಪುವಿನ ಕಾಲದಲ್ಲಿ ಕನ್ನಡ, ಮರಾಠಿ ಪಾರಸಿ ಭಾಷೆಗಳಲ್ಲಿ ಲೆಕ್ಕಪತ್ರಗಳನ್ನು ಇಡುತ್ತಿದ್ದರು. ಕನ್ನಡ ಗ್ರಂಥಗಳಲ್ಲಿ ನಿತ್ಯವ್ಯವಹಾರದ ಭಾಷೆಯಲ್ಲಿ ಅನೇಕ ಉರ್ದು ಪಾರಸಿ ಪದಗಳು ತಲೆದೋರಿದವು. ಈ ಭಾಷೆ ಚಂದ್ರಸಾಗರವರ್ಣಿ (ಸು.1810) ಎಂಬ ಜೈನಕವಿಗೆ ಮುಲ್ಲಾಶಾಸ್ತ್ರವನ್ನು ಬರೆಯಲು ಪ್ರೇರಣೆಯನ್ನಿತ್ತಿತು. ಮುಲ್ಲಾಶಾಸ್ತ್ರ ಭಾಮಿನಿ ಷಟ್ಪದಿಯಲ್ಲಿದೆ.

ಮೈಸೂರು ಒಡೆಯರ ಕಾಲದಲ್ಲಿ ಉರ್ದು ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಸನ್ನದುಗಳಲ್ಲಿ ಪಾರಸಿ ಮತ್ತು ಉರ್ದು ಶಬ್ದಗಳು ಹೇರಳವಾಗಿವೆ. ಬೆಂಗಳೂರು, ಮೈಸೂರು, ಕೋಲಾರ, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಅನೇಕ ಉರ್ದು ಕವಿಗಳು, ಕವಯಿತ್ರಿಯರು ಆಗಿ ಹೋಗಿದ್ದಾರೆ. ಕೋಲಾರದ ಅಸಿಮ್ (ಸು.1831) ಪ್ರಸಿದ್ಧ ಕವಿಯಾಗಿದ್ದ. ಷಾ ಅಬ್ದುಲ್ ಹೈ (ಸು.1884) ಪ್ರವಾದಿ ಪೈಗಂಬರರನ್ನು ಕುರಿತು ಫಿನಾನಸ್‌ಸಿಯರ್ ಎಂಬ ಗ್ರಂಥ ಬರೆದಿದ್ದಾನೆ. ಇದಲ್ಲದೆ ಇವನು ನೂರಾರು ಪದ್ಯಗದ್ಯ ಕೃತಿಗಳನ್ನು ರಚಿಸಿದ್ದಾನೆ. ಹೈದರ್, ಟಿಪ್ಪುವಿನ ಬಗ್ಗೆ ಮಹಮೂದ್‌ಖಾನ್ ಹನ್ನೆರಡು ಐತಿಹಾಸಿಕ ಕೃತಿಗಳನ್ನು ಬರೆದಿದ್ದಾನೆ.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರಾಜಾಜ್ಞೆಗಳನ್ನು ಉರ್ದು ಹಾಗೂ ಕನ್ನಡದಲ್ಲಿ ಹೊರಡಿಸುತ್ತಿದ್ದರು. ಕೃಷ್ಣರಾಜ ಒಡೆಯರು ಕೆಲವೊಮ್ಮೆ ಉರ್ದುವಿನಲ್ಲೂ ಭಾಷಣ ಮಾಡುತ್ತಿದ್ದರಂತೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉರ್ದು ಹಾಗೂ ಪರ್ಶಿಯನ್ ವಿಭಾಗಗಳನ್ನು ತೆರೆದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕರ್ನಾಟಕದ ಹಳೆಯ ಮೈಸೂರು ವಿಭಾಗದಲ್ಲಿ ಉರ್ದು ಸಾಹಿತ್ಯ ಸೇವೆಗೈದ ಮೊಹಮದ್ ಸಯೀದ ಮೆಹಕಲಿ, ಮೊಹಮದ್ ಮಖದೂಮ್ ಬಿಜಾಪುರಿ, ಸಯ್ಯದ್ ಮೊಹಮ್ಮದ್ ಮಾರೂಫ್, ಅಹಮದ್ ಖಾನ್ ಷೀರಾನಿ, ಮೊಹಮ್ಮದ್ ಇಸಹಾಕ್ ಬಿಜಾಪುರಿ, ಮೀರ್ ಹುಸೇನ್ ಅಲಿ ಕಿರಮಾನಿ, ಕಾಜಿ ಗುಲಾಮ ಅಹಮದ್, ಖೈರುಲ್ಲಾಷಾ ಕಾದರಿ, ಹುಸೇನ್ ಬಿನ್ ಖಾದಿರ್, ಸೈಯದ್ ಆರಿಫ್ ಷಾ ಕಾದರಿ, ಅಬ್ದಲ್ ಹೈವಾಜ್, ಮೊಹಮ್ಮದ್ ಕಾಸಿಮ್ ಷಾಗೋಗಮ್, ಮೊಹಮ್ಮದ್ ಹುಸೇನ್ ಅಲಿ ಸುಲ್ತಾನ ಬೆಂಕಿನವಾಬ್, ನಸೀಮ್,ಮುನ್ಷಿ ಕಲಂದರ ಹುಸೇನ್, ಮೊಹಮ್ಮದ್ ಅಬ್ದುಲ್ ರಹಮಾನ್ ದಿಲ್, ಮೊಹಮ್ಮದ್ ಬಾಕರ್

ಡೆಲ್ಲಿ, ಆಯಿಷಾ ಬೇಗಂ, ರಕಿಯಾ ಬೇಗಂ ಮೊದಲಾದ ಸಾಹಿತಿಗಳನ್ನು ಇಲ್ಲಿ ಸ್ಮರಿಸಬಹುದು.

1956ರಲ್ಲಿ ಮೈಸೂರು ರಾಜ್ಯದ ಪುನರ್ ವ್ಯವಸ್ಥೆಯಾದಾಗ ಹಳೆಯ ಹೈದರಾಬಾದ್ ಸಂಸ್ಥಾನದಿಂದ ಕರ್ನಾಟಕಕ್ಕೆ ಬಂದು ಸೇರಿದ ರಾಯಚೂರು, ಗುಲ್ಬರ್ಗ, ಬೀದರ್ ಜಿಲ್ಲೆಗಳ ಸರ್ಕಾರಿ ಕಛೇರಿಗಳಲ್ಲಿ ಆರಂಭದಲ್ಲಿ ಎಲ್ಲ ಕೆಲಸ ಕಾರ್ಯಗಳೂ ಆಡಳಿತವೂ ಉರ್ದುವಿನಲ್ಲೇ ನಡೆಯುತ್ತಿತ್ತು. ಉರ್ದು ಭಾಷೆಯೇ ಶಿಕ್ಷಣ ಮಾಧ್ಯಮವಾಗಿತ್ತು. ಸಿದ್ದಯ್ಯ ಪುರಾಣಿಕ, ಸೇತುಮಾಧವರಾವ್ ಪಗಡಿ, ಜಗನ್ನಾಥರಾವ್ ಚಂಡ್ರಕಿ ಮೊದಲಾದವರು ಉರ್ದುವನ್ನು ಪ್ರಧಾನವಾಗಿ ಕಲಿತಿದ್ದರು. ರಾಯಚೂರಿನ ನ್ಯಾಯಾಧೀಶರಾಗಿದ್ದ ರಾಘವೇಂದ್ರ ರಾವ್ (1894-1974) ಅವರು ಮಾಡಿದ ಉರ್ದು ಸೇವೆಗಾಗಿ ಅವರಿಗೆ ಖಿಯಾಮ ಐ ಆಂಧ್ರಾ ಎಂಬ ಬಿರುದು ಬಂದಿತ್ತು.

ಕರ್ನಾಟಕದಲ್ಲಿ ಈಗ ಉರ್ದು ಭಾಷೆಯ ಬೆಳವಣಿಗೆ ಹಾಗೂ ಅಭಿವೃದ್ಧಿ ಸಾಕಷ್ಟಾಗಿದ್ದು ಸಾಹಿತ್ಯ, ವೃತ್ತಪತ್ರಿಕೆ, ಭಾಷಾಂತರ, ಕರ್ನಾಟಕ ಉರ್ದು ಅಕಾಡೆಮಿಯ ಸ್ಥಾಪನೆ, ನಿಘಂಟುಗಳ ಸಂಪಾದನೆ ಮುಂತಾದ ಕಾರ್ಯಗಳ ಮೂಲಕ ಕನ್ನಡದೊಡನೆ ಉರ್ದು ಹಿತಮಿತವಾಗಿ ಬೆರೆಯುತ್ತ ನಡೆದಿದೆ. ಇಬ್ರಾಹಿಂ ಜಲೀಸ್ ಅವರ ಭೂಕಾ ಬಂಗಾಲ, ಜರದ್ ಚೆಹರಾ ಎಂಬ ಉರ್ದು ಗ್ರಂಥಗಳು, ಚಿಂಚೋಳಿಯ ಮುಜ್ತಾಬಾ ಹುಸೇನರ ಕಿಸ್ಸಾ ಮುಖ್ತಸಿರ್, ಆಖಿರ್‌ಕಾರ್ (1997) 'ಮೇರಾ ಕಾಲಂ' (1999) ಎಂಬ ಹಾಸ್ಯ ಪ್ರಬಂಧಗಳು, ಅಬ್ದುಲ್ ಕಾದಿರ್ ಅದೀಬ್‌ರ ನಕ್ಕಾರ ಖಾನೆ ಮೆ ತೋತೆ ಎಂಬ ವಿಡಂಬನಾತ್ಮಕ ಸಂಕಲನ, ಹುಬ್ಬಳ್ಳಿಯ ಅನಿಲ್ ಠಕ್ಕರ್ ಅವರ ಮೋಸಮಿ ಪರಿಂದೆ (1998) ಕಥಾಸಂಕಲನ, ಓಸ್ ಕಿ ಝಿಲ್ (2002) ಎಂಬ ಕಾದಂಬರಿ ಕರ್ನಾಟಕದಲ್ಲಿ ಉರ್ದು ಸಾಹಿತ್ಯಕ್ಕೆ ಮೆರುಗನ್ನು ನೀಡಿವೆ.

ಸುಲೇಮಾನ್ ಖತೀಬ್, ಮಹಮೂದ್ ಅಯಾಜ್, ಹಮೀದ್ ಅಲ್ಮಾಸ್, ಮುದ್ದಣ್ಣ ಮಂಜರ್, ಷಾ ಅಬ್‌ಲ್ ಹುಸೇನ್ ಅದೀಬ್, ನಸೀಮ ಮೈಸೂರಿ, ನಫೀಸ್ ಬೆಂಗಳೂರಿ, ಹಜರತ್ ಫೋತ್, ಹುಸನಾ ಸರ್ವರ್, ಜಮೀರ ಆಕಿಲ್‌ಷಾಹಿ, ಷಾಹಿದ್ ಮೈಸೂರಿ, ಜೋಹರ್ ಮೈಸೂರಿ, ಗೋಹರ್ ತರಿಕೇರವಿ, ರಾಹಿಲ್, ರಫಲಾಕ್ ಅಫಸರ್, ಸಲೀಮ ತಮನ್ನಾಯಿ ಮೊದಲಾದ ಸಾಹಿತಿಗಳು ತಮ್ಮ ಸಾಹಿತ್ಯ ಕೃತಿಗಳಿಂದ ಉರ್ದು ಬೆಳೆಯನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

ಉರ್ದು ಭಾಷೆಯ ವಿದ್ವತ್ತಿನ ಕ್ಷೇತ್ರದಲ್ಲಿ ವಹಾಬ್ ಅಂದಲೀಬ್, ಖಾಲಿದ್ ಸಯೀದ್, ತಯ್ಯಬ್ ಅನ್ಸಾರಿ, ಮಹಮದ್ ಹಾಷಿಮ್ ಅಲಿ, ಮಸೂದ ಸಿರಾಜ್, ಹೈದರ್‌ಅಲಿ ಕರಮಡಿ, ಇಕ್ಬಾಲ್ ಹಾಷಿಮಿ, ಖಲೀಲ್ ಮಾಮೂನ್, ಅಬ್ದುಲ್ ಅಹಮದ್ ಮೊದಲಾದವರು ಗಮನಾರ್ಹ ಕೆಲಸಮಾಡಿದ್ದಾರೆ. ಉರ್ದು ಗದ್ಯ ಸಾಹಿತ್ಯಕ್ಕೆ ಕರ್ನಾಟಕದ ಮಹಿಳೆಯರಲ್ಲಿ ಹಬೀಬುನ್ನಿಸಾ, ಅಮೀನಾಖಾನ್, ಫಹಮೀದಾ ಬೇಗಂ, ಜಮೀಲಾ ಬೇಗಂ, ಜಹಾನ್ ಅರಾಬೇಗಂ, ನೀಲೋಫರ ಸಮೀನಾ, ಸುಹಾನಾ ಷಬ್ನಮ್, ಮಹಮೂದಾ ಖಾನಂ, ಮಾಹೆಜಬೀನ್, ವಹೀದಾ ಖಾತೂನ್, ಮುಮತಾಜ್ ಜರೀನಾ ಮೊದಲಾದವರು ವಿಶೇಷ ಸೇವೆ ಸಲ್ಲಿಸಿದ್ದಾರೆ.

ವೃತ್ತಪತ್ರಿಕಾ ಕ್ಷೇತ್ರದಲ್ಲಿಯೂ ಉರ್ದು ಮುಂಚೂಣಿಯಲ್ಲಿದೆ. ಕರ್ನಾಟಕದ ಮಹಬೂಬ್‌ಹುಸೇನ್ ಜಿಗರ್, ಅಬುಲ್ ಹಕ್ ತಹರೀನ್, ಹಾಮಿದ್ ಅಕಮಲ್, ಉಸ್ಮಾನ್ ಸಹರಾಯಿ, ಹಕೀಮ ಲೇಕ, ಅಹಮದ್ ನೇಮಾನಿ, ಮಹಮೂದ್ ಅಯಾಜ್‌ಜಿಯಾಮೀರ್, ಮಕ್ದೂಮ್ ಅಲಿ ಖಾನ್, ಷಫಿ ಅಹಮದ್ ಷರೀಫ್, ಇಸ್ಮಾಯಿಲ್ ತಾಬುಷ್, ಅಬ್ದುಲ್‌ಹಾದಿ, ರಫ ಅತ್ ಮೊದಲಾದವರು ಪತ್ರಿಕಾ ಸಂಪಾದಕರುಗಳಾಗಿ ವೃತ್ತಪತ್ರಿಕಾ ವ್ಯವಸಾಯದಲ್ಲಿ ಅಗ್ರಗಣ್ಯರಾಗಿದ್ದಾರೆ.

ಕಾಸಿಮುಲ್ ಅಖ್ಬಾರ್, ಮಹಾಫಿಜ್, ಷಮಾಯ ಸುಖುನ್, ಷಾಹ್‌ರಾಹೆ ತರಕ್ಕಿ, ಮೈಸೂರ್ ಅಖ್ಬಾರ್, ಸಾಲಾರ್ (1964-2004), ಪಾಸ್ಬಾನ್, ಸಿಯಾಸತ್, ನಷೇಮನ್, ತರಜುಮಾನ್ ಜುನೂಬ್, ರಹನುಮಾಯೆ ಕರ್ನಾಟಕ ಮೊದಲಾದ ಪತ್ರಿಕೆಗಳು ಹೊರಬಂದವು. ಸಾಲಾರ್ ಪತ್ರಿಕೆ ಈಗಲೂ ಭಾರತಾದ್ಯಂತ ಪ್ರಸಾರದಲ್ಲಿದೆ.

ಉತ್ತಮ ಕೃತಿಗಳನ್ನು ಉರ್ದುವಿನಿಂದ ಕನ್ನಡಕ್ಕೆ, ಕನ್ನಡದಿಂದ ಉರ್ದುವಿಗೆ ಅನುವಾದಿಸುವ ಕಾರ್ಯ ಬಹಳ ಹಿಂದಿನಿಂದ ಸಾಗಿಬಂದಿದೆ. ರಾಜೇಂದ್ರಸಿಂಗ್ ಅವರ ಏಕ್ ಚಾದರ್ ಮೈಲೀಸಿ ಎಂಬ ಕಾದಂಬರಿಯನ್ನು ಲಿಂಗಸೂರ ವಿಠಲರಾಯರು ಅನುವಾದಿಸಿದ್ದಾರೆ. ರಫಿಯಾ ಮಂಜೂರುಲ್ ಅಮೀನರ ಆಲಮ್ ಪನಾಹ್ ಎಂಬ ಕಾದಂಬರಿಯನ್ನು (1987) ಶ್ಯಾಮಲಾ ಮಾಧವರು ಕನ್ನಡಕ್ಕೆ ಅನುವಾದಿಸಿದ್ದಾರೆ (1994). ಈ ಕೃತಿ ಫರಮಾನ್ ಎಂಬ ಹೆಸರಿನಲ್ಲಿ ಧಾರಾವಾಹಿಯಾಗಿ ದೂರದರ್ಶನದಲ್ಲೂ ಪ್ರಸಾರವಾಗಿದೆ (1992). ಇದಲ್ಲದೆ ರಜಾವುಜಬ್ಬಾರ್, ಫಿಕರ ತೌನ್‌ಸವಿ, ಕೇವಲ್ ಧೀರ್, ಮಸರೂರ್ ಜಹಾನ್, ಅತೀಯಾ ಪರವೀನ್, ನಯೀಮಾಜಾಫರಿ, ಬಾನು ಸರತಾಜ್, ಷಾಕಿರ್ ಕರೀಮಿ, ಎಂ.ಎಚ್. ಖಾನ್, ಬಲವಂತ್ ಸಿಂಗ್, ಜಫರ್ ಅಹಮದ್ ನಿಜಾಮಿ, ಅಜೀಜ್ ಕೈಸಿ, ಇಫತ್ತ ಮೋಹಾನಿ, ಬಷೇಷರ ಪ್ರದೀಪ್, ಜಗದೀಶ್ ಬಿಮಲ್, ಮುಜ್ತಬಾ ಹುಸೇನ್, ಮೀಮ್‌ಕಾಫ್ ಮೆಹ್ತಾಬ್, ರಫೀಯಾ ಮಂಜೂರುಲ್ಲ ಅಮೀನ್, ಅನ್ವರ್ ಇನಾಯತ್‌ಉಲ್ಲಾ, ಅನ್ವರ್‌ನುಜಹತ್, ಅನಿಲ್ ಠಕ್ಕರ್ ಮೊದಲಾದವರ ಉರ್ದುಕಥೆಗಳನ್ನು ಮಾಧವರಾವ್ ಮುಧೋಳ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ (1962-2004). ಸಂಯುಕ್ತ ಕರ್ನಾಟಕ, ಪ್ರಜಾಮತ, ಪ್ರಪಂಚ, ಕಸ್ತೂರಿ, ಕರ್ಮವೀರ, ಸುಧಾ, ಮಯೂರ, ಸಂಕೇತ, ಪುಸ್ತಕ ಪ್ರಪಂಚ, ತರಂಗ ಮೊದಲಾದ ವಿವಿಧ ಪತ್ರಿಕೆಗಳಲ್ಲಿ ಈ ಕಥೆಗಳು ಪ್ರಕಟವಾಗಿವೆ. ಮೌಲಾನಾ ಮೊಹಮ್ಮದ್ ಸಿರಾಜುಲ್ ಹಸನ್‌ರ ಮಾರ್ಗದರ್ಶನದಲ್ಲಿ ಕರ್ನಾಟಕ ಇಸ್ಲಾಮಿ ಸಾಹಿತ್ಯ ಪ್ರಕಾಶನ ಅನೇಕ ಉರ್ದು ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದೆ.

ಕನ್ನಡದಿಂದ ಉರ್ದು ಭಾಷೆಗೂ ಹಲವು ಪುಸ್ತಕಗಳು ಭಾಷಾಂತರಗೊಂಡಿವೆ. ಎಸ್.ಎಲ್.ಭೈರಪ್ಪನವರ ವಂಶವೃಕ್ಷ ಕಾದಂಬರಿಯನ್ನು ಸಯ್ಯದ್ ಷಹಾಬುದ್ದೀನ್ ರೋಷನ್ (1992), ಯು.ಆರ್. ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯನ್ನು ಷಫಿ ಅಹಮ್ಮದ್ ಷರೀಫ್ (1993), ಸರ್ವಜ್ಞನ ನೂರು ವಚನಗಳನ್ನು ಅಕಮಲ್ ಅಲ್ದೂರಿ (2000), ಶಿವರಾಮ ಕಾರಂತರ ಚೋಮನದುಡಿ ಕಾದಂಬರಿಯನ್ನು ಮಾಹಿರ್ ಮನ್ಸೂರ್ (2003) ಉರ್ದುವಿಗೆ ಅನುವಾದಿಸಿದ್ದಾರೆ.

ಕರ್ನಾಟಕದಲ್ಲಿ ಉರ್ದು ಸೇವೆ ಮತ್ತು ಕನ್ನಡ ಉರ್ದು ಮೈತ್ರಿ ಬೆಳೆಸಲು ಉರ್ದು ಅಕಾಡೆಮಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಿ (1977) ಉರ್ದು ಸಾಹಿತ್ಯವನ್ನು ಬೆಳೆಸುವುದರಲ್ಲಿ ನೆರವಾಗಿದೆ. ಅನೇಕ ಕವಿಗಳಿಗೆ, ಗದ್ಯ ಲೇಖಕರಿಗೆ, ಭಾಷಾಂತರಕಾರರಿಗೆ ಪ್ರೋತ್ಸಾಹವಿತ್ತಿದೆ. ಉರ್ದು ಅಕಾಡೆಮಿಯ ವತಿಯಿಂದ ನಡೆದಿರುವ ಉರ್ದು ಕನ್ನಡ ಹಾಗೂ ಕನ್ನಡ ಉರ್ದು ನಿಘಂಟು ಒಂದು ಮಹತ್ತ್ವದ ಕೆಲಸವಾಗಿದೆ. ಉರ್ದು ಕನ್ನಡ ನಿಘಂಟು 1986ರಲ್ಲಿ ಪ್ರಕಟವಾಯಿತು. 1994ರಲ್ಲಿ ಪರಿಷ್ಕಾರ ಹಾಗೂ ಪುನರ್ ಮುದ್ರಣಗೊಂಡಿದೆ. ಈ ನಿಘಂಟಿನ ರಚನೆಯಲ್ಲಿ ಮೌಲಾನಾ ಅಬ್ದುಲ್ ಗಫಾರ್ (ಸಂಪಾದಕ), ಇಬ್ರಾಹಿಂ ಸಯೀದ್, ಎಂ.ಸಾದುಲ್ಲಾ ಅವರು ದುಡಿದಿದ್ದಾರೆ.

ಕನ್ನಡ - ಉರ್ದು ನಿಘಂಟಿನ ಪ್ರಕಟಣೆಯು (1994) ಕೆಲಸ ಅತ್ಯಂತ ಮಹತ್ತ್ವದ್ದು. ಇದು ಭಾರತದ ಇತಿಹಾಸದಲ್ಲೇ ಪ್ರಪ್ರಥಮವಾಗಿ ಸಿದ್ಧವಾದಂಥದ್ದು. ಇದರ ರಚನೆಯಲ್ಲಿ ನಜಿಮುಸ್ಸಾಕಿಬಂ ಷಹನಾ (ಸಂಪಾದಕ), ಮಾಧವರಾವ್ ಮುಧೋಳ್ (ಸಹಸಂಪಾದಕ), ವೆಂಕಟರಾವ್ ಗಂಗಾವತಿ (ಸಹಾಯಕ ಸಂಪಾದಕ) ದುಡಿದ್ದಾರೆ. ಈ ನಿಘಂಟು 1997ರಲ್ಲಿ ಪುನರ್ ಮುದ್ರಣಗೊಂಡಿದೆ (ನೋಡಿ: ಅಕಾಡೆಮಿಗಳು). (ಎಂ.ಎಂಯು.)

**ತಮಿಳು :** ಕನ್ನಡದ ಸೋದರ ಭಾಷೆಯಾದ ತಮಿಳು ಕನ್ನಡಕ್ಕಿಂತ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಸಾಹಿತ್ಯಕವಾಗಿ ತೆಲುಗಿನೊಂದಿಗೆ ಹೆಚ್ಚು ಬಾಂಧವ್ಯವನ್ನು ಹೊಂದಿರುವ ಕನ್ನಡ ಭಾಷಾವಿಷಯದಲ್ಲಿ ತಮಿಳಿಗೆ ಸಮೀಪವಾಗಿದೆ. ಆದರೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ತಮಿಳು ಸಾಹಿತ್ಯದೊಂದಿಗೆ ತೌಲನಿಕವಾಗಿ ಪರಿಶೀಲಿಸಿದಾಗ ಈ ಎರಡು ಸೋದರ

ಭಾಷೆಗಳಿಗಿರುವ ಸಂಬಂಧ ಬಾಂಧವ್ಯಗಳು ಸಾಹಿತ್ಯಕವಾಗಿಯೂ ಬೆಳೆದುಬಂದಿವೆ ಎಂಬ ವಿಷಯ ವ್ಯಕ್ತವಾಗುತ್ತದೆ.

ಹತ್ತನೆಯ ಶತಮಾನಕ್ಕೆ ಮುಂಚೆ ಕನ್ನಡ ಮತ್ತು ತಮಿಳು ಭಾಷಾ ಸಾಹಿತ್ಯಗಳ ನಡುವೆ ಇದ್ದ ಸಂಬಂಧವನ್ನು ನಿರೂಪಿಸುವ ಮಾಹಿತಿಗಳು ಹೆಚ್ಚಾಗಿ ದೊರಕುವುದಿಲ್ಲ. ಪೂರ್ವದ ಹಳಗನ್ನಡದ ಶಾಸನಗಳ ಭಾಷೆ ತಮಿಳು ಶಾಸನಗಳ ಭಾಷೆಯನ್ನು ಹೋಲುತ್ತದೆ ಎಂದು ಹೇಳಬಹುದು. ಹಲ್ಮಿಡಿ ಶಾಸನದ ಕಾಲಕ್ಕೇ ತಮಿಳಿನಲ್ಲಿ ಸಮೃದ್ಧವಾದ ಸಾಹಿತ್ಯವಿತ್ತು. 4-5ನೆಯ ಶತಮಾನಗಳಲ್ಲಿ ಪ್ರಾಚೀನ ತಮಿಳು ಗೀತೆಗಳನ್ನು ಸಂಗ್ರಹಿಸಿ ಕ್ರಮಬದ್ಧವಾದ ಸಂಕಲನಗಳಾಗಿ ವಿಂಗಡಿಸುವ ಕಾರ್ಯ ನಡೆಯಿತು. ಸುಮಾರು ಇದೇ ಕಾಲದಲ್ಲಿ ತೊಲ್‌ಕಾಪ್ಪಿಯರ್ ರಚಿಸಿದ ತೊಲ್‌ಕಾಪ್ಪಿಯಮ್ ಎಂಬ ಲಕ್ಷಣ ಗ್ರಂಥ ಬೆಳಕು ಕಂಡಿತು. ಈ ಕಾಲದಲ್ಲಿ ಕನ್ನಡ ಸಾಹಿತ್ಯದ ಸ್ಥಿತಿಗತಿಗಳು ಹೇಗಿದ್ದವು ಎಂಬುದನ್ನು ತಿಳಿಯಲು ಸರಿಯಾದ ಆಧಾರಗಳಿಲ್ಲ.

ಪ್ರಾಚೀನ ತಮಿಳು ಗ್ರಂಥಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ತಿರುಕ್ಕುರಳ್. ಇದನ್ನು ಬರೆದವನು ತಿರುವಳ್ಳುವರ್. ಇವನ ಕಾಲ ಸು.200. ತಿರುಕ್ಕುರಳ್‌ನಲ್ಲಿ ವೆಣ್ಬಾ ಛಂದಸ್ಸಿಗೆ ಸೇರಿದ 1330 ಗೀತೆಗಳಿವೆ. ಈ ಕಾವ್ಯ ಕನ್ನಡವೂ ಸೇರಿದಂತೆ ಪ್ರಪಂಚದ ಅನೇಕ ಭಾಷೆಗಳಿಗೆ ಭಾಷಾಂತರವಾಗಿದೆ. ಆರ್.ನರಸಿಂಹಾಚಾರ್ಯ, ಬಿ.ಎಂ.ಶ್ರೀ., ಎಲ್.ಗುಂಡಪ್ಪ ಮೊದಲಾದವರು ತಿರುಕ್ಕುರಳ್‌ಅನ್ನು ಕನ್ನಡಕ್ಕೆ ಅನುವಾದ ಮಾಡಿದವರಲ್ಲಿ ಕೆಲವರು.

ಸು.2ನೆಯ ಶತಮಾನದಲ್ಲಿ ರಚಿತವಾದ ಶಿಲಪ್ಪದಿಕಾರಂ ತಮಿಳಿನ ಪಂಚಮಹಾಕಾವ್ಯಗಳಲ್ಲಿ ಒಂದು. ಇದರಲ್ಲಿ ನೀಲಗಿರಿಯ ಕನ್ನಡತಿಯರ ಕುಣಿತದ ಹಾಡಿನ ಪ್ರಸ್ತಾಪ ಬರುತ್ತದೆ. ಇದೇ ಕಾಲದ ಪೆರಿಂದೇವನಾರ್ ವೆಣ್ಬಾ ಛಂದಸ್ಸಿನಲ್ಲಿ ಭಾರತವನ್ನು ಬರೆದಿದ್ದಾನೆ. ಪಂಪ ಈ ತಮಿಳು ಭಾರತವನ್ನು ನೋಡಿರಬಹುದು.

7ನೆಯ ಶತಮಾನದಿಂದ ಸುಮಾರು ಎರಡು ಶತಮಾನಗಳ ಕಾಲ ತಮಿಳಿನಲ್ಲಿ ಭಕ್ತಿ ಪಂಥದ ಸಾಹಿತ್ಯ ಬೆಳೆಯಿತು. ನಾಯನ್ಮಾರರು ಶೈವಪಂಥಕ್ಕೂ ಆಳ್ವಾರರು ವೈಷ್ಣವ ಪಂಥಕ್ಕೂ ಸೇರಿದವರು. ತೇವಾರಮ್ ಎಂಬ ಹೆಸರಿನ ಶೈವಗೀತೆಗಳೂ ದಿವ್ಯಪ್ರಬಂಧಗಳೆಂದು ಹೆಸರು ಪಡೆದ ವೈಷ್ಣವ ಗೀತೆಗಳೂ ದಕ್ಷಿಣ ದೇಶದ ಅನೇಕ ಭಕ್ತಿಕಾವ್ಯಗಳ ಮೇಲೆ ಪ್ರಭಾವ ಬೀರಿವೆ. ನಂಬಿ ಆಂಡಾರ್ ನಂಬಿ ಎಂಬುವನು ಶೈವ ಗೀತೆಗಳನ್ನೂ ನಾದಮುನಿ ಎಂಬುವನು ವೈಷ್ಣವ ಗೀತೆಗಳನ್ನೂ ಸಂಗ್ರಹಿಸಿ ಸಂಕಲನ ಮಾಡಿದ್ದಾನೆ.

ತಮಿಳಿನಲ್ಲಿ ಬೌದ್ಧ ಜೈನ ಸಾಹಿತ್ಯಗಳು, ಆಮೇಲೆ ಶೈವ ವೈಷ್ಣವ ಸಾಹಿತ್ಯಗಳು ಬೆಳೆಯುತ್ತಿದ್ದ ಕಾಲದಲ್ಲಿ ಕನ್ನಡ ಸಾಹಿತ್ಯದ ಸ್ಥಿತಿಯನ್ನು ಸರಿಯಾಗಿ ನಿರ್ಧರಿಸುವ ಆಧಾರಗಳು ಕಡಿಮೆ. ಆದರೆ ಆ ಕಾಲದ ಶಾಸನಗಳ ಅಧ್ಯಯನದಿಂದ ತಮಿಳಿಗೂ ಇತರ ದ್ರಾವಿಡ ಭಾಷೆಗಳಿಗೂ ಸಮಾನವಾದ ಛಂದಸ್ಸುಗಳು ಕನ್ನಡದಲ್ಲಿ ಪ್ರಚಲಿತವಾಗಿದ್ದುವೆಂದು ಹೇಳಬಹುದು. ತಮಿಳಿನ ಕುಱಳ್, ವೆಣ್ಬಾ ಛಂದಸ್ಸುಗಳು ಕನ್ನಡದ ಏಳೆ, ತ್ರಿಪದಿ ಮುಂತಾದ ದೇಸೀ ಛಂದಸ್ಸುಗಳನ್ನು ಹೋಲುತ್ತವೆ.

10ನೆಯ ಶತಮಾನಕ್ಕೆ ಮುಂಚೆ ಗುಣಗಾಂಕಿಯಂ ಎಂಬ ಕನ್ನಡ ಲಕ್ಷಣ ಗ್ರಂಥ ತಮಿಳಿನ ಯಾಪ್ಪರುಂಗಲಮ್ ಎಂಬ ಛಂದೋಗ್ರಂಥದ ಆಧಾರ ಗ್ರಂಥಗಳಲ್ಲಿ ಒಂದಾಗಿತ್ತು ಎಂಬುದು ಗಮನಾರ್ಹ ಸಂಗತಿ. ಕನ್ನಡದ ಶಿವಶರಣರ ಮೇಲೆ ನಾಯನ್ಮಾರರ ಪ್ರಭಾವವಿತ್ತು ಎಂಬುದರಲ್ಲಿ ಸಂದೇಹವಿಲ್ಲ. 11ನೆಯ ಶತಮಾನದ ಕೊನೆಯ ವೇಳೆಗೆ ತಮಿಳುನಾಡಿನ ಶೈವಧರ್ಮ ಕನ್ನಡನಾಡಿಗೆ ಹರಡತೊಡಗಿತು. ಕನ್ನಡ ನಾಡಿನಲ್ಲಿ ಅದುವರೆಗೂ ಇದ್ದ ಜೈನಧರ್ಮಕ್ಕೆ ಶೈವರಾದ ಚೋಳರಿಂದ ರಾಜಕೀಯ ಆಘಾತಗಳೊಂದಿಗೆ ಧಾರ್ಮಿಕವಾದ ಒತ್ತಡಗಳೂ ಹೆಚ್ಚಿದುವು. ಚೋಳರ ನಾಡಿನಿಂದ ರಾಮಾನುಜಮತದ ಭಕ್ತಿರೀತಿ ಕರ್ನಾಟಕದಲ್ಲೂ ಹರಡಿತು.

12ನೆಯ ಶತಮಾನದಿಂದ 14ನೆಯ ಶತಮಾನದವರೆಗಿನ ಕಾಲದಲ್ಲಿ ಕನ್ನಡದ ಮೇಲೆ ತಮಿಳಿನ ಪ್ರಭಾವವನ್ನು ಕಾಣಬಹುದು. ಬಸವೇಶ್ವರರ ಧಾರ್ಮಿಕ ಕ್ರಾಂತಿಗೆ ತಮಿಳುನಾಡಿನ ಶೈವ ಕೊಡುಗೆಯೂ ತಕ್ಕಮಟ್ಟಿಗೆ ಇದೆ ಎಂದು ಹೇಳಬಹುದು. ಬಸವಣ್ಣನವರು ಬಾಳಿದ ಯುಗದಲ್ಲಿ ಸಾಹಿತ್ಯ 'ಮಾರ್ಗ'ದಿಂದ 'ದೇಸಿ'ಗೆ ಬದಲಾಗುತ್ತಿದ್ದ ಸಂಕ್ರಮಣ ಕಾಲವಾಗಿತ್ತು. ವಚನ ಸಾಹಿತ್ಯ ತಮಿಳು ಶೈವ ಸಂಪ್ರದಾಯದ ತೇವಾರಮ್ ಎಂಬ ಭಕ್ತಿಗೀತೆಗಳ ಪ್ರಭಾವದಿಂದ ಹುಟ್ಟಿತೆಂಬ ಅಭಿಪ್ರಾಯವೂ ಇದೆ. ತಮಿಳುನಾಡಿನ ಶೈವಸಿದ್ಧಾಂತಗಳನ್ನೂ ಶಿವಶರಣರ ಚರಿತ್ರೆಗಳನ್ನೂ ತಕ್ಕಮಟ್ಟಿಗೆ ಉಪಯೋಗಿಸಿಕೊಂಡವರಲ್ಲಿ ಹರಿಹರನನ್ನು ಪ್ರಮುಖವಾಗಿ ಗುರುತಿಸಬೇಕು. ಅರವತ್ತುಮೂವರು ಪುರಾತನರು ಎಂದು ಹೆಸರು ಪಡೆದಿರುವ ತಮಿಳನಾಡಿನ ಶಿವಶರಣರನ್ನು ಬಸವಣ್ಣನವರು ಸ್ಮರಿಸಿದ್ದಾರೆ. ಶೇಕ್ಕಿಳಾರ್ ರಚಿತ 'ಪೆರಿಯಪುರಾಣಂ' ಅರವತ್ತುಮೂವರ ಚರಿತ್ರವನ್ನು ಕೀರ್ತಿಸುವ ಗ್ರಂಥ. ಈ ಗ್ರಂಥವನ್ನು ಹರಿಹರ ನೋಡಿ ತನ್ನ ಕೆಲವು ರಗಳೆಗಳಿಗೆ ಕಥಾಭಾಗವನ್ನು ಆರಿಸಿಕೊಂಡಿರಬೇಕು. ಹರಿಹರನ ರಗಳೆಗಳಲ್ಲಿ ಕಂಡುಬರುವ ಕೆಲವು ತಮಿಳು ಪದಗಳನ್ನು ನೋಡಿದರೆ ಅವನಿಗೆ ತಮಿಳು ಭಾಷೆಯ ಪರಿಚಯವಿತ್ತೆಂದು ತೋರುತ್ತದೆ. ಹೀಗೆಯೇ ಆಂಡಯ್ಯ ಕಬ್ಬಿಗರಕಾವವನ್ನು ಬರೆಯಲು ಶೆಂದಮಿಳ್ ಕಾವ್ಯಗಳು ಪ್ರೇರಕವಾಗಿದ್ದುವೇನೋ ಎಂಬುದೊಂದು ಊಹೆ.

ರಾಮಾನುಜಾಚಾರ್ಯರ ಸೋತ್ರಗಳ ಪ್ರಭಾವ ದಾಸರ ಪದಗಳ ಮೇಲೆ ಇದ್ದಿತೆಂದು ಹೇಳಬಹುದು. ದಾಸರ ಪದಗಳ ರಚನೆಯ ಕಾಲಕ್ಕೆ ಸ್ವಲ್ಪ ಮುಂಚೆ ಹೊರಬಂದ ಸಾಹಿತ್ಯದಲ್ಲಿ ತಮಿಳು ಭಾಷಾಸಾಹಿತ್ಯಗಳ ಸಂಪರ್ಕ ಕಂಡುಬರುತ್ತದೆ. ಚಾಮರಸನ ಪ್ರಭುಲಿಂಗಲೀಲೆ (ಸು.1430) ತಮಿಳಿಗೆ ಅನುವಾದವಾಗಿದೆ. ಶಿವಪ್ರಕಾಶಸ್ವಾಮಿ (17ನೆಯ ಶತಮಾನ) ಎಂಬುವನು ಈ ಕೃತಿಯ ಅನುವಾದಕ. ನಿಜಗುಣಶಿವಯೋಗಿ ತನ್ನ ಅರವತ್ತುಮೂವರ ತ್ರಿಪದಿಯಲ್ಲಿ ಶಿವಭಕ್ತರಾದ ತಮಿಳುನಾಡಿನ ಅರವತ್ತುಮೂವರನ್ನು ಸ್ತುತಿಸಿದ್ದಾನೆ. ತ್ರಿಷಷ್ಟಿ ಪುರಾತನರ ಚರಿತ್ರೆ ಎಂಬ ಹೆಸರಿನಲ್ಲಿ ಇಂಥದನ್ನೇ ಸುರಂಗಕವಿಯೂ ಬರೆದಿದ್ದಾನೆ. ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನಕ್ಕೆ ತಮಿಳು ಗ್ರಂಥವೇ ಆಧಾರವೆಂದು ತಿಳಿದುಬಂದಿದೆ.

ಚಿಕ್ಕದೇವರಾಯನ ಕಾಲದ ಅನೇಕ ಕವಿಗಳು ತಮಿಳು ಬಲ್ಲವರಾಗಿದ್ದರು. ಗೀತಗೋಪಾಲ ಮುಂತಾದ ಗ್ರಂಥಗಳ ಅಚ್ಚಕನ್ನಡ ಹೊಸಕಳೆಗೆ ಶೆಂದಮಿಳ್ ಪ್ರಭಾವ ಸ್ವಲ್ಪಮಟ್ಟಿಗೆ ಕಾರಣವಾಗಿರಬಹುದು. ಶ್ರೀವೈಷ್ಣವರಾದ ಸಿಂಗರಾರ್ಯ, ತಿರುಮಲಾರ್ಯ ಮೊದಲಾದವರಿಗೆ ತಮಿಳಿನ ಪರಿಚಯ ಇದ್ದಿರಬೇಕು. ಚಿಕುಪಾಧ್ಯಾಯನ ಗ್ರಂಥಗಳಲ್ಲಿ ಬಹುಪಾಲು ವೈಷ್ಣವ ಗ್ರಂಥಗಳಾಗಿವೆ.

ಹೊಸಗನ್ನಡ ಯುಗದ ಮೊದಲನೆಯ ಹಂತದಲ್ಲಿ ತಮಿಳು ಗ್ರಂಥಗಳಿಂದ ಅನುವಾದವಾದ ಅನೇಕ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಕ್ರೈಸ್ತ ಮಿಷನರಿಗಳು ಧಾರ್ಮಿಕ ಗ್ರಂಥಗಳನ್ನೂ ತಮಿಳಿನಿಂದ ಭಾಷಾಂತರ ಮಾಡಿರುತ್ತಾರೆ. ಜಾನ್ ರೀಡ್, ಕೆ.ವಿ.ಜೋಸಿಯಾ, ಇ.ಎಲ್.ಚಾರ್ಬಾ ಮೊದಲಾದವರು ತಮಿಳಿನಲ್ಲಿದ್ದ ಧಾರ್ಮಿಕ ಗ್ರಂಥಗಳನ್ನು ಕ್ರೈಸ್ತಧರ್ಮದ ಪ್ರಚಾರಕ್ಕಾಗಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಕ್ರೈಸ್ತಮಿಷನರಿಗಳೇ ಅಲ್ಲದೆ ದೇಶೀಯ ಪಂಡಿತರೂ ತಮಿಳಿನಿಂದ ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಆರ್.ನರಸಿಂಹಾಚಾರ್ಯರು ಕರ್ನಾಟಕಕ್ಕೆ ಸಂಬಂಧಿಸಿದ ತಮಿಳು ಶಾಸನಗಳನ್ನೂ ಅವ್ವೈಯಾರ್‌ನಿಂದ ಹಿಡಿದು ತಿರುವಳ್ಳುವರ್‌ವರೆಗಿನ ನೀತಿಪದ್ಯಗಳನ್ನು ಅನುವಾದ ಮಾಡಿ ಕನ್ನಡಿಗರಿಗೆ ನೀಡಿದ್ದಾರೆ. ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಮತ್ತೆ ತಮಿಳಿನ ಪ್ರಭಾವ ಕನ್ನಡದ ಮೇಲೆ ಕಾಣಿಸಿಕೊಂಡಿದೆ. ಬಿ.ಎಂ.ಶ್ರೀ. ಅವರ ಸಿರಿಗನ್ನಡಂ ಗೆಲ್ಗೆ ಎಂಬ ಘೋಷಣೆಗೆ ಸ್ಫೂರ್ತಿ ಶೆಂದಮಿಳ್ ಎನ್ನುವ ಅಭಿಪ್ರಾಯವಿದೆ. ಭಾಷಿಕವಾಗಿ ಕಾಲ್ಡ್‌ವೆಲ್ ತಮಿಳು ಕನ್ನಡದ ತೌಲನಿಕ ವಿವೇಚನೆ ಮಾಡಿದ್ದಾನೆ. (ಆರ್.ವಿ.ಎಸ್.ಎಸ್.)

ಇವರಲ್ಲದೆ ಟಿ.ಬರೊ, ಬಿ.ಎಚ್.ಕೃಷ್ಣಮೂರ್ತಿ, ಎಂ.ಬಿ.ಎಮಿನೊ ಮೊದಲಾದ ಭಾಷಾತಜ್ಞರು ತಮಿಳು-ಕನ್ನಡ ಮತ್ತು ಇತರ ಭಾಷೆಗಳ ಬಾಂಧವ್ಯ ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಇತರ ಭಾಷೆಯ ಸಾಹಿತ್ಯ ಕ್ಷೇತ್ರಗಳಲ್ಲಿ ಆದಂತೆ ತಮಿಳಿನಲ್ಲಿ ಕೂಡ ಆಧುನಿಕ ಸಾಹಿತ್ಯದ ರಚನೆಗೆ ಪಾಶ್ಚಾತ್ಯ ಭಾಷೆ ಮತ್ತು ಸಾಹಿತ್ಯಗಳ ಪ್ರಭಾವವೇ ಪ್ರಧಾನವಾಗಿ

ಕಂಡುಬರುತ್ತವೆ. 1950ರ ಅನಂತರದ ಕಾಲದಲ್ಲಿ ರಚಿತವಾದ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆ, ಕಾದಂಬರಿ, ನಾಟಕ, ಕಾವ್ಯ ಹಾಗೂ ದಲಿತ ಸಾಹಿತ್ಯ, ಸ್ತ್ರೀವಾದಿ ಸಾಹಿತ್ಯ ಮುಖ್ಯವಾದವು.

ಕರ್ನಾಟಕದಲ್ಲಿ ದಲಿತ ಸಾಹಿತ್ಯದ ಉಗಮಕ್ಕೆ ಮಹಾರಾಷ್ಟ್ರದ ದಲಿತ ಪ್ಯಾಂಥರ್‍ಸ್ ಚಳವಳಿ, ಅಂಬೇಡ್ಕರ್‌ವಾದ, ಲೋಹಿಯಾವಾದ, ಆಫ್ರಿಕನ್ ಕಪ್ಪು ಸಾಹಿತ್ಯ ಮುಂತಾದವು ಕಾರಣವಾದರೆ ತಮಿಳುನಾಡಿನ ದಲಿತ ಸಾಹಿತ್ಯಕ್ಕೆ ಪೆರಿಯಾರ್ ಮತ್ತು ಅಂಬೇಡ್ಕರ್ ಮೊದಲಾದವರ ಚಿಂತನೆಗಳು ಪ್ರೇರಣೆ ನೀಡಿದವು.

ಸ್ತ್ರೀ ಸಮಾನತೆಯನ್ನು ಎತ್ತಿ ಹಿಡಿಯುವ ಸಾಹಿತ್ಯ ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿರುವುದು ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದಲೇ ಎಂಬ ಸಂಗತಿ ಗಮನಾರ್ಹವಾಗಿದೆ. ವಿಶ್ವಸಂಸ್ಥೆಯು 1975ನೆಯ ವರ್ಷವನ್ನು ಅಂತಾರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಿತು. ಅನಂತರ ರೂಪುಗೊಂಡ ಈ ಸಾಹಿತ್ಯಕ್ಕೆ ಪರಂಪರೆಯು ಕೆಲವು ಪ್ರೇರಣೆಗಳಿದ್ದರೂ ಅಂತಾರಾಷ್ಟ್ರೀಯ ಮಹಿಳಾ ವರ್ಷದ ಘೋಷಣೆ ಮತ್ತು 1985ರಲ್ಲಿ ನಡೆದ ಮಹಿಳಾ ದಶಮಾನೋತ್ಸವದ ಆಚರಣೆ ಮುಖ್ಯ ಕಾರಣವಾದವು. ತಮಿಳುನಾಡಿನಲ್ಲಿ ಸ್ತ್ರೀವಾದ ಸಾಹಿತ್ಯ ಅಂಕುರಿಸಲು ಸುಬ್ರಹ್ಮಣ್ಯ ಭಾರತಿ ಮತ್ತು ಪೆರಿಯಾರ್‌ರವರ ಸ್ತ್ರೀಪರ ಹೋರಾಟಗಳು ಪ್ರೇರಣೆ ನೀಡಿದವು.

ಆಧುನಿಕ ಸಾಹಿತ್ಯದಲ್ಲಿ ಸಣ್ಣಕಥೆ, ಕಾದಂಬರಿ, ನಾಟಕ, ಕಾವ್ಯ ಮುಂತಾದ ಪ್ರಕಾರಗಳಲ್ಲಿ ತಮಿಳು ಮತ್ತು ಕನ್ನಡ ಭಾಷೆಗಳ ನಡುವೆ ನಿಕಟವಾದ ಸಂಬಂಧವನ್ನು ಕಲ್ಪಿಸಿ ಕೊಟ್ಟ ಕ್ಷೇತ್ರವೆಂದರೆ ಅನುವಾದ ಕ್ಷೇತ್ರ. ಅನುವಾದಗಳ ಮೂಲಕ ಈ ಎರಡೂ ಭಾಷೆಗಳಲ್ಲಿ ಸಾಹಿತ್ಯಕ ಕೊಳುಕೊಡುಗೆಗಳು ನಡೆದವು. ಜಯಕಾಂತನ್ ಅವರ ಸಣ್ಣಕತೆಗಳನ್ನು ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆ ಕನ್ನಡಕ್ಕೆ ಅನುವಾದ ಮಾಡಿಸಿದೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ತಮಿಳಿನ ಅನೇಕ ಸಣ್ಣಕಥೆಗಳನ್ನು ಅನುವಾದ ಮಾಡಿಸಿ ತಮಿಳು ಕಥಾಸಂಕಲನ ಎಂಬ ಹೆಸರಿನಲ್ಲಿ ಹೊರತಂದಿದೆ. ಅಖಿಲನ್ ಅವರು ಸಂಕಲಿಸಿದ ತಮಿಳು ಸಣ್ಣಕಥೆಗಳ ಸಂಕಲನವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ತಮಿಳು ಕಥಾ ಸೌರಭ ಎಂಬ ಶೀರ್ಷಿಕೆಯಲ್ಲಿ ಅನುವಾದ ಮಾಡಿಸಿ ಪ್ರಕಟಿಸಿದೆ. ರಾಷ್ಟ್ರಕವಿ ಕುವೆಂಪು ಅವರ ಸಣ್ಣಕಥೆಗಳನ್ನು ಕುವೆಂಪುವಿನ್ ಸಿರುಗಥೈಗಳ್ ಎಂಬ ಹೆಸರಿನಲ್ಲಿ ನಟರಾಜನ್ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಅನುವಾದಿಸಿದ್ದಾರೆ. ಮಾಸ್ತಿಯವರ ಸಣ್ಣಕಥೆಗಳನ್ನು ಶೇಷನಾರಾಯಣ ಅವರೂ ಪಿ.ಲಂಕೇಶ್ ಅವರ ಸಣ್ಣ ಕಥೆಗಳನ್ನು ಪಾವಣ್ಣನ್ ಅವರೂ ಕ್ರಮವಾಗಿ ಮಾಸ್ತಿ ಸಿರುಗಥೈಗಳ್, ಕಲ್‌ಕರೈಯುಂ ನೇರಂ ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಯಶವಂತ ಚಿತ್ತಾಲರ ಕಥೆಯಾದಳು ಹುಡುಗಿ ಎಂಬ 'ಸಣ್ಣಕಥಾ ಸಂಕಲನ'ವನ್ನು ಸಿದ್ದಲಿಂಗಯ್ಯನವರು ಒರು ಪೆಣ್ ಗತೈಯಾಗಿರಾಳ್ ಎಂದು ಅನುವಾದಿಸಿದ್ದಾರೆ.

ವೇದನಾಯಗಂ ಪಿಳ್ಳೈ ಎಂಬುವರು ರಚಿಸಿದ (1879) ಪ್ರತಾಪ ಮೊದಲಿಯಾರ್ ಚರಿತಿರಂ ಎಂಬ ತಮಿಳಿನ ಮೊಟ್ಟಮೊದಲ ಕಾದಂಬರಿಯನ್ನು ಮತ್ತೂರು ಕೃಷ್ಣಮೂರ್ತಿಯವರು ಅನುವಾದಿಸಿದ್ದಾರೆ. ರಾಜಮಯ್ಯರ್ ರಚಿಸಿದ (1896) ಕಮಲಾಂಬಾಳ್ ಚರಿತಿರಂ ಎಂಬ ಕಾದಂಬರಿಯನ್ನು ಸಂಪತ್ ಗಿರಿರಾಜು ಅವರು, ಕಲ್ಕಿಯವರ ಅಲೈಯೋಸೈ, ಅಖಿಲನ್ ಅವರ ಪಾವೈ ವಿಳಕ್ಕು ಎಂಬ ಕಾದಂಬರಿಗಳನ್ನು ಮತ್ತೂರು ಕೃಷ್ಣಮೂರ್ತಿಯವರು ಕನ್ನಡಕ್ಕೆ ತಂದಿದ್ದಾರೆ. ಅಖಿಲನ್ ಅವರ ಚಿತ್ತಿರಪ್ಪಾವೈ ಎಂಬ ಮತ್ತೊಂದು ಕಾದಂಬರಿಯನ್ನು ಚಿತ್ರಕನ್ಯೆ ಎಂಬ ಹೆಸರಿನಲ್ಲಿ ಅನುವಾದ ಮಾಡಿಸಿ ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸಿದೆ. ವರದರಾಜನ್ ಅವರ ಅಗಳ್‌ವಿಳಕ್ಕು ಎಂಬ ಕಾದಂಬರಿಯನ್ನು ಶೇಷನಾರಾಯಣ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಮಾಸ್ತಿಯವರ ಚಿಕ್ಕವೀರರಾಜೇಂದ್ರ ಎಂಬ ಕಾದಂಬರಿಯನ್ನು ಹೇಮಾ ಆನಂದತೀರ್ಥನ್ ಅವರು ತಮಿಳಿಗೆ ಅನುವಾದಿಸಿದ್ದಾರೆ. ನ್ಯಾಷನಲ್ ಬುಕ್ ಟ್ರಸ್ಟ್ ಈ ಕೃತಿಯನ್ನು ಪ್ರಕಟಿಸಿದೆ. ಪೂರ್ಣಚಂದ್ರ ತೇಜಸ್ವಿಯವರ ಚಿದಂಬರ ರಹಸ್ಯ ಎಂಬ ಕಾದಂಬರಿಯನ್ನು ಚಿದಂಬರ ರಹಸಿಯಂ ಎಂದೂ ಚದುರಂಗರ ವೈಶಾಖ ಎಂಬ ಕಾದಂಬರಿಯನ್ನು ಮೌನ ಓಲಂ ಎಂದೂ ಎಂ.ಕೆ.ಇಂದಿರಾ ಅವರ ಗೆಜ್ಜೆಪೂಜೆ ಎಂಬ ಕಾದಂಬರಿಯನ್ನು ಸಲಂಗೈ ಚಡಂಗು ಎಂದೂ ಶಿವರಾಮ ಕಾರಂತರ ಚೋಮನದುಡಿ ಎಂಬ ಕಾದಂಬರಿಯನ್ನು ಮಣ್ಣುಮನುಷ್ಯರೂ ಎಂದೂ ಕೆ.ವಿ. ಅಯ್ಯರ್ ಅವರ ಶಾಂತಲೆ ಎಂಬ ಕಾದಂಬರಿಯನ್ನು ಶಾಂತಲೈ ಎಂದೂ ತಮಿಳಿಗೆ ಅನುವಾದಿಸಲಾಗಿದೆ.

ಕೋಮಲಸ್ವಾಮಿನಾಥನ್ ಅವರ ತಣ್ಣೀರ್ ತಣ್ಣೀರ್ ಎಂಬ ಪ್ರಸಿದ್ಧ ನಾಟಕವನ್ನು ಸುಬ್ರಹ್ಮಣ್ಯಂ ಎನ್ನುವವರು ಕನ್ನಡಕ್ಕೆ ತಂದಿದ್ದಾರೆ. ಚಂದ್ರಶೇಖರ ಕಂಬಾರ ಅವರ ಸಿರಿ ಸಂಪಿಗೆ ಎಂಬ ನಾಟಕವನ್ನು ಸದಾಶಿವಂ ಎನ್ನುವವರು ತಿರುಸಂಪಿಗೈ ಎಂದು ತಮಿಳಿಗೆ ಅನುವಾದಿಸಿದ್ದಾರೆ.

ಸುಬ್ರಹ್ಮಣ್ಯ ಭಾರತಿ ಮತ್ತು ಭಾರತಿದಾಸನ್ ಅವರ ಆಯ್ದ ಕವನಗಳನ್ನು ಪಶುಮಲೈ ಅರಸು ಕನ್ನಡಕ್ಕೆ ತಂದಿದ್ದಾರೆ. ಇದಲ್ಲದೆ ಶ್ರೀಲಂಕಾದ ತಮಿಳು ಕವನಗಳು ಎಂಬ ಕವನ ಸಂಕಲನವನ್ನು ಕಾರ್ಲೋಸ್ ಎನ್ನುವವರು ಕನ್ನಡದಲ್ಲಿ ಸಂಪಾದಿಸಿದ್ದಾರೆ. ಸ.ಸ.ಮಾಳವಾಡ ಅವರು ಸಂಕಲಿಸಿದ ಬಸವಣ್ಣನವರ ವಚನಗಳನ್ನು ವಸವಣ್ಣರ್ ವಾಕ್ಕಮುದು ಎಂಬ ಹೆಸರಿನಲ್ಲಿ ಸಿದ್ದಲಿಂಗಯ್ಯನವರು ಅನುವಾದಿಸಿದ್ದಾರೆ. ಇರೈಯಡಿಯಾನ್ ಎನ್ನುವವರು ಸರ್ವಜ್ಞನ ವಚನಗಳನ್ನು ವಿಶ್ವ ತಮಿಳು ಅಧ್ಯಯನ ಸಂಸ್ಥೆಯ ಪರವಾಗಿ ಅನುವಾದಿಸಿ ಪ್ರಕಟಿಸಿದ್ದಾರೆ. ತಮಿಳಿನ ನನ್ನೂಲ್ ಎಂಬ ವ್ಯಾಕರಣ ಗ್ರಂಥವನ್ನು ಬಿ.ನಂ. ಚಂದ್ರಯ್ಯನವರು ಕನ್ನಡಕ್ಕೆ ತಂದಿದ್ದಾರೆ. ಕನ್ನಡದ ಕವಿರಾಜಮಾರ್ಗವನ್ನು ವೆಂಕಟಾಚಲಂ ಎಂಬುವರು ತಮಿಳು ವಿಶ್ವವಿದ್ಯಾನಿಲಯದ ಪರವಾಗಿ ಅನುವಾದಿಸಿದ್ದಾರೆ. ಅರವಿಂದ ಮಾಲಗತ್ತಿಯವರ ಗೌರ್ನಮೆಂಟ್ ಬ್ರಾಹ್ಮಣ ಎಂಬ ಆತ್ಮಕಥೆಯನ್ನು ಪಾವಣ್ಣನ್‌ರವರು ತಮಿಳಿಗೆ ಅನುವಾದಿಸಿದ್ದಾರೆ. ಹಾಗೆಯೇ ಉ.ವೇ.ಸ್ವಾಮಿನಾಥ ಅಯ್ಯರ್ ಅವರ ಎನ್‌ಚರಿತ್ತಿರಂ ಎಂಬ ಆತ್ಮ ಚರಿತ್ರೆಯನ್ನು ಕನ್ನಡಕ್ಕೆ ತರಲಾಗಿದೆ.

ಹೀಗೆ ತಮಿಳು ಮತ್ತು ಕನ್ನಡ ಭಾಷೆಗಳ ಬಾಂಧವ್ಯ ಒಂದಲ್ಲಾ ಒಂದು ರೀತಿಯಲ್ಲಿ ನಿರಂತರವಾಗಿ ಮುಂದುವರಿದಿದೆ. (ಎಂ.ಟಿ.)

**ತೆಲುಗು :** ಕನ್ನಡ ಮತ್ತು ತೆಲುಗು ಭಾಷೆಗಳ ಬಾಂಧವ್ಯ ಬಹಳ ಹಿಂದಿನಿಂದಲೂ ಅಂದರೆ ಸಾತವಾಹನರು, ಚಾಳುಕ್ಯರು, ಚೋಳರು, ಕಾಕತೀಯರು, ವಿಜಯನಗರದ ಅರಸರು, ಕೊನೆಗೆ ಮೊನ್ನೆಮೊನ್ನೆಯ ಬ್ರಿಟಿಷರ ಕಾಲದಿಂದ ಈಗಿನವರೆಗೂ ನಡೆದುಕೊಂಡು ಬಂದಿದೆ. ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ ಭಾಷಿಕವಾಗಿ ನಾನಾಮುಖಗಳಿಂದ ಬೆಳೆದು ಬರುತ್ತಿರುವ ಈ ಬಾಂಧವ್ಯದ ಗುರುತುಗಳನ್ನು ಈ ಎರಡು ಭಾಷೆಗಳ ಸಾಹಿತ್ಯಕ ಕೃತಿಗಳಲ್ಲಿಯೂ ನಾವು ಕಾಣಬಹುದು. ತೆಲುಗರು ಆಂಧ್ರಪ್ರದೇಶದ ಗಡಿಪ್ರದೇಶಗಳಲ್ಲಿ ಮಾತ್ರವಲ್ಲದೆ ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಕಂಡುಬರುತ್ತಾರೆ. ಮುಖ್ಯವಾಗಿ ಕೋಲಾರ ಮತ್ತು ಬಳ್ಳಾರಿ ಜಿಲ್ಲೆ, ಬೆಂಗಳೂರು ನಗರ ಮುಂತಾದ ಪ್ರದೇಶಗಳಲ್ಲಿ ಇವರು ಬಹುಸಂಖ್ಯೆಯಲ್ಲಿ ನೆಲೆಸಿದ್ದಾರೆ.

ಕರ್ನಾಟಕದಲ್ಲಿ ತೆಲುಗು ಭಾಷೆ ಮಾತ್ರವಲ್ಲದೆ ತೆಲುಗು ಸಾಹಿತ್ಯವೂ ಆಶ್ರಯ ಪಡೆಯಿತು. ಕನ್ನಡದ ಆದಿಮಹಾಕವಿಯಾದ ಪಂಪ ತೆಲುಗಿನಲ್ಲಿ ಜಿನೇಂದ್ರ ಪುರಾಣವನ್ನು ಬರೆದಿದ್ದಾನೆ ಎಂಬ ಒಂದು ಅಭಿಪ್ರಾಯವಿದೆ. ಪೊನ್ನನೂ ತೆಲುಗಿನಲ್ಲಿ ಆದಿಪುರಾಣವನ್ನು ಬರೆದಿದ್ದಾನೆಂದು ಕೆಲವರ ಅಭಿಪ್ರಾಯ. ಆದರೆ ಈ ಅಭಿಪ್ರಾಯಗಳು ಸತ್ಯವಾದುವೆಂದು ಅಂಗೀಕರಿಸಲು ದೃಢ ಆಧಾರಗಳು ದೊರೆತಿಲ್ಲ.

ತೆಲುಗಿನ ಕವಿಯಾದ ಪಾಲ್ಕುರಿಕೆ ಸೋಮನಾಥನ ಜನ್ಮಸ್ಥಳದ ಬಗೆಗೆ ಭಿನ್ನಾಭಿಪ್ರಾಯಗಳಿದ್ದರೂ ಕೆಲವರ ಪ್ರಕಾರ ಈತ ಕನ್ನಡ ದೇಶದವನು. ಈತ ಅತ್ಯಂತ ವಿಶಿಷ್ಟವಾದ ತೆಲುಗುಕಾವ್ಯಗಳನ್ನು ಕರ್ನಾಟಕದಲ್ಲಿ ಸೃಷ್ಟಿಸಿದ್ದಾನೆ ಎಂದು ಹೇಳಬಹುದು. ಪ್ರೌಢದೇವರಾಯನ ಆಸ್ಥಾನದಲ್ಲಿ ಗೌಡ ಡಿಂಡಿಮಭಟ್ಟನನ್ನು ತನ್ನ ಪಾಂಡಿತ್ಯದಿಂದ ಸೋಲಿಸಿ ಶ್ರೀನಾಥನೆಂಬ ತೆಲುಗು ಕವಿ ಕನಕಾಭಿಷೇಕ ಸನ್ಮಾನವನ್ನು ಪಡೆದನೆಂದು ತಿಳಿಯುತ್ತದೆ. ಈತ ಕನ್ನಡ ದೇಶದಲ್ಲೂ ಸಂಚಾರ ಮಾಡಿ ಸನ್ಮಾನಗಳನ್ನು

ಪಡೆದನೆಂದು ತಿಳಿಯುತ್ತದೆ. ಕನ್ನಡ ಮತ್ತು ತೆಲುಗು ಭಾಷೆಗಳ ಬಾಂಧವ್ಯ ಕೃಷ್ಣದೇವರಾಯನ ಕಾಲದಲ್ಲಿ ಅತ್ಯಂತ ಉನ್ನತಮಟ್ಟಕ್ಕೆ ಏರಿತು. ಕೃಷ್ಣದೇವರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂಬ ಕವಿಗಳಿದ್ದರು. ಅವರಲ್ಲಿ ಬಹುಪಾಲು ತೆಲುಗು ಕವಿಗಳೇ ಆಗಿದ್ದರು. ಆ ಕಾಲದ ತೆಲುಗು ಕವಿಗಳಿಗೆ ಕನ್ನಡದ ಪರಿಚಯವೂ ಇತ್ತು. ಅವರಲ್ಲಿ ಒಬ್ಬನಾದ ನಂದಿತಿಮ್ಮನ ಎಂಬುವನು ಪಾರಿಜಾತಾಪಹರಣಮು ಎಂಬ ಕಾವ್ಯವನ್ನು ತೆಲುಗಿನಲ್ಲಿ ಬರೆದು ಕೃಷ್ಣದೇವರಾಯನಿಗೆ ಅರ್ಪಿಸಿದ. ಕೃಷ್ಣದೇವರಾಯನ ಆಶ್ರಯದಲ್ಲಿದ್ದ ತಿಮ್ಮಣ್ಣ ತನ್ನ ಭಾರತವನ್ನು ಬರೆಯುವಾಗ ತೆಲುಗಿನ ಮಹಾಕವಿ ತಿಕ್ಕನನನ್ನು (13ನೆಯ ಶತಮಾನ) ಅನುಸರಿಸಿದ್ದಾನೆ. ಕೃಷ್ಣದೇವರಾಯ ಕನ್ನಡ ರಾಜ್ಯ ರಮಾರಮಣನಾದರೂ ಸಾಹಿತ್ಯದ ಮಟ್ಟಿಗೆ 'ಆಂಧ್ರಭೋಜ' ಎನಿಸಿಕೊಂಡಿದ್ದಾನೆ. ಅಮುಕ್ತಮಾಲ್ಯದ ಎಂಬ ಹೆಸರಿನ ಉದ್ಗ್ರಂಥವೊಂದನ್ನು ಬರೆದು ಕೃಷ್ಣದೇವರಾಯ ತೆಲುಗು ಕವಿಗಳಿಗೆ ಸ್ಫೂರ್ತಿ ನೀಡಿದ್ದಾನೆ.

ತೆಲುಗು ಸಾಹಿತ್ಯ ಚರಿತ್ರೆಯಲ್ಲಿ 'ಮೈಸೂರು ತೆಲುಗು' ಸಾಹಿತ್ಯ ಒಂದು ಪ್ರಧಾನ ಘಟ್ಟ. ಈ ಕಾಲಾವಧಿಯಲ್ಲಿ (1700-50) ಕನ್ನಡ ದೇಶದಲ್ಲಿ ತೆಲುಗು ಕವಿಗಳೇ ಅಲ್ಲದೆ, ಕನ್ನಡಿಗರೂ ತೆಲುಗು ಕಾವ್ಯಗಳನ್ನು ರಚಿಸಿದ್ದಾರೆ. ಚಿಕ್ಕದೇವರಾಯನ ಕಾಲದಿಂದ ಮೈಸೂರು ತೆಲುಗು ಸಾಹಿತ್ಯ ಪ್ರಾರಂಭವಾದರೂ ಅದಕ್ಕಿಂತ ಮುಂಚೆಯೇ ಹೆಸರಿಸಬೇಕಾದ ಕೆಲವು ಕಾವ್ಯಗಳಿವೆ. ಬೆಂಗಳೂರು ನಿರ್ಮಾಪಕ ಹಿರಿಯ ಕೆಂಪೇಗೌಡ (1513-69) ತೆಲುಗಿನವನೆಂದು ಕೆಲವರ ಅಭಿಪ್ರಾಯ. ಅವನ ಹೆಸರಿನಲ್ಲಿ ಗಂಗಾಗೌರೀ ವಿಲಾಸಮು ಎಂಬ ಒಂದು ತೆಲುಗು ಯಕ್ಷಗಾನವಿದೆ. ಇದನ್ನು ಕೆಲವರು ಕೆಂಪೇಗೌಡನ ಮೊಮ್ಮಗ ಬರೆದನೆಂದು ಅಭಿಪ್ರಾಯಪಡುತ್ತಾರೆ. ಚನ್ನಪಟ್ಟಣದ ನಿರ್ಮಾಪಕನಾದ ಇಮ್ಮಡಿ ಜಗದೇವರಾಯ ತೆಲುಗಿನಲ್ಲಿ ಅಧ್ಯಾತ್ಮ ರಾಮಾಯಣವನ್ನು ಬರೆದಿದ್ದಾನೆಂದು ಅವನ ಆಸ್ಥಾನಕವಿಯಾಗಿದ್ದ ಪೊನ್ನತೋಟ ಔಬಲಕವಿ ತನ್ನ ವಾಮನಪುರಾಣದಲ್ಲಿ ಹೇಳಿದ್ದಾನೆ. ಸುಗುಟೂರಿನ ಮುಮ್ಮಡಿ ತಮ್ಮಭೂಪಾಲ (17ನೆಯ ಶತಮಾನ) ಸಂಸ್ಕೃತ ಕರ್ನಾಟ ಆಂಧ್ರ ಭಾಷೆಗಳಲ್ಲಿ ಪಂಡಿತನೆಂದೂ ತೆಲುಗಿನಲ್ಲಿ ಅವನು ರಾಜೇಂದ್ರಚೋಳ ಚರಿತ್ರ, ಕುಮಾರಾರ್ಜುನೀಯಮು, ಸೌಂದರೇಶ ಚರಿತ್ರ ಎಂಬ ಮೂರು ಗ್ರಂಥಗಳನ್ನು ಬರೆದಿರುವನೆಂದೂ ತಿಳಿಯುತ್ತದೆ.

ಚಿಕ್ಕದೇವರಾಯನ ಕಾಲದಿಂದ ಕರ್ನಾಟಕದಲ್ಲಿ ತೆಲುಗು ಭಾಷಾ ಸಾಹಿತ್ಯಗಳಿಗೆ ಸಾಕಷ್ಟು ಪ್ರಾಧಾನ್ಯತೆ ದೊರೆಯಿತು. ಚಿಕ್ಕದೇವರಾಯನ ಅಂಕಿತದಲ್ಲಿರುವ ಕೆಲವು ಪದಗಳ ಕರ್ತೃಗಳು ಯಾರೋ ತಿಳಿಯದು. ಚಿಕ್ಕದೇವರಾಯನ ಪುತ್ರ ಕಂಠೀರವ ನರಸರಾಜನ (1704-13) ಹೆಸರಿನಲ್ಲಿ ಅನೇಕ ತೆಲುಗು ಗ್ರಂಥಗಳಿವೆ. ಈ ಅರಸ ಸಂಸ್ಕೃತ, ಪ್ರಾಕೃತ, ಕರ್ನಾಟಕ, ಆಂಧ್ರ, ದ್ರಾವಿಡ ಭಾಷೆಗಳಲ್ಲಿ ಕವಿ, ಪಂಡಿತನೆಂದು ಹೇಳಲಾಗಿದೆ. ಇವನು ತೆಲುಗಿನಲ್ಲಿ ಆಂಧ್ರ ಕೊಱವಂಜಿ, ಪಂಚಾಯುಧ ಕಟ್ಲೆ, ಲಕ್ಷ್ಮೀವಿಲಾಸಮು, ಕಲವಾಣೀ ವಿಲಾಸಮು, ನಾಟ್ಯವಿದ್ಯಾವಿಲಾಸಮು, ವಸಂತೋತ್ಸವ ವಿಲಾಸಮು, ವಿಭಕ್ತಿ ಕಾಂತಾ ವಿಲಾಸಮು, ಅಷ್ಟದಿಕ್ಪಾಲಕ ವಿಲಾಸಮು, ಪಾವಕಿ ನಾಟಕಮು, ವೈವಸ್ವತ ನಾಟಕಮು, ನೈರುತಿ ನಾಟಕಮು, ವಾರುಣಿ ನಾಟಕಮು, ವಾಯವಿ ನಾಟಕಮು, ಕೌಬೇರಿ ನಾಟಕಮು ಎಂಬ ಗ್ರಂಥಗಳನ್ನು ರಚಿಸಿದ್ದಾನೆ.

ಕರ್ನಾಟಕದಲ್ಲಿ ಚಿಕ್ಕದೇವರಾಯನ ಕಾಲದಲ್ಲಿ ಹೆಸರಿಸಬೇಕಾದ ಇನ್ನೊಬ್ಬ ತೆಲುಗು ಕವಿ ಕಳಲೆ ವೀರರಾಜ. ಇವನು ಸೇನಾಪತಿ ಯಾಗಿದ್ದುದು ಮಾತ್ರವಲ್ಲದೆ ಬಹುಭಾಷಾಕೋವಿದನೂ ಸಾಹಿತ್ಯಜ್ಞನೂ ಆಗಿದ್ದ. ಈತ ಮಹಾಭಾರತವನ್ನು ತೆಲುಗು ವಚನರೂಪದಲ್ಲಿ ಬರೆದಿದ್ದಾನೆ. ಆದಿ, ಸಭಾ, ಭೀಷ್ಮಪರ್ವಗಳು ಮಾತ್ರ ಈಗ ಲಭ್ಯವಾಗಿವೆ. ಇವನ ಮಗ ನಂಜರಾಜನೂ (ಸು.1739-73) ತೆಲುಗಿನಲ್ಲಿ ಪಂಡಿತನಾಗಿದ್ದ. ಇವನು ತೆಲುಗಿನಲ್ಲಿ ಕಾಶೀಮಹಿಮಾರ್ಥ ದರ್ಪಣ, ಬ್ರಹ್ಮೋತ್ತರ ಖಂಡ, ಶಿವಭಕ್ತಿವಿಲಾಸ, ಗರಳಪುರಿ ಮಾಹಾತ್ಮ್ಯ, ಹಾಲಾಸ್ಯಮಾಹಾತ್ಮ್ಯ ಎಂಬ ಐದು ಕೃತಿಗಳನ್ನು ರಚಿಸಿದ್ದಾನೆ. ಇವೆಲ್ಲ ವಚನ ಗ್ರಂಥಗಳಾಗಿವೆ. ಇವನು ಪದ್ಯ ರಚನೆಯನ್ನು ಮಾಡಬಲ್ಲನೆಂಬುದಕ್ಕೆ ಪೀಠಿಕಾ ಪದ್ಯಗಳು, ಗ್ರಂಥಾಂತ್ಯ ಪದ್ಯಗಳು ಸಾಕ್ಷಿಯಾಗಿವೆ. ನಂಜರಾಜ ಕನ್ನಡದಲ್ಲೂ ಹಲವು ಗ್ರಂಥಗಳನ್ನು ಬರೆದಿದ್ದಾನೆ. ಮೂಕರಸು ಎಂದು ಖ್ಯಾತನಾಗಿದ್ದ ಕಂಠೀರವ ನರಸರಾಜ ಸ್ವತಃ ಕೆಲವು ತೆಲುಗು ಯಕ್ಷಗಾನಗಳನ್ನು ರಚಿಸಿದ್ದಾನೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿದ್ದ ಕೋಲಾರ ಜಿಲ್ಲೆಯ ಕುಂದಲಕುರ್ತಿ ಚಂದ್ರಕವಿ ಎಂಬ ತೆಲುಗು ಕವಿ ನನ್ನಯ್ಯನ 'ಆಂಧ್ರಶಬ್ದಚಿಂತಾಮಣಿ'ಯನ್ನು ಕೃಷ್ಣಭೂಪಾಲೀಯಮು ಎಂಬ ಹೆಸರಿನಲ್ಲಿ ಕಾವ್ಯರೂಪದಲ್ಲಿ ರಚಿಸಿದಂತೆ ತಿಳಿಯುತ್ತದೆ.

ಕರ್ನಾಟಕದಲ್ಲಿ ತೆಲುಗು ಭಾಷಾ ಸಾಹಿತ್ಯಗಳಿಗೆ ಪ್ರೋತ್ಸಾಹ ದೊರೆಯುತ್ತಿರುವುದರ ಜೊತೆಗೆ ಸುಮಾರು ಸಾವಿರ ವರ್ಷಗಳಿಂದ ಬೆಳೆದು ಬರುತ್ತಿರುವ ಸಾಹಿತ್ಯ ಬಾಂಧವ್ಯವೂ ಗಮನಾರ್ಹವಾಗಿದೆ. ಪಂಪ, ಪೊನ್ನ ಮುಂತಾದವರು ತೆಲುಗಿನೊಡನೆ ಅಷ್ಟೋ ಇಷ್ಟೋ ಸಂಬಂಧ ವಿದ್ದವರೆಂಬುದರಲ್ಲಿ ಸಂದೇಹವಿಲ್ಲ. ಪಂಪನ ತಮ್ಮನಾದ ಜಿನವಲ್ಲಭನ ಶಾಸನದಲ್ಲಿ ಕನ್ನಡ ಪದ್ಯಗಳ ಜೊತೆಯಲ್ಲಿ ತೆಲುಗು ಪದ್ಯಗಳೂ ಇರುವುದನ್ನು ಗಮನಿಸಬೇಕು. ಅವು ತೆಲುಗಿನಲ್ಲಿ ಲಭ್ಯವಾದ ಮೊದಲ ಕಂದಪದ್ಯಗಳೆಂಬುದೂ ಗಮನಾರ್ಹ ಸಂಗತಿಯಾಗಿದೆ.

ಆಧುನಿಕ ಕಾಲದಲ್ಲಿ ಕರ್ನಾಟಕದ ಅನೇಕರು ತೆಲುಗು ಸಾಹಿತ್ಯಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಉಲಚನಾಡು ವೆಂಕಟರಮಣಕವಿ 1850 ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲಿ ವಾಸಿಷ್ಠ ರಾಮಾಯಣಮು, ಅಧ್ಯಾತ್ಮ ರಾಮಾಯಣಮು ಎಂಬ ಎರಡು ಕಾವ್ಯಗಳನ್ನು ಬರೆದಿದ್ದಾನೆ. ನ್ಯಾಪತಿ ಲಕ್ಷ್ಮೀನರಸಿಂಹಕವಿಗಳು ತೆಲುಗು ಪದ್ಯಗಳನ್ನು ಬರೆಯುವ ಸಾಮರ್ಥ್ಯವುಳ್ಳವರಾಗಿದ್ದರು. ಸಾಧುಪಲ್ಲಿ ಚಂದ್ರಶೇಖರಶಾಸ್ತ್ರಿ (1890) ಅಮರುಕ ಕಾವ್ಯವನ್ನು ತೆಲುಗಿಗೆ ಅನುವಾದ ಮಾಡಿದ್ದಾರೆ.

ಇತ್ತೀಚಿನ ಕಾಲದಲ್ಲಿ ಆಲೂರು ರಾಮಕವಿ, ಜೋಳದರಾಶಿ ದೊಡ್ಡನಗೌಡ ಮೊದಲಾದವರು ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲೂ ಕೃತಿಗಳನ್ನು ಬರೆದು ಕರ್ನಾಟಕದ ತೆಲುಗು ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಬೆಂಗಳೂರು, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳು ತೆಲುಗು ಭಾಷಾಸಾಹಿತ್ಯಗಳಿಗೆ ಪ್ರೋತ್ಸಾಹ ನೀಡುತ್ತಿವೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತೆಲುಗಿನ ವೇಮನ ಕವಿಯ ಹೆಸರಿನಲ್ಲಿ ಪೀಠವೊಂದು ಸ್ಥಾಪನೆಯಾಗಿದೆ.

ತೆಲುಗಿನ ಆದಿಕವಿ ಎಂದು ಹೆಸರು ಪಡೆದಿರುವ ನನ್ನಯ (11ನೆಯ ಶತಮಾನ) ತನ್ನ ಆಂಧ್ರ ಮಹಾಭಾರತದಲ್ಲಿ ಪಂಪನನ್ನು ಅನುಸರಿಸಿದ್ದಾನೆಂಬುದು ಅನೇಕ ವಿದ್ವಾಂಸರ ಮಾತು. ನನ್ನಯನ ಸಹಾಧ್ಯಾಯಿ ನಾರಾಯಣಭಟ್ಟ ಕನ್ನಡದಲ್ಲಿಯೂ ಪಂಡಿತನಾಗಿದ್ದ.

ತೆಲುಗಿನ ಶೈವಕವಿಗಳು ಕನ್ನಡದಿಂದ ಬಹಳಷ್ಟು ನೆರವು ಪಡೆದಿದ್ದಾರೆ. ಬಸವಣ್ಣ ಅವರಿಗೆ ಸ್ಫೂರ್ತಿಯ ನೆಲೆಯಾಗಿದ್ದ. ಪಾಲ್ಕುರಿಕೆ ಸೋಮನಾಥ ತೆಲುಗಿನ ಮಹಾಕವಿಯಾಗಿದ್ದು ಕನ್ನಡದಲ್ಲಿಯೂ ಗ್ರಂಥ ರಚನೆ ಮಾಡಿದ್ದಾನೆ. ತೆಲುಗು ಕವಿ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿವತತ್ತ್ವಸಾರಮು ಕನ್ನಡಕ್ಕೂ ಭಾಷಾಂತರವಾಗಿದೆ. ತೆಲುಗಿನ ಮತ್ತೊಬ್ಬ ಶೈವಕವಿಯಾಗಿದ್ದ ನನ್ನೆಚೋಡದೇವ ಕನ್ನಡದ ಅನೇಕ ಕಾವ್ಯ ಸಂಪ್ರದಾಯಗಳನ್ನು ಅನುಸರಿಸಿದ್ದಾನೆ. ಪಾಲ್ಕುರಿಕೆ ಸೋಮನಾಥನ ಬಸವಪುರಾಣ ಭೀಮಕವಿಯಿಂದ ಕನ್ನಡಕ್ಕೆ ರೂಪಾಂತರವಾಗಿದೆ. ಪಾಲ್ಕುರಿಕೆ ಸೋಮನಾಥನದೇ ಆದ ಪಂಡಿತಾರಾಧ್ಯ ಚರಿತ್ರೆಯನ್ನು ನೀಲಕಂಠಾಚಾರ್ಯ ಕನ್ನಡಿಸಿದ್ದಾನೆ.

ಕನ್ನಡದಲ್ಲಿ ವೀರಶೈವ ತತ್ತ್ವವನ್ನು ವಿವರಿಸುವ ಕೆರೆಯ ಪದ್ಮರಸನ ದೀಕ್ಷಾಬೋಧೆಯನ್ನು ಪಿಡುಪರ್ತಿ ಬಸವನ ಎಂಬ ತೆಲುಗು ಕವಿ ಆಂಧ್ರೀಕರಿಸಿದ್ದಾನೆ. ಚಾಮರಸನ ಪ್ರಭುಲಿಂಗಲೀಲೆ ಪಿಡುಪರ್ತಿ ಸೋಮನಾಥ ಕವಿಯಿಂದ ತೆಲುಗಿಗೆ ಭಾಷಾಂತರವಾಗಿದೆ.

ಸರ್ವಜ್ಞ ಮತ್ತು ವೇಮನರ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾಗಿದೆ. ಸರ್ವಜ್ಞ ವೇಮನ ಸಂವಾದ ಎಂಬ ಪುಸ್ತಕವೊಂದು ಪ್ರಕಟವಾಗಿದೆ. ಅದರಲ್ಲಿ ಸಮಾನ ಭಾವವಿರುವ ನೂರಾರು ಪದ್ಯಗಳಿವೆ. ಈ ಇಬ್ಬರು ಸಂತಕವಿಗಳು ಒಂದೇ ಕಾಲದವರೆಂದಾಗಲಿ, ಒಬ್ಬರನ್ನೊಬ್ಬರು ಅನುಸರಿಸಿದರೆಂದಾಗಲಿ ಹೇಳಲು ಆಧಾರಗಳಿಲ್ಲದಿದ್ದರೂ ಇಬ್ಬರೂ ಪ್ರಾಯಶಃ ಸಮಾನದೃಷ್ಟಿಯಿಂದ ತಮ್ಮ ಪದ್ಯಗಳಲ್ಲಿ ಕೆಲವನ್ನಾದರೂ ಬರೆದಿದ್ದಾರೆಂಬುದು ಖಚಿತ.

ಈ ಎರಡು ಭಾಷೆಗಳ ಲಿಪಿಯಲ್ಲಿ ಅತ್ಯಂತ ನಿಕಟವಾದ ಸಂಬಂಧವಿದೆ. ಇವುಗಳಿಗೆ ಏಕಲಿಪಿಯನ್ನು ರೂಪಿಸುವ ಪ್ರಯತ್ನಗಳೂ ನಡೆದಿವೆ. ಕನ್ನಡ ತೆಲುಗುಗಳೆರಡೂ ಸಂಸ್ಕೃತ ಭಾಷಾಸಂಪ್ರದಾಯಗಳನ್ನು ಬಹುಮಟ್ಟಿಗೆ ಸ್ವೀಕರಿಸಿರುವುದರಿಂದ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಅನೇಕ ಸಾಮ್ಯಗಳು ಕಂಡುಬರುತ್ತವೆ. ಪದನಿರ್ಮಾಣ, ವಾಕ್ಯನಿರ್ಮಾಣದಿಂದ ಹಿಡಿದು ಕಾವ್ಯರಚನಾ ಸಂಪ್ರದಾಯಗಳವರೆಗೂ ಈ ಎರಡು ಭಾಷೆಗಳ ನಡುವೆ ಬಾಂಧವ್ಯ ಕಂಡುಬರುತ್ತದೆ. ಕೇತನ ಎಂಬ ತೆಲುಗು ವ್ಯಾಕರಣಕಾರ ಆಂಧ್ರ ಭಾಷಾಭೂಷಣವನ್ನು ಬರೆಯುವಾಗ ನಾಗವರ್ಮನ ಕರ್ಣಾಟಕ ಭಾಷಾಭೂಷಣ ಅವನಿಗೆ ನೆರವು ನೀಡಿತು. ಛಂದಸ್ಸಿನಲ್ಲಿ ಈ ಎರಡು ಭಾಷೆಗಳಿಗೂ ಇರುವ ಹೋಲಿಕೆ ಬಹಳ ಹತ್ತಿರವಾದುದು. ಸಂಸ್ಕೃತ ವೃತ್ತಗಳನ್ನು ಕನ್ನಡದವರು ತೆಗೆದುಕೊಂಡಿರುವಂತೆಯೇ ತೆಲುಗರೂ ತೆಗೆದುಕೊಂಡಿದ್ದಾರೆ. ಅಂಶಗಣಗಳಲ್ಲಿ ಕನ್ನಡ ತೆಲುಗುಗಳಿಗೆ ಹತ್ತಿರದ ಸಂಬಂಧವಿದೆ. ಅನೇಕ ಛಂದೋಗ್ರಂಥಗಳು ಪರಸ್ಪರ ಪ್ರಭಾವಕ್ಕೆ ಒಳಗಾಗಿವೆ. ಕನ್ನಡದಲ್ಲಿ ಅತ್ಯಂತ ಪ್ರಚುರವಾಗಿದ್ದ ಚಂಪೂಕಾವ್ಯ ತೆಲುಗಿನಲ್ಲಿಯೂ ಇನ್ನೂ ಹೆಚ್ಚಾಗಿ ಬಳಕೆಯಲ್ಲಿದೆ. ಹೀಗೆ ಈ ಒಂದೇ ಕುಟುಂಬದ ಎರಡು ಭಾಷೆಗಳೂ ತೌಲನಿಕ ಅಧ್ಯಯನಕ್ಕೆ ವಿಷಯವನ್ನು ವಿಸ್ತಾರವಾಗಿ ಒದಗಿಸುವಂಥವಾಗಿವೆ.

ಇಪ್ಪತ್ತನೆಯ ಶತಮಾನದ ಪ್ರಾರಂಭಕಾಲದಿಂದಲೇ ಕನ್ನಡದ ಹಲವು ಕೃತಿಗಳು ತೆಲುಗಿಗೆ ಮತ್ತು ತೆಲುಗಿನ ಕೃತಿಗಳು ಕನ್ನಡಕ್ಕೆ ಭಾಷಾಂತರಗೊಂಡಿವೆ. ಕನ್ನಡದ ಮಾಸ್ತಿ, ಡಿವಿಜಿ, ದೇವುಡು, ಶಿವರಾಮ ಕಾರಂತ, ತ್ರಿವೇಣಿ, ಯು.ಆರ್. ಅನಂತಮೂರ್ತಿ, ಆಲನಹಳ್ಳಿ ಕೃಷ್ಣ, ಪೂರ್ಣಚಂದ್ರ ತೇಜಸ್ವಿ ಮೊದಲಾದವರ ಕೃತಿಗಳು ತೆಲುಗಿಗೆ ಭಾಷಾಂತರಗೊಂಡು ಪ್ರಕಟವಾಗಿವೆ. ತೆಲುಗಿನ ಕಂದುಕೂರಿ ವೀರೇಶಲಿಂಗಂ, ಗುರಜಾಡ ಅಪ್ಪಾರಾವ್, ವಿಶ್ವನಾಥ ಸತ್ಯನಾರಾಯಣ, ಚಲಂ, ಶ್ರೀ.ಶ್ರೀ., ಸಿ. ನಾರಾಯಣರೆಡ್ಡಿ, ದಿಗಂಬರ ಕವಿಗಳು, ಯಂಡಮೂರಿ ವೀರೇಂದ್ರನಾಥ್ ಮೊದಲಾದವರ ರಚನೆಗಳು ಕನ್ನಡಕ್ಕೆ ಭಾಷಾಂತರಗೊಂಡಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ಎಂ.ಶೇಷಾಚಲಂ ಅಂಡ್ ಕಂಪನಿ ಮುಂತಾದ ಸಂಸ್ಥೆಗಳು ಇಂಥ ಕೃತಿಗಳ ಪ್ರಕಟಣೆಯನ್ನು ಕೈಗೊಂಡು ಎರಡು ಭಾಷೆಗಳ ನಡುವಿನ ಸಾಹಿತ್ಯ ಬಾಂಧವ್ಯವನ್ನು ಬೆಳೆಸಲು ನೆರವಾಗಿವೆ. (ಆರ್.ವಿ.ಎಸ್.ಎಸ್.)

**ಹಿಂದಿ :** ಆಧುನಿಕ ಯುಗದಲ್ಲಿ ಹಿಂದಿ ಭಾಷೆಯನ್ನು ಅಖಿಲ ಭಾರತ ಮಟ್ಟದಲ್ಲಿ ನೆಲೆಗೊಳಿಸಲು ಹಾಗೂ ಹಿಂದಿಯನ್ನು ಇಡೀ ರಾಷ್ಟ್ರದ ವಾಣಿಯಾಗಿ ಪ್ರಚುರಪಡಿಸಲು ಮಹಾತ್ಮ ಗಾಂಧೀಜಿಯವರು ಹಿಂದಿಯನ್ನು ಒಂದು ಆಂದೋಲನದಂತೆ ತಮ್ಮ ಕೈಗೆತ್ತಿಕೊಂಡರು. ಗಾಂಧೀಜಿ ತಮ್ಮ ಸಮಗ್ರ ಭಾರತ ಯಾತ್ರೆಯ ಸಂದರ್ಭದಲ್ಲಿ ಭಾರತದಂಥ ಬಹುಭಾಷೀಯ ಹಾಗೂ ಬಹು ಸಂಸ್ಕೃತಿಗಳ ದೇಶದಲ್ಲಿ ಭಾವೈಕ್ಯತೆ ಮತ್ತು ವಿಭಿನ್ನ ಭಾಷೀಯರ ನಡುವೆ ಸಂವಾದಗಳನ್ನು ಏರ್ಪಡಿಸಲು ಸಾಧ್ಯವಾಗುವುದು ಹಿಂದಿಯಿಂದ ಮಾತ್ರವೆಂದು ಭಾವಿಸಿದ್ದರು. ಹೀಗಾಗಿ ದೇಶದ ಪ್ರಾಂತೀಯ ಭಾಷೆಗಳ ವಿಕಾಸಕ್ಕೆ ಪೂರ್ಣ ಒತ್ತು ಕೊಟ್ಟು, ಇಂಗ್ಲಿಷ್‌ನ ಸ್ಥಾನದಲ್ಲಿ ಹಿಂದಿಯನ್ನು, ವ್ಯಾಪಕವಾಗಿ ಉಪಯೋಗಿಸಲು ಕಳಕಳಿ ಹಾಗೂ ಒತ್ತಾಸೆಯಿಂದ ಜನರಲ್ಲಿ ನಿವೇದಿಸಿಕೊಂಡರು.

ಗಾಂಧೀಜಿ ತಮ್ಮ ರಚನಾತ್ಮಕ ಕಾರ್ಯಗಳಲ್ಲಿ ಹಿಂದಿ ಪ್ರಚಾರ ಕಾರ್ಯವನ್ನೂ ಒಂದೆಂದು ಸ್ವೀಕರಿಸಿ ಇದರ ವ್ಯಾಪಕ ಪ್ರಯೋಗಕ್ಕೆ ನಾಂದಿ ಹಾಡಿದರು. ಇಂದೂರಿನಲ್ಲಿ 1918ರಲ್ಲಿ ನಡೆದ ಹಿಂದಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ, ಅವರ ಉದ್ಬೋಧಕ ವಿಚಾರಗಳನ್ನೊಳಗೊಂಡ ಭಾಷಣ ದೇಶದ ಏಕತೆಗೆ ಹಿಂದಿಯನ್ನು ಒಂದು ಪ್ರಬಲ ಶಕ್ತಿಯನ್ನಾಗಿ ಪ್ರತಿಪಾದಿಸುವಲ್ಲಿ ಯಶಸ್ವಿಯಾಯಿತು. ಅವರ ಪ್ರೇರಣೆ ಮತ್ತು ಪ್ರಭಾವದಿಂದಾಗಿ 1918 ಮಾರ್ಚ್ 30ರಂದು ಹಿಂದಿ ಸಾಹಿತ್ಯ ಸಮ್ಮೇಳನ ದಕ್ಷಿಣದ ಹಿಂದಿಯೇತರ ಪ್ರದೇಶಗಳಲ್ಲಿ ಹಿಂದಿ ಪ್ರಚಾರಕ್ಕಾಗಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾವನ್ನು ಸ್ಥಾಪಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು. ಅದೇ ವರ್ಷ ಮದರಾಸಿನಲ್ಲಿ ಸ್ಥಾಪಿತವಾದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ದಕ್ಷಿಣದ ಎಲ್ಲ ಭಾಷಾ ಪ್ರದೇಶಗಳ ಮಾತೃ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತ ಬಂದಿದೆ.

ಹಿಂದಿಯನ್ನು ಕುರಿತ ಗಾಂಧೀಜಿಯವರ ವಿಚಾರಗಳು ಕರ್ನಾಟಕದ ಅಂದಿನ ಯುವಕರನ್ನು ಎಷ್ಟರ ಮಟ್ಟಿಗೆ ಆಕರ್ಷಿಸಿದವೆಂದರೆ ಕರ್ನಾಟಕದ ಉದ್ದಗಲಕ್ಕೂ ಹಿಂದಿ ಪ್ರಚಾರಕರು ಹಿಂದಿಯನ್ನು ಭಾವೈಕ್ಯತೆಯನ್ನು ಸಾಧಿಸುವ ಅನನ್ಯ ಶಕ್ತಿಯೆಂದು ಪರಿಭಾವಿಸಿ ಸಮರ್ಪಣ ಭಾವನೆಯಿಂದ ಹಿಂದಿ ಕಲಿತರು. ಕಲಿತ ಹಿಂದಿಯನ್ನು ಸಹಸ್ರಾರು ಮಂದಿಗೆ ಕಲಿಸಿದರು. ಮದರಾಸಿನ ಸಭಾದ ವಿವಿಧ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವುದರ ಮೂಲಕ ಅಧಿಕೃತ ಪ್ರಮಾಣ ಪತ್ರಗಳನ್ನು ಪಡೆಯುವಂತೆ ಪ್ರೋತ್ಸಾಹಿಸಿದರು. ಮದರಾಸು ಸಭಾವನ್ನು ಕಟ್ಟಿ ಬೆಳೆಸಲು ಉತ್ತರದಿಂದ ಬಂದ ಭಾಷಾಪ್ರಚಾರಕರಲ್ಲಿ ಗಾಂಧೀಜಿಯವರ ಪುತ್ರ ದೇವದಾಸ್ ಗಾಂಧೀ, ಸ್ವಾಮಿ ಸತ್ಯದೇವ ಪರಿವ್ರಾಜಕ, ಪ್ರತಾಪ್ ನಾರಾಯಣ್, ವಾಜಪೇಯಿ, ಹೃಷಿಕೇಶ್ ಶರ್ಮರಂಥವರು ಉಲ್ಲೇಖನೀಯರಾಗಿದ್ದಾರೆ. ಹಿಂದಿ ಪ್ರಚಾರಕ್ಕೆ ಇವರೆಲ್ಲ ಹಾಕಿದ ಭದ್ರ ಬುನಾದಿಯ ಮೇಲೆ ದಕ್ಷಿಣದ ರಾಜ್ಯಗಳಲ್ಲಿ ಹಿಂದಿ ವಿಕಾಸಗೊಂಡಿದೆ.

ಕರ್ನಾಟಕದಲ್ಲಿ ಹಿಂದಿ ಪ್ರಚಾರಾಂದೋಲನದ ಮೂಲಕೇಂದ್ರ ಮದರಾಸಿನ ಸಭಾವೇ ಆಗಿದೆ. 1925ರಲ್ಲಿ ಶಿವರಾಮಶಾಸ್ತ್ರಿ, ಟಿ.ಕೃಷ್ಣಸ್ವಾಮಿ, ಜಮುನಾ ಪ್ರಸಾದ್, ಸಿದ್ಧನಾಥಪಂತ್, ಸಿದ್ಧಗೋಪಾಲ್ ಮುಂತಾದವರು ಕರ್ನಾಟಕದ ನಾನಾ ಭಾಗಗಳಲ್ಲಿ ಹಿಂದಿ ಪ್ರಚಾರ ಕಾರ್ಯವನ್ನು ಆರಂಭಿಸಿದರು. ಮುಂದೆ 1927ರಲ್ಲಿ ಗಾಂಧೀಜಿ ಕರ್ನಾಟಕಕ್ಕೆ ಬಂದಿದ್ದಾಗ ಬೆಂಗಳೂರಿನಲ್ಲಿ ಹಿಂದಿ ಪ್ರಚಾರಕರ ಸಮಾವೇಶ ನಡೆದು ಇದರ ಅಧ್ಯಕ್ಷತೆಯನ್ನು ಗಾಂಧೀಜಿ ವಹಿಸಿದ್ದರು. ಸಮಾವೇಶವನ್ನು ಪಂಡಿತ ಮದನ ಮೋಹನ ಮಾಳವೀಯರು ಉದ್ಘಾಟಿಸಿದರು. ಈ ಅಧಿವೇಶನದಲ್ಲಿ ಗಾಂಧೀಜಿಯವರ ಭಾಷಾ ವಿಷಯಕ ವಿಚಾರಗಳು ಪ್ರಚಾರಕರ ಉತ್ಸಾಹವನ್ನು ಇಮ್ಮಡಿಗೊಳಿಸಿದವು. ಈ ಹಿಂದೆಯೇ ಉಲ್ಲೇಖಿಸಿದ ವ್ಯಕ್ತಿಗಳ ಜೊತೆಗೆ ವೆಂಕಟಾಚಲಶರ್ಮಾ, ಟಿ.ಕೆ.ಸುಬ್ಬರಾವ್, ಎಂ.ವಿ.ಜಂಬುನಾಥನ್, ವೆಂಕಟಾಚಲಯ್ಯ, ರಾಘವಾಚಾರ್ಯ, ಡಿ.ಕೆ.ಭಾರದ್ವಾಜ್, ಎ.ಟಿ.ಶ್ರೀನಿವಾಸ ರಾಘವಾಚಾರ್ಯ ಮೊದಲಾದವರು ಕರ್ನಾಟಕದಲ್ಲಿ ಮೊದಲ ಪೀಳಿಗೆಯ ಹಿಂದಿ ಕಾರ್ಯಕರ್ತರಾಗಿ ದುಡಿದರು. ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಾದ ಅಂಶವೆಂದರೆ ಹಿಂದಿ ಪ್ರಚಾರಕರಷ್ಟೇ ಅಲ್ಲ, ಸಾರ್ವಜನಿಕ ಬದುಕಿನ ಗಣ್ಯ ವ್ಯಕ್ತಿಗಳಾದ ಎನ್.ಎಸ್.ಹರ್ಡೀಕರ್, ಗಂಗಾಧರ್‌ರಾವ್ ದೇಶಪಾಂಡೆ, ತಾತಯ್ಯ ಎಂದೇ ಪ್ರಸಿದ್ಧರಾದ ಮೈಸೂರಿನ ವೆಂಕಟಕೃಷ್ಣಯ್ಯ, ಬೆಂಗಳೂರಿನ ಕೆ.ಪಿ.ಪುಟ್ಟಣ್ಣಚೆಟ್ಟಿ, ಸಿ.ಬಿ.ರಾಮರಾವ್, ಸಂಪದ್ಗಿರಿರಾವ್ ಮೊದಲಾದವರು ರಾಷ್ಟ್ರೀಯ ಬದುಕಿನಲ್ಲಿ ಹಿಂದಿನ ಮಹತ್ತ್ವವನ್ನು ಮನಗಂಡು ಹಿಂದಿಯ ಪ್ರಚಾರ ಕಾರ್ಯಕ್ಕೆ ಬೆಂಗಾವಲಾಗಿ ನಿಂತರು. ಈ ಪರಂಪರೆಯಲ್ಲಿ ಇಂದಿಗೂ ಅನೇಕ ಮಹನೀಯರು ಹಿಂದಿ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಹಿಂದಿ ಪ್ರಚಾರ ಕಾರ್ಯದಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ತೊಡಗಿಕೊಂಡಲ್ಲಿ ಹಿಂದಿ ಪ್ರಚಾರಕ್ಕೆ ತೀವ್ರತೆ ಮತ್ತು ಗತಿಶೀಲತೆ ಬರುವುದೆಂದು ಗಾಂಧೀಜಿ ಹೇಳಿದ್ದರು. ಗಾಂಧೀಜಿಯವರ ಆಶಯದಂತೆ ಕರ್ನಾಟಕದ ಮಹಿಳೆಯರು ಹಿಂದಿ ಪ್ರಚಾರದ ಮೂಲಕ ಸಮಾಜದಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಹುರಿದುಂಬಿಸುವಲ್ಲಿ ನೆರವಾದರು. ಕರ್ನಾಟಕದಲ್ಲಿ ಹಿಂದಿ ಪ್ರಚಾರಾಂದೋಲನದ ಆರಂಭದ ವರ್ಷಗಳಲ್ಲಿ ಕೆಲಸ ಮಾಡಿದ ಸುಶೀಲಾ ಬಾಯಿ, ರುಕ್ಮಿಣಿದೇವಿ, ಕಾಮಾಕ್ಷಿದೇವಿ, ಉಮಾಬಾಯಿ ಕುಂದಾಪುರಕರ್, ಇಂದಿರಾ ಕೃಷ್ಣಮೂರ್ತಿ ಮುಂತಾದವರ ಸೇವೆ ಉಲ್ಲೇಖನೀಯವಾದುದು.

ಈ ಅವಧಿಯಲ್ಲಿಯೇ ಕರ್ನಾಟಕದ ಯುವಕರು ಹಿಂದಿ ಸಾಹಿತ್ಯದಲ್ಲಿ ಉಚ್ಚ ಶಿಕ್ಷಣ ಪಡೆಯಲು ಉತ್ತರ ಭಾರತದ ವಿಶ್ವವಿದ್ಯಾಲಯಗಳಿಗೆ ಹೋದದ್ದು ಮಹತ್ವದ ಸಂಗತಿಯಾಗಿದೆ. ನಾ.ನಾಗಪ್ಪ, ಹಿರಣ್ಮಯ, ಮೇ.ರಾಜೇಶ್ವರಯ್ಯ - ಇವರು ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದು ಹಿಂದಿ ಎಂ.ಎ. ಪದವಿ ಪಡೆದರು. ನಾ.ನಾಗಪ್ಪನವರು ಆಗ ದಕ್ಷಿಣ ಭಾರತದಲ್ಲಿ ಹಿಂದಿ ಎಂ.ಎ. ಮಾಡಿದ ಮೊದಲ ವಿದ್ಯಾರ್ಥಿ ಎಂಬ ಹೆಗ್ಗಳಿಕೆಗೆ ಪಾತ್ರರಾದರೆ, ಹಿರಣ್ಮಯ ಅವರು ಹಜಾರಿ ಪ್ರಸಾದ ದ್ವಿವೇದಿಯವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿ ಪಡೆದ ಕರ್ನಾಟಕದ ಮೊದಲ ವಿದ್ಯಾರ್ಥಿ ಎಂಬ ಗೌರವಕ್ಕೆ ಪಾತ್ರರಾದರು.

ಹಿಂದಿ ಸಾಹಿತ್ಯದತ್ತ ಜನರ ಚಿತ್ತವನ್ನು ಸೆಳೆಯಲು ಅಂದಿನ ಹಿರಿಯರು ಸೃಜನಾತ್ಮಕ ಹಾಗೂ ರಚನಾತ್ಮಕವಾದ ಎಷ್ಟೋ ಪ್ರಯೋಗಗಳನ್ನು ನಡೆಸಿದರು. ಬಹುಭಾಷಾವಿದರೂ ಪ್ರಸಿದ್ಧ ವೈದ್ಯರೂ ಆಗಿದ್ದ ಪಂಡಿತ ತಾರಾನಾಥರು ಹಿಂದಿ ಪ್ರೇಮಿಗಳೂ ಲೇಖಕರೂ ಆಗಿದ್ದರು. ಇವರು ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಕನ್ನಡ ಲಿಪಿಯಲ್ಲಿ ಬರೆದ ದೀನಬಂಧು ಕಬೀರ್ ಎಂಬ ಹಿಂದಿ ನಾಟಕವನ್ನು ಬೆಂಗಳೂರಿನಲ್ಲಿ ಗಾಂಧೀಜಿಯವರ ಸಮ್ಮುಖದಲ್ಲಿ ಅಭಿನಯಿಸಿದಾಗ ಅವರು ತುಂಬಾ ಪ್ರಭಾವಿತರಾದರು. ಅಂತೆಯೇ ಪಂಡಿತ ತಾರಾನಾಥರ ಈ ಪ್ರಯತ್ನವನ್ನು ಶ್ಲಾಘಿಸಿದರು. ಈ ನಿಟ್ಟಿನಲ್ಲಿ ಹಿಂದಿಯ ಪ್ರಸಿದ್ಧ ನಾಟಕಗಳಾದ ಮೇವಾಡ್ ಪತನ್, ವೀರ್ ಅಭಿಮನ್ಯು ಮುಂತಾದ ಹಿಂದಿ ನಾಟಕಗಳನ್ನು ಮೈಸೂರು, ಬೆಂಗಳೂರು, ಮದರಾಸು ಮುಂತಾದ ಸ್ಥಳಗಳಲ್ಲಿ ಅಭಿನಯಿಸುವಲ್ಲಿ ಆಕಾಶವಾಣಿಯ ನಟೇಶ್ ಮೊದಲಿಯಾರ್, ಚಲನಚಿತ್ರ ಸಾಹಿತಿ ಚಿ.ಸದಾಶಿವಯ್ಯ ಹಾಗೂ ಸಿ.ಕೆ.ನಾಗರಾಜರಾವ್ ಮುಂತಾದವರು ಅನನ್ಯ ಸಹಕಾರ ನೀಡಿದರು. ಜೊತೆಗೆ ಹಿಂದಿ ಕಲಿಯುವವರ ಅನುಕೂಲಕ್ಕಾಗಿ ಅನಿವಾರ್ಯವಾಗಿ ಬೇಕಾದ ಪುಸ್ತಕಗಳ ರಚನೆಯಾದದ್ದು ಮಹತ್ತ್ವದ ಕಾರ್ಯವಾಗಿದೆ. ಈ ನಿಟ್ಟಿನಲ್ಲಿ ಪಂಡಿತ ಸಿದ್ಧನಾಥ ಪಂತರ ಹಿಂದಿ - ಕನ್ನಡ ಸ್ವಯಂಬೋಧಿನಿ, ಜಂಬುನಾಥನ್‌ರ ಹಿಂದಿ ವ್ಯಾಕರಣ, ಹಿಂದಿ - ಕನ್ನಡ ಶಬ್ದಕೋಶ ಮುಂತಾದ ಇತರೆ ಉಪಯೋಗಿ ಕೃತಿಗಳು, ಡಿ.ಕೆ.ಭಾರದ್ವಾಜರ ಹಿಂದಿ ಪ್ರಚಾರಕ್ಕೆ ಪೂರಕವಾದ ಗ್ರಂಥಗಳನ್ನು ಇಲ್ಲಿ ನೆನೆಯಬಹುದು.

1935 ರಿಂದ 1947ರ ಮಧ್ಯೆ ಕರ್ನಾಟಕದಲ್ಲಿ ಹಿಂದಿ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಬೆಂಗಳೂರ್ ಹಿಂದಿ ಪ್ರಚಾರಕ್ ಗಿಲ್ಡ್, ಹಿಂದಿ ಪ್ರಚಾರ್ ಸಮ್ಮೇಲನ ಸ್ಥಾಯಿ ಸಮಿತಿ ಹಾಗೂ ಹಿಂದಿ ಸಾಹಿತ್ಯ ಪರಿಷತ್‌ಗಳು ಕ್ರಿಯಾಶೀಲವಾಗಿದ್ದುವು. ಜೊತೆಗೆ ಕರ್ನಾಟಕದಲ್ಲಿನ ಹಿಂದಿ ಪ್ರೇಮಿಗಳು ಈ ರಾಜ್ಯದಲ್ಲಿ ಹಿಂದಿ ಪ್ರಚಾರವನ್ನು ಸಂಘಟನಾತ್ಮಕವಾಗಿ ಮಾಡಲು ಒಂದು ಸಂಸ್ಥೆಯನ್ನು ಸ್ಥಾಪಿಸಲು ನಿರ್ಧರಿಸಿದರು. 1936ರಲ್ಲಿ ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ ಎಂಬ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಆರಂಭಿಸಿದರು. ಮೊದಲ ಹಂತದಲ್ಲಿ ಕೆ.ಪಿ.ಪುಟ್ಟಣಚೆಟ್ಟಿಯವರು ಗೌರವಾಧ್ಯಕ್ಷರಾಗಿ, ಸಿ.ಬಿ.ರಾಮರಾವ್ ಅವರು ಅಧ್ಯಕ್ಷರಾಗಿ, ಕೆ.ಸಂಪದ್ಗಿರಿರಾವ್, ನಾರಾಯಣ್‌ನಾಯಕ್ ಮತ್ತು ಸಿದ್ಧನಾಥ ಪಂತ್‌ರು ಕೋಶಾಧ್ಯಕ್ಷರೂ ಸಂಚಾಲಕರೂ ಆಗಿ ಆಯ್ಕೆಯಾದರು. 1937ರಲ್ಲಿ ಈ ಸಭಾವನ್ನು ಧಾರವಾಡಕ್ಕೆ ವರ್ಗಾಯಿಸಲಾಯಿತು. ಸುಮಾರು ಎಪ್ಪತ್ತು ವರ್ಷಗಳಿಂದ ಈ ಪ್ರಾಂತೀಯ  ಸಭಾ ಹಿಂದಿ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಈ ಮಧ್ಯೆ ಇದು ಕರ್ನಾಟಕದ ಸ್ವತಂತ್ರ ಸಂಸ್ಥೆಯೋ ಅಥ'ವಾ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಅಂಗಸಂಸ್ಥೆಯೋ ಎಂಬ ವಿವಾದ ತಲೆಎತ್ತಿ ಈಗ ಇದು ಮದರಾಸು ಸಭಾದ ಅಂಗಸಂಸ್ಥೆಯೆಂದೇ ತೀರ್ಮಾನವಾಗಿದೆ.

ಕರ್ನಾಟಕದ ಪ್ರಾಂತೀಯ ಹಿಂದಿ ಪ್ರಚಾರ ಸಭಾದ (1936) ಸ್ಥಾಪನೆಯೊಂದಿಗೆ ಕರ್ನಾಟಕದಲ್ಲಿ ಹಿಂದಿ ಪ್ರಚಾರ-ಪ್ರಸಾರಕ್ಕೆ ಹೊಸ ಆಯಾಮಗಳು ತೆರೆದುಕೊಂಡವು. ಅಂದಿನ ಅನುಭವಿ ಪ್ರಚಾರಕ ಕಾರ್ಯಕರ್ತರು ತಮ್ಮದೇ ಆದ ಸಂಸ್ಥೆಗಳನ್ನು ಸ್ಥಾಪಿಸಿದರು. ಇವೆಂದರೆ ಮೈಸೂರು ರಿಯಾಸತ್ ಹಿಂದಿ ಪ್ರಚಾರ್ ಸಮಿತಿ (1938), ಮೈಸೂರು ಹಿಂದಿ ಪ್ರಚಾರ್ ಪರಿಷದ್ (1942), ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ (1943). ಗುಲ್ಬರ್ಗದಲ್ಲಿ ಸಹ ಹಿಂದಿ ಪ್ರಚಾರ ಸಮಿತಿ ಆರಂಭವಾಗಿದೆ. ಹೀಗೆ ಈ ಐದು ಸಂಸ್ಥೆಗಳು ಇಡೀ ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ನಿರಂತರವಾಗಿ ಹಿಂದಿ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿವೆ.

ಕರ್ನಾಟಕದಲ್ಲಿ ಹಿಂದಿಯನ್ನು ಶಾಲಾ ಮಟ್ಟದಲ್ಲಿ ಕಲಿಸಲು ಅವಕಾಶ ಕಲ್ಪಿಸಿಕೊಡುವುದರ ಮೂಲಕ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆ ಹಿಂದಿ ಭಾಷೆ ಮತ್ತು ಸಾಹಿತ್ಯ ಪ್ರಸಾರ ಕಾರ್ಯದಲ್ಲಿ ಅತ್ಯಮೂಲ್ಯ ಕೊಡುಗೆಯನ್ನಿತ್ತಿದೆ. 1930ರಲ್ಲಿ ಹಿಂದಿ ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಪ್ರವೇಶಿಸಿತು. ಆ ದಿನಗಳಲ್ಲಿ ಶಾಲಾ ಹಂತದಲ್ಲಿ ಸ್ವಂತ ಅಭ್ಯಾಸ ಮಾಡಿ ಪರೀಕ್ಷೆಗಳನ್ನು ಬರೆಯುವ ಅವಕಾಶವಿತ್ತು. ಆದರೆ ಆರಂಭದ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ದ್ವಿತೀಯ ಭಾಷೆಯ ರೂಪದಲ್ಲಿ ಹಿಂದಿಯನ್ನು ಅಭ್ಯಾಸ ಮಾಡಲು ಅನುಕೂಲ ಕಲ್ಪಿಸಲಾಯಿತು. ಈ ಅನುಕೂಲ ಬಹಳ ದಿನಗಳ ಕಾಲ ಇರಲಿಲ್ಲ. ಹಿಂದಿಯಿಂದ ಮಾತೃಭಾಷೆಯ ಅಧ್ಯಯನಕ್ಕೆ ಧಕ್ಕೆಯಾಗಬಹುದೆಂಬ ಆತಂಕದಿಂದ ಹಿಂದಿಯನ್ನು ಐಚ್ಛಿಕ ವಿಷಯದ ಪಟ್ಟಿಗೆ ಸೇರಿಸಲಾಯಿತು. 1935ರಲ್ಲಿ ಮಾಧ್ಯಮಿಕ ಶಾಲಾ ಹಂತದಲ್ಲಿ ಹಿಂದಿಕಲಿಸುವಿಕೆಗೆ ವ್ಯವಸ್ಥೆ ಮಾಡಲಾಯಿತು. ಕಾಲ ಬದಲಾದಂತೆ ಹಿಂದಿಯ ಬಗೆಗಿನ ಸರ್ಕಾರದ ದೃಷ್ಟಿಯೂ ಬದಲಾಗುತ್ತ ಬಂದು 1946ರಲ್ಲಿ ಹಿಂದಿಯನ್ನು ಪ್ರೌಢಶಾಲಾ ಹಂತದಲ್ಲಿ ಅನಿವಾರ್ಯ ವಿಷಯವನ್ನಾಗಿ ಮಾಡಿದರಾದರೂ ಪರೀಕ್ಷೆಯ ವಿಷಯವನ್ನಾಗಿ ಮಾಡಲಿಲ್ಲ. 1955ರಲ್ಲಿ ಹಿಂದಿ ವಿದ್ವಾನ್ ಕೋರ್ಸ್‌ನ್ನು ಸರ್ಕಾರ ಮೈಸೂರಿನಲ್ಲಿ ಆರಂಭಿಸಿತು. ಈ ಕೋರ್ಸ್ ನಾಲ್ಕು ವರ್ಷಗಳ ಅವಧಿಯದಾಗಿದ್ದು ಹಿಂದಿಯಲ್ಲಿ ಉನ್ನತ ಶಿಕ್ಷಣವನ್ನು ನೀಡುವ ಉತ್ತಮ ಪಠ್ಯಕ್ರಮವನ್ನು ಹೊಂದಿತ್ತು. ಈಚಿನ ವಿಷಯಗಳಲ್ಲಿ ಈ ಕೋರ್ಸನ್ನು ಸರ್ಕಾರ ಸ್ಥಗಿತಗೊಳಿಸಿತು. ಇದೇ ರೀತಿಯಾಗಿ ಹಿಂದಿ ಶಿಕ್ಷಕರ ಟ್ರೈನಿಂಗ್ ಕಾಲೇಜನ್ನು ಸಹ ಸರ್ಕಾರ ಮೊದಲ ಹಂತದಲ್ಲಿ ಮೈಸೂರಿನಲ್ಲಿ ಸ್ಥಾಪಿಸಿ, ಅನಂತರದ ವರ್ಷಗಳಲ್ಲಿ ಗುಲ್ಬರ್ಗ ಮತ್ತು ಬಾಗಲಕೋಟೆಗಳಲ್ಲೂ ಈ ಬಗೆಯ ಕಾಲೇಜುಗಳನ್ನು ಸ್ಥಾಪಿಸಿ ಸಾವಿರಾರು ಹಿಂದಿ ಶಿಕ್ಷಕರಿಗೆ ತರಬೇತನ್ನು ನೀಡಿತು. ಈಗ ಈ ಮೂರೂ ಕಾಲೇಜುಗಳೂ ಕಾರ್ಯನಿರ್ವಹಿಸುತ್ತಿಲ್ಲ. ಕರ್ನಾಟಕದಲ್ಲಿ ಈಚಿನ ವರ್ಷಗಳಲ್ಲಿ ಸಮಿತಿ ಸಭಾಗಳು ಸರ್ಕಾರದ ಅನುಮತಿ ಮಾನ್ಯತೆ ಪಡೆದು ತರಬೇತಿ ಕಾಲೇಜುಗಳನ್ನು ನಡೆಸುತ್ತಿವೆ.

ಕರ್ನಾಟಕ ಸರ್ಕಾರ 1959ರಲ್ಲಿ ಹಿಂದಿ ಪ್ರಚಾರ-ಪ್ರಸಾರದಲ್ಲಿ ತೀವ್ರತೆಯನ್ನು ತರಲು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಿಂದಿ ಅಧಿಕಾರಿ ಹುದ್ದೆಯನ್ನು ಸೃಷ್ಟಿಸಿತು. ಈ ವಿಭಾಗ ಕರ್ನಾಟಕದಲ್ಲಿ ಹಿಂದಿ ಶಿಕ್ಷಣದ ಸರ್ವತೋಮುಖ ಪ್ರಗತಿಗೆ ಆರಂಭದ ವರ್ಷಗಳಲ್ಲಿ ನೀಡಿರುವ ಯೋಜನೆಗಳು ಮಹತ್ತ್ವದ್ದಾಗಿವೆ. ಕರ್ನಾಟಕದ ಹಿಂದಿ ಲೇಖಕರನ್ನು ಹಾಗೂ ಅನುವಾದಕರನ್ನು ಪ್ರೋತ್ಸಾಹಿಸಲು ರೂಪಿಸಿದ್ದ ಬಹುಮಾನ ಯೋಜನೆ ಈಚಿನ ವರ್ಷಗಳಲ್ಲಿ ಸ್ಥಗಿತಗೊಂಡಿದೆ.

ಕರ್ನಾಟಕದಲ್ಲಿ ಹಿಂದಿ ಭಾಷೆ ಮತ್ತು ಸಾಹಿತ್ಯದ ಅಧ್ಯಯನ ಮತ್ತು ಅಧ್ಯಾಪನಕ್ಕೆ ಹೊಸ ಆಯಾಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಪ್ರವೇಶದ ಐತಿಹಾಸಿಕ ಘಟನೆಯಿಂದ ಆರಂಭವಾಗುತ್ತದೆ. ಸಿ.ವೈ. ಚಿಂತಾಮಣಿಯವರು 1937ರಲ್ಲಿ ಹಿಂದಿಗೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾನ ಸಿಗಬೇಕೆಂದು ಪ್ರತಿಪಾದಿಸಿದ ಹಿನ್ನೆಲೆಯಲ್ಲಿ 1938ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿಯ ಪ್ರವೇಶ ದೊರೆಯಿತು. ವಿಶ್ವವಿದ್ಯಾನಿಲಯದಲ್ಲಿ ಮೊದಲ ಹಿಂದಿ ಅಧ್ಯಾಪಕರಾಗಿ ಸೇವೆ ಆರಂಭಿಸಿದ ನಾ.ನಾಗಪ್ಪನವರು ಹಿಂದಿ ಶಿಕ್ಷಣವನ್ನು ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಹಂತದಲ್ಲಿ ಪ್ರಾರಂಭಿಸಲು ಕಾರಣಪುರುಷರಾದರು. 1959ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಎಂ.ಎ. ತರಗತಿಗಳು ಆರಂಭವಾದವು. ಮುಂದೆ 1981ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ ಹಿಂದಿ ಎಂ.ಎ. ತರಗತಿಗಳನ್ನು ಆರಂಭಿಸಿತು. ಮೇ. ರಾಜೇಶ್ವರಯ್ಯನವರ ನೇತೃತ್ವದಲ್ಲಿ ಆರಂಭಗೊಂಡ ಹಿಂದಿ ಎಂ.ಎ., ಕೋರ್ಸ್ ಇಡೀ ದೇಶದಲ್ಲೇ ಜನಪ್ರಿಯವಾಯಿತು. ಹಿಂದಿ ಭಾಷೀಯ ರಾಜ್ಯಗಳ ವಿದ್ಯಾರ್ಥಿಗಳೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಕಲಿಯಲು ಬಂದದ್ದು ಒಂದು ದಾಖಲೆಯೆಂದೇ ಹೇಳಬೇಕು. ಕರ್ನಾಟಕದಲ್ಲಿ ಇತರ ವಿಶ್ವವಿದ್ಯಾಲಯಗಳು  ಸ್ಥಾಪಿತಗೊಂಡಾಗ ಅಲ್ಲೂ ಹಿಂದಿ ವಿಭಾಗಗಳು ಆರಂಭವಾದುವು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 1971ರಲ್ಲಿ ಗುಲ್ಬರ್ಗದ ಹಿಂದಿ ಸ್ನಾತಕೋತ್ತರ ಕೇಂದ್ರ (1976) (ಮುಂದೆ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಈ ಕೇಂದ್ರ ಸ್ವತಂತ್ರ ವಿಭಾಗವಾಗಿ ಕಾರ್ಯ ನಿರ್ವಹಿಸಲಾರಂಭಿಸಿತು), ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 1972ರಲ್ಲಿ, ಈಚೆಗೆ ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಿಂದಿ ಸ್ನಾತಕೋತ್ತರ ವಿಭಾಗಗಳು ಪ್ರಾರಂಭಗೊಂಡು ಕಾರ್ಯನಿರತವಾಗಿವೆ.

ಇಲ್ಲೆಲ್ಲ ಹಿಂದಿಯಲ್ಲಿ ಸ್ನಾತಕೋತ್ತರ ಶಿಕ್ಷಣ ಹಾಗೂ ಸಂಶೋಧನೆಗಳು ಯಶಸ್ವಿಯಾಗಿ ಸಾಗಿವೆ. ಈ ಮಧ್ಯೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಧಾರವಾಡದಲ್ಲಿ ಸ್ನಾತಕೋತ್ತರ ಹಿಂದಿ ಶಿಕ್ಷಣವನ್ನು ಆರಂಭಿಸಿದ್ದು ಇಲ್ಲೂ ಹಿಂದಿಯಲ್ಲಿ ಸಂಶೋಧನೆ ನಡೆಯುತ್ತಿದೆ. ಹೀಗೆ ಕರ್ನಾಟಕದಲ್ಲಿನ ಸಂಶೋಧನೆಗಳು ವಿಶ್ವವಿದ್ಯಾಲಯಗಳಲ್ಲಿ ಹಿಂದಿಗೆ ಸಾಕಷ್ಟು ಪ್ರಮಾಣದಲ್ಲಿ ಉತ್ತೇಜನ ನೀಡಿವೆ. ವಿಶ್ವವಿದ್ಯಾಲಯಗಳ ಹಂತದಲ್ಲಿ ಹಿಂದಿಯನ್ನು ಪ್ರತಿಷ್ಠಾಪಿಸುವುದರಲ್ಲಿ ನಾಗಪ್ಪ, ಮೇ. ರಾಜೇಶ್ವರಯ್ಯ, ರಾಧಾಕೃಷ್ಣ ಮೊದಲಿಯಾರ್, ಹಿರಣ್ಮಯ, ಶಂಕರರಾವ್ ಕೊಪ್ಪೀಕೇರಿ, ಸರಗೂ ಕೃಷ್ಣಮೂರ್ತಿ ಮುಂತಾದವರ ಕೊಡುಗೆ ಮಹತ್ತ್ವದ್ದಾಗಿದೆ.

ಕರ್ನಾಟಕ ಹಿಂದಿಯೇತರ ಭಾಷಿಕ ರಾಜ್ಯವಾದರೂ ಇಲ್ಲಿ ಹಿಂದಿ ಭಾಷೆಯಲ್ಲಿ ಮೌಲಿಕ ಸಾಹಿತ್ಯವನ್ನು ಸೃಜಿಸಿರುವ ಒಂದು ಪರಂಪರೆಯನ್ನೇ ಕಾಣಬಹುದು. ದಖನೀ ಭಾಷೆ ಗುಲಬರ್ಗ, ಬೀದರ್ ಹಾಗೂ ಬಿಜಾಪುರಗಳಲ್ಲಿ ಮುಸ್ಲಿಂ ದೊರೆಗಳ ಕಾಲದಲ್ಲಿ ಬಳಕೆಯಲ್ಲಿದ್ದು ವಿಪುಲವಾಗಿ ಸಾಹಿತ್ಯ ಸೃಷ್ಟಿಯಾಯಿತು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹಿಂದಿಯಲ್ಲಿ ಸೃಜನಾತ್ಮಕ ಬರೆವಣಿಗೆ ಸಾಕಷ್ಟು ಪ್ರಮಾಣದಲ್ಲಿ ಆಗಿದೆ. ಹಿಂದಿಯನ್ನು ಕಲಿತ ಕನ್ನಡಿಗರು ಆ ಭಾಷೆಯಲ್ಲಿ ಅಭಿವ್ಯಕ್ತಿ ಮಾಡುವಷ್ಟು ಪ್ರೌಢಿಮೆಯನ್ನು ಸಾಧಿಸಿದ್ದು ಹೆಮ್ಮೆಯ ವಿಷಯವೇ ಸರಿ. ಕರ್ನಾಟಕದ ಹಿಂದಿ ಕವಿಗಳಲ್ಲಿ ಮುಖ್ಯರಾದವರೆಂದರೆ ಸರಗೂ ಕೃಷ್ಣಮೂರ್ತಿ, ಅಪ್ಪಾಸಾಹೇಬ್ (ಶೈಲ್), ಸಿದ್ಧಲಿಂಗಪಟ್ಟಣಶೆಟ್ಟಿ (ಸಾಗರ್), ಕೆ.ಹನುಮಂತರಾವ್ (ರವಿ), ವಜ್ರಮಟ್ಟಿ (ಮೇಘಮಿತ್ರ್), ಟಿ.ಜಿ.ಪ್ರಭಾಶಂಕರ್ (ಪ್ರೇಮಿ). ಕರ್ನಾಟಕದ ಹಿಂದಿ ಕಾದಂಬರಿಕಾರರಲ್ಲಿ ಮ.ಸು.ಕೃಷ್ಣಮೂರ್ತಿ ಅವರ ಕೊಡುಗೆ ದೊಡ್ಡದು. ಇವರು ಹಿಂದಿಯಲ್ಲಿ ನಾಲ್ಕು ಕಾದಂಬರಿಗಳನ್ನು (ಅಪರಾಜಿತ್, ರಾಗ್ ಕಾನಡಾ, ಪರಶುರಾಮ್, ಕೀ ಬಹನೇಂ ಹಾಗೂ ಜ್ಯೋತಿಕಳಶ್) ಪ್ರಕಟಿಸಿ ಮನ್ನಣೆಗಳಿಸಿದ್ದಾರೆ. ಚಂದ್ರಕಾಂತ ಕುಸನೂರ್, ಅಪ್ಪಾ ಸಾಹೇಬ್, ಮ.ಸು.ಕೃಷ್ಣಮೂರ್ತಿ, ಕೇಶವ ಮಳಗಾಂವಕರ್ ಹಿಂದಿ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹಿಂದಿ ನಾಟಕ ಕ್ಷೇತ್ರದಲ್ಲಿ ಜಿ.ಜೆ.ಹರಿಜಿತ್ ವಿಶೇಷ ಉಲ್ಲೇಖಕ್ಕೆ ಅರ್ಹರಾಗಿದ್ದಾರೆ. ಅನೇಕ ಏಕಾಂಕಗಳನ್ನೂ ನಾಟಕಗಳನ್ನೂ ಪ್ರಕಟಿಸಿ ಹಿಂದಿ ಭಾಷೀಯರ ಮೆಚ್ಚುಗೆ ಹಾಗೂ ಪ್ರಶಂಸೆಯನ್ನು ಪಡೆದಿರುವ ಇವರ ಹುಮಾಯೂನ್, ಸಂಭವಾಮಿ ಯುಗೇ ಯುಗೆ, ಉತ್ತರ ಮೃಚ್ಛಕಟಿಕ, ಯೂನಿವರ್ಸಿಟಿ ನಾಟಕಗಳು ಉಲ್ಲೇಖಯೋಗ್ಯವಾಗಿವೆ. ನಾಟಕ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಇತರರೆಂದರೆ ಪಂಡಿತ ತಾರಾನಾಥ್, ಎಂ.ವಿ.ಜಂಬುನಾಥನ್, ಆರ್.ಸಿ.ಭೂಸನೂರ್‌ಮಠ, ಚಂದ್ರಕಾಂತ ಕುಸನೂರ್, ಎನ್.ಎಸ್.ದಕ್ಷಿಣಾಮೂರ್ತಿ ಮುಖ್ಯರಾಗಿದ್ದಾರೆ. ಲಲಿತ ಪ್ರಬಂಧದ ಕ್ಷೇತ್ರದಲ್ಲಿ ಸರೋಜಿನಿ ಮಹಿಷಿಯವರು ಪ್ರಕಟಿಸಿರುವ ಅತಿಥಿ ಸತ್ಕಾರ್ ಹಾಗೂ ಯೇ ಹಮಾರೇ ಸಂಗ್ರಹಗಳು, ನಾ.ನಾಗಪ್ಪನವರ ಬುವಾಜಿ ಸಂಗ್ರಹದ ಬರೆಹಗಳು ಗಮನ ಸೆಳೆಯುತ್ತವೆ.

ವ್ಯಾಕರಣ-ಶಬ್ದಕೋಶರಚನಾ ಕ್ಷೇತ್ರದಲ್ಲಿ ಕರ್ನಾಟಕದ ವಿದ್ವಾಂಸರು ಮಾಡಿರುವ ಕೆಲಸ ಬೆರಗುಗೊಳಿಸುವಂಥಾದ್ದಾಗಿದೆ. ಎಂ.ವಿ.ಜಂಬುನಾಥನ್‌ರ ಹಿಂದಿ-ಕನ್ನಡ ಕೋಶ, ಉರ್ದು-ಹಿಂದಿ ಕೋಶ, ಹಿಂದಿ ಮುಹಾವರಾ ಕೋಶ್, ಸರಳ ಹಿಂದಿ ವ್ಯಾಕರಣ, ಗುರುನಾಥ್ ಜೋಶಿಯವರ ಕನ್ನಡ-ಹಿಂದಿ ಕೋಶ, ವ್ಯಾಸಾಳೆಯವರ ಕನ್ನಡ-ಹಿಂದಿ ಕೋಶ, ದಕ್ಷಿಣಾಮೂರ್ತಿಯವರ ಕನ್ನಡ-ಹಿಂದಿ ಕೋಶ, ನಾಗಪ್ಪನವರ ಅಭಿನವ್ ಹಿಂದಿ ವ್ಯಾಕರಣ ಇತ್ಯಾದಿ ಗ್ರಂಥಗಳು ಉಲ್ಲೇಖಾರ್ಹವಾಗಿವೆ.

ಕರ್ನಾಟಕದಲ್ಲಿ ಹಿಂದಿ ಪತ್ರಿಕೆಗಳು ಹಿಂದಿ ಪ್ರಚಾರ ಸಭಾ ಸಮಿತಿಗಳ ಮೂಲಕ ಪ್ರಕಟವಾಗುತ್ತಿದ್ದು ಇವು ಆಯಾಯ ಸಂಸ್ಥೆಗಳ ಚಟುವಟಿಕೆಗಳನ್ನೂ ಪರೀಕ್ಷೋಪಯೋಗಿ ಲೇಖನಗಳನ್ನೂ ಪ್ರಕಟಿಸುವ ವೇದಿಕೆಗಳಾಗಿದ್ದರೂ ಕರ್ನಾಟಕದ ಹಿಂದಿ ಲೇಖಕರನ್ನು ಪ್ರೋತ್ಸಾಹಿಸುತ್ತಲೂ ಬಂದಿವೆ. ಭಾರತ್‌ವಾಣಿ, ಹಿಂದಿ ಪ್ರಚಾರ ಪತ್ರಿಕಾ, ಹಿಂದಿ ಪ್ರಚಾರ ವಾಣಿ, ಭಾಷಾ ಪೀಯೂಷ್ - ಇವು ಕರ್ನಾಟಕದ ಪ್ರಮುಖ ಹಿಂದಿ ಪತ್ರಿಕೆಗಳಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಹಿಂದಿ ವಿಭಾಗದಿಂದ ಪ್ರಕಟವಾಗಿರುವ ಮಾನಸಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗದಿಂದ ಪ್ರಕಟವಾಗಿರುವ 'ಕುಂತಲ್ ಭಾರತಿ'ಯ ಕೆಲವು ಸಂಚಿಕೆಗಳು ವಿದ್ವತ್ಪೂರ್ಣವಾಗಿವೆ. ಈಚಿನ ವರ್ಷಗಳಲ್ಲಿ ಇವುಗಳ ಪ್ರಕಟಣೆ ನಿಂತಿದೆ. ವಿಮರ್ಶೆ ಮತ್ತು ಸಂಶೋಧನ ಕ್ಷೇತ್ರಗಳಲ್ಲಿಯೂ ಕರ್ನಾಟಕ ಹಿಂದಿ ಲೇಖಕರ ಕೊಡುಗೆ ಗಣನೀಯವಾಗಿದೆ. ಕರ್ನಾಟಕದ ನಾಲ್ಕು ವಿಶ್ವವಿದ್ಯಾಲಯಗಳಲ್ಲಿರುವ ಹಿಂದಿ ಅಧ್ಯಯನ ವಿಭಾಗಗಳು ಅನೇಕ ಸಂಶೋಧನ ಕಾರ್ಯವನ್ನು ನಡೆಸುತ್ತಿವೆ.

ಕರ್ನಾಟಕದಲ್ಲಿ ಕನ್ನಡ ಮತ್ತು ಹಿಂದಿ ಭಾಷೆಗಳ ಮಧ್ಯೆ ಆಗಿರುವ ಅನುವಾದಕಾರ್ಯ ಸಮೃದ್ಧವಾಗಿದೆ. ಅದರಲ್ಲೂ ಹಿಂದಿಯಿಂದ ಕನ್ನಡಕ್ಕೆ ನೂರಾರು ಕೃತಿಗಳು ಅನುವಾದವಾಗಿದ್ದು ಕನ್ನಡವನ್ನು ಇವು ಪುಷ್ಟಿಗೊಳಿಸಿವೆ. ಪ್ರಾಚೀನ ಹಿಂದಿ ಸಾಹಿತ್ಯದ ಪ್ರಮುಖ ಕೃತಿಗಳ ಅನುವಾದಗಳಿಂದ ಈಚಿನವರೆಗೆ ಬಹುತೇಕ ಎಲ್ಲ ಪ್ರಮುಖರ ಕೃತಿಗಳು ಕನ್ನಡದಲ್ಲಿ ಬಂದಿವೆ. ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದವರ ಹಾಗೂ ಅನುವಾದಿಸುತ್ತಿರುವವರ ಸಂಖ್ಯೆ ಅಪಾರವಾದುದು. ಪ್ರಾತಿನಿಧಿಕವಾಗಿ ಹೇಳುವುದಾದರೆ ಡಿ.ಕೆ.ಭಾರದ್ವಾಜ, ಗುರುನಾಥ ಜೋಶಿ, ಎಂ.ಎಸ್.ಕೃಷ್ಣ ಮೂರ್ತಿ, ಪ್ರತಾಪ್ ಸುಧಾಕರ್, ಪ್ರಧಾನ್ ಗುರುದತ್ತ, ಸಿದ್ಧಲಿಂಗ ಪಟ್ಟಣಶೆಟ್ಟಿ, ಎಚ್.ಎಸ್.ಪಾರ್ವತಿ, ಎಚ್.ವಿ.ರಾಮಚಂದ್ರರಾವ್, ಎಂ.ವಿ.ನಾರಾಯಣರಾವ್, ತಿಪ್ಪೇಸ್ವಾಮಿ, ಕುಮುದಪ್ರಿಯ, ಬಿ.ನಂ.ಚಂದ್ರಯ್ಯ, ಎಸ್.ಎಂ.ರಾಮಚಂದ್ರ ಸ್ವಾಮಿ, ಪಿ.ವಿ.ನಂಜರಾಜ ಅರಸು, ತೇಜಸ್ವಿ ಕಟ್ಟೀಮನಿ, ಭಾಸ್ಕರ್ ಮಯ್ಯ, ಡಿ.ಎನ್.ಶ್ರೀನಾಥ್, ಕಾಶೀನಾಥ್ ಅಂಬಲಗೆ, ಪಂಚಾಕ್ಷರಿ ಹಿರೇಮಠ್, ಶಶಿಕಲಾ ಸುಬ್ಬಣ್ಣ ಗಮನಾರ್ಹ ಕನ್ನಡ ಅನುವಾದಗಳನ್ನು ಮಾಡಿದ್ದಾರೆ.

ಕನ್ನಡದಿಂದ ಹಿಂದಿಗೆ ಅನುವಾದಿಸುತ್ತಿರುವವರ ಹಾಗೂ ಅನುವಾದಿಸಿರುವವರ ಪಟ್ಟಿಯೂ ದೊಡ್ಡದೇ. ಆದರೆ ಕನ್ನಡದಿಂದ ಹಿಂದಿಗೆ ಅನುವಾದಗೊಂಡಿರುವ ಕೃತಿಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕು. ಕನ್ನಡದಿಂದ ಹಿಂದಿಗೆ ಅನುವಾದಿಸಿ ಕನ್ನಡ ಸಾಹಿತ್ಯ - ಸಂಸ್ಕೃತಿಯ ನಿಜವಾದ ರಾಯಭಾರಿಯಾಗಿದ್ದ ಪ್ರಮುಖ ಅನುವಾದಕರೆಂದರೆ ಬಿ.ಆರ್.ನಾರಾಯಣ್, ಇವರು ಕನ್ನಡದ ನಲ್ವತ್ತಕ್ಕೂ ಹೆಚ್ಚು ಕೃತಿಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಕನ್ನಡದಿಂದ ಹಿಂದಿಗೆ ಅನುವಾದ ಮಾಡಿರುವ ಇತರೆ ಕೆಲವು ಪ್ರಮುಖ ಅನುವಾದಕರೆಂದರೆ ಬಾಲಚಂದ್ರ ಜಯಶೆಟ್ಟಿ, ವಾಸು, ಬಿ.ಪುತ್ರನ್, ಬಾಬುರಾವ್ ಕುಮಠೇಕರ್, ಚಂದ್ರಕಾಂತ ಕುಸನೂರ, ಎಸ್.ಎಂ.ರಾಮಚಂದ್ರಸ್ವಾಮಿ, ಬಿ.ವಿ.ಕಾರಂತ, ಎಸ್.ರಾಮಚಂದ್ರ, ತಿಪ್ಪೇಸ್ವಾಮಿ, ಹಿರಣ್ಣಯ್ಯ, ರಸಿಕಪುತ್ತಿಗೆ, ಎಂ.ರಾಜೇಶ್ವರಯ್ಯ, ಆರಂ.ಸಿ.ಭೂಸನೂರಮಠ, ನಂದಿನಿ ಗುಂಡೂರಾವ್, ಬಿ.ವೈ.ಲಲಿತಾಂಬ, ಪ್ರಧಾನ ಗುರುದತ್ತ, ಎಂ.ಎಸ್.ಕೃಷ್ಣಮೂರ್ತಿ, ಸರೋಜಿನಿ ಮಹಿಷಿ, ಡಿ.ಎನ್.ಶ್ರೀನಾಥ್, ಟಿ.ಆರ್.ಭಟ್, ಜಿ.ಎಂ.ಉಮಾಪತಿ ಶಾಸ್ತ್ರಿ ಮೊದಲಾದವರು. ಪ್ರಧಾನ ಗುರುದತ್ತ ಅವರು ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಹಿಂದಿಗೆ ಅನುವಾದಿಸಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಮುಂತಾದ ಸಂಸ್ಥೆಗಳು ಈಚಿನ ವರ್ಷಗಳಲ್ಲಿ ಅನುವಾದಗಳನ್ನು ಪ್ರಕಟಿಸುವುದರಲ್ಲಿ ಅಪಾರ ಆಸಕ್ತಿಯನ್ನು ತೋರುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉತ್ತರ ಪ್ರದೇಶ ಸರ್ಕಾರ ಸ್ಥಾಪಿಸಿರುವ ದತ್ತಿ ನಿಧಿಯಿಂದ ಹಿಂದಿ ಮತ್ತು ಕನ್ನಡ ಅನುವಾದಗಳನ್ನು ಪ್ರಕಟಿಸುತ್ತಿರುವುದು ವಿಶೇಷವಾಗಿ ನಮೂದಿಸಬೇಕಾಗಿರುವ ಅಂಶವಾಗಿದೆ. (ಟಿ.)

**ಮರಾಠಿ:** ಭೌಗೋಳಿಕವಾಗಿ ನೆರೆಯ ರಾಜ್ಯಗಳಾಗಿರುವ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸಾಮರಸ್ಯ ಶತಮಾನಗಳಿಂದ ಕ್ರಮವಾಗಿ ನಡೆದುಕೊಂಡು ಬಂದಿದೆ. ಮಹಾರಾಷ್ಟ್ರದ ಬಹುಭಾಗ ಕವಿರಾಜಮಾರ್ಗದ ಕಾಲಕ್ಕೆ ಕರ್ನಾಟಕದಲ್ಲಿ ಐಕ್ಯವಾಗಿತ್ತೆಂದು ತಿಳಿಯುತ್ತದೆ. ಮಹಾರಾಷ್ಟ್ರದಲ್ಲಿ ಇಂದಿಗೂ ಇರುವ ಕೆಲವು ಊರುಗಳ ಹೆಸರುಗಳು ಕನ್ನಡ ಹೆಸರಿನ ರೂಪಾಂತರವಾಗಿವೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಉದಾಹರಣೆಗೆ: ಖಾಂಡಿವ್ಲಿ (<ಖಂಡವಳ್ಳಿ), ಬೋರಿವ್ಲಿ (<ಬೋರಿಹಳ್ಳಿ), ಲೋಣಾವ್ಳಾ (<ಲೋಳವಳ್ಳಿ), ಮಲವ್ಳಿ (<ಮಳವಳ್ಳಿ), ಮಲಪಹಳ್ಳಿ, ಪೂನಾ (<ಪುಣಕ), ಪಲಟನ್ (<ಪಳೆಯಠಾಣ), ಮೀರಜ್ (<ಮಿರಿಂಜೆ), ಕುರಂದವಾಡ್ (<ಕುಡಲದಾಮವಾಡ) ಇತ್ಯಾದಿ. ಸಿದ್ಧರಾಮನ ಸೊನ್ನಲಪುರ, ಬಿಜ್ಜಳನ ಮಂಗಳವೇಡ, ಅಕ್ಕಲಕೋಟೆ ಮುಂತಾದ ಊರುಗಳೂ ಮಹಾರಾಷ್ಟ್ರದಲ್ಲಿಯೇ

ಉಳಿದಿವೆ. ಕನ್ನಡ ಎನ್ನುವ ಹೆಸರಿನ ಒಂದು ತಾಲ್ಲೂಕು ಇಂದಿಗೂ ಔರಂಗಾಬಾದ್ ಜಿಲ್ಲೆಯಲ್ಲಿ ಗೋದಾವರಿಯ ಆಚೆಗಿದೆ.

ವಿಜಯನಗರದ ಪತನಾನಂತರ ಮಹಮ್ಮದೀಯರ ದಕ್ಷಿಣ ಭಾರತ ದಾಳಿಯ ಜೊತೆ ಜೊತೆಯಲ್ಲಿಯೇ ಮಹಾರಾಷ್ಟ್ರೀಯರು ಇನ್ನೂ ದಕ್ಷಿಣವನ್ನು ಆಕ್ರಮಿಸತೊಡಗಿದರು. ಬೆಂಗಳೂರು ಜಹಗೀರಿಯಾಗಿ ದೊರೆತಮೇಲಂತೂ ಶಿವಾಜಿಯ ತಂದೆ ಶಹಾಜಿ ಕೋಲಾರ ಮತ್ತು ದೊಡ್ಡಬಳ್ಳಾಪುರಗಳಲ್ಲಿ ನಿಂತು ಪ್ರಾಬಲ್ಯ ಹೊಂದಿ ಮರಾಠಿ ಭಾಷೆ, ಕಂದಾಯ ಪದ್ಧತಿ ಮತ್ತು ಲೆಕ್ಕಪತ್ರಗಳ ರೀತಿಯನ್ನು ಕರ್ನಾಟಕದಲ್ಲಿ ಅಳವಡಿಸಿದನೆಂದು ತಿಳಿಯುತ್ತದೆ. (ನೋಡಿ: ಮರಾಠರ ಆಳಿಕೆ). 1640ರ ಸುಮಾರಿನಲ್ಲಿ ಶಿವಾಜಿ ಬೆಂಗಳೂರಿನಲ್ಲಿಯೇ ನೆಲಸಿದ್ದ. ಇಂದಿಗೂ ಶಹಾಜಿಯ ಸಮಾಧಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿದೆ ಎನ್ನಲಾಗಿದೆ. ಮುಗಲ್ ಚಕ್ರವರ್ತಿ ಔರಂಗಜೇಬನ ಬೆದರಿಕೆಯನ್ನು ಅಲಕ್ಷಿಸಿ ಶಿವಾಜಿಯ ಮಗ ರಾಜಾರಾಮನಿಗೆ ಕೆಳದಿಯ ಚೆನ್ನಮ್ಮ ರಕ್ಷಣೆಯನ್ನು ಒದಗಿಸಿದಳು. ಪೇಶ್ವೆಗಳ ಆಡಳಿತ ಬಂದಮೇಲೆಯೂ ಕರ್ನಾಟಕದ ಮೇಲೆ ಮರಾಠಿಯ ಪ್ರಭಾವ ಗಾಢವಾಗಿಯೇ ಇದ್ದಿತು. ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೇಲೆ ಸ್ವಉಪಯೋಗಕ್ಕಾಗಿ ಕರ್ನಾಟಕದ ಹಲವು ಭಾಗಗಳನ್ನು ಮುಂಬಯಿ ಪ್ರಾಂತಕ್ಕೆ ಸೇರಿಸಿದರು.

ಕರ್ನಾಟಕದಲ್ಲಿ ಮರಾಠಿ ಜನವೂ ಮಹಾರಾಷ್ಟ್ರದಲ್ಲಿ ಕನ್ನಡಿಗರೂ ರಾಜನೀತಿಕ ಸಾಮಾಜಿಕ ಸಾಂಸ್ಕೃತಿಕ ಹೀಗೆ ಒಂದಲ್ಲ ಒಂದು ಕಾರಣಕ್ಕಾಗಿ ನೆಲಸಿದ್ದಾರೆ. ಸಿಂಪಿಗ ವೃತ್ತಿಯನ್ನು ಜೀವನವನ್ನಾಗಿ ಮಾಡಿಕೊಂಡ ಮರಾಠಿ ಮನೆಮಾತಿನ ಜನ ಕರ್ನಾಟಕದ ಹಳ್ಳಿಗಳಲ್ಲಿ ನೆಲಸಿದ್ದಾರೆ. ವ್ಯಾವಹಾರಿಕವಾಗಿ ಅವರು ಕನ್ನಡವನ್ನು ಹೊರಗೆ ಬಳಸುತ್ತಾರೆ. ಇಲ್ಲಿಯ ಮಾಧ್ವಪಂಥದ ಅನೇಕ ದೇಶಸ್ಥಮಾಧ್ವರು ಮರಾಠಿ ಮಾತೃಭಾಷೆಯವರು. ಮಹಾರಾಷ್ಟ್ರದಲ್ಲಿರುವ ಕನ್ನಡಿಗರಲ್ಲಿ ಬಹುಪಾಲು ಜನ ಜೈನರು ಮತ್ತು ವೀರಶೈವರು. ಮಹಾರಾಷ್ಟ್ರದಲ್ಲಿನ ಕನ್ನಡ ಶಾಸನಗಳನ್ನು ಕೊಲ್ಲಾಪುರ ಜಿಲ್ಲೆಯ ಶಾಸನಗಳು ಮತ್ತು ನಾಂದೇಡ್ ಜಿಲ್ಲೆಯ ಶಾಸನಗಳು ಎನ್ನುವ ಸಂಪುಟಗಳಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ. ಮಹಾರಾಷ್ಟ್ರದಲ್ಲಿ ಕನ್ನಡ ಸಾಹಿತ್ಯದ ಹಸ್ತಪ್ರತಿಗಳೂ ಕರ್ನಾಟಕದಲ್ಲಿ ಮರಾಠಿ ಸಾಹಿತ್ಯದ ಹಸ್ತಪ್ರತಿಗಳೂ ದೊರೆತಿವೆ. ಅವುಗಳಲ್ಲಿ ಒಂದು ಹಾತಕಣಗಿಲೆ (ಕೊಲ್ಲಾಪುರ ಜಿಲ್ಲೆ) ತಾಲ್ಲೂಕಿನ ಅಲತಗಿಯ ಪಾರ್ಶ್ವನಾಥ ತೀರ್ಥಂಕರ ಮಂದಿರದಲ್ಲಿ ಬರೆಯಲಾದ ಕನ್ನಡ ಪಂಪರಾಮಾಯಣದ ಹಸ್ತಪ್ರತಿ. ಸಮಡೊಳ್ಳಿ, (ಸಾತಾರಾ ಜಿಲ್ಲೆ)ಯಲ್ಲಿ ಉಪಾಧ್ಯಾಯರ ಜಿನ್ನಪ್ಪನ ಮಗ ಆದಪ್ಪನು ಬರೆದ ಪಂಚತಂತ್ರದ ಹಸ್ತಪ್ರತಿ ದೊರೆತಿದೆ. ಕನ್ನಡಿಗರಾದ ಮಹಿಪತಿದಾಸರ ಸಾಹಿತ್ಯಕ್ಕೆ ಮೂಲ ಆಕರವಾಗಿರುವ ಹಸ್ತಪ್ರತಿ ಮರಾಠಿ ಲಿಪಿಯಲ್ಲಿ ಲಿಖಿತವಾಗಿದೆ.

ಕರ್ನಾಟಕದ ಗಡಿಪ್ರಾಂತಗಳಲ್ಲಿ ಮರಾಠಿ ಸು. 10ನೆಯ ಶತಕದಿಂದ ಆಡುಮಾತಾಗಿ ರೂಢಿಯಲ್ಲಿರುವಂತೆ ತೋರುವುದಾಗಿಯೂ ದೇವಗಿರಿಯ ಯಾದವರ ಆಳಿಕೆಯ ಕಾಲದಲ್ಲಿ ಮರಾಠಿ ಭಾಷೆ, ಸಾಹಿತ್ಯಗಳು ಏರ್ಪಟ್ಟಂತೆ ತೋರುವುದಾಗಿಯೂ ಅಭಿಪ್ರಾಯಪಡಲಾಗಿದೆ. ಇಂದಿಗೂ ಕೊಲ್ಲಾಪುರದ ಜನ ಆಡುವ ಮಾತುಗಳಲ್ಲಿ ಹೆಂಟ್ಯಾ, ಕೊಯಿಂಡ್ಯಾ, ಅಳಸುಂದಾ, ಕಾಕವಿ ಮೊದಲಾದವು ಹೆಂಡ, ಕೊಂಡೆ, ಅಲಸಂದಿ, ಕಾಕಂಬಿ ಮೊದಲಾದ ಕನ್ನಡ ಪದಗಳ ಪ್ರತಿರೂಪಗಳಾಗಿವೆ. ಜೆಜೂರಿ ಖಂಡೋಬನ ಪೂಜಾವೇಳೆಯಲ್ಲಿ ಹೇಳುವ ಉಧೋ ಶಬ್ದವೂ ಏಲ್ಕೋಟ್ ಮಲ್ಲಾರ್ (ಏಳುಕೋಟೆ ಮಲ್ಲಾರಿ) ಎಂಬ ಮಾತೂ ಕನ್ನಡದವು. ಜೆಜೂರಿಯಲ್ಲಿಯ ಹೆಗಡೆ ಅಥವಾ ಹೇಗಪಾ ಕನ್ನಡ ಹೆಗ್ಗಡೆಯೇ ಅಗಿದೆ. ಅಕ್ಕ, ಅತ್ಯಾ ಇತ್ಯಾದಿ ಸಂಬಂಧಸೂಚಕ ಶಬ್ದಗಳು, ಕನ್ನಡದ ಅಕ್ಕ, ಅತ್ತೆ ಎಂಬವೇ ಆಗಿವೆ. ಮುದಲ್-ಮುದಲ, ಮುದ್ದಲ; ಬಂಬಲ್ ಬಂಬಾಳು, ಬಂಭಾಳ; ಹಡಪ-ಹಡಪಾ, ಹಡಪು ಇತ್ಯಾದಿ ಪದಗಳೂ ಕನ್ನಡದವೇ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಮರಾಠಿಯಲ್ಲಿ ಕನ್ನಡ ಶಬ್ದಗಳು ಬೆರೆತಿರುವಂತೆಯೇ ಕನ್ನಡದಲ್ಲಿಯೂ ಮರಾಠಿ ಶಬ್ದಗಳು ಬೆರೆತಿವೆ. ಶಬ್ದಮಣಿದರ್ಪಣದಲ್ಲಿ ಕೇಶಿರಾಜ ಕನ್ನಡದಲ್ಲಿ ಸಹಜವಾಗಿ ಮಹಾಪ್ರಾಣಾಕ್ಷರಗಳಿವೆಯೆಂದು ಹೇಳಿ ಕೊಟ್ಟಿರುವ ಮಹಾಪ್ರಾಣ ಘಟಿತವಾದ ಕೆಲವು ಶಬ್ದಗಳು ಮರಾಠಿಗೆ ತದ್ಭವಗೊಂಡು ಕನ್ನಡವನ್ನು ಹೊಕ್ಕಿರುವ ಸಂಸ್ಕೃತ ಶಬ್ದಗಳೇ ಆಗಿವೆ. ಗಡಿನಾಡಿನ ಕನ್ನಡಿಗರು ಮರಾಠಿ ಶಬ್ದಗಳನ್ನು ಬಳಸಿದರೂ ಅವುಗಳಿಗೆ ಕನ್ನಡ ಪ್ರತ್ಯಯಗಳನ್ನು ಸೇರಿಸುತ್ತಾರೆ. ಉದಾಹರಣೆಗೆ: ನಾ ವಾಚುಸತ್ಯಾನ-ನಾನು ಓದುತ್ತೇನೆ; ಅವಳ ಲಾಜಾಸ್ತಾಳ -ಅವಳು ನಾಚುತ್ತಾಳೆ; ಬೈಲನ ಸಿಂಗ ಮೊಡಸ್ತ -ಎತ್ತಿನ ಕೋಡು ಮುರಿಯಿತು; ಬೈಲಗಾಡಿ ಮ್ಯಾಲಿ ಖುಂಡಿಸಿದ್ರು -ಎತ್ತಿನ ಗಾಡಿಯ ಮೇಲೆ ಕೂಡಿಸಿದರು; ಧಾಬೆ (ಕೊಟ್ಟಿಗೆ)ದಾಗ ದನಾ ಕಟ್ಟು; ವೈನಿ (ಅಣ್ಣನ ಹೆಂಡತಿ) ಬಂದಳು; ನಮ್ಮ ಅಬಚಿ (ಅವ್ವನ ಅಕ್ಕ ಅಥವಾ ತಂಗಿ) ಬಯಿಂದಾಳ - ನಮ್ಮ ಅವ್ವನ ಅಕ್ಕ ಬಂದಿದ್ದಾಳೆ ಇತ್ಯಾದಿ ಅನೇಕ ಉದಾಹರಣೆಗಳಲ್ಲಿ ಮರಾಠಿ ಶಬ್ದಗಳು ಕನ್ನಡ ವಾಕ್ಯಗಳೊಳಗೆ ಸೇರಿಕೊಂಡಿವೆ.

ಮರಾಠಿ ಸಾಹಿತ್ಯದ ಮತ್ತು ಮಹಾರಾಷ್ಟ್ರದ ಉಲ್ಲೇಖ ಪಂಪಪೂರ್ವ ಮತ್ತು ಪಂಪನ ಕಾಲದಲ್ಲಿ ದೊರೆಯುತ್ತದೆ. ಸೈಗೊಟ್ಟ ಶಿವಮಾರನ ಗಜಾಷ್ಟಕ ಓವನಿಗೆಯೂ ಒನಕೆವಾಡೂ ಆಗಿದ್ದಿತೆಂದು ತಿಳಿದುಬರುತ್ತದೆ. ಓವನಿಗೆ ಎಂಬ ಶಬ್ದಕ್ಕೂ ಮರಾಠಿಯ ಓವಿ ಶಬ್ದಕ್ಕೂ ಸಂಬಂಧವಿರಬಹುದೆಂದು ಭಾವಿಸಲಾಗಿದೆ. ಸೋಮೇಶ್ವರನ ಅಭಿಲಷಿತಾರ್ಥಚಿಂತಾಮಣಿಯಲ್ಲಿ ಮರಾಠಿ ಜನಪದ ಗೀತೆಗಳ ತುಣುಕುಗಳು ಅಲ್ಲಲ್ಲಿ ಉದಾಹರಣೆಗಳಾಗಿ ಬಂದಿವೆ ಎಂದು ಅಭಿಪ್ರಾಯಪಡಲಾಗಿದೆ. ಪಂಪನ ಆದಿಪುರಾಣದಲ್ಲಿ ಮಹಾನಾಟಕರೆಂಬುದಾಗಿ ಮಹಾರಾಷ್ಟ್ರದ ಸೈನಿಕರ ವಿವರಣೆ ದೊರೆಯುತ್ತದೆ. ಹೊಯ್ಸಳ 2ನೆಯ ವೀರನರಸಿಂಹನ ಕಾಲದ ದಾವಣಗೆರೆ 25ನೆಯ ಶಾಸನದಲ್ಲಿ (1223-24) ಆ ಕಾಲಕ್ಕೆ ಸುಮಾರು 32-33 ವರ್ಷಗಳ ಹಿಂದೆ ಆಗಿಹೋದ ಸೊರಟೂರಿನ ಕಾಳಗದಲ್ಲಿ ಹೊಯ್ಸಳರ ಸೇನೆ ಸೇಉಣರ ದಂಡನ್ನು ಸೋಲಿಸಿತು ಎನ್ನುವಾಗ ಮರಾಠಿ ಪ್ರತ್ಯಯಗಳನ್ನುಳ್ಳ ಕನ್ನಡ ವೃತ್ತವೊಂದಿದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಮಹಾರಾಷ್ಟ್ರದಲ್ಲಿ 13ನೆಯ ಶತಮಾನದಲ್ಲಿ ಪ್ರಬಲಿಸಿದ ಮಹಾನುಭಾವ ಪಂಥಕ್ಕೂ ಕರ್ನಾಟಕದ ವೀರಶೈವ ಧರ್ಮಕ್ಕೂ ಅನೇಕ ಸಾಮ್ಯಗಳಿವೆ. ಎರಡರಲ್ಲಿಯೂ ವರ್ಣಬೇಧವಿಲ್ಲ. ಸ್ತ್ರೀಯರಿಗೆ ಮಹತ್ತ್ವವಿದೆ. ಮಹಾನುಭಾವ ಪಂಥದಲ್ಲಿ ಎಷ್ಟೋ ಜನ ಸ್ತ್ರೀಯರು ಸಂನ್ಯಾಸಿನಿಯರಾಗಿದ್ದಾರೆ. ವೀರಶೈವ ಧರ್ಮದಲ್ಲಿಯೂ ಎಷ್ಟೋ ಜನ ಸ್ತ್ರೀಯರು ವಿರಕ್ತೆಯರಾಗಿದ್ದಾರೆ. ಎರಡು ಧರ್ಮದವರೂ ತಾವಾಡುವ ಮಾತಿನಲ್ಲಿ ಧರ್ಮಗ್ರಂಥಗಳನ್ನು ಬರೆದಿದ್ದಾರೆ. ವೀರಶೈವರು ವೇದಕ್ಕೆ ಪ್ರಾಧಾನ್ಯವನ್ನು ಕೊಡುವುದಿಲ್ಲ; ಮಹಾನುಭಾವ ಪಂಥದವರು ವೇದಗಳನ್ನೂ ಉಪನಿಷತ್ತುಗಳನ್ನೂ ಒಪ್ಪುತ್ತಾರೆ. ವೀರಶೈವರು ಶಿವನೊಬ್ಬನನ್ನೇ ಪೂಜಿಸುವರು. ಮಹಾನುಭಾವಪಂಥದವರು ಕೃಷ್ಣನೊಬ್ಬನನ್ನೇ ಪೂಜಿಸುವರು. ವೀರಶೈವರು ರುದ್ರಾಕ್ಷಿಮಾಲೆ, ವಿಭೂತಿಗಳನ್ನು ಧರಿಸಿದರೆ ಮಹಾನುಭಾವ ಪಂಥದವರು ತುಳಸೀಮಾಲೆ ಚಂದನಗಳನ್ನು ಧರಿಸುತ್ತಾರೆ. ಮಹಾನುಭಾವ ಪಂಥದ ಮೂಲಪುರುಷ ಚಕ್ರಧರನ ಜೀವನಕ್ಕೂ ಬಸವಣ್ಣನವರ ಜೀವನಕ್ಕೂ ಹಲವು ಹೋಲಿಕೆಗಳಿವೆ. ಬಸವಣ್ಣನ ಉಪದೇಶವನ್ನು ವಚನ ಎನ್ನುವಂತೆಯೇ ಚಕ್ರಧರನ ಉಪದೇಶವನ್ನೂ ವಚನ ಎನ್ನುತ್ತಾರೆ. ಬಸವಣ್ಣ ವಿಷಯಪುಷ್ಟಿಗೆ ದೃಷ್ಟಾಂತ ಉಪಮೆಗಳನ್ನು ಕೊಟ್ಟರೆ, ಚಕ್ರಧರ ಬರಿಯ ಸೂತ್ರಗಳನ್ನು ಹೇಳುತ್ತಾನೆ. ಬಸವಣ್ಣನ ವಚನಗಳಿಗೆ ಹೇಗೋ ಹಾಗೆಯೇ ಚಕ್ರಧರನ ಉಪದೇಶಗಳಿಗೂ ದೃಷ್ಟಾಂತಗಳ ಮೂಲಕವಾದ ಸೂತ್ರಾರ್ಥ ವಿವರಣೆಯಿದೆ.

ಚಕ್ರಧರನ ಶಿಷ್ಯ ಭಾಸ್ಕರಭಟ್ಟ ಬೋರಿಕರನ ಶಿಶುಪಾಲವಧ ಮತ್ತು ಉದ್ಧವಗೀತೆಯಲ್ಲಿ ಗುಡಿ, ಗುಂಡಿ, ಹಡಪ, ಗುಡಾರ, ತೋಮ, ಹೇವ, ಅರಲ, ಅಡಣ ಮುಂತಾದ ಶಬ್ದಗಳೂ ಆ ಶಬ್ದಗಳ ರೂಪಾಂತರಗಳೂ ಇವೆ. ಮಹದಾಂಬಾ ಎನ್ನುವ ಚಕ್ರಧರನ ಶಿಷ್ಯೆ ಶ್ರೀಕೃಷ್ಣ ವಿವಾಹ ವಸ್ತುವನ್ನುಳ್ಳ ಧವಳೆ ಎಂಬ ಹೆಸರಿನ ಹಾಡುಗಳನ್ನು ರಚಿಸಿದ್ದಾಳೆ. ಕನ್ನಡದಲ್ಲಿ ವಿವಾಹ ಮುಂತಾದ ಶುಭ ಶೋಭನಗಳಲ್ಲಿ ಹಾಡುವ ಧವಳ ಎಂಬ ಹಾಡುಗಳು ಕೆಲವಿರುವುದನ್ನು ಇಲ್ಲಿ ನೆನೆಯಬಹುದು. ಇವುಗಳಿಗೆ ಇಲ್ಲಿ ಪ್ರಾಚೀನತೆಯೂ ಇರುವಂತೆ ತೋರುವುದರಿಂದ ಈ ಪದ್ಯಪ್ರಕಾರಸಾಮ್ಯ ಪರಿಶೀಲನಾರ್ಹ.

ಮಹಾರಾಷ್ಟ್ರದಲ್ಲಿ ಮಹಾನುಭಾವ ಪಂಥ' ಪ್ರಬಲವಾಗಿದ್ದ ಕಾಲದಲ್ಲಿಯೇ ನಾಥ ಸಂಪ್ರದಾಯವೂ ಪ್ರಬಲವಾಗಿದ್ದಿತು. ಮತ್ಸ್ಯೇಂದ್ರ ಸ್ತ್ರೀರಾಜ್ಯದಲ್ಲಿ ನೆಲೆಸಿದ್ದುದಕ್ಕೆ ಸಮಾನವಾಗಿದೆ ಅಲ್ಲಮಪ್ರಭು ಮತ್ತು ಮಾಯಾದೇವಿಯರ ಪ್ರಸಂಗ. ಮತ್ಸ್ಯೇಂದ್ರನಿಗೆ ಮಾಯಾಮತ್ಸ್ಯೇಂದ್ರ ಎನ್ನುವ ಬಿರುದಿರುವಂತೆಯೇ ಅಲ್ಲಮಪ್ರಭುವಿಗೆ ಮಾಯಾಕೋಲಾಹಲ ಎನ್ನುವ ಬಿರುದಿದೆ. ಪ್ರಭುಲಿಂಗಲೀಲೆಯಲ್ಲಿ ಬರುವ ಗೋರಕ್ಷ ಅಲ್ಲಮರ ಸಂವಾದ ಈ ದೃಷ್ಟಿಯಿಂದ ಗಮನಾರ್ಹವಾದುದು. ಶೂನ್ಯಸಂಪಾದನೆಯಲ್ಲಿ ದೊರೆಯುವ ಗೋರಕ್ಷ ಅಂಕಿತದ ವಚನಗಳು ಅವನಿಗೆ ಕನ್ನಡ ಬರುತ್ತಿದ್ದಿರಬಹುದೆಂದು ಸೂಚಿಸುತ್ತದೆ. ಅಲ್ಲದೆ ಮರಾಠಿಯಲ್ಲಿ ಗೋರಕ್ಷನದೆನ್ನಲಾದ ಈ ಮಾತುಗಳು ದೊರೆಯುತ್ತವೆ - ನ್ಯಾ ಹಾಳುನಿ ಸಂಸಾರದಿಲೆ ಪಾಣಿ ನಿಜಲಿಂಗವ ನಿಟ್ಟಿಸಿ ಸಂಸಾರಕ್ಕೆ ನೀರುಕೊಟ್ಟೆ. ಹೀಗೆ ನಾಥ' ಸಂಪ್ರದಾಯಕ್ಕೂ ವೀರಶೈವ ಧರ್ಮದ ಪ್ರಮುಖ ವ್ಯಕ್ತಿ ಅಲ್ಲಮಪ್ರಭುವಿಗೂ ಸಂಬಂಧವಿರುವುದನ್ನು ಗಮನಿಸಬಹುದು. ಇದೇ ಕಾಲದ ಚೆನ್ನಬಸವಣ್ಣನ ಕರಣಹಸುಗೆಯನ್ನು 17ನೆಯ ಶತಮಾನದ ಶಾಂತಲಿಂಗಶಿವಯೋಗಿ ಮರಾಠಿಗೆ ಅನುವಾದ ಮಾಡಿದ್ದಾನೆ. ಶಂಕರಾಚಾರ್ಯರ ಅದ್ವೈತ ವೇದಾಂತವನ್ನು ವಿವೇಕ ಸಿಂಧು ಮೊದಲಾದ ತನ್ನ ಕೃತಿಗಳಲ್ಲಿ ತಾನು ನೃಸಿಂಹ ಬಲ್ಲಾಳನ ಮಗ ಜಯಂತಪಾಳನ ಅನುಮತಿಯಂತೆ ರಚಿಸಿದುದಾಗಿ ಹೇಳಿಕೊಂಡಿದ್ದಾನೆ. ಆದರೆ ಈ ನೃಸಿಂಹ ಬಲ್ಲಾಳ ಮತ್ತು ಹೊಯ್ಸಳ ನರಸಿಂಹ ಬಲ್ಲಾಳ ಬೇರೆ ಬೇರೆಯವರೆಂದು ಕೆಲವರ ಅಭಿಪ್ರಾಯ.

ಮುಕುಂದರಾಜನ ವಿವೇಕಸಿಂಧುವನ್ನು ಮಹಲಿಂಗರಂಗ (17ನೆಯ ಶತಮಾನ) ಅನುಭವಾಮೃತ ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾನೆ. ಕನ್ನಡ ಕವಿ ನಾಥಪಂಥದವನೆಂದೂ ಆತನ ಕನ್ನಡ ಪ್ರೇಮಕ್ಕೆ ಮುಕುಂದರಾಜನೇ ಪ್ರೇರಣೆಯೆಂದೂ ವಿದ್ವಾಂಸರ ಅಭಿಪ್ರಾಯ. ಮುಕುಂದರಾಜನ ಕಾವ್ಯದ ಕೆಲವು ಪದ್ಯಗಳ ಛಾಯಾನುವಾದವನ್ನು ಅನುಭವಾಮೃತದಲ್ಲಿ ಕಾಣಬಹುದು.

ಮರಾಠಿಯ ಶ್ರೇಷ್ಠಕೃತಿ ಜ್ಞಾನೇಶ್ವರಿಯನ್ನೂ ಅಮೃತಾನುಭವ, ಸ್ವಾತ್ಮಾನುಭವ ಎಂಬ ಕೃತಿಗಳನ್ನೂ ಅನೇಕ ಪದಗಳನ್ನೂ ಅಭಂಗಗಳನ್ನೂ ಬರೆದ ಜ್ಞಾನದೇವ ದೇವಗಿರಿಯ ರಾಮರಾಜದೇವನ ಸಮಕಾಲೀನ. ಈಗಿನ ಜ್ಞಾನೇಶ್ವರಿಯಲ್ಲಿ ಅಕ್ಕಸಾಲಿ, ಅಡತರ, ಅಂಟಿ (ಅಂಟು), ಆಗಲೇ (ಅಗಲು), ಅಡವಾರಾ (ಅಡ್ಡಬರು), ಆರ್ಡಿ (ಆರಡಿ), ಕೇಳವಣೆ, ತೂಕ, ಪಡಗಾ (ಪಡಗ), ಉಗಾಳು (ಉಗುಳು), ಉಳಿಗ (ಊಳಿಗ), ಆರೋಗಿಣೆ (ಆರೋಗಣೆ), ಪೌಳೆ (ಪೌಳಿ), ಭಾಂಗಾರ, ಮದವಿ, ಮಾತು (ಶಬ್ದ), ಮಿರವಣೆ (ಮೆರವಣಿಗೆ), ಸೂಡ, ಹರಳು - ಹೀಗೆ ನೂರಾರು ಕನ್ನಡ ಶಬ್ದಗಳು ದೊರೆಯುತ್ತವೆ ಎಂಬುದು ಕುತೂಹಲಕರವಾಗಿದೆ. ಜ್ಞಾನದೇವನಿಗೆ ಕನ್ನಡದ ಪರಿಚಯವಿದ್ದು ಕನ್ನಡದಲ್ಲಿಯೂ ಒಂದೆರಡು ಅಭಂಗಗಳನ್ನು ರಚಿಸಿದ್ದಾನೆ.

ಅವನ ಅಭಂಗಗಳಲ್ಲಿ ಒಂದು ಈ ರೀತಿ ಇದೆ:

ಆ ಆ ನೀ ಕೇಳೆ ಚಿಕನ ಮಾತು ಕೋಳುಲೆ ಘನಿಗೆ ಮರುಳಾದೆನೆ
ಚಲುವಾನೆ ಚಲುವಾನೆ ಫಂಡರಿರಾಯ ಚಲುವಾನೆ
ಯಲ್ಲೆ ದೊರೆಕನ್ನೇ ಯಲ್ಲೆ ಬಾರನ್ನೆ (ಧ್ರುಪದ)
ಪುಂಡಲೀಕನೆ ಭಕ್ತಿಗೆ ಬಂದಾ
ರಖುಮಾದೇವೀ ವರ ವಿಟ್ಠಲುನೇ
(ಜ್ಞಾನದೇವ ಆಭಂಗ ಹೊಸ ಪ್ರತಿ, ನಂ.345)

ಇದೇ ಅಭಂಗವನ್ನು ಬೇರೊಂದು ಪಾಠಕ್ಕೆ ಅನುಗುಣವಾಗಿ ನಾ.ಶ್ರೀ.ರಾಜಪುರೋಹಿತರು ಹೀಗೆ ಕೊಟ್ಟಿದ್ದಾರೆ:

ಅಕ್ಕಾ ನೀ ಕೇಳೇ ಚಿಕ್ಕನ ಮಾತು
ಕಾರಲೇದಾಸೀಗೆ ಮರುಳಾದನೇ |
ಚೆಲುವಾನೆ ಚೆಲುವಾನೆ ಪಂಢರಿರಾಯಾ
ಚೆಲುವಾನೆ ಎಲ್ಲಿ ದೊರಕುವನೇ ||
ಪುಂಡಲೀಕನ ಭಕ್ತಿಗೆ ಬಂದಾ
ರುಖಮಾದೇವೀ | ವರವಿಟ್ಠಲನೇ ||

ಹೀಗೆ ಮರಾಠಿಯಲ್ಲಿ ಕನ್ನಡ ಪದಗಳೂ ಪದ್ಯಗಳೂ ಜ್ಞಾನೇಶ್ವರಿಯ ಕಾಲಕ್ಕಾಗಲೇ ಸೇರಿದ್ದುವು. ಅದಕ್ಕೆ ಕಾರಣ ಬಹುಶಃ ಸ್ವತಂತ್ರವಾಗಿ ಈಚೆಗೆ ಬೆಳೆಯುತ್ತಿದ್ದ ಮರಾಠಿ ಭಾಷೆ ಆ ಹೊತ್ತಿಗಾಗಲೇ ಪ್ರಬುದ್ಧವಾಗಿದ್ದ ಕನ್ನಡದಿಂದ ಶಬ್ದಗಳನ್ನು ಸ್ವೀಕರಿಸಿದುದು.

ಮಹಾನುಭಾವ ಪಂಥ ಮತ್ತು ನಾಥಸಂಪ್ರದಾಯಗಳಂತೆಯೇ ವಿಟ್ಠಲ ಭಕ್ತಿಯೂ ಮಹಾರಾಷ್ಟ್ರದ ಕೊಡುಗೆ. ಜ್ಞಾನದೇವನು ಕಾನಡಾ ಹೋ ವಿಟ್ಠಲೂ ಕರ್ನಾಟಕೂ ಎಂದು ಪಂಢರಪುರದ ವಿಟ್ಠಲನನ್ನು ಕರೆಯುತ್ತಾನೆ. ಕೆಲವರು ವಿಠೋಬಾ ಶಬ್ದದ ನಿಷ್ಪತ್ತಿಯನ್ನು ಕನ್ನಡದಿಂದ ಮಾಡುತ್ತಾರೆ. ಪಂಢರಪುರದ ವಿಟ್ಠಲಭಕ್ತಿ ಮತ್ತು ಸಂಪ್ರದಾಯ 13ನೆಯ ಶತಮಾನಕ್ಕಾಗಲೀ ಕರ್ನಾಟಕದಲ್ಲಿ ನೆಲಸಿದ್ದಿತು. ಇದಕ್ಕೆ ನಿದರ್ಶನ ಚೌಂಡರಸ ತನ್ನ ಅಭಿನವದಶಕುಮಾರಚರಿತೆಯಲ್ಲಿ ವಿಟ್ಠಲಸ್ತುತಿ ಮಾಡಿರುವುದು. ಸಂಸ್ಕೃತ ಮೂಲದಲ್ಲಿಲ್ಲದ ಈ ಭಾಗವನ್ನು ಆತ ಸ್ವತಃ ಸೇರಿಸಿದ್ದಾನೆ. ಅಭಿನವದಶಕುಮಾರಚರಿತೆಯ ವಿಟ್ಠಲಾಷ್ಟಕ ಕನ್ನಡದಲ್ಲಿ ದೊರೆಯುವ ವಿಟ್ಠಲಭಕ್ತಿಯ ಮೊದಲ ಸಾಹಿತ್ಯಕೃತಿ.

ವಿಟ್ಠಲನ ಪರಮಭಕ್ತ ಸಂತ ತುಕಾರಾಮನಾದರೋ ಬಸವಣ್ಣನವರನ್ನು ತನ್ನ ಗುರುವೆಂದು ಭಾವಿಸಿದ್ದವ. ತುಕಾರಾಮನ ಗೀತೆಗಳಲ್ಲಿಯ ಬಸವಂತ ಶಬ್ದ ಬಸವಣ್ಣನವರನ್ನು ಕುರಿತದ್ದೆಂಬುದಾಗಿ ಗ್ರಹಿಸಲಾಗಿದೆ. ತ್ರಿಭಂಗೀ ದೇಹುಡೇ ಉಭೇ ವೃಂದಾವನೀ ವೇಣೂ ಚಕ್ರಪಾಣಿ ವಾಜವಿತ ಎನ್ನುವ ನಾಮದೇವನ ಅಭಂಗ ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ ಎನ್ನುವ ವ್ಯಾಸರಾಯರ ಪದವನ್ನು ನೆನಪಿಗೆ ತರುತ್ತದೆ.

ಭಾಗವತ ಸಂಪ್ರದಾಯಕ್ಕೆ ಸೇರಿದ ಕುಮಾರವ್ಯಾಸನ ಭಾರತದಲ್ಲಿ ಪೈಕ, ಪಾರುಖಾಣೆ ಮುಂತಾದ ಮರಾಠಿ ಶಬ್ದಗಳು ದೊರೆಯುತ್ತವೆ. ವೀರಪಣ, ಜಾಣಪಣ, ಶೌರ್ಯಪಣ, ಸಾಮರ್ಥ್ಯಪಣ, ವಿಸ್ತಾರಪಣ ಮುಂತಾದ ಮರಾಠಿಯ ಭಾವನಾಮ ಸೂಚಕ ಪ್ರತ್ಯಯಾಂತ ಪದಗಳೂ ಬಳಕೆಯಾಗಿವೆ. ಪರಭಾಷೆಯ ಪ್ರತ್ಯಯವೊಂದನ್ನು ಕನ್ನಡಕ್ಕೆ ಸೇರಿಸುವ ಪ್ರಯೋಗವೊಂದನ್ನು ಕುಮಾರವ್ಯಾಸ ಮಾಡಿದ್ದಾನೆ. ಇದು ಆತನ ಸ್ವಸ್ಥಳಕ್ಕೆ ನೆರೆಯಲ್ಲಿದ್ದ ಮರಾಠಿ ಭಾಷೆಯ ಗಾಢವಾದ ಪ್ರಭಾವವನ್ನು ತೋರಿಸುತ್ತದೆ. ಕನ್ನಡದ ಅತ್ಯಂತ ಸಮರ್ಥ ಕವಿಯಾದ ಈತನ ಭಾರತವನ್ನು ಮರಾಠಿಯಲ್ಲಿ ಇಬ್ಬರು ಅನುಸರಿಸಿದ್ದಾರೆ. ಇದರಲ್ಲಿ ಮುಕ್ತೇಶ್ವರನ ಕೃತಿ ಮುಖ್ಯವಾದುದು. ಕುಮಾರವ್ಯಾಸ ಭಾರತದ 'ಅರಸುಗಳಿಗಿದು ವೀರ' (ಆದಿಪರ್ವ 1-19) ಪದ್ಯವನ್ನು ಹೋಲುವ ಅನೇಕ ಪದ್ಯಗಳು ಮುಕ್ತೇಶ್ವರನಲ್ಲಿವೆ. ಇನ್ನೊಬ್ಬ ಭಾರತ ಕರ್ತೃವಾದ ಚಂದ್ರಾತ್ಮಜನೆಂಬ ಮರಾಠಿ ಕವಿ ಕೂಡ ಕುಮಾರವ್ಯಾಸನನ್ನು ಅನುಸರಿಸಿರುವುದು ಮಾತ್ರವಲ್ಲದೆ ಮಜಸಂಸ್ಕೃತಿ ನಾಹೀ ಅಭ್ಯಾಸ, ಕರ್ನಾಟಕ ಕವಿ ಕುಮಾರವ್ಯಾಸ ತ್ಯಾಚೇನೀ ಆಧಾರೇ ಗ್ರಂಥ ವಿಲಾಸ ಪಾರಂಭಿಲಾಯಾ ಹೇತು ಎಂದು ಸ್ಪಷ್ಟವಾಗಿ ತನ್ನ ಗ್ರಂಥಋಣವನ್ನು ಹೇಳಿದ್ದಾನೆ. ಹೀಗೆ ಷಟ್ಪದಿ ಕಾವ್ಯಗಳ ಮರಾಠಿ ಅನುವಾದ ಕಾರ್ಯ ಮುಂದುವರಿದು ಚಾಮರಸನ ಪ್ರಭುಲಿಂಗಲೀಲೆಯನ್ನು ಬ್ರಹ್ಮದಾಸನೆಂಬ 18ನೆಯ ಶತಮಾನದ ಕವಿ ವಿಶ್ವಂಭರಲೀಲ ಎನ್ನುವ ಹೆಸರಿನಿಂದ ಪರಿವರ್ತಿಸಿದ್ದಾನೆ. 1581ರಲ್ಲಿ ಚಿತ್ರಭಾರತವನ್ನು ಕನ್ನಡದಲ್ಲಿ ರಚಿಸಿದ ಗೋಪ ಕವಿ ಕೃತಿಯ ಅರ್ಧಭಾಗದಲ್ಲಿ ಭಾರತ ಕಥಾಂಶವನ್ನೂ ಉಳಿದರ್ಧದಲ್ಲಿ ವತ್ಸಲಾ ಹರಣದ ಪ್ರಸಂಗವನ್ನೂ ನಿರೂಪಿಸಿದ್ದು, ಮರಾಠಿಯಲ್ಲಿ ಪ್ರಚಲಿತವಾಗಿದ್ದ ಕಥೆಯನ್ನು ಕನ್ನಡದಲ್ಲಿ ಬರೆದುದಾಗಿ ಹೇಳಿಕೊಂಡಿದ್ದಾನೆ. ಜಗನ್ನಾಥದಾಸರ ಹರಿಕಥಾಮೃತಸಾರ (ಸು. 1755) ಮತ್ತು ಲಕ್ಷ್ಮೀಶನ ಜೈಮಿನಿಭಾರತ (ಸು.1550) ಶೇಷಗಿರಿರಾಯ (1868) ಮತ್ತು ಯಶವಂತ ಭಾಸ್ಕರ ಜಠಾರ (19ನೆಯ ಶತಮಾನ) ಇವರಿಂದ ಮರಾಠಿಗೆ ಅನುವಾದಿತವಾಗಿವೆ.

ಕನ್ನಡದ ಅನುಭಾವ ಕವಿಗಳಲ್ಲಿ ಒಬ್ಬನಾದ ನಿಜಗುಣ ಶಿವಯೋಗಿ ಮತ್ತು ಕಾಡಸಿದ್ಧೇಶ್ವರರ ಪ್ರಭಾವ ಮಹಾರಾಷ್ಟ್ರದಲ್ಲಿ ದಟ್ಟವಾಗಿ ಹರಡಿದೆ. ನಿಜಗುಣ ಶಿವಯೋಗಿ ಮತ್ತು ಶ್ರೇಷ್ಠ ಮರಾಠೀ ಸಂತ ರಾಮದಾಸರನ್ನು ಚಿತ್ರಮಾಲಿಕೆಯೊಂದರಲ್ಲಿ ಒಟ್ಟಿಗೆ ಚಿತ್ರಿಸಲಾಗಿದೆ. ನಿಜುಗುಣಶಿವಯೋಗಿಯ ವಿವೇಕ ಚಿಂತಾಮಣಿಯನ್ನು ಸಾತಾರಾ ಜಿಲ್ಲೆಯ ಸಿಂಗಣಾಪುರದ ಶಾಂತಲಿಂಗ ಶಿವಯೋಗಿ ಅನುವಾದಿಸಿದ್ದಾನೆ (ಸು.1604).

ನಾಮದೇವನಾದ ಮೇಲೆ ಏಕನಾಥನವರೆಗೆ ಮರಾಠಿ ಸಾಹಿತ್ಯದಲ್ಲಿ ಶ್ರೇಷ್ಠ ಕವಿಗಳು ಬರಲಿಲ್ಲ. ಆದರೂ ಈ ಕಾಲದಲ್ಲಿ ದತ್ತ ಸಂಪ್ರದಾಯದ ನೃಸಿಂಹಸರಸ್ವತಿಯ ಶಿಷ್ಯನಾದ ಕಡಗಂಚಿಯ ಸರಸ್ವತಿ ಗಂಗಾಧರ ಬರೆದ ಮರಾಠಿ ಗುರುಚರಿತ್ರೆಯ ಕೊನೆಗೆ ಕನ್ನಡದ ಆರತಿ ಪದ್ಯವಿದೆ. ಗುರುಚರಿತ್ರೆ ದತ್ತಾತ್ರೇಯನ ಭಕ್ತರಿಗೆ ಪೂಜ್ಯ ಗ್ರಂಥವಾಗಿ ಮಹಾನುಭಾವ ಮತ್ತು ವಾರ್ಕರಿ ಪಂಥಗಳ ಅನುಯಾಯಿಗಳಿಂದ ಸಮಾನವಾಗಿ ಗೌರವಿಸಲ್ಪಟ್ಟಿದೆ. ಈ ಕೃತಿಯ ಹಲವಾರು ಕನ್ನಡ ಅನುವಾದಗಳು ಹೊರಬಂದಿವೆ. ಮಹಾರಾಷ್ಟ್ರದ ಪ್ರಸಿದ್ಧ ಸಂತರಲ್ಲೊಬ್ಬನಾದ ಏಕನಾಥನ ಮೇಲೆ ಪುರಂದರದಾಸರ ಪ್ರಭಾವ ಆಗಿರುವಂತೆ ತೋರುತ್ತದೆ. ಉದಾಹರಣೆಗೆ 'ಹ್ಯಾಗೆ ಇರಬೇಕು ಸಂಸಾರದಲ್ಲಿ ಹ್ಯಾಗೆ ಬರೆದಿದೆ ಪ್ರಾಚೀನದಲ್ಲಿ' ಎನ್ನುವ ಮಾತಿಗೆ ಸದೃಶವಾದ್ದು 'ಐಸೇ ಆಸಾವೀ ಸಂಸಾರೀ ಜೋವರಿ ಪ್ರಾಚೀ ವಾಚೀ ದೊರಿ' ಎನ್ನುವ ಮಾತು ಮೇಲಿನ ಊಹೆಗೆ ಅವಕಾಶ ಕಲ್ಪಿಸುತ್ತದೆ. ಏಕನಾಥ ಮರಾಠಿಯಲ್ಲಿ ಮೈರಾವಣ ಕಾಳಗವನ್ನು ಬರೆದ ಕಾಲಕ್ಕೇ ಕುಮಾರ ವಾಲ್ಮೀಕಿಯೂ ಮೈರಾವಣನ ಕಾಳಗವನ್ನು ಬರೆದಿದ್ದಾನೆ. ಏಕನಾಥನ ಮತ್ತು ಅವನ ಸೋದರಿಯ ಮಗ ಹಾಗೂ ಶಿಷ್ಯನಾದ ಮುಕ್ತೇಶ್ವರ (ರಾಮಾಯಣ ಭಾರತಗಳ ಕರ್ತೃ) ಈ ಇಬ್ಬರ ಜೋಡಿ ಕನ್ನಡದ ಹರಿಹರ - ರಾಘವಾಂಕರ ಜೋಡಿಯನ್ನು ನೆನಪಿಗೆ ತರುತ್ತದೆ.

1615ರಲ್ಲಿ ಬಿಜಾಪುರದಲ್ಲಿ ಹುಟ್ಟಿದ ವಾಮನಪಂಡಿತ ಎಂಬುವನು ರಾಮದಾಸನ ಪ್ರೇರಣೆಯ ಪ್ರಕಾರ ಸಮಶ್ಲೋಕಿ ಗೀತಾ ಎನ್ನುವ ಭಗವದ್ಗೀತೆಯ ನೇರ ಅನುವಾದದ ಜೊತೆಗೆ ಯಥಾರ್ಥದೀಪಿಕೆ ಎನ್ನುವ ಗೀತಾವ್ಯಾಖ್ಯಾನವನ್ನು ರಚಿಸಿದ್ದಾನೆ.

ಮಹಾರಾಷ್ಟ್ರದ ಅತ್ಯಂತ ಉನ್ನತಿಯ ಕಾಲದಲ್ಲಿದ್ದ ಪ್ರಸಿದ್ಧ ಕವಿ ಮೋರೋಪಂತ ಕೊಲ್ಹಾಪುರದ ಸಮೀಪದಲ್ಲಿರುವ ಪಣ್ಹಾಳದಲ್ಲಿ 1729ರಲ್ಲಿ ಜನಿಸಿದವನು. ಈತ ಭಾರತವನ್ನು ಬರೆದಿದ್ದಾನೆ. ಇವನ ಕಾವ್ಯಶೈಲಿ ಕುಮಾರವ್ಯಾಸನ ಕಾವ್ಯಶೈಲಿಯನ್ನು ನೆನಪಿಗೆ ತರುತ್ತದೆ.

ಸುಮಾರು ಇದೇ ಅವಧಿಯಲ್ಲಿ ಕರ್ನಾಟಕದ ಮೂಡಲಗಿ, ಗುರ್ಲಹೊಸೂರು ಮತ್ತು ಬಿಜಾಪುರಗಳಲ್ಲಿ ಮರಾಠಿ ಸಾಹಿತ್ಯ ಬೆಳೆದಿದೆ. ಗೋಕಾಕ ತಾಲ್ಲೂಕಿನ ಮೂಡಲಗಿಯಲ್ಲಿ 16ನೆಯ ಶತಮಾನದಲ್ಲಿ ರಂಗಬೋಧಸ್ವಾಮಿಯೂ 17ನೆಯ ಶತಮಾನದಲ್ಲಿ ಅಧ್ಯಾಯ ಬೋಧಸ್ವಾಮಿಯೂ ನೆಲಸಿದ್ದರು. ಮುಕುಂದರಾಜನ ಸಂಪ್ರದಾಯಕ್ಕೆ ಸೇರಿದ ಇವರು ಮರಾಠಿಯಲ್ಲಿ ಗ್ರಂಥರಚನೆ ಮಾಡಿರುವುದಲ್ಲದೆ ಕನ್ನಡದಲ್ಲಿಯೂ ಹಾಡುಗಳನ್ನು ಬರೆದಿದ್ದಾರೆ. ಗುರ್ಲಹೊಸೂರಿನಲ್ಲಿ 18ನೆಯ ಶತಮಾನದಲ್ಲಿ ಚಿದಂಬರ ದೀಕ್ಷಿತರೆಂಬುವರು ನೆಲಸಿದ್ದರು. ಅವರನ್ನು ಸಮಕಾಲೀನ ಮರಾಠಾ ಸರದಾರರು ಗೌರವಿಸುತ್ತಿದ್ದರು. ಬಿಜಾಪುರದ ರುಕ್ಮಾಂಗದ ಸ್ವಾಮಿ ಮತ್ತು ಕಾಖಂಡಕಿ ಮಹಿಪತಿಸ್ವಾಮಿಗಳ ಜೀವನ ಚರಿತ್ರೆಯನ್ನು 18ನೆಯ ಶತಮಾನದಲ್ಲಿ ರುಕ್ಮಜದಾಸ ತನ್ನ ಗುರುಮಾಲಿಕಾ ಕೃತಿಯಲ್ಲಿ ಸೇರಿಸಿದ್ದಾನೆ. ಮಹಿಪತಿದಾಸರ ಕೀರ್ತನೆಗಳ ಹಸ್ತಪ್ರತಿಯೊಂದು ಮರಾಠಿ ಭಾಷೆಯಲ್ಲಿಯೇ ಲಿಖಿತವಾಗಿದೆ (ಇದುವರೆಗೆ ಅಚ್ಚಾಗಿರುವ ಮಹೀಪತಿದಾಸರ ಕೃತಿಗಳಿಗೆ ಅದೇ ಆಧಾರ). ವಾಮನ ಪಂಡಿತನ ಶಿಷ್ಯ ಹರಿದೀಕ್ಷಿತ ನರಗುಂದದಲ್ಲಿ ನೆಲಸಿ ಸಾಹಿತ್ಯ ರಚಿಸಿದ್ದಾನೆ. ಹೀಗೆ ಮರಾಠಿ ಸಾಹಿತ್ಯ ರಚನೆಗೆ ಕರ್ನಾಟಕ ಕೆಲಕಾಲ ಆಶ್ರಯಸ್ಥಾನವೂ ಸ್ಫೂರ್ತಿಕೇಂದ್ರವೂ ಆಗಿದ್ದುದು ತಿಳಿಯುತ್ತದೆ.

ಮಹಾರಾಷ್ಟ್ರದ ರಾಜಕೀಯ ಪ್ರಾಬಲ್ಯ ಇಳಿಯುವ ಹೊತ್ತಿಗೆ ಕ್ರೈಸ್ತ ಮಿಷನರಿಗಳು ಭಾರತದಲ್ಲಿ ಪದಾರ್ಪಣ ಮಾಡಿ ಮರಾಠಿ ಭಾಷೆಯ ಏಳ್ಗೆಗೆ ಪ್ರೋತ್ಸಾಹ ಕೊಟ್ಟರು. ಅದರ ಫಲವಾಗಿ ಬಾಲಶಾಸ್ತ್ರಿ ಜಾಂಭೇಕರ್ ಪಾಶ್ಚಾತ್ಯ ವಿದ್ಯೆಯ ಪರಿಚಯ ಮತ್ತು ಪ್ರಭಾವ ಪಡೆದು 1840ರ ಸುಮಾರಿನಲ್ಲಿ ದರ್ಪಣ್ ಮತ್ತು ದಿಗ್ದರ್ಶನ್ ಪತ್ರಿಕೆಗಳನ್ನು ಪ್ರಾರಂಭಿಸಿದರು. ಆ ಕಾಲದಲ್ಲಿನ ಪತ್ರಿಕಾ ಪ್ರಪಂಚವೆಂದರೆ ಮರಾಠೀ ಪತ್ರಿಕಾ ಪ್ರಪಂಚವೆಂದೇ ಹೇಳಬಹುದು. ಕನ್ನಡ ನಾಡಿನಲ್ಲಿ ಕನ್ನಡಿಗರಿಗಾಗಿ ಕನ್ನಡಿಗರೇ ನಡೆಸುತ್ತಿದ್ದ ಪತ್ರಿಕೆಗಳು ಕೂಡ ಮರಾಠಿಯವಾಗಿದ್ದುವು. ಧಾರವಾಡದಿಂದ ಹೊರಡುತ್ತಿದ್ದ ಛಾವಾ (1883), ಜ್ಞಾನ ಬೋಧಕ (1871), ಧಾರವಾಡ ವೃತ್ತ (1873), ಹುಬ್ಬಳ್ಳಿ ವೈಭವ, ಕರ್ನಾಟಕ ವಾರ್ತಿಕ, ಬೆಳಗಾಂವ ಸಮಾಚಾರ (1864), ಹಿತೇಚ್ಛು (1870) ಪತ್ರಿಕೆಗಳಲ್ಲಿ ಕೆಲವು ಮರಾಠಿ ಮತ್ತು ಕೆಲವು ದ್ವಿಭಾಷಾಪತ್ರಿಕೆಗಳಾಗಿದ್ದುವು. ಆಗಿನ ಸಾರ್ವಜನಿಕ ಜೀವನವೆಲ್ಲ ಮರಾಠಿಮಯವಾಗಿದ್ದಿತು. ಇಂಥ ಪರಿಸ್ಥಿತಿಯಿಂದ ಉತ್ತರ ಕರ್ನಾಟಕವನ್ನು ಮರಾಠಿಯ ಪ್ರಭಾವದಿಂದ ಸ್ವಲ್ಪ ಬಿಡಿಸಿದವ ಡಬ್ಳ್ಯು.ಎಚ್.ರೈಡ್ಸ್ ಮಹಾಶಯ. ಆತ ಉತ್ತರ ಕರ್ನಾಟಕದ ಭಾಷೆ ಮರಾಠಿಯಲ್ಲವೆಂದೂ ಕನ್ನಡವೆಂದೂ ಮುಂಬಯಿ ಸರ್ಕಾರಕ್ಕೆ ಮನವಿ ಮಾಡಿಕೊಟ್ಟ. ಆ ಪ್ರಯತ್ನದ ಫಲವಾಗಿ ಡೆಪ್ಯುಟಿ ಚನ್ನಬಸಪ್ಪ, ರಾ.ಹ.ದೇಶಪಾಂಡೆ, ಗಳಗನಾಥ, ಶಾಂತಕವಿ, ಮುದವೀಡು ಕೃಷ್ಣರಾಯ, ರಾಜಪುರೋಹಿತ ನಾರಾಯಣರಾಯ, ಆಲೂರ ವೆಂಕಟರಾಯ ಮುಂತಾದ ಮಹನೀಯರು ಉತ್ತರ ಕರ್ನಾಟಕದಲ್ಲಿ ಕರ್ನಾಟಕತ್ವದ ವಿಕಾಸವನ್ನು ನಡೆಸಿದರು. ಈ ಸಂದರ್ಭದಲ್ಲಿ ಧಾರವಾಡದ ಟ್ರೇನಿಂಗ್ ಕಾಲೇಜು ಮತ್ತು ವಿದ್ಯಾವರ್ಧಕ ಸಂಘ ವಹಿಸಿದ ಪಾತ್ರ ದೊಡ್ಡದು.

ಇದರ ಪರಿಣಾಮವಾಗಿ ಕನ್ನಡದಲ್ಲಿ ಪಠ್ಯಪುಸ್ತಕ ಮತ್ತು ಕೃತಿರಚನೆ ನಡೆಯಿತು. ರಾ.ಹ.ದೇಶಪಾಂಡೆಯವರು ಚಲತೊಟ್ಟು ಕನ್ನಡದ ಏಳಿಗೆಗಾಗಿ ದುಡಿದರು. ಗಳಗನಾಥರ ಕೃತಿರಚನೆಗೆ ಪ್ರೇರಕರಾಗಿದ್ದರು. ಅನೇಕ ಪಠ್ಯಪುಸ್ತಕಗಳನ್ನು ಸ್ವತಂತ್ರವಾಗಿ ರಚಿಸುವುದರ ಜೊತೆಗೆ ಬಾಯಿಲೆಕ್ಕದ ಮೊದಲನೆಯ ಪುಸ್ತಕ (1896) ಮತ್ತು ಬೀಜಗಣಿತದ ಮೂಲತತ್ತ್ವಗಳು (1897) ಇವನ್ನು ಅನುವಾದಿಸಿದರು. ವಿಧವಾವಪನ ಅನಾಚಾರವನ್ನು ವೆಂಕಟರಂಗೋ ಕಟ್ಟಿ ಮರಾಠಿ ಮತ್ತು ಕನ್ನಡಗಳಲ್ಲಿ ರಚಿಸಿದ್ದಾರೆ. ಪಂಡಿತ ರಮಾಬಾಯಿಯ ಮರಾಠಿ ಸ್ತ್ರೀಧರ್ಮನೀತಿ ಕನ್ನಡಕ್ಕೆ ಅನುವಾದವಾಗಿದೆ.

ಇದೇ ಸಮಯದಲ್ಲಿ ಉತ್ತರ ಕರ್ನಾಟಕದಲ್ಲಿ ನಾಟಕ ಕಲೆ ಸ್ವತಂತ್ರವಾಗಿ ಬೆಳೆಯಿತು. ಕನ್ನಡ ಜಿಲ್ಲೆಗಳಿಂದ ನಾಟಕ ಕಂಪೆನಿಗಳು ಸಾಂಗಲಿಯವರೆಗೆ ಪ್ರಯಾಣ ಬೆಳೆಸಿದ್ದುವು. ಮರಾಠಿ ನಾಟಕಕಾರರಲ್ಲಿ ಪ್ರಸಿದ್ಧರಾದ ಕಿರ್ಲೋಸ್ಕರ್ ಮುಂತಾದವರು ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಿದ್ದರು. ಕನ್ನಡದ ಶ್ರೀ ಕೃಷ್ಣಪಾರಿಜಾತ ಕೃತಿ ಮುಂತಾದುವು 19ನೆಯ ಶತಮಾನದ ಮರಾಠಿ ನಾಟಕ ಸಾಹಿತ್ಯದ ಮೇಲೆ ಪ್ರಭಾವ ಬೀರಿದವೆಂದು ತಿಳಿದುಬರುತ್ತದೆ.

ಕಿರ್ಲೋಸ್ಕರನ ಮರಾಠಿ 'ಶಾಕುಂತಲ ನಾಟಕ' ಹುಟ್ಟಿದ ಸರಿಸುಮಾರಿನಲ್ಲೇ ಉತ್ತರ ಕರ್ನಾಟಕದಲ್ಲಿ ಚುರಮುರಿ ಶೇಷಗಿರಿರಾಯರ ಕನ್ನಡ ಶಾಕುಂತಲ ದೇಸೀ ಸೊಬಗನ್ನು ತುಂಬಿಕೊಂಡು ರೂಪುಗೊಂಡಿತು. ಮೈಸೂರಿನಲ್ಲಿ ಬಸವಪ್ಪಶಾಸ್ತ್ರಿಗಳ ಶಾಕುಂತಲ ನಾಟಕ ಸಿದ್ಧವಾಯಿತು. ಮಹಾರಾಷ್ಟ್ರದಿಂದ ಬಂದ ಪಾರಸೀಯವರ ಬಾಲೀವಾಲಾ ಕಂಪನಿ ಮೈಸೂರು ಅರಮನೆಯಲ್ಲಿ ನಾಟಕಗಳನ್ನು ಆಡಿತು. ಅದರ ಪ್ರಭಾವದಿಂದ ಮೈಸೂರಿನಲ್ಲಿ ವೃತ್ತಿರಂಗಭೂಮಿ ಬೆಳೆಯಿತು. ಬಾಲೀವಾಲಾ ಕಂಪನಿಯ ಅದ್ಭುತ ರಂಗವೈಭವ, ಸಂಗೀತ ಮತ್ತು ಅಭಿನಯ ಮೈಸೂರಿನ ಜನತೆಯನ್ನು ಬೆರಗುಗೊಳಿಸಿತು. ರಾಜಾಸ್ಥಾನದಲ್ಲಿದ್ದ ಮಂಡ್ಯಂ ರಂಗಾಚಾರ್ಯ ಮರಾಠಿಯ ಬಾಣಾಸುರೋಪಾಖ್ಯಾನವನ್ನೂ ಬಾಲಗಂಧರ್ವ ಖಾಡಿಲ್ಕರರ ಮರಾಠಿ ನಾಟಕಗಳನ್ನೂ ಪ್ರದರ್ಶಿಸಿದರು. ಮೂಲ್ಕಿಯ ನಾರಾಯಣ ರಾಮಪ್ಪ ಕಾಮತ ತನ್ನ ನಾಟಕ ಕಂಪನಿಯಲ್ಲಿ ಕನ್ನಡ ಮರಾಠಿ ನಾಟಕಗಳೆರಡನ್ನೂ ಆಡಿಸಿದ. ಶಾಂತಕವಿಗಳ 'ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ಕೀರ್ತಿ' ಎನ್ನುವ ಪದ್ಯವೊಂದರಲ್ಲಿ ಆ ಕಾಲದಲ್ಲಿ ಕರ್ನಾಟಕದ ಜನತೆಯ ಮೇಲೆ ಮರಾಠಿ ನಾಟಕಗಳು ಬೀರಿದ ಪರಿಣಾಮದ ಅರಿವಾಗುತ್ತದೆ. ಜನತೆ ಮರಾಠಿ ನಾಟಕಗಳಿಗೆ ಕೊಡುತ್ತಿದ್ದ ಪ್ರೋತ್ಸಾಹವನ್ನು ಕಂಡು ಶಾಂತಕವಿಗಳು ಗದಗಿನ ನಾಟ್ಯ ವಿಲಾಸಿಗಳ ಸಹಕಾರದಿಂದ ಉಷಾಹರಣವೆಂಬ ನಾಟಕವನ್ನು ರಚಿಸಿ ಆಡಿಸಿದರು. ಪುಣೆಯ ಕಾಲೇಜಿನಲ್ಲಿ ಕಲಿತ ಕನ್ನಡಿಗ ವೆಂಕಟರಂಗೋ ಕಟ್ಟಿ 'ಸವಾಯಿ ಮಾಧವ ರಾಯಾಂಚೆ ನಾಟಕ' ಎನ್ನುವ ಸ್ವತಂತ್ರ ಮರಾಠಿ ಐತಿಹಾಸಿಕ ನಾಟಕವನ್ನು ಬರೆದಿದ್ದಾರೆ. ಇತ್ತೀಚೆಗೆ ಮುಕ್ತಾಬಾಯಿ ದೀಕ್ಷಿತ್ ಮುಂತಾದ ಹಲವರ ಮರಾಠಿ ನಾಟಕಗಳು ಕನ್ನಡಕ್ಕೆ ಅನುವಾದಗೊಂಡಿವೆ. ಕೀರ್ತನಕಾರರು ಕೀರ್ತನೆಗಳನ್ನು ಮಾಡುವಾಗ ಮರಾಠಿ ಅಭಂಗಗಳನ್ನೂ ಕಟಾವ್‌ಗಳನ್ನೂ ಹೇಳಿ ಅರ್ಥ ವಿವರಿಸುತ್ತಿದ್ದರು. ಅದರಿಂದ ಉಂಟಾಗುತ್ತಿದ್ದ ರಸಾಭಾಸವನ್ನು ಕಂಡು ಶಾಂತಕವಿ ಹರಿಕೀರ್ತನೆ ಎನ್ನುವ ಕೃತಿಯನ್ನು ರಚಿಸಿದರು.

ಕನ್ನಡದಲ್ಲಿ ಕಾದಂಬರಿಗಳ ರಚನೆಗೆ ಮರಾಠಿ (ಮತ್ತು ಬಂಗಾಲಿ) ಕಾದಂಬರಿಗಳಿಂದ ಮಾರ್ಗದರ್ಶನ ದೊರೆಯಿತು. ಲಕ್ಷ್ಮಣರಾವ್ ಗದಗಕರನ

ಸೂರ್ಯಕಾಂತ (1892) ಎನ್ನುವ ಕೃತಿ ಕನ್ನಡದ ಮೊದಲ ಕಾದಂಬರಿ ಎಂದು ಕೆಲವರ ಅಭಿಪ್ರಾಯ. ಇಲ್ಲಿ ಮೊದಲ ಬಾರಿಗೆ ಕಾದಂಬರಿ ಎನ್ನುವ ಮಾತನ್ನು ಬಳಸಿದೆ. ಇದು ಬಹುಶಃ ಮರಾಠಿಯ ಪರಿಚಯದ ಪ್ರಭಾವವಿರಬಹುದು. ಮುಂದೆ ಗಳಗನಾಥರು ಹರಿನಾರಾಯಣ ಆಪ್ಟೆಯವರ ಮಹಾರಾಷ್ಟ್ರ ಮತ್ತು ರಾಜಸ್ಥಾನದ ಇತಿಹಾಸವನ್ನೊಳಗೊಂಡ ಕೃತಿಗಳನ್ನು ಆಧರಿಸಿ ಕೃತಿರಚನೆ ಮಾಡಿದರಲ್ಲದೆ ವಿಜಯನಗರ ಮತ್ತು ಮೈಸೂರು ಇತಿಹಾಸದ ವಸ್ತುವಿನ ಕೃತಿಗಳನ್ನು ರಚಿಸಿದ್ದಾರೆ.

ಹೀಗೆಯೇ ಕೆರೂರ ವಾಸುದೇವಾಚಾರ್ಯರು ಮರಾಠಿ ಕಥೆಗಳನ್ನು ಆಧರಿಸಿ ತಮ್ಮ ಕೆಲವು ಕಥೆಗಳನ್ನು ಬರೆದಿದ್ದಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ ಮತ್ತು ಅ.ನ.ಕೃಷ್ಣರಾಯರ ಕಥೆಗಳು ಮರಾಠಿಗೆ ಅನುವಾದವಾಗಿವೆ. ಅಲ್ಲದೆ ವಿನೋಬಾ, ಸಾವರ್‌ಕರ್, ಸಾನೆ ಗುರೂಜಿ ಮೊದಲಾದವರ ಬರೆಹಗಳೂ ಈಗಾಗಲೇ ಕನ್ನಡಕ್ಕೆ ಬಂದಿವೆ.

ಶತಮಾನಗಳಿಂದ ಬೆಳೆದುಬಂದ ಕನ್ನಡ ಮರಾಠಿ ಸಾಹಿತ್ಯದ ಕೊಳುಕೊಡೆ ಇಂದು ಇನ್ನೂ ದಟ್ಟವಾಗಿದೆ. ಕನ್ನಡ ಮರಾಠಿ ಕಾವ್ಯಪ್ರಪಂಚದಲ್ಲಿ ಪ್ರಸಿದ್ಧರಾದ ಬೇಂದ್ರೆಯವರ ಮಾತೃಭಾಷೆ ಮರಾಠಿ. ಮರಾಠಿ ಕಾವ್ಯ ಪ್ರಪಂಚದ ಉನ್ನತಿಗೆ ಕಾರಣರಾದ ಕೇಶವಸುತರು ಕರ್ನಾಟಕದಲ್ಲಿದ್ದವರು (ಧಾರವಾಡದಲ್ಲಿ ಶಿಕ್ಷಕರಾಗಿದ್ದು ಹುಬ್ಬಳ್ಳಿಯಲ್ಲಿ ದಿವಂಗತರಾದರು). ಅವರ ಮರಾಠಿ ಕವನ ಒಂದನ್ನು (ತುತಊರಿ) ಗೋವಿಂದ ಪೈ ಅನುವಾದಿಸಿದ್ದಾರೆ.

ಕೆ.ಜಿ.ಕುಂದಣಗಾರ, ಪಿ.ಬಿ.ದೇಸಾಯಿ, ಶಂ.ಬಾ.ಜೋಶಿ, ಆ.ನೇ.ಉಪಾಧ್ಯೆ, ವಿ.ಕೃ.ಗೋಕಾಕ, ರಂ.ಶ್ರೀ.ಮುಗಳಿ, ಶ್ರೀರಂಗ ಮುಂತಾದ ಸಾಹಿತಿಗಳು ಈ ಉಭಯ ಸಂಸ್ಕೃತಿಗಳ ಹಾಗೂ ಭಾಷೆ ಮತ್ತು ಸಾಹಿತ್ಯಗಳ ಬಾಂಧವ್ಯವನ್ನು ಹಲವು ವಿಧದಲ್ಲಿ ಬೆಳೆಸಿದ್ದಾರೆ. (ಜಿ.ಜಿ.ಎಂ.)

**ಕೊಂಕಣಿ** : ಕೊಂಕಣಿ ಭಾಷೆ ಕರ್ನಾಟಕಕ್ಕೆ ಹಿಂದಿನಿಂದ ಪರಿಚಿತವಾಗಿದೆ. ಉತ್ತರ ಭಾರತದಲ್ಲಿ ಹುಟ್ಟಿದ ಈ ಭಾಷೆ ಪಶ್ಚಿಮ ಕರಾವಳಿಯ ದಾರಿಯಾಗಿ ಇಳಿದು ಉತ್ತರ ಕನ್ನಡದ ಗಂಗಾವತಿ ನದಿಯವರೆಗೆ ಬಂತು. ಕೊಂಕಣಿ ಭಾಷೆಯಲ್ಲಿ ಅನೇಕ ಸುಧಾರಣೆಗಳನ್ನು ತಂದ ಸಾರಸ್ವತರು ಗೋವೆಗೆ ಬಂದು ನೆಲೆನಿಂತಾಗ ಅದು ಗೋವ ಕದಂಬರ ಆಳಿಕೆಗೆ ಒಳಪಟ್ಟಿತ್ತು. ಅವರ ಆಡಳಿತ ಭಾಷೆ ಕನ್ನಡವಾಗಿದ್ದುದರಿಂದ ಕನ್ನಡಕ್ಕೂ ಕೊಂಕಣಿಗೂ ಸಂಬಂಧ ಏರ್ಪಟ್ಟಿತು. ಇದರಿಂದಾಗಿ ಈ ಶೆಣೈ (ಸಾರಸ್ವತ ವರ್ತಕರು) ವ್ಯಾಪಾರಿಗಳು ಹಾಗೂ ದಲಾಲರು ಕನ್ನಡ ಲಿಪಿಯನ್ನು ಬಳಸಿಕೊಂಡು ಕೊಂಕಣಿ ಭಾಷೆಯಲ್ಲಿ ತಮ್ಮ ಅಂಗಡಿಯ ಲೆಕ್ಕಪತ್ರಗಳನ್ನು ಬರೆದರು. ಹೀಗೆ ಆರಂಭವಾದ ಕನ್ನಡ-ಕೊಂಕಣಿ ಸಂಬಂಧ ಕನಿಷ್ಠ ಪಕ್ಷ ಲಿಪಿಯ ಮಟ್ಟದಲ್ಲಾದರೂ ಪೋರ್ಚುಗೀಸರ, ಡಚ್ಚರ ಕಾಲದಲ್ಲಿ ಉಳಿದಿತ್ತು.

ಗೋವೆಯ ಕೊಂಕಣಿ ಜನ ಭಾರೀ ಪ್ರಮಾಣದಲ್ಲಿ ಕರ್ನಾಟಕಕ್ಕೆ ವಲಸೆ ಬಂದ ಮೇಲೆ ಕನ್ನಡದ ಪ್ರಭಾವ ಕೊಂಕಣಿಯ ಮೇಲೆ ಇನ್ನಷ್ಟು ಹೆಚ್ಚಾಯಿತು. 16-17ನೆಯ ಶತಮಾನಗಳಲ್ಲಿ ಬಿದನೂರು ಮತ್ತು ಸೋದೆ ರಾಜ್ಯಗಳ ವಿವಿಧ ಭಾಗಗಳಲ್ಲಿ ಕೊಂಕಣಿ ಹಿಂದು ಜನ ಭಾರಿ ಪ್ರಮಾಣದಲ್ಲಿ ಬಂದು ನೆಲೆನಿಂತರು. ಅನಂತರ ಕೊಂಕಣಿ ಮರಾಠರೆಂದು ಕರೆಯಲಾಗುವ ಗಾಂವಕರರು ಬಹುಪಾಲು ಕಾರವಾರ ತಾಲ್ಲೂಕಿನಲ್ಲಿ ನೆಲೆಸಿದರು. ಇವರ ಜೊತೆಗೆ ಭಂಡಾರಿಗಳು, ಪಟ್ಟಿಗಳು, ಕುಮಾರ ಪಂಥದವರು ಅಕ್ಕಸಾಲಿಗರು ಬಂದರು. ಕ್ರೈಸ್ತರು ಬಿದನೂರು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಕುಮಟ, ಹೊನ್ನಾವರ ತಾಲ್ಲೂಕುಗಳಲ್ಲಿ ನೆಲೆನಿಂತರು.

ಕರ್ನಾಟಕಕ್ಕೆ ಬಂದ ಮೇಲೆ ಶೆಣ್ವೆಗಳು ಕನ್ನಡ ಲಿಪಿಯನ್ನು ಉಪಯೋಗಿಸುವುದನ್ನು ಮುಂದುವರಿಸಿದರು. ಈ ನಡವಳಿಕೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲೂ ಕಂಡುಬಂತು. ಇದೆಲ್ಲವೂ ಕನ್ನಡವೆಂದು ಭಾವಿಸಿದ್ದ ಆಂಗ್ಲ ಆಡಳಿತಗಾರರು ಕನ್ನಡ ಜಿಲ್ಲೆಗಳಲ್ಲಿ ಕನ್ನಡವನ್ನೇ ಆಡಳಿತ ಭಾಷೆಯಾಗಿ ಮಾಡಿದರು. ಕನ್ನಡವನ್ನು ಶಾಲೆಗಳಲ್ಲಿ ಜಾರಿಗೆ ತರುವವರೆಗೆ, ಶೆಣ್ವೆಗಳು ತಮ್ಮ ಈ ಪದ್ಧತಿಯನ್ನು ಮುಂದುವರಿಸಿದರು. ಆದರೆ ಕ್ರೈಸ್ತರು ಇಂದಿಗೂ ಇದೇ ಪದ್ಧತಿಯನ್ನು ಮುಂದುವರಿಸುತ್ತಾರೆ. ಅವರ ಎಲ್ಲಾ ಧಾರ್ಮಿಕ ಬರೆವಣಿಗೆಗಳೂ ಅವರ ಪತ್ರಿಕೆಗಳೂ ಕನ್ನಡ ಲಿಪಿಯನ್ನೊಳಗೊಂಡಿದ್ದು ಕೊಂಕಣಿ ಭಾಷೆಯಲ್ಲಿವೆ. ಇದೇ ಕಾಲದಲ್ಲಿ ಕೊಂಕಣಿ ಭಾಷೆಗೆ ಬೇಕಾದ ಲಿಪಿಯೆಂದು ಕನ್ನಡ ಲಿಪಿಯ ಅಚ್ಚಿನ ಮೊಳೆಗಳನ್ನು ಸಿದ್ಧಪಡಿಸಲು ಜೆಸುಯಿಟರೆಂಬ ಕ್ರೈಸ್ತ ಧಾರ್ಮಿಕ ಸಂಸ್ಥೆಯವರು ಮುಂದೆ ಬಂದರು. ಇವರ ಪ್ರಥಮ ಪ್ರಯತ್ನ ಗುರಿಮುಟ್ಟಿದಂತೆ ಕಾಣುವುದಿಲ್ಲ. ಒಂದು ವೇಳೆ ಗುರಿ ಮುಟ್ಟಿದ್ದರೆ ಭಾರತದ ಮುದ್ರಣದ ಇತಿಹಾಸದಲ್ಲಿ ಕನ್ನಡಕ್ಕೆ ಲಿಪಿಯ ಮಟ್ಟದಲ್ಲಾದರೂ ಪ್ರಪ್ರಥಮ ಸ್ಥಾನ ಸಲ್ಲುತ್ತಿತ್ತು. ಮಂಗಳೂರಿನ ಕೊಡಿಯಾಲಬೈಲ ಮುದ್ರಣಾಲಯ ಕೊಂಕಣಿಯನ್ನು ಕನ್ನಡ ಲಿಪಿಯಲ್ಲಿ ಮುದ್ರಿಸತೊಡಗಿತು. ಕರ್ನಾಟಕದಲ್ಲಿ ಈ ಲಿಪಿಗಳನ್ನು ಮೊದಲಿಗೆ ರೂಢಿಸಿದವರು ಇವರೆ ಇದ್ದಿರಬೇಕು.

ಕೊಂಕಣಿಯನ್ನು ಈಗಲೂ ದಕ್ಷಿಣ ಕನ್ನಡದಲ್ಲಿ ಕನ್ನಡ ಲಿಪಿಯಲ್ಲಿಯೇ ಬರೆಯುತ್ತಾರೆ. ಹೀಗೆ ಬರೆಯುವಾಗ ಅಲ್ಪಪ್ರಾಣ ಮಹಾಪ್ರಾಣಗಳು, ಹ್ರಸ್ವ ದೀರ್ಘ ಸ್ವರಗಳು ಎಷ್ಟೋ ವೇಳೆ ಕನ್ನಡ ಲಿಪಿ ವ್ಯವಸ್ಥೆಯಲ್ಲಿ ಇದ್ದ ಹಾಗೆಯೇ ಇರುವುದುಂಟು. ಆಡುನುಡಿಯಲ್ಲಿರುವ ಮಹಾಪ್ರಾಣಗಳು ಬರೆಹದಲ್ಲಿ ಬಂದ ಉದಾಹರಣೆಗಳಿವೆ. ಇದರ ಪರಿಣಾಮವಾಗಿ ಶಿಷ್ಟರೆಂದೆನ್ನಿಸಿಕೊಳ್ಳುವವರು ಬರೆಹದ ಉಚ್ಚಾರ ಕ್ರಮವನ್ನೇ ಪ್ರಮಾಣವಾಗಿ ಇಟ್ಟುಕೊಂಡು ಆಡುನುಡಿಯ ರೀತಿಯನ್ನೇ ವ್ಯತ್ಯಾಸಗೊಳಿಸುತ್ತಿದ್ದಾರೆ. ಹೀಗೆ ವ್ಯತ್ಯಸ್ತವಾದ ಭಾಷೆ ಆಧುನಿಕರ ಪೈಕಿ ಕೆಲವರಲ್ಲಿ ರೂಢಿಗೆ ಬರುತ್ತಿದೆ.

ಮಂಗಳೂರಿನ ಕೊಂಕಣಿ ಜನರ ಮೇಲೆ, ಹೆಚ್ಚಾಗಿ ಕ್ರೈಸ್ತರ ಮೇಲೆ ಇಂಗ್ಲಿಷ್ ಪ್ರಭಾವ ದಟ್ಟವಾಗಿದ್ದಾಗ, ಈಗ್ಗೆ ಸುಮಾರು ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ, ಇಂಗ್ಲಿಷ್ ಹೆಸರುಗಳನ್ನು ಬರೆಯುವಲ್ಲಿ ಒಂದು ವಿಶಿಷ್ಟತೆ ಇರುತ್ತಿತ್ತು. ಉದಾ. ಜೊನ್ಸನ್, ಈಗ ಕನ್ನಡದ ಪ್ರಭಾವ ಬೆಳೆದಂತೆ ಜಾನ್ಸನ್ ಎಂದು ಬರೆಯುವ ರೂಢಿ ಬಂದಿದೆ. ಕನ್ನಡದ ಪ್ರಭಾವ ಕೊಂಕಣಿಯ ಲಿಪಿ ವ್ಯವಸ್ಥೆಯನ್ನು ಮಾರ್ಪಡಿಸಿದೆ ಎನ್ನುವುದಕ್ಕೆ ಇದೊಂದು ನಿದರ್ಶನ.

ಕನ್ನಡ-ಕೊಂಕಣಿ ಸಂಬಂಧ ಲಿಪಿಯೊಂದಕ್ಕೆ ಸೀಮಿತವಾಗಿಲ್ಲ. ವ್ಯಾಕರಣ ಪದಕೋಶಗಳ ಮೇಲಾದ ಪರಸ್ಪರ ಪ್ರಭಾವಗಳನ್ನು ಗುರುತಿಸುವ ಪ್ರಯತ್ನಗಳೂ ನಡೆದಿವೆ. ಕೊಂಕಣಿಯಲ್ಲಿ ಸೇರಿದ ಕನ್ನಡ ಪದಗಳು, ಗಾದೆಗಳು ಮತ್ತು ಲಾಲಿ ಹಾಡುಗಳು ಮುಂತಾದವನ್ನು ಸಂಗ್ರಹಿಸುವ ಪ್ರಯತ್ನವೂ ಕೆಲಮಟ್ಟಿಗೆ ನಡೆದಿದೆ.

ಕೊಂಕಣಿ ಗಾದೆ ಒಗಟುಗಳ ಒಂದು ಸಂಗ್ರಹದಲ್ಲಿ 136 ಕನ್ನಡ ಗಾದೆಗಳಿವೆ. ಇವುಗಳಲ್ಲಿ ಎಷ್ಟೋ ಗಾದೆಗಳು ಇಂದು ಕನ್ನಡದಲ್ಲಿ ಅಷ್ಟಾಗಿ ಪ್ರಚುರವಾಗಿರದೆ ಕೊಂಕಣಿಯಲ್ಲಿಯೇ ಇದ್ದ ಹಾಗೆ ಕಾಣುತ್ತದೆ. ಉದಾ. ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ; ಮೂವರ ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ; ಯಾವ ದೇವರ ಗುಡಿಯಾದರೇನು ನಿದ್ದೆ ಬಿದ್ದರೆ ಲೆಕ್ಕ ಇತ್ಯಾದಿ. ಬರಗಾಲಾಂಕ ಬುತ್ತಿ ಮೇಕಳ್ಳಿ; ನೋಟಕ ನಾ ನುಡಿಯಾಕ ನಾ: ಆಶಾ ಆಶಿಲ್ಯಾ ಸಾಧುಕ, ಮಿಶೋ ಆಶಿಲ್ಯಾ ಸನ್ಯಾಶಾಕ ನಂಬುನಯೇ - ಇತ್ಯಾದಿ ಕೊಂಕಣಿ ಗಾದೆಗಳಲ್ಲಿ ಕನ್ನಡ ಮಾತುಗಳು ಬೆರೆತಿರುವುದು ಸ್ಪಷ್ಟವಾಗಿದೆ. ಹೀಗೆಯೇ ಬಾವಲಿ, ಬಾವಲಕ್ಕಿ, ಮಣಗಟ್ಟು, ಬೇಗಡಿ, ಭಾಂಗಾರ್, ಬ್ರಹ್ಮಗುಡಿ, ತಲವಾರ, ದುಡ್ಡು, ಹೂವ, ನತ್ತು, ಬಡ್ಡಿ, ಕೊಪ್ಪರು, ಗುಪಚೀ (ಗುಬ್ಬಚ್ಚಿ), ಬಾಗಿಲು, ಅಂಗಡಿ, ಕಬ್ಬು - ಈ ಮುಂತಾದ ಕನ್ನಡ ಮಾತುಗಳು ಕೊಂಕಣಿಯ ಪದಕೋಶವನ್ನು ಪ್ರವೇಶಿಸಿರುವುದು ಕಾಣುತ್ತದೆ.

ವ್ಯಾಕರಣದ ದೃಷ್ಟಿಯಿಂದ ಕನ್ನಡ ಕೊಂಕಣಿಯ ಮೇಲೆ ಪ್ರಭಾವವನ್ನು ಬೀರಿದೆ. ಕನ್ನಡದ ಪದಗಳನ್ನು ಸ್ವೀಕರಿಸಿದಾಗ ಕೊಂಕಣಿ ತನ್ನಲ್ಲಿಯ ದೀರ್ಘ ಏ ಓ ಗಳನ್ನು ಹ್ರಸ್ವಗೊಳಿಸುತ್ತದೆ. ಕೊಂಕಣಿ ಶಬ್ದಗಳು ಮರಾಠಿಯಂತೆ ವ್ಯಂಜನಾಂತವಾಗಿರದೆ ಸ್ವರಾಂತವಾಗಿರುವುದು ಹೆಚ್ಚು. ಕೊಂಕಣಿ ಸಪ್ತಮೀ ವಿಭಕ್ತಿಯಾದ ಆ ಕಾರಾಂತವು ಉ ಕಾರಾಂತವಾಗುತ್ತದೆ. ಉದಾ: ಪಾನಾಂತು, ಝಾಡಾಂತು. ಮರಾಠಿಯ ಕ್ರಿಯಾಪದಗಳು ಓ ಕಾರಾಂತರವಾಗಿದ್ದರೆ, ಕೊಂಕಣಿಯಲ್ಲಿ ಆ, ಆಂ ಗಳು ಬರುತ್ತವೆ. ಉದಾ: ಧಾವತೊ (ಮರಾಠಿ) ಧಾವತಾಂ (ಕೊಂಕಣಿ). ಇದು

ಹಳಗನ್ನಡದಲ್ಲಿ ಪ್ರಾಚೀನ ಕ್ರಿಯಾರೂಪಗಳಲ್ಲಿ ಸೇರುವ ಒನ್, ಆನ್ ಆಖ್ಯಾತ ಪ್ರತ್ಯಯಗಳ ಪ್ರಭಾವದ ಫಲವಿರಬಹುದು. ಮರಾಠಿಯ ಚತುರ್ಥಿ ವಿಭಕ್ತಿಯ ಲಾ ಪ್ರತ್ಯಯದ ಪ್ರತಿಯಾಗಿ, ಕೊಂಕಣಿಯಲ್ಲಿ ಕ ಬರುತ್ತದೆ. ಇದು ಕನ್ನಡದ 'ಕೆ' ಪ್ರತ್ಯಯಕ್ಕೆ ಸಮೀಪತರ. ಕೆಲವರು ಭಾವಿಸುವಂತೆ ಹಿಂದಿ 'ಕೊ' ಪ್ರಭಾವವಿರುವುದು ಇಲ್ಲಿ. ಕೊಂಕಣಿಯ ವಾಕ್ಯಗಳ ಧ್ವನಿಯೂ ಇದನ್ನು ಸೂಚಿಸುತ್ತದೆ. ದಮಡಿ, ಮಾಲಾಕ, ದುಗಾಣೀ (ದುಗ್ಗಾಣಿ), ದಲಾಲಿ ಇತ್ಯಾದಿ. ಪಂಚಮೀ ವಿಭಕ್ತಿಯಲ್ಲಿ ಮರಾಠಿ ಹೂನ್ ಪ್ರತ್ಯಯ ಕೊಂಕಣಿಯಲ್ಲಿಲ್ಲ. 'ಥಾಮುನ್', 'ಥಾವ್ನೂನ್' ಇದೆ. ಅಂತ್ ಮತ್ತು ಹೂನ್ ಇವುಗಳ ಸೇರಿಕೆಯನ್ನು ಕೆಲವರು ಇಲ್ಲಿ ಭಾವಿಸುತ್ತಾರೆ. ಕನ್ನಡ ಪಂಚಮಿಯ ಅತ್ತಣ ಇಲ್ಲಿ ಪ್ರತ್ಯಯದ ಮೂಲವಿರಬಹುದೆ ಎಂಬ ಸಂದೇಹವಿದೆ.

ಈ ವಿಚಾರದ ಮಂಡನೆಯಲ್ಲಿ ಕೊಂಕಣಿ ಮರಾಠಿಯಿಂದ ಕೆಲವೆಡೆ ಭಿನ್ನವಾಗಿದೆಯೆಂದೂ ಈ ಭಿನ್ನತೆಗಳಿಗೆ ಕನ್ನಡದ ಪ್ರಭಾವವೇ ಕಾರಣವೆಂದೂ ತರ್ಕಿಸಲಾಗಿದೆ. ಕೊಂಕಣಿ ಮರಾಠಿಯಿಂದ ಬಂದಿದೆ, ಆದುದರಿಂದ ಇದರಲ್ಲಿ ಭಿನ್ನತೆಗಳಿರಬಾರದು ಎಂಬುದು ಪೂರ್ವಪಕ್ಷ. ಆದರೆ ಕೊಂಕಣಿಯ ಉಗಮದ ಬಗೆಗಿನ ಈ ಹೇಳಿಕೆ ಇನ್ನೂ ವಾದಗ್ರಸ್ತವಾಗಿದೆ. ಕನ್ನಡ ಪ್ರಭಾವದ ಪರಿಣಾಮಗಳು ಎಂದು ಹೇಳಲಾದ ಮಾರ್ಪಾಟುಗಳು ಕೂಡ ಕೊಂಕಣಿಯ ಸ್ವಾಭಾವಿಕ ಲಕ್ಷಣಗಳೇ ಆಗಿರುವುದು ಅಸಾಧ್ಯವೇ ಎಂದು ವಿಚಾರ ಮಾಡಬೇಕು. ಕೊಂಕಣಿಯ ಕೆಲವು ಪ್ರಭೇದಗಳ ಮೇಲೆ ಕನ್ನಡದ ಪ್ರಭಾವ ಹೆಚ್ಚಾಗಿ ಬಿದ್ದಿದೆ ಎಂದು ಪ್ರಾಯಃ ಹೇಳಬಹುದು. ಸ್ವರಾಂತ ಕೊಂಕಣಿ ಶಬ್ದಗಳು ಮಂಗಳೂರಿನ ಕ್ರೈಸ್ತೇತರ ಕೊಂಕಣಿಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಈ ಜನರಿಗೆ ಕನ್ನಡದೊಡನೆ ಸಂಪರ್ಕ ಹೆಚ್ಚಿದ್ದು ಅಷ್ಟು ಸಂಪರ್ಕವಿರದ ಅವರ ಕ್ರೈಸ್ತ ಭಾಷಾಬಾಂಧವರ ಮಾತುಗಳು ವ್ಯಂಜನಾಂತವಾಗಿಯೇ ಉಳಿದಿವೆ ಎಂಬುದನ್ನೂ ಗಮನಿಸಬೇಕು. ಉದಾ: ದೇವ್, ದೀಸ್, ಮನಿಸ್ ಇತ್ಯಾದಿ.

ಹಿಂದೆ ಬಳಕೆಯಲ್ಲಿದ್ದ ಕೆಲವು ಕೊಂಕಣಿ ಪದಗಳು ತಮ್ಮ ಸ್ಥಾನವನ್ನು ಈಗ ಕನ್ನಡ ಪದಗಳಿಗೆ ಬಿಟ್ಟುಕೊಟ್ಟಿವೆ. ಬಾಗಿಲ್ (ಬಾಗಿಲು-ಕನ್ನಡ)-ದಾರ್ (ಕೊಂಕಣಿ), ಗುಡೊ (ಗುಡ್ಡ-ಕ) - ದೊಂಗೊರ್ (ಕೊಂ) ಗಾದೊ (ಗದ್ದೆ-ಕ) - ಶೆತ್ (ಕೊಂ), ಶಾಯಿ (ಕಾಯಿ-ಕ) - ತೀಂತ್ (ಕೆಲಾಂ), ಪಾತ (ಪಾತ-ಕ) - ಲಿಸಾಂವ್ (ಕೊಂ), ತರ್ಕಾರಿ (ತರಕಾರಿ-ಕಂ) - ರಾಂದ್ವೊಯ್ (ಕೊಂ), ಮುಕ್ಕಾಲ್ (ಮುಕ್ಕಾಲು-ಕ) - ಡೆಕ್ಕಿ (ಕೊಂ), ಕೊಂಕಣಿ ಪದಗಳನ್ನು ಬಹಳ ಅಪೂರ್ವವಾಗಿ ಮಾತ್ರ ಕೇಳುತ್ತೇವೆ. ಹೀಗೆಯೇ ಕನ್ನಡದ ಮೇಲಾದ ಕೊಂಕಣಿಯ ಪ್ರಭಾವ ಸಿಗರೇಟ್ ಎಳೆ ಸಿಗರೇಟ್ ವೋಡ್, ನಿದ್ದೆತೆಗಿ-ನೀದ್‌ಕಾಡ್ (ಕೊಂ) ಮುಂತಾದ ನುಡಿಗಟ್ಟುಗಳಲ್ಲಿ ಹೊಳಹು ತೋರಿದೆ. (ಇ.ಎನ್.)

**ಇಂಗ್ಲಿಷ್ :** ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡ ಮೇಲೆ ಇಂಗ್ಲಿಷ್ ಭಾಷೆ ಭಾರತದಲ್ಲಿ ಪ್ರಚಾರಕ್ಕೆ ಬಂತು. ಭಾಷೆಯೊಂದಿಗೆ ಆ ಭಾಷೆಯ ಸಾಹಿತ್ಯವೂ ಭಾರತೀಯರಿಗೆ ಪರಿಚಿತವಾಯಿತು. ಕರ್ನಾಟಕ ಇದಕ್ಕೆ ಹೊರತಾಗಿಲ್ಲ. ಶ್ರೀಮಂತವೂ ಸಂಕೀರ್ಣವೂ ಆದ ಇಂಗ್ಲಿಷ್ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯಕ್ಕೆ ನೀಡಿದ ಸ್ಫೂರ್ತಿ ಅಪಾರ. ಕನ್ನಡ ವಾಙ್ಮಯದಲ್ಲಿ ಇಂಗ್ಲಿಷಿನ ಪ್ರಭಾವ ಪ್ರತ್ಯೇಕಿಸಿ ತೋರಿಸುವುದು ಕಠಿಣ ಎನ್ನುವಷ್ಟರಮಟ್ಟಿಗೆ ಹಾಸುಹೊಕ್ಕಾಗಿದೆ. ಇಂದಿನ ಅನೇಕ ಸಾಹಿತ್ಯ ಪ್ರಕಾರಗಳು ನೇರವಾಗಿ ಇಂಗ್ಲಿಷಿನಿಂದ ಬಂದವು ಅಥವಾ ಅದರ ಸಂಪರ್ಕದಿಂದ ಸಿದ್ಧವಾದವು. ಪ್ರಭಾವದ ಜೊತೆಗೆ ಅನುಕರಣ ಅನುವಾದಗಳನ್ನೂ ಲೆಕ್ಕಿಸಿದರೆ ಇಂಗ್ಲಿಷ್ ಸಾಹಿತ್ಯ ಕನ್ನಡವನ್ನು ಶ್ರೀಮಂತಗೊಳಿಸಿರುವುದು ತಿಳಿಯುತ್ತದೆ.

ಇಂಗ್ಲಿಷ್ ಸಾಹಿತ್ಯದ ಮೂಲಕ ಕನ್ನಡಕ್ಕೆ ಐರೋಪ್ಯಸಾಹಿತ್ಯದ ಪರಿಚಯವಾಯಿತು. ಕನ್ನಡ ಸಾಹಿತ್ಯದ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವವೆಂದರೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೆಂದೇ ಅರ್ಥ. ಗ್ರೀಕ್, ಲ್ಯಾಟಿನ್, ಫ್ರೆಂಚ್, ಜರ್ಮನ್, ಇಟಾಲಿಯನ್, ರಷ್ಯನ್ ಮುಂತಾದ ಸಾಹಿತ್ಯಗಳೆಲ್ಲ ಇಂಗ್ಲಿಷಿನ ಮೂಲಕ ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರಭಾವಿಸಿವೆ. ಪೂರ್ವ-ಪಶ್ಚಿಮಗಳ ಸಂಗಮವೇ ಕನ್ನಡದ ಹೊಸ ಸಾಹಿತ್ಯಕ್ಕೆ ಹೇತುವೂ ಮೂಲಧಾತುವೂ ಆಯಿತು.

19ನೆಯ ಶತಮಾನದಲ್ಲಿ ಪಾಶ್ಚಾತ್ಯ ಸಂಸರ್ಗದ ಹೊಸ ಪ್ರವಾಹ ಬಂದು ಸೇರಿದ ಮೇಲೆ ಕನ್ನಡ ಸಾಹಿತ್ಯವಾಹಿನಿ ನವೋನವವಾಗಿ ಜೀವಂತವಾಗಿ ಹರಿಯತೊಡಗಿತು. ಆಧುನಿಕ ಕನ್ನಡ ಸಾಹಿತ್ಯ ತಲೆ ಎತ್ತಿತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ಬಗೆಬಗೆಯ ಪಾಶ್ಚಾತ್ಯ ನಾಗರಿಕ ಸೌಲಭ್ಯಗಳನ್ನು ಭರತಖಂಡಕ್ಕೆ ಒದಗಿಸತೊಡಗಿದರು. ಈ ಪಾಶ್ಚಾತ್ಯ ಸಂಪರ್ಕ ನಾಲ್ಕು ರೀತಿಯಲ್ಲಿ ಉಂಟಾಯಿತೆಂದು ಹೇಳಲಾಗಿದೆ: ಆಡಳಿತ-ವ್ಯವಹಾರ, ಮುದ್ರಣ ಯಂತ್ರ, ಕ್ರೈಸ್ತಮತ ಪ್ರಚಾರ, ಹೊಸ ಶಿಕ್ಷಣ ಪದ್ಧತಿ-ಹೊಸ ವಿಚಾರಸರಣಿ. ಪಾಶ್ಚಾತ್ಯ ನಾಗರಿಕತೆಯ ಪ್ರಭಾವದಿಂದ ಭಾರತೀಯರ ಜೀವನದೃಷ್ಟಿ ಹಾಗೂ ಮೌಲ್ಯಗಳು ಬದಲಾದುವು; ಪಾಶ್ಚಾತ್ಯರ ವೈಚಾರಿಕ ಪ್ರವೃತ್ತಿ, ವ್ಯಾವಹಾರಿಕ ಲೌಕಿಕ ಮನೋಧರ್ಮ ಭಾರತೀಯರಲ್ಲಿ ಹರಡತೊಡಗಿದುವು. ಬ್ರಿಟಿಷರು ಜಾರಿಗೆ ತಂದ ಹೊಸ ಶಿಕ್ಷಣ ಪದ್ಧತಿ ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿತು. ಅದರಿಂದ ಭಾರತೀಯರ ಪಾಲಿಗೆ ನವದಿಗಂತಗಳು ತೆರೆದುಕೊಂಡವು. ಹೊಸ ದೊಂದು ಪ್ರಪಂಚದ ಪರಿಚಯವಾಯಿತು. ವಿಜ್ಞಾನ, ಇಂಗ್ಲಿಷ್ ಸಾಹಿತ್ಯ ಪ್ರಪಂಚದ ಪರಿಜ್ಞಾನ ಅವರಿಗೆ ಹಿಂದಿಲ್ಲದ ಅನುಭವಗಳನ್ನೂ ಸಂವೇದನೆಗಳನ್ನೂ ತಂದುಕೊಟ್ಟವು. ಬದುಕಿನ ರೀತಿನೀತಿಗಳನ್ನು ಮಾರ್ಪಡಿಸಿದುವು. ಇದುವರೆಗೆ ಮತಧರ್ಮದ ಆವರಣದಲ್ಲಿ ಬೆಳೆದುಬಂದಿದ್ದ ಭಾರತೀಯರ ಸಮಷ್ಟಿಪ್ರಜ್ಞೆ ಲೌಕಿಕವಾದ ವ್ಯಷ್ಟಿಪ್ರಜ್ಞೆಯಾಗಿ ಸಂಕ್ರಮಣಗೊಂಡು, ಸ್ವತಂತ್ರ ವಿಚಾರಶಕ್ತಿ ಕುದುರತೊಡಗಿತು. ಭಾರತೀಯರಲ್ಲಿ ಸ್ವಾತಂತ್ರ್ಯಪ್ರೇಮ, ರಾಷ್ಟ್ರೀಯ ಭಾವನೆ, ಸ್ವಾಭಿಮಾನ, ಸ್ವತಂತ್ರ ವಿಚಾರಸರಣಿಗಳು ಬೆಳೆಯಲು ಅದು ಕಾರಣವಾಯಿತು. ಇಂಗ್ಲಿಷ್ ಶಿಕ್ಷಣವೆಂತೊ ಅಂತೆ ಕ್ರೈಸ್ತ ಮಿಷನರಿಗಳು ತಂದ ಮುದ್ರಣಯಂತ್ರವೂ ಒಂದು ಕ್ರಾಂತಿ ಸಾಧನವಾಯಿತು, ವಾಚಕವರ್ಗವನ್ನು ಸೃಜಿಸಿ, ಬರೆಹಗಾರರಿಗೆ ಸ್ಫೂರ್ತಿ ಸಾಧನವಾಯಿತು.

ಈ ಎಲ್ಲ ಸಂಕ್ರಾಂತಿ ಭರತಖಂಡದ ಇತರ ಭಾಗಗಳನ್ನು ಹೇಗೋ ಹಾಗೆಯೇ ಕರ್ನಾಟಕವನ್ನೂ ವ್ಯಾಪಿಸಿ ಹೊಸ ಸಾಹಿತ್ಯ ಸೃಷ್ಟಿಗೆ ಪ್ರಚೋದಕವಾಯಿತು. ನಾಡು ನುಡಿಗಳ ಪ್ರೇಮ ಕನ್ನಡಿಗರಲ್ಲೂ ಜಾಗೃತವಾಯಿತು. ಇಂಗ್ಲಿಷ್ ಶಿಕ್ಷಣ ಪಡೆದ ಹೊಸ ಪೀಳಿಗೆಯ ಸಾಮಾನ್ಯ ಜನ ನವೀನ ಸಾಹಿತ್ಯದ ಹರಿಕಾರರಾದರು. ರೂಪ ವಸ್ತು ಭಾವ ಭಾಷೆಗಳಲ್ಲಿ ಸಾಹಿತ್ಯ ಹೊಸತನವನ್ನು ತಾಳಿತು.

ಹೊಸಗನ್ನಡದ ಅರುಣೋದಯವಾದುದು ಕ್ರೈಸ್ತ ಮಿಷನರಿಗಳಿಂದ. ಈ ಅರುಣೋದಯ ಕಾಲದಲ್ಲಿ ಮೂರು ಘಟ್ಟಗಳನ್ನು ಗುರುತಿಸಬಹುದು. ಸು.1810 ರಿಂದ ಸು.1850 ನಸುಕಿನ ಕಾಲ. ಈ ಅವಧಿಯಲ್ಲಿ ಪಾಶ್ಚಾತ್ಯ ಶಿಕ್ಷಣ ಪದ್ಧತಿ ಇನ್ನೂ ನೆಲೆಗೊಂಡಿರಲಿಲ್ಲ. ಕ್ರೈಸ್ತ ಮಿಷನರಿಗಳು ಮಾತ್ರ ಗ್ರಂಥ ರಚನೆಯಲ್ಲಿ ತೊಡಗಿದ್ದರು. ದೇಶೀಯರು ಆ ಕಡೆ ಗಮನ ಹರಿಸಿರಲಿಲ್ಲ. 1851 ರಿಂದ 1880ರವರೆಗಿನ ಕಾಲವನ್ನು ಮುಂಬೆಳಗಿನ ಕಾಲವೆನ್ನಬಹುದು. ಆ ಅವಧಿಯಲ್ಲಿ ದೇಶೀಯರೂ ಗ್ರಂಥರಚನೆಯ ಕಡೆಗೆ ಮನಸ್ಸು ಕೊಟ್ಟು, ಅನುವಾದ ಕಾರ್ಯದಲ್ಲಿ ಮತ್ತು ಹಳೆಯ ಗ್ರಂಥಗಳ ಪರಿಷ್ಕರಣದಲ್ಲಿ ತೊಡಗಿದರು. 1881 ರಿಂದ 1899ರವರೆಗಿನ ಕಾಲವನ್ನು ಹೊಂಬೆಳಗಿನ ಕಾಲ ಅಥವಾ ನವೋದಯ ಕಾಲವೆನ್ನಬಹುದು. ಈ ಅವಧಿಯಲ್ಲಿ ಮತ್ತು ಅನಂತರ ಅನುವಾದ ಕೃತಿಗಳ ಜೊತೆಗೆ ಸ್ವತಂತ್ರ ಕೃತಿಗಳೂ ಕಾಣಿಸಿಕೊಂಡುವು. ಇಂಗ್ಲಿಷ್ ಶಿಕ್ಷಣ ಕ್ರಮ ಎಲ್ಲೆಲ್ಲೂ ರೂಢವಾಗಿ, ನವೀನ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಿದ ಕಾಲಾವಧಿಯಿದು. ಈ ಶಿಕ್ಷಣದ ಫಲವಾಗಿ ಹೊಸ ಧೋರಣೆಯುಂಟಾಗಿ, ಸಮಾಜ ಸುಧಾರಣೆಯೇ ಮೊದಲಾದ ಸ್ವತಂತ್ರ ವಿಚಾರಗಳು ಸ್ಫುರಿಸಿ ಅಭಿವ್ಯಕ್ತಿಗಾಗಿ ಹಾತೊರೆದುವು. ಇಂಥ ಅಭಿವ್ಯಕ್ತಿಯಲ್ಲಿ ವೈಯಕ್ತಿಕ ವಿಚಾರಧಾರೆ, ಲೌಕಿಕ ದೃಷ್ಟಿ, ವಾಸ್ತವಿಕತೆಯ ಪ್ರಜ್ಞೆ ತಲೆದೋರಿದುವು.

ಕ್ರೈಸ್ತಮಿಷನರಿಗಳ ಸಾಹಿತ್ಯಕಾರ್ಯ ಭಾಷಾಭ್ಯಾಸದ ಸಾಧನಗಳ ಮೂಲಕ ಪ್ರಾರಂಭವಾಯಿತು. ಕನ್ನಡ ವ್ಯಾಕರಣ, ನಿಘಂಟು, ಛಂದಸ್ಸುಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಅವರು ಹೊರತಂದರು. ಈ ದಿಶೆಯಲ್ಲಿ ವಿಲಿಯಂ ಕೇರಿಯ ವ್ಯಾಕರಣ (1817) ಆದ್ಯಕೃತಿ. ಮಿಷನರಿಗಳು ಕ್ರೈಸ್ತ ಸಾಹಿತ್ಯವನ್ನು ಕನ್ನಡಕ್ಕೆ ತಂದುದು ಮುಖ್ಯವಾದ ಕಾರ್ಯ. 19ನೆಯ ಶತಮಾನದ ಪೂರ್ವಾರ್ಧದಲ್ಲಿ ಇವೇ ಹೊಸಗನ್ನಡದ ಮುಖ್ಯ ಬರೆಹಗಳು.

ಪಠ್ಯಪುಸ್ತಕ ರಚನೆ, ಪ್ರಾಚೀನ ಕೃತಿಗಳ ಶಾಸ್ತ್ರೀಯ ಸಂಪಾದನೆ ಹಾಗೂ ಮುದ್ರಣಾಲಯ ಸ್ಥಾಪನೆ ಮಿಷನರಿಗಳ ಮತ್ತು ಬ್ರಿಟಿಷ್ ಅಧಿಕಾರಿಗಳ ಇತರ ಕಾರ್ಯಗಳು.

ವಿದೇಶೀಯರು ಹೀಗೆ ಕನ್ನಡ ಸಾಹಿತ್ಯ ಸೇವೆಯನ್ನು ಹಿಂದೆಯೇ ಪ್ರಾರಂಭಿಸಿದ್ದರೂ ದೇಶೀಯರು ಆ ಬಗ್ಗೆ ಮೊದಮೊದಲು ನಿರ್ಲಿಪ್ತರಾಗಿದ್ದರು. ಇದಕ್ಕೆ ಮುಖ್ಯ ಕಾರಣವೇನೆಂದರೆ, ನಾಡು ಆಡಳಿತ ದೃಷ್ಟಿಯಿಂದ ವಿಭಜಿತವಾಗಿದ್ದು, ಶೈಕ್ಷಣಿಕವಾಗಿ ಹಿಂದೆ ಬಿದ್ದಿತ್ತು. ಅಲ್ಲದೆ, ಮೈಸೂರಿನಲ್ಲಿ ರಾಜಾಸ್ಥಾನದಲ್ಲಿದ್ದವರು ಹೊಸತನವನ್ನು ಅಷ್ಟಾಗಿ ಸ್ವಾಗತಿಸದೆ ಸಂಪ್ರದಾಯದ ಜಾಡಿನಲ್ಲೆ ಸಾಗಿದ್ದರು. ಕರ್ನಾಟಕದ ಉಳಿದ ಭಾಗಗಳಲ್ಲೂ ನವೋದಯಕ್ಕೆ ಅವಕಾಶ ಸಿಗುವುದು ತಡವಾಯಿತು. ಆದ್ದರಿಂದ ಬಂಗಾಲಿ, ಮರಾಠಿ ಮುಂತಾದ ಸಾಹಿತ್ಯಗಳಲ್ಲಿ ಬೇಗ ಕಾಣಿಸಿಕೊಂಡ ದೇಶಾಭಿಮಾನ, ಸಮಾಜ ಸುಧಾರಣೆಯ ಪ್ರವೃತ್ತಿ, ಪ್ರಗತಿಪರ ವಿಚಾರ ಧೋರಣೆಗಳು ಕನ್ನಡದಲ್ಲಿ ವಿಲಂಬಿತವಾಗಿ ಕಾಣಿಸಿಕೊಂಡುವು. ಏನಿದ್ದರೂ 1890ನೆಯ ದಶಕದಲ್ಲಿ ಸ್ವತಂತ್ರ ಕಾದಂಬರಿ ನಾಟಕಗಳು ಕನ್ನಡದಲ್ಲಿ ಹೊಮ್ಮಿದುವು. 1899ರಲ್ಲಿ ಪ್ರಥಮ ಸಾಮಾಜಿಕ ಕಾದಂಬರಿ ಹೊರಬಂತು. ಈ ನಡುವಣ ಅವಧಿ ಹೊಸಗನ್ನಡದ ಇತಿಹಾಸದಲ್ಲಿ ಮಹತ್ತ್ವದ ಶಕವೆನ್ನಲಾಗಿದೆ. ಹೊಸತು ನಿಚ್ಚಳವಾಗಿ, ಉಜ್ವಲವಾಗಿ ಕಾಣಿಸಿಕೊಂಡ ಕಾಲವದು.

ಹೊಸಗನ್ನಡ ಗದ್ಯದಲ್ಲಿ ಬೈಬಲ್ಲನ್ನು ಅನುವಾದಿಸಿದ (1812) ಜಾನ್ ಹ್ಯಾಂಡ್ಸ್ ಕರ್ನಾಟಕಕ್ಕೆ ಬಂದುದು 1810ರಲ್ಲಿ. ಆ ವರ್ಷವನ್ನು ಪಾಶ್ಚಾತ್ಯ ಪ್ರಭಾವದ ದೃಷ್ಟಿಯಿಂದ ಹೊಸಗನ್ನಡ ಸಾಹಿತ್ಯದ ಆರಂಭವರ್ಷವೆನ್ನಬಹುದು. ಲಿಯೊನಾರ್ಡೊ ಸಿನ್ನಾಮಿ ಎಂಬ ಮಿಷನರಿ ಹದಿನೇಳನೆಯ ಶತಮಾನದಲ್ಲೆ ಕರ್ನಾಟಕಕ್ಕೆ ಬಂದಿದ್ದ; ಅವನೇ ಹೊಸಗನ್ನಡದ ಪ್ರಪ್ರಥಮ ಗ್ರಂಥಕರ್ತ ಎನ್ನಲಾಗಿದೆ. ಆದರೆ ಅವನ ಕೃತಿಗಳು ದೊರೆತಿಲ್ಲ. ಜಾನ್ ಹ್ಯಾಂಡ್ಸ್ ಬೈಬಲ್ಲಿನ ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳನ್ನು 1820ರಲ್ಲಿ ಹೊರತಂದ. ಅನಂತರ ಹೊಸ ಒಡಂಬಡಿಕೆಯ ಮುಂದಿನ ಭಾಗವನ್ನೂ ಹಳೆಯ ಒಡಂಬಡಿಕೆಯ ಅನುವಾದವನ್ನೂ ಸಿದ್ಧಗೊಳಿಸಿದ. ಸಮಗ್ರ ಬೈಬಲನ್ನು ಮೊದಲ ಬಾರಿಗೆ ಕನ್ನಡದಲ್ಲಿ ಹೊರತಂದವನು ಹ್ಯಾಂಡ್ಸ್. ಅವನಿಗಿಂತ ಮೊದಲೇ ವಿಲಿಯಂ ಕೇರಿ 1809ರಲ್ಲಿ ಬೈಬಲನ್ನು ಕನ್ನಡಕ್ಕೆ ತಂದಿದ್ದ. ಆದರೆ ಅದರ ಹಸ್ತಪತ್ರಿ 1812ರಲ್ಲಿ ಸುಟ್ಟು ಹೋಯಿತು. ಕೇರಿ ಮತ್ತೆ ಅದನ್ನು ಪ್ರತಿಮಾಡಿ 1823ರಲ್ಲಿ ಪ್ರಕಟಿಸಿದ. ಇದೇ ಹೊಸಗನ್ನಡದ ಮೊದಲ ಗದ್ಯಗ್ರಂಥವೆನ್ನಲಾಗಿದೆ. ಎ.ಬೌಥೆಲೊ ಬೈಬಲ್ಲಿನ ಸಂಕ್ಷಿಪ್ತ ರೂಪವನ್ನು ಕನ್ನಡದಲ್ಲಿ ಪ್ರಕಟಿಸಿದ. ರೀವ್ ಎಂಬಾತ ಯೇಸುಕ್ರಿಸ್ತನ ಅವತಾರ ಎಂಬ ಅನುವಾದವನ್ನೂ ಹಳೆಯ ಒಡಂಬಡಿಕೆಯ ಅನೇಕ ಪರ್ವಗಳನ್ನೂ ಕನ್ನಡದಲ್ಲಿ ಹೊರತಂದ (1820). ಜಾನ್ ಬುನ್ಯನ್ 'ಪಿಲ್ಗ್ರಿಮ್ಸ್ ಪ್ರೊಗ್ರೆಸ್' ಕೃತಿಯನ್ನು ದೇಶಾಂತ್ರಿಯ ಪಯಣ ಎಂಬ ಹೆಸರಿನಲ್ಲಿ ಅನುವಾದಿಸಿದ. ಬಿ.ಎಚ್.ರೈಸ್ ತನ್ನ ಸಹೋದ್ಯೋಗಿ ಸಿವೆಲ್‌ನೊಡನೆ ಬೈಬಲ್ಲಿನ ನೂರು ಮುಖ್ಯಾಂಶಗಳನ್ನು ಟಿಪ್ಪಣಿ ಸಹಿತ ಪ್ರಕಟಿಸಿದ (ವೇದ ಸಂಗ್ರಹ, 1844). ಸ್ಯಾಂಡರ್ಸನ್ 'ಕಂ ಟು ಜೀಸಸ್' ಎಂಬ ಕೃತಿಯನ್ನು (ಮೂಲ: ಸಿ.ಎನ್.ಹಾಲ್) ಅನುವಾದಿಸಿದ (1862). ಹೀಗೆಯೇ ಚಾರ್ಬೋನಾ ಎಂಬಾತ ದೈವಪರೀಕ್ಷೆ (1863), ಸತ್ಯವೇದ ಪರೀಕ್ಷೆ (1852), ದಿವ್ಯಮಾತೃಕೆ (1862), ಸುಕೃತ ಮಂತ್ರಗಳು (1866) ಇತ್ಯಾದಿಗಳನ್ನು ಅನುವಾದಿಸಿದ. ಹೆನ್ರಿ ಹೇಗ್ ಜಿಗ್ಲರನೊಡನೆ ಹೊಸ ಒಡಂಬಡಿಕೆಯ ಲ್ಯೂಕ್ ಮತ್ತು ಮಾರ್ಕರ ಸುವಾರ್ತೆಗಳನ್ನು ಭಾಷಾಂತರಿಸಿದ. ಮೊಗ್ಲಿಂಗನ ಜಾತಿ (ಮತ) ವಿಚಾರಣೆ (1845), ದೇವ ವಿಚಾರಣೆ (1852) ಇವು ಸ್ವತಂತ್ರ ಕೃತಿಗಳು. ಇವು ಹೊಸಗನ್ನಡದ ಆದ್ಯ ಪ್ರಬಂಧಗಳು. 'ಪಿಲ್ಗ್ರಿಮ್ಸ್‌ನು ಪ್ರೋಗ್ರೇಸ್'ನ ಅನುವಾದವಾದ ಯಾತ್ರಿಕನ ಸಂಚಾರವನ್ನು ಮೊಗ್ಲಿಂಗನು ವೈಗಲ್‌ನೊಡನೆ 1849ರಲ್ಲಿ ಹೊರತಂದ. 'ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೇ ಮೊದಲನೆಯದು. 1838ರಲ್ಲಿ ಲಿಟ್ಲ್ ವಿಲಿಯಂ ಎಂಬ ಕ್ರೈಸ್ತ ಕಥನದ ಅನುವಾದ ಪ್ರಕಟವಾಗಿತ್ತು. ಪ್ರವಚನಕ್ಕೆ ಬೇಕಾದ ಕ್ರೈಸ್ತ ಗೀತೆಗಳನ್ನು ಅನುವಾದಿಸಿದ ಆರಂಭಕಾರರಲ್ಲೊಬ್ಬ ವೈಗಲ್. ಮೊಗ್ಲಿಂಗನೊಡನೆ ಹಾಕ್ ಅನೇಕ ಪ್ರಾರ್ಥನಾಗೀತೆಗಳನ್ನು ರಚಿಸಿದ. ಎಫ್. ಕಿಟ್ಟೆಲ್ ಕಥಾಮಾಲೆ (1862) ಎಂಬ ಹೆಸರಿನಲ್ಲಿ ಬೈಬಲ್ಲಿನ ಹೊಸ ಒಡಂಬಡಿಕೆಯನ್ನು ಕಥ'ನ ರೂಪಕ್ಕೆ ತಿರುಗಿಸಿದ. ಇದರಲ್ಲಿ ಭಾಮಿನಿ, ವಾರ್ಧಕ ಮುಂತಾದ ಛಂದೋರೂಪಗಳನ್ನು ಬಳಸಲಾಗಿದೆ. ಬೇರಾವ ಮಿಷನರಿಯೂ ಇಷ್ಟೊಂದು ಕನ್ನಡ ಪದ್ಯಗಳನ್ನು ರಚಿಸಿಲ್ಲವಂತೆ. ಮಿಷನರಿಗಳು ಬರಿಯ ಮತೀಯ ಸಾಹಿತ್ಯವನ್ನೆ ರಚಿಸಲಿಲ್ಲ. ಮಹಾಪುರುಷರ ಜೀವನಚರಿತ್ರೆಗಳು ಮುಂತಾಗಿ ಜೀವನೋಪಯೋಗಿ ಗ್ರಂಥಗಳನ್ನೂ ರಚಿಸಿದ್ದರು.

ಉಳಿದವರಿಗಿಂತ ಬಾಸೆಲ್ ಮಿಷನ್‌ಗೆ ಸೇರಿದ ಮಿಷನರಿಗಳು ಕನ್ನಡಕ್ಕಿತ್ತ ಕೊಡುಗೆ ಮಿಗಿಲಾದುದು. ಅವರು ತಮ್ಮ 60 ವರ್ಷಗಳ ಕಾಲಾವಧಿಯಲ್ಲಿ ಅನೇಕ ಹೊಸ ವಿಚಾರಗಳನ್ನೂ ನವೀನ ರೂಪಗಳನ್ನೂ ಸಾಹಿತ್ಯ ರಂಗದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಕನ್ನಡಕ್ಕೆ ಮ್ಯಾಕೆರಲ್, ಕಾಲ್ಡ್‌ವೆಲ್, ಬಿ.ಎಲ್.ರೈಸ್, ರೀಡ್ ಮುಂತಾದವರ ಸೇವೆಯೂ ಗಮನಾರ್ಹವಾದುದು. ಒಂದು ಕಡೆ ಪ್ರಾಚೀನ ನಿಕ್ಷೇಪದ ಅನಾವರಣ, ಇನ್ನೊಂದು ಕಡೆ ಹೊಸ ಸಾಹಿತ್ಯಕ್ಕೆ ಪ್ರೇರಣೆ ಈ ಎರಡೂ ಪರಸ್ಪರ ಪೂರಕವಾದ ಕೆಲಸಗಳನ್ನು ವಿದೇಶೀಯರು ಮಾಡಿದರು.

19ನೆಯ ಶತಮಾನದ ಉತ್ತರಾರ್ಧದಲ್ಲಿ, ಪಾಶ್ಚಾತ್ಯ ಶಿಕ್ಷಣಪಡೆದ ಹೊಸ ತಲೆಮಾರೊಂದು ಸಾಹಿತ್ಯ ರಚನೆಯಲ್ಲಿ ತೊಡಗಿ ನವ ಮನ್ವಂತರವನ್ನು ಆರಂಭಿಸಿತು. ಮೊದಮೊದಲು ಇಂಗ್ಲಿಷ್ ಕೃತಿಗಳ ಅನುವಾದಗಳು, ಅನುಕರಣಗಳು ಮತ್ತು ರೂಪಾಂತರಗಳು ಅನಂತರ ಸ್ವತಂತ್ರ ಕೃತಿಗಳು ಹೊರಬಂದುವು. ಚಾಮರಾಜ ಒಡೆಯರು ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯನ್ನು ಸ್ಥಾಪಿಸಿ ನಾಟಕಗಳ ಹುಟ್ಟಿಗೆ ಅನುವು ಮಾಡಿಕೊಟ್ಟದ್ದು ಒಂದು ಮಹತ್ವದ ಸಂಗತಿ. ಆಗ ಕೆಲವರು ಸಂಸ್ಕೃತದಿಂದ, ಕೆಲವರು ಇಂಗ್ಲಿಷಿನಿಂದ ನಾಟಕಗಳನ್ನು ಕನ್ನಡಿಸಿದರು. ಇಂಗ್ಲಿಷಿನಿಂದ ವಿಶೇಷವಾಗಿ ಷೇಕ್ಸ್‌ಪಿಯರನ ನಾಟಕಗಳನ್ನು ಭಾಷಾಂತರ ಅಥವಾ ರೂಪಾಂತರದ ಮೂಲಕ ತರಲಾಯಿತು. ಕನ್ನಡದಲ್ಲಿ ಐತಿಹಾಸಿಕ ನಾಟಕ ನಿರ್ಮಾಣಕ್ಕೆ ಅದೇ ಬುನಾದಿ. ಷೇಕ್ಸ್‌ಪಿಯರನನ್ನು ಕನ್ನಡಿಗರಿಗೆ ಮೊತ್ತಮೊದಲು ಪರಿಚಯಿಸಿದವರು ಚನ್ನಬಸಪ್ಪ ಎಂಬುವರೆಂದು ಹೇಳಲಾಗಿದೆ. ಅವರು 1821ರಷ್ಟು ಹಿಂದೆಯೇ ಕಾಮಿಡಿ ಆಫ್ ಎರರ್ಸ್, ಮ್ಯಾಕ್‌ಬೆತ್ ನಾಟಕಗಳ ಕಥೆಗಳನ್ನು ಪ್ರಕಟಿಸಿದ್ದರಂತೆ.

ಈ ದಿಕ್ಕಿನಲ್ಲಿ ಎಂ.ಎಲ್.ಶ್ರೀಕಂಠೇಶಗೌಡರ ಹೆಸರೂ ಮುಖ್ಯವಾದುದು. ಅವರು ಮ್ಯಾಕ್‌ಬೆತ್ ನಾಟಕವನ್ನು ಪ್ರತಾಪರುದ್ರದೇವ (1895) ಎಂದು ರೂಪಾಂತರಿಸಿದರು. ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ನಾಟಕವನ್ನು ಪ್ರಮೀಳಾರ್ಜುನೀಯ ಎಂದೂ ರೂಪಾಂತರಿಸಿದರು. ಅಲ್ಲದೆ ಹೆನ್ರಿ ಫೀಲ್ಡಿಂಗನ ಎ ಸಿಲಿಕನ್ ಸಮ್ಮರ್ (ಕನ್ಯಾವಿತಂತು), ಮೇರಿಯಾ ಎಜ್‌ವರ್ತಳ ಲಿಟಲ್ ಮರ್ಚೆಂಟ್ಸ್ (ಚಿಕ್ಕ ಬಣಜಿಗರು) ಕೃತಿಗಳನ್ನು ಕನ್ನಡಿಸಿದರು. ಎ.ಆನಂದರಾಯರು ರೋಮಿಯೋ ಜೂಲಿಯಟ್ ನಾಟಕವನ್ನು ರಾಮವರ್ಮ ಲೀಲಾವತಿ ಎಂದೂ ಮರ್ಚೆಂಟ್ ಆಫ್ ವೆನಿಸ್ ನಾಟಕವನ್ನು ಪಾಂಚಾಲೀ ಪರಿಣಯ ಎಂದೂ ರೂಪಾಂತರಿಸಿದರು. ಬಸವಪ್ಪಶಾಸ್ತ್ರಿಗಳಿಗೆ ಸ್ವತಃ ಇಂಗ್ಲಿಷ್ ಬರದಿದ್ದರೂ ಅನ್ಯರ ನೆರವಿನಿಂದ ಒಥೆಲೋ ನಾಟಕವನ್ನು ಶೂರಸೇನಚರಿತ ಎಂದು ಕನ್ನಡಕ್ಕೆ ತಂದರು. ಎಂ.ಎಸ್.ಪುಟ್ಟಣ್ಣನವರ ಹೇಮಚಂದ್ರ ರಾಮವಿಲಾಸ ಕಿಂಗ್ ಲಿಯರ್ ನಾಟಕದ ಗದ್ಯ ರೂಪಾಂತರ, ಆರ್. ಅಣ್ಣಾಜಿರಾಯರು, ಚುರಮುರಿ ಶೇಷಗಿರಿರಾಯರು, ಗುಂಡೋ ಕೃಷ್ಣ ಚುರಮುರಿಯವರು, ವೆಂಕಟಾದ್ರಿ ಶಾಮರಾಯರು ಮೊದಲಾದವರೂ ಹಲವಾರು ಇಂಗ್ಲಿಷ್ ನಾಟಕಗಳನ್ನು ಕನ್ನಡೀಕರಿಸಿದರು.

ಇಂಗ್ಲಿಷಿನಿಂದ ಕನ್ನಡಕ್ಕೆ ಬಂದ ಮೊದಲ ಕಾದಂಬರಿಯೆಂದರೆ ಎಸ್.ವಿ.ಕೃಷ್ಣಸ್ವಾಮಿ ಅಯ್ಯಂಗಾರ್ ಭಾಷಾಂತರಿಸಿದ ರಾಬಿನ್‌ಸನ್ ಕ್ರೂಸೋ (1858). ಬಾಪು ಸುಬ್ಬರಾಯರ ನಿರ್ಭಾಗ್ಯ ಮರಾದ ಅಂಥದೇ ಮತ್ತೊಂದು ಕಾದಂಬರಿ. ಥಾಮಸ್ ಡೇಯ 'ದಿ ಹಿಸ್ಟರಿ ಆಫ್ ಸ್ಯಾಂಡ್‌ಫೋರ್ಡ್ ಅಂಡ್ ಮರ್ಟನ್' ಎಂಬ ಕೃತಿಯನ್ನು ಎಂ.ಎಸ್.ಪುಟ್ಟಣ್ಣನವರು ಸುಮತಿ ಹಾಗೂ ಮದನಕುಮಾರರ ಚರಿತ್ರೆ ಎಂಬುದಾಗಿ ಕನ್ನಡಿಸಿದರು.

ಸ್ಥೂಲವಾಗಿ 19ನೆಯ ಶತಮಾನದ ಮೂರನೆಯ ದಶಕದಲ್ಲಿ ನಸುಕಾಗಿ, ಮಧ್ಯದಪ್ಪರ ಹೊತ್ತಿಗೆ ಬೆಳಕಾಗಿ ಹೊಸಗನ್ನಡ ಸಾಹಿತ್ಯ ತನ್ನ ವಿವಿಧ ಪ್ರಕಾರಗಳೊಡನೆ ಉದಯವಾಯಿತೆಂದು ಹೇಳಬಹುದು. ಆದರೆ

ಅದರ ಸ್ಪಷ್ಟ ರೂಪ ಕಾಣಿಸಿಕೊಂಡದ್ದು ಇಪ್ಪತ್ತನೆಯ ಶತಮಾನದಲ್ಲಿಯೇ ಎನ್ನಬೇಕು. ಭಾವಗೀತೆ, ನಾಟಕ, ಕಾದಂಬರಿ, ಕಥೆ, ವಿಮರ್ಶೆ, ಪ್ರಬಂಧ ಮುಂತಾದ ಪ್ರಕಾರಗಳೆಲ್ಲ ಕನ್ನಡದಲ್ಲಿ ಸುಪ್ರತಿಷ್ಠಿತವಾದುದು ಪ್ರಚಲಿತ ಶತಮಾನದಲ್ಲಿಯೇ. ಈ ಪ್ರತಿಷ್ಠಾಪನಾ ಕಾರ್ಯದಲ್ಲಿ ಇಂಗ್ಲಿಷ್ ವಾಙ್ಮಯದ ಕೊಡುಗೆ ಅಪರಿಮಿತವಾದುದು.

1820 ರಿಂದ 1920ರವರೆಗಿನ ಕಾಲವನ್ನು ಹೊಸಗನ್ನಡದ ಮೊದಲ ಹಂತವೆಂದಿಟ್ಟುಕೊಂಡರೆ, 1921ರ ಮುಂದಿನ ಕಾಲವನ್ನು ಎರಡನೆಯ ಹಂತವೆಂದು ಭಾವಿಸಬಹುದು. ಈ ಎರಡನೆಯ ಹಂತ ದೇಶಾದ್ಯಂತ ಅಪೂರ್ವ ಜಾಗೃತಿಯನ್ನು ಕಂಡ ಕಾಲ. ಆಗ ದೇಶದ ಸ್ವಾತಂತ್ರ್ಯಕ್ಕಾಗಿ ಪರಕೀಯ ಸತ್ತೆಯೊಡನೆ ಅಸಹಕಾರ ಮಾಡಿದಂತೆ ಸ್ವಭಾಷೆಯ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕಾಗಿ ಲೇಖಕರು ಹಳೆಯ ಸಂಪ್ರದಾಯದ ಸತ್ತೆಯೊಡನೆ ಅಸಹಕಾರ ಹೂಡಿದರು. ಸಾಹಿತ್ಯ ಕ್ಷೇತ್ರದಲ್ಲಿ ಸಹ ಇಂಗ್ಲಿಷ್ ವಾಙ್ಮಯದ ನಿತಾಂತಪ್ರಭಾವ ಭಾರತೀಯ ಸಾಹಿತ್ಯದ ಹೊಸ ಸ್ವರೂಪಕ್ಕೆ ಕಾರಣವಾಯಿತು. ಮೆಕಾಲೆ ಪ್ರಾರಂಭ ಮಾಡಿದ ವಿದ್ಯಾಭ್ಯಾಸ ಪದ್ಧತಿಯ ಮೂಲಕ ನಮ್ಮ ನಾಡಿನ ವಿದ್ಯಾವಂತರಿಗೆ ಷೇಕ್ಸ್‌ಪಿಯರ್ ಮತ್ತು ಮಿಲ್ಟನ್ ಇವರ ಮಹಾಕೃತಿಗಳೂ ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್ ಮುಂತಾದ ಕವಿಗಳ ಭಾವಗೀತೆಗಳೂ ಪರಿಚಿತವಾದವು. ಇವುಗಳ ಜೊತೆಗೆ ಮಿಲ್, ಮಾರ್ಲೆಯವರಂಥ ವಿಚಾರವಂತರ ವಿಚಾರ -ವಿವೇಕದಿಂದ ಪರಿಪುಷ್ಟರಾದರು. ಸ್ಕಾಟ್, ಡಿಕನ್ಸ್ ಅವರ ಕಾದಂಬರಿಗಳಿಂದ ಸ್ಫುರಣ ಹೊಂದಿದರು. ಅವರ ಮನೋಲೋಕ ಇಂಗ್ಲಿಷ್ ಸಾಹಿತ್ಯದ ಚಿತ್ರಗಳಿಂದಲೂ ಕಿಕ್ಕಿರಿಯಿತು. ಕೆಲವು ಕಾಲದ ಮೇಲೆ ಇದಕ್ಕೆ ಪ್ರತಿಕ್ರಿಯೆಯಾಗಿ ಪ್ರಾಚೀನ ಭಾರತೀಯ ಸಂಸ್ಕೃತಿಯ ಪರಿಚಯಕ್ಕಾಗಿ ಮನಸ್ಸು ಹಾತೊರೆಯಿತು. ವೇದೋಪನಿಷತ್ತುಗಳ ವ್ಯಾಸಂಗದಿಂದ ಇನ್ನೊಂದು ಆಳವಾದ ದೃಷ್ಟಿ ತೆರೆಯಿತು. ಪೌರ್ವಾತ್ಯ -ಪಾಶ್ಚಿಮಾತ್ಯ ದೃಷ್ಟಿಗಳ ಸಮನ್ವಯದತ್ತ ಹಲವರ ಮನಸ್ಸು ಹೊರಳಿತು. ಸಮಗ್ರ ದೇಶದಲ್ಲಿ ಪ್ರಕಟವಾದ ನೂತನಶಕ್ತಿ ಕರ್ನಾಟಕದಲ್ಲಿಯೂ ಸಂಚರಿಸಿತು.

1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದುದೂ ಹೊಸ ಸಾಹಿತ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ನವೀನ ಸಾಹಿತ್ಯದ ಪ್ರಧಾನ ಅಧ್ವರ್ಯುವಾಗಿ ನಿಂತವರು ಬಿ.ಎಂ.ಶ್ರೀಕಂಠಯ್ಯನವರು; ಅವರಿಗೆ ಬೆಂಬಲವಾಗಿ ಕೆಲಸ ಮಾಡಿದವರು ತ.ಸು.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರೀ. ಮೈಸೂರಿನ ಕಡೆ ಶ್ರೀಯವರ ನಾಯಕತ್ವದಲ್ಲಿ ತಳಿರು ತಂಡ, ಮಂಗಳೂರು ಕಡೆ ಪಂಜೆಯವರ ನೇತೃತ್ವದಲ್ಲಿ ಮಿತ್ರಮಂಡಳಿ, ಧಾರವಾಡದ ಕಡೆ ಬೇಂದ್ರೆಯವರ ನೇತೃತ್ವದಲ್ಲಿ ಗೆಳೆಯರ ಗುಂಪು ತಲೆಯೆತ್ತಿದುವು.

ಕಾವ್ಯಪ್ರಕಾರದಲ್ಲಿ 1921ರಲ್ಲಿ ಹೊರಬಂದ ಶ್ರೀಯವರ ಇಂಗ್ಲಿಷ್ ಗೀತಗಳು ಹೊಸಗನ್ನಡ ಕಾವ್ಯದ ಚರಿತ್ರೆಯಲ್ಲಿ ಒಂದು ಪ್ರಮುಖವಾದ ಮಜಲು. ಆದರೆ ಶ್ರೀಯವರಿಗಿಂತಲೂ ಹಿಂದೆಯೇ ಕೆಲಸ ಮಾಡಿದವರಿದ್ದರು ಎಂಬುದನ್ನು ಮರೆಯುವಂತಿಲ್ಲ. ಹೊಸಗನ್ನಡ ಕವಿತೆಗೆ ಕಳೆದ ಶತಮಾನದಲ್ಲೇ ನಾಂದಿ ಹಾಡಿದವರು ಕ್ರೈಸ್ತ ಮಿಷನರಿಗಳು. 1845ರಲ್ಲಿ ಪ್ರಕಟವಾದ ಬಾಸೆಲ್ ಮಿಶನ್ನಿನ ಪದ್ಯ ಸಂಕಲನದಲ್ಲಿ 68 ಕನ್ನಡ ಗೀತೆಗಳಿವೆ. 1847ರಲ್ಲಿ ಪ್ರಕಟವಾದ ಯಾತ್ರಿಕನ ಸಂಚಾರದಲ್ಲಿ ವೈಗಲ್ ಅನುವಾದಿಸಿದ ಅನೇಕ ಪದ್ಯಗಳಿವೆ. ಕೆಲವು ಭಾಮಿನಿ ಷಟ್ಪದಿಯಲ್ಲಿದ್ದರೆ, ಕೆಲವು ಚೌಪದಿಯ ರೂಪದಲ್ಲಿವೆ. ಸುಮಾರು ಇದೇ ಕಾಲದಲ್ಲಿ ಬೆಳಕಿಗೆ ಬಂದ ಗೀತ ಪುಸ್ತಕಗಳು ಎಂಬ ಮಿಷನರಿ ಕೃತಿಯಲ್ಲಿ ಇಂಗ್ಲಿಷ್, ಜರ್ಮನ್ ಗೀತಗಳ ಕನ್ನಡಾನುವಾದವಿದ್ದು ಅವುಗಳಲ್ಲಿ ಕೆಲವೆಡೆ ಆದಿ ಅಂತ್ಯಪ್ರಾಸಗಳನ್ನೂ ಕೆಲವೆಡೆ ಅಂತ್ಯಪ್ರಾಸವನ್ನೂ ಕಾಣಬಹುದು. ಮಿಷನರಿಗಳ ಈ ಪ್ರಾರ್ಥನಾ ಪದ್ಯಗಳು ಹಳೆಯ ಧಾಟಿಯಿಂದ ಮುಕ್ತವಾಗಿವೆ. ಕೆಲವು ಕಡೆ ಅಂತ್ಯಪ್ರಾಸ ಅನಿಯತವಾಗಿ ಬಂದಿರುವುದುಂಟು. ವಾಸ್ತವವಾಗಿ ಅಂತ್ಯಪ್ರಾಸ ಆಂಗ್ಲ ಕಾವ್ಯದ ವೈಶಿಷ್ಟ್ಯ. ಅದು ಹೊಸಗನ್ನಡ ಕವಿತೆಗೆ ಇಂಗ್ಲಿಷಿನಿಂದ ಬಂದು ಸೇರಿಕೊಂಡಿತು.

ಕ್ರೈಸ್ತಗೀತೆಗಳಲ್ಲೂ ಎರಡು ವರ್ಗಗಳನ್ನು ಕಾಣಬಹುದು. ಹಳೆಯ ಧಾಟಿಯಲ್ಲಿರತಕ್ಕವು ಮತ್ತು ಪಾಶ್ಚಾತ್ಯ ಗೀತಗಳ ಧಾಟಿಯಲ್ಲಿರತಕ್ಕವು. ಎರಡನೆಯ ವರ್ಗದಲ್ಲಿ ಹೊಸ ಛಂದಸ್ಸು ಕಾಣದೊರೆಯುತ್ತದೆ. ಮಿಷನರಿಗಳು ವಿರಳವಾಗಿ ಸ್ವತಂತ್ರ ಕವಿತೆಯನ್ನೂ ಬರೆದುದುಂಟು. ಹೀಗೆ ಕ್ರೈಸ್ತ ಮಿಷನರಿಗಳ ರಚನೆಗಳಲ್ಲಿ ಹೊಸಗನ್ನಡ ಕಾವ್ಯ ಪರಿಮಿತವಾಗಿ ಮೈದೋರಿತ್ತು. ಅದು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಮೊದಲೆರಡು ದಶಕಗಳಲ್ಲಿ ಹೆಚ್ಚಾಗಿ ಅನುವಾದರೂಪದಲ್ಲಿ ಮುಂದುವರಿಯಿತು. ಇಂಗ್ಲಿಷ್ ಕವಿತೆಗಳ ಭಾಷಾಂತರಕ್ಕೆ ಪಠ್ಯಪುಸ್ತಕಗಳೂ ನಿಮಿತ್ತವಾದುವು. ಹಾಗೆಯೇ ಕನ್ನಡದಲ್ಲಿ ಆಧುನಿಕ ಕಾವ್ಯ ಸ್ವತಂತ್ರವಾಗಿ ತಲೆಯೆತ್ತಿದ್ದು ಈ ಶತಮಾನದ ಆರಂಭದಲ್ಲಿ; ಇಂಗ್ಲಿಷ್ ಕಾವ್ಯವಿತ್ತ ಸ್ಫೂರ್ತಿಯಿಂದ.

ಶ್ರೀಯವರು ಹೊಸಗನ್ನಡವನ್ನು ಉದ್ಘಾಟಿಸಿದ ಕ್ರಾಂತಿ ಪುರುಷರಾದರೂ ಅವರಿಗಿಂತ ಹಿಂದೆಯೇ ಮುಂಬೆಳಗಿನ ಮೊದಲಿಗರಿದ್ದರು. ಈ ಮುಂಬೆಳಗಿನ ಕವಿಗಳೆಲ್ಲ ಬಹುಮಟ್ಟಿಗೆ ಹಳೆಯ ಛಂದೋರೂಪಗಳಲ್ಲಿ ಕಾವ್ಯರಚನೆ ಮಾಡಿದರೇ ಹೊರತು ಹೊಸ ಛಂದಸ್ಸನ್ನು ಸೃಷ್ಟಿಸಲಿಲ್ಲ. ಎಸ್.ಜಿ.ನರಸಿಂಹಾಚಾರ್, ಪಂಜೆಮಂಗೇಶರಾಯ, ಗೋವಿಂದಪೈ, ಹಟ್ಟಿಯಂಗಡಿ ನಾರಾಯಣರಾಯ, ಜಯರಾಯಾಚಾರ್ಯ, ಶಾಂತಕವಿ ಮೊದಲಾದವರು ಹೊಸ ಕವಿತೆಗೆ ಹಳೆಯ ಛಂದೋರೂಪಗಳನ್ನೇ ಬಳಸಿಕೊಂಡರು. ಸ್ವಂತ ರಚನೆಗಳಲ್ಲಾಗಲಿ ಅನುವಾದಗಳಲ್ಲಾಗಲಿ ಹೊಸತನ ಹೆಚ್ಚಾಗಿರಲಿಲ್ಲ. ಗೋವಿಂದ ಪೈಯವರು ಆದಿಪ್ರಾಸತ್ಯಾಗದ ನಿರ್ಧಾರ ಕೈಕೊಂಡದ್ದು ಒಂದು ಮಹತ್ವದ ಹೆಜ್ಜೆ.

ಹಟ್ಟಿಯಂಗಡಿ ನಾರಾಯಣರಾಯರು ಇಂಗ್ಲಿಷಿನಿಂದ ಕನ್ನಡಕ್ಕೆ ಕವಿತೆಗಳನ್ನು ಭಾಷಾಂತರಿಸಿದವರಲ್ಲಿ ಮೊದಲಿಗರು. ಅವರ ಆಂಗ್ಲಕವಿತಾವಳಿ ಅನುವಾದಿತ ಕವನಗಳ ಸಂಕಲನ (1919). ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದ ಹೇಗೆ ಕನ್ನಡ ಕಾವ್ಯಕ್ಕೆ ನಾವೀನ್ಯವುಂಟಾಗುವುದೆಂಬುದನ್ನು ನಾರಾಯಣರಾಯರು ಕನ್ನಡ ಕವಿತೆಯ ಭವಿತವ್ಯ ಎಂಬ ತಮ್ಮೊಂದು ಭಾಷಣದಲ್ಲಿ ಸೂಚಿಸಿದ್ದಾರೆ. 'ಇಂಗ್ಲಿಷ್ ಮಾರ್ಗಗಳ ಅನುಸರಣದಿಂದ ........................ ಕವಿಗಳು ಪಾರಮಾರ್ಥಿಕ ವಿಷಯಗಳಿಗಿಂತ ರಾಷ್ಟ್ರೀಯ, ಸಾಮಾಜಿಕ, ಚಾರಿತ್ರಿಕ ಮುಂತಾದ ಲೌಕಿಕ ಪ್ರಮೇಯಗಳಿಗೆ ಹೆಚ್ಚು ಗಮನ ಕೊಡುವರೆಂದೂ ದೀರ್ಘ ಪುರಾಣಗಳ ಬದಲಾಗಿ ಲಘುಕೃತಿಗಳನ್ನು ರಚಿಸುವರೆಂದೂ ಛಂದಸ್ಸಿನಲ್ಲಿ ಹೊಸ ಮಾದರಿಗಳನ್ನು ಕಲ್ಪಿಸಬಹುದೆಂದೂ ಅಲಂಕಾರದಲ್ಲಿ ಅಚೇತನ ಪದಾರ್ಥಗಳಿಗೆ ವಾಕ್‌ಶಕ್ತಿಯನ್ನೂ ಮಾನಸಿಕ ಭಾವಗಳಿಗೆ ಮೂರ್ತಿತ್ವವನ್ನೂ ಆರೋಪಿಸುವ ಉತ್ಪ್ರೇಕ್ಷೆಯು ರೂಢಿಯಾಗಬಹುದೆಂದೂ ಹಳಗನ್ನಡಕ್ಕಿಂತ ನಡುಗನ್ನಡವನ್ನೇ ಹೆಚ್ಚಾಗಿ ಪ್ರಯೋಗಿಸುವರೆಂದೂ' ಅವರ ನಿರೀಕ್ಷೆಯಾಗಿತ್ತು. ಅದು ಮುಂದೆ ನಿಜವಾಯಿತು. ಕನ್ನಡ ಕಾವ್ಯವು ಛಂದಸ್ಸು, ರೂಪ, ವಸ್ತು, ಶೈಲಿ, ಭಾಷೆಗಳಲ್ಲಿ ಹೊಸತನವನ್ನು ತಳೆಯಿತು. ಎಸ್.ಜಿ.ನರಸಿಂಹಾಚಾರ್ಯರೂ ಇಂಗ್ಲಿಷಿನಿಂದ ಕವನಗಳನ್ನು ಅನುವಾದಿಸಿದ್ದಲ್ಲದೆ ಪಠ್ಯಪುಸ್ತಕಗಳಿಗಾಗಿ ಸ್ವತಂತ್ರ ಕವಿತೆಗಳನ್ನೂ ರಚಿಸಿದರು. ಆದರೆ ಅವರ ಕವಿತೆಗಳ ವಸ್ತುಭಾವಗಳೂ ಹೊಸವಾದರೂ ಛಂದೋರೂಪಗಳು ಮಾತ್ರ ಹಳೆಯವೇ. ಪಂಜೆಯವರೂ ತಮ್ಮ ಅನುವಾದಗಳಲ್ಲಿ ಮತ್ತು ಸ್ವತಂತ್ರ ಕವನಗಳಲ್ಲಿ ಹಳೆಯ ಛಂದೋರೂಪಗಳನ್ನೇ ಅವಲಂಬಿಸಿದರು. ಆದಿಪ್ರಾಸವನ್ನು ಬಿಡಲಿಲ್ಲ. ಇಂಗ್ಲಿಷ್ ಕವನಗಳ ವರ್ಚಸ್ಸು ಕನ್ನಡಕ್ಕೆ ಬರುವಂತೆ ಮಾಡಿದವರಲ್ಲಿ ಅವರು ಮೊದಲಿಗರು. ಗೋವಿಂದ ಪೈಯವರು ಪಂಜೆಯವರಿಗಿಂತ ಮುಂದೆ ಹೋಗಿ ಕೆಲವು ಹೊಸ ರೂಪಗಳನ್ನು ಸೃಷ್ಟಿಸಿಕೊಂಡರು. ಮೊಟ್ಟಮೊದಲು ಸಾನೆಟ್ ಬರೆದವರು ಪೈ ಅವರೇ. ಇಂಗ್ಲಿಷಿನಿಂದ ಗ್ರಂಥಗಳನ್ನು ಕನ್ನಡಿಸುವುದು ಲಾಭದಾಯಕವೆಂದು ನಂಬಿದ್ದವರಲ್ಲಿ ಶಾಂತಕವಿಗಳೂ ಒಬ್ಬರಾಗಿದ್ದರು. ಹೀಗೆ ಹಿಂದಿನವರ ಈ ಎಲ್ಲ ಪ್ರಯತ್ನಗಳು ಶ್ರೀಯವರ ಇಂಗ್ಲಿಷ್ ಗೀತಗಳಿಗೆ ಸಮರ್ಥವಾದ ಮುನ್ನುಡಿಯಾದುದು ನಿಶ್ಚಿತ.

ಶ್ರೀ ಅವರ ಇಂಗ್ಲಿಷ್ ಗೀತಗಳಲ್ಲಿ ಹೊಸತನ ಸಮಗ್ರವಾಗಿ ಆವಿರ್ಭವಿಸಿತು. ವಸ್ತು, ಭಾವ, ಭಾಷೆ, ಛಂದಸ್ಸು ಎಲ್ಲದರಲ್ಲೂ ಈ ಹೊಸತನವನ್ನು ಸ್ಫುಟವಾಗಿ ಗುರುತಿಸಬಹುದು. ಅವರು ಹಳೆಯ ಮಾತ್ರಾಗಣಗಳನ್ನೇ ಇಟ್ಟುಕೊಂಡು ಹೊಸ ಛಂದಃಪ್ರಕಾರಗಳನ್ನು ಮೊದಲ ಬಾರಿಗೆ ಕಲ್ಪಿಸಿದರು. ಮುಂದಿನ ಕವಿಗಳಿಗೆ ಇದು ಹೆದ್ದಾರಿಯಾಗಿ ಪರಿಣಮಿಸಿತು; ಕನ್ನಡದಲ್ಲಿ ಸ್ವತಂತ್ರ ಭಾವಗೀತೆಗಳ ಸುಗ್ಗಿಗೆ

ಕಾರಣವಾಯಿತು. ಇಂಗ್ಲಿಷ್ ಕಾವ್ಯದಲ್ಲಿ 19ನೆಯ ಶತಮಾನದ ಆರಂಭದಲ್ಲಿ ಎಂಥ ನವೋದಯವುಂಟಾಯಿತೊ ಅಂಥದೇ ನವೋದಯವನ್ನು ತಮ್ಮ ಕೃತಿಯ ಮೂಲಕ ಕನ್ನಡ ಕಾವ್ಯದಲ್ಲಿ ಶ್ರೀಯವರು ಉಂಟುಮಾಡಿದರು. ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಕೋಲ್‌ರಿಜ್, ಬೈರನ್, ಬ್ರೌನಿಂಗ್, ಟೆನಿಸನ್, ಬರ್ನ್ಸ್ ಮುಂತಾದ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಕವಿತೆಗಳನ್ನು ಕನ್ನಡಿಸಿ, ಕನ್ನಡದಲ್ಲಿ ರೊಮ್ಯಾಂಟಿಕ್ ಕಾವ್ಯದ ಬೆಳೆಗೆ ಪ್ರೇರಕಶಕ್ತಿಯಾದರು. ಹೊಸಗನ್ನಡದಲ್ಲಿ ಇಂದು ಹೆಸರಾಗಿರುವ ಕವಿಗಳಲ್ಲಿ ಬಹುಮಂದಿ ಇಂಗ್ಲಿಷ್‌ಗೀತಗಳ ನೆರಳಲ್ಲಿ ಬೆಳೆದವರು. 1930ರವರೆಗೆ ಶ್ರೀಯವರೂ ಅವರ ಮಿತ್ರರೂ ನಡೆಸಿದ ಸಾಧನೆಯಿಂದ ಕನ್ನಡದಲ್ಲಿ ಹೊಸ ಕಾವ್ಯ ಬೇರೂರಿ ನಿಂತಿತು. ಇಂಗ್ಲೆಂಡಿನಲ್ಲಿ ವರ್ಡ್ಸ್‌ವರ್ತ್, ಕೋಲ್‌ರಿಜ್ ಮುಂತಾದ ರೊಮ್ಯಾಂಟಿಕ್ ಕವಿಗಳಿಗೆ ಜನಪದ ಸಾಹಿತ್ಯ ಸ್ಫೂರ್ತಿ ಕೊಟ್ಟಂತೆ, ಅಲ್ಲಿಯ ರೊಮ್ಯಾಂಟಿಕ್ ಕಾವ್ಯ ಜನಪದ ಸಾಹಿತ್ಯದಿಂದ ಪ್ರೇರಣೆ ಪಡೆದಂತೆ ಕನ್ನಡದಲ್ಲೂ ಇಂಥ ಪ್ರಕ್ರಿಯೆ ನಡೆಯಿತು. ಉತ್ತರ ಕರ್ನಾಟಕದಲ್ಲಿ ಗೆಳೆಯರ ಗುಂಪಿನವರು ಜನಪದ ಗೀತೆಗಳ ಧಾಟಿಯನ್ನು ತಮ್ಮ ಕವಿತೆಗಳಲ್ಲಿ ಬಳಸಿಕೊಂಡರು. ಗೆಳೆಯರ ಗುಂಪಿಗೆ ಸೇರಿದ ಮಧುರಚೆನ್ನರ ಅನುಭಾವ ಸಾಹಿತ್ಯ ಎ.ಇ.ಏಟ್ಸ್ ಮುಂತಾದ ಆಂಗ್ಲ ಅನುಭಾವ ಕವಿಗಳ ವ್ಯಾಸಂಗದಿಂದ ಪ್ರಭಾವಗೊಂಡದ್ದೆಂಬುದನ್ನು ಇಲ್ಲಿ ಗಮನಿಸಬಹುದು. ಆಶಯ ಮುಕ್ತ ಅಭಿವ್ಯಕ್ತಿಯಲ್ಲಿ ಸ್ವಾತಂತ್ರ್ಯ, ನಾವೀನ್ಯ, ವೈವಿಧ್ಯ ಹೊಸಗನ್ನಡ ಭಾವಗೀತೆಗಳ ಪ್ರಧಾನ ಲಕ್ಷಣಗಳು. ಇದು ಬಂದುದು ನಿಸ್ಸಂದೇಹವಾಗಿ ಇಂಗ್ಲಿಷ್ ಕಾವ್ಯದಿಂದ; ಇಂಗ್ಲಿಷ್ ಗೀತಗಳ ಮೂಲಕ. ಈ ಸಂದರ್ಭದಲ್ಲಿ ಭಾವಗೀತೆಯ ಪ್ರಕಾರಗಳೆಲ್ಲ ಇಂಗ್ಲಿಷಿನಿಂದ ಕನ್ನಡಕ್ಕೆ ಬಂದುವು. ಜೊತೆಗೆ ಕಥನಕಾವ್ಯ, ತಾತ್ತ್ವಿಕ ಕಾವ್ಯ, ವಿಡಂಬನ ಕಾವ್ಯಗಳೂ ನೆಲೆಗೊಂಡುವು. ಸರಳ ರಗಳೆ, ಮುಕ್ತ ಛಂದಗಳಂಥ ರೂಪಗಳೂ ಇಂಗ್ಲಿಷಿನ ಪ್ರಭಾವದಿಂದಲೆ ಸೃಜನಗೊಂಡುವು.

ಸಾನೆಟ್ ಭಾವಗೀತೆಯ ಮುಖ್ಯ ಪ್ರಕಾರಗಳಲ್ಲೊಂದು. ಮೂಲತಃ ಇದು ಇಟಲಿಯಲ್ಲಿ ಹುಟ್ಟಿ ಬೆಳೆದದ್ದು; 16ನೆಯ ಶತಮಾನದಲ್ಲಿ ಇಂಗ್ಲಿಷಿಗೆ ಬಂದು, ಅಲ್ಲಿಂದ ಕನ್ನಡಕ್ಕೆ ಬಂದು, ಅಲ್ಲಿ ಒಗ್ಗಿಹೋಯಿತು. ಸಾನೆಟ್ಟಿನಲ್ಲಿ ಎರಡು ಬಗೆ ಪೆಟ್ರಾರ್ಕನ್ ಸಾನೆಟ್ ಮತ್ತು ಷೇಕ್ಸ್‌ಪಿಯರಿಯನ್ ಸಾನೆಟ್, ಕನ್ನಡದಲ್ಲಿ ಈ ಎರಡೂ ಬಗೆಗಳು ಪ್ರಚುರವಾಗಿವೆ. ಬೇರೆ ರೀತಿಯ ಸಾನೆಟ್ಟುಗಳೂ ಉಂಟು. ಕನ್ನಡ ಪ್ರಗಾಥಗಳು ಇಂಗ್ಲಿಷಿನ ಓಡ್‌ಗಳಿಂದ ಸ್ಫೂರ್ತವಾದವು. ಕನ್ನಡಕ್ಕೆ ಈ ಪ್ರಕಾರವನ್ನು ವಿಶೇಷವಾಗಿ ತಂದವರು ಶ್ರೀಯವರೇ.

ಪಾಮರರ ಮನಸ್ಸಿಗೆ ಒಪ್ಪುವ ಕಥೆಗಳನ್ನು ಬರೆಯುವ ಕ್ರಾಂತಿ ಇಂಗ್ಲಿಷ್ ಕಥನ ಕವನಗಳ ಅಭ್ಯಾಸದಿಂದ ಅಂತೆಯೇ ಕನ್ನಡಕ್ಕೆ ಕಥನ ಕವನಗಳನ್ನು ಕೊಡಬೇಕು ಎನ್ನುವ ಸ್ಫೂರ್ತಿಯಿಂದ ಬಂದಿತೆಂದು ಹೇಳಿದರೆ ತಪ್ಪಾಗಲಾರದು. ಮಾಸ್ತಿಯವರ 'ನವರಾತ್ರಿ'ಯ ಕಥನಕವನಗಳಿಗೆ ಮಾದರಿ ಛಾಸರನ ಕ್ಯಾಂಟರ್ಬರಿ ಕಥೆಗಳು. ಎಲ್.ಗುಂಪಡಪ್ಪನವರ ಸೋಹ್ರಾಬ್-ರುಸ್ತುಂ (ಮೂಲ: ಮ್ಯಾಥ್ಯು ಅರ್ನಾಲ್ಡ್) ಪಾಶ್ಚಾತ್ಯರ ಮಹೋಪಮೆಗಳನ್ನು ಕನ್ನಡಕ್ಕೆ ಪರಿಚಯ ಮಾಡಿಕೊಟ್ಟಿತು. ಕುವೆಂಪು ಅವರ ಚಿತ್ರಾಂಗದಾ ಹಾಗೂ ಶ್ರೀರಾಮಾಯಣ ದರ್ಶನಂನಲ್ಲೂ ಮಹೋಪಮೆಗಳಿವೆ. ಇವು ಬಂದುದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ.

ಸರಳ ರಗಳೆಗೆ ಮೂಲ ಕನ್ನಡದ ಲಲಿತರಗಳೆಯೇ ಆದರೂ ಅದು ರೂಪುಗೊಂಡುದು ಇಂಗ್ಲಿಷ್ ಕಾವ್ಯದ ಪ್ರಭಾವದಿಂದ. ಬ್ಲಾಂಕ್‌ವರ್ಸ್‌ಗೆ ಸಂವಾದಿಯಾಗಿ ಲಲಿತರಗಳೆಯ ಆದ್ಯಂತ ಪ್ರಾಸಗಳನ್ನು ತೆಗೆದುಹಾಕಿ ಚರಣಗಳನ್ನು ತಡೆಯಿಲ್ಲದೆ ಹರಿಯಬಿಡುವುದರಿಂದ ಹುಟ್ಟುತ್ತದೆ ಸರಳರಗಳೆ. 1924ರಲ್ಲಿ ಇದು ರೂಪುಗೊಂಡಿತು. ಮಾಸ್ತಿಯವರು ಇದನ್ನು ಮೊದಲು ಬಳಸಿದರು. ಈ ಸರಳ ರಗಳೆ ಕಥನಕವನಗಳಲ್ಲಿ, ವರ್ಣನಾತ್ಮಕ ಕವಿತೆಯಲ್ಲಿ, ಪದ್ಯನಾಟಕಗಳಲ್ಲಿ ಯಶಸ್ವಿಯಾಗಿ ಬಳಕೆಗೊಂಡಿತು. ಮಹಾಛಂದಸ್ಸಿಗೆ ತಳಹದಿ ಈ ಸರಳ ರಗಳೆಯೇ. ಇಂಗ್ಲಿಷ್ ಬ್ಲಾಂಕ್‌ವರ್ಸಿನ ಪ್ರಯೋಗಗಳಿಂದ ಮಿಲ್ಟನ್ ಕವಿ ಹೇಗೆ ತನ್ನ ಮಹಾಕಾವ್ಯಕ್ಕೆ ಸರಿಯಾದ ಛಂದೋರೂಪವನ್ನು ಹೊಂದಿಸಿಕೊಂಡನೋ ಅದೇ ಬಗೆಯಲ್ಲಿಯೆ ಇಂಗ್ಲಿಷ್ ಬ್ಲಾಂಕ್‌ವರ್ಸಿನ ನೂತನ ಪ್ರಯೋಗಗಳಂತೆಯೇ ಸರಳ ರಗಳೆಯಲ್ಲಿಯೂ ಹೊಸ ಪ್ರಯೋಗಗಳನ್ನು ನಡೆಸಿ ಕುವೆಂಪು ಅವರು ತಮ್ಮ ಮಹಾಕಾವ್ಯಕ್ಕೆ ಸರಿಹೋಗುವ ಮಹಾಛಂದಸ್ಸನ್ನು ರೂಪಿಸಿಕೊಂಡರು. ಮಿಲ್ಟನ್ನನ ಛಂದಸ್ಸನ್ನು ಗ್ರಾಂಡ್‌ಸ್ಟೈಲ್ ಎನ್ನಲಾಗಿದೆ; ಅದಕ್ಕೆ ಸಂವಾದಿಯಾಗಿ ತಮ್ಮ ಛಂದಸ್ಸನ್ನು ಕುವೆಂಪು ಮಹಾಛಂದಸ್ಸು ಎಂದು ಕರೆದರು.

ಕುವೆಂಪು ತಮ್ಮ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ ಮುಂತಾದವರನ್ನು ಸ್ಮರಿಸಿದ್ದಾರೆ. ಇವರೆಲ್ಲರ ಪ್ರಭಾವ ಕುವೆಂಪು ಅವರ ಮೇಲಾಗಿದೆ; ಮುಖ್ಯವಾಗಿ ಮಿಲ್ಟನ್ನನಿಂದ ಅವರು ಪ್ರಭಾವಗೊಂಡಿದ್ದಾರೆ. ಕುವೆಂಪು ಅವರ ಶೈಲಿಗೂ ಮಿಲ್ಟನ್ನನ ಶೈಲಿಗೂ ಸಾದೃಶ್ಯವುಂಟು; ತಾಂತ್ರಿಕ ಸಿದ್ಧಿಯಲ್ಲೂ ಸಾಮ್ಯವಿದೆ. ಅವರು ಪಾಶ್ಚಾತ್ಯ ಮಹಾಕಾವ್ಯಗಳ ಗುಣಗಳನ್ನು ಶ್ರೀರಾಮಯಣ ದರ್ಶನಂನಲ್ಲಿ ಗ್ರಹಿಸಿದ್ದಾರೆ. ಉದಾಹರಣೆಗೆ, ಪಾಶ್ಚಾತ್ಯ ಕಾವ್ಯಗಳಲ್ಲಿ ಹೇಗೋ ಹಾಗೆ ಅವರ ಮಹಾಕಾವ್ಯದಲ್ಲಿ ದೇವತಾಪ್ರಾರ್ಥನೆ ಅಲ್ಲಲ್ಲಿ ನಡುನಡುವೆ ಕಂಡುಬರುತ್ತದೆ. ಹಾಗೆಯೇ ಮಹೋಪಮೆಗಳನ್ನೂ ನಾವು ಪರಿಗಣಿಸಬಹುದು.

ರೊಮ್ಯಾಂಟಿಕ್ ಕಾವ್ಯಕ್ಕೆ ಪ್ರತಿಕ್ರಿಯೆಯಾಗಿ ಪ್ರಗತಿಶೀಲ ಚಳವಳಿಯೊಂದು ಕನ್ನಡದಲ್ಲಿ 1944ರ ಹೊತ್ತಿಗೆ ತಲೆಯೆತ್ತಿತು. ರೈತರ, ಕಾರ್ಮಿಕರ ಬಾಳನ್ನು ಚಿತ್ರಿಸುವ ಕವಿತೆ, ಕಥೆ, ಕಾದಂಬರಿಗಳು ರಚಿತವಾದುವು. ಕಾರ್ಮಿಕರ ಮತ್ತು ದೀನದಲಿತರ ಉದ್ಧಾರ, ಬಂಡವಾಳಶಾಹಿಯ ವಿರೋಧ - ಇದು ಪ್ರಗತಿಶೀಲ ಲೇಖಕರ ಧೋರಣೆ. ಸಾಮಾಜಿಕ ಪ್ರಜ್ಞೆ, ವಾಸ್ತವಿಕತೆಗಳನ್ನು ಸಾಹಿತ್ಯದಲ್ಲಿ ಮೂಡಿಸುವಲ್ಲಿ ಪ್ರಗತಿಶೀಲಧೋರಣೆ ಸಾಕಷ್ಟು ಯಶಸ್ವಿಯಾದರೂ ಅದರ ಉದ್ದೇಶಗಳು ಸೀಮಿತವಾಗಿದ್ದುವು.

ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ 1947ರಿಂದ ಮುಂದಕ್ಕೆ ಕನ್ನಡದಲ್ಲಿ ನವ್ಯಕಾವ್ಯದ ಉಗಮ, ಬೆಳವಣಿಗೆಗಳನ್ನು ಕಾಣುತ್ತೇವೆ. ವಸ್ತು, ಶೈಲಿ, ಜೀವನ ಮೌಲ್ಯಗಳು, ಸಾಹಿತ್ಯದ ಮೇಲೆ ಮನಶ್ಶಾಸ್ತ್ರ ಮತ್ತು ಲೈಂಗಿಕ ಶಾಸ್ತ್ರ ಬೀರಿದ ಪ್ರಭಾವಗಳು - ಈ ಎಲ್ಲ ದೃಷ್ಟಿಗಳಿಂದ 1950ರಿಂದ ಈಚಿನ ಕಾವ್ಯಮಾರ್ಗ ನವ್ಯವಾಗಿದೆ. ವಿ.ಕೃ.ಗೋಕಾಕರು 1950ರಲ್ಲಿ ನವ್ಯ ಎಂಬ ಮಾತನ್ನು ಮೊದಲು ಬಳಸಿದರು. ನವ್ಯತೆಯ ಪರಂಪರೆಯನ್ನು ಆರಂಭಿಸಿದವರು ಪೇಜಾವರ ಸದಾಶಿವರಾಯರು ಮತ್ತು ಗೋಕಾಕರು. ಮುಂದೆ ಅಡಿಗರು ಮುಂತಾದವರು ಅದನ್ನು ಬೆಳೆಸಿದರು. ಎರಡನೆಯ ಮಹಾಯುದ್ಧಾನಂತರದ ಪ್ರಮುಖ ಇಂಗ್ಲಿಷ್ ಕವಿಗಳಾದ ಟಿ.ಎಸ್.ಎಲಿಯಟ್, ಆಡೆನ್, ಸೀಡೇ ಲೂಯಿ, ಮೆಕ್ನೀಸ್, ಡೈಲಾನ್ ಥಾಮಸ್ ಮುಂತಾದವರಿಂದ ಪ್ರಭಾವಿತವಾದುದು ಕನ್ನಡ ನವ್ಯಕಾವ್ಯ. ಅಮೇರಿಕನ್ ಕವಿ ಎಜ್ರಾಪೌಂಡನಿಗೂ ಅದು ಋಣಿಯಾಗಿದೆ. ಅದರ ಪ್ರೇರಣೆ ಅರ್ಧ ದೇಶೀಯವಾದರೆ ಅರ್ಧ ವಿದೇಶೀಯವೆನ್ನಬಹುದು. ನವ್ಯಕಾವ್ಯ ಬಹುಮಟ್ಟಿಗೆ ವ್ಯಕ್ತಿನಿಷ್ಠ. ಕವಿಯ ಅನುಭವದ ಸಂಕೀರ್ಣತೆಗೇ ಅದರಲ್ಲಿ ಪ್ರಾಧಾನ್ಯ, ಸುಪ್ತಚಿತ್ತದ ಜಟಿಲತೆಯ ಆವಿಷ್ಕಾರ, ಆಡುಮಾತಿನ ವಿನ್ಯಾಸ, ಮುಕ್ತಛಂದ ಅದರ ಲಕ್ಷಣಗಳು. ಅದರ ತಂತ್ರ, ಶೈಲಿ ಮುಂತಾದುವೆಲ್ಲಾ ಬಹುಮಟ್ಟಿಗೆ ಇಂಗ್ಲಿಷ್ ನವ್ಯಕಾವ್ಯದ ಅನುಕರಣವೆಂದರೂ ತಪ್ಪಲ್ಲ.

ಕನ್ನಡದಲ್ಲಿ ಮೊದಮೊದಲು ಬಂದ ನಾಟಕಗಳೆಲ್ಲ ಅನುವಾದ ಅಥವಾ ರೂಪಾಂತರಗಳೇ ಆಗಿದ್ದು ಸ್ವತಂತ್ರ ನಾಟಕಗಳು ಹುಟ್ಟಿದುದು ತಡವಾಗಿ, ಶ್ರೀಯವರು ಇಂಗ್ಲಿಷ್ ಗೀತಗಳು ಸಂಕಲನದಿಂದ ಹೊಸ ಕಾವ್ಯಕ್ಕೆ ಸ್ಫೂರ್ತಿಕೊಟ್ಟಂತೆ ಗದಾಯುದ್ಧ ನಾಟಕ, ಅಶ್ವತ್ಥಾಮನ್, ಪಾರಸಿಕರು ನಾಟಕಗಳ ರಚನೆಯಿಂದ ಪದ್ಯ ನಾಟಕಗಳ ನಿರ್ಮಿತಿಗೆ ಅಡಿಪಾಯ ಹಾಕಿದರು. ಅವರ ಗದಾಯುದ್ಧ ನಾಟಕ ಗ್ರೀಕ್ ರುದ್ರನಾಟಕದ ಸ್ವರೂಪವನ್ನು ಮೊದಲ ಬಾರಿಗೆ ಪರಿಚಯಿಸಿತು. ಷೇಕ್ಸ್‌ಪಿಯರನ ರುದ್ರನಾಟಕಗಳ ಪರಿಚಯ ಈ ಹಿಂದೆಯೇ ಆಗಿತ್ತು.

ಕನ್ನಡ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿ ಹೊಸ ಯುಗವನ್ನೇ ಆರಂಭಿಸಿದ ಶ್ರೇಯಸ್ಸು ಕೈಲಾಸಂ ಹಾಗೂ ಶ್ರೀರಂಗರದು.

ಇಬ್ಬರೂ ಪ್ರೌಢಶಿಕ್ಷಣಕ್ಕಾಗಿ ಪಶ್ಚಿಮಕ್ಕೆ ಹೋಗಿ ಅಲ್ಲಿ ಪ್ರವಾಸ ಮಾಡಿದ್ದರಿಂದ ಪಾಶ್ಚಾತ್ಯ ರಂಗಭೂಮಿಯ ಪ್ರಭಾವ ಅವರ ಮೇಲುಂಟಾಯಿತು; ಹೊಸ ಜೀವನದ ದರ್ಶನವೂ ಲಭಿಸಿತು. ಅದರ ಲಾಭವನ್ನು ಇಬ್ಬರೂ ಕನ್ನಡಕ್ಕೆ ತಮ್ಮ ನಾಟಕಗಳ ಮೂಲಕ ದೊರಕಿಸಿ ಕೊಟ್ಟರು. ಇಂಗ್ಲೆಂಡಿನಲ್ಲಿ ಇಬ್ಸನ್ನನ ನಾಟಕಗಳಿಂದ ಪ್ರೇರಿತರಾಗಿದ್ದ ಷಾ, ಗಾಲ್ಸ್‌ವರ್ದಿ ಮುಂತಾದವರು ಕೈಲಾಸಂ, ಶ್ರೀರಂಗರ ಮೇಲೆ ಪ್ರಭಾವ ಬೀರಿದರು. ಈ ಪ್ರಭಾವ ಕನ್ನಡ ನಾಟಕ ಸಾಹಿತ್ಯದಲ್ಲಿ ಹೊಸ ಹುಟ್ಟಿಗೆ ಹೇತುವಾಯಿತು. ಏಕಾಂಕ ನಾಟಕ, ಗೀತನಾಟಕ, ರೇಡಿಯೊ ನಾಟಕ ಮೊದಲಾದ ಪ್ರಕಾರಗಳೆಲ್ಲ ಪಾಶ್ಚಿಮಾತ್ಯ ಪ್ರಭಾವದಿಂದಲೇ ಕನ್ನಡದಲ್ಲಿ ನೆಲೆಗೊಂಡುವು.

ಈಚೆಗೆ ಅಸಂಗತ (ಅಬ್ಸರ್ಡ್) ನಾಟಕಗಳನ್ನು ಕನ್ನಡ ಸಾಹಿತ್ಯದಲ್ಲಿ ಕಾಣುತ್ತಿದ್ದೇವೆ. ಇಂಗ್ಲಿಷ್ ಹಾಗೂ ಫ್ರೆಂಚ್ ನಾಟಕಕಾರರಾದ ಆಸ್ಬರ್ನ್, ಪಿಂಟರ್, ಅಯನೆಸ್ಕೊ, ಆಲ್ಬರ್ಟ್‌ಕಾಮು ಮುಂತಾದವರು ಇವುಗಳ ಹಿಂದಿದ್ದಾರೆ.

ಅಸ್ತಿತ್ವವಾದ ನಾಟಕಗಳನ್ನು ಬರೆದಿರುವ ಫ್ರೆಂಚ್ ನಾಟಕಕಾರ ಬೆಕೆಟ್, ಇಟಲಿಯ ನಾಟಕಕಾರ ಪಿರಾಂಡೆಲೊ ಮುಂತಾದವರ ಪ್ರಭಾವ ಇಂದಿನ ಕನ್ನಡ ನಾಟಕಗಳ ಮೇಲಿದೆ. ಪ್ರಬಂಧ, ಲಲಿತ ಪ್ರಬಂಧ ಅಥವಾ ಆತ್ಮೀಯ ಪ್ರಬಂಧ - ಕನ್ನಡಕ್ಕೆ ಸಂಪೂರ್ಣವಾಗಿ ಹೊಸದು; ಇದೂ ಕೂಡ ಪಶ್ಚಿಮದ ಕೊಡುಗೆ. ಭಾವಗೀತೆ, ಕಥೆ ಮುಂತಾದುವುಗಳಿಗಿದ್ದಂತೆ ಇದಕ್ಕೆ ನಮ್ಮಲ್ಲಿ ಪೂರ್ವಪರಂಪರೆ ಇರಲಿಲ್ಲ. ಪ್ರಬಂಧ ಪ್ರಕಾರದ ತೌರುಮನೆ ಫ್ರಾನ್ಸ್; ಮಾಂಟೇನ್ ಇದರ ಜನಕ. ಅವನನ್ನು ಅನುಸರಿಸಿದವರು ಇಂಗ್ಲಿಷ್ ಪ್ರಬಂಧಕಾರರು; ಬೇಕನ್, ಅಡಿಸನ್, ಸ್ಟೀಲ್, ಜಾನ್ಸನ್, ಗೋಲ್ಡ್‌ಸ್ಮಿತ್, ಲ್ಯಾಂಬ್, ಲ್ಯೂಕಾಸ್, ಚೆಸ್ಟರ್‌ಟನ್, ರಾಬರ್ಟ್ ಲಿಂಡ್, ಎ.ಜಿ.ಗಾರ್ಡಿನರ್ ಇತ್ಯಾದಿ. ಇವರೆಲ್ಲರ ಪ್ರಭಾವ ಕನ್ನಡ ಪ್ರಬಂಧಗಳ ಮೇಲಿದೆ. ಅನೇಕ ಪ್ರಂಬಧಗಳು ಕನ್ನಡಕ್ಕೆ ಅನುವಾದಗೊಂಡಿರುವುದೂ ಉಂಟು.

ಕಥೆ-ಕಾದಂಬರಿ ಪಶ್ಚಿಮದ ಸಂಸರ್ಗದಿಂದ ನಮ್ಮಲ್ಲಿ ರೂಪುಗೊಂಡ ಪ್ರಕಾರಗಳು. ಇವುಗಳ ಚರಿತ್ರೆಯಲ್ಲಿ ನವೋದಯ, ಪ್ರಗತಿಶೀಲ ಮತ್ತು ನವ್ಯ ಎಂದು ಮೂರು ಹಂತಗಳನ್ನು ಗುರುತಿಸಬಹುದು.

ನವೋದಯ ಕಾಲದ ಕಥೆಗಾರರು ಮತ್ತು ಕಾದಂಬರಿಕಾರರು ಪರಂಪರಾಗತ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ಅನ್ವೇಷಿಸಿದರು. ನವೋದಯ ಸಾಹಿತ್ಯಕ್ಕೆ ಪ್ರತಿಭಟನೆಯಾಗಿ ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಂಡಿತು. ಎರಡನೆಯ ಮಹಾಯುದ್ಧ ಕಾಲಕ್ಕೆ ಆರಂಭವಾಗಿ, ಮಾರ್ಕ್ಸ್‌ವಾದವನ್ನು ಆಧರಿಸಿದ ಪ್ರಗತಿಶೀಲ ಚಳವಳಿ ರಷ್ಯನ್ ಸಾಹಿತ್ಯದಿಂದ ಹಿಂದಿಯ ಮೂಲಕ ಕನ್ನಡಕ್ಕೆ ಅವತರಿಸಿತು. ಅದು ಮೊದಲು ಕಾಣಿಸಿಕೊಂಡಿದ್ದು ಸಣ್ಣಕಥೆಗಳಲ್ಲಿ. 1936 ರಿಂದ 42ರವರೆಗೆ ನಡೆದ ರಾಜಕೀಯ ಕ್ರಾಂತಿಗಳು, ಪತ್ರಿಕೆಗಳಲ್ಲಿ ನಡೆಯುತ್ತಿದ್ದ ಪ್ರಗತಿಶೀಲತೆಯ ಪ್ರಚಾರ, ರಷ್ಯನ್ ಹಾಗೂ ಹಿಂದಿ ಕಥೆಗಳ ಅನುವಾದ -ಇವುಗಳ ಫಲಿತಾಂಶವೇ ಪ್ರಗತಿಶೀಲಪಂಥ.

ಇಂದಿನ ಸಣ್ಣಕಥೆ ಕವಿತೆಗೆ ಹತ್ತಿರವಾದುದು. ನವ್ಯಕಾವ್ಯ ಹಾಗೂ ನವ್ಯಕಥೆ ಒಂದೇ ಪ್ರಜ್ಞೆಯ ಮೂಲದಿಂದ ಹೊರಟವೆಂದು ಹೇಳಲಾಗಿದೆ. ಇದನ್ನು ಒಂದೇ ಮಾತಿನಲ್ಲಿ ಅನಾಥಪ್ರಜ್ಞೆ ಎಂದು ಕರೆಯಬಹುದು. ಇದು ತಕ್ಕಮಟ್ಟಿಗೆ ಪಶ್ಚಿಮದ ಬಳುವಳಿಯೇ. ಪಶ್ಚಿಮದಿಂದ ಬಂದಿರುವ ಸಾಹಿತ್ಯಕ, ವೈಜ್ಞಾನಿಕ, ಸಾಮಾಜಿಕ, ಮನೋವೈಜ್ಞಾನಿಕ ವಿಚಾರಗಳೆಲ್ಲ ಇಂದಿನ ಲೇಖಕನ ಮೇಲೆ ಪ್ರಭಾವಬೀರಿವೆ. ಹೊಸ ಮೌಲ್ಯಗಳ ಶೋಧ ಅವನ ಗುರಿ. ಇಂದಿನ ಕಥೆಗಾರ ಫ್ರಾಯ್ಡ್, ಯೂಂಗ್, ಆ್ಯಡ್ಲರ್ ಮೊದಲಾದವರ ಸಂಶೋಧನೆಯ ಫಲಗಳನ್ನು ಪಡೆದುಕೊಂಡು ಮಾನಸಿಕ ವಿಶ್ಲೇಷಣೆಯಲ್ಲಿ ತೊಡಗುತ್ತಾನೆ; ಅಂತರಂಗ ಸಂಬಂಧವಾದ ವಾಸ್ತವಿಕತೆಗೆ ಮಹತ್ತ್ವ ಕೊಡುತ್ತಾನೆ. ಅನುಭವದ ಸಂಕೀರ್ಣತೆಯನ್ನು ಹೊರಗೆಡಹುವ ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿಕೊಳ್ಳುತ್ತಾನೆ. ಈ ತಂತ್ರ ವರ್ಜೀನಿಯವುಲ್ಫ್, ಜೇಮ್ಸ್‌ಜಾಯ್ಸ್ ಮುಂತಾದವರಿಂದ ಪ್ರಚುರವಾದುದು. ನವ್ಯಕಾವ್ಯದಲ್ಲಿ ಹೇಗೋ ಹಾಗೆ ನವ್ಯಕಥೆಯಲ್ಲೂ ಪ್ರತಿಮೆ ಪ್ರತೀಕ ಸಂಕೇತಗಳು ತುಂಬಿರುತ್ತವೆ.

ಕನ್ನಡದಲ್ಲಿ ನವ್ಯಸಾಹಿತ್ಯ ಸಂದರ್ಭದಲ್ಲಿ ಬಂದ ಕಥೆಕಾದಂಬರಿಗಳ ಮೇಲೆ ಪಾಶ್ಚಾತ್ಯ ಅಸ್ತಿತ್ವವಾದದ ಪ್ರಭಾವ ದಟ್ಟವಾಗಿದೆ. ಫ್ರೆಂಚ್ ಲೇಖಕ ಜೀನ್‌ಪಾಲ್ ಸಾರ್ತ್ರೆ ಅಸ್ತಿತ್ವವಾದದ ಮೂಲಪುರುಷ. ಅಂತೆಯೇ ಫ್ರೆಂಚ್ ಲೇಖಕ ಆಲ್ಬರ್ಟ್ ಕಾಮು, ಜರ್ಮನ್ ಲೇಖಕ ಕಾಫ್ಕಾ, ಐರಿಷ್ ಲೇಖಕ ಜೇಮ್ಸ್ ಜಾಯ್ಸ್, ಜರ್ಮನ್ ಲೇಖಕ ಬ್ರೆಕ್ಟ್, ಸ್ವೀಡಿಷ್ ಲೇಖಕ ಸ್ಟ್ರಿಂಡ್‌ಬರ್ಗ್ ಮುಂತಾದವರ ಕೃತಿಗಳೆಲ್ಲ ಕನ್ನಡ ಕಥನ ಲೇಖಕರನ್ನು ಸೆಳೆದಿವೆ.

ಹೊಸಗನ್ನಡದ ಇತರ ಪ್ರಕಾರಗಳು ಹೇಗೋ ಹಾಗೆ ವಿಮರ್ಶೆಯೂ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲೇ ರೂಢವಾದದ್ದು. ಆಂಗ್ಲ ವಿಮರ್ಶೆ ಕನ್ನಡ ವಿಮರ್ಶೆಯ ಮೇಲೆ ಮಾತ್ರವಲ್ಲದೆ ಸೃಷ್ಟಿ ಸಾಹಿತ್ಯದ ಮೇಲೂ ಪ್ರಭಾವ ಬೀರಿದೆ. ಪಾಶ್ಚಾತ್ಯ ಕಾವ್ಯತತ್ತ್ವಗಳ ಅಭ್ಯಾಸ, ಪ್ರಾಚೀನ ಗ್ರಂಥಗಳ ಸಂಶೋಧನೆ ಪರಿಷ್ಕಾರ ಮತ್ತು ವಿಮರ್ಶಾತ್ಮಕವಾಗಿ ಬೆಲೆ ಕಟ್ಟುವುದು, ಸಂಸ್ಕೃತ ಕಾವ್ಯಮೀಮಾಂಸೆಯ ವ್ಯವಸ್ಥಿತ ಅಭ್ಯಾಸ, ಕನ್ನಡಕ್ಕೆ ಆ ವಿಷಯಕವಾದ ಗ್ರಂಥಗಳನ್ನು ತರುವುದು ಇಂಥವುಗಳಿಗೆ ಕಾರಣವಾಯಿತು.

ಚಾರಿತ್ರಿಕವಾಗಿ ನೋಡಿದರೆ ಕನ್ನಡದಲ್ಲಿ ವಿಮರ್ಶೆಗೆ ತಳಹದಿ ಹಾಕಿದವರು ವಿದೇಶೀಯರು, ಕ್ರೈಸ್ತಮಿಷನರಿಗಳು ಎನ್ನಬಹುದು. ಕಳೆದ ಶತಮಾನದಲ್ಲಿಯೇ ಕಿಟ್ಟೆಲ್ ಕನ್ನಡ ಸಾಹಿತ್ಯದ ಸಂಕ್ಷಿಪ್ತ ಸಮೀಕ್ಷೆಯನ್ನು ಛಂದೋಂಬುಧಿಯ ಪೀಠಿಕೆಯ ಭಾಗವಾಗಿ ಇಂಗ್ಲಿಷಿನಲ್ಲಿ ಪ್ರಕಟಿಸಿದ. ಅನಂತರ ಬೆನಗಲ್ ರಾಮರಾಯರ ರೆನೇಸಾನ್ಸ್ ಇನ್ ಮಾಡರ್ನ್ ಕನ್ನಡ ಹೊಸಗನ್ನಡದ ಮೊದಲ ಸಮೀಕ್ಷೆಯೆನ್ನಲಾಗಿದೆ.

ಹೊಸಗನ್ನಡ ಸಾಹಿತ್ಯಕ್ಕೆ ಶ್ರೀಯವರು ಆಚಾರ್ಯಪುರುಷರಾದಂತೆ ಆಧುನಿಕ ವಿಮರ್ಶೆಗೂ ಅವರೇ ಆದ್ಯರೆನ್ನಬೇಕು. ನವೋದಯ ಕಾಲದ ಕನ್ನಡ ಕವಿಗಳಿಗೂ ಆಂಗ್ಲ ರೊಮ್ಯಾಂಟಿಕ್ ಕವಿಗಳಿಗೂ ಸ್ಫೂರ್ತಿಯಲ್ಲಿ ಮತ್ತು ಕಾವ್ಯ ತತ್ತ್ವಗಳಲ್ಲಿ ಸಾಮ್ಯವಿದೆ. ನವೋದಯ ಕಾಲದಲ್ಲಿ ಸಾಹಿತ್ಯದ ಸಿದ್ಧಾಂತಗಳಿಗೆ ಒಂದು ರೂಪವನ್ನು ಕೊಡಲು ಪ್ರಯತ್ನಿಸಿದ ಮಾಸ್ತಿಯವರ ಸಾಹಿತ್ಯ ಗ್ರಂಥವನ್ನು ನೋಡಿದರೆ ಸಾಮ್ಯ ಸ್ಪಷ್ಟವಾಗುತ್ತದೆ. ಈ ಕೃತಿಯ ಮೇಲೆ ವರ್ಡ್ಸ್‌ವರ್ತನ ವಿಚಾರಗಳ ಪ್ರಭಾವವುಂಟು.

ಡಿ.ವಿ.ಜಿ., ಕುವೆಂಪು ಮೊದಲಾದವರ ವಿಮರ್ಶೆಗಳಲ್ಲಿ ಶೆಲ್ಲಿ, ವರ್ಡ್ಸ್‌ವರ್ತ್, ಅರ್ನಾಲ್ಡ್, ಅರಿಸ್ಟಾಟಲ್ ಮೊದಲಾದವರ ವಿಚಾರಗಳು ಒಂದು ಕಡೆ ಭಾರತೀಯ ಕಾವ್ಯತತ್ತ್ವಗಳು ಇನ್ನೊಂದು ಕಡೆ ಸಮ್ಮಿಲಿತವಾಗಿವೆ. ಎಸ್.ವಿ.ರಂಗಣ್ಣನವರ ಶೈಲಿಯಲ್ಲಿ ಹರ್ಬರ್ಟ್ ರೀಡ್, ಮಿಡ್ಲ್‌ಟನ್ ಮರ್‍ರಿ, ಎಫ್.ಎಲ್.ಲ್ಯೂಕಾಸರ ಶೈಲಿ ಸಿದ್ಧಾಂತಗಳ ಅಳವಡಿಕೆಯಿದೆ. ಕುವೆಂಪು ಅವರ ಕಾವ್ಯಮೀಮಾಂಸೆಯ ಮೇಲೆ ಇಂಗ್ಲಿಷ್ ವಿಮರ್ಶಕರಾದ ಐ.ಎ.ರಿಚರ್ಡ್ಸ್, ಎ.ಸಿ.ಬ್ರಾಡ್ಲೆ ಮುಂತಾದವರು ಮಾತ್ರವಲ್ಲದೆ ಸ್ವೀಡಿಷ್ ಮನೋವಿಜ್ಞಾನಿ ಯೂಂಗ್ ಪ್ರಭಾವ ಬೀರಿದ್ದಾರೆ. ಕುವೆಂಪು ಅವರ ಭವ್ಯತಾ ಮೀಮಾಂಸೆ ಪಾಶ್ಚಾತ್ಯ ವಿಮರ್ಶೆಯಿಂದ ಪ್ರೇರಿತವಾದುದು.

ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಕಾವ್ಯಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಂತಿದೆ. ನಮ್ಮ ಮುಂದಿನ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯ ಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯ ಮೀಮಾಂಸೆ ಮತ್ತು ಮನಶ್ಶಾಸ್ತ್ರ ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ ಸ್ವತಂತ್ರವಾಗಿ ಪೂರ್ಣದೃಷ್ಟಿಯ ಕಡೆಗೆ ಮುನ್ನಡೆಯಬೇಕಾಗುತ್ತದೆ ಎಂದು ಕುವೆಂಪು ಅವರು ವ್ಯಕ್ತಪಡಿಸಿದ ನಿರೀಕ್ಷೆ ತಕ್ಕಮಟ್ಟಿಗೆ ಫಲಿಸಿದೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಜೀವನಚರಿತ್ರೆ, ಆತ್ಮಕಥೆ, ಹಾಸ್ಯಸಾಹಿತ್ಯ ಮುಂತಾದ ಪ್ರಕಾರಗಳೂ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲೇ ಮೂಡಿದುವು.

ಒಟ್ಟಿನಲ್ಲಿ ಹೇಳುವುದಾದರೆ ಈ ಹೊತ್ತು ಆಧುನಿಕ ಕನ್ನಡ ಸಾಹಿತ್ಯ ಏನಾಗಿದೆಯೊ ಅದಕ್ಕೆ ಪಾಶ್ಚಾತ್ಯ ಸಾಹಿತ್ಯ - ಅರ್ಥಾತ್ ಇಂಗ್ಲಿಷ್ ಸಾಹಿತ್ಯ -ವಿಶೇಷವಾಗಿ ಕಾರಣವಾಗಿದೆ. ಇಂಗ್ಲಿಷಿನ ಪ್ರಭಾವವನ್ನು ಕನ್ನಡ ಅರಗಿಸಿಕೊಂಡು ರಕ್ತಗತ ಮಾಡಿಕೊಂಡಿದೆ. (ಸಿ.ಪಿ.ಕೆ.)

**ಕನ್ನರ :** ಸೇವುಣ ವಂಶದ ಅರಸ (1247-61). ಜೈತುಗಿಯ ಮಗ. ಎರಡನೆಯ ಸಿಂಘಣನ ಮೊಮ್ಮಗ ಮತ್ತು ಉತ್ತರಾಧಿಕಾರಿ. ಇವನ ಹೆಸರು ಕೃಷ್ಣ, ಕನ್ಹ, ಕನ್ಹಪ, ಕಂದಾರ, ಕನ್ಹಾರ ಎಂಬ ರೂಪಗಳಲ್ಲೂ ಕಂಡುಬರುತ್ತದೆ.

ಪಟ್ಟಕ್ಕೆ ಬಂದ ಕೆಲವೇ ವರ್ಷಗಳಲ್ಲಿ (ಸು.1250) ಇವನು ಮಾಳವ ಮತ್ತು ಗುಜರಾತಿನ ಮೇಲೆ ದಂಡೆತ್ತಿ ಹೋಗಿ ಆ ರಾಜ್ಯಗಳ ರಾಜರನ್ನು ಸೋಲಿಸಿ ಹಿಂದಿರುಗಿದನೆಂದು ಶಾಸನಗಳಲ್ಲಿ ಹೇಳಿಕೆಗಳಿವೆ. ಈ ಹೇಳಿಕೆಗಳು ಸಾಂಪ್ರದಾಯಿಕ ಉದ್ಗಾರ ಮಾತ್ರವೆಂಬ ಅಭಿಪ್ರಾಯವೂ ಇದೆ. ಕನ್ನರ ಹೊಯ್ಸಳ ಸೋಮೇಶ್ವರನ ಮೇಲೆ ಆಗಾಗ್ಗೆ ಯುದ್ಧ ಮಾಡುತ್ತಿದ್ದು, ಸೋಮೇಶ್ವರ ಬಹುತೇಕ ತಮಿಳುನಾಡಿನ ರಾಜಕೀಯದಲ್ಲಿ ಮಗ್ನನಾಗಿದ್ದನಾಗಿ ಹೊಯ್ಸಳ ರಾಜ್ಯದ ಉತ್ತರ ಭಾಗವನ್ನು ಆಕ್ರಮಿಸಲು ಇವನಿಗೆ ಅನುಕೂಲವಾಯಿತು. ಚೌಡಿಸೆಟ್ಟಿ ಎಂಬ ಕನ್ನರನ ದಂಡನಾಯಕ ಹೊಯ್ಸಳ ಚಕ್ರವರ್ತಿ ಸೋಮೇಶ್ವರ 'ಮದನಿವಾರಣ' ಎಂಬ ಬಿರುದನ್ನು ಧರಿಸಿದ್ದು, ಆತ ಈ ಹೊಯ್ಸಳರ ವಿರುದ್ಧದ ಕಾರ್ಯಾಚರಣೆಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದಂತೆ ತೋರುತ್ತದೆ. ಕನ್ನರ ಕೊಂಕಣದ ಶಿಲಾಹಾರರ ಮೇಲೂ ಜಯಗಳಿಸಿದ. ಗೋಪಕಪಾಲಕನ ಮೇಲೆ ಇವನು ಗಳಿಸಿದ ವಿಜಯ ಕೆಲವೆಡೆ ವರ್ಣಿತವಾಗಿದೆ. ಈ ಗೋಪಕಪಾಲಕ ಗೋವ ಪ್ರದೇಶದಲ್ಲಿ ಆಳುತ್ತಿದ್ದ ಕದಂಬ ರಾಜನಿರಬೇಕೆಂಬ ಊಹೆ ಇದೆ. ರಾಮಚಂದ್ರನ ಪುರುಷೋತ್ತಮಪುರಿ ಶಾಸನದಲ್ಲಿ ಕನ್ನರ ದೇವನು ಕಾಮಪಾಲನೆಂಬ ರಾಜನನ್ನು ಸೋಲಿಸಿ, ಗೋಪಾಲಕರಿಗೆ ಬಹುಸಂತೋಷವನ್ನುಂಟುಮಾಡಿದನೆಂದು ವರ್ಣಿಸಲಾಗಿದೆ. ಕೃಷ್ಣನ ಶಾಸನಗಳು ಆಭೀರರ ಮುಖ್ಯ ಕೇಂದ್ರವಾದ ಖಾನ್ ದೇಶ ಜಿಲ್ಲೆಯಲ್ಲಿ ದೊರಕಿರುವುದರಿಂದ ಕಾಮಪಾಲ ಆಭೀರನಾಗಿರಬಹುದೆಂದು ಊಹಿಸಬಹುದು. ಸಿಂಘಣನ ಕಾಲದ ಘಟನೆಗಳೊಡನೆ ಹೋಲಿಸಿದಾಗ ಕನ್ನರನ ಕಾಲ ಅಷ್ಟೇನು ಮಹತ್ತ್ವಪೂರ್ಣವಾದುದಾಗಿರಲಿಲ್ಲ. ಇವನು ನೆರೆರಾಜ್ಯಗಳ ಮೇಲೆ ಅನೇಕ ಯುದ್ಧಗಳನ್ನು ಕೈಗೊಂಡರೂ ಅವುಗಳಿಂದ ಸೇವುಣರ ರಾಜ್ಯ ವಿಸ್ತರಣೆ ಆಗಲಿಲ್ಲ.

ಕನ್ನರ ಧರ್ಮಿಷ್ಠ, ಪರಮತಸಹಿಷ್ಣುವಾಗಿದ್ದು ಜೈನ, ಬ್ರಾಹ್ಮಣ, ವೀರಶೈವ ಮೊದಲಾದ ಮತಗಳ ಅನುಯಾಯಿಗಳಿಗೆ ದತ್ತಿಗಳನ್ನು ನೀಡಿದ. ಶಾಸನಗಳು ಇವನನ್ನು ವೇದೋದ್ಧಾರ ಎಂದು ವರ್ಣಿಸುತ್ತವೆ. ಹೇಮಾದ್ರಿಯ ಹೇಳಿಕೆಯ ಪ್ರಕಾರ ಈತ ಅನೇಕ ಯಜ್ಞಗಳನ್ನು ಮಾಡಿ ಕ್ಷೀಣಿಸಿದ್ದ ವೇದಧರ್ಮದ ಪುನರುಜ್ಜೀವನ ಮಾಡಿದ. ಇವನು ಮಹಾನುಭಾವ ಪಂಥದ ಅಭಿಮಾನಿಯೂ ಆಗಿದ್ದನೆಂದು ಲೀಲಾಚರಿತ್ರವೆಂಬ ಗ್ರಂಥದಿಂದ ತಿಳಿಯುತ್ತದೆ. ತನ್ನ ತಮ್ಮ ಮಹಾದೇವನ ಜೊತೆಯಲ್ಲಿ ಲೋನರ್‌ಗೆ ಹೋಗಿ ಆ ಪಂಥ'ದ ಚಕ್ರಧರಸ್ವಾಮಿಗೆ ಗೌರವವನ್ನು ಅರ್ಪಿಸಿದನೆಂದು ಹೇಳಲಾಗಿದೆ.

ಇವನ ದಂಡನಾಯಕ ಜಲ್ಹಣನ ಸೂಕ್ತಿಮುಕ್ತಾವಳಿ, ಅಮಲಾನಂದನ ವೇದಾಂತಕಲ್ಪತರು ಇವನ ಕಾಲದಲ್ಲಿ ಹುಟ್ಟಿದ ಗ್ರಂಥಗಳು. (ಎಸ್.)

**ಕಪಿಲಾ :** ಕಪಿನಿ, ಕಬಿನಿ ಎಂಬ ಹೆಸರುಗಳೂ ಇರುವ ಈ ನದಿ ಕಾವೇರಿ ನದಿಯ ಪ್ರಧಾನ ಉಪನದಿಗಳಲ್ಲಿ ಒಂದು. ನದಿಯ ಉಗಮಸ್ಥಾನ ಕೇರಳದ ವೈನಾಡು ತಾಲ್ಲೂಕಿನ ಪಶ್ಚಿಮ ಘಟ್ಟಗಳ ಸಾಲಿನಲ್ಲಿ 2,100ಮೀ.ಗಳಿಗಿಂತಲೂ ಎತ್ತರ ಪ್ರದೇಶದಲ್ಲಿದೆ. ಅಲ್ಲಿಂದ ಅಲ್ಪ ದೂರ ವೈನಾಡಿನಲ್ಲಿ ಪ್ರವಹಿಸಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ನೈಋತ್ಯ ಮೂಲೆಯಲ್ಲಿ ಬಾವಲಿಯ ಬಳಿ ಕರ್ನಾಟಕ ರಾಜ್ಯವನ್ನು ಪ್ರವೇಶಿಸುತ್ತದೆ. ನದಿಯ ಹರಿವಿನ ಹೆಚ್ಚು ಭಾಗ ಮೈಸೂರು ಜಿಲ್ಲೆಯಲ್ಲಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಮೊದಲು ಮಗ್ಗೆ, ನಿಸನ ಗ್ರಾಮಗಳ ಮೂಲಕ ಸರಗೂರಿನವರೆಗೆ ಈಶಾನ್ಯಾಭಿಮುಖವಾಗಿ ಹರಿದು ಅಲ್ಲಿಂದ ಉತ್ತರಕ್ಕೆ ಚಕ್ಕೂರಿನವರೆಗೆ ಸಾಗಿ ಅನಂತರ ಪೂರ್ವಾಭಿಮುಖವಾಗಿ ಹರಿಯುತ್ತ ನಂಜನಗೂಡು ತಾಲ್ಲೂಕನ್ನು ಪ್ರವೇಶಿಸುತ್ತದೆ. ಇಲ್ಲಿ ಹುಲ್ಲಹಳ್ಳಿಯ ಮುಖಾಂತರ ನಂಜನಗೂಡಿನವರೆಗೆ ಬಂದು ಮತ್ತೆ ಈಶಾನ್ಯಕ್ಕೆ ತಿರುಗಿ ತಿರುಮಕೂಡಲು ನರಸೀಪುರದಲ್ಲಿ ಕಾವೇರಿಯನ್ನು ಸಂಧಿಸುತ್ತದೆ. ಹರಿವಿನ ಅಂತ್ಯದ ಸ್ವಲ್ಪ ಭಾಗ ಮಾತ್ರ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿದೆ. ನದಿಯ ಹರಿವಿನ ಒಟ್ಟು ಉದ್ದ ಸು.214ಕಿಮೀ.

ನದಿಯ ಪಾತ್ರದ ಅಗಲ ಸಾಮಾನ್ಯವಾಗಿ 150ರಿಂದ 200ಮೀಗಳಿದ್ದು ಪಕ್ಕದಲ್ಲಿ ಎತ್ತರದ ದಂಡೆಗಳಿರುವುದು ಸಾಮಾನ್ಯ. ನದಿಯಲ್ಲಿ ವರ್ಷಪೂರ್ತ ನೀರಿರುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಬೇಸಗೆಯಲ್ಲೂ ಇದರಲ್ಲಿ ಸಾಗುವ ನೀರಿನ ಪ್ರಮಾಣ ಕಾವೇರಿಯದಕ್ಕಿಂತಲೂ ಕಡಿಮೆಯಿರುವುದಿಲ್ಲ. ತಾರಕಾ, ನುಗು ಮತ್ತು ಗುಂಡ್ಲುಹೊಳೆ ಕಪಿಲಾ ನದಿಯ ಮುಖ್ಯ ಉಪನದಿಗಳು. ತಾರಕಾ ಹೆಗ್ಗಡದೇವನಕೋಟೆಯ ಮೂಲಕ ಹರಿದು ಬಂದು ಹಂಪಾಪುರದ ಪಶ್ಚಿಮಕ್ಕೆ ಸು.12ಕಿಮೀ ದೂರದಲ್ಲಿ ಮಟಕೆರೆಯ ಬಳಿ ಸೇರುತ್ತದೆ. ಮಿಕ್ಕೆರಡೂ ದಕ್ಷಿಣ ದಂಡೆಯಿಂದ ಬಂದು ಸೇರುವುವು. ನುಗುನದಿ ಹುಲ್ಲಹಳ್ಳಿಯಿಂದ ಸು.8ಕಿಮೀ ಪಶ್ಚಿಮದಲ್ಲಿರುವ ಮಲಾರದ ಹುಂಡಿ ಬಳಿಯೂ ಗುಂಡ್ಲುಹೊಳೆ ನಂಜನಗೂಡಿನ ಬಳಿಯೂ ಸೇರುತ್ತದೆ. ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ (ಹತ್ವಾಳ) ಅಣೆಕಟ್ಟಿನಿಂದ ಹೊರಡುವ ಎರಡು ನಾಲೆಗಳು ನದಿಯ ಎಡ ಮತ್ತು ಬಲದಂಡೆಯಲ್ಲಿ ಸಾಗಿ ತಾಲ್ಲೂಕಿನ ಬಹುಭಾಗಕ್ಕೆ ನೀರಾವರಿ ಸೌಕರ್ಯವನ್ನು ಒದಗಿಸುತ್ತವೆ. ಹೆಗ್ಗಡದೇವಕೋಟೆ ತಾಲ್ಲೂಕಿನ ತುಮ್ಮಸೋಗೆ, ಮಾದಾಪುರ, ಹೊಮ್ಮರಗಳ್ಳಿ - ಈ ಸ್ಥಳಗಳಲ್ಲೂ ಮುಂದೆ ಹುಲ್ಲಹಳ್ಳಿ, ನಂಜನಗೂಡು ಮತ್ತು ತಿರುಮಕೂಡಲು ನರಸೀಪುರಗಳ ಬಳಿಯೂ ಈ ನದಿಗೆ ಸೇತುವೆಗಳಿವೆ. ನದಿಯ ದಕ್ಷಿಣ ದಂಡೆಯಲ್ಲಿರುವ ನಂಜನಗೂಡು ಮತ್ತು ಕಾವೇರಿ ಸಂಗಮದ ಬಳಿ ಇರುವ ತಿರುಮಕೂಡಲು ನರಸೀಪುರ ದೊಡ ಊರುಗಳು ಹಾಗೂ ಪುಣ್ಯಕ್ಷೇತ್ರಗಳು. *

**ಕಪಿಲಾ ಯೋಜನೆ :** ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಬಿದರಹಳ್ಳಿಯ ಬೀಚನಹಳ್ಳಿ ಸಮೀಪದಲ್ಲಿ ಕಪಿಲಾ ನದಿಗೆ ಅಡ್ಡವಾಗಿ ನಿರ್ಮಿಸಿರುವ ಜಲಾಶಯ ಮತ್ತು ನೀರಾವರಿ ಯೋಜನೆ. 1959ರಲ್ಲೇ ಈ ಯೋಜನೆ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು. ಈಗಿನ ಮೈಸೂರು ಜಿಲ್ಲೆಯ ಮೈಸೂರು, ಹೆಗ್ಗಡದೇವನಕೋಟೆ, ನಂಜನಗೂಡು ಮತ್ತು ತಿರುಮಕೂಡಲು ನರಸೀಪುರ ತಾಲ್ಲೂಕುಗಳಿಗೂ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳಿಗೂ ನೀರಾವರಿ ಸೌಲಭ್ಯ ಕಲ್ಪಿಸುವುದು ಈ ಯೋಜನೆಯ ಪ್ರಧಾನ ಉದ್ದೇಶ. ಜೊತೆಗೆ 32 ಮೆಗಾವಾಟ್ ಜಲವಿದ್ಯುತ್ ಉತ್ಪಾದಿಸುವ ಮತ್ತು ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಉಪ ಉದ್ದೇಶಗಳು ಈ ಯೋಜನೆಯಲ್ಲಿ ಅಡಕವಾಗಿವೆ.

1959ರಲ್ಲೇ ಜಲಾಶಯದ ಕಾರ್ಯ ಪ್ರಾರಂಭವಾದರೂ ಅದು ಬಿರುಸು ಪಡೆದದ್ದು 1967ರ ಅನಂತರವೇ. 1974ರ ಹೊತ್ತಿಗೆ ಜಲಾಶಯದ ಕಾರ್ಯ ಪೂರ್ಣಗೊಂಡು 1975 ರಿಂದ ನೀರನ್ನು ಸಂಗ್ರಹಿಸಲು ಪ್ರಾರಂಭಿಸಲಾಯಿತು. ಈ ಜಲಾಶಯ 552.7 ಮಿಲಿಯನ್ ಕ್ಯೂಬಿಕ್ ಮೀಟರ್ ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ಜಲಾಶಯದ ಘನ ಗಾತ್ರ 19,200 ಘನ ಅಡಿಗಳು. ಈ ಜಲಾಶಯದ ನಿರ್ಮಾಣದಿಂದ 22 ಗ್ರಾಮಗಳೂ 14 ಉಪ ಗ್ರಾಮಗಳೂ ಮುಳುಗಡೆಯಾಗಿವೆ. ಮೈಸೂರು - ಮಾನಂದವಾಡಿ ರಸ್ತೆಯ 15ಕಿಮೀ ಉದ್ದದ ರಸ್ತೆ ಮುಳುಗಡೆಯಾಗಿದೆ. ಕಟ್ಟೆಯ ಒಟ್ಟು ಉದ್ದ 2,733 ಮೀ, ಎತ್ತರ 28.95ಮೀ. ಕಟ್ಟೆಯ ಮೂಲಕ ಒಂದು ಸೆಕೆಂಡಿಗೆ ಪ್ರವಹಿಸಬಹುದಾದ ನೀರಿನ ಗರಿಷ್ಠ ಪ್ರಮಾಣ 19,400 ಕ್ಯೂಸೆಕ್ಸ್‌ಗಳು. ಕಟ್ಟೆಯ ಮೇಲಣ ರಸ್ತೆಯ ಅಗಲ 24 ಅಡಿಗಳು.

ಪೂರ್ಣಕಾಲಿಕ ನೀರಾವರಿ ಬೆಳೆ ಮತ್ತು ಮಿಶ್ರ ಬೆಳೆಗಳು ಅಂದರೆ ಕಾಲಿಕ ನೀರಾವರಿ ಬೆಳೆಗಳಿಗೆ ಅನುಕೂಲವಾಗುವಂತೆ ಈ ಯೋಜನೆಯನ್ನು

ರೂಪಿಸಲಾಗಿದೆ. ಬತ್ತ, ಕಬ್ಬು, ಹಿಪ್ಪುನೇರಳೆ, ತೆಂಗು ಇತ್ಯಾದಿ ಬೆಳೆಗಳಿಗೆ ಹೆಚ್ಚು ಸಹಾಯಕವಾಗಿದೆ. ಪರಿಷ್ಕೃತ ಯೋಜನೆಯಂತೆ 87,900 ಹೆಕ್ಟೇರ್‌ಗಳಿಗೆ ಅಂತಿಮವಾಗಿ ನೀರುಣಿಸುವ ಗುರಿ ಇಟ್ಟುಕೊಳ್ಳಲಾಗಿದೆ. 2000 ಮಾರ್ಚ್ ಹೊತ್ತಿಗೆ 41,083 ಹೆಕ್ಟೇರ್ ಜಮೀನಿಗೆ ನೀರೊದಗಿಸಲಾಯಿತು. ಯೋಜನೆಯ ಅಂದಾಜು ವೆಚ್ಚ 480 ಕೋಟಿ. 2000 ಮಾರ್ಚ್ ವೇಳೆಗೆ 356.24 ಕೋಟಿ ಹಣವನ್ನು ವ್ಯಯಿಸಲಾಗಿದೆ.

ಕಬಿನಿ ಜಲಾಶಯ

ಜಲಾಶಯದ ಎರಡು ದೊಡ್ಡ ಕಾಲುವೆಗಳಲ್ಲಿ ಕಪಿನಿ ಬಲದಂಡೆ ಕಾಲುವೆ ಪ್ರಮುಖವಾದುದು. ಇದರ ಉದ್ದ 210 ಕಿಮೀ. ನಂಜನಗೂಡು ತಾಲ್ಲೂಕಿನ ಮೂಲಕ ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲದವರೆಗೂ ಸಾಗುವ ಈ ನಾಲೆ ಬಂಡಿಗುಡ್ಡ ಹಳ್ಳ ಮತ್ತು ನುಗು ನದಿಗಳನ್ನು ಸಾಗರ ಮತ್ತು ನುಗು ಹಾಯಿಗಾಲುವೆಗಳ ಮೂಲಕ ದಾಟಿ ಹೋಗುತ್ತದೆ. ಕೃಷ್ಣರಾಜಸಾಗರದ ಮೇಲ್ಮಟ್ಟ ನಾಲಾ ಯೋಜನೆಗೂ ಈ ಯೋಜನೆಯೊಂದಿಗೆ ಸಂಪರ್ಕ ಕಲ್ಪಿಸುವುದರಿಂದ ಶ್ರೀರಂಗಪಟ್ಟಣ ತಾಲ್ಲೂಕಿಗೂ ಈ ಯೋಜನೆಯ ಪ್ರಯೋಜನ ಆಗಲಿದೆ. ಎಡದಂಡೆ ನಾಲೆಯ ಉದ್ದ ಸು.32ಕಿಮೀ. ಇದು ತಾರಕ ಕಣಿವೆಗೆ ಸಂಪರ್ಕ ಕಲ್ಪಿಸುತ್ತದೆ. ಹೆಚ್ಚು ಜಲಸಂಪನ್ಮೂಲವಿರುವ ಕಪಿಲಾ ನದಿ ಈ ನೀರಾವರಿ ಯೋಜನೆಗೆ ವರವಾಗಿ ಪರಿಣಮಿಸಿದೆ. ಸಾಮಾನ್ಯವಾಗಿ ಮಳೆಯ ಕೊರತೆಯಿಂದ ನಲುಗುವ ಈ ಪ್ರದೇಶದ ಅಭಿವೃದ್ಧಿಗೆ ಕಪಿಲಾ ಯೋಜನೆ ಜೀವ ತುಂಬಿದೆ. *

**ಕಬ್ಬನ್, ಮಾರ್ಕ್ :** 1785-1861. ಮೈಸೂರು ಸಂಸ್ಥಾನದ ಆಡಳಿತವನ್ನು ನಡೆಸುತ್ತಿದ್ದ ಬ್ರಿಟಿಷ್ ಕಮಿಷನರ್ (1834-61). ಐರಿಷ್ ಸಮುದ್ರದಲ್ಲಿರುವ ಐಲ್ ಆಫ್ ಮ್ಯಾನ್ ದ್ವೀಪದ ಮ್ಯಾಂಕ್ಸ್‌ನಲ್ಲಿ ಪಾದ್ರಿಯೊಬ್ಬನ ಮಗನಾಗಿ 1785 ಸೆಪ್ಟೆಂಬರಿನಲ್ಲಿ ಜನಿಸಿದ. 1800ರಲ್ಲಿ ಭಾರತಕ್ಕೆ ಬಂದ ಕರ್ನಲ್ ವಿಲ್ಕ್ಸನ ಸೋದರಸಂಬಂಧಿಯಾದ ಈತ ಮದ್ರಾಸ್ ಇನ್‌ಫೆಂಟ್ರಿಯನ್ನು ಸೇರಿ 1816ರಲ್ಲಿ ಕ್ಯಾಪ್ಟನ್ ಪದವಿಗೇರಿದ. 1817-18ರಲ್ಲಿ ಪಿಂಡಾರಿಗಳ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಪಾತ್ರವಹಿಸಿ 1818ರಲ್ಲಿ ಲೆಫ್ಟಿನೆಂಟ್ ಕರ್ನಲ್ ಆದ.

ಮೈಸೂರಿನ ವಿದ್ಯಮಾನಗಳ ಬಗ್ಗೆ ವಿಚಾರಣೆ ನಡೆಸಲು ಲಾರ್ಡ್ ವಿಲಿಯಮ್ ಬೆಂಟಿಂಕ್ ಏರ್ಪಡಿಸಿದ್ದ ಸಮಿತಿಯಲ್ಲಿ (1831) ಈತನೂ ಒಬ್ಬ ಸದಸ್ಯನಾಗಿದ್ದ. ಅದೇ ವರ್ಷ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ವಶಪಡಿಸಿಕೊಂಡ ಸಂಸ್ಥಾನಾಡಳಿತವನ್ನು ನಿರ್ವಹಿಸುವುದಕ್ಕಾಗಿ ಈತ ಕಿರಿಯ ಕಮಿಷನರ್ ಅಧಿಕಾರಿ ಹುದ್ದೆಯನ್ನು ಪಡೆದ. 1834ರಲ್ಲಿ ಅದರ ಏಕೈಕ ಕಮಿಷನರ್ ಆಗಿ ನೇಕಮವಾದ, 27 ವರ್ಷಗಳ ಕಾಲ ಈ ಹುದ್ದೆಯಲ್ಲಿದ್ದ. ಈತ ಸಂಸ್ಥಾನದ ಆಡಳಿತ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಬಹಳ ಮಟ್ಟಿಗೆ ಸುಧಾರಿಸಿದ. ಸಂಸ್ಥಾನವನ್ನು ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ ಮತ್ತು ನಗರಗಳೆಂಬ ನಾಲ್ಕು ವಿಭಾಗಗಳನ್ನಾಗಿ ಮಾಡಿ ಅದಕ್ಕೆ ಮೇಲಧಿಕಾರಿಗಳನ್ನು ನೇಮಿಸಿದ. ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ಅಮಲ್ದಾರನನ್ನೂ ಪ್ರತಿ ಹೋಬಳಿಗೂ ಒಬ್ಬ ಶೇಕದಾರನನ್ನೂ ನೇಮಿಸಲಾಯಿತು. ತನ್ನ ಆಪ್ತಕಾರ್ಯದರ್ಶಿಯನ್ನೇ ಪ್ರಮುಖ ಕಾರ್ಯದರ್ಶಿಯನ್ನಾಗಿ ನೇಮಿಸಿ ಆಡಳಿತವನ್ನು ಬಿಗಿಗೊಳಿಸಿದ್ದಲ್ಲದೆ ಸರ್ಕಾರದ ಚಟುವಟಿಕೆಗಳನ್ನು ಜನರಿಗೆ ತಿಳಿಯಪಡಿಸುವ ವ್ಯವಸ್ಥೆಯನ್ನು ವಿಸ್ತರಿಸಿದ. 85 ತಾಲ್ಲೂಕು ನ್ಯಾಯಾಲಯಗಳು, 8 ಪ್ರಧಾನ ಸದರ್ ಮುನ್ಸಿಫ್ ನ್ಯಾಯಾಲಯಗಳು, 3 ಸೂಪರಿಂಟೆಂಡೆಂಟ್ ನ್ಯಾಯಾಲಯಗಳು ಮತ್ತು ಮೂವರು ನ್ಯಾಯಾಧೀಶರಿರುವ ಒಂದು ಹುಜೂರ್ ಅದಾಲತ್ ನ್ಯಾಯಾಲಯವಿರುವಂತೆ ನ್ಯಾಯಾಂಗವನ್ನು ಪುನರ್ವ್ಯವಸ್ಥೆಗೊಳಿಸಿ ದೃಢಗೊಳಿಸಿದ. ಒಟ್ಟು 1,600 ಮೈಲಿ ಉದ್ದದ ರಸ್ತೆಗಳೂ ಅನೇಕ ಸೇತುವೆಗಳೂ ಈತನ ಕಾಲದಲ್ಲಿ ರಚಿತವಾಗಿ ಬೆಂಗಳೂರಿಗೂ ಜಿಲ್ಲಾ ಕೇಂದ್ರಗಳಿಗೂ ಸಂಪರ್ಕ ಸುಲಭವಾಯಿತು. ಜಾಲಾರ್‌ಪೇಟೆ -ಬೆಂಗಳೂರು ರೈಲುಮಾರ್ಗ ನಿರ್ಮಾಣವಾದ್ದು ಈತನ ಕಾಲದಲ್ಲೇ (1859). ಇವನ ಆಡಳಿತ ಅವಧಿಯಲ್ಲಿ ಸಂಸ್ಥಾನದ ಆದಾಯವೂ ಹೆಚ್ಚಿತು. 1834ರಲ್ಲಿ 68ಲಕ್ಷರೂ. ಇದ್ದ ವಾರ್ಷಿಕ ಆದಾಯ 1855-56ರಲ್ಲಿ 85ಲಕ್ಷರೂ.ಗಳಿಗೆ ಏರಿತು. ಸರ್ಕಾರದ ಎಲ್ಲ ಸಾಲಗಳನ್ನೂ ತೀರಿಸಲು ಸಾಧ್ಯವಾಗಿ, ಹಣಕಾಸಿನ ಸ್ಥಿತಿ ಸುಧಾರಿಸಲು ಸಾಧ್ಯವಾದದ್ದು ಈತನ ದಕ್ಷ ಆಡಳಿತದಿಂದ.

ಕಬ್ಬನ್ ಕೊನೆಯ ತನಕವೂ ಅವಿವಾಹಿತನಾಗಿಯೇ ಉಳಿದ. 60 ವರ್ಷಗಳ ಕಾಲ ಭಾರತದಲ್ಲಿ ಸೇವೆ ಸಲ್ಲಿಸಿದ್ದ ಈತ ಈ ಅವಧಿಯಲ್ಲಿ ಒಮ್ಮೆಯೂ ಭಾರತವನ್ನು ಬಿಟ್ಟು ಹೋಗಲಿಲ್ಲ. 1861ರಲ್ಲಿ ಅನಾರೋಗ್ಯದ ನಿಮಿತ್ತ ಕೆಲಸಕ್ಕೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಹಿಂದಿರುಗುತ್ತಿದ್ದಾಗ ಹಾದಿಯಲ್ಲಿ ಸೂಯೆಜ್‌ನಲ್ಲಿ ತೀರಿಕೊಂಡ. ಇವನ ಪಾರ್ಥಿವ ಶರೀರವನ್ನು ಐಲ್ ಆಫ್ ಮ್ಯಾನ್‌ಗೆ ಕೊಂಡೊಯ್ದು ಅಲ್ಲಿ ಸಮಾಧಿ ಮಾಡಲಾಯಿತು. ಹಲವು ಶತಮಾನಗಳಲ್ಲಿ ಆ ದ್ವೀಪದಲ್ಲಿ ಹುಟ್ಟಿದವರ ಪೈಕಿ ಈತ ಅತಿ ದೊಡ್ಡ ವ್ಯಕ್ತಿ ಎಂದು ಅಲ್ಲಿಯ ಜನ ಘೋಷಿಸಿದರು.



ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿರುವ ಮಾರ್ಕ್ ಕಬ್ಬನ್‌ನ ಪ್ರತಿಮೆ

ಕಮಿಷನರ್ ಆಗಿ ಕೆಲಸ ಮಾಡುತ್ತಿದ್ದಾಗ 1852ರಲ್ಲಿ ಈತನಿಗೆ ಸೈನ್ಯದ ಹುದ್ದೆಯಲ್ಲಿ ಲೆಫ್ಟಿನೆಂಟ್ ಜನರಲ್ ಆಗಿ ಬಡ್ತಿ ಸಿಕ್ಕಿತು. ಬ್ರಿಟಿಷ್ ರಾಣಿ ಈತನಿಗೆ 1856ರಲ್ಲಿ ಸಿ.ಬಿ.ಪ್ರಶಸ್ತಿಯನ್ನೂ 1859ರಲ್ಲಿ

ಕೆ.ಸಿ.ಬಿ.ಪ್ರಶಸ್ತಿಯನ್ನೂ ನೀಡಿದಳು. ಬೆಂಗಳೂರಿನ ಕಬ್ಬನ್ ಪಾರ್ಕ್ ಇವನ ನೆನಪಿಗಾಗಿ ರಚಿತವಾದ್ದು. ಅಲ್ಲಿ ಈತನ ಅಶ್ವಾರೋಹಿ ಪ್ರತಿಮೆ ಇದೆ. (ಎಸ್.ಕೆ.)

**ಕಬ್ಬಾಳದುರ್ಗ :** ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿರುವ ಒಂದು ಬೆಟ್ಟ. ಸಮುದ್ರಮಟ್ಟದಿಂದ 1069ಮೀ ಎತ್ತರವಿದ್ದು ಶಂಕುವಿನಾಕಾರದಲ್ಲಿದೆ. ಕಡಿದಾದ ಪಕ್ಕಗಳಿಂದ ಕೂಡಿದ ಈ ಬೆಟ್ಟದ ಮೇಲೆ ಒಂದು ಕೋಟೆ ಇದೆ. ಈ ಕೋಟೆಯನ್ನು ಕಟ್ಟಿಸಿದವ ಗಾಥೆಕ್ ರಾಜ ಎಂಬ ಹೆಸರಿನ ಪಾಳೆಯಗಾರನೆಂದು ಪ್ರತೀತಿ. ಒಂದು ಕಡೆಯಿಂದ ಮಾತ್ರ ಈ ಬೆಟ್ಟದ ಮೇಲೇರಿಹೋಗುವುದು ಸಾಧ್ಯ. ಅಲ್ಲೂ ಮೆಟ್ಟಿಲುಗಳು ಬಲು ಕಡಿದು; ಅವನ್ನು ಬಂಡೆಯಲ್ಲೇ ಕೊರೆಯಲಾಗಿದೆ. ಕೆಲವು ಕಡೆಗಳಲ್ಲಿ ಮೆಟ್ಟಿಲುಗಳು ಆರು ಅಂಗುಲಗಳಿಗೂ ಕಿರಿದಾಗಿವೆ. ಆದ್ದರಿಂದ ಇದನ್ನು ಹತ್ತುವುದು ಬಲು ಕಷ್ಟ. ಸಾಕಷ್ಟು ಆಹಾರ ನೀರುಗಳನ್ನೊದಗಿಸಿಕೊಂಡು ಇಲ್ಲಿ ಉಳಿದರೆ ಶತ್ರುವಿನ ಆಕ್ರಮಣದ ಭಯವಿಲ್ಲದೆ ಇರುವುದು ಸಾಧ್ಯವಿತ್ತು. ಈ ಪ್ರದೇಶವನ್ನಾಳುತ್ತಿದ್ದ ವಿವಿಧ ಕಾಲದ ಆಡಳಿತಗಾರರೂ ಮುಮ್ಮಡಿ ಕೃಷ್ಣರಾಜ ಒಡೆಯರ ಸರ್ಕಾರದವರೂ ಅಪಾಯಕಾರಿಗಳಾದ ರಾಜದ್ರೋಹಿಗಳನ್ನು ಇಲ್ಲಿ ಇಡುತ್ತಿದ್ದರು. ಇಲ್ಲಿಯ ನೀರು ಕೂಡ ವಿಷವೆಂದು ಪರಿಗಣಿತವಾಗಿತ್ತು. ಅಹಿತಕರ ವಾತಾವರಣವೂ ಅತೃಪ್ತಿಕರ ಆಹಾರವೂ ಖೈದಿಯ ಬಂಧನದ ನೋವಿನ ಅವಧಿಯನ್ನು ಮೊಟಕುಮಾಡಿ ಬೇಗ ಅವನನ್ನು ಪರಲೋಕಕ್ಕೆ ಅಟ್ಟುತ್ತಿತ್ತೆಂದು ಕರ್ನಲ್ ವಿಲ್ಕ್ಸ ಬರೆದಿದ್ದಾನೆ. ಆರನೆಯ ಚಾಮರಾಜ ಒಡೆಯರನ್ನೂ ಅವರ ಪತ್ನಿಯನ್ನೂ ದಳವಾಯಿ ದೇವರಾಜ ಸೆರೆಯಲ್ಲಿಟ್ಟಿದ್ದದ್ದು ಈ ದುರ್ಗದಲ್ಲೇ. ಅವರು ಇಲ್ಲಿ ಬಹುಕಾಲ ಬದುಕಲಿಲ್ಲ. ಹೈದರ್ ಅಲಿ ಇಲ್ಲಿಯ ಕೋಟೆಯನ್ನು ದುರಸ್ತುಗೊಳಿಸಿ ಇದಕ್ಕೆ ಜಾಫರಾಬಾದ್ ಎಂದು ಹೆಸರಿಟ್ಟ. ಆದರೆ ಇಂದು ಯಾರೂ ಇದನ್ನು ಆ ಹೆಸರಿನಿಂದ ಕರೆಯುವುದಿಲ್ಲ. 1864ರಲ್ಲಿ ಇಲ್ಲಿಯ ಫಿರಂಗಿಗಳನ್ನೂ ಮದ್ದನ್ನೂ ನಾಶಗೊಳಿಸಲಾಯಿತಲ್ಲದೆ ಇಲ್ಲಿದ್ದ ಸಿಬ್ಬಂದಿಯನ್ನು ಸ್ಥಳಾಂತರಗೊಳಿಸಲಾಯಿತು. ಇಂದು ಈ ಸ್ಥಳ ಬೇಚಿರಾಕಾಗಿದೆ. (ಕೆ.ಆರ್.ಆರ್)

**ಕಬ್ಬಿಣದ ಉದ್ಯಮ :** ಕರ್ನಾಟಕದಲ್ಲಿ ಕಬ್ಬಿಣದ ಉದ್ಯಮ ಸು.3000 ವರ್ಷಗಳಷ್ಟು ಪ್ರಾಚೀನವಾದುದು. ಜನ ಕಬ್ಬಿಣವನ್ನು ಉಪಯೋಗಿಸುತ್ತಿದ್ದ ಬಗ್ಗೆ ಅತಿ ಹಳೆಯ ಮಾಹಿತಿ ಧಾರವಾಡ ಜಿಲ್ಲೆಯ ಹಳ್ಳೂರು ಎಂಬಲ್ಲಿನ ಉತ್ಖನನದಿಂದ ದೊರಕಿದೆ. ಅಲ್ಲಿ ಕಬ್ಬಿಣ ದೊರಕುವ ಮೊದಲ ಸ್ತರದ ಕಾಲವನ್ನು ಕ್ರಿ.ಪೂ.1000 ಎಂದು ವೈಜ್ಞಾನಿಕ ವಿಧಾನಗಳಿಂದ ಗುರುತಿಸಲಾಗಿದೆ. ಆ ಕಾಲದಾರಭ್ಯ ಕ್ರಿ.ಪೂ.ಸು.3ನೆಯ ಶತಮಾನದವರೆಗಾದರೂ ಪ್ರಚಲಿತವಾಗಿದ್ದ ಬೃಹತ್ ಶಿಲಾಸಮಾಧಿ ಸಂಸ್ಕೃತಿಗಳ ಕಾಲದ ಒಂದು ವೈಶಿಷ್ಟ್ಯವೆಂದರೆ ಕಬ್ಬಿಣದ ಉಪಕರಣಗಳ ವಿಶೇಷ ಬಳಕೆಯೇ. ಕರ್ನಾಟಕದ ವಿವಿಧ ಭಾಗಗಳಲ್ಲಿರುವ ಕಬ್ಬಿಣದ ನಿಕ್ಷೇಪವನ್ನು ಅಂದಿನ ಜನ ಬಳಸಿಕೊಂಡು ಕಬ್ಬಿಣದ ಉದ್ಯಮವನ್ನು ವ್ಯಾಪಕವಾಗಿ ಬೆಳೆಸಿದ್ದರು. ತತ್ಕಾಲದ ಸಮಾಧಿಗಳಲ್ಲಿ ಹುದುಗಿದ್ದ ಕಬ್ಬಿಣದ ಆಯುಧಗಳು ಮತ್ತು ಇತರ ಉಪಕರಣಗಳು ಇಂದಿಗೂ ಬಹುಸಂಖ್ಯೆಯಲ್ಲಿ ಉಳಿದುಬಂದಿವೆ. ಆ ಕಾಲದ ಬ್ರಹ್ಮಗಿರಿ, ಮಸ್ಕಿ, ತಿರುಮಕೂಡಲು ನರಸೀಪುರ ಮೊದಲಾದ ಹಲವು ನೆಲೆಗಳಲ್ಲಿ ಕಬ್ಬಿಣ ತಯಾರಿಕೆಯ ಉಳಿಕೆಯ ಕಿಟ್ಟದ ಗುಡ್ಡೆಗಳು ಕಂಡುಬಂದಿವೆ. ಆ ಕಾಲದಲ್ಲಿ ಮುಚ್ಚಿದ ಆವೆಗಳಲ್ಲಿ ಸುಣ್ಣಕಲ್ಲನ್ನು ಉಷ್ಣೋತ್ತೇಜಕವಾಗಿ ಉಪಯೋಗಿಸಿ ಅದಿರನ್ನು ಕರಗಿಸುತ್ತಿದ್ದರೆಂಬುದಕ್ಕೆ ಸೂಚನೆಗಳು ದೊರಕಿವೆ.

ಹೀಗೆ ಉಪಸ್ಥಿತವಾಗಿದ್ದ ಈ ದೇಶೀ ಉದ್ಯಮ ಇತ್ತೀಚಿನವರೆಗೂ ಮುಂದುವರೆದುಕೊಂಡು ಬಂದಿತ್ತು. ಕಬ್ಬಿಣದ ವಸ್ತುಗಳ ತಯಾರಿಕೆ ಚಾರಿತ್ರಿಕ ಕಾಲದಲ್ಲೂ ಚೆನ್ನಾಗಿ ಬೆಳೆದಿತ್ತೆಂಬುದಕ್ಕೆ ಇಂದಿಗೂ ಉಳಿದುಬಂದಿರುವ ವಿಜಯನಗರದ ಅರಸರು, ಬಹಮನೀ ಸುಲ್ತಾನರು, ಹೈದರ್ ಅಲಿ, ಟಿಪ್ಪು ಸುಲ್ತಾನ್ ಇವರ ಕಾಲದ ನೂರಾರು ಉಕ್ಕಿನ ಫಿರಂಗಿಗಳು ಸೂಚಕವಾಗಿವೆ. ಇಂದು ಕಾಡು ಬೆಳೆದು ಮುಚ್ಚಿಹೋಗಿರುವಂಥ ಅನೇಕ ಸ್ಥಳಗಳಲ್ಲೂ ಕಬ್ಬಿಣದ ಕಿಟ್ಟದ ದೊಡ್ಡ ಗುಡ್ಡೆಗಳನ್ನು ಗುರುತಿಸಬಹುದಾಗಿದ್ದು ಅವು ಪ್ರಾಚೀನ ಕಬ್ಬಿಣ ಉದ್ಯಮದ ಕುರುಹಾಗಿವೆ. ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ, ಅದರಲ್ಲೂ ಸಂಡೂರು ಬೆಟ್ಟಗಳ ಪ್ರದೇಶದಲ್ಲಿ ಕಬ್ಬಿಣದ ಉದ್ಯಮ ವಿಶೇಷವಾಗಿತ್ತು. ಅಲ್ಲಿ ದೊರೆಯುವ ಅದಿರು ಉತ್ತಮ ದರ್ಜೆಯದಾಗಿತ್ತು. ಸಮೀಪದಲ್ಲೇ ಇದ್ದ ಕಾಡುಗಳಿಂದ ಇದ್ದಿಲನ್ನು ಸುಲಭವಾಗಿ ಪಡೆಯಬಹುದಾಗಿತ್ತು. ಇವುಗಳನ್ನು ಉಪಯೋಗಿಸಿ ಕಬ್ಬಿಣದ ತಯಾರಿಕೆ ನಡೆಯುತ್ತಿತ್ತು. ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಹಲಗೂರು ಕಬ್ಬಿಣ ತಯಾರಿಕೆಯ ಇನ್ನೊಂದು ಮುಖ್ಯ ಕೇಂದ್ರವಾಗಿತ್ತು. ಇಲ್ಲಿಯ ಕಬ್ಬಿಣ 'ಹಲಗೂರು ಚಿನ್ನ' ಎಂದೇ ಪ್ರಸಿದ್ಧವಾಗಿತ್ತು. ಚಿತ್ರದುರ್ಗ ಜಿಲ್ಲೆಯ ಗಟ್ಟಿ ಸೋಮನಹಳ್ಳಿಯಲ್ಲಿ ಉಕ್ಕಿನ ತಯಾರಿಕೆಯೂ ಇತ್ತು. ಇಲ್ಲಿ ಬೀಡು ಕಬ್ಬಿಣದ ತುಣುಕುಗಳನ್ನು ಮರದ ತೊಗಟೆ, ಎಲೆ ಮೊದಲಾದವುಗಳೊಡನೆ ಬೆರೆಸಿ ಇದ್ದಿಲಿನ ಕೆಂಡದಿಂದ ಕಾಯಿಸಿ ಉಕ್ಕು ತಯಾರಿಸಲಾಗುತ್ತಿತ್ತು ಎನ್ನಲಾಗಿದೆ.

ಆದರೆ ಬ್ರಿಟಿಷರ ಆಳಿಕೆ ಪ್ರಾರಂಭವಾದಾಗಿನಿಂದ ಈ ದೇಶೀ ಉದ್ಯಮ ಹಿಂದಕ್ಕೆ ಸರಿಯಿತು. ಬ್ರಿಟಿಷರು ಈ ನಾಡಿನ ಉದ್ಯಮಗಳಿಗೆ ಉತ್ತೇಜನ ಕೊಡದಿದ್ದುದೂ ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದ ಕಬ್ಬಿಣದ ಪದಾರ್ಥಗಳು ಇಲ್ಲಿ ತಯಾರಾಗುತ್ತಿದ್ದವಕ್ಕಿಂತ ಅಗ್ಗವಾಗಿದ್ದುದೂ ಸ್ಥಳೀಯ ಕಬ್ಬಿಣದ ಉದ್ಯಮದ ಅವನತಿಗೆ ಕಾರಣವಾಯಿತು. *

ಈ ಉದ್ಯಮ ಮತ್ತೆ ತಲೆಯೆತ್ತಿದ್ದು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬೇಸಗೆಯ ದಿನಗಳನ್ನು ಬಾಬಾಬುಡನ್‌ಗಿರಿಯಲ್ಲಿರುವ ಗಿರಿಧಾಮಗಳಲ್ಲಿ ಕಳೆಯುತ್ತಿದ್ದರು. ಅವರು ಕುದುರೆ ಸವಾರಿ ಮಾಡುತ್ತಿದ್ದ ಮತ್ತು ಸಂಜೆಯ ವೇಳೆ ವಾಯು ವಿಹಾರಕ್ಕಾಗಿ ಹೋಗುತ್ತಿದ್ದ ಸ್ಥಳಗಳಲ್ಲೆಲ್ಲಾ ಕಬ್ಬಿಣದ ಅದಿರು ಇರುವುದನ್ನು ಕಂಡು ಆಗಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರಿಗೆ ಇದರ ಉಪಯೋಗದ ಅಧ್ಯಯನವನ್ನು ಮಾಡಿಸಲು ಆದೇಶ ನೀಡಿದರು.

ಮಹಾರಾಜರ ಆದೇಶದಂತೆ ರಾಜ್ಯದ ಭೂ ವಿಜ್ಞಾನ ಇಲಾಖೆ ಶೋಧನೆಯನ್ನು ಮಾಡಿ ಬಾಬಾಬುಡನ್‌ಗಿರಿಯ ಬೇರೆ ಬೇರೆ ಸ್ಥಳಗಳಲ್ಲಿ ಉತ್ತಮವರ್ಗದ ಕಬ್ಬಿಣದ ಅದಿರಿನ ನಿಕ್ಷೇಪವನ್ನು 1915ರಲ್ಲಿ ಪತ್ತೆ ಹಚ್ಚಿತು; ಅದೇ ಸುಮಾರಿಗೆ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪನಿಗೆ ಪ್ರವೀಣ ಸಲಹೆಗಾರರಾಗಿದ್ದ ಅಮೆರಿಕ ಸಂಯುಕ್ತ ಸಂಸ್ಥಾನದ ಸಿ.ಪಿ.ಪೆರೀನ್‌ರವರು ಭಾರತಕ್ಕೆ ಟಾಟಾ ಕಂಪನಿಯ ಉಕ್ಕಿನ ಕಾರ್ಖಾನೆಯ ವಿಸ್ತರಣೆಗೋಸ್ಕರ ಅಧ್ಯಯನ ಮಾಡಲು ಬಂದರು. ರಾಜ್ಯ ಸರ್ಕಾರ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರುಗಳ ನಿಕ್ಷೇಪಗಳನ್ನು ಲೋಹ ಕಾರ್ಖಾನೆಗಳಲ್ಲಿ ವಾಣಿಜ್ಯ ಮಟ್ಟದಲ್ಲಿ ಬಳಸುವ ಸಾಧ್ಯತೆಯನ್ನು ತಿಳಿಸಲು ಪೆರೀನ್‌ರನ್ನು ಆಹ್ವಾನಿಸಿತು.

ಪೆರೀನ್ ಅವರು ಬಾಬಾಬುಡನ್ ಗಿರಿಯಲ್ಲಿದ್ದ ಕಬ್ಬಿಣದ ಅದಿರಿನ ನಿಕ್ಷೇಪಗಳನ್ನು ಮತ್ತು ಸಮೀಪದಲ್ಲೇ ಇದ್ದ ಮಲೆನಾಡಿನ ದಟ್ಟವಾದ ಮತ್ತು ವಿಶಾಲವಾದ ಅರಣ್ಯಗಳನ್ನು ಪರಾಮರ್ಶಿಸಿ, ಬೃಹತ್ ಕಬ್ಬಿಣದ ಕಾರ್ಖಾನೆಗೆ ಅವಶ್ಯವಾದ ಕಲ್ಲಿದ್ದಲಿನ ನಿಕ್ಷೇಪ ದಕ್ಷಿಣ ಭಾರತದಲ್ಲಿ ಇಲ್ಲದ ಕಾರಣ ಸಮೀಪದ ದಟ್ಟವಾದ ಮತ್ತು ವಿಶಾಲವಾದ ಅರಣ್ಯಗಳ ಸೌದೆಯಿಂದ ಇದ್ದಿಲನ್ನು ತಯಾರಿಸಿ ಅದನ್ನು ಉಪಯೋಗಿಸಿ ಕಬ್ಬಿಣದ ಅದಿರಿನಿಂದ ಇದ್ದಿಲಿನ ಬೀಡುಕಬ್ಬಿಣ ತಯಾರಿಸುವ ಒಂದು ಕಾರ್ಖಾನೆಯನ್ನು ಸ್ಥಾಪಿಸಬಹುದೆಂದು 1916ರಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದರು. ಅವರ ಸಲಹೆಯಂತೆ ಮಲೆನಾಡಿನ ಕಾಡುಗಳಿಂದ ದೊರಕಬಹುದಾದ ಸೌದೆಯ ಪರಿಮಾಣಕ್ಕೆ ಸರಿಹೊಂದುವ ಹಾಗೆ ಸುಮಾರು 18,250 ಟನ್ ಚಾರ್‌ಕೋಲ್ ಪಿಗ್ ಐರನ್ ವಾರ್ಷಿಕ ಉತ್ಪಾದನ ಸಾಮರ್ಥ್ಯದ ಒಂದು ಕಬ್ಬಿಣದ ಕಾರ್ಖಾನೆಯ ಸ್ಥಾಪನೆಗೆ ಅನುಕೂಲಗಳಿವೆ ಎಂದು ದೃಢಪಟ್ಟಿತು. ಅವರು ಸಲಹೆ ಮಾಡಿದ ಯೋಜನೆಯಲ್ಲಿ ಮುಖ್ಯ ಉತ್ಪಾದನೆ ಕಬ್ಬಿಣವಾದರೂ ಅದರ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಉಪೋತ್ಪನ್ನಗಳ ಪುನರ್‌ಲಭ್ಯ ಘಟಕಗಳನ್ನು ಸೇರಿಸಿದ್ದರು. ವರ್ಷಕ್ಕೆ 73,000 ಟನ್ ಸೌದೆಯನ್ನು ಬಟ್ಟಿ ಪಾತ್ರೆಗಳಲ್ಲಿ ಇದ್ದಿಲಾಗಿ ಪರಿವರ್ತಿಸುವುದಲ್ಲದೆ ಉಪೋತ್ಪನಗಳನ್ನು ಪಡೆಯುವುದು, ಮೇಲಿನ ಇದ್ದಿಲನ್ನು ಮತ್ತು 30,000 ಟನ್ ಕಬ್ಬಿಣದ ಅದಿರನ್ನು ಉಪಯೋಗಿಸಿ ವರ್ಷಕ್ಕೆ 18,250 ಟನ್ ಇದ್ದಲಿನ ಬೀಡು ಕಬ್ಬಿಣವನ್ನು ಊದು ಕುಲುಮೆಯಲ್ಲಿ ಉತ್ಪಾದಿಸುವುದು. ಇವು ಪೆರೀನ್‌ರ ಸಲಹೆ. ಈ

ಸಲಹೆಯ ಮೇರೆಗೆ ಸ್ಥಾಪಿಸಬಹುದಾದ ಕಾರ್ಖಾನೆ ಒಂದು ದೊಡ್ಡ ಕಾರ್ಖಾನೆಯಾಗುವ ಸಾಧ್ಯತೆ ಇರಲಿಲ್ಲ. ಮೇಲ್ಕಂಡ ವಿಧಾನದಲ್ಲಿ ಉಪಯುಕ್ತವಲ್ಲದ ಇದ್ದಲ್ಲಿನ ಪುಡಿಯನ್ನು ಮತ್ತು ಊದು ಕುಲುಮೆಯಲ್ಲಿ ಉತ್ಪತ್ತಿಯಾಗುವ ಅನಿಲವನ್ನು ಉಪಯೋಗಿಸಿ ಉತ್ಪಾದಿಸಬಹುದುದಾದ ವಿದ್ಯುಚ್ಛಕ್ತಿಯನ್ನು ಬಳಸಿ ಕ್ಯಾಲ್ಸಿಯಂ ಕಾರ್ಬೈಡ್ ಸಹ ತಯಾರಿಸಬಹುದು. ಇಂಥ ಒಂದು ಕಾರ್ಖಾನೆಗೆ ದಿನ ಒಂದಕ್ಕೆ 30 ಲಕ್ಷ ಗ್ಯಾಲನ್ ನೀರು ಅವಶ್ಯವಿರುವುದರಿಂದ, ಕಾರ್ಖಾನೆಯನ್ನು ಭದ್ರಾ ನದಿ ದಂಡೆಯ ಮೇಲಿರುವ ಭದ್ರಾವತಿಯಲ್ಲಿ (ಆಗಿನ ಬೆಂಕಿಪುರ) ಸ್ಥಾಪಿಸಿವುದು ಸೂಕ್ತ ಎಂದು ಪೆರೀನ್ ಅಭಿಪ್ರಾಯಪಟ್ಟಿದ್ದರು.

1916ರಲ್ಲಿ ಪೆರೀನ್ ಭಾರತಕ್ಕೆ ಪುನಃ ಬಂದಾಗ ರಾಜ್ಯದ ದಿವಾನರಿಗೆ ಟಾಟಾ ಕಬ್ಬಿಣ ಕಾರ್ಖಾನೆಯವರು ಒಂದು ಪ್ರಸ್ತಾವವನ್ನು ಸಲ್ಲಿಸಿದರು. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪನಿ ಕೆಲವು ನಿಯಮಗಳ ಮೇಲೆ ರಾಜ್ಯದಲ್ಲಿ ಕಬ್ಬಿಣದ ಕಾರ್ಖಾನೆಯನ್ನು ನಿರ್ಮಿಸಿ ಅದರ ನಿರ್ವಾಹಕ ಸಂಸ್ಥೆಯಾಗಿ ಕೆಲಸ ಮಾಡುವುದು ಆ ಸಲಹೆಯಾಗಿತ್ತು. ದಿವಾನರೂ ಮಹಾರಾಜರೂ ಈ ಸಲಹೆಯನ್ನು ಒಪ್ಪಿ, ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಲು ಲಕ್ಕವಳ್ಳಿ, ಬೆಂಕಿಪುರ ಮತ್ತು ಶಿವಮೊಗ್ಗ ಈ ಸ್ಥಳಗಳನ್ನು ಪರಿಶೀಲಿಸಿ ಪೆರೀನ್ ಸಲಹೆಯ ಮೇರೆಗೆ ಕಾರ್ಖಾನೆಗೆ ಅಗತ್ಯವಾದ ಎಲ್ಲ ಅನುಕೂಲಗಳಿದ್ದ ಬೆಂಕಿಪುರದಲ್ಲಿ ನಿರ್ಮಿಸಲು ತೀರ್ಮಾನಿಸಿದರು.

ಕಾರ್ಖಾನೆಯ ನಿರ್ಮಾಣ ಕಾರ್ಯದಲ್ಲಿ ಎದುರಾದ ಎಡರು ತೊಡರುಗಳನ್ನೆಲ್ಲ ನಿವಾರಿಸಿಕೊಂಡು 1918ರಲ್ಲಿ ಪ್ರಾರಂಭವಾಗಿ 1922ರ ಹೊತ್ತಿಗೆ ಒಂದು ಘಟ್ಟವನ್ನು ಮುಟ್ಟಿತು. ಆ ಅವಧಿಯಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದಿಂದ ಕಳುಹಿಸಿದ ಕೆಲವು ಯಂತ್ರಗಳು ಉತ್ತರ ಭಾರತದಲ್ಲಿರುವ ಬೆಂಕಿಪುರಕ್ಕೆ ಹೋದುದರಿಂದ ಈ ಕಾರ್ಖಾನೆ ಇದ್ದ ಊರಿನ ಹೆಸರನ್ನು ಬೆಂಕಿಪುರದಿಂದ ಭದ್ರಾವತಿ ಎಂದು ಬದಲಾಯಿಸಲಾಯಿತು.

ಕಾರ್ಖಾನೆಯ ಕೆಲವು ಘಟಕಗಳ ನಿರ್ಮಾಣ ಮುಗಿಯುತ್ತಿದ್ದಂತೆಯೇ 1922ರಲ್ಲಿ ಪೆರೀನ್ ಆ ಘಟಕಗಳಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಲು ತರಪೇತಾದ ಚಾಲ್ತಿ ಸಿಬ್ಬಂದಿಯನ್ನು ಕರೆತಂದರು. 1923ರ ಜನವರಿ 18ರಂದು ಆಗಿನ ದಿವಾನ್ ಸರ್ ಆಲ್ಬಿಯನ್ ಬ್ಯಾನರ್ಜಿಯವರು ಊದು ಕುಲುಮೆಗೆ ಅಗ್ನಿಯನ್ನು ಸ್ಪರ್ಶಿಸಿದರು. ಇದಾದ ಎರಡು ತಿಂಗಳಿನಲ್ಲಿ ಇದ್ದಲಿನ ಭಟ್ಟಿಯಲ್ಲಿ ಉತ್ಪಾದನೆಯಾಗುವ 'ಹೊಗೆ ಎಣ್ಣೆ' (ಲಿಕ್ಕರ್) ಯಿಂದ ಟಾರು ಮತ್ತು ಸಿ.ಪಿ. ಮಿತೆನಾಲ್ ಅನ್ನು ಉಪೋತ್ಪನ್ನಗಳಾಗಿ ರೂಢಿಸುವ ಶಾಖೆಗಳಿಂದ ಉತ್ಪತ್ತಿಯನ್ನು ಪ್ರಾರಂಭಿಸಲಾಯಿತು. ಈ ಘಟಕಗಳಲ್ಲಿ 1923 ಮಾರ್ಚ್ 31ರ ವೇಳೆಗೆ 176 ಲಕ್ಷ ರೂಪಾಯಿಗಳ ಬಂಡವಾಳ ಹೂಡಲಾಗಿತ್ತು. ಇದರಲ್ಲಿ ಸ್ವಲ್ಪ ಭಾಗ ವಸತಿಸೌಕರ್ಯಕ್ಕಾಗಿಯೂ ನಗರ ನಿರ್ಮಾಣಕ್ಕಾಗಿಯೂ ವೆಚ್ಚವಾಗಿತ್ತು.

1923ರ ಏಪ್ರಿಲ್‌ವರೆಗೆ ಕೇಂದ್ರ ಕಾರ್ಖಾನೆ ಏಜೆಂಟರಿಂದ ಆಡಳಿತ ಮಂಡಳಿಯ ಹತೋಟಿಯಲ್ಲಿ ನಡೆಯಿತು. ಕಬ್ಬಿಣದ ಅದಿರು, ಸುಣ್ಣಕಲ್ಲು, ಸೌದೆ ಇತ್ಯಾದಿ ಕಚ್ಚಾ ಸಾಮಾಗ್ರಿಗಳ ಸರಬರಾಜು ಮತ್ತು ಸಾಗಾಣಿಕೆಗೆ ಸಂಬಂಧಪಟ್ಟ ಇಲಾಖೆಗಳು ಸರ್ಕಾರದ ನೇರ ಆಡಳಿತಕ್ಕೆ ಸೇರಿದ್ದವು. 1923ರ ಏಪ್ರಿಲ್‌ನಲ್ಲಿ ರಾಜ್ಯ ಸರ್ಕಾರ ಏಜೆಂಟರೊಡನೆ ಸಮಾಲೋಚಿಸಿ ಉದ್ಯಮಕ್ಕೆ ಸಂಬಂಧಪಟ್ಟ ಎಲ್ಲ ಇಲಾಖೆಗಳ ಪೂರ್ಣ ಸಹಕಾರ ಪಡೆಯುವುದಕ್ಕೆ ತಕ್ಕ ಆಡಳಿತ ಮಂಡಳಿಯನ್ನು ಪುನರ್ ರಚಿಸಿ ಅದರ ಅಧ್ಯಕ್ಷರಿಗೆ ಸಂಬಂಧಪಟ್ಟ ಇಲಾಖೆಗಳ ಮೇಲೆ ಪೂರ್ಣ ಹತೋಟಿಯ ಅಧಿಕಾರ ಕೊಟ್ಟಿತು. ಸರ್ಕಾರದ ಆಹ್ವಾನದ ಮೇರೆಗೆ ಸರ್.ಎಂ.ವಿಶ್ವೇಶ್ವರಯ್ಯನವರು ಆಡಳಿತ ಮಂಡಳಿಯ ಅಧ್ಯಕ್ಷ ಸ್ಥಾನ ಸ್ವೀಕರಿಸಿದರು. ಸರ್.ಕೆ.ಪಿ.ಪುಟ್ಟಣ್ಣಚೆಟ್ಟಿಯವರು ಮಂಡಳಿಯ ಕಾರ್ಯದರ್ಶಿ ಹಾಗೂ ನಿರ್ದೇಶಕರಾಗಿಯೂ ಏಜೆಂಟ್ ಪರವಾಗಿ ಸರ್ ಖವಾಸಜೀ ರೆಡಿಮನಿ ಮತ್ತು ಸಿ.ಜೆ.ಡಿ. ಗಾಂಧಿ ಮಂಡಳಿಯಲ್ಲಿದ್ದರು.

ಮಂಡಳಿಯ ಹತೋಟಿಯನ್ನು ಪರಿಣಾಮಕಾರಿಯಾಗಿ ಮಾಡಲು ಸ್ವತಂತ್ರವಾಗಿ ನಡೆಸುತ್ತಿದ್ದ ವೆಚ್ಚ ಮತ್ತು ಕೆಲಸಗಾರರ ನೇಮಕಗಳನ್ನು ತಕ್ಷಣ ನಿಲ್ಲಿಸತಕ್ಕದ್ದು ಮತ್ತು ಯಾವ ಹೊಸ ಕಾರ್ಯಗಳನ್ನೂ ಪ್ರಾರಂಭಿಸಕೂಡದು ಅಥವಾ ಉದ್ಯಮದಲ್ಲಿನ ಉತ್ಪಾದನೆಗಳಲ್ಲದೆ ಬೇರೆ ಯಾವುದಕ್ಕೂ ವೆಚ್ಚ ನಡೆಯಕೂಡದು ಎಂದು ವಿಶ್ವೇಶ್ವರಯ್ಯನವರು ಸೂಚಿಸಿದರು. ಉದ್ಯಮದ ಆಸ್ತಿಗಳನ್ನು ಪರಿಶೀಲಿಸಿ ಬೇರೆ ಬೇರೆ ಆಡಳಿತಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಲು, ಪರಿಣಾಮಕಾರಿಯಾಗಿ ನಿರ್ವಹಣೆ ವೆಚ್ಚವನ್ನು ಹತೋಟಿಗೊಳಪಡಿಸಲು, ಮಾರಾಟ ಹೆಚ್ಚಿಸಲು ಮತ್ತು ಉದ್ಯಮವನ್ನು ವಾಣಿಜ್ಯ ದೃಷ್ಟಿಯಲ್ಲಿ ಅಭಿವೃದ್ಧಿಪಡಿಸಲು ಅವಶ್ಯವಾದ ಕಾರ್ಯಗಳನ್ನು ಮಾಡಲು ಒಂದು ಕಾರ್ಯಕ್ರಮದ ಪಟ್ಟಿಯನ್ನು ತಯಾರು ಮಾಡಿಸಲಾಯಿತು. ಆ ಶಿಫಾರಸುಗಳನ್ನು ರಾಜ್ಯ ಸರ್ಕಾರ ಮತ್ತು ಮಂಡಳಿ 1923ರ ಮೇ ತಿಂಗಳಿನಲ್ಲಿ ಅನುಮೋದಿಸಿದವು. ಈ ರೀತಿಯಲ್ಲಿ ಹಂಚಿಹೋಗಿದ್ದ ಜವಾಬ್ದಾರಿಯಿಂದ ಉಂಟಾಗಿದ್ದ, ಹತೋಟಿಗೆ ಮೀರಿದ, ವೆಚ್ಚ ಮತ್ತು ಕಾರ್ಯನಿರ್ವಹಣೆಯಲ್ಲಿ ಆಗುತ್ತಿದ್ದ ತಡೆಗಳನ್ನು ಹೊಸ ಮಂಡಳಿ ನೇಮಕವಾದ ಕೂಡಲೇ ನಿವಾರಿಸಿತು. ವೈಜ್ಞಾನಿಕ ಕಾರ್ಯ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಹೊಸದಾಗಿಯೇ ನಿರ್ಮಿಸಬೇಕಾಗಿತ್ತು. ಪರಿಣಾಮಕಾರಿ ಲೆಕ್ಕಪತ್ರಗಳ ವಿಧಾನವಿರಲಿಲ್ಲ. ಎಲ್ಲ ಇಲಾಖೆಗಳಲ್ಲಿಯೂ ಕೆಲಸಗಳು ಸರಿಯಾದ ಹಿಡಿತವಿಲ್ಲದೆ ಅವ್ಯವಸ್ಥೆಯಲ್ಲಿ ನಡೆಯುತ್ತಿತ್ತು.

ವಿಶ್ವೇಶ್ವರಯ್ಯನವರು ಹಾಕಿಕೊಟ್ಟ ದಾರಿಯಲ್ಲಿ ಕಾರ್ಖಾನೆ ದಿನದಿನಕ್ಕೂ ತನ್ನ ಪ್ರಾರಂಭಿಕ ತೊಂದರೆಗಳನ್ನು ನಿವಾರಿಸುವುದರಲ್ಲಿ ದೃಢ ಹೆಜ್ಜೆಗಳನ್ನಿಡುತ್ತಿತ್ತು. ಇಷ್ಟಾದರೂ ಅದು ತನ್ನ ಕಾಲ ಮೇಲೆ ನಿಲ್ಲುವ ಶಕ್ತಿ ಹೊಂದಿರಲಿಲ್ಲ. ಕಾರ್ಖಾನೆಯ ಉತ್ಪಾದನೆಗಳಿಗೆ ಬೇಡಿಕೆಯಿಲ್ಲದೆ ಕಾರ್ಖಾನೆಯ ಆರ್ಥಿಕ ಸ್ಥಿತಿ ಬಹಳ ಶೋಚನೀಯ ಸ್ಥಿತಿಯಲ್ಲಿತ್ತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಕಾರ್ಖಾನೆಯನ್ನು ಮುಚ್ಚದೆ ನಡೆಸುವುದು ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಮೇಲೆ ದುಷ್ಪರಿಣಾಮವಾಗುವುದು ಮತ್ತು ಈ ಕಾರ್ಖಾನೆ ಚಿನ್ನದ ಗಣಿಯಾಗುವ ಬದಲು ಒಂದು ಬಿಳಿ ಆನೆಯಾಗಿ ಪರಿಣಮಿಸಿದೆ ಎಂದು ಅಂದಿನ ಪ್ರಜಾಪ್ರತಿನಿದಿ ಸಭೆಯಲ್ಲಿ ಹಲವಾರು ಪ್ರಮುಖ ವ್ಯಕ್ತಿಗಳು ಟೀಕೆಗಳನ್ನು ಮಾಡಿದರು. ಈ ಟೀಕೆಗಳ ಪರಿಣಾಮವಾಗಿ ಸರ್ಕಾರ ಈ ಕಾರ್ಖಾನೆಯನ್ನು ಲಾಭದಾಯಕವಾಗಿ ಮಾಡುವ ದಿಶೆಯಲ್ಲಿ ಮತ್ತೆ ವಿಶ್ವೇಶ್ವರಯ್ಯನವರ ಸೇವೆಯನ್ನು ಪಡೆಯಿತು.

ಅವರು ಕಾರ್ಖಾನೆಯ ಉತ್ಪಾದನೆಗಳಿಗೆ ಸರಿಯಾದ ಮಾರುಕಟ್ಟೆಯನ್ನು ಕಂಡು ಹಿಡಿಯುವುದರಲ್ಲಿ ಯಶಸ್ವಿಯಾದರು. ಅದೇ ರೀತಿ ಒಂದು ಕಬ್ಬಿಣದ ಎರಕದ ಕೊಳವೆ ಘಟಕವನ್ನು ಸಹ ಸ್ಥಾಪಿಸಿದರು. ಇದರಿಂದಾಗಿ ಕಾರ್ಖಾನೆ ತನ್ನ ಕಾಲಮೇಲೆ ನಿಲ್ಲುವ ಸ್ಥಿತಿಯನ್ನು ತಲುಪಿತು ಮತ್ತು ಸರ್ಕಾರಕ್ಕೆ ಲಾಭವನ್ನೂ ತರುವಂತಾಯಿತು. ಇದಾದನಂತರ ಕಾರ್ಖಾನೆ ಹಿನ್ನಡೆಯಲಿಲ್ಲ, ಉತ್ತರೋತ್ತರ ಬೆಳೆಯತೊಡಗಿತು.

ಕಾರ್ಖಾನೆಯ ಬೆಳವಣಿಗೆಯಲ್ಲಿ ಮತ್ತೊಂದು ಮೈಲಿಗಲ್ಲು -ಉಕ್ಕಿನ ಉತ್ಪಾದನೆ. ಇದಕ್ಕಾಗಿ 1936ರಲ್ಲಿ 25 ಟನ್ ತೆರೆದ ಕುಲುಮೆಯನ್ನೂ ಇದಕ್ಕೆ ಪೂರಕವಾಗಿ ಉಕ್ಕಿನ ಸರಳುಗಳನ್ನು ತಯಾರಿಸುವ ರೋಲಿಂಗ್ ಮಿಲ್ಲನ್ನು ಸ್ಥಾಪಿಸಲಾಯಿತು. ಇದೇ ವರ್ಷ ಕಾರ್ಖಾನೆಯ ಹೆಸರನ್ನು ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಎಂದು ಬದಲಾಯಿಸಲಾಯಿತು.

ಕಾರ್ಖಾನೆಯ ಆರ್ಥಿಕ ಸ್ಥಿತಿಯನ್ನು ವಿಶಾಲ ತಳಹದಿಯ ಮೇಲೆ ನಿಲ್ಲಿಸಲು 1938ರಲ್ಲಿ ಸಿಮೆಂಟ್ ಉತ್ಪಾದನೆ ಘಟಕವನ್ನು ಸ್ಥಾಪಿಸಲಾಯಿತು. 1942ರಲ್ಲಿ ಫೆರೋಸಿಲಿಕಾನ್ ಉತ್ಪಾದನಾ ಆರಂಭವಾಯಿತು. ಇದು ಒಂದು ದೊಡ್ಡ ಸಾಧನೆಯೇ ಎನ್ನಬೇಕು. ಏಕೆಂದರೆ ಇಂಥ ಒಂದು ಘಟಕ ಏಷ್ಯದಲ್ಲೇ ಪ್ರಪ್ರಥಮ. 1942ರಲ್ಲಿ ರಾಜ್ಯದ ಆವಶ್ಯಕತೆಯನ್ನು ಪೂರೈಸಲು ಒಂದು ಉಕ್ಕಿನ ಎರಕದ ಘಟಕವನ್ನು ಸ್ಥಾಪಿಸಲಾಯಿತು.

ಎರಡನೆಯ ಮಹಾಯುದ್ಧದ ದೆಸೆಯಿಂದ ರಾಜ್ಯದ ಉಕ್ಕಿನ ಉದ್ಯಮ ಆರ್ಥಿಕವಾಗಿ ದೃಢವಾಯಿತು. ಸ್ವಾತಂತ್ರ್ಯದ ಅನಂತರ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಗಾರಿಕಾ ನೀತಿಯಂತೆ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ರಾಷ್ಟ್ರದ ಕಬ್ಬಿಣ ಮತ್ತು ಉಕ್ಕಿನ ಉದ್ಯಮದ ಬೆಳವಣಿಗೆಗೆ ಸಹಾಯಕವಾಗುವಂತೆ ಯೋಜನೆಗಳನ್ನು ರೂಪಿಸಿತು. ಇದರ ಅಂಗವಾಗಿ ಏಷ್ಯದಲ್ಲೇ ಪ್ರಪ್ರಥಮವಾಗಿ ವಿದ್ಯುತ್ ಕುಲುಮೆಯಿಂದ ಬೀಡು ಕಬ್ಬಿಣವನ್ನು ತಯಾರು ಮಾಡುವ ಘಟಕವನ್ನು 1951ರಲ್ಲಿ

ಸ್ಥಾಪಿಸಲಾಯಿತು. ಇದು ಕಾರ್ಖಾನೆಯ ಇತಿಹಾಸದಲ್ಲಿ ಮತ್ತೊಂದು ಮೈಲಿಗಲ್ಲು. 1957ರಲ್ಲಿ ತಿರುಗಣಿ ಕೊಳಾಯಿಯ ಘಟಕ ಸ್ಥಾಪಿತವಾಯಿತು.

1962ರಲ್ಲಿ ಈ ಕಾರ್ಖಾನೆ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಂಪನಿ ಎಂಬ ಹೆಸರಿನಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಯಿತು. ಇದೇ ಸಮಯಕ್ಕೆ ಮೆದು ಉಕ್ಕಿನ ಉತ್ಪಾದನೆಯನ್ನು ವಿಸ್ತರಿಸಲು ನಿರ್ಧರಿಸಲಾಯಿತು. ಇದಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಪೂರೈಸಲು ಪಶ್ಚಿಮ ಜರ್ಮನಿಯ ಮೂರು ಸಂಸ್ಥೆಗಳೊಡನೆ ಒಪ್ಪಂದವಾಯಿತು. ಇದರಿಂದ 80,000 ಟನ್ ಮೆದು ಉಕ್ಕನ್ನು ತಯಾರಿಸುವ ಸಾಮರ್ಥ್ಯವನ್ನು ಕಾರ್ಖಾನೆ ಹೊಂದಲು ಸಜ್ಜಾಯಿತು. ಇದನ್ನು ಸಾಧಿಸಲು 20 ಟನ್ ವಿದ್ಯುತ್ ಉಕ್ಕಿನ ಕುಲುಮೆ ಮತ್ತು ಬ್ಲೂಮಿಂಗ್ ಮಿಲ್ ಘಟಕಗಳನ್ನು ಸ್ಥಾಪಿಸಲಾಯಿತು. ಈ ಯೋಜನೆ ಕಾರ್ಯಗತವಾಗುತ್ತಿದ್ದ ಕಾಲದಲ್ಲಿ ಕೇಂದ್ರ ಸರ್ಕಾರ ಬೃಹತ್ ಉಕ್ಕಿನ ಕಾರ್ಖಾನೆಗಳನ್ನು ರೂರ್ಕೆಲ, ಭಿಲೈ ಮತ್ತು ದುರ್ಗಾಪುರದಲ್ಲಿ ಸ್ಥಾಪಿಸಲು ನಿರ್ಧರಿಸಿತು. ಬೃಹತ್ ಕಾರ್ಖಾನೆಗಳೊಡನೆ ಮೆದು ಉಕ್ಕಿನ ಮಾರುಕಟ್ಟೆಯಲ್ಲಿ ಈ ಸಣ್ಣ ಕಾರ್ಖಾನೆ ಲಾಭದಾಯಕವಾಗಿ ಮೆದು ಉಕ್ಕನ್ನು ಸರಬರಾಜು ಮಾಡಲು ಅಶಕ್ತವಾಯಿತು. ಈ ಸಂದರ್ಭ ರಾಜ್ಯದ ಉದ್ಯಮಕ್ಕೆ ವರವಾಗಿ ಪರಿಣಮಿಸಿತು. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ರಾಷ್ಟ್ರದ ಮಿಶ್ರ ಮತ್ತು ವಿಶೇಷ ಉಕ್ಕಿನ ಬೇಡಿಕೆಯನ್ನು ಪೂರೈಸಲು ಸಹಾಯಕವಾಗುವಂತೆ ಒಂದು ಮಿಶ್ರ ಮತ್ತು ವಿಶೇಷ ಉಕ್ಕಿನ ಘಟಕವನ್ನಾಗಿ ಪರಿವರ್ತಿಸುವ ನಿರ್ಧಾರವಾಯಿತು. ಈ ನಿರ್ಧಾರದಂತೆ ವರ್ಷ ಒಂದಕ್ಕೆ 77,000 ಟನ್ ಮಿಶ್ರ ಮತ್ತು ವಿಶೇಷ ಉಕ್ಕನ್ನು ತಯಾರಿಸುವ ಯೋಜನೆ ಸಿದ್ಧವಾಯಿತು. ಈ ಪರಿವರ್ತನೆಗಾಗಿ ಮತ್ತೆರಡು ವಿದ್ಯುತ್ ಉಕ್ಕಿನ ಕುಲುಮೆ, ಸರಳುಗಳನ್ನು ತಯಾರಿಸುವ ಘಟಕ ಮತ್ತು ಹದ ಮಾಡುವ ಘಟಕ - ಈ ಸ್ಥಾವರಗಳನ್ನು ಸ್ಥಾಪಿಸಲಾಯಿತು. ಈ ಎಲ್ಲ ಘಟಕಗಳಿಂದ 1965 ರಿಂದ ಉತ್ಪಾದನೆ ಪ್ರಾರಂಭವಾಯಿತು. ಮೇಲಿನ ಯೋಜನೆಯಿಂದಾಗಿ ಹೆಚ್ಚಿನ ಬೀಡು ಕಬ್ಬಿಣದ ಆವಶ್ಯಕತೆಯನ್ನು ಪೂರೈಸಲು 1972ರಲ್ಲಿ ಮತ್ತೆರಡು ವಿದ್ಯುತ್ ಬೀಡು ಕಬ್ಬಿಣ ಕುಲುಮೆಗಳು ಆರಂಭವಾದುವು. ಕೆಲವು ಬಗೆಯ ಮಿಶ್ರ ಮತ್ತು ವಿಶೇಷ ಉಕ್ಕನ್ನು ಫೋರ್ಜ್ ಮಾಡಬೇಕಾಗಿರುವುದರಿಂದ ಒಂದು ಫೋರ್ಜ್ ಪ್ಲಾಂಟನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಈ ಘಟಕ 1978ರ ಸುಮಾರಿಗೆ ಉತ್ಪಾದನೆಯನ್ನು ಆರಂಭಿಸಿತು. ಇದು ಸ್ಥೂಲವಾಗಿ ನಮ್ಮ ರಾಜ್ಯದಲ್ಲಿನ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಬೆಳವಣಿಗೆಯೆಂದೇ ಹೇಳಬಹುದು. ಏಕೆಂದರೆ ಈ ಶತಮಾನದ ಸುಮಾರು 7ನೆಯ ದಶಕದವರೆಗೂ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ಈಗ ಇದಕ್ಕೆ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಎಂದು ನಾಮಕರಣ ಮಾಡಲಾಗಿದೆ, 1976) ಮತ್ತು ರಾಷ್ಟ್ರದಲ್ಲಿನ ಸಾರಿಗೆ ಉದ್ಯಮದ ಸ್ಪ್ರಿಂಗ್ ಸ್ಟೀಲ್ ಆವಶ್ಯಕತೆಗಳನ್ನು ಪೂರೈಸಲು ಮಂಗಳೂರಿನಲ್ಲಿ ಖಾಸಗಿ ಸಂಸ್ಥೆಯ ಒಂದು ಸಣ್ಣ ಸ್ಪ್ರಿಂಗ್ ಕಾರ್ಖಾನೆಯನ್ನು ಬಿಟ್ಟರೆ ರಾಜ್ಯದಲ್ಲಿ ಈ ಬಗೆಯ ಉಕ್ಕನ್ನು ತಯಾರಿಸುವ ಬೇರಾವ ಸಂಸ್ಥೆಗಳಿರಲಿಲ್ಲ.

1970ರ ದಶಕದಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಬೀಡು ಕಬ್ಬಿಣ ತಯಾರಿಸುವ ಘಟಕವನ್ನು ಖಾಸಗಿ ಸಂಸ್ಥೆಯೊಂದು ಸ್ಥಾಪಿಸಿತು. ಈಗ ರಾಷ್ಟ್ರದ ಹೆಚ್ಚುವರಿ ಉಕ್ಕಿನ ಬೇಡಿಕೆಯನ್ನು ಪೂರೈಸಲು ಕೇಂದ್ರ ಸರ್ಕಾರ ಮಿನಿ ಸ್ಟೀಲ್ ಪ್ಲಾಂಟ್‌ಗಳನ್ನು ಸ್ಥಾಪಿಸಲು ಖಾಸಗಿ ಸಂಸ್ಥೆಗಳಿಗೆ ಅನುಮತಿಯನ್ನಿತ್ತಿದೆ. ಇದಕ್ಕನುಗುಣವಾಗಿ ಬೆಂಗಳೂರಿನಲ್ಲಿ ಇಂಥ ಎರಡು ಸಂಸ್ಥೆಗಳು ಉಕ್ಕನ್ನು ಉತ್ಪಾದಿಸುತ್ತಿವೆ. ಇದೇ ರೀತಿ ಇನ್ನೂ ಒಂದೆರಡು ಘಟಕಗಳು ನಿರ್ಮಾಣವಾಗುತ್ತಿವೆ. ಈ ಘಟಕಗಳಲ್ಲಿ ಹಳೆಯ ಕಬ್ಬಿಣದ ಚೂರುಗಳನ್ನು ಕರಗಿಸಿ ಎರಕ ಹೊಯ್ದು ಸರಳುಗಳನ್ನಾಗಿ ಪರಿವರ್ತಿಸಲಾಗುತ್ತದೆ. ಕೆಲವು ಸಣ್ಣ ರಿರೋಲಿಂಗ್ ಮಿಲ್‌ಗಳೂ ಸ್ಥಾಪಿಸಲ್ಪಟ್ಟಿವೆ. ರಾಜ್ಯದ ಕಬ್ಬಿಣ ಉದ್ಯಮದ ಇತಿಹಾಸದಲ್ಲಿ ಕುದುರೆಮುಖ (ನೋಡಿ) ಕಬ್ಬಿಣ ಮತ್ತು ಉಕ್ಕು ಉತ್ಪಾದನೆ ಯೋಜನೆ ಮಹತ್ತರವಾದುದು. 1970ರ ದಶಕದಲ್ಲಿ ವಿಶೇಷವಾಗಿ ರಫ್ತು ಉದ್ದೇಶದಿಂದ ಈ ಯೋಜನೆಯನ್ನು ಕೈಗೊಳ್ಳಲಾಯಿತು. ಇದು ಏಷ್ಯಾದಲ್ಲೇ ಅತಿ ದೊಡ್ಡ ಯೋಜನೆಯೆಂದು ಪ್ರಸಿದ್ಧವಾಗಿದೆ. (ಕೆ.ಬಿ.ಜಿ.)

**ಕಬ್ಬು :** ಕರ್ನಾಟಕದಲ್ಲಿ ಕಬ್ಬನ್ನು ಎಲ್ಲ ಜಿಲ್ಲೆಗಳಲ್ಲೂ ಬೆಳೆಸಲಾಗುತ್ತಿದೆ. ಬೆಳೆಯ ಪ್ರದೇಶದ ವಿಸ್ತೀರ್ಣ ಜಿಲ್ಲೆಯಲ್ಲಿನ ವಾತಾವರಣ ಮತ್ತು ಅನುಕೂಲತೆಗಳನ್ನನುಸರಿಸುತ್ತದೆ. ರಾಜ್ಯದಲ್ಲಿ ಕಬ್ಬಿನ ಬೆಳೆಸು ನೀರಿನ ಸೌಲಭ್ಯವಿದ್ದೆಡೆ ಮಾತ್ರ ಸಾಧ್ಯ. ವಾಯುಗುಣ ಮತ್ತು ಮಣ್ಣಿನ ವೈವಿಧ್ಯ ಹೆಚ್ಚಾಗಿರುವುದರಿಂದ ಕೆಲವೆಡೆಗಳಲ್ಲಿ ಕಬ್ಬು ಹೆಚ್ಚಾಗಿ ಬೆಳೆಸಲಾಗುವುದಿಲ್ಲ. ಮಂಡ್ಯ, ರಾಯಚೂರು, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಬಿಜಾಪುರ, ಬಾಗಲಕೋಟೆ, ಧಾರವಾಡ, ಉತ್ತರ ಕನ್ನಡ, ಕೊಪ್ಪಳ, ಚಿಕ್ಕಮಗಳೂರು, ಹಾಸನ, ಚಾಮರಾಜನಗರ, ಬೆಳಗಾಂವಿ, ಬೀದರ್, ಶಿವಮೊಗ್ಗ, ಕೋಲಾರ, ಮತ್ತು ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಕಬ್ಬಿನ ಬೆಳೆಸು ಹೆಚ್ಚು. ಬೆಳಗಾಂವಿ ಜಿಲ್ಲೆ ವಿಸ್ತೀರ್ಣದಲ್ಲಿ ಸುಮಾರು ಶೇ.22 ಭಾಗ ಹೊಂದಿ ಪ್ರಥಮ ಸ್ಥಾನವನ್ನೂ ಬಳ್ಳಾರಿ ಮತ್ತು ಮಂಡ್ಯ ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನೂ ಗಳಿಸಿವೆ. ಕೊಡಗು ಜಿಲ್ಲೆಯ ಕಬ್ಬು ಬೆಳೆಯುವ ಪ್ರದೇಶ ಅತಿ ಕಡಿಮೆ.

ಈಗ ಸು.338761ಹೇ.ಗಳಲ್ಲಿ 34,770,919 ಟನ್ ಕಬ್ಬು ಬೆಳೆಯಲಾಗುತ್ತಿದೆ. ಕರ್ನಾಟಕದ ಎಕರೆವಾರು ಇಳುವರಿ ಭಾರತದಲ್ಲೇ ಅತ್ಯಧಿಕವಾಗಿದ್ದು ಸುಮಾರು 33 ರಿಂದ 36 ಟನ್ನುಗಳಷ್ಟಿದೆ. ಆದರೆ ಸಕ್ಕರೆ ಇಳುವರಿಯಲ್ಲಿ ಮಹಾರಾಷ್ಟ್ರ ಪ್ರಥಮ ಸ್ಥಾನಗಳಿಸಿ, ಕರ್ನಾಟಕಕ್ಕೆ ದ್ವಿತೀಯ ಸ್ಥಾನ ದೊರೆತಿದೆ. ಕರ್ನಾಟಕದಲ್ಲಿ ಒಟ್ಟು 35 ಕಾರ್ಖಾನೆಗಳಿವೆ.

ಕರ್ನಾಟಕದಲ್ಲಿ ಕಬ್ಬನ್ನು ಮೂರು ಗಿಣ್ಣುಗಳಿರುವ ಕಬ್ಬಿನ ಜಲ್ಲೆಯ ತುಂಡುಗಳನ್ನು ಕುರಿಕೆ ನೆಡುವುದರಿಂದ ಬೆಳೆಸಲಾಗುತ್ತಿದೆ. ಇದಕ್ಕೆ ಬಿತ್ತನೆ ಎಂದು ಹೆಸರು. ಕಬ್ಬಿಗೆ ಬೀಜವೂ ಇದೆ. ನವೆಂಬರ್-ಜನವರಿ ವೇಳೆಯಲ್ಲಿ ಆಕರ್ಷಕ ಹೂ ಗೊಂಚಲು ಹೊರಬೀಳುತ್ತದೆ. ಇದನ್ನು ಸೂಲಂಗಿ ಎಂದು ಕರೆಯುತ್ತಾರೆ. ಇದರಲ್ಲಿ ಸೂಕ್ಷ್ಮಗಾತ್ರದ ಬೀಜ ಉತ್ಪನ್ನವಾಗುತ್ತದೆ. ಈ ಬೀಜವನ್ನು ನೆಟ್ಟು, ಸಸಿ ಉತ್ಪನ್ನಮಾಡಿ ನೆಡಬಹುದು. ಆದರೆ ಅದರಲ್ಲಿ ವೈವಿಧ್ಯ ಹೆಚ್ಚು. ಪ್ರತಿ ಸಸಿಯೂ ಬೇರೆ ರೀತಿಯಾಗಬಹುದು. ಯಾವುದೂ ತಾಯಿಯನ್ನು ಹೋಲದಿರಬಹುದು. ಆದ್ದರಿಂದ ಹೊಸ ತಳಿಗಳ ಉತ್ಪಾದನೆಯಲ್ಲಿ ಮಾತ್ರ ಈ ಕ್ರಮವನ್ನನುಸರಿಸಿ ಸಾಮಾನ್ಯ ಬೆಳೆಯನ್ನು ನಿರ್ಲಿಂಗ ರೀತಿಯಲ್ಲಿ ಕಬ್ಬಿನ ತುಂಡನ್ನು ನೆಟ್ಟು ಬೆಳೆಸಲಾಗುತ್ತದೆ. ಇದರಿಂದ ಜಾತಿಯ ವ್ಯತ್ಯಾಸವಿಲ್ಲದೆ ಗೊತ್ತಾದ ನಿರ್ದಿಷ್ಟ ಮಿತಿಯಲ್ಲೇ ಬೆಳೆ ಕೈಸೇರುತ್ತದೆ.

ಕಬ್ಬನ್ನು ವರ್ಷದ ಯಾವ ಕಾಲದಲ್ಲಾದರೂ ನೆಟ್ಟು ಬೆಳೆಸಬಹುದು. ಚಳಿಗಾಲದಲ್ಲಿ ಮಾತ್ರ ಮೊಳಕೆ ಹೊರಡುವುದು ನಿಧಾನ. ಇದಕ್ಕೆ ಫಲವತ್ತಾದ ಭೂಮಿ ಉತ್ತಮ. ಆಳವಾಗಿ ಉತ್ತು, ಹದಮಾಡಿ, 3-4 ಅಡಿಗಳಿಗೊಂದರಂತೆ ಸಾಲು ತೆಗೆದು ಸಿದ್ಧಪಡಿಸಿದ ಅನಂತರ ನೀರು ಬಸಿಯುವ ಕಡಗುಗಳನ್ನೂ ನೀರು ಕಟ್ಟಲು ಅನುಕೂಲವಾಗುವಂತೆ ಅಲ್ಲಲ್ಲಿ ನೀರು ಕಾಲುವೆಗಳನ್ನು ತೆಗೆದು ಕಾಲುವೆಗಳಲ್ಲಿ ನೀರು ಹರಿಸಿ, ಬಿತ್ತನೆಗಳನ್ನೂ ಒತ್ತಾಗಿ ಹರಡಿ, ಮಣ್ಣಿನೊಳಗೆ ಪೂರ್ಣವಾಗಿ ಮುಚ್ಚಿಕೊಳ್ಳುವಂತೆ ಹೂತು ನಾಟಿ ಮಾಡುವುದುಂಟು. ಕೆಲವೆಡೆ ಪೂರ್ಣ ಕಬ್ಬನ್ನೇ ನೆಡುವುದೂ ಇತರೆಡೆ 3"-4" ಅಗಲದ ಪಾತಿಮಾಡಿ, ಮೂರು ಅಡಿ ಅಂತರದಲ್ಲಿ ಗುಳಿ ಮಾಡಿ ಅಲ್ಲಿ ಬಿತ್ತನೆ ನೆಡುವುದು ಮೊದಲಾದವು ಸ್ಥಳಕ್ಕೆ ತಕ್ಕ ಅನುಕೂಲ ವಿಧಾನಗಳು ರೂಢಿಯಲ್ಲಿವೆ. ಕಬ್ಬು ಪೂರ್ಣ ಬೆಳೆಯಲು ಸಾಧಾರಣವಾಗಿ 12-14 ತಿಂಗಳ ಅವಧಿ ಅಗತ್ಯ.

ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಕಬ್ಬಿನ ಬೆಳೆಯ ವಿಸ್ತೀರ್ಣ ಮತ್ತು ಉತ್ಪತ್ತಿ (1998-99)

| ಕ್ರ.ಸಂ. | ಜಿಲ್ಲೆಯ ಹೆಸರು | ವಿಸ್ತೀರ್ಣ ಹೆಕ್ಟೇರುಗಳಲ್ಲಿ | ಇಳುವರಿ ಮೆ.ಟನ್ನುಗಳಲ್ಲಿ |
|---|---|---|---|
| 1 | ಬೆಂಗಳೂರು | 67 | 6,874 |
| 2 | ಬೆಂಗಳೂರು ಗ್ರಾ. | 1,018 | 1,04,447 |
| 3 | ಚಿತ್ರದುರ್ಗ | 772 | 54,272 |
| 4 | ದಾವಣಗೆರೆ | 12,519 | 8,80,086 |
| 5 | ಕೋಲಾರ | 3,803 | 2,67,351 |

| | | | |
|---|---|---|---|
| 6 | ಶಿವಮೊಗ್ಗ | 11,233 | 1,248,548 |
| 7 | ತುಮಕೂರು | 1,017 | 133,329 |
| | **ಬೆಂಗಳೂರು ವಿಭಾಗ** | **30,429** | **2,694,907** |
| 8 | ಬೆಳಗಾಂವಿ | 1,24,020 | 1,23,70,995 |
| 9 | ಬಿಜಾಪುರ | 13,456 | 15,72,234 |
| 10 | ಬಾಗಲಕೋಟೆ | 49,449 | 57,78,116 |
| 11 | ಧಾರವಾಡ | 3,628 | 3,10,194 |
| 12 | ಗದಗ | 77 | 7,900 |
| 13 | ಹಾವೇರಿ | 6,078 | 5,19,669 |
| 14 | ಉತ್ತರ ಕನ್ನಡ | 1,775 | 1,97,291 |
| | **ಬೆಳಗಾಂವಿ ವಿಭಾಗ** | **198,483** | **20,756,499** |
| 15 | ಬಳ್ಳಾರಿ | 7,834 | 6,54,922 |
| 16 | ಬೀದರ್ | 24,518 | 17,70,200 |
| 17 | ಗುಲ್ಬರ್ಗ | 8,658 | 8,22,510 |
| 18 | ರಾಯಚೂರು | 134 | 13,748 |
| 19 | ಕೊಪ್ಪಳ | 1,956 | 2,00,686 |
| | **ಗುಲ್ಬರ್ಗ ವಿಭಾಗ** | **43,100** | **3,462,066** |
| 20 | ಚಿಕ್ಕಮಗಳೂರು | 1,560 | 1,24,488 |
| 21 | ದಕ್ಷಿಣ ಕನ್ನಡ | 565 | 45,087 |
| 22 | ಉಡುಪಿ | 1,729 | 1,37,974 |
| 23 | ಹಾಸನ | 5,327 | 4,70,640 |
| 24 | ಕೊಡಗು | 7 | 718 |
| 25 | ಮಂಡ್ಯ | 30,630 | 40,15,593 |
| 26 | ಮೈಸೂರು | 9,441 | 7,53,392 |
| 27 | ಚಾಮರಾಜನಗರ | 17,490 | 23,09,555 |
| | **ಮೈಸೂರು ವಿಭಾಗ** | **66,749** | **78,57,447** |
| | **ರಾಜ್ಯ** | **3,38,761** | **3,47,70,919** |

ಆಧಾರ: ಕರ್ನಾಟಕ ಅಂಕಿಅಂಶಗಳ ನೋಟ 2000-2001

ಕಬ್ಬಿನಲ್ಲಿ ಕಾರ್ಬೋಹೈಡ್ರೈಟ್ ಶೇ.22.5, ನೀರು ಶೇ.77.0, ಪ್ರೋಟೀನ್ ಶೇ.0.2 ಕಾಣುತ್ತಿದೆ. 100ಗ್ರಾಂ ತಾಜಾ ಕಬ್ಬಿನ ಹಾಲಿನಲ್ಲಿ ಕ್ಯಾಲ್ಸಿಯಂ 7.4ಮಿ.ಗ್ರಾಂ, ರಂಜಕ 0.12ಮಿ.ಗ್ರಾಂ, ಕಬ್ಬಿಣ 6.4ಮಿ.ಗ್ರಾಂ, ಪೊಟ್ಯಾಸಿಯಂ 3.6ಮಿ.ಗ್ರಾಂ ಇದೆ. 100ಗ್ರಾಂ. ಕಬ್ಬಿನ ರಸದಲ್ಲಿ 210 ಕ್ಯಾಲರಿ ಶಕ್ತಿ ದೊರೆಯುವುದು. ಹೃದಯದ ತೊಂದರೆ ಇರುವವರು ಕಬ್ಬಿನ ಹಾಲನ್ನು ನಿಯಮಿತವಾಗಿ ಸೇವಿಸುವುದರಿಂದ ಹೃದಯ ಉತ್ತಮವಾಗಿ ಕಾರ್ಯನಿರ್ವಹಿಸುವುದು. ಹಾಲುಣಿಸುವ ತಾಯಂದಿರು ಕಬ್ಬಿನ ಹಾಲು ಸೇವಿಸುವುದರಿಂದ ಎದೆಹಾಲು ಹೆಚ್ಚುವುದು. ಇದು ಪಿತ್ತ ಶಮನಕಾರಿಯೂ ಹೌದು. ಕಾಮಾಲೆ ಆದವರಿಗೆ ಕಬ್ಬಿನ ಹಾಲು ರಾಮಬಾಣ. ಪ್ರತಿದಿನ ಸೇವಿಸುವುದರಿಂದ ಯಕೃತ್ತಿನ ಕಾರ್ಯಕ್ಷಮತೆ ಹೆಚ್ಚುವುದು. ಮೂತ್ರ ಕೋಶದಲ್ಲಿ ಹರಳು ಉಳ್ಳವರಿಗೂ ಕಬ್ಬಿನ ಹಾಲು ಸೇವನೆ ಪ್ರಯೋಜನ ಕಾರಿ.

ಭಾರತದಲ್ಲಿ ಕಬ್ಬಿಗೆ ಉಪದ್ರವಕಾರಿಗಳಾದ ಕೀಟಗಳಲ್ಲಿ ಕಾಂಡ ಕೊರೆಯುವ ಹುಳ, ಪೈರಿಲ ಮತ್ತು ಸುಳಿ ಅಥವಾ ತುದಿ ಕೊರೆಯುವ ಹುಳು ಮುಖ್ಯವಾದುವು. ಕಾಂಡ ಕೊರೆಯುವ ಕೀಟಗಳು ಹಲವಾರು. ಅವು ಮೃದುಕಾಂಡ ಕೊರೆದು ತಿಂದು ಸುಳಿ ಒಣಗಿಸುತ್ತವೆ. ಒಂದು ಸುಳಿ ಸತ್ತಲ್ಲಿ ಒಂದು ಕಬ್ಬು ಹೋದಂತೆ. ಸುಳಿ ಕೊರೆಯುವ ಹುಳುಗಳ ಹಾವಳಿಯಿಂದ ತುದಿಯಲ್ಲಿನ ಎಲೆಗಳು ನಾಶವಾಗಿ, ಮಧ್ಯೆ ಎಲೆಗಳಲ್ಲಿ ತೂತುಗಳು ಮಾಡಿ, ಅಂಚೆಲ್ಲ ಕಚ್ಚುಕಚ್ಚಾಗುತ್ತದೆ. ಕಬ್ಬಿನ ತುದಿಯಲ್ಲಿನ ಮೊಗ್ಗುಗಳು ಬೆಳೆದು ತುದಿ ಕುಚ್ಚು ಕುಚ್ಚಾಗುತ್ತದೆ. ಪೈರಿಲ ಕೀಟಗಳು ಮರಿಗಳ ಸಮೇತ ಎಲೆಗಳ ತಳಭಾಗದಲ್ಲಿ ತಂಗಿದ್ದು, ರಸಹೀರಿ ಎಲೆ ಹಳದಿಯಾಗಿ ಸುಕ್ಕುಗಟ್ಟುವಂತೆ ಮಾಡುತ್ತವೆ. ಅವುಗಳ ಮೈಯಿಂದ ಸಿಹಿ ಅಂಟು ರಸ ಜಿನುಗುವುದರಿಂದ ಅಲ್ಲೆಲ್ಲಾ ಕಪ್ಪು ಬೂಷ್ಟು ಬೆಳೆದು ಹರಡುತ್ತದೆ. ಅಲ್ಲದೆ ಆ ಸಿಹಿ ರಸ ಹೀರಲು ಸಹಸ್ರಾರು ಇರುವೆಗಳು ಸೇರಿ, ಮರಿಗಳನ್ನು ಎಲೆಯಿಂದ ಎಲೆಗೆ ವರ್ಗಾಯಿಸಿ ಹರಡುತ್ತವೆ. ಕಬ್ಬಿಗೆ ಗೆದ್ದಲಿನ ಕಾಟವೂ ಹೆಚ್ಚು. ಅಲ್ಲದೆ ಇಲಿ, ನರಿ, ಆನೆ, ಹಂದಿ ಮುಂತಾದುವುಗಳಿಂದಲೂ ಇದಕ್ಕೆ ಹಾನಿಯುಂಟು.

ಕಬ್ಬಿಗೆ ಅನೇಕ ರೋಗಗಳೂ ತಗಲುತ್ತವೆ. ತುಕ್ಕುರೋಗ, ಕಾಡಿಗೆ ರೋಗ, ಕೆಂಪುಕೊಳೆ ರೋಗ, ಬಾಡುವ ರೋಗ, ಕಂದುಚುಕ್ಕೆ ರೋಗ, ಕಪ್ಪುಕೊಳೆ ರೋಗ ಇವುಗಳಲ್ಲಿ ಮುಖ್ಯವಾದವು. ತುಕ್ಕು ರೋಗದ ಮಚ್ಚೆಗಳು ಎಲೆಗಳ ಎರಡೂ ಕಡೆಯೂ ಹರಡಿ ಎದ್ದು ಕಾಣುತ್ತವೆ. ಕಾಡಿಗೆ ರೋಗದ ಕಬ್ಬಿನ ತುದಿ ನೀಳ ಕಪ್ಪು ಚಾಟಿಯಂತೆ ಬೆಳೆದು, ಅದನ್ನು ಆವರಿಸಿರುವ ತೆಳುಪೊರೆ ಮುಂದೆ ಸೀಳಿ ಅತಿ ಸೂಕ್ಷ್ಮಗಾತ್ರದ ಪುಡಿ ಬೀಜಾಣುಗಳು ಹೊರಬೀಳುತ್ತವೆ. ಕೆಂಪು ಕೊಳೆ ರೋಗದಿಂದ ತುದಿಯಲ್ಲಿನ 3 ಅಥವಾ 4ನೆಯ ಎಲೆ ಇದ್ದಕ್ಕಿದ್ದಂತೆ ಮಾಸಲು ಹಳದಿ ಬಣ್ಣಕ್ಕೆ ತಿರುಗಿ ಬಾಡುತ್ತದೆ. ಕಬ್ಬನ್ನು ಸೀಳಿದಲ್ಲಿ ತಳಭಾಗದಲ್ಲಿ ಕೆಂಪು ಬಣ್ಣವಿದ್ದು ಕೊಳೆತ ವಾಸನೆ ಬರುತ್ತದೆ. ಬಾಡುವ ರೋಗದಲ್ಲೂ ಕಬ್ಬಿನ ಮಧ್ಯಭಾಗವೆಲ್ಲ ಪೂರ್ಣ ಕೆಂಪಾಗಿ ಟೊಳ್ಳಾಗುತ್ತದೆ. ಕಂದು ಚುಕ್ಕೆ ರೋಗ ಎಲೆಯ ಅಲಗುಗಳಲ್ಲಿ ಮಾತ್ರ ಕಂಡುಬರುತ್ತದೆ. ಕೆಂಪು ನೀಳಪಟ್ಟೆಗಳು ಅಗಲವಾಗಿ ಬೆಳೆದು, ಮಧ್ಯ ಭಾಗ ಕಂದು ಬಣ್ಣವಾಗಿ ಸುತ್ತಲೂ ಹಳದಿಯಾಗುತ್ತದೆ. ಕಂದು ಭಾಗ ಪೂರ್ಣ ಒಣಗುತ್ತದೆ. ಕಪ್ಪು ಕೊಳೆರೋಗ ಗಾಯದ ಮೂಲಕ ಹರಡುತ್ತದೆ. ಗೋಂದು ರೋಗ ಮತ್ತು ಕೆಂಪು ಪಟ್ಟೆ ರೋಗ ಇತರ ಸಾಮಾನ್ಯ ರೋಗಗಳು. ಈಗ ನಂಜುರೋಗವೂ ಪ್ರಾರಂಭವಾಗಿದೆ. ಎಲೆಗಳ ಮೇಲೆಲ್ಲಾ ತಿಳಿಹಸಿರು ಅಥವಾ ಹಳದಿ ಮಚ್ಚೆಗಳಿರುತ್ತವೆ. ರೋಗ ಕಬ್ಬು ತೆಳುವಾಗಿ, ಗಿಡ್ಡವಾಗಿ ನುಲಿದುಕೊಂಡಂತಿರುತ್ತದೆ. ತುದಿಯ ಬೆಳವಣಿಗೆ ನಿಂತು ಮೊಗ್ಗುಗಳು ಅರಳಿ, ಅಡ್ಡ ಬೆಳೆಯುತ್ತದೆ.

ಕರ್ನಾಟಕದಲ್ಲಿ ಕಬ್ಬಿನಿಂದ ಬೆಲ್ಲ ತಯಾರಿಸುವುದು ಸಕ್ಕರೆಯಂತೆಯೇ ದೊಡ್ಡ ಉದ್ಯಮ. ಬೆಲ್ಲ ಬೆಲೆಯುಳ್ಳ ಖನಿಜಪದಾರ್ಥ. ಇದು ಜೀವಸತ್ವ ಪೌಷ್ಟಿಕಾಂಶಗಳನ್ನು ಹೊಂದಿದೆ. ಕಾಕಂಬಿ, ಕಲ್ಲುಸಕ್ಕರೆ ಮಾಡುವುದೂ ಉಂಟು. ಬೆವರು, ಕೆಮ್ಮು, ಬಾಯಿಹುಣ್ಣು, ನೀರಡಿಕೆಯಲ್ಲಿ ಕೆಂಪು ಕಲ್ಲುಸಕ್ಕರೆ, ಕಬ್ಬಿನ ಹಾಲು, ಯಾಲಕ್ಕಿ ಸೇರಿಸಿ ಸೇವಿಸಬೇಕು. ತರಗಿನಿಂದ ಉತ್ತಮ ಗೊಬ್ಬರವನ್ನೂ ಸಿಪ್ಪೆಯಿಂದ ಕಾಗದ ಮತ್ತು ಮೇಣವನ್ನೂ ಕಾಕಂಬಿಯಿಂದ ಮದ್ಯವನ್ನೂ ಉಳಿಕೆಗಳಿಂದ ಮೇವನ್ನೂ ತಯಾರಿಸಿ ಬಳಸಲಾಗುತ್ತಿದೆ. (ಜಿ.ವಿ.ಬಿ.ಎನ್.)

**ಕಮಡೋಳಿ, ಅಮೀನ್ ಸಾಹೇಬ** : 1900-95. ಚಿತ್ರ ಕಲಾವಿದ. ಇಂದಿನ ಗದಗ ಜಿಲ್ಲೆ ಲಕ್ಷ್ಮೇಶ್ವರದಲ್ಲಿ 1900ರಲ್ಲಿ ಜನಿಸಿದರು. ತಂದೆ ತಾಯಿಯನ್ನು ಕಳೆದುಕೊಂಡ ಬಳಿಕ ಕಲಾಭ್ಯಾಸಕ್ಕಾಗಿ ಮುಂಬೈಗೆ ತೆರಳಿದರು (1918). ಇದಕ್ಕೆ ಅಣ್ಣನ ಪ್ರೋತ್ಸಾಹವೂ ದೊರೆಯಿತು. ಮುಂಬೈಯಲ್ಲಿ ಜೆ.ಜೆ.ಕಲಾ ಶಾಲೆಯನ್ನು ಸೇರಿದರು. ಚಿತ್ರಕಲೆಯ ಅಭ್ಯಾಸ ನಡೆಸುತ್ತಿದ್ದಾಗ ಭಿತ್ತಿರಚನಾ ಕಲೆಯನ್ನೂ ಅಧ್ಯಯನ ಮಾಡಿದರು. ಅಲ್ಲಿಯೇ ಫೆಲೋ ಆಗಿ ನೇಮಕಗೊಂಡರು; ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇವರು ರಚಿಸಿದ ಸ್ಕೆಚ್ ಇನ್ ಲ ಗಾರ್ಡನ್, ತಾಜ್ ಆಟ್ ಆಗ್ರಾ, ಜುಮ್ಮಾಮಸೀದಿ, ಬಾಂಬೆ ಫ್ರಮ್ ಮಲ್‌ಬಾರ್ ಹಿಲ್ಸ್ ಈ - ಕೃತಿಗಳು ಚಿತ್ರಕಲಾಪ್ರದರ್ಶನಗಳಲ್ಲಿ ಜನಮೆಚ್ಚುಗೆ ಗಳಿಸಿದುವು. ಇವರ ಪ್ರೀತಿಯ ಕ್ಷೇತ್ರ ಜಲವರ್ಣ ಮಾಧ್ಯಮ. ತಮ್ಮ ಕುಂಚದ ಮೂಲಕ ಈ ಮಾಧ್ಯಮದಲ್ಲಿ ಅನೇಕ ಅಪೂರ್ವ ನಿಸರ್ಗ ಚಿತ್ರಗಳನ್ನು ಸೆರೆಹಿಡಿದಿದ್ದಾರೆ.

ಹಳ್ಳಿಯ ಸಂತೆ, ಟಿಪ್ಪು ಸಮಾಧಿ, ರಸ್ತೆ ಬದಿಯ ಸರ್ಕಸ್ ಮೊದಲಾದ ತೈಲವರ್ಣದ ಕೃತಿಗಳು ಇವರ ಕಲಾ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ಇವರು ರಚಿಸಿದ ರಾವಣ-ಜಟಾಯು ಕೃತಿ ರವಿವರ್ಮನ ಕೃತಿಗಿಂತ ಭಿನ್ನವಾಗಿದೆ. ಇವರೊಬ್ಬ ಛಾಯಾ ಚಿತ್ರಕಾರರೂ ಆಗಿದ್ದರು. ಧಾರವಾಡದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕಲೆಯನ್ನು ಕಲಿಸುತ್ತಿದ್ದರು. ಆ ಸಂದರ್ಭದಲ್ಲಿ ಮಾಡಲಿಂಗ್ ತರಬೇತಿಯನ್ನು ತೆಗೆದುಕೊಳ್ಳುತ್ತಿದ್ದರು. ಇವರ ಕೃತಿಗಳು ಮುಂಬಯಿಯ ಆರ್ಟ್ ಸೊಸೈಟಿ, ಆಲ್ ಇಂಡಿಯ ಫೈನ್ ಆರ್ಟ್ ಸೊಸೈಟಿ, ಸಿಮ್ಲಾ ಫೈನ್ ಆರ್ಟ್ ಸೊಸೈಟಿ ಹಾಗೂ ಮೈಸೂರು ದಸರಾ ಪ್ರದರ್ಶನಗಳಲ್ಲಿ ಪ್ರದರ್ಶನಗೊಂಡಿದ್ದವು. ಇವರು ಅನೇಕ ಗೌರವ-ಪುರಸ್ಕಾರಗಳಿಗೆ ಪಾತ್ರರಾಗಿದ್ದರು. *

**ಕಮಲಭವ :** ಸು.1235. ಜೈನಕವಿ. ಶಾಂತೀಶ್ವರಪುರಾಣ ಎಂಬ ಚಂಪೂಕಾವ್ಯದ ಕರ್ತೃ. ಕೊಂಡಕುಂದಾನ್ವಯದ ದೇಶಿಯಗಣ ಪುಸ್ತಕಗುಚ್ಛದ ಮಾಘಣಂದಿ ಪಂಡಿತ ಮುನೀಶ್ವರ ಈತನ ಗುರು. ಕವಿ ಯಾದವ ಸಿಂಘಣನ ಕಾಲದಲ್ಲಿ (ಸು.1200-47) ಇದ್ದನೆಂದು ಇವನ ಸಿಂಹಣೋರ್ವೀಶ್ವರ ವಿನಮನ್ಮಸ್ತಕನಾದಂ ಎಂಬ ಉಕ್ತಿಯಿಂದ ಊಹಿಸಬಹುದಾಗಿದೆ. ಪೂರ್ವಕವಿಗಳಲ್ಲಿ ಪಂಪ, ಪೊನ್ನ, ರನ್ನ, ನಾಗಚಂದ್ರ, ನೇಮಿಚಂದ್ರ, ಬಂಧುವರ್ಮ, ಜನ್ನ ಇವರನ್ನು ಸ್ತುತಿಸಿದ್ದಾನೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ (ಸು.1240) ಇವನ ಗ್ರಂಥದಿಂದ ಪದ್ಯಗಳು ಉದ್ಧೃತವಾಗಿರುವುದರಿಂದ, ಇವನಿಗೂ ಮುಂಚಿನವನೆಂದು ಊಹಿಸಬಹುದಾಗಿದೆ. ಕುಸುಮಾವಳಿ ಎಂಬ ಶೃಂಗಾರಕಾವ್ಯವನ್ನು ಬರೆದ ದೇವಕವಿಯು 'ಕವಿಕಮಳಜ ಸೂಕ್ತಿಸುಧಾರ್ಣವ ಸೋಮ' ಎಂಬ ಉಕ್ತಿಯಿಂದ ದೇವಕವಿಯಿಂದ ಈತ ಪ್ರೋತ್ಸಾಹಪಡೆದವನೆಂದು ಊಹಿಸಲಾಗಿದೆ. ಈತನಿಗೆ ಕವಿಕಂಜಗರ್ಭ, ಸೂಕ್ತಿ ಸಂದರ್ಭಗರ್ಭ ಎಂಬ ಬಿರುದುಗಳು ಇದ್ದಂತೆ ಕಾಣುತ್ತದೆ.

ಶಾಂತೀಶ್ವರಪುರಾಣ ಹದಿನಾರು ಆಶ್ವಾಸಗಳುಳ್ಳ ಕಾವ್ಯ. 16ನೆಯ ತೀರ್ಥಂಕರ ಶಾಂತಿನಾಥಸ್ವಾಮಿಯ ಚರಿತೆ ಈ ಪುರಾಣಕಾವ್ಯದ ವಸ್ತು. ಇದು ಪಂಪ ಪೊನ್ನ ರನ್ನರ ಜೈನಪುರಾಣಗಳ ಮಾದರಿಯಲ್ಲಿದೆ. ಕಾವ್ಯಾರಂಭದಲ್ಲಿ ತೀರ್ಥಂಕರರ ಸ್ತುತಿಯಿದೆ. ಅನಂತರ ಸಿದ್ಧರು, ಕೇವಲಿಗಳು, ಅನುಬದ್ಧ ಕೇವಲಿಗಳು, ಶ್ರುತ ಕೇವಲಿಗಳು, ಗಣಧರರು, ಯಕ್ಷಯಕ್ಷಿಯರು, ಸರಸ್ವತಿ, ಜೈನಗುರು ಪರಂಪರೆ-ಇವುಗಳ ಸ್ತುತಿಯಿದೆ.

ಪಂಪ ಪೊನ್ನಾದಿ ಪೂರ್ವಕವಿಗಳಿಂದ ಈತ ಸಾಕಷ್ಟು ಪ್ರಭಾವಿತನಾಗಿದ್ದರೂ ಇವನ ಸ್ವಪ್ರತಿಭೆ, ಕಲ್ಪನಾ ವಿಲಾಸ, ಭಾವ ಶ್ರೀಮಂತಿಕೆ, ನಿರೂಪಣಾ ವೈಖರಿ ಕುಂಠಿತವಾಗಿಲ್ಲ. ಇವನ ಶೈಲಿಯಲ್ಲಿ ಲಾಲಿತ್ಯ, ಸರಳತೆ, ನಿರರ್ಗಳತೆಗಳಿವೆ. ವರ್ಣನೆಗಳು ಪಾಂಡಿತ್ಯಪೂರ್ಣವಾಗಿವೆ. ಶಾಂತೀಶ್ವರಪುರಾಣವನ್ನು ರಚಿಸಿದ ಕನ್ನಡ ಕವಿಗಳಲ್ಲಿ ಈತ ಎರಡನೆಯವನಾದ್ದರಿಂದ ಈತನ ಕೃತಿಗೆ ಪ್ರಾಶಸ್ತ್ಯದೊರಕಿದೆ. (ಕೆ.ಎಚ್.)

**ಕಮಲಾ, ಹಂಪನ :** 1935-. ಕನ್ನಡ ಲೇಖಕಿ. ಬೆಂಗಳೂರು ಜಿಲ್ಲೆ ದೇವನಹಳ್ಳಿಯಲ್ಲಿ 1935 ಅಕ್ಟೋಬರ್ 28ರಂದು ಜನಿಸಿದರು. ತಂದೆ ಸಿ.ರಂಗಧಾಮ ನಾಯಕ್, ತಾಯಿ ಲಕ್ಷ್ಮಮ್ಮ. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ.ಆನರ್ಸ್ (ಕನ್ನಡ) ಮತ್ತು ಎಂ.ಎ.ಪದವಿ (ಕನ್ನಡ) ಪಡೆದರು. ತುರಂಗ ಭಾರತವನ್ನು ಕುರಿತ ಅಧ್ಯಯನಕ್ಕೆ ಪಿಎಚ್.ಡಿ.ಪದವಿ ಗಳಿಸಿದರು. 1961ರಲ್ಲಿ ತಮ್ಮ ಸಹಪಾಠಿ ಹಂಪ ನಾಗರಾಜಯ್ಯ (ಹಂಪನಾ) ಅವರನ್ನು ವಿವಾಹವಾದರು. ಬೆಂಗಳೂರು ಮತ್ತು ಮೈಸೂರಿನ ಮಹಾರಾಣಿ ಕಾಲೇಜು ಹಾಗೂ ಬೆಂಗಳೂರು ಸರ್ಕಾರಿ ವಿಜ್ಞಾನ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು (1959-96). ಅನಂತರ ಬೆಂಗಳೂರಿನ ವಿಜಯ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಪ್ರಾಕೃತ ಅಧ್ಯಯನ ವಿಭಾಗದ ಪ್ರಾಧ್ಯಾಪಕರೂ ಅಧ್ಯಕ್ಷರೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂದರ್ಶನ ಪ್ರಾಧ್ಯಾಪಕರೂ ಆಗಿದ್ದರು.

ದಲಿತರ ಹಾಗೂ ಮಹಿಳೆಯರ ಪರವಾದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಹತ್ತಾರು ಸಂಘ ಸಂಸ್ಥೆಗಳಲ್ಲಿ ಇವರು ದುಡಿದರೂ ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿ ಅನೇಕ ಕೃತಿಗಳನ್ನು ರಚಿಸಿದರು. ಇವರು ರಚಿಸಿದ ಕೃತಿಗಳು 48ಕ್ಕೂ ಹೆಚ್ಚು. ಶಾಂತಿನಾಥ, ಆದರ್ಶ ಜೈನ ಮಹಿಳೆಯರು, ಮಹಾವೀರರ ಜೀವನ ಸಂದೇಶ, ಜೈನ ಸಾಹಿತ್ಯ ಪರಿಸರ, ಅನೇಕಾಂತವಾದ, ತುರಂಗ ಭಾರತ: ಒಂದು ಅಧ್ಯಯನ ಮೊದಲಾದವು ಇವರ ಕೃತಿಗಳು. ಸುಕುಮಾರ ಚರಿತೆಯ ಸಂಗ್ರಹ, 'ಭರತೇಶ ವೈಭವ',

ಚಾವುಂಡರಾಯ ಪುರಾಣ, ಡಿ.ಎಲ್.ಎನ್. ಆಯ್ದ ಲೇಖನಗಳು, ಜೈನ ಧರ್ಮ ಮೊದಲಾದವು ಸಂಪಾದಿತ ಕೃತಿಗಳು. ಬಾಸಿಂಗ, ಬಾಂದಳ, ಬಡಬಾಗ್ನಿ- ಇವು ವೈಚಾರಿಕ ಕೃತಿಗಳು. ಬೀಜಾಕ್ಷರ ಮಾಲೆ, ಜಾತಿ ನಿರ್ಮೂಲನೆ, ಭಾರತದಲ್ಲಿ ಜಾತಿಗಳು, ಏಷಿಯಾದ ಹಣತೆಗಳು - ಇವು ಅನುವಾದಗಳು. ನಕ್ಕಿತು ಹಾಲಿನ ಬಟ್ಟಲು, ರೆಕ್ಕೆ ಮುರಿದಿತ್ತು, ಬಣವೆ, ಚಂದನಾ- ಇವು ಕಥಾ ಸಂಕಲನಗಳು. ಬಿಂದಲಿ, ಬುಗುಡಿ ಇವು ಆಧುನಿಕ ವಚನ ಸಂಕಲನಗಳು. ಶಿಶು ಸಾಹಿತ್ಯಕ್ಕೆ ಸಂಬಂಧಿಸಿದಂತೆಯೂ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ.

ನಿರಂತರ ಅಧ್ಯಾಪನ, ಲೇಖನ, ಭಾಷಣಗಳ ಮೂಲಕ ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳೆರಡರಲ್ಲೂ ಸಮಾನ ದುಡಿಮೆ ಮಾಡಿರುವ ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರೆತಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬಾಬಾ ಆಮ್ಟೆ ರಾಷ್ಟ್ರೀಯ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ರನ್ನಕವಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಐಐಟಿ ಮದರಾಸು ಕನ್ನಡ ಸಂಘದ ರಜತೋತ್ಸವ ಪುರಸ್ಕಾರ, ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕದ ರಾಷ್ಟ್ರೀಯ ಪುರಸ್ಕಾರ -ಇವುಗಳನ್ನು ಹೆಸರಿಸಬಹುದು. ಇವರು ಮೂಡಬಿದಿರೆಯಲ್ಲಿ ನಡೆದ 71ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (2003). (ಕೆ.ಆರ್.ಎಸ್.ಆರ್)

**ಕಮಲಾದೇವಿ, ಚಟ್ಟೋಪಾಧ್ಯಾಯ :** 1903-88. ಭಾರತ ಸ್ವಾತಂತ್ರ್ಯಹೋರಾಟಗಾರ್ತಿಯರಲ್ಲೊಬ್ಬರು. ಕಲಾಭಿಜ್ಞೆ, ಸಾಮಾಜಿಕ ಕಾರ್ಯಕರ್ತೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1903 ಏಪ್ರಿಲ್ 3ರಂದು ಜನಿಸಿದರು. ಇವರ ತಂದೆ ಮದರಾಸು ಸಿವಿಲ್ ಸರ್ವಿಸಿನಲ್ಲಿ ಉನ್ನತ ದರ್ಜೆಯ ಅಧಿಕಾರಿಯಾಗಿದ್ದರು. ಕಮಲಾದೇವಿ ಮಂಗಳೂರಿನ ಕೆಥೊಲಿಕ್ ಕಾನ್ವೆಂಟ್ ಮತ್ತು ಸೇಂಟ್ ಮೇರೀಸ್ ಕಾಲೇಜಿನಲ್ಲೂ ಆಮೇಲೆ ಲಂಡನ್ನಿನ ಬೆಡ್‌ಫರ್ಡ್ ಕಾಲೇಜು ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲೂ ವಿದ್ಯಾಭ್ಯಾಸ ಮಾಡಿದರು. ಬಾಲ್ಯದಲ್ಲೇ ಇವರ ವಿವಾಹವಾಗಿದ್ದೂ, ಶಾಲಾ ವಿದ್ಯಾರ್ಥಿನಿ ಯಾಗಿದ್ದಾಗಲೇ ಇವರಿಗೆ ವೈಧವ್ಯ ಪ್ರಾಪ್ತವಾಯಿತು. ಆಗ ಇವರು ಹಳೆಯ ಕಂದಾಚಾರವನ್ನು ಮುರಿದು, ತಾವು ಒಪ್ಪಿದ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಮದುವೆಯಾದರು. ಪತಿಯೊಂದಿಗೆ ಯುರೋಪಿನಲ್ಲಿ ಪ್ರವಾಸಮಾಡಿ ಕಲಾವಿದರನ್ನು ಸಂದರ್ಶಿಸುತ್ತ ರಂಗಭೂಮಿಯ ಅಧ್ಯಯನ ಮಾಡಿದರು. ಅದರ ಪ್ರಯೋಗತಂತ್ರವನ್ನು ಕಲಿತರು. ಭಾರತಕ್ಕೆ ಮರಳಿದ ಮೇಲೆ ತಾವೇ ಮುಖ್ಯಪಾತ್ರಗಳನ್ನು ವಹಿಸಿ, ಕಲಾತ್ಮಕ ನಾಟಕಗಳನ್ನು ರಂಗಭೂಮಿಯ ಮೇಲೆ ತರಲು ತಮ್ಮ ಪತಿಯೊಂದಿಗೆ ಶ್ರಮಿಸಿದರು.

ಗಾಂಧೀಜಿ, ಜವಹರಲಾಲ್ ನೆಹರೂ, ಸರೋಜಿನಿ ನಾಯ್ಡು, ಕಸ್ತೂರ ಬಾ -ಇವರ ಪ್ರಭಾವ ಕಮಲಾದೇವಿಯ ಮೇಲೆ ವಿಶೇಷವಾಗಿ ಆಯಿತು. ಓದುತ್ತಿದ್ದಾಗಲೇ ಇವರು ಕಾಲೇಜು ವಿದ್ಯಾಭ್ಯಾಸ ತೊರೆದು ಅಸಹಕಾರ ಚಳವಳಿಯಲ್ಲಿ ದುಮುಕಿದರು. ಯರವಾಡಾ, ಬೆಳಗಾಂವಿ ಮತ್ತು ವೆಲ್ಲೂರುಗಳಲ್ಲಿ ಜೈಲು ಶಿಕ್ಷೆ ಅನುಭವಿಸಿದರು. ಅನಂತರವೂ ಅನೇಕ ಸಾರಿ ಸೆರೆಮನೆ ಶಿಕ್ಷೆಗೆ ಗುರಿಯಾದರು. ಕರ್ನಾಟಕದ ಯುವಕರಲ್ಲಿ ರಾಷ್ಟ್ರಸೇವೆಯ ಜಾಗೃತಿ ಉಂಟುಮಾಡುವುದರಲ್ಲಿ ಇವರ ಪಾತ್ರ ಹಿರಿದು. ಕೃಷಿಕರ ಸಮಸ್ಯೆಗಳ ಪರಿಹಾರದಿಂದಲೇ ಜನತೆಯ ಉದ್ಧಾರ ಸಾಧ್ಯವೆಂದು ನಂಬಿ ಇವರು ಕೃಷಿ ಕ್ಷೇತ್ರದಲ್ಲಿ ತೀವ್ರ ಆಸಕ್ತಿ ತಳೆದರು. ಜಮೀನುದಾರಿ ಪದ್ಧತಿ ರದ್ದಾಗಿ ಭೂಮಿ ಸಮಾನವಾಗಿ, ನ್ಯಾಯಸಮ್ಮತವಾಗಿ ಹಂಚಿಕೆಯಾಗಬೇಕೆಂಬುದು ಇವರ ಆಶಯವಾಗಿತ್ತು. ಕಾಂಗ್ರೆಸ್ಸಿನ ಭೂ ಸುಧಾರಣೆಯ ಕ್ರಮಗಳು ಇವರಿಗೆ ಸಮರ್ಪಕವೆನಿಸಲಿಲ್ಲ.

ಕಮಲಾದೇವಿಯವರು 1948ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸೇರಿದರು. ಬಡತನದ ವಿರುದ್ಧ ಘೋಷಣೆಗಳನ್ನು

ಕೂಗುವುದಕ್ಕಿಂತ ಸುಖಮಯ ಮಾನವ ಸಂಬಂಧಗಳಿಗಾಗಿ ಕ್ರಿಯಾ ಶೀಲವಾದ ಕಳಕಳಿಯೇ ಸಮಾಜವಾದದ ಸತ್ತ್ವವೆಂಬುದು ಇವರ ನಂಬಿಕೆ. ಬ್ರಿಟಿಷ್‌ಸಾಮ್ರಾಜ್ಯ ಶಾಹಿಯ ವಿರುದ್ಧಹೋರಾಡು ವುದಕ್ಕಾಗಿ ಕಾಂಗ್ರೆಸ್ಸನ್ನು ಬಲಪಡಿಸುವ ಕರೆ ಕೊಟ್ಟ ಇವರು ಸಮಾಜವಾದದ ಧ್ಯೇಯ ನಿರೂಪಣೆಯಿಂದ ಒಮ್ಮೆಲೆ ಭಾರತದ ಮುಂಚೂಣಿ ನಾಯಕರ ಮಟ್ಟಕ್ಕೇರಿದರು. ಕಾರ್ಮಿಕರ ಹಿತರಕ್ಷಣೆಗಾಗಿ ಕಾರ್ಮಿಕ ಸಂಸ್ಥೆಗಳಲ್ಲಿ ಸಂಘಟನೆಗೂ ಚಳವಳಿಗೂ ನಾಯಕತ್ವ ನೀಡಿ ಉತ್ತೇಜನ ನೀಡಿದರು.

ಭಾರತದ ಮಹಿಳಾ ಆಂದೋಲನದ ಪ್ರಮುಖ ಮುಂದಾಳಾಗಿ ದೇಶಾದ್ಯಂತ ಸಂಚರಿಸಿ, ಭಾಷಣಗಳಿಂದ, ಸಂದರ್ಶನಗಳಿಂದ ಸ್ಫೂರ್ತಿ ನೀಡಿ, ಅಖಿಲ ಭಾರತ ಮಹಿಳಾ ಸಮ್ಮೇಳನವನ್ನು ಬೆಳೆಸಿದರು. ಬಿಳಿಯ ಒರಟು ಖಾದಿಗೆ ಕಲಾತ್ಮಕತೆ ತಂದುಕೊಟ್ಟು, ಅರಿವೆಗೆ ಬಣ್ಣ ಹಾಕುವ ಭಾರತೀಯ ಕಲೆಗೆ ಸ್ಫೂರ್ತಿ ನೀಡಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಕಾರ್ಯಕಾರಿ ಸಮಿತಿಯ, ಅಖಿಲ ಭಾರತ ಮಹಿಳಾ ಸಮ್ಮೇಳನದ ಸಂಘಟನಾ ಕಾರ್ಯದರ್ಶಿತ್ವ, ಉಪಾಧ್ಯಕ್ಷತೆ ಮತ್ತು ಅಧ್ಯಕ್ಷತೆ, ಭಾರತೀಯ ಸಹಕಾರ ಯೂನಿಯನ್ನಿನ ಅಧ್ಯಕ್ಷತೆ, ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್‌ನ ಉಪಾಧ್ಯಕ್ಷತೆ, ಅಖಿಲ ಭಾರತ ಕರಕುಶಲ ಮಂಡಳಿಯ ಅಧ್ಯಕ್ಷತೆ, ಅಖಿಲ ಭಾರತ ಡಿಸೈನ್ ಸೆಂಟರಿನ ಅಧ್ಯಕ್ಷತೆ-ಇವು ಕಮಲಾದೇವಿಯವರು ನಿರ್ವಹಿಸಿದ ಕೆಲವು ಅಧಿಕಾರಗಳು. ಇವರು ಅಂತಾರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ವತಿಯಿಂದ ಭಾರತ ರಾಷ್ಟ್ರೀಯ ರಂಗಭೂಮಿ ಕೇಂದ್ರದ ಸಂಸ್ಥಾಪಕರಾಗಿದ್ದರು.

ಇವರು ಇಂಗ್ಲಿಷಿನಲ್ಲಿ ಹತ್ತು ಪುಸ್ತಕಗಳನ್ನು ಬರೆದಿದ್ದಾರೆ: ಭಾರತೀಯ ಕರ ಕುಶಲ ಕೈಗಾರಿಕೆಗಳು, ಭಾರತೀಯ ಕಂಬಳಿಗಳು ಮತ್ತು ನೆಲಾವರಣಗಳು, ಸಮಾಜವಾದ ಮತ್ತು ಸಮಾಜ, ಭಾರತೀಯ ಮಹಿಳಾ ಜಾಗೃತಿ, ರಾಷ್ಟ್ರೀಯ ರಂಗಭೂಮಿ ಮುಂತಾದವು ಇವರ ವೈವಿಧ್ಯಪೂರ್ಣ ಆಸಕ್ತಿಯನ್ನು ಪ್ರತಿ ಫಲಿಸುತ್ತವೆ. ಸಾಮಾಜಿಕ ಧುರೀಣತ್ವಕ್ಕಾಗಿ ವಾಟ್ಟುಮಲ್ (1962) ಮತ್ತು ಮ್ಯಾಗ್ಸೆಸೇ (1966) ಪ್ರಶಸ್ತಿಗಳನ್ನುಗಳಿಸಿದರು. 1970ರಲ್ಲಿ ಶಾಂತಿ ನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಿಂದ ಇವರಿಗೆ ದೇಶಿಕೋತ್ತಮಾ ಎಂಬ ಪ್ರಶಸ್ತಿ ದತ್ತವಾಯಿತು. ಭಾರತ ಸರ್ಕಾರ ಇವರಿಗೆ ಪದ್ಮ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಇವರು 1988ರಲ್ಲಿ ನಿಧನರಾದರು. (ಜೆ.ಆರ್.ಪಿ.)

**ಕಯ್ಯಾರ ಕಿಞ್ಞಣ್ಣ ರೈ :** 1915-. ಕಾಸರಗೋಡಿನಲ್ಲಿ ನೆಲೆಸಿರುವ ಕನ್ನಡ ಲೇಖಕರು. ಈಗ ಕೇರಳ ರಾಜ್ಯದಲ್ಲಿರುವ ಕಾಸರಗೋಡು ಜಿಲ್ಲೆಯ ಪೈವಳಿಕೆಯಲ್ಲಿ 1915 ಜೂನ್ 8ರಂದು ಜನಿಸಿದರು. ತಂದೆ ದುಗ್ಗಪ್ಪರೈ, ತಾಯಿ ದೆಯ್ಯಕ್ಕ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಪೆರಡಾಲದಲ್ಲಿ ಪಡೆದ ಇವರು ರಾಮಾಯಣ, ಭಾರತ, ಯಕ್ಷಗಾನ, ತಾಳಮದ್ದಲೆಗಳ ಪರಿಸರದಲ್ಲಿ ಬೆಳೆದರು.

ಇವರಿಗೆ ಇಂಗ್ಲಿಷ್ ಶಿಕ್ಷಣ ಪಡೆಯಬೇಕೆಂಬ ಆಸೆಯಿತ್ತು. ಆದರೆ ತಂದೆ ತೀರಿಕೊಂಡಿದ್ದರಿಂದ ಅದಕ್ಕೆ ಅಡಚಣೆಯಾಯಿತು. ಸಂಸ್ಕೃತ ಶಾಲೆ ಸೇರಿದರು. ಸಂಸ್ಕೃತ ಕನ್ನಡಗಳೆರಡನ್ನೂ ಚೆನ್ನಾಗಿ ಕಲಿತರು. ವಿದ್ವಾನ್ ಪದವಿ ಗಳಿಸಿದರು. ಇವರು ಮೊತ್ತಮೊದಲು ಪತ್ರಿಕೋದ್ಯಮದಿಂದ ಆಕರ್ಷಿತರಾದರು. ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆಯ ಮೂಲಕ ದುಡಿದರು. ಈ ನಡುವೆ ಇವರು ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದರಲ್ಲದೆ ಅಧ್ಯಾಪಕ ತರಬೇತಿ ಪದವಿಯನ್ನೂ ಗಳಿಸಿದರು. ಅನಂತರ ಪೆರಡಾಲದ ನವಜೀವನ ಪ್ರೌಢಶಾಲೆಯಲ್ಲಿ ಅಧ್ಯಾಪಕರಾದರು. 1969ರಲ್ಲಿ ಇವರಿಗೆ ಶ್ರೇಷ್ಠ ಆಧ್ಯಾಪಕ ಎಂಬ ರಾಷ್ಟ್ರಪ್ರಶಸ್ತಿ ಲಭ್ಯವಾಯಿತು.

ಸಾಹಿತ್ಯ ಕ್ಷೇತ್ರಕ್ಕೆ ಇವರ ಕಾಣಿಕೆ ಮಹತ್ತ್ವಪೂರ್ಣವಾದದ್ದು. ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಪಂಚಮೀ (5 ಉಪನಿಷತ್ ಕಾವ್ಯಗಳು), ಮಹಾಕವಿ ಕುಮಾರನ್ ಆಶಾನರ ಮೂರು ಖಂಡಕಾವ್ಯಗಳು (ಮಲಯಾಳಂನಿಂದ ಅನುವಾದ), ಕೊರಗ ಮತ್ತು ಕೆಲವು

ಕವನಗಳು, ಶತಮಾನದ ಗಾನ, ಗಂಧವತೀ, ಪ್ರತಿಭಾ ಪಯಸ್ವಿನಿ (ಕವನಗಳ ಬೃಹತ್ ಸಂಪುಟ) ಮತ್ತು ಎನ್ನಪ್ಪೆ ತುಳುವಪ್ಪೆ (ತುಳು) ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ರತ್ನರಾಶಿ (ಜೀವನ ಚರಿತ್ರೆ), ಲಕ್ಷ್ಮೀಶನ ಕಥೆಗಳು, ಅನ್ನದೇವರು ಮತ್ತು ಇತರ ಕಥೆಗಳು, ಪರಶುರಾಮ, ಎಂ.ಬಿ.ಶೆಟ್ಟಿ (ಜೀವನಚರಿತ್ರೆ), ಕನ್ನಡದ ಶಕ್ತಿ (ಸಂಪಾದನೆ), ಕಾರ್ನಾಡು ಸದಾಶಿವರಾವ್ (ಜೀವನ ಚರಿತ್ರೆ), ಗಡಿನಾಡ ಕಿಡಿ (ಸಂಪಾದನೆ) ಮೊದಲಾದವು ಇವರ ಗದ್ಯ ಕೃತಿಗಳು. ವಿರಾಗಿಣಿ ಎಂಬುದು ನಾಟಕ. ನಾಲ್ಕು ಭಾಗಗಳಲ್ಲಿ ಇವರು ಬರೆದಿರುವ ವ್ಯಾಕರಣ ಮತ್ತು ಪ್ರಬಂಧ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ನವೋದಯ ವಾಚನಮಾಲೆ (ಎಂಟು ಭಾಗಗಳು) ಮಕ್ಕಳಿಗಾಗಿ ರಚಿಸಿದ ಸಾಹಿತ್ಯ. ದುಡಿತವೆ ನನ್ನ ದೇವರು ಎಂಬ ಆತ್ಮ ಕಥನವನ್ನೂ ಇವರು ಬರೆದಿದ್ದಾರೆ.

ದೇಶಕ್ಕಾಗಿ ಮತ್ತು ನಾಡಿಗಾಗಿ ಹೋರಾಡಿದ, ಹೋರಾಡುತ್ತಿರುವ ನಿಷ್ಠಾವಂತ ಹೋರಾಟಗಾರರಾದ ಇವರು ಗಾಂಧೀಜಿಯವರ ಕಟ್ಟಾ ಅಭಿಮಾನಿ. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು. ಮೊದಲು ಭರತಮಾತೆ, ಅನಂತರ ಕನ್ನಡತಾಯಿ, ತರುವಾಯ ತೌಳವಮಾತೆ ಎಂಬುದು ಇವರ ನಿಲುವು. ಕನ್ನಡಾಂತರ್ಗತಂ ತುಳುನಾಡು ನನ್ನದಿದು, ಭಾರತಾಂತರ್ಗತಂ ಕನ್ನಡದ ಬದುಕು ಎಂಬುದು ಇವರ ಧ್ಯೇಯ.

ಇವರು ಕವಿಯಷ್ಟೇ ಅಲ್ಲ, ವಿಮರ್ಶಕರೂ ಹೌದು. ರಾಷ್ಟ್ರಕವಿ ಗೋವಿಂದ ಪೈ, ಗೋವಿಂದ ಪೈ ಸ್ಮೃತಿ ಕೃತಿ, ಸಾಹಿತ್ಯದೃಷ್ಟಿ, ಮಲಯಾಳಂ ಸಾಹಿತ್ಯ ಚರಿತ್ರಂ, ಮಹಾಕವಿ ಗೋವಿಂದ ಪೈ, ಸಂಸ್ಕೃತಿಯ ಹೆಗ್ಗುರುತು ಮೊದಲಾದ ಕೃತಿಗಳಲ್ಲಿ ಇವರ ವಿಮರ್ಶನ ಪ್ರಜ್ಞೆ ವ್ಯಕ್ತವಾಗಿದೆ.

ಐವತ್ತು ವರ್ಷಗಳಿಂದ ಹಳ್ಳಿಯಲ್ಲೇ ನೆಲಸಿರುವ ಇವರಿಗೆ ಹಳ್ಳಿಯ ನಿರುಮ್ಮಳತೆ ತುಂಬ ಇಷ್ಟ. ನೇಗಿಲಿನ ಸಮಕ್ಕೆ ಲೇಖನಿ ಹಿಡಿದ ಇವರು

ಕೃಷಿಯಲ್ಲೂ ಪಳಗಿದವರು. ಸದಾ ಖಾದೀಧಾರಿಯಾದ ಇವರದು ಆರಡಿ ಎತ್ತರದ ಧೀಮಂತ ನಿಲುವು, ಕಂಚಿನ ಕಂಠ. ಇವರೊಬ್ಬ ಶ್ರೇಷ್ಠ ವಾಗ್ಮಿ. ಇವರದು ತುಂಬು ಸಂಸಾರದ ಬದುಕು. ಇವರ ಪತ್ನಿಯ ಹೆಸರು ಉಣ್ಣಾಕ್ಕೆ. ಆರು ಮಂದಿ ಪುತ್ರರು ಮತ್ತು ಇಬ್ಬರು ಪುತ್ರಿಯರು.

ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಕಯ್ಯಾರರು ಮಹತ್ತ್ವದ ಪಾತ್ರ ವಹಿಸಿದ್ದರು. ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಕಾರ್ಯದರ್ಶಿಯಾಗಿಯೂ ಇವರು ನಿಷ್ಠೆಯ ಸೇವೆ ಸಲ್ಲಿಸಿದ್ದಾರೆ. ಇವರು 1997ರಲ್ಲಿ ಮಂಗಳೂರಿನಲ್ಲಿ ಜರುಗಿದ 66ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕನ್ನಡದ ಹಿರಿಯಣ್ಣ ಎಂಬ ಅಭಿಧಾನಕ್ಕೆ ಪಾತ್ರರಾಗಿರುವ ಕಯ್ಯಾರರಿಗೆ ಅನೇಕ ಪ್ರಶಸ್ತಿ ಗೌರವಗಳು ದೊರೆತಿವೆ. ಶ್ರೇಷ್ಠ ಅಧ್ಯಾಪಕ ರಾಷ್ಟ್ರಪ್ರಶಸ್ತಿಯಲ್ಲದೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸ್ವಾತಂತ್ರ್ಯ ಯೋಧ ಪ್ರಶಸ್ತಿ -ಇವು ಕೆಲವು ಮುಖ್ಯ ಪ್ರಶಸ್ತಿಗಳು. (ಪೀ.ಎ.)

**ಕರಗ** : ಜನಪದ ಧಾರ್ಮಿಕ ನೃತ್ಯ. ತಮಿಳುನಾಡಿನಲ್ಲಿ ವಿಶೇಷವಾಗಿ ಪ್ರಾಚುರ್ಯದಲ್ಲಿರುವ ಈ ನೃತ್ಯ ತಮಿಳುನಾಡಿನ ಪ್ರಭಾವ ಸ್ವಲ್ಪ ಮಟ್ಟಿಗೆ ಕಂಡುಬರುವ ಕರ್ನಾಟಕದ ಆಗ್ನೇಯ ಭಾಗದಲ್ಲಿ ಅದರಲ್ಲೂ ಕೋಲಾರ, ಬೆಂಗಳೂರು, ತುಮಕೂರು ಮತ್ತು ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಕಂಡುಬರುತ್ತದೆ.

ಕರಗ ಹೊತ್ತು ನಡೆದಿರುವ ಕಲಾವಿದ

ಸಾಮಾನ್ಯವಾಗಿ ಹಿತ್ತಾಳೆಯ ಕೊಡವನ್ನು ಸುಂದರವಾಗಿ ಕಿರೀಟದಂತೆ ಅಲಂಕರಿಸಿ ತಲೆಯ ಮೇಲೆ ಹೊತ್ತು ಕೈಬಿಟ್ಟು ಮಾಡುವ ನೃತ್ಯವಿದು. ಡೋಲು ವಾದ್ಯಗಳ ತಾಳಗತಿಯೊಂದಿಗೆ ಪಾದವಿನ್ಯಾಸ, ಹಸ್ತಮುದ್ರೆ, ಮುಖಭಂಗಿಗಳನ್ನು ಪ್ರದರ್ಶಿಸುತ್ತ ನೃತ್ಯ ನಡೆಯುತ್ತದೆ. ನೃತ್ಯ ಮಾಡುತ್ತ ನೆಲದಲ್ಲಿಟ್ಟ ಸೂಜಿಯನ್ನು ಕೈಯಲ್ಲಿ ಮುಟ್ಟದೆ ಕಣ್ಣುರೆಪ್ಪೆಯಲ್ಲಿ ತೆಗೆದು ಅದರಿಂದ ಬಾಯಲ್ಲಿನ ನಿಂಬೆಹಣ್ಣನ್ನು ಚುಚ್ಚಿ ದಾರದಿಂದ ಮಾಲೆ ಮಾಡುವುದು, ಹಾಸಿದ ಸೀರೆಯ ಮೇಲೆ ಹೊರಳಿ, ಅದನ್ನುಡುವುದು ಮತ್ತು ಹಾಗೆಯೇ ಬಿಡಿಸುವುದು, ಕರಗನೃತ್ಯದವನ ಕಣ್ಣಿಗೆ ಬಟ್ಟೆ ಕಟ್ಟಿರಲು ಆತ ಹರಿತವಾದ ಕತ್ತಿಯಿಂದ ಬೇರೊಬ್ಬನ ತಲೆಯ ಮೇಲೆ ಇಟ್ಟ ತೆಂಗಿನ ಕಾಯಿಯನ್ನು ಒಂದೇ ಏಟಿಗೆ ಒಡೆಯುವುದು ಮುಂತಾದ ಅದ್ಭುತ ಪ್ರದರ್ಶನ ಅಚ್ಚರಿಯನ್ನುಂಟುಮಾಡುತ್ತದೆ. ದೈವಿಕ ಶಕ್ತಿಯಿಂದ ಈ ಕರಗನೃತ್ಯ ಯಶಸ್ವಿಯಾಗಿ ನಡೆಯುತ್ತದೆಂದು ಅವರ ನಂಬಿಕೆ.

ಕರ್ನಾಟಕದಲ್ಲಿ ಹೊಸಕೋಟೆ, ಕೋಲಾರ ಮುಂತಾದ ಕಡೆಗಳಲ್ಲಿನ ಕರಗ ಉತ್ಸವಗಳು ಪ್ರಸಿದ್ಧವಾದುವಾದರೂ ಬೆಂಗಳೂರಿನ ಕರಗ ಅತ್ಯಂತ ವಿಜೃಂಭಣೆಯದು. ಬೆಂಗಳೂರು ನಗರದ ಧರ್ಮರಾಯ ದೇವಸ್ಥಾನದಲ್ಲಿ ಚೈತ್ರ ಶುದ್ಧ ಸಪ್ತಮಿಯ ರಾತ್ರಿ ಧ್ವಜಾರೋಹಣ, ದ್ವಾದಶಿಯ ರಾತ್ರಿ ದೀಪಾರತಿ, ತ್ರಯೋದಶಿ ರಾತ್ರಿ ಹಸಿ ಕರಗದ ದೇವತಾರಾಧನೆ, ಹುಣ್ಣಿಮೆಯ ರಾತ್ರಿ ಕರಗ ಮಹೋತ್ಸವ ರಥೋತ್ಸವಗಳು, ಚೈತ್ರ ಬಹುಳ ಪಾಡ್ಯದ ರಾತ್ರಿ ಪುರಾಣ ನಿರೂಪಣೆ, ಬಿದಿಗೆಯ ಸಾಯಂಕಾಲ ವಸಂತೋತ್ಸವ ಮತ್ತು ರಾತ್ರಿ ಧ್ವಜಾವತರಣ - ಇವು ಕರಗ ಮಹೋತ್ಸವದ ಒಂಬತ್ತು ದಿನಗಳ ಕಾರ್ಯಕ್ರಮಗಳು. ತ್ರಯೋದಶಿಯ ರಾತ್ರಿ ಸುಮಾರು ಇನ್ನೂರ ಐವತ್ತು ವೀರಕುಮಾರರು, ಕರಗದ ಭಕ್ತ ತಿಗುಳರು ಬಿಳಿ ಚಲ್ಲಣ ತೊಟ್ಟು, ಕೆಂಪು ರೇಷ್ಮೆ ವಸ್ತ್ರವನ್ನು ಸೊಂಟಕ್ಕೆ ಬಿಗಿದು, ಕಲಾಬತ್ತಿನ ಪೇಟಾಧರಿಸಿ ಸೇವೆಗೆ ಅಣಿಯಾಗುತ್ತಾರೆ. ಇವರು ಜಯ ಘೋಷದೊಡನೆ ಅಲಗು ಸೇವೆ ನಡೆಸುತ್ತಾರೆ. ಅರ್ಚಕ ಇವರ ಮೆರವಣಿಗೆಯಲ್ಲಿ ಹಸಿ ಕರಗವನ್ನು (ಹಸಿ ಮಣ್ಣಿನ ಮಡಕೆ) ದೇವಾಲಯದೊಳಕ್ಕೆ ಒಯ್ಯುತ್ತಾನೆ. ಹುಣ್ಣಿಮೆಯ ರಾತ್ರಿ ಸುಮಾರು ಹನ್ನೆರಡು ಗಂಟೆಗೆ ಕರಗದ ಮೆರವಣಿಗೆ ದೇವಾಲಯದಿಂದ ಹೊರಟು ಪಟ್ಟಣದ ಬೀದಿಗಳಲ್ಲಿ ಸಾಗಿ ಬೆಳಗಾಗುವುದರೊಳಗೆ ದೇವಾಲಯದೊಳಗೆ ಬರುತ್ತದೆ. ಧ್ವಜಾರೋಹಣದ ದಿನ ಕರಗವನ್ನು ಜಲದಲ್ಲಿ ವಿಸರ್ಜಿಸಲಾಗುತ್ತದೆ.

ಇದನ್ನು ಆಚರಿಸುವವರು ವಹ್ನಿಕುಲದ ತಿಗುಳರಾದರೂ ಎಲ್ಲಾ ಜನಾಂಗದವರೂ ಕರಗದಲ್ಲಿ ಪಾಲುಗೊಂಡು ಪೂಜೆ ಸಲ್ಲಿಸುತ್ತಾರೆ. ಜುಮ್ಮಮಸೀದಿ ಬಳಿಗೆ ಕರಗ ಬಂದಾಗ ಮಹಮ್ಮದೀಯರೂ ಈ ಕರಗ ದೇವತೆಗೆ ಪೂಜೆ ಸಲ್ಲಿಸುವುದು ಸಂಪ್ರದಾಯವಾಗಿಯೇ ಬಂದಿದೆ. ವಹ್ನಿಕುಲದ ತಿಗುಳರು ವಹ್ನಿಜೆಯಾದ ದ್ರೌಪದಿಯ ಭಕ್ತವರ್ಗ ದವರು. ಪಾಂಡವರು ದ್ರೌಪದೀ ಸಮೇತ ಸ್ವರ್ಗಾರೋಹಣ ಮಾಡುತ್ತಿದ್ದಾಗ, ಹಿಂದೆ ಉಳಿದ ದ್ರೌಪದಿ ದಿಕ್ಕುಗಾಣದೆ ದೇವತೆಗಳನ್ನು ಪ್ರಾರ್ಥಿಸಿದಳು. ಆಕೆಯ ಸುತ್ತಲು ವೀರಕುಮಾರರು ಭೂಮಿಯಿಂದ ಉದ್ಭವಿಸಿ ಕತ್ತಿ, ಡಮರು, ತ್ರಿಶೂಲ, ಗಂಟೆ ಮುಂತಾದವನ್ನು ಹಿಡಿದು ನೃತ್ಯದೊಂದಿಗೆ ಆಕೆಯ ಭಜನೆಯಲ್ಲಿ ಸೇರಿಕೊಂಡರು. ದ್ರೌಪದಿ ಅವರಿಗೆ ಕರಗ ಉತ್ಸವವನ್ನು ನಾಡಿನಲ್ಲಿ ಪ್ರಚುರಗೊಳಿಸುವಂತೆ ಅನುಗ್ರಹಿಸಿದಳೆಂದು ಹೇಳಿಕೆಯಿದೆ. ಈ ವೀರಕುಮಾರರಿಂದ ಪಾಂಡವ ದೇವಾಲಯಗಳಾದವು. ಇವರಿಗೆ ದ್ರೌಪದಿ ಶಕ್ತಿದೇವತೆ. (ಟಿ.ಕೆ.ಬಿ.)

ಇನ್ನೊಂದು ಐತಿಹ್ಯದ ಪ್ರಕಾರ ಸ್ವರ್ಗಾರೋಹಣ ಸಂದರ್ಭದಲ್ಲಿ ದ್ರೌಪದಿ ಮೂರ್ಛಿತಳಾದಳು. ಎಚ್ಚರಗೊಂಡ ಮೇಲೆ ತನ್ನ ಪತಿಗಳು ಇಲ್ಲದಿರುವುದನ್ನು ಕಂಡು ರೋದಿಸುತ್ತಿದ್ದಾಗ ತಿಮಿರಾಸುರನೆಂಬ ರಾಕ್ಷಸ ಆಕೆಯನ್ನು ಪೀಡಿಸಲು ಅವನನ್ನು ನಿಗ್ರಹಿಸುವ ಸಲುವಾಗಿ ವಿರಾಟರೂಪ ತಾಳಿ ತಲೆಯ ಮೇಲೆ ಕುಂಭವನ್ನು ಧರಿಸಿದಳು. ಇದೇ ಇಂದು ಆರಾಧನೆಗೊಳ್ಳುತ್ತಿರುವ ಕರಗ ಎಂದು ಒಂದು ಹೇಳಿಕೆ. ದ್ರೌಪದಿ ಮಂಗಳ ಕಲಶವನ್ನು ಹಿಡಿದು ಸ್ವಯಂವರ ಮಂಟಪಕ್ಕೆ ಹೋಗಿ ಮತ್ಸ್ಯಯಂತ್ರವನ್ನು ಭೇದಿಸಿದ ಅರ್ಜುನನನ್ನೂ ಉಳಿದ ನಾಲ್ವರು ಪಾಂಡವ ಸೋದರರನ್ನೂ ವಿವಾಹವಾದಳೆಂದು ಕಥೆ. ಆ ಸಂದರ್ಭದಲ್ಲಿ ಆಕೆ ಆನಂದದಿಂದ ಕೈಯಲ್ಲಿದ್ದ ಕಲಶವನ್ನು ಶಿರದಲ್ಲಿ ಧರಿಸಿದಳು. ಇದೇ ಕರಗ ಎಂದು ಹೇಳಲಾಗಿದೆ.

ಕರಗದ ಮೂಲ ಅಸ್ಪಷ್ಟವಾದರೂ ಇದು ಆದಿಶಕ್ತಿಯನ್ನು ಆರಾಧಿಸುವ ಒಂದು ಸಂಪ್ರದಾಯ ಎಂದು ಹೇಳಬಹುದು. ನೀರಿನ ಕಲಶ ಎಂಬುದು ಕರಗ ಎಂಬುದರ ಮುಖ್ಯವಾದ ಅರ್ಥ. ಉತ್ತರ ಕರ್ನಾಟಕದ

ಹಲವೆಡೆ ಎಲ್ಲಮ್ಮನ ಭಕ್ತರೇ ಮೊದಲಾದವರು ಉದಕಕುಂಭವನ್ನು ತಲೆಯ ಮೇಲಿಟ್ಟುಕೊಂಡು ತರುವ ಧಾರ್ಮಿಕ ಸಂಪ್ರದಾಯವೂ ಇದೆ. ಪಂಪ, ರನ್ನರ ಕಾವ್ಯಗಳಲ್ಲಿ ಕರಗದ ಪ್ರಸ್ತಾಪವಿದೆ. ಪ್ರಾಯಶಃ ಇವು ಕರಗ ನೃತ್ಯಕ್ಕಿಂತಲೂ ನೀರಿನ ಕುಂಭವನ್ನು ಈ ರೀತಿ ತರುವ ಸಂಪ್ರದಾಯಕ್ಕೆ ಅನ್ವಯಿಸುತ್ತದೆಂದು ತೋರುತ್ತದೆ. *

**ಕರಡೆ ಮಜಲು :** ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಒಂದು ಜನಪದ ಮೇಳಗಾನ. ಇದರಲ್ಲಿ ಸಾಮಾನ್ಯವಾಗಿ ಏಳು ಜನ ವಾದ್ಯಗಾರರಿರುತ್ತಾರೆ. ಇವರಲ್ಲಿ ಕರಡೆಯವನು ಪ್ರಧಾನ. ಇವನು ಕರಡೆಯನ್ನು ಸೊಂಟಕ್ಕೆ ಕಟ್ಟಿಕೊಂಡು ಮಧ್ಯದಲ್ಲಿ ನಿಂತಿರುತ್ತಾನೆ. ಇನ್ನಿಬ್ಬರು ಡೊಳ್ಳನ್ನು ಕೊರಳಿಗೆ ನೇತು ಹಾಕಿಕೊಂಡು ಎಡಬಲಗಳಲ್ಲಿ ನಿಲ್ಲುತ್ತಾರೆ. ಈ ಮೂವರೂ ವಿಶಿಷ್ಟವಾದ ಸಮವಸ್ತ್ರ ಧರಿಸಿರುತ್ತಾರೆ. ಚೆಳ್ಳಮ್ಮು (ಕಂಚಿನ ಎರಡು ತಾಳಗಳು) ಹಿಡಿದು ತಾಳ ಬಾರಿಸುವಾತ ಇವರ ಪಕ್ಕದಲ್ಲಿರುತ್ತಾನೆ. ಕರಡೆಯವನಿಗೆ ಆಹ್ವಾನ ಕೊಡುವಂತೆ ರಾಗಾಲಾಪನೆ ಮಾಡುವ ಜೋಡು ಸನಾದಿ (ಊದು ವಾದ್ಯ) ಯವರಿಬ್ಬರು ಎದುರಿಗೆ ಇರುತ್ತಾರೆ. ಇವರ ಜೊತೆಗೆ ಉದ್ದವಾದ ಸನಾದಿಯನ್ನು ಹಿಡಿದು (ಶ್ರುತಿ) ಬಾಂವ್ ಎಂದು ಪ್ರಾರಂಭದಿಂದ ಕೊನೆಯ ತನಕ ಊದುವ ಇನ್ನೊಬ್ಬನೂ ಇರುತ್ತಾನೆ. ಒಬ್ಬ ಲಾವಣಿಕಾರನೂ ಇರುವುದುಂಟು. ಇವನು ಪ್ರಣಯದ ಹಾಗೂ ದೇವರಿಗೆ ಸಂಬಂಧಿಸಿದ ಜನಪದ ಗೀತೆಗಳನ್ನು ಸಖೀ ಹಾಡುತ್ತಾ ಮಧ್ಯೆ ಮಧ್ಯೆ ಕರಡೆ ಮಜಲಿನವರಿಗೆ ದಮ್ಮು ಆರಿಸಲು ಅವಕಾಶ ಮಾಡಿ ಕೊಡುತ್ತಾನೆ. ಕಾಲಲ್ಲಿ ಗೆಜ್ಜೆ, ಕೈಯಲ್ಲಿ ಜೋಡು ಗುಣಿಗಳು ಇಲ್ಲವೆ ಸಣ್ಣದೊಂದು ದಮಡಿ - ಇವು ಸಖೀ ಹಾಡುವವನ ತಾಳ ಮೇಳ. ತಾಳಮೇಳಗಳಲ್ಲಿ ಪೂರ್ಣ ತಯಾರಿ ನಡೆಸಿರುವ ಈ ಮಜಲಿನವರು ಕೆಲವೊಮ್ಮೆ ಸ್ಫೂರ್ತಿಹೊಂದಿ ಕುಣಿಯುವುದೂ ಉಂಟು. ಬಯಲಗತ್ತು ಒಂದು ವಿಶೇಷ ರೀತಿಯ ಕರಡೆ ಬಾರಿಸುವಿಕೆ. ಇದನ್ನು ಗ್ರಾಮದ ಆಯಕಟ್ಟಿನ ಸ್ಥಳದಲ್ಲಿ ಬಾರಿಸುವುದುಂಟು. ಇಂಥ ಸಂದರ್ಭದಲ್ಲಿ ಕರಡೆ ಮಜಲಿನವರ ಕುಣಿತ ದೊಡ್ಡದಾಗಿರುತ್ತದೆ.

ಕರಡೆ ಡೊಳ್ಳಿನಾಕಾರದ ಚಿಗರೆ ಅಥವಾ ಆಡಿನ ಚರ್ಮದಿಂದ ಮಾಡಿದ ಅವನದ್ಧ ವಾದ್ಯ. ಇದರ ಧ್ವನಿ ಚೀರುದನಿಯಾದರೂ ಕೇಳಲು ಇಂಪಾಗಿರುತ್ತದೆ. ಇದನ್ನು ಎರಡೂ ಕೈಗಳಲ್ಲಿ ಎರಡು ಗುಣಿಗೋಲು ಹಿಡಿದು ಬಾರಿಸುತ್ತಾರೆ. ಗುಣಿಕೋಲುಗಳು ಗಟ್ಟಿ ಕಟ್ಟಿಗೆಯಿಂದ ಗೇಣುದ್ದ ಚೂಪಾಗಿ ನುಣುಪಾಗಿ ಕೆತ್ತಲಾಗಿರುತ್ತವೆ. ಕರಡೆ ಬಹುಪ್ರಾಚೀನ ವಾದ್ಯ. ಕವಿರಾಜಮಾರ್ಗದಲ್ಲಿ ಇದರ ಉಲ್ಲೇಖವಿದೆ. 8ನೆಯ ಶತಮಾನದ ಪಟ್ಟದಕಲ್ಲಿನ ದೇವಾಲಯಗಳಲ್ಲಿ ಇದು ಶಿಲ್ಪಿತವಾಗಿದೆ. ಶಿವಶರಣರ ಕಾಲದಲ್ಲಿ ಈ ವಾದ್ಯಕ್ಕೆ ಹೆಚ್ಚು ಮಹತ್ತ್ವ ಪ್ರಾಪ್ತವಾಯಿತು. ವಚನಗಳನ್ನು ಹಾಡುವಾಗ ಕರಡೆಯನ್ನು ಬಾರಿಸುತ್ತ ಹಾಡುವ ವಾಡಿಕೆ ಆ ಕಾಲದಲ್ಲಿ ಬೆಳೆದು ಬಂದಂತೆ ತೋರುತ್ತದೆ. ವೀರಶೈವ ಸಮಾಜದಲ್ಲಿ ಕರಡಿ ಎಂಬ ಅಡ್ಡ ಹೆಸರಿನ ಮನೆತನಗಳು ಉತ್ತರ ಕರ್ನಾಟಕದಲ್ಲಿವೆ. ಪ್ರಾಯಶಃ ಕರಡೆ ಬಾರಿಸುವುದು ಇವರ ಮೂಲವೃತ್ತಿಯಾಗಿರಬಹುದು. (ಇ.ಪಿ.ಪಿ.)

**ಕರನಿರಾಕರಣ ಚಳವಳಿ :** ಪ್ರಭುತ್ವದ ರೀತಿನೀತಿಗಳು ಪ್ರಜೆಗಳಿಗೆ ಸರಿಯೆನಿಸದಾಗ, ಅವರ ಹಿತಗಳಿಗೆ ವಿರೋಧವಾಗಿ ಸರ್ಕಾರ ವರ್ತಿಸುತ್ತಿದ್ದಾಗ, ಪ್ರಜೆಗಳ ನ್ಯಾಯವಾದ ಆಶೋತ್ತರಗಳನ್ನು ಈಡೇರಿಸಲಿಕ್ಕೂ ಆಳರಸರು ಒಡಂಬಡದಿದ್ದಾಗ, ತಮ್ಮ ಹಕ್ಕಿನ ಸ್ಥಾಪನೆಗಾಗಿ, ಹಿತರಕ್ಷಣೆಗಾಗಿ, ನ್ಯಾಯದ ಪೂರೈಕೆಗಾಗಿ ಅಥವಾ ಆಶೋತ್ತರಗಳ ಈಡೇರಿಕೆಗಾಗಿ ಪ್ರಜೆಗಳು ಕೈಕೊಳ್ಳುವ ತೀವ್ರವಾದ ಮತ್ತು ಸಾಮಾನ್ಯವಾಗಿ ಕೊಟ್ಟಕೊನೆಯ ಅಹಿಂಸಾತ್ಮಕ ಅಸ್ತ್ರ; ಸರ್ಕಾರಕ್ಕೆ ಕೊಡಬೇಕಾದ ಕಂದಾಯವನ್ನು ಕೊಡಲು ನಿರಾಕರಿಸುವ ಸಾಮೂಹಿಕ ಕ್ರಮ. ಮಹಾತ್ಮ ಗಾಂಧಿಯವರ ಸತ್ಯಾಗ್ರಹಸಮರ ಕಾಲದಲ್ಲಿ ರೂಪಿತವಾಗಿ ಪ್ರಯೋಗವಾದ ಒಂದು ಮುಖ್ಯ ಅಸ್ತ್ರ. ಎಂದಿನಿಂದಲೋ ಪ್ರಜೆ ಪ್ರಭುತ್ವಗಳ ಮಧ್ಯೆ ಒಂದು ಬಗೆಯ ಒಪ್ಪಂದವಾಗಿದೆ. ಜನರ ಪ್ರಾಣ, ಮಾನ, ಆಸ್ತಿ ಪಾಸ್ತಿಗಳ ಸಂರಕ್ಷಣೆ ಮಾಡುವುದೂ ಶಾಂತಿ ಸಮಾಧಾನಗಳನ್ನು ನೆಲೆಗೊಳಿಸುವುದೂ ನಿತ್ಯ ಜೀವನ ನೆಮ್ಮದಿಯಾಗಿರಲು ಅವಶ್ಯವಾದದ್ದನ್ನೆಲ್ಲ ಮಾಡುವುದೂ ಪ್ರಭುತ್ವದ ಹೊಣೆ. ಈ ಭರವಸೆಗೆ ಪ್ರತಿಯಾಗಿ, ಸರ್ಕಾರದ ಕರ್ತವ್ಯ ನಿರ್ವಹಣೆಗಾಗಿ, ಸಮಾಜದಲ್ಲಿ ಸಮಸ್ಥಿತಿ ಸ್ಥಾಪನೆಗಾಗಿ, ಪ್ರಜೆಗಳು ಪ್ರಭುತ್ವಕ್ಕೆ ನಿಗದಿಯಾದ ಶುಲ್ಕ ಅಥವಾ ತೆರಿಗೆಯನ್ನು ವಸ್ತುರೂಪದಲ್ಲೊ, ಹಣದ ರೂಪದಲ್ಲೊ ಸಲ್ಲಿಸಬೇಕಾಗುತ್ತದೆ. ಕೃಷಿಕೈಗಾರಿಕೆ, ವ್ಯಾಪಾರ ಮುಂತಾದ ನಾನಾ ವೃತ್ತಿಗಳಲ್ಲಿ ತೊಡಗಿರುವವರು ತಮ್ಮ ವೃತ್ತಿಸೌಕರ್ಯ ಮತ್ತು ಸಂರಕ್ಷಣೆಗೆ ಪ್ರತಿಯಾಗಿ ಪ್ರಭುತ್ವಕ್ಕೆ ತಾವು ಗಳಿಸಿದ್ದರಲ್ಲೊಂದು ಭಾಗವನ್ನು ಕೊಡುತ್ತಾರೆ. ರೈತ ಪ್ರಭುತ್ವಕ್ಕೆ ಪ್ರತಿವರ್ಷ ಕೊಡುವ ಕಂದಾಯವನ್ನು ಕರವೆಂದು ಕರೆಯುವುದು ರೂಢಿ. ಕಂದಾಯವನ್ನು ಒಳಗೊಂಡು ಎಲ್ಲ ಬಗೆಯ ತೆರಿಗೆಗಳನ್ನೂ ಕರವೆನ್ನುವುದೂ ಉಂಟು.

ರಾಜ ಪ್ರಜಾಪ್ರಿಯನಾಗದೆ, ಪ್ರಜೆಯ ಹಿತಸಾಧಕನಾಗದೆ ಇದ್ದರೆ, ಪ್ರಜಾಹಿಂಸಕನಾದರೆ ಪ್ರಜೆ ಪ್ರತಿಭಟಿಸಬಹುದು. ಇದು ಅವನ ಮೂಲಭೂತಹಕ್ಕು. ರಾಜ ದುಷ್ಟನಾದರೆ, ಪ್ರಜಾಪೀಡಕನಾದರೆ ಪ್ರಜೆಗಳು ಅವನನ್ನು ಹುಚ್ಚುನಾಯಿಯಂತೆ ಭಾವಿಸಿ, ಬೇಟೆಯಾಡಿ ಕೊಲ್ಲಬಹುದೆಂದು ಪ್ರತಿಪಾದಿಸುವವರೆಗೂ ಭಾರತದ ರಾಜನೀತಿಶಾಸ್ತ್ರಜ್ಞರು ಹೋಗಿದ್ದಾರೆ. ನ್ಯಾಯವಾದ ಕಾರಣಗಳಿಗಾಗಿ ರೈತರು ಕಂದಾಯ ಸಲ್ಲಿಸದೆ ನಿರಾಕರಿಸಲು ಸಹ ಅಧಿಕಾರ ಉಳ್ಳವರಾಗಿದ್ದಾರೆ. ಅಷ್ಟು ಮಾತ್ರವಲ್ಲ, ಪ್ರಜೆಗಳಿಗೂ ಪ್ರಭುತ್ವಕ್ಕೂ ಘರ್ಷಣೆ ಉಂಟಾದಾಗ ಪ್ರಜೆಗಳು ಪ್ರಭುತ್ವದ ರೀತಿನೀತಿಗಳನ್ನು ಪ್ರತಿಭಟಿಸಿದ್ದಾರೆ. ಸಾಮೂಹಿಕವಾಗಿ ಹಳ್ಳಿಹಳ್ಳಿಗಳನ್ನೇ ಬರಿದುಮಾಡಿ, ದೇಶ ಬಿಟ್ಟುಹೋದ ಉದಾಹರಣೆಗಳಿವೆ. ಅಂಥ ಸಂದರ್ಭಗಳಲ್ಲಿ ಪ್ರಭುತ್ವದವರು ಪ್ರಜೆಗಳನ್ನು ಬರಮಾಡಿಕೊಂಡು, ಮಾತುಕತೆ ನಡೆಸಿ, ಅವರಿಗಾದ ಅನ್ಯಾಯಗಳನ್ನು ಸರಿಪಡಿಸಿ, ಪರಸ್ಪರ ಬಾಂಧವ್ಯವನ್ನು ಸುಗಮಗೊಳಿಸಿದ್ದಾರೆ.

ಸ್ವಾತಂತ್ರ್ಯಸಾಧನೆಗಾಗಿ ಭಾರತ ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಹೋರಾಟ ನಡೆಸಿದ್ದ ಕಾಲದಲ್ಲಿ ಮಹಾತ್ಮಗಾಂಧಿಯವರು ಈ ಸಂಗ್ರಾಮದ ನಾಯಕತ್ವ ವಹಿಸಿಕೊಂಡ ಮೇಲೆ ಅವರು ಇದಕ್ಕೆ ರೂಪ ಕೊಟ್ಟರು. ಶಸ್ತ್ರಾಸ್ತ್ರಗಳನ್ನು ನಿರಾಕರಿಸಿ, ಅಹಿಂಸೆಯ ಮಾರ್ಗವನ್ನು ಅನುಸರಿಸಿ, ಸತ್ಯವನ್ನಾಶ್ರಯಿಸಿ ನಡೆಸಿದ ಮಹಾಸಂಗ್ರಾಮವದು. ಒಂದು ಜನಾಂಗ ಶಾಂತಿಯಿಂದ, ತ್ಯಾಗದಿಂದ, ಪ್ರೇಮದಿಂದ ಪರಶತ್ರುವನ್ನು ಗೆಲ್ಲಬಹುದೆಂಬುದನ್ನು ಮಾನವಕುಲದ ಅನುಭವಕ್ಕೆ ಗಾಂಧಿಯವರು ತಂದುಕೊಟ್ಟರು. ಸತ್ಯ, ತ್ಯಾಗ, ಅಹಿಂಸೆಗಳೆಂಬ ತ್ರಿಮುಖ ಅಸ್ತ್ರಕ್ಕೆ ಅವರು ಸತ್ಯಾಗ್ರಹವೆಂದು ಹೆಸರಿಟ್ಟರು. ಈ ಅಸ್ತ್ರ ಪ್ರಯೋಗಾರ್ಹತೆ ಪಡೆಯುವುದೂ ಗಾಂಧಿಯವರಿಂದ ಪ್ರಶಸ್ತಿ ಪಡೆಯುವುದೂ ಸಾಮಾನ್ಯವಾಗಿರಲಿಲ್ಲ. ಇಂಥ ಅಸ್ತ್ರಪ್ರಯೋಗ ಸಾಧನೆಯಲ್ಲಿ ಗಾಂಧಿಯವರು ಅನೇಕ ಭಾರತೀಯರನ್ನು ನಿಪುಣರನ್ನಾಗಿ ಮಾಡಿದರು. ಅವರಿಗೊಂದು ನವೀನ ಸಂಸ್ಕಾರವನ್ನೇ ಗಳಿಸಿಕೊಟ್ಟರು. ದುಷ್ಕರ್ಮದಲ್ಲಿ ತೊಡಗುವ ಸರ್ಕಾರದೊಂದಿಗೆ, ತಮಗೆ ಬೇಡವೆನಿಸಿದ ಸರ್ಕಾರದೊಂದಿಗೆ, ಅಸಹಕಾರಮಾಡುವುದು ಪ್ರತಿಯೊಬ್ಬ ಪ್ರಜೆಯ ಈಶ್ವರದತ್ತವಾದ ಹಕ್ಕೆಂದರು. ದುಷ್ಕರ್ಮದೊಂದಿಗೆ ಸಹಕಾರ ಮಾಡಬಾರದೆಂಬ ತತ್ತ್ವದ ಪ್ರತಿಪಾದನೆ ಮಾಡಿದರು.

ಗಾಂಧೀಜಿಯವರ ಸತ್ಯಾಗ್ರಹ ಪ್ರಯೋಗಾವಸರದಲ್ಲಿ ನಾನಾ ಘಟ್ಟಗಳುಂಟು. ಕಟ್ಟಕಡೆಯ ಘಟ್ಟ ಕರನಿರಾಕರಣ. ಗಾಂಧಿಯವರು ನಡೆಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಅವರ ಒಪ್ಪಿಗೆ ಪಡೆದು, ಒಂದೆರಡು ಪ್ರಾಂತ್ಯಗಳಲ್ಲಿ ಮಾತ್ರ ಸತ್ಯಾಗ್ರಹಿಗಳು ಕರನಿರಾಕರಣವನ್ನಾರಂಭಿಸಿದರು. ಗುಜರಾತಿನಲ್ಲೂ ಕರ್ನಾಟಕ ಪ್ರಾಂತ್ಯದ ಕೆಲವು ತಾಲ್ಲೂಕುಗಳಲ್ಲೂ ಮಾತ್ರವೇ ತೃಪ್ತಿಕರವಾಗಿ ಈ ಆಂದೋಲನ ಸಾಗಿತು.

ಕರ್ನಾಟಕದ ಶಿರಸಿ, ಸಿದ್ದಾಪುರ, ಅಂಕೋಲ ಮತ್ತು ಹಿರೇಕೆರೂರು ಈ ನಾಲ್ಕೂ ತಾಲ್ಲೂಕುಗಳ ಜನ ಗಾಂಧೀಜಿಯವರ ನಿರ್ಮಲ ಕಲ್ಪನೆ ಮತ್ತು ಪವಿತ್ರಭಾವನೆಗೆ ಲೇಶವೂ ಊನ ಬಾರದಂತೆ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಹುಲ್ಲುಬನಿ ಕರನಿರಾಕರಣ ಮೊದಲಾದುವುಗಳನ್ನು ನಡೆಸಿದರು. ಅಂಕೋಲದ್ದು ಒಂದು ಧ್ಯೇಯಕ್ಕಾಗಿ ನಡೆದ (1930 ಏಪ್ರಿಲ್) ಸತ್ಯಾಗ್ರಹವೆನ್ನಬಹುದಾದರೂ ಉಳಿದ ತಾಲ್ಲೂಕುಗಳಲ್ಲಿ ನಡೆದದ್ದು ಒಂದು ಅನಿವಾರ್ಯ ಸನ್ನಿವೇಶದಿಂದಲೂ ಪ್ರಭಾವಿತವಾದದ್ದು ಎಂಬುದನ್ನು ಮರೆಯುವಂತಿಲ್ಲ.

1931ರಲ್ಲಿ ಶಿರಸಿ, ಸಿದ್ದಾಪುರ, ಹಿರೇಕೆರೂರು - ಈ ಮೂರು ತಾಲ್ಲೂಕುಗಳಲ್ಲೂ ಕ್ಷಾಮ ಆವರಿಸಿತು. ದವಸ ಧಾನ್ಯಗಳ ಧಾರಣೆಗಳು ಬಿದ್ದುವು. ಶಿರಸಿ, ಸಿದ್ದಾಪುರಗಳ ಸುವರ್ಣಾದಾಯದ ಬೆಳೆಯೆಂದರೆ ಅಡಿಕೆ. ಏನೋ ಕಾರಣದಿಂದ ಆ ಬೆಳೆ ಹಾಳಾಯಿತು. ರೂಪಾಯಿಗೆ ನಾಲ್ಕಾಣೆ (ಕಾಲುಭಾಗ) ಬೆಳೆ ಕೂಡ ರೈತರ ಕೈ ಹತ್ತಲಿಲ್ಲ. ಆ ವರ್ಷ ಕಂದಾಯ ವಸೂಲು ಮಾಡಬಾರದೆಂದು ರೈತರು ಸರ್ಕಾರದಲ್ಲಿ ಮೊರೆ ಇಟ್ಟರು. ಅದು ಬರಿಯ ಅರಣ್ಯರೋದನವಾಯಿತು. ಸರ್ಕಾರ ಆ ಮೊರೆಗೆ ಕಿವಿಗೊಡಲಿಲ್ಲ. ಕ್ಷಾಮ ಸಂಭವಿಸಿಲ್ಲವೆಂದೂ ಬೆಳೆಯಾಗಿಲ್ಲವೆಂಬ ಮಾತು ಸುಳ್ಳೆಂದೂ ಇದು ಕರನಿರಾಕರಣ ಚಳವಳಿಯೆಂದೂ ಸರ್ಕಾರ ವಾದಿಸಿತು. ಆದರೆ ಕ್ಷಾಮ ಪ್ರಾಪ್ತಿಯಾಗಿದ್ದುದು ನಿಜ. ರೈತರೂ ಕಂಗಾಲಾಗಿದ್ದುದೂ ನಿಜ. ಚಳವಳಿಯ ನಾಯಕತ್ವವನ್ನು ರಾಜಕಾರಣಿಗಳು (ಹಾಗೆಂದು ಸರ್ಕಾರದವರು ಅವರನ್ನು ಕರೆದರು) ವಹಿಸಿದ್ದರೆಂಬುದೂ ನಿಜ. ಆದರೆ ಕ್ಷಾಮವೇ ಚಳವಳಿಗೆ ಮೂಲ ಕಾರಣವೆಂಬ, ಚಳವಳಿಯ ನಾಯಕರು ರಾಜಕಾರಣಿಗಳೇ ಆದರೂ ರೈತರ ನ್ಯಾಯವಾದ ಬೇಡಿಕೆಯನ್ನು ಈಡೇರಿಸಬೇಕೆಂಬ ವಾದಕ್ಕೆ ಸರ್ಕಾರ ವಿಮುಖವಾಗಿತ್ತು.

ಮೂರೂ ತಾಲ್ಲೂಕುಗಳ ರೈತರೂ ಶಾಸನಬದ್ಧವಾಗಿ, ಶಾಂತರೀತಿಯಿಂದ ನಡೆದುಕೊಂಡರು. ಇದು ಸಂಪೂರ್ಣವಾಗಿ ಆರ್ಥಿಕ ದುಃಸ್ಥಿತಿಯ ಹೋರಾಟ, ರಾಜಕೀಯ ಹೋರಾಟವಲ್ಲ ಎಂಬುದನ್ನು ಸ್ಥಾಪಿಸಿದರು. ಅರ್ಜಿಗಳನ್ನು ಹಾಕಿದರು. ಸಭೆಗಳನ್ನು ನಡೆಸಿದರು, ನಿರ್ಣಯಗಳನ್ನು ಮಾಡಿದರು, ಜಿಲ್ಲೆಯ ಅಧಿಕಾರಿಗಳನ್ನು ಕಂಡರು, ತಮ್ಮ ಕಷ್ಟಗಳನ್ನು ವಿವರಿಸಿದರು, ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಬೇರೆ ದಾರಿಕಾಣದೆ ರೈತರು ಸಾಂಗವಾಗಿ ಕರನಿರಾಕರಣ ಸತ್ಯಾಗ್ರಹವನ್ನಾರಂಭಿಸಿದರು. ಸರ್ಕಾರ ದಂಡಧಾರಿಯಾಯಿತು. ರೈತರನ್ನು ಹಿಂಸಿಸಲಾರಂಭಿಸಿತು.

ಶಿರಸಿ, ಸಿದ್ದಾಪುರಗಳ ರೈತರ ವ್ಯವಹಾರ 1923 ರಿಂದ ಹಿರಿಯ ರೆವೆನ್ಯೂ ಅಧಿಕಾರಿ ಕಾಲ್ವೆನನ ಪರಿಶೀಲನೆಯಲ್ಲಿತ್ತು. ಇವೆರಡೂ ತಾಲ್ಲೂಕುಗಳಲ್ಲೂ ಈತ ಸಂಚಾರ ಮಾಡಿ, ಆರ್ಥಿಕ ಪರಿಶೀಲನೆ ನಡೆಸಿದ. ಕಂದಾಯದ ಮೊತ್ತವನ್ನು ಶಾಶ್ವತವಾಗಿ ಕಡಿಮೆಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಿದ. ಆದರೆ ಸರ್ಕಾರ ಈ ಸಲಹೆಗಳನ್ನು ಪುರಸ್ಕರಿಸಲಿಲ್ಲ.

ಮೂರು ತಾಲ್ಲೂಕುಗಳ ರೈತರೂ ದೃಢಸಂಕಲ್ಪರಾದರು. ಕಂದಾಯವನ್ನು ಕೊಡುವುದಿಲ್ಲವೆಂದು ಹೇಳಿದರು. ಅಧಿಕಾರಿಗಳು ಜಮೀನುಗಳನ್ನು ಜಪ್ತಿ ಮಾಡಿದರು, ರೈತರಿಗೆ ಕೊಡಬಾರದ ಹಿಂಸೆ ಕೊಟ್ಟರು. ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡರು. ಯಾವ ರೈತರೂ ಪ್ರತಿಭಟಿಸಲಿಲ್ಲ. ಜಮೀನು ಹರಾಜಿನಲ್ಲಿ ಸವಾಲು ಕೂಗುವವರೇ ಇರಲಿಲ್ಲ. ಎಂಟುನೂರಕ್ಕೂ ಮೀರಿ ಜಪ್ತಿಗಳಾದುವು. ಇನ್ನೂರು ಮಂದಿಗೆ ಮುಟ್ಟುಗೋಲು ನೋಟೀಸ್ ಕೊಡಲಾಯಿತು. ಉಭಯ ಪಕ್ಷಗಳ ಮಧ್ಯೆ ಹೀಗೆ ಹೋರಾಟವಾಗುತ್ತಿದ್ದಾಗ 1931 ಮಾರ್ಚ್ 4ರಂದು, ಗಾಂಧಿ - ಇರ್ವಿನ್ ಒಡಂಬಡಿಕೆಯಾಯಿತು. ಚಳವಳಿ ನಿಂತಿತು.

ಜಮೀನುಗಳು ಹರಾಜಾಗುತ್ತಿದ್ದ ಕಾಲದಲ್ಲಿ ಸ್ವಯಂ ಸೇವಕರನೇಕರು ಪಿಕೆಟ್‌ಮಾಡುತ್ತಿದ್ದರು. ಸರ್ಕಾರದವರು ಇವರ ಮೇಲೆಲ್ಲ ನಾನಾ ಆಪಾದನೆಗಳನ್ನು ಹೊರಿಸಿ ಮೊಕದ್ದಮೆಗಳನ್ನು ಹೂಡಿ, ವಿಚಾರಣೆಗೊಳಪಡಿಸಿ, ಇವರಿಗೆಲ್ಲ ಶಿಕ್ಷೆ ಕೊಡಿಸಿದ್ದರು. ಸ್ವಯಂಸೇವಕರ ನೇಕರಿಗೆ ಈ ತಾಲ್ಲೂಕು ಬಿಟ್ಟು ಹೊರಡಬೇಕೆಂದು ತಿಳಿವಳಿಕೆ ಕೊಟ್ಟಿದ್ದರು. ಧಾರವಾಡ, ಬೆಳಗಾಂವಿ ಕಡೆಗಳಲ್ಲಿ ಮನೆಗಳ ಶೋಧನೆ ನಡೆಸಿ, ಪಿತೂರಿ ಮತ್ತು ರಾಜದ್ರೋಹ ಆಪಾದನೆಗಳಿಗಾಗಿ ಹಲವರ ಮೇಲೆ ಮೊಕದ್ದಮೆಗಳನ್ನು ಹೂಡುವ ಸಿದ್ಧತೆ ನಡೆದಿತ್ತು. ಆದರೆ ಒಡಂಬಡಿಕೆಯಿಂದಾಗಿ ಅದನ್ನೆಲ್ಲ ಕೈಬಿಡಬೇಕಾಯಿತು.

ಕಟ್ಟಕಡೆಗೆ ರೈತರ ಮೊರೆ ಸಾಧುವಾದದ್ದು ಎಂಬುದು ಸರ್ಕಾರದವರ ಮನಸ್ಸಿಗೆ ಬಂತು. ನಿಜವಾಗಿಯೂ ಇದು ಆರ್ಥಿಕ ದುಃಸ್ಥಿತಿಯ ಚಳವಳಿ ಎಂಬುದನ್ನು ಅಧಿಕಾರಿಗಳು ಗ್ರಹಿಸಿದರು. ಈ ಅಂಶವನ್ನು ಗಾಂಧೀಜಿಯವರು ಲಾರ್ಡ್ ಇರ್ವಿನ್ನನ ಗಮನಕ್ಕೆ ತಂದು ಅವನನ್ನೊಪ್ಪಿಸಿದರು. 1931 ಮೇ ತಿಂಗಳಿನಲ್ಲಿ ರೆವೆನ್ಯೂ ಕಮೀಷನರೊಂದಿಗೆ ಆದ ಒಡಂಬಡಿಕೆಯ ಫಲವಾಗಿ ಹಿರೇಕೆರೂರು ತಾಲ್ಲೂಕಿನ ರೈತರಿಗೆ ತೃಪ್ತಿಕರ ಪರಿಹಾರ ಸಿಕ್ಕಿತು. ಆ ವರ್ಷದ ಕಂದಾಯವನ್ನು ರದ್ದುಮಾಡಲಾಯಿತು.

ಆದರೆ ಶಿರಸಿ ಸಿದ್ದಾಪುರಗಳ ರೈತರ ವಿಚಾರದಲ್ಲಿ ಹೀಗಾಗಲಿಲ್ಲ. ರೈತರೊಬ್ಬೊಬ್ಬರೂ ಅರ್ಜಿಹಾಕಿಕೊಂಡರೆ ವಿಚಾರಮಾಡಿ ಸಂದರ್ಭಾನುಸಾರ ಕಂದಾಯಪರಿಹಾರ ಕೊಡುವುದಾಗಿ ಸರ್ಕಾರಿ ಅಧಿಕಾರಿಗಳು ಕೊಸರಾಟ ಮಾಡಿದರಲ್ಲದೆ ರೈತರಿಗೆ ಕಿರುಕುಳ ಕೊಟ್ಟರು. ಸ್ಥಳೀಯ ಅಧಿಕಾರಿಗಳು ಸರ್ಕಾರದ ಆಜ್ಞೆಗಳಿಗೆ ತಮ್ಮದೇ ಆದ ಭಾಷ್ಯ ಮಾಡಿದ್ದರಿಂದ ಬಡರೈತರಿಗೆ ಸಹಿಸಲಾಗದಷ್ಟು ಹಿಂಸೆ ಉಂಟಾಯಿತು. ಕಡೆಗೆ ಇಲ್ಲೂ ರೈತರಿಗೆ ಗೆಲವು ಸಿಕ್ಕಿತು. ಬಂಧನದಲ್ಲಿದ್ದವರೆಲ್ಲರ ಬಿಡುಗಡೆಯಾಯಿತು. ನ್ಯಾಯಾಸ್ಥಾನಗಳಲ್ಲಿ ಹೂಡಿದ್ದ ಮೊಕದ್ದಮೆಗಳನ್ನೆಲ್ಲ ಅಧಿಕಾರಿಗಳು ಹಿಂದಕ್ಕೆ ತೆಗೆದುಕೊಂಡರು. ಕಡೆಗೂ ಕರನಿರಾಕರಣ ಸತ್ಯಾಗ್ರಹ ರೈತರ ಜಯದಲ್ಲಿ ಮುಕ್ತಾಯವಾಯಿತು.

1931-1932ರ ಕರ ನಿರಾಕರಣ ಸತ್ಯಾಗ್ರಹದ ಮಾತು ಬಂದಾಗ, ಉತ್ತರ ಕನ್ನಡ ಜಿಲ್ಲೆಯ ರೈತರ ಸತ್ತ್ವ ಮತ್ತು ಕ್ಷಾತ್ರಗುಣಗಳನ್ನು ಗಣನೆಗೆ ತೆಗೆದುಕೊಂಡಾಗ ಯಾರಿಗಾದರೂ ಹೆಮ್ಮೆಯಾಗುತ್ತದೆ. ಆ ಅಪೂರ್ವ ಸಂಗ್ರಾಮದಲ್ಲಿ ಗಂಡಸರೂ ಹೆಂಗಸರೂ ಸಾಮಾನ್ಯ ಕಲ್ಪನೆಗೆ ಮೀರಿದ ತ್ಯಾಗ ತೋರಿಸಿದರು. ಬೀಳಗಿಯ ಶ್ರೀ ಕೃಷ್ಣ, ಬಾಲಕೃಷ್ಣ ಪುರಾಣಿಕರು ಕರನಿರಾಕರಿಸಿದ ಕಾರಣ ಬಂಧನಕ್ಕೊಳಗಾದರು. ಅವರನ್ನು ಜನ ಮೆರವಣಿಗೆ ಮಾಡಿ ಪೊಲೀಸ್ ಠಾಣೆಗೆ ಕರೆದೊಯ್ದರು. ಪುರಾಣಿಕರಾಗ ತಮ್ಮ ಹೆಂಡತಿಗೆ ಹೇಳಿದ ಮಾತಿದು 'ನಮ್ಮ ಹೊಲ, ಮನೆ ಆಸ್ತಿಗಳೆಲ್ಲವನ್ನೂ ಈ ಧರ್ಮಯುದ್ಧದಲ್ಲಿ ನಾವು ಕಳೆದುಕೊಂಡರೂ ಹೆದರಬೇಕಿಲ್ಲ. ಪಾದಚಾರಿಗಳಾಗಿ ನಾವು ಊರಿಂದೂರಿಗೆ ಭಿಕ್ಷಾಟನೆ ಮಾಡುತ್ತ ಕಾಶೀಯಾತ್ರೆಗೆ ಹೋಗೋಣ. ಸರ್ಕಾರಕ್ಕೆ ಒಂದು ಕಾಸೂ ಕೊಡಬೇಡ. ತೀರ್ವೆ ಕೊಟ್ಟು ಪಾಪ ಕಟ್ಟಿಕೊಳ್ಳಬೇಡ. ಒಂದು ವೇಳೆ ಸರ್ಕಾರದವರು ಒತ್ತಾಯಮಾಡಿ ವಸೂಲುಮಾಡಲು ಪ್ರಯತ್ನಿಸಿದ್ದಾದರೆ ನಮ್ಮ ಕಾಳು ಕಡ್ಡಿ, ಮನೆ ಮಾರು, ಅವರ ಕೈಗೆ ಸಿಗದಂತೆ ಅವುಗಳನ್ನು ಅಗ್ನಿನಾರಾಯಣನಿಗೆ ಆಹುತಿ ಮಾಡಿಬಿಡು', ಇದಕ್ಕೆ ವ್ಯಾಖ್ಯಾನ ಬೇಕಿಲ್ಲ. ಕರನಿರಾಕರಣ ಸತ್ಯಾಗ್ರಹಿಗಳ ಸ್ವರೂಪ ನಿದರ್ಶನಕ್ಕೆ ಇದೊಂದು ಉದಾಹರಣೆ.

ಊರು ಬಿಟ್ಟು ಶಿಬಿರ ಸೇರಿದ್ದ ಗಂಡಸರ ಸುಳಿವನ್ನು ಪತ್ತೆ ಹಚ್ಚಲು ಪೊಲೀಸರು ಕೈಕೊಂಡ ನಾನಾ ಬೆದರಿಕೆಯ ಕ್ರಮಗಳಿಗೆ ಸ್ತ್ರೀಯರು ಬಗ್ಗದೆ ಸ್ಥೈರ್ಯದಿಂದ ನಿಂತು ಎದುರಿಸಿದ್ದು ಇತಿಹಾಸದ ಪುಟಗಳಲ್ಲಿ ಸೇರಿಹೋಗಿದೆ.

ತಮಗಾಗಲಿ, ತಮ್ಮ ಹೆಂಡಿರುಮಕ್ಕಳಿಗಾಗಲಿ ಸ್ವಲ್ಪಮಾತ್ರ ಅಪಮಾನವಾದರೆ ಸಹಿಸಲಾರದ ನಾಡಜನರು ಈ ಎಲ್ಲ ಕ್ರಮಗಳ ಎದುರಿನಲ್ಲೂ ತಾಳ್ಮೆ ವಹಿಸಿ ಅಹಿಂಸಾವ್ರತವನ್ನು ಪಾಲಿಸಿದರು. ಇದು ಅವರ ಸತ್ತ್ವಪರೀಕ್ಷೆಯ ಪ್ರಸಂಗವಾಗಿ ಪರಿಣಮಿಸಿತು. ಗಾಂಧೀಜಿ ಯವರಲ್ಲಿ, ಅವರ ಅಹಿಂಸಾತತ್ತ್ವದಲ್ಲಿ ಆಗ ನಾಡವರಿಗಿದ್ದ ನಿಷ್ಠೆಯ

ಪರಾಕಾಷ್ಠತೆಯಿಂದಾಗಿಯೇ ಅವರು ಇಂಥ ಉದ್ವೇಗಜನಕ ಸನ್ನಿವೇಶದಲ್ಲಿ ತಾಳ್ಮೆ ವಹಿಸುವುದು ಸಾಧ್ಯವಾಯಿತೆನ್ನಬಹುದು.
*

**ಕರಪಾಲ ಮೇಳ :** ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಬಂದ ಒಂದು ಜನಪದ ಕಲೆ. ದಕ್ಷಿಣ ಕರ್ನಾಟಕದ ತುಮಕೂರು, ಹಾಸನ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಅಲ್ಲಲ್ಲಿ ಇನ್ನೂ ಉಳಿದಿದೆ. ಕರಪಾಲ ಎಂಬ ಶಬ್ದ ಕರಪಲ್ಲ, ಕರಪಲ್ಲವ, ಕರತಾಲ ಎಂಬ ಶಬ್ದಗಳ ರೂಪಾಂತರವಿರಬೇಕೆಂದು ಊಹಿಸಲಾಗಿದೆ. ಬೆರಳುಗಳ ಸಂಜ್ಞೆಯ ಮೂಲಕ ಪ್ರೇಕ್ಷಕರ ಹೆಸರನ್ನು ಹೇಳುವ ಒಂದು ಸಂಪ್ರದಾಯ ಕರಪಾಲ ಮೇಳದಲ್ಲಿದ್ದಂತೆ ತೋರುತ್ತದೆ. ಗುರು ನಿರ್ದಿಷ್ಟ ವ್ಯಕ್ತಿಯ ಹೆಸರನ್ನು ತಿಳಿದು ಜನರ ನಡುವೆ ನಿಂತ ತನ್ನ ಶಿಷ್ಯನಿಗೆ ಬೆರಳುಗಳ ಮೂಲಕ ಕೆಲವು ಸಂಜ್ಞೆಗಳನ್ನು ತೋರುತ್ತಾನೆ. ಅದರ ಮೂಲಕ ಶಿಷ್ಯ ಸಂಬಂಧಪಟ್ಟ ವ್ಯಕ್ತಿಯ ಹೆಸರನ್ನು ಊಹಿಸಿ ಹೇಳುತ್ತಾನೆ. ಹೀಗೆ ಈ ಹೆಸರು ಹೇಳುವ ಸಂಪ್ರದಾಯವೂ ಹಾಡಿನಲ್ಲಿಯೇ ಬೆರೆತು ಬರುತ್ತದೆ. ಗುರು ಸೂಚಿಸಿದ ಹೆಸರು ಕಲ್ಲಪ್ಪ ಆಗಿದ್ದರೆ

ಕಲ್ಲಪ್ಪ ಹೌದೇನ್ರಿ
ಮತ್ತೀನ್ಯಾರ ಹೇಳಯ್ಯಾ
ಸುವ್ವಿ ಬಾ ಚೆನ್ನಬಸವಯ್ಯ ಸುವ್ವಿ

ಎಂಬ ಹಾಡಿನೊಂದಿಗೆ ಮುಂದುವರಿಯುತ್ತದೆ. ಈಗ ಕೈ ಬೆರಳಿನ ಸಂಜ್ಞೆಗಳ ಮೂಲಕ ಹೆಸರನ್ನು ಹಾಕುವ ಈ ಪದ್ಧತಿ ದೂರವಾಗುತ್ತಿದ್ದು ಮೇಳ ನಡೆಸುವ ಸಂಪ್ರದಾಯ ಮಾತ್ರ ಉಳಿದಿದೆ.

ಕರಪಾಲ ಮೇಳ ನಡೆಸುವುದು ಹೆಚ್ಚಾಗಿ ಹಬ್ಬಹರಿದಿನಗಳಲ್ಲಿ ಮತ್ತು ಪುಣ್ಯ ದಿನಗಳಲ್ಲಿ. ಮೇಳ ನಡೆಸುವವರು ಸಾಮಾನ್ಯವಾಗಿ ವೀರಶೈವ ಧರ್ಮದ ಅಯ್ಯಗಳು. ಅಲ್ಲಲ್ಲಿ ಬೇರೆ ಧರ್ಮೀಯರು ಭಾಗವಹಿಸಿದ ನಿದರ್ಶನಗಳೂ ಇವೆ. ಮಹಮ್ಮದೀಯ ಮತದವರೂ ಈ ಮೇಳವನ್ನು ಅತ್ಯಂತ ಆಕರ್ಷಕ ರೀತಿಯಲ್ಲಿ ನಡೆಸಿದ ಸಂದರ್ಭಗಳು ತುಮಕೂರು ಜಿಲ್ಲೆಯಲ್ಲಿ ಕಂಡುಬಂದಿದೆ. ಕರಪಾಲ ಮೇಳದಲ್ಲಿ ಯಕ್ಷಗಾನ ಬಯಲಾಟಗಳ ವರ್ಣವೈಭವ, ವೇಷಭೂಷಣಗಳ ವೈಖರಿ ಕಂಡುಬರುವುದಿಲ್ಲ. ಹೆಚ್ಚು ಸಂಖ್ಯೆಯ ಕಲಾವಿದರೂ ಇಲ್ಲಿ ಭಾಗವಹಿಸುವುದಿಲ್ಲ. ಮುಖ್ಯ ಕಥೆಗಾರ ಇಬ್ಬರು ಸಹನೃತ್ಯದವರೊಡನೆ ಜನಪ್ರಿಯ ಕಥೆಯೊಂದನ್ನು ನಾಟಕೀಯವಾಗಿ ಅಭಿನಯಿಸಿ, ನಿರೂಪಿಸಿ, ಗ್ರಾಮಾಂತರ ಜನತೆಗೆ ಮನರಂಜನೆಯನ್ನೊದಗಿಸುವನು. ಅತ್ಯಂತ ಸರಳ ರೀತಿಯಲ್ಲಿ ನೃತ್ಯ, ಸಂಗೀತ, ವೇಷಭೂಷಣಗಳನ್ನು ಒದಗಿಸಿಕೊಂಡು ತನ್ನ ಕಲೆ ಕಳೆಗಟ್ಟುವಂತೆ ಮಾಡಿಕೊಳ್ಳುವುದು ಇಲ್ಲಿನ ವೈಶಿಷ್ಟ್ಯ. ಎಲ್ಲ ದೃಷ್ಟಿಯಿಂದಲೂ ಕರಪಾಲ ಮೇಳದಲ್ಲಿ ಎದ್ದುತೋರುವ ಮುಖ್ಯ ಅಂಶ ಸರಳತೆ. ಕಥೆಯಲ್ಲಿ, ಹಾಡಿನಲ್ಲಿ, ಕುಣಿತದಲ್ಲಿ ಇತರ ಸಾಧನ ಸಲಕರಣೆಗಳಲ್ಲಿ ಈ ಅಂಶವನ್ನು ಗುರುತಿಸಬಹುದು. ಮೇಳ ನಡೆಸಲು ಸಾಕಷ್ಟು ಪ್ರೇಕ್ಷಕರು ಕೂರಲು ಅನುಕೂಲವಿರುವ ಬಯಲು ಪ್ರದೇಶ ಬೇಕು. ಊರ ಚಾವಡಿಯ ಮುಂದೊ ಗುಡಿಯ ಅಥವಾ ರಾಮ ಮಂದಿರದ ಮುಂದೊ ಬಯಲಾಟದಂತೆಯೇ ಚಪ್ಪರವನ್ನು ಹಾಕಬೇಕು. ಬಯಲಾಟದಂತೆ ವಿಡಂಗುಗಳು ಇಲ್ಲಿ ಬರುವುದಿಲ್ಲವಾದ್ದರಿಂದ ಇಲ್ಲಿನ ಚಪ್ಪರ ಬಹಳ ಚಿಕ್ಕದಾಗಿದ್ದು, ಎತ್ತರ ಏಳು ಅಥವಾ ಎಂಟು ಅಡಿ, ಉದ್ದ ಹತ್ತು ಅಡಿ, ಅಗಲ ಹತ್ತು ಅಡಿ ಇದ್ದು ಮೂರು ಮಂದಿ ಒಂದು ಸಾಲಿನಲ್ಲಿ ನಿಂತು ಹಿಂದೆ ಮುಂದೆ ಸರಿಯುತ್ತ ಕುಣಿಯಲು ಅನುಕೂಲವಾಗುವಂತಿರುತ್ತದೆ. ಯಾವ ರುದ್ರನೃತ್ಯವೂ ಇಲ್ಲಿ ಬರುವುದಿಲ್ಲವಾದ್ದರಿಂದ ರಂಗವ್ಯವಸ್ಥೆ ಸರಳವಾಗಿರುತ್ತದೆ.

ಕರಪಾಲ ಮೇಳಕ್ಕೆ ವಾದ್ಯಗಳನ್ನು ನುಡಿಸುವವರು, ಹಿಮ್ಮೇಳ ಹಾಡುವವರು ಚಪ್ಪರದ ಮುಂಭಾಗದಲ್ಲಿ ಹೊರಗೆ ಕುಳಿತಿರುತ್ತಾರೆ. ಚಪ್ಪರದ ಒಳಗೆ ಕರಪಾಲದ ಕಥೆಯನ್ನು ಅಭಿನಯಿಸುವ ಮುಖ್ಯ ನಿರೂಪಕ ಮತ್ತು ಅವನ ಎರಡು ಬದಿಯಲ್ಲಿ ಇಬ್ಬರು ನೃತ್ಯದವರು ನಿಂತಿರುತ್ತಾರೆ. ಮುಖ್ಯ ನಿರೂಪಕ ತಲೆಗೆ ಕೋಡಂಗಿಯ ಕುಲಾವಿಯ ಆಕಾರದ ವಸ್ತ್ರದ ಸಾಧನವನ್ನು ತೊಡುವನು. ಈ ಸಾಧನ ಮತ್ತು ಗಾಜಿನ ಕೊಳವೆ ಬಣ್ಣದ ವಸ್ತ್ರಗಳಿಂದ ಅಲಂಕೃತವಾಗಿದ್ದು ಕಿರೀಟದಂತಿರುತ್ತದೆ. ಅದರ ಬಲಬದಿಯಲ್ಲಿ ತುರಾಯಿ ಇಳಿಬಿದ್ದಿರುತ್ತದೆ. ಕತ್ತಿನಲ್ಲಿ ರುದ್ರಾಕ್ಷಿಯ ಸರ, ಮೈಮೇಲೆ ಕಾವಿಯ ನಿಲುವಂಗಿ, ನಡುವಿಗೆ ಮುತ್ತಿನ ಅಂಚಿನಿಂದ ಹೊಳೆಯುವ ಕಾಸೆ, ಶುಭ್ರವಸ್ತ್ರದ ಕಚ್ಚೆಯ ಪಂಚೆ, ಕಿವಿಗಳಿಗೆ ಒಂದು ಬಗೆಯ ಕುಂಡಲ, ಕಾಲಿಗೆ ಗೆಜ್ಜೆ, ಕೈಯಲ್ಲಿ ತಾಳ, ಮುಖಕ್ಕೆಲ್ಲ ಬಳಿದ ವಿಭೂತಿ, ಸೊಂಟಕ್ಕೆ ಸಿಕ್ಕಿಸಿದ-ಕರವಸ್ತ್ರ ಹೀಗೆ ಅಲಂಕೃತವಾದ ಕರಪಾಲದ ಅಯ್ಯ ನಾಟಕದ ಪಾತ್ರಧಾರಿಯಂತೆ ಸಿದ್ಧನಾಗಿ ನಿಲ್ಲುತ್ತಾನೆ. ಇವನ ಬಲಬದಿಯಲ್ಲಿ ನಿಂತ ಸಹನೃತ್ಯದವ ವೀರಗಾಸೆ ಹಾಕಿ, ಬಿಳಿ ನಿಲುವಂಗಿ ಧರಿಸಿ, ನಡುವಿಗೆ ಒಂದು ಶುಭ್ರವಸ್ತ್ರ ಬಿಗಿದು, ತಲೆಗೆ ಸವಾರನಂತೆ ಪೇಟ ಕಟ್ಟಿ ಕಾಲಿಗೆ ಗೆಜ್ಜೆಯ ಸರ ಸುತ್ತಿರುತ್ತಾನೆ. ಇವನ ನಡುವಿನಲ್ಲಿ ಮಣ್ಣಿನ ಅಚ್ಚಿನ ಢುಮಿಕಿ ಇರುತ್ತದೆ. ಇದರ ಗತ್ತನ್ನು ಅನುಸರಿಸಿ ಹಾಡು ಮತ್ತು ನೃತ್ಯ ಸಾಗುತ್ತದೆ.

ಮೇಳದಲ್ಲಿ ಹಾಡುಗಾರಿಕೆ ಮತ್ತು ಕುಣಿತ

ಕರಪಾಲದ ಅಯ್ಯನ ಎಡಬದಿಯಲ್ಲೂ ಇಂಥದೇ ವೇಷದ ಮತ್ತೊಬ್ಬ ನೃತ್ಯದವನಿದ್ದು ಆತ ಕೈಯಲ್ಲಿ ತಾಳವನ್ನು ಮಾತ್ರ ಹಿಡಿದಿರುತ್ತಾನೆ.

ಚಪ್ಪರದ ಮುಂದೆ ಕುಳಿತವರಲ್ಲಿ ಮೃದಂಗ ಮತ್ತು ಹಾರ್ಮೋನಿಯಂ ನುಡಿಸುವ ಮುಖ್ಯ ಕಲಾವಿದರು,ಇವರ ಜೊತೆ ಕೆಲವು ಮಂದಿ ಹಿಮ್ಮೇಳ ಹಾಡುವವರೂ ಇರಬಹುದು. ಚಪ್ಪರದ ಒಂದು ಕಡೆ ಬಯಲಾಟದಲ್ಲಿನಂತೆಯೇ ದೇವರ ಪಟ ಇಟ್ಟು ಪೂಜಿಸುತ್ತಾರೆ.

ಆರಂಭದಲ್ಲಿ ಮುಖ್ಯ ಕಥೆಗಾರ ತನ್ನ ಕಲಾಜ್ಞಾನದ ಬಗ್ಗೆ ನಮ್ರವಾಗಿ ಮೃದು ಮಧುರ ನುಡಿಗಳಲ್ಲಿ ಸಭಿಕರಿಗೆ ವಿನಂತಿ ಮಾಡಿಕೊಳ್ಳುತ್ತಾನೆ:

ನಾವು ಬಲ್ಲವರಲ್ಲ, ನಾವು ತಿಳಿದವರಲ್ಲ
ಯಾವ ತಪ್ಪಿದ್ದರೂ ತಿದ್ದಿಕೊಳ್ಳಬೇಕು
ದೇವತಾಸ್ತುತಿಯೊಡನೆ ತಿದ್ದಿಕೊಳ್ಳಬೇಕು ಕಥೆ ಆರಂಭವಾಗುತ್ತದೆ:
ತಪ್ಪುಗಳಿದ್ದರೆ ಒಪ್ಪಿಕೊಳ್ಳಯ್ಯ ದೇವ
ಸಾವಿರದ ಒಂದು ಶರಣಾರ್ಥಿ ನಿನಗೆ

ಹೀಗೆ ತಮ್ಮ ಆರಾಧ್ಯದೈವದ ಪಾದಮೂಲಕ್ಕೆ ಶರಣಾರ್ಥಿಯನ್ನು ಅರ್ಪಿಸಿ ತಾಳಮೇಳಗಳೊಡನೆ ಮುಖ್ಯ ನಿರೂಪಕ ಕಥಾರಂಭ ಮಾಡುತ್ತಾನೆ. ವಿಶಿಷ್ಟ ಭಂಗಿಯಲ್ಲಿ ಹೆಜ್ಜೆಯನ್ನು ಹಾಕುತ್ತ ತಾಳದ ನಾದಕ್ಕೆ ತಕ್ಕಂತೆ ಬಾಗುತ್ತ ಬಳುಕುತ್ತ ಹಿಂದೆ ನಾಲ್ಕು ಗಜ ಸರಿಯುತ್ತ ಮತ್ತೆ ಮುಂದೆ ಚಪ್ಪರದ ಅಂಚನ್ನು ಮುಟ್ಟುತ್ತ ಕುಣಿಯತೊಡಗುತ್ತಾನೆ:
ಮುಂದಣ ಕತೆಯ ಅದರಂದವ ಪೇಳುವೆ
ಚಂದ್ರಶೇಖರ ನಮಗೆ ವರಕೊಡೆಲೊ ದೇವ

ಕರಪಾಲದ ಹಾಡುಗಳಲ್ಲಿ ಅನೇಕ ವರ್ಣನೆಗಳು ಬರುತ್ತವೆ. ಆದರೂ ಎಲ್ಲಿಯೂ ಅನಗತ್ಯವಾಗಿ ವಿಸ್ತರಿಸುವ ಬಗೆ ಕಾಣುವುದಿಲ್ಲ. ತನ್ನ ಅನುಭವಕ್ಕೆ ಮಾತ್ರ ನಿಲುಕುವ ವರ್ಣನೆಗಳನ್ನು ಕಥೆಗಾರ ತರುತ್ತಾನೆ. ನಗರ ವರ್ಣನೆಯ ವೈಖರಿಯಿದು:

ಹಾಲು ಮಾರುವ ಬೀದಿ ನೂಲು ಮಾರುವ ಬೀದಿ
ಶಾಲು ಸಕಲಾತಿಗಳ ಮಾರುವ ಬೀದಿ
ಪ್ರಕೃತಿವರ್ಣನೆಯೂ ಕಥಾಸೂತ್ರದೊಡನೆ ಬೆಸೆದುಕೊಂಡೇ ಬರುತ್ತದೆ:
ಘೋರ ಕಾನನದೊಳಗೆ ನೀರಿಲ್ಲ ನೆರಳಿಲ್ಲ
ಹಾರುವ ಪಕ್ಷಿಗಳ ಸುಳಿವಿಲ್ಲ ದೇವ
ಅಡವಿಗಿಡಮರದಲ್ಲಿ ಎಡವಿ ಮುಗ್ಗರಿಸುತ್ತ
ತಡವರಿಸಿ ಹೊರಟಳು ಅರಣ್ಯದೊಳಗೆ
ಎನ್ನ ಮನೆಗೆ ಬಾರೊ ಹೊನ್ನ ಪುತ್ಥಳಿಗೊಂಬೆ
ಬಾರಯ್ಯ ನನ ಮಗನೆ ಮುದ್ದು ಮಗನೆ ಬಾರೊ

ಇಂಥ ಎಷ್ಟೋ ಹಾಡುಗಳು ಕಥೆಯ ಮಧ್ಯೆ ಮಧ್ಯೆ ಬರುತ್ತವೆ. ಯಾವುದೋ ಘಟ್ಟದಲ್ಲಿ ಮುಖ್ಯ ಕಥೆಯನ್ನು ನಿಲ್ಲಿಸಿ ಶೋಕಭಾವದಿಂದ ತಣಿದ ಪ್ರೇಕ್ಷಕರನ್ನು ನಗೆಯಲ್ಲಿ ತೇಲಿಸುವ ಉಪಕಥೆ ಮುಗಿದಮೇಲೆ ಮತ್ತೆ ಕಥೆಗಾರ ಮುಖ್ಯ ಕಥೆಗೆ ಬರುವ ಬಗೆ ಸುಂದರವಾಗಿರುತ್ತದೆ:

ಅಲ್ಲಿಗಲ್ಲಿಗೆ ಕಥೆಯು ಮಲ್ಲಿಗೆ ವಾಸನೆಯು
ಬಲ್ಲಂಥ ಜಾಣರಿಗೆ ಇದು ಮಧುರವಯ್ಯಾ ಅತಿಮಧುರವಯ್ಯಾ
ಮುಂದಲ ಕಥೆಯ ಅದರಂದವ ಪೇಳುವೆನು
ಚಂದ್ರಶೇಖರ ನಮಗೆ ವರ ಕೊಡೆಲೊ ದೇವ ವರ ಕೊಡೆಲೋ ದೇವ

ಕಥೆ ಗುರುಶಿಷ್ಯರ ಸಂಭಾಷಣೆಯಲ್ಲಿ ಸಾಗುತ್ತದೆ. ಮುಖ್ಯ ಕಥೆಗಾರ ಗುರು. ಆತ ತನ್ನ ಪಕ್ಕದ ನೃತ್ಯಗಾರನನ್ನು ಕುರಿತು ಹೀಗೆ ಹೇಳುತ್ತಾನೆ-
ಅಯ್ಯ ಮಗು ಕೇಳಬೇಕಯ್ಯ
ಆಗಲಿ ಗುರುವೇ .........
ಶುಭದಿನ, ಶುಭಲಗ್ನ, ಶುಭತಿಥಿಯಲ್ಲಿ
ಚದುರಂಗರಾಯರು ಹೇಗೆ ಹೊರಟಿದ್ದಾರಯ್ಯಾ ........
ಹೇಗೆ ಹೊರಟಿದ್ದಾರೆ ಗುರುವೇ .........
ಹೀಗೆ ಸಂಭಾಷಣೆಯಿಂದ ತಟ್ಟನೆ ಹಾಡಿಗೆ ಜಿಗಿಯುತ್ತಾನೆ:
ಕುದುರೆಯ ಕುಣಿಸುತ ಹುರಿಮೀಸೆ ತಿರುವುತ
ಹೊರಟನೇ ರಾಯ ಚದುರಂಗರಾಯ

ಹಾಡನ್ನು ಮುಗಿಸಿ ಮತ್ತೆ ಮನೋಜ್ಞವಾದ ಗದ್ಯಕಥ'ನಕ್ಕೆ ತೊಡಗುತ್ತಾನೆ.

ಆ ಪರಮಾತ್ಮನ ಲೀಲಾಮಯದಿಂದ ಚದುರಂಗರಾಯರು ಹೋಗುತ್ತಿರಬೇಕಾದರೆ,
ಮುಂದೆ ಏನಾಯಿತಪ್ಪಾ?
ಏನಾಯಿತು ಗುರುವೆ?

ಪಂಚವರ್ಣದ ಗಿಳಿಯೊಂದು ಕಾಣಿಸಿಕೊಂಡಿದೆ. ಆ ಕಾಡಾರಣ್ಯದಲ್ಲಿ ಚದುರಂಗರಾಯರು ಆ ಗಿಳಿಯನ್ನು ಹಿಂಬಾಲಿಸಿ ಹೋಗಿದ್ದಾರೆ - ಹೀಗೆ ಕರಪಾಲ ಮೇಳದ ವಚನ ಭಾಗವೂ ಒಂದು ರೀತಿಯಲ್ಲಿ ಪದ್ಯಗಂಧಿಯಾಗಿಯೇ ಇದ್ದು ತನ್ನದೇ ಆದ ಗತ್ತಿನಲ್ಲಿ ನಿರೂಪಿಸುವುದರ ಮೂಲಕ ಆಕರ್ಷಕವಾಗಿರುತ್ತದೆ.

ಕರಪಾಲ ಮೇಳ ಬಹುಮಟ್ಟಿಗೆ ಬಯಲಾಟ ಸಂಪ್ರದಾಯವನ್ನು ಹೋಲುತ್ತದೆ. ಬಯಲಾಟದ ಭಾಗವತರು ಹಾಡುಗಾರಿಕೆಯಲ್ಲಿ ಮುಂದಿನ ಸೊಲ್ಲನ್ನು ಎತ್ತಿಕೊಟ್ಟರೆ ಹಿಮ್ಮೇಳದವರು ಪೂರ್ಣಗೊಳಿಸುವ ಅದೇ ಕ್ರಮ ಇಲ್ಲಿಯೂ ಕಂಡುಬರುತ್ತದೆ. ಅಲ್ಲಿ ಭಾಗವತರ ಹಾಡಿಗೆ ಅನುಸಾರವಾಗಿ ಪಾತ್ರಧಾರಿಗಳು ಕುಣಿದರೆ ಇಲ್ಲಿ ಕುಣಿತವೂ ನಿರೂಪಕನ ಪಾಲಿಗೆ ಬರುತ್ತದೆ. ಮಾತುಗಾರಿಕೆಯೂ ಇವನದೇ ಆಗುತ್ತದೆ. ಮೇಳದಲ್ಲಿ ಕಥೆಗಿಂತ ಕುಣಿತ, ಕುಣಿತಕ್ಕಿಂತ ಹಾಡು, ಹಾಡಿಗಿಂತ ಅಭಿನಯ ಮುಖ್ಯವಾದುವು. ಇಲ್ಲಿಯೂ ಉಪಕಥೆಗಳುಂಟು. ಅವೆಲ್ಲವೂ ಬಹುಮಟ್ಟಿಗೆ ಗ್ರಾಮಜೀವನದಿಂದಲೇ ಆಯ್ದುವುಗಳಾಗಿರುತ್ತವೆ. ಭಾಷೆ ಆಡುಭಾಷೆಯ ಸತ್ವದಿಂದ ಕೂಡಿದ್ದು ಹಾಸ್ಯ ನೈಜವಾಗಿರುತ್ತದೆ. ಅಲ್ಲಿ ಬರುವ ಪಾತ್ರಗಳು ಗ್ರಾಮದ ಪ್ರತಿನಿಧಿಗಳೋ ಎನ್ನುವಂತೆ ಸಹಜವಾಗಿರುತ್ತವೆ.

ಕರಪಾಲ ಮೇಳದ ಪ್ರಧಾನ ಕಥೆ ಮಾತ್ರ ಸಾಹಿತ್ಯಕ ಶೈಲಿಯಲ್ಲಿ ನಿರೂಪಣೆಗೊಳ್ಳುತ್ತದೆ. ಇಲ್ಲಿ ಶಿಷ್ಟ ಪುರಾಣಮೂಲದ ಕಥೆಗಳು ವಿರಳ. ಜನಪ್ರಿಯ ಮೂಲದ ಕಥೆಗಳೇ ಹೆಚ್ಚು. ಸಾಮಾನ್ಯ ಜನಪದ ಕತೆಯೊಂದನ್ನು ಆರಿಸಿಕೊಂಡು ಅದಕ್ಕೆ ಜೀವಭಾವಗಳನ್ನು ತುಂಬಿ, ಸಾಕಷ್ಟು ವಿಸ್ತರಿಸಿಕೊಂಡು ನಿರೂಪಿಸಲಾಗುತ್ತದೆ. ಪ್ರಾಣಿ ಕಥೆಗಳು, ಹಾಸ್ಯಕಥೆಗಳು ಮುಂತಾದ ಸರಳ ಕಥೆಗಳನ್ನು ಕೈಬಿಟ್ಟು ಸಂಕೀರ್ಣ ಕಥೆಗಳನ್ನು ಕಥೆಗಾರ ಆರಿಸಿಕೊಂಡು ಮೇಳಕ್ಕೆ ಅಳವಡಿಸಿಕೊಂಡಿರುತ್ತಾನೆ. ನಾಯಕ ಅಥವಾ ನಾಯಕಿ ವಿರೋಧಿಗಳಿಂದ ಅನೇಕ ಸಂಕಷ್ಟಗಳಿಗೆ ಒಳಗಾಗಿ ಕ್ರಮೇಣ ಯಾವುದೋ ಅತಿಮಾನುಷ ಶಕ್ತಿಯ ನೆರವಿನಿಂದಲೋ ಇತರ ವ್ಯಕ್ತಿಗಳ ಆಶ್ರಯದಿಂದಲೋ ಚೇತರಿಸಿಕೊಂಡು ಅಡಚಣೆಗಳನ್ನೆಲ್ಲ ದಾಟಿ ಮತ್ತೆ ತಮ್ಮ ಪ್ರಿಯ ವ್ಯಕ್ತಿಗಳನ್ನು ಕೂಡುವರು. ಅಧರ್ಮಕ್ಕೆ ಸೋಲಾಗಿ,ಧರ್ಮಕ್ಕೆ ಜಯವಾಗುವುದು, ಶಿಷ್ಟರಕ್ಷಣೆಯಾಗಿ ದುಷ್ಟರಿಗೆ ಶಿಕ್ಷೆಯೊದಗುವುದು - ಹೀಗೆ ಕಥೆ ಶೋಕಸ್ಥಾಯಿಯ ಹಿನ್ನೆಲೆಯಲ್ಲಿ ಜನಸಾಮಾನ್ಯರ ಮನಸ್ಸನ್ನು ಕಲಕುವಂತಿರುತ್ತದೆ. ಕಾಡಸಿದ್ದಮ್ಮ, ನೀಲಕಂಠ ರೂಪಾವತಿ, ಬಸವಕುಮಾರ, ಲೋಹಿತಕುಮಾರ, ಶಿವಯೋಗಿ ಪರಯೋಗಿ- ಇಂಥ ಜನಪದ ಕಥೆಗಳು ಕರಪಾಲದ ಅಯ್ಯನವರ ಬಾಯಲ್ಲಿ ಅಪೂರ್ವ ಕಲಾಕೃತಿಗಳಾಗಿ ರಂಜಿಸುತ್ತವೆ; ಸೊಟಗಕ್ಕೆ ಅಣ್ಣ ತಮ್ಮ ಎಂಬ ಮೂಲದ ಸಾಧಾರಣ ಹೆಸರುಗಳನ್ನು ಕಳೆದುಕೊಂಡು ಆಕರ್ಷಕ ಶೀರ್ಷಿಕೆಗಳನ್ನು ಪಡೆದುಕೊಂಡು ಪ್ರೌಢ ಕಥೆಗಳಾಗುತ್ತವೆ. ಕಥೆಯಲ್ಲಿನ ಪಾತ್ರಗಳಿಗೆಲ್ಲ ಒಳ್ಳೆಯ ಹೆಸರುಗಳು ಪ್ರಾಪ್ತವಾಗುತ್ತವೆ. ಹಳೆಯ ಹಂದರವೇ ಇದ್ದರೂ ಅನೇಕ ಹೊಸ ಘಟನೆಗಳು ಮೈತುಂಬಿ ಬರುತ್ತವೆ.

ಕರಪಾಲ ಮೇಳದಲ್ಲಿ ಬಯಲಾಟದ ಸಂಸ್ಕೃತಭೂಯಿಷ್ಠ ಸಂಭಾಷಣೆಯಾಗಲಿ,ಹಾಡುಗಳಾಗಲಿ ಇಲ್ಲ. ಆದರೂ ಕೆಲವು ಪ್ರಾರ್ಥನಾ ಗೀತೆಗಳಲ್ಲಿ, ಮಂಗಳಾರತಿ ಗೀತೆಗಳಲ್ಲಿ ಆ ಹಾಡುಗಳ ಪ್ರಭಾವ ಇರುವುದನ್ನು ಕಾಣಬಹುದು.
ಶ್ರೀ ಗುರುವರನೆ ಜಯತು
ಯೋಗಿ ವಿಭೂಷಣ ಭೋಗಿವರನೆ ಜಯತು
ಇಂಥ ಹಾಡುಗಳು ಬಯಲಾಟದಿಂದ ಕರಪಾಲ ಮೇಳಕ್ಕೆ ಬಂದವು. ಕೆಲವು ವೇಳೆ ಶಿವಶರಣರ ತತ್ತ್ವಗಳಿಂದ ಆಯ್ದ ಹಾಡುಗಳೂ ಬರುತ್ತವೆ.

ಭಿಕ್ಷವ ನೀಡಿರಮ್ಮ ಜಂಗಮರಿಗೆ
ಭಿಕ್ಷವ ನೀಡಿರಮ್ಮ
ಭಿಕ್ಷವ ನೀಡಿರಿ ಮೋಕ್ಷವ ಪಡೆಯಿರಿ
ಭಿಕ್ಷವ ನೀಡಿರಮ್ಮ

ಇಂಥ ಕೆಲವು ಪದಗಳಲ್ಲದೆ ಸಂದರ್ಭಾನುಸಾರವಾಗಿ ರಚಿಸಿಕೊಂಡ ಕೆಲವು ಸ್ವತಂತ್ರ ಗೀತೆಗಳೂ ಇರುತ್ತವೆ.

ನಾನೊಲ್ಲೆ ನಾನೊಲ್ಲೆನೆ
ನೀ ನೀಡುವ ಭಿಕ್ಷವ
ನಾನೊಲ್ಲೆ ನಾನೊಲ್ಲೆನೆ
ಬಂಜೆಕೈಯೊಳ ಭಿಕ್ಷ
ಮಂಜುಳ ದಾನವ ನಾನೊಲ್ಲೆ ನಾನೊಲ್ಲೆನೆ

ಈ ಬಗೆಯ ಕೆಲವು ಹಾಡುಗಳನ್ನು ಬಿಟ್ಟರೆ ಕರಪಾಲ ಮೇಳಕ್ಕೆ ಮೀಸಲಾದ ವಿಶಿಷ್ಟ ವರ್ಗದ ದ್ವಿಪದಿಗಳನ್ನು ಹಾಡಲಾಗುತ್ತದೆ. ಕರಪಾಲದ ಮುಖ್ಯ ಆಕರ್ಷಣೆಯೆಲ್ಲ ಬಹುಮಟ್ಟಿಗೆ ಮೇಳದ ಮೇಲೆಯೇ ನಿಂತಿರುತ್ತದೆ. ಕಥೆಯ ಆರಂಭ, ಬೆಳೆವಣಿಗೆ, ಮುಕ್ತಾಯ- ಹೀಗೆ ಎಲ್ಲ ಘಟ್ಟಗಳಲ್ಲಿಯೂ ಆಯಾ ಸನ್ನಿವೇಶಕ್ಕೆ ತಕ್ಕಂತೆ ಈ ಹಾಡುಗಳನ್ನು ಬಳಸಿಕೊಳ್ಳಲಾಗುತ್ತದೆ. ಈ ಹಾಡುಗಳು ಅತ್ಯಂತ ಸರಳವಾಗಿ ಕಂಡರೂ ಉತ್ತಮ ಕಾವ್ಯಾಂಶದಿಂದ ಕೂಡಿರದಿದ್ದರೂ ಆಯಾ ಸನ್ನಿವೇಶದ ಹಿನ್ನೆಲೆಯಲ್ಲಿ ಅಪೂರ್ವ ಮಟ್ಟಿನಲ್ಲಿ ಹಾಡುವುದರಿಂದ, ಮೃದು ನೃತ್ಯವೂ ಅಲ್ಲಿ ಬೆರೆಯುವುದರಿಂದ, ಅತ್ಯಂತ ಸ್ವಾರಸ್ಯಪೂರ್ಣವಾಗಿ ತೋರಿಬರುವುದರ ಜೊತೆಗೆ ನೇರವಾಗಿ ಅರ್ಥವಾಗುವುದರಿಂದ ಜನರ ಆಸಕ್ತಿಯನ್ನು ಸೆಳೆದುಕೊಳ್ಳುತ್ತವೆ. ಆತ್ಮೀಯವಾದ ಶೈಲಿಯಲ್ಲಿ ಅಭಿನಯದೊಂದಿಗೆ ಕಥೆಗಾರ ಹಾಡುಗಳನ್ನು ಎತ್ತಿಕೊಳ್ಳುವ ರೀತಿ ಆಕರ್ಷಕವಾಗಿರುತ್ತದೆ, ನೆರೆದವರ ಹೃದಯವನ್ನು ಕರಗಿಸುವಂತಿರುತ್ತದೆ. (ಜೆ.ಎಸ್.ಪಿ.)

**ಕರಸ್ಥಲದ ನಾಗಲಿಂಗ :** ಸು.1430. ಶಿವಶರಣ ಹಾಗೂ ಕವಿ. 101 ವಿರಕ್ತರಲ್ಲಿ ಮೊದಲಿಗ. ಕರಸ್ಥಲ ನಾಗದೇವನ ತ್ರಿವಿಧಿ ಎಂಬ ಗ್ರಂಥದ ಕರ್ತೃ. ಈತ ವಿಜಯನಗರದ ಎರಡನೆಯ ಪ್ರೌಢದೇವರಾಯನ (1424-46) ಕಾಲದಲ್ಲಿದ್ದನೆಂದು ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣದಲ್ಲಿ (1584) ಹೇಳಿದೆ. ಶ್ರೀರಂಗಪಟ್ಟಣಕ್ಕೆ 9ಕಿಮೀ ದೂರದಲ್ಲಿರುವ ಬೊಮ್ಮೂರು ಇವನ ಜನ್ಮಸ್ಥಳವಿರಬೇಕೆಂದು ಊಹಿಸಲಾಗಿದೆ. ಚೆನ್ನಿಗೆಲಸ ಇವನ ಕಾಯಕ. ಚೆನ್ನಬಸವ ಪುರಾಣದ ಪ್ರಕಾರ ಇವನ ಗುರು ಕರಸ್ಥಲದ ವೀರಣ್ಣೊಡೆಯ. ಪತ್ನಿ ನಾಗಕನ್ಯೆ, ಗುರುಶಾಂತ ಇವನ ದೀಕ್ಷಾಗುರು.

ಜಕ್ಕಣಾರ್ಯ, ಕಲ್ಲುಮಠದ ಪ್ರಭುದೇವ, ಚಾಮರಸ, ವೀರಣ್ಣೊಡೆಯ, ಕುಮಾರ ಬಂಕನಾಥ ಇವರು ಕರಸ್ಥಲ ನಾಗಲಿಂಗನ ಸಮಕಾಲೀನರಾಗಿದ್ದಂತೆ ತಿಳಿಯುತ್ತದೆ. ಗಣವಚನರತ್ನಾವಳಿ, ಪ್ರೌಢ ರಾಯನಕಾವ್ಯ, ಚೆನ್ನಬಸವಪುರಾಣ, ಗುರುರಾಜ ಚಾರಿತ್ರ, ರಾಘವಾಂಕ ಚಾರಿತ್ರ - ಈ ಕೃತಿಗಳಲ್ಲಿ ಇವನ ಹೆಸರಿನ ಉಲ್ಲೇಖವಿದೆ. ಚೆನ್ನಬಸವ ಪುರಾಣದಲ್ಲಿ ಇವನ ಚರಿತ್ರೆ ಪ್ರಾಸಂಗಿಕವಾಗಿ ನಿರೂಪಿತವಾಗಿದೆ. ಶಿವಾಣುಗ ಅಥವಾ ರುದ್ರ (ಸು.1650) ರಚಿಸಿರುವ ಕರಸ್ಥಲದ ನಾಗಲಿಂಗ ಚರಿತ್ರೆ ಈತನ ಜೀವನವನ್ನೂ ಪವಾಡಗಳ ಮೂಲಕ ಈತನ ಮಹಿಮೆಯನ್ನೂ ವಿವರಿಸುವ ಸ್ವತಂತ್ರ ಕೃತಿ.

ಮಡಿವಾಳಯ್ಯಗಳ ತಾರಾವಳಿ, ಅಕ್ಷರ ಚೌಪದ, ಮೂರೇಳು ದೀಕ್ಷೆಯಪದ, ವಚನಗಳು, ಕರಸ್ಥಲದೇವರು ನಿರೂಪಿಸಿದ ಲಿಂಗನಿಜಸ್ಥಲದ ವಚನ (ಷಟ್ಸ್ಥಲ ಮಾರ್ಗ-98 ತ್ರಿವಿಧಿಗಳು), ಪರಮವಿರಕ್ತನ ಐಕ್ಯಸ್ಥಲ ಕಾಲಜ್ಞಾನ ಮತ್ತು ಗುರುಶಾಂತ ಶತಕ ಇವು ಈತನ ಇತರ ಕೃತಿಗಳು.

ಕರಸ್ಥಲ ನಾಗದೇವನ ತ್ರಿವಿಧಿ ಗೂಢಾರ್ಥವುಳ್ಳ, ವೀರಶೈವ ಸಿದ್ಧಾಂತವನ್ನು ಬೋಧಿಸುವ, ತ್ರಿಪದಿಯಲ್ಲಿ ರಚಿತವಾದ ಗ್ರಂಥ. ಇದರಲ್ಲಿ 31 ಪದ್ಯಗಳಿವೆ. ಈ ಕೃತಿಯನ್ನು ಕುರಿತು ವೀರ ಮಾಹೇಶ್ವರ ಪರ್ವತ ಶಿವಯೋಗಿ (ಸು.1650) ಮತ್ತು ಸಿದ್ಧಮಲ್ಲದೇವರು ಕನ್ನಡದಲ್ಲಿ ವ್ಯಾಖ್ಯಾನ ರಚಿಸಿದ್ದಾರೆ. ಕರಸ್ಥಲದ ನಾಗಲಿಂಗನ ಇತರ ಕೃತಿಗಳೂ ವೀರಶೈವ ಸಿದ್ಧಾಂತವನ್ನೇ ನಿರೂಪಿಸುತ್ತವೆ. ಈತ ಒಬ್ಬ ಮಹಾಪುರುಷ ಮತ್ತು ಶ್ರೇಷ್ಠಜ್ಞಾನಿ ಎಂಬ ಹೊಗಳಿಕೆಗೆ ಪಾತ್ರನಾಗಿದ್ದ. ಇಂದಿಗೂ ಇವನ ಹೆಸರಿನೊಂದಿಗೆ ಸಂಬಂಧ ಹೊಂದಿರುವ ಕರ್ನಾಟಕದ ಅನೇಕ ಮಹಾಕ್ಷೇತ್ರಗಳು ಇದಕ್ಕೆ ಸಾಕ್ಷಿಯಾಗಿವೆ. (ಜಿ.ಜಿ.ಎಂ.)

**ಕರಿಗಿರಿರಾಯ :** 1853-1927. ಚಾಮರಾಜ ಒಡೆಯರ ಆಸ್ಥಾನದಲ್ಲಿದ್ದ ಪ್ರಸಿದ್ಧ ಸಂಗೀತಗಾರರು ಮತ್ತು ವಿದ್ವಾಂಸರು. ವೀಣೆ ಸುಬ್ಬಣ್ಣ, ವೀಣೆ ಶೇಷಣ್ಣನವರ ಸಮಕಾಲೀನರು. ಇವರ ಸ್ಥಳ ಶ್ರೀರಂಗಪಟ್ಟಣ, ಇವರ ತಂದೆ ಆಸ್ಥಾನ ಪಂಡಿತರಾಗಿದ್ದ ವೇದಾಂತ ಲಕ್ಷ್ಮೀನರಸಿಂಹಾಚಾರ್ಯರು. ವೈದಿಕ ಮನೆತನದವರಾಗಿದ್ದ ಇವರು ತಂದೆಯ ಇಷ್ಟಕ್ಕೆ ವಿರುದ್ಧವಾಗಿ ಸಂಗೀತ ಸುಬ್ಬರಾಯರಲ್ಲಿ ಸಂಗೀತಾಭ್ಯಾಸ ಮಾಡಿ ಲಕ್ಷ್ಯ ಲಕ್ಷಣಗಳಲ್ಲಿ ವಿಶೇಷವಾದ ಪಾಂಡಿತ್ಯಗಳಿಸಿದರು. ಇದರಿಂದ ತಂದೆಯೊಡನೆ ಮನಸ್ತಾಪ ವುಂಟಾಗಿ ಗೃಹತ್ಯಾಗ ಮಾಡಿ ಹೈದರಾಬಾದಿಗೆ ಹೋಗಿ ಸ್ವಲ್ಪಕಾಲವಿದ್ದು ಅನಂತರ ಮೈಸೂರಿಗೆ ಬಂದು ನೆಲೆಸಿದರು. ದೇಶ ಸಂಚಾರ ಮಾಡಿ ತಮ್ಮ ಗಾಯನ ಪ್ರತಿಭೆಯಿಂದ ಪ್ರಸಿದ್ಧಿಗೆ ಬಂದರು.

ಸಂಸ್ಕೃತದಲ್ಲಿ ಒಳ್ಳೆಯ ಪಾಂಡಿತ್ಯವನ್ನು ಗಳಿಸಿದ್ದ ಇವರು ಸಂಗೀತ ಶಾಸ್ತ್ರದ ಮೂಲಗ್ರಂಥಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ಆ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದರು. ಸಂಗೀತ ಸಂಬೋಧಿನಿ ಮತ್ತು ಗಾನವಿದ್ಯಾರಹಸ್ಯ ಪ್ರಕಾಶಿನಿ ಎಂಬ ಎರಡು ಸಂಗೀತ ಗ್ರಂಥಗಳನ್ನು ಇವರು ಕನ್ನಡದಲ್ಲಿ ರಚಿಸಿದ್ದಾರೆ. ಆದರೆ ಅವು ಪ್ರಕಟವಾಗಿಲ್ಲ. ಇವರ ವರ್ಣಗಳು, ಕೃತಿಗಳು ಮತ್ತು ದೇವರ ನಾಮಗಳು ಲಕ್ಷ್ಯ ಲಕ್ಷಣಗಳ ದೃಷ್ಟಿಯಿಂದ ಶ್ರೇಷ್ಠಮಟ್ಟದ ರಚನೆಗಳಾಗಿವೆ. ಗಾನವಿಶಾರದ ಬಿಡಾರಂ ಕೃಷ್ಣಪ್ಪನವರು, ಸಂಗೀತರತ್ನ ಚಿಕ್ಕರಾಮರಾಯರು ಇವರ ಪ್ರಮುಖ ಶಿಷ್ಯರು. ವೀಣಾ ವಿದ್ವಾನ್ ಟಿ.ವೆಂಕಟರಾಯರು ಇವರ ಮೊಮ್ಮಗ.

ಆಗಿನ ಮೈಸೂರು ಮಹಾರಾಜರು ಇವರಿಗೆ ಗಾನಕಲಾಧುರಂಧರ ಎಂಬ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದ್ದರು. ಕಾಶಿ ವಿದ್ಯಾಪೀಠದಿಂದ ಗೀತಭೂಷಣ ಎಂಬ ಪ್ರಶಸ್ತಿಯೂ ಇವರಿಗೆ ಪ್ರಾಪ್ತವಾಗಿತ್ತು. (ಆರ್.ಎನ್.ಡಿ.)

**ಕರಿಬಂಟ :** ಕನ್ನಡ ಜನಪದ ಗದ್ಯ ಕಥೆಗಳಲ್ಲಿ, ಲಾವಣಿಗಳಲ್ಲಿ ಮತ್ತು ಬಯಲಾಟಗಳಲ್ಲಿ ಅತ್ಯಂತ ಜನಪ್ರಿಯವಾಗಿರುವ ಒಂದು ಕಥೆ. ಯಕ್ಷಗಾನಗಳಲ್ಲಿ ಸಾಮಾನ್ಯವಾಗಿ ರಾಮಾಯಣ, ಮಹಾಭಾರತ ಮತ್ತು ಭಾಗವತಗಳಿಂದ ಆರಿಸಿದ ಪೌರಾಣಿಕ ಕಥೆಗಳೇ ಹೆಚ್ಚಾಗಿದ್ದರೂ ನಾಡಿನ ವೀರರ ಕಥೆಗಳೂ ಇವೆ. ಇಂಥ ಕಥೆಗಳಲ್ಲಿ ಕರಿಬಂಟನ ಕಾಳಗ ಪ್ರಖ್ಯಾತವಾಗಿದೆ. ಕರಿರಾಜ ಒಬ್ಬ ಸುಂದರ, ಸಾಹಸಿ, ಮೇಲಾಗಿ ವೀರ. ದುರ್ಗಮ ಪ್ರದೇಶವೊಂದರಲ್ಲಿ ವಾಸವಾಗಿದ್ದ ಮಾವ,ಹೆಣ್ಣು ಕೊಡುತ್ತೇನೆಂದು ಆಹ್ವಾನಿಸಿದಾಗ ಇದು ಅವನಿಗೆ ತನ್ನ ಪರಾಕ್ರಮವನ್ನು ಪ್ರಶ್ನಿಸುವ ಆಹ್ವಾನವಾಗುತ್ತದೆ. ಕರಿರಾಜ ಹೆಣ್ಣು ವರಿಸಲು ಪ್ರಯಾಣ ಹೊರಡುತ್ತಾನೆ. ಬಹಳ ದೂರ ಹೋದ ಅನಂತರ ಒಂದು ಕೆರೆಯ ಏರಿಯ ಮೇಲೆ ಆಯಾಸ ಪರಿಹಾರಕ್ಕಾಗಿ ಕೂತಿದ್ದಾಗ ಅವನ ಸೌಂದರ್ಯವನ್ನು ಕಂಡು ತೊಂಡನೂರು (ತೊಣ್ಣೂರು) ರಾಕ್ಷಸಿಯ ಮಗಳಾದ ಪುಂಡರೀಕಾಕ್ಷಿಯು ಗೌಡೀರು (ಸೇವಕಿಯರು) ಮೂರ್ಛೆ ಹೋಗುವರು. ಅನಂತರ ಚೇತರಿಸಿಕೊಂಡು ಬಂದು ತಮ್ಮ ಒಡತಿಗೆ ತಾವು ಕಂಡ ಸುಂದರನ ಸುದ್ದಿ ಮುಟ್ಟಿಸುವರು. ಕರಿರಾಜನನ್ನು ನೋಡಲು ಬಂದ ಪುಂಡರೀಕಾಕ್ಷಿ ಅವನ ರೂಪಿಗೆ ಮನಸೋತು ಮೂರ್ಛೆ ಹೋಗುವಳು. ಅನಂತರ ಚೇತರಿಸಿಕೊಂಡು ಕರಿರಾಜನನ್ನು ಒಲಿಸಿ ಮನೆಗೆ ಕರೆದೊಯ್ಯುವಳು. ತಾಯಿ ರಕ್ಕಸಿಯಿಂದ ತನ್ನ ಪ್ರಿಯತಮನನ್ನು ಪಾರು ಮಾಡಲು ಪ್ರಯತ್ನಿಸುವಳು. ತನ್ನ ತಮ್ಮ ಬೊಮ್ಮಣ್ಣ ರಾಕ್ಷಸನಿಗೆ ಮಗಳನ್ನು ಕೊಟ್ಟು ಮದುವೆ ಮಾಡುವ ಹಂಚಿಕೆಯಲ್ಲಿದ್ದ ತೊಂಡನೂರು ರಾಕ್ಷಸಿ ಕೋಪವನ್ನು ತಾಳಿ ಮಗಳನ್ನು ವಂಚಿಸಿ ಕರಿಬಂಟನನ್ನು ಕೊಲ್ಲಲು ಪ್ರಯತ್ನಿಸುವಳು. ಆದರೆ ಪುಂಡರೀಕಾಕ್ಷಿಯ ತಂತ್ರದಿಂದ ರಾಕ್ಷಸಿಯ ತಮ್ಮ ಬೊಮ್ಮಣ್ಣ ತನ್ನ ಅಕ್ಕನಿಂದಲೇ ಹತನಾಗುವನು.

ತಮ್ಮನನ್ನು ತನ್ನ ಕೈಯಿಂದಲೇ ಕೊಂದ ರಾಕ್ಷಸಿ ತಲೆ ಮರೆಸಿಕೊಂಡು ಹೊರ ಬಿದ್ದ ಕರಿಬಂಟನನ್ನು ಅಟ್ಟಿಸಿಕೊಂಡು ಹೋಗುವಳು. ತನ್ನ ಕತ್ತಿಯನ್ನು ಬಾವಿಯ ಕಟ್ಟೆಯ ಮೇಲಿಟ್ಟು ನೀರು ಕುಡಿಯಲು ಇಳಿದಿದ್ದ ಕರಿಬಂಟ ರಾಕ್ಷಸಿ ಬೆನ್ನಟ್ಟಿ ಬರುವುದನ್ನು ಕಂಡು ಕತ್ತಿಯನ್ನು ಬಿಟ್ಟು ಓಡಿಹೋಗುವನು. ರಾಕ್ಷಸಿ ಕತ್ತಿಯನ್ನು ತೆಗೆದುಕೊಂಡು ಅದನ್ನು ಒಂದು ಮಗುವನ್ನಾಗಿ ಮಾಡಿಕೊಂಡು ಬಾಣಂತಿಯಂತೆ ಕರಿಬಂಟನನ್ನು ಹಿಂಬಾಲಿಸಿ ಒಂದೆಡೆ ಸೇರಿದ್ದ ಏಳೂರ ಗೌಡರಿಗೆ ತನ್ನ ಗಂಡ

ಬಾಣಂತಿಯನ್ನು ಬಿಟ್ಟು ಹೋಗುತ್ತಿದ್ದಾನೆಂದು ನ್ಯಾಯವನ್ನು ಒಪ್ಪಿಸುವಳು. ಕರಿಬಂಟ ನ್ಯಾಯದವರಿಗೆ ತನ್ನ ನಿಜಸ್ಥಿತಿಯನ್ನು ಹೇಳಿ, ಪರಿಪರಿಯಾಗಿ ಬೇಡಿಕೊಂಡರೂ ಅವನ ಮಾತನ್ನು ನಂಬದ ಗೌಡರು ಅವರಿಬ್ಬರನ್ನೂ ಆ ರಾತ್ರಿ ಊರ ಚಾವಡಿಯಲ್ಲಿ ಕೂಡುವರು. ನಡುರಾತ್ರಿಯಲ್ಲಿ ರಾಕ್ಷಸಿ ಕರಿಬಂಟನನ್ನು ಕೊಂದು ಓಡಿಹೋಗುವಳು. ಹೀಗೆ ಮಡಿದ ಕರಿಬಂಟನಿಗಾಗಿ ಪುಂಡರೀಕಾಕ್ಷಿ ಮತ್ತು ಏಳೂರ ಗೌಡರು ವ್ಯಥೆಪಟ್ಟು ಅಗ್ನಿಕುಂಡದಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳಲು ನಿರ್ಧರಿಸಿದಾಗ ಶಿವಪಾರ್ವತಿಯರು ಪ್ರತ್ಯಕ್ಷರಾಗಿ ಸತ್ತವನನ್ನು ಬದುಕಿಸಿ ಹರಸುವರು. ಕೊನೆಗೆ ಕರಿಬಂಟ ತನ್ನ ಮಾವನ ಊರಿಗೆ ಹೋಗಿ ಮಾವನ ಮಗಳನ್ನು ಮದುವೆಯಾಗುವನು. ಕಥೆಯ ಬಹುಭಾಗ ಒಂದೆಡೆ ರಾಕ್ಷಸಿ ಹಾಗೂ ಅವಳ ತಮ್ಮ ಬೊಮ್ಮ, ಇನ್ನೊಂದೆಡೆ ಕರಿಬಂಟ ಮತ್ತು ರಾಕ್ಷಸಿಯ ಮಗಳಾದ ಪುಂಡರೀಕಾಕ್ಷಿ - ಈ ಎರಡು ಪಕ್ಷಗಳಿಗೂ ನಡೆಯುವ ವಾದ, ಜಗಳ, ಹೋರಾಟವೇ ಆಗಿದೆ. ಒಂದು ಸಾಮಾನ್ಯ ಕಥೆ ಯಕ್ಷಗಾನವಾಗಿರುವುದು ಇಲ್ಲಿಯ ವೈಶಿಷ್ಟ್ಯ.

ಕರಿಬಂಟನ ಕಥೆಯನ್ನು ಹೇಳುವ ಯಕ್ಷಗಾನಗಳು ಅನೇಕವಿದ್ದು ಇವುಗಳಲ್ಲಿ ಈ ಕಥೆಯನ್ನು ಶಿವ ಪಾರ್ವತಿಗೆ ಹೇಳಿದಂತೆ ಹೇಳಿದೆ. ಅತಿಮಾನುಷ ಘಟನೆಗಳು ಬಂದರೂ ಕಥೆಯ ಓಟ ಕುಂಟದೆ ಮುಂದುವರಿಯುತ್ತದೆ. ಯಕ್ಷಗಾನ ಪ್ರೇಮಿಗಳು ಇದನ್ನು ಮೆಚ್ಚುವುದು ಬಹಳ. ಯಕ್ಷಗಾನಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ. ವೀರನಗೆರೆ ಪುಟ್ಟಣ್ಣ ವಿರಚಿತ ಕೃತಿಯಲ್ಲಿ ಹಳೆಯಬೀಡಿನ ರಾಜಕುಮಾರಿ ಭುವನಮೋಹಿನಿಯನ್ನು ಸುಮತಿ ನಗರದ ರಾಜನ ಮಗ ಕರಿಬಂಟ ಮದುವೆಯಾಗುತ್ತಾನೆ. ಭಾಳಾಕ್ಷ ವಿರಚಿತ ಯಕ್ಷಗಾನದಲ್ಲಿ ವೀರಬಲ್ಲಾಳನ ಮಗಳನ್ನು ಕರಿಬಂಟ ಮದುವೆಯಾಗುತ್ತಾನೆ. ಇವನ ತಂದೆತಾಯಿಗಳು ಮಾರಭೂಪ, ಬಲವಂತಾದೇವಿ. ಜೀಶಂಪ ಅವರು ಪ್ರಕಟಿಸಿರುವ ಹೆಳವರ ಕಾವ್ಯಗಳು ಎಂಬ ಸಂಕಲನದಲ್ಲಿ ಬರುವ ಮಲ್ಲರಾಜ ಎಂಬ ಲಾವಣಿ ಕರಿಬಂಟನ ಕಥೆಯೇ ಆಗಿದೆ. ಇಲ್ಲಿ ಕರಿಬಂಟನ ತಂದೆ ಮಲ್ಲರಾಜ; ಇವನಿಗೆ ದುಂಡೋಜಿ, ಮಲ್ಲೋಜಿ ಎಂಬ ಇಬ್ಬರು ಹೆಂಡತಿಯರು. ಇವರಲ್ಲಿ ದುಂಡೋಜಿಯ ಮಗ ಕರಿಬಂಟ. ಇಲ್ಲಿಯೂ ಈತ ಒಬ್ಬ ರಾಜಕುಮಾರಿಯನ್ನು ಮದುವೆಯಾಗುತ್ತಾನೆ. ಕಾಳೇಗೌಡ ನಾಗವಾರ ಅವರ ಬಯಲು ಸೀಮೆಯ ಲಾವಣಿಗಳು ಎಂಬ ಸಂಕಲನದಲ್ಲಿ ಕರಿರಾಯಬಂಟ 1 ಎಂಬ ಲಾವಣಿಯಲ್ಲಿ ಕರಿಬಂಟನ ತಂದೆ ತಾಯಿಗಳ ಹೆಸರಿಲ್ಲ, ಆದರೆ ಮಾವ ತಿಮ್ಮರಾಜು ಹೆಣ್ಣು ಕೊಡುವ ಪ್ರಸ್ತಾಪವಿದೆ. ಕರಿರಾಯಬಂಟ 2 ಎಂಬ ಲಾವಣಿಯಲ್ಲಿ ಕರಿಬಂಟನ ತಂದೆ ತಾಯಿಗಳು ಬಾಲರಾಯ ಮತ್ತು ಮಾರ್ಬಲ ದೇವಿ. ಸೋದರಮಾವ ಹೆಣ್ಣು ಕೊಡುವ ಸುದ್ದಿ ಇದೆ.

ಈ ಮೇಲ್ಕಂಡ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಬಿಟ್ಟರೆ ಮೂಲಕಥೆಯ ವಸ್ತು ಮತ್ತು ಆಶಯ ಯಕ್ಷಗಾನಗಳಲ್ಲೂ ಲಾವಣಿಗಳಲ್ಲೂ ಒಂದೇ ಆಗಿರುವುದು ಕಂಡುಬರುತ್ತದೆ. ರಾಕ್ಷಸಿ ಮತ್ತು ಅವಳ ಮಗಳ ಹೆಸರು ಪುಂಡುಲಕ್ಷ್ಮಿ, ಪುಂಡಲಕಾಂತೆ ಎಂದು ಬಯಲುಸೀಮೆ ಲಾವಣಿಗಳಲ್ಲಿಯೂ ಪುಂಡರೀಕಾಕ್ಷಿ ಎಂದು ಹೆಳವರ ಕಾವ್ಯ ಹಾಗೂ ಯಕ್ಷಗಾನ ಕೃತಿಗಳಲ್ಲಿಯೂ ಕಂಡುಬರುತ್ತದೆ. ಸಿದ್ಧೇಶನ ಯಕ್ಷಗಾನದಲ್ಲಿ ಕರಿರಾಜ ಕಾಶ್ಮೀರ ದೇಶದ, ಧಾರಾಪುರದ ರಾಜ ಮಾರಭೂಪನ ಮಗ ಎಂದು ಹೇಳಿದೆ. (ಟಿ.ಎಸ್.ಆರ್.)

**ಕರಿಬಸವಶಾಸ್ತ್ರೀ, ಎನ್.ಆರ್. :** 1872-1923. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿದ್ವಾಂಸರಾಗಿದ್ದವರು ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನಪಂಡಿತರಾಗಿದ್ದರು. ನಂಜನಗೂಡಿನ ಪಂಡಿತ ರುದ್ರಶಾಸ್ತ್ರಿಗಳ ಮಕ್ಕಳಾದ ಇವರು, ಮೈಸೂರಿಗೆ ಬಂದು ಆಸ್ಥಾನ ವಿದ್ವಾನ್ ಪಂಡಿತ ಕರಿಬಸವಶಾಸ್ತ್ರಿಯವರಲ್ಲಿ ವಿದ್ಯಾಭ್ಯಾಸ ಮಾಡಿ, ಕನ್ನಡ ಸಂಸ್ಕೃತ ಭಾಷೆಗಳನ್ನೂ ಸಾಹಿತ್ಯ ಮತ್ತು ವೇದಾಂತ ಶಾಸ್ತ್ರಗಳನ್ನೂ ಕಲಿತು ಪಾಂಡಿತ್ಯವನ್ನು ಸಂಪಾದಿಸಿದರು. ಯಜಮಾನ್ ವೀರಸಂಗಪ್ಪನವರ ಉದಾರ ಆಶ್ರಯದಿಂದ ಅಭಿವೃದ್ಧಿಗೆ ಬಂದರು. ವೀರಸಂಗಪ್ಪನವರೇ ಹೊರಡಿಸುತ್ತಿದ್ದ ಮೈಸೂರು ಸ್ಟಾರ್ (1888) ಎಂಬ ಪತ್ರಿಕೆಯ ಲೇಖಕರೂ ಅನಂತರ ಆ ಪತ್ರಿಕೆಯ ಉಪಸಂಪಾದಕರೂ ಆಗಿ ಕೆಲವು ವರ್ಷಗಳ ಕಾಲ ಕೆಲಸ ಮಾಡಿದರು. ಅನಂತರ ವೀರಶೈವಗ್ರಂಥ' ಪ್ರಕಾಶಿಕೆ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಹಲವಾರು ಪ್ರಾಚೀನ ಗ್ರಂಥಗಳನ್ನು ಬೆಳಕಿಗೆ ತಂದರು. ಇವರು ಸಂಪಾದಿಸಿ ಪ್ರಕಟಿಸಿರುವ ಕೆಲವು ಮುಖ್ಯ ಗ್ರಂಥಗಳಿವು: ಸಿದ್ಧಾಂತ ಶಿಖಾಮಣಿ, ಪಂಡಿತಾರಾಧ್ಯ ಚರಿತ್ರೆ, ಸೌಂದರಪುರಾಣ, ರೇವಣಸಿದ್ಧೇಶ್ವರ ಪುರಾಣ, ಶಿವಯೋಗಪ್ರದೀಪಿಕಾ, ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣವನ್ನು ಚೆನ್ನ ಬಸವೇಶವಿಜಯಂ ಎಂಬ ಹೆಸರಿನಿಂದ ಗದ್ಯಕ್ಕೆ ಅನುವಾದಿಸಿದ್ದಾರೆ. ಬಸವರಾಜ ವಿಜಯಂ, ಸ್ತುತಿ ಮುಕ್ತಾವಳಿ ಮುಂತಾದುವು ಇವರ ಇತರ ಗ್ರಂಥಗಳು. ಸಮಕಾಲೀನ ವಿದ್ವಾಂಸರಲ್ಲಿ ಗಣ್ಯರಾಗಿದ್ದ ಇವರು 1923 ಮೇ 9ರಂದು ನಿಧನರಾದರು. (ಬಿ.ಎಸ್.)

**ಕರಿಬಸವಶಾಸ್ತ್ರೀ, ಪಿ.ಆರ್. :** 1846-1931. ಹಿಂದಿನ ಮೈಸೂರು ಪ್ರಾಂತ್ಯದಲ್ಲಿ ಆಗಿಹೋದ ಹಿರಿಯ ವಿದ್ವಾಂಸರು. 1846ರಲ್ಲಿ ಜನಿಸಿದರು. ತಂದೆ ಪಂಡಿತ ರುದ್ರಪ್ಪ. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹಾಗೂ ವೀರಶೈವ ಧರ್ಮದಲ್ಲಿ ಮಹಾಪಂಡಿತರಾಗಿದ್ದ ಇವರು ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮತ್ತು ಮೈಸೂರು ಮಹಾರಾಜ ಕಾಲೇಜುಗಳಲ್ಲಿ ಕನ್ನಡ ಪಂಡಿತರಾಗಿ ಸು.45 ವರ್ಷಗಳ ಕಾಲ ಕೆಲಸ ಮಾಡಿದರು. ಬೈಬಲ್ ಸಮಿತಿಯ ಸದಸ್ಯರಾಗಿದ್ದ ರೆವರೆಂಡ್ ಗ್ರೀನ್ ಹುಡ್, ಹಾಕಿನ್, ಹೆಗ್, ಕಾಸ್ಟಿಕ್, ಗಲಿಫರ್ಡ್, ಥಾಮ್ಸನ್ ಮೊದಲಾದವರಿಗೆ ಕನ್ನಡವನ್ನು ಹೇಳಿಕೊಟ್ಟರು. ಇವರ ಶಿಷ್ಯಪರಂಪರೆ ಬಹಳ ದೊಡ್ಡದು. ಕರ್ನಾಟಕ ಕವಿಚರಿತೆಯ ರಚನೆಯ ಕಾಲದಲ್ಲಿ ಇವರು ಆರ್.ನರಸಿಂಹಾಚಾರ್ಯರಿಗೆ ನೆರವಾಗಿದ್ದರು.

ಇವರು ವೀರಶೈವ ಮತ ಪ್ರಕಾಶಕ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಹಲವಾರು ಕನ್ನಡ ಸಂಸ್ಕೃತ ಗ್ರಂಥಗಳನ್ನು ಪ್ರಕಟಿಸಿದರು. ಜೈಮಿನಿ ಭಾರತ, ಪ್ರಹ್ಲಾದ ಚರಿತ್ರೆ, ಕನ್ನಡ ಭಾರತ, ರಾಜಶೇಖರವಿಳಾಸ, ಶಬರಶಂಕರ ವಿಳಾಸ - ಹೀಗೆ ಹಲವು ಪ್ರಾಚೀನ ಕನ್ನಡ ಗ್ರಂಥಗಳು ಮೊದಲ ಬಾರಿಗೆ ಇವರಿಂದ ಸಂಶೋಧಿಸಲ್ಪಟ್ಟು ಪ್ರಕಟವಾದುವು. ಸ್ವತಂತ್ರವಾಗಿ ಕನ್ನಡ ಬಸವೇಶ ವಿಜಯ, ನಯಶತಕ ಎಂಬ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ನಿಜಗುಣ ಶಿವಯೋಗಿಯ ಅನುಭವಸಾರಕ್ಕೆ ಟಿಪ್ಪಣಿಯನ್ನು ಬರೆದಿದ್ದಾರೆ. ವೀರಶೈವೋತ್ಕರ್ಷ ಪ್ರದೀಪಿಕಾ ಇವರ ಸ್ವತಂತ್ರ ಸಂಸ್ಕೃತ ಕೃತಿ. ಕ್ರಿಯಾಸಾರ, ಸಿದ್ಧಾಂತಶಿಖಾಮಣಿ, ದೀಕ್ಷಾವಿಧಿ, ಮಾಚದೇವ, ಮನೋವಿಲಾಸ, ಲಿಂಗಧಾರಣ ಚಂದ್ರಿಕಾ, ಅನುಭವಸೂತ್ರ, ವಿವಾಹ ವಿಧಿ, ವೀರಶೈವೋತ್ಕರ್ಷ ಸಂಗ್ರಹ, ಸಂಸ್ಕೃತ ಬಸವೇಶವಿಜಯ ಈ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಭಕ್ತಾಧಿಕ್ಯ ರತ್ನಾವಳಿ, ಅನುಭವಸಾರ, ವ್ಯಾಸೋಕ್ತ ಬಸವಪುರಾಣ, ಶೈವಾದ್ವೈತಮಂಜರಿ, ಸಿದ್ಧೇಶ್ವರಪುರಾಣ, ನಳಚರಿತ್ರೆ, ವೀರಶೈವಪ್ರದೀಪಿಕಾ, ಶಿವಭಕ್ತಿಸಾರ, ತ್ರಿಕಾಂಡ ಅಮರಕೋಶ, ಕರ್ನಾಟಕ ಬಾಲಬೋಧೆ, ಶಬ್ದರೂಪಾವಳಿ ಮೊದಲಾದವು ಇವರ ಇತರ ಗ್ರಂಥಗಳು. ಮೈಸೂರು ಮಹಾರಾಜರ ಆಸ್ಥಾನ ವಿದ್ವಾಂಸರಾಗಿದ್ದ ಇವರಿಗೆ 1918ರಲ್ಲಿ ಕರ್ನಾಟಕ ಭಾಷಾರತ್ನ ಎಂಬ ಬಿರುದು ಲಭಿಸಿತ್ತು. ಇವರು 1931 ಆಗಸ್ಟ್ 30ರಂದು ಮೈಸೂರಿನಲ್ಲಿ ನಿಧನರಾದರು. (ಬಿ.ಎಸ್.)

**ಕರೀಂಖಾನ್, ಎಸ್.ಕೆ. :** ಹಿರಿಯ ತಲೆಮಾರಿನ ಜಾನಪದ ವಿದ್ವಾಂಸ, ಗೀತರಚನಕಾರ. ಹುಟ್ಟಿದ್ದು ಬೆಳೆದದ್ದು ಹಾಸನಜಿಲ್ಲೆಯ ಸಕಲೇಶಪುರದಲ್ಲಿ. ತಾಯಿ ಜೈನಬ್ಬಿ ಅರಬ್ ಮೂಲದವರು. ತಂದೆ ಅಬ್ದುಲ್ ರಹಮಾನ್ ಖಾನ್, ಅಫ್ಘನ್ ಯೋಧ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಅಣ್ಣನ ಆಶ್ರಯದಲ್ಲಿ ಬೆಳೆದರು. ಹಾಸನದಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಪಡೆದರು. ಆಚಂಗಿ ನಾರಾಯಣಶಾಸ್ತ್ರಿ ಇವರ ಗುರುಗಳು.

ಉರ್ದು ಮನೆಮಾತಾಗಿದ್ದರೂ ಕರೀಂಖಾನರು ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತವನ್ನು ಅಧ್ಯಯನ ಮಾಡಿದರು. ಇವರು ಹೆಚ್ಚು ವಿದ್ಯಾಭ್ಯಾಸ ಮಾಡದಿದ್ದರೂ ಇತಿಹಾಸ, ಜಾನಪದ, ಪುರಾಣ, ಮಹಾಕಾವ್ಯಗಳ ಬಗ್ಗೆ ಅಪಾರವಾದ ಪಾಂಡಿತ್ಯ ಗಳಿಸಿದವರಾಗಿದ್ದಾರೆ. ಚಾರಿತ್ರಿಕ ಸಂಗತಿಗಳನ್ನು ಕುರಿತಂತೆ ನಿಂತಲ್ಲಿಯೇ ಮಾಹಿತಿ ನೀಡುವ ಪ್ರತಿಭಾವಂತರು. ಮೂಲತಃ ಇಸ್ಲಾಂ ಧರ್ಮದವರಾದರೂ ಭಗವದ್ಗೀತೆ, ಭಾಗವತ, ಶಿವಪುರಾಣ, ವಿಷ್ಣುಪುರಾಣಗಳನ್ನು ಬಲ್ಲವರಾಗಿದ್ದಾರೆ. ತೆಲುಗಿನ

ಪೋತನನ ಭಾಗವತವನ್ನು ನಾಟಕರೂಪಕ್ಕೆ ತರುವ ಪ್ರಯತ್ನದಲ್ಲೂ ಇವರು ತೊಡಗಿದ್ದರು. ಉರ್ದು ಸಾಹಿತ್ಯದ ಘಾಲಿಬ್, ಇಕ್ಬಾಲ್‌ರಂತಹ ಕವಿಗಳ ಪ್ರಭಾವಕ್ಕೂ ಒಳಗಾಗಿದ್ದ ಇವರು ಹಿಂದು ಮುಸ್ಲಿಂ ಏಕತೆಗೆ ಸಾಕಷ್ಟು ಕಥೆಗಳನ್ನು ರಚಿಸಿದ್ದುಂಟು. (ನಿವಾರ ಉರ್ದುವಿನಿಂದ ಅನುವಾದಿತ ಕಥೆಗಳು), ನೀಹಾರ (ಚಾರಿತ್ರಿಕ ಕಥಾಸಂಕಲನ) ಬಲಿದಾನಿ ಹುಸೇನ್ ಎಂಬುದು ಚಾರಿತ್ರಿಕ ಕಾದಂಬರಿ, ಮಾತೃಶಾಪ ಪೌರಾಣಿಕ ಕಾದಂಬರಿ. ಇವಲ್ಲದೆ ಇವರು ನಿರ್ದೋಷಿ, ಶ್ರೀ ಕೃಷ್ಣಲೀಲೆ, ಹುಮಾಯೂನ್, ಅಂಬರನಾಥ, ಮಹಾಪ್ರಭು ಮಾಗಡಿ ಕೆಂಪೇಗೌಡ ಮೊದಲಾದ ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ.

ಪ್ರೌಢಶಾಲಾ ವ್ಯಾಸಂಗದ ಸಮಯದಲ್ಲಿಯೇ ಇವರು ಜಾನಪದದತ್ತ ಆಕರ್ಷಿತರಾದರು. ಹಳ್ಳಿಯ ಸಂಸ್ಕೃತಿ ಮತ್ತು ಸಾಹಿತ್ಯ ಇವರನ್ನು ಕೈ ಬೀಸಿ ಕರೆದುದರಿಂದ ಅವನ್ನು ಸಂಗ್ರಹಿಸುತ್ತಾ ಹಾಡುತ್ತಾ, ಹಳ್ಳಿ ಹಳ್ಳಿ ಸುತ್ತಿದರು. ಜೀವನ ಕಷ್ಟಕರವಾದಾಗ ಜನಪದ ಗೀತೆಗಳನ್ನು ಸಂಗ್ರಹಿಸಿ, ಪ್ರಕಟಿಸಿ ಮಾರಾಟ ಮಾಡಿದರು. ರಂಗಭೂಮಿಯತ್ತಲೂ ಆಕರ್ಷಿತರಾಗಿ ಕಥೆ, ಸಂಭಾಷಣೆ, ಹಾಡು ಬರೆಯತೊಡಗಿದರು. ರಾಯಲ್ ಇಂಡಿಯನ್ ನೇವಿ ಸಂಸ್ಥೆಯಲ್ಲಿ ಕೆಲಸ ಮಾಡಲು ಮುಂಬೈಗೂ ಹೋಗಿ ಬಂದರು. ಸೇವಾದಳದ ಬೆಳೆವಣಿಗೆಯಲ್ಲೂ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಗಳಾಗಿದ್ದಾಗ ಭಾರತೀಯ ಸೇವಾದಳದ ಸಂಘಟಕರಾಗಿ ಇವರು ಪ್ರವಾಸ ಕೈಗೊಂಡರು.

ಭಾರತ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕರೀಂಖಾನರಂಥ ಕಂಚಿನ ಕಂಠದ ಗಾಯಕರೊಬ್ಬರು ಹೋರಾಟಗಾರರಿಗೆ ಬೇಕಾಗಿದ್ದರು. ತಮ್ಮ ಅದ್ಭುತ ಕಂಠದಿಂದ ಹಾಡುತ್ತಾ ನಿರರ್ಗಳವಾಗಿ ಹರಿಯುವ ತಮ್ಮ ವಾಗ್ಝರಿಯಿಂದ ಜನರನ್ನು ಹುರಿದುಂಬಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ದುಮುಕಿದ್ದರಿಂದಾಗಿ ಸತತ ಏಳು ಸಲ ಜೈಲುವಾಸ ಅನುಭವಿಸಿದರು. ಸ್ವಾತಂತ್ರ್ಯಾನಂತರ ಇವರು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಆಗಲೂ ಸೆರೆವಾಸ ಅನುಭವಿಸಿದರು. ಗಾಂಧೀಜಿಯವರು ವಿಶ್ರಾಂತಿಗೆಂದು ನಂದಿಬೆಟ್ಟಕ್ಕೆ ಬಂದಾಗ ಅವರನ್ನು ಭೇಟಿಯಾಗಿದ್ದರು.

ಏಕಾಂಗಿಯಾಗಿಯೂ ಸ್ವಾಭಿಮಾನಿಯಾಗಿದ್ದ ಕರೀಂಖಾನ್ ಮದರಾಸಿನ ಸಿನಿಮಾ ಜಗತ್ತಿನಲ್ಲಿ ಅದೃಷ್ಟವನ್ನು ಅರಸಿ ತೆರಳಿದರು. ಪ್ರಸಾದ್ ಮೂವೀಸ್‌ನ ಆರ್. ನಾಯ್ಡು ಅವರು ಕರೀಂಖಾನರನ್ನು ಮದರಾಸಿಗೆ ಬರಮಾಡಿಕೊಂಡರು. ಅಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಇದ್ದು ಹಲವಾರು ಚಿತ್ರಗಳಿಗೆ ಕಥೆ, ಸಂಭಾಷಣೆ, ಹಾಡುಗಳನ್ನು ಬರೆದರು. ಮುನ್ನೂರಕ್ಕೂ ಹೆಚ್ಚು ಗೀತೆಗಳನ್ನು ರಚಿಸಿದರು. ಸ್ವರ್ಣಗೌರಿ, ಜೀವನ ತರಂಗ, ಬೇವು ಬೆಲ್ಲ, ಚಂದ್ರಕುಮಾರ, ದೇವಮಾನವ, ದೊಂಬರಕೃಷ್ಣ, ರಾಜೇಶ್ವರಿ, ಪತಿತಪಾವನಿ, ಸೂಪರ್ ನೋವ 445 ಮೊದಲಾದ ಹದಿನೈದು ಚಿತ್ರಗಳಿಗೆ ಇವರು ಸಾಹಿತ್ಯ ನೀಡಿದ್ದಾರೆ. ಸ್ವರ್ಣಗೌರಿ ಚಿತ್ರಕ್ಕೆ ಬರೆದ ಹಾಡುಗಳಿಂದಾಗಿ ಇವರ ಜನಪ್ರಿಯತೆ ಹೆಚ್ಚಿತು. ರಂಭಾಪುರಿ, ಕೂಡ್ಲಿ, ಶೃಂಗೇರಿ, ಉಡುಪಿ, ಧರ್ಮಸ್ಥಳ, ಆದಮಾರು ಸ್ವಾಮಿಗಳನ್ನು ಕುರಿತಂತೆ ಸ್ವಾಗತ ಗೀತೆಗಳನ್ನು ಇವರು ರಚಿಸಿದ್ದಾರೆ. ಮಂದಾರ ಧರ್ಮಸ್ಥಳ (ಧರ್ಮಸ್ಥಳ ಮಂಜುನಾಥ'ನ ಬಗ್ಗೆ) ಎಂಬ ಧ್ವನಿ ಸುರಳಿಯನ್ನು ಬಿಡುಗಡೆ ಮಾಡಿದ್ದಾರೆ. ನಾಡುನುಡಿಗಳ ಬಗ್ಗೆಯೂ ಹಾಡು ರಚಿಸಿದ್ದಾರೆ. ನಟವರ ಗಾಂಗಾಧರ ಉಮಾಶಂಕರದಂಥ ಭಕ್ತಿಪ್ರಧಾನ ಗೀತೆಗಳಿಂದ ಹಿಡಿದು ಬಾರೇ ನೀ ಚೆಲುವೆಯಂಥ ಶೃಂಗಾರ ರಸದ ಹಾಡುಗಳವರೆಗೆ ಮಧುರ ಮತ್ತು ಜನಪ್ರಿಯ ಗೀತೆಗಳನ್ನು ರಚಿಸಿದರು.

ಇವರ ಸೇವೆಯನ್ನು ಗುರುತಿಸಿ ಇವರನ್ನು ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಆಗ ಹಲವರು ಸರ್ಕಾರದ ಕ್ರಮವನ್ನು ಟೀಕಿಸಿದಾಗ ಮನನೊಂದ ಕರೀಂಖಾನ್ ನೇಮಕಾದೇಶ ಕೈ ಸೇರುವ ಮೊದಲೇ ರಾಜೀನಾಮೆ ಪ್ರಕಟಿಸಿಬಿಟ್ಟರು (1990). ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಇವರದು ಅಪರೂಪದ ವ್ಯಕ್ತಿತ್ವ. ಅನಂತರ ಸರ್ಕಾರ ಇವರ ಮನ ಒಲಿಸಿ ಅಧಿಕಾರ ಸ್ವೀಕರಿಸುವಂತೆ ಮಾಡಿತು. ಜಾನಪದ ಕ್ಷೇತ್ರದ ಬೆಳೆವಣಿಗೆಗೆ ಇವರು ಅಪಾರವಾಗಿ ದುಡಿದರು. ಗಿರಿಜನ ಮತ್ತು ಬುಡಕಟ್ಟು ಜನಾಂಗದ ಸಮಗ್ರ ವೀಡಿಯೋ ಚಿತ್ರೀಕರಣ ಕಾರ್ಯವನ್ನು ಕೈಗೆತ್ತಿಕೊಂಡರು. ಇದರಿಂದ ಕಣ್ಮರೆಯಾಗುವಂತಿದ್ದ ಸಂಸ್ಕೃತಿಯೊಂದು ಉಳಿಯುವಂತಾಯಿತು. ಚಲನಚಿತ್ರರಂಗದ ನಿಕಟ ಪರಿಚಯವಿದ್ದುದರಿಂದ ಮತ್ತು ಸ್ವತಃ ಜನಪದ ಗಾಯಕರಾಗಿದ್ದುದರಿಂದ ತಮ್ಮ ಅಧ್ಯಕ್ಷಾವಧಿಯಲ್ಲಿ ಪ್ರದರ್ಶನ ಕಲೆಗಳ ವಿಷಯದಲ್ಲಿ ವಿಶೇಷ ಗಮನ ಹರಿಸಿದರು. ನಾಡಿನಾದ್ಯಂತ ಜನಪದ ಕಲಾ ಪ್ರದರ್ಶನಗಳನ್ನೇರ್ಪಡಿಸಿ ಕಲಾವಿದರಲ್ಲಿ ಆತ್ಮವಿಶ್ವಾಸ ಮೂಡಿಸಿದರು. ಶಿವಮೊಗ್ಗ ಜಿಲ್ಲೆಯ ಮೇಘಾನೆ ಎಂಬ ಬೆಟ್ಟದ ತುದಿಯಲ್ಲಿ ವಾಸಿಸುತ್ತಿರುವ ಕುಣುಬಿಗೊಂಡ ಎಂಬ ಬುಡಕಟ್ಟು ಜನಾಂಗದ ಅಧ್ಯಯನ ಮಾಡಲು ಕಾಲ್ನಡಿಗೆಯ ಕಾರ್ಯಕ್ರಮ ಹಮ್ಮಿಕೊಂಡರು. ಹಸಲರು, ಹಾಲಕ್ಕಿಗಳು, ಸಿದ್ದಿಗಳು, ಎರವರು, ಕಾಡುಕುರುಬರು, ಸೋಲಿಗರು ಮುಂತಾದ ಬುಡಕಟ್ಟು ಜನಾಂಗಗಳ ಸಮಗ್ರ ಜೀವನ ಕಲೆಯ ವೈವಿಧ್ಯಗಳನ್ನು ಇವರ ಕಾಲದಲ್ಲಿ ವೀಡಿಯೋ ಟೇಪ್‌ಗಳಲ್ಲಿ ಸೆರೆ ಹಿಡಿಯಲಾಯಿತು. ಸಾಂಸ್ಕೃತಿಕವಾಗಿ ಮಹತ್ತ್ವ ಹೊಂದಿದ ಹಿರಿಯಡ್ಕದ ಸಿರಿ ಜಾತ್ರೆ, ಮಾಸ್ಕಾಳದ ಚೌಡೇಶ್ವರಿ ಜಾತ್ರೆ, ಮೈಲಾರಲಿಂಗದ ಜಾತ್ರೆಗಳನ್ನು ಚಿತ್ರೀಕರಣಗೊಳಿಸಲಾಯಿತು. ಕಲಾವಿದರನ್ನು ಪೋಷಿಸುವ ಸಲುವಾಗಿ ಕರೀಂಖಾನರು ವಿಶೇಷ ಗಿರಿಜನರ ಪ್ರಶಸ್ತಿಯನ್ನು ರೂಪಿಸಿದರು.

ಬೆಂಗಳೂರಿನ ಬಸವನಗುಡಿಯ ಚಿಕ್ಕ ಹೋಟೆಲೊಂದರ ಸಣ್ಣ ಕೋಣೆಯಲ್ಲಿದ್ದ ಇವರು ಈಗ ಬಂಧುಗಳ ಮನೆಯಲ್ಲಿದ್ದು ಸಂತರಂತೆ ಜೀವನ ಸಾಗಿಸುತ್ತಿದ್ದಾರೆ. ಇವರು ಸಾಹಿತ್ಯ, ಸಂಸ್ಕೃತಿ, ಜಾನಪದ ಮತ್ತು ಚಲನಚಿತ್ರ ರಂಗಕ್ಕೆ ಕೊಟ್ಟಕೊಡುಗೆ ಅಪಾರ. ಜನಪದ ಗೀತೆಗಳನ್ನು ಸಂಗ್ರಹಿಸಿ ಒಂಬತ್ತು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಜನಪದಗೀತೆ ಅನುಭವ ದರ್ಶನ ಇವರ ಇನ್ನೊಂದು ಕೃತಿ. ಇವರು ಸಲ್ಲಿಸಿದ ಸೇವೆಯನ್ನು ಗಮನಿಸಿ ಕರ್ನಾಟಕ ಸರ್ಕಾರ ಜಾನಪದಶ್ರೀ (1995) ಪ್ರಶಸ್ತಿಯನ್ನೂ ಕನ್ನಡ ವಿಶ್ವವಿದ್ಯಾಲಯ ನಾಡೋಜ (1997) ಪ್ರಶಸ್ತಿಯನ್ನೂ ಗುಲ್ಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟನ್ನೂ ನೀಡಿ ಗೌರವಿಸಿವೆ. ಹುಬ್ಬಳ್ಳಿಯ ಮೂರುಸಾವಿರ ಜಂಗಮ ಮಠದ ಜಾನಪದ ಜಂಗಮ ಪ್ರಶಸ್ತಿ, ಮಂಡ್ಯದ ಜೀಶಂಪ ಪ್ರಶಸ್ತಿ (1995), ಹಂಸಜ್ಯೋತಿ ಸಂಸ್ಥೆಯ ಹಂಸರತ್ನ (1998) ಪ್ರಶಸ್ತಿ -ಇವು ಇವರಿಗೆ ದೊರೆತ ಇನ್ನಿತರ ಪ್ರಶಸ್ತಿಗಳು. (ಜಿ.ಆರ್.ಟಿ.)

**ಕರ್ಕ II :** ರಾಷ್ಟ್ರಕೂಟ ವಂಶದ ಕೊನೆಯ ರಾಜ (972-73). ನಾಲ್ಕನೆಯ ಗೋವಿಂದನ ಮೊಮ್ಮಗ. ಮೂರನೆಯ ನಿರುಪಮನ ಮಗ. ಖೊಟ್ಟಿಗ ಸತ್ತಮೇಲೆ ಕರ್ಕ ಸಿಂಹಾಸನವನ್ನೇರಿದ. ಈತನಿಗೆ ಅಮೋಘವರ್ಷ, ನೃಪತುಂಗ, ವೀರನಾರಾಯಣ, ರಾಜ ತ್ರಿನೇತ್ರ ಎಂಬ ಬಿರುದುಗಳಿದ್ದುವು.

ಖೊಟ್ಟಿಗನ ಕಾಲದಲ್ಲಿ ನಡೆದ ಸೀಯಕನ ದಾಳಿಯಿಂದ ರಾಷ್ಟ್ರಕೂಟರ ಗೌರವದ ಅಧಃಪಾತವಾಗಿತ್ತು. ಇಂಥ ಸಮಯದಲ್ಲಿ ಅಧಿಕಾರಕ್ಕೆ ಬಂದ ಕಕ್ಕನೂ ದಕ್ಷನಾಗಿರಲಿಲ್ಲ. ಇವನು ದುಷ್ಟ ಮಂತ್ರಿಗಳಿಬ್ಬರ ಕೈಗೊಂಬೆಯಾಗಿದ್ದ. ಪ್ರಜೆಗಳು ರಾಜನನ್ನೂ ಅವನ ಪರಿವಾರವನ್ನೂ ದ್ವೇಷಿಸುತ್ತಿದ್ದರು. ಈ ದೌರ್ಬಲ್ಯದಿಂದಾಗಿ ಇವನ ಸಾಮಂತ ರಾಜರಲ್ಲಿ ದುರಾಸೆ ಬೆಳೆಯಿತು.

ಚಾಳುಕ್ಯ ವಂಶದ ಎರಡನೆಯ ತೈಲಪ ಮೂರನೆಯ ಗೋವಿಂದನಿಂದ ತರ್ದವಾಡಿ ಪ್ರಾಂತ್ಯದಲ್ಲಿ ಮಾಂಡಲಿಕನಾದಾಗಿನಿಂದಲೂ ರಾಷ್ಟ್ರಕೂಟರನ್ನು ನಾಶಮಾಡುವ ಹಂಚಿಕೆ ಹೂಡಿದ್ದ. ಬಾದಾಮಿಯ ಚಳುಕ್ಯರ ವಂಶಜನೆಂದು ಭಾವಿಸಿದ್ದ ತೈಲಪನಿಗೆ ತನ್ನ ಹಿರಿಯರಿಂದ ರಾಷ್ಟ್ರಕೂಟರು ಕಿತ್ತುಕೊಂಡಿದ್ದ ಸಾಮ್ರಾಜ್ಯವನ್ನು ಮತ್ತೆ ಸಂಪಾದಿಸಬೇಕೆಂಬ ಆಕಾಂಕ್ಷೆಯಿತ್ತು. ಎರಡನೆಯ ಕರ್ಕನ ಕಾಲದಲ್ಲಿ ಆತನಿಗೆ ಈ ಅವಕಾಶ ದೊರೆಯಿತು. ತನ್ನ ವಿರುದ್ಧ ಎದ್ದ ತೈಲಪನನ್ನು ಅಡಗಿಸುವ ಉದ್ದೇಶದಿಂದ ದಂಡೆತ್ತಿಹೋದ ಕರ್ಕ ಸೋತ (973). ಚಾಳುಕ್ಯ ತೈಲಪ ಮಾನ್ಯಖೇಟವನ್ನು ಹಿಡಿದ. ಕರ್ಕನ ಮಂತ್ರಿಗಳು ಕಾಳಗದಲ್ಲಿ ಕೊನೆಗೊಂಡರು. ಕರ್ಕ ಮಾತ್ರ ಹೇಗೋ ತಲೆತಪ್ಪಿಸಿಕೊಂಡು ಹೋಗಿ, ಈಗಿನ ಕರ್ನಾಟಕ ರಾಜ್ಯದಲ್ಲಿರುವ ಸೊರಬ ತಾಲ್ಲೂಕಿನಲ್ಲಿ ಒಂದಿಷ್ಟು ನೆಲ ಗಿಟ್ಟಿಸಿಕೊಂಡು ಅಲ್ಲಿ 991ರವರೆಗೂ ಆಳಿಕೆ ನಡೆಸಿದ. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಮತ್ತೆ ಸಂಪಾದಿಸುವ ಆಸೆಯನ್ನು ಕರ್ಕ ಕೈಬಿಟ್ಟನಾದರೂ ಮೂರನೆಯ ಕೃಷ್ಣನ ಮಗನಾದ ನಾಲ್ಕನೆಯ ಇಂದ್ರನನ್ನು ಸಿಂಹಾಸನಕ್ಕೆ ತರಲು ಗಂಗವಂಶದ ದೊರೆ ಎರಡನೆಯ ಮಾರಸಿಂಹ ಪ್ರಯತ್ನಪಟ್ಟ. ಆದರೆ ಅದು ಫಲಿಸಲಿಲ್ಲ. ಕೇವಲ 6 ವರ್ಷಗಳ ಹಿಂದೆ (967) ಕೃಷ್ಣನ ಕಾಲದಲ್ಲಿ ಇಡೀ ದಕ್ಷಿಣ ಭಾರತವನ್ನು ಆವರಿಸಿದ್ದ ರಾಷ್ಟ್ರಕೂಟ ಸಾಮ್ರಾಜ್ಯ ಇವನ ಕಾಲದಲ್ಲಿ ಕೊನೆಗೊಂಡಿತು. (ಕೆ.ಎಸ್.ಎಸ್.)

**ಕರ್ಕ್‌ಪ್ಯಾಟ್ರಿಕ್, ವಿಲಿಯಂ :** 1754-1812. ಈಸ್ಟ್ ಇಂಡಿಯ ಕಂಪನಿಯ ಸೇವೆಯಲ್ಲಿದ್ದ ಯೋಧ, ಆಡಳಿತಗಾರ. ಮದರಾಸ್ ಅಶ್ವದಳದಲ್ಲಿ ಕರ್ನಲ್ ಆಗಿದ್ದ ಜೇಮ್ಸ್ ಅವರ ಮಗನಾದ ಈತ 1773ರಲ್ಲಿ ಬಂಗಾಲ ಕಾಲ್ದಳದಲ್ಲಿ ಸೇನೆಗೆ ಸೇರಿ, ಲೆಫ್ಟಿನೆಂಟ್ ಕರ್ನಲ್ ಹುದ್ದೆಯವರೆಗೆ ಏರಿದ. ಪಾರಸೀ ಭಾಷೆ ಬಲ್ಲವನಾಗಿ ಮೂರನೆಯ ಮೈಸೂರು ಯುದ್ಧದ ಕಾಲದಲ್ಲಿ ಲಾರ್ಡ್ ಕಾರ್ನ್‌ವಾಲೀಸನ ದುಭಾಷಿಯಾಗಿ ಕೆಲಸ ಮಾಡಿದ. ಲಾರ್ಡ್ ಮಾರ್ನಿಂಗ್‌ಟನ್‌ನ ಸೇನಾ ಕಾರ್ಯದರ್ಶಿ (1798) ಹಾಗೂ ಆಪ್ತ ಕಾರ್ಯದರ್ಶಿ (1799) ಹುದ್ದೆ ನಿರ್ವಹಿಸಿದ. ಟಿಪ್ಪುವಿನ ಪತನಾನಂತರ ಮೈಸೂರು ವಿಭಜನೆಯ ಒಪ್ಪಂದವನ್ನು ರೂಪಿಸಲು ಜನರಲ್ ಹ್ಯಾರಿಸ್, ಕರ್ನಲ್ ಆರ್ಥರ್ ವೆಲ್ಲೆಸ್ಲಿ, ಹೆನ್ರಿ ವೆಲ್ಲೆಸ್ಲಿ, ಬ್ಯಾರಿ ಕ್ಲೋಸ್ ಮತ್ತು ಈತನನ್ನು ಒಳಗೊಂಡ ಕಮಿಷನ್ ನೇಮಿಸಿದ್ದು, ಅದಕ್ಕೆ ಸಹಿ ಹಾಕಿದ್ದ ಕಂಪನಿಯ ಪ್ರತಿನಿಧಿಗಳಲ್ಲಿ ಈತನೂ ಒಬ್ಬ. ಮುಂದೆ ಈತನನ್ನು ಪುಣೆಯ ರೆಸಿಡೆಂಟನಾಗಿ ನೇಮಿಸಲಾಗಿತ್ತು. ಭಾರತೀಯ ಭಾಷೆ ಮತ್ತು ಸಾಹಿತ್ಯಗಳನ್ನು ಚೆನ್ನಾಗಿ ಬಲ್ಲವನಾದ ಈತ ಟಿಪ್ಪುವಿನ 1786ರವರೆಗಿನ ಪಾರಸೀ ಪತ್ರಗಳನ್ನು ಭಾಷಾಂತರಿಸಿ, 1811ರಲ್ಲಿ ಲಂಡನಿನಿಂದ ಸೆಲೆಕ್ಟ್ ಲೆಟರ್ಸ್ ಆಫ್ ಟಿಪ್ಪುಸುಲ್ತಾನ್ ಎಂಬ ಹೆಸರಿನಲ್ಲಿ ಪ್ರಕಟಿಸಿದ.

ಈತನ ಸೋದರ ಜೇಮ್ಸ್ ಅಕಿಲಿಸ್ ಕರ್ಕ್‌ಪ್ಯಾಟ್ರಿಕ್ (1764-1805) 1791-92ರ ಮೈಸೂರು ಯುದ್ಧದಲ್ಲಿ ಪಾಲುಗೊಂಡಿದ್ದ. 1799ರ ಯುದ್ಧದಲ್ಲಿ ಟಿಪ್ಪುವಿನ ವಿರುದ್ಧ ನಿಜಾಮನ ಸೇನೆಯನ್ನು ತಂದು ಭಾಗವಹಿಸಿದ್ದ. (ಎಸ್.ಕೆ.)

**ಕರ್ಕಿ, ಡಿ.ಎಸ್. :** 1907-84. ಕನ್ನಡ ನವೋದಯ ಮಾರ್ಗದ ಕವಿ. ದುಂಡಪ್ಪ ಸಿದ್ದಪ್ಪ ಕರ್ಕಿ ಎಂಬುದು ಇವರ ಪೂರ್ಣ ನಾಮ. ಬೆಳಗಾಂವಿ ಜಿಲ್ಲೆಯ ಭಾಗೋಜಿ ಕೊಪ್ಪದಲ್ಲಿ ಜನಿಸಿದರು. ಇವರು ಮೂರು ವರ್ಷದವರಿರುವಾಗಲೇ ತಾಯಿಯನ್ನು ಕಳೆದುಕೊಂಡರು. ಅನಂತರ ಇವರು ಬೆಳೆದದ್ದು ಸೋದರಮಾವನ ಮನೆಯಲ್ಲಿ. ಬೆಲ್ಲದ ಬಾಗೇವಾಡಿಯಲ್ಲಿ ಪ್ರಾಥಮಿಕ ಶಿಕ್ಷಣ, ಬೆಳಗಾಂವಿಯ ಜಿ.ಎ.ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ ಪಡೆದರು. ಕೊಲ್ಹಾಪುರದ ರಾಜಾರಾಮ ಕಾಲೇಜು, ಪುಣೆಯ ಫರ್ಗ್ಯುಸನ್ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜುಗಳಲ್ಲಿ ಓದಿದರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಕಾರವಾರದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಜೀವನ ಆರಂಭಿಸಿದರು. ಕೆಲಕಾಲದಲ್ಲಿ ಕೆ.ಎಲ್.ಇ. ಸೊಸೈಟಿ ಸೇರಿದರು. ಜಿ.ಎ. ಪ್ರೌಢ ಶಾಲೆಯಲ್ಲಿ ಅಧ್ಯಾಪಕರಾದರು. ಅನಂತರ ಬೆಳಗಾಂವಿಯ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಕೆ.ಎಲ್.ಇ. ಸೊಸೈಟಿಯ ಹುಬ್ಬಳ್ಳಿಯ ಆರ್ಟ್ಸ್ ಕಾಲೇಜಿನ ಉಪಪ್ರಾಚಾರ್ಯರಾಗಿ, ಪ್ರಾಂಶುಪಾಲರಾಗಿ, ಕೆಲಕಾಲ ನರೇಗಲ್ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿ ಹುಬ್ಬಳ್ಳಿಗೆ ಹಿಂದಿರುಗಿದರು. ದಕ್ಷ ಆಡಳಿತಗಾರರೆಂದೂ ಇವರು ಹೆಸರುಗಳಿಸಿದರು. ವಿದ್ಯಾರ್ಥಿಗಳನ್ನು ಸ್ನೇಹಿತರಂತೆ ಕಾಣುತ್ತಿದ್ದರು. ಕರ್ಕಿಯವರು ಸಹಜವಾದುರ್ಯದ ಸಂವೇದನಾಶೀಲ ಮತ್ತು ಭಾವನಿಷ್ಠ ರಮ್ಯ ಕವನಗಳ ಮೂಲಕ ಕನ್ನಡ ನಾಡು ನುಡಿ ಸಂಸ್ಕೃತಿಯ ಉನ್ನತವೌಲ್ಯಗಳನ್ನು ಉದಾತ್ತ ಆದರ್ಶಗಳನ್ನು ಹೃದ್ಯವಾಗಿ ಹಾಡಿದ ಭಾವಗೀತೆಯ ಕವಿ ಎಂದೇ ಪ್ರಸಿದ್ಧರಾಗಿದ್ದರು. ಪ್ರಕೃತಿ ಮತ್ತು ಜೀವನದ ಸಾತ್ವಿಕ ಸತ್ವ



ಸೌಂದರ್ಯದಿಂದ ಅಗಾಧವಾಗಿ ಪ್ರಭಾವಿತರಾದ ಇವರು ಗದ್ಯಪದ್ಯವೆರಡರಲ್ಲೂ ತಮ್ಮ ವ್ಯಕ್ತಿ ವಿಶಿಷ್ಟ ಪ್ರತಿಭೆಯನ್ನು ಪ್ರದರ್ಶಿಸಿದರು. ಕಾವ್ಯ, ಪ್ರಬಂಧ, ಮಕ್ಕಳಸಾಹಿತ್ಯ ಮತ್ತು ಸಂಪಾದನೆ, ಸಂಶೋಧನೆಗೆ ಸಂಬಂಧಿಸಿದ ಒಟ್ಟು ಹನ್ನೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ. ಆಧ್ಯಾತ್ಮಿಕ ಚಿಂತನೆಗಳನ್ನು ಸೌಂದರ್ಯಪ್ರಜ್ಞೆ ಮತ್ತು ಜೀವನಸಂಸ್ಕೃತಿ ಕುರಿತಾದ ಆರೋಗ್ಯಪೂರ್ಣ ವಿಚಾರಗಳನ್ನು ಬದುಕಿನ ಶುಚಿ ರುಚಿ ಮತ್ತು ಒಲವು ಚೆಲವನ್ನು ಕಲಾತ್ಮಕ ವಿನ್ಯಾಸದಲ್ಲಿ ಸುಕುಮಾರ ಶೈಲಿಯಲ್ಲಿ ಪಡಿಮೂಡಿಸಿರುವ ಇವರ ಕಾವ್ಯಪ್ರತಿಭೆ ಅನನ್ಯವಾದುದು.

ನಕ್ಷತ್ರಗಾನ (1949), ಭಾವತೀರ್ಥ (1953), ಗೀತಗೌರವ (1968), ಕರಿಕೆ ಕಣಗಿಲು (1976), ನಮನ (1977) - ಇವು ಇವರ ಕವನ ಸಂಕಲನಗಳು. ಹಚ್ಚೇವು ಕನ್ನಡದ ದೀಪ, ಕರುನಾಡದೀಪ ಸಿರಿನುಡಿಯದೀಪ ಒಲವೆತ್ತಿ ತೋರುವ ದೀಪ ಎಂದು ಕನ್ನಡಿಗರ ಎದೆಯಾಳದ ಮಿಡಿತವನ್ನು ಕಾವ್ಯದ ಕೊರಳಲ್ಲಿ ಮಿಡಿದ ನಾಡಕವಿ ಇವರು. ಕವಿಯು ಜೀವನ ಪ್ರೀತಿ, ಪ್ರಕೃತಿ, ಕಲೆ ಮತ್ತು ಸಾಹಿತ್ಯ ಚಿಂತನೆಯ ಚತುರ್ಮುಖ ದರ್ಶನ ನೀಡುವ ಗದ್ಯಕೃತಿ ನಾಲ್ದೆಸೆಯನೋಟ (1952), ಸಾಹಿತ್ಯ ಸಂಸ್ಕೃತಿ ಶೃತಿ (1974) ಇವರ ಗದ್ಯಶೈಲಿಯ ಸೊಗಸು ಪ್ರಬಂಧ ಪ್ರತಿಭೆ ಮತ್ತು ಅನುವಾದ ಸಾಮರ್ಥ್ಯಕ್ಕೆ ಉತ್ತಮ ಉದಾಹರಣೆ. ಮಕ್ಕಳ ಶಿಕ್ಷಣ (1956) ಶಿಕ್ಷಣತಜ್ಞನೊಬ್ಬನ ಶೈಕ್ಷಣಿಕ ಕಾಳಜಿಗಳನ್ನು ಪ್ರಕಟಿಸಿರುವ ಕೃತಿ. ಬಣ್ಣದ ಚೆಂಡು, ತನನತೋಂನಂ ಶಿಶುಗೀತೆಗಳ ಸಂಕಲನಗಳು. ಕರ್ನಾಟಕದ ಅನುಭಾವಿ ಕವಿ ಶಿಶುನಾಳ ಶರೀಫರ ತತ್ತ್ವಪದಗಳ ಸಂಗ್ರಹ ಜನಪ್ರಿಯ ಪದಗಳು. ಇದು ಶರೀಫರ ಗೀತೆಗಳ ಆನುಭಾವಿಕ ಸಾಮಾಜಿಕ, ತಾತ್ತ್ವಿಕ ನೆಲೆಗಳ ಗಂಭೀರ ಪ್ರತಿಪಾದನೆಯನ್ನೊಳಗೊಂಡಿದೆ.

ಕನ್ನಡ ಛಂದೋವಿಕಾಸ (1956) ಕನ್ನಡ ಛಂದಸ್ಸಿನ ಚರಿತ್ರೆ ಮತ್ತು ಸ್ವರೂಪವನ್ನು ಪ್ರಾಚೀನ ಮತ್ತು ಆಧುನಿಕ ಕಾವ್ಯಭಾಗಗಳ ಮೂಲಕ ವಿಶ್ಲೇಷಿಸುವ ಸಂಶೋಧನ ಮಹಾ ಪ್ರಬಂಧ. ಛಂದಶ್ಶಾಸ್ತ್ರದ ಗಂಭೀರ ಅಧ್ಯಯನಗಳು ವಿರಳವಾಗಿದ್ದ ಸಂದರ್ಭದಲ್ಲಿ ಛಂದಶ್ಶಾಸ್ತ್ರದ ಅಧ್ಯಯನಕ್ಕೆ ಅಧಿಕೃತ ಆಕರ ಗ್ರಂಥವಾಗಿದ್ದ ಕನ್ನಡ ಛಂದೋವಿಕಾಸ ಅಚ್ಚಗನ್ನಡದ ದೇಸಿ ಛಂದಸ್ಸನ್ನು ಕುರಿತು ನಡೆಸಿರುವ ವಿವೇಚನೆ ಮೌಲಿಕವಾದುದಾಗಿದೆ. ತ್ರಿಪದಿ, ಕಂದ, ರಗಳೆ, ಸಾಂಗತ್ಯ, ಷಟ್ಪದಿ, ಅಕ್ಕರ, ಚೌಪದಿ, ಏಳೆ ಇತ್ಯಾದಿ ಅಚ್ಚಗನ್ನಡ ಛಂದೋಲಯಗಳ, ಚಾರಿತ್ರಿಕ ಮತ್ತು ಕಲಾತ್ಮಕ ನೆಲೆಯ ಚರ್ಚೆ ಕರ್ಕಿಯವರ ವಿದ್ವತ್ ಪರಿಶ್ರಮ ಮತ್ತು ಸದಭಿರುಚಿಯ ಪ್ರತೀಕವಾಗಿದೆ. ಇವರ ಸಾಹಿತ್ಯಕ ಸಾಧನೆಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ (1972). ಕಾವ್ಯಗೌರವ ಎಂಬ ಸಂಭಾವನಾ ಗ್ರಂಥವನ್ನು ಇವರಿಗೆ ಅರ್ಪಿಸಲಾಗಿದೆ (1991). (ಎಸ್‌ಎಚ್‌ಎ.ಐ.)

**ಕರ್ಕಿ ವೆಂಕಟರಮಣಶಾಸ್ತ್ರಿಸೂರಿ :** ಹೊಸಗನ್ನಡ ಅರುಣೋದಯದ (19ನೆಯ ಶತಮಾನ) ಆದ್ಯಲೇಖಕರು. ಹೊಸಗನ್ನಡದ ಪ್ರಪ್ರಥಮ ಸಾಮಾಜಿಕ ನಾಟಕ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಎಂಬ ನಾಟಕದ ಕರ್ತೃ. ಇವರು ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕರ್ಕಿಯವರು. ಸೂರಿ ಎಂಬ ಬಿರುದು ವೈದಿಕ ಕರ್ಮಕಾಂಡಗಳಲ್ಲಿ ಪ್ರಸಿದ್ಧಿಯನ್ನು ಪಡೆದ ಇವರ ಮನೆತನಕ್ಕೆ ಶ್ರೀ ಗುರುಪೀಠದಿಂದ ದೊರೆತದ್ದು. ಇವರ ತಂದೆ ವಿಘ್ನೇಶ್ವರ ಶಾಸ್ತ್ರಿಗಳೂ ದೊಡ್ಡ ಪಂಡಿತರು. ವೆಂಕಟರಮಣಶಾಸ್ತ್ರಿಯವರು ತಮ್ಮ ಬಾಲ್ಯದ ವಿದ್ಯಾಭ್ಯಾಸವನ್ನು ಕರ್ಕಿಯಲ್ಲಿ ಮುಗಿಸಿ, ಹೊಸನಗರದ ಬಳಿ ಇರುವ ಶ್ರೀ ರಾಮಚಂದ್ರಾಪುರ ಮಠದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಪಡೆದರು. ಅಲ್ಲಿ ಕಾವ್ಯ, ವ್ಯಾಕರಣ, ಅಲಂಕಾರ, ವೇದಾಂತಗಳನ್ನು ಅಧ್ಯಯನ ಮಾಡಿ ಶ್ರೀಗಳ ಪ್ರೀತಿಗೆ ಪಾತ್ರರಾದರು. ಇವರು ಕೆಲವು ಕಾಲ ಮಠದ ಪಾರುಪತ್ಯಗಾರರಾಗಿಯೂ ಕೆಲಸ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಫೌಜುದಾರರಾಗಿ ಅನುಭವ ಪಡೆದ ಇವರು ಯಾವ ಹುದ್ದೆಯಲ್ಲಿಯೂ ಬಹುಕಾಲ ಮುಂದುವರೆಯಲಿಲ್ಲ. ಗೆಳೆಯ ಬೂದಿ ಮಹಾಬಲಭಟ್ಟರೊಂದಿಗೆ ಸೇರಿ 'ಶಾಸ್ತ್ರೀ ಕಂಪನಿ' ಮಾಡಿಕೊಂಡು ಊರೂರು ತಿರುಗಿ ಹವ್ಯಕ ಬಾಂಧವರಿಂದ ನಿಧಿ ಸಂಗ್ರಹಿಸಿಕೊಂಡು ಮುಂಬಯಿಯಲ್ಲಿ ಭಾರತೀ ಛಾಪಖಾನೆಯನ್ನು ಸ್ಥಾಪಿಸಿದರು. ಕನ್ನಡದಲ್ಲಿ ಗ್ರಂಥರಚನೆ, ಗ್ರಂಥ ಸಂಪಾದನೆ ಮತ್ತು ಪ್ರಕಟಣೆ ಅಂದಿನ ಇವರ ಗುರಿಯಾಗಿತ್ತು. ಕರಾವಳಿಯ ಅಕ್ಕಸಾಲಿಗರಿಂದ ಕನ್ನಡ ಅಕ್ಷರಗಳನ್ನು ಕೆತ್ತಿಸಿ ಅನೇಕ ಶಾಸ್ತ್ರ ಗ್ರಂಥಗಳನ್ನೂ ಕಾವ್ಯಗಳನ್ನೂ ಅಚ್ಚು ಹಾಕಿಸಿದರು. ಶಂಕರಸಂಹಿತೆ, ಮನುಸ್ಮೃತಿ, ಯೋಗವಾಸಿಷ್ಠ, ದುರ್ಗಾಸಪ್ತಶತಿ, ಸಹಸ್ರನಾಮಾವಳಿ, ಪೂಜಾಸಮುಚ್ಚಯ, ತುರಂಗಭಾರತ ಮುಂತಾದವು ಕೆಲವು ಮುಖ್ಯಕೃತಿಗಳು.

ಹವ್ಯಕರ ಇತಿಹಾಸ, ಧರ್ಮ ಮತ್ತು ಮಠಗಳಿಗೆ ಸಂಬಂಧಿಸಿದ ಗ್ರಂಥಗಳನ್ನೂ ಅನೇಕ ಯಕ್ಷಗಾನ ಕೃತಿಗಳನ್ನೂ ಇವರು ಮುದ್ರಿಸಿ ಪ್ರಕಟಿಸಿದರು. ಸ್ವತಃ ಕೆಲವು ಕೃತಿಗಳನ್ನು ರಚಿಸಿದರು. ದಕ್ಷಿಣಯಾತ್ರಾ ಚರಿತ್ರೆ, ಪ್ರಾಚೀನ ನಾಟ್ಯ ಕಥಾರ್ಣವ, ಅನಾರ್ಯವಿವರ (1887) ಇವು ಮುಖ್ಯವಾದವು. 'ದಕ್ಷಿಣ ಯಾತ್ರಾ ಚರಿತ್ರೆ' ಹದಿಮೂರು ಪುಟಗಳ ಒಂದು ಚಿಕ್ಕ ಗ್ರಂಥವಾದರೂ ಐತಿಹಾಸಿಕವಾಗಿ ಕನ್ನಡದ ಪ್ರಥಮ ಪ್ರವಾಸಸಾಹಿತ್ಯ ಕೃತಿಯಾಗಿದೆ. ಹೀಗೆಯೇ ಇವರು ಪ್ರಕಟಿಸಿದ ಕಿಬ್ಬಚ್ಚಲು ಮಂಜಮ್ಮನ ವೇದಾಂತ ತತ್ತ್ವಸರಸಾ ಕನ್ನಡದಲ್ಲಿ ಮುದ್ರಣಗೊಂಡ ಮೊದಲ ಮಹಿಳಾಕೃತಿ.

ಕನ್ನಡ ಪತ್ರಿಕೋದ್ಯಮದಲ್ಲಿಯೂ ಇವರದು ಮಹತ್ತ್ವದ ಹೆಸರು. ಇವರು ಹವ್ಯಕ ಸುಬೋಧ ಎಂಬ ವಾರ ಪತ್ರಿಕೆಯನ್ನೂ (1885) ಹಿತೋಪದೇಶ (1888) ಎಂಬ ಮಕ್ಕಳ ಮಾಸಪತ್ರಿಕೆಯನ್ನೂ ಪ್ರಾರಂಭಿಸಿದರು. ಇವು ಆ ಕಾಲಕ್ಕೆ ಬಹಳ ಜನಪ್ರಿಯ ಪತ್ರಿಕೆಗಳೆನ್ನಿಸಿ ಕೊಂಡಿದ್ದವು. ನಿರ್ಭಿಡೆ ವ್ಯಕ್ತಿತ್ವದ ವೆಂಕಟರಮಣಶಾಸ್ತ್ರಿಯವರಿಂದ ಅಂದಿನ ಬ್ರಿಟಿಷರ ಆಡಳಿತ ನೀತಿ ಮತ್ತು ಅಧಿಕಾರಿಗಳ ದುರ್ವರ್ತನೆಗಳು ಕಟುಟೀಕೆಗೆ ಒಳಗಾದವು. ಅರಣ್ಯ ಇಲಾಖೆಯ ಅವ್ಯವಹಾರಗಳನ್ನೆಲ್ಲ ಬಯಲಿಗೆಳೆದಿದ್ದರಿಂದಾಗಿ ಪ್ರಾಯಶಃ ಇವರ ಮೇಲೆ ಖಟ್ಲೆ ಜರುಗಿ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಇವರಿಗೆ ಜೈಲು ಶಿಕ್ಷೆ ವಿಧಿಸಲ್ಪಟ್ಟಿತು. ಹೀಗೆ ರಾಜಕೀಯ ಕಾರಣಕ್ಕಾಗಿ ಶಿಕ್ಷೆಗೊಳಗಾದ ಕನ್ನಡ ಲೇಖಕರಲ್ಲಿ ವೆಂಕಟರಮಣಶಾಸ್ತ್ರಿಯವರೇ ಮೊದಲಿಗರು. ಕನ್ನಡ ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳನ್ನು ಮೊದಲು ಬಳಸಿದವರು ಇವರು. ತಮ್ಮ ಜೀವಿತದ ಕೊನೆಯ ಕೆಲವು ಕಾಲ ಪುಣೆಯಲ್ಲಿ ವೈದ್ಯಕೀಯ ವೃತ್ತಿ ನಡೆಸಿ, ಹುಟ್ಟೂರಿಗೆ ಮರಳಿ ಅನಂತರ ಅಲ್ಲಿಯೇ ನಿಧನರಾದರು. (ನೋಡಿ: ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ). (ಎಸ್.ಆರ್.ಎಸ್.)

**ಕರ್ಣ [1] (ಕಳಚುರಿ) :** ಕರ್ನಾಟಕದಲ್ಲಿ ಚಾಳುಕ್ಯರ ಆಶ್ರಯದಲ್ಲಿ ಆಳುತ್ತಿದ್ದ ಕಳಚುರಿ ದೊರೆಗಳಲ್ಲೊಬ್ಬ. ಒಂದನೆಯ ಬಿಜ್ಜಳನ (ಬಿಜ್ಜ) ಮಗ. ಕನ್ನಮ, ಕೃಷ್ಣರಾಜ ಎಂದೂ ಈತನನ್ನು ಸಂಬೋಧಿಸಲಾಗಿದೆ. 1067ರಲ್ಲಿ ಈತನ ಆಳಿಕೆ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ಮಂಗಳಿವೇಡದಿಂದ (ಈಗಿನ ಮಂಗಳವೇಡೆ) ಷೋಲಾಪುರ ಜಿಲ್ಲೆ ಅದರ ಸುತ್ತಮುತ್ತಣ ಪ್ರದೇಶಗಳನ್ನು ಈತ ಆಳುತ್ತಿದ್ದ. ಐವತ್ತು ಕದನಗಳಲ್ಲಿ ಕಾದಾಡಿ ಗೆದ್ದನೆಂದೂ ಹನ್ನೆರಡು ಮಂದಿ ದೊರೆಗಳನ್ನು ಕೊಂದು ತನ್ನ ರಾಜಧಾನಿಯನ್ನು ಶತ್ರುಗಳಿಂದ ರಕ್ಷಿಸಿದನೆಂದೂ ಇವನನ್ನು ಹೊಗಳಲಾಗಿದೆ. ಪರಮಾರರು, ಪೂರ್ವ ಚಾಳುಕ್ಯರು, ಚೋಳರು ಮುಂತಾದವರೊಂದಿಗೆ ಈತನ ಪ್ರಭುವಾದ ಒಂದನೆಯ ಸೋಮೇಶ್ವರ ಮಾಡಿದ ಕದನಗಳಲ್ಲಿ ಇವನೂ ಭಾಗವಹಿಸಿರಬೇಕೆಂದು ತೋರುತ್ತದೆ. ಈತ 1080ರವರೆಗೂ ರಾಜ್ಯವಾಳಿದ. (ನೋಡಿ: ಕಳಚುರಿವಂಶ). *

**ಕರ್ಣ [2] (ಸೇವುಣ) :** ದೇವಗಿರಿಯ ಸೇವುಣ ರಾಜವಂಶದ ಐದನೆಯ ಭಿಲ್ಲಮನ (1173-92) ತಂದೆಯೆಂದು ಹೇಳಲಾಗಿದೆ. ಇವನ ವಿಷಯವಾಗಿ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ. ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿ ಗ್ರಂಥದಲ್ಲಿರುವ ಸೇವುಣರ ರಾಜಪ್ರಶಸ್ತಿಯಲ್ಲಿ ಇವನ ಹೆಸರು ಕಾಣಬರುವುದಿಲ್ಲ. ಆದರೆ ಐದನೆಯ ಭಿಲ್ಲಮನಿಂದಲೇ ಹೊರಡಿಸಲಾದ ಗದಗ ಶಾಸನದಲ್ಲಿ ಈತ ಭಿಲ್ಲಮನ ತಂದೆಯೆಂದು ಹೇಳಿದೆ. ಮೇತಿ ಮತ್ತಿತ್ತರ ಶಾಸನಗಳಲ್ಲಿ ಇವನ ಹೆಸರು ಕೃಷ್ಣ ಎಂದಿದೆ. ಈ ಎಲ್ಲ ಅಂಶಗಳನ್ನೂ ಗಮನಿಸಿ ಕೆಲವು ಚರಿತ್ರಕಾರರು ಕರ್ಣನನ್ನು ಸೇವುಣರ ವಂಶವೃಕ್ಷದಲ್ಲಿ ಕೈಬಿಟ್ಟಿದ್ದಾರೆ. ಕರ್ಣ ರಾಜ್ಯಭಾರ ಮಾಡಿದಂತೆ ಕಾಣುವುದಿಲ್ಲ. ಎರಡನೆಯ ಮಲ್ಲುಗಿಯ ಅನಂತರ ಐದನೆಯ ಭಿಲ್ಲಮ ರಾಜ್ಯಭಾರ ಮಾಡಿದನೆಂದು ಸ್ಪಷ್ಟವಾಗುತ್ತದೆ. ಭಿಲ್ಲಮ ಮಲ್ಲುಗಿಯ ಮಗನೆಂದೇ ಪಿ.ಬಿ.ದೇಸಾಯಿ ಸಂಪಾದಿತ ಎ ಹಿಸ್ಟರಿ ಆಫ್ ಕರ್ನಾಟಕದಲ್ಲೂ ಹೇಳಲಾಗಿದೆ. ಕರ್ಣ ರಾಜ್ಯಭಾರವನ್ನು ವಹಿಸಿಕೊಳ್ಳುವ ಮೊದಲೇ ಮರಣ ಹೊಂದಿರಬೇಕು ಎಂಬುದೂ ಒಂದು ಊಹೆ (ನೋಡಿ: ಸೇವುಣ ವಂಶ). *

**ಕರ್ಣಪಾರ್ಯ :** ಹನ್ನೆರಡನೆಯ ಶತಮಾನದ ಜೈನಕವಿ. ನೇಮಿನಾಥ ಪುರಾಣ (ಸು.1160-70), ವೀರೇಶಚರಿತೆ ಎಂಬ ಗ್ರಂಥಗಳ ಕರ್ತೃ. ಕೊನೆಯದು ಉಪಲಬ್ಧವಿಲ್ಲ. ಕವಿಗೆ ಕರ್ಣಪ, ಕಣ್ಣಪ, ಕಣ್ಣಮಯ್ಯ, ಕನ್ನಮಯ್ಯ, ಕಣ್ಣಮ ಎಂಬ ಹೆಸರುಗಳೂ ಇದ್ದಂತೆ ತಿಳಿದುಬರುತ್ತದೆ. ಕೊಲ್ಲಾಪುರದ ಶಿಲಾಹಾರರಾಜ ವಿಜಯಾದಿತ್ಯನ (1140-1175) ಕರಣಾಗ್ರಣಿಯೂ ಅಮಾತ್ಯನೂ ಆಗಿದ್ದ ಲಕ್ಷ್ಮೀಧರ ಈತನ ಆಶ್ರಯದಾತ. ಮಲಧಾರಿದೇವರ ಶಿಷ್ಯ ಕಲ್ಯಾಣಕೀರ್ತಿ ಇವನ ಗುರು. ಭವ್ಯವನಜವನ ಮಾರ್ತಾಂಡ, ಪರಮಜಿನಮತ ಕ್ಷೀರವಾರಾಶಿಚಂದ್ರ, ಸಹಜಕವಿತಾರಸೋದಯ ಎಂಬುವು ಇವನ ಬಿರುದುಗಳು. ಪೂರ್ವ ಕವಿಗಳಲ್ಲಿ ಪಂಪ, ಪೊನ್ನ, ರನ್ನ, ನಾಗಚಂದ್ರರನ್ನು ಸ್ತುತಿಸಿದ್ದಾನೆ. ಈತನನ್ನು ರುದ್ರಭಟ್ಟ, ಆಂಡಯ್ಯ, ಮಂಗರಸ, ದೊಡ್ಡಯ್ಯ ಹೆಸರಿಸಿದ್ದಾರೆ. ಕವಿಯ ಕಾಲನಿರ್ಣಯದ ಬಗೆಗೆ ವಿದ್ವಾಂಸರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ.

ನೇಮಿನಾಥಪುರಾಣ 14 ಆಶ್ವಾಸ ಹಾಗೂ 2,242 ಪದ್ಯಗಳುಳ್ಳ ಚಂಪೂ ಗ್ರಂಥ. ದೊರೆತಿರುವ ಕನ್ನಡ ನೇಮಿನಾಥಪುರಾಣಗಳಲ್ಲಿ ಇದೇ ಮೊದಲನೆಯದು ಹಾಗೂ ಸಮಗ್ರ ಸ್ವರೂಪದ್ದು. 22ನೆಯ ತೀರ್ಥಂಕರ ನೇಮಿನಾಥನ ಚರಿತೆ ಕಾವ್ಯವಸ್ತು. ಜೊತೆಗೆ ಹರಿವಂಶ ಕುರುವಂಶಗಳ ಕಥೆಯೂ ತನ್ನದೇ ಆದ ಹರಹಿನಲ್ಲಿ ನಿರೂಪಿತವಾಗಿದ್ದು ಸಹೃದಯರನ್ನು ಆಕರ್ಷಿಸುತ್ತದೆ. ಕೃತಿಯ ಆರಂಭದಲ್ಲಿ ಜೈನಯತಿಗಳ ಸ್ತವನ, ಪಂಪಾದಿ ಪೂರ್ವಕವಿಗಳ ಸ್ಮರಣೆ, ವಿಜಯಾದಿತ್ಯನ ಪ್ರಸ್ತಾಪ ಮುಂತಾದುವಿದ್ದರೆ, ಕೊನೆಯ ಭಾಗದಲ್ಲಿ ಆಶ್ರಯದಾತ ಲಕ್ಷ್ಮೀಧರಾಮಾತ್ಯ ಮತ್ತು ಅವನ ಹೆಂಡತಿಯ ಪ್ರಸ್ತಾಪವಿದೆ.

ಸಾಂಪ್ರದಾಯಿಕ ಶೈಲಿಯ ರೂಢಿ ರಿವಾಜುಗಳಲ್ಲಿಯೇ ತನ್ನ ಕೃತಿಯನ್ನಾರಂಭಿಸಿರುವ ಕರ್ಣಪಾರ್ಯ ತನಗೆ ಮೊದಲಿನ ಸಂಸ್ಕೃತ ಮತ್ತು ಪ್ರಾಕೃತ ನೇಮಿನಾಥ' ಪುರಾಣಗಳನ್ನೂ ಕನ್ನಡ ಜೈನಕವಿಗಳ ನೇಮಿಕಥಾಮೂಲಗಳಲ್ಲಿ ಕೆಲವನ್ನೂ ಅಧ್ಯಯನ ಮಾಡಿ, ಅವನ್ನು ಸಂದರ್ಭೋಚಿತವಾಗಿ ತಕ್ಕ ಪರಿಕರಗಳೊಡನೆ ಬಳಸಿಕೊಂಡಿದ್ದಾನೆ. ಹಾಗಾಗಿ ಕವಿ ಯಾವುದೇ ಒಂದು ನೇಮಿಕಥೆ'ಯನ್ನು ವಿಧೇಯ ರೀತಿಯಲ್ಲಿ ಅನುಸರಿಸುವ ಪರಿಪಾಠಕ್ಕೆ ಹೋಗದೆ ಈ ಮೂಲಾಂಶಗಳನ್ನು ಉಪಯೋಗಿಸಿಕೊಂಡು ತನ್ನದೇ ಆದ ಕಾವ್ಯವನ್ನು ರಚಿಸಿದ್ದಾನೆ ಎನ್ನಬಹುದು. ಜಿನಸೇನರ ಹರಿವಂಶಪುರಾಣ ಮತ್ತು ಚಾವುಂಡರಾಯನ ತ್ರಿಷಷ್ಟಿಶಲಾಕಪುರಾಣ ಇವನ್ನು ಹೆಚ್ಚಾಗಿ ಬಳಸಿಕೊಂಡಿರುವುದು ಕಾವ್ಯದಲ್ಲಿ

ಪರಿಸ್ಫುಟವಾಗಿ ಗೋಚರವಾಗುತ್ತದೆ. ಆದರೂ ಇವನದು ಸಮ್ಮಿಶ್ರ ಕಥಾರೀತಿ ಎಂದು ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ ನಡೆಸಿರುವ ಟಿ.ವಿ.ವೆಂಕಟಾಚಲಶಾಸ್ತ್ರೀ ಅವರು ಅಭಿಪ್ರಾಯಪಡುತ್ತಾರೆ. ಕವಿ ಜೈನಸಂಪ್ರದಾಯದ ಮೂಲಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದರೂ ವೈದಿಕ ಕಥಾಮಾರ್ಗದ ಹಲವಾರು ಆಕರ್ಷಕ ಅಂಶಗಳನ್ನಳವಡಿಸಿಕೊಂಡು ಕೃತಿಗೆ ಕಳೆ ಮತ್ತು ಕಥನಕಲೆಗೆ ಸ್ವಾರಸ್ಯವನ್ನು ದೊರಕಿಸಿಕೊಟ್ಟಿದ್ದಾನೆ. ಮೂಲ ಕಥೆಗಳಲ್ಲಿನ ಮತೀಯ ಹಾಗೂ ಧಾರ್ಮಿಕ ವಿವರಗಳನ್ನು ದೂರೀಕರಿಸಿ ಕಥೆಯನ್ನು ಆಕರ್ಷಕವಾಗಿ ಹೇಳುವುದಕ್ಕೆ ಹೆಚ್ಚು ಗಮನ ನೀಡಿರುವುದರಿಂದ ಇವನ ಕಥನ ಕಲೆ ತನ್ನದೇ ಆದ ಧಾಟಿ ಧೋರಣೆಗಳನ್ನು ರೂಢಿಸಿಕೊಂಡಿದೆ. ವರ್ಣನೆಗಳ ಲೋಲುಪತೆಗೆ ಒಳಗಾಗಿ ಅವನ್ನು ಸೇರಿಸುವ ಹೊಲಬಿಗೆ ಹೋಗದೆ, ಕಥೆಯ ಅಂಗೋಪಾಂಗಗಳನ್ನು ಮಾತ್ರ ಹದವರಿತು ವಿಸ್ತರಿಸುತ್ತ ಮುಂಬರಿಯುವುದರಿಂದ ಕೃತಿ ಕೇವಲ ಮೂಲಾನುಸರಣವಾಗದೆ ಗುಣದಲ್ಲಿ ಮೂಲವನ್ನೂ ಮೀರಿಸಿದೆ. ಚಾರುದತ್ತನ ವೃತ್ತಾಂತ, ಅಂಧಕವೃಷ್ಣಿಯ ಪೂರ್ವಜನ್ಮದ ವೃತ್ತಾಂತ, ವಿಂಧ್ಯಕ ವಾಗುರೆಯರ ಕಥೆ, ಸುಮುಖ ವೀರದತ್ತಶ್ರೇಷ್ಠಿಗಳ ಕಥೆ, ಪ್ರದ್ಯುಮ್ನ, ವಿದರ್ಭೆಯರ ವಿವಾಹ ಪ್ರಸಂಗ ಮುಂತಾದವುಗಳಲ್ಲಿ ಕವಿಯ ಕಥನ ಕೌಶಲ, ಸನ್ನಿವೇಶ ನಿರ್ಮಾಣ ಚಾತುರ್ಯ, ವಸ್ತುವಿನ್ಯಾಸ ಮತ್ತು ಪಾತ್ರಪರಿಕಲ್ಪನೆಗಳಲ್ಲಿ ತೋರುವ ಎಚ್ಚರ ಸುವಿದಿತವಾಗುತ್ತದೆ. ಇಂಥ ಪ್ರಸಂಗಗಳು ಕಥೆಗಳಾಗಿಯೇ ಅಚ್ಚುಕಟ್ಟಾಗಿ ಹರಳುಗಟ್ಟಿರುವುದರಿಂದ ನೇಮಿನಾಥಪುರಾಣ ಒಂದು ಕಥಾಗುಚ್ಛವೆನಿಸಿಕೊಂಡಿದೆ. ಪಾತ್ರರಚನೆಯಲ್ಲಿ ಕವಿ ತೋರುವ ಕುಸುರಿ ಕೆಲಸಕ್ಕೆ ನೇಮಿನಾಥನ ಪಾತ್ರ ಸೋಜ್ವಲ ಉದಾಹರಣೆಯಾಗಿದೆ. ಸರಳ ಶೈಲಿ, ಕಥೆಗಾರಿಕೆಯ ಕೌಶಲ, ಸನ್ನಿವೇಶ ರಚನೆ ಮುಂತಾದ ಗುಣಗಳನ್ನು ಮೈಗೂಡಿಸಿಕೊಂಡಿರುವ ನೇಮಿನಾಥಪುರಾಣ ಜೈನ ಚಂಪೂ ಕಾವ್ಯಗಳಲ್ಲಿ ಮಹತ್ತ್ವದ ಸ್ಥಾನ ಪಡೆದಿದೆ. (ಎನ್.ಎಸ್.ಟಿ.)

**ಕರ್ನಾಟಕ :** ಡಿ.ವಿ.ಗುಂಡಪ್ಪನವರು ಬೆಂಗಳೂರಿನಲ್ಲಿ ನಡೆಸುತ್ತಿದ್ದ ಇಂಗ್ಲಿಷ್ ದ್ವಿಸಾಪ್ತಾಹಿಕ. 1913ರಲ್ಲಿ ಪ್ರಾರಂಭವಾಯಿತು.ಆಗಿನ ಮೈಸೂರು ಸರ್ಕಾರದ ರೀತಿ ನೀತಿಗಳನ್ನು ಈ ಪತ್ರಿಕೆ ಧೈರ್ಯವಾಗಿ ಟೀಕಿಸುತ್ತಿತ್ತು. ಸರ್ಕಾರಕ್ಕೆ ಮತ್ತು ಪತ್ರಿಕೆಗೆ ಆಗಾಗ ಘರ್ಷಣೆಯಾಗುತ್ತಿದ್ದುದೂ ಉಂಟು.

ಕಾಬ್ ಎಂಬ ಬ್ರಿಟಿಷ್ ರೆಸಿಡೆಂಟ್ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿರುವ ಸಾರ್ವಜನಿಕ ಗ್ರಂಥಾಲಯದಲ್ಲಿ ಬಾಂಬೇಕ್ರಾನಿಕಲ್, ಇಂಡಿಯನ್ ಪೇಟ್ರಿಯಟ್ ಮೊದಲಾದ ಪತ್ರಿಕೆಗಳ ಜೊತೆಗೆ ಕರ್ನಾಟಕ ಪತ್ರಿಕೆಯೂ ಇದ್ದುದನ್ನು ನೋಡಿ ಕಿಡಿಕಿಡಿಯಾದನೆಂದು ಹೇಳಲಾಗಿದೆ. ಇದೊಂದು ವಿಷಪೂರಿತ ಪತ್ರಿಕೆಯೆಂದೂ ಇದನ್ನು ತರಿಸಕೂಡದೆಂದೂ ಆತನು ಸೂಚನೆ ನೀಡಿದ. ಪತ್ರಿಕೆ ಆ ಅವಮಾನವನ್ನು ಧೈರ್ಯವಾಗಿ ಎದುರಿಸಿತು. ಪರಕೀಯ ರೆಸಿಡೆಂಟನಿಗೆ ಸಂಸ್ಥಾನದ ವಿಷಯಗಳಲ್ಲಿ ಬಾಯಿಹಾಕಲು ಅಧಿಕಾರವಿಲ್ಲವೆಂದು ಅದು ಟೀಕಿಸಿತು. ರಾಜವಿರೋಧಿಯಾಗಿ ಬರೆಯುತ್ತಿದ್ದರಿಂದ ಅದು ದಿವಾನರ ಪತ್ರಿಕೆಯೆಂದು ಅರಮನೆಯವರು ಶಂಕಿಸಿದ್ದೂ ಉಂಟು. ಕರ್ನಾಟಕ ಪತ್ರಿಕೆ ತನಗೆ ತೋರಿದ್ದನ್ನು ನಿರ್ಭಯವಾಗಿ ಬರೆಯಿತು. ಇದರಿಂದ ಆಗಿನ ದಿವಾನರು ಪತ್ರಿಕೆಯ ಸಂಪಾದಕರನ್ನು ಆಗಾಗ್ಗೆ ಕರೆಸಿಕೊಂಡು ಸಲಹೆ ಕೇಳುತ್ತಿದ್ದರು. ಬಿಗಿಯಾದ ವೃತ್ತಪತ್ರಿಕಾ ಕಾನೂನು ಜಾರಿಯಲ್ಲಿದ್ದ ಕಾಲವದು. ಈ ಪತ್ರಿಕೆಯನ್ನು ಮುಟ್ಟುಗೋಲು ಹಾಕಬೇಕೆಂದು ಹಲವು ಕಡೆಯಿಂದ ಒತ್ತಾಯ ಬಂದಿತ್ತಾದರೂ ಆಗಿನ ದಿವಾನರು ಪತ್ರಿಕೆಯನ್ನು ಸಹಾನುಭೂತಿಯಿಂದ ನೋಡುತ್ತಿದ್ದರು.ಕರ್ನಾಟಕ ಪತ್ರಿಕೆಯ ಪ್ರಕಟಣೆ ನಿಂತದ್ದು 1922-23ರ ಸುಮಾರಿನಲ್ಲಿ. ಆಗ ಅದಕ್ಕೆ ಚಂದಾದಾರರಿಂದ ಬರಬೇಕಾದ್ದ ಬಾಕಿಯ ಮೊತ್ತ ಸು.8000ರೂಪಾಯಿ *

**ಕರ್ನಾಟಕ ಕೇಸರಿ :** ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. 1928ರ ಜುಲೈ ತಿಂಗಳಿನಲ್ಲಿ ಪ್ರಾರಂಭವಾಗಿ ಎರಡು ವರ್ಷ ನಡೆಯಿತು.ಸಂಪಾದಕರು ಮಂಜೇಶ್ವರ ಅನಂತರಾವ್. ಇದರಲ್ಲಿ ಕಥೆ, ಕವನ, ಪ್ರಬಂಧ, ನಾಟಕ, ಲೇಖನ, ಸಂಶೋಧನೆ, ಇತಿಹಾಸ ಮುಂತಾದ ವಿವಿಧ ಪ್ರಕಾರಗಳ ಲೇಖನಗಳಿದ್ದು, ಪತ್ರಿಕೆಯುಲ್ಲಿ 24 ಪುಟಗಳಿರುತ್ತಿದ್ದವು.ಬಿಡಿ ಸಂಚಿಕೆಯ ಬೆಲೆ ನಾಲ್ಕಾಣೆ; ವಾರ್ಷಿಕ ಚಂದಾ ಎರಡೂವರೆ ರೂಪಾಯಿ.ಮೊದಲ ಪುಟದಲ್ಲಿ ಸಾಮಾನ್ಯವಾಗಿ ಕವಿತೆಯೊಂದು ಪ್ರಕಟವಾಗುತ್ತಿತ್ತು. ಅದರ ಬದಿಯ ಪುಟ ಪ್ರಾಚೀನ ದೇವಾಲಯಗಳ ಚಿತ್ರಗಳಿಗೆ ಮೀಸಲು.



ಎಂ.ಗೋವಿಂದ ಪೈ ಅವರ ಲಕ್ಷ್ಮೀಶನ ಕಾಲ ವಿಚಾರ, ಶಿವರಾಮ ಕಾರಂತರ ವಿಜಯನಗರಕ್ಕೆ ಸಂಬಂಧಿಸಿದ ಲೇಖನಮಾಲೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ನಿಜಗಲ್ಲಿನ ರಾಣಿ ಮೊದಲಾದ ಹಲವಾರು ಸಂಶೋಧಕ ಚಾರಿತ್ರಿಕ ಲೇಖನಗಳು ಈ ಪತ್ರಿಕೆಯಲ್ಲಿ ಬೆಳಕು ಕಂಡವು. ಐರೋಡಿ ಶಿವರಾಮಯ್ಯ, ಹೊಸಕೆರೆ ಚಿದಂಬರಯ್ಯ, ಉಗ್ರಾಣ ಮಂಗೇಶರಾವ್, ಪಾಂಡೇಶ್ವರ ಗಣಪತಿರಾವ್, ಕಡೆಂಗೋಡ್ಲು ಶಂಕರಭಟ್ಟ, ಮುಚ್ಚಿಮನೆ ಶಂಕರನಾರಾಯಣರಾವ್, ಬೆಳ್ಳೆ ರಾಮಚಂದ್ರರಾವ್ ಮೊದಲಾದವರ ಲೇಖನಗಳಿರುತ್ತಿದ್ದುವು. ಪುತ್ತೂರಿನ ಹರಿಹರ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದ ಈ ಮಾಸಪತ್ರಿಕೆಯ ಪ್ರಸಾರ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಿದ್ದು ಆ ಭಾಗದ ಜನಪ್ರಿಯ ಪತ್ರಿಕೆಯೆನಿಸಿತ್ತು. (ಎಸ್.ವಿ.ಪಿ.)

**ಕರ್ನಾಟಕ ಭಾಷೋಜ್ಜೀವಿನಿ ಸಭಾ :** 18ನೆಯ ಶತಮಾನದ ಕೊನೆಯ ಭಾಗದಲ್ಲಿ ಮೈಸೂರಿನಲ್ಲಿ ಕನ್ನಡದ ಅಭಿವೃದ್ಧಿಗೆಂದೇ ಸ್ಥಾಪಿತವಾದ (1887) ಒಂದು ಸಂಘ. ಚಾಮರಾಜ ಒಡೆಯರ್ ಇದರ ಸ್ಥಾಪಕರು. ಇವರ ರಾಜ್ಯಾಭಿಷೇಕ 1881 ಮಾರ್ಚ್ 1ರಂದು ಜರುಗಿತು. ಆ ಬಳಿಕ ಇವರು ಹಲವು ಸಾಂಸ್ಕೃತಿಕ, ಸಾರ್ವಜನಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮಹಾರಾಜ ಕಾಲೇಜಿನ ಪ್ರಗತಿ, ಸ್ತ್ರೀ ವಿದ್ಯಾಭ್ಯಾಸ, ಸಂಸ್ಕೃತ-ಕನ್ನಡಗಳ ಪೋಷಣೆ ಇವರ ಉದ್ದೇಶವಾಗಿತ್ತು. ಸಂಸ್ಕೃತ ಭಾಷೆ-ವಿದ್ಯಾಭ್ಯಾಸಗಳ ಪುನರುಜ್ಜೀವನಕ್ಕೆ ಸರಸ್ವತೀ ಪ್ರಾಸಾದವೆಂಬ ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಿದರು. ಯುವಕರ, ವಿದ್ಯಾರ್ಥಿಗಳ ಜ್ಞಾನವಿಕಾಸಕ್ಕೆ ಇಂಗ್ಲಿಷ್ ವಿದ್ಯೆಯೊಂದೇ ಸಾಲದು, ಭಾರತೀಯ ಭಾಷೆ ಸಂಸ್ಕೃತಿಗಳ ತಿಳಿವಳಿಕೆಯೂ ಅಗತ್ಯವೆಂಬುದು ಒಡೆಯರ ಅಭಿಪ್ರಾಯವಾಗಿತ್ತು. ಪಾಶ್ಚಾತ್ಯ ವಿದ್ಯೆ ಕನ್ನಡದ ಮೂಲಕ ದೊರೆಯಬೇಕು ಪಾಶ್ಚಾತ್ಯ ಜ್ಞಾನಶಾಖೆಗಳ ಅಧ್ಯಯನ-ಬೋಧನೆ ಕನ್ನಡದಲ್ಲಿ ನಡೆಯಬೇಕು ಎಂಬ ಉದ್ದೇಶದಿಂದ ಇವರು ಕರ್ನಾಟಕ ಭಾಷೋಜ್ಜೀವಿನಿ ಸಭಾದ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿದರು. ಈ ಸಭೆ ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತುಗಳಿಗಿಂತ ಹಳೆಯದು. ಇದರ ಚಟುವಟಿಕೆಗಳಲ್ಲಿ ಎಂ.ಶಾಮರಾವ್ ಮುಂತಾದ ಮಹನೀಯರು ಪಾಲ್ಗೊಂಡಿದ್ದರು. (ಎನ್.ಎಸ್.ಟಿ.)

**ಕರ್ನಾಟಕ ಸಂಗೀತ :** ದಕ್ಷಿಣಾದಿ ಸಂಗೀತ ಎಂದೂ ಹೆಸರಿರುವ ಈ ಪದ್ಧತಿ ಭಾರತೀಯ ಸಂಗೀತದ ಎರಡು ಮುಖ್ಯ ಪ್ರಕಾರಗಳಲ್ಲಿ ಒಂದು. ಇನ್ನೊಂದು ಉತ್ತರಾದಿ (ಹಿಂದುಸ್ತಾನಿ). ಕರ್ನಾಟಕ ಸಂಗೀತ ಈಗ ದಕ್ಷಿಣ ಕರ್ನಾಟಕ ಮತ್ತು ಪಕ್ಕದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳಗಳಲ್ಲಿ ವಿಶೇಷವಾಗಿ ಪ್ರಚಾರದಲ್ಲಿದೆ. ಕನ್ನಡ, ಸಂಸ್ಕೃತ, ತೆಲುಗು, ತಮಿಳು ಮುಂತಾದ ಎಲ್ಲ ಭಾಷೆಗಳ ಸೇವೆಯನ್ನೂ ಪಡೆದು, ಗಾಯನ, ವಾದನ, ನಾಟ್ಯ, ನರ್ತನ, ರಸಭಾವ, ಅಲಂಕಾರ, ಛಂದಸ್ಸು, ಧ್ರುವಗಾನ ಮೊದಲಾದ ಎಲ್ಲಾ ಅಂಗಗಳೊಡನೆ ಬೆಳೆದಿರುವ ಈ ಸಂಗೀತ

ಪದ್ಧತಿಗೆ ಕನ್ನಡಿಗರ ಕೊಡುಗೆ ಪ್ರಮುಖವಾದುದು. ಕರ್ನಾಟಕ ಸಂಗೀತ ಶಾಸ್ತ್ರಜ್ಞರ ಕಾಣಿಕೆ, ಪ್ರಾಚೀನ ಕಾಲದಿಂದ ಈ ನಾಡಿನಲ್ಲಿ ದೊರೆತ ವಿಶೇಷ ಪ್ರೋತ್ಸಾಹ ಇವು ಕರ್ನಾಟಕ ಸಂಗೀತ ರೂಪುಗೊಳ್ಳಲು ಮುಖ್ಯ ಕಾರಣ. ಇದರಿಂದಲೇ ಈ ಪ್ರಕಾರಕ್ಕೆ ಕರ್ನಾಟಕದ ಹೆಸರು ಜೊತೆಗೂಡಿಕೊಂಡಿದೆ.

**ಉಗಮ-ವಿಕಾಸ :** ಸಾಮವೇದದಿಂದ ಆರಂಭವಾಗಿ ದತ್ತಿಲ, ಕೋಹಿಲ, ಭರತ ಮೊದಲಾದವರ ಗ್ರಂಥಗಳಲ್ಲಿ ಶಾಸ್ತ್ರೀಯವಾಗಿ ನಿರೂಪಿತವಾಗಿರುವ ಸಂಗೀತ ಪದ್ಧತಿ; ಭಾರತೀಯ ಸಂಗೀತ ಪದ್ಧತಿಗಳಿಗೆ ಆಧಾರವಾಗಿದೆ. ಬಹುಶಃ ದಕ್ಷಿಣ ಭಾರತದಲ್ಲಿಯೂ ಸ್ಥಳೀಯ ಸಂಗೀತ ರೀತಿಯೊಂದು ಬಳಕೆಯಲ್ಲಿದ್ದು ಇದನ್ನೂ ಒಳಗೊಂಡು ಮುಂದಿನ ಭಾರತೀಯ ಸಂಗೀತ ಮಾರ್ಗ ಬೆಳೆದಂತೆ ತೋರುತ್ತದೆ. ಉದಾಹರಣೆಗೆ ಭರತನ ನಾಟ್ಯಶಾಸ್ತ್ರದಲ್ಲಿ ಕ್ರಿ.ಶ. ಸು.4ನೆಯ ಶತಮಾನ ಗಾಯನ ವಾದನ ರಸ ಅಲಂಕಾರ ಮುಂತಾದ ಎಲ್ಲ ಸಂಗೀತಗಳಿಗೂ ಸಾಮಾನ್ಯವಾದ ವಿಷಯಗಳಿದ್ದರೆ ಸು.4-5ನೆಯ ಶತಮಾನದಲ್ಲಿದ್ದ ಮತಂಗನ ಬೃಹದ್ದೇಶೀ ಎಂಬ ಪ್ರಮಾಣ ಗ್ರಂಥ ದಕ್ಷಿಣ ಭಾರತದ ಸಂಗೀತವನ್ನು ವಸ್ತುವಾಗಿ ಗ್ರಹಿಸಿ, ಭರತ ಹೇಳುವ ಸಂಗೀತ ಜಾತಿಗಳ ಬದಲು ರಾಗ ಸಂಗೀತದ ವಿಷಯವನ್ನು ಮೊಟ್ಟಮೊದಲಿಗೆ ಪ್ರತಿಪಾದಿಸುತ್ತದೆ. ರಾಗಗಳನ್ನು ಶುದ್ಧ, ಸಂಕೀರ್ಣವೆಂದು ವಿಭಾಗ ಮಾಡಿ ಶ್ರುತಿ, ಸ್ವರ, ವರ್ಣ, ಅಲಂಕಾರ ಮುಂತಾದ ಹಲವು ವಿವರಗಳನ್ನು ಮತಂಗ ನಿರೂಪಿಸಿದ್ದಾನೆ. ಅನೇಕ ವಾದ್ಯಗಳ ವಿಚಾರವಾಗಿ ತುಂಬ ಸ್ವಾರಸ್ಯವಾದ ವಿವರಗಳನ್ನು ನೀಡುತ್ತಾನೆ. ಬಹುಶಃ ಇವನು ಕನ್ನಡ ನಾಡಿನವನು. ಇವನ ಗ್ರಂಥದಲ್ಲಿ ಕನ್ನಡ ಪ್ರಬಂಧಗಳನ್ನೂ ಹೇಳಿದೆ.

ಕರ್ನಾಟಕದಲ್ಲಿ ಬಹು ಹಿಂದಿನಿಂದಲೂ ಸಂಗೀತಕ್ಕೆ ವಿಶೇಷವಾದ ಮನ್ನಣೆಯಿತ್ತೆಂಬುದು ಹಲವು ಶಾಸನ ಸಾಹಿತ್ಯ ಉಲ್ಲೇಖಗಳಿಂದ ತಿಳಿಯುತ್ತದೆ. ತಾಳಗುಂದ ಶಾಸನದಲ್ಲಿ ಕದಂಬ ಶಾಂತಿವರ್ಮನ ವೈಭವವನ್ನು ವರ್ಣಿಸುತ್ತಾ ಅವನ ಮನೆ ಸಂಗೀತದ ಧ್ವನಿಯಿಂದ ತುಂಬಿಹೋಗಿದ್ದಿತೆಂದು ಹೇಳಿದೆ (ನಾನಾ ವಿಧ ದ್ರವಿಣಸಾರಸಮುಚ್ಚಯೇಷು ದ್ವಿಪೇಂದ್ರಮದವಾಸಿಕಗೋಪುರೇಷು ಸಂಗೀತವಲ್ಗು ನಿನದೇಷು ಗೃಹೇಷು). ಪಟ್ಟದಕಲ್ಲಿನ ದೇವಸ್ಥಾನದ ಕಂಬದ ಮೇಲಿನ ಸು.850ರ ಶಾಸನವೊಂದರಲ್ಲಿ ಒಬ್ಬ ಶ್ರೇಷ್ಠ ನಟನ ಪ್ರಶಂಸೆ ಇದೆ. ಸ್ತ್ರೀಯರ ವಿದ್ಯಾಭ್ಯಾಸದಲ್ಲಿ ಸಂಗೀತ, ನರ್ತನ ಮುಂತಾದ ಕಲೆಗೆ ಹೆಚ್ಚು ಪ್ರಾಧ್ಯಾನವಿದ್ದುದು ತಿಳಿಯಬರುತ್ತದೆ. ಉದಯಸಿಂಹ ಎಂಬವನು ಕದಂಬ ಗೀತ ವಾದ್ಯ ನೃತ್ಯ ವೇಣು ವೀಣಾರವ ಸಂಗತ ಪಾಟಕ ವಿಜೃಂಭಿತ ಆಸ್ಥಾನ ಕಾವ್ಯನಾಟಕ ವಿಚಾರ ಪ್ರಸಂಗನಾಗಿದ್ದನೆಂದು 1017ರ ಒಂದು ಶಾಸನ ಹೊಗಳಿದೆ. ಹೊಯ್ಸಳ ವಿಷ್ಣುವರ್ಧನನ ಪತ್ನಿ ಶಾಂತಲೆಯನ್ನು ಅನೇಕ ಶಾಸನಗಳು ಸಂಗೀತವಿದ್ಯಾಸರಸ್ವತಿ, ವಿಚಿತ್ರನರ್ತನ ಪಾತ್ರ ಶಿಖಾಮಣಿ, ಸಕಳಕಳಾಗಮಾನೂನೆ, ಗೀತವಾದ್ಯನೃತ್ಯಸೂತ್ರಧಾರೆ ಎಂದು ವರ್ಣಿಸಿವೆ. ಹಲವು ಅಗ್ರಹಾರಗಳ ಮಹಾಜನರು ಸಂಗೀತಕಲಾ ನಿಪುಣರಾಗಿದ್ದುದನ್ನೂ ದೇವಾಲಯಗಳಲ್ಲಿ ಗೀತವಾದ್ಯ ನೃತ್ಯದವರಿಗಾಗಿ ದತ್ತಿಗಳನ್ನು ಕೊಟ್ಟದ್ದನ್ನೂ ಶಾಸನಗಳಲ್ಲಿ ಹೇಳಿದೆ.

ಪಂಪ, ಪೊನ್ನ, ರನ್ನ,ಜನ್ನ ಮೊದಲಾದವರು ರಚಿಸಿರುವ ಕನ್ನಡ ಸಾಹಿತ್ಯ ಗ್ರಂಥಗಳಲ್ಲಿ ಸಂಗೀತ ಮತ್ತು ನೃತ್ಯಗಳ ವರ್ಣನೆಗಳು ಹೇರಳವಾಗಿ ದೊರಕುತ್ತವೆ. ಪಂಪನ ಆದಿಪುರಾಣದಲ್ಲಿ ವಾದ್ಯಗಳ ವರ್ಣನೆ, ನೃತ್ಯದ ವರ್ಣನೆಗಳು ಸುಂದರವಾಗಿವೆ. ಪೊನ್ನನ ಶಾಂತಿಪುರಾಣದಲ್ಲಿ ಅಮರಿಯರ ನರ್ತನ ಅಪೂರ್ವ ಸಂಗೀತದಿಂದ ಕೂಡಿತ್ತೆಂಬ ಹೇಳಿಕೆಯಿದೆ. ರನ್ನನ ಅಜಿತಪುರಾಣದಲ್ಲಿ ಇಂದ್ರಜಿನಶಿಶುವಿನ ಪರಮೋತ್ಸವವನ್ನು ಮಾಡಿದ ಸಂದರ್ಭದಲ್ಲಿ ನಡೆದ ನೃತ್ಯ ನಾನಾವಿಧ ಗೀತವಾದ್ಯಗಳೊಡನೆ ಶೃಂಗಾರಾದಿ ನವರಸಗಳಿಂದ ಕೂಡಿದ್ದು ಸಪ್ತ ಸ್ವರಗಳನ್ನು ನಾನಾ ಭೇದಗಳಿಂದ ಧ್ವನಿತವಾಗುವಂತೆ ಮಾಡಿ ದಿಶಾವನಿತೆಯರು ಶೋಭಿಸುತ್ತಿದ್ದರೆಂದು ವರ್ಣಿಸಿದೆ. ಅಭಿನವಪಂಪನ ಮಲ್ಲಿನಾಥ'ಪುರಾಣದಲ್ಲಿ ಶರತ್ಸಮಯ ವರ್ಣನೆಯಲ್ಲಿ ವೇಣುಗಾನಲೋಲನು ತ್ರಿಸ್ಥಾನಶುದ್ಧಿಯಿಂದ ಹಾಡಿದಾಗ ಸಭಿಕರು ಮೈ ಮರೆತು ರಾಗರಸದಲ್ಲಿ ತಲ್ಲೀನರಾದಂತೆ ವರ್ಣಿಸಿದೆ. ಕಣ್ಣಪ್ಪ ಹಾಡುತ್ತ, ಕುಣಿಯುತ್ತ ಈಶ್ವರನನ್ನು ಕೂಗಿದಂತೆ ಹರಿಹರ ವರ್ಣಿಸಿದ್ದಾನೆ. ನೇಮಿಚಂದ್ರನ ಲೀಲಾವತೀಪ್ರಬಂಧದಲ್ಲಿ ಓರ್ವ ಪ್ರೌಢೆ ತಾಳಲಯ ಗಳಿಗನುಗುಣವಾಗಿ ಮನೋಹರವಾಗಿ ವೀಣೆಯನ್ನು ನುಡಿಸಿದಳೆಂದು ವರ್ಣಿಸಿದೆ. ಅಗ್ಗಳನ ಚಂದ್ರಪ್ರಭಪುರಾಣದಲ್ಲಿ ಗಾನವಿದ್ಯಾವಿಶಾರದನೊಬ್ಬ ತಾಳಸ್ವರಲಯಗಳಿಗನುಗುಣವಾಗಿ ವೀಣೆಯ ನಾದಕ್ಕನುಸಾರವಾಗಿ ಕರ್ಣಾನಂದಕರವಾಗಿ ಹಾಡಿದನೆಂದೂ ಸಂಗೀತದ ಗಂಧವನ್ನೇ ಅರಿಯದವರೂ ಸಂಗೀತ ಕಚೇರಿಯನ್ನು ಪ್ರವೇಶಿಸಿದ ಕೂಡಲೇ ತಮಗೂ ಹಾಡುವ ಮನೋಭಾವವನ್ನುಂಟುಮಾಡುವಂತೆ ಅಲ್ಲಿಯ ಸಂಗೀತವಿತ್ತೆಂದೂ ವಿವರಿಸಿದೆ. ಜನ್ನನ ಅನಂತನಾಥ' ಪುರಾಣದಲ್ಲೂ ಸಂಗೀತದ ಬಗ್ಗೆ ಹೇಳಿಕೆಯಿದೆ. ಸೋಮರಾಜ ತನ್ನ ಉದ್ಭಟಕಾವ್ಯದಲ್ಲಿ ಗಾನವಿಶಾರದೆಯರು ಗಾನ ಮಾಡಿದುದನ್ನು ವರ್ಣಿಸಿದ್ದಾನೆ. ಗಾಯಕಿಯರು ಮನೋಹರವಾಗಿ ಹಾಡಲುದ್ಯುಕ್ತರಾಗಿ ನಾಟಿ, ಗೌಳ, ಸಾಳಗ, ಶ್ರೀ ಮೊದಲಾದ ನಾನಾವಿಧ ರಾಗ ಸಮೂಹದಿಂದ ಹಾಡಿ ಅಲ್ಲಿ ನೆರೆದಿದ್ದವರ ಮನ ಮೆಚ್ಚಿಸಿದರೆಂದು ಹೇಳಿದೆ.

ಪ್ರಾಚೀನ ಕರ್ನಾಟಕದಲ್ಲಿ ಸಂಗೀತ ಜನಪ್ರಿಯವಾಗಿದ್ದು ವಿಶೇಷ ಪ್ರೋತ್ಸಾಹವನ್ನು ಗಳಿಸಿತ್ತೆಂಬುದನ್ನು ಶಾಸನಗಳು ಮತ್ತು ಸಾಹಿತ್ಯದ ಉಲ್ಲೇಖಗಳು ಸೂಚಿಸುತ್ತವೆ. ಇಂಥ' ವಾತಾವರಣದಲ್ಲಿ ಅಂದಿನ ಸಂಗೀತದ ಶಾಸ್ತ್ರೀಯ ನಿರೂಪಣೆ ಮತ್ತು ವ್ಯವಸ್ಥೆ ಅನೇಕ ವಿದ್ವಾಂಸರಿಂದ ನೆರವೇರಿತು. ಸೋಮೇಶ್ವರ ಮಾನಸೋಲ್ಲಾಸದಲ್ಲಿ ಆ ಕಾಲದಲ್ಲಿ ಈ ದೇಶದಲ್ಲಿ ಪ್ರಚಲಿತವಾಗಿದ್ದ ಸಂಗೀತದ ಪ್ರಸ್ತಾಪವಿದೆ. ಇದರಲ್ಲಿ ವಿನೋದವಿಂಶತಿಯಮೂರು ಅಧ್ಯಾಯಗಳಲ್ಲಿ ಸಂಗೀತಶಾಸ್ತ್ರದ ವಿವರಣೆಗಳಿವೆ. ಪ್ರಾದೇಶಿಕ ರಾಗಗಳು, ಅವುಗಳ ಲಕ್ಷಣಗಳು ಮತ್ತು ಅನೇಕ ಪ್ರಬಂಧಗಳನ್ನು ದೃಷ್ಟಾಂತಗಳೊಡನೆ ವಿವರಿಸಿಲಾಗಿದೆ. ಸೋಮೇಶ್ವರನ ಮಗ ಎರಡನೆಯ ಜಗದೇಕಮಲ್ಲ ತನ್ನ ಸಂಗೀತಚೂಡಾಮಣಿ ಎಂಬ ಗ್ರಂಥದಲ್ಲಿ ನೂರಕ್ಕೂ ಮಿಗಿಲಾಗಿ ರಚನಾರೂಪಗಳನ್ನು ವಿವರಿಸಿದ್ದಾನೆ. ಮತ್ತೊಂದು ಮೇರುಕೃತಿ ಶಾರ್ಙ್ಗದೇವನ ಸಂಗೀತ ರತ್ನಾಕರ. ಈತ ದೇವಗಿರಿಯ ಸೇವುಣ ದೊರೆ ಸಿಂಘಣನ (1199-1247) ಆಶ್ರಯದಲ್ಲಿ ಶ್ರೀಕರಣಿಕಾಗ್ರಣಿಯಾಗಿದ್ದ. ಈ ಗ್ರಂಥದಲ್ಲಿ ಸಂಗೀತದ ನಿಯಮಗಳನ್ನು ರೂಪಿಸಿದ್ದಾನೆ. ಈ ಗ್ರಂಥ ಹಿಂದಿನ ಕಾಲದ ಸಂಗೀತದ ಸ್ವರೂಪವನ್ನು ತಿಳಿಸುತ್ತದೆ. 74 ಪ್ರಬಂಧಗಳನ್ನು ವಿವರಿಸುವ ಈ ಸಂಗೀತ ರತ್ನಾಕರ ಭಾರತೀಯ ಪ್ರಾಚೀನ ಪ್ರಮಾಣಗ್ರಂಥಗಳಲ್ಲಿ ಅತಿ ಮುಖ್ಯವಾದುದು. ಈ ಕೃತಿ ಸಂಗೀತ ಶಾಸ್ತ್ರಕ್ಕೆ ಭದ್ರವಾದ ಬುನಾದಿ ಹಾಕಿತೆಂದರೆ ತಪ್ಪಾಗದು. ಶಾರ್ಙ್ಗದೇವನ ಸಂಗೀತ ರತ್ನಾಕರಕ್ಕೆ ಸುಧಾಕರವೆಂಬ ಟೀಕೆಯನ್ನು 1330ರ ಸುಮಾರಿಗಿದ್ದ ಸಿಂಹಭೂಪಾಲ ಬರೆದಿದ್ದಾನೆ. ಈ ದೇಶದಲ್ಲಿ ಸಂಗೀತಕ್ಕೆ ಇದ್ದ ವಿಶೇಷ ಪ್ರೋತ್ಸಾಹ ಹಾಗೂ ಜಗದೇಕಮಲ್ಲನಂಥ ಚಕ್ರವರ್ತಿಯೂ ಒಳಗೊಂಡಂತೆ ಹಲವು ಶಾಸ್ತ್ರಕಾರರ ಪರಿಶ್ರಮದಿಂದ ಕರ್ನಾಟಕ ದೇಶದಲ್ಲಿ ಒಂದು ವಿಶಿಷ್ಟ ಸಂಗೀತ ಪದ್ಧತಿ ಬೆಳೆಯಲು ಆರಂಭಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಈ ಸಂಗೀತ ಪದ್ಧತಿಯನ್ನೇ ಕರ್ನಾಟಕ ಸಂಗೀತ ಎಂದು ಕರೆದಿರುವುದು ಸಹಜ. ಹದಿನಾಲ್ಕನೆಯ ಶತಮಾನದಲ್ಲಿ ಕರ್ನಾಟಕದಲ್ಲಿದ್ದ ಒಬ್ಬ ಲಕ್ಷಣಕಾರ ಹರಿಪಾಲದೇವ (1309-80) 'ತದಪಿ ದ್ವಿವಿಧಂ ಪ್ರೋಕ್ತಂ ದಕ್ಷಿಣೋತ್ತರಭೇದತಃ | ಕರ್ಣಾಟಕಂ ದಕ್ಷಿಣೇ ಸ್ಯಾದ್ಧಿಂದುಸ್ತಾನೀ ತಥೋತ್ತರೇ' ಎಂದು ಸ್ಪಷ್ಟವಾಗಿ ಅಂದಿಗೆ ಕರ್ನಾಟಕ ಸಂಗೀತ ಎಂಬ ಪದ್ಧತಿ ರೂಢಿತವಾಗಿತ್ತೆಂದು ಹೇಳಿದ್ದಾನೆ.

ವಿಜಯನಗರದ ಅರಸರ ಕಾಲದಲ್ಲಿ ಕರ್ನಾಟಕ ಸಂಗೀತ ಸ್ಪಷ್ಟ ರೂಪುರೇಖೆಗಳೊಡನೆ ವಿಶಿಷ್ಟ ಆವಿಷ್ಕಾರಗಳೊಡನೆ ರೂಪು ತಳೆಯಿತು. ಹಿಂದಿನ ಕಾಲದಲ್ಲಿದ್ದ ಜನಮನ್ನಣೆ ಅದೇ ಧಾಟಿಯಲ್ಲಿ ಮುಂದುವರಿದಿದ್ದು ಮತ್ತು ಅಂದಿನ ದೊರೆಗಳ ವಿಶೇಷ ಪ್ರೋತ್ಸಾಹ ಈ ಮುನ್ನಡೆಗೆ ಕಾರಣ. ತತ್ಕಾಲೀನ ಸಾಹಿತ್ಯ ಗ್ರಂಥಗಳಲ್ಲಿ ಬರುವ ಹಲವು ಉಲ್ಲೇಖಗಳು ಸಂಗೀತ ಅಂದು ಜನಪ್ರಿಯವಾಗಿತ್ತೆಂಬುದನ್ನೂ ಶಾಸ್ತ್ರಬದ್ಧವಾಗಿತ್ತೆಂಬುದನ್ನೂ ಸೂಚಿಸುತ್ತವೆ. ಚಂದ್ರಶೇಖರ ಕವಿಯಿಂದ ರಚಿತವಾದ ಪಂಪಾಸ್ಥಾನವರ್ಣನಂ ಕಾವ್ಯದಲ್ಲಿ ಗಾಯಕರು ದಂಡಿಗೆಯನ್ನು ತೆಗೆದುಕೊಂಡು ಶಾರೀರಕ್ಕೆ ತಕ್ಕಂತೆ ಮೇಳೈಸಿ ಗ್ರಾಮ ಮೂರ್ಛನೆ ಪಂಚವಿಧಗಮಕಗಳನ್ನು ತ್ರಿಸ್ಥಾಯಿದಲ್ಲೂ ನೆಲೆಗೊಳಿಸಿ ರಂಜಿಸುವಂತೆ ರಾಗಾಲಾಪವನ್ನೂ ಅನೇಕ ತಾಳಗಳಿಗನು ಗುಣವಾಗಿ, ದೋಷ ರಹಿತವಾದ ರಾಗಗಳನ್ನೂ ಹಾಡಿದರೆಂಬುದರ ವರ್ಣನೆ,

ಪಕ್ಕವಾದ್ಯಗಳ ವರ್ಣನೆ, ಮದ್ದಳೆಯನ್ನು ನುಡಿಸುವ ಚಿತ್ರ ಮನೋಜ್ಞವಾಗಿ ನಿರೂಪಿತವಾಗಿದೆ. ಅನೇಕ ವಾದ್ಯಗಳ ವಾದನಕ್ರಮವನ್ನು ಈ ಗ್ರಂಥದಲ್ಲಿ ಮನನಾಟುವಂತೆ ವರ್ಣಿಸಿದೆ. ಸು.1500ರಲ್ಲಿ ನಿಜಗುಣಶಿವಯೋಗಿಯಿಂದ ರಚಿತವಾದ ವಿವೇಕ ಚಿಂತಾಮಣಿಯಲ್ಲಿ ಸ್ವರೋತ್ಪತ್ತಿಕ್ರಮ, ರಾಗೋತ್ಪತ್ತಿಲಕ್ಷಣ, ವಿಪಂಚಿ ಮೊದಲಾದ ವಿವಿಧ ವೀಣೆಗಳು, ಪ್ರಸಿದ್ಧ ರಾಗಗಳು ಮೊದಲಾದವುಗಳನ್ನು ಕುರಿತ ವಿವರಣೆಯಿದೆ. ನಾರದ ವೀಣೆಯಲ್ಲಿ ಹಲವಾರು ರಾಗಗಳನ್ನು ನುಡಿಸಿ ವಿಶ್ವೇಶ್ವರನನ್ನು ಕುರಿತು ಹಾಡಿದಂತೆ ವೀರಭದ್ರ ಕವಿಯ ವೀರಭದ್ರವಿಜಯದಲ್ಲಿ ವರ್ಣಿಸಿದೆ. ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣದಲ್ಲಿ ಶಂಭು ಅಂಧಕಾಸುರನ ಸ್ತೋತ್ರಕ್ಕೆ ಮೆಚ್ಚಿ ಅವನ ಬೇಡಿಕೆಯನ್ನು ಮನ್ನಿಸಿ ತಾಂಡವನೃತ್ಯವನ್ನಾಡಿದಾಗ ನಂದಿ ಬ್ರಹ್ಮಾದಿಗಳು ಮೃದಂಗ ತಾಳಗಳನ್ನೂ ನಾರದ ತುಂಬುರರು ವೀಣೆ ದಂಡಿಗಳನ್ನೂ ನುಡಿಸಿದರೆಂಬ ಸುಂದರ ವರ್ಣನೆಯಿದೆ. ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಪೂರ್ವನಾಟಕ ಸಂಧಿಯಲ್ಲಿ ಬರುವ ನಾಟ್ಯದವರ್ಣನೆ, ಉತ್ತರನಾಟಕ ಸಂಧಿಯಲ್ಲಿ ಬರುವ ಹಂಸಮಂಡಳೆ ಎಂಬ ನರ್ತನ, ತಾಂಡವವಿನಯ ಸಂಧಿಯಲ್ಲಿ ಬರುವ ವಿವಿಧ ವೇಷಗಳಿಂದ ಕೂಡಿದ ನೃತ್ಯಗಳ ವರ್ಣನೆಗಳು ಬಹು ಮನೋಜ್ಞವಾಗಿದ್ದು ಕರ್ಣಾಟಕ ಸಂಗೀತ ಮತ್ತು ನಾಟ್ಯಗಳ ಪ್ರೌಢಾವಸ್ಥೆಯನ್ನು ತಿಳಿಸುತ್ತವೆ. (ವಿ.ಎಸ್.ಎಸ್.)

ಕರ್ಣಾಟಕ ಸಿಂಹಾಸನಾಧೀಶ್ವರರಾದ ವಿಜಯನಗರದ ಅರಸರ ಕಾಲದಲ್ಲಿ ಅವರ ಪ್ರೋತ್ಸಾಹದ ನೆರಳಿನಲ್ಲಿ ಈ ನಾಡಿನ ಸಂಗೀತದ ಶಾಸ್ತ್ರೀಯ ನಿರೂಪಣೆ ಹೆಚ್ಚಿನ ಮಟ್ಟಿಗೆ ಸಾಗಿತಾಗಿ ಇದೇ ಈ ಸಂಗೀತ ಪ್ರಕಾರಕ್ಕೆ ಕರ್ನಾಟಕ ಸಂಗೀತ ಎಂಬ ಹೆಸರು ಬರಲು ಕಾರಣವಾಯಿತು ಎಂಬ ಊಹೆ ಇದೆ. ಅದರಲ್ಲೂ ಕರ್ಣಾಟಕ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ವಿದ್ಯಾರಣ್ಯರು ದಕ್ಷಿಣಾದಿ ಸಂಗೀತವನ್ನು ಪುನರುತ್ಥಾನ ಮಾಡಿದ ಮಹಾಮಹಿಮರು ಸಂಗೀತಸಾರವೆಂಬ ಗ್ರಂಥ ಬರೆದು ಈಗ ಅನುಪಲಬ್ಧ ಕರ್ಣಾಟಕ ಸಂಗೀತವೆಂದು ದಕ್ಷಿಣಾದಿ ಸಂಗೀತ ನೆಲೆಗೊಳ್ಳಲು ಅಂಕುರಾರ್ಪಣ ಮಾಡಿದವರು. ಇವರು ಆರಂಭಿಸಿದ ಅಥವಾ ಸ್ಫುಟಪಡಿಸಿದ ಸಂಗೀತ ಪದ್ಧತಿಯನ್ನು ಕರ್ಣಾಟಕ ಸಂಗೀತವೆಂದು ಜನ ಕರೆದಿದ್ದಿರಬಹುದು ಎಂಬ ಹೇಳಿಕೆಯೂ ಇದೆ.

ವಿದ್ಯಾರಣ್ಯರು ತಮ್ಮ ಸಂಗೀತಸಾರದಲ್ಲಿ ಹದಿನೈದು ಮೇಳ ರಾಗಗಳನ್ನು ಹೇಳಿ ಐವತ್ತು ಪ್ರಚುರ ಪ್ರಯೋಗಗಳುಳ್ಳ ರಾಗಗಳನ್ನ ಳವಡಿಸಿದ್ದಾರೆಂದು ಗೋವಿಂದ ದೀಕ್ಷಿತ ತನ್ನ ಸಂಗೀತಸುಧೆಯಲ್ಲಿ (1614) ಹೇಳುತ್ತಾನೆ. ಕರ್ಣಾಟಕ ಭಾಗ್ಯ ವಿದ್ಯಾರಣ್ಯ ಶ್ರೀಚರಣಾಗ್ರಣೇಭ್ಯಃ ಆರಭ್ಯರಾಗಾನ್ ಪ್ರಚುರ ಪ್ರಯೋಗಾನ್ ಪಂಚಾಶತಂ ಚ ಕಲಯೇ ಷಡಂಗಾನ್ - ಎಂಬುದು ಅವನ ಮಾತು. ರಾಗವಿಬೋಧದಲ್ಲಿ (1609) 960 ಮೇಳರಾಗಗಳ ಪದ್ಧತಿಯನ್ನು ನಿರೂಪಿಸಿರುವ ಸೋಮನಾಥನಿಂದ ಈ ಮೇಳ ಪದ್ಧತಿ ಆರಂಭವಾಯಿತೆಂದು ಇತ್ತೀಚಿನ ವರೆಗೂ ಎಣಿಕೆಯಿದ್ದಿತು. ಆದರೆ ಮೇಳರಾಗಗಳ ನಿರ್ದೇಶ ಮಾತ್ರವಲ್ಲದೆ ವಿದ್ಯಾರಣ್ಯರು ತಮ್ಮ ಗ್ರಂಥದಲ್ಲಿ ರಾಗಾಲಾಪನೆಯ ವಿಧಿಗಳನ್ನೂ ನಿರೂಪಿಸಿದ್ದಾರೆಂದು ದೀಕ್ಷಿತನಿಂದ ತಿಳಿದುಬರುತ್ತದೆ.

ದೇವರಾಯನ ಆಳಿಕೆಯ (ಸು.1446-65) ಕಾಲದಲ್ಲಿದ್ದು, ಅಭಿನವಭರತಾಚಾರ್ಯ, ರಾಯವಾಗ್ಗೇಯಕಾರ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದ ಕಲ್ಲಿನಾಥನೆಂಬ ವಿದ್ವಾಂಸ ಶಾರ್ಙ್ಗದೇವನ ಕೃತಿಗೆ ಕಲಾನಿಧಿಯೆಂಬ ಟೀಕೆಯನ್ನು ಬರೆದ. ಈತ ತುಂಬ ಪ್ರತಿಭಾಶಾಲಿ, ಪ್ರಭಾವಶಾಲಿ. ಒಂದು ಕಾಲಕ್ಕೆ ಸಂಗೀತ ಪ್ರಪಂಚದಲ್ಲಿ ಹನೂಮನ್ಮತ, ನಾರದಮತ, ಸೋಮೇಶ್ವರಮತಗಳಿದ್ದಂತೆ ಕಲ್ಲಿನಾಥಮತವೆಂಬ ವಿಶಿಷ್ಟವಾದ ಸಂಪ್ರದಾಯವೇ ಇತ್ತು. ತಾಳದೀಪಿಕೆಯನ್ನು ಬರೆದ ಗೋಪೇಂದ್ರ ತಿಪ್ಪಭೂಪಾಲ (ಸು.1423-46) ಸಂಗೀತ ಶಾಸ್ತ್ರವನ್ನು ಸ್ಫುಟಗೊಳಿಸಲು ಯತ್ನಿಸಿದ. ಇವನ ವ್ಯಾಖ್ಯೆಯಿಂದ ಆ ಕಾಲಕ್ಕೆ ವಿಜಯನಗರದಲ್ಲಿ ಶಾಸ್ತ್ರೀಯ ಸಂಗೀತ ವಿಶೇಷವಾಗಿ ಜನಪ್ರಿಯವಾಗಿದ್ದಿತೆಂದು ತಿಳಿದುಬರುತ್ತದೆ. ಕೃಷ್ಣದೇವರಾಯನ ಕಾಲದಲ್ಲಿ ಸಂಗೀತ ಸೂರ್ಯೋದಯ ಎಂಬ ಸಂಸ್ಕೃತ ಸಂಗೀತ ಶಾಸ್ತ್ರಗ್ರಂಥ ಬೆಳಕು ಕಂಡಿತು. ರಾಣಿವಾಸದವರಿಗೆ ನಾಟ್ಯಾಚಾರ್ಯನಾಗಿದ್ದ ಬಂಧಂ ಲಕ್ಷ್ಮೀನಾರಾಯಣ ಈ ಗ್ರಂಥದ ಕರ್ತೃ.

ದಕ್ಷಿಣಾದಿ ಸಂಗೀತದ ಸ್ವರೂಪವನ್ನು ಚಿತ್ರಿಸುವ ಮತ್ತೊಂದು ಗ್ರಂಥ ಸ್ವರ ಮೇಳಕಳಾನಿಧಿ. ವಿಜಯನಗರದ ರಾಮರಾಯನಿಗೆ ಅಮಾತ್ಯನಾಗಿದ್ದ ರಾಮಾಮಾತ್ಯ ಈ ಗ್ರಂಥದ ಕರ್ತೃ. ತನ್ನ ಗ್ರಂಥದಲ್ಲಿ (ಸು.1550) ಇಪ್ಪತ್ತು ಮೇಳಗಳನ್ನು ನಮೂದಿಸಿ, ರಾಗಗಳನ್ನು ಉತ್ತಮ, ಮಧ್ಯಮ ಮತ್ತು ಅಧಮಗಳೆಂದು ವರ್ಗೀಕರಿಸಿದ್ದಾನೆ. ವೀಣಾವಾದ್ಯದ ವಿವರಣೆಗೆ ಒಂದು ಅಧ್ಯಾಯವನ್ನೇ ಬರೆದಿದ್ದಾನೆ. ಸ್ವರಮೇಳಕಳಾನಿಧಿ ಕರ್ಣಾಟಕ ಸಂಗೀತದಲ್ಲಿ ಕ್ರಾಂತಿಯನ್ನು ತಂದ ಗ್ರಂಥ. ಆ ಕಾಲಕ್ಕೆ ಸಂಗೀತಶಾಸ್ತ್ರದಲ್ಲಿ ಲಕ್ಷ್ಯ, ಲಕ್ಷಣಗಳ ವಿಷಯದಲ್ಲಿ ವಿಶೇಷವಾದ ಗೊಂದಲವಿದ್ದುದರಿಂದ ಇವುಗಳನ್ನು ಸಮೀಕರಿಸಿ ಗ್ರಂಥರಚನೆ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಇವನು ಪ್ರಯೋಗದ ದೃಷ್ಟಿಯನ್ನೇ ಹಿಡಿದು ಪ್ರಚುರವಾಗಿದ್ದ ಎಲ್ಲ ದೇಶೀ ರಾಗಗಳನ್ನೂ ಇಪ್ಪತ್ತು ಮೇಳಗಳಲ್ಲಿ ಅಡಕಮಾಡಲು ಯತ್ನಿಸಿದ. ಹಿಂದಿನ ಕಾಲದಿಂದ ಬಂದಿದ್ದ ಗ್ರಾಮಮೂರ್ಛನ ಪದ್ಧತಿಯಿಂದ ರಾಗಗಳನ್ನು ಹಿಡಿಯುವ, ಹೆಸರಿಸುವ ಹುಟ್ಟಿಸುವ ಪದ್ಧತಿಯನ್ನು ಧೈರ್ಯದಿಂದ ಬದಿಗಿಟ್ಟಾತ ರಾಮಾಮಾತ್ಯ ಈ ಪದ್ಧತಿ ಲಕ್ಷಣಪ್ರಧಾನವಾದದ್ದು. ಮೇಳವೆಂಬ ಮಾತಿಗೆ ಹಿರಿಮೆ ಕೊಟ್ಟವರಲ್ಲಿ ರಾಮಾಮಾತ್ಯ ಮೊದಲಿಗ. ಇವನ ಗ್ರಂಥದಲ್ಲಿ ಮೇಳ ಪ್ರಕರಣವೆಂಬ ಪ್ರತ್ಯೇಕವಾದ ಪರಿಚ್ಛೇದವೇ ಇದೆ. ಆದರೆ ಇವನ ಗಮನವೆಲ್ಲ ಲಕ್ಷ್ಯದ ಕಡೆಗೇ ಇತ್ತು.

ಇದೇ ಕಾಲದಲ್ಲಿದ್ದ ನಿಜಗುಣಶಿವಯೋಗಿ ತನ್ನ ವಿವೇಕಚಿಂತಾಮಣಿಯಲ್ಲಿ ನಾಲ್ಕನೆಯ ಅಧ್ಯಾಯವನ್ನು ಸಂಗೀತಶಾಸ್ತ್ರದ ನಿರೂಪಣೆಗೆ ವಿನಿಯೋಗಿಸಿರುವುದಲ್ಲದೆ ಪಲ್ಲವಿ ಮತ್ತು ಚರಣಗಳನ್ನುಳ್ಳ ಸಹಸ್ರಾರು ಶೈವಪರ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿದ್ದಾನೆ. ಈ ಕೀರ್ತನೆಗಳೊಂದರಿಂದ ಆ ಕಾಲದ ವೀಣೆಗೆ ಹದಿನಾರು ಮೆಟ್ಟಲುಗಳು ಇದ್ದವೆಂದು ತಿಳಿಯುತ್ತದೆ. ವಿವೇಕಚಿಂತಾಮಣಿ ದಕ್ಷಿಣಾದಿ ಸಂಗೀತಶಾಸ್ತ್ರವನ್ನು ಕನ್ನಡದಲ್ಲಿ ತಿಳಿಸುವ ಮೊತ್ತಮೊದಲ ಗ್ರಂಥ.

ವಿಜಯನಗರದ ಪತನಾನಂತರ ತಮಿಳುನಾಡಿನ ಕೊಡುಗೆ ಹೆಚ್ಚಾಗಿ ಕಂಡುಬರುತ್ತದೆ. ಆದರೆ ದಕ್ಷಿಣ ಕರ್ನಾಟಕದ ಹಲವು ಸಂಸ್ಥಾನಗಳು ಸಂಗೀತ ಪ್ರೋತ್ಸಾಹವನ್ನು ಮುಂದುವರಿಸಿದವು. ಮಾಗಡಿ ಕೆಂಪೇಗೌಡ ಸಂಗೀತಪ್ರಿಯನಾಗಿದ್ದಂತೆ ತೋರುತ್ತದೆ. ವಿಜಯನಗರದ ಸಂಪ್ರದಾಯಗಳನ್ನು ಮೈಸೂರಿನ ಒಡೆಯರು ಪೋಷಿಸಿ ಮುಂದುವರಿಸಿದರು. ಐದನೆಯ ಚಾಮರಾಜ ಒಡೆಯರು ಚತುಷ್ಷಷ್ಟಿ ಕಲಾಪರಿಣತರಾಗಿದ್ದರು. ಕಂಠೀರವ ನರಸಿಂಹರಾಜ ಒಡೆಯರ ನಿತ್ಯದೋಲಗದಲ್ಲಿ ನಾಟ್ಯ,ತಂಬೂರ, ವೀಣಾದಿ ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದಿತು. ಅವರ ಆಸ್ಥಾನದಲ್ಲಿ ಸಂಗೀತಕೋವಿದೆಯರಿದ್ದರು. ಅವರು ಸ್ವತಃ ಸಂಗೀತಸಾಹಿತ್ಯಶಾಸ್ತ್ರ ವಿಶಾರದರು. ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಸಂಗೀತ ಗಾನ ವಾದ್ಯ ನಾಟ್ಯಗಳು ಪ್ರೋತ್ಸಾಹಿತವಾಗಿದ್ದುವು. ಇಲ್ಲಿ ವೀಣಾವಾದನ ತತ್ವಲಯಜ್ಞಾನಕುಶಲ ಕಲಾವಿದರಿದ್ದರು. ಇವರು ಸಂಗೀತಸಾರಜ್ಞರೇ ಆಗಿದ್ದರು. ಚಿಕ್ಕದೇವರಾಜ ಒಡೆಯರು ವೈಣಿಕರೊಳು ಪ್ರವೀಣರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಸಂಗೀತಶಾಸ್ತ್ರ ಸಂಪ್ರದಾಯಗಳಲ್ಲಿ ನಿಶ್ಚಿತ ಯೋಗ್ಯತೆಯನ್ನು ಪಡೆದಿದ್ದ ವಿದ್ವಾಂಸರಾಗಿದ್ದು ಸ್ವತಃ ಕೆಲವು ಗೇಯ ಕೃತಿಗಳನ್ನು ರಚಿಸಿದ್ದಲ್ಲದೆ ಬಹುಮಂದಿ ಸಂಗೀತ ವಿದ್ವಾಂಸರಿಗೆ ಉದಾರ ಆಶ್ರಯ ಕೊಟ್ಟಿದ್ದರು. ಹಾಗೆಯೇ 9ನೆಯ ಚಾಮರಾಜ ಒಡೆಯರವರೂ ಕಲಾಪ್ರೇಮಿಯಾಗಿದ್ದು ಕಲೆಯನ್ನು ಪೋಷಿಸುತ್ತಾ ಬಂದರು. ಅನಂತರ ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರು (1895-1940) ರಸಾಭಿಜ್ಞರಾಗಿದ್ದು ಸಂಗೀತಾದಿ ಕಲೆಗಳಿಗೆ ಉದಾರ ಪೋಷಣೆ ನೀಡಿ ಮೈಸೂರನ್ನು ತಂಜಾವೂರಿಗೆ ಸಮನಾಗಿ ಮಾಡಿದರು. ಇವರ ಆಸ್ಥಾನ ಅನೇಕ ವೈಣಿಕರು, ಗಾಯಕರು, ನಾಟ್ಯಕಲಾಪ್ರವೀಣರಿಂದ ಶೋಭಿಸುತ್ತಿತ್ತು. ಜಯಚಾಮರಾಜರೂ ಸಂಗೀತ ಪೋಷಕರಾಗಿದ್ದರು.

ಈ ಕಾಲದ ಶಾಸ್ತ್ರಗ್ರಂಥಕರ್ತರಲ್ಲಿ ಬೆಂಗಳೂರು ಜಿಲ್ಲೆಯ ಶಿವಗಂಗೆಯ ಸಮೀಪದ ಸಾತನೂರಿನ ಪುಂಡರೀಕವಿಠಲ (ಸು.1562-91) ಮುಖ್ಯನಾದವನು. ಬುರ್ಹಾನ್ ಖಾನನ ಆಹ್ವಾನದ ಮೇಲೆ ಖಾನ್‌ದೇಶಕ್ಕೆ ಹೋಗಿ ಷಡ್ರಾಗ ಚಂದ್ರೋದಯ, ರಾಗಮಾಲಾ, ರಾಗಮಂಜರಿ, ನರ್ತನನಿರ್ಣಯ ಎಂಬ ನಾಲ್ಕೂ ಸಂಗೀತ ಗ್ರಂಥಗಳನ್ನು ರಚಿಸಿದ್ದಾನೆ. ಪುಂಡರೀಕವಿಠಲ ಉತ್ತರಾದಿ ದಕ್ಷಿಣಾದಿ ಸಂಗೀತಗಳೆರಡರಲ್ಲೂ ನಿಷ್ಣಾತನಾಗಿದ್ದ.

ತಂಜಾವೂರಿನ ಅರಸು ರಘುನಾಥನಾಯಕನ ಆಳ್ವಿಕೆಯಲ್ಲಿ (ಸು.1614-28) ಮಂತ್ರಿಯಾಗಿದ್ದು ಸಂಗೀತಸುಧೆ ಎಂಬ ಪ್ರಖ್ಯಾತ ಗ್ರಂಥವನ್ನು ಬರೆದ ಗೋವಿಂದ ದೀಕ್ಷಿತನೂ ಕನ್ನಡದವನೇ, ಕರ್ನಾಟಕ ಸ್ಮಾರ್ತ ಬ್ರಾಹ್ಮಣ. ಈಗ ಪ್ರಚುರವಾಗಿರುವ ವೀಣೆಯ ಸ್ವರೂಪವನ್ನು ಸಿದ್ಧಮಾಡಿಕೊಟ್ಟವ ಇವನೇ. (ಈ ಕೆಲಸ ತಂಜಾವೂರಿನಲ್ಲಿ ನಡೆದಿದ್ದು ಆದ್ದರಿಂದ ವೀಣೆಗೆ ತಂಜಾವೂರು ವೀಣೆಯೆಂದು ಹೆಸರಾಯಿತು). ಇವನ ಮಗ ವೆಂಕಟಮಖಿ (ವೆಂಕಟೇಶ್ವರ ದೀಕ್ಷಿತ) ಮೇಳ ಪದ್ಧತಿಯನ್ನು ಮುಂದುವರಿಸಿ ತನ್ನ ಚತುರ್ದಂಡಿ ಪ್ರಕಾಶಿಕೆಯಲ್ಲಿ (ಸು.1620) ಎಪ್ಪತ್ತೆರಡು ಮೇಳಕರ್ತ ರಾಗಗಳ (ಮೂಲಪದ ಮೇಳಕರ್ತೃ ಎಂದು) ವಿಭಜನೆಯನ್ನು ಮಾಡಿಕೊಟ್ಟಿದ್ದಾನೆ. ತಂಜಾವೂರಿನ ವಿಜಯರಾಘವ ನಾಯಕನ ಆದೇಶದ ಮೇಲೆ ಬರೆದ ಈ ಪ್ರಸಿದ್ಧ ಗ್ರಂಥ' ಕರ್ನಾಟಕ ಸಂಗೀತಕ್ಕೆ ಸ್ಪಷ್ಟವಾದ ಕಟ್ಟಡವನ್ನು ಕಟ್ಟಿಕೊಟ್ಟಿತು. ಎಲ್ಲ ರಾಗಗಳನ್ನು ನುಡಿಸಲು ಅನುಕೂಲವಾಗುವಂತೆ ಮೇಳದ ಮೆಟ್ಟಲುಗಳನ್ನು ಮೇಣದಲ್ಲಿ ಸ್ಥಿರವಾಗಿರಿಸಿದ ಇಂದಿನ ವೀಣೆ ಈತನ ಕಲ್ಪನೆಯಂತೆ. ಇವನ ಗ್ರಂಥದ ಹೆಸರಿನಲ್ಲಿ ಬರುವ ಚತುರ್ದಂಡಿಯೆಂದರೆ ಗೀತ, ಆಲಾಪ, ಲಯ ಮತ್ತು ಪ್ರಬಂಧ - ಇವು ರಾಗ ಹರಿಯುವ ನಾಲ್ಕು ದಾರಿಗಳು. ಈ ಗ್ರಂಥದಲ್ಲಿ ವೀಣೆ, ಶ್ರುತಿ, ಸ್ವರ, ಮೇಳ, ರಾಗ, ಆಲಾಪ, ಠಾಯ,ಗೀತ ಪ್ರಬಂಧಗಳನ್ನು ವಿವರಿಸುವ ಪರಿಚ್ಛೇದಗಳಿವೆ. ತಾಳ ಪ್ರಕರಣ ಉಪಲಬ್ಧವಿಲ್ಲ. ಈತ ರಾಗಾಂಗ ಉಪಾಂಗ ಭಾಷಾಂಗ ರಾಗಗಳಿಗೆ ಶ್ಲೋಕರೂಪದಲ್ಲಿ ಲಕ್ಷಣವನ್ನು ಗೀತ ರೂಪದಲ್ಲಿ ಲಕ್ಷ್ಯವನ್ನು ನಿರೂಪಿಸಿದ್ದಾನೆ. ಅನಂತರದಲ್ಲಿ ಉಲ್ಲೇಖನೀಯ ಶಾಸ್ತ್ರ ಗ್ರಂಥಗಳಾವುವೂ ಹುಟ್ಟಲಿಲ್ಲವೆಂದು ತೋರುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ತಚ್ಚೂರು ಶಿಂಗರಾಚಾರ್ಯರೆಂಬುವರು ತಮ್ಮ ಸಹೋದರ ಹಿರಿಯ ಶಿಂಗರಾಚಾರ್ಯರೊಡನೆ ಸೇರಿಕೊಂಡು ಸ್ವರಮಂಜರಿ, ಗಾಯಕಪಾರಿಜಾತಂ, ಸಂಗೀತಕಲಾನಿಧಿ, ಗಾಯಕ ಲೋಚನಂ, ಗಾಯಕ ಸಿದ್ಧಾಂಜನಂ, ಗಾನೇಂದು ಶೇಖರಂ, ಭಾಗವತ ಸಾರಾಮೃತಂ ಎಂಬ ಶಾಸ್ತ್ರಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.

**ಗೇಯ ಕೃತಿಗಳು :** ಸಂಗೀತ ಲಕ್ಷಣದ ಬಗ್ಗೆ ಹುಟ್ಟಿರುವ ಹಲವಾರು ಗ್ರಂಥಗಳು ಶಾಸ್ತ್ರದ ಪ್ರಾಗಲ್ಭ್ಯತೆಯನ್ನು ಸೂಚಿಸುತ್ತಿರುವಂತೆ ಗೇಯಕೃತಿಗಳ ರಚನೆಯೂ ವ್ಯಾಪಕವಾಗಿ ಆಗಿರಬೇಕು. ಇದರ ಬಗ್ಗೆಯೂ ಹಿಂದೆ ತಿಳಿಸಿರುವ ಹಲವಾರು ಶಾಸನ ಮತ್ತು ಸಾಹಿತ್ಯ ಉಲ್ಲೇಖಗಳು ಉತ್ತಮ ಸಾಕ್ಷಿಗಳಾಗಿವೆ. ಗ್ರಂಥ'ಗಳಲ್ಲಿ ಲಕ್ಷಣದ ಜೊತೆಗೆ ಲಕ್ಷ್ಯಗಳನ್ನೂ ಬರೆಯುತ್ತಿದ್ದುದು ರೂಢಿ. ಹೀಗೆ ಸಂಗೀತರೂಪಗಳ ರಚನೆಯಲ್ಲೂ ಕರ್ನಾಟಕದ ಕೊಡುಗೆ ಹೇರಳವಾಗಿ ವೈವಿಧ್ಯದಿಂದ ಕೂಡಿದೆ. ಕರ್ನಾಟಕದಲ್ಲಿ ರೂಪಗೊಂಡ ರಚನೆಗಳ ಬಗ್ಗೆ ಸುಮಾರು ಐವತ್ತು ಪ್ರಬಂಧಗಳ ವಿವರಣೆ ಮತಂಗನ ಬೃಹದ್ದೇಶೀಯಲ್ಲೇ ಉಕ್ತವಾಗಿದೆ. ಇವುಗಳಲ್ಲದೆ ಬೆದಂಡೆ, ಮೆಲ್ವಾಡು, ಪಾಡುಗಬ್ಬ, ಪಾಡು, ಬಾಜನೆಗಬ್ಬ, ಚತ್ತಾಣ, ಸುವ್ವಿ, ಚೌಪದಿ, ಅಡ್ಡತನ, ಒನಕೆವಾಡು, ಓವಿ, ಧವಳ, ಮಂಗಳಾಚಾರ, ಏಲಾ ಎಂಬ ರಚನೆಗಳೂ ರೂಢಿಯಲ್ಲಿದ್ದುವೆಂದು ತಿಳಿದುಬರುತ್ತದೆ. ವಚನ ಸಾಹಿತ್ಯದಲ್ಲಿ ಸಂಗೀತ ಉಲ್ಲೇಖನ ಅನೇಕ ಕಡೆ ಬಂದಿದೆ. ಶರಣರು ವಚನಗಳಲ್ಲದೆ, ಹಾಡುಗಳನ್ನೂ ಬರೆದಿದ್ದರು. ಎನ್ನ ಕಾಯವ ದಂಡಿಗೆಯ ಮಾಡಯ್ಯ, ಬತ್ತೀಸರಾಗವ ಹಾಡಯ್ಯ, ಉರದಲೊತ್ತಿ ಬಾರಿಸುಕೂಡಲಸಂಗಮದೇವಯ್ಯ ಎಂಬ ಬಸವಣ್ಣನವರ ವಚನದಿಂದ 32 ರಾಗಗಳು ಕರ್ನಾಟಕದಲ್ಲಿ ಮುಖ್ಯವಾಗಿದ್ದುವೆಂದು ಕಾಣುತ್ತದೆ. ಹರಿಹರ ತನ್ನ ಕಾವ್ಯದಲ್ಲಿ ಒಂದು ಕಡೆ ಗೀತಗಳಂ ಪಾಡುತಂ ಎಂದು ಹೇಳಿದ್ದಾನೆ. ಶರಣರು ವಚನಗಳನ್ನು ಹಾಡುತ್ತಿದ್ದರೆನ್ನಬಹುದು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಬತ್ತಲೇಶ್ವರ ಮುಂತಾದ ಶರಣಶರಣೆಯರೂ ಪ್ರೌಢದೇವರಾಯನ ಕಾಲದಲ್ಲಿದ್ದ 101 ವಿರಕ್ತರಲ್ಲಿ ಅನೇಕರು ಗುರುಬಸವ, ಕರಸ್ಥಲದ ನಾಗಿದೇವ, ನಿರ್ವಾಣಬೋಳೇಶ ಮುಂತಾದವರೂ ವಿಚಾರಪ್ರಧಾನವಾದ ಸಂಗೀತ ಕೃತಿಗಳನ್ನು ರಚಿಸಿದರು. ಅನಂತರದ ಯುಗದಲ್ಲಿ ರಚಿತವಾದ ಮುಖ್ಯ ಕೃತಿ ನಿಜಗುಣಶಿವಯೋಗಿಯದು. ಇವನು ತ್ರಿಪದಿ, ಸಾಂಗತ್ಯ ಮುಂತಾದ ಹಾಡುಗಳಲ್ಲಿ ತನ್ನ ಷಟ್ ಶಾಸ್ತ್ರಗಳನ್ನೆಲ್ಲಾ ರಚಿಸಿದ. ಕೈವಲ್ಯಪದ್ಧತಿಯ ಹಾಡುಗಳು ರಾಗ ತಾಳ ಸಮನ್ವಿತವಾದ ಸಂಗೀತ ಕೃತಿಗಳು, ನಾದನಾಮಕ್ರಿಯೆ, ಧನ್ಯಾಸಿ, ಶಂಕರಾಭರಣ, ಲಲಿತೆ, ದೇಶಿ ಸಾರಗ, ಸುವ್ವಾಲೆ, ಭೈರವ, ತೋಡಿ, ಕಾಂಬೋಧಿ, ಭವುಳಿ, ಕುರಂಜಿ, ಮಧು ಮಾಧವಿ, ಸೌರಾಷ್ಟ್ರ, ಸಾವಂತ,ಕಲ್ಯಾಣಿ ಮೊದಲಾದ ರಾಗಗಳಲ್ಲಿರುವ ಭಾವಪ್ರಧಾನವಾದ ನಾದಮಾಧುರ್ಯ ಮತ್ತು ಪದವಿನ್ಯಾಸದಿಂದ ಕೂಡಿದ ಸಂಗೀತ ಸಾಹಿತ್ಯಗಳ ಸಮನ್ವಯವುಳ್ಳ ಶ್ರೇಷ್ಠ ಕೃತಿಗಳು ಇದರಲ್ಲಿವೆ.

ಅಲ್ಲಿಂದ ಮುಂದೆ ದಾಸಸಾಹಿತ್ಯ ಒಂದು ಹೊಸ ಶಕೆಯನ್ನು ಆರಂಭಿಸಿತು. ಹರಿದಾಸ ಸಾಹಿತ್ಯದ ಆದ್ಯಾಚಾರ್ಯರಾದ ನರಹರಿತೀರ್ಥರು ರಘುಪತಿ ಎಂಬ ಅಂಕಿತದಲ್ಲಿ ಕನ್ನಡದ ಹಾಡುಗಳನ್ನು ರಚಿಸಿದರು. ಶ್ರೀಪಾದರಾಯರು ಕನ್ನಡದಲ್ಲಿ ಅನೇಕ ಸುಳಾದಿಗಳನ್ನೂ ದೇವರ ನಾಮಗಳನ್ನೂ ರಂಗವಿಠಲ ಮುದ್ರಿಕೆಯಿಂದ ರಚಿಸಿದ್ದಾರೆ. ಇವರು ಸುಳಾದಿಗಳ ಆದ್ಯಪ್ರವರ್ತಕರು. ಇವರ ಶಿಷ್ಯರಾದ ವ್ಯಾಸರಾಯರು ಹೇರಳವಾಗಿ ದೇವರ ನಾಮಗಳನ್ನೂ ಸುಳಾದಿಗಳನ್ನೂ ಶ್ರೀ ಕೃಷ್ಣ ಮುದ್ರಿಕೆಯಿಂದ ರಚಿಸಿ, ತಮ್ಮ ಶಿಷ್ಯರುಗಳಾದ ಪುರಂದರದಾಸ, ಕನಕದಾಸ, ವಾದಿರಾಜ ಇವರಿಗೆ ಸಂಗೀತ ಕೃತಿಗಳ ರಚನೆಯಲ್ಲಿ ಮಾರ್ಗ ದರ್ಶಕರಾದರು. ಅನಂತರಕಾಲದಲ್ಲಿ ವಿಜಯದಾಸರು, ಗೋಪಾಲದಾಸರು, ರಾಘವೇಂದ್ರ ಸ್ವಾಮಿಗಳು, ಮೋಹನದಾಸರು ಮತ್ತು ಜಗನ್ನಾಥದಾಸರೇ ಮುಂತಾದವರು ದಾಸಸಾಹಿತ್ಯವನ್ನು ಬೆಳೆಸಿದರು. ಈ ಕಾಲಕ್ಕೆ ಅನೇಕ ರಾಗಗಳನ್ನು ಬಳಸಿಕೊಂಡು ವೈವಿಧ್ಯಮಯವೂ ಶಾಸ್ತ್ರೀಯವೂ ಆದ ಮಾರ್ಗದಲ್ಲಿ ಬೆಳೆದು ಬಂದ ಸಂಗೀತವನ್ನು ಅತ್ಯಂತ ಜನಪ್ರಿಯವಾಗಿ ಈ ಹರಿದಾಸರು ಪರಿವರ್ತಿಸಿದರು.

ಹರಿದಾಸರಲ್ಲಿ ಬಹು ಮುಖ್ಯರಾದವರು ಅಪಾರ ಸಂಖ್ಯೆಯ ಕೀರ್ತನೆಗಳನ್ನು ರಚಿಸಿರುವ ಪುರಂದರದಾಸರು. ಇವರು ಸಂಗೀತದ ಅಭ್ಯಾಸಕ್ಕೆ ಒಂದು ಹೊಸ ಹಾದಿಯನ್ನು ಹಾಕಿಕೊಟ್ಟು, ಕರ್ನಾಟಕ ಸಂಗೀತವನ್ನು ಕಲಿಯಲು ವೈಜ್ಞಾನಿಕವೂ ವ್ಯವಸ್ಥಿತವೂ ಆದ ಪದ್ಧತಿಯನ್ನು ರೂಪಿಸಿದರು. ಸರಳೆ, ಜಂಟಿವರಸೆ, ಅಲಂಕಾರಗಳನ್ನು ಮಾಯಾಮಾಳವಗೌಳ ರಾಗದಲ್ಲೂ ಸುಳಾದಿ ಸಪ್ತ ತಾಳಗಳನ್ನು ಅಳವಡಿಸಿ ಮಲಹರಿ ರಾಗದಲ್ಲಿ ಪಿಳ್ಳಾರಿ ಗೀತಗಳನ್ನೂ ರಚಿಸಿದರು. ಅನೇಕ ಜನಪದ ಸಂಗೀತದ ಮಟ್ಟುಗಳಿಗೆ ಶಾಸ್ತ್ರೀಯವಾದ ರಾಗಗಳ ಸ್ವರೂಪ ಕೊಟ್ಟರು. ತುತ್ತುರುತುರೆಂದು, ನಳಿನಜಾಂಡ - ಎಂಬ ಕೀರ್ತನೆಗಳಿಂದ 12ನೆಯ ಶತಮಾನದಿಂದಲೂ ಬೆಳೆದುಬಂದಿದ್ದ ಬತ್ತೀಸ ರಾಗಗಳಲ್ಲಿ ಹಾಡಿದ್ದಾರೆಂದು ತಿಳಿದುಬರುತ್ತದೆ. ಅಲ್ಲದೆ ಅನೇಕ ಸುಳಾದಿ ಉಗಾಭೋಗಗಳನ್ನೂ ರಚಿಸಿದರು.

ಮಾಯಾಮಾಳವಗೌಳವನ್ನು ಶುದ್ಧಮೇಳವೆಂದು ಗ್ರಹಿಸಿದುದೇ ಕರ್ನಾಟಕ ಸಂಗೀತದ ಇತಿಹಾಸದಲ್ಲಿ ದೊಡ್ಡದೊಂದು ಕ್ರಾಂತಿಯಾಗಿ ಪರಿಣಮಿಸಿತು ಎನ್ನಬಹುದು. ಸಮಾನಾಂತರ ಶ್ರುತಿಯ ಈ ರಾಗದ ಹಿರಿಮೆಯನ್ನು ಅರ್ಥಮಾಡಿಕೊಂಡವರಲ್ಲಿ ಪುರಂದರದಾಸರು ಮೊದಲಿಗರು. ಅಭ್ಯಾಸಿಗಳ ಅನುಕೂಲಕ್ಕೆಂದು ಇವರು ಮಾಯಾಮಾಳವಗೌಳ ಮೇಳದಿಂದ ಜನ್ಯವಾದ ಮಲಹರಿಯಲ್ಲಿ ಗೀತಗಳನ್ನು ರಚಿಸಿದ್ದಾರೆ. ಈ ರಾಗದಲ್ಲಿ ಪುರಂದರದಾಸರು ರಚಿಸಿದ ಲಕ್ಷ್ಯಗೀತಗಳಲ್ಲಿ ಶ್ರೀಗಣನಾಥ ಸಿಂಧುರ ವರ್ಣ, ಕುಂದಗೌರ ಗೌರೀವರ, ಕೆರೆಯ ನೀರನು ಕೆರೆಗೆ ಚೆಲ್ಲಿ ಇವು ಇಂದಿಗೂ ಉಳಿದುಬಂದಿವೆಯಲ್ಲದೆ ಎಳೆಯರಿಗೆ ಸಂಗೀತಾಭ್ಯಾಸವನ್ನು ಮಾಡಿಸುವಲ್ಲಿ ಇವುಗಳಿಂದ ಪ್ರಾರಂಭ ಮಾಡುವ ರೂಢಿ ಇದೆ. ಪುರಂದರ ಕೊಡುಗೆ ದಕ್ಷಿಣಾದಿ ಸಂಗೀತದ ಭದ್ರ ಬುನಾದಿಯಾಯಿತು. ಇವರು ಕರ್ನಾಟಕ ಸಂಗೀತ ಪಿತಾಮಹರಾದರು.

ಹರಿದಾಸರೆಲ್ಲರೂ ಜನರ ಭಾಷೆಗೆ ಹೊಂದುವಂತೆ ವಾಕ್ಯರಚನೆ ಮತ್ತು ಪದಗಳನ್ನು ಮಾರ್ಪಡಿಸಿ ಒಂದು ಹೊಸ ಶೈಲಿಯನ್ನೇ ಸೃಷ್ಟಿಸಿದರು. ಪ್ರಾಸ, ಅನುಪ್ರಾಸ, ಯಮಕ, ಅಲಂಕಾರಗಳು, ದ್ವಿತೀಯಾಕ್ಷರ ಮತ್ತು ಅಂತ್ಯಪ್ರಾಸ, ಉಪಮಾನ, ರೂಪಕ, ಸ್ವಭಾವೋಕ್ತಿ, ನಿಂದಾಸ್ತುತಿ, ಜನಜೀವನಕ್ಕೆ ಸಂಬಂಧಿಸಿದ ಅನುಭವಸಿದ್ಧವಾದ ಉಪಮಾನಗಳನ್ನು ಬಳಸಿ ಕೃತಿಗಳನ್ನು ರಚಿಸಿದ್ದಾರೆ. ಇವರೆಲ್ಲರೂ ಗೀತ, ವಾದ್ಯ, ನೃತ್ಯ ಈ ಮೂರರಲ್ಲೂ ಪರಿಣತರಾಗಿದ್ದರು. ಹರಿದಾಸರ ಕೀರ್ತನೆಗಳೆಲ್ಲವೂ ಸುಂದರವಾಗಿ ಲಯಬದ್ಧವಾಗಿವೆ; ವೈರಾಗ್ಯ, ಶಾಂತಿ, ಭಕ್ತಿರಸಗಳಿಂದ ತುಂಬಿದ ರಚನೆಗಳಾಗಿವೆ. ಈ ರೀತಿ ದಾಸರ ಕಾಲದಿಂದ ಈಚೆಗೆ ಕರ್ನಾಟಕ ಸಂಗೀತ ಒಂದು ಖಚಿತ ರೂಪವನ್ನು ಪಡೆಯಿತು. ಪುರಂದರದಾಸರು ಮುಂದಿನ ವಾಗ್ಗೇಯಕಾರರಿಗೆ ಗುರುಗಳಾಗಿ ಪರಿಣಮಿಸಿದರು. ಕರ್ನಾಟಕ ಸಂಗೀತದ ರತ್ನಪ್ರಾಯರಾದ ತ್ಯಾಗರಾಜ ಸ್ವಾಮಿಗಳು ಇವರನ್ನು ಗುರುಗಳೆಂದು ಅಂಗೀಕರಿಸಿ ಸ್ತುತಿಸಿರುವುದಲ್ಲದೆ ಇವರ ಕೃತಿಗಳಿಂದ ಪ್ರಭಾವಿತರಾಗಿ ಕೃತಿಗಳನ್ನು ರಚಿಸಿದರು.

ನಿಜಗುಣಶಿವಯೋಗಿ, ಮಾಗಡಿ ಕೆಂಪೇಗೌಡ ಇಂತಹ ಕೆಲವರು ದಾಸಪಂರಪೆಯ ಹೊರಗಿದ್ದು ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ.

ಸಂಗೀತ-ಸಾಹಿತ್ಯ ರಚನೆ 18ನೆಯ ಶತಮಾನದಿಂದ ಮುಂದಿನ ಶತಮಾನಗಳಲ್ಲೂ ಅನೇಕ ಹರಿದಾಸರಿಂದ ವಿಪುಲವಾಗಿ ನಡೆಯಿತು. ಅಂಥ ವಾಗ್ಗೇಯಕಾರರಲ್ಲಿ ಪ್ರತಿಯೊಬ್ಬರ ರಚನೆಯಲ್ಲೂ ಸಂಗೀತ ದೃಷ್ಟಿಯಿಂದ ಅವರದೇ ಆದ ವೈಶಿಷ್ಟ್ಯವಿದೆ. ವಿಜಯದಾಸರ (18ನೆಯ ಶತಮಾನ) ಸಮಕಾಲೀನರಾದ ಪ್ರಸನ್ನವೆಂಕಟದಾಸರು ಭಾಗವತ ಮತ್ತು ಜೋಗುಳ ಪದಗಳನ್ನು ರಚಿಸಿದರು. ಅವರ ಸೋದರರು ಹಯವದನವಿಠಲ ಎಂಬ ಅಂಕಿತದಲ್ಲಿ ಕೃತಿಗಳನ್ನು ರಚಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ ಸಮಕಾಲೀನರೆಂದು ಹೇಳಲಾದ ಸುರಪುರದ ಆನಂದದಾಸರು ಸಂಗೀತಮಾಧುರ್ಯ, ಸಾಹಿತ್ಯ ಸೌಂದರ್ಯಗಳ ಮಧುರ ಮಿಲನವಿರುವ ಕೃತಿಗಳನ್ನು ರಚಿಸಿ ಸುರಪುರದ ಶೈಲಿಯನ್ನು ಸ್ಥಾಪಿಸಿದರು. ಮಹಿಪತಿದಾಸರು ಮತ್ತು ಅಣ್ಣಾವಧೂತರು ಹಲವು ಸುಂದರವಾದ ಕೃತಿಗಳನ್ನು ರಚಿಸಿದರು. ಮಹಿಪತಿದಾಸರ ಮಗ ಕೃಷ್ಣರಾಯರೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. 20ನೆಯ ಶತಮಾನದ ವರೆಗಿನ ಹರಿದಾಸ ಕೃತಿಗಳ ಸಂಪತ್ತನ್ನು ಹೆಚ್ಚಿಸಿದವರಲ್ಲಿ ವೆಂಕಟವಿಠಲ, ವೈಕುಂಠಕೇಶವ, ಅಚ್ಯುತವಿಠಲ, ವಾಸುದೇವ ವಿಠಲ, ಕಮಲೇಶವಿಠಲ, ಭೀಮೇಶವಿಠಲ, ಜನಾರ್ದನವಿಠಲ, ಶ್ರೀಪತಿವಿಠಲ, ರಘುನಾಥ'ವಿಠಲ, ಪ್ರಾಣೇಶವಿಠಲ, ಶ್ರೀವಿಠಲ ಪ್ರಸನ್ನವೆಂಕಟಪತಿ, ಅನಂತಾದ್ರೀಶ, ಅಭಿನವಜನಾರ್ದನವಿಠಲ, ಅಚಲಾನಂದವಿಠಲ ಮತ್ತು ವೆಂಕಟೇಶ್ವರ ಎಂಬ ಹರಿದಾಸರು ಮುಖ್ಯರು. ಹಾಗೆಯೇ ವ್ಯಾಸರಾಯರ ಶಿಷ್ಯಪರಂಪರೆಗೆ ಸೇರಿದ ವಿದ್ಯಾಕಾಂತರು ಭಾವರಾಗಯುಕ್ತವಾದ ದೇವರನಾಮಗಳನ್ನು ರಚಿಸಿದ್ದಾರೆ. ಮಂಗಳೂರಿನ ತುಪಾಕಿ ವೆಂಕಟರಮಣಾಚಾರ್ಯ, ಸುಬ್ಬಣ್ಣಾಚಾರ್ಯ ಮತ್ತು ರಾಮಾಚಾರ್ಯರ ದೇವರನಾಮಗಳು, ಬಾಗೇಪಲ್ಲಿಯ ಗುರುರಾಮವಿಠಲರ ಕೃತಿಗಳು, ಸೋಸಲೆ ವಿದ್ಯಾರತ್ನಾಕರ (ನರಹರಿವಿಠಲ) ಮತ್ತುವ್ಯಾಸರಾಯರ ಮಠಾಧೀಶ ಶ್ರೀ ವಿದ್ಯಾಪ್ರಸನ್ನತೀರ್ಥರ ದೇವರನಾಮಗಳೂ ಸುಂದರವಾದುವು. ಬೆಂಗಳೂರಿನ ಸರ್ಪಭೂಷಣ ಶಿವಯೋಗಿಗಳು ರಾಗಭಾವದಿಂದ ಕೃತಿಗಳನ್ನು ರಚಿಸಿದ್ದಾರೆ.

19 ಮತ್ತು 20ನೆಯ ಶತಮಾನಗಳಲ್ಲಿ ಮೈಸೂರು ರಾಜಮನೆತನದ ವಿಶೇಷ ಪ್ರೋತ್ಸಾಹ, ಪೋಷಣೆಗಳಿಂದ ಅನೇಕ ವಾಗ್ಗೇಯಕಾರರು ಸಂಗೀತಸಂಪತ್ತನ್ನು ಹೆಚ್ಚಿಸಿದ್ದಾರೆ. ಮೈಸೂರು ಸದಾಶಿವರಾಯರು, ವೀಣೆ ಶೇಷಣ್ಣನವರು, ಮೂಗೂರು ಸುಬ್ಬಣ್ಣನವರು, ವೀಣೆ ಸುಬ್ಬಣ್ಣನವರು, ಕರಿಗಿರಿರಾಯರು, ಬಿಡಾರಂ ಕೃಷ್ಣಪ್ಪನವರು ಅನೇಕ ಬಗೆಯ ಸಂಗೀತ ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ವಾಸುದೇವಾ ಚಾರ್ಯರು 300ಕ್ಕಿಂತಲೂ ಹೆಚ್ಚು ಕೃತಿಗಳನ್ನು ವಾಸುದೇವ ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ಮುತ್ತಯ್ಯ ಭಾಗವತರು 108 ರಾಗಗಳಲ್ಲಿ ಚಾಮುಂಡೇಶ್ವರಿಯ ಮೇಲೆ ಸಾಮಾನ್ಯವಾಗಿ ಬಳಕೆಯಲ್ಲಿಲ್ಲದ ಅನೇಕ ಜನ್ಯರಾಗಗಳಲ್ಲಿ 108 ಕನ್ನಡದ ಕೀರ್ತನೆಗಳನ್ನು ಹರಿಕೇಶ ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ದೇವೋತ್ತಮ ಜೋಯಿಸರು ಕನ್ನಡ ಹಾಡುಗಳನ್ನು ರಚಿಸಿದವರಲ್ಲಿ ಮುಖ್ಯರು. ಟಿ.ಚೌಡಯ್ಯನವರು ಅನೇಕ ತಿಲ್ಲಾನಗಳನ್ನೂ ಕೃತಿಗಳನ್ನೂ ತ್ರಿಮಕುಟ ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ಜಯಚಾಮರಾಜ ಒಡೆಯರು ಸ್ವಯಂ ಸಂಗೀತರಸಿಕರು ಮತ್ತು ವಾಗ್ಗೇಯಕಾರರು. ಶ್ರೀವಿದ್ಯಾ ಎಂಬ ಅಂಕಿತದಲ್ಲಿ ಹಲವು ಶ್ರೇಷ್ಠವಾದ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿಯವರೆಗೆ ಕರ್ನಾಟಕದಲ್ಲಿ ಹಲವಾರು ಕೃತಿಗಳ ರಚನೆಯಿಂದ ಕರ್ನಾಟಕ ಸಂಗೀತ ಸಾಹಿತ್ಯ ವಿಪುಲವಾಗಿ ವೈಶಿಷ್ಟ್ಯಪೂರ್ಣವಾಗಿ ಬೆಳೆದುಬಂದಿದೆ.

**ಕಲಾವಿದರು :** ಹಿಂದೆಯೇ ವಿವರಿಸಿರುವ ಅನೇಕ ಸಾಹಿತ್ಯ ಮತ್ತು ಶಾಸನಗಳ ಉಲ್ಲೇಖದಿಂದ ಕಾಲಕಾಲದಲ್ಲಿ ಅನೇಕ ಗಾಯನ ನಿಪುಣರಿದ್ದಿರಬೇಕೆಂಬುದು ಸ್ಪಷ್ಟವೇ ಇದೆ. ಕರ್ನಾಟಕದ ಸಂಗೀತಗಾರರಲ್ಲಿ ವಿಶೇಷ ಉಲ್ಲೇಖಕ್ಕೆ ಅರ್ಹನಾದವನು ಗೋಪಾಲನಾಯಕ. ಸ್ವತಃ ಶಾಸ್ತ್ರಜ್ಞನಷ್ಟೇ ಅಲ್ಲದೆ ಗಾಯನ ಚತುರನೂ ಆಗಿದ್ದ ಈತ ಉತ್ತರ ಭಾರತದಲ್ಲೂ ತನ್ನ ಕಲಾಚಾತುರ್ಯವನ್ನು ಮೆರೆಸಿ ಅಲ್ಲಿ ರಾಜಪೋಷಣೆಯನ್ನೂ ಪ್ರಸಿದ್ಧ ಗಾಯಕನಾಗಿದ್ದ ಅಮೀರ್ ಖುಸ್ರುವಿನಿಂದ ಹೊಗಳಿಕೆಯನ್ನೂ ಗಳಿಸಿದ್ದ. ಪುರಂದರದಾಸರೇ ಮೊದಲಾದ ದಾಸಕೂಟದವರು ಉತ್ತಮ ಗಾಯಕರೂ ಆಗಿದ್ದರು. ಅರಸರಿಂದ ದೊರೆತ ಪ್ರೋತ್ಸಾಹದಿಂದಾಗಿ ಅನೇಕ ಸಂಗೀತ ವಿದ್ವಾಂಸರು ಮೈಸೂರು ಆಸ್ಥಾನದಲ್ಲಿದ್ದರು. ಸುಪ್ರಸಿದ್ಧ ವೀಣೆ ಕುಪ್ಪಯ್ಯನವರ ಮೊಮ್ಮಕ್ಕಳಾದ ವೀಣೆ ವೆಂಕಟಸುಬ್ಬಯ್ಯನವರನ್ನು ದಿವಾನ್ ಪೂರ್ಣಯ್ಯನವರು ಮೈಸೂರಿಗೆ ಆಹ್ವಾನಿಸಿದರೆಂದೂ ಮುಮ್ಮಡಿ ಕೃಷ್ಣರಾಜ ಒಡೆಯರು ಅವರ ಸಂಗೀತ ಸಾಮರ್ಥ್ಯಕ್ಕೆ ಮೆಚ್ಚಿ ಬಹುಮಾನಿಸಿದರೆಂದೂ ತಿಳಿದುಬರುತ್ತದೆ.

19ನೆಯ ಶತಮಾನದ ಅಂತ್ಯ ಮತ್ತು 20ನೆಯ ಶತಮಾನದ ಮೊದಲ ಭಾಗದಲ್ಲಿದ್ದ ಕರ್ನಾಟಕ ಸಂಗೀತ ವಿದ್ವಾಂಸರಲ್ಲಿ ಬಿಡಾರಂ ಕೃಷ್ಣಪ್ಪ ಸಂಗೀತರಂಗದಲ್ಲಿ ಪ್ರಖ್ಯಾತಿಪಡೆದವರು. ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ಇವರು ಕನ್ನಡ ದೇವರನಾಮಗಳಲ್ಲೆ ಸಂಗೀತ ಕಛೇರಿಯನ್ನು ಮಾಡುವ ಪದ್ಧತಿಯನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದರು. ಇವರಿಗೆ ತ್ರಿಸ್ಥಾಯಿಯಲ್ಲಿ ನುಡಿಯುವ ಅದ್ಭುತ ಶಾರೀರ ಸಂಪತ್ತಿದ್ದಿತು. ಇವರ ಸಂಗೀತ ಪ್ರಮುಖವಾಗಿ ಮನೋಭಾವದ, ಸ್ವಾನುಭವದ ಸಂಗೀತವಾಗಿತ್ತು. ಕಾಲಕ್ರಮದಲ್ಲಿ ಇವರ ಗಾನಕೀರ್ತಿ ದಕ್ಷಿಣ ದೇಶದಲ್ಲೆಲ್ಲಾ ಹರಡಿತು. ಮೈಸೂರು ವಾಸುದೇವಾಚಾರ್ಯರು ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ಮತ್ತೊಬ್ಬ ವಿದ್ವನ್ಮಣಿಗಳು. ಸಂಸ್ಕೃತ ಶ್ಲೋಕಗಳನ್ನು ಹಾಡುವುದರಲ್ಲಿ ತಾನ, ಪಲ್ಲವಿಗಳನ್ನು ಹಾಡುವುದರಲ್ಲಿ ಅದ್ವಿತೀಯರು. ಇವರ ಶಿಷ್ಯರಾದ ವಿದ್ವಾನ್ ಚನ್ನಕೇಶವಯ್ಯನವರು ಆಸ್ಥಾನ ವಿದ್ವಾಂಸರಾಗಿದ್ದರು. ಇದೇ ಆಸ್ಥಾನ ವಿದ್ವಾಂಸರಾಗಿದ್ದು ಮೈಸೂರಿನ ಕೀರ್ತಿಯನ್ನು ದೇಶಾದ್ಯಂತ ಹರಡಿದ ಮತ್ತೊಬ್ಬ ವಿದ್ವಾಂಸರು ಟಿ.ಚೌಡಯ್ಯನವರು. (ವಿ.ಎಸ್.ಎಸ್.;ಎಸ್.ಕೆ.ಆರ್.;ಎಲ್.ಆರ್.)

**ಸ್ವರೂಪ ವಿಧಾನ :** ಕರ್ನಾಟಕ ಸಂಗೀತ ದೈವಿಕ ಹಿನ್ನೆಲೆಯಲ್ಲಿ ಸುಪುಷ್ಟವಾಗಿ ಬೆಳೆದು ಬಂದಿದೆ. ನಾದಬ್ರಹ್ಮೋಪಾಸನೆಯೇ ಇದರ ಅಂತಿಮ ಗುರಿ. ಕರ್ನಾಟಕ ಸಂಗೀತಶಾಸ್ತ್ರಜ್ಞರ ಪ್ರಕಾರ ಸಂಗೀತದ ಸರ್ವಸ್ವವೂ ನಾದವೇ. ಸಂಗೀತರತ್ನಾಕರದ ಪ್ರಕಾರ ನಾದದ ವಿಶ್ಲೇಷಣೆ ಹೀಗಿದೆ: ನ ಎಂದರೆ ಪ್ರಾಣ, ದ ಎಂದರೆ ಅನಲ ಅಥ'ವಾ ಅಗ್ನಿ; ಈ ಎರಡರ ಸಂಯೋಗದಿಂದ ಆದದ್ದು ನಾದ. ಮನುಷ್ಯನಲ್ಲಿ ನಾಭಿಯಿಂದ ಅತಿ ಸೂಕ್ಷ್ಮ, ಹೃದಯದಿಂದ ಸೂಕ್ಷ್ಮ, ಕಂಠದಿಂದಪುಷ್ಟ, ಮೂರ್ಧನ್ಯದಿಂದ ಅಪುಷ್ಟ, ಮುಖದಿಂದ ಕೃತ್ರಿಮ ಎಂಬ ನಾದಗಳು ಉತ್ಪತ್ತಿಯಾಗುತ್ತವೆ. ವ್ಯವಹಾರದಲ್ಲಿ ಹೃದಯದಿಂದೆದ್ದ ಮಂದ್ರ,ಮಧ್ಯ, ತಾರ ಇವನ್ನು ಮಾತ್ರ ಪರಿಗಣಿಸುತ್ತಾರೆ. ಇವೇ ಸ್ಥಾಯಿಗಳು, ಸ್ಥಾಯಿಗಳಲ್ಲಿ ಶ್ರುತಿಗಳಿವೆ. ಇಂಥ ಶ್ರುತಿಗಳ ಸಂಖ್ಯೆ ಇಪ್ಪತ್ತೆರಡು. ಇವನ್ನು ಐದು ಭಾಗಗಳಲ್ಲಿ ಅಳವಡಿಸಲಾಗಿದೆ. (ಶಾರ್ಙ್ಗದೇವ), ತೀವ್ರಾ, ರೌದ್ರೀ, ವಜ್ರಿಕಾ, ಉಗ್ರಾ- ಈ ನಾಲ್ಕು ದೀಪ್ತಾ ಎಂಬ ಜಾತಿಗೆ ಸೇರಿದವು. ಕುಮುದ್ವತೀ, ಕ್ರೋಧೀ, ಪ್ರಸಾರಿಣೀ, ಸಂದೀಪಿನೀ, ರೋಹಿಣೀ- ಈ ಐದು ಆಯತಾ ಜಾತಿ, ದಯಾವತೀ, ಆಲಾಪಿನೀ, ಮದಂತೀ- ಈ ಮೂರು ಕರುಣಾ ಎಂಬ ಜಾತಿ; ಮಂದಾ, ರತಿಕಾ, ಪ್ರೀತಿ, ಕ್ಷಿತಿ- ಈ ನಾಲ್ಕು ಮೃದು ಎಂಬ ಜಾತಿ; ಛಂದೋವತಿ, ರಂಜಿನೀ, ಮಾರ್ಜಿನಿ, ರಕ್ತಾ,ರಮ್ಯಾ, ಕ್ಷೋಭಿಣೀ ಈ ಆರು ಮಧ್ಯಾ ಎಂಬ ಜಾತಿ.

ಈ ಶ್ರುತಿಗಳ ನಡುವೆ ಅನುರಣನದಿಂದ ಯುಕ್ತವಾದ, ಸ್ಫುಟವಾದ, ನಿರ್ದಿಷ್ಟವಾದ ಏಳು ಸ್ವರಗಳನ್ನು ನಿಲ್ಲಿಸುತ್ತಾರೆ. ಇವುಗಳ ನಡುವೆ ಇರುವ ವ್ಯತ್ಯಾಸ (ರೇಷ್ಯೋ) ಸ್ಪಂದನ ಪರಿಮಾಣದಲ್ಲಿ. ಇವನ್ನು ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ ಎನ್ನುತ್ತಾರೆ. ಇಪ್ಪತ್ತೆರಡು ಶ್ರುತಿಗಳ ನಡುವೆ ಈ ಏಳು ಸ್ವರಗಳ ಸ್ಥಾನ ಈ ರೀತಿ - 1, 2, 3, 4 ಷಡ್ಜ; 5, 6, 7 ಋಷಭ; 8, 9 ಗಾಂಧಾರ; 10, 11, 12, 13 ಮಧ್ಯಮ; 14, 15, 16, 17 ಪಂಚಮ; 18, 19, 20 ಧೈವತ; 21, 22 ನಿಷಾದ. ಆಯಾ ಸ್ವರದ ಸಂಗಡಲೇ ಬಂದ ಶ್ರುತಿಗೆ ನಿಯತಶ್ರುತಿ ಎಂದು ಹೆಸರು.

ಈ ಏಳು ಸ್ವರಗಳು ಶುದ್ಧ ಮತ್ತು ಪ್ರಕೃತಿ ಸ್ವರಗಳು. ಸ, ರಿ, ಗ, ಮ, ಪ, ಧ, ನಿ ಎಂದು ಇವುಗಳ ನಿರ್ದೇಶ. ನಿಯತಶ್ರುತಿಯೇ ಶುದ್ಧಸ್ವರದ ಉಗಮಸ್ಥಾನ. ಈ ಶುದ್ಧಸ್ವರಗಳಲ್ಲದೆ ವಿಕೃತಸ್ವರಗಳೂ ಇವೆ. ಶಾರ್ಙ್ಗದೇವನ ಪ್ರಕಾರ ವಿಕೃತ ಸ್ವರಗಳ ಸಂಖ್ಯೆ 12, ಸಂಗೀತಪಾರಿಜಾತದ ಪ್ರಕಾರ 22, ಸೋಮನಾಥ'ನ ರಾಗವಿಬೋಧ'ದ ಪ್ರಕಾರ 10, ರಾಮಾಮಾತ್ಯನ ಸ್ವರ ಮೇಳಕಳಾನಿಧಿಯ ಪ್ರಕಾರ 11, ವೆಂಕಟಮಖಿಯ

ಚತುರ್ದಂಡಿ ಪ್ರಕಾಶಿಕೆಯ ಪ್ರಕಾರ 9, ಕಡೆಯ ಸಂಖ್ಯೆಯೇ ಇಂದು ವಾಡಿಕೆಯಲ್ಲಿದೆ. ಈ ವಿಕೃತ ಸ್ವರಗಳು ಶ್ರುತಿಯ ಹೆಚ್ಚಳ ಅಥವಾ ತಗ್ಗುಗಳಿಂದಾದವು. ಅವುಗಳು ಯಾವುವೆಂದರೆ - ಕೋಮಲ ಅಥವಾ ಚತುಃ ಶ್ರುತಿ ಋಷಭ, ಷಟ್ಶ್ರುತಿ ಋಷಭ, ಸಾಧಾರಣ ಗಾಂಧಾರ, ಅಂತರ ಗಾಂಧಾರ, ಪ್ರತಿ ಮಧ್ಯಮ, ಚತುಃಶ್ರುತಿ ಧೈವತ, ಷಟ್ಶ್ರುತಿಧೈವತ, ಕೈಶಿಕೀ ನಿಷಾದ, ಕಾಕಲೀ ನಿಷಾದ. ಏಳು ಸ್ವರಗಳನ್ನು ಸೇರಿಸಿ ನಿರ್ದೇಶಿಸಬೇಕಾದರೆ ಸ,ರ,ರಿ, ರು, ಗ, ಗಿ, ಗು,ಮ, ಮಿ, ಪ, ಧ, ಧಿ, ಧು, ನ, ನಿ, ನು ಎನ್ನುತ್ತಾರೆ. ಸ ಮತ್ತು ಪ ಗಳಲ್ಲಿ ವಿಕಾರವೇ ಇಲ್ಲ; ಇವು ಇನಿತ್ಯ ಶುದ್ಧ. ರಿ ಯಲ್ಲಿ ಮೂರು, ಗ ದಲ್ಲಿ ಮೂರು, ಮ ದಲ್ಲಿ ಎರಡು,ಧದಲ್ಲಿ ಮೂರು, ನಿ ಯಲ್ಲಿ ಮೂರು - ಹೀಗೆ ವಿಕಾರಗಳಿವೆ.

ಈ ಸ್ವರಗಳ ಸಮೂಹ ಗ್ರಾಮ. ಇವು ಮೂರು ವಿಧ ಷಡ್ಜಗ್ರಾಮ, ಮಧ್ಯಮ ಗ್ರಾಮ, ಗಾಂಧಾರ ಗ್ರಾಮ. ಪ್ರತಿ ಗ್ರಾಮದಲ್ಲೂ 7 ಮೂರ್ಛನೆಗಳಿರುತ್ತವೆ. ಮೂರ್ಛನೆಯೆಂದರೆ ಅನುಕ್ರಮವಾಗಿ ಏಳು ಸ್ವರಗಳ ಆರೋಹಣ ಮತ್ತು ಅವರೋಹಣ. ಗಾಂಧಾರ ಗ್ರಾಮದ ಏಳುಮೂರ್ಛನೆಗಳಿಗೆ ನಂದ, ವಿಲಾಸ, ಸುಮುಖೀ, ಚಿತ್ರ, ಚಿತ್ರವತೀ, ಸುಖ, ಆಲಾಪ ಎಂದು ಹೆಸರುಗಳು. ಷಡ್ಜಗ್ರಾಮದ ಮೊದಲ ಮೂರ್ಛನೆಯಲ್ಲಿ ತಾರಸ್ಥಾಯಿಯ ಒಂದು ಸ್ವರ ಮುಟ್ಟುತ್ತೇವೆ, ಎರಡನೆಯ ಮೂರ್ಛನೆಯಲ್ಲಿ ಎರಡು ಇತ್ಯಾದಿ. ಮಧ್ಯಮ ಗ್ರಾಮದ ಮೊದಲ ಮೂರ್ಛನೆಯಲ್ಲಿ ಅತಿತಾರದ ಒಂದು ಸ್ವರ, ಎರಡನೆಯ ಮೂರ್ಛನೆಯಲ್ಲಿ ಎರಡು ಹೀಗೆ ಮುಟ್ಟುತ್ತೇವೆ. ಹಾಗೆಯೇ ಗಾಂಧಾರ ಗ್ರಾಮದಲ್ಲಿ ಅತಿ ತಾರಕ್ಕಿಂತ ತಾರತರವಾದ ಸ್ವರ ಮುಟ್ಟಬೇಕು. ಆದರೆ ಇದು ಮಾನವ ಕಂಠಕ್ಕೆ ಅಸಾಧ್ಯವಾದುದರಿಂದ ದೇವಗಾನವೆಂದು ಇದನ್ನು ಬಿಟ್ಟಿದ್ದಾರೆ. ಅಂತೂ ಮೂರು ಗ್ರಾಮಗಳಿಂದ ಒಟ್ಟು 21 ಮೂರ್ಛನೆಗಳು. ಈ ಸಪ್ತಸ್ವರಗಳು, ಏಕವಿಂಶತಿ ಮೂರ್ಛನೆಗಳು, ಅಷ್ಟಾದಶ ಶ್ರುತಿಗಳು -ಇವಕ್ಕೆ ಒಟ್ಟಾರೆಯಾಗಿ ಸ್ವರಮಂಡಲ ಎಂಬ ಹೆಸರಿದೆ.

ಸ್ವರಗಳನ್ನು ಹಾಡುವುದಕ್ಕೆ ವರ್ಣ ಎಂದು ಹೆಸರು. ಸ್ವರಗಳನ್ನು ನಾಲ್ಕು ಬಗೆಯಾಗಿ ಹಾಡಬಹುದು. ಒಂದೇ ಸ್ವರವನ್ನು ವಿಳಂಬಕಾಲದಲ್ಲಿ ಮೂರಾವರ್ತಿ ಉಚ್ಚರಿಸುವುದು ಸ್ಥಾಯೀ (ಸಾ-ಸಾ-ಸಾ). ಕ್ರಮ ಹಿಡಿದು ಒಂದು ಸ್ವರದಿಂದ ಮೇಲಿನ ಸ್ವರಗಳನ್ನು ಹತ್ತಿದರೆ ಆರೋಹಿ (ರಿ ಗ ಮ ಪ). ಹಾಗೆಯೇ ಕ್ರಮ ಹಿಡಿದು ಇಳಿದರೆ ಅವರೋಹಿ (ನಿ ಧ ಮ ಪ). ಈ ಆರೋಹಿ ಅವರೋಹಿಗಳು ಕಲಿಸಿದಂತೆ ಸ್ವರಗಳನ್ನು ಹಾಡಿದರೆ ಅದು ಸಂಚಾರಿ (ರಿ ಮ ಗ ಮ ಗ ರಿ ಸಾ).

ಇಂಥ ವರ್ಣಗಳನ್ನು ಕ್ರಮವರಿತು ಸೇರಿಸಿದರೆ ಅಲಂಕಾರವಾಗುತ್ತದೆ. ಅಲಂಕಾರವೂ ವರ್ಣದಂತೆ ಸ್ಥಾಯೀ, ಆರೋಹಿ, ಅವರೋಹಿ, ಸಂಚಾರಿ ಎಂದು ನಾಲ್ಕು ವಿಧ. ಸ್ಥಾಯ್ಯಲಂಕಾರದಲ್ಲಿ ಪ್ರಸನ್ನಾದಿ (ಸ ಸ ಸ), ಪ್ರಸನ್ನಾಂತ (ಸ ಸ ಸ), ಪ್ರಸನ್ನಾದ್ಯಂತ (ಸ ಸ ಸ), ಪ್ರಸನ್ನಮಧ್ಯ (ಸ ಸ ಸ), ಕ್ರಮರೇಚಿತ (ಸ ರಿ ಸ ಸ ಗ ಮ ಸ) ಎಂದು ಐದು ವಿಧಗಳು. ಆರೋಹ್ಯಲಂಕಾರದಲ್ಲಿ ವಿಸ್ತೀರ್ಣ (ಸಾ-ರೀ-ಗಾ-ಮಾ), ನಿಷ್ಕರ್ಷ (ಸಸ-ರಿರಿ-ಗಗ), ಪ್ರೇಂಖಿತ (ಸರೀ-ರಿಗಾ-ಗಮಾ), ಬಿಂದು (ಸಸಸರಿ-ಗಗಗಮ-ಮಮಮಪ), ಹಸಿತ (ಸಾ-ರಿರೀ-ಗಗಗಗಾ-ಮಮಮಮಮಾ), ಸಂಧಿಪ್ರಚ್ಛಾದನ (ಸರಿಗಾ-ಗಮಪಾ-ಪಧನೀ), ಅಕ್ಷಿಪ್ತ (ಸಗಾ-ಗಪಾ-ಪನೀ) ಎಂದೂ ಏಳು ಉಪವಿಧಗಳು. ಅವರೋಹ್ಯಾಲಂಕಾರದಲ್ಲೂ ಇದೇ ಏಳು ವಿಧಗಳು. ಆದರೆ ಸ್ವರಗಳ ಕ್ರಮ ಹಿಂದು ಮುಂದಾಗಿರುತ್ತದೆ. ಸಂಚಾರಿ ಅಲಂಕಾರದಲ್ಲಿ ಪ್ರಸಾದ (ಸರಿಸ-ರಿಗರಿ-ಗಮಗ), ಪ್ರೇಂಖ (ಸರಿರಿಸ- ರಿಗಗರಿ-ಗಮಮಗ), ರಂಜಿತ (ಸಗರಿ, ಸಗರಿಸ-ರಿಮಗ, ರಿಮಗರಿ-ಗಪಮ, ಗಪಮಗ), ಆಕ್ಷೇಪ (ಸರಿಗಾ-ರಿಗಮಾ-ಗಮಪಾ), ಪರಿವರ್ತ (ಸಗಮಾ-ರಿಮಪಾ-ಗಪಧಾ), ಕೂಹಜಿ (ಸರಿ, ಸಗಸ-ರಿಗ, ರಿಮರಿ-ಗಮ, ಗಪಗ), ಉದ್ವಾಹಿತ (ಸರಿಗರಿ-ರಿಗಮಗ-ಗಮಪಮ), ಉದ್ಘಟ್ಟಿತ (ಸರಿ,ಪಮಗರಿ-ರಿಗ, ಧಪಮಗ-ಗಮ), ನಿಧಪಮ, ಹುಂಕಾರ (ಸರಿಸ-ಸರಿಗರಿಸ -ಸರಿಗಮರಿಗಸ-ಸರಿಮಪಮಗರಿಸ), ಸ್ಖಲಿತ (ಸಗರಿಮ, ಮರಿಗಸ-ರಿಮಗಪ, ಪಮಗರಿ), ಕ್ರಮ (ಸರಿ-ಸರಿಗ, ಸರಿಗಮ-ರಿಗ, ರಿಗಮ, ರಿಗಮಪ), ಶ್ಯೇನ (ಸಪಾ-ರಿಧಾ-ಗನೀ-ಮಸಾ), ಹ್ರಾದಮಾನ (ಸಗರಿಸ-ರಿಮಗರಿ-ಗಪಮಗ) ಎಂದು ಹದಿಮೂರು ಉಪವಿಧಗಳು, ಭರತ ಕಲ್ಪಲತಾ ಮಂಜರಿಯಲ್ಲಿ ತಾಲ ಮಂದ್ರ ಪ್ರಸನ್ನ (ಸರಿಗಮಗರಿ-ಸರಿಗರಿ-ಸರಿಗಮ), ಮಂದ್ರ ತಾಲಪ್ರಸನ್ನ (ಸರಿಗರಿ-ಸರಿ-ಸರಿಗಮ), ಆವರ್ತಕ (ಸರಿ-ಸರಿಗಮ-ರಿಗ-ರಿಗಮಪ), ಸಂವಿಧಾನ (ಸರಿಗಸರಿಸರಿ-ಗ-ಮಾ-ರಿಗಮರಿಗರಿಗ-ಮ-ಪಾ), ವಿಧೃತ (ಸರಿಗ-ಸರಿಗಮ-ರಿಗಮ-ರಿಗಮಪ), ವ್ಯವಲೋಪ (ಸರಿಗಾ-ಸಾರಿಗಾ-ಮಾ-ಮಾ- ರಿಗಾಮ-ರೀಗಮಾ-ಪಾ-ಪಾ), ಢಿಲ್ಲಾಸಿತ (ಸರಿಗ-ಸರಿಗಮ-ರಿಗಮ-ರಿಗಮಪ) ಎಂದು ಸಪ್ತಾಲಂಕಾರಗಳನ್ನು ಹೇಳಿದೆ.

ಕೇಳುವವರಿಗೆ ಹಿತವೆನಿಸುವಂತೆ ಸ್ವರವನ್ನು ಕಂಪಿಸುವುದಕ್ಕೆ ಗಮಕ ಎಂದು ಹೆಸರು. ಒಂದು ಸ್ವರವನ್ನು ಅರ್ಧಾಕ್ಷರ ಕಾಲ ಹಿಡಿದು ಒತ್ತುವುದು ತಿರಿಪ ಎನಿಸಿಕೊಳ್ಳುತ್ತದೆ. ಒಂದು ಸ್ವರವನ್ನು ಒಂದಕ್ಷರ ಕಾಲ ಅಲುಗಿಸುವುದು ಕಂಪಿತ (ಟ್ರಿಲ್), ಎರಡಕ್ಷರ ಕಾಲ ಅಲುಗಿಸುವುದು ಲೀನ, ನಾಲ್ಕಕ್ಷರ ಕಾಲ ಆಂದೋಲಿತ, ಹನ್ನೆರಡಕ್ಷರ ಕಾಲ ಪ್ಲಾವಿತ. ಸಸ, ರಿರಿ ಇತ್ಯಾದಿ ಜಂಟಿಸ್ವರಗಳಲ್ಲಿ ಎರಡನೆಯ ಸ್ವರವನ್ನು ಒತ್ತಿ ಬಿಡುವುದು ಆರೋಹಣದಲ್ಲಿ ಸ್ಫುರಿತ (ಡಿಫ್ಲೆಕ್ಟ್), ಅವರೋಹಣದಲ್ಲಿ ಪ್ರತ್ಯಾಘಾತ. ಒಂದು ಸ್ವರದಿಂದ ಹಿಂದಿನ ಸ್ವರಕ್ಕೆ ಸ್ವರ ಛಾಯೆಯಲ್ಲಿ ಇಳಿಯುವುದು (ಪಮ=ಪಪಮ) ಆಹತ; ವೀಣೆಯಲ್ಲಿ ಮೀಟುಹಾಕಿ ಗ ಸ್ವರವನ್ನು ಎಬ್ಬಿಸಿ, ಮೀಟು ಹಾಕದೆಯೇ ಮ ಸ್ವರವನ್ನು ಉತ್ಪತ್ತಿ ಮಾಡುವುದು ಆಹತವೆನಿಸಿಕೊಳ್ಳುತ್ತದೆ. ಒಂದು ಸ್ವರದಿಂದ ಕೆಳಗಿನ ಇನ್ನೊಂದು ಸ್ವರಕ್ಕೆ ಇಳಿಯುವಾಗ ನಡುವೆ ಇರುವ ಸ್ವರವನ್ನು ಶಬ್ದಿಸಿ ದಾಟುವುದು ಖಂಡಿಂಪು [ಮರಿ=ಮ(ಗ)ರಿ]. ಉಲ್ಲಸಿತ ಎಂಬುದಿನ್ನೊಂದು ಬಗೆಯ ಗಮಕ. ಒಂದು ಸ್ವರದಿಂದ ಮತ್ತೊಂದು ಸ್ವರಕ್ಕೆ ಜಾರುವುದು ಆರೋಹಣದಲ್ಲಿ ಎಕ್ಕುಜಾರು, ಅವರೋಹಣದಲ್ಲಿ ದಿಗುಜಾರು. ಒಂದೇ ಸ್ವರಸ್ಥಾನದಲ್ಲಿ ಪಕ್ಕದ ಸ್ವರವನ್ನೂ ಲಘುವಾಗಿ ಪ್ರದರ್ಶಿಸುವುದು ಓರಿಕ (ಸನಿಧಪ=ಸರಿನಿಸಧನಿಪ). ಇಂಥ ಗಮಕಗಳ ಒಟ್ಟು ಸಂಖ್ಯೆ ಹತ್ತೊಂಬತ್ತು. ಆದರೆ ಸಾಮಾನ್ಯವಾಗಿ ಬಳಕೆಯಲ್ಲಿರುವುದು ಹತ್ತು ಮಾತ್ರ.

ಸ್ವರಗಳಲ್ಲಿ ನಾಲ್ಕು ವಿಧ ವಾದಿ,ಸಂವಾದಿ,ಅನುವಾದಿ, ವಿವಾದಿ. ವಾದಿ (ಸೊನ್ಯಾಂಟ್) ಎನ್ನುವುದು ಮುಖ್ಯಸ್ವರ. ರಾಗದಲ್ಲಿ ಬಹುವೇಳೆ ಬರುವ ಸ್ವರ (ಸರಿಗಮಪಧನಿಸ-ರಿಗಮಪಧನಿಸ-ಗಮಪಧನಿಸ-ಮಪಧನಿಸ-ಪಧನಿಸ-ಧನಿಸ-ನಿಸ-ಸ) ಸಂವಾದಿ (ಕಾನ್ಸೊನೆಂಟ್) ಸ್ವರ ವಾದಿಯೊಂದಿಗೆ ಸುಸಂಗತವಾಗಿ ಸೇರಿ ಹೊಂದಿಕೊಂಡು ಹೋಗುವ ಸ್ವರ. ಸಂವಾದಿ ಸ್ವರಗಳ ನಡುವೆ ಎಂಟು ಇಲ್ಲವೆ ಹನ್ನೆರಡು ಶ್ರುತಿಗಳ ಅಂತರ ಇರಬೇಕು. ಸ-ಪ, ಸ-ಮ, ರ-ಧ, ಗ-ನ, ಗಿ-ನಿ, ಗು-ನು, ರ-ಮಿ ಗಳು ಸಂವಾದಿ ಸ್ವರಗಳು. ವಿವಾದಿಗೆ (ಡಿಸ್ಸೊನೆಂಟ್) ವೈರಿ ಸ್ವರ ಎಂದೂ ಹೆಸರು; ಎರಡು ಸ್ವರಗಳ ನಡುವೆ ಒಂದೇ ಶ್ರುತಿಯ ಅಂತರ ಇದ್ದರೆ ಸಂವಾದಿ, ವಾದಿಗೆ ವಿರುದ್ಧ (ಸಮ್ಮಗರಿಸ-ರಿಗಮ-ರಿಪ್ಪಮರಿಗ-ಗಮಪ-ಗದ್ದಪಮಗ-ಮಪಧ). ಕಡೆಯದಾಗಿ ಅನುವಾದಿ (ಅಸ್ಸೊನೆಂಟ್). ವಾದಿಯೊಂದಿಗೆ ಯಾವೊಂದು ಸಂಬಂಧವನ್ನೂ ಇಟ್ಟುಕೊಂಡಿರದೆ, ಅದಕ್ಕೆ ವಿರೋಧವಾಗಿಯೂ ಇರದೆ ರಾಗದ ಸೌಂದರ್ಯ ಹೆಚ್ಚಿಸಲು ತನ್ನ ಮಟ್ಟಿಗೆ ತಾನು ಯತ್ನಿಸುತ್ತದೆ (ಸರಿಗ-ರಿಪಮ-ಗಮಪ). ಇದೂ ಒಂದು ಬಗೆಯಲ್ಲಿ ಸಂವಾದಿತ್ವವೇ ಆದರೂ ಸಂವಾದಿಗಿಂತ ಇದರ ಸಂವಾದಿತ್ವ ಕಡಿಮೆ.

**ರಾಗ :** ದಕ್ಷಿಣಾದಿ ಸಂಗೀತದ ವೈಶಿಷ್ಟ್ಯವೆಂದರೆ ರಾಗ ಪದ್ಧತಿ. ರಾಗ ಎಂದರೆ ಸಂತೋಷಪಡಿಸುವುದು ಎಂದರ್ಥ (ರಂಜಕತ್ವಾತ್). ಇಂಗ್ಲಿಷಿನಲ್ಲಿ ಇದಕ್ಕೆ ಮೆಲೊಡಿ-ಟೈಪ್, ಮೆಲೊಡಿ-ಮೌಲ್ಡ್, ಟ್ಯೂನ್ ಎನ್ನಬಹುದು. ಶುದ್ಧವಿಕೃತ ಸ್ವರಗಳ ಸಂಖ್ಯೆ ಹನ್ನೆರಡು. ಅವುಗಳಲ್ಲಿ (ಸಪ್ತಸ್ವರಭೇದಗಳಲ್ಲಿ) ಐದಕ್ಕೆ ಕಡಿಮೆ ಇಲ್ಲದಂತೆ ಸ್ವರಗಳನ್ನಾಯ್ದು ಅವನ್ನು ಆಧಾರಷಡ್ಜಕ್ಕೆ ಸಂಬಂಧಿಸಿದಂತೆ ಒಂದು ಕ್ರಮದಲ್ಲಿ ಸೇರಿಸಿದರೆ ರಾಗವಾಗುತ್ತದೆ. ಐದೇ ಸ್ವರಗಳಿದ್ದರೆ ಅದಕ್ಕೆ ಔಡವ (ಪೆಂಟಾಟೋನಿಕ್) ರಾಗ ಎಂದು ಹೆಸರು. ದೃಷ್ಟಾಂತ ಬೇಕೆಂದರೆ ಮೋಹನ ರಾಗದಲ್ಲಿ ಸರಿಗಪಧಸ ಎಂಬಷ್ಟೇ ಸ್ವರಗಳು. ಆರು ಸ್ವರಗಳಿದ್ದರೆ ಅದು ಷಾಡವ ರಾಗ (ಹೆಕ್ಸೋಟೋನಿಕ್) ಎನಿಸಿಕೊಳ್ಳುತ್ತದೆ. ಶ್ರೀರಂಜನೀ ರಾಗದಲ್ಲಿ ಸರಿಗಮಧನಿ ಎಂಬಷ್ಟೇ ಸ್ವರಗಳು. ಏಳೂ ಸ್ವರಗಳಿದ್ದರೆ ಸಂಪೂರ್ಣ ರಾಗ. ಆರೋಹಣದಲ್ಲಿ ಅವರೋಹಣದಲ್ಲಿ ಎರಡರಲ್ಲೂ ಸಂಪೂರ್ಣವಾಗಿದ್ದರೆ ಅಂಥ ರಾಗಕ್ಕೆ ಮೇಳಕರ್ತ ಅಥವಾ ಜನಕರಾಗ ಅಥವಾ ಸಂಪೂರ್ಣ ರಾಗ ಎಂದು

ಹೆಸರು. ಇಂಥ ಮೇಳಕರ್ತಗಳನ್ನು ಎಪ್ಪತ್ತೆರಡಾಗಿ ವೆಂಕಟಮುಖಿ ತನ್ನ ಚತುರ್ದಂಡಿ ಪ್ರಕಾಶಿಕೆಯಲ್ಲಿ ವಿಭಾಗ ಮಾಡಿದ್ದಾನೆ. ನಿತ್ಯ ಶುದ್ಧ ಸ್ವರಗಳಾದ ಸ ಮತ್ತು ಪ - ಈ 72 ರಾಗಗಳಲ್ಲೂ ಏಕರೀತಿಯಾಗಿರುತ್ತವೆ. ಮಧ್ಯಮದ ವಿಕಾರಗಳಾದ ಶುದ್ಧ ಮತ್ತು ಪ್ರತಿಮಧ್ಯಮಗಳು ಬರುವ ದೃಷ್ಟಿಯಿಂದ ಮೇಳಕರ್ತಗಳನ್ನು ಪೂರ್ವ, ಉತ್ತರ ಎಂದು ವಿಗಂಡಿಸಿದ್ದಾರೆ -ಪೂರ್ವ ಮೇಳದಲ್ಲಿ 1 ರಿಂದ 36 ರಾಗಗಳಿದ್ದು ಅವುಗಳೆಲ್ಲಲ್ಲ ಶುದ್ಧ ಮಧ್ಯಮ ಇರುತ್ತದೆ. ಉತ್ತರ ಮೇಳದಲ್ಲಿ 37 ರಿಂದ 72 ರಾಗಗಳಿದ್ದು ಅವುಗಳಲ್ಲಿ ಪ್ರತಿ ಮಧ್ಯಮ ಇರುತ್ತದೆ. ಉಳಿದ ಋಷಭ, ಗಾಂಧಾರ, ಧೈವತ, ನಿಷಾದಗಳು ರಾಗರಾಗಕ್ಕೆ ವ್ಯತ್ಯಾಸವಾಗುತ್ತ ಹೋಗುತ್ತವೆ.

ಇಲ್ಲೂ ಒಂದು ಕ್ರಮಹಿಡಿದು ಒಂದೇ ಜಾತಿಯ ಈ ಸ್ವರಗಳು ಬರುವ ಆರಾರು ರಾಗಗಳನ್ನು ಒಂದೊಂದು ಚಕ್ರ ಮಾಡಿ ಇಂಥ ಹನ್ನೆರಡು ಚಕ್ರಗಳಲ್ಲಿ 72 ರಾಗಗಳನ್ನೂ ಅಡಕ ಮಾಡಿದ್ದಾರೆ. ಪೂರ್ವಮೇಳದ ಮೊದಲ ಚಕ್ರವಾದ ಇಂದುವಿನಲ್ಲಿ ಸ, ಪ, ಮ ಗಳ ಜೊತೆಗೆ ರ, ಗ ಇದ್ದು ಇದರ ಆರು ರಾಗಗಳಲ್ಲಿ ಧ, ನ ಗಳ ವಿಕಾರಗಳು ಇರುತ್ತವೆ ಇತ್ಯಾದಿ.

ಸ್ವರಜಾತಿ ವೈವಿಧ್ಯದಿಂದ ರಾಗವೈವಿಧ್ಯ. ಏಳು ಸ್ವರಗಳೂ ಕ್ರಮ ಹಿಡಿದು ಬಂದು ಆರೋಹಣಾವರೋಹಣಗಳಲ್ಲೂ ಒಂದೇ ಜಾತಿಯ ಸ್ವರಗಳಾಗಿರುವುದು ಮೇಳಕರ್ತರಾಗದ ಲಕ್ಷಣ. ಉಳಿದ ರಾಗಗಳಲ್ಲಿ ಹೀಗೆ ಸಪ್ತಸ್ವರಗಳೂ ಇರುವುದಿಲ್ಲ. ಸ್ವರಗಳ ಆರೋಹಣಾವರೋಹಣ ಹೀಗೆ ಪೂರ್ಣ ಕ್ರಮಯುಕ್ತವೂ ಅಲ್ಲ. ಏಳು ಸ್ವರಗಳೂ ಇಲ್ಲದಿರುವುದರಿಂದ ಇವುಗಳಿಗೆ ವರ್ಜ್ಯರಾಗಗಳೆನ್ನುತ್ತಾರೆ.

ಇಂಥ ರಾಗಗಳ ಸಂಖ್ಯೆ ಅನಂತವಾದರೂ ಸುಮಾರು 800 ಬಳಕೆಯಲ್ಲಿವೆ. ಸ್ವರಗಳ ಸಂಖ್ಯೆಯ ದೃಷ್ಟಿಯಿಂದ ವರ್ಜ್ಯರಾಗಗಳಲ್ಲಿ ಎಂಟು ವಿಧಗಳಾಗುತ್ತವೆ. ಆರೋಹಣದಲ್ಲೂ ಐದು, ಅವರೋಹಣದಲ್ಲೂ ಐದು ಸ್ವರಗಳು ಬಂದರೆ ಅದು ಔಡವ-ಔಡವ; ಮೋಹನ ರಾಗದಲ್ಲಿ ಸರಿಪಧಗ ಇಷ್ಟು ಮಾತ್ರ ಸ್ವರಗಳು (ಹರಿಕಾಂಭೋದಿ ಮೇಳದ ಜನ್ಯ ಇದು). ಆರೋಹಣದಲ್ಲಿ ಆರು, ಅವರೋಹಣದಲ್ಲಿ ಐದು ಸ್ವರಗಳಿದ್ದರೆ ಷಾಡವ-ಔಡವ; ನಾಟಕುರಂಜಿ ರಾಗದಲ್ಲಿ ಸರಿಗಮಧನಿಸ-ಸನಿಮಧಧಸ ಬರುತ್ತವೆ (ಇದೂ ಹರಿಕಾಂಭೋದಿ ಜನ್ಯ). ಆರೋಹಣದಲ್ಲಿ ಐದು ಅವರೋಹಣದಲ್ಲಿ ಆರು ಇದ್ದರೆ ಔಡವ-ಷಾಡವ; ಶ್ರೀಮಣಿ ರಾಗದಲ್ಲಿ ಸರಗಪಧಸ-ಸನಿಧಪಗರಸ (ಇದು ರತ್ನಾಂಗಿ ಮೇಳಜನ್ಯ). ಆರೋಹಣದಲ್ಲಿ ಐದು ಅವರೋಹಣದಲ್ಲಿ ಏಳು ಸ್ವರಗಳಿದ್ದರೆ ಔಡವ-ಸಂಪೂರ್ಣ; ಕೀರ್ತಿಪ್ರಿಯ ರಾಗದಲ್ಲಿ ಸರಮಪಧಸ-ಸನಧಪಮಗರಸ (ಇದು ಕನಕಾಂಗಿ ಮೇಳ ಜನ್ಯ). ಆರೋಹಣದಲ್ಲಿ ಆರು, ಅವರೋಹಣದಲ್ಲಿ ಆರು ಸ್ವರಗಳಿದ್ದರೆ ಷಾಡವ-ಷಾಡವ; ಶ್ರೀ ರಂಜಿನೀ ರಾಗದ ಸ್ವರಗಳು ಸರಿಗಮಧನಿಸ-ಸನಿಧಮಗರಿಸ (ಖರಹರಪ್ರಿಯಜನ್ಯ). ಆರೋಹಣದಲ್ಲಿ ಆರು ಅವರೋಹಣದಲ್ಲಿ ಏಳು ಸ್ವರಗಳಿದ್ದರೆ ಷಾಡವ-ಸಂಪೂರ್ಣ; ಕಾಂಭೋದಿ ರಾಗದಲ್ಲಿ ಸರಿಗಮಪಧಸ ಸನಿಧಪಮಗರಿಸ (ಹರಿಕಾಂಭೋದಿ ಜನ್ಯ). ಆರೋಹಣದಲ್ಲಿ ಏಳು ಅವರೋಹಣದಲ್ಲಿ ಆರು ಸ್ವರಗಳಿದ್ದರೆ ಸಂಪೂರ್ಣ-ಷಾಡವ; ಸೇನಾಜಯಂತೀ ರಾಗದಲ್ಲಿ ಸರುರಿಗಪಧಮಸ-ಸಧಪನಿಮಗಸ (ಸುಚರಿತ್ರ ಮೇಳಜನ್ಯ). ಕಡೆಯದಾಗಿ ಆರೋಹಣದಲ್ಲಿ ಏಳು; ಅವರೋಹಣದಲ್ಲಿ ಐದು ಸ್ವರಗಳಿದ್ದರೆ ಸಂಪೂರ್ಣ-ಔಡವ ಗೌರೀಶೀಮಂತಿನೀ ರಾಗದಲ್ಲಿ ಸಗಮಮಪಧನಿಸ-ಸನಿಪಗರಿಸ (ನಾಸಿಕಾಭೂಷಣೀಜನ್ಯ). ಇದು ಸ್ವರಸಂಖ್ಯಾ ದೃಷ್ಟಿಯಿಂದ ಮಾಡಿದ ವಿಭಾಗ.

ಮತ್ತೊಂದು ದೃಷ್ಟಿಯೆಂದರೆ ಸ್ವರಗಳು ಕ್ರಮವಾಗಿ ಬಂದಿವೆಯೋ ಇಲ್ಲವೋ ಎಂಬುದು. ಅವರೋಹಣದಲ್ಲಿ ಆಧಾರ ಷಡ್ಜದಿಂದ ಶುರುಮಾಡಿ ಋಷಭ, ಅನಂತರ ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ, ತಾರಷಡ್ಜ, ಅವರೋಹಣದಲ್ಲಿ ತಾರಷಡ್ಜದಿಂದ ಶುರುಮಾಡಿ ನಿಷಾದ, ಧೈವತ, ಪಂಚಮ, ಮಧ್ಯಮ, ಗಾಂಧಾರ, ಋಷಭ ಮಧ್ಯಸ್ಥಾಯಿಷಡ್ಜ ಮುಟ್ಟುವ ರಾಗಗಳು ಕ್ರಮರಾಗಗಳು. ಈ ಕ್ರಮ ತಪ್ಪಿ ಸ್ವರಗಳು ಬಂದರೆ ಅಂಥ ರಾಗಕ್ಕೆ ವಕ್ರರಾಗ ಎಂದು ಹೆಸರು. ಈ ವಕ್ರತ್ವ ಆರೋಹಣದಲ್ಲಿರಬಹುದು. ಚಕ್ರವಾಕಜನ್ಯವಾದ ವೇಗವಾಹಿನೀ ಸ ರ ಗು ಮ ಪ ಧಿ ನಿ ಸ - ಸ ನಿ ಧಿ ಪ ಮ ಗು ರ ಸ ಎಂಬ ಸ್ವರಗಳನ್ನೂ ನಟಭೈರವೀಜನ್ಯವಾದ ಆನಂದಭೈರವಿ ಸ ಗಿ ರಿ ಗಿ ಮ ಪ ಧ ಪ ನಿ ಸ - ಸ ನಿ ಧ ಪ ಮ ಗ ರಿ ಸ ಎಂಬ ಸ್ವರಗಳನ್ನೂ ಹೊಂದಿವೆ. ಇಲ್ಲವೇ ಅವರೋಹಣ ವಕ್ರವಾಗಿರಬಹುದು. ಹರಿಕಾಂಭೋದಿಜನ್ಯವಾದ ಸುರುಟಿ ರಾಗದಲ್ಲಿ ಸ ರಿ ಮ ಪ ನಿ ಸ - ಸ ನಿ ಧಿ ಪ ಮ ಗು ಪ ಮ ರೀ ಸ ಎಂಬ ಸ್ವರಗಳೂ ಗಾಂಗೇಯಭೂಷಣೀಜನ್ಯವಾದ ಗಂಗಾತರಂಗಿಣಿ ರಾಗದಲ್ಲಿ ಸ ರು ಗು ಮ ಪ ಸ - ಸ ನು ಧ ಪ ಸ ಗು ಮ ರು ಸ ಎಂಬ ಸ್ವರಗಳೂ ಬರುತ್ತವೆ. ಅಥವಾ ಎರಡೂ ವಕ್ರವಾಗಿರಬಹುದು. ನಟಭೈರವೀಜನ್ಯವಾದ ಹಿಂದೋಳ ವಸಂತ ರಾಗದಲ್ಲಿ ಸ ಗಿ ಮ ಪ ಧ ನಿ ಧ ಸ - ಸ ನಿ ಧ ಪ ಮ ಧ ಮ ಗಿ ಸ ಎಂಬ ಸ್ವರಗಳು ಬರುತ್ತವೆ.

ತಂತಮ್ಮ ಮೇಳಕರ್ತಗಳಲ್ಲಿ ಬಂದಂಥದೇ ಜಾತಿಯ ಸ್ವರಗಳನ್ನು ಮಾತ್ರ ಜನ್ಯರಾಗಗಳು ಹೊಂದಿದ್ದರೆ ಅಂಥವಕ್ಕೆ ಉಪಾಂಗರಾಗಗಳೆನ್ನುತ್ತಾರೆ; ಶುದ್ಧ ಸಾವೇರಿ, ಮೋಹನ ಮುಂತಾದ ಹಲವು ರಾಗಗಳು ಈ ಜಾತಿಗೆ ಸೇರಿದವು. ತಂತಮ್ಮ ಮೇಳಗಳ ಸ್ವರಗಳ ಜೊತೆಗೆ ವಿಜಾತೀಯ ಸ್ವರಗಳೂ ಜನ್ಯರಾಗದಲ್ಲಿದ್ದರೆ ಅದು ಭಾಷಾಂಗರಾಗ; ಈ ಅನ್ಯಸ್ವರಗಳು ಕೆಲವು ಸಂಚಾರಗಳಲ್ಲಿ ಮಾತ್ರ ಬರುತ್ತವೆ. ನಟಭೈರವಿಯ ಧೈವತ ಶುದ್ಧವಾದರೂ ಭೈರವಿಯ ಕೆಲವೆಡೆ ಚತುಃಶ್ರುತಿ ಧೈವತ ಬರುತ್ತದೆ; ಇದರಿಂದ ರಾಗದ ಮಾಧುರ್ಯ ಹೆಚ್ಚುತ್ತದೆ. ನೀಲಾಂಬರಿ, ಮಾಂಜಿ, ಬಿಲಹರಿ ಮುಂತಾದ ಭಾಷಾಂಗ ರಾಗಗಳಲ್ಲಿ ಒಂದೇ ಒಂದು ಅನ್ಯಸ್ವರ ಇರುತ್ತದೆ. ಆನಂದಭೈರವಿ, ಹಿಂದುಸ್ತಾನೀ, ಬೇಹಾಗ್ ಮುಂತಾದ ಭಾಷಾಂಗರಾಗಗಳಲ್ಲಿ ಎರಡು ಅನ್ಯಸ್ವರಗಳು ಇರುತ್ತವೆ. ಹಿಂದುಸ್ತಾನೀ ಕಾಪಿಯಲ್ಲಿ ಮೂರು ಅನ್ಯಸ್ವರಗಳಿರುತ್ತವೆ. ಈ ಅನ್ಯಸ್ವರಗಳಿಂದ ರಾಗ ಲಕ್ಷಣಕ್ಕೆ ಧಕ್ಕೆ ಬರುವುದಿಲ್ಲ. ರಾಗದ ಸ್ವರೂಪ ಇನ್ನೂ ಹೆಚ್ಚು ಸ್ಫುಟವಾಗಲೆಂದೇ ಅನ್ಯಸ್ವರ ಪ್ರವೇಶದ ಆಶಯ.

ಸಾಮಾನ್ಯವಾಗಿ ಆರೋಹಣ ಆಧಾರಷಡ್ಜದಿಂದ ಮೊದಲಾಗಿ ತಾರಷಡ್ಜದಲ್ಲಿ ಮುಗಿಯುತ್ತದೆ. ಆದರೆ ಕೆಲವು ರಾಗಗಳಲ್ಲಿ ಆರೋಹಣ ತಾರಷಡ್ಜವನ್ನು ಮುಟ್ಟುವುದೇ ಇಲ್ಲ. ನಿಷಾದಕ್ಕೊ ಧೈವತಕ್ಕೊ ಪಂಚಮಕ್ಕೊ ಬಂದು ಹಿಂದಿರುಗುತ್ತದೆ. ಷಣ್ಮುಖಪ್ರಿಯ ಮೇಳದ ದೇಶಮಾಳವಿಯ ಕೈಶಿಕೀ ನಿಷಾದಕ್ಕಿಂತ ಮುಂದೆ ಹೋಗುವುದಿಲ್ಲ; ಇಂಥ ರಾಗಗಳಿಗೆ ನಿಷಾದಾಂತ ರಾಗಗಳೆನ್ನುತ್ತಾರೆ. ಸರಸಾಂಗೀ ಮೇಳದ ಮಣಿಮಯ ರಾಗ, ಧೀರ ಶಂಕರಾಭರಣ ಮೇಳದ ಕುರಂಜೀ ರಾಗ, ಶುದ್ಧ ಧೈವತದಲ್ಲೇ ಆರೋಹಣ ಮುಗಿಸುತ್ತವೆ. ಇಂಥವಕ್ಕೆ ಧೈವತಾಂತ ರಾಗಗಳೆಂದು ಹೆಸರು. ಧೀರಶಂಕರಾಭರಣ ಮೇಳದ ನವರೋಸ್ ಮತ್ತು ಜುಲಾವ್ ರಾಗಗಳು ಪಂಚಮದಲ್ಲೇ ಮುಗಿಯುವುದರಿಂದ ಅಂಥ ರಾಗಗಳಿಗೆ ಪಂಚಮಾಂತಗಳೆನ್ನುತ್ತಾರೆ. ಇವು ಜನ್ಯರಾಗದ ವಿವಿಧ ಜಾತಿಗಳು.

ಮೇಳಕರ್ತರಾಗ ಗೊತ್ತಾಗಿದ್ದರೆ ಅದರ ಮೇಳಸಂಖ್ಯೆ ಇದೇ ಎಂದು ಹೇಳುವ ಬಗೆ ಹೇಗೆ ಎಂಬುದನ್ನು ನಿರ್ಧರಿಸಲು ಈ ಕೆಳಗಿನ ಕಟಪಯಾದಿ ಸಂಖ್ಯಾಯಂತ್ರವನ್ನುಪಯೋಗಿಸುತ್ತಾರೆ.

| | 1 | 2 | 3 | 4 | 5 | 6 | 7 | 8 | 9 | 0 |
|---|---|---|---|---|---|---|---|---|---|---|
| ಕಾದಿನವ | ಕ | ಖ | ಗ | ಘ | ಙ | ಚ | ಛ | ಜ | ಝ | ಞ |
| ಟಾದಿನವ | ಟ | ಠ | ಡ | ಢ | ಣ | ತ | ಥ | ದ | ಧ | ನ |
| ಪಾದಿಪಂಚ | ಪ | ಫ | ಬ | ಭ | ಮ | | | | | |
| ಯಾದ್ಯಷ್ಟ | ಯ | ರ | ಲ | ವ | ಶ | ಷ | ಸ | ಹ | | |

ಮೇಳ ಪತ್ತೆ ಮಾಡಬೇಕಾಗಿರುವ ರಾಗದ ಹೆಸರಿನ ಮೊದಲ ಎರಡು ಅಕ್ಷರಗಳನ್ನು ತೆಗೆದುಕೊಂಡು, ಆ ಅಕ್ಷರಗಳಿಗೆ ತಕ್ಕ ಸಂಖ್ಯೆಯನ್ನು ಈ ಪದಕದಿಂದ ನಿರ್ಧರಿಸಬೇಕು; ಅನಂತರ ಆ ಎರಡು ಸಂಖ್ಯೆಯನ್ನು ತಿರುಗುಮುರುಗು ಮಾಡಿದರೆ ಮೇಳರಾಗದ ಸಂಖ್ಯೆ ಬರುತ್ತದೆ. ದೃಷ್ಟಾಂತಕ್ಕೆ, ಚಾರುಕೇಶೀ ರಾಗದ ಮೇಳ ತಿಳಿಯಬೇಕೆಂದರೆ- ಚ ದ ಸಂಖ್ಯೆ ಪದಕದಲ್ಲಿ 6, ರು ದ ಸಂಖ್ಯೆ 2 ಅಂದರೆ 62 ಆಯಿತು. ಅದನ್ನು ಹಿಂದುಮುಂದು ಮಾಡಿದರೆ 26 - ಅದೇ ಚಾರುಕೇಶಿಯ ಮೇಳ ಸಂಖ್ಯೆ; ಹಾಗೆಯೇ ಖರಹರಪ್ರಿಯ ಖ 2 ರ 2; 22 ಹಿಂದು ಮುಂದು ಮಾಡಿದರೂ ಅಷ್ಟೇ ಅದರ ಮೇಳ.

ಧಾತುವರ್ಧಿನಿ -ಧ 9, ತು 6; 96; 69ನೆಯ ಮೇಳ. ರಸಿಕಪ್ರಿಯ - ರ 2 ಸಿ 7; 27; 72ನೆಯ ಮೇಳ ಇತ್ಯಾದಿ. ಈ ಪದಕ ಜನ್ಯರಾಗಗಳಿಗೆ ಅನ್ವಯಿಸುವುದಿಲ್ಲ.

ರಾಗಗಳನ್ನು (ಜನಕ-ಜನ್ಯ ಎರಡೂ) ಮತ್ತೊಂದು ಬಗೆಯಲ್ಲಿ ವಿಂಗಡಿಸುತ್ತಾರೆ. ಮಾಯಾಮಾಳವಗೌಳ, ಕಲ್ಯಾಣಿಯಂಥ ರಾಗಗಳು ತಂತಮ್ಮ ವೈಶಿಷ್ಟ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡು, ಅದರಿಂದ ಮಾತ್ರ ತೃಪ್ತವಾಗಿ, ಲಕ್ಷಣಕಾರರ ಆದೇಶಗಳಿಗೆ ತಲೆಬಾಗಿ ಪಾತಿವ್ರತ್ಯ ನಿಯಮ ಪಾಲಿಸುವ ರಾಗಗಳು, ಇವುಗಳಿಗೆ ಶುದ್ಧರಾಗಗಳೆಂದು ಹೆಸರು. ಸಾರಂಗ, ಸೌರಾಷ್ಟ್ರದಂಥ ಮತ್ತೆ ಕೆಲವು ರಾಗಗಳು ಬೇರೆ ರಾಗಗಳ ಲಕ್ಷಣವನ್ನೂ ಪ್ರದರ್ಶಿಸುತ್ತವೆ; ಇಂಥವಕ್ಕೆ ಛಾಯಾಲಗ ಅಥವಾ ಸಾಳಗ ಎನ್ನುತ್ತಾರೆ. ಉದಾ: ಕುರಂಜಿ, ಶಂಕರಾಭರಣ ಇತ್ಯಾದಿ.

ಹೀಗೆ ಬೇರೆ ರಾಗದ ಛಾಯೆ ತನ್ನ ವೈಶಿಷ್ಟ್ಯಕ್ಕೆ ಪೈಪೋಟಿ ಮಾಡುವಷ್ಟು ಹಿರಿದಾಗಿದ್ದರೆ ಅದು ಸಂಕೀರ್ಣ ಅಥವಾ ಮಿಶ್ರರಾಗ; ಘಂಟಾ, ಆಹಿರಿ ಮುಂತಾದವು ಇಂಥವು.

ಭಾವಸ್ಫುರಣದ ದೃಷ್ಟಿಯಿಂದ ರಾಗವನ್ನು ಘನ ಇಲ್ಲವೆ ನಯ ಎನ್ನಬಹುದು. ಚಲನಾಟ ರಾಗ ದಿಟ್ಟತನವನ್ನು ಸೂಚಿಸುತ್ತದೆ; ಶುದ್ಧನಾಟ ಶಕ್ತಿ, ವೈಭವಗಳ ಪ್ರದರ್ಶಕ. ಶ್ರೀರಾಗದಲ್ಲಿ ಶೋಕದ ವಾಸನೆ ಇದ್ದರೂ ಅದರಲ್ಲಿ ಒಂದು ಠೀವಿ, ಗತ್ತು ಇದೆ. ಹೀಗೆಯೇ ಗೌಳ ಆರಭಿ ವರಾಳಿ ಕೇದಾರ ರೀತಿಗೌಳ ಮುಂತಾದವು ಪ್ರತಿಷ್ಠೆಯನ್ನಾಗಲಿ ಪರಾಕ್ರಮವನ್ನಾಗಲೀ ವ್ಯಕ್ತಪಡಿಸುವುದರಿಂದ ಇವಕ್ಕೆ ಘನರಾಗಗಳೆನ್ನುತ್ತಾರೆ. ಈ ರಾಗಗಳಿಗೆ ತಾನ (ಮಧ್ಯಮ ಕಾಲ) ತುಂಬ ಸೊಗಸು. ದುಃಖಪ್ರದರ್ಶಕವಾದ ತೋಡಿ. ಅಂಗಲಾಚಿ ಬೇಡುವ ಕಾಂಬೋದಿ, ಗೋಳು ಕರೆಯುವ ಭೈರವಿ, ಶೃಂಗಾರರಸಭರಿತವಾದ ಕಲ್ಯಾಣಿ ಇಂಥ ಹೃದಯ ಮುಟ್ಟುವ ರಾಗಗಳನ್ನು ನಯ ಅಥವಾ ರಕ್ತಿರಾಗಗಳೆನ್ನುತ್ತಾರೆ. ಇವುಗಳ ಆಲಾಪನೆಯೇ ತುಂಬ ಹಿತ. ಈ ಎರಡೂ ಬಗೆಯ ಭಾವಗಳನ್ನು ಕೊಂಚಮಟ್ಟಿಗೆ ವ್ಯಕ್ತಪಡಿಸುತ್ತ ಆಲಾಪನೆಯಲ್ಲಿ ಮಾತ್ರವೇ ತನ್ನ ವೈಶಿಷ್ಟ್ಯ ಹೊರಸೂಸುವ ಕಾನಡ, ಬೇಹಾಗ್, ಜಂಝೂಟಿ ಮುಂತಾದ ದೇಶ್ಯ ರಾಗಗಳು ಉತ್ತರದಿಂದ ಕರ್ಣಾಟಕ ಸಂಗೀತದಲ್ಲಿ ಬಂದು ಸೇರಿಕೊಂಡು ಕರ್ನಾಟಕದವೇ ಆಗಿವೆ. ನವರೋಸ್, ಖಮಾಸ್, ಜಲಾವ್, ಕಾಪಿ ಇವೂ ಈ ರೀತಿಯವು. ಕರ್ಣಾಟಕ ಸಂಗೀತದವೇ ಪೂರ್ಣವಾಗಿ ಆದ ರಾಗಗಳು ಭೈರವಿ, ಕೇದಾರಗೌಳ, ಶಂಕರಾಭರಣ ಇತ್ಯಾದಿ. ರಾಗಗಳ ಹೆಸರುಗಳಲ್ಲೂ ಕರ್ಣಾಟಕದ ಶಂಕರಾಭರಣ ಹಿಂದುಸ್ತಾನಿಯ ಬಿಲಾವಲ್, ಕರ್ಣಾಟಕದ ಹನುಮತೋಡಿ, ಹಿಂದುಸ್ತಾನಿಯ ಭೈರವಿ, ಕರ್ಣಾಟಕದ ಮಾಯಾ ಮಾಳವಗೌಳ, ಹಿಂದುಸ್ತಾನಿಯ ಭೈರವ್, ಕರ್ಣಾಟಕದ ಶುಭಪಂತುವರಾಳಿ, ಹಿಂದುಸ್ತಾನಿಯ ತೋಡಿ ಇತ್ಯಾದಿ ವ್ಯತ್ಯಾಸಗಳಿವೆ.

ರಾಗಭಾವಗಳ ವಿಷಯ ಪ್ರಸ್ತಾಪ ಮಾಡುತ್ತ ಸಂಗೀತನಿಧಿ ತಿರುವನಂತಪುರಂ ಲಕ್ಷ್ಮಣ ಪಿಳ್ಳೆ ಅವರ ಅಭಿಪ್ರಾಯವನ್ನಿಲ್ಲಿ ಸೂಚಿಸುವುದು ಉಚಿತವೆನ್ನಿಸುತ್ತದೆ. ಅವರ ಪ್ರಕಾರ ತೋಡಿ, ಭೈರವಿಗಳು ವೈಭವ, ಠೀವಿಯ ರಾಗಗಳು; ಪುನ್ನಾಗ ವರಾಳಿ ಶೋಕಪೂರಿತ; ಮೋಹನ ಪೂರ್ವಿಕಲ್ಯಾಣಿ ರಾಗಗಳು ಶೃಂಗಾರರಸ ಪ್ರಧಾನ, ಬೇಗಡೆ ವಾದವಿವಾದಕ್ಕೆ ತಕ್ಕ ರಾಗ. ಅದರಲ್ಲಿ ಕೋಪ ಪ್ರದರ್ಶನ ಸುಲಭ. ನಾದನಾಮ ಕ್ರಿಯವಾದರೆ ಶಾಂತ, ಯೋಚನಾಭರಿತ; ನೀಲಾಂಬರಿ, ಯದುಕುಲ ಕಾಂಬೋದಿ ತಗ್ಗಿ ನಡೆಯುವ ರಾಗಗಳು. ಅವುಗಳದ್ದು ಬೇಡುವ ಸ್ವಭಾವ; ಕೀರ್‍ವಾಣಿ, ವಸಂತ ರಾಗಗಳು ಗಾಂಭೀರ್ಯವಿಶಿಷ್ಟ ಇತ್ಯಾದಿ. ಮಾಯಾಮಾಳವಗೌಳ ಗೌರವಸೂಚಕ, ಚಕ್ರವಾಕ ಪ್ರಣಯಸಂಬಂಧಿ, ಶಂಕರಾಭರಣ ಶಾಂತ, ಶುಭಪಂತುವರಾಳಿ ಮರ್ಯಾದೆಯ ರಾಗ, ಗಮನಪ್ರಿಯ ಉದ್ವಿಗ್ನ, ಮಧ್ಯಮಾವತಿ ಮತ್ತು ಆರಭಿ ಸ್ತೋತ್ರಕ್ಕೆ ಅನುರೂಪವಾದ ರಾಗಗಳು, ಧನ್ಯಾಸಿ ಗೋಗರೆಯುವ ರಾಗ, ಹಂಸಧ್ವನಿ ಭಕ್ತಿ ಹಾಗೂ ಶೃಂಗಾರರಸಯುಕ್ತ, ಬಿಲಹರಿ ಸಂತೋಷಪ್ರದರ್ಶಕ, ಶ್ರೀರಾಗ ದುಃಖಸೂಚಕ, ನಾದನಾಮಕ್ರಿಯ ಜನಪದ ಭಜನೆ ಮುಂತಾದವಕ್ಕೆ ಸರಿಹೋಗುವ ರಾಗ, ಆನಂದಭೈರವಿ ಭಕ್ತಿರಸಪ್ರಧಾನ ಎಂದು ಮುಂತಾಗಿ ಕೆಲವರು ಹೇಳುತ್ತಾರೆ.

ಕೆಲವು ರಾಗಗಳನ್ನು ನಿರ್ದಿಷ್ಟ ಕಾಲದಲ್ಲಿ ಹಾಡಿದರೇ ಇಂಪು, ಸೊಗಸು ಇರುವುದೆಂದು ನಮ್ಮಲ್ಲಿ ಒಂದು ಮತ. ಈ ದೃಷ್ಟಿಯಿಂದ ರಾಗಗಳನ್ನು ಬೆಳಗಿನ ರಾಗಗಳು, ಮಧ್ಯಾಹ್ನದ ರಾಗಗಳು ಎಂದು ಮುಂತಾಗಿ ವಿಂಗಡಿಸಬಹುದು. ಶಂಕರಾಭರಣ, ಬಿಲಹರಿ, ಹನುಮತೋಡಿ ಮುಂತಾದವು ಬೆಳಗಿನ ರಾಗಗಳು, ಮಾಯಾಮಾಳವಗೌಳವಂತೂ ಅರುಣೋದಯದ ರಾಗ. ಖರಹರಪ್ರಿಯ ಮಧ್ಯಾಹ್ನದ ರಾಗ. ಶುಭ ಪಂತುವರಾಳಿ, ಮೇಚಕಲ್ಯಾಣಿ ಮುಂತಾದವು ಸಾಯಂಕಾಲ ಹಾಡಲು ಯೋಗ್ಯ. ಹರಿಕಾಂಭೋದಿ, ನಟಭೈರವಿ, ಚಲನಾಟ ಮುಂತಾದವು ರಾತ್ರಿಯ ರಾಗಗಳು. ಚಕ್ರವಾಕ, ಆನಂದಭೈರವಿಯಂಥ ರಾಗಗಳು ಸಾರ್ವಕಾಲಿಕ.

ಭರತಕಲ್ಪಲತಾ ಮಂಜರಿಯಲ್ಲಿ ಭೈರವಿ, ಭೂಪಾಲ ಮುಂತಾದವು ಪುರುಷ ರಾಗಗಳೆಂದೂ ಅವುಗಳಿಗೆ ಕೆಲವು ಸ್ತ್ರೀರಾಗಗಳಿವೆಯೆಂದೂ ಹೇಳಿದೆ. ಭೈರವ ರಾಗಕ್ಕೆ ಮೇಘರಂಜೀ, ಕುರಂಜೀ, ದೇವಕ್ರಿಯಾ; ಭೂಪಾಲಕ್ಕೆ ಮಲಹರಿ, ಬೌಳಿ, ವೇಳಾವತಿ; ಬಂಗಾಳಕ್ಕೆ ಧನ್ಯಾಸಿ, ಕರ್ಣಾಟ, ಗೌಳ; ಶ್ರೀರಾಗಕ್ಕೆ ಹಿಂದೋಳಿ, ಆಹಿರಿ; ವಸಂತ ರಾಗಕ್ಕೆ ರಾಮಕ್ರಿಯಾ, ವರಾಳಿ; ಸಾರಂಗಕ್ಕೆ ದೇಶಾಕ್ಷಿ, ರೀತಿಗೌಳ; ಪಂಚಮಕ್ಕೆ ದೇಶಿ, ಲಲಿತಾ,ತೋಡಿ ಇತ್ಯಾದಿ ಒಟ್ಟು ಎಂಟು ಪುರುಷ ರಾಗಗಳಿಗೆ ಇಪ್ಪತ್ತನಾಲ್ಕು ಸ್ತ್ರೀರಾಗಗಳನ್ನು ಭರತ ಹೇಳಿದ್ದಾನೆ.

ಲಕ್ಷಣಗ್ರಂಥಗಳಲ್ಲಿ ರಾಗಕ್ಕೆ 13 ಲಕ್ಷಣಗಳನ್ನು ಹೇಳಿದ್ದಾರೆ- ಗ್ರಹ, ಅಂಶ, ತಾರ, ಮಂದ್ರ, ನ್ಯಾಸ, ಅಪನ್ಯಾಸ, ಸನ್ಯಾಸ, ವಿನ್ಯಾಸ, ಬಹುತ್ವ, ಅಲ್ಪತ್ವ, ಅಂತರ, ಮಾರ್ಗ, ಷಾಡವ, ಔಡವ (ಸಂಗೀತರತ್ನಾಕರ). ಇವುಗಳಲ್ಲಿ ಗ್ರಹ, ಅಂಶ, ನ್ಯಾಸ ಮೂರು ಮಾತ್ರ ಮುಖ್ಯ. ಉಳಿದವು ಇಂದು ಅಷ್ಟಾಗಿ ವ್ಯವಹಾರದಲ್ಲಿಲ್ಲ. ಗ್ರಹವೆಂದರೆ ರಾಗ ಶುರುವಾಗುವ ಸ್ವರ (ತಮಿಳು ಎಡುಪ್ಪು). ನ್ಯಾಸ ರಾಗ ಮುಗಿಯುವ ಸ್ವರ ಅಂಶವೆಂದರೆ ರಾಗದಲ್ಲಿ ಅತಿ ಮುಖ್ಯವಾಗಿ ಪ್ರಯೋಗ ಬಾಹುಳ್ಯದಿಂದ ವಿಶಿಷ್ಟವಾದ ಸ್ವರ. ಇದಕ್ಕೆ ಜೀವಸ್ವರ, ರಾಗ ಛಾಯಾಸ್ವರ ಎಂತಲೂ ಕರೆಯುತ್ತಾರೆ. ಹನುಮತೋಡಿಯಲ್ಲಿ ಧೈವತ, ನಟಭೈರವಿಯಲ್ಲಿ ಋಷಭ, ಹರಿಕಾಂಭೋದಿಯಲ್ಲಿ ಗಾಂಧಾರ, ಖರಹರಪ್ರಿಯದಲ್ಲಿ ಪಂಚಮ, ಆರಭಿಯಲ್ಲಿ ಮಧ್ಯಮ, ಧನ್ಯಾಸಿಯಲ್ಲಿ ನಿಷಾದ ಇವು ಅಂಶಸ್ವರಗಳು.

ಒಂದು ರಾಗದ ಲಕ್ಷಣ ಹೇಳಬೇಕೆಂದರೆ ಮೊದಲು ಅದು ಮೇಳಕರ್ತವೋ ಜನ್ಯವೋ ಎಂಬುದನ್ನು ನಿರ್ಧರಿಸಬೇಕು. ಅದರ ಸ್ವರಜಾತಿಗಳನ್ನೂ ಗಮನಿಸಬೇಕು. ಜನ್ಯವಾದರೆ ಅದು ಯಾವ ಮೇಳ, ವರ್ಜ್ಯವೋ ಸಂಪೂರ್ಣವೋ ವಕ್ರವೋ ಕ್ರಮವೋ, ಅದರ ಮೂರ್ಛನೆಗಳು ಯಾವುವು, ಷಾಡವವೋ, ಔಡವವೋ, ಸಂಪೂರ್ಣವೋ, ಉಪಾಂಗವೋ, ಭಾಷಾಂಗವೋ, ಯಾವ ಸ್ವರಾಂತ,ಅದರ ಸಂಚಾರಗಳು ಯಾವುವು, ಅದರ ಜೀವ ಹಾಗೂ ನ್ಯಾಸ ಸ್ವರಗಳು ಯಾವುವು. ಶುದ್ಧವೋ ಛಾಯಾಲಗವೋ, ಘನರಾಗವೋ, ರಕ್ತಿರಾಗವೋ, ಅದರ ವಿಶಿಷ್ಟ ಗಮಕಗಳು ಯಾವುವು, ವಿಶೇಷ ಸಂಚಾರಗಳು ಯಾವುವು, ಜಂಟಿಸ್ವರ ದಾಟುಸ್ವರ ಪ್ರಯೋಗಗಳುಂಟೆ - ಎಂಬೆಲ್ಲ ವಿಷಯಗಳನ್ನೂ ಗಮನದಲ್ಲಿ ಇಟ್ಟುಕೊಂಡು ರಾಗಲಕ್ಷಣ ನಿರ್ಧರಿಸಬೇಕು.

**ತಾಳ :** ಕರ್ಣಾಟಕ ಸಂಗೀತದಲ್ಲಿ ರಾಗ ಎಷ್ಟು ಮುಖ್ಯವೋ ತಾಳ ಅಷ್ಟೇ ಮುಖ್ಯ; ತಾಳವೆಂದರೆ ಕಾಲನಿಯತಿ (ಟೈಮ್-ಮೆಷರ್). ಎಲ್ಲ ಸಂಗೀತದಲ್ಲೂ ತಾಳ ಅವಶ್ಯಾಂಗವಾದರೂ ಈ ಸಂಗೀತದಲ್ಲಿ ಅದಕ್ಕೆ ಪ್ರಮುಖಪಟ್ಟ; ತಾಳ ಎಂದರೆ ಕಾಲಪ್ರಮಾಣ. ಈ ಕಾಲದ ಗಣನೆ ಹೀಗಿದೆ. ಒಂದರಮೇಲೊಂದರಂತೆ ನೂರು ತಾವರೆ ಎಲೆಗಳನ್ನಿಟ್ಟು ಒಂದು ಸೂಜಿಯಿಂದ ಎಲ್ಲವನ್ನೂ ಒಮ್ಮೆಲೆ ಚುಚ್ಚಲು ಎಷ್ಟು ಕಾಲ ಬೇಕೋ ಅದು ಒಂದು ಕ್ಷಣ; ಎಂಟು ಕ್ಷಣಗಳಾದರೆ ಒಂದು ಲವ; ಎಂಟು ಲವಗಳಾದರೆ ಒಂದು ಕಾಷ್ಠ; ಎಂಟು ಕಾಷ್ಠಗಳಾದರೆ ಒಂದು ನಿಮಿಷ; ಎಂಟು ನಿಮಿಷಗಳು ಒಂದು ಕಲಾ; ಎರಡು ಕಲಾ ಒಂದು ಚತುರ್ಭಾಗ; ಎರಡು ಚತುರ್ಭಾಗ ಒಂದು ಅನುದ್ರುತ; ಎರಡು ಅನುದ್ರುತ ಒಂದು ದ್ರುತ; ಎರಡು ದ್ರುತ ಒಂದು (ಚತುರಶ್ರ) ಲಘು; ಎರಡು ಲಘು ಒಂದು ಗುರು; ಮೂರು ಲಘು ಒಂದು ಪ್ಲುತ; ನಾಲ್ಕು ಪ್ಲುತ ಒಂದು ಕಾಕಪಾದ. ವ್ಯವಹಾರದಲ್ಲಿ ಆರು ಮುಖ್ಯ ಕಾಲವಿಭಾಗಗಳನ್ನು ಪರಿಗಣಿಸುತ್ತಾರೆ.

| ಕಾಲವಿಭಾಗ | ಸಂಜ್ಞೆ | ಅಕ್ಷರಕಾಲ | ಮಾತ್ರಾಕಾಲ | ಕ್ರಿಯೆ |
|---|---|---|---|---|
| ಅನುದ್ರುತ | 0 | 1 | 1/4 | ಪೆಟ್ಟು |
| ದ್ರುತ | 0 | 2 | 1/2 | ಪೆಟ್ಟು, ಹುಸಿ |
| ಲಘು | 1 | 4 | 1 | ಪೆಟ್ಟು, ಎಣಿಕೆ |
| ಗುರು | S | 8 | 2 | ------ |
| ಪ್ಲುತ | 3 | 12 | 3 | ------ |
| ಕಾಕಪಾದ | x | 16 | 4 | ------ |

ಈ ಆರು ತಾಳದ ಷಡಂಗಗಳೆಂದು ಕರೆಸಿಕೊಳ್ಳುತ್ತವೆ. ಲಕ್ಷಣ ಗ್ರಂಥಗಳಲ್ಲಿ ಹೇಳಿರುವ ತಾಳಗಳಲ್ಲಿ ಈ ಆರೂ ಅಂಗಗಳು ಇರುತ್ತವೆ. ಆದರೆ ಸಾಮಾನ್ಯವಾಗಿ ವ್ಯವಹಾರದಲ್ಲಿರುವ ಸುಳಾದಿ ಸಪ್ತತಾಳಗಳಲ್ಲಿ ಅನುದ್ರುತ, ದ್ರುತ, ಲಘು ಇಷ್ಟೇ ಇರುತ್ತವೆ. ಒಂದು ಪೆಟ್ಟು (ಘಾತ) ಹಾಕುವಷ್ಟು ಕಾಲ ಅಥ’ವಾ ಒಂದಕ್ಷರ ಉಚ್ಚರಿಸುವಷ್ಟು ಕಾಲ ಅನುದ್ರುತವೆನಿಸಿಕೊಳ್ಳುತ್ತದೆ; ಒಂದು ಪೆಟ್ಟು ಹಾಕಿ ಕೈ ಎತ್ತಿ ಪಕ್ಕಕ್ಕೆ ಬಿಡುವಷ್ಟು (ವಿಸರ್ಜ) ಕಾಲ ಅಥವಾ ಎರಡಕ್ಷರ ಉಚ್ಚರಿಸುವಷ್ಟು ಕಾಲ ದ್ರುತ. ಲಘುವಿನಲ್ಲಿ ಐದು ಜಾತಿಗಳುಂಟು. ತ್ರಿಶ್ರ ಲಘುವೆಂದರೆ ಒಂದು ಪೆಟ್ಟು ಹಾಕಿ ಬೆರಳಲ್ಲಿ ಎರಡು ಎಣಿಸುವಷ್ಟು ಕಾಲ, ಅಂದರೆ ಮೂರು ಅಕ್ಷರ ಕಾಲವಾಯಿತು. ಚತುರಶ್ರ ಲಘುವಿನಲ್ಲಿ ಒಂದು ಪೆಟ್ಟು ಹಾಕಿ ಮೂರು ಎಣಿಕೆ ಅಂದರೆ ನಾಲ್ಕಕ್ಷರ ಕಾಲ. ಖಂಡ ಲಘುವೆಂದರೆ ಒಂದು ಪೆಟ್ಟು, ನಾಲ್ಕು ಎಣಿಕೆ ಎಂದರೆ ಐದಕ್ಷರ ಕಾಲ. ಮಿಶ್ರ ಲಘುವಿನಲ್ಲಿ ಒಂದು ಪೆಟ್ಟು ಆರು ಎಣಿಕೆ ಏಳಕ್ಷರ ಕಾಲ. ಕಡೆಯದಾಗಿ ಸಂಕೀರ್ಣ ಲಘುವಿನಲ್ಲಿ ಒಂದು ಪೆಟ್ಟು ಎಂಟು ಎಣಿಕೆ, 9 ಒಟ್ಟು ಒಂಬತ್ತು ಅಕ್ಷರ ಕಾಲ. ಈ ಐದು ಲಘುವಿನ ಜಾತಿ ಭೇದಗಳು ಸಪ್ತ ಸುಳಾದಿ ತಾಳಗಳಲ್ಲಿ ಸೇರಿದರೆ ಒಟ್ಟು 35 ತಾಳಗಳಾಗುತ್ತವೆ. ಒಂದೊಂದು ತಾಳದಲ್ಲೂ ಐದೈದು ಜಾತಿಗಳು.

ಈ ಏಳು ಸುಳಾದಿ ತಾಳಗಳಲ್ಲೂ ಪುರಂದರದಾಸರು ಅನೇಕ ಅಲಂಕಾರಗಳನ್ನು ಹೆಣೆದಿದ್ದಾರೆ. ಉದಾಹರಣೆಗೆ - ತ್ರಿಶ್ರ ಧ್ರುವ ಸರಿಗ, ಸಗ, ರಿಗಮ, ಗಮಪ; ರಿಗಮ, ರಿಮ, ಗಮಪ, ಮಪಧ ಇತ್ಯಾದಿ. ಚತುರಶ್ರ ಮಠ್ಯ - ಸರಿಗರಿ, ಸರಿ, ಸರಿಗಮ, ರಿಗಮಗ, ರಿಗ, ರಿಗಮಪ ಇತ್ಯಾದಿ. ಖಂಡರೂಪಕ ಸರಿ, ಸರಿಗಮಪ; ರಿಗ, ರಿಗಮಪಧ ಇತ್ಯಾದಿ. ಮಿಶ್ರ ಝಂಪ - ಸರಿಗಸರಸರಿ, ಗ, ಮಾರಿಗಮರಿಗರಿಗ, ಮ, ಪಾ ಇತ್ಯಾದಿ. ಸಂಕೀರ್ಣ ತ್ರಿಪುಟ - ಸಾರೀಗಾಮಪಧ, ಮಪ, ಧ, ನಿ, ರೀಗಾಮಾಪಧನಿ, ಪನಿಧಸ ಇತ್ಯಾದಿ. ತ್ರ್ಯಶ್ರ ಅಟ - ಸರಿಗ, ರಿಗಮ, ಪಾ, ಪಾ, ರಿಗಮ, ಗಮಪ, ಧಾ, ಧಾ ಇತ್ಯಾದಿ. ಚತುರಶ್ರ ಏಕ - ಸರಿಗಮ; ರಿಗಮಪ ಇತ್ಯಾದಿ. ಇವಕ್ಕೆ ತಾಳಾಲಂಕಾರಗಳು ಎಂದು ಹೆಸರು. ಮೇಲೆ ಹೇಳಿದ ಮೂವತ್ತೈದು ತಾಳಗಳಲ್ಲಿ ಒಂದೊಂದು ಗತಿಭೇದದಿಂದ ಐದೈದು ಉಪವಿಭಾಗಗಳಾಗಿ ಒಡೆಯುತ್ತವೆ; ಎಂದರೆ ಒಟ್ಟು 175 ತಾಳಗಳಾದಂತಾಯಿತು. ಐದು ಜಾತಿಗಳೂ ಐದು ಗತಿಭೇದಗಳೂ ಒಂದೊಂದು ತಾಳದಲ್ಲೂ ಬಂದು ಸಪ್ತತಾಳಗಳಲ್ಲಿ ಪ್ರತಿಯೊಂದರಲ್ಲೂ 25 ವಿಧಗಳಾಗುತ್ತವೆ. ಜಾತಿಭೇದ ಲಘುವಿಗೆ ಮಾತ್ರವಾದರೆ ಗತಿಭೇದ ಇತರ ತಾಳಾಂಗಗಳಿಗೂ ಉಂಟು. ಚಾಪು ತಾಳ ಎಂಬ ಒಂದು ತಾಳ ವಿಶೇಷ ನಮ್ಮಲ್ಲಿ ತೀರ ಹಿಂದಿನಿಂದಲೂ ವ್ಯವಹಾರದಲ್ಲಿದೆ; ಅದರ ಕ್ರಿಯೆ ಎರಡೂ ಘಾತಗಳು ಅಥವಾ ಒಂದು ಘಾತ ಒಂದು ವಿಸರ್ಜಿತ.

ತಾಳದ ಪ್ರಾಣಗಳಲ್ಲಿ ಗ್ರಹ ಒಂದು ಎಂದು ಲಕ್ಷಣ ಗ್ರಂಥಗಳಲ್ಲಿ ಹೇಳಿದೆ. ಇಲ್ಲಿ ಗ್ರಹವೆಂದರೆ ತಾಳಾವರ್ತದಲ್ಲಿ ಸಂಗೀತದ ಸಾಹಿತ್ಯವನ್ನು ಪ್ರಾರಂಭಿಸುವುದೆಂದರ್ಥ. ಗ್ರಹದಲ್ಲಿ ಎರಡು ವಿಧ - ಸಮ, ವಿಷಮ ಎಂದು. ಸಮಗ್ರಹವೆಂದರೆ ತಾಳ ಶುರುವಾಗುತ್ತಿದ್ದಂತೆಯೇ ಸಂಗತಿಯೂ ಶುರುವಾಗುವುದು; ಎರಡಕ್ಕೂ ವ್ಯತ್ಯಾಸ ಬಂದರೆ ಅದು ವಿಷಮ. ತಾಳಕ್ಕೆ ಮುಂಚೆಯೇ ಗಾನಶುರುವಾದರೆ ಅದು ಅತೀತ ವಿಷಮಗ್ರಹ; ತಾಳವೇ ಮುಂಚೆ ಶುರುವಾಗಿ ಆಮೇಲೆ ಗಾನ ಆರಂಭವಾದರೆ ಅದು ಅನಾಗತ ವಿಷಮ ಗ್ರಹ. ತಾಳದ ಮತ್ತೊಂದು ಪ್ರಾಣ ಲಯ, ಎಂದರೆ ಗಾನ ವೇಗ (ಟೆಂಪೋ), ಇದರಲ್ಲಿ ಮೂರು ವಿಧ; ಓಟ ಜೋರಾಗಿದ್ದರೆ ಅದು ದ್ರುತ, ನಿಧಾನವಾದರೆ ವಿಳಂಬಿತ; ಎರಡೂ ಅಲ್ಲದಿದ್ದರೆ ಮಧ್ಯ. ಇದಕ್ಕೇ ಸಾಮಾನ್ಯವಾಗಿ ಕಾಲ ಎಂದು ವ್ಯವಹರಿಸುವುದುಂಟು. ಇನ್ನೊಂದು ತಾಳ ಪ್ರಾಣವಾದ ಕಳಾ ಎನ್ನುವುದು ತಾಳಾಕ್ಷರದಲ್ಲಿ ಅಂಗೀಭೂತವಾದ ಕಾಲವಿಭಾಗ. ಏಕಕಳಾ ಎಂದರೆ ಒಂದು ತಾಳಾಕ್ಷರದಲ್ಲಿ ಒಂದೇ ಉಪವಿಭಾಗ ಇರುವುದು. ಅಂದರೆ ಒಂದು ತಾಳಕ್ರಿಯೆಗೆ ಒಂದು ಸ್ವರ ಪ್ರಮಾಣ; ದ್ವಿಕಳಾ ಎಂದರೆ ಒಂದು ತಾಳಕ್ರಿಯೆಗೆ ಎರಡಕ್ಷರಗಳು ಇತ್ಯಾದಿ.

ಯತಿ ಎನ್ನುವುದು ಇನ್ನೊಂದು ತಾಳಪ್ರಾಣ (ರಿದಮ್). ತಾಳಾಂಗಗಳಲ್ಲಿ ಸಮ, ಗೋಪುಚ್ಛ, ಸ್ರೋತೋವಹ, ಡಮರು, ಮೃದಂಗ, ವಿಷಮ ಎಂದು ಷಡ್ವಿಧ. ಏರದೇ ಕುಗ್ಗದೇ ಇರುವೆಯ ಸಾಲಿನಂತೆ ಒಂದೇ ಸಾಲಿನಲ್ಲಿ ಹೋಗುವುದು ಸಮಯತಿ. ಎಲ್ಲ ತಾಳಾಂಗಗಳೂ ಒಂದೇ ಅಕ್ಷರ ಪ್ರಮಾಣದ್ದೋ ಇಲ್ಲವೆ ಎರಡೇ ಅಕ್ಷರ ಪ್ರಮಾಣದ್ದೋ ಇರಬಹುದು. ಗೋಪುಚ್ಛ ಯತಿಯಲ್ಲಾದರೋ ಹಸುವಿನ ಬಾಲದಂತೆ ತಾಳಾಂಗಗಳು ಮೊದಲು ದೊಡ್ಡವಾಗಿದ್ದು ಬರುಬರುತ್ತ ಕ್ರಮವಾಗಿ ಸಣ್ಣಗಾಗುವುವು. ಮೊದಲೊಂದು ಕಾಕಪಾದ. ಅನಂತರ ಒಂದು ಪ್ಲುತ, ಅನಂತರ ಲಘು, ದ್ರುತ, ಅನುದ್ರುತ - ಹೀಗೆ ತಾಳಾಂಗಗಳು ಬರುತ್ತವೆ. ಈ ಕ್ರಮ ಹಿಂದುಮುಂದಾದರೆ ಅದು ಸ್ರೋತೋವಹ; ನದಿ ಸಣ್ಣದಾಗಿ ಶುರುವಾಗಿ ಕ್ರಮೇಣ ದೊಡ್ಡದಾಗುವುದೇ ಉಪಮಾನ. ಡಮರು ಯತಿಯಲ್ಲಿ ಗೋಪುಚ್ಛ ಹಾಗೂ ಸ್ರೋತೋವಹಗಳು ಸಮವಾಗಿ ಸೇರುತ್ತವೆ. ಅರ್ಧದ ವರೆಗೆ ಸಣ್ಣದಾಗುತ್ತ ಬಂದು ಅನಂತರ ದೊಡ್ಡದಾಗಲಾರಂಭಿಸಿ ಮೊದಲ ಪ್ರಮಾಣಕ್ಕೆ ಬರುವುದು ಡಮರು. ಇದಕ್ಕೆ ವಿರುದ್ಧ ಮೃದಂಗ ಯತಿ. ಮೊದಲು ಸ್ರೋತೋವಹ ಅರ್ಧದ ವರೆಗೆ ಬಂದು ಅನಂತರ ಗೋಪುಚ್ಛ ಆರಂಭವಾಗಿ ಆದ್ಯಂತ ಪ್ರಮಾಣ ಒಂದೇ ಆಗುತ್ತದೆ. ಇಂಥ ಯಾವ ಕ್ರಮವೂ ಇಲ್ಲದಿರುವುದು ವಿಷಮ ಯತಿ.

ಮಾರ್ಗ ಎಂಬ ತಾಳಪ್ರಾಣ ಕೃತಿರಚನೆಯಲ್ಲಿ ಕಾಲ ಲಯ ನಿಯಂತ್ರಣದ ಸಾಧನ. ಇದರಲ್ಲಿ ಆರು ವಿಧ. ಒಂದು ತಾಳಾಕ್ಷರಕ್ಕೆ ಎಂಟು ಮಾತ್ರಾಕಾಲಗಳಿದ್ದರೆ ದಕ್ಷಿಣ ಸಂಜ್ಞೆ. ನಾಲ್ಕು ಮಾತ್ರಾ ಕಾಲಗಳಿದ್ದರೆ ವರ್ತಿಕ. ಎರಡಿದ್ದರೆ ಚಿತ್ರ, ಒಂದಿದ್ದರೆ ಚಿತ್ರತರ, ಅರ್ಧ ಇದ್ದರೆ ಚಿತ್ರತಮ (ದ್ರುತ), ನಾಲ್ಕನೆಯ ಒಂದು ಭಾಗ ಇದ್ದರೆ ಅತಿಚಿತ್ರತಮ (ಅನುದ್ರುತ). ಕಡೆಯದಾಗಿ ಪ್ರಸ್ತಾರ ಎಂದರೆ ತಾಳದ ವಿವಿಧ ಅಂಗಗಳನ್ನು ಉಪಾಂಗಗಳಾಗಿ ವಿಭಜಿಸಿ ಅವುಗಳ ವೈವಿಧ್ಯವನ್ನೆಲ್ಲ ಕ್ರಮ ಹಿಡಿದು ಪ್ರದರ್ಶಿಸುವುದು ಎಂದರ್ಥ.

ಈ ಹತ್ತು- ಅಂಗ (ದ್ರುತ, ಲಘು ಇತ್ಯಾದಿ), ಜಾತಿ (ತ್ರಿಶ್ರ ಇತ್ಯಾದಿ), ಕಾಲ (ಕ್ಷಣ, ಲವ ಇತ್ಯಾದಿ), ಗ್ರಹ, ಲಯ, ಯತಿ, ಮಾರ್ಗ, ಪ್ರಸ್ತಾರ, ಕ್ರಿಯೆ (ಘಾತ ಇತ್ಯಾದಿ), ಕಳಾ ತಾಳದ ದಶಪ್ರಾಣಗಳೆಂದು ಲಕ್ಷಣಕಾರರು ಹೇಳಿದ್ದಾರೆ. ಅವುಗಳಲ್ಲಿ ಮುಖ್ಯವಾದುವೆಂದರೆ ಅಂಗ, ಗ್ರಹ, ಜಾತಿ, ಕ್ರಿಯೆ, ಲಯಗಳು. ಶಾಸ್ತ್ರೋಕ್ತವಾಗಿ 108 ತಾಳಗಳಿದ್ದರೂ ವ್ಯವಹಾರದಲ್ಲಿರುವುದು ಮೇಲೆ ಹೇಳಿದ 35 ಮಾತ್ರ.

**ಕಲಿಕೆ ಪ್ರಯೋಗ :** ಕರ್ನಾಟಕ ಸಂಗೀತ ಕಲಿಯಲಾರಂಭಿಸುವವರು ಮೊದಲು ಸ್ವರಜ್ಞಾನಕೋಸ್ಕರ ಸ್ವರಾವಳಿ (ಸರಳೆ), ಜಂಟಿವರಸೆ, ಅಲಂಕಾರಗಳನ್ನು ಕಲಿತು ಗೀತಗಳಿಗೆ ಕೈ ಹಾಕುತ್ತಾರೆ. ಗೀತ ತುಂಬ ಸರಳವಾದ ಕೃತಿ; ಅದರಲ್ಲಿ ಪಲ್ಲವಿ, ಅನುಪಲ್ಲವಿ, ಚರಣ ಮುಂತಾದ ಗೊಂದಲಗಳಿಲ್ಲ; ತಾಳವೂ ತುಂಬ ಸುಲಭ. ಆಯಾ ರಾಗ ಲಕ್ಷಣ ಪ್ರದರ್ಶಿಸಲು ಎಷ್ಟು ಬೇಕೋ ಅಷ್ಟು ಮಾತ್ರ ಸಂಚಾರ ಇರುತ್ತದೆ. ಪ್ರತಿ ಸ್ವರಕ್ಕೂ ಸಾಹಿತ್ಯದಲ್ಲೊಂದು ಅಕ್ಷರ ಇರುತ್ತದೆ. ಪುರಂದರದಾಸ, ಪೈದಾಳ ಗುರುಮೂರ್ತಿಶಾಸ್ತ್ರಿ, ವೆಂಕಟಮುಖಿ ಮುಂತಾದವರು ಗೀತರಚನೆಯಲ್ಲಿ ಪ್ರಸಿದ್ಧರು. ಗೀತದ ಅನಂತರ ಅಭ್ಯಾಸ ಮಾಡವುದು ಸ್ವರಜತಿ. ಇದರಲ್ಲಿ ಪಲ್ಲವಿ ಇದ್ದು (ಕೆಲವು ವೇಳೆ ಅನುಪಲ್ಲವಿಯೂ ಇದ್ದು) ನಾಲ್ಕೈದು ಚರಣಗಳಿರುತ್ತವೆ. ಪ್ರತಿ ಚರಣ ಮುಗಿದೊಡನೆ ಪಲ್ಲವಿ ಬರುತ್ತದೆ. ಇದರಲ್ಲಿ ಭಕ್ತಿರಸ ಅಥವಾ ಶೃಂಗಾರರಸ ಇರುತ್ತದೆ. ಶ್ಯಾಮಶಾಸ್ತ್ರಿಗಳ ಕಾಮಾಕ್ಷಿ ಎಂಬ ಭೈರವೀ ಸ್ವರಜತಿ, ನೀಟು ಗಲ ಮಿಠಾರಿ ಎಂಬ ಕಲ್ಯಾಣಿ ಸ್ವರಜತಿ, ಸಾಮೀ ದಯಮೀರಾ ಎಂಬ ಮೋಹನ ಸ್ವರಜತಿ, ರಾರ ವೇಣು ಗೋಪಬಾಲ ಎಂಬ ಬಿಲಹರಿಯ ಸ್ವರಜತಿ ಮುಂತಾದವು ಪ್ರಸಿದ್ಧ. ಸ್ವರಜತಿಯ ಹಂತ ದಾಟಿದರೆ ವರ್ಣ. ವರ್ಣಗಳು ವಿದ್ವತ್ಪೂರ್ಣ ರಾಗಭಾವದಿಂದ ಪಕ್ವವಾಗಿರುತ್ತವೆ. ಇದರಲ್ಲಿ

ಒಂದು ಸಣ್ಣ ಪಲ್ಲವಿ, ಅನುಪಲ್ಲವಿ, ಮುಕ್ತಾಯ ಸ್ವರ (ಇವುಗಳು ಸೇರಿ ಪೂರ್ವಾಂಗ) ಒಂದು ಚರಣ ಮತ್ತು ಚರಣ ಸ್ವರಗಳು (ಇವು ಉತ್ತರಾಂಗ) ಇರುತ್ತವೆ. ಪಲ್ಲವಿ, ಅನುಪಲ್ಲವಿ, ಚರಣಗಳಿಗೆ ಮಾತ್ರ ಸಾಹಿತ್ಯ ಇದ್ದು ಉಳಿದ ಭಾಗಗಳು ಸ್ವರ ಮಾತ್ರವಾಗಿದ್ದರೆ ಅದು ತಾನ ವರ್ಣ; ವರ್ಣದ ಪೂರಾ ಸಾಹಿತ್ಯ ಇದ್ದರೆ ಅದು ಪದವರ್ಣ. ರಾಗಮಾಲಿಕಾ ವರ್ಣಗಳಲ್ಲಿ ಒಂದಕ್ಕಿಂತ ಹೆಚ್ಚು ರಾಗಗಳಿರುತ್ತವೆ. ಪಲ್ಲವಿ ಒಂದು ರಾಗ, ಅನುಪಲ್ಲವಿ ಇನ್ನೊಂದು. ಹೀಗೆ ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್, ರಾಮನಾಥಪುರಂ ಶ್ರೀನಿವಾಸಯ್ಯಂಗಾರ್, ಶ್ಯಾಮಾಶಾಸ್ತ್ರಿ, ವೀಣಾ ಕುಪ್ಪಯ್ಯರ್, ಆದಿಯಪ್ಪಯ್ಯ, ವೀಣೆ ಶೇಷಣ್ಣ ಮುಂತಾದವರ ವರ್ಣಗಳು ಇಂದಿಗೂ ವ್ಯವಹಾರದಲ್ಲಿವೆ.

ವರ್ಣಗಳಾದ ಮೇಲೆ ಕೃತಿ; ರಾಗಭಾವ ಸಂಪೂರ್ಣವಾಗಿ ಹೊರಸೂಸುವ ಸಾಧನ ಇದು. ಇಲ್ಲಿ ಮಾತಿನ ಜಂಜಾಟ ಅಷ್ಟಾಗಿ ಇಲ್ಲ. ಇದರಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳು, ಕೆಲವೆಡೆ ಚಿಟ್ಟೆಸ್ವರ ಇರುತ್ತವೆ. ಕೃತಿಯೇ ಸಂಗೀತ ಸಾಹಿತ್ಯ ರಚನೆಯ ಪರಾಕಾಷ್ಠತೆ. ಕೃತಿಯ ನಡುವೆ ಮಧ್ಯಮ ಕಾಲ ಸಾಹಿತ್ಯ ಇರಬಹುದು; ಕೃತಿಯ ಸಾಹಿತ್ಯದ ಕೆಲವು ಕಡೆ ಸಂಗತಿಗಳಿರಬಹುದು. ಇವೆಲ್ಲ ಮಾಧುರ್ಯವರ್ಧಕ ಸಾಧನಗಳು. ಕೃತಿಕಾರರಲ್ಲಿ ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತ, ಶ್ಯಾಮಾಶಾಸ್ತ್ರಿ, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್, ವೀಣಾ ಕುಪ್ಪಯ್ಯರ್, ತಿರುವಟ್ಟಿಯೂರು ತ್ಯಾಗಯ್ಯರ್, ಮೈಸೂರು ಸದಾಶಿವರಾಯ, ಸ್ವಾತಿ ತಿರುನಾಳ್, ರಾಮಸ್ವಾಮಿ ದೀಕ್ಷಿತ, ಪಲ್ಲವಿ ಗೋಪಾಲಯ್ಯ, ಮೈಸೂರು ವಾಸುದೇವಾಚಾರ್ಯ ಮುಂತಾದವರು ಪ್ರಖ್ಯಾತರು. ರಾಗಮಾಲಿಕೆ ಎಂಬುದು ಕೃತಿಯಂತೆಯೆ ಪಲ್ಲವಿ, ಅನುಪಲ್ಲವಿ, ಚರಣಗಳಿಂದ ಕೂಡಿ ವಿವಿಧ ರಾಗಗಳಲ್ಲಿರುತ್ತದೆ. ಪನ್ನಗೇಂದ್ರಶಯನ ಎಂಬ ಸ್ವಾತಿ ತಿರುನಾಳ್ ರಾಗಮಾಲಿಕೆ, ನಿತ್ಯಕಲ್ಯಾಣೀ ಎಂಬ ತೋಡಿ, ಸೀತಾರಾಮಯ್ಯನ ರಾಗಮಾಲಿಕೆ, ಲೀಲಾಶುಕನ ಶ್ಯಾಮಲಾದಂಡಕ, ಕೃಷ್ಣಕರ್ಣಾಮೃತದ ಹಲವು ಶ್ಲೋಕಗಳು - ಇವೆಲ್ಲ ತುಂಬ ಸೊಗಸಾದ ದೃಷ್ಟಾಂತಗಳು.

ಇವುಗಳಲ್ಲಿ ಧಾತು (ಸ್ವರ) ಮತ್ತು ಮಾತು (ಸಾಹಿತ್ಯ) ಎರಡೂ ಇರುತ್ತವೆ; ಇವು ಮೊದಲೆ ಸಿದ್ಧವಾಗಿರುವುದರಿಂದ ಸಂಗೀತಗಾರನ ಪ್ರತಿಭೆಗೆ ಇಲ್ಲಿ ಅಷ್ಟಾಗಿ ಅವಕಾಶವಿಲ್ಲ. ಆದರೆ ಕೃತಿಯ ಮೊದಲು ಹಾಡುವ ಆಲಾಪನೆ ತಾನ ಇವುಗಳೂ ಕೃತಿಯಲ್ಲಿ ಪಲ್ಲವಿಗೆ ಸಂಗತಿಗಳನ್ನು ಹಾಕಿ ಹಾಡುವುದೂ ಸಂಗೀತಸಾಧನೆಯ ಕಳಶ; ಇದಕ್ಕೆ ಮನೋಧರ್ಮ ಸಂಗೀತ ಎನ್ನುತ್ತಾರೆ. ಇದನ್ನು ಸಂಗೀತಗಾರ ಅಲ್ಲಿಯೇ ಆಗಲೇ ಕಲ್ಪಿಸಿಕೊಂಡು ಹಾಡುತ್ತಾನೆ. ರಾಗಾಲಾಪನೆಯಲ್ಲಿ ಆಯಾರಾಗದ ಸ್ವರಗಳ ಕ್ರಮಯುಕ್ತ ಸಂಚಾರಗಳು ತಾಳನಿಯಮವಿಲ್ಲದೆ ತೇಲಿಸಿಕೊಂಡು ಬರುತ್ತವೆ. ಬಾಯಲ್ಲಿ ಸ್ವರಗಳನ್ನು ಹೇಳದೆ ಆಯಾ ಸ್ವರಸ್ಥಾನಕ್ಕೆ ಸಹಜವಾದ ತದರಿನ್ನತಂ ನಂ ಎಂಬ ಶಬ್ದಗಳನ್ನು ಮಾತ್ರ ಮಾಧುರ್ಯ ದೃಷ್ಟಿಯಲ್ಲಿಟ್ಟುಕೊಂಡು ಜೋಡಿಸುವುದು ಆ ರಾಗಲಕ್ಷಣವನ್ನು ಸ್ಫುಟವಾಗಿ ಪ್ರದರ್ಶಿಸುವುದು ಇವು ಆಲಾಪನೆಯ ಮುಖ್ಯ ವಿಷಯಗಳು. ಆಲಾಪನೆಯಲ್ಲಿ ಆಕ್ಷಿಪ್ತಿಕಾ (ಅಥವಾ ಅಯತ್ತ) ಅಂದರೆ ಸಣ್ಣದರಲ್ಲಿ ರಾಗಲಕ್ಷಣ ಪೂರ್ತಿ ಸಂಗ್ರಹಿಸುವುದು. ಒಂದು ಬಗೆಯಲ್ಲಿ ಮುನ್ನುಡಿಯಂತೆ; ರಾಗವರ್ಧಿನೀ, ಆಲಾಪನೆಯ ಮುಖ್ಯಾಂಗ. ಇದರಲ್ಲಿ ನಾಲ್ಕು ಹಂತಗಳು - ಮೊದಲದರಲ್ಲಿ ಮಂದ್ರ, ಎರಡನೆಯದರಲ್ಲಿ ಮಧ್ಯ, ಮೂರನೆಯದರಲ್ಲಿ ತಾರಸ್ಥಾಯಿಗಳಲ್ಲಿ ವಿಳಂಬ ಕಾಲದಿಂದ ಸಂಚಾರ, ನಾಲ್ಕನೆಯದರಲ್ಲಿ ದ್ರುತ ಕಾಲದ ಸಂಚಾರ ಅಥವಾ ಮೂರ್ಛನಾ ಪ್ರಸ್ತಾರ, ಅನಂತರ ಸ್ಥಾಯಿ, ಸಂಚಾರದಲ್ಲಿ ಒಂದೇ ಸ್ವರದಿಂದ ಆರಂಭಮಾಡಿ ಆ ಸ್ವರದಲ್ಲಿಯೇ ಮುಗಿಸಿದರೆ ಆ ಸ್ವರಕ್ಕೆ ಸ್ಥಾಯೀ ಎಂದು ಹೆಸರು. ಕಡೆಯದಾಗಿ ಮಕರಿಣೀ ಅಥವಾ ತಾನ. ಪಾಂಡ್ಯ ರಾಜನ ಪ್ರಶಸ್ತಿಯಾದ ದಕ್ಷಿಣ ರಾಷ್ಟ್ರಾಧಿಪಾ ಎಂಬರ್ಥವನ್ನು ಸೂಚಿಸುವ ತೆನ್ನಾ ಎಂಬ ದ್ರಾವಿಡ ಪದದ ಸಂಸ್ಕೃತದ ರೂಪವೇ ತಾನ. ತಾನದ ಕಾಲ ಮಧ್ಯಮ, ಇದರಲ್ಲಿ ಪ್ರಯೋಗ ತಾನಾಂತ, ತಾನಂ,ತಾನಂನ ಇತ್ಯಾದಿ. ಇಲ್ಲಿ ಯತಿ ಸ್ಫುಟವಾಗಿ ಎದ್ದು ಕಾಣುತ್ತದೆ. ತಾಳ ದ್ರುತವಾದರೆ ಅದು ಘನ ಎನಿಸಿಕೊಳ್ಳುತ್ತದೆ. ಆಲಾಪನೆ ಮುಗಿದಮೇಲೆ ಪಲ್ಲವಿ ಶುರುವಾಗುತ್ತದೆ; ಇದರ ಜೀವಾಳ ಸಂಗತಿ - ಅಂದರೆ ಬಾರಿಬಾರಿಗೂ ಪಲ್ಲವಿಯ ಸ್ವರ ಸಾಹಿತ್ಯ ಹಿಗ್ಗಿಸುವುದೆಂದರ್ಥ. ದೃಷ್ಟಾಂತಕ್ಕೆ ಖಮಾಸ್ ರಾಗದ ಈ ತ್ಯಾಗರಾಜ ಕೃತಿ ನೋಡಬಹುದು.

1. ಸುಜನ ಜೀವ | ನಾ - ರ ಅಮಾ
2. ಸು ಉ ಜ ಅ ನಾ - ಜೀವ | ನ ಅ ಅ ಅ ಅ -ರ ಅ ಮಾ
3. ಸುಜನ ಜೀವ | ನ ಅ ಅ - ಅ ಅ ಅ -ರ ಅ ಅ ಅ ಅ ಮ
4. ಸುಜನ ಜೀವ | ನಾ ಅ ಅ ಅ ರ ಮ ಅ -ಸುಗುಣಭೂಷ ಣಾ ಅ ..

ಪಲ್ಲವಿ ಹಾಡಿ ಮುಗಿದಮೇಲೆ ಹಾಕುವ ಕಲ್ಪನಾ ಸ್ವರವೂ ಮನೋಧರ್ಮ ಸಂಗೀತ.

ಗಾಯಕರನ್ನು ಐದು ವಿಧವಾಗಿ ವಿಂಗಡಿಸುತ್ತಾರೆ ಶಿಕ್ಷಾಕಾರ, ಅಂದರೆ ಪಾಠ ಹೇಳಿ ಕೊಡುವುದರಲ್ಲಿ ಮಾತ್ರ ನಿಪುಣ; ಅನುಕಾರ, ಅಂದರೆ ಬೇರೆಯವರು ಹಾಡಿದಂತೆ ಅನುಕರಿಸಿ ಹಾಡುವವನು; ರಸಿಕ ಅಂದರೆ ರಸವತ್ತಾಗಿ ಹೃದಯ ಮುಟ್ಟುವಂತೆ ಹಾಡುವವನು; ರಂಜಕ ಅಂದರೆ ಶ್ರೋತೃಗಳ ಮನೋಲ್ಲಾಸವನ್ನೇ ಆದರ್ಶವಾಗುಳ್ಳವನು; ಕಡೆಯದಾಗಿ ಭಾವುಕ ಅಂದರೆ ಭಾವಗಳನ್ನು ಹಿಡಿದು ಅವುಗಳಿಗೆ ಮೆರುಗು ಕೊಟ್ಟು ಮನಮುಟ್ಟುವಂತೆ ಹಾಡುವವನು.

ಸಂಗೀತಗಾರನಿಗೆ ಶಾರೀರ ತುಂಬ ಮುಖ್ಯ. ಒಳ್ಳೆಯ ಶಾರೀರದ ಲಕ್ಷಣಗಳೆಂದರೆ ರಕ್ತಿ, ಗಾಂಭೀರ್ಯ, ಮಾರ್ದವ, ಘನತೆ, ಸ್ನಿಗ್ಧತೆ, ಧ್ವನಿಮಾಧುರ್ಯ ಮುಂತಾದವು. ಅಭ್ಯಾಸವಿಲ್ಲದಿದ್ದರೂ ರಾಗವನ್ನು ಸ್ಫುಟವಾಗಿ ಕಾಣಿಸುವ ಸಾಮರ್ಥ್ಯ ಶಾರೀರವೆನಿಸಿಕೊಳ್ಳುತ್ತದೆ. (ಎಸ್.ಕೆ.ಆರ್.)

ಕರ್ಣಾಟಕ ಸಂಗೀತದ ಪ್ರಯೋಗದಲ್ಲಿ ಗಾಯಕ ಮುಖ್ಯ. ಈಗ ಪಿಟೀಲು, ಮೃದಂಗ, ಕಂಜರಿ ಮುಂತಾದ ಪಕ್ಕವಾದ್ಯಗಳೊಡನೆ ಕಚೇರಿಗಳಲ್ಲಿ ಹಾಡುವುದು ರೂಢಿಯಲ್ಲಿದೆ. ವೀಣೆ, ನಾಗಸ್ವರ, ಪಿಟೀಲು ಮುಂತಾದವುಗಳನ್ನೇ ಪ್ರಧಾನವಾಗಿಯೂ ಉಪಯೋಗಿಸಬಹುದು. ಹಿಂದಿನಿಂದಲೂ ಈ ಪದ್ಧತಿಗಳು ಇದ್ದಂತೆ ತೋರುತ್ತದೆ. 17-18ನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸಂಗೀತ ಕಚೇರಿಗಳು ಸಂಗಾತವಾದ್ಯಗಳ ಉಲ್ಲೇಖಗಳೂ ದೊರೆಯುತ್ತವೆ. ನಗರಗಳಲ್ಲಿ ಸಂಗೀತ ಮತ್ತು ನೃತ್ಯಕ್ಕಾಗಿ ಪ್ರತ್ಯೇಕ ರಂಗಮಂಟಪಗಳಿದ್ದುವು. ವಾದ್ಯಸಂಗೀತದ ತನಿಕಚೇರಿಗಳು ವೀಣೆ ಮತ್ತು ಕೊಳಲು ವಾದ್ಯಗಳಲ್ಲಿ ಮದ್ದಳೆ ವಾದನದೊಡನೆ ನಡೆಯುತ್ತಿದ್ದುವು. ಹಾಡುಗಾರಿಕೆಯಲ್ಲಿ ಒಬ್ಬನೇ ಗಾಯಕ ಅಥವಾ ಯುಗ್ಮ ಜೊತೆ ಅಥವಾ ಗೋಷ್ಠಿಗಳು ಇರುತ್ತಿದುವು. ಇವು ಪಕ್ಕವಾದ್ಯಗಳೊಡನೆ ನಡೆಯುತ್ತಿದ್ದುವು. ಮುಖ್ಯ ಗಾಯಕನಿಗೆ ಮುಖರಿ ಎಂದು ಹೆಸರಿತ್ತು. ಇವನ ಜೊತೆಯಲ್ಲಿ ಇತರ ಗಾಯಕರು ಅನುಸರಿಸುತ್ತಿದ್ದರು. ರಾಜಾಸ್ಥಾನದಲ್ಲಿ ಗಾಯನವು ವೀಣೆ ಅಥವಾ ಕೊಳಲು ಮತ್ತು ಅವನದ್ಧ, ತತ ಮತ್ತು ಸುಷಿರ ವಾದ್ಯಗಳೊಡನೆ ನಡೆಯುತ್ತಿತ್ತು. ಅವನದ್ಧ ವಾದ್ಯಗಳಲ್ಲಿ ಹಲವು ರೀತಿಯ ಪಟಹ, ಭೇರಿ ಮುಂತಾದವು ಇದ್ದವು. ಕೊಂಬು, ಕಹಳೆ ಮುಂತಾದವು ಸುಷಿರ ವಾದ್ಯಗಳು. ಪಂಚಮುಖವಾದ್ಯವೆಂಬ ವಾದ್ಯ ರೂಢಿಯಲ್ಲಿತ್ತು. ಕಥಾಪ್ರಸಂಗದ ಪದ್ಯಗಳನ್ನು ಓದುವಾಗ ಸಂಗೀತವನ್ನು ಬಳಸಿಕೊಳ್ಳುತ್ತಿದ್ದರು. ವಾದ್ಯಗಳಲ್ಲಿ ಕಿನ್ನರಿ, ವಲ್ಲಕಿ, ವಿಪಂಚಿ, ರಾವಣಹಸ್ತ, ದಂಡಿಕಾ, ತ್ರಿಸರಿ, ಚಂತ್ರ, ಸ್ವರಮಂಡಲ ಮತ್ತು ಪರಿವಾದಿನಿ ಎಂಬ ತಂತೀವಾದ್ಯಗಳು ಶಂಖ, ಶೃಂಗ, ವಂಶ, ತಿತ್ತಿರಿ, ಬಂಬುಲಿ, ಕಹಳೆ ಮುಂತಾದ ಸುಷಿರ ವಾದ್ಯಗಳು ಒತ್ತು ಕರಡೆ, ಮೃದಂಗ, ಢಕ್ಕೆ, ಪಟಹ, ಆವುಜ, ದುಂದುಭಿ, ಪಣವ, ಭೇರಿ, ಡಿಂಡಿಮ, ತ್ರಿವಳಿ, ನಿಸ್ಸಾಳ, ಡಮರು, ಚಿಂಬಕ, ದಂಡೆ, ರುಂಜ, ಟೋಲುಗ, ಮುಕುಂದ, ರವಲಿ, ಕಂಠೀರವ, ಗಜಢಕ್ಕೆ, ಸಿಂಹಘಂಟೆ, ಪವಲ, ಚಿಂಕಿರು ಮುಂತಾದ ತಾಳ ವಾದ್ಯಗಳು ಘಂಟೆ, ಜಯಘಂಟೆ, ಕಿಂಕಣಿ, ಝುಲ್ಲರಿ, ತಾಳ, ಕಂಸಾಲವೆಂಬ ಘನವಾದ್ಯಗಳ ಹೆಸರು ಉಕ್ತವಾಗಿವೆ. ಪಾಲ್ಕುರಿಕೆ ಸೋಮನಾಥ'ನ ಪಂಡಿತಾರಾಧ್ಯಚರಿತ್ರೆ ಎಂಬ ತೆಲುಗು ಗ್ರಂಥದ ಪರ್ವತಪ್ರಕರಣದಲ್ಲಿ 32 ಬಗೆಯ ವೀಣೆಗಳು ಮತ್ತು 18 ಬಗೆಯ ಕೊಳಲುಗಳನ್ನು ಮತ್ತು ಸಂಗೀತ ವಾದ್ಯಗಳನ್ನು ಕುರಿತು ಹೇಳಿದೆ. ಇವುಗಳಲ್ಲಿ ಹಲವು ವಾದ್ಯಗಳ ಬಳಕೆ ಬಿಟ್ಟುಹೋಗಿದೆ. ಕೆಲವು ಕೇವಲ ಜನಪದ ವಾದ್ಯಗಳಾಗಿ ಬಳಕೆಯಲ್ಲಿವೆ. ಪಿಟೀಲು, ಹಾರ್ಮೋನಿಯಂ, ಮೋರ್ಚಿಂಗ್ ಮೊದಲಾದ ಪಾಶ್ಚಾತ್ಯ ಮೂಲದ ವಾದ್ಯಗಳು ಈಚೆಗೆ ಬಳಕೆಗೆ ಬಂದಿವೆ. (ವಿ.ಎಸ್.ಎಸ್.)

**ಕರ್ನಾಟಕ (ರಾಜ್ಯ) :** ಭಾರತಾಂತರ್ಗತವೂ ಪುರಾತನವೂ ವಿಶಿಷ್ಟ ಸಂಸ್ಕೃತಿಯುಕ್ತವೂ ಆಗಿದ್ದು, ಕನ್ನಡ ಪ್ರಧಾನ ಭಾಷೆಯಾಗಿ ಪ್ರಚಲಿತವಾಗಿರುವ ರಾಜ್ಯ. ದಕ್ಷಿಣ ಭಾರತದ ಮಧ್ಯವರ್ತಿ ಪ್ರದೇಶದಲ್ಲಿ ಸ್ವಲ್ಪ ಪಶ್ಚಿಮಕ್ಕೆ, ಅರಬ್ಬೀ ಸಮುದ್ರಕ್ಕೆ ಹೊಂದಿಕೊಂಡಂತಿರುವ ಕರ್ನಾಟಕ ಉತ್ತರ ಅಕ್ಷಾಂಶ $11^0$ 30' ನಿಂದ $18^0$ 45' ವರೆಗೂ ಪೂರ್ವ ರೇಖಾಂಶ $74^0$ 12' ನಿಂದ $78^0$ 30' ವರೆಗೂ ಹಬ್ಬಿದೆ. ಪೂರ್ವಪಶ್ಚಿಮವಾಗಿ ಸು.400ಕಿಮೀ ಮತ್ತು ಉತ್ತರ ದಕ್ಷಿಣವಾಗಿ 770ಕಿಮೀ ಇದೆ. ರಾಜ್ಯದ ಮೇರೆಗಳು - ವಾಯುವ್ಯ ಮತ್ತು ಉತ್ತರ ದಿಕ್ಕುಗಳಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರ ಪ್ರದೇಶ, ಆಗ್ನೇಯ ದಕ್ಷಿಣಗಳಲ್ಲಿ ತಮಿಳುನಾಡು, ನೈಋತ್ಯದಲ್ಲಿ ಕೇರಳ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ.

ಪ್ರಾಚೀನ ಕಾಲದಲ್ಲಿ ಕನ್ನಡ ಆಡುಭಾಷೆಯಾಗಿದ್ದ ನಾಡಿನ ವಿಸ್ತೀರ್ಣ ಎಷ್ಟು ಇತ್ತು ಎಂಬುದು ಸರಿಯಾಗಿ ತಿಳಿಯುವುದಿಲ್ಲ. ಕೆಲವು ಕಾಲಘಟ್ಟಗಳಲ್ಲಾದರೂ ಉತ್ತರದಲ್ಲಿ ಔರಂಗಾಬಾದ್, ಮುಂಬಯಿ ಭಾಗದಿಂದ ದಕ್ಷಿಣದಲ್ಲಿ ನೀಲಗಿರಿಯವರೆಗೂ ಪೂರ್ವದಲ್ಲಿ ಅನಂತಪುರ, ಕರ್ನೂಲುಗಳ ವರೆಗೂ ಕನ್ನಡ ಭಾಷೆ ಪ್ರಚಾರದಲ್ಲಿತ್ತು ಎಂಬುದಕ್ಕೆ ಸೂಚನೆಗಳು ದೊರಕುತ್ತವೆ. ಕನ್ನಾಡು, ಕನ್ನಡ ನಾಡು, ಕರ್ನಾಟಕ ಎಂಬ ಹೆಸರುಗಳಿಂದ ಪ್ರಖ್ಯಾತವಾಗಿದ್ದ ಈ ನಾಡಿನ ಭಾಗಗಳು ಪ್ರಾಚೀನ ಕಾಲದಲ್ಲಿ ಗಂಗವಾಡಿ, ನೊಳಂಬವಾಡಿ, ಕುಂತಳ, ಎಡೆನಾಡು, ತೊರೆನಾಡು, ಮರುಕರೆ ವಿಷಯ ಇತ್ಯಾದಿ ನೂರಾರು ವಿಭಾಗಗಳಾಗಿ ವಿಂಗಡವಾಗಿತ್ತಲ್ಲದೆ, ಐತಿಹಾಸಿಕ ಕಾರಣಗಳಿಂದಾಗಿ ಹಲವು ರಾಜವಂಶಗಳ ಕಕ್ಷೆಯೊಳಗೆ ಹಂಚಿಹೋಗುತ್ತಿತ್ತು.

19ನೆಯ ಶತಮಾನದಲ್ಲಿ ಮೈಸೂರು ಸಂಸ್ಥಾನ ಮತ್ತು ಕೊಡಗು ರಾಜ್ಯಗಳು ಮಾತ್ರ ಪೂರ್ಣ ಕನ್ನಡ ಪ್ರದೇಶವಾಗಿದ್ದು, ಕನ್ನಡನಾಡಿನ ಹೆಚ್ಚಿನ ಭಾಗಗಳು ಮದರಾಸು ಪ್ರಾಂತ್ಯ, ಮುಂಬಯಿ ಪ್ರಾಂತ್ಯ ಮತ್ತು ಹೈದರಾಬಾದು ಸಂಸ್ಥಾನಗಳಲ್ಲಿ ಸೇರಿಹೋಗಿದ್ದುವು. ಕನ್ನಡದ ನೆಲವೆಲ್ಲ ಒಟ್ಟುಗೂಡಿ ವಿಸ್ತೃತ ರಾಜ್ಯ ಉದಯವಾದದ್ದು 1956ರ ನವೆಂಬರ್ 1ರಂದು. ಅಂದು ಭಾರತ ಸರ್ಕಾರದ ರಾಜ್ಯ ಪುನರ್ಘಟನೆಯ ಅಧಿನಿಯಮದ ಪ್ರಕಾರ 1956ಕ್ಕೆ ಹಿಂದೆ ಇದ್ದ, ಹಳೆಯ ಮೈಸೂರು ಸಂಸ್ಥಾನದ ಎಲ್ಲ ಜಿಲ್ಲೆಗಳು, ಈ ಹಿಂದೆಯೇ 1953ರಲ್ಲಿ ಆಂಧ್ರ ರಾಜ್ಯ ನಿರ್ಮಾಣ ಶಾಸನದನ್ವಯ ಮದರಾಸ್ ರಾಜ್ಯದಿಂದ ಮೈಸೂರು ರಾಜ್ಯಕ್ಕೆ ಸೇರಿಸಿದ್ದ ಬಳ್ಳಾರಿ ಜಿಲ್ಲೆ, ಮುಂಬಯಿ ರಾಜ್ಯದಲ್ಲಿದ್ದ ಧಾರವಾಡ, ಉತ್ತರ ಕನ್ನಡ, ಬೆಳಗಾಂವಿ (ಚಂದಗಡ ತಾಲ್ಲೂಕನ್ನು ಬಿಟ್ಟು) ಮತ್ತು ಬಿಜಾಪುರ ಜಿಲ್ಲೆಗಳು, ಹೈದರಾಬಾದ್ ಸಂಸ್ಥಾನದಲ್ಲಿದ್ದ ಗುಲ್ಬರ್ಗ (ಕೋಡಂಗಲ್ ಮತ್ತು ತಾಂಡೂರು ತಾಲ್ಲೂಕುಗಳನ್ನು ಬಿಟ್ಟು), ರಾಯಚೂರು (ಆಲಂಪುರ ಮತ್ತು ಗದ್ವಾಲ ತಾಲ್ಲೂಕುಗಳು ವಿನಾ), ಬೀದರ್ (ಬೀದರ್, ಹುಮ್ನಾಬಾದ, ಭಾಲ್ಕಿ ಮತ್ತು ಔರಾದ ತಾಲ್ಲೂಕುಗಳು ಮಾತ್ರ) ಈ ಜಿಲ್ಲೆಗಳು, ಮದರಾಸು ಪ್ರಾಂತ್ಯದಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆ ಕಾಸರಗೋಡು ತಾಲ್ಲೂಕು ಮತ್ತು ಅಮೀನ್‌ದೀವಿ ದ್ವೀಪಗಳ ವಿನಾ ಮತ್ತು ಕೊಯಮುತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಹಾಗೂ ಹಿಂದಿನ ಕೊಡಗು ಸಂಸ್ಥಾನ ಈ ಭಾಗಗಳು ಸೇರಿದ ವಿಶಾಲ ಕರ್ನಾಟಕ ಮೈಸೂರು ರಾಜ್ಯ ಎಂಬ ಹೆಸರಿನಿಂದ ರಚಿತವಾಯಿತು. ಹೀಗೆ ಉದಯವಾದ ಕನ್ನಡ ನಾಡು ಹದಿನಾರು ವರ್ಷಗಳ ಅನಂತರ 1973 ನವೆಂಬರ್ 1ರಂದು ಕರ್ನಾಟಕ ಎಂಬ ಅಭಿಧಾನವನ್ನು ಪಡೆಯಿತು.

ಕರ್ನಾಟಕ ರಾಜ್ಯದ ವಿಸ್ತೀರ್ಣ 1,91,791ಚ.ಕಿಮೀ. ಜನಸಂಖ್ಯೆ 5,27,33,958. ರಾಜ್ಯದಲ್ಲಿ ಪಟ್ಟಣಗಳೂ ಗ್ರಾಮಗಳೂ ಸೇರಿದಂತೆ ಒಟ್ಟು 27,066 ಜನವಸತಿ ಘಟಕಗಳಿವೆ. ಪಟ್ಟಣಗಳ ಸಂಖ್ಯೆ 209. ಇವುಗಳಲ್ಲಿ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ, ಧಾರವಾಡ, ಮಂಗಳೂರು, ಬೆಳಗಾಂವಿ ಬೃಹನ್ನಗರಗಳು. ಲಕ್ಷಕ್ಕೂ ಮೀರಿದ ಜನಸಂಖ್ಯೆಯುಳ್ಳ ಇತರ ನಗರಗಳ ಸಂಖ್ಯೆ 124.50, ಸಾವಿರದಿಂದ ಲಕ್ಷದವರೆಗಿನ ಜನಸಂಖ್ಯೆಯುಳ್ಳ ನಗರಗಳು ಒಟ್ಟು 127.20, ಸಾವಿರದಿಂದ 50 ಸಾವಿರದವರೆಗೆ ಪ್ರಜಾಸಂಖ್ಯೆಯುಳ್ಳ 101 ಪಟ್ಟಣಗಳಿವೆ.

ಭಾರತದ ಒಟ್ಟು ವಿಸ್ತೀರ್ಣದಲ್ಲಿ ಕರ್ನಾಟಕ ರಾಜ್ಯ (32,80,433) ಶೇ.5.85 ವಿಸ್ತೀರ್ಣವುಳ್ಳದ್ದೂ. ಭಾರತದ 28 ರಾಜ್ಯಗಳು ಮತ್ತು ಏಳು ಕೇಂದ್ರಾಡಳಿತ ಪ್ರದೇಶಗಳಿಗೆ ಹೋಲಿಸಿದರೆ ವಿಸ್ತೀರ್ಣ ಹಾಗೂ ಜನಸಂಖ್ಯೆಯಲ್ಲಿ ಕರ್ನಾಟಕ ಒಂಬತ್ತನೆಯ ಸ್ಥಾನವನ್ನು ಪಡೆದಿದೆ.

ಆಡಳಿತ ಉದ್ದೇಶಗಳಿಗಾಗಿ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳಾಗಿಯೂ 27 ಜಿಲ್ಲೆಗಳಾಗಿಯೂ ವಿಂಗಡಿಸಲಾಗಿದೆ. ಈ ಜಿಲ್ಲೆಗಳಲ್ಲಿ ಒಟ್ಟು 175 ತಾಲ್ಲೂಕುಗಳಿವೆ. ರಾಜ್ಯದ ರಾಜಧಾನಿ ಬೆಂಗಳೂರು. ವಿಭಾಗಗಳು ಜಿಲ್ಲೆಗಳು, ಅವುಗಳಲ್ಲಿರುವ ತಾಲ್ಲೂಕುಗಳ ಸಂಖ್ಯೆ, ವಿಸ್ತೀರ್ಣ ಮತ್ತು ಜನಸಂಖ್ಯೆ ಇವುಗಳ ವಿವರಗಳನ್ನು 457-58ನೆಯ ಪುಟ ಸಂಖ್ಯೆಯಿಂದ ತಿಳಿಯಬಹುದು. *

**ಕರ್ನಾಟಕ (ಪದವ್ಯುತ್ಪತ್ತಿ) :** ಕರ್ನಾಟಕ ಮತ್ತು ಕನ್ನಡ ಶಬ್ದಗಳು ದೇಶ, ಭಾಷೆ, ಜನ ಮತ್ತು ಕುಲಗಳನ್ನು ನಿರ್ದೇಶಿಸುತ್ತವೆ. ಕವಿರಾಜಮಾರ್ಗದಲ್ಲಿಯೂ ಆಂಡಯ್ಯನ ಕಬ್ಬಿಗರಕಾವದಲ್ಲಿಯೂ ಕನ್ನಡ ದೇಶವಾಚಕವಾಗಿದೆ. ಚೆನ್ನಬಸವೇಶ್ವರ ಮತ್ತು ನಿಜಗುಣಶಿವಯೋಗಿಗಳ ಉಲ್ಲೇಖಗಳಲ್ಲಿ ಅದು ಕುಲವಾಚಕವಾಗಿ ಬಂದಿರುವಂತೆ ತೋರುತ್ತದೆ. ಮುಖ್ಯವಾಗಿ ಆ ಶಬ್ದಗಳು ದೇಶ ಮತ್ತು ಭಾಷಾವಾಚಕಗಳಾಗಿಯೇ ಪ್ರಯೋಗವಾಗುತ್ತವೆ. ಈ ಲೇಖನದಲ್ಲಿ ಕರ್ನಾಟಕ ಶಬ್ದದ ವ್ಯುತ್ಪತ್ತಿ ಅರ್ಥವ್ಯಾಪ್ತಿಯನ್ನು ಕುರಿತು ವಿವೇಚಿಸಲಾಗಿದೆ.

ಕರ್ನಾಟಕ ಶಬ್ದದ ಪೂರ್ವಪ್ರಯೋಗಗಳು ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಸಂಸ್ಕೃತ ಮಹಾಭಾರತದಲ್ಲಿ (ಕ್ರಿ.ಪೂ.3ನೆಯ) ಶತಮಾನ ಜನಪದಗಳನ್ನು ಕುರಿತು ಹೇಳುವಾಗ ಸಭಾಪರ್ವದಲ್ಲಿ ಕರ್ಣಾಟಾಃ ಎಂದೂ (78-98) ಭೀಷ್ಮಪರ್ವದಲ್ಲಿ ಕರ್ಣಾಟಕಾಃ ಎಂದೂ (9-50) ಎರಡು ಮಾತುಗಳು ಬಂದಿವೆ. ಶೂದ್ರಕ ಕವಿಯ (ಸು.400) ಮೃಚ್ಛಕಟಿಕ ನಾಟಕದ ಒಂದು ಸಂವಾದದಲ್ಲಿ, ವರಾಹಮಿಹಿರನ (ಸು.6ನೆಯ ಶತಮಾನದ ಆದಿಭಾಗ) ಬೃಹತ್ಸಂಹಿತೆಯಲ್ಲಿ, ಮಾರ್ಕಂಡೇಯಪುರಾಣ (ಸು.8ನೆಯ ಶತಮಾನ) ಮತ್ತು ಸೋಮದೇವನ ಕಥಾಸರಿತ್ಸಾಗರಗಳಲ್ಲಿ ಕರ್ಣಾಟ ಶಬ್ದವನ್ನು ಕಾಣಬಹುದು. ಗುಣಾಢ್ಯನ ಬೃಹತ್ಕಥೆಯಿಂದ ಆ ಪದವನ್ನು ಸೋಮದೇವ ಎತ್ತಿಕೊಂಡಿದ್ದ ಪಕ್ಷಕ್ಕೆ ಆ ಶಬ್ದದ ಬಳಕೆ 1-2ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆನ್ನಬಹುದು. ಈಚೆಗೆ ರಾಜಶೇಖರನ (10ನೆಯ ಶತಮಾನ) ಕಾವ್ಯಮೀಮಾಂಸಾ ಗ್ರಂಥದಲ್ಲಿ ಕನ್ನಡಿಗರ ಪಠನರೀತಿಯನ್ನು ಕುರಿತು ಹೇಳುವಾಗ ರಸಃ ಕೋಪ್ಯಸ್ತು ಕಾಪ್ಯಸ್ತು ರೀತಿಃ ಸಗರ್ವಂ ಸರ್ವ ಕರ್ಣಾಟಕಾಃ ಟಂಕಾರೋತ್ತರಪಾಠಿನಃ ಎಂಬ ಸ್ವಾರಸ್ಯಕರವಾದ ಮಾತು ಬಂದಿದೆ.

ಶಿಲಪ್ಪದಿಗಾರಂ ಎಂಬ ಪ್ರಾಚೀನ ತಮಿಳು ಸಾಹಿತ್ಯ ಕೃತಿಯಲ್ಲಿ (ಸು.2-5ನೆಯ ಶತಮಾನ) ಕರುನಾಡರ್ ಎಂಬ ಶಬ್ದವೂ ಪಾಂಡ್ಯ ದೊರೆ ಜಡೈಯನ್ ಪರಾಂತಕನ ವೇಳ್ವಿಕುಡಿ ತಾಮ್ರಶಾಸನದಲ್ಲಿ (ಸು.770) ಕರುನಾಡಗನ್ ಎಂಬ ಶಬ್ದವೂ ದೊರೆಯುತ್ತವೆ. ಹಾಗೆಯೇ ಕನ್ನಾಡಗರುಂ, ಕನ್ನಾಟ, ಕನ್ನಾಟಕ ಎಂಬ ರೂಪಗಳು ತಮಿಳು ಶಾಸನಗಳಲ್ಲಿ ಕಂಡುಬಂದಿವೆ. ಅಪಭ್ರಂಶ ಪ್ರಾಕೃತದಲ್ಲಿ ಕನ್ನಾಡ, ಪಾಲಿಯಲ್ಲಿ ಕರ್ನಾಟ, ಗುಜರಾತಿ ಮೊದಲಾದವುಗಳಲ್ಲಿ ಕನಡಿ, ಮರಾಠಿಯಲ್ಲಿ ಕಾನಡಿ ಎಂಬ ರೂಪಗಳುಂಟು. ಬಿ.ಎ. ಸಾಲೆತೊರೆ ಅವರ ಪ್ರಕಾರ ಪಾಶ್ಚಾತ್ಯರು ಕನ್ನಡ ಭಾಷೆಯ ಹೆಸರನ್ನು 1516ರಲ್ಲಿ Canari, 1520ರಲ್ಲಿ Canarim, 1552ರಲ್ಲಿ Canarij, 1615ರಲ್ಲಿ Canarin, 1654ರಲ್ಲಿ Canary ಎಂದೂ ನಡುನಡುವೆ ಎಷ್ಟೋ ಬಾರಿ Carnatic, Carnate, Karnat ಎಂದೂ ಮುಂತಾಗಿ ಬರೆಯುತ್ತಿದ್ದರೆಂದೂ ತಿಳಿಯುತ್ತದೆ.

ಕನ್ನಡ ಭಾಷೆಯಲ್ಲಿಯೇ ಬಹುಸಂಖ್ಯೆಯ ಪ್ರಾಚೀನ ಶಾಸನಗಳಲ್ಲಿ ಹಾಗೂ ಗ್ರಂಥಗಳಲ್ಲಿ ಕರ್ನಾಟಕ ಮತ್ತು ಸದೃಶ ಶಬ್ದಗಳಾದ ಕರ್ನಾಟ, ಕರ್ಣಾಟಕ, ಕರ್ಣಾಟ, ಕನ್ನಡ ಮುಂತಾದವು ಬಳಕೆಯಾಗಿವೆ. ಉತ್ತರ ಕರ್ನಾಟಕದಲ್ಲಿ ವ್ಯವಹಾರದಲ್ಲಿ ಕನ್ನಡು ಎಂಬ ಮಾತುಂಟು. ಸುಮಾರು 7-8ನೆಯ ಶತಮಾನದಿಂದ ಶಾಸನಗಳಲ್ಲಿ ಈ ಶಬ್ದಗಳ ರೂಪಗಳು ಬಳಕೆಯಾಗಿರುವಂತೆ ತೋರುತ್ತವೆ. 90ಕ್ಕೆ ಮೇಲ್ಪಟ್ಟ ಅಂಥ ಶಾಸನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಇವುಗಳ ಆಧಾರದಿಂದ ಕನ್ನಡನಾಡು ಬಹು ಹಿಂದಿನ ಕಾಲದಿಂದಲೂ ಕರ್ಣಾಟ, ಕರುನಾಡು ಮುಂತಾದ ಹೆಸರುಗಳಲ್ಲಿ ಅಸ್ತಿತ್ವದಲ್ಲಿದೆಯೆಂಬುದಾಗಿ ತಿಳಿಯುತ್ತದೆ.

ಕಾಲ್ಡ್‌ವೆಲ್ ಅವರು ಕರ್ನಾಟಕ ಎಂಬ ಪದ ಈಚೆಗೆ ವಿಪರೀತವಾದ ಅರ್ಥವನ್ನು ಪಡೆಯಿತೆಂದು ಹೇಳಿದ್ದಾರೆ. ಈ ಮೊದಲು


ಕ ರ್ನಾ ಟ ಕ
ಆಡಳಿತ ವಿಭಾಗಗಳು
ಜಿಲ್ಲಾ ಗಡಿ
ತಾಲ್ಲೂಕು ಗಡಿ
ರಾಜಧಾನಿ
ವಿಭಾಗಕೇಂದ್ರ
ಜಿಲ್ಲಾಕೇಂದ್ರ
ತಾಲ್ಲೂಕು ಕೇಂದ್ರ
0 25 50 75
ಕಿಲೋಮೀಟರುಗಳು
ಗೋವ
ಬೀದರ್
ಭಾಲ್ಕಿ
ಬಸವಕಲ್ಯಾಣ
ಹುಮನಾಬಾದ್
ಆಳಂದ
ಚಿಂಚೋಳಿ
ಗುಲ್ಬರ್ಗ
ಅಫಜಲಪುರ
ಇಂಡಿ
ಚಿತ್ತಾಪುರ
ಸೇಡಂ
ಜೇವರ್ಗಿ
ಸಿಂಧಗಿ
ಯಾದಗಿರಿ
ಬಿಜಾಪುರ
ಅಥಣಿ
ಜಮಖಂಡಿ
ಶಾಹಪುರ
ಬಸವನ
ಬಾಗೇವಾಡಿ
ಸುರಪುರ
ಚಿಕ್ಕೋಡಿ
ರಾಯಬಾಗ
ಬೀಳಗಿ
ಮುದ್ದೇಬಿಹಾಳ
ದೇವದುರ್ಗ
ಮುಧೋಳ
ಲಿಂಗಸುಗೂರು
ರಾಯಚೂರು
ಹುಕ್ಕೇರಿ
ಗೋಕಾಕ
ಬಾಗಲಕೋಟೆ
ಹುನಗುಂದ
ಮಾನ್ವಿ
ರಾಮದುರ್ಗ
ಬಾದಾಮಿ
ಬೆಳಗಾಂವಿ
ಸವದತ್ತಿ
ಕುಷ್ಟಗಿ
ಸಿಂಧನೂರು
ಬೈಲಹೊಂಗಲ
ನರಗುಂದ
ರೋಣ
ಸಿರಗುಪ್ಪ
ಖಾನಾಪುರ
ನವಲಗುಂದ
ಯಲಬುರ್ಗ
ಗಂಗಾವತಿ
ಧಾರವಾಡ
ಗದಗ
ಕೊಪ್ಪಳ
ಹಳಿಯಾಳ
ಹುಬ್ಬಳ್ಳಿ
ಕುಂದಗೋಳ
ಮುಂಡರಗಿ
ಹೊಸಪೇಟೆ
ಬಳ್ಳಾರಿ
ಜೋಯಿಡ
ಕಲಘಟಗಿ
ಶಿರಹಟ್ಟಿ
ಹಗರಿಬೊಮ್ಮನಹಳ್ಳಿ
ಸಂಡೂರು
ಯಲ್ಲಾಪುರ
ಶಿಗ್ಗಾಂವಿ
ಸವಣೂರ
ಹಡಗಲಿ
ಉತ್ತರ ಕನ್ನಡ
ಮುಂಡಗೋಡ
ಹಾವೇರಿ
ಕಾರವಾರ
ಹರಪನಹಳ್ಳಿ
ಕೂಡ್ಲಗಿ
ಮೊಳಕಾಲ್ಮೂರು
ಬ್ಯಾಡಗಿ
ಹಾನಗಲ್
ಅಂಕೋಲ
ಶಿರಸಿ
ರಾಣೆಬೆನ್ನೂರು
ಹರಿಹರ
ಜಗಳೂರು
ಹಿರೇಕೆರೂರು
ಕುಮಟ
ಸೊರಬ
ದಾವಣಗೆರೆ
ಚಿತ್ರದುರ್ಗ
ಚಳ್ಳಕೆರೆ
ಸಿದ್ದಾಪುರ
ಶಿಕಾರಿಪುರ
ಪಾವಗಡ
ಹೊನ್ನಾವರ
ಹೊನ್ನಾಳಿ
ಚನ್ನಗಿರಿ
ಸಾಗರ
ಶಿವಮೊಗ್ಗ
ಹೊಳಲ್ಕೆರೆ
ಹಿರಿಯೂರು
ಭಟ್ಕಳ
ಭದ್ರಾವತಿ
ಹೊಸನಗರ
ಹೊಸದುರ್ಗ
ಬಾಗೇಪಲ್ಲಿ
ಮಧುಗಿರಿ
ಶಿರಾ
ಗುಡಿಬಂಡೆ
ತೀರ್ಥಹಳ್ಳಿ
ನರಸಿಂಹ
ತರೀಕೆರೆ
ಗೌರಿ
ಬಿದನೂರು
ಶಿಡ್ಲಘಟ್ಟ
ಕುಂದಾಪುರ
ರಾಜಪುರ
ಚಿಕ್ಕನಾಯಕನಹಳ್ಳಿ
ಕೊರಟಗೆರೆ
ಚಿಕ್ಕಬಳ್ಳಾಪುರ
ಚಿಂತಾಮಣಿ
ಕಡೂರು
ಕೊಪ್ಪ
ಗುಬ್ಬಿ
ದೊಡ್ಡ
ಶ್ರೀನಿವಾಸಪುರ
ಉಡುಪಿ
ಶೃಂಗೇರಿ
ಚಿಕ್ಕಮಗಳೂರು
ಅರಸೀಕೆರೆ
ತಿಪಟೂರು
ತುಮಕೂರು
ಬಳ್ಳಾಪುರ
ದೇವನಹಳ್ಳಿ
ಕೋಲಾರ
ಕಾರ್ಕಳ
ಮೂಡಿಗೆರೆ
ಬೇಲೂರು
ನೆಲಮಂಗಲ
ಹೊಸಕೋಟೆ
ಮುಳಬಾಗಿಲು
ದಕ್ಷಿಣಕನ್ನಡ
ಹಾಸನ
ತುರುವೇಕೆರೆ
ಮಂಗಳೂರು
ಬೆಳ್ತಂಗಡಿ
ಆಲೂರು
ಚನ್ನರಾಯಪಟ್ಟಣ
ಕುಣಿಗಲು
ಮಾಗಡಿ
ಬೆಂಗಳೂರು
ಮಾಲೂರು
ಬಂಗಾರಪೇಟೆ
ಬಂಟ್ವಾಳ
ಸಕಲೇಶಪುರ
ಹೊಳೆ
ನಾಗಮಂಗಲ
ರಾಮನಗರ
ಆನೇಕಲ್ಲು
ಚನ್ನಪಟ್ಟಣ
ಕನಕಪುರ
ಸುಳ್ಯ
ಸೋಮವಾರಪೇಟೆ
ಕೃಷ್ಣರಾಜ
ಪೇಟೆ
ಮಂಡ್ಯ
ಮದ್ದೂರು
ನಗರ
ಪಾಂಡವಪುರ
ಬೆಂಗಳೂರು
(ಗ್ರಾಮಾಂತರ)
ಮಡಿಕೇರಿ
ಶ್ರೀರಂಗಪಟ್ಟಣ
ಮಳವಳ್ಳಿ
ಕೊಡಗು
ಪಿರಿಯಾಪಟ್ಟಣ
ತಿರುಮಕೂಡಲು
ಹುಣಸೂರು
ಮೈಸೂರು
ನರಸೀಪುರ
ಕೊಳ್ಳೇಗಾಲ
ವಿರಾಜಪೇಟೆ
ಹೆಗ್ಗಡದೇವನ
ಕೋಟೆ
ನಂಜನಗೂಡು
ಯಳಂದೂರು
ಗುಂಡ್ಲುಪೇಟೆ
ಚಾಮರಾಜನಗರ

## ವಿಸ್ತೀರ್ಣ ಮತ್ತು ಜನಸಂಖ್ಯೆ

| ಕ್ರ. ಸಂ. | ಜಿಲ್ಲೆಯ ಹೆಸರು | ವಿಸ್ತೀರ್ಣ ಚ.ಕಿಮೀ. | ಜನಸಂಖ್ಯೆ (2001) | | | | |
|---|---|---|---|---|---|---|---|
| | | | ಒಟ್ಟು | ಗಂಡಸರು | ಹೆಂಗಸರು | ಗ್ರಾಮೀಣ | ನಗರ |
| 1 | 2 | 3 | 4 | 5 | 6 | 7 | 8 |
| 1 | ಬೆಂಗಳೂರು | 2,190 | 6,523,110 | 3,422,797 | 3,100,313 | 777,693 | 5,745,417 |
| 2 | ಬೆಂಗಳೂರು ಗ್ರಾಮಾಂತರ | 5,815 | 1,877,416 | 961,335 | 961,081 | 1,470,542 | 4,06,874 |
| 3 | ಚಿತ್ರದುರ್ಗ | 8,388 | 1,510,227 | 772,64 | 737, 578 | 1,236, 148 | 2,74,079 |
| 4 | ದಾವಣಗೆರೆ | 6,018 | 1,789,693 | 917,320 | 872,373 | 1,247,443 | 542,250 |
| 5 | ಕೋಲಾರ | 8,223 | 2,523,406 | 1,281,153 | 1,242,253 | 1,898,771 | 624,635 |
| 6 | ಶಿವಮೊಗ್ಗ | 8,465 | 1,639,595 | 829,365 | 810,230 | 1,069,132 | 570,463 |
| 7 | ತುಮಕೂರು | 10,598 | 2,579,516 | 1,311,941 | 1,267,575 | 2,072,836 | 506,680 |
| **I** | ಬೆಂಗಳೂರು ವಿಭಾಗ | **49,697** | **18,442,963** | **9,496,560** | **8,946,403** | **9,772,565** | **8,670,398** |
| 8 | ಬೆಳಗಾಂವಿ | 13,415 | 4,207,264 | 2,147,746 | 2,059,518 | 3,194,848 | 1,012,416 |
| 9 | ಬಿಜಾಪುರ | 10,475 | 1,808,863 | 928,550 | 880,313 | 1,413,290 | 395,573 |
| 10 | ಬಾಗಲಕೋಟೆ | 6,594 | 1,652,232 | 835,684 | 816,548 | 1,1 73,058 | 479,174 |
| 11 | ಧಾರವಾಡ | 4,230 | 1,603,794 | 823,415 | 780,379 | 722.068 | 881,726 |
| 12 | ಗದಗ | 4,657 | 971,955 | 493,795 | 478,160 | 629,994 | 341,961 |
| 13 | ಹಾವೇರಿ | 4,851 | 1,437,860 | 740,307 | 697,553 | 1,138,954 | 298,906 |
| 14 | ಉತ್ತರ ಕನ್ನಡ | 10,291 | 1,353,299 | 687,026 | 66,273 | 965,345 | 38 7,954 |
| **II** | ಬೆಳಗಾಂವಿ ವಿಭಾಗ | **54,513** | **13,035,267** | **656,523** | **6,378,744** | **9,237,557** | **3797,710** |
| 15 | ಬಳ್ಳಾರಿ | 8,419 | 2,025,242 | 1,028,481 | 996,761 | 1,319,239 | 706,003 |
| 16 | ಬೀದರ್ | 5,448 | 1,501,374 | 770,679 | 730,695 | 1,156,920 | 344,454 |
| 17 | ಗುಲ್ಬರ್ಗ | 16,224 | 3,124,858 | 1,591,379 | 1,533,479 | 2,276,935 | 847,923 |
| 18 | ರಾಯಚೂರು | 5,559 | 1,648,212 | 832,352 | 815,860 | 1,229,203 | 419,009 |
| 19 | ಕೊಪ್ಪಳ | 8,458 | 1,193,496 | 602,026 | 591,470 | 995,224 | 198,272 |
| **III** | ಗುಲ್ಬರ್ಗ ವಿಭಾಗ | **44,108** | **9,493,182** | **4,824,917** | **4,668,265** | **6,977,521** | **2,515,661** |
| 20 | ಚಿಕ್ಕಮಗಳೂರು | 7,201 | 1,139,104 | 5734,275 | 564,275 | 916,740 | 222,364 |
| 21 | ದಕ್ಷಿಣ ಕನ್ನಡ | 4,843 | 1.896,403 | 937,651 | 958,752 | 1,167,958 | 728,445 |
| 22 | ಉಡುಪಿ | 3,598 | 1,109,494 | 521,541 | 587,953 | 903,173 | 206,321 |
| 23 | ಹಾಸನ | 6,814 | 1,721,319 | 858,623 | 862,696 | 1,416,579 | 304,740 |
| 24 | ಕೊಡಗು | 4,102 | 545,322 | 273,210 | 272,112 | 470,099 | 75,223 |
| 25 | ಮಂಡ್ಯ | 4,961 | 1,761,718 | 887,307 | 874,411 | 1,479,534 | 282,184 |
| 26 | ಮೈಸೂರು | 6,269 | 2,624,911 | 1,335,841 | 1,289,070 | 1,656,310 | 968,601 |
| 27 | ಚಾಮರಾಜನಗರ | 5,685 | 964,275 | 489,895 | 474,380 | 816,064 | 148,211 |
| **IV** | ಮೈಸೂರು ವಿಭಾಗ | **43,473** | **11,762,546** | **5,878,343** | **5,884,203** | **8,826,457** | **2,936,089** |
| | ರಾಜ್ಯ | **191,791** | **52,733,958** | **26,856,343** | **25,877,615** | **34,814,100** | **17,919,858** |

# ಕರ್ನಾಟಕ (ರಾಜ್ಯ)

## ವಿಸ್ತೀರ್ಣ ಮತ್ತು ಜನಸಂಖ್ಯೆ

| ಕ್ರ. ಸಂ. | ವಿಭಾಗಗಳು ಮತ್ತು ಜಿಲ್ಲೆಗಳು | ತಾಲ್ಲೂಕುಗಳು | ಹೋಬಳಿಗಳು | ಗ್ರಾಮಗಳು (2001ರ ಜನಗಣತಿ) | |
|---|---|---|---|---|---|
| | | | | ಜನವಸತಿ ಇರುವ | ಜನವಸತಿ ಇಲ್ಲದ |
| 1 | 2 | 3 | 4 | 5 | 6 |
| 1 | ಬೆಂಗಳೂರು | 3 | 17 | 681 | 47 |
| 2 | ಬೆಂಗಳೂರು ಗ್ರಾಮಾಂತರ | 8 | 35 | 1,713 | 170 |
| 3 | ಚಿತ್ರದುರ್ಗ | 6 | 22 | 932 | 127 |
| 4 | ದಾವಣಗೆರೆ | 6 | 24 | 786 | 132 |
| 5 | ಕೋಲಾರ | 11 | 53 | 2,889 | 432 |
| 6 | ಶಿವಮೊಗ್ಗ | 7 | 40 | 1,430 | 103 |
| 7 | ತುಮಕೂರು | 10 | 50 | 2,537 | 181 |
| **I** | ಬೆಂಗಳೂರು ವಿಭಾಗ | **51** | **241** | **10,968** | **1,192** |
| 8 | ಬೆಳಗಾಂವಿ | 10 | 35 | 1,138 | 26 |
| 9 | ಬಿಜಾಪುರ | 5 | 18 | 639 | 4 |
| 10 | ಬಾಗಲಕೋಟೆ | 6 | 18 | 608 | 2 |
| 11 | ಧಾರವಾಡ | 5 | 14 | 362 | 10 |
| 12 | ಗದಗ | 5 | 11 | 307 | 5 |
| 13 | ಹಾವೇರಿ | 7 | 19 | 675 | 7 |
| 14 | ಉತ್ತರ ಕನ್ನಡ | 11 | 35 | 1,264 | 53 |
| **II** | ಬೆಳಗಾಂವಿ ವಿಭಾಗ | **49** | **150** | **4,993** | **107** |
| 15 | ಬಳ್ಳಾರಿ | 7 | 27 | 517 | 25 |
| 16 | ಬೀದರ್ | 5 | 30 | 587 | 22 |
| 17 | ಗುಲ್ಬರ್ಗ | 10 | 48 | 1,295 | 83 |
| 18 | ರಾಯಚೂರು | 5 | 37 | 808 | 70 |
| 19 | ಕೊಪ್ಪಳ | 4 | 20 | 588 | 40 |
| **III** | ಗುಲ್ಬರ್ಗ ವಿಭಾಗ | **31** | **162** | **3,795** | **240** |
| 20 | ಚಿಕ್ಕಮಗಳೂರು | 7 | 32 | 1,021 | 92 |
| 21 | ದಕ್ಷಿಣ ಕನ್ನಡ | 5 | 17 | 371 | - |
| 22 | ಉಡುಪಿ | 3 | 9 | 244 | - |
| 23 | ಹಾಸನ | 8 | 38 | 2,369 | 183 |
| 24 | ಕೊಡಗು | 3 | 16 | 291 | 5 |
| 25 | ಮಂಡ್ಯ | 7 | 31 | 1,365 | 113 |
| 26 | ಮೈಸೂರು | 7 | 33 | 1,203 | 129 |
| 27 | ಚಾಮರಾಜನಗರ | 4 | 16 | 446 | 66 |
| **IV** | ಮೈಸೂರು ವಿಭಾಗ | **44** | **192** | **7,310** | **588** |
| | ರಾಜ್ಯ | **175** | **745** | **27,066** | **2,127** |

ಕರ್ನಾಟಕ ಎಂಬುದು ದಕ್ಷಿಣ ಹಿಂದುಸ್ಥಾನದ ಎತ್ತರವಾದ ಪ್ರಾಂತ್ಯಕ್ಕೆ ಕೊಟ್ಟ ಹೆಸರಾಗಿತ್ತು. ಈಚೆಗೆ ವಿದೇಶೀಯರ ಕೈಯಲ್ಲಿ ಅದಕ್ಕೆ ವಿಪರೀತವಾದ ಅರ್ಥ ಬಂತು. ಮಹಮ್ಮದೀಯರು ದಕ್ಷಿಣ ಭಾರತಕ್ಕೆ ಬಂದ ಮೊದಲಲ್ಲಿ ತಮಗೆ ಮೊದಲು ಪರಿಚಿತವಾದ ಮೈಸೂರು ಮತ್ತು ತೆಲಂಗಾಣದ ಭಾಗಗಳನ್ನೊಳಗೊಂಡ ಘಟ್ಟಗಳ ಮೇಲಿನ ಪ್ರದೇಶವನ್ನು ಕರ್ನಾಟಕ ದೇಶವೆಂದು ಕರೆದರು. ಕಾಲಕ್ರಮದಲ್ಲಿ ಅವರು ಆ ಹೆಸರನ್ನು ಘಟ್ಟಗಳ ಕೆಳಗಿನ ಪ್ರದೇಶಕ್ಕೂ ಕೊಟ್ಟರು. ಅನಂತರದಲ್ಲಿ ಇಂಗ್ಲಿಷರು ವಾಸ್ತವವಾಗಿ ಆ ಹೆಸರಿಗೆ ಏನೂ ಸಂಬಂಧವೇ ಇಲ್ಲದ ಘಟ್ಟದ ಕೆಳಗಿನ ಪ್ರದೇಶಕ್ಕೆ ಮಾತ್ರ ಹೆಸರನ್ನು ಸೀಮಿತಗೊಳಿಸಿದರು. ಈ ಕಾರಣವಾಗಿ ನಿಜವಾಗಿ ಕರ್ನಾಟಕ ಎಂಬ ಶಬ್ದ ಯಾವ ಪ್ರದೇಶವನ್ನು ಸೂಚಿಸಬೇಕಾಗಿತ್ತೋ ಅದು ಹೋಗಿ ಕರ್ನಾಟಿಕ್ ಎಂಬುದು ತಮಿಳು ದೇಶವನ್ನೂ ತೆಲುಗು ದೇಶದ ನೆಲ್ಲೂರು ಜಿಲ್ಲೆಯನ್ನೂ ಒಳಗೊಂಡ ಪೂರ್ವ ಸಮುದ್ರತೀರದಲ್ಲಿರುವ ಘಟ್ಟದ ಕೆಳಗಿನ ಪ್ರಾಂತ್ಯಕ್ಕೆ ಮಾತ್ರ ಅನ್ವಯಿಸುವಂತಾಯಿತು.

ಕವಿರಾಜಮಾರ್ಗದ ಉಲ್ಲೇಖದ ಪ್ರಕಾರ ಕನ್ನಡನಾಡು ಎಂಬುದು ದಕ್ಷಿಣದ ಕಾವೇರಿಯಿಂದ ಗೋದಾವರಿಯವರೆಗಿದ್ದ ನಾಡು. ನಂಜುಂಡ ಕವಿಯ (ಸು.1525) ರಾಮನಾಥ'ಚರಿತದಲ್ಲಿಯ ಉಲ್ಲೇಖವೂ ಈ ವಿಷಯವನ್ನು ಘೋಷಿಸುತ್ತದೆ. ಕವಿರಾಜಮಾರ್ಗಕರ್ತೃ ಹೇಳುವ ಪ್ರಕಾರ ಬಿಜಾಪುರ ಜಿಲ್ಲೆಯ ಪಟ್ಟದಕಲ್ಲು, ರಾಯಚೂರು ಜಿಲ್ಲೆಯ ಕೊಪ್ಪಳ, ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ ಹಾಗೂ ಬೆಳಗಾಂವಿ ಜಿಲ್ಲೆಯ ಒಂಕುಂದ - ಇವುಗಳ ನಡುವೆಯಿದ್ದ ಪ್ರದೇಶ ಕನ್ನಡನಾಡಿನ ತಿರುಳು. ಶಾಸನಗಳು, ಸಾಹಿತ್ಯ, ಸ್ಥಳನಾಮಗಳು ಮೊದಲಾದವುಗಳ ಆಧಾರದ ಮೇಲೆ ಹಿಂದಿನ ಹೈದರಾಬಾದು ಸಂಸ್ಥಾನದ ಅತಿ ಪಡುವಲ ಸ್ಥಾನದಿಂದ ಹಿಡಿದು ಅತಿ ಮೂಡಲಸ್ಥಾನದ ವರೆಗಿನ ಪ್ರದೇಶವೂ ಹಿಂದಿನ ಮದರಾಸು ಪ್ರಾಂತ್ಯದ ವೆಂಗಿಮಂಡಲ ಮತ್ತು ಗೋದಾವರಿ-ಕೃಷ್ಣಾ ನದಿಗಳ ನೀರು ಹರಿಯುವ ಜಿಲ್ಲೆಗಳೂ ಹಿಂದಿನ ಮಹಾರಾಷ್ಟ್ರದ ಭಾಗಗಳೂ ಇನ್ನೂ ದಕ್ಷಿಣದಲ್ಲಿ ನೀಲಗಿರಿ, ಕೊಯಮತ್ತೂರು, ಸೇಲಂ ಜಿಲ್ಲೆಗಳೂ ಕನ್ನಡ ಭೂಮಿಯಾಗಿತ್ತೆಂದು ಕೆಲವು ಚರಿತ್ರಕಾರರು ಹೇಳಿದ್ದಾರೆ. ರಾಜಕೀಯ ಕಾರಣಗಳಿಂದಾಗಿ ಕಾಲಕಾಲಕ್ಕೆ ಕನ್ನಡನಾಡಿನ ಸೀಮಾರೇಖೆಗಳು ಸಂಕೋಚಗೊಂಡಿವೆ.

ಕರ್ನಾಟ(ಕ) ಎಂಬ ಪದದ ಸರಿಯಾದ ರೂಪ ಯಾವುದು, ಅರ್ಥವೇನು, ನಿಷ್ಪತ್ತಿ ಹೇಗೆ ಎಂಬ ವಿಷಯದಲ್ಲಿ ಚರಿತ್ರಕಾರರೂ ಸಾಹಿತ್ಯಜ್ಞರೂ ತುಂಬ ಜಿಜ್ಞಾಸೆ ಮಾಡಿರುವುದು ಕಾಣುತ್ತದೆ. ಆ ಪದದ ಸಂಬಂಧವಾಗಿಯೇ ಕನ್ನಡ ಪದವೂ ವಿಚಾರಕ್ಕೆ ಸೇರಿಕೊಂಡಿದೆ. ಕೆಲವು ಅಭಿಪ್ರಾಯಗಳನ್ನು ಇಲ್ಲಿ ಸಂಕ್ಷೇಪವಾಗಿ ಸೂಚಿಸಬಹುದು.

(ಅ) ಕರ್ನಾಟ(ಕ) ಎಂಬ ಪದಕ್ಕೆ ಸಂಸ್ಕೃತ ಮೂಲವಾಗಿ ನಿಷ್ಪತ್ತಿಯನ್ನು ಕೊಡುವ ಹಳೆಯ ಉಲ್ಲೇಖಗಳಲ್ಲಿ ಇವು ಪ್ರಸಿದ್ಧವಾಗಿವೆ. ಕರ್ಣೇಷು ಅಟತಿ ಪ್ರಭೂತ ಯಶಸ್ವಿನ ಏತದ್ದೇಶಸ್ಯ ರಾಜ್ಞೋ ಗುಣಾದಿಕೀರ್ತನೇನ ಸರ್ವೇಷಾಂ ಕರ್ಣೇಷು ಭ್ರಮತೀತಿ, ಕರ್ಣ+ಅಟ್+ಅಚ್ (ಯಾವ ದೇಶದ ರಾಜನ ಕೀರ್ತಿ ಎಲ್ಲರ ಕಿವಿಯಲ್ಲಿಯೂ ಮೊಳಗುತ್ತಿರುವುದೋ ಆ ದೇಶ). ಇದು ಶಬ್ದರತ್ನಾವಲಿಯಲ್ಲಿ ಸಿಗುವ ಆಧಾರ. ಕೇಶವವರ್ಣಿಯೆಂಬ (1356) ಜೈನ ಪಂಡಿತನ ಪ್ರಕಾರ ಭೇದನಾರ್ಥಕವಾದ ಕರ್ಣ ಧಾತುವಿನಿಂದ ಕರ್ಣಾಟಕ ಪದವಾಯಿತು. ದಿವ್ಯಭಾಷೆಯಿಂದ ಬೇರೆಯಾಗಿ ವ್ಯವಹಾರದಲ್ಲಿರುವ ಭಾಷೆಯೆಂದು ಆ ಪದದ ಅರ್ಥ. ವೆಂಕಟಾಧ್ವರಿಯ (ಸು.1700) ವಿಶ್ವಗುಣಾದರ್ಶದಲ್ಲಿ ಕರ್ಣಾಟದೇಶೋ ಯಃ ಪೂರ್ವಂ ಕರ್ಣದೇಶಮಭೂಷಯಾತ್ ಸ ಏಷ ಸಾಂಪ್ರತಂ ಪಶ್ಯ ಚಕ್ಷುಷೋರ್ಭೂಷಣಾಯತೇ ಎಂದೂ ಕರ್ಣಯೋಃ ಅಟತೀತಿ ಕರ್ಣಾಟಃ ಆಟ ಗತೌ ಇತಿ ಧಾತೋಃ ನಿಷ್ಪನ್ನಶ್ಶಬ್ದಃ ಎಂದೂ ನಿರೂಪಣೆಯಿದೆ. ಸ್ಕಾಂದಪುರಾಣದ ಪ್ರಕಾರ ಕರ್ಣಾಟನೆಂಬ ರಾಕ್ಷಸನಿಂದ ನಾಡಿಗೆ ಈ ಹೆಸರಾಯಿತಂತೆ.

ಕವಿಕಲ್ಪಿತಗಳೆಂದು ಹೇಳಿ ಈ ಅರ್ಥ ಮತ್ತು ನಿಷ್ಪತ್ತಿಗಳನ್ನು ರಾ.ನರಸಿಂಹಾಚಾರ್ ಮೊದಲಾದ ಮಹನೀಯರು ಗ್ರಾಹ್ಯ ಮಾಡಿಲ್ಲ. ರಾಜವಾಡೆಯವರು ಕರಣ+ನಟ-ಕರ್ಣಾಟ ಎಂದು ನಿಷ್ಪತ್ತಿ ಹೇಳಿದ್ದಾರೆ. ಮನು ತನ್ನ ಕಾಲದ ವ್ರಾತ್ಯಕ್ಷತ್ರಿಯರ ಪಂಗಡಗಳನ್ನು ನಟಶ್ಚ ಕರಣಶ್ಚೈವ ಎಂಬುದಾಗಿ ಎರಡು ಬಗೆಗಳನ್ನು ಕೂಡ ಹೇಳಿದ್ದಾನೆ ಎಂಬ ಆಧಾರವನ್ನು ಹಿಡಿದು ಕರಣ ಮತ್ತು ನಟರ ಸಮ್ಮಿಶ್ರ ಪಂಗಡವೇ ಕರ್ಣಾಟವೆಂದು ಗ್ರಹಿಸಿದ್ದಾರೆ. ಇದನ್ನು ವಿಮರ್ಶಿಸುತ್ತ ಶಂ.ಬಾ.ಜೋಶಿಯವರು ಬೇರೆ ಸ್ಮೃತಿಗಳಲ್ಲಿಯೂ ನಟರ ಉಲ್ಲೇಖಗಳನ್ನು ಗುರುತಿಸಿ ಮತ್ಸ್ಯಪುರಾಣದಲ್ಲಿ ಕರ್ಣ ಎಂದಿರುವ ಜನಪದ ವಾಚಕವನ್ನು ಕರಣ ಎಂಬುದರೊಡನೆ ಅಭಿನ್ನವಾಗಿ ಗ್ರಹಿಸಿ, ಕರಣ+ನಟ-ಕರ್ಣಾಟ, ಕರ್ಣಾಟ ಎಂದೋ ಕರ್ಣ+ನಟ-ಕರ್ಣಾಟ ಎಂದೋ ಆಗಬಹುದೆಂದು ಸೂಚಿಸಿ, ಆ ಶಬ್ದಗಳ ಮೂಲವನ್ನು ಮಾತ್ರ ದೇಶೀಯವೆಂದು, ಕನ್ನಡವೆಂದು ಹೇಳಿದ್ದಾರೆ. ಆದರೆ ಈ ಸಮೀಕರಣಗಳನ್ನು ಪುಷ್ಟೀಕರಿಸುವ ಬೇರೆ ಪ್ರಮಾಣಗಳಿಲ್ಲ.

(ಆ) ಕನ್ನಡ ಎಂಬ ದೇಶ್ಯ ಶಬ್ದವೇ ಕರ್ಣಾಟ(ಕ) ಎಂಬ ಸಂಸ್ಕೃತ ರೂಪವನ್ನು ಅನಂತರದಲ್ಲಿ ಪಡೆಯಿತು ಎನ್ನುವ ಆಧುನಿಕ ಭಾಷಾವಿದ್ವಾಂಸರ ಕೆಲವು ಅಭಿಪ್ರಾಯಗಳು ಹೀಗಿವೆ:

1. ಗುಂಡರ್ಟನ ಪ್ರಕಾರ ದಕ್ಷಿಣ ದಖನ್ನಿನ ನೆಲ ಕಪ್ಪುಮಣ್ಣಿನ ಭೂಮಿಯಾಗಿದೆ, ಆದ್ದರಿಂದ ಕರ್ ನಾಡು (ಕಪ್ಪುನಾಡು) ಎಂಬುದು ಕರ್ನಾಟಕದ ಮೂಲ ರೂಪ. ಕರ+ನಾಟ್+ಅಗಂ ಎಂದರೆ ಕಪ್ಪುನಾಡಿನ ಒಳಭಾಗ (ಪ್ರದೇಶ) - ಎಂಬುದು ಕೂಡ ಅವರ ಇನ್ನೊಂದು ಸೂಚನೆ. ಮೊದಲನೆಯದನ್ನು ಕಾಲ್ಡ್‌ವೆಲ್ ಮತ್ತು ಆರ್.ರಘುನಾಥ'ರಾಯರು ಒಪ್ಪಿದ್ದಾರೆ. ಎರಡನೆಯದನ್ನು ಉದ್ಧರಿಸಿದ್ದಾರೆ.

2. ಕನ್ನಡನಾಡು ಸಮುದ್ರಮಟ್ಟಕ್ಕಿಂತ ಎತ್ತರವಾಗಿ ಘಟ್ಟದ ಮೇಲಿದೆ. ಕರುನಾಡು ಎಂಬುದು ಕರುಮಾಡ ಎಂಬಂತೆ ಮೇಲಣ ಸೀಮೆ (ಕಣಿವೆ ಮೇಲಣ ಸೀಮೆ) ಆದ್ದರಿಂದ ಕರು-ನಾಡು (ಎತ್ತರವಾದ ನಾಡು) ಎಂಬುದು ದ್ರಾವಿಡ ಭಾಷೆಗಳಲ್ಲಿ ಮುಂದೆ ಕನ್ನಡ ಎಂಬುದಾಗಿಯೂ ಸಂಸ್ಕೃತದಲ್ಲಿ ಕರ್ಣಾಟಕ ಎಂಬುದಾಗಿಯೂ ಪರಿವರ್ತಿಸಿರಬಹುದು. ಇದು ಹಟ್ಟಿಯಂಗಡಿ ನಾರಾಯಣರಾಯರ ಅಭಿಪ್ರಾಯ.

3. ಕರುನಡಂ (=ಕನ್ನಡ): ಕರ್ಣಾಟ,ಕರುನಡಂ ಎಂಬುದೂ ಕನ್ನಡಂ ಎಂಬುದೂ ತಮಿಳು ಲಕ್ಷಣ ಗ್ರಂಥಗಳ ವೃತ್ತಿಗಳಲ್ಲಿ ಉಕ್ತವಾಗಿವೆ. ತಮಿಳಿನಲ್ಲಿ ಕರು ಎಂದರೆ ಬೆಟ್ಟ ಎಂದರ್ಥ. ಕೀಳ್ನಾಡಿನವರಾದ ತಮಿಳರು ಮೇಲ್ನಾಡನ್ನು ಕರುನಾಡು-ಕರುನಡ ಎಂದು ಕರೆದಿರಬಹುದು. ಕಮ್ಮಿತು+ನಡೆ (ಕಂ+ನಡೆ>ಕನ್ನಡ) ಇದು ಆರ್.ತಾತಾಚಾರ್ಯರ ಅಭಿಮತ.

4. ಕರಂ, ಕರು, ಕಡು ಎಂಬುವು ದೊಡ್ಡ, ವಿಸ್ತಾರವಾದ ಮಹಾ ಎಂಬ ಅರ್ಥದ ಪದಗಳು. ಆದ್ದರಿಂದ ಕರುನಾಡು ಎಂದರೆ ಮಹಾರಾಷ್ಟ್ರ. ಕರು+ನಾಡು>ಕರ್+ನಾಡು>ಕರ್ನಾಡು (ದೊಡ್ಡದೇಶ) ಎಂಬ ಕನ್ನಡ ಸಮಾಸಪದವೇ ಸಂಸ್ಕೃತದಲ್ಲಿ ಕರ್ಣಾಟಕ ಎಂದು ಆಗಿರಬೇಕು. ಇದು ಎಂ.ಗೋವಿಂದ ಪೈಗಳ ಮತ. ರಾ.ಹ.ದೇಶಪಾಂಡೆಯವರ ಅಭಿಪ್ರಾಯವೂ ಒಟ್ಟಿನಲ್ಲಿ ಇದೇ ಆಗಿದೆ.

5. (ಪರಿಮಳವಾಚಿಯಾದ) ಕಮ್ಮಿತು+ನಾಡು=ಕನ್ನಾಡು>ಕನ್ನಡು >ಕನ್ನಡ. ಕನ್ನಡ ಎಂಬ ಪದಕ್ಕೆ ಪರಿಮಳ ವಿಶಿಷ್ಟವಾದ ದೇಶದ ಭಾಷೆ ಎಂದು ಅರ್ಥ. ಕನ್ನಡ ದೇಶ ಗಂಧದ ಮರದ ಕಾಡುಗಳಿಗೂ ತಾವರೆ ಕೊಳಗಳಿಗೂ ಪ್ರಸಿದ್ಧಿ ಪಡೆದಿರುವುದರಿಂದ ಕಮ್ಮಿತು ಎಂಬ ವಿಶೇಷಣ ಅನುರೂಪವಾದುದು - ಎಂದು ರಾ.ನರಸಿಂಹಾಚಾರ್ಯರು ಹೇಳುತ್ತಾರೆ. ಆರ್.ತಾತಾಚಾರ್ಯರು ಈ ಅಭಿಪ್ರಾಯವನ್ನು ಒಪ್ಪಿಕೊಂಡಿರುವಂತೆ ತೋರುತ್ತದೆ.

6. ಕನ್ (ಎಂದರೆ ಕಾಣು ಅಥವಾ ಒಡಮೂಡು) ಎಂಬ ಧಾತುವಿನಿಂದ ಕನ್ನಡ ಹುಟ್ಟಿದೆ. ಕನ್+ಅಳ್+ಕನ್ನಳ್ ,ಕನ್ನಡ, ಕನ್ನಡ, ಕನ್-ಅಳ=ಒಡಮೂಡುವುದನ್ನು ಉಳ್ಳದ್ದು; ಭಾವಗಳನ್ನು ಒಡಮೂಡಿಸುವುದು - ಕನ್ನಡ. ಹೀಗೆಂದು ದ.ರಾ.ಬೇಂದ್ರೆ ಮತ್ತು ಬೆಟಗೇರಿ ಕೃಷ್ಣಶರ್ಮರ ಮತ.

7. ಕರ್-ನಾಟ್-ಅಗಂ ಎಂದರೆ ಕರಿಯ ನಾಡನ್ನು ಒಳಗೊಂಡ ಪ್ರದೇಶ. ಆದರೆ ಶಬ್ದರೂಪ ಕರ್ಣಾಟಕವೇ ಹೊರತು ಕರ್ನಾಟಕ ಅಲ್ಲ. ಇದು ಬಿ.ಎಂ.ಶ್ರೀ ಅವರ ಧೋರಣೆ. ಒಟ್ಟಿನಲ್ಲಿ ಇದು ಗುಂಡರ್ಟ್ ಅವರ ಅಭಿಪ್ರಾಯವನ್ನು ಪೋಷಿಸುತ್ತದೆ.

8. ಮೊಹೆಂಜೊದಾರೋ ಚಿತ್ರಲಿಪಿಯ ಸಂಕೇತವನ್ನು ಗಮನಿಸಿದರೆ ಕಣ್ ನೀರ್ ಪದದ ಸಂಸ್ಕೃತ ರೂಪ ಕರ್ಣಾಟಕ ಆಗಿರಬಹುದು ಎಂದು ಫಾದರ್ ಹೆರಾಸರ ಮತ.

9. ಅಡಿಯಲ್ಲಿ ಕಣ್ಣುಳ್ಳವರು ಯಾರೋ ಅವರು ಕನ್ (ಣ್)+ ಅಡಿಗರ್ ಅರ್ಥಾತ್ ಕನ್ನಡಿಗರು-ಎಂಬುದು ರೆ.ಚನ್ನಪ್ಪ ಉತ್ತಂಗಿಯವರ ಮತ.

10. ಕನ್ನಡದ ರಾಜಕುಲಕ್ಕೆ ಕದಂಬ ಅಥವಾ ಕರಂಬ ಎಂಬ ಹೆಸರಿದೆ. ಆ ಕರ್ ಅಲ್ಲವೆ ಕನ್ ಎಂಬ ದಸ್ಯುವರ್ಗದಿಂದ ಕನ್ನಡ ಎಂಬ ಹೆಸರಾಗಿರಬಹುದು. ಕರು ಪದಕ್ಕೆ ಎತ್ತರ, ಶಿಖರ, ಮಹತ್ತು ಎಂಬ ಅರ್ಥಗಳಿರುವುದು ತಿಳಿದಿದೆ. ಕನ್ ಮತ್ತು ಕರ್ ಎಂಬ ರೂಪಗಳು ಅಭಿನ್ನ. ಅದರಿಂದ ಕನ್+ನಾಡು=ಕನ್ನಾಡು (ಕನ್ನಡ); ಕರ್+ನಾಡು=ಕರುನಾಡು (ಕರುನಾಡಿಗ, ಸಂ. ಕರ್ಣಾಟಕ); ಕಱು ತಳದ ನಾಟರೇ ಕನ್ನಡಿಗರು. ಆದಿಜನಾಂಗದೊಳಗಿನವರಾದ ಕನ್ ಮತ್ತು ನಾಟರು ಬೆರೆದು ಕನ್ನಡಿಗರೆನ್ನಿಸಿರಬಹುದು. ಇದು ಮುಳಿಯ ತಿಮ್ಮಪ್ಪಯ್ಯನವರ ವಾದ.

11. ಶ್ರೀಶೈಲ ಪರ್ವತದ ತಪ್ಪಲಿನಲ್ಲಿ ಹಿಂದಿನ ಕಾಲದಲ್ಲಿ ಕಣ್ಣವಿಷಯ (ಕರ್ಣಾಟ ಸೀಮಾ), ಕನ್ನಾಡು ಎಂಬ ಚಿಕ್ಕ ಜಿಲ್ಲೆಯಿತ್ತು. ಆ ಮೂಲಕವಾಗಿಯೇ ತಮ್ಮ ನಾಡಿಗೆ, ನುಡಿಗೆ ಕನ್ನಡಿಗರು ಆ ಹೆಸರನ್ನು ಪಡೆದುಕೊಂಡರು ಎಂದು ತೋರುತ್ತದೆಂದು ಹೇಳಿದ್ದಾರೆ ಎನ್.ವೆಂಕಟರಮಣಯ್ಯನವರು.

12. ಳ-ಣ-ನ ಗಳಲ್ಲಿ ಪರಸ್ಪರವಾಗಿ ಪಲ್ಲಟವುಂಟು. ಕಳವರು (ಕಳ್ವರು ಅಥವಾ ಕಳ್ಳರು ಅಥವಾ ಕಳಭ್ರರು) ಎಂಬ ದ್ರಾವಿಡ ವರ್ಗದ ಬಹುಪ್ರಾಚೀನ ಶಾಖೆಯ ಜನಾಂಗವೇ ಕಣ್ಣರು ಅಥವಾ ಕನ್ನರು. ಕನ್ನರ ನಾಡು ಕನ್ನಾಡು (ಕನ್ನಡ). ಇದು ಕನ್ನಾಡು > ಕನ್ನಾಟ > ಕರ್ಣಾಟ - ಈ ಕ್ರಮದಿಂದ ಸಂಸ್ಕೃತದಲ್ಲಿ ಸೇರಿಕೊಂಡಿದೆ. ಕರ್ಣಾಟಕದಲ್ಲಿರುವ ದ್ವಿರುಕ್ತಿದೋಷ ಕನ್ನಾಡ (ಕನ್ನಡ)ದಲ್ಲಿ ಸ್ವಲ್ಪವೂ ಇಲ್ಲ. ಇದು ಶಂ.ಬಾ.ಜೋಶಿಯವರ ಮತ.

13. ಕನ್ನಾಡು ಅಥವಾ ಕರ್ನಾಡು ಎಂಬ ಪದದ ಮೂಲ ಅರ್ಥ ಒಂದು ಮಹಾನಾಡು ಅಥವಾ ಒಂದು ಎತ್ತರವಾದ ನಾಡು ಎಂದಿದ್ದು, ಇವನ್ನು ಸಂಸ್ಕೃತರೂಪಕ್ಕೆ ತಿರುಗಿಸಿದಾಗ, ಕರ್ನಾಟ, ಕರ್ನಾಟಕ, ಮಹಾರಾಷ್ಟ್ರ ಆಗಿರಬೇಕು ಎಂದು ಬಿ.ಎ. ಸಾಲೆತೊರೆಯವರ ವಾದ.

14. ಕಣಾ(ರ್ನಾ)ಟ, ಕಣಾ(ರ್ನಾ)ಟಕ ಶಬ್ದಗಳು ಮೂಲತಃ ಸಂಸ್ಕೃತ ಶಬ್ದಗಳಲ್ಲ. ಪುನ್ನಾಡು ಸಂಸ್ಕೃತಕ್ಕೆ ಬರುವಾಗ ಪುನ್ನಾಟ ಆದಂತೆ ಕರ್ನಾಡು ಎಂಬ ದೇಶ್ಯಶಬ್ದ ಸಂಸ್ಕೃತಜ್ಞರ ಉಚ್ಚಾರಣೆಯಲ್ಲಿ ಕಣಾ(ರ್ನಾ)ಟ ಎಂಬ ರೂಪವನ್ನು ತಾಳಿರಬೇಕು. ಕಣಾ(ರ್ನಾ)ಟ+ಕ=ಕಣಾ(ರ್ನಾ)ಟಕ. ಇದು ತೀ.ನಂ.ಶ್ರೀಕಂಠಯ್ಯನವರ ಹೇಳಿಕೆ.

15. ಕರ್‌ನಾಡುವಿನಿಂದ ಕರ್‌ನಾಟ ಹುಟ್ಟಿ ಸ್ವಾರ್ಥದಲ್ಲಿ ಕ ಪ್ರತ್ಯಯ ಬಂದು ಕರ್ನಾಟಕ ಆಗಿರುವುದು ಸಾಧ್ಯ. ಕರ್ನಾಟ, ಕರ್ನಾಟಕ ರೂಪಗಳು ಅಪಾಣಿನೀಯವೆಂದು ಅವನ್ನು ಕರ್ಣಾಟ, ಕರ್ಣಾಟಕ ಎಂದು ಮಾಡಿಕೊಂಡಿರಬೇಕು. ಆಗ ಮೂಲ ಪದದ ಅರ್ಥ ಮರೆಯಾಗಿಯೋ ಗೊತ್ತಾಗದೆಯೋ ಪುನ್‌ನಾಟವನ್ನು ಪುಂರಾಷ್ಟ್ರಯೆಂದು ಮಾಡಿಕೊಂಡಂತೆ ಕರ್ಣಾಟಕ ನಿಷ್ಪತ್ತಿಯನ್ನು ಕರ್ಣೇಷು ಅಟತಿ ಇತಿ ಕರ್ಣಾಟಃ ಎಂದು ವಿವರಿಸಲು ಸ್ವಾಭಾವಿಕವಾಗಿ ಯತ್ನಿಸಿರಬಹುದು. ಪ್ರಯೋಗಗಳನ್ನು ನೋಡಿದರೆ ನಕಾರಯುಕ್ತ ಕರ್ನಾಟಕವೂ ಣಕಾರಯುಕ್ತ ಕರ್ಣಾಟಕವೂ ಬಹುಕಾಲದಿಂದ ವಿಕಲ್ಪವಾಗಿ ಪ್ರಯೋಗವಾಗಿರುವುದಕ್ಕೆ ಶಾಸನೋಕ್ತವಾದ ಉದಾಹರಣೆಗಳಿರುವುದರಿಂದ ಎರಡೂ ಗ್ರಾಹ್ಯವೇ. ಕರ್‌ನಾಡು ಪ್ರಾಯಃ ಪ್ರಾಕೃತ ಪ್ರಭಾವದಿಂದ, ಪ್ರಾಚೀನವಾದ ಪುನ್ನಾಡು ಪುನ್ನಾಟ ಆದಂತೆ ಕರ್‌ನಾಡು ಕರ್ನಾಟ ಆಗಿರಬೇಕು - ಇದು ಜಿ.ಪಿ.ರಾಜರತ್ನಂ ಅವರ ಮಂಡನೆ.

ಮೇಲೆ ಕಾಣಿಸಿದ ಕೆಲವು ಅಭಿಪ್ರಾಯಗಳನ್ನು ಪರಿಶೀಲಿಸಿದರೆ ಕನ್ನಡ ದೇಶ ಮತ್ತು ಭಾಷೆಗಳಿಗೆ ಆ ಹೆಸರುಗಳು ಎಲ್ಲಿಂದ ಹೇಗೆ ಬಂದುವು ಎನ್ನುವ ವಿಷಯುವನ್ನು ಖಚಿತವಾಗಿ ಗೊತ್ತುಮಾಡುವುದು ಇನ್ನೂ ಸಾಧ್ಯವಾಗಿಲ್ಲ ಎನ್ನುವ ಸಂಗತಿ ವಿಶದವಾಗುತ್ತದೆ. ಕರ್ನಾ(ರ್ಣಾ)ಟ(ಕ) ಎಂಬ ಸಂಸ್ಕೃತ ಪದದ ಮೂಲ ದೇಶೀಯವಾದುದು. ದೇಶೀಯವಾದುದೊಂದು ಪದದಿಂದ ಸಂಸ್ಕೃತ ರೂಪ ಹುಟ್ಟಿತಲ್ಲದೆ ಸಂಸ್ಕೃತ ರೂಪದ ತದ್ಭವವಾಗಿ ದೇಶೀಯು ಪದ ಹುಟ್ಟಲಿಲ್ಲ. ಅದು ಒಂದು ಸಮಾಸಪದ. ಅದರ ಉತ್ತರ ಪದ ನಾಡು ಮತ್ತು ಅದರ ಜನ್ಯ ರೂಪಗಳು. ಇನ್ನು ಪೂರ್ವಪದದ ರೂಪ ಎತ್ತರ, ದೊಡ್ಡ, ಮಹಾ ಎಂಬರ್ಥಗಳಿರುವ ಕರು ಎಂಬುದಾಗಿದ್ದಿರಬೇಕೆಂಬುದು ಹಲವರಿಗೆ ಒಪ್ಪಿಗೆಯಾಗಿರುವಂತೆ ತೋರುತ್ತದೆ. ಕಪ್ಪು ಎಂಬರ್ಥದ ಕರ್‌ಎಂಬುದನ್ನೂ ಕೆಲವರು ಒಪ್ಪಿದ್ದಾರೆ. ಜನಾಂಗಸೂಚಕವಾದ ಕಳ್, ಕಣ್, ಕರ್, ಕನ್ ಎಂಬುವನ್ನು ಪೂರ್ವಪದವಾಗಿ ತೋರಿಸಲು ಶಂ.ಬಾ.ಜೋಶಿ ಮೊದಲಾದ ವಿದ್ವಾಂಸರು ತುಂಬ ಶ್ರಮಿಸಿದರೂ ಒದಗಿಸಿರುವ ಪ್ರಮಾಣಗಳು ಪ್ರಾಯಃ ಗಟ್ಟಿಯಾದವಲ್ಲವಾಗಿ ಅವು ಸಾರ್ವತಿಕ್ರವಾದ ಮಾನ್ಯತೆ ಪಡೆದುಕೊಂಡಿರುವಂತೆ ತೋರುವುದಿಲ್ಲ. ಉಳಿದ ಕೆಲವು ಸೂಚನೆಗಳು ಹೆಚ್ಚಾಗಿ ಊಹಾಜನ್ಯವಾಗಿಯೇ ಕಾಣುತ್ತವೆ. ಬಹುಜನಸಮ್ಮತವಾಗಿ ತೋರುವ ವ್ಯುತ್ಪತ್ತಿಗಳ ವಿಷಯದಲ್ಲೂ ಕೆಲವರು ಸಯುಕ್ತಿಕವಾದ ಆಕ್ಷೇಪಣೆಗಳನ್ನು ಒಡ್ಡಿರುವುದು ಕಾಣುತ್ತದೆ. ಕರು ಪದಕ್ಕೆ ವಿಸ್ತಾರವಾದ, ಎತ್ತರವಾದ ಮೊದಲಾದ ಅರ್ಥಗಳು ಇಲ್ಲವೆಂದೂ ತಮಿಳು ಉಲ್ಲೇಖಗಳಲ್ಲಿ ಅಲ್ಲದೆ ಕರುನಾಡು ಎಂಬ ಮಾತು ಕನ್ನಡದಲ್ಲಿ ಎಲ್ಲೂ ಬಳಕೆಯಾಗಿಲ್ಲವೆಂದೂ ಎತ್ತರವಲ್ಲದ ಬಯಲುಸೀಮೆಯೂ ಕನ್ನಡ ನಾಡಿನಲ್ಲಿ ಉಂಟೆಂದೂ ಮುಂತಾಗಿ ವಾದಿಸಿದ್ದಾರೆ. ಹೀಗೆಯೇ ಕನ್ನಡದ ನೆಲದಲ್ಲಿ ಕಪ್ಪುಮಣ್ಣಿನ ನೆಲವಲ್ಲದ ಭಾಗಗಳೂ ಬಹುವಾಗಿರುವುದರಿಂದ ಕರ್ (ಕರಿದು) ನಾಡು ಕನ್ನಾಡು ಆಯಿತೆಂದು ಒಪ್ಪುವುದಕ್ಕೆ ಆಗದೆಂದಿದ್ದಾರೆ. ಪ್ರಾಚೀನ ಕಾಲದಲ್ಲಿ ಚಾಳುಕ್ಯ, ರಾಷ್ಟ್ರಕೂಟ ಸಾಮ್ರಾಜ್ಯಗಳು ಉತ್ತರಭಾಗದ ಕಪ್ಪು ಮಣ್ಣಿನ ಪ್ರದೇಶ ಹೆಚ್ಚಾಗಿರುವ ಪ್ರಾಂತದಲ್ಲಿ ರಾಜಧಾನಿಗಳನ್ನು ಹೊಂದಿದ್ದು ಆ ಪ್ರದೇಶಕ್ಕೆ ಬಂದ ಹೆಸರು ಕ್ರಮೇಣ ಕನ್ನಡ ಭಾಷೆ, ಸಂಸ್ಕೃತಿ ಇರುವ ಎಲ್ಲ ಇತರ ಭಾಗಗಳಿಗೂ ಅನ್ವಯಿಸುವಂತಾಗಿರಬಹುದೆಂಬ ಅಭಿಪ್ರಾಯವೂ ಇದೆ. ಉತ್ತರ ಕರ್ನಾಟಕದ ಒಳನಾಡು ಕಪ್ಪುಮಣ್ಣಿನಿಂದ ಕೂಡಿದ್ದು ಆ ಭಾಗಕ್ಕೆ ಕುಂತಳ, ಕರ್ನಾಟಕ ಎಂಬ ಪದಗಳನ್ನು ಹೆಚ್ಚಾಗಿ ಬಳಸಿರುವುದರಿಂದ ಇದೇ ಭಾವ ಛಾಯೆಯಿಂದ ಪದ ನಿಷ್ಪತ್ತಿಗೊಂಡಿದೆ ಎಂಬ ಅಭಿಪ್ರಾಯ ಹೆಚ್ಚು ತೂಕ ಪಡೆಯುತ್ತದೆ. ಈಚೆಗೆ ಈ ವಿಷಯದಲ್ಲಿ ಹೆಚ್ಚಿನ ವಿಚಾರ ವಿಮರ್ಶೆಗಳೇನೂ ಆಗಿಲ್ಲ. ಪೂರ್ವೋಕ್ತವಾದ ಎರಡು ನಿಷ್ಪತ್ತಿಗಳಲ್ಲಿ ವಿಮರ್ಶಕರು ಯಾವುದಾದರೊಂದರ ಕಡೆಗೆ ಒಲವನ್ನು ತೋರುವಂತೆ ಕಾಣುತ್ತದೆ.

ಶಬ್ದಾರ್ಥದ ವಿಚಾರದಲ್ಲಿ ವಿವಿಧಾಭಿಪ್ರಾಯಗಳು ವ್ಯಕ್ತವಾಗಿರುವಂತೆಯೇ ಶಬ್ದರೂಪದ - ಮುಖ್ಯವಾಗಿ ಕರ್ನಾಟ(ಕ) - ಕರ್ಣಾಟ(ಕ) ಎಂಬ ರೂಪಗಳ ವಿಚಾರದಲ್ಲಿಯೂ ಬಹುವಾಗಿ ಚರ್ಚೆ ನಡೆದಿರುವುದು ಕಾಣುತ್ತದೆ. ಈ ಚರ್ಚೆಯಲ್ಲಿ ಶ್ರೀಯುತರಾದ ತೋಗೆರೆ ನಂಜುಂಡಶಾಸ್ತ್ರಿ, ಎಚ್.ನಾರಾಯಣರಾವ್, ಆರ್.ತಾತಾಚಾರ್ಯ, ರಾ.ಹ.ದೇಶಪಾಂಡೆ, ತೀ.ನಂ.ಶ್ರೀಕಂಠಯ್ಯ, ಜಿ.ಪಿ.ರಾಜರತ್ನಂ ಮೊದಲಾದ ವಿದ್ವಾಂಸರು ಪಾಲ್ಗೊಂಡಿದ್ದಾರೆ. ಕರ್ಣಾಟ(ಕ) ಶುದ್ಧ ಸಂಸ್ಕೃತ ಪದವೆಂದೂ ಅದಕ್ಕೆ ಸಂಸ್ಕೃತದಲ್ಲಿ ವ್ಯುತ್ಪತ್ತಿ ಕೊಡಬಹುದೆಂದೂ ಕನ್ನಡ ಅದರ ತದ್ಭವವೆಂದೂ ಆದ್ದರಿಂದ ಕರ್ಣಾಟ(ಕ)ವೇ ಸಾಧುವೆಂದು ಎನ್ನುವವರು ಸಾಮಾನ್ಯವಾಗಿ ಶಬ್ದರತ್ನಾವಲಿಯಲ್ಲಿ ಉಕ್ತವಾದ ವ್ಯುತ್ಪತ್ತಿಯನ್ನೂ ಕೇಶಿರಾಜ ಅಪಭ್ರಂಶ ಪ್ರಕರಣದಲ್ಲಿ ಕರ್ಣಾಟದ ತದ್ಭವ ಕನ್ನಡ ಎಂದು ಹೇಳಿರುವುದನ್ನೂ ಸಂಸ್ಕೃತ - ಕನ್ನಡ ಗ್ರಂಥಗಳಲ್ಲಿ ಕರ್ಣಾಟ(ಕ) ಪದದ ಪ್ರಾಚುರ್ಯವನ್ನೂ ಆಧಾರವಾಗಿ ತೋರಿಸುತ್ತಾರೆ. ಪೂರ್ವೋಕ್ತವಾದ ಸಂಸ್ಕೃತ ಗ್ರಂಥದ ವ್ಯುತ್ಪತ್ತಿಯನ್ನು ಯಾವ ದೇಶಕ್ಕಾಗಲಿ ಭಾಷೆಗಾಗಲಿ ಅನ್ವಯಿಸಬಹುದೆಂದೂ ಕೇಶಿರಾಜ ಕೆಲವು ದ್ರಾವಿಡ ಶಬ್ದಗಳನ್ನೂ ಸಂಸ್ಕೃತದ ತದ್ಭವವಾಗಿ ಹೇಳಿರುವುದರಿಂದ ಆತನ ಸೂಚನೆ ಪ್ರಮಾಣವಾಗದೆಂದೂ ಮುಂತಾಗಿ ಇದಕ್ಕೆ ಆಕ್ಷೇಪವಿದೆ. ಎರಡನೆಯ ಪಂಥದವರು ಕರ್ಣಾಟ(ಕ)ಕ್ಕೆ ಮೂಲ ಕನ್ನಡ ಅಥವಾ ಕರ್ನಾಟ(ಕ) ಯಾವುದೇ ಇರಲಿ, ರಕಾರ ಸಂಪರ್ಕವಿರುವ ನ ಕಾರ ಣ ಕಾರವಾಗಿ ಮಾರ್ಪಡಬೇಕಾದ್ದು ಸಂಸ್ಕೃತ ವ್ಯಾಕರಣದ ಮರ್ಯಾದೆಯಾದ್ದರಿಂದ ಕರ್ಣಾಟ(ಕ) ಎಂಬ ಶಬ್ದರೂಪವೇ ಸಾಧು ಎನ್ನುತ್ತಾರೆ. ಇದನ್ನು ಆಕ್ಷೇಪಿಸುವವರು, ದುರ್ನಯ ದುರ್ನೀತಿ ಇತ್ಯಾದಿ ಸಂಸ್ಕೃತ ಪದಗಳಲ್ಲಿ ರಕಾರ ಸಂಪರ್ಕದ ನ ಕಾರ ಣ ಕಾರವಾಗದಿರುವುದನ್ನು ತೋರಿಸಿ, ಕರ್ನಾಟ(ಕ) ತಪ್ಪೆಂದು ಹೇಳುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಕರ್ನಾಟ(ಕ) ಅಚ್ಚಕನ್ನಡ ಶಬ್ದ ಅದಕ್ಕೆ ಕನ್ನಡದಲ್ಲಿಯೇ ವ್ಯುತ್ಪತ್ತಿಯುಂಟು. ಸಂಸ್ಕೃತಜ್ಞರು ಭಾಷಾ ಮರ್ಯಾದೆಗೆ ಅನುಸಾರವಾಗಿ ಅದನ್ನು ಕರ್ಣಾಟ(ಕ) ವೆಂದು ಮಾಡಿದ್ದಾರೆ ಎನ್ನುವುದು ಇನ್ನೊಂದು ಪಂಥ. ಕರ್ನಾಟಕ ಅಚ್ಚಕನ್ನಡ ಎನ್ನುವವರ ವಾದವನ್ನು ಆಧುನಿಕ ಭಾಷಾಶಾಸ್ತ್ರಜ್ಞರ ಮತ್ತು ಇತರರ ನಿರೂಪಣೆಯಲ್ಲಿ ಕಾಣುತ್ತೇವೆ. ಈ ಜಿಜ್ಞಾಸೆ ಪ್ರಬಲವಾಗಿದ್ದ ಕಾಲದಲ್ಲೆ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಹೆಸರನ್ನು

ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಿಸಿಕೊಂಡಿತೆಂಬುದನ್ನು ಇಲ್ಲಿ ನೆನೆಯಬಹುದು.

ಶಬ್ದರೂಪದ ಬಗ್ಗೆ ವಿದ್ವಾಂಸರ ಚರ್ಚೆಗಳು ಏನೇ ಇದ್ದರೂ ಕನ್ನಡ ನಾಡಿಗೆ ಕರ್ನಾಟಕ ಎಂಬ ಹೆಸರು ಇರಬೇಕೆಂದು ವಿಧಾನ ಮಂಡಲಗಳಲ್ಲಿ ತೀರ್ಮಾನವಾಗಿ (1973) ಈಗ ಈ ರೂಪವೇ ಮಾನ್ಯವಾಗಿದೆ. (ಟಿ.ವಿ.ವಿ.)

**ಕರ್ನಾಟಕ ಏಕೀಕರಣ :** ಎರಡು ಸಾವಿರ ವರ್ಷಗಳಿಗೂ ದೀರ್ಘವಾದ ಇತಿಹಾಸ ಹೊಂದಿರುವ ಕರ್ನಾಟಕದ ಪ್ರದೇಶ ಪ್ರಾಕೃತಿಕವಾಗಿಯೂ ಸಾಂಸ್ಕೃತಿಕವಾಗಿಯೂ ಮಾತ್ರವೇ ಅಲ್ಲದೆ ರಾಜಕೀಯವಾಗಿಯೂ ಅಖಂಡವಾದದ್ದು. ಇತಿಹಾಸಕಾಲದಲ್ಲಿ ಕರ್ನಾಟಕ ದೇಶ ವಿವಿಧ ರಾಜವಂಶಗಳ ಆಳಿಕೆಗೆ ಒಳಪಟ್ಟಿದ್ದರೂ ನಾಡಿನ ಸಾಂಸ್ಕೃತಿಕ ಏಕತೆಯ ಭಾವನೆ ಸ್ಫುಟವಾಗಿತ್ತು. ಆದರೆ ಉತ್ತರದಲ್ಲಿ ಬಹುಮನೀ ರಾಜ್ಯ ಮತ್ತು ದಕ್ಷಿಣದಲ್ಲಿ ವಿಜಯನಗರ ರಾಜ್ಯ ಸ್ಥಾಪನೆಯಾದಾಗ ಸ್ವಲ್ಪಮಟ್ಟಿನ ವಿಭಿನ್ನತೆ ಕಾಣಿಸಿಕೊಂಡು, ಮುಂದೆ ಟಿಪ್ಪುವಿನ ಪತನವಾಗಿ ಭಾರತದಲ್ಲಿ ಬ್ರಿಟಿಷರ ಆಡಳಿತ ಸ್ಥಿರಗೊಂಡಾಗ ಕರ್ನಾಟಕ ಮತ್ತಷ್ಟು ಛಿದ್ರವಾಯಿತು. 22 ಆಡಳಿತಗಳ ಅಡಿಯಲ್ಲಿ ಹಂಚಿಹೋಯಿತು.

1858ರಲ್ಲಿ ಕಂಪನಿ ಸರ್ಕಾರವನ್ನು ಕೊನೆಗಾಣಿಸುವ ಸಲುವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತ ಸರ್ಕಾರ ವಿಧೇಯಕದ ಚರ್ಚೆಯಾಯಿತು. ಆಗ ಜಾನ್ ಬ್ರೈಟ್ ಭಾಷಣ ಮಾಡುತ್ತ, ಭಾರತದ ಪ್ರಾಂತ್ಯಗಳ ರಚನೆಗೆ ಭಾಷೆಗಳು ಆಧಾರವಾಗಬೇಕೆಂದೂ ಅದರಂತೆ ಐದು ಪ್ರಾಂತ್ಯಗಳ ನಿರ್ಮಾಣವಾಗಬೇಕೆಂದೂ ಸ್ಪಷ್ಟವಾಗಿ ಸೂಚನೆ ಮಾಡಿದ್ದ. 19ನೆಯ ಶತಮಾನದ ಕಡೆಯ ಪಾದದಲ್ಲಿ ಬ್ರಿಟಿಷರು ಆಡಳಿತ ವಿಚಕ್ಷಣೆಗಾಗಿ ಪ್ರಾಂತ್ಯಗಳನ್ನು ಮರುವಿಂಗಡಣೆ ಮಾಡುವ ಆಲೋಚನೆ ಮಾಡಲಾರಂಭಿಸಿದ್ದು, ಬಿಹಾರ, ಒರಿಸ್ಸ, ಸಿಂಧ್ ಪ್ರಾಂತ್ಯಗಳು ಬಹುಶಃ ಭಾಷೆಯ ಆಧಾರದ ಮೇಲೆ ನಿರ್ಮಾಣವಾದರೂ ಕನ್ನಡ ನಾಡಿನ ಬಗ್ಗೆ ಆಡಳಿತಗಾರರಿಂದ ಈ ರೀತಿಯ ಪ್ರಯತ್ನವೇನೂ ನಡೆಯಲಿಲ್ಲ.

ಬ್ರಿಟಿಷರ ಆಡಳಿತದಲ್ಲಿ ಕರ್ನಾಟಕದಂತೆ ಭಾರತದ ಇತರ ಭಾಷಾ ಪ್ರದೇಶಗಳೂ ಛಿದ್ರವಾಗಿದ್ದವಾದ್ದರಿಂದ ಭಾಷಾವಾರು ಪ್ರಾಂತ್ಯಗಳ ರಚನೆಯ ಭಾವನೆ ಸುಮಾರು ಎಲ್ಲೆಡೆಯಲ್ಲೂ ತಲೆಯೆತ್ತಲು ಅವಕಾಶವಾಯಿತು. 1874ರ ಸುಮಾರಿನಿಂದಲೇ ಬಂಗಾಲ, ಅಸ್ಸಾಂಗಳಲ್ಲೂ 1876ರಿಂದ ಒರಿಸ್ಸದಲ್ಲೂ ಭಾಷಾನುಗುಣವಾಗಿ ಪ್ರಾಂತ್ಯಗಳ ಪುನರ್ವಿಭಾಗವಾಗಬೇಕೆಂಬ ಚಳವಳಿ ಮೊದಲಾಯಿತು. ಉತ್ಕಲ ಪರಿಷತ್ತಿನ ಸ್ಥಾಪನೆಯಾದದ್ದು 1903ರಲ್ಲಿ. ಉತ್ಕಲ ಪ್ರಾಂತ್ಯ ರಚನೆಯ ಚಳವಳಿಯನ್ನು ಬಲಪಡಿಸಲು ಅಂಕಿ ಅಂಶಗಳಿಂದ ಕೂಡಿದ ಸಣ್ಣ ಗ್ರಂಥವೊಂದು ಪ್ರಕಟವಾಯಿತು. ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳ ರಚನೆಯಾಗಬೇಕೆಂಬ ತತ್ತ್ವಪ್ರತಿಪಾದನೆ ಮಾಡುವ ಸಾಹಿತ್ಯದ ಮೊದಲನೆಯ ಪ್ರಕಟಣೆ ಇದೆಂದು ಕಂಡುಬರುತ್ತದೆ. ಭಾರತದ ವೈಸ್‌ರಾಯಿಯಾಗಿದ್ದ ಲಾರ್ಡ್ ಕರ್ಜನ್ ಬಂಗಾಲವನ್ನು ವಿಭಜಿಸಲು ಕೈಕೊಂಡ ತೀರ್ಮಾನದ ಫಲವಾಗಿ ಭಾರತಾದ್ಯಂತ ಕ್ರಾಂತಿ ವಾತಾವರಣ ತಲೆಹಾಕಿತು. ಆ ನಿಮಿತ್ತದಿಂದ ಜನರಲ್ಲಿ ಸ್ವಾತಂತ್ರ್ಯದ ಹಂಬಲ ಪ್ರಬಲವಾಯಿತಲ್ಲದೆ ಅದರ ಅಂಗವಾಗಿ ಒಂದೊಂದು ಭಾಷಾ ವರ್ಗದವರೂ ಪ್ರತ್ಯೇಕ ಪ್ರಾಂತ್ಯ ನಿರ್ಮಾಣದ ಕನಸನ್ನು ಕಾಣಲು ಆರಂಭಿಸಿದರು.

ಇದಕ್ಕೂ ಹಿಂದಿನಿಂದಲೇ ಕರ್ನಾಟಕದಲ್ಲಿ ಏಕೀಕರಣದ ಕಲ್ಪನೆ ಮೂಡುತ್ತಿತ್ತು. 1856ರಷ್ಟು ಹಿಂದೆಯೇ ಡೆಪ್ಯುಟಿ ಚೆನ್ನಬಸಪ್ಪನವರು ಧಾರವಾಡ, ಬಿಜಾಪುರ, ಉತ್ತರ ಕನ್ನಡ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿ ಈ ಚಳವಳಿ ಘೋಷಿಸಿದರೆನ್ನಬಹುದು. 1890ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಪ್ರಾರಂಭವಾದಾಗ ಈ ಕನಸಿಗೆ ಮೊತ್ತಮೊದಲನೆಯ ಬಾರಿಗೆ ಸಂಘಟನೆಯ ಬೆಂಬಲ ದೊರಕಿತೆನ್ನಬಹುದು. 1903ರಲ್ಲಿ ಬೆನಗಲ್ ರಾಮರಾಯರು ಕರ್ನಾಟಕ ಏಕೀಕರಣವನ್ನು ಕುರಿತು ಧಾರವಾಡದಲ್ಲಿ ಭಾಷಣ ಮಾಡಿದರು. ಆಲೂರ ವೆಂಕಟರಾಯರು ವಾಗ್ಭೂಷಣ ಪತ್ರಿಕೆಯಲ್ಲಿ 1907ರಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಲೇಖನವೊಂದನ್ನು ಬರೆದರು. ಕರ್ನಾಟಕ ಏಕೀಕರಣದ ಬಗ್ಗೆ ಆಗಲೇ ಜನರಲ್ಲಿ ಜಾಗೃತಿಯುಂಟಾಗುತ್ತಿತ್ತು. ವಿಕೇಂದ್ರೀಕರಣದ ಬಗ್ಗೆ 1908ರಲ್ಲಿ ನೇಮಕವಾಗಿದ್ದ ರಾಯಲ್ ಕಮಿಷನ್ನಿನ ಮುಂದೆ ಲೋಕಮಾನ್ಯ ಬಾಲ ಗಂಗಾಧರ ಟಿಳಕರು ಸಾಕ್ಷ್ಯ ನೀಡುತ್ತ, ಕುಲಭಾಷಾ ಸಾದೃಶ್ಯಗಳ ದೃಷ್ಟಿಯಿಂದ ಪ್ರಾಂತ್ಯಗಳನ್ನು ಪುನಾರಚಿಸಬೇಕೆಂದು ಒತ್ತಿ ಹೇಳಿದರು.

1915ರಲ್ಲಿ ಬೆಂಗಳೂರು ನಗರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಯಿತು. ಇದು ಅಖಿಲ ಕರ್ನಾಟಕ ಸಂಸ್ಥೆಯಾಗಿ, ಇದರ ಸದಸ್ಯ ವರ್ಗದಲ್ಲಿ ಮುಂಬಯಿ, ಮದರಾಸು, ಕೊಡಗು ಪ್ರಾಂತ್ಯಗಳಿಗೂ ಮೈಸೂರು, ಹೈದರಾಬಾದ್ ಮತ್ತು ಉತ್ತರ ಕರ್ನಾಟಕದ ಸಣ್ಣ ಪುಟ್ಟ ಸಂಸ್ಥಾನಗಳಿಗೂ ಪ್ರಾತಿನಿಧ್ಯವಿದ್ದು, ಕರ್ನಾಟಕ ಏಕೀಕರಣದ ಭಾವನೆಗೆ ಒಂದು ಸಾಂಸ್ಕೃತಿಕ ಸ್ವರೂಪ ಬಂತು. ಪರಿಷತ್ತಿನ ಆಶ್ರಯದಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲೇ ಸಂಯುಕ್ತ ಕರ್ನಾಟಕ ಪ್ರಾಂತ್ಯ ರಚನೆಯ ಬೇಡಿಕೆಯ ವಾಣಿ ಬಲವಾಗಿ ಕೇಳಿಬಂತು. ಕನ್ನಡ ಸಾಹಿತ್ಯ ಪರಿಷತ್ತಿನ ಅಂತಿಮ ಗುರಿಯಾದರೂ ಕರ್ನಾಟಕ ಏಕೀಕರಣವೇ ಆಗಿತ್ತು.

ಕರ್ನಾಟಕದ ರಾಜಕೀಯ ಏಕೀಕರಣ ಸಾಧಿಸುವ ಉದ್ದೇಶದಿಂದ 1917ರಲ್ಲಿ ಕಡಪ ರಾಘವೇಂದ್ರರಾವ್, ಮುದವೀಡು ಕೃಷ್ಣರಾವ್, ಗದಿಗಯ್ಯ ಹೊನ್ನಾಪುರಮಠ ಮೊದಲಾದವರ ಪ್ರಯತ್ನದಿಂದ ಕರ್ನಾಟಕ ಸಭೆಯ ಸ್ಥಾಪನೆಯಾಯಿತು. ಭಾರತದ ಕಾರ್ಯದರ್ಶಿ ಮಾಂಟೆಗ್ಯೂಗೆ ಕನ್ನಡ ನಾಡಿನ ಮೂಲೆ ಮೂಲೆಗಳಿಂದ ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕು ಎಂಬ ಬಿನ್ನಹ ಪತ್ರಗಳನ್ನು ಕಳುಹಿಸಲಾಯಿತು. 1918ರಿಂದ ಕರ್ನಾಟಕ ಸಭೆಗೂ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೂ ನಿಕಟ ಸಂಪರ್ಕವುಂಟಾಯಿತು. ಕಾಂಗ್ರೆಸ್ ಅಧಿವೇಶನಗಳಿಗೆ ಹೋದ ಕನ್ನಡ ಪ್ರತಿನಿಧಿಗಳೆಲ್ಲ ಕರ್ನಾಟಕ ಪ್ರಾಂತ್ಯ ನಿರ್ಮಾಣದ ಪಲ್ಲವಿಯನ್ನು ಹಾಡುತ್ತ ಬಂದರು. ಕಾಂಗ್ರೆಸ್ಸಿನಲ್ಲೇ ಆಡಳಿತ ಸೌಲಭ್ಯಕ್ಕಾಗಿ ಭಾಷಾನುಗುಣ ಪ್ರಾಂತ್ಯಗಳು ರೂಪುಗೊಳ್ಳಬೇಕೆಂದು ವಾದಿಸುತ್ತ ಬಂದರು.

1920ರಲ್ಲಿ ಮೈಸೂರಿನ ದಿವಾನರಾಗಿದ್ದ ವಿ.ಪಿ.ಮಾಧವರಾಯರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಮೊತ್ತ ಮೊದಲನೆಯ ಕರ್ನಾಟಕ ರಾಜಕೀಯ ಸಮ್ಮೇಳನ ನಡೆದು, ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂಬ ನಿರ್ಣಯವಾಯಿತು. ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಈ ತತ್ತ್ವವನ್ನು ಅಂಗೀಕರಿಸಲಾಯಿತು. ಕಾಂಗ್ರೆಸ್ಸಿನ ಆಡಳಿತದಲ್ಲಿ 21 ಭಾಷಾಪ್ರಾಂತ್ಯಗಳು ರೂಪುಗೊಂಡುವು. ಸಿದ್ದಪ್ಪ ಕಂಬಳಿಯವರು 1923ರಲ್ಲಿ ಮುಂಬಯಿಯ ಶಾಸನ ಸಭೆಯಲ್ಲಿ ಏಕೀಕರಣವನ್ನು ಸಮರ್ಥಿಸಿದರು.

1924ರಲ್ಲಿ ಬೆಳಗಾಂವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಮಹಾತ್ಮ ಗಾಂಧಿಯವರು ಅಧ್ಯಕ್ಷರಾಗಿದ್ದರು. ಕರ್ನಾಟಕ ಏಕೀಕರಣವಾಗಬೇಕೆಂಬ ಜನರ ಬೇಡಿಕೆ ನ್ಯಾಯವಾದುದು, ಸಹಜವಾದುದು ಎಂಬುದು ಭಾರತದ ನಾನಾಭಾಗಗಳ ಪ್ರತಿನಿಧಿಗಳಿಗೆ ಅರಿವಾಗಲು ಈ ಅಧಿವೇಶನ ಬಹಳಮಟ್ಟಿಗೆ ಸಹಾಯಕವಾಯಿತು.

ಅದೇ ಕಾಲದಲ್ಲಿ ಬೆಳಗಾಂವಿಯಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ ನಡೆಯಿತು. ಅಂದಿನಿಂದ ಕರ್ನಾಟಕ ಏಕೀಕರಣ ಸಭೆ ಎರಡೆರಡು ವರ್ಷಕ್ಕೊಮ್ಮೆ ಸಮ್ಮೇಳನ ನಡೆಸುತ್ತ ಬಂತು. 1926ರ ಅಧಿವೇಶನ ಬಳ್ಳಾರಿಯಲ್ಲೂ 1947ರಂದು ಕಾಸರಗೋಡಿನಲ್ಲೂ ನಡೆದುವು. ಈ ಸಮ್ಮೇಳನಗಳ ಬೇಡಿಕೆಗಳ ಫಲವಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂಬಯಿ ಅಧಿವೇಶನದಲ್ಲಿ (1927), ಭಾಷಾನುಗುಣವಾಗಿ ಪ್ರಾಂತ್ಯಗಳನ್ನು ಪುನರ್ವಿಭಾಗ ಮಾಡುವ ಕೆಲಸವನ್ನು ಕೈಕೊಳ್ಳತಕ್ಕದ್ದೆಂದೂ ಆಂಧ್ರ, ಸಿಂಧ್, ಕರ್ನಾಟಕಗಳನ್ನು ಪ್ರತ್ಯೇಕ ಪ್ರಾಂತ್ಯಗಳನ್ನಾಗಿ ರಚಿಸುವ ಕಾರ್ಯವನ್ನಾರಂಭಿಸತಕ್ಕದ್ದೆಂದೂ ನಿರ್ಣಯವಾಯಿತು.

1928ರಲ್ಲಿ ಯು. ರಾಮರಾಯರು ಕೇಂದ್ರ ಶಾಸನ ಮಂಡಲಿಯ ಮುಂದೆ ಕರ್ನಾಟಕ ಏಕೀಕರಣದ ಬಗ್ಗೆ ಒಂದು ಗೊತ್ತುವಳಿ ತಂದರು. ಮುಂಬಯಿ ಶಾಸನಸಭೆಯಲ್ಲೂ ಈ ಬಗ್ಗೆ ಗೊತ್ತುವಳಿ ಬಂದದ್ದು 1929ರಲ್ಲಿ ವಿಶ್ವನಾಥರಾವ್ ಜೋಗರಿಂದ.

1931ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಬೆನಗಲ್ ರಾಮರಾವ್, ಬೆನಗಲ್ ಶಿವರಾವ್, ಮಿರ್ಜಾ ಇಸ್ಮಾಯಿಲ್ ಇವರು ಕರ್ನಾಟಕ ಏಕೀಕರಣದ ಬಗ್ಗೆ ಪ್ರಸ್ತಾಪ ಮಾಡಿದರು.

1928ರಲ್ಲಿ ಕರ್ನಾಟಕ ಏಕೀಕರಣ ಸಮಿತಿಯೂ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯೂ ಕೂಡಿ ನೆಹರು ಸಮಿತಿಯ ಮುಂದೆ

ಅರಿಕೆಯೊಂದನ್ನಿಟ್ಟವು. ಆ ಸಮಿತಿಯವರು ಕರ್ನಾಟಕ ಪ್ರಾಂತ್ಯ ರಚನೆಯ ವಾದವನ್ನೊಪ್ಪಿದ್ದರು. ಈ ಅಭಿಪ್ರಾಯವನ್ನು ಲಖನೌದಲ್ಲಿ ನಡೆದ ಸಕಲ ಪಕ್ಷಗಳ ಸಮ್ಮೇಳನ ಅಂಗೀಕರಿಸಿತು.

1928-29ರಲ್ಲಿ ಸೈಮನ್ ಸಮಿತಿಯ ಮುಂದೆಯೂ ಕರ್ನಾಟಕ ಏಕೀಕರಣ ಬೇಡಿಕೆಯನ್ನಿಡಲಾಯಿತು. ಆ ಸಮಿತಿಯವರು ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳನ್ನು ನಿರ್ಮಿಸಬೇಕೆಂಬ ತತ್ತ್ವವನ್ನು ಮಾನ್ಯಮಾಡಿದರಲ್ಲದೆ ಆದಷ್ಟು ಬೇಗ ಈ ತತ್ತ್ವಕ್ಕನುಸಾರವಾಗಿ ಪ್ರಾಂತ್ಯಗಳನ್ನು ರೂಪುಗೊಳಿಸಬೇಕೆಂದು ಸೂಚಿಸಿದರು. ಕನ್ನಡ ನಾಡಿನ ಐತಿಹಾಸಿಕ ಹಿನ್ನೆಲೆ, ಸಾಂಸ್ಕೃತಿಕ ಸಂಪದ್ವೈಭವ ಮತ್ತು ಅರ್ಥಸಾಧನೆಯ ಅವಕಾಶಗಳ ದೃಷ್ಟಿಯಿಂದ ಅದರ ಬೇಡಿಕೆ ಪುರಸ್ಕಾರ ಯೋಗ್ಯವಾದುದೆಂಬುದು ಅವರ ಅಭಿಪ್ರಾಯವಾಗಿತ್ತು.

ಮುಂದಿನ ಒಂದೆರಡು ವರ್ಷಗಳಲ್ಲೇ ಕರ್ನಾಟಕ ಏಕೀಕರಣದ ಬಗ್ಗೆ ಜನರಲ್ಲಿ ಸಾಕಷ್ಟು ಜಾಗೃತಿಯುಂಟಾಗಿತ್ತು. ಬಿ.ಎಂ.ಶ್ರೀ., ಕುವೆಂಪು ಮುಂತಾದ ಅನೇಕರು ರಚಿಸಿದ ಕವಿತೆಗಳ ಏಕೀಕೃತ ಕನ್ನಡನಾಡಿನ ಭವ್ಯ ಚಿತ್ರ ಮೂಡಿತು. ಸ್ವತಂತ್ರ ಕರ್ನಾಟಕ, ಸಂಯುಕ್ತ ಕರ್ನಾಟಕ ಮುಂತಾದ ಅನೇಕ ಪತ್ರಿಕೆಗಳ ಹೆಸರುಗಳು ಕರ್ನಾಟಕದ ಕನಸನ್ನು ಕಟ್ಟುತ್ತಿದ್ದುವು. ಆದರೆ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಲಭ್ಯವಾಗುವವರೆಗೆ ಕನ್ನಡ ನಾಡನ್ನು ಒಂದು ಆಡಳಿತದೊಳಕ್ಕೆ ತರುವುದು ಸಾಧ್ಯವಿಲ್ಲವೆಂಬುದೂ ಖಚಿತವಾಯಿತು. ಭಾರತದ ಸ್ವಾತಂತ್ರ್ಯ ಚಳವಳಿ ಬಿರುಸಾಯಿತು. ಕಾಂಗ್ರೆಸ್ ಅಧಿಕಾರ ವಹಿಸಿಕೊಂಡ ಮೇಲೆ ಭಾಷಾನುಗುಣ ಪ್ರಾಂತ್ಯಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ 1938ರಲ್ಲಿ ನಿರ್ಣಯ ಮಾಡಿತು. ಹಳೆಯ ಮೈಸೂರು ಸಂಸ್ಥಾನ ಪ್ರದೇಶದಲ್ಲಿ ಏಕೀಕರಣ ಚಳವಳಿಯನ್ನು ಬಲಪಡಿಸಲು ಬೆನಗಲ್ ರಾಮರಾವ್ ಅಧ್ಯಕ್ಷರಾಗಿಯೂ ಬಿ.ಶಿವಮೂರ್ತಿ ಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಉಳ್ಳ ಏಕೀಕರಣ ಸಮಿತಿ ಅದೇ ವರ್ಷ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಕರ್ನಾಟಕವನ್ನು ಪ್ರತ್ಯೇಕ ಪ್ರಾಂತ್ಯವಾಗಿ ರಚಿಸುವ ಕ್ರಮವನ್ನು ವಿರೋಧಿಸುವುದು ಸಾಧ್ಯವಿಲ್ಲ ಮತ್ತು ಕರ್ನಾಟಕ ಪ್ರಾಂತ್ಯ ನಿರ್ಮಾಣ ವಿಚಾರ ನನಗೆ ಪ್ರಿಯವಾದ್ದು-ಎಂಬುದಾಗಿ ಗಾಂಧೀಜಿ ಹೇಳಿದರು. 1946ರಲ್ಲಿ ಕರ್ನಾಟಕ ಏಕೀಕರಣ ಸಭೆಯ ಹತ್ತನೆಯ ಅಧಿವೇಶನದ ಆರಂಭೋತ್ಸವವನ್ನು ಸರ್ದಾರ್ ಪಟೇಲರು ನೆರವೇರಿಸುತ್ತ, ಛಿದ್ರ ಕರ್ನಾಟಕ ಒಂದಾದ ರಾಜ್ಯವಾಗಿ ಬಹು ಬೇಗ ರೂಪುಗೊಳ್ಳಲಿದೆ. ಕನ್ನಡ ನಾಡಿನ ಜನ ಇನ್ನು ಬಹಳ ಕಾಲ ಕಾಯಬೇಕಾಗಿಲ್ಲ. ಕರ್ನಾಟಕ ರಾಜ್ಯದೊಂದಿಗೆ ಒಂದು ಪ್ರಾಂತ್ಯಾಧಿಕಾರ, ಒಂದು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯದ ಸ್ವತಂತ್ರ ಜೀವನ ಭಾಗ್ಯಗಳು ಕರಗತವಾಗಲಿವೆ. ತಮ್ಮ ಉದ್ದೇಶಸಾಧನೆಗಾಗಿ ಬ್ರಿಟಿಷರು ಭಾಷಾನುಗುಣ ಪ್ರಾಂತ್ಯಗಳನ್ನು ಮಣ್ಣುಗೂಡಿಸಿ, ಆ ರಾಜ್ಯಗಳನ್ನೆಲ್ಲ ದುರ್ಬಲಗೊಳಿಸಿದರು. ಭಾರತ ಸ್ವತಂತ್ರವಾದ ಕೂಡಲೆ ಈ ದೋಷ ದೌರ್ಭಾಗ್ಯಗಳು ಕೊನೆಗಾಣುತ್ತವೆ ಎಂದು ಭರವಸೆ ನೀಡಿದರು.

1946ರ ಆಗಸ್ಟ್ ತಿಂಗಳಲ್ಲಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯೂ ಕರ್ನಾಟಕ ಏಕೀಕರಣ ಸಭೆಯೂ ಒಂದಾಗಿ, ದಾವಣಗೆರೆಯಲ್ಲಿ ಅಖಿಲ ಕರ್ನಾಟಕ ಮಹಾಸಮ್ಮೇಳನವನ್ನು ನಡೆಸಿದುವು. ಮುಂಬಯಿ, ಮದರಾಸು ಮತ್ತು ಮೈಸೂರು ಶಾಸನ ಸಭೆಗಳ ಕನ್ನಡ ಪ್ರತಿನಿಧಿಗಳೂ ಸಣ್ಣಪುಟ್ಟ ಸಂಸ್ಥಾನಗಳ ಪ್ರಜೆಗಳ ಪ್ರತಿನಿಧಿಗಳೂ ಸಂಸ್ಥಾನ ಪ್ರಜಾ ಪರಿಷತ್ ಅಧಿಕಾರ ವರ್ಗದವರೂ ಸಾಂಸ್ಕೃತಿಕ ಸಂಸ್ಥೆಗಳ ಪ್ರತಿನಿಧಿಗಳೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ ಇದರ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿದರು.

ಭಾರತ ಸಂವಿಧಾನವನ್ನು ರಚಿಸಲು ಸೇರಿರುವ ಸಂವಿಧಾನ ರಚನಾಸಭೆ ಸಾವಕಾಶಮಾಡದೆ ಭಾಷಾನುಗುಣವಾಗಿ ಪ್ರಾಂತ್ಯಗಳ ನಿರ್ಮಾಣ ಮಾಡುವ ಕಾರ್ಯಕೈಗೊಳ್ಳಬೇಕು ಮತ್ತು ಪ್ರತ್ಯೇಕವಾಗಿ ಕರ್ನಾಟಕ ಪ್ರಾಂತ್ಯ ನಿರ್ಮಿಸಲು ಬೇಕಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕು ಎಂದು ಈ ಸಮ್ಮೇಳನದಲ್ಲಿ ಸರ್ವಾನುಮತದ ನಿರ್ಣಯವಾಯಿತು.

ಈ ನಿರ್ಣಯದ ಸೂಚನೆಗೆ ಅನುಗುಣವಾಗಿ ಸಂವಿಧಾನ ರಚನಾ ಸಭೆ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡದೆ ಭಾಷೆ, ಸಂಸ್ಕೃತಿ, ಭೂಗೋಳ ಇವುಗಳನ್ನಾಧಾರಮಾಡಿಕೊಂಡು ಪ್ರಾಂತ್ಯಗಳನ್ನು ರಚಿಸಬೇಕೆಂದು 1946 ಡಿಸೆಂಬರ್ 8ರಂದು ನಿರ್ಣಯಮಾಡಿತು.

ದಾವಣಗೆರೆಯಲ್ಲಾದ ಮಹಾ ಸಮ್ಮೇಳನದಲ್ಲಿ ಒಂದು ಸಮಸ್ಯೆ ತಲೆಹಾಕಿತು. ಆಗಿನ ಮೈಸೂರು ಸಂಸ್ಥಾನ ಮಹಾರಾಜರ ಪ್ರಭುತ್ವಕ್ಕೊಳಗಾಗಿತ್ತು. ಮೈಸೂರು ಜವಾಬ್ದಾರಿ ಸರ್ಕಾರ ಸ್ಥಾಪಿಸಿದ ಮೇಲೆ ಅದು ಕರ್ನಾಟಕ ರಾಜ್ಯದೊಳಗೆ ಐಕ್ಯವಾಗಬಹುದು. ಅದುವರೆಗೆ ಬ್ರಿಟಿಷ್ ಪ್ರಾಂತ್ಯಗಳ ಕನ್ನಡ ಭಾಗಗಳೆಲ್ಲ ಒಂದಾಗಿ ಒಂದು ರಾಜ್ಯ ರೂಪುಗೊಳ್ಳಲಿ ಎಂದು ಮೈಸೂರೇತರ ಕನ್ನಡಿಗರು ವಾದಿಸಲಾರಂಭಿಸಿದರು. ಮೈಸೂರನ್ನು ಬಿಟ್ಟು ಕರ್ನಾಟಕ ರಾಜ್ಯವನ್ನು ಊಹಿಸುವುದು ಸಾಧ್ಯವಿಲ್ಲ; ಇದು ನ್ಯಾಯವಲ್ಲ ಎಂಬುದು ಮೈಸೂರಿನವರ ವಾದವಾಗಿತ್ತು. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯವರು ಯಾವ ಕಾರಣದಿಂದಲೂ ಕರ್ನಾಟಕ ಪ್ರಾಂತ್ಯ ರಚನೆಯ ಕೆಲಸವನ್ನು ತಡಮಾಡಬಾರದೆಂದು ಹೇಳಲಾರಂಭಿಸಿದರು. ದೇಶೀಯ ರಾಜರ ಕರ್ನಾಟಕವೊಂದು ಕಡೆ, ಬ್ರಿಟಿಷ್ ಕರ್ನಾಟಕವಿನ್ನೊಂದು ಕಡೆ ಮುಖಮಾಡುವ ಸೂಚನೆಗಳು ಕಂಡುಬಂದುವು. ಕಾಸರಗೋಡಿನ ಕರ್ನಾಟಕ ಏಕೀಕರಣ ಸಮ್ಮೇಳನ ಸಹ ತಡಮಾಡದೆ ಕರ್ನಾಟಕ ಪ್ರಾಂತ್ಯ ನಿರ್ಮಿಸಬೇಕೆಂದು ನಿರ್ಣಯ ಮಾಡಿತು. 1947ರಲ್ಲಿ ಭಾರತ ಸ್ವತಂತ್ರವಾದ ಕೆಲವು ತಿಂಗಳುಗಳಲ್ಲೇ ಹಳೆಯ ಮೈಸೂರಿನಲ್ಲೂ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಯಿತು. ಕರ್ನಾಟಕ ಏಕೀಕರಣಕ್ಕಿದ್ದ ಆಡಳಿತದ ತೊಡಕು ಇದರಿಂದ ಪರಿಹಾರವಾಯಿತೆನ್ನಬಹುದು.

ಭಾರತ ಸರ್ಕಾರ ಆಂಧ್ರ ಪ್ರಾಂತ್ಯದ ನಿರ್ಮಾಣ ಮಾಡುವ ನಿರ್ಧಾರ ಮಾಡಿ, ಪ್ರಕಟಿಸಿತು. ಸಂವಿಧಾನ ರಚನಾ ಸಮಿತಿ ಭಾಷಾನುಗುಣ ರಾಜ್ಯ ನಿರ್ಮಾಣ ತತ್ತ್ವವನ್ನು ಅನುಮೋದಿಸಿ, ಈ ಉದ್ದೇಶದ ಸಾಧನೆಗಾಗಿ ಒಂದು ಆಯೋಗದ ನೇಮಕವಾಗಬೇಕೆಂದು ಸೂಚನೆ ಮಾಡಿತು. ಇದರ ಫಲವಾಗಿ 1948 ಜೂನ್ 17ರಂದು ಧಾರ್ ಸಮಿತಿ ಅಸ್ತಿತ್ವಕ್ಕೆ ಬಂತು. ಈ ಸಮಿತಿಯ ವರದಿ ಹೊರಬಿದ್ದುದು ಆ ವರ್ಷದ ಡಿಸೆಂಬರ್ ತಿಂಗಳ 10ರಂದು. ಒಕ್ಕೂಟ ಸೇರಲು ಮೈಸೂರು ಇಚ್ಛಿಸಿದ್ದ ಪಕ್ಷದಲ್ಲಿ ಮೈಸೂರನ್ನೇ ನಾಭಿಯನ್ನಾಗಿ ಸುಲಭವಾಗಿ ಇಟ್ಟುಕೊಂಡು ಅದರ ಸುತ್ತ ಮದರಾಸ್, ಮುಂಬಯಿಗಳ ಕನ್ನಡ ಮಾತಾಡುವವರ ಜಿಲ್ಲೆಗಳನ್ನು ಒಟ್ಟಿಗೆ ತಂದು, ಆಡಳಿತದೃಷ್ಟಿಯಿಂದ ಅನುಕೂಲಕರವಾದ ಒಂದು ಪ್ರಾಂತ್ಯವನ್ನಾಗಿ ಬೆಳೆಸಲು ಸಾಧ್ಯಾವಾಗುವಂತೆ ಮಾಡಬಹುದಾಗಿತ್ತು. ಆದರೆ ಕರ್ನಾಟಕ ಪ್ರಾಂತ್ಯದಲ್ಲಿ ವಿಲೀನಗೊಳ್ಳಲು ಮೈಸೂರು ಸಂಸ್ಥಾನ ಇನ್ನೂ ಸಿದ್ಧವಾಗಿರುವಂತೆ ಕಾಣುವುದಿಲ್ಲ. ಭಾರತ ಒಕ್ಕೂಟದ ಪ್ರದೇಶವನ್ನು ದೇಶೀಯ ಸಂಸ್ಥಾನಗಳಲ್ಲಿ ವಿಲೀನಗೊಳಿಸಲು ಜನಾಭಿಪ್ರಾಯವಾಗಲಿ ಸರ್ಕಾರದ ನೀತಿಯಾಗಲಿ ಸಿದ್ಧವಾಗಿದೆಯೆ ಎಂಬುದನ್ನು ನಾವು ಹೇಳಲಾರೆವು ಎಂಬ ಧಾರ್ ಸಮಿತಿಯ ಹೇಳಿಕೆಯಿಂದ ಭಾರತದ ನಾನಾ ಭಾಷೆಗಳನ್ನಾಡುವ ಜನರಿಗೆ ಅಸಮಾಧಾನವಾಯಿತು. ಈ ಅಸಮಾಧಾನ ಬೆಳೆದು ವಕ್ರರೂಪ ತಾಳದಂತೆ ಕಾಂಗ್ರೆಸ್ ನಾಯಕರು ಸಮಸ್ಯೆಯನ್ನು ಜವಾಹರಲಾಲ್ ನೆಹರೂ, ಸರ್ದಾರ್ ಪಟೇಲ್, ಪಟ್ಟಾಭಿ ಸೀತಾರಾಮಯ್ಯ - ಈ ಮೂವರಿಗೆ ಅವರ ಸಲಹೆಗಾಗಿ ಒಪ್ಪಿಸಿದರು. ಈ ಬಗ್ಗೆ ಆತುರ ಬೇಡವೆಂಬುದೂ ಸಕಾಲದಲ್ಲಿ ಅಗತ್ಯವಾದ್ದನ್ನು ಮಾಡಬಹುದೆಂಬುದೂ ಅವರ ಅಭಿಪ್ರಾಯವಾಗಿತ್ತು. ಇದರಿಂದ ಅಸಮಾಧಾನ ಅತೃಪ್ತಿಗಳು ಬೆಳೆದುವು. ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿ 1949 ನವೆಂಬರ್ 5ರಂದು ಸಭೆ ಸೇರಿ ಈ ವಿಚಾರವನ್ನು ವಿಮರ್ಶಿಸಿ ಸ್ವೀಕರಿಸಿದ ನಿರ್ಣಯದಲ್ಲಿ ಕರ್ನಾಟಕ ರಾಜ್ಯ ನಿರ್ಮಾಣದ ಅಗತ್ಯವನ್ನು ಮತ್ತೊಮ್ಮೆ ಎತ್ತಿ ಹೇಳಿತಲ್ಲದೆ ಕರ್ನಾಟಕ ರಾಜ್ಯಕ್ಕೆ ಮೈಸೂರು ಮಹಾರಾಜರು ಶಾಸನಬದ್ಧ ರಾಜರಾಗಿರುವುದು ವಿಹಿತವಾಗಿದೆಯೆಂದು ಅಭಿಪ್ರಾಯಪಟ್ಟಿತು. ಆದಕಾರಣ ಭಾರತ ಸಂವಿಧಾನದಲ್ಲಿ ಯಾವ ಕಾರ್ಯವಿಧಾನ ಸೂಚಿಸಲಾಗಿದೆಯೋ ಅದರಂತೆ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದು ನಿರ್ಣಯಿಸಿತು. ಮೈಸೂರು ಸಂಸ್ಥಾನದ ಮತ್ತು ಹಿಂದಿನ ಬ್ರಿಟಿಷ್ ಕರ್ನಾಟಕ ಭಾಗಗಳ ಆರ್ಥಿಕ ಹಿತಗಳು ಸಮಾನವಾಗಿವೆಯಾದ್ದರಿಂದ ಸಮಸ್ತ ಕರ್ನಾಟಕವೂ ಸರ್ವತೋಮುಖ ಪ್ರಗತಿ ಸಾಧಿಸುವ ಸಲುವಾಗಿ ಸಂಯುಕ್ತ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದೂ ಅದಕ್ಕೆ ಮೈಸೂರು ಮಹಾರಾಜರೇ ಶಾಸನಬದ್ಧ ರಾಜರಾಗಬೇಕೆಂದೂ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯೂ ಜನವರಿ 19ರಂದು ನಿರ್ಣಯಿಸಿತು.

ಧಾರ್ ಸಮಿತಿಯ ನಿರ್ಧಾರದಿಂದ, ತ್ರಿಮೂರ್ತಿಗಳ ಸೂಚನೆಯಿಂದ ಕರ್ನಾಟಕದಲ್ಲೆಲ್ಲ ಅಸಮಾಧಾನ ಹಬ್ಬಿತು. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಅಸಹಕಾರ ಚಳವಳಿಯನ್ನಾರಂಭಿಸಲು ಸಹ ಸಿದ್ಧವಾಯಿತು. ಕೇಂದ್ರ ಮತ್ತು ಪ್ರಾಂತ್ಯಗಳ ಶಾಸನಸಭಾ ಸ್ಥಾನಗಳಿಗೆ ಕನ್ನಡ

ಭಾಗಗಳ ಶಾಸಕರು ರಾಜೀನಾಮೆ ಕೊಡಲು ಒಪ್ಪಿಗೆ ಕೊಡಬೇಕೆಂದು ಅವುಗಳ ಕನ್ನಡ ಶಾಸಕರು ಸಮಿತಿಯನ್ನು ಕೇಳಿದರು. ಆಂಧ್ರ ಪ್ರಾಂತ್ಯ ನಿರ್ಮಾಣದೊಂದಿಗೆ ಕರ್ನಾಟಕ ಪ್ರಾಂತ್ಯ ನಿರ್ಮಾಣವೂ ಆಗಬೇಕೆಂದು ಅವರ ನಿಲವು. ಪರಿಸ್ಥಿತಿ ವಿಷಮಿಸುತ್ತ ಬಂತು. 1950 ಜನವರಿ 19ರಂದು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಮಂಡಲ ಸಭೆ ಸೇರಿ ಪರಿಸ್ಥಿತಿಯನ್ನು ಪರಿಶೀಲಿಸಿತು. ಕರ್ನಾಟಕ ಏಕೀಕರಣವಾಗದೆ ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯದಲ್ಲಿ ಛಿದ್ರ ಕನ್ನಡ ನಾಡು ಏನನ್ನೂ ಮಾಡಲಾರದು. ಕರ್ನಾಟಕ ಪ್ರಾಂತ್ಯ ನಿರ್ಮಾಣ ಕಾರ್ಯವನ್ನು ತಡಮಾಡಿದಷ್ಟೂ ಕನ್ನಡ ನಾಡಿನ ಸಾರ್ವಜನಿಕ ಜೀವನ ಶಿಥಿಲವಾಗುತ್ತ ಬರುತ್ತದೆ. ಆದಕಾರಣ ತತ್‍ಕ್ಷಣ ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕೆ ಏನೇನು ಪರಿಣಾಮಕಾರಿ ಕ್ರಮಗಳನ್ನು ಕೈಕೊಳ್ಳಬೇಕೋ ಅವುಗಳನ್ನೆಲ್ಲ ತೆಗೆದುಕೊಳ್ಳಬೇಕು. ಕೂಡಲೆ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧಿವೇಶನವನ್ನು ಕರೆಯಬೇಕು ಎಂದು ಅದು ತೀರ್ಮಾನಿಸಿತು.

1951 ಜೂನ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಮಾವೇಶಗೊಂಡಿದ್ದ ಸಮಯದಲ್ಲಿ ಅದರ ಮುಂದಿಡಲಾದ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಭಾಷಾನುಗುಣ ರಾಜ್ಯ ರಚನೆಯ ಬಗ್ಗೆ ಆ ಸಂಸ್ಥೆಯ ನಿಲುವೇನೆಂಬುದು ಸ್ಪಷ್ಟವಾಗಿತ್ತು. ಅಲ್ಲಿ ಈ ವಿಚಾರವಾಗಿ ಹೀಗೆ ಹೇಳಲಾಗಿತ್ತು; ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳ ಪುನರ್ವಿಭಾಗ ಮಾಡಬೇಕೆಂದು ದಕ್ಷಿಣ ಭಾರತದಲ್ಲೂ ಪಶ್ಚಿಮ ಭಾರತದಲ್ಲೂ ಜನ ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದಾರೆ. ಎಷ್ಟೋ ವರ್ಷಗಳ ಹಿಂದೆಯೇ ಕಾಂಗ್ರೆಸ್ ಭಾಷಾನುಗುಣ ಪ್ರಾಂತ್ಯರಚನಾತತ್ತ್ವವನ್ನಂಗೀಕರಿಸಿತು. ಕಟ್ಟಕಡೆಯ ನಿರ್ಣಯವಾದರೋ ಸಂಬಂಧಪಟ್ಟ ಜನರ ಅಪೇಕ್ಷೆಯನ್ನೇ ಅವಲಂಬಿಸಿದೆ. ಭಾಷೆಗಳ ಆಧಾರದ ಮೇಲೆ ನಿರ್ಮಾಣವಾಗುವ ಪ್ರಾಂತ್ಯಗಳ ವಾದಕ್ಕೆ ಸಾಂಸ್ಕೃತಿಕವಾಗಿ ಅಮೂಲ್ಯ ಬೆಲೆ ಇದೆ. ಆದರೂ ಆರ್ಥಿಕ, ಆಡಳಿತ, ಹಣಕಾಸಿನ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಿ ಜನ ಏಕಾಭಿಪ್ರಾಯದಿಂದ ಕೂಡಿ, ಇಂಥ ಪ್ರಾಂತ್ಯಬೇಕೆಂದು ಬೇಡುವರೋ ಅಲ್ಲೆಲ್ಲ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಲಾಗುತ್ತದೆ. ಸಂವಿಧಾನಬದ್ಧವಾಗಿ ಕಾರ್ಯಸಾಧನೆ ಮಾಡಲಾಗುತ್ತದೆ. ಪ್ರಾಂತ್ಯಗಳ ಚತುಸ್ಸೀಮೆಗಳನ್ನು ನಿಶ್ಚಯಮಾಡಲು ಗಡಿ ಸಮಿತಿಗಳನ್ನು ನೇಮಿಸಲಾಗುತ್ತದೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನ ಕಾಲದಲ್ಲೇ ಬೆಂಗಳೂರಿನಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ ನಡೆಯಿತು. ಮೈಸೂರನ್ನೊಳಗೊಂಡ ಕರ್ನಾಟಕ ರಾಜ್ಯ ಸ್ಥಾಪನೆಯಾಗಬೇಕು, ಮೈಸೂರು ಮಹಾರಾಜರೇ ಕರ್ನಾಟಕದ ರಾಜಪ್ರಮುಖರಾಗಬೇಕು ಎಂಬುದಾಗಿ ಅಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅದೇ ವಾರದಲ್ಲೇ ಬೆಂಗಳೂರಿನಲ್ಲಿ ಮಹಾರಾಷ್ಟ್ರ, ವಿದರ್ಭ, ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರ, ನಾಗಪುರಗಳ ಪ್ರತಿನಿಧಿಗಳು ಸಭೆ ಸೇರಿ ದಕ್ಷಿಣ ಮತ್ತು ಪಶ್ಚಿಮ ಭಾರತಗಳಲ್ಲಿ ಕೂಡಲೆ ಭಾಷಾನುಗುಣ ಪ್ರಾಂತ್ಯ ನಿರ್ಮಾಣವಾಗಬೇಕೆಂದು ಸರ್ವಾನುಮತದಿಂದ ನಿರ್ಣಯ ಮಾಡಿದರು. ಕಾಂಗ್ರೆಸ್ ಮಹಾ ಚುನಾವಣೆಗಳ ಘೋಷಣೆ ಪತ್ರದಲ್ಲಿ ಭಾಷಾನುಗುಣ ಪ್ರಾಂತ್ಯ ರಚನೆಯ ವಿಚಾರ ಸೇರಿಸಿದ್ದನ್ನು ಸ್ವಾಗತಿಸಿದರು. 1951ರಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಬೆಂಗಳೂರಿಗೆ ಬಂದಿದ್ದಾಗ ಬಿ.ಶಿವಮೂರ್ತಿಶಾಸ್ತ್ರಿಗಳ ನೇತೃತ್ವದಲ್ಲಿ ನಿಯೋಗವೊಂದು ಅವರಿಗೆ ಕರ್ನಾಟಕ ಏಕೀಕರಣದ ಬಗ್ಗೆ ಒಂದು ಮನವಿ ಸಲ್ಲಿಸಿತು.

1952ರಲ್ಲಿ ನಡೆದ ಪ್ರಥಮ ಮಹಾಚುನಾವಣೆಗಳಲ್ಲಿ ಭಾರತದ ಕೇಂದ್ರ ರಾಜ್ಯಗಳ ಸಭೆಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳೇ ಬಹು ಸಂಖ್ಯೆಯಲ್ಲಿ ಗೆದ್ದು ಬಂದರು. ಕಾಂಗ್ರೆಸ್ ಸರ್ಕಾರಗಳ ಸ್ಥಾಪನೆಯಾಯಿತು. ಆದರೆ ಆಂಧ್ರ ನಿರ್ಮಾಣವನ್ನಲ್ಲದೆ ಸದ್ಯಕ್ಕೆ ಮತ್ತೆ ಯಾವ ಪ್ರಾಂತ್ಯ ನಿರ್ಮಾಣ ಕಾರ್ಯವನ್ನೂ ಆರಂಭಿಸಲಾಗದೆಂದೂ ಭಾಷಾನುಗುಣವಾಗಿ ಪ್ರಾಂತ್ಯಗಳ ಪುನರ್ನಿರ್ಮಾಣವಾಗಬೇಕೆಂಬ ತತ್ತ್ವವನ್ನು ಕಾಂಗ್ರೆಸ್ ಅಂಗೀಕರಿಸುತ್ತದೆಯಾದರೂ ಸದ್ಯಕ್ಕೆ ಅಂಥ ಪ್ರಾಂತ್ಯಗಳ ನಿರ್ಮಾಣ ಪ್ರಯತ್ನಗಳನ್ನು ನಿಲ್ಲಿಸತಕ್ಕದ್ದೆಂದೂ 1953ರಲ್ಲಿ ಹೈದರಾಬಾದಿನಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯವಾಯಿತು. ಇದು ಜನಕ್ಕೆ ತೃಪ್ತಿ ನೀಡಲಿಲ್ಲ. ಆಂಧ್ರದ ನಿರ್ಮಾಣವಾದಾಗ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸಿದಾಗ ಅದನ್ನು ಸ್ವಾಗತಿಸಿದ ಮೈಸೂರು ಅಖಂಡ ಕರ್ನಾಟಕ ನಿರ್ಮಾಣಕ್ಕೆ ಅಡ್ಡಿಯಾಗದೆಂದು ಅನೇಕ ಮುಖಂಡರು ಅಭಿಪ್ರಾಯ ಪಟ್ಟರಾದರೂ ಏನೂ ಪ್ರಯೋಜನವಾಗಲಿಲ್ಲ. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಮತ್ತೆ ಸಭೆ ಸೇರಿ (1953) ಈ ಬಗ್ಗೆ ನಿರ್ಣಯ ಮಾಡಿ, ಜನರಲ್ಲಿ ಅಧಿಕವಾಗುತ್ತಿದ್ದ ಅಸಮಾಧಾನದ ಕಡೆಗೆ ಸರ್ಕಾರದ ಗಮನ ಸೆಳೆಯಿತಲ್ಲದೆ, 1954ರ ಅಂತ್ಯದೊಳಗಾಗಿ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದೂ ಕೇಂದ್ರ ಸರ್ಕಾರ ಯಾವ ಸಂದೇಹಕ್ಕೂ ಆಸ್ಪದ ಕೊಡದೆ, ಸ್ಪಷ್ಟವಾಗಿ 1953 ಅಕ್ಟೋಬರ್ ತಿಂಗಳೊಳಗಾಗಿ ಈ ಬಗ್ಗೆ ತನ್ನ ನಿಶ್ಚಯವನ್ನು ಪ್ರಕಟಿಸಬೇಕೆಂದೂ ಈ ಎರಡು ಬೇಡಿಕೆಗಳನ್ನೂ ಮಾನ್ಯಮಾಡುವಂತೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದೂ ಅಭಿಪ್ರಾಯಪಟ್ಟಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯೂ ಕೇಂದ್ರ ಸರ್ಕಾರವೂ ಸೂಚಿಸಿರುವ ಕಾಲಾವಧಿಯೊಳಗೆ ಬೇಡಿಕೆಗಳನ್ನು ಪೂರೈಸದೆ ಹೋದರೆ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಸದಸ್ಯರೂ ಕೇಂದ್ರ ಮತ್ತು ರಾಜ್ಯ ಶಾಸನ ಸಭೆಗಳ ಕನ್ನಡ ನಾಡಿನ ಸದಸ್ಯರೂ ತಂತಮ್ಮ ಸದಸ್ಯತ್ವಗಳಿಗೆ ರಾಜೀನಾಮೆ ಕೊಡತಕ್ಕದ್ದೆಂದು ತೀರ್ಮಾನಿಸಿತು.

ದಾವಣಗೆರೆಯಲ್ಲಿ ಸೇರಿದ್ದ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತೂ ಈ ಬಗ್ಗೆ ನಿರ್ಣಯ ಮಾಡಿ ಕರ್ನಾಟಕ ರಾಜ್ಯ ನಿರ್ಮಾಣಕಾರ್ಯ ಆರಂಭವಾಗದಿದ್ದರೆ ಶಾಂತಿಯುತ ಸಂಗ್ರಾಮವನ್ನಾರಂಭಿಸುವುದು ಖಂಡಿತವೆಂದು ಎಚ್ಚರಿಸಿತು.

1953 ಸೆಪ್ಟೆಂಬರ್ ಮಧ್ಯದವರೆಗೆ ಕೇಂದ್ರ ಸರ್ಕಾರ ಈ ಬಗ್ಗೆ ಕಾರ್ಯಪ್ರವೃತ್ತವಾಗುವ ಸೂಚನೆಗಳು ಕಂಡುಬರಲಿಲ್ಲ. ಆಗ ಈ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ದೆಹಲಿಗೆ ಹೋಗಿದ್ದ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ನಿಯೋಗಕ್ಕೆ ಪ್ರಧಾನಿಯಿಂದ ಭರವಸೆ ದೊರಕಿತ್ತು. ಅಧಿಕಾರ ನಿಯುಕ್ತ ಸಮಿತಿಗೆ ರಾಜ್ಯಗಳ ಪುನರ್ನಿರ್ಮಾಣ ಕುರಿತು ಸೂಕ್ತ ಸಲಹೆಗಳನ್ನು ನೀಡುವಂತೆ ಹೇಳಲಾಗುವುದೆಂದೂ 1953 ರೊಳಗಾಗಿ ಸಮಿತಿಯನ್ನು ನೇಮಿಸುವುದಾಗಿಯೂ ಆಶ್ವಾಸನೆ ಬಂತು.

1953 ಡಿಸೆಂಬರ್ 29ರಂದು ಸರ್ಕಾರ ಎಸ್.ಫಜಲ್ ಅಲಿ ಅಧ್ಯಕ್ಷ ಮತ್ತು ಎಚ್.ಎನ್.ಕುಂಜ್ರು, ಕೆ.ಎಂ.ಪಣಿಕ್ಕರ್ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಿತು. ಸಾರ್ವಜನಿಕರಿಂದ ಟಿಪ್ಪಣಿಗಳು, ಹೇಳಿಕೆಗಳು, ಲೇಖನಗಳು, ಅಂಕಿ ಅಂಶಗಳು ಮತ್ತು ನಕ್ಷೆಗಳನ್ನು ಈ ಸಮಿತಿ ಪಡೆಯಿತು. ಇದಕ್ಕೆ ಬಂದ ಲೇಖನಗಳು 1,52,250, ವಿಶಿಷ್ಟ ಪ್ರಬಂಧಗಳು 2,000. ಸದಸ್ಯರು 1954 ಏಪ್ರಿಲ್ ತಿಂಗಳಲ್ಲಿ 8 ದಿನಗಳ ಕಾಲ ಅಖಿಲ ಭಾರತ ಪ್ರವಾಸ ಕೈಕೊಂಡು 38,000 ಮೈಲಿಗಳ ಪ್ರಯಾಣ ಮಾಡಿ 104 ಸ್ಥಳಗಳನ್ನು ಸಂದರ್ಶಿಸಿ, 9,000ಕ್ಕೂ ಹೆಚ್ಚು ಜನರನ್ನು ಭೇಟಿ ಮಾಡಿದರು. 1955 ಸೆಪ್ಟೆಂಬರ್ 30ರಂದು ಸಮಿತಿ ವರದಿಯೊಪ್ಪಿಸಿತು.

ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದು ಫಜಲ್ ಅಲಿ ಸಮಿತಿ ಸಲಹೆ ಮಾಡಿ, ಈ ರಾಜ್ಯದಲ್ಲಿ ಕೆಳಗೆ ಹೆಸರಿಸಿರುವ ಪ್ರದೇಶಗಳಿರತಕ್ಕದ್ದೆಂದು ಸೂಚಿಸಿತು: 1 ಆಗ ನಿರ್ಮಾಣವಾಗಿದ್ದ ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ ತಾಲ್ಲೂಕುಗಳು ಮತ್ತು ಕಟ್ಟೆ ಮತ್ತು ತುಂಗಭದ್ರಾ ಯೋಜನೆಯ ಮೂಲ ಕಾಮಗಾರಿಗಳು ಇರುವ ಮಲ್ಲಾಪುರಂ ಉಪ ತಾಲ್ಲೂಕಿನ ಸಣ್ಣ ಪ್ರದೇಶಗಳು -ಇವುಗಳನ್ನು ಬಿಟ್ಟು ಮೈಸೂರು ರಾಜ್ಯ; 2 ಮುಂಬಯಿ ರಾಜ್ಯದ ದಕ್ಷಿಣ ಭಾಗದ ಕನ್ನಡ ಭಾಷೆಯನ್ನಾಡುವ ನಾಲ್ಕು ಜಿಲ್ಲೆಗಳು, ಎಂದರೆ ಚಂದಗಡ ತಾಲ್ಲೂಕಿನ ವಿನಾ ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ; 3 ಹೈದರಾಬಾದ್ ಪ್ರಾಂತ್ಯದ ಬೀದರ್, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳು; 4 ಕಾಸರಗೋಡು ತಾಲ್ಲೂಕಿನ ಹೊರತು ದಕ್ಷಿಣ ಕನ್ನಡ ಜಿಲ್ಲೆ; 5 ಮದರಾಸಿನ ಕೊಯಮತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕು; ಮತ್ತು 6 ಕೊಡಗು.

ಮುಂದೆ ಏರ್ಪಡಲಿರುವ ಕರ್ನಾಟಕ ರಾಜ್ಯದ ಅಂಚಿನಲ್ಲಿರುವ ಕೆಲವು ಪ್ರದೇಶಗಳನ್ನು ಅಂದರೆ ಕೊಯಮತ್ತೂರು, ನೀಲಗಿರಿ, ಸೇಲಂ, ಚಿತ್ತೂರು, ಅನಂತಪುರ, ಕರ್ನೂಲು, ಕೊಲ್ಹಾಪುರ, ದಕ್ಷಿಣ ಸಾತಾರಾ

ಮತ್ತು ಸೊಲ್ಲಾಪುರ ಜಿಲ್ಲೆಗಳ ಕೆಲವು ಪ್ರದೇಶಗಳನ್ನು ಕರ್ನಾಟಕ ರಾಜ್ಯಕ್ಕೆ ವರ್ಗಾಯಿಸಬೇಕೆಂದು ಕೆಲವರು ಸಲಹೆ ಮಾಡಿದ್ದಾರೆ. ಆದರೆ ಆ ಪ್ರದೇಶಗಳನ್ನು ಕರ್ನಾಟಕ ರಾಜ್ಯಕ್ಕೆ ಸೇರಿಸುವುದಕ್ಕೆ ಎಲ್ಲ ಜನರ ಒಪ್ಪಿಗೆಯೂ ದೊರೆಯುವುದೆಂದು ನಿರೀಕ್ಷಿಸುವುದು ಅಸಾಧ್ಯ. ಜಿಲ್ಲೆಗಳನ್ನು ಒಡೆಯಬೇಕೆಂದು ಯಾವ ಸಲಹೆಯನ್ನೇ ಮಾಡಲಿ ಅದರಿಂದ ಬಹಳ ಹೆಚ್ಚಿನ ವಾದವಿವಾದಗಳು ಉದ್ಭವಿಸುತ್ತವೆ. ಇದನ್ನು ಎದುರಿಸಿ ಆ ಗಡಿಪ್ರದೇಶಗಳನ್ನು ಸರಿಪಡಿಸುವುದು ಬಹಳ ಕಷ್ಟವಾಗುತ್ತದೆ. ಇಷ್ಟೊಂದು ಕಷ್ಟಪಟ್ಟು ಆ ಪ್ರದೇಶಗಳನ್ನು ಕರ್ನಾಟಕ ರಾಜ್ಯಕ್ಕೆ ವರ್ಗಾಯಿಸುವುದು ಸಾಧುವೆಂದು ಹೇಳುವುದಕ್ಕಾಗುವುದಿಲ್ಲ ಎಂಬುದಾಗಿ ಫಜಲ್ ಅಲಿ ಆಯೋಗ ಅಭಿಪ್ರಾಯಪಟ್ಟಿತು. ನೂತನ ರಾಜ್ಯವನ್ನು ಕರ್ನಾಟಕವೆಂದೇ ಕರೆಯುವುದು ಸೂಕ್ತವೆಂಬುದು ಅದರ ಸಲಹೆ. ಫಜಲ್ ಅಲಿ ಆಯೋಗದ ವರದಿ ಪ್ರಕಟವಾದಾಗ ಕನ್ನಡ ನಾಡಿನ ಎಲ್ಲ ಪಕ್ಷಗಳೂ ಸಾಮಾನ್ಯವಾಗಿ ಅದರ ಸಲಹೆಗಳನ್ನು ಮಾನ್ಯ ಮಾಡಿದುವು. ಒಟ್ಟಿನಲ್ಲಿ ಜನರಿಗೆಲ್ಲ ಸಂತೋಷವಾಯಿತು. ಆದರೆ ಸಮಿತಿಯವರು ಕಾಸರಗೋಡನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಕಿತ್ತು ನೂತನ ಕೇರಳ ರಾಜ್ಯಕ್ಕೆ ಜೋಡಿಸಿದ್ದನ್ನೂ ಬಳ್ಳಾರಿ ಜಿಲ್ಲೆ ಕುರಿತು ಮಾಡಿದ ಸಲಹೆಗಳನ್ನೂ ಕನ್ನಡ ನಾಡಿನ ಜನ ಏಕಕಂಠದಿಂದ ಪ್ರತಿಭಟಿಸಿದರು.

1955 ನವೆಂಬರ್ 29, 30 ಮತ್ತು ಡಿಸೆಂಬರ್ 1ರಂದು ಮೈಸೂರು ವಿಧಾನ ಸಭೆ ಫಜಲ್ ಅಲಿ ಸಮಿತಿಯ ಶಿಫಾರಸುಗಳ ವಿಚಾರ ಮಾಡಿ ಬಳ್ಳಾರಿಯನ್ನು ಮೈಸೂರಿನಿಂದ ಪ್ರತ್ಯೇಕಗೊಳಿಸಬಾರದೆಂದೂ ನೂತನ ರಾಜ್ಯಕ್ಕೆ ಮೈಸೂರು ರಾಜ್ಯವೆಂದು ಹೆಸರಿಡಬೇಕೆಂದೂ ತೀರ್ಮಾನಕ್ಕೆ ಬಂತು. ಇದರಿಂದ ಕರ್ನಾಟಕ ರಾಜ್ಯಸ್ಥಾಪನೆ ಸ್ಥಿರಪಟ್ಟಿತು. ಎರಡು ಕರ್ನಾಟಕ ರಾಜ್ಯಗಳಾಗಲಿ ಎಂಬ ಕೂಗಿನ ಸದ್ದಡಗಿತು.

ಭಾರತ ಸರ್ಕಾರ ಫಜಲ್ ಅಲಿ ಸಮಿತಿಯ ವರದಿಯನ್ನು ಸಾರ್ವಜನಿಕರ ಅವಗಾಹನೆಗಾಗಿ 1955 ಅಕ್ಟೋಬರ್ 10ರಂದು ಪ್ರಕಟಿಸಿತು. ಅದಾದ ಮೇಲೆ 1956 ಜನವರಿ 16ರಂದು ರಾಜ್ಯ ಪುನರ್ನಿರ್ಮಾಣ ಕುರಿತು ಭಾರತ ಸರ್ಕಾರ ನಿರ್ಣಯಿಸಿ ವಿಧೇಯಕ ಸಿದ್ಧಗೊಳಿಸಿತು. ಆ ವಿಧೇಯಕವನ್ನು ವಿಧ್ಯುಕ್ತವಾಗಿ 1956 ಮಾರ್ಚ್ 16ರಂದು ಪ್ರಕಟಿಸಿ ಭಾರತ ಸರ್ಕಾರ ಅದನ್ನು ಲೋಕಸಭೆ ರಾಜ್ಯ ಸಭೆಗಳ ಮುಂದಿಟ್ಟಿತು. ಫಜಲ್ ಅಲಿ ಸಮಿತಿ 15 ರಾಜ್ಯಗಳನ್ನೂ 7 ಕೇಂದ್ರಾಡಳಿತ ಕ್ಷೇತ್ರಗಳನ್ನೂ ರಚಿಸಲು ಶಿಫಾರಸು ಮಾಡಿತ್ತು. ಎಲ್ಲ ರಾಜ್ಯಗಳ ವಿಧಾನಸಭೆಗಳಿಗೂ ವಿಧೇಯಕದ ಪ್ರತಿ ಕಳುಹಿಸಿ ಒಂದು ತಿಂಗಳೊಳಗೆ ಅವುಗಳ ಅಭಿಪ್ರಾಯವನ್ನು ಕೇಳಲಾಯಿತು.

ಕೇಂದ್ರ ಸರ್ಕಾರ ಬಳ್ಳಾರಿ ಕುರಿತು ಮೈಸೂರು ರಾಜ್ಯದ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಒಂದು ತಿರ್ಮಾನಕ್ಕೆ ಬಂತು. ಆ ತೀರ್ಮಾನವನ್ನು ವಿಧೇಯಕದ ಪ್ರಸ್ತಾವನೆಯಲ್ಲೇ ಪ್ರಕಟಿಸಿತು. ಕೇಂದ್ರ ಸರ್ಕಾರದ ನಿರ್ಣಯವಿದು: ತುಂಗಭದ್ರಾ ಯೋಜನೆಯ ಕಾರ್ಯದಕ್ಷತೆಯಿಂದ ಮತ್ತು ಅದು ನಿರಾತಂಕವಾಗಿ ನಡೆಯುವಂತೆ ಮಾಡಲು ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳನ್ನು ಆಂಧ್ರಪ್ರದೇಶಕ್ಕೆ ವರ್ಗಾಯಿಸಬೇಕೆಂದು ರಾಜ್ಯ ಪುನರ್ನಿರ್ಮಾಣ ಸಮಿತಿ ಸೂಚಿಸಿತ್ತಷ್ಟೆ. ಈ ಯೋಜನೆಯಲ್ಲಿ ರಾಯಲಸೀಮೆಯ ಜನರಿಗೆ ಅತ್ಯಂತ ಆಸ್ಥೆ ಇದೆಯೆಂಬುದನ್ನು ಭಾರತ ಸರ್ಕಾರ ಮಾನ್ಯ ಮಾಡುತ್ತದೆ. ಆದರೆ ಈ ಧ್ಯೇಯಸಾಧನೆಗೆ ಸಮಿತಿ ಸೂಚಿಸಿರುವಂತೆ ಕೆಲವು ಪ್ರದೇಶಗಳನ್ನು ವರ್ಗಾಯಿಸುವುದು ಅನಾವಶ್ಯಕವೆಂಬ ಅಭಿಪ್ರಾಯಕ್ಕೆ ಭಾರತ ಸರ್ಕಾರ ಬಂದಿದೆ. ಆಂಧ್ರ ಸರ್ಕಾರ ಮಹತ್ವ ಕೊಡುತ್ತಿರುವ ತುಂಗಭದ್ರಾ ಮೇಲ್ಮಟ್ಟದ ಕಾಲುವೆ ಯೋಜನೆಯಾದರೂ ಸರಿಯೆಂದು ಸರ್ಕಾರಕ್ಕೆ ಕಂಡುಬಂದಿದೆ. ಈ ಯೋಜನೆ ತ್ವರಿತವಾಗಿ ಮತ್ತು ಸಮಾಧಾನಕರವಾಗಿ ಆಚರಣೆಗೆ ಬರುವಂತೆ ಮಾಡಲು ಅವಶ್ಯ ಕ್ರಮಗಳನ್ನು ಕೈಕೊಳ್ಳುವುದೇ ಭಾರತ ಸರ್ಕಾರದ ಉದ್ದೇಶವಾಗಿದೆ. ಆದ್ದರಿಂದ ಸಮಿತಿ ತನ್ನ ಸೂಚನೆಮಾಡುವಾಗ ಯಾವ ಉದ್ದೇಶವನ್ನಿಟ್ಟುಕೊಂಡಿತ್ತೋ ಅದನ್ನು, ಪ್ರದೇಶಗಳನ್ನು ವರ್ಗಾಯಿಸದೆ ಅಥವಾ ಈ ಮೊದಲು ವಿವರವಾದ ವಿಚಾರಣೆಗಳ ಅನಂತರ ಬಗೆಹರಿದಿರುವ ಬಳ್ಳಾರಿ ಪ್ರಶ್ನೆಯನ್ನು ಪುನಃ ಎತ್ತದೆ, ಸಾಧಿಸಲಾಗುವುದು. ಹೆಸರನ್ನು ಕುರಿತು ಹೆಚ್ಚು ವಿವಾದ ಬೇಡವೆಂದೂ ರಾಜ್ಯಕ್ಕೆ ಮೈಸೂರು ರಾಜ್ಯವೆಂದೇ ಅಭಿಧಾನವಿರಲೆಂದೂ ಭಾರತ ಸರ್ಕಾರ ಅಭಿಪ್ರಾಯಪಟ್ಟಿತು. ಭಾರತ ಸರ್ಕಾರ ಸಿದ್ಧಗೊಳಿಸಿ ವಿಧಾನ ಸಭೆಗಳ ಮುಂದಿಟ್ಟ ವಿಧೇಯಕದ ಪ್ರಕಾರ ಮೈಸೂರು ರಾಜ್ಯದಲ್ಲಿ ಈ ಭಾಗಗಳು ಸೇರಿದುವು: 1. ಆಗಿನ ಮೈಸೂರು ರಾಜ್ಯ; 2. ಮುಂಬಯಿ ರಾಜ್ಯ (ಚಂದಗಡ ತಾಲ್ಲೂಕನ್ನು ಬಿಟ್ಟು) ಬೆಳಗಾಂವಿ ಜಿಲ್ಲೆ, ಧಾರವಾಡ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು; 3. ಹೈದರಾಬಾದ್ ರಾಜ್ಯದ ಗುಲ್ಬರ್ಗ ಜಿಲ್ಲೆ (ಕೋಡಂಗಲ್, ತಾಂಡೂರು ತಾಲ್ಲೂಕುಗಳನ್ನು ಬಿಟ್ಟು), ರಾಯಚೂರು ಜಿಲ್ಲೆ (ಆಲಂಪುರ, ಗದ್ವಾಲ್ ತಾಲ್ಲೂಕುಗಳನ್ನು ಬಿಟ್ಟು), ಮತ್ತು ಬಿದರೆ ಜಿಲ್ಲೆಯ ಬಿದರೆ, ಭಾಲ್ಕಿ, ಸಂತಪುರ, ಹುಮ್ನಾಬಾದ್ ತಾಲ್ಲೂಕುಗಳು; 4. ಮದರಾಸು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲ್ಲೂಕು, ಅಮೀನ್ ದೀವಿ ದ್ವೀಪಗಳನ್ನು ಬಿಟ್ಟು), ಮತ್ತು ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು; 5. ಕೊಡಗು, ವಿಧೇಯಕ ವಿಧ್ಯುಕ್ತವಾಗಿ ಸಂಸತ್ತಿನ ಮುಂದೆ ಬಂತು. ಈ ಬಗ್ಗೆ ಪುನರ್ವಿಮರ್ಶಿತ ವಿಧೇಯಕವನ್ನು ಲೋಕಸಭೆ 1956 ಜೂನ್ 10ರಂದು ಅಂಗೀಕರಿಸಿತು. ರಾಜ್ಯಸಭೆ ಆಗಸ್ಟ್ 25ರಂದು ತನ್ನ ಒಪ್ಪಿಗೆ ಕೊಟ್ಟಿತು. ಆಗಸ್ಟ್ 31ರಂದು ವಿಧೇಯಕಕ್ಕೆ ರಾಷ್ಟ್ರಪತಿಗಳ ಸಹಿಯಾಯಿತು. ಅಂದಿನಿಂದ ಅದು ಅಧಿನಿಯಮವಾಯಿತು. ನವೆಂಬರ್ 1ರಂದು ಹೊಸ ಮೈಸೂರು ರಾಜ್ಯ ಉದಯವಾಯಿತು. ಕನ್ನಡ ನಾಡಿನ ಜನರ ಸುಮಾರು 65 ವರ್ಷಗಳ ಅವಿಶ್ರಾಂತ ಚಳವಳಿಯ ಫಲವಾಗಿ ಛಿದ್ರವಾಗಿದ್ದ ಕನ್ನಡ ಪ್ರದೇಶಗಳು ಒಂದು ಆಡಳಿತದ ಅಡಿಗೆ ಬಂದವು. ಅನಂತರದಲ್ಲಿ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಲಾಯಿತು (1973).

ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕ ಮತ್ತು ಆಡಳಿತದ ಕಾರಣಗಳಿಂದ ಕರ್ನಾಟಕಕ್ಕೆ ಸೇರಬೇಕಾಗಿದ್ದ ಕೆಲವು ಭಾಗಗಳು ಬಿಟ್ಟು ಹೋಗಿವೆಯೆಂಬುದಾಗಿಯೂ ಭಾವಿಸಲಾಗಿದೆ. ಕಾಸರಗೋಡು, ನೀಲಗಿರಿ, ಹೊಸೂರು, ತಾಳವಾಡಿ, ಮಡಕಶಿರ, ಆಲೂರು, ಆದವಾನಿ, ರಾಯದುರ್ಗ, ದೇಗಲೂರು, ಸೊಲ್ಲಾಪುರ, ಅಕ್ಕಲಕೋಟೆ, ಜತ್ತ, ಗಡಹಿಂಗ್ಲಜ ಇವು ಈ ಭಾಗಗಳು. ಮಹಾರಾಷ್ಟ್ರ ಮೈಸೂರು ಗಡಿ ವಿವಾದವನ್ನು ಪುನರ್ವಿಮರ್ಶಿಸಿ ಇತ್ಯರ್ಥಪಡಿಸಲು ನೇಮಕವಾಗಿದ್ದ ಮಹಾಜನ ಆಯೋಗ ಅಕ್ಕಲಕೋಟೆ, ಜತ್ತ ಮತ್ತು ಕಾಸರಗೋಡುಗಳು ಕರ್ನಾಟಕಕ್ಕೂ ನಿಪ್ಪಾಣಿ, ಖಾನಾಪುರ, ಹಳಿಯಾಳ ಮೊದಲಾದುವು ಮಹಾರಾಷ್ಟ್ರಕ್ಕೂ ಸೇರಬೇಕೆಂದೂ ಬೆಳಗಾಂವಿ ಕರ್ನಾಟಕ ರಾಜ್ಯದಲ್ಲೇ ಉಳಿಯಬೇಕೆಂದೂ ತೀರ್ಪುನೀಡಿತು. ಈ ಗಡಿ ಹೊಂದಾಣಿಕೆಗಳ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. (ಟಿ.ಟಿ.ಎಸ್.)

**ಕರ್ನಾಟಕ ಗ್ಯಾಸೆಟಿಯರ್ :** ಒಂದು ಪ್ರದೇಶದ ಅಥವಾ ಜಿಲ್ಲೆಯ ನಿಖರವಾದ ಸಮಗ್ರವಾದ ಸ್ಥಳೀಯ ಮಾಹಿತಿ ಒದಗಿಸುವ ಆಕರ ಗ್ರಂಥವೇ ಗ್ಯಾಸೆಟಿಯರ್ (ದೇಶ ವಿಷಯಕೋಶ.)

ಗ್ಯಾಸೆಟಿಯರ್ ಎಂಬುದು ಆಧುನಿಕ ನಮೂನೆಯ ಮಾಹಿತಿಕೋಶ. ಇದೇ ಬಗೆಯ ಕಲ್ಪನೆ ಮತ್ತು ಉದ್ದೇಶಗಳನ್ನೊಳಗೊಂಡ ಗ್ರಂಥಗಳು ಪ್ರಾಚೀನ ಭಾರತೀಯರಲ್ಲಿದ್ದವು. ವಾಯುಪುರಾಣದಲ್ಲಿರುವ ಭೌಗೋಳಿಕ ವಿವರಣೆ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವ ಭೂಮಿ, ಹವಾಮಾನ, ಸಂಪನ್ಮೂಲ ಆಡಳಿತ ವಿಭಾಗಗಳು, ತೆರಿಗೆಗಳ ವಿವರ, ಸಂಸ್ಕೃತದಲ್ಲಿರುವ ವರಾಹಮಿಹಿರನ ಬೃಹತ್ ಸಂಹಿತೆ, ಸೋಮೇಶ್ವರನ ಮಾನಸೋಲ್ಲಾಸ ಮೊದಲಾದ ಕೃತಿಗಳಲ್ಲಿರುವ ಸಂಕ್ಷಿಪ್ತ ಮಾಹಿತಿಗಳೂ ಗ್ಯಾಸೆಟಿಯರ್‌ನಲ್ಲಿ ಕಂಡುಬರುವ ವಿವರಗಳನ್ನು ತಕ್ಕಮಟ್ಟಿಗೆ ಹೋಲುತ್ತವೆ. ಸ್ಥಳ ಪುರಾಣಗಳು ಮತ್ತು ಪಾಶ್ಚಾತ್ಯ ಪ್ರವಾಸಿಗಳು ಒದಗಿಸಿರುವ ಕಥನಗಳು ಇದೇ ಗುಂಪಿಗೆ ಸೇರುತ್ತವೆ. ಅಬುಲ್ ಫಜಲನ ಡಿನ್-ಇ-ಅಕ್ಬರಿ ಗ್ಯಾಸೆಟಿಯರ್ ಮಾದರಿಯ ಗ್ರಂಥ.

ಕೈಗಾರಿಕಾ ಕ್ರಾಂತಿ, ಆಧುನಿಕ ಗ್ಯಾಸೆಟಿಯರ್‌ಗಳ ಪ್ರಕಟಣೆಗೆ ದಾರಿ ಮಾಡಿಕೊಟ್ಟಿತು. ಭಾರತದ ಅತ್ಯಂತ ಹಳೆಯ ಗ್ಯಾಸೆಟಿಯರ್‌ಗಳೆಂದರೆ ಈಸ್ಟ್ ಇಂಡಿಯ ಕಂಪನಿಯವು. ಆಂಗ್ಲರ ಆಡಳಿತದ ಅಂಗವಾಗಿ ಬಂದ ಗ್ಯಾಸೆಟಿಯರ್‌ಗಳು ಪ್ರಾರಂಭದಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಕಟಗೊಂಡವು.

ಆಂಗ್ಲ ಅಧಿಕಾರಿಗಳ ಆಡಳಿತಾನುಕೂಲಕ್ಕಾಗಿ ವಾಲ್ಟರ್ ಹ್ಯಾಮಿಲ್ಟನ್ ಮತ್ತು ಎಡ್ವರ್ಡ್ ಥಾರ್ನಟನ್ 1815ರಲ್ಲಿ ಸಿದ್ಧಪಡಿಸಿದ ಈಸ್ಟ್ ಇಂಡಿಯಾ ಗ್ಯಾಸೆಟಿಯರ್, ಅನಂತರ 1854ರಲ್ಲಿ ಗ್ಯಾಸೆಟಿಯರ್ ಆಫ್ ದಿ ಟೆರಿಟರೀಸ್ ಅಂಡರ್ ದಿ ಈಸ್ಟ್ ಇಂಡಿಯ ಕಂಪನಿ ಎಂಬ ಕೃತಿಗಳು ಭಾರತದಲ್ಲಿ ಬೆಳಕು ಕಂಡ ತೀರಾ ಮೊದಲಿನ ಗ್ಯಾಸೆಟಿಯರ್‌ಗಳು. 1874-84ರ ಅವಧಿಯಲ್ಲಿ ಮುಂಬಯಿ ಪ್ರಾಂತ್ಯದ

ಜಿಲ್ಲೆಗಳ ಬಗ್ಗೆ ಅತ್ಯಂತ ಮಹತ್ವದ ಮಾಹಿತಿಗಳನ್ನೊಳಗೊಂಡ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಜೇಮ್ಸ್ ಕಾಂಪಬೆಲ್ ಪ್ರಕಟಿಸಿದ. ಅನಂತರ ಬಿ.ಎಲ್.ರೈಸ್ ಅವರು 1877-78ರಲ್ಲಿ ಹಳೆಯ ಮೈಸೂರು ರಾಜ್ಯದ ಕೊಡಗು ಸೇರಿದಂತೆ ಮೂರು ಸಂಪುಟಗಳಲ್ಲಿ ಗ್ಯಾಸೆಟಿಯರ್ ಪ್ರಕಟಿಸಿದರು. ಇವುಗಳನ್ನು ಪುನಃ 1907ರಲ್ಲಿ ಪರಿಷ್ಕರಿಸಲಾಯಿತು. 1881ರಲ್ಲಿ ಸರ್ ವಿಲಿಯಂ ಹಂಟರ್ ಅವರ ನೇತೃತ್ವದಲ್ಲಿ ಇಂಪೀರಯಲ್ ಗ್ಯಾಸೆಟಿಯರ್ ಆಫ್ ಇಂಡಿಯುದ ಒಂಬತ್ತು ಸಂಪುಟಗಳು ಪ್ರಕಟಗೊಂಡವು. ಹೈದರಾಬಾದ್ ಸರ್ಕಾರ 1921ರಲ್ಲಿ ಈ ಪ್ರಕಟಣೆಗಳನ್ನು ಬಳಕೆಗೆ ತಂದಿತು.

ಹಳೆಯ ಮೈಸೂರು ರಾಜ್ಯಕ್ಕೆ (ಈಗ ಕರ್ನಾಟಕ) ಸಂಬಂಧಿಸಿದಂತೆ ಸಿ.ಹಯವದನರಾವ್ ಅವರು 20ನೆಯ ಶತಮಾನದ ಮೂರನೆಯ ದಶಕದಲ್ಲಿ ಮೈಸೂರು ಗ್ಯಾಸೆಟಿಯರ್‌ಗಳನ್ನು ಎಂಟು ಭಾಗಗಳಲ್ಲಿ ಹೊರತಂದರು. ಸ್ವಾತಂತ್ರ್ಯಾನಂತರ ಕೇಂದ್ರ ಸರ್ಕಾರ ನೇಮಿಸಿದ ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಪ್ರತಿರಾಜ್ಯವೂ ಗ್ಯಾಸೆಟಿಯರ್ ಪ್ರಕಟಣಾ ಕಾರ್ಯ ಕೈಗೊಂಡವು (1955). ಸಮಿತಿಯ ಮಾರ್ಗ ಸೂಚಿಯಂತೆ ಹಿಂದಿನ ಗ್ಯಾಸೆಟಿಯರ್‌ಗಳ ಪರಿಷ್ಕರಣ ಹಾಗೂ ಪುನರ್ ಮುದ್ರಣ ಕಾರ್ಯ ಪ್ರಾರಂಭವಾಯಿತು. ರಾಜ್ಯಗಳ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಕಾರ್ಯವು ಚಾಲನೆಗೊಂಡಿತು. ರಾಜ್ಯ ಗ್ಯಾಸೆಟಿಯರನ್ನು ಪ್ರಕಟಿಸಿದ ಮೊದಲನೆಯ ರಾಜ್ಯ ಕರ್ನಾಟಕ. ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಿಸುವಲ್ಲಿಯೂ ಪ್ರಥಮ ದಾಖಲೆ ಸ್ಥಾಪಿಸಿದ್ದೂ ಕರ್ನಾಟಕವೇ.

ಕರ್ನಾಟಕ ರಾಜ್ಯ ಸರ್ಕಾರ 1958ರಲ್ಲಿ ಗ್ಯಾಸೆಟಿಯರ್ ಘಟಕ ಪ್ರಾರಂಭಿಸಿತು. ರಾಜ್ಯದ ಆಯಾ ಜಿಲ್ಲೆಗೆ ಸಂಬಂಧಿಸಿದ ಸಮಕಾಲೀನ ಮತ್ತು ಪ್ರಾಚೀನ ವಿಷಯಗಳನ್ನು ಒಳಗೊಂಡಿರುವ ಅತ್ಯಂತ ಮೌಲಿಕ ಹಾಗೂ ಬಹೂಪಯೋಗಿ ಆಕರ ಗ್ರಂಥ ಗ್ಯಾಸೆಟಿಯರ್. ಕರ್ನಾಟಕ ರಾಜ್ಯದ ರಜತ ಮಹೋತ್ಸವದ ಸವಿ ನೆನಪಿಗಾಗಿ 1984ರಲ್ಲಿ ಮೊದಲ ಬಾರಿ ಕನ್ನಡದಲ್ಲಿ ಗ್ಯಾಸೆಟಿಯರ್ ಪ್ರಕಟಿಸಲಾಯಿತು.

ಬಹುಕಾಲ ನಿಲ್ಲಬಹುದಾದ ವಿಶ್ವಕೋಶ ಮಾದರಿಯ ಸರ್ಕಾರದ ಅಧಿಕೃತ ಪ್ರಕಟಣೆಯ ಆಕರ ಗ್ರಂಥಗಳಾದ ಇವು ಒಂದು ಪ್ರದೇಶದ ಸಮಗ್ರ ಕೈಪಿಡಿಯಾಗಿ ಅಧ್ಯಯನಶೀಲರಿಗೆ, ವೃತ್ತಿನಿರತರಿಗೆ, ಆಡಳಿತಗಾರರಿಗೆ ಉಪಯುಕ್ತ ಮಾಹಿತಿ ನೀಡಬಲ್ಲ ಗ್ರಂಥಗಳಾಗಿವೆ.

ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಜನಗಣತಿ ಇಲಾಖೆ ಸರ್ಕಾರದ ಇತರೆ ಇಲಾಖೆಗಳ ವಿವಿಧ ಆಕರ ಗ್ರಂಥಗಳ ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಂದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸುವ ಮಾಹಿತಿಗಳನ್ನು ಆಧರಿಸಿ ಮುಖ್ಯ ಸಂಪಾದಕರ ಮಾರ್ಗದರ್ಶನದಲ್ಲಿ ಸಂಪಾದಕರು ಸಿದ್ಧಪಡಿಸುವ ಗ್ಯಾಸೆಟಿಯರ್‌ಗಳನ್ನು ಪರಿಶೀಲಿಸಲು ಸರ್ಕಾರ ತಜ್ಞರ ಸಮಿತಿ ನೇಮಿಸಿದೆ. ಈ ಸಮಿತಿಯಲ್ಲಿ ಆಯಾ ಜಿಲ್ಲೆಗೆ ಸಂಬಂಧಿಸಿದ ವಿಷಯತಜ್ಞರೂ ಭಾಷಾಕೋವಿದರೂ ಸದಸ್ಯರಾಗಿರುತ್ತಾರೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷರಾಗಿರುತ್ತಾರೆ. ಗ್ಯಾಸೆಟಿಯರ್ ಇಲಾಖೆಯ ಮುಖ್ಯ ಸಂಪಾದಕರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

ಸಂಪಾದಕ ವರ್ಗ, ಅನ್ವೇಷಕರು ಮತ್ತು ಅಗತ್ಯ ಕಛೇರಿ ಸಿಬ್ಬಂದಿಯನ್ನು ಹೊಂದಿರುವ ಈ ಇಲಾಖೆ ಬೆಂಗಳೂರಿನಲ್ಲಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತಕ್ಕೊಳಪಟ್ಟ ಸರ್ಕಾರಿ ಕಛೇರಿ ಇದಾಗಿದೆ.

ಗ್ಯಾಸೆಟಿಯರ್ ಸ್ವರೂಪ ಕೇಂದ್ರ ಸರ್ಕಾರದ ಗ್ಯಾಸೆಟಿಯರ್ ಮಾದರಿಯಲ್ಲಿ ಸ್ಥಳೀಯ ಅಗತ್ಯಕ್ಕೆ ಸೂಕ್ತವೆನಿಸಿದ ಮಾರ್ಪಾಡಿನೊಂದಿಗೆ ರಚನೆಯಾಗುತ್ತದೆ. ಸಾಮಾನ್ಯವಾಗಿ ಪ್ರತಿ ಗ್ಯಾಸೆಟಿಯರ್ ಈ ಕೆಳಕಂಡ 17 ಅಧ್ಯಾಯಗಳಲ್ಲಿ ವಿವಿಧ ಮಾಹಿತಿಗಳ್ನು ನೀಡುವಂತಿರುತ್ತದೆ.

1.ಪ್ರಾಸ್ತಾವಿಕ, 2.ಇತಿಹಾಸ, 3.ಜನತೆ, 4.ಕೃಷಿ ಮತ್ತು ನೀರಾವರಿ, 5.ಕೈಗಾರಿಕೆ, 6.ಬ್ಯಾಂಕಿಂಗ್ ಹಣಕಾಸು ವ್ಯವಹಾರ ಮತ್ತು ವಾಣಿಜ್ಯ, 7.ಸಾರಿಗೆ ಮತ್ತು ಸಂಪರ್ಕ, 8.ಆರ್ಥಿಕ ಪ್ರವೃತ್ತಿಗಳು, 9.ಆಡಳಿತ ಮತ್ತು ರಾಜಸ್ವ, 10.ನ್ಯಾಯಾಡಳಿತ ಮತ್ತು ಶಾಂತಿ ಪಾಲನೆ, 11.ಇತರೆ ಇಲಾಖೆಗಳು, 12.ಸ್ಥಳೀಯ ಸ್ವಯಂ ಸೇವಾ ಆಡಳಿತ ಸಂಸ್ಥೆಗಳು, 13.ಶಿಕ್ಷಣ ಮತ್ತು ಕ್ರೀಡೆ, 14.ಸಾಹಿತ್ಯ ಮತ್ತು ಸಂಸ್ಕೃತಿ, 15.ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು, 16.ಇತರ ಸೇವಾ ಸೌಲಭ್ಯಗಳು 17.ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳಗಳು ಹಾಗೂ ವಿವಿಧ ಜಾತಿಗಳ ಆಚಾರ ವಿಚಾರ ಸಂಪ್ರದಾಯಗಳ ಸಂಕ್ಷಿಪ್ತ ಮಾಹಿತಿಗಳು. ಕಳೆದ 50 ವರ್ಷಗಳ ಹಿಂದಿನ ಮಳೆಯ ಪ್ರಮಾಣ, 100 ವರ್ಷಗಳಿಂದ ಜನಸಂಖ್ಯೆ ಬೆಳೆವಣಿಗೆ, ಜಿಲ್ಲೆಯ ನಕ್ಷೆ, ಗ್ರಾಮಗಳ ಪಟ್ಟಿ ಈ ಮುಂತಾದ ಉಪಯುಕ್ತ ಮಾಹಿತಿಯನ್ನು ಇತಿಹಾಸ ಪೂರ್ವಕಾಲದಿಂದ ಇತ್ತೀಚಿನವರೆಗೆ ಕಾಲಕ್ರಮದ ಅನ್ವಯ ವಿವರದ ವೈವಿಧ್ಯಗಳನ್ನು ಇಲ್ಲಿ ಕಾಣುತ್ತೇವೆ. ಪೂರಕವಾಗಿ ವಿವಿಧ ಅಂಕಿ ಅಂಶಗಳ ಪಟ್ಟಿ, ನಕಾಶೆ, ಚಿತ್ರಗಳು, ಶಬ್ದಸೂಚಿ ಮೊದಲಾದ ಉಪಯುಕ್ತ ಮಾಹಿತಿಗಳು ಗ್ಯಾಸೆಟಿಯರ್‌ನಲ್ಲಿರುತ್ತವೆ.

ಜಿಲ್ಲಾ ಗ್ಯಾಸೆಟಿಯರ್‌ಗಳಲ್ಲದೆ ರಾಜ್ಯಕ್ಕೆ ಅನ್ವಯವಾಗುವ ರಾಜ್ಯ ಗ್ಯಾಸೆಟಿಯರ್ ಸಂಪುಟಗಳನ್ನು (1982-83) ಇಂಗ್ರಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸಲಾಗಿದೆ. ಇಲಾಖೆಯ ವಿಶೇಷ ಪ್ರಕಟಣೆಯಾಗಿ ಸಮಗ್ರ ಕರ್ನಾಟಕವನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಇಂಗ್ಲಿಷ್ ಭಾಷೆಯಲ್ಲಿ ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ ಮತ್ತು ಕನ್ನಡದಲ್ಲಿ ಕರ್ನಾಟಕ ಕೈಪಿಡಿಗಳನ್ನು ಪ್ರಕಟಿಸಲಾಗಿದೆ (1996-97). ಕರ್ನಾಟಕದ ಗ್ಯಾಸೆಟಿಯರ್ ಇಲಾಖೆಯ ಮುಖ್ಯ ಸಂಪಾದಕರಾಗಿ ಬಿ.ಎಲ್.ರೈಸ್, ಹಯವದನರಾವ್, ಬಿ.ಎನ್.ಶ್ರೀಸತ್ಯನ್, ಕೆ.ಅಭಿಶಂಕರ, ಸೂರ್ಯನಾಥ್ ಕಾಮತ್ ಮೊದಲಾದವರು ಸ್ಮರಣೀಯರು. ಟಿ.ಎ.ಪಾರ್ಥಸಾರಥಿ ಈಗಿನ ಮುಖ್ಯ ಸಂಪಾದಕರು.

ಸರ್ಕಾರದ ಆಡಳಿತ ನೀತಿಯಂತೆ ಇ-ಗವರ್ನೆನ್ಸ್ ಯೋಜನೆಯ ಅಡಿಯಲ್ಲಿ ಗ್ಯಾಸೆಟಿಯರ್‌ಗಳ ಇಲಾಖೆಯ ಎಲ್ಲಾ ಪ್ರಕಟಣೆಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಗಣಕೀಕೃತಗೊಳಿಸುವ, ಈವರೆಗೆ ಪ್ರಕಟವಾದ ಗ್ಯಾಸೆಟಿಯರ್‌ಗಳನ್ನು ಸಿ.ಡಿ.ರೂಪದಲ್ಲಿ ಹೊರತರುವ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮಹತ್ತರ ಯೋಜನೆಯನ್ನು ಇಲಾಖೆ ಹಮ್ಮಿಕೊಂಡಿದೆ. (ಎಂ.ವಿ.ಎನ್.)

**ಕರ್ನಾಟಕ ಗ್ರಂಥಮಾಲೆ :** ಹತ್ತೊಂಬತ್ತನೆಯ ಶತಮಾನದ ಕೊನೆಯಭಾಗದಲ್ಲಿ 1893ರ ಹೊತ್ತಿಗೆ ಪ್ರಕಟಣೆ ಪ್ರಾರಂಭಿಸಿ ಇಪ್ಪತ್ತನೆಯ ಶತಮಾನದ ಮೂರನೆಯ ದಶಕದ ಮಧ್ಯದವರೆಗೆ ನಡೆದು ಸುಮಾರು ಮೂರು ದಶಕಗಳ ಕಾಲ ಕನ್ನಡ ಸಾಹಿತ್ಯ ಸೇವೆ ಸಲ್ಲಿಸಿದ ಮೈಸೂರಿನ ಒಂದು ಮಾಸಪತ್ರಿಕೆ. ಹೆಸರೇ ಹೇಳುವಂತೆ ಇದು ಗ್ರಂಥಗಳ ಮಾಲೆ. ಪ್ರತಿಯೊಂದು ಸಂಚಿಕೆಯಲ್ಲೂ ನಾಟಕ, ಕಾದಂಬರಿಗಳ ಒಂದೊಂದು ಭಾಗವನ್ನೂ ಸಾಮಾಜಿಕ ಆಧ್ಯಾತ್ಮಿಕ ಗ್ರಂಥಗಳ ಭಾಗಗಳನ್ನೂ ಪ್ರತಿ ತಿಂಗಳೂ ಕ್ರಮವಾಗಿ ಪ್ರಕಟಿಸಲಾಗುತ್ತಿತ್ತು. ಅಲ್ಲದೆ ಅನೇಕ ಸಂಸ್ಕೃತ ಗ್ರಂಥಗಳ ಅನುವಾದಗಳನ್ನು ಟಿಪ್ಪಣಿಗಳೊಂದಿಗೆ ಅನುಕ್ರಮವಾಗಿ ಕೊಡಲಾಗುತ್ತಿತ್ತು. ಕಾಂದಬರಿಗಳಿಗೂ ಅವಶ್ಯವಾದ ಅಡಿಟಿಪ್ಪಣಿ ಒದಗಿಸುವ ಪದ್ಧತಿ ಇಲ್ಲಿ ಕಂಡುಬರುತ್ತದೆ. ಸಂಚಿಕೆಯಲ್ಲಿ ಆಯಾ ಗ್ರಂಥಗಳ ಕ್ರಮವಾದ ಪುಟಸಂಖ್ಯೆ ಹಾಕುವ ಏರ್ಪಾಡಿತ್ತು. ಬಿಡಿಬಿಡಿಯಾಗಿ ಸಂಚಿಕೆಗಳಲ್ಲಿ ಬಂದ ಗ್ರಂಥ ಭಾಗಗಳನ್ನೆಲ್ಲಾ ಕೂಡಿಸಿ ಒಟ್ಟುಗೊಳಿಸುವುದಕ್ಕೆ ಓದುಗರಿಗೆ ಸೌಲಭ್ಯ ಕಲ್ಪಿಸುವುದು ಈ ಕ್ರಮದ ಉದ್ದೇಶ. ಪ್ರಕಟವಾದ ಲೇಖನ ಮತ್ತು ಗ್ರಂಥಗಳನ್ನು ಗಮನಿಸಿದಾಗ ವಿದ್ವಾಂಸರಿಗೆ ಪ್ರಾಧಾನ್ಯವಿದ್ದುದು ಕಂಡುಬರುತ್ತದೆ. ಪ್ರತಿ ಸಂಚಿಕೆಯಲ್ಲೂ ರಾಯಲ್ ಆಕಾರದ 92 ಪುಟಗಳಿರುತ್ತಿದ್ದವು. ಬಿಡಿ ಸಂಚಿಕೆಯ ಬೆಲೆ ಅಂದಿನ 4 ಆಣೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ.2.80. ಈ ಪತ್ರಿಕೆಯ ಸಂಪಾದಕರು, ಪ್ರಕಾಶಕರು ಮತ್ತು ವ್ಯವಸ್ಥಾಪಕರು ಬಿ.ಸುಬ್ಬರಾವ್. ಮೈಸೂರಿನ ಜಿ.ಟಿ.ಎ.ಪ್ರೆಸ್ಸಿನಲ್ಲಿ ಇದು ಮುದ್ರಣವಾಗುತ್ತಿತ್ತು. ಅನೇಕ ಉತ್ತಮ ಗ್ರಂಥಗಳನ್ನು ಪ್ರಕಟಗೊಳಿಸಿದ ಕೀರ್ತಿ ಈ ಪತ್ರಿಕೆಗೆ ಸೇರಿದೆ. (ಎಸ್.ವಿ.ಪಿ.)

**ಕರ್ನಾಟಕ ಚಿತ್ರಕಲಾ ಪರಿಷತ್ತು :** ಬೆಂಗಳೂರಿನ ಪ್ರತಿಷ್ಠಿತ ಕಲಾ ಶಾಲೆ. ಚಿತ್ರಕಲಾ ಪ್ರದರ್ಶನ, ಪ್ರಚಾರ, ಶಿಕ್ಷಣ, ಕಲಾವಿದರ ಸಂಘಟನೆಯಲ್ಲಿ ತೊಡಗಿರುವ ಈ ಸಂಸ್ಥೆ 1964ರಲ್ಲಿ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ಪೂರ್ಣಪ್ರಮಾಣದಲ್ಲಿ ಆರಂಭವಾಯಿತು. ಇದರ ಫಲವಾಗಿ ಎಂ.ಎಸ್. ನಂಜುಂಡರಾವ್ ಅವರು ಕರ್ನಾಟಕದ ಕಲಾವಿದರಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಒಂದು ಸಂಘಟನೆಯ ಆವಶ್ಯಕತೆಯನ್ನು ಅರಿತು ಅಂದಿನ ಮುಖ್ಯಮಂತ್ರಿ ಕೆ.ಹನುಮಂತಯ್ಯ ಅವರ ಪ್ರೇರಣೆ ಪ್ರೋತ್ಸಾಹದಿಂದ ಎಂ.ಆರ್ಯಮೂರ್ತಿ, ಎಸ್.ಎಸ್.ಕುಕ್ಕೆ ಯವರೊಂದಿಗೆ ಸೇರಿ 1960ರಲ್ಲಿ ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಈ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿ ಆರ್ಯಮೂರ್ತಿಯವರೂ ಕಾರ್ಯದರ್ಶಿಯಾಗಿ ನಂಜುಂಡರಾವ್ ಅವರೂ ಖಚಾಂಚಿಯಾಗಿ ಇನಾಮತಿಯವರೂ ಆಯ್ಕೆಯಾಗಿದ್ದರು. ಕುಕ್ಕೆಯವರು ಉಪಾಧ್ಯಕ್ಷರಾಗಿದ್ದರು.



ಚಿತ್ರಕಲಾ ಪರಿಷತ್ತಿನ ಕಟ್ಟಡ

ಈ ಸಂಸ್ಥೆಯ ಪ್ರಮುಖ ಉದ್ದೇಶಗಳು ಇವು: 1 ಭಾರತೀಯ ಚಿತ್ರಕಲೆಯ ರಕ್ಷಣೆ, ಪ್ರೋತ್ಸಾಹ ಮತ್ತು ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸುವುದು 2 ಭಾರತೀಯ ಚಿತ್ರಕಲೆಯ ರಕ್ಷಣೆಗಾಗಿ ಕಲಾಸಂಸ್ಥೆಗಳು, ಕಲಾಕೃತಿ ಸಂಗ್ರಹಾಲಯ, ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಗಳ ಸಹಕಾರದಿಂದ ಭಾರತ ಮತ್ತು ವಿದೇಶಗಳಲ್ಲಿ ಉಪನ್ಯಾಸ, ಪ್ರಾತ್ಯಕ್ಷಿಕೆ, ವಿಚಾರಸಂಕಿರಣ, ಸಮೂಹಚರ್ಚೆ ಮತ್ತು ಪ್ರದರ್ಶನಗಳನ್ನು ಏರ್ಪಡಿಸುವುದು, ಕಲಾಕ್ಷೇತ್ರದ ನಾಮಾಂಕಿತ ಹಿರಿಯರನ್ನು ಗೌರವಿಸುವುದು. 3 ಕಲೆಗೆ ಸಂಬಂಧಿಸಿದಂತೆ ಶಾಲೆ, ಕಾಲೇಜುಗಳನ್ನು ಬೆಂಗಳೂರು ಮತ್ತು ಕರ್ನಾಟಕದ ಇತರೆಡೆಗಳಲ್ಲಿ ತೆರೆಯುವುದು. 4 ಪುಸ್ತಕ, ನಿಯತಕಾಲಿಕೆ, ಪತ್ರಿಕೆ, ವಿಶ್ವಕೋಶ, ಡೈರೆಕ್ಟರಿ ಮುಂತಾದವುಗಳ ಪ್ರಕಟಣೆ. 5 ಬೆಂಗಳೂರು ಮತ್ತು ಕರ್ನಾಟಕದ ಇತರ ಸ್ಥಳಗಳಲ್ಲಿ ಇಂದಿನ ಮತ್ತು ಹಿಂದಿನ ಹೆಸರಾಂತ ಕಲಾವಿದರ ಚಿತ್ರಗಳ ಪ್ರದರ್ಶನಕ್ಕೆ ಶಾಶ್ವತ ಕಲಾಗ್ಯಾಲರಿಗಳನ್ನು ತೆರೆಯಲು ಪ್ರೋತ್ಸಾಹಿಸುವುದು. 6 ಕರ್ನಾಟಕದಲ್ಲಿರುವ ಕಲಾವಿದರು ಮತ್ತು ಕಲಾವಿದರ ಗುಂಪುಗಳನ್ನು ಪ್ರೋತ್ಸಾಹಿಸುವುದು. ಕಲಾವಿದರ ಕಾಲೋನಿ ನಿರ್ಮಿಸಲು, ಮನೆ ಕಟ್ಟಲು ಸರ್ಕಾರ ಮತ್ತು ಗೃಹಮಂಡಳಿಯವರು ನೀಡುವ ಸವಲತ್ತುಗಳನ್ನೂ ಸಹಾಯವನ್ನೂ ಉಪಯೋಗಿಸಿಕೊಳ್ಳುವುದು.

ಹೀಗೆ ಕಲಾವಿದರ ಸರ್ವಾಂಗೀಣ ಉನ್ನತಿಗೆ ಕಾರಣವಾಗುವ ಉದ್ದೇಶ ಇಟ್ಟುಕೊಂಡ ಈ ಸಂಸ್ಥೆಯ ಕರ್ಣಧಾರತ್ವವನ್ನು ಎಂ. ಎಸ್. ನಂಜುಂಡರಾವ್ ವಹಿಸಿದ್ದರು. ಮೊಟ್ಟಮೊದಲಾಗಿ ಕರ್ನಾಟಕ ಕಲಾವಿದರ ಸಮ್ಮೇಳನ ವಿಧಾನಸೌಧದ ಔತಣ ಸಭಾಂಗಣದಲ್ಲಿ ಏರ್ಪಾಡಾಯಿತು. ಈ ಸಂಸ್ಥೆ 1962ರಿಂದ ಪ್ರತಿವರ್ಷವೂ ಒಂದರಂತೆ ಸಮ್ಮೇಳನಗಳನ್ನೂ ಕಲಾಪ್ರದರ್ಶನಗಳನ್ನೂ ಏರ್ಪಡಿಸಿ ಕರ್ನಾಟಕದ ಕಲೆ ಹಾಗೂ ಕಲಾವಿದರ ಪ್ರಮುಖ ಕೇಂದ್ರವಾಗಿ ಬೆಳೆಯಿತು. ಕರ್ನಾಟಕದ, ಭಾರತದ ಮತ್ತು ವಿದೇಶೀಯ ಕಲಾವಿದರನ್ನು ಸಂಪರ್ಕಿಸಿ ಅವರ ಕಲಾಪ್ರದರ್ಶನ, ಪ್ರಾತ್ಯಕ್ಷಿಕೆ, ಚರ್ಚಾಗೋಷ್ಠಿ, ಉಪನ್ಯಾಸಗಳಿಗೆ ಅವಕಾಶ ದೊರಕಿತು.

ಈ ಕಲಾಶಾಲೆಯಲ್ಲಿ ಈಗ ಪ್ರತಿವರ್ಷ ನೂರು ಕಲಾವಿದರು ರೂಪುಗೊಳ್ಳುತ್ತಾರೆ. ಇಲ್ಲಿ ಸ್ನಾತಕೋತ್ತರ ಮಟ್ಟದ ಶಿಕ್ಷಣ ಸೌಲಭ್ಯವೂ ಇದೆ. ಕಲಾವಿದ್ವಾಂಸರು ಸಂಶೋಧನೆ ಕೈಗೊಳ್ಳಲು, ಸಂಪ್ರಬಂಧ ಮಂಡಿಸಿ ಪಿಎಚ್.ಡಿ. ಪದವಿ ಪಡೆಯಲು ಅವಕಾಶವಿದೆ. ಹೆಸರಾಂತ ಕಲಾವಿದರೂ ಶಿಕ್ಷಕರೂ ಸಮರ್ಥ ಮಾರ್ಗದರ್ಶನ ನೀಡುತ್ತಿದ್ದಾರೆ. ಇದುವರೆಗೆ ಈ ಸಂಸ್ಥೆಯಿಂದ 1200 ಕ್ಕೂ ಹೆಚ್ಚು ಪದವೀಧರರು ಶಿಕ್ಷಣ ಪಡೆದು ದೇಶ ವಿದೇಶಗಳಲ್ಲಿ ಕಲಾ ಸೇವೆಯಲ್ಲಿದ್ದಾರೆ.

ಶಿಲ್ಪಕಲೆ ಮತ್ತು ನಿಸರ್ಗ ಅಧ್ಯಯನಕ್ಕಾಗಿ ಬೆಂಗಳೂರಿನಿಂದ ಅಜಂತಾವರೆಗೆ 50 ಕಲಾವಿದರ ತಂಡದ ಅಧ್ಯಯನ ಪ್ರವಾಸ (1967), ದಕ್ಷಿಣ ಭಾರತದ ಜನಪದ ಕಲೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಮಲ್ಲೇಶ್ವರದ ಮೈದಾನದಲ್ಲಿ ಒಂದು ತಿಂಗಳ ಕಾಲ ನಡೆದ ಜನಪದ ವಸ್ತು - ಕಲಾಪ್ರದರ್ಶನ (1971), ಅಖಿಲಭಾರತ ಮಟ್ಟದ ಜನಪದ ಕಲಾವಿದರನ್ನು ಆಹ್ವಾನಿಸಿ ಜನಪದ ಕಲೆಯ ವಿವಿಧ ಮುಖಗಳ ಅಧ್ಯಯನಕ್ಕೆ ಅವಕಾಶ (1971) - ಇವು ಈ ಸಂಸ್ಥೆಯ ಕೆಲವು ಸಾಧನೆಗಳು. ಸಂಸ್ಥೆಯ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದ ವಿವಿಧ ವಿಭಾಗಗಳ ಅಧ್ಯಯನಕ್ಕೆ ಅವಕಾಶವಿದೆ. ಶಿಲ್ಪಕಲೆಯ ಅಧ್ಯಯನಕ್ಕೂ ಸೌಲಭ್ಯಗಳಿವೆ.

ವಿದೇಶದಿಂದ ಬಂದು ಕರ್ನಾಟಕದಲ್ಲಿ ನೆಲೆಸಿದ್ದ ಪ್ರಸಿದ್ಧ ಕಲಾವಿದ ಸ್ವೆತಾಸ್ಲಾವ್ ರೋರಿಕ್ ಅವರ 117 ಚಿತ್ರಕಲಾ ಕೃತಿಗಳನ್ನು ಪರಿಷತ್ತಿನಲ್ಲಿ ಶಾಶ್ವತವಾಗಿ ಪ್ರದರ್ಶಿಸಲಾಗಿದೆ. ಈ ಅಪರೂಪದ ಕೃತಿಗಳು ಕಲೆಯ ಅಧ್ಯಯನಕ್ಕೆ ಅಪಾರ ಅವಕಾಶ ಒದಗಿಸುತ್ತಿವೆ. ರೋರಿಕ್ ಗ್ಯಾಲರಿಯಲ್ಲಿ ಹಿಮಾಲಯದ ವೈವಿಧ್ಯಮಯ ಚಿತ್ರಗಳಿವೆ. ರೋರಿಕ್ ಅವರ ಹೆಸರಿನಲ್ಲಿ ಆರಂಭಿಸಲಾಗಿರುವ ಸಂಸ್ಥೆಯಲ್ಲಿ (ರೋರಿಕ್ ಇನ್‌ಸ್ಟಿಟ್ಯೂಟ್ ಆಫ್ ಫೈನ್ ಆರ್ಟ್ಸ್) ಚಿತ್ರಕಲೆಯ ಮೂಲಭೂತ ಅಧ್ಯಯನದ ಸೌಲಭ್ಯವೂ ಉಂಟು.

ಎಚ್.ಕೆ.ಕೆಜ್ರಿವಾಲಾ ಎಂಬುವರು ತಮ್ಮ ತಂದೆ ಸಂಗ್ರಹಿಸಿದ ಅಮೂಲ್ಯ ಕಲಾಕೃತಿಗಳೊಂದಿಗೆ ತಾವು ಸಂಗ್ರಹಿಸಿದ ಕಲಾಕೃತಿಗಳನ್ನು ಪರಿಷತ್ತಿನ ಎಚ್.ಕೆ.ಕೆಜ್ರಿವಾಲಾ ಶಾಶ್ವತ ಗ್ಯಾಲರಿಯಲ್ಲಿ ಪ್ರದರ್ಶನ ಕ್ಕಿಡಲಾಗಿದೆ. ಇದರಲ್ಲಿ 350 ಕಲಾಕೃತಿಗಳಿವೆ. ಕವಿ ರವೀಂದ್ರನಾಥ ಠಾಕೂರರ ಚಿತ್ರಗಳಿಂದ ಇತ್ತೀಚಿನ ಭಾರತೀಯ ಕಲಾವಿದರವರೆಗಿನ ಹಲವಾರು ಅಮೂಲ್ಯ ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಕಲಾಸಾಧನೆಯಲ್ಲಿ ತೊಡಗಿದ ವಿದ್ಯಾರ್ಥಿಗಳಿಗೆ 1998 ರಿಂದ ಎಚ್.ಕೆ.ಕೆಜ್ರಿವಾಲಾ ಪ್ರಶಸ್ತಿ ನೀಡಲಾಗುತ್ತಿದೆ. ಇದಲ್ಲದೆ ಅಂತಾರಾಷ್ಟ್ರೀಯ ಗ್ರಾಫಿಕ್ ಕಲಾವಿದ ಕೃಷ್ಣಾರೆಡ್ಡಿ (ನ್ಯೂಯಾರ್ಕ್) ಅವರ ಗ್ರಾಫಿಕ್ ಚಿತ್ರಗಳೂ ಎಸ್.ಎಸ್.ಕುಕ್ಕೆಯವರ ಕಲಾಕೃತಿಗಳೂ ಇಲ್ಲಿ ಪ್ರದರ್ಶಿತವಾಗಿವೆ. ಮೈಸೂರಿನ ಸಾಂಪ್ರದಾಯಿಕ ಚಿತ್ರಕಲೆಯ ಕೃತಿಗಳನ್ನು ವೈ.ಸುಬ್ರಹ್ಮಣ್ಯರಾಜು ಅವರ ಮಾರ್ಗದರ್ಶನದಲ್ಲಿ ಪುನರುಜ್ಜೀವನಗೊಳಿಸಿ ಪ್ರದರ್ಶನಕ್ಕಿಡಲಾಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಹಿಂದೆ ಪ್ರಚಲಿತವಿದ್ದ ತೊಗಲುಗೊಂಬೆಗಳನ್ನು ಸಂಗ್ರಹಿಸಿ, ರಕ್ಷಿಸಿ ಪ್ರದರ್ಶಿಸಲಾಗುತ್ತಿದೆ. ಸಮಕಾಲೀನ ಶಿಲ್ಪಕಲೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಮೂರು ಗ್ಯಾಲರಿಗಳಲ್ಲಿ ಖಾಯಂ ಶಿಲ್ಪಕಲಾ ಪ್ರದರ್ಶನ ಏರ್ಪಡಿಸಿದೆ. ಕರ್ನಾಟಕ, ಭಾರತೀಯ, ವಿದೇಶೀಯ ಕಲಾವಿದರ ಚಿತ್ರಗಳನ್ನು ಪ್ರದರ್ಶಿಸಲು ನಿರ್ದಿಷ್ಟ ಕಾಲಾವಧಿಯ ಪ್ರದರ್ಶನಕ್ಕೂ ಗ್ಯಾಲರಿಗಳ ಸೌಲಭ್ಯವಿದೆ. ಇಲ್ಲಿ ಪ್ರತಿನಿತ್ಯ ಬೇರೆ ಬೇರೆ ಕಲಾವಿದರ ಕಲಾ ಪ್ರದರ್ಶನಗಳು ನಡೆಯುತ್ತಲೇ ಇರುತ್ತವೆ.

ಇಲ್ಲಿ ಚಿತ್ರಕಲೆ-ಶಿಲ್ಪ-ಇತಿಹಾಸಗಳಿಗೆ ಸಂಬಂಧಿಸಿದ ಹತ್ತುಸಾವಿರಕ್ಕೂ ಹೆಚ್ಚು ಅಮೂಲ್ಯ ಪುಸ್ತಕಗಳ ಸಂಗ್ರಹವುಂಟು. ಭಾರತದ ಮತ್ತು ವಿದೇಶದ ತಜ್ಞರು ಬರೆದ ಅಮೂಲ್ಯ ಗ್ರಂಥ ಭಂಡಾರ ವಿದ್ಯಾರ್ಥಿಗಳ ಸಂಶೋಧನೆ, ಅಧ್ಯಯನಗಳಿಗೆ ಉಪಯುಕ್ತವೆನಿಸಿದೆ.

ಚಿತ್ರಕಲಾ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ ವಿಭಾಗ ಲಘು ಅವಧಿ ಹಾಗೂ ದೀರ್ಘ ಅವಧಿಗಳ ಸಂಶೋಧನ ಪರಿಯೋಜನೆಗಳನ್ನು ಆರಂಭಿಸಿ ಉಪನ್ಯಾಸ, ಚರ್ಚಾಗೋಷ್ಠಿ, ಕಾರ್ಯಾಗಾರ, ವಿಚಾರಸಂಕಿರಣಗಳ ಮೂಲಕ ಹೊಸ ಹೊಸ ಸಂಶೋಧನೆಗೆ ಪ್ರೋತ್ಸಾಹ

ನೀಡುತ್ತಿದೆ. ತುಂಬ ಹಳೆಯ, ಮಾಸಿ ಹೋದ, ಬಣ್ಣಗೆಟ್ಟ ಕಲಾಕೃತಿಗಳನ್ನು ಪುನರುಜ್ಜೀವನಗೊಳಿಸುವ ವಿಭಾಗವೂ ಇಲ್ಲುಂಟು.

ತರುಣ ಕಲಾವಿದರಿಂದ ಹಿರಿಯ ಕಲಾವಿದರವರೆಗೆ ಎಲ್ಲರನ್ನೂ ಪ್ರೋತ್ಸಾಹಿಸಲು, ಅವರ ಕಲಾಪ್ರದರ್ಶನಕ್ಕೆ ಅನುವು ಮಾಡಿಕೊಡಲು ಇಲ್ಲಿ ಐದು ಗ್ಯಾಲರಿಗಳನ್ನು ಕಾದಿರಿಸಲಾಗಿದೆ. ಪರಿಷತ್ತಿನ ಖಾಯಂ ಪ್ರದರ್ಶನ ಗ್ಯಾಲರಿಯಲ್ಲಿ ಪ್ರಸಿದ್ಧ ಚಿತ್ರಕಾರರಾದ ಜೆಮಿನಿ ರಾಯ್, ಅವನೀಂದ್ರನಾಥ ಠಾಕೂರ್, ಗಣನೇಂದ್ರ ಠಾಕೂರ್, ನಂದಲಾಲಬೋಸ್, ರಾಯ್ ಚೌಧರಿ, ಅಬ್ದುಲ್ ರೆಹಮಾನ್, ಕೆ.ಕೆ.ಹೆಬ್ಬಾರ್, ಚುಗತ್ತಾಯ, ಅಮೃತಾ ಶೇರ್‌ಗಿಲ್, ಜಿ.ಎಸ್.ಶೆಣೈ, ಖಂಡೇರಾವ್, ರಮೇಶ್‌ರಾವ್, ಎಂ.ಎಸ್.ಚಂದ್ರಶೇಖರ್, ಸುಬ್ರಹ್ಮಣ್ಯರಾಜು, ಕೇಶವಯ್ಯ, ಎಸ್.ಎನ್.ಸ್ವಾಮಿ, ಪಿ.ಆರ್.ತಿಪ್ಪೇಸ್ವಾಮಿ ಮೊದಲಾದವರ ಚಿತ್ರಗಳಿವೆ.

ಮುಂದಿನ ಯೋಜನೆಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕಲಾವಿದರ ಚಿತ್ರಪ್ರದರ್ಶನದ ಗ್ಯಾಲರಿಗಳನ್ನೂ ಕರ್ನಾಟಕದವರದೇ ಒಂದು ಗ್ಯಾಲರಿಯನ್ನೂ ನಿರ್ಮಿಸುವ ವಿಚಾರವಿದೆ. ಅದಕ್ಕಾಗಿ ಚಿತ್ರಗಳ ಸಂಗ್ರಹಕಾರ್ಯ ನಡೆದಿದೆ. ಪರಿಷತ್ತಿನ ಕಟ್ಟಡ 1988ರಲ್ಲಿ ಕಟ್ಟಿ ಮುಗಿದ ಅನಂತರ ಅದರ ಎರಡನೆಯ ಹಂತದ ಕಟ್ಟಡ ವಿಸ್ತರಣೆಯ ಕಾರ್ಯ ಮುಗಿದು ಮೂರನೆಯ ಹಂತದ ಕಾರ್ಯ ಮುಂದುವರಿದಿದೆ. ಯಲಹಂಕದಲ್ಲಿ ಇಪ್ಪತ್ತು ಎಕರೆ ಸ್ಥಳದಲ್ಲಿ ಲಲಿತಕಲೆಗಳ ಕಾಲೇಜನ್ನೂ ವಿದ್ಯಾರ್ಥಿನಿಲಯವನ್ನೂ ಅಧ್ಯಾಪಕರಿಗಾಗಿ ವಸತಿಗೃಹಗಳನ್ನೂ ನಿರ್ಮಿಸುವ ಯೋಜನೆಯಿದೆ. ಪರಿಷತ್ತಿನಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ. ಇವುಗಳ ನೆರವಿನಿಂದ ಗ್ರಾಫಿಕ್ ವಿಭಾಗ ಬೆಳೆಸಬೇಕೆಂಬ ಉದ್ದೇಶವಿದೆ.

ಪ್ರಸಿದ್ಧ ಕಲಾವಿದರಾದ ಕೆ.ಕೆ.ಹೆಬ್ಬಾರ್, ರೋರಿಕ್, ಶಂಭು ಚೌಧರಿ, ಬಿ.ಸಿ.ಸನ್ಯಾಲ, ಕೃಷ್ಣಾರೆಡ್ಡಿ, ರುಮಾಲೆ ಚನ್ನಬಸಪ್ಪ, ಎಸ್.ಎಸ್.ಸ್ವಾಮಿ, ಎಂ.ವೀರಪ್ಪ, ನಾರಾಯಣ ಸಂಗಮ, ಎಂ.ಎ.ಚೆಟ್ಟಿ, ಟಿ.ಪಿ.ಅಕ್ಕಿ, ಶಂಕರರಾವ್ ಆಳಂದಕರ್, ಕೆ.ಸಿ.ಎನ್. ಪಣಿಕ್ಕರ್, ಎಸ್.ಧನಪಾಲ, ಕೊರಂಚಿ, ಕುಟ್ಟಿ, ನಾಡಕರ್ಣಿ (ಮುಂಬಯಿ), ಆರ್.ಸಂತೋಷ್ (ಜಮ್ಮು), ಬಿಕಾಶ ಭಟ್ಟಾಚಾರ್ಯ (ಕೋಲ್ಕತ), ಪಿ.ಟಿ.ರೆಡ್ಡಿ (ಆಂಧ್ರಪ್ರದೇಶ) ಮೊದಲಾದವರು ಈ ಸಂಸ್ಥೆಯ ಬೆಳೆವಣಿಗೆಗೆ ಸಹಕಾರ ನೀಡಿದ್ದಾರೆ.

1975ರಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್ ಆರಂಭವಾಯಿತು. ಇದು ಪರಿಷತ್ತಿಗೆ ಸಂಬಂಧಿಸಿದ ಆಸ್ತಿ ಪಾಸ್ತಿಗಳ ರಕ್ಷಣೆ ಹಾಗೂ ಬೆಳೆವಣಿಗೆಯ ಕಾರ್ಯವನ್ನು ನೋಡಿಕೊಳ್ಳುತ್ತಿದೆ. (ಎಸ್.ಎಂ.ಕೆ.)

**ಕರ್ನಾಟಕದಲ್ಲಿ ವೈದ್ಯ** (ಆಯುರ್ವೇದ) : ಕರ್ನಾಟಕದ ವೈದ್ಯಕೀಯ ಇತಿಹಾಸವನ್ನು ಮೂರು ಯುಗಗಳಾಗಿ ವಿಂಗಡಿಸಬಹುದು. 1 ಆದಿಯುಗ ಕ್ರಿ.ಪೂ.260. - ಕ್ರಿ.ಶ.1300, 2 ಮಧ್ಯಯುಗ 1300-1800, 3 ಆಧುನಿಕ ಯುಗ 1800 ರಿಂದೀಚೆಗೆ.

**ಆದಿಯುಗ :** ಕರ್ನಾಟಕದ ಉತ್ತರ ಭಾಗ ಅಶೋಕನ ರಾಜ್ಯದಲ್ಲಿದ್ದುದರಿಂದ ಆತ ಸ್ಥಾಪಿಸಿದ ಮನುಷ್ಯರ ಮತ್ತು ಪಶುಗಳ ಔಷಧಾಲಯಗಳು ಈ ಪ್ರದೇಶದಲ್ಲಿ ಇದ್ದಿರಬಹುದೆಂದು ಊಹಿಸಿ ಕರ್ನಾಟಕದ ವೈದ್ಯ ಇತಿಹಾಸವನ್ನು ಕ್ರಿ.ಪೂ.260 ರಿಂದ ಪ್ರಾರಂಭಿಸ ಬಹುದು. ರಸಾಯನ ಮತ್ತು ಲೋಹಶಾಸ್ತ್ರಗಳ ಪಿತಾಮಹನೆಂಬ ಗೌರವಕ್ಕೆ ಪಾತ್ರನಾಗಿದ್ದ, ಶಾತವಾಹನರ ಕಾಲದ ಬೌದ್ಧಭಿಕ್ಷು ನಾಗಾರ್ಜುನ ಶ್ರೀಶೈಲ ಪರ್ವತದಲ್ಲಿ ವಾಸವಾಗಿದ್ದು ರಸಾಯನ ಪ್ರಯೋಗಗಳಲ್ಲಿ ತೊಡಗಿದ್ದ. ರಸರತ್ನಾಕರ, ಲೋಹಶಾಸ್ತ್ರ ಮುಂತಾದ ವೈದ್ಯ ಗ್ರಂಥಗಳನ್ನು ಬರೆದ ಈತನನ್ನು ಕರ್ನಾಟಕದ ಪ್ರಥಮ ವೈದ್ಯವ್ಯಕ್ತಿ ಎನ್ನಬಹುದಾಗಿದೆ. ಶಾತವಾಹನರ ಅನಂತರ ರಾಜ್ಯವಾಳಿದವರಲ್ಲಿ ಗಂಗರು ಜೈನಧರ್ಮಾವಲಂಬಿ ಗಳಾಗಿದ್ದರು. ಗಂಗರಸ ದುರ್ವಿನೀತನ ಗುರುವಾಗಿದ್ದ ದಿಗಂಬರ ಜೈನಯತಿ ಪೂಜ್ಯಪಾದ ವೈದ್ಯಶಾಸ್ತ್ರದಲ್ಲಿಯೂ ಪಂಡಿತನಾಗಿದ್ದ. ಇವನು ಬರೆದ ಕಲ್ಯಾಣಕಾರಕ ಎಂಬ ಸಂಸ್ಕೃತ ವೈದ್ಯಗ್ರಂಥವನ್ನು ಮುಂದಿನ ಎಲ್ಲ ವಿದ್ವಾಂಸರೂ ಗೌರವದಿಂದ ಸ್ಮರಿಸಿದ್ದಾರೆ. ಈತನ ಸೋದರಳಿಯ ಸಿದ್ಧ ನಾಗಾರ್ಜುನ (ಸು.690) ರಸಾಯನ ಮತ್ತು ಲೋಹವಿದ್ಯೆಗಳಲ್ಲಿ ಖ್ಯಾತಿಯನ್ನು ಪಡೆದಿದ್ದ. ರಸೇಂದ್ರ ಮಂಗಳ, ಕಕ್ಷಪುಟತಂತ್ರ, ನಾಗಾರ್ಜುನತಂತ್ರ ಮುಂತಾದವು ಈತನ ಕೃತಿಗಳು. ಗಂಗರಾಜ ಶ್ರೀಪುರುಷ (ಸು.775) ಗಜಶಾಸ್ತ್ರವನ್ನೂ ಆತನ ಮಗನಾದ ಸೈಗೊಟ್ಟ ಶಿವಮಾರ ಗಜಾಷ್ಟಕವನ್ನೂ ಬರೆದಿದ್ದಾರೆ (800). ಶಿವಮಾರನ ಗಜಾಷ್ಟಕ ಕನ್ನಡಭಾಷೆಯ ಪ್ರಥಮಶಾಸ್ತ್ರಗ್ರಂಥ. ರಾಷ್ಟ್ರಕೂಟ ದೊರೆ ನೃಪತುಂಗನ (814-78) ಆಸ್ಥಾನದಲ್ಲಿದ್ದ ಉಗ್ರಾದಿತ್ಯನೆಂಬ ಜೈನವೈದ್ಯ ಕಲ್ಯಾಣಕಾರಕ ಎಂಬ ಗ್ರಂಥವನ್ನು ಬರೆದಿದ್ದಾನೆ. ಜೈನಧರ್ಮದ ನಿಷ್ಠೆಯನ್ನು ಪಾಲಿಸಿರುವ ಈ ಗ್ರಂಥದಲ್ಲಿ ಮದ್ಯ, ಮಾಂಸ ಮತ್ತು ಮಧುಗಳನ್ನು ಔಷಧಾರ್ಥವಾಗಿಯೂ ವರ್ಜಿಸಿರುವುದು ಒಂದು ವೈಶಿಷ್ಟ್ಯ. ಚಾಳುಕ್ಯ ದೊರೆ ಇಮ್ಮಡಿ ಜಯಸಿಂಹನ (1015-44) ಆಸ್ಥಾನದಲ್ಲಿದ್ದ 2ನೆಯ ಚಾವುಂಡರಾಯ ತನ್ನ ಕನ್ನಡ ಗ್ರಂಥವಾದ ಲೋಕೋಪಕಾರದಲ್ಲಿ ಆಯುರ್ವೇದ ಶಾಸ್ತ್ರವನ್ನು ವಿಸ್ತಾರವಾಗಿ ವಿವರಿಸಿದ್ದಾನೆ.

ಚಂದ್ರರಾಜನ (1079) ಮದನತಿಲಕ, ಕೀರ್ತಿವರ್ಮನ (1125) ಗೋವೈದ್ಯ, ಚಾಳುಕ್ಯ ಚಕ್ರವರ್ತಿ ಸೋಮೇಶ್ವರನ (1126-38) ಮಾನಸೋಲ್ಲಾಸದಲ್ಲಿನ ಆಯುರ್ವೇದದ ವಿವರಣೆ ಮತ್ತು ಜೈನವೈದ್ಯ ಜಗದ್ದಳ ಸೋಮನಾಥನ (1150) ಕರ್ಣಾಟಕ ಕಲ್ಯಾಣಕಾರಕ, ದೇವೇಂದ್ರ ಮುನಿಯ (1200) ಬಾಲಗ್ರಹ ಚಿಕಿತ್ಸೆ, ಕೇಶವ ಪಂಡಿತನ (1240) ಸಿದ್ಧಮಂತ್ರ, ಬೋಪದೇವನ (1263) ಸಿದ್ಧಮಂತ್ರ ಪ್ರಕಾಶ, ವೈದ್ಯಶತಕ, ಹೃದಯ ದೀಪಿಕ ನಿಘಂಟು, ಯಾದವರಾಜ ಮಹಾದೇವನ ಮುಖ್ಯ ಮಂತ್ರಿಯಾಗಿದ್ದ ಹೇಮಾದ್ರಿಯ (1260-1309) ಆಯುರ್ವೇದ ರಸಾಯನ ಎಂಬ ಅಷ್ಟಾಂಗ ಹೃದಯದ ಮೇಲಿನ ವ್ಯಾಖ್ಯಾನ, ಅಮೃತನಂದಿಯ ಅಕಾರಾದಿ ನಿಘಂಟು - ಇವು ಈ ಯುಗದ ಕೆಲವು ಮುಖ್ಯ ವೈದ್ಯಗ್ರಂಥಗಳು.

ಆಯುರ್ವೇದದ ಅಧ್ಯಯನ ಅಧ್ಯಾಪನಗಳು ದೇವಾಲಯಗಳಲ್ಲಿ ಇರುತ್ತಿದ್ದ ಪಾಠಶಾಲೆಗಳಲ್ಲಿ ನಡೆಯುತ್ತಿದ್ದುವು. ಅವುಗಳ ನಿರ್ವಹಣೆಗಾಗಿ ರಾಜರು ಭೂಮಿ ಮತ್ತು ಗ್ರಾಮಗಳನ್ನು ದೇವಾಲಯಗಳ ಹೆಸರಿನಲ್ಲಿ ದಾನ ಮಾಡುತ್ತಿದ್ದರು. ಶಾಸ್ತ್ರಜ್ಞರಾದ ವೈದ್ಯರನ್ನು ರಾಜಾಸ್ಥಾನದಲ್ಲಿ ನೇಮಕ ಮಾಡಲಾಗುತ್ತಿತ್ತು. ವೈದ್ಯರು ತಾವೇ ಗಿಡ ಮೂಲಿಕೆಗಳಿಂದ ಔಷಧಗಳನ್ನು ಬೇಕಾದಾಗ ತಯಾರಿಸಿ ಉಚಿತವಾಗಿ ರೋಗಿಗಳಿಗೆ ಕೊಡುತ್ತಿದ್ದರು. ಕಾಷ್ಠೌಷಧಿಗಳು ಅದರಲ್ಲೂ ಏಕಮೂಲಿಕಾ ಪ್ರಯೋಗಗಳೇ ಪ್ರಾಮುಖ್ಯ ಪಡೆದಿದ್ದುವು. ಕೆಲವು ದೇವಾಲಯಗಳಲ್ಲಿ ಔಷಧಿಗಳನ್ನು ಜನರಿಗೆ ಉಚಿತವಾಗಿ ನೀಡಲಾಗುತ್ತಿತ್ತು. ವೈದ್ಯರಿಗೆ ಸಮಾಜದಲ್ಲಿ ಗೌರವಾದರಗಳು ದೊರಕುತ್ತಿದ್ದುವು. ವಸ್ತುರೂಪವಾದ ಸಂಭಾವನೆಯೇ ಹೆಚ್ಚಾಗಿದ್ದರೂ ಕೆಲವು ವೇಳೆ ಧನರೂಪ ಸಂಭಾವನೆಯೂ ವೈದ್ಯರಿಗೆ ದೊರಕುತ್ತಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಶಾಸ್ತ್ರಜ್ಞರಿಗಿಂತ ಅರ್ಚಕರು, ಜ್ಯೋತಿಷ್ಕರು, ವೈದ್ಯವೃತ್ತಿಯನ್ನು ನಡೆಸುತ್ತಿದ್ದರು.

**ಮಧ್ಯಯುಗ :** ವಿಜಯನಗರ ಸಾಮ್ರಾಜ್ಯದ ದಕ್ಷ ಆಡಳಿತ ಈ ಯುಗದ ಪ್ರಮುಖ ಘಟನೆ. ಈ ಅರಸರು ಹಿಂದೂಧರ್ಮದ ಪುನರುಜ್ಜೀವನಕ್ಕಾಗಿ ಮಾಡಿದ ಕಾರ್ಯಗಳಿಂದ ಪ್ರಾಚೀನ ವಿದ್ಯೆಗಳು ಪುನರುಜ್ಜೀವನಗೊಂಡವು. ವಿದ್ಯಾರಣ್ಯರ ತತ್ತ್ವಶಾಸ್ತ್ರ ಗ್ರಂಥಗಳು, ಸಾಯಣರ ಚತುರ್ವೇದ ಭಾಷ್ಯಗಳು ಸಮಾಜದಲ್ಲಿ ಹಿಂದುಧರ್ಮವನ್ನು ಸ್ಥಿರಗೊಳಿಸಿದುವು. ಪರಧರ್ಮ ಸಹಿಷ್ಣುಗಳಾಗಿದ್ದ ರಾಯರು ಇತರ ಧರ್ಮಗಳನ್ನೂ ಪೋಷಿಸಿದರು. ವಿಜಯನಗರದ ಅಧಿರಾಜನಾಗಿದ್ದ ಮುಗಳೀಪುರದ ಅರಸ ಮಂಗರಾಜ (1360) ವಿಷಚಿಕಿತ್ಸೆಯಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ. ಈತನ ಖಗೇಂದ್ರ ಮಣಿದರ್ಪಣ ಕನ್ನಡ ಶಾಸ್ತ್ರ ಸಾಹಿತ್ಯದಲ್ಲಿ ಶ್ರೇಷ್ಠ ಗ್ರಂಥ. ಒಂದನೆಯ ಬುಕ್ಕರಾಯನ (1356-76) ಆಸ್ಥಾನ ವೈದ್ಯ ವಿಷ್ಣುದೇವನ ರಸರಾಜಲಕ್ಷ್ಮಿ, ಇಮ್ಮಡಿ ಬುಕ್ಕರಾಯನ (1404-24) ಆಸ್ಥಾನ ವೈದ್ಯ ಲಕ್ಷ್ಮಣಪಂಡಿತನ ವೈದ್ಯರಾಜ ವಲ್ಲಭ, ಅಭಿನವ ಚಂದ್ರನ (1400) ಅಶ್ವಶಾಸ್ತ್ರ, ವಲ್ಲಭೇಂದ್ರನ ವೈದ್ಯ ಚಿಂತಾಮಣಿ, ಕಲ್ಲರಸನ (1450) ಜನವಶ್ಯವೆಂಬ ಕಾಮಶಾಸ್ತ್ರ ಗ್ರಂಥ, ಕವಿಲಿಂಗನ (1490) ಕಾಮಶಾಸ್ತ್ರದ ಪದಗಳು, ದಾಮೋದರ ಪಂಡಿತನ ಆರೋಗ್ಯ ಚಿಂತಾಮಣಿ, ಭಟ್ಟನರಹರಿಯ ವಾಗ್ಭಟ ಮಂಡನ,

ಶ್ರೀಧರದೇವನ (1500) ವೈದ್ಯಾಮೃತ, ಬಾಚರಸನ (1500) ಅಶ್ವವೈದ್ಯ, ಮೂರನೆಯ ಮಂಗರಸನ (1508) ಸೂಪಶಾಸ್ತ್ರ, ಸಾಳ್ವನ (1550) ವೈದ್ಯ ಸಾಂಗತ್ಯ, ರಘುನಾಥ ಸೂರಿಯ ಭೋಜನ ಕುತೂಹಲ, ಯಳಂದೂರು ಚನ್ನರಾಜನ (1570) ವೈದ್ಯಸಾರ ಸಂಗ್ರಹ, ವೀರಭದ್ರರಾಜನ (1600) ಹಸ್ತ್ಯಾಯುರ್ವೇದ ಟೀಕೆ, ರಾಮಚಂದ್ರ ಪಂಡಿತನ (1625) ಅಶ್ವಶಾಸ್ತ್ರ, ಪದ್ಮಣ ಪಂಡಿತನ (1627) ಹಯಸಾರ ಸಮುಚ್ಚಯ. ಬಿಜಾಪುರದ ಸುಲ್ತಾನ್ ಇಮ್ಮಡಿ ಆದಿಲ್‌ಷಾನ ಆಸ್ಥಾನದಲ್ಲಿದ್ದ ಲೋಲಂಬರಾಜನ ಸದ್ವೈದ್ಯ ಜೀವನ ಮತ್ತು ವೈದ್ಯಾವತಂಸಗಳು, ಕೊಟ್ಟೂರು ಬಸವರಾಜನ (1670) ಶಿವತತ್ತ್ವ ರತ್ನಾಕರದಲ್ಲಿ ಆಯುರ್ವೇದದ ವಿವರಣೆ, ಶ್ರೀಕಂಠ ನಂದಿಯ ಪರ್ಯಾಯ ಮಂಜರಿ, ಶ್ರೀಕಂಠ ಪಂಡಿತನ ವೈದ್ಯಸಾರ ಸಂಗ್ರಹ, ಶ್ರೀಪಂಡಿತನ ಯೋಗಶತಕ, ಕೃಷ್ಣಾರ್ಯನ ಸಿದ್ಧಯೋಗ ಸಮುಚ್ಚಯ, ಸಲಾದು ಮಾಧವಾಚಾರ್ಯನ ಚಿಕಿತ್ಸಾಸಾರ ಸಂಗ್ರಹ, ಗಂಗಾಧರನ ಭೇಷಜ ಕಲ್ಪ, ಕಳಲೆಯ ವೀರರಾಜನ (1720) ಸಕಲ ವೈದ್ಯ ಸಂಹಿತಾ ಸಾರಾರ್ಣವ, ನಂಜರಾಜನ (1749) ವೈದ್ಯಸಾರಸಂಗ್ರಹ, ತಿಮ್ಮರಾಜಗೌಡನ (1750) ಸ್ತ್ರೀವೈದ್ಯ, ಇಮ್ಮಡಿ ಕೃಷ್ಣರಾಜ ಒಡೆಯನ (1759) ಬಾಹಟ ಟೀಕೆ, ಲಕ್ಷ್ಮಣಪಂಡಿತನ (1775) ಅಕಾರಾದಿ ನಿಘಂಟು ಈ ಯುಗದ ಮುಖ್ಯ ವೈದ್ಯಗ್ರಂಥಗಳು.

ಹದಿನೆಂಟನೆಯ ಶತಮಾನದವರೆಗೆ ದಕ್ಷಿಣ ಭಾರತದಲ್ಲಿ ಏಕೈಕ ವೈದ್ಯ ಪದ್ಧತಿಯಾಗಿದ್ದ ಆಯುರ್ವೇದಕ್ಕೆ ಪ್ರತಿಸ್ಪರ್ಧಿಯಾಗಿ ಯುನಾನಿ ಪದ್ಧತಿ ಹದಿನಾರನೆಯ ಶತಮಾನದಲ್ಲೂ ಐರೋಪ್ಯ ಪದ್ಧತಿ ಹದಿನೇಳನೆಯ ಶತಮಾನದಲ್ಲೂ ಕ್ರಮೇಣ ನೆಲೆಯೂರಿದುವು. ಮುಸ್ಲಿಂ ಸುಲ್ತಾನರ ಕಾಲದಲ್ಲಿ ಯುನಾನಿ ಹಕೀಮರು ರಾಜಾಸ್ಥಾನ ಮತ್ತು ಸಮಾಜದಲ್ಲಿ ವೈದ್ಯವೃತ್ತಿಯನ್ನಾರಂಭಿಸಿದರು. ಹಿಂದುಶಾಸ್ತ್ರಜ್ಞರು ಮುಸ್ಲಿಂ ದಾಳಿಕಾರರ ಹೆದರಿಕೆಯಿಂದ ತಮ್ಮಲ್ಲಿದ್ದ ಗ್ರಂಥಗಳನ್ನು ತೆಗೆದುಕೊಂಡು ಗ್ರಾಮಾಂತರ ಪ್ರದೇಶಗಳಿಗೆ ವಲಸೆ ಹೋದರು. ತತ್ಪರಿಣಾಮವಾಗಿ ಶಾಸ್ತ್ರೀಯ ಅಧ್ಯಯನವಿಲ್ಲದೆ ಖೋಟಾವೈದ್ಯರು ಸಮಾಜದಲ್ಲಿ ಹೆಚ್ಚಿ ಜನರ ನಿಂದೆಗೆ ಗುರಿಯಾದರು. ಸುಲಭವಾದ ಮೂಲಿಕಾವೈದ್ಯಕ್ಕೆ ಬದಲಾಗಿ ರಸಾಯನ ಪ್ರಯೋಗಗಳಿಂದ ಔಷಧಿಗಳನ್ನು ತಯಾರಿಸುವ ಕ್ರಮ ಹೆಚ್ಚು ರೂಢಿಗೆ ಬಂದುದು ಈ ಯುಗದ ಮತ್ತೊಂದು ಪ್ರಮುಖ ಘಟನೆ.

**ಆಧುನಿಕ ಯುಗ :** ಬ್ರಿಟಿಷ್ ಆಡಳಿತ ಭಾರತದಾದ್ಯಂತ ಕ್ರಮ ಕ್ರಮವಾಗಿ ಹರಡಿದ ಪರಿಣಾಮವಾಗಿ ಯುರೋಪಿನ ವೈದ್ಯಪದ್ಧತಿ ರಾಜಮಾನ್ಯತೆಯನ್ನು ಪಡೆಯಿತು. ಜನಾರೋಗ್ಯ ರಕ್ಷಣಾಕ್ಷೇತ್ರದಲ್ಲಿ ಪ್ರಥಮವಾಗಿ ಕಾರ್ಯನಿರತವಾದ ಈ ಪದ್ಧತಿ ದಿನೇ ದಿನೇ ಬೆಳೆಯುತ್ತ ಇಂದು ಎಲ್ಲೆಡೆ ವ್ಯಾಪಿಸಿದೆ. ಪ್ರಾಚೀನ ಆಯುರ್ವೇದಕ್ಕೆ ಇದರಿಂದ ಬಹುಮಟ್ಟಿನ ಧಕ್ಕೆ ತಗುಲಿತಾದರೂ ತನ್ನ ಅಂತಃಸತ್ತ್ವದಿಂದ ಅದು ಇಂದಿಗೂ ಉಳಿದು ತನ್ನ ವೈಶಿಷ್ಟ್ಯದಿಂದ ಜನತಾಸೇವೆಯನ್ನು ಯಥಾಶಕ್ತಿ ಸಲ್ಲಿಸುತ್ತಿದೆ. ಪ್ರಾಚೀನ ಸಂಸ್ಕೃತಿವತ್ಸಲರಾದ ಮೈಸೂರು ರಾಜಮನೆತನದ ಒಡೆಯರು ಇದರ ಏಳಿಗೆಗಾಗಿ ಪ್ರಯತ್ನಗಳನ್ನು ಮಾಡಿದ್ದಾರೆ. ಆಯುರ್ವೇದಾಧ್ಯಯನವನ್ನು ವ್ಯವಸ್ಥೆಗೊಳಿಸುವ ಉದ್ದೇಶದಿಂದ ಮಹಾರಾಜ ಚಾಮರಾಜ ಒಡೆಯರು ಮೈಸೂರು ನಗರದ ಸಂಸ್ಕೃತ ಮಹಾಪಾಠ ಶಾಲೆಯಲ್ಲಿ 1908ರಲ್ಲಿ ಆಯುರ್ವೇದ ವಿಭಾಗವೊಂದನ್ನು ಸ್ಥಾಪಿಸಿದರು. 1930ರಲ್ಲಿ ಪ್ರತ್ಯೇಕವಾದ ವಿದ್ಯಾಶಾಲೆಯೊಂದು ಏರ್ಪಟ್ಟು ಇಂದಿನವರೆಗೆ ಸಾವಿರಾರು ವಿದ್ಯಾರ್ಥಿಗಳು ವೈದ್ಯವಿದ್ಯೆ ಪಡೆದಿದ್ದಾರೆ. ಇತ್ತೀಚೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯುರ್ವೇದಾಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕೈಗೊಂಡಿವೆ. *

**ಕರ್ನಾಟಕ ನಂದಿನಿ :** ಮಹಿಳೆಯರ ಶಿಕ್ಷಣ ಅವರಲ್ಲಿ ಧರ್ಮ ನೀತಿಗಳ ಬೆಳೆವಣಿಗೆ, ಸೌಜನ್ಯಾಭಿವೃದ್ಧಿ ಇವುಗಳಿಗಾಗಿಯೇ ಮೀಸಲಾಗಿದ್ದು, ಮಹಿಳೆಯೊಬ್ಬರಿಂದ ಸಂಪಾದಿತವಾಗಿ ಮೈಸೂರಿನಿಂದ ಪ್ರಕಟವಾಗುತ್ತಿದ್ದ ಪತ್ರಿಕೆ. ಪತ್ರಿಕಾ ಪ್ರಪಂಚದಲ್ಲಿ ಸಾಹಿತ್ಯ ಲೋಕದಲ್ಲಿ ಮಹಿಳೆಯರ ಸಾಹಸದ ಗುರುತಾಗಿ ಅದು ಕಂಗೊಳಿಸಿತು. ಮೂರು ವರ್ಷಗಳ ಕಾಲ ಈ ಪತ್ರಿಕೆ ಪ್ರಕಟವಾಗುತ್ತಿದ್ದು ಅನಂತರ ನಿಂತರೂ ಪತ್ರಿಕಾ ಪ್ರಪಂಚದಲ್ಲೂ ಸಾಹಿತ್ಯ ಸಂವರ್ಧನೆಯಲ್ಲೂ ಅದು ತಕ್ಕಮಟ್ಟಿಗೆ ಸೇವೆ ಸಲ್ಲಿಸಿತು.

ಮೈಸೂರಿನ ಬಳಿಯ ನಂಜನಗೂಡಿನಲ್ಲಿ ಸತೀ ಹಿತೈಷಿಣೀ ಗ್ರಂಥಮಾಲೆಯು ತಿರುಮಲಾಂಬಾ 1916ರ ಅಕ್ಟೋಬರಿನಲ್ಲಿ ಈ ಪತ್ರಿಕೆಯನ್ನು ಪ್ರಾರಂಭಿಸಿದರು. ಅವರು 1913ರಲ್ಲಿ ಪ್ರಾರಂಭಿಸಿದ ಸತೀ ಹಿತೈಷಿಣೀ ಗ್ರಂಥಮಾಲೆಯಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳಿಗೆ ದೊರೆತ ಪ್ರೋತ್ಸಾಹವೇ ಇದಕ್ಕೆ ಪ್ರೇರಣೆ. ಆದರೆ ಆರ್ಥಿಕ ತೊಂದರೆಯಿಂದಾಗಿ ಅವರು ಈ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. ಇದರ ಚಂದಾದಾರರ ಸಂಖ್ಯೆ ಸುಮಾರು 300. ಆದರೆ ಕರ್ನಾಟಕದ ಹೊರಗಿನ ಮುಂಬಯಿ, ಕೋಲ್ಕತ, ಆಗ್ರ ಮೊದಲಾದ ಸ್ಥಳಗಳಲ್ಲೂ ಇದರ ಪ್ರಸಾರ ಸಾಕಷ್ಟಿತ್ತು. ಮಂಗಳೂರಿನಲ್ಲಿ ವಿಶೇಷವಾದ ಪ್ರಸಾರವಿತ್ತು.

ಪತ್ರಿಕೆ ನಂಜನಗೂಡಿನಿಂದ ಪ್ರಕಟವಾಗುತ್ತಿದ್ದರೂ ಧಾರವಾಡದ ಕೃಷ್ಣ ಮುದ್ರಣಾಲಯದಲ್ಲಿ ಮುದ್ರಣವಾಗುತ್ತಿತ್ತು. ಈ ಮುದ್ರಣಾಲಯ ದೊಂದಿಗೆ ಲೋಕಮಾನ್ಯ ತಿಲಕರ ಸಂಬಂಧವಿದ್ದುದರಿಂದ ಪತ್ರಿಕೆಯ ಮುದ್ರಣಕ್ಕೆ ಸರ್ಕಾರ ಪ್ರತಿಬಂಧಕ ಹೇರಬಯಸಿದಾಗ, ತಮ್ಮ ಪತ್ರಿಕೆಯಲ್ಲಿ ರಾಜಕೀಯ ವಿಚಾರಗಳನ್ನು ಪ್ರಕಟಿಸುವುದಿಲ್ಲವೆಂದು ಬರೆದುಕೊಟ್ಟು ಪ್ರಕಟಣೆಗೆ ಅನುಮತಿ ಪಡೆಯಬೇಕಾಯಿತು.

ಮೊದಲ ಪುಟ ಕವನದಿಂದ ಪ್ರಾರಂಭವಾಗುತ್ತಿತ್ತು. ಸಾಮಾನ್ಯವಾಗಿ ಇದು ದೇವತಾ ಪ್ರಾರ್ಥನೆಯಾಗಿರುತ್ತಿತ್ತು. ಶ್ರೀಪಾದರೇಣು ಅವರ ಕವಿತೆಗಳೇ ಹೆಚ್ಚು. ಮೊದಲ ಪುಟದ ಪಕ್ಕದಲ್ಲಿ ರನ್ನಗನ್ನಡಿಯಲ್ಲಿ ಪರಿಚಯ ಮಾಡಿಸುತ್ತಿದ್ದ ಪ್ರಸಿದ್ಧ ವ್ಯಕ್ತಿಗಳ ಚಿತ್ರ ಪ್ರಕಟಿಸುತ್ತಿದ್ದರು. ಮುಖಪುಟದಲ್ಲಿ ವಂದೇ ತ್ವಾ ಭೂದೇವಿ ಆರ್ಯ ಮಾತರಂ ಎಂಬ ವಾಕ್ಯವಿರುತ್ತಿತ್ತು. ಕ್ರೌನ್ ಅಷ್ಟಪತ್ರದ 53 ಪುಟಗಳಿಂದ ಕೂಡಿದ್ದ ಪತ್ರಿಕೆಯ ಬಿಡಿ ಪ್ರತಿಯ ಬೆಲೆ 2½ ಆಣೆ, ವಾರ್ಷಿಕ ಚಂದಾ ರೂ.1½

ಸ್ತ್ರೀ ಶಿಕ್ಷಣ, ಸ್ತ್ರೀ ಸುಧಾರಣೆ, ಸ್ತ್ರೀ ನೀತಿ, ಭಕ್ತಿ ಮುಂತಾದ ಸ್ತ್ರೀಯರಿಗೆ ಸಂಬಂಧಿಸಿದ ಅನೇಕ ಲೇಖನಗಳೂ ಧಾರಾವಾಹಿಯಾಗಿ ಐತಿಹಾಸಿಕ ಕಾದಂಬರಿಗಳೂ ಪ್ರಬಂಧಗಳೂ ಆಧ್ಯಾತ್ಮಿಕ ಲೇಖನಗಳೂ ಪ್ರಕಟವಾಗುತ್ತಿದ್ದವು. ವಿವಾಹ ವಯಸ್ಸನ್ನು ಏರಿಸುವುದರ ಆವಶ್ಯಕತೆಯನ್ನು ಕುರಿತು ಪ್ರಕಟವಾದ ಒಂದು ಲೇಖನ ಉತ್ತಮವಾದದ್ದು. ಈ ಪತ್ರಿಕೆಯಲ್ಲಿ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿತ್ತು.

ಹೆಂಗಸರು ಪತ್ರಿಕೆ ಹೊರಡಿಸಬಾರದು ಎಂದು ಹೇಳಿ ಹಲವರು ಈ ಪತ್ರಿಕೆಯನ್ನು ನಿಲ್ಲಿಸಲು ಯತ್ನಿಸಿದಾಗ ಶುಭೋದಯದಲ್ಲಿ ಇವರ ಪರವಾಗಿ ಶ್ರೀ ಶೇಷ ಪಾರಿಶ್ವಾಡರು ಲೇಖನ ಬರೆದು ಬೆಂಬಲ ನೀಡಿದರು. ಈ ಪತ್ರಿಕೆಯ ಲೇಖಕರಿಗೆ ಅಲ್ಪಸ್ವಲ್ಪವಾದರೂ ಗೌರವಧನ ನೀಡುವ ಪರಿಪಾಟ ಇತ್ತು. ಪತ್ರಿಕೆಗಳಿಂದ ಒಳ್ಳೆಯ ಸಾಹಿತ್ಯ ಸೇವೆ ಸಲ್ಲುವುದೆಂಬುದಕ್ಕೆ ಇದೊಂದು ಉತ್ತಮ ನಿದರ್ಶನ. *

**ಕರ್ನಾಟಕ ಬಂಧು :** ಗದಗ ಜಿಲ್ಲೆ ಗದಗಿನಿಂದ ಪ್ರಕಟ ವಾಗುತ್ತಿರುವ, ಮುಖ್ಯವಾಗಿ ಪ್ರಾದೇಶಿಕ ಸ್ವರೂಪದ ವಾರಪತ್ರಿಕೆ. ಸ್ಥಾನಿಕ ಸಮಸ್ಯೆಗಳ ಮತ್ತು ಸ್ಥಾನಿಕ ಸಮಾಜಗಳ ಪರಿಚಯ, ಕಥೆ, ಕವನ, ಪ್ರಬಂಧಗಳನ್ನು ಒಳಗೊಂಡಿರುತ್ತದೆ. ಇದು 1930ರ ಅಕ್ಟೋಬರಿನಲ್ಲಿ ಆರಂಭವಾಯಿತು.

ಚೆನ್ನಬಸವಸ್ವಾಮಿ ವಿರೂಪಾಕ್ಷಯ್ಯಸ್ವಾಮಿ ಹಿರೇಮಠ ಅವರು ಪತ್ರಿಕೆಯ ಒಡೆಯರು, ಸಂಪಾದಕರು ಮತ್ತು ಪ್ರಕಾಶಕರು. ಪ್ರಾರಂಭದಲ್ಲಿ ಪತ್ರಿಕೆಯಲ್ಲಿ ಕಿರೀಟ ಅರ್ಧ ಆಕಾರದ 16 ಪುಟಗಳಿದ್ದುವು. 1934ರಲ್ಲಿ ಇದನ್ನು 28ಕ್ಕೆ ಹೆಚ್ಚಿಸಲಾಯಿತು. ಅಲ್ಲದೆ ಲೇಖನಗಳೊಂದಿಗೆ ಚಿತ್ರಗಳನ್ನು ಪ್ರಕಟಿಸಲು ಉಪಕ್ರಮಿಸಿ ಪತ್ರಿಕೆಯ ಸ್ವರೂಪವನ್ನು ಆಕರ್ಷಕವಾಗಿಸಿ ಸಚಿತ್ರ ಗೊಳಿಸಲಾಯಿತು.

ಪತ್ರಿಕೆಯ ಪ್ರಸಾರ ಪ್ರಾರಂಭದಲ್ಲಿ 700-800. ಆದರೆ ಪುಟಗಳ ಸಂಖ್ಯೆಯನ್ನು ಹೆಚ್ಚಿಸಿದಾಗ ಬೆಲೆ ಒಂದೇ ಆಣೆ ಇದ್ದುದ ರಿಂದ ಪತ್ರಿಕೆಯ ಪ್ರಸಾರ ಮೊದಲಿದ್ದ ರಿಂದ ಸು.5,000-6,000ಕ್ಕೆ ಏರಿತ್ತು. ಈಗ ಇದರ ಪ್ರಸಾರ ಸಂಖ್ಯೆಯೂ ಪುಟಗಳ ಸಂಖ್ಯೆಯೂ ಕಡಿಮೆಯಾಗಿದೆ. ಡೆಮ್ಮೆ ಅರ್ಧ ಆಕಾರದ 12 ಪುಟಗಳಿವೆ. *

**ಕರ್ನಾಟಕ ಭಾರತಿ :** ಸೃಜನ, ವಿಮರ್ಶನ, ಸಂಶೋಧನ ಮತ್ತು ವಿಜ್ಞಾನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾದ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕ. ಸ್ವಾತಂತ್ರ್ಯೋತ್ಸವ ದಿನ, ಕನ್ನಡ ರಾಜ್ಯೋದಯ ದಿನ, ಸಂಕ್ರಮಣ ಮತ್ತು ಅಕ್ಷಯತೃತೀಯಗಳ ಸಮಯಗಳಲ್ಲಿ ಕ್ರಮವಾಗಿ ಪ್ರಕಟವಾಗುತ್ತದೆ. ಬಿಡಿ ಸಂಚಿಕೆಯ ಬೆಲೆ ರೂ.2.50, ವಾರ್ಷಿಕ ಚಂದಾ ರೂ.8.

ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷಿನಲ್ಲಿ ಸೈನ್ಸ್ (1956), ಹ್ಯುಮಾನಿಟೀಸ್ (1957) ಮತ್ತು ಸೋಷಿಯಲ್ ಸೈನ್ಸಸ್ (1965) ಪತ್ರಿಕೆಗಳು ಪ್ರಕಟವಾಗುತ್ತಿವೆ.




ಹ್ಯುಮಾನಿಟೀಸ್ ಪತ್ರಿಕೆ ಇಂಗ್ಲಿಷ್ ಲೇಖನಗಳ ಜೊತೆಗೆ ಕೆಲವು ಕನ್ನಡ ಲೇಖನಗಳನ್ನೂ ಒಳ ಗೊಂಡಿರುತ್ತಿತ್ತು. ಆದರೆ ಪ್ರಕಟಣೆಗೆ ಬರುತ್ತಿದ್ದ ಕನ್ನಡ ಲೇಖನಗಳ ಸಂಖ್ಯೆ ಹೆಚ್ಚಾದಂತೆ ಆ ಪತ್ರಿಕೆಯಲ್ಲಿ ಅವಕ್ಕೆ ಸ್ಥಳ ಸಾಲದಾಯಿತು. ಅಲ್ಲದೆ, ಅದೇ ಹೊತ್ತಿಗೆ ಉತ್ತರ ಕರ್ನಾಟಕದ ಓದುಗರ ಹಾಗೂ ಲೇಖಕರ ಬಳಗಕ್ಕೆ ಆ ಭಾಗದಲ್ಲಿ ಪ್ರೌಢವಾದ ಸಂಶೋಧನ ಹಾಗೂ ಸೃಜನಾತ್ಮಕ ಲೇಖನಗಳನ್ನು ಪ್ರಕಟಿಸಬಲ್ಲ ಉನ್ನತಮಟ್ಟದ ನಿಯತಕಾಲಿಕೆಯೊಂದರ ಆವಶ್ಯಕತೆಯಿತ್ತು. ಸಾಹಿತ್ಯದಂತೆಯೇ ವಿಜ್ಞಾನದ ವಿವಿಧ ಶಾಖೆಗಳ ಹಾಗೂ ನಾನಾ ಶಾಸ್ತ್ರಗಳ ಜ್ಞಾನವನ್ನು ಕನ್ನಡ ಮಾಧ್ಯಮದ ಮೂಲಕ ಜನತೆಯಲ್ಲಿ ಹರಡುವ ಮತ್ತು ಭಾಷೆಯನ್ನು ಅದಕ್ಕೆ ಒಗ್ಗಿಸಿ ಪುಷ್ಟಿಗೊಳಿಸುವ ಕಾರ್ಯ ತೀವ್ರಗತಿಯಿಂದ ನಡೆಯಬೇಕಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯ ಈ ಪರಿಸ್ಥಿತಿಯನ್ನು ಮನಗಂಡು, ಕರ್ನಾಟಕ ಭಾರತಿ ಎಂಬ ಹೆಸರಿನಲ್ಲಿ ಷಾಣ್ಮಾಸಿಕ ಪತ್ರಿಕೆಯೊಂದನ್ನು ಪ್ರಕಟಿಸಲು ನಿಶ್ಚಯಿಸಿ 1968 ನವೆಂಬರ್ 1ರಂದು ಅದರ ಪ್ರಥಮ ಸಂಚಿಕೆಯನ್ನು ಬಿಡುಗಡೆಗೊಳಿಸಿತು. ಡೆಮ್ಮೆ ಅಷ್ಟಪತ್ರಾಕಾರದಲ್ಲಿ 200ಕ್ಕೂ ಹೆಚ್ಚು ಪುಟಗಳನ್ನೊಳಗೊಂಡಿದ್ದ ಆ ಪತ್ರಿಕೆಯ ಬಿಡಿಸಂಚಿಕೆಯ ಬೆಲೆ ರೂ.3 ವಾರ್ಷಿಕ ಚಂದಾ ರೂ.5. ಮೊದಲ ಎರಡು ಸಂಪುಟಗಳ ನಾಲ್ಕು ಸಂಚಿಕೆಗಳು ಪ್ರಕಟವಾದ ಮೇಲೆ 1970 ಆಗಸ್ಟ್ 15ರ ಸಂಚಿಕೆಯಿಂದ ತ್ರೈಮಾಸಿಕವಾಯಿತು. ಲೇಖನಗಳ ಜೊತೆಗೆ ಗ್ರಂಥಾವಲೋಕನ, ಸಂಪಾದಕೀಯ, ಲೇಖಕರ ಪರಿಚಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ಗ್ರಂಥಗಳ ಕ್ರಯಪಟ್ಟಿ ಇವನ್ನು ಪ್ರತಿಸಂಚಿಕೆಯೂ ಒಳಗೊಂಡಿರುತ್ತದೆ. ಸಂಪಾದಕ ಮಂಡಲಿಯ ಸದಸ್ಯರು ಬೇರೆ ಬೇರೆ ವ್ಯಾಸಂಗ ವಿಭಾಗಗಳನ್ನು ಪ್ರತಿನಿಧಿಸುತ್ತಾರೆ. ಲೇಖಕರಿಗೆ ಅವರ ಲೇಖನ ಪ್ರಕಟವಾದ ಸಂಚಿಕೆಯೊಂದಿಗೆ ಆ ಲೇಖನದ ಮೇಲಚ್ಚಿನ ಇಪ್ಪತ್ತೈದು ಪ್ರತಿಗಳನ್ನು ಉಚಿತವಾಗಿ ಕೊಡಲಾಗುತ್ತದೆ. *

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ :** ಮೈಸೂರು ನಗರದ ಮಾನಸಗಂಗೋತ್ರಿ ಆವರಣದಲ್ಲಿರುವ ಒಂದು ದೂರಶಿಕ್ಷಣ ವಿಶ್ವವಿದ್ಯಾಲಯ. ಮೈಸೂರು ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯಾಗಿದ್ದ ಹಿಂದಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯನ್ನು (1969-96) ಉನ್ನತೀಕರಿಸಿ ಸ್ಥಾಪಿಸಲಾಗಿದೆ. ಆರಂಭದಲ್ಲಿ ಅಂಚೆ ಬೋಧನೆ ಮೂಲಕ ಬಿ.ಎ., ಬಿ.ಕಾಂ., ಎಂ.ಎ., ಎಂ.ಕಾಂ., ಮತ್ತು ಇತರ ಶಿಕ್ಷಣಗಳನ್ನು ನೀಡುತ್ತಿತ್ತು. ನವದೆಹಲಿಯಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಸ್ಥಾಪಿತವಾದ (1985) ಮೇಲೆ ದೂರಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳಾದುವು. ಇದರ ಫಲವಾಗಿ ಅಂಚೆ ಬೋಧನ ವಿಧಾನದಿಂದ ದೂರ ಶಿಕ್ಷಣ ವಿಧಾನಕ್ಕೆ ಬೋಧನೆಯನ್ನು ಬದಲಾಯಿಸಿಕೊಳ್ಳಲಾಯಿತು. ಕರ್ನಾಟಕದ ಶೈಕ್ಷಣಿಕ ಅಗತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು 1996 ಜೂನ್ 26ರಂದು ಈ ವಿಶ್ವವಿದ್ಯಾನಿಲಯ ಸ್ಥಾಪಿತವಾಯಿತು.

ಮುಕ್ತ ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯಗಳಿವು: ವಿದ್ಯಾರ್ಥಿಗಳಿಗೆ ಅವರ ಕಲಿಕಾ ವೇಗಕ್ಕೆ ಅನುಗುಣವಾಗಿ ಮನೆ ಬಾಗಿಲಿಗೆ ಉನ್ನತ ಶಿಕ್ಷಣವನ್ನು ನೀಡುವುದು, ವಯೋಮಾನದ ಆಧಾರದ ಮೇಲೆ ಪ್ರತಿಯೊಬ್ಬರಿಗೂ ಶಿಕ್ಷಣವನ್ನು ನೀಡುವುದು, ವೃತ್ತಿಪರತೆ ಮತ್ತು ವೃತ್ತಿ ನೈಪುಣ್ಯ ತಂದುಕೊಡುವ ರೀತಿಯಲ್ಲಿ ಅಗತ್ಯವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವುದು, ಸರಳ ಪ್ರವೇಶ ನಿಬಂಧನೆಗಳು, ವಿದ್ಯಾರ್ಥಿ ಆಸಕ್ತಿ ಹಾಗೂ ಅನುಕೂಲಕ್ಕೆ ಅನುಗುಣವಾಗಿ ಅಧ್ಯಯನ ಮಾಡುವ ಅವಕಾಶ ಒದಗಿಸುವುದು, ಪೂರ್ಣಕಾಲಿಕ ವಿದ್ಯಾರ್ಥಿಗಳಂತೆ ಅಧ್ಯಯನ ಮುಂದುವರಿಸಲು ಸಾಧ್ಯವಾಗದ ಉದ್ಯೋಗಸ್ಥರಿಗೆ, ಗ್ರಾಮಾಂತರ ಪ್ರದೇಶದ ಜನರಿಗೆ ಶಿಕ್ಷಣನೀಡುವುದು, ಪುರುಷರಿಗೆ ಹಾಗೂ ಮಹಿಳೆಯರಿಗೆ ಶಿಕ್ಷಣ ನೀಡುವುದು, ಆಧುನಿಕ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಗಳನ್ನು ಅನುಸರಿಸಿ ಹೊಸ ಶಿಕ್ಷಣಗಳನ್ನು ತೆರೆಯುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನೀಡುವ ವಿವಿಧ ಶಿಕ್ಷಣ ಕ್ರಮಗಳು ಹೀಗಿವೆ: ಪದವಿ ಶಿಕ್ಷಣಗಳು: ಬಿ.ಎ., ಬಿ.ಕಾಂ., ಬಿ.ಎಡ್., ಬಿ.ಎಲ್.ಐ.ಎಸ್‌ಸಿ., ಬಿ.ಎಸ್‌ಸಿ. (ಐ.ಟಿ.). ಸ್ನಾತಕೋತರ ಶಿಕ್ಷಣ ಕ್ರಮಗಳು: ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಸಂಸ್ಕೃತ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಜೊತೆಗೆ ಎಂ.ಕಾಂ., ಎ.ಎಡ್., ಎಂ.ಎಸ್‌ಸಿ. (ಐ.ಟಿ). ಡಿಪ್ಲೊಮ ಶಿಕ್ಷಣ ಕ್ರಮಗಳು: ಪ್ರಿ-ಯೂನಿವರ್ಸಿಟಿ ಅನಂತರದ ಕನ್ನಡ ಡಿಪ್ಲೊಮ, ಪತ್ರಿಕೋದ್ಯಮ ಡಿಪ್ಲೊಮ, ನಿರ್ವಹಣಾಶಾಸ್ತ್ರ ಡಿಪ್ಲೊಮ, ಆಹಾರ ಪೋಷಣೆ ಮತ್ತು ಆರೋಗ್ಯ ಶಿಕ್ಷಣ ಡಿಪ್ಲೊಮ ಗ್ರಾಮೀಣ ಅಭಿವೃದ್ಧಿ ಡಿಪ್ಲೊಮ, ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಡಿಪ್ಲೊಮ, ಮಾನವ ಸಂಪನ್ಮೂಲ ನಿರ್ವಹಣೆ, ಸ್ನಾತಕೋತ್ತರ ಡಿಪ್ಲೊಮ, ಉನ್ನತ ಶಿಕ್ಷಣ ಸ್ನಾತಕೋತ್ತರ ಡಿಪ್ಲೊಮ, ಕ್ರಿಯಾತ್ಮಕ ಇಂಗ್ಲಿಷ್ ಡಿಪ್ಲೊಮ. ಸರ್ಟಿಫಿಕೇಟ್ ಶಿಕ್ಷಣಗಳು: ಕನ್ನಡ ಸರ್ಟಿಫಿಕೇಟ್ ಶಿಕ್ಷಣಕ್ರಮ, ಇಂಗ್ಲಿಷ್ ಬೋಧನೆ ಸರ್ಟಿಫಿಕೇಟ್ ಶಿಕ್ಷಣಕ್ರಮ, ಆಹಾರ ಮತ್ತು ಪೋಷಣೆ ಸರ್ಟಿಫಿಕೇಟ್ ಶಿಕ್ಷಣಕ್ರಮ (ಸಿ.ಎಫ್.ಎನ್.), ಗಣಕೀಕರಣ ಸರ್ಟಿಫಿಕೇಟ್ ಶಿಕ್ಷಣ ಕ್ರಮ (ಸಿ.ಐ.ಸಿ). ಇವುಗಳ ಜೊತೆಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಫಿಲ್. ಪದವಿ ಶಿಕ್ಷಣಕ್ರಮವಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಆಡಳಿತ ಕಚೇರಿ

ಈಗಾಗಲೇ ಕರ್ನಾಟಕದ ಹಲವು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ 57 ಅಧ್ಯಯನ ಕೇಂದ್ರಗಳು ಸ್ಥಾಪಿತವಾಗಿದ್ದು ಕಾರ್ಯನಿರತವಾಗಿವೆ. ಹೊರ ರಾಜ್ಯಗಳಲ್ಲಿ 4 ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದಂತೆ ಬಿ.ಎಡ್.ಶಿಕ್ಷಣಕ್ರಮಕ್ಕೆ 5 ಅಧ್ಯಯನ ಕೇಂದ್ರಗಳನ್ನೂ ಎಂ.ಎಡ್.ಶಿಕ್ಷಣ ಕ್ರಮಕ್ಕೆ 8 ಅಧ್ಯಯನ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ವಿವಿಧ ಶಿಕ್ಷಣಗಳಿಗೆ ಅಧ್ಯಾಪಕ ವಿದ್ಯಾರ್ಥಿ ಸಂಪರ್ಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಪ್ರಸ್ತುತ ಇರುವ ವಿದ್ಯಾರ್ಥಿಗಳ ಸಂಖ್ಯೆ 36,000 (2003).

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 50 ಮಂದಿ ಪೂರ್ಣಾವಧಿ ಅಧ್ಯಾಪಕರೂ 22 ಮಂದಿ ಅತಿಥಿ ಅಧ್ಯಾಪಕರೂ ಇದ್ದಾರೆ. ಕೇಂದ್ರ ಕಾರ್ಯಾಲಯದಲ್ಲಿನ ಈ ಅಧ್ಯಾಪಕ ವೃಂದದ ಜೊತೆಗೆ ವಿವಿಧ ಅಧ್ಯಯನ ಕೇಂದ್ರಗಳಲ್ಲಿ 700 ಮಂದಿ ಶೈಕ್ಷಣಿಕ ಸಮಾಲೋಚಕರಿದ್ದಾರೆ. ಬೋಧಕೇತರ ಸಿಬ್ಬಂದಿ ಸಂಖ್ಯೆ 109. ವಿದ್ಯಾರ್ಥಿಗಳಿಗೆ ಮಾಧ್ಯಮಗಳ ಬಳಕೆ-ರೇಡಿಯೋ ಸಮಾಲೋಚನೆ (ಆಕಾಶವಾಣಿ ಹಾಗೂ ಎಫ್.ಎಂ.) ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಈ ವಿಶ್ವವಿದ್ಯಾನಿಲಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಮನ್‌ವೆಲ್ತ್ ಆಫ್ ಲರ್ನಿಂಗ್ (ಸಿ.ಒ.ಎಲ್.), ಕೆನಡ ಸಂಸ್ಥೆಯೊಡನೆ ಸಹಯೋಗವನ್ನು ಪಡೆದುಕೊಂಡಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿ ಸಿ.ಅಂಜನಾಮೂರ್ತಿ (1996-99), ಎಸ್.ಎಸ್.ರಾಮೇಗೌಡ (1999-2003) ದ್ವಿತೀಯ ಕುಲಪತಿ. ಕೆ.ಸುಧಾರಾವ್ ಈಗಿನ ಕುಲಪತಿ (2003 ಜೂನ್ 25ರಿಂದ) (ಎಸ್.ಎಲ್.)

**ಕರ್ನಾಟಕ ವಿದ್ಯಾವರ್ಧಕ ಸಂಘ :** ನಾಡು ನುಡಿಗಳ ಸೇವೆಯನ್ನೇ ಉದ್ದೇಶವಾಗಿಟ್ಟುಕೊಂಡು ಧಾರವಾಡದಲ್ಲಿ 1890ರ ಜುಲೈ 20ರಂದು ಪ್ರಾರಂಭವಾದ ಒಂದು ಸಾಂಸ್ಕೃತಿಕ ಸಂಸ್ಥೆ. ಅಖಿಲ ಕರ್ನಾಟಕದ ವ್ಯಾಪ್ತಿಯುಳ್ಳ ಸಂಸ್ಥೆಗಳಲ್ಲಿ ಮೊಟ್ಟ ಮೊದಲನೆಯದೆನಿಸಿದ ಈ ಸಾಂಸ್ಕೃತಿಕ ಸಂಸ್ಥೆಯ ಪ್ರಥಮ ಅಧ್ಯಕ್ಷ ಶಾಮರಾವ್ ಕೈಕಿಣಿ, ಪ್ರಥಮ ಕಾರ್ಯದರ್ಶಿ ರಾ.ಹ.ದೇಶಪಾಂಡೆ.

ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖ್ಯಕಟ್ಟಡ

ಮುಂಬಯಿ, ಮದರಾಸು, ಪುಣೆ, ಅಹಮ್ಮದ್‌ನಗರ, ಹೈದರಾಬಾದ್, ಕಾರವಾರ, ಮಂಗಳೂರು, ಮೈಸೂರು, ಚಿತ್ರದುರ್ಗ,ಬಳ್ಳಾರಿ, ರಾಯಚೂರು, ಮಡಿಕೇರಿ ಇತ್ಯಾದಿ ಕರ್ನಾಟಕದ ಒಳ ಹಾಗೂ ಹೊರಗಿನ ಪಟ್ಟಣಗಳ ಕನ್ನಡಿಗರು, ಕನ್ನಡಾಭಿಮಾನಿಗಳು ಇದರ ಆಜೀವ ಸದಸ್ಯರಾಗಿ ಅಂದಿಗೆ ಈ ಸಂಸ್ಥೆಯನ್ನು ಇಡೀ ಕರ್ನಾಟಕದ ಪ್ರಾತಿನಿಧಿಕ ಸಂಸ್ಥೆಯನ್ನಾಗಿ ಮಾಡಿದರು. ಎಂಥ ಹಿರಿಯರ ಮಾರ್ಗದರ್ಶನ ಈ ಸಂಸ್ಥೆಗೆ ಇತ್ತೆಂಬುದಕ್ಕೆ ಮುಂದಿನ ಪಟ್ಟಿಯೇ ನಿದರ್ಶನವಾಗಿದೆ. ಶಾಮರಾವ್ ಕೈಕಿಣಿ, ಸಿ.ಸಿ. ಹುಲಕೋಟಿ ಮುಂತಾದವರು ಅಧ್ಯಕ್ಷರು, ಬಿ.ಎಲ್. ರೈಸ್, ಕಿಟ್ಟೆಲ್, ಫ್ಲೀಟ್, ಭಂಡಾರಕರರಂಥ ಎತ್ತರದ ವ್ಯಕ್ತಿಗಳು ಗೌರವ ಸದಸ್ಯರು, ಬೆಳವಿ ವಕೀಲರು, ಬಿ.ಎಂ.ಶ್ರೀ. ಮೊದಲಾದವರು ಉದ್ಧಾರಕರು. ರಾಮಚಂದ್ರರಾವ್ ದೇಶಪಾಂಡೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದವರು ಪ್ರದಾತೃಗಳು, ಆಲೂರ ವೆಂಕಟರಾವ್, ಮುದವೀಡು ಕೃಷ್ಣರಾವ್, ಎಸ್.ಸಿ.ನಂದೀಮಠ, ಟಿ.ಕೆ.ತುಕೋಳ್, ಕೆ.ಜಿ.ಕುಂದಣಗಾರ, ಎ.ಆರ್.ಕೃಷ್ಣಶಾಸ್ತ್ರೀ, ಎಂ.ಎಚ್.ಕೃಷ್ಣ, ಕಡೆಂಗೋಡ್ಲು ಶಂಕರಭಟ್ಟ, ಮಧುರಚೆನ್ನ, ಬಿ.ವೆಂಕಟಾಚಾರ್ಯರಂಥ ಕೀರ್ತಿವಂತ ಕನ್ನಡಿಗರು ಸದಸ್ಯರು. ಈ ಸಂಘ ಮೈಸೂರು ಅರಸರು, ವಂಟಮುರಿ ಸಿರಿಸಿಂಗಿ ದೇಸಾಯಿಗಳು ಮೊದಲುಗೊಂಡು, ಶ್ರೀ ಸಾಮಾನ್ಯರವರೆಗಿನ ಅನೇಕಾನೇಕ ವ್ಯಕ್ತಿಗಳ ಉದಾರಾಶ್ರಯದಲ್ಲಿ ಬೆಳೆಯಿತು. ಪ್ರತಿವರ್ಷದ ವಾರ್ಷಿಕ ಸಭೆಗೆ ಮೈಸೂರಿನಿಂದ ಪ್ರತಿನಿಧಿಗಳನ್ನು ಕರೆಸಿಕೊಂಡುದುಂಟು. 1900 ಮಾರ್ಚ್ 11ರ ಸಭೆಗೆ ಮೈಸೂರು ಸರ್ಕಾರದವರು ಬಿ.ಎಂ.ಶ್ರೀ.ಅವರನ್ನು ಕಳಿಸಿದ್ದರು. ಕಟ್ಟಡದ ಉಪಸಭೆಗೆ ಬೆಳಗಾಂವಿ, ಬಿಜಾಪುರ, ರಾಯಚೂರು, ಗುಲ್ಬರ್ಗ, ಬಳ್ಳಾರಿಗಳಿಂದ ಗಣ್ಯ ವ್ಯಕ್ತಿಗಳನ್ನು ಬರಮಾಡಿಕೊಳ್ಳಲಾಗಿತ್ತು. ಹೀಗೆ ಎಲ್ಲ ಪ್ರದೇಶಗಳ ಎಲ್ಲ ವರ್ಗದ ಪ್ರಜಾಸ್ತೋಮಕ್ಕೆ ಮುಕ್ತ ದ್ವಾರವಾಗಿ ನಿಂತು ಅಖಿಲ ಕರ್ನಾಟಕವನ್ನೇ ಪ್ರತಿನಿಧಿಸುವ ಸಂಸ್ಥೆಯಾಗಿ ಇದು ಬೆಳೆದು ಬಂತು.

ಈ ಸಂಘ ಹುಟ್ಟಿದ 25 ವರ್ಷಗಳ ತರುವಾಯ ಇದರ ದುಡಿಮೆ, ಬಯಕೆಗಳ ಫಲವಾಗಿ ಕರ್ನಾಟಕದಲ್ಲಿ ಮಿಕ್ಕ ಸಂಸ್ಥೆಗಳು ಹುಟ್ಟಿದುವು, ಅನೇಕ ಕಡೆಗೆ ಕನ್ನಡ ಸಂಘಗಳು ಉದಿಸತೊಡಗಿದುವು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೇರೂರಿತು. ಒಟ್ಟಾರೆ ವಿದ್ಯಾವರ್ಧಕ ಸಂಘದ 25 ವರ್ಷಗಳ ಕನಸು ಒಂದೊಂದೇ ನಿಜಸ್ವರೂಪ ತಾಳತೊಡಗಿದುವು. ಪ್ರಾರಂಭದಲ್ಲಿ ಈ ಸಂಘದ ಶಾಖೆಯೊಂದು ವಿಜಾಪುರದಲ್ಲಿದ್ದು ಮುಂದೆ ಕಾರವಾರಕ್ಕೆ ಸ್ಥಳಾಂತರಿಸಲ್ಪಟ್ಟಿತು.

**ಕನ್ನಡ ಭಾಷೆಯ ಪುನರುಜ್ಜೀವನ :** ಮುಂಬಯಿ ಕರ್ನಾಟಕದಲ್ಲಿ ಮರಾಠಿ, ನಿಜಾಮ ಕರ್ನಾಟಕದಲ್ಲಿ ಉರ್ದು ಹಾದೂ ತೆಲುಗು, ಮದರಾಸು ಕರ್ನಾಟಕದಲ್ಲಿ ತಮಿಳು ಭಾಷೆಗಳ ಪ್ರಾಬಲ್ಯದಿಂದ ಕನ್ನಡ ಕಡೆಗಣಿಸಲ್ಪಟ್ಟ ಸಮಯದಲ್ಲಿ ಈ ಸಂಘ ಕನ್ನಡದ ಪುನರುಜ್ಜೀವನಕ್ಕೆ ಅಹೋರಾತ್ರಿ ದುಡಿಯಿತು. ಕನ್ನಡ ಭಾಗಗಳಲ್ಲಿನ ಶಾಲೆಗಳಲ್ಲಿ ಕಲಿಸುತ್ತಿದ್ದ ಮರಾಠಿಯನ್ನು ವ್ಯವಸ್ಥಿತವಾಗಿ ನಿಲ್ಲಿಸಿತು. ಮುಂಬೈ ವಿಶ್ವವಿದ್ಯಾಲಯದಲ್ಲಿ ಮರಾಠಿ, ಗುಜರಾತಿಗಳ ಜೊತೆ ಕನ್ನಡವನ್ನೂ ಎಂ.ಎ.ಪರೀಕ್ಷೆಗೆ ಅಂಗೀಕರಿಸಲು ಒತ್ತಾಯಿಸಿತು. ಸಂಘಕ್ಕೆ ಕನ್ನಡದ ಬಗ್ಗೆ ಇರುವ ಆಸ್ಥೆಯನ್ನು ಕಂಡು ಹರ್ಷಪಟ್ಟ ಜೆ.ಎಫ್.ಫ್ಲೀಟ್‌ರು 1959ರಲ್ಲಿ ಒಂದು ಪತ್ರ ಬರೆದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

**ಉಪನ್ಯಾಸ ಮಾಲೆ :** ವ್ಯವಹಾರದಿಂದ ದೂರವಾಗುತ್ತಿದ್ದ ಕನ್ನಡವನ್ನು ಉಪನ್ಯಾಸಕ್ಕೆ ಯೋಗ್ಯವಾಗುವಂತೆ ಪಳಗಿಸಲು ಸಂಸ್ಥೆ 1891ರಿಂದ ಮುಂದೆ ಪ್ರತಿವರ್ಷವೂ ವಾಕ್ ಸ್ಪರ್ಧೆಗಳನ್ನು ಏರ್ಪಡಿಸಿತು. ವಿದ್ಯಾರ್ಥಿಗಳಿಗಾಗಿ 1929ರಿಂದ ಲೋಕಮಾನ್ಯ ವಕ್ತೃತ್ವ ಸ್ಪರ್ಧೆ, 1945ರಿಂದ ತಾರಾನಾಥ ವಕ್ತೃತ್ವ ಸ್ಪರ್ಧೆಗಳನ್ನು ನಡೆಸಿಕೊಂಡು ಬರುವುದರ ಜೊತೆಗೆ ವಿದ್ವಾಂಸರಿಗಾಗಿ 1936ರಿಂದ ಸಾಸನೂರ ವ್ಯಾಖ್ಯಾನ ಮಾಲೆಯನ್ನು ಕೆಲವು ವರ್ಷ ನಡೆಸಿಕೊಂಡು ಬಂತು.

**ಸಾಹಿತ್ಯ ಪರೀಕ್ಷೆಗಳು :** ಹಳಗನ್ನಡ ಅಭ್ಯಾಸದ ಅಗತ್ಯವನ್ನು ಮನಗಂಡು ಪ್ರಾಚೀನ ಕಾವ್ಯ ಭಾಗಗಳನ್ನು ಪಠ್ಯವೆಂದು ನಿರ್ದಿಷ್ಟಪಡಿಸಿ ಪ್ರತಿವರ್ಷ ಸಂಘದಿಂದ ಪರೀಕ್ಷೆಗಳನ್ನು ಜರುಗಿಸಲಾಯಿತು. ಇವಕ್ಕೆ ಪರೀಕ್ಷಕರಾಗಿ ಹೊರಗಿನಿಂದ ಅನೇಕ ವಿದ್ವಾಂಸರು ಬರುತ್ತಿದ್ದರು.

**ಗ್ರಂಥಕರ್ತರ ಸಮ್ಮೇಳನ :** ಗ್ರಂಥಪ್ರಚಾರ, ಗ್ರಂಥಸ್ಥ ಭಾಷೆಯ ಏಕ ರೂಪತೆ, ಸಾಹಿತಿಗಳ ಪರಸ್ಪರ ಪರಿಚಯಗಳಿಗಾಗಿ ಧಾರವಾಡದಲ್ಲಿ 1907 ಜೂನ್ 2 ಮತ್ತು 3ರಂದು ಅಖಿಲ ಕರ್ನಾಟಕ ಗ್ರಂಥಕರ್ತರ ಮೊದಲ ಸಮ್ಮೇಳನವನ್ನು ಕರೆಯಲಾಯಿತು. ಎಸ್.ಜಿ.ನರಸಿಂಹಾಚಾರ್ ಅವರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ದೇಶದ ಎಲ್ಲ ಭಾಗಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಇದರ ಫಲವಾಗಿ ಪಠ್ಯಪುಸ್ತಕ, ಪಾರಿಭಾಷಿಕ ಪದ, ರಂಗಭೂಮಿ, ನಾಟಕ, ಇತಿಹಾಸ, ಸಾಹಿತ್ಯಗಳಿಗೆ ಸಂಬಂಧಪಟ್ಟ ಹಲವಾರು ಯೋಜನೆಗಳು ರೂಪುಗೊಂಡುವು.

**ಜಿಲ್ಲಾ ಸಾಹಿತ್ಯ ಸಮ್ಮೇಳನ :** 1939ರಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ವನ್ನು ಪ್ರಾರಂಭ ಮಾಡಲಾಯಿತು. ಧಾರವಾಡದಲ್ಲಿ ಜರುಗಿದ ಪ್ರಥಮ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಕಡೆಂಗೋಡ್ಲು ಶಂಕರಭಟ್ಟರು. ತರುವಾಯ ಗದಗ, ಹಾವೇರಿ, ನವಿಲಗುಂದ, ರಾಣೇಬೆನ್ನೂರ, ಹುಬ್ಬಳ್ಳಿ ಮೊದಲಾದ ಸ್ಥಳಗಳಲ್ಲಿ ಸಮ್ಮೇಳನಗಳು ಜರುಗಿದುವು. ಮೂರು ದಿನ ನಡೆದ ಹುಬ್ಬಳ್ಳಿ ಸಮ್ಮೇಳನದ ಕವಿಗೋಷ್ಠಿ, ನಾಟ್ಯಗೋಷ್ಠಿ, ವಿಜ್ಞಾನಗೋಷ್ಠಿ, ಕರ್ನಾಟಕ

ವಿಶ್ವವಿದ್ಯಾಲಯ ಗೋಷ್ಠಿಗಳು ಈ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಕಾರ್ಯಸ್ವರೂಪವನ್ನು ವ್ಯಕ್ತಪಡಿಸುತ್ತವೆ.

**ವಾಗ್ಭೂಷಣ ಪತ್ರಿಕೆ :** ಸಂಸ್ಥೆಯ ಮುಖಪತ್ರವಾಗಿ 1896ರಲ್ಲಿ ಈ ಮಾಸ ಪತ್ರಿಕೆಯನ್ನು ಹೊರತರಲಾಯಿತು. ಕರ್ನಾಟಕ ಹಾಗೂ ಮೈಸೂರು ಸೀಮೆಯ ಗ್ರಂಥಸ್ಥ ಭಾಷೆ ಸಾಧ್ಯವಿದ್ದ ಮಟ್ಟಿಗೆ ಒಂದೇ ಆಗುವಂತೆ ಮಾಡುವುದೇ ಈ ಮಾಸಪತ್ರಿಕೆಯ ಉದ್ದೇಶ. ಹಳಗನ್ನಡ ಗ್ರಂಥಸಂಶೋಧನ, ಪರಿಷ್ಕರಣ, ಹೊಸಗನ್ನಡದ ಹೊಸ ಸಾಹಿತ್ಯ ನಿರ್ಮಾಣಗಳಿಗೆ ಈ ಪತ್ರಿಕೆ ಪ್ರೋತ್ಸಾಹ ಕೊಟ್ಟಿತು. 23 ವರ್ಷಗಳಲ್ಲಿ ಧರ್ಮ, ಇತಿಹಾಸ, ಸಂಶೋಧನೆ, ವಿಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ಸಂಬಂಧಿಸಿ 85 ಗ್ರಂಥಗಳು ಪ್ರಕಟವಾದುವು. ಇವುಗಳಲ್ಲಿ ಧಾರವಾಡದ ಕುರಡಿ ಅವರು ಬರೆದ ಆರ್.ನರಸಿಂಹಾಚಾರ್ ಚರಿತ್ರೆ, ಮೈಸೂರಿನ ಬಿ.ವೆಂಕಟಾಚಾರ್ಯರು ಬರೆದ ಅಮೃತಪುಲಿನಗಳು ಪರಸ್ಪರ ಬಾಂಧವ್ಯದ ಪ್ರತೀಕಗಳಾಗಿವೆ.

**ಗ್ರಂಥ ಪ್ರಕಟನೆ :** ಉನ್ನತಮಟ್ಟದ ಗ್ರಂಥಗಳನ್ನು ಹೊರತರಲು ಬಯಸಿದ ಸಂಸ್ಥೆ ಮಾಲವಿಕಾಗ್ನಿಮಿತ್ರ, ಉತ್ತರರಾಮಚರಿತ, ವೇಣೀಸಂಹಾರ, ಕನ್ನಡ ತಮಿಳು ಮೊದಲನೆಯ ಪುಸ್ತಕ, ಬಾಣಕಾದಂಬರಿ, ಕನ್ನಡದ ನೆಲೆ, ಕರ್ನಾಟಕ ಜನಜೀವನ, ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ, ಕಾವ್ಯಾವಲೋಕನ, ಶಬ್ದಾನುಶಾಸನ, ದಿ ಹರಿದಾಸಾಸ್ ಆಫ್ ಕರ್ನಾಟಕ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದೆ.

**ಕನ್ನಡ ಬರೆಹಗಾರರಿಗೆ ಪ್ರೋತ್ಸಾಹ :** 1900-1940ರ ಅವಧಿಯಲ್ಲಿ ಈ ಸಂಘ 175 ಗ್ರಂಥಕಾರರಿಗೆ 18,990 ರೂಪಾಯಿಗಳ ಸಂಭಾವನೆಯನ್ನು ನೀಡಿದೆ. ಪ್ರತಿಯೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಸಂಶೋಧನೆ 44, ಶಿಕ್ಷಣ 7, ಪ್ರಬಂಧ 9, ಪೌರಾಣಿಕ 33, ವೇದಾಂತ 23, ಸಾಹಿತ್ಯ ವಿಮರ್ಶೆ 11, ಕಾವ್ಯ 31, ಗಣಿತ 1, ಶಾಸ್ತ್ರೀಯ ವಿಷಯ 10, ಇತರ 32, ಚರಿತ್ರೆ 60, ಇತಿಹಾಸ 28, ಕಾದಂಬರಿ 95, ನಾಟಕ 30, ಒಕ್ಕಲುತನ 9- ಹೀಗೆ 423 ಪುಸ್ತಕಗಳಿಗೆ ಸಂಭಾವನೆ ನೀಡಿದೆ. ಈ ಸಂಘವು ಆಯಾ ವರ್ಷ ಪ್ರಕಟವಾದ ಉತ್ತಮ ಕೃತಿಗಳಿಗೆ ಪ್ರಶಸ್ತಿಗಳನ್ನು ನೀಡುವ ಯೋಜನೆ ಹೊಂದಿದೆ. ಉತ್ತಮ ಸಂಶೋಧನಾ ಗ್ರಂಥಗಳಿಗಾಗಿ ಅಮೀನಬಾವಿ ತಮ್ಮಣ್ಣರಾವ್ ಪ್ರಶಸ್ತಿ ನೀಡಿದರೆ, ಲೇಖಕಿಯರಿಗೆ ಅಮೀನಾಬಾವಿ ರತ್ನಮ್ಮ ಪ್ರಶಸ್ತಿ ನೀಡಲಾಗುತ್ತದೆ.

**ವಾಚನಾಲಯ :** ಸಂಘಕ್ಕೆ ಸಾವಿರ ರೂಪಾಯಿ ಸಂಗ್ರಹವಾದ ಕೂಡಲೇ ರೂ.300 ಗಳನ್ನು ವಾಚನಾಲಯಕ್ಕೆ ವಿನಿಯೋಗಿಸಬೇಕೆಂದು ತನ್ನ ಮೊದಲ ಸಭೆ (20-7-1890) ಯಲ್ಲಿಯೇ ನಿರ್ಧರಿಸಿ ಅಂದೇ ಗ್ರಂಥ ಸಂಗ್ರಹಕ್ಕೆ ಮೊದಲು ಮಾಡಲಾಯಿತು. 1940ರಲ್ಲಿ ಶಾಂತೇಶ ವಾಚನಾಲಯವನ್ನು ಒಳಗುಮಾಡಿಕೊಂಡು ಗ್ರಂಥ' ಭಂಡಾರವನ್ನು ವಿಸ್ತರಿಸಿಕೊಂಡಿತು. ಅಹಮ್ಮದಾಬಾದ್, ಪುಣೆ, ಧಾರವಾಡಗಳಲ್ಲಿ ಕ್ರಮವಾಗಿ ಗುಜರಾತಿ, ಮರಾಠಿ ಕನ್ನಡ ಗ್ರಂಥಗಳ ಪ್ರಾದೇಶಿಕ ಗ್ರಂಥಾಲಯಗಳನ್ನು ಪ್ರಾರಂಭಿಸಲು ಬೊಂಬಾಯಿ ಸರಕಾರ ಬಯಸಿದಾಗ ಕರ್ನಾಟಕದ ಎಲ್ಲ ಸಂಸ್ಥೆಗಳೂ ಪತ್ರಿಕೆಗಳೂ ಆ ಹೊಣೆಗೆ ವಿದ್ಯಾವರ್ಧಕ ಸಂಘವೇ ಯೋಗ್ಯ ಎಂದು ಸೂಚಿಸಿದುವು. ಈ ಸೂಚನೆ ಆ ಕಾಲದಲ್ಲಿ ಸಂಘ ಸಾಧಿಸಿದ್ದ ಗೌರವ, ಪ್ರತಿಷ್ಠೆಯನ್ನು ವ್ಯಕ್ತಪಡಿಸುತ್ತದೆ. ಹತ್ತು ಸಾವಿರ ರೂಪಾಯಿಗಳ ಈ ಹೊಣೆಯನ್ನು ಸಂಘ ಹೊತ್ತು ವಾಚನಾಲಯಗಳನ್ನು ನಡೆಸಿತು.

**ಕನ್ನಡ ಸುಶೋಧನ ಕೇಂದ್ರ :** ಬೊಂಬಾಯಿ ಸರ್ಕಾರ ಕನ್ನಡ ಸಂಶೋಧನ ಕೇಂದ್ರವನ್ನು ಸ್ಥಾಪಿಸುವ ಯೋಚನೆ ನಡೆಸಿದಾಗ ಈ ಸಂಘ ಮುಂದೆ ಬಂದು ಯೋಜನೆಯನ್ನು ಸಿದ್ಧಪಡಿಸಿ ಹೊಣೆ ಹೊರಲು ಮುಂದಾಗಿ ಅದರ ಯಶಸ್ಸಿಗೆ ದುಡಿಯಿತು.

**ನಾಡಹಬ್ಬ :** 1926ರಲ್ಲಿ ಬೆಟಗೇರಿ ಕೃಷ್ಣಶರ್ಮ ಮತ್ತು ದ.ರಾ.ಬೇಂದ್ರೆಯವರಿಂದ ಪ್ರಾರಂಭವಾದ ನಾಡಹಬ್ಬ ಕಾರ್ಯಕ್ರಮವನ್ನು ಸಂಘ ಪ್ರತಿವರ್ಷ ತಪ್ಪದೇ ಆಚರಿಸುತ್ತ ಬಂದಿದೆ. ಈ ಸಮಾರಂಭದಲ್ಲಿ ಉಪನ್ಯಾಸ, ಗೋಷ್ಠಿ, ಸಂಗೀತ, ಕಲಾ ಪ್ರದರ್ಶನ, ವ್ಯಾಯಾಮ ಸ್ಪರ್ಧೆ, ನಾಟಕ ಮೊದಲಾದ ಕಾರ್ಯಕ್ರಮಗಳು ಈವರೆಗೆ ನಡೆಯುತ್ತಲಿವೆ. ಇದಕ್ಕೆ ನಾಡಹಬ್ಬವೆಂಬ ಮನ್ನಣೆ ಲಭಿಸಲು ಮೂಲಕಾರಣ ಈ ಸಂಘವೇ.

**ಪಠ್ಯಪುಸ್ತಕ, ಆಕಾಶವಾಣಿ :** ಸಂಘದಂಥ ಸಂಸ್ಥೆಗೆ ವರ್ನ್ಯಾಕ್ಯುಲರ ಟೆಕ್ಸ್ಟಬುಕ್ ಕಮಿಟಿಯಲ್ಲಿ ಪ್ರಾತಿನಿಧ್ಯ ಅವಶ್ಯ (10-2-1931), ಪಠ್ಯ ಪುಸ್ತಕಗಳ ಭಾಷೆಯಲ್ಲಿ ಏಕರೂಪ ಅವಶ್ಯ (2-3 ಜೂನ್ 1907), ಅಖಿಲ ಭಾರತ ಆಕಾಶವಾಣಿಯಲ್ಲಿ ಕನ್ನಡಕ್ಕೆ ಮಿಕ್ಕ ಭಾಷೆಗಳ ಕಾರ್ಯಕ್ರಮದಷ್ಟೇ ಸ್ಥಾನ ಬೇಕು (12-9-1939) - ಇವೇ ಮೊದಲಾದ ಗೊತ್ತುವಳಿಗಳನ್ನು ಅಂಗೀಕರಿಸಿ ಅವನ್ನು ಕಾರ್ಯರೂಪಕ್ಕೆ ತರಲು ಸಂಘ ಮಾಡಿದ ಪ್ರಯತ್ನಗಳು ಸ್ಮರಣೀಯವಾಗಿವೆ.

**ಸಾಹಿತ್ಯ ಸಮ್ಮೇಳನಕ್ಕೆ ಆಮಂತ್ರಣ :** ಸಾಹಿತ್ಯ ಸಮ್ಮೇಳನವನ್ನು ಧಾರವಾಡದಲ್ಲಿ ನಡೆಸಲು ಬೆಂಗಳೂರು ಪರಿಷತ್ತು ಯೋಚಿಸಿದಾಗ ಸಂಘ ಎರಡು ಸಲ ಮುಂದೆ ಬಂದು ಹೊಣೆ ಹೊತ್ತಿತ್ತು. ಆರ್. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ 4ನೆಯ ಸಮ್ಮೇಳನ, ಚಂದ್ರಶೇಖರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ 25ನೆಯ ಸಮ್ಮೇಳನಗಳ ಹೊಣೆಯನ್ನು ತ್ರಿಕರಣಪೂರ್ವಕವಾಗಿ ನಿರ್ವಹಿಸಿತು.

**ಕರ್ನಾಟಕ ವಿಶ್ವವಿದ್ಯಾಲಯ :** 'ಬೊಂಬಾಯಿ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರ ಮಿತಿಮೀರಿ ಬೆಳೆದು ಕನ್ನಡವು ಕಡೆಗಣಿಸಲ್ಪಟ್ಟಿದೆ; ಈ ಪ್ರದೇಶಕ್ಕೆ ಒಂದು ಸ್ವತಂತ್ರ ವಿಶ್ವವಿದ್ಯಾನಿಲಯ ಬೇಕು' (25-3-1942). ಇಂಥ ಗೊತ್ತುವಳಿಗಳನ್ನು ಸ್ವೀಕರಿಸಿ, ಕ್ರಿಯಾತ್ಮಕ ಪ್ರಯತ್ನ ನಡೆಸಿ 1950ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗೊಳ್ಳುವಲ್ಲಿ ಸಂಘ ತನ್ನ ಪಾಲಿನ ಕರ್ತವ್ಯವನ್ನು ಪೂರೈಸಿತು.

**ಕರ್ನಾಟಕ ಏಕೀಕರಣ :** ಇಪ್ಪತ್ತು ಕಡೆ ಹಂಚಿಹೋದ ಕನ್ನಡ ನಾಡು ಒಂದಾಗಬೇಕು. ಇದರಿಂದ ಕನ್ನಡಿಗರ ಐಕ್ಯಕ್ಕೂ ಹಿತಕ್ಕೂ ಬೆಳೆವಣಿಗೆಗೂ ಅನುಕೂಲವಾಗುವುದು (7-10-1917) ಎಂಬುದು ಕರ್ನಾಟಕ ಏಕೀಕರಣದ ಇತಿಹಾಸದಲ್ಲಿ ಸಂಘ ಸಾರಿದ ಪ್ರಥಮ ಗೊತ್ತುವಳಿಯಾಗಿದೆ. ಇದನ್ನು ಕಾರ್ಯರೂಪಕ್ಕೆ ತರಲು ಹಲವು ಸಲ ಹಲವಂದದಿಂದ ಸಂಸ್ಥೆ ಪ್ರಯತ್ನಿಸಿತು. ಭಾರತದ ರಾಜಕೀಯ ಸುಧಾರಣೆಗಳ ವಿಚಾರಗೋಷ್ಠಿ ನಡೆದ ಸಮಯದಲ್ಲಿ ಕನ್ನಡ ಜನತೆಯ ತೀವ್ರ ಆಕಾಂಕ್ಷೆಗಳನ್ನು ತಂತಿಯ ಮೂಲಕ ವೈಸ್‌ರಾಯರಿಗೂ ಕೇಂದ್ರ ಶಾಸನಸಭೆಯ ಕರ್ನಾಟಕದ ಸದಸ್ಯರಿಗೂ ಮುಟ್ಟಿಸಿದ ಸಂಗತಿಯನ್ನು ಇಲ್ಲಿ ಗಮನಿಸಬೇಕು.

**ಸ್ಮರಣೆ, ಸನ್ಮಾನ :** ಕನ್ನಡವನ್ನುದ್ಧರಿಸಿದ ಪುಣ್ಯಪುರುಷರ ಸ್ಮರಣೆಗೆಯ್ದು ಕೃತಜ್ಞತೆಯನ್ನರ್ಪಿಸುವ ಸಂದರ್ಭಗಳನ್ನು ಸಂಘ ತಪ್ಪಿಸಿಕೊಂಡಿಲ್ಲ. ಬಹುದಿನಗಳಿಂದ ಶಾಂತಕವಿಗಳ ಉತ್ಸವ ಮಾಡುತ್ತ ಬಂದಿದೆ, ಗೌರವಪ್ರಶಸ್ತಿ ಪಡೆದ ಕನ್ನಡ ವಿದ್ವಾಂಸರನ್ನು ಸತ್ಕರಿಸುತ್ತ ಬಂದಿದೆ.

**ಭಾಷೆಯ ಸಂಸ್ಕಾರ, ಸಾಹಿತ್ಯದ ಉದ್ಧಾರ :** ಆಡುಭಾಷೆಯಲ್ಲಿ ಮಾತ್ರ ವ್ಯವಹರಣಗೊಳ್ಳುತ್ತಿದ್ದ ಕನ್ನಡವನ್ನು ಗ್ರಂಥಸ್ಥ ಭಾಷೆಯ ಅಂತಸ್ತಿಗೇರಿಸುವುದು ಆವಶ್ಯಕವೆನಿಸಿದ್ದ ಕಾಲವದು. ಉತ್ತರ ಕರ್ನಾಟಕ ಹಾಗೂ ಮೈಸೂರು ಸೀಮೆಯ ಗ್ರಂಥಸ್ಥ ಭಾಷೆ ಸಾಧ್ಯವಿದ್ದಮಟ್ಟಿಗೆ ಒಂದೇ ಆಗುವಂತೆ ಮಾಡುವುದೇ ಈ ಸಂಘದ ಮತ್ತು ಮಾಸಪತ್ರಿಕೆಯ ಉದ್ದೇಶವಾಗಿತ್ತು. ಹೊಸಗನ್ನಡ ಗದ್ಯವನ್ನು ಹದಗೊಳಿಸಲು ಸಂಘ ತಾಳಿದ ನವೀನ ಧೋರಣೆಗಳ ಫಲವಾಗಿ ಗಳಗನಾಥರ ಸರಸ ಗದ್ಯ ತುರಮರಿಯವರ ಶ್ರೀಮಂತ ಗದ್ಯ, ಮುಳಬಾಗಿಲರ ನಾಟಕ ಗದ್ಯಗಳು ಈ ಸಂಘದಲ್ಲಿ ರಸಪಾಕಗೊಂಡುವು.

ಕನ್ನಡವನ್ನುದ್ಧರಿಸಿದ ಮುಳಬಾಗಿಲ, ತುರಮರಿ, ಕಟ್ಟಿ, ಪೂಜಾರ, ಜೀಗ್ಲರ್, ಗಳಗನಾಥರನ್ನು ಮೊದಲುಗೊಂಡು ಬೇಂದ್ರೆ, ಬೆಟಗೇರಿ, ಬಸವನಾಳ, ಶ್ರೀರಂಗ,ಗೋಕಾಕ್, ಮಾಳವಾಡ, ಆರ್.ಸಿ.ಹಿರೇಮಠ, ಈಶ್ವರನ್, ಮುಗಳಿ, ಪಾಟೀಲಪುಟ್ಟಪ್ಪನವರನ್ನೊಳಗೊಂಡು ಕಣವಿ, ಕಟ್ಟೀಮನಿಯವರವರೆಗೆ ಸಾಲುಗಟ್ಟಿ ನಿಂತ ಸಾಹಿತಿಗಳೆಲ್ಲ ಈ ಸಂಘದ ಕಮ್ಮಟದಲ್ಲಿ ಸಿದ್ಧರಾದವರು.

ಹೀಗೆ ಬಹುಮುಖ ಕಾರ್ಯಗಳನ್ನು ಕೈಕೊಂಡು ವಿದ್ಯಾವರ್ಧಕ ಸಂಘ ನಾಡಿನುದ್ದಗಲಕ್ಕೂ ಭಾವೈಕ್ಯವನ್ನು ಸಾಧಿಸಲು ಪ್ರಯತ್ನಿಸಿತು; ಭಾಷೆ,

ಸಾಹಿತ್ಯಗಳನ್ನು ಕವಿ, ವಾಗ್ಮಿಗಳನ್ನು ತನ್ನ ಗರಡಿಯಲ್ಲಿ ಪಳಗಿಸಿತು; ಕನ್ನಡ ಬೆಳೆವಣಿಗೆಯ ಇತಿಹಾಸವೆಂದರೆ ತನ್ನ ಬೆಳೆವಣಿಗೆಯ ಇತಿಹಾಸವೆಂಬ ಕೀರ್ತಿಗಳಿಸಿತು.

*

**ಕರ್ನಾಟಕ ವಿಶ್ವವಿದ್ಯಾಲಯ :** ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲೊಂದು. ಧಾರವಾಡದಲ್ಲಿ ಆಡಳಿತ ಕೇಂದ್ರ ಮತ್ತು ಮುಖ್ಯ ಕಾಲೇಜುಗಳನ್ನು ಹೊಂದಿದೆ. ಧಾರವಾಡ, ಗದಗ, ಹಾವೇರಿ, ಬಾಗಲಕೋಟೆ, ಬೆಳಗಾಂವಿ, ಬಿಜಾಪುರ, ಉತ್ತರ ಕನ್ನಡ ಇದರ ಪ್ರಾದೇಶಿಕ ವ್ಯಾಪ್ತಿಯಲ್ಲಿವೆ. ಈ ವಿಶ್ವವಿದ್ಯಾಲಯ ಮುಂಬಯಿ ರಾಜ್ಯದ 1949ನೆಯ ಕರ್ನಾಟಕ ವಿಶ್ವವಿದ್ಯಾಲಯ ಕಾಯಿದೆ ಪ್ರಕಾರ 1950 ಮಾರ್ಚ್ 1ರಂದು ಧಾರವಾಡದಲ್ಲಿ ಸ್ಥಾಪಿತವಾಯಿತು. 1956ರಲ್ಲಿ ನೂತನ ಮೈಸೂರು ರಾಜ್ಯದ ಆಡಳಿತದಲ್ಲಿ ಸಮಾವೇಶಗೊಂಡಿತು. ಧಾರವಾಡ, ಬೆಳಗಾಂವಿ, ಬಿಜಾಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತವಾಗಿದ್ದ ವಿಶ್ವವಿದ್ಯಾಲಯದ ಕಕ್ಷೆ 1957ರಲ್ಲಿ ಬಿದರೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಿಗೂ 1965ರಲ್ಲಿ ಬಳ್ಳಾರಿ ಜಿಲ್ಲೆಗೂ ವಿಸ್ತರಿಸಿತು. ಪ್ರಾರಂಭವಾದಾಗ ಕೇವಲ ಹನ್ನೊಂದು ಕಾಲೇಜುಗಳನ್ನು ಪಡೆದಿದ್ದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂದು 19 ಸರ್ಕಾರಿ ಕಾಲೇಜುಗಳು, 100 ಸರ್ಕಾರಿ ಅನುದಾನಿತ ಕಾಲೇಜುಗಳು, 100 ಅನುದಾನ ರಹಿತ ಕಾಲೇಜುಗಳಿವೆ. ಇದಲ್ಲದೆ 18 ಕಾನೂನು ಕಾಲೇಜುಗಳು ಹೆಚ್ಚಿನ ವಿದ್ಯಾರ್ಥಿಗಳನ್ನೂ ಪಡೆದಿವೆ.

ವಿದ್ಯಾಸೌಧ, ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಕಛೇರಿ

ಧಾರವಾಡದಲ್ಲಿ 365 ಎಕರೆಗಳ ವಿಸ್ತಾರವಾದ ರಮಣೀಯ ನಿವೇಶನ, ಸುವ್ಯವಸ್ಥಿತವಾದ ರಸ್ತೆಗಳು, ಉದ್ಯಾನಗಳು, ಭವ್ಯವಾದ ಶೈಕ್ಷಣಿಕಸೌಧ, ಆಡಳಿತ ಭವನ, ವಿಶ್ವಚೇತನ, ವಿದ್ಯಾರ್ಥಿನಿಲಯಗಳು, ಅತಿಥಿಭವನ, ಗಾಂಧೀಭವನ ಮುಂತಾದ ಕಟ್ಟಡಗಳು, ಪ್ರಾಧ್ಯಾಪಕರ ಹಾಗೂ ಅಧಿಕಾರಿಗಳ ವಸತಿಗಳು, ಬಾಲೋದ್ಯಾನ, ಕ್ರೀಡಾಂಗಣ, ಈಜುಕೊಳ, ಜಂಖಾನ ಮುಂತಾದವುಗಳಿಂದ ತುಂಬಿದ ವಿಶ್ವವಿದ್ಯಾಲಯದ ಆವರಣ ಅತ್ಯಂತ ಸುಂದರವಾದುದೆಂದು ಪ್ರಸಿದ್ಧವಾಗಿದೆ. ಎತ್ತರದ ಗುಡ್ಡದ ತಪ್ಪಲಿನಲ್ಲಿರುವುದರಿಂದ ಸಮಶೀತೋಷ್ಣ ಹವೆಯನ್ನು ಪಡೆದಿದ್ದು, ಈ ಬಡಾವಣೆಗೆ ಛೋಟಾ ಮಹಾಬಲೇಶ್ವರ ಎಂಬ ಹೆಸರು ಬಂದಿದೆ.

ಸ್ನಾತಕೋತ್ತರ ಶಿಕ್ಷಣ ಹಾಗೂ ಸಂಶೋಧನೆ, ಪೂರಕ ಹಾಗೂ ಸಂಯೋಜಿತ ಕಾಲೇಜುಗಳ ಅಂಗೀಕಾರ ಹಾಗೂ ಶಿಕ್ಷಣ ಆಡಳಿತ, ಪರೀಕ್ಷೆಗಳ ಮೇಲ್ವಿಚಾರಣೆಯ ಕಾರ್ಯ, ಜನಸಾಮಾನ್ಯರಿಗೆ ಜ್ಞಾನಪ್ರಸಾರಮಾಡುವ ವ್ಯಾಸಂಗ ವಿಸ್ತರಣಯೋಜನೆ ಹಾಗೂ ವಿಶೇಷ ತರಬೇತಿ ಕಾರ್ಯಕ್ರಮಗಳ ಮೂಲಕ ಕರ್ನಾಟಕ ವಿಶ್ವವಿದ್ಯಾಲಯ ಈ ಭಾಗದ ಜನತೆಯ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಮಾತೃಸಂಸ್ಥೆಯಾಗಿದೆ.

ಸ್ನಾತಕೋತ್ತರ ಶಿಕ್ಷಣಕ್ಕಾಗಿ ಧಾರವಾಡ, ಬಿಜಾಪುರ ಮತ್ತು ಕಾರವಾರಗಳಲ್ಲಿ ಕೇಂದ್ರಗಳಿವೆ. ಅಲ್ಲದೆ ಇದರ ಪ್ರಾದೇಶಿಕ ವ್ಯಾಪ್ತಿಗೊಳಪಡುವ ಹಲವು ಕಾಲೇಜುಗಳು ಪದವಿ ಪೂರ್ವ ಶಿಕ್ಷಣವನ್ನು ನೀಡುತ್ತಿದ್ದು ವಿಶ್ವವಿದ್ಯಾಲಯ ಪದವಿ ಪರೀಕ್ಷೆಗಳನ್ನೂ ನಡೆಸುತ್ತದೆ. ಕರ್ನಾಟಕ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ವಿಶ್ವವಿದ್ಯಾಲಯದ ಲಾ ಕಾಲೇಜು, ವಿಶ್ವವಿದ್ಯಾಲಯದ ಶಿಕ್ಷಣ ಕಾಲೇಜು - ಇವು ವಿಶ್ವವಿದ್ಯಾಲಯದ ಆಂಗಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತವೆ. ಸ್ನಾತಕೋತ್ತರ ಶಿಕ್ಷಣವನ್ನು ನೆರವೇರಿಸಲು ಕನ್ನಡ,ಇಂಗ್ಲಿಷ್, ಸಂಸ್ಕೃತ, ಭೌತವಿಜ್ಞಾನ, ರಸಾಯನವಿಜ್ಞಾನ, ಭೂಗರ್ಭಶಾಸ್ತ್ರ, ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ತತ್ತ್ವಶಾಸ್ತ್ರ, ವಾಣಿಜ್ಯಶಾಸ್ತ್ರ ಮುಂತಾದ ವಿಭಾಗಗಳನ್ನು ತೆರೆಯಲಾಗಿದೆ. ಈ ಎಲ್ಲ ವಿಭಾಗಗಳಲ್ಲಿ ಎಂ.ಎ. ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದರ ಜೊತೆಗೆ, ಸಂಶೋಧನ ಕಾರ್ಯ ವ್ಯವಸ್ಥಿತವಾಗಿ ಸಾಗುತ್ತಿದೆ. ವಿದೇಶಿಯ ಭಾಷಾಭ್ಯಾಸ ವಿಭಾಗದಲ್ಲಿ ಫ್ರೆಂಚ್, ಜರ್ಮನ್ ಮತ್ತು ರಷ್ಯನ್ ಭಾಷೆಗಳ ಅಭ್ಯಾಸಕ್ಕೆ ಅವಕಾಶ ಒದಗಿಸಿದೆ. ಈ ಭಾಷೆಗಳಲ್ಲಿ ಡಿಪ್ಲೊಮ, ಹಾಗೂ ಪದವಿ ಮಟ್ಟದ ಅಭ್ಯಾಸಕ್ಕೆ ವ್ಯವಸ್ಥೆಯಿದೆ. ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದಲ್ಲಿ ಲಿಪಿಶಾಸ್ತ್ರದ ಬಗ್ಗೆ ಒಂದು ಸರ್ಟಿಫಿಕೇಟ್ ಕೋರ್ಸ್ ನಡೆಸಲಾಗುತ್ತಿದೆ. ಕನ್ನಡ ವಿಭಾಗದಲ್ಲಿ ಭಾಷಾಶಾಸ್ತ್ರ, ಭಾಷಾಂತರ ವಿಷಯಗಳಲ್ಲಿ ಡಿಪ್ಲೊಮ ತರಗತಿಗಳನ್ನು ತೆರೆಯಲಾಗಿದೆ. ಪದವಿ ಹಾಗೂ ಪದವಿಪೂರ್ವ ಶಿಕ್ಷಣಮಟ್ಟದಲ್ಲಿ ಅಪರಾಧಶಾಸ್ತ್ರ ಮತ್ತು ಫೋರೆನ್ಸಿಕ್ ಸೈನ್ಸ್ ಅಭ್ಯಾಸದ ವ್ಯವಸ್ಥೆ ಮಾಡಲಾಗಿದೆ.

1970ರಿಂದ ಗುಲ್ಬರ್ಗದಲ್ಲಿ ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ತೆರೆಯಲಾಯಿತು. ಈ ಕೇಂದ್ರ 1980ರಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ರೂಪುಗೊಂಡಿತು (ನೋಡಿ: ಗುಲ್ಬರ್ಗ ವಿಶ್ವವಿದ್ಯಾಲಯ).

ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್.ಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ವ್ಯವಸ್ಥೆ ಸಹ ಧಾರವಾಡದಲ್ಲಿ ಇದೆ. ಅಭ್ಯಾಸ, ಸಂಶೋಧನೆಗಳಿಗಾಗಿ ದೇಶವಿದೇಶದ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕ ಹಾಗೂ ಸಂಶೋಧಕರ ವಿನಿಮಯಕ್ಕೆ ವಿಶೇಷ ಅವಕಾಶಗಳಿವೆ. ಶಿಕ್ಷಣವೇತನ, ವಿದ್ಯಾರ್ಥಿವೇತನ ಹಾಗೂ ಪಾರಿತೋಷಿಕಗಳ ವಿಶಿಷ್ಟ ಸೌಕರ್ಯಗಳೂ ಉಂಟು.

ಸ್ನಾತಕೋತ್ತರ ವಿಭಾಗಗಳು ಸಂಶೋಧನೆಯನ್ನೂ ಕೈಗೊಳ್ಳುತ್ತವೆ. ಅಲ್ಲದೆ, ಇತರ ಸಂಸ್ಥೆಗಳು ಮತ್ತು ವಿಶೇಷ ಯೋಜನೆಗಳು ಸಹ ಇವೆ. ಪ್ರಾಚೀನ ಇತಿಹಾಸ, ಭೂಗರ್ಭ ಸಂಶೋಧನೆ ಹಾಗೂ ಗ್ರಂಥ ಪ್ರಕಟನೆಯ ಕಾರ್ಯವನ್ನು ನೆರವೇರಿಸುತ್ತಿರುವ ಕನ್ನಡ ಸಂಶೋಧನ ಸಂಸ್ಥೆ (ನೋಡಿ) ಇಲ್ಲಿನ ಒಂದು ವಿಶೇಷ. ಈ ಸಂಸ್ಥೆಯಲ್ಲಿ ಒಂದು ವಸ್ತು ಸಂಗ್ರಹಾಲಯವೂ ಇದ್ದು ಬೆಲೆಯುಳ್ಳ ಹಾಗೂ ಮಹತ್ತ್ವದ ಶಿಲ್ಪಕೃತಿಗಳೂ ವರ್ಣಚಿತ್ರಗಳೂ ಹಸ್ತಪ್ರತಿಗಳೂ ಪುರಾತನ ಸಂಸ್ಕೃತಿಯ ಅವಶೇಷಗಳೂ ನಾಣ್ಯಗಳೂ ಇವೆ. ಅಲ್ಲದೆ, ಚಾರಿತ್ರಿಕ ಸ್ಥಳಗಳ ಉತ್ಖನನ ಈ ವಿಭಾಗದ ಒಂದು ವಿಶೇಷ ಕಾರ್ಯಕ್ರಮ. ಇತ್ತೀಚಿನ ಉತ್ಖನನಗಳಿಂದ ಕರ್ನಾಟಕ ಹಾಗೂ ಭಾರತದ ಗತ ಇತಿಹಾಸದ ಮೇಲೆ ವಿಶೇಷ ಬೆಳಕು ಬಿದ್ದಿದೆ. ಅನೇಕ ಶಾಸನ ಸಂಪುಟಗಳನ್ನೂ ಇತಿಹಾಸದ ಗ್ರಂಥಗಳನ್ನೂ ಈ ಸಂಸ್ಥೆ ಪ್ರಕಟಿಸಿದೆ.

ಸಮಗ್ರ ವಚನ ವಾಙ್ಮಯ ಸಂಶೋಧನ ಹಾಗೂ ಪ್ರಕಟನೆಯ ಯೋಜನೆಯನ್ನು ಕನ್ನಡ ವಿಭಾಗ ಕೈಗೊಂಡು. ಸಾವಿರಾರು ಓಲೆಗ್ರಂಥಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಈಗಾಗಲೇ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಶೂನ್ಯ ಸಂಪಾದನೆ ಎಂಬ ಆಧ್ಯಾತ್ಮಿಕ ಗ್ರಂಥವನ್ನು ಆರು ಸಂಪುಟಗಳಲ್ಲಿ ಇಂಗ್ಲಿಷಿಗೆ ಭಾಷಾಂತರಿಸುವ ಯೋಜನೆ ಮುಕ್ತಾಯ ಘಟ್ಟ ತಲುಪಿದೆ. ಇಷ್ಟಲ್ಲದೆ ಜೈನ ಹಾಗೂ ಬ್ರಾಹ್ಮಣ ಸಾಹಿತ್ಯ ಸಂಶೋಧನ ಕಾರ್ಯವೂ ಕನ್ನಡ ವಿಭಾಗದಲ್ಲಿ ನಡೆಯುತ್ತಿದೆ. ಭಾಷಾಶಾಸ್ತ್ರ, ಜಾನಪದ, ತೌಲನಿಕ ತತ್ತ್ವಶಾಸ್ತ್ರಗಳ ಅಧ್ಯಯನ ಈ ವಿಭಾಗದ ಒಂದು ವಿಶೇಷ ಅಂಶವಾಗಿದೆ. ಕನ್ನಡ ವಿಭಾಗವನ್ನು ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠವೆಂದು ಕರೆಯಲಾಗಿದೆ.

ವಿಶ್ವವಿದ್ಯಾಲಯ ಸಂಗ್ರಹಿಸಿದ ಹಾಗೂ ಸಂಶೋಧಿಸಿದ ವಿಶೇಷ ಜ್ಞಾನವನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಕಾರ್ಯ ನೆರವೇರಿಸಲು ವ್ಯಾಸಂಗ ವಿಸ್ತರಣ ವಿಭಾಗವನ್ನು ತೆರೆಯಲಾಗಿದೆ. ಹಳ್ಳಿಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಿ ಆ ಉಪನ್ಯಾಸಗಳನ್ನು ಕಿರುಹೊತ್ತಗೆಗಳಾಗಿ ಪ್ರಕಟಿಸಲಾಗುತ್ತಿದೆ. ಲಕ್ಷಾಂತರ ಪ್ರತಿಗಳು ಮಾರಾಟವಾಗಿರುವುದು ಈ ಯೋಜನೆಯ

ಜನಪ್ರಿಯತೆಯನ್ನು ಸೂಚಿಸುತ್ತದೆ. ಪ್ರೌಢ ವ್ಯಾಸಂಗ ಹಾಗೂ ಸಂಶೋಧನೆಗೆ ನೆರವಾಗಲು ಸಂಶೋಧನ ಗ್ರಂಥಮಾಲೆ, ವಿಶೇಷೋಪನ್ಯಾಸ ಗ್ರಂಥಮಾಲೆ, ಕನ್ನಡ ಕಾವ್ಯಮಾಲೆ, ಅರ್ಥಶಾಸ್ತ್ರ ಗ್ರಂಥಮಾಲೆ ಮುಂತಾದುವುಗಳ ಮೂಲಕ ಕನ್ನಡದಲ್ಲಿ, ಇಂಗ್ಲಿಷಿನಲ್ಲಿ ನೂರಾರು ಸಂಶೋಧನ ಗ್ರಂಥಗಳೂ ಈ ವಿಭಾಗದ ಪ್ರಕಟಣೆಗಳಾಗಿವೆ. ವಿಜ್ಞಾನ, ಮಾನವಿಕ ವಿಜ್ಞಾನ ಹಾಗೂ ಸಾಮಾಜಿಕ ವಿಜ್ಞಾನ ಕ್ಷೇತ್ರದ ಸಂಶೋಧನೆಗಳನ್ನು ಬೆಳಕಿಗೆ ತರುವ ನಿಯತಕಾಲಿಕಗಳನ್ನು ನಡೆಸಿಕೊಂಡು ಬರಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಮೀಸಲಾದ ಕರ್ನಾಟಕ ಭಾರತಿ (ನೋಡಿ) ಎಂಬ ತ್ರೈಮಾಸಿಕವೂ ವಿಶ್ವವಿದ್ಯಾಲಯದ ಬುಲೆಟಿನ್ ಎಂಬ ಮಾಸಿಕ ಪತ್ರಿಕೆಯೂ ಪ್ರಕಟವಾಗುತ್ತಿವೆ.

ದೇಶೀಯ ಭಾಷೆಗಳು ಉನ್ನತ ವ್ಯಾಸಂಗದ ಶಿಕ್ಷಣ ಮಾಧ್ಯಮವಾಗಲು ಬೇಕಾದ ಎಲ್ಲ ಪಠ್ಯ ಹಾಗೂ ಪೂರಕ ಗ್ರಂಥಗಳ ರಚನೆ ಹಾಗೂ ಪ್ರಕಟನ ಕಾರ್ಯ ವಿಶ್ವವಿದ್ಯಾಲಯದ ಪಠ್ಯಪುಸ್ತಕ ಡೈರಕ್ಟೊರೇಟಿನಿಂದ ನೆರವೇರುತ್ತಿದೆ. ಪದವಿ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಬೇಕಾಗುವ ಪಠ್ಯಪುಸ್ತಕ, ಪೂರಕ ಗ್ರಂಥ, ಭಾಷಾಂತರ ಕೃತಿಗಳನ್ನು ಪ್ರಕಟಿಸುವ ಯೋಜನೆಯ ಕಾರ್ಯ ಮುಂದುವರಿದಿದೆ. ತಜ್ಞ ಪ್ರಾಧ್ಯಾಪಕರಿಂದ ವಿವಿಧ ವಿಷಯಗಳಲ್ಲಿ ಮೂಲಗ್ರಂಥ ರಚನೆಯ ಹಾಗೂ ತಾಂತ್ರಿಕ ಶಬ್ದಕೋಶಗಳ ರಚನೆಯ ಕಾರ್ಯ ಸಾಗುತ್ತಿದೆ. ಎಂಜಿನಿಯರಿಂಗ್, ಕಾಯಿದೆ ಹಾಗೂ ವೈದ್ಯವಿಷಯಗಳನ್ನು ಜನಪ್ರಿಯಗೊಳಿಸುವ ಸಲುವಾಗಿ ಜನಪ್ರಿಯವಿಜ್ಞಾನ ಗ್ರಂಥಮಾಲೆಯನ್ನು ತೆರೆಯಲಾಗಿದೆ. ಸಂಶೋಧನೆ ಮತ್ತು ಅಧ್ಯಯನಕ್ಕೆ ಸಹಕಾರಿಯಾಗಿ ವಿಶ್ವವಿದ್ಯಾಲಯದ ಗ್ರಂಥಾಲಯವಿದೆ. ಇಲ್ಲಿ ಲಿಂಗ್ವಾಫೋನ್, ಮೈಕ್ರೋ ಫಿಲ್ಮ್, ಮೈಕ್ರೋ ಕಾರ್ಡುಗಳ ವ್ಯವಸ್ಥೆಯಂಥ ವಿಶೇಷ ಸೌಕರ್ಯಗಳಿವೆ.

ಚುನಾಯಿತ ಹಾಗೂ ನೇಮಿತ ಸದಸ್ಯರನ್ನುಳ್ಳ ಸೆನೆಟ್ ಮತ್ತು ಅಕೆಡಮಿಕ್ ಕೌನ್ಸಿಲ್‌ಗಳ ನಿರ್ದೇಶನದ ಮೇರೆಗೆ, ಈ ಎರಡು ಅಂಗಗಳಿಂದ ಆರಿಸಲ್ಪಟ್ಟ ವಿಶ್ವವಿದ್ಯಾಲಯದ ಪರಮಾಧಿಕಾರಿ ಸಂಸ್ಥೆಯಾದ ಸಿಂಡಿಕೇಟ್ ವ್ಯವಹಾರ ನಡೆಸುತ್ತಿತ್ತು. ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮಕ್ಕೆ ತಿದ್ದುಪಡಿ ಮಾಡಿರುವುದರಿಂದ ಸೆನೆಟ್ ರದ್ದಾಗಿದೆ. ಶಿಕ್ಷಣ ಮಂಡಳಿಯ ಸ್ವರೂಪ ಬದಲಾಗಿದೆ. ಸಿಂಡಿಕೇಟ್ ಪ್ರಮುಖ ಕಾರ್ಯನೀತಿ ನಿರ್ದೇಶನ ಸಮಿತಿಯಾಗಿದೆ. ಕುಲಾಧಿಪತಿಗಳಿಂದ ನೇಮಕವಾಗುವ ಕುಲಪತಿ, ವಿಶ್ವವಿದ್ಯಾಲಯದ ಸರ್ವೋಚ್ಚ ಕಾರ್ಯ ನಿರ್ವಹಣಾಧಿಕಾರಿ. ವಿಶ್ವವಿದ್ಯಾಲಯದ ಆಡಳಿತದ ಮುಖ್ಯಾಧಿಕಾರಿಯಾದ ಕುಲಸಚಿವರು ತಮ್ಮ ಅಧಿಕಾರದಲ್ಲಿರುವ ಸಹಾಯಕ ಕುಲಸಚಿವರುಗಳ, ಲೆಕ್ಕಪತ್ರಾಧಿಕಾರಿಗಳ, ಆಡಳಿತ ವಿಭಾಗಾಧಿಕಾರಿಗಳ ಸಹಕಾರದಿಂದ ವಿಶ್ವವಿದ್ಯಾಲಯದ ಎಲ್ಲ ಆಡಳಿತವನ್ನೂ ನಿರ್ವಹಿಸುವರು. ಪರೀಕ್ಷಾ ವಿಭಾಗದ ಕಾರ್ಯಗಳನ್ನು ಪರೀಕ್ಷಾ ನಿಯಂತ್ರಣಾಧಿಕಾರಿಗಳು, ತಮ್ಮ ಸಹಾಯಕ ಅಧಿಕಾರಿಗಳ ನೆರವಿನಿಂದ ನೆರವೇರಿಸುವರು. ಸ್ಥಾನಿಕ ಎಂಜಿನಿಯರನ್ನೊಳಗೊಂಡ ಕಟ್ಟಡ ವಿಭಾಗದವರು ವಿಶ್ವವಿದ್ಯಾಲಯದ ಕಟ್ಟಡಗಳ, ರಸ್ತೆಗಳ ನಿರ್ಮಾಣ ಹಾಗೂ ರಕ್ಷಣೆಯ ಕೆಲಸವನ್ನು ನಿರ್ವಹಿಸುವರು. ಉದ್ಯಾನವನ, ಸಸ್ಯಶಾಸ್ತ್ರಕ ಉದ್ಯಾನಗಳ ರಕ್ಷಣೆಯನ್ನು ಉದ್ಯಾನಾಧಿಕಾರಿಗಳೂ ಸಂಶೋಧನ ಸಲಕರಣೆಗಳನ್ನು ಸಿದ್ಧಗೊಳಿಸುವ ಹಾಗೂ ರಿಪೇರಿ ಮಾಡುವ ಕಾರ್ಯಗಳನ್ನು ಕಾರ್ಯಾಗಾರದ ಅಧಿಕಾರಿಗಳೂ ನೋಡಿಕೊಳ್ಳುತ್ತಾರೆ. ವಿದ್ಯಾರ್ಥಿವಿದ್ಯಾರ್ಥಿನಿಯರ ವಸತಿ ಗೃಹಗಳ ಆಡಳಿತ ಹಾಗೂ ಮೇಲ್ವಿಚಾರಣೆಗೆ ವಿಶೇಷಾಧಿಕಾರಿಗಳು ನಿಯಮಿತರಾಗಿದ್ದಾರೆ. ವಿವಿಧ ಕ್ರೀಡೆಗಳು ಹಾಗೂ ಯುವಜನ ಕಾರ್ಯಕ್ರಮ ಹಾಗೂ ಯೋಜನಾಕಾರ್ಯಗಳ ಮೇಲ್ವಿಚಾರಣೆಗೂ ವಿಶೇಷಾಧಿಕಾರಿಗಳು ಇದ್ದಾರೆ.

ಆರ್.ಎ.ಜಹಗೀರ್‌ದಾರ್, ಸಿ.ಸಿ.ಹುಲಕೋಟಿ, ಡಿ.ಸಿ.ಪಾವಟೆ, ಎ.ಎಸ್.ಅಡಕೆ, ಎಂ.ಜಯಲಕ್ಷ್ಮಮ್ಮಣ್ಣಿ, ಆರ್.ಸಿ.ಹಿರೇಮಠ, ಡಿ.ಎಂ.ನಂಜುಂಡಪ್ಪ, ಎಸ್.ಎಸ್.ಒಡೆಯರ್, ಎ.ಎಂ.ಪಠಾಣ್, ಎಸ್.ರಾಮೇಗೌಡ, ಎಸ್.ಜಿ.ದೇಸಾಯಿ, ಜಿ.ಕೆ.ನಾರಾಯಣರೆಡ್ಡಿ, ಇವರು ಕ್ರಮವಾಗಿ ಇದರ ಕುಲಪತಿಗಳಾಗಿದ್ದರು. ಎಂ.ಖಾಜಿಪೀರ ಇಂದಿನ ಕುಲಪತಿಗಳು (2004). *

**ಕರ್ನಾಟಕ ವೃತ್ತ** : ಮುದವೀಡು ಕೃಷ್ಣರಾಯರ ಸಂಪಾದಕತ್ವದಲ್ಲಿ ಧಾರವಾಡದಿಂದ ಪ್ರಕಟವಾಗುತ್ತಿದ್ದ ವಾರಪತ್ರಿಕೆ. 1892ರಲ್ಲಿ ಪ್ರಾರಂಭವಾದ ಈ ಪತ್ರಿಕೆಯಲ್ಲಿ ಅನಂತರ ಧನಂಜಯವೂ ಸಮಾವೇಶವಾಗಿ ಕರ್ನಾಟಕ ವೃತ್ತ ಮತ್ತು ಧನಂಜಯ ಎಂಬ ಹೆಸರಿನಿಂದ ಇದು 1936ರ ವರೆಗೂ ನಡೆಯಿತು. 1924ರಲ್ಲಿ ಕೆಲ ಕಾಲ ದಿನಪತ್ರಿಕೆಯಾಗಿತ್ತು. ರಾಷ್ಟ್ರೀಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದಕ್ಕೆ ಪತ್ರಿಕೆ ಮಹತ್ವ ಕೊಟ್ಟರೂ ಬರೆವಣಿಗೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಕಾನೂನಿನ ಮಿತಿಯೊಳಗೆ ಇರಿಸಿಕೊಂಡಿತ್ತು. ಸಂಪಾದಕರಾದ ಮುದವೀಡು ಅವರು ತಮ್ಮ ಉಗ್ರ ವಿಚಾರಗಳಿಗಾಗಿ ಹಾಗೂ ಭಾಷಣಗಳಿಗಾಗಿ ಕಾರಾಗೃಹ ಸೇರಿದ್ದರೂ ಪತ್ರಿಕೆಯ ಮೇಲೆ ಸರ್ಕಾರ ತೀವ್ರಕ್ರಮ ಕೈಗೊಂಡಿರಲಿಲ್ಲ. ಜಲಿಯನ್‌ವಾಲಾಬಾಗ್ ದುರಂತ ಪ್ರಕರಣದಲ್ಲಿ ಗೋಲೀಬಾರು ಆಜ್ಞೆಗೆ ಕಾರಣನಾದ ಜನರಲ್ ಡಯರ್‌ನನ್ನೂ ಧಾರವಾಡದ ಕಲೆಕ್ಟರಾದ ಪೇಂಟರನ್ನೂ ಹೋಲಿಸಿ 1920 ರಲ್ಲಿ ಬರೆದ ವ್ಯಂಗ ಲೇಖನಕ್ಕಾಗಿ ಸರ್ಕಾರ ಈ ಪತ್ರಿಕೆಯ ಮೇಲೆ ಮೊಕದ್ದಮೆ ಹೂಡಿದ್ದರೂ ಅದು ವಿಫಲವಾಯಿತು.

ಕರ್ನಾಟಕ ವೃತ್ತದಲ್ಲಿ ರಾಜಕೀಯ ಸುದ್ದಿಗಳಲ್ಲದೇ ಸ್ವದೇಶಿ ಪ್ರಚಾರ, ಕನ್ನಡ ಭಾಷೆಯ ಪುನರುಜ್ಜೀವನ, ಕರ್ನಾಟಕದ ಏಕೀಕರಣ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಸುದ್ದಿಗಳೂ ಅಭಿಪ್ರಾಯಗಳೂ ಪ್ರಕಟವಾಗುತ್ತಿದ್ದವು. ಪ್ರತಿ ಸಂಚಿಕೆಯೂ ಡಿಮೈ ಪೂರ್ಣಾಕಾರದ 3-8 ಪುಟಗಳನ್ನೊಳಗೊಡಿರುತ್ತಿತ್ತು. (ಪಿ.ವಿ.ಎ.)

**ಕರ್ನಾಟಕ ವೈಭವ** : ಬಿಜಾಪುರದಿಂದ ಪ್ರಕಟವಾಗುತ್ತಿರುವ ಕನ್ನಡ ದ್ವಿಸಾಪ್ತಾಹಿಕ ಪತ್ರಿಕೆ. ರಾಷ್ಟ್ರೀಯ ಜಾಗೃತಿಗೆ, ಕನ್ನಡದ ಅರಿವಿಗೆ 1892ರಲ್ಲಿ ಸವಣೂರು ಗುಂಡುರಾಯರು ಬಿಜಾಪುರದಲ್ಲಿ ವಾರಪತ್ರಿಕೆಯಾಗಿ ಇದನ್ನು ಪ್ರಾರಂಭಿಸಿದರು. 1904 ರಿಂದ 1908ರವರೆಗೆ ಬಂಗಾಲ ವಿಭಜನೆಯ ಆಂದೋಲನದ ಕಾಲದಲ್ಲಿ ಈ ಪತ್ರಿಕೆಯಲ್ಲಿ ಪ್ರಕಟವಾದ ಉಗ್ರಲೇಖನಗಳನ್ನು ಕಂಡು ಆಗ ಭಾರತಕ್ಕೆ ಬಂದಿದ್ದ ಲಂಡನ್ ಟೈಮ್ಸ್ ಪತ್ರಿಕಾ ವರದಿಗಾರ ವ್ಯಾಲಂಟೈನ್ ಚಿರೋಲ್ ತನ್ನ ಇಂಡಿಯನ್ ಅನ್‌ರೆಸ್ಟ್ ಗ್ರಂಥ'ದಲ್ಲಿ ಕರ್ನಾಟಕ ವೈಭವ ಉಗ್ರ ಕ್ರಾಂತಿಕಾರಿ ಪತ್ರಿಕೆಯೆಂದು ಬರೆದಿದ್ದ.

1920ರಲ್ಲಿ ಜಯರಾವ್ ದೇಶಪಾಂಡೆಯವರು ಇದರ ಸಂಪಾದಕರಾದರು. ಅಸಹಕಾರ ಚಳವಳಿಯ ಕಾಲದಲ್ಲಿ ಪತ್ರಿಕೆಯ ಪ್ರಸಾರ ಹೆಚ್ಚಿತು. ಮೊಹರೆ ಹಣಮಂತರಾಯರು ಈ ಕಾಲದಲ್ಲಿ ಬರೆದ ಒಂದು ಅಗ್ರಲೇಖನಕ್ಕಾಗಿ, ಸಂಪಾದಕರು 1923ರಲ್ಲಿ ಬರೆದ ಕರ್ನಾಟಕವೀರರು ಎಂಬ ಅಗ್ರಲೇಖನಕ್ಕಾಗಿ ಸೆರೆಮನೆ ಸೇರಬೇಕಾಯಿತು. ಆಗ ಎರಡು ವರ್ಷಗಳ ವರೆಗೆ ಮೊಹರೆ ಹಣಮಂತರಾಯರು ಬಿಡುಗಡೆಯಾಗಿ ಬರುವವರೆಗೂ ಕೌಜಲಗಿ ಹಣಮಂತರಾಯರು ಸಂಪಾದಕರಾಗಿದ್ದರು. ಮೊಹರೆ ಹಣಮಂತರಾಯರು ಸಂಯುಕ್ತ ಕರ್ನಾಟಕ ಪತ್ರಿಕೆಗೆ ಸಂಪಾದಕರಾಗಿದ್ದಾಗ ನಾಯಕ ವೆಂಕಟರಾಯರೂ ಎನ್.ಎಚ್.ನಾಯಕರೂ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಪತ್ರಿಕೆಯಲ್ಲಿ ಪ್ರಾರಂಭದಲ್ಲಿ ಕನ್ನಡ, ಮರಾಠಿ ಮತ್ತು ಇಂಗ್ಲಿಷ್ ಲೇಖನಗಳಿರುತ್ತಿದ್ದವು. (ಎಸ್.ವಿ.ಪಿ.)

**ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗಗಳು** : ಹಿಂದುಳಿದ ವರ್ಗಗಳೆಂದು ಪರಿಗಣಿತವಾದ ಜಾತಿಗಳು ಮತ್ತು ಸಮುದಾಯಗಳ ಉನ್ನತಿಗಾಗಿ ಕರ್ನಾಟಕ ಸರ್ಕಾರ ಕಾಲದಿಂದ ಕಾಲಕ್ಕೆ ಅನೇಕ ಆಯೋಗಗಳನ್ನು ರಚಿಸಿದೆ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಹಿಂದುಳಿದ ವರ್ಗಗಳೆಂಬ ಪರಿಕಲ್ಪನೆ ಸಾರ್ವಜನಿಕ ವಲಯದಲ್ಲಿ ಕೇಳಿ ಬಂತು. ಅದುವರೆಗೂ ಬ್ರಿಟಿಷರ ನೇರ ಅಧೀನದ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಸರ್ಕಾರಿ ನೌಕರಿಗಳನ್ನು ವಿವೇಚನೆಯ ಮತ್ತು ಅರ್ಹತೆಯ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿತ್ತು. ಇದರಲ್ಲಿ ಸೇಕಡ ಸು.75ರಷ್ಟು ಭಾಗ ಬ್ರಾಹ್ಮಣರೇ ಇರುತ್ತಿದ್ದರು. ಈ ಸಮುದಾಯ ವಿದ್ಯೆಯಲ್ಲಿ ಅದರಲ್ಲೂ ಇಂಗ್ಲಿಷ್ ವಿದ್ಯಾಭ್ಯಾಸದಲ್ಲಿ ಮುಂದಿರುತ್ತಿತ್ತು. ಉಳಿದಂತೆ ಐರೋಪ್ಯ ಅಧಿಕಾರಿಗಳು ಮತ್ತು ಅರಸು ಮನೆತನ ಮೂಲದವರು ಆಡಳಿತದಲ್ಲಿದ್ದರು. ಬ್ರಾಹ್ಮಣ ವರ್ಗ ಆಡಳಿತದ ಎಲ್ಲ

ಶಾಖೆಗಳಲ್ಲಿ ಬೇರೂರಿದ್ದಲ್ಲದೆ ರಾಜಕೀಯವಾಗಿಯೂ ಮುಂಚೂಣಿಗೆ ಬಂದಿತು. ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲೂ ಬ್ರಾಹ್ಮಣರು ಮುಂದಾಳುಗಳಾಗಿದ್ದರು. ಇದನ್ನು ಗಮನಿಸಿದ ಬ್ರಿಟಿಷ್ ಪ್ರಭುತ್ವ ಸಮಾಜವನ್ನು ಹಿಂದು-ಮುಸ್ಲಿಮ್ ಎಂದು ಬೇರ್ಪಡಿಸಿದ್ದಂತೆ ಬ್ರಿಟಿಷರ ಆಳಿಕೆಯನ್ನು ಪ್ರಶ್ನಿಸುವ ಬ್ರಾಹ್ಮಣರನ್ನು ಇತರ ಬಹುಸಂಖ್ಯಾತ ಸಮುದಾಯಗಳಿಂದ ಬೇರ್ಪಡಿಸಿದರೆ ಸ್ವಾತಂತ್ರ್ಯ ಚಳವಳಿಯನ್ನು ಸಮರ್ಥವಾಗಿ ಹತ್ತಿಕ್ಕಬಹುದೆಂಬ ಚಿಂತನೆ ಮಾಡಿತು. ಜೊತೆಗೆ ಆಗತಾನೇ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿದ್ದ ಮುಸ್ಲಿಮರೂ ಸೇರಿದಂತೆ ಹಲವಾರು ಹಿಂದುಳಿದ ವರ್ಗಗಳ ವಿದ್ಯಾವಂತ ಯುವಕರು ಬ್ರಾಹ್ಮಣರನ್ನು ಸ್ಪರ್ಧೆಯಲ್ಲಿ ಸರಿಗಟ್ಟಲು ಸಾಧ್ಯವಾಗದೆ ಚಡಪಡಿಸುತ್ತಿದ್ದರು. ಈ ಅತೃಪ್ತಿ ಪತ್ರಿಕೆಗಳಲ್ಲಿ ಸಾರ್ವಜನಿಕ ಹಾಗೂ ಖಾಸಗೀ ಸಭೆಗಳ ಮೂಲಕ ಪ್ರಕಟವಾಗತೊಡಗಿತು. ಮಹಾರಾಷ್ಟ್ರದಲ್ಲಿ ಜ್ಯೋತಿಭಾಫುಲೆ ಈ ಚಳವಳಿಗೆ ಒಂದು ರೂಪುಕೊಟ್ಟರೆ, ಮದರಾಸಿನಲ್ಲಿ ಪೆರಿಯಾರ್ ಅವರು ಇದನ್ನು ಸಂಘಟಿಸಿದರು. ಅಲ್ಲಿ ಜಸ್ಟೀಸ್ ಪಾರ್ಟಿ ಎಂಬ ಒಂದು ರಾಜಕೀಯ ಸಂಘಟನೆ ಪ್ರಾರಂಭವಾಗಿ ಅದು ಬ್ರಾಹ್ಮಣೇತರ ಹಿಂದುಳಿದವರಿಗೆ ರಾಜಕೀಯ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವಂತೆ ಒತ್ತಾಯಿಸಿತು. ಅಲ್ಲಿ ಕೆಲಸ ಮಾಡಿ ಮೈಸೂರು ಸಂಸ್ಥಾನದ ಸೇವೆಗೆ ಸೇರಿದ ಸಿ.ಆರ್.ರೆಡ್ಡಿ ಮೊದಲಾದ ಹಿಂದುಳಿದ ವರ್ಗದ ಅಧಿಕಾರಿಗಳು ಮೈಸೂರಿನಲ್ಲಿ ಅದಕ್ಕೊಂದು ಸಂಸ್ಥಾರೂಪವನ್ನು ನೀಡಲು ಶ್ರಮಿಸಿದರು. ಒಕ್ಕಲಿಗ ಜನಾಂಗದ ಕೆ.ಎಚ್.ರಾಮಯ್ಯನವರು ಇದೇ ಕಾಲದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿದ್ದರು. ಎಂ.ಬಸವಯ್ಯ, ಎಚ್.ಚನ್ನಯ್ಯ, ಗುಲಾಮ್ ಅಹಮ್ಮದ್, ಕಲಾಮಿ ಮೊದಲಾದವರು ಪ್ರಜಾಮಿತ್ರ ಮಂಡಳಿ ಎಂಬ ಪ್ರಥಮ ಹಿಂದುಳಿದವರ ರಾಜಕೀಯ ಸಂಘಟನೆ ಅಸ್ತಿತ್ವಕ್ಕೆ ಬರಲು ಕಾರಣರಾದರು. 1918ರ ಫೆಬ್ರವರಿಯಲ್ಲಿ ಈ ನಿಯೋಗ ಮಹಾರಾಜರನ್ನು ಭೇಟಿ ಮಾಡಿ ತಮ್ಮ ಅಹವಾಲನ್ನು ಸಲ್ಲಿಸಿತು.

**ಲೆಸ್ಲಿ ಮಿಲ್ಲರ್ ಸಮಿತಿ :** ಹಿಂದುಳಿದ ವರ್ಗದ ಪ್ರತಿನಿಧಿಗಳು ಸರ್ಕಾರಿ ಉದ್ಯೋಗಗಳು, ಶಿಕ್ಷಣ ಪ್ರವೇಶ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ತಮ್ಮ ಸಮುದಾಯಗಳಿಗೆ ಮೀಸಲಾತಿ ಇರಬೇಕೆಂದು ಕೋರಿ ಒತ್ತಾಯಿಸಿದ್ದರು. ಯುವರಾಜ ನರಸಿಂಹರಾಜ ಒಡೆಯರ್ ಈ ಬೇಡಿಕೆ ಬಗ್ಗೆ ಸಹಾನುಭೂತಿ ಉಳ್ಳವರಾಗಿದ್ದರು. ಇದರ ಫಲವಾಗಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಮುಖ್ಯ ನ್ಯಾಯಾಧೀಶರಾಗಿದ್ದ ಲೆಸ್ಲಿ ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಬ್ರಾಹ್ಮಣೇತರ ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ಅವರ ಏಳಿಗೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಿದರು. ಈ ಅವಧಿಯಲ್ಲಿ ಎಂ.ವಿಶ್ವೇಶ್ವರಯ್ಯನವರು (ನೋಡಿ) ದಿವಾನರಾಗಿದ್ದರು. ಅವರು ಮೈಸೂರು ರಾಜ್ಯ ಸರ್ವತೋಮುಖ ಪ್ರಗತಿ ಸಾಧಿಸಬೇಕೆಂದು ಶಿಕ್ಷಣ, ವ್ಯವಸಾಯ, ಕೈಗಾರಿಕೆ - ಈ ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಮುಂದುವರಿಯುತ್ತಿದ್ದರು. ಮೀಸಲಾತಿಯ ಬಗ್ಗೆ ತಮ್ಮದೇ ಆದ ನಿಲುವು ಹೊಂದಿದ್ದರು. ಹಿಂದುಳಿದ ವರ್ಗದವರನ್ನು ಉತ್ತಮ ಶಿಕ್ಷಣದ ಮೂಲಕ ಹೆಚ್ಚು ಅರ್ಹರನ್ನಾಗಿ ಮಾಡಿ ಸರ್ಕಾರಿ ಸೇವೆಗಳಲ್ಲಿ ನೇಮಿಸುವುದರಿಂದ ಆಡಳಿತದಲ್ಲಿ ದಕ್ಷತೆ ಹೆಚ್ಚುತ್ತದೆ ಹಾಗೂ ಮಿತವಾದ ಮೀಸಲಾತಿಯ ಮೂಲಕ ಹಂತಹಂತವಾಗಿ ಇದನ್ನು ಸಾಧಿಸಿದರೆ ಇತರರಲ್ಲಿ ಅತೃಪ್ತಿ ಕಡಿಮೆ ಪ್ರಮಾಣದಲ್ಲುಳಿದು ಸಾಮರಸ್ಯ ಸಾಧನೆಯೂ ಆಗುತ್ತದೆ ಎಂಬುದು ಅವರ ಖಚಿತ ನಿಲುವಾಗಿತ್ತು. ಆದರೆ ಮಹಾರಾಜರು ಬಹು ಜನಾಭಿಪ್ರಾಯದಂತೆ ಮಿಲ್ಲರ್ ಸಮಿತಿ ನೇಮಿಸಿದ್ದು, ಆ ಸಮಿತಿಗೆ ವಹಿಸಲಾದ ಕಾರ್ಯಸೂಚಿಗಳೂ ಮೊದಲಾದವುಗಳ ಬಗ್ಗೆ ವಿಶ್ವೇಶ್ವರಯ್ಯನವರಿಗೆ ಸಮಾಧಾನವಿರಲಿಲ್ಲ. ವಿಶ್ವೇಶ್ವರಯ್ಯನವರು ಈ ಕಾರಣಕ್ಕಾಗಿ ರಾಜೀನಾಮೆ ಕೊಟ್ಟರು ಎಂಬ ಮಾತು ಅಂದಿನ ದಿನಗಳಲ್ಲಿ ಹೆಚ್ಚಾಗಿ ಕೇಳಿಬಂದರೂ ಅವರಿಗೆ ರಾಜೀನಾಮೆ ನೀಡಲು ಇನ್ನೂ ಹಲವಾರು ರಾಜಕೀಯ ಒತ್ತಡಗಳು ಕಾರಣವಾಗಿದ್ದವು. 1918ರಲ್ಲಿ ರಚಿತವಾದ ಈ ಸಮಿತಿ 1919ರಲ್ಲಿ ತನ್ನ ಕಾರ್ಯವನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿತು.

ಲೆಸ್ಲಿ ಮಿಲ್ಲರ್ ಸಮಿತಿ ನೀಡಿದ ವರದಿಯಲ್ಲಿ ಮುಂದಿನ 7 ವರ್ಷಗಳಲ್ಲಿ ಸರ್ಕಾರದ ಸೇಕಡ 50 ರಷ್ಟು ಉನ್ನತ ಹುದ್ದೆಗಳು ಮತ್ತು ಮೂರನೆಯ ಎರಡು ಭಾಗ ಕೆಳದರ್ಜೆಯ ಹುದ್ದೆಗಳು ಹಿಂದುಳಿದ ವರ್ಗಗಳಿಗೆ ಪ್ರಾಪ್ತವಾಗಬೇಕೆಂಬ ಅಂಶ ಅಡಕವಾಗಿತ್ತು. ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ಮತ್ತು ವಿಶೇಷ ವಿದ್ಯಾರ್ಥಿವೇತನಗಳು ಈ ವರ್ಗಕ್ಕೆ ಲಭ್ಯವಾಗಬೇಕೆಂಬ ಸಲಹೆಗಳಿದ್ದವು. ಈ ವರದಿಯ ಕೆಲವು ಶಿಫಾರಸುಗಳು 1921ರಲ್ಲಿ ಸರ್ಕಾರಿ ಆದೇಶದ ಮೂಲಕ ಅನುಷ್ಠಾನಕ್ಕೆ ಬಂದವು. ಅಂದಿನಿಂದ ಇಂದಿನವರೆಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಆಯೋಗಗಳು ರಚನೆಯಾಗುತ್ತಲೇ ಬಂದಿವೆ.

1920ರ ದಶಕದ ಕೊನೆಯ ಹೊತ್ತಿಗೆ ಬ್ರಾಹ್ಮಣರನ್ನು ಬಿಟ್ಟು ಇತರ ಎಲ್ಲ ವರ್ಗಗಳಿಗೂ ನೀಡಿದ್ದ ಮೀಸಲಾತಿಯ ಅನುಷ್ಠಾನದಲ್ಲಿ ಪಕ್ಷಪಾತವಾಗಿರುವುದನ್ನು ಗುರುತಿಸಲಾಯಿತು. ಮುಸ್ಲಿಮರು, ವೀರಶೈವರು, ಜೈನರು ಮೊದಲಾದ, ಆಗ ಶಿಕ್ಷಣದಲ್ಲಿ ಸ್ವಲ್ಪ ಹೆಚ್ಚು ಮುಂದಿದ್ದ ಜಾತಿ ವರ್ಗಗಳು ಈ ಸೌಲಭ್ಯದ ಗರಿಷ್ಠ ಲಾಭ ಪಡೆದವೆಂಬ ದೂರು ಕೇಳಿಬರತೊಡಗಿತು. ಇದರ ಪರಿಣಾಮ ಎಷ್ಟಿತ್ತೆಂದರೆ 'ಪ್ರಜಾಮಿತ್ರ ಮಂಡಳಿಯಿಂದ ಸಿಡಿದುಹೋದ ಒಂದು ಗುಂಪು' ಪ್ರಜಾಪಕ್ಷವೆಂಬ ಹೊಸ ಪಕ್ಷವನ್ನೇ ಕಟ್ಟಿಕೊಂಡಿತು. ಆದರೆ ರಾಜಕೀಯ ಸಂಘಟನೆಗಾಗಿ ಅವೆರಡೂ 1935ರಲ್ಲಿ ಒಂದಾಗಿ 'ಪ್ರಜಾಸಂಯುಕ್ತ ಪಕ್ಷ' ಅಸ್ತಿತ್ವಕ್ಕೆ ಬಂದಿತು.

ಮೀಸಲಾತಿ ಕುರಿತ ವಾದವಿವಾದಗಳು ಮುಂದುವರಿಯುತ್ತಲೇ ಇದ್ದವು. ಆದರೆ ಸಮಾಜದಲ್ಲಿ ಹೊಸ ರಾಜಕೀಯ ಬೆಳವಣಿಗೆ ಕಾಣಿಸಿಕೊಂಡಿತು. ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬ್ರಾಹ್ಮಣರು ಉತ್ಸಾಹದಿಂದ ಭಾಗವಹಿಸುತ್ತಿದ್ದು ತಮಗಾದ ನಷ್ಟವನ್ನು ಮರೆತು ಇತರರೊಂದಿಗೆ ಬೆರೆಯತೊಡಗಿದರು. ಸ್ವಾತಂತ್ರ್ಯ ಚಳವಳಿ ಎಲ್ಲ ವರ್ಗದ ಜನರನ್ನೂ ಆಕರ್ಷಿಸಿತು. 1937ರಲ್ಲಿ 'ಪ್ರಜಾಸಂಯುಕ್ತ ಪಕ್ಷ' ಕಾಂಗ್ರೆಸ್ ಪಕ್ಷದಲ್ಲಿ ವಿಲೀನವಾಯಿತು. ಮುಂದೆ ಸ್ವಾತಂತ್ರ್ಯ ಚಳವಳಿಗೆ ಧುಮುಕಿದ ಎಲ್ಲ ವರ್ಗದ ಮುಖಂಡರು ಈ ಮೀಸಲಾತಿಯ ಅಸಮಾಧಾನಗಳನ್ನು ಮರೆತು ಭಾವೈಕ್ಯ ತೋರಿದರು. ಬಹುಕಾಲದವರೆಗೆ ಮಿಲ್ಲರ್ ಸಮಿತಿಯ ವರದಿಯ ಶಿಫಾರಸುಗಳೇ ಪ್ರಮುಖ ಮಾರ್ಗದರ್ಶಿ ಸೂತ್ರಗಳಾಗಿ ಮೀಸಲಾತಿ ವ್ಯವಸ್ಥೆ ಅನುಷ್ಠಾನದಲ್ಲಿತ್ತು.

**ನಾಗನಗೌಡ ಸಮಿತಿ :** ಸ್ವಾತಂತ್ರ್ಯಾನಂತರದ ಒಂದು ದಶಕ ಸಂವಿಧಾನದ ಅಳವಡಿಕೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಅನುಷ್ಠಾನ ಮತ್ತು ರಾಜ್ಯಗಳ ಪುನರ್ವಿಂಗಡಣೆಯ ಪ್ರಕ್ರಿಯೆಯಲ್ಲಿ ಕಳೆದುಹೋಯಿತು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳಿಗೆ ಸಂವಿಧಾನ ನೀಡಿದ ವಿಶೇಷ ಮೀಸಲಾತಿಯಿಂದ ಆ ವರ್ಗಗಳು ಮೀಸಲಾತಿ ದೃಷ್ಟಿಯಿಂದ ಹಿಂದುಳಿದ ವರ್ಗಗಳಿಂದ ಬೇರೆಯಾದವು. ಸರ್ಕಾರ ಕೈಗೊಂಡ ವಿವಿಧ ಅಭಿವೃದ್ಧಿ ಯೋಜನೆಗಳ ಫಲ ಎಲ್ಲ ಸಮುದಾಯಗಳಿಗೂ ಸಮಾನವಾಗಿ ಸಿಕ್ಕಲಿಲ್ಲ. ಭೂರಹಿತ ಕಾರ್ಮಿಕರು ಮತ್ತು ಚಿಕ್ಕ ಪುಟ್ಟ ಉಪಕಸುಬುಗಳನ್ನು ಮಾಡುತ್ತಿದ್ದ ಜನರಿಗೆ ಸೂಕ್ತ ಪ್ರಾತಿನಿಧ್ಯವಿಲ್ಲವೆಂಬ ಕೂಗು ಕೇಳಿಬಂತು. ಈ ಹಿನ್ನೆಲೆಯಲ್ಲಿ 1960ರಲ್ಲಿ ಸರ್ಕಾರ ಡಾ.ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಅದಕ್ಕೆ ಹಿಂದುಳಿದ ವರ್ಗಗಳ ವಿಂಗಡಣೆ ಮತ್ತು ಮೀಸಲಾತಿಯ ಪ್ರಮಾಣವನ್ನು ನಿರ್ಧರಿಸಿ ವರದಿ ಸಲ್ಲಿಸುವಂತೆ ಕೋರಿತು.

ಈ ಸಮಿತಿ ಅಧ್ಯಯನ ಕೈಗೊಂಡು ಒಂದು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿತು. ಅದು ಒಟ್ಟು 399 ಜಾತಿಗಳನ್ನು ಮೀಸಲಾತಿಗೆ ಅರ್ಹವೆಂದು ಪರಿಗಣಿಸಿತ್ತು. ಈ ಜಾತಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಸೇಕಡ 45ರಷ್ಟು ಮತ್ತು ಶಿಕ್ಷಣ ಪ್ರವೇಶದಲ್ಲಿ ಸೇಕಡ 50ರಷ್ಟು ಮೀಸಲಾತಿ ಇರಬೇಕೆಂದು ಸಲಹೆಮಾಡಿತ್ತು. ಈ ಸಮಿತಿ ಲಿಂಗಾಯತ ಸಮುದಾಯವನ್ನು ಮೀಸಲಾತಿ ಪಟ್ಟಿಯಿಂದ ಕೈ ಬಿಟ್ಟಿತ್ತು. ವ್ಯವಸಾಯ ಮತ್ತು ಕೈಗಾರಿಕೆ ಅಭಿವೃದ್ಧಿ ಹಾಗೂ ಗೃಹಕೈಗಾರಿಕೆಗಳಿಗಾಗಿ ಹಿಂದುಳಿದ ವರ್ಗಗಳಿಗೆ ವಿಶೇಷ ಹಣಕಾಸು ನೆರವು ನೀಡಲೂ ಈ ಸಮಿತಿ ಶಿಫಾರಸು ಮಾಡಿತ್ತು. ಆದರೆ ಸರ್ಕಾರ ಈ ವರದಿಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿ 1962ರಲ್ಲಿ ಒಂದು ಆದೇಶ ಹೊರಡಿಸಿತು.

ಅದರಲ್ಲಿ ಹಿಂದುಳಿದ ವರ್ಗಗಳು ಮತ್ತು ಅತಿ ಹಿಂದುಳಿದ ವರ್ಗಗಳು ಎಂಬ ಎರಡು ಗುಂಪುಗಳನ್ನು ಮಾಡಲಾಗಿತ್ತು. ಈ ವರ್ಗಗಳಿಗೆ ಅನುಕ್ರಮವಾಗಿ ಶೇಕಡ 28ರಷ್ಟು ಮತ್ತು ಸೇಕಡ 22ರಷ್ಟು ಮೀಸಲಾತಿ ನೀಡಲಾಗಿತ್ತು. ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಅದು ಅನೂರ್ಜಿತಗೊಳಿಸಲ್ಪಟ್ಟಿತು. ಈ ತೀರ್ಪಿನ ಹಿನ್ನೆಲೆಯಲ್ಲಿ 1963ರಲ್ಲಿ ಹಾಗೂ 1968ರಲ್ಲಿ ಮಾರ್ಪಾಡಾದ ಸರ್ಕಾರಿ ಆದೇಶಗಳು ಹೊರಟವು. ಎಲ್ಲ ಹಿಂದುಳಿದ ವರ್ಗಗಳು ಸೇರಿದಂತೆ ಸೇಕಡ 30ರಷ್ಟು ಮೀಸಲಾತಿ ನೀಡಲಾಯಿತು. ಆದಾಯ ಮಿತಿಯನ್ನು 2400 ರೂಪಾಯಿಗಳೆಂದು ನಿಗದಿಗೊಳಿಸಲಾಯಿತು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಒಟ್ಟು ಸೇಕಡ 18ರಷ್ಟು ಮೀಸಲಾತಿ ಪ್ರತ್ಯೇಕವಾಗಿ ಮುಂದುವರಿಯಿತು. ಇದಕ್ಕೆ ಆದಾಯ ಮಿತಿ ಇರಲಿಲ್ಲ.

**ಹಾವನೂರ್ ಆಯೋಗ :** 1970ರ ದಶಕದ ಪ್ರಾರಂಭದ ಹೊತ್ತಿಗೆ ಕರ್ನಾಟಕದ ರಾಜಕೀಯ ವಿದ್ಯಮಾನಗಳು ಹೊಸ ತಿರುವನ್ನು ಪಡೆದವು. ಬಡವರ ಏಳ್ಗೆಗಾಗಿ ಶ್ರಮಿಸುವುದು ಸರ್ಕಾರದ ಮುಖ್ಯ ಹೊಣೆ ಎಂಬ ವಿಚಾರ ಪ್ರಚಲಿತ ಮೌಲ್ಯ ಪಡೆಯಿತು. ಆಗಿನ ಮುಖ್ಯ ಮಂತ್ರಿ ಡಿ.ದೇವರಾಜ ಅರಸು (ನೋಡಿ) ಅವರು ಹಿಂದುಳಿದ ವರ್ಗಗಳ ನಾಯಕರಾಗಿ ಪ್ರತಿಬಿಂಬಿಸಲ್ಪಟ್ಟರು. ಅವರು ಈ ವರ್ಗಗಳ ಬಗ್ಗೆ ವಿಶೇಷ ಕಾಳಜಿ ಹೊಂದಿ ಗೇಣಿ ಶಾಸನ, ಲೇವಾದೇವಿ ರದ್ದಾಯಿತಿ ಶಾಸನ, ಬಾಡಿಗೆ ನಿಯಂತ್ರಣ ಕಾಯಿದೆ ಮೊದಲಾದವನ್ನು ಜಾರಿಗೆ ತಂದರು. ಬಡವರಿಗೆ ಮನೆ, ನಿವೇಶನ ನೀಡುವ ಮತ್ತು ಉಪ ಕಸಬುಗಳಿಗೆ ಉತ್ತೇಜನ ನೀಡುವ ಹಲವಾರು ಯೋಜನೆಗಳು ಜಾರಿಗೆ ಬಂದವು. ಹಿಂದುಳಿದ ವರ್ಗಗಳ ಮೀಸಲಾತಿ ಮತ್ತಿತರ ವಿಚಾರಗಳನ್ನು ಪರಿಶೀಲಿಸಿ ಸಲಹೆ ಮಾಡಲು ನ್ಯಾಯವಾದಿ ಎಲ್.ಜಿ. ಹಾವನೂರ್ ಅವರ ಅಧ್ಯಕ್ಷತೆಯಲ್ಲಿ 1972ರಲ್ಲಿ ಒಂದು ಸಮಿತಿ ರಚಿಸಲಾಯಿತು. ಈ ಸಮಿತಿ 1975ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತು.

ಈ ವರದಿಯಲ್ಲಿ ವಿವಿಧ ಬ್ರಾಹ್ಮಣೇತರ ವರ್ಗಗಳನ್ನು ಮೀಸಲಾತಿಯಿಂದ ಕೈಬಿಡಲಾಗಿತ್ತು. ಅವುಗಳಲ್ಲಿ ಲಿಂಗಾಯತ ಅಥವಾ ವೀರಶೈವ, ಜೈನ, ಬಂಟ, ಕ್ರೈಸ್ತ, ಅರಸು ಮತ್ತಿತರ ಸಮುದಾಯಗಳು ಮುಖ್ಯವಾಗಿದ್ದವು. ಈ ವರ್ಗಗಳಿಂದ ಬರಬಹುದಾದ ಪ್ರತಿಭಟನೆಯ ಬಗ್ಗೆ ಆತಂಕಗೊಂಡ ಸರ್ಕಾರ ವರದಿಯ ಅನುಷ್ಠಾನವನ್ನು ಸ್ವಲ್ಪಕಾಲ ಮುಂದೂಡಿತು. ಮುಂದೆ ರಾಷ್ಟ್ರದಲ್ಲಿ ತುರ್ತುಸ್ಥಿತಿ ಜಾರಿಗೆ ಬಂದು ಸರ್ಕಾರ ಹೆಚ್ಚು ಪ್ರಬಲವಾದಾಗ ದೇವರಾಜ ಅರಸು ಅವರು ಈ ವರದಿಯ ಅನುಷ್ಠಾನಕ್ಕೆ ಧೈರ್ಯ ತೋರಿದರು. ಸರ್ಕಾರ 1977 ಫೆಬ್ರವರಿ 22ರಂದು ಈ ವರದಿಯನ್ನು ಅಂಗೀಕರಿಸಿ ಆದೇಶ ಹೊರಡಿಸಿತು. ಅದರಲ್ಲಿ ವಿವಿಧ ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಲಾಗಿತ್ತು. (1) ಹಿಂದುಳಿದ ಸಮುದಾಯಗಳು (ಸೇ.20); (2) ಹಿಂದುಳಿದ ಜಾತಿಗಳು (ಸೇ.10); (3) ಹಿಂದುಳಿದ ಪಂಗಡಗಳು (ಸೇ.5). ಇವುಗಳ ಜೊತೆಗೆ ಮುಂದುವರಿದವೆಂದು ಪರಿಗಣಿತವಾದ ವಿವಿಧ ಸಮುದಾಯಗಳ ಬಡವರನ್ನು ವಿಶೇಷ ಗುಂಪೆಂದು ಪರಿಗಣಿಸಿ ಅವುಗಳಿಗೆ ಸೇ.5ರಷ್ಟು ಮೀಸಲಾತಿಯನ್ನು ನೀಡಲಾಯಿತು. ಈ ಎಲ್ಲ ವರ್ಗಗಳ ಹಿಂದುಳಿದ ಜಾತಿ ಮತ್ತು ಸಮುದಾಯಗಳ ವ್ಯಕ್ತಿಗಳಿಗೆ ಮೀಸಲಾತಿ ಸೌಲಭ್ಯ ಪಡೆಯಲು ವಾರ್ಷಿಕ 10,000 ರೂಪಾಯಿಗಳ ಆದಾಯ ಮಿತಿಯನ್ನು ವಿಧಿಸಲಾಯಿತು. ಈ ವರದಿ ಹಿಂದುಳಿದ ವರ್ಗಗಳ ಆಯೋಗಗಳಲ್ಲಿ ಮಾತೃಸ್ಥಾನ ಪಡೆದಿದೆ. ಈ ಆಯೋಗದ ಮಾರ್ಗದರ್ಶಿ ಸಲಹೆಗಳ ಆಧಾರಗಳು ವೈಜ್ಞಾನಿಕವಾದ ಭದ್ರ ಅಂಕಿ-ಅಂಶಗಳಿಂದ ಕೂಡಿದ್ದವು. ಈ ಸಂದರ್ಭದಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ವಿಚಾರ ಪ್ರಶ್ನೆಯಾಗುಳಿಯದೆ ಹಿಂದುಳಿದ ವರ್ಗಗಳಲ್ಲಿ ಯಾರನ್ನು ಮೀಸಲಾತಿಯಿಂದ ಕೈಬಿಡಬೇಕು ಮತ್ತು ಯಾರನ್ನು ಸೇರಿಸಬೇಕು ಎಂಬ ಪ್ರಶ್ನೆ ಬೃಹದಾಕಾರ ಪಡೆಯಿತು. ಯಾವುದೇ ಮಾನದಂಡದಿಂದ ನೋಡಿದರೂ ಒಂದು ಸಮುದಾಯದಲ್ಲಿ ಹಿಂದುಳಿದ ವ್ಯಕ್ತಿಗಳ ಸಮೂಹ ಇದ್ದೇ ಇರುತ್ತಿತ್ತು. ಮುಖ್ಯಮಂತ್ರಿ ದೇವರಾಜ ಅರಸರಿಗೆ ತಮ್ಮ ಅರಸು ಸಮುದಾಯವನ್ನು ಹಿಂದುಳಿದ ಪಟ್ಟಿಯಿಂದ ಹಾವನೂರ್ ಆಯೋಗ ಕೈಬಿಟ್ಟದ್ದು ಸರಿಕಾಣಲಿಲ್ಲ. ಕೆಲವು ಕೈ ಬಿಟ್ಟ ಜನಾಂಗಗಳೊಡನೆ ಅರಸು ಸಮುದಾಯವನ್ನು ಸೇರಿಸಿ ಅರಸು ಸರ್ಕಾರ ಮೀಸಲಾತಿ ಆದೇಶ ಹೊರಡಿಸಿತು.

ಯಥಾಪ್ರಕಾರ ಹಾವನೂರು ಆಯೋಗದ ವರದಿಯನ್ನು ಆಧರಿಸಿದ ಸರ್ಕಾರಿ ಆದೇಶವೂ ನ್ಯಾಯಾಲಯದಲ್ಲಿ ಪ್ರಶ್ನಿಸಲ್ಪಟ್ಟಿತ್ತು. ನ್ಯಾಯಾಲಯ ಹೊಸದಾಗಿ ಸರ್ಕಾರದಿಂದ ಸೇರಿಸಲಾದ ಸಮುದಾಯಗಳನ್ನು ಅನೂರ್ಜಿತಗೊಳಿಸಿತು. 1979ರಲ್ಲಿ ಈ ಸಂಬಂಧವಾದ ಮರು ಆದೇಶವನ್ನು ಸರ್ಕಾರ ಹೊರಡಿಸಿತು. ಇಡೀ ಹಿಂದುಳಿದ ವರ್ಗಗಳಿಗೆ ಸೇ.50ರಷ್ಟಕ್ಕೆ ಮೀರದಂತೆ ಮೀಸಲಾತಿಯನ್ನು ನಿಗದಿಪಡಿಸಲಾಯಿತು. ಅದರಲ್ಲಿ ಸೇ.5ರಷ್ಟು ಮೀಸಲಾತಿ ಪಡೆದಿದ್ದ ವಿಶೇಷ ಗುಂಪಿಗೆ ಮೀಸಲಾತಿಯನ್ನು ಸೇ.15ಕ್ಕೆ ಹೆಚ್ಚಿಸಲಾಯಿತು.

**ವೆಂಕಟಸ್ವಾಮಿ ಆಯೋಗ :** ಹಿಂದುಳಿದ ವರ್ಗಗಳ ಮೀಸಲಾತಿ ಪ್ರಶ್ನೆ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲು ಹತ್ತಿತ್ತು. ಅಲ್ಲಿ ತೋರಿಬಂದ ಕೆಲವು ನ್ಯೂನತೆಗಳ ಸಂಬಂಧವಾಗಿ ಕರ್ನಾಟಕ ಸರ್ಕಾರ ನ್ಯಾಯಾಲಯಕ್ಕೆ ಒಂದು ದೃಢೀಕರಣ ಪತ್ರ ನೀಡಿ ಇನ್ನೊಂದು ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲು ತಾನು ಬದ್ಧವಿರುವುದಾಗಿ ತಿಳಿಸಿತು. 1983ರಲ್ಲಿ ರಾಮಕೃಷ್ಣಹೆಗ್ಗಡೆಯವರ ನೇತೃತ್ವದ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ವೆಂಕಟಸ್ವಾಮಿ ಅವರ ಅಧ್ಯಕ್ಷತೆಯ ಎರಡನೆಯ ಹಿಂದುಳಿದ ಆಯೋಗ ಅಸ್ತಿತ್ವಕ್ಕೆ ಬಂದಿತು. ಅದು 17 ವಿವಿಧ ಸೂಚಕಗಳನ್ನು ಪರಿಶೀಲಿಸಿ ವಿವಿಧ ಹಿಂದುಳಿದ ವರ್ಗಗಳಿಗೆ ಸಲ್ಲಬೇಕಾದ ಮೀಸಲಾತಿಯ ಪ್ರಮಾಣವನ್ನು ನಿರ್ಧರಿಸಿ 1986ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯಲ್ಲಿ ಕೆಲವು ಸಮುದಾಯಗಳನ್ನು ಮೀಸಲಾತಿಯಿಂದ ಕೈಬಿಟ್ಟದ್ದರಿಂದ ಉಂಟಾದ ರಾಜಕೀಯ ಒತ್ತಡಕ್ಕೆ ಮಣಿದ ಸರ್ಕಾರ ಕೆಲವು ಕಾರಣಗಳನ್ನು ನೀಡಿ ಈ ಆಯೋಗದ ವರದಿಯನ್ನು ತಿರಸ್ಕರಿಸಿತು.

ಈ ನಡುವೆ ಸರ್ಕಾರ 1986ರ ಅಕ್ಟೋಬರ್ ತಿಂಗಳಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಒಂದು ಮಧ್ಯಂತರ ಆಜ್ಞೆಯನ್ನು ಹೊರಡಿಸಿತು. ಅದರ ಪ್ರಕಾರ 'ಎ', 'ಬಿ', 'ಸಿ', 'ಡಿ' ಮತ್ತು 'ಈ' ಗುಂಪುಗಳಾಗಿ ಹಿಂದುಳಿದವರನ್ನು ವಿಂಗಡಿಸಲಾಯಿತು. ಕೊನೆಯದು ಹಿಂದಿನಂತೆ ವಿಶೇಷ ಗುಂಪಾಗಿ ಪರಿಗಣಿತವಾಯಿತು. ಹಾವನೂರು ಆಯೋಗದಲ್ಲಿ ಅವಕಾಶ ಪಡೆಯದಿದ್ದ ಲಿಂಗಾಯತರು ಅಥವಾ ವೀರಶೈವರು ಮತ್ತಿತರರೂ ಇದರಲ್ಲಿ ಅವಕಾಶ ಪಡೆದದ್ದು ಗಮನಾರ್ಹವಾಗಿತ್ತು. 'ಎ' ಗುಂಪಿಗೆ ಆದಾಯ ಮಿತಿಯ ನಿರ್ಬಂಧ ತೆಗೆದು ಹಾಕಲಾಯಿತು.

**ಚಿನ್ನಪ್ಪರೆಡ್ಡಿ ಆಯೋಗ :** ಹಿಂದುಳಿದ ವರ್ಗಗಳ ಮೀಸಲಾತಿಯ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯಗಳು ಉದ್ಭವಿಸಿದರೂ ಆಯೋಗಗಳಿಗೆ ಪುನರಪಿ ಮರಣ ಪುನರಪಿ ಜನನದ ಅವಸ್ಥೆ ತಪ್ಪಲಿಲ್ಲ. ಮತ್ತೆ ಕರ್ನಾಟಕ ಸರ್ಕಾರ ಚಿನ್ನಪ್ಪರೆಡ್ಡಿಯವರ ನೇತೃತ್ವದಲ್ಲಿ ಮೂರನೆಯ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿತು. ಈ ಆಯೋಗ ಹಿಂದುಳಿದ ವರ್ಗಗಳನ್ನು ಕುರಿತು ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಪರಿಶೀಲನೆ ನಡೆಸಿತು. ಈ ಆಯೋಗ 1960ರ ದಶಕದಲ್ಲಿದ್ದಂತೆ ಅತ್ಯಂತ ಹಿಂದುಳಿದವರು, ಅತಿ ಹಿಂದುಳಿದವರು ಮತ್ತು ಹಿಂದುಳಿದವರು ಎಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಈ ವರ್ಗಗಳನ್ನು ವಿಭಜಿಸಿ ಪ್ರಮಾಣಾನುಗುಣವಾಗಿ ಮೀಸಲಾತಿಯನ್ನು ನಿಗದಿಪಡಿಸಿತು. ಆ ಪ್ರಕಾರ ಇಡೀ ವರ್ಗವನ್ನು ಒಟ್ಟು ನಾಲ್ಕು ಗುಂಪುಗಳಾಗಿ ವಿಂಗಡಿಸಿತು. ಗರಿಷ್ಠ ಸೇ.50ರಷ್ಟು ಮೀಸಲಾತಿ ನಿಗದಿಪಡಿಸಿತು. ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ವೃತ್ತಿ ನಡೆಸುವ ಹಿಂದುಳಿದವರಿಗೆ ಹೇಗೆ ಸರ್ಕಾರ ನೆರವಾಗಬೇಕೆಂಬ ಬಗ್ಗೆಯೂ ಯೋಜನೆ ಹಾಕಿಕೊಟ್ಟಿತು. ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯವೆಂದು ಸಲಹೆ ಮಾಡಿತು.

ಈ ಆಯೋಗದ ವರದಿಯನ್ನು 1990ರ ಏಪ್ರಿಲ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಲಾಯಿತು. 1992ರಲ್ಲಿ ಕೇಂದ್ರ ಸರ್ಕಾರ ಹಿಂದುಳಿದ ವರ್ಗಗಳನ್ನು ಕುರಿತು ವರದಿ ಸಲ್ಲಿಸಲು ನೇಮಿಸಿದ್ದ ಮಂಡಲ್ ಆಯೋಗದ ವರದಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಪು ನೀಡಿತು. ಅದನ್ನು ಅನುಸರಿಸಿ 1993ರಲ್ಲಿ ಕೇಂದ್ರ ಸರ್ಕಾರ ಒಂದು ಪರಿಷ್ಕೃತ ಆದೇಶ ಹೊರಡಿಸಿತು. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ನೀಡುವ ಮೀಸಲಾತಿಯೂ ಸೇರಿದಂತೆ ಯಾವುದೇ ಮೀಸಲಾತಿಯೂ ಸೇ.50ಕ್ಕೆ

ಮೀರಬಾರದೆಂಬುದು ನ್ಯಾಯಾಲಯದ ನಿರ್ದೇಶನವಾಗಿತ್ತು. ಜೊತೆಗೆ ರಾಜ್ಯ ಸರ್ಕಾರದ ಚಿನ್ನಪ್ಪರೆಡ್ಡಿ ಆಯೋಗ ಹಿಂದುಳಿದವರ ಪಟ್ಟಿಯಿಂದ ಕೈಬಿಟ್ಟಿದ್ದ ಕೆಲವು ಸಮುದಾಯಗಳನ್ನು ಮಂಡಲ್ ಆಯೋಗ ಹಿಂದುಳಿದದ್ದೆಂದು ಪರಿಗಣಿಸಿತ್ತು. ಉದಾಹರಣೆಗೆ, ಕರ್ನಾಟಕದ ಒಕ್ಕಲಿಗ ಸಮುದಾಯ. ಚಿನ್ನಪ್ಪರೆಡ್ಡಿ ಆಯೋಗದ ಅನುಷ್ಠಾನಕ್ಕೆ ಆದೇಶ ಹೊರಟಾಗ ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆಗಳು ಪ್ರಕಟವಾದವು. ಇದರಿಂದ ವಿಚಲಿತವಾದ ರಾಜ್ಯಸರ್ಕಾರ ಈ ವರದಿಯ ಅನುಷ್ಠಾನವನ್ನು ಹಿಂದಕ್ಕೆ ತೆಗೆದುಕೊಂಡಿತು. ಅನಂತರದಲ್ಲಿ ಮಧ್ಯಂತರ ಆದೇಶವೇ ಅಧಿಕೃತವಾಯಿತು. ಮಧ್ಯಂತರ ಆದೇಶದ ಕಲಂಗಳಿಗೆ ೨ಎ, ೨ಬಿ, ೩ಎ, ೩ಬಿ ಎಂಬ ಉಪವಿಂಗಡನೆಗಳನ್ನೂ ಮಾಡುವ ಮೂಲಕ ಕೆಲವು ಸುದಾಯಗಳಿಗೆ ನಿರ್ದಿಷ್ಟ ಪ್ರಮಾಣದ ಮೀಸಲಾತಿ ನಿಗದಿಪಡಿಸಲಾಗಿದೆ. ಪ್ರತಿಯೊಂದು ಸಮುದಾಯಕ್ಕೂ ಮೀಸಲಾತಿಯ ಸೌಲಭ್ಯ ಒದಗಿಸುವುದೇ ಈ ಒಳವಿಂಗಡನೆಯ ಉದ್ದೇಶ. ಆದರೆ ಹಿಂದುಳಿದ ವರ್ಗಗಳ ವಿಷಯ ಮತ್ತು ವಿಚಾರ ಸದಾ ಪರಿಶೀಲನೆಗೆ ಅರ್ಹವಾದುವೆಂದೂ ಅವುಗಳಿಗೆ ನೀಡಬೇಕಾದ ಸೌಲಭ್ಯಗಳು ಸದಾ ವೀಕ್ಷಣೆಗೆ ಒಳಪಡಬೇಕೆಂದೂ ಸಾರ್ವಜನಿಕ ಅಭಿಪ್ರಾಯ ರೂಪಿತವಾಯಿತು. ಇದನ್ನನುಸರಿಸಿ ಸರ್ಕಾರ 1994ರಲ್ಲಿ ಹಿಂದುಳಿದ ವರ್ಗಗಳ ಖಾಯಂ ಆಯೋಗ ರಚನೆಗೆ ಕ್ರಮಕೈಗೊಂಡಿತು. ಹೀಗೆ ರಚಿತವಾದ ಖಾಯಂ ಆಯೋಗದ ಮೊದಲ ಅಧ್ಯಕ್ಷರು ನಿವೃತ್ತ ನ್ಯಾಯಾಧೀಶರಾಗಿದ್ದ ಕುದೂರು ನಾರಾಯಣಪೈಗಳು.

ಇಪ್ಪತ್ತನೆಯ ಶತಮಾನ ಹಿಂದುಳಿದ ವರ್ಗಗಳ ಜಾಗೃತಿಯ ಶತಮಾನ. ದೀರ್ಘ ಕಾಲದ ಹೋರಾಟ ಮತ್ತು ಪ್ರಜಾಪ್ರಭುತ್ವ ಸರ್ಕಾರಗಳ ಕಾಳಜಿಯ ಫಲವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯೂ ಸೇರಿದಂತೆ ವಿವಿಧ ಅಭಿವೃದ್ಧಿ ಸವಲತ್ತುಗಳು ಜಾರಿಗೆ ಬಂದಿವೆ. ಸರ್ಕಾರ ಹಿಂದುಳಿದ ವರ್ಗಗಳ ಕುಂದುಕೊರತೆಗಳನ್ನು ಗಮನಿಸಿ ಸೌಲಭ್ಯ ಕಲ್ಪಿಸಲು ಒಂದು ಇಲಾಖೆಯನ್ನೇ ತೆರೆದಿದೆ. ಈ ವರ್ಗಗಳ ಹಣಕಾಸು ನೆರವಿಗಾಗಿ ಹಣಕಾಸು ಕಾರ್ಪೋರೇಷನ್ ರಚಿತವಾಗಿದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಈ ಮೇಲಿನ ಆಯೋಗಗಳ ಕೊಡುಗೆ ಅಪಾರವಾದದ್ದೂ ಬೆಲೆಯುಳ್ಳದ್ದೂ ಆಗಿರುವುದು ಗಮನಾರ್ಹ ವಿಚಾರವಾಗಿದೆ. (ಡಿ.ಎಸ್.ಜೆ.)

**ಕರ್ಪೂರ ಶ್ರೀನಿವಾಸರಾವ್ :** 1863-1932. ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತ್ಯ ಪ್ರೇಮಿಗಳಾಗಿ ಕನ್ನಡ ನುಡಿಯ ಅಭಿವೃದ್ಧಿಗಾಗಿ ಶ್ರಮಿಸಿದವರು. ಕನ್ನಡ ಸಾಹಿತ್ಯ ಪರಿಷತ್ತಿನ

ನಿರ್ಮಾಣಕಾರ್ಯದಲ್ಲಿ ಇವರು ವಹಿಸಿದ ಆಸಕ್ತಿ ಸ್ಮರಣೀಯ. ಜನನ 1863. ಇವರ ತಂದೆ ಕರ್ಪೂರ ಸುಬ್ಬರಾವ್. ಇವರ ಪೂರ್ವಿಕರು ತಿರುಪತಿಯ ತಿಮ್ಮಪ್ಪನ ದರ್ಶನಕ್ಕೆ ಮೊದಲು ಹೋದಾಗ, ಬೆಟ್ಟದ ಅಡಿಯಿಂದ ಮುಡಿಯವರೆಗೂ ಉಂಡುಂಡೆ ಕರ್ಪೂರವನ್ನು ಉರಿಸಿದ್ದರಿಂದ ಇವರ ವಂಶಕ್ಕೆ ಕರ್ಪೂರ ಎಂಬ ಹೆಸರು ಬಂತಂತೆ. ಇವರದು ಶ್ರೀಮಂತ ಮನೆತನವಾಗಿದ್ದರೂ ಇವರ ತಂದೆಯವರ ಕಾಲಕ್ಕೆ ಬಹಳ ಬಡತನದಲ್ಲಿಯೇ ಇವರ ವ್ಯಾಸಂಗ ನಡೆಯಿತು. ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ, ಇಂಟರ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವಷ್ಟರಲ್ಲಿ ಇವರ ತಂದೆಯವರು ತೀರಿಕೊಂಡರು. ಹೀಗಾಗಿ ಇವರು ಮುಂದಿನ ವ್ಯಾಸಂಗದ ಆಸೆಯನ್ನು ಬಿಟ್ಟು, ಪುಣೆಗೆ ಹೋಗಿ ಉದ್ಯೋಗಕ್ಕಾಗಿ ಪ್ರಯತ್ನಿಸಿದರು. ಈ ಸಮಯದಲ್ಲಿ ವಕೀಲರೊಬ್ಬರ ಪರಿಚಯವಾಯಿತು. ಆ ವಕೀಲರು ಇವರ ಪ್ರತಿಭೆಯನ್ನು ಗುರುತಿಸಿ, ಇವರ ಮುಂದಿನ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಟ್ಟರು. ಪ್ರೋತ್ಸಾಹಗೊಂಡ ಶ್ರೀನಿವಾಸರಾಯರು ಪುಣೆಯಲ್ಲಿದ್ದು ಕೊಂಡು ಬಿ.ಎಸ್‌ಸಿ., ಎಲ್.ಸಿ.ಇ. ಪದವಿಗಳನ್ನು ಗಳಿಸಿದರು. ಮುಂಬಯಿ ಪ್ರಾಂತ್ಯದ ಮರಾಮತ್ ಇಲಾಖೆಯಲ್ಲಿ ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿದ ಇವರು, ಆ ಇಲಾಖೆಯಲ್ಲಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿ, ಮುಖ್ಯ ಎಂಜಿನಿಯರ್ ಪದವಿಗೇರಿ ನಿವೃತ್ತರಾದರು. ಇವರ ವೈಜ್ಞಾನಿಕ ಪ್ರತಿಭೆ ಕಾರ್ಯದಕ್ಷತೆಗಳನ್ನು ಗುರುತಿಸಿದ ಆಗಿನ ಮೈಸೂರು ಸರ್ಕಾರ ಇವರನ್ನು ಪ್ರಧಾನ ಎಂಜಿನಿಯರ್ ಹುದ್ದೆಗೆ ನೇಮಿಸಿಕೊಂಡಿತು.

ಕರ್ಪೂರ ಶ್ರೀನಿವಾಸರಾಯರು ಧಾರ್ಮಿಕ ಸಂಪ್ರದಾಯ ಶೀಲರಾಗಿದ್ದರು. ಕನ್ನಡದ ಜೊತೆಗೆ ಸಂಸ್ಕೃತ, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳನ್ನು ಕಲಿತಿದ್ದರು. ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಹೊಂದಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಸು.13 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಲವಾರು ಕನ್ನಡ ಸಂಘ ಸಂಸ್ಥೆಗಳಿಗೆ ಮತ್ತು ಕನ್ನಡ ಲೇಖಕರಿಗೆ ಇವರು ಆರ್ಥಿಕ ನೆರವನ್ನು ನೀಡಿದ್ದರು.

ಗಾಂಧೀಜಿ ಅವರ ಸ್ವಾತಂತ್ರ್ಯ ಚಳವಳಿಯಿಂದ ಪ್ರಭಾವಿತರಾಗಿದ್ದ ಶ್ರೀನಿವಾಸರಾಯರು ಖಾದಿ ಭಕ್ತರಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದಿದ್ದರೂ ಪರೋಕ್ಷವಾಗಿ ಬೆಂಬಲ ಕೊಟ್ಟಿದ್ದರು. ಇವರ ಸಾರ್ವಜನಿಕ ಸೇವೆಯನ್ನು ಗಮನಿಸಿ ಆಗಿನ ಮೈಸೂರು ಮಹಾರಾಜರು ರಾಜಸಭಾಭೂಷಣ ಎಂಬ ಬಿರುದನ್ನು ಕೊಟ್ಟು ಗೌರವಿಸಿದ್ದರು. ಹಾಸನದಲ್ಲಿ 1919ರಲ್ಲಿ ನಡೆದ 5ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಲಾಯಿತು. ಬೇರೆ ಬೇರೆ ಭಾಷೆಗಳ ಅಭ್ಯಾಸದಿಂದ ಕನ್ನಡವನ್ನು ಶ್ರೀಮಂತಗೊಳಿಸಬೇಕು; ಕನ್ನಡದಲ್ಲಿ ಉತ್ತಮ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಬೇಕು-ಎಂಬುದು ಇವರ ಹೆಬ್ಬಯಕೆಯಾಗಿತ್ತು.

ಇವರು ನಿಧನರಾದ (1932 ಜೂನ್ 2) ತರುವಾಯ ಕಾವ್ಯ ಸಂಬಂಧವಾದ ಶಾಸ್ತ್ರೀಯ ವಿಚಾರಗಳನ್ನು ಕುರಿತು ಇವರು ಬರೆದಿದ್ದ ಲೇಖನಗಳನ್ನು ಸಂಪಾದಿಸಿ ಸಾಹಿತ್ಯ ಶಾಸ್ತ್ರ (1971) ಎಂಬ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪುಸ್ತಕರೂಪದಲ್ಲಿ ಪ್ರಕಟಿಸಿದೆ. *

**ಕರ್ಮವೀರ :** ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ ಸಚಿತ್ರ ವಾರ ಪತ್ರಿಕೆ. ರಾಷ್ಟ್ರದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಗಳನ್ನು




ಗುರಿಯಾಗಿಟ್ಟುಕೊಂಡು 1929 ಫೆಬ್ರವರಿ 11ರಂದು ಪ್ರಾರಂಭ ವಾಯಿತು. ರಂಗನಾಥರಾಮ ಚಂದ್ರದಿವಾಕರ, ರಾಮರಾವ್ ಹುಕ್ಕೇರಿಕರ ಮತ್ತು ಕಬ್ಬೂರ ಮಧ್ವರಾಯರು ಪತ್ರಿಕೆಯ ಸಂಸ್ಥಾಪಕರು. ಪ್ರಾರಂಭದಲ್ಲಿ ದಿವಾಕರರು ಸಂಪಾದಕ ರಾಗಿಯೂ ಹುಕ್ಕೇರಿಕರರು ಪ್ರಕಾಶಕರಾಗಿಯೂ ಮಧ್ವ ರಾಯರು ಮುದ್ರಕರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ದಿವಾಕರರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದಾಗ ಹುಕ್ಕೇರಿಕರ ರಾಮರಾಯರೂ ಆಲೂರು ವೆಂಕಟರಾಯರೂ ಸಂಪಾದಕರಾಗಿದ್ದರು. ಆಲೂರು ವೆಂಕಟರಾಯರು ಬರೆದ ಭೂರಕ್ಕಸಾಯ ಸ್ವಾಹಾ ಎಂಬ ಅಗ್ರ ಲೇಖನ ಆಗಿನ ಸರ್ಕಾರವನ್ನು ಕೆರಳಿಸಿತು. ಲಾವಣಿಯೊಂದನ್ನು ಮುದ್ರಿಸಿದ್ದಕ್ಕೆ ದಿವಾಕರರು ಶಿಕ್ಷೆ ಅನುಭವಿಸಿದರು. 1932ರಲ್ಲಿ ಪತ್ರಿಕೆಯನ್ನು ನಿಲ್ಲಿಸಿ ಮತ್ತೆ 1935ರಲ್ಲಿ ಪ್ರಾರಂಭಿಸಿದರೂ ಕೆಲವೇ ತಿಂಗಳಲ್ಲಿ ಸರ್ಕಾರದ ಆಗ್ರಹಕ್ಕೆ ತುತ್ತಾಗಿ ಪ್ರಕಟಣೆ ನಿಂತಿತು.

ಹ.ರಾ.ಪುರೋಹಿತರ ಸಂಪಾದಕತ್ವದಲ್ಲಿ ಪತ್ರಿಕೆ 1940ರಲ್ಲಿ ಮತ್ತೆ ಪ್ರಾರಂಭವಾಗಿ ಅಭಿವೃದ್ಧಿ ಹೊಂದಿತು. 1968ರಲ್ಲಿ ದಿವಾಕರರು ಮತ್ತೆ ಸಂಪಾದಕತ್ವ ವಹಿಸಿಕೊಂಡರು. ಮೊಹರೆ ಹಣಮಂತರಾಯರು ಮುದ್ರಕ ಪ್ರಕಾಶಕರಾಗಿ,ಲೇಖಕರಾಗಿ ಪತ್ರಿಕೆಯ ಬೆಳವಣಿಗೆಗೆ ದುಡಿದರು. ಈ ಪತ್ರಿಕೆಯಲ್ಲಿ ಅನೇಕ ಹಿರಿಯ ಸಾಹಿತಿಗಳ, ವಿದ್ವಾಂಸರ ಮತ್ತು ಲೇಖಕರ ಲೇಖನಗಳು ಪ್ರಕಟವಾಗಿ ರಾಷ್ಟ್ರಾಭಿಮಾನದ ಪ್ರಜ್ಞೆಗೆ ಸಹಕಾರಿಯಾದವು. ಸ್ವಲ್ಪ ಕಾಲ ಗಾಂಧಿಯವರ ಹರಿಜನದ ಪುರವಣಿಯನ್ನು ಕನ್ನಡದಲ್ಲಿ ಪ್ರಕಟಿಸುತ್ತಿತ್ತು.ಎಳೆಯರ ಬಳಗ, ಮಹಿಳಾ ಪ್ರಪಂಚ ವಿಭಾಗಗಳನ್ನು ಪ್ರಥಮವಾಗಿ ಈ ಪತ್ರಿಕೆ ತೆರೆಯಿತು. ದೀಪಾವಳಿ ವಿಶೇಷ ಸಂಚಿಕೆಗಳನ್ನು ತರುತ್ತಿದೆ. ಧರ್ಮ, ರಾಜಕೀಯ, ಅರ್ಥಶಾಸ್ತ್ರ, ವಿಜ್ಞಾನ, ಕಥೆ, ಸಾಹಿತ್ಯ ವಿಮರ್ಶೆ, ಪ್ರಶ್ನೋತ್ತರ ವಿಭಾಗ, ಚಲನಚಿತ್ರ, ಕ್ರೀಡಾ ವಿಭಾಗಗಳಿಂದ ಪತ್ರಿಕೆ ಆಕರ್ಷಣೀಯವಾಗಿದೆ. (ಎಸ್.ವಿ.ಪಿ.)

**ಕಲಘಟಗಿ :** ಧಾರವಾಡ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಧಾರವಾಡ ಉಪವಿಭಾಗಕ್ಕೆ ಸೇರಿದ ಒಂದು ತಾಲ್ಲೂಕು, ಅದರ ಮುಖ್ಯ ಸ್ಥಳ. ಪಶ್ಚಿಮ ಮತ್ತು ದಕ್ಷಿಣದಲ್ಲಿ ಉತ್ತರ ಕನ್ನಡ ಜಿಲ್ಲೆ, ಉತ್ತರದಲ್ಲಿ ಧಾರವಾಡ ತಾಲ್ಲೂಕು, ಪೂರ್ವದಲ್ಲಿ ಹುಬ್ಬಳ್ಳಿ ಮತ್ತು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕುಗಳು ಈ ತಾಲ್ಲೂಕನ್ನು ಬಳಸಿವೆ. ತಾಲ್ಲೂಕಿನ ವಿಸ್ತೀರ್ಣ 670ಚ.ಕಿಮೀ, ಜನಸಂಖ್ಯೆ 1,36,978. ಕಲಘಟಗಿ, ಧುಮ್ಮವಾಡ, ತಬಕದ ಹೊನ್ನಳ್ಳಿ-ಇವು ಹೋಬಳಿಗಳು. ಒಟ್ಟು ಗ್ರಾಮಗಳು 127.



ಮರದಿಂದ ತಯಾರಿಸಿದ ಆಕರ್ಷಕ ಕಲಘಟಗಿ ಬಣ್ಣದ ತೊಟ್ಟಿಲು

ತಾಲ್ಲೂಕಿನ ಬಹುಭಾಗ ಹೆಚ್ಚು ಎತ್ತರವಲ್ಲದ ಅನೇಕ ಗಿರಿ ಪಂಕ್ತಿಗಳಿಂದ ಕೂಡಿದೆ. ಧಾರವಾಡದಿಂದ ಕಲಘಟಗಿಯತ್ತ ಹಬ್ಬಿರುವ ಬೂದನಗುಡ್ಡ ಶ್ರೇಣಿ ಇಂತಹ ಪಂಕ್ತಿಗಳಲ್ಲೊಂದು. ಧಾರವಾಡಶಿಲಾ ಪ್ರಕಾರದ ಶಿಲೆಗಳು ಮತ್ತು ಹಲವು ಉತ್ಕರ್ಷಿತ ಅಗ್ನಿಶಿಲೆಗಳು ಈ ಭಾಗದ ಮೂಲ ಅರೆಗಳಾಗಿವೆ. ಅಲ್ಲಲ್ಲಿ ಜಂಬಿಟ್ಟಿಗೆ ಕಲ್ಲು ಇದೆ. ಗಿರಿಶ್ರೇಣಿಗಳ ನಡುವೆ ಸ್ವಲ್ಪಮಟ್ಟಿನ ಮಟ್ಟಸ ಕಣಿವೆಗಳಿವೆ. ಭೂಮಿ ಆಗ್ನೇಯದತ್ತ ಇಳಿಜಾರಾಗಿದೆ. ತಾಲ್ಲೂಕಿನ ಪಶ್ಚಿಮದಂಚಿನಲ್ಲಿರುವ ತಟ್ಟಿಹಳ್ಳ ಮತ್ತು ಸುಮಾರು ಮಧ್ಯಭಾಗದಲ್ಲಿರುವ ಬೇಡ್ತಿ ಹೊಳೆ ನೈಋತ್ಯಾಭಿಮುಖವಾಗಿ ಹರಿಯುತ್ತವೆ.

ಇದು ಮಲೆನಾಡಿನ ಅಂಚಿನಲ್ಲಿರುವುದರಿಂದ ಈ ಜಿಲ್ಲೆಯ ಇತರ ಭಾಗಕ್ಕಿಂತ ಇಲ್ಲಿ ಸಾಮಾನ್ಯವಾಗಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ 95ಮಿಮೀ. ಇಲ್ಲಿಯದು ಕಂದು ಬಣ್ಣ ಮಿಶ್ರವಾದ ಮಸಾರಿ ಭೂಮಿ. ಕೃಷಿ ಇಲ್ಲಿಯ ಮುಖ್ಯ ಕಸುಬು. ಬತ್ತ ಮುಖ್ಯ ಬೆಳೆ. ಇತರ ಕಸುಬುಗಳಲ್ಲೂ ಕೈಗಾರಿಕೆಗಳಲ್ಲೂ ತೊಡಗಿದವರು ಕಡಿಮೆ. *

ಕಲಘಟಗಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಹುಬ್ಬಳ್ಳಿಯಿಂದ 27ಕಿಮೀ ಅಂತರದಲ್ಲಿ ಹುಬ್ಬಳ್ಳಿ ಧಾರವಾಡಗಳಿಂದ ಕಾರವಾರಕ್ಕೆ ಹೋಗುವ ಹೆದ್ದಾರಿಯ ಮೇಲೆ ಇದೆ. ಜನಸಂಖ್ಯೆ 14,676. ಅಕ್ಕಿ ಗಿರಣಿ ಇಲ್ಲಿಯ ಒಂದು ಮುಖ್ಯ ಉದ್ಯಮ. ಕಲಘಟಗಿಯ ಅಕ್ಕಿ ರುಚಿಗೆ ಬಲು ಹೆಸರುವಾಸಿ. ಆದ್ದರಿಂದ ಅದಕ್ಕೆ ಬಹಳ ಬೇಡಿಕೆ ಇದೆ. ಹಿಂದೆ ಅಕ್ಕಿಯನ್ನು ಬಹಳ ದೂರದ ಪ್ರದೇಶಗಳಿಗೆ ರವಾನಿಸಲಾಗುತ್ತಿತ್ತು. ಈಗ ಅವಲಕ್ಕಿ, ಚುರಮುರಿಗಳನ್ನು ತಯಾರಿಸುವರು. ಅರಣ್ಯ ಸಮೀಪವಾಗಿರುವುದರಿಂದ ಮರದ, ಬಿದಿರಿನ ಸರಕುಗಳನ್ನು ಇಲ್ಲಿ ತಯಾರಿಸುವರು. ಕಲಘಟಗಿಯ ಬಣ್ಣದ ಮರದ ತೊಟ್ಟಿಲುಗಳು ಒಂದು ಕಾಲಕ್ಕೆ ತುಂಬ ಪ್ರಸಿದ್ಧವಾಗಿದ್ದವು. ಆದರೆ ಈಗ ಈ ಕೈಗಾರಿಕೆ ಅಷ್ಟಾಗಿ ನಡೆಯದಿದ್ದರೂ ಮೊದಲಿನ ಹೆಸರನ್ನು ಉಳಿಸಿಕೊಂಡಿದೆ. ಗುರುವಾರ ಸ್ಥಾನಿಕ ಸಂತೆ ಜರಗುತ್ತದೆ.

ಇದೊಂದು ಇತಿಹಾಸ ಪ್ರಸಿದ್ಧಸ್ಥಳ. ಇಲ್ಲಿ ಐದು ಶಿಲಾಶಾಸನಗಳು ದೊರೆತಿವೆ. ಅವುಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಆರನೆಯ ವಿಕ್ರಮಾದಿತ್ಯನಿಗೆ (1077-1127) ಸೇರಿದ್ದು. ಮರಾಠರ ಕಾಲದಲ್ಲಿ ಇದು ಸಾಮಂತರ ಕೇಂದ್ರವಾಗಿತ್ತು. ಕಲಘಟಗಿಯಲ್ಲಿ 18ನೆಯ ಶತಮಾನದ ಮುಸ್ಲಿಂ ಸಂತ ರುಸ್ತುಂ ಶಹೀದನ ಗೋರಿಯಿದೆ. ಪ್ರತಿ ವರ್ಷ ಯುಗಾದಿಯ ಅನಂತರ ಇಲ್ಲಿ ಉರುಸು ನಡೆಯುತ್ತದೆ.

ಕಲಘಟಗಿಯಿಂದ ಸು.10ಕಿಮೀ ವಾಯವ್ಯಕ್ಕಿರುವ ಕಾಮಧೇನು ಎಂಬ ಗ್ರಾಮದಲ್ಲಿ ಹಲವು ಪೌರಾಣಿಕ ಶಿಲ್ಪಗಳಿರುವ, ಕರಿ ಕಣಶಿಲೆಯಲ್ಲಿ ಕಟ್ಟಿದ ಕಲಮೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ 1130 ಮತ್ತು 1172ರ ಶಾಸನಗಳು ದೊರಕಿವೆ. ಹುಬ್ಬಳ್ಳಿ-ಕಲಘಟಗಿ ರಸ್ತೆಯಲ್ಲಿ 13ಕಿಮೀ ವಾಯವ್ಯಕ್ಕಿರುವ ಮಿಶ್ರಿ ಕೋಟೆ 1838ರವರೆಗೆ ಒಂದು ದೊಡ್ಡ ಆಡಳಿತ ವಿಭಾಗಕ್ಕೆ ಹಾಗೂ 1862ರ ವರೆಗೆ ಚಿಕ್ಕದಾದ ವಿಭಾಗಕ್ಕೆ ಕೇಂದ್ರವಾಗಿತ್ತು. ಇಲ್ಲಿ ಒಂದು ದೊಡ್ಡ ಕೋಟೆ, ಪ್ರಾಚೀನ ರಾಮೇಶ್ವರ ದೇವಾಲಯ ಇವೆ. 1136ರ ಇಲ್ಲಿನ ಒಂದು ಶಾಸನ ಕದಂಬ ಇಮ್ಮಡಿ ಜಯಕೇಶಿಯ ಹೆಂಡತಿ ಮೈಳಲದೇವಿಯನ್ನು ಹೆಸರಿಸುತ್ತದೆ. *

**ಕಲಬಾವಿ :** ಬೆಳಗಾಂವಿ ಜಿಲ್ಲೆ ಸಂಪಗಾಂವ ತಾಲ್ಲೂಕಿನ ಒಂದು ಗ್ರಾಮ. ಬೈಲಹೊಂಗಲದಿಂದ 18ಕಿಮೀ ದೂರದಲ್ಲಿದೆ. ಇದು ಪ್ರಾಚೀನ ಕುಮ್ಮುದವಾಡ ಎಂದು ಫ್ಲೀಟರು ಗುರುತಿಸಿದ್ದಾರೆ. ಇಲ್ಲಿರುವ ಬಸದಿ ಆದಿನಾಥ ತೀರ್ಥಂಕರನದು. ಇದೊಂದು ಸಾಮಾನ್ಯ ಕಟ್ಟಡ. ಕಲ್ಯಾಣಿ ಚಾಳುಕ್ಯ ಶೈಲಿಯಲ್ಲಿರುವ ಆದಿನಾಥನ ಮೂರ್ತಿ ಕುಳಿತ ಭಂಗಿಯಲ್ಲಿದ್ದು ಎರಡು ಮೀಟರ್ ಎತ್ತರವಾಗಿದೆ. ಇಲ್ಲಿರುವ 814ರ ಗಂಗರ ಕಾಲದ ಶಾಸನವೊಂದು ಗಂಗರ ಶಿವಮಾರನು ಒಂದನೆಯ ಅಮೋಘವರ್ಷನ ಕಾಲದಲ್ಲಿ ಕಾದರವಳ್ಳಿ - 30ರಲ್ಲಿರುವ ಕುಮ್ಮುದವಾಡ ಜಿನಾಲಯಕ್ಕೆ ಕೊಟ್ಟ ದಾನ - ದತ್ತಿಯನ್ನು ಹೇಳುತ್ತದೆ. ರಾಮಲಿಂಗ, ಕಲ್ಮೇಶ್ವರ, ದ್ಯಾಮವ್ವ, ಮಾರುತಿ ಮತ್ತು ಇತ್ತೀಚೆಗೆ ನಿರ್ಮಿಸಿದ ವಿಠಲ ದೇವಾಲಯ ಇಲ್ಲಿನ ಇತರ ದೇವಾಲಯಗಳು. ರಾಮಲಿಂಗ ದೇವಾಲಯವನ್ನು ಜೀರ್ಣೋದ್ಧಾರ ಗೊಳಿಸಲಾಗಿದೆ. ಇಲ್ಲಿರುವ ಇನ್ನೊಂದು ಶಾಸನ 300 ಕಮ್ಮ ಭೂಮಿಯನ್ನು ಕುಮ್ಮುದವಾಡದ ದೇವಾಲಯಕ್ಕೆ ದಾನ ಕೊಟ್ಟ ವಿಚಾರವನ್ನು ದಾಖಲಿಸಿದೆ. ಕಲ್ಮೇಶ್ವರ ದೇವಾಲಯವೂ ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದ್ದು ಶಿವ-ಪಾರ್ವತಿಯರ ಮೂರ್ತಿಗಳನ್ನೊಳಗೊಂಡಿದೆ. ಇಲ್ಲಿರುವ ಮತ್ತೊಂದು ಶಾಸನ 12ನೆಯ ಶತಮಾನದ ಮತಿಮಾಳಪಂಡಿತ, ಅವನ ಶಿಷ್ಯ ತೇಜೋರಶಿ ಪಂಡಿತ, ನಾಗೇಶ್ವರ ದೇವರು ಮತ್ತು ಅಣ್ಣಿಗೇರಿಗಳ ಬಗ್ಗೆ ಮಾಹಿತಿ ಒದಗಿಸುವುದು. ಈ ದೇವಾಲಯದ ಎದುರು 4 ವೀರಗಲ್ಲುಗಳಿವೆ.

(ಆರ್.ಐ.)

**ಕಲಾ** : ಲಲಿತಕಲೆಗಳಿಗೆ ಮೀಸಲಾಗಿದ್ದ ಕನ್ನಡ ಪತ್ರಿಕೆ. 1930ರ ಮಾರ್ಚ್ ತಿಂಗಳಿನಲ್ಲಿ ಆರಂಭವಾಗಿ ಸುಮಾರು ನಾಲ್ಕು ವರ್ಷಗಳ ಕಾಲ ನಡೆಯಿತು. ಸಂಪಾದಕರು ಎ.ಎನ್.(ಅ.ನ.)ಸುಬ್ಬರಾವ್.

"ಕಲೆಯ ಖನಿಯಂತಿದ್ದ ಕರ್ನಾಟಕದಲ್ಲಿ ಕಲೆಗಳು ಗಳಿತಾವಸ್ಥೆಯಲ್ಲಿದ್ದು, ತಕ್ಕ ವ್ಯವಸಾಯವಿಲ್ಲದೆ ಸೊರಗುತ್ತಿವೆ ........ ಜನಸಾಮಾನ್ಯರಲ್ಲಿ ಕಲಾಭಿಮಾನವೂ ಉದ್ಯೋಗ ತತ್ಪರತೆಯೂ ಅಳಿಸಿಹೋಗಿರುವುದು ......... ಇಂಥ ಪರಿಸ್ಥಿತಿಯಿಂದ ಪಾರಾಗಿ ಕರ್ನಾಟಕದ ಕೀರ್ತಿಯನ್ನುಳಿಸಲು ವಿದ್ಯಾವಂತರೂ ಕಲಾಭಿಮಾನಿಗಳೂ ನಡೆಸಬೇಕಾದ ಕಾರ್ಯಗಳು ಅನೇಕವಿವೆ", ಎಂಬ ಅಂಶವನ್ನು ಮುನ್ನುಡಿ ಸಂಪಾದಕರು ಕಲಾಕ್ಷೇತ್ರದ ಅಭಿವೃದ್ಧಿಗಾಗಿ ಈ ಪತ್ರಿಕೆಯನ್ನು ಸ್ಥಾಪಿಸಿದರು.



ಪತ್ರಿಕೆಯನ್ನು ವಿದ್ಯಾ, ಲಲಿತಕಲೆ, ರಂಗಭೂಮಿ ಮತ್ತು ಕುಶಲ ವಿದ್ಯೆಗಳ ಮಾಸಪತ್ರಿಕೆ ಎಂದು ವಿವರಿಸಲಾಗಿತ್ತಾದರೂ ಇದರ ಒಲವು ಪ್ರಧಾನವಾಗಿ ಚಿತ್ರಕಲೆಯ ಕಡೆಗೆ ಇತ್ತು. ಕಥೆ, ಕವನಗಳೂ ಕಲಾವಿಮರ್ಶೆ ಮತ್ತು ವಿವಿಧ ಕಲೆಗಳನ್ನು ಕುರಿತ ವಿವರಣಾತ್ಮಕ ಲೇಖನಗಳೂ ಇದರಲ್ಲಿ ಪ್ರಕಟವಾಗುತ್ತಿದ್ದವು. ದೇವುಡು ನರಸಿಂಹಶಾಸ್ತ್ರೀ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ, ಬೆಳ್ಳಾವೆ ನರಹರಿಶಾಸ್ತ್ರೀ, ಆಸ್ಥಾನ ವಿದ್ವಾನ್ ಜಯರಾಮು ವೆಂಕಟಾಚಾರ್ಯ, ಶಿವರಾಮ ಕಾರಂತ, ಅ.ನ.ಕೃಷ್ಣರಾಯ, ವಿ.ಕೃ.ಗೋಕಾಕ್, ತಿ.ತಾ.ಶರ್ಮ ಮೊದಲಾದ ವಿದ್ವಾಂಸರು ಈ ಪತ್ರಿಕೆಯ ಲೇಖನ ಬಳಗಕ್ಕೆ ಸೇರಿದ್ದರು. *

**ಕಲಾದಗಿ** : ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕಿನಲ್ಲಿ ಕಸಬೆಯಿಂದ 24ಕಿಮೀ ಪಶ್ಚಿಮಕ್ಕೆ ಘಟಪ್ರಭಾ ನದಿಯ ಬಲದಂಡೆಯಲ್ಲಿರುವ ಗ್ರಾಮ. 1858ಕ್ಕೆ ಮುಂಚೆ ಇದು ದಕ್ಷಿಣ ಮಹಾರಾಷ್ಟ್ರದ ಕುದುರೆ ಹಾಗೂ ಕಾಲಾಳು ಸೈನ್ಯದ ಶಿಬಿರವಾಗಿತ್ತು. ಮೊದಲನೆಯ ಸ್ವಾತಂತ್ರ್ಯ ಸಮರದ (1857) ಕಾಲದಲ್ಲಿ ಸೈನ್ಯದ ಪಡೆಗಳು ತಿರುಗಾಡಲು ಅನುಕೂಲವಾದ ಮಧ್ಯಸ್ಥಳವೂ ಆಗಿತ್ತು. ಆ ಯುದ್ಧ ಮುಗಿದ ಅನಂತರ ಸಿವಿಲ್ ಅಧಿಕಾರಿಗಳಿಗೆ ಆಡಳಿತೆಯನ್ನು ಹಸ್ತಾಂತರಗೊಳಿಸಲು ಅದು ಆಗಿನ ಜಿಲ್ಲೆಯ ಆಡಳಿತ ಕೇಂದ್ರದ ಮುಖ್ಯಸ್ಥಳವೂ ಆಯಿತು. ಆಗ ಅಲ್ಲಿ ಒಂದು ದೊಡ್ಡ ಆಸ್ಪತ್ರೆ, ಖಜಾನೆ, ಕಾರಾಗೃಹ ಮತ್ತು ಪ್ರವಾಸಿಮಂದಿರ ಇದ್ದುವು. ಇಂದಿಗೂ ಉಳಿದಿರುವ ಆ ಕಾಲದ ಒಂದು ಐತಿಹಾಸಿಕ ಅವಶೇಷವಾದ ಸಿ.ಜೆ.ಮ್ಯಾನ್ಸನ್ ಎಂಬ ಬ್ರಿಟಿಷ್ ಅಧಿಕಾರಿಯ, ಗೋರಿಯ ಮೇಲೆ ಈತನನ್ನು ನರಗುಂದದ ಬ್ರಾಹ್ಮಣ ಕೊಲೆ ಮಾಡಿದ ಎಂದು ಸಾರುವ ಶಾಸನವಿದೆ. 1884ರಲ್ಲಿ ಬಿಜಾಪುರವನ್ನು ಆಗಿನ ಬಿಜಾಪುರ ಜಿಲ್ಲೆಯ ಮುಖ್ಯಸ್ಥಳವಾಗಿ ಮಾಡಿ ಕಲಾದಗಿಯಲ್ಲಿದ್ದ ಕಾರ್ಯಾಲಯಗಳನ್ನು ಸ್ಥಳಾಂತರಗೊಳಿಸಲಾಯಿತು. ಇದರಿಂದ ಪಟ್ಟಣ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಈಗ ಇದೊಂದು ಚಿಕ್ಕ ಗ್ರಾಮ.

ದಕ್ಷಿಣ ಭಾರತದಲ್ಲಿ ಪ್ರಥಮವಾಗಿ ಭೂವೈಜ್ಞಾನಿಕ ಸರ್ವೇಕ್ಷಣೆ ನಡೆಸಿದ ರಾಬರ್ಟ್ ಬ್ರೂಸ್‍ಫುಟ್‍ಗೆ ಬಿಜಾಪುರ ಜಿಲ್ಲೆಯಲ್ಲಿ ಪ್ರೀಕೇಂಬ್ರಿಯನ್ ಯುಗದ ಶಿಲಾಶ್ರೇಣಿಯ ಅತ್ಯುತ್ತಮ ರೀತಿಯ ವಿನ್ಯಾಸ ಕಲಾದಗಿಯ ಬಳಿಯಲ್ಲೆ ಕಂಡುಬಂದುದರಿಂದ ಆತ ಆ ಶ್ರೇಣಿಗೆ ಕಲಾದಗಿ ಶ್ರೇಣಿಯೆಂದೇ ಹೆಸರಿಟ್ಟ. ಅಂದಿನಿಂದ ಭೂವಿಜ್ಞಾನ ಕ್ಷೇತ್ರದಲ್ಲಿ ಕಲಾದಗಿಯ ಹೆಸರು ಪ್ರಸಿದ್ಧವಾಗಿದೆ. (ಎಸ್.ಜಿಎ.)

**ಕಲೆ** : ಒಂದು ಜನಾಂಗದ ಸಂಸ್ಕೃತಿಯ ಮಟ್ಟವನ್ನು, ಅದರ ಬೆಳವಣಿಗೆಯನ್ನು ತಿಳಿಯಬೇಕಾದರೆ ಅಲ್ಲಿ ಬೆಳೆದು ಬಂದ ಹಲವು ಬಗೆಯ ಕಲೆಗಳನ್ನು ಪರಾಮರ್ಶಿಸಬೇಕಾಗುತ್ತದೆ. ಕರ್ನಾಟಕ ಜನತೆ, ಸಂಸ್ಕೃತಿಯ ಕೈಗನ್ನಡಿಯಾದ ಕಲೆಯ ಹಲವು ಪ್ರಕಾರಗಳನ್ನು ಅತ್ಯಂತ ಪ್ರಾಚೀನ ಕಾಲದಿಂದಲೂ ತನ್ನದೇ ಆದ ರೀತಿಯಲ್ಲಿ ಬೆಳೆಸಿಕೊಂಡು ಬಂದಿದೆ.

ವಿಶಾಲವೂ ವೈವಿಧ್ಯಮಯವೂ ಆದ ಕಲೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ ಚಿತ್ರಕಲೆ, ನೃತ್ಯ, ವಾಸ್ತು, ಶಿಲ್ಪ, ಸಂಗೀತ, ರಂಗಭೂಮಿ ಮೊದಲಾದವುಗಳ ಹಾಗೂ ಕರ್ನಾಟಕ ಸಂಗೀತ, ಯಕ್ಷಗಾನ ಇತ್ಯಾದಿ ಅನೇಕ ಪ್ರಕಾರಗಳ ಬಗ್ಗೆ ಪ್ರತ್ಯೇಕ ಲೇಖನಗಳಿವೆ. ವಿವಿಧ ರಾಜಮನೆತನಗಳ ಬಗ್ಗೆ ಇರುವ ಲೇಖನಗಳಲ್ಲಿ ತತ್ಕಾಲದ ಲಲಿತಕಲೆಗಳನ್ನೂ ಚರ್ಚಿಸಲಾಗಿರುತ್ತದೆ. ಈ ಲೇಖನಗಳಲ್ಲಿ ಬರುವ ವಿವರಗಳನ್ನು ಹೊರತುಪಡಿಸಿ ಕರ್ನಾಟಕದ ಕಲಾ ರಂಗದ ಸ್ವರೂಪದ ಸ್ಥೂಲ ನೋಟವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಮಾನವ ನಿತ್ಯ ಜೀವನದಲ್ಲಿ ಅನುಭವಿಸುವ ಸುಖ ಸಂತೃಪ್ತಿ ಆನಂದಗಳೇ ಕಲೆಗೆ ಮೂಲ. ಶಾಂತಿ, ಸಮೃದ್ಧಿಗಳು ಕಲೆಯನ್ನು ಬೆಳೆಸಿಕೊಂಡು ಬರುವ ಮುಖ್ಯ ಅಂಶಗಳು. ತನಗುಂಟಾದ ಸಂತೋಷದ ಕುರುಹಾಗಿ ಮಾನವ ಹಲವು ಬಗೆಯಲ್ಲಿ ಹಾವಭಾವಗಳನ್ನು ವ್ಯಕ್ತಪಡಿಸುತ್ತಾನೆ. ಸುಗ್ಗಿಯ ಕಾಲದಲ್ಲಿ ಸಂತೋಷದಿಂದ ಗುಂಪುಗುಂಪಾಗಿ ಕುಣಿಯುವುದು, ಹಾಡುವುದು, ಅನೂಚಾನವಾಗಿ ನಡೆದುಬಂದ ಪದ್ಧತಿ. ಒಕ್ಕುವಾಗ, ಬೀಸುವಾಗ, ಕುಟ್ಟುವಾಗ ಲೀಲಾಜಾಲವಾಗಿ ಹಾಡಿಕೊಳ್ಳುವುದೂ ಇದೇ ರೀತಿಯದು. ಅತ್ಯಂತ ಪ್ರಾಚೀನ ಕಾಲದ ಮಾನವನೂ ಹೀಗೆ ಒಂದು ಬೇಟೆ ಸಿಕ್ಕಾಗಲೋ ಒಂದು ಗೆಲುವು ಸಾಧಿಸಿದಾಗಲೋ ತನ್ನ ಸಂತೋಷಕ್ಕಾಗಿ ಕುಣಿದು ಕುಪ್ಪಳಿಸಿ ಕೇಕೆ ಹಾಕುತ್ತಿದ್ದಿರಬೇಕು; ಅದರ ಮಧುರ ಭಾವಗಳನ್ನು ನೆನಪುಗಳನ್ನು ಚಿತ್ರಿಸಿಕೊಂಡಿರಬೇಕು; ಕರ್ನಾಟಕದಲ್ಲಿ ಮಾನವ ಒಂದು ಕಡೆ ನೆಲೆ ನಿಲ್ಲಲಾರಂಭಿಸಿದ ನವಶಿಲಾಯುಗದ ಕಾಲದಲ್ಲಿ ಕ್ರಿ.ಪೂ.3ನೆಯ ಸಹಸ್ರಮಾನದಿಂದ ಕಲೆಯ ಆರಂಭವನ್ನು ಗುರುತಿಸಬಹುದು. ಆ ಕಾಲದ ಜನ ಗವಿಗಳಲ್ಲಿಯೋ ಚಾಚುಬಂಡೆಗಳ ಕೆಳಗೋ ಬಿಳಿಯ ಬಣ್ಣ ಅಥವಾ ಕೆಮ್ಮಣ್ಣಿನಿಂದ ರೇಖಾಚಿತ್ರಗಳನ್ನು ರಚಿಸಿದ್ದಾರೆ. ಅವುಗಳಿಗೆ ಬಣ್ಣ ತುಂಬಿಸಿದ್ದಾರೆ. ಮಾನವರ ಸಾಲು, ಜಿಂಕೆ, ಗೂಳಿ, ಹುಲಿ, ನವಿಲು ಮೊದಲಾದ ಪ್ರಾಣಿಪಕ್ಷಿಗಳನ್ನು ಚಿತ್ರಿಸಿದ್ದಾರೆ. ಮಾನವಾಕೃತಿಗಳು ಸಾಲುಗಟ್ಟಿ, ಕೈಕೈ ಹಿಡಿದು ಕುಣಿಯುತ್ತಿರುವುದನ್ನೂ ಕಾಣಬಹುದು.

ಹೀಗೆ ಪ್ರಾಚೀನ ಕಾಲದಲ್ಲಿ ಹುಟ್ಟಿದ ಕಲಾಪ್ರಕಾರ ಮುಂದೆ ಎರಡು ಧಾಟಿಗಳಲ್ಲಿ ಮುಂದುವರೆದುದನ್ನು ಕಾಣಬಹುದು. ಜನಸಾಮಾನ್ಯರಲ್ಲಿ ಜನಪದ ಕಲೆಗಳು ತಮ್ಮದೇ ಆದ ರೀತಿಯಲ್ಲಿ ಉಳಿದು ಬಂದಿವೆ. ಆದರೆ ಜನ ಸಂಸ್ಕೃತರಾಗುತ್ತ ಬಂದ ಹಾಗೆ ಕಲೆಗಳನ್ನು ವೈವಿಧ್ಯಮಯವಾಗಿ ಬೆಳೆಸಿಕೊಂಡು ಬಂದಿದ್ದಾರೆ. ಕೇವಲ ಆತ್ಮಸಂತೋಷಕ್ಕೆ ಬೆಳೆಸಿಕೊಂಡು ಬಂದ ಈ ಕೆಲವು ಕಲೆಗಳು ಇತರರಿಗೂ ಸಂತೋಷವನ್ನುಂಟುಮಾಡುವ ಸಾಧನಗಳಾದುವು. ಮೊದಲು ಸ್ವತಂತ್ರವಾಗಿ ಬೆಳೆದು ಬಂದ ಕಲೆಗಳು ಕಾಲಕ್ರಮೇಣ ಕೆಲವು ಕಟ್ಟುಪಾಡುಗಳಿಗೊಳಗಾಗಿ ಅವಕ್ಕೆ ನಿರ್ದಿಷ್ಟ ರೂಪ ಆಕಾರಗಳು ಬಂದುವು; ಪ್ರೌಢತೆಯನ್ನು ಸಾಧಿಸಿದುವು. ಶಿಷ್ಟ ಮತ್ತು ಜನಪದ ಸಂಪ್ರದಾಯಗಳು ವಿಭಿನ್ನತೆಯನ್ನು ಸ್ಪಷ್ಟವಾಗಿ ತೋರಿಸಿಕೊಳ್ಳಲಾರಂಭಿಸಿದುವು. ಎರಡರಲ್ಲೂ ಬೆಳವಣಿಗೆಯ ಘಟ್ಟಗಳು ಇವೆಯಾದರೂ ಜನಪದ ಕಲೆಗಳಲ್ಲಿ ಉದ್ಭವವಾಗಿರುವ ಪ್ರಾದೇಶಿಕ ವೈವಿಧ್ಯವನ್ನು ಮತ್ತು ಕೆಲವೊಮ್ಮೆ ಸಂಭವಿಸಿದ ಶಿಷ್ಟಸಂಪ್ರದಾಯದ ಪ್ರಭಾವವನ್ನು ಬಿಟ್ಟರೆ ಅದರ ಮೂಲಸ್ವರೂಪದಲ್ಲಿ ಮತ್ತು ಅವು ಉಪಯೋಗಿಸುವ ಆಶಯಗಳಲ್ಲಿ, ಗುರುತಿಸಬಹುದಾದ ಬದಲಾವಣೆಗಳೇನೂ ನಡೆದಿಲ್ಲ. ಶಿಷ್ಟ ಕಲೆಗಳಲ್ಲಾದರೋ ಕಾಲಕ್ರಮೇಣ ವೈವಿಧ್ಯ ಹೆಚ್ಚಿತು. ಪ್ರಾದೇಶಿಕ ವಿಭಿನ್ನತೆಗಳೂ ತೋರಿದುವು.

ಎಲ್ಲ ದೇಶಗಳಲ್ಲೂ ಕಂಡುಬರುವಂತೆ, ಕರ್ನಾಟಕದಲ್ಲೂ ಕಲೆಗಳ ಬೆಳವಣಿಗೆಯಲ್ಲಿ ಪಾತ್ರವಹಿಸುವ ಭೌಗೋಳಿಕ, ಚಾರಿತ್ರಿಕ, ಸಾಮಾಜಿಕ ಪರಿಸರಗಳ ಪ್ರಭಾವವನ್ನು ಗುರುತಿಸಬಹುದು.

ವಾಸ್ತುಶಿಲ್ಪದಂಥ ಕಲೆಗಳು ಪ್ರಾಕೃತಿಕ ಸನ್ನಿವೇಶಗಳನ್ನು ಅವಲಂಬಿಸಬೇಕಾದುದು ಸ್ವಾಭಾವಿಕ. ಭಾರತದಲ್ಲಿ ಕರ್ನಾಟಕವು ಆಯಕಟ್ಟಾದ ನೆಲೆಯಲ್ಲಿರುವುದರಿಂದ ಇಲ್ಲಿ ಔತ್ತರೇಯ ಮತ್ತು ದಾಕ್ಷಿಣಾತ್ಯ ಶೈಲಿಗಳು ಸಂಗಮಿಸಿ ಬೆಳೆದುದಲ್ಲದೆ ಕಾಲಕ್ರಮದಲ್ಲಿ ಆ ಸಮ್ಮಿಳನದಿಂದ ಕೆಲವು ವಿಶಿಷ್ಟ ಶೈಲಿಗಳೂ ಹುಟ್ಟಿಬೆಳೆದುದನ್ನು ಗಮನಿಸಬಹುದು.

ರಾಜಕೀಯ ಭದ್ರತೆ ಕಲೆಗಳ ಬೆಳವಣಿಗೆಯ ಮೇಲೆ ತಕ್ಕಷ್ಟು ಪ್ರಭಾವ ಬೀರುತ್ತದೆ. ಕದಂಬ, ಗಂಗ, ನೊಳಂಬ, ಚಾಳುಕ್ಯ, ಹೊಯ್ಸಳ, ವಿಜಯನಗರಗಳಂಥ ಪ್ರಸಿದ್ಧ ರಾಜಮನೆತನಗಳು ಸುಭದ್ರವಾದ ಸಾಮ್ರಾಜ್ಯಗಳನ್ನು ಕಟ್ಟಿ ಕಲೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದರಿಂದ, ತಾವು ಗಳಿಸಿದ ಅಪಾರ ಐಶ್ವರ್ಯವನ್ನು ದೇವಾಲಯ, ಬಸದಿ ಮೊದಲಾದುವನ್ನು ಕಟ್ಟಿಸುವುದಕ್ಕಾಗಿ ವಿನಿಯೋಗಿಸಿದುದರಿಂದ ವಿವಿಧ ಶೈಲಿಗಳ ಬೆಳವಣಿಗೆ ಸಾಧ್ಯವಾಯಿತು. ರಾಜರ ಆಸ್ಥಾನಗಳು, ಒಡ್ಡೋಲಗಗಳು ಆರಂಭವಾಗುತ್ತಿದ್ದುದು ಕವಿ ಗಮಕಿ ವಾದಿವಾಗ್ಮಿಗಳ ಪ್ರತಿಭಾಪ್ರದರ್ಶನದಿಂದ, ನಾಟ್ಯಗೀತ ವಾದ್ಯಗಳ ಮಧುರ ಸನ್ನಿವೇಶಗಳಿಂದ. ಕಲೆಗಾರರಿಗೆ ಇಲ್ಲಿ ಅತಿ ಹೆಚ್ಚಿನ ಗೌರವವಿರುತ್ತಿತ್ತು. ರಾಜರು ಈ ಕಲೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದುದು ಮಾತ್ರವಲ್ಲ ತಾವೇ ಇಂಥ ಹಲವು ಕಲೆಗಳಲ್ಲಿ ನಿಷ್ಣಾತರಾಗಿರುತ್ತಿದ್ದರು.

ಕನ್ನಡ ನಾಡಿನ ರಾಜರು ಕೊಟ್ಟ ಪ್ರೋತ್ಸಾಹ ಇಲ್ಲಿನ ಕಲಾವಿದರ ನೈಪುಣ್ಯವನ್ನು ಉಚ್ಚಮಟ್ಟಕ್ಕೆ ಒಯ್ಯುದ್ದಷ್ಟೇ ಅಲ್ಲ, ಹೊರಗಿನ ಅನೇಕ ಕಲಾವಿದರನ್ನಾಕರ್ಷಿಸಿತು. ಉದಾಹರಣೆಗೆ ಬಾದಾಮಿಯ ಚಳುಕ್ಯರ ಕಾಲದಲ್ಲಿ ಸುಂದರ ದೇವಾಲಯಗಳನ್ನು ನಿರ್ಮಿಸಿದವರಲ್ಲಿ ತ್ರಿಭುವನಾಚಾರಿ ಎಂಬ ಬಿರುದುಳ್ಳ ಗುಂಡನ್ ಒಬ್ಬ. ಇವನು ಪಲ್ಲವನಾಡಿನಿಂದ ಬಂದಂತೆ ತೋರುತ್ತದೆ. ಬೇರೆ ಬೇರೆ ದೇಶಗಳಲ್ಲಿ ಬೆಳೆದ ಕಲಾಸಂಪ್ರದಾಯಗಳು ಕರ್ನಾಟಕದಲ್ಲಿ ಹರಡುವುದಕ್ಕೆ ಅಥವಾ ಕರ್ನಾಟಕದ ಸಂಪ್ರದಾಯಗಳಲ್ಲಿ ಹೊಸ ತಿರುವುಗಳು ಮೂಡುವುದಕ್ಕೆ ಇಂಥ' ಸನ್ನಿವೇಶಗಳು ಕಾರಣವಾಗಿರುತ್ತಿದ್ದುವು.

ಕರ್ನಾಟಕದಲ್ಲಿ ಭಾರತದ ಇತರೆಡೆಗಳಂತೆ ಎಲ್ಲ ಕಲೆಗಳೂ ಧರ್ಮದ ಅಡಿಗಲ್ಲು ಮತ್ತು ಮತದ ನೆಲಗಟ್ಟುಗಳ ಮೇಲೆ ಬೆಳೆದು ಬಂದಿವೆ. ಹಲವು ಮತಧರ್ಮಗಳಿಗೆ ತವರೂ ಆಶ್ರಯಸ್ಥಾನವೂ ಆಗಿದ್ದ ಕರ್ನಾಟಕದಲ್ಲಿ ಆಯಾ ಮತಗಳಿಗೆ ಸಂಬಂಧಿಸಿದಂತೆ ಕೆಲವು ವಿಶಿಷ್ಟವಾದ ಶೈಲಿಗಳು ಬೆಳೆದುಬಂದಿವೆ. ಬೌದ್ಧ, ಜೈನ, ಶೈವ, ವೈಷ್ಣವ ಮತ್ತು ಇಸ್ಲಾಂ ಮತಗಳನ್ನಾಧರಿಸಿ ಹುಟ್ಟಿದ ಕಲಾ ಸಂಪ್ರದಾಯಗಳು ಕರ್ನಾಟಕದಲ್ಲಿ ಹರಡಿದ್ದುದನ್ನು ಸುಲಭವಾಗಿ ಗುರುತಿಸಬಹುದು. ಒಂದು ದೃಷ್ಟಿಯಿಂದ ಪ್ರಾಚೀನ ಕರ್ನಾಟಕದ ಕಲಾಪ್ರಕಾರಗಳನ್ನೆಲ್ಲಾ ಧಾರ್ಮಿಕ ಕಲೆಗಳು ಎಂದೇ ಹೇಳಬಹುದು.

ಕಲೆಗಳನ್ನು ಲಲಿತಕಲೆಗಳು, ಉಪಯೋಗಿ ಕಲೆಗಳು ಎಂದು ಎರಡು ರೀತಿಯಾಗಿ ವಿಭಾಗಿಸಬಹುದಾದರೂ ಇಂಥ ಸ್ಪಷ್ಟ ವಿಭಜನೆಯ ಕಲ್ಪನೆ ಪ್ರಾಚೀನ ಕರ್ನಾಟಕದಲ್ಲಿ ಇದ್ದಂತೆ ತೋರುವುದಿಲ್ಲ. ಹೆಚ್ಚಿನ ಕಲೆಗಳು ಧರ್ಮಸಂಬಂಧದಲ್ಲಿ ಪ್ರವರ್ಧಿಸಿದ್ದು ಅವೆಲ್ಲ ಉಪಯೋಗೀ ಕಲೆಗಳೇ ಆಗುತ್ತಿದ್ದುದು ಈ ಸ್ಥಿತಿಗೆ ಕಾರಣ ಎಂದು ತೋರುತ್ತದೆ. ಅನೇಕ ಗ್ರಂಥಗಳು ಮತ್ತು ಶಾಸನಗಳಲ್ಲಿ 64 ಕಲೆಗಳ ಪ್ರಸ್ತಾಪ ಕಂಡುಬರುತ್ತದೆ. ಆದರೆ ಈ ಕಲೆಗಳ ಪಟ್ಟಿಯಲ್ಲಿ ಲಲಿತ ಹಾಗೂ ಉಪಯೋಗೀ ಕಲೆಗಳು ಜೊತೆಜೊತೆಯಾಗೇ ಬಂದಿರುತ್ತವೆ.

ಈ ಎಲ್ಲ ಕಲೆಗಳ ಬೆಳವಣಿಗೆಯನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟದ ಕೆಲಸ. ಪ್ರಾಚೀನ ಕಾಲದ ಚಿತ್ರ, ಶಿಲ್ಪ, ವಾಸ್ತುಕೃತಿಗಳು ಅಲ್ಲಲ್ಲಿ ಉಳಿದು ಬಂದಿವೆಯಾದರೆ ಸಂಗೀತ, ನೃತ್ಯ ಮೊದಲಾದುವಕ್ಕೆ ಗ್ರಂಥಸ್ಥ ಆಧಾರಗಳನ್ನು ಅವಲಂಬಿಸಬೇಕಾಗುತ್ತದೆ. ಜನಪದ ಕಲೆಗಳಿಗಾದರೋ ಇಂದು ಉಳಿದು ಬಂದಿರುವ ರೀತಿಗಳೇ ಮುಖ್ಯ ಆಧಾರಗಳು.

ಕರ್ನಾಟಕದಲ್ಲಿ ಕಲೆಯ ಬಗ್ಗೆ ಅತ್ಯಂತ ಪ್ರಾಚೀನ ದಾಖಲೆ ದೊರಕುವುದು ಚಿತ್ರಕಲೆಯ ಬಗ್ಗೆ. ಉತ್ತರ ಕರ್ನಾಟಕದ ಹಲವು ಸ್ಥಳಗಳಲ್ಲಿ ಬಂಡೆಗಳ ಮೇಲೆ ಗೀಚಿರುವ ಅಥವಾ ರೇಖಿಸಿರುವ ಕ್ರಿ.ಪೂ. 3-2ನೆಯ ಸಹಸ್ರಮಾನದ ಚಿತ್ರಗಳೇ ಅತ್ಯಂತ ಪ್ರಾಚೀನವಾದವು. ಅಲ್ಲಿಂದ ಮುಂದೆ ಬಾದಾಮಿಯ ಗುಹಾಚಿತ್ರಗಳು, ಹೊಯ್ಸಳ ಕಾಲದ ಗ್ರಂಥಸ್ಥ ಚಿತ್ರಗಳು, ವಿಜಯನಗರದ ಕಾಲದ ದೇವಾಲಯದ ಭಿತ್ತಿಚಿತ್ರಗಳು, ಆದಿಲ್‌ಶಾಹೀ ಮತ್ತು ಮೈಸೂರು ಅರಸರ ಕಾಲದ ಚಿತ್ರಪಟಗಳು, ಮೈಸೂರು ಅರಸರ ಮತ್ತು ಪಾಳೆಗಾರರ ಕಾಲದ ಕೆಲವು ಭಿತ್ತಿಚಿತ್ರಗಳು ಪ್ರಾಚೀನ ಚಿತ್ರಕಲೆಯ ಸ್ವರೂಪವನ್ನು ಪರಿಚಯ ಮಾಡಿಕೊಡುತ್ತವೆ.

ವಾಸ್ತುಕೃತಿಗಳೂ ನವಶಿಲಾಯುಗದ ಕಾಲದಲ್ಲಿ ಆರಂಭವಾದರೂ ಅದು ಕಲೆಯ ಸ್ವರೂಪವನ್ನು ಸ್ಪಷ್ಟವಾಗಿ ಕಾಣುವುದು ಚಾರಿತ್ರಿಕ ಕಾಲದಲ್ಲಿ, ದೇವಾಲಯಗಳ ನಿರ್ಮಾಣ ಪ್ರಾರಂಭವಾದಾಗಿನಿಂದ. ಈ ಕಲಾಪ್ರಕಾರದ ಬಗ್ಗೆ ಬಾದಾಮಿಯ ಚಳುಕ್ಯರ ಕಾಲದಾರಭ್ಯ ಮುಂದೆ ಕರ್ನಾಟಕದಲ್ಲಿ ಆಳಿಕೆ ನಡೆಸಿದ ಎಲ್ಲ ಹಿಂದು ರಾಜವಂಶಗಳ ಕಾಲದಲ್ಲೂ ದೇವಾಲಯ ರಚನೆ ವಿವಿಧ ಶೈಲಿಗಳಲ್ಲಿ ಮುಂದುವರೆದು ಬಂದಿದೆ. ಇದೇ ರೀತಿ ಬಹಮನೀ, ಆದಿಲ್‌ಶಾಹಿ ಮೊದಲಾದ ಇಸ್ಲಾಮಿ ರಾಜವಂಶಗಳಿಂದ ಅದ್ಭುತವಾದ ಕಲಾಕೃತಿಗಳೆನಿಸಬಹುದಾದ ಮಸೀದಿ ಮತ್ತು ಗೋರಿಗಳು ನಿರ್ಮಾಣವಾಗಿವೆ. ಜೊತೆಗೆ ಇಸ್ಲಾಮೀ ಆಳಿಕೆಯ ಆರಂಭ ಕಾಲದಿಂದ ಲೌಕಿಕ ವಾಸ್ತುವೂ ಕಲೆಯಾಗಿ ಬೆಳೆದಿದ್ದುದಕ್ಕೆ ಆ ಕಾಲದ ಅನೇಕ ಅರಮನೆಗಳು, ಶ್ರೀಮಂತರ ಗೃಹಗಳು, ಕೊಳ, ಬಾವಿ ಇತ್ಯಾದಿಗಳು ಸಾಕ್ಷ್ಯಗಳಾಗಿ ನಿಂತಿವೆ.

ಶಿಲ್ಪಕ್ಕೆ ಸಂಬಂಧಿಸಿದ ಬಹುಪ್ರಾಚೀನ ಕೃತಿಗಳು ಕ್ರಿಸ್ತಶಕಾರಂಭದ ಪರಿಸರದಿಂದ ದೊರಕುತ್ತವೆ. ಈ ಶಿಷ್ಟ ಶಿಲ್ಪಕಲೆಯೂ ಧಾರ್ಮಿಕ ಅಂಗವಾಗಿಯೇ ಬೆಳೆದಿದ್ದರಿಂದ ದೇವಾಲಯ ಶಿಲ್ಪಗಳೇ ವಿಶೇಷವಾಗಿ ದೊರಕಿವೆ. ಹೆಚ್ಚಿನವೆಲ್ಲಾ ಹಿಂದು ಶಿಲ್ಪಗಳು. ಇಸ್ಲಾಮೀ ಸಂಸ್ಕೃತಿಯಲ್ಲಿ ಶಿಲ್ಪಕಲೆಗೆ ಪ್ರೋತ್ಸಾಹವಿರಲಿಲ್ಲವಾಗಿ ಆ ಅರಸರ ಆಳಿಕೆಯ ಕಾಲಘಟ್ಟಗಳಲ್ಲಿ ಶಿಲ್ಪಕಲೆ ಅಷ್ಟಾಗಿ ಪ್ರಚಾರದಲ್ಲಿರಲಿಲ್ಲವೆಂದು ಹೇಳಬಹುದು. ಶಿಲ್ಪಗಳಲ್ಲೂ ಶಿಲಾಶಿಲ್ಪಗಳೇ ಹೆಚ್ಚಾಗಿ ದೊರಕುತ್ತವೆ. ಕಲ್ಯಾಣದ ಚಾಳುಕ್ಯರ ಕಾಲದ್ದೆನ್ನುವ ಕೆಲವು ತಾಮ್ರದ ಶಿಲ್ಪಗಳು ದೊರಕಿದ್ದರೂ ಅವುಗಳ ಸಂಖ್ಯೆ ಚೋಳ ಕಾಲದಿಂದ ಹೆಚ್ಚಾಗುತ್ತದೆ. ದೊರಕಿರುವುದರಲ್ಲಿ ವಿಜಯನಗರ ಕಾಲದವೇ ಹೆಚ್ಚು.

ಸಂಗೀತ, ನೃತ್ಯಗಳು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ಬೆಳೆದು ಬಂದ ಕಲೆಗಳು. ಒಂದು ನೆಲೆಯಾಗಿ ನಿಲ್ಲಬಲ್ಲ ಸಾಮಗ್ರಿ ಈ ಎರಡೂ ಕಲೆಗಳಿಗಿಲ್ಲದಿರುವುದರಿಂದ ಇವುಗಳ ಹುಟ್ಟು ಬೆಳವಣಿಗೆಯನ್ನು ಗುರುತಿಸಲಾಗುವುದಿಲ್ಲ. ತಲತಲಾಂತರದಿಂದ ಜನಜೀವನದಲ್ಲಿ ಹರಿದುಕೊಂಡು ಬಂದು ಇಂದಿಗೂ ಹಲವು ರೂಪಗಳಲ್ಲಿ ಉಳಿದು ಬಂದಿರುವ ಈ ಕಲೆಗಳಲ್ಲಿ ಪ್ರಾದೇಶಿಕ ವಿಭಿನ್ನತೆಗಳನ್ನು ಗುರುತಿಸಬಹುದು. ಬೆದಂಡೆ, ಪದ, ಮೇಲ್ವಾಡು, ಪಾಡುಗಬ್ಬ, ಒನಕೆವಾಡು ಮುಂತಾದುವನ್ನು ಲಾಕ್ಷಣಿಕರು ಹೆಸರಿಸಿದ್ದರೂ ಅವುಗಳ ಸ್ವರೂಪ ಎಂಥದು ಎಂದು ತಿಳಿಯಲು ಈಗ ಆಧಾರಗಳಿಲ್ಲ. ಬಾದಾಮಿಯ ಚಳುಕ್ಯರ ಕಾಲದಾರಭ್ಯ ವಿವಿಧ ದೇವಾಲಯ ಶಿಲ್ಪಗಳಲ್ಲಿ ಸಂಗೀತಗಾರರ ಮೇಳ, ನೃತ್ಯಭಂಗಿಗಳು ಬಗೆಬಗೆಯ ವಾದ್ಯಗಳನ್ನು ನುಡಿಸುತ್ತಿರುವ ಶಿಲ್ಪಮಾದರಿಗಳನ್ನು ದೇವಾಲಯಗಳ ಗೋಡೆಗಳ ಮೇಲೆ ಅಸಂಖ್ಯಾತವಾಗಿ ನೋಡಬಹುದು. ಸಂಗೀತದ ವೈವಿಧ್ಯಮಯವಾದ ಬೆಳವಣಿಗೆಗೆ ಕರ್ನಾಟಕವೇ ಮೂಲವೆಂದು ಅನೇಕ ಪ್ರಾಚೀನ ಸಂಗೀತ ಶಾಸ್ತ್ರಗ್ರಂಥಗಳಿಂದ ವ್ಯಕ್ತವಾಗುತ್ತದೆ. (ಎಂ.ಎಚ್.)

ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ವಿವಿಧ ಉಪಯೋಗೀ ಕಲೆಗಳ ಬಗ್ಗೆ ಸಾಕಷ್ಟು ಆಧಾರಗಳು ಉಳಿದು ಬಂದಿಲ್ಲ. ದೇವಾಲಯ ಶಿಲ್ಪಗಳಲ್ಲಿ ಕಂಡುಬರುವ ಆಭರಣಗಳು, ಕೆಲವು ಗ್ರಾಂಥಿಕ ವಿವರಣೆಗಳು, ಚಿನ್ನಗಾರಿಕೆಯ ಬಗ್ಗೆ ಸ್ವಲ್ಪ ಮಟ್ಟಿಗೆ ಮಾಹಿತಿ ಒದಗಿಸುತ್ತವೆ. ಈ ಎಲ್ಲ ಮಾಹಿತಿಗಳೂ ದೊರಕಿಸುವ ಒಂದು ಮುಖ್ಯಾಂಶವೆಂದರೆ ಪ್ರಾಚೀನ ಕಾಲದಲ್ಲಿ ರಾಜಮನೆತನದವರು ಮತ್ತು ಶ್ರೀಮಂತರ ಉದಾರ ಪ್ರೋತ್ಸಾಹದಿಂದಲೇ ವಿವಿಧ ಶಿಷ್ಟಕಲೆಗಳು ಬೆಳೆದಿವೆ ಎಂಬುದು. ಚತುರ ಕಲೆಗಾರರಿಗೆ ಈ ಜನ ಪ್ರೋತ್ಸಾಹ ನೀಡುತ್ತಿದ್ದರು. ಆದರೂ ಈ ಯಾವ ಕಲೆಯೂ ವ್ಯಕ್ತಿಗತ ಪ್ರತಿಭಾಸೃಷ್ಟಿಯಾಗಿ ವೈಯಕ್ತಿಕ ವೈವಿಧ್ಯವನ್ನು ಪ್ರದರ್ಶಿಸುವುದಿಲ್ಲವೆಂದೇ ಹೇಳಬಹುದು. ಪ್ರಾಚೀನ ಕಲೆ ಸಂಪ್ರದಾಯಾತ್ಮಕವಾಗಿಯೇ ಹೆಚ್ಚುಕಡಿಮೆ ಬೆಳೆದುಬಂದಿವೆ. ಕಲೆಗಿಂತಲೂ ಕಲೆಯ ಬೆಳವಣಿಗೆಯಲ್ಲಿ ಶಾಸ್ತ್ರ ಪ್ರಧಾನ ಪಾತ್ರ ವಹಿಸಿದೆ.

ಆದರೂ ವೈಯಕ್ತಿಕವಾಗಿಲ್ಲವಾದರೂ ಒಟ್ಟಾರೆಯಾಗೀ ಈ ಸಂಪ್ರದಾಯಗಳ ಬೆಳೆವಣಿಗೆಯಲ್ಲಿ ಕರ್ನಾಟಕದ ಪಾತ್ರ ವಿಶೇಷವಾದುದು. ಕರ್ನಾಟಕದ ಕಲೆಗಳು ಸಾಮಾನ್ಯತಃ ಭಾರತೀಯ ಸಂಪ್ರದಾಯದ ಭಾಗವಾಗಿ ಕಂಡುಬಂದರೂ ವಾಸ್ತು ಮತ್ತು ಸಂಗೀತ ಕಲೆಗಳಲ್ಲಿ ಕರ್ನಾಟಕ ಸಾಧನೆ ವಿಶಿಷ್ಟವಾಗಿದೆ. ದೇವಾಲಯದ ರಚನಾಸಂಪ್ರದಾಯ ಉತ್ತರ ಭಾರತದಲ್ಲಿ ಮೊದಲು ಕಾಣಿಸಿಕೊಂಡಿತಾದರೂ ಆ ಸಂಬಂಧದಲ್ಲಿ ಹೊಸ ಹೊಸ ಪ್ರಯೋಗಗಳು ನಡೆದು ದೇವಾಲಯ ಸ್ವರೂಪವನ್ನು ನಿರ್ದಿಷ್ಟ ಗೊಳಿಸಿದುದಲ್ಲದೆ, ದ್ರಾವಿಡ, ನಾಗರ, ವೇಸರ ಪ್ರಕಾರಗಳೂ ರೂಪುಗೊಂಡುದು ಕರ್ನಾಟಕದಲ್ಲಿ, ಬಾದಾಮಿಯ ಚಳುಕ್ಯರ ಕಾಲದಲ್ಲಿ. ಇಲ್ಲಿ ಬೆಳೆದ ದೇವಾಲಯದ ರೀತಿಗಳು ಇಡೀ ಭಾರತವೇ ಅಲ್ಲದೆ ಆಗ್ನೇಯ ಏಷ್ಯದ ಹಲವು ಪ್ರದೇಶಗಳಲ್ಲೂ ಬೆಳೆದ ವಾಸ್ತು ಸಂಪ್ರದಾಯಗಳಿಗೆ ಮೂಲಮಾದರಿಯನ್ನು ಒದಗಿಸಿದುವು. ಸಂಗೀತರಂಗದಲ್ಲಿ ಕರ್ನಾಟಕದ ಮತಂಗ, ಶಾರ್ಙ್ಗದೇವ, ವಿದ್ಯಾರಣ್ಯ, ಕಲ್ಲರಸ, ಪುರಂದರದಾಸ, ಕನಕದಾಸ ಮೊದಲಾದವರು ಬೆಳೆಸಿದ ಶಾಸ್ತ್ರೀಯ ಸಂಗೀತ ರೀತಿ ಮುಂದೆ ಕರ್ಣಾಟಕ ಸಂಗೀತ ಎಂಬ ವಿಶೇಷ ಪ್ರಕಾರವಾಗಿ ಬೆಳೆದು ಇಂದು ಇಡೀ ದಕ್ಷಿಣ ಭಾರತದ ಶಾಸ್ತ್ರೀಯ ಸಂಪ್ರದಾಯವಾಗಿದೆ. ಈ ವಾಸ್ತು ಮತ್ತು ಸಂಗೀತದ ಸಂಪ್ರದಾಯಗಳು ಭಾರತೀಯ ಕಲೆಗೆ ಕನ್ನಡಿಗರು ಇತ್ತ ವಿಶೇಷ ಕೊಡುಗೆಗಳು.

ಪಾಶ್ಚಾತ್ಯರ ಪ್ರಭಾವ ಪ್ರಾರಂಭವಾದ ಕಾಲದಿಂದ ಈ ನಾಡಿನ ಶಿಷ್ಟಕಲೆಗಳ ಸ್ವರೂಪವೂ ಬದಲಾವಣೆಯಾಗಲಾರಂಭಿಸಿತು. ಧಾರ್ಮಿಕ ಚೌಕಟ್ಟಿನಲ್ಲಿ ನಿರ್ಮಾಣವಾಗುತ್ತಿದ್ದ ಹಾಗೂ ಅರಸರ ಅನಿಸಿಕೆಯಂತೆ ಅಪೇಕ್ಷೆಯಂತೆ ಮೈ ತಾಳುತ್ತಿದ್ದ ಕಲೆ, ಮೊಟ್ಟಮೊದಲ ಬಾರಿಗೆ ಸ್ವತಂತ್ರವಾಯಿತು. ಅಂದರೆ ಕಲೆಗಾರ ಸ್ವತಂತ್ರ ಕಲೆಗಾರನಾದ, ಸ್ವತಂತ್ರ ವ್ಯಕ್ತಿತ್ವ ಹೊಂದಿದವನಾದ, ಕಲೆ ಅರ್ಧ ಭಾವನಾತ್ಮಕ ಅರ್ಧ ವ್ಯಾವಹಾರಿಕ ಕಸಬಾಯಿತು. ಕೆಲವೊಮ್ಮೆ ಕಲಾಕೃತಿಗಳು ಸರಕಾಗಿ ಅದನ್ನು ಉತ್ಪಾದಿಸುವ ಕಲೆಗಾರ ಸರಕಿನ ತಯಾರಕನೂ ಆದ. ಹಿಂದೆ ಕಲೆ ಬಹುಮಟ್ಟಿಗೆ ಧಾರ್ಮಿಕ ಜೀವನದ ಪೋಷಣೆಗೆ ಸಾಧಕವಾಗಿ ಪಾರಮಾರ್ಥಿಕ ಗುರಿಯನ್ನು ಹೊಂದಿದ್ದರೆ, ಈಗ ಸಮಾಜದ ಸಾಂಸ್ಕೃತಿಕ ಚಟುವಟಿಕೆಯಾಗಿ ಮನರಂಜನೆಯಾಗಿ ಮುಖ್ಯಕಸಬಾಗಿ ಬೆಳೆಯುತ್ತಿವೆ. ಅರಮನೆ ಮತ್ತು ದೇವಾಲಯಗಳು ಹಿಂದೆ ಕಲಾವಿದರನ್ನು ಕಾಪಾಡಿ ಒಂದೊಂದು ಕಾಲದಲ್ಲಿಯೂ ಒಂದೊಂದು ಸಂಪ್ರದಾಯವನ್ನು ಉಳಿಸಿ, ಬೆಳೆದು ಬರುವಂತೆ ಮಾಡಿದ್ದರೆ, ಈಗ ಕಲಾವಿದರು ಸ್ವತಂತ್ರರಾಗಿ ಸ್ವಪ್ರತಿಭೆಯನ್ನೇ ಬಂಡವಾಳವನ್ನಾಗಿಟ್ಟುಕೊಂಡು ಒಬ್ಬೊಬ್ಬ ವ್ಯಕ್ತಿಗಳನ್ನು ಆಶ್ರಯಕ್ಕಾಗಿ ಅವಲಂಬಿಸದೆ, ಒಟ್ಟಾರೆ ಸಮಾಜದ ಆಸರೆಯ ಕಲಾಸೃಷ್ಟಿ ಮಾಡುತ್ತಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಬಳಕೆಗೆ ಬಂದಿರುವ ಕಲಾತಂತ್ರ ಮತ್ತು ರೂಪಗಳನ್ನು ಅವಲಂಬಿಸುತ್ತಿದ್ದಾರೆ. ಹಿಂದೆ ಕಲೆ ಕೆಲವೇ ಕಸಬುದಾರರ ಮನೆತನಗಳ ಸ್ವತ್ತಾಗಿದ್ದರೆ ಇಂದು ಕಲಾಬೋಧನೆಗೆ ಸಾಕಷ್ಟು ಸಂಸ್ಥೆಗಳು ಇದ್ದು ಕಲಾಭ್ಯಾಸ ಎಲ್ಲರಿಗೂ ತೆರೆದಿದೆ. ಇವೆಲ್ಲ ವ್ಯತ್ಯಾಸಗಳಿಂದ ಪ್ರಾಚೀನ ಮತ್ತುಆಧುನಿಕ ಕಲಾರೀತಿಗಳಲ್ಲಿ ಗಮನಾರ್ಹ ವ್ಯತ್ಯಾಸಗಳು ಕಂಡುಬರುತ್ತಿವೆ. ಆದರೂ ಕೆಲವೊಮ್ಮೆ ಹಳೆಯ ಸಂಪ್ರದಾಯಗಳನ್ನು ಉಳಿಸಿಕೊಳ್ಳುವುದೂ ಉಂಟು. ನಾಡಿನ ಕಲಾರಂಗ ಈ ದೇಶೀ ಮತ್ತು ಪಾಶ್ಚಿಮಾತ್ಯ ಸಂಪ್ರದಾಯ ಪ್ರಭಾವಗಳ ಮಧ್ಯೆ ಸಿಲುಕಿದ್ದು ಇನ್ನೂ ಸ್ವಂತತನವನ್ನು ಸಾಧಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ ಸಂಗೀತವನ್ನು ತೆಗೆದುಕೊಂಡರೆ, ಕರ್ನಾಟಕ ಸಂಗೀತ ತನ್ನ ಹಿಂದಿನ ಸಂಪ್ರದಾಯದ ಮುದ್ರೆಯನ್ನು ಮೀರಿ ಹೆಚ್ಚೇನೂ ಬದಲಾಗಿಲ್ಲ. ಆದರೂ ಬದಲಾವಣೆಯತ್ತ ಪ್ರಯೋಗಗಳು ನಡೆಯುತ್ತಿವೆ. ಈಗಾಗಲೇ, ಆಧುನಿಕ ಕವಿಗಳ ಕವನಗಳಿಗೆ ಶಾಸ್ತ್ರೀಯ ರಾಗದ ಮಟ್ಟುಗಳನ್ನು ಹಾಕುವ ಪ್ರಯತ್ನಗಳು ನಡೆದಿವೆ. ಲಘುಗೀತೆಗಳ ಪ್ರಕಾರ ಹೆಚ್ಚು ಜನಪ್ರಿಯತೆ ಗಳಿಸುತ್ತಿದೆ. ಸ್ಯಾಕ್ಸೊಫೋನ್, ಕ್ಲಾರಿಯೋನಟ್, ಸಿತಾರ್ ಮೊದಲಾದ ಹೊಸ ವಾದ್ಯಗಳನ್ನು ಕೆಲವು ವಿದ್ವಾಂಸರು ಈಗ ಉಪಯೋಗಿಸುತ್ತಿದ್ದಾರೆ. ಕರ್ನಾಟಕ ಸಂಗೀತದ ಬೆಳೆವಣಿಗೆಗೆ ಸಹಾಯಕವಾದ ಭಜನೆ ಹರಿಕಥೆ ಗೋಷ್ಠಿ ಇವು ಬಳಕೆಯಲ್ಲಿದ್ದರೂ ಸಂಗೀತಪ್ರಸಾರದ ಒಂದು ಮಾಧ್ಯಮವಾಗಿ ರೇಡಿಯೋ ಮುಖ್ಯ ಸ್ಥಾನವನ್ನು ಆಕ್ರಮಿಸಿದೆ. ಇತ್ತೀಚೆಗೆ ಪಾಶ್ಚಾತ್ಯಸಂಗೀತದ ಬಳಕೆಯೂ ಆಗುತ್ತಿದೆ. ಅದರ ವ್ಯಾಮೋಹವೂ ಯುವಜನಾಂಗದಲ್ಲಿ ಹೆಚ್ಚುತ್ತಿದೆ. ವಿವಿಧ ಸಂಗೀತ ಸಂಪ್ರದಾಯಗಳ ಬಗ್ಗೆ ಜನರ ಆಸಕ್ತಿ ಕೆರಳಿಸಲು ಸಂಸ್ಥೆಗಳೂ ಶ್ರಮಿಸುತ್ತವೆ. ಉದಾಹರಣೆಗೆ: ಮೈಸೂರು ವಿಶ್ವವಿದ್ಯಾನಿಲಯ ಹಿಂದುಸ್ಥಾನಿ ಸಂಗೀತ ಮತ್ತು ಕರ್ಣಾಟಕ ಸಂಗೀತದ ಬಗ್ಗೆ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಅಭಿರುಚಿ ಬೆಳೆಸಲು ಕಲಾವಿದರಿಂದ ಸಂಗೀತ ಕಚೇರಿಗಳನ್ನು ಏರ್ಪಡಿಸುತ್ತಿದೆ. ಇದೇ ರೀತಿಯ ಬೆಳೆವಣಿಗೆಯ ಧಾಟಿಯನ್ನು ಇತರ ಕಲೆಗಳಲ್ಲೂ ನೋಡಬಹುದು.

ದೇಶಕ್ಕೆ ಸ್ವಾತಂತ್ರ್ಯ ಬಂದ ಅನಂತರ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಕಲೆಯ ಅಭಿವೃದ್ಧಿಯಲ್ಲಿ ಆಸಕ್ತಿ ತೋರಿಸುತ್ತವೆ. ಅದಕ್ಕಾಗಿ ಕಲಾ ಶಿಕ್ಷಣ ಒದಗಿಸಲು ರಾಜ್ಯದ ಹಲವಾರು ಕಡೆ ಕಲಾಶಾಲೆಗಳನ್ನು ತೆರೆಯಲಾಗಿದೆ. ಸಾಮಾನ್ಯ ಶಾಲೆಗಳಲ್ಲೂ ಕಲಾಬೋಧನೆಗೆ ಅವಕಾಶ ಕಲ್ಪಿಸಲಾಗಿದೆ. ರಾಜ್ಯದಲ್ಲೇ ಮೊದಲನೆಯದಾಗಿ (ಭಾರತದಲ್ಲಿ ಎರಡನೆಯದಾಗಿ) ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜನ್ನೂ ಸ್ಥಾಪಿಸಿದೆ. ಈಗ ಬೆಂಗಳೂರು ವಿಶ್ವವಿದ್ಯಾಲಯವೂ ಒಂದು ಕಾಲೇಜನ್ನು ಆರಂಭಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಸಂಗೀತ, ನೃತ್ಯ ಮತ್ತು ನಾಟಕಕ್ಕೆ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆಯಿದೆ. ಕ್ರಮೇಣ ಚಿತ್ರಕಲೆ ಮತ್ತಿತರ ಲಲಿತಕಲೆಗಳ ವಿಭಾಗವನ್ನೂ ಈ ಕಾಲೇಜುಗಳಲ್ಲಿ ತೆಗೆಯುವ ಸಂಭವವಿದೆ. ರಾಜ್ಯ ಸಂಗೀತ ನಾಟಕ ಅಕಾಡೆಮಿ, ಲಲಿತಕಲಾ ಅಕಾಡೆಮಿ, ಇತ್ಯಾದಿ ರಾಜ್ಯ ಕಲಾ ಸಂಸ್ಥೆಗಳು ಕಲಾಭ್ಯುದಯಕ್ಕೆ ಅನೇಕ ಯೋಜನೆ ಹಾಕಿಕೊಂಡು ಕೆಲಸಗಳನ್ನು ಮಾಡುತ್ತವೆ ಮತ್ತು ಅಶಕ್ತ ಕಲಾವಿದರಿಗೆ ನಿಧಿ ಅರ್ಪಿಸುವ ಹಾಗೂ ಮಾಸಾಶನ ನೀಡುವ ವ್ಯವಸ್ಥೆ ಇದೆ. ಕಲಾಪ್ರಸಾರಕ್ಕೆ ಗೋಷ್ಠಿಗಳನ್ನು ಏರ್ಪಡಿಸುವದು, ಪ್ರದರ್ಶನಗಳನ್ನು ಏರ್ಪಾಡುಮಾಡುವದು, ಉತ್ತಮ ಕಲಾವಿದರಿಗೆ ಮತ್ತು ಕಲಾಕೃತಿಗಳಿಗೆ ಬಹುಮಾನ ನೀಡುವುದು, ಮೊದಲಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿವೆ. ಹಿಂದೆ ರಾಜರಾಶ್ರಯದಲ್ಲಿ ಬೆಳೆಯುತ್ತಿದ್ದ ಕಲೆಗಳು ಇಂದು ರಾಜ್ಯಾಶ್ರಯದಲ್ಲಿ, ಕಲಾಭಿಮಾನೀ ಸಂಘ ಮತ್ತು ಸಂಸ್ಥೆಗಳ ಆಶ್ರಯದಲ್ಲಿ ಬೆಳೆದು ತಮ್ಮ ಪ್ರತಿಷ್ಠೆಯ ಸ್ಥಾನ ಉಳಿಸಿಕೊಳ್ಳುತ್ತಿವೆ; ಬೆಳೆಸಿಕೊಳ್ಳುತ್ತಿವೆ. (ಸಿ.ಎಸ್.)

**ಕಲ್ಕಿ ತುರಾಯಿ :** ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಒಂದು ಪ್ರಸಿದ್ಧ ಲಾವಣಿ ಸಂಪ್ರದಾಯ. ದಕ್ಷಿಣ ಕರ್ನಾಟಕದಲ್ಲಿಯೂ ಈ ಸಂಪ್ರದಾಯದ ಹಾಡುಗಳಿದ್ದವು ಎಂಬುದಕ್ಕೆ ಅಲ್ಲಲ್ಲಿ ನಿದರ್ಶನಗಳು ಲಭ್ಯವಾದರೂ ಇತ್ತೀಚೆಗೆ ಸಂಪೂರ್ಣವಾಗಿ ಅವು ಕಣ್ಮರೆಯಾಗಿ ಹೋಗಿವೆ. ಮೈಸೂರು ಮತ್ತು ಕಡೂರುಗಳಲ್ಲಿ ಕಲ್ಕಿ ತುರಾಯಿ ಲಾವಣಿಗಳನ್ನು ಹಾಡುವವರು ತೀರ ಇತ್ತೀಚಿನವರೆಗೆ ಕಾಣಬರುತ್ತಿದ್ದರು.

ಕಲ್ಕಿ ಮತ್ತು ತುರಾಯಿಗಳು ಲಾವಣಿಕಾರರ ಎರಡು ವರ್ಗಗಳು. ನಾಗೇಸಿ ಮತ್ತು ಹರದೇಸಿ ಎಂದೂ ಇವರನ್ನು ಕರೆಯುವುದಿದೆ. ಈ ಎರಡು ವರ್ಗದ ಲಾವಣಿಕಾರರೂ ಎದಿರುಬದಿರಾಗಿ ನಿಂತು ಸ್ಪರ್ಧೆಯಿಂದ ಹಾಡುತ್ತಾರೆ. ಹರದೇಸಿಯುವರು ಗಂಡಿನ ಪಕ್ಷವನ್ನೂ ನಾಗೇಸಿಯುವರು ಹೆಣ್ಣಿನ ಪಕ್ಷವನ್ನೂ ವಹಿಸಿ ಅಪೂರ್ವ ಲಾವಣಿಗಳನ್ನು ಹೇಳುತ್ತಾರೆ. ತಮ್ಮ ತಮ್ಮ ಪಕ್ಷಗಳನ್ನು ಎತ್ತಿಹಿಡಿದು ಹಾಡುವುದು ಇಲ್ಲಿನ ಸಂಪ್ರದಾಯ. ಉದಾಹರಣೆಗೆ ಕೆಲವನ್ನು ಇಲ್ಲಿ ಗಮನಿಸಬಹುದು. ಬೀಜ ಮೊದಲೋ ಗಿಡ ಮೊದಲೋ ಎಂಬ ಸಮಸ್ಯೆಯನ್ನು ಎತ್ತಿಕೊಂಡು ಎರಡು ಪಕ್ಷಗಳಲ್ಲಿ ಒಂದು ಬೀಜವೆಂದರೆ ಇನ್ನೊಂದು ವೃಕ್ಷ ಎಂದು ವಾದಮಾಡುತ್ತದೆ. ಕೆಲವೊಮ್ಮೆ ಕಪ್ಪು ಬಣ್ಣ ಕಲ್ಕಿಯ ಪ್ರತೀಕವಾದರೆ ಕೆಂಪು ಬಣ್ಣ ತುರಾಯಿಯ ಪ್ರತೀಕವಾಗುತ್ತದೆ. ಕರಿ ಹೆಚ್ಚೆಂದು ಕಲ್ಕಿಯ ಪಕ್ಷ ವಾದಿಸಿದರೆ ಕೆಂಪು ಹೆಚ್ಚೆಂದು ತುರಾಯಿ ಪಕ್ಷ ವಾದಿಸುತ್ತದೆ. ಯುದ್ಧದಲ್ಲಿ ಕಪ್ಪುಮದ್ದು, ಕರಿ ಕಬ್ಬಿಣದ ಕತ್ತಿ, ಕೋವಿಗಳಿಂದಲೇ ಗೆಲ್ಲಲು ಸಾಧ್ಯವೆಂದು ಕಲ್ಕಿ ಪಕ್ಷ ವಾದಿಸಿದರೆ ಕಪ್ಪುಮದ್ದು ಸಿಡಿಯಲು ಕೆಂಪುಬಣ್ಣದ ಬೆಂಕಿಯೇ ಬೇಕಾಗುವುದೆಂದೂ ಆದ್ದರಿಂದ ಕೆಂಪು ಮೇಲೆಂದೂ ತುರಾಯಿ ವಾದಿಸುತ್ತದೆ. ಇವರ

ತರ್ಕಸರಣಿ ಕುತೂಹಲಕಾರಿಯಾಗಿರುತ್ತದೆ. ದೇವರ ಘನತೆ ಕುರಿತಾದಂತಹ ಸಂವಾದಗಳೂ ಉಂಟು. ಒಂದು ಪಕ್ಷ ಗಣಪತಿಯ ಘನತೆಯನ್ನು ಎತ್ತಿ ಹಾಡಿದರೆ ಇನ್ನೊಂದು ಪಕ್ಷ ವೀರಭದ್ರ ದೇವರ ಘನತೆಯನ್ನು ಎತ್ತಿಹಿಡಿದು ವಾದ ಮಾಡುತ್ತದೆ. ಹೀಗೆ ಕೆಲವು ಸಮಸ್ಯೆಗಳಿಗೆ ಚಾತುರ್ಯಯುಕ್ತವಾಗಿ ಪ್ರಶ್ನೆ-ಉತ್ತರದ ಚಕಮಕಿ ನಡೆಯುತ್ತದೆ. ಈ ವಾದ ಒಮ್ಮೆ ಮುಗಿದರೆ ಇನ್ನೊಮ್ಮೆ ಮುಗಿಯದಿರುವುದೂ ಉಂಟು. ಒಂದು ಇನ್ನೊಂದಕ್ಕಿಂತ ಮೇಲು ಎಂದು ಸ್ಥಾಪಿಸುವ ಭರದಲ್ಲಿ ಲಾವಣಿಯ ಲಾವಣ್ಯಕ್ಕೆ ಭಂಗವನ್ನುಂಟುಮಾಡುವ ಸಂದರ್ಭಗಳೂ ಉಂಟು.

ಲಾವಣಿಗಳಲ್ಲಿ ವಿಸ್ತಾರವಾದ ಲಾವಣಿಗಳೂ ಉಪಲಾವಣಿಗಳೂ ಇವೆ. ಪೌರಾಣಿಕ, ಸಾಮಾಜಿಕ, ಐತಿಹಾಸಿಕ ವಿಷಯಗಳು ಸಾಮಾನ್ಯವಾಗಿ ಈ ಲಾವಣಿಯ ಮುಖ್ಯ ವಸ್ತುಗಳಾಗಿ ಕಂಡುಬರುತ್ತವೆ. ಶೃಂಗಾರ ಹಾಗೂ ಹಾಸ್ಯಪ್ರಧಾನ ಲಾವಣಿಗಳ ಪ್ರಾಚುರ್ಯ ಹೆಚ್ಚು. ಹಳೆಯ ಸಂಪ್ರದಾಯದ ಲಾವಣಿಗಳು, ಹೊಸ ಸಂಪ್ರದಾಯದ ಲಾವಣಿಗಳು ಎಂದು ಇವುಗಳ ಬಗೆಗಳನ್ನು ವಿಭಜಿಸಲಾಗಿದೆ. ಹಳೆಯ ಲಾವಣಿಗಳು ರಚನಾರೀತಿ ಮತ್ತು ಕಲ್ಪನಾರಮ್ಯತೆಯ ದೃಷ್ಟಿಯಿಂದ ವಿಶಿಷ್ಟ ಸ್ಥಾನಕ್ಕೆ ಅರ್ಹವಾದವು.

ಸಾಮಾನ್ಯವಾಗಿ ಲಾವಣಿಕಾರರು ಪ್ರತಿ ಲಾವಣಿಯನ್ನು ಹಾಡುವಾಗಲೂ ಮೊದಲಿಗೊಂದು ಉಪೋದ್ಘಾತ ಸ್ವರೂಪದ ಚಿಕ್ಕಹಾಡನ್ನೂ ಕೊನೆಗೊಂದು ಉಪಸಂಹಾರ ಸ್ವರೂಪದ ಹಾಡನ್ನೂ ಹೇಳುವುದು ವಾಡಿಕೆ. ಸೂಚನಾ ಪಲ್ಲವಿಯನ್ನು ಸಖಿ ಎಂದೂ ಕೊನೆಯದನ್ನು ಖ್ಯಾಲಿ ಎಂದೂ ಹೆಸರಿಸುತ್ತಾರೆ. ಪ್ರತಿ ಲಾವಣಿಯಲ್ಲೂ ಚೌಕ ಎಂಬ ವಿಭಾಗವನ್ನು ಕಲ್ಪಿಸಿ, ಅದರಲ್ಲಿ ಕೆಲವು ನುಡಿಗಳು ಸೇರಿರಬೇಕೆಂದು ಇಟ್ಟುಕೊಂಡಿದ್ದಾರೆ. ಅಂಥ ನಾಲ್ಕೋ ಆರೋ ಚೌಕ ಸೇರಿದರೆ ಒಂದು ಇಡೀ ಲಾವಣಿ ಆಗುತ್ತದೆ.

ಲಾವಣಿ ಹಾಡುವಾಗ ಸಾಮಾನ್ಯವಾಗಿ ಇಬ್ಬರು ಜೊತೆಯಾಗುತ್ತಾರೆ. ಅವರು ಎಡಗೈಯಲ್ಲಿ ಕೈತಾಳ, ಬಲಗೈಯಲ್ಲಿ ಡಪ್ಪು ಹಿಡಿದು ಗೆಜ್ಜೆ ಕಟ್ಟಿಕೊಂಡು ಹಾಡಲು ಸಿದ್ಧವಾಗುತ್ತಾರೆ. ಅವರ ಹಿಂದೆ ತಿಂತಿಣಿ ಎಂಬ ವಾದ್ಯವನ್ನು ಹಿಡಿದ ಸೂರಿನವ ನಿಂತಿರುತ್ತಾನೆ.

ಲಾವಣಿಕಾರ ಲಾವಣಿಯ ಕೊನೆಯಲ್ಲಿ ತನ್ನ ಊರು, ಅಧಿದೈವ, ಗುರು ಪರಂಪರೆ, ಹಾಡುವ ಜೊತೆಗಾರರು ಮುಂತಾದ ವಿಷಯಗಳನ್ನೂ ತನ್ನ ಹಾಡು ಎಂಥ ಪ್ರಭಾವಶಾಲಿಯಾದುದು, ಪ್ರತಿಪಕ್ಷದವರನ್ನು ಹೇಗೆ ಆಕರ್ಷಿಸಬಲ್ಲುದು ಎಂಬ ಅಂಶವನ್ನೂ ಸೂಚಿಸುತ್ತಾನೆ:

ಮನ ಸಂತೋಷವಾಯ್ತು ಬೆಳದಿಂಗಳ ಮಳಿಕುಟ್ಟಿ | ಮಳಿಕುಟ್ಟಿ |
ಸುತ್ತ ರಾಜ್ಯದಾಗ ಹಲಸಂಗಿ ಊರ ಕರಿಕೋಟೀ | ಕರಿಕೋಟೀ|
ಗಂಡು ಬಾಳು ವಸ್ತಾದರ ಆ ಕಡಿ ನಡಗಟ್ಟಿ | ನಡಗಟ್ಟಿ |
ಕರನಾಟಕ ಹಲಸಂಗಿ ಊರ | ಮೆರಿಯತಾವ ತೂರ |
ಮಲಿಕ ಮೈತರ | ಹಚ್ಚಿ ವರಗಿ |
ಖಾಜ್ಯಾನ ಕವೀ ಸವಿ ಸಕ್ಕರಿ ಎಲ್ಲರಿಗಿ |
ಖಂಡೂನ ಸೂರ ಕೇಳಿ ಕಲ್ಲ ಮನಸು ಕರಗಿ |

ಕಲ್ಕಿ-ತುರಾಯಿ ಸಂಪ್ರದಾಯ ಹಾಗೂ ಆ ಸಂಬಂಧವಾದ ಲಾವಣಿಗಳು ಕರ್ನಾಟಕ ಜಾನಪದದ ಒಂದು ಪ್ರಮುಖ ಅಂಗ. ಅತ್ಯುತ್ಕೃಷ್ಟ ಲಾವಣಿಗಳು ಈ ಪರಂಪರೆಯಲ್ಲಿ ಲಭ್ಯವಾಗಿ ಕನ್ನಡ ಜನಪದ ಕಾವ್ಯಸಂಪತ್ತಿನ ಹಿರಿಮೆಯನ್ನು ಸಾರುತ್ತಿವೆ. (ಎಸ್.ಎಲ್.)

**ಕಲ್ಲತ್ತಗಿರಿ :** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿರುವ ಒಂದು ಪರ್ವತ. ತರೀಕೆರೆಯಿಂದ ದಕ್ಷಿಣಕ್ಕೆ 20ಕಿಮೀ ದೂರದಲ್ಲಿದೆ. ಕಲ್ಲತ್ತಗಿರಿ, ಕಲ್ಲತ್ತಿಗಿರಿ ಎಂದೂ ಕರೆಯಲಾಗುತ್ತದೆ. ಗಿರಿಪರ್ವತ ಶ್ರೇಣಿಗೆ ಸೇರಿದ ಈ ಪರ್ವತ ಸಮುದ್ರಮಟ್ಟದಿಂದ 1876ಮೀ ಎತ್ತರವಾಗಿದೆ. ಮನಮೋಹಕ ಪ್ರಕೃತಿ ಸೌಂದರ್ಯದಿಂದಲೂ ಆಹ್ಲಾದಮಯ ಹವಾಗುಣದಿಂದಲೂ ಕೂಡಿರುವ ಗಿರಿಯ ನೆತ್ತಿಯ ಮೇಲೆ ಕಟ್ಟಿನ ಚೌಡೇಶ್ವರಿ ದೇವಾಲಯವೊಂದಿದೆ.

ಕಲ್ಲತ್ತಗಿರಿಯ ಸಮೀಪದಲ್ಲಿಯೇ ಕಲ್ಲತ್ತಿಪುರ ಎಂಬ ಊರಿದೆ. ಇದು ಕೆಮ್ಮಣ್ಣುಗುಂಡಿಯಿಂದ 10ಕಿಮೀ ದೂರದಲ್ಲಿದ್ದು ನಿಸರ್ಗ ರಮಣೀಯತೆಯಿಂದ ಕೂಡಿದೆ. ಈ ಪ್ರದೇಶದಲ್ಲಿರುವ ಕಲ್ಲತ್ತ ಜಲಪಾತ ಜಿಲ್ಲೆಯ ಸುಂದರ ಜಲಪಾತಗಳಲ್ಲಿ ಒಂದು. ಇದು ಸು.130ಮೀಟರ್ (ಸು.400ಅಡಿ) ಆಳಕ್ಕೆ ಧುಮುಕುತ್ತಿದ್ದು ತನ್ನ ಪ್ರಕೃತಿ ಸಹಜ ದೃಶ್ಯದಿಂದ ನೋಡುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ.

ಪೂರ್ವದಲ್ಲಿ ಕಲ್ಲತ್ತಗಿರಿ ಪ್ರದೇಶ ಅಗಸ್ತ್ಯ ಋಷಿಯ ಆಶ್ರಮಗಳಲ್ಲಿ ಒಂದಾಗಿತ್ತೆಂದು ಪ್ರತೀತಿ. ಇಲ್ಲಿ ಎರಡು ಬಂಡೆಗಳ ನಡುವೆ ವೀರಭದ್ರನ ದೇವಾಲಯವಿದೆ. ಇದನ್ನು ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ತಿಳಿದುಬರುತ್ತದೆ. ಹೊರಗಿನಿಂದ ಇದೊಂದು ಗುಹಾದೇವಾಲಯದಂತಿದ್ದು ಇದರ ಮುಂಭಾಗದಲ್ಲಿ ಕಲ್ಲಿನಲ್ಲಿ ಕೆತ್ತಿದ ಮೂರು ಆನೆಗಳ ಚಿತ್ರಗಳಿವೆ. ಇವುಗಳ ನೆತ್ತಿಯ ಮೇಲಿನಿಂದ ಜಲಪಾತದ ನೀರು ಕೆಳಕ್ಕೆ ಧುಮ್ಮಿಕ್ಕುತ್ತದೆ. ಭಕ್ತಾದಿಗಳು ಈ ನೀರಿನಲ್ಲಿ ಮಿಂದು ದೇವರ ದರ್ಶನ ಮಾಡುತ್ತಾರೆ. ಇಲ್ಲಿ ಪ್ರತಿ ವರ್ಷ ಏಪ್ರಿಲ್ - ಮೇ ತಿಂಗಳಿನಲ್ಲಿ ಮೂರು ದಿನಗಳ ಕಾಲ ವೀರಭದ್ರನ ಜಾತ್ರೆ ನಡೆಯುತ್ತದೆ. ಇಲ್ಲಿಂದ ಸುಮಾರು ಒಂದು ಕಿಮೀ ದೂರದಲ್ಲಿ ಜಕ್ಕರುಪುದಿ ಎಂಬ ಸ್ಥಳವಿದೆ. ಅಲ್ಲಿ ಗಂಗಾತೀರ್ಥ ಎಂಬ ಹೆಸರಿನ ಒಂದು ಕೊಳವಿದೆ. ಅದರ ಸುತ್ತಲೂ ಜೇನುಗೂಡುಗಳಿರುವುದೊಂದು ವಿಶೇಷ. ಈ ಸ್ಥಳದಲ್ಲಿ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕುಕಾರ್ಖಾನೆಗೆ ಸೇರಿದ ಒಂದು ಪ್ರವಾಸಿ ಮಂದಿರವಿದೆ (ನೋಡಿ: ಚಿಕ್ಕಮಗಳೂರು). (ಎಂ.ಪಿ.ಎಂ.)

**ಕಲ್ಪನಾ :** -1979. ಕನ್ನಡ ಚಲನಚಿತ್ರ ಅಭಿನೇತ್ರಿ. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಲ್ಲಿ ಜನಿಸಿದರು. ಕಾನ್ವೆಂಟಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಅಭಿನಯದ ಕಲೆಯನ್ನೂ ರೂಢಿಸಿಕೊಂಡು ಬಂದ ಕಲಾವಿದೆ. ಹದಿನಾರರ ಹರೆಯದಲ್ಲಿ ವಿದ್ಯಾಭ್ಯಾಸ ನಿಲ್ಲಿಸಿ ರಂಗಭೂಮಿಯತ್ತ ನಡೆದರು. ಒಮ್ಮೆ ದಾವಣಗೆರೆಯಲ್ಲಿ ಹವ್ಯಾಸಿ ರಂಗಭೂಮಿಯ ನಾಟಕದಲ್ಲಿ ಅಭಿನಯಿಸುತ್ತಿದ್ದಾಗ ಕನ್ನಡ ಚಿತ್ರರಂಗದ ನರಸಿಂಹರಾಜು ಅವರ ಪರಿಚಯವಾಯಿತು. ಇಲ್ಲಿಂದ ಮದರಾಸಿಗೆ ಪ್ರಯಾಣ. ಎಂ.ವಿ.ರಾಜಮ್ಮ ನವರ 'ಸಾಕುಮಗಳು' ಚಿತ್ರದ ಮೂಲಕ ಕಲ್ಪನಾ ರಜತರಂಗ ಪ್ರವೇಶಿಸಿ, ಪದ್ಮಿನಿ ಚಿತ್ರ ಸಂಸ್ಥೆಯ ಖಾಯಂನಟಿಯಾಗಿ ನಾಲ್ಕಾರು ಚಿತ್ರಗಳಲ್ಲಿ ಅಭಿನಯಿಸಿದರು. ಮುಂದೆ ತ್ರಿವೇಣಿಯವರ ಕಾದಂಬರಿ ಬೆಳ್ಳಿಮೋಡ ಚಿತ್ರ, ಅನಂತರ ನಾಂದಿ ಚಿತ್ರದಲ್ಲಿ ಅಭಿನಯ. ಬಂಗಾರದ ಹೂವಿನಲ್ಲಿ ಕುಷ್ಠರೋಗಿಯಾಗಿ, ಗೆಜ್ಜೆಪೂಜೆಯಲ್ಲಿ ವೇಶ್ಯೆಯ ಪುತ್ರಿ ಚಂದ್ರಳಾಗಿ, ಶರಪಂಜರದ ಬುದ್ಧಿಭ್ರಮಣೆಯ ಕಾವೇರಿಯಾಗಿ, ಉಯ್ಯಾಲೆಯ ರಾಧ, ಸರ್ವಮಂಗಳದ ಮಂಗಳೆ, ಕಪ್ಪು ಬಿಳುಪಿನ ವತ್ಸಲಾ, ಚಂದ್ರ (ದ್ವಿಪಾತ್ರ)- ಹೀಗೆ ಒಂದೊಂದು ಚಿತ್ರವೂ ಕಲ್ಪನಾರ ಅಭಿನಯಕ್ಷೇತ್ರದ ಮೈಲಿಗಲ್ಲುಗಳಾಗಿ ಇವರಿಗೆ ಶ್ರೇಷ್ಠ ನಟಿಯ ಬಿರುದು ಗಳಿಸಿಕೊಟ್ಟವೆ. ತ್ರಿವೇಣಿಯವರ ಮತ್ತೊಂದು ಕೃತಿ ಹಣ್ಣೆಲೆ ಚಿಗುರಿದಾಗ ಚಿತ್ರದ ವಿಧವೆಯ ಪಾತ್ರದಲ್ಲಿ ಕಲ್ಪನಾ ನೀಡಿದ ಪ್ರೌಢಾಭಿನಯ ಆ ಪಾತ್ರವನ್ನೇ ಸಜೀವಗೊಳಿಸಿತು. ಇದಲ್ಲದೆ ಶರಪಂಜರ, ನಾ ಮೆಚ್ಚಿದ ಹುಡುಗಿ, ಗಂಧದ ಗುಡಿ, ಬಯಲುದಾರಿ, ನಾರಿ ಮುನಿದರೆ ಮಾರಿ, ಒಂದೇ ಕುಲ ಒಂದೇ ದೈವ, ಕರುಳಿನ ಕರೆ, ಮುಕ್ತಿ, ಪ್ರೇಮಕ್ಕೂ ಪರ್ಮಿಟ್ಟೇ ಚಿತ್ರಗಳಲ್ಲೂ ವೈವಿಧ್ಯಮಯ ಅಭಿನಯ ನೀಡಿದರು. ಎರಡು ಕನಸು ಚಿತ್ರದ ಅಭಿನಯ ಪ್ರೇಕ್ಷಕರ ಮೆಚ್ಚುಗೆಗಳಿಸಿತು. ಅಪಾರಶ್ರದ್ಧೆ ವಹಿಸಿ ಪಾತ್ರದೊಡನೆಯೇ ಏಕೀಕೃತವಾಗಿರುವಂತೆ ಅಭಿನಯಿಸುವುದು ಇವರ ವೈಶಿಷ್ಟ್ಯ.

ಇವರು ಉತ್ತಮ ವಾಗ್ಮಿಗಳೂ ಸಾಹಿತ್ಯಪ್ರಿಯರೂ ಆಗಿದ್ದರು. ಪ್ರಕೃತಿ ಸೌಂದರ್ಯ, ಕಲೆ-ಸಂಗೀತಗಳ ಬಗ್ಗೆ ಆಸಕ್ತರು. ಇವರ ಮಾತೃಭಾಷೆ ತುಳುವಾದರೂ ಕನ್ನಡದ ಬಗ್ಗೆ ಹೆಚ್ಚಿನ ಆಸಕ್ತಿ. ತುಳು, ಕನ್ನಡ, ಮಲೆಯಾಳಂ, ತೆಲುಗು ಹಾಗೂ ತಮಿಳು ಚಿತ್ರಗಳೂ ಸೇರಿದಂತೆ ಸುಮಾರು 73ಚಿತ್ರಗಳ ನಾಯಕಿಯಾಗಿ ಅಭಿನಯಿಸಿದರು. ತಮ್ಮ ಉತ್ತಮ ಅಭಿನಯಕ್ಕಾಗಿ ಕರ್ನಾಟಕ ಸರ್ಕಾರದಿಂದ ಪ್ರಶಸ್ತಿ ಗಳಿಸಿದರು. ಮಾಸ್ಕೋದಲ್ಲಿ ನಡೆದ ಚಿತ್ರೋತ್ಸವಕ್ಕೆ ಆಹ್ವಾನಿತರಾಗಿ ಹೋಗಿದ್ದ ಕಲ್ಪನಾ ಅಲ್ಲಿನ ಕಲಾವಿದರಲ್ಲಿ ಮತ್ತು ಚಿತ್ರರಸಿಕರಲ್ಲಿ ಕನ್ನಡ ಚಿತ್ರದ ಬಗ್ಗೆ ಆಸಕ್ತಿ ಮೂಡಿಸಿ ಬಂದುದು ಒಂದು ವಿಶೇಷ ಸಂಗತಿ. ದುರಂತ ಪಾತ್ರಗಳಲ್ಲಿ ನಟಿಸುತ್ತಿದ್ದ ಕಲ್ಪನಾರ ಜೀವನವೂ ದುರಂತಮಯವಾಗಿ ಕೊನೆಗೊಂಡಿತು. ಆತ್ಮಹತ್ಯೆ ಮಾಡಿಕೊಂಡು ತಮ್ಮ ಜೀವನ ಕೊನೆಗೊಳಿಸಿದರು (1979). (ಬಿ.ಎಸ್.ಎಸ್.ಆರ್)

**ಕಲಬುರ್ಗಿ, ಎಂ.ಎಂ.** : 1938-. ಕನ್ನಡದ ಪ್ರಸಿದ್ಧ ಸಂಶೋಧಕರು, ವಿಶ್ರಾಂತ ಕುಲಪತಿಗಳು. ಬಿಜಾಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಗುಬ್ಬೇವಾಡದಲ್ಲಿ 1938 ನವೆಂಬರ್ 29ರಂದು ಜನಿಸಿದರು. ತಂದೆ ಮಡಿವಾಳಪ್ಪ, ತಾಯಿ ಗುರಮ್ಮ. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪ್ರಶಸ್ತಿಯೊಂದಿಗೆ ಉನ್ನತಶ್ರೇಣಿಯಲ್ಲಿ ಪಡೆದರು. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಗಳಿಸಿದರು.



ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ (1962) ಇವರು ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವನ್ನು ಸೇರಿ (1966) ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ 32 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದರು. ಬಳಿಕ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡು (1998) ಮೂರು ವರ್ಷ ಕ್ರಿಯಾಶೀಲರಾಗಿ ದುಡಿದರು.

ಕಲಬುರ್ಗಿಯವರು ಸಂಶೋಧನೆಗಾಗಿ ತಮ್ಮನ್ನು ಅರ್ಪಿಸಿಕೊಂಡು ಈ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬಂದವರು. ಇವರ ಸಂಶೋಧನೆ ಎರಡು ಬಗೆಯದು. ಒಂದು, ವೈಯಕ್ತಿಕ ನೆಲೆಯಲ್ಲಿ ಕೈಗೊಂಡ ಸಂಶೋಧನೆ; ಮತ್ತೊಂದು ಸಾಂಸ್ಥಿಕ ನೆಲೆಯಲ್ಲಿ ಮಾಡಿದ ಸಂಶೋಧನೆ. ಹಳಗನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಜಾನಪದ, ಶಾಸನ, ಭಾಷಾವಿಜ್ಞಾನ (ನಾಮವಿಜ್ಞಾನ) ಹೀಗೆ ಇವರ ಸಂಶೋಧನೆಯ ವ್ಯಾಪ್ತಿ ದೊಡ್ಡದು. ಇವರು 46ಕ್ಕೂ ಹೆಚ್ಚು ಗ್ರಂಥಗಳನ್ನೂ 200 ಸಂಶೋಧನ ಲೇಖನಗಳನ್ನೂ ಬರೆದಿದ್ದಾರೆ; ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ.

ಸಂಶೋಧನೆ ಸತ್ಯನಿಷ್ಠವಾಗಿರಬೇಕೆಂಬ ಸಿದ್ಧಾಂತದಲ್ಲಿ ನಂಬಿಕೆಯುಳ್ಳ ಇವರು "ಸಂಶೋಧನೆ ಎನ್ನುವುದು ಸತ್ಯವನ್ನು ಶೋಧಿಸಲು ಮಾಡಿಕೊಂಡ ಪ್ರತಿಜ್ಞೆ, ಸತ್ಯ ಕಹಿಯಾಗಿರುವುದೇ ಹೆಚ್ಚು" ಎಂಬುದನ್ನು ಮನಗಂಡವರು. ಸಂಶೋಧನೆಯಲ್ಲಿ ಕ್ಷೇತ್ರಕಾರ್ಯದ ಅನುಭವಗಳಿಗೂ ಹೆಚ್ಚು ಒತ್ತುಕೊಟ್ಟವರು. ಈ ಕಾರಣಕ್ಕಾಗಿ ಇವರು ನಾಡಿನಾದ್ಯಂತ ಹಾಗೂ ನಾಡಿನ ಹೊರಗೂ ಸಂಚರಿಸಿದ್ದಾರೆ. ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ನಿಂಬಸಾಮಂತ ಚರಿತೆ, ಸಿರುಮಣನಾಯಕನ ಸಾಂಗತ್ಯ, ಸಿರುಮನ ಚರಿತೆ, ಗೊಲ್ಲಸಿರುಮನ ಚರಿತೆ, ಕೊಂಡಗುಳಿ ಕೇಶಿರಾಜನ ಕೃತಿಗಳು, ವಿಜಾಪುರ - ಧಾರವಾಡ ಜಿಲ್ಲೆಯ ಶಾಸನಗಳು (1976), ಕರ್ನಾಟಕ ಕೈಫಿಯತ್ತುಗಳು (1994) ಮೊದಲಾದ ಸಂಪಾದಿತ ಕೃತಿಗಳು ಕರ್ನಾಟಕದ ಇತಿಹಾಸ ರಚನೆಯಲ್ಲಿ ಅಪೂರ್ವ ಆಕರ ಗ್ರಂಥಗಳಾಗಿವೆ.

ಹಳಗನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿ ವಿದ್ವತ್ತು ಗಳಿಸಿರುವ ಇವರಿಗೆ ಪಂಪ, ವಚನಕಾರರು, ಹರಿಹರ ಅಚ್ಚುಮೆಚ್ಚು. ಹಾಗಾಗಿ ಪ್ರಾಚೀನ ಗ್ರಂಥ'ಗಳ ಪರಿಷ್ಕರಣ ವಿಚಾರದಲ್ಲಿ ಆಸ್ಥೆ ಬೆಳೆಸಿಕೊಂಡರು. ಚೆನ್ನಬಸವಣ್ಣನವರ ಷಟ್ಸ್ಥಲವಚನ, ಮಹಾಸಂಪುಟ (1990) ಬಸವಣ್ಣನವರ ಟೀಕಿನ ವಚನಗಳು, ಹರಿಹರನ ರಗಳೆಗಳು, ಕುಮಾರರಾಮ ಸಾಂಗತ್ಯಗಳ ಸಂಪಾದನೆ ಮೂಲಕ ಆಕರ ಸಂಶೋಧನೆಗೆ ಕೊಡುಗೆ ನೀಡಿದರು. ಇವರು ರಚಿಸಿದ 'ಕನ್ನಡ ಗ್ರಂಥಸಂಪಾದನ ಶಾಸ್ತ್ರ' (1972) ಈ ಕ್ಷೇತ್ರದ ಒಂದು ಮಹತ್ವದ ಕೃತಿ. 'ಕನ್ನಡ ಸಂಶೋಧನ ಶಾಸ್ತ್ರ', (1992) ಹಸ್ತಪ್ರತಿ ಶಾಸ್ತ್ರ ಕನ್ನಡ ನಾಮ ವಿಜ್ಞಾನ ಶಾಸ್ತ್ರ -ಇವು ಆಯಾ ಕ್ಷೇತ್ರದ ಅಮೂಲ್ಯ ಕೃತಿಗಳೆನಿಸಿವೆ.

ಕಲಬುರ್ಗಿಯವರ ಸಮಗ್ರ ಸಂಶೋಧನ ಬರೆಹಗಳು 'ಮಾರ್ಗ' ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿವೆ. ಈ ಎಲ್ಲ ರಚನೆಗಳು ಸಾಹಿತ್ಯ, ಸಂಸ್ಕೃತಿ, ಶಾಸನ, ಜಾನಪದ ಕ್ಷೇತ್ರದಲ್ಲಿ ನಡೆಸಿದ ಬಹುಮುಖೀ ಸಂಶೋಧನೆಗೆ ಹಿಡಿದ ಕನ್ನಡಿಯಾಗಿದೆ. ವ್ಯಾಖ್ಯಾನ ಮತ್ತು ವಿಶ್ಲೇಷಣೆಗಳನ್ನು ಮೇಳೈಸಿ ಕೊಂಡಿರುವುದೇ ಇಲ್ಲಿನ ಸಂಶೋಧನೆಯ ವೈಶಿಷ್ಟ್ಯ. ಸಂಶೋಧನ ಪ್ರತಿಭೆಯ ಬಹುಶ್ರುತತೆಯನ್ನು ನಾವು ಈ ಲೇಖನಗಳಲ್ಲಿ ಕಾಣಬಹುದಾಗಿದೆ. ಈ ಸರಣಿಯ ನಾಲ್ಕನೆಯ ಸಂಪುಟ 2004ರಲ್ಲಿ ಬೆಳಕುಕಂಡಿದೆ.

ಕನ್ನಡ ಸಂಶೋಧನೆಗೆ ಸಂಬಂಧಿಸಿದಂತೆ ಹಲವಾರು ಉತ್ತಮ ಯೋಜನೆಗಳನ್ನು ಇವರು ರೂಪಿಸಿ, ಅದರಲ್ಲಿ ಸಂಸ್ಥೆಗಳನ್ನು ತೊಡಗಿಸಿಕೊಂಡು ಸಾಕಾರಗೊಳಿಸಿದ್ದಾರೆ. ಈ ಪೈಕಿ ಕನ್ನಡ ಹಸ್ತಪ್ರತಿಗಳ ಸಂಗ್ರಹಣೆ, ಪರಿವೀಕ್ಷಣೆ, ಸಮಗ್ರ ವಚನ ಸಾಹಿತ್ಯ ಪ್ರಕಟಣೆ, ಕರ್ನಾಟಕದ ನೆರೆಯ ರಾಜ್ಯಗಳ ಹಸ್ತಪ್ರತಿ ಸಂಗ್ರಹ, ಮಾನಸೋಲ್ಲಾಸ ಅನುವಾದ, ಅಪ್ರಕಟಿತ ವೀರಶೈವ ಗ್ರಂಥಗಳ ಪ್ರಕಟಣಾ ಯೋಜನೆ ಬೆಲೆಯುಳ್ಳವಾಗಿವೆ.

ಇವರು ತಮ್ಮ ಸಾಹಿತ್ಯಕ ಸಾಧನೆಗಾಗಿ ಅನೇಕ ಗೌರವ, ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಶಾಸನಗಳಲ್ಲಿ ಶಿವಶರಣರು (1970), ಶಾಸನ ವ್ಯಾಸಂಗ (1974) ಮೊದಲಾದ ಐದು ಗ್ರಂಥಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ವರ್ಷದ ಶ್ರೇಷ್ಠ ಪುಸ್ತಕ ಬಹುಮಾನ ಲಭ್ಯವಾಗಿದೆ. ವಿಶ್ವಮಾನವ ಪ್ರಶಸ್ತಿ (1990), ರಾಜ್ಯೋತ್ಸವ ಪ್ರಶಸ್ತಿ (1991), ವರ್ಧಮಾನ ಪ್ರಶಸ್ತಿ (1994) ಇವರಿಗೆ ಸಂದಿವೆ. ಇವರಿಗೆ 1996ರಲ್ಲಿ ಕರ್ನಾಟಕ ಸರ್ಕಾರ ಪಂಪ ಪ್ರಶಸ್ತಿ ನೀಡಿ ಗೌರವಿಸಿದೆ. ಪಂಪ ಪ್ರಶಸ್ತಿಯಿಂದ ಬಂದ ಒಂದು ಲಕ್ಷರೂಪಾಯಿಗಳನ್ನು ಇವರು ಅಣ್ಣಿಗೇರಿಯಲ್ಲಿ ಪಂಪನ ಹೆಸರಿನ ಸಂಶೋಧನ ಕೇಂದ್ರ ತೆರೆಯಲು ಕೊಡುಗೆಯಾಗಿ ನೀಡಿದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರಿಗೆ ಜಾನಪದ ತಜ್ಞ ಪ್ರಶಸ್ತಿ ನೀಡಿದೆ. ಇವರಿಗೆ ಮಹಾಮಾರ್ಗ ಎಂಬ ಗೌರವ ಗ್ರಂಥವನ್ನು ಸಮರ್ಪಿಸಲಾಗಿದೆ. (ವೈ.ಸಿ.ಬಿ.)

**ಕಲ್ಯ** : ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿ ಕಸಬೆಯಿಂದ ವಾಯುವ್ಯಕ್ಕೆ 5ಕಿಮೀ ದೂರದಲ್ಲಿರುವ ಗ್ರಾಮ. ಐತಿಹಾಸಿಕ ಸ್ಥಳ. ಶಾಸನ ಹಾಗೂ ಕಾವ್ಯಗಳಲ್ಲಿ ಇದನ್ನು ಕಲ್ದೆಹ ಎಂದು ಕರೆಯಲಾಗಿದೆ. ಇದು ಜೈನ ಹಾಗೂ ವೀರಶೈವರ ಪವಿತ್ರ ಸ್ಥಳವಾಗಿತ್ತು. ಬಸದಿಯ ಮತ್ತು ಇತರ ಜೈನ ಅವಶೇಷಗಳೂ ಅನೇಕ ಶಿಲಾಶಾಸನಗಳೂ ಇಲ್ಲಿವೆ. 1368ರ ಒಂದು ಶಾಸನದಲ್ಲಿ 1ನೆಯ ಬುಕ್ಕರಾಯ ಜೈನರು ಮತ್ತು ವೈಷ್ಣವರಲ್ಲಿ ರಾಜಿ ಮಾಡಿಸಿದ ಪ್ರಸ್ತಾಪವಿದೆ. ಗ್ರಾಮದ ಪಶ್ಚಿಮಕ್ಕಿರುವ ಸಣ್ಣ ಬೆಟ್ಟದ ಮೇಲೆ ವೀರಶೈವರ ಒಂದು ಮಠವೂ ಕಲ್ಲೇಶ್ವರ ದೇವಸ್ಥಾನವೂ ಇವೆ. ಮಠ ವಿಶಾಲವಾದ ಪ್ರಾಂಗಣ ಮತ್ತು ಒಂದು ಗುಹಾ ಕೋಣೆ ಇರುವ ಕಟ್ಟಡ. ಮಠದ ಹೊರಗೆ ಗದ್ದುಗೆಗಳಿರುವ ಮೂರು ನಾಲ್ಕು ಮಂಟಪಗಳಿವೆ. ಒಂದರ ಮೇಲೆ ಬಸವನ ಪ್ರತಿಮೆಯಿದೆ. ಆ ಗದ್ದುಗೆ ಪಾಲ್ಕುರಿಕೆ ಸೋಮನಾಥನದೆಂದು ಪ್ರಸಿದ್ಧವಾಗಿದೆ. ಚೆನ್ನಬಸವಪುರಾಣದ ಪ್ರಕಾರ ಸೋಮನಾಥ ಸತ್ತದ್ದು

ಇಲ್ಲೇ. ವೀರಶೈವರು ವರ್ಷಕ್ಕೊಮ್ಮೆ ಇಲ್ಲಿ ಸೋಮನಾಥನ ಪರ್ವವನ್ನು ಆಚರಿಸುತ್ತಾರೆ. 13ನೆಯ ಶತಮಾನದ ಕಡೆಯಲ್ಲಿ ಸರ್ವಶೀಲೆ ಚನ್ನಮ್ಮ ಎಂಬ ಶರಣೆ ಇಲ್ಲಿ ಆಗಿಹೋಗಿದ್ದಳೆಂದು ಪಾಲ್ಕುರಿಕೆ ಸೋಮೇಶ್ವರ ಪುರಾಣದಿಂದಲೂ 12ನೆಯ ಶತಮಾನದಲ್ಲಿದ್ದ ಜ್ಞಾನಿ ಚೆನ್ನಬಸವಣ್ಣ ಇಲ್ಲಿ ಸಾಯುಜ್ಯ ಹೊಂದಿದನೆಂದು ಚೆನ್ನಬಸವಪುರಾಣದಿಂದಲೂ ತಿಳಿದುಬರುತ್ತವೆ. ಇಲ್ಲಿರುವ ಕಲ್ಲೇಶ್ವರ ಗುಡಿ ಒಂದು ಗುಹಾದೇವಾಲಯ. ಕಲ್ಯದಲ್ಲಿ ಶ್ರೀವೈಷ್ಣವರ ದೇವಾಲಯಗಳೂ ಇದ್ದ ಬಗ್ಗೆ ಕೆಲವು ಸುಳಿವುಗಳಿವೆ. ಹಿಂದೆ ಇಲ್ಲಿ ಒಂದು ವರದರಾಜ ದೇವಾಲಯವಿತ್ತು. ಈಗ ಅದರ ಮುಂದಿನ ಗರುಡಗಂಬ ಮಾತ್ರ ನಿಂತಿದೆ. ಆಂಜನೇಯ ದೇವಾಲಯದಲ್ಲಿ ಕೆಲವು ಆಳ್ವಾರರುಗಳ ವಿಗ್ರಹಗಳಿವೆ.

ಕಲ್ಲೇಶ್ವರ ಗುಡಿಯ ಬಳಿಯ ಒಂದು ಕಂಬದ ಮೇಲೆ ಕುಂಬಳಕಾಯಜ್ಜಿಯದು ಎನ್ನುವ ಸ್ತ್ರೀಯ ತಲೆಯೊಂದನ್ನು ಕೆತ್ತಿರುವ ಶಿಲ್ಪವಿದೆ. ಹಿಂದೆ ಈ ಊರು ಕಲಾವತಿ ಎಂಬ ಪಟ್ಟಣವಾಗಿತ್ತು. ಈಕೆ ಒಮ್ಮೆ ಕುಂಬಳಕಾಯಿಗಳನ್ನು ಮಾರಲು ತಂದಾಗ ಅದನ್ನು ಕೊಳ್ಳುವ ವಿಷಯದಲ್ಲಿ ಜೈನರು ಮತ್ತು ಇತರರಲ್ಲಿ ವಿರಸ ಉಂಟಾಗಿ ಕೊನೆಗೆ ಈ ಊರು ಹಾಳಾಯಿತೆಂದು ಪ್ರತೀತಿ. 1533ರ ಒಂದು ಶಾಸನದಲ್ಲಿ ಕಲಾವತಿ ಎಂಬ ಒಂದು ಪಟ್ಟಣದಲ್ಲಿ ಬೌದ್ಧಧರ್ಮೀಯರು ವಾಸವಾಗಿದ್ದ ಪ್ರಸ್ತಾಪವಿದೆ. ಈ ಕಲಾವತಿಯೇ ಕಲ್ಯ ಎಂಬ ಅಭಿಪ್ರಾಯವಿದೆ. *

**ಕಲ್ಯಾಡಿ** : ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಕಸಬೆಯ ನೈಋತ್ಯಕ್ಕೆ 17ಕಿಮೀ ದೂರದಲ್ಲಿ ತಾಮ್ರದ ಗಣಿಗಳಿರುವ ಗ್ರಾಮ. ಇಲ್ಲಿ ಪ್ರಾಚೀನ ಮೂಸೆಗಳ ಹಾಗೂ ಕುಲುಮೆಗಳ ಅವಶೇಷಗಳು ಹೇರಳವಾಗಿ ದೊರಕಿವೆ. ಬಹಳ ಹಿಂದಿನಿಂದಲೂ ತಾಮ್ರದ ಗಣಿ ಉದ್ಯಮ ಈ ಗ್ರಾಮದಲ್ಲಿತ್ತು ಎಂಬುದಕ್ಕೆ ಇದು ಕುರುಹಾಗಿದೆ. ಹಳೆಯ ಮೈಸೂರು ಸರ್ಕಾರದ ಭೂವೈಜ್ಞಾನಿಕ ವಿಭಾಗದ ಪ್ರಥಮ ಭಾರತೀಯ ನಿರ್ದೇಶಕರಾದ ಜಯರಾಂ (1917) ಕಲ್ಯಾಡಿಯ ಭೂವೈಜ್ಞಾನಿಕ ಸಮೀಕ್ಷೆಯನ್ನು ನಡೆಸಿದರು. 1937ರಲ್ಲಿ ಡಾ.ರಾಧಾಕೃಷ್ಣ ಅವರು ತಾಮ್ರನಿಕ್ಷೇಪದ ಮಾಹಿತಿ ನೀಡಿದರು. ಎನ್.ಜಿ.ಕೆ.ಮೂರ್ತಿ 1964ರಲ್ಲಿ ಈ ಪ್ರದೇಶದ ವಿವರವಾದ ಭೂವೈಜ್ಞಾನಿಕ ಸಮೀಕ್ಷೆ ನಡೆಸಿ ತಾಮ್ರ ನಿಕ್ಷೇಪದ ಆಕೃತಿ, ಉದ್ದ, ಅಗಲ, ಆಳಗಳ ಪರಿಮಿತಿಯ ವಿವರವಾದ ಮಾಹಿತಿಯನ್ನು ಪ್ರಕಟಪಡಿಸಿದರು. ಅನಂತರ ಮೈಸೂರು ಸರ್ಕಾರದ ಭೂವೈಜ್ಞಾನಿಕ ವಿಭಾಗ ಅನೇಕ ಕೊರೆಗಳನ್ನು ಹಾಕುವುದರ ಮೂಲಕ ಪರೀಕ್ಷಾರ್ಥ ಪರಿಶೋಧನೆಗಳನ್ನು ನಡೆಸಿತು.

ನೀಣಿಕಲ್ಲು, ಕಣಶಿಲೆ, ಪದರಶಿಲೆ ರೂಪಾಂತರ ಹೊಂದಿದ ಮರಳು ಶಿಲೆ, ಅಂಫಿ ಬೊಲೈಟ್ ಇವು ಕಲ್ಯಾಡಿಯ ಸುತ್ತುಮುತ್ತು ಇರುವ ಪ್ರಮುಖ ಶಿಲೆಗಳು. ಅನೇಕ ಮಡಿಕೆಗಳಾಗಿ ಮಾರ್ಪಟ್ಟಿರುವ ಮರಳುಶಿಲೆಗಳಿಗೆ ತಾಮ್ರಯುಕ್ತ ಖನಿಜಗಳು ಸೀಮಿತವಾಗಿವೆ. ತಾಮ್ರದ ನಿಕ್ಷೇಪಗಳನ್ನು ಹೊಂದಿದ ಮರಳುಶಿಲೆ 1000ಮೀಟರ್ ಉದ್ದ, 8 ರಿಂದ 50ಮೀಟರ್ ಅಗಲವಿದ್ದು, 100 ರಿಂದ 280ಮೀಟರ್ ಆಳದವರೆಗೆ ದೊರೆಯುತ್ತದೆ. ಇದರಲ್ಲಿ ತಾಮ್ರದ ಅಂಶ ಸೇ.7; ತಾಮ್ರನಿಕ್ಷೇಪದ ಮೊತ್ತ 1ಕೋಟಿ ಟನ್‍ಗಳೆಂದು ಅಂದಾಜು ಮಾಡಲಾಗಿದೆ. ಈಗ ಕಲ್ಯಾಡಿ ತಾಮ್ರದ ಗಣಿಗಳು ಕರ್ನಾಟಕ ತಾಮ್ರ ಕಾರ್ಪೊರೇಷನ್‍ನ ನಿರ್ವಹಣೆಯಲ್ಲಿವೆ. (ಟಿ.ಆರ್.ಎಸ್.)

**ಕಲ್ಯಾಣಕೀರ್ತಿ** : ಸು.1439 ಜೈನಕವಿ. ಜ್ಞಾನಚಂದ್ರಾಭ್ಯುದಯ, ನಾಗಕುಮಾರಚರಿತೆ, ಕಾಮನಕಥೆ, ಚಿನ್ಮಯಚಿಂತಾಮಣಿ, ಅನುಪ್ರೇಕ್ಷೆ, ಜಿನಸ್ತುತಿ ತತ್ತ್ವಭೇದಾಷ್ಟಕ ಎಂಬ ಕನ್ನಡ ಕೃತಿಗಳ ಹಾಗೂ ಜಿನಯಜ್ಞಫಲೋದಯ, ಯಶೋಧರಚರಿತೆ ಎಂಬ ಸಂಸ್ಕೃತ ಗ್ರಂಥಗಳ ಕರ್ತೃ. ಸಿದ್ಧರಾಶಿ ಎಂಬ ಗ್ರಂಥವನ್ನೂ ಈತ ಬರೆದಿರುವಂತೆ ತೋರುತ್ತದೆ ಎಂದು ಕವಿಚರಿತೆಕಾರರು ಹೇಳಿದ್ದಾರೆ. ಆದರೆ ಇದು ಬೇರೊಂದು ಗ್ರಂಥವಾಗಿರದೆ ಮೇಲೆ ಹೇಳಿದ ಅನುಪ್ರೇಕ್ಷೆಗೆ ಇರುವ ಮತ್ತೊಂದು ಹೆಸರಾಗಿದೆ. ಈತ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದ ಮಠಾಧೀಶರಾಗಿದ್ದ ಲಲಿತಕೀರ್ತಿಗಳ ಶಿಷ್ಯನೆಂದು ತಿಳಿದುಬರುತ್ತದೆ.

ಜ್ಞಾನಚಂದ್ರಾಭ್ಯುದಯಕ್ಕೆ ಜ್ಞಾನಚಂದ್ರೋದಯ ಎಂಬ ಹೆಸರೂ ಕಂಡುಬರುತ್ತದೆ. ಇದನ್ನು ಶಕನೃಪದ ರತಿಲೋಕ (1362) ಸಂಖ್ಯೆಯಿಂ ವಿಧಿತ ಸಿದ್ಧಾರ್ಥಿ ವರ್ಷದಲ್ಲಿ ಎಂದರೆ 1439ರಲ್ಲಿ ಬರೆದಂತೆ ತಿಳಿಯುತ್ತದೆ. ವಿವಿಧ ಷಟ್ಪದಿಗಳನ್ನೊಳಗೊಂಡ, 908 ಪದ್ಯಗಳನ್ನುಳ್ಳ ಈ ಕಾವ್ಯ ಜ್ಞಾನಚಂದ್ರನೆಂಬ ರಾಜ ತಪಸ್ಸು ಮಾಡಿ ಮುಕ್ತಿಯನ್ನು ಪಡೆದ ಕಥೆಯಿಂದ ಕೂಡಿದೆ.

ನಾಗಕುಮಾರ ಚರಿತೆ ಮುಖ್ಯವಾಗಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ (1442), ಜೊತೆಗೆ ಕಂದವೃತ್ತಗಳೂ ಬಳಕೆಯಾಗಿವೆ. ಇದಕ್ಕೆ ಫಣಿಕುಮಾರಚರಿತೆಯೆಂದೂ ಹೆಸರಿದೆ. ಇದು 5 ಸಂಧಿಗಳನ್ನೂ 5 ಪದ್ಯಗಳನ್ನೂ ಒಳಗೊಂಡಿದೆ.

ಕಾಮನಕಥೆ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 4 ಸಂಧಿಗಳೂ 331 ಪದ್ಯಗಳೂ ಇವೆ. ಅಲ್ಲಲ್ಲಿ ಕಂದ, ಷಟ್ಪದಿ, ವಚನಗಳೂ ಬರುವುದುಂಟು. ಇದನ್ನು ಲಲಿತಕೀರ್ತಿಯ ಶಿಷ್ಯನಾದ ತುಳುವ ದೇಶದ ದೊರೆ ಭೈರವಸುತ ಪಾಂಡರಾಯನ ಇಷ್ಟಾನುಸಾರವಾಗಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಕೃತಿ ಜೈನಮತಾನುಸಾರವಾಗಿ ಮನ್ಮಥಕಥಾ ನಿರೂಪಣೆಯನ್ನೊಳಗೊಂಡಿದೆ.

ಚಿನ್ಮಯಚಿಂತಾಮಣಿ ಮಾತ್ರಾವಿನ್ಯಾಸದ ಛಂದಸ್ಸಿನಿಂದ ಕೂಡಿದ್ದು ಒಟ್ಟು 105 ಪದ್ಯಗಳನ್ನೊಳಗೊಂಡಿದೆ. ಇದರಲ್ಲಿ ತತ್ತ್ವನಿರೂಪಣೆ ಅಡಕವಾಗಿದೆ. ಗ್ರಂಥದ ಕೊನೆಯಲ್ಲಿ ಪ್ರಣಿಹಿತ ಚಿನ್ಮಯಚಿಂತಾಮಣಿಯಿದು ಕಲ್ಯಾಣಕೀರ್ತಿ ಸೌಖ್ಯಾಸ್ಪದಮಂ ಮಣಿಯದೆ ಜಯಿಸಲಿ ಜಗದೊಳು ಗುಣಿಜನಗಳಿಗಿತ್ತು ಚಾರುಮುಕ್ತಿ ಶ್ರೀಯಂ ಎಂಬ ಒಂದು ಕಂದಪದ್ಯವಿದೆ.

ಅನುಪ್ರೇಕ್ಷೆ ಅಥವಾ ಸಿದ್ಧರಾಶಿಯಲ್ಲಿ 74 ಪದ್ಯಗಳಿವೆ. ಇದರಲ್ಲಿ ಕೊಂಡಕುಂದಾಚಾರ್ಯರ ಗಾಹೆಯ ಅರ್ಥವನ್ನು ವರ್ಣಿಸುವುದಾಗಿಯೂ ಪನ್ನೆರಡುನುಪ್ರೇಕ್ಷೆ ಚೆನ್ನಕನ್ನಡದಿಂದವೆ ಬಾಲಕರಿಗೆ ತಿಳಿಯುವಂತೆ ಹೇಳುವುದಾಗಿಯೂ ಕವಿ ಹೇಳಿಕೊಂಡಿದ್ದಾನೆ.

ಜಿನಸ್ತುತಿ 27 ಕಂದ ಪದ್ಯಗಳನ್ನುಳ್ಳ ಚಿಕ್ಕ ಕೃತಿ. ಜಿನ ಮಹಿಮೆಯ ವರ್ಣನೆಯಿಂದ ಕೂಡಿದೆ.

ತತ್ತ್ವಭೇದಾಷ್ಟಕ 9 ಮಲ್ಲಿಕಾಮಾಲಾವೃತ್ತಗಳಲ್ಲಿ ಜೈನತತ್ತ್ವವನ್ನು ನಿರೂಪಿಸುವ ಒಂದು ಅಷ್ಟಕ ಗ್ರಂಥ. (ಬಿ.ಎಸ್.ಎಸ್.)

**ಕಲ್ಯಾಣಕುಮಾರ್** : 1936-99. ಕನ್ನಡ ಜನಪ್ರಿಯ ಚಲನಚಿತ್ರ ನಟ, ನಿರ್ಮಾಪಕ, ನಿರ್ದೇಶಕ, ರಂಗಭೂಮಿ ಕಲಾವಿದ. 1936 ಜೂನ್ 7ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ರಾಘವಾಚಾರ್ಯ, ತಾಯಿ ಕಲ್ಯಾಣಮ್ಮ. ಈ ದಂಪತಿಗಳಿಗೆ ಇವರು ಹನ್ನೊಂದನೆಯ ಮಗು. ವೆಂಕಟರಂಗನ್ ಇವರ ಹುಟ್ಟು ಹೆಸರು. ಎಲ್ಲರೂ ಕರೆಯುತ್ತಿದ್ದ ಹೆಸರು ಚೊಕ್ಕಣ್ಣ. ಚಿತ್ರರಂಗಕ್ಕೆ ಪ್ರವೇಶಿಸಿದಾಗ ತಾಯಿಯ ಮೇಲಿನ ಪ್ರೀತಿಯಿಂದ ತಮ್ಮ ಹೆಸರನ್ನು ಕಲ್ಯಾಣಕುಮಾರ್ ಎಂದು ಬದಲಾಯಿಸಿಕೊಂಡರು. ನ್ಯಾಷನಲ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ.ವರೆಗೆ ಅಭ್ಯಾಸ ಮಾಡಿದರು. ಅನಂತರ ಎಸ್.ಜೆ.ಎಂ. ಪಾಲಿಟೆಕ್ನಿಕ್ ಸೇರಿದರಾದರೂ ಓದನ್ನು ಮುಂದುವರಿಸಲಿಲ್ಲ. ತಂದೆ ಬಯಸಿದ್ದು ಮಗ ವೈದ್ಯ ಆಗಬೇಕೆಂದು, ಆದರೆ ಕಲ್ಯಾಣಕುಮಾರ್ ಆಯ್ಕೆ ಮಾಡಿಕೊಂಡದ್ದು ಸಿನಿಮಾರಂಗ.

ಬಾಲ್ಯದಿಂದಲೂ ಇವರಿಗೆ ಸಂಗೀತ, ನೃತ್ಯ, ಅಭಿನಯಗಳ ಕಡೆ ಆಸಕ್ತಿ. ಮೂರನೆಯ ವಯಸ್ಸಿನಲ್ಲಿಯೇ ಇವರು ರಂಗಪ್ರವೇಶಿಸಿದರು.

ಅಣ್ಣಂದಿರೆಲ್ಲರೂ ವಿದ್ಯಾವಂತರಾಗಿ ಒಳ್ಳೆಯ ಕೆಲಸದಲ್ಲಿದ್ದರೂ ಕಲ್ಯಾಣ ಕುಮಾರ್ ಬೆಂಗಳೂರಿನಿಂದ ಮುಂಬಯಿಗೆ ರೈಲು ಹತ್ತಿ ತಮ್ಮ ಭವಿಷ್ಯವನ್ನು ಅರಸುತ್ತ ಹೊರಟರು. ಅಲ್ಲಿ ಏನೊಂದೂ ಪ್ರಯೋಜನ ವಾಗದಿದ್ದಾಗ ಮದರಾಸಿಗೆ ತೆರಳಿದರು (1953). ನಿರ್ದೇಶಕ ಸಿ.ವಿ.ರಾಜು ಇವರ ಪ್ರತಿಭೆಯನ್ನು ಗುರುತಿಸಿ ನಟಶೇಖರ ಚಿತ್ರದ ನಾಯಕ ನಟನನ್ನಾಗಿಸುವ ಮೂಲಕ ಚಿತ್ರರಂಗಕ್ಕೆ ತಂದರು (1954). ರಾಜಕುಮಾರ್ ಅವರೊಂದಿಗೆ ಅಭಿನಯಿಸಿದ ಮೊದಲ ಚಿತ್ರ ಓಹಿಲೇಶ್ವರ (1956). ಅನಂತರ ರಾಯರ ಸೊಸೆ, ದೇವಸುಂದರಿ, ಭೂಕೈಲಾಸ, ಅನ್ನಪೂರ್ಣ, ಗಾಳಿಗೋಪುರ, ಭೂದಾನ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದರು. ಸದಾರಮೆ ಚಿತ್ರದ ಕಳ್ಳನ ಪಾತ್ರ ಇವರಿಗೆ ಜನಪ್ರಿಯತೆ ತಂದುಕೊಟ್ಟಿತು. ಕನ್ನಡದ ಮೊದಲ ವರ್ಣಚಿತ್ರ ಅಮರಶಿಲ್ಪಿ ಜಕಣಾಚಾರಿಯಲ್ಲಿ ಇವರು ನಾಯಕಪಾತ್ರ ವಹಿಸಿದರು. ಇವರು ಕೆಲವು ಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿದರು. ಎಂದೂ ನಿನ್ನವನೇ (1964), ಕಲ್ಲುಸಕ್ಕರೆ (1966) ಚಿತ್ರ ತಯಾರಿಸಿದರು. ಆ ಕಾಲದಲ್ಲಿ ಸ್ಟುಡಿಯೋ ಇಲ್ಲದೆ ತಯಾರಿಸಿದ ಚಿತ್ರ ಪ್ರವಾಸಿ ಮಂದಿರ (1967). ಇವರು 1975-76ರಲ್ಲಿ ಮನೆಮುಂದಿಮಕ್ಕಳು ಚಿತ್ರ ತಯಾರಿಸಿದರು. ಇವರು ಅಭಿನಯಿಸಿದ ಮುತ್ತೈದೆ ಭಾಗ್ಯ, ಪ್ರೇಮದ ಪುತ್ರಿ, ವಿಜಯನಗರದ ವೀರಪುತ್ರ, ಅತಿಥಿ, ತಾಯಿಕರಳು, ಲಾಯರ ಮಗಳು, ಬಂಗಾರಿ -ಇವು ತುಂಬ ಯಶಸ್ಸು ಕಂಡ ಚಿತ್ರಗಳು. ದೈವಲೀಲೆ ಚಿತ್ರದಲ್ಲಿ ದ್ವಿಪಾತ್ರದಲ್ಲಿ ಅಭಿನಯಿಸಿದರು; ಪಾಪಪುಣ್ಯ (1971) ಚಿತ್ರದ ಬಳಿಕ ಕೆಲ ಕಾಲ ಚಿತ್ರರಂಗದಿಂದ ದೂರವಾಗಿದ್ದರು. ಪುಟ್ಟಣ್ಣ ಕಣಗಾಲ್ ಅವರ ಕಥಾಸಂಗಮ, ಕಾಲೇಜುರಂಗ; ರವಿ ಅವರ ತುಳಸಿ ಚಿತ್ರಗಳ ಮೂಲಕ ಮತ್ತೆ ಚಿತ್ರರಂಗಕ್ಕೆ ಹಿಂದಿರುಗಿದರು. ಲವ್ ಇನ್ ಬೆಂಗಳೂರು ಚಿತ್ರದ ಮೂಲಕ ನಾಯಕಿ ನಟಿ ಭಾರತಿಯವರನ್ನು ಚಿತ್ರರಂಗಕ್ಕೆ (1966) ಪರಿಚಯಿಸಿದರು. ಗಾಳಿಗೋಪುರ, ಮನೆ ಅಳಿಯ, ಮಾವನ ಮಗಳು, ಚಿನ್ನದ ಗೊಂಬೆ, ಬೆಳ್ಳಿಮೋಡ, ಬೆರೆತ ಜೀವ -ಇವು ಇವರ ಅಭಿನಯದ ಯಶಸ್ವಿ ಚಿತ್ರಗಳು. ಜಯಲಲಿತ, ಬಿ.ಸರೋಜದೇವಿ, ಕಲ್ಪನಾ - ಇವರೊಡನೆ ಅಭಿನಯಿಸಿದ ಜನಪ್ರಿಯ ಯಶಸ್ವಿ ನಾಯಕಿಯರು. ಇವರು ತಮಿಳು,ತೆಲುಗು, ಮಲೆಯಾಳಂ ಚಿತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಇವರು ಅಭಿನಯಿಸಿದ ತಮಿಳು ಚಿತ್ರ ನೆಂಜಿಲ್ ಓರು ಆಲಯಂ ಅಪಾರ ಜನಮನ್ನಣೆ ಗಳಿಸಿತು. ಸರ್ಕಾರದಿಂದ ಪ್ರಶಸ್ತಿಯನ್ನೂ ಗಳಿಸಿತು. ಇವರು ಅಭಿನಯಿಸಿದ ಒಟ್ಟು ಚಿತ್ರಗಳು 150ಕ್ಕೂ ಹೆಚ್ಚು.

ತಮ್ಮದೇ ಆದ ಕಲ್ಯಾಣ್ ಥಿಯೇಟರ್ಸ್ ಎಂಬ ನಾಟಕ ಸಂಸ್ಥೆ ಕಟ್ಟಿಕೊಂಡು ಇಡೀ ಕರ್ನಾಟಕದಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಿದರು. ಸದಾರಮೆ, ಚಿಕ್ಕಮ್ಮ, ಚನ್ನ ನನ್ನ ಅಣ್ಣ, ರಾಮು ನನ್ನ ತಮ್ಮ, ರಾಮ್ ರಹೀಂ, ಮಂಗಳೂರು ಮಾವ- ಮುಂತಾದವು ಕೆಲವು ಉಲ್ಲೇಖನೀಯ ನಾಟಕಗಳು. ಇವಲ್ಲದೆ ಕೆಲವು ವೃತ್ತಿ ನಾಟಕ ಕಂಪನಿಗಳಿಂದ ಆಹ್ವಾನ ಬಂದಾಗ ಹೋಗಿ ಅಭಿನಯಿಸಿದ್ದೂ ಉಂಟು. ಕೆಲವು ಕಿರುತೆರೆ ಧಾರವಾಹಿಗಳನ್ನು ನಿರ್ಮಿಸಿ, ನಿರ್ದೇಶಿಸಿದರು ಹಾಗೂ ಅವುಗಳಲ್ಲಿ ನಟಿಸಿದರು. ಚಿತ್ರ ಕಲಾವಿದರ ಬದುಕಿಗೆ ನೆರವಾಗಬೇಕೆಂಬ ಉದ್ದೇಶದಿಂದ ಅಶಕ್ತ ಕಲಾವಿದರ ಕಲ್ಯಾಣ ಸಮಿತಿ ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಮೂರುವರ್ಷ ಕಾಲ ದುಡಿದರು (1967-70).

ಇವರಿಗೆ ಹಲವಾರು ಪ್ರಶಸ್ತಿಗಳು, ಗೌರವಗಳು ದೊರಕಿವೆ. ಅರುಣೋದಯ ಚಿತ್ರಕ್ಕೆ ಮದರಾಸು ಫಿಲಂಫ್ಯಾನ್ ಪ್ರಶಸ್ತಿ ಲಭಿಸಿದೆ. ಮನೆ ಅಳಿಯ ಮತ್ತು ತಮಿಳಿನ ನೆಂಜಿಲ್ ಓರು ಆಲಯಂ ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿ ದೊರೆತಿದೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, (1992-93), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳೂ ಇವರಿಗೆ ಬಂದಿವೆ. ಲಾವಣ್ಯ ಚಲನಚಿತ್ರ ಪತ್ರಿಕೆಯವರ ಲಾವಣ್ಯ ಪ್ರಶಸ್ತಿ ಲಭಿಸಿದೆ (1976). ಬೆಂಗಳೂರಿನ ಚಿತ್ರರಸಿಕರ ಸಂಘ ಪ್ರಶಸ್ತಿ ನೀಡಿ ಗೌರವಿಸಿದೆ. ವಿಜಯ ಕಲಾ ಮಂದಿರದವರು ಕಲಾರತ್ನ ಎಂಬ ಬಿರುದು ನೀಡಿ ಇವರನ್ನು ಗೌರವಿಸಿದ್ದಾರೆ. (1963-64). ಇವರಿಗೆ ಆರ್.ಎನ್.ಜಯಗೋಪಾಲ್ ಸಂಸ್ಥೆ 'ಕಲಾಪ್ರಪೂರ್ಣ' (1965), ಉದಯ ಟಿ.ವಿ. 'ಕಲಾಭೀಷ್ಮ' (1998) ಎಂಬ ಬಿರುದು ನೀಡಿವೆ.

ಇವರು ಅಂದಿನ ಪ್ರಸಿದ್ಧ ತಾರೆ ರೇವತಿಯವರನ್ನು ಪ್ರೇಮಿಸಿ ವಿವಾಹವಾಗಿದ್ದರು. ಇವರಿಗೆ ಇಬ್ಬರು ಗಂಡುಮಕ್ಕಳು. ಇವರು 1999 ಆಗಸ್ಟ್ 1ರಂದು ನಿಧನರಾದರು. (ಎಸ್.ಜಿ.ಪಿ.)

**ಕಲ್ಯಾಣಪುರ** : ಉಡುಪಿ ಜಿಲ್ಲೆ ಉಡುಪಿಯಿಂದ 4ಕಿಮೀ ಉತ್ತರಕ್ಕೆ ಅರಬ್ಬೀ ಸಮುದ್ರದಿಂದ 4ಕಿಮೀ ಪೂರ್ವಕ್ಕೆ ಕಲ್ಯಾಣಪುರ ನದಿಯ (ಸ್ವರ್ಣನದಿ) ದಕ್ಷಿಣ ದಂಡೆಯ ಮೇಲಿರುವ ಸ್ಥಳ. ಪೂರ್ವದ ತೋನ್ಸೆ ಗ್ರಾಮದ ಉಪಗ್ರಾಮ. ಇಲ್ಲಿ ವಿಜಯನಗರದ ಅರಸರ ಕಾಲದ ಕೋಟೆಯ ಅವಶೇಷಗಳು, ಅದೇ ಕಾಲದ ಕೆಂಚಮ್ಮ, ವೀರಭದ್ರ, ಮಹಾಲಿಂಗೇಶ್ವರ, ಗಣಪತಿ ಮುತ್ತು ವೆಂಕಟರಮಣ ದೇವಾಲಯಗಳು ಇವೆ. ಇದರ ಸಮೀಪದಲ್ಲಿರುವ ಅರಕಲಬೆಟ್ಟ ಮುತ್ತು ಉಪ್ಪೂರು ಎಂಬಲ್ಲಿ ವಿಜಯನಗರದ ಕಾಲದ ಹಲವು ಮೂರ್ತಿಗಳು ದೊರಕಿವೆ. ಕೆಳದಿ ನಾಯಕರ ಕಾಲದಲ್ಲಿ ಕಲ್ಯಾಣಪುರ ಉಚ್ಛ್ರಾಯಸ್ಥಿತಿಯಲ್ಲಿತ್ತು. ಇಲ್ಲಿ ಡಿಸೆಂಬರ್ ತಿಂಗಳಲ್ಲಿ ಪೂರ್ಣಿಮೆಯ ದಿನ ಢಕ್ಕೆ ಬಲಿ ಎಂಬ ಉತ್ಸವ ಬಹಳ ವಿಜೃಂಭಣೆಯಿಂದ ಜರುಗುವುದು. ಮಿಲಾಗ್ರಿಸ್ ಮತ್ತು ಮೌಂಟ್ ರೋಸರಿ ಎಂಬ ಎರಡು ಇಗರ್ಜಿಗಳು ಇಲ್ಲಿವೆ. ಮಿಲಾಗ್ರಿಸ್ ಇಗರ್ಜಿ ಅವರ್ ಲೇಡಿ ಆಫ್ ಮಿರೆಕಲ್ಸ್‌ರ ಹೆಸರಿನಲ್ಲಿ 17ನೆಯ ಶತಮಾನದ ಉತ್ತರ ಭಾಗದಲ್ಲಿ ಸ್ಥಾಪಿಸಿದ್ದು. ಈಗಿರುವ ಕಟ್ಟಡ 1941ರ ಪುನರ್ನಿರ್ಮಾಣ. ಮೌಂಟ್ ರೋಸರಿ ಇಗರ್ಜಿ ಕೂಡ ಕ್ಯಾತೊಲಿಕರದು. ಇದು 1837ರ ಸ್ಥಾಪನೆ.

ಕಲ್ಯಾಣಪುರದಲ್ಲಿ ಮಿಲಾಗ್ರಿಸ್ ಹೈಸ್ಕೂಲ್ ಮತ್ತು ಮಿಲಾಗ್ರಿಸ್ ಕಾಲೇಜುಗಳಿವೆ. ಕ್ಯಾತೊಲಿಕರಿಂದ ನಡೆಸಲ್ಪಡುವ ಒಂದು ಅನಾಥಾಲಯ ಇದೆ. ಕಲ್ಯಾಣಪುರ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ. (ಟಿ.ಪಿ.ಎಸ್.ಆರ್.)

**ಕಲ್ಯಾಣಮ್ಮ, ಆರ್.** : 1894-1965. ಸ್ತ್ರೀ ಸಮಾಜದ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸಿದ ಲೇಖಕಿ. ಬೆಂಗಳೂರಿನಲ್ಲಿ ಜನನ. ಇವರ

ತಂದೆ ರಾಮಸ್ವಾಮಿ ಅಯ್ಯಂಗಾರ್, ತಾಯಿ ಜಾನಕಮ್ಮ. ಕಲ್ಯಾಣಮ್ಮ ನವರು ಮೈಸೂರು ಸೆಕೆಂಡರಿ ಪರೀಕ್ಷೆಯನ್ನು 1906ರಲ್ಲಿ ಪಾಸುಮಾಡಿದರು. ಆಗಿನ ಪದ್ಧತಿಯಂತೆ ಹತ್ತುವರ್ಷ ವಯಸ್ಸಿನಲ್ಲಿಯೇ ಇವರ ವಿವಾಹ ವಾಯಿತು. ಮುಂದೆ ಮೂರೇ ತಿಂಗಳಿನಲ್ಲಿ ಇವರು ವಿಧವೆಯಾದರು. ತಂದೆಯ ಪ್ರಭಾವದಿಂದ ಚಿಕ್ಕಂದಿನಲ್ಲಿಯೇ ಸಾಹಿತ್ಯದಲ್ಲಿ ಆಸಕ್ತಿ ತಳೆದು ಇವರು, ತಮಗೆ ಬಂದ ದುಸ್ಥಿತಿಗಾಗಿ ಅಳುಕದೆ, ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ನಡೆಸಿ ಪ್ರಸಿದ್ಧರಾದರು.

ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡಿದ್ದ ಕಲ್ಯಾಣಮ್ಮನವರು ಸರಸ್ವತಿ (ನೋಡಿ) ಎಂಬ ಮಾಸಪತ್ರಿಕೆಯನ್ನು ಮೂರು ದಶಕಗಳ ಕಾಲ ನಡೆಸಿ, ಆ ಮೂಲಕ ಸಾಹಿತ್ಯ ಸೇವೆ ಮಾಡಿದರು. ಶಾರದಾ ಸ್ತ್ರೀ ಸಮಾಜವನ್ನು ಸ್ಥಾಪಿಸಿ (1913) ಮಹಿಳಾ ಸೇವೆಯನ್ನು, ಅಖಿಲ ಕರ್ನಾಟಕ ಮಕ್ಕಳ ಕೂಟವನ್ನು ಸ್ಥಾಪಿಸಿ (1938) ಮಕ್ಕಳ ಸೇವೆಯನ್ನು ಮಾಡಿದರು. ಬೆಂಗಳೂರು ನಗರಸಭೆಯ ಪ್ರಥಮ ಮಹಿಳಾ ಸದಸ್ಯೆಯಾಗಿದ್ದ ಇವರು ಅನಂತರ ಸಭೆಯ ಉಪಾಧ್ಯಕ್ಷಿಣಿಯೂ ಆಗಿದ್ದರು. ಮೈಸೂರು ಪ್ರಜಾಪ್ರತಿನಿಧಿ ಸಭೆ, ಕನ್ನಡ ಸಾಹಿತ್ಯ ಪರಿಷತ್ತು, ಥಿಯೊಸಾಫಿಕಲ್ ಸೊಸೈಟಿ ಮುಂತಾದ ಹಲವು ಸಂಘಸಂಸ್ಥೆಗಳಲ್ಲೂ ದುಡಿದರು.

ಕಲ್ಯಾಣಮ್ಮನವರ ಸಾಹಿತ್ಯ ಸೃಷ್ಟಿ ವೈವಿಧ್ಯಮಯವಾದುದು. ಇವರು ಬರೆದ ಮೊದಲ ಕಾದಂಬರಿ ಪ್ರಿಯಂವದೆ. ನಿರ್ಭಾಗ್ಯವನಿತೆ, ಸುಖಲತ, ಭಕ್ತ ಮೀರಾ, ಮಾಧವಿ, ನಿರ್ಮಲಾ, ಸತೀ ಪದ್ಮಿನಿ, ರಣಕೇಸರಿ, ಷಹಜಹಾನ್ - ಇವು ಇತರ ಕಾದಂಬರಿಗಳು. ಯದುರಾಯ, ಬ್ಯಾರಿಸ್ಟರ್ ರಾಮಚಂದ್ರನ್, ವರದಕ್ಷಿಣೆ, ದರಿದ್ರ ನಾರಾಯಣ - ಇವು ಇವರ ನಾಟಕಗಳು. ಸ್ತ್ರೀ ಸಮಸ್ಯೆಗಳೇ ಇವರ ಕೃತಿಗಳ ವಸ್ತು. ಮಕ್ಕಳಿಗಾಗಿ ಇವರು ರಚಿಸಿರುವ ಕೃತಿಗಳಿವು: ಪಂಚಕಜ್ಜಾಯ, ಪುಟಾಣಿ ಕಥೆಗಳು, ನಮ್ಮ ಹಿಂದುಸ್ಥಾನ ವಿಕಟ ಕವಿ.

ಹೀಗೆ ನಾಡುನುಡಿಗಳ ಅಭಿಮಾನಿಯಾಗಿ ಸೇವೆ ಮಾಡಿದ ಕಲ್ಯಾಣಮ್ಮನವರಿಗೆ ಮೈಸೂರು ಮಹಾರಾಜರು ಸಾರ್ವಜನಿಕ ಸೇವಾ ಪದಕವನ್ನು ನೀಡಿ ಗೌರವಿಸಿದರು (1938). ಸರಸ್ವತಿ ಪತ್ರಿಕೆಯ ರಜತೋತ್ಸವ ಸಂದರ್ಭದಲ್ಲಿ (1949) ಸಾರ್ವಜನಿಕರ ಪರವಾಗಿ ಇವರಿಗೆ ಒಂದು ನಿಧಿಯನ್ನು ಅರ್ಪಿಸಲಾಯಿತು.

ಕಲ್ಯಾಣಮ್ಮನವರು ತಮ್ಮ 71ನೆಯ ವಯಸ್ಸಿನಲ್ಲಿ 1965 ಫೆಬ್ರವರಿ 24ರಂದು ನಿಧನರಾದರು. ಇವರ ಜ್ಞಾಪಕಾರ್ಥ ಅಖಿಲ ಕರ್ನಾಟಕ ಮಕ್ಕಳ ಕೂಟ ಒಂದು ಸ್ಮಾರಕ ನಿಧಿಯನ್ನು ಸ್ಥಾಪಿಸಿದೆ.

*

**ಕಲ್ಯಾಣಸ್ವಾಮಿ :** 1837ರಲ್ಲಿ ಕೊಡಗಿನ ಸಿಂಹಾಸನಕ್ಕೆ ಉತ್ತರಾಧಿಕಾರಿಗಳೆಂದು ಸಾರಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿದ ಕಲ್ಯಾಣಪ್ಪ ಅಥವಾ ಕಲ್ಯಾಣಸ್ವಾಮಿ ಎಂಬ ಹೆಸರಿನ, ಒಬ್ಬರ ಅನಂತರ ಇನ್ನೊಬ್ಬರಂತೆ ಬಂದ ಇಬ್ಬರು ವ್ಯಕ್ತಿಗಳು. ಇವರು ಕಲ್ಯಾಣಬಸವ ಮತ್ತು ಪುಟ್ಟಬಸವ ಎಂಬಿಬ್ಬರು ಜಂಗಮರು. ಇಬ್ಬರೂ 1835ರಲ್ಲಿ ಮೊದಲು ತಾನು ಕೊಡಗು ಸಿಂಹಾಸನಕ್ಕೆ ಹಕ್ಕುದಾರನೆಂದು ಘೋಷಿಸಿ ಕೊನೆಗೆ ಬ್ರಿಟಿಷರಿಗೆ ಸೆರೆಯಾಳಾದ ಅಪರಂಪಾರನ ಆಪ್ತ ಅನುಯಾಯಿಗಳು. ಅಪರಂಪಾರ ಬ್ರಿಟಿಷರಿಂದ ತಪ್ಪಿಸಿಕೊಂಡು ಕಡಬದಿಂದ ಮಂಜರಾಬಾದಿಗೆ ಹೊರಟಾಗ ಇವರಿಬ್ಬರೂ ವೇಷ ಮರೆಸಿಕೊಂಡು ಕೊಡ್ಲಿಪೇಟೆಗೆ ಹೋದರು.

1835ರ ಅಂತ್ಯದಲ್ಲಿ ಕೊಡಗು ರಾಜ್ಯದಲ್ಲಿದ್ದ ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳು ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರನ ಅಧಿಕಾರಕ್ಕೆ ವರ್ಗಾಯಿಸಲ್ಪಟ್ಟಾಗ ಅಲ್ಲಿನ ಜನರಲ್ಲಿ ಬೆಳೆದ ಅತೃಪ್ತಿಯನ್ನು ಬಂಡವಾಳ ಮಾಡಿಕೊಂಡು ಕಲ್ಯಾಣಬಸವ ತಾನು ಕೊಡಗಿನ ಪದಚ್ಯುತ ರಾಜ ಚಿಕ್ಕವೀರರಾಜೇಂದ್ರನ ದೊಡ್ಡತಂದೆ ಅಪ್ಪಾಜಿರಾಜನ ಎರಡನೆಯ ಮಗ ನಂಜುಂಡರಸನೆಂದು ಹೇಳಿಕೊಂಡ. ಆಗ ಇವನ ಅನುಯಾಯಿಗಳು ಇವನನ್ನು ಕಲ್ಯಾಣಸ್ವಾಮಿಯೆಂದು ಕರೆದರು. 1836ನೆಯ ಡಿಸೆಂಬರಿನಲ್ಲಿ ಕಲ್ಯಾಣಸ್ವಾಮಿ ಸೋಮವಾರಪೇಟೆ ತಾಲ್ಲೂಕಿನ ಗಡಿನಾಡು ಉಮ್ಮತ್ತು ನಾಡುಗಳಿಗೆ ಬಂದ. ಆದರೂ ಕೊಡಗಿನ ಇತರ ಭಾಗಗಳಲ್ಲಿ ತನಗೆ ಸಹಾಯ ಸಿಗಲಾರದೆಂದು ತಿಳಿದು ಅಲ್ಲಿಂದ ದಕ್ಷಿಣಕನ್ನಡ ಜಿಲ್ಲೆಗೆ ಹೋಗಲುದ್ಯುಕ್ತನಾದ. ಇವನು ನೆಟ್ಟಗೆ ಅಲ್ಲಿಗೆ ಹೋದರೆ ಬ್ರಿಟಿಷ್ ಸೈನಿಕರ ಕೈಗೆ ಬೀಳಬಹುದೆಂಬ ಹೆದರಿಕೆಯಿಂದ ಗಡಿನಾಡು ಉಮ್ಮತ್ತುನಾಡಿನ ಜನರು ಇವನನ್ನು ಗುಟ್ಟಾಗಿ ಮಲಬಾರಿನ ವೈನಾಡಿಗೆ ತಲಪಿಸಿದರು. ಆದರೆ ಅಷ್ಟರಲ್ಲಿ ಕ್ಯಾಪ್ಟನ್ ಲೀ ಹಾರ್ಡಿಗೆ ತಿಳಿದು ಇವನನ್ನು ಸೆರೆಹಿಡಿಯಲು ತನ್ನ ಸೈನಿಕರನ್ನು ಕಳುಹಿಸಿದ. ಈ ಮಧ್ಯೆ ವೈನಾಡಿಗೆ ಹೋಗಿದ್ದ ಕಲ್ಯಾಣಸ್ವಾಮಿ ವೇಷ ಬದಲಾಯಿಸಿ ಉತ್ತರ ಮಲಬಾರಿನ ಬೈತೂರನ್ನು ತಲಪಿದ್ದ. ಲೀ ಹಾರ್ಡಿಯ ಸೈನಿಕರು 1837ನೆಯ ಜನವರಿ ಆದಿಭಾಗದಲ್ಲಿ ಇವನನ್ನು ಸೆರೆಹಿಡಿದರು. ಮೈಸೂರಿನಲ್ಲಿ ವಿಚಾರಣೆಯಾಯಿತು. ಕಲ್ಯಾಣಸ್ವಾಮಿಗೆ ಯಾವ ಶಿಕ್ಷೆ ವಿಧಿಸಲ್ಪಟ್ಟಿತು ಎಂದು ತಿಳಿದಿಲ್ಲ. ಮೊದಲನೆಯ ಕಲ್ಯಾಣಸ್ವಾಮಿಯ ಕಥೆ ಇಲ್ಲಿಗೆ ಮುಗಿಯಿತು.

ಈ ಕಲ್ಯಾಣಸ್ವಾಮಿ ಸೆರೆಹಿಡಿಯಲ್ಪಟ್ಟರೂ ದಕ್ಷಿಣ ಕನ್ನಡದ ಅಮರಸುಳ್ಯ ಮಾಗಣೆಗಳ ಜನರು ಬ್ರಿಟಿಷರ ವಿರೋಧವಾದ ಯುದ್ಧದ ಯೋಜನೆಯನ್ನು ಬಿಡಲಿಲ್ಲ. ಇವನು ಸೆರೆಯಾದ ವಿಷಯ ಹೆಚ್ಚಿನ ಜನರಿಗೆ ಗೊತ್ತಿರಲಿಲ್ಲ. ಆದುದರಿಂದ ಕಲ್ಯಾಣಸ್ವಾಮಿಯ ಅನುಯಾಯಿಗಳು ಕೊಡಗಿನ ಸಿಂಹಾಸನಕ್ಕೆ ಅಪ್ಪಾಜಿ ಅರಸನ ಎರಡನೆಯ ಮಗನ ಹಕ್ಕನ್ನು ಬಹಿರಂಗವಾಗಿ ಸ್ಥಾಪಿಸುವುದಕ್ಕೆ ಕೊಡಗಿನಲ್ಲಿ 1837ರ ಮಾರ್ಚ್ 5ನೆಯ ತಾರೀಖು ಶಿವರಾತ್ರಿಯ ದಿವಸದಲ್ಲೂ ಅಮರಸುಳ್ಯದ ಸೀಮೆಗಳಲ್ಲಿ ಏಪ್ರಿಲ್ 6ನೆಯ ತಾರೀಖು ಯುಗಾದಿ ದಿವಸದಲ್ಲೂ ದಂಗೆಯೇಳುವುದೆಂದು ನಿಶ್ಚಯಿಸಿದರು. ಇದಕ್ಕೆ ಕಲ್ಯಾಣಸ್ವಾಮಿಯ ಬದಲು ಇನ್ನೊಬ್ಬ ವ್ಯಕ್ತಿಯನ್ನು ಅಪ್ಪಾಜಿ ಅರಸನ ಮಗನೆಂದು ಜನರ ಮುಂದಿಡಬೇಕಾಗಿದ್ದಿತು.

ಅಮರಸುಳ್ಯ ಸೀಮೆಗಳಲ್ಲಿ ಬ್ರಿಟಿಷರ ವಿರೋಧ ಚಳವಳಿಯಲ್ಲಿ ಮುಖ್ಯಸ್ಥನಾಗಿದ್ದ ಕೆದಂಬಾಡಿ ರಾಮೇಗೌಡನೆಂಬವನು ಮೊದಲು ಕಲ್ಯಾಣಸ್ವಾಮಿಯ ಜತೆಯಲ್ಲಿದ್ದ ಕೊಡಗಿನ ಏಳುಸಾವಿರ ಸೀಮೆಯ ಪುಟ್ಟಬಸವನೆಂಬವನನ್ನು ಇದಕ್ಕೆ ಆರಿಸಿ ಬೆಳ್ಳಾರೆ ಕೋಟೆಗೆ ಕರೆದುಕೊಂಡು ಹೋಗಿ ಅಲ್ಲಿ ಹಾಕಿದ್ದ ಚಪ್ಪರದ ಅಡಿಯಲ್ಲಿ ಸಿಂಹಾಸನದ ಮೇಲೆ ಕುಳ್ಳಿರಿಸಿದ. ಇವನೇ ಕಲ್ಯಾಣಸ್ವಾಮಿ ಅಥವಾ ನಂಜುಂಡರಸ, ಕೊಡಗು ಅಮರಸುಳ್ಯಗಳ ರಾಜ ಎಂದು ಸೀಮೆಯವರಿಗೆಲ್ಲ ತಿಳುಹಿಸಿದ. ಎರಡು ಮೂರು ಸಾವಿರ ಸಶಸ್ತ್ರಜನ ಇವನನ್ನು ಕೂಡಿಕೊಂಡರು. ಮರುದಿವಸ ಕಲ್ಯಾಣಸ್ವಾಮಿಯ ಹೆಸರಿನಲ್ಲಿ ನಿರೂಪಗಳನ್ನು ಬರೆಯಿಸಿ ಅವುಗಳ ಪ್ರತಿಗಳನ್ನು ಚೆಂಬು ಪೆರಾಜೆಗಳ ಪಾರ್ಪತಿಗಾರರಿಗೂ ಮಂಜರಾಬಾದು ಸೀಮೆಯ ಪಟೇಲರಿಗೂ ತಾವುನಾಡು, ಟೇಂಗುನಾಡು, ಗಡಿನಾಡುಗಳ ಪಾರ್ಪತಿಗಾರರಿಗೂ ದಿವಾನ್ ಪೊನ್ನಪ್ಪನಿಗೂ ಕಳುಹಿಸಿದರು. 1837ನೆಯ ಮಾರ್ಚ್ 31ರಲ್ಲಿ ಈ ನಿರೂಪದ ಒಂದು ಪ್ರತಿ ಕೊಡಗಿನ ಸೂಪರಿಂಟೆಂಡೆಂಟನಿಗೂ ತಲಪಿ ಅವನಿಗೆ ಬಂಡಾಯದ ಸುಳುಹು ಸಿಕ್ಕಿತು.

ಒಂದೆರಡು ದಿನಗಳಲ್ಲೆ ಕೆದಂಬಾಡಿ ರಾಮೇಗೌಡ ಅಲ್ಲಿದ್ದ ಇತರ ಮುಖಂಡರನ್ನು ಸುಬೇದಾರರನ್ನಾಗಿ ನೇಮಿಸಿ ಅವರನ್ನು ಕೆಲವು ಜನರೊಡನೆ ಆ ಸೀಮೆಯ ಬೇರೆ ಬೇರೆ ಸ್ಥಳಗಳಿಗೆ ಕಳುಹಿಸಿದ. ತಾನು ಕಲ್ಯಾಣಸ್ವಾಮಿಯನ್ನೂ ಸೈನಿಕರನ್ನೂ ಕರೆದುಕೊಂಡು ಪುತ್ತೂರಿಗೆ ಹೊರಟ. ದಾರಿಯಲ್ಲಿ ಇವನ ಸಂಗಡಿಗರು ಒಬ್ಬ ಬ್ರಿಟಿಷ್ ಅಧಿಕಾರಿಗೆ ಸೇರಿದ್ದ ಏಳೆಂಟು ಕುದುರೆಗಳನ್ನು ಹಿಡಿದರು. ಧರ್ಮಸ್ಥಳದ ಮಂಜಯ್ಯಹೆಗ್ಗಡೆ ತನ್ನಲ್ಲಿದ್ದ ಎರಡು ಫಿರಂಗಿಗಳನ್ನು ಕೊಟ್ಟರು. ಇತರ ಅನೇಕರು ವಿವಿಧ ರೀತಿಯಲ್ಲಿ ಸಹಾಯ ನೀಡಿದರು.

ಕಲ್ಯಾಣಸ್ವಾಮಿ ಮತ್ತು ಸಂಗಡಿಗರು ಪುತ್ತೂರನ್ನು ತಲಪಿದಾಗ ಸಣ್ಣ ತುಕಡಿಯೊಡನೆ ಅಲ್ಲಿಗೆ ಬಂದಿದ್ದ ಮಂಗಳೂರಿನ ಕಲೆಕ್ಟರ್ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರು. ಆದರೆ ಸುದ್ದಿ ತಿಳಿದ ಕಲೆಕ್ಟರ್ ಓಡಿಹೋದ.

ಕಲ್ಯಾಣಸ್ವಾಮಿ ಪುತ್ತೂರನ್ನು ಸುಲಿಗೆ ಮಾಡಿ ಪಾಣೆಮಂಗಳೂರಿಗೆ ಹೋದ. ಅಲ್ಲಿ ನಂದಾವರದ ಲಕ್ಕಪ್ಪ ಬಂಗರಸ ಇವನ ಜೊತೆ ಸೇರಿಕೊಂಡ. ಆ ಹೊತ್ತಿಗೆ ದೊಡ್ಡದಾಗಿ ಬೆಳೆದಿದ್ದ ಸಮೂಹದೊಡನೆ ಕಲ್ಯಾಣಸ್ವಾಮಿ ಬಂಟ್ವಾಳಕ್ಕೆ ತೆರಳಿ ಪೇಟೆಯನ್ನು ಸುಲಿಗೆ ಮಾಡಿ ಮಂಗಳೂರಿಗೆ ಹೋದ. ಇವನು ಮಂಗಳೂರನ್ನು ತಲಪುವಷ್ಟರಲ್ಲಿ ಅಲ್ಲಿದ್ದ ಇಂಗ್ಲಿಷ್ ಅಧಿಕಾರಿಗಳು ಕಣ್ಣಾನೂರಿಗೆ ಓಡಿಹೋಗುವುದಕ್ಕೆ ಹಡಗನ್ನು ಕಾಯುತ್ತಿದ್ದರು. ಕಲ್ಯಾಣಸ್ವಾಮಿ ಅಲ್ಲಿ ಸೆರೆಮನೆಯ ಖೈದಿಗಳನ್ನು ಬಿಡಿಸಿ ತಾಲ್ಲೂಕು ಖಜಾನೆಯನ್ನು ಒಡೆದು ಹಣವನ್ನು ದೋಚಿದ. ಅಲ್ಲಿದ್ದ ಇಂಗ್ಲಿಷ್ ಉದ್ಯೋಗಸ್ಥರ ಮನೆಗಳಿಗೆ ಬೆಂಕಿ ಕೊಡಿಸಿದ. ಮಂಗಳೂರಿನಲ್ಲಿ ತನ್ನ ಬಾವುಟವನ್ನೇರಿಸಿ ಹದಿಮೂರು ದಿವಸಗಳಿದ್ದ. ಆದರೆ ಅಷ್ಟರಲ್ಲಿ ತಲಚೇರಿ, ಕಣ್ಣಾನೂರುಗಳಿಂದ ಇಂಗ್ಲಿಷರ ಸೈನ್ಯಗಳು ಮಂಗಳೂರನ್ನು ತಲಪಿದವು. ಸರಿಯಾದ ಆಯುಧಗಳಿಲ್ಲದ ಕಲ್ಯಾಣಸ್ವಾಮಿಯ ಜನ ಹೆದರಿ ಓಡಿ ಹೋದರು. ಕಲ್ಯಾಣಸ್ವಾಮಿಯೂ ಸುಳ್ಯಕ್ಕೆ ಓಡಿಬಂದ.

ಕಲ್ಯಾಣಸ್ವಾಮಿ ಮಂಗಳೂರಿಗೆ ಹೋದಾಗ ಇವನ ಸಂಗಡಿಗರು ಕೊಡಗನ್ನು ಹಿಡಿಯಬೇಕೆಂದು ಸನ್ನಾಹಮಾಡಿದ್ದರೂ ಕೊಡಗಿನಲ್ಲಿ ದಿವಾನರುಗಳಾಗಿದ್ದ ಚಪ್ಪುದಿರ ಪೊನ್ನಪ್ಪ ಮತ್ತು ಅಪ್ಪಾರಂಡ ಬೋಪು ಬ್ರಿಟಿಷರ ಆಳಿಕೆಗೆ ಬೆಂಬಲ ಕೊಟ್ಟಿದ್ದರಿಂದ ಸಾಧ್ಯವಾಗಲಿಲ್ಲ. ಪ್ರತಿಯಾಗಿ ಅವರು ಈ ದಂಗೆಯನ್ನು ಅಡಗಿಸಲು ಅಮರಸುಳ್ಯ ಸೀಮೆಗಳಿಗೆ ಬಂದು ಸುಳ್ಯದ ಕೋಟೆಪೇಟೆಗಳನ್ನು ಹಿಡಿದುಕೊಂಡು ಕಲ್ಯಾಣಸ್ವಾಮಿ ಬೆಳ್ಳಾರೆಯಲ್ಲಿರುವನೆಂಬ ವರ್ತಮಾನವನ್ನು ಕೇಳಿ ಬೆಳ್ಳಾರೆಗೆ ಹೋದರು. ಅಷ್ಟರಲ್ಲಿ ಕಲ್ಯಾಣಸ್ವಾಮಿ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಲಪಿದ್ದ. ಅಲ್ಲಿದ್ದ ಇಂಗ್ಲಿಷ್ ಸೈನ್ಯದ ಕಣ್ಣು ತಪ್ಪಿಸಿ ಮರೆಯಾದ. ಈ ವರ್ತಮಾನವನ್ನು ತಿಳಿದು ಈಸ್ಟ್ ಇಂಡಿಯ ಕಂಪನಿ ಸರ್ಕಾರ

ಕಲ್ಯಾಣಸ್ವಾಮಿಯನ್ನು ಹಿಡಿದುಕೊಟ್ಟವರಿಗೆ ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು, ಇವನ ಸಂಗಡಿಗರನ್ನು ಹಿಡಿದುಕೊಟ್ಟವರಿಗೆ ಐದು ಸಾವಿರ ರೂಪಾಯಿಗಳ ಬಹುಮಾನಗಳನ್ನು ಕೊಡುವುದಾಗಿ ಪ್ರಕಟಿಸಿತು. ಕಲ್ಯಾಣಸ್ವಾಮಿ ವೇಷ ಮರೆಸಿಕೊಂಡು ತನ್ನ ಊರನ್ನು ತಲುಪಿದ್ದ. ಇದನ್ನು ಅರಿತ ಅಲ್ಲಿನ ಕೆಲವು ಜನ ಹಣದ ಆಸೆಗಾಗಿ ಬ್ರಿಟಿಷರಿಗೆ ಸುದ್ದಿ ನೀಡಿದರು. ಕಲ್ಯಾಣಸ್ವಾಮಿ ಸೆರೆಸಿಕ್ಕಿದ.

ಆಗ ಕಲ್ಯಾಣಸ್ವಾಮಿ ತಾನು ಶನಿವಾರಸಂತೆಯ ಹತ್ತಿರದ ಹೆಮ್ಮನಿ ಗ್ರಾಮದ ಬೇಸಾಯಗಾರ, ಅಲ್ಲಿಗೆ ಕೆದಂಪಾಡಿ ರಾಮೇಗೌಡನ ಜನ ಬಂದು ತನ್ನನ್ನು ಅಮರಸುಳ್ಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತನ್ನನ್ನು ಕೊಡಗಿನ ದೊರೆಯೆಂದು ಇತರರಿಗೆ ಹೇಳಿ ದಂಗೆಯೆಬ್ಬಿಸಿದರು, ತನ್ನ ಹುಟ್ಟು ಹೆಸರು ಬಸಪ್ಪ, ದೊಡ್ಡವನಾದಮೇಲೆ ತನ್ನನ್ನು ಪುಟ್ಟಬಸವ ಅಥವಾ ಮರಿಬಸವ ಎಂದು ಊರಿನವರು ಕರೆಯುತ್ತಿದ್ದರು ಎಂದು ಹೇಳಿಕೆ ನೀಡಿದನೆಂದು ಬ್ರಿಟಿಷ್ ದಾಖಲೆಗಳು ತಿಳಿಸುತ್ತವೆ.

ಮಂಗಳೂರಿನಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಗಳು ವಿಚಾರಣೆ ನಡೆಸಿ ಮರಣದಂಡನೆ ವಿಧಿಸಿದರು. ಕಲ್ಯಾಣಸ್ವಾಮಿ, ಲಕ್ಕಪ್ಪ ಬಂಗರಸು ಮತ್ತು ಇನ್ನು ಕೆಲವು ಮುಖಂಡರೊಡನೆ ಮಂಗಳೂರಿನ ಬಿಕ್ರಾನಕಟ್ಟೆ ಪದವಿನ ಹತ್ತಿರ ಗಲ್ಲಿಗೇರಿಸಲ್ಪಟ್ಟ. (ಡಿ.ಎನ್.ಕೆ.)

**ಕಲ್ಲುಮಠದ ಪ್ರಭುದೇವ :** ಸು.1430. ವೀರಶೈವ ಕವಿ, ಲಿಂಗ ಲೀಲಾವಿಲಾಸಚಾರಿತ್ರ, ಪ್ರಭುದೇವರ ಮಂತ್ರಗೋಪ್ಯದ ಟೀಕೆ ಎಂಬ ಕೃತಿಗಳನ್ನು ರಚಿಸಿದ್ದಾನೆ. ಈತ ವಿಜಯನಗರದ ಪ್ರೌಢದೇವರಾಯನ ಆಳಿಕೆಯ ಕಾಲದಲ್ಲಿ ಆಗಿಹೋದ ನೂರೊಂದು ಜನ ವಿರಕ್ತರಲ್ಲಿ ಒಬ್ಬ. ಜಕ್ಕಣಾರ್ಯ, ಚಾಮರಸ ಇವರ ಸಮಕಾಲೀನ. ಅದೃಶ್ಯಕವಿ (ಸು.1580) ತನ್ನ ಪ್ರೌಢರಾಯನಕಾವ್ಯದಲ್ಲಿ, ಸಿದ್ಧನಂಜೇಶ (ಸು.1650) ತನ್ನ ರಾಘವಾಂಕಚಾರಿತ್ರದಲ್ಲಿ, ಶಾಂತಲಿಂಗದೇಶಿಕ (ಸು.1672) ತನ್ನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಈತನನ್ನು ಹೆಸರಿಸಿದ್ದಾರೆ.

ಲಿಂಗಲೀಲಾವಿಲಾಸಚಾರಿತ್ರ ಷಟ್ಸ್ಥಲವನ್ನು ಬೋಧಿಸುವ ವಚನ ಗ್ರಂಥ'. ಇದರಲ್ಲಿ 16 ಸ್ಥಲಗಳೂ ಸುಮಾರು ಮೂವತ್ತಾರು ವಚನಕಾರರಿಂದ ಆಯ್ದುಕೊಂಡ 729 ವಚನಗಳೂ ಇವೆ. ಇವಲ್ಲದೆ 135 ಸಂಸ್ಕೃತ ಶ್ಲೋಕಗಳೂ ಅವುಗಳ ವ್ಯಾಖ್ಯಾನವೂ ಈ ಕೃತಿಯಲ್ಲಿ ಸೇರಿವೆ. ಸ್ಥಲಾನುಗುಣವಾಗಿ ಬಸವ, ಚೆನ್ನಬಸವ, ಮಹಾದೇವಿಯಕ್ಕ ಮುಂತಾದ ಪುರಾತನರ ವಚನಗಳನ್ನು ಆಯ್ದುಕೊಂಡು ಷೋಡಶಸ್ಥಲ ಪರಿಕ್ರಮದಿಂದ ಅವನ್ನು ಸೇರಿಸಿ ವ್ಯಾಖ್ಯಾನ ಮಾಡಿದ್ದಾನೆ. ಭಕ್ತಿಕಾಂಡವೆ ಷಟ್‌ಸ್ಥಲ ಮಾರ್ಗ. ಈ ಮಾರ್ಗವೇ ಲಿಂಗಲೀಲಾವಿಲಾಸಚಾರಿತ್ರ ಎಂದು ಕವಿ ಗ್ರಂಥಾರಂಭದಲ್ಲಿ ಹೇಳಿದ್ದಾನೆ.

ಪ್ರಭುದೇವರ ಮಂತ್ರಗೋಪ್ಯದ ಟೀಕೆಯಲ್ಲಿ ಸೀಸಪದ್ಯದಂತಿರುವ 27 ಪದ್ಯಗಳಿವೆ. ಒಂದೊಂದು ಪದ್ಯಕ್ಕೂ ವಿಸ್ತಾರವಾದ ಟೀಕೆ ಇದೆ. ಈ ಟೀಕೆಗಳು ರಸವತ್ತಾಗಿವೆ; ಜ್ಞಾನಬೋಧಕವಾಗಿವೆ. ಈ ಮೇಲಿನ ಗ್ರಂಥಗಳು ಪುರಾತನರ ವಚನಗಳಲ್ಲಿ ಹುದುಗಿರಬಹುದಾದ ಗೂಢಾರ್ಥವನ್ನು ತಿಳಿಯಲು ಸಹಾಯಕವಾಗಿವೆ. (ಜೆ.ಎಸ್.ಪಿ.ಎಂ.)

**ಕಲ್ಲರಸ :** ಸು.1450. ಜನವಶ್ಯ ಎಂಬ ಕಾಮಶಾಸ್ತ್ರಗ್ರಂಥದ ಕರ್ತೃ. ಇವನ ಸ್ಥಳ ಹಂಪೆ. ಕ್ರಿಯಾಶಕ್ತಿಮುನಿ ಇವನ ಕುಲಗುರು. ಹೇಮಕೂಟಗಿರಿ ನಿವಾಸಿ ಮಲ್ಲಿಕಾರ್ಜುನ ಆರಾಧ್ಯದೈವ. ಪೂರ್ವಕವಿಗಳಲ್ಲಿ ಭೋಜನನ್ನು ಸ್ಮರಿಸಿದ್ದಾನೆ.

ಜನವಶ್ಯಕ್ಕೆ ಮದನತಿಲಕ, ಮಲ್ಲಿಕಾರ್ಜುನವಿಜಯ ಎಂಬ ಹೆಸರುಗಳೂ ಇವೆ. 13 ಸಂಧಿ, 685 ಶರ, ಕುಸುಮ, ಭೋಗ ಷಟ್ಪದಿಗಳನ್ನೊಳಗೊಂಡಿರುವ ಈ ಕೃತಿ ರತಿರಹಸ್ಯದ ನೇರವಾದ ಅನುವಾದ. ಕಕೋಕ ಸಂಸ್ಕೃತದಲ್ಲಿ ಸೂತ್ರಬದ್ಧವಾಗಿ ಹೇಳುವುದನ್ನು ಅಷ್ಟೇ ಸೂತ್ರಬದ್ಧವಾಗಿ ಸಮರ್ಥವಾಗಿ ಕಲ್ಲರಸ ಕನ್ನಡದಲ್ಲಿ ಅನುವಾದ ಮಾಡಿದ್ದಾನೆ. ಆದರೆ ತನ್ನ ಕೃತಿಗೆ ಆಕರವನ್ನು ಹೇಳುವಾಗ ಇಂದುಶೇಖರ ಕೃಷ್ಣ ಸಂದೇಶ ಗೋಣಿಕಾನಂದನಂ ಮೊದಲಾದವರ್ ಪೇಳಿದ ಕಂದರ್ಪಶಾಸ್ತ್ರಮಂ ಮಂದಸ್ಮಿತಾಸ್ಯೆ ನಿನಗಂದಮೊದವಿರ್ದ ಕನ್ನಡದಿನೊರೆದೆ ಎಂದು ಹೇಳಿ ಕಕೋಕನ ಹೆಸರನ್ನು ಗ್ರಂಥದಲ್ಲಿ ಎಲ್ಲಿಯೂ ಹೇಳುವುದಿಲ್ಲ. ಹಾಗೆಯೇ ಮಲ್ಲಿಕಾರ್ಜುನ ನೃಪಾಲ ತನ್ನ ಹೆಂಡತಿಗೆ ಹೇಳಿದ ಜನವಶ್ಯವನ್ನು ತಾನು ಕನ್ನಡದಲ್ಲಿ ವಿಸ್ತರಿಸಿ ಹೇಳುತ್ತಿರುವುದಾಗಿ, ಮಲ್ಲಿಕಾರ್ಜುನ ಧರಾವಲ್ಲಭನೊಸೆದು ತನ್ನ ನಲ್ಲಳೆಜವಂತೊರೆದ ಜನವಶ್ಯಮಂ ಸಲ್ಲಲಿತವಾಣಿ ಕವಿ ಕಲ್ಲರಸನಱುವವರ ಮೆಲ್ಲೆರ್ದೆಯನಿಂಬುಗೊಳ್ವಂತೆ ಬರೆದು ಎಂಬ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಮೇಲಿನ ಪದ್ಯದಲ್ಲಿ ಉಲ್ಲೇಖಿತನಾಗಿರುವ ಮಲ್ಲಿಕಾರ್ಜುನ 1446 ರಿಂದ 1465ರವರೆಗೆ ಆಳಿದ ವಿಜಯನಗರದ ದೊರೆಯೆಂದು ತಿಳಿದುಬರುತ್ತದೆ.

ಜನವಶ್ಯದ ರಚನೆಯಲ್ಲಿ ಕಂಡುಬರುವ ಕಲ್ಲರಸನ ಕವಿತಾಶಕ್ತಿ ಮತ್ತು ಪ್ರತಿಭೆ ಮೆಚ್ಚುವಂತಹುದು. ಕಾಮಶಾಸ್ತ್ರದ ನಿರೂಪಣೆಗೆ ಬೇಕಾದ ಲಲಿತಶೈಲಿಯನ್ನು ಈತ ಸಾಧಿಸಿಕೊಂಡಿದ್ದಾನೆ. ಈತನೇ ಹೇಳುವ ಅಜೆ ಯದರ್ಗುಪದೇಶವಱಿದರ್ಗೆ ಜೀವಕಳೆಯುಱಿದಱಿಯದವರಿಗಱಿವೆನಿಸಿರ್ಪುದು ಮಱೆಯಿಲ್ಲದೆಲ್ಲರ್ಗೆ ನೆಱೆವೆಱೆಯುವೊಲ್ ಕಲೆಯನುಱೆಬೀರ್ಪುದೆನ್ನಕೃತಿ ಸತತಮಬಲೆ -ಎಂಬ ಮಾತು ಉತ್ಪ್ರೇಕ್ಷೆಯಲ್ಲ. ಸತಿಪತಿಯರ ಸರಸ ಸಂಭಾಷಣೆಯ ಚೌಕಟ್ಟಿನಲ್ಲಿ ಸಾಗುವ ಈ ಕೃತಿ ಓದುಗನ ಮನಮುಟ್ಟುವಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಂಡಿದೆ.

ಕನ್ನಡದಲ್ಲಿ ಕಾಮಶಾಸ್ತ್ರವನ್ನು ಕುರಿತು ಮೋಹಾನುಭವಮುಕುರ, ಮದನ ತಿಲಕ, ಮನ್ಮಥವಿಜಯ ಮೊದಲಾದ ಕೃತಿಗಳು ಬಂದಿದ್ದು, ಜನವಶ್ಯ ಅವುಗಳೆಲ್ಲಲ್ಲ ಸಮಗ್ರವೂ ಸಮರ್ಪಕವೂ ಆದ ಕೃತಿಯಾಗಿದೆ ಎಂದು ಹೇಳಬಹುದು. (ಜಿ.ಜಿ.ಎಂ.)

**ಕಲ್ಲೂರು :** ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನಲ್ಲಿ ರಾಯಚೂರು ಮಾನ್ವಿ ಮಾರ್ಗದಲ್ಲಿ ರಾಯಚೂರಿನಿಂದ 20ಕಿಮೀ ದೂರದಲ್ಲಿರುವ ಗ್ರಾಮ. ಅನೇಕ ಐತಿಹಾಸಿಕ ಮತ್ತು ಪ್ರಾಗೈತಿಹಾಸಿಕ ಅವಶೇಷಗಳು ಇಲ್ಲಿವೆ. ಸುತ್ತಲೂ ಕಲ್ಲುಗುಡ್ಡಗಳಿರುವುದರಿಂದ ಈ ಊರಿಗೆ ಈ ಹೆಸರು ಬಂದಿರಬೇಕು.

ಈಗಿನ ಹಳ್ಳಿಯ ಸುತ್ತ ಸು.13-14ನೆಯ ಶತಮಾನಗಳಲ್ಲಿ ಕಟ್ಟಿರಬಹುದಾದ ಕೋಟೆ ಇದೆ. ಕೋಟೆಗೆ ಮಾನ್ವಿ ದರ್‍ವಾಜಾ, ಕಲ್ಮಲ ದರ್‍ವಾಜಾ, ರಾಯಚೂರು ದರ್‍ವಾಜಾ ಮುಂತಾದ ಐದು ದ್ವಾರಗಳಿವೆ. ಇವು ಮುಸಲ್ಮಾನರ ಆಳ್ವಿಕೆಯ ಕಾಲದವು. ರಾಯಚೂರು ದರ್‍ವಾಜಾದಲ್ಲಿ ಮರದ ತೊಲೆಯ ಮೇಲಿದ್ದ ಕನ್ನಡ ಶಾಸನವೊಂದು ಆದಿಲ್‌ಶಾಹೀ ಕಾಲದ ಪ್ರಮುಖನೊಬ್ಬನಾದ ಆಫಾಖುಸ್ರು ಇದನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಈ ಊರಿನಲ್ಲಿ ಮತ್ತು ಪರಿಸರದಲ್ಲಿ 6 ದೇವಾಲಯಗಳಿವೆ. ಅವುಗಳಲ್ಲಿ ಮಾರ್ಕಂಡೇಶ್ವರ ದೇವಾಲಯ ಬಹು ಹಳೆಯದು. ಕಲ್ಯಾಣದ ಚಾಳುಕ್ಯ ಶೈಲಿಯ ಕಂಬಗಳು ಈ ದೇವಾಲಯದಲ್ಲಿವೆ. ಗ್ರಾಮದಲ್ಲಿ ಹಲವು ಕಲ್ಯಾಣ ಚಾಳುಕ್ಯ ಶಾಸನಗಳೂ ದೊರಕಿವೆ. ಇಲ್ಲಿರುವ ಮಾರುತೀಶ್ವರ ದೇವಾಲಯವೂ ಪುರಾತನವಾದದ್ದೇ. ದೇವಾಲಯದ ಗರುಡಗಂಬವನ್ನು ಸಿಂಘಣನೆಂಬವ ನಿಲ್ಲಿಸಿದನೆಂದೂ ಈ ಗ್ರಾಮ ಹಿಂದೆ ಒಂದು ಅಗ್ರಹಾರವಾಗಿತ್ತೆಂದೂ ಇಲ್ಲಿಯ ಒಂದು ಶಾಸನದಿಂದ ತಿಳಿದುಬರುತ್ತದೆ.

ಕಲ್ಲೂರಿನ ಸಮೀಪದ ಬೆಟ್ಟ ಪ್ರದೇಶಗಳಲ್ಲಿ ಮತ್ತು ಕಣಿವೆಗಳಲ್ಲಿ ನವಶಿಲಾಯುಗ ಮತ್ತು ಶಿಲಾ - ತಾಮ್ರಯುಗ ಕಾಲಗಳಿಗೆ ಸೇರಿದ ಶಿಲಾಯುಧಗಳು, ಮಡಕೆ ಚೂರುಗಳು, ಕಲ್ಲಿನ ಕೂರಲಗು ಫಲಕಗಳು (ಬ್ಲೇಡ್ಸ್) ದೊರಕುತ್ತವೆ. ಇಲ್ಲಿನ ಎಮ್ಮಿಗುಡ್ಡ ಎಂಬ ಚಿಕ್ಕ ಬೆಟ್ಟವೊಂದರ ಗುಹೆಯಲ್ಲಿ ಹಿಂದಿನ ಹೈದರಾಬಾದು ಸರ್ಕಾರದವರು ಉತ್ಖನನ ನಡೆಸಿದಾಗ ಅನೇಕ ತಾಮ್ರದ ವಸ್ತುಗಳು ದೊರಕಿದುವು. ಅಲ್ಲದೆ ತಾಮ್ರವನ್ನು ಕರಗಿಸಿ, ಎರಕ ಹುಯ್ಯುವ ಉದ್ಯಮ ಇಲ್ಲಿತ್ತೆಂದು ಸೂಚಿಸುವ ಮೂಸೆಗಳು, ಒಲೆಗಳು ಸಹ ಬೆಳಕಿಗೆ ಬಂದುವು. ಇದೇ ಪ್ರದೇಶದಲ್ಲಿ ಹಿಂದೆ ಕತ್ತಿ ಮೊದಲಾದ ತಾಮ್ರದ ವಸ್ತುಗಳು ಸಹ ದೊರಕಿದ್ದುವು. ಇವುಗಳನ್ನು ಅಧ್ಯಯನ ಮಾಡಿರುವ ಪ್ರಾಗಿತಿಹಾಸಜ್ಞರು ಈ ವಸ್ತುಗಳು ಉತ್ತರ ಭಾರತದಲ್ಲಿ ದೊರೆಯುವ ತಾಮ್ರಯುಗದ ವಸ್ತುಗಳ ವರ್ಗದವೇ ಎಂದು ಊಹಿಸಿದ್ದಾರೆ. ಶಿಲಾ - ತಾಮ್ರಯುಗದ ಕಾಲದಲ್ಲಿ ಈ ಊರು ತಾಮ್ರ ಕೈಗಾರಿಕಾ ಕೇಂದ್ರವಾಗಿರಬಹುದು. ಎಮ್ಮಿಗುಡ್ಡದಲ್ಲಿ

ಎಮ್ಮೆ ಮತ್ತು ದನದ ಚಿತ್ರಗಳನ್ನು ಬಂಡೆಗಳಲ್ಲಿ ಕೊರೆದಿರುವುದೂ ಬೆಳಕಿಗೆ ಬಂದಿದೆ. ಇವೂ ಪ್ರಾಗಿತಿಹಾಸ ಕಾಲದವೇ. ಇವು ಪ್ರಾಯಶಃ ಕರ್ನಾಟಕದ ಕಲೆಯ ಬಹು ಪ್ರಾಚೀನ ಉದಾಹರಣೆಗಳು. *

**ಕಲ್ಲೋಳಿ :** ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಒಂದು ಗ್ರಾಮ. ಗೋಕಾಕದಿಂದ 11ಕಿಮೀ ದೂರದಲ್ಲಿದೆ. ಸೌಂದತ್ತಿ ರಟ್ಟರ ಶಾಸನದಲ್ಲಿ ಇದನ್ನು ಸಿಂಧನಕಲ್ಲೋಳೆ ಎಂದು ಕರೆಯಲಾಗಿದೆ. ಇಲ್ಲಿ ಮುಖ್ಯವಾಗಿ ವಡ್ಡಸಮಾಜಕ್ಕೆ ಸೇರಿದ ಕಲ್ಲೋಳಪ್ಪನ ಗುಡಿ ಸುಪ್ರಸಿದ್ಧವಾಗಿದೆ. ಈ ಗ್ರಾಮದಲ್ಲಿ ರಾಮಲಿಂಗೇಶ್ವರ, ಕಲ್ಮೇಶ್ವರ, ಮಲ್ಲಮ್ಮ, ದ್ಯಾಮವ್ವ, ದುರ್ಗವ್ವ, ಬೀರಪ್ಪ ಸಿದ್ಧಾರೂಢ ಮತ್ತು ಸದಾಶಿವ ದೇವಾಲಯಗಳಿವೆ. ಕಲ್ಲೋಳಪ್ಪನ ಭವ್ಯ ಗುಡಿ ವಿಶೇಷವಾಗಿದೆ. ಈ ದೇವಾಲಯದ ಎದುರಿಗಿನ ಆವರಣದಲ್ಲಿ ಎರಡು ಕೈ ಜೋಡಿಸಿ ನಿಂತ ಕಾಟಮುತ್ತಪ್ಪನ ಮೂರ್ತಿಗಳಿವೆ. ಇಲ್ಲಿನ ಪಾರ್ಶ್ವನಾಥ' ಜಿನಾಲಯವನ್ನು ಸು.1200ರಲ್ಲಿ ಹಗರ್ತಗೆ ನಾಡಿನ ರಟ್ಟ ಅರಸರ ಸಂಬಂಧಿ ಕಟ್ಟಿಸಿದ ಬಗ್ಗೆ ಶಾಸನವಿದೆ.

ರಾಮಲಿಂಗೇಶ್ವರ ದೇವಾಲಯ ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಮೇಲೆ ಕದಂಬನಾಗರ ಶೈಲಿಯ ಶಿಖರವಿದ್ದು, ಇದನ್ನು ಭಾಗಶಃ ಜೀರ್ಣೋದ್ಧಾರ ಮಾಡಲಾಗಿದೆ. ನವರಂಗದಲ್ಲಿಯ ಕಂಬಗಳ ಕೆತ್ತನೆಯಲ್ಲಿ ನಯಗಾರಿಕೆಯಿದೆ. ಸುಖನಾಸಿಯನ್ನು ಜೀರ್ಣೋದ್ಧಾರದ ಕಾಲಕ್ಕೆ ಮೇಲ್ಛಾವಣಿಯಲ್ಲಿ ಇರಿಸಲಾಗಿದೆ. ಅದರ ಮೇಲೆ ಕುಳಿತ ಭಂಗಿಯಲ್ಲಿರುವ ಶಿವನ ಮೂರ್ತಿಯನ್ನು ಕೆತ್ತಲಾಗಿದೆ. ಮುಖ್ಯ ಮಂಟಪ ವಿಸ್ತಾರವಾದ ಪ್ರಾಂಗಣವನ್ನು ಹೊಂದಿದೆ. ಅದರ ಸುತ್ತ ಕಕ್ಷಾಸನವಿದೆ. ವಿಜಯನಗರ ಶೈಲಿಯಲ್ಲಿರುವ ಕಲ್ಮೇಶ್ವರ ದೇವಾಲಯದಲ್ಲಿ ಗರ್ಭಗೃಹ ಮತ್ತು ನವರಂಗಗಳಿವೆ. ನವರಂಗದ ಛಾವಣಿ ಭಾಗಶಃ ಬಿದ್ದುಹೋಗಿದೆ. ಹೊಸ್ತಿಲು ಹುಣ್ಣಿಮೆಯಲ್ಲಿ ಮಾರುತಿಯ (ಕಲ್ಲೋಳಪ್ಪನ) ಜಾತ್ರೆ ಎರಡು ವಾರಗಳವರೆಗೆ ನಡೆಯುತ್ತದೆ.

ತ್ರಿಕೂಟಾಚಲ ಇಲ್ಲಿನ ಇನ್ನೊಂದು ಸ್ಮಾರಕ. ಮಧ್ಯದ ಗರ್ಭಗೃಹದಲ್ಲಿ ಶಾಂತಿನಾಥನ ಮೂರ್ತಿ, ಎಡಗಡೆಯ ಗರ್ಭಗೃಹದಲ್ಲಿ ಚಂದ್ರನಾಥ ಮತ್ತು ಬಲಗಡೆಯ ಗರ್ಭಗೃಹದಲ್ಲಿ ಸುಪಾರ್ಶ್ವನಾಥನ ಮೂರ್ತಿಗಳಿವೆ. ಈ ಮೂರೂ ಗರ್ಭಗೃಹಗಳು ನಕ್ಷತ್ರಾಕಾರದ ಜಗಲಿ ಹೊಂದಿದ್ದು ಮಧ್ಯದ ಗರ್ಭಗೃಹದ ಮೇಲಿನ ಶಿಖರವು ಕದಂಬ ನಾಗರ ಶೈಲಿಯನ್ನು ಹೊಂದಿದೆ. ನವರಂಗದ ಕಂಬಗಳು ನುಣುಪಾದ ಕೆತ್ತನೆಯಿಂದ ಕೂಡಿದೆ. ನವರಂಗದ ಛಾವಣಿಯಲ್ಲಿ ಕೆಳಮುಖ ಮಾಡಿದ ಕಮಲವು ಲೋಲಕದಂತಿದ್ದು ಅದರಲ್ಲಿ ಹಲವಾರು ಸಸ್ಯ ನಕ್ಷೆಗಳನ್ನು ಕೆತ್ತಲಾಗಿದೆ. ಇಲ್ಲಿ ಜೈನ ಸರಸ್ವತಿಮೂರ್ತಿ ಮತ್ತು ನೇಮಿನಾಥನ ಮೂರ್ತಿಗಳಿವೆ. ಮುಖಮಂಟಪ ಕಕ್ಷಾಸನವನ್ನು ಹೊಂದಿದ್ದು, ಹೊರಬದಿಯ ಗೋಡೆಯ ಮೇಲೆ ಸಸ್ಯಾಲಂಕಾರ ಮತ್ತು ಹೊರಬದಿಗೆ ಭೂಮಿತಿ ನಕ್ಷೆಗಳನ್ನು ಕೆತ್ತಲಾಗಿದೆ. ಮುಖಮಂಟಪದ ಗೋಡೆಯ ಮೇಲಿರುವ ಶಿಲಾಶಾಸನದಲ್ಲಿ ಈ ಗ್ರಾಮವು ಕೂರುಂಬೆಟ್ಟ ಕಂಪಣದಲ್ಲಿರುವ ಸಿಂಧನ ಕಲ್ಲೋಳೆ ಎಂದೂ ಪಾರ್ಶ್ವಜಿನಾಲಯವನ್ನು ಕಟ್ಟಿಸಿದವನು ಹಗರಟೆಗೆ ನಾಡಿನ ಚಂದ್ರಿಕಾದೇವಿಯ ಸೋದರನ ಮಗನೆಂದೂ ಹೇಳಿದೆ. ಈ ಚಂದ್ರಿಕಾದೇವಿ ರಟ್ಟದೊರೆ ಲಕ್ಷ್ಮೀದೇವನ ಹೆಂಡತಿ, 4ನೆಯ ಕಾರ್ತವೀರ್ಯನ ತಾಯಿ. ಕಾರ್ತವೀರ್ಯ 1204ರಲ್ಲಿ 2000 ಕಮ್ಮ ಭೂಮಿಯನ್ನು ಈ ದೇವಾಲಯಕ್ಕೆ ದಾನ ನೀಡಿದ. ಈ ಪ್ರದೇಶ ವಾಣಿಜ್ಯ ಕೇಂದ್ರವಾಗಿತ್ತೆಂದು ಶಾಸನದಲ್ಲಿ ಹೇಳಿದೆ. ಪಾರ್ಶ್ವನಾಥ' ಪುರಾಣವನ್ನು ಬರೆದ ಕವಿ ಪಾರ್ಶ್ವಪಂಡಿತ ಈ ಶಾಸನದ ಕರ್ತೃ. (ಆರ್.ಐ.)

**ಕವಲೆದುರ್ಗ :** ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಕಸಬೆಯಿಂದ 21ಕಿಮೀ ದೂರದಲ್ಲಿ ಸಮುದ್ರಮಟ್ಟಕ್ಕಿಂತ 932ಮೀ ಎತ್ತರದಲ್ಲಿರುವ ಒಂದು ದುರ್ಗಮವಾದ ಬೆಟ್ಟ. ಐತಿಹಾಸಿಕ ಸ್ಥಳ.

ದ್ವಾಪರಯುಗದಲ್ಲಿ ಕಾಮ್ಯಕವನವೆಂದು ಹೆಸರಿದ್ದ ಇಲ್ಲಿ ಪಾಂಡವರು ತಮ್ಮ ವನವಾಸಕಾಲದಲ್ಲಿ ತಂಗಿದ್ದರೆಂದೂ ಮತ್ತು ಆ ಸಮಯದಲ್ಲಿ ಈ ದುರ್ಗದಲ್ಲಿ ಪುರಾತನವಾದ ದೊಡ್ಡ ಪ್ರಮಾಣದ ಮತ್ತು ಭದ್ರವಾದ ಕೋಟೆಕೊತ್ತಲಗಳನ್ನು ಕಟ್ಟಿದರೆಂದೂ ಪ್ರತೀತಿ. ಪಾಂಡವರು ಈ ದುರ್ಗದಲ್ಲಿದ್ದಾಗ ಭೀಮ ಈ ಸ್ಥಳದ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ ಭೀಮನಕಟ್ಟೆಯನ್ನು ಕಟ್ಟಿದ್ದ. ಇದರಿಂದ ಋಷಿಗಳಿಗೆ ತೊಂದರೆಯಾಯಿತು. ಧರ್ಮರಾಯನ ಆಣತಿಯ ಪ್ರಕಾರ ಭೀಮ ಅಣೆಕಟ್ಟೆಗೆ ಈಗಿರುವ ಮೂರು ರಂಧ್ರಗಳನ್ನು ಮಾಡಿ ನೀರನ್ನು ಬಿಟ್ಟ ಎಂದೂ ಕಥೆ ಇದೆ.

ಐತಿಹಾಸಿಕ ಕಾಲದಲ್ಲಿ ಈ ದುರ್ಗ ಬಿದನೂರು ನಾಯಕರ ಭದ್ರಕೋಟೆ. ಇದಕ್ಕೆ ಭುವನಗಿರಿ ಎಂದು ಹೆಸರಿತ್ತು. ಕೋಟೆಯೊಳಗೆ ಕೆಳದಿ ವೆಂಕಟಪ್ಪನಾಯಕ ಕೆಲವು ಕಟ್ಟಡಗಳನ್ನು ಕಟ್ಟಿಸಿದ್ದನೆಂದು ಕೆಳದಿನೃಪ ವಿಜಯದಲ್ಲಿ ಹೇಳಿದೆ. ದುರ್ಗದ ಮೇಲೆ ಮತ್ತು ಗ್ರಾಮದಲ್ಲಿ ಶಿಖರೇಶ್ವರ, ಲಕ್ಷ್ಮೀನಾರಾಯಣ, ಮೈಲಾರೇಶ್ವರ ಗುಡಿಗಳೂ ಅರಮನೆ, ಮದ್ದುಗುಂಡು ಶೇಖರಣಾ ಕೋಣೆ, ಕಮಂಡಲತೀರ್ಥ ಮುಂತಾದವೂ ಇವೆ. ದುರ್ಗದ ಮೇಲಿರುವ ಶ್ರೀಕಂಠೇಶ್ವರ ದೇವಸ್ಥಾನದ ದ್ವಾರ ಪಶ್ಚಿಮಕ್ಕಿರುವುದು ಒಂದು ವೈಶಿಷ್ಟ್ಯವಾಗಿದೆ.

ಮುಂದೆ ಹೈದರ್ 1761ರಲ್ಲಿ ಬಿದನೂರಿನ ಕೆಳದಿ ರಾಜರನ್ನು ಸೋಲಿಸಿ ತನ್ನ ರಾಜ್ಯಕ್ಕೆ ಈ ಪ್ರಾಂತ್ಯವನ್ನು ಸೇರಿಸಿಕೊಂಡು ಈ ದುರ್ಗಕ್ಕೆ ಕಾವಲುದುರ್ಗವೆಂದು ಹೆಸರಿಟ್ಟ. ಕ್ರಮೇಣ ಅದು ಕವಲೆದುರ್ಗವಾಯಿತು. 1882ರ ವರೆಗೆ ಕವಲೆದುರ್ಗ ಅದೇ ಹೆಸರಿನ ತಾಲ್ಲೂಕಿನ ಮುಖ್ಯಸ್ಥಳವಾಗಿತ್ತು. ಈ ಹಳೆಯ ಊರು ದುರ್ಗದ ಪಶ್ಚಿಮಕ್ಕಿದೆ. ಇಲ್ಲಿ ಹಿಂದಿನ ಕೆಳದಿ ರಾಜರ ಗುರುಗಳ ಪರಂಪರೆಗೆ ಸೇರಿದ ಲಿಂಗಾಯತ ಮಠವೊಂದಿದೆ. ಊರಿನಲ್ಲಿ ವೆಂಕಟಪ್ಪನಾಯಕ ಪ್ರತಿಷ್ಠಾಪಿಸಿದನೆನ್ನಲಾದ ವಿನಾಯಕ, ವಿರೂಪಾಕ್ಷ, ವಿಜಯವಿಠಲ, ವೀರಭದ್ರ, ನರಸಿಂಹ, ಗುರುನಾಥ', ಭುವನೇಶ್ವರಿ ಮುಂತಾದ ದೇವಮಂದಿರಗಳಿವೆ. ಮಹಾನವಮಿ ಮೈದಾನ ಮತ್ತು ಅನೇಕ ಮಾಸ್ತಿಕಲ್ಲುಗಳಿವೆ. ಒಂದು ಮಸೀದಿಯೂ ಇದೆ. ಕಲ್ಯಾಣಮಂಟಪ, ಟಂಕಶಾಲೆ, ಶಿವಗಂಗಾ ಜಲಕ್ರೀಡಾ ಕೊಳಗಳು ಇವೆ. ಕೆಳದಿ ಪಾಳೆಗಾರರು ಕಟ್ಟಿಸಿದ ಕೆರೆಗಳಿವೆ. ಸಮುದ್ರದ ವಿಹಂಗಮ ನೋಟವನ್ನು ದುರ್ಗದ ಪಶ್ಚಿಮ ಭಾಗದಿಂದ ಕಾಣಬಹುದು. (ಟಿ.ಡಿ.ಪಿ.)

**ಕವಳೆ ಗವಿಗಳು :** ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ಹಳಿಯಾಳದಿಂದ 30ಕಿಮೀ ದೂರದಲ್ಲಿ ಅಂಬಿಕಾನಗರದ ಬಳಿ ಇರುವ ನಾಗರಝರಿ ವಿದ್ಯುದುತ್ಪಾದನಾ ಕೇಂದ್ರದ ಎದುರಿಗಿನ ಗವಿಗಳನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಎತ್ತರದ ಬೆಟ್ಟದ ಮಣಿನಲ್ಲಿರುವ ಈ ಗುಹೆಗಳು ಪ್ರಕೃತಿರಮ್ಯ ದೃಶ್ಯಗಳ ನಡುವೆ ಅಡಗಿವೆ. ಇಲ್ಲಿಗೆ ತಲುಪಲು ಎರಡು ಮಾರ್ಗಗಳಿವೆ. ಒಂದು, ನಾಗಝರಿ ತೊರೆಹಾಯ್ದು ಮೆಟ್ಟಿಲುಗಳನ್ನು ಹತ್ತಿ ಬರುವ ಮಾರ್ಗ. ಇನ್ನೊಂದು, ಪಣಸೊಳ್ಳಿ ಮಾರ್ಗದಲ್ಲಿ ದಾಂಡೇಲಿ ಮೃಗಧಾಮವನ್ನು ದಾಟಿ ಬರುವ ಮಾರ್ಗ. ಈ ಮಾರ್ಗದಲ್ಲಿ ಬಂದರೆ 12ಕಿಮೀ ದೂರ ಕ್ರಮಿಸಬೇಕು ಹಾಗೂ ಮೆಟ್ಟಿಲುಗಳನ್ನು ಹತ್ತಬೇಕು. ಕಡಿದಾದ ಬಂಡೆಯ ಮಧ್ಯದಲ್ಲಿ ಸುಂದರ ಗವಿಗಳ ಸಮೂಹ ಗೋಚರಿಸುತ್ತದೆ. ಇದರ ಪ್ರವೇಶದ್ವಾರ 4ಮೀ ಎತ್ತರ ಮತ್ತು ಅಷ್ಟೇ ಸುತ್ತಳತೆ ಹೊಂದಿದೆ. ಆದರೆ ನಿಜವಾದ ಕಿಂಡಿ ಕೇವಲ 90ಸೆಂಮೀನಷ್ಟು ಎತ್ತರದ್ದಾಗಿದ್ದು, ಇದರ ಮೂಲಕ ಎಚ್ಚರಿಕೆಯಿಂದ ಸು.9ಮೀನಷ್ಟು ತೆವಳಿಕೊಂಡು ಕ್ರಮಿಸಿದರೆ ಒಂದು ಹಜಾರದಂತಹ ಜಾಗಕ್ಕೆ ತಲುಪಬಹುದು. ಅಲ್ಲಿ ಮಧ್ಯದಲ್ಲಿ ಒಂದು ದೊಡ್ಡ ಶಿವಲಿಂಗವಿದೆ. ಇದು ಸುಮಾರು ಒಂದು ಮೀಟರ್‌ನಷ್ಟು ಎತ್ತರವಾಗಿದೆ. ಇದನ್ನು ಸ್ಥಳೀಯರು ಕವಳೆಲಿಂಗ ಎಂದು ಕರೆಯುತ್ತಾರೆ. ಇದಕ್ಕೆ ನಿತ್ಯ ಪೂಜೆ ನಡೆಯುತ್ತದೆ. ಶಿವಲಿಂಗದ ಹಿಂಭಾಗದಲ್ಲಿ ಒಂದು ಪ್ರತ್ಯೇಕ ಗವಿಯಿದ್ದು ಇಲ್ಲಿಂದ ಹೊರಗೆ ಹೋಗಬಹುದು. ಈಗ ಗವಿಯೊಳಗೆ ಬೆಳಕಿನ ವ್ಯವಸ್ಥೆ ಮಾಡಲಾಗಿದೆ.

ಈ ಸ್ಥಳಕ್ಕೆ ಪುರಾಣ, ಐತಿಹ್ಯಗಳೂ ಇವೆ. ಒಮ್ಮೆ ಶಿವ ಶನಿಯಿಂದ ಪೀಡಿಸಲ್ಪಟ್ಟಾಗ ಇಲ್ಲಿಗೆ ಬಂದು ಅಡಗಿದ್ದನಂತೆ. ಪಾಂಡವರು

ವನವಾಸದ ಸಂದರ್ಭದಲ್ಲಿ ಇಲ್ಲಿಗೆ ಬಂದಿದ್ದು ಈ ಶಿವಲಿಂಗವನ್ನು ಪೂಜಿಸಿದ್ದರೆಂದು ಐತಿಹ್ಯ. ಇತ್ತೀಚೆಗೆ ಗವಿಯ ಹೊರಗಡೆ ಗಣಪತಿ ಹಾಗೂ ಕಾರ್ತಿಕೇಯನ ಮೂರ್ತಿಗಳನ್ನು ಸ್ಥಾಪಿಸಿದ್ದಾರೆ. ಶಿವರಾತ್ರಿಯ ಸಂದರ್ಭದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. (ಎಸ್.ಎಚ್‌ಇ.)

**ಕವಿಕಾಮ :** ಸು.1200. ಶೈವ ಬ್ರಾಹ್ಮಣಕವಿ. ಶೃಂಗಾರರತ್ನಾಕರ ಎಂಬ ಅಲಂಕಾರಶಾಸ್ತ್ರಗ್ರಂಥದ ಕರ್ತೃ. ಈತನಿಗೆ ಶೃಂಗಾರರತ್ನಾಕರ, ಕವಿಮುಖ ಮುಕುರ ಎಂಬ ಬಿರುದುಗಳಿದ್ದಂತೆ ತಿಳಿದುಬರುತ್ತದೆ. ತನ್ನ ಗ್ರಂಥದಲ್ಲಿ ಅಮರಸಿಂಹ, ಚಂದ್ರದತ್ತ ಮೊದಲಾದ ಸಂಸ್ಕೃತ ಕವಿಗಳನ್ನು ಸ್ಮರಿಸಿದ್ದಾನೆ. ವಿವಿಧ ಭೂಭೃದ್‌ಭೂರಿಸಂಭಾವಿತಾಸ್ಪದದಿಂ ಎಂದು ಹೇಳಿಕೊಂಡಿರುವುದರಿಂದ ಈತ ರಾಜಾಸ್ಥಾನಗಳಲ್ಲಿ ಪ್ರಸಿದ್ಧ ಕವಿಯಾಗಿದ್ದಿರಬಹುದು. ಕವಿಪಾರ್ಶ್ವನೂ (ಸು.1205) ಸೂಕ್ತಿ ಸುಧಾರ್ಣವದ ಕರ್ತೃ ಮಲ್ಲಿಕಾರ್ಜುನನೂ (ಸು.1240) ಈತನನ್ನು ಸ್ಮರಿಸಿದ್ದಾರೆ.

ಶೃಂಗಾರರತ್ನಾಕರ ಕನ್ನಡದಲ್ಲಿ ರಸಪ್ರಕ್ರಿಯೆಯನ್ನು ಸವಿಸ್ತಾರವಾಗಿ ಪ್ರತಿಪಾದಿಸಿದ ಮೊಟ್ಟಮೊದಲ ಗ್ರಂಥ. ಇದಕ್ಕೆ ರಸವಿವೇಕ ಎಂಬ ಹೆಸರೂ ಇದೆ. ಇದರಲ್ಲಿ ನವರಸ ವ್ಯಾವರ್ಣನ, ಭಾವಭೇದ ನಿರ್ಣಯ, ನಾಯಕನಾಯಿಕಾ ವಿಕಲ್ಪವಿಸ್ತರ, ಸಖಿಸಖೀ ಸಂಭೋಗ ವಿಪ್ರಲಂಭ ಪ್ರಮಾವಸ್ಥಾವಿಸ್ತರ ಎಂಬ ನಾಲ್ಕು ಪರಿಚ್ಛೇದಗಳಿವೆ. ಸಂಸ್ಕೃತ ರಸಶಾಸ್ತ್ರದ ನಿಕಟ ಪ್ರಭಾವದಿಂದ ಭಾವರಸ ಪ್ರಪಂಚ, ವಿಶೇಷವಾಗಿ ಶೃಂಗಾರರಸ ಇವುಗಳಲ್ಲಿ ನಿರೂಪಿಸಲಾಗಿದೆ. ರಸವೇ ಮೊದಲ್ ಕವಿತೆಗೆ ಎಂದು ಕಾವ್ಯಕ್ಕೆ ಮುಖ್ಯವಾಗಿ ಬೇಕಾದ ಅಂಶವನ್ನು ಹೇಳುತ್ತಾನೆ. ಶಾಸ್ತ್ರ ದೃಷ್ಟಿಯಿಂದ ಈ ಗ್ರಂಥ ಬಹುಮಟ್ಟಿಗೆ ಪರತಂತ್ರವೇ ಆದರೂ ಯಾವೊಂದು ಕೃತಿಯ ತದ್ರೂಪವಾದ ಅನುವಾದವಲ್ಲ. ಕೆಲವು ಹೊಸ ಸಂಗತಿಗಳನ್ನು ರಸದ ಬಗ್ಗೆ ಹೇಳಿದ್ದಾನೆ. ಇವನ ಲಕ್ಷ್ಯಲಕ್ಷಣ ಪದ್ಯಗಳಲ್ಲಿ ಸಹಜ ಕವಿತ್ವ, ಲಲಿತ ಶೈಲಿ, ಶಾಸ್ತ್ರಜ್ಞಾನ ಕಂಡುಬರುತ್ತದೆ.

ಶೃಂಗಾರರತ್ನಾಕರದಿಂದ ಲಕ್ಷಣ ಪದ್ಯಗಳನ್ನು ಸಾಳ್ವ ತನ್ನ ರಸರತ್ನಾಕರದಲ್ಲಿಯೂ ತಿಪ್ಪರಸ ತನ್ನ ನವರಸಾಲಂಕಾರದಲ್ಲಿಯೂ ಮಲ್ಲಿಕಾರ್ಜುನ ತನ್ನ ಸೂಕ್ತಿಸುಧಾರ್ಣವದಲ್ಲಿಯೂ ಉದ್ಧರಿಸಿದ್ದಾರೆ.

ಪಾರ್ಶ್ವಕವಿಯ ಹೇಳಿಕೆಯನ್ನು ಆಧರಿಸಿ ಈತ ಸ್ತನಶತಕವೆಂಬ ಗ್ರಂಥವನ್ನು ಬರೆದಿರಬಹುದೆಂಬ ಊಹೆ ಇದೆ. ಆದರೆ ಈ ಗ್ರಂಥ ಉಪಲಬ್ಧವಿಲ್ಲ. (ಪಿ.ಜಿ.ಪಿ.)

**ಕವಿತಾ ಲಂಕೇಶ್ :** 1964 ಹೊಸತಲೆಮಾರಿನ ಚಲನಚಿತ್ರ ನಿರ್ದೇಶಕಿ ಮತ್ತು ನಿರ್ಮಾಪಕಿ. ಇವರ ತಂದೆ ಕನ್ನಡದ ಹೆಸರಾಂತ ಲೇಖಕ ಪಿ.ಲಂಕೇಶ್, ತಾಯಿ ಇಂದಿರಾ. 1964 ಡಿಸೆಂಬರ್ 13ರಂದು ಜನಿಸಿದ ಕವಿತಾ ಅವರು ಜಾಹೀರಾತು ವಿಷಯದಲ್ಲಿ ಡಿಪ್ಲೋಮಾ, ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದಾರೆ. ಸಿನಿಮಾ ಕಲೆಯ ಬಗ್ಗೆ ಇವರಿಗೆ ವಿಶೇಷ ಆಸಕ್ತಿ. ಇವರು ಆಪ್ಸಾಜ್ ಫಿಲ್ಮ್ಸ್ ಪ್ರಾರಂಭಿಸಿ ಅದರ ಮೂಲಕ 30ಕ್ಕೂ ಹೆಚ್ಚು ಕಾರ್ಪೋರೇಟ್ ಸಂಸ್ಥೆಗಳಿಗಾಗಿ ಹಾಗೂ ಕರ್ನಾಟಕ ಸರ್ಕಾರದ ಹಲವು ಇಲಾಖೆಗಳಿಗಾಗಿ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಯಕ್ಷಗಾನ ಕುರಿತಂತೆ 'ದಿ ಸಾಂಗ್ಸ್ ಆಫ್ ಏಂಜಲ್ಸ್' ಎಂಬುದು ಅವುಗಳಲ್ಲೊಂದು. ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಕುರಿತಂತೆ ಇವರು ನಿರ್ದೇಶಿಸಿದ ಸಾಕ್ಷ್ಯ ಚಿತ್ರಗಳು ಇವರನ್ನು ಪ್ರಯೋಗಶೀಲ ನಿರ್ದೇಶಕಿ ಎಂಬುದನ್ನು ಋಜುವಾತುಪಡಿಸಿವೆ. ಮೊಟ್ಟ ಮೊದಲಬಾರಿಗೆ ಪಿ.ಲಂಕೇಶರ ಅಕ್ಕ ಕಾದಂಬರಿ ಆಧರಿಸಿ ಇವರು ನಿರ್ದೇಶಿಸಿದ ದೇವೀರಿ ಎಳೆಯ ವಯಸ್ಸಿನ ಹುಡುಗನೊಬ್ಬನ ಭಾವನೆಗಳನ್ನು ಹಿಡಿದಿಟ್ಟಿರುವ ಚಿತ್ರ. ಇದು ಅತಿ ಹೆಚ್ಚು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಭಾಗವಹಿಸಿದ ಕನ್ನಡ ಚಲನಚಿತ್ರವೆನಿಸಿದೆ. ಪ್ರಥಮ ಅತ್ಯುತ್ತಮ ಚಿತ್ರವೆಂದು ಇದು ಕರ್ನಾಟಕ ಸರ್ಕಾರದಿಂದ ಪ್ರಶಸ್ತಿ ಗಳಿಸಿತು. (1999-2000).

ಈ ಚಲನಚಿತ್ರಕ್ಕೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ಅರವಿಂದನ್ ಪುರಸ್ಕಾರದ ರಾಷ್ಟ್ರೀಯ ಉತ್ತಮ ನಿರ್ದೇಶನ ಪ್ರಶಸ್ತಿ (1999), ವಿಶೇಷ ರಾಷ್ಟ್ರೀಯ ಪ್ರಶಸ್ತಿ (1999), ಶ್ರೇಷ್ಠ ಬಾಲಾಭಿನಯ ಪ್ರಶಸ್ತಿ (2000), ಸುಪ್ರಭಾತ ಟೆಲಿವಿಷನ್‌ನ ಶ್ರೇಷ್ಠ ನಿರ್ದೇಶನ ಪ್ರಶಸ್ತಿ (2001), ಕಾವೇರಿ ವಿಷ್ಯಾನೆಟ್ ಟೆಲಿವಿಷನ್‌ನ ಉತ್ತಮ ಕಥಾ ಪ್ರಶಸ್ತಿ (2001). ಈ ಚಿತ್ರ ಭಾರತದ ಪ್ರಮುಖ ನಗರಗಳಲ್ಲಷ್ಟೇ ಅಲ್ಲದೆ ಲಂಡನ್, ದರ್ಬಾನ್, ಬ್ಯಾಂಕಾಕ್, ಸಿಡ್ನಿ

ಮುಂತಾದೆಡೆಗಳಲ್ಲಿ ನಡೆದ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ವಿದೇಶೀಯರ ಗಮನವನ್ನು ಸೆಳೆಯಿತು.

ಇವರು ಅಲೆಮಾರಿ, ಬಿಂಬ ಎಂಬ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಪ್ರೀತಿ ಪ್ರೇಮ ಪ್ರಣಯ ಇವರು ನಿರ್ದೇಶಿಸಿದ ಚಿತ್ರ(2003). ತಾವೊಬ್ಬ ಸಮರ್ಥ ನಿರ್ದೇಶಕಿ ಎಂಬುದನ್ನು ಇವರು ತೋರಿಸಿಕೊಟ್ಟಿದ್ದಾರೆ. ಪರಿಸರತಜ್ಞೆ ತುಳಸಿಯವರ ಬಗ್ಗೆ ಇವರು ತಯಾರಿಸಿದ ಕಿರುಚಿತ್ರ ಗಂಭೀರ ಪ್ರಯತ್ನದಲ್ಲಿ ಮೂಡಿ ಬಂದಿದೆ. ಸಾಮಾಜಿಕ ಕಳಕಳಿಯನ್ನೊಳಗೊಂಡ ಚಿತ್ರವೆಂದು ಇದಕ್ಕೆ ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಲಭಿಸಿದೆ. ಕರ್ನಾಟಕದ ಸಿದ್ದಿಜನಾಂಗದ ಸ್ಥಿತಿಗತಿಗಳ ಬಗ್ಗೆ ತಯಾರಿಸಿರುವ ಇನ್ನೊಂದು ಸಾಕ್ಷ್ಯಚಿತ್ರ ಗಮನಾರ್ಹವಾದದ್ದು. 'ಹಸೆಕಲೆ' ಅವನತಿ ಹೊಂದುತ್ತಿರುವ ಒಂದು ಗ್ರಾಮೀಣ ಕಲೆ. ಈ ಕಲೆ ಕುರಿತಂತೆ ಕೂಡ ಇವರು ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ. ರಂಗಭೂಮಿ ಕಲಾವಿದೆ ಬಿ.ಜಯಶ್ರೀ, ಚಿತ್ರಕಲಾವಿದೆ ಪುಷ್ಪಮಾಲ, ನಿರ್ದೇಶಕಿ ಪ್ರೇಮಾಕಾರಂತ, ಚಿತ್ರನಟಿ ಜಯಂತಿ, ಬರೆಹಗಾರ್ತಿ ವೈದೇಹಿ ಹಾಗೂ ಸಮಕಾಲೀನ ನೃತ್ಯಗಾರ್ತಿ ತ್ರಿಪುರಾ ಕಶ್ಯಪ್ ಮುಂತಾದವರ ಬಗೆಗಿನ ಸಾಕ್ಷ್ಯಚಿತ್ರಗಳು ರಾಜ್ಯದೆಲ್ಲೆಡೆ ಪ್ರದರ್ಶಿತಗೊಂಡು ಪ್ರಶಂಸೆ ಗಳಿಸಿವೆ.

ಯುವ ನಿರ್ದೇಶಕ ಹಾಗೂ ಲೇಖಕ ಪಿ.ಎಲ್.ಇಂದ್ರಜಿತ್ ಇವರ ಸೋದರ, ಲಂಕೇಶ್ ಪತ್ರಿಕೆ (ಈಗ ಲಂಕೇಶ್) ಸಂಪಾದಕಿ ಗೌರಿಲಂಕೇಶ್ ಇವರ ಸೋದರಿ. (ಜಿ.ಎಸ್.ಎಲ್.)

**ಕವಿತಾಳ :** ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ ರಾಯಚೂರು ಲಿಂಗಸುಗೂರು ರಸ್ತೆಯಲ್ಲಿ ಲಿಂಗಸುಗೂರಿನಿಂದ 28ಕಿಮೀ ದೂರದಲ್ಲಿರುವ ಒಂದು ಗ್ರಾಮ. ಇದರ ಪುರಾತತ್ತ್ವ ಪ್ರಾಗೈತಿಹಾಸಿಕ ಕಾಲದಷ್ಟು. ಊರಿನಿಂದ ಆಗ್ನೇಯದಲ್ಲಿರುವ ಗುಡ್ಡದಲ್ಲಿ ಅನೇಕ ನೈಸರ್ಗಿಕ ಗುಹೆಗಳಿದ್ದು ಅಲ್ಲಿ ಪುರಾತನ ಶಿಲಾಯುಗ ಕಾಲದಿಂದ ಆಗಾಗ ಜನವಸತಿ ಇದ್ದಿತೆಂದು ತಿಳಿದುಬರುತ್ತದೆ. ಬೆಟ್ಟದ ತಪ್ಪಲಲ್ಲಿ ಕಬ್ಬಿಣದ ಕಿಟ್ಟಗಳೂ ಮಣ್ಣಿನ ಪಾತ್ರೆಗಳೂ ಕುಶಲವಸ್ತುಗಳೂ ದೊರಕಿವೆ. ಊರಿನ ಪಶ್ಚಿಮದಲ್ಲಿ ಒಂದು ಬೂದಿತಿಟ್ಟು ಸಹ ಇದೆ. ಈ ಊರ ಬಳಿಯಲ್ಲಿನ ತುಪ್ಪಲ ದೊಡ್ಡಿಯ ಬಳಿಯಲ್ಲಿ ಪುರಾತನ ಅವಶೇಷಗಳ ಜೊತೆಗೆ ಬಂಗಾರದ ಗಣಿಯೂ ಇದ್ದು ಅದನ್ನು ಪುರಾತನಕಾಲದಲ್ಲಿ ಶೋಧಿಸಿದುದರ ಕುರುಹುಗಳೂ ದೊರೆತಿವೆ.

ಈ ಊರಿನ ತ್ರ್ಯಂಬಕೇಶ್ವರ ದೇವಸ್ಥಾನ ಬಹು ಪ್ರಸಿದ್ಧವಾದುದು. ಇದನ್ನು ದ್ರಾವಿಡ ಶೈಲಿಯಲ್ಲಿ ಕಟ್ಟಿದೆ. ದೇವಸ್ಥಾನದಲ್ಲಿ ಮೂರು ಗರ್ಭಗೃಹಗಳಿದ್ದು ಮಧ್ಯದಲ್ಲಿ ನವರಂಗವಿದೆ. ಮೂರೂ ಗರ್ಭಗೃಹಗಳಿಗೂ ನವರಂಗಕ್ಕೂ ಮಧ್ಯೆ ಸುಕನಾಸಿಗಳಿವೆ. ಪ್ರಾಕಾರ ಸರಳವಾಗಿದ್ದರೂ ಕಂಬಗಳು ಒಳ್ಳೆಯ ಪ್ರಭಾವಯುತವಾಗಿವೆ. ದೇವಸ್ಥಾನದ ಶಿಖರಗಳು ಸುಂದರವಾಗಿವೆ. ಇವುಗಳಲ್ಲಿ $^2/_3$ ಭಾಗ ಕಲ್ಲಿನಲ್ಲಿಯೂ ಮಿಕ್ಕ ಭಾಗವನ್ನು ಇಟ್ಟಿಗೆ ಹಾಗೂ ಗಾರೆಯಲ್ಲಿಯೂ ಕಟ್ಟಲಾಗಿದೆ. ಇಲ್ಲಿನ ಮೂರು ಭಿತ್ತಿಮಂಟಪಗಳಲ್ಲಿ ಒಂದೊಮ್ಮೆ (ಮೂರರಲ್ಲೂ) ಪ್ರಾಯಃ ಲಿಂಗಗಳೂ ಇದ್ದುವೆಂದು

ತೋರುತ್ತದೆ. ಈಗ ಎರಡರಲ್ಲಿ ಇವೆ. ಇಲ್ಲಿನ ಒಂದು ಮಹಿಷಾಸುರ ಮರ್ದಿನಿಯ ಮೂರ್ತಿ ಕೂಡ ತುಂಬ ಸೊಗಸಾಗಿದೆ. ಈ ದೇವಸ್ಥಾನದಲ್ಲಿನ ಗೋಡೆಗಳನ್ನು ದೊಡ್ಡ ದೊಡ್ಡ ನಸುಗೆಂಪಿನ ಕಗ್ಗಲ್ಲುಗಳಲ್ಲಿ (ಖೊಂಡಾಲೈಟ್ ಕಲ್ಲುಗಳು) ಕಟ್ಟಿದೆ; ಅಲ್ಲಲ್ಲಿ ಯಾಳಿಗಳನ್ನೂ ಬಿಡಿಸಲಾಗಿದೆ. ಇಲ್ಲಿ ಕೆಲವೆಡೆ ಗಜಯುದ್ಧ ಇತ್ಯಾದಿಗಳನ್ನು ಕೆತ್ತಲಾಗಿದೆ. ಈ ದೇವಸ್ಥಾನದಲ್ಲಿ ಸೇವುಣ ಸಿಂಘಣನ ಮಾಂಡಲಿಕನಾದ ಮಲ್ಲಿದೇವರಸ ಬರೆಯಿಸಿದ ಎರಡು ಕನ್ನಡ ಶಾಸನಗಳಿವೆ. (ಎಸ್.ಜೆ.ಎ.)

**ಕವಿಪರಮೇಷ್ಠಿ :** ಸು.551. ಒಬ್ಬ ಪ್ರಾಚೀನ ಕವಿ. ಪಂಪನಿಂದ (ಸು.941) ಕಮಲಭವನ (ಸು.1235) ವರೆಗೆ ಹಲವು ಕನ್ನಡ ಕವಿಗಳು ಈತನನ್ನು ಆದರದಿಂದ ಸ್ತುತಿಸಿದ್ದಾರೆ. ಪಂಪನಂತೂ ಇವನನ್ನು ಜಗತ್ಪ್ರಸಿದ್ಧನೆಂದು ಕರೆದಿದ್ದಾನೆ. ಗುಣವರ್ಮ ಇವನ ವಾಕ್ಚಾತುರ್ಯವನ್ನು ಹೊಗಳಿ ಇವನನ್ನು ಪರಬ್ರಹ್ಮ ಎಂದು ಕರೆದಿದ್ದಾನೆ. ಕವಿಪರಮೇಷ್ಠಿ ಇಪ್ಪತ್ನಾಲ್ಕು ತೀರ್ಥಂಕರರ ಪುರಾಣವನ್ನು (ಚರಿತ್ರೆ) ಬರೆದಿದ್ದಾನೆಂದು ನೇಮಿಚಂದ್ರ (12ನೆಯ ಶತಮಾನ) ಹೇಳಿದ್ದಾನೆ. ಈ ಮಾತಿನ ಉಲ್ಲೇಖ ಚಾವುಂಡರಾಯನ (ಸು.978) ತ್ರಿಷಷ್ಟಿಶಲಾಕಪುರಾಣದಲ್ಲೂ ದೊರೆಯುತ್ತದೆ. ಗುಣಭದ್ರರು ತಮ್ಮ ಗುರು ಜಿನಸೇನರ ಆದಿಪುರಾಣ ಕವಿ ಪರಮೇಷ್ಠಿಯ ಗದ್ಯಕಥಾ ಎಂಬ ಕೃತಿಯನ್ನು ಅನುಸರಿಸಿದೆ ಎಂದು ಹೇಳಿದ್ದಾರೆ. ಕವಿಪರಮೇಷ್ಠಿ ಪೂರ್ವಪುರಾಣದ ಸಂಗ್ರಹಕಾರನೆಂದು ಹೇಳಿ ಜಿನಸೇನರು ಈತನ ವಾಗರ್ಥಸಂಗ್ರಹವನ್ನು ನಿರ್ದೇಶಿಸಿದ್ದಾರೆ. ಇವೆಲ್ಲ ಸಂದರ್ಭಗಳಿಂದ ಕವಿ ಪರಮೇಷ್ಠಿ 9ನೆಯ ಶತಮಾನಕ್ಕಿಂತ ಮುಂಚಿನವನೆಂದು ಹೇಳಬಹುದು. ರಾ.ನರಸಿಂಹಾಚಾರ್ಯರು ಇವನ ಕಾಲ ಸು.551 ಎಂದು ಊಹಿಸಿದ್ದಾರೆ. ಕವಿ ಪರಮೇಷ್ಠಿಯ ಕೃತಿಗಳು ಬೆಳಕಿಗೆ ಬಂದಿಲ್ಲ; ಆದರೂ ಚಾವುಂಡರಾಯಪುರಾಣ, ಶಾಂತಿಪುರಾಣಗಳಲ್ಲಿ ಕವಿಪರಮೇಷ್ಠಿಯ ಕೆಲವು ಪದ್ಯಗಳು ಕವಿಯ ನಾಮ ನಿರ್ದೇಶಪೂರ್ವಕ ಉದಾಹರಿತವಾಗಿದೆ. ಇವೆಲ್ಲ ಸಂಸ್ಕೃತ ಭಾಷೆಯಲ್ಲಿ ವೃತ್ತ ರೂಪದಲ್ಲಿವೆ. ಗುಣಭದ್ರರು ಹೇಳುವುದನ್ನು ನೆನಪಿನಲ್ಲಿಟ್ಟುಕೊಂಡು ಈ ಪದ್ಯಗಳನ್ನು ನೋಡಿದರೆ ಕವಿಪರಮೇಷ್ಠಿಯ ಗ್ರಂಥ ಪುರಾಣಶೈಲಿಯ ಚಂಪೂಕಾವ್ಯವಾಗಿರಬಹುದೆಂದು ತೋರುತ್ತದೆ. (ಎ.ಎಸ್.ಯು.)

**ಕವಿಮಲ್ಲ :** ಸು.1400. ಬ್ರಾಹ್ಮಣಕವಿ. ಮನ್ಮಥವಿಜಯ ಎಂಬ ಗ್ರಂಥದ ಕರ್ತೃ. ತಾನು ಕವಿ ಪುಟ್ಟಣಾಂಕಪಂಡಿತನಿಂದ (ಸು.1380) ವಿದ್ಯೆಯನ್ನು ಕಲಿತಂತೆ ಹೇಳಿಕೊಂಡಿದ್ದಾನೆ. ಇವನಿಗೆ ಲಕ್ಷಣಕವಿ ಎಂಬ ಬಿರುದಿದ್ದಂತೆ ತಿಳಿದುಬರುತ್ತದೆ. ಪೂರ್ವಕವಿಗಳಲ್ಲಿ ಕವಿಕಾಮ, ಅಗ್ಗಳ, ನೇಮಿಚಂದ್ರ, ಮನಸಿಜ, ಸುಜನೋತ್ತಂಸ, ರುದ್ರಾಂಕ, ಪೊನ್ನ, ನಾಗವರ್ಮ, ಕೇಶಿರಾಜ, ಇವರನ್ನು ಸ್ತುತಿಸಿದ್ದಾನೆ.

ಮನ್ಮಥವಿಜಯ ಚಂಪೂರೂಪದಲ್ಲಿದೆ. ಚಂದ್ರರಾಜನ ಮದನತಿಲಕವನ್ನು ಬಿಟ್ಟರೆ, ಇದು ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಎರಡನೆಯ ಕನ್ನಡ ಗ್ರಂಥ. ಸ್ಮರವಿಜಯ ಕೃತಿಯ ಹೆಸರೆಂದೂ ಶೃಂಗಾರರಸಕೋವಿದರು ಇದನ್ನು ಆದರಿಸುವರೆಂದೂ ಕವಿ ಹೇಳಿಕೊಂಡಿದ್ದಾನೆ. (ಬಿ.ಎಸ್.ಎಸ್.)

**ಕವಿರಾಜಮಾರ್ಗ :** ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುದು. ಇದರ ರಚನೆಯ ಕಾಲಾವಧಿ 815-77. ಈ ಗ್ರಂಥದ ಕರ್ತೃ ಯಾರು ಎಂಬ ಬಗೆಗೆ ಗ್ರಂಥ ಪ್ರಕಟಗೊಂಡಂದಿನಿಂದ (1898) ಇಂದಿನ ವರೆಗೆ ವಿಪುಲವಾದ ಚರ್ಚೆ ನಡೆದಿದೆ. ಆದರೆ ಒಮ್ಮತದ ತೀರ್ಮಾನಕ್ಕೆ ಬರಲಾಗಿಲ್ಲ (ನೋಡಿ : ಶ್ರೀವಿಜಯ).

ವಿದ್ವಾಂಸರು ಮುಖ್ಯವಾಗಿ ಕೃತಿಯ ಬಾಹ್ಯಾಭ್ಯಂತರ ಪ್ರಮಾಣವನ್ನು ಗಮನಿಸಿ ಕವಿರಾಜಮಾರ್ಗದ ಕರ್ತೃವಿನ ಬಗ್ಗೆ ತಾಳಿರುವ ಅಭಿಪ್ರಾಯಗಳನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು:

1.ಪ್ರತಿ ಪರಿಚ್ಛೇದಾಂತ ಗದ್ಯದಲ್ಲಿ 'ಪರಮಶ್ರೀನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗ' ಎಂದಿರುವುದರಿಂದಲೂ ಗ್ರಂಥದಲ್ಲಿ ಅಲ್ಲಲ್ಲಿ ಭಾವಿಸಿ ಬೆಸಸಿದನ್ ಅಮೋಘವರ್ಷ ನೃಪೇಂದ್ರಂ, ಎಂದನ್ ಅತಿಶಯ ಧವಳಂ, ಅತಿಶಯಧವಳೋಕ್ತ ಕ್ರಮದೆ ಎಂಬಿವೇ ಮುಂತಾದ ಉಕ್ತಿಗಳು ಹೇರಳವಾಗಿ ದೊರೆಯುವುದರಿಂದಲೂ ಭಟ್ಟಾಕಳಂಕ (ಸು.1604) ನೃಪತುಂಗಗ್ರಂಥ ಎಂದು ಸ್ಪಷ್ಟವಾಗಿ ಹೇಳಿರುವುದರಿಂದಲೂ ನೃಪತುಂಗ ಗ್ರಂಥಕರ್ತನೆಂದು ಊಹಿಸಲು ಅವಕಾಶವಿದೆ.

2.ಪ್ರತಿ ಪರಿಚ್ಛೇದಾಂತ ಪದ್ಯದಲ್ಲಿ 'ಶ್ರೀ ವಿಜಯ ಪ್ರಭೂತಮಂ ಇದಂ ಕೈಕೊಳ್ಳುದೀಮಾಜ್ಞೆಯಿಂ', ಇತ್ಯಾದಿಯಾಗಿ ಸ್ಪಷ್ಟವಾಗಿ ಶ್ರೀವಿಜಯನ ಉಲ್ಲೇಖವಿರುವುದರಿಂದಲೂ ಆಶ್ರಿತಮಹಾನೃಪತುಂಗಸಭಾಸದಂ ಕೊಡೆ ಪೇಳ್ದನುತಕಾವ್ಯಂ ಎಂಬ ಸ್ಪಷ್ಟೋಕ್ತಿ ಇರುವುದರಿಂದಲೂ ಕೇಶಿರಾಜ ತನ್ನ ಶಬ್ದಮಣಿದರ್ಪಣದಲ್ಲಿ ಸ್ಮರಿಸಿದ ಕವಿವೃಂದದಲ್ಲಿ ನೃಪತುಂಗನನ್ನು ಬಿಟ್ಟು ಶ್ರೀವಿಜಯನನ್ನು ಹೆಸರಿಸಿರುವುದಲ್ಲದೆ ಕವಿರಾಜಮಾರ್ಗದಿಂದ ಕೆಲವು ಪದ್ಯಗಳನ್ನು ಉದ್ಧರಿಸಿರುವುದರಿಂದಲೂ ದುರ್ಗಸಿಂಹ (ಸು.1031) ತನ್ನ ಪಂಚತಂತ್ರದಲ್ಲಿ 'ಶ್ರೀ ವಿಜಯರ ಕವಿಮಾರ್ಗ' ಎಂದು ಗೌರವದಿಂದ ನೆನೆದಿರುವುದರಿಂದಲೂ ಶ್ರೀವಿಜಯ ಗ್ರಂಥಕರ್ತನೆಂದು ಊಹಿಸಲು ಪ್ರಬಲ ಸಾಧನಗಳಿವೆ.

3.ಗ್ರಂಥದಲ್ಲಿ ಕವೀಶ್ವರ ಎಂಬ ಹೆಸರೂ ಉಕ್ತವಾಗಿದ್ದು ಎರಡನೆಯ ಪರಿಚ್ಛೇದದ ಕೊನೆಯಲ್ಲಿಯ ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ ಎಂಬ ವಾಕ್ಯದಿಂದ ಕವೀಶ್ವರನೆಂಬವನು ಶ್ರೀವಿಜಯಕರ್ತೃಕವಾದ ಈ ಗ್ರಂಥವನ್ನು (ಕವಿಮಾರ್ಗವನ್ನು) ತನ್ನ ಪ್ರಯೋಜನಕ್ಕಾಗಿ ಉಪಯೋಗಿಸಿಕೊಂಡನೆಂದು ಹೇಳಬಹುದಾಗಿರು ವುದರಿಂದಲೂ ಕವಿರಾಜಮಾರ್ಗ ಎಂಬ ಹೆಸರು ಕೂಡ ಕವೀಶ್ವರಮಾರ್ಗ ಎಂಬುದಕ್ಕೆ ಸಂವಾದಿಯಾಗಿರುವುದರಿಂದಲೂ ಈ ಗ್ರಂಥವನ್ನು ಕವೀಶ್ವರನೇ ಬರೆದನೆಂದು ಸೂಚಿತವಾಗುವುದು. ಇದು ಕವೀಶ್ವರ ಪಕ್ಷದವರ ಅಭಿಪ್ರಾಯ.

ಕೊನೆಯದಾಗಿ, ಗ್ರಂಥದಲ್ಲಿ ವೈದಿಕಮತಾನುಯಾಯಿಯಾದ ನೃಪತುಂಗನ ವ್ಯಕ್ತಿತ್ವವೂ ಜೈನಮತಾನುಯಾಯಿಯಾದ ನೃಪತುಂಗಸಭಾಸದನ ವ್ಯಕ್ತಿತ್ವವೂ ಸರಿಜೋಡಿಯಾಗಿ ಚಿತ್ರಿತವಾಗಿರುವುದರಿಂದಲೂ ಜೈನಪರವಾದ ಅನೇಕ ಸಂಗತಿಗಳನ್ನು ವೈದಿಕ ಮತಾನುಯಾಯಿಯಾದ ನೃಪತುಂಗನಿಗಿಂತ ಜೈನಮತಾನುಯಾಯಿಯಾದ ಸಭಾಸದನೆ ಉಲ್ಲೇಖಿಸುವ ಸಂಭವ ಹೆಚ್ಚಾಗಿರುವುದರಿಂದಲೂ ಗ್ರಂಥದಲ್ಲಿಯೇ ಶ್ರೀ ವಿಜಯನ ಹೆಸರಿದ್ದು, ದುರ್ಗಸಿಂಹನ ಹೇಳಿಕೆ ಇದಕ್ಕೆ ಬೆಂಬಲವಾಗಿರುವುದರಿಂದಲೂ ಶ್ರೀವಿಜಯನು ನೃಪತುಂಗನ ಅನುಜ್ಞೆಯ ಮೇರೆಗೆ ಅಲ್ಲಲ್ಲಿ ಅವನ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು ಗ್ರಂಥ ರಚನೆ ಮಾಡಿರುವಂತೆ ತೋರಿಬರುವುದರಿಂದಲೂ ಶ್ರೀ ವಿಜಯನೇ ಕವಿರಾಜಮಾರ್ಗಕಾರ ಎಂಬ ನಿಲುವಿಗೆ ಹೆಚ್ಚು ಮನ್ನಣೆ ದೊರಕಿದೆ.

ಕವಿರಾಜಮಾರ್ಗ ಪ್ರಮುಖವಾಗಿ ಲಕ್ಷಣಗ್ರಂಥ. ದಂಡಿಯ ಕಾವ್ಯಾದರ್ಶ ಈ ಕೃತಿಗೆ ಆಕರ. ಇದರಲ್ಲಿ ದೋಷಾನುವರ್ಣನನಿರ್ಣಯ, ಶಬ್ದಾಲಂಕಾರ ವರ್ಣನನಿರ್ಣಯ, ಅರ್ಥಾಲಂಕಾರ ವರ್ಣನನಿರ್ಣಯ ಎಂಬ ಮೂರು ಪರಿಚ್ಛೇದಗಳಿವೆ. ಮೊದಲನೆಯ ಪರಿಚ್ಛೇದದಲ್ಲಿ ಕಾವ್ಯದೋಷಗಳನ್ನು ವಿವರಿಸಿರುವುದರ ಜೊತೆಗೆ ಕವಿ ನಿರೂಪಿಸಿರುವ ಕೆಲವು ಬಹುಬೆಲೆಯುಳ್ಳ ಸಂಗತಿಗಳು ಕನ್ನಡ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಗಮನಾರ್ಹವಾಗಿವೆ. ಗದ್ಯಪದ್ಯ ಸಂಮಿಶ್ರಿತವಾದ ಗದ್ಯಕಥೆಯನ್ನು ಚಿರಂತನಾಚಾರ್ಯರು ನಿಗದಿಸುತ್ತಿದ್ದರು (1-27); ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತಾದಿಗಳು ಗದ್ಯಾಶ್ರಮಪದ ಗುರುತಾಪ್ರತೀತಿಯಂ ಕೈಕೊಂಡಿದ್ದರು (1-29); ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಮೊದಲಾದವರ ಕೃತಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆ ಎಂದುಂ (1-32); ಪುರಾತನ ಕವಿಗಳು ನುಡಿಗೆಲ್ಲಂ ಸಲ್ಲದ ಚತ್ತಾಣ ಮತ್ತು ಬೆದಂಡೆ ಎಂಬ ಕಾವ್ಯಪ್ರಕಾರಗಳನ್ನು ಕಾವ್ಯರಚನೆಯಲ್ಲಿ ಒಡಂಬಡಂ ಮಾಡಿದ್ದರು; ಇವುಗಳಲ್ಲಿ ಕಂದವೃತ್ತಗಳಲ್ಲದೆ ಚೌಪದಿ, ತ್ರಿಪದಿ, ಗೀತಿಕೆ - ಈ ಕನ್ನಡ ಛಂದಸ್ಸುಗಳು ಪ್ರಧಾನವಾಗಿ ಬಳಕೆಯಾಗುತ್ತಿದ್ದವು (1-33, 34, 35) - ಎಂಬ ಈ ಸಂಗತಿಗಳು ಕವಿರಾಜಮಾರ್ಗಪೂರ್ವದ ಕನ್ನಡ ಸಾಹಿತ್ಯ ಸ್ವರೂಪದ ಮೇಲೆ ಬೆಳಕು ಚೆಲ್ಲುತ್ತವೆ. ಇದೇ ಪರಿಚ್ಛೇದದಲ್ಲಿ ಕವಿರಾಜಮಾರ್ಗಕಾರ ಮಾಡಿರುವ ಕನ್ನಡನಾಡಿನ ಮತ್ತು ನಾಡವರ ವರ್ಣನೆ ಕನ್ನಡಿಗರಿಗೆ ಅಭಿಮಾನಾಸ್ಪದ ವಿಷಯವಾಗಿರುವುದಲ್ಲದೆ, ಚಾರಿತ್ರಿಕ ಮಹತ್ತ್ವವುಳ್ಳದ್ದೂ ಆಗಿದೆ. ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್

ಭಾವಿಸಿದ ಜನಪದಂ (1-36), ಚದುರರ್ ನಿಜದಿಂ ಕುಱಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ (1-38), ಸುಭಟರ್ಕಳ್ ಕವಿಗಳ್ ಸುಪ್ರಭುಗಳ್ ಚೆಲ್ವರ್ಕಳ್ ಅಭಿಜನರ್ಕಳ್ ಗುಣಿಗಳ್ ಅಭಿಮಾನಿಗಳ್ ಅತ್ಯುಗ್ರರ್ ಗಭೀರಚಿತ್ತರ್ ವಿವೇಕಿಗಳ್ ಆ ನಾಡವರ್ಗಳ್ ಮುಂತಾಗಿ ಹೇಳುವ ಈ ಮಾತುಗಳಲ್ಲಿ ಕನ್ನಡ ಜನರ ಸಂಸ್ಕೃತಿ ಪ್ರತಿಬಿಂಬಿತವಾಗಿದೆ. ಇಲ್ಲಿ ಇದರ ಜೊತೆಗೆ ಯತಿ, ಕಾರಕ, ಸಮಸಂಸ್ಕೃತ ಮುಂತಾದ ವಿಷಯಗಳ ಬಗ್ಗೆಯೂ ಚರ್ಚೆ ಕಂಡುಬರುತ್ತದೆ. ಎರಡನೆಯ ಪರಿಚ್ಛೇದದಲ್ಲಿ ಶಬ್ದಾಲಂಕಾರಗಳ ವಿಷಯ ನಿರೂಪಿತವಾಗಿದೆ. ಮೂರನೆಯ ಪರಿಚ್ಛೇದದಲ್ಲಿ ಅರ್ಥಾಲಂಕಾರ ವಿಷಯ ಸಂಬಂಧಿಯಾದ ನಿರೂಪಣೆಯಿದೆ. ಪುರಾಣಶಾಸ್ತ್ರಗಳಲ್ಲಿ ಹೇಳಿರುವ ಮೇರೆಗೆ ಅರ್ಥಾಲಂಕಾರಗಳನ್ನು ತಾನು ವಿವರಿಸಿರುವುದಾಗಿ ಗ್ರಂಥಕರ್ತನ ಮಾತಿನಿಂದಲೇ (3-5) ಸ್ಪಷ್ಟವಾಗುತ್ತದೆ. ಆದರೆ ಆ ಪುರಾಣಶಾಸ್ತ್ರಕಾರರ ಹೆಸರನ್ನು ಮಾತ್ರ ಸ್ಮರಿಸಿಲ್ಲ. ಅಲಂಕಾರ ಪ್ರಕರಣದ ಅನೇಕ ಪದ್ಯಗಳು ದಂಡಿಯ ಕಾವ್ಯಾದರ್ಶದ ಹಾಗೂ ಭಾಮಹನ ಕಾವ್ಯಾಲಂಕಾರದ ಶ್ಲೋಕಗಳ ಅನುವಾದಗಳು. ಆದರೆ ಕಾವ್ಯದೋಷ ಪ್ರಕರಣದಲ್ಲಿ ಭಾಮಹನನ್ನು ಅನುಸರಿಸಿದ್ದರೂ ಕನ್ನಡ ಭಾಷೆಗೆ ಸಂಬಂಧಪಟ್ಟಂತೆ ವ್ಯಾಕರಣದೋಷ, ಛಂದೋದೋಷ ಮುಂತಾದ ದೋಷಗಳ ವಿವೇಚನೆ ಮಾಡಿರುವುದು ಕವಿರಾಜಮಾರ್ಗಕಾರನ ಸ್ವತಂತ್ರ ವಿಚಾರಪರತೆಗೆ ನಿದರ್ಶನಗಳಾಗಿವೆ. ಕೃತಿಯಲ್ಲಿ ಮೊದಲ ಬಾರಿಗೆ ರಸ, ಧ್ವನಿಗಳ ಚರ್ಚೆಯೂ ಬಂದಿದ್ದು ರಸವನ್ನು ರಸವದಲಂಕಾರವೆಂದೂ ಧ್ವನಿಯನ್ನು ಧ್ವನ್ಯಾಲಂಕಾರವೆಂದೂ ಕರೆಯಲಾಗಿದೆ. ಹಾಗೆಯೇ ಲಕ್ಷ್ಯಪದ್ಯಗಳಲ್ಲಿ ಹಲವು ಸ್ವತಂತ್ರ ರಚನೆಗಳಿವೆ ಎಂಬುದೂ ಗಮನಾರ್ಹವಾದ ಸಂಗತಿ. ಕಾವ್ಯರಚನಾಕ್ರಮದ ಬಗೆಗೆ, ಕನ್ನಡ ಕವೀಶ್ವರರಾಗ ಬಯಸುವವರಿಗೆ ಇವನು ನೀಡಿರುವ ಕೆಲವು ಸಲಹೆಸೂಚನೆಗಳು ಇವನ ಸ್ವತಂತ್ರ ಕಾವ್ಯಶಾಸ್ತ್ರಪ್ರಜ್ಞೆಗೆ ಸಾಕ್ಷ್ಯಗಳಾಗಿವೆ. ಅಲ್ಲದೆ, ಇವುಗಳನ್ನು ಹೇಳಿರುವ ರೀತಿಯು ಲಕ್ಷ್ಯಪದ್ಯಗಳ ಸೊಬಗೂ ಕವಿರಾಜಮಾರ್ಗಕಾರ ಶಾಸ್ತ್ರಕಾರ ಮಾತ್ರವಲ್ಲದೆ ಮೇಲುಮಟ್ಟದ ಕವಿಯೂ ಆಗಿದ್ದನೆಂಬುದಕ್ಕೆ ನಿದರ್ಶನಗಳಾಗಿವೆ. (ಎಂ.ವಿ.ಎಸ್.)

**ಕಸ್ತೂರಿ :** ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ ಮಾಸಪತ್ರಿಕೆ. 1956ರ ಸೆಪ್ಟಂಬರಿನಲ್ಲಿ ಪ್ರಾರಂಭವಾಯಿತು. ಅದು ಲೋಕಶಿಕ್ಷಣ ಟ್ರಸ್ಟಿನ ಪ್ರಕಟಣೆ ಯಾಗಿತ್ತು. 1958ರ ಆಗಸ್ಟ್‌ವರೆಗೆ ಮೊಹರೆ ಹಣಮಂತರಾಯರು ಸಂಪಾದಕರಾಗಿದ್ದರು. ಅನಂತರ ರಂಗನಾಥ ದಿವಾಕರರು ಪ್ರಧಾನಸಂಪಾದಕರಾಗಿ, ಪಾ.ವೆಂ.ಆಚಾರ್ಯರು ಸಹಸಂಪಾದಕರಾದರು. ಖಾದ್ರಿ ಶಾಮಣ್ಣ, ಮಾಧವ ನಾ.ಮಹಿಷಿ, ಚಿರಂಜೀವಿ, ರವಿ ಬೆಳಗೆರೆ, ಗರುಡನಗಿರಿ ನಾಗರಾಜ್, ಕೆ.ಶ್ಯಾಮರಾವ್ ಸಂಪಾದಕರಾಗಿ ಸೇವೆಸಲ್ಲಿಸಿದ ಪ್ರಮುಖರು.

ಇದು ವಸ್ತುವಿನ್ಯಾಸದಲ್ಲಿ ಇಂಗ್ಲಿಷಿನ ರೀಡರ್ಸ್ ಡೈಜೆಸ್ಟ್ ಮಾದರಿಯನ್ನು ಅನುಸರಿಸಿರುವ ಸಾರಸಂಗ್ರಹ ಪತ್ರಿಕೆ. ಪ್ರತಿ ಸಂಚಿಕೆಯಲ್ಲೂ 25-30 ವಿಷಯಗಳಿದ್ದು 3-4 ಕಥೆಗಳಿರುತ್ತವೆ. ಗಂಭೀರ ವಿಷಯಗಳ ಲೇಖನಗಳಿದ್ದು, ಕೊನೆಯ ಸುಮಾರು 20ಪುಟಗಳಲ್ಲಿ ಯಾವುದಾದರೂ ಒಂದು ಪ್ರಸಿದ್ಧ ಪುಸ್ತಕದ ಸಂಗ್ರಹವಿರುತ್ತದೆ. ಇದಲ್ಲದೆ ಜೀವನಚರಿತ್ರೆ, ವಿಜ್ಞಾನ, ಸಾಮಾಜಿಕ, ರಾಜಕೀಯ, ಭೌಗೋಳಿಕ ವಿಷಯಗಳನ್ನೊಳಗೊಂಡ ಲೇಖನಗಳಿರುವುದು ಇದರ ವೈಶಿಷ್ಟ್ಯ. ಪತ್ರಿಕೆಯ ಇಂದಿನ ಪ್ರಸಾರ 5,000 (2003) (ಪಿ.ವಿ.ಎ.)

**ಕಸ್ತೂರಿ, ನಾ :** 1897-1987. ಹಾಸ್ಯಸಾಹಿತಿ, ನಾಟಕಕಾರ, ವಾಗ್ಮಿ, ಅಧ್ಯಾಪಕ, ಸಮಾಜಸೇವಾಸಕ್ತ. ಇವರ ಪೂರ್ತಿ ಹೆಸರು ಕಸ್ತೂರಿ ನಾರಾಯಣ ರಂಗನಾಥ ಶರ್ಮ. ನಾ. ಕಸ್ತೂರಿ ಎಂಬ ಹೆಸರಿನಲ್ಲೇ ಪ್ರಸಿದ್ಧರು. ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಸೃಷ್ಟಿಗಾಗಿಯೇ ತಮ್ಮ ಜೀವನದ ಬಹುಭಾಗವನ್ನು ಮುಡಿಪಾಗಿಟ್ಟವರು. ಕೇರಳ ರಾಜ್ಯದ ತ್ರಿಪುನಿತ್ತೂರ್ ಗ್ರಾಮದಲ್ಲಿ 1887 ಡಿಸೆಂಬರ್ 25ರಂದು ಜನಿಸಿದರು. ಎರ್ನಾಕುಲಂ, ತಿರುವನಂತಪುರಂಗಳಲ್ಲಿ ವಿದ್ಯಾಭ್ಯಾಸಮಾಡಿ ಬಿ.ಎ. (ಆನರ್ಸ್) ಇತಿಹಾಸ ಮತ್ತು ಬಿ.ಎಲ್.ಪದವಿ ಗಳಿಸುವುದರೊಂದಿಗೆ ತಿರುವನಂತಪುರ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಎಂ.ಎ.ಯನ್ನೂ ಮುಗಿಸಿದರು.

ಉತ್ತಮ ಭವಿಷ್ಯವನ್ನರಸುತ್ತ ಮೈಸೂರಿಗೆ ಬಂದರು. ಮೈಸೂರಿನ ಬನುಮಯ್ಯ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾದರು. ಇವರ ಮನೆಮಾತು ತಮಿಳು, ಕೇರಳದಲ್ಲಿದ್ದುದ್ದರಿಂದ ಮಲಯಾಳಂ ಅಭ್ಯಾಸ ಮಾಡಿದ್ದರು. ಮೈಸೂರಿಗೆ ಬಂದಾಗ ಇವರಿಗೆ ಕನ್ನಡ ಕಲಿಯವುದು ಅನಿವಾರ್ಯವಾಯಿತು. ಇಲ್ಲಿಯ ಜನಜೀವನದಲ್ಲಿ ಬೆರೆತರು. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಅಧ್ಯಾಪಕರ ಹುದ್ದೆ ದೊರಕಿತು. ಅಲ್ಲಿಯ ಇಂಟರ್‌ಮೀಡಿಯಟ್ ಮತ್ತು ಮಹಾರಾಜ ಕಾಲೇಜುಗಳಲ್ಲಿ ಹಲವು ವರ್ಷ ಅಧ್ಯಾಪಕರಾಗಿದ್ದರು. ಅನಂತರ ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲೂ ದಾವಣಗೆರೆಯಲ್ಲೂ ಉದ್ಯೋಗನಿರತರಾಗಿದ್ದರು. ದಾವಣಗೆರೆ ಕಾಲೇಜಿನ ಸೂಪರಿಂಟೆಂಡೆಂಟರಾಗಿದ್ದರು. ನಿವೃತ್ತಿಯ ವೇಳೆಗೆ ಇವರಿಗೆ ಉಪಪ್ರಾಧ್ಯಾಪಕರಾಗಿ ಬಡ್ತಿ ದೊರಕಿತ್ತು. ಅನಂತರ ಕೆಲಕಾಲ ಮೈಸೂರು ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿಯೂ ಬೆಂಗಳೂರು ಆಕಾಶವಾಣಿಯಲ್ಲಿ ಗ್ರಾಮಸ್ಥರ ಕಾರ್ಯಕ್ರಮವೇ ಮುಂತಾದ ವಿಭಾಗಗಳ ಕಾರ್ಯಕ್ರಮನಿರ್ವಾಹಕರಾಗಿಯೂ ಸೇವೆಸಲ್ಲಿಸಿದರು.

ಕನ್ನಡದ ಗಂಧವೇ ಇರದಿದ್ದ ಕಸ್ತೂರಿಯವರು ಕನ್ನಡವನ್ನು ಚೆನ್ನಾಗಿ ಕಲಿತು, ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿ, ಕನ್ನಡದ ಸತ್ತ್ವವನ್ನರಿತುಕೊಂಡು ಕನ್ನಡ ಭಾಷೆಯ ಮರ್ಜಿಯನ್ನು ಹಿಡಿದರು. ಕನ್ನಡದ ಆಡುಭಾಷೆಯ ಬನಿಯನ್ನು ಸಂಪೂರ್ಣ ಸಾಕ್ಷಾತ್ಕರಿಸಿಕೊಂಡರು. ಅತ್ಯಂತ ಜೀವಂತ ಎನಿಸುವ ಶೈಲಿಯಲ್ಲಿ ಹಾಸ್ಯಕೃತಿಗಳನ್ನೂ ಇತರ ಪ್ರಕಾರಗಳ ಸಾಹಿತ್ಯವನ್ನೂ ಇವರು ರಚಿಸಿದ್ದು ಆಶ್ಚರ್ಯಕರ ಸಂಗತಿ. ಹರಟೆ, ಪ್ರಬಂಧ, ಪ್ರಹಸನ, ನಾಟಕ, ಕಾದಂಬರಿ, ಇತಿಹಾಸ, ಮಕ್ಕಳ ಸಾಹಿತ್ಯ, ಕಾವ್ಯ, ಅನುವಾದ - ಹೀಗೆ ನಾನಾ ಕ್ಷೇತ್ರಗಳಲ್ಲಿ ಇವರು ಕೈಯಾಡಿಸಿ ಅನನ್ಯ ಎನಿಸುವಂಥ ಶ್ರೇಷ್ಠಕೃತಿಗಳನ್ನು ರಚಿಸಿದರು. ಕನ್ನಡದ ಕಸ್ತೂರಿ ಎಂದರೆ ಇವರೇ ಎನಿಸುವಂಥ ಸಾಧನೆಗೈದರು.

ಇವರ ಮೊತ್ತಮೊದಲ ಪ್ರಕಟಿತ ಕೃತಿ ಪಾತಾಳದಲ್ಲಿ ಪಾಪಚ್ಚಿ (1943). ಇಂಗ್ಲಿಷಿನಲ್ಲಿ ಚಾರ್ಲ್ಸ್ ಲುಡ್ವಿಗ್ ರಚಿಸಿದ ಆಲಿಸ್ ಇನ್ ವಂಡರ್‌ಲ್ಯಾಂಡ್ ಎಂಬ ಕೃತಿಯ ರೂಪಾಂತರ. ಈ ಕೃತಿ ಸ್ವತಂತ್ರ ಎಂಬಷ್ಟು ಮನೋಜ್ಞವಾಗಿದೆ. ಇದು ಮಕ್ಕಳ ಸಾಹಿತ್ಯ ಎನಿಸಿಕೊಂಡರೂ ಎಲ್ಲ ವಯಸ್ಸಿನವರನ್ನೂ ರಂಜಿಸುವಂಥದು. ಇದಕ್ಕೆ ಒಂದು ವರ್ಷ ಮುಂಚೆ ಇವರು ಮೈಸೂರು ವಿಶ್ವವಿದ್ಯಾನಿಲಯ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದ 'ಕಾಡಾನೆ' ಪಿ.ಜಿ.ವುಡ್‌ಹೌಸ್‌ನ ಇಂಗ್ಲಿಷ್ ಕೃತಿಯಿಂದ ಪ್ರೇರಿತವಾದ ಪ್ರಹಸನ. ಷಹಜಹಾನ್ ಎಂಬುದು ಮಲಯಾಳಂ ಭಾಷೆಯ ನಾಟಕ. ಇವರು ಕೇರಳದಲ್ಲಿ ಅಧ್ಯಾಪಕರಾಗಿದ್ದಾಗ ಬರೆದು ಆಡಿಸಿದ್ದ ಹೆಡ್‌ಮಾಸ್ಟರ್ಸ್ ಡಾಟರ್ ಎಂಬುದು ಇಂಗ್ಲಿಷ್ ನಾಟಕ. ಕನ್ನಡದಲ್ಲಿ ಇವರ ಪ್ರಸಿದ್ಧ ನಾಟಕಗಳಿವು: ಗಗ್ಗಯ್ಯನ ಗಡಿಬಿಡಿ, ವರಪರೀಕ್ಷೆ, ತಾಪತ್ರಯ ತಪ್ಪಿತು, ಬ್ಯಾಂಕಿನ ದಿವಾಳಿ, ರಾಮಕೃಷ್ಣಯ್ಯನ ದರ್ಬಾರು ಮತ್ತು ಚಿತ್ರವಿಚಿತ್ರ. ಗಗ್ಗಯ್ಯನ ಗಡಿಬಿಡಿ ಅತ್ಯಂತ ಹೆಚ್ಚಿನ ಜನಪ್ರಿಯತೆ ಗಳಿಸಿದ ನಾಟಕ.

ಕಸ್ತೂರಿಯವರ ಹರಟೆಗಳೂ ಪ್ರಬಂಧಗಳೂ ಇತರ ಬಗೆಯ ನಗೆರಬಹಗಳೂ ಲೆಕ್ಕವಿಲ್ಲದಷ್ಟು. ಯದ್ವಾತದ್ವಾ, ಅಲ್ಲೋಲ್ಲ ಕಲ್ಲೋಲ, ಉಪಾಯವೇದಾಂತ, ಡೊಂಕುಬಾಲ, ಕೆಂಪ ಮೈಸೂರಿಗೆ ಹೋದದ್ದು - ಇವು ಸಂಕಲನಗಳು. ಇವುಗಳಲ್ಲಿ ಕೊನೆಯದು ನವಸಾಕ್ಷರರಿಗಾಗಿ ಹಾಗೂ ಮಕ್ಕಳಿಗಾಗಿ ರಚಿಸಿದ್ದು.

ಕಾದಂಬರಿ ಹಾಗೂ ಜೀವನಚರಿತ್ರೆಗಳ ಕ್ಷೇತ್ರಗಳಲ್ಲೂ ಇವರು ಹಲವು ಪುಸ್ತಕಗಳನ್ನು ರಚಿಸಿದ್ದಾರೆ. ಗಾಳಿಗೋಪುರ, ಶಂಖವಾದ್ಯ, ಗೃಹದಾರಣ್ಯಕ, ರಂಗನಾಯಕಿ, ಚೆಂಗೂಲಿ ಚೆಲುವೆ, ಚಕ್ರದೃಷ್ಟಿ-ಇವು ಕಾದಂಬರಿಗಳು. ದಿ ಲಿವಿಂಗ್ ಗಾಡ್ ಎಂಬುದು ಇಂಗ್ಲಿಷಿನಲ್ಲಿ ರಚಿಸಿದ ಜೀವನಚರಿತ್ರೆ. ಇದರಲ್ಲಿ ಸತ್ಯಸಾಯಿಬಾಬಾ ಅವರ ಹಾಗೂ ಮುಪ್ಪಿನಲ್ಲಿ ಬಾಬಾ ಅವರ ಆಶ್ರಮದಲ್ಲಿ ನೆಮ್ಮದಿಯನ್ನು ಕಂಡುಕೊಳ್ಳಲು ಯತ್ನಿಸಿದ ಕಸ್ತೂರಿ ಅವರ ಜೀವನದ ಎಳೆಗಳಿವೆ. ಇದು ಕನ್ನಡಕ್ಕೂ ಅನುವಾದಗೊಂಡಿದೆ. ಕೇರಳ ಇನ್ ಕರ್ನಾಟಕ ಎಂಬುದು ಇವರು ಇಂಗ್ಲಿಷಿನಲ್ಲಿ ರಚಿಸಿದ ಸಂಶೋಧನ ಪ್ರಬಂಧ. ದಿ ಲಾಸ್ಟ್ ರಾಜಾಸ್ ಆಫ್ ಕೂರ್ಗ್ ಇನ್ನೊಂದು ಸಂಶೋಧನಾತ್ಮಕ ಕೃತಿ. ಅಶೋಕ ಎಂಬುದು ಅಶೋಕ ಚಕ್ರವರ್ತಿಯ ಜೀವನಚರಿತ್ರೆ. ಅಣಕುಮಿಣುಕು ಇವರ ಕವನ ಸಂಕಲನ. ಅನರ್ಥಕೋಶ ಎಂಬುದರಲ್ಲಿ ಕನ್ನಡದ ಹಲವು ಶಬ್ದಗಳಿಗೆ ಇವರು ತಿರುಚಿದ ಅರ್ಥ ನೀಡಿ ನಗೆಯ ಹೊಗೆಯಾಡಿಸಿದ್ದಾರೆ. ಹಾಸ್ಯರಸವನ್ನು ಹಿಂಡಿದ್ದಾರೆ. ವ್ಯಂಗ್ಯ, ಕಟಕಿ, ಹಾಸ್ಯಗಳನ್ನು ಎರಚಾಡಿದ್ದಾರೆ, ನುಡಿಯ ಲಾಸ್ಯವನ್ನು ಮಿಂಚಿಸಿದ್ದಾರೆ. ಈ ಅನರ್ಥಕೋಶ ಪ್ರಕಾರವನ್ನು ಫಿಕ್ಷನರಿ ಎಂದು ಕರೆದಿದ್ದಾರೆ. ಗಂಭೀರವಾದ ಡಿಕ್ಷನರಿಗೆ (ನಿಘಂಟು) ಇದಿರಾಗಿ ಇವರು ರಚಿಸಿದ ಕಲ್ಪನಾ ಲಹರಿಯಿದು. ಲಗುಬಗೆಯ ಬಗೆಬಗೆಯ ನಗೆಯ ಗುಂಫನವಿದು.

ಕಸ್ತೂರಿಯವರು ಕನ್ನಡಕ್ಕೆ ಅನುವಾದ ಮಾಡಿದ ಅಥ’ವಾ ರೂಪಾಂತರಿಸಿದ ಕೃತಿಗಳೂ ಹಲವಾರಿವೆ. ದಿಲ್ಲೀಶ್ವರನ ದಿನಚರಿ, ಬಾಬರನ ದಿನಚರಿ, ಚೇರ್ಮನ್ ಪೆರುಮಾಳ್ (ಕಾದಂಬರಿ), ಕೃಷ್ಣ ಮೆನನ್, ಚೈನಾ ಜಪಾನ್ ಕಥೆಗಳು, ನೊಂದಜೀವಿ (ವಿಕ್ಟರ್ ಹ್ಯುಗೋನ ಲೇ ಮಿಸರಬೆಲ್ ಕಾದಂಬರಿ) ಮತ್ತು ಕೋಹಂ ಸೋದರಿ- ಈ ಕೆಲವನ್ನು ಹೆಸರಿಸಬಹುದು. ಇವರು ರಾ.ಶಿ.ಯವರ ಕೊರವಂಜಿ ಎಂಬ ಹಾಸ್ಯ ಪ್ರಧಾನ ಮಾಸಪತ್ರಿಕೆಗಾಗಿಯೂ ಹಲವು ವರ್ಷಗಳ ಕಾಲ ಬೇರೆ ಬೇರೆ ಹೆಸರುಗಳಲ್ಲಿ ನಗೆಬರೆಹಗಳನ್ನು ಬರೆದರು.

ಇವರ ಕೃತಿಗಳ ಪ್ರಧಾನ ಲಕ್ಷಣವೆಂದರೆ ನಗೆ. ಅದು ಬಹುತೇಕ ಪರಿಶುದ್ಧವಾದದ್ದು, ಇವರ ಹಾಸ್ಯದಲ್ಲಿ ನಂಜು ಸುಳಿವಿಲ್ಲ. ಹಗುರವಾದ ವಿಡಂಬನೆಯ ಛಾಯೆ ಕಂಡುಬಂದದೂ ಅದು ಅನುಕಂಪದಿಂದ ಕೂಡಿರುತ್ತದೆ. ಇವರಂತೆ ಹಾಸ್ಯದಲ್ಲಿ ಸಿದ್ಧಿ ಪಡೆದ ಲೇಖಕರು ಬಲು ವಿರಳ. ಇವರು ಹಲವಾರು ಪ್ರಯೋಗಗಳನ್ನೂ ಮಾಡಿದರು. ಚಕ್ರದೃಷ್ಟಿ ಕಾದಂಬರಿಯು ತಂತ್ರ ವಿಶಿಷ್ಟವಾದ್ದು. ಕಾದಂಬರಿಯು ನಾಯಕನ ವ್ಯಕ್ತಿತ್ವವನ್ನು ಬೇರೆ ಬೇರೆ ಪಾತ್ರಗಳ ದೃಷ್ಟಿಯಿಂದ ಕಾಣಿಸಲು ಇಲ್ಲಿ ಇವರು ಯತ್ನಿಸಿದ್ದಾರೆ. ಹಳೆಯ ಸಂಪ್ರದಾಯವನ್ನು ಲೇವಡಿ ಮಾಡುವ, ಮೂರ್ಖತನವನ್ನು ಬಯಲಿಗೆಳೆಯುವ ಪ್ರಯತ್ನ ಅಲ್ಲಲ್ಲಿ ಕಂಡುಬಂದರೂ, ಯಾರ ಮನಸ್ಸನ್ನೂ ನೋಯಿಸದ ರೀತಿಯಲ್ಲಿ ಪರಿಸ್ಥಿತಿಯನ್ನೋ ವ್ಯಕ್ತಿಯನ್ನೋ ಟೀಕೆಗೆ ಒಳಪಡಿಸುವ ಇವರ ಬರೆಹದಲ್ಲಿ ಬಾಣದ ತೀಕ್ಷ್ಣತೆಯ ಜೊತೆಗೆ ಡೊಂಕನ್ನು ತಿದ್ದುವ ನಯಗಾರಿಕೆಯೂ ಸಮ್ಮೋಹಕ ಗುಣವೂ ಇರುವುದರಿಂದ ಎಲ್ಲರಿಗೂ ಇದು ಆಪ್ಯಾಯಮಾನವಾಗಿರುತ್ತದೆ.

ಇವರು ಸಮಾಜಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೈಸೂರಿನಲ್ಲಿ ವಯಸ್ಕರಿಗೆ ರಾತ್ರಿ ಶಾಲೆ ನಡೆಸಿದರು. ವಿದ್ಯಾರ್ಥಿಗಳೊಂದಿಗೂ ಸಹೋದ್ಯೋಗಿಗಳೊಂದಿಗೂ ಹತ್ತಿರದ ಗ್ರಾಮಗಳಿಗೆ ಹೋಗಿ ಅಲ್ಲಿಯ ಜನಕ್ಕೆ ಶುಚಿತ್ವ ಹಾಗೂ ಉತ್ತಮ ಜೀವನದ ಬಗ್ಗೆ ತಿಳಿವಳಿಕೆ ನೀಡಿದರು. ಜೊತೆಯವರೊಂದಿಗೆ ಗ್ರಾಮಸೇವೆಯಲ್ಲಿ ತೊಡಗಿದರು. ಇವರೊಬ್ಬ ಶ್ರೇಷ್ಠ ವಾಗ್ಮಿಗಳಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಹಲವಾರು ಸ್ಥಳಗಳಲ್ಲಿ ವಿವಿಧ ಜ್ಞಾನ ಕ್ಷೇತ್ರಗಳ ವಿಷಯಗಳನ್ನು ಕುರಿತಂತೆ ಪ್ರಚಾರೋಪನ್ಯಾಸಗಳನ್ನು ನೀಡಿದರು. ಹರಿಜನರ ಶ್ರೇಯಸ್ಸಿಗಾಗಿ ದುಡಿದರು. ಮೈಸೂರಿನಲ್ಲಿ ಶ್ರೀರಾಮಕೃಷ್ಣಾಶ್ರಮದ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದರು. ರೋವರ್ಸ್ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು.

ಇವರು ಜೀವನದಲ್ಲಿ ಹಲವಾರು ಕಷ್ಟಗಳನ್ನು ಎದುರಿಸಿದವರು. ಆರು ವರ್ಷದವರಾಗಿದ್ದಾಗ ತಂದೆ ತೀರಿಕೊಂಡರು. ಇವರು ಜನಿಸಿದಾಗ ಕೈಕಾಲುಗಳಲ್ಲಿ ತಲಾ ಆರು ಬೆರಳುಗಳಿದ್ದುವಂತೆ. ನಾಲ್ಕು ಹೆಚ್ಚಿನ ಬೆರಳುಗಳು ಅನಿಷ್ಟಕಾರಕ ಎನಿಸಿ ಅವರ ಅಜ್ಜಿ ಆ ಬೆರಳುಗಳನ್ನು ಕತ್ತರಿಸಿ ಹಾಕಿದರಂತೆ. ಇದರಿಂದ ಇವರು ತೊಂದರೆ ಅನುಭವಿಸಬೇಕಾಗಿ ಬಂತು. ಕೊನೆಗೂ ಪ್ರಾಣಾಪಾಯದಿಂದ ಪಾರಾದರು. 1947ರಲ್ಲಿ ಇವರ ಒಬ್ಬ ಪುತ್ರ ತೀರಿಕೊಂಡ. ಆ ವೇಳೆಗೆ ಕಸ್ತೂರಿಯವರ ಮನಸ್ಸು ಆಧ್ಯಾತ್ಮಿಕದ ಕಡೆಗೆ ಒಲಿಯತೊಡಗಿತ್ತು. 1948ರಲ್ಲಿ ಇವರು ಪುಟ್ಟಪರ್ತಿಯಲ್ಲಿ ಸಾಯಿಬಾಬಾ ಆಶ್ರಮ ಸೇರಿ ತಮ್ಮ ಜೀವನದ ಕೊನೆಯವರೆಗೂ ಅಲ್ಲೇ ಇದ್ದರು. ಬಾಬಾ ಅವರ ಉಪನ್ಯಾಸಗಳನ್ನೂ ಪ್ರವಚನಗಳನ್ನೂ ಸಂಗ್ರಹಿಸಿ, ಇಂಗ್ಲಿಷಿಗೂ ಕನ್ನಡಕ್ಕೂ ಅನುವಾದಿಸಿದರು. ಇವರು 1987 ಆಗಸ್ಟ್ 14ರಂದು ನಿಧನರಾದರು. (ಎಚ್.ಎಸ್.ಕೆ.)

**ಕಳಚುರಿ ವಂಶ :** 12ನೆಯ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಆಳಿಕೆ ನಡೆಸಿದ ರಾಜವಂಶ.

ಪ್ರಾಚೀನ ಐತಿಹ್ಯಗಳ ಪ್ರಕಾರ ಕಳಚುರಿಗಳು ಚಂದ್ರ ವಂಶೀಯರು, ಯದು, ಹೈಹಯ, ಕಾರ್ತವೀರ್ಯಾರ್ಜುನ ಇವರ ವಂಶಪೂರ್ವಜರು. ಹೈಹಯ ಕುಲದ ಒಂದು ಶಾಖೆಯೇ ಕಳಚುರಿ ಎಂದು ಇತಿಹಾಸ ತಿಳಿಸುತ್ತದೆ. 6ನೆಯ ಶತಮಾನದಲ್ಲಿ ಕಟಚ್ಚುರಿ ಎಂದು ಕರೆಯಿಸಿಕೊಂಡ ರಾಜರು ಮಧ್ಯ ಮತ್ತು ಪಶ್ಚಿಮ ಭಾರತ ಪ್ರದೇಶದಲ್ಲಿ ಸಾಮ್ರಾಜ್ಯವನ್ನು ಕಟ್ಟಿದ್ದರು. 601ರಲ್ಲಿ ಕಟಚ್ಚುರಿ ಬುದ್ಧರಾಜ ಚಳುಕ್ಯ ಮಂಗಲೀಶನ ಪ್ರಹಾರದಿಂದ ಪರಾಜಯ ಹೊಂದಿದ್ದರಿಂದ ಈ ಕಟಚ್ಚುರಿ ಸಾಮ್ರಾಜ್ಯ ಅಸ್ತಂಗತವಾಯಿತು. ಅನಂತರ ಸುಮಾರು ಅರ್ಧಶತಮಾನ ಈಚೆಗೆ ಬುದ್ಧರಾಜನ ವಂಶಿಕನಾದ ವಾಮರಾಜ ಮಧ್ಯಭಾರತದ ಬುಂದೇಲಖಂಡ ಪ್ರದೇಶಕ್ಕೆ ಬಂದು ಕಾಲಂಜರ ಎಂಬ ದುರ್ಗವನ್ನು ಗೆದ್ದುಕೊಂಡ. ಮುಂದೆ ಈತನ ಸಂತತಿಯವರು ತ್ರಿಪುರಿಯಿಂದ, ಜಬ್ಬಲಪುರದ ಪಶ್ಚಿಮಕ್ಕೆ ಸು.9ಕಿಮೀ ದೂರದಲ್ಲಿರುವ ಇಂದಿನ ತೆವರ್‌ಗೆ ಬಂದು ರಾಜ್ಯಭಾರ ಮಾಡಲಾರಂಭಿಸಿದರು. ಈ ವಂಶದ ಕಟಚ್ಚುರಿ ಎಂಬ ಹೆಸರು ಕಳಚುರಿ ಎಂದು ಮಾರ್ಪಟ್ಟಿತು. ಕಳಚುರಿಗಳ ಬೇರೆ ಶಾಖೆಗಳೂ ಹುಟ್ಟಿಕೊಂಡವು. ಮಧ್ಯಭಾರತದ ಕಳಚುರಿಗಳು ಬಾದಾಮಿಯ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ ಈ ಅರಸುಮನೆತನಗಳೊಡನೆ ವಿವಾಹಸಂಬಂಧಗಳನ್ನು ಬೆಳೆಸಿ ಕರ್ನಾಟಕದೊಂದಿಗೆ ನಿಕಟಸಂಪರ್ಕ ಹೊಂದಿದ್ದರು. ಕಾಲಕ್ರಮದಲ್ಲಿ ಪ್ರಬಲಿಸಿದ ಪ್ರತೀಹಾರರು ಕಳಚುರಿಗಳ ಭದ್ರಸ್ಥಳವಾದ ಕಾಲಂಜರ ಕೋಟೆಯನ್ನು ಹಿಡಿದುಕೊಂಡರು. ಮುಂದೆ ಇದು ರಾಷ್ಟ್ರಕೂಟರ ವಶಕ್ಕೆ ಹೋಯಿತು. ಹೀಗೆ ಶತ್ರುಗಳ ಬಾಧೆಗೆ ಸಿಲುಕಿದ ಕಳಚುರಿ ಕುಟುಂಬದ ಕೆಲವ್ಯಕ್ತಿಗಳು ಕುಂತಲ ದೇಶಕ್ಕೆ (ಕರ್ನಾಟಕ) ಬಂದು, ತರಿಕಾಡು ನಾಡಿನ ಮುಖ್ಯಸ್ಥಳವಾದ ಮಂಗಳವೇಡದಲ್ಲಿ (ಇಂದಿನ ಮಂಗಳವೇಡೆ, ಮಹಾರಾಷ್ಟ್ರದ ಸೊಲ್ಲಾಪುರದೆ ಜಿಲ್ಲೆ) ನೆಲಸಿದರು.

ಈ ಕರ್ನಾಟಕ ಶಾಖೆಯ ಪ್ರಮುಖ ಉಚಿತ (ಸು. ಹತ್ತನೆಯ ಶತಕದ ಪ್ರಥಮ ಪಾದ). ಉಚಿತನ ವಂಶಾನುಕ್ರಮ ಅಸಗ, ಕನ್ನಮ, ಕಿರಿಯ ಅಸಗ ಇವರಿಂದ ಮುಂದುವರಿಯಿತು. ಕಿರಿಯ ಅಸಗನ ಮಕ್ಕಳು ರಾಜ (ರಾಜಲ) ಮತ್ತು ಒಂದನೆಯ ಬಿಜ್ಜ (ಬಿಜ್ಜಲ, ಬಿಜ್ಜಳ). ಈ ಬಿಜ್ಜಳ ಕಲ್ಯಾಣದ ಒಂದನೆಯ ಸೋಮೇಶ್ವರನ ಮಹಾಮಂಡಳೇಶ್ವರನಾಗಿದ್ದ (ಸು.1057). ಡಾಹಳಬೆಡಂಗ ಎಂಬ ಈತನ ಬಿರುದು ಮಧ್ಯಭಾರತದ ಕಳಚುರಿಗಳೊಂದಿಗೆ ಈ ಮನೆತನ ಹೊಂದಿದ ಸಂಬಂಧವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಈ ಬಿಜ್ಜಳನ ಮಗ ಮಹಾಮಂಡಲೇಶ್ವರ ಕನ್ನಮ (1067). ಕೃಷ್ಣ, ಕರ್ಣ, ಕನ್ನರ ಇವು ಈತನ ಹೆಸರಿನ ಪರ್ಯಾಯ ರೂಪಗಳು. ಕನ್ನಮನ ಮಗ ಜೋಗಮನ ಕಾಲದಲ್ಲಿ (ಸು.1080-1118) ಈ ವಂಶ ಉನ್ನತ ಸ್ಥಾನವನ್ನು ಪಡೆಯಿತು. ಇವನು ಕಲ್ಯಾಣದ ಚಾಳುಕ್ಯ ವಂಶದ ಆರನೆಯ ವಿಕ್ರಮಾದಿತ್ಯನ ವಿಶ್ವಸ್ಥ ಅಧಿಕಾರಿ. ಈತನ ಪುತ್ರಿ ಸಾವಳದೇವಿಯನ್ನು ವಿಕ್ರಮಾದಿತ್ಯ ವಿವಾಹವಾಗಿದ್ದ. ಜೋಗಮನ ಮಗ ಪೆರ್ಮಾಡಿ (ಸು.1118-30) ಅದೇ ವಿಕ್ರಮಾದಿತ್ಯನಿಗೆ ಚಂದಲದೇವಿಯಲ್ಲಿ ಜನಿಸಿದ ರಾಜಕುಮಾರಿ ನಾಗಲದೇವಿಯ ಪಾಣಿಗ್ರಹಣ ಮಾಡಿದ್ದ. ಈ ಮೇರೆಗೆ ಈ ಚಾಳುಕ್ಯ-ಕಳಚುರಿವಂಶಗಳು ಪರಸ್ಪರ ವಿವಾಹಗಳಿಂದ ನಿಕಟ ಬಾಂಧವ್ಯವನ್ನು ಹೊಂದಿದ್ದವು. ಮಹಾಮಂಡಲೇಶ್ವರ ಒಂದನೆಯ ಬಿಜ್ಜಳ ಕಾಲಂಜರಪುರ ವರಾಧೀಶ್ವರ, ಸುವರ್ಣವೃಷಭಧ್ವಜ, ಡಮರುಗತೂರ್ಯ

**ಕಳಚುರಿ ವಂಶಾವಳಿ:**




ನಿರ್ಘೋಷಣ ಮುಂತಾದ ಬಿರುದುಗಳಿಂದ ತನ್ನ ವಂಶದ ಪ್ರಶಸ್ತಿಯನ್ನು ಘೋಷಿಸಿದ. ಈ ಪ್ರಶಸ್ತಿಯನ್ನು ಮುಂದಿನ ಸಂತತಿಯವರು ತಮ್ಮ ರಾಜಶಾಸನಗಳಲ್ಲಿ ಬಳಸಿಕೊಂಡರು. ಈ ಬಿರುದುಗಳಿಂದ ಈ ವಂಶದವರ ಮೂಲಸ್ಥಳ ಮಧ್ಯ ಭಾರತದ ಕಾಲಂಜರಪುರ, ಇವರು ಶೈವಮತಾನುಯಾಯಿಗಳು, ಇವರ ಧ್ವಜಚಿಹ್ನೆ ವೃಷಭ ಎಂದು ತಿಳಿಯುತ್ತದೆ.

ಪೆರ್ಮಾಡಿಯ ಮಗ ಇಮ್ಮಡಿ ಬಿಜ್ಜಳ. ಇವರಿಬ್ಬರೂ ಆಪ್ತತ್ವದ ಮೂಲಕ ಚಾಳುಕ್ಯ ರಾಜ್ಯದಲ್ಲಿ ಮತ್ತು ರಾಜಭವನದಲ್ಲಿ ಆದರಣೀಯರಾಗಿ ಪ್ರಾಮುಖ್ಯತೆಯ ಸ್ಥಾನವನ್ನು ಪಡೆದರು. ಪೆರ್ಮಾಡಿ ತಾನು ಸ್ವತಂತ್ರ ರಾಜನಂತೆ ವರ್ತಿಸಿ, ತನ್ನ ಆಳಿಕೆಯ ವರ್ಷದ ಗಣನೆಯನ್ನು ಪ್ರಾರಂಭಿಸಿದ. ಆರನೆಯ ವಿಕ್ರಮಾದಿತ್ಯನ ಪುತ್ರ ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರ (1127-39) ಮತ್ತು ಪೆರ್ಮಾಡಿ ಓರಗೆಯವರಾಗಿದ್ದರು. ಆದ್ದರಿಂದ ಈತನಿಗೆ ತನ್ನ ಸಮವಯಸ್ಕ ಸಂಬಂಧಿತನಾದ ಅಧಿರಾಜನನ್ನು ಅಲಕ್ಷಿಸುವುದು ಸುಲಭವಾಯಿತು. ಚಾಳುಕ್ಯ ವಂಶದ ರಾಜಪುತ್ರರಿಗೆ ಸಲ್ಲತಕ್ಕ ಮಾನಮರ್ಯಾದೆಗಳು ತಂದೆಯ ತರುವಾಯ ಬಿಜ್ಜಳನಿಗೆ ಸಲ್ಲತೊಡಗಿದವು. ಕುಮಾರ ರಾಜಕುಮಾರ ಎಂಬ ಗೌರವದ ಬಿರುದನ್ನು ಈತ ಪಡೆದ. ಪೆರ್ಮಾಡಿ ಇನ್ನೂ ಜೀವಿಸಿರುವಾಗಲೇ ಬಿಜ್ಜಳನಿಗೂ ವಿಕ್ರಮಾದಿತ್ಯ ಮಹಾಮಂಡಲೇಶ್ವರ ಪದವಿಯನ್ನು ದಯಪಾಲಿಸಿದ (ಸು.1126). ಇದರಿಂದ ಮಹಾತ್ವಾಕಾಂಕ್ಷಿಯಾದ ಬಿಜ್ಜಳನಿಗೆ ರಾಜ್ಯತಂತ್ರದಲ್ಲಿ ಪ್ರೋತ್ಸಾಹ ದೊರೆತು, ಸಾಮ್ರಾಜ್ಯದ ಅಧಿಪತಿಯಾಗುವ ಉದ್ದೇಶದ ಸಾಧನೆಯಲ್ಲಿ ತೊಡಗಿದ. ಈ ನಡುವೆ ಚಾಳುಕ್ಯ ಸಿಂಹಾಸನವೇರಿದ ಭೂಲೋಕಮಲ್ಲನ ಮಕ್ಕಳು ಇಮ್ಮಡಿ ಜಗದೇಕಮಲ್ಲ ಮತ್ತು ಮುಮ್ಮಡಿ ತೈಲಪ ರಾಜಕೀಯ ಬಲವನ್ನು ಸಂವರ್ಧಿಸಿಕೊಳ್ಳುತ್ತಿದ್ದ ಬಿಜ್ಜಳನನ್ನು ಹತ್ತಿಕ್ಕಲು ಅಸಮರ್ಥರಾಗಿದ್ದರು. ಬಿಜ್ಜಳ ಮುಮ್ಮಡಿ ತೈಲಪನ ಆಳಿಕೆಯಲ್ಲಿ ರಾಜ್ಯಕ್ರಾಂತಿಯನ್ನು ಸಾಧಿಸಿ ಚಾಳುಕ್ಯ ಸಾಮ್ರಾಜ್ಯವನ್ನು ಅಪಹರಿಸಿದ (1162).

ಬಿಜ್ಜಳ ಸ್ವತಂತ್ರ ರಾಜನೆನಿಸಿ ಆಳಿದುದು ಆರು ವರ್ಷ ಮಾತ್ರ (1162-67). ಈ ಅವಧಿಯಲ್ಲಿ ರಾಜಶಾಸನದಲ್ಲಿ ಅದಕ್ಷತೆ, ರಾಜಪುತ್ರರಲ್ಲಿ ರಾಜ್ಯಾಧಿಕಾರಿಗಳ ಅವಿಶ್ವಾಸ, ಬಸವೇಶ್ವರ ಮತ್ತು ಆತನ ಅನುಯಾಯಿಗಳ ಆತಂಕ ಇತ್ಯಾದಿ ಘಟನೆಗಳಿಂದ ಬಿಜ್ಜಳನ ರಾಜ್ಯಭಾರ ವಿಫಲವಾಯಿತು. ಕೊನೆಗೆ ತನ್ನ ಮಗ ರಾಯಮುರಾರಿ ಸೋವಿದೇವನಿಗೆ (ಸೋಮೇಶ್ವರ) 1167ರಲ್ಲಿ ಅಧಿಕಾರ ವಹಿಸಿ 1168ರಲ್ಲಿ ಮೃತನಾದ. ಆದರೆ ಬಿಜ್ಜಳನ ತಮ್ಮ ಮೈಳುಗಿ, ಬಿಜ್ಜಳನ ಜೇಷ್ಠಪುತ್ರ ವಜ್ರದೇವನ ಮಗ ಕರ್ಣದೇವ ಇವರು ರಾಯಮುರಾರಿ ಸೋವಿದೇವನೊಡನೆ ಸಿಂಹಾಸನಕ್ಕಾಗಿ ಸ್ಪರ್ಧಿಸಿದರು. ಸೋವಿದೇವ ಜಯಶೀಲನಾದ. ಈ ಕದನದಲ್ಲಿ ಕಸಪಯ್ಯ ನಾಯಕನೆಂಬ ಅಧಿಕಾರಿ ಪ್ರಮುಖ ಪಾತ್ರ ವಹಿಸಿದ. ಸೋವಿದೇವನ (1167-76) ಆಳ್ವಿಕೆಯ ಕಡೆಯ ವರ್ಷಗಳಲ್ಲಿ ತಮ್ಮಂದಿರಾದ ಮಲ್ಲಿಕಾರ್ಜುನ (1175-76) ಮತ್ತು ಸಂಕಮ II ರಾಜ್ಯದ ಕೆಲವು ಭಾಗಗಳಲ್ಲಿ ಸ್ವತಂತ್ರರಾಗಿ ಆಳಲಾರಂಭಿಸಿದರು. ಸೋವಿದೇವನ ಮರಣಾನಂತರ ಸಂಕಮ II (1175-80) ಮತ್ತು ಆಹವಮಲ್ಲ (1180-83) ಅರಸುಗೈದರು. ಈ ಸಮಯಕ್ಕೆ ಕಳಚುರಿಗಳ ಆಳಿಕೆ ದುರ್ಬಲವಾಗುತ್ತ ಹೋಯಿತು. ಚಾಳುಕ್ಯ ಮುಮ್ಮಡಿ ತೈಲಪನ ಮಗ ನಾಲ್ವಡಿ ಸೋಮೇಶ್ವರ ಚೇತರಿಸಿಕೊಂಡು ಚಾಳುಕ್ಯ ಪ್ರಭುತ್ವದ ಪುನಃಸ್ಥಾಪನೆ ಮಾಡಿದ (1183). ಬಿಜ್ಜಳನ ಕೊನೆಯ ಮಗ ಸಿಂಘಣ ಸೋತು ಸೋಮೇಶ್ವರನಿಗೆ ಶರಣಾಗತನಾಗಿ ಆತನ ಆಧಿಪತ್ಯವನ್ನು ಅಂಗೀಕರಿಸಿದ.

ಹೀಗೆ ಕಳಚುರಿಗಳ ಸ್ವತಂತ್ರ ಆಳಿಕೆ ಸಂಕಟಮಯ ಸಂದಿಗ್ಧ ಸ್ಥಿತಿಯಲ್ಲಿ ಸುಮಾರು 21 ವರ್ಷ ಹೇಗೋ ಬದುಕಿ ಕೊನೆಗೆ ಕುಂಠಿತವಾಯಿತು. ಕಳಚುರಿ ಆಳಿಕೆ ಮುಗಿದ ಬಳಿಕ ಈ ವಂಶದ ಕೆಲವು ವ್ಯಕ್ತಿಗಳು ಚಿಕ್ಕನಾಯಕರಾಗಿ ಉಳಿದುಕೊಂಡರು. ಅವರಲ್ಲಿ ರಾಯಮುರಾರಿ ಸೋವಿದೇವನ ಸಂತತಿಯವರಾದ ಮುಮ್ಮಡಿ ವೀರಬಿಜ್ಜಳ, ರಾಯಮುರಾರಿ, ಜನ್ನುಗಿ, ನಾಲ್ವಡಿ ಬಿಜ್ಜಳ ಇವರನ್ನು ಹೆಸರಿಸಬಹುದು.

ಕಳಚುರಿಗಳ ಮೊದಲ ಮುಖ್ಯ ವಾಸಸ್ಥಳ ಮಂಗಳವೇಡ (ಮಂಗಳಿವೇಡ ಅಥವಾ ಮಂಗಳವಾಡ). ಬಿಜ್ಜಳ ಚಾಳುಕ್ಯ ಸಿಂಹಾಸನವನ್ನು ಆಕ್ರಮಿಸಿದ ಬಳಿಕ ಕಲ್ಯಾಣ ರಾಜಧಾನಿಯಿಂದ ರಾಜ್ಯಭಾರ ಮಾಡಿದ. ಬಿಜ್ಜಳನ ಸಾವಿನ ಅನಂತರ ಈ ಅರಸರು ಮೊದೆಗನೂರು (ಕೊಪ್ಪಳದ ಬಳಿ ಮಾದನೂರು) ಮತ್ತು ಸೆಲೆಯಹಳ್ಳಿ ಮುಂತಾದ ಸ್ಥಳಗಳಿಂದ ತಮ್ಮ ರಾಜ್ಯಾಧಿಕಾರವನ್ನು ಮುಂದುವರಿಸಿದರು. ಆದರೆ ಈ ಕಾಲದ ಪೂರ್ತ ಮಂಗಳವೇಢೆ ರಾಜ್ಯದ ಪ್ರಮುಖ ಸ್ಥಳವಾಗಿತ್ತು. (ಪಿ.ಬಿ.ಡಿ.)

ಕಳಚುರಿಗಳ ಹ್ರಸ್ವ ಆಳಿಕೆಯ ಕಾಲದಲ್ಲಿ ಆರ್ಥಿಕ, ಆಡಳಿತ ಹಾಗೂ ಇತರ ರಂಗಗಳಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಸ್ಥಿತಿಗತಿಗಳೇ ಮುಂದುವರಿದು ಈ ಕಾಲದಲ್ಲಿ ವಿಶೇಷವಾದ ಹೊಸ ಸಾಧನೆಗಳೇನೂ ಕಂಡುಬರುವುದಿಲ್ಲ. ಆದರೆ ಇವರ ಕಾಲದಲ್ಲಿ ನಡೆದ ಮಹತ್ವದ ಘಟನೆಯೆಂದರೆ ಬಸವಣ್ಣನವರ ವೀರಶೈವ ಕ್ರಾಂತಿ. ಇದರಿಂದ ನಾಡಿನ ಧಾರ್ಮಿಕ ಮತ್ತು ಸಾಮಾಜಿಕ ಪರಂಪರೆಯಲ್ಲಿ ಹೊಸ ಧೋರಣೆ ಮತ್ತು ಮಾರ್ಗಗಳು ಮೂಡಿದುವು.

**ನಾಣ್ಯಗಳು :** ಈ ಮನೆತನದ ಅರಸುಗಳ ನಾಣ್ಯಗಳು ಬಹು ವಿರಳ. ಸಾತಾರಾ ಜಿಲ್ಲೆಯಲ್ಲಿ ದೊರಕಿದ ಒಂದು ಚಿನ್ನದ ನಾಣ್ಯ ರಾಯಮುರಾರಿ ಸೋವಿದೇವನದು. ಇದರ ತೂಕ 54.5 ಗ್ರೇನ್‌ಗಳು. ಈ ನಾಣ್ಯದ ಮುಮ್ಮುಖದಲ್ಲಿ ಬಲಭಾಗಕ್ಕೆ ಸರಿಯುತ್ತಿರುವ ಮನುಷ್ಯನ ಚಿತ್ರವಿದೆ. ಹಿಮ್ಮುಖದಲ್ಲಿ 12ನೆಯ ಶತಮಾನಕ್ಕೆ ಸೇರಬಹುದಾದ ಕನ್ನಡ ಲಿಪಿಯ ಮೂರು ಸಾಲಿನ ಬರೆವಣಿಗೆಯಿದೆ. ಈ ಬರೆವಣಿಗೆಯ ಮಧ್ಯದ ಸಾಲಿನಲ್ಲಿ ಮುರಾರಿ ಎಂಬುದು ಸ್ಪಷ್ಟವಾಗಿದೆ. ಆದುದರಿಂದ ಈ ನಾಣ್ಯವನ್ನು ರಾಯಮುರಾರಿ ಸೋವಿದೇವನದು ಎಂದು ಭಾವಿಸಲಾಗಿದೆ. ಕಲ್ಯಾಣದ ಚಾಳುಕ್ಯರ ನಾಣ್ಯಗಳನ್ನೇ ವಿಶೇಷವಾಗಿ ಹೋಲುವ ಮುದ್ರಾಂಕಿತ ನಮೂನೆಗೆ ಸೇರಿದ ನಾಣ್ಯವೊಂದು ಬೆಳಕಿಗೆ ಬಂದಿದೆ. ಈ ನಾಣ್ಯದಲ್ಲಿ ಒಂಬತ್ತು ಮುದ್ರೆಗಳಿದ್ದು ಅವುಗಳಲ್ಲಿ ಕಳಚುರಿ ಎಂಬ ಬರೆಹವಿದೆ. ಇದು ಇಮ್ಮಡಿ ಬಿಜ್ಜಳನ ನಾಣ್ಯವಿರಬಹುದೆಂದು ಭಾವಿಸಲಾಗಿದೆ. ಆದರೆ ಇದರಲ್ಲಿ ಖಚಿತತೆಯಿಲ್ಲ. (ಎ.ವಿ.ಎನ್.)

**ಕಳಬುರ್ಗಿ :** ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಒಂದು ಗ್ರಾಮ. ಬಂಗಾರಪೇಟೆಯಿಂದ 3ಕಿಮೀ ದೂರದಲ್ಲಿದೆ. ಇಲ್ಲಿಯ ವೆಂಕಟರಮಣ ದೇವಾಲಯ ಅತ್ಯಂತ ಪ್ರಾಚೀನವಾಗಿದ್ದು, ವಾಸ್ತುಶಿಲ್ಪದ ದೃಷ್ಟಿಯಿಂದ ವಿಶಿಷ್ಟವಾಗಿದೆ. ಈ ದೇವಾಲಯದ ಮೇಲ್ಭಾಗದಲ್ಲಿ ಚಿಕ್ಕಗೋಪುರವಿದೆ. ಗರ್ಭಗುಡಿಯಲ್ಲಿ ವೆಂಕಟರಮಣನ ಸು.3 ಅಡಿ ಎತ್ತರದ ವಿಗ್ರಹವಿದ್ದು, ಅಕ್ಕಪಕ್ಕದಲ್ಲಿ ಪದ್ಮಾವತಿ, ಲಕ್ಷ್ಮಿಯರ ವಿಗ್ರಹಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಆ ಕಂಬಗಳ ಎಲ್ಲ ಭಾಗಗಳಲ್ಲಿಯೂ ಸುಂದರ ಕೆತ್ತನೆಗಳಿವೆ. ವಿಷ್ಣುವಿನ ದಶಾವತಾರಗಳನ್ನೂ ಕೆತ್ತಲಾಗಿದೆ. ವೆಂಕಟರಮಣ ವಿಗ್ರಹ ಉತ್ತರಕ್ಕೆ ಮುಖಮಾಡಿಕೊಂಡಿರುವಂಥ‘ದ್ದು ವಿರಳವೆಂದೇ ಹೇಳಬೇಕು. ನವರಾತ್ರಿ ಸಂದರ್ಭದಲ್ಲಿ 9 ದಿನಗಳ ವಿಶೇಷ ಪೂಜೆ ನಡೆಯುತ್ತದೆ. ಇಲ್ಲಿ ಆಂಜನೇಯ ಹಾಗೂ ಮಾಯಮ್ಮನ ನವೀನ ದೇವಾಲಯಗಳಿವೆ. (ಎ.ಬಿ.ಬಿ.)

**ಕಳ'ಲೆ :** ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನಲ್ಲಿ ನಂಜನಗೂಡಿನಿಂದ 8ಕಿಮೀ ದೂರದಲ್ಲಿ ನೀಲಗಿರಿ ರಸ್ತೆಯ ಪಕ್ಕದಲ್ಲಿರುವ ಗ್ರಾಮ. ಇದು ಕಳಲೆ ಅರಸರ ಕೇಂದ್ರಸ್ಥಾನವಾಗಿತ್ತು. ಊರಿನ ಮಧ್ಯದಲ್ಲಿರುವ ಪಟ್ಟದ ಚಾವಡಿಯೆಂಬ ಪುರಾತನ ಕಟ್ಟಡ ಅವರ ಪಟ್ಟಾಭಿಷೇಕ ನಡೆಯುತ್ತಿದ್ದ ಸ್ಥಳವೆಂದೂ ಅದರ ಮುಂದಿರುವ ಬಯಲಿನಲ್ಲಿ ಅವರ ಅರಮನೆಯಿತ್ತೆಂದೂ ಪ್ರತೀತಿ. ಪಟ್ಟದ ಚಾವಡಿಯ ಮುಂಭಾಗದಲ್ಲಿ ಕಳಲೆಯ ಪ್ರಭು ಲಕ್ಷ್ಮೀಕಾಂತ ಒಡೆಯ ಸಾವಿಗೆ ಈಡಾದಾಗ ಸಹಗಮನ ಮಾಡಿದ ಆತನ ಪತ್ನಿಯ ನೆನಪಿಗಾಗಿ ಕಟ್ಟಿದ ಸತೀ ಗುಡಿಯೊಂದು ಇದೆ. ಇದೊಂದು ಇಟ್ಟಿಗೆ ಗಾರೆಯಲ್ಲಿ ಕಟ್ಟಿದ ಚಿಕ್ಕ ಕಟ್ಟಡ. ಆ ಸತಿ ಇಟ್ಟಿಗೆಮಾಳಿಗಮ್ಮ ಎಂದೇ ಸ್ಥಳದಲ್ಲಿ ಪ್ರಸಿದ್ಧಳಾಗಿದ್ದಾಳೆ. ಆಕೆ ತನ್ನ ಪತಿಯನ್ನು ಆಲಂಗಿಸಿಕೊಂಡು ಮುದ್ದಿಸುತ್ತಿರುವಂತೆ ಇರುವ 3' ಎತ್ತರದ ಶಿಲ್ಪಗಳನ್ನು ಆ ಗುಡಿಯ ಮರದ ಬಾಗಿಲಿನ ಮೇಲೆ ಕಡೆಯಲಾಗಿದೆ.

ಲಕ್ಷ್ಮೀಕಾಂತದೇವಾಲಯದಲ್ಲಿರುವ ರಾಜಮನ್ನಾರ್ ವಿಗ್ರಹ

ಇಲ್ಲಿರುವ ಲಕ್ಷ್ಮೀಕಾಂತ ದೇವಾಲಯ ದ್ರಾವಿಡಶೈಲಿಗೆ ಸೇರಿದ್ದು. ದೊಡ್ಡ ಪ್ರಾಕಾರದ ಮಧ್ಯೆ ಗರ್ಭಗೃಹ ನವರಂಗ ಮುಖಮಂಟಪ ಇರುವ ಮೂಲಗುಡಿ ಮತ್ತು ಮುಂದಗಡೆ ಪಾತಾಲಾಂಕಣ ಇವೆ. ಪ್ರಾಕಾರಕ್ಕೆ ಹೊಂದಿಕೊಂಡಂತೆ ಒಳಗಡೆ ಕೈಸಾಲೆ ಮತ್ತು ಅನೇಕ ಉಪದೇವತೆಗಳು ಹಾಗೂ ಆಳ್ವಾರುಗಳ ಗುಡಿಗಳಿವೆ. ಮಹಾದ್ವಾರದ ಮೇಲೆ ದೊಡ್ಡ ಗೋಪುರವಿದೆ. ಪ್ರಾಕಾರದ ಹೊರಭಾಗದಲ್ಲಿರುವ ದೇವಕೋಷ್ಠಗಳಲ್ಲಿ ಉತ್ತಮವಾದ ಗಾರೆಯ ಪ್ರತಿಮೆಗಳಿವೆ. ನಂಬಿನಾರಾಯಣನ ರೂಪದಲ್ಲಿರುವ ಲಕ್ಷ್ಮೀಕಾಂತಸ್ವಾಮಿ ವಿಗ್ರಹ $3^{1}/_{2}'$ ಎತ್ತರದ ಸುಂದರ ಶಿಲ್ಪ. ದಳವಾಯಿ ದೇವರಾಜಯ್ಯನ ಮನೆದೇವರಾದ ರಾಮವಿಗ್ರಹವನ್ನು ಅವನ ಮರಣಾನಂತರ ದೇವಾಲಯಕ್ಕೆ ಕೊಡಲಾಯಿತು. ಈ ಸುಂದರ ವಿಗ್ರಹದ ಪ್ರಭಾವಳಿಯ ಮೇಲೆ ದಶಾವತಾರಗಳ ಚಿತ್ರಗಳಿವೆ. ಮೈಸೂರು ರಾಜಮನೆತನದ ಚಿಹ್ನೆಗಳಾದ ಶಂಖ, ಚಕ್ರ, ಮತ್ಸ್ಯ ಮತ್ತು ಯಾಳಿಗಳ ಶಿಲ್ಪಗಳು ಇಲ್ಲಿರುವುದು ಗಮನಾರ್ಹ. ಕಳಲೆಯ ನಂಜರಾಜ ಇವನ್ನು ಕೊಟ್ಟುದಾಗಿ ಇವುಗಳ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ. ದಳವಾಯಿ ನಂಜರಾಜ, ಲಕ್ಷ್ಮಮ್ಮಣ್ಣಿ, ಚೆಲುವೇ ಅರಸು ಮತ್ತು ಟಿಪ್ಪುಸುಲ್ತಾನ್ ಇವರು ಹಲವು ಬೆಳ್ಳಿಯ ಪಾತ್ರೆಗಳನ್ನು ಈ ಮಂದಿರಕ್ಕೆ ಕೊಟ್ಟರೆಂದು ಅವುಗಳ ಮೇಲಿನ ಶಾಸನಗಳಿಂದ ಗೊತ್ತಾಗುತ್ತದೆ. ದೇವಾಲಯದ ಹೊರಗಡೆ ಎತ್ತರವಾದ ಮಂಟಪವೊಂದಿದೆ.

ಗ್ರಾಮದ ಬಳಿ ದೊಡ್ಡ ಕೆರೆಯೊಂದಿದೆ. ಕಳಲೆ ಅರಸರ ಕಾಲದ ಕೆಲವು ಸಣ್ಣ ಗುಡಿಗಳು ಮತ್ತು ವೀರಗಲ್ಲುಗಳು ಗ್ರಾಮದಲ್ಲಿ ಮತ್ತು ಗ್ರಾಮದ ಸುತ್ತಮುತ್ತ ಇವೆ. *

**ಕಳಲೆ ಅರಸರು :** 17-18ನೆಯ ಶತಮಾನಗಳಲ್ಲಿ ನಂಜನಗೂಡು ತಾಲ್ಲೂಕಿನ ಭಾಗವೊಂದನ್ನು ಕಳಲೆಯಿಂದ ಆಳಿದ ಒಂದು ಅರಸುಮನೆತನ. ಮೈಸೂರಿನ ರಾಜಒಡೆಯ 33 ಹಳ್ಳಿಗಳ ಒಡೆಯನಾಗಿ 25,000 ಗದ್ಯಾಣಗಳ ಉತ್ಪತ್ತಿಯನ್ನು ಹೊಂದಿದ್ದಾಗ ಕಳಲೆ ಅರಸರಿಗೆ 40,000 ಗದ್ಯಾಣಗಳ ಆದಾಯವಿದ್ದಂತೆ ತಿಳಿದುಬರುತ್ತದೆ. ಈ ಎರಡು ಅರಸುಮನೆತನಗಳೂ ಒಂದೇ

ಅಂತಸ್ತಿನವರಾಗಿದ್ದೂ ಹೆಣ್ಣು ಕೊಟ್ಟು ತಂದು ಬಾಂಧವ್ಯ ಬೆಳೆಸಿಕೊಂಡಿದ್ದರು. ಮೈಸೂರು ರಾಜ್ಯವು ವಿಸ್ತಾರವಾಗಿ ಕಳಲೆಯನ್ನು ಒಳಗೊಂಡಾಗ ಈ ಅರಸರು ಮೈಸೂರು ರಾಜ್ಯದ ದಳವಾಯಿಗಳಾಗಿ ಪ್ರಸಿದ್ಧರಾದರು.

ಶಾಸನಗಳು 17ನೆಯ ಶತಮಾನದ ಮೊದಲಲ್ಲಿದ್ದ ಕರಿಕಾಲ ಮಲ್ಲರಾಜನಿಂದ ಈ ರಾಜರ ವಂಶಾವಳಿಯನ್ನಾರಂಭಿಸಿದರೂ ಕೆಲವು ಗ್ರಂಥಗಳು 16ನೆಯ ಶತಮಾನದ ಆರಂಭದಿಂದ ಇವರ ವಂಶಾವಳಿಯನ್ನು ಗುರುತಿಸುತ್ತವೆ. ಕರಿಕಾಲ ಮಲ್ಲರಾಜ ಒಡೆಯನಿಗಿಂತ ಹಿಂದೆ ಕ್ರಮವಾಗಿ ಕಾಂತ ಒಡೆಯ ಅವನ ಮೊಮ್ಮಗ ತಿಮ್ಮರಾಜ ಒಡೆಯ, ಅವನ ಮಕ್ಕಳು ನಂದಿನಾಥ ಒಡೆಯ, ಇಮ್ಮಡಿಕಾಂತ ಒಡೆಯ ಮತ್ತು ಚಂದ್ರಶೇಖರ ಒಡೆಯ ಇವರು ಆಳಿದಂತೆ ಕಳಲೆ ಅರಸರ ವಂಶಾವಳಿ ಎಂಬ ಗ್ರಂಥ ತಿಳಿಸುತ್ತದೆ. ಈ ಕಾಲದಲ್ಲಿ ಉಮ್ಮತ್ತೂರಿನ ಅರಸನೊಬ್ಬ ಕಳಲೆಯ ರಾಜಮನೆತನಕ್ಕೆ ಸೇರಿದ್ದ ಎಲ್ಲರನ್ನೂ ವಂಚನೆಯಿಂದ ಕಗ್ಗೊಲೆ ಮಾಡಿದನೆಂದೂ ಆದರೆ ಆ ವಂಶದ ಮಗುವೊಂದು ಬದುಕಿ ಉಳಿದು ಮುಂದೆ ತನ್ನ ವಂಶದ ಸ್ಥಾನಮಾನವನ್ನು ಉಳಿಸಿದುದಾಗಿಯೂ ಅವನೇ ಕರಿಕಾಲ ಮಲ್ಲರಾಜನೆಂದೂ ಹೇಳಲಾಗಿದೆ. ಕಳಲೆ ಅರಸರಂತೆ ಮೈಸೂರಿನ ಒಡೆಯರೂ ಉಮ್ಮತ್ತೂರಿನ ರಾಜರಿಗೆ ವಿರೋಧಿಗಳಾಗಿದ್ದುದರಿಂದ ಈ ಎರಡು ಮನೆತನಗಳೂ ಅವರಿಗೆದರಾಗಿ ಒಂದುಗೂಡಿದುವು. ಮೈಸೂರಿನ ರಾಜ ಒಡೆಯನಿಗೂ ಕಳಲೆಯ ಕರಿಕಾಲ ಮಲ್ಲರಾಜ ಒಡೆಯನಿಗೂ ಆದ ಒಪ್ಪಂದದಂತೆ ಮಲ್ಲರಾಜನ ವಂಶದವರೇ ಮೈಸೂರು ರಾಜ್ಯಕ್ಕೆ ವಂಶಪಾರಂಪರ್ಯವಾಗಿ ದಳವಾಯಿಗಳಾಗಿ ನೇಮಿತರಾದರೆಂದು ಹೇಳಿದ್ದರೂ 1637ರವರೆಗೂ ಬೇರೆ ಬೇರೆ ದಳವಾಯಿಗಳು ಮೈಸೂರಿನಲ್ಲಿದ್ದುದ್ದು ಸ್ಪಷ್ಟವಿದೆ.

ಕರಿಕಾಲ ಮಲ್ಲರಾಜನ ಅನಂತರ ಅವನ ಮಗ ಇಮ್ಮಡಿ ತಿಮ್ಮರಾಜ ಒಡೆಯನೂ ಅನಂತರ ಅವನ ಮೊಮ್ಮಕ್ಕಳಾದ ಕುಮಾರ ಮಲ್ಲರಾಜ ಒಡೆಯ, ನಂದಿನಾಥಯ್ಯ ಮತ್ತು ಕುಮಾರಯ್ಯ ಇವರು ಕ್ರಮವಾಗಿ 1644 ರಿಂದ 1682ರವರೆಗೆ ಆಳಿದರು. ಮೈಸೂರು ರಾಜ್ಯಕ್ಕೆ ಮುತ್ತಿಗೆ ಹಾಕಿದ ಬಿಜಾಪುರದ ರಣದುಲ್ಲಾ ಖಾನನೊಡನೆ ಆಗ ದಳವಾಯಿಯಾಗಿದ್ದ ಕುಮಾರಯ್ಯ ಯುದ್ಧ ಮಾಡಿದುದಲ್ಲದೆ ಪಿರಿಯಾಪಟ್ಟಣಕ್ಕೆ ಮುತ್ತಿಗೆ ಹಾಕಿದುದಾಗಿಯೂ ಮತ್ತು ಮಧುರೆಯ ವೀರಪ್ಪ ನಾಯಕನನ್ನು ಸೋಲಿಸಿದುದಾಗಿಯೂ ತಿಳಿದುಬರುತ್ತದೆ. ಇದರಿಂದ ಕಂಠೀರವ ನರಸರಾಜ ಒಡೆಯ ಅವನಿಗೆ ಪರರಾಜಹರಿಣಶಾರ್ದೂಲ ಎಂಬ ಬಿರುದನ್ನಿತ್ತು ಸನ್ಮಾನಿಸಿದ. ದಳವಾಯಿ ಕುಮಾರಯ್ಯ ಯಲಹಂಕ ಮತ್ತು ಮಾಗಡಿನಾಯಕರನ್ನೂ ಸೋಲಿಸಿ ಮೈಸೂರು ರಾಜ್ಯವನ್ನು ವಿಸ್ತರಿಸಿದುದಾಗಿ ಕೆಲವು ಗ್ರಂಥಗಳು ಸೂಚಿಸುತ್ತವೆ. ಕುಮಾರಯ್ಯನ ಅನಂತರ ಇಮ್ಮಡಿ ತಿಮ್ಮರಾಜ ಒಡೆಯನ ಮೊಮ್ಮಗನೂ ಮುಪ್ಪಿನ ಕಾಂತೇಅರಸು ಅಥವಾ ಶ್ರೀಕಾಂತನ ಮಗನೂ ಆಗಿದ್ದ ದೊಡ್ಡಯ್ಯ ದಳವಾಯಿಯಾಗಿ ಮರಾಠರ ಸೈನ್ಯವನ್ನು ಸೋಲಿಸಿ ಓಡಿಸಿದ. ಔರಂಗಜೇಬ್ ಚಿಕ್ಕದೇವರಾಯನಿಗೆ ರಾಜಾಜಗದೇವನೆಂಬ ಬಿರುದನ್ನಿತ್ತುದು ಇದೇ ಸಂದರ್ಭದಲ್ಲಿ. ದೊಡ್ಡಯ್ಯ ಶಿಂಕಗಿರಿ, ನಾಮಕಲ್, ಪರಮತಿ ಮುಂತಾದ ಪಾಳೆಯಪಟ್ಟುಗಳನ್ನು ಸೋಲಿಸಿ ಮೈಸೂರು ರಾಜ್ಯ ವಿಸ್ತಾರವಾಗಲು ಕಾರಣನಾದ. ದೊಡ್ಡಯ್ಯನ ಅಣ್ಣ ದಳವಾಯಿ ನಂಜರಾಜಯ್ಯನ ಮಗ ಕಾಂತಯ್ಯ ಚಿಕ್ಕಬಳ್ಳಾಪುರದ ಮುತ್ತಿಗೆಯಲ್ಲಿ ಹತನಾದ. ಅನಂತರ ಅವನ ತಮ್ಮ ದಳವಾಯಿ ಬಸವರಾಜ, ಅವನ ಅನಂತರ ಅವನ ಚಿಕ್ಕಪ್ಪನಾದ ದಳವಾಯಿ ಮಲ್ಲರಾಜಯ್ಯ ಕ್ರಮವಾಗಿ ದಳವಾಯಿಗಳಾಗಿದ್ದರು.

ಮಲ್ಲರಾಜಯ್ಯನ ಅನಂತರ ಬಂದವನು ದೊಡ್ಡಯ್ಯನ ಮೊಮ್ಮಗ ದಳವಾಯಿ ದೇವರಾಜಯ್ಯ (ನೋಡಿ). ಇಮ್ಮಡಿ ಕೃಷ್ಣರಾಜನ ದಳವಾಯಿಯಾಗಿದ್ದ ಈತ ಮಿಡಿಗೇಶಿ, ಮಾಗಡಿ, ಸಾವನದುರ್ಗ ಮುಂತಾದ ಹಲವು ರಾಜ್ಯಗಳನ್ನು ಗೆದ್ದ. ಇದೇ ಕಾಲದಲ್ಲಿಯೇ ಬಸವರಾಜನ ಮಗ ನಂಜರಾಜನೂ ಸರ್ವಾಧಿಕಾರಿಯಾದ. ದೇವರಾಜನ ತಮ್ಮ ಕರಾಚೂರಿ ನಂಜರಾಜನೂ ಪ್ರಭಾವಶಾಲಿಯಾದ ದಂಡನಾಯಕನಾದ. ಮೈಸೂರು ರಾಜ್ಯದಲ್ಲಿ ಈ ದಳವಾಯಿಗಳು ಅತ್ಯಂತ ಪ್ರಬಲರಾಗಿ ತಮಗೆ ಇಷ್ಟ ಬಂದವರನ್ನು ರಾಜ್ಯದ ಸಿಂಹಾಸನದ ಮೇಲೆ ಕೂಡಿಸುವಷ್ಟು ಶಕ್ತರಾಗಿದ್ದರು. ಕರಾಚೂರಿ ನಂಜರಾಜ ದೇವನಹಳ್ಳಿಯನ್ನು ಮುತ್ತಿ ಗೆದ್ದಾಗ ಹೈದರ್ ಅಲಿಯನ್ನು ಸೈನ್ಯಕ್ಕೆ ಸೇರಿಸಿಕೊಂಡ. ಮುಂದೆ ದೇವರಾಜ-ನಂಜರಾಜರ ನೆರವಿನಿಂದಲೇ ಅಧಿಕಾರದಲ್ಲಿ ಮೇಲೇರಿದ ಹೈದರ್ ಕೊನೆಗೆ ಸರ್ವಾಧಿಕಾರಿಯಾಗಿ ಅವರನ್ನು ಮೂಲೆಗೊತ್ತರಿಸಿದಾಗ ನಂಜರಾಜಯ್ಯ ಅವನನ್ನು ದಮನ ಮಾಡಲು ಯತ್ನಿಸಿ ಕಡೆಗೆ ಅವನ ಬಂದಿಯಾಗಿ 1773 ರಲ್ಲಿ ತೀರಿಕೊಂಡ (ನೋಡಿ: ಕಳಲೆ ನಂಜರಾಜಯ್ಯ). ನಂಜರಾಜಯ್ಯನಿಗೆ ಸೇರಿದ್ದ ಕಳಲೆ ಜಹಗೀರನ್ನೂ ಈ ಸಮಯದಲ್ಲಿ ಹೈದರ್ ಮುಟ್ಟುಗೋಲು ಹಾಕಿಕೊಂಡು ನಂಜರಾಜಯ್ಯನ ಮಗ ವೀರರಾಜಯ್ಯನನ್ನು ಸೆರೆಮನೆಗೆ ಅಟ್ಟಿದ. ಹೀಗೆ ಮೈಸೂರು ರಾಜ್ಯದ ದಳವಾಯಿಗಳೆಂದು ಪ್ರಸಿದ್ಧರಾಗಿದ್ದ ಕಳಲೆ ಅರಸರ ಪ್ರಾಮುಖ್ಯತೆ ಅಡಗಿಹೋಯಿತು. ಶಾಸನಗಳಲ್ಲಿ ಬರುವ ಇವರ ವಂಶಾವಳಿ ಹೀಗಿದೆ:




(ಎಂ.ಎಚ್.)

**ಕಳಲೆ ನಂಜರಾಜಯ್ಯ :** ಮೈಸೂರು ರಾಜಮನೆತನದ ಸೇವೆಯಲ್ಲಿದ್ದ ಪ್ರಭಾವಿ ದಳವಾಯಿ. ಸರ್ವಾಧಿಕಾರಿ (1739-59). ಕರಾಚೂರಿ ನಂಜರಾಜಯ್ಯ ಎಂದೂ ಪ್ರಸಿದ್ಧ. ಬ್ರಿಟಿಷರ ದಾಖಲೆಗಳಲ್ಲಿ ಇವನನ್ನು ನಂದಿರಾಜ ಎಂದು ಹೆಸರಿಸಲಾಗಿದೆ. ಈತ ಕಳಲೆಯ ಅರಸು ವೀರರಾಜಯ್ಯನ ಮಗ. ಮೊದಲಿನಿಂದಲೂ ತನ್ನ ಅಣ್ಣನಾದ ದಳವಾಯಿ ದೇವರಾಜಯ್ಯನ ಸಹಕಾರಿಯಾಗಿದ್ದ. ಸರ್ವಾಧಿಕಾರಿ ನಂಜರಾಜಯ್ಯನ ಮರಣಾನಂತರ ದೇವರಾಜಯ್ಯ ಇವನನ್ನೇ ಸರ್ವಾಧಿಕಾರಿಯಾಗಿ ನೇಮಿಸಿದ. (1739). ಅಲ್ಲದೆ ಇವನ ಮಗಳನ್ನು ಮಹಾರಾಜ ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಕೊಟ್ಟು ಮದುವೆ ಮಾಡಿಸಿ, ಕಳಲೆ ಮತ್ತು ಮೈಸೂರು ರಾಜಮನೆತನಗಳ ಬಾಂಧವ್ಯವನ್ನು ಭದ್ರಗೊಳಿಸಿದ.

ಉತ್ಸಾಹಿಯಾಗಿದ್ದ ನಂಜರಾಜಯ್ಯ 1749ರಲ್ಲಿ ದೇವನ ಹಳ್ಳಿಯನ್ನು ವಶಪಡಿಸಿಕೊಂಡ (ಹೈದರ್ ಅಲಿ ಮೈಸೂರು ಸೇವೆ ಸೇರಿದ್ದು ಆಗಲೇ). ಅನಂತರ ತನ್ನ ಅಣ್ಣನ ಮಾತಿಗೆ ವಿರುದ್ಧವಾಗಿ ತಿರುಚಿನಾಪಳ್ಳಿ ವಿವಾದದಲ್ಲಿ ಸಿಲುಕಿಕೊಂಡ (1751). ಇದಕ್ಕೆ ಮುಖ್ಯ ಕಾರಣ ಆರ್ಕಾಟಿನ ನವಾಬ ಮುಹಮ್ಮದ್ ಅಲಿ ಇಂಗ್ಲಿಷರ ಮತ್ತು ನಂಜರಾಜಯ್ಯನ ಬೆಂಬಲ ಪಡೆದು ಚಂದಾಸಾಹೇಬ ಮತ್ತು ಅವನ ಬೆಂಬಲಿಗರಾಗಿದ್ದ ಫ್ರೆಂಚರನ್ನು ಸೋಲಿಸಿದ. ಆದರೆ ಮುಂದಿನ ಷರತ್ತಿನಂತೆ ಮಹಮ್ಮದ್ ಅಲಿ ತಿರುಚಿನಾಪಳ್ಳಿಯನ್ನು ನಂಜರಾಜಯ್ಯನಿಗೆ ಕೊಡಲಿಲ್ಲ. ಆದ್ದರಿಂದ ರೊಚ್ಚಿಗೆದ್ದ ದಳವಾಯಿ ಫ್ರೆಂಚರ ಬೆಂಬಲ ಪಡೆದು ತಿರುಚಿನಾಪಳ್ಳಿಯನ್ನು ಪಡೆಯಲು ಶ್ರಮಿಸಿದ. ಇದೇ ಸಂದರ್ಭದಲ್ಲಿ ದಖನ್ನಿನ ಸುಬೇದಾರಿ ಸಲಾಬತ್‌ಜಂಗ್‌ನು ಮೈಸೂರಿನ ಮೇಲೆ ದಾಳಿ ಮಾಡಿದ್ದರಿಂದ 1755ರ ಏಪ್ರಿಲ್‌ನಲ್ಲಿ ರಾಜಧಾನಿಯ ಕಡೆಗೆ ಹಿಂತಿರುಗಿದ.

ತಿರುಚಿನಾಪಳ್ಳಿ ವಿವಾದದಲ್ಲಿ ಇಂಗ್ಲಿಷರ ಕುತ್ಸಿತ ಮನೋಭಾವವನ್ನು ಕಂಡ ನಂಜರಾಜಯ್ಯ ಅವರಿಗೆ ವಿರುದ್ಧವಾಗಿ ಹೈದರ್ ಅಲಿಯನ್ನು ದಿಂಡಿಗಲ್ಲಿನ ಫೌಜುದಾರರನ್ನಾಗಿ ನೇಮಿಸಿದ. ಈ ಕೊಡುಗೆ ರಾಜನೀತಿ ಚತುರನಾಗಿದ್ದ ಹೈದರನ ಪ್ರಾಬಲ್ಯಕ್ಕೆ ಅಡಿಗಲ್ಲಾಯಿತು. ಇದೇ ವೇಳೆಗೆ ರಾಜಧಾನಿಯಲ್ಲಿನ ಆಗು ಹೋಗುಗಳಲ್ಲಿ ಬದಲಾವಣೆಯುಂಟಾಗತೊಡಗಿತು. ರಾಜಕೀಯ ಕೈಗೊಂಬೆಯಾಗಿದ್ದ ಇಮ್ಮಡಿ ಕೃಷ್ಣರಾಜ ತನ್ನ ಸ್ಥಿತಿಗೆ ನೊಂದು ದಳವಾಯಿ ಸೋದರರ ವಿರುದ್ಧ ತನ್ನದೇ ಆದ ಗುಂಪು ಕಟ್ಟಲಾರಂಭಿಸಿದ. ಇದರಿಂದ ರೊಚ್ಚಿಗೆದ್ದ ನಂಜರಾಜಯ್ಯ ಮಹಾರಾಜನನ್ನು ಬಲತ್ಕಾರದಿಂದ ಅರಮನೆಯ ಸಭಾಂಗಣದಲ್ಲಿ ಕೂರಿಸಿ, ಅವನ ಎದುರಿನಲ್ಲೆ ಅವನ ಬೆಂಬಲಿಗರಿಗೆ ಚಿತ್ರಹಿಂಸೆ ಕೊಟ್ಟು, ರಾಜನನ್ನು ಅವಮಾನಿಸಿದ.

ಇದರಿಂದ ಬೇಸರಗೊಂಡ ದೇವರಾಜಯ್ಯ 1757ರಲ್ಲಿ ಸತ್ಯಮಂಗಲಕ್ಕೆ ಹೋಗಿ ನೆಲಸಿದ. ನಂಜರಾಜಯ್ಯ ಪೂರ್ಣ ಸ್ವತಂತ್ರನಾದ.

ಇದೇ ಸಮಯದಲ್ಲಿ ಪೇಶ್ವೆ ಬಾಲಾಜಿರಾವ್ ಮೈಸೂರಿನ ಮೇಲೆ ದಾಳಿಯಿಟ್ಟ. ದೇವರಾಜಯ್ಯನ ಮಾರ್ಗದರ್ಶನವಿಲ್ಲದೆ ಆರ್ಥಿಕ ಮುಗ್ಗಟ್ಟಿನಿಂದ ತೊಳಲುತ್ತಿದ್ದ ನಂಜರಾಜಯ್ಯ ಮರಾಠರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಒಪ್ಪಂದದ ಪ್ರಕಾರ 32ಲಕ್ಷ ರೂಪಾಯಿಗಳನ್ನು ಒಟ್ಟಾಗಿ ಕೊಡಲಾಗದಿದ್ದುದರಿಂದ ರಾಜ್ಯದ ಕೆಲವು ತಾಲ್ಲೂಕುಗಳನ್ನು ಅಡವಾಗಿಟ್ಟ. ಅನಂತರ ಹೈದರ್ ಅಲಿಯ ಪ್ರೋತ್ಸಾಹದಿಂದ ಒಪ್ಪಂದದ ಕರಾರುಗಳನ್ನು ನಿರಾಕರಿಸಿದ. ಕ್ರಮೇಣ ನಂಜರಾಜಯ್ಯನ ವ್ಯಕ್ತಿತ್ವ ಅಧೋಮುಖವಾಗತೊಡಗಿತ್ತು. ಸಂಬಳದ ಬಾಕಿಗಾಗಿ ಸೈನಿಕರು ನಂಜರಾಜಯ್ಯನ ಮನೆಮುಂದೆ ಧರಣಿ ಹೂಡಿದರು. ಸೈನಿಕರ ಅಶಿಸ್ತಿನ ಆಂದೋಳನಕ್ಕೆ ಹೆದರಿದ ಹೈದರ್ ಪರಿಸ್ಥಿತಿಯನ್ನು ಸರಿಪಡಿಸಲು ದಳವಾಯಿ ಸೋದರರು ಮತ್ತು ಮಹಾರಾಜರ ಮಧ್ಯೆಯಿದ್ದ ವೈಮನಸ್ಯವನ್ನು ಹೋಗಲಾಡಿಸಿದ. ಆಗ ನಂಜರಾಜಯ್ಯ ಸೈನಿಕರನ್ನು ತಹಬದಿಗೆ ತರಲು ಹೈದರ್ ಅಲಿಯನ್ನೇ ನಿಯಮಿಸಿದ. ಈ ಸಮಯದ ಸದುಪಯೋಗಪಡೆದ ಹೈದರ್ ಮತ್ತಷ್ಟು ಪ್ರಬಲನಾದ. ಅಲ್ಲದೆ 1759ರಲ್ಲಿ ನಡೆದ ಮರಾಠರ ದಾಳಿಯನ್ನು ಧೈರ್ಯವಾಗಿ ಎದುರಿಸಿ ಮೈಸೂರಿಗೆ ಅನುಕೂಲಕರವಾಗಿ ಒಪ್ಪಂದ ಮಾಡಿಕೊಂಡ. ಈ ಹೊತ್ತಿಗೆ ಅಧಿಕಾರದ ಔನ್ನತ್ಯಕ್ಕೆ ಏರಿದ್ದ ಹೈದರನು ಖಂಡೇರಾವ್, ಮಹಾರಾಜ ಮತ್ತು ದೇವರಾಜಮ್ಮಣ್ಣಿ ಇವರ ಸಹಕಾರದಿಂದ ಒಳಸಂಚುಮಾಡಿ ನಂಜರಾಜಯ್ಯನನ್ನು ಕುಗ್ಗಿಸಿದ. ನಂಜರಾಜಯ್ಯ ಅಧಿಕಾರಕ್ಕೆ ರಾಜೀನಾಮೆ ಕೊಟ್ಟು ಹೈದರ್ ತನಗೆ ಒದಗಿಸಿದ ಕೊಣನೂರು ಜಹಗೀರಿನಲ್ಲಿ 1773ರಲ್ಲಿ ಕೊನೆಯುಸಿರೆಳೆದ. ನಂಜರಾಜಯ್ಯನ ಪತನ ಮೈಸೂರನ್ನು ಹೈದರ್ ಅಲಿಯ ಹಿಡಿತಕ್ಕೆ ಒಳಪಡಿಸಿತು. (ಕೆ.ಜಿ.)

ನಂಜರಾಜಯ್ಯ ಇತಿಹಾಸದಲ್ಲಿ ವಿವಾದಾಸ್ಪದ ವ್ಯಕ್ತಿಯಾಗಿದ್ದಾನೆ. ಹಲವು ಕಡೆ ಈತ ಸ್ವಾರ್ಥಿ, ಲಂಚಕೋರ, ಸ್ವಾಮಿದ್ರೋಹಿ ಇತ್ಯಾದಿಯಾಗಿ ವರ್ಣಿತನಾಗಿದ್ದಾನೆ; ತನ್ನ ಜೀವಮಾನಪರ್ಯಂತ ಸಿಂಹಾಸನದ ಮೇಲೆ ಅಬಲ ಅಥವಾ ಬಾಲಕ ರಾಜರಿದ್ದಾಗಲೂ ಮೈಸೂರು ರಾಜ್ಯದ ಭದ್ರತೆಗಾಗಿ ಹೊಡೆದಾಡಿದ್ದಲ್ಲದೆ, ಆ ರಾಜ್ಯದ ವಿಸ್ತಾರ ಮತ್ತು ಬಲವನ್ನು ವರ್ಧಿಸಲು ನಿರತನಾಗಿದ್ದನೆಂದೂ ದಕ್ಷಿಣ ಭಾರತದಲ್ಲಿ ಬ್ರಿಟಿಷರು, ಫ್ರೆಂಚರು, ಡಚ್ಚರು ತಳ ಊರಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ ಅವರನ್ನು ತಡೆಗಟ್ಟಿದ ಏಕೈಕ ದೇಶೀ ಶಕ್ತಿಯಾಗಿ ಮೈಸೂರನ್ನು ರೂಪಿಸಿದ ಕೀರ್ತಿ ಈತನಿಗೆ ಸಲ್ಲಬೇಕೆಂದೂ ಒಬ್ಬ ಇಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

ನಂಜರಾಜಯ್ಯ ಯುದ್ಧದಲ್ಲಿ ಸಮರ್ಥನಾಗಿದ್ದಂತೆ ಅತ್ಯಂತ ದೈವಭಕ್ತನೂ ವಿದ್ವಾಂಸನೂ ಸ್ವತಃ ಕವಿಯೂ ಕವಿಪೋಷಕನೂ ಆಗಿದ್ದ. ಈತ ಶಿವಪೂಜಾದುರಂಧರನಾಗಿದ್ದು ನಂಜನಗೂಡಿನ ನಂಜುಂಡೇಶ್ವರನ ಭಕ್ತನಾಗಿದ್ದ. ತನ್ನ ಮುದ್ರೆಯಲ್ಲಿ ಸಹ ಈತ 'ಶಿವಶಂಭೋಮಹಾದೇವ', 'ಶ್ರೀನಂಜುಂಡ', ಎಂದು ಕೆತ್ತಿಸಿಕೊಂಡಿದ್ದ. ಕನ್ನಂಬಾಡಿಯ ಬಳಿ ನಂಜರಾಜಪುರ ಅಗ್ರಹಾರವನ್ನು ನಿರ್ಮಿಸಿದ. ಮೈಸೂರಿನ ತ್ರಿನಯನೇಶ್ವರ ಗುಡಿಯ ಗೋಪುರವನ್ನು ಕಟ್ಟಿಸಿದ. ಬೆಟ್ಟದಪುರ, ಶ್ರೀರಂಗಪಟ್ಟಣ, ತಿರುಮಕೂಡಲು, ಹರದನಹಳ್ಳಿ, ನಂಜನಗೂಡು ಮೊದಲಾದ ದೇವಾಲಯಗಳಿಗೆ ನಟರಾಜ, ಅರವತ್ತುಮೂರು ಪುರಾತನರು ಮೊದಲಾದ ಅನೇಕ ಕಂಚಿನ ವಿಗ್ರಹಗಳನ್ನು ಮಾಡಿಸಿಕೊಟ್ಟಿದ್ದಾನೆ.

ಸಂಸ್ಕೃತದ ಶೈವಪುರಾಣಗಳು, ಧರ್ಮ ಮತ್ತು ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಸರ್ವಜನ ಉಪಯೋಗಿಯಾಗುವಂತೆ ನಂಜರಾಜ ವಾಣೀ ವಿಲಾಸವೆಂಬ ಮಾಲೆಯಲ್ಲಿ ಸುಲಭಕನ್ನಡಲ್ಲಿ ರಚಿಸಿದ (1734-42). ಅವುಗಳಲ್ಲಿ ಸ್ಕಾಂದಪುರಾಣದ ಆಧಾರದಿಂದ ರಚಿಸಿದ ಶಿವಭಕ್ತಮಹಾತ್ಮ್ಯ, ಹಾಲಾಸ್ಯ ಮಹಾತ್ಮ್ಯ, ಕಾಶೀಮಹಿಮಾರ್ಥದರ್ಪಣ, ಶಿವಧರ್ಮೋತ್ತರ ವಚನ, ಪುರಾಣ ಸೇತುಮಹಿಮಾದರ್ಶ, ಪದ್ಮಪುರಾಣದಿಂದ ಶಿವಗೀತೆ, ಲಿಂಗಪುರಾಣ ಮತ್ತು ಮಾರ್ಕಂಡೇಯಪುರಾಣ, ಬ್ರಹ್ಮಾಂಡಪುರಾಣದಿಂದ ಭದ್ರಗಿರಿ ಮಾಹಾತ್ಮ್ಯ, ಭವಿಷ್ಯೋತ್ತರಪುರಾಣದಿಂದ ಹರದತ್ತಾಚಾರ್ಯ ಮಹಾತ್ಮ್ಯ, ವಿಘ್ನೇಶ್ವರ ವ್ರತಕಲ್ಪ, ಸ್ಯಮಂತಕೋಪಾಖ್ಯಾನ, ಸಂಕಷ್ಟಹರ ಗಣಪತಿ ವ್ರತ, ಧುಂಡಿವಿನಾಯಕ ಚರಿತ್ರೆ ಈ ಗ್ರಂಥಗಳಿವೆ. 1742-51ರ ಅವಧಿಯಲ್ಲಿ ಕನ್ನಡ ಗದ್ಯದಲ್ಲಿ ಮಹಾಭಾರತ (ಮಹಾಭಾರತ ಟೀಕು. ಈಗ 7 ಪರ್ವಗಳು ಮಾತ್ರ ಉಳಿದಿವೆ), ಕಕುದ್ಗಿರಿ ಮಹಾತ್ಮ್ಯವನ್ನು (ಶಿವಗಂಗೆಯ ಸ್ಥಳಪುರಾಣ) ಬರೆದ. ಈತ ಸಂಗೀತಗಂಗಾಧರ ಮೊದಲಾದ ಸಂಸ್ಕೃತ ಗ್ರಂಥಗಳನ್ನೂ ರಚಿಸಿದನೆಂದು ತಿಳಿಯುತ್ತದೆ. ಸು.1763-65ರಲ್ಲಿ ರಚಿಸಿದ 'ಗರಳಪುರಿ ಮಹಾತ್ಮ್ಯ, (ನಂಜನಗೂಡಿನ ಸ್ಥಳಪುರಾಣ) ಈತನ ಕೊನೆಯ ಕೃತಿ.

ಈ ಗ್ರಂಥಗಳಲ್ಲಿ ಶಿವತತ್ತ್ವಪರವಾದ ವಿಷಯಗಳೇ ಹೆಚ್ಚಾಗಿದ್ದು ಅಲ್ಲಲ್ಲಿ ಪರಮತ ಖಂಡನೆಯನ್ನೂ ಮಾಡಿದ್ದಾನೆ. ಆದರೂ ಶಿವವಿಶಿಷ್ಟಾದ್ವೈತವು ವ್ಯಾಸರ ಪೌರಾಣಿಕ ಸಂಪ್ರದಾಯಕ್ಕೂ ಹೊಂದಿಕೊಳ್ಳುತ್ತದೆ ಎಂದು ತನ್ನ ಗ್ರಂಥಗಳಲ್ಲಿ ತೋರಿಸಿದ್ದಾನೆ. ತನ್ನ ಗ್ರಂಥಗಳ ಆದಿ ಮತ್ತು ಅಂತ್ಯಗಳಲ್ಲಿ ಸ್ವವಿಷಯಕ ಹಾಗೂ ದೈವಸ್ತುತಿಪರ ಅಂಶಗಳನ್ನು ಹೇಳುವಲ್ಲಿ ಭಾಮಿನಿಷಟ್ಪದಿ, ಕಂದ ಮುಂತಾದ ಪದ್ಯಸರಣಿಯನ್ನು ಅನುಸರಿಸಿದ್ದರೂ ಕೃತಿಯ ವಸ್ತುನಿರೂಪಣಾ ಭಾಗ ಮಾತ್ರ ಗದ್ಯದಲ್ಲಿರುತ್ತದೆ. ಈತನ ಗದ್ಯ ಶೈಲಿ ಉತ್ತಮವಾಗಿದೆ.

ಈತನ ಸಂಗೀತಗಂಗಾಧರಕ್ಕೆ ಶ್ರವಣನಂದಿನೀ ಎಂಬ ಟೀಕನ್ನು ಬರೆದಿರುವ ಕಾಶೀಪತಿ ಪಂಡಿತ್ತ, ನಂಜರಾಜಯಶೋಭೂಷಣವೆಂಬ ಅಲಂಕಾರಗ್ರಂಥವನ್ನು ಸಂಸ್ಕೃತದಲ್ಲಿ ಬರೆದ ನರಸಿಂಹಕವಿ, ನಂಜರಾಜನನ್ನು ಹೊಗಳುವ ಸಂಸ್ಕೃತ ಗ್ರಂಥ ನಂಜರಾಜಯಶಸ್ಸಮೊಲ್ಲಾಸಚಂಪೂವನ್ನು ಬರೆದ ನೀಲಕಂಠಕವಿ, ಕನ್ನಡದಲ್ಲಿ ಹಾಲಾಸ್ಯಮಹಾತ್ಮ್ಯವನ್ನು ಬರೆದ ವೆಂಕಟೇಶ ಮುಂತಾದ ಕವಿಗಳು ನಂಜರಾಜನಿಂದ ಪೋಷಿತರಾಗಿದ್ದರು. (ಎನ್.ಬಿ.ಎಲ್.)

**ಕಳವರದುರ್ಗ** : ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ನಂದಿದುರ್ಗದಿಂದ ಉತ್ತರಕ್ಕೆ ಪೆನುಗೊಂಡ ಮತ್ತು ಧರ್ಮಾವರಂವರೆಗೆ ಹಬ್ಬಿರುವ ಪರ್ವತ ಸಾಲಿನಲ್ಲಿರುವ ಒಂದು ಕಗ್ಗಲ್ಲು ದುರ್ಗ. ನಂದಿದುರ್ಗದ ಉತ್ತರಕ್ಕೆ 8ಕಿಮೀ ಅಂತರದಲ್ಲಿಯೂ ಚಿಕ್ಕಬಳ್ಳಾಪುರದಿಂದ ಪಶ್ಚಿಮಕ್ಕೆ 6ಕಿಮೀ ಅಂತರದಲ್ಲಿಯೂ ಇದೆ. ಸಮುದ್ರಮಟ್ಟದಿಂದ 1447ಮೀ ಎತ್ತರವಿದೆ. ನಂದಿದುರ್ಗವನ್ನು ಬಿಟ್ಟರೆ ಈ ಪ್ರದೇಶದಲ್ಲಿ ಇದೆ ಅತಿ ಎತ್ತರವಾದುದು. ಈ ಬೆಟ್ಟದ ಇರುವಿಕೆಯಿಂದ ಇದರ ಪಶ್ಚಿಮಕ್ಕಿರುವ ಪ್ರದೇಶದಲ್ಲಿ ಒಳ್ಳೆಯ ಹಿಂಗಾರು ಮಳೆ ಆಗುತ್ತದೆ.

ಕಳವರದುರ್ಗದ ಮೇಲ್ಭಾಗದಲ್ಲಿ ವಿಶಾಲವಾದ ಬಯಲು ಪ್ರದೇಶವಿದ್ದು ಆ ಬಯಲಿನಲ್ಲಿ ಪಾಂಡವರ ಗುಡಿಗಳು ಎಂದು ಹೆಸರಿಸುವ ಬೃಹತ್ ಶಿಲಾಯುಗದ ಸಮಾಧಿಗಳಿವೆ. ಈ ಸಮಾಧಿಗಳು ದೂರದ ನೋಟಕ್ಕೆ ಚಿಕ್ಕ ಚಿಕ್ಕ ಸ್ತೂಪಗಳಂತೆ ಗೋಚರಿಸುತ್ತವೆ. ಬೆಟ್ಟದ ಮೇಲೆ ಒಂದು ಕೋಟೆಯ ಅವಶೇಷಗಳು ಇವೆ. ಇದು ಬಹುಶಃ ಚಿಕ್ಕಬಳ್ಳಾಪುರದ ನಾಯಕರ ಕಾಲದಲ್ಲಿ ಕಟ್ಟಿದ್ದು. ಅಲ್ಲಿಂದ ಚಿಕ್ಕಬಳ್ಳಾಪುರದ ಆಧಿಪತ್ಯವನ್ನು ನೋಡಿಕೊಳ್ಳಲಾಗುತ್ತಿತ್ತೆಂದು ಹೇಳಲಾಗುತ್ತದೆ. 1791ರಲ್ಲಿ ಬ್ರಿಟಿಷರು ಈ ಪ್ರದೇಶವನ್ನು ಆಕ್ರಮಿಸಿ ಕೋಟೆಯನ್ನು ಕೆಡವಿಸಿದರು. ಬೆಟ್ಟದ ನೆತ್ತಿಯಿಂದ ಸುತ್ತಲ ಪ್ರದೇಶದ ರಮ್ಯದೃಶ್ಯವನ್ನು ಕಾಣಬಹುದು. ಈ ಬೆಟ್ಟದ ತಪ್ಪಲಿನಲ್ಲಿ ಭಾರತರತ್ನ ಎಂ. ವಿಶ್ವೇಶ್ವರಯ್ಯನವರು ಜನಿಸಿದ ಮುದ್ದೇನಹಳ್ಳಿ ಇದೆ. (ಸಿ.ಕೆ.)

**ಕಳಸ** : ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಮೂಡಿಗೆರೆಯ ವಾಯವ್ಯಕ್ಕೆ 53ಕಿಮೀ ದೂರದಲ್ಲಿ ಭದ್ರಾನದಿಯ ಬಲದಂಡೆಯ ಬಳಿ ಸಹ್ಯಾದ್ರಿಯ ಉತ್ತುಂಗಶ್ರೇಣಿಗಳ ನಡುವಣ ಕಣಿವೆಯಲ್ಲಿದೆ.

ಇದು ಕಾರ್ಕಳದ ಭೈರರಸರ (ನೋಡಿ) ಆಳಿಕೆಯಲ್ಲಿ ಒಂದು ಮುಖ್ಯ ಸ್ಥಳವಾಗಿತ್ತು. ಆ ಕಾಲದಲ್ಲಿ ಕಟ್ಟಿದ ಇಲ್ಲಿಯ ಕಳಸೇಶ್ವರ ದೇವಾಲಯ ದೊಡ್ಡದು. ಅದರ ಸುತ್ತಲೂ ಭೈರರಸರ ಅನೇಕ ಶಾಸನಗಳಿವೆ. ಉತ್ತರದಿಂದ ಬಂದ ಶ್ರುತಬಿಂದುವೆಂಬ ರಾಜ ತಾನು ಬೇಟೆಯಲ್ಲಿ ಪ್ರಾಣಿಗಳನ್ನು ಕೊಂದ ಪಾಪದ ಪ್ರಾಯಶ್ಚಿತವಾಗಿ ಈ ಮಂದಿರವನ್ನು ಕಟ್ಟಿಸಿದನೆಂಬ ಐತಿಹ್ಯವಿರುವುದರಿಂದ ಇದು ಮೊದಲಿಗೆ ಜೈನಮಂದಿರವಾಗಿತ್ತೆಂಬ ಊಹೆ ಇದೆ.

ಗರ್ಭಗುಡಿ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿರುವ ಈ ದೇವಾಲಯದ ಗರ್ಭಗುಡಿಯಲ್ಲಿರುವ 9 ಅಡಿ ಎತ್ತರದ ಲಿಂಗ

ಉತ್ತರಕ್ಕೆ ಬಾಗಿದೆ. ಗರ್ಭಗುಡಿಯ ಮೇಲಿನ ಶಿಖರಕ್ಕೆ ಲೋಹದ ಹೊದಿಕೆ ಇದೆ. ನವರಂಗದಲ್ಲಿ 16 ಕಲ್ಲಿನ ಕಂಬಗಳಿವೆ. ಅದಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದ್ವಾರಗಳಿವೆ. ಮುಖ ಮಂಟಪದ ಒಳಪಕ್ಕದಲ್ಲಿ ನಾಲ್ಕು ಕಂಬಗಳೂ ಮುಂಭಾಗದಲ್ಲಿ ದ್ರಾವಿಡಶೈಲಿಯ ಅಡಿಯಲ್ಲಿ ಸಿಂಹಗಳಿರುವ ಎರಡು ಕಂಬಗಳೂ ಇವೆ. ಈ ಕಳಸೇಶ್ವರ ಅಥವಾ ಕಳಸನಾಥ' ದೇವಾಲಯ ಈಗಿರುವ ಸ್ಥಿತಿಯಲ್ಲಿ ಸು.17-18ನೆಯ ಶತಮಾನದ್ದಿರಬಹುದು. ಆದರೆ ಅಕ್ಕಪಕ್ಕಗಳಲ್ಲಿ ದೊರಕುವ ವಾಸ್ತು ಅವಶೇಷಗಳು ಮತ್ತು ಕೆಲವು ಶಿಲ್ಪಗಳು ನಿರ್ದಿಷ್ಟವಾಗಿ ಹೊಯ್ಸಳ ಶೈಲಿಗೆ ಸೇರಿದುವಾದ್ದರಿಂದ, ಇಲ್ಲಿ ಮೊದಲಿಗೆ ಹೊಯ್ಸಳ ದೇವಾಲಯವಿದ್ದು, ಅದು ಪಾಳುಬಿದ್ದಮೇಲೆ ನಾಯಕರ ಕಾಲದಲ್ಲಿ ಈಗಿನ ಕಟ್ಟಡಗಳನ್ನು ಕಟ್ಟಿದರೆಂದು ಕಾಣುತ್ತದೆ.

ಪಕ್ಕದಲ್ಲಿರುವ ದೇವೀಮಂದಿರವೂ ನಾಯಕರ ಕಾಲಕ್ಕೆ ಸೇರಿದುದು. ಇದರ ಮಹಾದ್ವಾರದ ಇಕ್ಕೆಲಗಳಲ್ಲಿ ಸಿಂಹವಾಹಿನಿಯರಾದ ದ್ವಾರಪಾಲಕಿಯರಿದ್ದಾರೆ. ಗಜಪತಿಯ, ತುಗಲಕನ ಹಾಗೂ ವಿಜಯನಗರದ ಅರಸರ ಕೆಲವು ನಾಣ್ಯಗಳು ಇಲ್ಲಿ ಸಿಕ್ಕಿವೆ.

ಕಳಸದಲ್ಲಿ ಪ್ರಾಚೀನ ಅವಶೇಷಗಳನ್ನು ಮುಚ್ಚಿನಿಂತಿರುವ ದಿಬ್ಬಗಳನ್ನು ಗಮನಿಸಿದರೆ ಮುಂಚೆ ಇಲ್ಲಿ ಒಂದು ದೊಡ್ಡ ಊರಿತ್ತೆಂದು ತಿಳಿಯುತ್ತದೆ. ಮೊದಲಿಗೆ ಹುಮಚದವರ, ಅನಂತರ ಭೈರರಸರ, ಅನಂತರ ಐಗೂರು ನಾಯಕರ ಆಳಿಕೆಗೆ ಇದು ಒಳಪಟ್ಟಿತ್ತು.

ನದಿಯ ದಂಡೆಯಲ್ಲಿ ಪವಿತ್ರ ಸ್ಥಳವೆನಿಸಿರುವ ಅಂಬುತೀರ್ಥದಲ್ಲಿ ಒಂದು ಚಾಕನಾದ ಬಂಡೆಯಿದ್ದು, ಅದರ ಮೇಲಿರುವ ಸಂಸ್ಕೃತ ಶಾಸನ ಆ ಬಂಡೆಯನ್ನು ಮಧ್ವಾಚಾರ್ಯರು ಒಂದೇ ಕೈಯಲ್ಲಿ ತಂದು ಅಲ್ಲಿಟ್ಟಂತೆ ತಿಳಿಸುವುದು. ಈ ಸಂಗತಿಯ ಪ್ರಸ್ತಾಪ, ಮಧ್ವವಿಜಯವೆಂಬ ಗ್ರಂಥದಲ್ಲಿಯೂ ಬಂದಿದೆ.

ಕಳಸದ ಸುತ್ತಮುತ್ತ ಬೆಳೆಯುವ ಅಡಕೆ ಉತ್ತಮ ಗುಣಮಟ್ಟದ್ದು. ಕಳಸದಿಂದ ಒಂದು ರಸ್ತೆ ಬಂದ್‌ಘಾಟ್‌ಗೆ ಹೋಗುತ್ತದೆ. ಮತ್ತೊಂದು ಉತ್ತರಕ್ಕೆ ಬುಗ್ಗುಂಜಿ ಮೂಲಕ ಆಗುಂಬೆ ಘಾಟನ್ನು ಸೇರುತ್ತದೆ. (ಎಸ್.ಜಿ.)

**ಕಾಂತರಾಜ ಅರಸು :** 1870-1923. ಹಿಂದಿನ ಮೈಸೂರು ಸಂಸ್ಥಾನದ ದಿವಾನರು (1919-22). ನಾಲ್ವಡಿ ಕೃಷ್ಣರಾಜ ಒಡೆಯರ ಸೋದರಮಾವಂದಿರು ಮತ್ತು ಅವರ ಸೋದರಿ ಜಯಲಕ್ಷ್ಮಮ್ಮಣ್ಣಿಯವರ ಪತಿ.

ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣ ಮುಗಿಸಿದ ಇವರು 1894ರಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿ ನಿಯುಕ್ತರಾದರು. 1895-99ರಲ್ಲಿ ರಾಜ ಪ್ರತಿನಿಧಿಗಳಾಗಿದ್ದ ಮಹಾರಾಣಿಯವರ ಆಪ್ತ ಕಾರ್ಯದರ್ಶಿಗಳಾಗಿದ್ದರು. 1899-1900ರಲ್ಲಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ ಪದವಿ ಪಡೆದು 1901-04ರಲ್ಲಿ ಸ್ಪೆಷಲ್ ಸಬ್ ಡಿವಿಶನ್ ಆಫೀಸರರಾಗಿ 1904ರಲ್ಲಿ ಡೆಪ್ಯುಟಿಕಮಿಷನರಾಗಿ ನಿಯುಕ್ತ ರಾದರು. 1913ರಲ್ಲಿ ಕೌನ್ಸಿಲ್ ಸದಸ್ಯರಾದರು. 1914ರಲ್ಲಿ ಬ್ರಿಟಿಷ್ ಸರ್ಕಾರದಿಂದ ಸಿ.ಎಸ್.ಐ. ಪ್ರಶಸ್ತಿ ಪಡೆದರು. 1917ರಲ್ಲಿ ಜಪಾನಿಗೆ ತೆರಳಿ ಅಲ್ಲಿಯ ಆಡಳಿತ, ಉದ್ಯಮ ವ್ಯವಸ್ಥೆ, ಸಂಸ್ಕೃತಿ ವೈಶಿಷ್ಟ್ಯ ಮುಂತಾದ ಅಂಶಗಳನ್ನು ತಿಳಿದುಕೊಂಡು ಬಂದರು.

ವಿಶ್ವೇಶ್ವರಯ್ಯನವರ ಅನಂತರ ಇವರು ದಿವಾನರಾದರು (1918). ಒಂದನೆಯ ಮಹಾಯುದ್ಧ ಆಗ ತಾನೆ ಮುಗಿದು ದೇಶದ ಆರ್ಥಿಕ ಸ್ಥಿತಿ ಅಸ್ತವ್ಯಸ್ತವಾಗಿದ್ದರೂ ಇವರು ಸಂಸ್ಥಾನದಲ್ಲಿ ಹಲವಾರು ಸುಧಾರಣೆಗಳನ್ನು ಕೈಗೊಂಡರು. ಆರ್ಥಿಕ ಸಲಹಾ ಸಮಿತಿಯನ್ನು (ಎಕನಾಮಿಕ್ ಕಮಿಟಿ) ಪುನರ್ರಚಿಸಿ, ಅದು ಆಡಳಿತದ ಶಾಶ್ವತ ಅಂಗವಾಗಿ ಮುಂದುವರಿಯುವಂತೆ ಮಾಡಿದರು (1919-20). ನ್ಯಾಯವಿಧಾಯಕ ಸಭೆಯನ್ನು (ಲೆಜಿಸ್ಲೇಟಿವ್ ಕೌನ್ಸಿಲ್) ವಿಸ್ತರಿಸಿ, ಅದಕ್ಕೆ ಪ್ರತಿಯೊಂದು ಜಿಲ್ಲೆಯಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸುವ ವ್ಯವಸ್ಥೆಯನ್ನು ಜಾರಿಗೆ ತಂದರು. ಸಂಸ್ಥಾನದಲ್ಲಿ ಪ್ರೌಢಶಾಲಾ ಮಟ್ಟಕ್ಕಿಂತ ಕೆಳಗಿನ ತರಗತಿಗಳ ಪಾಠಶುಲ್ಕವನ್ನು ರದ್ದುಗೊಳಿಸಿದರು. ಈ ಕಾಲಕ್ಕೆ ಆಹಾರ ಪರಿಸ್ಥಿತಿ ದುಸ್ಸಹವಾಗಿದ್ದುದರಿಂದ ಆಹಾರಧಾನ್ಯಗಳ ರಫ್ತನ್ನು ನಿಲ್ಲಿಸಿ ಆಮದನ್ನು ಹೆಚ್ಚು ಮಾಡಿ ಸಹಕಾರ ಸಂಘಗಳ ಮೂಲಕ ಆಹಾರ ಧಾನ್ಯಗಳ ಮಾರಾಟಕ್ಕೆ ವ್ಯವಸ್ಥೆ ಮಾಡಿದರು. ಏಪ್ರಿಲ್ 1919ರಲ್ಲಿ ಭದ್ರಾವತಿಯ ಕಬ್ಬಿಣ ಕಾರ್ಖಾನೆಯ ಅನಾವರಣೋತ್ಸವವನ್ನು ಜರುಗಿಸಿದರು. ಗಣಿ ಕಾರ್ಯಗಳ ಅಧೀಕ್ಷಕ ಹುದ್ದೆ (ಸೂಪರಿಂಟೆಂಡೆಂಟ್ ಆಫ್ ಮೈನಿಂಗ್ ಆಪರೇಷನ್ಸ್) ಇವರ ಕಾಲದಲ್ಲಿ ಸ್ಥಾಪಿತವಾಯಿತಲ್ಲದೆ ಆಡಳಿತ ಯಂತ್ರದಲ್ಲಿ ಹಲವು ಬದಲಾವಣೆ ಗಳನ್ನು ಅಳವಡಿಸಿದರು. ಹಿಂದುಳಿದ ಪಂಗಡಗಳಿಗೆ ಸರ್ಕಾರಿ ಸೇವೆಗಳಲ್ಲಿ ಯಥೋಚಿತ ಪ್ರಾತಿನಿಧ್ಯ ವಿರಬೇಕೆಂದು 1920-21ರಲ್ಲಿ ಆದೇಶ ಹೊರಡಿಸಿದರು. ನಿಮ್ನವರ್ಗಗಳ ಸ್ಥಿತಿಗಳ ಮೇಲ್ಮಾಟಿಗೂ ಗಮನ ನೀಡಿದರು. 1921ರಲ್ಲಿ ಚಿಕ್ಕಜಾಜೂರಿನಿಂದ ಚಿತ್ರದುರ್ಗದವರೆಗಿನ ಸು.33ಕಿಮೀ ದೂರಕ್ಕೆ ಮೀಟರ್ ಗೇಜ್ ರೈಲುಮಾರ್ಗವನ್ನು ಹಾಕಿಸಿದರು. ಆರೋಗ್ಯದ ದೆಸೆಯಿಂದ 1922ರಲ್ಲಿ ವಿಶ್ರಾಂತರಾಗಿದ್ದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು (1920-23). ಇವರು 1923 ಅಕ್ಟೋಬರ್ 2ರಂದು ನಿಧನರಾದರು. (ಎಂ.ಕೆ.ಬಿ.)

**ಕಾಕನಕೋಟೆ :** ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕಿಗೆ ಸೇರಿದ ಆನೆಗಳನ್ನು ಸೆರೆಹಿಡಿಯುವ ಖೆಡ್ಡಾ ಪ್ರಸಿದ್ಧವಾಗಿದ್ದ ಸ್ಥಳ. ಮೈಸೂರಿಗೆ 77ಕಿಮೀ ದೂರದಲ್ಲಿದೆ. ದಟ್ಟವಾದ ಕಾಡಿನಿಂದ ಕೂಡಿದ ಈ ಪ್ರದೇಶದಲ್ಲಿ ತೇಗ, ಹೊನ್ನೆ, ನಂದಿ, ಬೀಟೆ ಮುಂತಾದ ಮರಗಳು ಹುಲುಸಾಗಿ ಬೆಳೆದಿವೆ. ಇಲ್ಲಿ ತೇಗದ ಮರಗಳನ್ನು ಬೆಳೆಯುವ ಸರ್ಕಾರಿ ಪ್ಲಾಂಟೇಷನ್ನುಗಳಿವೆ.

ಕಾಕನಕೋಟೆಯ ಕಾಡು ಆನೆಗಳ ಬೀಡು. ಆನೆಗಳಿಂದ ಬೆಳೆಗಳಿಗೂ ಜನ ಜೀವನಕ್ಕೂ ಆಗಾಗ ತೊಂದರೆ ಆಗುವುದು ಸಾಮಾನ್ಯ. 1873-1971ರ ವರೆಗೆ ನಡೆಸಿದ 36 ಖೆಡ್ಡಾಗಳಲ್ಲಿ (ನೋಡಿ: ಖೆಡ್ಡಾ) 24ನ್ನು ಕಾಕನಕೋಟೆ ಪ್ರದೇಶದಲ್ಲೇ ನಡೆಸಲಾಯಿತು. 1968ರಲ್ಲಿ ಹಿಡಿಯಲಾದ ಆನೆಗಳ ಸಂಖ್ಯೆ 88; 1971ರಲ್ಲಿ 41. ಕಪಿಲಾ ಯೋಜನೆಯಿಂದಾಗಿ ಈ ಪ್ರದೇಶ ಈಗ ನೀರಿನಲ್ಲಿ ಮುಳಗಡೆಯಾಗಿದೆ. *

**ಕಾಕುತ್ಸ್ಥವರ್ಮ:** ಬನವಾಸಿಯ ಕದಂಬ ವಂಶದ ರಾಜ (ಸು.405-430) ರಘುವಿನ ತಮ್ಮ ಮತ್ತು ಉತ್ತರಾಧಿಕಾರಿ.

ತಾಳಗುಂದ ಮತ್ತು ಹಲ್ಮಿಡಿಯ ಶಿಲಾಶಾಸನಗಳು ಹಾಗೂ ಅನೇಕ ಕದಂಬ ತಾಮ್ರಪಟಗಳು ಇವನ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಕಾಕುತ್ಸ್ಥವರ್ಮ ತನ್ನ ಅಣ್ಣನ ಆಳಿಕೆಯ ಕಾಲದಲ್ಲೇ ಹಲಸಿಯಲ್ಲಿ ಯುವರಾಜನಾಗಿ ಆಳುತ್ತಿದ್ದ. ಇವನು ಪಟ್ಟಕ್ಕೆ ಬಂದ ಅನಂತರ ಕದಂಬ ರಾಜ್ಯ ಉಚ್ಛ್ರಾಯ ಸ್ಥಿತಿಗೇರಿತು. ಪಲ್ಲವರೊಡನೆ ಯುದ್ಧಮಾಡಿ ಕದಂಬ ರಾಜ್ಯದ ಉನ್ನತಿಗೆ ಕಾರಣನಾದ. ಇವನು ಯುದ್ಧದಲ್ಲಿ ನಿಷ್ಣಾತನಾಗಿದ್ದಂತೆಯೂ ದೀನಾನಾಥರಿಗೆ ಸಹಾಯಮಾಡಿ ಪ್ರಜೆಗಳನ್ನು ರಕ್ಷಿಸಿ ಜನಪ್ರಿಯನಾಗಿದ್ದಂತೆಯೂ ದೇಶ ಶಾಂತಿ ಸುಭಿಕ್ಷದಿಂದ ಕೂಡಿದ್ದು ಜನ ಇವನ ರಾಜ್ಯದ ನೆರಳಿಗೆ ಬಂದು ಸುಖವಾಗಿದ್ದರೆಂದೂ ಶಾಸನಗಳು ವರ್ಣಿಸಿವೆ. ಈತ ತನ್ನ ಹಲವು ಪುತ್ರಿಯರನ್ನು ಗುಪ್ತರೇ ಮೊದಲಾದ ನಾನಾ ರಾಜಕುಟುಂಬಗಳಿಗೆ ಲಗ್ನಮಾಡಿಕೊಟ್ಟು ಅವರ ಸ್ನೇಹವನ್ನು ಗಳಿಸಿದ್ದಲ್ಲದೆ ಕದಂಬವಂಶದ ಸ್ಥಾನಮಾನವನ್ನೂ ಹೆಚ್ಚಿಸಿದ. ಪಾಟಲಿಪುತ್ರದಲ್ಲಿ ಆಳುತ್ತಿದ್ದ ಕುಮಾರಗುಪ್ತ ಕಾಕುತ್ಸ್ಥನ ಸಮಕಾಲೀನನಾಗಿದ್ದು ಕಾಕುತ್ಸ್ಥನ ಮಗಳನ್ನು ಕುಮಾರಗುಪ್ತನ ಮಗ

ಸ್ಕಂದಗುಪ್ತ ಮದುವೆಯಾಗಿದ್ದನೆಂದು ಊಹಿಸಲಾಗಿದೆ. ವಾಕಾಟಕ ಅರಸು ನರೇಂದ್ರಸೇನ ಕುಂತಲೇಶ್ವರನ ಮಗಳಾದ ಅಜ್ಝಿತ ಭಟ್ಟಾರಿಕಾಳನ್ನು ಮದುವೆಯಾಗಿದ್ದಂತೆ ಬೇರೆಯ ಆಧಾರಗಳಿಂದ ತಿಳಿಯುವುದರಿಂದಲೂ ನರೇಂದ್ರಸೇನ ಕಾಕುತ್ಸ್ಥನ ಸಮಕಾಲೀನನಾಗಿದ್ದರಿಂದಲೂ ಆ ಅಜ್ಝಿತ ಭಟ್ಟಾರಿಕಾ ಸಹ ಕಾಕುತ್ಸ್ಥನ ಮಗಳಾಗಿರಬಹುದು. ಗಂಗವಂಶದ ಅವಿನೀತನನ್ನು ಕದಂಬ ಕೃಷ್ಣವರ್ಮನ ಪ್ರಿಯ ಭಾಗಿನೀಯನೆಂದು ಗಂಗ ಶಾಸನಗಳು ಹೇಳುತ್ತವೆಯಾಗಿ ಕಾಕುತ್ಸ್ಥನ ಇನ್ನೊಬ್ಬ ಮಗಳನ್ನು ಗಂಗ ಅವಿನೀತನ ತಂದೆ 3ನೆಯ ಮಾಧವ ಮದುವೆಯಾಗಿರಬೇಕು. ಬಟರಿ ವಂಶದ ಪಶುಪತಿ ಎಂಬುವನು ಕಾಕುತ್ಸ್ಥನ ಇನ್ನೊಬ್ಬ ಅಳಿಯ.

ಶಾಂತಿವರ್ಮ ಮತ್ತು ಒಂದನೆಯ ಕೃಷ್ಣವರ್ಮ ಕಾಕುತ್ಸ್ಥನ ಮಕ್ಕಳು. ಕಾಕುತ್ಸ್ಥನ ಮರಣಾನಂತರ ಕದಂಬ ರಾಜ್ಯ ಇಬ್ಭಾಗವಾಯಿತು. ಶಾಂತಿವರ್ಮ ಬನವಾಸಿಯಿಂದಲೂ ಕೃಷ್ಣವರ್ಮ ತ್ರಿಪರ್ವತದಿಂದಲೂ ಆಳಲಾರಂಭಿಸಿದರು. *

**ಕಾಖಂಡಕಿ :** ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕಿನ ಒಂದು ಗ್ರಾಮ. ಬಿಜಾಪುರದ ದಕ್ಷಿಣಕ್ಕೆ ಸು.35ಕಿಮೀ ದೂರದಲ್ಲಿದೆ. ಇಲ್ಲಿ ಸಂಗಮೇಶ್ವರ, ಮಲ್ಲಿಕಾರ್ಜುನ ಮತ್ತು ಕರವೀರಭದ್ರ ಎಂಬ ಮೂರು ಚಿಕ್ಕ ದೇವಸ್ಥಾನಗಳಿವೆ. ಊರಿನ ವಾಯವ್ಯ ದಿಕ್ಕಿನಲ್ಲಿ ಒಂದು ಮಸೀದಿ ಇದೆ. ಮಹಿಪತಿದಾಸರು (ನೋಡಿ) ಈ ಗ್ರಾಮದವರು. ಇವರ ದೇವಾಲಯ ಸಹ ಇಲ್ಲಿದೆ.

ಈ ಗ್ರಾಮದ ಸಮೀಪದಲ್ಲಿ ಹರಳೇಶ್ವರ ಕ್ಷೇತ್ರವಿದೆ. ಇಲ್ಲಿರುವ ಶಿವಲಿಂಗ ಪ್ರಸಿದ್ಧ ಶರಣ ಹರಳಯ್ಯನ ನೆನಪಿಗಾಗಿ 12ನೆಯ ಶತಮಾನದಲ್ಲಿ ಸ್ಥಾಪಿತವಾದುದೆಂಬ ನಂಬಿಕೆ ಇದೆ. ಮತ್ತೊಬ್ಬ ಶರಣ ಪರಮಯ್ಯನ ಹೆಸರಿನಲ್ಲಿ ಒಂದು ಕಲ್ಯಾಣಿ ಇದೆ. ಇಲ್ಲಿ ಒಂದು ವೀರಶೈವಮಠ ಸಹ ಇದೆ. (ಎಚ್.ಆರ್.ಡಿ.)

**ಕಾಗದದ ಉದ್ಯಮ :** ಕಾಗದ ತಯಾರಿಕೆ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಗೊಂಡಿತ್ತು. ಸ್ವಿಟ್ಸರ್ಲೆಂಡಿನ ಡಾ.ಸ್ಮಿಡ್ತ್‌ರವರ ಪ್ರಕಾರ ಕಾಗದ ತಯಾರಿಕೆ ಮೊದಲಾದುದು ಭಾರತದಲ್ಲೇ. ಕರ್ನಾಟಕದಲ್ಲೂ ಸ್ವಲ್ಪಮಟ್ಟಿಗೆ ಇದು ಗೃಹಕೈಗಾರಿಕೆಯಾಗಿ ಇದ್ದಿರಬೇಕು.

ಮರದ ತೊಗಟೆ, ಹುಲ್ಲು ಮುಂತಾದ ಕಚ್ಚಾವಸ್ತುಗಳಿಂದ ಪ್ರಾರಂಭವಾದ ಕಾಗದದ ಉದ್ಯಮ ಕ್ರಮೇಣ ಹತ್ತಿ ಮತ್ತು ಹತ್ತಿಬಟ್ಟೆ ಚಿಂದಿಗಳ ಉಪಯೋಗದೊಡನೆ ಇಲ್ಲಿ ಚೆನ್ನಾಗಿ ಬೇರೂರಿತು. ಈ ಕಚ್ಚಾವಸ್ತುಗಳ ಸರಬರಾಜು ಮಿತವಾಗಿದ್ದು, ಕಾಗದದ ಕೈಗಾರಿಕೆಗೆ ಒಂದು ನಿಗದಿ ಇತ್ತು. ಡೆಹ್ರಾಡೂನಿನ ಅರಣ್ಯ ಸಂಶೋಧನ ಸಂಸ್ಥೆಯ ಸಂಶೋಧನೆಯಿಂದ ಕಾಗದದ ತಯಾರಿಕೆಗೆ ಬೊಂಬು ಒಳ್ಳೆಯ ಕಚ್ಚಾವಸ್ತುವಾಗಬಲ್ಲುದೆಂದು 1912ರ ವೇಳೆಗೆ ಖಚಿತವಾಯಿತು. ಈ ವೇಳೆಗೆ ಮೈಸೂರಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಈ ವಿಷಯದಲ್ಲಿ ಆಸಕ್ತಿ ವಹಿಸಿದರು. ಮುಂಬಯಿಯ ಅಯ್ಯರ್ ಮತ್ತು ಬಾಲಕೃಷ್ಣರವರ ನೇತೃತ್ವದಲ್ಲಿ ಹಲವು ಮೂಲಭೂತ ಅಧ್ಯಯನಗಳು ನಡೆದವು. ಅನಂತರ ಮಿರ್ಜಾ ಇಸ್ಮಾಯಿಲರು ಕರ್ನಾಟಕದ ಮೊಟ್ಟಮೊದಲ ಕಾಗದ ಕಾರ್ಖಾನೆಯಾದ ಭದ್ರಾವತಿಯ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯನ್ನು 1936ರಲ್ಲಿ ಆರಂಭಿಸಿದರು. ಸರ್ಕಾರ ಮತ್ತು ಖಾಸಗಿ ಬಂಡವಾಳದೊಡನೆ ಪ್ರಾರಂಭವಾದ ಈ ಸಂಸ್ಥೆ ವರ್ಷಕ್ಕೆ 4000 ಟನ್ ಉತ್ಪಾದನಾ ಸಾಮರ್ಥ್ಯವುಳ್ಳದ್ದಾಗಿತ್ತು. ಕನ್ನಡ ನಾಡಿನ ಕಾಗದದ ಬೇಡಿಕೆ ಕಡಿಮೆಯಿದ್ದುದರಿಂದ ಹೆಚ್ಚು ಭಾಗ ತಮಿಳುನಾಡಿಗೆ ರಫ್ತಾಗುತ್ತಿತ್ತು. ಇದೇ ಕಾಲದಲ್ಲಿ ಗ್ರಾಮೋದ್ಯೋಗದ ಬೆಳವಣಿಗೆಯ ಅಂಗವಾಗಿ ಮೈಸೂರು ಸರ್ಕಾರ ಬದನವಾಳು ಖಾದಿಕೇಂದ್ರದಲ್ಲಿ ಕೈಯಲ್ಲಿ ಕಾಗದವನ್ನು ತಯಾರಿಸಲೂ ಆರಂಭಿಸಿತ್ತು. ಅನಂತರ ಮುಂಬಯಿ ಕರ್ನಾಟಕದಲ್ಲಿ ಬೊಂಬನ್ನು ಕಚ್ಚಾವಸ್ತುವಾಗಿ ಬಳಸಿ ಕಾಗದ ತಯಾರಿಸುವ ಉದ್ದೇಶದಿಂದ ಕರ್ನಾಟಕ ಪೇಪರ್ ಮಿಲ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಪ್ರಯತ್ನ ನಡೆದು, 1956-58ರ ವೇಳೆಗೆ ಉತ್ತರ ಕನ್ನಡ ಜಿಲ್ಲೆ ದಾಂಡೇಲಿಯಲ್ಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಸ್ಥಾಪಿತವಾಯಿತು. ಇದೇ ಸಮಯದಲ್ಲಿ ಕೊಡಗು, ಮೈಸೂರು, ಹಾಸನ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಗದ ಕಾರ್ಖಾನೆಗಳನ್ನು ಸ್ಥಾಪಿಸಲು ಪ್ರಯತ್ನಗಳು ನಡೆದುವು. ಸು.1954ರಲ್ಲಿ ನಂಜನಗೂಡಿನ ಕಾರ್ಖಾನೆ ಅಸ್ತಿತ್ವಕ್ಕೆ ಬಂತು.

ಸಕ್ಕರೆ ಕಾರ್ಖಾನೆಗಳಲ್ಲಿ ದೊರೆಯುವ ಕಬ್ಬಿನ ಸಿಪ್ಪೆಯನ್ನು ಕಚ್ಚಾ ವಸ್ತುವಾಗಿ ಬಳಸಿ ಕಾಗದ ತಯಾರಿಸುವ ಉದ್ದಿಶ್ಯವನ್ನು ಇಟ್ಟುಕೊಂಡು ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಎಂಬ ಕಾರ್ಖಾನೆ ಮೈಸೂರಿನ ಬಳಿ ಬೆಳಗೊಳದಲ್ಲಿ 1960ರಲ್ಲಿ ಸ್ಥಾಪಿತವಾಯಿತು. ಆದರೆ ಈ ಕಾರ್ಖಾನೆ ಬೊಂಬನ್ನೇ ಮೂಲ ಕಚ್ಚಾವಸ್ತುವಾಗಿ ಬಳಸುವ ಕಾರ್ಖಾನೆಯಾಗಿ ಪರಿವರ್ತನೆಗೊಂಡು ಅನೇಕ ವರ್ಷಗಳ ಕಾಲ ನಡೆಯಿತು. ಈಗ ಉತ್ಪಾದನೆ ಸ್ಥಗಿತಗೊಂಡಿದೆ.

ಬೊಂಬನ್ನಷ್ಟೇ ಅಲ್ಲದೆ, ಬಾಳೆನಾರು, ಹಳೆಯ ಗೋಣಿನಾರು, ನೆಲ್ಲುಹುಲ್ಲು (ಬತ್ತದ ಹುಲ್ಲು), ಹಳೆಯ ಕಾಗದಗಳನ್ನು ಉಪಯೋಗಿಸಿ ಕಾಗದ ಅಥವಾ ರಟ್ಟನ್ನು ತಯಾರಿಸುವ ಅನೇಕ ಪುಟ್ಟ ಕಾರ್ಖಾನೆಗಳು ಅಸ್ತಿತ್ವದಲ್ಲಿವೆ.

ಅರಣ್ಯಗಳು ಕುಗ್ಗುತ್ತಿದ್ದು ಈ ಎಲ್ಲ ಕಾರ್ಖಾನೆಗಳೂ ತಮ್ಮ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚುಹೆಚ್ಚಾಗಿ ಹೆಚ್ಚಿಸುತ್ತಿರುವುದರಿಂದ ಬೊಂಬಿನ ಬೇಡಿಕೆ ಹೆಚ್ಚುತ್ತಿದೆ. ಇಷ್ಟನ್ನೂ ಮತ್ತು ಮುಂದೆ ಬರುವ ಬೊಂಬಿನ ಬೇಡಿಕೆಗಳನ್ನೂ ಪೂರೈಸಲು ನಮ್ಮ ಅರಣ್ಯಗಳು ಅಸಮರ್ಥವಾಗುತ್ತಿವೆ. ಹೀಗಾಗಿ ಕರ್ಪೂರದ ಮರವನ್ನು ಪಲ್ಪಿಗಾಗಿ ಉಪಯೋಗಿಸಲು ಹೆಚ್ಚು ಹೆಚ್ಚು ಯಶಸ್ವೀ ಪ್ರಯತ್ನಗಳು ನಡೆಯುತ್ತಿವೆ. ಕಾಗದ ತಯಾರಿಕೆಗೆ ಬೇಕಾಗುವ ಮತ್ತೆಲ್ಲ ಕಚ್ಚಾ ವಸ್ತುಗಳೂ ಕನ್ನಡ ನಾಡಿನಲ್ಲೇ ದೊರೆಯುತ್ತವೆ.

ಕಾಗದ ಉದ್ಯಮದಲ್ಲಿ ಅಖಿಲ ಭಾರತ ಉತ್ಪಾದನಾ ಶಕ್ತಿ 9,00,000 ಟನ್. ಕರ್ನಾಟಕದ ಕಾರ್ಖಾನೆಗಳ ಒಟ್ಟು ಉತ್ಪಾದನೆ 1,02,000 ಟನ್. ಕರ್ನಾಟಕದಲ್ಲಿ ಉತ್ತಮ ವಿದ್ಯುತ್ ಮತ್ತು ನೀರಿನ ಸೌಲಭ್ಯ ವಿಶಾಲವಾದ ಬಿದಿರಿನ ಕಾಡುಗಳು ಇರುವುದಲ್ಲದೆ, ಕಬ್ಬಿನ ಸಿಪ್ಪೆ, ನೆಲ್ಲು ಹುಲ್ಲು ಇತ್ಯಾದಿಗಳೂ ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತವಾಗಿ ಈ ಉದ್ಯಮ ಮತ್ತಷ್ಟು ಬೆಳೆಯುವ ಸಾಧ್ಯತೆ ಇದೆ. (ಟಿ.ಕೆ.ಆರ್.ಎಸ್.)

**ಕಾಗವಾಡ :** ಬೆಳಗಾಂವಿ ಜಿಲ್ಲೆ ಅಥಣಿ ತಾಲ್ಲೂಕಿನ ಒಂದು ಗ್ರಾಮ. ಅಥಣಿಯಿಂದ 30ಕಿಮೀ ದೂರದಲ್ಲಿದೆ. ಸ್ಥಳೀಯ ಜೈನದೇವ ಕಗ್ಗೋಡರಾಯನಿಂದಾಗಿ ಈ ಊರಿಗೆ ಕಾಗವಾಡ ಎಂಬ ಹೆಸರು ಬಂತೆಂದು ಪ್ರತೀತಿ. ಆದರೆ ವಾಸ್ತವದಲ್ಲಿ ಇಲ್ಲಿಯ ಕೆಂಪುಮಣ್ಣು (ಕಾಗ ಅಥವಾ ಮಸಾರಿ) ಈ ಹೆಸರಿಗೆ ಕಾರಣವಾಗಿರುವಂತಿದೆ. ಇಲ್ಲಿ ಕಗ್ಗೋಡರಾಯ ಗಣಪತಿ, ಮಾರುತಿ ಮತ್ತು ಸಂತೂಬಾಯಿ ದೇವಾಲಯಗಳಿವೆ. ಕಗ್ಗೋಡರಾಯ ಜಿನಾಲಯದ ಮುಖ್ಯಮಂಟಪ ಮತ್ತು ಗರ್ಭಗೃಹಗಳು ಈಗ ಜೀರ್ಣೋದ್ಧಾರಗೊಂಡಿವೆ. ಆಲಯದೊಳಗೆ ಕಗ್ಗೋಡರಾಯ ಮತ್ತು ಅವನ ಸಂಗಾತಿ ಕಾಳಮ್ಮನ ಮೂರ್ತಿಗಳಿವೆ. ಕೆಲವರ ಪ್ರಕಾರ ಇವು ಬ್ರಹ್ಮನಾಥ ಮತ್ತು ಪದ್ಮಾವತಿಯ ಮೂರ್ತಿಗಳು. ಇಲ್ಲಿ ಕೆಲವು ಕಂಚಿನ ಜೈನ ಮೂರ್ತಿಗಳೂ ಇವೆ. ಗರ್ಭಗೃಹದ ಎಡಬದಿಯಲ್ಲಿ ಒಂದು ಗವಿಯಿದ್ದು, ಅದು ನೆಲಮಾಳಿಗೆಯಲ್ಲಿರುವ ಕೋಣೆಯ ಕಡೆಗೆ ತೆರೆದಿದೆ. 5ಮೀ ಕೆಳಗೆ ಇಳಿದ ಅನಂತರ ಮತ್ತೊಂದು ಗರ್ಭಗೃಹದ ಎದುರಿಗೆ ಇರುವ ಚಿಕ್ಕಅಂಕಣವನ್ನು ತಲುಪುತ್ತದೆ. ಇದು ಮತ್ತೊಂದು ಬಸದಿಯ ನವರಂಗವಾಗಿದೆ. ಇಲ್ಲಿ ಜೀರ್ಣೋದ್ಧಾರ ಮಾಡಿದ ಪಾಣೀಪೀಠದ ಮೇಲೆ ಪಾರ್ಶ್ವನಾಥ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಇನ್ನೊಂದು ಗರ್ಭಗೃಹದಲ್ಲಿ ಸು.15ಮೀ ಎತ್ತರವಿರುವ ಶಾಂತಿನಾಥನ ಮೂರ್ತಿ ಇದೆ. ಈ ಮೂರ್ತಿಯನ್ನು ಜೀರ್ಣೋದ್ಧಾರಗೊಂಡ ಪಾಣೀಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಚಾಳುಕ್ಯ ಶೈಲಿಯ ಕಂಬಗಳಿವೆ. ನವರಂಗದ ಬಲಗೋಡೆಯ ಮೇಲೆ 1314ರ ಒಂದು ನಿಷಧಿ ಶಾಸನವಿದೆ.

ಇಲ್ಲಿಯ ಇನ್ನೊಬ್ಬ ದೇವತೆ ಸಂತೂಬಾಯಿ. ಈಕೆಯನ್ನು ಕಗ್ಗೋಡರಾಯನ ಸೋದರಿ ಎಂದು ಕರೆಯಲಾಗುತ್ತದೆ. ಹೆಂಚಿನ ಹೊದಿಕೆಯುಳ್ಳ ಗರ್ಭಗೃಹದಲ್ಲಿ ಕುಳಿತ ಭಂಗಿಯ ದೇವಿಯ ಮೂರ್ತಿ

ಇದೆ. ಇದನ್ನು ತಾಯಂದಿರು ತಮ್ಮ ಚೊಚ್ಚಲು ಮಕ್ಕಳೊಂದಿಗೆ ಪೂಜಿಸುವರು. ಪ್ರತಿವರ್ಷ ಮಾಘಮಾಸದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಈ ಊರಿನಲ್ಲಿ ಇಂಚಗೇರಿ ಮಠದ ಶಾಖೆಯಿದ್ದು, ಅದರಲ್ಲಿ ಬ್ರಹ್ಮಾನಂದ ಮಹಾರಾಜರ ಸಮಾಧಿಯಿದೆ. ಸಂಬಂಧಿಕರಾದ ಮೀರಜ್ ಸಂಸ್ಥಾನಿಕರ ಪಟವರ್ಧನರ ವಾಡಾದಲ್ಲಿ ಮಾರುತಿಯ ಚಿಕ್ಕ ಮಂದಿರವಿದೆ. ಪಟವರ್ಧನರ ಜಹಗೀರು 1857ರಲ್ಲಿ ಬ್ರಿಟಿಷರಿಂದ ರದ್ದುಗೊಳಿಸಲ್ಪಟ್ಟಿತು. (ಆರ್.ಐ.)

**ಕಾಗಿಣಾ :** ಗುಲ್ಬರ್ಗ ಜಿಲ್ಲೆಯ ಒಂದು ನದಿ. ಆಂಧ್ರ ಪ್ರದೇಶದ ಕೋಹಿರ್ ಎಂಬಲ್ಲಿ ಹುಟ್ಟುತ್ತದೆ. ಸೇಡಂ ತಾಲ್ಲೂಕಿನ ಈಶಾನ್ಯದ ಅಂಚಿನಲ್ಲಿ ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸಿ ಹೈದರಾಬಾದ್-ವಾಡಿ ರೈಲುಮಾರ್ಗಕ್ಕೆ ಸಮಾನಾಂತರವಾಗಿ ಪಶ್ಚಿಮಾಭಿಮುಖವಾಗಿ ಹರಿದು ಚಿತ್ತಾಪುರ ತಾಲ್ಲೂಕನ್ನು ಪ್ರವೇಶಿಸಿ, ನೈರುತ್ಯಾಭಿಮುಖವಾಗಿ ಹರಿದು ಹುನಗುಂಟ ಗ್ರಾಮದ ಹತ್ತಿರ ಭೀಮಾನದಿಯನ್ನು ಸೇರುತ್ತದೆ. ಈ ಜಿಲ್ಲೆಯಲ್ಲಿ ನದಿಯ ಹರಿವಿನ ಒಟ್ಟು ಉದ್ದ 64ಕಿಮೀ. ಮುಲ್ಲಾಮಾರಿ, ಬೆಣ್ಣೆತೊರೆ ಮತ್ತು ಕಮಲಾವತಿ ಈ ನದಿಗೆ ಸೇರುವ ಮುಖ್ಯ ತೊರೆಗಳು. ಸೇಡಂ ಮತ್ತು ಚಿತ್ತಾಪುರ ಈ ನದಿಯ ಬಳಿ ಇರುವ ಮುಖ್ಯ ಊರುಗಳು. ಮಳಖೇಡ ಪುಣ್ಯಕ್ಷೇತ್ರ. ಗುಲ್ಬರ್ಗ-ಶಾಹಬಾದ-ವಾಡಿ ಮಾರ್ಗದಲ್ಲಿ ಶಾಹಬಾದದ ಸಮೀಪದಲ್ಲಿ ಕಾಗಿಣಾ ನದಿಗೆ ಸೇತುವೆ ಕಟ್ಟಲಾಗಿದೆ. ಈ ನದಿಗೆ ಯಡಹಳ್ಳಿ ಬಳಿ ಕಟ್ಟೆಯೊಂದನ್ನು ಕಟ್ಟಿ ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಸು.20,000 ಎಕರೆಗಳಿಗೆ ನೀರು ಒದಗಿಸುವ ಯೋಜನೆ ಇದೆ. *

**ಕಾಗಿನೆಲೆ :** ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನಲ್ಲಿ ಹಾವೇರಿಯಿಂದ ಸು.11ಕಿಮೀ ದೂರದಲ್ಲಿರುವ ಒಂದು ಹಳ್ಳಿ. ಕನಕದಾಸರ (ನೋಡಿ) ಆರಾಧ್ಯದೈವ ಆದಿಕೇಶವನ ನೆಲೆವೀಡು. ಆದಿಕೇಶವ, ಲಕ್ಷ್ಮೀನರಸಿಂಹ, ಕಾಳಹಸ್ತೀಶ್ವರ, ವೀರಭದ್ರ, ಸೋಮೇಶ್ವರ, ಬ್ರಹ್ಮೇಶ್ವರ, ಸಂಗಮೇಶ್ವರ, ಬಸವಣ್ಣ ಮತ್ತು ಆದಿಶಕ್ತಿ ಇವು ಇಲ್ಲಿರುವ ಮುಖ್ಯ ದೇವಾಲಯಗಳು. ಆದಿಕೇಶವ ಮತ್ತು ನರಸಿಂಹ ದೇವಾಲಯಗಳು ಒಂದೇ ಪ್ರಾಕಾರದೊಳಗೆ ಮಣ್ಣಿನ ಗೋಡೆಯಿಂದ ಸುತ್ತುವರಿದಿವೆ. 16ನೆಯ ಶತಮಾನದಲ್ಲಿ ಕನಕದಾಸರು ಆದಿಕೇಶವನ ಮೂರ್ತಿಯನ್ನು ಬಾಡಗ್ರಾಮದಿಂದ ತಂದು ಪ್ರತಿಷ್ಠಾಪಿಸಿದರೆಂದು ಹೇಳಲಾಗುತ್ತದೆ. ಈ ಮೂರ್ತಿ ಒಂದೂವರೆ ಅಡಿ ಎತ್ತರವಿದೆ. ಇಲ್ಲಿಯ ಕೆರೆಯ ದಂಡೆಯ ಮೇಲೆ ಕನಕದಾಸರ ಸಮಾಧಿ ಇದೆ. ಇಲ್ಲಿನ ದೇವಾಲಯಗಳಲ್ಲಿ ಕಲ್ಯಾಣದ ಚಾಳುಕ್ಯರ ಮತ್ತು ಸೇವುಣ ರಾಮಚಂದ್ರನ ಕಾಲದ ಶಾಸನಗಳು ದೊರಕಿವೆ.

14ನೆಯ ಶತಮಾನದಲ್ಲಿ ವಿಜಯನಗರದ ಅರಸ ಬುಕ್ಕನಿಂದ ಬಹಮನೀ ಸುಲ್ತಾನರು ಕಾಗಿನೆಲೆಯನ್ನು ವಶಪಡಿಸಿಕೊಂಡರು. ಅನಂತರ ಮತ್ತೆ ಇದು ವಿಜಯನಗರ ಅರಸರಿಗೇ ಸೇರಿದ್ದರಿಂದ ಕನಕದಾಸರು ಇದರ ಢಣಾಯಕರಾಗಿ ವಿಜಯನಗರದ ಮಾಂಡಲಿಕರಾಗಿದ್ದರು. ಮುಂದೆ ಬಿಜಾಪುರದ ಸುಲ್ತಾನ ಇದನ್ನು ವಶಪಡಿಸಿಕೊಂಡು (1573) ಬಂಕಾಪುರ ಪ್ರಾಂತ್ಯಕ್ಕೆ ಸೇರಿಸಿದನೆಂದು ಹೇಳಲಾಗಿದೆ. ಕಾಗಿನೆಲೆಯ ಪ್ರಕೃತಿ ಸೌಂದರ್ಯವನ್ನು ಆಂಡಯ್ಯ ಮತ್ತು ಕನಕದಾಸರು ಬಣ್ಣಿಸಿದ್ದಾರೆ. (ಎಂ.ಕೆ.ಬಿ.)

**ಕಾಗೋಡು ಸತ್ಯಾಗ್ರಹ :** ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಕಾಗೋಡು ಗ್ರಾಮದಲ್ಲಿ ನಡೆದ ಗೇಣಿ ರೈತರ ಸತ್ಯಾಗ್ರಹ (1951). ದೇಶಕ್ಕೆ ಸ್ವಾತಂತ್ರ್ಯ ಬಂದಾಗ ರಾಜಕೀಯ ಅಧಿಕಾರ ಜನರಿಗೆ ಪ್ರಾಪ್ತವಾಗಿದ್ದರೂ ಆರ್ಥಿಕ ಶೋಷಣೆಯಿಂದ ಜನರು ಮುಕ್ತವಾಗಿರಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನ್ದಾರಿಕೆ ವ್ಯವಸ್ಥೆಯ ಮೂಲದಿಂದ ಬಂದ ಗೇಣಿ ಪದ್ಧತಿಯೂ ಅಂತಹ ಶೋಷಣೆಗೆ ಹೆಚ್ಚಿನ ಅವಕಾಶ ನೀಡಿತ್ತು. ಆಗ ಇಂಥ ವ್ಯವಸ್ಥೆಯ ವಿರುದ್ಧ ನಡೆದ ಈ ರೈತ ಹೋರಾಟ ಕರ್ನಾಟಕದ ರೈತ ಚಳವಳಿಯ ಇತಿಹಾಸದಲ್ಲಿ ಮೈಲಿಗಲ್ಲಾಗಿದೆ.

ಸಾಗರ ಪಟ್ಟಣದಿಂದ ಉತ್ತರದಿಕ್ಕಿಗೆ ಕೆಳದಿ-ಮಾಸೂರು ಮಾರ್ಗದಲ್ಲಿ ಸಾಗರದಿಂದ 15ಕಿಮೀ ದೂರದಲ್ಲಿ ವರದಾ ನದಿಯ ದಂಡೆಯ ಮೇಲಿರುವ ಕಾಗೋಡು ಮಲೆನಾಡಿನ ಒಂದು ಪುಟ್ಟ ಹಳ್ಳಿ. ಕಾಗೋಡು ಚಳವಳಿ ನಡೆದ ಕಾಲಕ್ಕೆ ಇಲ್ಲಿ ಒಟ್ಟು 50 ಮನೆಗಳಿದ್ದುವು. ಈಗ 232 ಕುಟುಂಬಗಳಿವೆ. ಅವುಗಳಲ್ಲಿ ದೀವರ ಕುಟುಂಬಗಳೆ ಹೆಚ್ಚು. ಉಳಿದಂತೆ ಹರಿಜನರು, ಮಡಿವಾಳರು, ಅಕ್ಕಸಾಲಿಗರು, ಲಿಂಗಾಯಿತರು ಮೊದಲಾದವರಿದ್ದರು. ಒಟ್ಟು ಜಮೀನಿನ ವಿಸ್ತೀರ್ಣ ಸು.891 ಎಕರೆ.

ಆಗಿನ ಮೈಸೂರು ರಾಜ್ಯದ ಮಲೆನಾಡು ಪ್ರಾಂತ್ಯದಲ್ಲಿ ಭೂ ಒಡೆತನದ ಹಕ್ಕು ಹಿಂದು ಶ್ರೇಣೀಕೃತ ಸಮಾಜದ ಮೇಲ್ವರ್ಗದವರ ಕೈಯಲ್ಲಿ ಹೆಚ್ಚಾಗಿತ್ತು. ಕೆಲವೇ ಜಮೀನ್ದಾರರ ಅಡಿಯಲ್ಲಿ ರೈತಾಪಿ ಗೇಣಿ ಒಕ್ಕಲುಗಳು ಇರುತ್ತಿದ್ದರು. ಅವರೆಲ್ಲ ಬಹುತೇಕ ಗೇಣಿದಾರರಾಗಿ ಮತ್ತು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಈ ದುಡಿಮೆ ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುತ್ತಿತ್ತು. ಭೂ ಒಡೆಯರ ಮನೆಗಳಲ್ಲಿ ವರ್ಷದಲ್ಲಿ ಹಲವಾರು ದಿವಸ ಬಿಟ್ಟಿ ದುಡಿಮೆ ಮಾಡುವ ಪದ್ಧತಿಯೂ ಇತ್ತು. ರುಮಾಲು ಸುತ್ತಿಕೊಳ್ಳುವುದು, ಉದ್ದವಾಗಿ ಮೊಳಕಾಲ ಕೆಳಗಿನವರೆಗೆ ಪಂಚೆ ಉಡುವುದು, ಕಾಲಿಗೆ ಚಪ್ಪಲಿ ಹಾಕಿಕೊಳ್ಳುವುದು, ಒಡೆಯರ ಎದುರು ಛತ್ರಿ ಹಿಡಿದು ನಡೆಯುವುದು ಅಪರಾಧಗಳಾಗಿದ್ದುವು. ಒಡೆಯರು ಎದುರಾದಾಗ ಮಳೆ ಸುರಿಯುತ್ತಿದ್ದರೂ ಛತ್ರಿ ಮಡಿಚಿ ಹಿಡಿದು ಮಳೆಯಲ್ಲಿ ನೆನೆಯುತ್ತಲೇ ಮುಂದೆ ಹೋಗಬೇಕಾಗಿತ್ತು. ಒಡೆಯರು ಎದುರಾದಾಗ ಚಪ್ಪಲಿ ಕೈಯಲ್ಲಿ ಹಿಡಿದು ನಡುಬಗ್ಗಿಸಿ ನಮಸ್ಕರಿಸಿ ಮುಂದೆ ಹೋಗಬೇಕು. ತಪ್ಪಿದರೆ ಅದು ಅವಿಧೇಯ ವರ್ತನೆ ಎಂದು ಭಾವಿಸಲಾಗುತ್ತಿತ್ತು. ಅದಕ್ಕೆ ಶಿಕ್ಷೆ ಕಾದಿರುತ್ತಿತ್ತು. ಪ್ರತಿಯೊಬ್ಬ ಗೇಣಿದಾರನೂ ಭೂ ಮಾಲೀಕರ ಬಳಿ ವರ್ಷದಲ್ಲಿ 15-20 ದಿವಸ ಸಂಬಳವಿಲ್ಲದೆ ಬಿಟ್ಟಿ ಕೆಲಸ ಮಾಡಬೇಕಾಗಿತ್ತು.

ಮಲೆನಾಡಿನಲ್ಲಿ ಬತ್ತ ಮತ್ತು ಇತರ ಧಾನ್ಯಗಳನ್ನು ಅಳೆಯುವ ಸಾಧನವಾಗಿ ಕೊಳಗ ಎಂಬ ಮಾನಕವಿತ್ತು. ಒಂದು ಕೊಳಗಕ್ಕೆ ಮೂರು ಸೇರು ಎಂದು ಸರ್ಕಾರದ ಅಧಿಕೃತ ಅಳತೆ. ಆದರೆ ಕೆಲವು ಭೂಮಾಲೀಕರು ಗೇಣಿ ಬತ್ತ ಅಳೆಯಲು ಮೂರುವರೆ ಅಥವಾ ನಾಲ್ಕು ಸೇರುಗಳು ಹಿಡಿಯುವ ಕೊಳಗವನ್ನು ಮಾಡಿಸಿಟ್ಟುಕೊಂಡಿದ್ದರು. ತಮ್ಮ ಕೊಳಗದಲ್ಲೇ ಗೇಣಿ ಬತ್ತ ಅಳೆದುಕೊಡಬೇಕೆಂದು ರೈತರಿಗೆ ಕಡ್ಡಾಯ ಮಾಡುತ್ತಿದ್ದರು. ಅದಕ್ಕೆ ತಪ್ಪಿದರೆ ಜಮೀನು ಕಳೆದುಕೊಳ್ಳುವ ಅನಿಶ್ಚಿತತೆಯ ಬದುಕಿನ ಭಯದಿಂದಾಗಿ ರೈತರು ಯಾರೂ ಪ್ರತಿಭಟಿಸದೆ ಮೌನ ವಹಿಸಿದ್ದರು. ಇದಲ್ಲದೆ ಗೇಣಿ ರೈತ ಬತ್ತಕೊಡುವಾಗ ನಿಗದಿಪಡಿಸಿದ ಅಳತೆಯ ಬತ್ತವನ್ನು ಕೊಡುವುದಲ್ಲದೆ ಪ್ರತಿಯೊಂದು ಚೀಲಕ್ಕೆ ಹೆಚ್ಚು ಬತ್ತವೆಂದು ಒಂದು ಕೊಳಗವನ್ನು ಹೆಚ್ಚಾಗಿ ಕೊಡಬೇಕಾಗಿತ್ತು.

ರೈತ ಸಂಘಟನೆಯು ಸ್ವಾತಂತ್ರ್ಯ ಬರುವ ಸ್ವಲ್ಪ ಮೊದಲೇ ಒಂದು ನೆಲೆಯನ್ನು ಕಂಡುಕೊಂಡಿತ್ತು. ಕಾಂಗ್ರೆಸ್‌ನ ಪ್ರಮುಖರು ಮತ್ತು ಮುಂದೆ ಸಚಿವರಾಗಿ ಕೀರ್ತಿಪಡೆದ ಕಡಿದಾಳ್ ಮಂಜಪ್ಪನವರು (ನೋಡಿ) 1945ರಲ್ಲಿಯೇ ತೀರ್ಥಹಳ್ಳಿಯಲ್ಲಿ ಮಲೆನಾಡು ಗೇಣಿ ರೈತ ಸಂಘವನ್ನು ಸ್ಥಾಪಿಸಿದ್ದರು. ಕಡಿದಾಳರೂ ಒಂದು ಗೇಣೀ ಕುಟುಂಬ ಮೂಲದಿಂದಲೇ ಬಂದವರಾಗಿದ್ದು ಅವರು ಭೂಮಾಲೀಕರು ಮತ್ತು ಒಕ್ಕಲುಗಳ ನಡುವೆ ಸಂಧಾನ ಮಾರ್ಗದಲ್ಲಿ ಸಮಸ್ಯೆಗಳ ಪರಿಹಾರವಾಗಬೇಕೆಂದು ನಂಬಿದ್ದರು. ಸಾಗರ ತಾಲ್ಲೂಕಿನಲ್ಲಿಯೂ ಅದೇವರ್ಷ ಗೇಣಿ ರೈತರ ಸಂಘಟನೆ ರೂಪುತಳೆಯಿತು. ಸ್ವಾತಂತ್ರ್ಯ ಹೋರಾಟಗಾರ ಎಚ್.ಗಣಪತಿಯಪ್ಪ, ಮರತ್ತೂರಿನ ಡಿ.ಮೂಕಪ್ಪ, ಮನೆಘಟ್ಟ ಚೌಡಪ್ಪ, ಎಲಗಳಲೆ ಡಿ.ಆರ್.ಹುಚ್ಚಪ್ಪ, ಬರಸಿನ ದ್ಯಾವಪ್ಪ, ಕಾಗೋಡಿನ ಪವಾಜಿ ಬೀರನಾಯ್ಕ,ಮಂಡಗಳಲೆ ಹೊಸೂರು ರಾಮನಾಯ್ಕ ಮೊದಲಾದ ಮುಖಂಡರು ಈ ಸಂಘಟನೆಯಲ್ಲಿ ಪಾಲ್ಗೊಂಡಿದ್ದರು. ಗೇಣಿದಾರರ ಸಮುದಾಯದ ಬಹುಭಾಗವಾಗಿದ್ದ ದೀವರ ಜನಾಂಗದ ಹಿರಿಯರು ಈ ಸಂಸ್ಥೆಯ ಮುಂಚೂಣಿಯಲ್ಲಿದ್ದರು. ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಗೇಣಿದಾರರಲ್ಲಿ ಅವರು ಜಾಗೃತಿ ಮೂಡಿಸತೊಡಗಿದರು.

ಆಗಿನ ಕಾಲಕ್ಕೆ ವಿದ್ಯಾವಂತರಾಗಿದ್ದ ಎಚ್.ಗಣಪತಿಯಪ್ಪನವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರದ ಸಮೀಪದ ಹೊಸೂರಿನವರು. ರೈತಕುಟುಂಬದಲ್ಲಿ ಹುಟ್ಟಿದ ಇವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಗಾಂಧೀವಾದಿಗಳಾಗಿದ್ದರು. ಸರ್ಕಾರಿ ನೌಕರಿ ಬಿಟ್ಟು ಖಾಸಗಿ ಶಾಲೆಯ ಉಪಾಧ್ಯಾಯರಾಗಿ ಜೀವನ ನಿರ್ವಹಿಸುತ್ತಿದ್ದರು. ಶೋಷಣೆಗೊಳಗಾದವರಲ್ಲಿ ಜಾಗೃತಿ ಉಂಟುಮಾಡುವುದು ಇವರ ಕಾರ್ಯನೀತಿಯಾಗಿತ್ತು. ಕಾಗೋಡು

ಹಿರೇನೆಲ್ಲೂರು ಗ್ರಾಮಕ್ಕೆ ಸೇರಿದ ಮಜ್ರೆ ಗ್ರಾಮ. ಇಲ್ಲಿಯ ಭೂಮಾಲೀಕರಾದ ಕೆ.ಜಿ.ಒಡೆಯರ್ ಕುಟುಂಬದವರು ಶಿವಮೊಗ್ಗ ಜಿಲ್ಲೆಯ ಭೂಮಾಲೀಕರಲ್ಲಿ ಪ್ರಮುಖರಾಗಿದ್ದರು. ಅವರು ಮೂವರು ಅಣ್ಣ ತಮ್ಮಂದಿರು. ಕಾಗೋಡು ಚಳವಳಿಯ ಸಂದರ್ಭದಲ್ಲಿ ಕಾಗೋಡಿನಲ್ಲಿದ್ದ ಮನೆಗಳಲ್ಲಿ ಲಿಂಗಾಯತರದಾಗಿದ್ದ ಮನೆ ಅದೊಂದೇ. ಈ ಕಾಗೋಡು ಗೌಡರ ಮನೆಗೆ ಏಳುಹಳ್ಳಿ ಗೌಡಿಕೆ ಇತ್ತು. ನೆರೆಹೊರೆಯ ಅನೇಕ ಊರುಗಳಲ್ಲಿ ಇವರ ಜಮೀನುಗಳಿದ್ದುವು. ಆಗಿನ ಕಾಲದಲ್ಲಿ ಎಕರೆಗೆ ನಾಲ್ಕಾಣೆಯಂತೆ ಮೂರು ಸಾವಿರ ರೂಪಾಯಿ ಕಂದಾಯ ಕಟ್ಟುತ್ತಿದ್ದರು. ಸಾವಿರಾರು ಎಕರೆಭೂಮಿ ಇವರಿಗೆ ವಂಶಪಾರಂಪರ್ಯವಾಗಿ ಬಂದಿದ್ದಿತ್ತು. ಕಾಗೋಡು ಮನೆತನದ ಕೆ.ಗುರುಬಸಪ್ಪಗೌಡ ಅಥವಾ ಕೆ.ಜಿ.ಒಡೆಯರ್ ನಡುಕಲ ಸಹೋದರರಾಗಿದ್ದು ಉನ್ನತ ವ್ಯಾಸಂಗ ಮಾಡಿದ್ದರು. ವಿದೇಶ ಪ್ರವಾಸ ಮಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು. ರಾಜ್ಯಮಟ್ಟದ ಅನೇಕ ಕಾಂಗ್ರೆಸ್ ನಾಯಕರಿಗೆ ನಿಕಟ ಒಡನಾಡಿಗಳಾಗಿದ್ದರು. ಇವರು ಶಿವಮೊಗ್ಗ ಬೆಂಗಳೂರುಗಳಲ್ಲಿ ಹೆಚ್ಚಾಗಿರುತ್ತಿದ್ದರು.

ಇಂತಹ ಪ್ರಭಾವಶಾಲಿ ಕುಟುಂಬದ ಗುರುವೇಗೌಡರು ಗೇಣಿ ರೈತರನ್ನು ತಮ್ಮ ಕೊಳಗದಲ್ಲೇ ಬತ್ತ ಅಳೆದುಕೊಡಲು ಒತ್ತಾಯಿಸುತ್ತಿದ್ದರು. ಕೊಡದಿದ್ದವರ ಮೇಲೆ ದರ್ಪ ತೋರಿಸುತ್ತಿದ್ದರು. ಇಂಥದ್ದೊಂದು ಪರಿಸ್ಥಿತಿಯಲ್ಲಿ ಗೇಣಿ ರೈತರಲ್ಲಿ ಹುಟ್ಟಿದ ಜಾಗೃತಿ ಕ್ರಮೇಣ ದಂಗೆಯ ರೂಪ ತಳೆಯತೊಡಗಿತು. ಇದರ ಫಲವಾಗಿ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ರೈತರು ಒಡೆಯರ ಮನೆಗಳಿಗೆ ಬಿಟ್ಟಿ- ಬಿಗಾರಿ ಕೆಲಸಗಳಿಗೆ ಹೋಗುವುದನ್ನು ನಿಲ್ಲಿಸಬೇಕು; ಪ್ರತಿವರ್ಷ ಗೇಣಿ ಬತ್ತ ಕೊಟ್ಟಿದ್ದಕ್ಕೆ ರಶೀದಿ ಪಡೆಯಬೇಕು; ಗೇಣಿ ಬತ್ತ ಅಳೆಯುವಾಗ ಸರ್ಕಾರಿ ಅಳತೆಯ ಮಾಪನವಾದ ಮೂರು ಸೇರಿನ ಕೊಳಗದಲ್ಲಿ ಅಳೆಯಬೇಕು; ರೈತರು ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಬೇಕು; ಗೇಣಿ ಜಮೀನಿನಿಂದ ಒಕ್ಕಲೆಬ್ಬಿಸದಂತೆ ಸರ್ಕಾರಕ್ಕೆ ರಕ್ಷಣೆ ನೀಡುವಂತೆ ಕೇಳಬೇಕು. ಇಂಥ ಅನೇಕ ಹೊಸ ವಿಚಾರಗಳು ರೈತ ಸಂಘದ ಸದಸ್ಯರಲ್ಲಿ ಚಲಾವಣೆಗೊಳ್ಳತೊಡಗಿದವು. ಈ ಬಗೆಯ ಸಂಘದ ಸಭೆಗಳಿಂದಾಗಿ ಪ್ರಭಾವಿತರಾದ ರೈತರು ಒಡೆಯರ ಮುಂದೆ ನಿಂತು ಧೈರ್ಯವಾಗಿ ತಮ್ಮ ಬೇಡಿಕೆಗಳನ್ನು ಮಂಡಿಸತೊಡಗಿದರು.

ಕಾಗೋಡಿನ ರೈತರಲ್ಲಿ ಜಾಗೃತಿ ಮೂಡಿಸುತ್ತಿದ್ದ ಎಲೆ ಕನ್ನಪ್ಪ ಗೇಣಿ ಬತ್ತ ಕೊಟ್ಟಿದ್ದಕ್ಕೆ ರಶೀದಿ ಕೇಳಿದನೆಂಬ ಕಾರಣಕ್ಕೆ ಕಾಗೋಡು ಗೌಡರು ಆತನನ್ನು ಹಿಡಿದು ಥಳಿಸಿದರು. ಈ ವಿಚಾರ ರೈತರಲ್ಲಿ ಕಿಚ್ಚು ಹಚ್ಚಿತು. ಆಗ ಸಾಗರ ತಾಲ್ಲೂಕು ರೈತಸಂಘದ ಮುಂಖಡರು ಕಾಗೋಡು ಒಡೆಯರ ದಬ್ಬಾಳಿಕೆಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಎದುರಾಗಿ ಸತ್ಯಾಗ್ರಹ ಹೂಡುವಂತೆ ಹುರಿದುಂಬಿಸಿದರು. ಈ ನಡುವೆ 1951 ಏಪ್ರಿಲ್ 16ರಂದು ಕಡಗಳಲೆ ಎಂಬ ಗ್ರಾಮದಲ್ಲಿ ಭೂಮಾಲೀಕರು ಮತ್ತು ರೈತರ ನಡುವೆ ಜಮೀನು ಉಳುತ್ತಿದ್ದಾಗ ಘರ್ಷಣೆ ನಡೆದು ರೈತರು ಆರಂಭ ಮಾಡುತ್ತಿದ್ದಾಗ ಅವರ ಮೇಲೆ ಹಲ್ಲೆಗಳು ನಡೆದವು. ಎತ್ತುಗಳನ್ನು ಬಿಚ್ಚಿ ಓಡಿಸಿ ನೇಗಿಲು ನೊಗಗಳನ್ನು ಕಡಿದು ಹಾಕಿ, ಹೊಡೆದು ಬಡಿದು ಅವರನ್ನು ಅಲ್ಲಿಂದ ಅಟ್ಟಲಾಯಿತು. ಈ ಸುದ್ದಿ ಕೂಡಲೇ ತಾಲ್ಲೂಕಿನಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು.

ಮಾರನೆಯ ದಿನ ಎಚ್.ಗಣಪತಿಯಪ್ಪನವರ ನೇತೃತ್ವದಲ್ಲಿ ಸಾವಿರಾರು ರೈತರು ಸಾಗರ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ತಹಸೀಲ್ದಾರರಿಗೆ ಮನವಿ ಸಲ್ಲಿಸಿ ಕಾನೂನನ್ನು ಕೈಗೆ ತೆಗೆದುಕೊಂಡವರ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿದರು. ಕಾಗೋಡಿನಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ನಡೆಸಲು ತೀರ್ಮಾನ ಮಾಡಲಾಯಿತು. ಏಪ್ರಿಲ್ 18ರಂದು ರೈತ ಸಂಘದ ಅಧ್ಯಕ್ಷರಾದ ಡಿ.ಮೂಕಪ್ಪನವರ (ಮಾಜಿ ಶಾಸಕರು) ಮುಖಂಡತ್ವದಲ್ಲಿ ಪ್ರಥಮ ಸತ್ಯಾಗ್ರಹ ತಂಡ ಧರಣಿ ಕುಳಿತು ಬಂಧನಕ್ಕೊಳಗಾಯಿತು. ಸರಕಾರ ನೂರಾರು ಪೊಲೀಸರನ್ನು ಒಡೆಯರ ಜಮೀನಿಗೆ ಪಹರೆ ಹಾಕಿತು. ರೈತರು ಅಲ್ಲಲ್ಲಿ ಚಳವಳಿ ನಡೆಸಿ ಲಾಠಿ ಏಟು ತಿಂದರೂ ಹೆದರದೆ ಬಂಧನಕ್ಕೊಳಗಾಗುತ್ತಿದ್ದರು. ಆಗ ಕಂದಾಯ ಸಚಿವರಾಗಿದ್ದ ಕಡಿದಾಳ್ ಮಂಜಪ್ಪನವರು ಕಾಗೋಡು ಭೂಮಾಲೀಕರಿಗೂ ರೈತರಿಗೂ ನಡುವೆ ಸಂಧಾನಸಭೆ ನಡೆಸಿದರು. ಆದರೆ ರೈತರಿಗೆ ಯಾವುದೇ ಭೂಮಿಯನ್ನು ಬಿಡಲು ಸಾಧ್ಯವಿಲ್ಲವೆಂದು ಗುರುವೇಗೌಡರು ಪಟ್ಟುಹಿಡಿದಾಗ ಈ ಸಂಧಾನ ವಿಫಲವಾಯಿತು. ಅನೇಕ ರೈತ ಮುಂದಾಳುಗಳು ಬಂಧಿತರಾದರು.

ಇದರಿಂದಾಗಿ ರೈತ ಚಳವಳಿ ದುರ್ಬಲಗೊಳ್ಳುತ್ತಾ ಸಾಗಿಬಂತು. 1951 ಮೇ 21ರಂದು ಎಚ್.ಗಣಪತಿಯಪ್ಪನವರು ಕಾಗೋಡಿನಲ್ಲಿ ರೈತ ಸಂಘದ ಸಭೆ ಏರ್ಪಡಿಸಿದರು. ಆಗ ಆ ಸಭೆಯಲ್ಲಿ ಸಮಾಜವಾದಿ ಪಕ್ಷದ ಮುಖಂಡರಾಗಿದ್ದ ತೀರ್ಥಹಳ್ಳಿ ತಾಲ್ಲೂಕಿನ ಶಾಂತವೇರಿ ಗೋಪಾಲಗೌಡರು ಭಾಗವಹಿಸಿದ್ದರು. ರೈತ ಸಂಘ ಮತ್ತು ಸಮಾಜವಾದಿ ಪಕ್ಷಗಳು ಒಟ್ಟಾಗಿ ಚಳವಳಿಯನ್ನು ಮುಂದುವರಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಗೋಪಾಲಗೌಡರು ಈ ಹೋರಾಟದ ನೇತೃತ್ವ ವಹಿಸಿದರು. 28ರ ಹರೆಯದ ಗೋಪಾಲಗೌಡರು ತಮ್ಮ ವಿದ್ಯಾರ್ಥಿದೆಸೆಯಿಂದಲೂ ಪುರೋಹಿತಶಾಹಿಯನ್ನು ಜಮೀನ್ದಾರಿ ದಬ್ಬಾಳಿಕೆಯನ್ನು ಮೂಢ ನಂಬಿಕೆಗಳನ್ನು ವಿರೋಧಿಸಿಕೊಂಡು ಬಂದಿದ್ದ ಹೋರಾಟಗಾರರಾಗಿದ್ದರು. 1948 ರಿಂದಲೇ ಅವರು ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಸಂಘಟನೆಯ ಹೊಣೆಹೊತ್ತಿದ್ದರು. ಅವರು ತೀರ್ಥಹಳ್ಳಿಯಲ್ಲಿ 1948ರಲ್ಲಿ ಸಂಘಟಿಸಿದ ರೈತ ಸಮಾವೇಶಕ್ಕೆ ರಾಮಾನಂದ ಮಿಶ್ರ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬಂದು ಭಾಗವಹಿಸಿದ್ದರು. ಹೀಗೆ ರೈತರೊಡನೆ ಸಂಪರ್ಕ ಮತ್ತು ರಾಜಕೀಯ ಪ್ರಬುದ್ಧತೆ ಪಡೆದಿದ್ದ ಗೋಪಾಲಗೌಡರ ನಾಯಕತ್ವ ಕಾಗೋಡು ಸತ್ಯಾಗ್ರಹಕ್ಕೆ ದೊರೆತದ್ದು ಅದರ ಶಕ್ತಿ ನೂರ್ಮಡಿಯಾಗಲು ಕಾರಣವಾಯಿತು (ನೋಡಿ: ಗೋಪಾಲಗೌಡ, ಶಾಂತವೇರಿ).

ಕಾಗೋಡಿನ ಒಡೆಯರ ಮನೆತನದ ಕೆ.ಜಿ.ಒಡೆಯರು ಅಂದಿನ ಕಾಂಗ್ರೆಸ್‌ನ ಪ್ರಮುಖ ಮುಂದಾಳಾಗಿದ್ದುದರಿಂದ ಸಮಾಜವಾದಿ ಪಕ್ಷ ಈ ಚಳವಳಿಯನ್ನು ಒಂದು ಮಾದರಿ ಹೋರಾಟವಾಗಿ ರೂಪುಗೊಳಿಸಲು ಸಜ್ಜಾಯಿತು. ಈ ಚಳವಳಿಯಲ್ಲಿ ಸಮಾಜವಾದಿ ಕಾರ್ಯಕರ್ತರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ರೈತರೊಂದಿಗೆ ಭಾಗವಹಿಸಿದರು. ಗೋಪಾಲಗೌಡರು, ವೈ.ಆರ್.ಪರಮೇಶ್ವರಪ್ಪ, ಜಿ.ಸದಾಶಿವರಾವ್, ಗರುಡಶರ್ಮ, ಖಾದ್ರಿಶಾಮಣ್ಣ, ಟಿ.ಎನ್.ಗಂಡುಗಲಿ, ಬೀ.ಸು.ಕೃಷ್ಣಮೂರ್ತಿ, ಸಿ.ಜಿ.ಕೆ. ರೆಡ್ಡಿ, ಮುಲ್ಕಾಗೋವಿಂದ ರೆಡ್ಡಿ, ಈಶ್ವರಪ್ಪ ಮೊದಲಾದವರು ಗೇಣಿ ರೈತರ ನಡುವೆ ಶಿಬಿರಗಳನ್ನು ನಡೆಸುತ್ತಾ ಹಳ್ಳಿ ಹಳ್ಳಿಗಳನ್ನು ಸುತ್ತುತ್ತಾ ರೈತರನ್ನು ಸತ್ಯಾಗ್ರಹಕ್ಕೆ ಹುರಿದುಂಬಿಸುತ್ತಿದ್ದರು. ಗೋಪಾಲಗೌಡರು, ಎಚ್.ಗಣಪತಿಯಪ್ಪ ಸೇರಿದಂತೆ ಅನೇಕ ಮುಖಂಡರು ಬಂಧನಕ್ಕೊಳಗಾಗಿ ಜೈಲು ಸೇರಿದರು. ಆಗ ಶಾಂತವೇರಿ ಗೋಪಾಲಗೌಡರು ರಾಷ್ಟ್ರಮಟ್ಟದ ಸಮಾಜವಾದಿ ನಾಯಕರಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ್, ಪಂಡಿತ ರಮಾನಂದ ಮಿಶ್ರರಂತಹವರ ಗಮನವನ್ನು ಈ ಚಳವಳಿಯತ್ತ ಸೆಳೆದರು. ಅವರು ತಮ್ಮ ಇತರ ಕಾರ್ಯಕ್ರಮಗಳನ್ನು ಬದಿಗೊತ್ತಿ ಕಾಗೋಡಿನತ್ತ ಧಾವಿಸಿದರು. ಈ ನಾಯಕರನ್ನು ನೋಡಲು ಮಲೆನಾಡಿನ ಜನಸಾಗರವೇ ಸೇರಿತ್ತು.

ಲೋಹಿಯಾರವರು ಕಾಗೋಡಿನಲ್ಲಿ ರೈತ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ್ದಲ್ಲದೆ ಸ್ವತಃ ಒಡೆಯರ ಜಮೀನನ್ನು ಸುತ್ತುವರಿದಿದ್ದ ಬೇಲಿಯನ್ನು ಕಿತ್ತೆಸೆದು ಮುನ್ನುಗ್ಗಿದ್ದರು. ಆಗ ರೈತ ಸಮೂಹ ಪ್ರವಾಹದೋಪಾದಿಯಲ್ಲಿ ನುಗ್ಗಿಬಂದು ಎಲ್ಲ ಬಂಧನಗಳನ್ನು ಕಿತ್ತೆಸದು ಉಳುವವನೆ ನೆಲದೊಡೆಯ, ಇಂಕ್ವಿಲಾಬ್ ಜಿಂದಾಬಾದ್ ಎಂಬ ಘೋಷಣೆಗಳನ್ನು ಮೊಳಗಿಸುತ್ತ ರೈತ ಚಳವಳಿಗೆ ಹೊಸ ಇತಿಹಾಸ ಬರೆಯಿತು. ಅಂದು ರಾತ್ರಿ ಸಾಗರ ರೈಲ್ವೆ ನಿಲ್ದಾಣದಲ್ಲಿ ಲೋಹಿಯಾ ಅವರನ್ನು ಬಂಧಿಸಲಾಯಿತು. ಅವರು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ರೈತರ ಹೋರಾಟದ ನ್ಯಾಯಸಮ್ಮತ ಬೇಡಿಕೆಯನ್ನು ಪ್ರತಿಪಾದಿಸಿದರು. ಈ ಸುದ್ದಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಯಿತು. ಆಗ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂರವರು ಕೂಡಲೇ ಲೋಹಿಯಾ ಅವರ ಮೇಲೆ ಹೂಡಿದ್ದ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದರು. ರೈತ ಚಳವಳಿ ಹಾಗೂ ಕಾಗೋಡು ಸತ್ಯಾಗ್ರಹ ಚಳವಳಿ ನಿಂತಿತು. ಆದರೆ ರೈತರು ಹಿಂದಿಗಿಂತ ಹೆಚ್ಚು ಸಂಘಟಿತರಾಗಲು ಇದು ನಾಂದಿಯಾಯಿತು.

ಕಾಗೋಡು ಸತ್ಯಾಗ್ರಹ ಮೈಸೂರು ರಾಜ್ಯದ ಮೇಲೆ ಪರೋಕ್ಷವಾಗಿ ರಾಜಕೀಯ ಮತ್ತು ಸಾಮಾಜಿಕ ಪರಿಣಾಮ ಬೀರಿತು. ಜೊತೆಗೆ ಗೇಣಿ ರೈತವರ್ಗದ ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆಯನ್ನು ಒದಗಿಸಿತು. ರಾಷ್ಟ್ರಮಟ್ಟದಲ್ಲಿಯೂ ಚಳವಳಿ ಗುರುತಿಸಲ್ಪಟ್ಟಿತು. ಶಾಂತವೇರಿ ಗೋಪಾಲಗೌಡರು 1952ರಲ್ಲಿ ಸಾಗರ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ವತಿಯಿಂದ ವಿಧಾನಸಭೆಗೆ ಸ್ಪರ್ಧಿಸಿ ಚುನಾಯಿತರಾದರು. ವಿಧಾನಸಭೆ ರಚಿತವಾದ ಸ್ವಲ್ಪ ಕಾಲದಲ್ಲೇ ಗೇಣಿದಾರರ ಶಾಸನ ಜಾರಿಗೆ ಬಂದಿತ್ತು. ಮುಂದೆ 1961ರ ಜತ್ತಿ ಸಮಿತಿ ವರದಿಯನ್ನು ಆಧರಿಸಿ ಮತ್ತೊಂದು ಗೇಣಿ ಶಾಸನವನ್ನು ರಚಿಸಲಾಯಿತು. ಅದು 1965ರಲ್ಲಿ ಜಾರಿಗೆ ಬಂತು. ಈ ಕಾಯಿದೆಗಳು ರೈತರ ಹಕ್ಕನ್ನು ಮತ್ತು ಉಳುವ ರೈತನೆ ನೆಲದೊಡೆಯನಾಗುವ ಅವಕಾಶವನ್ನು ಹೆಚ್ಚಿಸಿದ್ದವು. ಈ ಕಾಯಿದೆ ರಚನೆಯಲ್ಲಿ ಆಗ ಕಂದಾಯ ಸಚಿವರಾಗಿದ್ದ ಮಲೆನಾಡ ಗಾಂಧಿಯೆಂದು ಪ್ರಸಿದ್ಧರಾದ ಕಡಿದಾಳ್ ಮಂಜಪ್ಪನವರ ಪಾತ್ರವೂ ಗಣನೀಯವಾಗಿತ್ತು. 1974ರಲ್ಲಿ ಡಿ.ದೇವರಾಜ ಅರಸು ಅವರ ಸರ್ಕಾರ ತಂದ ಸಮಗ್ರ ಗೇಣಿ ಶಾಸನ ಸಂಪೂರ್ಣವಾಗಿ ಸಮಗ್ರ ಗೇಣಿ ಜಮೀನಿಗೆ ಗೇಣಿದಾರರನ್ನು ಒಡೆಯರನ್ನಾಗಿ ಮಾಡುವಲ್ಲಿ ದೊಡ್ಡ ಹೆಜ್ಜೆಯಾಯಿತು. ಅಲ್ಲಿಗೆ ಕಾಗೋಡು ಸತ್ಯಾಗ್ರಹ ಯಾವ ಧ್ಯೇಯೋದ್ದೇಶಗಳಿಗಾಗಿ ಹುಟ್ಟಿಕೊಂಡಿತೋ ಅದು ಪೂರ್ಣಗೊಂಡಂತಾಯಿತು. (ಎನ್.ಎಚ್.ಎಂ.)

**ಕಾಡಸಿದ್ಧೇಶ [1] :** ಸು.18ನೆಯ ಶತಮಾನ. ಇಷ್ಟಲಿಂಗಶತಕದ ಕರ್ತೃ. ವೀರಶೈವ ಕವಿ. ಇಷ್ಟಲಿಂಗಶತಕದಲ್ಲಿ ವೃತ್ತಛಂದಸ್ಸಿನ 111 ಪದ್ಯಗಳಿವೆ. ಪರ್ವತೇಶನ ಅಂಗ್ಯೆಯೊಳೊಗೆದಾತ ಭಕ್ತರಣುಗ ಕಾಡಸಿದ್ಧೇಶ ಎಂದು ಹೇಳಿಕೊಂಡಿರುವುದರಿಂದ ಈತನ ಗುರು ಪರ್ವತೇಶ ಎಂದು ತಿಳಿದು ಬರುತ್ತದೆ. ಚತುರಾಚಾರ್ಯಪುರಾಣವನ್ನು ಬರೆದ ಪರ್ವತೇಶನೂ (ಸು.1698) ಈತನೂ ಒಬ್ಬನೇ ಆದ ಪಕ್ಷದಲ್ಲಿ ಈತನ ಕಾಲ ಸು.1725 ಎಂದು ಊಹಿಸಬಹುದು. ಇಷ್ಟಲಿಂಗಶತಕದಲ್ಲಿನ ಪ್ರತಿಯೊಂದು ಪದ್ಯವೂ ಶ್ರೀ ಇಷ್ಟಲಿಂಗೇಶ್ವರಾ ಎಂದು ಮುಗಿಯುತ್ತದೆ. ಶಿವಾಧಿಕ್ಯವನ್ನು ಹೆಚ್ಚಾಗಿ ವರ್ಣಿಸಿರುವುದರಿಂದ ಈ ಗ್ರಂಥಕ್ಕೆ ಶಿವಾಧಿಕ್ಯ ಎಂಬ ಹೆಸರೂ ಉಂಟು. ಒಂದು ಪದ್ಯ ಹೀಗಿದೆ:

> ಜಗಮಂ ರಕ್ಷಿಪ ದೇವ ತಾನೆ ಗುರುವಿಂ ಹಸ್ತಾಬ್ಜದಲ್ಲೊಪ್ಪಿರಲ್
> ಬಗೆಯಿಂ ಪೂಜಿಸಿ ಮುಕ್ತರಾಗಿ ಭವಪಾರಾವಾರಮಂ ದಾಂಟದೇ
> ನಗೆಗೇಡಾಗಿ ಕುಜಾತಿಗೂಡಿ ಕುಣಿದಾಡೀ ಪಾಡಿ ಭೂತಂಗಳಂ
> ಮಿಗಿಲಾರಾಧಿಸಿ ಬೀಬ್ಬಿರೇಕೆ ಭವದೊಳ್ ಶ್ರೀ ಇಷ್ಟಲಿಂಗೇಶ್ವರಾ

*

**ಕಾಡಸಿದ್ಧೇಶ [2] :** ವಚನಕಾರ. ಕಾಡಿನೊಳಗಾದ ಶಂಕರಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯ ಪ್ರಭುವೇ ಎಂಬುದು ಈತನ ಅಂಕಿತ. ತನ್ನ ಗುರುಪರಂಪರೆಯನ್ನು ಒಂದು ವಚನದಲ್ಲಿ ಹೇಳಿಕೊಂಡಿದ್ದಾನೆ. ಅಲ್ಲಿನ ಇಪ್ಪತ್ತೆರಡು ಮಂದಿ ಗುರುವರ್ಯರಲ್ಲಿ ಕಡೆಯವನಾದ ಸಂಗಮೇಶ್ವರ ದೇವರೇ ಈತನ ಗುರು.

ಕಾಡಸಿದ್ಧೇಶನ 561 ವಚನಗಳು ದೊರಕಿವೆ. ಇವುಗಳಲ್ಲಿ 77 ಬೆಡಗಿನ ವಚನಗಳಿವೆ. ಕೆಲವು ವಚನಗಳಿಗೆ ಟಿಪ್ಪಣಿಯಿದೆ. ಅನೇಕ ವಚನಗಳಲ್ಲಿ ಉರ್ದು ಭಾಷೆಯ ಪದಗಳು ಹೇರಳವಾಗಿವೆ. ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಸಿದ್ಧಾಂತ ರಹಸ್ಯಗಳನ್ನು ತಿಳಿಸಬಲ್ಲ ವಚನಶಾಸ್ತ್ರದಲ್ಲಿ ಕಾಡಸಿದ್ಧೇಶ್ವರನ ವಚನಗಳಿಗೆ ಪ್ರಮುಖ ಸ್ಥಾನವಿದೆ. ಒಂದು ವಚನ ಹೀಗಿದೆ:

> ಒಮ್ಮನದವರಿಗೆ ಹಣವಿಲ್ಲ, ಇಮ್ಮನದವರಿಗೆ ಹಣವುಂಟು; ಇಮ್ಮನ ಸುಟ್ಟು, ಒಮ್ಮನ ನುಂಗಿ ಬಂದವರು ಮರಳಿ ಬಾರದೆ ಹೋದರು ನೋಡೆಂದನಯ್ಯ ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

*

**ಕಾಡ್ಯನಾಟ :** ಕರಾವಳಿಯ ಉಡುಪಿ, ಕುಂದಾಪುರ ಪರಿಸರದ ಪರಿಶಿಷ್ಟ ಸಮುದಾಯಗಳಲ್ಲಿ ಒಂದಾದ ಮೇರರ ಆರಾಧ್ಯ ದೈವದ ಒಂದು ಆಚರಣೆ. ಈ ಸಮುದಾಯದ ವಾಸಸ್ಥಾನ ಇರುವಲ್ಲೆಲ್ಲ ಕಾಡ್ಯನ ಮನೆ ಅಥವಾ ಕಾಡ್ಯನ ಗುಡಿಗಳು ಕಾಣಿಸುತ್ತವೆ. ಕಾಡ್ಯನಾಟದ ಸಂದರ್ಭದಲ್ಲಿ ಹಾಡಲಾಗುವ ಹಾಡುಗಳನ್ನು ಗಮನಿಸಿದಾಗ ಕಾಡ್ಯ ಎಂದರೆ ಕಾಳಿಂಗಸರ್ಪ ಎಂದು ತಿಳಿಯುತ್ತದೆ. ಕಾಡ್ಯನ ಗುಡಿಗಳಲ್ಲಿರುವ ಹುತ್ತ, ಸರ್ಪದ ಸಂಕೇತವಿರುವ ಕಲ್ಲುಗಳು, ಸರ್ಪದ ಉಬ್ಬುಶಿಲ್ಪವನ್ನು ರೇಖಿಸಿರುವ ಮಣ್ಣಿನ ಗಡಿಗೆಗಳು, ವಿವಿಧ ಪ್ರಾಣಿ ಪಕ್ಷಿ, ಕೃಷಿಸಂಬಂಧಿ ವಸ್ತುಗಳಿರುವ ಮಂಡಲ ಚಿತ್ತಾರಗಳು ಕಾಡ್ಯನಾಟ ಒಂದು ಸರ್ಪಾರಾಧನೆ ನಾಗಾರಾಧನೆ ಎನ್ನುವುದನ್ನು ತಿಳಿಸುತ್ತವೆ.

ಕಾಡ್ಯನಾಟಕ್ಕೆ ಸಿದ್ಧತೆ

ಕಾಡ್ಯನ ಗುಡಿ ಸಾಮಾನ್ಯವಾಗಿ ಜನವಸತಿಯಿಂದ ದೂರ ಕಾಡಿನೊಳಗೆ ಅಥವಾ ಊರ ಹೊರಗಿರುತ್ತದೆ. ಅದು ಬರಿಯ ಗುಡಿಯಲ್ಲ. ಕಾಡ್ಯನೇ ಪ್ರಧಾನವಾಗಿರುವ ಹಲವು ದೈವಗಳ ಒಂದು ಸಂಕೀರ್ಣ. ಇಂತಹ ಗುಡಿಗಳು ಗೋಡೆಗಳಿಂದ ಆವೃತವಾಗಿರುವುದಿಲ್ಲ, ಕಲ್ಲು ಕಂಬಗಳ ಮೇಲೆ ನಿಂತ ಹುಲ್ಲುಹಾಸಿನ ಚಾವಣಿಗಳಿರುತ್ತವೆ. ಗುಡಿಯ ನಡುಭಾಗದಲ್ಲಿ ಸುಮಾರು ಹತ್ತರಿಂದ ಹದಿನೈದು ಅಡಿಎತ್ತರಕ್ಕೆ ಬೆಳೆದ ಹುತ್ತವಿದ್ದು ಬುಡದಲ್ಲಿ ನಾಗರಕಲ್ಲುಗಳಿರುತ್ತವೆ. ಸುತ್ತಲೂ ನೂರಾರು ಸಂಖ್ಯೆಯ ವಿವಿಧ ಗಾತ್ರಗಳ ಮಣ್ಣಿನ ಕಲಶಗಳಿರುತ್ತವೆ. ಅವುಗಳ ಮೇಲೆ ಹೆಡೆ ಎತ್ತಿದ ಸರ್ಪದ ಉಬ್ಬುಶಿಲ್ಪಗಳಿರುತ್ತವೆ. ಕಾಡ್ಯನ ಗುಡಿಯ ಪರಿಸರದಲ್ಲಿ ಸ್ವಾಮಿ, ಬ್ರಹ್ಮ, ಯಕ್ಷಿ, ಉಮ್ಮಳ್ತಿ, ಬೊಬ್ಬರ‍್ಯ ಮುಂತಾದ ದೈವಗಳ ಕಲ್ಲುಗಳನ್ನೂ ಕಾಣಬಹುದು. ಭಕ್ತರು ಕಾಡ್ಯನನ್ನು ಅಮ್ಮ, ತಾಯಿ, ಕಾಳಿಕಾಂಬ, ವನದುರ್ಗಿ ಎಂಬ ಪರ್ಯಾಯ ನಾಮದಿಂದಲೂ ಗುರುತಿಸುವುದುಂಟು. ಕಾಡ್ಯನನ್ನು ಚರ್ಮರೋಗ, ದೃಷ್ಟಿದೋಷ, ಸಂತಾನ ಹೀನತೆಯ ಸಂದರ್ಭಗಳಲ್ಲಿ ಹರಕೆಹೊತ್ತು ಮೇರ ಸಮುದಾಯ ಆರಾಧಿಸುತ್ತದೆ.

ಕಾಡ್ಯನಾಟ ನಾಲ್ಕುರಾತ್ರಿ ಮೂರು ಹಗಲುಗಳ ಕಾಲ ನಡೆಯುವ ಒಂದು ಆಚರಣೆ. ಇದರಲ್ಲಿ ಹುತ್ತದ ಪೂಜೆಯಷ್ಟೇ ಮಹತ್ವ ಕಲಶ ಪೂಜೆಗೂ ಇದೆ. ವಿಧ್ಯುಕ್ತವಾಗಿ ಕುಂಬಾರರಿಂದ ಮಡಕೆಗಳ ತಯಾರಿ, ಪೂಜೆ, ಕುಲದ ಸ್ತ್ರೀಯರಿಂದಲೇ ಅವುಗಳನ್ನು ಹೊತ್ತು ತರುವಿಕೆ, ಕಲಶದೊಳಗೆ ನೀರೆರೆದು ಮೇಲೆ ಮಾವಿನ ಚಿಗುರು ಇರಿಸುವುದು, ಬರೆದ ಮಂಡಲ ಚಿತ್ತಾರಗಳ ಮೇಲೆ ಕಲಶಹೊತ್ತ ಹೆಣ್ಣು ನಿಂತಾಗ ಆಕೆಯ ಮೇಲೆ ಅಕ್ಕಿಕಾಳುಗಳನ್ನು ಚೆಲ್ಲುವುದು, ಕೊನೆಯಲ್ಲಿ ಕಲಶವನ್ನು ಹರಿವ ನೀರಲ್ಲಿ ತೊಳೆದುಕೊಂಡು ಬರುವುದು ಇವೆಲ್ಲವೂ ಕಾಡ್ಯ ಸಂತಾನಾಭಿಮಾನಿ ದೇವತೆ ಎಂಬುದನ್ನು ಸೂಚಿಸುತ್ತವೆ.

ಈ ಸಂಪ್ರದಾಯದ ಪ್ರಮುಖ ಕ್ರಿಯಾಶೀಲ ಪಾತ್ರಧಾರಿಗಳು ಕಾಡ್ಯನ ಪ್ರತಿನಿಧಿ ಅಥವಾ ಪಾತ್ರಿ ಹಾಗೂ ಇಡಿಯ ಕ್ರಿಯೆಯ ನಿಯಂತ್ರಕ ಬೈದ್ಯ. ಮಂಡಲ ಬರೆಯುವುದು ಕಾಡ್ಯನಾಟದ ಪ್ರಧಾನ ವಿಧಿ. ಸುಮಾರು ಹತ್ತು ಅಡಿ ವ್ಯಾಸದ ವೃತ್ತಾಕಾರದ ಮಂಡಲವನ್ನು ಪಂಚವರ್ಣದ ಹುಡಿಯಿಂದ ಬರೆಯುತ್ತಾರೆ. ಮಂಡಲದ ಮಧ್ಯದಲ್ಲಿ ಮುಹೂರ್ತದ ಕಂಬವಿರುತ್ತದೆ. ಆದಿಮ ಸಮಾಜದಿಂದ ಅಪ್ರಜ್ಞಾಪೂರ್ವಕವಾಗಿ ಇಳಿದು ಬಂದ ನೆನಪುಗಳನ್ನು ಇಲ್ಲಿನ ಚಿತ್ತಾರಗಳು ಪ್ರತಿನಿಧಿಸಿದಂತೆ ತೋರುತ್ತದೆ. ಈ ಸಮುದಾಯದ ಸಾಮೂಹಿಕ ಬದುಕನ್ನು ಪ್ರಭಾವಿಸಿದ ಸೂರ್ಯ, ಚಂದ್ರ, ನಕ್ಷತ್ರ, ದೇವತೆಗಳು, ಕಮಲದ ಹೂ, ಹೊನ್ನರಳಿ ಮರ, ಕಾಗೆ, ಗೂಗೆ, ಗುಬ್ಬಚ್ಚಿ, ನವಿಲು, ಒನಕೆ, ಒರಳು, ಗೆರಸೆ, ದೊರು, ಚೆನ್ನೆಮಣೆ, ಡೋಲು, ಕಾಡ್ಯ (ಕರಿನಾಗ), ನಾಗ (ಹಳದಿನಾಗ) - ಇತ್ಯಾದಿಗಳನ್ನು ಮಂಡಲ ಚಿತ್ತಾರ ಪ್ರತಿನಿಧಿಸುತ್ತದೆ. ಹಾಡುಗಳಲ್ಲಿ ಮೇಲಿನ ವಸ್ತುಗಳು ಒಂದಲ್ಲ ಒಂದು ರೀತಿಯಲ್ಲಿ ಸಂಬಂಧವನ್ನು ಪಡೆಯುತ್ತವೆ. ಕಾಡ್ಯನಾಟದ ಎರಡನೆಯ ಮತ್ತು ಮೂರನೆಯ ರಾತ್ರಿಗಳಲ್ಲಿ ಮಂಡಲ ಬರೆದು ಐದು ಹೊಸ ಮಣ್ಣಿನ ಕಲಶಗಳನ್ನು ಅದರ ಮೇಲಿರಿಸಿ ಬೈದ್ಯ (ಪೂಜಾರಿ) ಹಾಡು ಕುಣಿತಗಳೊಂದಿಗೆ ಪೂಜೆ ಸಲ್ಲಿಸುತ್ತಾನೆ.



ಕಾಡ್ಯನಾಟದ ಪೂಜಾರಿ

ಕಾಡ್ಯನಾಟದ ಆರಾಧನಾ ವಿಧಿಗಳ ನಿಯಂತ್ರಕ ಬೈದ್ಯ. ಇವನಿಗೂ ಇವನ ಕುಟುಂಬದವರಿಗೂ ಕಾಡ್ಯನ ಮನೆಯ ಎದುರು ವಿಶೇಷ ಚಪ್ಪರವನ್ನು ನಿರ್ಮಿಸಲಾಗುತ್ತದೆ. ಅಲ್ಲಿ ಬೈದ್ಯ ಹಾಗೂ ಇವನ ಸಹಾಯಕರು ಡೋಲು ಬಡಿಯುತ್ತ ನಾಲ್ಕು ದಿನಗಳ ಕಾಲ ಹಾಡು ಹೇಳುತ್ತಿರುತ್ತಾರೆ. ಕಲಶಗಳನ್ನು ಹೊತ್ತುತರುವ ಸಂದರ್ಭ,. ಕಲಶಗಳಿಗೆ ಪೂಜೆ, ಕಲಶಗಳನ್ನು ಹೊತ್ತು ಊರಾಡಲು ಹಾಗೂ ಹರಿವ ನದಿಯಲ್ಲಿ ಕಲಶ ತೊಳೆಯಲು ಹೋಗುವ ಸಂದರ್ಭಗಳಲ್ಲಿ ಮಹಿಳೆಯರು ಹಾಡು ಹೇಳುತ್ತಾರೆ. ಈ ಹಾಡುಗಳು ಕಥೆ ಅಥವಾ ಐತಿಹ್ಯಗಳ ರೂಪದಲ್ಲಿರದೆ ಆಚರಣೆಗಳ ಘಟನಾವಳಿಗಳ ವಿವರಣಾತ್ಮಕ ರೂಪದಲ್ಲಿರುತ್ತವೆ. ಬೈದ್ಯ ಹಾಡುವ ಗುರುಶಾಸ್ತ್ರ, ಕಂಬಕಡಿವಹಾಡು, ಮಂಡಲಬರೆವಹಾಡು ಇವು ಜನಪದ ಗೀತೆಗಳ ಮಾದರಿಯಲ್ಲಿರುತ್ತವೆ. ಕಾಡ್ಯನ ಹುಟ್ಟು, ಹೆಣ್ಣು ಮಕ್ಕಳ ಹುಟ್ಟು, ರಣಸಿರಿ ಹಾಡು ಇವುಗಳಲ್ಲಿ ಜೀವನಾವರ್ತನಗಳ ವಿವರ ವಿಶ್ವಸೃಷ್ಟಿಯ ಹಂತ, ಕೊರಗ ಕೊರತಿಯರಿಂದ ಮಾನವರ ವಿಕಾಸವಾದುದೆನ್ನುವ ಹೇಳಿಕೆ, ಭೂಮಿಯಲ್ಲಿ ಕೃಷಿಪದ್ಧತಿ ಆರಂಭ ಗೊಂಡುದರ ಹಿನ್ನೆಲೆ, ಜನಪದೀಯರ ವಿಶಿಷ್ಟ ಲೋಕದೃಷ್ಟಿ ಪ್ರಕಟವಾಗುತ್ತವೆ.

ಕಾಡ್ಯನಾಟದಲ್ಲಿ ವಿಧಿಕ್ರಿಯೆಯೊಳಗೆ ಕ್ರೀಡೆಯ ಸ್ವರೂಪದ ಅಂಬೋಡಿ ಆಡುವುದು ಹಾಗೂ ಹಿಡ್ಗಾಯಿ ಹಾಕುವುದು ಎಂಬ ಎರಡು ಆಚರಣೆಗಳು ಇವೆ. ಅಂಬೋಡಿ ಒಂದು ಬಗೆಯ ಅಣಕುಕಾಳಗ. ಪಾತ್ರಿಯ ಎದುರು ಯುವಕರ ಎರಡು ತಂಡ ಕೈಯಲ್ಲಿ ಉದ್ದನೆಯ ಬರಲುಗಳನ್ನು ಹಿಡಿದು ಎದುರು ಬದುರಾಗಿ ನಿಲ್ಲುತ್ತಾರೆ. ಎರಡು ಕಂಬಗಳಿಗೆ ಅಡ್ಡವಾಗಿ ಕಟ್ಟಿದ ಹುರಿಹಗ್ಗಕ್ಕೆ ಯುವಕರು ಪರಸ್ಪರ ಬರಲುಗಳನ್ನು ತಾಗಿಸುತ್ತಾರೆ. ಯುವಕರ ದೈಹಿಕಶಕ್ತಿ ಹಾಗೂ ಕ್ರೀಡಾಕ್ಷಮತೆಯನ್ನು ಸ್ಪರ್ಧೆಗೊಡ್ಡುವ ಅಣಕು ಕಾಳಗ ಇದಾಗಿರಬಹುದು. ಇಲ್ಲಿನ ಪರವಿರೋಧ ತಂಡಗಳನ್ನು ಬಂಧುತ್ವ ವ್ಯವಸ್ಥೆಯ (ಕಿನ್‌ಶಿಪ್) ಹಿನ್ನೆಲೆಯಲ್ಲಿ ಗುರುತಿಸಲಾಗುವುದು. ಹಿಡ್ಗಾಯಿ ಹಾಕುವ ಕ್ರೀಡಾಚರಣೆಯಲ್ಲಿ ಸಂಸಾರದ ಮಕ್ಕಳ ಗುಂಪಿನ ನಡುವೆ ಪಾತ್ರಿ ತೆಂಗಿನಕಾಯಿಯನ್ನು ಹಾರಿಸುವನು. ಅವರೊಳಗೆ ಆ ತೆಂಗಿನಕಾಯನ್ನು ಹಿಡಿಯುವ ಬಗ್ಗೆ ಮೇಲಾಟ ನಡೆಯುತ್ತದೆ. ಈ ಸೆಣಸಾಟದಲ್ಲಿ ಯಶಸ್ವಿಯಾದ ಹುಡುಗ ಕಾಡ್ಯನ ಗುಡಿಯ ಸಮೀಪದ ಬೆಣಗಲ್ಲಿಗೆ ಅದನ್ನು ಒಡೆಯಬೇಕು. ಎರಡನೆಯ ಬಾರಿ ನೆಂಟರು ಮಕ್ಕಳ ನಡುವೆ ಈ ಸ್ಪರ್ಧೆ ನಡೆಯುವುದು. ಸಾಮಾನ್ಯವಾಗಿ ಕ್ರೀಡೆಗಳಲ್ಲಿ ನಿಯಮವಿರುವಂತೆ ಇಲ್ಲೂ ಕೆಲವು ಖಚಿತ ನಿಯಮಗಳಿರುತ್ತವೆ. ಕ್ರೀಡಾಳುಗಳು ಈ ನಿಯಮಗಳನ್ನು ಮುರಿಯದಂತೆ ನಿಗಾವಹಿಸುವುದು ಪಾತ್ರಿಯ ಕೆಲಸ. ಜೊತೆಗೆ ಪ್ರೇಕ್ಷಕರೂ ನಿರ್ಣಾಯಕ ಪಾತ್ರವಹಿಸುವುದುಂಟು.

ಕಾಡ್ಯನಾಟ ಆಚರಣೆಯಲ್ಲಿ ಕಾಡ್ಯ ಕಾಳಿಂಗ ಸರ್ಪನ ರೂಪದಲ್ಲಿ ಅಮೂರ್ತವಾಗಿ ಆರಾಧನೆಗೊಳ್ಳುವ ಅಲೌಕಿಕ ಶಕ್ತಿ ಎನ್ನುವುದು ವಿಧಿ ಆಚರಣೆಗಳಿಂದ ವ್ಯಕ್ತಗೊಳ್ಳುವ ಸಂಗತಿ. ಅಂತಹ ಅಲೌಕಿಕ ಶಕ್ತಿಗಳು ಭೌತಪ್ರಪಂಚಕ್ಕಿಂತ ಭಿನ್ನವಾದ ಅಲೌಕಿಕ ಜಗತ್ತಿನಲ್ಲಿರುತ್ತವೆ ಎಂದು ತಿಳಿಯಲಾಗುತ್ತದೆ. ಅವುಗಳನ್ನು ಭಯಭಕ್ತಿಯಿಂದ ಆರಾಧಿಸುವುದಕ್ಕೆ ಮೇರ ಸಮುದಾಯ ರೂಪಿಸಿಕೊಂಡಿರುವ ವಿಶಿಷ್ಟ ಆಚರಣೆ ಇದಾಗಿದೆ. ಇದು ಸಾಮಾನ್ಯ ಆಚರಣೆಗಳಿಂದ ಭಿನ್ನವಾದ, ವಿಶಿಷ್ಟ ಕಾಲದಲ್ಲಿ, ಊರ ಹೊರಗಿನ ಪರಿಸರದಲ್ಲಿ (ಕಾಡಿನೊಳಗೆ) ನಡೆಯುತ್ತಿರುವುದನ್ನು ಗಮನಿಸಬೇಕು. ಇದನ್ನು ಮಾನವ ಪ್ರಪಂಚಕ್ಕೆ ವೈದೃಶ್ಯ ಲೋಕವೆಂದೂ ಮಧ್ಯಂತರ ಜಗತ್ತೆಂದೂ ವಿದ್ವಾಂಸರು ಗುರುತಿಸಿದ್ದಾರೆ. ಈ ವಾಸ್ತವವಲ್ಲದ ಭ್ರಾಮಕಪ್ರಪಂಚದಲ್ಲಿ ಮಾನವ ಶ್ರೇಯಸ್ಸು ಹಾಗೂ ಅರ್ಥವಂತಿಕೆಯನ್ನು ಪಡೆಯುತ್ತಾನೆ. ಕಾಡ್ಯನಾಟದಂತಹ ಆರಾಧನೆಯ ಸಂದರ್ಭದಲ್ಲಿ ಲೌಕಿಕ, ಅಲೌಕಿಕ, ಲೋಕಗಳ ನಡುವೆ ಒಂದು ಬಗೆಯ ಅಂತರ್‌ಸಂಬಂಧ ಏರ್ಪಡುತ್ತದೆ. ಅಲೌಕಿಕ ಶಕ್ತಿಗಳಾದ ಕಾಡ್ಯ, ನಾಗ, ಸೂರ್ಯ, ಚಂದ್ರ, ನಕ್ಷತ್ರ ಮುಂತಾದ ಶಕ್ತಿಗಳನ್ನು ಮಂಡಲ ಚಿತ್ತಾರದೊಳಗೆ ರೇಖಿಸಿ ಹಾಡು ಹೇಳಿದಾಗ ಅವು ಅಲ್ಲಿ ನೆಲೆಗೊಳ್ಳುತ್ತವೆ ಎಂಬ ನಂಬಿಕೆಯಿದೆ. ಹಾಗೆಯೇ ಈ ವಿಶಿಷ್ಟ ಶಕ್ತಿಗಳು ಆಚರಣೆಯ ಸಂದರ್ಭದಲ್ಲಿ ದೈವದ ಪಾತ್ರಿಯ ಮೂಲಕ ಅಭಿವ್ಯಕ್ತಗೊಳ್ಳುತ್ತವೆ. ಲೌಕಿಕ ಹಾಗೂ ಅಲೌಕಿಕ ಜಗತ್ತಿನ ಮಧ್ಯಸ್ಥ ಈ ಪಾತ್ರಿಯಾದರೆ ಆಚರಣೆಯ ಎಲ್ಲ ಕ್ರಿಯೆಗಳನ್ನು ಚಾಲನೆಗೊಳಿಸುವವ ಹಾಗೂ ನಿಯಂತ್ರಿಸುವವ ಬೈದ್ಯ.

ಕಾಡ್ಯನಾಟ ಒಂದು ಸಮುದಾಯದ ಸಾಮೂಹಿಕ ಹಬ್ಬ. ಇದರಲ್ಲಿ ಭಾಗವಹಿಸುವವರು ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆಯೇ ಹೊರತು ವೀಕ್ಷಕರಾಗಿ ಉಳಿಯುವುದಿಲ್ಲ. ಕೂಡುಕಟ್ಟಿನ ಸದಸ್ಯರೆಲ್ಲರೂ ನಾಲ್ಕುರಾತ್ರಿ ಮೂರು ಹಗಲು ಕಾಡ್ಯನ ಮನೆಯ ಪರಿಸರದಲ್ಲೇ ಉಳಿಯುತ್ತಾರೆ. ಈ ಬಗೆಯ ಸಾಮೂಹಿಕ ಪಾಲ್ಗೊಳ್ಳುವಿಕೆ ಅವರಲ್ಲಿ ಒಂದು ಬಗೆಯ ಸಾಂಘಿಕ ಏಕತೆಯನ್ನು ರೂಪಿಸುತ್ತದೆ. ಇದರಿಂದಾಗಿ ಪ್ರತಿಯೊಬ್ಬನೂ ಸಮಾಜದೊಳಗೆ ತನ್ನ ಸ್ಥಾನ ಹಾಗೂ ಕರ್ತವ್ಯಗಳನ್ನು ಗುರುತಿಸಿಕೊಳ್ಳುವಂತಾಗುತ್ತದೆ.

ಧಾರ್ಮಿಕ ಆಚರಣೆಯ ಚೌಕಟ್ಟಿನೊಳಗೆ ಜನಪದ ರಂಗಭೂಮಿಯ ಪ್ರಕಾರಗಳು ಪ್ರದರ್ಶನಗೊಳ್ಳುವುದು ಸಹಜ ಸಂಗತಿ. ಕಾಡ್ಯನಾಟದಲ್ಲಿನ ಆಶುಪ್ರಹಸನ ರೂಪದ ಕೋಲಬಲಿ - ಹಗರಣಗಳು ಇಡಿಯ ಆಚರಣೆಗೆ ನಾಟಕೀಯತೆಯನ್ನು ತರುತ್ತವೆ. ಸಮಾಜದ ದುರ್ಬಲ ವರ್ಗವೊಂದು ಇಲ್ಲಿನ ಜಾತಿಪದ್ಧತಿ, ಏರು ಶ್ರೇಣಿ ವ್ಯವಸ್ಥೆ, ಮಡಿ ಮೈಲಿಗೆಯಿಂದ ಹತ್ತಿಕ್ಕಲ್ಪಟ್ಟ ಭಾವವನ್ನು ತುಟಿತೆರೆದು ಮಾತನಾಡುವ ದನಿಯನ್ನು ಇಲ್ಲಿ ಪಡೆಯುತ್ತದೆ. ಎಂಬುದು ಗಮನಿಸತಕ್ಕ ಅಂಶ. ಭಾಗಾಳುಗಳಲ್ಲಿನ ಉತ್ಸಾಹ, ಉಲ್ಲಾಸಗಳನ್ನೂ ಅವು ಮೂಡಿಸುವ

ಮನರಂಜನೆಯನ್ನೂ ಈ ಹಗರಣಗಳನ್ನು ಹೋಲುವ ಆಚರಣೆಗಳಲ್ಲಿ ಗುರುತಿಸಬಹುದು. ದಾಸರಕೋಲ, ಹುಲಿಹಂದಿಕೋಲ, ಕುದುರೆಕೋಲ, ಜ್ವರನಕೋಲ, ಕೆಮ್ಮನಕೋಲ, ತಿಗಣೆಕೋಲ, ಬ್ರಾಹ್ಮಣಕೋಲಗಳು ವಿಧಿಕ್ರಿಯೆಯ ಭಾಗಗಳಾಗಿ ನಡೆಯುತ್ತವೆ.

ಕರಾವಳಿ ಪ್ರದೇಶದಲ್ಲಿ ನಾಗಾರಾಧನೆ ಎನ್ನುವುದು ಸ್ಥಳೀಕ ಜನರ ಒಂದು ಆರಾಧನಾ ಪದ್ಧತಿ. ನಾಗದರ್ಶನ, ನಾಗಮಂಡಲ, ಆಶ್ಲೇಷ ಬಲಿ ಮುಂತಾದ ನಾಗಸಂಬಂಧಿ ವೈದಿಕ ಆಚರಣೆಗಳು ಈ ಪ್ರದೇಶದಲ್ಲಿ ವ್ಯಾಪಕವಾಗಿದ್ದರೂ ಕಾದ್ಯನಾಟ (ಮೇರ), ಸ್ವಾಮಿಕೋಲ (ಪಾಣರು) ಗಳಂತಹ ಆಚರಣೆಯನ್ನು ಕಂಡಾಗ ಸರ್ಪಾರಾಧನೆ ಮೂಲತಃ ಒಂದು ಅವೈದಿಕ ಹಿನ್ನೆಲೆಯುಳ್ಳ ಆಚರಣೆ ಎಂಬ ನಿರ್ಧಾರಕ್ಕೆ ಬರಬಹುದಾಗಿದೆ. (ಎ.ವಿ.ಎನ್.ಎ.)

**ಕಾದ್ರೊಳ್ಳಿ :** ಬೆಳಗಾಂವಿ ಜಿಲ್ಲೆ ಸಂಪಗಾವ ತಾಲ್ಲೂಕಿನ ಒಂದು ಗ್ರಾಮ. ಬೈಲಹೊಂಗಲದಿಂದ 19ಕಿಮೀ ದೂರದಲ್ಲಿದೆ. ಈ ಗ್ರಾಮದ ಪೂರ್ವದ ಹೆಸರು ಕಂದರಹಳ್ಳಿ ಎಂದು ಇಲ್ಲಿನ 1075ರ ಶಾಸನದಿಂದ ತಿಳಿದುಬರುತ್ತದೆ. ಈ ಸ್ಥಳದ ಹೆಸರನ್ನು ಚೆನ್ನಬಸವಣ್ಣ ಮತ್ತು ಕಳಚುರಿ ಸೈನ್ಯದ ನಡುವೆ ಹೋರಾಟದ ಸಂದರ್ಭದೊಡನೆ ತಳಕು ಹಾಕುವ ಒಂದು ಪರಿಪಾಠ ಬೆಳೆದುಬಂದಿದೆ. ಇಲ್ಲಿ ವೀರಭದ್ರ, ಹನುಮಂತ, ದ್ಯಾಮವ್ವ ಮತ್ತು ರುದ್ರದೇವರ ಗುಡಿಗಳಿವೆ. ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಲ್ಪಟ್ಟ ವೀರಭದ್ರ ದೇವರ ಗುಡಿಯಲ್ಲಿ ಮೂರು ಶಾಸನಗಳು ಮತ್ತು ಚಾಳುಕ್ಯರ ಕಾಲದ ಪ್ರಾಚೀನ ಅವಶೇಷಗಳು ಇವೆ.

ವೀರಭದ್ರ ದೇವರ ಗುಡಿಯ ಮುಂದಿರುವ 1098ರ ಶಾಸನ ತ್ರಿಭುವನ ಮಲ್ಲನಿಗೆ (ವಿಕ್ರಮಾದಿತ್ಯ VI) ಸಂಬಂಧಿಸಿದ್ದು ಗಂಗವಂಶದ ಅರಿಕೇಸರಿ ದೇವ ಕಾದರವಳ್ಳಿಯನ್ನು ಆಳುತ್ತಿದ್ದನೆಂದಿದೆ. ಇದೇ ಶಾಸನದಲ್ಲಿ ಕಾದರವಳ್ಳಿಯ ತರ್ದವಾಡಿ ಇಂದ್ರಯ್ಯನು ರಾಮೇಶ್ವರ ದೇವರಿಗೆ ಕೊಡಮಾಡಿದ ದತ್ತಿಯನ್ನು ದಾಖಲಿಸಿದೆ. ಇಲ್ಲಿದ್ದ ಪಾರ್ಶ್ವನಾಥನ ಮೂರ್ತಿಯನ್ನು ಈಗ ಕಿತ್ತೂರಿನ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಇಲ್ಲಿರುವ ಲಿಂಗಾಯತರ ಅದೃಶ್ಯಾನಂದ ಮಠವನ್ನು ಸೀಮಾಮಠ ಎಂದೂ ಕರೆಯಲಾಗುತ್ತದೆ. ಖಂಡೋಬಾ ಸಾಧು ಮಠವೂ (ಶ್ರೀರಾಮಮಂದಿರ) ಇಲ್ಲಿದೆ. ಬಸವ ಜಯಂತಿ ದಿನ ವೀರಭದ್ರ ದೇವರ ಜಾತ್ರೆ ನಡೆಯುವುದು. (ಆರ್.ಐ.)

**ಕಾನಕಾನಹಳ್ಳಿ ವರದಾಚಾರ್ಯ :** 1870-1942. ರಸಜ್ಞ ಬೋಧನೆಗೆ ಹೆಸರಾಗಿದ್ದ ಪ್ರಾಚೀನ ಸಂಪ್ರದಾಯದ ವಿದ್ವಾಂಸರು. ಬೆಂಗಳೂರು ಜಿಲ್ಲೆಯ ಕಾನಕಾನಹಳ್ಳಿಯಲ್ಲಿ (ಈಗಿನ ಕನಕಪುರ) ಜನಿಸಿದರು. ಇವರ ತಂದೆ ಲಕ್ಷ್ಮೀನರಸಿಂಹಾಚಾರ್ಯ, ತಾಯಿ ಕಲ್ಯಾಣಮ್ಮ ವರದಾಚಾರ್ಯರು. ಪ್ರಾರಂಭದ ವ್ಯಾಸಂಗವನ್ನು ಹುಟ್ಟೂರಿನಲ್ಲಿ ಮುಗಿಸಿ, ಆಮೇಲೆ ಮೈಸೂರಿಗೆ ಹೋಗಿ ಅಲ್ಲಿನ ಕರ್ನಾಟಕ ಭಾಷೋಜ್ಜೀವಿನೀ ವಿದ್ಯಾ ಶಾಲೆಯಲ್ಲಿ ಕನ್ನಡವನ್ನು ವಿಶೇಷವಾಗಿ ವ್ಯಾಸಂಗ ಮಾಡಿದರು. ಅನಂತರ ಮೈಸೂರು ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಮ್ಮಡಿ ಕೃಷ್ಣರಾಜ ಒಡೆಯರವರ ಆಸ್ಥಾನ ವಿದ್ವಾಂಸರೂ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಕಾವ್ಯ ವ್ಯಾಕರಣಗಳ ಅಧ್ಯಾಪಕರೂ ಆಗಿದ್ದ ಮಾತಾಮಹ ಸಜ್ಜಿ ತಾತಾಚಾರ್ಯ ಮತ್ತು ಮೈಸೂರಿನ ಸಜ್ಜಿ ವೆಂಕಟಾಚಾರ್ಯರ ಬಳಿ ಇವರು ವಿಶೇಷ ಶಿಷ್ಯವೃತ್ತಿ ನಡೆಸಿ, ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ ಪರಿಶ್ರಮ ಪಡೆದರು.

ವರದಾಚಾರ್ಯರು ಮೈಸೂರು ಮಹಾರಾಜರವರ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಅನಂತರ ಮಹಾರಾಜರವರ ಕಾಲೇಜಿನಲ್ಲಿ ಜೂನಿಯರ್ ಕನ್ನಡ ಪಂಡಿತರಾಗಿ ನೇಮಕಗೊಂಡು (ಸು.1917-18) ಸೇವೆಸಲ್ಲಿಸಿ ನಿವೃತ್ತರಾದರು (1927). ಅನಂತರ ಬನುಮಯ್ಯನವರ ಹೈಸ್ಕೂಲಿನಲ್ಲಿ ಆಗ ತಾನೆ ಪ್ರಾರಂಭವಾಗಿದ್ದ ಜೂನಿಯರ್ ಇಂಟರ್ ಮೀಡಿಯಟ್ ತರಗತಿಗೆ ಪಾಠ ಹೇಳಲು ಒಂದು ವರ್ಷಕಾಲ ವಿಶೇಷ ಪಂಡಿತರಾಗಿ ನೇಮಕಗೊಂಡರು. ಕನ್ನಡ ಸಾಹಿತ್ಯ ಪ್ರಪಂಚದ ಅನೇಕ ಹೆಸರಾಂತ ಸಾಹಿತಿಗಳು ಇವರ ಶಿಷ್ಯವರ್ಗಕ್ಕೆ ಸೇರಿದವರು.

ಇವರ ಪಾಂಡಿತ್ಯಕ್ಕೆ ನಿದರ್ಶನಗಳಾಗಿ ಕೆಲವು ಬರೆವಣಿಗೆಗಳು ಇವರಿಂದ ಮೂಡಿಬಂದಿವೆ. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ

ಕನ್ನಡ ಕೈಪಿಡಿಯಲ್ಲಿ (1927) ಶಬ್ದಾಲಂಕಾರ, ಅರ್ಥಾಲಂಕಾರ ಪ್ರಕರಣಗಳು ಇವರ ಬೆಲೆಯುಳ್ಳ ಕೊಡುಗೆ. ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಸಂಪುಟ-1 ಸಂಚಿಕೆ 3-4 (1916-17) ಪ್ರಕಟವಾಗಿರುವ ಕರ್ನಾಟಕ ಶಬ್ದಾನುಶಾಸನ ತತ್ತ್ವಾಲೋಕಂ ಎಂಬ ಲೇಖನಗಳಲ್ಲಿ ಶಬ್ದಾನುಶಾಸನದ ವ್ಯಾಖ್ಯಾನಕಾರ ಸೂತ್ರ ವೃತ್ತಿಕಾರನಾದ ಗ್ರಂಥ'ಕರ್ತ ಭಟ್ಟಾಕಳಂಕನಿಗಿಂತ ಭಿನ್ನನಾದವನು ಎಂದು ಸಾಧಿಸಿದ್ದಾರೆ. ಪಿ.ಆರ್.ಕರಿಬಸವಶಾಸ್ತ್ರಿಗಳು ಸಂಪಾದಿಸಿರುವ ಲಕ್ಷ್ಮೀಶನ ಜೈಮಿನಿ ಭಾರತದ ಪರಿಷ್ಕರಣ ಕಾರ್ಯದಲ್ಲಿ (1912) ವರದಾಚಾರ್ಯರು ನೆರವಾಗಿದ್ದುದನ್ನು ಶಾಸ್ತ್ರೀಗಳು ಸ್ಮರಿಸಿದ್ದಾರೆ.

ಇವರ ಪಾಂಡಿತ್ಯವನ್ನು ಮೆಚ್ಚಿಕೊಂಡು ಆಗಿನ ಮೈಸೂರು ಮಹಾರಾಜರು ಇವರನ್ನು ತಮ್ಮ ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿಕೊಂಡು ಗೌರವಿಸಿದರು. (ಎಂ.ವಿ.ಎಸ್.)

**ಕಾನಡಾ ಧುರೀಣ :** ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಕಟವಾಗುತ್ತಿದ್ದ ಒಂದು ವಾರಪತ್ರಿಕೆ. 1918ರಲ್ಲಿ ಈ ಪತ್ರಿಕೆಯನ್ನೂ ಇದರ ಮುದ್ರಣ ಪ್ರಕಾಶನಗಳಿಗಾಗಿ ಶ್ರೀರಾಮಕೃಷ್ಣ ಪ್ರಿಂಟಿಂಗ್ ಪ್ರೆಸ್ಸನ್ನೂ ಒಂದು ಖಾಸಗಿ ಪರಿಮಿತ ಸಹಕಾರಿ ಸಂಸ್ಥೆ ಪ್ರಾರಂಭಿಸಿತು. ಗಣಪತಿರಾವ್ ಮಾಸೂರ್‌ಕರ್ ಇದರ ವ್ಯವಸ್ಥಾಪಕರಾಗಿದ್ದರು. ಇವರ ಅನಂತರ ಸದಾಶಿವರಾವ್ ಮಾಸೂರ್‌ಕರ್ ಪತ್ರಿಕೆಯ ಕೊನೆಗಾಲದವರೆಗೂ ವ್ಯವಸ್ಥಾಪಕರಾಗಿದ್ದರು. ಪತ್ರಿಕೆ ಆರಂಭವಾಗಿ ಮೂರು ವರ್ಷಗಳವರೆಗೂ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಲೇಖನಗಳನ್ನು ಪ್ರಕಟಿಸುತ್ತಿತ್ತು. ರಾಮರಾವ್ ಎಸ್.ನಾಡಕರ್ಣಿ, ರಾಮರಾವ್ ಭಟಕಳಕರ, ಎಸ್.ಎಸ್.ಶಾಸ್ತ್ರಿ ಮತ್ತು ಜಿ.ಅಣ್ಣಾಜಿರಾವ್ ಅನುಕ್ರಮವಾಗಿ ಪತ್ರಿಕೆಯ ಸಂಪಾದಕರಾಗಿದ್ದರು. ಮುಂದೆ ಗಣೇಶ ರಾಮಯಾಜಿಯವರು ಪತ್ರಿಕೆ ನಿಲ್ಲುವತನಕ ದೀರ್ಘಕಾಲ ಅದರ ಸಂಪಾದಕರಾಗಿದ್ದರು. ಈ ಪತ್ರಿಕೆಗೆ ಅಖಿಲ ಕರ್ನಾಟಕದಲ್ಲಿ ಪ್ರಚಾರ ಪ್ರತಿಷ್ಠೆ ದೊರೆತು ಅನಂತರ ಇದು ಕರ್ನಾಟಕ ಧುರೀಣವಾಗಿ ಪರಿವರ್ತನೆಗೊಂಡಿತು. ಪತ್ರಿಕೆಯ ಪರಿಷ್ಕೃತ ಕನ್ನಡಶೈಲಿ, ದೊಡ್ಡ ಆಕಾರದ ರಚನೆ ಮತ್ತು ವಿಷಯ ಪ್ರೌಢಿಮೆಗಳಿಂದ ಜನಾದರಣೀಯವಾಗಿತ್ತು. ಪತ್ರಿಕೆಯಲ್ಲಿ ಉಗ್ರ ರಾಷ್ಟ್ರೀಯ ಸಂಪಾದಕೀಯ ಲೇಖನದ ಪ್ರಕಟಣೆಗಾಗಿ 1934ರ ಸುಮಾರಿಗೆ ಗಣೇಶ ರಾಮಯಾಜಿಯವರಿಗೆ ಬ್ರಿಟಿಷ್ ಸರ್ಕಾರ ಒಂದುತಿಂಗಳ ಜೈಲು ಶಿಕ್ಷೆ ವಿಧಿಸಿದ ಅನಂತರ ಇದು ಮತ್ತೆ ಹೊರಡಲಿಲ್ಲ. ಧುರೀಣ ಸಾಪ್ತಾಹಿಕ 1928ರ ಸುಮಾರಿಗೆ ಒಂದು ವಿಶೇಷಾಂಕವನ್ನು ಹೊರಡಿಸಿತು. 1952-54ರಲ್ಲಿ ಕರ್ನಾಟಕ ಧುರೀಣ ಹೊಸ ವ್ಯವಸ್ಥಾಪನೆಯಲ್ಲಿ ಕೆಲವು ಕಾಲ ಪ್ರಕಟವಾಗುತ್ತಿತ್ತು. ಆಗ ಜಿ.ಆರ್.ಹೆಗಡೆ ಮತ್ತು ರಾಮಚಂದ್ರ ವಾಲಗಳ್ಳಿ ಇವರು ಅನುಕ್ರಮವಾಗಿ ಪತ್ರಿಕೆಯ ಸಂಪಾದಕರಾಗಿದ್ದರು. *

**ಕಾಪಾಲಿಕ :** ವಾಮಾಚಾರಕ್ಕೆ ಹೆಸರಾಗಿದ್ದ ಒಂದು ಶೈವಪಂಥ. ನರಕಪಾಲವನ್ನು ಕೈಯಲ್ಲಿ ಧರಿಸಿ ಶಿವನನ್ನು ಭೈರವನ ಉಗ್ರ ರೂಪದಲ್ಲಿ ಪೂಜಿಸುವ ಆಚರಣೆಯಿಂದಾಗಿ ಈ ಪಂಥೀಯರು ಕಾಪಾಲಿಕರೆನಿಸಿದರು. ನರಕಪಾಲ, ಖಟ್ವಾಂಗಗಳೇ ಇವರ ಪ್ರಮುಖ ಚಿಹ್ನೆಗಳಾದುವು. ಮೈತ್ರಿ ಉಪನಿಷತ್ತ್, ಸೂತ್ರಸಂಹಿತೆ, ಪುರಾಣ ಮತ್ತು ತಂತ್ರಶಾಸ್ತ್ರಗಳಲ್ಲಿ ಕಾಪಾಲಿಕರನ್ನು ಕುರಿತ ಉಲ್ಲೇಖ ಕಂಡುಬಂದರೂ ಮಾಲತೀಮಾಧವ, ಚಂಡಕೌಶಿಕ ಮೊದಲಾದ ಗ್ರಂಥಗಳಲ್ಲಿ ಇವರ ಪಾತ್ರ ಪರಿಚಯ ಚೆನ್ನಾಗಿ

ದೊರೆಯುತ್ತದೆ. ಇವರ ಉಗ್ರತರವಾದ ಆಚರಣೆಗಳಿಂದಾಗಿ ಇವರಿಗೆ ಮಹಾವ್ರತಿಗಳು ಎಂಬ ಮತ್ತೊಂದು ಹೆಸರಿದ್ದಿತು. ಇವರ ಸಿದ್ಧಾಂತವನ್ನು ಸೋಮಸಿದ್ಧಾಂತ ಎಂದೂ ಕರೆಯಲಾಗಿದೆ. ಉಮಾಸಮೇತನಾದ ಶಿವನನ್ನು ಆರಾಧಿಸಿ ತತ್ಫಲವಾದ ಪುಣ್ಯದಿಂದ ಕೈಲಾಸವನ್ನು ಸೇರಿ ಅಲ್ಲಿ ಉಮೆಯಷ್ಟೇ ಸುಂದರಿಯಾದ ಸ್ತ್ರೀಯೊಡನೆ ವಿಹರಿಸುವುದೇ ಇವರ ಎಲ್ಲ ಆಚರಣೆಗಳ ಪರಮೋದ್ದೇಶ ಎಂಬುದಾಗಿ ಕೃಷ್ಣಮಿಶ್ರನ ಪ್ರಬೋಧಚಂದ್ರೋದಯ ಎಂಬ ಗ್ರಂಥದಲ್ಲಿ ಹೇಳಿದೆ.

ಉತ್ತರ ಭಾರತದಲ್ಲಿ ಹೆಚ್ಚು ಪ್ರಚಾರದಲ್ಲಿದ್ದ ಈ ಮತ ಕರ್ನಾಟಕದಲ್ಲೂ ಸ್ವಲ್ಪ ಮಟ್ಟಿಗೆ ಹರಡಿತ್ತು ಎಂಬುದಕ್ಕೆ ಕೆಲವು ಆಧಾರಗಳಿವೆ.

ಶಂಕರಾಚಾರ್ಯರು ತಾವು ಕರ್ನಾಟಕಕ್ಕೆ ಹೋಗುವುದಾಗಿ ಹೇಳಿದಾಗ, ಅಲ್ಲಿ ಕಾಪಾಲಿಕರು ಹೆಚ್ಚು; ಆದ್ದರಿಂದ ಹೋಗಬೇಡ ಎಂದು ವಿದರ್ಭದ ರಾಜ ಸೂಚಿಸಿದಂತೆ ವಿದ್ಯಾರಣ್ಯರ (14ನೆಯ ಶತಮಾನ) ಶಂಕರ ದಿಗ್ವಿಜಯ ಹೇಳುತ್ತದೆ. ಯಶಸ್ತಿಲಕ ಚಂಪೂಗ್ರಂಥ'ದಲ್ಲಿ (10ನೆಯ ಶತಮಾನ) ತಮ್ಮ ದೇಹದ ಮಾಂಸವನ್ನೇ ಮಾರುತ್ತಿದ್ದ ಮಹಾವ್ರತಿಗಳ ಪ್ರಸ್ತಾಪವಿದೆ. ಚೆನ್ನಬಸವಣ್ಣನವರು ಮಹಾವ್ರತಿಗಳನ್ನು ಹೆಸರಿಸುತ್ತಾರೆ. ಅಲ್ಲಮಪ್ರಭು ಕಾಪಾಲಿಕರ ಕೆಲವು ಆಚರಣೆಗಳನ್ನು ತಮ್ಮ ವಚನಗಳಲ್ಲಿ ಖಂಡಿಸಿದ್ದಾರೆ. ಶ್ರೀ ಶೈಲದಲ್ಲಿ ಗೋರಕ್ಷನೆಂಬ ವಾಮಾಚಾರಿಯನ್ನು ಅಲ್ಲಮಪ್ರಭು ವಾದದಲ್ಲಿ ಸೋಲಿಸಿ ಅವನಲ್ಲಿ ದೈವೀ ಪ್ರಜ್ಞೆಯನ್ನು ಮೂಡಿಸಿದ ಅಂಶ ಪ್ರಭುಲಿಂಗಲೀಲೆಯಲ್ಲಿ ಉಲ್ಲೇಖಿತವಾಗಿದೆ. ಶ್ರವಣಬೆಳಗೊಳದ 1100ರ ಒಂದು ಶಾಸನದಲ್ಲಿ ಕಾಪಾಲಿಕರು ಹಸಿಯ ತಲೆಗಳನ್ನು ಪೋಣಿಸಿ ಮಾಲೆ ಮಾಡಿಕೊಳ್ಳುತ್ತಿದ್ದ ವಿಷಯವಿದೆ. 1148ರ ಒಂದು ಶಾಸನದಲ್ಲಿ ಮಹಾವ್ರತಿಗಳನ್ನು ಹೆಸರಿಸಲಾಗಿದೆ. ಮಂಡ್ಯ ಜಿಲ್ಲೆಯ ಆದಿಚುಂಚನಗಿರಿಯಲ್ಲಿರುವ ಕೆಲವು ಸಮಾಧಿಗಳು ಕಾಪಾಲಿಕರವಿರಬಹುದೆಂಬ ಒಂದು ಅಭಿಪ್ರಾಯವಿದೆ.

12ನೆಯ ಶತಮಾನದಿಂದ ವೀರಶೈವಧರ್ಮ ಪ್ರಬಲಗೊಂಡಂತೆಲ್ಲ ಕಾಪಾಲಿಕ ಇತ್ಯಾದಿ ವಾಮಾಚಾರ ಶೈವಪಂಥಗಳು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡಂತೆ ತೋರುತ್ತದೆ. (ಎ.ಎಲ್.ಎಸ್.)

**ಕಾಫಿ** : ಕರ್ನಾಟಕದ ಪ್ರಮುಖ ತೋಟದ ಬೆಳೆಗಳಲ್ಲಿ ಒಂದು. ರಾಜ್ಯಕ್ಕೆ ವಿದೇಶಿ ವಿನಿಮಯ ಗಳಿಸಿಕೊಡುವ ಬೆಳೆಗಳಲ್ಲಿ ಕಾಫಿಯದು ಪ್ರಮುಖ ಸ್ಥಾನ. 1973-74ರ ಸಾಲಿನಲ್ಲಿ ಕಾಫಿಯ ರಫ್ತಿನಿಂದ ಭಾರತ ಗಳಿಸಿದ ವರಮಾನ 45 ಕೋಟಿ 48 ಲಕ್ಷ ರೂಪಾಯಿಗಳು. ಇದರಲ್ಲಿ ಸಿಂಹಪಾಲು ಕರ್ನಾಟಕದ ಕಾಫಿ ಬೆಳೆಯಿಂದ ಬಂದುದು. ಕರ್ನಾಟಕದಲ್ಲಿ ಕಾಫಿಯ ಬೇಸಾಯ ಪಶ್ಚಿಮ ಘಟ್ಟಗಳಿಗೆ ಸೀಮಿತವಾಗಿದೆ. ರಾಜ್ಯದಲ್ಲಿ 1973-74ರ ಅಂಕಿ ಅಂಶಗಳ ಪ್ರಕಾರ ಒಟ್ಟು 91,314 ಹೆಕ್ಟೇರುಗಳಷ್ಟು ಪ್ರದೇಶದಲ್ಲಿ ಕಾಫಿ ಬೇಸಾಯ ಇದ್ದು, 1999-2000ಕ್ಕೆ ಅದು 1,92,130 ಹೆಕ್ಟೇರ್‌ಗೆ ಏರಿತು. ಅದರಲ್ಲಿ 1,10,057 ಹೆಕ್ಟೇರ್‌ಗಳಲ್ಲಿ ಅರ್ಯಾಬಿಕ ಕಾಫಿಯನ್ನು ಮತ್ತು 82,073 ಹೆಕ್ಟೇರುಗಳಲ್ಲಿ ರೊಬಸ್ಟ ಕಾಫಿಯನ್ನು ಬೆಳೆಯಲಾಗುತ್ತದೆ. ರಾಜ್ಯದಲ್ಲಿ ಕಾಫಿಯ ಒಟ್ಟು ಉತ್ಪನ್ನ 2,09,100 ಮೆಟ್ರಿಕ್ ಟನ್‌ಗಳು. ಇದು ಇಡೀ ಭಾರತದಲ್ಲಿ ಬೆಳೆಯುವ ಕಾಫಿಯ ಸುಮಾರು ಶೇಕಡ 70 ಭಾಗದಷ್ಟಾಗುತ್ತದೆ. ಕರ್ನಾಟಕದಲ್ಲಿ ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳದೇ ಸಿಂಹಪಾಲು. ಮೂರನೆಯ ಪ್ರಮುಖ ಕಾಫಿ ಬೆಳೆಯುವ ಜಿಲ್ಲೆ ಹಾಸನ. ಉಳಿದ ಕೆಲವು ಜಿಲ್ಲೆಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಕಾಫಿ ಬೆಳೆಯಲಾಗುತ್ತದೆ. ಕರ್ನಾಟಕದಲ್ಲಿ ಬೆಳೆಯುವ ಕಾಫಿಯಲ್ಲಿ ಪ್ರಧಾನವಾಗಿ ಅರ್ಯಾಬಿಕ (ಕಾಫೀಯ ಅರ್ಯಾಬಿಕ) ಮತ್ತು ರೊಬಸ್ಟ (ಕಾಫೀಯ ಕ್ಯಾನಿಫೋರ) ಎಂಬ ಎರಡು ಪ್ರಭೇದಗಳಿವೆ. ಅರ್ಯಾಬಿಕದ ಬೆಳವಣಿಗೆ ಎತ್ತರದ ಪ್ರದೇಶಗಳಲ್ಲಿ (900-1200ಮೀ) ಉತ್ತಮವಾಗಿದೆಯಾದರೆ ರೊಬಸ್ಟ ಕಡಿಮೆ ಎತ್ತರದ (ಸು.450ಮೀ). ಪ್ರದೇಶಗಳಲ್ಲೂ ಬೆಳೆಯಬಲ್ಲುದು. ಅಲ್ಲದೆ ರೊಬಸ್ಟಕ್ಕಿಂತ ಅರ್ಯಾಬಿಕ ಬಗೆಗೆ ಹೆಚ್ಚು ನೆರಳಿನ ಅಗತ್ಯ ಉಂಟು.

ಅರ್ಯಾಬಿಕ ಬಗೆ ಮೂಲತಃ ಇಥಿಯೋಪಿಯದ ಕಾಫ ಎಂಬ ಪ್ರಾಂತ್ಯದ್ದೆಂದೂ ರೊಬಸ್ಟ ಬಗೆ ಮಧ್ಯ ಆಫ್ರಿಕದ್ದೆಂದೂ ತಿಳಿಯಲಾಗಿದೆ. ಭಾರತಕ್ಕೆ ಕಾಫಿ ಬಂದುದರ ಬಗ್ಗೆ ಕಟ್ಟುಕತೆಯೊಂದಿದೆ. 1670ರ ಸುಮಾರಿಗೆ ಬಾಬಾಬುಡನ್ ಎಂಬ ಮುಸ್ಲಿಂ ಸಂತ ಯೆಮೆನಿನಿಂದ ಅರ್ಯಾಬಿಕ ಕಾಫಿಯ (ಮೋಚ ಕಾಫಿ) ಏಳು ಬೀಜಗಳನ್ನು ತಂದು ಚಿಕ್ಕಮಗಳೂರು ಬಳಿಯ ದತ್ತಾತ್ರೇಯ ಪೀಠದಲ್ಲಿನ ತನ್ನ ಆಶ್ರಮದಲ್ಲಿ ಬೆಳೆಸಿದನಂತೆ. ಈ ಬೆಟ್ಟಕ್ಕೆ ಬಾಬಾಬುಡನ್‌ಗಿರಿ ಎಂಬ ಹೆಸರೇ ಹೆಚ್ಚು ಪ್ರಚಲಿತವಿದೆ. ಕ್ರಮೇಣ ಸುತ್ತಮುತ್ತಲಿನ ಹಳ್ಳಿಗಳ, ಮುಖ್ಯವಾಗಿ ಅತ್ತಿಗುಂಡಿ ಎಂಬ ಹಳ್ಳಿಯ, ಮನೆಗಳ ಹಿತ್ತಲಿನಲ್ಲಿ ಅಂದರೆ ಮನೆತೋಟಗಳಲ್ಲಿ ಕಾಫಿಯನ್ನು ಬೆಳೆಸಲಾರಂಭಿಸಿದರು. ಅಲ್ಲಿಂದ ಕೊಡಗಿನ ನಾಲ್ಕು ನಾಡು ಪ್ರದೇಶಕ್ಕೆ ಸಸಿಗಳನ್ನು ಅತ್ತಿಗುಂಡಿಯಿಂದ ತಂದು ನೆಡಲಾಯಿತು. ಇಲ್ಲಿಂದಲೇ ದಕ್ಷಿಣ ಭಾರತದ ಇತರೆಡೆಗಳಿಗೂ ಕಾಫಿ ಗಿಡಗಳನ್ನು ಸಾಗಿಸಲಾಯಿತೆಂದು ಹೇಳಲಾಗಿದೆ. ಇನ್ನೊಂದು ಮೂಲದ ಪ್ರಕಾರ ಅರೇಬಿಯಾದ ವರ್ತಕರು ತಂದ ಕಾಫಿ ಬೀಜಗಳನ್ನು ಕೊಡಗಿನಲ್ಲಿ ಸ್ವತಂತ್ರವಾಗಿ ನೆಟ್ಟು ಬೆಳೆಯಲಾಯಿತು. ಆದರೂ 1820ನೆಯ ಇಸವಿಯ ಅನಂತರದಲ್ಲಿ ಸಾಹಸಿಗಳಾದ ಬ್ರಿಟಿಷರು ಬಂಡವಾಳ ಹೂಡಿ ಕಾಫಿ ತೋಟಗಳನ್ನು ರಚಿಸುವವರೆಗೂ ಕಾಫಿಯ ಬೇಸಾಯ ಇರಲಿಲ್ಲವೆಂದೇ ಹೇಳಬಹುದು. ಅನಂತರ ಸುಮಾರು 40 ವರ್ಷಗಳಲ್ಲಿ ಕಾಫಿಯ ಕೃಷಿ ಶೀಘ್ರಗತಿಯಲ್ಲಿ ಮುಂದುವರಿಯಿತು. 1869ರ ವೇಳೆಗೆ ಸು.58,000 ಹೆಕ್ಟೇರುಗಳಷ್ಟು ಕಾಫಿ ತೋಟಗಳಾದುವು. 1830 ರಲ್ಲಿ ಥಾಮಸ್ ಕ್ಯಾನನ್ ಎಂಬಾತ ಚಿಕ್ಕಮಗಳೂರು ಬಳಿ ಆರಂಭಿಸಿದ ಮೈಲಿ ಮನೆ ಕಾಫಿ ತೋಟ ಇಂದಿಗೂ ಉತ್ತಮ ಸ್ಥಿತಿಯಲ್ಲಿದೆ. ಪ್ಯಾರಿ ಕಂಪನಿಯ ಜೋಲಿ ಎಂಬಾತ 1823-25ರಲ್ಲಿ ಶಿವಮೊಗ್ಗದ ಬಳಿ ಕಾಫಿ ತೋಟಗಳನ್ನು ಆರಂಭಿಸಿದ. 1843ರಲ್ಲಿ ಫ್ರೆಡರಿಕ್ ಗ್ರೀನ್ ಎಂಬಾತ ಸಕಲೇಶಪುರದ ಬಳಿಯ ಐಗೂರಿನಲ್ಲೂ ಫ್ರೆಡ್ ಮೆಪನ್ ಎಂಬಾತ ಕಡೂರು ಬಳಿಯ ಎಮ್ಮೆದೊಡ್ಡಿಯಲ್ಲೂ ಕಾಫಿ ಬೆಳೆಯಲಾರಂಭಿಸಿದರು. 1854ರಲ್ಲಿ ಫೌಲರ್ ಎಂಬಾತ ಮಡಿಕೇರಿಯ ಬಳಿಯೂ ಫೆನಲ್ ಎಂಬಾತ ಉಲಿಗೊಳ್ಳಿಯಲ್ಲೂ ಕಾಫಿ ತೋಟ ಆರಂಭಿಸಿದರು. ಅಂತೆಯೇ 1855ರಲ್ಲಿ ಮಾನ್ ಮತ್ತು ಸ್ಟೀವರ್ಟ್ ಎಂಬವರು ಸಂಪಾಜೆ ಘಾಟಿಯಲ್ಲೂ ಚಿಸೋಮ್ ಎಂಬಾತ ಶುಂಠಿಕೊಪ್ಪ, ಬೇಲಿಕಾಡು ಮತ್ತು ಎಮ್ಮೆಗುಂಡಿಗಳಲ್ಲೂ (1860) ಮ್ಯಾಂಗಲ್ಸ್ ಎಂಬಾತ 1863ರಲ್ಲಿ ಅಲಿಕುಟ್ಟಿ ಹಾಲೇರಿಗಳಲ್ಲೂ ಕಾಫಿ ಬೇಸಾಯವನ್ನು ಆರಂಭಿಸಿದರು. ಹೀಗಾಗಿ 1856ರ ವೇಳೆಗೆ ಕಾಫಿಯ ವಿಸ್ತೀರ್ಣ ಕೊಡಗೊಂದರಲ್ಲೇ 11,330 ಹೆಕ್ಟೇರುಗಳಷ್ಟು ವಿಸ್ತಾರವಾಗಿತ್ತು. ಖಾಸಗಿ ಉದ್ಯಮಿಗಳು ಮಾತ್ರವಲ್ಲದೆ ಕಂಪನಿಗಳೂ ಕಾಫಿ ವ್ಯವಸಾಯದಲ್ಲಿ ತೊಡಗಿದವು. 1870ರಲ್ಲಿ ಕೊಡಗಿನಲ್ಲಿ ಆರಂಭವಾದ ಕರ್ನಾಟಕ್ ಕಾಫಿ ಕಂಪನಿ ಎಂಬುದು ಇಂಥ ಸಂಸ್ಥೆಗಳಲ್ಲಿ ಬಹುಶಃ ಮೊದಲನೆಯದು.

1860ರ ಸುಮಾರಿನಲ್ಲಿ ಕೃಷಿಯಲ್ಲಿದ್ದ ಕಾಫಿ ಪ್ರಮುಖವಾಗಿ ಅರ್ಯಾಬಿಕ (ಓಲ್ಡ್ ಚಿಕ್ಸ್) ಬಗೆಯದೇ ಆಗಿತ್ತು. ಕಾಫಿ ಬೇಸಾಯ ತನ್ನ ಉಚ್ಛ್ರಾಯಸ್ಥಿತಿಯನ್ನು ತಲಪಿದ್ದೂ ಈ ಅವಧಿಯಲ್ಲೇ. ಆದರೆ ಇದೇ ಸಮಯದಲ್ಲಿ ಕಾಫಿ ಹಲವಾರು ಬಗೆಯ ಬೂಷ್ಟು ಮತ್ತು ಕೀಟರೋಗಗಳಿಗೆ ತುತ್ತಾಗತೊಡಗಿತ್ತು. ಹೀಗೆ ಕಾಫಿಯ ಮೇಲೆ ದಾಳಿಯಿಕ್ಕಿದ ರೋಗ, ಪಿಡುಗುಗಳಲ್ಲಿ ಮುಖ್ಯವಾದವು ಬಿಳಿಬಣ್ಣದ ಕಾಂಡಕೊರಕ (ಕ್ಸೈಲೊಟ್ರೀಕಸ್ ಕ್ವಾಡ್ರಿಪೆಸ್) ಎಂಬ ಕೀಟ, ಹಸಿರು ತಿಗಣೆ (ಕಾಕಸ್ ವಿರಿಡಸ್) ಎಲೆ ತುಕ್ಕುರೋಗ (ಹೆಮಿಲಿಯ ವೆಸ್ಟಾ ಟ್ರಿಕ್ಸ್). ಇದರಿಂದಾಗಿ ಕಾಫಿಯ ಕೃಷಿ ಇಳಿಮುಖವಾಗುತ್ತ ಬಂತು. ಸಣ್ಣಪುಟ್ಟ ತೋಟಗಳಂತೂ ಸಂಪೂರ್ಣವಾಗಿ ನಾಶವಾದುವು. ಇದೇ ಅವಧಿಯಲ್ಲಿ ಶ್ರೀಲಂಕಾದಲ್ಲಿ ಸಿಂಹಳ ಎಲೆತುಕ್ಕುರೋಗದಿಂದಾಗಿ ಕಾಫಿ ಬೇಸಾಯ ಸಂಪೂರ್ಣವಾಗಿ ನಿಂತುಹೋಯಿತು. ಕರ್ನಾಟಕದಲ್ಲಿ ಕಾಫಿ ನಿರ್ನಾಮವಾಗುವುದನ್ನು ತಪ್ಪಿಸಲೋಸುಗ ಹಲವಾರು ಕ್ರಮಗಳನ್ನು ಕೈಗೊಳ್ಳಲಾಯಿತು. ಸಿಲ್ವರ್ ಓಕ್, ಹಾಲುವಾಣ ಮುಂತಾದ ನೆರಳೀಯುವ ಮರಗಳನ್ನು ಬೆಳೆಸಿ ಎಲೆತುಕ್ಕುರೋಗ ಮತ್ತು ಕಾಂಡಕೊರಕ ಕೀಟಗಳನ್ನು ನಿಯಂತ್ರಿಸುವ ಪ್ರಯತ್ನ ನಡೆಯಿತಲ್ಲದೆ ರೋಗನಿರೋಧಕ ಸಾಮರ್ಥ್ಯವುಳ್ಳ ಕಾಫಿ ತಳಿಗಳನ್ನು ಪಡೆಯುವ ಕಾರ್ಯವೂ ಆರಂಭವಾಯಿತು. ಇಂಥ ತಳಿಗಳಲ್ಲಿ ಮೊದಲನೆಯದು ಕೂರ್ಗ್ಸ್ ಎಂಬುದು. ಸ್ಟ್ಯಾನ್ಲಿ ಜೂಪ್ ಎಂಬಾತ 1870ರಲ್ಲಿ ಇದನ್ನು ವೃದ್ಧಿಸಿದ. ಆದರೆ ಈ ತಳಿ ಕೂಡ ಎಲೆತುಕ್ಕು ರೋಗಕ್ಕೆ ಬಲಿಯಾಗುವುದೆಂದು ತಿಳಿದು ಬಂದು ಬ್ರಜಿಲ್, ವೆನಿಜೂಲ,

ಕಾಸ್ಟರೀಕ, ಜಮೈಕ ಮುಂತಾದೆಡೆಗಳಿಂದ ಉತ್ತಮ ಬಗೆಯ ಕಾಫಿ ತಳಿಗಳ ಬೀಜಗಳನ್ನು ಮ್ಯಾತೆಸನ್ ಎಂಬಾತ ತಂದು ಬೆಳೆಸಿದರೆ ಹ್ಯಾಮಿಲ್ಟನ್, ಜ್ಯಾಕ್‌ಸನ್, ಕೆಂಟ್, ಬ್ರೌನ್ ಮುಂತಾದವರು ರೋಗನಿರೋಧಕ ತಳಿಗಳನ್ನು ಬೆಳೆಸಲುಪಕ್ರಮಿಸಿದರು. ಹೀಗೆ ರೂಢಿಗೆ ತಂದ ತಳಿಗಳಲ್ಲಿ ಜ್ಯಾಕ್‌ಸನ್ಸ್ ಹೈಬ್ರಿಡ್ ಮತ್ತು ಕೆಂಟ್ಸ್ ಎಂಬವು ಪ್ರಧಾನವಾದುವು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಇಂಡೋಚೀನ ಪ್ರದೇಶದಿಂದ ರೊಬಸ್ಟ ಪ್ರಭೇದವನ್ನು ತಂದು ಕಡಿಮೆ ಎತ್ತರದ ಬೆಟ್ಟಸೀಮೆಗಳಲ್ಲಿ ಬೆಳೆಸಲಾರಂಭಿಸಿದರು. ಆದರೂ ಕಾಫಿಯ ಕೃಷಿ 1869ರಲ್ಲಿದ್ದ 1,20,000 ಹೆಕ್ಟೇರುಗಳಿಂದ 1941ರ ವೇಳೆಗೆ 72,400 ಹೆಕ್ಟೇರುಗಳಿಗೆ ಇಳಿಯಿತು. ಇದರಿಂದಾಗಿ ಕಾಫಿಯ ಉದ್ಯಮದ ಹಲವಾರು ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ 1892ರಲ್ಲಿ ದಕ್ಷಿಣ ಭಾರತದ ಪ್ಲಾಂಟರುಗಳ ಸಂಯುಕ್ತ ಸಂಘ (ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಷನ್ ಆಫ್ ಸದರ್ನ್ ಇಂಡಿಯ) ಸ್ಥಾಪಿತವಾಯಿತು. 1914ರ ವೇಳೆಗೆ ಕೊಡಗಿನ ಪೊಲ್ಲಿಬೆಟ್ಟದಲ್ಲಿ ಮ್ಯಾತೆಸನ್ ಎಂಬಾತ ಕಾಫಿಯ ಎಲೆತುಕ್ಕು ಮತ್ತು ಇತರ ಬೂಷ್ಟು ರೋಗಗಳ ವಿರುದ್ಧ ರಾಸಾಯನಿಕಗಳನ್ನು ಸಿಂಪಡಿಸುವುದರ ಬಗ್ಗೆ ಪ್ರಯೋಗಗಳನ್ನು ಆರಂಭಿಸಿದ. ಅಂದಿನ ಮೈಸೂರಿನ ಕೃಷಿ ಇಲಾಖೆಯ ನಿರ್ದೇಶಕರಾಗಿದ್ದ ಲೆಸ್ಲಿ ಕೋಲ್ಮನ್ ಎಂಬವರ ಸತತ ಪ್ರಯತ್ನದಿಂದಾಗಿ ಮೈಸೂರು ಸರ್ಕಾರ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿ 1926ರಲ್ಲಿ ಕಾಫಿ ಪ್ರಯೋಗ ಶಾಲೆಯೊಂದನ್ನು (ಕಾಫಿ ಎಕ್ಸ್‌ಪೆರಿಮೆಂಟಲ್ ಸ್ಟೇಷನ್) ಸ್ಥಾಪಿಸಿತು. ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಷನ್ನಿನ ಮೊದಲ ವಿಜ್ಞಾನಾಧಿಕಾರಿಯಾದ ಮೇನ್ ಮತ್ತು ಕಾಫಿ ಪ್ರಯೋಗ ಶಾಲೆಯ ವಿಜ್ಞಾನಿಗಳಾದ ಶ್ರೀನಿವಾಸನ್ ಮತ್ತು ನರಸಿಂಹಸ್ವಾಮಿ ಇವರ ಸಂಶೋಧನೆಯ ಫಲವಾಗಿ ಎಸ್ 288 ಎಂಬ ರೋಗನಿರೋಧಕ ಅರ‍್ಯಾಬಿಕ ತಳಿ ರೂಪುಗೊಂಡು 1938 ರಲ್ಲಿ ತೋಟಗಾರರಿಗೆ ಲಭ್ಯವಾಯಿತು. ಕ್ಷಿಪ್ರದಲ್ಲಿಯೇ ಎಸ್ 333 ಎಂಬ ಇನ್ನೊಂದು ಉತ್ತಮ ತಳಿಯನ್ನು ಬಿಡುಗಡೆ ಮಾಡಲಾಯಿತು. 1946ರಲ್ಲಿ ಬಾಳೆಹೊನ್ನೂರಿನ ಕಾಫಿ ಪ್ರಯೋಗಶಾಲೆಯನ್ನು ಕಾಫಿ ಬೋರ್ಡ್ ವಹಿಸಿಕೊಂಡು ಕೇಂದ್ರ ಕಾಫಿ ಸಂಶೋಧನ ಸಂಸ್ಥೆಯನ್ನಾಗಿ ಪರಿವರ್ತಿಸಿತು. ಕಾಫಿ ಗಿಡದ ಪೋಷಣೆ, ತಳೀಕರಣ ಮತ್ತು ರಕ್ಷಣೆಗಳೇ ಈ ಸಂಸ್ಥೆಯ ಪ್ರಧಾನ ಉದ್ದೇಶಗಳು. 1947ರಲ್ಲಿ ಕೊಡಗಿನ ಬೆಟ್ಟಹಳ್ಳಿಯಲ್ಲಿ ಕಾಫಿ ಸಂಶೋಧನೆಯ ಉಪಕೇಂದ್ರವೊಂದು ಆರಂಭವಾಯಿತು. ಬಾಳೆಹೊನ್ನೂರಿನ ಸಂಸ್ಥೆಯಲ್ಲಿ ರೂಪಿಸಿದ ಹೊಸ ತಳಿಗಳನ್ನು, ರಕ್ಷಣಾ ವಿಧಾನಗಳನ್ನು ದೊಡ್ಡಪ್ರಮಾಣದಲ್ಲಿ ರೂಢಿಸುವ ಕಾರ್ಯ ಈ ಉಪಕೇಂದ್ರದ್ದು. ಈ ಸಂಸ್ಥೆಯ ಸಂಶೋಧನೆಗಳ ಫಲವಾಗಿ 1946ರಲ್ಲಿ ಎಸ್ 785 ಎಂಬ ತಳಿಯೂ 1964ರಲ್ಲಿ ಎಸ್ 1934 ಎಂಬ ತಳಿಯೂ ಬಿಡುಗಡೆಯಾಗಿದೆ.

ಕರ್ನಾಟಕದಲ್ಲಿ ಬೆಳೆಯುವ ಕಾಫಿ ಬಗೆಗಳಲ್ಲಿ ಬಲು ಮುಖ್ಯವಾದುವು ಕಾಫೀಯ ಅರ‍್ಯಾಬಿಕ (ಅರ‍್ಯಾಬಿಕ), ಕಾಫೀಯ ಕ್ಯಾನಿಫೊರ (ರೊಬಸ್ಟ) ಮತ್ತು ಕಾಫೀಯ ಲೈಬೀರಿಕ (ಟ್ರೀ ಕಾಫಿ).

ಅರ‍್ಯಾಬಿಕ ಪ್ರಭೇದ ಪುಟ್ಟ ಮರ ಇಲ್ಲವೆ ದೊಡ್ಡ ಪೊದೆ. ತುಂಬ ಹುಲುಸಾಗಿ ಕವಲೊಡೆದು ಬೆಳೆಯುತ್ತದೆ. ಎಲೆಗಳ ಬಣ್ಣ ದಟ್ಟ ಹಸುರು. ಕಾಯಿಗಳು ಗುಂಡಗೆ ಇಲ್ಲವೆ ಕೊಂಚ ಉದ್ದುದ್ದವಾಗಿವೆ. ಮೊಗ್ಗುಗಳು ಎಲೆಗಳ ಬುಡದಲ್ಲಿ ಅಕ್ಟೋಬರ್-ಮಾರ್ಚ್ ತಿಂಗಳುಗಳ ನಡುವಣ ಕಾಲದಲ್ಲಿ ಹೊಮ್ಮುತ್ತವೆ. ಮಾರ್ಚ್ ತಿಂಗಳಿನಲ್ಲಿ ಮೊದಲ ಮಳೆಯಾದ 9-10 ದಿನಗಳ ತರುವಾಯ ಅರಳುವುವು. ನಿಷೇಚಿತ ಅಂಡಾಶಯ 8-9 ತಿಂಗಳುಗಳಲ್ಲಿ ಕಾಯಾಗಿ ಬೆಳೆದು ಮಾಗುತ್ತವೆ. ಅರ‍್ಯಾಬಿಕ ಪ್ರಭೇದ ಬಹುರೂಪಿ ಸಸ್ಯ. ಇದರಲ್ಲಿ ಓಲ್ಡ್ ಚಿಕ್ಸ್, ಕೂರ್ಗ್ಸ್, ಕೆಂಟ್ಸ್, ಎಸ್ 288, ಎಸ್ 795 ಮತ್ತು ಎಸ್ 1934 ಎಂಬ 6 ಮುಖ್ಯ ತಳಿಗಳುಂಟು.

ಓಲ್ಡ್ ಚಿಕ್ಸ್ ಎಂಬುದನ್ನು ಚಿಕ್ಕಮಗಳೂರಿನಲ್ಲಿ ಪ್ರಥಮತಃ ವೃದ್ಧಿಸಲಾಯಿತು. ಆದ್ದರಿಂದಲೇ ಇದಕ್ಕೆ ಈ ಹೆಸರು. ಕೂರ್ಗ್ಸ್ ಎಂಬುದನ್ನು 1870ರಲ್ಲಿ ಕೊಡಗಿನ ನಾಲ್ಕುನಾಡು ಎಂಬಲ್ಲಿ ರೂಪಿಸಲಾಯಿತು. ಇವೆರಡು ಬಗೆಗಳು ಎಲೆ ಕೊಳೆರೋಗಕ್ಕೆ ಬಲುಬೇಗ ಬಲಿಯಾಗುತ್ತವೆ. ಕೆಂಟ್ಸ್ ಎಂಬುದು ಮೂಡಿಗೆರೆ ವಲಯದ ದೊಡ್ಡನಗುಡ್ಡ ತೋಟದಲ್ಲಿ 1918-20ರ ಸುಮಾರಿನಲ್ಲಿ ವೃದ್ಧಿಯಾದ ತಳಿ. ಎಲೆಕೊಳೆ ರೋಗಕ್ಕೆ ಸುಲಭವಾಗಿ ಈಡಾಗದು. ಟಾಂಜನೀಯ ಮುಂತಾದ ಪರದೇಶಗಳಲ್ಲೂ ಇದನ್ನೂ ಇದರಿಂದ ಪಡೆಯಲಾದ ಇತರ ಬಗೆಗಳನ್ನೂ ಬೆಳೆಸಲಾಗುತ್ತಿದೆ. 1938 ರಿಂದ ಈಚೆಗೆ ಬೆಳೆಸಲಾಗುತ್ತಿರುವ ತಳಿಗಳಲ್ಲಿ ಎಸ್ 288, ಎಸ್ 333, ಎಸ್ 795 ಮತ್ತು ಎಸ್ 1934 ಮುಖ್ಯವಾದುವು. ಅರ‍್ಯಾಬಿಕ ತಳಿಯು ಹೆಚ್ಚು ತಾಪಮಾನವಿರುವ ತಗ್ಗಾದ ಪ್ರದೇಶಗಳಲ್ಲಿ ವಿವಿಧ ರೋಗಗಳಿಗೆ ಈಡಾಗುತ್ತಿದ್ದುದರಿಂದ ಆಫ್ರಿಕದಿಂದ ತಂದ ರೊಬಸ್ಟ ಎಂಬ ದೊಡ್ಡ ಕಾಂಡದ ದೊಡ್ಡ ಎಲೆಯ ಒರಟು ಸ್ವರೂಪದ ಕಾಫಿ ಗಿಡಗಳನ್ನು 1930ರ ದಶಕದಿಂದ ಬೆಳೆಸಲಾಯಿತು. ಇದು ಇಂದು ಕೊಡಗಿನ ಕೆಲಭಾಗಗಳು, ಸಕಲೇಶಪುರ ಮತ್ತು ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಕಂಡುಬರುತ್ತದೆ. ಇತ್ತೀಚಿನ ದಶಕಗಳಲ್ಲಿ ಕಾವೇರಿ ಎಂಬ ಮಿಶ್ರತಳಿ ರೂಢಿ ಹೆಚ್ಚಾಗಿ ಬಂದಿತು. ಜೊತೆಗೆ ಸಿ.ಆರ್ ಎಂಬ ರೋಬಸ್ಟದ ಉಪತಳಿ ಈಗ ಹೆಚ್ಚು ಪ್ರಚುರವಾಗಿದೆ. ಅರ‍್ಯಾಬಿಕದಲ್ಲಿ ನಂಬರ್ 9 ಎಂಬ ಉಪತಳಿಯನ್ನೂ ಬೆಳೆಯಲಾಗುತ್ತಿದೆ. ಇವಲ್ಲದೆ ತುಂಗಭದ್ರಾ, ಹೇಮಾವತಿ, ಮೊದಲಾದ ತಳಿಗಳು ಬಂದಿದ್ದರೂ ಅವು ಹೆಚ್ಚು ಪ್ರಚುರದಲ್ಲಿಲ್ಲ.

ಕಾಫಿ ಮಂಡಳಿ ಪ್ರಕಟಿಸಿರುವ ಕಾಫಿ ಹಿಡುವಳಿ ಮತ್ತು ಬೆಳೆಗಾರರ ವಿವರ (2002):

| ರಾಜ್ಯಗಳು | ಒಂದು ಎಕರೆ ಯಿಂದ **10** ಎಕರೆವರೆಗೆ | ಹತ್ತು ಎಕರೆ ಯಿಂದ ಇಪ್ಪತ್ತೈದು ಎಕರೆವರೆಗೆ | ಇಪ್ಪತ್ತೈದು ಎಕರೆಗಿಂತ ಹೆಚ್ಚು | ಒಟ್ಟು ಬೆಳೆಗಾರರು |
|---|---|---|---|---|
| ಕರ್ನಾಟಕ | 22,747ಮಂದಿ | 3918ಮಂದಿ | 1653ಮಂದಿ | 28318ಮಂದಿ |
| ಕೇರಳ | 73,258 | 1876 | 1516 | 76,650 |
| ತಮಿಳು ನಾಡು | 14,254 | 788 | 296 | 15,338 |
| ಆಂಧ್ರ ಪ್ರದೇಶ | 1777 | 2 | 22 | 1801 |
| ಇತರೆಡೆ | 655 | --- | 9 | 664 |
| ಒಟ್ಟು ದೇಶದಲ್ಲಿ | 1,12,691 | 6578 | 3496 | 1,22,765 |

ಕಾಫಿ ಉತ್ಪನ್ನ ಇಂದು ಪೆಟ್ರೋಲ್ ಬಿಟ್ಟರೆ ಎರಡನೆಯ ಸ್ಥಾನದಲ್ಲಿರುವ ಅಂತಾರಾಷ್ಟ್ರೀಯವಾಗಿ ಅತ್ಯಂತ ಹೆಚ್ಚಿನ ವಹಿವಾಟು ನಡೆಯುವ ಸರಕಾಗಿದೆ. ಭಾರತದಲ್ಲಿ ಸರಾಸರಿ ಮೂರು ಲಕ್ಷ ಟನ್ ಕಾಫಿ ಬೀಜ ಉತ್ಪಾದನೆಯಾಗುತ್ತಿದ್ದು ಇದು ವಿಶ್ವದ ಒಟ್ಟು ಉತ್ಪನ್ನದ ಸೇ.3 ರಷ್ಟಾಗುತ್ತದೆ. ಆದರೂ ಕಾಫಿ ಮಾರಾಟದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ವಿಶ್ವಮಟ್ಟದಲ್ಲಿ ಕಾಫಿ ಉತ್ಪಾದನೆ ಹೆಚ್ಚಿ ದರಗಳು ಅತ್ಯಂತ ಕಡಿಮೆ ಮಟ್ಟದಲ್ಲಿರುವುದರಿಂದ ಈ ಕ್ಷೇತ್ರ ಹೆಚ್ಚಿನ ಪೈಪೋಟಿ ಎದುರಿಸುತ್ತಿದೆ. ಸ್ಪೆಷಾಲಿಟಿ ಕಾಫಿ ಅಥವಾ ವಿಶೇಷ ಗುಣಮಟ್ಟದ ಕಾಫಿಗೆ ಆದ್ಯತೆ ನೀಡಲಾಗುತ್ತಿದೆ. ಇದನ್ನು ಸಾಧಿಸಲು ಬೆಳೆಗಾರರು ಕಾಫಿ ಹಣ್ಣುಗಳನ್ನು ಕುಯ್ದು ಸಂಸ್ಕರಿಸುವಾಗಲೆ ವಿಶೇಷ ಗಮನ ನೀಡಬೇಕಾಗುತ್ತದೆ. ಬೀಜ ಶೇಖರಣೆ, ಬೀಜಗಳ ದರ್ಜೀಕರಣ, ಕಾಫಿಪುಡಿ ತಯಾರಿಕೆ ಮತ್ತು ಸಂರಕ್ಷಣೆ ಈ ಎಲ್ಲ ಹಂತಗಳಲ್ಲೂ ನಿಗದಿತ ಉತ್ಕೃಷ್ಟ ವಿಧಾನಗಳನ್ನು ಅನುಸರಿಸಿದರೆ ಈ ಗುರಿ ಸಾಧಿಸಲು ಸಾಧ್ಯವಾಗುತ್ತದೆ. ಅದಕ್ಕಾಗಿ ಈಗ ತರಬೇತಿ, ಪರಿಣತಿಯ ಅಭಿವೃದ್ಧಿಗೆ ಒತ್ತುಕೊಡಲಾಗಿದೆ. ಕಾಫಿ ತೋಟಗಾರಿಕೆಯನ್ನು ಅವಲಂಬಿಸಿರುವ ಲಕ್ಷಾಂತರ ಕಾರ್ಮಿಕರು, ಬೆಳೆಗಾರರು ಮತ್ತು ವ್ಯಾಪಾರಸ್ಥರು ಈ ಸೂಕ್ಷ್ಮ ಸಂವೇದಿಯಾಗಿರುವ ಅಂತಾರಾಷ್ಟ್ರೀಯ ಕಾಫಿ ವಹಿವಾಟನ್ನು ಅವಲಂಬಿಸಿದ್ದಾರೆ.

*

**ಕಾಮತ್, ಎಂ.ಎನ್. :** 1883-1940 ಹೊಸಗನ್ನಡ ಅರುಣೋದಯ ಕಾಲದ, ದಕ್ಷಿಣ ಕನ್ನಡ ಜಿಲ್ಲೆಯ ಆದ್ಯಲೇಖಕರಲ್ಲೊಬ್ಬರು. ಪಂಜೆಮಂಗೇಶರಾಯ, ಗೋವಿಂದ ಪೈ ಅವರ ಸಮಕಾಲೀನರು.



ಮುಂಡ್ಕೂರು ನರಸಿಂಹ ಕಾಮತ್ ಇವರ ಪೂರ್ಣ ಹೆಸರು. 1883 ಮಾರ್ಚ್ 17ರಂದು ಮುಂಡ್ಕೂರಿನಲ್ಲಿ ಜನಿಸಿದರು. ತಂದೆ ಶ್ರೀನಿವಾಸ ಕಾಮತ್, ತಾಯಿ ತುಂಗಭದ್ರ. ಕಾಮತ್ ಈ ದಂಪತಿಗಳ ಏಕೈಕ ಪುತ್ರರು. ಬಾಲ್ಯ ಜೀವನವನ್ನು ಬಡತನದಲ್ಲೇ ಕಳೆದರು. ಮೆಟ್ರಿಕ್ಯುಲೇಶನ್ ವರೆಗೆ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲೂ ಎಫ್.ಎ. ವರೆಗಿನ ಶಿಕ್ಷಣವನ್ನು ಸೇಂಟ್ ಅಲೋಯಿಸಿಯಸ್ ಕಾಲೇಜಿನಲ್ಲೂ ಮುಗಿಸಿದರು. ಪ್ರೌಢ ಶಾಲೆಯಲ್ಲಿ ರಾಷ್ಟ್ರಕವಿ ಗೋವಿಂದಪೈಯವರ ಸಹಪಾಠಿಯಾಗಿದ್ದರು. ಚಿಕ್ಕವಯಸ್ಸಿನಿಂದಲೇ ಮೇಧಾವಿಯೂ ಜ್ಞಾನಪಿಪಾಸುವೂ ಅಸಾಧಾರಣ ಪ್ರತಿಭಾವಂತರೂ ಆಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ರಾಬಿನ್ ರೆಡ್‌ಬ್ರೆಸ್ಟ್ ಎಂಬ ಕಾವ್ಯನಾಮದಲ್ಲಿ ಗಾಡ್ಸ್ ಲೈಟ್ ಹೌಸ್, ಕ್ರಿಯೇಷನ್ಸ್ ಬ್ಯಾಪ್ಟಿಸಮ್, ಸ್ನೇಲ್ ಎಂಬ ಸ್ವತಂತ್ರ ಇಂಗ್ಲಿಷ್ ಕವನಗಳನ್ನು ಬರೆದುದಲ್ಲದೆ ಸೋಮೇಶ್ವರ ಶತಕದ ಕೆಲವು ಭಾಗವನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದರು.

ಮುಂದೆ ಕಾರ್ಕಳದ ಅನುಸೂಯಾಬಾಯಿ ಎಂಬುವರನ್ನು ವಿವಾಹವಾದರು. ಅನಂತರ ಮುಂಬಯಿಯ ರೋಸ್ ಎಂಡ್ ಕಂಪೆನಿ ಎಂಬ ವಾದ್ಯವಾದನಗಳ (ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ಸ್) ವಿದೇಶಿ ಕಂಪನಿಯ ಉದ್ಯೋಗಿಯಾಗಿ ಎರಡು ವರ್ಷ ಸೇವೆ ಸಲ್ಲಿಸಿದರು. ಆಗ ಇವರು ಮರಾಠಿ ರಂಗಭೂಮಿ, ಮರಾಠಿ ಭಾಷೆ ಸಾಹಿತ್ಯಗಳ ಪರಿಚಯ ಮಾಡಿಕೊಂಡರು. ಅನಂತರ ಇವರಿಗೆ ಕಲ್ಕತ್ತಕ್ಕೆ ವರ್ಗವಾಯಿತು. ಅಲ್ಲಿ ನೆಲೆಸಿದ್ದ ಹತ್ತುವರ್ಷಗಳಲ್ಲಿ ಇವರು ಸಾಹಿತಿಯಾಗಿ ಎತ್ತರಕ್ಕೆ ಬೆಳೆದರು. ವಂಗಸಾಹಿತ್ಯ, ಬಂಗಾಲಿಭಾಷೆ, ರವೀಂದ್ರ ಸಾಹಿತ್ಯ, ವಂಗರಂಗಭೂಮಿಗಳ ಪರಿಚಯ ಮತ್ತು ಪ್ರಭಾವಗಳು ಇವರನ್ನು ಸಾಹಿತಿಯಾಗಿ ರೂಪಿಸಿದುವು. ಆಮೇಲೆ ಹುಟ್ಟೂರಿಗೆ ಮರಳಿ ಶಿಕ್ಷಕ ತರಬೇತಿ ಪಡೆದು ಮೂಲ್ಕಿ ಮತ್ತು ಬಂಟ್ವಾಳದಲ್ಲಿ ಕೆಲಸಮಯ ಅಧ್ಯಾಪಕರಾಗಿದ್ದು ಸಾಹಿತ್ಯರಚನೆಗೆ ತೊಡಗಿದರು. ಕನ್ನಡದಲ್ಲೇ ಬರೆವೆನೆಂಬ ಪಣ ತೊಟ್ಟರು. ಸು.22 ವರ್ಷಗಳ ಕಾಲ ಇವರು ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು (1918-40).

ಸುಮಾರು ಮೂರು ದಶಕಗಳ ಕಾಲ (1910-40) ಇವರು ಅವಿರತವಾಗಿ ಸಾಹಿತ್ಯ ರಚಿಸಿದರು. ಜನಪ್ರಿಯ ಅಧ್ಯಾಪಕರೂ ಜನಪ್ರಿಯ ಸಾಹಿತಿಯೂ ಆಗಿ ದಕ್ಷಿಣ ಕನ್ನಡದ ಜನತೆಯಲ್ಲಿ ಓದುವ ಹವ್ಯಾಸ ಬೆಳೆಸಿದರು. ಇವರು ಮಕ್ಕಳ ನಾಟಕಕಾರ, ಮೊದಲ ಏಕಾಂಕ ನಾಟಕಕಾರ, ಲಘು ಪ್ರಬಂಧಕಾರ ಎಂದೇ ಪ್ರಸಿದ್ಧರು. ಸ್ವದೇಶಾಭಿಮಾನಿ, ಕನ್ನಡ ಸಹಕಾರಿ, ಕಂಠೀರವ, ವಾಗ್ಭೂಷಣ, ಮಧುರವಾಣಿ, ಕಾದಂಬರಿ ಸಂಗ್ರಹ, ಪ್ರವಾಸಿ, ಜಯಕರ್ನಾಟಕ, ಕಲಾರಂಗ ಮೊದಲಾದ ವೃತ್ತಪತ್ರಿಕೆ ನಿಯತಕಾಲಿಕಗಳಿಗೆ ಬರೆದು ಆ ಪತ್ರಿಕೆಗಳ ಹೆಸರನ್ನು ಪ್ರಚುರಗೊಳಿಸಿದರು.

ಇವರದು ಸದಭಿರುಚಿಯ ಶುಚಿಯಾದ ಸಾಹಿತ್ಯ. ಹಾಸ್ಯ ಮತ್ತು ಸಹ್ಯವಾದ ವಿಡಂಬನೆಯಿಂದ ರಂಜನೀಯವಾದುದು. ಇವರ ಸಾಹಿತ್ಯದಲ್ಲಿ ಮಕ್ಕಳ ಮನಸ್ಸನ್ನು ಧಕ್ಕೆಗೊಳಿಸುವ ಒಂದಾದರೂ ವಿಕೃತಮಾತು ಬಾರದು. ಇವರ ವೈನೋದಿಕಗಳ ಹಾಸ್ಯ ಮಂಗಳೂರಿನಲ್ಲಿ ಮನೆಮಾತು. ಇವರ ಸಾಹಿತ್ಯವೆಲ್ಲ ಮಂಗಳೂರು ಶೈಲಿಯಲ್ಲೇ. ನಾಟಕಗಳಲ್ಲಿ ಕೂಡ ಧಾರವಾಡ ಅಥ'ವಾ ಮೈಸೂರು ಕನ್ನಡ ಕಾಣಸಿಗದು. ಇವರು ತಾಸುಗಟ್ಟಲೆ ಹಾಸ್ಯಪೂರಿತ ಶೈಲಿಯಿಂದ ಸಭಿಕರನ್ನು ಹೊಟ್ಟೆ ಹುಣ್ಣಾಗಿಸುವಂತೆ ನಗಿಸಬಲ್ಲ ಸಮರ್ಥ ವಾಗ್ಮಿಯಾಗಿದ್ದರು. ಹಾಸ್ಯವೆಂದರೆ ಕಾಮತರು, ಕಾಮತರೆಂದರೆ ಹಾಸ್ಯ ಎಂಬ ಖ್ಯಾತಿ ಇವರದು. ಭೂಗೋಳದ ಅಧ್ಯಾಪಕರಾದರೂ ಯಾವ ವಿಷಯವನ್ನೂ ರಸವತ್ತಾಗಿ ಬೋಧಿಸಬಲ್ಲ ಪ್ರತಿಭೆ ಇವರಲ್ಲಿತ್ತು.

ಕಾಮತರು ವಿಪುಲವಾಗಿ ಸಾಹಿತ್ಯ ಸೃಷ್ಟಿಕಾರ್ಯ ನಡೆಸಿದ್ದಾರೆ. ಈ ಸಾಹಿತ್ಯದಲ್ಲಿ ವೈವಿಧ್ಯವಿದೆ. ಯಾದವಕೃಷ್ಣ, ಗದಾಯುದ್ಧದ ಕಥೆ, ಭೀಷ್ಮಚರಿತೆ, ಕರ್ಣಕಥೆ, ಆರ್ಯಮತೋಪಾಖ್ಯಾನ, ಸೀತಾರಾಮ, ಚಂಡಕೌಶಿಕ, ನಾಗಾನಂದ ಇವು ಪೌರಾಣಿಕ ಕಥೆಗಳು. ಕುಮಾರ ಭೀಮಸಿಂಹ, ಪ್ರೇಮ ಪಿಪಾಸೆ, ಕಮಲ ಕುಮಾರಿ, ಪಟ್ಟಾಭಿಷೇಕ ವಿಂಧ್ಯವಾಸಿನಿ, ಅಶ್ವತ್ಥಮೃಗ, ದಯಾಳುವಾದ ಬುದ್ಧ, ಅಲ್ಲಾವುದ್ದೀನ ಮೊದಲಾದವು ಐತಿಹಾಸಿಕ ಕಥೆಗಳು. ಕಾಮತರದು ಕಟ್ಟಾ ಸ್ತ್ರೀಪಕ್ಷಪಾತಿ ಅಥವಾ ಸ್ತ್ರೀವಾದಿ ಸಂವೇದನೆ, ಸ್ತ್ರೀ ಶೋಷಣೆಯ ಎಲ್ಲ ಮುಖಗಳನ್ನೂ ಪರಿಚಯಿಸುವ ಸ್ವಪ್ನದ ತೊಟ್ಟಿಲು, ಕನ್ಯಾಬಲಿ, ವಧುಪರೀಕ್ಷೆ, ಹಣದಪ್ರಭಾವ, ವರದಕ್ಷಿಣೆಯ ವಿಡಂಬನೆ, ಶಾಂತಿ ಮೊದಲಾದ ಸಾಮಾಜಿಕ ಕಥೆಗಳು ನಮ್ಮ ಗಮನ ಸೆಳೆಯುತ್ತವೆ. ಹತ್ತರೊಡನೆ ಹನ್ನೊಂದು ಎಂಬುದು 11 ವಿನೋದ ಕಥೆಗಳ ಒಂದು ಗುಚ್ಛ. ಬೇಡಿ ಸೇದಬೇಡಿ, ಆಮುಗು, ಕೆಪ್ಪಟೆರಾಯ, ಕರಿನಾಯಿ, ಅದ್ಯಕ್ಷ, ಆಮೆ, ರಾಜ್ಯಪ್ರೇಮ, ಡಾಕ್ಟರರ ವಿಜಿಟ್, ಕಲಾವತಿ, ಕೋಳಿ ಜೀವನ -ಇವು ಬಿಡಿ ಕಥೆಗಳು. ಇವರ ಅತ್ಯಂತ ಪ್ರಸಿದ್ಧಕೃತಿ, 'ಅಂದಿನ ಆವೂರು', ಇದರಲ್ಲಿರುವ ಕದ್ದವರು ಯಾರು? -ಭಾರತ ಪ್ರಯೋಗ, ಬೊಗ್ಗು ಮಹಾಶಯ, ಆವೂರು ಮಠ, ವೈದ್ಯರಾಜ ಧನ್ವಂತರಿ -ಈ ಕಥೆಗಳು ಪ್ರಾತಿನಿಧಿಕ ಮೌಲ್ಯವುಳ್ಳ, ಪ್ರಾದೇಶಿಕ ಸನ್ನಿವೇಶ ಮತ್ತು ಪಾತ್ರಗಳಿಂದ ಸೊಗಸಾಗಿವೆ. ಜಯಕರ್ನಾಟಕದಲ್ಲಿ ಪ್ರಕಟವಾದ ಒಂದು ಚಿಕ್ಕ ಕತೆಯ ಕತೆ ಮತ್ತು ಕೂಲಿ -ಇವು ಸಣ್ಣಕಥೆಗಳಂತೆ ಇದ್ದು, 'ಕೂಲಿ' ನವ್ಯದ ಲಕ್ಷಣವಿರುವ ಕಥೆಯೆನ್ನಬಹುದು. ಸಣ್ಣಕಥೆಗಳ ತಂತ್ರ, ನಿರೂಪಣೆಗೆ ಯಾವುದೇ ಸೂತ್ರವಿಲ್ಲದ ಕಾಲದಲ್ಲಿ ಕಾಮತರು ಸಣ್ಣಕಥೆ ರಚಿಸಿದರೆಂಬುದು ಮಹತ್ವದ ಸಂಗತಿ. ಮಕ್ಕಳಿಗಾಗಿಯೇ ಬರೆದ ಬಾಲಕರ ಮಹಾಭಾರತ ಮತ್ತು ರಾಮಾಯಣ -ಇವು ಪಠ್ಯಗಳಾಗಿ ಹಲವು ವರ್ಷ ಪ್ರಚಲಿತವಿದ್ದುವು.

ಕಾಮತರು ಕಾವ್ಯ ರಚನೆಯನ್ನೂ ಸಾಕಷ್ಟು ಮಾಡಿದ್ದಾರೆ. ಅನೇಕ ಕವಿತೆಗಳನ್ನು ರಚಿಸಿದ್ದಾರೆ. ವಟಪುರಾಧೀಶ್ವರ ಶತಕ ಎಂಬ ನೂರು ಪದ್ಯಗಳ ಭಾಮಿನಿ ಷಟ್ಪದಿ ಕಾವ್ಯವನ್ನು ರಚಿಸಿದ್ದಾರೆ. ಮಕ್ಕಳಿಗಾಗಿ ಬರೆದ ಇರುವೆಯೂ ಮಿಡಿತೆಯೂ, ಗೂಡಿನಲ್ಲಿಯ ಇಲಿ, ಬಾಲ ಕಳೆದ ನರಿಯ ಉಪದೇಶ, ಸಂತೆಯ ಕುರುಡನ ಹಾಡು, ಆನೆ ಆನೆಯೋ?, ಗೋವಿನ ಕತೆ,ತಂದೆ ಮಕ್ಕಳೂ ಕುದುರೆಯೂ, ತುಳುನಾಡ ರಾಣಿ, ಹರಕೆ, ತಾಯಿ, ಬೆಂಬಲ, ಕೊಡೆ, ನಾವೆಲ್ಲ ಒಂದೇ ಜಾತಿ, ನನ್ನ ನೆರಳು, ಢಿಲ್ಲಿ, ನಮ್ಮ ತಾಯಿ ಭಾರತಿ, ನೇಗಿಲು ದೇವರು, ಸವಾರನ ಸಮಾಧಾನ, ದೀಪಗಳು, ಹೂವು ಹಂಬಲಿಸಲೇಕೆ? ಈ ಮೊದಲಾದ ರಚನೆಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ಹೊಂದತಕ್ಕವುಗಳಾಗಿವೆ. ಮಕ್ಕಳ ಕೂಗನು ಕೇಳಿದಿರಾ, ನಮ್ಮ ಬೇಡಿಕೆ, ಬಂಡಿಯೆತ್ತು, ವೀರಪಥ, ಹೊಲೆಯನ ಹಂಬಲ, ದೀನನಾಥನಿಗೆ, ದರಿದ್ರ ನಾರಾಯಣ, ಪೀಡಕನಿಗೆ, ಗ್ರಾಮ ಸೇವಕರ ಹಾಡು ಎಂಬ ಕವನಗಳಲ್ಲಿ ಕಾಮತರ ಕ್ರಾಂತಿಕಾರಿ ಮನೋಭಾವ ವ್ಯಕ್ತವಾಗಿದೆ. 'ಬೇಡಿಕೆ' ಕವಿತೆಯಲ್ಲಿ ಬಂಡಾಯದ ಧ್ವನಿಮಾತ್ರವಲ್ಲ ಕಾಮತರ ಕಾವ್ಯಮಾರ್ಗ ಹಾಗೂ ಚಿಂತನೆ ತಮ್ಮ ಕಾಲಕ್ಕಿಂತ ಬಲುಮುಂದೆ ಇದ್ದಿತೆಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಗಾಂಧಿವಾದಿಯಾಗಿದ್ದ ಇವರು ಅಸ್ಪೃಶ್ಯರ ಪರವಾಗಿ ಬರೆದ ಕವನಗಳು ತುಂಬ ಮಾರ್ಮಿಕವಾಗಿವೆ; ಮನುಷ್ಯತ್ವದ ಚಿಂತನೆಯನ್ನು ಅನಾವರಣಗೊಳಿಸುತ್ತವೆ. ಆ ಕಾಲದಲ್ಲಿ ಇವರು ಅಸ್ಪೃಶ್ಯರೊಡನೆ ಸಹಪಂಕ್ತಿ ಭೋಜನಗೈದುದರಿಂದ ಜಾತಿಯಿಂದ ಬಹಿಷ್ಕೃತರೂ ಆಗಿದ್ದರು. ನಮ್ಮ ತಾಯಿ ಭಾರತಿಯಂಥ ದೇಶಭಕ್ತಿಗೀತೆಯಲ್ಲದೆ ನೀರುಳ್ಳಿಯ ಫಿರ್ಯಾದಿಯ ಯಥಾಸಕಲು ಎಂಬ ವಿಡಂಬನ ಗೀತೆಯನ್ನೂ ಇವರು ರಚಿಸಿದ್ದಾರೆ. ಇಂಗ್ಲಿಷ್‌ನಿಂದ, ಬಂಗಾಲಿಯಿಂದ ಅನೇಕ ಪದ್ಯಗಳನ್ನು ಅದರಲ್ಲಿಯೂ ಠಾಕೂರರ ಕವಿತೆಗಳನ್ನು ಅನುವಾದ ಮಾಡಿದ್ದಾರೆ. ಎಲ್ಲಿ ಮನಕಳುಕಿರದೊ (ಠಾಕೂರರ ವೇರ್ ದಿ ಮೈಂಡ್ ಈಸ್ ಹೈ ಎಂಬ ಪದ್ಯದ ಅನುವಾದ) ಮತ್ತು ಸರಿದಾರಿ ತಪ್ಪದಂತೆ (ಲೀಡ್ ಕೈಂಡ್ಲಿ ಲೈಟ್ ಎಂಬ ನ್ಯೂಮನ್‌ನ ಪದ್ಯದ ಅನುವಾದ) ಎಂಬ ಪ್ರಾರ್ಥನಾ ಗೀತೆಗಳು ಪ್ರಸಿದ್ಧವಾಗಿವೆ.

ಇವರು ಹೆಚ್ಚಾಗಿ ಮಕ್ಕಳಿಗಾಗಿ ಅನೇಕ ನಾಟಕಗಳನ್ನು ಬರೆದರು; ಅನುವಾದಿಸಿದರು. ಕೆಲವೊಮ್ಮೆ ತಾವೇ ನಿರ್ದೇಶಿಸಿದರು. ಇವರ ರಚನೆಯಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಈ ಎಲ್ಲ ಪ್ರಕಾರದ ನಾಟಕಗಳೂ ಇವೆ. ಒಂದು ಅಂದಾಜಿನಂತೆ ಇವರು 100 ನಾಟಕಗಳನ್ನು ರಚಿಸಿದ್ದಾರೆಂದು ತಿಳಿದುಬರುತ್ತದೆ. ಆದರೆ ಇದುವರೆಗೆ 27 ನಾಟಕಗಳು ಮಾತ್ರ ದೊರೆತಿವೆ. ಈ ನಾಟಕಗಳನ್ನು ಕಾಮತರು ಅನೇಕ ಶಾಲಾ ವರ್ಧಂತಿಯಂದು ಆಡಿಸುತ್ತಿದ್ದುದುಂಟು. ಶಿವರಾಮ ಕಾರಂತರಿಗಿಂತಲೂ ಮೊದಲು ಇವರು ನಾಟಕ ರಚನೆ ಮಾಡಿದ್ದರು ಎಂಬ ಸಂಗತಿ ಇಲ್ಲಿ ಗಮನಾರ್ಹವಾದುದು. ಇವರೇ ದಕ್ಷಿಣ ಕನ್ನಡ ಜಿಲ್ಲೆಯ ಆದ್ಯ ಏಕಾಂಕ ನಾಟಕಕಾರರೆನ್ನಬಹುದು. 1912ರಲ್ಲಿ ಬರೆದ 'ಸಂಗೀತ ಸಂವಾದ' ಎಂಬುದು ಸಾಮಾಜಿಕ ನಾಟಕ, ಚಂದ್ರಹಾಸಾಭ್ಯುದಯ (ಸಂಗೀತ ನಾಟಕ), ಅರ್ಜುನ ಚಾತುರ್ಮಾಸ (ಕಿರ್ಲೋಸ್ಕರರ ಮರಾಠಿ ನಾಟಕದ ಅನುವಾದ), ನಾಗಾನಂದ, ಮಧ್ಯಮ ವ್ಯಾಯೋಗ, ಸಾಧನೆ ಅಥವಾ ಏಕಲವ್ಯ (ಕಾಮತರ ಕೊನೆಯ ನಾಟಕ), ಕೃಷ್ಣ-ಸಂಧಾನ -ಇವು ಪೌರಾಣಿಕ ನಾಟಕಗಳು. ಮೌರ್ಯಸಿಂಹಾಸನ (ಸಂಗೀತ ನಾಟಕ), ತುಕಾರಾಮ, ತೆನಾಲಿರಾಮ, ದಾಮಾಜಿಪಂತ, ಪ್ರತಾಪಸಿಂಹ, ಚಂದ್ರರಾವ್ ಮೊರೆ, ವಜ್ರಮುಷ್ಟಿ, (ಸಿಖ್ ಪಂಥ ಕುರಿತದ್ದು), ವಿಠೂಮಹಾರ್, ಸತೀ ಮೀರಾಬಾಯಿ -ಇವು ಐತಿಹಾಸಿಕ ನಾಟಕಗಳು. ಮರ್ಜಿ, ವಂತಿಗೆ, ಮೆಂಬರು, ವಂತಿಗೆದಾರ, ಮಧುಸೂದನ, ಪುನರ್ಜನ್ಮ, ಮಾಲಿ, ಉದ್ಧಾರಾನಂದ (ಬಿಷಪ್‌ನ ಕ್ಯಾಂಡಲ್ ಸ್ಟಿಕ್ ನಾಟಕದ ರೂಪಾಂತರ), ಯೋಗಕ್ಷೇಮ (ಟಾಲ್‌ಸ್ಟಾಯನ್ ಒಂದು ನಾಟಕದ ರೂಪಾಂತರ), ಅಂಚೆಮನೆ (ಠಾಕೂರರ ಪೋಸ್ಟ್ ಆಫೀಸ್ ನಾಟಕದ ಭಾಷಾಂತರ), ಶಿಕ್ಷಣ ಪರೀಕ್ಷೆ, ಶೋಕ ಶಿಕ್ಷಣ, ಹಾರೆದೊರೆ, ಸದ್ರಿಸುಬ್ಬ, ಇದ್ದವರು ಮೂವರು, ಅವಳಿ ಜವಳಿ, ನಮ್ಮ ಹಳೆಯ ನಾಟಕದ ನೆನಪು, ಮನೆಯಲ್ಲಿ ಮಹಾಸಭೆ, ನಮ್ಮ ನಾಟ್ಯಾಭಿನಯ, ಸಾಣೂರು ಸಂಕಯ್ಯ, ಯುದ್ಧಾಂತ್ಯ -ಇವು ಸಾಮಾಜಿಕ ನಾಟಕಗಳು.

ಕಾಮತರು ಸಸ್ಯಶಾಸ್ತ್ರದಿಂದ ಹಿಡಿದು ಆಧ್ಯಾತ್ಮಿಕ ಚಿಂತನದವರೆಗೆ ನೂರಾರು ಪ್ರಬಂಧಗಳನ್ನೂ ಲೇಖನಗಳನ್ನೂ ಹರಟೆಗಳನ್ನೂ ಬರೆದಿದ್ದಾರೆ. ನನ್ನ ಕೊಡೆ, ಗಾಳಿ, ಆ ಬೆಕ್ಕಲ್ಲ ಈ ಬೆಕ್ಕು, ಪೆನ್ಸನರ್ ಮೊದಲಾದ ಹಾಸ್ಯ ಪ್ರಬಂಧಗಳನ್ನೂ ಪ್ರಾಚೀನಕಾಲದ ಪತ್ರಲೇಖನ, ಸಾಹಿತ್ಯ ರೈಲ್ವೇ ಕಂಪನಿ ಎಂಬ ವಿಡಂಬನ ಪ್ರಬಂಧಗಳನ್ನೂ ಇಲ್ಲಿ ಹೆಸರಿಸಬಹುದು. ಇವರ ಪತ್ರಿಕಾ ವ್ಯವಸಾಯವೂ ಗಮನಾರ್ಹವಾದದ್ದು. ಆನಂದ ಎಂಬ ಪತ್ರಿಕೆ ಇವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. 'ಭಾರತಿ' ಪತ್ರಿಕೆಗೆ ಇವರೇ ಆಧಾರಸ್ತಂಭವಾಗಿದ್ದರು. ಬೋಧಿನಿ (1914-18) ಎಂಬ ಅಮೂಲ್ಯವಾದ ಶಿಕ್ಷಣ ಕೈಪಿಡಿಯನ್ನು ಇವರು ನಡೆಸಿದರು. ಮಂಗಳೂರಿನ ಮಿತ್ರಮಂಡಳಿಯನ್ನು ಹುಟ್ಟುಹಾಕಿದವರೇ ಕಾಮತರು. ಶಾಲಾ ಮಕ್ಕಳಿಗಾಗಿ ಅನೇಕ ಪದ್ಯಗಳನ್ನು ರಚಿಸಿಕೊಟ್ಟಿದ್ದಾರೆ. ಇತ್ತೀಚೆಗೆ ಪುತ್ತೂರು ಕರ್ನಾಟಕ ಸಂಘ ಕಾಮತರ ಎಲ್ಲ ಬರೆಹಗಳನ್ನು ಎಮ್.ಎನ್. ಕಾಮತ್ ಕೃತಿಗಳು (ಸಂ: ಲೀಲಾ ಭಟ್) ಎಂಬ ಹೆಸರಿನಲ್ಲಿ ಐದು ಸಂಪುಟಗಳಲ್ಲಿ ಪ್ರಕಟಿಸಿದೆ. ಕಾಮತರಿಗೆ ಪ್ರಶಸ್ತಿ ಪುರಸ್ಕಾರಗಳು ದೊರೆಯುವುದು ಒತ್ತಟ್ಟಿಗಿರಲಿ, ಇಷ್ಟೆಲ್ಲ ಕೆಲಸಮಾಡಿಯೂ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇವರದು ಮರೆತುಹೋದ ಮಹನೀಯರ ಹೆಸರಾಗಿತ್ತು. ಇವರು ನಿಧನರಾಗುವುದಕ್ಕೆ ಮೂರು ತಿಂಗಳ ಮೊದಲು ನಡೆದ ಅಖಿಲ ಕರ್ನಾಟಕ ಸಣ್ಣಕಥೆಗಳ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು (1940) ಎಂಬ ಸಂಗತಿಯನ್ನು ಇಲ್ಲಿ ಉಲ್ಲೇಖಿಸಬಹುದು. (ಎಲ್.ಬಿ.)

**ಕಾಮತ, ಎಂ.ವಿ. :** 1921-. ಹೆಸರಾಂತ ಪತ್ರಿಕೋದ್ಯಮಿ, ಲೇಖಕ. ಇವರ ಪೂರ್ಣ ಹೆಸರು ಮಾಧವ ವಿಠ್ಠಲ ಕಾಮತ. ತಂದೆ ವಿಠ್ಠಲ ಕಾಮತ, ತಾಯಿ ಗಿರಿಜಾ. ಕಾಮತರು 1921 ಸೆಪ್ಟೆಂಬರ್ 7ರಂದು ಉಡುಪಿಯಲ್ಲಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಉಡುಪಿಯ ಸಿಸಿಲ್ಸ್ ಕಾನ್ವೆಂಟ್, ಕ್ರಿಶ್ಚಿಯನ್ ಹೈಸ್ಕೂಲ್ ಮತ್ತು ಬೋರ್ಡ್ ಹೈಸ್ಕೂಲುಗಳಲ್ಲಾಯಿತು. 1937ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾದರು. ಅನಂತರ ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿ ಮುಂಬಯಿಯ ಸೆಂಟ್ ಝೇವಿಯರ್ಸ್ ಕಾಲೇಜಿನಲ್ಲಿ ಬಿ.ಎಸ್‌ಸಿ. ಪದವಿ ಪಡೆದರು (1941). ಇ.ಡಿ.ಸಸೂನ್ ಟರ್ಕಿ ರೆಡ್ ಡೈ ವರ್ಕ್ಸ್‌ನಲ್ಲಿ ಕೆಮಿಸ್ಟ್ ಆಗಿ ಸೇರಿ (1941) ಕೆಲಸ ಮಾಡಿದರು. ಮುಂಬಯಿಯ ಓರಿಯೆಂಟಲ್ ಫಾರ್ಮಾಸ್ಯುಟಿಕಲ್ ಕಂಪನಿಯಲ್ಲಿ ಸೀನಿಯರ್ ಕೆಮಿಸ್ಟ್ ಮತ್ತು ಅಸಿಸ್ಟೆಂಟ್ ಫ್ಯಾಕ್ಟರಿ ಮ್ಯಾನೇಜರಾಗಿ ಕೆಲಸ ಮಾಡಿದರು (1944-46).



ಅನಂತರ ಫ್ರೀಪ್ರೆಸ್ ಜರ್ನಲ್ ಪತ್ರಿಕೆಯ ವರದಿಗಾರರೂ ಲೇಖಕರೂ ಆಗಿ ಮೂರು ವರ್ಷ ಕೆಲಸ ಮಾಡಿದರು. ಅದೇ ಪತ್ರಿಕೆಯ ದೆಹಲಿ ವರದಿಗಾರರಾಗಿ (1949-50), ಮುಂಬಯಿಯ ಫ್ರೀಪ್ರೆಸ್ ಬುಲೆಟಿನ್‌ನ ಸಂಪಾದಕರಾಗಿ (1950-55), ಕೆಲಸಮಾಡಿದರು. ಭಾರತಜ್ಯೋತಿ ಪತ್ರಿಕೆಯ ಸಂಪಾದಕರಾಗಿದ್ದರು (1954-55). ಅನಂತರ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಸಂಸ್ಥೆಯ ನ್ಯೂ ಯಾರ್ಕ್‌ನ ವಿಶೇಷ ವರದಿಗಾರರಾಗಿ ನಿಯುಕ್ತರಾದರು (1955-58). ಯುನೈಟೆಡ್‌ವಿಷ್ಯ ಮುಂಬಯಿ ಪತ್ರಿಕೆಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಯುರೋಪ್ ಖಂಡದ ವಿಶೇಷ ವರದಿಗಾರರಾಗಿ 1959ರಿಂದ ಎಂಟು ವರ್ಷಗಳ ಕಾಲ ಕೆಲಸ ಮಾಡಿದರು. ಅದೇ ಪತ್ರಿಕೆಯ ಭಾನುವಾರ ಸಂಚಿಕೆಯ ಸಂಪಾದಕರಾಗಿಯೂ ಎರಡುವರ್ಷ ಕೆಲಸ ನಿರ್ವಹಿಸಿದರು. ಟೈಮ್ಸ್ ಆಫ್ ಇಂಡಿಯಾದ ವಾಷಿಂಗ್ ಟನ್ ವಿಶೇಷ ವರದಿಗಾರರಾಗಿ ಕಾರ್ಯನಿರ್ವಹಿಸಿದರು (1969-78). ಇದರಿಂದ ಅಂತಾರಾಷ್ಟ್ರೀಯ ಕೀರ್ತಿಗೆ ಭಾಜನರಾದರು. ಅನಂತರ ಇಂಗ್ಲಿಷಿನ ಪ್ರಸಿದ್ಧ ಪತ್ರಿಕೆ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾದ ಸಂಪಾದಕರಾಗಿ ನಿಯುಕ್ತರಾದರು (1979). ತಮ್ಮ ಸಂಪಾದಕತ್ವದ ಅವಧಿಯಲ್ಲಿ ಪತ್ರಿಕೆಯ ಆಕರ್ಷಣೆಯನ್ನೂ ಪ್ರಸಾರ ಸಂಖ್ಯೆಯನ್ನೂ ಹೆಚ್ಚಿಸಿದ್ದರು.

ಇವರು ಫ್ರೀಪ್ರೆಸ್ ಜರ್ನಲ್, ಜನ್ಮಭೂಮಿ, ಪ್ರವಾಸಿ, ಆಫ್ಟರ್‌ನೂನ್ ಡಿಸ್‌ಪ್ಯಾಚ್ ಅಂಡ್ ಕೋರಿಯರ್, ನಾಗಪುರದ ಹಿತವಾದ, ದಿಲ್ಲಿಯ ಆರ್ಗನೈಜರ್, ದಿ ಸೆಂಟಿನೆಲ್ (ಗೌಹಾತಿ), ರಾಜಸ್ಥಾನ ಪತ್ರಿಕಾ, ಕೇಸರಿ, ಉದಯವಾಣಿ, ಪ್ರಿಯದತ್ತ, ಇಶ್ಯೂಸ್ ಅಂಡ್ ಕನ್‌ಸರ್ನ್ಸ್, ನ್ಯೂಸ್ ಟುಡೇ ಮೊದಲಾದ ಪತ್ರಿಕೆಗಳ ಅಂಕಣ ಬರೆಹಗಾರರಾಗಿದ್ದರು. ಇವರ ಬರೆವಣಿಗೆಯ ಹೃದ್ಯಶೈಲಿ, ಅಧ್ಯಯನಪೂರ್ಣ ಖಚಿತ ವಿಚಾರಗಳು, ರಾಜಕೀಯ ಆಗುಹೋಗುಗಳ ಭಾಷ್ಯ ಓದುಗರನ್ನು ಸೆರೆಹಿಡಿದಿದ್ದವು.

ತಮ್ಮ ಬಿಡುವಿಲ್ಲದ ಪತ್ರಿಕಾ ವ್ಯವಸಾಯದ ನಡುವೆಯೂ ಅನೇಕ ಕೃತಿಗಳನ್ನು ಇವರು ರಚಿಸಿದ್ದಾರೆ. ಪಾರ್ಟೀಸ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ (1946), ದ ಕಾಪ್ಟೈನ್ (1972), ಕಿಸಿಂಜರ್ ದಿ ಇನ್‌ಕಂಪ್ಲಿಟ್ ಡಿಪ್ಲೊಮ್ಯಾಟ್ (1975), ಹಿಸ್ಟರಿ ಆಫ್ ಇಂಡಿಯನ್ ಮರ್ಚಂಟ್ಸ್ ಚೇಂಬರ್ (1982), ಪ್ರೊಫೆಷನಲ್ ಜರ್ನಲಿಸಂ (1980), ದಿ ಜರ್ನಲಿಸ್ಟ್ಸ್ ಹ್ಯಾಂಡ್‌ಬುಕ್ (1983), ಬಿಹೈಂಡ್ ದಿ ಬೈಲೈನ್ (1985), ದ ಇನೊವೇಟಿವ್ ಬ್ಯಾಂಕರ್ (1983), ಮ್ಯಾನೇಜ್‌ಮೆಂಟ್ ಕುರಿಯನ್ ಸ್ಟೈಲ್, ದಿ ಯುನೈಟೆಡ್ ಸ್ಟೇಟ್ಸ್ ಅಂಡ್ ಇಂಡಿಯಾ (1976), ವಾಟ್ ಜರ್ನಲಿಸಂ ಇಸ್ ಆಲ್ ಅಬೌಟ್ (1986), ಬಿ.ಜಿ. ಖೇರ್, ದಿ ಜಂಟಲ್‌ಮ್ಯಾನ್ ಪ್ರೀಮಿಯರ್ (1989), ದಿ ಪರ್‌ಸ್ಯೂಟ್ ಆಫ್ ಎಕ್ಸಲೆನ್ಸ್ (1982), ಗಣೇಶ ವಾಸುದೇವ ಮಾವಳಂಕರ್ (1990), ಫಿಲಾಸಫಿ ಆಫ್ ಡೆಥ್ ಅಂಡ್ ಡೈಯಿಂಗ್ (1978), ದ ಕಫ್ ಆಫ್ ಲವ್ (1981), ಸಮ್ ಆಫ್ ಅಸ್ ಆರ್ ಲಕೀ (1996), ದಿ ಮೇಕಿಂಗ್ ಆಫ್ ಎ ಮಿಲಿನೇರ್‌ಯು (1991), ದೇವಿ ಅಹಲ್ಯಾಬಾಯಿ ಹೋಳ್ಕರ್, ದಿ ಫಿಲಾಸಫರ್ ಕ್ವೀನ್ (1995), ಪಾಯಿಂಟ್ಸ್ ಅಂಡ್ ಲೈನ್ಸ್ (1994), ಲೆಟರ್ಸ್ ಟು ಗೌರಿ (1996),

ಮಿಲಿಟೆಂಟ್ ಬಟ್ ನಾನ್ ವಯಲಂಟ್ ಟ್ರೇಡ್ ಯೂನಿಯನಿಸಂ (1993), ಗಾಂಧೀಸ್ ಕೂಲಿ (1988), ಮಿಲ್ಕ್ ಮ್ಯಾನ್ ಫ್ರಂ ಆನಂದ (1996), ಜಾಯ್ಸ್ ಬುಕ್ ಆಫ್ ಇಂಡಿಯನ್ ನೇಮ್ಸ್ (1997), ಥರ್ಟಿ ಥೌಸಂಡ್ ಇಂಡಿಯನ್ ನೇಮ್ಸ್ (2001), ರಿ ಡಿಸ್ಕವರಿಂಗ್ ಕರ್ನಾಟಕ (1985), ಎ ಬ್ಯಾಂಕಿಂಗ್ ಒಡಿಸ್ಸಿ (1991), ಸೆವೆಂಟಿಫೈವ್ ಇಯರ್ಸ್ ಆಫ್ ಸರ್ವಿಂಗ್ ದಿ ಕಾಮನ್ ಮ್ಯಾನ್ (1994), ಸಿಂಡಿಕೇಟ್ ಬ್ಯಾಂಕ್ ಎ ಪೀಪಲ್ಸ್ ಬ್ಯಾಂಕ್ (2000), ಕಾರ್ಪೋರೇಶನ್ ಬ್ಯಾಂಕ್; ಎ ಕಾರ್ಪೋರೇಟ್ ಜರ್ನಿ (1997), ಟೈಡ್ ಆಫ್ ಟೈಮ್, ಹಿಸ್ಟರಿ ಆಫ್ ಮುಂಬಯಿ ಪೋರ್ಟ್ (2000), ದಿ ಎಕ್ಸೆಲ್ ಸ್ಟೋರಿ (2001), ದಿ ಅದರ್ ಫೇಸ್ ಆಫ್ ಇಂಡಿಯಾ (1991), ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಪುನರಪಿ ಜನನಂ ಎಂಬ ಕೃತಿಯನ್ನು ಇವರು ಕನ್ನಡದಲ್ಲಿ ರಚಿಸಿದ್ದಾರೆ. ದಿ ಇಂಡಿಯಾ ಆಫ್ ಅವರ್ ಡ್ರೀಮ್ಸ್ (1982), ಅನ್‌ಟೋಲ್ಡ್ ಸ್ಟೋರಿ ಆಫ್ ಡಾಕ್ಟರ್ಸ್ ಅಂಡ್ ಪೇಷಂಟ್ಸ್ (1993), ನೆಹರು ರಿ ವಿಸಿಟೆಡ್ (2003) -ಇವು ಇವರ ಸಂಪಾದಿತ ಕೃತಿಗಳು.

ಭಾರತ ಸರ್ಕಾರ ಇವರನ್ನು ಪ್ರಸಾರಭಾರತಿ ಸಂಸ್ಥೆಯ ಅಧ್ಯಕ್ಷರನ್ನಾಗಿ ನೇಮಿಸಿತ್ತು. ಇವರು ನವದೆಹಲಿಯ ವಿಜ್ಞಾನ ಭಾರತಿ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು. ಇವರು ಹಲವು ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿಯೂ ಕೆಲಸ ನಿರ್ವಹಿಸಿದ್ದರು. ಹಲವು ಸಾರ್ವಜನಿಕ ಹಿತಾಸಕ್ತಿಯ ಸಂಸ್ಥೆಗಳ ಧರ್ಮದರ್ಶಿಗಳೂ ಆಗಿದ್ದರು. ಬಾಂಬೆ ಯೂನಿಯನ್ ಆಫ್ ಜರ್ನಲಿಸ್ಟ್ಸ್ (1953), ಅಖಿಲ ಭಾರತ ಕೊಂಕಣಿ ಭಾಷಾ ಪರಿಷದ್ ಈ ಸಂಸ್ಥೆಯ ಅಧ್ಯಕ್ಷರಾಗಿದ್ದರು.

ಇವರ ಸೇವೆಯನ್ನು ಪರಿಗಣಿಸಿ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಹಲವು ಪ್ರಶಸ್ತಿಗಳನ್ನು ನೀಡಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಟಿಳಕ- ಮೊಹರೆ ಪತ್ರಿಕೋದ್ಯಮ ಪ್ರಶಸ್ತಿ, ಗೋಕರ್ಣ ಪರ್ತಗಾಳಿ ಮಠದ ವಿದ್ಯಾಧಿರಾಜ ಪ್ರಶಸ್ತಿ, ಉಡುಪಿಯ ಮಠಾಧೀಶರ ಸಮಾಜ ಭೂಷಣ ಬಿರುದು ಮುಖ್ಯವಾದವು.

ತಮ್ಮ ಜೀವಮಾನವನ್ನೆಲ್ಲ ಕರ್ನಾಟಕದ ಹೊರಗೆ ಕಳೆದರೂ ತಮ್ಮ ಬರೆಹಗಳಿಂದ, ಅರ್ಥಪೂರ್ಣ ಕೃತಿಗಳಿಂದ ಇವರು ಕನ್ನಡ ನಾಡಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. (ಎಸ್.ಎಂ.ಕೆ.)

**ಕಾಮದೇವ[1]**: ಕದಂಬ ದೊರೆ (1180-1217). 12ನೆಯ ಶತಮಾನದಲ್ಲಿ ಹಾನಂಗಲ್ ಪ್ರದೇಶವನ್ನು ಆಳುತ್ತಿದ್ದ ರಾಜರಲ್ಲಿ ಪ್ರಮುಖ. ಈತನ ತಂದೆ ಇಮ್ಮಡಿ ಕೀರ್ತಿನೃಪಾಲ. ಕದಂಬರ ಬಿರುದುಗಳಾದ ಮಾಲತೀ ಮಧುಕೇಶ್ವರ, ಬನವಾಸಿ ಪುರವರಾಧೀಶ್ವರ ಎಂಬವನ್ನು ಕಾಮದೇವ ತಳೆದಿದ್ದ. ಕಾಳಲದೇವಿ ಈತನ ರಾಣಿ. ಬರಮ, ಸೋಮ ಮತ್ತು ಮಲ್ಲಿದೇವ ಗಂಡು ಮಕ್ಕಳು. ತನ್ನ ಆಳಿಕೆಯ ಪ್ರಾರಂಭದಲ್ಲಿ ಕಾಮದೇವ ಕಳಚುರಿ ಸಾಮ್ರಾಟರ ಅಧೀನನಾಗಿದ್ದ. 1184ರಲ್ಲಿ ಕಳಚುರಿ ಮನೆತನ ಕೊನೆಗೊಂಡು ನಾಲ್ವಡಿ ಸೋಮೇಶ್ವರ ಚಾಳುಕ್ಯ ಮನೆತನವನ್ನು ಪುನಃ ಸ್ಥಾಪಿಸಿದ ಮೇಲೆ ಅವರ ಅಧೀನನಾಗಿದ್ದ. ಕಲ್ಯಾಣವನ್ನು ಕಳಚುರಿಗಳಿಂದ ಮರಳಿ ಪಡೆಯುವ ಪ್ರಯತ್ನದಲ್ಲಿ ಸೋಮೇಶ್ವರನಿಗೆ ಕಾಮದೇವನ ಸಹಕಾರ ದೊರಕಿತು. 1189ರಲ್ಲಿ ಚಾಳುಕ್ಯ ಮನೆತನ ಅಳಿದು ಹೊಯ್ಸಳ ವೀರಬಲ್ಲಾಳ ಬನವಾಸಿ, ಹಾನಂಗಲ್, ನಾಗರಖಂಡ ನಾಡುಗಳನ್ನು ಗೆದ್ದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ. ಕಾಮದೇವ ಹಲವು ವರ್ಷಗಳ ಕಾಲ ವೀರಬಲ್ಲಾಳ ಚಕ್ರವರ್ತಿಯ ಅಧೀನನಾಗಿದ್ದ. ಈತ 1205ರ ವೇಳೆಗೆ ಸ್ವತಂತ್ರ ರಾಜನೆಂದು ಘೋಷಿಸಿಕೊಂಡುದರಿಂದ ಬಲ್ಲಾಳನ ಸೈನ್ಯ ಇವನನ್ನು ಅನೇಕ ಬಾರಿ ಸೋಲಿಸಿತು. ಸೋತಾಗಲೆಲ್ಲ ಈತ ತಲೆತಪ್ಪಿಸಿಕೊಂಡು ಮರಸು ಯುದ್ಧದಲ್ಲಿ ತೊಡಗುತ್ತಿದ್ದ. ಕೊನೆಗೆ 1211ರ ವೇಳೆಗೆ ಕಾಮದೇವ ಸ್ವತಂತ್ರನಾದ, ಆದರೆ ಹಾನಂಗಲ್ ಕದಂಬರ ಸ್ವಾತಂತ್ರ್ಯ ಮುಂದುವರಿಯಲಿಲ್ಲ. ಇವನ ಉತ್ತರಾಧಿಕಾರಿ ಮಲ್ಲಿದೇವ ಸೇವುಣರ ಸಾಮಂತನಾದ. ಕಾಮದೇವ ಕಬ್ಬಿಗರ ಕಾವದ ಕರ್ತೃವಾದ ಆಂಡಯ್ಯನ ಪೋಷಕನಾಗಿದ್ದ. (ಜಿ.ಆರ್.ಆರ್.)

**ಕಾಮದೇವ[2]**: ಉಚ್ಚಂಗಿ ಪಾಂಡ್ಯ ಮನೆತನದ ಕೊನೆ ಅರಸ. 1161ರಿಂದ 1187ವರೆಗೆ ಆಳಿದ. ವಿಜಯ ಪಾಂಡ್ಯನೆಂದೂ ಇವನಿಗೆ ಹೆಸರಿತ್ತು. 11-12ನೆಯ ಶತಮಾನಗಳಲ್ಲಿ ಪಾಂಡ್ಯರು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ, ಉಚ್ಚಂಗಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಇಂದಿನ ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳ ಹಲವು ಭಾಗಗಳನ್ನೊಳಗೊಂಡ ನೊಳಂಬವಾಡಿ ಎಂಬ ರಾಜ್ಯವನ್ನು ಆಳುತ್ತಿದ್ದರು. ಕಾಮದೇವನ ಆಳಿಕೆಯ ಪ್ರಾರಂಭಕ್ಕೆ ಮೊದಲೇ ಕಲ್ಯಾಣ ಚಾಳುಕ್ಯರ ಸಿಂಹಾಸನವನ್ನು ಕಳಚುರಿ ಮನೆತನದ ಬಿಜ್ಜಳ ಆಕ್ರಮಿಸಿಕೊಂಡಿದ್ದ. ಈತ 1162ರಲ್ಲಿ ಕಾಮದೇವನನ್ನು ಸೋಲಿಸಿದ. ಆದರೂ ಕಾಮದೇವ ಪದಚ್ಯುತರಾದ ಚಾಳುಕ್ಯರ ಪಕ್ಷಪಾತಿಯಾಗಿದ್ದ. 1177ರಲ್ಲಿ ಹೊಯ್ಸಳ ಇಮ್ಮಡಿ ವೀರಬಲ್ಲಾಳ ಉಮ್ಮತ್ತೂರಿನಲ್ಲಿ ಕಾಮದೇವನನ್ನು ಸೋಲಿಸಿ ದುರ್ಗಮವಾದ ಉಚ್ಚಂಗಿಯನ್ನು ಮುತ್ತಿ, ಕಾಮದೇವನಿಂದ ಅಪಾರ ಕಪ್ಪಕಾಣಿಕೆಗಳನ್ನು ಪಡೆದ. ಅವನ ರಾಜ್ಯವನ್ನು ಅವನಿಗೇ ಹಿಂತಿರಿಗಿಸಿ, ಪಾಂಡ್ಯರಾಜಪ್ರತಿಷ್ಠಾಪನಾಚಾರ್ಯ ಎಂಬ ಬಿರುದನ್ನು ತಳೆದ. 1184ರಿಂದ 1187ರ ವರೆಗೆ ಕಾಮದೇವ ಪುನಃ ಸ್ಥಾಪಿಸಲಾದ ಕಲ್ಯಾಣ ಚಾಳುಕ್ಯ ರಾಜ್ಯದ ನಾಲ್ವಡಿ ಸೋಮೇಶ್ವರನ ಪಕ್ಷ ವಹಿಸಿದ. ಇದರಿಂದ ಕೋಪಗೊಂಡ ಬಲ್ಲಾಳ 1187ರಲ್ಲಿ ಉಚ್ಚಂಗಿಯನ್ನು ಮುತ್ತಿದ. ಯುದ್ಧದಲ್ಲಿ ಕಾಮದೇವನೂ ಆತನ ಮಗನಾದ ಒಡೆಯನೂ ಮರಣ ಹೊಂದಿದರು. ನೊಳಂಬವಾಡಿ ಹೊಯ್ಸಳ ಸಾಮ್ರಾಜ್ಯದಲ್ಲಿ ಸೇರಿತು. *

**ಕಾಮಧೇನು** : ಕೃಷಿವಿಚಾರಗಳಿಗೆ ಮೀಸಲಾಗಿದ್ದ ಮಾಸ ಪತ್ರಿಕೆ. ಕೌಜಲಗಿ ಹಣಮಂತರಾವ್ ಸ್ಮಾರಕನಿಧಿಯಿಂದ 1958ರ ಆಗಸ್ಟ್‌ನಲ್ಲಿ ಆರಂಭವಾಯಿತು. ಕೃಷಿಕರಲ್ಲಿ ಶಾಸ್ತ್ರೀಯ ದೃಷ್ಟಿಕೋನವನ್ನು ಬೆಳೆಸುವುದು, ಶಾಸ್ತ್ರೀಯ ಕೃಷಿತಂತ್ರವನ್ನು ಅನುಸರಿಸಿ ಸಮೃದ್ಧ ಬೆಳೆ ಬೆಳೆಸುವ ಬಗ್ಗೆ ಅವರಿಗೆ ಸಲಹೆ ಮತ್ತು ಅನುಭವ ಕಥನಗಳನ್ನು ಒದಗಿಸುವುದು, ನಾಡಿನಲ್ಲೂ ವಿದೇಶಗಳಲ್ಲೂ ಕೃಷಿರಂಗದಲ್ಲಿ ನಡೆದ ಪ್ರಯೋಗಗಳ ಪರಿಚಯ ಮಾಡಿಕೊಡುವುದು, ಜೊತೆಗೆ ಬಿಡುವಿನ ಸಮಯದಲ್ಲಿ ಓದಲು ಸರಸ ಸಾಹಿತ್ಯ ಒದಗಿಸುವುದು-ಇವು ಈ ಪತ್ರಿಕೆಯ ಉದ್ದೇಶಗಳು. ಡಿಮ್ಮೈ ಚತುರ್ಥಾಕಾರದ 48 ಪುಟಗಳ ಬಿಡಿ ಸಂಚಿಕೆಯ ಬೆಲೆ 50 ಪೈ. ವಾರ್ಷಿಕ ಚಂದಾ ರೂ.5. ಈ ಪತ್ರಿಕೆಯ ಸಂಪಾದಕರಾಗಿದ್ದವರು ರಂಗನಾಥ ದಿವಾಕರ.

ಪ್ರಗತಿಪರ ರೈತರ ಅನುಭವ ಕಥನ, ದುಡಿದು ಪಡೆದವರು, ಕೃಷಿಯಲ್ಲಿ ನೀವು ಅರಿತಿರಬೇಕಾದುದು ಮೊದಲಾದ ಶೀರ್ಷಿಕೆಗಳ




ಅಡಿಯಲ್ಲಿ ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು ಆಕರ್ಷಕವಾಗಿದ್ದುವು. ಅಲ್ಲದೆ ಕೃಷಿರಂಗದಲ್ಲಿ ಕಾಲ ಕಾಲಕ್ಕೆ ಅನುಸರಿಸಬೇಕಾದ ರೀತಿನೀತಿಗಳ ತಿಳಿವಳಿಕೆಯನ್ನೂ ಕೊಡಲಾಗುತ್ತಿತ್ತು. ಇದರಿಂದಾಗಿ ಕಾಮಧೇನು ಎಂಬ ಹೆಸರು ಇದಕ್ಕೆ ಅನ್ವರ್ಥವಾಗಿ ಪರಿಣಮಿಸಿತು. ಗ್ರಾಮಾಯಣ ಖ್ಯಾತಿಯ ರಾವ್ ಬಹದ್ದೂರರು ಈ ಪತ್ರಿಕೆಯಲ್ಲಿ ಒಡೆದ ಕನ್ನಡಿ ಎಂಬ ಶೀರ್ಷಿಕೆಯಲ್ಲಿ ಬರೆಯುತ್ತಿದ್ದ ಕಥೆಗಳು ಹಳ್ಳಿಗರ ಜೀವನದಲ್ಲಿ ಬರುವ ನಾನಾ ಸಮಸ್ಯೆಗಳ ಮೇಲೆ ಕ್ಷಕಿರಣ ಬೀರುತ್ತಿದ್ದುವು. ಜೊತೆಗೆ ಅನ್ಯಭಾಷೆಗಳ ಉತ್ತಮ ಕಥೆಗಳನ್ನೂ ಪತ್ರಿಕೆ ಪ್ರಕಟಿಸುತ್ತಿತ್ತು. ದನಗಳ ಪಾಲನೆ ಪೋಷಣೆ, ಅವುಗಳ ರೋಗರುಜಿನಗಳ ನಿವಾರಣೆ ಮೊದಲಾದ ವಿಷಯಗಳನ್ನು ಕುರಿತ ಲೇಖನಗಳು ಉಪಯುಕ್ತವಾಗಿದ್ದುವು. ಮೊದಲ ಕೆಲವು ಸಂಚಿಕೆಗಳ ಮುಖಪತ್ರ ತ್ರಿವರ್ಣದಲ್ಲಿ ಮುದ್ರಿತವಾಗುತ್ತಿತ್ತು.

ಈ ಪತ್ರಿಕೆ 1963ರ ಮಾರ್ಚ್‌ವರೆಗೆ ನಡೆದು ಶಿರಸಿಯ ಒಂದು ಸಂಸ್ಥೆಗೆ ಹಸ್ತಾಂತರವಾಯಿತು. ಸ್ವಲ್ಪ ಕಾಲವಾದ ಮೇಲೆ ಅದು ಮತ್ತೆ ಹಸ್ತಾಂತರಗೊಂಡಿತಲ್ಲದೆ ಅದರ ಹೆಸರೂ ಬದಲಾಯಿತು. ರೈತರಿಗೆ ತುಂಬ ಉಪಯುಕ್ತವಾಗಿದ್ದ ಪತ್ರಿಕೆಯಾಗಿದ್ದರೂ ಇದರ ಪ್ರಸಾರ ಸಂಖ್ಯೆ 1,500ರ ಗಡಿಯನ್ನು ದಾಟಿರಲಿಲ್ಲ. *

**ಕಾಮನ ಹಬ್ಬ :** ಕರ್ನಾಟಕದಲ್ಲಿ ಆಚರಣೆಯಲ್ಲಿರುವ ಒಂದು ಜನಪದ ಹಬ್ಬ. ಉತ್ತರ ಕರ್ನಾಟಕದಲ್ಲಿ ಈ ಹಬ್ಬವನ್ನು ಹೋಳಿ ಹುಣ್ಣಿಮೆ, ಹೋಳಿಹಬ್ಬ ಎಂದು ಆಚರಿಸುವ ರೂಢಿಯಿದೆ. ಇದು ಪ್ರತಿವರ್ಷದ ಫಾಲ್ಗುಣ ಮಾಸದಲ್ಲಿ ನಡೆಯುತ್ತದೆ.

ವಿಜಯನಗರದ ಅರಸರು ಕಾಮನ ಹಬ್ಬವನ್ನು ತುಂಬ ಉತ್ಸಾಹದಿಂದ ಆಚರಿಸುತ್ತಿದ್ದ ಸಂಗತಿಯನ್ನು ಕಣ್ಣಾರೆ ಕಂಡು ಆನಂದಿಸಿದ ವಿದೇಶೀ ಯಾತ್ರಿಕ ಡೂಮಿಂಗೊ ಪೆಯಸ್ ವರದಿ ಮಾಡಿದ್ದಾನೆ. ಕನಕದಾಸರ ವಿಖ್ಯಾತ ಹಾಡುಗಬ್ಬ 'ಮೋಹನ ತರಂಗಿಣಿ' ಕಾಮನ ಹಬ್ಬದ ಹಿನ್ನೆಲೆಯನ್ನು ಕುರಿತುದಾಗಿದೆ.

ಜನಪದ ಪರಂಪರೆಯ ಸಾಮಾಜಿಕ ಸಂಪ್ರದಾಯಗಳ ಸಂಕೇತಗಳನ್ನು ಈ ಹಬ್ಬದ ನಡೆವಳಿಯಲ್ಲಿ ನಾವು ಗುರುತಿಸಬಹುದು. ಹಳೆಯ ವಸ್ತುಗಳನ್ನು ಹೋಳಿಗಾಗಿ ಸಂಗ್ರಹಿಸುವುದು, ಕುಳ್ಳು (ಬೆರಣಿ), ಕಟ್ಟಿಗೆ ಕಳವು ಮಾಡಿ ತರುವುದು, ಕಾಮದಹನದ ಬೇರೆ ಬೇರೆ ಕಾರ್ಯಕ್ಕಾಗಿ ಹಳ್ಳಿಗಳಲ್ಲಿ ಬೇರೆ ಬೇರೆ ಹಕ್ಕುದಾರರಿರುವುದು, ಇವರೆಲ್ಲರ ಮೇಲೆ ಹೋಳಿಯ ನಾಯಕ ಎಂಬ ಹಿರಿಯನಿರುವುದು, ಅಸ್ಪೃಶ್ಯರೂ ಈ ಹಬ್ಬದಲ್ಲಿ ಪಾಲ್ಗೊಳ್ಳುವ ಅವಕಾಶವಿರುವುದು, ತಮ್ಮಟೆಗಳನ್ನು ಬಾರಿಸುವುದು, ಸಕ್ಕರೆಯ ಸರಗಳನ್ನು ಒಬ್ಬರು ಇನ್ನೊಬ್ಬರ ಮಕ್ಕಳಿಗೆ ಒಲವುಗಾಣಿಕೆಗಳನ್ನಾಗಿ ಕೊಡುವುದು, ಕಾಮದಹನದ ಕಾಲದಲ್ಲಿ ಉರಿಯಮೇಲೆ ಮಾಸ್ತಿ ಎಂಬ ಹೆಸರಿನಿಂದ ಹೆಣ್ಣು ಕೋಳಿಯನ್ನು ಹಾರಿಸುವುದು, ಉರಿಯುವ ಹೋಳಿಯಲ್ಲಿ ಕಬ್ಬಿನ ಗಣಿಕೆ (ತುಂಡು), ಬೆಲ್ಲದಿಂದ ಮಾಡಿದ ಚೇಳು, ತೆಂಗಿನಕಾಯಿ - ಇವುಗಳನ್ನು ಒಗೆಯುವುದು, ಹೋಳಿಯ ಬೆಂಕಿಯನ್ನು ಮನೆಗೆ ತಂದು ಅದರಲ್ಲಿ ಕಡಲೆಗಳನ್ನು ಸುಟ್ಟು ತಿನ್ನುವುದು ಇವೆಲ್ಲ ನಮ್ಮ ಜನಪದ ಸಂಪ್ರದಾಯಗಳಾಗಿವೆ ಎಂಬ ಬೆಟಗೇರಿ ಕೃಷ್ಣಶರ್ಮರ ಮಾತುಗಳು ಕಾಮನ ಹಬ್ಬದ ಆಚರಣೆಯ ವೈಶಿಷ್ಟ್ಯಗಳನ್ನು ನಿರೂಪಿಸುತ್ತವೆ. ಈ ಹಬ್ಬ ಕುರಿತಂತೆ ಉತ್ತರ ಕರ್ನಾಟಕದಲ್ಲಿ ಜನಪದ ಲಾವಣಿಗಳು, ದುಂದುಮೆ ಹಾಡು, ಹಿಯಾಲು ಮುಂತಾದ ಜನಪದ ಸಾಹಿತ್ಯ ಕಂಡುಬರುತ್ತದೆ.

ಕಾಮನ ಹಬ್ಬಕ್ಕೆ ಪೌರಾಣಿಕ ಅಂಶಗಳೂ ಸೇರಿಕೊಂಡಿವೆ. ವಿಷ್ಣುಪುರಾಣ, ಲಿಂಗಪುರಾಣಗಳ ಪ್ರಕಾರ ಪರಮೇಶ್ವರನ ಉಗ್ರತಪಸ್ಸಿಗೆ ಭಂಗತಂದ ಮನ್ಮಥ ಮುಕ್ಕಣ್ಣನ ಉರಿಗಣ್ಣಿನ ಬಿರುಬಿಗೆ ಸಿಕ್ಕು ಬೆಂದು ಹೋದ. ಅನಂತರ ರತಿಯ ಮೊರೆಯ ಕನಿಕರದಿಂದ ಕಾಮ ಅನಂಗನಾಗಿ ಬಾಳುವಂತೆ ಪರಮೇಶ್ವರ ಅನುಗ್ರಹಿಸಿದ. ಈ ಕಲ್ಪನೆಯಂತೆ ರತಿ-ಮನ್ಮಥರನ್ನು ಮೊದಲು ಪೂಜಿಸಿ ಹಾಡಿ ಕುಣಿದು ಅನಂತರ ಕಾಮನನ್ನು ಸುಡುವ ಸಂಪ್ರದಾಯ ಕರ್ನಾಟಕದಲ್ಲಿದೆ. (ಎನ್.ಟಿ.)

**ಕಾಮಲಾಪುರ :** ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನಲ್ಲಿ ಕಸಬೆಯಿಂದ 11ಕಿಮೀ ಈಶಾನ್ಯಕ್ಕಿರುವ ಒಂದು ಊರು. ಹಂಪೆಯಿಂದ ಮೂರೂವರೆ ಕಿಮೀ ದೂರದಲ್ಲಿದೆ. ಈ ಊರು ಒಂದು ಕಾಲದಲ್ಲಿ ವಿಜಯನಗರ ರಾಜಧಾನಿಯ ಭಾಗವಾಗಿತ್ತು. ರಾಣಿ ಕಾಮಲಾದೇವಿ ಇಲ್ಲಿ ವಾಸಿಸುತ್ತಿದ್ದುದರಿಂದ ಈ ಹೆಸರು ಬಂತೆಂದು ಹೇಳಿಕೆ. ಇದು ಕೆಲವು ಕಾಲ ಆನೆಗೊಂದಿ ರಾಜನ ವಾಸಸ್ಥಳವಾಗಿತ್ತು. ವಿಜಯನಗರದ ಅರಸರ ಕಾಲದ ಅನೇಕ ದೇವಾಲಯಗಳು ಇಲ್ಲಿವೆ. ಅವುಗಳಲ್ಲಿ ನಗರೇಶ್ವರ, ಪಟ್ಟಾಭಿರಾಮ ಮತ್ತು ಕಂಪ್ಲಿಗೆ ಹೋಗುವ ಮಾರ್ಗದಲ್ಲಿ ಸಿಕ್ಕುವ ಮಾಲ್ಯವಂತ ರಘುನಾಥ ದೇವಾಲಯಗಳು ಪ್ರಸಿದ್ಧ (ನೋಡಿ: ಹಂಪೆ).

ಊರಿನ ಮುಂಭಾಗದಲ್ಲಿ 476 ಎಕರೆ ಒಳ ಆಯ ಹೊಂದಿರುವ ದೊಡ್ಡಕೆರೆ ಇದೆ. ಫಲವತ್ತಾದ ಕೆಂಪು ಮಿಶ್ರಿತ ಮಣ್ಣಿರುವ ಈ ಪ್ರದೇಶದಲ್ಲಿ ಕಬ್ಬನ್ನು ಹೆಚ್ಚು ಬೆಳೆಸುವುದರ ಜೊತೆಗೆ ಬತ್ತ ಮತ್ತು ಬಾಳೆ ಬೆಳೆಯುತ್ತಾರೆ.

ಕಾಮಲಾಪುರಕ್ಕೆ ಸಮೀಪದಲ್ಲಿ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇಲ್ಲಿ ಕಾರ್ಮಿಕರು ಮತ್ತು ಇತರರು ನೆಲಸಿ ಒಂದು ಬಡಾವಣೆಯಾಗಿದೆ. ಹೊಸಪೇಟೆ ಬಳಿಯ ತುಂಗಭದ್ರಾ ಅಣೆಕಟ್ಟಿನಿಂದ ಸದಾ ದೊರಕುವ ನೀರಿನಿಂದ ಈ ಸುತ್ತಿನಲ್ಲಿ ವ್ಯವಸಾಯ ಪ್ರಗತಿಹೊಂದಿದೆ. ಕಬ್ಬನ್ನು ಬೆಳೆದು ಹೊಸಪೇಟೆ ಸಕ್ಕರೆ ಕಾರ್ಖಾನೆಗೆ ಒದಗಿಸುತ್ತಾರೆ. ಬೆಲ್ಲದ ತಯಾರಿಕೆಯೂ ಉಂಟು.

ಕಾಮಲಾಪುರ ನಗರ ಪಂಚಾಯಿತಿಯ ಆಡಳಿತಕ್ಕೆ ಸೇರಿದೆ. ಇಲ್ಲಿ ಒಂದು ಕಾಲೇಜು ಇದೆ. ಪ್ರವಾಸಿಮಂದಿರ ಮತ್ತು ಕೇಂದ್ರ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುವ ಪುರಾತತ್ವ ಇಲಾಖೆಯ ಒಂದು ಕಾರ್ಯಾಲಯ ಇವೆ. *

**ಕಾರಂತ, ಕೆ.ಆರ್. :** 1894-. ಪ್ರಸಿದ್ಧ ರಾಜಕೀಯ ಧುರೀಣ ಮತ್ತು ನ್ಯಾಯವಾದಿ. ದಕ್ಷಿಣ ಕನ್ನಡ ಜಿಲ್ಲೆ ಕೋಟದಲ್ಲಿ 1894 ಮೇ 1ರಂದು ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಪದವೀಧರರಾದ ಅನಂತರ ಮುಂಬಯಿಯಲ್ಲಿ ನ್ಯಾಯಶಾಸ್ತ್ರ ಪದವಿಯನ್ನು ಗಳಿಸಿಕೊಂಡರು. 1919ರಿಂದ ಮಂಗಳೂರಿನಲ್ಲಿ ನೆಲೆಸಿ ವಕೀಲಿವೃತ್ತಿ ಕೈಗೊಂಡರು.

ಗಾಂಧೀಜಿಯವರ ಕರೆಗೆ ಓಗೊಟ್ಟು ತಮ್ಮ ವೃತ್ತಿ ಬಿಟ್ಟು ಅಸಹಕಾರ ಚಳವಳಿಯಲ್ಲಿ ಪಾತ್ರವಹಿಸಿ ಕಾಂಗ್ರೆಸ್ಸಿನ ಕ್ರಿಯಾತ್ಮಕ ಸದಸ್ಯರಾದರು. 1924ರಿಂದ 1937ರವರೆಗೆ ಮಂಗಳೂರು ನಗರ ಯೋಜನೆಯಲ್ಲಿ ಹೆಚ್ಚು ಆಸಕ್ತಿವಹಿಸಿದ್ದ ಇವರು ಕಾಂಗ್ರೆಸ್ಸಿನ ಸ್ವರಾಜ್ಯ ಪಕ್ಷದ ಪ್ರತಿನಿಧಿಯಾಗಿ 1926ರಲ್ಲಿ ಮದರಾಸಿನ ಶಾಸನಸಭೆಗೆ ಚುನಾಯಿತರಾದರು. 1937ರಲ್ಲಿ ಎರಡನೆಯಸಾರಿ ಚುನಾಯಿತರಾಗಿ ಸಿ.ರಾಜಗೋಪಾಲಾಚಾರಿಯವರ ಮಂತ್ರಿಮಂಡಲದ ಸಂಸತ್ತಿನ ಕಾರ್ಯದರ್ಶಿಯಾಗಿ ನೇಮಿತರಾದರು. 1940ರಲ್ಲಿ ಸತ್ಯಾಗ್ರಹಿಯಾಗಿ ಸರ್ಕಾರದಿಂದ ಬಂಧಿತರಾದರು. 1942ರಿಂದ 1944ರವರೆಗೂ ಭಾರತ ಬಿಟ್ಟು ತೊಲಗಿ ಚಳವಳಿಯ ಅಂಗವಾಗಿ ಪುನಃ ಬಂಧಿತರಾಗಿದ್ದರು. 1946ರಲ್ಲಿ ಮದರಾಸು ವಿಧಾನಸಭೆಗೆ ಚುನಾಯಿತರಾಗಿ ಟಿ.ಪ್ರಕಾಶಂ ಅವರ ಮಂತ್ರಿಮಂಡಲದಲ್ಲಿ ಕಂದಾಯಮಂತ್ರಿಯಾಗಿದ್ದಾಗ ಜಮೀನ್ದಾರಿ ರದ್ದಿಯಾತಿ ಕಾನೂನಿನ ಕರಡನ್ನು ತಂದು, ಸ್ವಾತಂತ್ರ್ಯದ ಅನಂತರ ಅದು ಕಾನೂನಾಗಲು ಕಾರಣರಾದರು. ಮಲಬಾರು ಮತ್ತು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿ ಅರಣ್ಯರಕ್ಷಣೆ ಮತ್ತು ನೀರಾವರಿ ಕಾಯಿದೆಯನ್ನೂ ತಂದರು. 1951ರಲ್ಲಿ ಇಂಗ್ಲೆಂಡ್ ಮತ್ತು ಯುರೋಪಿನ ಕೆಲವು ದೇಶಗಳನ್ನು ಸುತ್ತಿಬಂದ ಕಾರಂತರು ತಮ್ಮ ಪ್ರವಾಸದ ಅನುಭವಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ.

1951ರ ಕೊನೆಯಲ್ಲಿ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟು ಕೆ.ಎಂ.ಪಿ. ಪಕ್ಷದ ಸದಸ್ಯರಾಗಿದ್ದರು. ಅನಂತರ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಸ್ಥಾಪಕ ಸದಸ್ಯ ಮತ್ತು ಉಪಾಧ್ಯಕ್ಷರಾದರು.

ರಾಜ್ಯ ಪುನರ್ ವಿಂಗಡಣೆಯಾದಮೇಲೆ ಇವರು ಬೆಂಗಳೂರಿನಲ್ಲಿ ನೆಲೆಸಿ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಮುಂದುವರಿಸಿದರು. ಪ್ರಸಿದ್ಧ ಸಾಹಿತಿಗಳಾದ ಶಿವರಾಮ ಕಾರಂತರು (ನೋಡಿ) ಇವರ ಸಹೋದರರಲ್ಲೊಬ್ಬರು. (ಬಿ.ಡಿ.ಎಸ್.)

**ಕಾರಂತ, ಬಿ.ವಿ. :** 1931-2002. ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದ ಪ್ರಯೋಗಶೀಲ ನಟ, ನಿರ್ದೇಶಕ. ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಜನಿಸಿದರು (1931). ಕಾರಂತರು ಚಿಕ್ಕಂದಿನಿಂದಲೇ ನಾಟಕದಲ್ಲಿ ಆಸಕ್ತಿ ಬೆಳೆಸಿಕೊಂಡರು. ಆ ಸುತ್ತಿನಲ್ಲಿ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳನ್ನು ನೋಡುತ್ತಿದ್ದರಲ್ಲದೆ ತಮ್ಮ ಹಳ್ಳಿಯಿಂದ ಇಪ್ಪತ್ತು ಮೈಲಿ ದೂರದಲ್ಲಿರುವ ಮಂಗಳೂರಿಗೆ ಹೋಗಿ ಆಗ ಅಲ್ಲಿ ಪ್ರದರ್ಶನ ನೀಡುತ್ತಿದ್ದ ಗುಬ್ಬಿ ಕಂಪನಿಯ ನಾಟಕಗಳನ್ನೂ ವೀಕ್ಷಿಸುತ್ತಿದ್ದರು. ಕಾರಂತರ ಮೊಟ್ಟ ಮೊದಲನೆಯ

ಅಭಿನಯವೆಂದರೆ ಕುವೆಂಪು ಅವರ ಮಕ್ಕಳ ನಾಟಕ ನನ್ನ ಗೋಪಾಲದಲ್ಲಿ. ಆಗ ಇವರು ಇನ್ನೂ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದರು.

ಎಂಟನೆಯ ತರಗತಿ ಯವರೆಗೆ ಓದಿದ ಕಾರಂತರಿಗೆ ವಿದ್ಯಾಭ್ಯಾಸವನ್ನು ಮುಂದು ವರಿಸುವುದು ಸಾಧ್ಯವಾಗಲಿಲ್ಲ. ರಂಗಭೂಮಿಯ ಆಕರ್ಷಣೆ ಅದಮ್ಯವಾಗಿತ್ತು. ಇವರು ದೂರದ ಮೈಸೂರಿಗೆ ಹೋಗಿ ಅಲ್ಲಿ ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಮುನ್ನಡೆಯಬಯಸಿದರು; ಸಂಗೀತ ಕಲಿಯಬೇಕೆಂಬುದು ಆಗ ಇವರ ಇಚ್ಛೆಯಾಗಿತ್ತು. ಹೋಟೆಲು ಮಾಣಿಯಾದರು.



ಆ ಸಮಯದಲ್ಲಿ ಮೈಸೂರು ನಗರದಲ್ಲಿ ಬಿಡಾರ ಹೂಡಿದ್ದ ಗುಬ್ಬಿ ವೀರಣ್ಣನವರ ನಾಟಕ ಕಂಪನಿಯನ್ನು ಸೇರಿದರು. ವೀರಣ್ಣನವರು ಕಾರಂತರಿಗೆ ವಿಶೇಷವಾದ ಪ್ರೋತ್ಸಾಹ ಕೊಟ್ಟರು. ಇವರಿಗೆ ಸಾಮಾನ್ಯವಾಗಿ ಸ್ತ್ರೀಪಾತ್ರಗಳನ್ನು ಕೊಡಲಾಗುತ್ತಿತ್ತು. ಕೃಷ್ಣ, ಮಾರ್ಕಂಡೇಯ ಮುಂತಾದ ಪಾತ್ರಗಳನ್ನೂ ಇವರು ಬಲು ಚೆನ್ನಾಗಿ ಅಭಿನಯಿಸುತ್ತಿದ್ದರು. ಬಿ.ಪುಟ್ಟಸ್ವಾಮಯ್ಯ, ಎಂ.ಎ. ಮುನಿಯಪ್ಪ ಮುಂತಾದವರಲ್ಲಿ ಇವರು ಶಿಷ್ಯವೃತ್ತಿ ಮಾಡಿದರು.

ನಾಟಕರಂಗದಲ್ಲಿ ಕಾರಂತರು ಮುಂದುವರಿಯುತ್ತಿದ್ದಂತೆಯೇ ಹಿಂದಿಯನ್ನೂ ಅಭ್ಯಾಸ ಮಾಡಿದರು. ಅನಂತರ ಬೆಂಗಳೂರಿನಲ್ಲಿ ಹಿಂದಿ ಅಧ್ಯಾಪಕರಾದರು. ಕಾಶಿ ವಿಶ್ವವಿದ್ಯಾಲಯದಲ್ಲಿ ಹಿಂದಿ ಎಂ.ಎ. ಪದವಿ ಪಡೆದು ಸಂಶೋಧನೆಯಲ್ಲಿ ಮುಂದುವರಿದರು. ಇವರು ಕಾಶಿಯಲ್ಲಿದ್ದಾಗಲೇ ಹಿಂದಿ ರಂಗಭೂಮಿಯೊಂದಿಗೆ ಸಂಪರ್ಕ ಬೆಳೆಸಿಕೊಂಡರು. ಅಲ್ಲಿ ಇವರ ಸಾಹಿತ್ಯಾಭ್ಯಾಸವೂ ಮುಂದುವರಿಯಿತು. ಅಲ್ಲಿಂದ ಇವರು ದೆಹಲಿಗೆ ಹೋಗಿ ಅಲ್ಲಿಯ ರಾಷ್ಟ್ರೀಯ ನಾಟಕಶಾಲೆಯಲ್ಲಿ (ಎನ್ಎಸ್ಡಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮ) ಮೂರೂವರೆ ವರ್ಷ ಶಿಕ್ಷಣ ಪಡೆದರು. ಸರ್ವತೋಮುಖ ಪರಿಣತರೆಂಬ ಪುರಸ್ಕಾರ ಗಳಿಸಿದರು.

ಕಾರಂತರು ಒಳ್ಳೆಯ ಅಭಿನಯಕಾರರು ಮಾತ್ರವಲ್ಲದೆ ಪ್ರಯೋಗಶೀಲರು ಕೂಡ. ದೆಹಲಿಯಲ್ಲಿದ್ದಾಗ ಇವರು ಕನ್ನಡ ನಾಟಕಗಳನ್ನು ಹಿಂದಿ ರಂಗಭೂಮಿಗೆ ತರಲು ಶ್ರಮಿಸಿದರು. ದೆಹಲಿಯ ಕನ್ನಡ ಭಾರತಿಯೊಂದಿಗೆ ದುಡಿದರು. ಸರದಾರ್ ಪಟೇಲ್ ವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದುದಲ್ಲದೆ ಹಿಂದಿ ದಿಶಾಂತರ ತಂಡದಲ್ಲೂ ನಾಟಕ ಕಲಿಸುತ್ತಿದ್ದ ಕಾರಂತರ ಕೆಲವು ಗಮನಾರ್ಹ ಪ್ರಯೋಗಗಳೆಂದರೆ ಸುನೋ ಜನಮೇಜಯ, ತುಘಲಕ ಮತ್ತು ಆಟೇಕಾ ಕುಕ್ಕುಟ. ಮೊದಲನೆಯದು ಶ್ರೀರಂಗರ ಕೇಳು ಜನಮೇಜಯ ನಾಟಕದ ಹಿಂದಿ ರೂಪಾಂತರ. ಎರಡನೆಯದು ಗಿರೀಶ ಕಾರ್ನಾಡರ ಅದೇ ಹೆಸರಿನ ಕನ್ನಡ ನಾಟಕದ ಹಿಂದಿ ಅನುವಾದ. ಮೂರನೆಯದು ಕಾರ್ನಾಡರ ಹಿಟ್ಟಿನ ಹುಂಜ ನಾಟಕದ ಅನುವಾದ. ಹಿಂದಿ ನಾಟಕಗಳನ್ನೂ ಗುಜರಾತಿ ನಾಟಕಗಳನ್ನೂ ಸಂಸರ ಐತಿಹಾಸಿಕ ನಾಟಕಗಳನ್ನೂ ಇವರು ಪರಿಣಾಮಕಾರಿಯಾಗಿ ಪ್ರಯೋಗಿಸಿದರು. ಕಾರಂತರು ದೆಹಲಿಯಿಂದ ಬೆಂಗಳೂರಿಗೆ ಹಿಂದಿರುಗಿ ಅಲ್ಲೂ ಅನೇಕ ನಾಟಕಗಳನ್ನು ನಿರ್ದೇಶಿಸಿ ಕನ್ನಡ ರಂಗಭೂಮಿಗೆ ಹೊಸತನದ ಚೈತನ್ಯ ತುಂಬಿದರು. ಇವರು ಇದುವರೆಗೆ 104ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದರು. ಇವುಗಳಲ್ಲಿ ಇಟಾಲಿಯನ್, ಫ್ರೆಂಚ್, ಗುಜರಾತಿ, ಬಂಗಾಲಿ, ಗ್ರೀಕ್ ಹಾಗೂ ಸಂಸ್ಕೃತ ನಾಟಕಗಳೂ ಸೇರಿವೆ. ಗೋಕುಲ ನಿರ್ಗಮನ ಇವರು ನಿರ್ದೇಶಿಸಿದ ಜನಪ್ರಿಯ ನಾಟಕ. ಕನ್ನಡ ವೃತ್ತಿರಂಗಭೂಮಿಗೆ ಪುನಶ್ಚೇತನ ನೀಡಲು ಕರ್ನಾಟಕ ಸರ್ಕಾರ ಮೈಸೂರಿನಲ್ಲಿ ಸ್ಥಾಪಿಸಿದ (1989) ರಂಗಾಯಣ ಮುಖ್ಯಸ್ಥರಾಗಿಯೂ ಕೆಲಸ ನಿರ್ವಹಿಸಿದರು (1989-95) (ನೋಡಿ: ರಂಗಾಯಣ).

ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಕಾರಂತರು ಮಾಡಿರುವ ಸಾಧನೆಯೂ ಗಮನಾರ್ಹವಾದ್ದು. ಗಿರೀಶ ಕಾರ್ನಾಡರೊಂದಿಗೆ ಇವರು ನಿರ್ದೇಶಿಸಿದ ವಂಶವೃಕ್ಷ ಚಿತ್ರ ಎಸ್.ಎಲ್.ಭೈರಪ್ಪನವರ ಅದೇ ಹೆಸರಿನ ಕಾದಂಬರಿಯನ್ನು ಆಧರಿಸಿ ನಿರ್ಮಿಸಲಾದ್ದು. ಅದರಲ್ಲಿ ಕಾರಂತರೂ ಒಂದು ಪಾತ್ರ ವಹಿಸಿದ್ದಾರೆ. ಈ ಚಿತ್ರದ ನಿರ್ದೇಶನಕ್ಕಾಗಿ ಇವರೂ ಕಾರ್ನಾಡರೂ ರಾಷ್ಟ್ರೀಯ ಹಾಗೂ ಫಿಲ್ಮ್ ಫೇರ್ ಪ್ರಶಸ್ತಿಗಳನ್ನು ಗಳಿಸಿದರು. ಗಿರೀಶ ಕಾರ್ನಾಡರು ನಿರ್ದೇಶಿಸಿದ 'ಕಾಡು' ಚಿತ್ರಕ್ಕೆ ಜಿ.ವಿ.ಅಯ್ಯರ್ ನಿರ್ದೇಶಿಸಿದ 'ಹಂಸಗೀತೆ' ಚಿತ್ರಕ್ಕೆ ಇವರು ಸಂಗೀತ ಅಳವಡಿಸಿದ್ದಾರೆ.

ಚಲನಚಿತ್ರ ಕ್ಷೇತ್ರದಲ್ಲಿ ಕಾರಂತರ ಮಹತ್ತ್ವದ ಸಾಧನೆಯೆಂದರೆ ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯ ಚಿತ್ರೀಕರಣ. ಶಿವರಾಮ ಕಾರಂತರೇ ಚಲನಚಿತ್ರ ಕಥೆಯನ್ನೂ ಸಂಭಾಷಣೆಯನ್ನೂ ಒದಗಿಸಿರುವ ಈ ಚಿತ್ರದ ನಿರ್ದೇಶನದಲ್ಲಿ ಕಾರಂತರು ಸ್ವಾತಂತ್ರ್ಯಪೂರ್ವ ಭಾರತದ ಹರಿಜನ ಜೀತದಾಳೊಬ್ಬನ ಸಂಸಾರದ ದಾರುಣ ಪರಿಸ್ಥಿತಿಯನ್ನು ಯಥಾವತ್ತಾಗಿ ಮೂಡಿಸಿದ್ದಾರೆ. ಹೊರಾಂಗಣದಲ್ಲಿ ವಾಸ್ತವ ಸ್ಥಳಗಳಲ್ಲೇ ಚಿತ್ರೀಕರಿಸಲಾಗಿರುವ 'ಚೋಮನ ದುಡಿ'ಗೆ ಸಂಗೀತವನ್ನು ಹೊಂದಿಸಿರುವವರೂ ಇವರೇ. ಬಂಗಾಲಿಯ 'ಪಥೇರ್ ಪಾಂಚಾಲಿ' ಯಂತೆ ಕನ್ನಡದಲ್ಲಿ 'ಚೋಮನದುಡಿ' ಒಂದು ಹೊಸ ಹಾದಿ ನಿರ್ಮಿಸಿದೆಯೆಂದು ವಿಮರ್ಶಕರಿಂದ ಪ್ರಶಂಸೆ ಪಡೆದ ಈ ಚಿತ್ರಕ್ಕೆ ಭಾರತ ಸರ್ಕಾರ, ಕರ್ನಾಟಕ ರಾಜ್ಯ ಮತ್ತು ಫಿಲ್ಮ್‌ಫೇರ್ ಪ್ರಶಸ್ತಿಗಳು ದೊರಕಿವೆ. ಮಕ್ಕಳ ಚಿತ್ರವೊಂದನ್ನೂ ಕಾರಂತರು ನಿರ್ದೇಶಿಸಿದ್ದಾರೆ.

ಇವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿದ್ದರು (1980-82).

1979ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 1981ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಇವರನ್ನು ಗೌರವಿಸಲಾಯಿತು. ಮಧ್ಯಪ್ರದೇಶ ಸರ್ಕಾರ ರಂಗಭೂಮಿಗೆ ಮೀಸಲಾಗಿಟ್ಟಿರುವ ಕಾಳಿದಾಸ ಸಮ್ಮಾನ, ಕರ್ನಾಟಕ ಸರ್ಕಾರ ರಂಗಭೂಮಿಯಲ್ಲಿ ಅಧಿಕ ಸಾಧನೆ ಮಾಡಿರುವವರಿಗೆ ಇಟ್ಟಿರುವ ಗುಬ್ಬಿವೀರಣ್ಣ ಪ್ರಶಸ್ತಿಯೂ ಇವರಿಗೆ ಲಭಿಸಿದೆ (1995). ಇವರು 2002 ಸೆಪ್ಟೆಂಬರ್ 1ರಂದು ಬೆಂಗಳೂರಿನಲ್ಲಿ ನಿಧನರಾದರು. (ಎಚ್.ಎಸ್.ಕೆ.)

**ಕಾರಖಾನೀಸ, ಗಣೇಶ ಗೋವಿಂದ :** 1890-. ಹರಿಜನರ ಏಳಿಗೆ, ದೇವದಾಸಿಯರ ವಿಮೋಚನೆ ಮತ್ತು ದೀನದಲಿತರ ಸೇವೆಗಾಗಿ ಜೀವನವನ್ನು ಮುಡುಪಾಗಿರಿಸಿದ ಖ್ಯಾತ ಸಮಾಜ ಸುಧಾರಕ, ಗಾಂಧೀವಾದಿ ಕನ್ನಡಿಗ.

1890 ಏಪ್ರಿಲ್ 28ರಂದು ಕೊಲ್ಲಾಪುರ ಜಿಲ್ಲೆ ಮಲಕಾಪುರದಲ್ಲಿ ಜನಿಸಿದರು. ತಂದೆ ಗೋವಿಂದ, ತಾಯಿ ಪಾರ್ವತೀಬಾಯಿ. ಕಾರಖಾನೀಸ ಎಂಬುದು ಮನೆತನದ ಹೆಸರು. ಇವರ ಪೂರ್ವಿಕರೊಬ್ಬರು ಛತ್ರಪತಿ ಶಿವಾಜಿ ಗೆದ್ದಿದ್ದ ಕೋಟೆಯೊಂದನ್ನು ಸುರಕ್ಷಿತವಾಗಿ ಕಾವಲು ನೋಡಿಕೊಂಡಿದ್ದರಿಂದ ಅವರಿಗೆ ಕಾರಖಾನೀಸ ಎಂಬ ಸನ್ನದನ್ನು ಶಿವಾಜಿ ನೀಡಿದ್ದನಂತೆ. ಅದೇ ಮನೆತನದ ಹೆಸರಾಯಿತು.

ಕಾರಖಾನೀಸರು ಮಲಕಾಪುರದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಜಮಖಂಡಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನೂ ಪಡೆದರು. ಬಿ.ಎ. ಪದವಿ ಪಡೆದ ಅನಂತರ ಒಂದು ವರ್ಷ ನ್ಯಾಯಶಾಸ್ತ್ರವನ್ನೂ ಅಭ್ಯಾಸ ಮಾಡಿದರು. ವಿದ್ಯಾರ್ಥಿಯಾಗಿದ್ದಾಗ್ಗೆ 1904ರ ವಂಗಭಂಗ ಚಳವಳಿಯಿಂದಲೂ ಲೋಕಮಾನ್ಯ ಟಿಳಕರ ಲೇಖನಗಳಿಂದಲೂ ರಾಷ್ಟ್ರಸೇವೆಯ ಸ್ಫೂರ್ತಿ ಪಡೆದರು. ಚಿಕ್ಕಂದಿನಿಂದಲೂ ಜ್ಞಾನೇಶ್ವರಿ, ದಾಸಬೋಧ ಮುಂತಾದ ಆಧ್ಯಾತ್ಮ ಗ್ರಂಥಗಳ ಸತತ ಅಧ್ಯಯನ ಮಾಡಿ ಸಮಾಜಸೇವಾ ಕಾರ್ಯಕ್ಕೆ ಅಧ್ಯಾತ್ಮದ ತಳಹದಿ ಹಾಕಿಕೊಂಡರು. ಆರ್.ಡಿ.ರಾನಡೆಯವರಿಂದ ಆಧ್ಯಾತ್ಮಿಕ

ವಿಷಯಗಳ ಬಗ್ಗೆ ಪ್ರಭಾವಿತರಾಗಿ ಇಂಚಗೇರಿಯ ಉಮದೀ ಭಾವುಸಾಹೇಬ ಮಹಾರಾಜರಿಂದ ಉಪದೇಶ ಪಡೆದು ಸಮಾಜಸೇವೆಗೆ ಪಣತೊಟ್ಟರು. ರಾಮದಾಸ, ರಾಮದಾಸಿ, ಜ್ಞಾನೇಶ್ವರಿ ಹಾಗೂ ಸಂತ ವಾಙ್ಮಯದ ಬಗ್ಗೆ ಅನೇಕ ಪ್ರಬುದ್ಧ ಲೇಖನಗಳನ್ನು ಬರೆದರು.

ಇವರು 1927ರಲ್ಲಿ ಗಾಂಧೀಜಿಯವರ ಸಬರಮತಿ ಆಶ್ರಮ ಸೇರಿ ಎರಡು ವರ್ಷಗಳ ಕಾಲ ಖಾದಿ ಮತ್ತಿತರ ವಿದಾಯ ಕಾರ್ಯಗಳ ಬಗ್ಗೆ ಶಿಕ್ಷಣ ಪಡೆದರು. ಅನಂತರ ಕೌಜಲಗಿ ಹಣಮಂತರಾಯರ ಸಲಹೆ ಮೇರೆಗೆ ಕರ್ನಾಟಕಕ್ಕೆ ಬಂದು ಖಾದಿ ಪ್ರಚಾರ ಮತ್ತು ಸೇವಾದಳದ ಸಂಘಟನೆಯಲ್ಲಿ ನಿರತರಾದರು. 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲೂ ತದನಂತರ ನಡೆದ ಸತ್ಯಾಗ್ರಹಗಳಲ್ಲೂ ಭಾಗವಹಿಸಿ ಸೆರೆಮನೆ ಶಿಕ್ಷೆಯನ್ನು ಅನುಭವಿಸಿದರು.

1933ರಲ್ಲಿ ಹರಿಜನ ಸೇವಾ ಸಂಘದ ಸ್ಥಾಪನೆಯಾದ ಮೇಲೆ ಅದರ ಆಜೀವ ಸೇವಕರಾಗಿ ಸೇರಿ ಅಂದಿನಿಂದ ನಿರಂತರವಾಗಿ ಹರಿಜನ ಸೇವಾ ಕಾರ್ಯದಲ್ಲಿ ತೊಡಗಿದರು. ಬಿಜಾಪುರದಲ್ಲಿ 1933ರಲ್ಲಿ ಹರಿಜನ ವಿದ್ಯಾರ್ಥಿ ವಸತಿಗೃಹವನ್ನೂ 1937ರಲ್ಲಿ ಹರಿಜನ ಕನ್ಯಾಮಂದಿರವನ್ನೂ ಸ್ಥಾಪಿಸಿದರು. ವರ್ಷವರ್ಷವೂ ನೂರಾರು ಮಂದಿ ಹರಿಜನ ಬಾಲಕ ಬಾಲಕಿಯರಿಗೆ ಊಟ, ಬಟ್ಟೆ, ವಸತಿ ಮತ್ತು ವಿದ್ಯೆಯನ್ನು ಒದಗಿಸಿ ಅವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಮುನ್ನಡೆಗೆ ಅಹರ್ನಿಶಿ ದುಡಿದರು.

ಬಿಜಾಪುರ ಜಿಲ್ಲೆ ಹಾಗೂ ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ ನಿಮ್ನವರ್ಗದ ಹಾಗೂ ಮತ್ತಿತರ ಹಿಂದುಳಿದ ವರ್ಗಗಳ ಹೆಣ್ಣು ಮಕ್ಕಳನ್ನು ದೇವದಾಸಿ ಪದ್ಧತಿಗೆ ದೂಡುವ ದುಷ್ಟ ಪದ್ಧತಿ ಆಚರಣೆಯಲ್ಲಿತ್ತು. ಅದರ ವಿರುದ್ಧ ಇವರು ಪ್ರಬಲವಾದ ಚಳವಳಿ ಕೈಗೊಂಡು ಈ ಪದ್ಧತಿ ಕಾನೂನು ಬಾಹಿರವೆಂದು ಶಾಸನ ಮಾಡಿಸಲು ಯಶಸ್ವಿಯಾಗಿ ದುಡಿದರು. ದೇವದಾಸಿಯರಾಗಿದ್ದವರನ್ನೂ ರಕ್ಷಿಸಿ ಅವರು ಗೌರವಸ್ಥರಾಗಿ ಬಾಳಲು ನೆರವು ನೀಡುವುದಕ್ಕಾಗಿ 1952ರಲ್ಲಿ ಅಹಲ್ಯೋದ್ಧಾರ ಮಂದಿರವನ್ನು ಬಿಜಾಪುರದಲ್ಲಿ ಸ್ಥಾಪಿಸಿದರು. ರಕ್ಷಿಸಲ್ಪಟ್ಟ ಮಹಿಳೆಯರು ಮದುವೆ ಮಾಡಿಕೊಂಡು ಗೌರವ ಜೀವನವನ್ನು ನಡೆಸಲು ಸಹಾಯ ಮಾಡಿದರು.

ಕಾರಖಾನೀಸರು ಆಜನ್ಮ ಬ್ರಹ್ಮಚಾರಿಗಳು. ತಮ್ಮ ನಿಷ್ಠ ಸಮಾಜಸೇವೆಯಿಂದ ಜನಪ್ರಿಯರಾಗಿದ್ದ ಇವರು ಕಾಕಾ ಕಾರಖಾನೀಸ ಎಂದೇ ಪ್ರಸಿದ್ಧರಾಗಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸರ್ಕಾರ 1958ರಲ್ಲಿ ಪ್ರಶಸ್ತಿಯನ್ನು ನೀಡಿತು. 1959ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. (ಬಿ.ಆರ್.ಪಿ.)

**ಕಾರವಾರ :** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು. ಆ ತಾಲ್ಲೂಕು ಮತ್ತು ಜಿಲ್ಲೆಯ ಕೇಂದ್ರ ಪಟ್ಟಣ. ತಾಲ್ಲೂಕನ್ನು ಪಶ್ಚಿಮದಲ್ಲಿ ಅರಬ್ಬೀಸಮುದ್ರ, ದಕ್ಷಿಣದಲ್ಲಿ ಅಂಕೋಲ, ಪೂರ್ವದಲ್ಲಿ ಯಲ್ಲಾಪುರ, ಈಶಾನ್ಯದಲ್ಲಿ ಜೊಯಿಡಾ ತಾಲ್ಲೂಕುಗಳು, ವಾಯವ್ಯದಲ್ಲಿ ಗೋವ ರಾಜ್ಯ - ಇವು ಸುತ್ತುವರಿದಿವೆ. ಸಾವಂತವಾಡ, ಬಾಡ, ಕಿನ್ನಾರ, ಗಡಸಿ - ಇವು ಈ ತಾಲ್ಲೂಕಿನ ಹೋಬಳಿಗಳು. ಒಟ್ಟು 60 ಗ್ರಾಮಗಳಿವೆ. ಜನಸಂಖ್ಯೆ 1,47,842.

ಪಶ್ಚಿಮ ಘಟ್ಟಗಳ ತಡಿಯಲ್ಲಿ ಕರಾವಳಿ ಭಾಗದಲ್ಲಿರುವ ಕಾರವಾರ ತಾಲ್ಲೂಕಿನಲ್ಲಿ ಮರಳುಮಿಶ್ರಿತ ಮಟ್ಟ ಭೂಪ್ರದೇಶ ಹಾಗೂ ಬೆಟ್ಟಗುಡ್ಡಗಳಿವೆ. ಇಲ್ಲಿರುವ ಗುಡ್ಡಗಳಲ್ಲಿ ಪ್ರಸಿದ್ಧವಾದುದು ಕಾರವಾರದಿಂದ ಸು.5ಕಿಮೀ ದೂರದಲ್ಲಿರುವ ಗುಡ್ಡೆಹಳ್ಳಿ (ಎತ್ತರ ಸು.500ಮೀ). ಕಾಳಿ ಇಲ್ಲಿನ ಮುಖ್ಯ ನದಿ. ತಾಲ್ಲೂಕಿನ ಮಧ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಅರಬ್ಬೀಸಮುದ್ರವನ್ನು ಸೇರುತ್ತದೆ. ವರ್ಷದಲ್ಲಿ ಆರು ತಿಂಗಳು ಮಳೆಗಾಲವಾಗಿದ್ದು ಹೆಚ್ಚು ಮಳೆ ಈ ತಾಲ್ಲೂಕಿನಲ್ಲಿ ಬೀಳುತ್ತದೆ. ವಾರ್ಷಿಕ ಸರಾಸರಿ ಸು.3050ಮಿಮೀ ಸುತ್ತಲಬೆಟ್ಟಗುಡ್ಡಗಳು ಅರಣ್ಯಗಳಿಂದ ತುಂಬಿದ್ದು ತೇಗ, ಮತ್ತಿ, ಹೊನ್ನೆ, ಜಂಬೆ ಮುಂತಾದ ಮರಗಳಿವೆ. ಈ ತಾಲ್ಲೂಕಿನಲ್ಲಿ ಸಾಗುವಳಿ ಭೂಪ್ರದೇಶ ಇತರ ತಾಲ್ಲೂಕುಗಳಿಗಿಂತ ಕಡಿಮೆ. ಇಲ್ಲಿನ ಮರಳು ಮಣ್ಣಿನಲ್ಲಿ ಸಸ್ಯಪೋಷಕ ದ್ರವ್ಯವೂ ಕಡಿಮೆ. ಆದರೂ ಪ್ರಮುಖವಾಗಿ ಬತ್ತ, ಕಬ್ಬು, ಗೆಣಸು, ಗೇರು, ನೆಲಗಡಲೆ ಮುಂತಾದವನ್ನು ಬೆಳೆಯುತ್ತಾರೆ. ತೆಂಗು ಇನ್ನೊಂದು ಪ್ರಮುಖ ಉತ್ಪಾದನೆ. ಮೀನುಗಾರಿಕೆ ಈ ತಾಲ್ಲೂಕಿನ ಒಂದು ಮುಖ್ಯ ಉದ್ಯಮ ಬೆಸ್ತರು ಮೀನು ಹಿಡಿಯುವುದರಲ್ಲಿ ಪರಿಣತರಾಗಿದ್ದಾರೆ. ಇತ್ತೀಚೆಗೆ ಇಂಡೋ ನಾರ್ವೇಜಿಯನ್ ಯೋಜನೆಯ ಪರಿಣಾಮವಾಗಿ ದೂರಸಾಗರದಲ್ಲಿ ಮೀನು ಹಿಡಿಯುವ ಉದ್ಯಮ ಬೆಳೆಯುತ್ತಿದೆ. ದೋಣಿ ಕಟ್ಟುವುದು, ಕೈಮಗ್ಗದ ನೇಯ್ಗೆ ಇತರ ಉದ್ಯಮಗಳಿಗೆ. ಅರಣ್ಯ ಸಂಪತ್ತು ಬಳಕೆಯಾಗುತ್ತಿದೆ. ಕಾರವಾರದ ಉತ್ತರದಲ್ಲಿ ಕೋಡಿಭಾಗದಲ್ಲಿ ಅರಣ್ಯ ಇಲಾಖೆ ತೆರೆದಿರುವ ಕೋಠಿಯೊಂದಿದೆ. ಮಲೆನಾಡಿನ ಅರಣ್ಯದಿಂದ ತೇಲಿಸಿತಂದ ತೇಗದ ಮರದ ದಿಮ್ಮಿಗಳನ್ನು ಇಲ್ಲಿ ಕೂಡಿಸಿ ಬೇರೆ ಎಡೆಗಳಿಗೆ ಸಾಗಿಸುವರು. ಈ ತಾಲ್ಲೂಕಿನಲ್ಲಿ ರಸ್ತೆ ಸಂಪರ್ಕ ಉತ್ತಮವಾಗಿದೆ.



ಸೀಬರ್ಡ್ ನೌಕಾನೆಲೆಯ ತಾಣ

ಬೆಟ್ಟ ಗುಡ್ಡಗಳ ವನಶ್ರೀಯಿಂದ ಮತ್ತು ಸಮುದ್ರತೀರದಿಂದ ಈ ತಾಲ್ಲೂಕು ಸುಂದರ ಪ್ರದೇಶಗಳಲ್ಲಿ ಒಂದು ಎನಿಸಿಕೊಂಡಿದೆ. ತಾಲ್ಲೂಕಿನ ಪೂರ್ವಬದಿಯ ನೀಳಪರ್ವತಶ್ರೇಣಿ ಸೌಂದರ್ಯಪೂರಿತವಾದದ್ದು. ಕಾಳಿ ನದಿಯು ಸಮುದ್ರ ಸೇರುವೆಡೆ ಸಮುದ್ರದ ಹಿಂಬದಿಯ ನೀರಿನ ಒತ್ತಡದಿಂದ ನದಿಯ ಪಾತ್ರ ವಿಶಾಲವಾಗಿ ಒಂದು ಸುಂದರ ಸರೋವರದ ಹಾಗೆ ಕಾಣುತ್ತದೆ. ಪ್ರವಾಸಿಗಳು ದೋಣಿಗಳಲ್ಲಿ ಕುಳಿತು ವಿಹರಿಸಿ ಆನಂದಿಸುವುದನ್ನು ಕಾಣಬಹುದು.

ಸದಾಶಿವಗಡ, ಮಾಜಾಳಿ, ಶಿವೇಶ್ವರ, ಕದ್ರ, ಬಾಡ, ಬಿಣಗಿ ಮುಂತಾದವು ತಾಲ್ಲೂಕಿನ ಪ್ರಮುಖ ಸ್ಥಳಗಳು. ಗುಡ್ಡೆಹಳ್ಳಿ ಬೇಸಗೆ ಕಾಲದ ವಿಶ್ರಾಂತಿಧಾಮ. ಇಲ್ಲಿ ಕೆಲವು ಪ್ರಾಚೀನ ಗುಹೆಗಳೂ ಇವೆ ಎನ್ನಲಾಗಿದೆ. ಕಾರವಾರದ ಹತ್ತಿರವೇ ಸಮುದ್ರದಲ್ಲಿನ ಕೂರ್ಮಗಡ (ನೋಡಿ) ನಡುಗಡ್ಡೆ ಸಮುದ್ರಮಟ್ಟದಿಂದ 60ಮೀ ಎತ್ತರವಿದೆ. ಇಲ್ಲಿ ಪೂರ್ವದ ಕಡೆ ಒಂದು ಕೋಟೆಯೂ ನರಸಿಂಹ ದೇವಸ್ಥಾನವೂ ಒಂದು ಬಾವಿಯೂ ಉಂಟು. ಪ್ರತಿ ಡಿಸೆಂಬರ್ ತಿಂಗಳಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಈ ದೇವಸ್ಥಾನದ ಮೂರ್ತಿಯನ್ನು ಅರಬ್ಬರು ತಂದರೆಂದು ಪ್ರತೀತಿ. ಇಲ್ಲಿರುವ ಕೋಟೆಯನ್ನು ಶಿವಾಜಿ ಕಟ್ಟಿಸಿ ಸಿದಗಡ ಎಂಬ ಹೆಸರನ್ನು ಇಟ್ಟ. 1715ರಲ್ಲಿ ಕಡವಾಡದಿಂದ ಕಲ್ಲುಗಳನ್ನು ತಂದು ಈ ಕೋಟೆಯ ನಿರ್ಮಾಣ ಪೂರೈಸಲಾಯಿತು. ಆಗಿನಿಂದ ಇದಕ್ಕೆ ಕೂರ್ಮಗಡವೆಂಬ ಹೆಸರು ಬಂತು. ಟಿಪ್ಪು ಈ ಕೋಟೆಯ ಮೇಲೆ ದಾಳಿ ಮಾಡಿದ್ದ.

ಕಾರವಾರಕ್ಕೆ ಪೂರ್ವದಲ್ಲಿರುವ ಕಡವಾಡ (ಹಿಂದಿನ ಹೆಸರು ಕಾಡೆವರ) ಪ್ರಾಚೀನ ಕಾಲದಿಂದಲೂ ಒಂದು ಬಂದರಾಗಿ ವ್ಯಾಪಾರ ಕೇಂದ್ರವಾಗಿತ್ತು. ಫಿನಿಶಿಯನರ ಕಾಲದಿಂದಲೂ ಇದು ಹೊರ ದೇಶಗಳೊಂದಿಗೆ ಸಂಪರ್ಕ ಪಡೆದಿತ್ತೆಂದೂ ಇಂಗ್ಲಿಷರು ಇಲ್ಲಿ 1639ರಲ್ಲಿ ಸ್ಥಾಪಿಸಿದ್ದ ಕಾರ್ಖಾನೆಯಲ್ಲಿ 5000 ಮಂದಿ ನೇಕಾರರು ಮಸ್ಲಿನ್ ವಸ್ತ್ರನೇಯ್ಗೆಯಲ್ಲಿ ನಿರತರಾಗಿದ್ದರೆಂದೂ ಹೇಳಲಾಗಿದೆ. ಇಲ್ಲಿಯ ವಸ್ತ್ರ

ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಮಾರಾಟವಾಗುತ್ತಿತ್ತೆಂದು ಪ್ರತೀತಿ. ಕಡವಾಡ ಶಿವಾಜಿಯ ಆಳಿಕೆಗೆ ಒಳಪಟ್ಟಿದ್ದುದರಿಂದ ಒಮ್ಮೆ ಇಂಗ್ಲಿಷರು ಸಹ ಕರವನ್ನು ಕೊಟ್ಟಿದ್ದರು. ಅನಂತರ ಇದು ಬಿಜಾಪುರದ ಸುಲ್ತಾನರ ಆಳಿಕೆಗೆ ಸೇರಿತೆಂದೂ ಬಿಜಾಪುರದ ರಾಜ್ಯಪಾಲ ಇಲ್ಲಿ ವಾಸಿಸುತ್ತಿದ್ದನೆಂದೂ 1675ರಲ್ಲಿ ಶಿವಾಜಿಯ ಸೇನೆ ಈ ಸ್ಥಳವನ್ನು ಸುಟ್ಟಿತೆಂದೂ ಪ್ರತೀತಿ. 1720ರಲ್ಲಿ ಸೋದೆಯ ರಾಜ ಇಂಗ್ಲಿಷರನ್ನು ಇಲ್ಲಿಂದ ಹೊರಹಾಕಿದ. ಕಲ್ಯಾಣದಿಂದ ವಲಸೆ ಬಂದ ಕೊಂಕಣರು ಮೊದಲು ಇಲ್ಲಿ ನೆಲೆಸಿದ್ದು ಅನಂತರ ಸದಾಶಿವಗಡಕ್ಕೆ ಹೋದರೆಂದೂ ತಿಳಿದುಬರುತ್ತದೆ. ಕಡವಾಡದಲ್ಲಿ ಒಂದು ವೈಷ್ಣವ ಮಠವಿದೆ. ಕಡವಾಡದ ಕೊಲ್ಲಿ ಮೀನುಗಾರಿಕೆಗೆ ಅನುಕೂಲವಾಗಿದೆ. ಕಡವಾಡದ ಬಳಿಯಲ್ಲಿರುವ 'ಹೆದಾರ್ ಘಾಟ್' ಪ್ರಸಿದ್ಧವಾದದ್ದು. ಹೆದಾರ್ ಘಾಟ್ ಮಾರ್ಗ ಒಂದು ಎಂಜಿನಿಯರಿಂಗ್ ಸಾಹಸವೆನ್ನುವರು. ಹೈದರ್ ಈ ಮಾರ್ಗವಾಗಿ ಹೆಚ್ಚು ಸಂಚರಿಸುತ್ತಿದ್ದನಂತೆ.

ಐದು ನಡುಗಡ್ಡೆಗಳ ಒಂದು ದ್ವೀಪಸ್ತೋಮದ ಅಂಜನಾದ್ವೀಪ ಕಾರವಾರಕ್ಕೆ 5ಕಿಮೀ ದೂರದಲ್ಲಿದೆ. ವಾಸ್ಕೋಡಗಾಮ ಈ ದ್ವೀಪದಲ್ಲಿ ಕೆಲವು ದಿವಸಗಳ ಕಾಲ ತಂಗಿದ್ದನಂತೆ. ಸ್ಥಳೀಯರು ಇದನ್ನು 'ಅಂಜಿ ದೀವ್' ಎಂದು ಕರೆಯುತ್ತಾರೆ (ಇದು ಗೋವಕ್ಕೆ ಸೇರಿದೆ). ಕಾರವಾರ ಬಂದರಿಗೆ ಪಶ್ಚಿಮದಲ್ಲಿ 11ಕಿಮೀ ದೂರದಲ್ಲಿ ದೇವಗಡ ನಡುಗಡ್ಡೆ ಇದೆ. ಇದು ಬಂದರಿಗೆ ಬಿರುಗಾಳಿಯಿಂದ ರಕ್ಷಣೆ ಕೊಟ್ಟಿದೆ. ಈ ನಡುಗಡ್ಡೆಯಲ್ಲಿ ಒಂದು ದೀಪಸ್ತಂಭವಿದೆ. ನಡುಗಡ್ಡೆಯನ್ನು 'ಆಯಿಸ್ಟರ್ ರಾಕ್ಸ್' ಎಂದೂ ಕರೆಯುತ್ತಾರೆ. ಇಲ್ಲಿ ಒಂದು ಕೋಟೆ ಸಹ ಉಂಟು. ಪ್ರವಾಸಿಗರು ಅಲ್ಲಿಗೆ ಹೋಗಿ ಬರುತ್ತಾರೆ. ಸದಾಶಿವಗಡ ಕಾರವಾರಕ್ಕೆ ಉತ್ತರದಲ್ಲಿ 5ಕಿಮೀ ದೂರದಲ್ಲಿದೆ. ಇದೂ ಒಂದು ಬಂದರು. ಇಲ್ಲಿಯ ಗುಡ್ಡದ ಮೇಲೆ ಇರುವ ಕೋಟೆಯನ್ನು 17ನೆಯ ಶತಮಾನದಲ್ಲಿ ಸ್ವಾದಿಯ ಒಂದನೆಯ ಸದಾಶಿವನಾಯಕ ಕಟ್ಟಿಸಿದನೆಂದು ತಿಳಿದುಬರುತ್ತದೆ. ಕಾರವಾರದಿಂದ 3ಕಿಮೀ ದೂರದಲ್ಲಿ ಪ್ರಸಿದ್ಧ ಸಜ್ಜೇಶ್ವರ ದೇವಾಲಯವಿದೆ.

ಕಾರವಾರ ಉತ್ತರ ಕನ್ನಡ ಜಿಲ್ಲೆಯ ಮತ್ತು ಅದೇ ತಾಲ್ಲೂಕಿನ ಕೇಂದ್ರ ಪಟ್ಟಣ. ಒಂದು ನೈಸರ್ಗಿಕ ಬಂದರು. ಪಶ್ಚಿಮಕ್ಕೆ ಅರಬ್ಬೀ ಸಮುದ್ರ, ಪೂರ್ವಕ್ಕೆ ಸಹ್ಯಾದ್ರಿ ಶ್ರೇಣಿ, ಉತ್ತರದಲ್ಲಿ ಕಾಳಿ ನದಿಯಿದ್ದು ಪಶ್ಚಿಮ ಕರಾವಳಿಯ ಪ್ರಕೃತಿಯ ಸೆರಗಿನಲ್ಲಿರುವ ಒಂದು ಸುಂದರ ಪಟ್ಟಣವೆಂದು ಹೆಸರು ಪಡೆದಿದೆ. ಜನಸಂಖ್ಯೆ 62960.



ಸಮುದ್ರತೀರ

ಇಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಡಳಿತಕ್ಕೆ ಸಂಬಂಧಿಸಿದ ಎಲ್ಲ ಸರ್ಕಾರಿ ಕಚೇರಿಗಳೂ ನ್ಯಾಯಾಲಯ, ಆಸ್ಪತ್ರೆ, ಶಾಲಾ ಕಾಲೇಜುಗಳೂ ಇವೆ. ಇಲ್ಲಿಂದ ಗೋವ, ಮಂಗಳೂರು, ಹುಬ್ಬಳ್ಳಿ, ಬೆಳಗಾಂವಿ ಮತ್ತು ಬೆಂಗಳೂರಿಗೆ ರಸ್ತೆ ಸಂಪರ್ಕವಿದೆ. ಗೋವ, ಕುಮಟ, ಮುಂಬಯಿ, ಮಂಗಳೂರು, ಕೊಚ್ಚಿ ಮುಂತಾದೆಡೆಗೆ ಕರಾವಳಿಯ ಹಡಗು ಸಂಚಾರಸೌಲಭ್ಯವೂ ಇದೆ. ಕೊಂಕಣ ರೈಲು ಕಾರವಾರದ ಮೂಲಕ ಹಾದು ಹೋಗಿದೆ. ಕವಿ ರವೀಂದ್ರನಾಥ ಠಾಕೂರರ ಮನಸೂರೆಗೊಂಡಿದ್ದ ಈ ಪಶ್ಚಿಮ ಕಡಲತೀರದ ನಗರದಲ್ಲಿ 45ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕಡೆಂಗೋಡ್ಲು ಶಂಕರಭಟ್ಟ ಅವರ ಅಧ್ಯಕ್ಷತೆಯಲ್ಲಿ 1965ರಲ್ಲಿ ನಡೆಯಿತು.

ಕಾರವಾರ ಬಂದರು ಪ್ರದೇಶ ಸುತ್ತಣ ಗುಡ್ಡಗಳಿಂದ ಆವೃತ್ತವಾಗಿದ್ದು ಮಾರುತಗಳಿಂದ ಒಳ್ಳೆಯ ರಕ್ಷಣೆ ಪಡೆದಿರುವುದಲ್ಲದೆ ಇಲ್ಲಿ ದೊಡ್ಡ ಹಡಗುಗಳು ಸುಲಭವಾಗಿ ತಂಗುವಷ್ಟು ನೀರಿನ ಆಳವೂ ಇದೆ. ಅಲ್ಲದೆ ಇಲ್ಲಿನ ಪ್ರಾಕೃತಿಕ ಸನ್ನಿವೇಶದಿಂದಾಗಿ ಹೂಳುಬಿದ್ದು ಆಳ ಕಡಿಮೆಯಾಗುವ ಸಂಭವವೂ ಕಡಿಮೆ ಎನ್ನಲಾಗಿದೆ. ಆದರೂ ಇದು ಇನ್ನೂ ಸರ್ವಋತು ಬಂದರಾಗಿ ಬೆಳೆದಿಲ್ಲ. ಈಗ ಇದು ಸಣ್ಣ ಹಡಗುಗಳಿಗೆ ರೇವು. ಒಳನಾಡಿನಿಂದ ಬರುವ ಕಬ್ಬಿಣದ ಅದುರು ಈ ಬಂದರಿನಿಂದ ರಫ್ತಾಗುತ್ತದೆ. ಇದರ ಅಭಿವೃದ್ಧಿಗೆ ಎರಡು ಹಂತಗಳ ಯೋಜನೆ ಸಿದ್ಧವಾಗಿದೆ. (ಎಚ್.ಆರ್.ಆರ್.ಬಿ.)

**ಕಾರ ಹುಣ್ಣಿಮೆ :** ಜ್ಯೇಷ್ಠಮಾಸದಲ್ಲಿ ಆಚರಿಸಲಾಗುವ ಒಂದು ಜನಪದ ಹಬ್ಬ. ಇದನ್ನು ಕಾರಹಬ್ಬ ಕಾರಹುಣ್ಣಿವೆ ಎಂದೂ ಕರೆವುದಿದೆ. ಯಜ್ಞಕರ್ಮಪ್ರಧಾನವಾದ ಸನಾತನ ಸಂಪ್ರದಾಯದಲ್ಲಿ, ಹುಣ್ಣಿಮೆಗಳಿಗೆ ವಿಶಿಷ್ಟ ಪರ್ವದಿನದ ಸ್ಥಾನವಿರುವುದಾದರೂ ಕನ್ನಡ ನಾಡಿನಲ್ಲಿ ಹುಣ್ಣಿಮೆಗಳೆಂದು ನಡೆಯುತ್ತ ಬಂದ ಜನಪದ ಸಂಸ್ಕೃತಿ ಪ್ರಧಾನವಾದ ಕಾರ್ಯಕಲಾಪಗಳು, ಸನಾತನ ವೈದಿಕ ಪರಂಪರೆಯವಾಗಿ ಕಾಣಿಸುವುದಿಲ್ಲ.

ಕನ್ನಡ ನಾಡಿನ ಇತಿಹಾಸದಲ್ಲಿ ಸಾವಿರ ವರ್ಷಗಳಿಗೆ ಹಿಂದಿನಿಂದಲೂ ಕಾರ ಹುಣ್ಣಿಮೆಯ ಹೆಸರು ಬಳಕೆಯಲ್ಲಿದ್ದಂತೆ ಕಾಣುವುದು. 1007 ಮತ್ತು 1104ನೆಯ ವರ್ಷದ ಶಿಲಾಶಾಸನಗಳಲ್ಲಿ ಕಾರಹುಣ್ಣಿಮೆ ಎಂಬ ಮಾತು ಬಂದಿದೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಜನಪದ ಸಾಹಿತ್ಯ ಪರಂಪರೆಯಲ್ಲಿ ಈ ಹುಣ್ಣಿವೆಯ ಹೆಸರು ಹಲವಾರು ಸಲ ಕಿವಿಗೆ ಬೀಳುತ್ತದೆ. ಕಾರಹುಣ್ಣಿವಿ ಆದ ಮೇಲೆ ಈರುಳ್ಳಿಯನ್ನು ಕತ್ತೆ ಕೂಡ ಮೂಸುವುದಿಲ್ಲ, ಕಾರಹುಣ್ಣಿವೀ ಕರಿ ಹರಿದ ಮ್ಯಾಲೆ ಕಂಕಣಾ ಕಟ್ಟಬಾರದು ಎಂಬ ನಾಣ್ಣುಡಿಗಳು ಕಾರಹುಣ್ಣಿವೆಯ ನಾಮ ನಿರ್ದೇಶನದೊಂದಿಗೆ, ಜನಪದ ಸ್ಮೃತಿಯ ವಿಧಿನಿಷೇಧನಿಯಮಗಳನ್ನೂ ಹೇಳುತ್ತವೆ.

ಕಾರಹುಣ್ಣಿಮೆ ಅದರ ಹೆಸರೇ ತಿಳಿಸುವಂತೆ ಮಳೆಗಾಲದ ಮೊದಲ ಹುಣ್ಣಿವೆ; ಕನ್ನಡನಾಡಿನ ಕೃಷಿಕರು, ಮಳೆಗಾಲದ ಮೊದಲ ಹುಣ್ಣಿವೆಯನ್ನು ಸಂತೋಷದಿಂದ ಆಚರಿಸುತ್ತಾರೆ. ಕಾರಹುಣ್ಣಿವೆಯ ಆಚರಣೆ ಬಯಲು ನಾಡಿನಲ್ಲಿ ವಿಶೇಷವಾಗಿದೆ. ಗಡಿನಾಡಿನಲ್ಲಿಯೂ ಅಲ್ಲಲ್ಲಿ - ಬಯಲುನಾಡಿನ ಪ್ರಭಾವದಿಂದಾಗಿ - ಜನಪದರು ಈ ಹಬ್ಬವನ್ನು ಆಚರಿಸುವುದುಂಟು. ಆದರೆ ಮಲೆನಾಡಿನ ಪ್ರದೇಶದಲ್ಲಿ ಈ ಹಬ್ಬದ ಆಚರಣೆಯ ಜನಪದ ಸಂಪ್ರದಾಯ, ಅಷ್ಟೊಂದು ಪ್ರಭಾವಶಾಲಿಯಾಗಿ ಕಂಡುಬರುವುದಿಲ್ಲ. ಉತ್ತರ ಕರ್ನಾಟಕದ ಉತ್ತರದ ಗಡಿಗೆ ಹೊಂದಿದ ಮಹಾರಾಷ್ಟ್ರದ ಬಯಲು ಪ್ರದೇಶದ ಒಕ್ಕಲಿಗರಲ್ಲಿಯೂ ಈ ಹಬ್ಬದ ಪರಂಪರೆ ರೂಢಿಯಲ್ಲಿದೆ. ಮಹಾರಾಷ್ಟ್ರದ ಉತ್ತರದ ಸೀಮಾಪ್ರದೇಶದ ವಿದರ್ಭ ಪ್ರಾಂತ್ಯದಲ್ಲಿಯೂ ಪೋಳಾಂಚಾ ಸಣ್ಣ ಎಂಬ ಹೆಸರಿನಿಂದ ಈ ಹಬ್ಬದ ಸಂಪ್ರದಾಯ ನಡೆದುಕೊಂಡು ಬಂದಿದೆ. ಇಲ್ಲಿ ಪೋಳ ಎಂದರೆ ಗೂಳಿ, ಕೊಬ್ಬಿದ ಹೋರಿ; ಸಣ್ಣ ಎಂದರೆ ಹಬ್ಬ. ಸಂಸ್ಕೃತ ಭಾಷೆಯಲ್ಲಿ ಈ ಹುಣ್ಣಿವೆಗೆ ಅನಡ್‌ವಾಹ ಪೌರ್ಣಿಮಾ ಎಂದು ಹೆಸರಿದೆ. ಅನಡ್‌ವಾಹ ಎಂದರೆ ಎತ್ತು. ಸಾಂಸ್ಕೃತಿಕ ಪರಂಪರೆಯಲ್ಲಿಯೂ ಇದಕ್ಕೆ ಎತ್ತಿನ ಹುಣ್ಣಿವೆ ಎಂದು ಹೆಸರಿರುವುದೂ ಕಾರಹುಣ್ಣಿವೆಯ ಹಬ್ಬಕ್ಕಿರುವ ಕೃಷಿಕ ಕುಲಸಂಬಂಧವನ್ನೇ ಗಟ್ಟಿಗೊಳಿಸುತ್ತದೆ. ಎತ್ತು ಕೃಷಿಕನ ಪ್ರಧಾನ ಸಹಕಾರಿ. ಕೃಷಿಕರಲ್ಲದ ನಾಗರಿಕರೂ ಇಂದು ಹಬ್ಬದ ಸಂಪ್ರದಾಯದಂತೆ ಮಣ್ಣಿನ ಜೋಡೆತ್ತುಗಳನ್ನು ಮಾಡಿ ಪೂಜಿಸಿ, ಅದಕ್ಕೆ ಕೋಡಬಳೆ, ಕರಿಗಡಬಿನ ನೈವೇದ್ಯವೀಯುತ್ತಾರೆ.

ಪೌರಾಣಿಕ ಸಂಪ್ರದಾಯದವರು ಈ ಹುಣ್ಣಿವೆಯನ್ನು ವಟಸಾವಿತ್ರಿ ಪೌರ್ಣಿಮೆ ಎಂದು ಹೇಳುವರು. ಕರ್ನಾಟಕ, ಮಹಾರಾಷ್ಟ್ರ ಪ್ರದೇಶಗಳಲ್ಲಿರುವ ಪುರಾಣಸಂಪ್ರದಾಯದ ಸುಮಂಗಳೆಯರು ಅಂದು ವಟಸಾವಿತ್ರೀ ವ್ರತಪೂಜೆಗಳನ್ನು ಆಚರಿಸುವರು. ಐದೆಯರೆಲ್ಲರೂ ಆ ದಿನ ಸಾವಿತ್ರೀದೇವಿಯ ಸಾನ್ನಿಧ್ಯವೃಕ್ಷವೆಂದು ಆಲದಮರವನ್ನು ಪೂಜಿಸುವರು; ಕೆಲವರು ಮನೆಯಲ್ಲಿಯೆ ಸಾವಿತ್ರೀದೇವಿಯ ಪಠವನ್ನಿರಿಸಿ ಪೂಜಿಸುವರು ಸಾವಿತ್ರಿಯ ಕಥೆಯನ್ನು ಕೇಳುವರು. ಈ ಸಂಪ್ರದಾಯ ಕೇವಲ ನಾಗರಿಕ ಜಗತ್ತಿಗೆ ಸೇರಿದುದು.

ಜ್ಯೇಷ್ಠ ಪೌರ್ಣಿಮೆಯಂದು ಎತ್ತುಗಳ ಪೂಜೆಯಾದ ಮೇಲೆ, ಮುಂದೆ ಆಷಾಢ ಮಾಸದ ಪ್ರತಿ ಮಂಗಳವಾರದಂದು, ಹಳ್ಳಿಗರ ಮನೆಗಳಲ್ಲಿಯೂ ಸಾರ್ವಜನಿಕವಾಗಿಯೂ ನಡೆಯುವ ಗುಳ್ಳವ್ವ ಎಂಬ ಹೆಸರಿನ ಮಣ್ಣಿನ ಪೂಜೆ ಅವರ ನೆಲದಮ್ಮನ ಪೂಜೆಯು ಸಂಕೇತವೆನಿಸುವಂತಿದೆ. ಕಾರಹುಣ್ಣಿವೆ ಆಚರಣೆಯಲ್ಲಿರುವ ಬಯಲು ನಾಡಿನಲ್ಲೆಲ್ಲ ಗುಳ್ಳವ್ವನ ಪೂಜೆ ಇದ್ದೇ ಇರುವುದು. ಗುಳ್ಳವ್ವ ಎಂಬ ದೇವತೆ ಕೇವಲ ಕನ್ನಡ ಜಾನಪದ ಸೃಷ್ಟಿ. ಈ ದೇವತೆ ಉತ್ತರದ ಸೀಮಾಪ್ರದೇಶದಲ್ಲಿರುವ ಮರಾಠಿಗರಲ್ಲಿಯೂ ಸೇರಿಕೊಂಡಿದ್ದಾಳೆ.

ಕಾರಹುಣ್ಣಿವೆಗೆ ಸಂಬಂಧಿಸಿದ ಕಾರ್ಯಕಲಾಪಗಳು ಎರಡು ದಿನ ನಡೆಯುವುವು. ಜ್ಯೇಷ್ಠ ಶುದ್ಧ ಚತುರ್ದಶಿ ಕಾರಹಬ್ಬದ ಪೂರ್ವಾಂಗ ದಿನವಾಗಿರುವುದು. ಉತ್ತರಾಂಗ ದಿನ ಹುಣ್ಣಿವೆ. ಈ ಚತುರ್ದಶಿಗೆ ಹೊನಹುಗ್ಗೆ, ಹೊನ್ನುಗ್ಗಿ ಎಂದು ಹೆಸರು. ಕೆಲವೆಡೆಗಳಲ್ಲಿ ಹೊನ್ನುಕ್ಕೆ ಎಂಬ ಹೆಸರೂ ಇದೆ. ಹೊನ್ನುಗ್ಗೆಯ ದಿನ ಹಳ್ಳಿಗರೆಲ್ಲರೂ ತಮ್ಮ ತಮ್ಮ ಮನೆಯ ಎತ್ತು, ಹೋರಿಗಳನ್ನು ಮೈ ತೊಳೆದು ಮೀಯಿಸುವರು. ಕೊಂಬುಗಳಿಗೆ ಚೆಂಬಣ್ಣವನ್ನು ತೊಡೆಯುವರು. ಮೈಮೇಲೆ ಅಂದ ಕಾಣುವಂತೆ ಕುಂಟೆಯ ಬಳೆಗಳಿಂದ, ಬೇರೆ ಬೇರೆ ಬಣ್ಣಗಳ ಮುದ್ರೆಗಳನ್ನು ಒತ್ತುವರು. ತುದಿಗೊಂಬುಗಳಿಗೆ ಮಿರುಗುವ ಕೊಂಬಣಸುಗಳನ್ನು ತೊಡಿಸುವರು. ಕೊರಳಿಗೆ ಹುರಿಗೆಜ್ಜೆ, ಕಿರುಗಂಟೆ ಸರಗಳನ್ನು ಹಾಕುವರು. ಹಣೆಗೆ ಕನ್ನಡಿ ಇರುವ ಹಣೆಪಟ್ಟುಗಳನ್ನು ಕಟ್ಟುವರು. ಗುಡಿಸಿ ಹಸನುಗೊಳಿಸಿದ ಕೊಟ್ಟಿಗೆಯಲ್ಲಿ ಎತ್ತುಗಳನ್ನು ಕಟ್ಟುವರು.

ಅಂದಿನ ಮುನ್ನಿರುಳಲ್ಲಿ, ಎಲ್ಲ ಎತ್ತು, ಹೋರಿಗಳನ್ನು ಪೂಜಿಸಲಾಗುವುದು. ಆಗ ಗುಗ್ಗುಳ ಧೂಪದ ಕಂಪು ಕೊಟ್ಟಿಗೆಯಲ್ಲೆಲ್ಲ ತುಂಬಿರುವುದು. ಮನೆಯ ಮುತ್ತೈದೆಯರು ಎತ್ತು, ಹೋರಿಗಳಿಗೆ ಕಲಶದಾರತಿಯನ್ನು ಎತ್ತುವರು. ನೈವೇದ್ಯಕ್ಕೆಂದು ಜೋಳವನ್ನು ಕುಟ್ಟಿ, ಜೋಳದಕ್ಕಿಯಿಂದ ತಯಾರಿಸಿದ ಹುಗ್ಗಿಯನ್ನೂ (ಕಿಚಡಿ) ಅಂಬಲಿಯನ್ನೂ ಎತ್ತುಗಳಿಗೆ ತಿನ್ನಿಸುವರು. ಆಮೇಲೆ ಮನೆಯವರೆಲ್ಲರೂ ಈ ಹುಗ್ಗಿ ಅಂಬಲಿಗಳನ್ನೇ ಪ್ರಸಾದವೆಂದು ಊಟ ಮಾಡುವರು. ಈ ದಿನದ ಹುಗ್ಗಿಯೇ ಹೊನ್ನುಗ್ಗಿ ಎಂದು ಹೆಸರು ಪಡೆದಿದೆ.

ಮರುದಿನವೇ ಕಾರಹುಣ್ಣಿವೆ, ದನಗಳೆಲ್ಲ ಅಂದೂ ಪೂಜೆಗೊಳ್ಳುವುವು. ಮಧ್ಯಾಹ್ನ ಹೋಳಿಗೆ ಪಾಯಸಗಳ ಬಿರ್ದಣಿಸು. ಕೆಲವೊಂದು ಹಳ್ಳಿಗಳಲ್ಲಿ ಹುರುಪಿನ ಜನ. ಊರಲ್ಲಿಯ ಎಲ್ಲ ಎತ್ತುಗಳನ್ನೂ ಸೇರಿಸಿ, ವಾದ್ಯವೈಭವದೊಂದಿಗೆ ಬೀದಿಯಲ್ಲಿ ಮೆರೆಸುವರು. ಕನ್ನಡ ನಾಡಿನ ಕೆಲವೊಂದು ಭಾಗದಲ್ಲಿ ಬಿತ್ತುವ ಬೀಜಗಳನ್ನು ಪೂಜಿಸುವ ಸಂಪ್ರದಾಯ ಕಾರಹುಣ್ಣಿವೆಯೆಂದೇ ನಡೆಯುತ್ತದೆ.

ಹುಣ್ಣಿವೆಯ ಸಂಜೆ ಕರಿ ಹರಿಯುವ ಸಂಪ್ರದಾಯ. ಈ ಕಾರ್ಯಕ್ರಮ ಮಾತ್ರ ನಾಡಿನ ಎಲ್ಲ ಭಾಗಗಳಲ್ಲಿಯೂ ಸಾರ್ವಜನಿಕವಾಗಿ ನಡೆಯುತ್ತದೆ. ಈ ಕಾರ್ಯಕ್ರಮದ ವಿವರಗಳಲ್ಲಿ ಪ್ರಾದೇಶಿಕ ಭೇದಗಳು ಕಂಡುಬರುವುವಾದರೂ ಕರಿ ಹರಿಯುವುದು ಎಂಬ ಕ್ರಿಯಾನಾಮ ಮಾತ್ರ ಸರ್ವತ್ರ ಸಾಮಾನ್ಯವಾಗಿರುವುದು. ಈ ಕಾರ್ಯಕ್ರಮದ ಪರಿಣಾಮ ಮುಂಬರುವ ಬೆಳೆಯ ಭವಿಷ್ಯವನ್ನು ಸೂಚಿಸುವುದೆಂಬ ನಂಬುಗೆ ನಾಡಿನ ಜನರೆಲ್ಲರಲ್ಲಿಯೂ ಇದೆ. ಕಾರಹುಣ್ಣಿವೆಯ ಕರಿ ಹರಿಯುವ ಸಂಪ್ರದಾಯ ಮಾತ್ರ ಕೆಲವೆಡೆ ಉಳಿದುಕೊಂಡು ಬಂದಿದೆ.

ಫಾಲ್ಗುಣ ಬಹುಳ ಪ್ರತಿಪದೆಯಂದು ಎಂದರೆ ಹೋಳಿಯ ಹಬ್ಬದ ಮರುದಿನ ಬೆಳಗಿನಲ್ಲಿ ಹೋಳಿಯನ್ನು ಸುಟ್ಟಾದ ಮೇಲೆ, ಆ ಹೋಳಿಯ ಬೂದಿಯನ್ನು ಕರಿ ತಮ್ಮಟೆಗಳ ಮೊಳಗಿನೊಂದಿಗೆ, ಹಬ್ಬದ ವಿಶಿಷ್ಟ ಹಕ್ಕುದಾರರು ತೆಗೆದು ಕೊಂಡೊಯ್ದು ಗ್ರಾಮದ ಸುತ್ತಲೂ ಚೆಲ್ಲಿ ರಕ್ಷೆಯನ್ನು ಕಟ್ಟುವರು. ಈ ರಕ್ಷಾಬಂಧನ ಕ್ರಿಯೆಯೇ ಕರಿಕಟ್ಟುವುದು. ಈ ನಡೆವಳಿಯ ಹಿಂದೆ ಹಳ್ಳಿಗರದೊಂದು ಮುಗ್ಧಶ್ರದ್ಧೆ ಅಡಗಿ ಕುಳಿತಿದೆ. ಹೋಳಿಯ ಹುಣ್ಣಿವೆಗೆಂದರೆ ಆ ವರ್ಷದ ಸುಗ್ಗಿಯ ಸಂಪತ್ತೆಲ್ಲವೂ ಊರಮನೆಗಳನ್ನು ತುಂಬಿರುತ್ತದೆ. ಈ ಸಂಪತ್ತಿಗೆ ಯಾವುದೇ ಬಗೆಯ ಭೀತಿ, ಉಪದ್ರವಗಳು ಉಂಟಾಗಬಾರದೆಂಬ ಅವರ ಭಾವನೆ, ಈ ಕರಿ ಕಟ್ಟುವ ಸಂಪ್ರದಾಯವನ್ನು ಇದುವರೆಗೆ ಉಳಿಸಿಕೊಂಡು ಬಂದಿದೆ. ಧಾನ್ಯ ತುಂಬಿದ ಹಗೇವು, ಹುಲ್ಲುಸೊಪ್ಪು, ಒಟ್ಟಿದ ಬಣವೆ ಇವುಗಳಿಗೆ ಹುಲ್ಲು ಕಾರ ಹುಣ್ಣಿವೆಯಾಗುವವರೆಗೂ ಕೈ ಹಚ್ಚಬಾರದೆಂದಿರುವ ಹಳ್ಳಿಗಳ ನಂಬುಗೆ ಈ ಸಂಪ್ರದಾಯವನ್ನು ಪುರಸ್ಕರಿಸುವಂಥದಾಗಿದೆ. ಹೋಳಿಯ ಹಬ್ಬದಲ್ಲಿ ಕಟ್ಟಿದ ಕರಿಯನ್ನು ರಕ್ಷೆ ಕಾರಹುಣ್ಣಿವೆಯ ಸಂಜೆ ಹರಿಯುವ ಸಾಂಕೇತಿಕ ಕಾರ್ಯವೊಂದು, ಸಾರ್ವಜನಿಕವಾಗಿ ಜರುಗುವುದು. ಇದೇ ಕರಿ ಹರಿಯುವ ರಕ್ಷಾವಿಮೋಚನ ಕಾರ್ಯ.

ಕರಿ ಹರಿಯುವ ಸಂಪ್ರದಾಯದ ಸಾಂಕೇತಿಕ ಉಪಕರಣಗಳಲ್ಲಿ ಪ್ರಾದೇಶಿಕ ಭೇದಗಳು ಕಂಡುಬರುವುವಾದರೂ ಬೇರೆ ಬೇರೆ ಬಣ್ಣದ ಎತ್ತುಗಳು ಮಾತ್ರ ಸರ್ವತ್ರ ಸಾಮಾನ್ಯವಾಗಿರುವುವು. ಆದರೆ ಬಯಲುಸೀಮೆಯ ಬಹುಭಾಗದಲ್ಲಿ ಈ ಕಾರ್ಯಕ್ರಮಕ್ಕೆ ಕರಿದು ಬಿಳಿದು ಅಥವಾ ಕೆಂದು ಬಿಳಿದು ಹೀಗೆ ಎರಡೇ ಎತ್ತುಗಳು ಬೇಕಾಗುವುವು. ಕೆಲವೆಡೆ ಐದು ಎತ್ತುಗಳು ಬೇಕೆಂಬ ನಿಯಮವಿರುವುದು. ಇನ್ನು ಕೆಲವೆಡೆ ಊರಲ್ಲಿಯ ಎಲ್ಲ ಎತ್ತುಗಳನ್ನೂ ತರಲಾಗುವುದು.

ಈ ಕಾರ್ಯಕ್ರಮದಲ್ಲಿ, ಇಂಥಿಂಥ ಕಾರ್ಯಗಳನ್ನೂ ಇಂಥಿಂಥ ಮನೆತನದವರೇ ವಹಿಸಿಕೊಳ್ಳಬೇಕೆಂಬ ನಿಯಮ. ವಂಶಾನುಗತವಾಗಿ ನಡೆದುಕೊಂಡು ಬಂದಿದೆ. ವಿಶಿಷ್ಟ ಕಾರಣಗಳಿಲ್ಲದೆ ಈ ನಿಯಮದ ಉಲ್ಲಂಘನೆಯಾಗುವಂತಿಲ್ಲ. ಊರ ಗೌಡ (ಪಟೇಲ), ಹತ್ತು ಸಮಸ್ತರು ಪಂಚರು, ಹಕ್ಕುದಾರರು ಇವರೇ ಈ ನಡೆವಳಿಯಲ್ಲಿ ಗೊತ್ತಾದ ವ್ಯವಸ್ಥಾಪಕರು.

ಕರಿ ಹರಿಯುವ ಪ್ರಮುಖ ಸಾಂಕೇತಿಕ ಸಾಧನವೆಂದರೆ ಬೇವು, ಮಾವುಗಳ ತೊಂಗಲುಗಳಿಂದ ಮಾಡಿದ ತೋರಣವನ್ನು ಸರಮಾಲೆ ಎತ್ತುಗಳಿಂದ ಹರಿಸುವುದು. ಮಧ್ಯೆ ಮಧ್ಯೆ ಅದರಲ್ಲಿ ತೆಂಗಿನಕಾಯಿ ಕೊಬ್ಬರಿಬಟ್ಟಲುಗಳನ್ನೂ ಕಟ್ಟಿರುತ್ತಾರೆ. ಊರ ಅಗಸೆಯ ಮುಂಗಡೆ ಎಡ ಬಲ ಬದಿಗಳಲ್ಲಿ ನಿಂತುಕೊಂಡಿರುವ ಕರೀ ಕಲ್ಲು ಕಂಬಗಳಿಗೆ, ಎತ್ತುಗಳ ನಿಲುವಿನಳತೆಗೆ ಸರಿಯಾಗುವಂತೆ, ಕರಿಯ ಸರಮಾಲೆಯನ್ನು ಕಟ್ಟಲಾಗುವುದು. ಹಬ್ಬದ ಉಡಿಗೆತೊಡಿಗೆಗಳಿಂದ ಸಿಂಗರಗೊಂಡ ಜನಜಂಗುಳಿ ಕುತೂಹಲಭಾವವನ್ನು ಹೊತ್ತು ಅಲ್ಲಿ ನೆರೆದಿರುವುದು. ಆಗ ಗೊತ್ತುಮಾಡಿದ ಮನೆಯ ಎತ್ತುಗಳನ್ನು, ವಾದ್ಯವೃಂದದ ಗುಲ್ಲುಗಲಾಟೆಯೊಂದಿಗೆ ಮೆರವಣಿಗೆ ಮಾಡುತ್ತ ಅಗಸೆಯ ಒಳಬಾಗಿಲಿಗೆ ತಂದು ನಿಲ್ಲಿಸುವರು. ಗರತಿಯರು ಎತ್ತುಗಳಿಗೆ ಆರತಿಯನ್ನೆತ್ತಿ ನಿವಾಳಿ ತೆಗೆಯುವರು.

ಬಳಿಕ ಸಿದ್ಧವಾಗಿ ನಿಂತ ಎತ್ತುಗಳನ್ನು ಹೊಡೆದು ಹೆದರಿಸಿ ರಭಸದಿಂದ ಓಡಿಸಲಾಗುವುದು. ಕರಿಯ ತೋರಣದ ತಡೆಯನ್ನು ಹರಿದು ಎತ್ತುಗಳು ಮುನ್ನುಗ್ಗಿ ಓಡುವುವು. ಈ ಓಟದ ಮೇಲಾಟದಲ್ಲಿ ಕರಿ ಅಥವಾ ಕೆಂದು ಎತ್ತು ಮುಂದಾದರೆ ಆ ವರ್ಷ ಮುಂಗಾರು ಧಾನ್ಯಗಳು ಹೆಚ್ಚಾಗಿ ಬೆಳೆಯುವುವೆಂದೂ ಬಿಳಿಯ ಎತ್ತು ಮುಂದಾದರೆ ಹಿಂಗಾರು ಧಾನ್ಯಗಳ ಸಮೃದ್ಧಿಯೆಂದೂ ನಂಬುವ ಭಾವನಾತ್ಮಕ ಪರಂಪರೆ ಹಳ್ಳಿಗರಲ್ಲಿದೆ. ಇದೆಲ್ಲ ಕಾರ್ಯಕ್ರಮ ಮುಗಿದ ಮೇಲೆ, ಅದರಲ್ಲಿ ಭಾಗವಹಿಸಿದ ಎತ್ತುಗಳನ್ನು ಊರಲ್ಲಿ ಮೆರೆಸುತ್ತ ಅವರವರ ಮನೆಗೆ ತಲುಪಿಸಲಾಗುವುದು. ಇಲ್ಲಿಗೆ ಹಬ್ಬದ ಆಚರಣೆ ಪೂರ್ತಿ ಗೊಂಡಂತಾಗುವುದು. ಕರಿ ಹರಿದ ಮೇಲೆಯೇ ಬಿತ್ತನೆ ಬೀಜಗಳು ಹೊಲಗಳಿಗೆ ಹೋಗಬೇಕು. ಅಲ್ಲಿಯವರೆಗೂ ಬಿತ್ತನೆಯ ಕೆಲಸ ನಡೆಯಕೂಡದೆಂಬ ಸಾಂಪ್ರದಾಯಿಕ ನಿಷೇಧವಿದೆ. *

**ಕಾರಾಗೃಹಗಳು :** ದೇಶ ಅಥವಾ ಸಮಾಜಕ್ಕೆ ಕಂಟಕಪ್ರಾಯವಾಗಿರುವ ವ್ಯಕ್ತಿಗಳನ್ನು ನಿರ್ಬಂಧದಲ್ಲಿರಿಸುವುದು; ಅವರನ್ನು ಪುನಃ ಸತ್ಪ್ರಜೆಗಳನ್ನಾಗಿ ಮಾಡುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಈ ಉದ್ದೇಶಗಳಿಂದ ಸ್ಥಾಪಿತವಾಗಿರುವ ಹಲವು ಕಾರಾಗೃಹಗಳು ಕರ್ನಾಟಕದಲ್ಲಿ ಇವೆ. ಇವು ರಾಜ್ಯ ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟಿದ್ದು ಪ್ರತ್ಯೇಕ ಆಡಳಿತ ವಿಭಾಗವನ್ನೊಳಗೊಂಡಿವೆ.

ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಜೀವಕ್ಕೆ ಜೀವ ಎಂಬ ನೀತಿ ಪ್ರಾಚೀನ ಕಾಲದಲ್ಲಿತ್ತು. ಶಿಕ್ಷೆಯು ಕೋಪದ, ಸೇಡಿನ, ಪ್ರತೀಕಾರದ ಪ್ರತೀಕವಾಗಿತ್ತು. ಮಾನವತೆಗೆ ಕರುಣೆಗೆ ಕಾಲವಿರಲಿಲ್ಲ. ರಾಜರುಗಳ

ಸುಲ್ತಾನರುಗಳ ಕಾಲದಲ್ಲಿ ಅಪರಾಧಿಗಳನ್ನು ಮತ್ತು ತಮಗೆ ಬೇಡವಾದವರನ್ನು ವಿಶಿಷ್ಟವಾದ ಸ್ಥಳಗಳಲ್ಲಿಟ್ಟು ಚಿತ್ರವಿಚಿತ್ರವಾದ ಹಿಂಸೆಗೆ ಗುರಿಮಾಡಿ ಸೇಡುತೀರಿಸಿಕೊಳ್ಳುತ್ತಿದ್ದರು. ದುರ್ಗಮ ಬೆಟ್ಟಗಳ ಮೇಲೆ, ನೆಲಮಾಳಿಗೆಗಳಲ್ಲಿ ಕಾರಾಗೃಹಗಳು ಇರುತ್ತಿದ್ದುವು. ಆದರೆ ಭಾರತಕ್ಕೆ ಬ್ರಿಟಿಷರು ಬಂದ ಅನಂತರ ಕಾರಾಗೃಹಗಳಿಗೆ ಒಂದು ರೀತಿ, ನೀತಿ, ರೂಪುರೇಷೆ ಕೊಡುವ ಕೆಲಸ ಆರಂಭವಾಯಿತು. ಆದರೂ ಬ್ರಿಟಿಷರ ಉದ್ದೇಶ ಈ ದೇಶದಲ್ಲಿ ಆಡಳಿತ ಸ್ಥಾಪನೆಯ ಜೊತೆಗೆ ಜನರ ಸ್ವಾತಂತ್ರ್ಯಭಾವನೆಗಳನ್ನು ಹತ್ತಿಕ್ಕುವುದೂ ಆಗಿತ್ತು. ಬಂದಿಗಳನ್ನು ಕರುಣೆಯಿಂದ ಕಂಡು, ಅವರೂ ಮಾನವರೆಂದು ತಿಳಿದು ಅವರ ಮಾನಸಿಕ ಆಂದೋಲನಗಳನ್ನು ಅರ್ಥಮಾಡಿಕೊಂಡು ಸೂಕ್ತ ಸುಧಾರಣೆಗಳನ್ನು ಜಾರಿಗೆ ತರಲು ಅವರಿಗೆ ಬಹಳ ಕಾಲವೇ ಬೇಕಾಯಿತು. ಮೊದಮೊದಲು ಬ್ರಿಟಿಷರ ಕಾಲದಲ್ಲಿಯೂ ರಾಗಿ ಬೀಸುವುದು, ಎಣ್ಣೆ ತೆಗೆಯುವುದು, ಕಲ್ಲು ಒಡೆಯುವುದು ಇವುಗಳನ್ನು ಮಾಡಿಸುತ್ತಿದ್ದರು. ದುಡಿಸುವುದೇ ದುಡಿಮೆಯ ಉದ್ದೇಶವಾಗಿ ಆ ದುಡಿಮೆಗೆ ಬೆಲೆ ಕೊಡುತ್ತಿರಲಿಲ್ಲ. ಸಣ್ಣ ತಪ್ಪುಗಳಿಗೂ ಮೈ ಕೀಳುವಂತೆ, ಬಿಸಿರಕ್ತ ಒಸರುವಂತೆ ಛಡಿ ಏಟುಗಳನ್ನು ಕೊಡಲಾಗುತ್ತಿತ್ತು.

ಕಾಲ ಬದಲಾದಂತೆ, ಜನತೆ ಎಚ್ಚೆತ್ತಂತೆ ಜೈಲುಗಳ ಆಡಳಿತದಲ್ಲಿ ಸುಧಾರಣೆ ಕಾಣಿಸಿಕೊಳ್ಳತೊಡಗಿತು. ಭಾರತ ಸರ್ಕಾರದವರು 1864ರಲ್ಲಿ ಹಾಗೂ 1919-20ರಲ್ಲಿ ಕಾರಾಗೃಹ ಸುಧಾರಣಾ ಸಮಿತಿಗಳನ್ನು ನೇಮಿಸಿದರು. ಸದರಿ ಸಮಿತಿಗಳು ಅನೇಕ ಸುಧಾರಣೆಗಳನ್ನು ಸೂಚಿಸಿದವು. ಅಂದಿನ ಮೈಸೂರು ಸರಕಾರವೂ ಜೈಲಿನ ಸುಧಾರಣೆಗಳ ಔಚಿತ್ಯವನ್ನು ಮನಗಂಡು 1940ರಲ್ಲಿ ಅಂದಿನ ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿಗಳಾಗಿದ್ದ ಕೆ.ಎಸ್.ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಜೈಲು ಸುಧಾರಣಾ ಸಮಿತಿಯನ್ನು ನೇಮಿಸಿತು. ಆಗ ಸೆರೆಮನೆಯ ಕಷ್ಟನಷ್ಟಗಳನ್ನನುಭವಿಸಿದ್ದ ಕೆಲವು ಮಹನೀಯರನ್ನೊಳಗೊಂಡಿದ್ದ ಈ ಸಮಿತಿ ಬಹಳ ಉಪಯುಕ್ತ ಸುಧಾರಣೆಗಳನ್ನು ಸೂಚಿಸಿತು. ಆ ಪೈಕಿ ಕೆಲ ಸುಧಾರಣೆಗಳು ಸ್ವಾತಂತ್ರ್ಯಕ್ಕೆ ಮೊದಲೂ ಕೆಲವು ಸ್ವಾತಂತ್ರ್ಯಾನಂತರವೂ ಜಾರಿಗೆ ಬಂದವು.

ಹಿಂದಿನ ಕಾರಾಗೃಹಗಳಿಗೂ ಇಂದಿನ ಕಾರಾಗೃಹಗಳಿಗೂ ಕಟ್ಟಡಗಳನ್ನು ಬಿಟ್ಟು ಉಳಿದೆಲ್ಲ ರೀತಿನೀತಿಗಳಲ್ಲಿ ಬಹುಶಃ ಹೋಲಿಕೆಯೇ ಇಲ್ಲವೇನೋ. ಅಂದಿನ ಮೂಲೋದ್ದೇಶ ಶಿಕ್ಷೆಯಾಗಿತ್ತು. ಇಂದಿನ ಮೂಲೋದ್ದೇಶ ರಕ್ಷೆಯಾಗಿದೆ, ಸುಧಾರಣೆಯಾಗಿದೆ. ಇಂದಿನ ಕಾರಾಗೃಹಗಳು ಬಂದೀಖಾನೆಗಳಾಗಿರುವ ಬದಲು ಅಪರಾಧಿಗಳನ್ನು ದೈಹಿಕವಾಗಿ ಮಾನಸಿಕವಾಗಿ ಬೌದ್ಧಿಕವಾಗಿ ನರಳುತ್ತಿರುವ ರೋಗಿಗಳೆಂದು, ಜೈಲಿನ ಅಧಿಕಾರಿಗಳನ್ನು ವೈದ್ಯರುಗಳೆಂದು ಕರೆಯುವಷ್ಟರ ಮಟ್ಟಿಗೆ ಔಚಿತ್ಯಪೂರ್ಣ ಸುಧಾರಣೆಗಳಾಗಿವೆ. ಅಪರಾಧಿಗಳಿಗೆ ತಮ್ಮ ತಪ್ಪಿನ ಅರಿವನ್ನು ಮೂಡಿಸಿ, ಅವರಿಗೆ ಸೂಕ್ತ ವೈಜ್ಞಾನಿಕವಾದ ತರಬೇತಿ ಕೊಡಿಸಿ ಅವರೇ ಪಶ್ಚಾತ್ತಾಪದಲ್ಲಿ ಬೆಂದು ಸದ್ಗುಣಿಗಳಾಗಿ ಸತ್ಪ್ರಜೆಗಳಾಗಿ ಮತ್ತೆ ಸಮಾಜದಲ್ಲಿ ಸೇರಿಸುವುದೇ ಇಂದಿನ ಬಂದೀಖಾನೆಗಳ ಉದ್ದೇಶ.

ಹಿಂದಿನ ಮೈಸೂರಿನಲ್ಲಿ ಕೇವಲ ಎಂಟು ಸೆರೆಮನೆಗಳಿದ್ದುವು. ಏಕೀಕೃತ ಕರ್ನಾಟಕದಲ್ಲಿ ಎಲ್ಲ ಬಗೆಯ ಜೈಲುಗಳ ಸಂಖ್ಯೆ 99 (1981-82). ಕೈದಿಗಳನ್ನು ನೋಡಿ ನಡೆಸುವ ರೀತಿನೀತಿ ಸಹ ವೈಜ್ಞಾನಿಕವಾಗಿದೆ. ಹದಿನಾರರಿಂದ ಇಪ್ಪತ್ತೊಂದು ವರ್ಷದ ಯುವ ಅಪರಾಧಿಗಳ ಸುಧಾರಣೆಗಾಗಿ ಬಾರ್ಸ್ಟಲ್ ಶಾಲೆ ಎಂಬ ಸಂಸ್ಥೆ ಧಾರವಾಡದಲ್ಲಿದೆ. ಬದಲಾವಣೆಗಳಿಗೆ ಬಗ್ಗದೇ, ಸುಧಾರಣೆಗಳಿಗೆ ಸಗ್ಗದೇ ಇರುವವರಿಗೆ ಬಳ್ಳಾರಿ ಕಾರಾಗೃಹಗಳಲ್ಲಿ ಅತಿ ಕಟ್ಟುನಿಟ್ಟಿನ ಶಿಕ್ಷೆ, ತರಬೇತು ಮತ್ತು ಶಿಕ್ಷಣ ಕೊಡಲಾಗುತ್ತದೆ. ಹಿಂದೆ ವೈಜ್ಞಾನಿಕವಾಗಿ ತರಬೇತು ಪಡೆದ ಅಧಿಕಾರಿಗಳು ಕಾರಾಗೃಹದಲ್ಲಿ ಇರಲಿಲ್ಲ. ಈಗ ವೈಜ್ಞಾನಿಕವಾಗಿ ಪೂರ್ಣ ತರಬೇತನ್ನು ಪಡೆದ ಅಧಿಕಾರಿಗಳು ಇಲಾಖೆಯಲ್ಲಿ ಇದ್ದಾರೆ. ಕಾರಾಗೃಹಕ್ಕೆ ಅಪರಾಧಿ ಆಗಮಿಸುತ್ತಿದ್ದಂತೆಯೇ ಅವನ ವಯಸ್ಸು, ಅವನ ವಿದ್ಯಾಭ್ಯಾಸ, ಉದ್ಯೋಗ, ಮನೆತನ, ಹಿಂದಿನ ನಡೆವಳಿಕೆ, ಆರ್ಥಿಕ ಶಕ್ತಿ, ಹವ್ಯಾಸಗಳು, ಮಾಡಿರುವ ಅಪರಾಧ, ಅವನ ದೃಷ್ಟಿಕೋನ, ಅವನ ಸಾಂಸಾರಿಕ ವಿವರಗಳು ಎಲ್ಲವನ್ನೂ ಅರಿತು ಅವನ ಕಾರಾಗೃಹವಾಸದಲ್ಲಿ ಯಾವ ವೃತ್ತಿಯಲ್ಲಿ ಎಷ್ಟು ಶಿಕ್ಷಣ ಕೊಟ್ಟರೆ ಬಿಡುಗಡೆಯಾದ ಅನಂತರ ಅವನು ಎಷ್ಟರಮಟ್ಟಿಗೆ ಸಮಾಜದಲ್ಲಿ ಸದ್ಗುಣಿಯಾಗಿ ಬಾಳಬಲ್ಲ ಎಂಬುದನ್ನು ಪರೀಶೀಲಿಸಿ ಸೂಕ್ತ ನಿರ್ಧಾರವನ್ನು ತಿಳಿದುಕೊಂಡು ಅವನಿಗೆ ಶಿಕ್ಷಣ ಕೊಡಲಾಗುತ್ತದೆ. ಪಟ್ಟಣಗಳಿಂದ ಬಂದವರಿಗೆ ಬಿಡುಗಡೆಯಾದಮೇಲೆ ಅಲ್ಲಿಯೇ ನೆಲೆಸಬೇಕೆನ್ನುವವರಿಗೆ ಅಲ್ಲಿಯ ಆವಶ್ಯಕತೆಗಳನ್ನರಿತು, ಕೈಗಾರಿಕೆಗಳಲ್ಲಿ ವೈಜ್ಞಾನಿಕವಾಗಿ ವೃತ್ತಿಶಿಕ್ಷಣ ತರಬೇತು ಕೊಡಲಾಗುತ್ತದೆ. ಕೈಮಗ್ಗ, ಯಂತ್ರಚಾಲಿತ ಮಗ್ಗ, ಹೊಲಿಗೆ, ಕಮ್ಮಾರಿಕೆ, ಜಮಖಾನೆಗಳನ್ನು ಮಾಡುವುದು, ತೆಂಗಿನನಾರಿನ ಉದ್ಯೋಗ, ಸಾಬೂನು ಮಾಡುವುದು, ಕ್ರಿಮಿನಾಶಕ ದ್ರವ ತಯಾರಿಸುವುದು -ಇವು ಇಂದು ಕರ್ನಾಟಕದ ಕಾರಾಗೃಹಗಳಲ್ಲಿ ಕೊಡಲಾಗುವ ವೃತ್ತಿಶಿಕ್ಷಣಗಳಲ್ಲಿ ಮುಖ್ಯವಾದುವು. ಹಳ್ಳಿಯಿಂದಲೇ ಬಂದು ಹಳ್ಳಿಗೆ ಹಿಂತಿರುಗುವವರಿಗೆ ಆಧುನಿಕ ವ್ಯವಸಾಯ ಮತ್ತು ತೋಟಗಾರಿಕೆಗಳಲ್ಲಿ ತರಬೇತು ಕೊಡಲಾಗುತ್ತದೆ. ತರಬೇತಿಯೇ ಈ ವೃತ್ತಿ ಶಿಕ್ಷಣಗಳ ಮೂಲೋದ್ದೇಶವಾದರೂ ಉತ್ಪಾದನೆಯ ಮಟ್ಟವೂ ಕಡಿಮೆ ಏನಿಲ್ಲ. ಪ್ರಾಂತ್ಯ ಪುನರ್ವಿಂಗಡಣೆಯಾದಾಗ ಸುಮಾರು ನಾಲ್ಕು ಲಕ್ಷ ರೂಪಾಯಿಗಳಷ್ಟು ಬೆಲೆಯ ಉತ್ಪಾದನೆ ಇಂದು ಕೋಟ್ಯಾಂತರ ರೂಪಾಯಿಗಳಿಗೇರಿದೆ.

ಕರ್ನಾಟಕದ ಜೈಲುಗಳಲ್ಲಿ ಕೈದಿಗಳಿಗೆ ದುಡಿತದ ಜೊತೆಗೆ ಸಾಮಾನ್ಯ ಶಿಕ್ಷಣವನ್ನೂ ಕೊಡಲಾಗುತ್ತದೆ. ಸಾಮಾನ್ಯ ಓದುಬರಹ ಕಡ್ಡಾಯವಾದರೆ ಕೆಲವರು ಬಂದಿಗಳು ಜೈಲಿನಿಂದಲೇ ವ್ಯಾಸಂಗಮಾಡಿ, ಶಾಲಾ ಕಾಲೇಜುಗಳಿಗೂ ಹೋಗಿ ಪದವಿಗಳನ್ನು ಗಳಿಸಿದ್ದಾರೆ. ಬಂದಿಗಳಿಗೆ ದೈಹಿಕ ಶಿಕ್ಷಣವೂ ದೊರೆಯುತ್ತದೆ. ಜೈಲುಗಳಲ್ಲಿ ಕಲೆ, ಕ್ರೀಡೆ ಮತ್ತು ಮನೋಲ್ಲಾಸಗಳಿಗೂ ಪ್ರಾಶಸ್ತ್ಯವುಂಟು. ಕೆಲವು ಹೊರಾಂಗಣದ ಹಾಗೂ ಒಳಾಂಗಣದ ಕ್ರೀಡೆಗಳಿಗೆ ಕಾರಾಗೃಹಗಳಲ್ಲಿ ಅವಕಾಶವಿದೆ.

ಓದುಬರೆಹ ಬಲ್ಲ ಎಲ್ಲ ಬಂದಿಗಳಿಗೂ ವರ್ತಮಾನ ಪತ್ರಿಕೆಗಳು, ವಾರ ಹಾಗೂ ಮಾಸಪತ್ರಿಕೆಗಳನ್ನು ಒದಗಿಸಲಾಗುತ್ತದೆ. ದೊಡ್ಡ ದೊಡ್ಡ ಕಾರಾಗೃಹಗಳಲ್ಲಿ ವಾರಕ್ಕೊಮ್ಮೆ ಶೈಕ್ಷಣಿಕ ಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಜೈಲುಗಳಲ್ಲಿಯೂ ಚುನಾವಣಾ ಪದ್ಧತಿಯಿಂದ ಬಂದಿಗಳೇ ತಮ್ಮ ಪ್ರತಿನಿಧಿಗಳನ್ನಾರಿಸುತ್ತಾರೆ. ಈ ಪ್ರತಿನಿಧಿಗಳು ಆಡಳಿತದ ಅನೇಕ ಬಾಬುಗಳಲ್ಲಿ ಮೇಲ್ವಿಚಾರಣೆ ಮಾಡುತ್ತಾರೆ. ಕಾವ್ಯರಚನೆ, ನಾಟಕ, ಲಲಿತಕಲೆಗಳಲ್ಲಿ ಆಸಕ್ತಿಯುಳ್ಳವರನ್ನು ಪ್ರೋತ್ಸಾಹಿಸಲಾಗುತ್ತದೆ. ಬಂದಿಗಳು ಆಗಾಗ್ಗೆ ನಾಟಕಾಭ್ಯಾಸ ಮಾಡಿ ಪ್ರದರ್ಶಿಸಿ ಉಲ್ಲಾಸಪಡುತ್ತಾರೆ. ಆಕಾಶವಾಣಿಯಲ್ಲೂ ಆಗಿಂದಾಗ್ಗೆ ಬಂದಿಗಳ ಕಾರ್ಯಕ್ರಮಗಳಿರುತ್ತವೆ.

ದೇಶಭಕ್ತಿಯಲ್ಲೂ ಬಂದಿಗಳು ಯಾರಿಗೂ ಕಡಿಮೆಯಿಲ್ಲ. ಜೈಲಿನಲ್ಲಿ ಅವರಿಗೆ ಕೊಡುವ ಕೂಲಿಯಿಂದಲೇ ಹಣ ಉಳಿಸಿ ಯುದ್ಧಕಾಲದಲ್ಲಿ ದೇಶಕ್ಕೆ ಅರ್ಪಿಸಿದ್ದಾರೆ. ನಾಟಕ ಪ್ರದರ್ಶಿಸಿ ಸಾವಿರಾರು ರೂಪಾಯಿ ಸಂಗ್ರಹಿಸಿ ಯುದ್ಧ ನಿಧಿಗೆ ಅರ್ಪಿಸಿರುವುದಲ್ಲದೆ ತಮ್ಮೆಲ್ಲ ಜೈಲು ದುಡಿತದ ಹಣವನ್ನೂ ದೇಶಕ್ಕಾಗಿ ಅರ್ಪಿಸಿದ ದೇಶಾಭಿಮಾನಿ ಬಂದಿಗಳಿದ್ದಾರೆ.

ಇಂದಿನ ಕರ್ನಾಟಕದ ಜೈಲುಗಳಲ್ಲಿ ಊಟೋಪಚಾರ ಸುಧಾರಿಸಿದೆ. ಅಲ್ಲಿ ನೀಡುವ ಆಹಾರ ರುಚಿಕರವಾಗಿಯೂ ಶುಚಿಕರವಾಗಿಯೂ ಪುಷ್ಟಿಕರವಾಗಿಯೂ ಇರುತ್ತದೆ. ಹಬ್ಬಹರಿದಿನಗಳಲ್ಲಿ ವಿಶೇಷ ತಿಂಡಿತಿನಿಸುಗಳನ್ನು ಒದಗಿಸಲಾಗುತ್ತದೆ. ಇಂದಿನ ಜೈಲುಗಳಲ್ಲಿ ಒಳಗೆ ಬಂದಾಗ್ಗಿಂತ ಹೊರಗೆ ಹೋಗುವಾಗ ಕೈದಿಗಳು ಹೆಚ್ಚು ಆರೋಗ್ಯವಂತರಾಗಿರುತ್ತಾರೆ. ಎಲ್ಲ ಜೈಲುಗಳಲ್ಲಿಯೂ ಕೈದಿಗಳಿಗಾಗಿಯೇ ಅವರಿಂದಲೇ ನಡೆಸಲ್ಪಡುವ ಲಾಭವೂ ನಷ್ಟವೂ ಇಲ್ಲದ ಕ್ಯಾಂಟೀನುಗಳಿವೆ. ನಿತ್ಯ ಬೇಕಾಗುವ ವಸ್ತುಗಳು ಇಲ್ಲಿ ಸಿಗುತ್ತವೆ. ಬೆಲೆ ಮಾರುಕಟ್ಟೆಗಿಂತ ಕಡಿಮೆ.

ಕೈದಿಗಳು ಶಿಕ್ಷೆ ಅನುಭವಿಸುತ್ತಿದ್ದರೂ ವರ್ಷಕ್ಕೊಂದೆರಡು ಸಲ ಅವರವರ ಊರುಗಳಿಗೆ ಹೋಗಿಬರಲು ಅವಕಾಶವಿದೆ. ಮನೆಯಲ್ಲಿ ಅಥವಾ ಬಂಧುಗಳಲ್ಲಿ ಯಾರಾದರೂ ಅಸ್ವಸ್ಥಗೊಂಡರೆ ಅಥವಾ ಉಳುಮೆ, ಬಿತ್ತನೆ ಕಾಲದಲ್ಲಿ ಎರಡರಿಂದ ಮೂರು ವಾರಗಳವರೆಗೆ ರಜೆಯ ಮೇಲೆ ಊರಿಗೆ ಹೋಗಿ ಮನೆಯ ಆಡಳಿತಕ್ಕೆ ವ್ಯವಸ್ಥೆಮಾಡಿ, ನಿಯಮಾನುಸಾರ ಮರಳಿ ಜೈಲಿಗೆ ಬರುತ್ತಾರೆ. ಹೀಗೆ ಅವರು ರಜೆಯಲ್ಲಿರುವಾಗ ಯಾವುದೇ ಕಾವಲಿನ ಕಟ್ಟುಪಾಡುಗಳಿಲ್ಲ. ಪರಸ್ಪರ ವಿಶ್ವಾಸವೇ ಆಧಾರ. ಆ ಆಧಾರಕ್ಕೆ

ಮೋಸ ಮಾಡುವ ಜನ ತೀರ ಕಡಿಮೆ. ಹಾಗೆ ವಿಶ್ವಾಸಕ್ಕೆರಡೆಣಿಸುವ ಜನರಿಗೆ ಮತ್ತೆ ಅಂಥ ಸೌಲಭ್ಯ ದೊರಕುವುದಿಲ್ಲ.

ಆಗಿಂದಾಗ್ಗೆ ಸಮಾಜದ ಶಿಕ್ಷಣವೇತ್ತರು, ವಿದ್ವಾಂಸರು, ಗುರುಗಳು, ಸಮಾಜ ಸುಧಾರಕರು ಜೈಲುಗಳಿಗೆ ಬಂದು ನೈತಿಕ, ಆಧ್ಯಾತ್ಮಿಕ, ಪೌರ ನಿಯಮಗಳ ವಿಚಾರದಲ್ಲಿ ಉಪನ್ಯಾಸ ಕೊಡುತ್ತಾರೆ. ಎಲ್ಲ ದೊಡ್ಡ ಬಂದೀಖಾನೆಗಳಲ್ಲಿ ಸುಸಜ್ಜಿತ ಪುಸ್ತಕ ಭಂಡಾರಗಳಿವೆ. ಈ ದಿಶೆಯಲ್ಲಿ ಕೇಂದ್ರ ಪುಸ್ತಕ ಭಂಡಾರದ ಸೇವೆ ಸ್ಮರಣೀಯ.

ಪ್ರತಿ ಕಾರಾಗೃಹದಲ್ಲಿಯೂ ಬಂದಿಗಳ ಆರೋಗ್ಯ ರಕ್ಷಣೆಗೆ ವೈದ್ಯರುಗಳಿರುತ್ತಾರೆ. ಉಚಿತ ವೈದ್ಯಕೀಯ ಸೇವೆ ಸದಾ ಇರುತ್ತದೆ.

ಹೀಗೆ ಸುಧಾರಣೆ ಮಾಡಿ ಹೊರಗೆ ಕಳಿಸಿದ ಕೈದಿಗಳನ್ನು ಸರ್ಕಾರ ಮರೆಯುವುದಿಲ್ಲ. ಜೈಲಿನಲ್ಲಿ ಕಲಿತ ವೃತ್ತಿಯನ್ನೇ ಸ್ವತಂತ್ರವಾಗಿ ಉದ್ಯೋಗ ನಡೆಸಬೇಕೆನ್ನುವವರಿಗೆ ಸರ್ಕಾರ ಸಹಾಯಧನ ನೀಡುತ್ತದೆ ಹಾಗೂ ಮಾರ್ಗದರ್ಶನ ಮಾಡುತ್ತದೆ. ಇಂಥ ಕೈದಿಗಳು ಸಮಾಜದಲ್ಲಿ ಸುಸಂಸ್ಕೃತರಾಗಿ ಬಾಳುತ್ತಾರೆಯೇ ಎಂಬುದನ್ನು ಅಭ್ಯಸಿಸುತ್ತದೆ. ಬಂದಿಗಳು ಬಿಡುಗಡೆಯಾದ ಅನಂತರ ಸತ್ಪ್ರಜೆಗಳಾಗಿ ಬಾಳಲು ಯೋಜನೆಗಳನ್ನು ಹಾಕಿ, ಅಂಕಿ- ಅಂಶಗಳನ್ನು ಸಂಗ್ರಹಿಸಿ, ಸರಿಯಾಗಿ ಮಾರ್ಗದರ್ಶನ ಮಾಡಲು ರಾಜ್ಯದ ಬಂದೀಖಾನೆಗಳ ಮುಖ್ಯಾಧಿಕಾರಿಗಳ ಕಚೇರಿಯಲ್ಲಿ ವಿಶೇಷ ಸಂಶೋಧನಾ ಶಾಖೆ ಇದೆ.

ರಾಜ್ಯದಲ್ಲಿ ಕೆಲವು ಬಯಲು ಕಾರಾಗೃಹಗಳಿವೆ. ಅಪರಾಧಿಗಳನ್ನು ಸುಧಾರಿಸಲು ಇಲಾಖೆ ಹಾಕಿದ ಅನೇಕ ಯೋಜನೆಗಳಲ್ಲಿ ಬಯಲು ಕಾರಾಗೃಹಗಳ ಯೋಜನೆಯೂ ಒಂದು. ಬಯಲು ಕಾರಾಗೃಹಗಳ ಉದ್ದೇಶ ಬಂದಿಗಳನ್ನು ಅವರವರ ಪೂರ್ವಪರಿಸರದಲ್ಲಿಯೇ, ಪೂರ್ವವೃತ್ತಿಯಲ್ಲಿಯೇ ಸುಸಜ್ಜಿತರನ್ನಾಗಿ ಮಾಡಿ ಉಪಯುಕ್ತ ಮಾನವರನ್ನು ಮತ್ತೆ ಸಮಾಜಕ್ಕೆ ಹಿಂದಿರುಗಿಸುವುದೇ ಆಗಿದೆ. ಇಲ್ಲಿ ಗೋಡೆಗಳಿಲ್ಲ, ತಂತಿಬೇಲಿಗಳಿಲ್ಲ, ಸದಾ ಕಣ್ಣಾಡಿಸುವ ಕಾವಲುಗಾರರಿಲ್ಲ. ಇಲ್ಲಿ ಮುಖ್ಯವಾಗಿ ರೈತರನ್ನು ಆರಿಸಿ ಕಳಿಸಿ, ಆಧುನಿಕ ವ್ಯವಸಾಯ, ತೋಟಗಾರಿಕೆ ಸುಧಾರಿತ ತಳಿಗಳ ಸಂಸ್ಕರಣೆ ಬೇಸಾಯ - ಔಷಧಿಗಳ - ಕೀಟನಾಶಕಗಳ ಉಪಯೋಗ, ಜಾನುವಾರುಗಳ ಸಂಸ್ಕರಣೆ ಮುಂತಾದವುಗಳಲ್ಲಿ ತರಬೇತಿ ನೀಡಲಾಗುತ್ತದೆ. ದೇಶ ಕಟ್ಟುವ ಜಲಾಶಯ ನಿರ್ಮಾಣದಂಥ ಯೋಜನೆಗಳಲ್ಲಿಯೂ ಇಂಥ ಬಂದೀಖಾನೆಗಳಿರುತ್ತವೆ.

ಕರ್ನಾಟಕದಲ್ಲಿ ಬಯಲು ಬಂದೀಖಾನೆಯ ಯೋಜನೆ ದಶಕಗಳಷ್ಟು ಹಿಂದಿನದಾದರೂ ಮೊಟ್ಟಮೊದಲ ಬಯಲು ಬಂದೀಖಾನೆ ಪ್ರಾರಂಭವಾದದ್ದು 1968ರಲ್ಲಿ, ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿ. ಮಲಪ್ರಭಾ ಜಲಾಶಯದ ಕಾಲುವೆ ನಿರ್ಮಾಣ ಕೆಲಸದಲ್ಲಿ ಪಾಲ್ಗೊಂಡ ಈ ಯೋಜನೆ 1971ರವರೆಗೆ ತುಂಬ ತೃಪ್ತಿಕರವಾಗಿ ನಡೆಯಿತು. ಸುಮಾರು ಇನ್ನೂರು ಜನ ಬಂದಿಗಳು ಸನ್ನಡತೆಯಿಂದ ಸಂತೃಪ್ತಿಯಿಂದ ಕೆಲಸಮಾಡಿ, ಕೆಲಸಗಾರರಿಗೆ ಮೇಲ್ಪಂಕ್ತಿಯಾಗಿ ಲೋಕೋಪಯೋಗಿ ಇಲಾಖೆಯ ತಜ್ಞರ ಹಾಗೂ ಎಲ್ಲರ ಮೆಚ್ಚುಗೆ ಪಡೆದರು. ಈ ಮೆಚ್ಚುಗೆಯಿಂದ ಉತ್ತೇಜಿತವಾದ ಇಲಾಖೆ, ಈಗ ವ್ಯವಸಾಯವೇ ಮೂಲವಾದ ಬಯಲು ಬಂದೀಖಾನೆಯೊಂದನ್ನು ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕು ಕೋರಮಂಗಲ ಗ್ರಾಮದ 145 ಎಕರೆ ವಿಸ್ತೀರ್ಣದಲ್ಲಿ 1972ರಲ್ಲಿ ಪ್ರಾರಂಭ ಮಾಡಿದೆ. ಈ ಬಯಲು ಕಾರಾಗೃಹದಲ್ಲಿರುವ ನೂರಾರು ಮಂದಿ ಕೊಲೆಗಾಗಿ ಶಿಕ್ಷೆ ಪಡೆದವರಾದರೂ ಅವರ ಆಸಕ್ತಿ ಶ್ರದ್ಧೆ ಉತ್ಸಾಹ ದುಡಿಮೆಗಳನ್ನು ಕಂಡವರಾರೂ ಅವರನ್ನು ಅಪರಾಧಿಗಳೆಂದು ಹೇಳಲಾಗುವುದಿಲ್ಲ. ಇಲ್ಲಿ ಅವರಿಗೆ ವೈಜ್ಞಾನಿಕ ರೀತಿಯ ವ್ಯವಸಾಯ, ತೋಟಗಾರಿಕೆ, ಕ್ರಿಮಿಕೀಟ ನಾಶಗಳ ಉಪಯೋಗ, ಧಾನ್ಯ ಸಂಗ್ರಹಣೆ, ಸಂಸ್ಕರಣೆ, ಜಾನುವಾರು ಸಾಕಾಣಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಇಟ್ಟಿಗೆ ತಯಾರಿಕೆ ಹಾಗೂ ಗೃಹ ನಿರ್ಮಾಣ ಮುಂತಾದ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಇಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ವೇತನದ ಜೊತೆಗೆ ಶಿಕ್ಷಾ ಅವಧಿಯ ಕಡಿತವೂ ಹೆಚ್ಚು. ಕೋರಮಂಗಲದ ಬಯಲು ಕಾರಾಗೃಹ ಉತ್ತಮ ಫಲಿತಾಂಶ ನೀಡುತ್ತಿದೆ.

(ಪಿ.ಎಸ್.ಎಂ.)

**ಕಾರ್ಕಳ :** ಉಡುಪಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ತಾಲ್ಲೂಕಿನ ಸುತ್ತ ಉತ್ತರದಲ್ಲಿ ಕುಂದಾಪುರ ತಾಲ್ಲೂಕು ಮತ್ತು ಶಿವಮೊಗ್ಗ ಜಿಲ್ಲೆ, ಪೂರ್ವದಲ್ಲಿಚಿಕ್ಕಮಗಳೂರು ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು, ದಕ್ಷಿಣದಲ್ಲಿ ಬಂಟ್ವಾಳ ತಾಲ್ಲೂಕು ಮತ್ತು ಪಶ್ಚಿಮದಲ್ಲಿ ಉಡುಪಿ ಮತ್ತು ಮಂಗಳೂರು ತಾಲ್ಲೂಕುಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 1400.63 ಚ.ಕಿಮೀ. ಜನಸಂಖ್ಯೆ 204571. ಹೋಬಳಿಗಳು ಮೂರು - ಕಾರ್ಕಳ, ಮೂಡಬಿದರೆ ಮತ್ತು ಅಜೆಕಾರು. ಗ್ರಾಮಗಳು 79.



ಅನಂತಶಯನ ಪ್ರತಿಮೆ, ಕಾರ್ಕಳ

ಇದು ಪಶ್ಚಿಮಘಟ್ಟಗಳ ಸಾಲಿನಲ್ಲಿರುವ ಬೆಟ್ಟಗುಡ್ಡ ಪ್ರದೇಶ. ಆಗುಂಬೆ ಶ್ರೇಣಿಯ ಸ್ವಲ್ಪಭಾಗ ಕಾರ್ಕಳ ತಾಲ್ಲೂಕಿಗೆ ಸೇರುತ್ತದೆ. ಇಲ್ಲಿ ಹಲವು ರೀತಿಯ ಉತ್ತಮ ಕಟ್ಟಡಕಲ್ಲುಗಳು ಸಿಕ್ಕುತ್ತವೆ. ಚಪ್ಪಡಿಕಲ್ಲು, ಜಂಬುಕಲ್ಲು (ಲ್ಯಾಟರೈಟ್) ಇವು ಮುಖ್ಯವಾದುವು. ಜಂಬುಕಲ್ಲು ಇಟ್ಟಿಗೆಗಳನ್ನು ಈ ಪ್ರದೇಶದಲ್ಲೆಲ್ಲ ಕಟ್ಟಡಗಳಿಗೆ ಉಪಯೋಗಿಸುತ್ತಾರೆ. ಕಾರ್ಕಳದ ವಾಯುಗುಣ ಹಿತಕರವಾದುದು. ಜೂನ್‌ನಿಂದ ಅಕ್ಟೋಬರ್ ವರೆಗೆ ಮಳೆ. ವಾರ್ಷಿಕ ಸರಾಸರಿ ಸು.3500ಮಿಮೀ. ಅನೇಕ ಸಣ್ಣ ಹೊಳೆಗಳು ಇಲ್ಲಿ ಹರಿಯುತ್ತವೆ. ಸಹ್ಯಾದ್ರಿ ಗಿರಿಶೃಂಗಗಳಲ್ಲಿ ಜನಿಸುವ ನೀಲಾ, ಸ್ವರ್ಣ, ಶಾಂಭವಿ, ಫಲ್ಗುಣಿ ಮೊದಲಾದ ಹೊಳೆಗಳು ಈ ತಾಲ್ಲೂಕಿನ ಮೂಲಕ ಹರಿದು ಹೋಗುತ್ತವೆ. ಮುಖ್ಯವಾದುದು ತಾಲ್ಲೂಕಿನ ಮಧ್ಯಭಾಗದಲ್ಲಿ ಹರಿಯುವ ಸುವರ್ಣ ಹೊಳೆ. ರಾಮಸಾಗರ ಇಲ್ಲಿಯ ಮುಖ್ಯ ಸರೋವರ. ಪ್ರಮುಖವಾದ ಭಂಡಾಜೆ ಜಲಪಾತ ಕಾರ್ಕಳ ತಾಲ್ಲೂಕಿನಲ್ಲಿದೆ. ಸಮೃದ್ಧವಾದ ಅರಣ್ಯಸಂಪತ್ತು ಮತ್ತು ಅರಣ್ಯಜನ್ಯ ಉತ್ಪನ್ನಗಳು ಕಾರ್ಕಳದ ವೈಶಿಷ್ಟ್ಯ.

ಇಲ್ಲಿನ ಪ್ರಮುಖ ಬೆಳೆ ಬತ್ತ. ಇದಲ್ಲದೆ ತೆಂಗು, ಅಡಕೆ, ಮೆಣಸು, ಶುಂಠಿ, ಅನಾನಸು, ಹಲಸು, ಮಾವು, ಬಾಳೆ ಮತ್ತು ಗೇರುಬೀಜ ಇಲ್ಲಿಯ ಉತ್ಪನ್ನಗಳಲ್ಲಿ ಮುಖ್ಯವಾದವು. ಕಲ್ಲುಕೆಲಸ, ಬೀಡಿ ಕಟ್ಟುವುದು, ನಶ್ಯದ ತಯಾರಿಕೆ, ಕೊಬ್ಬರಿ ಎಣ್ಣೆ ತಯಾರಿಕೆ, ಹೆಂಚಿನ ತಯಾರಿಕೆ, ಮಡಕೆ ಕುಡಿಕೆ ಮತ್ತು ಬೆತ್ತದ ಕೆಲಸ ಮುಂತಾದ ಗ್ರಾಮ ಕೈಗಾರಿಕೆಗಳಿವೆ. ಸರ್ಕಾರಿ ವ್ಯವಸಾಯ ಸಂಶೋಧನ ಕೇಂದ್ರಗಳು ಇವೆ. ಬೀಜೋತ್ಪಾದನಾ ಕೇಂದ್ರ (ಸಾಣೂರು), ಅನಾನಸು ಸಂಶೋಧನ ಕೇಂದ್ರ (ಮೂಡಬಿದರೆ) ಮತ್ತು ವ್ಯವಸಾಯಾಭಿವೃದ್ಧಿ ಫಾರ್ಮುಸಿ (ಕಾರ್ಕಳ) ಇವು ಮುಖ್ಯವಾದವು. ಕಾರ್ಕಳದಲ್ಲಿ 42 ಅಡಿ ಎತ್ತರದ ಗೊಮ್ಮಟ ವಿಗ್ರಹವಿದೆ. 18 ಜೈನ ಬಸದಿಗಳೂ ಜೈನರ ದಾನಶಾಲಾಮಠವೂ ಇದೆ. ಇದಲ್ಲದೆ ಅನಂತಶಯನ ಮತ್ತು ವೆಂಕಟರಮಣ ದೇವಾಲಯಗಳೂ ಇವೆ. ಇಲ್ಲಿರುವ ಚತುರ್ಮುಖ ಬಸದಿಯ ಶಿಲ್ಪಕಲಾ ಸೌಂದರ್ಯ ಅವರ್ಣನೀಯ. ಸು.800 ವರ್ಷಗಳ ಹಿಂದೆ ಇದೊಂದು ಪುಟ್ಟ ಗ್ರಾಮವಾಗಿತ್ತು. ಇದರ ಸುತ್ತಲೂ ಕರಿಯ ಕಲ್ಲುಗಳೇ ಹೆಚ್ಚಾಗಿದ್ದುದರಿಂದ ಕಾರಕಲ ಎಂದು

ಹೆಸರಾಯಿತು. ಕಾಲಕ್ರಮದಲ್ಲಿ ಕಾರ್ಕಳ ಎಂಬ ಹೆಸರು ಉಳಿದು ಬಂತು. ಭೈರರಸರು (ನೋಡಿ) ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ನಗರ ಪ್ರಸಿದ್ಧ ಕಲಾಕ್ಷೇತ್ರವೂ ತೀರ್ಥಕ್ಷೇತ್ರವೂ ಆಗಲು ಅವರ ಕೊಡುಗೆ ಅಪಾರವಾದುದು. ಅವರ ಕಾಲದಲ್ಲಿ ಸಾಕಷ್ಟು ಜೈನಸಾಹಿತ್ಯದ ರಚನೆಯಾಯಿತು. ಭೈರರಸರ ರಾಜಗುರುವಾಗಿದ್ದ ಕಲ್ಯಾಣಕೀರ್ತಿ (ಸು.1440) ಜ್ಞಾನಚಂದ್ರಾಭ್ಯುದಯ, ಚಿನ್ಮಯ ಚಿಂತಾಮಣಿ ಮೊದಲಾದ ಹತ್ತು ಗ್ರಂಥಗಳನ್ನು ರಚಿಸಿದ್ದಾನೆ. ಬಾಹುಬಲಿಯ (ಸು.1560) ನಾಗಕುಮಾರ ಚರಿತೆ, ಚದುರಚಂದ್ರಮನ ಮದನಾರಿ ಕುಮ್ಮಟಸ್ವಾಮಿ ಚರಿತೆ ಗಮನಾರ್ಹ ಕೃತಿಗಳು. ಲಲಿತಕೀರ್ತಿ, ಯಶಃಕೀರ್ತಿ, ಶಾಂತಿಕೀರ್ತಿ, ವರ್ಧಮಾನ, ನಾಗಚಂದ್ರ ಮೊದಲಾದವರು ಭೈರರಸರ ಆಶ್ರಿತ ಕವಿಗಳಾಗಿದ್ದರು. ನವೋದಯ ಸಾಹಿತ್ಯದ ಆರಂಭ ಕಾಲದ ಕೃತಿಕಾರರಲ್ಲಿ ಎಂ.ಎನ್.ಕಾಮತ್ (ನೋಡಿ) ಹೆಸರು ಉಲ್ಲೇಖನೀಯ. ಇದಲ್ಲದೆ ವಿ.ಎನ್.ಕುಡ್ವ, ರಾಘವೇಂದ್ರ ಸುಬ್ಬರಾವ್ ಮೂಡಕಟ್ಟೆ, ಐ.ಕೆ.ಪಿ. ಶರ್ಮ, ಕೆ.ಶ್ರೀನಿವಾಸ, ಕಿಣಿ ಮೊದಲಾದ ಲೇಖಕರು ಸಾಹಿತ್ಯ ರಚಿಸಿದ್ದಾರೆ.

ಕಾರ್ಕಳ ಕ್ಷೇತ್ರವನ್ನು 1972 ರಿಂದಲೂ ಪ್ರತಿನಿಧಿಸುತ್ತಿದ್ದ ಎಂ.ವೀರಪ್ಪಮೊಯ್ಲಿ (ನೋಡಿ) ಕರ್ನಾಟಕದ ಮುಖ್ಯಮಂತ್ರಿಯಾಗಿ (1992-1994) ಸೇವೆ ಸಲ್ಲಿಸಿರುವರು. ರಾಜಕಾರಣಿಯಾಗಿಯೂ ಸೃಜನಶೀಲ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ರಚಿಸಿದ ಕೊಟ್ಟ (1993) ಕಾದಂಬರಿ ಕೊರಗ ಜನಾಂಗದ ಬದುಕು ಬವಣೆಗಳನ್ನು ಚಿತ್ರಿಸುತ್ತದೆ. ಜೈನಕಾಶಿ ಎಂದು ಪ್ರಸಿದ್ಧವಾದ ಮೂಡಬಿದರೆ (ನೋಡಿ) ಈ ತಾಲ್ಲೂಕಿನಲ್ಲಿದೆ. ಸೋಮೇಶ್ವರ ಇನ್ನೊಂದು ಮುಖ್ಯ ಸ್ಥಳ. ಮುದ್ದಣಕವಿ ಹುಟ್ಟಿದ ನಂದಳಿಕೆ ಗ್ರಾಮ ಇರುವುದೂ ಈ ತಾಲ್ಲೂಕಿನಲ್ಲಿ. ಯಕ್ಷಗಾನಕ್ಕೆ ಈ ಪ್ರದೇಶದಲ್ಲಿ ಒಳ್ಳೆಯ ಪ್ರೋತ್ಸಾಹವಿದೆ.

ಕಾರ್ಕಳ ಈ ತಾಲ್ಲೂಕಿನ ಮುಖ್ಯ ಸ್ಥಳ. ಮಂಗಳೂರಿನ ಈಶಾನ್ಯಕ್ಕೆ 52ಕಿಮೀ ದೂರದಲ್ಲಿದೆ. ಉಡುಪಿಯ ಆಗ್ನೇಯ ದಿಕ್ಕಿನಲ್ಲಿದೆ. ಉಡುಪಿ, ಮಂಗಳೂರು, ಆಗುಂಬೆ, ಕುಂದಾಪುರ, ಮೂಡಬಿದರೆ, ಬಂಟ್ವಾಳ, ಶೃಂಗೇರಿ ಮತ್ತು ಬೆಳ್ತಂಗಡಿಗಳೊಡನೆ ರಸ್ತೆಸಂಪರ್ಕವೂ ಬಸ್ ಸೌಕರ್ಯಗಳೂ ಇವೆ. ಇಲ್ಲಿನ ಜನಸಂಖ್ಯೆ 25118. ಸಂಸ್ಕೃತ ಮತ್ತು ಆಯುರ್ವೇದದಲ್ಲಿ ಉಚಿತ ಶಿಕ್ಷಣ ನೀಡುವ ಭುವನೇಂದ್ರ ಸಂಸ್ಕೃತ ಕಾಲೇಜು, ಒಂದು ಕಲಾ ಮತ್ತು ವಿಜ್ಞಾನ ಕಾಲೇಜು ಇಲ್ಲಿವೆ. ಬೀಡಿ ಮತ್ತು ನಶ್ಯದ ತಯಾರಿಕೆ ಊರಿನ ಪ್ರಮುಖ ಉದ್ಯಮಗಳಲ್ಲೊಂದು. ಮಳೆ ಅಧಿಕವಾಗಿರುವ ಪ್ರದೇಶ ಎನ್ನುವುದರಿಂಲೂ ಈ ಊರಿಗೆ ಕಾರ್ಕಳ ಎಂಬ ಹೆಸರು ಬಂದಿದೆಯೆನ್ನಲಾಗಿದೆ. ಕಾರ್ಕಳ ಐತಿಹಾಸಿಕ ಪ್ರಾಮುಖ್ಯವುಳ್ಳ ಸ್ಥಳ. ಪಾಂಡ್ಯನಗರಿ ಎಂದು ಹೆಸರು ತಳೆದಿದ್ದ ಕಾರ್ಕಳದ ಉಲ್ಲೇಖವನ್ನುಳ್ಳ ಮೊತ್ತಮೊದಲಿನ ಶಾಸನ 1333ರದು. ಕಳಸ ರಾಜವಂಶದ ಭೈರರಸರ ಆಳಿಕೆಗೆ ಸೇರಿದ್ದ ಈ ಪಟ್ಟಣ ಅವರ ರಾಜಧಾನಿಗಳಲ್ಲೊಂದಾಗಿತ್ತು. ಭೈರರಸವಂಶದವರು ಜೈನ ಧರ್ಮೀಯರಾಗಿದ್ದುದರಿಂದ ಇಲ್ಲಿ ಅನೇಕ ಜೈನಬಸದಿಗಳೂ ಜೈನರ ಮಠವೂ ಇವೆ. ಕೆಲವು ಪ್ರಸಿದ್ಧ ಹಿಂದು ದೇವಾಲಯಗಳೂ ಈ ರಾಜರ ಆಶ್ರಯದಲ್ಲಿ ಸ್ಥಾಪಿತವಾದುವು. ಇಲ್ಲಿರುವ ಅನಂತಶಯನ ದೇವಾಲಯವನ್ನು ಭೈರರಸ ವಂಶದಲ್ಲಿ ಪ್ರಮುಖನಾದ ಇಮ್ಮಡಿ ಭೈರವ 1567ರಲ್ಲಿ ಸ್ಥಾಪಿಸಿದುದಾಗಿ ಐತಿಹ್ಯವಿದ್ದರೂ ಅದರಲ್ಲಿರುವ ಪ್ರತಿಮೆಗಳು 12-13ನೆಯ ಶತಮಾನಗಳ ಕೃತಿಗಳಂತೆ ಕಂಡುಬರುತ್ತವೆ. ತ್ರಿಭುವನ ಜಿನ ಚೈತ್ಯಾಲಯವೆಂದು ಹೆಸರು ಪಡೆದಿದ್ದ ಮತ್ತು ಈಗ ಚತುರ್ಮುಖ ಬಸದಿಯೆಂದು ಕರೆಯುವ ಜೈನಮಂದಿರ ನಿರ್ಮಿತವಾದ್ದೂ ಈ ರಾಜನ ನೇತೃತ್ವದಲ್ಲೇ (1545). ಕಾರ್ಕಳದಲ್ಲಿರುವ 42' ಎತ್ತರದ ಗೊಮ್ಮಟೇಶ್ವರ ವಿಗ್ರಹವನ್ನು 1432ರಲ್ಲಿ ವೀರಪಾಂಡ್ಯ ಸ್ಥಾಪಿಸಿದ. ಆ ಸಂದರ್ಭದಲ್ಲಿ ವಿಜಯನಗರದ ದೊರೆ ಇಮ್ಮಡಿ ದೇವರಾಯ ಇಲ್ಲಿಗೆ ಬಂದುದಾಗಿ ಹೇಳಲಾಗಿದೆ. ಇದೊಂದು ಏಕಶಿಲಾವಿಗ್ರಹ. ಶ್ರವಣಬೆಳಗೊಳದ ಗೊಮ್ಮಟ ವಿಗ್ರಹದಂತೆ ಇದೂ ಸುಂದರವಾಗಿದೆ. ಇದರ ಎದುರು 1437ರಲ್ಲಿ ಸ್ಥಾಪಿತವಾದ ಬ್ರಹ್ಮದೇವರ ಕಂಬದ ಮೇಲೆ ಆಕರ್ಷಕ ಬ್ರಹ್ಮವಿಗ್ರಹವಿದೆ. ಕಾರ್ಕಳದಲ್ಲಿರುವ ಮಾನಸ್ತಂಭಗಳು ಉತ್ತಮ ಕಲಾಕೃತಿಗಳು. ಚತುರ್ಮುಖ ಬಸದಿಯ ನಾಲ್ಕು ಮೂಲೆಗಳಲ್ಲಿ ಅರ-ಮಲ್ಲ ಮುನಿ ಸುವ್ರತರ -ಶಿಲಾಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದಲ್ಲದೆ 15-16ನೆಯ ಶತಮಾನದ ಆದಿಭಾಗದಲ್ಲಿ ಜೈನಧರ್ಮಕ್ಕೆ ಸೇರಿದ ಲಲಿತಕೀರ್ತಿ ಭಟ್ಟಾರಕರ ಮಠ ಇಲ್ಲಿ ಸ್ಥಾಪಿತವಾಯಿತು. ಇಲ್ಲಿರುವ ಅನಂತಪದ್ಮನಾಭ ಮೂರ್ತಿ ದಕ್ಷಿಣ ಭಾರತದಲ್ಲೇ ವಿಶಿಷ್ಟವಾದ್ದು. ವಿಜಯನಗರದ ಕಾಲಕ್ಕೆ ಸೇರಿದ ಕಾಳಿಕಾಂಬಾ ದೇವಾಲಯ ಮತ್ತೊಂದು ಮುಖ್ಯ ಮಂದಿರ. ಇದರ ಮೂಲ ವಿಗ್ರಹ ಬಹಳ ಸುಂದರವಾಗಿದೆ. ಕಾರ್ಕಳದಲ್ಲಿ ಒಂದು ವೆಂಕಟರಮಣ ದೇವಾಲಯವೂ ಇದೆ. (ಎಸ್.ಎಸ್.)



ನೇಮಿನಾಥ ಬಸದಿಯ ಮಾನಸ್ತಂಭ, ಕಾರ್ಕಳ

ಆನೆಕೆರೆಯ ಚತುರ್ಮುಖ ಬಸದಿ (1545), ಹಿರಿಯಂಗಡಿಯ ನೇಮಿನಾಥ ಬಸದಿಯ 50' ಎತ್ತರದ ಮಾನಸ್ತಂಭ (1334), ಪೆರುವಾಜೆಯ ಚೋಳ ಶೈಲಿಯ ಮಹಲಿಂಗೇಶ್ವರ ದೇವಾಲಯ (12ನೆಯ ಶತಮಾನ), ಕುಕ್ಕುಂದೂರಿನ ಮಹಿಷಮರ್ದಿನಿ (12ನೆಯ ಶತಮಾನ), ಕಾಪೆಟ್ಟಿನ ಕೃಷ್ಣದೇವಾಲಯ (12ನೆಯ ಶತಮಾನ), ಕೆರೆವಸೆಯ ಹೊಯ್ಸಳ ಶೈಲಿಯ ಎರಡು ಜೈನ ಬಸದಿಗಳು, ಟಿಪ್ಪುವಿನ ಕಾಲದ ಮಣ್ಣಿನ ಕೋಟೆ ಮತ್ತು ಪರ್ಪಲದಲ್ಲಿರುವ ಪ್ರಾಚೀನ ಇಗರ್ಜಿ - ಸೇಂಟ್-ಲೋರೆನ್ಸ್ ಇವು ಸಮೀಪದಲ್ಲಿರುವ ಇತರ ಪ್ರಮುಖ ಐತಿಹಾಸಿಕ ನಿರ್ಮಾಣಗಳು. (ಆರ್.ಟಿ.ಎಸ್.)

**ಕಾರ್ನಾಡು, ಸದಾಶಿವರಾವ್ :** 1881-1937. ದಕ್ಷಿಣ ಕನ್ನಡ ಜಿಲ್ಲೆಯ ಒಬ್ಬ ಪ್ರಮುಖ ನ್ಯಾಯವಾದಿ, ಸಮಾಜಸೇವಕ, ಸ್ವಾತಂತ್ರ್ಯ ಹೋರಾಟಗಾರ. 1891ರಲ್ಲಿ ಮಂಗಳೂರಿನಲ್ಲಿ ಜನಿಸಿದರು. ತಂದೆ ಕಾರ್ನಾಡು ರಾಮಚಂದ್ರರಾವ್ ಮಂಗಳೂರಿನ ಪ್ರಮುಖ ವಕೀಲರು; ಸದ್ಗುಣಿಯೆಂದೂ ಸ್ವತಂತ್ರ ಧೋರಣೆಯುಳ್ಳ ಸತ್ಯನಿಷ್ಠರೆಂದೂ ಪ್ರಸಿದ್ಧರಾಗಿದ್ದರು. ತಾಯಿ ರಾಧಾಬಾಯಿ. ಸದಾಶಿವರಾಯರು

ಮಂಗಳೂರಿನಲ್ಲೇ ಪ್ರಾರಂಭಿಕ ಶಿಕ್ಷಣ ಪಡೆದರು. ಮುಂದೆ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಪದವೀಧರರಾದರು. ಮುಂಬಯಿಯಲ್ಲಿ ನ್ಯಾಯಶಾಸ್ತ್ರ ಪದವಿಗಳಿಸಿ ಮಂಗಳೂರಿನಲ್ಲಿ 1906ರಲ್ಲಿ ವಕೀಲಿಯನ್ನಾರಂಭಿಸಿದರು.

ಇವರು ಬಲು ಬೇಗ ವೃತ್ತಿಜೀವನದಲ್ಲಿ ಯಶಸ್ಸು ಗಳಿಸಿದರಾದರೂ ಇವರ ಮನಸ್ಸು ದೇಶದ ಉನ್ನತಿಗಾಗಿ ಸದಾ

ತುಡಿಯುತ್ತಿತ್ತು. ಸ್ತ್ರೀಯರ ಪ್ರಗತಿಗಾಗಿ ಮಹಿಳಾ ಸಭಾ ಎಂಬ ಸಂಸ್ಥೆಯೊಂದನ್ನು ಪ್ರಾರಂಭಿಸಿದರು. ಇವರೂ ಇವರ ಪತ್ನಿ ಶಾಂತಾಬಾಯಿ ಯವರೂ ಆ ಸಂಸ್ಥೆಯ ಆಶ್ರಯದಲ್ಲಿ ಮಹಿಳೆಯರಿಗೆ ಉಪಯುಕ್ತವಾದ ಕೆಲಸಗಳನ್ನು ಕಲಿಸಿಕೊಡುತ್ತಿದ್ದರು. ದೇಶದಲ್ಲಿ ಸ್ವಾತಂತ್ರ್ಯಚಳವಳಿ ತೀವ್ರವಾದಾಗ ಯುವಕರಿಗೆ ರಾಷ್ಟ್ರೀಯ ಶಿಕ್ಷಣವನ್ನು ನೀಡುವತ್ತ ಇವರ ಮನಸ್ಸು ಹರಿಯಿತು. ಇವರು ತಿಲಕ್ ವಿದ್ಯಾಲಯ ಎಂಬ ರಾಷ್ಟ್ರೀಯ ವಿದ್ಯಾಶಾಲೆ ಯನ್ನಾರಂಭಿಸಿದರು. ಹಿಂದಿಯ ಜೊತೆಗೆ ಅಲ್ಲಿ ನೂಲುವುದು, ನೇಯುವುದು ಮುಂತಾದ ಉಪಯುಕ್ತ ಕೈಕಸಬುಗಳನ್ನೂ ಬೋಧಿಸಲಾಗುತ್ತಿತ್ತು.

ರಚನಾತ್ಮಕ ಕಾರ್ಯಗಳಲ್ಲೆ ಅಲ್ಲದೆ ಇವರು ಸ್ವಾತಂತ್ರ್ಯ ಚಳುವಳಿಯಲ್ಲೂ ನೇರವಾಗಿ ಭಾಗವಹಿಸಿದರು. ಗಾಂಧೀಜಿ ಸತ್ಯಾಗ್ರಹ ಚಳವಳಿಯನ್ನಾರಂಭಿಸಿದಾಗ ಕರ್ನಾಟಕದಲ್ಲಿ ಅದರ ಪ್ರತಿಜ್ಞೆಗೆ ಸಹಿಹಾಕಿದವರಲ್ಲಿ ಇವರು ಮೊದಲಿಗರು. ಇವರು ಆ ಚಳವಳಿಯಲ್ಲಿ ಧುಮುಕಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ಸು ಬಲಗೊಂಡಿತು. ದಕ್ಷ ಹಾಗೂ ನಿಷ್ಠಾವಂತ ಸತ್ಯಾಗ್ರಹಿಗಳ ತರಬೇತಿಗಾಗಿ ಇವರು ಧಾರಾಳವಾಗಿ ಹಣ ಸುರಿದರು.

ಹಲವು ವರ್ಷಗಳ ಕಾಲ ಇವರು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರೂ ಆಗಿದ್ದರಲ್ಲದೆ 1931-34ರಲ್ಲಿ ಅದರ ಅಧ್ಯಕ್ಷರೂ ಆಗಿದ್ದರು. ಇವರ ಖ್ಯಾತಿ ಅಖಿಲಭಾರತ ಮಟ್ಟಕ್ಕೂ ಏರಿತು. ಇವರು ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾದರು.

ಮಹಾತ್ಮ ಗಾಂಧೀಯವರ ಅಚ್ಚುಮೆಚ್ಚಿನ ಅನುಯಾಯಿ ಗಳಲ್ಲೊಬ್ಬರಾಗಿದ್ದ ಇವರು ಗಾಂಧೀಯವರು ಆರಂಭಿಸಿದ ಉಪ್ಪಿನ ಸತ್ಯಾಗ್ರಹ ಸಮಯದಲ್ಲಿ ವೈಯಕ್ತಿಕ ಸತ್ಯಾಗ್ರಹಿಯಾಗಿ ದಸ್ತಗಿರಿಯಾಗಿ ಕಾರಾಗೃಹವಾಸವನ್ನನುಭವಿಸಿದರು. 1937ರಲ್ಲಿ ಫೈಜ್‍ಪುರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದಾಗ ಇವರ ಆರೋಗ್ಯ ಕೆಟ್ಟಿತು. 1937 ಜನವರಿ 9ರಂದು ಮುಂಬಯಿಯಲ್ಲಿ ನಿಧನರಾದರು.

ಇವರು ಐಶ್ವರ್ಯವಂತರ ಮನೆತನದಲ್ಲಿ ಹುಟ್ಟಿ ಬೆಳೆದವರಾದರೂ ದೀನದಲಿತರ ಬಗ್ಗೆ ಸದಾ ಅನುಕಂಪ ಹೊಂದಿದ್ದರು. ಅವರ ಉದ್ಧಾರಕ್ಕಾಗಿ ಬಹಳ ಶ್ರಮಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಜಸುಧಾರಕರ ದೊಡ್ಡ ಪಡೆಯನ್ನೇ ಕಟ್ಟಿದ್ದರು. ಮಹಿಳೆಯರ ಪ್ರಗತಿಗಾಗಿಯೂ ರಾಷ್ಟ್ರೀಯ ಶಿಕ್ಷಣಕ್ಕಾಗಿಯೂ ಇವರು ಕಟ್ಟಿದ ಸಂಸ್ಥೆಗಳು ತುಂಬ ಯಶಸ್ವಿಯಾಗಿ ಕೆಲಸ ಮಾಡಿದುವು. ಹರಿಜನೋದ್ಧಾರ ಕಾರ್ಯದಲ್ಲಿ ಇವರು ಕೊನೆಯವರೆಗೂ ನಿರತರಾಗಿದ್ದರು. ಇವರು ಕೆನರಾ ಸಾರಸ್ವತ ಸಂಘದ ಅಧ್ಯಕ್ಷರೂ ಆಗಿದ್ದರು (1924-25).

ಇವರು ಸರಸಿ, ಸರಳ ಜೀವಿ. ಮಹಾತ್ಮ ಗಾಂಧೀಯವರಿಗೆ ಇವರಲ್ಲಿ ತುಂಬ ವಿಶ್ವಾಸವಿತ್ತು. ಬೆಂಗಳೂರಿನಲ್ಲಿ ಸೇರಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅರವತ್ತೈದನೆಯ ಅಧಿವೇಶನದ (1960) ಸ್ಥಳಕ್ಕೆ ಸದಾಶಿವನಗರ ಎಂದು ಹೆಸರಿಡಲಾಗಿತ್ತು. ಈಗ ಬೆಂಗಳೂರಿನಲ್ಲಿ ಇವರ ಹೆಸರಿನ ಒಂದು ಬಡಾವಣೆ ಇದೆ. (ಎಚ್.ಎಸ್.ಕೆ.)

**ಕಾರ್ಮಿಕ ಸಂಘಟನೆ ಮತ್ತು ಕಲ್ಯಾಣ :** ಭಾರತದಲ್ಲಿ ಕಾರ್ಮಿಕ ಸಂಘಟನೆ ಪ್ರಾರಂಭವಾದದ್ದು ಬಹಳ ವಿಳಂಬವಾಗಿ. ಕರ್ನಾಟಕ ರಾಜ್ಯದಲ್ಲೂ ಅದು ಪ್ರಾರಂಭವಾದ್ದದ್ದು ತಡವಾಗಿಯೇ. ಇಂದು ಸಂಘಟನೆ ಹಾಗೂ ಕಲ್ಯಾಣಕಾರ್ಯಗಳು ಬಿರುಸಿನಿಂದ ನಡೆಯುತ್ತಿವೆ. ಒಳ್ಳೆಯ ತಳಹದಿಯ ಮೇಲೆ ವ್ಯವಸ್ಥಿತವಾಗುತ್ತಿವೆ. ಕಳೆದ ಶತಮಾನದಿಂದ ಏಳ್ಗೆಗೊಳ್ಳುತ್ತಿರುವ ಈ ಚಟುವಟಿಕೆಯ ಇತಿವೃತ್ತ ಮತ್ತು ಅದರ ಇಂದಿನ ಸ್ಥಿತಿಗಳು ಕರ್ನಾಟಕದ ಆರ್ಥಿಕತೆಯ ಅಧ್ಯಯನದ ಒಂದು ಮುಖ್ಯಾಂಗವಾಗಿದೆ. ಇದಕ್ಕೆ ಸಂಬಂಧಿಸಿದ ವಿಷಯಗಳ ಸಮೀಕ್ಷೆಯನ್ನು ಈ ಲೇಖನದಲ್ಲಿ ಇತಿಹಾಸ, ಬೆಳವಣಿಗೆ, ಆರ್ಥಿಕ ಸ್ಥಿತಿಗತಿ, ರಚನೆ ಮತ್ತು ಆಡಳಿತ, ಕಾರ್ಮಿಕ ಕಲ್ಯಾಣ ಎಂಬ ವಿಭಾಗಗಳಲ್ಲಿ ವಿಂಗಡಿಸಿಕೊಡಲಾಗಿದೆ.

**ಇತಿಹಾಸ :** ಕರ್ನಾಟಕದಲ್ಲಿ 1920ರವರೆಗೂ ಯಾವ ಕಾರ್ಮಿಕ ಸಂಘಗಳೂ ಸ್ಥಾಪನೆಗೊಂಡಿರಲಿಲ್ಲ. 1884ರಲ್ಲಿ ಮೊತ್ತಮೊದಲು ಬೆಂಗಳೂರಿನಲ್ಲಿ ಒಂದು ದೊಡ್ಡ ಹತ್ತಿಬಟ್ಟೆ ಗಿರಣಿ ಸ್ಥಾಪಿತವಾದರೂ ಅಲ್ಲಿ ಕಾರ್ಮಿಕ ಸಂಘಟನೆಯ ಚಟುವಟಿಕೆಗಳೇ ಇರಲಿಲ್ಲ. 1920ರಲ್ಲಿ ಕಾರ್ಮಿಕರ ಒಂದು ದುರ್ಬಲ ಪ್ರತಿಕ್ರಿಯೆ ರೂಪುಗೊಂಡಿತು. ಇದೂ ಒಂದು ಸುಸಂಘಟಿತ ಚಟುವಟಿಕೆಯ ರೂಪವನ್ನೇನೂ ತಳೆಯಲಿಲ್ಲ. ಅದು ಉದ್ಯಮಿಗಳ ವಿರುದ್ಧ ಕೇವಲ ತಾತ್ಕಾಲಿಕ ಪ್ರತಿಭಟನೆಯಾಗಿತ್ತು. ಕರ್ನಾಟಕದ ವಿಳಂಬಿತ ಕೈಗಾರಿಕೀಕರಣ ಪ್ರಾರಂಭ ಕಾಲದಲ್ಲಿ ಕಾರ್ಮಿಕರ ಪೂರೈಕೆಯಲ್ಲಿ ವಿರಳತೆಯಿದ್ದುದರಿಂದ ಉದ್ಯಮಶೀಲರು ಅವರಿಗೆ ಬೇಕಾದ ಎಲ್ಲ ಅನುಕೂಲಗಳನ್ನೂ ಒದಗಿಸಲು ತಯಾರಿದ್ದರು. ಕಾರ್ಮಿಕರಲ್ಲಿ ಭಾಷೆ, ವ್ಯವಹಾರ, ನಡವಳಿಕೆ ಇತ್ಯಾದಿಗಳಲ್ಲಿ ವಿಭಿನ್ನತೆಯಿತ್ತು. ಕಾರ್ಮಿಕರ ಸಂಘಟನೆಗೆ ಅನುಕೂಲಕರವಾದ ಕಾನೂನುಗಳಿರಲಿಲ್ಲ, ಆದ್ದರಿಂದ ಸಂಘಟನೆ ಬೆಳೆಯಲಿಲ್ಲ. 1926ರಲ್ಲಿ ಕೇಂದ್ರದ ಕಾರ್ಮಿಕ ಸಂಘಗಳ ಕಾನೂನು ಜಾರಿಗೆ ಬಂತು. ಸುಮಾರು ಆ ಕಾಲದಲ್ಲಿ ಕರ್ನಾಟಕದಲ್ಲೂ ಕಾರ್ಮಿಕ ಸಂಘಟನೆಯ ಪ್ರಯತ್ನಗಳು ನಡೆದವು. 1926 ರಿಂದ 1942ರವರೆಗೆ ಅನೇಕ ಜವಳಿ ಗಿರಣಿಗಳಲ್ಲಿ ಕಾರ್ಮಿಕ ಸಂಘಗಳು ದಿವಂಗತ ಕೆ.ಟಿ.ಭಾಷ್ಯಂ ಅವರಂತಹ ರಾಜಕೀಯ ಮುಂದಾಳುಗಳ ಪ್ರಯತ್ನದ ಫಲವಾಗಿ ಅಸ್ತಿತ್ವಕ್ಕೆ ಬಂದುವು. ಆದರೆ ಈ ಸಂಘಗಳೆಲ್ಲವೂ 1924ರವರೆಗೆ ಕಾನೂನಿನ ಬೆಂಬಲವಿಲ್ಲದೆ ಸಮಾಜಸೇವಾ ಸಂಸ್ಥೆಗಳಂತೆ ಕೆಲಸ ಮಾಡುತ್ತಿದ್ದು ಸಹಕಾರ ಸಂಘಗಳ ಕಾನೂನಿನ ವ್ಯಾಪ್ತಿಯಲ್ಲಿ ನೋಂದಣಿಯಾದ ಸಂಸ್ಥೆಗಳಾಗಿದ್ದುವು. 1942ರಲ್ಲಿ ಮೈಸೂರು ರಾಜ್ಯದ ಕಾರ್ಮಿಕ ಸಂಘಗಳ ನಿಬಂಧನೆಗಳು ಎಂಬ ಹೆಸರಿನಲ್ಲಿ ರಾಜ್ಯಕ್ಕೆ ಅನ್ವಯಿಸಿದ 1926ರ ಕೇಂದ್ರದ ಕಾರ್ಮಿಕ ಸಂಘಗಳ ಕಾನೂನಿಂದ ಕರ್ನಾಟಕದಲ್ಲಿ ಕಾರ್ಮಿಕರ ಸಂಘಗಳ ಬೆಳವಣಿಗೆಗೆ ಅಂಕುರಾರ್ಪಣವಾಯಿತು. ಹಿಂದಿದ್ದ ಸಂಸ್ಥೆಗಳು ಕಾರ್ಮಿಕ ಸಂಘಗಳಾದುವು.

ಕರ್ನಾಟಕದ ಕಾರ್ಮಿಕ ಸಂಘಗಳು ಎರಡು ಮಹಾಯುದ್ಧಗಳ ಮಧ್ಯಂತರದಲ್ಲಿ ತಮ್ಮ ಸದಸ್ಯರುಗಳ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದಕ್ಕೆ ಹಾಗೂ ತಮಗೆ ಕಾನೂನಿನ ಮಾನ್ಯತೆಯನ್ನು ಪಡೆದುಕೊಳ್ಳುವುದಕ್ಕೆ ಚಳುವಳಿಗಳನ್ನು ನಡೆಸಿದವು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಹಾಗೂ ಅದು ಮುಕ್ತಾಯವಾದ ತರುವಾಯ ರಾಜ್ಯದಲ್ಲಿನ ಕೈಗಾರಿಕಾ ಸಂಸ್ಥೆಗಳು ರಾಷ್ಟ್ರದ ಇತರ ಪ್ರಾಂತ್ಯಗಳ ಸಂಸ್ಥೆಗಳಂತೆ ಅಧಿಕ ಲಾಭ ಗಳಿಸಿದರೂ ಅವುಗಳ ಮಾಲೀಕರು ತಮ್ಮ ಕಾರ್ಮಿಕರಿಗೆ ಹೆಚ್ಚಿನ ವೇತನವನ್ನಾಗಲೀ ಬೋನಸ್ಸನ್ನಾಗಲೀ ಕೊಡಲು ನಿರಾಕರಿಸಿದುದು ಮತ್ತು ಇದೇ ಕಾಲದಲ್ಲಿ ಪದಾರ್ಥಗಳ ಬೆಲೆಗಳು ತೀವ್ರವಾಗಿ ಏರಿ ಕಾರ್ಮಿಕರ ಸ್ಥಿತಿಗತಿಗಳು ಹದಗೆಟ್ಟುದು ಮುಂತಾದ ಕಾರಣಗಳಿಂದ ಅಸಮಾಧಾನಗೊಂಡ ರಾಜ್ಯದ ಕಾರ್ಮಿಕರು 1920ರಲ್ಲಿ ಒಟ್ಟುಗೂಡಿ ಮುಷ್ಕರ ಪ್ರಾರಂಭಿಸಿದರು. ಬೆಂಗಳೂರಿನ ಬಿನ್ನಿಮಿಲ್ ಕೆಲಸಗಾರರಿಗೇ ಆಡಳಿತದವರು ಬೋನಸ್ಸನ್ನು ಕೊಡಲು ನಿರಾಕರಿಸಿದುದರಿಂದ ಭಾಷ್ಯಂರವರ ನೇತೃತ್ವದಲ್ಲಿ ಅವರು ಒಂದು ಮುಷ್ಕರ ಪ್ರಾರಂಭಿಸಿದರು. ಇದರಿಂದ ಬೆಂಗಳೂರಿನ ಇತರ ಮುಖ್ಯ ಜವಳಿ ಗಿರಣಿಗಳಲ್ಲೂ ಮಿನರ್ವ

ಮಿಲ್ ಮತ್ತು ಕೃಷ್ಣ ಮಿಲ್‌ಗಳಲ್ಲೂ ಕಾರ್ಮಿಕ ಸಂಘಗಳು ಪ್ರಾರಂಭವಾದುವು. ರಾಜ್ಯದ ಜವಳಿ ಗಿರಣಿ ಕಾರ್ಮಿಕರೆಲ್ಲರೂ ಒಟ್ಟುಗೂಡಿ ತಮ್ಮದೇ ಆದ ಒಂದು ಪ್ರಬಲ ಕಾರ್ಮಿಕ ಸಂಘವನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯಕ್ಕೆ ಮನ್ನಣೆ ದೊರಕಿದಂತಾಯಿತು.

ಆದರೂ 1926 ರಿಂದ 1942ರವರೆಗಿನ ಕಾಲ ಕರ್ನಾಟಕದ ಕಾರ್ಮಿಕ ಸಂಘಟನೆಯ ದೃಷ್ಟಿಯಿಂದ ಬಲು ತ್ರಾಸದಾಯಕ ಕಾಲವಾಗಿತ್ತೆಂದೇ ಹೇಳಬೇಕು. ಈ ಕಾಲದಲ್ಲಿ ಕೈಗಾರಿಕಾ ಹಿಂಜರಿತ ಉಂಟಾಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕರ ಉಚ್ಚಾಟನೆ ವ್ಯಾಪಕವಾಗಿ ಪ್ರಾರಂಭವಾಯಿತು. ಇದರಿಂದ ಕೈಗಾರಿಕಾ ಮುಷ್ಕರಗಳು ಮತ್ತು ಬೀಗಮುದ್ರೆಗಳು ಪ್ರಾರಂಭವಾದುವಲ್ಲದೆ, ಕಾರ್ಮಿಕರಿಗೆ ಹಿಂಜರಿತದ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೇಡಿಕೆಯಿರಲಿಲ್ಲವಾಗಿ ಮುಷ್ಕರಗಳಲ್ಲಿ ಕಾರ್ಮಿಕರು ಅಪಜಯ ಗಳಿಸಬೇಕಾಯಿತು. ಈ ಕಾರಣದಿಂದ ಕೈಗಾರಿಕೆಯ ಮಟ್ಟದಲ್ಲಿ ಕಾರ್ಮಿಕರ ಪ್ರಬಲ ಸಂಘಟನೆಯ ಆವಶ್ಯಕತೆಯ ತೀವ್ರತೆಯ ಅರಿವಾಗಿ ಬೆಂಗಳೂರು ಜವಳಿ ಕಾರ್ಮಿಕರ ಸಂಘ 1929 ರಲ್ಲಿ ಕೆ.ಟಿ. ಭಾಷ್ಯಂ ಅವರ ನಾಯಕತ್ವದಲ್ಲಿ ಸ್ಥಾಪಿಸಲ್ಪಟ್ಟಿತು. ಕ್ರಮೇಣ ಈ ಸಂಘ ಪ್ರಬಲವಾಯಿತು. ಸರ್ಕಾರದ ಗಮನವನ್ನು ಸೆಳೆಯಿತು. ಈ ಸಂಘದ ಬೆಂಬಲದಿಂದ ಬಿನ್ನಿ ಮಿಲ್ ಮತ್ತು ಮಿನರ್ವ ಮಿಲ್ ಕಾರ್ಮಿಕರು ಬೇರೆ ಬೇರೆಯಾಗಿ ಮುಷ್ಕರಗಳನ್ನು ಹೂಡಿ ಜಯ ಗಳಿಸಿದರು. ಈ ಎರಡು ಮುಷ್ಕರಗಳಲ್ಲೂ ಮೊದಲು ಕಾರ್ಮಿಕರ ಮುಂದಾಳುಗಳನ್ನು ದಸ್ತಗಿರಿ ಮಾಡಿ ಮುಷ್ಕರಗಳನ್ನು ನಿಷ್ಕ್ರಿಯಗೊಳಿಸಲು ಸರ್ಕಾರ ಪ್ರಯತ್ನಿಸಿತಾದರೂ ಅಂತಿಮವಾಗಿ ಕಾರ್ಮಿಕರೇ ಜಯಗಳಿಸಿದರು. ಹೀಗೆ ಬೆಂಗಳೂರು ಜವಳಿ ಗಿರಣಿ ಕಾರ್ಮಿಕರ ಸಂಘದ ಚಟುವಟಿಕೆಗಳು ಗಮನಾರ್ಹವಾಗಿ ಬೆಳೆದುದರಿಂದ ಸರ್ಕಾರ ಇದರ ಪ್ರಭಾವವನ್ನು ಮೊಟಕುಗೊಳಿಸಲು ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕೆಂಬ ಅಂಶವನ್ನು ಮನಗಂಡು 1940ರಲ್ಲಿ ಕಾರ್ಮಿಕರ ಸಂಘಗಳಿಗೆ ಮಾನ್ಯತೆಯನ್ನು ಕೊಡುವುದರ ಬಗ್ಗೆ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿಯನ್ನು ಏರ್ಪಡಿಸುವುದರ ಬಗ್ಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡಬೇಕೆಂದು ಕೋರಿ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯ ಸಲಹೆಗಳಿಗನುಗುಣವಾಗಿ 1942ರಲ್ಲಿ ಮೈಸೂರು ಕಾರ್ಮಿಕರ ಸಂಘ ನಿಬಂಧನೆಗಳು ಎಂಬ ಕಾನೂನನ್ನು ಜಾರಿಗೆ ತಂದಿತು. ಈ ಕಾನೂನಿನ ಪ್ರಕಾರ, ಕೈಗಾರಿಕಾ ಮಟ್ಟದಲ್ಲಿ ಕಾರ್ಮಿಕರ ಸಂಘಸ್ಥಾಪನೆ ಬಹಿಷ್ಕರಿಸಲ್ಪಟ್ಟು ಕೈಗಾರಿಕಾಘಟಕದ ಮಟ್ಟದಲ್ಲಿ ಕಾರ್ಮಿಕ ಸಂಘ ಸ್ಥಾಪಿಸಲ್ಪಡುವುದಕ್ಕೆ ಪ್ರೋತ್ಸಾಹವನ್ನು ನೀಡಿತು. ಹೀಗೆ ಘಟಕಗಳ ಮಟ್ಟದಲ್ಲಿ ಸ್ಥಾಪಿಸಲ್ಪಟ್ಟ ಕಾರ್ಮಿಕ ಸಂಘಗಳು ನೋಂದಾವಣೆ ಮಾಡಿಸಿಕೊಳ್ಳಬೇಕೆಂಬ ನಿಯಮವನ್ನು ಜಾರಿಗೆತರಲಾಯಿತು.

1942ರ ಮೈಸೂರು ಕಾರ್ಮಿಕರ ಸಂಘಗಳ ನಿಬಂಧನೆ ಜಾರಿಗೆ ಬಂದುದರಿಂದ ಕಾರ್ಮಿಕ ಸಂಘಗಳ ಮೇಲೆ ಅನೇಕ ಅನಪೇಕ್ಷಣೀಯ ಪರಿಣಾಮಗಳುಂಟಾದುವು. ಕೈಗಾರಿಕಾಮಟ್ಟದಲ್ಲಿ ಸ್ಥಾಪಿತವಾದ ಬೆಂಗಳೂರು ಜವಳಿ ಕೈಗಾರಿಕೆಯ ಕಾರ್ಮಿಕರ ಸಂಘ ಅವಸಾನಕ್ಕೀಡಾಯಿತು. ಈ ಕಾರಣದಿಂದಲೇ ಮುಷ್ಕರಗಳಲ್ಲಿ ಕಾರ್ಮಿಕರು ಅಪಜಯವನ್ನನುಭವಿಸ ಬೇಕಾಯಿತು. ಕಾರ್ಮಿಕರಲ್ಲಿ ಒಡಕುಂಟಾಯಿತು. ಅವರ ಸಂಘಟನಾಶಕ್ತಿ ದುರ್ಬಲಗೊಂಡಿತು. ಆದರೆ ಕೈಗಾರಿಕಾಘಟಕಗಳ ಮಟ್ಟದಲ್ಲಿ ಕಾರ್ಮಿಕರ ಸಂಘಗಳು ಹೆಚ್ಚು ಪ್ರಮಾಣದಲ್ಲಿ ಸ್ಥಾಪಿತವಾದುವು. ಉದಾಹರಣೆಗೆ ಕೋಲಾರದ ಚಿನ್ನದಗಣಿ ಹಾಗೂ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳು ಸ್ಥಾಪಿತವಾದುವು. ಆದರೆ ರಾಜ್ಯದಲ್ಲಿ ಜವಳಿ ಅಂದು ಬಹುಮುಖ್ಯ ಕೈಗಾರಿಕೆಯಾಗಿದ್ದುದರಿಂದ ಆ ಕೈಗಾರಿಕೆಯ ಘಟಕಗಳಲ್ಲೂ ಕಾರ್ಮಿಕ ಸಂಘಗಳು ಹೆಚ್ಚಿನ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂದುವು. ಎರಡನೆಯ ಮಹಾಯುದ್ಧದಿಂದೀಚೆಗೆ, ಅದರಲ್ಲೂ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಎಂಜಿನಿಯರಿಂಗ್ ಕೈಗಾರಿಕೆ ಅಭಿವೃದ್ಧಿಗೊಂಡು ಆ ಕೈಗಾರಿಕೆಯ ಘಟಕಗಳಲ್ಲಿ ಕಾರ್ಮಿಕ ಸಂಘಟನೆಯ ಚಟುವಟಿಕೆಗಳು ಪ್ರಾರಂಭವಾದುವು. ಉದಾಹರಣೆಗೆ ಮೈಕೋ, ರೆಮ್ಕೋ, ಸರ್ಕಾರಿ ವಿದ್ಯುತ್ ಕಾರ್ಖಾನೆ, ಕೇಂದ್ರ ಸರ್ಕಾರದ ವತಿಯಿಂದ ಸ್ಥಾಪಿಸಲ್ಪಟ್ಟ ಹಿಂದೂಸ್ಥಾನ್ ಏರೋನಾಟಿಕ್ಸ್, ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಇತ್ಯಾದಿ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳು ಸ್ಥಾಪಿತವಾದುವು.

ಹೀಗೆ ಘಟಕಗಳ ಮಟ್ಟದಲ್ಲಿ ಬೆಳೆದ ಕಾರ್ಮಿಕ ಸಂಘಗಳಲ್ಲಿ ಜವಳಿ ಕೈಗಾರಿಕೆಯಲ್ಲಿನ ಕಾರ್ಮಿಕ ಸಂಘಗಳಂಥ, ಮೊದಲು ಅಭಿವೃದ್ಧಿಗೆ ಬಂದ, ಕಾರ್ಮಿಕ ಚಟುವಟಿಕೆಗಳಿಗೆ ರಾಜಕೀಯ ಧುರೀಣರು ಮಾರ್ಗದರ್ಶನ ನೀಡುತ್ತಿದ್ದರು. ಎಂಜಿನಿಯರಿಂಗ್ ಕೈಗಾರಿಕೆಯ ಘಟಕಗಳ ಕಾರ್ಮಿಕ ಸಂಘಗಳಿಗೆ ಪ್ರಾರಂಭದಲ್ಲಿ ಕಾರ್ಮಿಕರೇ ಮುಂದಾಳತ್ವ ವಹಿಸಿದ್ದರು. ಆದರೆ ಈ ಮುಂದಾಳುಗಳು ಕೊನೆಗೆ ಉದ್ಯಮಿಗಳ ವ್ಯಗ್ರದೃಷ್ಟಿಗೆ ಬಿದ್ದು ತೊಂದರೆಗೀಡಾದ್ದರಿಂದ ಮುಂದೆ ಈ ಘಟಕಗಳಲ್ಲೂ ಹೊರಗಿನವರ ನಾಯಕತ್ವ ಬೇರೂರಿತ್ತು. ಇದರಿಂದ ಕಾರ್ಮಿಕ ಸಂಘಗಳಲ್ಲಿಯೇ ತಾತ್ತ್ವಿಕ ಭೇದಭಾವ, ನಿರ್ದಿಷ್ಟ ರಾಜಕೀಯ ಪಕ್ಷಗಳತ್ತ ಒಲವು ಉಂಟಾಗಿ ಅವುಗಳಲ್ಲಿ ಪರಸ್ಪರ ವೈಮನಸ್ಸಿಗೆ ಕಾರಣವಾಯಿತು. ಇದರಿಂದ ಸಂಘಟನೆಗೆ ತೊಡಕುಂಟಾಯಿತು.

ರಾಜ್ಯದಲ್ಲಿ ಕಾರ್ಮಿಕ ಸಂಘಗಳು ಮತ್ತು ಅವುಗಳ ಸದಸ್ಯರುಗಳ ಸಂಖ್ಯೆ ಉದ್ದಕ್ಕೂ ಅಧಿಕಗೊಳ್ಳುತ್ತಿದೆ. ಇದರಿಂದ ಕರ್ನಾಟಕದ ಕಾರ್ಮಿಕ ಸಂಘಟನೆ ಸಾಂಖ್ಯಿಕವಾಗಿ ಪ್ರಗತಿಯನ್ನು ಹೊಂದಿದೆಯೆಂದು ಹೇಳಬಹುದು. ಸಾಂಖ್ಯಿಕ ಪ್ರಗತಿಯೊಂದೇ ಕಾರ್ಮಿಕ ಸಂಘಟನೆಯ ಬಲದ ಸೂಚಕವೇನಲ್ಲ. ಕಾರ್ಮಿಕ ಉದ್ಯೋಗಿಗಳ ಸಂಖ್ಯೆಗೂ ಮತ್ತು ಕಾರ್ಮಿಕ ಸಂಘಗಳ ಸದಸ್ಯರ ಸಂಖ್ಯೆಗೂ ಇರುವ ಸಂಬಂಧ ಕುರಿತ ಅಂಕಿಗಳ ಅಭಾವ ಇದೆ. ವರದಿ ನೀಡುತ್ತಿರುವ ಕಾರ್ಮಿಕ ಸಂಘಗಳ ಸಂಖ್ಯೆ ಮತ್ತು ಅವುಗಳ ಸದಸ್ಯತ್ವ ಸುಮಾರು 1970ರವರೆಗೆ ಹೆಚ್ಚಾಗುತ್ತಿದ್ದರೂ ಸರಾಸರಿ ಸದಸ್ಯತ್ವ ಕಡಿಮೆಯಾಗುತ್ತಿತ್ತು. ಈಚೆಗೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ.

ಭಾರತದ ಇತರ ರಾಜ್ಯಗಳಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಕಾರ್ಮಿಕ ಸಂಘಟನೆಯಲ್ಲಿ ಅನೇಕ ಸಮಸ್ಯೆಗಳು ಕಾಣುತ್ತವೆ. ಮುಖ್ಯವಾಗಿ ಕಾರ್ಮಿಕ ಸಂಘಗಳ ಸಂಖ್ಯಾಬಾಹುಳ್ಯ, ಅವುಗಳಲ್ಲಿನ ಪರಸ್ಪರ ದ್ವೇಷ ಮತ್ತು ಸ್ಪರ್ಧೆ, ಹೊರಗಿನವರ ನಾಯಕತ್ವ, ಕಾರ್ಮಿಕ ಸಂಘಗಳಿಗೆ ರಾಜಕೀಯದಲ್ಲಿನ ಆಸಕ್ತಿ, ಇದರಿಂದ ಉಂಟಾದ ರಾಜಕೀಯ ಪಕ್ಷಗಳೊಡನೆ ಕಾರ್ಮಿಕ ತಾತ್ವಿಕ ಸಂಬಂಧ, ದುರ್ಬಲ ಆರ್ಥಿಕ ಸ್ಥಿತಿ ಮುಂತಾದ ಸಮಸ್ಯೆಗಳು ರಾಜ್ಯದಲ್ಲಿನ ಕಾರ್ಮಿಕ ಸಂಘಗಳನ್ನು ದುರ್ಬಲಗೊಳಿಸಿವೆ.

ರಾಜ್ಯದಲ್ಲಿ ಕಾರ್ಮಿಕ ಸಂಘಗಳು ಸಾಮಾನ್ಯವಾಗಿ ಕೈಗಾರಿಕಾವಾರು ಸಂಘಗಳಾಗಿರುತ್ತವೆ. ಆಯಾ ಉದ್ಯಮಘಟಕದಲ್ಲಿ ಕೆಲಸ ಮಾಡುವ ಎಲ್ಲ ವಿಧವಾದ ಕಾರ್ಮಿಕರೂ ಕುಶಲ ಕೆಲಸಗಾರರೂ ಅರೆಕುಶಲರೂ ಹಾಗೂ ಕುಶಲರಲ್ಲದ ಸಾಮಾನ್ಯ ಕೆಲಸಗಾರರೂ - ಈ ಸಂಘಗಳ ಸದಸ್ಯರಾಗಿರುತ್ತಾರೆ. ಉದಾಹರಣೆಗಾಗಿ ಬಿನ್ನಿ ಮಿಲ್ ಕಾರ್ಮಿಕರ ಸಂಘ, ಮೈಕೋ ಕೆಲಸಗಾರರ ಸಂಘ ಇಂಥ ಕಾರ್ಮಿಕ ಸಂಘಗಳ ಜೊತೆಗೆ ವೃತ್ತಿ ಸಂಘಗಳೂ ಇವೆ. ಉದಾ: ಕರಣಿಕರ ಸಂಘ, ಐ.ಟಿ.ಐ. ಡ್ರೈವರುಗಳ ಸಂಘ ಇತ್ಯಾದಿ. ಇವು ಒಂದೊಂದು ವೃತ್ತಿಗೆ ಸೇರಿದ ಕಾರ್ಮಿಕ ಸಂಘಗಳಾಗಿರುತ್ತವೆ. ಇವು ರಾಜ್ಯದಲ್ಲಿ ವಿರಳ.

**ರಚನೆ ಮತ್ತು ಆಡಳಿತ :** ಕಾರ್ಮಿಕ ಸಂಘಗಳ ರಚನೆ ಭಾರತದ ಇತರ ರಾಜ್ಯಗಳಲ್ಲಿರುವಂತೆ ಒಂದು ಪಿರಮಿಡ್ಡಿನ ಆಕಾರ ಹೊಂದಿದೆ. ಉದ್ಯಮ ಘಟಕಗಳಲ್ಲಿನ ಕಾರ್ಮಿಕ ಸಂಘಗಳು ಕೆಳ ಅಂತಸ್ತಿನ ಸಂಘಗಳು. ಅವುಗಳು ಪ್ರಾಥಮಿಕ ಸಂಘಗಳು. ಇದರ ಮೇಲಿನ ಅಂತಸ್ತಿನಲ್ಲಿ ರಾಜ್ಯಮಟ್ಟದ ಕಾರ್ಮಿಕ ಸಂಘಗಳಿವೆ. ಈ ಸಂಘಗಳಿಗೂ ಸಂಬಂಧ ಕಲ್ಪಿಸುತ್ತವೆ. ಇವಲ್ಲದೆ ಕೆಲವು ಮಧ್ಯಮ ಮಟ್ಟದ ಜಿಲ್ಲಾವಾರು ಕಾರ್ಮಿಕ ಸಂಘಗಳೂ ಇವೆ (ಉದಾಹರಣೆಗೆ ಬೆಂಗಳೂರು ಜಿಲ್ಲೆಯ ಆಟೋಮೊಬೈಲ್ ಕೆಲಸಗಾರರ ಸಂಘ). ಇವು ಸ್ವತಂತ್ರ ಸಂಸ್ಥೆಗಳಾಗಿವೆ. ಇವು ಯಾವ ಸಂಯುಕ್ತ ರಚನೆಯ ಭಾಗವೂ ಆಗಿರುವುದಿಲ್ಲ. ಯಾವ ಕೇಂದ್ರ ಸಂಯುಕ್ತ ಸಂಘಗಳ ಜೊತೆಯಲ್ಲಿಯೂ ಸಂಬಂಧವಿಟ್ಟು ಕೊಂಡಿರುವುದಿಲ್ಲ. ಇನ್ನೂ ಕೆಲವು ಸ್ವತಂತ್ರ ಸಂಘಗಳಿವೆ. ಅವು ಯಾವ ಕೇಂದ್ರ ಅಥವಾ ರಾಷ್ಟ್ರೀಯ ಸಂಯುಕ್ತ ಕಾರ್ಮಿಕ ಸಂಘಗಳಿಗೂ ಸೇರಿರುವುದಿಲ್ಲ.

ಕರ್ನಾಟಕದಲ್ಲಿ ಅನೇಕ ಕಾರ್ಮಿಕ ಸಂಘಗಳು ವಿವಿಧ ರಾಷ್ಟ್ರೀಯ ಸಂಯುಕ್ತ ಸಂಘಗಳ ಜೊತೆ ಸಂಬಂಧ ಇಟ್ಟುಕೊಂಡಿವೆ. ರಾಜ್ಯದ ಕಾರ್ಮಿಕ ಸಂಘಗಳ ಸಂಖ್ಯೆಯಲ್ಲಿ ಹೆಚ್ಚು ಭಾಗ ಯಾವ ಕೇಂದ್ರ

ಸಂಯುಕ್ತ ಸಂಘಕ್ಕೂ ಸೇರದೆ ಅಥವಾ ಸಂಬಂಧವಿಟ್ಟುಕೊಳ್ಳದೆ ಸ್ವತಂತ್ರ ಸಂಸ್ಥೆಗಳಾಗಿ ಉಳಿದಿವೆ. ಆದರೆ ಕೇಂದ್ರ ಸಂಯುಕ್ತ ಸಂಘಗಳ ಜೊತೆ ಸಂಬಂಧವಿಟ್ಟುಕೊಂಡಿರುವ ಸಂಘಗಳ ಸದಸ್ಯರೇ ಅಧಿಕವಾಗಿದ್ದಾರೆ.

ಭಾರತ ರಾಷ್ಟ್ರೀಯ ಕಾರ್ಮಿಕ ಸಂಘಗಳ ಒಕ್ಕೂಟ ಕಾಂಗ್ರೆಸ್ ಪಕ್ಷದ ಬೆಂಬಲವನ್ನು ಹೊಂದಿದ್ದರೆ ಅಖಿಲ ಭಾರತ ಕಾರ್ಮಿಕರ ಸಂಘಗಳು ಕಾಂಗ್ರೆಸ್ (ಐಟಿಯುಸಿ) ಕಮ್ಯೂನಿಸ್ಟ್ ಪಕ್ಷದ ಒಲವನ್ನು ಹೊಂದಿದೆ. ಅದೇ ರೀತಿ ಹಿಂದ್ ಮಜ್‌ದೂರ್ ಸಭಾ ಮತ್ತು ಸಂಯುಕ್ತ ಕಾರ್ಮಿಕ ಸಂಘಗಳ ಕಾಂಗ್ರೆಸ್ (ಯುನೈಟೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್) ಕ್ರಮವಾಗಿ ಸಮಾಜವಾದಿ ಪಕ್ಷ ಮತ್ತು ವಾಮಪಂಥೀಯರ ಪಕ್ಷದ ಬೆಂಬಲವನ್ನು ಪಡೆದಿವೆ. ಇತ್ತೀಚೆಗೆ ಮಾರ್ಕ್ಸಿಸ್ಟ್ ಪಕ್ಷದ ಬೆಂಬಲವನ್ನು ಪಡೆದಿರುವ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಎಂಬ ಕೇಂದ್ರ ಸಂಯುಕ್ತ ಸಂಘವೂ ಬೆಳೆಯುತ್ತಿದೆ. 1980ರಲ್ಲಿ 1636 ಕಾರ್ಮಿಕ ಸಂಘಗಳಿದ್ದರೆ, 1999ರಲ್ಲಿ ಇವುಗಳ ಸಂಖ್ಯೆ 3905. ಇದು ಬೆಳೆಯುತ್ತಿರುವ ಕಾರ್ಮಿಕ ಸಂಘಟನೆಯ ಜಾಲಕ್ಕೂ ಮತ್ತು ಉದ್ಯೋಗಗಳ ಹೆಚ್ಚಳಕ್ಕೂ ಸಾಕ್ಷಿ.

ಕರ್ನಾಟಕ ರಾಜ್ಯದ ಕಾರ್ಮಿಕ ಸಂಘಗಳು ಕಾರ್ಮಿಕ ಸಂಘದ ಎಲ್ಲ ಸಾಮಾನ್ಯ ಕಾರ್ಯಗಳನ್ನೂ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆ. ಉದಾಹರಣೆಗೆ ಅವು ತಮ್ಮ ತಮ್ಮ ಸದಸ್ಯರುಗಳ ಹಿತಸಾಧನೆಗೋಸ್ಕರ ಮಾಲೀಕರೊಡನೆ ಕಾರ್ಮಿಕರ ವೇತನ, ಬೋನಸ್ಸು, ಉದ್ಯೋಗ ಮುಂತಾದವುಗಳನ್ನು ಉತ್ತಮಪಡಿಸಲು ಹೋರಾಟ ನಡೆಸುತ್ತವೆ. ಅನಿವಾರ್ಯವಾದರೆ ಮುಷ್ಕರಗಳನ್ನೂ ಘೇರಾವೊಗಳನ್ನೂ ಹೂಡಲು ಹಿಂಜರಿದಿಲ್ಲ. ಸಾರ್ವಜನಿಕ ಹಾಗೂ ಖಾಸಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕ ಸಂಘಗಳು ತಮ್ಮ ಮಾಲೀಕರನ್ನು ಒಳ್ಳೆಯ ಕೈಗಾರಿಕಾ ಸಂಬಂಧವೇರ್ಪಡಿಸುವ ದೃಷ್ಟಿಯಿಂದ ತಮ್ಮೊಡನೆ ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳುವಂತೆ ಒತ್ತಾಯಪಡಿಸಿ ಜಯಗಳಿಸಿವೆ. ಇದರಿಂದ ಉದ್ಯಮ ಘಟಕಗಳಲ್ಲಿ ಸಾಧ್ಯವಾದಮಟ್ಟಿಗೂ ಒಳ್ಳೆಯ ಕೈಗಾರಿಕಾ ಬಾಂಧವ್ಯವೇರ್ಪಡುವುದು ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ಒಂದೆರಡು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳು ಮಾನ್ಯತೆಯನ್ನು ಸಂಪಾದಿಸಲು ಅದುವರೆವಿಗೂ ಅನುಸರಿಸುತ್ತಿದ್ದ ಸದಸ್ಯರ ಸಂಖ್ಯಾಬಲವನ್ನು ಅವಲೋಕಿಸುವ ಪದ್ಧತಿಯನ್ನು ಕೈಬಿಟ್ಟು ಗುಪ್ತ ಮತದಾನ ಪದ್ಧತಿಯನ್ನು ಅನುಸರಿಸುವಂತೆ ಮಾಲೀಕರನ್ನು ಒತ್ತಾಯಪಡಿಸಿ ಜಯಗಳಿಸಿರುವುದು ಕರ್ನಾಟಕ ರಾಜ್ಯದ ಕಾರ್ಮಿಕರ ಬಲಯುತ ಸಂಘಟನೆಯ ಪ್ರತೀಕವಾಗಿದೆ. ಕರ್ನಾಟಕದ ಕೆಲವು ಭಾರಿ ಉದ್ಯಮಸಂಸ್ಥೆಗಳ ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವ ಯೋಜನೆಯ ಅಂಗವಾಗಿ ಜಂಟಿ ಆಡಳಿತ ಸಮಿತಿಯನ್ನು ಸ್ಥಾಪಿಸುವ ಪ್ರಯತ್ನಗಳೂ ನಡೆದಿವೆ. ಕೊನೆಯದಾಗಿ ಸರ್ಕಾರ ಮತ್ತು ಉದ್ಯಮಿಗಳ ಜೊತೆಗೆ ಕಾರ್ಮಿಕ ಸಂಘಗಳೂ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣಾಭಿವೃದ್ಧಿ ಸೌಲಭ್ಯಗಳನ್ನು ಒದಗಿಸಲು ನೆರವಾಗುತ್ತಿವೆ.

ಕರ್ನಾಟಕ ಕಾರ್ಮಿಕ ಸಂಘಗಳು ಭಾರತದ ಇತರ ರಾಜ್ಯಗಳಲ್ಲಿರುವ ಕಾರ್ಮಿಕ ಸಂಘಗಳಷ್ಟೇ ಸಬಲವಾಗಿವೆಯೆಂದು ಹೇಳಬಹುದು. ಕರ್ನಾಟಕದಲ್ಲಿ ಭಾರತದ ಇತರ ಭಾಗಗಳಲ್ಲಿರುವಂತೆ ಕಾರ್ಮಿಕ ಸಂಘಗಳು ರಾಜಕೀಯ ಪಕ್ಷಗಳ ಜೊತೆ ಸಂಬಂಧವನ್ನಿಟ್ಟುಕೊಂಡಿವೆ. ಈ ರಾಜಕೀಯ ಪಕ್ಷಗಳ ಧುರೀಣರು ಕಾರ್ಮಿಕ ಸಂಘಗಳಿಗೆ ನಾಯಕತ್ವವನ್ನು ಒದಗಿಸಿರುತ್ತಾರೆ. ಇದರಿಂದ ಕಾರ್ಮಿಕ ಸಂಘಗಳು ರಾಜಕೀಯ ಪಕ್ಷಗಳ ಸಂಪೂರ್ಣ ಬೆಂಬಲವನ್ನು ಪಡೆದಂತಾಗಿ ಬಲಯುತ ಹಾಗೂ ಒತ್ತಡ ಹೇರಬಲ್ಲ ಶಕ್ತಿ ಸಮುದಾಯಗಳಾಗಿವೆ.

ಎರಡನೆಯದಾಗಿ ರಾಜ್ಯದಲ್ಲಿ ಕಾರ್ಮಿಕ ಸಂಘಗಳು ಕೆಲವೇ ಅನುಕೂಲಕರವಾದ ಬಿಂದುಗಳಲ್ಲಿ ಕೇಂದ್ರೀಕೃತವಾಗಿವೆ. ಉದಾಹರಣೆಗಾಗಿ, ಕಾರ್ಮಿಕ ಸಂಘಗಳು ಕೆಲವು ಅತಿಮುಖ್ಯವಾದ ಸಂಸ್ಥೆಗಳಲ್ಲಿ ಅಂದರೆ ಸರ್ವಜನೋಪಯೋಗಿ ಸಂಸ್ಥೆಗಳು, ದೇಶ ಸಂರಕ್ಷಣೆಗೆ ಸಂಬಂಧಿಸಿದ ಕೈಗಾರಿಕಾ ಸಂಸ್ಥೆಗಳು, ಆರ್ಥಿಕ ಬೆಳವಣಿಗೆಗೆ ಬೇಕಾಗುವ ಮೂಲ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕಾ ಘಟಕಗಳು ಇತ್ಯಾದಿಗಳಲ್ಲಿ ಕೇಂದ್ರೀಕೃತವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕರು ಮುಷ್ಕರಗಳನ್ನೇನಾದರೂ ಹೂಡಿ ಉತ್ಪಾದನೆ ತಡೆಗಟ್ಟಲು ಪ್ರಯತ್ನಿಸಿದರೆ ರಾಷ್ಟ್ರದ ಹಾಗೂ ರಾಜ್ಯದ ಆರ್ಥಿಕ ಬೆಳವಣಿಗೆಗೆ ಮತ್ತು ಸಾರ್ವಜನಿಕರ ಸೇವಾ ಸೌಲಭ್ಯಗಳಿಗೆ ಧಕ್ಕೆ ಒದಗುವುದರಿಂದ ಸರ್ಕಾರವೇ ಆಗಲಿ ಮಾಲೀಕರೇ ಆಗಲಿ ಈ ಕಾರ್ಮಿಕ ಸಂಘಗಳನ್ನು ಕಡೆಗಣಿಸುವಂತಿಲ್ಲದಂತಾಗಿದೆ. 1991ರಿಂದ ಈಚೆಗೆ ದೇಶದಲ್ಲಿ ತೀವ್ರವಾಗಿ ಜಾರಿಗೆ ಬಂದ ಆರ್ಥಿಕ ಉದಾರೀಕರಣ ಹಾಗೂ ಸರ್ಕಾರಿ ವಲಯದ ಉದ್ಯಮಗಳ ಖಾಸಗೀಕರಣದ ನೀತಿಯಿಂದಾಗಿ ಕಾರ್ಮಿಕರ ಕಾನೂನುಗಳನ್ನು ಪುನರ್ವಿಮರ್ಶಿಸಲಾಗುತ್ತಿವೆ. ಈ ಪ್ರವೃತ್ತಿಯ ವಿರುದ್ಧ ಕಾರ್ಮಿಕರು ಹೋರಾಟದಲ್ಲಿ ತೊಡಗಿದ್ದಾರೆ.

**ಕಾರ್ಮಿಕ ಕಲ್ಯಾಣ :** ಕಾರ್ಮಿಕ ಕಲ್ಯಾಣ ವಿಶಾಲವಾದ ಅರ್ಥದಲ್ಲಿ ಕಾರ್ಮಿಕರ ಕಲ್ಯಾಣಾಭಿವೃದ್ಧಿಗೋಸ್ಕರ ಸರ್ಕಾರ, ಉದ್ಯಮಶೀಲರು ಮತ್ತು ಕಾರ್ಮಿಕ ಸಂಘಗಳು ಹಾಗೂ ಹಲವು ದಾನಶೀಲ ಸಂಸ್ಥೆಗಳು ಕೈಗೊಳ್ಳುವ ಕಾನೂನುಬದ್ಧವಾದ ಹಾಗೂ ಸ್ವಯಂಪ್ರೇರಿತ ಕಾರ್ಯಕ್ರಮಗಳನ್ನೊಳಗೊಂಡಿರುತ್ತವೆ. ಈ ಕಾರ್ಯಕ್ರಮಗಳು ಕಾರ್ಮಿಕರ ಕಾರ್ಯದಕ್ಷತೆಯನ್ನು ಮತ್ತು ಅವರ ಜೀವನದ ಸ್ಥಿತಿಗಳನ್ನು ಉತ್ತಮಗೊಳಿಸುವ ಕ್ರಮಗಳಷ್ಟೇ ಆಗಿರದೆ ಸಾಮಾಜಿಕ ಭದ್ರತಾಕ್ರಮಗಳಾಗಿವೆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸೌಕರ್ಯಗಳನ್ನು ಮತ್ತು ಕಾರ್ಮಿಕರಿಗೆ ವಸತಿಸೌಕರ್ಯಗಳನ್ನು ಒದಗಿಸಿಕೊಡುವ ಕಾರ್ಯಕ್ರಮಗಳೂ ಆಗಿರುತ್ತವೆ. ಈ ಕಾರ್ಯಕ್ರಮಗಳೆಲ್ಲವನ್ನೂ ಅಂತಾರಾಷ್ಟ್ರೀಯ ಕಾರ್ಮಿಕ ಸಂಘವೂ ಅನುಮೋದಿಸಿ ವಿಶ್ವದ ಪ್ರತಿಯೊಂದು ಕೈಗಾರಿಕಾ ರಾಷ್ಟ್ರದಲ್ಲೂ ಅವುಗಳನ್ನು ಜಾರಿಗೆ ತರುವಂತೆ ಪ್ರೋತ್ಸಾಹಿಸುತ್ತಿದೆ.

ಬಡತನ ಅಧಿಕವಾಗಿರುವ ಮತ್ತು ಕಲ್ಯಾಣ ರಾಜ್ಯ ಸ್ಥಾಪನೆಯನ್ನು ಗುರಿಯಾಗಿಟ್ಟುಕೊಂಡಿರುವ ಭಾರತದಲ್ಲೂ ಈ ಎಲ್ಲ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳು ಜಾರಿಗೆ ಬಂದಿವೆ.

ಕರ್ನಾಟಕದಲ್ಲಿ, ಎರಡನೆಯ ಮಹಾಯುದ್ಧದ ಪೂರ್ವದಲ್ಲಿಯೇ ಕೆಲವು ಪ್ರಗತಿಪರ ಹಾಗೂ ವಿವೇಕಿ ಉದ್ದಿಮೆದಾರರು ಸ್ವಪ್ರೇರಣೆಯಿಂದಲೆ ತಮ್ಮ ಕಾರ್ಖಾನೆಗಳಲ್ಲಿ ಕೆಲವು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಈ ಸೌಲಭ್ಯಗಳು ಸಾಕಷ್ಟು ವ್ಯಾಪಕವಾಗಿಲ್ಲದಿದ್ದುದರಿಂದಲೂ ಕಾರ್ಮಿಕರ ಸಂಘಗಳು ಇವುಗಳನ್ನು ಕೈಗೊಳ್ಳಲು ಸಾಮರ್ಥ್ಯ ಹೊಂದಿಲ್ಲದಿದ್ದುದರಿಂದಲೂ ಸರ್ಕಾರ ಮಧ್ಯೆ ಪ್ರವೇಶಿಸ ಬೇಕಾಯಿತು. ಅದರಂತೆ ಕೇಂದ್ರದ 1948ರ ಕಾರ್ಖಾನೆಯ ಕಾನೂನಿನ ಅನ್ವಯ ರಾಜ್ಯದಲ್ಲಿ 1950ರಿಂದ ಪ್ರತಿಯೊಬ್ಬ ಉದ್ದಿಮೆದಾರನೂ ಅನೇಕ ಸೌಲಭ್ಯಗಳನ್ನು ತನ್ನ ಕಾರ್ಖಾನೆಯಲ್ಲಿ ನೇಮಿತರಾಗಿರುವ ಕಾರ್ಮಿಕರಿಗೆ ಕಡ್ಡಾಯವಾಗಿ ಒದಗಿಸಬೇಕಾಯಿತು. ಈ ಸೌಲಭ್ಯಗಳು ಯಾವುವೆಂದರೆ ಕುಡಿಯಲು ತಂಪಾದ ಹಾಗೂ ಶುದ್ಧವಾದ ನೀರು, ಶೌಚಗೃಹ, 250ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಪ್ರತಿಯೊಂದರಲ್ಲೂ ಉಪಾಹಾರಮಂದಿರ, 50ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರಿರುವ ಪ್ರತಿಯೊಂದು ಕಾರ್ಖಾನೆಯಲ್ಲಿಯೂ ಶಿಶುವಿಹಾರ, ವಿಶ್ರಾಂತಿಗೃಹ, 150ಕ್ಕೂ ಹೆಚ್ಚು ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲಿಯೂ ಉಪಾಹಾರ ಕೋಣೆಗಳು ಇತ್ಯಾದಿ. ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ದೊಡ್ಡ ಕಾರ್ಖಾನೆಗಳಲ್ಲಿಯೂ ಆವಿ, ಹೊಗೆ ಮತ್ತು ದೂಳು ಹೊರಗೆ ಹೋಗುವಂತೆ ಸರಿಯಾದ ವ್ಯವಸ್ಥೆ, ಆಕಸ್ಮಿಕಗಳನ್ನು ತಡೆಗಟ್ಟುವ ದೃಷ್ಟಿಯಿಂದ ಯಂತ್ರಗಳಿಗೆ ಬೇಲಿ ಅಥವಾ ಕಟಕಟೆಯನ್ನು ಕಟ್ಟಿಸುವುದು, ಕಾರ್ಮಿಕರುಗಳಿಗೆ ಸುರಕ್ಷತೆಯ ವಸ್ತ್ರಗಳು, ಪಾದರಕ್ಷೆಗಳು ಮತ್ತು ಕನ್ನಡಕಗಳು ಮೊದಲಾದುವುಗಳನ್ನು ಒದಗಿಸುವುದು ಇತ್ಯಾದಿ ಸೌಲಭ್ಯಗಳೆಲ್ಲವೂ ಕಡ್ಡಾಯವಾಗಿ ಜಾರಿಗೆ ಬಂದುವು. ಕಾರ್ಖಾನೆಗಳ ಕಾಯಿದೆಗೆ ಅನುಗುಣವಾದ ನಿಯಮಗಳನ್ನು ಗಣಿ, ಪ್ಲಾಂಟೇಷನ್ ಮತ್ತು ಬಂದರುಗಳ ಕಾರ್ಮಿಕರುಗಳ ಕಲ್ಯಾಣದ ದೃಷ್ಟಿಯಿಂದ ರಾಜ್ಯದಲ್ಲಿ ಜಾರಿಗೆ ತರಲಾಯಿತು.

ಕಾರ್ಮಿಕರ ಅನಿಶ್ಚಿತತೆಯ ಪರಿಸ್ಥಿತಿಗಳನ್ನು ಎದುರಿಸಲು ನೆರವಾಗುವ ಸೌಲಭ್ಯಗಳನ್ನೊದಗಿಸುವ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ರಾಜ್ಯ ಸರ್ಕಾರ ನೌಕರರ ರಾಜ್ಯ ವಿಮಾಯೋಜನೆಯನ್ನು ಜಾರಿಗೆ ತಂದಿತು. 1958ರಲ್ಲಿ ಬೆಂಗಳೂರಿನಲ್ಲೂ 1960ರಲ್ಲಿ ಹುಬ್ಬಳ್ಳಿಯಲ್ಲೂ

1961ರಲ್ಲಿ ದಾಂಡೇಲಿಯಲ್ಲೂ ಈ ಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರಿಗೆ ಅನ್ವಯಿಸಲಾಯಿತು. ಉದ್ಯೋಗದಾತ, ಸರ್ಕಾರ ಮತ್ತುಕಾರ್ಮಿಕರಿಂದ ಪಡೆದ ಅಂಶದಾನಗಳಿಂದ ರಚಿಸಿದ ನಿಧಿಯಿಂದ ಈ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ವಿಮಾ ಯೋಜನೆಗೆ ಒಳಪಟ್ಟು ರಾಜ್ಯದ ಕಾರ್ಮಿಕರು ಐದು ಬಗೆಯ ಸೌಲಭ್ಯಗಳನ್ನು ಇದರಿಂದ ಪಡೆಯುತ್ತಾರೆ. ಅಸ್ವಸ್ಥತಾ ಪರಿಹಾರ, ಪ್ರಸೂತಿ ಪರಿಹಾರ, ಕೆಲಸದಲ್ಲಿ ನಿರತರಾದಾಗ ಆದ ಅಂಗವಿಕಲತೆ, ಉದ್ಯೋಗಹಾನಿ ಮತ್ತು ಕಾಯಿಲೆಗಳ ಕಾಲದಲ್ಲಿ ಕಾರ್ಮಿಕರಿಗೆ ನೆರವು, ಉಚಿತ ವೈದ್ಯಕೀಯ ಚಿಕಿತ್ಸೆ ಮತ್ತು ಮರಣಹೊಂದಿದ ಕಾರ್ಮಿಕನ ಅವಲಂಬಿತರಿಗೆ ಪರಿಹಾರ - ಇವೇ ಈ ಐದು ಸೌಲಭ್ಯಗಳು. ರಾಜ್ಯದ ಎಲ್ಲ ಕೈಗಾರಿಕಾ ಕಾರ್ಮಿಕರುಗಳನ್ನು ಈ ಯೋಜನೆಯ ವ್ಯಾಪ್ತಿಗೊಳಪಡಿಸುವುದೇ ರಾಜ್ಯಸರ್ಕಾರದ ಗುರಿಯಾಯಿತು.

ಕಾಯಿದೆಗೊಳಪಡದ ಸೌಲಭ್ಯಗಳನ್ನೂ ಹಲವು ಉದ್ಯೋಗದಾತರು ಒದಗಿಸುತ್ತಿದ್ದಾರೆ. ಇವುಗಳಲ್ಲಿ ಮುಖ್ಯವಾದುವು ಉಚಿತ ವೈದ್ಯಕೀಯ ಚಿಕಿತ್ಸೆ, ಶಿಕ್ಷಣ ಮತ್ತು ಮನರಂಜನೆ. ನೌಕರರ ರಾಜ್ಯ ವಿಮಾ ವ್ಯವಸ್ಥೆಯ ಪ್ರಕಾರ ಚಿಕಿತ್ಸೆಯ ಸೌಲಭ್ಯವಿದ್ದರೂ ಕೆಲವು ಉದ್ಯಮಗಳು ತಮ್ಮವರೇ ಆದ ವೈದ್ಯರನ್ನು ನಿಯಮಿಸಿರುವುದುಂಟು. ಕಾರ್ಮಿಕರ ಮಕ್ಕಳ ಶಿಕ್ಷಣದ ವಿಷಯದಲ್ಲಿ ಅನೇಕ ಉದ್ಯಮಗಳು ಉದಾರವಾಗಿ ಧನಸಹಾಯ ನೀಡುತ್ತಿವೆ ಮತ್ತು ಕೆಲವು ಉದ್ಯಮಗಳು ತಮ್ಮವೇ ಆದ ಶಾಲೆಗಳನ್ನು ನಡೆಸುತ್ತಿವೆ. ಕಾರ್ಖಾನೆಗಳ ಪರಿಸರದಲ್ಲೇ ಕಾರ್ಮಿಕರಿಗೆ ವಸತಿಸೌಲಭ್ಯವನ್ನು ಒದಗಿಸಿಕೊಡುವುದರಲ್ಲಿ ಕೆಲವು ಉದ್ದಿಮೆದಾರರು ಸರ್ಕಾರಕ್ಕಿಂತ ಹೆಚ್ಚು ಉತ್ತಮವಾದ ಪಾತ್ರವನ್ನು ವಹಿಸಿದ್ದಾರೆ. ಬೆಂಗಳೂರಿನಲ್ಲಿ ಮತ್ತು ಇತರ ದೊಡ್ಡ ನಗರಗಳಲ್ಲಿ ಕಾರ್ಮಿಕರು ವಾಸಸ್ಥಾನದಿಂದ ಕಾರ್ಖಾನೆಗೆ ಹೋಗಿಬರಲು ಅನುಕೂಲವಾಗುವಂತೆ ಸಾರಿಗೆ ವ್ಯವಸ್ಥೆಯನ್ನು ಅನೇಕ ಕಾರ್ಖಾನೆಗಳು ಏರ್ಪಡಿಸಿವೆ. ಬೆಲೆಗಳ ತೀವ್ರ ಏರಿಕೆಯ ಕಾಲದಲ್ಲಿ ಕಾರ್ಮಿಕರಿಗೆ ಅವಶ್ಯವಾದ ಪದಾರ್ಥಗಳನ್ನು ನ್ಯಾಯ ಬೆಲೆಗಳಲ್ಲಿ ದೊರಕಿಸಲು ಅನುಕೂಲವಾಗುವಂತೆ ಬಳಕೆದಾರರ ಸಂಸ್ಥೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಿರುವುದಲ್ಲದೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದೆ. ಇದಕ್ಕೆ ಅಗತ್ಯವಾದ ಬಂಡವಾಳ, ಕಟ್ಟಡ ಹಾಗೂ ಕಾರ್ಯನಿರ್ವಹಣೆಯ ಸೌಲಭ್ಯಗಳನ್ನು ಉದ್ದಿಮೆದಾರರು ಒದಗಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣ ಸಾಧನೆಗಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದ ಒಂದು ನಿರ್ದಿಷ್ಟ ಹಣದ ಮೊತ್ತವನ್ನು ರಾಜ್ಯ ಸರ್ಕಾರ ಖರ್ಚು ಮಾಡುತ್ತಿದೆ. ಕಾರ್ಮಿಕ ಕಲ್ಯಾಣ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ. ರಾಜ್ಯದಲ್ಲಿ ಕಾರ್ಮಿಕರಿಗೆ ಹಲವು ವಾಚನಾಲಯಗಳು, ಮನರಂಜನಾ ಸೌಲಭ್ಯಗಳು, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಸೌಕರ್ಯಗಳು, ಮಹಿಳೆಯರಿಗಾಗಿ ಹೊಲಿಗೆ ತರಬೇತಿ ಕೇಂದ್ರಗಳು, ಉದ್ಯೋಗ ವಿನಿಮಯ ಕೇಂದ್ರಗಳು, ಶಾಲೆ ಬಿಡುವ ಯುವಕರು ಅವರವರ ಅಭಿರುಚಿ ಆಸಕ್ತಿಗಳಿಗೆ ಅನುಗುಣವಾಗಿ ಉದ್ಯೋಗಗಳನ್ನು ಆರಿಸಿಕೊಳ್ಳಲು ನೆರವಾಗಲು ವೃತ್ತಿಪೂರ್ವ ಮಾರ್ಗದರ್ಶನ ಘಟಕಗಳು - ಇವೇ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಇವುಗಳ ಜೊತೆಗೆ ಇನ್ನೂ ಅನೇಕ ಖಾಸಗಿ ಉದ್ಯಮಗಳಿಂದ ನಿರ್ದೇಶಿತವಾದ ಕಾರ್ಮಿಕ ಕಲ್ಯಾಣ ಕೇಂದ್ರಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಕಾರ್ಮಿಕ ಕಲ್ಯಾಣವನ್ನು ಸಾಧಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಕಾರ್ಮಿಕ ಇಲಾಖೆಯನ್ನು ಸ್ಥಾಪಿಸಿದೆ. ಅದು ಕಾರ್ಮಿಕ ಕಮಿಷನರ್‌ರ ನೇತೃತ್ವದಲ್ಲಿದ್ದು 11 ವಿಭಾಗ ಕಚೇರಿಗಳನ್ನು ಹೊಂದಿದೆ, 99 ಉಪ ವಿಭಾಗ ಕಚೇರಿಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕು ಮಟ್ಟದಲ್ಲಿ 164 ವೃತ್ತ ಕಚೇರಿಗಳಿವೆ. ಈ ಇಲಾಖೆಯ ಮುಖ್ಯ ಕಾರ್ಯಗಳೆಂದರೆ: 1 ಮುಷ್ಕರಗಳು ಆಗದಂತೆ ತಡೆಯುವುದು; ಕಾರ್ಮಿಕರು ಮತ್ತು ಒಡೆತನದ ನಡುವೆ ಉದ್ಭವಿಸುವ ಕೈಗಾರಿಕಾ ವಿವಾದಗಳನ್ನು ಸಂಧಾನದ ಮೂಲಕ ಬಗೆಹರಿಸುವುದು. 2 ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿದ ಕಾರ್ಮಿಕ ಕಾನೂನುಗಳು ಜಾರಿಯಾಗುವಂತೆ ನೋಡಿಕೊಳ್ಳುವುದು. 3 ಕನಿಷ್ಠ ವೇತನವನ್ನು ನಿಗದಿಗೊಳಿಸಿ ಅದು ಕಾರ್ಯಗತವಾಗುವಂತೆ ಮಾಡುವುದು. 4 ಕಾರ್ಮಿಕ ಕಲ್ಯಾಣ ಮಂಡಳಿಯ ಕೇಂದ್ರಗಳ ಮೂಲಕ ಕಾರ್ಮಿಕರ ಶಿಕ್ಷಣ ಅವರ ಮಕ್ಕಳ ಪೋಷಣೆ ಬಗ್ಗೆ ನಿಗಾ ಇಡುವುದು. 5 ವಿವಿಧ ವೇತನ ಮಂಡಳಿಗಳ ಶಿಫಾರಸುಗಳು ಜಾರಿಯಾಗುವಂತೆ ಮಾಡುವುದು. 6 ವಿವಿಧ ಕಾರ್ಮಿಕ ಕಲ್ಯಾಣ ಶಾಸನಗಳ ಪ್ರಯೋಜನ ಕಾರ್ಮಿಕರಿಗೆ ದೊರೆಯುವಂತೆ ಮಾಡುವುದು. 7 ವ್ಯವಸಾಯ ಮತ್ತಿತರ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ಲಭ್ಯವಾಗುವಂತೆ ಖಾತರಿಪಡಿಸುವುದು. ರಾಜ್ಯದಲ್ಲಿ 9 ಇ.ಎಸ್.ಐ. ಆಸ್ಪತ್ರೆಗಳು, 129 ಚಿಕಿತ್ಸಾಲಯಗಳು, 9 ಆಯುರ್ವೇದ ಕೇಂದ್ರಗಳು ಕಾರ್ಮಿಕರ ಆರೋಗ್ಯ ಕ್ಷೇಮಕ್ಕಾಗಿ ಸ್ಥಾಪಿತವಾಗಿವೆ (1998-99). (ಎಸ್.ಎನ್.ಎ.)

**ಕಾರ್ಯಪ್ಪ, ಕೆ.ಎಂ. :** 1900-93. ಸ್ವತಂತ್ರ ಭಾರತ ಸೈನ್ಯದ ಪ್ರಥಮ ಭಾರತೀಯ ಕಮಾಂಡರ್-ಇನ್-ಚೀಫ್. 1900 ಜನವರಿ 28 ರಂದು ಕೊಡಗಿನಲ್ಲಿ ಜನಿಸಿದರು. ತಂದೆ ಕೊಡಂದೆರ ಮಾದಪ್ಪ, ತಾಯಿ ಕಾವೇರಿ. ವಿದ್ಯಾಭ್ಯಾಸ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್ ಮತ್ತು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ.

ಕಾರ್ಯಪ್ಪನವರು ಸೈನ್ಯದಲ್ಲಿ ಕಮಿಷನ್ ಹುದ್ದೆಯನ್ನು ಗಳಿಸಿಕೊಂಡ (ಡಿಸೆಂಬರ್ 1919) ಪ್ರಥಮ ಭಾರತೀಯರು. ಸೈನಿಕ ಶಿಕ್ಷಣಾನಂತರ ಮೊದಲು 2/88 ಕರ್ನಾಟಕ ರೆಜಿಮೆಂಟ್, ಅನಂತರ 2-125ನೆಯ ನೇಪಿಯರ್ ರೈಫಲ್ಸ್ ದಳದಲ್ಲಿ ಅಡ್ಜುಟೆಂಟ್ ಆಗಿ (1920-22) ಕೆಲಸ ಮಾಡಿದರು. ಮೆಸಪೊಟೇಮಿಯ ದಳದಲ್ಲಿ, 1922-23ರಲ್ಲಿ 37 ಡೋಗ್ರಾ ರೆಜಿಮೆಂಟ್ ಮತ್ತು 1923-24ರಲ್ಲಿ ರಾಜಪೂತ್ ದಳದಲ್ಲಿದ್ದರು. ಇವರು ಸೈನ್ಯಾಧಿಕಾರಿಗಳ ಶಿಕ್ಷಣ ವಿಧಾನ, ಜೀವನಕ್ರಮ ಮುಂತಾದವುಗಳನ್ನು ಅಭ್ಯಸಿಸುವ ಉದ್ದೇಶದಿಂದ ಸ್ವತಃ ಪ್ರಪಂಚ ಪರ್ಯಟನೆಯನ್ನು 1925ರಲ್ಲಿ ಕೈಗೊಂಡರು. ಆಗ ಚೀನ, ಜಪಾನ್, ಸಂಯುಕ್ತಸಂಸ್ಥಾನ, ಕೆನಡ, ಗ್ರೇಟ್ ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್‌ಲೆಂಡ್, ಇಟಲಿ ಮುಂತಾದ ದೇಶಗಳಿಗೆ ಭೇಟಿಕೊಟ್ಟರು. 1922-30ರ ಅವಧಿಯಲ್ಲಿ ಅನೇಕ ಸಲ ವಜೀರಿಸ್ತಾನದಲ್ಲಿ (ವಾಯವ್ಯ ಗಡಿ ಪ್ರಾಂತ್ಯ) ಸೇವೆ ಸಲ್ಲಿಸಿದರು. ಕ್ವೆಟ್ಟ ಸ್ಟಾಫ್ ಕಾಲೇಜಿನಲ್ಲಿ ಪ್ರೌಢಸೈನ್ಯಶಿಕ್ಷಣ ಪಡೆಯಲು ಪ್ರವೇಶಿಸಿದ (1933) ಪ್ರಥಮ ಭಾರತೀಯರು ಇವರು. 1935ರಲ್ಲಿ ಸಿಂಗಪುರದ ನೌಕೆ ಹಾಗೂ ವಿಮಾನ ನೆಲೆಗಳ ಪರೀಕ್ಷಾ ಸಂದರ್ಶನ ಮಾಡಿದರು. ಎರಡನೆಯ ಮಹಾಯುದ್ಧದಲ್ಲಿ 19ನೆಯ ಇಂಡಿಯನ್ ಡಿವಿಷನ್ ಪಡೆಯೊಡನೆ ಸೇವೆ ಸಲ್ಲಿಸುತ್ತ ಇರಾಕ್, ಸಿರಿಯ ಮತ್ತು ಇರಾನ್‌ಗಳಲ್ಲಿ ಯುದ್ಧರಂಗ ಪ್ರವೇಶ ಮಾಡಿದರು. 7ನೆಯ ರಾಜಪೂತ್ ರೆಜಿಮೆಂಟಿನ ಮಷೀನ್‌ಗನ್ ಪಡೆಯನ್ನು ರಚಿಸುವ ಕಾರ್ಯಭಾರವನ್ನು ಸರ್ಕಾರ ಕಾರ್ಯಪ್ಪನವರಿಗೆ ವಹಿಸಿತು. ಆ ಕೆಲಸವನ್ನು ಇವರು ತೃಪ್ತಿಕರವಾಗಿ ಮಾಡಿ ಮುಗಿಸಿದರು (1942). 1943-44ರಲ್ಲಿ ಇವರು ಮೊದಲು ಈಸ್ಟರ್ನ್ ಕಮಾಂಡ್ ಹುದ್ದೆಗೇರಿ ಆಮೇಲೆ 20ನೆಯ ಡಿವಿಷನ್ನಿನ ಅಸಿಸ್ಟೆಂಟ್ ಕ್ವಾರ್ಟರ್ ಮಾಸ್ಟರ್ ಜನರಲ್ ಆದರು. ಈ ಅವಧಿಯಲ್ಲಿ ಬರ್ಮಾ ಯುದ್ಧದಲ್ಲಿ ಅರಕಾನ್ ರಂಗ ಪ್ರವೇಶಮಾಡಿ ಯುದ್ಧ ನಿರ್ದೇಶನ ಮಾಡಿ ತಮ್ಮ ಯುದ್ಧತಂತ್ರನಿಪುಣತೆಯನ್ನು ತೋರಿದರು. 1944ರಲ್ಲಿ ಸೈನ್ಯ ಪುನರ್ವ್ಯವಸ್ಥಾ ಸಮಿತಿಯ (ಆರ್ಮಿ ರೀಆರ್ಗನೈಸೇಷನ್ ಕಮಿಟಿ) ಸದಸ್ಯರಾಗಿ ನೇಮಕಗೊಂಡರು. ಈ ಕಾಲದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳ ಪರ್ಯಟನೆ ಮಾಡಿ ವೆಸ್ಟ್ ಪಾಯಿಂಟ್ ಎಂಬಲ್ಲಿನ ಮಿಲಿಟರಿ ಅಕಾಡೆಮಿಯನ್ನು ಸಂದರ್ಶಿಸಿದರು. 1946ರಲ್ಲಿ ಫ್ರಾಂಟಿಯರ್ ಬ್ರಿಗೇಡ್ ಗ್ರೂಪ್ ಸೈನ್ಯ

ವಿಭಾಗದ ಅಧಿಪತಿಯಾಗಿ ನೇಮಕಗೊಂಡರು. 1947ರಲ್ಲಿ ಇಂಪೀರಿಯಲ್ ಡಿಫೆನ್ಸ್ ಕಾಲೇಜಿನ ಉನ್ನತ ಸೈನ್ಯ ಶಿಕ್ಷಣಕ್ಕೆ ಆಯ್ಕೆಯಾದರು.

ಭಾರತ ಸ್ವತಂತ್ರವಾದ ಅನಂತರ ಇವರ ಮೇಲೆ ಹೆಚ್ಚು ಹೊಣೆಗಾರಿಕೆ ಬಿತ್ತು. 1947 ಜೂನ್‌ನಲ್ಲಿ ಗಳಿಸಿದ ಮೇಜರ್ ಜನರಲ್ ದರ್ಜೆ ಸಮೇತ ಚೀಫ್ ಆಫ್ ಜನರಲ್ ಸ್ಟಾಫ್ ಆಗಿ 1947 ಆಗಸ್ಟ್ 15ರಲ್ಲಿ ನೇಮಕಗೊಂಡರು. ಮುಂದೆ ಇತರ ಉನ್ನತ ಅಧಿಕಾರಗಳನ್ನು ಒಂದೊಂದಾಗಿ ಏರಿ 1948ರ ಕಾಶ್ಮೀರ ಯುದ್ಧದಲ್ಲಿ ಜನರಲ್ ದರ್ಜೆ ಸಮೇತ ಸೈನ್ಯದ ಪರಿಷ್ಕಾಧಿಕಾರಿಯಾದರು. 1949 ಜನವರಿ 15ರಿಂದ ಭಾರತ ಸೈನ್ಯದ ಪರಿಷ್ಕಾಧಿಕಾರಿಯಾಗಿ 1953 ಜನವರಿ 15ರವರೆಗೆ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಭಾರತ ಸೇನೆ ಅನೇಕ ಸುಧಾರಣೆಗಳನ್ನು ಕಂಡಿತು. 1953ರ ಜುಲೈ ತಿಂಗಳಲ್ಲಿ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡುಗಳಿಗೆ ಭಾರತದ ಹೈಕಮಿಷನರ್ ಆಗಿ 1956 ಏಪ್ರಿಲ್ ವರೆಗೆ ಆ ಹುದ್ದೆಯಲ್ಲಿದ್ದರು.

ನಿವೃತ್ತಿಯ ಅನಂತರ ಇವರು ಮಡಿಕೇರಿಯಲ್ಲಿ ನೆಲೆಸಿದ್ದರು. ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಸಂಘಸಂಸ್ಥೆಗಳಲ್ಲಿ ಜನತೆಯ ಒಳಿತಿಗಾಗಿ ದುಡಿಯುತ್ತಿದ್ದರು. ಇವರಿಗೆ ಭಾರತ ಸರ್ಕಾರ ಫೀಲ್ಡ್ ಮಾರ್ಷಲ್ ಗೌರವ ನೀಡಿತ್ತು. ಇವರು 1993ರಲ್ಲಿ ನಿಧನರಾದರು. *

**ಕಾಲಜ್ಞಾನದ ಪದಗಳು :** ಭವಿಷ್ಯದಲ್ಲಿ ಸಂಭವಿಸಬಹುದಾದ ಕೆಲವು ಮುಖ್ಯ ಘಟನೆಗಳನ್ನು ಸಾರುವ ನುಡಿಗಳೇ ಕಾಲಜ್ಞಾನದ - ಪದಗಳು; ವಚನಗಳು. ಕನ್ನಡ ಸಾಹಿತ್ಯದ ವೀರಶೈವ ಕೃತಿಗಳಲ್ಲಿ (ವಚನ) ಇವು ಅಧಿಕವಾಗಿ ಕಂಡುಬರುತ್ತವೆ. ಪವಾಡಪುರುಷರು ತಮ್ಮ ಅರಿವಿನಿಂದ ಭವಿಷ್ಯವನ್ನು ತಿಳಿದು ಮುಂದಾಗಬಹುದಾದ ಅನಾಹುತಗಳನ್ನೂ ಅವುಗಳ ನಿವಾರಣೋಪಾಯಗಳನ್ನೂ ಹೇಳುತ್ತಿದ್ದರೆಂದು ನಂಬಿಕೆ. ತಮಗಿಂತ ಹಿಂದಿದ್ದ ಪ್ರಸಿದ್ಧರಾದವರು ಹೇಳಿರುವ ಕಾಲಜ್ಞಾನದಲ್ಲಿರುವ ವಿಷಯಗಳನ್ನು ಉದ್ಧರಿಸಿ ಹೊಸತಾಗಿ ಹೇಳಿರುವ ಕಾಲಜ್ಞಾನಗಳೂ ಇವೆ. ಪುರುಷರು ಮಾತ್ರವಲ್ಲದೆ ಸ್ತ್ರೀಯರೂ ಇಂಥ ವಚನಗಳನ್ನು, ಪದಗಳನ್ನು ಹೇಳಿದ್ದಾರೆ. ಪ್ರಭುದೇವ, ಚೆನ್ನಬಸವಣ್ಣ, ರುದ್ರಮುನಿ, ಎಮ್ಮೆಬಸವಣ್ಣ, ಸರ್ವಜ್ಞಕವಿ, ಅಖಂಡಮುನಿ, ಮೋಳಿಗೆಯ ಮಾರಯ್ಯ, ಅಕ್ಕಮಹಾದೇವಿ, ನೀಲಲೋಚನೆ, ಕಲ್ಯಾಣಮ್ಮ, ಗಂಗಮ್ಮ ಮೊದಲಾದವರ ಹೆಸರಿನಲ್ಲಿ ಕಾಲಜ್ಞಾನದ ವಚನಗಳು ಇವೆ. ಕೆಲವು ಕಾಲಜ್ಞಾನಗಳಲ್ಲಿ ಸಮಕಾಲೀನ ಚಾರಿತ್ರಿಕ ಘಟನೆಗಳು ಉಕ್ತವಾಗಿವೆ. ಈ ಕಾಲಜ್ಞಾನಗಳಲ್ಲಿ ಕೆಲವಕ್ಕೆ ಎಚ್ಚರಿಕೆ ಎಚ್ಚರಿಕೆ, ಧರ್ಮವ ಬಿಡಬೇಡಿರೋ, ಕೋಲನಾಡುವ ಬನ್ನಿರೋ, ಡಂಗುರ ಸಾರಿದೆನು, ಸುಪ್ಪಿ ಸುಪ್ಪಿ, ಸೂರೆಯೋ ಸೂರೆಯೋ ದಿಮ್ಮಿ ಸಾಲೆ ಎನ್ನಿರೋ, ಸಾರ ಬಂದೆ ಕಣಿಯ ಕೇಳಿರೋ ಎಂಬಿವೇ ಮೊದಲಾದ ಪಲ್ಲವಿಗಳಿವೆ. ಒಟ್ಟಿನಲ್ಲಿ ಧರ್ಮಗ್ಲಾನಿ ಆಗಿ ಅಧರ್ಮ ತಲೆ ಎತ್ತಿದಾಗ ಸಮಾಜದ ಪುನರುದ್ಧಾರಕ್ಕಾಗಿ 770 ವರ್ಷಗಳಿಗೊಮ್ಮೆ ಶಿವಶರಣರು ಮತ್ತೆ ಮತ್ತೆ ಬಂದು ಸ್ವಮತಧರ್ಮಬೋಧೆಯಿಂದ ಜನರನ್ನು ಉದ್ಧರಿಸುತ್ತಾರೆ ಎಂದು ಸಾಮಾನ್ಯ ಜನರಿಗೆ ಕೆಲವು ನಿರೂಪಣೆಗಳಿಂದ ತಿಳಿಯಹೇಳುವುದೇ ಈ ಕಾಲಜ್ಞಾನದ ಉದ್ದೇಶ. ಅಷ್ಟೇ ಅಲ್ಲದೆ ಕಾಲಜ್ಞಾನಗಳು ವಿವಿಧ ವಿಷಯಗಳಿಗೆ ಸಂಬಂಧಿಸಿದ್ದು ಜನರ ಆಕರ್ಷಣೆಯೂ ಇವುಗಳ ಮುಖ್ಯ ಗುರಿ ಎನ್ನಬಹುದು. ಕಲಿ ಪಾಪವಾದ ಕಾರಣ ಕಾಲಜ್ಞಾನವ ಹೇಳಬೇಕಾದೀತು ಎಂಬ ಅಕ್ಕಮಹಾದೇವಿಯ ವಚನ ಇದನ್ನು ಪುಷ್ಟೀಕರಿಸುತ್ತದೆ. ಕಾಲಜ್ಞಾನದ ಸ್ವರೂಪದ ಅರಿವಿಗಾಗಿ ಕೆಳಗೆ ಕೆಲವು ವಚನಗಳನ್ನು ಉದ್ಧರಿಸಿ ಕೊಟ್ಟಿದೆ.

1.ಹೈದರಾಬಾದದೊಳಗಿನ ತುರುಕರು ಬೊಬ್ಬಿಡುತ್ತ ತುರ್ಕಸ್ತಾನ ದೇಶದಲ್ಲಿ ದಿಲ್ಲಿಯ ಖಾನರಿಗೆ ಫಿರ್ಯಾದಿ ಮಾಡಿಕೊಂಡರು | ಆ ದಿಲ್ಲಿಯ ಖಾನರು ಹದಿನೆಂಟು ಲಕ್ಷ ಮಾರ್ಬಲ ಸಹಿತವಾಗಿ ಬರುವರು | ಆವಾಗ್ಗೆ ಬಹುಜನರು ಮಡಿಯುವರು | ಅವರು ಬರುವ ಕಾಲಕ್ಕೆ ಕೆಂದೂಳು ಮುಸುಕಿತ್ತು | ಸಣ್ಣ ನಾಮದವರು ಹೋಗುವರು (ಅಖಂಡಮುನಿ).

2. ಕಪ್ಪಡಿ ಸಂಗಮ ತಪ್ಪದೆ ಹೇಳಿದ | ಅಪ್ಪ ಬಸವಣ್ಣ ಬರುವುದನ್ನು ಸುಪ್ಪಿ | ಯೇಳುನೂರು ಯೆಪ್ಪತ್ತ ವರುಷಕ್ಕೆ ಬರುತಾನೆ ಸುಪ್ಪಿ | ಹದಿನೆಂಟು ಜಾತಿಯು ಶಿವಭಕ್ತರಾದಾರು | ಸದಮಲಭಕ್ತಿಜ್ಞಾನವಿಡಿದು ಸುಪ್ಪಿ | ನಂದಿಯ ಧ್ವಜಗಳು ತಮ್ಮ ಮನೆ ಮನೆಗೆ ಸುಪ್ಪಿ | ಬಸವಣ್ಣ ಬರುವಾಗ ಶಶಿಧರನ ಭಕ್ತರು ಕುಶಲದ ನುಡಿಗಳ ನುಡಿದಾರು ಸುಪ್ಪಿ | ಮನೆಮನೆ ಬಸವನುತ್ಸಾಹ ಮೆರೆದಾವು ಸುಪ್ಪಿ | (ನೀಲಲೋಚನೆ).

3. ಸಟೆಯಲ್ಲ ಶಿವಸಾಕ್ಷಿ | ಕಲ್ಯಾಣದ ವಳಗಣ ಕಲ್ಲುಚೇಳು ಧರೆಗಿಳಿದೀತು | ಎಂದು ಡಂಗೂರ ಹೊಯ್ಸಿದವರು | ಮುಂದೆ ವೀರವಸಂತ ಹುಟ್ಟುವಾಗ ಕಲ್ಲೆಲ್ಲ ಕನಕಮಯವಾದೀತು | ಬಳ್ಳಿ ಸೊಂಡೆಯೆಲ್ಲ ಮುತ್ತುರತ್ನಮಯವಾದಾವು | ಚಲದಂಕ ವೀರ ವಸಂತರಾಯ ಪುಟ್ಟುವಾಗ ತುಕನೂರಲ್ಲಿ ಕಲ್ಲುಕೋಳಿ ಕೂಗೀತು |.

4. ಅಂಗದೇಶದ ಪರಂಗೇರು ಬಂದು | ಶ್ರೀರಂಗಪಟ್ಟಣವ ತಕ್ಕೊಂಡು ಲೋಕವನು | ಭಂಗಪಡಿಶ್ಯಾರು ಸರ್ವಜ್ಞ (ಎಸ್.ಎನ್.ಕೆ.)

**ಕಾವಿ ಕಲೆ :** ಜನಸಾಮಾನ್ಯರು ಹಬ್ಬ ಆಚರಣೆಗಳ ಸಂದರ್ಭದಲ್ಲಿ ಮನೆ, ಮಠ, ಮಾಡು, ದೇವಾಲಯಗಳ ಮೇಲ್ಭಾವಣಿ, ಗೋಡೆಗಳ ಒಳಬದಿ ಹಾಗೂ ಹೊರಬದಿಗಳಿಗೆ, ಕಾವಿಹಿಟ್ಟಿನಿಂದ ಸಿದ್ಧಪಡಿಸಿದ ಬಣ್ಣದಿಂದ ಚಿತ್ತಾರ ಬಿಡಿಸುವ ಒಂದು ಜನಪದಕಲೆ; ಕರ್ನಾಟಕದ

ಕೃಷ್ಣನ ಸಾರಥ್ಯದಲ್ಲಿ ಅರ್ಜುನ

ಸಾಂಪ್ರದಾಯಿಕ ಕಲೆಗಳಲ್ಲಿ ಒಂದು. ಕ್ರಿ.ಪೂ.1500ರಲ್ಲಿ ಈಜಿಪ್ಟ್ ದೇಶದಲ್ಲಿ ಸತ್ತವರ ಸಮಾಧಿಗಳ ಮೇಲೆ (ಪಿರಮಿಡ್) ಕಾವಿಕಲೆಯ ಚಿತ್ರಗಳನ್ನು ರಚಿಸುತ್ತಿದ್ದರು. ಇದಲ್ಲದೆ ಎಟ್ರುಸ್ಕನ್ ಜನಾಂಗದವರು ತಮ್ಮ ಗುಹೆಗಳಲ್ಲಿ ಮೃತಪಟ್ಟವರ ನೆನಪಿಗಾಗಿ ಕಾವಿಬಣ್ಣದಿಂದ ಚಿತ್ರಬಿಡಿಸಿದರೆ, ಗ್ರೀಕ್ ಮತ್ತು ರೋಮನ್ನರು ತಮ್ಮ ಪಾತ್ರೆ-ಪರಡೆಗಳ ಮೇಲೆ ಪೌರಾಣಿಕ ಸನ್ನಿವೇಶದ ಚಿತ್ರಗಳನ್ನು ಕೆಂಬಣ್ಣದಿಂದಲೇ ಚಿತ್ರಿಸುತ್ತಿದ್ದರು. ಜರ್ಮನಿಯ ಸಂಶೋಧಕರಾದ ಗ್ರೆಟ್ಲಿಮಿಟರ್ ಭಾರತದಲ್ಲಿ ಗೋವದಲ್ಲಿ ಕಾವಿಕಲೆಯನ್ನು

ಅಭ್ಯಸಿಸುವಾಗ, ಈ ಕಲೆ ಮೂಲತಃ ಇಟಲಿಯ ಗ್ರಾಫಿಕ್ (ರೇಖಾಚಿತ್ರ) ಕಲೆಯಾಗಿದ್ದು, ಪೋರ್ಚುಗೀಸರು ಭಾರತಕ್ಕೆ ಬಂದಾಗ ತಮ್ಮೊಡನೆ ಈ ಕಲೆಯನ್ನು ತಂದರು ಎಂದು ಅಭಿಪ್ರಾಯಪಟ್ಟಿದ್ದಾರೆ.

ಗೌಡ ಸಾರಸ್ವತರೆಂದು ಗುರುತಿಸಿಕೊಂಡಿರುವ ಕೊಂಕಣಿ ಭಾಷಿಕರು ಗೋವ ಮತ್ತು ಕರ್ನಾಟಕದ ಕರಾವಳಿಯಲ್ಲಿ ನೆಲೆಸಿದ್ದರು. ಇವರು ಕರಾವಳಿಯ ಜೀವನಕ್ಕೆ ಒಗ್ಗಿಕೊಂಡು ತಮ್ಮ ಪ್ರಾಂತೀಯ ದೈವಗಳಾದ ಶಾಂತದುರ್ಗ ಮಂಗೇಶ, ಮ್ಹಾಳಸಾ, ನಾಗೇಶ, ರಾಮನಾಥ, ರವಳನಾಥ, ದಾಮೋದರ, ನರಸಿಂಹ, ಸಪ್ತಕೋಟೇಶ್ವರ, ಮಹಾಮಾಯಿ -ಹೀಗೆ ದೇವಾಲಯಗಳನ್ನು ನಿರ್ಮಿಸಿ ತಮ್ಮ ಸಂಸ್ಕೃತಿ ಅಭಿರುಚಿಗೆ ತಕ್ಕಂತೆ ಈ ಮಂದಿರಗಳನ್ನು ಕಾವಿಚಿತ್ರಗಳಿಂದ ಅಲಂಕರಿಸಿದರು. ಕರಾವಳಿ ಪ್ರದೇಶಗಳನ್ನು ಆಳುತ್ತಿದ್ದ ರಾಜಮಾಂಡಲಿಕರು ಹೊನ್ನಾವರ, ಭಟ್ಕಳ, ಬಸರೂರು, ಬಾರಕೂರು, ಬ್ರಹ್ಮಾವರ, ಮೂಲ್ಕಿ, ಮಂಗಳೂರು, ಉಲ್ಲಾಳ ಮುಂತಾದ ಕಡೆ ಕೊಂಕಣಿಗರಿಗೆ ಆಶ್ರಯನೀಡಿ, ದೇವಾಲಯಗಳ ಸ್ಥಾಪನೆಗೆ ಕಾರಣರಾದರು. ದೇವಾಲಯ ನಿರ್ಮಾಣದ ಸಂದರ್ಭದಲ್ಲಿ ಗೋವೆಯ ಸ್ಥಾನಿಕರಾದ ಗಾರೆಗಾರರು, ಗುಡಿಗಾರರು, ಪರಿಣತ ಶಿಲ್ಪಿಗಳನ್ನೆಲ್ಲ ಕೊಂಕಣಿಗರು ವಿಶ್ವಾಸದಿಂದ ಬರಮಾಡಿಕೊಂಡು, ದೇವಾಲಯಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ದೇವಾಲಯಗಳ ಹೊರಗೋಡೆ ಹಾಗೂ ಒಳಗೋಡೆಗಳಲ್ಲಿ ಕುಸ್ಸಿಪಟುಗಳು, ಕಾಳಗ, ಪ್ರಕೃತಿಯಲ್ಲಿನ ಪ್ರಾಣಿಪಕ್ಷಿಗಳು, ದ್ವಾರಪಾಲಕರು, ಕುಲದೇವತೆಗಳು, ಮೊದಲಾದ ರೇಖಾಚಿತ್ರ ಹಾಗೂ ಜಾಮಿತಿ ಚಿತ್ರಗಳನ್ನು ರಚಿಸುತ್ತ ಬಂದರು. ಈ ಚಿತ್ರಗಳಲ್ಲಿ ಕರ್ನಾಟಕದ ಭಿತ್ತಿ ಚಿತ್ರಗಳ ಸಾಮ್ಯ ಹೊಂದಿದ್ದು ರಾಮಾಯಣ, ಮಹಾಭಾರತ, ಭಾಗವತಗಳ ಸಾಮಾಜಿಕ ಸನ್ನಿವೇಶಗಳನ್ನು ಒಳಗೊಂಡಿವೆ. ಮೈಸೂರು ಒಡೆಯರ ಆಡಳಿತದ ಕಾಲದಲ್ಲಿ ಕಾವಿಚಿತ್ರಗಳು ಅಲಂಕಾರ ಸ್ಥಾನ ಪಡೆದಿದ್ದುವು. ಉತ್ತರ ಕನ್ನಡ ಜಿಲ್ಲೆಯ ಕುಮಟ, ಕಾರವಾರ, ಅಂಕೋಲ ಹಾಗೂ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಕುಂದಾಪುರ, ಮಂಗಳೂರು ದೇವಾಲಯಗಳಲ್ಲಿ ಈ ಕಲೆ ಇನ್ನೂ ಜೀವಂತವಾಗಿದೆ. (ಪಿ.ಜಿಜ.)

**ಕಾವೇರಿ :** ಕರ್ನಾಟಕದ ದಕ್ಷಿಣ ಭಾಗದಲ್ಲಿ ಹರಿಯುವ ಮುಖ್ಯ ನದಿ. ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನಲ್ಲಿ ಭಾಗಮಂಡಲದ ಸಮೀಪ ಬ್ರಹ್ಮಗಿರಿ (ನೋಡಿ) ಬೆಟ್ಟದಲ್ಲಿ ಕಾವೇರಿ ಹುಟ್ಟುತ್ತದೆ. ಇದರ ಉಗಮಸ್ಥಾನಕ್ಕೆ ತಲಕಾವೇರಿ (ನೋಡಿ) ಎಂದು ಹೆಸರು. ಅಲ್ಲಿಂದ ಮಡಿಕೇರಿ ತಾಲ್ಲೂಕಿನ ಬಾವಲಿಯವರೆಗೆ ಆಗ್ನೇಯಾಭಿಮುಖವಾಗಿ ಹರಿದು, ಮುಂದೆ ಈಶಾನ್ಯಾಭಿಮುಖವಾಗಿ ಮೊದಲು ವಿರಾಜಪೇಟೆ ತಾಲ್ಲೂಕಿನ ಉತ್ತರ ಗಡಿಯಾಗಿ ಅನಂತರ ಕೊಡಗಿನ ಪೂರ್ವ ಅಂಚಿನಲ್ಲಿ ಸೋಮವಾರಪೇಟೆ ತಾಲ್ಲೂಕಿನ ಶಿರಂಗಾಲದವರೆಗೂ ಪ್ರವಹಿಸಿ, ಅಲ್ಲಿಂದ ಪೂರ್ವಕ್ಕೆ ತಿರುಗಿ ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಅಲ್ಲಿ ರಾಮನಾಥಪುರದ ಮೂಲಕ ಸಾಗಿ, ಆಗ್ನೇಯಕ್ಕೆ ತಿರುಗಿ ಮೈಸೂರು ಜಿಲ್ಲೆಯನ್ನು ಹೊಕ್ಕು ಚುಂಚನಕಟ್ಟೆಯಲ್ಲಿ ಜಲಪಾತವಾಗಿ ಪರಿಣಮಿಸಿ ಕೃಷ್ಣರಾಜನಗರದ ಮೂಲಕ ಕೃಷ್ಣರಾಜಸಾಗರ ಕಟ್ಟೆಯನ್ನು ತಲುಪುತ್ತದೆ. ಮುಂದೆ ಮಂಡ್ಯ ಜಿಲ್ಲೆಯಲ್ಲಿ ಪೂರ್ವಕ್ಕೆ ಇದರ ಗಮನ. ಶ್ರೀರಂಗಪಟ್ಟಣದಲ್ಲಿ ಕವಲೊಡೆದು ಅದನ್ನೊಂದು ದ್ವೀಪವನ್ನಾಗಿಸಿ ಮತ್ತೆ ಸೇರಿ ಪುನಃ ಮೈಸೂರು ಜಿಲ್ಲೆಗೆ ಬರುತ್ತದೆ. ಇಲ್ಲಿ ತಿರುಮಕೂಡಲು ನರಸೀಪುರದವರೆಗೆ ಆಗ್ನೇಯಕ್ಕೆ ಹರಿದು, ಮುಂದೆ ಪೂರ್ವಕ್ಕೆ ತಿರುಗಿ ತಲಕಾಡನ್ನು ದಾಟಿ ಕೊಳ್ಳೇಗಾಲದ ಹತ್ತಿರ ಬರುತ್ತದೆ. ಮುಂದೆ ಕೊಳ್ಳೇಗಾಲ ತಾಲ್ಲೂಕನ್ನು ಮಂಡ್ಯ, ಬೆಂಗಳೂರು ಜಿಲ್ಲೆಗಳು ಮತ್ತು ತಮಿಳುನಾಡುಗಳಿಂದ ಬೇರ್ಪಡಿಸುವ ಗಡಿರೇಖೆಯಾಗುತ್ತದೆ. ಕೊಳ್ಳೇಗಾಲದಿಂದ ಈಶಾನ್ಯಾಭಿಮುಖವಾಗಿ ಹರಿದು ಶಿವಸಮುದ್ರದಲ್ಲಿ ಕವಲೊಡೆದು ಗಗನಚುಕ್ಕಿ ಭರಚುಕ್ಕಿಗಳಾಗಿ ದುಮುಕಿ ಮತ್ತೆ ಒಂದುಗೂಡಿ ಪೂರ್ವಗಾಮಿಯಾಗುತ್ತದೆ. ಕೊಳ್ಳೇಗಾಲ ತಾಲ್ಲೂಕಿನ ಈಶಾನ್ಯ ಮೂಲೆಯಲ್ಲಿ ಹೋಗೇನಕಲ್ಲಿನ ಬಳಿ ಮತ್ತೆ ದುಮುಕಿ ಇದ್ದಕ್ಕಿದ್ದಂತೆ ದಕ್ಷಿಣಕ್ಕೆ ತಿರುಗಿ ಮಾದೇಶ್ವರ ಗಿರಿ ಶ್ರೇಣಿಯ ಆಗ್ನೇಯ ಅಂಚಿನಲ್ಲಿ ಬೋಡಮಲ್ಲೈ ಬೆಟ್ಟದ ಬಳಿ ಕರ್ನಾಟಕದ ಎಲ್ಲೆಯನ್ನು ಬಿಟ್ಟು ತಮಿಳುನಾಡಿನತ್ತ ಸಾಗುತ್ತದೆ. ಅಲ್ಲಿಂದ ಮುಂದೆ ಆ ರಾಜ್ಯದ ಕೊಯಮತ್ತೂರು, ತಿರುಚ್ಚಿರಾಪಳ್ಳಿ, ತಂಜಾವೂರು ಜಿಲ್ಲೆಗಳ ಮೂಲಕ ಹರಿದು ಕಾವೇರಿಪಟ್ಟಣದ ಬಳಿ ಬಂಗಾಲ ಕೊಲ್ಲಿಯನ್ನು ಸೇರುತ್ತದೆ. (ಬಿ.ಎಂ.)

ಧುಮುಕುತ್ತಿರುವ ಕಾವೇರಿ, ಬಲಮುರಿ

ಭೂವೈಜ್ಞಾನಿಕ ದೃಷ್ಟಿಯಿಂದ ಕಾವೇರಿಯ ಓಟ ಕುತೂಹಲ ಕಾರಿಯಾದುದು. ಹುಟ್ಟುವುದು ಪಶ್ಚಿಮಘಟ್ಟಗಳ ನೆತ್ತಿಯಲ್ಲಿ, ಅದರ ಸ್ವಲ್ಪ ಪಶ್ಚಿಮದಲ್ಲಿಯೇ, ಅರಬ್ಬೀಸಮುದ್ರದಿಂದ ಅನತಿದೂರದಲ್ಲಿ. ಆದರೆ ಹರಿವು ಪೂರ್ವಾಭಿಮುಖವಾಗಿ. ಇದರಿಂದಾಗಿ ಮೊದಲು ಘಟ್ಟನೆತ್ತಿಯ ಪಶ್ಚಿಮ ಭಾಗವನ್ನು ಸ್ವಲ್ಪ ದೂರ ತೊಯ್ದು ಆ ಬೆಟ್ಟದ ಗೋಡೆಯನ್ನು ಸೀಳಿ ಪೂರ್ವಕ್ಕೆ ತಿರುಗುತ್ತದೆ. ಉಗಮಸ್ಥಾನದಿಂದ ದಿಢೀರನೆ ಇಳಿಜಾರಿನಲ್ಲಿ ವೇಗವಾಗಿ ನುಗ್ಗಿ ಸು.8ಕಿಮೀ ಅಂತರದಲ್ಲಿ 450ಮೀ ಕೆಳಕ್ಕೆ ಬಂದುಬಿಡುತ್ತದೆ. ಭಾಗಮಂಡಲದ ಬಳಿ ಈ ಓಟವನ್ನು ಇದ್ದಕ್ಕಿದಂತೆ ಕಳೆದುಕೊಳ್ಳುತ್ತದೆ. ಕೊಡಗಿನ ಭಾಗ ಬೆಟ್ಟಪ್ರದೇಶ, ಹೊಸ ನದಿಗಳಲ್ಲಿ ಕಾಣುವ ಕಡಿದಾದ ದಂಡೆಗಳೂ ಇಲ್ಲಿವೆ. ಆದರೆ ನದಿಯ ಓಟ ಮಾತ್ರ ಮಂದ. ಹರಿವಿನ ಪ್ರದೇಶದ ಮಟ್ಟ ಬಹಳ ಸ್ವಲ್ಪ ಸ್ವಲ್ಪವಾಗಿ ಇಳಿಯುತ್ತದೆ. ಇಲ್ಲಿ ನದಿ ಹಲವಾರು ಸುತ್ತುಬಳಸುಗಳಿಂದ ಕೂಡಿದೆ. ಹರಿವಿನ ಗತಿಯನ್ನು ನಿರ್ಧರಿಸುವಲ್ಲಿ ತಳಶಿಲೆಯ ಪ್ರಭಾವವೂ ಬಹಳ ಕಡಿಮೆ. ಈ ರೀತಿಯಲ್ಲಿ ಜವ್ವನದ ನದಿ ಮತ್ತು ವೃದ್ಧ ನದಿಗಳ ಸ್ವರೂಪಗಳೆರಡನ್ನೂ ಒಳಗೊಂಡಿರುವ ಇಲ್ಲಿಯ ಕಾವೇರಿ ಒಂದು ವೈಜ್ಞಾನಿಕ ಸಮಸ್ಯೆ. ಬಹುಶಃ ವೃದ್ಧನದಿಯೊಂದು ಈಚಿನ ಭೂವ್ಯತ್ಯಾಸಗಳಿಂದ ಪುನರ್ಯೌವ್ವನವನ್ನು ಪಡೆದಿರಬಹುದು ಎಂದು ಅನ್ನಿಸುತ್ತದೆ. ಮುಂದೆ ಮೈಸೂರು ಪ್ರಸ್ಥಭೂಮಿಯಲ್ಲಿ ಬಳಸಿ ಬಳಸಿ ಹರಿಯುತ್ತ ಎರಡೂ ದಡಗಳಲ್ಲಿ ವಿಶಾಲವಾದ ಮೆಕ್ಕಲು ಹರವುಗಳನ್ನು ಸೃಷ್ಟಿಸಿದೆ. ಇಲ್ಲಿ ಪಾತ್ರ ಅಗಲ, ಸಾಮಾನ್ಯವಾಗಿ ಬಂಡೆತಳದಿಂದ ಕೂಡಿರುತ್ತದೆ. ಆದರೆ ಮೈಸೂರು ಜಿಲ್ಲೆಯ ಪೂರ್ವಭಾಗದಲ್ಲಿ ಹರಿಯುವಾಗ ವಿಶಾಲವಾದ ಮರಳ ಹರವುಗಳನ್ನು ಸೃಷ್ಟಿಸಿರುವುದೂ ಉಂಟು. ಇಲ್ಲಿಯೂ ಈ ಅಂಶಗಳು ನದಿಯ ಪ್ರಾಚೀನತೆ ಅಥವಾ ವೃದ್ಧತ್ವವನ್ನು ಸೂಚಿಸುವಂತಿದ್ದರೂ ಚುಂಚನ ಕಟ್ಟೆಯ ಬಳಿಯಲ್ಲೊಮ್ಮೆ ಸುಮಾರು 27ಮೀಗಳಷ್ಟು ಕೆಳಗೆ ದುಮುಕುತ್ತದೆ. ಪುನಃ ಶಿವಸಮುದ್ರದಲ್ಲಿ 100ಮೀ ಪ್ರಪಾತಕ್ಕೆ ಇಳಿಯುತ್ತದೆ. ಶಿವಸಮುದ್ರದಿಂದ ಮುಂದೆ ನದಿಯ ಓಟ ಅತಿ ತೀವ್ರ. ಹಿಂದಿನ ಮಂದಗಮನಕ್ಕೆ ನೇರವಿರುದ್ಧ. ಅಲ್ಲಿ ಬಹುವೇಗದಿಂದ ಹರಿದು 80ಕಿಮೀಗಳಷ್ಟು ದೂರದಲ್ಲಿ 800ಮೀ ಕೆಳಕ್ಕೆ ಇಳಿದುಬಿಡುತ್ತದೆ. ಅಲ್ಲದೆ ಈ ಭಾಗದ ಪಾತ್ರ ಹಿಂದಿನಂತೆ ವಿಶಾಲವೂ ಅಲ್ಲ. ಇಲ್ಲಿಹರಿಯುವ ನೀರಿನ ಅಗಾಧ ಪ್ರಮಾಣಕ್ಕೆ ಸಾಲದೆಂಬಷ್ಟು ಕಿರಿದಾಗಿದೆ. ಸಹಜವಾಗಿ ಅತಿ ಗಟ್ಟಿಬಂಡೆಗಳೂ ನೀರಿನ ಹೊಡೆತಕ್ಕೆ ಸಿಕ್ಕಿ ಸವೆದು ಕೊರಕಲುಗಳಾಗಿವೆ. ಕೆಲವೆಡೆ ಅಡಿ ಬಂಡೆಗಳಲ್ಲಿ ಕೊರೆತದಿಂದಾಗಿ 12-15ಮೀ ಆಳದ ಗುಂಡಿಗಳು ಇವೆ. ನದಿಯ ಈ ಸ್ವರೂಪವನ್ನು ಮೇಕೆದಾಟಿನಲ್ಲಿ ಚೆನ್ನಾಗಿ ಕಾಣಬಹುದು. ಕಾವೇರಿಯ ಇನ್ನೊಂದು ವಿಚಿತ್ರವೆಂದರೆ, ಇದೇ ಪ್ರಧಾನ ನದಿಯಾದರೂ ಈ ನದಿಯ ಹರಿವಿನಲ್ಲಿ ಓಟದ ದಿಕ್ಕಿನ ಮುಖ್ಯ ಬದಲಾವಣೆಗಳು ಬೇರೆ ನದಿಗಳು ಕೂಡುವಲ್ಲಿ

ಮಾತ್ರ ಕಂಡುಬರುತ್ತವೆ. ಕಾವೇರಿ ಅದಕ್ಕೂ ಹಿಂದೆ ಇದ್ದ ಪ್ರಾಚೀನ ನದಿಗಳ ಪಾತ್ರವನ್ನು ಈಚೆಗೆ (ಭೂ ವೈಜ್ಞಾನಿಕ ಯುಗದಲ್ಲಿ ತನ್ನದಾಗಿ) ಮಾರ್ಪಡಿಸಿಕೊಂಡಿರಬಹುದು ಎಂಬುದು ವಿಜ್ಞಾನಿಗಳ ಅಭಿಪ್ರಾಯ.

ಕರ್ನಾಟಕದ ಭಾಗದಲ್ಲಿ 20 ನದಿಗಳು ಕಾವೇರಿಯನ್ನು ಕೂಡುತ್ತವೆ. ಹೆಚ್ಚಿನ ಉಪನದಿಗಳು ಪಶ್ಚಿಮ ಬೆಟ್ಟಗಳ ಸಾಲಿನಲ್ಲಿ ಹುಟ್ಟುವುವು. ಕೊಡಗು ಪ್ರದೇಶದಲ್ಲಿನ ಮೊದಲ ಉಪನದಿ ಕನ್ನಿಕೆ. ಉತ್ತರ ಭಾಗದಿಂದ ಹರಿದುಬರುವ ಈ ನದಿ ಭಾಗಮಂಡಲದಲ್ಲಿ ಸಂಗಮವಾಗುತ್ತದೆ. ಅನಂತರ ಅಲ್ಲಿಂದ ಸು.9ಕಿಮೀ ಕೆಳಗೆ ಎಡಕಲ್ಲ ಬಳಿ ನಿಡುಹೊಳೆ, 9ಕಿಮೀ ಕೆಳಗೆ ಚರಂದೇತಿ ಬಳಿ ಚೆರುವು ಹೊಳೆ, 16ಕಿಮೀ ಕೆಳಗೆ ಪುಲಿಕೋಟಾ ಬಳಿ ತಂತ್ರಿ ನದಿ, ಮುಂದೆ ನಾಪೊಕ್ಲುವಿನ ಬಳಿ ಕಕ್ಕಬೆ ಹೊಳೆ ಸೇರುತ್ತವೆ. ಇವೆಲ್ಲ ದಕ್ಷಿಣದಿಂದ ಬಂದು ಸೇರುವ ಉಪನದಿಗಳು. ಮುಂದೆ ರಂಗಸಮುದ್ರದ ಬಳಿ ಸೇರುವ ಚೆಕ್ಲಿ ಹೊಳೆ, ಕುಶಾಲನಗರದಿಂದ ಸ್ವಲ್ಪ ಮೇಲೆ ಕೂಡಿಗೆ ಬಳಿ ಸೇರುವ ಹಾರಂಗಿ ಇವು ಉತ್ತರ ಭಾಗದಲ್ಲಿ ಕೂಡುವ ಉಪನದಿಗಳು. ಅನಂತರದ ದೊಡ್ಡ ಉಪನದಿ ಹೇಮಾವತಿ. ಮೂಡಿಗೆರೆ ತಾಲ್ಲೂಕಿನಲ್ಲಿ ಹುಟ್ಟಿ ಸಕಲೇಶಪುರದ ಕಡೆಯಿಂದ ಬರುವ ಈ ನದಿ ಅಕ್ಕಿಹೆಬ್ಬಾಳಿನಿಂದ ಸ್ವಲ್ಪ ಕೆಳಗೆ ತಿಪ್ಪೂರಿನ ಬಳಿ ಕೃಷ್ಣರಾಜಸಾಗರದ ಹಿನ್ನೀರಿನ ಹರವನ್ನು ಸೇರುತ್ತದೆ. ಮುಂದೆ ದಕ್ಷಿಣದಿಂದ ಬರುವ ಲಕ್ಷ್ಮಣತೀರ್ಥ ಇದೇ ಹಿನ್ನೀರ ಹರವನ್ನು ಕೃಷ್ಣರಾಜನಗರದಿಂದ ಸು.12ಕಿಮೀ ಪೂರ್ವದಲ್ಲಿ ಸೇರುತ್ತದೆ. ಇಲ್ಲಿಂದ ಮುಂದಿನ ಕಾವೇರಿಯ ಉತ್ತರ ದಂಡೆಯಿಂದ ಬಂದು ಸೇರುವ ಉಪನದಿಗಳೆಲ್ಲ ಕಾವೇರಿ ಕೃಷ್ಣಾ ನದೀವಲಯಗಳ ನೀರ್ಬೇರ್ಪಡೆ ಮಾಡುವ ಬೆಂಗಳೂರು ಬಾಣಾವರ ಬೆನ್ನುಬೆಟ್ಟಗಳ ಶ್ರೇಣಿಯಿಂದ ಹುಟ್ಟಿ ಬರುವುವು. ಅವುಗಳಲ್ಲಿ ಮೊದಲನೆಯದು ಲೋಕಪಾವನಿ. ಶ್ರೀರಂಗಪಟ್ಟಣದ ಬಳಿ ಕರಿಘಟ್ಟದ ಹತ್ತಿರ ಸಂಗಮ. ಮುಂದೆ ಸಂಗಮವಾಗುವ ದೊಡ್ಡ ನದಿ ಕಪಿಲಾ. ಕೇರಳದ ವೈನಾಡಿನಿಂದ ಹರಿದು ಬರುವ ಈ ನದಿ ಕೂಡುವುದು ತಿರುಮಕೂಡಲು ನರಸೀಪುರದಲ್ಲಿ. ಇಲ್ಲಿಂದ ಮುಂದಿನ, ದಕ್ಷಿಣದಿಂದ ಬರುವ ಕಾವೇರಿಯ ಉಪನದಿಗಳೆಲ್ಲ ಕರ್ನಾಟಕದ ದಕ್ಷಿಣದಂಚಿನ, ಮಾದೇಶ್ವರ - ಬಿಳಿಗಿರಿರಂಗ - ನೀಲಗಿರಿಬೆಟ್ಟ ಶ್ರೇಣಿಯಿಂದ ಹರಿದು ಬರುವುವು. ತಿರುಮಕೂಡಲು ನರಸೀಪುರದಿಂದ ಮುಂದೆ ಕೂಡುವ ಮೊದಲ ಉಪನದಿ ಸುವರ್ಣಾವತಿ. ತಲಕಾಡಿನಿಂದ ಸ್ವಲ್ಪ ಕೆಳಗೆ ಕೊಳ್ಳೇಗಾಲ ತಾಲ್ಲೂಕಿನ ಹಂಪಾಪುರದ ಹತ್ತಿರ ಕಾವೇರಿಯ ಬಲದಂಡೆಯಲ್ಲಿ ಅದರ ಸಂಗಮ. ಅನಂತರ ಉತ್ತರದಿಂದ ಬರುವ ಶಿಂಷಾ ಶಿವಸಮುದ್ರದಿಂದ ಸು.10ಕಿಮೀ ಕೆಳಗೆ ಸೇರುತ್ತದೆ. ಮುಂದಿನದು ಬೆಂಗಳೂರು ಜಿಲ್ಲೆಯಿಂದ ಹರಿದುಬರುವ ಅರ್ಕಾವತಿ. ಇದು ಕೂಡುವುದು ಮೇಕೆದಾಟಿನಿಂದ ಸು.5ಕಿಮೀ ಮೇಲೆ ಸಂಗಮ ಎಂಬಲ್ಲಿ. ಮುಂದಿನವು ಚಿಕ್ಕ ನದಿಗಳು, ಹಳ್ಳಗಳು. ಎಲ್ಲವೂ ಕಾವೇರಿಯ ಬಲದಂಡೆಯ ಉಪನದಿಗಳು. ಇವುಗಳಲ್ಲಿ ಬಿಳಿಗಿರಿರಂಗನ ಬೆಟ್ಟದಿಂದ ಹರಿದುಬರುವ ಉಡುತೊರೆ ಹಳ್ಳ ಸ್ವಲ್ಪ ದೊಡ್ಡದು. ಅನಂತರದವು ಮಾದೇಶ್ವರ ಬೆಟ್ಟದಿಂದ ಹುಟ್ಟಿ ಹರಿಯುವುವು. ಅವು ಕ್ರಮವಾಗಿ ಗಿಲ್ಲಿಗುಳಿ ಹಳ್ಳ, ಗುಳಿ ಹಳ್ಳ, ಗುಳಿಯಾತನೂರು ಹಳ್ಳ, ಯೇಲಕ್ಕಿಯಾತು ಹಳ್ಳ. ಕೊನೆಯಲ್ಲಿ, ಕಾವೇರಿ ಕರ್ನಾಟಕದ ಎಲ್ಲೆಯನ್ನು ಬಿಡುವಲ್ಲಿ ಕೊಳ್ಳೇಗಾಲ ತಾಲ್ಲೂಕಿನ ದಕ್ಷಿಣ ಗಡಿಯಾಗಿ ಹರಿಯುವ ಪಾಲಾರ್ ಎಂಬ ಸಣ್ಣ ನದಿ ಕಾವೇರಿಯನ್ನು ಸಂಧಿಸುತ್ತದೆ.

ಕಾವೇರಿ ನದಿಯ ಒಟ್ಟು ಹರಿವಿನ ಉದ್ದ ಸು.760ಕಿಮೀ. ಉಗಮದಿಂದ ಕರ್ನಾಟಕದ ಎಲ್ಲೆಯನ್ನು ಬಿಡುವವರೆಗಿನ ಕಾವೇರಿಯ ಹರಿವಿನ ಒಟ್ಟು ಉದ್ದ ಸು.400ಕಿಮೀ. ಮುಖ್ಯ ಉಪನದಿಗಳೂ ಸೇರಿದಂತೆ ಕಾವೇರಿ ವಲಯದ ನದಿಗಳ ಒಟ್ಟು ಉದ್ದ ಸು.1100ಕಿಮೀ. ಕರ್ನಾಟಕದಲ್ಲಿನ ಕಾವೇರಿ ಕಣಿವೆಯ ವಿಸ್ತಾರ ಸು.30,000ಚ.ಕಿಮೀ.

ಏಪ್ರಿಲ್-ಮೇ ತಿಂಗಳ ಸುಮಾರಿನಲ್ಲಿ ಬೀಳುವ ಮಳೆಯಿಂದ ಹೇಮಾವತಿ, ಕಪಿಲಾ, ಅರ್ಕಾವತಿ, ಶಿಂಷಾ ಮೊದಲಾದ ನದಿಗಳಲ್ಲಿ ಸ್ವಲ್ಪ ಮಟ್ಟಿನ ಪ್ರವಾಹವಿರುತ್ತದೆ. ಇದರಿಂದ ಕಾವೇರಿಯಲ್ಲೂ ಆಗಾಗ್ಗೆ ಸ್ವಲ್ಪ ಹೆಚ್ಚು ನೀರು ಹರಿಯುವುದುಂಟು. ಜೂನ್‌ನಿಂದ ಸೆಪ್ಟಂಬರಿನವರೆಗೆ ಪಶ್ಚಿಮಘಟ್ಟದಲ್ಲಿ ವಿಶೇಷ ಮಳೆಯಾಗುವುದರಿಂದ ಆ ಕಾಲದಲ್ಲಿ ಅದರ ಉಪನದಿಗಳಲ್ಲಿ ಮುಖ್ಯವಾದ ಕಪಿಲಾ, ಹೇಮಾವತಿ ಮತ್ತು ಲಕ್ಷ್ಮಣ ತೀರ್ಥಗಳಲ್ಲೂ ಪ್ರವಾಹವಿದ್ದು ಕಾವೇರಿ ತುಂಬಿ ಹರಿಯುತ್ತದೆ. ಅನಂತರ ನೀರಿನ ಪ್ರಮಾಣ ಕ್ರಮೇಣ ಇಳಿಮುಖವಾಗುತ್ತದೆ.

ಕಾವೇರಿ ಪ್ರತಿಮೆ, ಕೃಷ್ಣರಾಜಸಾಗರ

ಕಾವೇರಿ ನದಿಗೆ ಅಡ್ಡಲಾಗಿ ಅನೇಕ ಅಣೆಕಟ್ಟೆಗಳನ್ನು ಕಟ್ಟಿ ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಳ್ಳಲಾಗಿದೆ. ಕಾವೇರಿ ನದಿ ಬಯಲು ಪ್ರದೇಶವನ್ನು ಸೇರುವೆಡೆಯಿಂದ ಶಿವಸಮುದ್ರದವರೆಗೂ ನದಿಯ ಇಕ್ಕೆಲಗಳಲ್ಲೂ ವಿಶಾಲವಾದ ಮೆಕ್ಕಲು ಹರವುಗಳೂ ಇದ್ದು, ನೀರಾವರಿ ಸೌಕರ್ಯವೂ ಇರುವುದರಿಂದ ಈ ಭಾಗ ಸಂಪದ್ಭರಿತವಾಗಿ ಬೆಳೆಯಲು ಅವಕಾಶವಾಗಿದೆ. ಕೃಷ್ಣರಾಜಸಾಗರ ಕಟ್ಟೆಯನ್ನು ಬಿಟ್ಟರೆ ಮಿಕ್ಕವೆಲ್ಲ ಚಿಕ್ಕ ಅಣೆಕಟ್ಟುಗಳು. ಹಲವು ಬಹು ಪ್ರಾಚೀನವಾದವು. ಕಾವೇರಿಯ ಅಣೆಕಟ್ಟುಗಳಲ್ಲಿ ಮೊದಲನೆಯದು ಕೃಷ್ಣರಾಜ ಅಣೆಕಟ್ಟು, ಹಾಸನ ಜಿಲ್ಲೆಯಲ್ಲಿ ರಾಮನಾಥಪುರದ ಪಶ್ಚಿಮಕ್ಕೆ ಸು.5ಕಿಮೀ, ದೂರದಲ್ಲಿ ಕಟ್ಟೇಪುರ ಎಂಬಲ್ಲಿ ಕಟ್ಟಲಾಗಿದೆ. ಇದರ ಎಡದಂಡೆಯಿಂದ ಹೊರಡುವ ರಾಮನಾಥಪುರ ನಾಲೆ ರಾಮನಾಥಪುರ, ಬಸವಾಪಟ್ಟಣದ ಮೂಲಕ ಕಲ್ಲಾಪುರದವರೆಗೆ ನೀರುಣಿಸುತ್ತದೆ. ಬಲದಂಡೆಯ ಕಟ್ಟೆಪುರನಾಲೆ ಮಲ್ಲಿನಾಥಪುರ, ರುದ್ರಪಟ್ಟಣಗಳ ಮೂಲಕ ಸುಮಾರು ಚುಂಚನಕಟ್ಟೆಯ ಹತ್ತಿರದವರೆಗೂ ಬರುತ್ತದೆ. ಚುಂಚನಕಟ್ಟೆಯಿಂದ ಸು.12ಕಿಮೀ ಮೇಲೆ ಕೃಷ್ಣರಾಜನಗರ ತಾಲ್ಲೂಕು ಚಳ್ಳೂರು ಬಳಿ ಇರುವ ಚಾಮರಾಜಕಟ್ಟೆ (ಅಳಲೆಕಟ್ಟೆ) ಎರಡನೆಯದು. ಇಲ್ಲಿಂದ ಹೊರಡುವ ಕಾವೇರಿಯ ಎಡದಂಡೆಯ ಚಾಮರಾಜ ನಾಲೆ ಸಾಲಿಗ್ರಾಮ, ಮಿರ್ಲೆ ಗಂಧನಹಳ್ಳಿ ಮೂಲಕ ಕೃಷ್ಣರಾಜಸಾಗರದ ಹರವಿಗೆ ಸೇರುತ್ತದೆ; ಬಲದಂಡೆಯ ನಾಲೆ ಕೃಷ್ಣರಾಜನಗರದ ಮೂಲಕ ಅತ್ತಿಕುಪ್ಪೆಯವರೆಗೆ ಸಾಗುತ್ತದೆ. ಮುಂದೆ ಚುಂಚನಕಟ್ಟೆಯ ಬಳಿಯಲ್ಲೆ ಎರಡು ಅಣೆಕಟ್ಟುಗಳಿವೆ. ಅವುಗಳಲ್ಲಿ ಮೊದಲನೆಯದು ಹನುಮಂತಕಟ್ಟೆ, ಇದರ ಎಡದಂಡೆಯಿಂದ ತೆಗೆದಿರುವ ಮಿರ್ಲೆ ನಾಲೆ ಮುಂದೆ ಹೊಸನಾಲೆ, ಹಿರೇನಾಲೆ, ಅತ್ತಿಕಟ್ಟೆನಾಲೆಗಳಾಗಿ ಕವಲೊಡೆದು ಮಿರ್ಲೆ, ಗಂಧನಹಳ್ಳಿ ಮೂಲಕ ಸಾಗಿ ಕೃಷ್ಣರಾಜಸಾಗರದ

ಹಿನ್ನೀರನ್ನು ಸೇರುತ್ತವೆ. ಈ ಕಟ್ಟೆ ಚಿಕ್ಕದೇವರಾಜ ಒಡೆಯರ ಕಾಲದ ರಚನೆ; ಪೂರ್ಣಯ್ಯನವರು ಮತ್ತಷ್ಟು ದುರಸ್ತಿ ಮಾಡಿಸಿದರು. ಹನುಮಂತಕಟ್ಟೆಯಿಂದ ಕೇವಲ 200ಮೀ ಕೆಳಗಿರುವುದು ಚುಂಚನಕಟ್ಟೆ ಅಣೆಕಟ್ಟು (ಶ್ರೀರಾಮದೇವರ ಅಣೆಕಟ್ಟು) ಚುಂಚನಕಟ್ಟೆ ಜಲಪಾತದಿಂದ ಮೇಲೆ ಸ್ವಲ್ಪ ದೂರದಲ್ಲಿದೆ. ಇಲ್ಲಿಂದ ಬಲದಂಡೆಯಲ್ಲಿ ರಾಮಸಮುದ್ರ ನಾಲೆ ಹೊರಟು ಕೃಷ್ಣರಾಜನಗರದ ಮೂಲಕ ತಿಪ್ಪೂರಿನವರೆಗೆ ಸಾಗಿ ಕೃಷ್ಣರಾಜಸಾಗರ ಹರವನ್ನು ಸೇರುತ್ತದೆ. ಇಲ್ಲಿಂದ ಮುಂದೆ ಅಡಗೂರು ಕಟ್ಟೆ ಎಂಬುದಿತ್ತು. ಈಗ ಕೃಷ್ಣರಾಜಸಾಗರದ ಹಿನ್ನೀರಿನಲ್ಲಿ ಮುಳುಗಿದೆ. ಅನಂತರದ್ದು ಪ್ರಸಿದ್ಧ ಕೃಷ್ಣರಾಜಸಾಗರ (ನೋಡಿ). ಇಲ್ಲಿಂದ ಬಲ-ಎಡದಂಡೆಗಳಲ್ಲಿ ಹೊರಡುವ ನಾಲೆಗಳು ಮಂಡ್ಯ ಜಿಲ್ಲೆಯ ಬಹುಭಾಗವನ್ನು ಸಮೃದ್ಧವಾಗಿ ಮಾಡಿವೆ. ಕೃಷ್ಣರಾಜಸಾಗರದಿಂದ ಕೇವಲ 3ಕಿಮೀ ಕೆಳಗೆ ಸೀತಾಪುರದ ಬಳಿ ಮಾಡದಕಟ್ಟೆ ಇದೆ. ಈ ಚಿಕ್ಕ ಅಣೆಕಟ್ಟಿನಿಂದ ಎಡದಂಡೆಯಲ್ಲಿ ಹೊರಡುವ ಚಿಕ್ಕದೇವರಾಯ ನಾಲೆ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಹರವು, ಕ್ಯಾತನಹಳ್ಳಿ, ಪಾಂಡವಪುರ, ಕರಿಘಟ್ಟ, ಸೆಟ್ಟಿಹಳ್ಳಿ, ಅರಕೆರೆ ಮೂಲಕ ಸು.12ಕಿಮೀ ದೂರ ಸಾಗುತ್ತದೆ. ಈ ಕಟ್ಟೆ ಚಿಕ್ಕ ದೇವರಾಯ ಒಡೆಯರ ಕಾಲದ ರಚನೆ. ಆ ಕಟ್ಟೆಯಿಂದ ಕೆಲವೇ ಮೀಟರುಗಳ ಕೆಳಗೆ ದೇವರಾಯ ಅಣೆಕಟ್ಟಿದೆ. ಇಲ್ಲಿಂದ ಹೊರಡುವ ನಾಲೆ ಬಲದಂಡೆಯಲ್ಲಿ ಪಾಲಹಳ್ಳಿಯವರೆಗೆ ಸು.12ಕಿಮೀಗಳಷ್ಟು ದೂರ ಮಾತ್ರ ಹೋಗುತ್ತದೆ. ಮತ್ತಷ್ಟು ಕೆಳಗೆ ಬೆಳಗೊಳದಿಂದ ಸು.3ಕಿಮೀ ದೂರದಲ್ಲಿ ಬಲಮುರಿ ಅಣೆಕಟ್ಟಿದೆ. ಇಲ್ಲಿಂದ ಹೊರಡುವ ವಿರಜಾ ನದಿ ನಾಲೆ ಸು.60ಕಿಮೀ ಉದ್ದವಿದೆ. ಪಾಲಹಳ್ಳಿ, ಕಳಸ್ತವಾಡಿ, ನಾಗನಹಳ್ಳಿ, ಹೆಬ್ಬಡಿ ಮೂಲಕ ಹರಿದು ಅಂಕನಹಳ್ಳಿಯ ಬಳಿ ಕೊನೆಗೊಳ್ಳುತ್ತದೆ. ಅಲ್ಲಿಂದ ಮತ್ತಷ್ಟು ಕೆಳಗೆ ಬಂಗಾರದೊಡ್ಡಿ ಅಣೆಕಟ್ಟಿದೆ. ಇದು ಕಾವೇರಿಯ ಶಾಖೆಯಾದ ಪಶ್ಚಿಮವಾಹಿನಿಗೆ ಅಡ್ಡಲಾಗಿದೆ. ಕಟ್ಟೆಯ ಎಡದಂಡೆಯಿಂದ ಹೊರಡುವ ಬಂಗಾರದೊಡ್ಡಿ ನಾಲೆ ನೀರ್ಸೇತುವೆಯೊಂದರ ಮೂಲಕ ಕಾವೇರಿಯ ಬಲ ಕವಲನ್ನು ದಾಟಿ ಶ್ರೀರಂಗಪಟ್ಟಣವನ್ನು ತಲುಪಿ ಅಲ್ಲಿ ಮೂರು ಕವಲಾಗುತ್ತದೆ. ಒಂದು ಕವಲು ಕೋಟೆಯೆಡೆಗೆ, ಇನ್ನೊಂದು ದರಿಯಾದೌಲತ್ತಿಗೆ, ಮತ್ತೊಂದು ಗುಂಬಜಿನವರೆಗೆ -ಹೀಗೆ ಸಾಗುತ್ತವೆ. ಶ್ರೀರಂಗಪಟ್ಟಣ ದ್ವೀಪದಿಂದ ಮತ್ತಷ್ಟು ಕೆಳಗೆ ರಾಮಸ್ವಾಮಿ ಕಟ್ಟೆ ಇದೆ. ಇಲ್ಲಿಂದ ಎಡದಂಡೆಯಲ್ಲಿ ಹೊರಡುವ ರಾಮಸ್ವಾಮಿ ನಾಲೆ ಸು.50ಕಿಮೀಗಳಷ್ಟು ದೂರ ಬನ್ನೂರು, ಸೋಸಲೆ ಮೂಲಕ ಸುಮಾರು ತಲಕಾಡಿನ ಹತ್ತಿರದವರೆಗೂ ಹೋಗುತ್ತದೆ. ಬಲದಂಡೆಯದು ರಾಜಪರಮೇಶ್ವರಿ ನಾಲೆ. ಇದು ಸು.30ಕಿಮೀ ಉದ್ದವಿದ್ದು ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ರಂಗಸಮುದ್ರ, ಗರ್ಗೇಶ್ವರಿ ಮೂಲಕ ತಿರುಮಕೂಡಲಿನವರೆಗೆ ಹೋಗುತ್ತದೆ. ತಲಕಾಡಿನ ಬಳಿ ಮಾಧವಮಂತ್ರಿ ಅಣೆಕಟ್ಟಿದೆ. ನೀರಾವರಿಗೆ ಉಪಯೋಗವಾಗುವ ಕರ್ನಾಟಕ ಭಾಗದ ಕಾವೇರಿ ಅಣೆಕಟ್ಟುಗಳಲ್ಲಿ ಇದೇ ಕೊನೆಯದು. ಇದು 14ನೆಯ ಶತಮಾನದಲ್ಲಿ ರಚಿತವಾದದ್ದು. ಇದರ ಎಡದಂಡೆಯಿಂದ ನಾಲೆ ಹೊರಡುತ್ತದೆ. ಇದು ತಲಕಾಡಿನ ಮೂಲಕ ಸಾಗಿ ಮುಂದೆ ಮೂರು ಕವಲುಗಳಾಗಿ ಒಡೆಯುತ್ತದೆ. ಮುಖ್ಯ ಕವಲು ಶಿವಸಮುದ್ರದವರೆಗೂ ಹೋಗುತ್ತದೆ. ಶಿವಸಮುದ್ರದ ಬಳಿಯಲ್ಲಿ ಜಲಪಾತದಿಂದ ಸ್ವಲ್ಪ ಮೇಲೆ ವಿದ್ಯಾದುತ್ಪಾದನ ಕೇಂದ್ರಕ್ಕೆ ನೀರೊದಗಿಸುವ ಸಲುವಾಗಿ ಚಿಕ್ಕ ಅಣೆಕಟ್ಟೆಯೊಂದನ್ನು ಕಟ್ಟಲಾಗಿದೆ.

ಕಾವೇರಿ ದೊಡ್ಡ ನದಿಯಾದರೂ ಬೇಸಗೆ ಕಾಲದಲ್ಲಿ ನೀರು ಕಡಿಮೆ ಇರುವುದರಿಂದ ನದಿಯನ್ನು ಸುಲಭವಾಗಿ ಹಾಯಬಹುದು. ಕೆಲವೆಡೆಗಳಲ್ಲಿ ಎರಡು ದಡಗಳ ಸಂಪರ್ಕಕ್ಕೆ ದೋಣಿ ಅಥವಾ ಹರಿಗೋಲುಗಳನ್ನು ಉಪಯೋಗಿಸಲಾಗುತ್ತದೆ. ವರ್ಷದ ಎಲ್ಲ ಕಾಲದಲ್ಲೂ ಉಪಯೋಗಿಸಬಹುದಾದ ಹಲವು ಸೇತುವೆಗಳನ್ನೂ ಕಾವೇರಿಗೆ ಕಟ್ಟಲಾಗಿದೆ. ಉಗಮಸ್ಥಾನದಿಂದ ಆರಂಭಿಸಿದರೆ ಮೊದಲನೆಯದು ಕೊಡಗಿನ ಸಿದ್ದಾಪುರದ ಬಳಿ ಇದೆ. ಇದು ವಿರಾಜಪೇಟೆ - ಕುಶಾಲನಗರಗಳಿಗೆ ಸಂಪರ್ಕ ಒದಗಿಸುತ್ತದೆ. ಎರಡನೆಯದು ಕುಶಾಲನಗರದ್ದು (ಮೈಸೂರು - ಮಡಿಕೇರಿ ರಸ್ತೆ ಇದನ್ನು ಹಾಯುತ್ತದೆ). ಮುಂದಿನ ಸೇತುವೆಗಳು ರಾಮನಾಥಪುರದ ಬಳಿ ಕೇರಳಾಪುರ, ಚುಂಚನಕಟ್ಟೆ ಮತ್ತು ಕೃಷ್ಣರಾಜನಗರದ ಬಳಿ (ಮೈಸೂರು - ಹಾಸನ ರಸ್ತೆ) ಇವೆ. ಅನಂತರ ಕೃಷ್ಣರಾಜಸಾಗರ ಕಟ್ಟೆಯ ಮೇಲೂ ಹಾದಿ ಮಾಡಲಾಗಿದೆ. ಮುಂದೆ ಶ್ರೀರಂಗಪಟ್ಟಣದಲ್ಲಿ ಕಾವೇರಿಯ ಎರಡು ಕವಲುಗಳಿಗೂ ಹೊಸದಾಗಿ ನಿರ್ಮಿಸಿದ ಒಂದೊಂದು ಬೃಹತ್ ಸೇತುವೆಗಳಿವೆ. ಇವನ್ನು ಕಟ್ಟುವುದಕ್ಕೆ ಮುಂಚೆ ಇದ್ದ ದಕ್ಷಿಣ ಕವಲಿನ ಸೇತುವೆ ಹಾಗೂ ಉತ್ತರ ಕವಲಿನ ವೆಲ್ಲೆಸ್ಲಿ ಸೇತುವೆ ಇನ್ನೂ ಉಳಿದಿವೆ. ಮುಂದೆ ಬನ್ನೂರು ಮತ್ತು ತಿರುಮಕೂಡಲು ನರಸೀಪುರದ ಬಳಿಯಲ್ಲಿ ಸೇತುವೆಗಳಿವೆ. ಕೊನೆಯದು ಶಿವಸಮುದ್ರದಲ್ಲಿದೆ.

ಶಿವಸಮುದ್ರ ಜಲಪಾತ

ಕುಶಾಲನಗರ, ಕೃಷ್ಣರಾಜನಗರ, ಶ್ರೀರಂಗಪಟ್ಟಣ ಮತ್ತು ತಿರುಮಕೂಡಲು ನರಸೀಪುರ ಕಾವೇರಿ ದಂಡೆಯಲ್ಲಿರುವ ದೊಡ್ಡ ಊರುಗಳು. ಭಾಗಮಂಡಲ, ರಾಮನಾಥಪುರ, ಚುಂಚನಕಟ್ಟೆ, ಶ್ರೀರಂಗ ಪಟ್ಟಣ, ತಿರುಮಕೂಡಲು ನರಸೀಪುರ, ಮುಡುಕುತೊರೆ, ತಲಕಾಡು ಮತ್ತು ಶಿವನಸಮುದ್ರ ಮುಖ್ಯ ಪುಣ್ಯಕ್ಷೇತ್ರಗಳು.

ಕಾವೇರಿ ನದಿ ಕರ್ನಾಟಕದಲ್ಲಿ ನೀರಾವರಿಗೆ ಬಹುಮಟ್ಟಿಗೆ ಉಪಯೋಗಿಸಿಕೊಳ್ಳಲಾಗಿರುವ ಒಂದು ಮುಖ್ಯ ನದಿ. ಇದು ದಕ್ಷಿಣ ಕರ್ನಾಟಕ ಭಾಗದ ಜೀವನಾಡಿ. ಈ ಭಾಗದ ಸಂಪತ್ತಿಗೆ ಮೂಲಹೇತು. ಮಂಡ್ಯ ಜಿಲ್ಲೆಯ ಕನ್ನಂಬಾಡಿಯ ಬಳಿ ಹೇಮಾವತಿ ಮತ್ತು ಲಕ್ಷ್ಮಣತೀರ್ಥ ಉಪನದಿಗಳು ಕೂಡಿದ ಸ್ವಲ್ಪ ದೂರದಲ್ಲೇ ಕಾವೇರಿ ನದಿಗೆ ಕೃಷ್ಣರಾಜಸಾಗರ ಅಣೆಕಟ್ಟನ್ನು ಕಟ್ಟಲಾಗಿದೆ. ಇದನ್ನು ಸರ್.ಎಂ. ವಿಶ್ವೇಶ್ವರಯ್ಯನವರು ಯೋಜಿಸಿ 1911ರಲ್ಲಿ ನಿರ್ಮಾಣ ಪ್ರಾರಂಭಿಸಿದರು. ಇದು ಮಂಡ್ಯ, ಮೈಸೂರು ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಒದಗಿಸಿದೆ. ಕಾವೇರಿ ಉಪನದಿಗಳಿಗೂ ವಿವಿಧ ಕಡೆಗಳಲ್ಲಿ ಜಲಾಶಯಗಳನ್ನು ನಿರ್ಮಿಸಲಾಗಿದೆ. ತಮಿಳುನಾಡಿನ ಭಾಗದಲ್ಲಿ ಅತಿ ದೊಡ್ಡ ಮೆಟ್ಟೂರು ಜಲಾಶಯವಿದೆ. ನೀರಾವರಿಗೆ ಅಲ್ಲದೆ ಕೃಷ್ಣರಾಜಸಾಗರ ಹಾಗೂ ಶಿವಸಮುದ್ರದಲ್ಲಿ ಕಾವೇರಿಯ ನೀರನ್ನು ನಿಯಂತ್ರಿಸಿ, ಶಿವಸಮುದ್ರ ವಿದ್ಯುದಾಗರಕ್ಕೆ ವರ್ಷಪೂರ್ತಿ ನೀರೊದಗಿಸಿ ವಿದ್ಯುಚ್ಛಕ್ತಿ ಉತ್ಪಾದನೆಗೂ ಕಾವೇರಿಯನ್ನು ಬಳಸಲಾಗಿದೆ. ಈಗ ಬೆಂಗಳೂರು ಮತ್ತು ಮೈಸೂರು ಮಹಾನಗರಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಕಾವೇರಿಯೇ.

ಈ ನದಿಯಿಂದಾಗಿ ದೇಶದ ಸಂಪದಭಿವೃದ್ಧಿಗೆ ಮಹದುಪಕಾರವಾಗಿದೆ. ಇದರ ದಡದಲ್ಲಿರುವ ಪುಣ್ಯಕ್ಷೇತ್ರಗಳಿಂದಾಗಿ ಕಾವೇರಿ ಪವಿತ್ರ ನದಿಯೆಂದೆನಿಸಿ, ದಕ್ಷಿಣಗಂಗೆ ಎಂದು ಖ್ಯಾತಿಪಡೆದಿದೆ. ಹಲವಾರು ಶಾಸನ ಮತ್ತುಕಾವ್ಯಗಳಲ್ಲಿ ಇದರ ಪಾವಿತ್ರವನ್ನೂ ಸೌಂದರ್ಯವನ್ನೂ ವರ್ಣಿಸಲಾಗಿದೆ. ಪುರಾಣಗಳಲ್ಲಿ ಸಹ ಇದರ ಪ್ರಸ್ತಾಪವಿದೆ. ಕಾವೇರಿ ನದಿಯನ್ನು ಕುರಿತು ಕೆಲವು ಮಹಾತ್ಮ್ಯೆಗಳೂ ಹುಟ್ಟಿಕೊಂಡಿವೆ.

ಅಗ್ನಿಪುರಾಣದಲ್ಲಿ ಕಾವೇರಿ ನದಿಯ ಉಗಮದ ಒಂದು ಕಥೆ ಹೀಗಿದೆ: ಪೂರ್ವಕಾಲದಲ್ಲಿ ಕವೇರನೆಂಬ ರಾಜ ಬ್ರಹ್ಮನನ್ನು ಕುರಿತು ಕಠಿಣ ತಪಸ್ಸನ್ನಾಚರಿಸಿದ. ಅವನಿಗೆ ಬ್ರಹ್ಮ ಪ್ರತ್ಯಕ್ಷನಾಗಿ, ಮೋಕ್ಷವುಂಟಾಗಬೇಕಾದರೆ ಇನ್ನು ಸ್ವಲ್ಪಕಾಲ ಕಾಯಬೇಕೆಂದೂ

ಅಲ್ಲಿಯವರೆಗೆ ಬ್ರಹ್ಮನ ಮಗಳಾದ ವಿಷ್ಣುಮಾಯೆಯನ್ನು ತನ್ನ ಮಗಳನ್ನಾಗಿ ಸ್ವೀಕರಿಸಿ ಸಾಕಬೇಕೆಂದೂ ತಿಳಿಸಿದ. ಅದರಂತೆ ಕವೇರರಾಜ ವಿಷ್ಣುಮಾಯೆಯನ್ನು ತನ್ನ ಅರಮನೆಯಲ್ಲಿ ಸಾಕಿದ. ವಿಷ್ಣುಮಾಯೆ ದೊಡ್ಡವಳಾದ ಮೇಲೆ ತಪ್ಪಸ್ಸುಮಾಡಲು ಹಿಮಾಲಯಕ್ಕೆ ತೆರಳಿದಳು. ಅವಳ ತಪಸ್ಸಿನಿಂದ ಕವೇರರಾಜನಿಗೆ ಮೋಕ್ಷ ಪ್ರಾಪ್ತವಾಯಿತು. ವಿಷ್ಣುಮಾಯೆಯ ತಪಸ್ಸಿಗೆ ವಿಷ್ಣು ಮೆಚ್ಚಿ ಪ್ರತ್ಯಕ್ಷನಾಗಿ ಅವಳಿಗೆ ಎರಡು ವರಗಳನ್ನು ಕೊಟ್ಟ. ಒಂದು, ಅವಳು ಸಹ್ಯಪರ್ವತದಲ್ಲಿ ನದಿಯಾಗಿ ಹುಟ್ಟಿ ಹರಿಯುವುದು. ಇನ್ನೊಂದು, ಮಾನವ ರೂಪದಲ್ಲಿ ಲೋಪಾಮುದ್ರೆ ಎಂಬ ಹೆಸರನ್ನು ತಳೆದು ಅಗಸ್ತ್ಯಋಷಿಯ ಪತ್ನಿಯಾಗುವುದು. ವಿಷ್ಣು ಈ ವರಗಳನ್ನು ವಿಷ್ಣುಮಾಯೆಗೆ ಕೊಟ್ಟ ಸಮಯದಲ್ಲಿ ಅಗಸ್ತ್ಯಋಷಿ ಬ್ರಹ್ಮನನ್ನು ಕುರಿತು ತಪಸ್ಸುಮಾಡುತ್ತಿದ್ದ. ಬ್ರಹ್ಮ ಅಗಸ್ತ್ಯನಿಗೆ ಪ್ರತ್ಯಕ್ಷನಾಗಿ ಲೋಪಾಮುದ್ರೆಯನ್ನು ವಿವಾಹವಾಗುವಂತೆ ಅವನಿಗೆ ಹೇಳಿದ. ಅದರಂತೆ ಅಗಸ್ತ್ಯ ಲೋಪಾಮುದ್ರೆಯ ರೂಪ ತಳೆದಿದ್ದ ವಿಷ್ಣುಮಾಯೆಯಿದ್ದಲ್ಲಿಗೆ ಬಂದು ಆಕೆಯನ್ನು ಮದುವೆಯಾದ. ಈ ವಿವಾಹವಾದ ಸ್ವಲ್ಪ ಸಮಯದ ಅನಂತರ, ದಕ್ಷಿಣ ಭಾರತದಲ್ಲಿ ನೀರಿನ ಅಭಾವವುಂಟಾಗಿದೆಯೆಂಬ ಸಂಗತಿ ಅಗಸ್ತ್ಯನಿಗೆ ತಿಳಿಯಿತು. ಆಗ ಅಗಸ್ತ್ಯ ಲೋಪಾಮುದ್ರೆಯನ್ನು ನೀರಿನ ರೂಪ ತಾಳಿ ತನ್ನ ಕಮಂಡಲದಲ್ಲಿರುವಂತೆ ಕೇಳಿಕೊಂಡ. ಲೋಪಾಮುದ್ರೆ ಹಾಗೆಯೇ ಮಾಡಿದಳು. ಅಗಸ್ತ್ಯ ಆ ಕಮಂಡಲವನ್ನು ಹಿಡಿದುಕೊಂಡು ಸಹ್ಯಪರ್ವತಶ್ರೇಣಿಯ ಬ್ರಹ್ಮಗಿರಿಗೆ ಹೋದ. ಆ ಸ್ಥಳದಲ್ಲಿ ವಿಷ್ಣು ನೆಲ್ಲಿಮರದ ರೂಪ ತಳೆದಿದ್ದ. ಬ್ರಹ್ಮ ಆ ಮರವನ್ನು ಪೂಜಿಸಲು, ಕೈಲಾಸದಲ್ಲಿ ಹರಿಯುತ್ತಿದ್ದ ವಿರಜಾ ನದಿಯ ನೀರನ್ನು ತನ್ನ ಶಂಖದಿಂದ ತಂದು ಆ ಮರಕ್ಕೆ ಎರೆಯುತ್ತಿದ್ದ. ಆ ಸಮಯದಲ್ಲಿ ಅಲ್ಲಿಗೆ ಆಗಮಿಸಿದ ಅಗಸ್ತ್ಯ ತನ್ನ ಕಮಂಡಲವನ್ನು ಅಲ್ಲಿನ ಒಂದು ದೊಡ್ಡ ಚಪ್ಪಟೆ ಕಲ್ಲಿನ ಮೇಲಿಟ್ಟು ಸ್ನಾನಕ್ಕೆಂದು ಸ್ವಲ್ಪ ದೂರ ಹೋದ. ಅದೇ ಸಮಯದಲ್ಲಿ ಬಿರುಗಾಳಿ ಬೀಸಲು, ಕಲ್ಲಿನ ಮೇಲಿಟ್ಟಿದ್ದ ಕಮಂಡಲ ಮಗುಚಿಕೊಂಡಿತು. ಅದರಲ್ಲಿದ್ದ ನೀರು ಹರಿದು ವಿರಜಾ ನದಿಯ ನೀರನ್ನು ಕೂಡಿಕೊಂಡಿತು. ಕಾವೇರಿ ತೀರ್ಥ ಕುಂಡಿಗೆಯಿಂದ ನದಿಯಾಗಿ ಹರಿಯಿತು. ವಿಷ್ಣುಮಾಯೆಯಾಗಿದ್ದ ಲೋಪಾಮುದ್ರೆ ಹೀಗೆ ನದಿಯಾಗಿ ಹರಿದಳು. ಕವೇರ ಅವಳನ್ನು ಸಾಕಿದ್ದರಿಂದ ಈ ನದಿಗೆ ಕಾವೇರಿ ಎಂಬ ಹೆಸರು ಬಂತು.



ಸ್ನಾನ ಘಟ್ಟ, ಭಾಗಮಂಡಲ

ಸ್ಕಂದಪುರಾಣದಲ್ಲಿ ನದಿಯ ಹುಟ್ಟಿನ ಬಗ್ಗೆ ಎರಡು ಕಥೆಗಳಿವೆ. ಅದರಲ್ಲಿ ಮೊದಲನೆಯ ಕಥೆ ಹೀಗಿದೆ: ಒಮ್ಮೆ ವಿಂಧ್ಯಪರ್ವತ ಸೂರ್ಯನ ಎತ್ತರಕ್ಕೇರಬೇಕೆಂದು ಬಯಸಿ, ಬೆಳೆಯುತ್ತ ಸೂರ್ಯ ಮತ್ತು ನಕ್ಷತ್ರಗಳ ದಾರಿಗೆ ಅಡ್ಡವಾಗಿ ಬಂತು. ಅವುಗಳಿಂದ ಬರುತ್ತಿದ್ದ ಬೆಳಕಿಗೆ ಇದರಿಂದ ಅಡಚಣೆಯುಂಟಾಯಿತು. ವಿಂಧ್ಯಪರ್ವತದ ಈ ಬೆಳೆವಣಿಗೆಯನ್ನು ತಡೆಯಬೇಕೆಂದು ದೇವತೆಗಳು ಅಗಸ್ತ್ಯನನ್ನು ಕೋರಿದರು. ಅದಕ್ಕೆ ಒಪ್ಪಿದ ಅಗಸ್ತ್ಯ ಈಶ್ವರನನ್ನು ಕುರಿತು ತಪಸ್ಸು ಮಾಡಿ, ಬೇಕಾಗಿದ್ದ ಆಧ್ಯಾತ್ಮಿಕ ಶಕ್ತಿಯನ್ನು ಸಂಪಾದಿಸಿಕೊಂಡ. ಅಗಸ್ತ್ಯನ ಅನುಕೂಲಕ್ಕಾಗಿ ಕೈಲಾಸಪರ್ವತದಲ್ಲಿ ಹರಿಯುತ್ತಿದ್ದ ಕಾವೇರಿಗೆ ಅವನ ಕಮಂಡಲದಲ್ಲಿರುವಂತೆಯೂ ಆಜ್ಞಾಪಿಸಿದ. ಅದರಂತೆ ಕಾವೇರಿ ಅಗಸ್ತ್ಯನ ಕಮಂಡಲವನ್ನು ಸೇರಿದಳು. ಅಗಸ್ತ್ಯ ಈ ಕಮಂಡಲವನ್ನು ಹಿಡಿದುಕೊಂಡು ಹಿಮಾಲಯ ಪ್ರದೇಶದಿಂದ ದಕ್ಷಿಣಕ್ಕೆ ಹೊರಟ. ಅವನು ವಿಂಧ್ಯಪರ್ವತದ ಬಳಿ ಬಂದಾಗ - ಅದು ಅವನಿಗೆ ಭಕ್ತಿಯಿಂದ ನಮಸ್ಕರಿಸಿತು. ಆಗ ಅಗಸ್ತ್ಯ ತಾನು ನೆಮ್ಮದಿಯಿಂದ ದಕ್ಷಿಣ ಭಾರತಕ್ಕೆ ಹೋಗಬೇಕಾಗಿರುವುದರಿಂದ, ತಾನು ಹಿಂದಿರುಗುವ ವರೆಗೂ ಮೇಲಕ್ಕೇಳದೆ ನಮಸ್ಕರಿಸಿದ ಭಂಗಿಯಲ್ಲಿಯೇ ಇರಬೇಕೆಂದು ವಿಂಧ್ಯಪರ್ವತಕ್ಕೆ ಹೇಳಿ ಹೋದ. ಅನಂತರ ಅವನು ಉತ್ತರ ಭಾರತಕ್ಕೆ ಹಿಂದಿರುಗಲೇ ಇಲ್ಲ. ಈ ಕಾರಣದಿಂದ ವಿಂಧ್ಯಪರ್ವತ ಮುಂಚಿನ ಸ್ಥಿತಿಯಲ್ಲಿಯೇ ಇದೆ ಎಂದು ಪುರಾಣಗಳಲ್ಲಿ ಹೇಳಿದೆ. ಅಗಸ್ತ್ಯ ಬ್ರಹ್ಮಗಿರಿಯ ಬಳಿ ತಪಸ್ಸು ಮಾಡುತ್ತಿದ್ದ. ಆ ಸಮಯದಲ್ಲಿ ಸೂರಪದ್ಮನೆಂಬ ಅಸುರ ತನ್ನ ತಪಶ್ಶಕ್ತಿಯಿಂದ, ಆ ಪ್ರದೇಶದಲ್ಲಿ ಮಳೆಯಾಗದಂತೆ ಮಾಡಿದ್ದ. ಇದರಿಂದ ಖೇದಗೊಂಡ ಇಂದ್ರ ದಕ್ಷಿಣದೇಶದಲ್ಲಿ ನೀರು ಸಮೃದ್ಧಿಯಾಗಿರುವಂತೆ ಮಾಡಬೇಕೆಂದು ಗಣಪತಿಯನ್ನು ಪ್ರಾರ್ಥಿಸಿದ. ಆಗ ಗಣಪತಿ ಕಾಗೆ ರೂಪವನ್ನು ತಾಳಿ, ಅಗಸ್ತ್ಯ ತನ್ನ ಪಕ್ಕದಲ್ಲಿ ಕಲ್ಲಿನ ಮೇಲೆ ಇಟ್ಟಿದ್ದ ಕಮಂಡಲವನ್ನು ಮಗುಚಿಹಾಕಿದ. ಅದರಲ್ಲಿದ್ದ ಕಾವೇರಿ ಕೂಡಲೇ ಅಲ್ಲಿಂದ ಹರಿದಳು.

ಎರಡನೆಯ ಕಥೆ ಹೀಗಿದೆ: ಸಂತಾನವಿಲ್ಲದ ಕವೇರಮುನಿ ಸಂತಾನಕ್ಕಾಗಿ ಬ್ರಹ್ಮನನ್ನು ಕುರಿತು ಬ್ರಹ್ಮಗಿರಿಯಲ್ಲಿ ತಪಸ್ಸು ಮಾಡಿದ. ಅವನ ತಪಸ್ಸಿಗೆ ಮೆಚ್ಚಿದ ಬ್ರಹ್ಮ ಪ್ರತ್ಯಕ್ಷನಾಗಿ ತನ್ನ ಸಾಕು ಮಗಳಾದ ಲೋಪಾಮುದ್ರೆಯನ್ನೇ ಅವನಿಗೆ ಕೊಟ್ಟ. ಅಂದಿನಿಂದ ಲೋಪಾಮುದ್ರೆ ಕವೇರನ ಮಗಳಾಗಿ ಕಾವೇರಿ ಎಂಬ ಹೆಸರನ್ನು ಪಡೆದಳು. ತನ್ನ ಸಾಕು ತಂದೆಗೆ ಮೋಕ್ಷವುಂಟಾಗಲೆಂದು ಬಯಸಿದ ಕಾವೇರಿ ತಾನು ನದಿಯಾಗಿ ಹರಿಯುವಂತೆ ಮತ್ತು ತನ್ನಲ್ಲಿ ಸ್ನಾನಮಾಡಿದವರು ತಮ್ಮ ಎಲ್ಲ ಪಾಪಗಳಿಂದ ಮುಕ್ತರಾಗುವಂತೆ ವರವನ್ನು ಕೊಡಬೇಕೆಂದು ಬ್ರಹ್ಮನನ್ನು ಕುರಿತು ಬ್ರಹ್ಮಗಿರಿಯಲ್ಲಿ ತಪಸ್ಸು ಮಾಡಿದಳು. ಅವಳ ತಪಸ್ಸಿಗೆ ಮೆಚ್ಚಿದ ಬ್ರಹ್ಮ ಅವಳು ಕೇಳಿದ ವರಗಳನ್ನು ಕೊಟ್ಟ.

ಕಾವೇರಿ ಬ್ರಹ್ಮಗಿರಿಯಲ್ಲಿ ತಪಸ್ಸುಮಾಡುತ್ತಿದ್ದ ಸಮಯದಲ್ಲಿ ಅಲ್ಲಿಗೆ ಬಂದ ಅಗಸ್ತ್ಯ, ಅವಳ ತಪಸ್ಸು ಮುಗಿದಮೇಲೆ ಅವಳನ್ನು ಕಂಡು ತನ್ನನ್ನು ವಿವಾಹವಾಗುವಂತೆ ಕೇಳಿಕೊಂಡ. ಅದಕ್ಕೆ ಕಾವೇರಿ ಅಗಸ್ತ್ಯ ಎಂದಿಗೂ ತನ್ನನ್ನು ಒಂಟಿಯಾಗಿ ಬಿಟ್ಟಿರಕೂಡದೆಂಬ, ಒಂದುವೇಳೆ ಹಾಗೆ ಬಿಟ್ಟರೆ ನದಿಯಾಗಿ ಹರಿದುಹೋಗುವ ಸ್ವಾತಂತ್ರ್ಯ ಇರುವುದೆಂಬ ಷರತ್ತಿನ ಮೇಲೆ ವಿವಾಹವಾಗಲು ಒಪ್ಪಿದಳು. ಅದಕ್ಕೆ ಅಗಸ್ತ್ಯ ಒಪ್ಪಿ ಆಕೆಯನ್ನು ವಿವಾಹವಾದ. ನೀರಿನ ರೂಪದಲ್ಲಿ ಕಾವೇರಿ ಇದ್ದ ಕಮಂಡಲವನ್ನು ಒಮ್ಮೆ ಅಗಸ್ತ್ಯ ಶಿಷ್ಯನ ಕೈಗೆ ಕೊಟ್ಟು, ಕನ್ನಿಕಾ ನದಿಗೆ ಸಂಧ್ಯೋಪಾಸನೆಗೆ ಹೋದ. ಆಗ ಕಾವೇರಿ ಅಗಸ್ತ್ಯ ತನ್ನ ಮಾತಿಗೆ ತಪ್ಪಿದನೆಂದು ಕಮಂಡಲದಿಂದ ಬ್ರಹ್ಮಗಿರಿಯ ತೀರ್ಥಕುಂಡಿಗೆಗೆ ಜಿಗಿದು ಅಲ್ಲಿಂದ ನದಿಯಾಗಿ ಪ್ರವಹಿಸಿದಳು. ಆಗ ಅಗಸ್ತ್ಯನ ಶಿಷ್ಯರು ಅವಳು ನದಿಯಾಗಿ ಹರಿಯುವುದನ್ನು ತಡೆದರು. ಅವಳು ತೀರ್ಥಕುಂಡಿಗೆಯ ಮುಂದಿರುವ ತೀರ್ಥಕೊಳದ ಬಲಭಾಗದ ಇಳಿಜಾರಿನಲ್ಲಿ ಕಲ್ಲುಬಂಡೆಯ ಅಡಿಭಾಗದಲ್ಲಿ ಹರಿದು ಕೆಳಗೆ ಕಾಣಿಸಿಕೊಂಡಳು. ಅಲ್ಲಿಂದ ಭಾಗಮಂಡಲ ಕ್ಷೇತ್ರ ತಲಪಿದಾಗ ಮೊದಲನೆಯ ಉಪನದಿ ಕನ್ನಿಕೆ ಕಾವೇರಿಯನ್ನು ಸೇರಿಕೊಂಡಳು. ತನ್ನ ಪತ್ನಿ ತನಗೆ ತಿಳಿಸದೆ ನದಿಯಾಗಿ ಹರಿದುದಕ್ಕೆ ಅಗಸ್ತ್ಯ ಕೋಪಗೊಳ್ಳಲು, ಬ್ರಹ್ಮ ಅವನಿಗೆ ಸಮಾಧಾನ ಹೇಳಿದ. ಅನಂತರ ಅಗಸ್ತ್ಯ ನದಿಯಾಗಿ ಹರಿಯುತ್ತಿದ್ದ ಕಾವೇರಿಯನ್ನು ಬ್ರಹ್ಮಗಿರಿಯಿಂದ ಸುಮಾರು 40ಕಿಮೀ ದೂರದಲ್ಲಿರುವ ಬಲಮುರಿಯಲ್ಲಿ ಸಂಧಿಸಿ ಮತ್ತೆ ತನ್ನ ಪತ್ನಿಯಾಗುವಂತೆ ಅವಳನ್ನು ಕೇಳಿಕೊಂಡ. ಆಗ ಕಾವೇರಿ ಈಶ್ವರ ತನಗೆ ಕೊಟ್ಟ ವರದಂತೆ ಒಂದು ರೂಪದಲ್ಲಿ ಸ್ತ್ರೀಯಾಗಿದ್ದು ಅಗಸ್ತ್ಯನ ಪತ್ನಿಯಾಗಿರಲೂ ಇನ್ನೊಂದು ರೂಪದಲ್ಲಿ ನದಿಯಾಗಿ ಹರಿಯಲೂ ಒಪ್ಪಿಕೊಂಡಳು. ಕಾವೇರಿ ಪೂರ್ವಸಮುದ್ರವನ್ನು ಸೇರುವವರೆಗೆ

ದಾರಿಯಲ್ಲಿ ಯಾವ ಯಾವ ಸ್ಥಳ ಮತ್ತು ಕ್ಷೇತ್ರಗಳ ಮೂಲಕ ಹರಿದುಹೋಗಬೇಕೆಂಬುದನ್ನು ಅಗಸ್ತ್ಯ ತಿಳಿಸಿದ.

ಕಾವೇರಿ ದೇವತೆಯನ್ನು ಕೊಡಗರು ತಮ್ಮ ಕುಲದೇವತೆ ಎಂದು ನಂಬಿ ಪೂಜಿಸುತ್ತಾರೆ. ಕಾವೇರಿ ದೇವತೆಯ ವರದಿಂದ ಕೊಡಗಿನಲ್ಲಿ ವ್ಯವಸಾಯಕ್ಕೆ ಅಗತ್ಯವಾದ ಮಳೆಯಾಗುತ್ತದೆಂದೂ ಬತ್ತದ ಬೆಳೆ ಸಮೃದ್ಧವಾಗಿ ಬೆಳೆಯುತ್ತದೆಂದೂ ಕೊಡಗಿನ ಜನಪದರು ನಂಬಿದ್ದಾರೆ. *

**ಕಾವ್ಯಕಲಾನಿಧಿ :** ಕನ್ನಡ ಸಾಹಿತ್ಯದ ಪ್ರಾಚೀನ ಕಾವ್ಯ ಹಾಗೂ ಶಾಸ್ತ್ರಗ್ರಂಥಗಳನ್ನು ತಾಳೆಗರಿಗಳ ಆಧಾರದಿಂದ ಶಾಸ್ತ್ರೀಯವಾದ ಪಾಠಸಂಸ್ಕರಣಗಳೊಂದಿಗೆ ಸಂಪಾದಿಸುವ ಯೋಜನೆ ಹಾಕಿಕೊಂಡಿದ್ದ ಮೈಸೂರಿನ ಎಂ.ಎ.ರಾಮಾನುಜಯ್ಯಂಗಾರ್ ಅವರು ಎಸ್.ಜಿ. ನರಸಿಂಹಾಚಾರ್ಯರ ಸಹಕಾರದಿಂದ ಪ್ರಾಚೀನ ಗ್ರಂಥಗಳ ಪ್ರಕಟನೆಗಾಗಿ ಕಾವ್ಯಮಂಜರಿ ಎಂಬ ಪತ್ರಿಕೆಯನ್ನಾರಂಭಿಸಿದರು. ಅದರ ಅನಂತರದ ಹೆಸರೇ ಕಾವ್ಯಕಲಾನಿಧಿ. ಇದು 19ನೆಯ ಶತಮಾನದ ಅಂತ್ಯದಲ್ಲಿ ಪ್ರಕಟವಾಗುತ್ತಿತ್ತು.

ಈ ಗ್ರಂಥಮಾಲೆಯಲ್ಲಿ ಮೊದಲು ಮುದ್ರಿತವಾಗಿ ಅನಂತರ ಪುಸ್ತಕರೂಪವಾಗಿ ಹೊರಬಂದ ಸಾಹಿತ್ಯಗ್ರಂಥಗಳಲ್ಲಿ ರನ್ನನ ಗದಾಯುದ್ಧ, ಅಜಿತಪುರಾಣ, ನೇಮಿಚಂದ್ರನ ಲೀಲಾವತಿ ಮತ್ತು ಅರ್ಧನೇಮಿಪುರಾಣ, ಚೌಂಡರಸನ ದಶಕುಮಾರಚರಿತೆ, ಕಮಲಭವನ ಶಾಂತೀಶ್ವರಪುರಾಣ, ಅಗ್ಗಳನ ಚಂದ್ರಪ್ರಭ ಪುರಾಣ ಮುಂತಾದ ಜೈನಕಾವ್ಯಪುರಾಣಗಳೂ ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನದಂಥ ವೀರಶೈವ ಕಾವ್ಯಗಳೂ ಹದಿಬದೆಯ ಧರ್ಮ, ಮೋಹನ ತರಂಗಿಣಿ, ಜಯನೃಪಕಾವ್ಯ ಮುಂತಾದುವೂ ಚಿಕದೇವ ರಾಜ ವಂಶಾವಳಿ, ರಾಮಾಶ್ವಮೇಧ ಮುಂತಾದ ಗದ್ಯ ಕೃತಿಗಳೂ ಇವೆ. ವಚನ, ಕಾದಂಬರಿ, ವರ್ಷವರ್ಧಂತೀಶತಕ, ಗುರುಚರಿತ್ರೆ ಮುಂತಾದ ಲಘುಸಾಹಿತ್ಯವೂ ಮುದ್ರಿತವಾಗಿ ಹೊರಬಂದಿವೆ. ಇವೆಲ್ಲ ಈಗ ಬೇರೆ ಬೇರೆ ಪುನರ್ಮುದ್ರಣಗಳನ್ನು ಕಂಡಿದ್ದರೂ ಕನ್ನಡ ಸಾಹಿತ್ಯದ ಉದ್ದಾಮ ಕೃತಿಗಳ ಸಾಕ್ಷಾತ್ ಪರಿಚಯವನ್ನು ನಾಡಿಗೆಲ್ಲ ಬಹಳ ಹಿಂದೆಯೇ ಮಾಡಿಸಿಕೊಟ್ಟ ಶ್ರೇಯಸ್ಸು ಕಾವ್ಯಕಲಾನಿಧಿ ಗ್ರಂಥಮಾಲೆಗೆ ಸಲ್ಲುತ್ತದೆ. (ಕೆ.ಕೆ.)

**ಕಾವ್ಯಾನಂದ ಪುಣೇಕರ :** 1870-1929. ಪತ್ರಿಕೋದ್ಯಮಿ, ಗ್ರಂಥಕರ್ತ. ಸಮಸ್ಯಾಪೂರ್ತಿ ಕಾವ್ಯರಚನೆಗೆ ಹೆಸರಾಗಿದ್ದವರು. ಇವರ ಹೆಸರು ನರಸಿಂಹಾಚಾರ್ಯ ಭೀಮಾಚಾರ್ಯ ಕಿತ್ತೂರ. ಕಾವ್ಯಾನಂದ ಪುಣೇಕರ ಇವರ ಕಾವ್ಯನಾಮ. ಬೆಳಗಾಂವಿ ಜಿಲ್ಲೆಯ ಕಿತ್ತೂರು ಇವರ ಜನ್ಮಸ್ಥಳ. ಇವರ ಮನೆತನ ಪಾಂಡಿತ್ಯಕ್ಕೆ ಹೆಸರಾಗಿತ್ತು. ಇವರ ತಾತ ತರ್ಕವಿದ್ವಾನ್ ನರಹರಿ ಆಚಾರ್ಯರಿಗೆ ಪುಣೆಯ ರಾಜಾಸ್ಥಾನದಿಂದ ಕರವಸ್ತ್ರ ಮತ್ತು ಕರದೀಪದ ಗೌರವ ಲಭಿಸಿತ್ತು. ಈ ಕಾರಣಕ್ಕಾಗಿಯೇ ಇವರ ಮನೆತನಕ್ಕೆ ಪುಣೇಕರ ಎಂಬ ಹೆಸರು ಬಂತು. ಕಾವ್ಯಾನಂದರ ಕಾಲಕ್ಕೆ ಮನೆಯಲ್ಲಿ ಬಡತನ. ಇದರಿಂದ ಇವರು ಹೆಚ್ಚಿನ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲವಾದರೂ ಸ್ವತಂತ್ರವಾಗಿ ಸಂಸ್ಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯ ಗಳಿಸಿಕೊಂಡರು. ಧಾರವಾಡದ ವಿಕ್ಟೋರಿಯಾ ಪ್ರೌಢಶಾಲೆ ಮತ್ತು ರಾಷ್ಟ್ರೀಯ ಶಾಲೆಗಳಲ್ಲಿ ಅಧ್ಯಾಪಕರಾಗಿ ಇವರು ಹಲವು ವರ್ಷಗಳ ಕಾಲ ಕೆಲಸ ಮಾಡಿದರು. ಚಚಡಿಯರಗಟ್ಟಿ ದೇಸಾಯರಲ್ಲಿ ಕೆಲವು ವರ್ಷ ಕಾರಭಾರಿಯಾಗಿದ್ದರು. ಧಾರವಾಡದಿಂದ ಪ್ರಕಟವಾಗುತ್ತಿದ್ದ ಒಕ್ಕಲಿಗರೂ ಒಕ್ಕಲುತನವೂ ಎಂಬ ಮಾಸಪತ್ರಿಕೆಗೆ ಇವರು ಕೆಲಕಾಲ ಸಹಾಯಕ ಸಂಪಾದಕರಾಗಿದ್ದರಲ್ಲದೆ ಸ್ವತಂತ್ರವಾಗಿ ಕ್ಷೇಮ ಸಮಾಚಾರ ಎಂಬ ವಾರಪತ್ರಿಕೆಯನ್ನು ಎರಡು ವರ್ಷಕಾಲ ನಡೆಸಿದರು.

ಇವರು ರಾಷ್ಟ್ರೀಯ ಪ್ರವೃತ್ತಿಯವರು, ಕನ್ನಡ ಪ್ರೇಮಿಗಳು, ರಸಿಕರು ಮತ್ತು ಮಾತಿನಲ್ಲಿ ತುಂಬ ಕುಶಲರು. ಕಾವ್ಯ, ಶಾಸ್ತ್ರ, ಜ್ಯೋತಿಷ್ಯ, ಧರ್ಮ ಮತ್ತು ಆಯುರ್ವೇದಗಳಲ್ಲಿ ಬಲ್ಲಿದರಾಗಿದ್ದರು. ಇವರು ಗೃಹವೈದ್ಯಕ, ಗೃಹಿಣೀ ಭೂಷಣ, ಗರುಡಚೂರ್ಣಮಹಾತ್ಮೆ, ಸತ್ಯನಾರಾಯಣ ಕಥೆ, ಧನವಂತನೇ ಬಲವಂತನು, ಪ್ರಶ್ನೋತ್ತರಮಾಲಿಕಾ, ಬಾಲರಂಜನ ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಪ್ರಭಾತ ಮತ್ತು ವಾಗ್ಭೂಷಣ ಪತ್ರಿಕೆಗಳಲ್ಲಿ ಇವರು ಪ್ರಕಟಿಸಿರುವ ಮಳೆಗಾಲ, ನಾಗಪಂಚಮಿ, ಕವಿಯೂ ನಾಟಕಕಾರನೂ, ಜಹಗೀರದಾರನ ಊರು - ಮೊದಲಾದ ಕವನಗಳು ಇವರ ಕಾವ್ಯಶಕ್ತಿಗೆ ಸಾಕ್ಷಿಯಾಗಿವೆ. (ಆರ್.ವೈ.ಡಿ.)

**ಕಾಶೀನಾಥ ಶಾಸ್ತ್ರೀ :** 1895-1950. ಉಭಯಭಾಷಾ ವಿದ್ವಾಂಸರು. ಸುಮಾರು ಎಪ್ಪತ್ತಕ್ಕೂ ಹೆಚ್ಚಿನ ಕನ್ನಡ ಸಂಸ್ಕೃತ ಗ್ರಂಥಗಳ ಪ್ರಕಾಶಕರಾಗಿ ಹೆಸರು ಗಳಿಸಿದ ಕನ್ನಡಿಗರು. ಇಂದಿನ ಗದಗ ಜಿಲ್ಲೆ ಗದಗ ತಾಲ್ಲೂಕು ನಾರಾಯಣಪುರದಲ್ಲಿ ಜನಿಸಿದರು. ತಂದೆ ಸಿದ್ದಯ್ಯ, ತಾಯಿ ನಾಗವ್ವ. ಅಬ್ಬಿಗೇರಿ ಸೊಲ್ಲಾಪುರಗಳ ಸಂಸ್ಕೃತ ಪಾಠಶಾಲೆಗಳಲ್ಲಿ ಅಭ್ಯಾಸ ಮಾಡಿದ ಇವರು ಅನಂತರ ವಾರಾಣಸಿಯಲ್ಲಿ ವ್ಯಾಸಂಗಮಾಡಿ ಕಾವ್ಯತೀರ್ಥ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ವಾಗ್ಮಿಗಳೂ ಪ್ರಬುದ್ಧ ಲೇಖಕರೂ ಆದ ಶಾಸ್ತ್ರಿಗಳು ಮೈಸೂರಿನಲ್ಲಿ ಪಂಚಾಚಾರ್ಯ ಪ್ರಭಾ ಎಂಬ ವಾರಪತ್ರಿಕೆಯನ್ನು (1927) ಆರಂಭಿಸಿದರಲ್ಲದೆ ಕಾಶೀನಾಥ ಗ್ರಂಥಮಾಲೆ ಎಂಬ ಮಾಲೆಯನ್ನು ಸ್ಥಾಪಿಸಿ, ವೀರಶೈವ ಧರ್ಮದ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ನಂದಿಕೇಶ್ವರಕಾರಿಕಾ, ಶ್ರೀಕರಭಾಷ್ಯ (ಚತುಸ್ಸೂತ್ರೀ), ವೈದಿಕವಾಙ್ಮಯ ರಹಸ್ಯ, ಶೈವೋಪನಿಷತ್ಸಂಗ್ರಹ, ಶಿವಾದ್ವೈತಮಂಜರೀ ಮುಂತಾದ ಸುಮಾರು 70 ಗ್ರಂಥಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. (ಎಂ.ಜಿ.ಎನ್.)

**ಕಾಳಗಿ :** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಒಂದು ಗ್ರಾಮ. ಗುಲ್ಬರ್ಗದಿಂದ ಪೂರ್ವಕ್ಕೆ ಸು.32ಕಿಮೀ ದೂರದಲ್ಲಿದೆ. ಇದು 11ನೆಯ ಶತಮಾನದಲ್ಲಿ ಕಲ್ಯಾಣದ ಚಾಳುಕ್ಯರ ಆಳಿಕೆಯಲ್ಲಿ ಕಾಳುಗೆ ಎಂಬ ಹೆಸರಿನಿಂದ ಮನ್ನೆದಡಿ -1000 ನಾಡಿನ ರಾಜಧಾನಿಯಾಗಿ ಪ್ರಸಿದ್ಧವಾಗಿತ್ತು. ತ್ರೈಲೋಕ್ಯಮಲ್ಲ ಸೋಮೇಶ್ವರನ ಆಳಿಕೆಯಲ್ಲಿ ವಾರಣಕುಲಕ್ಕೆ ಸೇರಿದ ಮಹಾಮಂಡಲೇಶ್ವರ ದಿಬ್ಬರಸ ಈ ಪ್ರಾಂತ್ಯವನ್ನು ಆಳುತ್ತಿದ್ದ. ಬಹುಶಃ ಅವನ ಕಾಲದಲ್ಲಿ ಅವನ ಹೆಸರಿನಿಂದ ಬಿಡ್ಡೇಶ್ವರ (ದಿಬ್ಬೇಶ್ವರ) ದೇವಾಲಯವನ್ನು ಇಲ್ಲಿ ನಿರ್ಮಿಸಲಾಗಿದೆ. 12ನೆಯ ಶತಮಾನದಲ್ಲಿ ಕಳಚುರಿ ರಾಯಮುರಾರಿ ಸೋವಿದೇವ ಆಳುತ್ತಿದ್ದಾಗ ಬಾಣವಂಶದ ವೀರಗೊಂಕರಸ ಮನ್ನೆದಡಿ ನಾಡನ್ನು ಇಲ್ಲಿಂದ ಆಳುತ್ತಿದ್ದು ಬಹುಶಃ ತನ್ನ ತಂದೆ ಉದಯಾದಿತ್ಯ ವೀರಕಾಳರಸನ ಹೆಸರಿನಲ್ಲಿ ಸ್ವಯಂಭು ಕಾಳೇಶ್ವರ ದೇವಾಲಯವನ್ನು ನಿರ್ಮಿಸಿ ಅನೇಕ ದತ್ತಿಗಳನ್ನು ಬಿಟ್ಟಂತೆ ತೋರುತ್ತದೆ. ಕಾಳೇಶ್ವರ ದೇವಾಲಯಕ್ಕೆ ಮನ್ನೆದಡಿ 1000ಕ್ಕೆ ಸೇರಿದ್ದ ನೂರುಂಬಾಡ ಪ್ರಾಂತ್ಯದ ಪ್ರತಿಯೊಂದು ಹಳ್ಳಿಯಿಂದ ಒಂದು ಗದ್ಯಾಣವನ್ನು ದತ್ತಿಯಾಗಿ ಹಿರಿಯ ದಂಡನಾಯಕ ಮಾಧವಯ್ಯ ಬಿಟ್ಟುದಾಗಿ ಶಾಸನವೊಂದರಿಂದ ತಿಳಿದುಬರುತ್ತದೆ. 13ನೆಯ ಶತಮಾನದ ಅನಂತರ ಈ ಊರು ತನ್ನ ಪ್ರಾಮುಖ್ಯವನ್ನೂ ಕಳೆದುಕೊಂಡಿತು.

ಮೇಲೆ ತಿಳಿಸಿದ ದಿಬ್ಬೇಶ್ವರ ಕಾಳೇಶ್ವರ ದೇವಾಲಯಗಳಲ್ಲದೆ ಚಾಳುಕ್ಯ ಮತ್ತು ಕಳಚುರಿಗಳ ಕಾಲದಲ್ಲಿ ಸೋಮೇಶ್ವರ, ಜಯಲಿಂಗೇಶ್ವರ ದೇವಾಲಯ ಮೊದಲಾದ ಹಲವು ದೇವಾಲಯಗಳು ಇಲ್ಲಿ ನಿರ್ಮಿತವಾದುದಾಗಿ ಶಾಸನಗಳು ತಿಳಿಸುತ್ತವೆ. ಆದರೆ ಈ ದೇವಾಲಯಗಳು ಜೀರ್ಣಾವಸ್ಥೆಯಲ್ಲಿವೆ. ಕೆಲವು ನಾಮಾವಶೇಷವಾಗಿವೆ. ದೇವಾಲಯಗಳ ಶಿಲ್ಪಗಳು, ಗೋಡೆ ಚಾವಣಿಗಳ ಭಾಗಗಳು, ಇತರ ಶಿಲಾಫಲಕಗಳು ಊರಿನ ಸುತ್ತ ಚೆಲ್ಲಾಡಿವೆ. ಇವುಗಳಲ್ಲಿ ತಕ್ಕಮಟ್ಟಿಗೆ ಉಳಿದುಬಂದಿರುವ ದೇವಾಲಯವೆಂದರೆ ಕಾಳಮೇಶ್ವರ ಅಥವಾ ಕಾಳೇಶ್ವರ ದೇವಾಲಯ. ಆದರೆ ಮೂಲ ದೇವಾಲಯಕ್ಕೆ ಅನಂತರದ ಕಾಲದಲ್ಲಿ ಕೆಲವು ಭಾಗಗಳನ್ನು ಸೇರಿಸಿರುವುದಲ್ಲದೆ ದೇವಸ್ಥಾನಕ್ಕೆ ಪೂರ್ಣವಾಗಿ ಸುಣ್ಣ ತುಂಬಿರುವುದರಿಂದ ಅದರ ಮೂಲ ಸೌಂದರ್ಯ ಬಹಳ ಮಾಸಿದೆ ಎನ್ನಬಹುದು. ಆದರೂ ಈ ದೇವಾಲಯದ ಹೊರಗೋಡೆಗಳ ಮೇಲೆ ಇರುವ ಸುಂದರವಾದ ಭಂಗಿಗಳಲ್ಲಿ ನಾಟ್ಯಮಗ್ನರಾಗಿರುವ ಸ್ತ್ರೀಮೂರ್ತಿಗಳ ಉಬ್ಬು ಶಿಲ್ಪಗಳು ಆಕರ್ಷಕವಾಗಿವೆ. ಇವುಗಳಲ್ಲಿನ ಒಂದು ವಿಶೇಷವೆಂದರೆ ಈ ಕೆಲವು ಮೂರ್ತಿಗಳ ಮೇಲೆ ಅಪರೂಪವಾಗಿ ಕಿರುಶಾಸನಗಳಿದ್ದು ಆ ಮೂರ್ತಿಗಳ ಭಾವಭಂಗಿಗಳನ್ನು ಅವುಗಳನ್ನು ಕಂಡರಿಸಿರುವ ಉದ್ದೇಶವನ್ನು ವಿವರಿಸುತ್ತವೆ. ಸಾಮಾನ್ಯವಾಗಿ ಈ ಕಿರುಶಾಸನಗಳು ನೀಲಕಂಠನನ್ನು ಬಗೆಬಗೆಯಾಗಿ ಅಲ್ಲಿ

ಕಂಡರಿಸಿರುವ ಸ್ತ್ರೀಯರು ವರ್ಣಿಸುತ್ತಿರುವುದನ್ನು ಸೂಚಿಸುತ್ತವೆ. ವೀಣೆಯನ್ನು ನುಡಿಸಿ ಹಾಡುತ್ತಿರುವ ಸ್ತ್ರೀಮೂರ್ತಿಯ ಶಿಲ್ಪವೊಂದರ ಮೇಲಿನ ಶಾಸನ - 'ಧರೆಯೊಳಗೆ ನೀಲಕಂಠನೆ ಸುಜನಂ ಧಾರ್ಮಿಕನೆಂದು ಒರಳಿ ವಸಂತಂ ಗುಜರಿ ಸಿರಿರಾಗದೆ ವೀಣಾಕಾರ್ತಿ ಪಾಡುತ್ತುಮಿರ್ದಳ್' ಎಂದಿದೆ. ಇಲ್ಲಿ ಹೆಸರಿಸಿರುವ ಕೆಲವು ರಾಗಗಳು ಗಮನಿಸತಕ್ಕವಾಗಿವೆ. ಮೋಹಕ ಭಂಗಿಯಲ್ಲಿ ನಿಂತು ಮುಂಗೈ ಮೇಲೆ ಕುಳಿತಿರುವ ಗಿಳಿಯೊಂದನ್ನು ನುಡಿಸುತ್ತಿರುವ ಸ್ತ್ರೀಮೂರ್ತಿಯ ಮೇಲಿನ ಒಂದು ಶಾಸನ, 'ಲಲಿತಾಂಗಿ ಆಡಿಸುತ್ತಿರೆ ಗಿಳಿಯಾಡಿತು. ನೀಲಕಂಠನ್ ಈ ಬಂಧಂ ನೀವೇಳಿರೆ ಏಳಿರೆ ತೋರಣಂಗೂಡಿ ಕಳಸಕನ್ನಡಿಯಿಂದ ಇದಿರುಗೊಳ್ವುದು' ಎಂದು ವರ್ಣಿಸಿದರೆ, ಮತ್ತೊಂದರಲ್ಲಿ ಬುಧಾಗ್ರಣಿ ನೀಲಕಂಠನನ್ನು ಮನೋನುರಾಗದಿಂದ ಬಗೆಬಗೆಯಾಗಿ ವರ್ಣಿಸಿ ಸರಸ್ವತಿಯಂತೆ ಆಡುತ್ತಿರುವ ಮೂರ್ತಿಯ ವರ್ಣನೆ ಇದೆ. ಹೀಗೆ ಶಾಸನಗಳನ್ನುಳ್ಳ ಶಿಲಾಬಾಲಿಕೆಯ ಮೂರ್ತಿಗಳಿರುವುದು ಚಾಳುಕ್ಯ ಶಿಲ್ಪದಲ್ಲಿ ಅಪರೂಪವೇ. ಉಳಿದಂತೆ ದೇವಾಲಯದ ದ್ವಾರಗಳು, ಕಂಬಗಳು, ಒಳಚಾವಣಿಯ ಶಿಲ್ಪಗಳು ಇತರ ಸಾಮಾನ್ಯವಾದ ಚಾಳುಕ್ಯ ದೇವಾಲಯಗಳಲ್ಲಿರುವಂತೆಯೇ ಇವೆ.

ಈ ದೇವಾಲಯದ ಮುಂದೆ ಕೆಲವು ಗಜಗಳ ಅಂತರದಲ್ಲಿ ನಿಂತಿರುವ ದೇವಾಲಯವೇ ಇಲ್ಲಿನ ಅತ್ಯಂತ ಪ್ರಾಚೀನ ದಿಬ್ಬೇಶ್ವರ ದೇವಾಲಯವಿರಬಹುದು. ಎತ್ತರವಾದ ಜಗತಿಯ ಮೇಲೆ ಮೂರು ಗರ್ಭಗೃಹಗಳು, ಮೂರು ಸುಕನಾಸಿಗಳು, ನಡುವೆ ಒಂದು ನವರಂಗ, ಮುಂದೆ ಒಂದಂಕಣದ ಮುಖಮಂಟಪಗಳಿವೆ. ಹೊರಗೋಡೆಗಳು ಕಚ್ಚುಕಚ್ಚಾಗಿ ಉಬ್ಬಿದ ಆಯಾಕಾರದ ಗೋಡೆಗಳಿಂದ ಕೂಡಿವೆ. ಚಾಳುಕ್ಯರ ಕಾಲದ ದೇವಾಲಯಗಳ ತಳವಿನ್ಯಾಸದಲ್ಲಿ ಇದು ಅಪರೂಪವಾದುದೆನಿಸಿದೆ. ಹೊರಗೋಡೆಗಳ ಮೇಲೆ ಹೆಚ್ಚು ಉಬ್ಬಿನಿಂತಿರುವ ಸುಂದರವಾದ ಮೂರ್ತಿಗಳನ್ನು ಕಾಣಬಹುದು. ಆದರೆ ದೇವಾಲಯ ಅತ್ಯಂತ ಜೀರ್ಣಾವಸ್ಥೆಯಲ್ಲಿದೆ.

ಈಗ ಊರು ಈ ದೇವಾಲಯಗಳಿರುವ ಹಳೆಯ ನಿವೇಶನದಿಂದ ಸ್ವಲ್ಪ ದೂರದಲ್ಲಿದೆ. ಅಲ್ಲಿಯೂ ಮಲ್ಲಿಕಾರ್ಜುನ ದೇವಾಲಯ, ಚೌಡೇಶ್ವರಿ ಗುಡಿ, ಆಂಜನೇಯನ ಗುಡಿಗಳಿವೆ. ಆದರೆ ವಾಸ್ತುಶಿಲ್ಪ ದೃಷ್ಟಿಯಿಂದ ಇವು ಸಾಮಾನ್ಯ ರಚನೆಗಳು.

ಕಾಳಗಿ ಒಂದು ಯಾತ್ರಾಸ್ಥಳ. ಇಲ್ಲಿನ ಕಾಳೇಶ್ವರ ಮತ್ತು ನರಸಿಂಹ ದೇವಾಲಯಗಳು ವರ್ಷವಿಡೀ ಈ ಸುತ್ತಿನ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತವೆ. ಮೇ ತಿಂಗಳಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತದೆ. (ಎಂ.ಎಚ್.)

**ಕಾಳಪ್ಪ, ಎಸ್. :** 1924-2000. ಹೆಸರಾಂತ ಕಲಾವಿದ. 1924ರಲ್ಲಿ ಮೈಸೂರಿನಲ್ಲಿ ಜನಿಸಿದರು. ಬಾಲ್ಯದಿಂದಲೇ ಚಿತ್ರಕಲೆಯ ಬಗ್ಗೆ ವಿಶೇಷ ಒಲವನ್ನು ಹೊಂದಿದ್ದ ಇವರು ಮೈಸೂರಿನ ಚಾಮರಾಜ ತಾಂತ್ರಿಕ ಶಾಲೆಯ ವಿದ್ಯಾರ್ಥಿಯಾಗಿ ಚಿತ್ರಕಲೆಯನ್ನು ಅಭ್ಯಾಸ ಮಾಡಿ ಡಿಪ್ಲೊಮಾ ಪದವಿ ಗಳಿಸಿದರು (1942).

ನಿಸರ್ಗ ಹಾಗೂ ಪೌರಾಣಿಕ ಚಿತ್ರಗಳ ರಚನೆಯಲ್ಲಿ ಇವರು ನಿಷ್ಣಾತರು. ಹಳೆಯ ಮೈಸೂರಿನ ಕಲಾ ಪರಂಪರೆಯನ್ನು ಮುಂದುವರೆಸಿ ಬೆಳೆಸಲು ಶ್ರಮಿಸಿದರು. ನಾಟಕ, ಚಲನಚಿತ್ರ ಮತ್ತು ಪ್ರಚಾರ ಕ್ಷೇತ್ರಗಳಲ್ಲಿ ಕಲಿಕೆಯನ್ನು ವಿಸ್ತರಿಸಿದರು. ನಿರಂತರ ಕೃತಿರಚನಾ ಚಟುವಟಿಕೆಯನ್ನು ರೂಢಿಸಿಕೊಂಡಿದ್ದ ಇವರು ಶ್ರೀಕಲಾನಿಕೇತನ ಎಂಬ ಕಲಾಶಾಲೆಯನ್ನು ಪ್ರಾರಂಭಿಸಿ (1954) ಶಿಷ್ಯಪರಂಪರೆಯನ್ನೂ ಬೆಳೆಸಿದರು.

ಕಲೆಗೆ ಸಬಂಧಿಸಿದಂತೆ ಅನೇಕ ಪ್ರಯೋಗಗಳನ್ನು ನಡೆಸಿದ ಇವರು ಅನ್ವೇಷಕ ಮನೋಭಾವ ಹೊಂದಿದ್ದ ವ್ಯಕ್ತಿ. ಇವರ ವೈಶಿಷ್ಟವೆಂದರೆ ಚಿತ್ರಕಲೆಯನ್ನು ಸಿನಿಮಾ, ನಾಟಕ ಮತ್ತು ಪ್ರಚಾರ ಕಲೆಗಳಲ್ಲಿ ಸಮರ್ಥವಾಗಿ ಬಳಸಿದರೆಂಬುದು. ಬೆಂಗಳೂರು, ಮೈಸೂರು ಹಾಗೂ ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳಗಳಲ್ಲೂ ಈ ಕ್ಷೇತ್ರದಲ್ಲಿ ಇವರು ಹೆಸರಾಗಿದ್ದರು.

ಮೈಸೂರಿನಲ್ಲಿದ್ದ ನವಜ್ಯೋತಿ ಸ್ಟುಡಿಯೋದಲ್ಲಿ ಹಲವು ವರ್ಷಗಳು ಕಲಾ ದಿಗ್ದರ್ಶಕರಾಗಿ ಸೇವೆಸಲ್ಲಿಸಿದರು. ಕಲಾಕೃತಿಗಳು ಸಂಗ್ರಹಾಲಯಗಳಲ್ಲಿ, ಪ್ರದರ್ಶನಮಂದಿರಗಳಲ್ಲಿ ಮಾತ್ರವಿರದೆ ಜನಸಾಮಾನ್ಯರಿಗೂ ತಲಪುವಂತಾಗಬೇಕೆಂಬುದು ಇವರ ಹೆಬ್ಬಯಕೆಯಾಗಿತ್ತು. ಭಾರತ ಗಣರಾಜ್ಯೋತ್ಸವ ಸಂದರ್ಭದಲ್ಲಿ ನವದೆಹಲಿಯಲ್ಲಿ ಜರುಗುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸ್ತಬ್ಧಚಿತ್ರಗಳನ್ನು ರಚಿಸುವುದರ ಮೂಲಕ ತಮ್ಮ ಬಯಕೆಯನ್ನು ಕಾರ್ಯರೂಪಕ್ಕೆ ತಂದರು. ಇದೇ ಸಂದರ್ಭದಲ್ಲಿ ರಾಜ್ಯದ ಪರವಾಗಿ ಇವರು ರಚಿಸಿದ ಮಹಿಷಾಸುರಮರ್ದಿನಿ ಸ್ತಬ್ಧಚಿತ್ರ ಅಪಾರ ಮೆಚ್ಚುಗೆ ಪಡೆಯಿತು.

ತಮ್ಮ ಕಲಾ ಪ್ರಾವೀಣ್ಯದಿಂದ ಇವರು ರಷ್ಯ, ಇಂಗ್ಲೆಂಡ್, ಇಂಡೋನೇಷ್ಯ ಮತ್ತು ಜಪಾನ್‌ಗಳಲ್ಲಿ ರಂಗಸಜ್ಜಿಕೆ ಅಳವಡಿಸುವ ಅವಕಾಶವನ್ನು ಪಡೆದು ಅದರಲ್ಲಿ ಯಶಸ್ಸು ಹಾಗೂ ಕೀರ್ತಿ ಗಳಿಸಿದರು. ಗುಬ್ಬಿ ನಾಟಕ ಕಂಪನಿಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಇವರು ತಯಾರಿಸಿದ ಎರಡು ಪ್ಯಾನೆಲ್‌ಗಳು ಮತ್ತೊಂದು ಗಮನಾರ್ಹ ರಚನೆ.

ಇವರು ಚಿತ್ರಕಲಾ ಮಾಧ್ಯಮವನ್ನು ಅನೇಕ ಪ್ರಕಾರಗಳಲ್ಲಿ ತೊಡಗಿಸಿ ಯಶಸ್ವಿಯಾದರು. ಹಳೆಯ ಭಿತ್ತಿಚಿತ್ರಗಳು, ಕಲಾಕೃತಿಗಳನ್ನು ಮೂಲದ ಸೊಗಸಿಗೆ ಕಿಂಚಿತ್ತೂ ಚ್ಯುತಿಬಾರದಂತೆ ನಕಲು ಮಾಡುವದರಲ್ಲೂ ಇವರು ನಿಪುಣರಾಗಿದ್ದರು. ಇವರು ಲಲಿತಕಲಾ ಅಕಾಡೆಮಿಯ ಕಲಾ ಪ್ರದರ್ಶನಗಳ ಹಾಗೂ ದಸರ ವಸ್ತುಪ್ರದರ್ಶನದ ಕಲಾ ವಿಭಾಗದ ತೀರ್ಪುಗಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಕರ್ನಾಟಕ ಚಿತ್ರಕಲಾ ಅಕಾಡೆಮಿಯ ಸದಸ್ಯರಾಗಿ, ಮೈಸೂರಿನ ಚಿತ್ರಕಲಾಸಂಘದ ಪದಾಧಿಕಾರಿಯಾಗಿ, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಇವರ ಬಹುಮುಖ ಪ್ರತಿಭೆ ಮತ್ತು ಕಲಾನೈಪುಣ್ಯಕ್ಕಾಗಿ ಅನೇಕ ಬಹುಮಾನಗಳು ಪ್ರಶಸ್ತಿಗಳು ಲಭಿಸಿವೆ. ದಸರ ವಸ್ತುಪ್ರದರ್ಶನದ ಪ್ರಥಮ ಬಹುಮಾನಗಳು (1938 ಮತ್ತು 1952) ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಇವು ಉಲ್ಲೇಖನಾರ್ಹ (1986). ಇವರು 2000 ಇಸವಿಯಲ್ಲಿ ನಿಧನರಾದರು. (ಎಸ್‌ಯು.ಎಂ.)

**ಕಾಳವ್ವೆ :** ಸು.1180. ಬಸವಾದಿ ಪ್ರಮಥರ ಕಾಲದಲ್ಲಿ ಜೀವಿಸಿದ್ದ ಪ್ರಸಿದ್ಧ ವಚನಕಾರ್ತಿ, ಶಿವಾನುಭವಿ, ಶರಣ ಮಾರ್ಗಾನುಯಾಯಿ. ಉರಿಲಿಂಗ ಪೆದ್ದಿಯ (ನೋಡಿ) ಹೆಂಡತಿ. ಉರಿಲಿಂಗ ಪೆದ್ದಿಗಳರಸ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಈಗಿನ ಆಂಧ್ರಪ್ರದೇಶದಿಂದ ಬಂದು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂಧಾರ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಈಕೆಯ ಪತಿ ಪೆದ್ದಯ್ಯ ಕುಪ್ರಸಿದ್ಧ ಕಳ್ಳ. ಉರಿಲಿಂಗದೇವನ ಪ್ರಭಾವದಿಂದ ಶರಣನಾಗಿ ಉರಿಲಿಂಗ ಪೆದ್ದಿಯಾದ. ಪತಿಯನ್ನನುಸರಿಸಿ ಈಕೆಯೂ ಶರಣೆಯಾದಳು. ಈಕೆ ವಚನಗಳನ್ನು ರಚಿಸಿರುವುದಲ್ಲದೆ ತನ್ನ ಪತಿಯ ಜೊತೆಯಲ್ಲಿ ಶಿವಾನುಭವ ಪ್ರಚಾರ ಕಾರ್ಯದಲ್ಲಿ ನಿರಂತರ ನೆರವಾದವಳು. ಅಸ್ಪೃಶ್ಯರೆನಿಸಿದ್ದ ಈ ಸತಿಪತಿಯರು ಶಿವಾನುಭವವನ್ನು ಪಡೆದು ಶ್ರೇಷ್ಠಜ್ಞಾನಿಗಳೆನಿಸಿಕೊಂಡರು. ಈಕೆ ರಚಿಸಿರಬಹುದಾದ ಎಲ್ಲ ವಚನಗಳೂ ಸಿಕ್ಕಿಲ್ಲ. ಸಿಕ್ಕಿರುವ ಕೆಲವೇ ವಚನಗಳಲ್ಲಿ ಕಾಣುವ ಪಾಂಡಿತ್ಯ, ಅನುಭವ, ನಿಷ್ಠೆ, ತತ್ತ್ವಜ್ಞಾನದ ತಿಳಿವಳಿಕೆಗಳೂ ಗೃಹಿಣಿಯಲ್ಲಿರಬೇಕಾದ ಸದ್ಗುಣಗಳ ವಿವರಗಳೂ ಈಕೆಯನ್ನು ಉತ್ತಮ ವಚನಕಾರ್ತಿಯಾಗಿಸಿವೆ. ಹನ್ನೆರಡನೆಯ ಶತಮಾನದಲ್ಲಿ ಕಾಣುವ ಅಪೂರ್ವ ಸತಿ-ಪತಿ ಜೋಡಿಗಳಲ್ಲಿ ಇವರದೂ ಒಂದು.

ತುಮುರಿಯ ಕೊಳ್ಳಿಯಂತೆ ಉರಿವಾತ ಭಕ್ತನೆ; ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ, ಸತ್ಯ ಶುದ್ಧವಿಲ್ಲದದು ಕಾಯಕವಲ್ಲ; ವ್ರತವೇ ಮುತ್ತು ರತ್ನ -ಈಕೆಯ ವಚನಗಳಲ್ಲಿ ಬರುವ ಇಂಥ ಮಾತುಗಳು ಸಾಹಿತ್ಯದ ಕಾಂತಿಯಿಂದ ಮಿನುಗುತ್ತವೆ. *

**ಕಾಳಾಚಾರ್, ರು :** 1942-. ಹೆಸರಾಂತ ಶಿಲ್ಪಿ. ಇಂದಿನ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಅಜ್ಜಿಹಳ್ಳಿಯಲ್ಲಿ 1942 ಜೂನ್

15ರಂದು ಜನಿಸಿದರು. ತಂದೆ ರುದ್ರಾಚಾರ್. ಇವರದು ಶಿಲ್ಪಿಗಳ ಕುಟುಂಬ. ಓದಿನ ನಡುವೆಯೇ ಕಲಾ ವ್ಯಾಸಂಗವನ್ನೂ ನಡೆಸಿದ ಕಾಳಾಚಾರ್ ಆಯ್ದುಕೊಂಡಿದ್ದು ಪೂರ್ಣಾವಧಿ ಶಿಲ್ಪವೃತ್ತಿಯನ್ನೇ. ಶಾಲಾ ವಸ್ತು ಪ್ರದರ್ಶನಗಳಲ್ಲಿ ಪ್ರದರ್ಶಿಸಲು ಕಲಾಕೃತಿ ರಚಿಸುವ ಮೂಲಕ ಕಲಾ ಪ್ರಪಂಚಕ್ಕೆ ಕಾಲಿಟ್ಟರು. ಅನಂತರ ಶಿಲೆ, ಲೋಹ, ಮರ, ಚಿನ್ನ, ಬೆಳ್ಳಿ ಮತ್ತು ಚಿತ್ರಕಲಾ ಮಾಧ್ಯಮಗಳಲ್ಲಿ ಪರಿಣಿತರಾಗಿ, ಸಾವಿರಾರು ಕೃತಿಗಳನ್ನು ರಚಿಸಿದರು. ಇವರು ರಚಿಸಿರುವ ಶಿಲ್ಪಗಳು ದೇಶ ವಿದೇಶಗಳಲ್ಲೂ ಸಂಗ್ರಹವಾಗಿವೆ. ಇವಲ್ಲದೇ ದೇವತಾಮೂರ್ತಿಗಳು ಹಾಗೂ ಉತ್ಸವ ಮೂರ್ತಿಗಳನ್ನು ರಚಿಸುವುದರಲ್ಲೂ ಇವರು ಪ್ರಾವೀಣ್ಯ ಪಡೆದಿದ್ದಾರೆ.

ಆರಾಧನಾ ಮೂರ್ತಿಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿದ ಬಳಿಕವೇ ಇವರು ಮೂರ್ತಿಗಳನ್ನು ನಿರ್ಮಿಸುತ್ತಿದ್ದರು. ಅಧ್ಯಯನಕ್ಕಾಗಿ ತಮ್ಮ ಮನೆಯಲ್ಲಿ ಸುಸಜ್ಜಿತ ಗ್ರಂಥಭಂಡಾರ ಹೊಂದಿರುವ ಇವರು ತಮ್ಮ ಮನೆಯನ್ನೇ ಶಿಲ್ಪ ಕಾರ್ಯಾಗಾರವನ್ನಾಗಿ ಮಾಡಿಕೊಂಡಿದ್ದರು.

ಶಿಲ್ಪಕಲೆಗೆ ಅಮೂಲ್ಯ ಸೇವೆ ಸಲ್ಲಿಸಿದ ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ಲಭಿಸಿವೆ. ಇವುಗಳಲ್ಲಿ ಮುಖ್ಯವಾದವು: ಮೈಸೂರು ದಸರ ವಸ್ತುಪ್ರದರ್ಶನದಲ್ಲಿ ಸತತ ಮೂರು ಬಾರಿ ಪ್ರಶಸ್ತಿ (1961, 62, 63), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1995), ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ (1997), ಜಕಣಾಚಾರಿ ಪ್ರಶಸ್ತಿ (2003). (ಎನ್.ಎಂ.)

**ಕಾಳಿ :** ಉತ್ತರ ಕನ್ನಡ ಜಿಲ್ಲೆಯ ಒಂದು ನದಿ. ಸಮುದ್ರ ಮಟ್ಟದಿಂದ 900ಮೀ ಎತ್ತರದಲ್ಲಿ, ಪಶ್ಚಿಮ ಘಟ್ಟಗಳ ಮಡಿಲಿನಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಅನಂತರ ಆಗ್ನೇಯ ದಿಕ್ಕಿನತ್ತ ತಿರುಗಿ ಹಳಿಯಾಳ ತಾಲ್ಲೂಕಿನ ದಾಂಡೇಲಿ ಮೂಲಕ ದಕ್ಷಿಣದತ್ತ ಹರಿದು, ಯಲ್ಲಾಪುರಕ್ಕೆ ನೈಋತ್ಯದಲ್ಲಿ 20ಕಿಮೀ ದೂರದಲ್ಲಿ ಸು.90ಮೀನಷ್ಟು ಕೆಳಕ್ಕೆ ದುಮುಕಿ ಸುಂದರವಾದ ಲಾಲಗುಳಿ ಜಲಪಾತವನ್ನು ನಿರ್ಮಿಸಿದೆ. ಮುಂದೆ ಸುಪ, ಹಳಿಯಾಳ ಮತ್ತು ಯಲ್ಲಾಪುರ ತಾಲ್ಲೂಕುಗಳ ಗಡಿಯಲ್ಲಿ ಹರಿದು ಕಾರವಾರ ತಾಲ್ಲೂಕನ್ನು ಪೂರ್ವ ದಿಕ್ಕಿನಲ್ಲಿ ಪ್ರವೇಶಿಸಿ ತಾಲ್ಲೂಕಿನ ಮಧ್ಯಭಾಗದಲ್ಲಿ ಹರಿದು ಕಾರವಾರದ ಹತ್ತಿರ ಪಡುವಣ ಕಡಲನ್ನು ಕೂಡಿಕೊಳ್ಳುತ್ತದೆ. ನದಿಯ ಮಾರ್ಗ ದಟ್ಟವಾದ ಅರಣ್ಯದಿಂದ ಕೂಡಿದೆ. ಪಶ್ಚಿಮಕ್ಕೆ ತಿರುಗಿದಾಗ ಘಟ್ಟದ ಇಳಿಜಾರಿನಲ್ಲಿ ಜಿಗಿದು, ಹೆಚ್ಚು ದೂರ ಇಕ್ಕಟ್ಟಾದ ಎಡೆಗಳಲ್ಲೇ ಹರಿದು, ಒಟ್ಟು 161ಕಿಮೀ ದೂರ ಪ್ರವಹಿಸುತ್ತದೆ. ಕಾಳಿ ನದಿಯ ಹೆಚ್ಚು ಭಾಗ ಪರ್ವತ ಪ್ರದೇಶದಲ್ಲಿ ಹರಿಯುವುದರಿಂದಲೂ ಕಡಲು ಸೇರುವ ಮುನ್ನ ಇದು ದಾಟುವ ಕರಾವಳಿ ಕೂಡ ತೀರ ಕಿರಿದಾಗಿರುವುದರಿಂದಲೂ ನೀರಾವರಿಗೆ ಇದನ್ನು ಹೆಚ್ಚಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ನದಿಯ ಮುಖದ ಸುಮಾರು 30ಕಿಮೀ ದೂರ ದೋಣಿಸಂಚಾರಕ್ಕೆ ಯೋಗ್ಯವಾಗಿದೆ. ಈ ನದಿಯ ಇಡೀ ಜಲಾನಯನ ಪ್ರದೇಶದಲ್ಲಿ. ವರ್ಷಕ್ಕೆ 889ಮಿಮೀ ಮಳೆಯಾಗುತ್ತದೆ. ಪಂಡ್ರಿ, ಬಾರ್ಚಿ, ತಟ್ಟಿಹಳ್ಳ, ಕಾನೇರಿ, ವಾಕಿ ಮತ್ತು ಮಾದ್ರಿ -ಇವು ಈ ನದಿಯ ಉಪನದಿಗಳು. ಕಾಳಿ ನದಿ ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಬೇಸಗೆಯಲ್ಲಿ ನೀರು ಕಡಿಮೆ. ಒಟ್ಟು 278 ಟಿ.ಎಂ.ಸಿ. ಅಡಿ ನೀರು ಈ ನದಿಯಲ್ಲಿ ವಾರ್ಷಿಕವಾಗಿ ಹರಿಯುವುದೆಂದು ಅಂದಾಜು ಮಾಡಲಾಗಿದೆ.

ಈ ನದಿ ಅರಬ್ಬೀಸಮುದ್ರವನ್ನು ಸೇರುವ ಮುನ್ನ ಅದರಿಂದ ಆದಷ್ಟು ಹೆಚ್ಚಿನ ಪ್ರಯೋಜನ ಪಡೆಯುವ ಸಲುವಾಗಿ ಈ ನದಿಗೆ ಅಲ್ಲಲ್ಲಿ ಜಲಾಶಯಗಳನ್ನು ನಿರ್ಮಿಸಿ, ವಿದ್ಯುದುತ್ಪಾದನ ಕೇಂದ್ರಗಳನ್ನು ಸ್ಥಾಪಿಸುವ ಕೆಲಸ ನಡೆದಿದೆ. ಇದಕ್ಕಾಗಿ ಈ ನದಿಯ ಸುತ್ತಣ ನೆಲದ ವ್ಯಾಪಕ ಸಮೀಕ್ಷೆಯನ್ನು ಮಾಡಲಾಗಿದೆ. ವಿದ್ಯುತ್ತಿನ ಅಭಿವೃದ್ಧಿಗಾಗಿ ಯೋಜನೆಯೊಂದನ್ನು ಜಾರಿಗೆ ತರಲಾಗಿದೆ. ಅಂತಿಮವಾಗಿ ಕಾಳಿ ನದಿ ಕಣಿವೆಯಲ್ಲಿ ಎಂಟು ಕಟ್ಟೆಗಳ ಆರು ವಿದ್ಯುತ್ ಕೇಂದ್ರಗಳ ನಿರ್ಮಾಣದ ಯೋಜನೆಯಿದು.

ಕಾಳಿ ಜಲವಿದ್ಯುತ್ ಯೋಜನೆಯ ಮುಖ್ಯ ಜಲಾಶಯವನ್ನು ಸುಪದ ಬಳಿ ನಿರ್ಮಿಸಲಾಗಿದೆ. ಅಲ್ಲಿಯ ಕಟ್ಟೆಯ ಎತ್ತರ 320'. 10ಲಕ್ಷ ಕಿವ್ಯಾ ವಿದ್ಯುತ್ತಿನ ಉತ್ಪಾದನೆಯಾಗುತ್ತದೆ.

ದಾಂಡೇಲಿಯ ದಟ್ಟಕಾಡಿನಲ್ಲಿ ಹರಿಯುತ್ತಿರುವ ಕಾಳಿ ನದಿ

ಮೊದಲನೆಯ ಹಂತದಲ್ಲಿ ಬೊಮ್ಮನಹಳ್ಳಿಯ ಬಳಿ ಕಾಳಿ ನದಿಗೆ ಅಡ್ಡಲಾಗಿ 75' ಎತ್ತರದ ಕಟ್ಟೆ ಕಟ್ಟಲಾಗಿದೆ. ಇದರಿಂದ ನಿರ್ಮಿತವಾದ ಸರೋವರದ ನೀರನ್ನು 29,100' ಉದ್ದದ ಒತ್ತಡ ಸುರಂಗವೊಂದರ ಮೂಲಕ 75' ವ್ಯಾಸ ಮತ್ತು 225' ಆಳದ ತೊಟ್ಟಿಯೊಳಕ್ಕೆ ಹರಿಸಿ, ಅದಕ್ಕೆ ತಲಾ 12 $^1/_2$ (ವ್ಯಾಸ ಮುಚ್ಚು 2,550) ಉದ್ದ ಇರುವ ಎರಡು ತೂಬುಗಳನ್ನು ನಿರ್ಮಿಸಲಾಗಿದೆ. ಇದರಿಂದ 1,166' ಯ ಔನ್ನತ್ಯ ದೊರಕುತ್ತದೆ. ತಲಾ 165 ಮೆಗಾವ್ಯಾಟಿನ ಎರಡು ವಿದ್ಯುಜ್ಜನಕ ಯಂತ್ರಗಳನ್ನು ಸ್ಥಾಪಿಸಿ ಇಲ್ಲಿ ಉತ್ಪತ್ತಿಯಾದ ವಿದ್ಯುತ್ತನ್ನು ಸು.64 ಕಿಮೀ ದೂರದಲ್ಲಿರುವ ಹುಬ್ಬಳ್ಳಿಗೆ ಸಾಗಿಸಲಾಗುತ್ತದೆ. ಸದ್ಯ ಸುಪದ ಈ ಜಲಾಶಯದಿಂದ 100 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದ್ದು ಎರಡನೆಯ ಹಂತದ ಯೋಜನೆಯನ್ನು ಕೊಡಸಾಲಿ ಜಲಾಶಯ ಅನುಷ್ಠಾನಕ್ಕೆ ತರಲಾಗಿದೆ. ಇದು ಉತ್ಪಾದಿಸುವ ವಿದ್ಯುತ್ 120 ಮೆಗಾವ್ಯಾಟ್‌ಗಳು. *

**ಕಾಳಿಂಗನಾವಡ, ಗುಂಡ್ಮಿ : 1957-** ಯಕ್ಷಗಾನದ ಹೆಸರಾಂತ ಭಾಗವತರು. ಉಡುಪಿ ತಾಲ್ಲೂಕಿನ ಗುಂಡ್ಮಿಯಲ್ಲಿ 1957 ಜೂನ್ 6ರಂದು ಹುಟ್ಟಿದರು. ಇವರ ತಂದೆ ಗುಂಡ್ಮಿ ರಾಮಚಂದ್ರ ನಾವಡರೂ ಪ್ರಸಿದ್ಧ ಭಾಗವತರಾಗಿದ್ದರು. ಕಾಳಿಂಗನಾವಡರ ವಿದ್ಯಾಭ್ಯಾಸ ಹೈಸ್ಕೂಲ್ ಮಟ್ಟವನ್ನು ಮೀರಲಿಲ್ಲ. ಬಾಲ್ಯದಿಂದಲೂ ಸೂಕ್ಷ್ಮ ಗ್ರಹಣಶಕ್ತಿ ಮತ್ತು ಅನುಕರಣ ಶಕ್ತಿಯನ್ನು ಹೊಂದಿದ್ದ ಇವರನ್ನು ತಂದೆಯವರ ಭಾಗವತ ವೃತ್ತಿ ಆಕರ್ಷಿಸಿತು. ಅವರ ಜೊತೆ ಯಕ್ಷಗಾನ ಆಟಗಳಿಗೆ ಹೋಗಿ ತಾಳ ನುಡಿಸುವ ಅಭ್ಯಾಸ ಬೆಳೆಸಿಕೊಂಡರು. ಯಕ್ಷಗಾನಕ್ಕೆ ಮಾರುಹೋದರು.

ತಮ್ಮ 15ನೆಯ ವಯಸ್ಸಿನಲ್ಲಿ ಅಮೃತೇಶ್ವರಿ ಮೇಳದಲ್ಲಿ ಸಂಗೀತಗಾರರಾಗಿ ಸೇರಿದರು. ಅಲ್ಲಿ ಇವರಿಗೆ ಗುರುವಾಗಿದ್ದವರು ಹಿರಿಯ ಭಾಗವತ ಉಪ್ಪೂರ ನಾರ್ಣಪ್ಪ. ಶುದ್ಧ ಶಾಸ್ತ್ರೀಯ ಭಾಗವತಿಕೆಯನ್ನು ಅವರಿಂದಲೂ ಕಲಿತರು. ಮುಂದೆ ಯಕ್ಷಗಾನದ ಮಹಾನ್ ಕಲಾವಿದರಾದ

ಹಿರಿಯಡ್ಕ ಗೋಪಾಲರಾವ್, ಮಹಾಬಲ ಕಾರಂತ, ಸದಾನಂದ ಹೆಬ್ಬಾರ ಮೊದಲಾದವರಿಂದ ಇವರಿಗೆ ಮಾರ್ಗದರ್ಶನ ದೊರೆಯಿತು. ಅಮೃತೇಶ್ವರಿ, ಸಾಲಿಗ್ರಾಮ ಮೊದಲಾದೆಡೆಗಳ ಮೇಳಗಳಲ್ಲಿ ಶ್ರೋತೃಗಳ ಕಿವಿಗಳನ್ನು ತಣಿಸುತ್ತಾ ಬಂದರು. ತಮ್ಮ ತುಂಬು ಕಂಠ ಮಾಧುರ್ಯದಿಂದ ಪದಗಳನ್ನು ನಿಧಾನವಾಗಿ ಬಿಡಿಸಿ ಬಿಡಿಸಿ ಹಾಡುವುದರಲ್ಲಿ ಇವರು ಎತ್ತಿದ ಕೈ.



ಯಕ್ಷಗಾನದಲ್ಲಿ ಇವರು ಹಲವು ಪ್ರಸಂಗಗಳನ್ನು ರಚಿಸಿದ್ದರು. ರೂಪಶ್ರೀ, ನಾಗಶ್ರೀ, ಕಾಂಚನಶ್ರೀ, ಭಾಗ್ಯಶ್ರೀ, ವಿಜಯಶ್ರೀ- ಇವು ಜನಪ್ರಿಯ ಪ್ರಸಂಗಗಳು. ನಾಗಶ್ರೀ ಎಂಬ ಪ್ರಸಂಗ ಒಂದು ಸಾವಿರಕ್ಕೂ ಹೆಚ್ಚು ಪ್ರದರ್ಶನವನ್ನು ಕಂಡಿದೆ. ಹೊಸ ಪ್ರಸಂಗಗಳ ಜೊತೆ ಹೊಸ ರಾಗಗಳನ್ನು ಕೂಡ ಇವರು ಪರಿಚಯಿಸಿದರು. ಭಾಗವತರಾಗಿ ರಾಮಾಯಣ, ಭಾರತ, ಭಾಗವತ ಮುಂತಾದ ಪೌರಾಣಿಕ ಪ್ರಸಂಗಗಳ ಬಗ್ಗೆ ಒಲವಿದ್ದ ನಾವಡರು ಕಾಲ್ಪನಿಕ ಪ್ರಸಂಗಗಳ ರಚನೆಗೆ ಕೈಹಾಕಿದರು. ಪ್ರಸಂಗಗಳು ಕಾಲ್ಪನಿಕವಾದರೂ ಅವುಗಳಲ್ಲಿ ನೀತಿ ಪ್ರತಿಪಾದನೆ, ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವುದು ಇವರ ಉದ್ದೇಶವಾಗಿತ್ತು.

ಇವರು ರಂಗದ ಮೇಲೆ ಶಿಸ್ತನ್ನು, ಸಾಂಸ್ಕೃತಿಕ ಗತ್ತನ್ನು ಕಾಪಾಡಿಕೊಂಡು ಬರುತ್ತಿದ್ದರು. ಅಂತಹುದೇ ಶಿಸ್ತನ್ನು ಇತರ ಕಲಾವಿದರಿಂದಲೂ ಅಪೇಕ್ಷಿಸುತ್ತಿದ್ದರು. ಇವರಿಗೆ ಕರಾವಳಿಯಲ್ಲಿ ಮಾತ್ರವಲ್ಲ ಬೆಂಗಳೂರು, ಮುಂಬಯಿ, ದೂರದ ಕೊಲ್ಲಿ ರಾಷ್ಟ್ರಗಳಲ್ಲೂ ಅಸಂಖ್ಯ ಅಭಿಮಾನಿಗಳಿದ್ದರು. ಬೆಹರಿನ್ ಕನ್ನಡ ಸಂಘ ಒಮ್ಮೆ ಇವರನ್ನು ಕರೆಸಿಕೊಂಡಿತ್ತು. ಕಿರುವಯಸ್ಸಿನಲ್ಲೇ ಅಪಾರ ಜನಪ್ರಿಯತೆ ಗಳಿಸಿಕೊಂಡಿದ್ದ ಇವರು ರಸ್ತೆ ಅಪಘಾತದಲ್ಲಿ ಅಕಾಲ ನಿಧನಕ್ಕೀಡಾದರು. (ಟಿ.ಎಂ)

**ಕಾಳಿಂಗರಾಯ :** ಸುದೀರ್ಘ ಕನ್ನಡ ಜನಪದ ಕಾವ್ಯಗಳಲ್ಲಿ ಒಂದು. ಆಂಧ್ರಪ್ರದೇಶ ಹಾಗೂ ಕರ್ನಾಟಕ ಎರಡು ರಾಜ್ಯಗಳಲ್ಲೂ ಈ ಕಥೆ ಪ್ರಚಲಿತವಾಗಿದೆ. ಜನಪದ ಪುಣ್ಯಕಥೆಗಳ ಸಾಲಿನಲ್ಲಿ ಇದಕ್ಕೆ ಅಗ್ರಸ್ಥಾನ. ತ್ರಿಪದಿ ಛಂದಸ್ಸಿನಲ್ಲಿ ಲಭ್ಯವಾಗುವ ಈ ಕಾವ್ಯ ಕಂಠಸ್ಥ ಸಂಪ್ರದಾಯದಲ್ಲಿ ಉಳಿದು ಬಂದ ಒಂದು ಸುಸಂಬದ್ಧ ರಚನೆಯಾಗಿದೆ. ಇದರ ಆರಂಭ ಅಂತ್ಯಗಳನ್ನು ಗಮನಿಸಿದಾಗ ಶಿಷ್ಟ ಸಂಪ್ರದಾಯದ ಮಾರ್ಗಕಾವ್ಯಗಳ ಸ್ವರೂಪವನ್ನೇ ಕಾಣಬಹುದಾಗಿದೆ. ಪೀಠಿಕಾ ಪ್ರಕರಣದಲ್ಲಿ ದೇವಾತಾಸ್ತುತಿ, ಕಾವ್ಯವನ್ನು ಹಾಡಿಸಿದವರ ಸ್ಮರಣೆ, ಅದನ್ನು ಕೇಳುವವರಲ್ಲಿ ಇರಬೇಕಾದ ಶ್ರದ್ಧೆ, ಆಸಕ್ತಿ ಈ ಎಲ್ಲ ವಿವರಗಳನ್ನೂ ಪ್ರಸ್ತಾಪಿಸಲಾಗುತ್ತದೆ:

ಆತಗಿನ್ನ ಮೊದಲು ಈಕೀಯ ನೆನೆದೇವೆ
ಸುತ್ತೇಳು ಹೊಂಡದ ಗಿರಿಯಳ - ಮೇಲುದುರುಗಾದ
ಸತ್ಯಕ್ಕನ ಮೊದಲು ಬಲಗೊಂಡೆ
ಶರಣರ ಕತೆಯ ಈಗ್ಯಾರು ಕರೆಸ್ಯಾರೆ
ಸಾಲು ಮಾಳಿಗೆ ಮನೆಯೋರು ತಿಪ್ಪೇಸ್ವಾಮಿ
ಸತ್ಯಕಾರ ಕತೆಯ ತಗಿಸ್ಯಾರು
ತಾಯಿ ತಂದೆಯ ತೋರಿಟ್ಟು ಹೇಳೀನೆ
ಲಿಂಗದ ಗುಡಿಯಾಗೆ ನೆನೆದೇನೆ - ಈ ಹಾಡ
ಕೆಂಚವ್ವ ಜಾಣೆ ಕಲಿಸ್ಯಾಳೆ

ಕಾವ್ಯದ ಅಂತ್ಯದಲ್ಲಿಯೂ ಕತೆಗಾರ್ತಿ ಕತೆಯನ್ನು ಹಾಡಿಸಿದವರಿಗೆ, ಕೇಳಿದವರಿಗೆ, ಸೊಲ್ಲು ಕೊಟ್ಟವರಿಗೆ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತಾಳೆ.

ಹಾಡಿದಕ್ಕಗಿನ್ನ ಕೇಳಿದಕ್ಕಗಿನ್ನ
ಸೋಯೆಂದ ಅಕ್ಕಗಳೆ ಸುಖಿಬಾಳು - ನಿಮ್ಮೊಟ್ಟೀಯಲ್ಲಿ
ಕಾಳಿಂಗನೆಂಬೊ ಮಗ ಬರಲಿ
ಕಂಚಿನುಂಗುರದ ಕೆಂಚೆಣ್ಣು ಕೇಳೆ
ಅಂತರಿಸಿ ಧ್ವನಿಯನಿಲಹೊಯ್ಯಿ - ಉತ್ತದಾಳ
ಸಂಪನ್ನರ ಕತೆಯ ಮುಗಿದಾವೆ

ಹೀಗೆ ಕಾಳಿಂಗರಾಯನ ವೃತ್ತಾಂತ ಅತ್ಯಂತ ಶ್ರದ್ಧೆ, ನಿಷ್ಠೆಗಳಿಂದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹಾಡಬಹುದಾದ ಕತೆಯಾದುದರಿಂದ ಅದರ ಸ್ವರೂಪ ಕೆಡದಂತೆ ಉಳಿದು ಬಂದಿದೆ. ನಾಲ್ಕಾರು ಅಧ್ಯಾಯಗಳಲ್ಲಿ ಕತೆಯನ್ನು ವಿಸ್ತರಿಸಿಕೊಳ್ಳುವಾಗ ಕಂಠಸ್ಥ ಸಂಪ್ರದಾಯಕ್ಕೆ ಅನುಗುಣವಾಗಿ, ಸ್ಮರಣೆಯಲ್ಲಿಟ್ಟುಕೊಳ್ಳುವ ಅನುಕೂಲಕ್ಕಾಗಿ ಬೇರೆ ಬೇರೆ ಪಲ್ಲವಿಗಳನ್ನು ಒಂದೊಂದು ಅಧ್ಯಾಯಕ್ಕೂ ಬದಲಿಸಿಕೊಂಡು ವೈವಿಧ್ಯಮಯ ಮಟ್ಟುಗಳಲ್ಲಿ ಹಾಡಲಾಗುತ್ತದೆ. ಎಲ್ಲ ಸಂಪ್ರದಾಯದ ಜನಪದ ಗಾಯಕರಲ್ಲೂ ಹಾಡುಗಾರಿಕೆಯ ಸೊಗಸನ್ನು ಮೆರೆಯಲು, ಏಕತಾನತೆಯನ್ನು ನಿವಾರಿಸಿಕೊಳ್ಳಲು ಸುದೀರ್ಘ ರಚನೆಗಳಲ್ಲಿ ಈ ತಂತ್ರವನ್ನೇ ಅಳವಡಿಸಿಕೊಳ್ಳುವುದು ಗಮನಾರ್ಹ ಅಂಶವಾಗಿದೆ.

ಕರ್ನಾಟಕದ ಪುರುಷ ಗಾಯಕರಲ್ಲಿ ನೀಲಗಾರರು, ದೇವರ, ಗುಡ್ಡರು, ಚೌಡಿಕೆಯವರು, ದೊಂಬಿದಾಸರು ಮೊದಲಾದ ವೃತ್ತಿಗಾಯಕರು ಅನೇಕ ಜನಪದ ಪುಣ್ಯಕತೆಗಳನ್ನು ವಾದ್ಯವಿಶೇಷದೊಡನೆ ಸಮಗ್ರ ರಾತ್ರಿ ಹಾಡುವ ವಿಶಿಷ್ಟ ಸಂಪ್ರದಾಯಗಳಂತೆಯೇ ಸ್ತ್ರೀ ಗಾಯಕರು ಯಾವ ವಾದ್ಯವಿಶೇಷವನ್ನೂ ಬಳಸದೆ ಹಾಡುವ ಸುದೀರ್ಘಕತೆಗಳೂ ಅನೇಕ. ಗೊತ್ತಾದ ಸಂದರ್ಭಗಳಲ್ಲಿ ಉಡುಗೊರೆಗಳನ್ನು ನೀಡಿ ಹಾಡಿಸುವ ವ್ಯಾಪಕವಾದ ಕತೆಗಳಿವು. ಗುಣಸಾಗರಿ, ಅಣಜಿ ಹೊನ್ನಮ್ಮ, ಹುಳಿಯಾರು ಕೆಂಚಮ್ಮ, ಬಾಲನಾಗಮ್ಮ ಮುಂತಾದ ಕತೆಗಳು ಈ ವರ್ಗಕ್ಕೆ ಸೇರುತ್ತವೆ. ಕಾಳಿಂಗರಾಯ ಮಧ್ಯ ಕರ್ನಾಟಕದ ಒಂದು ಶ್ರೇಷ್ಠ ಸಂಪ್ರದಾಯದಲ್ಲಿ ಅತ್ಯಂತ ಜನಪ್ರಿಯ ಕತೆಯಾಗಿದೆ.

ಮಕ್ಕಳಿಲ್ಲದ ಮದರಂಬೆ ಶಿವನ ಕರುಣೆಯಿಂದ ತನ್ನ ಇಳಿವಯಸ್ಸಿನಲ್ಲಿ ಗಂಡು ಮಗುವೊಂದನ್ನು ಪಡೆಯುತ್ತಾಳೆ. ಹುಟ್ಟುವಂಥ ಕಂದ ಹೆಚ್ಚುಕಾಲ ಬದುಕಲಾರ ಎಂದು ಹೇಳಿದರೂ ಕೇಳದೆ ಪಡೆದ ಮಗುವಿಗೆ ಕಾಳಿಂಗರಾಯನೆಂದು ಹೆಸರಿಡುತ್ತಾಳೆ. ಕಾಳಿಂಗರಾಯ ಓದಿನಲ್ಲಿ ಅತಿ ಜಾಣನಾಗಿ ಒಂದು ಬರೆಯೆಂದರೆ ಒಂಬತ್ತು ಬರೆದು ಗುರುವಿಗೆ ಆಶ್ಚರ್ಯವನ್ನುಂಟುಮಾಡುತ್ತಾನೆ. ಎಲ್ಲರ ಮೆಚ್ಚಿನ ಮಗುವಾಗಿ ಬೆಳೆದು, ಗೆಳೆಯರೊಡನೆ ಒಮ್ಮೆ ಚೆಂಡಾಡುವಾಗ ಕಾಳಿಂಗರಾಯ ವಿಧಿಮಾಯೆಯ ದೃಷ್ಟಿಗೆ ಬೀಳುತ್ತಾನೆ. ಮರುದಿನ ಹುಲಿಯ ಬೇಟೆಯಲ್ಲಿ ವಿಧಿ ಅವನ ಮರಣವನ್ನು ಬರೆದು ಮಾಯವಾಗುತ್ತಾಳೆ. ಕಾಳಿಂಗರಾಯ ಯಾರ ಮಾತನ್ನೂ ಲೆಕ್ಕಿಸದೆ ಮರುದಿನ ಹುಲಿಯ ಬೇಟೆಗೆ ಹೋಗಿ ಘೋರ ವ್ಯಾಘ್ರಕ್ಕೆ ಬಲಿಯಾಗುತ್ತಾನೆ. ಮಗನ ಮರಣದಿಂದ ಕಡುದುಃಖಕ್ಕೊಳಗಾದ ಮದರಂಬೆ ಸತ್ತ ಮಗನಿಗೆ ಮದುವೆ ಮಾಡುವ ನಿರ್ಧಾರಕ್ಕೆ ಬರುತ್ತಾಳೆ. ಮುದ್ದು ಚೆನ್ನವ್ವಳೊಡನೆ ಸತ್ತ ಕಾಳಿಂಗನ ಲಗ್ನವಾಗುತ್ತದೆ. ಸುಡುಗಾಡಿನಲ್ಲಿ ತನ್ನ ಪತಿಯ ಶವವನ್ನು ಬಿಟ್ಟು ಬರಲಾರದೆ, ಚೆನ್ನವ್ವ ಒಬ್ಬಳೇ ಅಲ್ಲಿ ಉಳಿಯುತ್ತಾಳೆ. ನಾನಾ ಬಗೆಯಲ್ಲಿ ಅವಳ ದೃಢತೆಯನ್ನು ಪರೀಕ್ಷಿಸಿ ಶಿವ, ಕೊನೆಗೆ ಕಾಳಿಂಗನನ್ನು ಬದುಕಿಸುತ್ತಾನೆ. ಶಿವನೊಡನೆ ಎಲ್ಲರೂ ಕೈಲಾಸಕ್ಕೆ ತೆರಳುತ್ತಾರೆ.

ಇದಿಷ್ಟು ಕತೆಯ ಚೌಕಟ್ಟು. ಮಗನನ್ನು ಪಡೆಯುವ ಮುನ್ನ ತಾಯಿಯ ಹಂಬಲ, ಪಡೆದ ಮಗನನ್ನು ಬೆಳೆಸಿದ ಬಗೆ, ಚೆಂಡಾಟದ ಸನ್ನಿವೇಶ, ಬೇಟೆ, ತಾಯಿಯ ದುಃಖ, ಚೆನ್ನವ್ವನನ್ನು ತಂದ ಬಗೆ, ಚೆನ್ನವ್ವನ ಪತಿಭಕ್ತಿ, ದೃಢನಿಷ್ಠೆ - ಮುಂತಾದುವು ಅತ್ಯಂತ ಉಜ್ವಲವಾಗಿ ಈ ಕಾವ್ಯದಲ್ಲಿ ಮೂಡಿಬಂದಿದೆ. ಜನಪದ ಕತೆಗಳ ಪ್ರಸಿದ್ಧ ಆಶಯಗಳು ಈ ಕತೆಯಲ್ಲಿ ಕೂಡಿಬಂದು ಸುಂದರ ಕಥಾಶಿಲ್ಪವನ್ನು ಮೂಡಿಸಿವೆ. ಈ ಕೃತಿ ಕನ್ನಡ ಸಾರಸ್ವತಲೋಕದ ಒಂದು ಉತ್ಕೃಷ್ಟ ಕೃತಿಯಾಗಿ ಜನಪದ ಕಾವ್ಯಗಳ ಘನತೆಯನ್ನು ಎತ್ತಿಹಿಡಿಯುವ ಅತ್ಯುತ್ತಮ ಮಾದರಿಯಾಗಿದೆ. ಉಚ್ಚಂಗಿದುರ್ಗದ ಪ್ರಸಿದ್ಧ ಜನಪದ ಗಾಯಕಿ ಎಲಿಸವ್ವ ಹಾಡಿದ ಈ ಕತೆಯ ಒಂದು ಪಾಠ ಈಗಾಗಲೇ ಕೃತಿರೂಪದಲ್ಲಿ ಪ್ರಕಟವಾಗಿದೆ. (ಜಿ.ಎಸ್.ಪಿ.)

**ಕಾಳಿಂಗರಾವ್, ಪಿ. :** 1911-81. ಪ್ರಸಿದ್ಧ ಗಾಯಕ, ಸಂಗೀತ ನಿರ್ದೇಶಕ. 1914 ಆಗಸ್ಟ್ 31ರಂದು ದಕ್ಷಿಣ ಕನ್ನಡ ಜಿಲ್ಲೆ ಪಾಂಡೇಶ್ವರದಲ್ಲಿ ಜನಿಸಿದರು. ಹಾರಾಡಿ ರಾಮಗಾಣಿಗರ ಗುರುಗಳಾಗಿದ್ದ ಪಾಂಡೇಶ್ವರ ಪುಟ್ಟಯ್ಯ ಇವರ ತಂದೆ, ತಾಯಿ ನಾಗರತ್ನಮ್ಮ. ಸುಬ್ರಹ್ಮಣ್ಯ ದೇವರ ಮನೆಯೊಕ್ಕಲಿನವರಾಗಿದ್ದ ತಾಯಿ,ಮಗನಿಗೆ ಸುಬ್ರಹ್ಮಣ್ಯ ಹೆಸರನ್ನೇ ಇಟ್ಟು ಸುಬ್ರಾಯ ಶಾನಭಾಗ್ ಎಂದು ಕರೆಯುತ್ತಿದ್ದರು. ಅನಂತರ ಕಾಳಿಂಗಶರ್ಮನೆನಿಸಿ, ಮುಂದೆ ಕಾಳಿಂಗರಾವ್ ಎಂಬ ಹೆಸರು ರೂಢಿಗತವಾಯಿತು.

ಬಾಲ್ಯದಲ್ಲಿ ಶಾಲಾರಂಗಭೂಮಿಯಿಂದಲೇ ನಾಟಕರಂಗ, ಪ್ರವೇಶಿಸಿದರು. ಇವರಲ್ಲಿದ್ದ ಸುಪ್ತಕಲೆಯ ವಿಕಾಸಕ್ಕೆ ನೆರವಾದವರು



ಸೋದರಮಾವ ಸೂರತ್ ಮಂಜಯ್ಯ. ಬಾಲಕನಲ್ಲಿದ್ದ ಸಂಗೀತಾಸಕ್ತಿಯನ್ನು ಗುರುತಿಸಿದ ಅವರು ಶ್ಲೋಕಗಳು, ದೇವರ ನಾಮಗಳು, ಭಜನೆಗಳನ್ನು ಕಲಿಸಿದರು. ಕಾಲಕ್ರಮದಲ್ಲಿ ರಾಯರ ಒಲವು ಶಾಸ್ತ್ರೀಯ ಸಂಗೀತದತ್ತ ಹೊರಳಿತು. ಜೊತೆ ಜೊತೆಗೇ ಅಂಟಿ ಕೊಂಡಿದ್ದು ಸಂಗೀತ ಹಾಗೂ ನಾಟಕದ ಗೀಳು. ಇದರೊಂದಿಗೆ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳೆರಡರ ಸಾಹಿತ್ಯದಲ್ಲೂ ಆಸಕ್ತಿ ತಳೆದರು. ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಚಂದ್ರಹಾಸ ನಾಟಕದಲ್ಲಿ ಚಂದ್ರಹಾಸನಾಗಿ ಅಭಿನಯಿಸಿ ತಮ್ಮ ಅಭಿನಯಕ್ಕೆ ಚಿನ್ನದ ಪದಕ ಪಡೆದುಕೊಂಡರು. ಆಗ ನಾಟಕ ವೀಕ್ಷಿಸಿದ ರಂಗಭೂಮಿಯ ನಟ ಮುಂಡಾಜೆ ರಂಗನಾಥ'ಭಟ್ಟರು ತಮ್ಮ ಅಂಬಾಪ್ರಸಾದಿತ ನಾಟಕ ಮಂಡಳಿಯಲ್ಲಿ ಅವಕಾಶ ಕಲ್ಪಿಸಿದರು. ಲೋಹಿತಾಶ್ವ, ಧ್ರುವ, ಕೃಷ್ಣನಾಗಿ ಬಾಲ ಪಾತ್ರಗಳಲ್ಲಿ ಮೆರೆದರು. ಭಟ್ಟರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಕ್ಷಣವನ್ನು ಪಡೆಯುವ ಅವಕಾಶ ಕಾಳಿಂಗರಾಯರಿಗೆ ದೊರೆಯಿತು. ಆ ನಾಟಕ ಕಂಪನಿಯಲ್ಲಿ ಮುಖ್ಯ ಪಾತ್ರಧಾರಿಗಳಾಗಿದ್ದ ವೆಂಕಟರಾವ್ ರಾಮದುರ್ಗಾ ಹಾಗೂ ರಾಮಚಂದ್ರಬುವಾ ಮರೇಳಕರ್ ಇವರಿಗೆ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವನ್ನೂ ಕಲಿಸಿದರು. ಕಾಲಕ್ರಮದಲ್ಲಿ ಇವರು ಬಾಲ ಪಾತ್ರಗಳಿಂದ ಸ್ತ್ರೀ ಪಾತ್ರಕ್ಕೇರಿದರು. ರಾಯರ ಸೊಸೆ, ಆಜನ್ಮಕುಮಾರಿ, ಕಾಳಿಯ ಮರ್ದನ, ತುಳಸಿದಾಸ, ಮಿಸ್ ಮಾಧುರಿ, ವಿಕ್ರಮ ಶಶಿಕಲಾ ಮುಂತಾದ ನಾಟಕಗಳಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಅಭಿನಯಿಸಿದರು.

ಹಲವಾರು ಕಂಪನಿ ನಾಟಕಗಳಲ್ಲಿ ವೇಷ ಹಾಕಿ ಮೆರೆದಿದ್ದ ರಾಯರು ಚಲನಚಿತ್ರರಂಗದ ಲೋಕಕ್ಕೆ ಬೆರಗಾಗಿ ಮದರಾಸಿಗೆ ಕಾಲಿಟ್ಟರು. ಪ್ರೇಮಸಾಗರ, ವಸಂತಸೇನಾ ಮೊದಲಾದ ಚಿತ್ರಗಳಿಗೆ ಸಂಗೀತ ನೀಡಿದರು. ಇದರೊಂದಿಗೆ ಚಿತ್ರಗಳಲ್ಲೂ ಅಭಿನಯಿಸಿದರು. ಇವರ ಪ್ರತಿಭೆಯನ್ನು ಗುರುತಿಸಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯವರು, ತಮ್ಮ ಸಂಗೀತ ಕಾಲೇಜಿಗೆ ಪ್ರಾಚಾರ್ಯರನ್ನಾಗಿ ನೇಮಿಸಿಕೊಂಡರು. ಆದರೆ ಕೆಲಸದ ಏಕತಾನತೆಗೆ ಬೇಸರಗೊಂಡು, ಕೆಲಸಕ್ಕೆ ರಾಜೀನಾಮೆ ನೀಡಿದರು.

ಮದರಾಸು ಬಿಟ್ಟು ಮೈಸೂರಿಗೆ ಬಂದರು. ಇಲ್ಲಿ ನಿರ್ಮಾಣವಾದ ಪ್ರಥ'ಮ ಚಲನಚಿತ್ರ ಕೃಷ್ಣಲೀಲಾಗೆ ಸಂಗೀತ ನೀಡಿದರು. ಯಾರೂ ತುಳಿಯದ ಜಾಡಿನಲ್ಲಿ ತಮ್ಮ ಹೆಜ್ಜೆಯನ್ನೂರುವ ಆಸೆ ಇವರದಾಗಿತ್ತು. ಆ ತುಡಿತದ ಫಲವೇ ಜನಪದ ಗೀತೆಗಳು, ಲಾವಣಿ, ವಚನ, ದೇವರನಾಮ, ಭಾವಗೀತೆ ಮುಂತಾದ ವೈವಿಧ್ಯಮಯವಾದ ಸಾಹಿತ್ಯದ ಹಾಡುಗಾರಿಕೆಯಲ್ಲಿ ಸಾರ್ಥಕತೆಯನ್ನು ಪಡೆದರು. ಕರ್ಣಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತದ ಜೊತೆಗೆ ಪಾಶ್ಚಾತ್ಯ ಸಂಗೀತವನ್ನೂ ಅಭ್ಯಾಸ ಮಾಡಿದ್ದರಿಂದ ಆಯಾಯಾ ಸಾಹಿತ್ಯದ ಧ್ವನಿಯನ್ನನುಸರಿಸಿ ರಾಗದ ಕವಚವನ್ನು ತೊಡಿಸಿ, ಕವನದ ಭಾವಕ್ಕೆ ಇಂಬುಕೊಡುತ್ತಿದ್ದರು.

ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' - ಎಂಬ ಗೀತೆಯನ್ನು ಸ್ವರಸಂಯೋಜಿಸಿ ಹಾಡಿದರು (1946). ಕರ್ನಾಟಕ ರಾಜ್ಯೋದಯದ ಅನಂತರ ಕರ್ನಾಟಕ ಸರ್ಕಾರ ಈ ಹಾಡನ್ನು ಹಾಡಿದ್ದ ಕಾಳಿಂಗರಾಯರನ್ನು ಸನ್ಮಾನಿಸಿತು. ಇವರು ತಮ್ಮ ವಿಶಿಷ್ಟ ಗಾಯನದ ಮೂಲಕ ಜನಪದಗೀತೆಗಳಿಗೆ, ಭಾವಗೀತೆಗಳಿಗೆ ಹೊಸ ತಿರುವನ್ನು ಕೊಟ್ಟರು. ಜಿ.ಪಿ. ರಾಜರತ್ನಂರವರ ರತ್ನನ ಪದಗಳನ್ನು ಹೇಗೆ ಭಾವಪೂರ್ಣವಾಗಿ ಹಾಡಬಹುದೆಂದು ಮೊದಲಿಗೆ ತೋರಿಸಿಕೊಟ್ಟರು. ಇವರ ನಾಲಿಗೆಯ ಮೇಲೆ ದಾಸರು ನಲಿದರು, ವಚನಕಾರರು ಕುಣಿದರು, ಜನಪದರು ಉಕ್ಕಿ ಹರಿದರು, ಭಾವಗೀತಾಕಾರರು ಮಿಂಚಿದರು, ಯೆಂಡ್ಕುಡಕರತ್ನ ಮೆರೆದ. ಕಾಳಿಂಗರಾಯರು ಎಲ್ಲ ಪ್ರಕಾರದ ಹಾಡುಗಳಿಂದ ಭಾರತದ ಉದ್ದಗಲಕ್ಕೂ ತಮ್ಮ ಗಾನಸುಧೆ ಹರಿಸಿದರು. ಇದಲ್ಲದೆ ಕಿತ್ತೂರು ಚೆನ್ನಮ್ಮ, ಅಬ್ಬಾ ಆ ಹುಡುಗಿ, ಅಣ್ಣ ತಂಗಿ, ಲಗ್ನಪತ್ರಿಕೆ ಚಿತ್ರಗಳಲ್ಲಿ ಹಾಡಿದರು. ನಟಶೇಖರ, ಅಬ್ಬಾ ಆ ಹುಡುಗಿ, ತರಂಗ ಚಿತ್ರಗಳಿಗೆ ಸಂಗೀತ ನೀಡಿದರು.

ನಾಟಕರತ್ನ ಗುಬ್ಬಿವೀರಣ್ಣನವರ ದಶಾವತಾರ ನಾಟಕಕ್ಕೆ ಸಂಗೀತ ನಿರ್ದೇಶಿಸಿದರು (1955). ಆ ಕಂಪನಿಯ ಲವ-ಕುಶ ನಾಟಕಕ್ಕೂ ಸಂಗೀತ ನೀಡಿದರು. ಸುಮಾರು ಐದಾರು ವರ್ಷ ಈ ಕಂಪನಿಯಲ್ಲಿ ದುಡಿದರು. ರಂಗನಾಟಕಗಳಿಗೂ ವಿನೂತನ ಶೈಲಿಯ ಹೊಚ್ಚ ಹೊಸ ರಾಗರೂಪವನ್ನು ಕೊಟ್ಟು ಪ್ರಸಿದ್ಧರಾದರು.

ಆಕಾಶವಾಣಿಯ ಗಾಯಕರಾಗಿಯೂ ಇವರು ಸೇವೆಸಲ್ಲಿಸಿದರು. ಇಂಥ' ಪ್ರತಿಭಾವಂತ ಗಾಯಕನಿಗೆ ಜಾನಪದ ಸಂಗೀತರತ್ನ, ಬಾಲಗಂಧರ್ವ, ಜಾನಪದ ಕಲಾಚಕ್ರವರ್ತಿ, ಗಾಯನ ಚಕ್ರವರ್ತಿ, ಗಾಯನ ಕಂಠೀರವ, ಕನ್ನಡ ಉದಯಗಾನ ಕೋಗಿಲೆ, ಸಂಗೀತ ರಸವಿಹಾರಿ - ಇವು ಜನ ಮೆಚ್ಚಿಕೊಟ್ಟ ಬಿರುದುಗಳು. ಇವರ ಬಾಳಿನ ಸಂಜೆ ಅಷ್ಟೊಂದು ಸುಗಮವಾಗಿರಲಿಲ್ಲ. ಆರ್ಥಿಕ ಮುಗ್ಗಟ್ಟಿನಿಂದಾಗಿ ನಲುಗಿದರು. ಇವರ ಪತ್ನಿ ಮೀನಾಕ್ಷಿ. ಕಾಳಿಂಗರಾಯರು 1981 ಸೆಪ್ಟೆಂಬರ್ 21ರಂದು ನಿಧನರಾದರು. ಎಚ್.ಎಂ.ವಿ.ಸಂಸ್ಥೆ ಇವರ ಕೆಲವು ಧ್ವನಿಮುದ್ರಿಕೆಗಳನ್ನು ಹೊರತಂದಿದೆ. (ಎಚ್.ಆರ್.ಎಲ್.)

**ಕಾಳೆ, ಭಿ.ಪ. :** 1889-. ಕನ್ನಡ ಗ್ರಂಥಕರ್ತ, ಪ್ರಕಾಶಕ, ಮುದ್ರಕ. ಕನ್ನಡದಲ್ಲಿ ಪತ್ತೇದಾರಿ ಕಾದಂಬರಿಗಳನ್ನು ಬರೆದ ಆದ್ಯರು. ಭಿಕಾಜಿ ಪಂತ ಕಾಳೆ ಎಂಬುದು ಇವರ ಪೂರ್ಣ ಹೆಸರು.

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಸಂಶಿ ಗ್ರಾಮದಲ್ಲಿ 1889 ಜನವರಿ 20ರಂದು ಜನಿಸಿದರು. ತಂದೆ ಪರಶುರಾಮ ಪಂತ. ಆಗ ಸಂಶಿ ಗ್ರಾಮ ಪಟವರ್ಧನ ಸಂಸ್ಥಾನಿಕರ ಆಡಳಿತಕ್ಕೆ ಒಳಪಟ್ಟಿದ್ದು ಕುರಂದವಾಡ ಸಂಸ್ಥಾನಿಕರ ಅಧೀನದಲ್ಲಿತ್ತು. ಸಂಸ್ಥಾನಿಕರ ಮನೆಮಾತು ಮರಾಠಿಯಾಗಿದ್ದುದರಿಂದ ಅವರ ಆಡಳಿತದ ಭಾಷೆಯೂ ಮರಾಠಿಯೇ ಆಗಿತ್ತು. ಹೀಗಾಗಿ ನೂರರಲ್ಲಿ ನೂರು ಜನ ಕನ್ನಡಿಗರಿಂದಲೇ ತುಂಬಿದ್ದ ಸಂಶಿ ಗ್ರಾಮವೂ ಮರಾಠಿಯ ಪ್ರಭಾವಕ್ಕೆ ಒಳಗಾಗಿತ್ತು.

ಆಡಳಿತ ಭಾಷೆಯ ಕಾರಣದಿಂದಲೇ ಮಹಾರಾಷ್ಟ್ರದಿಂದ ಪಟವರ್ಧನ ಸಂಸ್ಥಾನಕ್ಕೆ ಬಂದು ಅಲ್ಲಿಯ ಬೇರೆ ಬೇರೆ ಊರುಗಳಲ್ಲಿ ನೆಲಸಿದ ಚಿತ್ಪಾವನ (ಕೊಂಕಣಸ್ಥ) ಬ್ರಾಹ್ಮಣ ಮನೆತನಗಳಲ್ಲಿ ಕಾಳೆ ಕುಟುಂಬವೂ ಒಂದು. ಈ ಕುಟುಂಬ ಸಂಶಿಯಲ್ಲಿ ನೆಲಸಿತು. ಇವರ ಮನೆಮಾತು ಮರಾಠಿಯಾದರೂ ಇವರ ಪ್ರಾಥಮಿಕ ಶಿಕ್ಷಣ ಕನ್ನಡ ಭಾಷೆಯಲ್ಲಿ ನಡೆಯಿತು. ಆ ಕಾಲದ ಪ್ರಾಥಮಿಕ ಶಾಲೆಯ ಕೊನೆಯ ಘಟ್ಟವಾದ ಮುಲ್ಕೀ ಪರೀಕ್ಷೆಯಲ್ಲಿ ಇವರು ತೇರ್ಗಡೆಹೊಂದಿದರಲ್ಲದೆ ನಾಲ್ಕನೆಯ ತರಗತಿಯವರೆಗೆ ಇಂಗ್ಲಿಷ್ ಓದಿದರು.

ಹಾವೇರಿ ತಾಲ್ಲೂಕಿನ ಅಗಡಿಯ ಬಳಿಯ ಆನಂದವನ ಅಗ್ರಹಾರದಲ್ಲಿ ಸದ್ಬೋಧ ಚಂದ್ರಿಕೆ ಮಾಸಪತ್ರಿಕೆಗಾಗಿ ಆರಂಭವಾದ ಒಂದು ಚಿಕ್ಕ ಮುದ್ರಣಾಲಯದ ವ್ಯವಸ್ಥಾಪಕರಾಗಿ ಇವರು 1909ರಲ್ಲಿ ಅಲ್ಲಿಗೆ ಹೋದರು. ಗಳಗನಾಥ'ರ ಮೊದಮೊದಲಿನ ಪುಸ್ತಕಗಳೆಲ್ಲ ಇವರ ವ್ಯವಸ್ಥಾಪಕತ್ವದಲ್ಲಿಯೇ ಮುದ್ರಿತವಾಗುತ್ತಿದ್ದುವು. ಸದ್ಬೋಧಚಂದ್ರಿಕೆ ಮಾಸಪತ್ರಿಕೆಯ ವ್ಯವಸ್ಥಾಪಕರೂ ಇವರೇ ಆಗಿದ್ದರು. ಗಳಗನಾಥರು ಆನಂದವನವನ್ನು ಬಿಟ್ಟು ಹೊರಟಮೇಲೆ ಸದ್ಬೋಧ ಚಂದ್ರಿಕೆಯ ಹೆಚ್ಚಿನ ಹೊಣೆಯನ್ನು ಇವರೇ ಹೊರಬೇಕಾಯಿತು. ಈ ಅವಧಿಯಲ್ಲಿ ಇವರು 20ಕ್ಕಿಂತ ಹೆಚ್ಚು ಐತಿಹಾಸಿಕ, ಸಾಮಾಜಿಕ ಮತ್ತು ಪತ್ತೇದಾರಿ ಕಾದಂಬರಿಗಳನ್ನು ಬರೆದು ಪ್ರಕಟಿಸಿದರು. ಇವುಗಳಲ್ಲಿ ಹೆಚ್ಚಿನ ಸಂಖ್ಯೆಯವು ಮರಾಠಿಯಿಂದ ಭಾಷಾಂತರಿಸಿದವು.

ಮಕ್ಕಳ ಶಿಕ್ಷಣಕ್ಕಾಗಿ ಇವರು ಆನಂದವನವನ್ನು ಬಿಡಬೇಕಾಯಿತು. ಧಾರವಾಡದ ಮದಿಹಾಳ ಭಾಗದಲ್ಲಿ ಮನೆಮಾಡಿ ಇರತೊಡಗಿದರು. ಇಲ್ಲಿಯೂ ಒಂದು ಚಿಕ್ಕ ಮುದ್ರಣಾಲಯವನ್ನು ಸ್ಥಾಪಿಸಿಕೊಂಡು ಹತ್ತು ಹನ್ನೆರಡು ವರ್ಷಗಳವರೆಗೆ ತಮ್ಮ ಕೃತಿಗಳನ್ನು ಪುನರ್ಮುದ್ರಿಸುವ ಕಾರ್ಯ ನಡೆಸಿದರು. ಆ ಮುದ್ರಣಾಲಯವನ್ನು ಧಾರವಾಡದ ಜನತಾ ವಿದ್ಯಾಸಂಸ್ಥೆಗೆ ದಾನವಾಗಿ ಕೊಡಲಾಗಿದೆ. ಕಾಳೆಯವರು ತಮ್ಮ ವೃದ್ಧಾಪ್ಯ ಜೀವನವನ್ನು ಧಾರವಾಡದಲ್ಲಿಯೇ ಕಳೆದು ನಿಧನರಾದರು. (ಬ.ಕಿ.)

**ಕಿಕ್ಕೇರಿ :** ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕೃಷ್ಣರಾಜಪೇಟೆಗೆ 16ಕಿಮೀ ದೂರದಲ್ಲಿ ಚನ್ನರಾಯಪಟ್ಟಣದ ರಸ್ತೆಯಲ್ಲಿರುವ ಗ್ರಾಮ.



ಮಲ್ಲೇಶ್ವರ ದೇವಾಲಯ, ಕಿಕ್ಕೇರಿ

ಇದು ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿತ್ತು. ಇಲ್ಲಿ ಆ ಕಾಲದ ಅನೇಕ ದೇವಾಲಯಗಳಿವೆ. ಇಲ್ಲಿರುವ, 1111ರಲ್ಲಿ ನಿರ್ಮಿತವಾದ ಮಲ್ಲೇಶ್ವರ, ಜನಾರ್ಧನ ಮತ್ತು ಇನ್ನೂ ಹಲವು ದೇವಾಲಯಗಳು ಹಾಳುಬಿದ್ದಿವೆ. ಬಹುಶಃ ಇವುಗಳಲ್ಲೊಂದರಲ್ಲಿದ್ದಿರಬಹುದಾದ ಕೇಶವನ ಮೂರ್ತಿಯೊಂದು ಈಗ ನ್ಯೂಯಾರ್ಕಿನ ಮೆಟ್ರೋಪಾಲಿಟನ್ ವಸ್ತುಸಂಗ್ರಹಾಲಯದಲ್ಲಿದೆ. ಅದರ ಪೀಠದ ಮೇಲಿನ ಸುಂದರವಾದ ಶಾಸನದಿಂದ ಅದನ್ನು ಪ್ರಸಿದ್ಧನಾದ ಬಳ್ಳಿಗಾಮೆಯ ದಾಸೋಜ ರಚಿಸಿದಂತೆ ತಿಳಿದುಬರುತ್ತದೆ. ಈ ಊರಿನಲ್ಲಿ ಈಗ ಭವ್ಯವಾಗಿ ನಿಂತಿರುವ ಹೊಯ್ಸಳ ದೇವಾಲಯವೆಂದರೆ ಬ್ರಹ್ಮೇಶ್ವರ ದೇವಾಲಯ. ಇದನ್ನು 1171ರಲ್ಲಿ ಬಮ್ಮವೆ ನಾಯಕಿತಿ ಕಟ್ಟಿಸಿದಳು. ಇದರ ನವರಂಗದಲ್ಲಿ ಕಂಬಗಳ ಮೇಲಿರುವ ಮದನಿಕೆಯರ ವಿಗ್ರಹಗಳು ಬೇಲೂರಿನ ಮೂರ್ತಿಗಳನ್ನು ನೆನಪಿಗೆ ತರುತ್ತವೆ. ಈಚೆಗೆ ಕಟ್ಟಿರುವ ನರಸಿಂಹ ದೇವಾಲಯದಲ್ಲಿ ಹಳೆಯ ನರಸಿಂಹ, ಜನಾರ್ದನ, ತಿರುಮಲದೇವರು ಮೊದಲಾದ ಪಾಳುಬಿದ್ದ ದೇವಾಲಯಗಳ ಮೂರ್ತಿಗಳನ್ನು ತಂದಿರಿಸಿದೆ. ಕಿಕ್ಕೇರಮ್ಮ ಮತ್ತು ಉಪ್ಪರಿಗೆ ಬಸವಣ್ಣನ ದೇವಾಲಯಗಳೂ ಇಲ್ಲಿವೆ. ಊರಿನ ಬಳಿ ಒಂದು ದೊಡ್ಡ ಕೆರೆ ಇದೆ. (ಎಂ.ಎಚ್.)

**ಕಿಕ್ಕೇರಿಯಾರಾಧ್ಯ ನಂಜುಂಡ :** ಸು.1550. ವೀರಶೈವ ಕವಿ. ಭೈರವೇಶ್ವರಕಾವ್ಯ ಎಂಬ ಗ್ರಂಥದ ಕರ್ತೃ. ಕೃಷ್ಣರಾಜಪೇಟೆ ತಾಲ್ಲೂಕಿನ ಕಿಕ್ಕೇರಿ ಈತನ ಜನ್ಮಸ್ಥಳ. ಪೂರ್ವಕವಿಗಳಲ್ಲಿ ಬಾಣ, ಮಯೂರ, ಗುಜ್ಜರ, ಮಲುಹಣ, ಹರೀಶ, ಪಾಲ್ಕುರಿಕೆ ಸೋಮನಾಥ ಇವರನ್ನು ಸ್ಮರಿಸಿದ್ದಾನೆ. ತನ್ನ ಕಾವ್ಯದಲ್ಲಿ ಸೋಮನಾಥನನ್ನು ಹೆಚ್ಚಾಗಿ ಸ್ತುತಿಸಿರುವುದರಿಂದ ಸೋಮನಾಥ ಇವನ ಇಷ್ಟದೈವವೆಂದು ತೋರುತ್ತದೆ. ಈತ ಅತ್ಯಂತ ಪ್ರತಿಭಾವಂತನೂ ಬಹುಶ್ರುತನೂ ಆಗಿದ್ದಾತ.

ಭೈರವೇಶ್ವರಕಾವ್ಯ ಷಟ್ಪದಿಯಲ್ಲಿ ರಚಿತವಾಗಿದ್ದು 5 ಸಂಧಿ, 5 ವೃತ್ತ, 1200 ಪದ್ಯಗಳನ್ನೊಳಗೊಂಡಿದೆ. ಸಾಸಲಪುರದ ಸೋಮೇಶ್ವರನುನ್ನತ ಭೈರವೇಶನಿಗೊಲಿದು ಕೈಲಾಸಾವಾಸಕೊಯ್ದ ಕಥೆ ಕಾವ್ಯವಸ್ತು. ಇದರಲ್ಲಿ 342ಕ್ಕೂ ಹೆಚ್ಚು ಶಿವಶರಣರ ಕಥೆಗಳೂ 597ಕ್ಕೂ ಹೆಚ್ಚು ಇತರ ಕಥೆಗಳೂ ಸೂತ್ರರೂಪದಲ್ಲಿವೆ. ತನ್ನ ಕಾವ್ಯ ವಸ್ತುಕವರ್ಣಕದಿಂದ ನವರಸಾರ್ಥದಿಂದ ಹದಿನೆಂಟು ಶೃಂಗಾರಯುಕ್ತ ಕಾವ್ಯ ಪ್ರಬಂಧವಾಗಿ ರೂಪುಗೊಂಡಿದೆ ಎಂದು ಕವಿ ಹೇಳಿಕೊಂಡಿದ್ದಾನೆ. ಭಕ್ತಿಯ ತಾಣ ಸನ್ಮುಕ್ತಿಯಸದನ ವಿರಕ್ತಿಯ ಸೀಮೆ ಮೋಹನರಸೋಕ್ತಿಯ ಸಿರಿ ಸರಸೋಕ್ತಿಯ ನೆಲೆ ಎಂದು ತನ್ನ ಕೃತಿಯ ಉತ್ಕೃಷ್ಟತೆಯನ್ನು ಕುರಿತು ಹೇಳಿಕೊಂಡಿದ್ದಾನೆ. (ಜಿ.ಜಿ.ಎಂ.)

**ಕಿಗ್ಗ:** ನೋಡಿ: ಋಷ್ಯಶೃಂಗಪುರ

**ಕಿಟ್ಟೆಲ್, ಫರ್ಡಿನೆಂಡ್ :** 1832-1903. ಕನ್ನಡ-ಇಂಗ್ಲಿಷ್ ನಿಘಂಟನ್ನು ಅಪಾರಶ್ರಮದಿಂದ ಸಿದ್ಧಪಡಿಸಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ ಪಾಶ್ಚಾತ್ಯ ವಿದ್ವಾಂಸ. ಜರ್ಮನಿಯ ವಾಯವ್ಯ ಭಾಗದಲ್ಲಿರುವ ರೋಸ್ಟರ್ ಹಾಫೆಯಲ್ಲಿ 1832 ಏಪ್ರಿಲ್ 7ರಂದು ಜನಿಸಿದರು. ತಂದೆ ಗಾಟ್ ಫ್ರೀಟ್ ಕ್ರಿಸ್ತಿಯಾನ್. ಕಿಟ್ಟೆಲ್ ಕ್ರೈಸ್ತಮತದ ಪ್ರಾಟೆಸ್ಟಂಟ್ ಪಂಗಡಕ್ಕೆ ಸೇರಿದ ಧರ್ಮಾಧಿಕಾರಿ. ಮಿಷನರಿ ವಾತಾವರಣದಲ್ಲಿ ಬೆಳೆದ ಕಿಟ್ಟೆಲ್ ಹುಟ್ಟೂರಿನಲ್ಲಿ ಮತ್ತು ಔರಿಕ್ ಎಂಬಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದ ಅನಂತರ ಸ್ವಿಟ್ಜರ್‌ಲೆಂಡಿನ ಬಾಸೆಲ್ ನಗರದ ಮಿಷನ್ ಕಾಲೇಜಿಗೆ ಉನ್ನತ ವ್ಯಾಸಂಗಕ್ಕಾಗಿ ತೆರಳಿದರು. ಅಲ್ಲಿ ಮೂರು ವರ್ಷಗಳ ಶಿಕ್ಷಣವನ್ನು ಮುಗಿಸಿ ಪಾದ್ರಿಯಾಗಿ ನೇಮಕಗೊಂಡು ಭಾರತಕ್ಕೆ ಬಂದು ಧಾರವಾಡದಲ್ಲಿ ನೆಲೆಸಿದರು (1853). ಅನಂತರ ಮಂಗಳೂರು, ಮಡಿಕೇರಿ, ಆನಂದಪುರ ಮತ್ತು ಹುಬ್ಬಳ್ಳಿಗಳಲ್ಲಿ ಪಾದ್ರಿಯಾಗಿ ಕೆಲಸಮಾಡಿದರು. ಮಂಗಳೂರಿನಲ್ಲಿದ್ದಾಗ ಕನ್ನಡದ ವ್ಯಾಸಂಗವನ್ನು ಆರಂಭಿಸಿ, ಅದರಲ್ಲಿ ಬಹು ಬೇಗ ಪರಿಶ್ರಮವನ್ನು ಸಂಪಾದಿಸಿಕೊಂಡರು.

ಪಾಲಿನ್ ಎಫ್.ಈತ್ ಎಂಬ ಜರ್ಮನ್ ಕನ್ಯೆಯನ್ನು ಮದುವೆಯಾದರು(1860). ಮದುವೆಯಾದ ನಾಲ್ಕೇವರ್ಷಗಳಲ್ಲಿ ಆಕೆ ಇಬ್ಬರು ಗಂಡು ಮಕ್ಕಳನ್ನು ಬಿಟ್ಟು ಮಂಗಳೂರಿನಲ್ಲಿ ತೀರಿಕೊಂಡರು. ಕಿಟ್ಟೆಲ್ ತಮ್ಮ ಮಕ್ಕಳೊಂದಿಗೆ ಒಂದು ವರ್ಷಕಾಲ ಯುರೋಪಿನ ಪ್ರವಾಸಕ್ಕೆ ಹೊರಟರು. ಹಿಂದಿರುಗುವಾಗ ತಮ್ಮ ಪತ್ನಿಯ ಸಹೋದರಿ ಡಬ್ಲ್ಯೂ.ಜ್ಯೂಲಿ ಎಂಬಾಕೆಯನ್ನು ವಿವಾಹವಾಗಿ ಭಾರತಕ್ಕೆ ಹಿಂದಿರುಗಿದರು.

ಕನ್ನಡ ಭಾಷೆಯಲ್ಲಿ ಕಿಟ್ಟೆಲರಿಗಿದ್ದ ಪಾಂಡಿತ್ಯವನ್ನು ಗಮನಿಸಿದ ಬಾಸೆಲ್ ಮಿಷನ್ನಿನ ಹರ್ಮನ್ ಮೊಗ್ಲಿಂಗ್ ಮುಂತಾದ ಆಂಗ್ಲ ಅಧಿಕಾರಿಗಳು ಕನ್ನಡ -ಇಂಗ್ಲಿಷ್ ನಿಘಂಟನ್ನು ರಚಿಸುವ ಕೆಲಸವನ್ನು ಕಿಟ್ಟೆಲ್ ಅವರಿಗೆ ಒಪ್ಪಿಸಿ, ಅದಕ್ಕೆ ಬೇಕಾಗುವ ಎಲ್ಲ ಬಗೆಯ ಸಹಾಯ ಸೌಲಭ್ಯಗಳನ್ನೂ ಒದಗಿಸುವ ಭರವಸೆ ಕೊಟ್ಟರು. ಆ ವೇಳೆಗೆ ಕ್ರೈಸ್ತಪಾದ್ರಿ ರೆವೆರೆಂಡ್ ರೀವ್ ಕನ್ನಡ ಇಂಗ್ಲಿಷ್ ಕೋಶವೊಂದನ್ನು ಪ್ರಕಟಿಸಿದ್ದರಾದರೂ ಅದು ಅಷ್ಟೊಂದು ಪ್ರಮಾಣಭೂತವಾಗಿಯೂ ಶಾಸ್ತ್ರೀಯವಾಗಿಯೂ ಇರಲಿಲ್ಲ. ಶಾಲಾಕಾಲೇಜುಗಳ ದೃಷ್ಟಿಯಿಂದಲೂ ಅದರ ಪ್ರಯೋಜನ ಸೀಮಿತವಾಗಿತ್ತು. ಹೀಗಾಗಿ ಹೊಸದೊಂದು ನಿಘಂಟಿನ ಅಗತ್ಯ ಬಹಳವಾಗಿತ್ತು. ಇದನ್ನು ಗಮನಿಸಿದ ಕಿಟ್ಟೆಲ್‌ರು ಕೋಶಕಾರ್ಯವನ್ನು ಸಂತೋಷದಿಂದ ಒಪ್ಪಿಕೊಂಡು ಉತ್ಸಾಹದಿಂದ ದುಡಿಯಲಾರಂಭಿಸಿದರು. ಕೋಶದ ರೂಪರೇಷೆ 1872ರಲ್ಲಿ ಪ್ರಾರಂಭವಾಯಿತು. ಹಸ್ತಪ್ರತಿಯ

ಸಿದ್ಧತೆಯಲ್ಲಿ ತೊಡಗಿದ್ದ ಕಿಟ್ಟೆಲ್ಲರ ಆರೋಗ್ಯ ಕೆಟ್ಟಿತು. ಹವಾ ಬದಲಾವಣೆಗಾಗಿ ಹಸ್ತಪ್ರತಿಯೊಂದಿಗೆ 1877ರಲ್ಲಿ ಜರ್ಮನಿಗೆ ತೆರಳಿ, ಅಲ್ಲಿಯ ಎಸ್ಲಿಂಗೆನ್ ಎಂಬಲ್ಲಿ 1883ರವರೆಗೆ ನೆಲಸಿ ಅಲ್ಲಿ ಕೋಶದ ಪ್ರಥಮ ಕರಡನ್ನು ಸಿದ್ಧಪಡಿಸಿದರು. ಅನಂತರ ಧಾರವಾಡಕ್ಕೆ ಬಂದು ಅಲ್ಲಿ ಕನ್ನಡ ಪಂಡಿತರೊಂದಿಗೆ ಪರಿಷ್ಕಾರಕಾರ್ಯವನ್ನು ನಡೆಸಿದರು. 70,000 ಶಬ್ದಗಳನ್ನೊಳಗೊಂಡ ಹಸ್ತಪ್ರತಿಯನ್ನು 1892ರಲ್ಲಿ ಅಂತಿಮವಾಗಿ ಸಿದ್ಧಪಡಿಸಿ, ಪ್ರಕಟಣೆಗಾಗಿ ಬಾಸೆಲ್ ಮಿಷನ್ ಸಂಸ್ಥೆಯವರಿಗೆ ಒಪ್ಪಿಸಿದರು.

ಕೋಶದ ಕೆಲಸಕ್ಕೆ ಅಪಾರವಾಗಿ ಶ್ರಮಿಸಿದ್ದುದರಿಂದ, ಕಣ್ಣು ನೋವು ಮತ್ತು ನರಗಳ ದೌರ್ಬಲ್ಯದಿಂದ ಬಳಲಿದ ಕಿಟ್ಟೆಲ್ ಅವರು ವಿಶ್ರಾಂತಿಗಾಗಿ ಮತ್ತೆ ಯುರೋಪಿಗೆ ತೆರಳಿದರು (1892). ಅಲ್ಲಿದ್ದುಕೊಂಡೇ ಕೋಶಕ್ಕೆ ಮೊದಲ ಮಾತುಗಳನ್ನು ಬರೆದರು. ಬೃಹತ್ ಪ್ರಮಾಣದ ಕಿಟ್ಟೆಲ್ ನಿಘಂಟು 1894ರಲ್ಲಿ ಪ್ರಕಟವಾಯಿತು. ಈ ಕೋಶ ಇಂದಿಗೂ ಕನ್ನಡಭಾಷೆಯಲ್ಲಿ ಪ್ರಮಾಣ ಭೂತವಾದ ನಿಘಂಟಾಗಿದೆ. ಇಷ್ಟು ಖಚಿತವೂ ಶಾಸ್ತ್ರೀಯವೂ ಆದ ನಿಘಂಟು ಭಾರತದ ಇತರ ದೇಶೀಯ ಭಾಷೆಗಳಲ್ಲಿ ಆ ವೇಳೆಗೆ ಪ್ರಕಟವಾಗಿರಲಿಲ್ಲ ಎಂಬುದು ಬಲ್ಲವರ ಅಭಿಪ್ರಾಯ. ಟೂಬಿಂಗನ್ ವಿಶ್ವವಿದ್ಯಾಲಯ ಕಿಟ್ಟೆಲ್ಲರ ಈ ಮಹತ್ಕಾರ್ಯವನ್ನು ಗುರುತಿಸಿ 1896ರಲ್ಲಿ ಇವರಿಗೆ ಡಾಕ್ಟರ್ ಆಫ್ ಫಿಲಾಸಫಿ ಪದವಿ ನೀಡಿ ಗೌರವಿಸಿತು.



ಕನ್ನಡ ನಿಘಂಟಿಗೆ ಬರೆದಿರುವ ಮುನ್ನುಡಿಯಲ್ಲಿ ಸಂಪಾದನೆಯ ಕಾರ್ಯದಲ್ಲಿ ಉಪಯೋಗಿಸಿಕೊಂಡ ಕನ್ನಡದ ಪ್ರಸಿದ್ಧ ಕೃತಿಗಳ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಅನಂತರ ನಿಘಂಟಿನಲ್ಲಿ ತಾವು ಅನುಸರಿಸಿರುವ ಕ್ರಮವನ್ನುಕುರಿತು ಹೇಳಿದ್ದಾರೆ. ಲಿಪ್ಯಂತರ ಮಾಡುವಾಗ ಬಳಸಿರುವ ಸಂಜ್ಞೆಗಳ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ದ್ರಾವಿಡ ಭಾಷೆಗಳಿಂದ ಸಂಸ್ಕೃತಕ್ಕೆ ಹೋಗಿರಬಹುದಾದ ಸು.420 ಪದಗಳ ವಿಷಯಪ್ರಸ್ತಾಪಿಸಿದ್ದಾರೆ. ನಿಘಂಟಿನಲ್ಲಿ ಶಬ್ದಗಳನ್ನು ಜೋಡಿಸುವಾಗ ಸಂಸ್ಕೃತ ಶಬ್ದಗಳನ್ನು ರೋಮನ್ ಅಕ್ಷರದಲ್ಲೂ ಕನ್ನಡ ಶಬ್ದಗಳನ್ನು ಆಂಟಿಕ್ ಅಕ್ಷರಗಳಲ್ಲೂ ಕೊಟ್ಟಿರುವುದು ಈ ನಿಘಂಟಿನ ವೈಶಿಷ್ಟ್ಯ. ಒಂದು ಪದವನ್ನು ಕೊಟ್ಟು, ಅದರ ಮುಂದೆ ಇಂಗ್ಲಿಷ್ ಅಕ್ಷರಗಳಲ್ಲಿ ಅದನ್ನು ಲಿಪ್ಯಂತರ ಮಾಡಿ ಒದಗಿಸಿ, ಅನಂತರ ಪದದ ವಿವಿಧ ರೂಪಗಳನ್ನು, ಸಮಾಸಗಳಲ್ಲಿ ಅದು ಬರುವ ರೀತಿಯನ್ನು ತಿಳಿಸಿ, ಅವು ಬಂದಿರುವ ಮೂಲವಾಕ್ಯಗಳನ್ನು ಉದ್ಧರಿಸಿ, ಸಾಧ್ಯವಿದ್ದಲ್ಲೆಲ್ಲ ಆ ಮಾತು ಬಂದಿರುವ ಗಾದೆ ಮಾತುಗಳನ್ನು ಕೊಟ್ಟಿರುವುದಲ್ಲದೆ ಆ ಪದಕ್ಕೆ ಸಂಬಂಧಿಸಿದಂತೆ ಹಿಂದೆ, ಮುಂದೆ ಓದುಗ ಎಲ್ಲಿ ಏನನ್ನು ನೋಡಬೇಕು ಎಂಬ ಅಂಶವನ್ನು ಕಿಟ್ಟೆಲ್ ಒದಗಿಸಿದ್ದಾರೆ. ಅಕ್ಷರಗಳನ್ನು ಸೂಚಿಸುವಾಗ ಗ್ರಂಥಗಳ ಹೆಸರು, ಪರಿಚ್ಛೇದ, ಪುಟ ಪದಸಂಖ್ಯೆಗಳನ್ನು, ಗದ್ಯವಾದಲ್ಲಿ ಸಾಲಿನ ಸಂಖ್ಯೆಯನ್ನು ಕೊಡಲಾಗಿದೆ. ಅರ್ಥವನ್ನು ಇಂಗ್ಲಿಷಿನಲ್ಲಿ ಒದಗಿಸಲಾಗಿದೆ. ಉಳಿದ ದ್ರಾವಿಡ ಭಾಷೆಗಳಲ್ಲಿ ಪದರೂಪ ಹೇಗಿದೆ ಎಂಬುದನ್ನು ಸೂಚಿಸಿರುವುದು ಈ ನಿಘಂಟಿನ ಮತ್ತೊಂದು ಹಿರಿಮೆ. ಹಲವು ವರ್ಷಗಳಿಂದ ದುರ್ಲಭವಾಗಿದ್ದ ಈ ನಿಘಂಟನ್ನು ಆ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿದ್ದ ಎಂ.ಮರಿಯಪ್ಪ ಭಟ್ಟ (ನೋಡಿ) ಅವರು ಮದರಾಸು ವಿಶ್ವವಿದ್ಯಾಲಯದ ನೆರವಿನೊಂದಿಗೆ ಪರಿಷ್ಕರಿಸಿ ವಿಸ್ತರಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದರು (1968-71).

ಕೇಶಿರಾಜನ ಶಬ್ದಮಣಿದರ್ಪಣವನ್ನು ಒಂಬತ್ತು ಹಸ್ತಪ್ರತಿಗಳ ಆಧಾರದಿಂದ ಶಾಸ್ತ್ರೀಯ ರೀತಿಯಲ್ಲಿ ಸಂಪಾದಿಸಿ ವಿದ್ವತ್ಪೂರ್ಣವಾದ ಮುನ್ನುಡಿಯೊಂದಿಗೆ ಕಿಟ್ಟೆಲ್ ಪ್ರಕಟಿಸಿದರು (1872). ನಾಗವರ್ಮನ ಛಂದೋಂಬುಧಿಯನ್ನು ಇದೇ ರೀತಿ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದರು (1875). ಇದಕ್ಕೊಂದು ವಿಸ್ತಾರವಾದ ಮುನ್ನುಡಿ ಬರೆದರಲ್ಲದೆ, 19ನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯದ ಸ್ಥೂಲ ಪರಿಚಯವನ್ನು ಇದರಲ್ಲಿ ಒದಗಿಸಿದ್ದಾರೆ. ಇವರು ಸಂಪಾದಿಸಿರುವ ಇನ್ನೊಂದು ಗ್ರಂಥ ಪಂಚತಂತ್ರ. ಕರ್ನಾಟಕ ಕಾವ್ಯ ಮಾಲೆ ಎಂಬ ಒಂದು ಸಂಗ್ರಹವನ್ನೂ ಇವರು ಪ್ರಕಟಿಸಿದರು (1874).

ಇವರು ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ 18 ಸಣ್ಣಪುಟ್ಟ ಕೃತಿಗಳನ್ನು, ಆರು ಕನ್ನಡ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಇಂಡಿಯನ್ ಆಂಟಿಕ್ವೆರಿ ಮುಂತಾದ ಪ್ರೌಢ ಪತ್ರಿಕೆಗಳಲ್ಲಿ ಸು.24 ಅಮೂಲ್ಯ ಲೇಖನಗಳನ್ನು ಪ್ರಕಟಿಸಿದ್ದರು.

ಇಂಗ್ಲಿಷಿನಲ್ಲಿ ಬರೆದಿರುವ ಕನ್ನಡ ವ್ಯಾಕರಣ (ಗ್ರಾಮರ್ ಆಫ್ ದಿ ಕನ್ನಡ ಲಾಂಗ್ವೇಜ್) ಇವರ ಕೊನೆಯ ಕೃತಿ. ಅದು ಪ್ರಕಟವಾದಾಗ (1903 ಡಿಸೆಂಬರ್ 18) ಕಿಟ್ಟೆಲ್ ಅವರು ಅದನ್ನು ಕಣ್ಣಾರೆ ಕಂಡು, ಅದನ್ನು ಮುಟ್ಟಿ ಭಾವ ಪರವಶರಾದರಂತೆ. (ಎಂ.ಎಂ.ಬಿ.)

**ಕಿಡಿ :** ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಒಂದು ಪತ್ರಿಕೆ. ವಿಶ್ವಕರ್ನಾಟಕ, ಮಾತೃಭೂಮಿ ಮತ್ತು ಒಕ್ಕಲಿಗರ ಪತ್ರಿಕೆಗಳಲ್ಲಿ ಕೆಲಸ ಮಾಡಿ ತಮ್ಮ ಮೊನಚಾದ ವರದಿಗಳಿಗೂ ಲೇಖನಗಳಿಗೂ ಹೆಸರಾಗಿದ್ದ ಪಿ.ಶೇಷಪ್ಪನವರು ಈ ಪತ್ರಿಕೆಯ ಸಂಪಾದಕರಾಗಿದ್ದರು. ಶೇಷಪ್ಪನವರು ಕಿಡಿಯನ್ನು ಪ್ರಾರಂಭಿಸುವ ಮುನ್ನ, 1947 ಆಗಸ್ಟ್ 15ರಂದು ಸ್ವಾತಂತ್ರ್ಯೋದಯ ಎಂಬ ಪಾಕ್ಷಿಕವನ್ನು ಪ್ರಾರಂಭಿಸಿದ್ದರು. ಹದಿನೈದು ದಿನಗಳ ಬಳಿಕ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ಪ್ರಾರಂಭವಾಯಿತು. ಶೇಷಪ್ಪನವರು ಚಳವಳಿಗೆ ಬೆಂಬಲ ನೀಡಿದ್ದರಿಂದ ಅಂದಿನ ಸರ್ಕಾರದ ಆಗ್ರಹಕ್ಕೆ ತುತ್ತಾಗಬೇಕಾಯಿತು. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿತವಾಯಿತು. ಶೇಷಪ್ಪನವರ ಸ್ವಾತಂತ್ರ್ಯೋದಯ ಪತ್ರಿಕೆಯ ಸ್ವತಂತ್ರಧ್ಯೇಯ ಧೋರಣೆಗಳು ಬದಲಾಗಲಿಲ್ಲ. ಸರ್ಕಾರದ ನೀತಿನಿಲವುಗಳನ್ನು ನಿರ್ಭಯವಾಗಿ ಟೀಕಿಸುತ್ತಿದ್ದ ಈ ಪತ್ರಿಕೆಯಿಂದ ಭಾರಿ ಮೊತ್ತದ ಠೇವಣಿಯನ್ನು ಸರ್ಕಾರ ಕೇಳಿತು. ಶೇಷಪ್ಪನವರು ಮುಚ್ಚಳಿಕೆ ಬರೆದುಕೊಡಲು ಮತ್ತು ಠೇವಣಿ ಕೊಡಲು ಒಪ್ಪದೆ ಪತ್ರಿಕೆಯನ್ನು ನಿಲ್ಲಿಸಿದರು.


ಕಿಡಿ

ಕೆಂಗಲ್ ವಿರುದ್ಧ ಸ್ಪರ್ಧಿಸಲು ಸಾಹುಕಾರರ ಮಸಲತ್ತು

ಶೇಷಪ್ಪನವರು ರಷ್ಯನ್ ಕ್ರಾಂತಿ ನಾಯಕ ಲೆನಿನನ ಇಸ್ಕ್ರಾ ಪತ್ರಿಕೆಯನ್ನು ಬಹು ಮೆಚ್ಚಿಕೊಂಡಿದ್ದರು. ಇಸ್ಕ್ರಾ ಎಂದರೆ ಕಿಡಿ ಎಂದರ್ಥ. ಸ್ವಾತಂತ್ರ್ಯೋದಯ ಪತ್ರಿಕೆಯನ್ನು ನಿಲ್ಲಿಸಿದ ಕೆಲವು ವಾರಗಳ ಅನಂತರ ಇವರು ಪ್ರಾರಂಭಿಸಿದ ಪತ್ರಿಕೆಗೆ ಕಿಡಿ ಎಂದು ಹೆಸರಿಟ್ಟರು. ಪತ್ರಿಕೆ ಪ್ರಾರಂಭವಾದ ಕೆಲವೇ ದಿನಗಳಲ್ಲಿ ಏಕೈಕ ರಾಜಕೀಯ ವಾರಪತ್ರಿಕೆಯಾಗಿ ಜನಪ್ರಿಯವಾಯಿತು. ರಾಜ್ಯದ ರಾಜಕೀಯಕ್ಕೆ ಮೀಸಲಾದ ಕಿಡಿ ಅಂದಿನ ಸರ್ಕಾರದ ಮೇಲೆ, ಅದರ ರಾಜಕೀಯ ನೀತಿಯ ಮೇಲೆ ಹೆಚ್ಚು ಪ್ರಭಾವ ಬೀರಿತು. ಆಳುವ ಪಕ್ಷವಾಗಿದ್ದ ಕಾಂಗ್ರೆಸಿನ ವಿರೋಧಿ ಧೋರಣೆಯನ್ನೇ ಪತ್ರಿಕೆ ತಳೆದಿತ್ತು. 1948ರ ಪೋಲಿಸ್ ಮುಷ್ಕರ ಮತ್ತು 1950ರ ವಿಮಾನ ಕಾರ್ಖಾನೆಯ ಕೆಲಸಗಾರರ ಮುಷ್ಕರದ ಸಂದರ್ಭದಲ್ಲಿ ಶೇಷಪ್ಪನವರನ್ನು ಸರ್ಕಾರ ಬಂಧಿಸಿ ಕಾರಾಗೃಹದಲ್ಲಿಟ್ಟಿತ್ತು.

ಕಿಡಿ ರಾಜ್ಯದ ರಾಜಕೀಯ ಮತ್ತು ಆಡಳಿತದ ಮರ್ಮವನ್ನು ಶೋಧಿಸಿ ಸತ್ಯವಾದವುಗಳೆಂದು ಖಚಿತಪಡಿಸಿಕೊಂಡು, ರಹಸ್ಯಗಳನ್ನು ಪ್ರಕಟಿಸಿ, ನಿಜವನ್ನು ಬಯಲು ಮಾಡುತ್ತಿತ್ತು. ಪ್ರತಿವಾರವೂ ಪತ್ರಿಕೆಗಾಗಿ ಜನರು ಕಾದುಕೊಂಡು ಓದುತ್ತಿದ್ದರು. ರಾಜಕೀಯ ವ್ಯಂಗ್ಯಚಿತ್ರಗಳು ಜನಪ್ರಿಯವಾಗಿದ್ದವು. ಶೇಷಪ್ಪನವರ ನಿರ್ದಾಕ್ಷಿಣ್ಯವಾದ ಹರಿತವಾದ ಬರೆಹ ಜನರ ಮೆಚ್ಚುಗೆ ಗಳಿಸಿಕೊಂಡಿತ್ತು.

ಕಿಡಿ ಪತ್ರಿಕೆಯ ಕಾಂಗ್ರೆಸ್ ವಿರೋಧಿ ಬರೆಹಗಳು 1952ರ ತರುವಾಯ ಅಧಿಕಾರಕ್ಕೆ ಬಂದ ಸರ್ಕಾರವನ್ನು ಕೆರಳಿಸಿದವು. ಕಿಡಿ ಪತ್ರಿಕೆಯಲ್ಲಿ ಪ್ರಕಟವಾದ ಹತ್ತಾರು ಲೇಖನಗಳ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಯಿತು. ಒಂದೊಂದು ಮೊಕದ್ದಮೆಯಲ್ಲೂ ಮುದ್ರಕರಿಂದ ರೂ.3000, ಸಂಪಾದಕ ಮತ್ತು ಪ್ರಕಾಶಕರಿಂದ ರೂ.3000 ಠೇವಣಿ ಕೇಳಲಾಯಿತು. ಆದರೆ ನ್ಯಾಯಾಲಯದ ತೀರ್ಪು ಹೊರಬೀಳುವುದಕ್ಕೆ ಒಂದೆರಡು ದಿನಗಳಿಗೆ ಮೊದಲೇ ಎಲ್ಲ ಮೊಕದ್ದಮೆಗಳನ್ನೂ ಸರ್ಕಾರ ವಾಪಸ್ಸು ತೆಗೆದುಕೊಂಡಿತು.

ಪತ್ರಿಕೆ 10"x13" ಆಕಾರವಿದ್ದು ಅದರಲ್ಲಿ ನಾಲ್ಕು ಪುಟಗಳಿರುತ್ತಿದ್ದುವು. ಬಿಡಿ ಪ್ರತಿಯ ಬೆಲೆ ಮೊದಲು ಆರು ಕಾಸು. ದೇಶದಲ್ಲಿ ದಶಮಾಂಶ ನಾಣ್ಯಪದ್ಧತಿ ಜಾರಿಗೆ ಬಂದಮೇಲೆ ಬೆಲೆ ಏಳು ನಯಾಪೈಸೆ ಆಗಿತ್ತು.

ದೇವನಹಳ್ಳಿಯಲ್ಲಿ ಜನಿಸಿ ಬೆಂಗಳೂರಲ್ಲಿ ನೆಲೆಸಿ ಪತ್ರಿಕೋದ್ಯಮವನ್ನೇ ನಂಬಿದ್ದ ಶೇಷಪ್ಪನವರು ತಮ್ಮ ನಿಷ್ಠುರ ಬರೆಹಗಳಿಗಾಗಿ ಕಷ್ಟನಷ್ಟ ಅನುಭವಿಸಿ ಜೈಲು ಸೇರಿದ್ದರು. ಕೆಲವೊಮ್ಮೆ ಭೂಗತರಾಗಿಯೂ ಇರಬೇಕಾಗುತ್ತಿತ್ತು. ಕಿಡಿ ಶೇಷಪ್ಪ ಎಂದು ಹೆಸರು ಪಡೆದಿದ್ದ ಇವರು 1963 ಜನವರಿ 2ರಂದು ತಮ್ಮ 44ನೆಯ ವಯಸ್ಸಿನಲ್ಲಿ ನಿಧನರಾದರು. (ಎಸ್.ಪಿ.ಆರ್.)

**ಕಿತ್ತೂರು[1]:** ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಒಂದು ಗ್ರಾಮ. ಹೆಗ್ಗಡದೇವನ ಕೋಟೆಯ ದಕ್ಷಿಣಕ್ಕೆ ಕಪಿಲಾ ನದಿಯ ಬಲದಂಡೆಯ ಮೇಲಿದೆ. ಕೀರ್ತಿಪುರ ಅಥವಾ ಕಿತ್ತಿಪುರ ಇದರ ಪ್ರಾಚೀನ ಹೆಸರು. ಇದು ಪುನ್ನಾಟರಾಜರ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. 11ನೆಯ ಶತಮಾನದ ಶಾಸನ ಒಂದರಲ್ಲಿ ಇದು ಅನಂತಕೀರ್ತಿಯ ಮಹಾನಗರವೆಂಬ ಉಲ್ಲೇಖವಿದೆ. ಈ ಊರಿನ ಉತ್ತರಕ್ಕೆ ಕಪಿಲಾ ನದಿಯ ದಂಡೆಯಲ್ಲಿ ಇದ್ದ ಪುರಾತನ ನಗರದ ಅವಶೇಷಗಳು ಈಗಲೂ ಕಂಡುಬರುತ್ತವೆ. ಅಲ್ಲಲ್ಲಿ ಬಿದ್ದಿರುವ ಇಟ್ಟಿಗೆ ಚೂರುಗಳೂ ಮನೆಗಳ ತಳಪಾಯಗಳೂ ಕೆಂಪು ಕಪ್ಪು ಮಣ್ಣಿನ ಮಡಕೆಯ ಚೂರುಗಳೂ ಮುಂತಾದವು ಇಲ್ಲಿ ಸುಮಾರು ಒಂದು ಎರಡನೆಯ ಶತಮಾನಗಳಿಂದಲೂ ಒಂದು ಊರು ಇದ್ದುದಕ್ಕೆ ಸಾಕ್ಷಿಯಾಗಿವೆ.

ಇಲ್ಲಿರುವ ರಾಮೇಶ್ವರ ದೇವಾಲಯ ಪ್ರಾಚೀನವಾದದ್ದು. ಈಗಿರುವ ದೇವಾಲಯ ಇತ್ತೀಚೆಗೆ ನಿರ್ಮಿತವಾದುದಾದರೂ ಅದರಲ್ಲಿ ಪ್ರಾಚೀನ ದೇವಾಲಯದ ಅನೇಕ ಅವಶೇಷಗಳನ್ನು ಕಾಣಬಹುದಾಗಿದೆ. ದೇವಾಲಯದಲ್ಲಿ ಪಲ್ಲವ ಶೈಲಿಯ ಸಿಂಹದ ಕಂಬಗಳು, ಸುಂದರವಾಗಿ ಕೆತ್ತಿರುವ ದ್ವಾರಪಾಲಕರು, ಮಹಿಷಮರ್ದಿನಿ ಮುಂತಾದ ಶಿಲ್ಪಗಳಿವೆ. ಇವು ಗಂಗ, ಪಲ್ಲವ ಶೈಲಿಯವು. ಊರಿನಲ್ಲಿ ಅಲ್ಲಲ್ಲಿ ಬಿದ್ದಿರುವ ಗಂಗರ ಶೈಲಿಯ ಕಂಬಗಳೂ ಶಿಲ್ಪಗಳೂ ಈ ಊರಿನ ಪ್ರಾಚೀನತೆಗೆ ಸಾಕ್ಷಿಯಾಗಿವೆ. (ಎಂ.ಎಚ್.)

**ಕಿತ್ತೂರು[2]:** ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನಲ್ಲಿ ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಧಾರವಾಡ-ಬೆಳಗಾಂವಿಗಳ ನಡುವೆ ಇದೆ. 12ನೆಯ ಶತಮಾನದ ಹೊತ್ತಿಗೆ ಈ ಊರು ಇದ್ದುದ್ದು ಇಲ್ಲಿನ ಬಸವೇಶ್ವರ ದೇವಾಲಯದ ಶಾಸನವೊಂದರಿಂದ ತಿಳಿದುಬರುತ್ತದೆ. ಗೋವೆಯ ಕದಂಬರ ವೀರ ಜಯಕೇಶಿಯ 15ನೆಯ ಆಳಿಕೆಯ ವರ್ಷಕ್ಕೆ ಸೇರಿದ ಈ ಶಾಸನದಲ್ಲಿ ಕಿತ್ತೂರನ್ನು ಹೆಸರಿಸಿದೆ. ಆಗ ಇಲ್ಲಿ ಭವ್ಯವಾದ ದೇವಾಲಯವನ್ನು ಕಟ್ಟಿಸಿ, ಅದಕ್ಕೆ ದತ್ತಿ ಬಿಟ್ಟವಿಷಯವನ್ನು ಆ ಶಾಸನ ತಿಳಿಸುತ್ತದೆ.

ಕಿತ್ತೂರು ಪ್ರಸಿದ್ಧಿಗೆ ಬಂದುದು 16ನೆಯ ಶತಮಾನದಿಂದೀಚೆಗೆ. ಯೂಸುಫ್ ಖಾನನ ಜಹಗೀರಿಯಲ್ಲಿ ಸೇರಿದ್ದ ಈ ಊರು 16ನೆಯ ಶತಮಾನದ ಕಡೆಯ ಹೊತ್ತಿಗೆ ಒಂದು ಪುಟ್ಟ ಸಂಸ್ಥಾನದ ಮುಖ್ಯ ಪಟ್ಟಣವಾಗಿ ಬೆಳೆಯಿತು. ಇಲ್ಲಿಗೆ ಬಿಜಾಪುರದ ಸೈನ್ಯದೊಡನೆ ಬಂದ ಹಿರೇಮಲ್ಲ ಬಿಜಾಪುರದ ಸುಲ್ತಾನರಿಂದ ಕಿತ್ತೂರು ಸಂಸ್ಥಾನವನ್ನು ದತ್ತಿ ಪಡೆದು ಕಿತ್ತೂರು ದೇಸಾಯರ (ನೋಡಿ) ಮನೆತನವನ್ನು ಸ್ಥಾಪಿಸಿದ. ಬಿಜಾಪುರದ ಸುಲ್ತಾನರು, ಮರಾಠರು, ಸವಣೂರಿನ ನವಾಬರು, ಹೈದರ್ ಮತ್ತು ಟಿಪ್ಪು ಇವರುಗಳ ನಡುವೆ ಕೈಬದಲಾಯಿಸಿ ಈ ಊರು ಹಲವು ಯುದ್ಧಗಳನ್ನು ಕಂಡಿತು. ಕಿತ್ತೂರು ದೇಸಾಯರ ಮನೆತನದ ಚೆನ್ನಮ್ಮನ ವೀರ ಹೋರಾಟದ ಅನಂತರ ಇದು ಬ್ರಿಟಿಷರ ಆಳಿಕೆಗೆ ಸೇರಿತು, ಮುಂಬಯಿ ಪ್ರಾಂತ್ಯದ ಭಾಗವಾಯಿತು.

ಬ್ರಿಟಿಷರು ಈ ಭಾಗವನ್ನು ಆಕ್ರಮಿಸಿಕೊಂಡ ಅನಂತರ ಬಹುಮಟ್ಟಿಗೆ ಖಿಲವಾಗಿದ್ದ ಈ ಊರು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ ಮತ್ತೆ ಪ್ರಾಮುಖ್ಯ ಪಡೆಯುತ್ತಿದೆ. ತಕ್ಕಷ್ಟು ದೊಡ್ಡದಾಗಿರುವ ಈ ಗ್ರಾಮದ ಜನರ ಮುಖ್ಯ ಕಸಬು ನೇಯ್ಗೆ. ಇಲ್ಲಿನ ರೇಷ್ಮೆ ಬಟ್ಟೆಗಳು ಪ್ರಸಿದ್ಧವಾಗಿವೆ. ವೀರರಾಣಿ ಚೆನ್ನಮ್ಮನ ನೆನಪಿಗಾಗಿ ಮಹಿಳೆಯರ ಸೈನಿಕ ಶಾಲೆ ಇಲ್ಲಿ ಆರಂಭವಾಗಿದೆ. ದೇಸಾಯರ ಕಾಲದ ಜನಜೀವನ ಮತ್ತು ಪ್ರಾಚೀನ ಕಾಲದ ಶಿಲ್ಪವೈಖರಿಯನ್ನು ಪ್ರತಿಬಿಂಬಿಸುವ ವಸ್ತು ಸಂಗ್ರಹಾಲಯ ರೂಪಗೊಂಡಿದೆ. ಈ ಊರು ವ್ಯಾಪಾರ ಕೇಂದ್ರವೂ ಹೌದು.



ಕೋಟೆ ಅವಶೇಷಗಳು

ಈಗ ಕಿತ್ತೂರಿನಲ್ಲಿ ಉಳಿದು ಬಂದಿರುವ ಪ್ರಾಚೀನ ಅವಶೇಷಗಳಲ್ಲಿ ಮುಖ್ಯವಾದುದು ಹೊಂಡದ ಗುಡಿ ಎಂದು ಕರೆಯುವ ಈಶ್ವರ ದೇವಾಲಯ. 12ನೆಯ ಶತಮಾನದ ಚಾಳುಕ್ಯ ರೀತಿಯಲ್ಲಿ ನಿರ್ಮಿತವಾಗಿದ್ದ ಈ ದೇವಾಲಯ ಈಗ ಪೂರ್ತಿಯಾಗಿ ಪುನರ್ನಿರ್ಮಾಣಗೊಂಡಿದೆ. ಇಲ್ಲಿಯ ನವರಂಗದ ಕಂಬಗಳು, ನಂದಿ, ಗಣೇಶ, ಮಹಿಷಮರ್ದಿನಿ ಮೊದಲಾದ ಮೂರ್ತಿಗಳು, ದೇವಾಲಯದ ತಳಹದಿಯ ಅಷ್ಟಪಟ್ಟಿಕೆಗಳು ಚಾಳುಕ್ಯರೀತಿಯ ಉತ್ತಮ ಮಾದರಿಗಳಾಗಿವೆ.

ಎತ್ತರವಾದ ದಿಬ್ಬವೊಂದರ ಮೇಲೆ ದೇಸಾಯರು ಕಟ್ಟಿಸಿದ್ದ ಕೋಟೆ ಈಗ ಪಾಳುಬಿದ್ದಿದೆ. ಎತ್ತರವಾದ ಇದರ ಮಣ್ಣಿನ ಗೋಡೆಗಳಲ್ಲಿ ಅಲ್ಲಲ್ಲಿ ಕಿರುಗಲ್ಲಿನ ಮುಖವರಿಸೆಗಳು ಉಳಿದುಬಂದಿವೆ. ಗುಂಡಾದ ಈ ಕೋಟೆಯ ಸುತ್ತಲೂ ಆಳವೂ ಅಗಲವೂ ಆದ ಕಂದಕವಿದೆ. ಗೋಡೆಗೆ ಅಲ್ಲಲ್ಲಿ ಬುರುಜುಗಳಿದ್ದ ಗುರುತುಗಳಿವೆ. ಕೋಟೆಯೊಳಗೆ ಈಶಾನ್ಯಭಾಗದಲ್ಲಿ ದೇಸಾಯರ ಭವ್ಯವಾದ ಸೌಧವಿತ್ತು. ಅದರ ಬಹು ಭಾಗ ಪಾಳು ಬಿದ್ದಿದೆ. ಈಗ ಕೆಲವು ಗೋಡೆಗಳು ಮಾತ್ರ ನಿಂತಿವೆ. ಈ ಕಟ್ಟಡದ ಭಗ್ನಾವಶೇಷಗಳನ್ನು ಇತ್ತೀಚೆಗೆ ಬಿಡಿಸಿದೆ. ಅದರ ತಳವಿನ್ಯಾಸ ಬೆಳಕಿಗೆ ಬಂದಿದೆ. ಅದರಲ್ಲಿನ ಕೋಣೆಗಳು, ಪಾಕಶಾಲೆಗಳು, ಸ್ನಾನಗೃಹಗಳು, ಬಾವಿಗಳು, ಪ್ರತಿ ಕೋಣೆಗೂ ಗೋಡೆಯೊಳಗೇ ಸಾಗುತ್ತಿದ್ದ ನೀರಿನ ಕೊಳಾಯಿಗಳು, ಹೊಗೆಯ ಗೂಡುಗಳು, ಇವೆಲ್ಲಕ್ಕಿಂತ ಮಿಗಿಲಾಗಿ ಧ್ರುವ ನಕ್ಷತ್ರವನ್ನು ಒಳಗಿನಿಂದಲೇ ಕಾಣಬಹುದಾದ ವೀಕ್ಷಣಾಕಿಂಡಿ ಇವುಗಳನ್ನು ಈಗಲೂ ಗುರುತಿಸಬಹುದು. ಅರಮನೆಯ ಮುಂದೆ ದೊಡ್ಡದಾದ ಸಭಾಂಗಣವಿದೆ. ಅಲ್ಲಿದ್ದ ದಪ್ಪ ಮರದ ಕಂಬಗಳೂ ನೆಲಕ್ಕೆ ಹಾಸಿದ್ದ

ಹೊಳಪುಗಲ್ಲುಗಳೂ ಈಗ ಉಳಿದುಬಂದಿಲ್ಲ. ಕೋಟೆಯ ನಡುವೆ ಉನ್ನತವಾದ ವೀಕ್ಷಣಾಗೋಪುರವೊಂದಿದೆ. ಅದರ ಬುಡದಲ್ಲಿ ಆಂಜನೇಯನ ಗುಡಿ ಇದೆ. ಇದಲ್ಲದೆ ಕೋಟೆಯ ಪಶ್ಚಿಮ ದ್ವಾರದ ಬಳಿ ಒಂದು ಚಿಕ್ಕ ದೇವಾಲಯ ಇದೆ. ಉಳಿದ ಕಟ್ಟಡಗಳು ನೆಲಸಮವಾಗಿವೆ. ವಸ್ತುಸಂಗ್ರಹಾಲಯದ ಕಟ್ಟಡ ಕೋಟೆಯೊಳಗೆ ನಿರ್ಮಿತವಾಗಿದೆ. ಇಲ್ಲಿ ಒಂದು ಸುಂದರವಾದ ಉದ್ಯಾನವೂ ರೂಪುಗೊಂಡಿದೆ.

ಕೋಟೆಯಿಂದ ಪಶ್ಚಿಮಕ್ಕೆ ಎತ್ತರವಾದ ಸ್ಥಳದಲ್ಲಿ ಕಿತ್ತೂರು ದೇಸಾಯರ ಕೆಲವು ಸಮಾಧಿ ಕಟ್ಟಡಗಳಿವೆ. ಭಾರತೀಯ ಇಸ್ಲಾಮೀ ಶೈಲಿಯಲ್ಲಿ ಕಟ್ಟಿರುವ ಈ ಕಟ್ಟಡಗಳು ಭವ್ಯವಾಗಿವೆ. ಇಲ್ಲಿನ ಕಟ್ಟಡಗಳಲ್ಲಿ ಈಗ ಶಾಲೆಗಳನ್ನು ನಡೆಸಲಾಗುತ್ತಿದೆ. ಈಗ ಊರು ಕೋಟೆಯ ದಕ್ಷಿಣಕ್ಕೂ ಹರಡಿಕೊಂಡಿದೆ.

ಕಿತ್ತೂರಿನ ಜನಗಳ ಸ್ವಾತಂತ್ರ್ಯಾಕಾಂಕ್ಷೆಯಿಂದ, ಚೆನ್ನಮ್ಮನ ಧೀರೋದಾತ್ತವಾದ ಹೋರಾಟದಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಈ ಊರು ಮೊದಲ ಹೆಜ್ಜೆ ಇಟ್ಟಿತೆಂಬ ಖ್ಯಾತಿ ಪಡೆದಿದೆ. ಹಲವು ಯುದ್ಧಗಳನ್ನು ಕಂಡ ವೀರಭೂಮಿಯಾಗಿದೆ. ಕಿತ್ತೂರಿನ ಕಥೆ ಲಾವಣಿಯಾಗಿ, ಕತೆಯಾಗಿ, ನಾನಾಮುಖವಾಗಿ ಪ್ರಚಾರ ಪಡೆದಿದೆ. (ಎಂ.ಎಚ್.)

**ಕಿತ್ತೂರು ಚೆನ್ನಮ್ಮ :** 1780-1830. ಕನ್ನಡನಾಡಿನ ವೀರ ಮಹಿಳೆಯರಲ್ಲಿ ಅಗ್ರಪಂಕ್ತಿಗೆ ಸೇರಿದ, ಸ್ವಾತಂತ್ರ್ಯ ಸ್ವಾಭಿಮಾನಗಳ ಸಾಕಾರಮೂರ್ತಿಯಾದ ಕಿತ್ತೂರಿನ ರಾಣಿ. ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಕಿರಿಯ ಹೆಂಡತಿ. ಕಾಗತಿ ದೇಸಾಯಿಯ ಮಗಳು. ತನ್ನ ಪುಟ್ಟ ರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ಸೆಟೆದು ನಿಂತು ನಡೆಸಿದ ಹೋರಾಟ, ಅಲ್ಲಿ ತೋರಿಸಿದ ಧೈರ್ಯ, ಸಾಹಸ, ಕೆಚ್ಚುಗಳು ಈಕೆಯನ್ನು ಅಜರಾಮರವಾದ ಕೀರ್ತಿಶಿಖರಕ್ಕೇರಿಸಿದೆ. ಚೆನ್ನಮ್ಮನಿಂದ ಕಿತ್ತೂರು ಪ್ರಸಿದ್ಧವಾಗಿದೆ.



ಕಿತ್ತೂರು ಚೆನ್ನಮ್ಮನ ಪ್ರತಿಮೆ

ಮಲ್ಲಸರ್ಜನ ಕಾಲದಲ್ಲಿ ಹೈದರ್, ಟಿಪ್ಪು ಹಾಗೂ ಮರಾಠರು ಕಿತ್ತೂರಿನ ಮೇಲೆ ದಾಳಿ ಮಾಡಿದ್ದರು. ಮರಾಠರು ದೇಸಾಯಿಯನ್ನು ಸೆರೆಹಿಡಿದಿದ್ದರು. ರಾಣಿ ಚೆನ್ನಮ್ಮನೇ ರಾಜ್ಯದ ಆಡಳಿತ ಸೂತ್ರಗಳನ್ನು ಹಿಡಿದಿದ್ದಳು (1809-10). ಪೇಶ್ವೆಯ ಬಂಧನದಲ್ಲಿದ್ದ ಮಲ್ಲಸರ್ಜ ತನ್ನ ಕಡೆಗಾಲದಲ್ಲಿ ಬಿಡುಗಡೆ ಹೊಂದಿ ಕಿತ್ತೂರಿಗೆ ಹಿಂತಿರುಗಿದೊಡನೆಯೇ ತೀರಿಕೊಂಡ. ಅವನ ಮಗ ಶಿವಲಿಂಗರುದ್ರ ಸರ್ಜ ಪಟ್ಟಕ್ಕೆ ಬಂದು (1816) ಎಂಟು ವರ್ಷಗಳ ಕಾಲ ಮಾತ್ರ ಆಳಿ, ಕ್ಷಯರೋಗಪೀಡಿತನಾಗಿ ತೀರಿಕೊಂಡ. ಮಕ್ಕಳಿಲ್ಲದಿದ್ದುದರಿಂದ ಮಾಸ್ತಮರಡಿ ಗೌಡರ ಮಗ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡಿದ್ದ ಚೆನ್ನಮ್ಮನೇ ಆಗ ದತ್ತಕನ ಹೆಸರಿನಿಂದ ರಾಜ್ಯಭಾರ ಮಾಡುತ್ತಿದ್ದಳು. ಶಿವಲಿಂಗರುದ್ರ ಸರ್ಜ ನೀಡಿದ ಸಹಾಯ ಸಹಕಾರಗಳಿಂದ ಸುಪ್ರೀತರಾಗಿದ್ದ ಬ್ರಿಟಿಷರು ಆತನಿಗೆ ವಂಶಪಾರಂಪರ್ಯವಾಗಿ ಕಿತ್ತೂರನ್ನಾಳಿಕೊಂಡಿರುವಂತೆ ಸನ್ನದನ್ನು ಕೊಟ್ಟಿದ್ದರು. ಆದರೆ ಅವನ ಮರಣದೊಂದಿಗೆ ಅವರಿಗೆ ಕಿತ್ತೂರು ಸಂಸ್ಥಾನವನ್ನು ಕಬಳಿಸಲು ನೆಪ ಸಿಕ್ಕಂತಾಯಿತು. ಧಾರವಾಡದಲ್ಲಿ ಕಲೆಕ್ಟರನೂ ರಾಜಕೀಯ ಪ್ರತಿನಿಧಿಯೂ ಆಗಿದ್ದ ಥ್ಯಾಕರೆ ದಖನ್ನಿನ ಕಮಿಷನರ್ ಆಗಿದ್ದ ಚಾಪ್ಲಿನ್ನನ ಜೊತೆಗೂಡಿ ಸನ್ನಾಹ ಮಾಡಿ ದತ್ತು ಸ್ವೀಕಾರವನ್ನು ಶಿವಲಿಂಗರುದ್ರ ಸರ್ಜ ಮಾಡಿಕೊಂಡಿಲ್ಲವೆಂದೂ ಅದು ಅವನ ಮರಣಾನಂತರ ಆದುದೆಂದೂ ತನ್ನ ಮೇಲಧಿಕಾರಿ ಗೌರ್ನರ್ ಎಲ್ಫಿನ್‌ಸ್ಟನ್‌ಗೆ ಸುಳ್ಳುವರದಿ ಕಳುಹಿಸಿ ಅವನನ್ನು ತಪ್ಪುದಾರಿಗೆಳೆದ. ಅಲ್ಲದೆ ತನ್ನ ಸರ್ಕಾರದಿಂದ ಉತ್ತರ ಬರುವವರೆಗೆ ಬನ್ನೂರು ಮಲ್ಲಪ್ಪಶೆಟ್ಟಿ ಮತ್ತು ವೆಂಕಟರಾವ್ ಎಂಬ ಕಾರಭಾರಿಗಳಿಗೆ ಆಡಳಿತವನ್ನು ಒಪ್ಪಿಸಬೇಕೆಂದು ತಿಳಿಸಿ ಖಜಾನೆಗೆ ಬೀಗಮುದ್ರೆ ಹಾಕಲು ಪ್ರಯತ್ನಿಸಿದ. ಹೀಗೆ ಥ್ಯಾಕರೆ ತನ್ನ ರಾಜ್ಯದ ಕಾರ್ಯಭಾರದಲ್ಲಿ ಅನಾವಶ್ಯಕವಾಗಿ ತಲೆಹಾಕಿದುದು ಚೆನ್ನಮ್ಮನ ಸ್ವಾಭಿಮಾನವನ್ನು ಕೆಣಕಿತು. ಚೆನ್ನಮ್ಮನೂ ಸಂಸ್ಥಾನದ ಹಿರಿಯರೂ ಇದಕ್ಕೆ ಎಷ್ಟು ಮಾತ್ರಕ್ಕೂ ಒಪ್ಪಲು ಸಿದ್ಧರಿರಲಿಲ್ಲ. ಆದರೂ ಚೆನ್ನಮ್ಮ ತಾಳ್ಮೆಯಿಂದ ದತ್ತಕ ಮತ್ತು ಆಡಳಿತದ ವಿಷಯವಾಗಿ ಪತ್ರವ್ಯವಹಾರ ನಡೆಸಿದಳು. ಸಂಸ್ಥಾನದ ಪರವಾಗಿ ಸಂಧಾನ ನಡೆಸಲು ಲಿಂಗಾಭಟ್ಟ, ರಾಚಪ್ಪ ಎಂಬ ಇಬ್ಬರು ವಕೀಲರನ್ನು ಕಂಪನಿ ಸರ್ಕಾರಕ್ಕೆ ಕಳುಹಿಸಿದಳು. ಎಂಥ ಸಂದರ್ಭವೇ ಬರಲಿ, ಸಂಸ್ಥಾನದ ಅಸ್ತಿತ್ವವನ್ನು ಉಳಿಸಬೇಕೆಂದು ಸಂಕಲ್ಪಿಸಿ ಸೈನ್ಯವನ್ನು ಸಜ್ಜುಗೊಳಿಸಲು ಏರ್ಪಡಿಸಿದಳು. ಬೇರೆ ಬೇರೆ ಸ್ಥಳಗಳಲ್ಲಿ ಇರಿಸಿದ ಸರದಾರರನ್ನೂ ಸೈನಿಕರನ್ನೂ ಕರೆಸಿಕೊಂಡಳು. ಇದು ಇಂಗ್ಲಿಷರಿಗೆ ತಿಳಿಯದಿರಲಿಲ್ಲ. ಥ್ಯಾಕರೆ 1824ರ ಅಕ್ಟೋಬರ್ 23ರಂದು ಸೈನ್ಯಸಮೇತನಾಗಿ ಕಿತ್ತೂರಿಗೆ ಬಂದ. ಕೋಟೆಯ ಬಾಗಿಲನ್ನು ಭದ್ರಪಡಿಸಲಾಗಿತ್ತು. ಕೋಟೆಯಲ್ಲಿ ಸೈನ್ಯ ಯುದ್ಧಕ್ಕೆ ಸಜ್ಜಾಗಿ ನಿಂತಿತ್ತು. ಬಾಗಿಲಿಗೆ ಎರಡು ಫಿರಂಗಿಗಳನ್ನು ಗುರಿಮಾಡಿ ನಿಲ್ಲಿಸಿದ್ದ ಸೇನಾಧಿಕಾರಿಗಳು ಇಪ್ಪತ್ತು ನಿಮಿಷಗಳೊಳಗಾಗಿ ಬಾಗಿಲು ತೆರೆಯದಿದ್ದರೆ ಲಗ್ಗೆ ಹಾಕುವುದಾಗಿ ಘೋಷಿಸಿದರು. ಕಿತ್ತೂರು ಜಗ್ಗಲಿಲ್ಲ, ಯುದ್ಧವನ್ನೇ ಆರಿಸಿಕೊಂಡಿತು. ಗುರುಸಿದ್ದಪ್ಪನ ನಾಯಕತ್ವದಲ್ಲಿ ಕಿತ್ತೂರು ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ಬಿದ್ದಿತು. ಕತ್ತಿಯನ್ನು ಹಿರಿದು ಕುದುರೆಯನ್ನೇರಿದ ಚೆನ್ನಮ್ಮ ಸೈನಿಕರನ್ನು ಹುರಿದುಂಬಿಸಿದಳು. ಆಕೆಯ ಮೈಗಾವಲಿನ ಭಟ ಅಮಟೂರ ಬಾಳಪ್ಪ ಥ್ಯಾಕರೆಯನ್ನು ಗುಂಡಿಟ್ಟುಕೊಂದ. ಭೀಕರ ಕಾಳಗ ನಡೆಯಿತು. ಇಂಗ್ಲಿಷರ ಕಡೆ ಹಲವರು ಸತ್ತರು. ಅವರಿಗೆ ಸೋಲಾಯಿತು. ಹಲವರು ಸೆರೆ ಸಿಕ್ಕರು. ಅವರಲ್ಲಿ ಸ್ಟೀವನ್‌ಸನ್, ಎಲಿಯಟ್ ಮುಖ್ಯರು. ಅವರೊಂದಿಗೆ ಹಲವು ಮಕ್ಕಳೂ ಇದ್ದರು. ಚೆನ್ನಮ್ಮ ಮಕ್ಕಳ ವಿಷಯದಲ್ಲಿ ತುಂಬ ದಯೆಯಿಂದ ನಡೆದುಕೊಂಡು ಅವರನ್ನು ಸುಖವಾಗಿರಿಸಿ ಜೋಕೆಯಿಂದ ಕಾಯಲು ಆಜ್ಞಾಪಿಸಿದಳು. ಈ ಮುತ್ತಿಗೆಯಲ್ಲಿ ಚೆನ್ನಮ್ಮನಿಗೆ ಪೂರ್ಣ ಜಯವಾಯಿತು.

ಬ್ರಿಟಿಷರ ಸೋಲಿನ ಸುದ್ದಿಯನ್ನು ಕೇಳಿದೊಡನೆ ಚಾಪ್ಲಿನ್ ಮತ್ತು ಲೆಫ್ಟಿನೆಂಟ್ ಕರ್ನಲ್ ಡೀಕನ್ ದೊಡ್ಡ ಸೈನ್ಯದೊಡನೆ ಕಿತ್ತೂರಿನ ಮೇಲೆ ಸಾಗಿಬಂದರು (3-11-1824). ಯುದ್ಧವನ್ನು ತಪ್ಪಿಸಲು ಚೆನ್ನಮ್ಮ ಕಿತ್ತೂರಿನ ಪರಿಸ್ಥಿತಿಯನ್ನು ವಿವರಿಸಿ ಗೌರ್ನರಿಗೂ ಕಮಿಷನರ್‌ಗೂ ಬರೆಸಿ ತಿಳಿಸಿದುದು ವ್ಯರ್ಥವಾಯಿತು. ಕಿತ್ತೂರಿಗೆ ಬಲವಾದ ಮುತ್ತಿಗೆ ಬಿತ್ತು. ಬಂದಿಗಳನ್ನು ಬಿಡಿಸಲು ಚಾಪ್ಲಿನ್ ಪ್ರಯತ್ನಿಸಿದ. ಆದರೆ ಕಿತ್ತೂರಿನ ಆಡಳಿತದಲ್ಲಿ ಆಂಗ್ಲರು ಪ್ರವೇಶ ಮಾಡುವುದಿಲ್ಲವೆಂಬ ಭರವಸೆ ಕೊಡುವವರೆಗೂ ಬಂದಿಗಳ ಬಿಡುಗಡೆ ಇಲ್ಲವೆಂದು ಚೆನ್ನಮ್ಮ ಸ್ಪಷ್ಟವಾಗಿ ತಿಳಿಸಿದಳು. ಚಾಪ್ಲಿನ್ನನ ಬೆದರಿಕೆಗಳಿಗೆ ಆಕೆ ಅಂಜಲಿಲ್ಲ. ಎರಡು ಕಡೆಯೂ ಯುದ್ಧ ಸಿದ್ಧತೆಗಳಾದುವು. ಏನೇ ಆಗಲಿ ಶರಣಾಗತರಾಗುವುದು ಅವಮಾನಕರವೆಂದೂ ಕಡೆಯವರೆಗೂ ಹೋರಾಡಬೇಕೆಂದೂ ಚೆನ್ನಮ್ಮನೂ ಉಳಿದ ಸರದಾರರೂ ನಿರ್ಧರಿಸಿದರು. ಆದರೆ ಕೋಟೆಯೊಳಗೇ ಹಲವು ವಿದ್ರೋಹಿಗಳು ಸೇರಿ ಪಿತೂರಿ ನಡೆಸಿದ್ದರು. ಆಂಗ್ಲರದು ಅಪಾರ ಸೈನ್ಯ. ಅದು ಫಿರಂಗಿದಳ, ಅಶ್ವದಳ, ಮದರಾಸಿನ ಸಿಪಾಯಿಗಳು ಮತ್ತು ಮುಂಬೈನ ಪದಾತಿಗಳನ್ನೊಳಗೊಂಡಿತ್ತು. ಅದರೊಂದಿಗೆ ಹೋರಾಡುವುದು ಸುಲಭವಲ್ಲವೆಂಬುದು ಚೆನ್ನಮ್ಮನಿಗೆ ಗೊತ್ತಿತ್ತು. ಆದರೆ ಆಕೆಯ ಸ್ವಾತಂತ್ರ್ಯಪ್ರೇಮ, ಆಕೆಯ ಸೈನಿಕರ ಸ್ವಾಮಿಭಕ್ತಿ ಇವು ಆಕೆಯ ಧೈರ್ಯವನ್ನು ನೂರ್ಮಡಿಗೊಳಿಸಿದುವು. ಈ ನಡುವೆ ಬ್ರಿಟಿಷ್ ಸರ್ಕಾರಕ್ಕೂ ಚೆನ್ನಮ್ಮನಿಗೂ ನಡೆದ

ಪತ್ರವ್ಯವಹಾರದಲ್ಲಿ ಬ್ರಿಟಿಷರು ಕೇವಲ ತಮ್ಮ ಕಡೆಯವರನ್ನು ಸೆರೆಯಿಂದ ಬಿಡುಗಡೆ ಮಾಡಿಸುವ ಪ್ರಯತ್ನ ಮಾತ್ರ ಮಾಡಿದರು. ಚೆನ್ನಮ್ಮನ ಬೇಡಿಕೆಗಳನ್ನು ತಿರಸ್ಕರಿಸಿದ್ದ ಅವರು ಇಂಗ್ಲಿಷ್ ಖೈದಿಗಳ ಸ್ಥಾನಬದ್ಧತೆಯಿಂದ ಚೆನ್ನಮ್ಮನಿಗೆ ಯಾವ ಪ್ರಯೋಜನವಿಲ್ಲವೆಂದೂ ಅವರನ್ನು ಬಿಡುಗಡೆ ಮಾಡುವುದರಿಂದ ಪ್ರಯೋಜನವಾಗಬಹುದೆಂದೂ ತಿಳಿಸಿದರು. ಈ ಪತ್ರಕ್ಕೆ ಉತ್ತರಿಸಿದ ಚೆನ್ನಮ್ಮ ಸಂಸ್ಥಾನದ ಸ್ವಾತಂತ್ರ್ಯವನ್ನು ಮುಂದುವರಿಸುವುದೆ ತನ್ನ ಅಪೇಕ್ಷೆಯೆಂದೂ ಅದಕ್ಕಾಗಿಯೇ ಕೈದಿಗಳ ಬಿಡುಗಡೆ ಸಾಧ್ಯವಿಲ್ಲವೆಂದೂ ಸಂಸ್ಥಾನವನ್ನು ಹಾಗೆಯೇ ಉಳಿಯಗೊಡುವುದಾಗಿ ಪತ್ರ ಬರೆದು ತಿಳಿಸಿದಲ್ಲಿ ಮಾತ್ರ ತನ್ನ ಕಾರಬಾರಿಗಳನ್ನು ಸಂಧಾನಕ್ಕೆ ಕಳುಹಿಸುವುದಾಗಿಯೂ ತಿಳಿಸಿದಳು. ಬ್ರಿಟಿಷರು ತಮ್ಮ ಕಡೆಯವರನ್ನು ಬಿಡಿಸಿಕೊಳ್ಳಲು ಬೇರೆ ಉಪಾಯ ಕಾಣದೆ ಇಂಗ್ಲಿಷ್ ಕೈದಿಗಳನ್ನು ಬಿಟ್ಟರೆ ಯುದ್ಧ ಪ್ರಾರಂಭಿಸುವುದಿಲ್ಲವೆಂದು ಭರವಸೆ ಕೊಟ್ಟರು. ಅದರಂತೆ ಚೆನ್ನಮ್ಮ ಆ ಕೈದಿಗಳ್ನು ಬಿಟ್ಟುಕೊಟ್ಟಳು. ಆಕೆಗೆ ವೃಥಾ ರಕ್ತಪಾತವಾಗುವುದು ಬೇಕಿರಲಿಲ್ಲ. ಆದರೆ ಬ್ರಿಟಿಷರು ಕುಟಿಲತಂತ್ರವನ್ನನುಸರಿಸಿದರು. ಕೋಟೆಯನ್ನು ತೆರವು ಮಾಡಬೇಕೆಂದೂ ಹೊರಗೆ ಬಂದು ವಿಧೇಯತೆಯನ್ನು ತೋರದಿದ್ದರೆ ಅವರ ಪ್ರಾಣರಕ್ಷಣೆಯಾಗದೆಂದೂ ಹತ್ತುಗಂಟೆಯೊಳಗಾಗಿ ಶರಣಾಗದಿದ್ದರೆ ಯುದ್ಧ ಪ್ರಾರಂಭಿಸುವುದಾಗಿಯೂ ಚಾಪ್ಲಿನ್ ಬರೆದ. ಚೆನ್ನಮ್ಮ ಅದಕ್ಕೆ ಧೀರೋದಾತ್ತವಾದ ಮುತ್ಸದ್ದಿತನದಪತ್ರ ಬರೆದು "ನಾವು ಎಂದೂ ಯುದ್ಧವನ್ನು ಬಯಸಿಲ್ಲ. ಯುದ್ಧವನ್ನು ತಪ್ಪಿಸಲು ಪ್ರಯತ್ನಮಾಡುತ್ತ ಬಂದಿದ್ದೇವೆ. ನಮ್ಮ ಈ ಸ್ನೇಹಭಾವನೆಗಳನ್ನು ಲಕ್ಷಿಸದೆ ನೀವು ವೈರಭಾವನೆಗಳನ್ನು ತಳೆದಿದ್ದೀರಿ. ನಮಗೆ ಬೇರೆ ಮಾರ್ಗವಿಲ್ಲ" ಎಂದು ಹೇಳಿದಳು. ಅಕ್ಟೋಬರ್ 24ರಿಂದ ನವೆಂಬರ್ 30ರ ವರೆಗೆ ಈ ಪತ್ರವ್ಯವಹಾರಗಳು ನಡೆದುವು. ಯುದ್ಧದ ಸಿದ್ಧತೆಗಳನ್ನು ಪೂರೈಸುವುದಕ್ಕೆ ಮಾತ್ರ ಈ ವಿಳಂಬವನ್ನು ಬ್ರಿಟಿಷರು ಉಪಯೋಗಿಸಿಕೊಂಡರು. ಅವರಿಗೆ ಕಿತ್ತೂರನ್ನು ಸ್ವತಂತ್ರವಾಗಿ ಬಿಡುವುದು ಬೇಕಿರಲಿಲ್ಲ. ನವಂಬರ್ 30ರಂದು ಆರಂಭವಾದ ಯುದ್ಧ ಡಿಸೆಂಬರ್ 3ರಂದು ತೀವ್ರವಾಯಿತು. ಚೆನ್ನಮ್ಮನೂ ಕಿತ್ತೂರಿನ ಸೈನಿಕರೂ ವೀರಾವೇಶದಿಂದ ಹೋರಾಡಿದರು. ಆದರೆ ಬ್ರಿಟಿಷರ ಫಿರಂಗಿಗಳು ಕೋಟೆಯ ಭಾಗಗಳನ್ನು ಕೆಡವಿದುವು. ಕೋಟೆಯೊಳಗಿನ ವಿದ್ರೋಹದಿಂದಾಗಿ ಮದ್ದಿನ ಮನೆಯಲ್ಲಿ ಮೋಸ ನಡೆದುಹೋಯಿತು. ಕಿತ್ತೂರಿಗೆ ಸೋಲು ಸಿದ್ಧವೆನಿಸಿತು. ಶತ್ರುಗಳ ಕೈಗೆ ಸಿಗಬಾರದೆಂದು ಚೆನ್ನಮ್ಮ ಕೋಟೆಯ ಕಿರುಗಂಡಿಯಿಂದ ಪಾರಾಗಿ ಸಂಗೊಳ್ಳಿಯ ಮಾರ್ಗವಾಗಿ ತಪ್ಪಿಸಿಕೊಂಡು ಹೋಗಲೆತ್ನಿಸಿದ್ದರೂ ಬ್ರಿಟಿಷರು ಆಕೆಯನ್ನು ಹಿಡಿದು ಬೈಲಹೊಂಗಲದಲ್ಲಿ ಸೆರೆಯಿಟ್ಟರು. ಆರು ವರ್ಷಗಳ ಕಾಲ ಸೆರೆಮನೆಯಲ್ಲಿದ್ದಾಗ ಸಂಗೊಳ್ಳಿರಾಯಣ್ಣ, ಬಿಚ್ಚುಗತ್ತಿ ಚೆನ್ನಬಸಪ್ಪ, ಗಜವೀರ, ಬಾಲಣ್ಣ ಮೊದಲಾದವರು ಈಕೆಯೊಂದಿಗೆ ಸಂಪರ್ಕ ಹೊಂದಿದ್ದು, ಅಲ್ಲಲ್ಲಿ ದಂಗೆಯೆಬ್ಬಿಸಿದರು. ಸಂಗೊಳ್ಳಿ ರಾಯಣ್ಣನನ್ನು ಸೆರೆಹಿಡಿದು ಬ್ರಿಟಿಷರು ಗಲ್ಲಿಗೇರಿಸಿದಾಗ ಚೆನ್ನಮ್ಮನಿಗೆ ಪುನಃ ತನ್ನ ನಾಡನ್ನು ಬಿಡುಗಡೆ ಮಾಡುವ ಕನಸು ಒಡೆದು ಹೋಯಿತು. ಹತಾಶಳಾದ ಈಕೆ 1830 ಫೆಬ್ರವರಿ 30ರಂದು ಸೆರೆಯಲ್ಲಿಯೇ ನಿಧನಳಾದಳು.

ಚೆನ್ನಮ್ಮ ತನ್ನ ಸಂಸ್ಥಾನದ ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ನಡೆಸಿದ ಹೋರಾಟ ಜನಮನದಲ್ಲಿ ಅಚ್ಚಳಿಯದೆ ಉಳಿಯಿತು. ಬಗೆಬಗೆಯಲ್ಲಿ ಲಾವಣಿಯಾಗಿ, ಹಾಡಾಗಿ, ಕಥೆಯಾಗಿ ವೀರ ಚೆನ್ನಮ್ಮನ ಸಾಹಸಗಳು ಕಿತ್ತೂರಿನ ಸುತ್ತಮುತ್ತಲ ಊರುಗಳಲ್ಲಿ ಹಬ್ಬಿ ಇಂದಿಗೂ ಉಳಿದಿದೆ. ಬ್ರಿಟಿಷರ ಮೇಲೆ ಬಂಡೆದ್ದು ಅವರನ್ನು ಈ ದೇಶದಿಂದಲೇ ಹೊರಗೋಡಿಸಲು ನಡೆದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಚೆನ್ನಮ್ಮ ನಡೆಸಿದ ಪ್ರಥಮ ಹೋರಾಟ ಸ್ಫೂರ್ತಿಯ ನೆಲೆಯಾಯಿತು; ನಾಂದಿಯಾಯಿತು. (ಎಂ.ಎಚ್.)

**ಕಿತ್ತೂರು ದೇಸಾಯರು :** 1585ರಿಂದ 1824ರ ವರೆಗೆ ಬೆಳಗಾಂವಿ ಜಿಲ್ಲೆ ಕಿತ್ತೂರು ಮತ್ತು ಸುತ್ತಲ ಪ್ರದೇಶಗಳನ್ನು ಆಳಿದ ಮನೆತನ.

ವಿಜಯನಗರ ಸಾಮ್ರಾಜ್ಯದ ಪತನಾನಂತರ ಹುಟ್ಟಿಕೊಂಡ ಹಲವಾರು ಸಣ್ಣಪುಟ್ಟ ಮನೆತನಗಳಲ್ಲಿ ಕಿತ್ತೂರಿನ ದೇಸಾಯರ ಮನೆತನವೂ ಒಂದು. ಹಿರೇಮಲ್ಲ ಮತ್ತು ಚಿಕ್ಕಮಲ್ಲ ಎಂಬ ಮಲೆನಾಡಿನ ಗೌಡಮನೆತನದ ಸೋದರರಿಬ್ಬರು ಈ ಮನೆತನದ ಮೂಲಪುರುಷರು. 16ನೆಯ ಶತಮಾನದ ಅಂತ್ಯದಲ್ಲಿ ವ್ಯಾಪಾರಕ್ಕಾಗಿ ಬಂದು ಸಂಪಗಾಂವಿಯಲ್ಲಿ ನೆಲಸಿ ಬಿಜಾಪುರ ಸೈನ್ಯಕ್ಕೆ ಸಾಮಾನು ಸರಬರಾಜು ಮಾಡುತ್ತಿದ್ದ ಇವರಿಗೆ ಬೆಳಗಾಂವಿಯ ಕಿಲ್ಲೇದಾರನಾಗಿದ್ದ ಅಸದ್‌ಖಾನನು ಹಟ್ಟಿಹೊಲೆ ಮತ್ತು ಇತರ ಆರು ಊರುಗಳನ್ನು ಉಂಬಳಿಯಾಗಿ ಬಿಟ್ಟಿದ್ದ. ಹಿರೇಮಲ್ಲ ಸೈನ್ಯದಲ್ಲಿ ಸೇರಿ ಪರಾಕ್ರಮವನ್ನು ತೋರಿದ್ದರಿಂದ ಬಿಜಾಪುರದ ಸುಲ್ತಾನ ಅವನಿಗೆ ಷಂಷೇರ್ ಜಂಗ್ ಬಹದೂರ್ ಎಂಬ ಬಿರುದು ಕೊಟ್ಟುದುದಲ್ಲದೆ 1585ರಲ್ಲಿ ಹುಬ್ಬಳ್ಳಿಯ ಸರ್‌ದೇಶ ದತ್ತಿಯನ್ನು ಬಿಟ್ಟ. ಕಿತ್ತೂರು ಸೇರಿದಂತೆ 19 ಹಳ್ಳಿಗಳಿದ್ದ ಈ ನಾಡನ್ನು ಈತನೂ ಈತನ ಅನಂತರ ಬಂದ ಹಿರೇನಾಗನಗೌಡ, ಚಿಕ್ಕನಾಗನಗೌಡ ಮತ್ತು ಬಿಚ್ಚುಗತ್ತಿ ಚೆನ್ನಬಸಪ್ಪ ಮೊದಲಾದವರು ಬಹುವಾಗಿ ಅಭಿವೃದ್ಧಿ ಪಡಿಸಿದರು. ಔರಂಗಜೇಬ್ ಬಿಜಾಪುರವನ್ನು ಆಕ್ರಮಿಸಿದಾಗ ದೇಸಾಯರ ವಂಶದಲ್ಲಿ 5ನೆಯವನಾಗಿ 1660ರಿಂದ ಆಳಲಾರಂಭಿಸಿದ್ದ ಅಲ್ಲಪ್ಪಗೌಡ ಸರದೇಸಾಯಿ ಸಮಯ ಸಾಧಿಸಿ ಬೀಡಿ, ಸಂಪಗಾಂವಿಗಳನ್ನು ಗೆದ್ದು ಕಿತ್ತೂರಿನಿಂದ ಆಳಲಾರಂಭಿಸಿದ. ಕಿತ್ತೂರಿನ ಕೋಟೆಯನ್ನು ಇವನೇ ಕಟ್ಟಿಸಿದ್ದನೆಂದು ಹೇಳಲಾಗಿದೆ. ಇವನ ಮಗ ಮುದಿಮಲ್ಲಪ್ಪ ಸರದೇಸಾಯಿ ಮುಗಲರ ಪ್ರತಿನಿಧಿಯಾಗಿ ದಕ್ಷಿಣದಲ್ಲಿ ಆಳುತ್ತಿದ್ದ ಸವಣೂರು ನವಾಬನ ಸಾಮಂತನಾದ. ಮುಂದೆ ಕ್ರಮವಾಗಿ ಚಿಕ್ಕಮಲ್ಲಪ್ಪ ದೇಸಾಯಿ, ಶಿವನಗೌಡ ಸರದೇಸಾಯಿ ಮತ್ತು ಮಲವರುದ್ರಸರ್ಜ ಮುಗಲರ ಅಧೀನರಾಗಿ ಆಳಿದರು. ಈ ಹೊತ್ತಿಗೆ ಮರಾಠರು ಪ್ರಬಲರಾದರು. 1746ರಲ್ಲಿ ಸವಣೂರಿನ ನವಾಬ ಕಿತ್ತೂರಿನ ಜೊತೆಗೆ ಇನ್ನೂ ಕೆಲವು ಭಾಗಗಳನ್ನು ಪೇಶ್ವೆಗೆ ಒಪ್ಪಿಸಬೇಕಾಯಿತು. ಆಗ ಕಿತ್ತೂರಿನಲ್ಲಿ ಮಲವರುದ್ರಸರ್ಜನ ತಮ್ಮನ ಮಗ ವೀರಪ್ಪದೇಸಾಯಿ ಆಳುತ್ತಿದ್ದ. ವೀರಪ್ಪದೇಸಾಯಿ ಪರಾಕ್ರಮಶಾಲಿಯೂ ಧೈರ್ಯಸ್ಥನೂ ಆಗಿದ್ದು ಮರಾಠರು ನಡೆಸಿದ ಹಲವು ಯುದ್ಧಗಳಲ್ಲಿ ಭಾಗವಹಿಸಿದ್ದ. ಮೂರನೆಯ ಪಾಣಿಪಟ್ಟದ ಕದನದಲ್ಲಿ ಇವನು ಹೋರಾಡಿದುದಾಗಿ ತಿಳಿದುಬರುತ್ತದೆ. ಈ ನಡುವೆ ಹೈದರ್ 1774ರಲ್ಲಿ ಈ ಪ್ರಾಂತ್ಯಗಳನ್ನು ಗೆದ್ದದ್ದರಿಂದ ಕಿತ್ತೂರಿನ ದೇಸಾಯಿ ಅವನಿಗೆ ಕಪ್ಪ ಕೊಡಬೇಕಾಗಿತ್ತಾದರೂ ವೀರಪ್ಪ ದೇಸಾಯಿ ತನ್ನ ಸ್ವಂತ ರಾಜ್ಯವನ್ನು ವಿಸ್ತರಿಸಿ ಗೋಕಾಕ ಮತ್ತು ಸವದತ್ತಿ ತಾಲ್ಲೂಕಿನ ಭಾಗಗಳನ್ನು ವಶಪಡಿಸಿಕೊಂಡ. ಈ ಸುತ್ತಮುತ್ತಲಿನ ಪ್ರಾಂತ್ಯಗಳ ಮೇಲೆ ಆಗ ಅಧಿಕಾರ ನಡೆಸುತ್ತಿದ್ದ ಮರಾಠರ ಪರಶುರಾಮ ಭಾವು ದಂಡೆತ್ತಿ ಬಂದು ಗೋಕಾಕದ ಬಳಿ ವೀರಪ್ಪ ದೇಸಾಯಿಯನ್ನೆದುರಿಸಿದ. ವೀರಪ್ಪ ದೇಸಾಯಿ ಸೋತು ಸೆರೆಯಾಗಿ ಮೀರಜಿನಲ್ಲಿ ಸೆರೆಮನೆಯಲ್ಲಿರುವಾಗಲೇ ತೀರಿಕೊಂಡ.

1782ರಲ್ಲಿ ಪಟ್ಟಕ್ಕೆ ಬಂದ ಮಲ್ಲಸರ್ಜನ ಕಾಲದಲ್ಲಿ ಕಿತ್ತೂರು ರಾಜ್ಯ ಕಲಘಟಗಿ, ಮುನವಳ್ಳಿ, ನರಗುಂದ, ಧಾರವಾಡದವರೆಗೆ ವಿಸ್ತರಿಸಿತ್ತು. ಸಂಸ್ಥಾನ 700 ಹಳ್ಳಿಗಳನ್ನೊಳಗೊಂಡಿತ್ತು. ಮಲ್ಲಸರ್ಜ ಪಟ್ಟಕ್ಕೆ ಬಂದಾಗ ಅವನಿಗಿನ್ನೂ 17 ವರ್ಷ. ಒಂದು ಕಡೆ ಮರಾಠರು,ಮತ್ತೊಂದು ಕಡೆ ಟಿಪ್ಪು ಇವನ ಪ್ರಾಂತ್ಯವನ್ನು ಕಬಳಿಸಲು ಹವಣಿಸುತ್ತಿದ್ದರು. ಹಲವು ಬಾರಿ ಈ ರಾಜ್ಯ ಸುಲಿಗೆಗೊಳಗಾಯಿತು. ಟಿಪ್ಪು ಕಿತ್ತೂರಿಗೆ ಎರಡು ಬಾರಿ ಮುತ್ತಿಗೆ ಹಾಕಿ 1785ರಲ್ಲಿ ಮಲ್ಲಸರ್ಜನನ್ನು ಸೆರೆಹಿಡಿದು ಕಬ್ಬಾಳದುರ್ಗದಲ್ಲಿ ಸೆರೆಯಿಟ್ಟು ಕಿತ್ತೂರು ಕೋಟೆಯಲ್ಲಿ ಬಲವಾದ ಸೈನ್ಯವನ್ನು ಇರಿಸಿದ. ಅನಂತರ ಗಣೇಶಪಂತ ಬೆಹರೆ ಮತ್ತು ತುಕೋಜಿ ಹೋಳ್ಕರ ಎಂಬ ಮರಾಠ ಸರದಾರರು ಟಿಪ್ಪುವಿನ ಸೈನ್ಯವನ್ನೋಡಿಸಿ ಕಿತ್ತೂರು ಮತ್ತು ಆ ಪ್ರಾಂತ್ಯವನ್ನು ತಮ್ಮ ಕೈವಶಮಾಡಿಕೊಂಡರೂ ಟಿಪ್ಪುವಿನ ಸೇನಾನಿ ಬದುಲ್‌ಖಾನ್ ಝುಮಾನ್ ಮತ್ತೆ ಕಿತ್ತೂರನ್ನು ಗೆದ್ದುಕೊಂಡ. ಮಲ್ಲಸರ್ಜ ಮೂರು ವರ್ಷಗಳ ಅನಂತರ ಸೆರೆಯಿಂದ ತಪ್ಪಿಸಿಕೊಂಡು ಬಂದು ಮರಾಠರೊಂದಿಗೆ ಸ್ನೇಹ ಬೆಳೆಸಿದ. 1787ರಲ್ಲಿ ಮೂರನೆಯ ಮೈಸೂರು ಯುದ್ಧದ ಪರಿಣಾಮವಾಗಿ ಆದ ಶ್ರೀರಂಗಪಟ್ಟಣದ ಒಪ್ಪಂದದಂತೆ ಕಿತ್ತೂರು ಪೇಶ್ವೆಯ ಅಧೀನಕ್ಕೊಳಪಟ್ಟು ಪರಶುರಾಮಭಾವುವಿನ ಆಡಳಿತಕ್ಕೊಳಗಾಗಿ ಧಾರವಾಡ ಪ್ರಾಂತ್ಯದ ಭಾಗವಾಯಿತು. ಪರಶುರಾಮಭಾವು 1788ರಲ್ಲಿ ಪಟ್ಟಣಕುಡಿ ಕಾಳಗದಲ್ಲಿ ಗಾಯಗೊಂಡು ತೀರಿಕೊಂಡ ಮೇಲೆ ಮಲ್ಲಸರ್ಜ ಸ್ವತಂತ್ರನಾಗಲು ಹವಣಿಸಿದ. ಮರಾಠರ ಬಲ ಕುಂದುತ್ತಿದ್ದುದನ್ನು ಮನಗಂಡ ಇವನು 1803ರಲ್ಲಿ ಇಂಗ್ಲಿಷರ ಸ್ನೇಹ ಬೆಳೆಸಿ ವೆಲ್ಲೆಸ್ಲಿಗೆ ಯುದ್ಧದಲ್ಲಿ ಸಹಾಯ ಮಾಡಿದ. ಧೊಂಡಿಯಾ ವಾಘ್ ಇಲ್ಲಿ ನಡೆಸುತ್ತಿದ್ದ ಸುಲಿಗೆಯನ್ನು ತಪ್ಪಿಸಲು ಇಂಗ್ಲಿಷರಿಗೆ ಸೈನ್ಯಸಹಾಯವನ್ನೂ ಒದಗಿಸಿದ. ಇದರಿಂದ ಪೇಶ್ವೆ ಮತ್ತು ಕಿತ್ತೂರು

ದೇಸಾಯಿಯರ ನಡುವೆ ಒಪ್ಪಂದಉಂಟಾಗಲು ವೆಲ್ಲೆಸ್ಲಿ ಮಧ್ಯಸ್ಥಿಕೆ ವಹಿಸಿದ. ಪೇಶ್ವೆ 1809ರಲ್ಲಿ ಮಲ್ಲಸರ್ಜನ ಆಧಿಪತ್ಯವನ್ನು ಒಪ್ಪಿಕೊಂಡು ಅವನು ವರ್ಷಂಪ್ರತಿ 1,75,000 ರೂಪಾಯಿಗಳ ಕಪ್ಪ ಸಲ್ಲಿಸಬೇಕೆಂದೂ ಕಿತ್ತೂರಿನಲ್ಲಿ ಒಂದು ಸೈನ್ಯವನ್ನಿರಿಸಿ ಅದರ ವೆಚ್ಚವನ್ನು ದೇಸಾಯಿ ವಹಿಸಿಕೊಳ್ಳಬೇಕೆಂದೂ ವಿಧಿಸಿದ. ಆದರೆ ಕೆಲಕಾಲದಲ್ಲಿಯೇ ಪೇಶ್ವೆ ಮಲ್ಲಸರ್ಜನನ್ನು ಸೆರೆಹಿಡಿದು ಪುಣೆಯಲ್ಲಿ ಬಂಧನದಲ್ಲಿಟ್ಟ. ಅವನಿಗೆ ರೋಗ ಬಂದು ಅದು ಉಲ್ಬಣಿಸಿದಾಗ ಮರಾಠರು ಅವನನ್ನು ಬಿಡುಗಡೆ ಮಾಡಿದರೂ ಕಿತ್ತೂರಿಗೆ ಹಿಂದಿರುಗಿದ ಸ್ವಲ್ಪ ಕಾಲದಲ್ಲಿಯೇ ಅವನು ಮರಣಹೊಂದಿದ. ಕಿತ್ತೂರನ್ನು ದೀರ್ಘ ಕಾಲ ಆಳಿದ ಮಲ್ಲಸರ್ಜ ಪರಾಕ್ರಮಿಯೂ ಸಾಹಸಿಯೂ ಆಗಿದ್ದು ಪ್ರಬಲರಾದ ಮರಾಠರು ಮತ್ತು ಮೈಸೂರರಸರ ಆಕ್ರಮಣಗಳನ್ನು ಕೆಚ್ಚೆದೆಯಿಂದ ಎದುರಿಸಿದ. ಕಲೆ ಮತ್ತು ಸಾಹಿತ್ಯದ ಪೋಷಕನೂ ಆಗಿದ್ದ. ಇವನ ಆಸ್ಥಾನದಲ್ಲಿ ಕೊಳಸಿ ರಂಗಾಚಾರ್ಯ, ವೆಂಗಿಚೆನ್ನಬಸಪ್ಪ, ಮುಳುಗುಂದ ಚೆನ್ನಬಸಪ್ಪ ಮೊದಲಾದ ಪಂಡಿತರೂ ವರರುದ್ರಕವಿ, ಅಮೃತೇಶ್ವರ ಎಂಬ ಕವಿಗಳೂ ಇದ್ದರು.

ಮಲ್ಲಸರ್ಜನಿಗೆ ರುದ್ರಮ್ಮ ಮತ್ತು ಚೆನ್ನಮ್ಮ ಎಂಬ ಇಬ್ಬರು ಹೆಂಡಿರು. ಶಿವಲಿಂಗರುದ್ರಸರ್ಜ (ಬಾಪುಸಾಹೇಬ), ವೀರಪ್ಪಸರ್ಜ ಮತ್ತು ಶಿವಲಿಂಗಸರ್ಜ (ಬಾಳಾಸಾಹೇಬ) ಎಂಬ ಮೂವರು ಗಂಡುಮಕ್ಕಳು. ಶಿವಲಿಂಗರುದ್ರಸರ್ಜ 1816ರಲ್ಲಿ ಪಟ್ಟಕ್ಕೆ ಬಂದ. ಇವನು ಆಂಗ್ಲರ ಸ್ನೇಹ ಸಂಪಾದಿಸಿ ಅವರಿಗೆ ವಿಶೇಷ ನೆರವಿತ್ತು ಬೆಳಗಾವಿ ಕೋಟೆಯ ಮುತ್ತಿಗೆಯ ಕಾಲದಲ್ಲಿ ಸೈನಿಕರು ಮತ್ತು ಸಾಮಗ್ರಿಗಳನ್ನೊದಗಿಸಿದ. ಕಿತ್ತೂರ ದೇಸಾಯಿ ಸಲ್ಲಿಸುತ್ತಿದ್ದ ಅಪಾರ ಸಹಕಾರ ಸಹಾಯವನ್ನು ನೆನೆದು ಇಂಗ್ಲಿಷರು ಕಿತ್ತೂರ ಸಂಸ್ಥಾನ ಸ್ವತಂತ್ರವಾಗಿ ಮುಂದುವರಿಯುವ ಸಲುವಾಗಿ ಭರವಸೆಯ ಸನದನ್ನು ಕೊಟ್ಟರು. ಥಾಮಸ್ ಮನ್ರೋ ಕೊಟ್ಟ ಈ ಸನದಿನ ಪ್ರಕಾರ ಕಿತ್ತೂರು ದೇಸಾಯಿ ಬ್ರಿಟಿಷರಿಗೆ ವರ್ಷಂಪ್ರತಿ ರೂ.1,70,000 ಕಪ್ಪವನ್ನು ಕೊಡುತಕ್ಕುದೆಂದೂ ಅವನು ಕಿತ್ತೂರು ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ಅನುಭವಿಸತಕ್ಕುದೆಂದೂ ಒಪ್ಪಂದವಾಯಿತು. ಆದರೆ ವ್ಯಾಧಿಗ್ರಸ್ತನಾಗಿದ್ದ ಶಿವಲಿಂಗರುದ್ರ ಸರ್ಜ 8 ವರ್ಷಗಳಕಾಲ ಮಾತ್ರ ಆಳಿ 1824 ಸೆಪ್ಟಂಬರ್ 11ರಂದು ಮಕ್ಕಳಿಲ್ಲದೆ ಮೃತನಾದ. ಸಾಯುವುದಕ್ಕೆ ಮುಂಚೆ ಇವನು ಶಿವಲಿಂಗಪ್ಪನೆಂಬ ಬಾಲಕನನ್ನು ದತ್ತುಸ್ವೀಕಾರ ಮಾಡಿಕೊಂಡಿದ್ದ. ಆದರೆ ಅದುವರೆಗೂ ಅತ್ಯಂತ ಸ್ನೇಹದಿಂದಿದ್ದ ಇಂಗ್ಲಿಷರು ಈ ದತ್ತುಸ್ವೀಕಾರವನ್ನು ನಿರಾಕರಿಸಿದಾಗ ಚೆನ್ನಮ್ಮ ಕಿತ್ತೂರಿನ ಸ್ವಾತಂತ್ರವನ್ನು ರಕ್ಷಿಸಲು ಕೆಚ್ಚಿನಿಂದ ಹೋರಾಡಿ ಬ್ರಿಟಿಷ್ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದಳು. ಆದರೆ ಬ್ರಿಟಿಷರು ಮತ್ತೆ ಅಪಾರ ಸೈನ್ಯವನ್ನು ತಂದು ಘೋರ ಯುದ್ಧವನ್ನು ನಡೆಸಿ ಕೋಟೆಯನ್ನು ವಶಪಡಿಸಿಕೊಂಡರು. ಚೆನ್ನಮ್ಮ ಸೆರೆಯಾದಳು. ಕಿತ್ತೂರು ಸಂಸ್ಥಾನ ಬ್ರಿಟಿಷರ ಆಡಳಿತಕ್ಕೊಳಗಾಯಿತು. ದೇಸಾಯರ ಆಡಳಿತ ಕೊನೆಗೊಂಡಿತು (1824). (ಎಂ.ಎಚ್.)

**ಕಿನ್ನರಿ ಜೋಗಿ :** ಕಿನ್ನರಿ ಎಂಬ ವಾದ್ಯ ಬಾರಿಸುತ್ತ ಹಾಡು ಹೇಳಿಕೊಂಡು ಭಿಕ್ಷೆ ಬೇಡುವ ಜನಪದ ಹಾಡುಗಾರರು. ಕಿನ್ನರಿ ಅಥವಾ ಕಿಂದರಿ ಮೂರು ಅಥವಾ ಐದು ಸೋರೆಬುರುಡೆಗಳನ್ನು ಒಂದು ಬಿದಿರಿನ ಕೊಳವೆಗೆ ಜೋಡಿಸಿ, ನಾಲ್ಕೈದು ತಂತಿ ಬಿಗಿದು ಮಾಡಿದ ಒಂದು ವಾದ್ಯ. ಈ ವಾದ್ಯ ಹಿಡಿದು ಹಾಡುವ ಜನರಾದ್ದರಿಂದ ಇವರಿಗೆ ಕಿನ್ನರಿ ಜೋಗಿ (ಯೋಗಿ) ಗಳೆಂಬ ಹೆಸರು ಬಂದಿರುವಂತೆ ತೋರುತ್ತದೆ.

ಕಿನ್ನರಿ ಜೋಗಿಗಳು ಮುಖ್ಯವಾಗಿ ಆದಿಚುಂಚನಗಿರಿಯ ಭೈರವೇಶ್ವರನ ಒಕ್ಕಲು. ಇವರು ದೀಕ್ಷಾಬದ್ಧರಾದ ಜನ. ಕಿವಿಗಳಿಗೆ ಕಾಪಾಲಿ ಮುದ್ರೆ ಹಾಕಿಸಿಕೊಂಡಿರುತ್ತಾರೆ. ಅರಿಶಿಣಗಾವಿ ಅಂಗಿ, ಹಾರೋಗಚ್ಚೆ, ಸೊಂಟಕ್ಕೆ ಮತ್ತು ತಲೆಗೆ ಕೆಂಪು ವಸ್ತ್ರ, ಕಾಲಿಗೆ ಗೆಜ್ಜೆ - ಇವು ಇವರ ಉಡುಪು.

ಕಿನ್ನರಿ ಜೋಗಿಗಳು ಮುಖ್ಯವಾಗಿ ಹಾಡುವುದು ಅರ್ಜುನ ಜೋಗಿ ಹಾಡು. ಅರ್ಜುನ ಸುಭದ್ರೆಯನ್ನು ಅಪಹರಿಸಲು ಹೋದಾಗ ಜೋಗಿ ವೇಷ ಹಾಕಿಕೊಂಡು ಕಿನ್ನರಿ ಹಿಡಿದು ಬಾರಿಸುತ್ತ ಹೋದನೆಂದು ಒಂದು ಜನಪದ ಕಥೆಯುಂಟು. ಆದರೆ ಇದಕ್ಕೆ ಮಹಾಭಾರತದ ಕಥೆಯಲ್ಲಿ ಆಧಾರವಿಲ್ಲ. ಬಹುಶಃ ವೇಷದಲ್ಲಿ ಇವರು ಅರ್ಜುನನ ಸನ್ಯಾಸಿ ವೇಷಕ್ಕೆ ಸರಿಬರಬಹುದೆಂದು ಕಾಣುತ್ತದೆ. ಇವರು ಅರ್ಜುನ ಸುಭದ್ರೆಯರಿಗೆ ಸಂಬಂಧಪಟ್ಟ ಹಾಡುಗಳಲ್ಲದೆ ಬೇರೆ ಹಾಡುಗಳನ್ನೂ ಹಾಡುತ್ತಾರೆ. ಅವುಗಳಲ್ಲಿ ಚುಂಚನಗಿರಿಯ ಭೈರವ ಮಾಳವ್ವರ ಕಥೆಯೂ ಒಂದು. ಉತ್ತರ ಕರ್ನಾಟಕದ ಕಡೆ ಅರ್ಜುನಜೋಗಿಯ ಹಾಡುಗಬ್ಬಗಳೆಂಬ ಒಂದು ಪ್ರಕಾರವೇ ಉಂಟು. ಆದರೆ ಅಲ್ಲಿ ಆ ಹಾಡುಗಳನ್ನು ಹಾಡುವವರು ಕಿನ್ನರಿ ಜೋಗಿಗಳಲ್ಲ.

ಕಿನ್ನರಿ ಜೋಗಿ ಮೇಳ

ಕರ್ನಾಟಕದಲ್ಲಿ ಜೋಗಿ ಎಂಬ ಜಾತಿಯ ಜನರಿದ್ದಾರೆ. ಹಂದಿಜೋಗಿ ಎಂಬ ಹೆಸರಿನ ಜನರೂ ಇದ್ದಾರೆ. ಆದರೆ ಇವರು ಕಿನ್ನರಿ ಬಾರಿಸುವುದಿಲ್ಲ. ಇವರು ಹಂದಿಗಳನ್ನು ಸಾಕಿ ಜೀವಿಸುತ್ತಾರೆ. ಹಾಗೆಯೇ, ಭೈರಪ್ಪನ ಭಕ್ತರ ಮನೆಗಳಿಗೆ ಹೋಗಿ ಮೀಸಲು ತೀರಿಸುವ ಜೋಗಪ್ಪಗಳಿಗೂ ಜೋಗಿಗಳೆಂದೇ ಕರೆಯುತ್ತಾರೆ. ಆದರೆ ಇವರಿಗೂ ಕಿನ್ನರಿ ಜೋಗಿಗಳಿಗೂ ಯಾವುದೇ ಸಂಬಂಧ ಕಂಡುಬರುವುದಿಲ್ಲ. (ಎಚ್.ಎಲ್.ಎನ್.)

**ಕಿನ್ನರಿ ಬೊಮ್ಮಯ್ಯ :** ಸು.1160. ಶಿವಶರಣ ಮತ್ತು ವಚನಕಾರ, ಆಂಧ್ರಪ್ರದೇಶದ ಪುದೂರ ಎಂಬ ಗ್ರಾಮದ ಕಲಿದೇವಿಯ ಮಗ. ಅಕ್ಕಸಾಲೆಯ ಕಾಯಕದಲ್ಲಿದ್ದ. ಗುರುವಿನ ಆಭರಣದಲ್ಲಿ ತೂಕ ಕಡಿಮೆಯಾಗಲು ತನ್ನ ಕಾಯಕ ತ್ಯಜಿಸಿ ಕಲ್ಯಾಣಕ್ಕೆ ಬಂದು, ಬಸವಣ್ಣನ ಸಹಾಯಕನಾಗಿದ್ದು, ತ್ರಿಪುರಾಂತಕೇಶ್ವರನ ಮುಂದೆ ಕಿನ್ನರಿ ಬಾರಿಸಿ, ಬಂದ 11 ಹಾಗ ಆದಾಯದಿಂದ ಜಂಗಮ ದಾಸೋಹ ನಡೆಸುತ್ತಿದ್ದ. ಇದರಿಂದ ಇವನಿಗೆ ಕಿನ್ನರಿ ಬೊಮ್ಮಯ್ಯನೆಂಬ ಹೆಸರಾಯಿತು. ಶಿವನ ಆರೋಗಣೆಗೆ ಉಳ್ಳಿ ಬೇಡವೆಂದು ಆಕ್ಷೇಪಿಸಿದ ಬಸವಣ್ಣನೂ ಕಿನ್ನರಿ ಬೊಮ್ಮಯ್ಯನ ಭಕ್ತಿಗಾಗಿ ಕರಗಿದ. ಅಂದಿನಿಂದ ಉಳ್ಳಿಯ ಹಬ್ಬ ಮಾಡುವ ನೇಮವನ್ನೂ ಆಚರಣೆಗೆ ತಂದ. ಕೊನೆಯಲ್ಲಿ ಚೆನ್ನಬಸವಣ್ಣನಿಂದ ಇವನು ದಂಡಿನ ಆಧಿಪತ್ಯವನ್ನು ವಹಿಸಿಕೊಂಡು ಯುದ್ಧ ಮಾಡುತ್ತ ಮಡಿದನೆಂದು ಹೇಳುವರು. ಉಳುವಿಯ ಮಹಾಮನೆಯ ಸಮೀಪದಲ್ಲಿ ಈತನ ಸಮಾಧಿ ಇದೆ. ಮಹಲಿಂಗ ತ್ರಿಪುರಾಂತಕಾ ಎಂಬುದು ಇವನ ವಚನಗಳ ಅಂಕಿತ. (ಎಸ್.ಐ.)

**ಕಿಬ್ಬನಹಳ್ಳಿ :** ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿ ಕಸಬೆಯಿಂದ ಪೂರ್ವಕ್ಕೆ ಬೆಂಗಳೂರು ಹಾದಿಯಲ್ಲಿರುವ ಒಂದು ಗ್ರಾಮ.

ಸಮೀಪದಲ್ಲಿರುವ ಪ್ರಾಗೈತಿಹಾಸಿಕ ನೆಲೆಯಿಂದ ಈ ಗ್ರಾಮ ಪ್ರಸಿದ್ಧವಾಗಿದೆ. ಗ್ರಾಮದ ಪರಿಸರದಲ್ಲಿ ಹಬ್ಬಿರುವ ಬಾಣಸಂದ್ರ ಬೆಟ್ಟದ ಶಾಖೆಗಳ ಬುಡದಲ್ಲಿ ಮತ್ತು ಅಲ್ಲಿಂದ ಹರಿದುಬರುವ ಝರಿಗಳ ದಡಗಳಲ್ಲಿ ಪೂರ್ವ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗಗಳ ಕಾಲದ ಅನೇಕ ರೀತಿಯ ಶಿಲಾಯುಧಗಳು ದೊರಕುತ್ತವೆ.

ಇಲ್ಲಿಯ ಪೂರ್ವ ಶಿಲಾಯುಗದ ಕಾಲದಲ್ಲಿ ಅಬೆವಿಲಿಯನ್ ಮತ್ತು ಅಷೂಲಿಯನ್ ರೀತಿಯ ಕೈಕೊಡಲಿಗಳು, ಸೀಳುಗೊಡಲಿಗಳು (ಕ್ಲೀವರ್)

ಹೆರೆಯುವ ಆಯುಧಗಳು ಮತ್ತು ಕೊಕ್ಕು ತುದಿಯುಳ್ಳ ಆಯುಧಗಳು (ಬೀಕ್ಡ್ ಇಂಪ್ಲಿಮೆಂಟ್ಸ್) ಬಳಕೆಯಲ್ಲಿದ್ದುವು. ಉಂಡೆಕಲ್ಲುಗಳು ಮತ್ತು ಕಲ್ಲುಚಕ್ಕೆಗಳಿಂದ ಮಾಡಿದ ಎರಡು ಸಂಪ್ರದಾಯದ ಆಯುಧಗಳೂ ಇಲ್ಲಿ ದೊರಕುತ್ತವೆ. ಈ ಆಯುಧಗಳು ಬಹುಮಟ್ಟಿಗೆ ಒಟ್ಟಿಗೆ ದೊರಕಿದರೂ ಅವುಗಳ ರೂಪು, ತಂತ್ರ ಮತ್ತು ಬಳಕೆಯ ಆಧಾರದ ಮೇಲೆ ಮೊದಲ ಪೂರ್ವಶಿಲಾಯುಗದ ಮತ್ತು ಪೂರ್ವಶಿಲಾಯುಗದ ಉತ್ತರ ಭಾಗದ ಕಾಲದವುಗಳೆಂದು ಪರಿಗಣಿಸುವ ಸಾಧ್ಯತೆ ಇದೆ. ಇವೆಲ್ಲ ಮಧ್ಯ ಮತ್ತು ಉತ್ತರ ಪ್ಲೀಟೋಸೀನ್ ಯುಗದವೆಂದು, ಇದೇ ರೀತಿಯ ಆಯುಧಗಳು ತತ್ಕಾಲಕ್ಕೆ ಸೇರಿದಂತೆ ಯುರೋಪ್ ಮತ್ತು ಆಫ್ರಿಕ ಖಂಡಗಳಲ್ಲಿ ದೊರಕಿರುವುದರಿಂದ, ಹೇಳಬಹುದಾಗಿದೆ. ಸೂಕ್ಷ್ಮ ಶಿಲಾಯುಗದ ಕಾಲದಲ್ಲಿ ತೆಳು ಕಲ್ಲುಚಕ್ಕೆಯ, ಎರಡು ಕಡೆ ಅಲುಗುಳ್ಳ ಚಿಕ್ಕ ಚಾಕುಗಳು, ಮೊನೆಗಳು, ಹೆರೆಯುವ ಆಯುಧಗಳು ಮತ್ತು ಅರ್ಧಚಂದ್ರಾಕೃತಿಯ ಪುಟ್ಟ ಆಯುಧಗಳು ಬಳಕೆಯಲ್ಲಿದ್ದುವು. ಹೆರೆಯುವ ಆಯುಧಗಳಲ್ಲಿ ಪಾರ್ಶ್ವಹೆರೆಗಗಳೂ ತುದಿಹೆರೆಗಗಳೂ ಒಳಬಾಗಿನ ಹೆರೆಗಗಳೂ ದೊರಕಿವೆ. ಇಲ್ಲಿನ ಸೂಕ್ಷ್ಮಶಿಲಾಯುಗದ ಆಯುಧಗಳ ರಚನೆಗೆ ಬೆಣಚುಕಲ್ಲನ್ನು ಬಳಸಲಾಗಿದೆ. ಈ ಸೂಕ್ಷ್ಮಶಿಲಾಯುಗದ ಆಯುಧಗಳು ಬೇರೆಡೆಗಳಲ್ಲಿ ಮೆಸೋಲಿಥಿಕ್ ಸಂಸ್ಕೃತಿಗಳ ಆಯುಧಗಳಂತೆಯೇ ಇರುವುದರಿಂದ ಇವೂ ಕಾಲಿಕವಾಗಿ ಇಂದಿನ ಹೋಲೋಸೀನ್ ಯುಗದ ಆದಿಭಾಗದವಿರಬೇಕೆಂದು ಭಾವಿಸಲಾಗಿದೆ.

ಇಲ್ಲಿನ ನೆಲೆಯು ವಿಸ್ತಾರ, ದೊರಕುವ ಆಯುಧಗಳ ಸಂಖ್ಯೆ ಮತ್ತು ವೈವಿಧ್ಯಗಳ ದೃಷ್ಟಿಯಿಂದ ಕಿಬ್ಬನಹಳ್ಳಿ ಕರ್ನಾಟಕದ ಒಂದು ಪ್ರಮುಖ ಪ್ರಾಗೈತಿಹಾಸಿಕ ನೆಲೆಯೆಂದು ಪರಿಗಣಿತವಾಗಿದೆ. *

**ಕೀರ್ತನೆಗಳು** : ಕನ್ನಡ ಸಾಹಿತ್ಯ ವಾಙ್ಮಯದಲ್ಲಿ ಹರಿದಾಸರ ಉಗಾಭೋಗ, ಸುಳಾದಿಗಳನ್ನುಳಿದ ಬಿಡಿರಚನೆಗಳ ಸಮೂಹಕ್ಕೆ ಕೀರ್ತನೆಗಳು ಎಂಬ ಹೆಸರಿದೆ. ಕೀರ್ತನ ಎಂಬ ಮಾತಿಗೆ ಭಾಗವತದಲ್ಲಿ ಸ್ತುತಿ, ಸ್ತೋತ್ರ ಎಂಬ ಅರ್ಥವಿದೆ. ನವವಿಧ ಭಕ್ತಿಮಾರ್ಗಗಳಲ್ಲಿ ಕೀರ್ತನವೂ ಒಂದು. ಈಗ ಆಚರಣೆಯಲ್ಲಿರುವ ಪ್ರಕಾರ, ಕೀರ್ತನಭಕ್ತಿ ಎಂದರೆ ಗಾಯನ ಮುಖೇನ ದೇವರನ್ನು ಸ್ತುತಿಸುವುದು. ಹರಿದಾಸರ ಕೀರ್ತನೆಗಳು ಎಂದು ಹೇಳುವಲ್ಲಿ ಬಹುಶಃ ಈ ಅರ್ಥವಾಪ್ತಿಯನ್ನೇ ಇಟ್ಟುಕೊಂಡಿರುವಂತೆ ಕಾಣುತ್ತದೆ. ಅಲ್ಲದೆ ಕೀರ್ತನೆ ಎಂಬ ಮಾತನ್ನು ಹರಿಕಥೆ ಎಂಬ ಮಾತಿಗೆ ಸಂವಾದಿಯಾಗಿ ಬಳಸುವುದೂ ಉಂಟು.

ಸಾಮಾನ್ಯವಾಗಿ ಕೀರ್ತನೆಯಲ್ಲಿ ಪಲ್ಲವಿ, ಅನುಪಲ್ಲವಿ, ನುಡಿಗಳು - ಈ ತ್ರಿಧಾತುಕಗಳಿರುತ್ತವೆ. ಪಲ್ಲವಿಯಲ್ಲಿ ದಾಸರು ತಾವು ಕಂಡುಕೊಂಡಂಥ ಸತ್ಯದ ಪ್ರತಿಪಾದನೆ ಮಾಡಿರುತ್ತಾರೆ. ಅನುಪಲ್ಲವಿಯಲ್ಲಿ ಅದು ಮುಂದುವರಿದು ನುಡಿಗಳಿಂದ ಪೋಷಿತವಾಗುತ್ತದೆ. ದಾಸರು ಲೌಕಿಕ ದೃಷ್ಟಾಂತಗಳಿಂದ, ಶಾಸ್ತ್ರಗಳ ಆಧಾರದಿಂದ ತಮ್ಮ ಅಭಿಪ್ರಾಯವನ್ನು ಪುಷ್ಟಿಗೊಳಿಸಲು, ಸ್ಪಷ್ಟಪಡಿಸಲು ಯತ್ನಿಸುತ್ತಾರೆ.

ಎಲ್ಲ ಕೀರ್ತನೆಗಳಲ್ಲೂ ಸೂತ್ರದೋಪಾದಿಯಲ್ಲಿರುವ ವಸ್ತು ಭಕ್ತಿ. ತೋರಿಕೆಗೆ ಭಿನ್ನಭಿನ್ನವೆಂಬಂತೆ ಕಂಡರೂ ಅಂತರಾಳದಲ್ಲಿ ಭಕ್ತಿ ಏಕರೂಪವಾಗಿ ಪ್ರವಹಿಸಿದೆ. ಹರಿದಾಸರ ಕೀರ್ತನೆಗೆ ವಸ್ತುವಾಗದ ವಸ್ತುವೇ ಇಲ್ಲವೆಂದರೆ ತಪ್ಪಾಗಲಾರದು. ಬದುಕಿನ ನೈಜಚಿತ್ರಣವನ್ನು ಕೊಡುವುದರಲ್ಲಿ, ಸಾಮಾಜಿಕ ವಲಯದಲ್ಲಿ ಸಾಂಸಾರಿಕ ಚಿತ್ರಣಗಳನ್ನು ಅಚ್ಚುಕಟ್ಟಾಗಿ ಬಿಡಿಸುವಲ್ಲಿ ದಾಸರು ಸಫಲರಾಗಿದ್ದಾರೆ. ಬುದ್ಧಿಮಾತು ಹೇಳಿದರೆ ಕೇಳಬೇಕಮ್ಮ ಮಗಳೆ ಎಂದು ಮನೆಯ ಹೆಣ್ಣುಮಗುವಿಗೆ ಬುದ್ಧಿವಾದ ಹೇಳುವುದರಿಂದ ಹಿಡಿದು, ಮಡದಿ ಹುಟ್ಟಿದ ಮನೆಯಲಿರುವಾತ ಮೂರ್ಖ ಎಂದು ಅಳಿಯನಿಗೆ ಎಚ್ಚರಿಸುವವರೆಗೂ ವಿವಿಧ ಹಂತಗಳಲ್ಲಿ ಅವರ ಸಾಂಸಾರಿಕ ಚಿತ್ರಣ ರೂಪುಗೊಂಡಿದೆ. ನಿತ್ಯಜೀವನದಲ್ಲಿ ಕಾಣುವ ಸಾಮಾನ್ಯ ಘಟನೆಗಳೂ ಕೀರ್ತನೆಗಳ ವಸ್ತುಗಳಾಗಿ ಪರಿಣಮಿಸಿವೆ. ಕಾಗದ ಹಂಚುವುದನ್ನು ಕಂಡಾಗ ಸಾಕ್ಷಾತ್ ಪದುಮನಾಭನೇ ಬರೆದ ಕಾಗದ ಬಂದಿದೆಯೆಂದು ಹೇಳಿ, ಕಾಮ ಕ್ರೋಧವ ಬಿಡಿರೆಂಬೋ ಕಾಗದ ಬಂದಿದೆ, ನೇಮನಿಷ್ಠೆಯೊಳಿರಿಯೆಂಬೋ ಕಾಗದ ಬಂದಿದೆ ಇತ್ಯಾದಿಯಾಗಿ ಅದರ ಒಕ್ಕಣೆಯನ್ನು ಓದಿ ಹೇಳುತ್ತಾರೆ. ಪುರಂದರದಾಸರು, ವ್ಯಾಸರಾಯರು ನಿದ್ರೆಯನ್ನು ಬಹು ಸೊಗಸಾಗಿ ನಿಂದಿಸಿದ್ದಾರೆ. ಅಂತೆಯೇ ಕೋಳಿ ಕೂಗುವಿಕೆ, ತಾಸು ಬಾರಿಸುವಿಕೆ, ಡಂಗುರ ಹೊಯ್ಯುವಿಕೆ ಎಲ್ಲವೂ ಅವರ ಕೀರ್ತನೆಗಳಲ್ಲಿ ವಸ್ತುವಿನ ಸ್ಥಾನವನ್ನು ಪಡೆದುಕೊಂಡಿದೆ. ವೇಣುಗೋಪಾಲ ಮತ್ತು ಗೋಪಿಯರ ಸರಸವಿರಸಗಳು, ತಾಯಿ ಮಕ್ಕಳ ವಾತ್ಸಲ್ಯ ಮುಂತಾದ ವರ್ಣನೆಗಳು ಸಹೃದಯನನ್ನು ಪ್ರತ್ಯೇಕ ಪ್ರಪಂಚಕ್ಕೆ ಸೆಳೆದೊಯ್ಯುತ್ತವೆ.

ಸಮಾಜದ ಆರೋಗ್ಯ ಸೂತ್ರಗಳಾದ ಸತ್ಯ, ಧರ್ಮ, ಸ್ವಚ್ಛತೆ, ಭಕ್ತಿ, ಸಜ್ಜನಿಕೆಗಳನ್ನು ಬೋಧಿಸುವುದರೊಂದಿಗೆ ಸಮಾಜದಲ್ಲಿದ್ದ ಸಣ್ಣತನ, ಮತ್ಸರ, ಮೋಹ, ಭ್ರಮೆ, ಅಂಧಶ್ರದ್ಧೆಗಳೇ ಮೊದಲಾದ ರೋಗಾಣುಗಳನ್ನೂ ಗುರುತಿಸಿ, ನಾಶಪಡಿಸಲು ಈ ಕೀರ್ತನೆಗಳ ಮೂಲಕ ಹರಿದಾಸರು ಯತ್ನಿಸಿದ್ದಾರೆ. ಮಾನವಜನ್ಮ ದೊಡ್ಡದು; ಇದ ಹಾನಿ ಮಾಡಲು ಬೇಡಿ, ಹುಚ್ಚಪ್ಪಗಳಿರಾ ಎಂದು ಎಚ್ಚರಿಸಿದ ದಾಸರು ಈ ಜನ್ಮವನ್ನು ಸಾರ್ಥಕಗೊಳಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಾರೆ. ಕೇವಲ ಶರೀರದ ಮೋಹಕ್ಕೆ, ಹೆಣ್ಣು ಹೊನ್ನು ಮಣ್ಣುಗಳ ವ್ಯಸನಕ್ಕೆ ಸಿಲುಕಿ ನಲುಗುತ್ತಿರುವ ಜನತೆಗೆ ಅವುಗಳ ನಶ್ವರತೆಯ ಅರಿವುಂಟುಮಾಡಲು ಯತ್ನಿಸಿದ್ದಾರೆ. ಕಷ್ಟಜೀವಿಗಳ ಮನಸ್ಸಿನ ಆಂದೋಲನ, ಅವರ ಆಸೆ ನಿರಾಶೆಗಳ ಮಟ್ಟಗಳನ್ನು ಗುರುತಿಸಿ ವಿಶ್ಲೇಷಿಸಿ ಆ ಮೂಲಕ ತಾವೂ ಅವರೊಂದಿಗೆ ಬೆರೆಯುತ್ತಾರೆ. ಸಂಸಾರದ ನಶ್ವರತೆಯನ್ನು ಹೇಳಿ, ಗೇರುಹಣ್ಣಿನ ಬೀಜದಂತೆ ಹೊರಗಿದ್ದು ಹರಿಯನ್ನು ನೆನೆಯಬೇಕೆಂದು ಸಮರ್ಥವಾದ ಉಪಮೆಯಿಂದ ಸಾರಿದ ದಾಸರು ಈಸಬೇಕು ಇದ್ದು ಜೈಸಬೇಕು ಎಂದೂ ಹೇಳಿ ಬದುಕಿನಲ್ಲಿ ಚೆನ್ನಾಗಿ ಬಾಳುವ ಒಂದು ನೆಚ್ಚನ್ನೂ ಭರವಸೆಯನ್ನೂ ತುಂಬುತ್ತಾರೆ. ಧರ್ಮವೇ ಜಯವೆಂಬ ದಿವ್ಯಮಂತ್ರ, ಸತ್ಯವೆಂಬುದೆ ಸ್ನಾನ, ತಾಳುವಿಕೆಗಿಂತ ತಪವು ಇಲ್ಲ ಇತ್ಯಾದಿ ಧರ್ಮಸೂಕ್ಷ್ಮಗಳನ್ನು ತಮ್ಮ ಬಾಳಿನಲ್ಲಿ ಸಾಧಿಸಿ, ಆ ಮೂಲಕ ಇತರರಿಗೆ ಆದರ್ಶಪ್ರಾಯರಾಗಿ ನಿಂತಿದ್ದಾರೆ. ಈ ಮೇಲೆ ವಿವೇಚಿಸಿದ ಎಲ್ಲ ಅಂಶಗಳೂ ಪ್ರತಿಯೊಬ್ಬ ಮಾನವನಿಗೂ ಅನ್ವಯಿಸತಕ್ಕಂತವು. ಇವು ಸಾರ್ವಕಾಲಿಕ ಹಾಗೂ ಸಾರ್ವಜನಿಕವಾದವು. ಮನುಷ್ಯ ಮನುಷ್ಯನಾಗಿ ಬಾಳತಕ್ಕಂಥ ಬಟ್ಟೆಯನ್ನು ತೋರುವಂಥವು. ಈ ದೃಷ್ಟಿಯಿಂದ ಮಾನವಧರ್ಮವನ್ನು ಕಟ್ಟುವ ಪ್ರಯತ್ನವನ್ನು ಹರಿದಾಸರಲ್ಲಿ ಗುರುತಿಸಬಹುದು. ಈ ಬೃಹದ್ಯೋಜನೆಯ ಸಾಧನೆಯನ್ನು ಧರ್ಮದ ಹೆಸರಿನಲ್ಲಿ ಕೀರ್ತನೆಗಳ ಮೂಲಕ ಕೈಕೊಂಡ ಧಾರ್ಮಿಕರು ಹರಿದಾಸರು. ಅವರ ಹಾಗೂ ಸಾಮಾನ್ಯ ಜನತೆಯ ಈ ಅನುಭವಗಳ ವಿನಿಮಯಕ್ಕೆ ಕೀರ್ತನೆಗಳು ಮಾಧ್ಯಮವಾಗಿ ನಿಂತು, ಕಾವ್ಯದ ಗೌರವವನ್ನು ಸಾಧಿಸಿಕೊಂಡಿವೆ.

ಕೀರ್ತನೆ ಎಂಬ ಈ ಪ್ರಕಾರಕ್ಕೆ ಹರಿದಾಸರೇ ಮೊದಲಿಗರಲ್ಲ. ಕೀರ್ತನೆಯ ಲಕ್ಷಣಕ್ಕೆ ಹೊಂದಿಕೊಳ್ಳುವಂಥ ರಚನೆಗಳನ್ನು ಹನ್ನೆರಡನೆಯ ಶತಮಾನದಲ್ಲಿ ಬಂದಂಥ ಶಿವದಾಸರಲ್ಲೆ ಕಾಣುತ್ತೇವೆ. ಆದರೆ ಅವುಗಳನ್ನು ಹಾಡುಗಳೆಂದೂ ಗೀತೆಗಳೆಂದೂ ಕರೆದಿದ್ದಾರೆ. ಸಾಮಾನ್ಯವಾಗಿ ಹಾಡು, ಗೀತೆಗಳಲ್ಲಿ ಅನುಪಲ್ಲವಿ ಕಂಡುಬರುವುದಿಲ್ಲ. ಅಂತೆಯೇ ಕೆಲವು ಕೀರ್ತನೆಗಳಿಗೂ ಅನುಪಲ್ಲವಿಯಿಲ್ಲದಿರುವುದುಂಟು. ಇತ್ತೀಚೆಗೆ ತ್ಯಾಗರಾಜರೇ ಮೊದಲಾದವರ ಸಂಗೀತ ಕೃತಿಗಳನ್ನೂ ಕೀರ್ತನೆಗಳೆಂದು ಕರೆಯುವುದು ವಾಡಿಕೆಯಾಗಿದೆ. ಆದರೆ ಕೃತಿಗೂ ಕೀರ್ತನೆಗೂ ಸಂಗೀತಶಾಸ್ತ್ರದ ಪ್ರಕಾರ ವ್ಯತ್ಯಾಸವಿದೆ. (ಟಿ.ಎನ್.ಎನ್.)

**ಕೀರ್ತಿನಾಥ ಕುರ್ತಕೋಟಿ** : 1928-2003. ಕನ್ನಡದ ಅಗ್ರಗಣ್ಯ ವಿಮರ್ಶಕರು ಹಾಗೂ ವಿದ್ವಾಂಸರು. 1928 ಅಕ್ಟೋಬರ್ 13ರಂದು ಗದಗ ಸಮೀಪದ ಕುರ್ತಕೋಟಿಯ ವಿದ್ವತ್‌ಪರಂಪರೆಯ ಗೌಡರ ಮನೆತನದಲ್ಲಿ ಜನಿಸಿದರು. ತಂದೆ ಡಿ.ಕೆ.ಕುರ್ತಕೋಟಿ, ತಾಯಿ ಪದ್ಮಾವತಿಬಾಯಿ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಗದಗಿನಲ್ಲಿ ಪಡೆದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು (1958). ಗದಗಿನಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ, ಬೆಳಗಾಂವಿ ಕಾಲೇಜಿನಲ್ಲಿ ಟ್ಯೂಟರ್ ಆಗಿ, ಪುಣೆಯ ಸರ್.ಪರಶುರಾಮಭಾವು ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು (1958-67). ಅನಂತರ ಗುಜರಾತಿನ ಸರ್ದಾರ್ ಪಟೇಲ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ (1967), ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಶೈಕ್ಷಣಿಕ ಸೇವೆ ಸಲ್ಲಿಸಿ ನಿವೃತ್ತಿಯ ಬಳಿಕ ಧಾರವಾಡದಲ್ಲಿ ನೆಲೆಸಿದರು.

ಧಾರವಾಡದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪರಿಸರ ಇವರ ಮೇಲೆ ಗಾಢವಾದ ಪ್ರಭಾವ ಬೀರಿತು. ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ರಂ.ಶ್ರೀ.ಮುಗಳಿ, ವಿ.ಕೃ.ಗೋಕಾಕ ಮೊದಲಾದವರ ಸಂಪರ್ಕ ಹಾಗೂ ಸಹವಾಸಗಳು ಇವರಿಗೆ ದೊರೆತವು. ಇವರು ಕನ್ನಡ, ಇಂಗ್ಲಿಷ್, ಮರಾಠಿ, ಸಂಸ್ಕೃತ, ಗುಜರಾತಿ, ಹಿಂದಿ ಮೊದಲಾದ ಭಾರತೀಯ ಭಾಷಾ ಸಾಹಿತ್ಯದ ಆಳವಾದ ಅಧ್ಯಯನ ಹಾಗೂ ಅಪೂರ್ವವಾದ ತಮ್ಮ ಪಾಂಡಿತ್ಯ ಪ್ರತಿಭೆಗಳಿಂದ ಕನ್ನಡ ವಿಮರ್ಶೆಗೆ ಹೊಸ ಆಯಾಮ ನೀಡಿದರು. 'ಮನೋಹರ ಗ್ರಂಥ'ಮಾಲೆ'ಯ ನಡೆದು ಬಂದ ದಾರಿಯ ಸಂಪುಟಗಳಿಗೆ ಬರೆದ 'ಯುಗ ಧರ್ಮ ಹಾಗೂ ಸಾಹಿತ್ಯ ದರ್ಶನ' (1962) ಹೊಸಗನ್ನಡ ವಿಮರ್ಶೆಯಲ್ಲಿ ಗಮನಾರ್ಹ ವಾದುದು. ಆಧುನಿಕ ಕನ್ನಡ ಸಾಹಿತ್ಯವನ್ನು ವಿಮರ್ಶೆಯ ನಿಕಷಕ್ಕೆ ಹಚ್ಚಿ ನೋಡುವ ಕುರ್ತಕೋಟಿಯವರ ಸಾಹಸ ಅದ್ವಿತೀಯವಾದದ್ದು. ಇವರು ಆಧುನಿಕ ಕನ್ನಡ ವಿಮರ್ಶೆಗೆ ಹೊಸಭಾಷೆ, ದೃಷ್ಟಿ ಧೋರಣೆಗಳನ್ನು ರೂಪಿಸಿದರು. ಮನೋಹರ ಗ್ರಂಥಮಾಲೆಯ ಸಾಹಿತ್ಯ ಸಲಹೆಗಾರರಾಗಿಯೂ ಇವರು ಅನೇಕ ಲೇಖಕರ ಪ್ರತಿಭೆಯನ್ನು ಗುರುತಿಸಿ ಅವರ ಕೃತಿಗಳು ಪ್ರಕಟವಾಗುವಂತೆ ನೋಡಿಕೊಂಡರು; ಅನೇಕ ಕೃತಿಗಳನ್ನು ವಿಮರ್ಶಿಸಿದರು. ಮನ್ವಂತರ ಎಂಬ ಸಾಹಿತ್ಯ ವಿಮರ್ಶಾ ಪತ್ರಿಕೆಯ ಸಂಪಾದಕರಾಗಿ ಸಾಹಿತ್ಯ ಚರ್ಚೆಗೆ ವೈಚಾರಿಕ ಆಯಾಮವನ್ನು ಒದಗಿಸಿದರು. ನವ್ಯಕಾವ್ಯ ಪ್ರಯೋಗ (1963), ಭೃಂಗದ ಬೆನ್ನೇರಿ, ವಿಮರ್ಶೆಯ ವಿನಯ: ನಾಟಕ (1985), ವಿಮರ್ಶೆಯ ವಿನಯ: ಕಾದಂಬರಿ (1982), ಸಂಸ್ಕೃತಿ ಸ್ಪಂದನ, ಪುಟಬಂಗಾರಕ್ಕೆ ಬರೆದ ಪ್ರಸ್ತಾವನೆ, ಶ್ರಾವಣ ಪ್ರತಿಭೆ, ಕುಮಾರವ್ಯಾಸ, ಉರಿಯನಾಲಗೆ (1993), ದ.ರಾ.ಬೇಂದ್ರೆ, ಬಾರೋ ಸಾಧನಕೇರಿಗೆ, ಬಯಲು ಆಲಯ (1992), ಅಸಂಗತನಾಟಕಗಳು, ಕನ್ನಡ ಸಾಹಿತ್ಯ ಸಂಗಾತಿ (1995), ನೂರುಮರ ನೂರು ಸ್ವರ (1998) ಪ್ರತ್ಯಭಿಜ್ಞಾನ (1999) - ಹೀಗೆ ವಿಮರ್ಶೆಯ ವಿವಿಧ ಸಂಪುಟಗಳಲ್ಲಿ ಇವರ ವಿಮರ್ಶನ ಪಾಂಡಿತ್ಯಪ್ರವಾಹ ಹರಿದಿದೆ.

ಇವರು ಅಂಕಣ ಸಾಹಿತ್ಯದಲ್ಲೂ ವೈಚಾರಿಕ ಪ್ರತಿಭೆಯನ್ನು ಪ್ರಕಟಪಡಿಸಿದ್ದಾರೆ. ಪ್ರಜಾವಾಣಿಯ 'ಸಮ್ಮುಖ' ಅಂಕಣ ಲೇಖನಗಳು ವಿಶಿಷ್ಟವಾಗಿವೆ. ಭಾರತೀಯ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಇವರ ವಿಚಾರಧಾರೆ, ವ್ಯಾಖ್ಯಾನ ಪರಿಣತಿ ವಿಶೇಷವಾದದ್ದು. ಇವರು ಕುಮಾರವ್ಯಾಸ ಮತ್ತು ಬೇಂದ್ರೆ ಸಾಹಿತ್ಯದ ತಜ್ಞರೆಂದೂ ಖ್ಯಾತರಾಗಿದ್ದಾರೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಮೂರು ನೂರಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ. ಶ್ರೇಷ್ಠ ಅನುವಾದಕರೂ ಆಗಿರುವ ಇವರು ಶಂ.ಬಾ.ಜೋಶಿ ಅವರ ಮರಾಠೀ ಸಂಸ್ಕೃತಿ: ಕೆಲವು ಸಮಸ್ಯೆಗಳು ಎಂಬ ಕೃತಿಯನ್ನು ಅನುವಾದಿಸಿದ್ದಾರೆ. ಇದರ ಅನುವಾದಕ್ಕಾಗಿ ಕೇಂದ್ರಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ (1993) ಮತ್ತು ಉರಿಯನಾಲಗೆ ಅಂಕಣ ಲೇಖನ ಸಂಪುಟಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ (1995) ದೊರಕಿವೆ. ಆಮನಿ (1956), ಚಂದ್ರಗುಪ್ತ (1983) ಇವು ಇವರ ಸೃಜನಶೀಲ ಬರೆಹದ ಮಾದರಿಗಳು.

ಇವರು ಅಪರೂಪದ ವಾಗ್ಮಿಗಳೂ ಹೌದು. ಪ್ರಾಚೀನ ಮತ್ತು ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಸಮಾನವಾದ ಶ್ರದ್ಧೆಯುಳ್ಳವರೂ ಆಗಿದ್ದ ಇವರು ಸಮಕಾಲೀನ ಭಾರತೀಯ ವಿದ್ವಾಂಸ ವಿಮರ್ಶಕರಲ್ಲಿ ಪ್ರಮುಖರಾಗಿದ್ದರು. ನಿರಂತರವಾದ ಓದು, ಸಾಹಿತ್ಯಸಂವಾದ ನಡೆಸುವ ಮನೋಹರ ಗ್ರಂಥ'ಮಾಲೆಯ ಅಟ್ಟದ ಗೆಳೆಯರ ಬಳಗದ ರಸಿಕ ಹರಟೆಗಾರರಾಗಿಯೂ ಹೆಸರಾಗಿದ್ದರು. 'ಕನ್ನಡದ ಕೀರ್ತಿ' (1989) ಅಭಿಮಾನಿಗಳು ಇವರಿಗೆ ಅರ್ಪಿಸಿದ ಅಭಿನಂದನಗ್ರಂಥ. ಇವರು 2003 ಆಗಸ್ಟ್ 31ರಂದು ಧಾರವಾಡದಲ್ಲಿ ನಿಧನಹೊಂದಿದರು. (ಜಿ.ಎಂ.ಎಚ್)

**ಕೀರ್ತಿವರ್ಮ[1]:** ಸು.1100. ಜೈನಕವಿ. ಗೋವೈದ್ಯ ಎಂಬ ವೈದ್ಯಗ್ರಂಥ'ದ ಕರ್ತೃ. ಈತನ ಕಾಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಈತನ ಗ್ರಂಥದ ಒಂದು ಪದ್ಯದಿಂದ ಕವಿಯ ತಂದೆ ತ್ರೈಲೋಕ್ಯಮಲ್ಲ, ಅಣ್ಣ ವಿಕ್ರಮಾಂಕ, ಗುರು ದೇವಚಂದ್ರಮುನಿ, ಇಷ್ಟದೇವತೆ ಜಿನ ಎಂದು ತಿಳಿದುಬರುತ್ತದೆ. ಕವಿ ತನ್ನನ್ನು ಕೀರ್ತಿಚಂದ್ರ, ವೈರಿಕರಿಹರಿ, ಕಂದರ್ಪಮೂರ್ತಿ, ಸಮ್ಯಕ್ತ್ವರತ್ನಾಕರ, ಬುಧಭವ್ಯಬಾಂಧವ, ವೈದ್ಯರತ್ನ, ಪಾಲಭವಂದ್ಯ, ಕವಿತಾಬ್ಧಿಚಂದ್ರಮ, ಕೀರ್ತಿವಿಳಾಸ ಎಂಬ ಪ್ರಶಸ್ತಿಗಳಿಂದಲೂ ಬಿರುದುಗಳಿಂದಲೂ ವಿಶೇಷಿಸಿಕೊಂಡಿದ್ದಾನೆ. ಬ್ರಹ್ಮಶಿವ ತನ್ನ ಸಮಯ ಪರೀಕ್ಷೆಯಲ್ಲಿ ಈತನನ್ನು

ಜನತಾನಂದಂ ಚಳುಕ್ಯಾಭರಣನವನಿಪಾಳೋತ್ತಮಂ ಸಾರ್ವಭೌಮಂ
ಜನಕಂ ತ್ರೈಲೋಕ್ಯಮಲ್ಲಂ ಸಕಳವಸುಮತೀವಲ್ಲಭಂ ವಿಕ್ರಮಾಂಕಾ
ವನಿಪಂ ತಾನಗ್ರಜಾತಂ ತ್ರಿಭುವನಪತಿ ದೇವಾಧಿದೇವಂ ಜಿನೇಂದ್ರಂ
ತನಗಾಪ್ತಂ ಮತ್ತೆನಲ್ಕೇಂ ಪ್ರಿಯನೊ ಜಗತೀನಾಥರೊಳ್ ಕೀರ್ತಿವರ್ಮಂ

ಅರಸುಮಗಂ ಗಡ ಕವಿ ಗಡ ಪಿರಿದೀವಂ ಗಡ ಬಟುಕ್ಕೆ ಜೈನಂಗಡೆನಲ್
ಧರಣಿಪತಿ ಕೀರ್ತಿವರ್ಮಂ ನಿರತಂ ಪೊನ್ ಕಮ್ಮಿತಾದುದೆನಿಸಿದನಿಳೆಯೊಳ್

ಎಂದು ಹೊಗಳಿದ್ದಾನೆ. ಇದರಿಂದ ಕೀರ್ತಿವರ್ಮ ಚಾಳುಕ್ಯ ರಾಜನ ವಂಶದಲ್ಲಿ ಹುಟ್ಟಿದವನೆಂದು ವ್ಯಕ್ತವಾಗುತ್ತದೆ. ಆ ರಾಜನಲ್ಲಿ ತ್ರೈಲೋಕ್ಯಮಲ್ಲ 1042ರಿಂದ 1068ರವರೆಗೆ ಆಳಿದಂತೆಯೂ ಅವನ ಮಗನಾದ ವಿಕ್ರಮಾದಿತ್ಯ 1076ರಿಂದ 1127ರವರೆಗೆ ಆಳಿದಂತೆಯೂ ತಿಳಿಯುತ್ತದೆ. ಈ ವಿಕ್ರಮಾದಿತ್ಯನೇ ಕವಿಯ ಅಣ್ಣನಾಗಿದ್ದಿರಬೇಕು. ವಿಕ್ರಮಾದಿತ್ಯನಿಗೆ ಮೂರನೆಯ ಜಯಸಿಂಹ, ವಿಷ್ಣುವರ್ಧನ ವಿಜಯಾ ದಿತ್ಯರೆಂಬ ಇಬ್ಬರು ತಮ್ಮಂದಿರಿದ್ದರು. ಕೀರ್ತಿವರ್ಮ ಎಂಬುದು ವಿಷ್ಣುವರ್ಧನ ವಿಜಯಾದಿತ್ಯನ ಮತ್ತೊಂದು ಹೆಸರೆಂಬ ಅಭಿಪ್ರಾಯವೂ ಇದೆ.

ಗೋವೈದ್ಯ ಕನ್ನಡದಲ್ಲಿ ರಚಿತವಾದ ಮೊತ್ತಮೊದಲ ವೈದ್ಯಗ್ರಂಥ. ಸಿಕ್ಕಿರುವ ಓಲೆಗರಿ ಪ್ರತಿ ಅಸಮಗ್ರವೂ ಅಶುದ್ಧವೂ ಆಗಿದೆ.ಕೃತಿ ಚಂಪೂವಿನಲ್ಲಿದೆ. ಇದರಲ್ಲಿ ಗೋವುಗಳ ವ್ಯಾಧಿಗಳಿಗೆ ಔಷಧಗಳನ್ನೂ ಯಂತ್ರಗಳನ್ನೂ ಬರೆಹಾಕುವ ಕ್ರಮಗಳನ್ನೂ ವಿಸ್ತಾರವಾಗಿ ಹೇಳಿದೆ. ಈ ಗ್ರಂಥದ ಮೊದಲ ಒಂದು ಪದ್ಯ ಹೀಗಿದೆ:

ಬಡವಂ ಕೊಬ್ಬಿದ ಬಂಜೆಯ
ನುಡುಗದೆ ಹಯಮಾಡಿ ಕರೆವತೆರನಂ ಕುತ್ತಂ
ಬಿಡುವಂತು ವೈರಿಕರಿಹರಿ
ನುಡಿದಂ ಕಂದರ್ಪಮೂರ್ತಿ ಕೀರ್ತಿವಿಲಾಸಂ (ಜಿ.ಸಿ.ಎ.)

**ಕೀರ್ತಿವರ್ಮ[2]:** ಬಾದಾಮಿಯ ಚಳುಕ್ಯ ವಂಶದ ದೊರೆ (566-96). ಒಂದನೆಯ ಪುಲಕೇಶಿಯ ಮಗ ಹಾಗೂ ಉತ್ತರಾಧಿಕಾರಿ. ಇವನಿಗೆ ಸತ್ಯಾಶ್ರಯ, ಉರುರಣ ಪರಾಕ್ರಮ ವಲ್ಲಭ, ಕೀರ್ತಿವಲ್ಲಭ ಎಂಬ ಬಿರುದುಗಳಿದ್ದುವು. ತನ್ನ ತಂದೆಯಿಂದ ಸ್ಥಾಪಿತವಾದ ಚಿಕ್ಕ ರಾಜ್ಯವನ್ನು ವಿಸ್ತರಿಸಿದ ಕೀರ್ತಿ ಈತನದು. ಕೀರ್ತಿವರ್ಮ ಪ್ರಾಯಶಃ ಕದಂಬ ವಂಶದ ಅಜವರ್ಮನನ್ನು ಸದೆಬಡಿದು ಬನವಾಸಿಯನ್ನು ಆಕ್ರಮಿಸಿಕೊಂಡಂತೆ ತಿಳಿಯುತ್ತದೆ. ನಳವಾಡಿಯಲ್ಲಿ (ಬಳ್ಳಾರಿ, ಕರ್ನೂಲು ಜಿಲ್ಲೆಗಳ ಪ್ರದೇಶ) ಆಳುತ್ತಿದ್ದ ನಳರನ್ನು ಸೋಲಿಸಿ ಆ ಪ್ರಾಂತ್ಯವನ್ನೂ ಕೊಂಕಣದಲ್ಲಿ ಆಳುತ್ತಿದ್ದ ಮೌರ್ಯರನ್ನೂ ಸೋಲಿಸಿ ಅದನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಂಡು, ಕೊಂಕಣ ಮತ್ತು ಇನ್ನುಳಿದ ಪಶ್ಚಿಮ ಕರಾವಳಿಯ ಪ್ರದೇಶದ ಆಡಳಿತವನ್ನು ನಿರ್ವಹಿಸಲು ಬಪ್ಪೂರ ವಂಶದ ಧ್ರುವರಾಜ ಇಂದ್ರವರ್ಮನನ್ನು ನೇಮಿಸಿದ. ಇವನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳುತ್ತಿದ್ದ ಆಳುಪರನ್ನು ಮತ್ತು ತಲಕಾಡಿನ ಗಂಗರನ್ನು ಸೋಲಿಸಿದನೆಂದೂ ಶಾಸನಗಳು ವಿವರಿಸುತ್ತವೆ.

ಮೊದಲು ಕದಂಬರ ಮಾಂಡಳಿಕರಾಗಿದ್ದ ಸೇಂದ್ರಕರು ಕೀರ್ತಿವರ್ಮನ ಕಾಲದಲ್ಲಿ ತಮ್ಮ ರಾಜನಿಷ್ಠೆಯನ್ನು ಚಳುಕ್ಯ ಸಮ್ರಾಟರಿಗೆ ಬದಲಾಯಿಸಿದರು. ಈ ಸೇಂದ್ರಕ ವಂಶದ ಶ್ರೀವಲ್ಲಭ ಸೇನಾನಂದನ ಸಹೋದರಿಯನ್ನು ಕೀರ್ತಿವರ್ಮ ವಿವಾಹವಾದ. ಬಾದಾಮಿಯ ಕೆಲವು ಲೋಕವಿಖ್ಯಾತ ಗುಹಾಂತರ ದೇವಾಲಯಗಳ ನಿರ್ಮಾಣ ಕಾರ್ಯಗಳು ಇವನ ಕಾಲದಲ್ಲಿ ನಡೆದವು. ಇವನು 596ರಲ್ಲಿ ನಿಧನನಾದ. ಇವನಿಗೆ ಇಮ್ಮಡಿ ಪುಲಕೇಶಿ, ವಿಷ್ಣುವರ್ಧನ, ಧರಾಶ್ರಯ ಜಯಸಿಂಹ, ಬದ್ಧವರಸ ಎಂಬ ನಾಲ್ವರು ಗಂಡುಮಕ್ಕಳಿದ್ದರು. (ಎಸ್.)

**ಕೀರ್ತಿವರ್ಮ[3] :** ಬಾದಾಮಿಯ ಚಳುಕ್ಯ ವಂಶದ ಕೊನೆಯ ಅರಸ (745-57). ಇಮ್ಮಡಿ ವಿಕ್ರಮಾದಿತ್ಯನ ಮಗ ಹಾಗೂ ಉತ್ತರಾಧಿಕಾರಿ. ತ್ರೈಲೋಕ್ಯಮಹಾದೇವಿ ಈತನ ತಾಯಿ.

ಯುವರಾಜನಾಗಿದ್ದಾಗಲೇ ತಂದೆಯ ಅನುಮತಿ ಪಡೆದು ಪಲ್ಲವರ ಮೇಲೆ ದಾಳಿ ನಡೆಸಿದ ಈತ ಅಲ್ಲಿನ ಅರಸ ನಂದಿವರ್ಮನನ್ನು ಸೋಲಿಸಿ ಶತ್ರುವಿನಿಂದ ಕಸಿದು ತಂದಿದ್ದ ಆನೆಗಳನ್ನೂ ಕನಕಾಭರಣಗಳನ್ನೂ ತಂದೆಗೆ ಕಾಣಿಕೆಯಾಗಿ ಒಪ್ಪಿಸಿದ.

ಈತನ ಆಳಿಕೆಯ ಕಾಲದಲ್ಲಿ ನಡೆದ ಘಟನೆಗಳ ವಿವರಗಳು ವಿಶೇಷವಾಗಿ ತಿಳಿದಿಲ್ಲ. ಅನಂತರದ ಶಾಸನಗಳಲ್ಲಿ ಈತನ ಕಾಲದಲ್ಲಿ ಚಳುಕ್ಯ ರಾಜ್ಯಶ್ರೀ ಕಣ್ಮರೆಯಾದಳೆಂದು ಹೇಳಿದೆ. ಚಳುಕ್ಯರ ಅವನತಿಗೆ ಈತ ಎಷ್ಟರಮಟ್ಟಿಗೆ ಕಾರಣನಾದನೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಸತತವಾಗಿ ನಡೆದ ಚಳುಕ್ಯ ಹಾಗೂ ಪಲ್ಲವರ ನಡುವಣ ಕದನಗಳು ಎರಡು ಪಕ್ಷಗಳವರ ಶಕ್ತಿಯನ್ನೂ ಕುಗ್ಗಿಸಿತ್ತು. ಪರಿಸ್ಥಿತಿಯ ಪ್ರಯೋಜನ ಪಡೆದ ಹಲವರು ಸಾಮಂತರು ಸ್ವತಂತ್ರರಾಗಲು ಹವಣಿಸಿದರು. ಅಂಥವರಲ್ಲಿ ಆಳುಪರ ಇಮ್ಮಡಿ ಆಳುವರಸನೂ ಒಬ್ಬ. ಈತ ಪಲ್ಲವ ನಂದಿವರ್ಮನ ಬೆಂಬಲಿಗನಾಗಿ ಆತನ ಸೇನಾನಿಯಾದ ಉದಯಚಂದ್ರನ ದಂಡಯಾತ್ರೆಗಳಲ್ಲಿ ಪಾಲುಗೊಂಡ.

ದಂಗೆ ಎದ್ದವರಲ್ಲಿ ಇನ್ನೊಬ್ಬ, ರಾಷ್ಟ್ರಕೂಟ ಮನೆತನದ ದಂತಿದುರ್ಗ. ಈತ ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ಅರಬರನ್ನು ಹೊರದೂಡಲು ಶ್ರಮಿಸಿ ಅರಸನಿಂದ ಪೃಥ್ವೀವಲ್ಲಭ, ಖಡ್ಗಾವಲೋಕ ಎಂಬ ಬಿರುದುಗಳನ್ನು ಪಡೆದಿದ್ದ. ಕೀರ್ತಿವರ್ಮನೊಡನೆ ಪಲ್ಲವ ರಾಜಧಾನಿಯವರೆಗೂ ಹೋಗಿದ್ದ. ಆದರೆ ಕ್ರಮೇಣ ಈತ ಬಾದಾಮಿ ಚಳುಕ್ಯರ ಸಂಬಂಧಿಗಳಾದ ನವಸಾರಿಯ ಚಳುಕ್ಯರನ್ನು ಮೊದಲು ಸೋಲಿಸಿದ. ಆ ಬಳಿಕ ಕೀರ್ತಿವರ್ಮನನ್ನು ಎದುರಿಸಿದ. ಆಗ ನಡೆದ ಕದನದಲ್ಲಿ ಕೀರ್ತಿವರ್ಮ ಸೋತನಾದರೂ ದಂತಿದುರ್ಗನ ಅಕಾಲ ಮರಣದಿಂದಾಗಿ (756) ರಾಜ್ಯವನ್ನು ಕಳೆದುಕೊಳ್ಳಲಿಲ್ಲ. ಈ ಸೋಲಿನ ಅನಂತರವೂ ಕೀರ್ತಿವರ್ಮ ರಾಜ್ಯದ ಹಲವಾರು ಪ್ರದೇಶಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದನೆನ್ನಲು ಆಧಾರಗಳಿವೆ. ಆದರೆ 757ರಲ್ಲಿ ದಂತಿದುರ್ಗನ ಚಿಕ್ಕಪ್ಪನಾದ ಒಂದನೆಯ ಕೃಷ್ಣ ಕೀರ್ತಿವರ್ಮನನ್ನು ಇನ್ನೊಮ್ಮೆ ಎದುರಿಸಿ ಸೋಲಿಸಿದ. ಈ ಸೋಲಿನೊಡನೆ ಚಳುಕ್ಯ ಸಾಮ್ರಾಜ್ಯ ಅಸ್ತಂಗತವಾಯಿತು. ಈ ಕದನದಲ್ಲಿ ಕೀರ್ತಿವರ್ಮ ಮಡಿದಿರಬಹುದು. ರಾಜ್ಯದ ಸೈನ್ಯದ ಬಲಹೀನತೆ, ಬಹಶಃ ರಾಜನ ಅದಕ್ಷತೆ ಈ ಸೋಲಿಗೆ ಪ್ರಮುಖ ಕಾರಣಗಳು. ಈತನಿಗಿಂತ ಹೆಚ್ಚು ಚತುರನೂ ಬಲಶಾಲಿಯೂ ಆದ ದಂತಿದುರ್ಗ ಕೊಟ್ಟ ಪೆಟ್ಟು ತೀವ್ರವಾಗಿತ್ತು. ಅಲ್ಲದೆ ನವಸಾರಿಯ ಚಳುಕ್ಯರು ಸಹ ಆ ವೇಳೆಗೆ ಇಲ್ಲದಿದ್ದುದರಿಂದ ಅವರಿಂದ ಲಭಿಸುತ್ತಿದ್ದ ಸಹಾಯಕ್ಕೆ ಚ್ಯುತಿ ಬಂದಿದ್ದೂ ಈ ಸೋಲಿಗೆ ಕಾರಣವಾಗಿರಬೇಕು. (ಬಿ.ಆರ್.ಜಿ.)

**ಕೀಲುಕುದುರೆ :** ಒಂದು ಬಗೆಯ ಜನಪದ ನೃತ್ಯ ಸಾಧನ. ಎಲ್ಲ ದ್ರಾವಿಡ ಭಾಷಾಪ್ರದೇಶಗಳಲ್ಲೂ ಕೀಲುಕುದುರೆಯ ಕುಣಿತ ಹಿಂದಿನಿಂದ ಜನಪ್ರಿಯವಾಗಿದೆ. ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ಬರುವ ಕೀಲು ಕುದುರೆಯ ಸನ್ನಿವೇಶವನ್ನು ಇಲ್ಲಿ ನೆನೆಯಬಹುದು. ರಾಜಕುಮಾರ ತಾನು ಪ್ರೀತಿಸಿದ ಪ್ರಿಯತಮೆಯನ್ನು ಸಂದರ್ಶಿಸುವ ಸನ್ನಿವೇಶಗಳಲ್ಲಿ ಇಲ್ಲವೆ ಆಕೆಯನ್ನು ಅಪಹರಿಸಿಕೊಂಡು ಹೋಗುವಲ್ಲಿ ಕೀಲುಕುದುರೆಯನ್ನು ಬಳಸುವ ಕಲ್ಪನೆ ರಮ್ಯವಾದುದು. ಏಳು ಉಪ್ಪರಿಗೆ ಅರಮನೆಯ ಮೇಲೆ ಸುರಕ್ಷಿತಳಾಗಿರುವ ರಾಜಕುಮಾರಿಯನ್ನು ಆಕೆಯ ಪ್ರಿಯತಮ ಅಂತರಿಕ್ಷ ಮಾರ್ಗವಾಗಿ ಗುಟ್ಟಾಗಿ ಆಕೆಯ ಸಾಮೀಪ್ಯವನ್ನು ಸೇರಲು ಕೀಲುಕುದುರೆಯನ್ನು ಉಪಯೋಗಿಸುತ್ತಾನೆ. ಇಂಥ ಅನೇಕ ಸನ್ನಿವೇಶಗಳಲ್ಲಿ ಈ ಕೀಲುಕುದುರೆ ಮಾಯಾ ಜಗತ್ತಿನ ಕಾಲ್ಪನಿಕ ಪಾತ್ರವಾಗಿ ಬಹಳ ಸುಂದರವಾಗಿ ಬೆಳೆದು ಬಂದಿದೆ. ಜನಪದ ಕಲಾರಂಗದಲ್ಲಿ ಕೀಲುಕುದುರೆಯನ್ನು ನೃತ್ಯಕ್ಕೆ ಅಳವಡಿಸಿಕೊಳ್ಳಲಾಗಿದೆ. ಕೀಲುಗಳಿಂದ ಜೋಡಿಸಲ್ಪಟ್ಟ ಈ ಕುದುರೆಯ ರಚನೆಯೂ ಒಂದು ಅಪೂರ್ವ ಜನಪದಕಲೆ. ಶಿಲ್ಪ ಮತ್ತು ಚಿತ್ರಗಳ ಸಾಮರಸ್ಯವನ್ನು ಇಲ್ಲಿ ಕಾಣಬಹುದು. ಕೀಲುಕುದುರೆಯ ಹೊಟ್ಟೆಯ ಭಾಗವನ್ನು, ಕಾಲುಗಳನ್ನು ಬಿಟ್ಟು ಉಳಿದ ದೇಹಭಾಗವನ್ನು, ಅಂದರೆ ಎದೆ ಮತ್ತು ಹಿಂಭಾಗವನ್ನು ಕುದುರೆಯ ಆಕಾರದಂತೆ ಬಿದುರಿನ ತೆಳುವಾದ ದಬ್ಬೆಗಳಿಂದ ಹೆಣೆದು ರಚಿಸಿಕೊಳ್ಳುತ್ತಾರೆ. ಮೇದರ ವಂಶಪಾರಂಪರ್ಯವಾದ ಕಲೆ ಇದು. ತಲೆ ಮತ್ತು ಕತ್ತನ್ನು ಮಾತ್ರ ಆಯಾ ಪ್ರದೇಶದ ಗ್ರಾಮಕಲಾವಿದರು ರಚಿಸಿಕೊಡುತ್ತಾರೆ. ಅಕ್ಕಸಾಲಿ, ರಂಗಾರೆಯವ ಇಲ್ಲವೆ ಚಿತ್ರಗಾರ ಕುದುರೆಯ ತಲೆಭಾಗವನ್ನು ರೂಪಿಸಿಕೊಡುತ್ತಾನೆ. ಟೊಳ್ಳಾದ ಕತ್ತನ್ನುಳ್ಳ ಕುದುರೆಯ ತಲೆಯನ್ನು ಕಾಗದದ ಹಿಟ್ಟಿನಿಂದ ರಚಿಸಲಾಗುತ್ತದೆ. ಅನಂತರ ಅದಕ್ಕೆ ಸ್ವಾಭಾವಿಕ ಬಣ್ಣ ಹಚ್ಚಲಾಗುತ್ತದೆ. ಕೀಲನ್ನು ಅಳವಡಿಸಿರುತ್ತಾರಾಗಿ ಕುಣಿವಾಗ ಕುದರೆಯ ನಾಲಗೆ ಮೇಲೆ ಕೆಳಗೆ ಆಡುತ್ತದೆ. ತಲೆಯನ್ನು ಬಿದುರಿನ ಮುಂಡಕ್ಕೆ ಸೇರಿಸಿ ಬಿಗಿಯುತ್ತಾರೆ.

ರಾಜ-ರಾಣಿ ನೃತ್ಯ

ಕೀಲುಕುದುರೆಯನ್ನು ನಡೆಸುವ ವ್ಯಕ್ತಿ ರಾಜನಂತೆ ವೇಷ ಭೂಷಣಗಳನ್ನು ಧರಿಸಿಕೊಂಡು ತನ್ನ ಎರಡು ಕಾಲುಗಳಿಗೂ ಒಂದೊಂದು ಪುಟ್ಟನೆಯ ಮರಗಾಲುಗಳನ್ನು ಕಟ್ಟಿಕೊಂಡಿರುತ್ತಾನೆ. ಸಾಮಾನ್ಯವಾಗಿ ಇವು ಎರಡು ಅಡಿ ಉದ್ದವೂ ಹಗುರವೂ ಆದ ಮರದ ರಚನೆ. ಪಾದಗಳು ಕೂರಲು ಅನುಗುಣವಾಗಿ ಇರುವ ಈ ಮರಗಾಲುಗಳ ಮೇಲುಭಾಗವನ್ನು ಕಾಲುಗಳಿಗೆ ನುಣುಪಾದ ನೂಲಿನಿಂದ ಬಿಗಿದಿರುತ್ತಾರೆ. ಸವಾರ ಕುದುರೆಯ ಹೊಟ್ಟೆಯಲ್ಲಿರುವ ರಂಧ್ರದಿಂದ ತೂರಿ ನಿಲ್ಲುತ್ತಾನೆ. ಕುದುರೆಗೆ ಹೊದಿಸುವ ಗೌನು ಬಣ್ಣ ಬಣ್ಣದ್ದಾಗಿದ್ದು ಅದರ ದೇಹವನ್ನೂ ಸವಾರನ ಮರಗಾಲುಗಳನ್ನೂ ಮುಚ್ಚುವಷ್ಟು ಉದ್ದನಾಗಿರುತ್ತದೆ. ಹೀಗೆ ಕುದರೆಯ ಬೆನ್ನಿನ ನಡುವೆ ಸೇರಿ ನಿಂತಿರುವ ಸವಾರ ತನ್ನ ಎರಡು ಹೆಗಲುಗಳಿಗೆ ಆ ದಬ್ಬೆಯ ಕುದುರೆಯ ದೇಹವನ್ನು ಬಿಗಿದುಕೊಳ್ಳುತ್ತಾನೆ. ನೃತ್ಯಮಾಡುವಾಗ ಕುದುರೆಯ ಲಗಾಮುಗಳನ್ನು ಕೈಲಿ ಹಿಡಿದು ಅದರ ತಲೆಬಾಲಗಳನ್ನು ಹಿಂದು ಮುಂದು ಮಾಡಿ ಸಹಜಭಂಗಿಯಲ್ಲಿ ನೃತ್ಯ ಮಾಡುತ್ತಾನೆ. ಸವಾರನ ಕಾಲಿನ ಮತ್ತು ಕೈಗಳ ಒನಪು ವೈಯಾರಗಳಿಂದ, ಚಾಕಚಕ್ಯತೆಗಳಿಂದ ಆತ ಕುಳಿತಿರುವುದು ಜೀವಂತ ಕುದುರೆ ಎಂಬಂತೆ ಭಾಸವಾಗುತ್ತದೆ.

ಕೀಲುಕುದುರೆಯ ನೃತ್ಯ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳ ಮುಂತಾದ ನೆರೆಪ್ರಾಂತ್ಯಗಳಲ್ಲಿ ಉಳಿದು ಬಂದಿದೆ. ದೇವರ ಉತ್ಸವಗಳಲ್ಲಿ, ಇಲ್ಲವೆ ಮದುವೆಯ ಮೆರವಣಿಗೆಗಳಲ್ಲಿ ಅಥವಾ ವಿಶೇಷ

ಉತ್ಸವಗಳಲ್ಲಿ ಈ ನೃತ್ಯದವರನ್ನು ಕರೆಸುವ ರೂಢಿ ಇದೆ. ನೃತ್ಯದಲ್ಲಿ ಸಾಮಾನ್ಯವಾಗಿ ರಾಜ ರಾಣಿಯರಿಗೆಂದು ಎರಡು ಕುದುರೆಗಳಿರುತ್ತವೆ. ವಾದ್ಯಮೇಳದೊಂದಿಗೆ ನಡೆಯುವ ಕೀಲುಕುದುರೆ ನೃತ್ಯ ಬಹು ಆಕರ್ಷಕವಾಗಿರುತ್ತದೆ. *

**ಕುಂಡಲಗಿರಿಯಾಚಾರ್ಯ :** ಸು.1865-1904. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅಪ್ರತಿಮ ಪಂಡಿತರು. ಬ್ರಹ್ಮವೆಂಕಟಾಚಾರ್ಯರ ಮಕ್ಕಳು. ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಕಳಲೆ ಗ್ರಾಮದಲ್ಲಿ ಜನಿಸಿದರು. ಇವರ ವಿದ್ಯಾಭ್ಯಾಸ ತಿರುಮಕೂಡಲು ಮತ್ತು ಮೈಸೂರಿನಲ್ಲಿ ನಡೆಯಿತು.

ಶ್ರವಣಬೆಳಗೊಳದ ಸಂಸ್ಕೃತ ಪಾಠಶಾಲೆಯಲ್ಲಿ, ಅನಂತರ ಬೆಂಗಳೂರು ನಗರದ ಸಂಸ್ಕೃತ ಪಾಠಶಾಲೆ ಮತ್ತು ಮೈಸೂರಿನ ನಾರ್ಮಲ್ ಸ್ಕೂಲಿನಲ್ಲಿ ಒಟ್ಟು ಹದಿನೇಳು ವರ್ಷಗಳ ಕಾಲ ಅಧ್ಯಾಪಕರಾಗಿದ್ದರು. ತಮ್ಮ ನಲವತ್ತನೆಯ ವಯಸ್ಸಿನಲ್ಲಿ ನಿಧನರಾದರು. ವಿದ್ಯಾದಾಯಿನಿ, ಕರ್ನಾಟಕ ಗ್ರಂಥಮಾಲೆ ಮೊದಲಾದ ಮಾಸಿಕ ಪತ್ರಿಕೆಗಳಿಗೆ ಇವರ ಸೇವೆ ಸಂದಿತ್ತು. ಭಟ್ಟಾಕಳಂಕನ ಕರ್ನಾಟಕ ಶಬ್ದಾನುಶಾಸನಕ್ಕೆ ಬರೆದ ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆ ಎಂಬ ಕನ್ನಡ ವ್ಯಾಖ್ಯಾನ ಇವರ ಕೃತಿಗಳಲ್ಲಿ ಮುಖ್ಯವಾದುದು. ಇದರಲ್ಲಿ ಇವರ ಅಗಾಧ ಪರಿಶ್ರಮ ಮತ್ತು ಅದ್ಭುತ ಪರಿಣತಿ ಕಂಡುಬರುತ್ತದೆ. ಹರ್ಷಚರಿತ್ರೆ, ಧರ್ಮಶರ್ಮಾಭ್ಯುದಯ, ಜೀವಂಧರ ಚರಿತ್ರೆ -ಇವು ಇವರ ಇತರ ಸಂಪಾದಿತ ಕೃತಿಗಳು. ಇವರ ಅನುಪಮ ಪಾಂಡಿತ್ಯಕ್ಕೆ ಮೆಚ್ಚಿ ಮೈಸೂರು, ಬರೋಡ ಮತ್ತು ತಿರುವಾಂಕೂರಿನ ಮಹಾರಾಜರು ಇವರನ್ನು ಸನ್ಮಾನಿಸಿದ್ದರು. (ಡಿ.ಪಿ.ಬಿ.)

**ಕುಂತಳ :** ದಕ್ಷಿಣ ಭಾರತದ ಪ್ರಾಚೀನ ಭೂಭಾಗಗಳಲ್ಲಿ ಗಣ್ಯವಾಗಿದ್ದ ಒಂದು ಪ್ರದೇಶ. ಈ ಶಬ್ದದ ಮೂಲ ನಿರ್ದಿಷ್ಟವಾಗಿ ತಿಳಿದಿಲ್ಲ. ಕರ್ನಾಟಕ ಎಂಬ ಶಬ್ದಕ್ಕೆ ದ್ರಾವಿಡ ಮೂಲದ ನಿಷ್ಪತ್ತಿಯನ್ನು ಹೇಳುವ ಹಾಗೆಯೇ ಕುಂತಳ (ಲ) ಶಬ್ದಕ್ಕೆ ಕೂಡ ಅಂಥ ಮೂಲವನ್ನು ಊಹಿಸಿ, ಅದೊಂದು ಸಂಸ್ಕೃತೀಕರಣಗೊಂಡ ರೂಪವಾಗಿರಬಹುದು ಎಂದು ಭಾವಿಸುವಂತೆ ತೋರುತ್ತದೆ. ಕೆಲವು ಪ್ರಾಚೀನ ಕನ್ನಡ ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಅಲ್ಲದೆ ಮತ್ಸ್ಯ, ಮಾರ್ಕಂಡೇಯ, ಬ್ರಹ್ಮಾಂಡ, ಪದ್ಮ ಈ ಕೆಲವು ಪುರಾಣಗಳಲ್ಲಿಯೂ ಇದರ ಉಲ್ಲೇಖ ಕಂಡುಬಂದಿದೆ. 930ರ ಕಳಸ ಶಾಸನದಲ್ಲಿ ಕುಂತಳ ಧರಾತಳಂ, ತದ್ವಿಷಯಕ್ಕೆ ಎರಡಱನೂ ಱುಲಲಾಮಂ ಎಂದಿದೆ. ಈ ಹೆಸರು ಮತ್ತು ಪ್ರಾದೇಶಿಕ ಪ್ರಾಮುಖ್ಯ ಇತರ ಕೆಲವು ಶಾಸನಗಳಲ್ಲಿ ಕಂಡುಬಂದಿದೆ. ಅನುಪಮರವನಿಪರನ್ಯಾವನಿಪ ಶ್ರೀ ಕುಂತಳಕ್ಕೆ ಕೈನೀಡಿ ನಿಜಾವನಿಗೆ ತೆಗೆಯಲ್ಲದೀಯಾವನಿ ಕುಂತಳ ವಿಷಯುವೆನಿಸಿ ಪೆಸರ್ವೆತ್ತೆಸೆಗುಂ (ಕಾಲ 1058), ಜಳಧಿ ವ್ಯಾವೇಷ್ಟ ತೋರ್ವಿಮಹಿಳೆಗೆ ವಿಳಸಲ್ಲೋಳಭಾಳ ಸ್ಥಳೀ ಕುಂತಳ ದೇಶಂ ತಾನೆನಿಪ್ಪಂತಿರಲೆಸೆವ ಲಸತ್ಕುಂತಳಕ್ಷೋಣಿಗೆ (1116), ವರರತ್ನಾ ಕರದಿಂದಳಂಕರಿಸಿ ಮೆಯ್ಬೆರ್ಚಿರ್ದ ಭೂದೇವಿಗಾದರದಿಂ ಕುಂತಳದಂತೆ ಕುಂತಳ ಸುದೇಶಂ ತೋರ್ಕುಂ (1145), ಭರತಮಹೀಕಾನ್ತೆಯ ಕುಂತಳದಂತೆಸೆವುತಿರ್ದ ಕುಂತಳದೇಶದ (1176), ದೇಸಂಗಳೊಳಗೆ ಕುಂತಳ ದೇಶಮೆ ಮಿಗಿಲ್ (1079)- ಎಂದು ಮುಂತಾದ ವರ್ಣನ ಭಾಗಗಳಲ್ಲಿ ಸೇರಿಕೊಂಡು ಬಂದಿದೆ.

ಮತ್ಸ್ಯಾಃ ಕಿರಾತಾಃ ಕುಲ್ಯಾಶ್ಚ ಕುಂತಲಾಃ ಕಾಶಿ ಕೋಸಲಾಃ ಎಂದು ಮತ್ಸ್ಯ ಪುರಾಣದಲ್ಲಿಯೂ ಮತ್ಸ್ಯಾಃ ಕುಶಲ್ಯಾಃ ಸೌಶಲ್ಯಾಃ ಕುಂತಲಾಃ ಕಾಶಿಕೋಶಲಾಃ ಎಂದು ಬ್ರಹ್ಮಾಂಡ ಪುರಾಣದಲ್ಲಿಯೂ ಝುಲ್ಲಿಕಾಃ ಕುನ್ತಲಾಶ್ಚೈವ ಸೌಹೃದಾ ನಲಕಾನನಾಃ ಎಂದು ಪದ್ಮಪುರಾಣದಲ್ಲಿಯೂ ಮತ್ಸ್ಯಾಶ್ವ ಕೂಟಾಃ ಕುಲ್ಯಾಶ್ಚ ಕುಂತಲಾಃ ಕಾಶಿ ಕೋಸಲಾಃ ಮತ್ತು ನೈಷಿಕಾಃ ಕುನ್ತಲಾ ಆನ್ಧ್ರಾಉದ್ಭಿದಾ ವನದಾರಕಾಃ ಎಂದು ಮಾರ್ಕಂಡೇಯ ಪುರಾಣದಲ್ಲಿಯೂ ಕುಂತಳ ಪ್ರದೇಶವನ್ನು ಉಲ್ಲೇಖಿಸಿದೆ. ಇತರ ಕೆಲವು ಪುರಾಣಗಳಲ್ಲಿಯೂ ಈ ಬಗೆಯ ಉಲ್ಲೇಖವಿರಬಹುದೆಂದು ತೋರುತ್ತದೆ.

ಕುಂತಳ, ಕರ್ನಾಟ, ವನವಾಸಿ, ಮಾಹಿಷಕ (ಮಹಿಷ ವಿಷಯ)ಇತ್ಯಾದಿ ಶಬ್ದಗಳು ಮೂಲತಃ ಬೇರೆ ಬೇರೆ ಭೌಗೋಳಿಕ ಘಟಕಗಳಾಗಿದ್ದೂ ಒಂದೊಂದೂ ಇನ್ನೊಂದರ ಮಗ್ಗುಲಿಗೆ ಸೇರಿಕೊಂಡಿದ್ದಿರುವುದೂ ಒಂದು ಇನ್ನೊಂದರ ಭಾಗವಾಗಿದ್ದಿರುವುದೂ ಸಂಭವನೀಯವಾಗಿದೆ. ಚಾಳುಕ್ಯ ಮತ್ತು ರಾಷ್ಟ್ರಕೂಟರ ಪ್ರಾಬಲ್ಯದ ಕಾಲದಲ್ಲಿ ಕರ್ನಾಟ ಮತ್ತು ಕುಂತಳಗಳು ಪಶ್ಚಿಮ ಮತ್ತು ದಕ್ಷಿಣ ದಖನ್ನಿನ ಬಹುಭಾಗಕ್ಕೆ ವ್ಯಾಪಿಸಿದ್ದುವು. ಕಲಿಂಗತ್ತುಪ್ಪರಣಿಯಲ್ಲಿ ಚಾಳುಕ್ಯರು ಕುಂತಲರ್ ಎಂದು ವರ್ಣಿಸಲ್ಪಟ್ಟಿದ್ದಾರೆ. ಬಾದಾಮಿ ಚಳುಕ್ಯರ ಕಾಲದಲ್ಲಿ ಕನ್ನಡ ಸೀಮೆ ಕರ್ಣಾಟ, ಕುಂತಲ, ಲಾಟ, ಕರಹಾಟ, ವನವಾಸ ಎಂದು ಬೇರೆ ಬೇರೆ ವಿಷಯಗಳಾಗಿ ವಿಭಜನೆಗೊಂಡಿದ್ದ ಪ್ರದೇಶ ಕರ್ಣಾಟ ಎಂಬ ಒಂದು ಹೆಸರಿನ ಕೆಳಗೆ ಬಂದುದೆಂದೂ ಇದಕ್ಕೆ ಇಮ್ಮಡಿ ಪುಲಕೇಶಿಯ ಸಾಹಸೋದ್ಯಮಗಳು ಬಹುಮಟ್ಟಿಗೆ ಕಾರಣವೆಂದೂ ತಿಳಿಯುತ್ತದೆ. ಇಮ್ಮಡಿ ಹರಿಹರನ 1385ರ ಶಾಸನವೊಂದರಲ್ಲಿ ವಿಜಯನಗರ ಕರ್ನಾಟಕ ಸೀಮೆಯ ಕುಂತಳ ವಿಷಯಕ್ಕೆ ಸೇರಿದ್ದೆಂದು ಹೇಳಿದೆ.

ಕುಂತಳ - ಕರ್ನಾಟಕಗಳನ್ನು ಪರ್ಯಾಯಪದಗಳಾಗಿ ಬಳಸಿರುವುದು ಬಿಲ್ಹಣನ ವಿಕ್ರಮಾಂಕದೇವಚರಿತದಲ್ಲಿ ಕಾಣುತ್ತದೆ. ಇಲ್ಲಿ 6ನೆಯ ವಿಕ್ರಮಾದಿತ್ಯ ಕುಂತಲೇಂದು ಎಂದೂ ಕರ್ಣಾಟೇಂದು ಎಂದೂ ಕರೆಯಲ್ಪಟ್ಟಿದ್ದಾನೆ. ವೈಜಯಂತೀಪುರ (ಬನವಾಸಿ) ಕರ್ನಾಟ ದೇಶದ ತಿಲಕ ಎಂಬುದಾಗಿ ಶಾಂತಿವರ್ಮನ ಬೀರೂರು ಶಾಸನದಲ್ಲಿ ಹೇಳಿದೆ. ಆದ್ದರಿಂದ ಕುಂತಳ ಎಂಬ ಹೆಸರು ಸೂಚಿಸುತ್ತಿದ್ದ ಅಥವಾ ಕುಂತಳ ಒಂದು ಭಾಗವಾಗಿದ್ದ ನಾಡನ್ನು ಸೂಚಿಸುತ್ತಿದ್ದ ಪ್ರದೇಶವೇ ಕರ್ನಾಟ ಎಂಬುದಾಗಿ ಅಭಿಪ್ರಾಯವಿದೆ. ವಿವೇಕಚಿಂತಾಮಣಿ, ಶಿವತತ್ತ್ವರತ್ನಾಕರ, ಚೆನ್ನಬಸವಪುರಾಣ ಇತ್ಯಾದಿಗಳಲ್ಲಿರುವ ಸಾಂಪ್ರದಾಯಿಕ ದೇಶವಾಚಕ ಪಟ್ಟಿಯಲ್ಲಿ ಒಮ್ಮೊಮ್ಮೆ ಅವನ್ನು ಬೇರೆಯಾಗಿ ಹೇಳಿರುವುದೂ ಉಂಟು.

ಒಟ್ಟಿನಲ್ಲಿ ಹೇಳುವುದಾದರೆ, ಕುಂತಳ ದೇಶದ ಭೌಗೋಳಿಕ ವ್ಯಾಪ್ತಿ ಮತ್ತು ಅದರ ಗಡಿರೇಖೆಗಳು ಅಷ್ಟೇನೂ ಸ್ಪಷ್ಟವಿರಲಿಲ್ಲ. ಅಲ್ಲದೆ ಕಾಲಕಾಲಕ್ಕೆ ಅದರ ವ್ಯಾಪ್ತಿಯನ್ನು ಕುರಿತ ಕಲ್ಪನೆಯೂ ಬದಲಾಗುತ್ತಿತ್ತು ಎನಿಸುತ್ತದೆ. ಸಾತವಾಹನ ಅರಸರಲ್ಲಿ ಒಬ್ಬ ಕುಂತಲ ಸಾತಕರ್ಣಿ ಎಂದು ಪ್ರಸಿದ್ಧವಾಗಿದ್ದ. ಗೋದಾವರಿ ದಡದ ಪ್ರತಿಷ್ಠಾನ ಕುಂತಳದ ರಾಜಧಾನಿ ಎನಿಸಿತ್ತಂತೆ. ಕುಂತಲ ಗೋದಾವರಿ ನದಿ ಹರಿಯುವ ಸಹ್ಯಪರ್ವತದ ಉತ್ತರ ದಿಗ್ಭಾಗದಲ್ಲಿರುವ ಪ್ರದೇಶ ಎಂದು ಪುರಾಣಗಳಲ್ಲಿ, ಅದರಲ್ಲೂ ಮತ್ಸ್ಯ ಮತ್ತು ಬ್ರಹ್ಮಾಂಡ ಪುರಾಣಗಳಲ್ಲಿ ಹೇಳಿದೆ. 6ನೆಯ ವಿಕ್ರಮಾದಿತ್ಯನ ನೀಲಗುಂದ ತಾಮ್ರ ಶಾಸನದಲ್ಲಿ ಉಲ್ಲೇಖಗೊಂಡಿರುವ ವಿಖ್ಯಾತ ಕೃಷ್ಣವರ್ಣ್ಣೇತೈಲಸ್ನೇಹೋಪಲಬ್ಧ ಸಕಲತ್ವೇ ಕುಂತಲವಿಷಯೋ ನಿತಹಾಂ ವಿರಜತೇ ಮಲ್ಲಿಕಾಮೋದಃ ಎಂಬ ಶ್ಲೋಕವಾದರೋ ವರ್ಣಾ (ವರ್ಣಾ) ನದಿ ಸಂಗಮಿಸಿದ, ಕೃಷ್ಣಾ ನದಿಗಾಗಿ ಪ್ರಸಿದ್ಧವಾಗಿರುವ ಕುಂತಲ ವಿಷಯ ಎಂದು ತಿಳಿಸುತ್ತದೆ. ಕೆಲವು ಶಾಸನಗಳ ಪ್ರಕಾರ ಕುಂತಳ, ಬನವಾಸಿಯ ಸುತ್ತಿನಲ್ಲಿರುವ ಜಿಲ್ಲೆ. ಬೃಹತ್ಸಂಹಿತೆ ಮೊದಲಾದ ಕಡೆಗಳಲ್ಲಿ ಕುಂತಳ, ಬನವಾಸಿಗಳನ್ನು ಬೇರ್ಪಡಿಸಿ ಹೇಳಿರುವುದೂ ಉಂಟು. 10-14 ನೆಯ ಶತಮಾನಗಳ ಶಾಸನಗಳ ಆಧಾರದಿಂದ ಅಂದಿನ ಕುಂತಳ ದೇಶ ಕರ್ನಾಟಕದ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಧಾರವಾಡ, ಬೆಳಗಾಂವಿ ಮತ್ತು ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗಲಿ, ಸೊಲ್ಲಾಪುರ, ಉಸ್ಮಾನಾಬಾದ್ ಈ ಜಿಲ್ಲೆಗಳ ಪ್ರದೇಶಗಳನ್ನು ಒಳಗೊಂಡಿತ್ತು ಎಂದು ಹೇಳಬಹುದು. (ಟಿ.ವಿ.ವಿ.)

**ಕುಂದಕುಂದಾಚಾರ್ಯ :** ದಕ್ಷಿಣ ಭಾರತದಲ್ಲಿ ಜೈನಮತ ಪ್ರಸಾರ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಿದ ಪ್ರಾಚೀನ ಹಾಗೂ ಪ್ರಸಿದ್ಧ ದಿಗಂಬರ ಜೈನ ಆಚಾರ್ಯ. ಇವರ ಕಾಲ ಹಾಗೂ ಮನೆತನಗಳ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ. ಕ್ರಿ.ಪೂ.8ನೆಯ ಶತಮಾನದಿಂದ ಕ್ರಿ.ಶ.5ನೆಯ ಶತಮಾನದವರೆಗೂ ಇವರ ಕಾಲದ ಗಡಿಯಿದ್ದು, ಇತ್ತೀಚೆಗೆ ಅನೇಕ ಪ್ರಮಾಣಗಳನ್ನು ಆಧರಿಸಿ ಕ್ರಿಶ.1ನೆಯ ಶತಮಾನವೆಂದು ಸದ್ಯದಲ್ಲಿ ನಿರ್ಧರಿಸಲಾಗಿದ್ದು ಇದೇ ಹೆಚ್ಚು ಮಾನ್ಯತೆ ಪಡೆದ ಅಭಿಪ್ರಾಯವಾಗಿದೆ. ಪುಣ್ಯಾಶ್ರವ ಕಥೆಯ ಆಧಾರದ ಮೇಲೆ ಇವರ ತಂದೆ ಕರ್ಣಮುಂಡ, ತಾಯಿ ಶ್ರೀಮತಿ ಎಂದೂ ತಂದೆ ಕುಂದಶ್ರೇಷ್ಠ, ತಾಯಿ ಕುಂದಲತಾ

ಎಂದೂ ಎರಡು ಅಭಿಪ್ರಾಯಗಳಿವೆ. ಇವರ ಗುರು ಜಿನಚಂದ್ರರೆಂದೂ ಕುಮಾರನಂದಿಸಿದ್ಧಾಂತದೇವ ಎಂದೂ ವಿಭಿನ್ನ ಅಭಿಪ್ರಾಯಗಳಿವೆ. ತಾವು ಭದ್ರಬಾಹುವಿನ ಶಿಷ್ಯರೆಂದು ಬೋಧಪಾಹುಡದ ಕೊನೆಯಲ್ಲಿ ಕುಂದಕುಂದಾಚಾರ್ಯರೇ ಹೇಳಿಕೊಂಡಿದ್ದಾರೆ. ಭದ್ರಬಾಹು ನೇರವಾಗಿ ಇವರ ಗುರುವಾಗಿರದಿದ್ದರೂ ಪರಂಪರೆಯಿಂದ ಗುರುವಾಗಿರಬಹುದು ಎಂದು ಅಭಿಪ್ರಾಯಪಡಲಾಗಿದೆ.

ಕುಂದಕುಂದಾಚಾರ್ಯರ ಪೂರ್ವಾಶ್ರಮದ ಹೆಸರು ಪದ್ಮನಂದಿ. ಇವರಿಗೆ ಏಲಾಚಾರ್ಯ, ಗೃಧ್ರಪಿಚ್ಛ, ವಕ್ರಗ್ರೀವ ಎಂಬ ಹೆಸರುಗಳೂ ಇವೆ. ಶಿಲಾಲೇಖಗಳಲ್ಲಿ ಇವರ ಹೆಸರು ಕೊಂಡಕುಂದ ಎಂದಿದೆ. ಆಂಧ್ರದ ಅನಂತಪುರ ಜಿಲ್ಲೆಯ ಗುತ್ತಿ ತಾಲ್ಲೂಕಿನ ಕೊನಕೊಂಡ್ಲ ಇವರ ಮೂಲಸ್ಥಳ. ಈ ಸ್ಥಳ ಮೊದಲಿಗೆ ಕೊಂಡ ಕುಂದ ಅಥವಾ ಕೊಂಡಕುಂದ ಎಂಬ ಅಚ್ಚಗನ್ನಡ ಹೆಸರಿನಿಂದ ಪ್ರಸಿದ್ಧವಾಗಿತ್ತು.

ಕುಂದಕುಂದಾಚಾರ್ಯರ ಹೆಸರಿನಲ್ಲಿ 84 ಗ್ರಂಥಗಳು ಪ್ರಸಿದ್ಧವಿವೆ. ಇವುಗಳ ಭಾಷೆ ಪ್ರಾಕೃತ. ಷಟ್ ಖಂಡಾಗಮ ಟೀಕೆ, ಮೂಲಾಚಾರ, ಭಕ್ತಿಗಳಿಗೆ ಸಂಬಂಧಪಟ್ಟ ಹತ್ತು ಗ್ರಂಥಗಳು (ಇವುಗಳಲ್ಲಿ ತೀರ್ಥಂಕರ ಭಕ್ತಿ ದಿಗಂಬರ ಶ್ವೇತಾಂಬರ ಸಂಪ್ರದಾಯಗಳಲ್ಲಿ ಕಾಣುತ್ತದೆ, ದಂಸನಪಾಹುಡ (ಸಮ್ಯಕ್ ದರ್ಶನ), ಚಾರಿತ್ರಪಾಹುಡ (ಸಚ್ಚಾರಿತ್ರ್ಯ), ಬೋಧಪಾಹುಡ, ಭಾವಪಾಹುಡ (ಭಾವಶುದ್ಧಿ), ಮೋಖ್ಖಪಾಹುಡ (ಮೋಕ್ಷ), ಲಿಂಗಪಾಹುಡ (ಭಾವಲಿಂಗ), ಶೀಲಪಾಹುಡ -ಈ ಎಂಟು ಪಾಹುಡಗಳು, ಸಂನ್ಯಾಸಿಗಳ ಮತ್ತು ಗೃಹಸ್ಥರ ಜೀವನ ನಿಯಮಗಳನ್ನು ಕುರಿತು ಬರೆದಿರುವ ರಯಣಸಾರ, ಕರ್ಮವನ್ನು ತಡೆಯುವುದಕ್ಕೆ ಅಗತ್ಯವಾದ ಹನ್ನೆರಡು ಅನುಪ್ರೇಕ್ಷೆಗಳನ್ನು ಕುರಿತ ಬಾರಸ ಅಣುವೇಖ್ಖಾ (ಇದರಲ್ಲಿ 91 ಗಾಥಾಗಳಿವೆ), ತ್ರಿರತ್ನಗಳನ್ನು ಕುರಿತ ನಿಯಮಸಾರ - ಇವು ಎಂಬತ್ತ ನಾಲ್ಕರಲ್ಲಿ ಕೆಲವು. ಇವೆಲ್ಲದರ ಕರ್ತೃ ಕುಂದಕುಂದಾಚಾರ್ಯರೇ ಎಂಬ ವಿಚಾರದಲ್ಲಿ ಸಂಶಯಕ್ಕೆ ಅವಕಾಶವಿದೆ.

ಆದರೆ ಪಂಚಾಸ್ತಿಕಾಯಸಾರ, ಸಮಯಸಾರ, ಪ್ರವಚನಸಾರ - ಈ ಮೂರು ಗ್ರಂಥಗಳು ಕುಂದಕುಂದಾಚಾರ್ಯಕೃತವೆಂಬುದರಲ್ಲಿ ಅನುಮಾನವಿಲ್ಲ. ಪಂಚಾಸ್ತಿಕಾಯಸಾರ ಜೀವ, ಅಜೀವ, ಧರ್ಮ, ಅಧರ್ಮ ಮುಂತಾದ ಜೈನತತ್ತ್ವಗಳಿಗೆ ಸಂಬಂಧಪಟ್ಟದ್ದು. ಸಮಯಸಾರ, ಸ್ವಸಮಯ ಪರಸಮಯಗಳನ್ನು ಮತ್ತು ಆತ್ಮದ ಮೋಕ್ಷವನ್ನು ವಿಚಾರ ಮಾಡುವ ಗ್ರಂಥ. ಈ ಗ್ರಂಥ ಸಂಸಾರವನ್ನು ನಾಟಕಕ್ಕೆ ಹೋಲಿಸುತ್ತದೆ. ಗ್ರಂಥದ ಭಾಗಗಳನ್ನು ನಾಟಕದಂತೆ ಪೂರ್ವರಂಗ, ಅಂಕ ಮುಂತಾಗಿ ವಿಂಗಡಿಸಲಾಗಿದೆ. ಇದನ್ನು ಶ್ವೇತಾಂಬರ ದಿಗಂಬರ ಸ್ಥಾವರವಾಸಿಗಳು ತಮ್ಮಲ್ಲಿನ ಭೇದಭಾವವನ್ನು ತೊರೆದು ಆದರದಿಂದ ಅಧ್ಯಯನ ಮಾಡುತ್ತಾರೆ. ವೈದಿಕರು ಉಪನಿಷತ್ತುಗಳನ್ನೂ ಭಗವದ್ಗೀತೆಯನ್ನೂ ಬ್ರಹ್ಮಸೂತ್ರವನ್ನೂ ಪ್ರಸ್ಥಾನತ್ರಯವೆಂದು ಗಣಿಸಿರುವಂತೆ ಜೈನರು ಈ ಮೂರು ಗ್ರಂಥಗಳನ್ನು ನಾಟಕತ್ರಯವೆಂದೂ ಪ್ರಾಭೃತತ್ರಯವೆಂದೂ ಪರಿಗಣಿಸಿದ್ದಾರೆ.

ತಮಿಳರಿಗೆ ಅತ್ಯಂತ ಮೆಚ್ಚಿಕೆಯಾದ ಕುಱುಳ್ ಗ್ರಂಥವನ್ನು ಏಲಾಚಾರ್ಯ ಕುಂದಕುಂದ ರಚಿಸಿ ತಿರುವಳ್ಳುವರ್‌ಗೆ ಕೊಟ್ಟರೆಂದು ಜೈನ ಸಂಪ್ರದಾಯದ ಪ್ರಕಾರ ಹೇಳಲಾಗಿದೆ. *

**ಕುಂದಗೋಳ :** ಧಾರವಾಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯ ಸ್ಥಳ. ಹುಬ್ಬಳ್ಳಿ ತಾಲ್ಲೂಕಿನ ಆಗ್ನೇಯಕ್ಕಿದೆ. ಹುಬ್ಬಳ್ಳಿ, ನವಲಗುಂದ, ಗದಗ ಜಿಲ್ಲೆಯ ಶಿರಹಟ್ಟಿ, ಹಾವೇರಿ ಜಿಲ್ಲೆಯ ಸವಣೂರು, ಶಿಗ್ಗಾಂವಿ ಮತ್ತು ಕುಂದಗೋಳ ಈ ತಾಲ್ಲೂಕುಗಳು ಸುತ್ತುವರಿದಿವೆ. ತಾಲ್ಲೂಕಿನಲ್ಲಿ ಒಂದು ಪಟ್ಟಣ ಮತ್ತು 56 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 648.6ಚಕಿಮೀ. ಜನಸಂಖ್ಯೆ 1,57,039. 1948ರಲ್ಲಿ ಇದು ಧಾರವಾಡ ಜಿಲ್ಲೆಯಲ್ಲಿ ಸಮಾವೇಶವಾಗುವ ಮೊದಲು ಜಮಖಂಡಿ ಸಂಸ್ಥಾನದ ಆಡಳಿತದಲ್ಲಿತ್ತು.

ತಾಲ್ಲೂಕಿನ ಬಹುಭಾಗದಲ್ಲಿ ಹರಡಿರುವ ಕಪ್ಪುಮಿಶ್ರಿತ ಮಣ್ಣು ತುಂಬ ಫಲವತ್ತಾಗಿದೆ. ವಾರ್ಷಿಕ ಸರಾಸರಿ ಮಳೆ 765ಮಿಮೀ. ತಾಲ್ಲೂಕಿನಲ್ಲಿ ದೊಡ್ಡ ನದಿಗಳಾವುವೂ ಇಲ್ಲ. ಭೂಮಿ ಸುಮಾರು ಉತ್ತರಕ್ಕೆ ಇಳಿಜಾರಾಗಿದ್ದು ಕೆಲವು ಹಳ್ಳಗಳು ಮಾತ್ರ ಹರಿಯುತ್ತವೆ. ಹತ್ತಿ ಮತ್ತು ಜೋಳ ಇಲ್ಲಿಯ ಮುಖ್ಯ ಬೆಳೆಗಳು. ಹುಬ್ಬಳ್ಳಿ - ಬೆಂಗಳೂರು ರೈಲು ಹಾದಿ ತಾಲ್ಲೂಕಿನ ಮಧ್ಯದಲ್ಲಿ ವಾಯವ್ಯಾಗ್ನೇಯವಾಗಿ ಸಾಗುತ್ತದೆ. ಮೂರು ನಿಲ್ದಾಣಗಳಿವೆ. ತಾಲ್ಲೂಕಿನ ಪಶ್ಚಿಮದ ಅಂಚಿನ ಭಾಗದಲ್ಲಿ ಹುಬ್ಬಳ್ಳಿ-ಬೆಂಗಳೂರು ಹೆದ್ದಾರಿ ಸ್ವಲ್ಪ ದೂರದವರೆಗೆ ಹಾಯುತ್ತದೆ. ಹುಬ್ಬಳ್ಳಿ-ಕುಂದಗೋಳ - ಲಕ್ಷ್ಮೇಶ್ವರ ಹಾದಿ ತಾಲ್ಲೂಕಿನ ಮುಖ್ಯ ಹಾದಿಗಳಲ್ಲೊಂದು. ಇಲ್ಲಿ ದೊಡ್ಡ ಕೈಗಾರಿಕೆ ಯಾವುದೂ ಇಲ್ಲ. ಹತ್ತಿ ಎಕ್ಕುವ ಒಂದು ಕಾರ್ಖಾನೆಯಿದೆ. ಕೃಷಿ ಮುಖ್ಯ ಕಸುಬು.

ತಾಲ್ಲೂಕಿನ ಮುಖ್ಯ ಸ್ಥಳವಾದ ಕುಂದಗೋಳ ಇತಿಹಾಸ ಪ್ರಸಿದ್ಧ. ಇದು ಮೊದಲು ಬ್ರಹ್ಮಪುರವಾಗಿದ್ದಿರಬೇಕೆಂದು ಸ್ಥಳಪುರಾಣದಿಂದ ವ್ಯಕ್ತವಾಗುತ್ತದೆ. ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಸು.19ಕಿಮೀ ದೂರದಲ್ಲಿರುವ ಈ ಪಟ್ಟಣ ಹುಬ್ಬಳ್ಳಿ-ಬೆಂಗಳೂರು ಮುಖ್ಯ ರೈಲುಮಾರ್ಗದಲ್ಲಿದೆ. ಪಟ್ಟಣದ ಜನಸಂಖ್ಯೆ 16,837. ಇಲ್ಲಿಯ ಪುರಸಭೆ ಹಳೆಯದು. 1877ರಲ್ಲಿ ಸ್ಥಾಪಿತವಾಯಿತು. ಇಲ್ಲಿಯ ಶಂಭುಲಿಂಗದೇವಾಲಯ ಪ್ರಸಿದ್ಧ. ಇದು ಬಂಕಾಪುರ ಕೋಟೆಯಲ್ಲಿರುವ 60 ಕಂಬಗಳ ದೇವಾಲಯದ ಮಾದರಿಯಲ್ಲಿದೆ. ಚಾಳುಕ್ಯ ಶೈಲಿಯಲ್ಲಿ ನಿರ್ಮಿತವಾದ ಈ ದೇವಾಲಯದ ಮೂಲಗುಡಿಯ ಸಭಾಮಂಟಪ ಮತ್ತು ಗರ್ಭಗುಡಿಗಳು ಮಾತ್ರ ಉಳಿದಿವೆ. ಸಭಾಮಂಟಪದ ಛತ್ತಿನಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಹೊರ ಬದಿಯಲ್ಲಿ ಕೀರ್ತಿಮುಖಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗವೂ ಮುಂಭಾಗದ ಕೋಣೆಯ ಎಡಬಲಗಳಲ್ಲಿ ಪಾರ್ವತಿ ವಿಘ್ನೇಶ್ವರ ವಿಗ್ರಹಗಳೂ ಇವೆ. ದ್ವಾರದ ಮೇಲ್ಭಾಗದಲ್ಲಿ ರಾಮ ಲಕ್ಷ್ಮಣ ಸೀತೆಯರ ಮೂರ್ತಿಗಳನ್ನು ಕೆತ್ತಲಾಗಿದೆ. ದೇವಾಲಯದ ಕೆಳಭಾಗ ಜೀರ್ಣೋದ್ಧಾರವಾಗಿದೆ. ಬ್ರಹ್ಮದೇವರ ಗುಡಿ, ದತ್ತಾತ್ರೇಯ ಗುಡಿ, ಶಂಕರಾಚಾರ್ಯರ ಗುಡಿ ಹಾಗೂ ಮಲ್ಲಿಕಾರ್ಜುನ ಗುಡಿಗಳು ಇಲ್ಲಿಯ ಇತರ ದೇವಾಲಯಗಳು. ಇಲ್ಲಿ ಹನ್ನೊಂದು ಶಿಲಾಶಾಸನಗಳಿವೆ. 1040ರದು ಅತಿ ಹಳೆಯದು. ಈ ಶಿಲಾಶಾಸನಗಳು ಚಾಳುಕ್ಯ, ಕಳಚುರಿ ಮತ್ತು ವಿಜಯನಗರ ಕಾಲಗಳಿಗೆ ಸೇರಿದವು.

ಕುಂದಗೋಳ ಭಾರತದ ಸಂಗೀತ ನಕ್ಷೆಯಲ್ಲಿ ತನ್ನ ಹೆಸರನ್ನು ಛಾಪಿಸಿದೆ. ಸವಾಯಿಗಂಧರ್ವರು ಇಲ್ಲಿದ್ದಾಗ ಅವರು ಭೀಮಸೇನ ಜೋಶಿ ಮತ್ತು ಗಂಗೂಬಾಯಿ ಹಾನಗಲ್ಲರಂಥ ಅಖಿಲ ಭಾರತ ಖ್ಯಾತಿಯ ಶಿಷ್ಯರನ್ನು ತಯಾರಿಸಿದರು. ಸವಾಯಿ ಗಂಧರ್ವರ ಸಂಗೀತದಿಂದಾಗಿ ಕುಂದಗೋಳ ಪಟ್ಟಣ ಸಂಗೀತದ ನೆಲೆವೀಡಾಗಿ ಪರಿಣಮಿಸಿತು. ಇಲ್ಲಿಯ ನಾನಾಸಾಹೇಬ ನಾಡಗಿರರು ಅವರ ಶಿಷ್ಯರಲ್ಲೊಬ್ಬರು. ಗುರುಗಳ ಪುಣ್ಯತಿಥಿಯಂದು ಕುಂದಗೋಳದಲ್ಲಿ ಸಂಗೀತ ಸಮಾರೋಹ ಜರುಗುತ್ತದೆ. ಭಾರತದ ನಾನಾ ಮೂಲೆಗಳಿಂದ ಬರುವ ಸಂಗೀತಗಾರರ ಕಾರ್ಯಕ್ರಮಗಳಿಂದ ಕೂಡಿದ ಈ ಸಂಗೀತಾರಾಧನೆ ಸಂಗೀತದ ರಸದೌತಣವಾಗಿ ಪರಿಣಮಿಸಿದೆ. (ಎಸ್.ವಿ.ಪಿ.)

**ಕುಂದಣಗಾರ, ಕೆ.ಜಿ :** 1895-1965. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಅಭಿವೃದ್ಧಿಗಾಗಿ ಶ್ರಮಿಸಿದ ವಿದ್ವಾಂಸರು. ಇವರ ಪೂರ್ಣ ಹೆಸರು ಕಲ್ಲಪ್ಪ ಗಿರಿಯಪ್ಪ ಕುಂದಣಗಾರ. ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಕೌಜಲಗಿಯಲ್ಲಿ ಅಕ್ಕಸಾಲಿಗ ಮನೆತನವೊಂದರಲ್ಲಿ ಜನಿಸಿದರು. ಇವರದು ಬಡ ಕುಟುಂಬವಾದ್ದರಿಂದ ಚಿಕ್ಕಂದಿನಿಂದಲೇ ಸ್ವಾವಲಂಬಿಯಾಗಿ ಬಾಳಬೇಕಾಯಿತು. ಪ್ರಾಥಮಿಕ ಶಿಕ್ಷಣವನ್ನು ಕೌಜಲಗಿಯಲ್ಲಿ ಮುಗಿಸಿ, ಪ್ರೌಢಶಿಕ್ಷಣಕ್ಕಾಗಿ ಬೆಳಗಾಂವಿಗೆ ಹೋದರು. ಅಲ್ಲಿ ಒಬ್ಬ ಸರಾಫನ ಅಂಗಡಿಯಲ್ಲಿ ಲೆಕ್ಕ ಬರೆದು ಬಂದ ಹಣದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಅನಂತರ ಧಾರವಾಡದಲ್ಲಿ ವಿಕ್ಟೋರಿಯ ಹೈಸ್ಕೂಲಿನಲ್ಲಿ ವ್ಯಾಸಂಗಮಾಡಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಜೀವನದ ದುರ್ಭರ ಸನ್ನಿವೇಶಗಳಿಗೆ ಸಿಕ್ಕಿದ ಇವರು 1919ರಲ್ಲಿ ಬಿ.ಎ. ಪದವಿ ಪಡೆದು ಗೋಕಾಕದ ವಿ.ವಿ. ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯಲು ನಿರ್ಧರಿಸಿ, ಹಳಗನ್ನಡ ಕಾವ್ಯಗಳ ವ್ಯಾಸಂಗ ಹಾಗೂ ಸಂಸ್ಕೃತ ಭಾಷೆಯ ಅಭ್ಯಾಸಕ್ಕೆ ತೊಡಗಿದರು. ಬಿಡುವಿನ ವೇಳೆಯಲ್ಲಿ ಶಾಸನಗಳ ಪರಿಚಯಕ್ಕೂ ಪ್ರಯತ್ನಿಸಿದರು. ಪ್ರಾಚೀನ

ಅವಶೇಷಗಳ ಅಧ್ಯಯನದ ಕಡೆಗೂ ಒಲವನ್ನು ಬೆಳೆಸಿಕೊಂಡರು. ಎಂ.ಎ. ಪದವಿ ಪಡೆದ ಅನಂತರ ಇವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಅಧ್ಯಾಪಕರಾಗಿದ್ದರು (1925-27). ಅನಂತರ ಕೊಲ್ಹಾಪುರದ ರಾಜಾರಾಮ್ ಕಾಲೇಜನ್ನು ಸೇರಿ, ಕನ್ನಡ ಪ್ರಾಧ್ಯಾಪಕರಾಗಿ 1948ರವರೆಗೂ ಆ ಕಾಲೇಜಿನಲ್ಲಿ ಕೆಲಸ ಮಾಡಿದರು. ಅನಂತರ ತಮ್ಮ ಕೊನೆಯ ದಿನಗಳವರೆಗೂ ಬೆಳಗಾಂವಿಯ ರಾಣಿ ಪಾರ್ವತಿದೇವಿ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಕನ್ನಡಕ್ಕಾಗಿ ಸುಮಾರು ಅರ್ಧ ಶತಮಾನ ಕಾಲ ದುಡಿದ ಕುಂದಣಗಾರರು ಇಂಗ್ಲಿಷ್, ಮರಾಠಿ, ಪಾಲಿ ಮತ್ತು ಅರ್ಧಮಾಗಧೀ

ಭಾಷೆಗಳಲ್ಲೂ ಪಾಂಡಿತ್ಯ ಗಳಿಸಿಕೊಂಡಿದ್ದರು. ಇವರ ಬರೆವಣಿಗೆ ವೈವಿಧ್ಯಮಯ. ರಗಳೆ, ಷಟ್ಪದಿ, ವಚನ, ಸಾಹಿತ್ಯ, ಛಂದಸ್ಸು, ಧರ್ಮ, ಕಲೆ -ಹೀಗೆ ವಿವಿಧ ವಿಷಯಗಳ ಮೇಲೆ ಇವರ ಲೇಖನಿ ಹರಿದಿದೆ. ಇವರ ಪ್ರಥಮ ಕೃತಿ ಸರಸ್ವತಿ ಎಂಬ ಕಾದಂಬರಿ 1930ರಲ್ಲಿ ಪ್ರಕಟವಾಯಿತು. ಇದೇ ವರ್ಷ ಮಹಾದೇವಿಯಕ್ಕ ಎಂಬ ವಿಮರ್ಶಾಗ್ರಂಥವೂ ಹೊರ ಬಂತು. ಲೀಲಾವತಿಪ್ರಬಂಧ (1937), ಪೂರ್ವಪುರಾಣ (1943), ಆದಿಪುರಾಣ (1953), ಕುಮುದೇಂದುರಾಮಾಯಣ -ಇವು ಇವರ ಸಂಪಾದನ ಕೃತಿಗಳಾಗಿದ್ದು ಇವರ ಪಾಂಡಿತ್ಯ ಪರಿಶ್ರಮಗಳಿಗೆ ಸಾಕ್ಷಿಯಾಗಿದೆ. ಇವರ ಹರಿಹರದೇವ (1937) ಎಂಬ ವಿಮರ್ಶನ ಗ್ರಂಥ ಕನ್ನಡ ಕವಿ ಪ್ರಶಸ್ತಿಗ್ರಂಥಗಳಲ್ಲಿ ಗಣ್ಯವಾದುದು. ಕೊಲ್ಹಾಪುರದ ಮಹಾಲಕ್ಷ್ಮೀ ದೇವಾಲಯವನ್ನು ಕುರಿತು ಇಂಗ್ಲಿಷಿನಲ್ಲಿ ಇವರು ಬರೆದಿರುವ 'ಸಮ್‌ನೋಟ್ಸ್ ಆನ್ ಶ್ರೀ ಮಹಾಲಕ್ಷ್ಮೀ ಟೆಂಪಲ್' ಎಂಬ ಗ್ರಂಥ ಪ್ರಮಾಣಭೂತವಾದುದೆಂದು ಹೆಸರಾಗಿದೆ. ಕೊಲ್ಹಾಪುರದ ಬ್ರಹ್ಮಪುರಿಯಲ್ಲಿ ಇವರು ನಡೆಸಿದ ಉತ್ಖನನ ಐತಿಹಾಸಿಕ ದೃಷ್ಟಿಯಿಂದ ಮಹತ್ತ್ವಪೂರ್ಣವಾಗಿದೆ. ಕೊಲ್ಹಾಪುರ ಸಂಸ್ಥಾನದ ಕನ್ನಡ ಶಾಸನಗಳ ಒಂದು ಸಂಗ್ರಹವನ್ನೂ ಇವರು ಪ್ರಕಟಿಸಿದ್ದಾರೆ. ಸಂಶೋಧನ ಪ್ರವೃತ್ತಿಯವರಾಗಿದ್ದ ಇವರು ಪಂಪನ ಹಿನ್ನೆಲೆ, ಪ್ರಾಚೀನ ಕನ್ನಡ ನಾಡಿನ ನಾಣ್ಯ ಪದ್ಧತಿ, ಚಾಳುಕ್ಯರ ಆರಂಭದ ಕಲೆಗಳು ಮುಂತಾದ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. 1961ರಲ್ಲಿ ಇವರಿಗೆ ಅರ್ಪಿಸಿದ ಕುಂದಣ ಎಂಬ ಗೌರವ ಗ್ರಂಥದಲ್ಲಿ ಇವರ 15 ಸಂಶೋಧನ ಲೇಖನಗಳು ಪ್ರಕಟವಾಗಿವೆ.

ಕೊಲ್ಹಾಪುರದಲ್ಲಿ ಕನ್ನಡದ ಬೆನ್ನೆಲುಬಾಗಿದ್ದ ಕುಂದಣಗಾರರು ಮುಂಬಯಿಯಲ್ಲಿ ಸೇರಿದ್ದ ಪ್ರಾಚ್ಯ ಮಹಾಸಭೆಯ ಕನ್ನಡ ವಿಭಾಗದ ಅಧ್ಯಕ್ಷರಾಗಿದ್ದರು. ಧಾರವಾಡದ ವಾಗ್ಭೂಷಣ ಮತ್ತು ಬೆಳಗಾಂವಿಯ ಜಿನವಿಜಯ ಪತ್ರಿಕೆಗಳಿಗೆ ಕೆಲವು ಕಾಲ ಸಂಪಾದಕರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುಗಳ ಸಂಪಾದಕ ಮಂಡಲಿಯ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.

ಸದ್ದುಗದ್ದಲವಿಲ್ಲದೆ ನಾಡು ನುಡಿಗಳಿಗೆ ಸೇವೆ ಸಲ್ಲಿಸಿದ ಇವರನ್ನು ಕನ್ನಡನಾಡು 1961ರಲ್ಲಿ ಗದಗದಲ್ಲಿ ನಡೆದ 43ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು. *

**ಕುಂದಾಣ** : ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಹೋಬಳಿ ಕೇಂದ್ರ. ದೇವನಹಳ್ಳಿಯ ಪಶ್ಚಿಮಕ್ಕೆ 10ಕಿಮೀ ದೂರದಲ್ಲಿದೆ.

ಈ ಗ್ರಾಮದ ಬಳಿ 61ಮೀ ಎತ್ತರದ ಸಮತಟ್ಟಿನ ಶಿಖರವುಳ್ಳ ದೊಡ್ಡಕಲ್ಲುಬಂಡೆಯಿಂದಾಗಿರುವ ಒಂದು ಬೆಟ್ಟವಿದೆ. ಇದರ ಪೂರ್ವಭಾಗ ಮಾತ್ರ ಇಳಿಜಾರಾಗಿದ್ದು ಉಳಿದ ಮೂರು ಕಡೆ ಕಡಿದಾಗಿದೆ. ಇಲ್ಲಿ ವಿಜಯನಗರ ಮತ್ತು ಪಾಳೆಯಗಾರರ ಕಾಲದ್ದೆಂದು ಹೇಳುವ ನಾಲ್ಕು ಸುತ್ತಿನ ಕೋಟೆಯಿದೆ. ಪೂರ್ವದಿಕ್ಕಿನ ನಾಲ್ಕು ಕಲ್ಲಿನಬಾಗಿಲುಗಳ ಮುಖಾಂತರ ಇಲ್ಲಿಗೆ ಪ್ರವೇಶವಿದೆ. ಮೇಲಿನ ಕೋಟೆಯೊಳಗಿನ ಪ್ರದೇಶ ಸು.100ಮೀ ಉದ್ದ 50ಮೀ ಅಗಲವಾಗಿದ್ದು ಅಂಡಾಕಾರವಾಗಿದೆ. ಪೂರ್ವದಿಕ್ಕಿಗೆ ಎದುರಾಗಿ ಇರುವುದು ಚನ್ನರಾಯಸ್ವಾಮಿ ದೇವಾಲಯ. ಇಲ್ಲಿನ ಜನಾರ್ದನ ವಿಗ್ರಹ 2' ಎತ್ತರವಿದೆ. ಇದು ಪಾಳೆಯಗಾರರ ಕಾಲದ್ದೆಂದು ತಿಳಿದುಬರುತ್ತದೆ. ಒಂದು ಚಿಕ್ಕ ಆಂಜನೇಯ ದೇವಾಲಯವೂ ಇಲ್ಲಿದೆ. ಕುಂದಾಣ ಹೊಯ್ಸಳ ರಾಮನಾಥನ ರಾಜಧಾನಿಯಾಗಿತ್ತು. *

**ಕುಂದಾದ್ರಿ** : ಶಿವಮೊಗ್ಗ ಜಿಲ್ಲೆಯಲ್ಲಿರುವ ಒಂದು ಬೆಟ್ಟ. ಇಲ್ಲೊಂದು ಜಿನಾಲಯವಿದೆ. ನಾಗಕುಮಾರ ಚರಿತ್ರೆಯಲ್ಲಿ ಬಾಹುಬಲಿ ಕವಿ (16ನೆಯ ಶತಮಾನ) ಈ ಗಿರಿಯನ್ನು ಮನಸಾರೆ ಬಣ್ಣಿಸಿದ್ದಾನೆ. ಈಗ ಇಲ್ಲೊಂದು ಜೈನ ಬ್ರಹ್ಮಚರ್ಯಾಶ್ರಮವೂ ಇದೆ. *

**ಕುಂದಾಪುರ** : ಉಡುಪಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಕೇಂದ್ರ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಉತ್ತರ ಮತ್ತು ಪೂರ್ವದಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳು, ದಕ್ಷಿಣದಲ್ಲಿ ಕಾರ್ಕಳ ಹಾಗೂ ಉಡುಪಿ ತಾಲ್ಲೂಕುಗಳು ಸುತ್ತುವರಿದಿರುವ ಈ ತಾಲ್ಲೂಕಿನ ವಿಸ್ತೀರ್ಣ 1559.8ಚ.ಕಿಮೀ. ಜನಸಂಖ್ಯೆ 3,77,372. ತಾಲ್ಲೂಕಿನಲ್ಲಿ ಒಟ್ಟು 101 ಗ್ರಾಮಗಳೂ ಕುಂದಾಪುರ, ಬೈಂದೂರು, ವಂಡ್ಸೆ -ಈ ಮೂರು ಹೋಬಳಿಗಳೂ ಇವೆ.

ತಾಲ್ಲೂಕಿನಲ್ಲಿ ಸು.45ಕಿಮೀ ಸಮುದ್ರ ಕರಾವಳಿ ಇದೆ. ಉದ್ದಕ್ಕೂ 5 ರಿಂದ 40ಕಿಮೀ ಅಗಲವಿರುವ ಮಟ್ಟಸ ಪ್ರದೇಶ ಇದೆ. ಅದರ ಪೂರ್ವಕ್ಕೆ ಪಶ್ಚಿಮ ಘಟ್ಟಗಳ ಭಾಗ. 54,902 ಹೆಕ್ಟೇರುಗಳಷ್ಟು ವಿಸ್ತೀರ್ಣವಿರುವ ಕಾಡುಗಳಲ್ಲಿ ತೇಗ, ಹೊನ್ನೆ, ಬೀಟೆ, ಕರಿಮರ, ಬೆಳನಂದಿ, ಮತ್ತಿ, ಹಲಸು ಮುಂತಾದ ವೃಕ್ಷಗಳು ಇವೆ. ದಟ್ಟ ಕಾಡಿನ ಪ್ರದೇಶದಲ್ಲಿ ಚಿರತೆ, ಕಾಟಿ ಮುಂತಾದ ಪ್ರಾಣಿಗಳನ್ನು ಕಾಣಬಹುದು. ಕೊಲ್ಲೂರು ನದಿ, ಚಕ್ರನದಿ ಮತ್ತು ಹಾಲಾಡಿ - ಇವು ತಾಲ್ಲೂಕಿನ ಮುಖ್ಯ ನದಿಗಳು. ಇವೆಲ್ಲ ಘಟ್ಟದಲ್ಲಿ ಹುಟ್ಟಿ ಸಮುದ್ರದತ್ತ ಹರಿಯುತ್ತವೆ. ವಾರ್ಷಿಕ ಸರಾಸರಿ ಮಳೆ 3,781ಮಿಮೀ. ಮುಂಗಾರು ಮಾರುತದ ಪ್ರಭಾವದಿಂದ ಮಳೆಯಾಗುತ್ತದೆ.

ಇಲ್ಲಿನ ಜನರ ಮುಖ್ಯ ವೃತ್ತಿ ಕೃಷಿ. ಬೇಸಾಯಕ್ಕೆ ಮಳೆಯ ನೀರೆ ಆಧಾರ. ನೀರಾವರಿಗಾಗಿ ಅಲ್ಲಲ್ಲಿ ನದಿಗಳಿಗೆ ಸಣ್ಣ ಅಣೆಕಟ್ಟುಗಳನ್ನು ಕಟಲಾಗಿದೆ. ತಾಲ್ಲೂಕಿನಲ್ಲಿ ಬೆಳೆಯುವ ಮುಖ್ಯ ಆಹಾರ ಬೆಳೆಗಳು ಬತ್ತ ಮತ್ತು ರಾಗಿ. ಉದ್ದು, ಹೆಸರು, ಹುರುಳಿ, ಅವರೆ, ಅಡಕೆ, ತೆಂಗು, ಬಾಳೆ, ಕಬ್ಬು, ಗೇರುಬೀಜ, ಮೆಣಸು ಮತ್ತು ಗೆಣಸು ಇತರ ಬೆಳೆಗಳು. ಬುಟ್ಟಿ ಮತ್ತು ಚಾಪೆ ಹೆಣೆಯುವುದು, ಬೆತ್ತದ ಕೆಲಸ, ನೇಯ್ಗೆ, ಚರ್ಮದ ಸಾಮಾನು, ಕೊಬ್ಬರಿ ಎಣ್ಣೆ ಮತ್ತು ಹೆಂಚು ತಯಾರಿಕೆ, ಮೀನುಗಾರಿಕೆ - ಇವು ಇಲ್ಲಿಯ ಮುಖ್ಯ ಉದ್ಯೋಗಗಳು. ಹೆಂಚು, ಬೆಲ್ಲ, ತೆಂಗಿನಕಾಯಿ ಮತ್ತು ಮಡಕೆ - ಇವು ವ್ಯಾಪಾರವಾಗುವ ವಸ್ತುಗಳು.

ಕೊಲ್ಲೂರು (ನೋಡಿ), ಶಂಕರನಾರಾಯಣ (ನೋಡಿ) ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳು. ಕುಂದಾಪುರದಿಂದ 8ಕಿಮೀ ದೂರಕ್ಕೆ ಪೂರ್ವದಲ್ಲಿರುವ ಬಸರೂರು (ನೋಡಿ) ಒಂದು ಚಾರಿತ್ರಿಕ ಸ್ಥಳ.

ಬಡಗತಿಟ್ಟು ಸಂಪ್ರದಾಯದ ಯಕ್ಷಗಾನ, ನಾಟಕ ಮತ್ತು ಕುಣಿತ ಈ ತಾಲ್ಲೂಕಿನ ಮುಖ್ಯ ಕಲೆಗಳು. ಗ್ರಾಮಪ್ರದೇಶದಲ್ಲಿ ಕಂಬಳ ಮತ್ತು ಕೋಳಿ ಅಂಕ ಜನಪ್ರಿಯವಾಗಿವೆ.

ತಾಲ್ಲೂಕಿನ ಕೇಂದ್ರವಾದ ಕುಂದಾಪುರ ಪಟ್ಟಣ ಒಂದು ಬಂದರು ಮತ್ತು ಮುಖ್ಯ ವ್ಯಾಪಾರ ಕೇಂದ್ರ. ಜನಸಂಖ್ಯೆ 28,595. ಹಾಲಾಡಿ, ಗರ್ಗತ ಚಕ್ರ, ಕೊಲ್ಲೂರು, ಜಂಬೂ ಮತ್ತು ಸೂಕ್ತಿಮತಿಗಳೆಂಬ ಐದು

ನದಿಗಳ ಸಂಗಮದಿಂದ ನಿರ್ಮಾಣವಾದ ವಿಶಾಲವಾದ ಪಂಚಗಂಗಾವಳಿ (ಗಂಗೊಳ್ಳಿ) ನದಿಯ ಅಳಿವೆಯ ದಕ್ಷಿಣಕ್ಕೆ ಸಮತಟ್ಟಾದ ಪ್ರದೇಶದಲ್ಲಿದೆ. ಪಂಚ ಗಂಗಾವಳಿಯ ಅಳಿವೆಯ ಉತ್ತರ ತೀರದಲ್ಲಿರುವ ಗಂಗೊಳ್ಳಿ ಹಿಂದಿನ ಕಾಲದಿಂದಲೂ ಬಳಕೆಯಲ್ಲಿದ್ದ ಬಂದರು. ಅಳಿವೆಯಿಂದ 5ಕಿಮೀ ದೂರದೊಳಗೆ ನದಿಯಲ್ಲಿ ಹಲವು ಚಿಕ್ಕ ಫಲವತ್ತಾದ ಕುದುರುಗಳು (ದ್ವೀಪಗಳು) ಇವೆ. ಅವುಗಳಲ್ಲಿ ಉಪ್ಪಿನಕುದುರು, ಹಿರಿ(ಹೇರಿ) ಕುದುರು ಮತ್ತು ಹಟ್ಟಿಕುದುರು ಮುಖ್ಯವಾದವು.

ಕುಂದವರ್ಮನೆಂಬ ಅರಸ ಪಂಚಗಂಗಾವಳಿಯ ಹತ್ತಿರ ಕಟ್ಟಿಸಿದ ಕುಂದೇಶ್ವರ ದೇವಾಲಯದಿಂದ ಇದಕ್ಕೆ ಕುಂದಾಪುರವೆಂಬ ಹೆಸರಾಯಿತೆಂದು ಪ್ರತೀತಿ. ಈ ದೇವಾಲಯದಲ್ಲಿ ಆಳುಪರ ಕಾಲದ ಶಿಲಾಶಾಸನಗಳಿವೆ. ಪೋರ್ಚುಗೀಸರು ಇಲ್ಲಿ ಕಟ್ಟಿಸಿದ ಕೋಟೆ ಈಗಲೂ ಇದೆ. ಹೈದರ್ ಅಲಿ ಇಲ್ಲಿ ರಚಿಸಿದ ಕೊತ್ತಳದಲ್ಲಿ ಈಗ ಸರ್ಕಾರಿ ಆಡಳಿತ ಕಚೇರಿಗಳಿವೆ. ಟಿಪ್ಪುವಿನ ಕಾಲದಲ್ಲಿ ಗಂಗೊಳ್ಳಿ ಹಡಗು ಕಟ್ಟುವ ಒಂದು ಮುಖ್ಯ ಕೇಂದ್ರವಾಗಿತ್ತು. ಟಿಪ್ಪುವನ್ನು ಸೋಲಿಸಲು ಮುಂಬಯಿಯಿಂದ ಕಳುಹಿಸಲಾದ ಇಂಗ್ಲಿಷ್ ಸೈನ್ಯ ಕುಂದಾಪುರದಲ್ಲಿಳಿದು, ಅನಂತರ 45ಕಿಮೀ ದೂರದ ಹೊಸಂಗಡಿ ಘಾಟಿಯ ದಾರಿಯಾಗಿ ಬಿದನೂರಿಗೆ ಸಾಗಿತ್ತು. ಈಗ ಈ ಘಾಟಿ ಮೋಟಾರ್ ವಾಹನಗಳ ಸಂಚಾರಮಾರ್ಗವಾಗಿ ಉಪಯೋಗದಲ್ಲಿದೆ.

ಪಶ್ಚಿಮ ಕರಾವಳಿಯ ಹೆದ್ದಾರಿ ನಿರ್ಮಾಣದ ಅಂಗವಾಗಿ ಗಂಗಾವಳಿಗೆ ಹಾಕಲಾದ ಹೊಸ ಮಾದರಿಯ ಸೇತುವೆಗಳಿಂದ ಕುಂದಾಪುರದ ದಕ್ಷಿಣೋತ್ತರ ಭಾಗಗಳಿಗೆ ನೇರ ಸಂಚಾರ ಸಂಪರ್ಕವುಂಟಾಗಿದೆ. ಕುಂದಾಪುರ ಹೆಂಚು ಮತ್ತು ಕೆಲವು ಚಿಕ್ಕ ಕೈಗಾರಿಕೆಗಳ ಕೇಂದ್ರವಾಗಿಯೂ ಹೆಸರಾಗಿದೆ. ಇಲ್ಲಿ ಪ್ರತಿ ಶನಿವಾರ ನಡೆಯುವ ಸಂತೆ ಈ ಭಾಗದಲ್ಲೆಲ್ಲ ಪ್ರಸಿದ್ಧ.

ಕೊಡಚಾದ್ರಿ ವಲಯದ ಕಬ್ಬಿಣದ ಅದುರಿನ ಸ್ವಲ್ಪ ಭಾಗ ಗಂಗೊಳ್ಳಿ ಬಂದರಿನ ಮೂಲಕ ರಫ್ತಾಗುತ್ತದೆ. (ಡಿ.ಎನ್.ಕೆ.)

**ಕುಂಸಿ :** ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನ ಒಂದು ಪಟ್ಟಣ, ಹೋಬಳಿ ಕೇಂದ್ರ. ಶಿವಮೊಗ್ಗ -ಜೋಗ ಮಾರ್ಗದಲ್ಲಿ ಶಿವಮೊಗ್ಗಕ್ಕೆ ವಾಯವ್ಯದಲ್ಲಿ 27ಕಿಮೀ ದೂರದಲ್ಲಿದೆ. ಇದು ಶಿವಮೊಗ್ಗ ಸಾಗರ ರೈಲ್ವೆ ಮಾರ್ಗದ ಒಂದು ನಿಲ್ದಾಣ.

ಈ ಊರಿಗೆ ಹಿಂದೆ ಕುಂಬಸೆ ಎಂಬ ಹೆಸರಿತ್ತೆಂದೂ ಹುಂಚದ ಜಿನದತ್ತರಾಯ ಇಲ್ಲಿಯ ಜೈನಬಸದಿಗೆ ಗ್ರಾಮವನ್ನು ದಾನವಾಗಿ ಕೊಟ್ಟನೆಂದೂ ಐತಿಹ್ಯವಿದೆ. ಇಲ್ಲಿನ ಪಕ್ಷಿರಂಗನಾಥ ದೇವಸ್ಥಾನದಲ್ಲಿ ಹರಡಿದ ರೆಕ್ಕೆಯುಳ್ಳ ಗರುಡನ ಮೇಲೆ ಕುಳಿತಿರುವ ವಿಷ್ಣು ವಿಗ್ರಹವಿದೆ.

ಕುಂಸಿ ಮ್ಯಾಂಗನೀಸ್ ಗಣಿಗಳಿಗೆ ಪ್ರಸಿದ್ಧ. ಈ ಊರಿನ ಬಳಿ ಧಾರವಾಡ ಶಿಲಾಸ್ತೋಮಕ್ಕೆ ಸೇರಿದ ಸುಣ್ಣಕಲ್ಲು, ಸಿಲಿಕಯುಕ್ತ ಕಬ್ಬಿಣದ ಶಿಲೆಗಳು, ಮ್ಯಾಂಗನೀಸ್ ಅದುರು, ಜೇಡು ಶಿಲೆ ಹಾಗೂ ಗ್ರ್ಯಾನೈಟ್ ಶಿಲೆಗಳು ದೊರಕುತ್ತವೆ. ಈ ಪ್ರದೇಶದಲ್ಲಿ ಮ್ಯಾಂಗನೀಸ್ ನಿಕ್ಷೇಪ, ರೂಪಾಂತರ ಶಿಲೆಗಳಾದ ಫಿಲೈಟ್ ಹಾಗೂ ಶಿಸ್ಟ್ ಶಿಲೆಗಳಲ್ಲಿ ದೊರೆಯುವುದು. ಬಹುತೇಕ ಪ್ರದೇಶದಲ್ಲಿ ಸುಣ್ಣಕಲ್ಲಿನ ಪದರಗಳು ನಿಕ್ಷೇಪದ ಮೇಲ್ಭಾಗವನ್ನು ಮತ್ತು ಸಿಲಿಕಯುಕ್ತ ಕಬ್ಬಿಣ ಶಿಲೆಗಳು ನಿಕ್ಷೇಪದ ಕೆಳಭಾಗವನ್ನು ಆಕ್ರಮಿಸಿವೆ. ಮ್ಯಾಂಗನೀಸ್ ನಿಕ್ಷೇಪ ಸುಮಾರು ಒಂದು ಸಾವಿರ ಅಡಿ ಉದ್ದದವರೆಗೆ ಪ್ರಸರಿಸಿದ್ದು, 20'-30' ಆಳದ ವರೆಗೆ ದೊರೆಯುತ್ತದೆ. ಕೆಲವೆಡೆ ಅತಿ ವಿರಳವಾಗಿ 80' ಆಳದವರೆಗೂ ದೊರೆಯುತ್ತದೆ. ಮ್ಯಾಂಗನೀಸ್ ನಿಕ್ಷೇಪ ಬಂಡೆಗಳ ರೂಪದಲ್ಲಿವೆ. ಅವುಗಳ ವ್ಯಾಸ ಒಂದರಿಂದ ಮೂರು ಅಡಿಗಳಷ್ಟು. ಇಲ್ಲಿಯ ನಿಕ್ಷೇಪದಲ್ಲಿ ರಂಜಕ ಮತ್ತು ಸಿಲಿಕದ ಅಂಶ ಅತ್ಯಂತ ಕಡಿಮೆ. ಮ್ಯಾಂಗನೀಸ್ ಲೋಹದ ಅಂಶ ಸೇಕಡ 40 ರಿಂದ 50 ರಷ್ಟಿದೆ. ಕಬ್ಬಿಣದ ಅಂಶ ಸೇ.11ರಷ್ಟು. ಕುಂಸಿಯ ಬಳಿ ಸು.50,000 ಟನ್‍ಗಳಷ್ಟು ಮ್ಯಾಂಗನೀಸ್ ನಿಕ್ಷೇಪವಿದೆಯೆಂಬುದು ಅಂದಾಜು. ಈ ಪ್ರದೇಶದ ಅದುರನ್ನು ಭದ್ರಾವತಿಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಗಳಿಗೆ ಮತ್ತು ಜಪಾನ್ ದೇಶಕ್ಕೆ ಕಳುಹಿಸಲಾಗುತ್ತಿದೆ. ಜೇಡಿಮಣ್ಣನ್ನು ಬೆಂಗಳೂರಿನಲ್ಲಿರುವ ಪಿಂಗಾಣಿ ಕಾರ್ಖಾನೆಗೆ ಸರಬರಾಜು ಮಾಡಲಾಗುತ್ತಿದೆ. (ಟಿ.ಆರ್.ಎಸ್.)

**ಕುಕ್ಕನೂರು :** ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನಲ್ಲಿ, ಕಸಬೆಯಿಂದ ದಕ್ಷಿಣಕ್ಕೆ ಗುಂತಕಲ್ಲು -ಹುಬ್ಬಳ್ಳಿ ರೈಲುಮಾರ್ಗದ ಬನ್ನಿಕೊಪ್ಪ ನಿಲ್ದಾಣದಿಂದ 11ಕಿಮೀ ಉತ್ತರಕ್ಕಿರುವ ಗ್ರಾಮ.

ಈ ಊರು ಪ್ರಾಚೀನ ದೇವಾಲಯಗಳಿಗೆ ಪ್ರಸಿದ್ಧವಾಗಿದೆ. ಸ್ಥಳಪುರಾಣದ ಪ್ರಕಾರ ಈ ಊರು ಕುಂತಳಪುರ. ಲಕ್ಷ್ಮೀಶನೂ ಈ ಊರಿಗೆ ಇದೇ ಹೆಸರನ್ನು ಬಳಸಿದ್ದನೆನ್ನಲಾಗಿದೆ. ಚಂದ್ರಹಾಸ ದುಷ್ಟಬುದ್ಧಿಯ ಮಗಳನ್ನು ಭೇಟಿ ಮಾಡಿದ ಸ್ಥಳವೆಂದು ಇಲ್ಲಿನ 'ಶ್ರಿಂಗೇರ ತೋಟವನ್ನು' ತೋರಿಸುತ್ತಾರೆ.

ಊರಿನ ಮಧ್ಯದಲ್ಲಿ ದೊಡ್ಡ ಪ್ರಾಕಾರದ ಒಳಗೆ ಹಲವು ದೇವಾಲಯಗಳಿವೆ. ಇವುಗಳಲ್ಲಿ ಸ್ಥಳೀಯವಾಗಿ ಪ್ರಮುಖವಾದುದು ಮಹಾಮಾಯಾ ದೇವಾಲಯ. ಪ್ರಾಯಶಃ ವಿಜಯನಗರದ ಕಾಲದಲ್ಲಿ ಕಟ್ಟಲಾದ ಈ ದೇವಾಲಯ ಅನೇಕ ಆಧುನಿಕ ಸೇರ್ಪಡೆಗಳಿಂದ ಮಾರ್ಪಾಡುಗೊಂಡಿದೆ. ಇದೇ ಆವರಣದಲ್ಲಿರುವ ನವಲಿಂಗ ಎಂಬ 9 ಚಿಕ್ಕ ಶಿವದೇವಾಲಯಗಳ ಗುಂಪಿನಲ್ಲಿ ಮೂರು ನವರಂಗ ಮಂಟಪಗಳು ಮತ್ತು ಅವಕ್ಕೆ ಹೊಂದಿಕೊಂಡಂತೆ 9 ಗರ್ಭಗುಡಿಗಳಿವೆ. ಪ್ರಾಯಶಃ 10-11ನೆಯ ಶತಮಾನದಲ್ಲಿ ಕಟ್ಟಿರಬಹುದಾದ ಈ ಗುಡಿಗಳು ಬಾದಾಮಿ ಚಳುಕ್ಯ ವಾಸ್ತುಶೈಲಿ ಕಲ್ಯಾಣ ಚಾಳುಕ್ಯ ವಾಸ್ತುಶೈಲಿಯತ್ತ ಪರಿವರ್ತನೆ ಹೊಂದುತ್ತಿದ್ದ ಘಟ್ಟದ ಸೂಚಕಗಳಾಗಿವೆ. ಈ ಕಟ್ಟಡಗಳು ದ್ರಾವಿಡ ಶೈಲಿಯವು. ಪಟ್ಟದಕಲ್ಲಿನವುಗಳಂತೆ ಮರಳುಗಲ್ಲಿನಲ್ಲಿ ಅದೇ ಹೊರಮೈ ಅಲಂಕರಣ ಮತ್ತು ಶಿಖರವಿನ್ಯಾಸಗಳೊಡನೆ ಕಟ್ಟಲಾದುವು. ಆದರೆ ಒಳಗಿನ ಕಂಬಗಳು ಸ್ವಲ್ಪಮಟ್ಟಿಗೆ ತಿರುಗಣೆಯಲ್ಲಿ ಮಾಡಿದ ರೀತಿಯವು. ಇಲ್ಲಿರುವ 11-12ನೆಯ ಶತಮಾನದ ಅನೇಕ ಶಾಸನಗಳಲ್ಲಿ ಗಂಗಾ, ಕಾಳಿಕಾ, ಮಹಾಮಾಯಿ, ಸರಸ್ವತಿ ಮೊದಲಾದ ದೇವತೆಗಳಿಗೆ ಕೊಟ್ಟ ದತ್ತಿಗಳ ಪ್ರಸ್ತಾಪವಿರುವುದರಿಂದ ಈ ನವಲಿಂಗಗುಡಿ ದೇವಿಗುಡಿಗಳಾಗಿದ್ದಿರಬಹುದು ಎಂದು ಊಹಿಸಲು ಅವಕಾಶವಿದೆ.

ಗ್ರಾಮದ ನೈಋತ್ಯ ಭಾಗದಲ್ಲಿರುವ ಪ್ರಾಯಶಃ 11ನೆಯ ಶತಮಾನದ ಆದಿ ಭಾಗದ ಕಲ್ಲೇಶ್ವರ ದೇವಾಲಯ ಕಲ್ಯಾಣ ಚಾಳುಕ್ಯ ಶೈಲಿಯತ್ತಣ ನಡೆಯ ಇನ್ನೊಂದು ಘಟ್ಟವನ್ನು ಸೂಚಿಸುವಂತಿದೆ. ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖ ಅಥ'ವಾ ನಂದಿಮಂಟಪವಿರುವ ಈ ಗುಡಿಯ ತಳವಿನ್ಯಾಸ ಪಟ್ಟದಕಲ್ಲಿನ ಗುಡಿಗಳಂತೆಯೇ ಇದೆ. ಇದೂ ಮರಳುಗಲ್ಲಿನಲ್ಲಿ ಕಟ್ಟಿದ ದ್ರಾವಿಡ ಶೈಲಿಯ ಗುಡಿ. ಆದರೆ ಶಿಖರ ಹಿಂದಿನ ದ್ರಾವಿಡ ಶಿಖರಗಳಂತೆ ಭಾರವಾದ ನಿರ್ದಿಷ್ಟವಾಗಿ ಹಂತಗಳಲ್ಲೇರುವ ಘಟ್ಟಗಳಲ್ಲಿ ಕಾಣಿಸದೆ, ಆ ಘಟ್ಟಗಳಿದ್ದರೂ ಹಲವು ಮಾರ್ಪಾಡುಗಳಿಂದ ಸ್ವಲ್ಪಮಟ್ಟಿನ ಏರುಗೆರೆಗಳ ಧಾಟಿಯನ್ನೂ ಹೊಂದಿದೆ; ಕಲ್ಯಾಣ ಚಾಳುಕ್ಯ ಶಿಖರರೀತಿಯ ಮೊಳಕೆಯ ಘಟ್ಟದಂತೆ ತೋರುತ್ತದೆ. ಪುನಃ ಹೊರಗೋಡೆಗಳಲ್ಲಿ ಶಿಲ್ಪಾಲಂಕರಣ ಕಾಣಿಸದೆ ಕೇವಲ ದ್ರಾವಿಡ ಅಥವಾ ನಾಗರ ಸಂಪ್ರದಾಯದ ಶಿಖರಗಳನ್ನು ಹೊತ್ತ ಒಂಟಿ ಅರೆಗಂಬ ಅಥವಾ ಕೋಷ್ಠಗಳಿಂದ ಅಲಂಕೃತವಾಗಿದೆ. ಒಳಗಿನ ಕಂಬಗಳು ನವಲಿಂಗ ದೇವಾಲಯಕ್ಕಿಂತಲೂ ಸ್ವಲ್ಪ ಮುಂದಣ ಘಟ್ಟದವೆನಿಸುತ್ತವೆ. ದೇವಾಲಯದ ಒಳಗೆ ಶಿವ ಮತ್ತು ಬ್ರಹ್ಮನ ಒಂದೊಂದು ಶಿಲ್ಪಗಳುಂಟು. ಇವು ಸ್ಪಷ್ಟವಾಗಿ ಬೆಳೆದ ಕಲ್ಯಾಣ ಚಾಳುಕ್ಯ ಶೈಲಿಯವು. ಆ ದೇವಾಲಯದ ಕಾಲಕ್ಕಿಂತ ಇವು ಈಚಿನವಿರಬಹುದೆಂದೂ ಭಾವಿಸಲಾಗಿದೆ. *

**ಕುಕ್ಕಿಲ ಕೃಷ್ಣಭಟ್ಟ :** 1911-88. ಸಂಗೀತಶಾಸ್ತ್ರ, ನಾಟ್ಯಶಾಸ್ತ್ರ, ಯಕ್ಷಗಾನ, ಛಂದಸ್ಸು, ಗ್ರಂಥಸಂಪಾದನೆ, ಅನುವಾದ, ಸಂಶೋಧನೆಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಹೆಸರಾಂತ ವಿದ್ವಾಂಸರು. ದಕ್ಷಿಣ ಕನ್ನಡದ ವಿಟ್ಲ ಪಡ್ನೂರಿನ ಕುಕ್ಕಿಲ ಎಂಬ ಹಳ್ಳಿಯಲ್ಲಿ 1911 ಜುಲೈ 3ರಂದು ಜನಿಸಿದರು. ತಂದೆ ನಾರಾಯಣ ಭಟ್ಟ, ತಾಯಿ ಗೌರಮ್ಮ. ಇವರದು ಕೃಷಿಕ ಮನೆತನ. ಅಜ್ಜ ಕೃಷ್ಣಭಟ್ಟರಿಂದ ಕನ್ನಡ ಮತ್ತು ಸಂಸ್ಕೃತದ ಅಭ್ಯಾಸ ನಡೆಸಿದರು. ಸೋದರಮಾವ ಬಡೆಕ್ಕಿಲ ವೆಂಕಟರಮಣಭಟ್ಟರ ಒತ್ತಾಸೆ ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ಓದುವಾಗ ದೊರಕಿತು. ಹಾಗೆಯೇ ಕಡವ ಶಂಭುಶರ್ಮ, ಕನ್ನೆಪ್ಪಾಡಿ ಪರಮೇಶ್ವರಶಾಸ್ತ್ರಿಗಳ ಶಿಷ್ಯತ್ವ

ದೊರಕಿತು. ಕಡವ ಶಂಭುಶರ್ಮರಲ್ಲಿ ಭರತನ ನಾಟ್ಯಶಾಸ್ತ್ರವನ್ನು ವ್ಯಾಖ್ಯಾನಸಮೇತ ಹಲವು ವರ್ಷಗಳ ಕಾಲ ದೀರ್ಘ ವ್ಯಾಸಂಗ ಮಾಡಿದರು. ಎಂಟನೆಯ ತರಗತಿಗೆ ಶಾಲೆಯ ಓದು ನಿಂತಿತು. ಆದರೆ ಓದುವ ಆಸಕ್ತಿ ಕಡಿಮೆಯಾಗಲಿಲ್ಲ. ಸ್ವಾಧ್ಯಾಯದ ಮೂಲಕ ಕಲಿತು, ವಿದ್ವಾಂಸರಾದರು. ಸೇಡಿಯಾಪು ಕೃಷ್ಣಭಟ್ಟರು ಇವರ ಹತ್ತಿರದ ಸಂಬಂಧಿ. ಅವರ ಸಲಹೆಯಂತೆ ಮಂಗಳೂರಿಗೆ ಬಂದು ಬನಾರಸಿನ ಪ್ರವೇಶ ಪರೀಕ್ಷೆಗೆ ತಯಾರಿ ನಡೆಸಿದರು. ಆದರೆ ಸ್ವಾತಂತ್ರ್ಯ ಹೋರಾಟದ ಚಳವಳಿಯಿಂದಾಗಿ ಪರೀಕ್ಷೆ ನಡೆಯಲಿಲ್ಲ. ಸ್ವಲ್ಪ ಸಮಯ ಕನ್ನಡ ವಿದ್ವಾನ್ ಪರೀಕ್ಷೆಗೆಂದು ಅಭ್ಯಾಸ ಮಾಡಿದರು. ರಾಷ್ಟ್ರಬಂಧು ಪತ್ರಿಕೆಯಲ್ಲಿ ಕೆಲಕಾಲ ಉದ್ಯೋಗಿಯಾಗಿದ್ದರು. ಇವರಿಗೆ ಕಾವ್ಯವಾಚನ, ತಾಳಮದ್ದಳೆಯಲ್ಲಿ ವಿಶೇಷ ಅಭಿರುಚಿ; ಸಂಗೀತ, ಯಕ್ಷಗಾನ ಮತ್ತು ನಾಟ್ಯಶಾಸ್ತ್ರದಲ್ಲಿ ಒಲವು. ಮಂಗಳೂರಿನ ಸಂಗೀತ ವಿದ್ವಾಂಸರಾದ ಎಚ್.ಕೃಷ್ಣಉಡುಪರಲ್ಲಿ ಸಂಗೀತವ್ಯಾಸಂಗ ಮಾಡಿದರು. ಇವರಿಗೆ ಗಮಕ ಹಾಗೂ ಭಾಗವತಿಕೆಯಲ್ಲಿಯೂ ಪ್ರವೇಶವಿತ್ತು.



ಭಾರತೀಯ ಸಂಗೀತಶಾಸ್ತ್ರ (1971), ಪಾರ್ತಿಸುಬ್ಬನ ಯಕ್ಷಗಾನಗಳು (1975), ನಾಗವರ್ಮನ ಛಂದೋಂಬುಧಿ (1975), ಸಿಲಪ್ಪದಿಗಾರಂ (2000), ದ್ರಾವಿಡ ಛಂದಸ್ಸು (2002) ಇವರ ಮುಖ್ಯ ಕೃತಿಗಳು. ಇವರು ಸಂಪಾದಿಸಿದ ನಾಗವರ್ಮನ ಛಂದೋಂಬುಧಿ ಗ್ರಂಥಸಂಪಾದನೆಯ ಕ್ಷೇತ್ರಕ್ಕೊಂದು ಮಾದರಿ. ಛಂದಸ್ಸಿನ ಮೂಲತತ್ತ್ವಗಳು, ಲೌಕಿಕ ಸಂಸ್ಕೃತ ಛಂದಸ್ಸು, ಕರ್ನಾಟಕ ಭಾಷಾಜಾತಿಗಳು, ಗಣಗಳ ಹುಟ್ಟು, ಕನ್ನಡದ ಗಣ ಮತ್ತು ಅಕ್ಷರಗಳ ನಡುವಿರುವ ವ್ಯತ್ಯಾಸ, ಲಯ, ಗತಿ, ಯತಿ, ಪ್ರಾಸ, ಮೂಜುವಜೆ ಭಾಷೆಗಳು, ರಗಳೆ ಮೊದಲಾದ ಛಂದಸ್ಸಿನ ಅಧ್ಯಯನದ ಪ್ರವೇಶಕ್ಕೆ ಅಗತ್ಯವಿರುವ ಮೂಲಭೂತ ವಿಷಯಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಭಾರತೀಯ ಸಂಗೀತಶಾಸ್ತ್ರ ಗಾತ್ರದಲ್ಲಿ ಚಿಕ್ಕದಾದರೂ ಪುರಾತನ ಸಂಗೀತ ಸ್ವರೂಪದ ವಿವೇಚನೆಯುಳ್ಳ ಕೃತಿ. ಸ್ವರ - ಗ್ರಾಮ, ಸಾಮಗಾನ-ಗಾಂಧರ್ವ, ಭರತನ ಶ್ರುತಿ ನಿರ್ಣಯ, ಶ್ರುತಿ ಸಮಸ್ಯೆ, ಸಂಗೀತ ರತ್ನಾಕರ, ದೇಶೀಯ ಅಶಾಸ್ತ್ರೀಯತೆ, ಶಾರ್ಙ್ಗದೇವನ ಸ್ವರ ಸಮೀಕರಣ, ಸಂಗೀತ ರತ್ನಾಕರದ ಕನ್ನಡ ವ್ಯಾಖ್ಯಾನ ಎಂಬ ಅಧ್ಯಯನಗಳು ಈ ಕೃತಿಯಲ್ಲಿವೆ. ಭರತನ ಶ್ರುತಿ ನಿರ್ಣಯ, ಶ್ರುತಿ ಸಮಸ್ಯೆ, ಇಪ್ಪತ್ತೆರಡು ಶ್ರುತಿಗಳ ಬಗೆಗೆ ಅಪೂರ್ವ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

'ಪಾರ್ತಿಸುಬ್ಬನ ಯಕ್ಷಗಾನಗಳು' ಪಾರ್ತಿಸುಬ್ಬನ ಎಲ್ಲಾ ಯಕ್ಷಗಾನ ಪ್ರಸಂಗಗಳನ್ನುಳ್ಳ ಇನ್ನೊಂದು ಸಂಪಾದಿತ ಕೃತಿ. ಯಕ್ಷಗಾನ ಪ್ರಸಂಗಸಾಹಿತ್ಯದಲ್ಲಿ ಬಳಕೆಯಾಗುವ ಬತ್ತೀಸರಾಗವನ್ನು, ಬತ್ತೀಸತಾಳಕ್ಕೆ ಅಳವಡಿಸಿ ಇಲ್ಲಿ ನೀಡಿದ್ದಾರೆ. ಪಾರ್ತಿಸುಬ್ಬ ಪ್ರಸ್ತಾಪಿಸುವ ಸಭಾಲಕ್ಷಣ ಭಾಗ ಇಲ್ಲಿ ಸೇರಿದೆ. ಶಿವರಾಮ ಕಾರಂತರು ತಮ್ಮ ಯಕ್ಷಗಾನ ಬಯಲಾಟ ಕೃತಿಯಲ್ಲಿ ಪ್ರಸ್ತಾಪಿಸಿದ ಹಲವು ಅಂಶಗಳನ್ನು ಕುಕ್ಕಿಲರು ಇಲ್ಲಿ ಮರುವಿಮರ್ಶಿಸಿದ್ದಾರೆ. ಪಾರ್ತಿಸುಬ್ಬನ ಬಗೆಗೆ ವಿದ್ವಾಂಸರಲ್ಲಿದ್ದ ಹಲವು ಸಂದೇಹಗಳಿಗೆ ತಮ್ಮ ಆಳವಾದ ಅಧ್ಯಯನದ ಮೂಲಕ ಪರಿಹಾರಗಳನ್ನು ಸೂಚಿಸಿದ್ದಾರೆ. ಈ ಕೃತಿಗೆ ಬರೆದಿರುವ ವಿಸ್ತಾರವಾದ ಪೀಠಿಕೆ ಇವರ ವಿದ್ವತ್ತಿಗೆ ಸಾಕ್ಷಿಯಾಗಿದೆ. ಒಟ್ಟು 32 ತಾಳಗಳನ್ನು ಗುರುತಿಸಿ ಇವುಗಳಿಗೆ ಸಂಗೀತಶಾಸ್ತ್ರದಲ್ಲಿ ನೀಡಿರುವ ಪರ್ಯಾಯ ಹೆಸರುಗಳನ್ನು ನೀಡಿದ್ದಾರೆ.

ಸಿಲಪ್ಪದಿಗಾರಂ ತಮಿಳು ಮಹಾಕಾವ್ಯದ ಕನ್ನಡ ಗದ್ಯ ಕಥಾರೂಪ. ಸಂಘಂ ಸಾಹಿತ್ಯದ ಅನಂತರ ತಮಿಳಿನಲ್ಲಿ ಬಂದ ಪಂಚ ಮಹಾಕಾವ್ಯಗಳಲ್ಲಿ ಇದು ಮೊದಲಿನದು. ದ್ರಾವಿಡ ಸಂಸ್ಕೃತಿಯ ವಸ್ತು ಕೃತಿಯ ಕೇಂದ್ರದಲ್ಲಿದೆ. ಸರಳವಾದ ಭಾಷೆ, ಲಲಿತವಾದ ಶೈಲಿ ಈ ಅನುವಾದಿತ ಕೃತಿಯ ವೈಶಿಷ್ಟ್ಯ.

ದ್ರಾವಿಡ ಛಂದಸ್ಸು ಎಂಬ (ಸಂ: ಶತಾವಧಾನಿ ಆರ್ ಗಣೇಶ್) ಕೃತಿಯಲ್ಲಿ ಮುಖ್ಯವಾಗಿ ತಮಿಳು ಛಂದಸ್ಸಿನ ವಿವೇಚನೆ ಮತ್ತು ತೊಲ್ಕಾಪ್ಪಿಯಮ್ ಕೃತಿಯ ಭಾವಾನುವಾದವಿದೆ. ದ್ರಾವಿಡ ಛಂದಸ್ಸು ಸಾಮಾನ್ಯ ಪರಿಚಯ, ಉಗಮ, ವಿಕಾಸ, ವ್ಯಾಪ್ತಿ - ತೊಲ್ಕಾಪ್ಪಿಯಮ್, ಎಮಿತ್ತದಿಕಾರಮ್, ವರ್ಣಾಧಿಕಾರ; ತೊಲ್ಕಾಪ್ಪಿಯಮ್, ಚೆಯ್‌ಯುಳಿಯಲ್ ಛಂದೋವಿಲಾಸ; ಯಾಪ್ಪರುಂಕಲಮ್‌ಕಾರಿಕೈ ಲಕ್ಷ್ಯೋದಾಹರಣೆಗಳು ಎಂಬ ನಾಲ್ಕು ಅಧ್ಯಾಯಗಳಿವೆ. ತಮಿಳು ವರ್ಣಮಾಲೆ ಮತ್ತು ಸಂಜ್ಞೆಯ ವಿವರಣೆಯ ಹಿನ್ನೆಲೆಯಲ್ಲಿ ಅನಾವರಣಗೊಳ್ಳುವ ದ್ರಾವಿಡ ಛಂದಸ್ಸು ಕುಕ್ಕಿಲರ ವಿಸ್ತಾರವಾದ ಓದು, ಪಾಂಡಿತ್ಯಕ್ಕೆ ಇನ್ನೊಂದು ನಿದರ್ಶನ.

ಕುಕ್ಕಿಲ ಸಂಪುಟ (ಸಂ: ಎಂ.ಪ್ರಭಾಕರ ಜೋಶಿ) ಬೇರೆ ಬೇರೆ ಸಂದರ್ಭಗಳಲ್ಲಿ ಕುಕ್ಕಿಲರು ಯಕ್ಷಗಾನ, ಛಂದಸ್ಸು, ನಾಟ್ಯಶಾಸ್ತ್ರ, ಸಂಗೀತಶಾಸ್ತ್ರ, ವ್ಯಾಕರಣ, ಕಾವ್ಯ, ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ಬರೆದ 25 ಬಿಡಿ ಲೇಖನಗಳ ಸಂಗ್ರಹ. ಇವರು 1988 ಜುಲೈ 21ರಂದು ನಿಧನಹೊಂದಿದರು.

(ಎಸ್.ಎಚ್.ಜಿ.)

**ಕುಕ್ಕೆ, ಎಸ್.ಎಸ್. :** 1918-91. ಪ್ರಸಿದ್ಧ ಚಿತ್ರಕಲಾವಿದ; ಲಲಿತಕಲಾತಜ್ಞ, ಕುಕ್ಕೆ ಶ್ರೀಕಂಠಶಾಸ್ತ್ರಿ ಇವರ ಪೂರ್ಣ ಹೆಸರು. ತಂದೆ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ, ತಾಯಿ ಸಂಕಮ್ಮ. 1918 ಜೂನ್ 8ರಂದು ಶಿವಮೊಗ್ಗದಲ್ಲಿ ಜನಿಸಿದರು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಇವರು ಪಂಡಿತರ ಮನೆತನದಲ್ಲಿ ಹುಟ್ಟಿದರೂ ಶೈಕ್ಷಣಿಕ ವಿದ್ಯಾಭ್ಯಾಸದಲ್ಲಿ ಹಿಂದುಳಿದರು. ತಮ್ಮ ಒಂಬತ್ತನೆಯ ವಯಸ್ಸಿನಲ್ಲಿ ಶಾಲೆಯಲ್ಲಿ ಉಪಾಧ್ಯಾಯರ ಪಾಠಕ್ಕೆ ಗಮನಕೊಡದೆ ಅವರ ಭಾವಚಿತ್ರವನ್ನು ರಚಿಸಿದರು. ಇದರಿಂದ ಉಪಾಧ್ಯಾಯರ ಕೋಪಕ್ಕೆ ಒಳಗಾಗಿ ಬೆತ್ತದ ರುಚಿಕಂಡು ಶಾಲೆಯಿಂದ ಹೊರಹಾಕಲಾಗಿದ್ದರಿಂದ ಇವರ ಸಾಮಾನ್ಯ ಶಿಕ್ಷಣ ಕೊನೆಗೊಂಡಿತು.

ಶಿವಮೊಗ್ಗದ ಚಿತ್ರಕಲಾ ಶಿಕ್ಷಕರಾದ ರಾಮಕೃಷ್ಣ ಮತ್ತು ಎ.ಜಿ. ಮೂರ್ತಿಯವರ ಸ್ನೇಹ ಸಹವಾಸದಿಂದ ಇವರ ಚಿತ್ರಕಲಾಸಕ್ತಿ ಮೊಳಕೆಯೊಡೆಯಿತು. ಮದರಾಸಿನ ಎಲ್.ಎ. (ಲೋಯರ್) ಆರ್ಟ್ಸ್ ಪರೀಕ್ಷೆಯಲ್ಲಿ ಇವರು ಪ್ರಥಮಶ್ರೇಣಿಯಲ್ಲಿ ತೇರ್ಗಡೆಯಾದರು. ತಂದೆಯವರೊಂದಿಗೆ ಶೃಂಗೇರಿಗೆ ಹೋಗಿದ್ದ ಸಂದರ್ಭದಲ್ಲಿ ತುಂಗಾನದಿ ದಡದಲ್ಲಿದ್ದ ವಿದ್ಯಾಶಂಕರ ದೇವಾಲಯದ ಪೆನ್ಸಿಲ್ ಸ್ಕೆಚ್ ಮಾಡಿ ಗುರುಗಳಾದ ಚಂದ್ರಶೇಖರ ಭಾರತಿ ಸ್ವಾಮಿಗಳಿಗೆ ಸಮರ್ಪಿಸಿ ಅವರ ಆಶೀರ್ವಾದ ಪಡೆದರು. ಶೃಂಗೇರಿಯ ಮಠದಲ್ಲಿ ಸಂಸ್ಕೃತ ಅಧ್ಯಯನ ನಡೆಸಿ ಪಂಡಿತೋತ್ತಮನಾಗುವುದನ್ನು ಬಿಟ್ಟು ಕುಟುಂಬದ ಹಿರಿಯರ ವಿರೋಧವನ್ನು ಎದುರಿಸಿ ಮೈಸೂರಿನ ರೈಲು ಹತ್ತಿದರು. ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆ ಸೇರಲು ಅರ್ಹತಾ ಪ್ರವೇಶ ಪರೀಕ್ಷೆಗೆ ಕುಳಿತರು. ಕಲಾ ಶಾಲೆಯ ಅಧೀಕ್ಷಕರಾಗಿದ್ದ ರಾಮಸ್ವಾಮಿ ಐಯ್ಯಂಗಾರ್ ಮತ್ತು ಸಹಾಯಕ ಅಧೀಕ್ಷಕರಾಗಿದ್ದ ಎಸ್.ಜಿ.ಪಾವಂಜೆಯವರು ಇವರ ಚಿತ್ರಕಲಾ ಪ್ರೌಢಿಮೆಯನ್ನು ಕಂಡು ಮೊದಲನೆಯ ತರಗತಿಗೆ ಸೇರಬೇಕಾಗಿದ್ದ ವಿದ್ಯಾರ್ಥಿಯನ್ನು ನೇರವಾಗಿ ನಾಲ್ಕನೆಯ ತರಗತಿಗೆ ಸೇರಿಸಿಕೊಳ್ಳಲು ಶಿಫಾರಸು ಮಾಡಿದರು. ಇವರ ಹಿನ್ನೆಲೆ ಮತ್ತು ಆರ್ಥಿಕ ಪರಿಸ್ಥಿತಿ ಅರಿತು ವಿದ್ಯಾರ್ಥಿ ವೇತನ ಕೊಡಿಸಿ ಅನುಕೂಲ ಮಾಡಿಕೊಟ್ಟರು. ಆದರೆ ತಿಂಗಳಿಗೆ ಹನ್ನೆರಡು ರೂಪಾಯಿ ವಿದ್ಯಾರ್ಥಿವೇತನದಲ್ಲಿ ಊಟ, ವಸತಿ, ಬಣ್ಣ ಬ್ರಷ್ ಎಲ್ಲದಕ್ಕೂ ಹಣ ಸಾಲದಾದಾಗ ಅಧ್ಯಾಪಕ ಕೇಶವಯ್ಯ ಇವರ ಕಷ್ಟವನ್ನು ಗಮನಿಸಿ ಸ್ವಂತಕ್ಕೆ ಚಿತ್ರಗಳನ್ನು ರಚಿಸುವಾಗ ಸಹಾಯಕನಾಗಿ ಕೆಲಸಮಾಡುವಂತೆ ತಿಳಿಸಿ, ಆ ಕೆಲಸಕ್ಕೆ ದಿನಕ್ಕೆ ಹನ್ನೆರಡಾಣೆ ಮಜೂರಿ ಕೊಟ್ಟು ನೆರವಾದರು.

ಪ್ರತಿಭಾನ್ವಿತ ಕಲಾವಿದ್ಯಾರ್ಥಿಯಾಗಿದ್ದ ಕುಕ್ಕೆಯವರು ಮದರಾಸಿನ ಹೈಯರ್ ಕಲಾಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಹೊಂದಿದರು. ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಐದು ವರ್ಷಗಳ ಡಿಪ್ಲೊಮ ಶಿಕ್ಷಣವನ್ನು ಪ್ರಥಮ ಶ್ರೇಣಿಯಲ್ಲಿ ಪೂರೈಸಿದರು. ಅನಂತರ ಶಿವಮೊಗ್ಗದಲ್ಲಿ ಚಿತ್ರಕಲೆ ಮತ್ತು ಅಂಗಸಾಧನೆಯನ್ನು ಕಲಿಸಲಾರಂಭಿಸಿದರು. ಉತ್ತಮ ದೇಹದಾರ್ಢ್ಯ ಹೊಂದಿದ್ದ ಇವರಿಗೆ ಜಿಲ್ಲಾ ಆರೋಗ್ಯ ಇಲಾಖೆ ಮಲ್ನಾಡ್ ಬೆಸ್ಟ್ ಎಂಬ ಬಿರುದು ನೀಡಿತ್ತು. ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಿಂದ ಕ್ರಾಫ್ಟ್‌ಮನ್ ಹುದ್ದೆಗೆ ಆದೇಶಗೊಂಡು ಸೇರಿದರಾದರೂ ಆ ಕೆಲಸ ಇವರಿಗೆ ಹಿಡಿಸಲಿಲ್ಲವಾದ್ದರಿಂದ ಕೆಲಸ ತ್ಯಜಿಸಿದರು. ಬಳಿಕ ಗುರುಗಳಾದ ಕೇಶವಯ್ಯನವರೊಂದಿಗೆ ಅರಮನೆಯಲ್ಲಿ ದಸರಾ ಪ್ಯಾನಲ್ ಕೆಲಸ ಪ್ರಾರಂಭಿಸಿದರು. ಅನಾರೋಗ್ಯದ ಕಾರಣ ಶಿವಮೊಗ್ಗೆಗೆ ಮರಳಿದವರಿಗೆ ಅಣ್ಣ ಸೀತಾರಾಮಶಾಸ್ತ್ರಿಗಳು ಕ್ಯಾಮರಾ ಕೊಡಿಸಿ ಫೋಟೋ ಸ್ಟುಡಿಯೋ ಪ್ರಾರಂಭಿಸಿಲು ನೆರವಾದರು. ಆದರೆ ಲಾಭವಿಲ್ಲದ ಕಾರಣ ಸ್ಟುಡಿಯೋ ಮುಚ್ಚಬೇಕಾಯಿತು. ವಿವಾಹನಂತರ ಮಾವನವರೊಂದಿಗೆ ಬೆಂಗಳೂರಿಗೆ ಬಂದು ಚಿಕ್ಕಪೇಟೆಯಲ್ಲಿ ಕುಕ್ಕೆ ಬ್ರದರ್ಸ್ ಎಂಬ ಹೆಸರಿನಲ್ಲಿ ಫೋಟೋ ಸ್ಟುಡಿಯೋ ಸ್ಥಾಪಿಸಿದರು. ಅದರಲ್ಲಿ ಚಿತ್ರಕಲಾ ಸ್ಟುಡಿಯೋ ಸಹ ಹೊಂದಿದ್ದರು. ವಾಣಿಜ್ಯ ಕಲಾವಿದರಾಗಿ ವೃತ್ತಿ ಜೀವನ ಆರಂಭಿಸಿದ ಇವರಿಗೆ ಒಂದಾದ ಮೇಲೊಂದು ಕೆಲಸಗಳು ಸಿಕ್ಕಿ ಪರಿಸ್ಥಿತಿ ಸುಧಾರಿಸಿತು.

ಚಲನಚಿತ್ರ ಕ್ಷೇತ್ರದಲ್ಲಿ ಹೆಸರಾಗಿದ್ದ ನಟ, ಸಂಗೀತಗಾರ ಹೊನ್ನಪ್ಪ ಭಾಗವತರ್ ಮತ್ತು ಕು.ರಾ.ಸೀತಾರಾಮಶಾಸ್ತ್ರಿಗಳ ಸಂಪರ್ಕ ಇವರಿಗೆ ಬಂತು. ಇವರನ್ನು ಮಹಾಕವಿ ಕಾಳಿದಾಸ ಚಲನಚಿತ್ರ ಕಲಾನಿರ್ದೇಶಕರಾಗಿ ಹೊನ್ನಪ್ಪ ಭಾಗವತರು ಆಹ್ವಾನಿಸಿದರು. ಈ ಕೆಲಸದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಚಿತ್ರ ಹೆಸರು ಗಳಿಸಲು ಸಹಾಯಕರಾದರು. ಅನಂತರ ಕೈವಾರ ಮಹಾತ್ಮೆ ಚಿತ್ರದ ಕಲಾನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.

ಕಲಾ ಮಾಧ್ಯಮದ ವಿವಿಧ ತಂತ್ರಗಳು ಇವರಿಗೆ ಸಿದ್ಧಿಸಿದ್ದವು. ಬ್ರಷ್‌ನಿಂದಲ್ಲದೆ, ಬ್ಲೇಡಿನಿಂದ, ದಾರದಿಂದ ಬಣ್ಣಲೇಪನ ಮಾಡುವುದು, ಕಾಲ್ಬೆರಳಿನಿಂದ, ಒಂದೇ ಕೈಯಿಂದ, ಎರಡೂ ಕೈಯಿಂದ ಚಿತ್ರರಚನೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಚಿತ್ರರಚನೆ ಮಾಡುವುದು ಇವರು ತೋರಿಸುತ್ತಿದ್ದ ಕೆಲವು ಚಮತ್ಕಾರಗಳು. ಚಿತ್ರ ಮಾಧ್ಯಮವೇ ಅಲ್ಲದೇ ಇವರು ಶಿಲ್ಪಕೃತಿಗಳ ರಚನೆಯನ್ನೂ ದಂತದಲ್ಲಿ, ತೇಗ, ಬೀಟೆ ಮರಗಳಲ್ಲಿ, ಪ್ಲಾಸ್ಟರ್ ಆಫ್ ಪ್ಯಾರೀಸ್ ಮಿಶ್ರಣದಲ್ಲಿ ಮಾಡಿದರು. ಶೀಘ್ರ ರೇಖಾ ರಚನೆ ಮತ್ತು ವ್ಯಕ್ತಿ ಚಿತ್ರಣ ಇವರಿಗೆ ಪ್ರಿಯವಾದ ಮಾಧ್ಯಮಗಳಾಗಿದ್ದವು.

ಮೈಸೂರು ಚಿತ್ರಕಲಾ ಪರಿಷತ್‌ನ (ಇಂದಿನ ಕರ್ನಾಟಕ ಚಿತ್ರ ಕಲಾ ಪರಿಷತ್ತು) ಸಂಸ್ಥಾಪಕ ಸದಸ್ಯರಾಗಿ ಮಹತ್ತರ ಪಾತ್ರವಹಿಸಿದರು. ಸಿದ್ದವನಹಳ್ಳಿ ಕೃಷ್ಣಶರ್ಮರ ಸಹಾಯದಿಂದ ಚಿತ್ರಕಲಾ ವಿದ್ಯಾಲಯ ಪ್ರಾರಂಭಿಸಿ ಕಲಾ ಶಿಕ್ಷಣಶಾಲೆಗೆ ಪ್ರಥಮ ಪ್ರಾಂಶುಪಾಲರಾಗಿ ನಿಯೋಜಿತರಾದರು. ಈ ಅವಧಿಯಲ್ಲಿ ಇವರು ಅನೇಕ ಕಲಾವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿ ಉತ್ತಮ ಕಲಾವಿದರನ್ನಾಗಿ ರೂಪಿಸಿದರು. 22 ಮಂದಿ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಕಲಾಶಾಲೆ ನೂರಾರು ಕಲಾ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿಯನ್ನು ನೀಡುವ ಚಿತ್ರಕಲಾ ಮಹಾವಿದ್ಯಾಲಯವಾಗಿ ಬೆಳೆದಿದೆ. ಇವರ ಕಲಾ ಪ್ರದರ್ಶನಗಳು ಹಲವು ಸಂಘ ಸಂಸ್ಥೆಗಳು ಹಾಗೂ ಅಕಾಡೆಮಿಗಳ ಮೂಲಕ ನಡೆದಿವೆ. ಚಿತ್ರಕಲಾ ಪರಿಷತ್ತು ಏರ್ಪಡಿಸಿದ್ದ ಕಲಾ ಶಿಬಿರಗಳಲ್ಲಿ ಇವರು ಪ್ರಮುಖ ಪಾತ್ರವಹಿಸುತ್ತಿದ್ದರು. ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಲಲಿತಾ ಕಲಾ ಅಕಾಡೆಮಿ ನೆರವಿನಿಂದ ಇವರೇ ಏರ್ಪಡಿಸಿದ್ದ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಲ್ಲಿ ಉಗುರಿನಿಂದ, ಚಾಕು ಅಲುಗಿನಿಂದ, ಕುಂಚದಿಂದ ರಚಿತವಾಗಿದ್ದ ಸುಮಾರು 46 ಕೃತಿಗಳನ್ನು ಪ್ರದರ್ಶಿಸಿದ್ದರು. ಪರಂಪರಾಗತ ಸಾಹಿತ್ಯ ಕಲಾಸಂಸ್ಕಾರಗಳು ಇವರಲ್ಲಿ ಸ್ವಾಭಾವಿಕವಾಗಿಯೆ ಬಂದಿದ್ದುವು. ಕಾವ್ಯ ಸನ್ನಿವೇಶಗಳನ್ನು ದೃಶ್ಯ ರೂಪಗಳಲ್ಲಿ ಚಿತ್ರಕಲೆಯ ಮೂಲಕ ಚಿತ್ರಿಸಿದರು. ಸಂಸ್ಕೃತ ಕಾವ್ಯ ಶ್ಲೋಕಗಳ ಸೂಕ್ಷ್ಮ ವರ್ಣನೆಗಳನ್ನು ಆಧರಿಸಿ ರಚಿಸಿದ ಇವರ ಪ್ರತಿಯೊಂದು ಕೃತಿಯೂ ಅಪಾರ ಶ್ರಮದ ಕುಸುರಿ ಕೆಲಸದಿಂದ ಸಾಮಾನ್ಯ ವೀಕ್ಷಕರನ್ನೂ ತಲಪುವಲ್ಲಿ ಯಶಸ್ವಿಯಾಯಿತು. ಬೆಂಗಳೂರಿನ ವೆಂಕಟಪ್ಪ ಕಲಾಭವನ, ಮೈಸೂರು ದಸರ ವಸ್ತುಪ್ರದರ್ಶನಗಳಲ್ಲಿ ಪುರಾಣ, ಇತಿಹಾಸಗಳಿಗೆ ಸಂಬಂಧಿಸಿದ ವ್ಯಕ್ತಿ ಚಿತ್ರಗಳು, ಪ್ರಾಚೀನ ಕಾವ್ಯಗಳನ್ನಾಧರಿಸಿದ ಮೇನಕಾ ವಿಶ್ವಾಮಿತ್ರ, ಕುಮಾರ ಸಂಭವ ಮೊದಲಾದ ಕಲಾಕೃತಿಗಳು ಪ್ರದರ್ಶನಗೊಂಡಿವೆ.

ಇವರಿಗೆ ಅನೇಕ ಸನ್ಮಾನ ಗೌರವಗಳು ಲಭಿಸಿವೆ. ಹಿಂದೆ ಮೈಸೂರು ದಸರ ವಸ್ತುಪ್ರದರ್ಶನದ ಚಿತ್ರಕಲಾ ಪ್ರದರ್ಶನದಲ್ಲಿ ಬಹುಮಾನ ಗಳಿಸುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಇವರಿಗೆ 1940ರಿಂದ ಸತತವಾಗಿ 30ಕ್ಕೂ ಹೆಚ್ಚು ಬಹುಮಾನಗಳು ಬಂದವು. ಸತತ ಏಳು ವರ್ಷಗಳು ಪ್ರಥಮ ಬಹುಮಾನ ಪಡೆದರು. ಬೆಂಗಳೂರಿನಲ್ಲಿ ಜರುಗಿದ ಅಖಿಲ ಭಾರತ ಕಲಾ ಪ್ರದರ್ಶನದಲ್ಲಿ ಪ್ರಜಾವಾಣಿಯವರ ವಿಶೇಷ ಬಹುಮಾನ ಲಭ್ಯವಾಗಿತ್ತು. ನಲವತ್ತೊಂಬತ್ತನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಸನ್ಮಾನಿಸಿತು. ವಿಧಾನಸೌಧದಲ್ಲಿ ನಾಡಿನ ಖ್ಯಾತ ಚಿತ್ರಕಲಾವಿದರನ್ನು ಸನ್ಮಾನಿಸುವ ಸಮಾರಂಭದಲ್ಲಿ ಸನ್ಮಾನವಾಯಿತು. (1973). ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1982), ರಾಜ್ಯೋತ್ಸವ ಪ್ರಶಸ್ತಿ (1976) ಇವರಿಗೆ ಲಭಿಸಿವೆ.

ಇವರ ಕಲಾಕೃತಿಗಳನ್ನು ಕರ್ನಾಟಕದ ಅನೇಕ ಕಡೆ ಪ್ರದರ್ಶಿಸಲಾಗಿದೆ. ಬೆಂಗಳೂರಿನ ಜಯನಗರದಲ್ಲಿರುವ ಇವರ ನಿವಾಸದಲ್ಲಿ ತಮ್ಮ ತಂದೆಯವರ ಹೆಸರಿನಲ್ಲಿ ಸ್ಥಾಪಿಸಿದ ಸುಬ್ರಹ್ಮಣ್ಯ ಆರ್ಟ್ ಗ್ಯಾಲರಿಯಲ್ಲಿಯೂ ಇವರ ಕಲಾ ಕೃತಿಗಳಿವೆ. ಇವರು 1991 ಜನವರಿ 1ರಂದು ನಿಧನರಾದರು. (ಎಸ್‌ಯು.ಎಂ.)

**ಕುಡಚಿ :** ಬೆಳಗಾಂವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ ಕಸಬೆಯಿಂದ ಸು.18ಕಿಮೀ ಉತ್ತರ ಈಶಾನ್ಯದಲ್ಲಿ ಕೃಷ್ಣಾನದಿಯ ಬಲದಂಡೆಯಲ್ಲಿರುವ ಊರು. ಹುಬ್ಬಳ್ಳಿ - ಪುಣೆ ರೈಲುಮಾರ್ಗದ ಒಂದು ನಿಲ್ದಾಣ. ಕೃಷ್ಣಾನದಿಗೆ ಈ ಊರಿನ ಬಳಿ ದೊಡ್ಡ ಸೇತುವೆಯೊಂದನ್ನು ರಚಿಸಲಾಗಿದ್ದು ಇದು ಮಹಾರಾಷ್ಟ್ರದ ಮೀರಜ್ ಮೊದಲಾದೆಡೆಗಳಿಂದ ರಾಯಭಾಗ ತಾಲ್ಲೂಕಿಗೆ ಸಂಪರ್ಕ ಒದಗಿಸುತ್ತದೆ.

ಈ ಊರನ್ನು ಮಹಮ್ಮದ್ ತುಗಲಕನಿಂದ ಬಹಮನೀ ರಾಜ್ಯದ ಸ್ಥಾಪಕನಾದ ಹಸನ್ ಗುಂಗುವಿಗೆ ಜಹಗೀರಾಗಿ ಕೊಡಲಾಗಿತ್ತು. ಹಸನ್ ಗಂಗು ತುಗಲಕನಿಂದ ಗಳಿಸಿದ್ದ ಜಹಗೀರುಗಳಲ್ಲಿ ಇದೇ ಮೊದಲನೆಯದು ಎಂದು ಫೆರಿಷ್ಟ ತಿಳಿಸಿದ್ದಾನೆ. ಕುಡಚಿಯ ಸಮೀಪದಲ್ಲಿ ಕೃಷ್ಣಾ ನದಿಯ ನಡುಗಡ್ಡೆಯೊಂದರಲ್ಲಿ ಶೇಖ್ ಮಹಮ್ಮದ್ ಸಿರಾಜ್ಜೀನ ದಿ ಪೀರ್ದಾದಿ ಎಂಬ ಸಂತನ ಗೋರಿ ಇದೆ. ಈತ ಅನೇಕ ಜನರನ್ನು ಇಸ್ಲಾಮಿಗೆ ಮತಾಂತರಗೊಳಿಸಿದನೆಂದೂ ಅವರಲ್ಲಿ ಬಾಲ್ಕ್ ದೇಶದ ರಾಜಕುಮಾರಿ ಮಸಪ್ಲಿ ಎಂಬುವಳು ಒಬ್ಬಳೆಂದೂ ಹೇಳಲಾಗಿದೆ. ಈತ ಗುಲ್ಬರ್ಗದಲ್ಲಿ ನಿಧನನಾದ. ಆದರೆ ಇವನ ಗೌರವಾರ್ಥ ಕುಡಚಿಯಲ್ಲಿ ಮಸಪ್ಲಿಯ ಗೋರಿಯ ಬಳಿ ದರ್ಗಾವನ್ನು ರಚಿಸಲಾಯಿತು. ಈ ಗೋರಿಗಳ ಬಳಿ ಪತ್ರಿ ವರ್ಷ ಉರ್ಸ್ ನಡೆಯುತ್ತದೆ.

ಕುಡಚಿಯ ಬಳಿಯಲ್ಲಿ ಶಿಲಾ -ತಾಮ್ರಯುಗದ ಪ್ರಾಚೀನ ನೆಲೆಯೊಂದನ್ನು ಈಚೆಗೆ ಗುರುತಿಸಲಾಗಿದೆ. *

**ಕುಣಿಗಲು :** ತುಮಕೂರು ಜಿಲ್ಲೆಯ ದಕ್ಷಿಣದ ಕೊನೆಯಲ್ಲಿರುವ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಈ ತಾಲ್ಲೂಕನ್ನು ತುರುವೇಕೆರೆ, ಗುಬ್ಬಿ, ತುಮಕೂರು ತಾಲ್ಲೂಕುಗಳು ಮತ್ತು ಮಂಡ್ಯ ಬೆಂಗಳೂರು ಜಿಲ್ಲೆಗಳು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 964.5ಚಕಿಮೀ. ಜನಸಂಖ್ಯೆ 2,35,182. ಹೋಬಳಿಗಳು ಐದು - ಕುಣಿಗಲು, ಎಡೆಯೂರು, ಅಮೃತೂರು, ಹುಲಿಯೂರುದುರ್ಗ ಮತ್ತು ಕೊತ್ತಗೆರೆ. ಗ್ರಾಮಗಳು 313.

ತಾಲ್ಲೂಕಿನ ಹೆಚ್ಚು ಭಾಗದಲ್ಲಿ ಪ್ರಸ್ತಭೂಮಿಯ ಲಕ್ಷಣಗಳಿವೆ. ಏರಿಳಿತಗಳಿಂದ ಕೂಡಿದ ಭೂಮಿಯಲ್ಲಿ ಅಲ್ಲಲ್ಲಿ ಆಳವಾದ ಕಮರಿಗಳಿವೆ. ಪೂರ್ವ ಮತ್ತು ಆಗ್ನೇಯದ ಹುತ್ರಿದುರ್ಗ ಮತ್ತು ಹುಲಿಯೂರು ದುರ್ಗಗಳು ಬೆಟ್ಟಗಳಿಂದ ಕೂಡಿವೆ. ಹುತ್ರಿದುರ್ಗ ಪ್ರದೇಶ ಹೆಚ್ಚು

ಬೆಂಗಾಡು. ಹುಲಿಯೂರುದುರ್ಗದಲ್ಲಿ ಹೆಚ್ಚು ಅರಣ್ಯಪ್ರದೇಶವಿದೆ. ಆದರೆ ಕಾಡು ದಟ್ಟವಲ್ಲ. ಮರಮುಟ್ಟುಗಳಿಗೆ ಆಗುವಂಥ ದೊಡ್ಡ ಮರಗಳಿಲ್ಲ. ತಾಲ್ಲೂಕಿನ ಹಲವು ಭಾಗಗಳಲ್ಲಿ ಅನೇಕ ತೋಪುಗಳಿವೆ. ಪಿಂಗಾಣಿ ಕೈಗಾರಿಕೆಗೆ ಉಪಯೋಗವಾಗುವ ಫೆಲ್ಡ್‌ಸ್ಪಾರ್ ನಿಕ್ಷೇಪಗಳು ಈ ತಾಲ್ಲೂಕಿನಲ್ಲಿವೆ. ಬಂಡಿಹಳ್ಳಿ ಎಂಬಲ್ಲಿ ಗಾರ್ನೆಟ್ ಮತ್ತು ಕೊರಂಡಮ್ ದೊರಕುತ್ತವೆ. ಹೆಚ್ಚಿನ ಭಾಗದಲ್ಲಿ ಕಣಶಿಲೆ (ಗ್ರ್ಯಾನೈಟ್) ಆಧಾರಶಿಲೆಯಾಗಿದೆ.

ಎತ್ತರ ಪ್ರದೇಶದಲ್ಲಿ ಬೂದುಬಣ್ಣದ, ಮರಳು ನಿಂದ ಕೂಡಿದ ಮಣ್ಣಿದೆ; ಆದರೆ ಕೆಳಗಿನ ಕಣಿವೆಗಳಲ್ಲಿರುವ ಮಣ್ಣು ಸಾಕಷ್ಟು ಉತ್ತಮವಾಗಿದೆ. ವಾರ್ಷಿಕ ಮಳೆ 751.44ಮಿಮೀ. ತಾಲ್ಲೂಕಿನ ಪಶ್ಚಿಮ ಅಂಚಿನಲ್ಲಿ ಹರಿಯುವ ಶಿಂಷಾನದಿಗೆ ಮಾರ್ಕೋನಹಳ್ಳಿಯಲ್ಲಿ ಒಂದು ಅಣೆಕಟ್ಟಿದೆ. ಈ ಅಣೆಕಟ್ಟು ಮತ್ತು ಮಂಗಳ ಎಂಬಲ್ಲಿ ನಾಗಿನಿ ಹಳ್ಳಕ್ಕೆ ಕಟ್ಟಿರುವ ಅಣೆಕಟ್ಟು ಹಾಗೂ 166 ಕೆರೆಗಳು ಮತ್ತು ಅನೇಕ ಬಾವಿಗಳು ನೀರಾವರಿ ಸೌಕರ್ಯವನ್ನು ಒದಗಿಸುತ್ತವೆ. ನೀರಿನ ಅನುಕೂಲ ಇರುವೆಡೆಗಳಲ್ಲಿ ಬತ್ತ ಅಥವಾ ಕಬ್ಬನ್ನೂ ಉಳಿದೆಡೆಗಳಲ್ಲಿ ರಾಗಿ, ಜೋಳ, ಅವರೆ, ತೊಗರಿ, ಹರಳು ಮುಂತಾದ ಬೆಳೆಗಳನ್ನೂ ಬೆಳೆಯುತ್ತಾರೆ. ಕುಣಿಗಲಿನಲ್ಲಿ ಒಂದು ವ್ಯವಸಾಯ ಉಪಕರಣಗಳ ತಯಾರಿಕಾ ಸಂಸ್ಥೆ ಇದೆ. ಸ್ವಲ್ಪ ಮಟ್ಟಿಗೆ ರೇಷ್ಮೆ ಉದ್ಯಮ, ಕಂಬಳಿ ಮತ್ತು ಹತ್ತಿನೇಯ್ಗೆಯೂ ಇವೆ.

ಅಮೃತೂರು (ನೋಡಿ), ಹುಲಿಯೂರುದುರ್ಗ (ನೋಡಿ) ಹುತ್ರಿದುರ್ಗ (ನೋಡಿ) ತಾಲ್ಲೂಕಿನ ದೊಡ್ಡ ಸ್ಥಳಗಳು. ತೋಂಟದ ಸಿದ್ಧಲಿಂಗೇಶ್ವರ ಗದ್ದಿಗೆ ಇರುವ ಎಡೆಯೂರು (ನೋಡಿ) ಮತ್ತು ಅವರಿದ್ದ ಕಗ್ಗೆರೆ ತೀರ್ಥಕ್ಷೇತ್ರಗಳು. ಕೊಡವತ್ತಿ ಎಂಬಲ್ಲಿ ಒಂದು ಲಿಂಗಾಯತ ಮಠವಿದೆ. ಕೊತ್ತಗೆರೆ ಹೊಯ್ಸಳರ ಕಾಲದಲ್ಲಿ ಶ್ರೀಧರಪುರವೆಂದು ಪ್ರಸಿದ್ಧಿ ಪಡೆದಿತ್ತು.

ಕುಣಿಗಲು ತಾಲ್ಲೂಕಿನ ಮುಖ್ಯಸ್ಥಳ. ತುಮಕೂರಿನ ದಕ್ಷಿಣಕ್ಕೆ 38ಕಿಮೀ ದೂರದಲ್ಲಿ ಬೆಂಗಳೂರು-ಹಾಸನ ಹೆದ್ದಾರಿಯಲ್ಲಿದೆ. ಜನಸಂಖ್ಯೆ 30,291.

ಇಲ್ಲಿ ಶಿವ ಹಿಂದೆ ನರ್ತನ ಮಾಡಿದ್ದ; ಆದ್ದರಿಂದ ಈ ಸ್ಥಳಕ್ಕೆ ಕುಣಿಗಲ್ ಎಂಬ ಹೆಸರಾಯಿತೆಂದೂ ಐತಿಹ್ಯ. ಪ್ರಾಚೀನ ಕನ್ನಡ ಹಾಗೂ ತಮಿಳು ಶಾಸನಗಳಲ್ಲಿ ಈ ಊರನ್ನು ಕುಣುಂಗಿಲ್, ಕುಣಿಂಗಿಲ್ ಎಂದು ಹೆಸರಿಸಲಾಗಿದೆ. ಶಿವಗಂಗೆಯಲ್ಲಿ ಹುಟ್ಟಿ ಹರಿಯುವ ನಳಿನಿ, ನಾಗಿನಿ ಮತ್ತು ಕಮಲ ನದಿಗಳು ಇಲ್ಲಿ ಸಂಗಮವಾಗುತ್ತವೆಂದು ಪ್ರತೀತಿ. ಈಗ ಈ ಮೂರು ನದಿಗಳ ನೀರನ್ನೂ ಶೇಖರಿಸುವ ದೊಡ್ಡಕೆರೆ ಇದೆ. ಉತ್ತರದೇಶದಿಂದ ಬಂದ ನೃಗ ಚಕ್ರವರ್ತಿ ಇಲ್ಲಿ ಸ್ನಾನಮಾಡಲಾಗಿ, ಅವನ ಕುಷ್ಠರೋಗ ವಾಸಿಯಾಗಿ, ಅವನೇ ಇಲ್ಲಿನ ಕೆರೆಯನ್ನು ಕಟ್ಟಿಸಿದನಂತೆ. ಈ ಕೆರೆ ಭರ್ತಿಯಿದ್ದಾಗ 23ಕಿಮೀ ಸುತ್ತಳತೆಯುಳ್ಳದ್ದೆಂದು ಅಂದಾಜು ಮಾಡಲಾಗಿದೆ.

ಕುಣಿಗಲು ಹಿಂದೆ ಕುಣಿಂಗಲು ನಾಡು ಎಂಬ ಪ್ರಾಚೀನ ಪ್ರಾಂತ್ಯದ ಕೇಂದ್ರವಾಗಿತ್ತು. ಈ ನಾಡಿಗೆ ಸು.785ರಲ್ಲಿ ಗಂಗವಂಶದ ಶಿವಮಾರ, ರಾಷ್ಟ್ರಕೂಟರ ಆಳ್ವಿಕೆಯಲ್ಲಿ ವಿಮಲಾದಿತ್ಯ (ಸು.812) ರಾಜ್ಯಪಾಲರಾಗಿದ್ದರು. ಚೋಳರ ಕಾಲದಲ್ಲಿ ಈ ಊರಿಗೆ ರಾಜೇಂದ್ರ ಶೋಳಪುರಂ ಎಂಬ ಹೆಸರಿತ್ತು. ಹೊಯ್ಸಳರ ಕಾಲದಲ್ಲಿ ಇದೊಂದು ಅಗ್ರಹಾರ. ವೀರಶೈವಧರ್ಮ, ಅದ್ವೈತ ವೇದಾಂತ ಹಾಗೂ ತರ್ಕಶಾಸ್ತ್ರಗಳಿಗೆ ಸಂಬಂಧಪಟ್ಟ ಹಲವು ಪ್ರಾಚೀನ ಕನ್ನಡ ಮತ್ತು ಸಂಸ್ಕೃತ ಗ್ರಂಥಗಳು ಇಲ್ಲಿ ಸಿಕ್ಕಿವೆ. ಇಲ್ಲಿನ ಕೋಟೆಯ ತಳಹದಿಯನ್ನು 1290ರಲ್ಲಿ ವೀರ ಕಂಬಲರಾಯ ಹಾಕಿದನೆಂದೂ ಅನಂತರ ಮಾಗಡಿಯ ನಾಯಕನೊಬ್ಬ ಈ ಕೋಟೆಯನ್ನೂ ಈ ಊರನ್ನೂ ವಿಸ್ತರಿಸಿ ಕಟ್ಟಿದನೆಂದೂ ಹೇಳಿಕೆ ಇದೆ.

ಇಲ್ಲಿನ ದೇವಾಲಯಗಳಲ್ಲಿ ಅತ್ಯಂತ ಪ್ರಮುಖವೆನಿಸಿರುವುದು ನರಸಿಂಹನ ಗುಡಿ. ಮೂಲತಃ ಇದು ಹೊಯ್ಸಳ ಶೈಲಿಯಲ್ಲಿದ್ದು, ಗರ್ಭಗುಡಿ, ಸುಕನಾಸಿ ಮತ್ತು ನವರಂಗಗಳನ್ನು ಹೊಂದಿತ್ತು. ಅನಂತರದ ಸೇರ್ಪಡೆಗಳಿಂದ ಈಗ ದೊಡ್ಡ ಕಟ್ಟಡವಾಗಿದೆ. ಈಗ ಈ ಗುಡಿಯಲ್ಲಿರುವುದು ನರಸಿಂಹನ ವಿಗ್ರಹವಲ್ಲ, ಜನಾರ್ದನನದು. ಈ ಮೂರ್ತಿಯನ್ನು ಹುಲಿಯೂರುದುರ್ಗದಿಂದ ತರಲಾಗಿದೆ. ಸೋಮೇಶ್ವರ ದೇವಾಲಯದ ಹಲವು ಭಾಗಗಳು ಹೊಯ್ಸಳರ ಕಾಲದಿಂದ ಹಿಡಿದು ಪಾಳೆಯಗಾರರ ಕಾಲದವರೆಗೂ ಹಲವು ಕಾಲದಲ್ಲಿ ಕಟ್ಟಿರುವುವು. ವೆಂಕಟರಮಣ ದೇವಾಲಯದಲ್ಲಿ ಸಾಲಾಗಿ ಮೂರು ಗುಡಿಗಳಿದ್ದು, ಮಧ್ಯದಲ್ಲಿ 3½' ಎತ್ತರದ ಸುಂದರವಾದ ಶ್ರೀನಿವಾಸನ ಮೂರ್ತಿಯಿದೆ. ಹೊಸದಾಗಿ ಕಟ್ಟಿರುವ ಶಿವರಾಮೇಶ್ವರ ದೇವಾಲಯದಲ್ಲಿ ಗಂಗಶೈಲಿಯ ಮಹಿಷಾಸುರಮರ್ದಿನಿ ವಿಗ್ರಹ ಇದೆ. ಇದು ಕೊತ್ತಗೆರೆಯಲ್ಲಿನ ಕೋಟೇಶ್ವರ ದೇವಾಲಯದಲ್ಲಿದ್ದುದು.

ಕುಣಿಗಲು ಹೆಚ್ಚು ಪ್ರಸಿದ್ಧವಾಗಿರುವುದು ಇಲ್ಲಿರುವ ಅಶ್ವವರ್ಧನ ಶಾಲೆಗಾಗಿ (ಸ್ಟಡ್ ಫಾರ್ಮ್). ಇದು ಇಡೀ ಭಾರತದಲ್ಲೇ ಪ್ರಥಮವಾಗಿ ಸ್ಥಾಪಿತವಾದದ್ದು. ಸು.175 ವರ್ಷಗಳಿಂದಲೂ ಉತ್ತಮ ಸ್ಥಿತಿಯಲ್ಲಿದೆ. ಮೊದಲು ಅಂದಿನ ಮೈಸೂರು ಸೈನ್ಯಕ್ಕೆ ಉತ್ತಮ ತಳಿಯ ಕುದುರೆಗಳನ್ನೂ ಒದಗಿಸುವ ಸಲುವಾಗಿ ಪ್ರಾರಂಭವಾದ ಈ ಕೇಂದ್ರದಲ್ಲಿ ಈಗ ರೇಸ್ ಕುದುರೆಗಳನ್ನು ಬೆಳೆಸಲಾಗುತ್ತಿದೆ. 1886ರಲ್ಲಿ ಇಂಗ್ಲೆಂಡಿನಿಂದ ಬೀಜದ ಕುದುರೆಯನ್ನು ತರಿಸಿ ಈ ಉದ್ಯಮವನ್ನು ಪ್ರಾರಂಭಿಸಲಾಯಿತು. ಇಲ್ಲಿನ ಕೆಲವು ತಳಿಯ ಕುದುರೆಗಳು ವಿದೇಶೀ ಕುದುರೆಗಳಷ್ಟೇ ಉತ್ತಮವೆನಿಸಿ, ಹಲವಾರು ಪ್ರತಿಷ್ಠಿತ ರೇಸ್‌ಗಳಲ್ಲಿ ಗೆದ್ದು ಹೊಸ ದಾಖಲೆಗಳನ್ನು ಸ್ಥಾಪಿಸಿವೆ. ಈ ಊರು ರೇಷ್ಮೆ ಕೈಗಾರಿಕೆಗೂ ಸಾಕಷ್ಟು ಹೆಸರಾಗಿದೆ. (ಎಸ್.ಜಿ.)

**ಕುದುರೆಮುಖ :** ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಪಶ್ಚಿಮಘಟ್ಟದ ಉನ್ನತ ಶಿಖರಗಳಲ್ಲಿ ಒಂದು. ಪಶ್ಚಿಮ ದಿಕ್ಕಿನಿಂದ ಇದು ಕುದುರೆಯ ಮುಖದಂತೆ ಕಾಣುವುದರಿಂದ ಶಿಖರಕ್ಕೆ ಈ ಹೆಸರು ಬಂದಿದೆ. ಚಿಕ್ಕಮಗಳೂರಿನಿಂದ ಸು.80ಕಿಮೀ ನೈಋತ್ಯದಲ್ಲಿ ಜಿಲ್ಲೆಯಂಚಿನಲ್ಲಿ,



ಕುದುರೆಮುಖ ಪಕ್ಷಿನೋಟ

ಕಳಸದಿಂದ ಸು.15ಕಿಮೀ ದೂರದಲ್ಲಿರುವ ಕುದುರೆಮುಖ ಶಿಖರ ಸಮುದ್ರಮಟ್ಟಕ್ಕಿಂತ ಸು.1894ಮೀ ಎತ್ತರವಿದೆ. ಶಿಖರಾರೋಹಣಕ್ಕೆ ಚಿಕ್ಕಮಗಳೂರು ಕಡೆಯ ದಾರಿ ದುರ್ಗಮವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ದಾರಿಯನ್ನೇ ಸಾಮಾನ್ಯವಾಗಿ ಅನುಸರಿಸಲಾಗುತ್ತಿದೆ. ಮಂಗಳೂರಿಗೆ 65ಕಿಮೀ ದೂರವಿರುವ ಬೆಟ್ಟದ ತಪ್ಪಲಲ್ಲಿರುವ ನಾವೂರು ತನಕ ರಸ್ತೆಯಿದೆ. ಉಳಿದದ್ದು ಕಾಲು ದಾರಿ. ಸಾಹಸಪ್ರಿಯರು ಕಡಿದಾದ

ಬೆಟ್ಟವನ್ನೇರುವುದುಂಟು. ಕುದುರೆಮುಖದಿಂದ ಕಾಣುವ ಸುತ್ತಣ ಪ್ರಕೃತಿ ದೃಶ್ಯ ಮನೋಹರವಾದದ್ದು. ಕುದುರೆಮುಖದಲ್ಲಿ ಮೃಗ ಪಕ್ಷಿ ವಾಸ ವಿರಳ. ಕಾಡುಕೋಳಿಗಳು ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇಲ್ಲಿ ಬೃಹತ್ತಾದ ಒಂದು ಬಗೆಯ ಹುಲ್ಲು ಹುಲುಸಾಗಿ ಬೆಳೆಯುತ್ತದೆ.

ಕುದುರೆಮುಖದ ಪರ್ವತಸಾಲಿನಲ್ಲಿ ಮ್ಯಾಗ್ನಟೈಟ್, ಕ್ವಾರ್ಟ್‌ಜೈಟ್ ಕಬ್ಬಿಣದ ಅದುರು ಧಾರಾಳವಾಗಿದೆ ಎಂಬುದನ್ನು ಮೈಸೂರು ಸರ್ಕಾರದ ಭೂ ವಿಜ್ಞಾನ ವಿಭಾಗದವರು 1913ರಲ್ಲೇ ಕಂಡುಹಿಡಿದರು. ಆದರೆ ಈ ನಿಕ್ಷೇಪಗಳ ವಿವರವಾದ ಪರಿಶೀಲನೆ, ಗಣಿಗಾರಿಕೆಯ ಮತ್ತು ಉಪಯೋಗದ ಚಿಂತನ ಇತ್ತೀಚೆಗೆ ಮಾತ್ರ ಮೂಡಿದೆ. ಭಾರತ ಸರ್ಕಾರದ ಅಂಗಸಂಸ್ಥೆಯಾದ ರಾಷ್ಟ್ರೀಯ ಖನಿಜಾಭಿವೃದ್ಧಿ ಮಂಡಳಿ ಈ ಪ್ರದೇಶದಲ್ಲಿನ ನಿಕ್ಷೇಪಗಳಿಗಾಗಿ ತೀವ್ರ ಭೂವೈಜ್ಞಾನಿಕ ಸಮೀಕ್ಷೆ ನಡೆಸಿತು. ಹಿಂದೆ ಈ ಪ್ರದೇಶದಲ್ಲಿ ನಡೆದ ಸಂಶೋಧನೆಯವರದಿ ಪ್ರಕಾರ 10ಅಡಿ ಆಳದವರೆಗೆ 8,56,35,200 ಚ.ಅಡಿಯಲ್ಲಿ ಸು.1,67,27,000 ಟನ್ ಅದುರು ಇದೆ ಎಂದು ತಿಳಿದುಬಂದಿತ್ತು. ಇತ್ತೀಚಿನ ಸಮೀಕ್ಷೆಯಿಂದ ಕುದುರೆಮುಖ ಆರೋಳಿ ಭಾಗಗಳಲ್ಲಿ 100ಕೋಟಿ ಟನ್ ಅದುರು ಇದೆಯೆಂದು ನಿರ್ಧರಿಸಲಾಗಿದೆ. ಆದರೆ ಈ ಪ್ರದೇಶದ ನಿಕ್ಷೇಪಗಳಲ್ಲಿ ಒಟ್ಟು 300ಕೋಟಿ ಟನ್‌ಗಳಷ್ಟಾದರೂ ಕಬ್ಬಿಣದ ಅದುರು ಇರುವ ಸಾಧ್ಯತೆ ಇದೆ ಎಂದು ಅಂದಾಜು ಮಾಡಲಾಗಿದೆ. ಇದು ಏಷ್ಯದಲ್ಲೇ ಅತಿ ದೊಡ್ಡ ಕಬ್ಬಿಣದ ಅದುರಿನ ನಿಕ್ಷೇಪ.

ಭಾರತದ ಕಬ್ಬಿಣದ ಅದುರಿಗೆ ವಿದೇಶಗಳಲ್ಲಿ ಹೆಚ್ಚು ಬೇಡಿಕೆ ಇದೆ. ಭಾರತದ ಎಲ್ಲ ಕಬ್ಬಿಣದ ಅದುರು ನಿಕ್ಷೇಪಗಳೂ ರಫ್ತಿಗೆ ಅನುಕೂಲವಾದ ಬಂದರುಗಳಿಂದ ಕನಿಷ್ಠ 450 ಕಿಮೀ ದೂರದಲ್ಲಿವೆ. ಇದರಿಂದಾಗಿ ಅದುರನ್ನು ನಿಕ್ಷೇಪಗಳಿಂದ ಬಂದರುಗಳಿಗೆ ಸಾಗಿಸುವುದಕ್ಕೆ ಹೆಚ್ಚು ಹಣ ಖರ್ಚಾಗುವುದು. ಈ ದಿಶೆಯಲ್ಲಿ ಕುದುರೆಮುಖದ ಅದುರು ಸಾಗಾಣಿಕೆಗೆ ಹತ್ತಿರದ ಬಂದರಾದ ಮಂಗಳೂರು ಕೇವಲ 50ಕಿಮೀ ದೂರದಲ್ಲಿರುವುದರಿಂದ ಇಲ್ಲಿನ ಅದುರಿನ ನಿಕ್ಷೇಪಕ್ಕೆ ಅತಿ ಹೆಚ್ಚಿನ ಮಹತ್ತ್ವ ಬಂದಿದೆ. ಕುದುರೆಮುಖದ ಅದುರಿನಲ್ಲಿ ಸೇ.60ಕ್ಕೂ ಹೆಚ್ಚು ಕಬ್ಬಿಣದಂಶವಿದ್ದರೂ ಬೆಣಚಿನ ಅಂಶವೂ ಸಾಕಷ್ಟು ಪ್ರಮಾಣದಲ್ಲಿರುವುದರಿಂದ, ಹೊರತೆಗೆದ ಅದುರನ್ನು ನೇರವಾಗಿ ಪರದೇಶಗಳಿಗೆ ರಫ್ತು ಮಾಡುವ ದರ್ಜೆಯದಾಗಿಲ್ಲ. ಆದ್ದರಿಂದ ಅದುರನ್ನು ಸಾರೀಕರಿಸಿದ ಅನಂತರವೇ ರಫ್ತು ಮಾಡಬಹುದು. ಅತ್ಯಂತ ಆಧುನಿಕ ತಾಂತ್ರಿಕ ಕುಶಲತೆಯಿಂದ ಪ್ರಾರಂಭದಲ್ಲಿ 40 ಲಕ್ಷ ಟನ್ ಪರಿಷ್ಕರಿಸಿದ ಅದುರನ್ನು ಉತ್ಪಾದಿಸಲು ಪ್ರಯತ್ನಗಳು ನಡೆದಿದೆ. ಈ ಪ್ರಮಾಣದ ಪರಿಷ್ಕರಿಸಿದ ಅದುರಿನ ಉತ್ಪಾದನೆಗೆ ಕನಿಷ್ಟ ಪಕ್ಷ 140 ಲಕ್ಷ ಟನ್ ಕೆಳದರ್ಜೆ ಅದುರನ್ನು ಬಳಸಬೇಕಾಗುವುದು. ಅಂದರೆ ಪ್ರತಿ ದಿನ 60,000 ಟನ್ ಮ್ಯಾಗ್ನಟೈಟ್ ಕ್ವಾರ್ಟ್‌ಜೈಟ್ ಅದುರನ್ನು ಹೊರತೆಗೆಯಬೇಕಾಗುವುದು. ಪರಿಷ್ಕರಿಸಿದ ಅದುರನ್ನು ನೀರಿನಲ್ಲಿ ಬೆರೆಸಿ (ಬುರುದೇ ರಾಡಿ ಮಾಡಿ) ಕುದುರೆಮುಖದಿಂದ ಮಂಗಳೂರು ಬಂದರಿಗೆ ನೇರ ಕೊಳವೆ ಮಾರ್ಗವಾಗಿ ಹಡಗಿಗೆ ತುಂಬಿ ಸಾಗಿಸುವ ಏರ್ಪಾಡು ಯಶಸ್ವಿಯಾಗಿದೆ. ಇದು ಬೃಹತ್ಪ್ರಮಾಣದ ಗಣಿಗಾರಿಕೆ ಕಾರ್ಯ. ಈ ಯೋಜನೆಯಿಂದ ಕರ್ನಾಟಕದ ಖನಿಜೋದ್ಯಮದಲ್ಲಿ ಒಂದು ಹೊಸ ಪರ್ವ ಆರಂಭವಾಗಿದೆ.

ಈ ನಿಕ್ಷೇಪಗಳ ಅದುರಿನ ಗಣಿಗಾರಿಕೆ, ಸಂಸ್ಕರಣಾಭಿವೃದ್ಧಿಯನ್ನು ಪರಸ್ಪರ ಸಹಕಾರದಿಂದ ನಿರ್ವಹಿಸಲು ಭಾರತ ಮತ್ತು ಇರಾನ್ ದೇಶಗಳ ಒಪ್ಪಂದದ ಅಡಿಯಲ್ಲಿ ಇದು ಕಾರ್ಯಾರಂಭವಾಯಿತು. ಈಗ ಪರಿಸರ ರಕ್ಷಣೆಯ ದೃಷ್ಟಿಯಿಂದ ಈ ಕಾರ್ಯವನ್ನು ಮುಂದುವರಿಸಿದ್ದರ ಬಗ್ಗೆ ವಿವಾದಗಳು ಉದ್ಭವಿಸಿವೆ. (ಎಂ.ಆರ್‌ಎ.;ಎಂ.ಎಸ್.ಎಂ.)

**ಕುದ್ಮುಲ್ ರಂಗರಾವ್ :** 1859-1928. ದಲಿತರ ಕಲ್ಯಾಣಕ್ಕಾಗಿ, ಸಮಾಜ ಸುಧಾರಣೆಗಾಗಿ ಬದುಕನ್ನು ಮುಡುಪಾಗಿಟ್ಟಿದ್ದ ಸಮಾಜ ಸೇವಕರು. 'ನಾನು ಜೀವಂತನಾಗಿರುವಾಗಲೇ, ಓರ್ವ ಪರಿಶಿಷ್ಟ ಜಾತಿಯ ಪಂಗಡದ ವಿದ್ಯಾರ್ಥಿ ತನ್ನ ವಿದ್ಯಾಸಂಸ್ಥೆಯ ಮೂಲಕ ವಿದ್ಯಾವಂತ ಪದವೀಧರನಾಗಿ ಜೀವನದಲ್ಲಿ ಉನ್ನತ ಉದ್ಯೋಗ ಹೊಂದಿ ಅವನದೇ ಆದ ಮೋಟಾರು ವಾಹನದಲ್ಲಿ ಹೋಗುತ್ತಿರುವಾಗ ರಸ್ತೆಯಲ್ಲಿ ಎದ್ದ ಧೂಳನ್ನು ನಾನು ಪ್ರತ್ಯಕ್ಷ ಕಾಣಬೇಕು' ಎಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದವರು. ಸರಳ ಜೀವನ ಇವರ ಬದುಕಿನ ವೈಶಿಷ್ಟ್ಯವಾಗಿತ್ತು. ಬದುಕಿನುದ್ದಕ್ಕೂ ಸಾಂಪ್ರದಾಯಿಕ ಸಮಾಜದ ಆಚಾರ ವಿಚಾರಗಳ ವಿರುದ್ಧ ಈಜುವ

ಎದೆಗಾರಿಕೆಯನ್ನು ತೋರಿದ ಧೀಮಂತ ವ್ಯಕ್ತಿಯಾಗಿ ದೀನದಲಿತರ ಉದ್ಧಾರಕ್ಕಾಗಿ, ಅಸ್ಪೃಶ್ಯ ಜನಾಂಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಸಮರ್ಪಣ ಭಾವದಿಂದ ಪ್ರಾಮಾಣಿಕಸೇವೆಸಲ್ಲಿಸಿದರು. ಇವರು ಕಾಸರಗೋಡಿನ ಕುದ್ಮುಲ್ ಎಂಬ ಹಳ್ಳಿಯಲ್ಲಿ ಸಾರಸ್ವತ ಬ್ರಾಹ್ಮಣ ಮನೆತನದಲ್ಲಿ 1859 ಜೂನ್ 29ರಂದು ಹುಟ್ಟಿದ್ದರು. ತಂದೆ ದೇವಪ್ಪಯ್ಯ, ತಾಯಿ ಗೌರಿ. ಈ ದಂಪತಿಗಳ ಏಳು ಮಂದಿ ಮಕ್ಕಳಲ್ಲಿ ರಂಗರಾಯರು ಹಿರಿಯರು. ಕಷ್ಟದಲ್ಲಿ ಕಾಸರಗೋಡಿನಲ್ಲಿ ಬಾಲ್ಯ ಶಿಕ್ಷಣ ಮುಗಿಸಿ ತಮ್ಮ 16ನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ಉದ್ಯೋಗಾರ್ಥಿಯಾಗಿ ಮಂಗಳೂರಿಗೆ ಬಂದರು. ಆರ್ಥಿಕ ತೊಂದರೆಯಿಂದಾಗಿ ಓದಿಗೆ ವಿದಾಯ ಹೇಳಿದರು. ಖಾಸಗಿಯಾಗಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಬರೆದು ತೇರ್ಗಡೆಯಾದರು. ವಕಾಲತ್ತಿನ ಪ್ಲೀಡರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವಕಾಲತ್ತು ವೃತ್ತಿಯನ್ನು ಆರಂಭಿಸಿದರು. ರುಕ್ಮಿಣಿ ಇವರ ಸಹಧರ್ಮಿಣಿ. ಬಾಳಿನುದ್ದಕ್ಕೂ ರಾಯರ ಎಲ್ಲಾ ಚಟುವಟಿಕೆಗಳಿಗೆ ಬೆನ್ನೆಲುಬಾಗಿ ನಿಂತರು.

ಹಿಂದು ಸಮಾಜದಲ್ಲಿದ್ದ ಅಸ್ಪೃಶ್ಯತೆ, ಜಾತೀಯತೆ, ಬಾಲ್ಯವಿವಾಹ, ವಿಧವಾ ಸಮಸ್ಯೆ, ದೇವದಾಸಿ ಪದ್ಧತಿಗಳು ರಂಗರಾಯರ ಮನಸ್ಸನ್ನು ಕಲಕಿದುವು. ಹೀಗಾಗಿ ಇವರು ಸಮಾನತೆಯನ್ನು ಸಾರುವ ಆಶಯವಿಟ್ಟುಕೊಂಡ ಬ್ರಹ್ಮಸಮಾಜದ ಕಾರ್ಯಕರ್ತರಾದರು. ವಕಾಲತ್ತಿನ ಸಂದರ್ಭದಲ್ಲಿಯೂ ಇವರು ಬಡವರಿಗೆ ಸಾಕಷ್ಟು ನೆರವೀಯುತ್ತಿದ್ದರು. ವೃತ್ತಿಯಲ್ಲಿ 'ಬಡವರ ವಕೀಲರು' ಎಂದೇ ಪ್ರಸಿದ್ಧರಾಗಿದ್ದರು. 1887-88ರ ವೇಳೆಗೆ ನಡೆದ 'ಬೆಂದೂರು ಬಾಬು ಪ್ರಕರಣ' ಇವರ ಬದುಕಿನ ದಿಕ್ಕನ್ನು ಬದಲಿಸಿತು. ಇವರು ಸಾಗಬೇಕಾದ ದಾರಿ ಸ್ಪಷ್ಟವಾಯಿತು; ಹೊಸ ಅಧ್ಯಾಯಕ್ಕೆ ನಾಂದಿ ಹಾಡಿತು. ಅಸ್ಪೃಶ್ಯ ಪಂಗಡಕ್ಕೆ ಸೇರಿದ ಬೆಂದೂರು ಬಾಬು ಎಂಬಾತ ಕೋರ್ಟಿನಲ್ಲಿ ಪೇದೆಯಾಗಿ ನೇಮಕಗೊಂಡಾಗ ಸವರ್ಣೀಯ ನೌಕರರು ಇದನ್ನು ಪ್ರತಿಭಟಿಸಿದರು. ಸವರ್ಣೀಯರ ಸಂಕುಚಿತ ಭಾವನೆ ರಂಗರಾಯರ ಮನಸ್ಸನ್ನು ಕಲಕಿತು. ಆಗಲೇ ಇವರು ದೀನದಲಿತರ ಏಳಿಗೆಗೆ ಶ್ರಮಿಸಲು ನಿರ್ಧರಿಸಿ ತಮ್ಮ 34ನೆಯ ವಯಸ್ಸಿನಲ್ಲಿ ವಕೀಲಿ ವೃತ್ತಿ ತ್ಯಜಿಸಿ ಸಮಾಜಸೇವೆಯ ಸಂಕಲ್ಪ ಮಾಡಿದರು.

ಮೊದಲ ಹೆಜ್ಜೆಯಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಶಿಕ್ಷಣಕ್ಕಾಗಿ ಪ್ರಾಥಮಿಕ ಶಾಲೆ ಮತ್ತು ಆಶ್ರಮಗಳನ್ನು ಸ್ಥಾಪಿಸಲು ಇವರು ನಿರ್ಧರಿಸಿದರು. ದಲಿತರನ್ನು ಶೋಷಣೆಯಿಂದ ಬಿಡುಗಡೆಗೊಳಿಸಬಲ್ಲದ್ದೆಂದರೆ ಶಿಕ್ಷಣ ಮತ್ತು ಸಂಘಟನೆ ಎಂಬುದನ್ನರಿತರು. ದಲಿತರಿಗೆ ವಿದ್ಯೆಯನ್ನು ನೀಡಿದರೆ ಅವರು ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳಬಲ್ಲರೆಂಬುದು ಇವರ ದೂರದೃಷ್ಟಿಯ ಚಿಂತೆಯಾಗಿತ್ತು. ಹೀಗಾಗಿ 1892ರಲ್ಲಿ ಮಂಗಳೂರಿನ ಉರ್ವ ಚಿಲಿಂಬಿ ಎಂಬಲ್ಲಿ ದಲಿತರಿಗಾಗಿ ಹುಲ್ಲು ಛಾವಣಿಯ ಮನೆಯಲ್ಲಿ ಪ್ರಾಥಮಿಕ ಶಾಲೆಯೊಂದನ್ನು ತೆರೆದರು. ಭಾರತದ ಇತಿಹಾಸದಲ್ಲಿ ಇದೊಂದು ಚಾರಿತ್ರಿಕ ಘಟನೆ. ಇಡೀ ನಾಡಿನಲ್ಲಿಯೇ ಇವರು ತಳೆದ ಈ ನಿರ್ಧಾರ ಅತ್ಯಂತ ಕ್ರಾಂತಿಕಾರಕವಾದುದು. ಇದರಿಂದಾಗಿ ಇವರು ಹಲವರ ವಿರೋಧವನ್ನು ಎದುರಿಸಿದರು. ಉರ್ವ ಚಿಲಿಂಬಿ ಶಾಲೆ ಹೆಚ್ಚು ಸಮಯ ಬದುಕಲಿಲ್ಲ. ಆದರೆ ಇದರಿಂದ ವಿಚಲಿತರಾಗದ ಇವರು ಮಂಗಳೂರಿನ ಕಂಕನಾಡಿ,

ಶೇಡಿಗುಡ್ಡೆ ಮತ್ತು ಬೋಳೂರುಗಳಲ್ಲಿ ಎಲಿಮೆಂಟರಿ ಶಾಲೆಗಳನ್ನು ಆರಂಭಿಸಿದರು. ಅಲ್ಲದೆ ದಲಿತರಿಗೆ ವೃತ್ತಿಪರ ಶಿಕ್ಷಣವನ್ನು ಕಲಿಸುವ ಉದ್ದೇಶದಿಂದ ಕೈಗಾರಿಕಾ ತರಬೇತಿ ಶಾಲೆಯನ್ನು ಶೇಡಿಗುಡ್ಡೆಯಲ್ಲಿ ಸ್ಥಾಪಿಸಿದರು. ಹೀಗೆ ಮೂಲಶಿಕ್ಷಣದ ಮಹತ್ವವನ್ನು ಗಾಂಧೀಜಿಗಿಂತ ಮೊದಲೇ ಇವರು ಮನಗಂಡಿದ್ದರು. ತಾವು ಸ್ಥಾಪನೆ ಮಾಡಿದ ಶಾಲೆಗಳಲ್ಲಿ ಬಡಗಿ, ನೇಯ್ಗೆ, ತೋಟಗಾರಿಕೆ, ಕಸೂತಿ, ರೇಷ್ಮೆಸಾಕಣೆ ಇತ್ಯಾದಿ ವಿಷಯಗಳಲ್ಲಿ ತರಬೇತಿ ನೀಡುತ್ತಿದ್ದರು.

ದಲಿತರ ಸಾಂಪ್ರದಾಯಿಕ ಕಾರ್ಯಕ್ರಮಗಳಿಗಾಗಿ ಸ್ಟಾರ್ ಹೋಲ್ ಎಂಬ ಭವನವನ್ನು ಇವರು ಕಾಪಿಕಾಡಿನಲ್ಲಿ ಕಟ್ಟಿಸಿದರು. ಕೊರಗ ಜನಾಂಗದವರಿಗೆ ಆಶ್ರಯ ನೀಡಿ ಅವರ ಕುಲಕಸುಬಾದ ಗುಡಿಗಾರಿಕೆಯ ಅಭಿವೃದ್ಧಿಗೆ ಸಾಕಷ್ಟು ನೆರವಿತ್ತರು. ಅತ್ತಾವರ, ಬಾಬುಗುಡ್ಡೆ, ದಡ್ಡಲಕಾಡು, ಉಳ್ಳಾಲ, ಮೂಲ್ಕಿ, ಉಡುಪಿಯ ಬನ್ನಂಜೆ ಮೊದಲಾದ ಕಡೆಗಳಲ್ಲಿ ದಲಿತರಿಗಾಗಿ ಶಾಲೆಗಳನ್ನು ತೆರೆದರು. ಈ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಅಧ್ಯಾಪಕರನ್ನೇ ನೇಮಕ ಮಾಡಿದರು. ಇವರು ಸ್ಥಾಪನೆ ಮಾಡಿದ ಶಾಲೆಗಳನ್ನು ಪಂಚಮರ ಶಾಲೆಗಳು ಎಂದು ಕರೆಯುತ್ತಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಮಕ್ಕಳಿಗೆ ಮಧ್ಯಾಹ್ನದ ಊಟವನ್ನೂ ದಿನಕ್ಕೆ 2ರಿಂದ 6ಕಾಸಿನವರೆಗೆ ನಗದು ಹಣವನ್ನೂ ನೀಡುತ್ತಿದ್ದರು. ತಾವು ಸ್ಥಾಪನೆ ಮಾಡಿದ ಶಾಲೆಗಳನ್ನು ನಡೆಸಿಕೊಂಡು ಹೋಗುವುದು ದುಸ್ತರವಾದಾಗ ಇವರು ಉಳ್ಳಾಲ ರಘುನಾಥಯ್ಯನವರ ಸಹಕಾರದಿಂದ 'ಡಿಪ್ರೆಸ್ಡ್ ಕ್ಲಾಸಸ್ ಮಿಶನ್, ಕೊಡಿಯಾಲ ಬೈಲು, ಮಂಗಳೂರು' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. (1897).

ಹೀಗೆ ಹಲವು ವರ್ಷಗಳ ಕಾಲ ಇವರು ಮಾಡಿದ ಕೆಲಸಗಳಿಂದ ಸಾರ್ವಜನಿಕರು ಮತ್ತು ಜನಸಾಮಾನ್ಯರಲ್ಲಿ ಜಾಗೃತಿ ಉಂಟಾಯಿತು. ಕ್ರಮೇಣ ಇದು ಸಾಮಾಜಿಕ ಬದಲಾವಣೆಗೆ ದಾರಿಮಾಡಿತು. ಇವರ ಒತ್ತಡದ ಪರಿಣಾಮವಾಗಿ ಜಿಲ್ಲಾ ಬೋರ್ಡು ಮತ್ತು ಮಂಗಳೂರು ಪುರಸಭೆಯಲ್ಲಿ ಪರಿಶಿಷ್ಟ ಪಂಗಡದವರಿಗೆ ಪ್ರಾತಿನಿಧ್ಯ ದೊರೆಯಿತು. ದಲಿತರ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸುವುದಕ್ಕಾಗಿ 'ಕೋರ್ಟುಹಿಲ್ ಆದಿದ್ರಾವಿಡ ಸಂಘ' ಅಸ್ತಿತ್ವಕ್ಕೆ ಬಂತು.

ಹಿಂದು ಸಮಾಜದಲ್ಲಿ ವಿಧವೆಯರ ಬದುಕಿನ ದುಃಸ್ಥಿತಿಯನ್ನು ಕಂಡ ಇವರು ಅವರ ಕಲ್ಯಾಣಕ್ಕಾಗಿ ಆಶ್ರಮವನ್ನು ತೆರೆದರು. ಅಲ್ಲಿ ಸಮಾಜದಿಂದ ದೂರವಾದ ಎಲ್ಲ ಜಾತಿಯ ವಿಧವೆಯರಿಗೆ ಆಶ್ರಯ ನೀಡಿ ಜೀವನೋಪಾಯದ ಮಾರ್ಗಗಳನ್ನು ತೋರಿದರು. 1922ರ ಹೊತ್ತಿಗೆ ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸಂಸ್ಥೆ ಆರ್ಥಿಕ ತೊಂದರೆಗೆ ಸಿಲುಕಿತು. ಬೇರೆ ದಾರಿ ಕಾಣದೆ ಇವರು ಈ ಸಂಸ್ಥೆಯನ್ನು ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಗೆ ಹಸ್ತಾಂತರಿಸಿದರು. ಆದರೂ ರಂಗರಾಯರ ಸಂಸ್ಥೆಗಳನ್ನು ಬಹುಕಾಲ ನಡೆಸಿಕೊಂಡು ಹೋಗುವುದು ದುಸ್ತರವಾಯಿತು. ಇದರಿಂದಾಗಿ 1953ರ ಹೊತ್ತಿಗೆ ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸಂಸ್ಥೆ ತನ್ನ ಆಡಳಿತದಲ್ಲಿದ್ದ ಎಲ್ಲಾ ವಿದ್ಯಾಸಂಸ್ಥೆಗಳನ್ನು ಮದರಾಸು ಸರ್ಕಾರಕ್ಕೆ ಒಪ್ಪಿಸಿತು.

ಇವರು ತಮ್ಮ 68ನೆಯ ವಯಸ್ಸಿನಲ್ಲಿ ಸುವಿಚಾರಾನಂದ ಸ್ವಾಮೀಜಿಯವರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದರು. 'ಈಶ್ವರಾನಂದ ಸಂನ್ಯಾಸಿ' ಎನಿಸಿಕೊಂಡರು. ಇವರು ಸಮಾಜದ ಉನ್ನತಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಆಗಿನ ಸರ್ಕಾರ ಇವರಿಗೆ 'ರಾವ್‌ಸಾಹೇಬ್' ಬಿರುದನ್ನಿತ್ತು ಗೌರವಿಸಿತು. ಬದುಕಿನ ಕೊನೆಗಾಲದಲ್ಲಿ ಹೃದಯದ ಕಾಯಿಲೆಯಿಂದ ಬಳಲಿದ ಇವರು 1928 ಜನವರಿ 30ರಂದು ನಿಧನರಾದರು.

ಸಮಾಜಸೇವಾ ಕಾರ್ಯಗಳಿಂದಾಗಿ ಇವರು ಆ ಕಾಲಕ್ಕೆ ಸಾರಸ್ವತ ಸಮಾಜದ ತೀವ್ರ ವಿರೋಧವನ್ನು ಎದುರಿಸಬೇಕಾಯಿತು. ಬಹಿಷ್ಕಾರಕ್ಕೂ ಒಳಗಾದರು. ಇದರ ನಿವೃತ್ತಿಗಾಗಿ ಇವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಜಯಶೀಲರಾದರು. ಇವರು ನಿಧನ ಹೊಂದಿದ 6 ವರ್ಷಗಳ ಅನಂತರ ಮಂಗಳೂರಿಗೆ ಬಂದ (24-2-1934) ಗಾಂಧೀಜಿಯವರು ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸಂಸ್ಥೆಗೆ ಭೇಟಿ ನೀಡಿದರು. ಇವರು ಅಸ್ಪೃಶ್ಯತಾ ನಿವಾರಣೆ ಹಾಗೂ ದಲಿತೋದ್ಧಾರದ ಕಾಯಕದಲ್ಲಿ ಮಾಡಿದ ಸಾಧನೆಯನ್ನು ಪರಿಶೀಲಿಸಿ 'ಈ ವಿಷಯದಲ್ಲಿ ರಂಗರಾಯರು ನನ್ನ ಗುರುಗಳು' ಎಂದು ಗಾಂಧೀಜಿ ಹೇಳಿದ್ದರು. ರಂಗರಾಯರ ಸೇವೆಗೆ ಇದಕ್ಕಿಂತ ಹೆಚ್ಚಿನ ಗೌರವ ಇನ್ನೊಂದಿರಲಾರದು.

(ಎಸ್.ಎಚ್.ಜಿ.)

**ಕುಪಟೂರು :** ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಒಂದು ಗ್ರಾಮ. ಸೊರಬದಿಂದ ಸು.20ಕಿಮೀ ಉತ್ತರಕ್ಕಿದೆ.

ಈ ಗ್ರಾಮ ಚಂದ್ರಹಾಸನ ರಾಜಧಾನಿಯಾದ ಕುಂತಳ ನಗರ ಎಂದು ಪ್ರತೀತಿ. ಚಾರಿತ್ರಿಕವಾಗಿ ರಾಷ್ಟ್ರಕೂಟರ ಕಾಲದಿಂದಲೂ ಇದು ಒಂದು ದೊಡ್ಡ ಪಟ್ಟಣವಾಗಿತ್ತೆಂದು ಇಲ್ಲಿನ ವಿಸ್ತಾರವಾದ ಪ್ರಾಚೀನ ನಿವೇಶನ ಮತ್ತು ಇತರ ಅವಶೇಷಗಳಿಂದ ತಿಳಿಯಬಹುದು. ರಾಷ್ಟ್ರಕೂಟರ, ಚಾಳುಕ್ಯರ ಮತ್ತು ಈಚಿನ ಅನೇಕ ಶಾಸನಗಳು ಮತ್ತು ವೀರಗಲ್ಲುಗಳು ಇಲ್ಲಿನ ಕೆರೆ ಮತ್ತು ದೇವಾಲಯಗಳ ಬಳಿ ನಿಂತಿವೆ.

ಇಲ್ಲಿನ ರಾಮೇಶ್ವರ ಗುಡಿ ರಾಷ್ಟ್ರಕೂಟರ ಕಾಲದ ದೇವಾಲಯ (9-10ನೆಯ ಶತಮಾನ). ನವರಂಗದ ಒಳಚಾವಣಿಯಲ್ಲಿರುವ ಅಷ್ಟ ದಿಕ್ಪಾಲಕರ ನಡುವಿನ ತಾಂಡವಮೂರ್ತಿ ಸುಂದರ ಕೃತಿ. ಅಂತೆಯೇ ನವರಂಗದಲ್ಲಿರುವ ಸಪ್ತಮಾತೃಕೆಯರು, ಮಹಿಷಾಸುರಮರ್ದಿನಿ, ಗರ್ಭಗೃಹದ ಮುಂದಿರುವ ಚಂದ್ರಶಿಲೆ, ನಂದಿಮಂಟಪದಲ್ಲಿರುವ ನಂದಿ ಇವೆಲ್ಲ ರಾಷ್ಟ್ರಕೂಟ ಶೈಲಿಯಲ್ಲಿವೆ. ಇಲ್ಲಿನ ಕೈಟಭೇಶ್ವರ ದೇವಾಲಯ ದೇವಸ್ಥಾನದ ಹಕ್ಕು ಎಂಬ ಜಾಗದಲ್ಲಿದ್ದು ಸಂಪೂರ್ಣವಾಗಿ ಉಳಿದುಬಂದಿರುವ ಪ್ರಸಿದ್ಧ ಗುಡಿ. ಚಾಳುಕ್ಯ ಶೈಲಿಯಲ್ಲಿರುವ ಈ ದೇವಾಲಯಕ್ಕೆ ಕೋಟೇಶ್ವರ ಎಂಬ

ಕೋಟೇಶ್ವರ ದೇವಾಲಯ

ಹೆಸರಿತ್ತೆಂದು ಹೊಯ್ಸಳ ವಿನಯಾದಿತ್ಯನ ಶಾಸನದಿಂದ ತಿಳಿಯುತ್ತದೆ. ಗರ್ಭಗುಡಿ, ಸುಕನಾಸಿ ಮತ್ತು ನವರಂಗ ಮಂಟಪವಿರುವ ಈ ದೇವಾಲಯದ ಹೊರಗೋಡೆಯ ಮೇಲೆ ಅರೆ ಗಂಬಗಳು, ಅರೆಗೋಪುರಗಳು ಮತ್ತು ಮಂಟಪಗಳ ಅಲಂಕರಣವಿದೆ. ಗರ್ಭಗುಡಿಯ ಮೇಲೆ ಸುಂದರವಾದ ಕಲ್ಲಿನ ಗೋಪುರವಿದೆ. 1077ರಲ್ಲಿ ನಿರ್ಮಿತವಾದ ಪಾರ್ಶ್ವನಾಥ ಬಸದಿಯಲ್ಲಿನ ಪಾರ್ಶ್ವನಾಥಮೂರ್ತಿ ಒಂದು ಸುಂದರ ಶಿಲ್ಪ. ಈಗ ಇದರ ಕಟ್ಟಡ ಶಿಥಿಲವಾಗಿದೆ. ಇದಲ್ಲದೆ ಈ ಊರಿನಲ್ಲಿ ದುರ್ಗಾ, ಕಾಳಿ, ಚಿಂತಾಮಣಿ ನರಸಿಂಹ ಮುಂತಾದ ಬೇರೆ ಬೇರೆ ಕಾಲಕ್ಕೆ ಸೇರಿದ

ದೇವಾಲಯಗಳಿವೆ. ಚಿಂತಾಮಣಿ ನರಸಿಂಹ ದೇವಾಲಯದಲ್ಲಿರುವ ನರಸಿಂಹನ ಮೂರ್ತಿ ಸಿಂಹದ ಸ್ವಾಭಾವಿಕ ರೂಪದಲ್ಲಿದೆ. ಇದೊಂದು ಅಪರೂಪ ಕೃತಿ. ದ್ಯಾವಮ್ಮ ಗುಡಿಯಲ್ಲಿ ದೇವತೆಯ ಬೃಹತ್ ಮರದ ವಿಗ್ರಹವಿದೆ. ಅದರ ಪ್ರಭಾವಳಿ ಸೇರಿದಂತೆ ವಿಗ್ರಹದ ಎತ್ತರ 2.44ಮೀ. ಸಿಂಹದ ಮೇಲೆ ಸವಾರಿ ಮಾಡುತ್ತಿರುವ 16 ಕೈಗಳ ಈ ಮೂರ್ತಿ ನೋಡಲು ರುದ್ರ ಭಯಂಕರವಾಗಿದೆ. (ಎಂ.ಎಚ್.)

**ಕುಪ್ಪಗಲ್ಲು :** ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೂಕಿನಲ್ಲಿರುವ ಒಂದು ಮಹತ್ವದ ಪ್ರಾಗೈತಿಹಾಸಿಕ ಸ್ಥಳ. ಈ ಗ್ರಾಮದ ಸಮೀಪದಲ್ಲಿ, ಬಳ್ಳಾರಿಯಿಂದ ಮೋಕಾಕ್ಕೆ ಹೋಗುವ ರಸ್ತೆಯಲ್ಲಿ, ಹಗರಿ ನದಿಯ ಪಶ್ಚಿಮಕ್ಕೆ ಸು.9ಕಿಮೀ ಅಂತರದಲ್ಲಿ, ನವಲಿ ಬೆಟ್ಟದ ಬಳಿಯಲ್ಲಿ ಮೂರು ಬೂದಿತಿಟ್ಟುಗಳು ಇವೆ. ಈ ಬೂದಿತಿಟ್ಟುಗಳು ನವ ಶಿಲಾಯುಗಕ್ಕೆ ಸಂಬಂಧಪಟ್ಟವೆಯೆಂದು ಪುರಾತತ್ತ್ವಜ್ಞರ ಅಭಿಪ್ರಾಯ. ಇವುಗಳ ಹುಟ್ಟಿನ ಬಗೆಗೆ ಭಿನ್ನಾಭಿಪ್ರಾಯಗಳಿವೆ.

ಕುಪ್ಪಗಲ್ಲಿನಲ್ಲಿ ನ್ಯೂಬೋಲ್ಡ್ ಎಂಬುವನು 1843ರಲ್ಲಿ ಮೊದಲ ಉತ್ಖನನ ನಡೆಸಿದ. ಈ ಬೂದಿತಿಟ್ಟುಗಳು ಮಾನವನ ಔದ್ಯೋಗಿಕ ಕೇಂದ್ರವಾಗಿರದೆ ಪ್ರಾಯಶಃ ಶವಸಂಸ್ಕಾರ ವಿಧಿಗೆ ಸಂಬಂಧಿಸಿರಬಹುದು ಎಂಬುದು ಆತನ ನಿರ್ಣಯವಾಗಿತ್ತು. ಅನಂತರ ಆರ್.ಬ್ರೂಸ್‌ಫೂಟ್ ಈ ತಿಟ್ಟುಗಳನ್ನು ಪರೀಕ್ಷಿಸಿ ಇವುಗಳ ಕಾಲ ನವಶಿಲಾಯುಗಕ್ಕೆ ಸಂಬಂಧಿಸಿದ್ದು ಎಂದುದಲ್ಲದೆ ಈ ತಿಟ್ಟುಗಳು ಹಸುವಿನ ಸಗಣಿಯನ್ನು ಒಂದೆಡೆಯಲ್ಲಿ ಹಾಕಿ ಸುಟ್ಟುದರಿಂದ ಉಂಟಾದುವೆಂದು ವಿವರಿಸಿದ. ಯಾಜ್ದಾನಿ (1936) ಚಿನ್ನ ಹಾಗೂ ಕಬ್ಬಿಣ ಮುಂತಾದ ಲೋಹಗಳನ್ನು ತಯಾರಿಸುವಾಗ ಕರಗಿಸುತ್ತಿದ್ದ ಅದುರಿನಿಂದಾಗಿ ಈ ಬಗೆಯ ತಿಟ್ಟುಗಳು ಆಗಿರಬಹುದೆಂದು ಭಾವಿಸಿದರು.

1965ರಲ್ಲಿ ಇಲ್ಲಿನ ದೊಡ್ಡ ತಿಟ್ಟನ್ನು ಜಿ.ಜಿ.ಮುಜುಮ್‌ದಾರ್ ಹಾಗೂ ಎಸ್.ಎನ್. ರಾಜಗುರು ಉತ್ಖನನಗೈದು ಅದರ ವರದಿಯನ್ನು ಪ್ರಕಟಿಸಿದರು. ಈ ಬೂದಿತಿಟ್ಟುಗಳು ನವಶಿಲಾಯುಗದ ಕಾಲದವು ಎಂಬುದನ್ನು ಇವರ ಈ ಅಧ್ಯಯನ ಇನ್ನಷ್ಟು ಬಲವತ್ತರವಾಗಿಸಿತು. ಇಲ್ಲಿನ ಉತ್ಖನನದಲ್ಲಿ ಐತಿಹಾಸಿಕ ಕಾಲದ, ಬೃಹತ್ ಶಿಲಾಯುಗದ ಅವಶೇಷಗಳು ಮೇಲಿನ ಸ್ತರಗಳಲ್ಲಿ, ಸ್ವಲ್ಪಮಟ್ಟಿಗೆ ದೊರಕಿದುವು. ತಿಟ್ಟಿನ ಹೆಚ್ಚಿನ ಭಾಗ ನವಶಿಲಾಯುಗ ಕಾಲದ್ದು. ಇಲ್ಲಿನ ಬೂದಿಯನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ತಜ್ಞರು ಇವು ದನದ ಸಗಣಿ ಸುಟ್ಟಿದ್ದರಿಂದ ಆದದ್ದೆಂದು ತೀರ್ಮಾನಿಸಿದರು. ಅಲ್ಲದೆ. ಈ ಬೂದಿಯ ಭಾಗದ ಕೆಳಗಡೆ ಸ್ತರಾಂತರದಲ್ಲಿ ನವಶಿಲಾಯುಗಕ್ಕೂ ಹಿಂದೆ ಬಳಕೆಯಲ್ಲಿದ್ದ ಕೆಲವು ಕಲ್ಲಿನ ಆಯುಧಗಳೂ ಬೆಳಕಿಗೆ ಬಂದುವು.

ಕುಪ್ಪಗಲ್ಲಿನ ಬೆಟ್ಟದ ಉತ್ತರ ಭಾಗದಲ್ಲಿ ಬಹಳ ಎತ್ತರದ ಸ್ಥಳದಲ್ಲಿ ವೃಷಭ, ನವಿಲು, ಆನೆ ಇತ್ಯಾದಿ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ವೃಷಭದ ಇಣಿಗಳು ವಿಶೇಷವಾಗಿ ದೊಡ್ಡವಾಗಿದ್ದು ಈಗಿನ ಇಲ್ಲಿನ ತಳಿಗಳಿಗಿಂತ ಕಿಂಚಿತ್ ಭಿನ್ನವಾಗಿವೆ. ಇವು ರಾಯಚೂರು ಜಿಲ್ಲೆಯಲ್ಲಿನ ಪ್ರಾಗೈತಿಹಾಸಿಕ ಚಿತ್ರಗಳನ್ನು ಹೋಲುತ್ತವೆ. (ಎಸ್.ಜಿವಿ.)

**ಕುಬ್ಜ :** ಸು.5ನೆಯ ಶತಮಾನದಲ್ಲಿದ್ದ ಒಬ್ಬ ಶಾಸನಕವಿ. ಈತ ಕದಂಬ ಶಾಂತಿವರ್ಮ (ಸು.430-55) ಬರೆಸಿದ ತಾಳಗುಂದದ ಪ್ರಣವೇಶ್ವರ ದೇವಾಲಯದ ಮುಂದಿನ ಶಿಲಾಸ್ತಂಭದಲ್ಲಿ ಕೊರೆದಿರುವ ಸಂಸ್ಕೃತ ಪದ್ಯಶಾಸನವನ್ನು (ಸು.450) ಬರೆದಿದ್ದಾನೆ. ಈ ಶಾಸನದ 34ನೆಯ ಪದ್ಯದಲ್ಲಿ ಕುಬ್ಜ ಸ್ವಕಾವ್ಯಮಿದಮಶ್ಮತಲೇಲಿಲೇಖ (ಕುಬ್ಜ ಸ್ವರಚಿತ ಈ ಕಾವ್ಯವನ್ನು ಕಲ್ಲಿನ ಮೇಲೆ ಬರೆದ) ಎಂದಿರುವುದರ ಹೊರತು ಈತನಿಗೆ ಸಂಬಂಧಿಸಿದ ವೈಯಕ್ತಿಕ ವಿವರಗಳು ಈ ಶಾಸನದಲ್ಲಾಗಲಿ ಬೇರೆ ಕಡೆಗಳಲ್ಲಾಗಲಿ ಕಂಡುಬಂದಿಲ್ಲ. ಕವಿ ಶೈವನಿರಬಹುದೆಂದು ತೋರುತ್ತದೆ. ಬಹಶಃ ಕನ್ನಡ ನಾಡಿನವನೇ ಇರಬಹುದು. ಸು.4-5ನೆಯ ಶತಮಾನಗಳಲ್ಲಿ ಕನ್ನಡ ನಾಡಿನಲ್ಲಿ ಸಂಸ್ಕೃತ ಭಾಷೆಗಿದ್ದ ಪ್ರಾಶಸ್ತ್ಯ ಕಾರಣವಾಗಿ, ಈ ಭಾಷೆಯಲ್ಲಿ ಪದ್ಯರಚನೆ ಮಾಡಿ ಖ್ಯಾತನಾಗಿರಬಹುದು. ಶಾಸನದ ಭಾಷೆ ಛಂದಸ್ಸುಗಳ ಪ್ರೌಢಿಮೆ ವೈವಿಧ್ಯಗಳನ್ನು ಗಮನಿಸಿದರೆ, ಈತ ಒಳ್ಳೆಯ ವಿದ್ವತ್ಕವಿಯಾಗಿ ತನ್ನ ಕಾಲದಲ್ಲಿ ಗಣ್ಯತೆ ಪಡೆದಿರಬೇಕೆಂದೂ ಪ್ರಾಯಶಃ ಕಾಕುತ್ಸ್ಥವರ್ಮ ಶಾಂತಿವರ್ಮರ ಪೋಷಣೆಯಲ್ಲಿ ಇದ್ದಿರಬೇಕೆಂದೂ ತೋರುತ್ತದೆ. ಶಾಸನದಲ್ಲಿ ಕದಂಬವಂಶದ ಸ್ಥಾಪನೆಯ ಹಿನ್ನೆಲೆ, ಮಯೂರಶರ್ಮನ ವೃತ್ತಾಂತ, ಕಾಕುತ್ಸ್ಥವರ್ಮನ ವೈಭವದ ವರ್ಣನೆ ಇವುಗಳನ್ನು ತನ್ನ ಕಾವ್ಯಮಯ ನಿರೂಪಣೆಯಿಂದ ಮನೋಹರವಾದ ಶಬ್ದ ಮತ್ತು ಅರ್ಥಾಲಂಕಾರಗಳ ವೈಚಿತ್ರ್ಯಗಳಿಂದ ಹೃದಯಂಗಮವಾಗಿ ನಿರೂಪಿಸಿದ್ದಾನೆ. ಒಂದೆರಡು ಕಡೆ ಹೊರತುಪಡಿಸಿ ಉಳಿದ ಕಡೆಗಳಲ್ಲಿ ಬಹುಮಟ್ಟಿಗೆ ಪ್ರಾಚೀನ ಕನ್ನಡ ಕವಿಗಳಿಗೆ ಪರಿಚಿತವಾದ ಸಂಸ್ಕೃತ ಛಂದಸ್ಸುಗಳ ಬಳಕೆಯಾಗಿರುವುದು ಗಮನಾರ್ಹವಾಗಿದೆ.

ಕವಿಯ ಹೆಸರು ಕುಬ್ಜ ಎಂದಿರುವುದು ಸ್ವಲ್ಪ ವಿಲಕ್ಷಣವಾಗಿ ತೋರುತ್ತದೆ. ಕುಬ್ಜ ಎಂದರೆ ಕುಳ್ಳಾದ ಕೊಂಕು ಬೆನ್ನಿನ ಎಂದು ಅರ್ಥ. ಈ ಅರ್ಥದ ಒಂದು ಗುಣವಾಚಕವನ್ನು ರಾಜಪುರುಷರೂ ಅಧಿಕಾರಿಗಳೂ ತಮಗೆ ಅಂಕಿತನಾಮವನ್ನಾಗಿ ಇಟ್ಟುಕೊಳ್ಳುತ್ತಿದ್ದರೇ ಎಂಬುದು ವಿಚಾರಣೀಯ, ವರಾಹಮಿಹಿರ ತನ್ನ ಬೃಹತ್‌ಸಂಹಿತೆಯಲ್ಲಿ. (ಸು.6ನೆಯ ಶತಮಾನ) ಭದ್ರ, ಹಂಸ, ಶಶ, ರುಚಕ, ಮಾಲವ ಎಂಬ ಲಕ್ಷಣದ ಐವರು ರಾಜ (ಮಹಾಪುರುಷ)ರನ್ನೂ ಅವರ ಅನುಚರರೆಂದು ಕ್ರಮವಾಗಿ ವಾಮನಕ, ಕುಬ್ಜ, ಜಘನ್ಯ, ಮಂಡಲಕ, ಸಾಚಿ ಎಂಬ ಐವರನ್ನೂ ಹೇಳಿದ್ದಾನೆ. ಇದರಿಂದ ಕುಬ್ಜನೆಂಬುವನು ಹಂಸಲಕ್ಷಣದ ರಾಜಾನುಚರನೆಂದು (ಪ್ರಾಯಶಃ ಒಬ್ಬ ಗಣ್ಯ ಅಧಿಕಾರಿ) ಹೇಳಬಹುದು. ಪ್ರಸ್ತುತದಲ್ಲಿ ಈ ಕವಿ ತನ್ನನ್ನು ಕುಬ್ಜನೆಂದು ಹೇಳಿಕೊಂಡಿರುವುದು ಈ ವಿಶೇಷಾರ್ಥದಲ್ಲಿಯೇ ಎಂದು ಒಬ್ಬ ವಿದ್ವಾಂಸರು ಊಹಿಸಿದ್ದಾರೆ. ಆದರೆ ಬೃಹತ್ ಸಂಹಿತೆಯಲ್ಲಿ ಹೇಳಿರುವಂಥ ವ್ಯಕ್ತಿಯೇ ಈ ಶಾಸನದ ಕವಿ ಎಂದು ಸಾಧಿಸುವುದು ಕಷ್ಟ. ಈಗಿನ ಕರ್ನಾಟಕದಲ್ಲಿ ಕುಳ್ಳಯ್ಯ, ಕುನ್ನಯ್ಯ, ಗಿಡ್ಡಪ್ಪ ಎನ್ನುವಂಥ ಹೆಸರುಗಳುಂಟು. ಆದ್ದರಿಂದ ಕುಬ್ಜ ಎಂಬುದು ಅಂಕಿತನಾಮವಾಗಿಯೂ ಇದ್ದಿರುವುದು ಅಸಂಭವವಲ್ಲ. ಇದು ಹೇಗಿದ್ದರೂ ಕನ್ನಡನಾಡಿನ ಪ್ರಾಚೀನ ಸಂಸ್ಕೃತ ಕವಿಗಳಲ್ಲಿ ಅದರಲ್ಲಿಯೂ ಶಾಸನಕವಿಗಳಲ್ಲಿ ಕದಂಬವಂಶ ಸ್ಥಾಪನೆಯನ್ನು ವಿವರಿಸುವ ಐತಿಹಾಸಿಕ ಮಹತ್ತ್ವದ ಮತ್ತು ಉತ್ತಮ ಕವಿತ್ವದ ಶಾಸನವನ್ನು ಬರೆದವನೆಂಬ ದೃಷ್ಟಿಯಿಂದ ಈತನ ಹೆಸರು ಚಿರಸ್ಥಾಯಿಯಾಗಿದೆ. (ಟಿ.ವಿ.ವಿ.)

**ಕುಬ್ಜ ವಿಷ್ಣುವರ್ಧನ :** ವೆಂಗಿ ಅಥವಾ ಪೂರ್ವಚಾಳುಕ್ಯ ರಾಜ್ಯದ ಪ್ರಪ್ರಥಮ ರಾಜ (ಸು.615-33). ಒಂದನೆಯ ಕೀರ್ತಿವರ್ಮನ ಮಗ. ಇಮ್ಮಡಿ ಪುಲಕೇಶಿಯ ಕಿರಿಯ ಸಹೋದರ. ಇವನಿಗೆ ಮಕರಧ್ವಜ, ವಿಷಮಸಿದ್ಧಿ ಮತ್ತು ಬಿಟ್ಟರಸ ಎಂಬ ಹೆಸರುಗಳೂ ಇದ್ದವು. ಇಮ್ಮಡಿ ಪುಲಕೇಶಿ ಬಾದಾಮಿ ಚಳುಕ್ಯ ಸಾಮ್ರಾಜ್ಯದ ಸಾಮ್ರಾಟನಾದ ಮೇಲೆ ತನ್ನ ಸಹೋದರ ಕುಬ್ಜ ವಿಷ್ಣುವರ್ಧನನನ್ನು ಯುವರಾಜನನ್ನಾಗಿ ನೇಮಿಸಿದ. ಅನಂತರ ಮಹಾರಾಷ್ಟ್ರದ ಕೆಲವು ಭಾಗಗಳ ಆಡಳಿತವನ್ನು ನಿರ್ವಹಿಸಲು ವಿಷ್ಣುವರ್ಧನನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿದ. ಈ ಅಂಶ ವಿಷ್ಣುವರ್ಧನನೇ (617-18) ಹೊರಡಿಸಿದ ಸಾತಾರಾ ಶಾಸನದಿಂದ ವೇದ್ಯವಾಗುತ್ತದೆ.

631ರಲ್ಲಿ ಇಮ್ಮಡಿ ಪುಲಕೇಶಿ ದಖನ್ನಿನ ಪೂರ್ವ ಪ್ರಾಂತ್ಯಗಳ ಮೇಲೆ ದಂಡೆತ್ತಿ ಹೋದಾಗ ವಿಷ್ಣುವರ್ಧನನೂ ಅವನ ಜೊತೆ ಹೋಗಿದ್ದ. ಪುಲಕೇಶಿ ದಖನ್ನಿನ ಪೂರ್ವಭಾಗದಲ್ಲಿ ಹೊಸದಾಗಿ ಗೆದ್ದು ಕೊಂಡ ಭಾಗಗಳ ಆಡಳಿತವನ್ನು ನಿರ್ವಹಿಸಲು ವಿಷ್ಣುವರ್ಧನನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿ ಬಾದಾಮಿಗೆ ಹಿಂದಿರುಗಿದ. ಆದರೆ ಕಾಲಾನಂತರ ವಿಷ್ಣುವರ್ಧನ ಸ್ವತಃ ಮಹಾರಾಜ ಎಂಬ ಬಿರುದನ್ನು ಧರಿಸಿ ಸ್ವತಂತ್ರ ರಾಜನಂತೆ ಆಳಲು ಪ್ರಾರಂಭಿಸಿ, ಆಂಧ್ರಪ್ರದೇಶದಲ್ಲಿ ಸು.6 ಶತಮಾನಗಳ ಕಾಲ ಆಳಿದ ಪೂರ್ವಚಾಳುಕ್ಯವಂಶದ ಮೂಲಪುರುಷನಾದ. ಅಯ್ಯನಮಹಾದೇವಿ ಈತನ ರಾಣಿ. ಈಕೆ ವಿಜಯವಾಡದಲ್ಲಿ ಒಂದು ಜೈನ ದೇವಸ್ಥಾನಕ್ಕೆ ದಾನ ನೀಡಿದಳೆಂದು ಒಂದು ಶಾಸನದಿಂದ ತಿಳಿಯುತ್ತದೆ. (ಎಸ್.)

**ಕುಮಟ :** ಉತ್ತರ ಕನ್ನಡ ಜಿಲ್ಲೆ ಕರಾವಳಿಯಲ್ಲಿರುವ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಜಿಲ್ಲೆಯ ದಕ್ಷಿಣದಲ್ಲಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಅಂಕೋಲ, ಪೂರ್ವದಲ್ಲಿ ಶಿರಸಿ ಮತ್ತು ಸಿದ್ದಾಪುರ, ದಕ್ಷಿಣದಲ್ಲಿ ಹೊನ್ನಾವರ ತಾಲ್ಲೂಕುಗಳು ಪಶ್ಚಿಮದಲ್ಲಿ ಅರಬ್ಬೀ ಸಮುದ್ರವೂ ಸುತ್ತುವರಿದಿವೆ. ತಾಲ್ಲೂಕಿನಲ್ಲಿ ಎರಡು ಪಟ್ಟಣಗಳೂ 112 ಹಳ್ಳಿಗಳೂ ಇವೆ. ಮಿರ್ಜಾನ್, ಕುಮಟ, ಕುಂಜಳ್ಳಿ ಮತ್ತು ಗೋಕರ್ಣ ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 608 ಚ.ಕಿಮೀ.ಗಳು; ಜನಸಂಖ್ಯೆ 1,45,772.



ಮೋಹಿನಿ ಶಿಖರ, ಯಾಣ

ಈ ತಾಲ್ಲೂಕು ಪಶ್ಚಿಮ ಘಟ್ಟದ ಇಳಿಜಾರು ಪ್ರದೇಶದಲ್ಲಿದ್ದು ಕಲ್ಲುಬಂಡೆಗಳ ಕೆಲವು ಬೆಟ್ಟಗಳಿಂದ ಮತ್ತು ಅಳಿವೆ ಕೋಡಿಗಳಿಂದ ಕೂಡಿದೆ. ತಾಲ್ಲೂಕಿನ ಮುಖ್ಯ ನದಿ ಅಘನಾಶಿನಿ (ನೋಡಿ) ತಾಲ್ಲೂಕಿನ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಅರಬ್ಬೀ ಸಮುದ್ರವನ್ನು ಕುಮಟದ ಉತ್ತರದಲ್ಲಿ ಸೇರುವುದು. ಇದಲ್ಲದೆ ಮಳೆಗಾಲದಲ್ಲಿ ತುಂಬಿಹರಿಯುವ ಕೆಲವು ಸಣ್ಣಪುಟ್ಟ ತೊರೆಗಳುಂಟು. ಅಂಕೋಲ ತಾಲ್ಲೂಕಿನ ಗಂಗಾವಳಿ ನದಿಯ ದಕ್ಷಿಣಕ್ಕಿರುವ ಈ ತಾಲ್ಲೂಕಿನ ಉತ್ತರದ ತೀರಪ್ರದೇಶವೆಲ್ಲ ಮರಳಿನಿಂದ ಕೂಡಿದೆ. ತಾಲ್ಲೂಕಿನ ಒಳಭಾಗ ಮತ್ತು ಪೂರ್ವ ಪ್ರದೇಶ ಗೋಡು ಮತ್ತು ಮರಳುಮಿಶ್ರಿತ ಗೋಡುಮಣ್ಣಿನ ಪ್ರದೇಶವಾಗಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ ಸು.3710ಮಿಮೀ. ಈ ತಾಲ್ಲೂಕಿಗೆ ಹಿನ್ನೆಲೆಯಾಗಿರುವ ಪಶ್ಚಿಮ ಘಟ್ಟದ ಮೇಲೆ ದಟ್ಟವಾದ ಕಾಡುಗಳು ಬೆಳೆದಿವೆ. ಅರಣ್ಯ ಭೂಮಿಯ ವಿಸ್ತೀರ್ಣ 3,96,412. ಬತ್ತ, ತೆಂಗು, ಅಡಕೆ, ಕಬ್ಬು, ಮೆಣಸು ಮುಖ್ಯ ಬೆಳೆಗಳು. 167 ಹೆ.ಗಳಲ್ಲಿ ದ್ವಿದಳಧಾನ್ಯಗಳನ್ನು ಬೆಳೆಯಲಾಗುತ್ತಿದೆ. ಮಾವು, ಬಾಳೆ, ಗೋಡಂಬಿ ಮುಖ್ಯ ಬೆಳೆಗಳಾಗಿವೆ. ಮೀನುಗಾರಿಕೆ ಒಂದು ಪ್ರಮುಖ ಉಪಕಸಬು. ವಾರ್ಷಿಕವಾಗಿ 7035 ಟನ್ ಸಾಗರೋತ್ಪನ್ನ ಮೀನು ಹಿಡಿಯಲಾಗುತ್ತಿದೆ.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಗೋಕರ್ಣ (ನೋಡಿ) ಒಂದು ಯಾತ್ರಾಸ್ಥಳ. ಕುಮಟದ ಉತ್ತರಕ್ಕೆ,ಗೋಕರ್ಣಕ್ಕೆ ಉತ್ತರದಲ್ಲಿ ಒಂದೂವರೆ ಕಿಮೀ ದೂರದಲ್ಲಿರುವ ಕಡೆ 18ನೆಯ ಶತಮಾನದಲ್ಲಿ ಪ್ರಾಮುಖ್ಯ ಪಡೆದಿದ್ದ ಸ್ಥಳವೆಂದು ತಿಳಿದುಬರುತ್ತದೆ. ಮಿರ್ಜಾನ್ ಈ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ; ಕುಮಟಕ್ಕೆ ಉತ್ತರದಲ್ಲಿ 8ಕಿಮೀ ದೂರದಲ್ಲಿದೆ. ಸಮುದ್ರದಿಂದ ಮಿರ್ಜಾನ್‌ವರೆಗೆ 8-9ಕಿಮೀ. ದೂರ ದೋಣಿ ಸಂಚಾರ ಉಂಟು. ಇದೊಂದು ನದೀಬಂದರಿನ ವ್ಯಾಪಾರ ಕೇಂದ್ರ. ಅಘನಾಶಿನಿ ನದಿ ದಡದಲ್ಲಿ ನದಿಯ ಉತ್ತರಕ್ಕಿರುವ ಈ ಊರಿನಲ್ಲಿ ಹಳೆಯ ಕೋಟೆಯ ಅವಶೇಷವಿದೆ. ಗೋಕರ್ಣಕ್ಕೆ ಆಗ್ನೇಯದಲ್ಲಿ 5ಕಿಮೀ ದೂರದಲ್ಲೂ ಕುಮಟದ ಉತ್ತರಕ್ಕೆ 10ಕಿಮೀ ದೂರದಲ್ಲೂ ತದಡಿ ನದೀ ಮುಖದಲ್ಲಿ ತದಡಿ (ನೋಡಿ) ಎಂಬ ಚಿಕ್ಕ ಬಂದರಿದೆ. ಇಲ್ಲಿ ಸಣ್ಣ ದೋಣಿಗಳ ಸಂಚಾರ ಹೆಚ್ಚು. ದೊಡ್ಡ ಮಚವೆಗಳೂ ಆಗಾಗ ಲಂಗರ ಹಾಕುವುದುಂಟು. ಇಲ್ಲೊಂದು ಲೈಟ್ ಹೌಸಿದೆ. ಉಪ್ಪು, ಕಟ್ಟಿಗೆ ಇಲ್ಲಿಂದ ರಫ್ತಾಗುತ್ತಿದೆ. ಯಾಣ (ನೋಡಿ) ಅಥವಾ ಭೈರವ ಕ್ಷೇತ್ರ ಕುಮಟಕ್ಕೆ ಈಶಾನ್ಯದಲ್ಲಿ 24ಕಿಮೀ ದೂರದಲ್ಲಿರುವ ಯಾತ್ರಾಸ್ಥಳ. ಸಹ್ಯಾದ್ರಿ ಪರ್ವತ ಶ್ರೇಣಿ ಸುತ್ತುವರಿದಿರುವ ಸೊಬಗಿನ ಸ್ಥಳ. ಪುರಾಣ ಪ್ರಸಿದ್ಧ ಮೋಹಿನಿ ಭಸ್ಮಾಸುರ ಕಥೆ ನಡೆದದ್ದು ಇಲ್ಲಿ ಎನ್ನಲಾಗಿದೆ. ಕುಮಟದಿಂದ 17ಕಿಮೀ ದೂರದಲ್ಲಿರುವ ಕಳ್ಳಿಗುಡ್ಡ ವಿರಾಮ ಸ್ಥಳ, ಸೊಬಗಿನ ತಾಣ. ಸಾಣೆಕಟ್ಟೆ ಬೃಹತ್ ಪ್ರಮಾಣದ ಉಪ್ಪು ತಯಾರಿಕಾ ಕೇಂದ್ರ. ಕುಮಟದ ದಕ್ಷಿಣಕ್ಕಿರುವ ಗುಡೇಅಂಗಡಿಯ (ಬಾಡ) ಕಂಚಿಕಾಪರಮೇಶ್ವರಿ ದೇವಾಲಯ ಪ್ರಸಿದ್ಧವಾದದ್ದು. ಮೇ ತಿಂಗಳಿನಲ್ಲಿ ಇಲ್ಲಿ ತೇರು ನಡೆಯುತ್ತದೆ.

ಕುಮಟ ಈ ತಾಲ್ಲೂಕಿನ ಆಡಳಿತ ಕೇಂದ್ರ. ಕಾರವಾರದಿಂದ 64ಕಿಮೀ. ದಕ್ಷಿಣಕ್ಕೆ, ಹೊನ್ನಾವರದಿಂದ 16ಕಿಮೀ ಉತ್ತರಕ್ಕೆ ಇದೆ. ಜನಸಂಖ್ಯೆ 27,597 ಇದೊಂದು ರೇವುಪಟ್ಟಣ. ಸಮುದ್ರಯಾನ ಮಾಡುವವರ ನೆರವಿಗಾಗಿ ಇಲ್ಲೊಂದು ದೀಪಸ್ತಂಭವಿದೆ. ಇಲ್ಲಿನ ಕುಂಭೇಶ್ವರ ದೇವಾಲಯದಿಂದಾಗಿ ಇದನ್ನು ಕುಂಬಟಂ ಎಂದು ಕರೆಯುತ್ತಿದ್ದುದಾಗಿಯೂ ಅದರಿಂದ ಕುಮಟವೆಂಬ ಹೆಸರು ಬಂತೆಂದೂ ಹೇಳಲಾಗಿದೆ. ಇದು ಹಿಂದೆ ಒಂದು ಜೈನ ಕೇಂದ್ರವಾಗಿತ್ತು. ಈಗಲೂ ಇಲ್ಲಿ ಅನೇಕ ಜೈನ ಬಸದಿಗಳಿವೆ. ಊರ ಮಧ್ಯದಲ್ಲಿರುವ ಮುಖ್ಯ ಬಸದಿ ಪಾರ್ಶ್ವನಾಥನದು. ಕುಮಟ ಹಲವು ದೇವಾಲಯಗಳ ಬೀಡು, ಶಾಂತೇರಿ ಕಾಮಾಕ್ಷಿ, ಗೋಪಾಲಕೃಷ್ಣ, ವೆಂಕಟರಮಣ, ಮ್ಹಾಲಸಾದೇವಿ, ಜಟ್ಟಿಗ ಇಲ್ಲಿನ ಮುಖ್ಯ ದೇವಾಲಯಗಳು. ಶಾಂತಿಕ ಪರಮೇಶ್ವರಿ ದೇವಾಲಯದ ಹಿಂದೆ ದೊಡ್ಡ ಹುತ್ತವಿದೆ. ಈ ದೇವಸ್ಥಾನದ ಬಳಿ ನಡೆಯುವ ಬಂಡಿಹಬ್ಬ ಪ್ರಸಿದ್ಧವಾದುದು. ಹಬ್ಬದ ದಿನದಂದು ಕೋಲು ಹಿಡಿದವರು, ಹೂವಿನ ಮಕ್ಕಳು ಬೆಂಕಿಯ ಮೇಲೆ ನಡೆಯುತ್ತಾರೆ. ಪೋರ್ಚುಗೀಸರು ಇಲ್ಲಿಯ ಜನರಿಂದ ತೆರಿಗೆ ವಸೂಲಿ ಮಾಡುತ್ತಿದ್ದರೆಂದು ಹೇಳಲಾಗಿದೆ. ಟಿಪ್ಪು ಈ ಪಟ್ಟಣದ ಮೇಲೆ ಎರಡು ಸಾರಿ ಆಕ್ರಮಣ ನಡೆಸಿದ್ದ.



ವೆಂಕಟರಮಣ ದೇವಸ್ಥಾನ, ಕುಮಟ

19ನೆಯ ಶತಮಾನದಲ್ಲಿ ದಕ್ಷಿಣ ಮಹಾರಾಷ್ಟ್ರ ಮತ್ತು ಬಳ್ಳಾರಿ ಪ್ರದೇಶಗಳಿಂದ ಹತ್ತಿಯನ್ನು ಇಲ್ಲಿಗೆ ತಂದು ಇಲ್ಲಿಂದ ಮುಂಬಯಿಗೆ ಕಳುಹಿಸಲಾಗುತ್ತಿತ್ತು. ಕುಮಟ ಹತ್ತಿ ಎಂದೇ ಅದು ಪ್ರಸಿದ್ಧಿ ಪಡೆದಿತ್ತು.

ಅರಬ್ಬರು ಹಿಂದಿನಿಂದಲೂ ಕುಮಟದ ಜೊತೆ ವ್ಯಾಪಾರ ಸಂಪರ್ಕ ಹೊದಿದ್ದು ಇಲ್ಲಿಂದ ಅಕ್ಕಿ ಮತ್ತು ಇತರ ಸಾಂಬಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಒಟ್ಟು 13 ಕಾರ್ಖಾನೆಗಳು ತಾಲ್ಲೂಕಿನಲ್ಲಿವೆ..

ಕುಮಟ ಒಂದು ವ್ಯಾಪಾರ ಕೇಂದ್ರ. ಅನೇಕ ರಸ್ತೆಗಳ ಸಂಧಿಸ್ಥಳ. ಇಲ್ಲಿಂದ ಕಾರವಾರ, ಭಟ್ಕಳ, ಯಲ್ಲಾಪುರ, ಶಿರಸಿ, ಶಿವಮೊಗ್ಗಗಳಿಗೆ ರಸ್ತೆಗಳಿವೆ. ಕೊಂಕಣ ರೈಲುಮಾರ್ಗ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. ಗಂಧದ ಕುಸುರಿ ಕೆಲಸಕ್ಕೆ ಈ ಪಟ್ಟಣ ಪ್ರಸಿದ್ಧವಾಗಿದೆ. ಹಸ್ತಿದಂತ, ದನಗಳ ಕೊಂಬಿನಿಂದ ಕಲಾತ್ಮಕ ವಸ್ತುಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಹಾಲಕ್ಕಿ ಒಕ್ಕಲಿಗರ ಹಗರಣ ಹಾಗೂ ಸುಗ್ಗಿ ಕುಣಿತ ಪ್ರಸಿದ್ಧವಾದುದು. ಈ ತಾಲ್ಲೂಕಿನ ಅನೇಕ ಕಲಾವಿದರು ಯಕ್ಷಗಾನ ಕ್ಷೇತ್ರದಲ್ಲಿ ಮಾಡಿದ ಸಾಧನೆ ಮಹತ್ವದ್ದು. ಕುಮಟ ಪಟ್ಟಣದಲ್ಲಿ 36ನೆಯ ಕನ್ನಡ ಸಾಹಿತ್ಯ ಸಮ್ಮೇಳನ ವಿ.ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತ್ತು (1954). ಸುತ್ತಲೂ ಗದ್ದೆಗಳಿಂದ, ತೆಂಗಿನ ತೋಟಗಳಿಂದ ಆವೃತ್ತವಾಗಿರುವ ಕುಮಟ ಪಶ್ಚಿಮ ಕರಾವಳಿಯ ಸುಂದರ ತಾಣವಾಗಿದೆ. *

**ಕುಮಾರಗಂಧರ್ವ** : 1924-92. ಹಿಂದುಸ್ತಾನಿ ಸಂಗೀತದ ಹೆಸರಾಂತ ಕಲಾವಿದರು. ಶಿವಪುತ್ರಯ್ಯ ಸಿದ್ಧರಾಮಯ್ಯ ಕುಂಭಕಾಳಿಮಠ ಎಂಬುದು ಇವರ ಪೂರ್ಣ ಹೆಸರು. ಇವರ ಮನೆತನದ ಮೂಲ ಊರು ಕೇರಳ ರಾಜ್ಯದ ಕೊಡವು. ಬೆಳಗಾಂವಿ ಜಿಲ್ಲೆ ಸೂಳೆಭಾವಿಯಲ್ಲಿ 1924 ಏಪ್ರಿಲ್ 8ರಂದು ಜನಿಸಿದರು. ತಂದೆ ಸಿದ್ಧರಾಮಯ್ಯ, ತಾಯಿ ಗುರುಸಿದ್ಧವ್ವ. ಪಂಚಾಕ್ಷರಿ ಗವಾಯಿಗಳು ಇವರ ಗುರು. ಇವರದು ಪೌರೋಹಿತ್ಯ ಮನೆತನವಾದರೂ ಅಜ್ಜನ ಕಾಲದಲ್ಲಿ ಸರಾಫ್ ಅಂಗಡಿ ತೆರೆದರು. ತಂದೆಯಿಂದ ಸಂಗೀತ ಕಲಿತು, ಆಕಾಶವಾಣಿಯಲ್ಲಿ ಮೊದಲಿಗೆ ಹಾಡುತ್ತಿದ್ದರು. ತಮ್ಮ ಆರನೆಯ ವಯಸ್ಸಿನಲ್ಲಿ ಹೆಸರಾಂತ ಗಾಯಕರ ಧ್ವನಿಮುದ್ರಿಕೆಗಳನ್ನು ಯಥಾವತ್ ಹಾಡಿ ಜನ ಸೋಜಿಗಪಡುವಂತೆ ಮಾಡುತ್ತಿದ್ದರು. ಇವರು ಓದಿದ್ದು ಪ್ರಾಥಮಿಕ ಮೂರನೆಯ ವರ್ಗದವರೆಗೆ ಮಾತ್ರ. ತಮ್ಮ ಮಗನ ಕಂಠಶ್ರೀ ಮತ್ತು ಅಪೂರ್ವ ಸಂಗೀತ ಜ್ಞಾನವನ್ನು ಗ್ರಹಿಸಿದ ತಂದೆ ಇವರ ಸಂಗೀತ ಶಿಕ್ಷಣಕ್ಕೆ ಬಿ.ಆರ್. ದೇವಧೂರರ ಹತ್ತಿರ ಬಿಟ್ಟರು. ತಮ್ಮ ಏಳನೆಯ ವಯಸ್ಸಿನಲ್ಲಿಯೇ ದೊಡ್ಡ ದೊಡ್ಡ ಸಂಗೀತ ವಿದ್ವಾಂಸರ ಮುಂದೆ ಸಂಗೀತ ಕಛೇರಿ ನಡೆಸಿ ಸೈ ಎನಿಸಿಕೊಂಡರು.

ಒಮ್ಮೆ ಇವರ ಕುಲಗುರು ಶಾಂತವೀರಸ್ವಾಮಿ ಗುರುಮಠಕಲ್ ಬಾಗೇವಾಡಿಗೆ ಬಂದಿದ್ದರು. ಅವರೆದುರು ಹಾಡಿ ಗುರುಗಳ ಮೆಚ್ಚುಗೆಗೆ ಪಾತ್ರರಾಗಿ ಅವರಿಂದ ಬಂಗಾರದ ಪದಕ ಪಡೆದರು. ಪದಕದ ಹಿಂದೆ ಕುಮಾರಗಂಧರ್ವ ಎಂಬ ಬಿರುದನ್ನು ಕೊರೆಯಲಾಗಿತ್ತು. ಅಂದಿನಿಂದ ಶಿವಪುತ್ರಯ್ಯನವರು ಕುಮಾರಗಂಧರ್ವ ಎಂದೇ ಖ್ಯಾತರಾದರು.

ಮೊದಮೊದಲು ವಝೆಖಾನ ಸಾಹೇಬ ಅಬ್ದುಲ್ ಕರೀಂ ಖಾನ, ಓಂಕಾರನಾಥ್ ಠಾಕೂರ್ ಮೊದಲಾದ ಹಿರಿಯರ ಹಾಡುಗಳನ್ನು ಯಥಾವತ್ ಭಟ್ಟಿಯಿಳಿಸುತ್ತಿದ್ದ ಕುಮಾರಗಂಧರ್ವರು ದೇವಧೂರರ ಗರಡಿಯಲ್ಲಿ ಗ್ವಾಲಿಯರ್ ಘರಾನೆಯ ಸಂಗೀತದಲ್ಲಿ ಪಳಗಿದರೂ ತಮ್ಮ ಸ್ವಂತಿಕೆಯಿಂದ ಹೊಸದಾರಿ ತುಳಿದರು. ಇವರು ಗ್ವಾಲಿಯರ್ ಘರಾನೆಯ ಸಂಗೀತ ಚೌಕಟ್ಟನ್ನು ಪರಂಪರೆಯ ದೃಷ್ಟಿಯಿಂದ ಮುರಿದರೂ ಆ ಸಂಗೀತಕ್ಕೊಂದು ಹೊಸಮೆರಗು, ಹೊಸಸೊಗಸು ನೀಡಿದರು. ಸಂಗೀತದ ಜೊತೆಗೆ ಸಾಹಿತ್ಯ, ಚಿತ್ರ, ಶಿಲ್ಪಗಳ ಅಧ್ಯಯನ ಮಾಡಿದರು. ತಾರುಣ್ಯದಲ್ಲಿಯೇ ಕ್ಷಯರೋಗ ಪೀಡಿತರಾದುದರಿಂದ ವೈದ್ಯರ ಸಲಹೆಯ ಮೇರೆಗೆ ಮಧ್ಯಪ್ರದೇಶದ ದೇವಾಸಕ್ಕೆ ವಾಸಿಸಲು ತೆರಳಿದರು.

ಸಂಗೀತ ಕಲೆಯಲ್ಲಿ ಕುಮಾರಗಂಧರ್ವರು ವಿವಿಧ ಪ್ರಯೋಗ ಮಾಡಿದರು. ನಿಸರ್ಗಕ್ಕೂ ಸಂಗೀತಕ್ಕೂ ಇವರು ಸಂಬಂಧ ಕಂಡುಕೊಳ್ಳಲು ಪ್ರಯತ್ನಿಸಿದರು. ಸಂಗೀತದ ಉತ್ಪತ್ತಿ ನಾದಬ್ರಹ್ಮದಿಂದಾದುದರಿಂದ ಆ ನಾದಬ್ರಹ್ಮವನ್ನು ಶೋಧಿಸುವುದು, ಸಂಗೀತ ಮೂಲಸ್ರೋತದತ್ತ ಸಾಗುವುದು ಇವರ ಗುರಿಯಾಗಿತ್ತು. ಹಿರಿಯರು ಹಾಕಿಕೊಟ್ಟ ದಾರಿಯಲ್ಲಿ ತಾವು ನಡೆಯುತ್ತಿದ್ದರೂ ತಮ್ಮದೇ ಆದ ಹೊಸ ಕಾಣಿಕೆಯನ್ನು ಸಂಗೀತ ಕ್ಷೇತ್ರಕ್ಕೆ ನೀಡಬೇಕೆಂಬ ಹಂಬಲದಿಂದ ತಮ್ಮ ಗಾನ ಪ್ರತಿಭೆಯ ಹದಿನಾರು ರೂಪಗಳನ್ನು ತೋರಿಸುವ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ ನೀಡಿ ಸಂಗೀತ ಜಗತ್ತಿನಲ್ಲಿ ಅಚ್ಚರಿ ಮೂಡಿಸಿದರು.

ಇದಲ್ಲದೆ ಇವರು ಹೊಸರಾಗ ಮತ್ತು ಹೊಸ ಬಂದಿಶ್ ರಚಿಸಿದರು. ಭಜನ, ಖ್ಯಾಲ, ಠುಮರಿ, ಟಪ್ಪಾ, ತರಾಣಾ, ಭಾವಗೀತೆಗಳನ್ನು ಸಮಾನ ತನ್ಮಯತೆಯಿಂದ ಹಾಡಿ ತಾನು ಸಂಗೀತದ ಎಲ್ಲ ಪ್ರಕಾರಗಳಲ್ಲೂ ಸಾಧಿಸಿದ್ದೇನೆಂಬುದನ್ನು ತೋರಿಸಿಕೊಟ್ಟರು. ತಮ್ಮ ಸಂಗೀತ ಕಛೇರಿ ಆರಂಭಿಸುವಾಗಲೇ ಅಂದು ಹಾಡಬೇಕಾದುದನ್ನು ನಿಶ್ಚಯಿಸಿ ಬರುತ್ತಿದ್ದರು. ಪರಂಪರೆಯ ರಾಗವನ್ನು ಹೊಸ ಬಂದಿಶ್‌ನಲ್ಲಿ ಹಾಡುತ್ತಿದ್ದರು. ಅದಕ್ಕೆ ರಾಗದ ಪ್ರೊಫೈಲ್ ಎನ್ನುತ್ತಿದ್ದರು. ಕೆಲವು ವೇಳೆ ಹಳೆಯ ರಾಗಗಳಲ್ಲಿ ತಮ್ಮ ಸ್ವರಚಿತ ಬಂದಿಶ್ ಹಾಡುತ್ತಿದ್ದುದುಂಟು. ಇಂಥ ಬಂದಿಶ್‌ಗಳ ಅನುಪರಾಗ ವಿಲಾಸ ಎಂಬ ಎರಡು ಗ್ರಂಥಗಳು ಪ್ರಕಟವಾಗಿವೆ.

ಇವರ ಸಂಗೀತ ಪ್ರತಿಭೆಗೆ ಹಲವು ಪ್ರಶಸ್ತಿಗಳು ಸಂದಿವೆ. ಅವುಗಳಲ್ಲಿ ಮುಖ್ಯವಾದವು: ಗಂಧರ್ವ ಮಹಾವಿದ್ಯಾಲಯ, ಉಜ್ಜೈನಿಯ ವಿಕ್ರಮ ವಿಶ್ವವಿದ್ಯಾಲಯ, ಭೂಪಾಲಿನ ಭಾರತ ಭವನ, ಮಧ್ಯಪ್ರದೇಶ ಕಲಾ ಅಕಾಡೆಮಿ, ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಗಳು ಹಾಗೂ ಭಾರತ ಸರ್ಕಾರದ ಪದ್ಮವಿಭೂಷಣ ಪ್ರಶಸ್ತಿ. ಇವರು 1992 ಜನವರಿ 12ರಂದು ನಿಧನರಾದರು. (ಎಸ್.ಎಂ.ಕೆ.)

**ಕುಮಾರ ಚೆನ್ನಬಸವ** : ಸು.1550. ವೀರಶೈವ ಕವಿ. ಬಸವ ಪುರಾಣದ ಪುರಾತನರ ಚರಿತ್ರೆ, ಸಾಸಲಭೈರವೇಂದ್ರ ಚರಿತ್ರೆ, ಶಂಭುಪೂಜಾವಿಧಿ, ಭೂತಿಯಧ್ಯಾಯ ಎಂಬ ಗ್ರಂಥಗಳ ಕರ್ತೃ. ಕೊನೆಯ ಮೂರು ಉಪಲಬ್ಧವಿಲ್ಲ.

ಕವಿ ತಾನು ಮುಕ್ತಿಮುನಿಸಿಂಹಾಸನಾಧಿಪತಿ ಬಸವೇಶಕರ ಬಿಸಜಸಂಜನಿತ ಎಂದು ಹೇಳಿಕೊಂಡಿರುವುದರಿಂದ ಬಸವೇಶ ಇವನ ಗುರು ಎಂದು ತಿಳಿಯುತ್ತದೆ. ವಿರೂಪಾಕ್ಷಪಂಡಿತನ (ಸು.1584) ಚೆನ್ನಬಸವ ಪುರಾಣದಿಂದ ಈತ ಬಾಳೆಯಹಳ್ಳಿಯ ಸಿಂಹಾಸನಾಧಿಪತಿಯಾಗಿದ್ದನೆಂದು ತಿಳಿದುಬರುತ್ತದೆ. ಕವಿ ತನ್ನನ್ನು ಮುಕ್ತಿಮುನಿನಾಥವಂಶಾಂಬರಾದಿತ್ಯ, ಶಿವಭಕ್ತಕಲ್ಪದ್ರುಮ, ಪ್ರತಾಪಕೀರ್ತಿ ವಿರಾಜಿತ ಎಂದು ಕರೆದುಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಬಾಣ, ಉದ್ಭಟ, ಮಲಯರಾಜ, ಶೃಂಗಾರಕವಿ, ಹರೀಶ್ವರ, ಪದ್ಮರಾಜ, ಸೋಮೇಶ ಇವರನ್ನು ಸ್ಮರಿಸಿದ್ದಾನೆ.

ಬಸವಪುರಾಣದ ಪುರಾತನರ ಚರಿತ್ರೆ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 9 ಸಂಧಿಗಳೂ 351 ಪದ್ಯಗಳೂ ಇವೆ. ಪ್ರತಿ ಸಂಧಿಯ ಪ್ರಾರಂಭದಲ್ಲಿ ಒಂದು ಕಂದ ಇಲ್ಲವೆ ವೃತ್ತ ಇದೆ. ಬಸವಪುರಾಣದಲ್ಲಿ ಸಂಗ್ರಹವಾಗಿ ಸೂಚಿಸಿರುವ ಪುರಾತನರ ಚರಿತ್ರೆ ಇಲ್ಲಿ ಉಪಕಥೆಗಳೊಡನೆ ವಿಸ್ತಾರಗೊಂಡಿದೆ. ಕಾವ್ಯದಲ್ಲಿ ಕವಿತ್ವ ಪ್ರದರ್ಶನಕ್ಕಾಗಲೀ ವರ್ಣನೆಗಾಗಲೀ ಅವಕಾಶವಿಲ್ಲ. ಕವಿ ತನ್ನ ಸಮಯ ಶರಣತೆಯನ್ನು ಶರಣರ ಕಥಾನಕಗಳನ್ನು ಹೇಳುವುದರ ಮೂಲಕ ತೋರಿಸಿಕೊಂಡಿದ್ದಾನೆ. ಶಿವಶರಣರ ಕಥೆಗಳನ್ನುಳ್ಳದ್ದರಿಂದ ಇದು ವೀರಶೈವ ಪುರಾಣವೆನಿಸಿಕೊಳ್ಳಲು ಯೋಗ್ಯವಾಗಿದೆ. (ಆರ್.ಎಸ್.ವಿ.)

**ಕುಮಾರದೇವ** : ಸು.17ನೆಯ ಶತಮಾನ. ತಮಿಳುನಾಡಿನಲ್ಲಿದ್ದು ಶೈವಪಂಥವನ್ನು ಪ್ರಬಲಗೊಳಿಸಿದ ಕನ್ನಡಿಗ. ಕುಮಾರದೇವ ಶಿವಪ್ರಕಾಶ ಈತನ ಪೂರ್ಣ ಹೆಸರು. ಕನ್ನಡಿಗನಾದರೂ ಈತನ ಜೀವನ ವಿಚಾರ ಕನ್ನಡಿಗರಿಗೇ ಹೆಚ್ಚಾಗಿ ತಿಳಿದಿಲ್ಲ. ಈತನ ಕಾಲದ ವಿಚಾರವಾಗಿ ನಿರ್ದಿಷ್ಟವಾಗಿ ತಿಳಿದುಬರುವುದಿಲ್ಲವಾದರೂ ಈತನಿಂದಲೇ ರಚಿತವಾದ ಮಹಾರಾಜ ತುರುವು (ಮಹಾರಾಜನ ಕಥೆ) ಎಂಬ ಗ್ರಂಥದಿಂದ ಈತ ಹದಿನೇಳನೆಯ ಶತಮಾನಕ್ಕೆ ಸೇರಿದವನೆಂದು ಗೊತ್ತುಮಾಡಬಹುದು. ಈ ಗ್ರಂಥದ ಸಹಾಯದಿಂದ ನಮಗೆ ಈತನ ಜೀವನ ವೃತ್ತಾಂತ ತಿಳಿದು ಬರುತ್ತದೆ. ಕನ್ನಡ ನಾಡಿನ ಪೂರ್ವ ಭಾಗದಲ್ಲಿ ಈತ ರಾಜನಾಗಿದ್ದವ.

ಆದರೆ ವೈರಾಗ್ಯ ಪ್ರವೃತ್ತಿಯಿಂದ ತನ್ನ ರಾಜ್ಯ ಮತ್ತು ಆಪ್ತಬಂಧುಗಳು ಎಲ್ಲರನ್ನೂ ಎಲ್ಲವನ್ನು ಬಿಟ್ಟು ತಮಿಳುನಾಡಿಗೆ ಹೋಗಿ ಪ್ರಖ್ಯಾತರಾಗಿದ್ದ ಪೆರೂರು ಮಠದ ಸ್ವಾಮಿಗಳ ಸನ್ನಿಧಿಯಲ್ಲಿ ಅಧ್ಯಾತ್ಮಭಿಕ್ಷೆಗಾಗಿ ಹಂಬಲಿಸಿದ. ಮಠದ ಅಧಿಪತಿಗಳಾದ ಶಾಂತಲಿಂಗ ಸ್ವಾಮಿಗಳು ತತ್ತ್ವಾರ್ಥನೆಗಾಗಿ ತಮ್ಮಲ್ಲಿಗೆ ಬಂದವರನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿ ಅನಂತರ ಶಿಷ್ಯನನ್ನಾಗಿ ಪರಿಗ್ರಹಿಸತಕ್ಕವರಾದುದರಿಂದ ಬಹಿರಂಗವಾಗಿ ಕುಮಾರದೇವನನ್ನು ಅಲಕ್ಷಿಸಿದಂತೆ ಕಂಡುಬಂದರೂ ಈತನ ತತ್ತ್ವ ಮತ್ತು ಜ್ಞಾನನಿಷ್ಠೆಗಳನ್ನು ಅಳೆಯಲು ತೊಡಗಿದರು. ಶಿಷ್ಯ ಗುರುಸೇವಾಪ್ರವೃತ್ತಿಯಲ್ಲಿ ನಿಂತ. ಗುರುಕುಲದ ಗೋಸಂವರ್ಧನಕಾರ್ಯ ಈತನ ಪಾಲಿಗೆ ಬಂತು. ಹುಲ್ಲು ತರುವಲ್ಲಿ ಒಮ್ಮೆ ಕತ್ತಿಯಿಂದ ತನ್ನ ಕೈಯನ್ನು ಗಾಯಪಡಿಸಿಕೊಂಡದರೂ ಕುಮಾರದೇವ ಕಾರ್ಯತತ್ಪರನಾಗಿ ಗುರುಶುಶ್ರೂಷಗೆ ಭಂಗತರದಂತೆ ನಡೆದುಕೊಂಡ. ಹೀಗೆ ಅನೇಕ ಕಷ್ಟಕರವಾದ ಪರೀಕ್ಷೆಗಳಿಗೆ ಒಳಪಟ್ಟು ಗುರುಗಳ ಪ್ರೇಮಕ್ಕೆ ಪಾತ್ರನಾದ ಈ ಹೊಸ ಶಿಷ್ಯ ರಾಜಕುಮಾರನಾಗಿದ್ದರೂ ಸಾಮಾನ್ಯನಂತೆ ದೇಹವನ್ನು ದಂಡಿಸಿಕೊಂಡು ಗುರುಗಳ ಕೃಪಾಕಟಾಕ್ಷವನ್ನು ಸಂಪಾದಿಸಲು ತೊಡಗಿದ್ದುದನ್ನು ಕಂಡ ಗುರುಗಳು ಈತನ ಅಧ್ಯಾತ್ಮ ಆರ್ತತೆಯ ಬಗ್ಗೆ ಆನಂದಪಟ್ಟರು. ಕೊನೆಯ ಸಲ ಅನುಗ್ರಹಿಸುವ ರೀತಿಯಲ್ಲಿ ಶಿಷ್ಯನನ್ನು ಒಂದು ಕಾರ್ಯದಲ್ಲಿ ನಿಯಮಿಸಿದರು. ಅವನಿಗೆ ಗೊತ್ತಾಗದಂತೆ, ಎರಡು ಗಂಟುಗಳಲ್ಲಿ ಆಹಾರವನ್ನು ಕಟ್ಟಿಸಿಕೊಂಡು ಶಿಷ್ಯನ ಹೆಗಲ ಮೇಲಿರಿಸಿಕೊಂಡು ದೂರದ ಯಾತ್ರೆಗೆಂದು ಹೊರಟರು. ಗಂಟುಗಳ ಭಾರ ಹೆಚ್ಚಾದ್ದರಿಂದ ಗುರುಗಳನ್ನು ಅನುಸರಿಸಲು ಕುಮಾರದೇವನಿಗೆ ಆಗದೆ ಹೋಯಿತು. ಹಿಂದೆ ಬಿದ್ದದ್ದು ಏಕೆ ಎಂದು ಗುರುಗಳು ಕೇಳಿದರು. ಗುರುಗಳ ನೆರಳಿನಲ್ಲೇ ನಡೆಯಬೇಕೆಂದು ಮನಸ್ಸು ಎಷ್ಟು ತವಕಪಟ್ಟರೂ ಬಳಲಿದ ದೇಹ ತನಗೆ ಅಡ್ಡಬರುತ್ತಿದೆ ಎಂದು ಶಿಷ್ಯ ಉತ್ತರಿಸಿದ. ಆತನ ವಿನಯ ಮತ್ತು ಶ್ರದ್ಧೆಗಳು ಗುರುಗಳಿಗೆ ಸಂತಸ ತಂದುವು. ಇವನ್ನು ಶಿಷ್ಯನನ್ನಾಗಿ ಪರಿಗ್ರಹಿಸಿ ಈಗ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿರುವ ವೃದ್ಧಾಚಲಂ ಎನ್ನುವ ಸ್ಥಳಕ್ಕೆ ಹೋಗುವಂತೆ ಆಣತಿ ನೀಡಿದರು. ಅಲ್ಲಿಗೆ ಹೋಗಿ ಇವನು ಅನೇಕ ದಿನಗಳ ಕಾಲ ಧ್ಯಾನ ನಿರತನಾಗಿದ್ದು ತಪಸ್ಸಿದ್ಧಿ ಪಡೆದ. ಅನೇಕ ಪವಾಡಗಳನ್ನು ಮೆರೆದ. ದಟ್ಟದರಿದ್ರನಾದ ಕುಷ್ಠರೋಗಿಯೊಬ್ಬನನ್ನು ಭಸ್ಮಲೇಪನದಿಂದಲೇ ರೋಗಮುಕ್ತನನ್ನಾಗಿ ಮಾಡಿದ್ದು ಇವನ ಕೀರ್ತಿ ಜನಜನಿತವಾಗಲು ಕಾರಣವಾದ ಪವಾಡಗಳಲ್ಲೊಂದು.

ಅನಂತರ ಈತ ವೃದ್ಧಾಚಲದಿಂದ ತಿರುವಾಯೂರಿಗೆ ಹೋದ. ಆ ಸಂದರ್ಭದಲ್ಲಿ ಅಲ್ಲಿ ತ್ಯಾಗರಾಜರ ಉತ್ಸವ ವಿಜೃಂಭಣೆಯಿಂದ ನಡೆಯುತ್ತಿತ್ತು. ಧ್ಯಾನಾಸಕ್ತನಾಗಿದ್ದ ಇವನನ್ನು ಹಲವರು ಶೈವನೆಂದು ಮೂದಲಿಸಿದರು. ತನ್ನ ಶೈವಮತ ಸತ್ಯವೆಂದಾದರೆ ದೇವರ ಉತ್ಸವವೇ ಮುಂದೆ ಹೋಗದಂತಾಗಲಿ ಎಂದು ಕುಮಾರದೇವ ಪ್ರಾರ್ಥಿಸಿದ. ಅದರ ಪರಿಣಾಮವಾಗಿ ಉತ್ಸವ ಮುಂದೆ ಹೊರಡಲಿಲ್ಲ. ತಂಜಾವೂರಿನ ಅಂದಿನ ರಾಜ ಉತ್ಸವ ನಡೆದು ದೇವರು ಯಥಾಸ್ಥಾನಕ್ಕೆ ಸೇರದ ಹೊರತು ಊಟ ಮಾಡುತ್ತಿರಲಿಲ್ಲವಾಗಿ, ದಿಕ್ಕು ತೋಚದಂತಾಯಿತು. ಘಟನೆಗೆ ಕಾರಣವೇನಿರ ಬಹುದೆಂದು ವಿಚಾರ ಮಾಡಲಾಗಿ ಶೈವಭಕ್ತನೊಬ್ಬನಿಗೆ ಅಪಚಾರ ನಡೆದಿದೆ ಎಂದು ತಿಳಿದುಬಂತು. ಇವನಲ್ಲಿಗೆ ರಾಜ ಬಂದು ಕ್ಷಮಾಪಣೆ ಕೇಳಿದ. ಶೈವಮತ ಸತ್ಯವೆಂದಾದರೆ ರಥೋತ್ಸವ ಮುಂದೆ ಸಾಗಲಿ ಎಂದು ಇವನು ಪ್ರಾರ್ಥಿಸಲಾಗಿ ರಥ ಮುಂದೆ ಸಾಗುವಂತಾಯಿತು. ಹೀಗೆ ಇವನ ದೈವಭಕ್ತಿ ಮತ್ತು ಮಹಿಮೆಗಳು ಪವಾಡರೂಪದಲ್ಲಿ ಪ್ರಕಟಗೊಂಡುವು.

ಇವನು ಗುರುವಿನ ಆದೇಶದಂತೆ ಚಿದಂಬರನೆಂಬ ಭಕ್ತನಿಗೆ ಶೈವಮತವನ್ನು ಉಪದೇಶ ಮಾಡಿದ. ಚಿದಂಬರ ಕೆಲಕಾಲಾನಂತರ ಚಿದಂಬರ ಸ್ವಾಮಿಯಾಗಿ ಮದರಾಸಿನ ಹತ್ತಿರವಿರುವ ತಿರಪ್ಪರೂರ್ ಮಠದ ಪೀಠಸ್ಥನಾಗಿ ಪ್ರಸಿದ್ಧನಾದ.

ಕುಮಾರದೇವ ತನ್ನ ಹೆಚ್ಚಿನ ಯೋಗಸಾಧನೆಯನ್ನು ವೃದ್ಧಾಚಲದಲ್ಲಿ ನಡೆಸಿದ. ದೇವಿ ಪೆರಿಯನಾಯಕಿ ಇವನ ಕನಸಿನಲ್ಲಿ ಕಾಣಿಸಿಕೊಂಡು ಶೈವಮತದ ಅನೇಕ ನಿಗೂಢ ತತ್ತ್ವಗಳನ್ನು ಬೋಧಿಸಿ ಅದನ್ನು ಪ್ರಕಟಿಸಲು ಪ್ರೇರೇಪಿಸಿದಳಂತೆ. ಸ್ವತಃ ಹೀಗೆ ಆ ದೇವಿಯ ಪೂರ್ಣ ಅನುಗ್ರಹಕ್ಕೆ ಪಾತ್ರನಾದ ಇವನು ಹದಿನಾಲ್ಕು ಶೈವತತ್ತ್ವಪರವಾದ ಶಾಸ್ತ್ರಗ್ರಂಥಗಳನ್ನು ತಮಿಳಿನಲ್ಲಿ ಅಭಿವ್ಯಕ್ತಿಗೊಳಿಸಿದ. ಜೊತೆಗೆ ಆ ನಿಗೂಢ ತತ್ತ್ವದಲ್ಲಿ ಶಿಷ್ಯರಿಗೆ ಉಪದೇಶ ಕೊಟ್ಟ. ಉಪದೇಶ ಪಡೆದ ಚಿದಂಬರ ಸ್ವಾಮಿ ಗುರುವಿನ ಸ್ಮರಣೆಗಾಗಿ ವೃದ್ಧಾಚಲದಲ್ಲಿ ಒಂದು ಮಠವನ್ನು ಸ್ಥಾಪಿಸಿದ. ಅದು ಈಗಲೂ ಕುಮಾರದೇವಮಠ ಎಂದು ಪ್ರಸಿದ್ಧವಾಗಿದೆ. ಈ ಮಠ ಅಲ್ಲಿನ ಪಟಿಮಲೈನಾದರ್ ದೇವಸ್ಥಾನದ ಹತ್ತಿರವಿದೆ. ಕುಮಾರದೇವ ಆ ಮಠದಲ್ಲಿಯೇ ಬಹಳ ಕಾಲ ಯೋಗಸಮಾಧಿಯಲ್ಲಿದ್ದು ಅಲ್ಲಿಯೇ ಶಿವೈಕ್ಯನಾದ. ಇವನ ಸಮಾಧಿ ಇಂದಿಗೂ ಶ್ರದ್ಧಾಳುಗಳಿಗೆ ಶಿವಸ್ಫೂರ್ತಿಯನ್ನು ನೀಡುತ್ತ ಆಧ್ಯಾತ್ಮಿಕ ಸಾಧನೆಗಳಿಗೆ ಪೋಷಕವಾಗಿದೆ.

ಶೈವಸ್ವಾಮಿಗಳ ಪರಂಪರೆಯಲ್ಲಿ ಮಹಾಮಹಿಮರೆನಿಸಿಕೊಂಡವರಲ್ಲಿ ಇವನು ಐದನೆಯವನೆಂದು ತಿಳಿದುಬರುತ್ತದೆ. ಶಿವನಿಂದ ಪ್ರಬೋಧಿತವಾದ ಶೈವಮತ ನಂದೀದೇವ, ಸನತ್ಕುಮಾರ, ಸತ್ಯಯಜ್ಞ ದರ್ಶಿನಿಗಳ ಮೂಲಕ ಬಂದು ಪರಂಜ್ಯೋತಿ ಸ್ವಾಮಿಗಳಿಂದ ಧರೆಗೆ ಇಳಿದು ಬಂತು. ಪರಂಜ್ಯೋತಿ ಸ್ವಾಮಿಗಳು ಮೈಕಂಡ ದೇವನಿಗದನ್ನು ಬೋಧಿಸಿದರು. ಅಲ್ಲಿಂದ ಮುಂದೆ ಅರುಳನಂದಿ ಶಿವಾಚಾರ್ಯರಿಗದು ಲಭಿಸಿ, ಅನಂತರ ಮರೆಯಜ್ಞಾನ ಸಂಬಂಧರ್, ಉಮಾಪತಿ ಶಿವಾಚಾರ್ಯ, ಉಮಾಪತಿ ನಮಶ್ಶಿವಾಯಸ್ವಾಮಿ, ಶಿವಪ್ರಕಾಶ ಸಿದ್ಧರ್, ನಮಶ್ಶಿವಾಯ ಮೂರ್ತಿ, ಶಿವಪ್ರಕಾಶ ದೇಶಿಕರ್, ಅನಂತರ ಇವರ ಶಿಷ್ಯರಾದ ಪೆರೂರಿನ ಶಾಂತಲಿಂಗಸ್ವಾಮಿಗಳ ಮೂಲಕ ಕುಮಾರದೇವನಿಗದು ಲಭ್ಯವಾಯಿತು. ಇವನು ಮದರಾಸು ಪ್ರಾಂತ್ಯಕ್ಕೆ ಬಂದಾಗ ಮೈಲಾಪುರವೆಂಬಲ್ಲಿ ತನ್ನ ಮಠದ ಒಂದು ಕವಲನ್ನು ಸ್ಥಾಪಿಸಿದ.

ಕುಮಾರದೇವನಿಂದ ರಚಿತವಾದ ಕೃತಿಗಳು ಹದಿನೈದು. ಅವುಗಳಲ್ಲಿ ಮುಖ್ಯವಾದವು ಶುದ್ಧ ಶತಕ ಮತ್ತು ಅದ್ವೈತ ಉನ್ಮೈ ಎನ್ನುವ ಗ್ರಂಥಗಳು. ಶ್ರೀಸುಬ್ರಹ್ಮಣ್ಯ ಶಿವಪ್ರಕಾಶ ಸ್ವಾಮಿಗಳು ಕುಮಾರದೇವನ ಶುದ್ಧ ಶತಕ ಮತ್ತು ವೃದ್ಧಾಚಲ ಪುರಾಣಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿಸಿದ್ದಾರೆ. ಮದರಾಸಿನ ತಮಿಳು ವಿದ್ವಾಂಸರೂ ಶೈವಸಿದ್ಧಾಂತದಲ್ಲಿ ಉನ್ನತ ಪಾಂಡಿತ್ಯವನ್ನು ಪಡೆದಿರುವವರೂ ಆದ ರಾವ್‌ಬಹದ್ದೂರ್ ಶ್ರೀಮುರುಗೇಶ ಮೊದಲಿಯಾರ್ ಎನ್ನುವವರು ಮೇಲಿನ ಗ್ರಂಥಗಳನ್ನು ಭಾಷಾಂತರಗೊಳಿಸಿದ್ದಾರೆ.

ಕುಮಾರದೇವನ ಗ್ರಂಥ'ಗಳ ವಿವರ ಹೀಗಿದೆ: ಮಹಾರಾಜ ತುರವು, ಶುದ್ಧಶತಕಮ್, ವಿಜ್ಞಾನಸಾರಂ, ಅದ್ವೈತ ಉನ್ಮೈ, ಬ್ರಹ್ಮಾನುಭೂತಿ ವಿಲಕ್ಕಂ, ಜ್ಞಾನ ಅಮ್ಮಗೈ, ದಶಾವಸ್ಥೈ, ಕಟ್ಟಳೈ, ದಶಾಕಾರ್ಯೈ ಕಟ್ಟಳೈ, ಸಿದ್ಧಾಂತ ಕಟ್ಟಳೈ, ಸಹಜನಿಷ್ಠೈ, ಬ್ರಹ್ಮಸಿದ್ಧಿ ಆಹವಳ್, ಶಿವದರ್ಶನ ಆಹವಳ್, ಆಗಮನೇರಿ ಅಹವಳ್, ವೇದನೇರಿ ಆಹವಳ್, ಬ್ರಹ್ಮಾನುಭವ ಆಹವಳ್, ಶಿವಸಮರಸವಾದ ಅಹವಳ್ ಇವು ಮುಖ್ಯವಾದುವು. ಇವುಗಳಲ್ಲಿ ಮೊದಲನೆಯದು ಕುಮಾರದೇವನ ಆತ್ಮಕಥ'ನ. ಮಹಾರಾಜನಾಗಿದ್ದವ ಇಹಜೀವನವನ್ನು ತೊರೆದು ಪಾರಮಾರ್ಥಿಕ ಸತ್ಯವನ್ನು ಅರಸುತ್ತ ಸಾರ್ಥಕ್ಯವನ್ನು ಗಳಿಸಿ ಲೋಕಕ್ಕೆ ಅಧ್ಯಾತ್ಮ ಮಾರ್ಗದರ್ಶನ ನೀಡಿದ ಕಥೆ' ಇಲ್ಲಿದೆ. ಮಿಕ್ಕದ್ದೆಲ್ಲವೂ ಶೈವಮತಕ್ಕೆ ಸಂಬಂಧಪಟ್ಟಿವೆ. ಕುಮಾರದೇವನಿಂದ ರಚಿತವಾದ ಆರು ಆಹವಳ್ ಗ್ರಂಥ'ಗಳು ವೀರಶೈವಮತದ ವಿವಿಧ' ಅಂಶಗಳನ್ನು ವಿವರಿಸುತ್ತವೆ. ಪಂಡಿತರ ಅಭಿಪ್ರಾಯದಲ್ಲಿ ಎಲ್ಲ ಗ್ರಂಥ'ಗಳಿಗೂ ಮಕುಟಪ್ರಾಯವಾಗಿರುವುದೆಂದರೆ ಶುದ್ಧ ಶತಕ. ತತ್ತ್ವಜ್ಞಾನಿಯಾದ ಕುಮಾರದೇವ ಭಕ್ತಾಗ್ರೇಸರನೂ ಆಗಿದ್ದ. ಇದಕ್ಕೆ ನಿದರ್ಶನ ಪೆರಿಯ ನಾಯಕಿ ಅಮ್ಮನ್ ಪಾದುಕಂ ಎನ್ನುವ, ಭಕ್ತಿ ರಸಪೂರ್ಣ ಮತ್ತು ತಾತ್ತ್ವಿಕದರ್ಶನವನ್ನು ಒಳಗೊಂಡ, ದಶಶ್ಲೋಕಗಳು.

*

**ಕುಮಾರಧಾರಾ** : ದಕ್ಷಿಣ ಕನ್ನಡ ಜಿಲ್ಲೆಯ ಒಂದು ನದಿ. ಇದು ಸುಬ್ರಹ್ಮಣ್ಯ ಕ್ಷೇತ್ರದ ಹತ್ತಿರವಿರುವ ಕುಮಾರಪರ್ವತದಲ್ಲಿ ಹುಟ್ಟಿ ವಾಯುವ್ಯ ದಿಕ್ಕಿನಲ್ಲಿ ಹರಿದು ಉಪ್ಪಿನಂಗಡಿ ಪೇಟೆಯ ಹತ್ತಿರ ನೇತ್ರಾವತಿಯನ್ನು ಸೇರುತ್ತದೆ. ಸುಬ್ರಹ್ಮಣ್ಯದಲ್ಲಿ ಜಾತ್ರೆಯ ಸಮಯದಲ್ಲಿ ಹರಕೆ ಹೊತ್ತ ಯಾತ್ರಿಕರು ಈ ನದಿಯಲ್ಲಿ ಸ್ನಾನಮಾಡಿ ಸುಬ್ರಹ್ಮಣ್ಯ ದೇವಸ್ಥಾನದವರೆಗೆ ಸುಮಾರು ಎರಡು ಕಿಲೋಮೀಟರುಗಳಷ್ಟು

ಉದ್ದದ ರಸ್ತೆಯಲ್ಲಿ ಉರುಳುಸೇವೆ ಹೋಗಿ ದೇವರಿಗೆ ಹರಕೆಯನ್ನೊಪ್ಪಿಸುತ್ತಾರೆ. ಹೀಗೆ ಈ ನದಿಯಲ್ಲಿ ಸ್ನಾನಮಾಡಿ ದೇವರಿಗೆ



ಕುಮಾರಧಾರಾ ನದಿ, ಸುಬ್ರಹ್ಮಣ್ಯ

ಉರುಳು ಸೇವೆ ಮಾಡುವುದರಿಂದ ಅಂಥವರ ಕಾಯಿಲೆಗಳೂ ಪಾಪಗಳೂ ಪರಿಹಾರವಾಗುವುವು ಎಂಬ ನಂಬಿಕೆಯಿದೆ. (ಡಿ.ಎನ್.ಕೆ.)

**ಕುಮಾರ ಪದ್ಮರಸ :** ಸು.1180. ವೀರಶೈವ ಕವಿ. ಸಾನಂದಚರಿತ್ರ ಎಂಬ ಕಾವ್ಯದ ಕರ್ತೃ. ತಂದೆ ಕೆರೆಯ ಪದ್ಮರಸ (ಸು.1165), ತಾಯಿ ಮಾದೇವಿ. ಕವಿಗೆ ಶರಣಕವಿ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ.

ಸಾನಂದಚರಿತ್ರ ನಾನಾ ಷಟ್ಪದಿಗಳಲ್ಲಿ ರಚಿತವಾಗಿದೆ. ಹೆಚ್ಚಾಗಿ ಬಳಕೆಯಾಗಿರುವುದು ಕುಸುಮ, ಭಾಮಿನೀ ಷಟ್ಪದಿಗಳು. ಇದರಲ್ಲಿ ಒಂಬತ್ತು ಸಂಧಿಗಳಿವೆ. ಈತನ ತಂದೆ ಸಂಸ್ಕೃತದಲ್ಲಿ ಬರೆದ ಸಾನಂದಚರಿತ್ರೆಯನ್ನೇ ಮಗ ಕನ್ನಡಿಸಿದನೆಂದೂ ಹೇಳುವವರಿದ್ದಾರೆ. ಕವಿಯೇ ಹೇಳಿಕೊಂಡಿರುವಂತೆ ಇದು ಪಂಚಾಕ್ಷರೀ ಮಹಿಮೆಯ ಚರಿತೆ. ಸಾನಂದನೆಂಬ ಋಷಿ ಪಂಚಾಕ್ಷರೀ ಮಹಿಮೆಯಿಂದ ನಾರಕಿಗಳನ್ನು ಉದ್ಧಾರ ಮಾಡಿದುದು ಕಾವ್ಯ ವಸ್ತು. ಚರಿತೆ ಸಾನಂದೇಶ ಚರಿತೆ ಜಗದಾನಂದ ಚರಿತೆ ಪಂಚಾಕ್ಷರೀವರಮಹಿಮೆಯ ಚರಿತೆ ಶಿವಭಕ್ತಿಗಿದು ಚರಿತೆ ಗುರುನಿಷ್ಠೆಗಿದು ಚರಿತೆ ಸತ್ಪಥಕೆ ತಾನೆಂತೆಂತೆನೆ ಎಂದು ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಹೇಳಿಕೊಂಡಿದ್ದಾನೆ. ತಂದೆಯೂ ಗುರುವೂ ಆಗಿದ್ದ ಕೆರೆಯ ಪದ್ಮರಸನ ಆಜ್ಞಾನುಸಾರ ತಾನು ಈ ಕೃತಿಯನ್ನು ರಚಿಸುತ್ತಿರುವುದಾಗಿಯೂ ಹೇಳುತ್ತಾನೆ. ರಾಘವಾಂಕ ಬಳಸದ ಇತರ ಷಟ್ಪದಿಗಳನ್ನೂ ಇವನ ಕಾವ್ಯದಲ್ಲಿ ಕಾಣಬಹುದು. ಇದು ಈತನ ಕಾವ್ಯದ ವೈಶಿಷ್ಟ್ಯವಾಗಿದೆ. ಅಲ್ಲದೆ ಪಂಚಾಕ್ಷರೀ ಮಂತ್ರ ಮಹಿಮೆಯನ್ನು ಪ್ರಪ್ರಥಮವಾಗಿ ಕನ್ನಡದಲ್ಲಿ ಬಣ್ಣಿಸಿದ ಹೆಗ್ಗಳಿಕೆಯೂ ಇದಕ್ಕಿದೆ. ಮುಂದೆ ಇವನ ವಂಶದಲ್ಲಿಯೆ ಉದಿಸಿದ ಪದ್ಮಣಾಂಕ (ಸು.1420) ಸಾನಂದಚರಿತ್ರೆಯನ್ನು ಶ್ರುತಿಸ್ಮೃತಿವಿಮಳಪುರಾಣಾಗಮೋಪನಿಷತ್ಪ್ರಭೃತಿ ಶಾಸ್ತ್ರಕುಳದ ಸಾರಂದೆಗೆದು ದೃಷ್ಟಕ್ಕೆ ಬರೆದು ಸವರಜಿಯೆ ಕರ್ನಾಟಕವಾಗಿ ಅಲಘು ವರ್ಣಕ ರೀತಿಯಿಂ ರಸಂ ಮುಸುಕಿಯುಜ್ವಳಿಪಂತೆ ಬರೆದ ಸಾನಂದ ಚರಿತಾಖ್ಯಶಾಸ್ತ್ರ ಎಂದು ಹೊಗಳಿದ್ದಾನೆ. ತಂದೆಯ ಪರವಾಗಿ ತ್ರಿಭುವನತಾತನೊಡನೆ ವಾದ ಮಾಡಿ ಕುಮಾರ ಪದ್ಮರಸ ವಿಜಯಿಯಾದನೆಂದೂ ಈತ ಹೇಳುತ್ತಾನೆ. ಸಾನಂದಚರಿತ್ರದ ಕಾವ್ಯಬಂಧ ಲಲಿತವಾಗಿದೆ. ವರ್ಣನೆಗಳು ಕೆಲವು ಸಂದರ್ಭಗಳಲ್ಲಿ ಮನೋಹರವಾಗಿವೆ. ನಿದರ್ಶನವಾಗಿ ಸಾನಂದ ನರಕಕ್ಕೆ ಹೋದುದರ ವರ್ಣನೆಯನ್ನೂ ಪಂಚಾಕ್ಷರೀ ಮಹಿಮೆಯ ನಿರೂಪಣೆಯನ್ನೂ ನೋಡಬಹುದು. ಧರೆಯೊಳು ಒಳುಗನ್ನಡದಿ ಪಸರಿಸಲೆಂದು ಸ್ತ್ರೀಬಾಲೂಸಾಧ್ಯವಾಗುವಂತೆ ಕೃತಿರಚನೆ ಮಾಡುವ ಸಂಕಲ್ಪದಿಂದ ಹೊರಟ ಕುಮಾರ ಪದ್ಮರಸ ಉದ್ದೇಶಿತ ಸಂಕಲ್ಪದಲ್ಲಿ ಬಹುಮಟ್ಟಿಗೆ ಸಫಲನಾಗಿರುವನೆಂದು ಹೇಳಬಹುದು. (ಎಸ್.ಪಿ.)

**ಕುಮಾರರಾಮ :** ಕಂಪಿಲಿ ರಾಜ್ಯದ ರಾಜಕುಮಾರ. ಕನ್ನಡ ನಾಡಿನ ಜನಪ್ರಿಯ ನಾಯಕರಲ್ಲೊಬ್ಬ. ಪೌರುಷ, ಶೌಚ ಗುಣಗಳಿಗೆ ಹೆಸರಾದವ. ಈತನನ್ನು ಕುರಿತು ನಂಜುಂಡ, ಪಾಂಚಾಳಗಂಗ ಮತ್ತು ಮಹಲಿಂಗಸ್ವಾಮಿ ಎಂಬ ಕವಿಗಳು ಸಾಂಗತ್ಯದಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ಅಲ್ಲದೆ ಈತನ ಬಗ್ಗೆ ಅನೇಕ ಜನಪದ ಗೀತೆಗಳೂ ಕಥೆಗಳೂ ಪ್ರಚಾರದಲ್ಲಿವೆ. ಕೆಲವು ಕೈಫಿಯತ್ತುಗಳೂ ದೊರೆತಿವೆ. ಈತನ ಪೂಜೆಗಾಗಿ ದೇವಾಲಯಗಳನ್ನು ನಿರ್ಮಿಸಿರುವ ವಿಚಾರಗಳು ಶಾಸನಗಳಲ್ಲಿ ಉಕ್ತವಾಗಿವೆ.

ಸಾಹಿತ್ಯ ಗ್ರಂಥಗಳ ಪ್ರಕಾರ ಕುಮಾರರಾಮ ಕಂಪಿಲ ಮತ್ತು ಹರಿಹರ ದೇವಿಯರ (ಹರಿಯಾಲದೇವಿ) ವರಪುತ್ರ. ಈತನಿಗೆ ರಾಮನಾಥ, ರಾಮುಗ, ಚೆನ್ನಿಗರಾಮ ಎಂಬ ಹೆಸರುಗಳೂ ಉಂಟು. ಈತನನ್ನು ಅರ್ಜುನನ ಅವತಾರವೆಂದು ನಂಜುಂಡನೂ ಜಟ್ಟಂಗಿರಾಮನ ಅವತಾರವೆಂದು ಪಾಂಚಾಳಗಂಗನೂ ಪರಶುರಾಮನ ಅವತಾರವೆಂದು ಮಹಲಿಂಗಸ್ವಾಮಿಯೂ ಚಿತ್ರಿಸಿರುತ್ತಾರೆ. ಚಿಕ್ಕಂದಿನಿಂದಲೇ ಆಟ, ಪಾಠ, ಬೇಟೆ ಮುಂತಾದ ಸಮಸ್ತ ವಿದ್ಯೆಗಳಲ್ಲಿಯೂ ಪ್ರವೀಣನಾಗಿ ಈತ ಕಂಪಿಲನಿಗೆ ಬಲಗೈಯಂತಿದ್ದ. ಹೊಸಮಲೆದುರ್ಗ ಮತ್ತು ಕುಮ್ಮಟ ದುರ್ಗಗಳಲ್ಲಿ ಪಾಳೆಯವನ್ನು ಸ್ಥಾಪಿಸಿಕೊಂಡು ಪ್ರಬಲನಾಗಿದ್ದ ಕಂಪಿಲನಿಗೆ ಹೊಯ್ಸಳ ವೀರಬಲ್ಲಾಳ, ಕಾಕತೀಯ ಪ್ರತಾಪರುದ್ರ ಮೊದಲಾದ ನೆರೆಹೊರೆಯ ರಾಜರು ಶತ್ರುಗಳಾಗಿದ್ದರು. ಕುಮಾರರಾಮ ಈ ಅರಸರನ್ನೆಲ್ಲ ಹಿಮ್ಮೆಟ್ಟಿಸಿ ಚಿಕ್ಕವಯಸ್ಸಿನಲ್ಲಿಯೇ ತುಂಬ ಯಶೋವಂತನಾದ. ಕ್ರಮಕ್ರಮವಾಗಿ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡು ಬಲಿಷ್ಠನಾಗುತ್ತಿದ್ದ ಕಂಪಿಲನ ಮೇಲ್ಮೆಯನ್ನು ದೆಹಲಿಯ ಸುಲ್ತಾನ ಸಹಿಸದೆ ಹೋದ. ಆದರೆ ಸಾಹಸಿಯೂ ಸ್ಫುರದ್ರೂಪಿಯೂ ಆದ ಕುಮಾರರಾಮನ ವೃತ್ತಾಂತವನ್ನು ಕೇಳಿ ಸುಲ್ತಾನನ ಮಗಳಾದ ಬಾಬಮ್ಮ ಆತನನ್ನೇ ವರಿಸಬೇಕೆಂದು ಹಟ ತೊಟ್ಟಳು. ಸುಲ್ತಾನ ತನ್ನ ವಜೀರರ ಮೂಲಕ ಕಂಪಿಲನಿಗೆ ಹೇಳಿಕಳುಹಿಸಿ, ಅವನೊಂದಿಗೆ ಬಾಂಧವ್ಯ ಬೆಳೆಸಲು ಅಪೇಕ್ಷಿಸಿದ. ಕುಮಾರರಾಮನಾಗಲಿ ಕಂಪಿಲನಾಗಲಿ ಈ ಸಲಹೆಗೆ ಒಪ್ಪಲಿಲ್ಲ. ಈ ನಿರಾಕರಣೆಯಿಂದ ಸುಲ್ತಾನನಿಗೆ ಅವಮಾನವಾದಂತಾಯಿತು. ಕಂಪಿಲ ಮತ್ತು ಅವನ ಮಗನ ಅಹಂಕಾರವನ್ನು ಅಡಗಿಸಬೇಕೆಂದು ಆತ ನಿಶ್ಚಯಿಸಿಕೊಂಡ. ಈ ವೇಳೆಗೆ, ಸುಲ್ತಾನನ ಆಶ್ರಯದಲ್ಲಿದ್ದ ಬಾದೂರಖಾನನೆಂಬ ಸರದಾರ ತನ್ನ ಒಡೆಯನೊಂದಿಗೆ ವೈಮನಸ್ಯ ಕಟ್ಟಿಕೊಂಡು, ತಲೆತಪ್ಪಿಸಿಕೊಂಡು ಬಂದು ಹಿಂದು ರಾಜರಲ್ಲಿ ಆಶ್ರಯ ಕೋರಿದ. ಆದರೆ ಸುಲ್ತಾನನ ನಿಷ್ಠುರಕ್ಕೆ ಹೆದರಿದ ಹಿಂದು ರಾಜರು ಅವನಿಗೆ ಆಶ್ರಯವೀಯಲು ಹಿಂದೆಗೆದರು. ಕುಮಾರರಾಮನ ಸಲಹೆಯ ಮೇರೆಗೆ ಕಂಪಿಲ ಮುಂದೆ ಬಂದು ಬಾದೂರಖಾನನಿಗೆ ಆಶ್ರಯವಿತ್ತ. ಇದೀಗ ಸುಲ್ತಾನನಿಗೆ ಕಂಪಿಲನ ಮೇಲೆ ದಂಡೆತ್ತಿಬರಲು ಸಾಕಷ್ಟು ಕಾರಣವನ್ನೊದಗಿಸಿತು. ಸುಲ್ತಾನನ ಅಪ್ಪಣೆಯ ಮೇರೆಗೆ, ನೇಮಿ ಎಂಬಾತ ಸುತ್ತಮುತ್ತಲಿನ ಪಾಳೆಯಗಾರರನ್ನು ಕೂಡಿಸಿಕೊಂಡು ಕುಮ್ಮಟದುರ್ಗವನ್ನು ಮುತ್ತಿದ. ಕಡುಗಲಿಯಾದ ಕುಮಾರರಾಮನೂ ಆತನ ಸಹೋದರಸಮಾನನಾದ ಕಾಟಣ್ಣನೂ ವೀರಾವೇಶದಿಂದ ಹೋರಾಡಿ ಮುಸಲ್ಮಾನರನ್ನು ಹಿಂದಟ್ಟಿದರು. ಆಶಾಭಂಗಕ್ಕೊಳಗಾದ, ರೂಪಿಗೆ ಮರುಳಾದ ಆತನ ಚಿಕ್ಕಮ್ಮ ರತ್ನಾಜಿಗೆ ಕುಮಾರರಾಮನಲ್ಲಿ ವ್ಯಾಮೋಹವಂಕುರಿಸಿತು. ಒಮ್ಮೆ ಕಂಪಿಲ ಬೇಟೆಗಾಗಿ ಅರಣ್ಯಕ್ಕೆ ತೆರಳಿದ್ದಾಗ ಊರಿನಲ್ಲಿಯೇ ಇದ್ದ ಕುಮಾರರಾಮ ತನ್ನ ಸಂಗಡಿಗರೊಂದಿಗೆ ಮುತ್ತಿನ ಚೆಂಡಿನ ಲಗ್ಗೆಯಾಟವನ್ನು ಆಡುತ್ತಿರುವಾಗ ಚೆಂಡು ಕೈಮೀರಿ ರತ್ನಾಜಿಯ ಅರಮನೆಯಲ್ಲಿ ಬಿತ್ತು. ಅದನ್ನು ಕೇಳಿ ಪಡೆಯಲು ಹೋಗಿದ್ದ ಕುಮಾರ ರಾಮನನ್ನು ಆಕೆ ನಾನಾ ಬಗೆಯಾಗಿ ಮರುಳು ಮಾಡಿ ಒಲಿಸಿಕೊಳ್ಳಲು ಪ್ರಯತ್ನಿಸಿದಳು. ಕುಮಾರರಾಮ ಕಂಗೆಟ್ಟು ಆಕೆ ತನಗೆ ಮಾತೃ ಸಮಾನಳೆಂದೂ ಹಾಗೆ ವರ್ತಿಸುವುದು ಉಚಿತವಲ್ಲವೆಂದೂ ಎಚ್ಚರಿಸಿದ. ಆದರೆ ಕಾಮಪರವಶಳಾಗಿದ್ದ ರತ್ನಾಜಿಗೆ ಆತನ ಹಿತವಚನಗಳು ಹಿಡಿಸಲಿಲ್ಲ. ಹೊರ ಹೊರಟಿದ್ದ ಆತನನ್ನು ಅಡ್ಡಗಟ್ಟಿ, ಮೈಮೇಲೆ ಬಿದ್ದು ಬಲತ್ಕಾರಗೊಳಿಸಲು ಮುಂದುವರಿದಳು. ಪರದಾರಸೋದರನಾದ ಕುಮಾರರಾಮ ಚಿಕ್ಕಮ್ಮನನ್ನು ಅಲ್ಲಗಳೆದು ಆಕೆಯನ್ನು ಅತ್ತ ನೂಕಿ, ಕೈಕೊಡವಿಕೊಂಡು ಹೊರಟುಬಂದ. ರತ್ನಾಜಿ ಈರ್ಷೆಯಿಂದ ಹೆಮ್ಮಾರಿಯಾಗಿ ಕುಮಾರರಾಮನ ಮೇಲೆ ಸೇಡು ತೀರಿಸಿಕೊಳ್ಳಲು ಬಗೆದಳು. ಕಂಪಿಲ ಬೇಟೆ ಮುಗಿಸಿ ಹಿಂತಿರುಗಿ ಬಂದ ಕೂಡಲೆ ಕುಮಾರರಾಮನ ಮೇಲೆ ಸಲ್ಲದ ಆರೋಪವನ್ನು ಹೊರಿಸಿ ದೂರು ಹೇಳಿದಳು. ಹೆಂಡತಿಯಲ್ಲಿ ಮೋಹಗ್ರಸ್ತನಾಗಿದ್ದ ಕಂಪಿಲ ನಿಜಸಂಗತಿಯನ್ನು ಕೇಳಿ ತಿಳಿಯದೆ ತನ್ನ ಆಪ್ತಸಚಿವನಾಗಿದ್ದ ಬೈಚಪ್ಪನನ್ನು ಬರಮಾಡಿಕೊಂಡು ಕುಮಾರರಾಮನ ಅನುಚಿತ ವರ್ತನೆಯನ್ನು ಖಂಡಿಸಿ ಕೂಡಲೆ ಆತನ

ತಲೆಯನ್ನು ಕಡಿದು ತರುವಂತೆ ಆಜ್ಞಾಪಿಸಿದ. ವಿಚಾರಪರನಾದ ಬೈಚಪ್ಪ ಎಷ್ಟು ಬುದ್ಧಿವಾದ ಹೇಳಿದರೂ ರಾಜ ಕೇಳಲಿಲ್ಲ. ಚತುರನಾದ ಬೈಚಪ್ಪ ನಿರುಪಾಯನಾಗಿ ಕುಮಾರರಾಮನ ಬಳಿಗೆ ಬಂದು ಎಲ್ಲ ಸಂಗತಿಗಳನ್ನೂ ವಿವರವಾಗಿ ಕೇಳಿ ತಿಳಿದುಕೊಂಡು ರಾಜಕುಮಾರನನ್ನು ಕೊಲ್ಲಲು ಮನಸ್ಸು ಬಾರದೆ, ಆತನನ್ನೂ ಆತನ ಮಿತ್ರರನ್ನೂ ನೆಲಮಾಳಿಗೆಯಲ್ಲಿ ಬಚ್ಚಿಟ್ಟು ಬೇರೊಬ್ಬನ ರುಂಡವನ್ನು ತೆಗೆದುಕೊಂಡು ಹೋಗಿ ರಾಜನಿಗೆ ಒಪ್ಪಿಸಿದ. ರುಂಡವನ್ನು ಕಂಡ ರತ್ನಾಜಿಗೆ ಸಂತೋಷವಾಯಿತು. ಅತ್ತ ಕಂಪಿಲನ ಮೇಲೆ ದಂಡೆತ್ತಿ ಬರಲು ಸಮಯ ಕಾಯುತ್ತಿದ್ದ ಸುಲ್ತಾನನಿಗೆ ಕುಮಾರರಾಮನ ಮರಣವೃತ್ತಾಂತ ಕೇಳಿ ಕಿವಿ ನೆಟ್ಟಗಾಯಿತು. ಎರಡನೆಯ ಬಾರಿ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಲು ನೇಮಿಯನ್ನು ಕಳುಹಿಸಿಕೊಟ್ಟ. ಮುಸಲ್ಮಾನರು ದಂಡೆತ್ತಿಬರುತ್ತಿರುವ ಸುದ್ದಿಯನ್ನು ಗಡಿ ಕಾಯುತ್ತಿದ್ದ ಚಾರರು ಕಂಪಿಲನಿಗೆ ತಿಳಿಸಿದ ಒಡನೆಯೇ ವೃದ್ಧರಾಜ ಕಂಗೆಟ್ಟ. ಕುಮಾರರಾಮನೂ ಅವನ ಸಂಗಡಿಗರೂ ಸತ್ತುಹೋಗಿರುವರೆಂದು ಭಾವಿಸಿದ್ದ ಆತನಿಗೆ ಮುಂದೆ ಗತಿಯೇನೆಂದು ತೋಚದಂತಾಯಿತು. ಬೈಚಪ್ಪನನ್ನು ಕರೆಸಿ ಮಂತ್ರಾಲೋಚನೆ ಮಾಡಿದ. ಇದೇ ಸಮಯವೆಂದರಿತ ಸಚಿವ ಅಕಾರ್ಯಕ್ಕಾಗಿ ಒಡೆಯನನ್ನು ಪರಿಪರಿಯಾಗಿ ಹಂಗಿಸಿದ. ಕಡೆಗೆ, ನಿರ್ವಾಹವಿಲ್ಲದೆ ತಾನು ಬೇರೊಬ್ಬ ಕಲಿಯನ್ನು ಕರೆದುಕೊಂಡು ಬಂದು ಶತ್ರುಗಳನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸುವುದಾಗಿ ಭರವಸೆಯಿತ್ತ. ಅನಂತರ ಕುಮಾರರಾಮನನ್ನು ಅಡಗಿಸಿಟ್ಟಿದ್ದ ನೆಲಮಾಳಿಗೆಯ ಬಳಿಗೆ ಬಂದು ರಾಜ್ಯಕ್ಕೆ ಒದಗಿರುವ ಆಪತ್ತನ್ನು ತಿಳಿಸಿದ. ಬೈಚಪ್ಪನ ಹಿತೋಕ್ತಿಗಳನ್ನು ಅಲ್ಲಗಳೆಯಲಾರದೆ ಕುಮಾರರಾಮ ವೇಷಮರೆಸಿಕೊಂಡು, ತನ್ನ ನೆಚ್ಚಿನ ಕುದುರೆಯಾದ ಬೊಲ್ಲನನ್ನು ಏರಿ ರಣರಂಗದತ್ತ ಧಾವಿಸಿದನಲ್ಲದೆ ಶತ್ರುಸೈನಿಕರೊಂದಿಗೆ ವೀರಾವೇಶದಿಂದ ಕಾದಾಡಿ, ಅವರನ್ನು ಬಡಿದೋಡಿಸಿ, ಕುಮ್ಮಟದುರ್ಗಕ್ಕೆ ಪ್ರಾಪ್ತವಾಗಿದ್ದ ಕಂಟಕವನ್ನು ಪರಿಹರಿಸಿದ. ಕುಮಾರರಾಮನ ಚಹರೆಯನ್ನು ಗುರುತಿಸಿದ ಮುಸಲ್ಮಾನ ಸರದಾರರಿಗಾದರೋ ಆತ ಸತ್ತಿರುವುದು ಸುಳ್ಳಿರಬೇಕು ಎನ್ನಿಸಿತು. ಯುದ್ಧದಲ್ಲಿ ಜಯವಾದ ಬಳಿಕ ಬೈಚಪ್ಪ ವೇಷ ಮರೆಸಿಕೊಂಡಿದ್ದ ಹೊಸ ರಾಹುತನನ್ನು ಕಂಪಿಲನ ಬಳಿಗೆ ಕರೆತಂದ. ಹೊಸ ರಾಹುತ ತಲೆಯ ಮೇಲಿನ ಟಾಳಿಯನ್ನು ತೆಗೆಯುವುದೇ ತಡ ಆತ ಕುಮಾರರಾಮನೆಂದು ಕಂಪಿಲನಿಗೆ ಗೊತ್ತಾಗಿ ಹಿರಿಹಿರಿ ಹಿಗ್ಗಿದ. ಸಮಯೋಚಿತವಾದ ಚಾತುರ್ಯಕ್ಕೆ ಬೈಚಪ್ಪನನ್ನು ಮನಸಾರೆ ಶ್ಲಾಘಿಸಿದ. ರತ್ನಾಜಿ ಈ ವೃತ್ತಾಂತವನ್ನೆಲ್ಲ ಕೇಳಿದ ಕೂಡಲೆ ಇನ್ನೆಲ್ಲಿ ತನ್ನ ಕಪಟವೆಲ್ಲ ಬಯಲಾಗುವುದೊ ಎಂದು ಹೆದರಿ ನೇಣು ಹಾಕಿಕೊಂಡು ಸತ್ತಳು. ಸೋತ ನೇಮಿ ದೆಹಲಿಗೆ ಹಿಂತಿರುಗಲು ಅವನನ್ನು ಕಂಡು ಸುಲ್ತಾನನಿಗೆ ಪರಾಭವದ ಉರಿ ತಾಕಿ ಮೈ ಕಾವೇರಿತು. ಕಂಪಿಲನ ಹೆಸರನ್ನೇ ಅಳಿಸುವುದಾಗಿ ಆತ ಶಪಥ ಮಾಡಿದ.

ಸುಲ್ತಾನ ತನ್ನ ದಳಪತಿಗಳನ್ನೆಲ್ಲ ಬರಮಾಡಿಕೊಂಡು, ಕಂಪಿಲನ ಅಹಂಕಾರವನ್ನು ಹೇಗೆ ಮುರಿಯಬೇಕೆಂದು ದೀರ್ಘವಾಗಿ ಮಂತ್ರಾಲೋಚನೆ ನಡೆಸಿದ. ಆಗ ಅಲ್ಲಿಯೇ ಇದ್ದ ಮಾತಂಗಿ ಎಂಬಾಕೆ ಮುಂದೆ ಬಂದು ಸಾಕಷ್ಟು ಸೈನ್ಯವನ್ನು ಸಜ್ಜುಗೊಳಿಸಿಕೊಟ್ಟರೆ ತಾನು ಕೂಡಲೆ ಕುಮಾರರಾಮನನ್ನು ಸಂಹರಿಸಿ ಆತನ ತಲೆಯನ್ನು ತಂದುಕೊಡುವುದಾಗಿ ಪ್ರತಿಜ್ಞೆ ಮಾಡಿದಳು. ಅಲ್ಲಿದ್ದ ವೀರಾಧಿವೀರರು ಅವಳ ಮಾತುಗಳನ್ನು ಕೇಳಿ ಆಶ್ಚರ್ಯಚಕಿತರಾದರು. ಸುಲ್ತಾನ ಆಕೆಯ ಮಾತಿಗೆ ಸಮ್ಮತಿಸಿ, ಅಪಾರವಾದ ಸೈನ್ಯವನ್ನು ಶೇಖರಿಸಿ ಆಕೆಯ ನೇತೃತ್ವದಲ್ಲಿ ಕಳುಹಿಸಿ ಕೊಟ್ಟ. ಸುಲ್ತಾನನ ಸೇನೆ ದಾರಿಯುದ್ದಕ್ಕೂ ಹಾವಳಿ ಮಾಡುತ್ತಾ ಬಂದು ಕುಮ್ಮಟಕ್ಕೆ ಮುತ್ತಿಗೆ ಹಾಕಿತು. ಇತ್ತ ಕುಮಾರರಾಮನೂ ಯುದ್ಧಸನ್ನದ್ಧನಾದ. ಉಭಯಪಕ್ಷಗಳಿಗೂ ಬಿರುಸಾದ ಕಾಳಗ ನಡೆಯಿತು. ಮೊದಮೊದಲು ಮಹಮ್ಮದೀಯರಿಗೆ ತತ್ತರಿಸುವಂತಾಯಿತು. ಸುಲ್ತಾನನ ಸರದಾರರು ಮಾತಂಗಿಯನ್ನು ಹೀಯಾಳಿಸತೊಡಗಿದರು. ಆಕೆ ಯಾವುದಕ್ಕೂ ಸಗ್ಗದೆ, ಗಂಡುಡುಗೆಯನ್ನು ಧರಿಸಿ ತಾನೇ ರಣರಂಗವನ್ನು ಪ್ರವೇಶಿಸಿ ವೀರಾವೇಶದಿಂದ, ಪರಾಕ್ರಮದಿಂದ ಹೋರಾಡುತ್ತ ಮುನ್ನುಗ್ಗಿದಳು. ಶತ್ರುಸೈನ್ಯದಲ್ಲಿ ದಾರಿಮಾಡಿಕೊಂಡು ಮುಂದುವರಿಯುತ್ತ ಕುಮಾರ ರಾಮನಿದ್ದಲ್ಲಿಗೆ ಬಂದಳು. ಆ ವ್ಯಕ್ತಿಯ ಕೆಚ್ಚನ್ನು ಕಂಡು ಕುಮಾರರಾಮ ಬೆರಗಾಗಿ ಮುಂದೆ ಬಂದು ಕಾಳಗಕ್ಕೆ ಅಣಿಯಾದ. ಕೆಲಕಾಲ ಇಬ್ಬರಿಗೂ ಬಿರುಸಾದ ಕಾಳಗ ಸಾಗಿತ್ತು. ಆವೇಶಗೊಂಡು ಕತ್ತಿಯನ್ನು ಮೇಲಕ್ಕೆತ್ತಿ ಹೊಡೆಯಲು ಹೋದಾಗ ಎದುರಿನಲ್ಲಿರುವ ವ್ಯಕ್ತಿ ಸ್ತ್ರೀಯೆಂದು ಕುಮಾರರಾಮನಿಗೆ ವಿದಿತವಾಯಿತು. ತತ್‌ಕ್ಷಣವೇ ಕೈ ಹಿಂದೆ ಸರಿಯಿತಲ್ಲದೆ ಕ್ಷಣಕಾಲ ಆತ ತಟಸ್ಥನಾದ. ಸ್ತ್ರೀಯೊಬ್ಬಳ ಮೇಲೆ ಕತ್ತಿಹಿರಿದು ಯುದ್ಧಕ್ಕೆ ನಿಂತದ್ದಕ್ಕಾಗಿ ಆತನ ಮನಸ್ಸು ವ್ಯಾಕುಲಗೊಂಡಿತು. ಅದೇ ಸುಸಮಯವೆಂದು ತಿಳಿದ ಮಾತಂಗಿ ಮುನ್ನುಗ್ಗಿ ಕುಮಾರರಾಮನನ್ನು ಸಂಹರಿಸಿದಳು. ಈ ದುರಂತವನ್ನು ನೋಡಿದ ಬೇಡರ ಪಡೆ ದಿಗ್ಭ್ರಾಂತವಾಗಿ ಚದುರಿತು. ಕಂಪಿಲ ಹತಾಶನಾದ. ಶತ್ರುಸೈನಿಕರು ವಿಜಯೋನ್ಮತ್ತರಾಗಿ ಕೋಟೆಯ ಕಡೆ ನುಗ್ಗಿದರು. ಇತರ ವೀರಾಧಿವೀರರು ಎಷ್ಟು ಅಡ್ಡಗಟ್ಟಿ ಹೋರಾಡಿದರೂ ಸಫಲವಾಗಲಿಲ್ಲ. ಕೋಟೆ ಶತ್ರುಗಳ ವಶವಾಯಿತು. ವೀರಪತ್ನಿಯರು ಚಿತಾಪ್ರವೇಶ ಮಾಡಿದರು. ಶತ್ರುರಾಜರಿಗೆಲ್ಲ ಸಿಂಹಸ್ವಪ್ನವಾಗಿದ್ದ ಕುಮ್ಮಟದುರ್ಗ ಮುಸಲ್ಮಾನರ ದಾಳಿಗೆ ಸಿಕ್ಕು ಹೇಳಹೆಸರಿಲ್ಲದಂತಾಗಿ ಹಾಳು ಬೀಡಾಯಿತು. ಮಾತಂಗಿ ಕುಮಾರರಾಮನ ರುಂಡವನ್ನು ಚಾರರ ಮೂಲಕ ದೆಹಲಿಗೆ ಕಳುಹಿಸಿಕೊಟ್ಟಳು. ಅದನ್ನು ಕಂಡು ಸುಲ್ತಾನನಿಗೆ ಪರಮಾನಂದವಾಯಿತು. ಆದರೆ ಆತನ ಮಗಳಾದ ಬಾಬಮ್ಮ ಈ ದಾರುಣ ವೃತ್ತಾಂತವನ್ನು ಕೇಳಿದ ಕೂಡಲೆ ಹತಾಶಳಾಗಿ ಪ್ರಾಣ ತ್ಯಜಿಸಿದಳು. ಕುಮಾರರಾಮನ ರುಂಡ ದೆಹಲಿಯಲ್ಲಿದ್ದಷ್ಟು ಕಾಲವೂ ಅನೇಕ ಅಪಶಕುನಗಳಾಗತೊಡಗಿದವಂತೆ. ಆದ್ದರಿಂದ ಅದನ್ನು ಮತ್ತೆ ಕುಮ್ಮಟಕ್ಕೆ ಕಳುಹಿಸಿಕೊಡಲಾಯಿತು. ಅಂದಿನಿಂದ ಕುಮಾರರಾಮನನ್ನು ಜನ ದೈವಾಂಶಪುರುಷನೆಂದು ಭಾವಿಸಿ ಪೂಜಿಸಲು ಆರಂಭಿಸಿದರು.

ಕುಮಾರರಾಮನ ಬಗ್ಗೆ ಇತ್ತೀಚೆಗೆ ಸಾಕಷ್ಟು ಸಂಶೋಧನೆ ನಡೆದಿದ್ದು, ಚಿತ್ತಾಕರ್ಷಕವಾಗಿರುವ ಇವನ ಕಥೆಯನ್ನು ಹಾಸು ಹೊಕ್ಕಾಗಿರುವ ಒಂದೆರಡು ಐತಿಹಾಸಿಕ ಎಳೆಗಳನ್ನು ಬಿಡಿಸಲು ಚರಿತ್ರಕಾರರು ಪ್ರಯತ್ನಿಸಿದ್ದಾರೆ. ಇಬ್ನಬತೂತ, ನ್ಯೂನಿಜ್, ಫೆರಿಷ್ಟ, ಇಸಾಮಿ ಮೊದಲಾದವರ ಉಲ್ಲೇಖನಗಳಲ್ಲಿ ಕುಮ್ಮಟದುರ್ಗದ ದುರಂತ ವೃತ್ತಾಂತದ ಕಥೆ ಅಲ್ಪಸ್ವಲ್ಪ ತಿಳಿದುಬರುತ್ತದೆ. ಕಂಪಿಲ ಮತ್ತು ಅವನ ತಂದೆ ಮುಮ್ಮಡಿ ಸಿಂಗನ ಹೆಸರುಗಳು ಶಾಸನಗಳಲ್ಲಿ ಉಕ್ತವಾಗಿರುವುವಲ್ಲದೆ, ಇವರಿಗೂ ಹೊಯ್ಸಳ ವೀರಬಲ್ಲಾಳನ ದಂಡನಾಯಕರಿಗೂ ನಡೆದ ಯುದ್ಧದ ಪ್ರಸಂಗಗಳೂ ನಿರೂಪಿತವಾಗಿವೆ. ಕುಮಾರರಾಮನ ಸಾಂಗತ್ಯವನ್ನು ಬರೆದಿರುವ ಪ್ರತಿಯೊಬ್ಬ ಕವಿಯೂ ತನ್ನ ಕಾವ್ಯವನ್ನು ನರಚರಿತ್ರೆಯೆಂದು ಅಲ್ಲಗಳೆಯಬಾರದೆಂದೂ ಅದು ಪರದಾರಸೋದರನೊಬ್ಬನ ವೀರಕಥಾನಕವೆಂದೂ ಅಲ್ಲಿ ಪ್ರತಿಪಾದಿತವಾಗಿರುವ ಶೌರ್ಯ ಮತ್ತು ಶುಚಿತ್ವಗಳು ಆದರ್ಶಪ್ರಾಯವಾದ ಸದ್ಗುಣಗಳೆಂದೂ ಬಿನ್ನವಿಸಿ ಕೊಂಡಿರುವುದನ್ನು ಗಮನಿಸಿದರೆ ಕುಮಾರರಾಮ ಕಲ್ಪಿತವ್ಯಕ್ತಿಯಲ್ಲವೆಂಬುದು ದೃಢವಾಗುತ್ತದೆ. ಈ ಮಹಿಮಾಪುರುಷನನ್ನು ಕುರಿತ ಶಾಸನಗಳು ಧಾರವಾಡ ಜಿಲ್ಲೆಯ ಸಂಗೂರು, ಬಳ್ಳಾರಿ ಜಿಲ್ಲೆಯ ರಾಮಗಡ ಮತ್ತು ಶಿವಮೊಗ್ಗಜಿಲ್ಲೆಯ ತೀರ್ಥಹಳ್ಳಿ ಮೊದಲಾದ ಎಡೆಗಳಲ್ಲಿ ಲಭಿಸಿವೆ. ರಾಮಗಡದ ಶಾಸನದಲ್ಲಿ ಮುಮ್ಮಡಿ ಸಿಂಗನ ಮಗನಾದ ಕಂಪಿಲರಾಯ ಮತ್ತು ಆತನ ಹೆಂಡತಿ ಹರಿಹರ ದೇವಿಯವರ ಪುತ್ರ ರಾಮನಾಥವೊಡೆಯರು ಎಂಬ ವಂಶಾವಳಿ ಸ್ಪಷ್ಟವಾಗಿ ಕಂಡುಬರುವುದರಿಂದ ಈತನೊಬ್ಬ ಐತಿಹಾಸಿಕ ವ್ಯಕ್ತಿಯಾಗಿರಬೇಕೆಂದು ಇತಿಹಾಸಕಾರರು ಭಾವಿಸಿರುತ್ತಾರೆ. ಕಾವ್ಯಗಳಲ್ಲಿ ಉಕ್ತವಾಗಿರುವ ಬಾದೂರನ ಪಲಾಯನಕ್ಕೂ ಐತಿಹಾಸಿಕ ಆಧಾರ ದೊರೆಯುತ್ತದೆ. ಮಹಮ್ಮದ್ ಬಿನ್ ತುಘಲಕ್ ಪಟ್ಟಕ್ಕೆ ಬಂದ ಕೂಡಲೆ ಪ್ರಾಂತ್ಯಾಧಿಕಾರಿಯಾಗಿದ್ದ ಆತನ ಬಂಧುವಾದ ಬಹಾಉದ್ದೀನ್ ಗುರ್ಷಾಸ್ಪ್(ನೋಡಿ) ಎಂಬಾತ ಯಾವುದೋ ವೈಮನಸ್ಯದಿಂದ ರಾಜ್ಯಭ್ರಷ್ಟನಾಗಿ, ಹಿಂದು ರಾಜನಾದ ಕಂಪಿಲನ ಆಶ್ರಯವನ್ನು ಪಡೆದನೆಂದೂ ಸುಲ್ತಾನನ ಸೇನೆ ಬೆನ್ನಟ್ಟಿಬರಲು ಈ ರಾಜ ಆತನನ್ನು ಬೇರೊಬ್ಬ ರಾಜನ ಬಳಿಗೆ ಕಳುಹಿಸಿದನೆಂದೂ ಅಲ್ಲಿಯೂ ಸೈನಿಕರು ಹಿಂಬಾಲಿಸಲು ಆ ದೊರೆ ಬಹಾಉದ್ದೀನನನ್ನು ಮುಸಲ್ಮಾನರಿಗೆ ಒಪ್ಪಿಸಲು ಅವರು ಆತನನ್ನು ಚಿತ್ರಹಿಂಸೆಗೆ ಗುರಿಮಾಡಿ ಕೊಂದರೆಂದೂ ಮಹಮ್ಮದೀಯ ಇತಿಹಾಸಕಾರರು ವಿವರಿಸುತ್ತಾರೆ. ಈ ಘಟನೆಯೇ ಇಲ್ಲಿ ಸಂದರ್ಭೋಚಿತವಾಗಿ ಮಾರ್ಪಟ್ಟಿರುವಂತಿದೆ. ಕಂಪಿಲ ಹತನಾದ ಬಳಿಕ ಅವನ ಆಸ್ಥಾನದ ಕೆಲವರು ಕೈಸೆರೆಯಾದರೆಂದೂ ಅವರಲ್ಲಿ ಜೀವಸಹಿತ ಉಳಿದ ಒಬ್ಬಿಬ್ಬರೇ ಮುಂದೆ ವಿಜಯನಗರದ ಸ್ಥಾಪನೆಗೆ ಕಾರಣರಾದರೆಂದೂ ವಾದವಿದೆ. ಒಟ್ಟಿನಲ್ಲಿ ಐತಿಹಾಸಿಕವಾಗಿದ್ದ ಕೆಲವು ಸಂಗತಿಗಳು ಹೇಗೆ

ಕಾಲಕ್ರಮದಲ್ಲಿ ಐತಿಹ್ಯವಾಗಿ ಪರಿಣಮಿಸಿವೆಯೆಂಬುದನ್ನು ವ್ಯಾಸಂಗ ಮಾಡಲು ಕುಮಾರರಾಮನ ಕಥೆ ಉತ್ತಮ ಸಾಧನವಾಗಿದೆ. ನಂಜುಂಡನ ನಿರೂಪಣೆಯಲ್ಲಿ ವಿದಿತವಾಗುವಂತೆ ಕುಮಾರರಾಮನ ವೃತ್ತಾಂತ ಇಂದಿನವರಿಗೆ ಪುಣ್ಯಕಥೆ, ಪೂರ್ವಚರಿತ್ರೆ ಮತ್ತು ಪುರಾಣವೆನ್ನಿಸಿ ಪ್ರಶಸ್ತಿ ಪಡೆದಿರುತ್ತದೆ.

ಕುಮಾರರಾಮನ ಹೆಸರು ಇಂದಿಗೂ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಲಿತವಾಗಿದೆ. ಸ್ಫುರದ್ರೂಪಿಯೂ ಪರಾಕ್ರಮಿಯೂ ಆದವನನ್ನು 'ಏನು ಈ ಮಗ ಕೊಮರಾಮ ಆಗ್ಯಾನ' ಎಂದೂ ಕರೆಯುವುದುಂಟು. ಒಮ್ಮೊಮ್ಮೆ ಬಡಾಯಿ ಕೊಚ್ಚಿಕೊಳ್ಳುವವನನ್ನೂ 'ಮಹಾ ಕೊಮರಾಮ ಬಂದ' ಎಂದು ಆಡಿಕೊಳ್ಳುವುದೂ ಉಂಟು. ಕೊಪ್ಪಳ ಜಿಲ್ಲೆಯ ಗಂಗಾವತಿ ಸಮೀಪದಲ್ಲಿರುವ ಕುಮ್ಮಟದುರ್ಗದಲ್ಲಿ ಪ್ರತಿವರ್ಷವೂ ವೈಶಾಖ ಶುಕ್ಲ ಪೂರ್ಣಿಮೆಯಂದು ಬೇಡರು ಕುಮಾರರಾಮನ ಜಾತ್ರೆಯನ್ನು ನಡೆಸುವರೆಂದು ತಿಳಿದುಬರುತ್ತದೆ. ಅವರ ಪಾಲಿಗೆ ಈತ ಪರದಾರಸೋದರತ್ವದ ಪ್ರತೀಕವಾದ ದೈವಾಂಶಪುರುಷನೇ ಆಗಿದ್ದಾನೆ. ಇಂದಿಗೂ ಈತ ಅಪ್ರತಿಮ ಪರಾಕ್ರಮಶಾಲಿಯೆಂದೂ ಪರದಾರಸೋದರನೆಂದೂ ಜನಮನದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾನೆ.

ಕುಮಾರಾಮನನ್ನು ಕುರಿತಂತೆ ಹೊಸಗನ್ನಡದಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರ ಗಂಡುಗಲಿ ಕುಮಾರರಾಮ, ಆಲೂರ ವೆಂಕಟರಾಯರ ರಣರಂಗ ಸಿಂಗನಾದ ಕುಮಾರರಾಮ, ಹುಯಿಲಗೋಳ ನಾರಾಯಣರಾಯರ ಕುಮಾರರಾಮನನ್ನು ಕುರಿತ ನಾಟಕ, ವಸುದೇವ ಭೂಪಾಲಂ ಅವರ ಕುಮ್ಮಟವಲ್ಲಭ, ವರದರಾಜ ಹುಯಿಲಗೋಳರ ರತ್ನಾಜಿ, ಎಂ.ಎಚ್. ರಾಮಶರ್ಮರ ರಣಧೀರ ರಾಮನಾಥ, ದೇಸಾಯಿ ಪಾಂಡುರಂಗರಾಯರ ಕಂಪಿಲ ಕುಮಾರ ಎಂಬ ಸಣ್ಣಕಥೆ, ದೇಜಗೌ, ಅವರ ಕಡುಗಲಿ ಕುಮಾರರಾಮ ಹಾಗೂ ನಂಜುಂಡಕವಿ ವಿಮರ್ಶೆ, ಜಿ.ವರದರಾಜರಾಯರ ಕುಮ್ಮಟಕೇಸರಿ ಹಾಗೂ ಕುಮಾರರಾಮನ ಸಾಂಗತ್ಯಗಳು ಎಂಬ ಪ್ರೌಢ ಪ್ರಬಂಧ-ಈ ಸಾಹಿತ್ಯಕೃತಿಗಳು ಪ್ರಕಟಗೊಂಡಿವೆ. (ಜಿ.ವಿ.)

**ಕುಮಾರ ವಾಲ್ಮೀಕಿ :** ಸು.1500. ಭಾಗವತ ಕವಿ. ತೊರವೆ ರಾಮಾಯಣ, ಐರಾವಣಕಾಳಗ ಎಂಬ ಕಾವ್ಯಗಳ ಕರ್ತೃ. ಬಿಜಾಪುರದ ಪಶ್ಚಿಮಕ್ಕೆ 8ಕಿಮೀ ದೂರದಲ್ಲಿರುವ ತೊರವೆ ಈತನ ಜನ್ಮಸ್ಥಳ. ತೊರವೆಯ ನರಸಿಂಹ ಈತನ ಇಷ್ಟದೈವ. ಕವಿಯ ನಿಜವಾದ ಹೆಸರು ನರಹರಿ. ಕುಮಾರವಾಲ್ಮೀಕಿ ಎಂಬುದು ಈತನ ಬಿರುದಾಗಿದ್ದು ಕವಿಯಾಗಿ ಈ ಹೆಸರಿನಿಂದಲೇ ಪ್ರಸಿದ್ಧನಾಗಿದ್ದಾನೆ. ಕವಿರಾಜಹಂಸ ಎಂಬುದು ಈತನ ಇನ್ನೊಂದು ಬಿರುದಿದ್ದಂತೆ ಈತನ ಕಾವ್ಯದಿಂದ ತಿಳಿದುಬರುತ್ತದೆ. ಈತನ ಕಾವ್ಯದಲ್ಲಿ ಕಾಲನಿರ್ದೇಶಕ ಅಂಶಗಳಾವುವೂ ಕಂಡುಬಾರದಿರುವುದರಿಂದ ಖಚಿತವಾಗಿ ಈತನ ಕಾಲವನ್ನು ನಿರ್ಧರಿಸಲಾಗಿಲ್ಲ. ಪೂರ್ವಕವಿಗಳಲ್ಲಿ ಕುಮಾರವ್ಯಾಸನನ್ನು (ಸು.1400) ಸ್ತುತಿಸಿದ್ದಾನೆ. ಕುಮಾರ ವಾಲ್ಮೀಕಿಯನ್ನು ಕನಕದಾಸರು (ಸು.1508-1606) ಸ್ಮರಿಸಿದ್ದಾರೆ. ಆದ್ದರಿಂದ ಕವಿ ಇವರಿಬ್ಬರ ನಡುವಿನ ಕಾಲದಲ್ಲಿ ಅಂದರೆ ಸು.1500 ರಲ್ಲಿದ್ದಿರಬಹುದೆಂದು ಕವಿ ಚರಿತಕಾರರು ಅಭಿಪ್ರಾಯಪಟ್ಟಿದ್ದಾರೆ. ಈಚಿನ ಅಭಿಪ್ರಾಯದಂತೆ ಈತನ ಕಾಲ ಹದಿನಾರನೆಯ ಶತಮಾನದ ಅಂತ್ಯಭಾಗ. ನರಹರಿ ತನ್ನ ಗ್ರಂಥವನ್ನು ತೊರವೆ ನರಸಿಂಹದೇವರ ಅಂಕಿತದಲ್ಲಿ ರಚಿಸಿದುದರಿಂದ ಈತನ ಕಾವ್ಯಕ್ಕೆ ತೊರವೆ ರಾಮಯಣವೆಂಬ ಹೆಸರು ಬಂದಿತು.

ತೊರವೆ ರಾಮಾಯಣ ಭಾಮಿನೀ ಷಟ್ಪದಿಯಲ್ಲಿದೆ. ಇದರಲ್ಲಿ 6 ಕಾಂಡಗಳೂ 112 ಸಂಧಿಗಳೂ 5200 ಪದ್ಯಗಳೂ ಇವೆ. ಇಲ್ಲಿನ ಯುದ್ಧಕಾಂಡ ಉಳಿದ ಐದು ಕಾಂಡಗಳಿಗಿಂತಲೂ ದೊಡ್ಡದಾಗಿದೆ. ಈ ಕಾವ್ಯ ವಾಲ್ಮೀಕಿರಾಮಾಯಣದ ಕಥಾಸರಣಿಯನ್ನೇ ಅನುಸರಿಸಿ ರಚಿತವಾಗಿದೆ. ಆದರೆ ಕವಿ ಅಲ್ಲಲ್ಲಿ ಹಲಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅವುಗಳಲ್ಲಿ ಪ್ರಮುಖವಾದ ಒಂದೆರಡು ಅಂಶಗಳನ್ನು ಗಮನಿಸಬಹುದು. ಇಲ್ಲಿ ಶ್ರೀರಾಮಚರಿತ್ರೆಯನ್ನು ಈಶ್ವರ ಪಾರ್ವತಿಗೆ ವಿವರಿಸುತ್ತಾನೆ. ಇಲ್ಲಿಯ ಶ್ರೀರಾಮ ಸಾಮಾನ್ಯ ಮಾನವನಲ್ಲ; ವಿಷ್ಣುವಿನ ಅವತಾರ. ಮಂಥರೆ ಮಾಯೆಯ ಪ್ರತೀಕ. ಇಲ್ಲಿಯ ರಾವಣ ಸ್ವಲ್ಪ ಮಟ್ಟಿಗೆ ದುರಂತ ನಾಯಕನಾಗಿ ಕಾಣುತ್ತಾನೆ ಇತ್ಯಾದಿ. ಈ ಕೆಲವು ಮಾರ್ಪಾಡುಗಳನ್ನು ಕವಿ ಅಧ್ಯಾತ್ಮರಾಮಾಯಣವನ್ನನುಸರಿಸಿ ಮಾಡಿಕೊಂಡಿರಬಹುದೆಂದು ಊಹಿಸಬಹುದಾಗಿದೆ. ಕಥೆಗಾರಿಕೆಯಲ್ಲಿ ನಿರರ್ಗಳವಾದ ಓಟವಿದೆ, ಅಚ್ಚುಕಟ್ಟಿದೆ; ಆದರೆ ಕಾವ್ಯತ್ವ ಉಜ್ವಲವಾಗಿ ತೀಕ್ಷ್ಣವಾಗಿ ಕಂಡುಬರುವುದಿಲ್ಲ. ಶೈಲಿ ಅತ್ಯಂತ ಸರಳವೂ ಸುಲಭವೂ ಆಗಿದೆ. ಅಲ್ಲಲ್ಲಿ ಈತನ ಕಾವ್ಯದಲ್ಲಿ ಕುಮಾರವ್ಯಾಸನ ಪ್ರಭಾವ ಎದ್ದು ತೋರುತ್ತದೆ. ಒಮ್ಮೊಮ್ಮೆ ಕಾಳಿದಾಸನ ಪ್ರಭಾವವೂ ಕಾಣುತ್ತದೆ. ಹೃದ್ಯ ಸಂದರ್ಭಗಳು ಬಂದಾಗ ಕವಿ ವಿಚಿತ್ರ ರೀತಿಯಲ್ಲಿ ಅವನು ನಿರ್ವಹಿಸಿ ಪಾತ್ರಗಳ ಮನೋಧರ್ಮವನ್ನು ಅಭಿವ್ಯಕ್ತಿಸುತ್ತಾನೆ. ವರ್ಣಕ ಕಾವ್ಯಕ್ಕೆ ಕುಮಾರವ್ಯಾಸ ಹಾಗೂ ತನ್ನನ್ನು ಬಿಟ್ಟರೆ ಉಳಿದ ಕವಿಗಳು ಯಾವ ಲೆಕ್ಕ ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾನೆ. ಇವನು ತನ್ನ ಕೃತಿಯನ್ನು ರಾಜಾಸ್ಥಾನಕ್ಕಾಗಲಿ ಪಂಡಿತರಿಗಾಗಲಿ ಬರೆಯಲಿಲ್ಲ. ಜನಸಾಮಾನ್ಯರ ಉದ್ಧಾರಕ್ಕಾಗಿ ಕನ್ನಡದಲ್ಲಿ ಮೊಟ್ಟಮೊದಲು ಬರೆದ. ಮಹಾ ಕಾವ್ಯವಲ್ಲದಿದ್ದರೂ ಈ ಕಾವ್ಯ ಜನಮನವನ್ನು ನೇರವಾಗಿ ಮುಟ್ಟುತ್ತದೆ.

ಐರಾವಣಕಾಳಗ ಭಾಮಿನೀ ಷಟ್ಪದಿಯಲ್ಲಿದೆ. ಇದರಲ್ಲಿ 4 ಸಂಧಿಗಳೂ 296 ಪದ್ಯಗಳೂ ಇವೆ. ಕಥಾವಸ್ತು ರಾಮಾಯಣಕ್ಕೆ ಸಂಬಂಧಿಸಿದ್ದಾಗಿದೆ. (ಬಿ.ಎಸ್.ಎಸ್.,ಎನ್.ಬಿ.,ಎನ್.ಕೆ.ಕೆ.)

**ಕುಮಾರವ್ಯಾಸ :** ಸು.1400. ಕನ್ನಡದ ಮಹಾಕವಿಗಳಲ್ಲೊಬ್ಬ. ಗದುಗಿನ ಭಾರತ, ಕನ್ನಡ ಭಾರತ, ನಾರಣಪ್ಪನ ಭಾರತ ಎಂದು ಜನಪ್ರಿಯವಾಗಿರುವ ಕರ್ಣಾಟಭಾರತ ಕಥಾಮಂಜರಿ ಎಂಬ ಮಹಾಕಾವ್ಯದ ಕರ್ತೃ.

ಗದಗಿನ ಸಮೀಪದ ಕೋಳಿವಾಡ(ನೋಡಿ) ಈತನ ಜನ್ಮಸ್ಥಳ. ನಾರಣಪ್ಪ ಅಥವಾ ನಾರಾಯಣಪ್ಪ ಎಂಬುದು ಈತನಿಗೆ ಮೊದಲಿದ್ದ ಹೆಸರಾದರೂ ಕುಮಾರವ್ಯಾಸನೆಂದೇ ಪ್ರಸಿದ್ಧ. ಕಾವ್ಯದಲ್ಲಿ ಕುಮಾರವ್ಯಾಸಯೋಗೀಂದ್ರ, ಕುಮಾರವ್ಯಾಸ ಮುನಿ, ಶುಕಮುನಿ ಎಂದು ತನ್ನನ್ನು ಕರೆದುಕೊಂಡಿರುವುದರಿಂದ ಕುಮಾರವ್ಯಾಸ ಎಂಬುದು ಬಿರುದೆಂದೂ ಕವಿಯೇ ಪ್ರೀತಿಯಿಂದ ಇಟ್ಟುಕೊಂಡಿರುವ ಕಾವ್ಯನಾಮವೆಂದೂ ಭಾವಿಸಬಹುದಾಗಿದೆ. ಈ ಹೆಸರುಗಳನ್ನು ಗಮನಿಸಿ ಇವನು ಒಬ್ಬ ಯೋಗಿಯೂ ಆಗಿದ್ದಿರಬಹುದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ವ್ಯಾಸಭಾರತವನ್ನು ಕನ್ನಡದಲ್ಲಿ ಸಮಗ್ರವಾಗಿ ಸತ್ವಯುತವಾಗಿ ನಿರೂಪಿಸಿದ್ದರಿಂದ ಈತನನ್ನು ಜನ ಕುಮಾರವ್ಯಾಸ ಎಂಬ ಬಿರುದನ್ನಿತ್ತು ಕರೆದಿರಬಹುದೆಂಬ ಇನ್ನೊಂದು ಹೇಳಿಕೆಯೂ ಇದೆ. ಕವಿ ಶಾನುಭೋಗರ ಅಥವಾ ಕರಣಿಕರ ಮನೆತನಕ್ಕೆ ಸೇರಿದವನೆಂಬ ಪ್ರತೀತಿ ಇತ್ತು. ಆದರೆ ಇತ್ತೀಚೆಗೆ ಕೋಳಿವಾಡದ ಗೌಡ ಮನೆತನದ ಹಳೆಯ ಲೆಕ್ಕಪತ್ರಗಳಲ್ಲಿ ಕವಿಯ ವಂಶಾವಳಿಯ ದಾಖಲೆಗಳು ದೊರಕಿದ್ದು, ಕವಿಯ ವಂಶಜರು ವಿಜಯನಗರ ರಾಜ್ಯದ ಸೇನೆಯ ಮುಖ್ಯ ಅಧಿಕಾರ ಸ್ಥಾನದಲ್ಲಿದ್ದರೆಂಬ ವಿಷಯ ತಿಳಿದುಬರುತ್ತದೆ ಎನ್ನಲಾಗಿದೆ. ಆನೆಯ ದೇವಪ್ಪಯ್ಯ ಎಂಬುವನು ಕುಮಾರವ್ಯಾಸನ ಮೊಮ್ಮಗನೆಂಬ ವಿಷಯವೂ ಒಂದು ಶಾಸನದಿಂದ ತಿಳಿದುಬರುತ್ತದೆ. ವಿಜಯನಗರದ ದೊರೆ 1ನೆಯ ದೇವರಾಯನಲ್ಲಿ (1406-22) ಮಂತ್ರಿಯಾಗಿದ್ದ ಲಕ್ಕರಸನ ಐವರು ಮಕ್ಕಳಲ್ಲಿ ಹಿರಿಯ ಮಗ ವೀರನಾರಾಯಣನೇ ಭಾರತಕರ್ತೃವಾದ ಕುಮಾರವ್ಯಾಸನೆಂಬ ಅಭಿಪ್ರಾಯವೂ ಇದೆ. ಗದಗಿನ ವೀರನಾರಾಯಣ ಕವಿಯ ಇಷ್ಟದೈವ. ತನ್ನ ಇಷ್ಟದೈವದ ಹೆಸರಿನಲ್ಲಿ ಕಾವ್ಯ ರಚನೆ ಮಾಡಿದ್ದಾನೆ.

ಕುಮಾರವ್ಯಾಸನ ಕಾಲನಿರ್ಣಯದ ಬಗ್ಗೆ ಅನೇಕ ಚರ್ಚೆಗಳಾಗಿವೆ. ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಳಿದ ಉಳಿದ ಪರ್ವಗಳ ನೀ ಸಕಲಜನ ಮೆಚ್ಚುವಂದದಿ ಹೇಳು ಎಂದು ವಿಜಯನಗರದ ಅರಸು ಕೃಷ್ಣದೇವರಾಯನ (1509-29) ಆಜ್ಞಾನುಸಾರ ತಾನು ಭಾರತದ ಉಳಿದ ಕಥೆಯನ್ನು ಹೇಳುವುದಾಗಿ ತಿಮ್ಮಣ್ಣಕವಿ (ಸು.1510) ಉಲ್ಲೇಖಿಸಿರುವುದರಿಂದ ಅವನ ಕಾಲಕ್ಕಿಂತ ಹಿಂದಿನವನು ಎಂಬುದು ಖಚಿತ; ಎಷ್ಟು ಹಿಂದಿನವನು ಎನ್ನುವುದು ವಿವಾದಾಸ್ಪದವಾಗಿದೆ. ಒಂದು ದಂತಕಥೆ ಕುಮಾರವ್ಯಾಸನಿಗೂ ಚಾಮರಸನಿಗೂ ಸಂಬಂಧಕಲ್ಪಿಸಿದೆ. ಇದರ ಆಧಾರದ ಮೇಲೆ, ಪ್ರೌಢದೇವರಾಯನ ಕಾಲದಲ್ಲಿದ್ದ (1424-46)

ಚಾಮರಸ ಇವನ ಸಮಕಾಲೀನನಾದುದರಿಂದ ಕುಮಾರವ್ಯಾಸನ ಕಾಲ ಸು.1430 ಎಂದು ಕವಿಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ. ವೀರಶೈವ ಸಂಪ್ರದಾಯದ ದಂತಕಥೆಯೊಂದರ ಪ್ರಕಾರ ಇವನು ರಾಘವಾಂಕನ (ಸು.1225) ಸಮಕಾಲೀನ. ಈ ದಂತಕಥೆಗಳನ್ನು ನಂಬುವುದು ಕಷ್ಟ. ಭಾಸ್ಕರನ ಜೀವಂಧರ ಚರಿತ್ರೆಯ ಮೇಲೆ ಕುಮಾರವ್ಯಾಸ ಭಾರತದ ಪ್ರಭಾವಮುದ್ರೆ ಬಿದ್ದಿರುವುದು ಸ್ಪಷ್ಟವಾಗಿ ಗೋಚರವಾಗುವುದರಿಂದ ಜೀವಂಧರಚರಿತ್ರೆಯ ರಚನಾಕಾಲ 1424 ಎಂದು ಆ ಕೃತಿಯಿಂದಲೇ ತಿಳಿಯುವುದರಿಂದ (ಭಾಸ್ಕರಕವಿಯ ಕಾಲವೂ ನಿಶ್ಚಿತವಲ್ಲ) ಕುಮಾರವ್ಯಾಸನ ಕಾಲ 1424 ಕ್ಕಿಂತ ಹಿಂದೆ ಎಂದು ಹೇಳಬಹುದು. ಎಷ್ಟು ಹಿಂದೆ ಎಂಬುದಕ್ಕೆ ನಿರ್ವಿವಾದವಾದ ಪ್ರಮಾಣಗಳು ದೊರೆತಿಲ್ಲ. ಕೆಲವು ಶಬ್ದ ಪ್ರಯೋಗಗಳ ಆಧಾರದ ಮೇಲೆ ಮುಖ್ಯವಾಗಿ ಕನ್ನಡ ಭಾರತದಲ್ಲಿ ಬಂದಿರುವ ಮರಾಠಿ ಶಬ್ದಗಳು, ವ್ಯಾಕರಣ ಲಕ್ಷಣಗಳಿಂದ ಕವಿಯ ಕಾಲ 13ನೆಯ ಶತಮಾನದ ಪೂರ್ವಾರ್ಧವಾಗಿರಬೇಕೆಂದು ಗೋವಿಂದ ಪೈಗಳ ಅಭಿಪ್ರಾಯ. ರಂ.ಶ್ರೀ.ಮುಗಳಿಯವರು ಸು.1400 ಎಂದು ಅಭಿಪ್ರಾಯಪಟ್ಟಿದ್ದಾರೆ. ಸದ್ಯದ ಮಟ್ಟಿಗೆ ಕವಿಯ ಕಾಲವನ್ನು 1350 ರಿಂದ 1425ರ ನಡುವಣ ಕಾಲ (ಸು.1375) ಎಂದು ಇಟ್ಟುಕೊಳ್ಳಬಹುದು ಎಂದು ಎಂ.ವಿ.ಸೀತಾರಾಮಯ್ಯ ನವರು ಅಭಿಪ್ರಾಯಪಟ್ಟಿದ್ದಾರೆ.

ಕುಮಾರವ್ಯಾಸನ ಮತದ ಬಗೆಗೂ ಭಿನ್ನಾಭಿಪ್ರಾಯಗಳಿವೆ. ಭಾಗವತ ಧರ್ಮದಲ್ಲಿ ಪರಮ ವೈಷ್ಣವ ಭಕ್ತಿ, ಅದರಲ್ಲಿ ವಿಶೇಷವಾಗಿ ವಾಸುದೇವ ಕೃಷ್ಣ ಭಕ್ತಿ, ಶೈವಭಕ್ತಿ, ಹರಿಹರಾಭೇದ ದೃಷ್ಟಿ, ಅದ್ವೈತ ದರ್ಶನ, ವಿಶಿಷ್ಟಾದ್ವೈತಿಗಳ ಮತ್ತು ದ್ವೈತಿಗಳ ಸಿದ್ಧಾಂತಗಳಿಗೂ ಮನ್ನಣೆ. ಇವೆಲ್ಲ ಲಕ್ಷಣಗಳೂ ಕುಮಾರವ್ಯಾಸ ಭಾರತದಲ್ಲಿ ಕಂಡುಬರುತ್ತವೆ. ಆದ್ದರಿಂದ ಕುಮಾರವ್ಯಾಸ ಭಾಗವತ ಸಂಪ್ರದಾಯದ ಸ್ಮಾರ್ತ ಬ್ರಾಹ್ಮಣ ಪಂಗಡಕ್ಕೆ ಸೇರಿದವನು ಎಂದು ಊಹೆ. ಕವಿ ಯಾವ ಮತಪಂಗಡಕ್ಕಾದರೂ ಸೇರಿರಲಿ ಮುಖ್ಯವಾಗಿ ಇವನು ವೇದ ಇತಿಹಾಸ ಪುರಾಣಾದಿ ಶಾಸ್ತ್ರಗಳಲ್ಲಿ ಬಲ್ಲಿದ, ಚತುರ್ಭಾಷಾಪಂಡಿತ, ವ್ಯಾಸ ಭಾರತವನ್ನು ಶಿರಸಾ ಮನಸಾ ಧಾರಣ ಮಾಡಿಕೊಂಡಿದ್ದವನು. ಪಂಪಭಾರತವೇ ಮೊದಲಾದ ಶ್ರೇಷ್ಠ ಪೂರ್ವಕವಿಕೃತಿಗಳನ್ನು ಅನುಸಂಧಾನ ಮಾಡಿದ್ದವನು ಎಂಬ ಮಾತು ಮುಖ್ಯ.

ಕರ್ಣಾಟ ಭಾರತಕಥಾಮಂಜರಿ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 10 ಪರ್ವಗಳಿವೆ. ಮೊದಲನೆಯ ಐದು ಪರ್ವಗಳನ್ನು ಆದಿಪಂಚಕವೆಂದೂ ಕೊನೆಯ ಐದನ್ನು ಯುದ್ಧ ಪಂಚಕವೆಂದೂ ಕರೆಯುತ್ತಾರೆ. ಸಂಸ್ಕೃತದಲ್ಲಿ ವ್ಯಾಸರಿಂದ ರಚಿತವಾದ ಮಹಾಭಾರತ ಈ ಕೃತಿಗೆ ಆಕರ. ಮಹಾಭಾರತದ ಕಥೆಯ 10 ಪರ್ವಗಳನ್ನು ಸಾರವತ್ತಾಗಿ ಕವಿ ಕನ್ನಡಕ್ಕೆ ತಂದುಕೊಟ್ಟಿದ್ದಾನೆ. ಕಾವ್ಯಾರಂಭದಲ್ಲಿ ತನ್ನ ಇಷ್ಟದೈವದ ಸ್ತುತಿಯೊಂದಿಗೆ, ತಿಳಿಯಹೇಳುವೆ ಕೃಷ್ಣ ಕಥೆಯನ್ನು ಇಳೆಯ ಜಾಣರು ಮೆಚ್ಚುವಂತಿರೆ ನೆಲೆಗೆ ಪಂಚಮಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ ಎಂದು ತನ್ನ ಕಾವ್ಯೋದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ವೀರ ನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸನೆಂದು ತನ್ನ ವಿನಯವನ್ನೂ ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ ಪದವಿಟ್ಟಳುಪದೊಂದಗ್ಗಳಿಕೆ ಎಂದು ತನ್ನ ಕಾವ್ಯಶಕ್ತಿಯನ್ನೂ ಹೇಳಿಕೊಂಡಿದ್ದಾನೆ. ತನ್ನ ಕಾವ್ಯದ ಸ್ವರೂಪವನ್ನು ಅರಸುಗಳಿಗಿದು ವೀರ ದ್ವಿಜರಿಗೆ ಪರಮವೇದದ ಸಾರ ಯೋಗೀಶ್ವರರ ತತ್ತ್ವ ವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ ವಿರಹಿಗಳ ಶೃಂಗಾರ ವಿದ್ಯಾಪರಿಣತರಲಂಕಾರ ಕಾವ್ಯಕ್ಕೆ ಗುರುವೆನಲು ರಚಿಸಿದ ಕುಮಾರವ್ಯಾಸಭಾರತವ ಎಂದು ತಿಳಿಸಿದ್ದಾನೆ. ಈ ಮೇಲಿನ ಮಾತುಗಳಿಗೆ ಕಾವ್ಯದಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ. ಇವನು ವ್ಯಾಸರ ಇತಿಹಾಸಕಾವ್ಯವನ್ನು ಅನುಸರಿಸಿದ್ದರೂ ಅದನ್ನು ಕನ್ನಡದ ಪುರಾಣಕಾವ್ಯವಾಗಿ ಮಾರ್ಪಡಿಸುವಲ್ಲಿ ಕಾವ್ಯಧರ್ಮಕ್ಕೆ ಸಾಧಾರಣವಾಗಿ ಲೋಪ ತಂದಿಲ್ಲ. ನೀತಿಬೋಧೆಗಾಗಿಯೇ ಹುಟ್ಟಿಕೊಂಡ ಉಪಾಖ್ಯಾನಗಳನ್ನೆಲ್ಲ ಬಿಟ್ಟು, ಮೂಲ ಭಾರತವನ್ನು ಸಂಗ್ರಹಿಸಿದರೂ ತನಗೆ ಇಷ್ಟಬಂದ ಕಡೆ ಹಿಗ್ಗಿಸಿ, ಎಷ್ಟೋ ಕಡೆ ಕವಿದೃಷ್ಟಿಗೆ ಒಪ್ಪಿಗೆಯಾಗದ ಮೂಲಕೃತಿಯ ಇತಿಹಾಸ ಸತ್ಯವನ್ನು ಕಾವ್ಯಸತ್ಯವಾಗಿ ಮಾರ್ಪಡಿಸಿ, ಪಾತ್ರಗಳನ್ನು ಹೆಚ್ಚು ಜೀವಂತವಾಗಿಸಿ, ವರ್ಣನೆಗಾಗಿ ವರ್ಣನೆಗಳನ್ನು ತುರುಕದೆ, ತನ್ನ ಅನುಭವ ಭಂಡಾರವನ್ನು ಕಾವ್ಯಕ್ಕೆ ಧಾರೆಯೆರೆಯಬಹುದಾದಂಥ ಸಂದರ್ಭಗಳಲ್ಲಿ ಸ್ವಲ್ಪ ಮಿತಿಮೀರಿತೋ ಎನ್ನುವಂತೆ ವರ್ಣಿಸಿ, ಸ್ವಯಂ ಪಂಡಿತನಾದರೂ ಪಾಂಡಿತ್ಯದ ಪ್ರತಿಷ್ಠೆಯನ್ನು ಮೆರೆಯದೆ ಬನಿಯಾದ ಬಳಕೆಯ ಜೀವಂತ ಕನ್ನಡವನ್ನೇ ಉಪಯೋಗಿಸಿ, ತನ್ನ ಭಾರತವನ್ನು ಭಾರವಾಗಿ ಮಾಡದೆ ರಸದ ಪೂರವನ್ನಾಗಿ ಮಾಡಿದ್ದಾನೆ.



ಕುಮಾರವ್ಯಾಸನ ಆರಾಧ್ಯದೈವ ಗದಗಿನ ವೀರನಾರಾಯಣ

ಕವಿ ಹೇಳಿಕೊಂಡಿರುವ ಕಾವ್ಯಸ್ವರೂಪವನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ಕನ್ನಡ ಭಾರತ ವೀರ, ಶೃಂಗಾರರಸಗಳ ಸನ್ನಿವೇಶಗಳನ್ನು ಯಥೇಷ್ಟವಾಗಿ ಒಳಗೊಂಡಿದೆ. ಆದಿಪರ್ವದಲ್ಲಿ ಬರುವ ಪಾಂಡುಮಾದ್ರಿಯರ ಕಡೆಗಾಲದ ಶೃಂಗಾರ ಸನ್ನಿವೇಶ ಮನೋಜ್ಞವಾಗಿದೆ. ಇಲ್ಲಿನ ವಸಂತಾಗಮನದ ವರ್ಣನೆ ಅರ್ಥಗರ್ಭಿತವಾಗಿದ್ದು, ಧ್ವನಿಪೂರ್ಣವಾಗಿದೆ. ಇಷ್ಟೇ ಮಹೋನ್ನತ ಶೃಂಗಾರ ಸನ್ನಿವೇಶ, ಊರ್ವಶಿ ಅರ್ಜುನನನ್ನು ಮೋಹಿಸಿದ ಸಂದರ್ಭ. ಮೇಲುನೋಟಕ್ಕೆ ಕುಮಾರವ್ಯಾಸಭಾರತ ಭಕ್ತಿಕಾವ್ಯದಂತೆ ತೋರಿದರೂ ಅದರ ಅಂತರಂಗ ಸಂಪೂರ್ಣವಾಗಿ ಯುದ್ಧಗಳ ಕ್ಷೋಭೆಯಿಂದಲೇ ತುಂಬಿದೆ. ಕವಿ ಶೃಂಗಾರ, ಹಾಸ್ಯ

ಸನ್ನಿವೇಶಗಳನ್ನು ನವುರಾಗಿ ವರ್ಣಿಸುವಂತೆಯೇ ವೀರರಸವನ್ನೂ ಅದ್ಭುತವಾಗಿ ವರ್ಣಿಸಿದ್ದಾನೆ. ಇವನ ವರ್ಣನೆಯಲ್ಲಿ ಉತ್ಪ್ರೇಕ್ಷೆ ಇಲ್ಲ. ಇದ್ದರೂ ಅದು ಸದಾ ಕಾವ್ಯಸತ್ಯವಾಗಿಯೇ ಗೋಚರಿಸುತ್ತದೆ. ಯುದ್ಧಪಂಚಕದ ಪರ್ವಗಳೆಲ್ಲ ವೀರರಸಕ್ಕೆ ಮೀಸಲು. ಭೀಷ್ಮ, ದ್ರೋಣ, ಕರ್ಣ, ಅರ್ಜುನ, ಅಭಿಮನ್ಯು ಮುಂತಾದ ವೀರರ ವೀರಾಲಾಪ ಮತ್ತು ಯುದ್ಧಗಳ ವರ್ಣನೆಗಳಲ್ಲಿ ವೀರರಸ ರೌದ್ರರಸಗಳು ನೊರೆಗಟ್ಟಿ ಹರಿಯುತ್ತವೆ. ಯುದ್ಧ ಪಂಚಕಗಳಲ್ಲಿ ಬರುವ ಸುಪ್ರತೀಕಗಜದ ಯುದ್ಧ, ಅಭಿಮನ್ಯುವಿನ ಚಕ್ರವ್ಯೂಹಭೇದನ, ಕರ್ಣಾರ್ಜುನರ ಕಾಳಗ, ಭೀಮ ದುರ್ಯೋಧನರ ಯುದ್ಧ, ಭೀಷ್ಮರ, ದ್ರೋಣರ ವೀರಾವೇಶದ ಹೋರಾಟ ಈ ಸಂದರ್ಭಗಳಲ್ಲಿ ಬರುವ ಚಿತ್ರಣ ಇವನು ಕನ್ನಡದ ಶ್ರೇಷ್ಠ ಮಹಾಕವಿ ಎಂಬ ಮಾತಿಗೆ ಸಾಕ್ಷಿಗಳಾಗಿವೆ. ಕರ್ಣಾವಸಾನ, ಅಭಿಮನ್ಯುವಿನ ಮರಣ ಇಂಥ'ಲ್ಲಿ ಕರುಣರಸ ಕೋಡಿವರಿಯುತ್ತದೆ. ವಿರಾಟಪರ್ವದಲ್ಲಿ ಬರುವ ಉತ್ತರಕುಮಾರನ ಪರಾಕ್ರಮ ವರ್ಣನೆ, ದ್ರೌಪದೀ ಸ್ವಯಂವರದಲ್ಲಿ ಹಾರುವರ ವೇಷದ ಅರ್ಜುನನ ಮತ್ಸ್ಯಯಂತ್ರಭೇದನ -ಈ ಸನ್ನಿವೇಶಗಳಲ್ಲಿ ನಿರೂಪಿತವಾಗಿರುವ ಹಾಸ್ಯ ಶ್ರೇಷ್ಠಮಟ್ಟದ್ದು. ಇಂಥ ಕೆಲವು ಕಡೆಗಳಲ್ಲಿ ಮೂಲಭಾರತದಲ್ಲಿ ಇಲ್ಲದ ಸನ್ನಿವೇಶ, ಸಂದರ್ಭಗಳನ್ನು ಸೃಷ್ಟಿಮಾಡಿ ಅವುಗಳಲ್ಲಿ ರಸವುಕ್ಕಿಸುವ ಕಲ್ಪನಾದೃಷ್ಟಿ, ಪ್ರತಿಭಾಸಾಮರ್ಥ್ಯ ಇವನಿಗಿದೆ. ಈ ಮಹಾಕಾವ್ಯ ಪಾಂಡವ ಕೌರವರ ದಾಯಾದಿ ಮತ್ಸರದ ಕಥೆಯಾದರೂ ಕೃಷ್ಣನ ಚರಿತವನ್ನು ನಿರೂಪಿಸುವುದೇ ಕವಿಯ ಮುಖ್ಯ ಗುರಿ. ಕೃಷ್ಣನೇ ಕಾವ್ಯದ ಜೀವಾಳ, ಕಥೆಯ ಸೂತ್ರಧಾರ. ಮೂಲಭಾರತದಲ್ಲಿ ಶ್ರೀಕೃಷ್ಣ ಬರುವ ಪ್ರಸಂಗಗಳನ್ನು ತನ್ನ ಕಾವ್ಯೋದ್ದೇಶಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು, ಅಳವಡಿಸಿಕೊಂಡು, ಬೆಳೆಸಿಕೊಂಡಿದ್ದಾನೆ. ಕವಿಯ ಕೃಷ್ಣಭಕ್ತಿಭಾವ ಕಾವ್ಯ ಮಂದಿರದ ಮೂಲೆಮೂಲೆಯನ್ನೂ ಬೆಳಗುತ್ತದೆ. ಅರ್ಜುನನ ರಥಕ್ಕೆ ಹೇಗೊ ಹಾಗೆ ಕಾವ್ಯರಥ'ಕ್ಕೂ ಕೃಷ್ಣನೇ ಸಾರಥಿ. ಅವನಿಲ್ಲದೆ ಕಥೆ ಮುನ್ನಡೆಯುವ ಹಾಗೇಯೇ ಇಲ್ಲ. ಕೃಷ್ಣನ ಪಾತ್ರ ಚಿತ್ರಣಕ್ಕೆ ಕವಿ ತನ್ನ ಸಕಲ ಕವಿತಾಸಾಮರ್ಥ್ಯವನ್ನೂ ನಿವೇದನ ಮಾಡಿದ್ದಾನೆ. ಕೃಷ್ಣನು ಸಾಕ್ಷಾತ್ ನಾರಾಯಣ ಎಂಬುದು ಇವನ ನಂಬಿಕೆಯಾದರೂ ಅವನು ಕಪಟನಾಟಕ ಸೂತ್ರಧಾರಿ, ಎಲ್ಲರಂತೆ ಮನುಷ್ಯ ನರರಾಚರಣೆಗಳ ನಾಟಕವ ನಟಿಸಿ ತೋರಿದ ನಿಪುಣ-ಎಂಬುದನ್ನು ಎಲ್ಲೂ ಮರೆತಿಲ್ಲ. ಹೀಗೆ ಕೃಷ್ಣನ ಪಾತ್ರದಲ್ಲಿ ತನ್ಮಯನಾದ ಕವಿ ತನ್ನ ಕಾವ್ಯವನ್ನು ಕೃಷ್ಣಚರಿತೆ ಎಂದು ಕರೆದಿರುವುದರಲ್ಲಿ ಸಹಜತೆ ಇದೆ. ಭಕ್ತಿಯೂ ಒಂದು ರಸವೇ ಎನ್ನುವಷ್ಟರ ಮಟ್ಟಿಗೆ ಇಡೀ ಕಾವ್ಯ ಭಕ್ತಿರಸಪೂರಿತವಾಗಿದೆ.

ಕಥಾಸಂವಿಧಾನದಲ್ಲಿ ಏಕಸೂತ್ರತೆಯಿದೆ. ವರ್ಣನೆಗಳಲ್ಲಿ ಅಪೂರ್ವವಾದ ಕಲ್ಪನಾವಿಲಾಸವಿದೆ. ಪಾತ್ರ ಚಿತ್ರಣದಲ್ಲಿ, ಪಾತ್ರಗಳ ಮನ ಹೊಕ್ಕು ಅವುಗಳ ಸಮಗ್ರ ವ್ಯಕ್ತಿತ್ವವನ್ನು ಪರಿಚಯಿಸಿ ಕೊಡುವಲ್ಲಿ ಕವಿಯ ಪ್ರತಿಭೆ ಅಪೂರ್ವವಾಗಿದೆ. ಕೃಷ್ಣ, ದುರ್ಯೋಧನ, ಕರ್ಣ, ಭೀಮ, ದ್ರೌಪದಿ, ಅರ್ಜುನ, ಧರ್ಮರಾಯ, ಭೀಷ್ಮ, ದ್ರೋಣ, ಉತ್ತರ, ಅಭಿಮನ್ಯು- ಮುಂತಾದ ಪಾತ್ರಗಳು ರಕ್ತಮಾಂಸ ತುಂಬಿದ ಜೀವಂತ ವ್ಯಕ್ತಿಗಳಾಗಿ ಗೋಚರಿಸುತ್ತಾರೆ. ಕವಿಯ ಲೇಖನಿ ಪ್ರತಿಯೊಂದು ಪಾತ್ರದ ನಡವಳಿಕೆ ನಂಬಿಕೆಗಳನ್ನು ಸಮರ್ಥವಾಗಿ ಸಹೃದಯರಿಗೆ ದರ್ಶಿಸುತ್ತದೆ.

ಭಾಷಾಬಳಕೆಯಲ್ಲಿಯೂ ಈ ಕವಿ ಸಮರ್ಥ. ಕನ್ನಡ ಭಾಷೆಯ ಅಂತಃಸಾರವನ್ನೆಲ್ಲಾ ತನ್ನ ಕಾವ್ಯದಲ್ಲಿ ಹಿಡಿದಿಟ್ಟಿದ್ದಾನೆ. ಈತ ಬಳಸುವ ಪದಗಳಿಗೆ ಅನ್ಯದೇಶ್ಯ, ದೇಶ್ಯ, ಗ್ರಾಮ್ಯ, ಸುಸಂಸ್ಕೃತ ಎಂಬ ಭೇದಭಾವವಿಲ್ಲ. ಸಂದರ್ಭಕ್ಕೆ, ಪಾತ್ರಕ್ಕೆ ಸಹಜವಾಗುವಂತೆ ಔಚಿತ್ಯ ಮೀರದಂತೆ ಮಾತುಗಳನ್ನು ಬಳಸುತ್ತಾನೆ. ಇವನ ಶೈಲಿ ಎಷ್ಟು ಸರಳವೊ ಅಷ್ಟೇ ಸುಂದರ. ತನ್ನ ಕಾಲದ ಆಡುಭಾಷೆಯ ಸಂಪೂರ್ಣ ಉಪಯೋಗವನ್ನು ಕವಿ ಪಡೆದುಕೊಂಡಿದ್ದಾನೆ. ಇವನ ಪಾತ್ರಗಳ ಸಂಭಾಷಣಾ ಚಾತುರ್ಯ ಬೆರಗುಗೊಳಿಸುವಂಥದ್ದು. ಅರಳು ಹುರಿದಂತೆ ಮಾತಾಡುವ ರೀತಿ ಇವನ ಪಾತ್ರಗಳ ವೈಶಿಷ್ಟ್ಯ. ಉಪಮೆ ರೂಪಕಗಳನ್ನು ಬಳಸುವಲ್ಲಿಯೂ ಕವಿ ಸಿದ್ಧಹಸ್ತ. ಇವನು ಕೊಡುವ ಒಂದೊಂದು ಉಪಮೆಯೂ ರೂಪಕವೂ ಸಹಜವಾಗಿದ್ದು, ಇಡೀ ಸನ್ನಿವೇಶ ಕಣ್ಣಿಗೆ ಕಟ್ಟುವಷ್ಟು ಪ್ರಭಾವ ಪೂರ್ಣವಾಗಿರುತ್ತದೆ. ಮುಗಿಲ ಬೆನಕಗೆ ಲಡ್ಡುಗೆಗಳಾದುವು ಸಮಸ್ತ ಗ್ರಹತಾರೆ; ಖಳನ ಕಾಲನ ಕೋಣ ತುಳಿದಂತಿಳೆಯೊಳೊರಗಿರೆ; ಕೋಪಾಯುಧವ ಮಸೆದಳು ಧಾರೆಕಂಗಳಲಿ; ಬಲೆಯ ಹಾಯಿಕಿ ಗಂಡು ಮೀನಗ್ಗಳೆಯಗಾಳವ ಕೊಳದ; ಕಾರಿರುಳ ಪಟ್ಟಣಕೆ ಚಂದ್ರನ ತೋರಣವ ಬಿಗಿದಂತೆ; ಘನಸಿಂಹನಾದದ ಸಿಡಿಲ ಶಿಕ್ಷಾಗುರುವೆನಲು ಮಸಗಿದ ಕಲಿಭೀಮ; ಗಿರಿಯ ಮಕ್ಕಳು ನೆರೆದು ವಜ್ರದ ಸರಸವಾಡುವ ಕಾಲವಾಯಿತೆ; ಮಂಜಿನ ಮಳೆಗೆ ಕುಲಗಿರಿ ಕರಗುವುದೆ; ಬರಿಯ ಕಾರ್ಪಣ್ಯದಲಿ ಮೇಘದ ಮರೆಯಹೊಕ್ಕರೆ ರಾಹು ಬಿಡುವನೆ ಉರಿವ ರವಿ ಮಂಡಲದ ಕೈಕಾಲ್ ಮೂಡಿತೋ ನಭಕೆ; ಪಡುವಣ ಶೈಲ ವಿಪುಲಸ್ತಂಭ ದೀಪಿಕೆಯಂತೆ ರವಿ ಮೆರೆದ ಈ ಮುಂತಾದ ಉಪಮೆ-ರೂಪಕಗಳೇ ಕವಿಯ ಕಲ್ಪನಾಚಾತುರ್ಯಕ್ಕೆ, ಪ್ರತಿಭಾಸಂಪತ್ತಿಗೆ ಕನ್ನಡಿ ಹಿಡಿಯುತ್ತವೆ.

ಸಂಸ್ಕೃತ ಭಾರತವನ್ನು ಕನ್ನಡಕ್ಕೆ ತಂದುಕೊಟ್ಟ ಇಬ್ಬರು ಮಹಾಕವಿಗಳಲ್ಲಿ ಪಂಪ ಮೊದಲಿಗನಾದರೆ, ನಾರಣಪ್ಪ ಎರಡನೆಯವನು. ಭಾಮಿನೀ ಷಟ್ಪದಿಗೆ ಪ್ರಖ್ಯಾತಿ ದೊರತದ್ದು ಈತನ ಭಾರತದಿಂದ. ಇವನ ಪ್ರಭಾವ ಛಾಯೆ ಮುಂದಿನ ಎಲ್ಲ ಷಟ್ಪದಿಕವಿಗಳ ಮೇಲೆ ಬಿದ್ದಿದೆ. ಕುಮಾರವ್ಯಾಸಯುಗ ಎಂದು ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸುವಷ್ಟರಮಟ್ಟಿಗೆ ಈತನ ಪ್ರಭಾವ ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತದೆ. ರೂಪಕಸಾಮ್ರಾಜ್ಯಚಕ್ರವರ್ತಿ, ಕಲಿಯುದವರಿಗೂ ಕಾಮಧೇನು ಎಂಬ ವಿಮರ್ಶಕರ ಮಾತುಗಳು ಇವನಿಗೆ ಸಂಪೂರ್ಣವಾಗಿ ಒಪ್ಪುತ್ತವೆ. (ಎಂ.ವಿ.ಎಸ್.)

ಇವನೇ ರಚಿಸಿರಬಹುದೆನ್ನಲಾದ 8 ಸಂಧಿ, 410 ಪದ್ಯಗಳುಳ್ಳ ಒಂದು ಚಿಕ್ಕ ಕಾವ್ಯ ಐರಾವತ. ಅರ್ಜುನನ ಪ್ರತಾಪವನ್ನು ಉತ್ಕರ್ಷಿಸುವ ಒಂದು ಪೌರಾಣಿಕ ವ್ರತ ಕಥೆಯೇ ಈ ಕಾವ್ಯದ ವಸ್ತು. ಈ ಕಥೆ ಸಂಸ್ಕೃತದಲ್ಲಿ ಸ್ಕಾಂದ ಮತ್ತು ಭವಿಷ್ಯೋತ್ತರ ಪುರಾಣಗಳಲ್ಲಿದೆ. ಈ ಕಥೆಗಳ ಮುಖ್ಯ ಗುರಿ ಒಂದೇ ಆದರೂ ಕಥಾನಿರೂಪಣೆಯ ಕ್ರಮದಲ್ಲಿ ವ್ಯತ್ಯಾಸವಿದೆ. ಇವುಗಳಲ್ಲಿ ಸ್ಕಾಂದಪುರಾಣದ ಕಥೆ ಕನ್ನಡದಲ್ಲಿ ಐರಾವತ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದು ಭಾರತ ಕಥೆಗೆ ಸಂಬಂಧಪಟ್ಟಿರುವುದರಿಂದ ಕುಮಾರವ್ಯಾಸ ಭಾರತದ ಆದಿಪರ್ವದಲ್ಲಿ ಒಂದು ಸಂಧಿಯಾಗಿ ಸೇರಿರುವುದಲ್ಲದೆ ಸಂಧಿಯ ಕೊನೆಯಲ್ಲಿ ಗದುಗಿನ ವೀರನಾರಾಯಣನ ಅಂಕಿತವೂ ಇದೆ. ಭವಿಷ್ಯೋತ್ತರ ಪುರಾಣದ ಕಥೆಯೂ ಕುಮಾರವ್ಯಾಸಭಾರತದ ಕೆಲವು ಪ್ರತಿಗಳಲ್ಲಿದೆ. ಈ ಪದ್ಯಗಳ ಶೈಲಿ ಕುಮಾರವ್ಯಾಸನ ಶೈಲಿಗಿಂತ ಭಿನ್ನವಾಗಿರುವುದಲ್ಲದೆ ಒಂದೇ ಕಥೆ ಆದಿಪರ್ವದ 7, 8, 10, 21, 23, 24, 38 ನೆಯ ಸಂಧಿಯಾಗಿ ಬೇರೆ ಬೇರೆ ಪ್ರತಿಗಳಲ್ಲಿ ಲಿಖಿತವಾಗಿದೆ. ಪದ್ಯ ಸಂಖ್ಯೆಯಲ್ಲೂ ಒಮ್ಮತವಿಲ್ಲ. ಆದುದರಿಂದ ಈ ಕೃತಿ ಕುಮಾರವ್ಯಾಸ ರಚಿತವಲ್ಲವೆಂಬ ಅಭಿಪ್ರಾಯವೂ ಇದೆ. (ಎಸ್.ಎನ್.ಕೆ.)

**ಕುಮುದೇಂದು** : ಸು.1275. ಜೈನಕವಿ. ಕುಮುದೇಂದು ರಾಮಾಯಣ ಎಂಬ ಕಾವ್ಯದ ಕರ್ತೃ. ಈತನ ತಂದೆ ಪದ್ಮನಂದಿವ್ರತಿ, ತಾಯಿ ಕಾಮಾಂಬಿಕೆ, ದೊಡ್ಡಪ್ಪ ಅರ್ಹನಂದಿವ್ರತಿ, ಗುರು ಮಾಘಣಂದಿ ಮುನಿ. ಕವಿಗೆ ಪರವಾದಿಗಿರಿವಜ್ರ, ವಾದಿಗಜಕೇಸರಿ, ವಾದಿಭಾಳಲೋಚನ, ವಾದಿಧರಾಧರ ಕುಳಿಶ, ಪರವಾದಿ ಗಂಡಭೇರುಂಡ, ಕವಿರಾಜಶಿಖಾಮಣಿ, ಸರಸಕವಿತಿಲಕ, ಸರಸಕವಿ ಮುಖತಿಲಕ, ಕವಿಕುಳಭಾಳಲಲಾಮ ಮುಂತಾದ ಬಿರುದುಗಳಿದ್ದಂತೆ ತಿಳಿಯುತ್ತದೆ. ಈ ಬಿರುದುಗಳ ಮೇಲಿಂದ ವಾದದಲ್ಲಿ ಅನೇಕ ಪಂಡಿತರನ್ನು ಗೆದ್ದಿರಬೇಕೆಂದು ಊಹಿಸಬಹುದಾಗಿದೆ. ಪೂರ್ವಕವಿಗಳಲ್ಲಿ ಗುಣವರ್ಮ, ಜಯವರ್ಮ, ಗಜಗ, ಗುಣನಂದಿ, ನಯವರ್ಮ, ಪೊನ್ನ, ಪಂಪ, ರನ್ನ, ಸುಮನೋಬಾಣ, ಜನ್ನ ಇವರುಗಳನ್ನು ಸ್ಮರಿಸಿದ್ದಾನೆ.

ಕುಮುದೇಂದು ರಾಮಾಯಣ ಷಟ್ಪದಿಯಲ್ಲಿದೆ. ಈಗ ಪ್ರಕಟವಾಗಿರುವ ಗ್ರಂಥದಲ್ಲಿ ಏಳು ಸಂಧಿಗಳು ಮಾತ್ರ ಇವೆ. ಇದರಲ್ಲಿ ಎಲ್ಲ ಜಾತಿಯ ಷಟ್ಪದಿಗಳೂ ದೊರೆಯುತ್ತವೆ. ಅಲ್ಲಲ್ಲಿ ಕೆಲವು ರಗಳೆಗಳೂ ಬಳಕೆಯಾಗಿವೆ. ಒಂದೊಂದು ಸಂಧಿಗೂ ಒಂದೊಂದು ರಾಗ ಸೂಚಿಸಲಾಗಿದೆ. ಎರಡು ಸಂಧಿಗಳಿಗೆ ತಾಳ ಸೂಚನೆಯೂ ಇದೆ. ಇದರಲ್ಲಿನ ರಾಮ ಕಥೆ ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದ್ದು ಪಂಪರಾಮಾಯಣವನ್ನು ಬಹುತೇಕ ಅನುಸರಿಸಿದೆ. ಕಥೆ ರಾವಣವಧೆಯಾದ ಮೇಲೆ ರಾಮಚಂದ್ರ ಸೀತಾಲಕ್ಷ್ಮಣರೊಡನೆ ಅಯೋಧ್ಯೆಗೆ ಬರುವವರೆಗೆ

ಮಾತ್ರ ಇದೆ. ಪಂಪರಾಮಾಯಣದಂತೆ ರಾಮಕೇವಲಿಯ ಮೋಕ್ಷದವರೆಗೆ ಸಂಪೂರ್ಣವಾಗಿಲ್ಲ. ಬಹುಶಃ ಕೃತಿ ಪೂರ್ಣಗೊಳ್ಳುವ ಮುಂಚೆ ಕವಿ ಗತಿಸಿದ್ದಿರಬಹುದಾದ್ದರಿಂದ ಕಾವ್ಯ ಅರ್ಧಕ್ಕೇ ನಿಂತಿರಬಹುದೆಂದು ಊಹಿಸಬಹುದಾಗಿದೆ. ಕಾವ್ಯಬಂಧ ಲಲಿತವಾಗಿದೆ. ವರ್ಣನಾ ಭಾಗಗಳಲ್ಲಿ ಅರ್ಥ, ರಸ, ಗುಣ, ಅಲಂಕಾರ, ಮೃದು ಪದ ಈ ಗುಣಗಳನ್ನು ಶೈಲಿಯಲ್ಲಿ ಕಾಣಬಹುದು. ಹಾಡುಗಬ್ಬದಲ್ಲಿ ಪ್ರೌಢಕಾವ್ಯದ ಲಕ್ಷಣ ತಂದು ಹಳೆಯ ಹೊಸ ಶೈಲಿಗಳ ಮಿಶ್ರಣ ಮಾಡಿದ್ದಾನೆ. ಭಾಷೆಯ ಮೇಲೆ ಇವನಿಗಿರುವ ಪ್ರಭುತ್ವ ಎಲ್ಲೆಡೆಯೂ ಸುಲಭವಾಗಿ ಗೋಚರಿಸುತ್ತದೆ. ಮತ್ಕೃತಿ ಮಾಡುವುದು ಚಮತ್ಕೃತಿಯುಂ ಎಂಬ ಕವಿವಾಣಿ ಕಾವ್ಯದಲ್ಲಿ ಸಾಕಷ್ಟು ಸಮರ್ಥನೆಯನ್ನು ಪಡೆದಿದೆ ಎನ್ನಬಹುದು. *

**ಕುಮುದ್ವತಿ [1]:** ಉತ್ತರ ಪಿನಾಕಿನಿಯ ಉಪನದಿ. ಕುಂದಾರ್ ಎಂದೂ ಹೆಸರು. ಬೆಂಗಳೂರು ಜಿಲ್ಲೆಯ ಮಾಕಳಿದುರ್ಗದ ಪಶ್ಚಿಮದ ಉಜನಿ ಬೆಟ್ಟದಲ್ಲಿ ಹುಟ್ಟಿ, ದೊಡ್ಡಬಳ್ಳಾಪುರ, ಗೌರಿಬಿದನೂರು ತಾಲ್ಲೂಕುಗಳ ಮೂಲಕ ಉತ್ತರಕ್ಕೆ ಸಾಗಿ, ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳ ಮೂಲಕ ಅನಂತಪುರ ಜಿಲ್ಲೆಗೆ ಹರಿದು ಹಿಂದುಪುರದ ಬಳಿ ಉತ್ತರ ಪಿನಾಕಿನಿ (ಪೆನ್ನಾರ್) ನದಿಗೆ ಸೇರುವುದು. ನದಿಯ ಉದ್ದ ಸು.72ಕಿಮೀ. ನದಿಯಲ್ಲಿ ಮಳೆಗಾಲದಲ್ಲಷ್ಟೇ ನೀರು ಹರಿಯುತ್ತದೆ. ಬೇಸಗೆಯಲ್ಲಿ ಒಣಗಿದ್ದರೂ ಪಾತ್ರದಲ್ಲಿನ ಮರಳು ಬಗೆದರೆ ನೀರುಕ್ಕುತ್ತದೆ. ನದಿಯ ಓಟದುದ್ದಕ್ಕೂ ಚಿಕ್ಕ ಕೆರೆಕಟ್ಟೆಗಳನ್ನು ಕಟ್ಟಿ ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ. (ಎ.ಕೆ.)

**ಕುಮುದ್ವತಿ [2]:** ತುಂಗಭದ್ರೆಯ ಉಪನದಿ. ಶಿಕಾರಿಪುರ ತಾಲ್ಲೂಕಿನ ಹುಮಚದ ಹತ್ತಿರ ಅಗಸ್ತ್ಯ ಪರ್ವತದಲ್ಲಿ (ಬಿಳೇಶ್ವರ ಬೆಟ್ಟ) ಹುಟ್ಟಿ ಕುಂಸಿ ಮತ್ತು ಶಿಕಾರಿಪುರಗಳ ಮೂಲಕ ಉತ್ತರಕ್ಕೆ ಹರಿದು ಹಿರೇಕೆರೂರು ತಾಲ್ಲೂಕನ್ನು ಪ್ರವೇಶಿಸಿ ಹರಿಹರದಿಂದ ಸ್ವಲ್ಪ ಮೇಲೆ ಮುದೇನೂರು ಗ್ರಾಮದ ಹತ್ತಿರ ತುಂಗಭದ್ರಾ ನದಿಯನ್ನು ಸೇರುತ್ತದೆ. ಇದಕ್ಕೆ ಚೊರಾಡಿ ನದಿ ಎಂಬ ಹೆಸರೂ ಇದೆ. ನದಿಯ ಉದ್ದ ಸು.96 ಕಿಮೀ. ಈ ನದಿ ಮಾಸೂರು ಮದಗ ಕೆರೆಗೆ ನೀರನ್ನೊದಗಿಸುವುದು. ಇದಕ್ಕೆ ಅನೇಕ ಕಡೆಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಿ ನೀರಾವರಿಗಾಗಿ ನೀರನ್ನು ಉಪಯೋಗಿಸುವರು. (ಎ.ಕೆ.)

**ಕುಮ್ಮಟಗಿ :** ಬಿಜಾಪುರ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಐತಿಹಾಸಿಕ ಸ್ಥಳ. ಬಿಜಾಪುರ ನಗರದಿಂದ ಸು.15 ಕಿಮೀ ದೂರದಲ್ಲಿದೆ. ಬಿಜಾಪುರದ ಸುಲ್ತಾನರಾದ ಆದಿಲ್ ಷಾಹಿ ದೊರೆಗಳು ಮತ್ತು ಅವರ ಅಧಿಕಾರಿಗಳು ಇಲ್ಲಿಗೆ ಬಂದು ಇಲ್ಲಿನ ಕೆರೆಯ ಆಸುಪಾಸಿನಲ್ಲಿ ಇದ್ದ ಅರಮನೆಗಳಲ್ಲಿ ತಂಗಿ ವಿಶ್ರಾಂತಿ ಪಡೆಯುತ್ತಿದ್ದರು. ಇದೊಂದು ಸುಖಸಂಕಥಾ ವಿನೋದದ ಸ್ಥಳ. ಇಲ್ಲಿನ ಜಲಕ್ರೀಡಾ ಮಂಟಪಗಳು, ನೀರಿನ ತೊಟ್ಟಿಗಳು, ಕಾರಂಜಿಗಳು ಮತ್ತು ನೀರು ಚಿಮ್ಮಿ ಜೋರಾಗಿ ಬರುವ ನೀರನಳಿಕೆಗಳು, ಭವನಗಳ ಅವಶೇಷಗಳು ಹಿಂದಿನ ಸುಂದರ, ಭವ್ಯ ಪ್ರವಾಸಿ ತಾಣವನ್ನು ನೆನಪಿಸುತ್ತವೆ. ಮಂಟಪಗಳ ಗೋಡೆಯ ಮೇಲೆ ಅಲ್ಲಲ್ಲಿ ಸುಂದರವಾದ, ಮಬ್ಬಾದ ಭಿತ್ತಿಚಿತ್ರಗಳಿವೆ. ಒಂದು ಚಿತ್ರದಲ್ಲಿ ಅಶ್ವಕಂದುಕದಾಟದ (ಪೋಲೋ) ಚಿತ್ರವಿದೆ. ಇನ್ನೊಂದು ಚಿತ್ರದಲ್ಲಿ ಕುಸ್ತಿ ನಡೆಯುತ್ತಿರುವುದನ್ನೂ ಆ ಕುಸ್ತಿಯನ್ನು ನೋಡಲು ಸುತ್ತ ಕುಳಿತ ಹಾಗೂ ನಿಂತ ಪ್ರೇಕ್ಷಕರನ್ನೂ ಚಿತ್ರಿಸಿದೆ. ಮತ್ತೊಂದು ಚಿತ್ರ ಶ್ರೀಮಂತ ಸ್ತ್ರೀಯರಿಗೆ ಮತ್ತು ಅಧಿಕಾರಿಗಳ ಪತ್ನಿಯರಿಗೆ ರಸಾನಂದವನ್ನು ಉಣಿಸುತ್ತಿರುವ ಸಂಗೀತಗಾರನ ಚಿತ್ರವನ್ನೊಳಗೊಂಡಿದೆ. ಈ ಭಿತ್ತಿಚಿತ್ರಗಳು ಅನಂತರ ಕಾಲದ ಚಿತ್ರಕಲೆಯ ಮೇಲೆ ಪ್ರಭಾವ ಬೀರಿವೆ ಎಂದು ಹೇಳಲಾಗಿದೆ.

ಈ ಊರು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿತ್ತು. ಇಲ್ಲಿ ಭೋಗೇಶ್ವರ, ಚೆನ್ನಬ್ರಹ್ಮೇಶ್ವರ ಎಂಬ ದೇವಾಲಯಗಳು ಇದ್ದುದರ ಬಗ್ಗೆ ಶಾಸನೋಲ್ಲೇಖವಿದೆ. (ಎಸ್.ಜಿ.)

**ಕುಮ್ಮಟದುರ್ಗ :** ಕೊಪ್ಪಳ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗಿರಿದುರ್ಗ. ಸಮುದ್ರಮಟ್ಟದಿಂದ ಸು.650ಮೀ ಎತ್ತರದಲ್ಲಿದೆ. ದುರ್ಗದ ಕೆಳಭಾಗದಲ್ಲಿ ಹೊಸಕುಮ್ಮಟ ಮತ್ತು ಸ್ವಲ್ಪ ದೂರದಲ್ಲಿ ಹಳೆಯ ಕುಮ್ಮಟ ಎಂಬ ಹಳ್ಳಿಗಳಿವೆ. ಆದರೆ ಜನವಸತಿ ಅತಿ ಕಡಿಮೆ.

ಕುಮಾರರಾಮ (ನೋಡಿ) ವೀರ ಕಂಪಿಲದೇವ ಮತ್ತು ಹರಿಯಾಲದೇವಿಯರ ಮಗ. ಆತನ ಇತಿಹಾಸ ಮತ್ತು ಐತಿಹ್ಯಗಳಿಗೆ ಸಂಬಂಧಪಟ್ಟ ಈ ಸ್ಥಳ ಕಂಪಿಲಿರಾಜ್ಯದ (ನೋಡಿ) ಒಂದು ರಾಜಧಾನಿ. ಇನ್ನೊಂದು ರಾಜಧಾನಿ ಕಂಪ್ಲಿ.

"ತುಂಗಭದ್ರಾ ದಾಟಿ ಮೊಗಲಾಯಿ ಸೀಮೆ ಎಮ್ಮಿಗುಡ್ಡಕ್ಕೆ ಐದು ಹರದಾರಿ ದೂರದಲ್ಲಿ ಗುಮ್ಮಟ ಎಂಬ ಕೋಟೆ ಇದೆ" ಎಂದು ಕೈಫಿಯತ್ತೊಂದು ತಿಳಿಸುತ್ತದೆ. ನ್ಯೂನಿಜ್ ಎಂಬ ವಿದೇಶಿ ಪ್ರವಾಸಿ ಉಲ್ಲೇಖಿಸುವ 'ಕ್ರಿನಮಟ' ಕುಮ್ಮಟವೆ ಎಂದು ಗುರುತಿಸಲಾಗಿದೆ. ಈ ದುರ್ಗವನ್ನು ಎಂ. ಎಚ್. ರಾಮಶರ್ಮ ಅವರು 1930ರ ವೇಳೆಗೆ ಪತ್ತೆಮಾಡಿದರು.

ಕೋಟೆ ಮೂರು ಪ್ರಾಕಾರಗಳಿಂದ ಕೂಡಿದ್ದು ಹೊರಗೋಡೆ 4ಮೀ ಎತ್ತರವಿದೆ. ತೋಪುಕಿಂಡಿ ಅಥವಾ ಕೋಟೆತೆನೆಗಳು ಕಂಡುಬರುವುದಿಲ್ಲ. ಕೋಟೆಯ ಸುತ್ತಳತೆ ಸು.5 ಕಿಮೀ. ಕೋಟೆಯೊಳಗೆ ಮುರಿದ ಕಂಬಗಳು, ಚಿಂತಾಲಕಲ್ಲು, ಭಗ್ನಶಿಲ್ಪ, ಬಂಡೆಗಲ್ಲುಗಳು ಚೆಲ್ಲಾಡಿವೆ. ಮೊದಲನೆಯ ಪ್ರಾಕಾರದೊಳಗೆ ಬೈಚಪ್ಪನಗುಡಿ ಇದೆಯಾದರೂ ಒಳಗೆ ಇರುವುದು ಲಿಂಗಾಕಾರದ ಶಿಲೆ. ಕುದುರೆಯ ಸವಾರಿ ಮಾಡುತ್ತಿರುವ ಶಿಲ್ಪ ಕುಮಾರರಾಮನದೆಂದು ಪ್ರತೀತಿ. ಅವನು ಶೀಲಕ್ಕೆ ಮತ್ತು ಶೌರ್ಯಕ್ಕೆ ಹೆಸರಾಗಿ ಮಹಮ್ಮದೀಯ ಸೈನ್ಯದ ವಿರುದ್ಧ ಹೋರಾಡಿ ಹುತಾತ್ಮನಾದುದು ಜನಮನದಲ್ಲಿ ಸಾಂಗತ್ಯವಾಗಿ ಹಾಡಾಗಿ ಹರಿದಿದೆ. ಕೋಟೆಯ ಎರಡನೆಯ ಪೌಳಿ ದಾಟಿದ ಮೇಲೆ ಗುಡ್ಡ ಕಡಿದಾಗುತ್ತ ಹೋಗುತ್ತದೆ. ಇಲ್ಲಿ ಕಾಟಪ್ಪನಗುಡಿ, ಆನೆಯಪಾಗ್ ಎಂಬ ಗಜಾಲಯ ಕಟ್ಟಡ ಕಾಣಸಿಗುತ್ತವೆ. ಮೂರನೆಯ ಪ್ರಾಕಾರದ ಅನಂತರ ಗುಡ್ಡದ ನೆತ್ತಿಯಲ್ಲಿ ರಾಮಸ್ವಾಮಿಗುಡಿ ಇದೆ. ಜೈನಬಸದಿ, ರಾಮನ ದೋಣೆ, ಕಟ್ಟಿಗೆ ದೋಣೆ ಮತ್ತು ಕೊತ್ತಳ ಇತರ ಪ್ರೇಕ್ಷಣೀಯ ಸ್ಥಳಗಳು. ಕೊತ್ತಳದಿಂದ ತುಂಗಭದ್ರಾನದಿ ಮನೋಹರವಾಗಿ ಕಾಣುತ್ತದೆ.

ಪ್ರತಿವರ್ಷ ವೈಶಾಖ ಹುಣ್ಣಿಮೆಯ ದಿನ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಕೊಪ್ಪಳದ ದುರ್ಗ, ಉಚ್ಚಂಗಿ ದುರ್ಗ ಮತ್ತು ಚಿತ್ರದುರ್ಗಗಳಂತೆಯೇ ಕುಮ್ಮಟದುರ್ಗವೂ ದುರ್ಗಮವಾದ ಕೋಟೆಯಾಗಿದ್ದಿತು. ವಿಜಯನಗರ ಅಸ್ತಿತ್ವಕ್ಕೆ ಬರುವವರೆಗೂ ಈ ದುರ್ಗ ಶತಮಾನಗಳ ಕಾಲ ತನ್ನ ಮಹತ್ವವನ್ನು ಮೆರೆದಿತ್ತು. ವಿಜಯನಗರ ಕಾಲದಲ್ಲೂ ಇಲ್ಲಿ ಸಾಮಂತರು ನೆಲೆಸಿದ್ದು ತಿಳಿದುಬರುತ್ತದೆ. ಇಲ್ಲಿ ನಾಲ್ಕು ಶಾಸನಗಳು ಶೋಧಿತವಾಗಿವೆ. ಬೈಚಪ್ಪನ ಅರಮನೆಯ ಮುಂದಿನ ವೀರಗಲ್ಲು ಶಾಸನಗಳಿಂದ 1315ರಲ್ಲಿ ಸುಲ್ತಾನನ ಸೈನ್ಯದ ದಾಳಿಯ ಸಂದರ್ಭದಲ್ಲಿ ಕಾಮಿನಾಯಕ ಮತ್ತು ಕಾತ್ರುನಾಯಕರು ಹೋರಾಡಿ ಮೃತರಾದ ವಿಷಯ ತಿಳಿದುಬರುತ್ತದೆ. ಆನೆಗೊಂದಿಯಲ್ಲಿ ಸಿಂಗೆನಾಯಕ ಮತ್ತು ಹನುಮನಾಯಕರು ರಾಮನಾಥದೇವರಿಗೆ ಮನೆಯೊಂದನ್ನು ದಾನವಾಗಿತ್ತುದು ಮೂರನೆಯ ಅತೇದಿ ಶಾಸನದ ವಸ್ತು. ಇನ್ನೊಂದು ಅತೇದಿ ಶಾಸನ ರಾಮನ ಮಗಳು ಗೋಪಾಯಿಯನ್ನು ಹೆಸರಿಸುತ್ತದೆ.

ಕುಮಾರರಾಮ ತನ್ನ ಕೊನೆಗಾಲದಲ್ಲಿ ಕುಮ್ಮಟದುರ್ಗವನ್ನು ಆಶ್ರಯಿಸಿದನೆಂದು ಆತನನ್ನು ಕುರಿತು ರಚಿತವಾದ ಕೆಲವು ಸಾಂಗತ್ಯ ಕಾವ್ಯಗಳಿಂದ ತಿಳಿದುಬರುತ್ತದೆ. (ಎಚ್.ಎಂ.ಎನ್.ಆರ್.)

**ಕುರಡಿ, ನಾರಾಯಣ ವೆಂಕಟೇಶ :** 1888-1974. ಕವಿ ಮತ್ತು ಸಾಹಿತಿ. ಉತ್ತರಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಕರ್ಕಿ ಗ್ರಾಮದಲ್ಲಿ 1888 ಆಗಸ್ಟ್ 8ರಂದು ಜನಿಸಿದರು. ಇವರ ತಂದೆ ವೆಂಕಟೇಶ ಭಾಗವತ (ವೆಂಕಪ್ಪ), ತಾಯಿ ಮಹಾಲಕ್ಷ್ಮಿ. ಕುರಡಿಯಾಗಿದ್ದ ವೆಂಕಮ್ಮ ಎಂಬುವರ ಪೋಷಣೆಯಲ್ಲಿ ಇವರು ಬೆಳೆದುಬಂದಿದ್ದರಿಂದ ಕುರಡಿ ಎಂಬ ಅಡ್ಡಹೆಸರನ್ನು ಇಟ್ಟುಕೊಂಡರು ಎಂದು ಹೇಳಲಾಗಿದೆ. ಇವರ ಪ್ರಾಥಮಿಕ

ಶಿಕ್ಷಣ ಕರ್ಕಿ ಗ್ರಾಮದಲ್ಲಿ ನಡೆಯಿತು. ಕುಮಟ ತಾಲ್ಲೂಕಿನ ಹೆಗಡೆ ಗ್ರಾಮದಲ್ಲಿ ಮುಲ್ಕಿ ಪರೀಕ್ಷೆಯನ್ನು ಮುಗಿಸಿದರು. ಮುಂದೆ ಧಾರವಾಡದ ಪ್ರಾಥಮಿಕ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಓದಿ ಅದೇ ಮಹಾವಿದ್ಯಾಲಯಕ್ಕೆ ಹೊಂದಿದ ಪ್ರ್ಯಾಕ್ಟಿಸಿಂಗ್ ಸ್ಕೂಲಿನಲ್ಲಿ ಸಹಶಿಕ್ಷಕರಾಗಿಯೂ ಮುಖ್ಯೋಪಾಧ್ಯಾಯರಾಗಿಯೂ ಕೆಲಸ ಮಾಡಿದರು. ಆಮೇಲೆ ಬಿಜಾಪುರ ಮತ್ತು ಉತ್ತರಕನ್ನಡ ಜಿಲ್ಲೆಗಳ ವಿದ್ಯಾಶಾಲೆಗಳ ಇನ್‌ಸ್ಪೆಕ್ಟರ್ ಆಗಿ ಕೆಲಸಮಾಡಿ ನಿವೃತ್ತರಾದ ಮೇಲೆ ಧಾರವಾಡದಲ್ಲಿ ನೆಲೆಸಿದರು.

ಹಳದೀಪುರ ಗ್ರಾಮದ ಕನ್ನಡ ಶಾಲೆಯಲ್ಲಿ ಮಾಸ್ತರಾಗಿದ್ದಾಗ ಉತ್ತರ ಕನ್ನಡ ಜಿಲ್ಲೆಯ ಕ್ಷತ್ರಿಯ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ್ದರು. ವಿದ್ಯಾರ್ಥಿ ಜೀವನದಿಂದಲೂ ಇವರು ಕನ್ನಡ ಸಾಹಿತ್ಯದ ಅಭ್ಯಾಸಿಗಳು, ಅಭಿಮಾನಿಗಳು. ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದ ಸಂಸ್ಥೆಗಳ ಸದಸ್ಯರಾಗಿ ಅವುಗಳ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದರು.

ಕೆರೂರ ವಾಸುದೇವಾಚಾರ್ಯರು ಇವರಿಗೆ ಮಾರ್ಗದರ್ಶಕರಾಗಿದ್ದರು. ಶಾಲಾಪತ್ರಿಕೆ, ವಾಗ್ಭೂಷಣ, ಪ್ರಾಥಮಿಕ ಶಿಕ್ಷಣ, ಸಾಹಿತ್ಯ ಪರಿಷತ್ಪತ್ರಿಕೆ ಮೊದಲಾದ ಪತ್ರಿಕೆಗಳಲ್ಲಿ ಇವರ ಲೇಖನಗಳು



ಪ್ರಕಟವಾದುವು. ಕರ್ನಾಟಕ ಏಕೀಕರಣದ ಗುರಿಯಿಂದ ಕರ್ನಾಟಕ ಹಿತೈಷಿಣೀ ಎಂಬ ಗ್ರಂಥಮಾಲೆಯನ್ನು ಸ್ಥಾಪಿಸಿದರು. 1914ರಲ್ಲಿ ಈ ಗ್ರಂಥಮಾಲೆಯ ಪ್ರಥಮ ಪ್ರಕಟಣೆಯಾಗಿ ತಮ್ಮ ಸಾವಿತ್ರಿ ಸತ್ಯವಾನ ಕಾದಂಬರಿಯನ್ನು ಪ್ರಕಟಿಸಿದರು. ಮುಂದೆ ಅಹಲ್ಯೋದ್ಧಾರ, ದಾಕ್ಷಾಯಿಣಿ, ಪಾರ್ವತಿ ಮುಂತಾದ ಪೌರಾಣಿಕ ಕಾದಂಬರಿಗಳನ್ನೂ ಪದ್ಮಿನಿ, ಮಹಾರಾಣಿ ಲಕ್ಷ್ಮೀಬಾಯಿ, ನಾನಾಸಾಹೇಬ ಪೇಶ್ವೆ, ಶ್ರೀಕೃಷ್ಣದೇವರಾಯ ವಿಜಯ ಮತ್ತು ಧರ್ಮಪಾಲ ಎಂಬ ಐತಿಹಾಸಿಕ ಕಾದಂಬರಿಗಳನ್ನೂ ಪ್ರಕಟಿಸಿದರು. ಶ್ರೀ ಹರ್ಷನ ಪ್ರಿಯದರ್ಶಿಕೆ, ರತ್ನಾವಳಿ ಮತ್ತು ನಾಗಾನಂದ ನಾಟಕಗಳ ಕನ್ನಡ ರೂಪಾಂತರ ಸಂಗ್ರಹದಲ್ಲಿ ಹರ್ಷ ಮತ್ತು ಅವನ ಕೃತಿಗಳ ವಿಮರ್ಶಾತ್ಮಕ ಟಿಪ್ಪಣಿ ಸಹ ಬರೆದಿದ್ದಾರೆ. ತಿಳಿಗನ್ನಡದಲ್ಲಿ ಬರೆದ ಇವರ ಕೆಲವು ಪುಸ್ತಕಗಳು ಪಠ್ಯ ಪುಸ್ತಕಗಳಾಗಿದ್ದುವು. ಕವಿತಾಕುಸುಮ ಮಂಜರಿ ಎಂಬ 3 ಭಾಗಗಳಲ್ಲಿ ಸಂಕಲಿತವಾದ ಇವರ ಕವನಗಳು, ಹಳತನದಿಂದ ಹೊಸತನದ ಕಡೆಗೆ ಅಡಿಯಿಟ್ಟಿರುವುದರ ಸಾಕ್ಷ್ಯಗಳಾಗಿರುವುವು. ಬಂಗಾಲಿ, ಮರಾಠಿ ಭಾಷೆಗಳನ್ನೂ ತಿಳಿದಿದ್ದರಿಂದ ಇವರು ಕವಿ ರವೀಂದ್ರರ ಗೀತಾಂಜಲಿಯ ಕೆಲವು ಗೀತೆಗಳನ್ನು ಸಾಂಪ್ರದಾಯಿಕ ಕನ್ನಡ ವೃತ್ತಗಳಲ್ಲಿ ಅನುವಾದಿಸಿದ್ದಾರೆ. ಜೊತೆಗೆ ರಾಮಕೃಷ್ಣ ಪರಮಹಂಸರ ನೀತಿಕಥೆಗಳ ಕನ್ನಡ ಅನುವಾದಗಳ ಸಂಗ್ರಹವನ್ನು ಹೊರತಂದಿದ್ದಾರೆ. ಬಿ.ಎಂ. ಶ್ರೀಯವರು ಹೇಳಿರುವಂತೆ -ಕುರಡಿಯವರ ಗ್ರಂಥಗಳಲ್ಲಿ ಸ್ವಧರ್ಮಶ್ರದ್ಧೆ ಸ್ವದೇಶಭಕ್ತಿ, ಮತ್ತು ಸ್ವಭಾಷಾಭಿಮಾನ ಕಾಣಬರುತ್ತವೆ. ಇವರು 1974 ಡಿಸೆಂಬರ್ 12ರಂದು ನಿಧನರಾದರು. (ಬಿ.ಕೆ.)

**ಕುರಿಯ ವಿಠಲಶಾಸ್ತ್ರಿ** :1912-72. ಹೆಸರಾಂತ ಯಕ್ಷಗಾನ ಕಲಾವಿದ. ಈಗ ಕೇರಳ ರಾಜ್ಯದಲ್ಲಿರುವ ಕಾಸರಗೋಡು ತಾಲ್ಲೂಕಿನ ಮಂಜೇಶ್ವರ ಫಿರ್ಕಾದ ಕುರಿಯ ಎಂಬಲ್ಲಿ 1912ರಲ್ಲಿ ಜನಿಸಿದರು. ತಂದೆ ವೆಂಕಟರಮಣ ಶಾಸ್ತ್ರಿಗಳಿಗೆ ಯಕ್ಷಗಾನ ಕಲೆಯಲ್ಲಿ ಆರಾಧನೆಯ ಭಾವವಿತ್ತು. ಹದಿವಯಸ್ಸಿನಲ್ಲೇ ತಂದೆಯ ಪ್ರೋತ್ಸಾಹ ಹಾಗೂ ಅವರೇ ಕಟ್ಟಿದ ಕೋಳ್ಯೂರು ಯಕ್ಷಗಾನ ಮಂಡಲಿಯಲ್ಲಿ ವಿಧಿವತ್ತಾಗಿ ಅಭಿನಯ ಆರಂಭಿಸಿದರು. ತಂದೆ ಹಿರಣ್ಯಕಶಿಪುವಾದರೆ ಮಗ ಪ್ರಹ್ಲಾದ, ತಂದೆ ಕಂಸನಾದರೆ ಮಗ ಕೃಷ್ಣನಾಗಿ ರಂಗದ ಮೇಲೆ ಅಭಿನಯಿಸುತ್ತಿದ್ದರು. ಪ್ರಸಿದ್ಧ ಬಣ್ಣದ ವೇಷಧಾರಿ ರಾವುಗೋಳಿ ಕಣ್ಣನ್ ಅವರಿಂದ ನೃತ್ಯ ಶಿಕ್ಷಣ ಪಡೆದರು. ಶಿವರಾಮ ಕಾರಂತರ ಯಕ್ಷಗಾನ ಮೂಕನೃತ್ಯದಲ್ಲೂ ಅಭಿನಯಿಸಿದರು. ಆಳಾಗಿ, ಅರಸಾಗಿ,ಭಕ್ತನಾಗಿ, ಸಾರಥಿಯಾಗಿ, ಹೆಣ್ಣಾಗಿ, ಗಂಡಾಗಿ ಪಾತ್ರ ನಿರ್ವಹಿಸಿದರು. ಕೃಷ್ಣ, ಹನುಮಂತ, ರಾಮ, ಕರ್ಣ, ಶಿವ, ಭಸ್ಮಾಸುರ, ಕಂಸ, ದುಷ್ಟಬುದ್ಧಿ, ರಾವಣ, ವಿಶ್ವಾಮಿತ್ರ, ರುಕ್ಮಿಣಿ, ಶಬರಿ, ಕೈಕೆ, ಗಿರಿಜೆ ಈ ಎಲ್ಲ ಪಾತ್ರಗಳಲ್ಲೂ ತಮ್ಮತನ ಮೆರೆದರು. ನವರಸಗಳಲ್ಲೂ ಪರಿಣತರೆನಿಸಿದರು.

ಇವರು ಯಕ್ಷಗಾನ, ಭರತನಾಟ್ಯಗಳೆರಡರ ಸಂಗಮವಾಗಿದ್ದರು. ಹಾಡು, ತಾಳ, ಚಂಡೆ, ಮುಂತಾದ ಹಿಮ್ಮೇಳನದ ಕ್ರಮಗಳಿಗೆ ಇಂತಿಷ್ಟೂ ಧಕ್ಕೆ ಬಾರದ ಹಾಗೆ ಎಲ್ಲರಿಗೂ ಅಭಿನಯದಿಂದಲೇ ಅರ್ಥವಾಗುವ ಹಾಗೆ ಭರತನಾಟ್ಯ ಕ್ರಮದಲ್ಲಿ ನರ್ತನ ಮಾಡುತ್ತಿದ್ದುದು ಇವರದೊಂದು ವಿಶೇಷ. ಬ್ರಹ್ಮಕಪಾಲದಿಂದ ಕಚ್ಚಿಸಿಕೊಂಡು ಮುಲುಗಾಡುವ ರಾವಣ, ಧೀರೋದಾತ್ತ ಗುಣಜಲಧಿ ಶ್ರೀರಾಮ- ಈ ಪಾತ್ರದಲ್ಲಿ ಶಾಸ್ತ್ರಿಗಳ ನೃತ್ಯಗತಿಯನ್ನೂ ವಾಗ್ವೈಭವವನ್ನೂ ನಯನಾಜೂಕುಗಳನ್ನೂ ಕಂಡವರಿಗೆ ರೋಮಾಂಚನವಾಗುತ್ತಿತ್ತು.

ಯಕ್ಷಗಾನವೊಂದು ಶಿಷ್ಟಕಲೆಯೇ ಅಲ್ಲ. ಸಂಭಾವಿತರು ಯಾರೂ ಅದರಲ್ಲಿ ಪಾಲ್ಗೊಳ್ಳುವುದು ತರವಲ್ಲ ಎಂಬ ಭಾವನೆಯಿದ್ದ ಕಾಲದಲ್ಲಿ ಅದರಲ್ಲಿ ಪ್ರವೇಶಿಸಿದ ಶಾಸ್ತ್ರಿಗಳು ಆ ಕ್ಷೇತ್ರದಲ್ಲಿ ನಡೆಸಿದ ಪ್ರಯೋಗಗಳೂ ಚಾಲ್ತಿಗೆ ತಂದ ಸುಧಾರಣೆಗಳೂ ಅನೇಕ. ಪಾತ್ರಕ್ಕೆ ತಕ್ಕ ವೇಷಭೂಷಣ (ಉದಾಹರಣೆ: ಗಿರಿಜಾ ಕಲ್ಯಾಣದಲ್ಲಿ ಕಾಮರತಿಯರಕೂಟ), ಪಾತ್ರಕ್ಕೆ ತಕ್ಕ ದೃಢಕಾಯ ಗುಣವಿಶೇಷಗಳಿರುವ ವ್ಯಕ್ತಿಗಳ ಆಯ್ಕೆಯ ವಿಧಾನ (ಉದಾಹರಣೆ: ಭಾರದ ಗದೆ ಎತ್ತಿ ಬೀಸಬಲ್ಲ ಶಕ್ತಿಯುತ ಹನುಮಂತ), ರಾವು ಬಡಿಸುವ ವೇಷಕ್ಕಿಂತ ಅಭಿನಯಕ್ಕೆ ಪ್ರಾಧಾನ್ಯ (ಉದಾಹರಣೆ: ಕುಂಭಕರ್ಣ)- ಹೀಗೆ ಎಷ್ಟೋ ವಿಚಾರಗಳಲ್ಲಿ ಇವರು ತಮ್ಮ ವಿಶೇಷತೆಯನ್ನು ಮೆರೆದರು. ವೇಷ, ಮಾತು, ಕುಣಿತ, ರಸ, ಭಾವ ಎಲ್ಲವೂ ಮೇಳೈಸಿದಾಗ ಮಾತ್ರವೇ ಯಕ್ಷಗಾನದ ಆವಿರ್ಭಾವ ಎಂಬುದು ಇವರ ಸೂತ್ರವಾಗಿತ್ತು.

ಕಟೀಲು ದುರ್ಗಾಪರಮೇಶ್ವರಿ, ಧರ್ಮಸ್ಥಳ ಮುಂತಾದ ಸುಪ್ರಸಿದ್ಧ ಮೇಳಗಳಲ್ಲಿ ಭಾಗವಹಿಸಿ ಕೀರ್ತಿಗಳಿಸಿದ ಇವರು ತಮ್ಮ ಪರಂಪರೆಯನ್ನು ಮುಂದುವರೆಸಲು ಕೈಗೊಂಡ ಪ್ರಯತ್ನ ಕಡಿಮೆಯಲ್ಲ. ಮೂವತ್ತಕ್ಕೂ ಹೆಚ್ಚು ಕಲಾವಿದರನ್ನು ಪರಿಪೂರ್ಣತೆಯ ಹತ್ತಿರಕ್ಕೆ ರೂಪಿಸಿದ್ದು ಇವರ ಮಹತ್ತರ ಸಾಧನೆ. ಇವರ ಮನೆಯೇ ಒಂದು ನಾಟ್ಯಶಾಲೆಯಾಗಿತ್ತು. ಹಣಕೊಟ್ಟು, ಊಟ ಹಾಕಿ, ಕುಣಿದು ಕಲಿಸಿದ ಶಾಸ್ತ್ರಿಗಳು ಉದಾರಿಯಾಗಿದ್ದರು. ಕಲೆಯ ವಿಚಾರದಲ್ಲಿ ಶಿಸ್ತಿನ ಮೂರ್ತಿ ಎನಿಸಿದ್ದ ಇವರು ಚಂದದ ರಂಗ, ವೇಷ-ಭೂಷಣ, ಚುರುಕು, ಸೊಬಗು, ಅಭಿಜ್ಞತೆ, ಔಚಿತ್ಯ ಇಂತಿಷ್ಟೂ ಕೆಡಬಾರದೆಂದು ಶಿಷ್ಯರಿಗೆ ಇವರ ಕಿವಿಮಾತಾಗಿತ್ತು. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಪೆರ್ಡೂರಿನಲ್ಲಿ ಧರ್ಮಸ್ಥಳ ಕ್ಷೇತ್ರ ಮಹಾತ್ಮೆಯ ಶಿವತಾಂಡವ ನೃತ್ಯ ಮಾಡುತ್ತಿರುವಾಗ ಹೃದಯಾಘಾತದಿಂದ ಕುಸಿದು ನಿಧನರಾದರು (1972). (ಎಚ್.ಎಸ್.ಕೆ.)

**ಕುರುಗೋಡು** : ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ, ಐತಿಹಾಸಿಕ ಸ್ಥಳ. ಬಳ್ಳಾರಿಯ ಉತ್ತರಕ್ಕೆ 29ಕಿಮೀ ದೂರದಲ್ಲಿ ಬಳ್ಳಾರಿ ಸಿರಗುಪ್ಪ ಮಾರ್ಗಮಧ್ಯದಲ್ಲಿ, ಕುರುಗೋಡು ಬೆಟ್ಟಗಳ ಪೂರ್ವದ ಅಂಚಿನಲ್ಲಿದೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಇದೊಂದು ಮುಖ್ಯ ನಗರವಾಗಿತ್ತು. 1185ರ ಸುಮಾರಲ್ಲಿ ಕೆಲವು ಕಾಲ ಇದು ಚಾಳುಕ್ಯ ರಾಜರ ನೆಲೆವೀಡಾಗಿತ್ತು. 1191ರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲದಲ್ಲಿ ಈ ಗ್ರಾಮ ಹೊಯ್ಸಳ ರಾಜ್ಯಕ್ಕೆ ಸೇರಿತು. ಮುಂದೆ ಬಳ್ಳಾರಿಯ ಪಾಳೆಯಗಾರ ಹನುಮಪ್ಪನಾಯಕನಿಗೆ ಸೇರಿತು. ಈಗಿರುವ ಗ್ರಾಮ ಮತ್ತು ಕೋಟೆಯನ್ನು ಹನುಮಪ್ಪನಾಯಕನ ವಂಶಸ್ಥ ದೇವಪ್ಪ 1701-02ರಲ್ಲಿ ಕಟ್ಟಿಸಿದನೆಂದು

ಊಹೆ. 1775ರಲ್ಲಿ ಹೈದರ್ ಈ ಕೋಟೆಯನ್ನು ವಶಪಡಿಸಿಕೊಂಡು ಅಭಿವೃದ್ಧಿಪಡಿಸಿದ.

ಕುರುಗೋಡು ಗ್ರಾಮದ ಪಶ್ಚಿಮದ ಕೊನೆಯಲ್ಲಿ ಇತ್ತೀಚಿನ ಗೋಪುರವುಳ್ಳ ಬಸವೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ಏಕಶಿಲಾಕೃತಿಯಾದ 12ಅಡಿ ಎತ್ತರದ ನಂದಿ ವಿಗ್ರಹವಿದೆ. ಪವಿತ್ರವಾದ ನೀಲವ್ವನ ಮಠ ದೇವಾಲಯಕ್ಕೆ ಸೇರಿದಂತಿದೆ. ಕುರುಗೋಡಿಗೆ ಪೂರ್ವದಲ್ಲಿ 8ಕಿಮೀ ದೂರದಲ್ಲಿರುವ ಸಿಂದಗೆರೆಯ ನೀಲಮ್ಮ ಎಂಬುವಳು ಹೈದರನ ಕಾಲದಲ್ಲಿದ್ದಳೆಂದೂ ಅನೇಕ ಪವಾಡಗಳನ್ನು ಮಾಡಿ ಪ್ರಸಿದ್ಧಳಾಗಿದ್ದಳೆಂದೂ ಹೇಳಲಾಗಿದೆ. ಗ್ರಾಮದಲ್ಲಿ ಅನೇಕ ವೀರಗಲ್ಲುಗಳಿವೆ.

ಕುರುಗೋಡಿನ ಹಿಂಧೂಳಿ ಸಂಗಮೇಶ್ವರ ದೇವಾಲಯದ ಮಂಟಪ 36 ಕಂಬಗಳಿಂದ ಕೂಡಿದೆ. ಮೆಟ್ಟಿಲುಗಳ ಅಕ್ಕಪಕ್ಕದಲ್ಲಿ 6' ಎತ್ತರದ ಎರಡು ಆನೆಗಳ ಕಲ್ಲುವಿಗ್ರಹಗಳಿವೆ.

ಹಿಂದಿನ ಕುರುಗೋಡು ಪ್ರದೇಶದಲ್ಲಿ ಒಂದೇ ಕಡೆ 9 ಪುರಾತನ ದೇವಾಲಯಗಳ ಗುಂಪಿದ್ದು, ಹತ್ತನೆಯದು ಹನುಮಂತಬೆಟ್ಟದ ಮೇಲಿದೆ. ಈ ದೇವಾಲಯಗಳೊಂದರಲ್ಲಿ ಸಿಕ್ಕಿರುವ 1175-76ರ ಶಾಸನದಲ್ಲಿ ಹೇಳಿರುವಂತೆ ಒಬ್ಬ ವ್ಯಾಪಾರಿ ಈ ದೇವಾಲಯಗಳನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಕುರುಗೋಡು ಕಂಬಳಿ ನೇಯ್ಗೆಗೆ ಪ್ರಸಿದ್ಧ. ಪ್ರತಿವರ್ಷ ಫೆಬ್ರವರಿ ಮಾರ್ಚಿಯಲ್ಲಿ ದೊಡ್ಡಬಸವೇಶ್ವರ ಜಾತ್ರೆ ನಡೆಯುತ್ತದೆ. *

**ಕುರುಡುಮಲೆ :** ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನಲ್ಲಿ ಮುಳಬಾಗಿಲಿನಿಂದ ವಾಯುವ್ಯಕ್ಕೆ ಸು.6ಕಿಮೀ ದೂರದಲ್ಲಿರುವ ಬೆಟ್ಟ. ಸಮುದ್ರಮಟ್ಟದಿಂದ ಎತ್ತರ 1004 ಮೀ. ಇದರ ಬುಡದಲ್ಲಿ ಜಕಣಾಚಾರಿ ಕಟ್ಟಿದ್ದೆಂಬ ಪ್ರತೀತಿ ಇರುವ ಕೆಲವು ದೇವಾಲಯಗಳ ಭಗ್ನಾವಶೇಷಗಳಿವೆ. ಹೆಚ್ಚಿನವು ಸ್ಥಳೀಯ ಚೋಳ ಶಾಖೆಯೊಂದರ ಆಳಿಕೆಯಲ್ಲಿ ಇಳವಂಜಿರಾಯ ಮತ್ತು ಅವನ ವಂಶೀಕರಿಂದ ಸು.12-13ನೆಯ ಶತಮಾನಗಳಲ್ಲಿ ನಿರ್ಮಿತವಾದವೆಂದು ತೋರುತ್ತದೆ.

ಇಲ್ಲಿನ ದೇವಾಲಯಗಳಲ್ಲಿ ಸೋಮೇಶ್ವರ ಮತ್ತು ಮಹಾಗಣಪತಿ ದೇವಾಲಯಗಳು ಮುಖ್ಯವಾದುವು. ಸೋಮೇಶ್ವರ ದೇವಾಲಯ ದ್ರಾವಿಡ ರೀತಿಯಲ್ಲಿ ನಿರ್ಮಿತವಾದ, ಹೆಚ್ಚು ಅಲಂಕರಣವಿಲ್ಲದ, ಆದರೂ ಸುಂದರವಾದ ಚಿಕ್ಕ ಕೃತಿ. ಇದರಲ್ಲಿ ಗರ್ಭಗೃಹ, ಎರಡು ಸುಕನಾಸಿಗಳು ಮತ್ತು ಮುಂದೆ ಒಂದು ಮಂಟಪ ಇವೆ. ಪ್ರವೇಶದ್ವಾರ ದಕ್ಷಿಣಾಭಿಮುಖವಾಗಿದೆ. ಮಂಟಪದಲ್ಲಿ 16 ಕೋನಗಳುಳ್ಳ 4 ಕಂಬಗಳಿವೆ. ಅದರ ಪ್ರತಿಯೊಂದು ಮುಖದಲ್ಲೂ ಶೈವ ಮತ್ತು ವೈಷ್ಣವ ಶಿಲ್ಪಗಳೂ ನರ್ತನ ದೃಶ್ಯಗಳೂ ಇವೆ. ಗರ್ಭಗುಡಿಯಲ್ಲಿರುವ ಲಿಂಗದ ಮುಂಭಾಗದ ಕಿಟಕಿಯ ಬಳಿ ಮೂರು ವ್ಯಕ್ತಿಗಳ ಶಿಲ್ಪಗಳು ಇವೆ. ಇವು ಈ ದೇವಾಲಯವನ್ನು ನಿರ್ಮಿಸಿದ ಇಳವಂಜಿರಾಯ ಮತ್ತು ಅವನ ರಾಣಿಯರದೆಂದು ಊಹಿಸಲಾಗಿದೆ. ದೇವಾಲಯದ ಗೋಡೆಗಳ ಹೊರ ಭಾಗ ಅಂದವಾಗಿದೆ. ಅದರಲ್ಲೂ ವಿಶೇಷವಾಗಿ, ನವರಂಗದ ಗೋಡೆಗಳ ಹೊರ ಭಾಗ ಹೆಚ್ಚು ಕಲಾತ್ಮಕವೆನಿಸುತ್ತದೆ. ಗುಡಿಯ ಮೇಲಿನ ಶಿಖರ (ವಿಮಾನ) ಇಟ್ಟಿಗೆಯದು. ಇದು ಪಲ್ಲವ ಹಾಗೂ ವಿಜಯನಗರ ಇವುಗಳ ಮಧ್ಯ ಕಾಲದ ರಚನೆಯ ರೀತಿಯಲ್ಲಿದೆ.

ಮಹಾಗಣಪತಿ ಅತಿ ಪ್ರಾಚೀನ ದೇವಾಲಯ. ಎರಡು ಘಟ್ಟಗಳ ಸೇರ್ಪಡೆ ಇಲ್ಲಿದೆ. ಈಗ ಪಾಳುಬಿದ್ದಿರುವ ಪ್ರಾಕಾರ ಮತ್ತು ಮಹಾದ್ವಾರಗಳು ಪ್ರಾಯಶಃ ವಿಜಯನಗರದ ಕಾಲದವು. ಈ ದೇವಾಲಯಕ್ಕೆ ಗರ್ಭಗುಡಿ, ಸುಕನಾಸಿ, ನವರಂಗ ಹಾಗೂ ಮುಖಮಂಟಪ ಇವೆ. ಇಲ್ಲಿನ ಮಂಟಪದಲ್ಲಿರುವ ಹಸುರು ಕಲ್ಲಿನ ಇಲಿ ಸು.2 ಅಡಿ ಎತ್ತರ ಹಾಗೂ 3 ಅಡಿ ಉದ್ದವಿದೆ. ವಿಶಾಲವಾದ ನವರಂಗದಲ್ಲಿ ಮಯೂರಾಸನನಾದ ಕುಮಾರನ ವಿಗ್ರಹವಿದೆ. ಹಸುರು ಕಲ್ಲಿನ ಸುಂದರವಾದ ಈ ಮೂರ್ತಿಯನ್ನು ದೇವಸ್ಥಾನದ ದಕ್ಷಿಣದಲ್ಲಿ ಪಾಳುಬಿದ್ದಿರುವ ದೇವಾಲಯದಿಂದ ಇಲ್ಲಿಗೆ ತಂದಿಟ್ಟಿದ್ದಾರೆಂದು ಊಹೆ. ಗರ್ಭಗೃಹ ಸಾಕಷ್ಟು ದೊಡ್ಡದಾಗಿದೆ. ಇದರ ಮುಂದೆ 2 ಕಂಬಗಳಿವೆ. ಇಲ್ಲಿ ಸು.2 ಅಡಿ ಎತ್ತರವಿರುವ, ದೀರ್ಘಚತುರಸ್ರಾಕಾರದ ಪೀಠದ ಮೇಲಿರುವ, ಅಂಡಾಕಾರದ ಸು.1½ ಅಡಿ ಎತ್ತರದ ಆಸನದ ಮೇಲೆ 8½ ಅಡಿ ಎತ್ತರವಿರುವ ಸುಂದರವಾದ ಮಹಾಗಣಪತಿಯ ಮೂರ್ತಿಯಿದೆ. ಈಗ ಪಾಳುಬಿದ್ದಿರುವ ಚೆನ್ನರಾಮಸ್ವಾಮಿ ದೇವಾಲಯ ಸು.13ನೆಯ ಶತಮಾನದ್ದು. ಇಲ್ಲಿನ ಅಂದವಾದ ವಿಗ್ರಹಗಳು ಈಗ ಮಹಾಗಣಪತಿಯ ದೇವಾಲಯದಲ್ಲಿವೆ.

ಈ ಊರಿನಲ್ಲಿ ದೇವತೆಗಳೆಲ್ಲ ಸೇರಿ ಗಣಪತಿಯನ್ನು ಪೂಜಿಸಿ, ವರಗಳನ್ನು ಪಡೆಯುವರಂತೆ. ಇದರಿಂದಲೂ ತ್ರಿಪುರ ಸಂಹಾರಕ್ಕಾಗಿ ಎಲ್ಲ ದೇವತೆಗಳೂ ಇಲ್ಲಿ ಸೇರಿದ್ದರಿಂದಲೂ ಇದರ ಮೂಲ ನಾಮ ಕೂಡು ಮಲೆ ಎಂದೂ ಮೊದಲಿನ ಮೂರು ಯುಗಗಳಲ್ಲಿ ಇದರ ಹೆಸರು ಕ್ರಮವಾಗಿ ಗಣೇಶಗಿರಿ, ಕೂಟಾಚಲ ಮತ್ತು ಯಾದವಾಚಲವೆಂದಿತ್ತೆಂದೂ ಇದು ಕೌಂಡಿನ್ಯ ಕ್ಷೇತ್ರ ಎಂದೂ ಐತಿಹ್ಯವಿದೆ. ಪಾಲಾರ್‌ನ ಉಪನದಿಯಾದ ಕೌಂಡಿನ್ಯ ಇಲ್ಲಿ ಹುಟ್ಟುತ್ತದೆ. (ಎಸ್.ಜಿ.)

**ಕುರುಮಾಮ :** ಕರ್ನಾಟಕದಲ್ಲಿ ಕಂಡುಬರುವ ಅಲೆಮಾರಿ ಭವಿಷ್ಯ ಕಾರರು. ಕುರುಮಾಮ ಎಂದರೆ ಕುರುಹನ್ನು ತೋರಿಸುವ ವ್ಯಕ್ತಿ. ಯಾವ ವ್ಯಕ್ತಿಯೇ ಆಗಲಿ ಆತನ ಮನಸ್ಸಿನಲ್ಲಿರುವುದನ್ನು ಈತ ಬಿಡಿಸಿ ಹೇಳುವ ಶಾಸ್ತ್ರಕಾರ.

ವೀರಗಚ್ಚೆಯನ್ನು ಬಿಗಿದು, ಎದೆಗೆ ಕಾವಿಬಟ್ಟೆ ಕಟ್ಟಿಕೊಂಡು ಇಲ್ಲವೆ ಅರೆದೋಳಿನ ಕರಿಯ ಕುಪ್ಪಸವನ್ನು ತೊಟ್ಟು, ಕೈಕಾಲುಗಳಲ್ಲಿ ಬಿಳಿ ಎಕ್ಕದ ಬೇರಿನ ಬಳೆಗಳನ್ನು ಹಾಕಿ, ಮುಡಿಯನ್ನು ಎತ್ತಿ ಮುಕುಟದಂತೆ ಬಿಗಿದುಕಟ್ಟಿ, ಮುಡಿ ಹಾಗೂ ಕೈಯ ಏಕನಾದಕ್ಕೆ ನವಿಲುಗರಿಯನ್ನು ಸಿಕ್ಕಿಸಿ,

ಕವಡೆಯ ನಡುಪಟ್ಟಿಯನ್ನು ಸುತ್ತಿ, ಬಿಳಿಯ ನಾಮದ ಮೇಲೆ ಕೆಂಪು ನಾಮ ಧರಿಸಿ, ಬಿದಿರ ದಬ್ಬೆಗೆ ನಾಲ್ಕು ಪದರಿನ ಚೀಲವನ್ನು ನೇತುಹಾಕಿಕೊಂಡು ಮತ್ತೊಂದು ಕೈಯಲ್ಲಿ ಏಕನಾದ ಹಿಡಿದು, ಕಿವಿಗಳಲ್ಲಿ ಚಂದ್ರರಮುರಿ ಇಟ್ಟುಕೊಂಡು, ಬೆನ್ನಿಗೆ ಬತ್ತಳಿಕೆ ನೇತು ಹಾಕಿ, ಉದ್ದನಾಗಿ ಗಡ್ಡಮೀಸೆ ಬಿಟ್ಟಿರುವ ಕುರುಮಾಮಗಳ ವೇಷ ಆಕರ್ಷಕವಾಗಿದ್ದು ವಿಚಿತ್ರವಾಗಿರುತ್ತದೆ.

ಈ ಜನಾಂಗದ ಮೂಲನಿವಾಸಿಗಳು ಆಂಧ್ರ ಪ್ರದೇಶದವರು. ಇವರ ಮಾತೃಭಾಷೆ ತೆಲುಗು. ವಿಜಯವಾಡ, ಶ್ರೀಶೈಲ, ಭದ್ರಾಚಲ ಕಡೆಯಿಂದ ಕನ್ನಡನಾಡಿಗೆ ವಲಸೆ ಬಂದು ಅಲ್ಲಲ್ಲಿ ನೆಲಸಿದ್ದಾರೆ. ಜೀವನೋಪಾಯಕ್ಕಾಗಿ ಕನ್ನಡ ಭಾಷೆಯನ್ನು ಕಲಿತಿದ್ದಾರೆ. ಈ ವಂಶೀಕರ ಮೂಲ ಗುರುಗಳು ಶ್ರೀಶೈಲದವರು, ಶ್ರೀಮಲ್ಲಿಕಾರ್ಜುನನ ಪರಮಭಕ್ತರು. ಒಮ್ಮೆ ಇವರ ಮೂಲ ವಂಶದವರು ಭದ್ರಾಚಲಕ್ಕೆ ಸಂದರ್ಶನ ನೀಡಿದಾಗ ಶ್ರೀರಾಮದಾಸರ ಸಂದರ್ಶನವಾದುದರ ಫಲವಾಗಿ ಶ್ರೀರಾಮನ ಭಕ್ತರಾಗಿ ಪರಿವರ್ತನೆ ಯಾದರಂತೆ. ಅಂದಿನಿಂದ ಶ್ರೀರಾಮನ ಧ್ಯಾನದಲ್ಲಿ ತಲ್ಲೀನರಾಗಿ ಶ್ರೀರಾಮ ಮುಡಿಕಟ್ಟಿ, ಏಕನಾದ, ಚಿಟಿಕೆ ಹಿಡಿದು ಭವಿಷ್ಯಕಾರರಾಗಿ ಇವರು ಜೀವನ ನಡೆಸುತ್ತಿದ್ದಾರೆ.

ಇವರದು ಅಲೆಮಾರಿ ಪ್ರವೃತ್ತಿ. ಕುಲಕಸಬು ಭವಿಷ್ಯ ಹೇಳಿ ಭಿಕ್ಷೆ ಬೇಡಿ ಜೀವಿಸುವುದು. ಜೊತೆಗೆ ದನಕರು ಸಾಕುತ್ತಾರೆ. ತಮ್ಮ ಸಂಸಾರದ ಸಾಮಗ್ರಿ ಹೇರಿಕೊಂಡು ಹಳ್ಳಿಯಿಂದ ಹಳ್ಳಿಗೆ ಸಾಗುತ್ತಾರೆ. ಊರ ಹೊರಗೆ ಚಾವಡಿಯಲ್ಲೋ ಇಲ್ಲವೆ ಮರದ ಕೆಳಗೋ ಇವರ ಬಿಡಾರ. ಗಂಡಸರು ಮಾತ್ರ ವೇಷಭೂಷಣಗಳಿಂದ ಅಲಂಕರಿಸಿಕೊಂಡು ಏಕನಾದ ಹಿಡಿದು ಮನೆಮನೆಗೂ ಹೋಗಿ ಭಿಕ್ಷೆ ಬೇಡುತ್ತಾರೆ. ಭಿಕ್ಷಾಟನೆ ಮುಗಿದಮೇಲೆ ಬಿಡುವು ಮಾಡಿಕೊಂಡು ಸಮೀಪದ ತೊರೆ, ಕೆರೆ ಇಲ್ಲವೆ ಬಾವಿಗಳಿಗೆ ಹೋಗಿ ಬಲೆಗಳ ಸಹಾಯದಿಂದ ಮೀನು ಹಿಡಿಯುತ್ತಾರೆ. ಹೆಂಗಸರು ಭಿಕ್ಷೆ ಬೇಡುವುದಿಲ್ಲ. ಅಡಿಗೆ, ಮಕ್ಕಳು, ದನಕರುಗಳು ಇವುಗಳನ್ನು ನೋಡಿಕೊಳ್ಳುವುದು ಇವರ ಕೆಲಸ. ಗುಡ್ಡಗಾಡು ಪ್ರದೇಶದಲ್ಲಿ ವಾಸವಾಗಿದ್ದ ಈ ಜನಾಂಗದವರು ಮೊದಮೊದಲು ಬಿದರಕ್ಕಿಗಂಜಿ, ಅಂಬಲಿ ಜೊತೆಗೆ ಮಾಂಸ ಸೇವಿಸುತ್ತಿದ್ದರು. ಮೀನು, ಕುರಿ, ಮೇಕೆ, ಕೋಳಿಗಳ ಮಾಂಸವನ್ನು ಮಾತ್ರ ಇವರು ಉಪಯೋಗಿಸುತ್ತಾರೆ. ನವಿಲು, ಗಿಳಿ, ಪಾರಿವಾಳ, ಗರುಡ ಮುಂತಾದ ಪಕ್ಷಿಗಳ ಮಾಂಸವನ್ನು ಇವರೆಂದೂ ಮುಟ್ಟುವುದಿಲ್ಲ. ಸೇಂದಿ ಕುಡಿಯುವುದು ಇವರಿಗೆ ಮೊದಲಿನಿಂದಲೂ ಅಂಟಿಬಂದ ಒಂದು ಚಟ.

ಇವರಲ್ಲೂ ಲಗ್ನ ಮುಂತಾದವು ಸಾಮಾನ್ಯವಾಗಿ ಇತರ ಹಿಂದು ಪಂಗಡದವರಂತೆಯೇ ನಡೆಯುತ್ತವೆ. ಮೊದಮೊದಲು ಬಾಲ್ಯ ವಿವಾಹ ಪದ್ಧತಿ ಹೆಚ್ಚಾಗಿ ಆಚರಣೆಯಲ್ಲಿತ್ತು. ತಾಳಿಕಟ್ಟಿ ಸರಳ ರೀತಿಯಲ್ಲಿ ಲಗ್ನ ಮಾಡುತ್ತಾರೆ. ಅಂದು ಮಾಂಸದ ವಿಶೇಷ ಊಟದ ಜೊತೆಗೆ ಲಗ್ನಕ್ಕೆ ಬಂದವರಿಗೆಲ್ಲ ಸೇಂದಿಪಾನ ದೊರಕುತ್ತದೆ. ಅಂದಿನ ರಾತ್ರಿ ಬಯಲಲ್ಲೆ ಪುಟ್ಟ ನೆರಕೆ ಕಟ್ಟಿ ಮರೆಮಾಡಿ, ಗಂಡು ಹೆಣ್ಣುಗಳನ್ನು ಬಿಟ್ಟು ನಿಷೇಕಪ್ರಸ್ತದ ಶಾಸ್ತ್ರ ಮುಗಿಸುತ್ತಾರೆ. ಮೃತರಾದವರನ್ನು ಮಣ್ಣು ಮಾಡುವುದು, ಸಮಾಧಿಗೆ ಹಾಲುತುಪ್ಪ ಎರೆಯುವುದು ಇವರಲ್ಲಿ ರೂಢಿಯಲ್ಲಿದೆ.

ಹಸ್ತಸಾಮುದ್ರಿಕೆಯಲ್ಲಿ ಇವರದು ಎತ್ತಿದ ಕೈ. ವ್ಯಕ್ತಿಯ ಹೆಸರಿನ ಬಲದಿಂದಲೂ ಅವರವರ ಭವಿಷ್ಯವನ್ನಿವರು ನುಡಿಯುತ್ತಾರೆ. ವ್ಯಕ್ತಿಯ ಹಸ್ತರೇಖೆಗಳನ್ನು ಗಮನಿಸಿ ಮೊದಲು ಶ್ರೀರಾಮನ ನಾಮವನ್ನು ನೆನೆದು ಕೈಯಲ್ಲಿರುವ ಏಕನಾದವನ್ನು ನುಡಿಸಿಕೊಂಡು

ರಾಮನಂದಂ, ರಾಮನಂದಂ ಮಸ್ತಾನನ್ನ ಗುರುನಾದನ್ನ
ಕೊಂಡದೇವತೆ, ಹೆಸರು ಯಾವುದು ಮಾಮ ನಿನ್ನದು?

ಎಂದು ವ್ಯಕ್ತಿಯ ಹೆಸರನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಮತ್ತೆ ಉತ್ತರಿಸುತ್ತ ಹುಟ್ಟಿದ ಗಳಿಗೆ ಬೆಳೆದ ಗಳಿಗೆ ಒಳ್ಳೆಯದು, ದೊಡ್ಡ ಗುಂಪಿನಲ್ಲಿ ಹುಟ್ಟಿದೆ, ದೊಡ್ಡ ಗುಂಪಿನಲ್ಲಿ ಬೆಳೆದೆ, ಗುಂಪಿನಲ್ಲಿ ಸುಖವಿಲ್ಲ, ಅಣ್ಣತಮ್ಮಂದಿರಲ್ಲಿ ತಾಯಿತಂದೆ ಕಟ್ಟಿದ ಮನೆಯಲ್ಲಿ ಸುಖವಿಲ್ಲ, ನೀರಿನಲ್ಲಿ ಕಂಟಕ ಕಳೆದುಹೋಯ್ತು, ಈಗ ಮುಂದುಹೋಗುವ ಪಯಣ ಒಳ್ಳೇದುಂಟು, ಲಾಭವಾಗ್ತದೆ, ಗೋವು ಸಂಬಂಧವಾಗಿ ಒಳ್ಳೆಯದು, ಭೂಮಿಯಲ್ಲಿ ಜಯವಾಗುತ್ತೆ, ಕುರಿತ ಕಾರ್ಯಗಳು ಜಯವಾಗುತ್ತೆ ಕುರ್‌ರ್ ಮಾಮ ಇನ್ನೇನು ಕೇಳ್ತೀರಿ, ಇನ್ನೇನು ಇದ್ದರೂ ಕೇಳಬಹುದು -ಎಂದು ನುಡಿಯುತ್ತಾರೆ.

ಕುರುಮಾಮ ಬರೀ ಭವಿಷ್ಯ ಹೇಳುವವ ಮಾತ್ರವಲ್ಲ. ಒಮ್ಮೊಮ್ಮೆ ಒಳ್ಳೆಯ ವೈದ್ಯನೂ ಆಗಿರುತ್ತಾನೆ. ಇವನಲ್ಲಿ ನಾಲ್ಕು ಮೂಲೆಯ ಒಂದು ಚೀಲವಿರುತ್ತದೆ. ಇದರಲ್ಲಿ ಭವಿಷ್ಯ ಹೇಳಲು ಸಹಕಾರಿಯಾಗುವ ಸಚಿತ್ರ ಗ್ರಂಥವೇ ಮುಂತಾದ ಅನೇಕ ಚಿತ್ರವಸ್ತುಗಳು ಅಡಕವಾಗಿರುತ್ತವೆ. ದುಂಡಾಗಿ ಸುತ್ತಿದ ಬಿಳಿ ಎಕ್ಕದ ಬೇರಿನ ಒಂದು ಸಿಂಬೆ, ಕರಡಿಯ ಕಾಲಿನ ಪಂಜ, ಮೈಮದನಿಕಿ, ತಾಮ್ರ ಸಿಖಿ, ಕಲ್ಲಂಬಿ, ಜಡಮೂಲಕಿ ಮುಂತಾದ ಗಿಡಮೂಲಿಕೆಗಳೂ ಇರುತ್ತವೆ. ಮಕ್ಕಳು ಹಲ್ಲು ಕಡಿಯುವುದಿದ್ದರೆ, ಬಾಲಗ್ರಹ ನೆಲಗ್ರಹದ ಭೀತಿ ಇದ್ದರೆ ಅವೆಲ್ಲವನ್ನೂ ಈ ವಸ್ತುಗಳ ಬಳಕೆಯಿಂದ ಕುರುಮಾಮ ನಿವಾರಿಸುತ್ತಾನೆ. ಇಷ್ಟಲ್ಲದೆ ಬಂಗಿಸೊಪ್ಪಿನ ಚಿಲುಮೆ, ಅಡಕೆಲೆ ಚೀಲವೂ ಇವನಲ್ಲುಂಟು.

ಗ್ರಾಮಗಳಲ್ಲಿ ಇವರು ಮನೆಯಿಂದ ಮನೆಗೆ ಭಿಕ್ಷಾಟನೆಗೆ ಹೋಗುವಾಗ ಏಕನಾದ ಹಿಡಿದು ನುಡಿಸುತ್ತ ಅದರ ನಾದದ ಹಿನ್ನೆಲೆಯಲ್ಲಿ ಹರಿಯೋ ಕಾಲ್ದಲ್ಲಿ ಒಂದು ಅಂಚಿಕಡ್ಡಿ, ಕಳೆಯೋ ಕಾಲ್ದಲ್ಲಿ ಒಂದು ಹುಲ್ಲುಕಡ್ಡಿ ಮಾಡ್ತೀನೀ, ಮಂಡಿ ಬಾದಿನಿ, ಕೀಲು ಬಾದಿನಿ, ಮುಂಗೈ ಬಾದಿನಿ, ತಲೆಬಾದಿನಿ, ಮೂಗಿಲಿ ಪಡಿಸು ನೆಗಡಿ ಕೆಮ್ಮಲು, ಏನಾರ ಇರಲಿ ಜೀವಸ್ಥಾನ ಜನ್ಮಸ್ಥಾನ ಹಿಡಿದು, ಕಳಿತೀನಿ ಹೊಟ್ಟೆಲಿ ಬಾದಿ, ಸುಸ್ತು ಸಂಕಟ, ತಲೇಲಿ ಮಂಕು, ಕಣ್ಣಲಿ ಮಂಜು, ಏನಿದ್ದರೂ ಪರಿಹಾರ ಆಗ್ತದೆ. ಹಿಂದಿದ್ದ ಬಲ ಹೋಯ್ತು, ಮುಂದಿದ್ದ ಸಿಂಗಾರ ಹೊಯ್ತು, ಆದರಿಂದ ಕೊಂಚ ಕಷ್ಟ ಅದೆ ಕಳ್ಕೊಳ್ಳಿ. ನೂರೊಂದು ಮೂಲಿಕೆ ಬೆರೆಸಿ ಅರಸಿನದ ಪುಡಿ ಆಗದೆ, ಗಿಂಡಿ ನೀರಿಗೆ ಬೆರೆಸಿ ಎಂಟು ದಿನ ಕುಡಿಯಲಿ ಹರಿದೋಯ್ತದೆ. ಹೀಗೆ ಕಾಯಿಲೆಯವರನ್ನು ಕುರುಮಾಮ ತನ್ನ ಚಮತ್ಕಾರದ ನುಡಿಗಳಿಂದ ಸಂತೈಸುತ್ತಾನೆ; ಗುಣಪಡಿಸುವ ಭರವಸೆ ನೀಡುತ್ತಾನೆ.

ಅಲೆಮಾರಿಗಳಾದ ಇವರಿಗೆ ಈಗ ಮನೆಮಠಗಳೂ ಇದ್ದು ಕೆಲವು ಕುಟುಂಬಗಳು ವ್ಯವಸಾಯದಲ್ಲಿ ತೊಡಗಿವೆ. ಮಕ್ಕಳಿಗೆ ವಿದ್ಯಾಭ್ಯಾಸ ಸಿಗುತ್ತಿದೆ. ಭವಿಷ್ಯ ಹೇಳುವ ಕುಲಕಸಬು ಮುಂದುವರಿದು ಬರುತ್ತಿದೆ. (ಪಿ.ಆರ್.ಟಿ.)

**ಕುರುವತ್ತಿ :** ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನಲ್ಲಿ ಕಸಬೆಯಿಂದ ಸು.36ಕಿಮೀ ನೈಋತ್ಯದಲ್ಲಿ ತುಂಗಭದ್ರಾತೀರದಲ್ಲಿರುವ ದೊಡ್ಡ ಗ್ರಾಮ. ಇಲ್ಲಿರುವ ಚಾಳುಕ್ಯ ಶೈಲಿಯ ಮಲ್ಲಿಕಾರ್ಜುನ ದೇವಾಲಯ (ಮಲ್ಲೇಶ್ವರ) ಪ್ರಸಿದ್ಧವಾದುದು. ಇತರ ಚಾಳುಕ್ಯ ದೇವಾಲಯಗಳಂತೆಯೇ ತಳವಿನ್ಯಾಸವನ್ನು ಹೊಂದಿದ್ದು ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ನವರಂಗಕ್ಕೆ ಮೂರು ಕಡೆ ಪ್ರವೇಶ ದ್ವಾರಗಳು, ಅಕ್ಕಪಕ್ಕದ ಪ್ರವೇಶದ್ವಾರಗಳ ಮುಂದೆ ಆರು ಕಂಬಗಳುಳ್ಳ ಮುಖಭದ್ರ ಈ ಭಾಗಗಳಿರುವ ಈ ದೇವಾಲಯ ತನ್ನದೇ ಆದ ಕೆಲವು ವೈಶಿಷ್ಟ್ಯಗಳಿಂದ, ಅಪರೂಪ ವಿನ್ಯಾಸಗಳಿಂದ ಚಾಳುಕ್ಯ ಶೈಲಿಯ ಪ್ರಮುಖ ದೇವಾಲಯಗಳಲ್ಲಿ ಒಂದೆನಿಸಿದೆ. ಗರ್ಭಗೃಹದ ಹೊರಗೋಡೆಗಳ ನಡುವೆ ಮೂರು ಕಡೆ ಹೆಚ್ಚು ಮುಂಚಾಚಿರುವ ಮಂಟಪಗಳಿವೆ. ಎರಡು ಕಿರುಕಂಬಗಳ ಮೇಲೆ ಆಳವಾಗಿ ಇಳಿಜಾರಾಗಿ ಮುಂಚಾಚಿರುವ ದೊಡ್ಡದಾದ ಲೋವೆ, ಮೇಲೆ ದೇವಾಲಯದ ಗೋಪುರವನ್ನು ಅನುಕರಿಸಿರುವ ಸುಂದರವಾದ ಅರೆಗೋಪುರ, ಮಂಟಪದಲ್ಲಿ ನಡುವೆ ದೇವರ ಮೂರ್ತಿ, ಇಕ್ಕೆಲಗಳಲ್ಲಿ ಕುಬ್ಜರು ಹೊತ್ತಂತಿರುವ ಮದನಿಕೆಯರ ಮೂರ್ತಿಗಳು ಇರುವ ಈ ಗೋಡೆಮಂಟಪಗಳು ಚಾಳುಕ್ಯ ಶೈಲಿಯಲ್ಲೆ ವಿಶಿಷ್ಟವಾಗಿವೆ. ಈಗ ಈ ಮದನಿಕೆ ಮೂರ್ತಿಗಳು ಇಲ್ಲ. ಇವುಗಳಲ್ಲೊಂದು ಮದರಾಸಿನ ವಸ್ತುಸಂಗ್ರಹಾಯದಲ್ಲಿರುವಂತೆ ತಿಳಿದುಬರುತ್ತದೆ. ಹೆಚ್ಚು ಕಚ್ಚುಕಚ್ಚಾಗಿ ಮುಂಚಾಚಿರುವ ಈ ದೇವಾಲಯದ ಹೋರಗೋಡೆಗಳ ಮೇಲೆ ನೀಳವಾದ ಅರೆಗಂಬಗಳು ಜೋಡಿಯಾಗಿಯೋ ಒಂಟಿಯಾಗಿಯೋ ಇದ್ದು ಅವುಗಳ ಮೇಲೆ ಬಗೆಬಗೆಯ ವಿನ್ಯಾಸದ ಕಿರುಗೋಪುರಗಳಿವೆ. ಒಮ್ಮೊಮ್ಮೆ ಗಿಡ್ಡ ಅರೆಗಂಬವೊಂದರ ಮೇಲೆ ಭವ್ಯವಾದ ಕಿರುಗೋಪುರವಿದ್ದು ಅದರ ಇಕ್ಕೆಲಗಳಲ್ಲಿ ನೀಳ ಅರೆಗಂಬಗಳ ಮೇಲಿರುವ ಮಕರಗಳ ಬಾಯಿಂದ ಸುರುಳಿ ಸುರುಳಿಯಾಗಿ ಹೊರಟು ಕಮಾನಾಗಿ ಬಳಸಿ ಬಂದಿರುವ ರೀತಿ ವಿನೂತನವಾದುದು. ಮಕರಗಳ ಬಾಲದಿಂದ ಬಿಡಿಸಿರುವ ಚಿತ್ರವಿಚಿತ್ರವಾದ ಬಳ್ಳಿವಿನ್ಯಾಸ ಅತ್ಯಂತ ನಾಜುಕಿನದು.

ನವರಂಗದ ಪೂರ್ವದ್ವಾರ ವಿಸ್ತಾರವಾದ ಕಂಡರಣೆಯಿಂದ ಕೂಡಿದ್ದು ಚಾಳುಕ್ಯ ಶೈಲಿಯ ಸುಂದರದ್ವಾರಗಳಲ್ಲೊಂದಾಗಿದೆ. ದ್ವಾರಬಂಧಗಳ ಮೇಲೆ ವಜ್ರಾಕೃತಿ, ಬಳ್ಳಿಸುರುಳಿ, ನಾಗಬಂಧ, ಹಕ್ಕಿಗಳೂ ಮೂರ್ತಿಗಳೂ ಇರುವ ಸುರುಳಿ, ನರ್ತಕರು, ವಾದ್ಯಗಾರರು, ಉದ್ದವಾಗಿ ಹಬ್ಬಿ ಬೆಳೆದಂತಿರುವ ಬಳ್ಳಿ ಮುಂತಾದ ಹಲವು ಸಾಲುಗಳಿವೆ. ಹೊರಪಕ್ಕಗಳಲ್ಲಿರುವ ಅಗಲವಾದ ದಪ್ಪನಾದ ಅರೆಗಂಬಗಳ ಮೇಲೆ ಮುಂದಕ್ಕೂ ಬಾಗಿಲಿನ ಕಡೆಗೂ ಚಾಚಿ ನಿಂತಿರುವ ಮದನಿಕೆಯರ ಮೂರ್ತಿಗಳಿವೆ. ಲತಾವಿತಾನದ ಕೆಳಗೆ ಅತ್ಯಂತ ನವುರಾಗಿಯೂ ಪೂರ್ಣವಾಗಿಯೂ ಬಿಡಿಸಿರುವ ಈ ಮೂರ್ತಿಗಳು ಈಗ ಸ್ವಲ್ಪ ಮುಕ್ಕಾಗಿವೆ.

ನವರಂಗದಿಂದ ಸುಕನಾಸಿಗೆ ಪ್ರವೇಶಿಸುವಲ್ಲಿ ದ್ವಾರದ ಬದಲು ಚಾಳುಕ್ಯ ರೀತಿಯ ಎರಡು ಗುಂಡುಕಂಬಗಳ ಮೇಲೆ ವಿಸ್ತೃತವಾಗಿ ಕಂಡರಿಸಿರುವ ಭವ್ಯವಾದ ಮಕರ ತೋರಣವೊಂದು ಅಲಂಕರಿಸಿದೆ. ಕಲ್ಲಿನ

ಮಲ್ಲಿಕಾರ್ಜುನ ದೇವಾಲಯ

ಅಗಲವಾದ ಅಡ್ಡಹಲಗೆಯ ನಡುವೆ ಮೂರು ಗೂಡುಗಳಲ್ಲಿ ನಡುವೆ ಶಿವ, ಅತ್ತಇತ್ತ ಬ್ರಹ್ಮ ಮತ್ತು ವಿಷ್ಣು ಮೂರ್ತಿಗಳು ನಿಂತಿದ್ದು ಇವನ್ನು ಬಳಸಿ ಅರೆಗೋಲಾಕಾರದ ಒಂದು ಕಮಾನು, ಕಮಾನನ್ನನುಸರಿಸಿ ಮಕರಗಳ ಬಾಯಿಂದ ಹೊರಟು ಮೇಲೆ ಸಿಂಹಲಲಾಟದಲ್ಲಿ ಸೇರುವ ಸುರುಳಿಯಲಂಕರಣವಿದೆ; ಮಕರಗಳ ಬಾಲದಿಂದ ಅಲೆಅಲೆಯಾಗಿ ಗರಿಗೆದರಿ ಹಲಗೆಯ ಎತ್ತರಕ್ಕೂ ಹಬ್ಬಿ ಬೆಳೆದಂತಿದೆ. ಮಕರತೋರಣದ ಕಂಡರಣೆ ತೂಕ ತಪ್ಪದೆ ಲಯಬದ್ಧವಾಗಿದ್ದು ಶಿಲ್ಪ ಚತುರತೆಯನ್ನು ಪ್ರದರ್ಶಿಸುತ್ತದೆ. ದೇವಾಲಯದ ಮುಂದಿನ ನಂದಿಮಂಟಪ ಇತ್ತೀಚಿನ ಕಟ್ಟಡ.

ಕುರುವತ್ತಿಯಲ್ಲಿದ್ದ ಬ್ರಹ್ಮನ ಮೂರ್ತಿಯೊಂದು ಈಗ ಫಿಲಡೆಲ್ಫಿಯಾ ವಸ್ತುಸಂಗ್ರಹಾಲಯದಲ್ಲಿದೆ. ಅದನ್ನು ಚಾವುಣ್ಡೋಜ ಎಂಬವನು ಕಡೆದನೆಂದು ಅದರ ಪೀಠಶಾಸನ ತಿಳಿಸುತ್ತದೆ. ಬೇಲೂರಿನ ದೇವಾಲಯದಲ್ಲಿರುವ ಕೇಶವನ ಮೂರ್ತಿಯನ್ನು ಕಡೆದ ಚಾವುಣ್ಡೋಜನೂ ಈತನೇ ಇರಬೇಕು. ಇಲ್ಲಿ ಹಿಂದೆ ಮಲ್ಲಿಕಾರ್ಜುನ ದೇವಾಲಯವಲ್ಲದೆ ಬೇರೆ ಕೆಲವು ದೇವಾಲಯಗಳೂ ಇದ್ದಿರಬೇಕು. ಊರಿನಲ್ಲಿ ಅಲ್ಲಲ್ಲಿ ಅನೇಕ ಶಿಲ್ಪಗಳೂ ದೇವಾಲಯದ ಕಲ್ಲುಗಳೂ ಬಿದ್ದಿವೆ.

ಈ ಊರಿನಲ್ಲಿ ಪ್ರತಿ ವರ್ಷ ಫೆಬ್ರುವರಿ ಮಾರ್ಚ್ ತಿಂಗಳುಗಳಲ್ಲಿ ರಥೋತ್ಸವವೂ ದನಗಳ ಜಾತ್ರೆಯೂ ನಡೆಯುತ್ತವೆ. ಇಲ್ಲಿ ಒಂದು ಪ್ರೌಢ ಶಾಲೆ ಇದೆ. (ಎಂ.ಎಚ್.)

**ಕುಲಕರ್ಣಿ, ಎನ್.ಕೆ. :** 1913-2005. ಎನ್ಕೆ ಎಂಬ ಸಂಕ್ಷಿಪ್ತ ನಾಮದಿಂದ ಹೆಸರಾದ ಪರ್ತಕರ್ತರು, ಲಲಿತಪ್ರಬಂಧಕಾರರು. ನಾರಾಯಣ ಕೃಷ್ಣರಾವ್ ಕುಲಕರ್ಣಿ ಇವರ ಪೂರ್ಣ ಹೆಸರು. 1913 ಆಗಸ್ಟ್ 29ರಂದು ಜನಿಸಿದರು. ತಂದೆ ಕೃಷ್ಣರಾವ್, ತಾಯಿ ಸೋನುಬಾಯಿ. ಇವರು ಎಂ.ಎ., ಬಿ.ಟಿ. ಪದವೀಧರರು. ಇವರು ಆರಂಭದಲ್ಲಿ ಕೆ.ಇ. ಬೋರ್ಡ್‌ನ ಅಡಿಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದರು (1940-43). ಅನಂತರ ಬಾನುಲಿ ಪ್ರಸಾರ ಕಾರ್ಯನಿರ್ವಾಹಕರಾಗಿದ್ದರು. ಅಂದಿನ ಮುಂಬಯಿ ಸರ್ಕಾರದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಸಂಶೋಧನ ಸಹಾಯಕರಾಗಿಯೂ (1943-45) ಆ ಸರ್ಕಾರದ ಲೋಕರಾಜ್ಯ ಎಂಬ ಪತ್ರಿಕೆಯ ಉಪಸಂಪಾದಕರಾಗಿಯೂ (1946) ಮುಂಬಯಿಯಲ್ಲಿ ಕೆಲಸ ಮಾಡಿದರು. 1946ರಲ್ಲಿ ಆಕಾಶವಾಣಿಯನ್ನು ಸೇರಿ ಪ್ರಾರಂಭದಲ್ಲಿ ಸಿಬ್ಬಂದಿ ಕಲಾವಿದರಾಗಿ, ಪ್ರಸಾರ ಸಹಾಯಕರಾಗಿ, 1965ರಲ್ಲಿ ಪದೋನ್ನತಿ ಪಡೆದು ಮುಂಬಯಿ, ಧಾರವಾಡ, ಬೆಂಗಳೂರು ಕೇಂದ್ರಗಳಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ಕಾರ್ಯನಿರ್ವಹಿಸಿದರು. 1971 ಆಗಸ್ಟ್ 27ರಂದು ನಿವೃತ್ತರಾದರು. 1933 ಫೆಬ್ರುವರಿಯಲ್ಲಿ ಧಾರವಾಡದ ಬುರ್ಲಿ ಮನೆತನದ ಇಂದಿರಾ ಅವರೊಂದಿಗೆ ಇವರ ಮದುವೆಯಾಯಿತು. ಅವರು ನಿಧನರಾದ ಮೇಲೆ 1946ರಲ್ಲಿ (ಸೆಪ್ಟೆಂಬರ್) ಕುಂದಗೋಳದ ಹುದ್ದಾರ ಮನೆತನದ ನಾಗವೇಣಿಯರೊಂದಿಗೆ ದ್ವಿತೀಯ ವಿವಾಹವಾಯಿತು.

ಮುಂಬಯಿ ಆಕಾಶವಾಣಿಯಲ್ಲಿದ್ದಾಗಿನಿಂದಲೂ ಭಾಷಣ, ಕನ್ನಡ ನಾಟಕ, ಕನ್ನಡ ಗೀತೆಗಳ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಾವೇ ಕನ್ನಡ ಗೀತರಚನೆಮಾಡಿ, ಕಲಾವಿದರನ್ನು ಸಂಘಟಿಸಿ ಕಾರ್ಯಕ್ರಮ ರೂಪಿಸತೊಡಗಿದರು. ಗೃಹಗೋಷ್ಠಿ, ಚಕ್ರಗೋಷ್ಠಿ, ಬೆಳಕಿನ ಹೆಜ್ಜೆ (ಸಾಪ್ತಾಹಿಕ ರೂಪಕ), ಕರ್ನಾಟಕ ರಂಗಗೀತವೈಭವ ಮೊದಲಾದ ಸ್ಥಿರಶೀರ್ಷಿಕೆಗಳ ಅಡಿಯಲ್ಲಿ ವೈವಿಧ್ಯಮಯ ಕಾರ್ಯಕ್ರಮ ನೀಡಲು ಪ್ರಯತ್ನಿಸಿದರು. ಆ ಕಾಲದಲ್ಲಿ ಇವರು ಅನೇಕ ನಾಟಕಗಳನ್ನೂ ಭಾಷಣಗಳನ್ನೂ ಬರೆದರು. ಅವು ಜನಪ್ರಿಯವಾದವು.

ಇವರ ಮೇಲೆ ಪ್ರಭಾವ ಬೀರಿದವರೆಂದರೆ ಕವಿ ದ.ರಾ.ಬೇಂದ್ರೆ, ವಿದ್ಯಾಗುರು ಶ್ರೀರಂಗ, ರಂ.ಶ್ರೀ. ಮುಗಳಿ, ವಿ.ಕೃ.ಗೋಕಾಕ. ಇಂಥವರ ಪ್ರಭಾವದಿಂದಾಗಿ ಇವರು ಲೇಖಕರಾಗಿ ವಿಕಾಸಗೊಂಡರು. ವಿವಿಧ ಪ್ರಕಾರಗಳಲ್ಲಿ ಒಟ್ಟು 70 ಕೃತಿಗಳನ್ನು ಇವರು ರಚಿಸಿದ್ದಾರೆ. ಸಾವಿನ ಉಡಿಯಲ್ಲಿ (1944), ಎರಡನೆಯ ಸಂಬಂಧ (1951), ವೈನಿ (1957), ಕಲೋಪಜೀವಿ (1957), ಗೌರಿಶಂಕರ (1958), ಮೂರು ತಲೆಮಾರು (1973), ಭಾವಸಂಗಮ (1978), ವಿಧುರ ವೈರಾಗ್ಯ (1990), ಧಾರವಾಡದ ದತ್ತು ಮಾಸ್ತರ್ (1999), ಅಶ್ವತ್ಥಮರ (2002)- ಇವು ಕಾದಂಬರಿಗಳು. ಕುಮಾರವ್ಯಾಸನನ್ನು ಕುರಿತು ಇವರು ಕುಮಾರವ್ಯಾಸಭಾರತ ಎಂಬ ಕೃತಿಯನ್ನು ಬರೆದಿದ್ದಾರೆ. ನೂರು ಏಕಾಂಕ ನಾಟಕಗಳನ್ನೂ ನೂರಾರು



ಲಲಿತ ಪ್ರಬಂಧಗಳನ್ನೂ ರಚಿಸಿದ್ದಾರೆ. ಇವರ ಕೆಲವು ಹರಟೆಗಳು ಮುಂಗಾಲ್ ಪುಟಿಗೆ, ಎನ್ಕೆ ಲಲಿತ ಪ್ರಬಂಧಗಳು, ಎನ್ಕೇನ ಪ್ರಕಾರೇಣ, ಮೊಡಕಬಜಾರ್ ಎಂಬ ಸಂಗ್ರಹಗಳಲ್ಲಿ ಸಂಕಲಿತವಾಗಿವೆ. 'ಹಳೆಯ ಹವಳ ಹೊಸ ಮುತ್ತು' ಪ್ರಬಂಧಗಳ ಸಂಗ್ರಹ, ಕುಮಾರವ್ಯಾಸ ಸಾಹಿತ್ಯ, ವಿ.ಕೃ.ಗೋಕಾಕ ಮತ್ತು ಶ್ರೀರಂಗರ ಸಾಹಿತ್ಯದ ಆಳವಾದ ಅಧ್ಯಯನ ಮಾಡಿರುವ ಇವರು ಕುಮಾರವ್ಯಾಸ ಭಾರತದ ಗದ್ಯಾನುವಾದವನ್ನೂ ವಿನಾಯಕ ಮಹಾದರ್ಶನ, ಆದ್ಯ ರಂಗಾಚಾರ್ಯ ಎಂಬ ಗ್ರಂಥಗಳನ್ನೂ ಬರೆದಿದ್ದಾರೆ.

ಇವರು ಸಲ್ಲಿಸಿದ ಸಾಹಿತ್ಯ ಸೇವೆಗಾಗಿ ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1981), ಗೊರೂರು ಪ್ರಶಸ್ತಿ (1997), ಗಳಗನಾಥ ಪ್ರಶಸ್ತಿ (1998) ದೊರಕಿವೆ. ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಪುರಸ್ಕರಿಸಿತು. ಇವರು 2005 ಏಪ್ರಿಲ್ 23ರಂದು ಧಾರವಾಡದಲ್ಲಿ ನಿಧನಹೊಂದಿದರು. (ಎಸ್.ಎಂ.ಕೆ.)

**ಕುಲಕರ್ಣಿ, ದ. ಬಾ. :** 1916-63. ಕಥೆಗಾರ, ಪ್ರಬಂಧಕಾರ. ಇವರ ಪೂರ್ಣ ಹೆಸರು ದತ್ತಾತ್ರೇಯ ಬಾಳಕೃಷ್ಣ ಕುಲಕರ್ಣಿ. ಸಂಕ್ಷಿಪ್ತ ನಾಮ ದ.ಬಾ.ಕು. ಹಿಂದಿನ ರಾಮದುರ್ಗ ಸಂಸ್ಥಾನದ ಮದೇನಕೊಪ್ಪದಲ್ಲಿ ಶಾನುಭೋಗ ಮನೆತನದಲ್ಲಿ 1916 ಮಾರ್ಚ್ 23ರಂದು ಜನಿಸಿದ ಇವರು ಮುಲ್ಕಿಯವರೆಗೂ ವ್ಯಾಸಂಗ ಮಾಡಿದರು. ಅನಂತರ ಧಾರವಾಡಕ್ಕೆ ತಮ್ಮ ಸೋದರಮಾವನಾದ, ಗೆಳೆಯರ ಗುಂಪಿನ ಖ್ಯಾತ ಸಾಹಿತಿ ಗೋವಿಂದರಾವ್ ಚುಳಕಿಯವರ ಜೊತೆಗಿರಲು ಬಂದರು. ದ.ಬಾ.ಕು. ಅವರ ಅಣ್ಣ (ದೊಡ್ಡಮ್ಮನ ಮಗ) ಪ್ರಹ್ಲಾದ ಎಂಬುವರೂ ಜೊತೆಗೆ ಬಂದರು. ಈ

ಇಬ್ಬರಿಗೂ ಉದ್ಯೋಗದ ದಾರಿ ತೋರಬೇಕೆಂದು ಚುಳುಕಿಯವರು ಅವರಿಗಾಗಿ ಮನೋಹರ ಗ್ರಂಥಭಂಡಾರ ತೆರೆದರು. ಗೆಳೆಯರ ಗುಂಪಿನ ತರುವಾಯ ಎರಡು ಸಾಹಿತ್ಯ ಸಂಸ್ಥೆಗಳು ಧಾರವಾಡದಲ್ಲಿ ಸ್ಥಾಪಿತವಾದುವು: ಒಂದು, ಮನೋಹರ ಗ್ರಂಥಮಾಲಾ ಎಂಬ ಪ್ರಕಾಶನ ಸಂಸ್ಥೆ; ಇನ್ನೊಂದು, ಮನೋಹರ ಗ್ರಂಥಭಂಡಾರ ಎಂಬ ಪುಸ್ತಕ ವ್ಯಾಪಾರ ಸಂಸ್ಥೆ. ಪ್ರಹ್ಲಾದ ಎಂಬುವರು ಪುಸ್ತಕದ ಅಂಗಡಿಯಲ್ಲಿ ಕೂತು ವ್ಯಾಪಾರ ಮಾಡಿದರೆ ಕುಲಕರ್ಣಿಯವರು ಪುಸ್ತಕಗಳನ್ನು ಹೆಗಲ ಮೇಲೆ ಹೊತ್ತು ಊರೂರು ಅಲೆದು ಮಾರಾಟಮಾಡಿದರು. ಮೈಸೂರು, ಕೊಡಗು, ಹೈದರಾಬಾದು, ಮುಂಬಯಿ, ಮದರಾಸುಗಳನ್ನು ಸುತ್ತಿದ್ದರು. ಪುಸ್ತಕದ ಮೂಲ ವೆಚ್ಚ ಕಳೆದು ಉಳಿಯುತ್ತಿದ್ದುದು ಅತ್ಯಲ್ಪ. ಹೀಗಿದ್ದೂ ಇವರು ಪುಸ್ತಕ ಭಂಡಾರವನ್ನು ವೈವಿಧ್ಯಪೂರ್ಣವಾಗಿ ವಿಸ್ತರಿಸಿದರು. ಯಾವುದೇ ಸಾಹಿತ್ಯ ಸಮ್ಮೇಳನದಲ್ಲಿ ಮನೋಹರ ಗ್ರಂಥಭಂಡಾರದ ಒಂದು ಅಂಗಡಿ ಇದ್ದೇ ಇರುತ್ತಿತ್ತು. ಇದರಿಂದ ಇವರು ಸಾಹಿತ್ಯ ವ್ಯಾಪಾರದೊಡನೆ ಸ್ನೇಹ ಸಂಪಾದನೆಯನ್ನೂ ಮಾಡಿದರು. ಬೇಂದ್ರೆ, ಗೋಕಾಕ, ಕಾರಂತ, ಮಾಸ್ತಿ ಅವರಂಥ ಹಿರಿಯ ಸಾಹಿತಿಗಳ ಪ್ರೀತಿಗೆ ಪಾತ್ರರಾದರು. ಸಾಹಿತಿಗಳ ಒಂದು ಬಳಗವನ್ನೇ ಕಟ್ಟಿದರು. ಹೀಗೆ ಪುಸ್ತಕ ವ್ಯಾಪಾರದಿಂದ ಜೀವನವನ್ನು ಪ್ರಾರಂಭಿಸಿದ ಇವರು ಅನಂತರ ಲಲಿತಸಾಹಿತ್ಯಮಾಲೆ ಎಂಬ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿ ಪ್ರಕಾಶಕರೂ ಲೇಖಕರೂ ಆದರು.

ದ.ಬಾ.ಕು ಪ್ರಸಿದ್ಧಿಗೆ ಬಂದದ್ದು ನಾ ಕಂಡ ಗೌರವ್ವ ಎಂಬ ವ್ಯಕ್ತಿ ಚಿತ್ರದಿಂದ. ಕಥೆಗಾರ್ತಿ ಕೊಡಗಿನ ಗೌರಮ್ಮನವರು ದುರಂತವೊಂದರಲ್ಲಿ ತೀರಿಕೊಂಡಾಗ, ಅದನ್ನು ನೆನೆದು ತಮ್ಮ ಅಳಲನ್ನು ತೋಡಿಕೊಂಡಿದ್ದೇ ಹೃದ್ಯವಾದ ವ್ಯಕ್ತಿಚಿತ್ರವಾಯಿತು. ಅಂದಿನಿಂದ ದ.ಬಾ.ಕು. ವ್ಯಕ್ತಿಚಿತ್ರಣದಲ್ಲಿ ಎತ್ತಿದ ಕೈಯೆನಿಸಿ ಅನೇಕ ವ್ಯಕ್ತಿಚಿತ್ರಗಳನ್ನು ರಚಿಸಿದರು. ಹಕ್ಕಿನೋಟ ಮತ್ತು ಸೀಮಾಪುರುಷರು ಎಂಬ ಎರಡು ವ್ಯಕ್ತಿಚಿತ್ರಗಳ ಸಂಗ್ರಹವನ್ನು ಇವರು ಪ್ರಕಟಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಸ್ಮೃತಿ ಚಿತ್ರಗಳು ಎಂಬ ಇನ್ನೊಂದು ವ್ಯಕ್ತಿಚಿತ್ರ ಸಂಗ್ರಹವನ್ನು ಮರಾಠಿಯಿಂದ ಭಾಷಾಂತರಿಸಿದರು.

ದ.ಬಾ.ಕು. ಕಥೆಗಾರಿಕೆಯಲ್ಲಿ ಹೆಚ್ಚು ಕೃಷಿ ಮಾಡಿದರು. ಕೊಡಗಿನ ಗೌರಮ್ಮ, ಧಾರವಾಡದ ಗೀತಾ ಕುಲಕರ್ಣಿ ಇವರು ಕಥೆಗಾರ್ತಿಯರಾಗಿ ಹೆಸರು ಗಳಿಸಿದುದು ಇವರು ಅವರ ಪ್ರಕಾಶನದ ಸ್ಫೂರ್ತಿಯಿಂದಲೇ. ಸ್ವತಃ ಕಥೆಗಾರರಾಗಿ ಇವರು ಹಾಸುಹೊಕ್ಕು, ಕಪ್ಪುಹುಡುಗಿ, ನಾಳಿನ ಕನಸು ಎಂಬ ಮೂರು ಕಥಾಸಂಗ್ರಹಗಳಲ್ಲಿ ಅನೇಕ ಅಪೂರ್ವ ಮಾದರಿಯ ಕಥೆಗಳನ್ನು ಪ್ರಕಟಿಸಿದ್ದಾರೆ. ಪರಿಹಾರ ಎಂಬ ಇವರ ಒಂದು ಕಾದಂಬರಿಯೂ ಪ್ರಕಟವಾಗಿದೆ. ಗೋವಾ ಎಂಬ ಕಾದಂಬರಿಯೊಂದನ್ನು ಇವರು ಬರೆಯಲು ಆಲೋಚಿಸಿದ್ದರೆಂದು ಹೇಳಲಾಗಿದೆ.

ಸಮಕಾಲೀನ ಸಾಮಾಜಿಕ ಪರಿಸ್ಥಿತಿ, ಇದರ ಸ್ಥಿತ್ಯಂತರಗಳು, ಆಧುನಿಕ ಜೀವನಕ್ರಮದಲ್ಲಿ ಅನಿವಾರ್ಯವಾಗಿ ಸಡಿಲಗೊಂಡಿರುವ ಸಂಪ್ರದಾಯದ ಕಟ್ಟುಗಳು, ಬದಲಾದ ನೀತಿಮೌಲ್ಯಗಳು ಇವೆಲ್ಲ ನಾಳಿನ ಕನಸು ಎಂಬ ಕಥಾಸಂಗ್ರಹದ ವೈಶಿಷ್ಟ್ಯಗಳೆಂದು ಮುನ್ನುಡಿಕಾರ ವ್ಯಾಸರಾಯ ಬಲ್ಲಾಳರು ಎತ್ತಿ ತೋರಿದ್ದಾರೆ. ನಮ್ಮನ್ನು ಕೆಣಕಿ ಕಾಡುತ್ತಿರುವ ಸಾಮಾಜಿಕ ಸಮಸ್ಯೆಗಳು, ಹಳೆ-ಹೊಸದರ ಲೆಕ್ಕಾಚಾರಗಳು; ದಾಂಪತ್ಯದ ಸರಸವಿರಸಗಳು ಕಥೆಯ ಸಾಮಗ್ರಿಯಾಗಿವೆಯೆಂದು ಕಪ್ಪುಹುಡುಗಿ ಎಂಬ ಕಥಾ ಸಂಗ್ರಹದ ಮುನ್ನುಡಿಯಲ್ಲಿ ರಾ.ಕು. ಹೇಳಿದ್ದಾರೆ.

'ಸಾವಧಾನ' ದ.ಬಾ.ಕು. ಅವರ ಪ್ರಬಂಧಸಂಕಲನ. ಇವರು ಹರಟೆ ಹೊಡೆಯಬಲ್ಲವರಾಗಿದ್ದರು. ಹಾಸ್ಯವೇ ಇವರ ಹರಟೆಯ ರಹಸ್ಯ. ಈ ಹಾಸ್ಯಗಾರಿಕೆಯನ್ನು ದ.ಬಾ.ಕು. ಜೀವನದಲ್ಲಿಯೂ ಬೆಳೆಸಿಕೊಂಡು, ಬಳಸಿಕೊಂಡು ಬಂದಿದ್ದರು.

ದ.ಬಾ.ಕು ಬರೆದು ಬಿಡಿಬಿಡಿಯಾಗಿ ಪ್ರಕಟಿಸಿದ್ದ ಕಥೆ, ಕವನ ಮತ್ತು ವ್ಯಕ್ತಿಚಿತ್ರಗಳನ್ನೊಳಗೊಂಡ ಬದುಕಿದ ಬಾಳು ಎಂಬ ಸಂಕಲನ ಇವರು ತೀರಿಕೊಂಡಮೇಲೆ ಪ್ರಕಟವಾಯಿತು (1964). *

**ಕುಲಕರ್ಣಿ, ಶಂಭುಲಿಂಗಪ್ಪ :** 1907-78. ಕನ್ನಡ ಪ್ರಾಥಮಿಕ ಪಠ್ಯಪುಸ್ತಕ ನಿರ್ಮಾಣಕಾರ್ಯದಲ್ಲಿ ಅಪಾರ ಸೇವೆ ಸಲ್ಲಿಸಿದವರು. ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ ಇವರ ಪೂರ್ಣ ಹೆಸರು. ಇವರ ತಂದೆ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ. ಅವರು ಶಿಕ್ಷಕರಾಗಿದ್ದರು. ಇವರು ಬೆಡಗಿನ ಕವಿತೆಗಳನ್ನು ಬರೆದಿದ್ದಾರೆ. ಇವರು ಬರೆದ ನನ್ನ ತಾಯಿ, ನಾಡನೆಲೆಗಾರ ಎಂಬ ನೂರು ನೀತಿಪರ ಕಥೆಗಳ ಸಂಗ್ರಹ ತುಂಬ ಜನಪ್ರಿಯವಾಗಿತ್ತು. ನಾಡನೆಲೆಗಾರ ಪ್ರತಿವರ್ಷ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗೆ ಪಠ್ಯವಾಗಿ ನೇಮಿಸಲ್ಪಡುತ್ತಿತ್ತು. ಶಂಭುಲಿಂಗಪ್ಪ ನವರು ವಿಶೇಷ ಶಿಕ್ಷಣ ಪಡೆಯದಿದ್ದರೂ ತಮ್ಮ ತಂದೆಯವರ ಕೆಲವು ಇತಿಹಾಸ ಮತ್ತು ಭೂಗೋಳ ಸಂಬಂಧವಾದ ಪುಸ್ತಕಗಳನ್ನು ಪ್ರಕಟಿಸಲು ಒಂದು ಸಂಪಾದಕ ಮಂಡಲಿಯನ್ನು ರಚಿಸಿದರು. ಆ ಮಂಡಲಿಯಲ್ಲಿ ಎಸ್.ಎಸ್.ಭೂಸನೂರಮಠ, ಆರ್.ಸಿ.ಹಿರೇಮಠ, ಬೆಟಗೇರಿ ಕೃಷ್ಣಶರ್ಮರಂತಹ ಸಾಹಿತಿಗಳೂ ಸಂಶೋಧಕರೂ ಸೇರಿದ್ದರು. ಕನ್ನಡ ಶಿಕ್ಷಣ ಲೋಕಕ್ಕೆ ಗೌರೀಶ ವಾಚನಮಾಲೆಯ ಮೂಲಕ ಪಠ್ಯ ಪುಸ್ತಕಗಳ ಅಪಾರ ಭಂಡಾರವನ್ನೂ ತಮ್ಮ ಸಮಸ್ತ ಆಸ್ತಿಯನ್ನೂ ಇವರು ಬಿಟ್ಟು ಹೋಗಿದ್ದಾರೆ. (ಎನ್.ಕೆ.ಕೆ.)

**ಕುಲಗೋಡ ತಮ್ಮಣ್ಣ :** ಸು.1860. ಯಕ್ಷಗಾನ ಕಲಾವಿದ ಹಾಗೂ ಕವಿ. ಬೆಳಗಾಂವಿ ಜಿಲ್ಲೆ ಕುಲಗೋಡ ಗ್ರಾಮದಲ್ಲಿ ಕುಲಕರ್ಣಿಯಾಗಿದ್ದ, ಸಂಗೀತ, ಸಾಹಿತ್ಯ ಮತ್ತು ಅಭಿನಯಗಳಲ್ಲಿ ಆಸಕ್ತಿಯನ್ನು ಹೊಂದಿದ್ದ ಇವನು ಅಪರಾಳ ತಮ್ಮಣ್ಣಕೃತ ಶ್ರೀಕೃಷ್ಣಪಾರಿಜಾತ ನಾಟಕವನ್ನು ಮನಸಾರೆ ಮೆಚ್ಚಿ ಅದನ್ನು ರಂಗದಮೇಲೆ ಪ್ರದರ್ಶಿಸಲು ಕೆಲವು ಸೂಕ್ತ ಬದಲಾವಣೆಗಳನ್ನು ಅಳವಡಿಸಿ ಆ ಮೇಳದ ಯಶಸ್ಸು ಹಾಗೂ ಜನಪ್ರಿಯತೆಗೆ ಕಾರಣನಾದ. ಕೆಲವೊಮ್ಮೆ ತಾನೇ ಭಾಗವತನಾಗಿ ದೂತ ಮತ್ತು ಕೃಷ್ಣನ ಪಾತ್ರವನ್ನೂ ವಹಿಸಿ ಪಾರಿಜಾತ ಪ್ರಯೋಗಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದ. ಪಾರಿಜಾತ ಮೇಳದಲ್ಲಿ ಮೊದಲ ಬಾರಿಗೆ ಸ್ತ್ರೀಯರು ಪಾತ್ರವಹಿಸುವಂತೆ ಮಾಡಿದ. ಇವನ ಮೇಳದಲ್ಲಿ ನುರಿತ ನಟಿ ಕೌಜಲಗಿ ನಿಂಗವ್ವ ಪಾರಿಜಾತ ನಾಟಕದಲ್ಲಿ ಕೊರವಂಜಿ ಪಾತ್ರ ವಹಿಸುತ್ತಿದ್ದಳಲ್ಲದೆ ಮುಂದೆ ತನ್ನದೇ ಆದ ಆಟದ ಮೇಳವನ್ನು ಸ್ಥಾಪಿಸಿದಂತೆ ತಿಳಿದುಬರುತ್ತದೆ. ತಮ್ಮಣ್ಣನ ರಂಗಜೀವನದಲ್ಲಿ ವಿಸ್ಮಯಕರ ಹಾಗೂ ಮಹತ್ವದ ಘಟನೆಯೊಂದು ಜರುಗಿದಂತೆ ತಿಳಿಯುತ್ತದೆ. ಒಮ್ಮೆ ಇವನ ಪ್ರೇಯಸಿಯೊಬ್ಬಳು ಸತ್ಯಭಾಮೆಯ ಪಾತ್ರ ಅಭಿನಯಿಸುತ್ತಿದ್ದಾಗ, ನಾಟಕ ತುಂಬಾ ಸ್ವಾರಸ್ಯವಾಗಿ ಸಾಗುತ್ತಿರುವ ಸಂದರ್ಭದಲ್ಲಿ ತಾಳ ತಪ್ಪಿತು. ಇದರಿಂದ ಕುಪಿತನಾದ ತಮ್ಮಣ್ಣ ತನ್ನ ಕೈಯಲ್ಲಿದ್ದ ತಾಳವನ್ನೇ ಅವಳೆಡೆಗೆ ಎಸೆದಾಗ ಅದು ಅವಳ ತಲೆಗೆ ಬಡಿದು ಆಕೆ ಪ್ರಾಣ ಬಿಟ್ಟಳಂತೆ. ಆಗಿನ ಆಂಗ್ಲ ನ್ಯಾಯಾಧೀಶ ತಮ್ಮಣ್ಣನಿಗೆ ಸೆರೆಮನೆವಾಸವನ್ನು ವಿಧಿಸಿ ಕೊನೆಗೆ ಅವನಿಗೆ ಫಾಸಿ ಶಿಕ್ಷೆಗೆ ವಿಧಿಸಿದ. ಆದರೆ ಅವನಿಗೆ ಕೊನೆಯಾಸೆ ಏನೆಂದು ಕೇಳಿದಾಗ ತಮ್ಮಣ್ಣ ಪಾರಿಜಾತ ನಾಟಕವನ್ನು ಅಭಿನಯಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ. ಅದರಂತೆ ನಾಟಕ ಅಭಿನಯಿಸುತ್ತಿರುವಾಗ ತಾಳ ತಪ್ಪಿದಾಗ ಆಗುವ ಆಭಾಸವನ್ನು ನ್ಯಾಯಾಧೀಶರಿಗೆ ಮನದಟ್ಟು ಮಾಡಿಕೊಡಲಾಗಿ ಅವನ ಫಾಸೀ ಶಿಕ್ಷೆ ರದ್ದಾಯಿತು. ಇಂದಿಗೂ ಗೋಕಾಕ ಸೆರೆಮನೆಯ ಕೋಣೆಯಲ್ಲಿ ತಮ್ಮಣ್ಣನ ಹಸ್ತಾಕ್ಷರಗಳಿವೆಯೆಂದು ಹೇಳಲಾಗಿದೆ.

ಯಕ್ಷಗಾನ ಪರಂಪರೆಯಂತೆ ಪೂರ್ವರಂಗದಲ್ಲಿ ಬಾಲಗೋಪಾಲರ ಪ್ರವೇಶ, ಚೈತನ್ಯಪಂಥದ ನಾಟಕಗಳಲ್ಲಿ ರಾಧಾಕೃಷ್ಣರ ಪ್ರವೇಶ ಮತ್ತು ದೊಡ್ಡಾಟಗಳಲ್ಲಿ ಗೋಪಾಲನ ಪ್ರವೇಶವಿರುವಂತೆ ತಮ್ಮಣ್ಣ ತಾನು ಅಳವಡಿಸಿದ ಪಾರಿಜಾತಮೇಳದ ಪೂರ್ವರಂಗದಲ್ಲಿ ಗೋಪಾಲ ಗೊಲ್ಲತಿಯರನ್ನು ತಂದ. ಪ್ರಾರ್ಥನೆಯ ಅನಂತರ ಗೋಪಾಲ ಗೊಲ್ಲತಿಯರ ಪ್ರವೇಶ, ಅವರ ಲೀಲಾವಿನೋದ, ಹೆಪ್ಪು ಮುರಿಯದ ಮೊಸರು ಸುಂಕ ಕೊಡು ಎಂದು ಗೋಪಾಲ ಕೇಳುವುದು, 'ರಂಗ ಸೆರಗ ಬಿಡೊ' ಎಂದು

ಗೊಲ್ಲತಿ ಬೇಡುವುದು - ಇವೇ ಮೊದಲಾದ ಶೃಂಗಾರ ರಸ ಸಂಭಾಷಣೆಗಳಿಂದ ಕೂಡಿದ ಗೋಕುಲ ದೃಶ್ಯ ಇವನ ಪಾರಿಜಾತದಲ್ಲಿ ಹೆಚ್ಚು ಮನರಂಜನೀಯವೂ ಜನಪ್ರಿಯವೂ ಆಗಿದೆ. ಪೂರ್ವರಂಗದ ಅನಂತರ ದ್ವಾರಕೆಗೆ ನಾರದರ ಆಗಮನ, ಕೃಷ್ಣನಿಗೆ ಪಾರಿಜಾತ ಕೊಡುವುದು, ನಾರದರು ಈ ಸುದ್ದಿಯನ್ನು ಸತ್ಯಭಾಮೆಗೆ ಮುಟ್ಟಿಸುವುದು, ರುಕ್ಮಿಣಿಗೆ ಪಾರಿಜಾತವನ್ನು ಕೊಟ್ಟಿದ್ದರಿಂದ ಸತ್ಯಭಾಮೆ ಕೋಪಗೊಳ್ಳುವುದು, ರುಕ್ಮಿಣಿ ಸತ್ಯಭಾಮೆಯರ ಜಗಳ, ಕೃಷ್ಣನ ಮನಸ್ಸನ್ನು ಪರಿವರ್ತಿಸಲು ಸತ್ಯಭಾಮೆ ಕೈಗೊಳ್ಳುವ ಪಾರ್ವತಿ ಆರಾಧನೆ, ಪರಿಣಾಮವಾಗಿ ಕೃಷ್ಣ ಕೊರವಂಜಿ ವೇಷದಲ್ಲಿ ಬಂದು ಸತ್ಯಭಾಮೆಗೆ ಕಣಿ ಹೇಳುವುದು, ಮರುದಿನ ಕೃಷ್ಣ ತನ್ನ ಹತ್ತು ಅವತಾರಗಳನ್ನು ಅವಳಿಗೆ ಪರಿಚಯಿಸುವುದು, ಸತ್ಯಭಾಮೆ ಮುಯ್ಯಿ ತೀರಿಸುವಂತೆ ವ್ಯಂಗ್ಯೋಕ್ತಿಗಳನ್ನಾಡುವುದು, ಅನಂತರ ಕೃಷ್ಣ ಸತ್ಯಭಾಮೆಯರ ಮಿಲನ, ಇಂದ್ರಲೋಕದಿಂದ ಪಾರಿಜಾತ ಪುಷ್ಪವನ್ನು ತಂದುಕೊಡುವ ಆಶ್ವಾಸನೆ, ಸತ್ಯಭಾಮೆಯ ಸಂತೃಪ್ತಿ ಇದು ಕುಲಗೋಡ ತಮ್ಮಣ್ಣ ಕ್ರಮವಾಗಿ ಅಳವಡಿಸಿ ಸಿದ್ಧಪಡಿಸಿದ ಪಾರಿಜಾತ ಆಟದ ಕಥಾವಸ್ತು.

ಈತನ ಪಾರಿಜಾತ ಮೇಳದಲ್ಲಿ ದೂತ ಎಂದು ಕರೆಯಲಾಗುವ ಸೂತ್ರಧಾರನ ಪಾತ್ರ ಪ್ರಮುಖ ಪಾತ್ರಗಳಲ್ಲೊಂದಾಗಿದೆ. ಸಭಿಕರಿಗೆ ಪಾತ್ರಗಳನ್ನು ಪರಿಚಯಿಸುವುದು, ಹಾಸ್ಯದ ವಾತಾವರಣ ಕಲ್ಪಿಸುವುದು ಮತ್ತು ಕಥೆಯನ್ನು ಸರಾಗವಾಗಿ ಮುಂದುವರಿಸಲು ಅನುವಾಗುವುದು ಇವಿಷ್ಟು ಸೂತ್ರಧಾರನ ಕೆಲಸ. ಹಾಡುಗಳನ್ನು ಆಧರಿಸಿದ ಸಂಭಾಷಣೆಯಲ್ಲದೆ ಅಲ್ಲಲ್ಲಿ ಬರುವ ಮಾತಿನ ಚಕಮಕಿ ತಮ್ಮಣ್ಣನ ಪಾರಿಜಾತ ನಾಟಕದ ಮುಖ್ಯ ಲಕ್ಷಣ. ಈತ ಅಳವಡಿಸಿದ ಕೆಲವು ಹಾಡುಗಳು ಸುಮಧುರವೂ ಹೆಚ್ಚು ಜನಪ್ರಿಯವೂ ಆಗಿದ್ದು ಅವು ಮರಾಠೀ ರಂಗಭೂಮಿಯ ಮೇಲೂ ತಮ್ಮ ಪ್ರಭಾವ ಬೀರಿದವು. ಇಂಥ' ಹಾಡುಗಳ ಮಾಧುರ್ಯಕ್ಕೆ ಮನಸೋತ ಅಣ್ಣಾರಾವ್ ಕಿರ್ಲೋಸ್ಕರ ಎಂಬ ಮರಾಠಿ ನಾಟಕಗಳ ಪ್ರವರ್ತಕರು ಈತ ರಚಿಸಿದ ಕ್ಷೀರಸಾಗರ ತವರುಮನೆ, ದ್ವಾರಕಿ ನಮ್ಮತ್ತೇಮನೆ ಎಂಬ ಹಾಡನ್ನು ತಮ್ಮ 'ಸಂಗೀತ ಸೌಭದ್ರ'ದಲ್ಲಿ ಅದೇ ಧಾಟಿಯನ್ನು ಅನುಸರಿಸಿ ಪಾಂಡುನೃಪತಿಜನಕಜಯಾ ಮಾತಾ ಕುಂತಿ ಯದುತನಯಾ ಎಂಬ ಹಾಡಿಗೆ ಸಂಗೀತವನ್ನು ಅಳವಡಿಸಿದರು.

ಕರ್ನಾಟಕದ ಬಯಲಾಟಗಳ ಚರಿತ್ರೆಯಲ್ಲಿ ಚಿರಸ್ಮರಣೀಯ ಯುಗವೊಂದು ಕುಲಗೋಡ ತಮ್ಮಣ್ಣನಿಂದ ಆರಂಭವಾಯಿತೆನ್ನಬಹುದು. ಈತನ ಮೇಳ ಎಲ್ಲ ಕಡೆ ಪಾರಿಜಾತ ಮೇಳಗಳ ಉದಯಕ್ಕೆ ಪ್ರೇರಣೆಯನ್ನೊದಗಿಸಿತು. ಬರಬರುತ್ತ ಹೆಚ್ಚಿನ ಪ್ರಚಾರ ಹಾಗೂ ಜನಪ್ರಿಯತೆಯಿಂದಾಗಿ ಶ್ರೀಕೃಷ್ಣಪಾರಿಜಾತ ಕುಲಗೋಡ ತಮ್ಮಣ್ಣನದೇ ಎಂಬ ಭಾವನೆ ಮೂಡಿತು.

ಈತ ಪಾರಿಜಾತ ನಾಟಕವನ್ನು ಜನಪ್ರಿಯಗೊಳಿಸಿದ್ದರಿಂದ ಇದೇ ಮಾದರಿಯಲ್ಲಿ ಅನೇಕ ಪಾರಿಜಾತ ಸಂಬಂಧ ನಾಟಕಗಳು ರಚಿತವಾಗಿ ರಂಗದ ಮೇಲೆ ಬಂದವು. ನಾಟಕ ಕಲಿಸುವುದರಲ್ಲಿಯೂ ತಮ್ಮಣ್ಣ ಹೊಸ ಪರಂಪರೆಯೊಂದನ್ನು ಸೃಷ್ಟಿಮಾಡಿದ. ಈ ದಿಶೆಯಲ್ಲಿ ಶೂರಪಾಲಿ ಅಚ್ಯುತನದು ತಮ್ಮಣ್ಣನ ಅನಂತರದ ಒಂದು ಪ್ರಮುಖ ಹೆಸರು. (ಎಸ್.ಎನ್.ಜಿ.)

**ಕುವೆಂಪು** : ನೋಡಿ - ಪುಟ್ಟಪ್ಪ, ಕೆ.ವಿ.

**ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಚಟುವಟಿಕೆಗಳನ್ನೆಲ್ಲ ಕೇಂದ್ರೀಕರಿಸುವ ದೃಷ್ಟಿಯಿಂದ ರೂಪುಗೊಂಡ ಸಂಸ್ಥೆ (1966). ಇದು ಈ ವಿಶ್ವವಿದ್ಯಾನಿಲಯದಲ್ಲಿ ಆರಂಭವಾದ ಮೊದಲನೆಯ ಸಂಸ್ಥೆಯೂ (ಇನ್‌ಸ್ಟಿಟ್ಯೂಟ್) ಹೌದು. ತನ್ನ ಸ್ವರೂಪ ವ್ಯಾಪ್ತಿಗಳಲ್ಲಿ ಭಾರತೀಯ ಭಾಷೆಯೊಂದರ ಅಧ್ಯಯನಕ್ಕೆ ಈ ಸಂಸ್ಥೆ ವಿಶಿಷ್ಟವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಚರಿತ್ರೆಯಲ್ಲಿ ಮತ್ತು ಕನ್ನಡ ಭಾಷಾಸಾಹಿತ್ಯಗಳ ಚಟುವಟಿಕೆಗಳ ಇತಿಹಾಸದಲ್ಲಿ ಅಧ್ಯಯನ ಸಂಸ್ಥೆ ಅಸ್ತಿತ್ವಕ್ಕೆ ಬಂದದ್ದು ಮಹತ್ತ್ವಪೂರ್ಣವಾದ, ಪರಿಣಾಮಕಾರಿಯಾದ ಘಟನೆ. ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಿ, ಆಡಳಿತದ ಎಲ್ಲ ಸ್ತರಗಳಲ್ಲಿಯೂ ಆಡಳಿತ ಭಾಷೆಯಾಗಿ, ಕನ್ನಡನಾಡಿನ ಜನಜೀವನದಲ್ಲಿ ಪ್ರಥಮ ಭಾಷೆಯಾಗಿ ಕನ್ನಡಕ್ಕೆ ಗೌರವದ ಸ್ಥಾನಮಾನಗಳು ಲಭಿಸಬೇಕೆಂಬ ಸಂಕ್ರಮಣ ಕಾಲದಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಆರಂಭವಾಯಿತು. ಬೋಧನೆ, ಸಂಶೋಧನೆ, ಸಂಪಾದನೆಗಳೊಂದಿಗೆ ಬೇರೆ ಭಾಷೆಗಳಿಂದ ಬಗೆಬಗೆಯಾದ ಗ್ರಂಥಗಳನ್ನು ಕನ್ನಡಕ್ಕೆ ತರಬೇಕು, ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳವರಿಗೆ ಪರಿಚಯಿಸಬೇಕು, ಇನ್ನೂ ಬೆಳಕಿಗೆ ಬಾರದ ಪ್ರಾಚೀನ ಗ್ರಂಥಗಳನ್ನು ಶಾಸ್ತ್ರೀಯವಾಗಿ ಪ್ರಕಟಿಸಬೇಕು, ಜಾನಪದದಂಥ ಮೂಲೆಗುಂಪಾದ ವಿಷಯಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಬೇಕು, ಭಾರತೀಯ ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡದ ವಲಯವನ್ನು ವಿಸ್ತೃತಗೊಳಿಸಬೇಕು, ಕನ್ನಡ ಭಾಷೆಯನ್ನು ಆಧುನಿಕ ಕಾಲಕ್ಕೆ ಅನುಗುಣವಾಗಿ ಬಲಪಡಿಸಬೇಕು - ಇವೇ ಮೊದಲಾದ ಉದ್ದೇಶಗಳಿಗನುಗುಣವಾಗಿ ಸುವ್ಯವಸ್ಥಿತವಾದ ಯೋಜನೆಗಳನ್ನು ಕೈಗೊಂಡು, ಅವನ್ನು ಶ್ರದ್ಧಾನಿಷ್ಠೆಗಳಿಂದ ಕಾರ್ಯರೂಪಕ್ಕೆ ತರುವ, ಕನ್ನಡದ ಬಹುಮುಖ ಬೆಳೆವಣಿಗೆಗೆ ಉತ್ತೇಜನ ನೀಡುವ, ನಾನಾ ಕಡೆ ಹಂಚಿಹೋದ ಶಕ್ತಿಗಳನ್ನೆಲ್ಲ ಒಂದೆಡೆ ಸೇರಿಸುವ ರಂಗವಾಗಿ ಸಜ್ಜುಗೊಳಿಸಲು ಕನ್ನಡ ಅಧ್ಯಯನ ಸಂಸ್ಥೆ ರೂಪುಗೊಂಡಿತು.

ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವದ ಅಂಗವಾಗಿ ನಡೆದ ಕನ್ನಡ ಲೇಖಕರ ಸಮ್ಮೇಳನವನ್ನು ಉದ್ಘಾಟಿಸುವ ಸಮಯದಲ್ಲಿಯೇ (1966 ಡಿಸೆಂಬರ್ 8), ಆಗಿನ ಕುಲಪತಿ ಕೆ.ಎಲ್.ಶ್ರೀಮಾಲಿ ಅವರು ಕನ್ನಡ ಅಧ್ಯಯನ ಸಂಸ್ಥೆಯನ್ನೂ ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಅವರು ಕನ್ನಡ ಅಧ್ಯಯನ ಸಂಸ್ಥೆ ಈ ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಶೋಧನೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ನಂದಾದೀಪವಾಗಲೆಂದೂ ಸಾಹಿತ್ಯ ಕ್ಷೇತ್ರದ ಅಧ್ವರ್ಯುಗಳಾದ ತಾವೂ ತಮ್ಮ ಮುಂದಿನ ಪೀಳಿಗೆಗಳೂ ಅದಕ್ಕೆ ಸದಾ ಸಹಕಾರದ ಎಣ್ಣೆಯನ್ನು ತುಂಬುವ ಅವಕಾಶವಿರಲೆಂದೂ ತಾವು ಹೃತ್ಪೂರ್ವಕವಾಗಿ ಹಾರೈಸುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅವರ ಮಾತುಗಳು ಕನ್ನಡದ ಸರ್ವತೋಮುಖವಾದ ಅಭ್ಯುದಯಕ್ಕೆ ಇಂಥದೊಂದು ಸಂಸ್ಥೆಯ ಸ್ಥಾಪನೆಯ ಅಗತ್ಯವಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಇದೇ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾಗಿದ್ದ ದೇ.ಜವರೇಗೌಡರು, ಈ ಸಂಸ್ಥೆಯೊಂದು ಭೂಮ ಬಂಧುರ ವಿಸ್ಮಯವಾಗಿ, ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳ ತಲಕಾವೇರಿಯಾಗಿ, ಕನ್ನಡಿಗರ ಪವಿತ್ರ ಯಾತ್ರಾಸ್ಥಾನವಾಗಿ ನಾಡಿನ ಪುಣ್ಯವೇ ಸಾಕಾರಗೊಂಡಂತೆ ವಿಕಾಸಗೊಳ್ಳುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದ್ದರು. ಈ ಮಾತಿಗೆ ಸಾಕ್ಷಿಯಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅದ್ವಿತೀಯವಾಗಿ ರೂಪುತಳೆದಿದೆ. 1994ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಹೆಸರನ್ನು ಕುವೆಂಪು ಅವರ ಗೌರವಾರ್ಥ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಂದು ಪುನರ್ನಾಮಕರಣ ಮಾಡಲಾಯಿತು.

ವಿಶ್ವವಿದ್ಯಾನಿಲಯದ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಕನ್ನಡ ಸಂಪಾದನ ವಿಭಾಗವನ್ನು ಬೇರ್ಪಡಿಸಿ, ಕನ್ನಡ ಸ್ನಾತಕೋತ್ತರ ಬೋಧನ ಮತ್ತು ಸಂಶೋಧನ ವಿಭಾಗಗಳೊಡನೆ ಕೂಡಿಸುವುದರೊಂದಿಗೆ ಕನ್ನಡ ಅಧ್ಯಯನ ಸಂಸ್ಥೆ ಆರಂಭವಾಯಿತು. ಆಮೇಲೆ ಅದಕ್ಕೆ ಅನೇಕ ವಿಭಾಗಗಳು ಹೊಸದಾಗಿ ಕೂಡಿಕೊಂಡುವು.

ಅನಂತರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಸ್ತೃತಗೊಂಡಿತು. ಬೋಧನಾಂಗ, ಸಂಶೋಧನಾಂಗ, ಪ್ರಕಟಣಾಂಗ, ಕಾರ್ಯಾಂಗ ಹೀಗೆ ವಿಸ್ತಾರವಾದ ಹಾಗೂ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿತು. ವಿವಿಧ ಶಾಖೆಗಳ, ಉಪಶಾಖೆಗಳ ಸಾಧನೆಗಳನ್ನೂ ಕಾರ್ಯಚಟುವಟಿಕೆಗಳನ್ನೂ ಏಕಸೂತ್ರದಲ್ಲಿ ನಿಯಂತ್ರಿಸುತ್ತ ಮಾನಸಗಂಗೋತ್ರಿಯ ಭವ್ಯ ಆವರಣದಲ್ಲಿ ಅದರ ಹೃದಯಪ್ರಾಯವಾಗಿ ಸಂಸ್ಥೆ ತಲೆಯೆತ್ತಿ ನಿಂತಿತು. ಕನ್ನಡ ವಿಭಾಗ ಕುವೆಂಪು, ಡಿ.ಎಲ್.ನರಸಿಂಹಾಚಾರ್, ತೀ.ನಂ.ಶ್ರೀಕಂಠಯ್ಯ ಇಂಥ ಅನೇಕ ಗಣ್ಯ ವಿದ್ವಾಂಸರ ಬೋಧನೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆದು ಕನ್ನಡ ಅಧ್ಯಯನ ಸಂಸ್ಥೆಯಾಗಿ ರೂಪುಗೊಂಡು ದೇ.ಜವರೇಗೌಡ, ಹಾ.ಮಾ. ನಾಯಕ, ಎಚ್.ತಿಪ್ಪೇರುದ್ರಸ್ವಾಮಿ ಮುಂತಾದ ವಿದ್ವಾಂಸರ ನಿರ್ದೇಶನದಲ್ಲಿ ಹಲವಾರು ಬಗೆಯ ಬೋಧನೆ, ಸಂಶೋಧನೆ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ನಿರೀಕ್ಷೆಗೆ ತಕ್ಕಂತೆ ಬೆಳೆವಣಿಗೆಯನ್ನು ಸಾಧಿಸಿದೆ.

ಹಳಗನ್ನಡ, ನಡುಗನ್ನಡ, ವಚನಸಾಹಿತ್ಯ, ದಾಸಸಾಹಿತ್ಯ, ಛಂದಸ್ಸು, ದ್ರಾವಿಡಭಾಷಾವಿಜ್ಞಾನ, ಸಂಸ್ಕೃತಿ, ಶಾಸನ, ಜಾನಪದ, ಕಾವ್ಯಮೀಮಾಂಸೆ, ಸಾಹಿತ್ಯವಿಮರ್ಶೆ, ಭಾಷಾಂತರ, ಸಾಹಿತ್ಯ ಚರಿತ್ರೆ, ಸಂಶೋಧನೆ, ಆಧುನಿಕ ಸಾಹಿತ್ಯ ಮುಂತಾದ ವಿಷಯಗಳಲ್ಲಿ ವಿಶೇಷ ತಜ್ಞರಾದವರು ಇಲ್ಲಿನ ಬೋಧಕ ಹಾಗೂ ಬೋಧಕೇತರ ಶೈಕ್ಷಣಿಕ ವರ್ಗದಲ್ಲಿರುವಂತೆಯೇ ಅನ್ಯ ಭಾಷಾ ನಿಪುಣರನ್ನೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪಡೆದುಕೊಂಡಿದೆ. ಇಂಗ್ಲಿಷ್, ತಮಿಳು, ತೆಲುಗು, ಮಲಯಾಳಂ ಭಾಷೆಗೆ ಸಂಬಂಧಿಸಿದಂತೆ ವಿಶೇಷ ಪರಿಣಿತರೂ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ಮೂರೂವರೆ ದಶಕಗಳಿಂದ ಹಲವಾರು ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳು ಸಂಸ್ಥೆಯ ಆಶ್ರಯದಲ್ಲಿ ನಡೆದು ಕನ್ನಡ ಭಾಷೆ ಹಾಗೂ ಸಾಹಿತ್ಯಗಳನ್ನು ಶ್ರೀಮಂತವಾಗಿಸುವಲ್ಲಿ ವಿಶೇಷವಾಗಿ ನೆರವಾಗಿವೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಜಾನಪದಗಳಿಗೆ ಸಂಬಂಧಪಟ್ಟಂತೆ ನಿರಂತರವಾಗಿ ನಡೆದ ಇಂಥ ಸಮ್ಮೇಳನ ಹಾಗೂ ವಿಚಾರಸಂಕಿರಣಗಳಲ್ಲಿ ಹೊರಬಂದ ಮೌಲಿಕವಾದ ಕೆಲವು ವಿಚಾರಗಳು ಪುಸ್ತಕರೂಪದಲ್ಲಿ ಹೊರಬಂದಿವೆ. ಸಂಸ್ಥೆಯಲ್ಲಿ ಈ ಹಿಂದೆ ಸೇವೆಸಲ್ಲಿಸಿದ ಹಾಗೂ ಸೇವೆಸಲ್ಲಿಸುತ್ತಿರುವ ಅನೇಕ ಪ್ರಾಧ್ಯಾಪಕ, ಸಂಶೋಧಕ ಮತ್ತು ಶೈಕ್ಷಣಿಕ ಉದ್ಯೋಗಿಗಳು ತಮ್ಮ ವಿಶಿಷ್ಟ ಸಾಧನೆ ಮತ್ತು ಕೊಡುಗೆಗಳಿಗಾಗಿ ರಾಷ್ಟ್ರಮಟ್ಟದ, ರಾಜ್ಯಮಟ್ಟದ ಬಹುಮಾನಗಳನ್ನೂ ಪ್ರಶಸ್ತಿ-ಗೌರವಗಳನ್ನು ಗಳಿಸಿದ್ದಾರೆ. ಶೈಕ್ಷಣಿಕ ಸಿಬ್ಬಂದಿ ಕಾಲೇಜಿನ ವತಿಯಿಂದ ನಡೆಯುತ್ತಿರುವ ಕನ್ನಡ ಪುನರ್ಮನನ ಶಿಕ್ಷಣದ (ರಿಫ್ರೆಶರ್‌ಕೋರ್ಸ್) ಹೊಣೆಯನ್ನು ಸಂಸ್ಥೆಯ ಸಿಬ್ಬಂದಿ ನಿರ್ವಹಿಸುತ್ತಿದ್ದು ಇಂಥ ಶಿಬಿರಗಳು ಯಶಸ್ವಿಯಾಗಿ ನಡೆದಿವೆ.

ಇಂಥ ಸಂಸ್ಥೆಯಲ್ಲಿ ಇಲ್ಲಿಯವರೆಗೆ ನಿರ್ದೇಶಕರಾಗಿ ಸೇವೆಸಲ್ಲಿಸಿರುವ ಪ್ರಾಧ್ಯಾಪಕರ ಹೆಸರುಗಳು ಹೀಗಿವೆ: ದೇ.ಜವರೇಗೌಡ (1966-69), ಹಾ.ಮಾ.ನಾಯಕ (1969-84), ಎಚ್.ತಿಪ್ಪೇರುದ್ರಸ್ವಾಮಿ (1984-87), ಜೀ.ಶಂ.ಪರಮಶಿವಯ್ಯ (1987-89), ಸಿ.ಪಿ.ಕೃಷ್ಣಕುಮಾರ್ (1989-91), ಟಿ.ವಿ.ವೆಂಕಟಾಚಲಶಾಸ್ತ್ರೀ (1991-93), ಎಚ್.ಎಂ.ಚನ್ನಯ್ಯ (1993-95), ಕೆ.ಕೆಂಪೇಗೌಡ (1995-97), ಡಿ.ಕೆ.ರಾಜೇಂದ್ರ (1997-99), ಸಿ.ಪಿ.ಸಿದ್ಧಾಶ್ರಮ (11-1-1999ರಿಂದ 2-1-2001), ಅರವಿಂದ ಮಾಲಗತ್ತಿ (2-1-2001ರಿಂದ 1-1-2002), ಡಿ.ಕೆ.ರಾಜೇಂದ್ರ (1-1-2002ರಿಂದ 12-4-2002), ಸಿ.ಪಿ.ಸಿದ್ಧಾಶ್ರಮ, (13-4-2002ರಿಂದ 14-4-2004). ಅರವಿಂದ ಮಾಲಗತ್ತಿ ಪ್ರಸ್ತುತ ನಿರ್ದೇಶಕರಾಗಿದ್ದಾರೆ (2005).

**ಬೋಧನಾಂಗಗಳು :** ಸಂಸ್ಥೆಯ ಬೋಧನಾಂಗದಲ್ಲಿ ಎರಡು ವರ್ಷದ ಕನ್ನಡ ಸ್ನಾತಕೋತ್ತರ ಶಿಕ್ಷಣ ಬಹಳ ಮುಖ್ಯವಾದುದು. ಜಾಗತೀಕರಣ, ಉದಾರೀಕರಣ, ಆಧುನೀಕರಣದೊಂದಿಗೆ ನಿಕಟ ಬಾಂಧವ್ಯ ಸಾಧಿಸುವ ಹಿನ್ನೆಲೆಯಲ್ಲಿ ಪಠ್ಯಕ್ರಮದಲ್ಲಿ ಈಗ ಸಂಪೂರ್ಣವಾಗಿ ಬದಲಾವಣೆ ಮಾಡಲಾಗಿದ್ದು, ಉದ್ಯೋಗಕ್ಕಾಗಿ ಶಿಕ್ಷಣ, ಜ್ಞಾನಕ್ಕಾಗಿ ಶಿಕ್ಷಣ ಎನ್ನುವುದಕ್ಕೆಂದು ಇವೆರಡರ ಸಂಯೋಜನಾತ್ಮಕ ಮಧ್ಯಂತರ ಶಿಕ್ಷಣ ಮಾರ್ಗವನ್ನು ತರಬೇಕೆಂಬುದು ಪಠ್ಯಕ್ರಮ ರೂಪಿಸುವುದರ ಹಿಂದಿನ ಆಶಯ. ಸಂಶೋಧನೆ ಹಾಗೂ ಗಣಕಜ್ಞಾನದ ವಿಷಯಗಳನ್ನು ಪಠ್ಯದ ಭಾಗಗಳಾಗಿ ಅಳವಡಿಸಲಾಗಿದೆ.

ಭಾಷಾವಿಜ್ಞಾನ ಅಂತಾರಾಷ್ಟ್ರೀಯ ಮನ್ನಣೆ ಪಡೆದಿರುವ ಪ್ರಮುಖ ಅಧ್ಯಯನ ವಿಷಯಗಳಲ್ಲೊಂದಾಗಿದೆ. ಅಧ್ಯಯನ ಸಂಸ್ಥೆಯಲ್ಲಿ ಈ ವಿಷಯದಲ್ಲಿ ಎಂ.ಎ. ಹಾಗೂ ಸ್ನಾತಕೋತ್ತರ ಡಿಪ್ಲೊಮಾ ಅಧ್ಯಯನ ಮಾಡುವ ಸೌಲಭ್ಯವನ್ನು ಒದಗಿಸಲಾಗಿದೆ. 1972ರಲ್ಲಿ ಎಂ.ಎ. ತರಗತಿ ಪ್ರಾರಂಭಗೊಂಡಿದೆ. ಸ್ನಾತಕೋತ್ತರ ಡಿಪ್ಲೊಮಾ ತರಗತಿ 1990ರಲ್ಲಿ ಪ್ರಾರಂಭವಾಯಿತು. ಈ ವಿಭಾಗದಲ್ಲಿ ಪಿಎಚ್.ಡಿ. ಅಧ್ಯಯನಕ್ಕೂ ಅವಕಾಶ ಕಲ್ಪಿಸಲಾಗಿದೆ. ಸಂಸ್ಥೆಯಲ್ಲಿ ಕನ್ನಡ ಕಲಿಕೆಗೆ ಬರುವ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಕನ್ನಡ ಸರ್ಟಿಫಿಕೇಟ್ ಶಿಕ್ಷಣದ ಪ್ರಾಯೋಗಿಕ ತರಗತಿಗಳಿಗಾಗಿ ಭಾಷಾವಿಜ್ಞಾನ ವಿಭಾಗದಲ್ಲಿ ಸುಸಜ್ಜಿತ ಭಾಷಾ ಪ್ರಯೋಗಾಲಯವನ್ನು ಸ್ಥಾಪಿಸಲಾಗಿತ್ತು (1975). ಕನ್ನಡೇತರರು, ವಿದೇಶೀಯರು ಹಾಗೂ ಸಂಶೋಧಕರ ಭಾಷಾ ಅಧ್ಯಯನ ಮತ್ತು ಬೋಧನಾ ಸೌಲಭ್ಯದ ಸುಗಮತೆಯ ದೃಷ್ಟಿಯಿಂದ ಪ್ರಾರಂಭವಾದ ಈ ಭಾಷಾ ಪ್ರಯೋಗಾಲಯ ಮಹತ್ತ್ವದ್ದು. ಈಗ ಸಂಪೂರ್ಣವಾಗಿ ಆಧುನಿಕಗೊಂಡಿದೆ

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಸ್ಥಿರವಾದ ಬುನಾದಿಯನ್ನು ಪ್ರಪ್ರಥಮವಾಗಿ ಹಾಕಿಕೊಟ್ಟ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲುತ್ತದೆ. ಜಾನಪದ ಅಧ್ಯಯನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆ ದೊರೆತದ್ದು 1966ರಲ್ಲಿ. ಆಗ ಕನ್ನಡ ಎಂ.ಎ. ಪಠ್ಯಕ್ರಮದಲ್ಲಿ ಜಾನಪದ ಅಧ್ಯಯನ ಸೇರ್ಪಡೆಗೊಂಡಿತು. ಜಾನಪದ ಅಧ್ಯಯನದ ಮಹತ್ತ್ವವನ್ನು ಮನಗಂಡು ಅದರ ಅಧ್ಯಯನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆಯನ್ನು ದೊರಕಿಸಿಕೊಡಲು ಶ್ರಮಿಸಿದವರು ಆಗಿನ ನಿರ್ದೇಶಕರಾಗಿದ್ದ ದೇ. ಜವರೇಗೌಡರು. ಅವರೊಡನೆ ಜಾನಪದ ಅಧ್ಯಯನವನ್ನು ಬೆಳೆಸಲು ಹಾ.ಮಾ. ನಾಯಕ ಮತ್ತು ಜೀ.ಶಂ.ಪರಮಶಿವಯ್ಯನವರು ಶ್ರಮಿಸಿದರು. ಅನಂತರ ಜಾನಪದವನ್ನು ಐಚ್ಛಿಕ ವಿಷಯವಾಗಿ ಅಭ್ಯಾಸ ಮಾಡುವವರ ಮತ್ತು ಆಸಕ್ತರ ಅನುಕೂಲಕ್ಕಾಗಿ ಒಂದು ವರ್ಷದ ಸ್ನಾತಕೋತ್ತರ ಜಾನಪದ ಡಿಪ್ಲೊಮಾ ಶಿಕ್ಷಣವನ್ನೂ ಆರಂಭಿಸಲಾಯಿತು (1972). ಜಾನಪದ ಅಧ್ಯಯನಕ್ಕೇ ಪ್ರತ್ಯೇಕವಾದ ಪೂರ್ಣಪ್ರಮಾಣದ ಜಾನಪದ ಎಂ.ಎ. ಶಿಕ್ಷಣವನ್ನು ಭಾರತದಲ್ಲೇ ಮೊತ್ತಮೊದಲ ಬಾರಿಗೆ ಆರಂಭಿಸಿದ್ದು 1974ರಲ್ಲಿ.

ದಕ್ಷಿಣ ಭಾರತವನ್ನು ಒಂದು ಸಮಗ್ರ ಘಟಕವನ್ನಾಗಿ ತೆಗೆದುಕೊಂಡು ಅಧ್ಯಯನ ಮಾಡುವ ದೃಷ್ಟಿಯಿಂದ ಪ್ರಾರಂಭಗೊಂಡ (1971-72) ಎರಡು ವರ್ಷಗಳ ದಕ್ಷಿಣ ಭಾರತೀಯ ಅಧ್ಯಯನ ಎಂ.ಎ. ಇಡೀ ರಾಷ್ಟ್ರದಲ್ಲೇ ಈ ಬಗೆಯ ಶಿಕ್ಷಣದಲ್ಲಿ ಇದು ಮೊದಲನೆಯದು. ಈ ಅಧ್ಯಯನ ಕೇವಲ ಇತಿಹಾಸ ಅಥವಾ ಸಾಹಿತ್ಯಕ್ಕೆ ಮೀಸಲಾಗಿರದೆ ದಕ್ಷಿಣ ಭಾರತೀಯ ಸಾಹಿತ್ಯಗಳು, ಅದಕ್ಕೆ ಸಂಬಂಧಿಸಿದ ಪಠ್ಯಗಳು, ಇತಿಹಾಸ, ಪ್ರಾಚೀನ ಇತಿಹಾಸ, ಕಲೆ ಮತ್ತು ವಾಸ್ತುಶಿಲ್ಪ, ತತ್ತ್ವಶಾಸ್ತ್ರ ಮತ್ತು ದ್ರಾವಿಡ ಭಾಷಾ ವಿಜ್ಞಾನ ಸೇರಿ, ದಕ್ಷಿಣ ಭಾರತೀಯ ಅಧ್ಯಯನ ಅರ್ಥಪೂರ್ಣ ಶೈಕ್ಷಣಿಕ ಶಿಸ್ತಾಗಿ ವಿಶಿಷ್ಟತೆಯನ್ನು ಪಡೆದಿದೆ.

ಭಾಷಾಂತರದ ಮಹತ್ತ್ವ ದಿನೇದಿನೇ ಹೆಚ್ಚುತ್ತಿರುವುದನ್ನು ಮನಗಂಡು 1967-68ರಲ್ಲಿ ಭಾಷಾಂತರದಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ತರುವಾಯ ಭಾಷಾಂತರದಲ್ಲಿ ಎಂ.ಫಿಲ್ ಪದವಿ ಶಿಕ್ಷಣ ಜಾರಿಗೆ ಬಂದಿತು. ಭಾಷಾಂತರಕಾರರನ್ನು ಸಿದ್ಧಪಡಿಸುವಲ್ಲಿ ಇದು ಮುಖ್ಯ ಪಾತ್ರವಹಿಸಿತು.

ಭಾರತೀಯ ಭಾಷೆಗಳು ಹಲವಾದರೂ ಭಾರತೀಯ ಸಾಹಿತ್ಯ ಒಂದೇ ಎಂಬ ಪರಿಕಲ್ಪನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾರತೀಯ ಸಾಹಿತ್ಯದ ವಿವಿಧ ಮುಖಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಸ್ನಾತಕೋತ್ತರ ಭಾರತೀಯ ಸಾಹಿತ್ಯ ಡಿಪ್ಲೊಮಾವನ್ನು ಪ್ರಾರಂಭಿಸಲಾಯಿತು (1970-71).ಯಾವುದೇ ಪದವಿಯಲ್ಲಿ ಉತ್ತೀರ್ಣರಾದವರು ಈ ಶಿಕ್ಷಣಕ್ಕೆ ಸೇರಲು ಅರ್ಹರು.

ಕನ್ನಡ ಮಾತೃಭಾಷೆಯಲ್ಲದ, ಶಿಕ್ಷಣದ ಯಾವ ಹಂತದಲ್ಲಿಯೂ ಕನ್ನಡವನ್ನು ಅಭ್ಯಾಸ ಮಾಡದಿರುವ ಕನಿಷ್ಠ ಪಕ್ಷ ಎಸ್‌ಎಸ್‌ಎಲ್‌ಸಿ. ಮಟ್ಟದಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗಾಗಿ ಕನ್ನಡ ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಲಾಗಿದೆ (1968-69). ಕನ್ನಡ ಓದು ಬರೆಹಗಳಿಗೆ ಹಾಗೂ ಮಾತನಾಡುವುದಕ್ಕೆ ಮೊದಲ ಪ್ರಾಶಸ್ತ್ಯ ನೀಡಿ ಕನ್ನಡ ಸಾಹಿತ್ಯವನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವಂತೆ ಈ ಶಿಕ್ಷಣವನ್ನು ರೂಪಿಸಲಾಗಿದೆ. ಇದನ್ನು ಯಶಸ್ವಿಯಾಗಿ ಮುಗಿಸುವವರಿಗೆ ಒಂದು ಶೈಕ್ಷಣಿಕ ವರ್ಷ ಅವಧಿಯ ಕನ್ನಡ ಡಿಪ್ಲೊಮಾ ಶಿಕ್ಷಣ ನೀಡುವ ಮೂಲಕ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ.

1968-69ರಲ್ಲಿ ಅಮೆರಿಕದ ಬಫೆಲೋ ಸ್ಟೇಟ್ ಕಾಲೇಜಿನ ಒಂಬತ್ತು ವಿದ್ಯಾರ್ಥಿಗಳು ಅವರ ಶಿಕ್ಷಣದ ಅಂಗವಾಗಿ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಅನ್ವಯ ಕನ್ನಡ ಕಲಿಯಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದಂದಿನಿಂದ ಕನ್ನಡ ಶಿಕ್ಷಣ ಪ್ರಾರಂಭವಾಯಿತು. ಅಂದಿನಿಂದ ವಿವಿಧ ಶೈಕ್ಷಣಿಕ ಅವಧಿಗಳಲ್ಲಿ ಅಮೆರಿಕ, ರಷ್ಯ ಮೊದಲಾದ

ದೇಶಗಳಿಂದ ವಿದೇಶೀಯರು ಬಂದು ಕನ್ನಡ ಕಲಿಯುತ್ತಿದ್ದಾರೆ. ಆರು ತಿಂಗಳ ಅವಧಿಯಲ್ಲಿ ಅವರು ಸ್ವತಂತ್ರವಾಗಿ ಓದಲು, ಬರೆಯಲು, ಮಾತನಾಡಲು ಕಲಿಯುತ್ತಾರೆ.

1996-97ರಲ್ಲಿ ಕರ್ನಾಟಕ ಸರ್ಕಾರದ ಆಶಯದಂತೆ ಆಡಳಿತ ತರಬೇತಿ ಸಹಕಾರದೊಂದಿಗೆ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ವರ್ಗದ ಪ್ರೊಬೇಷನರಿ ಅಧಿಕಾರಿಗಳಿಗಾಗಿ ಕರ್ನಾಟಕ ಸರ್ಕಾರ ನಡೆಸುವ ತತ್ಸಂಬಂಧವಾದ ಪರೀಕ್ಷೆಗಾಗಿ ಸರ್ಕಾರದ ಆರ್ಥಿಕ ನೆರವಿನಿಂದ ಸಂಸ್ಥೆಯ ವತಿಯಿಂದ ಕನ್ನಡ ತರಬೇತಿ ಕಾರ್ಯಕ್ರಮ ನಡೆಸಲಾಗಿದೆ.

**ಸಂಶೋಧನ ಸೌಲಭ್ಯ :** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನ ಅಭ್ಯರ್ಥಿಗಳು ಕನ್ನಡ ಭಾಷಾಸಾಹಿತ್ಯ, ಭಾಷಾವಿಜ್ಞಾನ, ಜಾನಪದ, ಭಾಷಾಂತರ, ದಕ್ಷಿಣ ಭಾರತೀಯ ಅಧ್ಯಯನಗಳಿಗೆ ಸಂಬಂಧಿಸಿದಂತೆ ಹಾಗೂ ಅಂತರಶಾಸ್ತ್ರೀಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಬೋಧನ ಸಿಬ್ಬಂದಿಯ ಹಾಗೂ ಶೈಕ್ಷಣಿಕ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಲು ಅವಕಾಶವಿದೆ. ಸಂಶೋಧನ ಅಭ್ಯರ್ಥಿಗಳು ಖಾಸಗಿಯಾಗಿ ಕೂಡ ವಿವಿಧ ವಿಷಯಗಳನ್ನು ಕುರಿತಂತೆ ಪಿಎಚ್.ಡಿ.ಗಾಗಿ ಸಂಶೋಧನೆ ನಡೆಸಲು ಅವಕಾಶವಿದೆ. ಸಂಸ್ಥೆಯಲ್ಲಿ ಕುವೆಂಪು ಕಾವ್ಯಾಧ್ಯಯನ ಪೀಠ ಸ್ಥಾಪಿತಗೊಂಡಿದ್ದು ಒಂದೊಂದು ವರ್ಷದ ಅವಧಿಗೆ ನಿವೃತ್ತ ವಿದ್ವಾಂಸರು ಈ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕವಾಗುತ್ತಾರೆ.

**ಗಣಕ ಶಾಖೆ :** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಲ್ಲ ವಿಭಾಗಗಳ ಗಣಕೀಕರಣದ ಮೊದಲ ಹಂತದ ಕೆಲಸಕ್ಕೆ ಮುಂದಾಗಿದೆ. ವಿದ್ಯಾರ್ಥಿಗಳಿಗಾಗಿ ಪಠ್ಯದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಗಣಕದ ವಿಷಯವನ್ನು ಕಡ್ಡಾಯವಾಗಿ ಸೇರಿಸಲಾಗಿದ್ದು ಬೋಧನಾಂಗಗಳಲ್ಲಿ ಏಕರೂಪತೆ ಮತ್ತು ಸಂಯುಕ್ತತೆಯನ್ನು ಕಾಪಾಡಲಾಗಿದೆ.

**ಭೌತಿಕ ಸ್ವರೂಪ :** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅಪರೂಪವಾದ ಕಟ್ಟಡ. ಎರಡು ಅಂತಸ್ತಿನ ಈ ಕಟ್ಟಡದಲ್ಲಿ ಒಟ್ಟು 35 ಕೊಠಡಿಗಳಿವೆ. ಸಂಸ್ಥೆಯಲ್ಲಿ ಸುಸಜ್ಜಿತ ಗ್ರಂಥಾಲಯವಿದೆ. ಇಲ್ಲಿ ಸುಮಾರು 35 ಸಾವಿರ ಗ್ರಂಥಗಳಿವೆ. ಕೇವಲ ಕನ್ನಡ ವಿಷಯಕ್ಕೆ ಸಂಬಂಧಿಸಿರದೆ ಬಗೆಬಗೆಯ ವಿಶ್ವಕೋಶಗಳೂ ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲಯಾಳಂ, ಮರಾಠಿ, ಭಾಷಾ ವಿಷಯಗಳ ಗ್ರಂಥಗಳೂ ಸೇರ್ಪಡೆಗೊಂಡಿವೆ. ಸಭೆಸಮಾರಂಭಗಳನ್ನು ನಡೆಸಲು ವಿಭಿನ್ನ ಸ್ವರೂಪದ ಮೂರು ಸಂರಚನೆಗಳಿವೆ. ಐವತ್ತು ಆಸನಗಳಿರುವ ಸಮಿತಿ ಕೊಠಡಿ, ನೂರೈವತ್ತು ಆಸನಗಳಿರುವ ಸಭಾಂಗಣ, ನೂರು ಆಸನಗಳ ಸಭಾಮನೆ ಇವೆ. ಇವುಗಳಲ್ಲಿ ವಿಚಾರಸಂಕಿರಣ, ವಿಚಾರಗೋಷ್ಠಿ, ವಿಶೇಷ ಉಪನ್ಯಾಸ, ಶಿಬಿರಗಳು ಜರಗುತ್ತವೆ.

**ಪ್ರಕಟಣೆಗಳು :** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಇಲ್ಲಿಯ ವರೆಗೆ ಒಟ್ಟು 536 ಕೃತಿಗಳು ಪ್ರಕಟವಾಗಿವೆ. ಅನುವಾದಿತ ಕೃತಿಗಳು 230, ಸಂಪಾದಿತ ಕೃತಿಗಳು 131, ಜಾನಪದಕ್ಕೆ ಸಂಬಂಧಿಸಿದ ಕೃತಿಗಳು 73, ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ 13, ಇತರ ಪ್ರಕಟಣೆಗಳು 44, ಇಂಗ್ಲಿಷ್ ಕೃತಿಗಳು 10 -ಹೀಗೆ ಪ್ರಕಟಣೆಯಲ್ಲಿ ಸಂಸ್ಥೆ ತನ್ನದೇ ಆದ ಛಾಪನ್ನು ಮೂಡಿಸಿದೆ.

**ಕನ್ನಡ ವಿಶ್ವಕೋಶ ಮತ್ತು ವಿಷಯ ವಿಶ್ವಕೋಶ ಯೋಜನೆ :** ಕನ್ನಡ ವಿಶ್ವ ಕೋಶ ಮೈಸೂರು ವಿಶ್ವವಿದ್ಯಾನಿಲಯದ ಹಾಗೂ ಕನ್ನಡದ ಪ್ರತಿಷ್ಠಿತ ಯೋಜನೆಗಳಲ್ಲೊಂದು. ಸಾಮಾನ್ಯ ವಿಶ್ವಕೋಶ 14 ಸಂಪುಟಗಳ ಯೋಜನೆ. ಈ ಯೋಜನೆಯಂತೆ ಇದುವರೆಗೆ 14 ಸಂಪುಟಗಳು ಬಂದಿವೆ (2004). ಕನ್ನಡ ವಿಶ್ವಕೋಶದ ಸೂಚಿ ಸಂಪುಟ ಪ್ರಕಟವಾಗಬೇಕಾಗಿದೆ.

**ಕನ್ನಡ ವಿಷಯ ವಿಶ್ವಕೋಶ :** ಸಾಮಾನ್ಯ ವಿಶ್ವಕೋಶಗಳು ಗಳಿಸಿದ ಯಶಸ್ಸನ್ನು ಪರಿಗಣಿಸಿ 30 ಸಂಪುಟಗಳಲ್ಲಿ ವಿಷಯ ವಿಶ್ವಕೋಶಗಳನ್ನು ಹೊರತರಲು ಬೃಹತ್ ಯೋಜನೆಯೊಂದನ್ನು ತಯಾರಿಸಲಾಗಿದೆ. ವಿಷಯದ ಆಯ್ಕೆ, ನಿರೂಪಣೆ, ತಾಂತ್ರಿಕತೆಗಳ ದೃಷ್ಟಿಯಿಂದ ಸಾಮಾನ್ಯ ವಿಶ್ವಕೋಶ ಹಾಗೂ ವಿಷಯ ವಿಶ್ವಕೋಶಗಳಲ್ಲಿ ಕೆಲವು ಭಿನ್ನತೆಗಳನ್ನು ಗುರುತಿಸಬಹುದು. ಸಾಮಾನ್ಯ ವಿಶ್ವಕೋಶ ಎಲ್ಲ ವರ್ಗದ ಆಸಕ್ತಿಯ ವಾಚಕರನ್ನು ಗಮನದಲ್ಲಿಟ್ಟುಕೊಂಡರೆ, ವಿಷಯ ವಿಶ್ವಕೋಶ ಆಯಾ ವಿಷಯಗಳಲ್ಲಿ ಆಸಕ್ತರನ್ನು ಮತ್ತು ಪರಿಣತರನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳುತ್ತದೆ. 16 ವಿಜ್ಞಾನ ವಿಷಯಗಳು, 14 ಮಾನವಿಕ ವಿಷಯಗಳು -ಹೀಗೆ ಒಟ್ಟು ಸಂಪುಟಗಳನ್ನು ಸಿದ್ಧಪಡಿಸಲು ಸು.99 ಲಕ್ಷ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಮಂಜೂರು ಮಾಡಿತ್ತು. ಈ ಹೊಣೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೇ ವಹಿಸಿಕೊಟ್ಟಿತ್ತು. ಕನ್ನಡ ವಿಷಯ ವಿಶ್ವಕೋಶದ ಮೊದಲ ಸಂಪುಟ ಕರ್ನಾಟಕ 1979ರಲ್ಲಿ ಪ್ರಕಟವಾಯಿತು. ಇದರ ಪರಿಷ್ಕಾರ ಹಾಗೂ ಪುನರ್ ಮುದ್ರಣ ಕಾರ್ಯವನ್ನು ಈಗ ಕೈಗೆತ್ತಿಕೊಳ್ಳಲಾಗಿದ್ದು ಎರಡು ಸಂಪುಟಗಳಲ್ಲಿ ಪ್ರಕಟಿಸಲು ಯೋಜಿಸಲಾಗಿದೆ. ಪ್ರಸ್ತುತ ಸಂಪುಟ ಕರ್ನಾಟಕ ವಿಷಯ ವಿಶ್ವಕೋಶದ ಮೊದಲನೆಯ ಸಂಪುಟವಾಗಿ ಪ್ರಕಟವಾಗುತ್ತಿದೆ. (ನೋಡಿ: ಕನ್ನಡದಲ್ಲಿ ವಿಶ್ವಕೋಶಗಳು).

**ಎಪಿಗ್ರಾಫಿಯ ಕರ್ನಾಟಿಕ :** ಕನ್ನಡನಾಡಿನಲ್ಲಿ ಸುಮಾರು ನಲವತ್ತು ಸಾವಿರ ಶಾಸನಗಳಿರಬಹುದೆಂದು ಅಂದಾಜು ಮಾಡಲಾಗಿದೆ. 'ಎಪಿಗ್ರಾಫಿಯ ಕರ್ನಾಟಿಕ' ಹಳೆಯ ಮೈಸೂರು ಮತ್ತು ಕೊಡಗು ರಾಜ್ಯಗಳಲ್ಲಿ ಲಭ್ಯವಾದ ಶಾಸನಗಳನ್ನು ಜಿಲ್ಲಾವಾರು ಸಂಕಲಿಸಿ, ಸಂಪಾದಿಸಿ, ಪ್ರಕಟಿಸಿದ ಸಂಪುಟಗಳಿಗೆ ನೀಡಲಾದ ಒಂದು ಶೀರ್ಷಿಕೆ. ಪಾಶ್ಚಾತ್ಯ ವಿದ್ವಾಂಸರಾದ ಬೆಂಜಮಿನ್ ಲೂಯಿ ರೈಸ್ 1984ರಿಂದ 1906ರ ಅವಧಿಯಲ್ಲಿ ಹನ್ನೆರಡು ಬೃಹತ್ ಸಂಪುಟಗಳನ್ನು ಹೊರತಂದರು. ಅವರು ಒಟ್ಟು 8669 ಶಾಸನಗಳನ್ನು ಲಿಪ್ಯಂತರ, ಸಂಕ್ಷಿಪ್ತ ಭಾಷಾಂತರ ಮತ್ತು ಪೀಠಿಕೆಗಳೊಡನೆ ಪ್ರಕಟಿಸಿದರು. ಅನಂತರ ಸುಮಾರು ಐದು ದಶಕಗಳಲ್ಲಿ ಸು.5000 ಶಾಸನಗಳು ಅನ್ವೇಷಿತವಾದವು. ಇವು ಎಂ.ಎ.ಆರ್. ವಾರ್ಷಿಕ ವರದಿಗಳಲ್ಲಿಯೂ ಎಪಿಗ್ರಾಫಿಯ ಕರ್ನಾಟಿಕ ಅನುಬಂಧ ಸಂಪುಟಗಳಲ್ಲಿಯೂ ಪ್ರಕಟಗೊಂಡವು. ಇವೆಲ್ಲವನ್ನೂ ಒಳಗೊಂಡಂತೆ ಪರಿಷ್ಕರಣದ ಕೆಲಸವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಲಾಯಿತು. ಪರಿಷ್ಕರಣಕಾರ್ಯ ಪ್ರಗತಿಯಲ್ಲಿದ್ದು ಈಗ 12 ಸಂಪುಟಗಳು ಪ್ರಕಟವಾಗಿವೆ. ಉಳಿದ ಸಂಪುಟಗಳ ಕಾರ್ಯ ನಡೆದಿದೆ (ನೋಡಿ: ಎಪಿಗ್ರಾಫಿಯ ಕರ್ನಾಟಿಕ).

**ಸಂಪಾದನೆ ವಿಭಾಗ :** ಪ್ರಾಚೀನ ಹಸ್ತಪ್ರತಿಗಳು ಯಾವುದೇ ನಾಡಿನ ಅಮೂಲ್ಯ ಆಸ್ತಿ; ಅವು ಆ ಜನಾಂಗದ ಸಾವಿರಾರು ವರ್ಷಗಳ ಸಂಸ್ಕೃತಿ ಮತ್ತು ಸಾಹಿತ್ಯ ಸಂಪತ್ತಿನ ವಾಹಕಗಳು. ಸುಮಾರು ಒಂದು ಸಾವಿರದ ಮುನ್ನೂರು ವರ್ಷಗಳ ಕನ್ನಡ ಸಾಹಿತ್ಯವಾಹಿನಿ ಹರಿದುಬಂದಿರುವುದು ಕೂಡ ಈ ಹಸ್ತಪ್ರತಿಗಳಿಂದಲೇ. ಇವುಗಳಿಲ್ಲದೇ ಹೋಗಿದ್ದಿದ್ದರೆ ನಮ್ಮ ಪ್ರಾಚೀನ ಸಾಹಿತ್ಯ ಯುಗ ಕಗ್ಗತ್ತಲೆಯ ಯುಗವಾಗಿಯೇ ಉಳಿದಿರುತ್ತಿತ್ತು.

1891ರಲ್ಲಿ ಬಿ.ಎಲ್.ರೈಸ್ ಅವರ ನೇತೃತ್ವದಲ್ಲಿ ಮೈಸೂರು ಪ್ರಾಚ್ಯಕೋಶಾಗಾರ ಪ್ರಾರಂಭವಾಯಿತು. ಇಲ್ಲಿ ಸಂಸ್ಕೃತ, ಕನ್ನಡ, ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳ ಅಧ್ಯಯನ ನಡೆಯತೊಡಗಿತು. ಜೊತೆಗೆ ಗ್ರಂಥ ಸಂಪಾದನ ಕಾರ್ಯವನ್ನೂ ಮಾಡತೊಡಗಿದರು. ಸರ್ಕಾರಿ ಇಲಾಖೆಯಾಗಿದ್ದ ಪ್ರಾಚ್ಯ ಕೋಶಾಗಾರ 1956ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಲೀನಗೊಂಡಿತು. ಅನಂತರ ಪ್ರಾಚ್ಯ ವಿದ್ಯಾಸಂಶೋಧನಾಲಯ ಎಂಬ ಹೆಸರಿನಲ್ಲಿ ಸಂಸ್ಥೆಯ ಕೆಲಸ ಮುಂದುವರಿಯಿತು. ಆಗ ಕನ್ನಡ ಮತ್ತು ಸಂಸ್ಕೃತ ವಿಭಾಗಗಳು ಒಟ್ಟಿಗೆ ಇದ್ದುವು.

ಕನ್ನಡದ ಕೆಲಸಗಳೆಲ್ಲ ಒಂದೇ ಸೂರಡಿಯಲ್ಲಿ ನಡೆಯಬೇಕು ಎಂಬ ಉದ್ದೇಶದಿಂದ ಮತ್ತು ಪರಸ್ಪರ ಸಂಬಂಧರಹಿತವಾಗಿದ್ದ ಭಿನ್ನಾಂಗಗಳನ್ನು ಒಂದೆಡೆ ಕೂಡಿಸಿ ಸಾವಯವ ಸಂಬಂಧವನ್ನು ಕಲ್ಪಿಸುವ ಉದ್ದೇಶದಿಂದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆ ಸ್ಥಾಪಿತವಾದ ಮೇಲೆ ಸಂಸ್ಕೃತದಿಂದ ಬೇರ್ಪಡಿಸಿ ಈ ಸಂಸ್ಥೆಯಲ್ಲಿ ಸೇರಿಸಲಾಯಿತು (1966). ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲ್ಪಟ್ಟು, ವಿಲೀನಗೊಂಡ ಬಳಿಕ ಸಂಪಾದನ ವಿಭಾಗ ಎಂಬ ಹೆಸರು ಪಡೆದು ಸಂಸ್ಥೆಯ ಪ್ರಧಾನ ವಿಭಾಗವಾಗಿದೆ.

ಪ್ರಾಚೀನ ಕನ್ನಡ ಹಸ್ತಪ್ರತಿಗಳ ಸಂಗ್ರಹಣೆ, ಸಂರಕ್ಷಣೆ, ಸಂಪಾದನೆ ಮತ್ತು ಪ್ರಕಟಣೆ ಸಂಪಾದನ ವಿಭಾಗದ ಕಾರ್ಯ. ಇಲ್ಲಿಯ ವಿದ್ವಾಂಸರು ಸಂಪಾದನಕಾರ್ಯದ ಜೊತೆಜೊತೆಯಲ್ಲಿಯೇ ಹಸ್ತಪ್ರತಿಗಳ ಸಂಗ್ರಹಣೆಗಾಗಿ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು ನಾಡಿನಲ್ಲೆಲ್ಲ ಸಂಚರಿಸಿ ಅವನ್ನು ಸಂಗ್ರಹಿಸಿ ತಂದು ವಿಭಾಗದ ಹಸ್ತಪ್ರತಿ ಭಂಡಾರವನ್ನು ತುಂಬುತ್ತ ಬಂದಿದ್ದಾರೆ. ಹೀಗಾಗಿ ಸಂಪಾದನ ವಿಭಾಗದ ಹಸ್ತಪ್ರತಿ ಭಂಡಾರ ಅಧಿಕ ಸಂಖ್ಯೆಯ ಹಾಗೂ ವೈವಿಧ್ಯಮಯ ಹಸ್ತಪ್ರತಿಗಳನ್ನು ಪಡೆದುಕೊಂಡು ಶ್ರೀಮಂತವಾಗಿದೆ. 19ನೆಯ ಶತಮಾನದಲ್ಲಿ ಕರ್ನಲ್ ಮೆಕೆಂಜಿಯಿಂದ ಆರಂಭವಾಗಿ ಬಿ.ಎಲ್.ರೈಸ್ ಮತ್ತು ಆರ್.ನರಸಿಂಹಾಚಾರ್ಯ ಮುಂತಾದವರು ಇಲ್ಲಿಯವರೆಗೆ ಸಂಗ್ರಹಿಸಿರುವ ಸು.10,000 ಹಸ್ತಪ್ರತಿಗಳು ಈ ಭಂಡಾರದಲ್ಲಿವೆ. ಅಲ್ಲದೆ ಸು.1,300 ಮೈಕ್ರೊ ಫಿಲ್ಮ್ ಪ್ರತಿಗಳು ಕೂಡ ಇವೆ. ಈ ಪ್ರತಿಗಳಲ್ಲಿ ಓಲೆಪ್ರತಿಗಳು, ಕಾಗದದ ಪ್ರತಿಗಳು, ಕಡತಗಳು ಮತ್ತು ಉದ್ಧರಣೆಯ ಪಟಲಗಳಿವೆ. ಇವುಗಳಲ್ಲಿ ರನ್ನ ಕವಿಯ ಗದಾಯುದ್ಧ, ಎರಡನೆಯ ನಾಗವರ್ಮನ ವರ್ಧಮಾನ ಪುರಾಣ, ಸಂಸ್ಕೃತಭಾಷೆ ಮತ್ತು ಮಲಯಾಳಂ ಲಿಪಿಯಲ್ಲಿ ಬರೆದಿರುವಂಥ ಕನ್ನಡ ವ್ಯಾಕರಣ ಶಾಸ್ತ್ರವನ್ನು ಹೇಳುವ ನಾಗವರ್ಮನ ಭಾಷಾಭೂಷಣ, ಹಸ್ತಪ್ರತಿಯ ಪ್ರತಿಯೊಂದು ಪುಟದ ನಾಲ್ಕೂ ಅಂಚುಗಳಲ್ಲಿ ವಿವಿಧ ಬಣ್ಣಗಳ ಹೂವುಗಳನ್ನು ಬಿಡಿಸಿರುವ ಬಸವಪುರಾಣ, ಕಾಲದ ದೃಷ್ಟಿಯಿಂದ ಕುಮಾರವ್ಯಾಸನಿಗೆ ತೀರ ಹತ್ತಿರವಾದ, 1544ರಲ್ಲಿ ಪ್ರತಿ ಮಾಡಲಾದ ಗದುಗಿನ ಭಾರತ, ಪಗಡೆಯಾಟ, ಅಶ್ವಶಾಸ್ತ್ರ ಮುಂತಾದ ಗ್ರಂಥಗಳ ಹಸ್ತಪ್ರತಿಗಳು ವಿಶಿಷ್ಟವಾಗಿವೆ. ಇವಲ್ಲದೆ 1852ರಲ್ಲಿ ಮಂಗಳೂರಿನ ಬಾಸೆಲ್ ಮಿಷನ್ನಿನಲ್ಲಿ ಮುದ್ರಣಗೊಂಡ ಕನ್ನಡ ಗಾದೆಗಳು ಕೃತಿಯ ಕಲ್ಲಚ್ಚಿನ ಪ್ರತಿ, ಇತ್ತೀಚಿನ ಅಳಿಯ ಲಿಂಗರಾಜನ ಪ್ರಭಾವತೀಪರಿಣಯ ಕಲಾತ್ಮಕ ಬರವಣಿಗೆಯ ಪ್ರತಿಗಳು ಮುಂತಾದ ವೈವಿಧ್ಯಮಯ ಹಸ್ತಪ್ರತಿಗಳನ್ನು ಈ ಭಂಡಾರ ಒಳಗೊಂಡಿದೆ. ವಸ್ತುವಿನ ದೃಷ್ಟಿಯಿಂದ ಇಲ್ಲಿ ಕಾವ್ಯ, ಇತಿಹಾಸ, ಪುರಾಣ, ವಿವಿಧಶಾಸ್ತ್ರವಿಷಯಗಳಾದ ವ್ಯಾಕರಣ, ಛಂದಸ್ಸು, ನಿಘಂಟು, ಅಲಂಕಾರ, ಜ್ಯೋತಿಷ, ಭಾಷಾಶಾಸ್ತ್ರ, ವೈದ್ಯಶಾಸ್ತ್ರ, ಯೋಗ, ಕಾಮಶಾಸ್ತ್ರ, ಅಶ್ವಶಾಸ್ತ್ರ, ಶಕುನಶಾಸ್ತ್ರ, ಮುಂತಾದವನ್ನೊಳಗೊಂಡ ಪ್ರತಿಗಳೂ ಸಂಕಲನ ಗ್ರಂಥಗಳೂ ನಾಟಕಗಳೂ -ಹೀಗೆ ಬಗೆಬಗೆಯ ಹಸ್ತಪ್ರತಿಗಳಿವೆ. ಇವೆಲ್ಲ ಜೈನ, ವೀರಶೈವ, ವೈದಿಕ ಮೊದಲಾದ ಧರ್ಮಕ್ಕೆ ಸೇರಿದವಾಗಿವೆ. ಸಂಗ್ರಹಿಸಿದ ಹಸ್ತಪ್ರತಿಗಳನ್ನು ಸಂರಕ್ಷಿಸುವುದು ಕೂಡ ಅಷ್ಟೇ ಅಗತ್ಯವಾದ ಮತ್ತು ಬಲು ಮುಖ್ಯವಾದ ಕಾರ್ಯ. ಹಾಗಾಗಿ ಇಲ್ಲಿ ಅತ್ಯಾಧುನಿಕ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಮೈಕ್ರೊ ಫಿಲಂ ಮಾಡಿದ ಅಪರೂಪದ ಹಸ್ತಪ್ರತಿಗಳನ್ನು ಓದುವುದಕ್ಕಾಗಿ ಇಲ್ಲಿ ಮೈಕ್ರೊ ಫಿಲ್ಮ್ ರೀಡರ್ ಸೌಲಭ್ಯವೂ ಇದೆ. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯನ್ನೂ (9 ಸಂಪುಟಗಳು; 1962-81) ಒಂದು ಮೈಕ್ರೊಫಿಲ್ಮ್ ಸೂಚಿಯನ್ನೂ (1989) ಪ್ರಕಟಿಸಲಾಗಿದೆ.

**ಹರಿದಾಸ ಸಾಹಿತ್ಯ ಯೋಜನೆ :** ಸಂಪಾದನ ವಿಭಾಗದ ಒಂದು ಉಪ ಶಾಖೆಯಾಗಿ ಇದು ಕೆಲಸ ಮಾಡುತ್ತಿದೆ. ಈ ಯೋಜನಾ ವಿಭಾಗದಿಂದ ಶಾಸ್ತ್ರೀಯ ಸಂಪಾದನ ಕಾರ್ಯದ ನಾಂದಿಯಾಯಿತು. ಅಂತೆಯೇ ಇದನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ 1963ರಲ್ಲಿ ಯೋಜನೆ ಸಿದ್ಧವಾಗಿ ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಸು.3,00,000 ರೂಪಾಯಿಗಳ ನೆರವಿನೊಡನೆ 1968ರ ಜುಲೈ ತಿಂಗಳಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇದು ಪ್ರಾರಂಭವಾಯಿತು. ಹರಿದಾಸ ಸಾಹಿತ್ಯಕ್ಷೇತ್ರದಲ್ಲಾಗಲೇ ಸಾಕಷ್ಟು ಕೆಲಸ ಮಾಡಿದ್ದ ಜಿ.ವರದರಾಜರಾಯರು (ನೋಡಿ) ಈ ಯೋಜನೆಯ ಮೇಲ್ವಿಚಾರಕರಾಗಿ ನಿಯೋಜಿತರಾಗಿದ್ದರು.

ವಾಕ್ಪರಂಪರೆಯಲ್ಲೇ ಉಳಿದಿದ್ದ ಸುಮಾರು ಇನ್ನೂರಕ್ಕೂ ಹೆಚ್ಚು ಮಂದಿ ಹರಿದಾಸರು ಹಾಡಿರುವ ಸಾವಿರಾರು ಕೀರ್ತನೆಗಳನ್ನು ಬರೆದಿಟ್ಟುಕೊಂಡಿದ್ದ ಆಸಕ್ತರಿಂದ ಈ ವಿಭಾಗದ ವಿದ್ವಾಂಸರು ನಾಡಿನ ಮೂಲೆಮೂಲೆಗಳಲ್ಲಿ ಸಂಚರಿಸಿ, ಕ್ಷೇತ್ರಕಾರ್ಯದ ಮೂಲಕ ಜನರ ಮನವೊಲಿಸಿ ಅಂತಹ ಹಸ್ತಪ್ರತಿಗಳನ್ನು ಸಂಗ್ರಹಿಸುವ ಕೆಲಸ ಮಾಡಿದರು. ಕಾಗದದ, ಓಲೆಯ ಹಾಗೂ ಹಳೆಯ ಮುದ್ರಿತ ಪ್ರತಿಗಳು ನೂರಾರು ಸಂಖ್ಯೆಯಲ್ಲಿ ಸಂಗ್ರಹವಾದವು. ಅಪರೂಪದ ಹಾಡುಗಾರರನ್ನು ಹುಡುಕಿ ಕೀರ್ತನೆಗಳನ್ನು ಹಾಡುವ ಸಂಪ್ರದಾಯ ಹೇಗೆ ಉಳಿದುಬಂದಿದೆ ಎಂಬುದನ್ನು ಅಭ್ಯಾಸಮಾಡುವ ಸಲುವಾಗಿ ನೂರಾರು ಕೀರ್ತನೆಗಳನ್ನು ಹಾಡಿಸಿ ಧ್ವನಿ ಮುದ್ರಿಸಿಕೊಳ್ಳಲಾಯಿತು. ವೈಯಕ್ತಿಕವಾಗಿ ಕೆಲವು ವಿದ್ವಾಂಸರು ಹಸ್ತಪ್ರತಿಗಳನ್ನು ದಾನವಾಗಿಯೂ ಕೊಟ್ಟಿದ್ದಾರೆ. ಈ ಹಸ್ತಪ್ರತಿಗಳಲ್ಲಿ ದೊರೆತ ಕೀರ್ತನೆಗಳನ್ನು ವಿಂಗಡಿಸಿ, ಶಾಸ್ತ್ರೀಯ, ಗ್ರಂಥಸಂಪಾದನೆಯ ಕ್ರಮವನ್ನನುಸರಿಸಿ ದಾಸರ ಅಧಿಕೃತ ಪಠ್ಯಗಳನ್ನು ಸಿದ್ಧಪಡಿಸಿಕೊಡುವ ಗುರುತರ ಜವಾಬ್ದಾರಿಯನ್ನು ಸಂಸ್ಥೆ ಹೊತ್ತು ನಿರ್ವಹಿಸುತ್ತಿದೆ. ಹೀಗೆ ಸಿದ್ಧವಾದ ಸಾಹಿತ್ಯವನ್ನು ವಿಷಯ, ಗಾತ್ರಗಳಿಗನುಗುಣವಾಗಿ ಬೇರೆ ಬೇರೆ ಸಂಪುಟಗಳಾಗಿ ಪ್ರಕಟಿಸುವುದು, ಪ್ರತಿಯೊಂದು ಸಂಪುಟಕ್ಕೂ ವಿದ್ವತ್ಪರಿಕರಗಳಾದ ಕವಿಕಾವ್ಯ ಸಂಬಂಧಿ ವಿಮರ್ಶಾತ್ಮಕ ಪೀಠಿಕೆ, ಅಭ್ಯಾಸಕ್ಕೆ ಅನುಕೂಲವಾಗುವ ಶಬ್ದಾರ್ಥಸೂಚಿ, ಲಘುಟಿಪ್ಪಣಿಗಳು, ಆಧಾರಗಳು, ಸಹಾಯಕ ಸಾಹಿತ್ಯದೊಂದಿಗೆ ಅನುಬಂಧ ಸಿದ್ಧಪಡಿಸಿ ಹರಿದಾಸ ಸಾಹಿತ್ಯವನ್ನು ಹೊರತರಲಾಗಿದೆ.

**ಭಾಷಾಂತರ ಮತ್ತು ಪಠ್ಯ ಪುಸ್ತಕ ವಿಭಾಗ :** ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಜಾರಿಗೆ ತರಲು ಸಹಾಯಕವಾಗುವ ದೃಷ್ಟಿಯಿಂದ ಪಠ್ಯಪುಸ್ತಕ ಮತ್ತು ಆಕರ ಗ್ರಂಥಗಳನ್ನು ಕನ್ನಡದಲ್ಲಿ ತರುವ ಉದ್ದೇಶದಿಂದ 1966-67ರಲ್ಲಿ ಈ ವಿಭಾಗವನ್ನು ಸ್ಥಾಪಿಸಲಾಯಿತು. 1969ರಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿದ ಧನಸಹಾಯದಿಂದ ಕೆಲಸಕ್ಕೆ ಹೆಚ್ಚಿನ ಚಾಲನೆ ದೊರೆಯಿತು. ಈವರೆಗೆ ಈ ವಿಭಾಗ 232 ಪುಸ್ತಕಗಳನ್ನು ಹೊರತಂದಿದೆ. ಇವುಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣಗಳಿಗೆ ಸಂಬಂಧಿಸಿದ ಪಠ್ಯಪುಸ್ತಕಗಳು, ಪರಾಮರ್ಶನ ಗ್ರಂಥಗಳು ಮತ್ತು ಆಕರ ಗ್ರಂಥಗಳಿವೆ.

ಇಷ್ಟೇ ಅಲ್ಲದೆ ಕರ್ನಾಟಕ ಸರ್ಕಾರ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲ ನೆರವನ್ನೂ ಈ ವಿಭಾಗ ನೀಡುತ್ತಿದೆ ಹಾಗೂ ಭಾರತ ಸರ್ಕಾರದ ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಗಳ ಪರಿಷತ್ತು ವಿವಿಧ ವಿಷಯಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಕೋಶಗಳನ್ನು ತರಲು ಹಾಕಿಕೊಂಡ ಯೋಜನೆಯಲ್ಲಿ ಕನ್ನಡಕ್ಕೆ ಸಂಬಂಧಿಸಿದ ಕೆಲಸಗಳನ್ನು ಈ ವಿಭಾಗ ಮಾಡಿಕೊಟ್ಟಿದೆ. ಪಿ.ವಿ.ಕಾಣೆಯವರ ಧರ್ಮಶಾಸ್ತ್ರದ ಇತಿಹಾಸ, ಭಂಡಾರಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಮಹಾಭಾರತದ ಸಟೀಕಾ ಆವೃತ್ತಿ ಹಾಗೂ ಕಾನೂನು ಪುಸ್ತಕಗಳ ಕನ್ನಡ ಆವೃತ್ತಿ ಇವನ್ನು ಹೊರತರುವ ಯೋಜನೆಯನ್ನು ಕೂಡ ಈ ವಿಭಾಗ ಕೈಗೊಂಡಿದೆ.

**ಜಾನಪದ ಸಂಶೋಧನೆ :** 1966ರಲ್ಲಿ ಜಾನಪದ ವಿಷಯವನ್ನು ಕನ್ನಡ ಸ್ನಾತಕೋತ್ತರ ವಿಷಯಗಳಲ್ಲಿ ಐಚ್ಛಿಕ ವಿಷಯವಾಗಿ ಸೇರಿಸಿದ್ದರ ಪರಿಣಾಮವಾಗಿ ಈ ವಿಷಯದ ಕುರಿತು ಹೆಚ್ಚಿನ ಅಧ್ಯಯನಗಳು ಆರಂಭವಾದವು. 1974ರಲ್ಲಿ ಮೊದಲ ಬಾರಿಗೆ ಜಾನಪದ ಎಂ.ಎ. ತರಗತಿಗಳನ್ನು ಆರಂಭಿಸಲಾಯಿತು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ಸಂಶೋಧನೆಗಾಗಿಯೇ ಕ್ಷೇತ್ರಜ್ಞರನ್ನೂ ನೇಮಕಗೊಳಿಸಿ ಜಾನಪದ ವಿಭಾಗದ ಸಂಶೋಧನಾಂಗವನ್ನು ಆರಂಭಿಸಲಾಯಿತು (1970). ಜಾನಪದ ಸಂಗ್ರಹ ಮತ್ತು ಸಂಪಾದನೆ ಇದರ ಮುಖ್ಯ ಗುರಿಯಾಗಿತ್ತು. ಇದರೊಂದಿಗೆ ಸಂಶೋಧನೆಗಳೂ ಆರಂಭವಾದವು.

ಜಾನಪದ ಸಂಗ್ರಹವೆಂದರೆ ಬರಿಯ ಸಾಹಿತ್ಯ ಕೃತಿಗಳ ಸಂಗ್ರಹವಲ್ಲ. ಜಾನಪದ ಸಂಸ್ಕೃತಿಗೆ ಸಂಬಂಧಿಸಿದ ಸಕಲ ಸಾಮಗ್ರಿಗಳ ಸಂಗ್ರಹ. ಈ ನಿಟ್ಟಿನಲ್ಲಿ ಜಾನಪದ ವಿಭಾಗ ಗಮನೀಯವಾದ ಕಾರ್ಯವನ್ನು ಸಾಧಿಸಿದೆ. ಅನೇಕ ಪ್ರದೇಶಗಳ ವೈವಿಧ್ಯಮಯವಾದ ಅಪಾರ ಜನಪದ ಗೀತೆಗಳನ್ನು ಧ್ವನಿಮುದ್ರಣ ಮಾಡಿಕೊಳ್ಳಲಾಗಿದೆ. ಜಾನಪದದ ಸಾಹಿತ್ಯಕಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆಗಳಿಗೆ ಸಂಬಂಧಿಸಿದಂತೆ ಕಥೆ, ಗೀತೆ, ಲಾವಣಿ, ಗಾದೆ, ರಂಗೋಲಿ, ಕಸೂತಿ, ವಾಸ್ತುಶಿಲ್ಪ, ವೃತ್ತಿ ಕಲೆಗಳು, ಬುಡಕಟ್ಟುಗಳು, ಒಗಟು, ನಂಬಿಕೆ, ಸಂಪ್ರದಾಯ, ವೈದ್ಯ, ಅಡುಗೆ, ಉಡುಗೆ, ತೊಡುಗೆ- ಹೀಗೆ ಜನಪದ ಜೀವನದ ಎಲ್ಲಾ ಸ್ತರಗಳ ಅಧ್ಯಯನ ನಡೆಯುತ್ತ ಬಂದಿದೆ.

**ಕನ್ನಡ ಸಾಹಿತ್ಯ ಚರಿತ್ರೆಯ ಯೋಜನೆ :** 1964ರಲ್ಲಿ ಸಮಗ್ರವಾದ ಕನ್ನಡ ಸಾಹಿತ್ಯ ಚರಿತ್ರೆಯ ರಚನೆಯ ಯೋಜನೆ ಹಾಕಿದವರು ದೇಜಗೌ ಅವರು. ಒಂದು ದಶಕದ ಅನಂತರ ಕನ್ನಡ ಅಧ್ಯಯನ ಸಂಸ್ಥೆಯು ಸಾಹಿತ್ಯ ಚರಿತ್ರೆಯ ಮೊದಲ ಸಂಪುಟ ಹೊರಬಂತು (1974). ಹಾ.ಮಾ.ನಾ. ಇದರ ಪ್ರಧಾನ ಸಂಪಾದಕರು. ಹತ್ತು ಸಂಪುಟಗಳ ಹರವುಳ್ಳ ಈ ಸಾಹಿತ್ಯ ಚರಿತ್ರೆಯ ಸಿದ್ಧತೆಯಲ್ಲಿ ತೀ.ನಂ.ಶ್ರೀ. ಹಾಕಿಕೊಟ್ಟ ರೂಪರೇಖೆಗಳ ಅನೇಕ ಅಂಶಗಳನ್ನು ಯಥಾವತ್ತಾಗಿ ಸ್ವೀಕರಿಸಿ, ಅಗತ್ಯವೆನಿಸಿದ ಅನೇಕ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಈವರೆಗೆ ಐದು ಸಂಪುಟಗಳು ಪ್ರಕಟಗೊಂಡಿವೆ.

**ಜಾನಪದ ವಸ್ತುಸಂಗ್ರಹಾಲಯ :** ಇದು ದಕ್ಷಿಣ ಮತ್ತು ಪೂರ್ವ ಏಷ್ಯದಲ್ಲಿಯೇ ಅತಿ ದೊಡ್ಡದಾದ ಮತ್ತು ಸುಸಜ್ಜಿತವಾದ ವಸ್ತು ಸಂಗ್ರಹಾಲಯವೆಂದು ಪ್ರಸಿದ್ಧಿ ಪಡೆದಿದೆ. ದೇಜಗೌ ಮತ್ತು

ಜಾನಪದ ವಸ್ತುಸಂಗ್ರಹಾಲಯ

ಹಾಮಾನಾ ಅವರ ದೂರದೃಷ್ಟಿಯ ಫಲವಾಗಿ ಇದು ಸ್ಥಾಪನೆಯಾಯಿತು (1968). 1964ರಲ್ಲಿ ಹಾಮಾನಾ ಅವರು ಇಂಡಿಯಾನ ವಿಶ್ವವಿದ್ಯಾಲಯದಲ್ಲಿದ್ದಾಗ ಅಲ್ಲಿಯ ಜಾನಪದ ವಸ್ತುಸಂಗ್ರಹಾಲಯದಿಂದ ಪ್ರಭಾವಿತರಾಗಿದ್ದರು. ದೇಜಗೌ ಅವರು ತಮ್ಮ ಮನೆಯಲ್ಲಿ ಸಂಗ್ರಹಿಸಿಕೊಂಡಿದ್ದ ವಸ್ತುಗಳನ್ನು ದಾನವಾಗಿ ವಸ್ತುಸಂಗ್ರಹಾಲಯಕ್ಕೆ ಕೊಡುವುದರ ಮೂಲಕ ವಸ್ತುಸಂಗ್ರಹಾಲಯವೊಂದು ಮಾನಸಗಂಗೋತ್ರಿಯ ಜಯಲಕ್ಷ್ಮೀವಿಲಾಸದ ಕಟ್ಟಡದಲ್ಲಿ ಸ್ಥಾಪನೆಯಾಗಲು ಅಸ್ತಿಭಾರ ಹಾಕಿದರು. ನಾಡಿನ ಹೆಸರಾಂತ ಜಾನಪದ ವಿದ್ವಾಂಸರಲ್ಲೊಬ್ಬರಾದ ಜೀ.ಶಂ. ಪರಮಶಿವಯ್ಯ (ನೋಡಿ) ಮತ್ತು ಪ್ರಸಿದ್ಧ ಚಿತ್ರ ಕಲಾವಿದರಾಗಿದ್ದ ಪಿ.ಆರ್.ತಿಪ್ಪೇಸ್ವಾಮಿ (ನೋಡಿ) ಅವರು ಸಂಗ್ರಹಾಲಯವನ್ನು ಕಟ್ಟುವ ಕಾರ್ಯದಲ್ಲಿ ದುಡಿದಿದ್ದಾರೆ. ಇವರು ನಾಡಿನ ಮೂಲೆಮೂಲೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಮಠಮಾನ್ಯಗಳನ್ನೂ ಹಳೆಯ ಮನೆಗಳನ್ನೂ ಶೋಧಿಸಿ ವಸ್ತುಗಳನ್ನು ಸಂಗ್ರಹಿಸಿದರು. ಹೀಗೆ ತಂದ ವಸ್ತುಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಿ ಪ್ರದರ್ಶನಕ್ಕೆ ಇಡಲಾಗಿದೆ.

ಈಗ ವಸ್ತುಸಂಗ್ರಹಾಲಯದಲ್ಲಿ ಸು.600 ವಸ್ತುಗಳು ಸಂಗ್ರಹಗೊಂಡಿವೆ. ಇಷ್ಟು ದೊಡ್ಡ ಮೊತ್ತದ ವಸ್ತುಗಳು ಬೇರಾವ ಜಾನಪದ ವಸ್ತುಸಂಗ್ರಹಾಲಯದಲ್ಲಿಯೂ ಇಲ್ಲ. ಕರ್ನಾಟಕದ ಸಾಂಸ್ಕೃತಿಕ ಮಹತ್ತ್ವದ ಈ ಸಂಗ್ರಹಾಲಯ ಪ್ರಮುಖವಾಗಿ ಕರ್ನಾಟಕಕ್ಕೂ ಆ ಮೂಲಕ ಭಾರತದ ಸಂಶೋಧಕರಿಗೂ ವಿದ್ವಾಂಸರಿಗೂ ಮೂರು ದಶಕಗಳಿಂದ ಸ್ಫೂರ್ತಿದಾಯಕ ಆಶ್ರಯವನ್ನು ನೀಡುತ್ತ ಬಂದಿದೆ. ಇದಕ್ಕೆ ನಿದರ್ಶನವಾಗಿ 1985 ಮತ್ತು 1992ರಲ್ಲಿ ಇಂಗ್ಲೆಂಡಿನಲ್ಲಿ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯದ ವಸ್ತುಗಳು ಪ್ರದರ್ಶನಗೊಂಡಿದ್ದವು. ಬ್ರಿಟಿಷ್ ಸರ್ಕಾರ ಇದರ ವ್ಯವಸ್ಥೆ ಮಾಡಿತ್ತು. ಈ ವಿಭಾಗದಲ್ಲಿ ಸಾಹಿತಿಗಳ ಕೊಠಡಿ ಮತ್ತು 500ಕ್ಕೂ ಹೆಚ್ಚು ಕಲಾಕೃತಿಗಳುಳ್ಳ ಕಲಾಶಾಲೆಯೂ ಇದೆ. ಇನ್‌ಫೋಸಿಸ್ ಫೌಂಡೇಷನ್‌ನ ಮುಖ್ಯಸ್ಥರಾದ ಸುಧಾ ಮೂರ್ತಿ ಅವರ ಉದಾರ ದೇಣಿಗೆಯಿಂದಾಗಿ ಜಾನಪದ ವಸ್ತುಸಂಗ್ರಹಾಲಯವಿರುವ ಜಯಲಕ್ಷ್ಮೀವಿಲಾಸ ಕಟ್ಟಡ ಇತ್ತೀಚೆಗೆ ನವೀಕರಣಗೊಂಡಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಸ್ಥಾಪಿತವಾದ ಬಳಿಕ ಇದೇ ಮಾದರಿಯ ಸಂಸ್ಥೆಗಳು ಕರ್ನಾಟಕ, ಬೆಂಗಳೂರು, ಗುಲ್ಬರ್ಗ, ಮತ್ತು ಕುವೆಂಪು ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿತವಾದುವು. *

**ಕುವೆಂಪು ವಿದ್ಯಾವರ್ಧಕ ಟ್ರಸ್ಟ್ :** ಮೈಸೂರು ನಗರದ ಜಯಲಕ್ಷ್ಮೀಪುರಂ ಬಡಾವಣೆಯಲ್ಲಿರುವ ಶಿಕ್ಷಣ ಹಾಗೂ ಸಂಶೋಧನ ಸಂಸ್ಥೆ. ಕುವೆಂಪು ಅವರು ನಾಡುನುಡಿಗಳಿಗೆ ಸಲ್ಲಿಸಿರುವ ಅಪಾರ ಸೇವೆಗೆ ಕೃತಜ್ಞತೆಯಾಗಿ ಅವರಿಗೆ ಅಭಿನಂದನ ಗ್ರಂಥ' ಸಲ್ಲಿಸಬೇಕೆಂಬ ಉದ್ದೇಶದಿಂದ 1964ರಲ್ಲಿ ಅಸ್ತಿತ್ವಕ್ಕೆ ಬಂತು. ತನ್ನ ಆರಂಭಿಕ ಉದ್ದೇಶಕ್ಕನುಗುಣವಾಗಿ ಕುವೆಂಪು ಅವರಿಗೆ ಗಂಗೋತ್ರಿ ಹಾಗೂ ಸಹ್ಯಾದ್ರಿ ಎಂಬ ಎರಡು ಬೃಹತ್ ಅಭಿನಂದನ ಗ್ರಂಥಗಳನ್ನು ಪ್ರಕಟಿಸಿದ ಟ್ರಸ್ಟ್ ಇಂದು ಶಿಕ್ಷಣ ವಿಭಾಗ, ಸಂಶೋಧನ ವಿಭಾಗ, ಪ್ರಕಟಣ ವಿಭಾಗ, ಜ್ಞಾನ ಪ್ರಸಾರ ವಿಭಾಗ, ಸೇವಾ ವಿಭಾಗ ಮುಂತಾದ ಹಲವು ಕ್ಷೇತ್ರಗಳಲ್ಲಿ ಗಣನೀಯ ಪಾತ್ರವಹಿಸುತ್ತಿದೆ. ನಾಡೋಜ ಪ್ರಶಸ್ತಿ ವಿಜೇತರಾದ ದೇ.ಜವರೇಗೌರಡರು ಇದರ ರೂವಾರಿ.

ಸಾಮಾಜಿಕವಾಗಿ, ಆರ್ಥಿಕವಾಗಿ, ಬೌದ್ಧಿಕವಾಗಿ ಹಿಂದುಳಿದ ಹಾಗೂ ಬೇರೆ ಶಾಲೆಗಳಲ್ಲಿ ಪ್ರವೇಶ ದೊರೆಯದ, ಸಮಾಜದಿಂದ ನಿರ್ಲಕ್ಷಿತರಾದ ದೀನದಲಿತರ ಮಕ್ಕಳ ಬೌದ್ಧಿಕ ಮಟ್ಟವನ್ನು ಉತ್ತಮಪಡಿಸಿ ಆ ಮೂಲಕ ಅವರನ್ನು ಸರ್ವತಂತ್ರ ಸ್ವತಂತ್ರ ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸಬೇಕೆಂಬ ಉದ್ದೇಶದಿಂದ ಟ್ರಸ್ಟ್ ಶೈಕ್ಷಣಿಕ ಕ್ಷೇತ್ರದಲ್ಲಿ ಕಾಲಿರಿಸಿದೆ. ಪ್ರಸ್ತುತ ಬೃಂದಾವನ ಪ್ರೌಢಶಾಲೆ (1975), ಕುವೆಂಪು ಪ್ರೌಢಶಾಲೆ (1980), ವಿವೇಕಾನಂದ ಪ್ರೌಢಶಾಲೆಗಳನ್ನು ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಟ್ರಸ್ಟ್‌ನ ವತಿಯಿಂದ ನಡೆಸಲಾಗುತ್ತಿದೆ. ವಿವೇಕಾನಂದ ಪ್ರೌಢಶಾಲೆ ಸಂಯುಕ್ತ ಕಿರಿಯ ಕಾಲೇಜಾಗಿ ಪರಿವರ್ತನೆಗೊಂಡಿದೆ (1990). ವಿಶ್ವಕವಿ ಕುವೆಂಪು ಪ್ರಥ'ಮ ದರ್ಜೆ ಕಾಲೇಜನ್ನು ಆರಂಭಿಸಲಾಗಿದೆ (1996).

ಶಾಲೆಯ ಪ್ರಾರಂಭದ ಒಂದು ತಿಂಗಳು ಮಕ್ಕಳಿಗೆ ಸಾಮಾನ್ಯಜ್ಞಾನ ಹಾಗೂ ಬುನಾದಿ ಶಿಕ್ಷಣದ ಸೇತುಬಂಧ ತರಗತಿಗಳನ್ನು ನಡೆಸುವುದು, ಓದುಬರೆಹಗಳಲ್ಲಿ ಮಕ್ಕಳಿಗೆ ವಿಶೇಷ ತರಬೇತಿ ನೀಡುವುದು, ಪ್ರಶ್ನೋತ್ತರಗಳ ರೂಪದಲ್ಲಿ ವಿದ್ಯಾರ್ಥಿಗಳ ಮೂಲಕವೇ ಹಿಂದಿನ ದಿನದ ಪಾಠಗಳ ಪುನರಾವರ್ತನೆ ಮಾಡಿಸುವುದು, ಪ್ರಶ್ನೆ, ಚರ್ಚೆ, ಪ್ರಬಂಧ ಸ್ಪರ್ಧೆಗಳ ಮೂಲಕ ಮಕ್ಕಳ ಜ್ಞಾನಾಸಕ್ತಿ ಮತ್ತು ವಾಗ್ಮಿತೆಯ ವಿಕಾಸಕ್ಕೆ ನೆರವಾಗಿ ಅವರಲ್ಲಿ ಆತ್ಮಪ್ರತ್ಯಯ ತುಂಬುವುದು, ಪರಿಸರ ಕಾಳಜಿ ಬೆಳೆಸುವುದು, ಶಾಲೆಯ ವೇಳೆ ಮುಗಿದ ಅನಂತರ ತುಂಬ ಹಿಂದುಳಿದ ಮಕ್ಕಳ ಜೊತೆಗೆ ಭಾವಸಂಪರ್ಕ ರೂಢಿಸಿಕೊಂಡು ಅವರ ಹಿಂದುಳಿಯುವಿಕೆಗೆ ಕಾರಣಗಳನ್ನು ಗುರುತಿಸಿ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುವುದು -ಇಂಥ ಹಲವು ಹತ್ತು ರೀತಿಗಳಲ್ಲಿ ಶಾಲೆಗಳ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ನಡುವೆ ಸಹಸ್ಪಂದನವೇರ್ಪಡಿಸಲು ಟ್ರಸ್ಟ್ ಪ್ರಯತ್ನಿಸುತ್ತಿದೆ.

ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಶೋಧಕರು ಪ್ರೌಢ ಅಧ್ಯಯನ ನಡೆಸಲು ಕೂಡ ಟ್ರಸ್ಟ್ ನೆರವು ನೀಡುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆಯನ್ನು ಪಡೆದುಕೊಂಡಿರುವ ಟ್ರಸ್ಟ್‌ನಿಂದ ಇದುವರೆಗೆ ಆರು ಮಂದಿ ವಿದ್ವಾಂಸರು ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ತೌಲನಿಕ ಸಾಹಿತ್ಯ ಅಧ್ಯಯನ ಕೇಂದ್ರ ಮತ್ತು ಆಫ್ರೊ-ದ್ರವಿಡಿಯನ್ ಅಧ್ಯಯನ ಕೇಂದ್ರಗಳನ್ನು ತೆರೆಯಬೇಕೆಂಬುದು ಟ್ರಸ್ಟ್‌ನ ಆಶಯವಾಗಿದೆ.

ಸಹ್ಯಾದ್ರಿ ಪ್ರಕಾಶನದ ಮೂಲಕ ಎಂಬತ್ತೈದು ಪುಸ್ತಕಗಳನ್ನು ಪ್ರಕಟಿಸಿರುವ ಟ್ರಸ್ಟ್ ಜ್ಞಾನಪ್ರಸಾರಕ್ಕೆ ಅನುವಾಗುವಂತೆ ಆಗಾಗ್ಗೆ ವಿಚಾರಗೋಷ್ಠಿ, ಕಾವ್ಯವಾಚನ, ದತ್ತಿ ಉಪನ್ಯಾಸಗಳನ್ನು ಏರ್ಪಡಿಸುತ್ತದೆ; ಕುವೆಂಪು ಸಾಹಿತ್ಯ ಪ್ರಸಾರಕ್ಕಾಗಿ ಯತ್ನಿಸುತ್ತಿದೆ. ಇಪ್ಪತ್ತು ಸಾವಿರಕ್ಕೂ

ಅಧಿಕ ಗ್ರಂಥಗಳಿಂದ ಕೂಡಿದ ಗ್ರಂಥಭಂಡಾರ, ಕುವೆಂಪು ವಸ್ತುಸಂಗ್ರಹಾಲಯ, ಕುವೆಂಪು ಮಾಹಿತಿ ಕೇಂದ್ರ, ಶ್ರೀಕುವೆಂಪು ಸ್ಮಾರಕೋದ್ಯಾನ, ಪಂಪವನ - ಇಂಥ ಹಲವಾರು ರಚನಾತ್ಮಕ ಯೋಜನೆಗಳು ಟ್ರಸ್ಟಿನ ಸಾಧನೆಗಳಾಗಿವೆ.

ಅಜ್ಞಾನ, ಮೌಢ್ಯ, ಜಾತಿಮತ ಭಾವನೆಗಳಿಂದ ಮುಕ್ತವಾದ ಸಮಾಜದ ನಿರ್ಮಾಣ ಮತ್ತು ಜನಮನದಲ್ಲಿ ವೈಜ್ಞಾನಿಕ, ವೈಚಾರಿಕ ಅಂಶಗಳನ್ನು ಮೂಡಿಸುವುದು ಟ್ರಸ್ಟ್‌ನ ಆಶಯ. ಇದಕ್ಕಾಗಿ ವಿಶ್ವಧರ್ಮ ಮಂದಿರ, ಸಮುದಾಯಭವನ ಮುಂತಾದ ನಿರ್ಮಾಣಗಳ ಜೊತೆಗೆ ಸ್ವಉದ್ಯೋಗಕ್ಕೆ ಪ್ರೇರಣೆ ನೀಡುವ ಕಾರ್ಯಾಗಾರಗಳನ್ನೂ ಹಮ್ಮಿಕೊಳ್ಳಲಾಗುತ್ತದೆ. (ಎಂ.ಎಚ್‌ಯು.)

**ಕುವೆಂಪು ವಿಶ್ವವಿದ್ಯಾಲಯ** : ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲೊಂದು. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳು ಇದರ ಪ್ರಾದೇಶಿಕ ವ್ಯಾಪ್ತಿಯಲ್ಲಿವೆ. ಇದರ ಆಡಳಿತ ಕೇಂದ್ರ ಬಿ.ಆರ್.ಪ್ರಾಜೆಕ್ಟ್. ಮೈಸೂರು ವಿಶ್ವವಿದ್ಯಾಲಯ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಸ್ನಾತಕೋತ್ತರ ಶಿಕ್ಷಣದ ಸೌಲಭ್ಯವನ್ನು ವಿಸ್ತರಿಸುವ ಉದ್ದೇಶದಿಂದ ಬಿ.ಆರ್.ಪ್ರಾಜೆಕ್ಟ್‌ನಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಿತು (1973 ಸೆಪ್ಟೆಂಬರ್ 5). ಆಗ ಕರ್ನಾಟಕ ಸರ್ಕಾರದ ಉನ್ನತಶಿಕ್ಷಣ ಸಚಿವರಾಗಿದ್ದ ಎ.ಆರ್.ಬದರಿ ನಾರಾಯಣ ಹಾಗೂ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ದೇ.ಜವರೇಗೌಡ ಈ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಲು ವಿಶೇಷವಾಗಿ ಶ್ರಮಿಸಿದರು. ಪ್ರಾರಂಭದಲ್ಲಿ ಈ ಕೇಂದ್ರದಲ್ಲಿ ಕನ್ನಡ, ಕೈಗಾರಿಕಾ ರಸಾಯನಶಾಸ್ತ್ರ, ಅರ್ಥಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಭಾಗಗಳನ್ನು ಆರಂಭಿಸಲಾಯಿತು. ವಿಶ್ವವಿದ್ಯಾಲಯ ಸ್ಥಾಪನೆ ಕುರಿತಂತೆ ಟಿ.ಆರ್.ಜಯರಾಮನ್ ಆಯೋಗದ ವರದಿಯನ್ನು ಒಪ್ಪಿಕೊಂಡ ಕರ್ನಾಟಕ ಸರ್ಕಾರ ಈ ವಿಶ್ವವಿದ್ಯಾಲಯವನ್ನು 1987 ಜೂನ್ 29ರಂದು ಸ್ಥಾಪಿಸಿತು. ಸಹ್ಯಾದ್ರಿ ಶ್ರೇಣಿಯ ಪ್ರಾಕೃತಿಕ ಸೌಂದರ್ಯ ಮತ್ತು ಪ್ರಾಕೃತಿಕ ಸಂಪನ್ಮೂಲಗಳಿಂದ ಕೂಡಿದ ಈ ವಿಶ್ವವಿದ್ಯಾನಿಲಯ ಪರಿಸರ ಮಾಲಿನ್ಯದಿಂದ ದೂರದಲ್ಲಿದ್ದು ಉನ್ನತ ಶಿಕ್ಷಣಕ್ಕೆ ಸೂಕ್ತವಾದ ಸ್ಥಳದಲ್ಲಿದೆ. ಇದು ಶಿವಮೊಗ್ಗದಿಂದ 26ಕಿಮೀ ಭದ್ರಾವತಿಯಿಂದ 18ಕಿಮೀ ತರೀಕೆರೆಯಿಂದ 20ಕಿಮೀ ದೂರದಲ್ಲಿದೆ. ವಿಶ್ವವಿದ್ಯಾಲಯದ ಆವರಣಕ್ಕೆ ಜ್ಞಾನಸಹ್ಯಾದ್ರಿ ಎಂದು ನಾಮಕರಣ ಮಾಡಲಾಗಿದೆ. ನಾಲ್ಕು ಜಿಲ್ಲೆಗಳಲ್ಲಿರುವ 123 ಕಾಲೇಜುಗಳು ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿವೆ. ಇವುಗಳಲ್ಲಿ ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜು ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜು, ದಾವಣಗೆರೆಯ ಬಿ.ಡಿ.ಟಿ. ಎಂಜಿನಿಯರಿಂಗ್ ಮತ್ತು ಲಲಿತ ಕಲಾ ಕಾಲೇಜುಗಳು ಘಟಕ ಕಾಲೇಜುಗಳಾಗಿವೆ. ಇವು ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟಿವೆ. 28 ಸರ್ಕಾರಿ ಕಾಲೇಜುಗಳು, 29 ಅನುದಾನಿತ ಕಾಲೇಜುಗಳು ಮತ್ತು 62 ಅನುದಾನ ರಹಿತ ಕಾಲೇಜುಗಳು ಸಂಯೋಜಿತ ಕಾಲೇಜುಗಳಾಗಿವೆ. ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ, ಕಾನೂನು ಮತ್ತು ಎಂಜಿನಿಯರಿಂಗ್ ನಿಕಾಯಗಳಿಗೆ ಸೇರಿದ 27 ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗೆ ಅವಕಾಶ ಕಲ್ಪಿಸಲಾಗಿದೆ. ಈ ಅಧ್ಯಯನಗಳಲ್ಲಿ ಈ ಪ್ರದೇಶದ ಸಾಂಸ್ಕೃತಿಕ ವೈವಿಧ್ಯ, ಜೀವ ವೈವಿಧ್ಯ ಹಾಗೂ ಪ್ರಾಕೃತಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ, ಅಭಿವೃದ್ಧಿಪಡಿಸುವ ಹಾಗೂ ಸಂಶೋಧಿಸುವ ಪ್ರಯತ್ನ ಮಾಡಲಾಗುತ್ತಿದೆ.

330 ಎಕರೆಗಳ ವ್ಯಾಪ್ತಿಯುಳ್ಳ ಜ್ಞಾನಸಹ್ಯಾದ್ರಿ ಆವರಣ ಸುಂದರವಾದ ಕಾಡಿನ ಪರಿಸರದಲ್ಲಿದೆ. ಈ ಆವರಣದಲ್ಲಿ ಆಡಳಿತ ಭವನ, ವಸ್ತುಸಂಗ್ರಹಾಲಯ, ಗ್ರಂಥಾಲಯ, ಶೈಕ್ಷಣಿಕ ಕಟ್ಟಡ, ವಿಜ್ಞಾನ ಭವನ, ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಪ್ರತ್ಯೇಕ ವಸತಿ ನಿಲಯ, ಕುಲಪತಿ ಭವನ, ಅಥಿತಿ ಗೃಹ, ಆರೋಗ್ಯ ಕೇಂದ್ರ ಮತ್ತು ಅಧ್ಯಾಪಕ, ಅಧ್ಯಾಪಕೇತರ ನಿವಾಸಗಳಿಗೆ ಅಗತ್ಯವಾಗಿ ಬೇಕಾಗಿರುವ ಹಲವಾರು ಕಟ್ಟಡಗಳನ್ನು ಕಟ್ಟಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕಲಾ ನಿಕಾಯದಲ್ಲಿ 5 ಭಾಷಾ ವಿಭಾಗಗಳು ಮತ್ತು 4 ಸಮಾಜವಿಜ್ಞಾನ ವಿಭಾಗಗಳಿವೆ. ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಾಗಿ ಅಭಿವೃದ್ಧಿಪಡಿಸಲಾಗಿದ್ದು ಇದಕ್ಕೆ ಕನ್ನಡ ಭಾರತಿ ಎಂದು ನಾಮಕರಣ ಮಾಡಲಾಗಿದೆ. ಜಾನಪದ, ಆಧುನಿಕ ಕನ್ನಡ ಸಾಹಿತ್ಯ, ಸಾಹಿತ್ಯ ತತ್ತ್ವ ಮತ್ತು ವಿಮರ್ಶೆ ಹಾಗೂ ತೌಲನಿಕ ಅಧ್ಯಯನ ವಿಷಯಗಳಲ್ಲಿ ವಿಶೇಷ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜಾನಪದ ವಸ್ತುಸಂಗ್ರಹಾಲಯ ಮತ್ತು ಕನ್ನಡ ಗಣಕ ಕೇಂದ್ರಗಳನ್ನು ಕನ್ನಡ ಭಾರತಿ ಒಳಗೊಂಡಿದೆ. ರಾಜ್ಯಶಾಸ್ತ್ರ ವಿಭಾಗದಲ್ಲಿ ಅಬ್ದುಲ್ ನಜೀರ್ ಸಾಬ್ ಪೀಠ, ಅಂಬೇಡ್ಕರ್ ಅಧ್ಯಯನ ಕೇಂದ್ರ ಹಾಗೂ ಶಾಂತವೇರಿ ಗೋಪಾಲಗೌಡ ಪೀಠಗಳು ಕಾರ್ಯ ನಿರ್ವಹಿಸುತ್ತಿವೆ. ಅನೇಕ ದತ್ತಿ ಉಪನ್ಯಾಸಗಳನ್ನು ವಿಶ್ವವಿದ್ಯಾಲಯ ಏರ್ಪಡಿಸುತ್ತಿದೆ.

ವಿಜ್ಞಾನ ನಿಕಾಯದ ಭೌತವಿಜ್ಞಾನ, ರಸಾಯನವಿಜ್ಞಾನ, ಕೈಗಾರಿಕಾ ರಸಾಯನವಿಜ್ಞಾನ, ಗಣಿತವಿಜ್ಞಾನ, ಗಣಕವಿಜ್ಞಾನ, ಎಂ.ಸಿ.ಎ., ಭೂವಿಜ್ಞಾನ ಮತ್ತು ಮಾನವಸಂಪನ್ಮೂಲ ವಿಭಾಗ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗಗಳಿವೆ. ಜೈವಿಕ ತಂತ್ರಜ್ಞಾನ, ಪರಿಸರವಿಜ್ಞಾನ, ಆನ್ವಯಿಕ ಸಸ್ಯವಿಜ್ಞಾನ ಮತ್ತು ಆನ್ವಯಿಕ ಪ್ರಾಣಿವಿಜ್ಞಾನ ಈ ನಾಲ್ಕು ಜೀವವಿಜ್ಞಾನ ವಿಭಾಗಗಳಿವೆ.

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸಹ್ಯಾದ್ರಿ ಪರ್ವತ ಶ್ರೇಣಿ ಜಗತ್ತಿನ ಅತ್ಯಂತ ಮಹತ್ತ್ವಪೂರ್ಣ ಜೀವ ವೈವಿಧ್ಯ ಕೇಂದ್ರಗಳಲ್ಲಿ ಒಂದಾಗಿದ್ದು ಜೀವವಿಜ್ಞಾನ ವಿಭಾಗಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಸುತ್ತಿವೆ. ರಸಾಯನವಿಜ್ಞಾನ ಮತ್ತು ಕೈಗಾರಿಕಾ ರಸಾಯನವಿಜ್ಞಾನ ವಿಭಾಗಗಳು ಕೈಗಾರಿಕೆಗಳೊಡನೆ ಸಂಪರ್ಕ ಹೊಂದಿ, ಅವುಗಳಿಗೆ ಸಲಹೆ ನೀಡುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯ ದಾವಣಗೆರೆಯಲ್ಲಿ ಆರಂಭ ಮಾಡಿದ ಸ್ನಾತಕೋತ್ತರ ಕೇಂದ್ರ (1979) ಈ ವಿಶ್ವವಿದ್ಯಾನಿಲಯಕ್ಕೆ ಸೇರಿದೆ. ಇತ್ತೀಚೆಗೆ (2002-03) ವಿಶ್ವವಿದ್ಯಾನಿಲಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ,



ಸ್ನಾತಕೋತ್ತರ ಕೇಂದ್ರ, ದಾವಣಗೆರೆ

ಉರ್ದು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಗಣಿತವಿಜ್ಞಾನ, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ ಈ ವಿಷಯಗಳಲ್ಲಿ ಸ್ನಾತಕೋತ್ತರ ದೂರ ಶಿಕ್ಷಣ ಕೋರ್ಸುಗಳನ್ನು ಆರಂಭಿಸಲಾಗಿದೆ. ವಿಶ್ವವಿದ್ಯಾನಿಲಯದಲ್ಲಿದ್ದುಕೊಂಡು ಅಭ್ಯಾಸ ಮಾಡಲು ಸಾಧ್ಯವಾಗದವರಿಗೆ ಶಿಕ್ಷಣ ನೀಡುವುದು ಇದರ ಉದ್ದೇಶ.

ಪ್ರಸಾರಾಂಗ ಈ ವಿಶ್ವವಿದ್ಯಾನಿಲಯದ ಜ್ಞಾನವಿಸ್ತರಣೆ ಮತ್ತು ಪ್ರಕಟಣ ವಿಭಾಗ; ವಿಶ್ವವಿದ್ಯಾಲಯ ಮತ್ತು ಜನಸಾಮಾನ್ಯರ ನಡುವೆ; ಸಂಪರ್ಕ ಕಲ್ಪಿಸುವ ಸಾಧನ. ಇದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ನಾಲ್ಕು ಜಿಲ್ಲೆಗಳಲ್ಲಿ, ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಡನೆ ಇದುವರೆಗೆ 75 ಅರಿವು ವಿಸ್ತರಣೋಪನ್ಯಾಸ

ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಈ ಉಪನ್ಯಾಸಗಳನ್ನು ವಿಸ್ತರಣೋಪನ್ಯಾಸ ಮಾಲೆಯಲ್ಲಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯಲ್ಲಿ ಇದುವರೆಗೂ 20

ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ

ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಪಠ್ಯ ಪುಸ್ತಕ ಮಾಲೆಯಲ್ಲಿ ಆರು ಪುಸ್ತಕಗಳನ್ನು ಪ್ರಕಟಿಸಲಾಗಿದೆ. ವಿಜ್ಞಾನ, ಮಾನವಿಕ ಹಾಗೂ ಸಮಾಜ ವಿಜ್ಞಾನಗಳಲ್ಲಿ ವಿದ್ಯುತ್ ಪತ್ರಿಕೆಗಳನ್ನು ಪ್ರಕಟಿಸಲು ವಿಶ್ವವಿದ್ಯಾಲಯ ಉದ್ದೇಶಿಸಿದೆ. ಈಗಾಗಲೇ ವಿಜ್ಞಾನದ ವಿದ್ಯುತ್ ಪತ್ರಿಕೆ ಪ್ರಕಟಿಸಲಾಗಿದೆ. ತ್ರೈಮಾಸಿಕ ವಾರ್ತಾಪತ್ರವನ್ನು ಪ್ರಕಟಿಸಲಾಗುತ್ತಿದೆ. ಆಗಾಗ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಗ್ರಂಥಾಲಯಕ್ಕೆ ಸುಸಜ್ಜಿತವಾದ ಕಟ್ಟಡವಿದೆ. ಇದರಲ್ಲಿ ಆಧುನಿಕ ಗ್ರಂಥಾಲಯಕ್ಕೆ ಬೇಕಾಗಿರುವ ಎಲ್ಲ ಸೌಲಭ್ಯಗಳನ್ನೂ ಒದಗಿಸಲಾಗಿದೆ. 52000 ಗ್ರಂಥಗಳು ಮತ್ತು 227 ನಿಯತಕಾಲಿಕೆಗಳಿವೆ. ಸಿಡಿ ರೋಂ ಡೇಟಾ ಬೇಸ್, ಇ ಮೇಲ್ ಮತ್ತು ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಲಾಗಿದೆ. ಡಿಜಿಟಲ್ ಲೈಬ್ರರಿಯನ್ನೂ ರೂಪಿಸಲು ಪ್ರಯತ್ನ ನಡೆಯುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಸುಸಜ್ಜಿತವಾದ ಗಣಕ ಕೇಂದ್ರವಿದೆ. ವಿಶ್ವವಿದ್ಯಾನಿಲಯದ ಆಡಳಿತ, ಹಣಕಾಸು ವ್ಯವಹಾರ ಹಾಗೂ ಪರೀಕ್ಷಾ ಸಂಬಂಧವಾದ ಮಾಹಿತಿಗಳನ್ನೂ ದಾಖಲೆಗಳನ್ನೂ ಕಂಪ್ಯೂಟರೀಕರಿಸಲಾಗಿದೆ. ಶಿವಮೊಗ್ಗ ನಗರದಲ್ಲಿರುವ ಪರೀಕ್ಷಾಂಗ ಕಚೇರಿಯಲ್ಲಿ ಪರೀಕ್ಷಾ ಸಂಬಂಧವಾಗಿ ಮಾಡಿರುವ ಕಂಪ್ಯೂಟರೀಕರಣ ವ್ಯವಸ್ಥೆ ತುಂಬ ಅಚ್ಚುಕಟ್ಟಾಗಿದೆ.

ಸಾಕ್ಷರತಾ ಯೋಜನೆ ಕುವೆಂಪು ವಿಶ್ವವಿದ್ಯಾನಿಲಯದ ವಿಶಿಷ್ಟವಾದ ಯೋಜನೆ. ಇದು ಜನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಸ್ನಾತಕ ತರಗತಿಯ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಅಂಕಗಳನ್ನು ನೀಡುವ ವ್ಯವಸ್ಥೆ ಮಾಡಲಾಗಿದ್ದು, ಸ್ನಾತಕೋತ್ತರ ತರಗತಿಗಳಿಗೆ ಈ ಅಂಕಗಳನ್ನು ಪರಿಗಣಿಸಿ ಪ್ರವೇಶ ನೀಡಲಾಗುತ್ತಿದೆ. ಈ ವಿಶಿಷ್ಟವಾದ ಯೋಜನೆಯನ್ನು ಇತರ ವಿಶ್ವವಿದ್ಯಾನಿಲಯಗಳಲ್ಲಿಯೂ ಅಳವಡಿಸಿಕೊಳ್ಳಲು ಶಿಫಾರಸು ಮಾಡಲಾಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಸ್ಥಾಪಿಸಲಾಗಿದೆ. ಇದಲ್ಲದೆ ವಿಶ್ವವಿದ್ಯಾನಿಲಯ ಉದ್ಯೋಗ ಮಾರ್ಗದರ್ಶಿ ಕೇಂದ್ರ ಸ್ಥಾಪಿಸಿದೆ. ಆ ಮೂಲಕ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಿ ಉಪಯುಕ್ತ ಸಲಹೆಗಳನ್ನು ನೀಡಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಸುಸಜ್ಜಿತವಾದ ಆರೋಗ್ಯ ಕೇಂದ್ರವಿದೆ.

ಇತಿಹಾಸ ಪ್ರಸಿದ್ಧ ಕೆಳದಿಯ ರಾಮೇಶ್ವರ ದೇವಾಲಯದ ಶಿಲ್ಪವೊಂದರ ಆಕೃತಿಯನ್ನು ವಿಶ್ವವಿದ್ಯಾನಿಲಯ ತನ್ನ ಲಾಂಛನವಾಗಿ ಬಳಸಿಕೊಂಡಿದೆ. ಹಂಸ ಮತ್ತು ಗಜದ ಅನ್ಯೋನ್ಯ ಹಾಗೂ ಅಭೇದ ಸಂಬಂಧವನ್ನು ಸೂಚಿಸುವ ಈ ಆಕೃತಿ ಸುಂದರವೂ ಅರ್ಥಪೂರ್ಣವೂ ಆಗಿದೆ. ಆನೆ ಶಕ್ತಿಯನ್ನೂ ಗಾಂಭೀರ್ಯವನ್ನೂ ಧೀಮಂತಿಕೆಯನ್ನೂ ಸೂಚಿಸಿದರೆ, ಹಂಸ ಪರಿಶುದ್ಧತೆಯನ್ನೂ ವಿವೇಕವನ್ನೂ ಪೂರ್ಣ ಜ್ಞಾನವನ್ನೂ ಪ್ರತಿಮಾತ್ಮಕವಾಗಿ ಸೂಚಿಸುತ್ತದೆ. ವ್ಯಕ್ತಿಯ ಪೂರ್ಣ ವಿಕಾಸ, ಜ್ಞಾನ-ವಿಜ್ಞಾನ-ಶಕ್ತಿ-ಗಾಂಭೀರ್ಯ-ಪರಿಶುದ್ಧತೆಗಳ ಅರ್ಥಪೂರ್ಣ ಸಂಯೋಗದ ಪರಿಣಾಮ ಫಲವಾಗಿರುತ್ತದೆ ಎಂಬ ಉನ್ನತ ಧ್ಯೇಯ ಈ ಶಿಲ್ಪಕೃತಿಯದು.

ಕುವೆಂಪು ವಿಶ್ವವಿದ್ಯಾನಿಲಯದ ಮೊದಲ ಕುಲಪತಿ ಶಾಂತಿನಾಥ ದೇಸಾಯಿ (1988-90). ಅನಂತರ ಎಂ.ಆರ್.ಗಜೇಂದ್ರಗಡ್ (1991-96), ಪಿ.ವೆಂಕಟರಾಮಯ್ಯ (1996-99), ಎಸ್.ಪಿ.ಹಿರೇಮಠ (1999-2002), ಸಿ.ಎಸ್.ಬಾಗೇವಾಡಿ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ (ಹಂಗಾಮಿ) ಸೇವೆ ಸಲ್ಲಿಸಿದ್ದಾರೆ. ಈಗಿನ ಕುಲಪತಿ ಪ್ರಸಿದ್ಧ ಗಣಕ ವಿಜ್ಞಾನಿ ಕೆ.ಚಿದಾನಂದಗೌಡ (2002ರಿಂದ).

ಈ ವಿಶ್ವವಿದ್ಯಾನಿಲಯಕ್ಕೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ನ್ಯಾಕ್ ಸಮಿತಿ ಮೂರು ನಕ್ಷತ್ರಗಳ ಮಾನ್ಯತೆ ನೀಡಿದೆ. (ಟಿ.ಎನ್.ಎಸ್.)

**ಕುಶಾಲನಗರ** : ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಒಂದು ಪಟ್ಟಣ. ಮಡಿಕೇರಿಯಿಂದ 30ಕಿಮೀ ಪೂರ್ವಕ್ಕಿದೆ. ಜನಸಂಖ್ಯೆ 13262. ಇದರ ಪೂರ್ವದ ಬದಿಗಾಗಿ ಕಾವೇರಿ ನದಿ ಹರಿಯುತ್ತದೆ. ಕಾವೇರಿ ನದಿಗೆ ಇಲ್ಲಿ ಕಳೆದ ಶತಮಾನದಲ್ಲೇ ಕಟ್ಟಿದ ಸೇತುವೆಯಿದೆ. ಮಡಿಕೇರಿ-ಮೈಸೂರು ಮುಖ್ಯ ರಸ್ತೆ ಈ ಊರ ಮೂಲಕ ಹಾದುಹೋಗುವುದಲ್ಲದೆ ಸಿದ್ದಾಪುರ, ಹೆಬ್ಬಾಲೆ ಮತ್ತು ಸೋಮವಾರಪೇಟೆ ಗಳಿಗೂ ರಸ್ತೆಗಳಿವೆ. ಸಾರಿಗೆ ಸಂಚಾರದ ಸೌಲಭ್ಯ ಉತ್ತಮವಾಗಿರುವುದರಿಂದ ಇದೊಂದು ಮುಖ್ಯ ವ್ಯಾಪಾರಸ್ಥಳ. ಕೊಡಗಿನಲ್ಲಿ ಎರಡು ಸಂಸ್ಕರಣ ಸಹಕಾರಿ ಸಂಘ ಮತ್ತು ಕಾರ್ಖಾನೆಗಳಲ್ಲಿ ಒಂದು ಕುಶಾಲನಗರದಲ್ಲಿದೆ.

1773ರಲ್ಲಿ ಕೊಡಗಿಗೆ ಮೊದಲಬಾರಿಗೆ ದಂಡೆತ್ತಿ ಬಂದಿದ್ದ ಹೈದರ್ ಅಲಿ ಆಗ ಒಂದು ಹಳ್ಳಿಯಾಗಿದ್ದ ಈ ಸ್ಥಳಕ್ಕೆ, ತಾನು ಅಲ್ಲಿದ್ದಾಗ ತನಗೆ ದೊರೆತ ಒಂದು ಸಂತೋಷದ ವರ್ತಮಾನದ ನೆನಪಿಗಾಗಿ ಕುಶಾಲ್ ನಗರವೆಂದು ಹೆಸರಿಟ್ಟ. ಟಿಪ್ಪುಸುಲ್ತಾನ ಇಲ್ಲಿ ಒಂದು ಕೋಟೆಯನ್ನು ಕಟ್ಟಿಸಿ ಸೈನ್ಯ ಠಾಣ್ಯ ಮಾಡಿದ್ದ. 1789ರಲ್ಲಿ ದೊಡ್ಡ ವೀರರಾಜೇಂದ್ರ ಒಡೆಯ ಈ ಕೋಟೆಯನ್ನು ಹಿಡಿದುಕೊಂಡ. ಈಗಲೂ ಈ ಕೋಟೆಯ ಕೆಲವು ಅವಶೇಷಗಳನ್ನು ಕುಶಾಲನಗರದಲ್ಲಿ ಕಾಣಬಹುದು. 1834ರಲ್ಲಿ ಬ್ರಿಟಿಷರು ಕೊಡಗನ್ನು ತಮ್ಮ ಆಡಳಿತಕ್ಕೊಳಪಡಿಸಿದ ಮೇಲೆ ಆಗ ಬ್ರಿಟಿಷ್ ಆಡಳಿತಾಧಿಕಾರಿಯಾಗಿದ್ದ ಕರ್ನಲ್ ಫ್ರೇಸರ್, ಅದುವರೆಗೆ ನಂಜರಾಜಪಟ್ಟಣದಲ್ಲಿದ್ದ ತಾಲ್ಲೂಕು ಅಧಿಕಾರಿಗಳ ಕಚೇರಿಯನ್ನು ಇಲ್ಲಿಗೆ ವರ್ಗಾಯಿಸಿ ಇದಕ್ಕೂ ಫ್ರೇಸರ್‌ಪೇಟೆ ಎಂದು ತನ್ನ ಹೆಸರಿಟ್ಟ. 1895ರಲ್ಲಿ ತಾಲ್ಲೂಕು ಕಛೇರಿ ಇಲ್ಲಿಂದ ಸೋಮವಾರಪೇಟೆಗೆ ವರ್ಗಾವಣೆಯಾಯಿತು.

ತೂಗುಸೇತುವೆ, ಕುಶಾಲನಗರ

ಇಲ್ಲಿ ಮಡಿಕೇರಿಗಿಂತ ಮಳೆ ಮತ್ತು ಚಳಿ ಕಡಿಮೆಯಾಗಿರು ವುದರಿಂದ ಆ ಕಾಲಗಳಲ್ಲಿ ಬ್ರಿಟಿಷರು ತಮ್ಮ ಕಛೇರಿಗಳನ್ನು ಇಲ್ಲಿಗೆ ವರ್ಗಾಯಿಸುತ್ತಿದ್ದರು. ಕುಶಾಲನಗರಕ್ಕೆ ಹೊಂದಿಕೊಂಡಂತೆ ಕಾವೇರಿ ನಿಸರ್ಗಧಾಮವಿದೆ. 65 ಎಕರೆ ವಿಸ್ತಾರ ಪ್ರದೇಶದಲ್ಲಿರುವ ಈ ತಾಣ ಪ್ರಕೃತಿ ಪ್ರಿಯರಿಗೊಂದು ಆಕರ್ಷಕ ತಾಣ. ಹಸುರು ಬಿದಿರು ಮೆಳೆಗಳಿಂದ ಕಂಗೊಳಿಸುತ್ತಿರುವ ದ್ವೀಪದ ಸುತ್ತಲೂ ಕಾವೇರಿ ನದಿ ಹರಿಯುತ್ತಿದೆ.

ದ್ವೀಪದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ತೂಗುಸೇತುವೆ ನಿರ್ಮಿಸಲಾಗಿದೆ. ನದಿಯಲ್ಲಿ ದೋಣಿ ವಿಹಾರದ ವ್ಯವಸ್ಥೆ ಇದೆ. ಈ ನಿಸರ್ಗಧಾಮದಲ್ಲಿ ಬಿದಿರು ಮೆಳೆ ಸೇರಿದಂತೆ ಅನೇಕ ಔಷಧ ಸಸ್ಯಗಳಿವೆ. ಇಲ್ಲಿ ಮರಗಳ ಮೇಲೆ ವಸತಿ ನಿರ್ಮಿಸಲಾಗಿದೆ. ಪ್ರವಾಸಿಗರಿಗಾಗಿ ಕೇವಲ ಮರದಿಂದಲೇ ನಿರ್ಮಿಸಿರುವ ಅತಿಥಿಗೃಹಗಳಿವೆ. ಕಾಡಿನಲ್ಲಿ ಜಿಂಕೆಗಳ ಹಿಂಡಿನ ದೃಶ್ಯ ಕಂಡುಬರುತ್ತದೆ. ಆನೆಸವಾರಿ ಇಲ್ಲಿಯ ಆಕರ್ಷಣೆಗಳಲ್ಲೊಂದಾಗಿದೆ. (ಡಿ.ಎನ್.ಕೆ.)

**ಕುಷ್ಟಗಿ :** ಕೊಪ್ಪಳ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಕೇಂದ್ರ. ತಾಲ್ಲೂಕಿನ ವಿಸ್ತೀರ್ಣ 1,360ಚ.ಕಿಮೀ. ಜನಸಂಖ್ಯೆ 2,39,259. ಕುಷ್ಟಗಿ, ಹನಮಸಾಗರ, ಗುಡದೂರು ಮತ್ತು ತಾವರಗೇರಿ ಎಂಬ ನಾಲ್ಕು ಹೋಬಳಿಗಳೂ ಒಟ್ಟು 176 ಹಳ್ಳಿಗಳೂ ಈ ತಾಲ್ಲೂಕಿನಲ್ಲಿವೆ.

ತಾಲ್ಲೂಕಿನ ಬಹುಭಾಗ ಪ್ರಿ-ಕೇಂಬ್ರಿಯನ್ ಮತ್ತು ಕೇಂಬ್ರಿಯನ್ ಯುಗದಲ್ಲಿ ನಿರ್ಮಾಣಗೊಂಡ ಭೂಪದರಗಳಿಂದ ಕೂಡಿದೆ. ಇಲ್ಲಿಯ ಬಹುಪಾಲು ಶಿಲೆಗಳು ಧಾರವಾಡ ಶಿಲಾವರ್ಗಕ್ಕೆ ಸೇರಿದವು. ಕಲಾದಗಿ ಶ್ರೇಣಿಗೆ ಸೇರಿದ ಕೆಲವು ಶಿಲೆಗಳು ತಾಲ್ಲೂಕಿನ ವಾಯವ್ಯಕ್ಕೆ ಹರಡಿವೆ. ಇವುಗಳಲ್ಲಿ ಪೆಂಟೆಶಿಲೆ ಮತ್ತು ಮರಳುಶಿಲೆಯ ಪದರಗಳನ್ನು ಕಾಣಬಹುದು. ತಾಲ್ಲೂಕಿನ ಬಹುಪಾಲು ಭೂಮಿ ಕಪ್ಪು. ಕೆಲವು ಕಡೆ ಮರಳು ಮಿಶ್ರಿತವಾದ ಕೆಂಪು ಛಾಯೆಯ ಮಣ್ಣನ್ನು ಕಾಣಬಹುದು. ವರ್ಷವಿಡೀ ಸಾಮಾನ್ಯವಾಗಿ ಒಣ ಹವೆ ಇರುತ್ತದೆ. ವಾರ್ಷಿಕ ಮಳೆ ಸರಾಸರಿ 563 ಮಿಮೀ. ಸಾಮಾನ್ಯವಾಗಿ ಮಳೆ ಕಡಿಮೆಯಾದರೂ ಕೆಲವು ಸಾರಿ ತಾಲ್ಲೂಕು ಅತಿವೃಷ್ಟಿಗೆ ಈಡಾದದ್ದೂ ಉಂಟು. 1944ರ ಸುಮಾರಿನಲ್ಲಿ ಆದ ಅತಿವೃಷ್ಟಿಯಿಂದ ತಾಲ್ಲೂಕಿನ ಪ್ರಮುಖ ಆಹಾರ ಬೆಳೆಯಾದ ಜೋಳವೆಲ್ಲ ಹಾಳಾಗಿ ಬರ ಬಂದಿತ್ತು. ಇದನ್ನು ಇಲ್ಲಿಯ ಜನ ಸಜ್ಜೆಬರ ಎಂದು ಕರೆಯುತ್ತಾರೆ. 1949ರಲ್ಲಿ ತಾಲ್ಲೂಕು ಭಾರಿ ಮಳೆಗೆ ಈಡಾಗಿತ್ತು.

ತಾಲ್ಲೂಕಿನಲ್ಲಿ ಖುಷ್ಕಿ ಬೆಳೆಯೇ ಹೆಚ್ಚು. ಜೋಳ, ಸಜ್ಜೆ, ಗೋಧಿ, ಸೇಂಗ, ಹತ್ತಿ, ಎಳ್ಳು ಮತ್ತು ತೊಗರಿ ಇಲ್ಲಿಯ ಮುಖ್ಯ ಬೆಳೆಗಳು. ತರಿ ಜಮೀನಿನಲ್ಲಿ ಸಾಮಾನ್ಯವಾಗಿ ಬತ್ತವನ್ನೂ ಕೆಲವೆಡೆ ಕಬ್ಬನ್ನೂ ಬೆಳೆಯುತ್ತಾರೆ. ತಾಲ್ಲೂಕಿನಲ್ಲಿರುವ ಕೆರೆಗಳು ನಾಲ್ಕು. ಇವು ಸುಮಾರು 921 ಎಕರೆ ಜಮೀನಿನ ನೀರಾವರಿಗೆ ಸಹಾಯಕವಾಗಿವೆ. ಕಡೂರು ಗ್ರಾಮದ ಸಮೀಪದಲ್ಲಿ ಚಿತ್ತವಡಗಿ ಕೆರೆಯಿದೆ. ಈ ಕೆರೆಯಿಂದ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಸ್ವಲ್ಪ ಜಮೀನಿಗೂ ನೀರೊದಗಿಸಲಾಗಿದೆ. ತಾಲ್ಲೂಕಿನಲ್ಲಿ ಬಹಳ ಕಡೆ ಲಕ್ಷ್ಮೀ ಹತ್ತಿ ಬೆಳೆಯುತ್ತಾರೆ. ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳ ಬಳಕೆ ಅಷ್ಟಾಗಿಲ್ಲ.

ಕೃಷಿಯನ್ನು ಬಿಟ್ಟರೆ ಎರಡನೆಯ ಮುಖ್ಯ ಕಸಬು ನೇಯ್ಗೆ. ಹನಮಸಾಗರ, ತಾವರಗೇರಿ ಮತ್ತು ದೋತಿಹಾಳಗಳು ನೇಯ್ಗೆಯ ಕೇಂದ್ರಗಳು. ಇಲ್ಲಿ ತಯಾರಾಗುವ ಇಳಕಲ ಸೀರೆಗಳಿಗೆ ಗ್ರಾಮ ಪ್ರದೇಶದಲ್ಲಿ ಬೇಡಿಕೆಯಿದೆ.

*

ಕುಷ್ಟಗಿ ಈ ತಹಶೀಲಿನ ಮುಖ್ಯ ಪಟ್ಟಣ. ರಾಯಚೂರಿನಿಂದ ಪಶ್ಚಿಮಕ್ಕೆ 142ಕಿಮೀ ಅಂತರದಲ್ಲಿದೆ. ಜನಸಂಖ್ಯೆ 21,180. ಚಿತ್ರದುರ್ಗ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ಈ ಮೂಲಕ ಹಾದುಹೋಗುತ್ತದೆ. ಸಿಂಧನೂರು, ಕೊಪ್ಪಳ, ಹುನಗುಂದ, ಗದಗ ಮುಂತಾದ ಪಟ್ಟಣಗಳಿಗೆ ಮಾರ್ಗಗಳಿವೆ. ಊರಿನ ಉತ್ತರಕ್ಕೆ 4ಕಿಮೀ ದೂರದಲ್ಲಿ ಮುಸ್ಕಿ ನದಿ ಹರಿಯುತ್ತದೆ.

ಇದು ಮುಖ್ಯ ವ್ಯಾಪಾರ ಕೇಂದ್ರ. ಜೋಳ, ಸಜ್ಜೆ, ಸೇಂಗ, ಔಡಲ ಮುಂತಾದ ಬೆಳೆಗಳ ವ್ಯಾಪಾರ ವಿಪುಲವಾಗಿ ಆಗುತ್ತದೆ. ವ್ಯಾಸಪೂರ್ಣಿಮೆಯಂದು ನಡೆಯುವ ಅಡವಿರಾಯ ಜಾತ್ರೆ ಈ ಊರಿನ ಮುಖ್ಯ ಆಕರ್ಷಣೆ. (ಡಿ.ಕೆ.; ಎಸ್.ಜಿ.ಕೆ.)

**ಕುಳ್ಳಿ, ಜೆ. ಎಸ್. :** 1936-82. ಹೆಸರಾಂತ ಭಾಷಾವಿಜ್ಞಾನಿ, ವಿದ್ವಾಂಸ. ಇವರ ಪೂರ್ಣ ಹೆಸರು ಜಯವಂತ ಶಿವರುದ್ರಪ್ಪ ಕುಳ್ಳಿ. ಇಂದಿನ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಬನಹಟ್ಟಿ ಗ್ರಾಮದಲ್ಲಿ 1936 ಸೆಪ್ಟೆಂಬರ್ 14ರಂದು ನೇಕಾರ ಕುಟುಂಬದಲ್ಲಿ ಜನಿಸಿದರು. ತಂದೆ ಶಿವರುದ್ರಪ್ಪ, ತಾಯಿ ಆನಂದವ್ವ. ಕುಳ್ಳಿ ಇವರ ಮನೆತನದ ಹೆಸರು. ಇವರಿಗೆ ಆರು ವರ್ಷವಾದಾಗ ತಂದೆ ತಾಯಿಯರನ್ನು ಕಳೆದುಕೊಂಡು ಕಷ್ಟದಲ್ಲಿ ಬೆಳೆದರು.

ಇವರು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಹುಟ್ಟೂರಿನಲ್ಲೇ ಮುಗಿಸಿದರು (1955). ಬಾಗಲಕೋಟೆ

ಬಸವೇಶ್ವರ ಕಾಲೇಜಿನಲ್ಲಿ ಸಂಸ್ಕೃತವನ್ನು ವಿಶೇಷ ವಿಷಯವಾಗಿ ತೆಗೆದುಕೊಂಡು ಉನ್ನತ ದರ್ಜೆಯಲ್ಲಿ ಬಿ.ಎ. ಪದವಿಯನ್ನು ಪಡೆದರು. ಮುಧೋಳದ ಪ್ರೌಢಶಾಲೆಯಲ್ಲಿ ಕೆಲಕಾಲ ಸಂಸ್ಕೃತ ಶಿಕ್ಷಕರಾಗಿ ದುಡಿದರು. ಅನಂತರ ಓದನ್ನು ಮುಂದುವರಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಸ್ಕೃತ ಎಂ.ಎ.ಪದವಿಯನ್ನು ಮೊದಲ ಶ್ರೇಣಿಯಲ್ಲಿ ಸಿ.ಡಿ.ದೇಶಮುಖ ಸುವರ್ಣಪದಕದೊಂದಿಗೆ ಪಡೆದರು (1961). ವಚನ ಸಾಹಿತ್ಯ ಸಂಗ್ರಹ ಮತ್ತು ಪ್ರಕಟಣೆಯ ಕಾರ್ಯದಲ್ಲಿ ಆರ್.ಸಿ.ಹಿರೇಮಠ ಅವರೊಂದಿಗೆ ಕೆಲಸ ಮಾಡಿದರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಸಹಾಯಕ ನಿರ್ದೇಶಕರಾಗಿಯೂ ದುಡಿದರು. 1967ರಲ್ಲಿ ಮದರಾಸಿನ ಅಣ್ಣಾಮಲೈ ವಿಶ್ವವಿದ್ಯಾಲಯದ ಭಾಷಾವಿಜ್ಞಾನದ ಉನ್ನತ ಕೇಂದ್ರದಲ್ಲಿ ಭಾಷಾವಿಜ್ಞಾನ ಎಂ.ಎ. ಪದವಿ ಗಳಿಸಿಕೊಂಡರು. ಇದೇ ವರ್ಷ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಭಾಷಾವಿಜ್ಞಾನದ ಅಧ್ಯಾಪಕರಾದರು. ಕೇಶಿರಾಜಾಸ್ ಶಬ್ದಮಣಿ ದರ್ಪಣ ಎ ಲಿಂಗ್ವಿಸ್ಟಿಕ್ ಅನಾಲಿಸಿಸ್ ಎಂಬ ವಿಷಯವಾಗಿ ಆರ್.ಸಿ.ಹಿರೇಮಠ ಅವರ ಮಾರ್ಗದರ್ಶನದಲ್ಲಿ ಭಾಷಾವಿಜ್ಞಾನದಲ್ಲಿ ಪಿಎಚ್.ಡಿ. ಪದವಿ ಪಡೆದರು (1971).

ಇವರ ಸಂಶೋಧನ ಅಧ್ಯಯನ ವ್ಯಾಪಕವಾದದ್ದು. ಇವರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಐವತ್ತಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಭಾಷಾವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷಾವಿಜ್ಞಾನ ಕ್ಷೇತ್ರ ಅಷ್ಟಾಗಿ ಬೆಳೆಯದಿದ್ದ ಕಾಲದಲ್ಲಿ ಅದರ ಬೆಳವಣಿಗೆಗೆ ಶ್ರಮಿಸಿದ ಇವರು ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಆಧುನಿಕ ಭಾಷಾವಿಜ್ಞಾನ (1967), ವರ್ಣಾತ್ಮಕ ಭಾಷಾ ಸೌಧ (1972), ಭಾಷಾವಿಜ್ಞಾನ (1971), ಐತಿಹಾಸಿಕ ಭಾಷಾವಿಜ್ಞಾನ (1974), ಅನುವಾದ ಕಲೆ (1974), ಕೇಶಿರಾಜಾಸ್ ಶಬ್ದಮಣಿದರ್ಪಣ - ಎ ಲಿಂಗ್ವಿಸ್ಟಿಕ್ ಅನಾಲಿಸಿಸ್ (1976), ಹಿಸ್ಟರಿ ಆಫ್ ಗ್ರಮ್ಯಾಟಿಕಲ್ ಥಿಯರೀಸ್ ಇನ್ ಕನ್ನಡ (1999) - ಇವು ಇವರ ಕೆಲವು ಮುಖ್ಯ ಕೃತಿಗಳು.

ಇವರು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನ ಅನೇಕ ಯೋಜನೆಗಳನ್ನು ಕೈಗೊಂಡಿದ್ದರು. ಕೊರವ ಡಯಲೆಕ್ಟ್ ಆಫ್ ಕನ್ನಡ, ಗೋಂಡಿ ಡಯಲೆಕ್ಟ್ ಆಫ್ ಕನ್ನಡ, ಜೋಳ್ನೈನಾಯಕನ್ ಲ್ಯಾಂಗ್ವೇಜ್ ಇವು ಪ್ರಮುಖವಾದವು.

ಕುಳ್ಳಿಯವರ ಸಾಧನೆ, ಕ್ರಿಯಾಶೀಲತೆ, ವಿದ್ವತ್ತು ಮತ್ತು ಪರಿಶ್ರಮಕ್ಕೆ ಸಂದ ಗೌರವ ಪುರಸ್ಕಾರಗಳು ಅನೇಕ. ಇವರು ಆಲ್ ಇಂಡಿಯ ದ್ರವಿಡಿಯನ್ ಲಿಂಗ್ವಿಸ್ಟಿಕ್ಸ್ ಅಸೋಸಿಯೇಷನ್ ಕಾರ್ಯದರ್ಶಿ (1977-80), ಭಾಷಾವಿಜ್ಞಾನದ ಬೇಸಗೆ ಶಿಬಿರ ಕಾರ್ಯದರ್ಶಿ (1962),

ಪ್ರಾಕೃತ, ಸಂಸ್ಕೃತ ಮತ್ತು ದಕ್ಷಿಣ ಭಾರತೀಯ ಭಾಷೆಗಳ ವಿಚಾರಗೋಷ್ಠಿಯ ನಿರ್ದೇಶಕ (1978), ಅಂತಾರಾಷ್ಟ್ರೀಯ ಭಾಷಾವಿಜ್ಞಾನ ಶಾಲೆಯ ಹಿರಿಯ ಸಂಶೋಧಕ (1980-81) ಆಗಿದ್ದರು. ಇವರ ವರ್ಣನಾತ್ಮಕ ಭಾಷಾವಿಜ್ಞಾನ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ (1971).

ಜಯವಂತ ಅವರು ಸರಳರೂ ಉತ್ತಮ ಜನಾನುರಾಗಿ ಅಧ್ಯಾಪಕರೂ ಆಗಿದ್ದರು. ಇವರು 1982 ಡಿಸೆಂಬರ್ 29ರಂದು ನಿಧನಹೊಂದಿದರು. (ಪಿ.ಎಸ್.ಆರ್.)

**ಕೂಡಲ ಸಂಗಮ** (ಸಂಗಮ): ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿಗೆ ಸೇರಿದ ಗ್ರಾಮ, ಪವಿತ್ರ ಕ್ಷೇತ್ರ; ಹುನಗುಂದದ ಉತ್ತರಕ್ಕೆ 19ಕಿಮೀ ದೂರದಲ್ಲಿದೆ. ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಇಲ್ಲಿ ಕೂಡುತ್ತವೆ.

ಐಕ್ಯಮಂಟಪ

ಇಲ್ಲಿ ಚಾಳುಕ್ಯ ಶೈಲಿಯಲ್ಲಿ ಕಟ್ಟಿರುವ ಸಂಗಮೇಶ್ವರ ದೇವಾಲಯವಿದೆ. ಇಲ್ಲಿರುವ ಶಿವಲಿಂಗ ಪ್ರಸಿದ್ಧವಾದದ್ದು. ವರ್ಷಕ್ಕೆ ಒಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ. 12ನೆಯ ಶತಮಾನದಲ್ಲಿ ಜಾತವೇದಮುನಿ ಇಲ್ಲಿ ಒಂದು ವಿದ್ಯಾಕೇಂದ್ರವನ್ನು ಸ್ಥಾಪಿಸಿದ್ದ. ಈ ವಿದ್ಯಾಕೇಂದ್ರದಲ್ಲಿ ಬಸವೇಶ್ವರ, ಚೆನ್ನಬಸವಣ್ಣ, ಅಕ್ಕನಾಗಮ್ಮ ಮೊದಲಾದವರು ಇದ್ದರೆಂದು ಹೇಳುತ್ತಾರೆ. ಬಸವೇಶ್ವರರ ಬಾಲ್ಯ ಮತ್ತು ವಿದ್ಯಾಭ್ಯಾಸ ಇಲ್ಲೇ ಆಯಿತು. ಇವರ ವಚನಗಳ ಅಂಕಿತದ ಕೂಡಲ ಸಂಗಮದೇವ ಈ ಸಂಗಮನಾಥನೇ. ಕೂಡಲಸಂಗಮದೇವ ಬಸವೇಶ್ವರರ ಆರಾಧ್ಯದೈವ. ಬಸವಣ್ಣನವರು ಕಲ್ಯಾಣವನ್ನು ಬಿಟ್ಟಮೇಲೆ ಕೂಡಲ ಸಂಗಮಕ್ಕೆ ಬಂದು ಅಲ್ಲಿ ಐಕ್ಯರಾದರು. ಬಸವೇಶ್ವರರ ಸಂಪರ್ಕದಿಂದ ಕೂಡಲಸಂಗಮ ಪವಿತ್ರಕ್ಷೇತ್ರವಾಗಿದೆ. ವರ್ಷಂಪ್ರತಿ ಇಲ್ಲಿ ಜಾತ್ರೆ ನಡೆಯುತ್ತದೆ. (ಪಿ.ಬಿ.ಡಿ.)

**ಕೂಡಲಿ** : ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ ನಗರದ ಈಶಾನ್ಯಕ್ಕೆ 16ಕಿಮೀ ದೂರದಲ್ಲಿ ಇರುವ ಗ್ರಾಮ. ತುಂಗಾ ಮತ್ತು ಭದ್ರಾ ನದಿಗಳು ಇಲ್ಲಿ ಸಂಗಮವಾಗುವುದರಿಂದ ಇದಕ್ಕೆ ಕೂಡಲಿ ಎಂಬ ಹೆಸರು ಬಂದಿದೆ. ದಕ್ಷಿಣ ವಾರಾಣಸಿ, ಮಹಾಪ್ರಯಾಗ, ಋಷ್ಯಾಶ್ರಮ ಎಂದೂ ಪ್ರಸಿದ್ಧವಾಗಿರುವ, ಶಂಕರಾಚಾರ್ಯರ ಪರಂಪರೆಗೆ ಸೇರಿದ ಒಂದು ಸ್ಮಾರ್ತ ಮಠವಿದೆ. ಇದು ಸು.600 ವರ್ಷಕ್ಕೂ ಹಳೆಯದು ಎನ್ನಲಾಗಿದೆ. ಒಂದು ಮಾಧ್ವ ಮಠವೂ (ಆರ್ಯಮಠ) ಉಂಟು.

ಈ ಮಠಗಳಲ್ಲಿ ಅನೇಕ ತಾಮ್ರ ಮತ್ತು ಶಿಲಾಶಾಸನಗಳು ದೊರಕಿವೆ. ಸ್ಮಾರ್ತ ಮಠದಲ್ಲಿರುವ ಪ್ರಾಚೀನ ಶಾಸನದಲ್ಲಿ ಹೊಯ್ಸಳ ದೊರೆ ಮೂರನೆಯ ಬಲ್ಲಾಳ ರಾಮನಾಥ ದೇವಾಲಯಕ್ಕೆ ಕೊಟ್ಟ ದಾನಗಳ ವಿವರಗಳಿವೆ. ಮಾಧ್ವ ಮಠದಲ್ಲಿರುವ ಶಾಸನವೊಂದು ವಿಜಯನಗರದ ಅರಸ ಕೃಷ್ಣದೇವರಾಯ 1527ರಲ್ಲಿ ನಾರಾಯಣ ಯತೀಂದ್ರರಿಗೆ ಐದು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟ ವಿಚಾರವನ್ನು ತಿಳಿಸುತ್ತದೆ. ಇದೇ ಅರಸನ ಇನ್ನೊಂದು ಶಾಸನ ಬ್ರಹ್ಮಣ್ಯತೀರ್ಥರ ಶಿಷ್ಯರಾದ ವ್ಯಾಸಯತೀಂದ್ರರಿಗೆ ಕೊಟ್ಟ ದಾನಗಳ ವಿವರಗಳನ್ನು ತಿಳಿಸುತ್ತದೆ. ಇತರ ಅನೇಕ ಶಾಸನಗಳು ಮತ್ತು ಕಾಗದದ ದಾಖಲೆಗಳಿಂದ ಕೂಡಲಿಯ ಮಠಗಳು ರಾಜಪೋಷಣೆಯನ್ನು ದೊರಕಿಸಿಕೊಂಡಿದ್ದುವೆಂದು ತಿಳಿಯುತ್ತದೆ. 1791ರಲ್ಲಿ ಮರಾಠರು ಈ ಸ್ಥಳದ ಮೇಲೆ ದಾಳಿ ನಡೆಸಿದ್ದರು. ಹನ್ನೊಂದನೆಯ ಶತಮಾನದಲ್ಲಿ ಚೋಳರಿಗೂ ಚಾಳುಕ್ಯರಿಗೂ ಕೂಡಲ ಸಂಗಮದಲ್ಲಿ ಯುದ್ಧ ನಡೆಯಿತು. ಈ ಕೂಡಲಸಂಗಮ ಕೂಡಲಿಯೇ ಎಂದು ಪ್ರಸಿದ್ಧ ಶಾಸನಶಾಸ್ತ್ರಜ್ಞ ಹುಲ್ಷ್ ಭಾವಿಸಿದ್ದರು.

ಇಲ್ಲಿ ಬ್ರಹ್ಮೇಶ್ವರ, ನರಸಿಂಹ ಮತ್ತು ರಾಮೇಶ್ವರ ಎಂಬ ಪ್ರಾಚೀನ ದೇವಾಲಯಗಳಿವೆ. (ಎ.ವಿ.ಎನ್.,ಎಚ್.ವಿ.ಎಸ್.)

**ಕೂಡಿಗೆ** : ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಒಂದು ಗ್ರಾಮ. ಕುಶಾಲನಗರದ ಉತ್ತರಕ್ಕೆ ಸುಮಾರು 6ಕಿಮೀ ದೂರದಲ್ಲಿ ಕುಶಾಲನಗರ-ಸೋಮವಾರ ಪೇಟೆ ಮಾರ್ಗದ ಮಧ್ಯದಲ್ಲಿದೆ. ಇದು ಮಾದರಿ ಪಶುಸಂಗೋಪನದ ಮತ್ತು ವ್ಯವಸಾಯದ ಕೇಂದ್ರ. ಬತ್ತ, ರಾಗಿ ಮತ್ತು ಇತರ ಅನೇಕ ಬೆಳೆಗಳ ಸಂಶೋಧನೆಗಾಗಿ ಸು.202 ಹೆಕ್ಟೇರ್ ಭೂಮಿಯನ್ನು ಬಳಸಿಕೊಳ್ಳಲಾಗಿದೆ. ರೇಷ್ಮೆ ವ್ಯವಸಾಯವೂ ಇದೆ. ರೇಷ್ಮೆ ಗೂಡುಗಳನ್ನು ಮೈಸೂರಿನ ಸರ್ಕಾರಿ ರೇಷ್ಮೆ ಕಾರ್ಖಾನೆಗೆ ಕಳಿಸುತ್ತಾರೆ. ಈ ಕೇಂದ್ರದಲ್ಲಿ ಉತ್ತಮ ತಳಿಯ ಹಸುಗಳನ್ನು ಸಾಕುತ್ತಾರೆ. ಇಲ್ಲಿ ಪಶುಗಳ ಕೃತಕ ಗರ್ಭಧಾರಣ ಕೇಂದ್ರವನ್ನು ತೆರೆಯಲಾಗಿದೆ. 1952ರಲ್ಲಿ ಪ್ರಾರಂಭವಾದ ಈ ಕೇಂದ್ರ ಪಶು ಆಹಾರ ಉತ್ಪಾದನೆಯನ್ನೂ ಕೈಗೊಂಡಿದ್ದು ಪಶುಪಾಲಕರ ಮೆಚ್ಚುಗೆಗಳಿಸಿದೆ. ಪಶು ಆಹಾರ ಸಂಶೋಧನೆಯನ್ನು 1954ರಿಂದ ಕೈಗೊಳ್ಳಲಾಗಿದೆ. (ವಿ.ಜಿ.ಕೆ.)

**ಕೂಡುವಳಿ** : ಗಂಡ ಬಿಟ್ಟ ಅಥವಾ ಗಂಡ ಸತ್ತ ಹೆಣ್ಣು ತಾನು ಒಪ್ಪಿದ ಬೇರೊಬ್ಬನೊಡನೆ ಸಂಸಾರಿಕ ಜೀವನ ನಡೆಸಲು ಅನುವು ಮಾಡಿಕೊಟ್ಟಿರುವ ಒಂದು ಸಾಮಾಜಿಕ ಪದ್ಧತಿ. ಕೂಟಿಕೆ, ಕೂಡಿಕೆ, ಸೀರುಡಿಕೆ, ಉಡಿಕೆ ಎಂಬ ಪದಗಳು ಇದೇ ಅರ್ಥದಲ್ಲಿ ಬಳಕೆಯಲ್ಲಿವೆ.

ಈ ಪದ್ಧತಿ ಸಮಾಜದ ಕೆಲವು ವರ್ಗಗಳಲ್ಲಿ ಮಾತ್ರ ಕಂಡುಬರುತ್ತದೆ. ಪ್ರಾಯವೂ ಸಾಂಸಾರಿಕ ಅಭಿಲಾಷೆಯೂ ಇರುವ ಹೆಣ್ಣು ಮತ್ತೆ ಸಂಸಾರಿಯಾಗುವ ಸೌಲಭ್ಯವನ್ನು ಕೂಡುವಳಿ ಆಕೆಗೆ ಒದಗಿಸಿದೆ. ಪ್ರಾಯ ಮೀರಿದ್ದಾಗ ಅಥವಾ ಪ್ರಾಯದ ಮಕ್ಕಳಿದ್ದಾಗ ಕೂಡುವಳಿಗೆ ಅವಕಾಶ ಉಂಟೆ ಎಂಬುದು ವೈಯಕ್ತಿಕ ಸಮಸ್ಯೆ. ಗಂಡು ಹೆಣ್ಣು ಒಪ್ಪಿದಲ್ಲಿ ಆಗಬಹುದು. ಕೆಲವು ಆದಿವಾಸಿ ಜನಾಂಗಗಳವರಲ್ಲಿ ಪ್ರಾಯದ ಮಕ್ಕಳಿದ್ದಾಗಲೂ ಕೂಡುವಳಿ ನಡೆಯುತ್ತದೆ.

ತಂದೆ ತಾಯಿಗಳು ಹಾಗೂ ಕುಲಸ್ಥರು ಒಪ್ಪಿಯೇ ವಿಧಿವತ್ತಾಗಿ ಕೂಡುವಳಿ ಮಾಡಿಕೊಡುತ್ತಾರೆ. ಅಂದರೆ ಹೆಣ್ಣು ಗಂಡುಗಳನ್ನು ಕೂರಿಸಿ ಹಸೆ ಹಚ್ಚುವುದು, ಮುತ್ತೈದೆಯರಿಂದ ಸೇಸೆ ಇಡಿಸಿ ಹರಸಿಸುವುದು, ಕುಲಸ್ಥರಿಗೆ ಊಟ ಹಾಕಿಸುವುದು ಮುಂತಾದುವೆಲ್ಲ ಯಥಾವತ್ತಾಗಿ ಜರುಗುತ್ತವೆ. ಇಷ್ಟೆಲ್ಲ ವೆಚ್ಚವನ್ನು ನಿಭಾಯಿಸಲಾಗದವರು ಕೇವಲ ಒಂದು ಸೀರೆ ಉಡಿಸಿ ಹಿರಿಯರ ಅನುಮತಿ ಆಶೀರ್ವಾದಗಳೊಂದಿಗೆ ಹೆಣ್ಣನ್ನು ಕರೆದೊಯ್ಯುತ್ತಾರೆ. ಹೀಗೆ ಎರಡನೆಯ ಸಂಬಂಧ ಬೆಳೆಸುವ ಮನೆತನದವರನ್ನು ಕೂಟಿಕೆ (ಕೂಡಿಕೆ) ಸಾಲಿನವರು ಎಂದು ಹೀಗಳೆದು ಕೊಡುಕೊಳೆ ಮಾಡದವರೂ ಇದ್ದಾರೆ. (ಎಸ್‌ಯು.)

**ಕೂಡ್ಲಿಗಿ :** ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತಕೇಂದ್ರ. ಬಳ್ಳಾರಿಯ ನೈಋತ್ಯಕ್ಕಿರುವ ಈ ತಾಲ್ಲೂಕನ್ನು ಪಶ್ಚಿಮದಲ್ಲಿ ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕುಗಳೂ ಉತ್ತರದಲ್ಲಿ ಹಗರಿಬೊಮ್ಮನಹಳ್ಳಿ ಮತ್ತು ಸಂಡೂರು ಆಗ್ನೇಯದಲ್ಲಿ ಚಿತ್ರದುರ್ಗ ಜಿಲ್ಲೆಯೂ ದಕ್ಷಿಣದಲ್ಲಿ ದಾವಣಗೆರೆ ಜಿಲ್ಲೆಯೂ ಸುತ್ತುವರಿದಿವೆ. ಇದು ಹೊಸಪೇಟೆ ಉಪವಿಭಾಗಕ್ಕೆ ಸೇರಿದೆ. ಕೊಟ್ಟೂರು, ಹೊಸಹಳ್ಳಿ, ಕೂಡ್ಲಿಗಿ ಮತ್ತು ಗುಡಿಕೋಟೆ ಹೋಬಳಿಗಳು. 82 ಗ್ರಾಮಗಳಿವೆ. ವಿಸ್ತೀರ್ಣ 1,825ಚಕಿಮೀ. ಜನಸಂಖ್ಯೆ 2,71,890.

ಈ ತಾಲ್ಲೂಕಿನಲ್ಲಿ ಕೂಡ್ಲಿಗಿ ಮತ್ತು ಗುಡಿಕೋಟೆ ಬೆಟ್ಟಗಳ ಸಾಲಿದೆ. ಕೂಡ್ಲಿಗಿ ಬೆಟ್ಟಸಾಲು ಆನೆಕಲ್ಲುಗುಡ್ಡದ (780 ಮೀ) ಉತ್ತರದಲ್ಲಿ 5ಕಿಮೀ ದೂರದಲ್ಲಿ ಪ್ರಾರಂಭವಾಗಿ ಕೂಡ್ಲಿಗಿ ಪಟ್ಟಣದ ಉತ್ತರ ಮತ್ತು ಪೂರ್ವದಲ್ಲಿ ಹಬ್ಬಿ ಜರಮಲಿದುರ್ಗದ 890 ಮೀ ಆಗ್ನೇಯದಲ್ಲಿ ಕೊನೆಗೊಳ್ಳುತ್ತದೆ. ಗುಡಿಕೋಟೆ ಶ್ರೇಣಿ ಸಂಡೂರು ತಾಲ್ಲೂಕಿನ ಚೋರನೂರಿನ ಬಳಿ ಪ್ರಾರಂಭವಾಗಿ ಆಗ್ನೇಯ ದಿಕ್ಕಿಗೆ ಹಬ್ಬಿ ಗುಡಿಕೋಟೆ ಕೋಟೆಯ ಉತ್ತರ ಭಾಗದಲ್ಲಿ ಮುಂದುವರಿದು ಚಿನ್ನಹಗರಿ ಕಣಿವೆಯನ್ನು ದಾಟುತ್ತದೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಈ ಶ್ರೇಣಿಯ 919 ಮತ್ತು 851ಮೀ. ಎತ್ತರವಿರುವ ಎರಡು ಬೆಟ್ಟಗಳುಂಟು. ಈ ಪ್ರದೇಶ ಒರಟು ಭೂಮಿಯ ಏರಿಳಿತಗಳಿಂದ ಕೂಡಿದ್ದು. ಚಿನ್ನಹಗರಿ ನದಿ ಕೂಡ್ಲಿಗಿ ತಾಲ್ಲೂಕಿನ ದಕ್ಷಿಣ ಮತ್ತು ಆಗ್ನೇಯ ದಿಕ್ಕಿನಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ಈ ತಾಲ್ಲೂಕನ್ನು ಬೇರ್ಪಡಿಸಿ (ಜನಗಹಳ್ಳ) ಹರಿಯುತ್ತದೆ. ಈ ಭಾಗದಲ್ಲಿ 8ಕಿಮೀ ಹರಿದ ಅನಂತರ ಹಗರಿ ನದಿಯನ್ನು ರಾಯದುರ್ಗಕ್ಕೆ ಉತ್ತರದಲ್ಲಿ ಕೂಡಿಕೊಳ್ಳುತ್ತದೆ. ಕೂಡ್ಲಿಗಿ ತಾಲ್ಲೂಕಿನ ಪೂರ್ವಭಾಗಕ್ಕೆ ಈ ನದಿಯಿಂದ ನೀರೊದಗುತ್ತದೆ. ಈ ನದಿಗೆ ಕುಮತಿ ಗ್ರಾಮದ ಹತ್ತಿರ ಭಾಗದ ಬೆಟ್ಟ ಪ್ರದೇಶಕ್ಕೆ ಹೊಂದಿಕೊಂಡ ಹಂಪಾಪಟ್ಟಣ ಅಥವಾ ಬೆಳ್ಳಹುಣಿಸಿ ತೊರೆಯಿಂದ ಸ್ವಲ್ಪ ನೀರೊದಗುವುದು.

ಈ ತಾಲ್ಲೂಕಿನ ನಿಂಬಳಪುರದ ದಕ್ಷಿಣದ ಕೀಕಲಗುಡ್ಡದಲ್ಲಿ ಪದ್ಮರಾಗ ಶಿಲಾ ನಿಕ್ಷೇಪವುಂಟು. ತಾಲ್ಲೂಕಿನ ಬಹುಭಾಗ ಬೆಣಚುಕಲ್ಲು ಮತ್ತು ಗ್ರಾನೈಟ್ ಶಿಲೆಗಳ ಪ್ರದೇಶ.

ಇಲ್ಲಿಯದು ಮರಳು ಮಿಶ್ರಿತ ಕೆಂಪು ಮತ್ತು ಕಪ್ಪು ಮಣ್ಣು ಭೂಮಿ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 7390ಮಿಮೀ. ತಾಲ್ಲೂಕಿನಲ್ಲಿ ಹತ್ತು ದೊಡ್ಡ ಕೆರೆಗಳೂ ಸೇರಿದಂತೆ ಒಟ್ಟು 73 ಕೆರೆಗಳಿವೆ. ಬತ್ತ, ಜೋಳ, ನವಣೆ, ಬಾಜ್ರ, ತೊಗರಿ, ನೆಲಗಡಲೆ, ಕಬ್ಬು, ಹತ್ತಿ, ಮೆಣಸಿನಕಾಯಿ ಇವು ಇಲ್ಲಿಯ ಬೆಳೆಗಳು. ಕೃಷಿಯೊಂದಿಗೆ ಪಶುಪಾಲನೆ ಉಪಕಸಬಾಗಿದೆ. ತಾಲ್ಲೂಕಿನಲ್ಲಿ ಹತ್ತಿ ಗಿರಣಿಗಳು, ಎಣ್ಣೆ ಕಾರ್ಖಾನೆಗಳು ಇವೆ. ಕೈಮಗ್ಗದ ಬಟ್ಟೆ ತಯಾರಿಕೆ, ಕಂಬಳಿ, ಬುಟ್ಟಿ ಚಾಪೆ ತಯಾರಿಕೆ ಇತರ ಕಸಬುಗಳು.

ಕೊಟ್ಟೂರು, ಚಿಕ್ಕಜೋಗಿಹಳ್ಳಿ, ಸರ್ವೋದಯ ಗ್ರಾಮ ಇವು ತಾಲ್ಲೂಕಿನ ಕೆಲವು ಮುಖ್ಯ ಗ್ರಾಮಗಳು. ಗುಡಿಕೋಟೆ, ಜರಮಲಿ ಇತಿಹಾಸಪ್ರಸಿದ್ಧ ಸ್ಥಳಗಳು. ಕೊಟ್ಟೂರಿನಿಂದ ಸು.10ಕಿಮೀ ವಾಯವ್ಯಕ್ಕಿರುವ ಅಂಬಲಿಯಲ್ಲಿ 12ನೆಯ ಶತಮಾನದ ಚಾಳುಕ್ಯ ಶೈಲಿಯ ಕಲ್ಲೇಶ್ವರ ದೇವಾಲಯವಿದೆ. ಕೂಡ್ಲಿಗಿಯ ದಕ್ಷಿಣಕ್ಕೆ ಸು.20ಕಿಮೀ ದೂರದಲ್ಲಿರುವ ಗುಣಸಾಗರದಲ್ಲಿ ಇರುವ ದೇವಾಲಯ ಗೋಪಾಲ ಕೃಷ್ಣನದು. ಇಲ್ಲಿನ ವಿಗ್ರಹ ಬಹು ಸುಂದರ. ವೀರವದುರ್ಗ ಎಂಬಲ್ಲಿ ರಮ್ಯ ಸನ್ನಿವೇಶದಲ್ಲಿ ಭದ್ರವಾದ ಕೋಟೆಯಿತ್ತು. ಟಿಪ್ಪುಸುಲ್ತಾನ ಇದರ ಮೇಲೆ ದಾಳಿ ಮಾಡಿ ಅಸಫಲನಾದನಂತೆ. ಕೊಟ್ಟೂರಿನಿಂದ ನೈಋತ್ಯಕ್ಕೆ ತಾಲ್ಲೂಕಿನ ಎಲ್ಲೆಯ ಬಳಿ ಇರುವ ಉಜ್ಜನಿ ಪ್ರಸಿದ್ಧ ವೀರಶೈವ ಕೇಂದ್ರ. ಇಲ್ಲಿನ ವೀರಶೈವ ಮಠ ಉಜ್ಜಯಿನಿ ಸದ್ಧರ್ಮಪೀಠ ಎಂದು ಹೆಸರಾಗಿದೆ. ಮಠವೂ ಅದರಲ್ಲಿನ ಸಿದ್ದೇಶ್ವರ ದೇವಾಲಯವೂ ಗಮನಾರ್ಹ ವಾಸ್ತುಕೃತಿಗಳು. ಇಲ್ಲಿ ಮಠದ ವತಿಯಿಂದ ನಡೆಯುವ ಪ್ರೌಢಶಾಲೆ ಮತ್ತು ಸಂಸ್ಕೃತ ಪಾಠಶಾಲೆ ಇವೆ. ಉಜ್ಜಯಿನಿಯಿಂದ ಸು.40ಕಿಮೀ ದೂರದಲ್ಲಿರುವ ಕಾನಮಡುವಿನಲ್ಲಿ ಒಂದು ವೀರಶೈವ ಮಠ ಮತ್ತು ಶರಣಾರ್ಯರೆಂಬ ಸಂತರ ಸಮಾಧಿ ಇವೆ. ಈ ತಾಲ್ಲೂಕಿನ ಶಿಡಿಗಲ್ಲು ಎಂಬ ಗ್ರಾಮ ಇತ್ತೀಚಿನವರೆಗೂ ಕಬ್ಬಿಣ ಕರಗಿಸಿ ಸುತ್ತಲ ಪ್ರದೇಶಕ್ಕೆ ಒದಗಿಸುತ್ತಿತ್ತು. ನಿಂಬಳಗಿರಿ ಅಡಕೆ ಬೆಳೆಗೆ ಪ್ರಸಿದ್ಧ. ಇಲ್ಲಿ ಒಳ್ಳೆಯ ಕಂಬಳಿಗಳು ತಯಾರಾಗುತ್ತವೆ. ಕೂಡ್ಲಿಗಿಗೆ ಸು.3ಕಿಮೀ ದೂರದಲ್ಲಿರುವ ಅಮರ ದೇವರ ಗುಡ್ಡದಲ್ಲಿ ಸು.1.71 ಎಕರೆಗಳಷ್ಟು ವಿಸ್ತಾರವಾಗಿ ಹಬ್ಬಿರುವ ದೊಡ್ಡ ಆಲದ ಮರವಿದೆ.

ಕೂಡ್ಲಿಗಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಜನಸಂಖ್ಯೆ 21,855. ಬಳ್ಳಾರಿ ನಗರದ ನೈಋತ್ಯಕ್ಕೆ ಸುಮಾರು 80ಕಿಮೀ ದೂರದಲ್ಲಿದೆ. ಕೂಡ್ಲಿಗಿಯ ನೈಋತ್ಯದಲ್ಲಿ ಪ್ರಸಿದ್ಧ ಸಿದ್ದೇಶ್ವರ ದೇವಾಲಯವಿದೆ. *

**ಕೂಡ್ಲೂರು :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಒಂದು ಗ್ರಾಮ. ಚನ್ನಪಟ್ಟಣಕ್ಕೆ 6ಕಿಮೀ ದೂರದಲ್ಲಿ ಕಣ್ವ ನದಿಯ ದಡದಲ್ಲಿ ಚೋಳರ ಪುರಾತನ ಪಟ್ಟಣವಾದ ಚಿಕ್ಕ ಮಳೂರು ಬಳಿಯಲ್ಲಿದೆ. ಚೋಳರ ಕಾಲದಲ್ಲಿ ಇದೊಂದು ಅಗ್ರಹಾರ ಹಾಗೂ ಪ್ರಸಿದ್ಧ ಪಟ್ಟಣವಾಗಿತ್ತು. ತಮಿಳು ಶಾಸನಗಳಲ್ಲಿ ಈ ಊರನ್ನು ಕೂಡಲೂರು, ರಾಜರಾಜಚತುರ್ವೇದಿಮಂಗಳ ಎಂದು ಕರೆದಿದೆ. 1767ರಲ್ಲಿ ಹೈದರ್ ಅಲಿ ಈ ಗ್ರಾಮವನ್ನು ಸೈಯದ್ ಮಹಮ್ಮದ್ ಅಖಿಲ್ ಷಾ ಖಾದ್ರಿ ಎಂಬುವನಿಗೆ ಫಕೀರರ ಧರ್ಮಕ್ಕೆ ಇನಾಮಾಗಿ (ದಾನವಾಗಿ) ಕೊಟ್ಟ ಸಂಗತಿ ಇಲ್ಲಿಯ ಶಾಸನವೊಂದರಲ್ಲಿದೆ.

ಚಲ್ಲಮ್ಮ, ಶ್ರೀರಾಮ, ಮಂಗಳೇಶ್ವರ, ನರಸಿಂಹ, ಮಳವಳ್ಳಮ್ಮ, ಮುಸಣಮ್ಮ, ಮೂಗಮ್ಮ, ಆಂಜನೇಯ, ಗಣಪತಿ, ಕರಿಚಲ್ಲಮ್ಮ ಮುಂತಾದ ದೇವಾಲಯಗಳು ಇಲ್ಲಿವೆ. ಚಲ್ಲಮ್ಮಗುಡಿ ಗಂಗರ ಕಾಲದ ಕಂಬಗಳುಳ್ಳ ಒಂದು ಚಿಕ್ಕ ಕಟ್ಟಡ. ಇದರ ಮುಂಭಾಗದಲ್ಲಿ ಉತ್ತಮ ಕೆತ್ತನೆಯಿಂದ ಕೂಡಿರುವ ಎರಡು ವೀರಗಲ್ಲುಗಳಿವೆ. ಮುಖ್ಯ ದೇವತೆಯಾದ ಲಕ್ಷ್ಮಿಗೆ ಕೇವಲ ಎರಡು ಕೈಗಳಿವೆ. ರಾಮ ದೇವಾಲಯದ ಗೋಡೆಗಳು ಬಿರುಕು ಬಿಟ್ಟಿವೆ. ಇದರ ಆವರಣದಲ್ಲಿ ಗಂಗರ ಶೈಲಿಯ ಸುಮಾರು ಒಂದೂವರೆ ಮೀಟರ್ ಎತ್ತರವಿರುವ ವಿಷ್ಣುವಿನ ವಿಗ್ರಹವಿದೆ. ಇದರ ನವರಂಗವನ್ನು ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಇಲ್ಲಿ ನಾಲ್ಕು ತಮಿಳು ಶಾಸನಗಳಿವೆ. ಮಣವಲರಮನ್ ಎಂಬ ದೇವರನ್ನು ಸುರಿಯ ಸೌರಿಯ ಪಂಡಿತನೆಂಬುವನು ಪ್ರತಿಷ್ಠೆ ಮಾಡಿದನೆಂದು 1200ರ ಶಾಸನದಲ್ಲಿ ಹೇಳಿದೆ. ಇದೇ ಕಾಲದ ಇನ್ನೊಂದು ಶಾಸನದಲ್ಲಿ ತಿರುಮಲಪಡಿ ರಾಜಸಿಂಗನ್ ಎಂಬ ಅಧಿಕಾರಿ ಕೂಡ್ಲೂರಿನ ಶರ್ಕುನರಾಮ ಪೆರುಮಾಳ್ ದೇವಸ್ಥಾನದ ಸಂಬಂಧ ಮಠವೊಂದಕ್ಕೆ ಜಮೀನನ್ನು ದತ್ತಿಯಾಗಿ ಕೊಟ್ಟನೆಂದಿದೆ. ಈ ದೇವಸ್ಥಾನದ ಹತ್ತಿರದಲ್ಲಿರುವ 1180ರ ಶಾಸನ ಹೊಯ್ಸಳ ಅರಸ ಎರಡನೆಯ ಬಲ್ಲಾಳನ ಕಾಲಕ್ಕೆ ಸೇರಿದ್ದು, ಶಾಂತರ ಬಸದಿಯ ಉಲ್ಲೇಖ ಹಾಗೂ ಬಸದಿಯೊಂದಕ್ಕೆ ತೋಟವನ್ನು ಕೊಟ್ಟ ದತ್ತಿಯ ಉಲ್ಲೇಖ ಇಲ್ಲಿಯ ಎರಡು ಶಾಸನಗಳಲ್ಲಿವೆ. 1828ರ ಕನ್ನಡ ಭಾಷೆಯ ಶಾಸನವೊಂದರಲ್ಲಿ ಕಾನಕಾನಹಳ್ಳಿಯ ವೆಂಕಟಲಕ್ಷ್ಮಿ ಎಂಬ ಮಹಿಳೆ ಕೂಡ್ಲೂರು ಶಾನುಭೋಗ ಕಪನಿಪತಯ್ಯನಿಂದ ತೆಂಗಿನ ತೋಟವೊಂದನ್ನು ಕ್ರಯಕ್ಕೆ ತೆಗೆದುಕೊಂಡು ಶ್ರೀರಾಮಸ್ವಾಮಿ ದೇವಸ್ಥಾನಕ್ಕೆ ವಾರ್ಷಿಕ ಕಟ್ಲೆ ನಡೆಸುವ ಉದ್ದೇಶಕ್ಕಾಗಿ ಕೊಟ್ಟಳೆಂದು ಹೇಳಿದೆ. ಈ ದೇವಸ್ಥಾನದ ವಾರ್ಷಿಕ ರಥೋತ್ಸವ ಶ್ರೀರಾಮ ನವಮಿಯಂದು ನಡೆಯುತ್ತದೆಂದು ಇದರಲ್ಲಿ ಹೇಳಿದೆ.

ಮಂಗಳೇಶ್ವರ ದೇವರ ಪಾಳು ದೇವಾಲಯ ಶ್ರೀರಾಮ ದೇವಾಲಯಕ್ಕೆ ಸಮೀಪದಲ್ಲಿದೆ. ಇದರಲ್ಲಿ ಒರಟಾದ ಕಂಬಗಳಿರುವ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗ ಇವೆ. ಇದು ಗಂಗರ ಕಾಲದಲ್ಲಿ ಕಟ್ಟಿದ್ದೆಂದು ಇಲ್ಲಿರುವ ಅನೇಕ ಶಾಸನಗಳಿಂದ ಹೇಳಬಹುದು. ಈ ದೇವಾಲಯಕ್ಕೆ ಹೇರಳವಾಗಿ ದತ್ತಿ ಕೊಟ್ಟ ಪ್ರಸ್ತಾಪಗಳು ತದನಂತರದ ಚೋಳರ ಶಾಸನಗಳಲ್ಲಿವೆ. ಇದರ ಗರ್ಭಗೃಹದಲ್ಲಿ ಗಂಗರ ಕಾಲದ ಶೈಲಿಯ ಎತ್ತರವಾದ ಲಿಂಗವಿದೆ. ಮುಖ್ಯ ಗರ್ಭಗೃಹದ ಬಲಭಾಗದ ಕೋಣೆಯಲ್ಲಿ ಇನ್ನೊಂದು ಲಿಂಗವಿದೆ. ಸಿಂಹದ ಮೇಲೆ ಕುಳಿತಿರುವ ಗಂಗರ ಕಾಲದ ಶೈಲಿಯ ಚಾಮುಂಡಿಯ ವಿಗ್ರಹವೂ ಇಲ್ಲಿದೆ. ಇದಕ್ಕೆ ಸಮೀಪದ ಶ್ರೀರಂಗದಮ್ಮನ ಚಿಕ್ಕಗುಡಿಯಲ್ಲಿ ಪುರಾತನ ಭೈರವ ವಿಗ್ರಹವಿದೆ. ಈ ದೇವಾಲಯಕ್ಕೆ ಸಮೀಪ ಕೊಳವೊಂದಿದೆ. ಇದಕ್ಕೆ ಸಮೀಪ ಚೋಳರ ಶೈಲಿಯ ಚಂದ್ರಶೇಖರ ದೇವರು, ಎಂಟು ಕೈಗಳುಳ್ಳ ದುರ್ಗಾ

ದೇವಿಯ ವಿಗ್ರಹಗಳು ಹಾಗೂ ಎರಡು ದೊಡ್ಡ ಶಿವಲಿಂಗಗಳಿವೆ. ಚಂದ್ರಶೇಖರಮೂರ್ತಿಯನ್ನು ಈ ಊರಿನ ಮಂಗಳೇಶ್ವರ ದೇವಾಲಯದಲ್ಲಿ ಸ್ಥಾಪಿಸಿರುವ ವಿಷಯವನ್ನು 1200ರ ಚೋಳರ ಶಾಸನವೊಂದರಲ್ಲಿ ಹೇಳಿದೆ. ಹೊಯ್ಸಳರ ಕಾಲದ 1305ರ ಶಾಸನವೊಂದರಲ್ಲಿ ಈ ದೇವಾಲಯಕ್ಕೆ ಕೊಟ್ಟ ದತ್ತಿಯ ಉಲ್ಲೇಖವಿದೆ. ಇದಕ್ಕೆ ಸಮೀಪವಿರುವ ಬಸವೇಶ್ವರ ದೇವಾಲಯದಲ್ಲಿ ನಿಂತ ಭಂಗಿಯ ದುರ್ಗಾ, ಮಹಿಷನ ಮುಂದೆ ನಿಂತಿರುವ ದುರ್ಗಾ, ಬ್ರಹ್ಮ, ಮಹಿಷಮರ್ದಿನಿ ಮುಂತಾದ ದೇವ ದೇವತೆಗಳ ಮೂರ್ತಿಗಳಿವೆ. ನರಸಿಂಹ ದೇವಾಲಯದ ಹೊರಗಡೆ ಒಂದು ಪಾರ್ಶ್ವದಲ್ಲಿ ಗುಂಡಮ್ಮ (ಬಹುಶಃ ಭುವನೇಶ್ವರಿ) ದೇವತೆಯ ಒಂದು ಚಿಕ್ಕ ಗುಡಿ ಇದೆ. ಇದರ ಸಮೀಪ ಎರಡು ಕೈಗಳಿರುವ ಗಂಡಸಿನ ಮೂರ್ತಿಯೊಂದು ಇದೆ. ಇದರ ಎದುರುಗಡೆ ಸುಂದರ ಕೆತ್ತನೆ ಕೆಲಸ ಮಾಡಿರುವ ಕಮಾನುಗಳಿರುವ ಲಕ್ಷ್ಮೀದೇವಿಯ ದೇವಾಲಯವಿದೆ. ಇಲ್ಲಿ ಹಿಂದೆ ಇದ್ದ ನಟರಾಜ, ಶಿವ, ಪಾರ್ವತಿ ಮುಂತಾದ ಕಂಚಿನ ಮೂರ್ತಿಗಳು ಈಗ ಪುರಾತತ್ವ ಇಲಾಖೆಯಲ್ಲಿವೆ. (ಕೆ.ಎಂ.ಎಸ್.)

**ಕೂರ್ಮಗಡ :** ಉತ್ತರ ಕನ್ನಡ ಜಿಲ್ಲೆಯ ಕಾರವಾರದಿಂದ 4ಕಿಮೀ ಅಂತರದಲ್ಲಿ ಅರಬ್ಬಿ ಸಮುದ್ರದಲ್ಲಿರುವ ಒಂದು ಸುಂದರ ಪುಟ್ಟ ದ್ವೀಪ. ವಿಸ್ತೀರ್ಣ ಸುಮಾರು 0.2ಚಮೀ. ಇಲ್ಲಿ ಸೋಂದಾದ ಸದಾಶಿವ ನಾಯಕ 1705ರಲ್ಲಿ ಕಟ್ಟಿಸಿದ ಒಂದು ಕೋಟೆಯಿದೆ. ನರಸಿಂಹ

ಕೂರ್ಮಗಡ ದ್ವೀಪ

ಹಾಗೂ ಮಾರುತಿ ದೇವಸ್ಥಾನ ಇವೆ. ನರಸಿಂಹ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ಒಳಗೆ ವಿಗ್ರಹವಿಲ್ಲ. ಜಾತ್ರೆಯ ಸಂದರ್ಭದಲ್ಲಿ ಸದವಾಡದ ಸಪ್ರೆ ಮನೆತನದವರು ಬೆಳ್ಳಿ ವಿಗ್ರಹವನ್ನು ತಂದಿಟ್ಟು ಪೂಜಿಸುವರು. ಪ್ರತಿ ವರ್ಷ ಪುಷ್ಯ ಪೂರ್ಣಿಮೆಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ದ್ವೀಪದಲ್ಲಿ ಕೆಲವು ಹಳೆಯ ಫಿರಂಗಿಗಳಿವೆ. ಇಲ್ಲಿ ಒಂದು ಹಳೆಯ ತಳಪಾಯ ನೆಲೆ ಇದೆ. ಅದನ್ನು ಅಂಬಾ ಭವಾನಿ ದೇವಾಲಯಕ್ಕಾಗಿ ನಿರ್ಮಿಸಿದ್ದೆಂದು ತಿಳಿದುಬರುತ್ತದೆ. ಇಲ್ಲೊಂದು ಆಕರ್ಷಕವಾದ ಗುಹೆ ಇದೆ. ಈ ದ್ವೀಪದ ಸಮೀಪ ಮಧುಲಿಂಗಗಢ ಎಂಬ ಇನ್ನೊಂದು ದ್ವೀಪ ಮತ್ತು ಬ್ಲಾಕ್ ರಾಕ್ ಎಂದು ಕರೆಯಲಾಗುವ ಒಂದು ಬಂಡೆ ಇವೆ. (ಬಿ.ಎನ್.ಎಂ.)

**ಕೃಷಿ :** ಕರ್ನಾಟಕದ ಆರ್ಥಿಕ ವ್ಯವಸ್ಥೆಗೆ ಕೃಷಿ ಬೆನ್ನೆಲುಬು. ಈ ನಾಡಿನ ಬಹುಸಂಖ್ಯಾತ ಜನರ ಜೀವನ ನಿರ್ವಹಣೆ ಸಾಗುವುದು ಕೃಷಿಯಿಂದಲೇ. ರಾಜ್ಯದ ಬೊಕ್ಕಸವನ್ನು ತುಂಬುವ ಆದಾಯಗಳಲ್ಲಿ ಕೃಷಿಯದೇ ಸಿಂಹಪಾಲು. ಇದು ನಾಡಿನ ಎಲ್ಲೆಡೆಯಲ್ಲೂ ಪಸರಿಸಿರುವ ಉದ್ಯಮ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಈ ಸಂಪುಟದಲ್ಲಿ ಬತ್ತ, ಕಬ್ಬು, ಗೋದಿ, ರಾಗಿ ಮೊದಲಾದ ಎಲ್ಲಾ ಮುಖ್ಯ ಬೆಳೆಗಳ ಬಗ್ಗೆಯೂ ಅಲ್ಲದೆ, ಹಿನ್ನೆಲೆಗೆ ಉಪಯುಕ್ತವಾಗುವಂತೆ, ಭೂರಚನೆ, ಹವಾಮಾನ, ಮಳೆ ಇತ್ಯಾದಿಗಳಿಗೂ ಪ್ರತ್ಯೇಕ ಲೇಖನಗಳನ್ನು ಆಯಾ ಶೀರ್ಷಿಕೆಗಳಲ್ಲಿ ಕೊಡಲಾಗಿದೆ. ಪ್ರಸಕ್ತ ಲೇಖನದಲ್ಲಿ ಕೃಷಿಯ ಇತಿಹಾಸ, ಆಧುನಿಕ ಕೃಷಿ, ಕೃಷಿಭೂಮಿ, ನೀರಾವರಿ ಮತ್ತು ಬೆಳೆಗಳು ಈ ವಿಷಯಗಳನ್ನು ಸಮೀಕ್ಷಿಸಲಾಗಿದೆ.

**ಇತಿಹಾಸ :** ವಿಶ್ವದ ಅತ್ಯಂತ ಪ್ರಾಚೀನ ಉದ್ಯಮವಾದ ಕೃಷಿ ಕರ್ನಾಟಕದಲ್ಲಿ ಪ್ರಚಲಿತವಾದ್ದು ನವಶಿಲಾಯುಗದ ಸಂಸ್ಕೃತಿಗಳು ಹರಡಲಾರಂಭಿಸಿದಂದಿನಿಂದ ಅಂದರೆ ಕ್ರಿ.ಪೂ.3000-2500ರ ಆರಂಭ. ಆಗಿನ ಕಾಲದಲ್ಲಿ ಬಳಸುತ್ತಿದ್ದ ಕೃಷಿ ವಿಧಾನಗಳು, ಬೆಳೆಗಳು ಇವುಗಳ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರಕಿಲ್ಲ. ಆದರೆ ಕಲ್ಲಿನ ಕೊಡಲಿಗಳನ್ನು ಉಪಯೋಗಿಸಿ ಕಾಡನ್ನು ಸವರಿ ಭೂಮಿಯನ್ನು ವ್ಯವಸಾಯಯೋಗ್ಯವಾಗಿ ಮಾಡಿಕೊಂಡು, ಬಹುಶಃ ಭಾರವಾದ ಕಲ್ಲನ್ನು ಸಿಕ್ಕಿಸಿದ ಮರದ ಚೂಪು ಕೋಲುಗಳಿಂದ ನೆಲವನ್ನು ಅಗೆದು ವ್ಯವಸಾಯ ಮಾಡುತ್ತಿದ್ದುದಕ್ಕೆ ಸಾಂದರ್ಭಿಕ ಸಾಕ್ಷ್ಯಗಳು ದೊರಕುತ್ತವೆ. ಆ ಕಾಲದಲ್ಲಿ ಜನ ಸಾಮಾನ್ಯವಾಗಿ ಕರ್ನಾಟಕದ ಮೈದಾನ ಪ್ರದೇಶದ ನದಿ ದಂಡೆಗಳಲ್ಲಿ ಅಥವಾ ಬೆಟ್ಟಗಳ ಮೇಲೆ ಕಾಣುವ ಮಟ್ಟಪ್ರದೇಶಗಳಲ್ಲಿ ಮಾತ್ರ ವಸತಿ ಹೂಡಿ ಸುತ್ತಲ ಪ್ರದೇಶದಲ್ಲಿ ಬೇಸಾಯ ಮಾಡುತ್ತಿದ್ದರು. ಕ್ರಿ.ಪೂ. 1500ರ ಸುಮಾರಿನಲ್ಲಿ ರಾಗಿ, ಅವರೆ ಮತ್ತು ಹುರುಳಿಯನ್ನು ಬೆಳೆಯುತ್ತಿದ್ದರೆಂಬುದಕ್ಕೆ ಪ್ರಾಚೀನ ನೆಲೆಗಳಲ್ಲಿ ಸಾಕ್ಷ್ಯಗಳು ದೊರಕಿವೆ. ಕಟ್ಟೆಗಳನ್ನು ಕಟ್ಟಿ ನೀರಾವರಿ ವ್ಯವಸಾಯವನ್ನು ರೂಢಿಸಿ ಬತ್ತ ಇತ್ಯಾದಿಗಳನ್ನು ಬೆಳೆಯುವುದು ಕರ್ನಾಟಕದ ಕಬ್ಬಿಣದ ಯುಗದಲ್ಲಿ ಅಂದರೆ ಕ್ರಿ.ಪೂ.800-600ರ ಸುಮಾರಿನಲ್ಲಿ ಪ್ರಾರಂಭವಾಗಿರಬಹುದು.

ಶಾಸನಗಳು, ಸಾಹಿತ್ಯ ಇತ್ಯಾದಿ ಆಧಾರಗಳು ಪ್ರಾಚೀನ ಕಾಲದಲ್ಲಿದ್ದ ಕೃಷಿಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಅಂದು ಕೃಷಿಯ ಪ್ರಗತಿಯೇ ದೇಶದ ಪ್ರಗತಿಯೆಂಬ ಭಾವನೆಯಿತ್ತು. ಸಿದ್ಧರಾಮನ 'ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತು' ಎಂಬ ಸೋಮೇಶ್ವರ ಕವಿಯ 'ಬೆಳೆಯೇ ಸರ್ವರ ಜೀವನಂ' ಎಂಬ ಉಕ್ತಿ ಇತ್ಯಾದಿಗಳಲ್ಲಿ ಅಂದಿನ ಸಮಾಜದಲ್ಲಿ ಕೃಷಿಗಿದ್ದ ಪ್ರಾಧಾನ್ಯವನ್ನು ಕಾಣಬಹುದು. ಭೂಮಿಯನ್ನು ತಾಯಿಯೆಂದೂ ರೈತರನ್ನು ಭೂಮಾತೆಯ ಮಕ್ಕಳೆಂದೂ ಭಾವಿಸಿದ್ದರು. ಒಕ್ಕಲ ಮಕ್ಕಳನ್ನು ಸಮಾಜ ಆದರ ಅಭಿಮಾನಗಳಿಂದ ನೋಡುತ್ತಿತ್ತು. ಕವಿ ನಯಸೇನ ತಿಳಿಸುವಂತೆ, ಸ್ವತಃ ಉತ್ತಿಬಿತ್ತಿ ಬೆಳೆಯದೆ ಪರರ ಬೆಳೆಗಳನ್ನು ಎದುರುನೋಡುತ್ತಾ ಕೂಡುವ ರೈತನಿಗೆ ಸಮಾಜದಲ್ಲಿ ಆದರಣೆಯಿರಲಿಲ್ಲ.

ಆಗಿನ ಕಾಲದಲ್ಲಿ ವ್ಯವಸಾಯದ ಭೂಮಿಯನ್ನು ದೇವಮಾತೃಕ ಮತ್ತು ನದೀಮಾತೃಕ ಎಂದು ಎರಡು ವಿಧಗಳಾಗಿ ವಿಂಗಡಿಸಿ ಕೊಳ್ಳಲಾಗಿತ್ತು. ಕೇವಲ ಮಳೆಯ ನೀರನ್ನೇ ಅವಲಂಬಿಸಿದ ಹೊಲಗಳು ದೇವಮಾತೃಕಗಳು; ನದಿ, ಕೆರೆ ಮುಂತಾದವುಗಳ ನೀರನ್ನು ಆಶ್ರಯಿಸಿದವು ನದೀಮಾತೃಕಗಳು. ಇವನ್ನೇ (ಬೆದ್ದಲೆ, ಬೆಟ್ದಲೆ, ಬೆರ್ದಲೆ, ಬೆದೆಮಣ್), ಗದ್ದೆ (ನೀರ್ನೆಲೆ, ನೀರ್ಮಣ್ಣು) ಎಂದೂ ಕರೆಯಲಾಗುತ್ತಿತ್ತು. ಬೆದಗದ್ದೆಗಳೂ ಇದ್ದುವು. ಇವು ಹೊಲದಲ್ಲೇ ನೀರು ನಿಲ್ಲುವಂತೆ ಕಟ್ಟೆಯನ್ನು ಕಟ್ಟಿ, ಮಳೆಯ ನೀರನ್ನು ಸಂಗ್ರಹಿಸಿ, ಬತ್ತವನ್ನು ಬೆಳೆಯುವ ತಾತ್ಕಾಲಿಕ ಗದ್ದೆಗಳು. ಕಾಯಿ-ಪಲ್ಯ, ಹೂವು-ಹಣ್ಣು ಮುಂತಾದವುಗಳನ್ನು ಬೆಳೆಯುವ ತೋಟಗಳೂ ಇದ್ದುವು.

ಕೃಷಿ ರಾಜ್ಯದ ಮುಖ್ಯ ಆದಾಯಮೂಲವಾಗಿದ್ದುದರಿಂದ ಅಂದಿನ ಆಡಳಿತಗಾರರು ಬೆಳೆಯ ಭೂಮಿಗಳನ್ನು ಅದರ ಗುಣದ ಮೇಲೆ ವಿಂಗಡಿಸಿ ತೆರಿಗೆ ಇತ್ಯಾದಿಗಳನ್ನು ನಿಷ್ಕರ್ಷೆ ಮಾಡುತ್ತಿದ್ದರು. ಅಂಥ ಅನೇಕ ಹೆಸರುಗಳು ಶಾಸನಗಳಲ್ಲಿ ದೊರಕುತ್ತವೆ. ಉದಾ: ನೆಲ್ಲಗೆ (ಬತ್ತ ಬೆಳೆಯುವ ಭೂಮಿ), ವಕುಲಕಚ್ಚ ಕ್ಷೇತ್ರ (ವಕುಲಗಳು ತುಂಬಿದ ಜವುಗು ನೆಲ), ಎರೆ ಅಥವಾ ಕರಿಯ ಕೆಮ್ಮಿ (ಕರಿಮಣ್ಣಿನ ಭೂಮಿ), ಕಿಸುಕಾಡು ಅಥವಾ ಕಿಸುಮಣ್ಣು (ಕೆಂಪು ಮಣ್ಣಿನ ಭೂಮಿ), ಮಳಲ ಕೆಮ್ಮಿ (ಮರಳು ಭೂಮಿ), ಹರಳ ಕೆಮ್ಮಿ (ಕಲ್ಜರಗು ಭೂಮಿ), ಖಿಜ್ಜಣ ಸರಂಧ್ರ ಅಥವಾ ಸಚ್ಛಿದ್ರವಾದ ಭೂಮಿ. ಶಾಸನಗಳಲ್ಲಿ ಉತ್ತಮ, ಮಧ್ಯಮ ಮತ್ತು ಅಧಮ ಭೂಮಿಗಳ ಉಲ್ಲೇಖವೂ ಇದೆ.

ಆಧುನಿಕ ಮತ್ತು ವೈಜ್ಞಾನಿಕ ಜ್ಞಾನ ಹಾಗೂ ಸಲಕರಣೆಗಳನ್ನು ಬಿಟ್ಟರೆ ಇಂದಿನ ಮತ್ತು ಅಂದಿನ ವ್ಯವಸಾಯ ಕ್ರಮಗಳಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲವೆಂದೇ ಹೇಳಬಹುದು. ಅಂದಿನ ಹಲವಾರು ಸಾಹಿತ್ಯ ಕೃತಿಗಳಲ್ಲಿ ಸಾದೃಶ್ಯ ಮತ್ತು ಉಪಮಾನಗಳ ರೂಪದಲ್ಲಿನ ವ್ಯವಸಾಯದ ಹಲವು ಕ್ರಮಗಳು, ಬಳಸುತ್ತಿದ್ದ ಕೆಲವು ಸಲಕರಣೆಗಳು ಮುಂತಾದ ವಿವರಗಳು ಸಿಗುವುದುಂಟು.

ವ್ಯವಸಾಯಕಾರ್ಯ ಸುಗಮವಾಗಿ ಸಾಗಲು, ಒಳ್ಳೆಯ ದಿನದ ಸಮಯವನ್ನು ಜ್ಯೋತಿಷಿಗಳಿಂದ ತಿಳಿದು ಪ್ರಾರಂಭ ಮಾಡುವ ಸಂಪ್ರದಾಯವಿತ್ತು. ಜೋಡೆತ್ತುಗಳಿಗೆ ನೊಗ ಹಾಕಿ, ನೊಗಕ್ಕೆ ನೇಗಿಲು ಕಟ್ಟಿ ಭೂಮಿಯನ್ನು ಉತ್ತು, ಗೋಡು ಗೊಬ್ಬರ ಹಾಕಿ ಹದಮಾಡಿದ ಭೂಮಿಗೆ ಬೀಜವನ್ನು ಬಿತ್ತುತ್ತಿದ್ದರು. ಮೂರನೆಯ ಸೋಮೇಶ್ವರನಿಂದ ವಿರಚಿತವಾದ ಮಾನಸೋಲ್ಲಾಸ (ಅಭಿಲಷಿತಾರ್ಥ ಚಿಂತಾಮಣಿ) ಎಂಬ ಗ್ರಂಥದಲ್ಲಿ ಹೂಗಿಡಗಳು ಮತ್ತು ಹಣ್ಣಿನ ಮರಗಳು ಇವುಗಳ ಬೀಜಗಳನ್ನು ಬಿತ್ತುವುದಕ್ಕೆ ಮುನ್ನ ಹೇಗೆ ಸಂಸ್ಕರಿಸಬೇಕು, ಅವುಗಳನ್ನು ನೆಡುವ ಪಾತಿಗಳು ಹೇಗಿರಬೇಕು ಇತ್ಯಾದಿ ವಿವರಗಳು ಸಹ ಇವೆ.

ಬೆಳೆಗಳ ಬಗ್ಗೆ ಜನ ಹೆಚ್ಚು ಶ್ರದ್ಧೆ ವಹಿಸುತ್ತಿದ್ದರು. ಗಿಡಮರಗಳಿಗೆ ನೀರನ್ನು ಸರಿಯಾದ ಸಮಯದಲ್ಲಿ ಎರೆಯುವುದಲ್ಲದೆ, ಬೆಳೆಗಳನ್ನು ಪ್ರಾಣಿಗಳಿಂದ ಹಾಗೂ ಕಳ್ಳಕಾಕರ ಹಾವಳಿಯಿಂದ ರಕ್ಷಿಸಲು ಶ್ರಮವಹಿಸುತ್ತಿದ್ದರು. ಕೆಯ್ಗೆ ಬೇಲಿ ಶಿಶುವಿಂಗೆ ಪಾಲ್ ಎನ್ನುತ್ತಾನೆ ನಯಸೇನ. ದನ, ಕುರಿ, ಆಡು, ಹಂದಿ ಮುಂತಾದ ಪ್ರಾಣಿಗಳೇನಾದರೂ ಹೊಲಗದ್ದೆಗಳಿಗೆ ನುಗ್ಗಿ, ಬೆಳೆದು ನಿಂತಿರುವ ಬೆಳೆಗಳನ್ನು ತಿಂದು ಹಾಳು ಮಾಡಿದರೆ ಆ ಪ್ರಾಣಿಗಳ ಒಡೆಯರಿಗೆ ದಂಡವನ್ನು ವಿಧಿಸಬೇಕು, ಪ್ರಜೆಗಳಿಗೆ ಜೀವನಾಧಾರವಾದ ಯಾವುದೇ ಗಿಡಮರಗಳನ್ನು ಯಾರಾದರೂ ಕಡಿದುಹಾಕಿದ್ದೇ ಆದರೆ ಅಂಥವರನ್ನು ರಾಜ ದಂಡ ವಿಧಿಸಿ ಶಿಕ್ಷಿಸಬೇಕು, ಬೆಳೆದು ಪಕ್ವವಾಗಿ ನಿಂತಿರುವ ಬೆಳೆಗಳಿಗೆ ಯಾರಾದರೂ ಬೆಂಕಿಯನ್ನು ಹಾಕಿ ನಷ್ಟಮಾಡಿದ್ದೇ ಆದರೆ ಅಂಥವರನ್ನು ವಿರಣ ಹುಲ್ಲಿನೊಳಗೆ ಹಾಕಿ ಸಜೀವವಾಗಿ ಸುಡಬೇಕು ಎಂದು ವಿಜ್ಞಾನೇಶ್ವರ ತಿಳಿಸುತ್ತಾನೆ.

ಬತ್ತವೇ ಮೊದಲಾದ ಧಾನ್ಯಗಳು ಬೆಳೆದು ಪಕ್ವವಾದ ಮೇಲೆ ಕೊಯ್ಲು ಮಾಡುತ್ತಿದ್ದರು. ಕತ್ತರಿಸಿದ ಧಾನ್ಯದ ತೆನೆಗಳನ್ನು ಸೂಡು ಕಟ್ಟಿ, ಕಳ(ಕಣ)ದಲ್ಲಿ ಹಾಕಿ, ಒಕ್ಕಣ ಮಾಡಿ, ಧಾನ್ಯಗಳನ್ನು ಬೇರ್ಪಡಿಸಿ, ಕಣದಲ್ಲಿ ರಾಶಿ ಮಾಡಿ ಧಾನ್ಯ ಸರಿಯಾಗಿ ಒಣಗಿ ಹದವಾದ ಮೇಲೆ, ಅದನ್ನು ಕೊಂಡೊಯ್ದು ಹಗೇವುಗಳಲ್ಲಿ ಸಂಗ್ರಹಿಸುತ್ತಿದ್ದರು. ವಿಜ್ಞಾನೇಶ್ವರ ಸೂಚಿಸುವಂತೆ ಬೆಳೆಗಳ ಸರದಿ ಅಂದರೆ, ಭೂಮಿಯನ್ನು ನಿಸ್ಸಾರಗೊಳಿಸದಿರಲು ಸರದಿಯ ಮೇಲೆ ಬೇರೆಬೇರೆ ಬೆಳೆಗಳನ್ನು ಬೆಳೆಯುವ ವಿಧಾನ ಬಳಕೆಯಲ್ಲಿತ್ತು. ಕೆಲವು ಶಾಸನಗಳಲ್ಲಿ 'ಕುಮರಿ' ವ್ಯವಸಾಯ ಪದ್ಧತಿಯ ಉಲ್ಲೇಖವಿದೆ. ಕಾಡು ಪ್ರದೇಶಗಳಲ್ಲಿ ಮರಗಳನ್ನು ಕಡಿದು ಅವನ್ನು ಸುಟ್ಟು, ಆ ಪ್ರದೇಶದಲ್ಲಿ ಒಂದು ಅಥವಾ ಎರಡು ವರ್ಷಗಳು ಮಾತ್ರ ವ್ಯವಸಾಯ ಮಾಡಿ ಬೆಳೆಯನ್ನು ತೆಗೆದು, ಅನಂತರ ಅದನ್ನು ತ್ಯಜಿಸಿ ಮತ್ತೆ ಅದೇ ರೀತಿಯಲ್ಲಿ ಹೊಸ ವ್ಯವಸಾಯ ಭೂಮಿಯನ್ನು ರೂಢಿಸುವುದು ಕುಮರಿ ಪದ್ಧತಿ.

ನಿತ್ಯಬಳಕೆಯ ಹಾಗೂ ಕೃಷಿಯ ಉದ್ದೇಶಕ್ಕಾಗಿ ಕೆರೆಕಟ್ಟೆ ಬಾವಿಗಳನ್ನು ಕಟ್ಟಿಸುವುದು ಅತಿ ಶ್ರೇಯಸ್ಕರವೆಂಬ ನಂಬಿಕೆಯಿತ್ತು. ಆಳರಸರು, ಅಧಿಕಾರಿಗಳು, ಶ್ರೀಮಂತರು, ಗ್ರಾಮಸಂಸ್ಥೆಯವರು - ಹೀಗೆ ಸಮಾಜದ ನಾನಾ ವರ್ಗದವರು ಕೆರೆ ಬಾವಿಗಳನ್ನು ನಿರ್ಮಿಸಿರುವ ನಿದರ್ಶನಗಳು ನೂರಾರಿವೆ. ಕಾವೇರಿಗೆ ತೂಬುಗಳೂ ಕಾಲುವೆಗಳೂ ಇದ್ದುವು ಎಂದು ಶಾಸನವೊಂದು ತಿಳಿಸುತ್ತದೆ. ತುಂಗಭದ್ರೆಗೆ ಅಡ್ಡಕಟ್ಟೆಯನ್ನು ಕಟ್ಟಿ ಅದರ ನೀರನ್ನು ಕಾಲುವೆಗಳ ಮೂಲಕ ಜಮೀನುಗಳಿಗೆ ಹಾಯಿಸಿ ವ್ಯವಸಾಯ ಮಾಡಿದುದರ ಉಲ್ಲೇಖವೂ ಶಾಸನದಲ್ಲಿದೆ. ಅಲ್ಲದೆ, ಬೆಟ್ಟದಿಂದ ಹರಿದು ಬರುವ ಸಣ್ಣ ಸಣ್ಣ ನದಿಗಳ ನೀರನ್ನೂ ಕಾಲುವೆಗಳ ಮೂಲಕ ಹಾಯಿಸಿ ಬತ್ತ, ಕಬ್ಬು ಮುಂತಾದವುಗಳನ್ನು ಬೆಳೆಯುತ್ತಿದ್ದರು. ಆ ಕಾಲದಲ್ಲಿ ಬಹುಶಃ ಕೆರೆಗಳಿಲ್ಲದ ಗ್ರಾಮವಿರಲಿಲ್ಲವೆನ್ನಬಹುದು. ಕೆರೆಯ ತೂಬಿನಿಂದ ಹೊರಟ ನೀರು ಬಾಯ್ಕಲ್ ಅಥವಾ ಕಾಲ್‌ಗಳ (ಕಾಲುವೆ) ಮೂಲಕ ಹರಿದು, ಗದ್ದೆಗಳನ್ನು ತಲಪುತ್ತಿತ್ತು. ವಿಶೇಷವಾಗಿ ತೋಟಗಳಲ್ಲಿ ಬಾವಿಗಳಿರುತ್ತಿದ್ದವು. ಏತಗಳಿಂದಲೋ ಘಟೀಯಂತ್ರಗಳಿಂದಲೋ ನೀರನ್ನೆತ್ತಿ ಹಾಯಿಸುತ್ತಿದ್ದರು.

ಕಾಫೀ, ಟೀ, ಹೊಗೆಸೊಪ್ಪುಗಳಂಥ ಬೆಳೆಗಳನ್ನು ಬಿಟ್ಟು, ಈಗ ಬೆಳೆಯುತ್ತಿರುವ ಬೆಳೆಗಳನ್ನೇ ಬಹುಶಃ ಪ್ರಾಚೀನ ಕರ್ನಾಟಕದಲ್ಲೂ ಬೆಳೆಯುತ್ತಿದ್ದರು. ಗದ್ದೆಗಳಲ್ಲಿ ಮುಖ್ಯವಾಗಿ ಬತ್ತ ಮತ್ತು ಕಬ್ಬನ್ನು ಬೆಳೆಯುತ್ತಿದ್ದರು. ಫಲವತ್ತಾದ ಮಣ್ಣು ಹಾಗೂ ಸಾಕಷ್ಟು ನೀರಿದ್ದ ಪ್ರದೇಶದಲ್ಲೆಲ್ಲ ಬತ್ತವನ್ನು ಬೆಳೆಯುತ್ತಿದ್ದರು. ಕೊಂಕಣ ಪ್ರದೇಶ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಬತ್ತದ ಬೆಳೆಗೆ ಬಹು ಪ್ರಸಿದ್ಧವೆನಿಸಿದ್ದುವು. ಭಟ್ಕಳದಿಂದ ಹೊನ್ನಾವರ ಮತ್ತು ಬಂಕಾಪುರಗಳ ಮಾರ್ಗವಾಗಿ ವಿಜಯನಗರದವರೆಗೂ ಇದ್ದ ಹೆದ್ದಾರಿಯ ಇಕ್ಕೆಲಗಳಲ್ಲಿಯೂ ಬತ್ತವನ್ನು ಸಮೃದ್ಧವಾಗಿ ಬೆಳೆಯುತ್ತಿದ್ದರು. ದಕ್ಷಿಣ ಕನ್ನಡದ ಕಡಲತೀರಪ್ರದೇಶದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ಬತ್ತವನ್ನು ಮಲಬಾರ್ ಮತ್ತು ಓರ್ಮುಜ್ ದೇಶಗಳಿಗೆ ರಫ್ತು ಮಾಡುತ್ತಿದ್ದರು ಎಂದು ಬಾರ್ಬೋಸ ತಿಳಿಸುತ್ತಾನೆ. ಹಲವಾರು ಬಗೆಯ ಬತ್ತವನ್ನು ಬೆಳೆಯುತ್ತಿದ್ದರು. ಸೋಮೇಶ್ವರ ರಕ್ತಶಾಲಿ, ಮಹಾಶಾಲಿ, ಗಂಧಶಾಲಿ, ಸೂಕ್ಷ್ಮಶಾಲಿ ಮೊದಲಾದ ಎಂಟು ಬಗೆಯ ಅಕ್ಕಿಯನ್ನು ಹೆಸರಿಸಿದ್ದಾನೆ. ಸುಶ್ರುತ 39 ಬಗೆಯ ಅಕ್ಕಿಗಳನ್ನು ಹೆಸರಿಸುತ್ತಾನೆ. ಸುಗಂಧಶಾಲಿ, ರಾಜಶಾಲಿ, ರಾಜಾನ್ನ, ಗಂಧಶಾಲಿ ಇತ್ಯಾದಿಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಬತ್ತವನ್ನು ಸಾಮಾನ್ಯವಾಗಿ ವರ್ಷಕ್ಕೆರಡು ಸಲ ಸುಗ್ಗಿ ಮಾಡುತ್ತಿದ್ದರು. ಚಳಿಗಾಲದಲ್ಲೊಂದು ಬೆಳೆ, ಬೇಸಗೆಯಲ್ಲೊಂದು ಬೆಳೆ. ಗದ್ದೆಗಳಲ್ಲಿ ಸಮೃದ್ಧವಾಗಿ ಬೆಳೆದು ನಿಂತಿರುವ ಕಬ್ಬಿನ ವರ್ಣನೆಗಳು ಸಾಹಿತ್ಯ ಕೃತಿಗಳಲ್ಲಿ ಮತ್ತು ಶಾಸನಗಳಲ್ಲಿ ಹಲವಾರಿವೆ. ಕುರುಜಾಂಗಣನಾಡಿನಲ್ಲಿ ಬೆರಳಿಂದ ಮಿಡಿದರೆ ರಸಬಿಡುವ ತನಿಯಾದ ಕಬ್ಬನ್ನು (ಮಿಡಿದೊಡೆ ತನಿಗರ್ಬು ರಸಂ ಬಿಡುವುವು) ಬೆಳೆಯುತ್ತಿದ್ದರೆಂದು ಪಂಪ ವರ್ಣಿಸಿದ್ದಾನೆ. ಕಬ್ಬಿನ ಗದ್ದೆಗಳಿಗೆ ನುಗ್ಗಿ ಬೆಳೆಗೆ ಹಾನಿ ಮಾಡುತ್ತಿದ್ದ ಆನೆ ನರಿಗಳಂಥ ಪ್ರಾಣಿಗಳ ಹಾವಳಿಯ ಬಗ್ಗೆಯೂ ಕಾವ್ಯಶಾಸನಾದಿಗಳಲ್ಲಿ ಸೂಚನೆಯಿದೆ. ಪ್ರಾಚೀನ ತುಳುನಾಡಿನ ರಾಜಧಾನಿಯೆನಿಸಿದ್ದ ಬಾರಕೂರಿನಲ್ಲಿ ಅತ್ಯುತ್ತಮವಾದ ಕಬ್ಬನ್ನು ಹೇರಳವಾಗಿ ಬೆಳೆಯುತ್ತಿದ್ದರು ಎಂದು ಇಬ್ನ್ ಬತೂತ್ ಹೇಳಿದ್ದಾನೆ. ಕಬ್ಬಿನ ಬೆಳೆಯನ್ನು ಬೇಸಗೆಯಲ್ಲಿ ಕೊಯ್ಲು ಮಾಡುತ್ತಿದ್ದರೆಂಬ ಅಂಶವನ್ನು ಕೃಷ್ಣದೇವರಾಯ ತನ್ನ ಅಮುಕ್ತಮಾಲ್ಯದಾ ಎಂಬ ಗ್ರಂಥದಲ್ಲಿ ತಿಳಿಸಿದ್ದಾನೆ.

ಹೊಲಗಳಲ್ಲಿ ಸಾಮಾನ್ಯವಾಗಿ ಗೋದಿ, ಜೋಳ, ರಾಗಿ, ಕಂಬು, ನವಣೆ, ಬರಗು, ಸಾಮೆ, ಸಜ್ಜೆ ಮುಂತಾದ ಧಾನ್ಯಗಳನ್ನು ಬೆಳೆಯುತ್ತಿದ್ದರು. ಅಲ್ಲದೆ ತೊಗರಿ, ಕಡಲೆ, ಹೆಸರು, ಉದ್ದು, ಅವರೆ, ಹುರುಳಿ ಮೊದಲಾದ ದ್ವಿದಳಧಾನ್ಯಗಳನ್ನು ಬೆಳೆಯುತ್ತಿದ್ದರು. ಹಾಗೆಯೆ ಹರಳು ಎಳ್ಳು ಕುಸುಬೆಗಳಂಥ ಎಣ್ಣೆ ಬೀಜಗಳನ್ನೂ ಬೆಳೆಯುತ್ತಿದ್ದರು. ವಾಣಿಜ್ಯ ಮಹತ್ವವುಳ್ಳ ಹತ್ತಿಯ ಬೆಳೆಗೆ ಕರ್ನಾಟಕ ಮೊದಲಿನಿಂದಲೂ ಪ್ರಸಿದ್ಧವೆನಿಸಿತ್ತು.

ಜೀರಿಗೆ, ಕೊತ್ತಂಬರಿ, ಮೆಣಸು ಮೊದಲಾದ ಹಲವು ಸಂಬಾರ ಪದಾರ್ಥಗಳನ್ನೂ ಬೆಳೆಯಲಾಗುತ್ತಿತ್ತು. ಬಾರಕೂರು ಮತ್ತು ಮಂಗಳೂರುಗಳಲ್ಲಿ ಮೆಣಸನ್ನು ಹೇರಳವಾಗಿ ಬೆಳೆದು ರಫ್ತು ಮಾಡುತ್ತಿದ್ದ ಸಂಗತಿ ಯಾಖೂತ್ ಮತ್ತು ದಿಮಿಷ್ಕಿಗಳ ಬರೆಹದಿಂದ ಸ್ಪಷ್ಟವಾಗುತ್ತದೆ. ಹಾಗೆಯೆ ಇಬ್ನ್ ಬತೂತ್ ಮಂಗಳೂರಿನಿಂದ ಹೊರದೇಶಗಳಿಗೆ ಹೆಚ್ಚು ಪ್ರಮಾಣದಲ್ಲಿ ರಫ್ತಾಗುತ್ತಿದ್ದ ಮೆಣಸು ಮತ್ತು ಶುಂಠಿಯನ್ನು ಹೆಸರಿಸುತ್ತಾನೆ.

ತೋಟಗಳಲ್ಲಿ ಬದನೆ ಸೌತೆ ಕುಂಬಳ ಹಾಗಲ ಹೀರೆ ಮೊದಲಾದ ತರಕಾರಿಗಳು; ಮಾವು ಹಲಸು ಕಿತ್ತಳೆ ನಿಂಬೆ ದಾಳಿಂಬೆ ಬಾಳೆಯೇ ಮೊದಲಾದ ಹಣ್ಣುಗಳು; ಜಾಜಿ ಮಲ್ಲಿಗೆ ಸಂಪಿಗೆ ಇರುವಂತಿಗೆ ಮುಂತಾದ ಹಲವಾರು ಬಗೆ ಹೂವುಗಳು ಮೊದಲಾದವನ್ನು ಬೆಳೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ಭಟ್ಕಳ ರೇವಿನಿಂದ ತೆಂಗಿನಕಾಯಿಯನ್ನು ಓರ್ಮುಜ್ ಮತ್ತು ಏಡನ್ ದೇಶಗಳಿಗೆ ರಫ್ತು ಮಾಡುತ್ತಿದ್ದರು. ಇದು ಮಾತ್ರವಲ್ಲದೆ, ಅಡಕೆ, ವೀಳ್ಯದೆಲೆ, ಅರಿಶಿನ ಮುಂತಾದವುಗಳ ಬೆಳೆಯೂ ಇತ್ತು. ಈ ಹಲವು ವ್ಯವಸಾಯ ಉತ್ಪನ್ನಗಳ ಉಲ್ಲೇಖ ಅನೇಕ ಶಾಸನಗಳಲ್ಲಿವೆ. ಹೈದರ್ ಅಲಿ ಹಿಪ್ಪನೇರಳೆ ಗಿಡಗಳನ್ನು

ಬೆಳೆಸಲು ಪ್ರಯತ್ನಿಸಿದನಾದರೂ ಆಗ ವ್ಯವಸಾಯದಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಲಿಲ್ಲ. ಪಾಶ್ಚಾತ್ಯರು ಕರ್ನಾಟಕಕ್ಕೆ ಹೊಗೆಸೊಪ್ಪು, ಆಲೂಗಡ್ಡೆ, ಕಾಫಿ, ಪರಂಗಿ, ಅನಾನಸ್ ಮೊದಲಾದ ಹಲವು ಬೆಳೆಗಳನ್ನು ತಂದರು. ಅಂದಿನಿಂದ ಅವುಗಳ ವ್ಯವಸಾಯವೂ ಸಾಗುತ್ತಿದೆ. (ಎಸ್.ಜಿ.)

**ಕೃಷಿ ಭೂಮಿ :** ಕರ್ನಾಟಕದ ಒಟ್ಟು ಭೂವಿಸ್ತಾರವಾದ 1,89,43,050 ಹೆಕ್ಟೇರುಗಳಲ್ಲಿ 30,62,769 ಹೆಕ್ಟೇರು ಕಾಡು, 17,77,591 ಹೆಕ್ಟೇರು ಕೃಷಿಗೆ ಯೋಗ್ಯವಲ್ಲದ ಭೂಮಿ ಇದನ್ನು ಬಿಟ್ಟು ಪ್ರತಿವರ್ಷ ಸಾಗುವಳಿಯಾಗುತ್ತಿರುವ ಭೂಮಿ 10,48,92,29 ಹೆಕ್ಟೇರುಗಳು. ಇದರಲ್ಲಿ ಆಹಾರ ಬೆಳೆಗಳನ್ನು ಬೆಳೆಯುವ ಭೂಮಿ 72%, ಉಳಿದ ಬೆಳೆಗಳದು, 26%. ಆಹಾರ ಬೆಳೆಗಳಲ್ಲಿ ಬತ್ತ, ಜೋಳ, ರಾಗಿಗಳದೆ ಪ್ರಥಮ ಸ್ಥಾನ. ಉಳಿದ ಬಗೆಯ ಬೆಳೆಗಳಲ್ಲಿ ಪ್ರಮುಖವಾದುವು ಎಣ್ಣೆಬೀಜಗಳು ಮತ್ತು ಹತ್ತಿ. ವರ್ಷಕ್ಕೆ ಒಂದಕ್ಕಿಂತ ಹೆಚ್ಚು ಬೆಳೆ ತೆಗೆಯುವ ನೆಲದ ವಿಸ್ತೀರ್ಣ 18,22,374 ಹೆಕ್ಟೇರುಗಳು. ವ್ಯವಸಾಯದ ವೈವಿಧ್ಯದ ಆಧಾರದ ಮೇಲೆ ಕರ್ನಾಟಕದಲ್ಲಿ ಎಂಟು ವಿಭಾಗಗಳನ್ನು ಗುರುತಿಸಬಹುದು:

**1. ಕರಾವಳಿ ವಿಭಾಗ :** ಒಂದು ಪಾರ್ಶ್ವದಲ್ಲಿ ಉನ್ನತವಾದ ಪಶ್ಚಿಮ ಘಟ್ಟಗಳು, ಇನ್ನೊಂದು ಪಾರ್ಶ್ವದಲ್ಲಿ ಸಮುದ್ರ - ಇವುಗಳ ಮಧ್ಯೆ ಇರುವ ಕಿರಿಯಗಲದ ಪ್ರದೇಶ. ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. ಈ ಪ್ರದೇಶದುದ್ದಕ್ಕೂ ಅಲ್ಲಲ್ಲಿ ಸಣ್ಣ ನದಿಗಳೂ ತೊರೆಗಳೂ ಉಂಟು. ಪಶ್ಚಿಮ ಘಟ್ಟಗಳಲ್ಲಿ ಉಗಮಿಸುವ ಈ ನದಿಗಳು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಈ ಪ್ರದೇಶದ ಮಳೆಯ ವಾರ್ಷಿಕ ಪರಿಮಾಣ 2,540ಮಿಮೀ. ಬಹುಪಾಲು ಮಳೆ ಮುಂಗಾರಿನಲ್ಲಿ ಅಂದರೆ ಮೇ-ಅಕ್ಟೋಬರ್ ಅವಧಿಯಲ್ಲಿ, ದಕ್ಷಿಣದ ಭಾಗಗಳಲ್ಲಿ ಕೊಂಚ ಮುಂಚೆಯೂ ಉತ್ತರದಲ್ಲಿ ತಡವಾಗಿಯೂ ಮುಂಗಾರು ಮಳೆ ಆರಂಭವಾಗುತ್ತದೆ. ಇಲ್ಲಿನ ಮಣ್ಣು ಮೆಕ್ಕಲು ಬಗೆಯದು. ಈ ಪ್ರದೇಶದ ಮುಖ್ಯ ಬೆಳೆ ಬತ್ತ. ದಕ್ಷಿಣ ಕನ್ನಡ, ಉಡುಪಿ, ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯವಿರುವಂಥ ಕಡೆ ವರ್ಷಕ್ಕೆ ಮೂರು ಬಾರಿ, ಮೇ-ಅಕ್ಟೋಬರ್, ಅಕ್ಟೋಬರ್-ಜನವರಿ ಹಾಗೂ ಜನವರಿ-ಏಪ್ರಿಲ್‌ಗಳಲ್ಲಿ, ಬತ್ತದ ಬೆಳೆಯನ್ನು ಪಡೆಯಲಾಗುತ್ತದೆ. ಹುರುಳಿ, ಹೆಸರು, ಉದ್ದು, ಅಲಸಂದೆ ಮುಂತಾದ ದ್ವಿದಳಧಾನ್ಯಗಳನ್ನೂ ಬೆಳೆಯಲಾಗುವುದು. ಕೊಂಚಮಟ್ಟಿಗೆ ಆಲೂಗಡ್ಡೆ, ಮೆಣಸಿನಕಾಯಿ, ಶುಂಠಿ ಹಾಗೂ ಮೆಣಸನ್ನು ಬೆಳೆಯಲಾಗುತ್ತದೆ. ಅಂತೆಯೇ ಮಾವು, ನಿಂಬೆ, ತೆಂಗು, ಅಡಕೆಗಳೂ ಇಲ್ಲಿನ ಪ್ರಧಾನ ಬೆಳೆಗಳು. ಉನ್ನತ ಪ್ರದೇಶಗಳಲ್ಲಿ ಕಾಡು ಸವರಿ ಗೋಡಂಬಿಯನ್ನೂ ಬೇಸಾಯ ಮಾಡಲಾಗಿದೆ.

**2. ಬೆಟ್ಟಗಳ ವಿಭಾಗ :** ಪಶ್ಚಿಮ ಘಟ್ಟಗಳನ್ನೊಳಗೊಂಡ ಪ್ರದೇಶ ಇದು. ಕರಾವಳಿ ವಿಭಾಗಕ್ಕೆ ಸಮಾನಾಂತರವಾಗಿ ಉತ್ತರದಿಂದ ದಕ್ಷಿಣಕ್ಕೆ ಹಬ್ಬಿದೆ. ಉತ್ತರ ಭಾಗದಲ್ಲಿ ಕಿರಿದಾಗಿಯೂ ದಕ್ಷಿಣದಲ್ಲಿ ಕೊಂಚ ಅಗಲವಾಗಿಯೂ ಉಂಟು. ಇದರ ಪೂರ್ವ ಹಾಗೂ ಪಶ್ಚಿಮ ಪಾರ್ಶ್ವಗಳ ಇಳಿಜಾರುಗಳಲ್ಲಿ ಕಾಡುಗಳಿವೆ. ಈ ವಿಭಾಗದಲ್ಲಿ ಕೊಡಗುಜಿಲ್ಲೆ ಹಾಗೂ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಧಾರವಾಡ, ಬೆಳಗಾಂವಿ ಜಿಲ್ಲೆಗಳ ಪಶ್ಚಿಮಭಾಗ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪೂರ್ವ ಭಾಗ ಸೇರಿವೆ. ಮಳೆಯ ವಾರ್ಷಿಕ ಪರಿಮಾಣ 1,524-6,350 ಮಿಮೀ. ಮಣ್ಣು ಲ್ಯಾಟರೈಟ್ ಬಗೆಯದು. ಇಲ್ಲಿ ಕೂಡ ಬತ್ತವೇ ಪ್ರಧಾನ ಬೆಳೆ. ಕಬ್ಬು, ಜೋಳ, ರಾಗಿ, ಹತ್ತಿ, ಸೇಂಗ, ಎಣ್ಣೆಬೀಜಗಳನ್ನೂ ಬೆಳೆಯಲಾಗುವುದು. ಶಿವಮೊಗ್ಗ ಜಿಲ್ಲೆಯಲ್ಲಿ ತೆಂಗು ಮತ್ತು ಅಡಕೆ ಬೆಳೆಯುಂಟು. ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಕಾಫಿತೋಟಗಳಿವೆ. ಚಹಾವನ್ನೂ ಅಲ್ಲಲ್ಲಿ ಕಾಣಬಹುದು. ದಕ್ಷಿಣ ಭಾಗಗಳಲ್ಲಿ ಕಿತ್ತಳೆಯನ್ನು ಬೆಳೆಯಲಾಗುತ್ತದೆ.

**3. ಉತ್ತರದ ಸಂಕ್ರಮಣ ವಲಯ :** ಬೆಟ್ಟಗಳ ವಿಭಾಗದ ಪೂರ್ವಕ್ಕಿದೆ. ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳನ್ನೊಳಗೊಂಡ ಪ್ರದೇಶ ಇದು. ಇಲ್ಲಿನ ಮಣ್ಣು ಕೆಂಪು ಇಲ್ಲವೆ ಕಪ್ಪು ಬಗೆಯದು. ಮಳೆಯ ಪರಿಮಾಣ 1,015-1,525ಮಿಮೀ. ಇದರ ಪೂರ್ವಭಾಗದಲ್ಲಿ ಮಳೆ ಕಡಿಮೆಯಾಗುತ್ತ ಬರುತ್ತದಲ್ಲದೆ ಅನಿಶ್ಚಿತವೂ ಆಗುತ್ತದೆ. ಹಿಂಗಾರು ಜೋಳ, ಬತ್ತ, ಸೇಂಗ, ಮೆಣಸಿನಕಾಯಿ, ತಂಬಾಕು, ಹತ್ತಿ, ಕುಸುಬೆ, ಗೋಧಿ, ಮುಸುಕಿನ ಜೋಳ, ಬೇಳೆಧಾನ್ಯಗಳು ಅಲ್ಲಿನ ಮುಖ್ಯ ಬೆಳೆಗಳು.

**4. ದಕ್ಷಿಣ ಸಂಕ್ರಮಣ ವಲಯ :** ಇದು ಕೂಡ ಹಿಂದಿನ ವಿಭಾಗ ದಂತೆಯೇ ಬೆಟ್ಟಗಳ ವಿಭಾಗದ ಪೂರ್ವಕ್ಕಿದೆ. ಆದರೆ ಇದರ ವ್ಯಾಪ್ತಿಯೆಲ್ಲವೂ ರಾಜ್ಯದ ದಕ್ಷಿಣಭಾಗದಲ್ಲಿ. ಶಿವಮೊಗ್ಗ ಮತ್ತು ಚಿಕ್ಕ ಮಗಳೂರು ಜಿಲ್ಲೆಗಳ ಪೂರ್ವಭಾಗ, ಹಾಸನ ಜಿಲ್ಲೆಯ ಮಧ್ಯಭಾಗ ಹಾಗೂ ಮೈಸೂರು ಚಾಮರಾಜನಗರ ಜಿಲ್ಲೆ ಈ ವಲಯಕ್ಕೆ ಸೇರಿವೆ. ಇಲ್ಲಿನ ಮಣ್ಣು ಮರಳುಮಿಶ್ರಿತ. ಮುಂಗಾರು ಮಳೆ ಆರಂಭವಾಗುವುದು ಉತ್ತರದ ಸಂಕ್ರಮಣ ವಲಯಕ್ಕಿಂತ ಮುಂಚೆ. ಕಾರುರಾಗಿ ಇಲ್ಲಿನ ಮುಖ್ಯ ಬೆಳೆ. ತಗ್ಗುಪ್ರದೇಶಗಳಲ್ಲಿ ಬತ್ತವನ್ನು ಬೆಳೆಯಲಾಗುತ್ತದೆ. ಸೀ ಐಲೆಂಡ್ ಹತ್ತಿ ಇಲ್ಲಿನ ಪ್ರಮುಖ ಆರ್ಥಿಕ ಬೆಳೆಯಾಗುತ್ತಿದೆ.

**5. ಈಶಾನ್ಯದ ಸಂಕ್ರಮಣ ವಲಯ :** ಕರ್ನಾಟಕದ ಈಶಾನ್ಯ ಮೂಲೆ ಯಲ್ಲಿದೆ. ಬೀದರ್ ಜಿಲ್ಲೆ ಹಾಗೂ ಗುಲ್ಬರ್ಗ ಜಿಲ್ಲೆಯ ಈಶಾನ್ಯ ಭಾಗಗಳನ್ನು ಈ ವಲಯ ಒಳಗೊಂಡಿದೆ. ಇಲ್ಲಿನ ಮಣ್ಣು ಲ್ಯಾಟರೈಟ್ ಇಲ್ಲವೆ ಕಪ್ಪು ಬಗೆಯದು. ಮಳೆಯ ಪರಿಮಾಣ ವರ್ಷಕ್ಕೆ 760 ಮಿಮೀ. ಬಹುಪಾಲೆಲ್ಲ ಸೆಪ್ಟಂಬರ್-ನವೆಂಬರ್ ಅವಧಿಯಲ್ಲಿ ಬೀಳುತ್ತದೆ. ಕಬ್ಬು, ದ್ವಿದಳ ಧಾನ್ಯಗಳು, ಜೋಳ - ಇಲ್ಲಿನ ಮುಖ್ಯ ಬೆಳೆಗಳು. ತಗ್ಗು ಪ್ರದೇಶಗಳಲ್ಲಿ ಬತ್ತವನ್ನೂ ಬೆಳೆಯಲಾಗುತ್ತದೆ.

**6. ಉತ್ತರದ ಒಣ ಪ್ರದೇಶ :** ವರ್ಷಕ್ಕೆ ಕೇವಲ 500ಮಿಮೀ ಮಳೆ ಯನ್ನು ಪಡೆಯುವ ಶುಷ್ಕ ಹವೆಯ ಪ್ರದೇಶ ಇದು. ಮಳೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಬೀಳುತ್ತದೆ. ಬಿಜಾಪುರ, ಗುಲ್ಬರ್ಗ, ಬಳ್ಳಾರಿ ಜಿಲ್ಲೆಗಳು, ಧಾರವಾಡ ಜಿಲ್ಲೆಯ ಪೂರ್ವಭಾಗ, ರಾಯಚೂರು, ಬೆಳಗಾಂವಿ ಮತ್ತು ಚಿತ್ರದುರ್ಗ ಜಿಲ್ಲೆಯ ವಾಯವ್ಯಭಾಗಗಳು ಈ ಪ್ರದೇಶಕ್ಕೆ ಸೇರಿವೆ. ಇಲ್ಲಿನದು ಬಹುವಾಗಿ ಎರೆಮಣ್ಣು. ಇಲ್ಲೆಲ್ಲ ಹಿಂಗಾರು ಬೆಳೆಯೇ ಹೆಚ್ಚು. ಹತ್ತಿ, ಜೋಳ, ಸೇಂಗ ಮುಖ್ಯ ಬೆಳೆಗಳು. ಗೋಧಿ ಮೊದಲಾದ ದ್ವಿದಳ ಧಾನ್ಯಗಳನ್ನೂ ಬೆಳೆಯಲಾಗುತ್ತದೆ.

**7. ಮಧ್ಯದ ಒಣ ಪ್ರದೇಶ :** ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಪೂರ್ವಭಾಗ, ತುಮಕೂರು ಜಿಲ್ಲೆಯ ಕೊಂಚ ಭಾಗ, ಚಿತ್ರದುರ್ಗ ಜಿಲ್ಲೆಯ ದಕ್ಷಿಣ ಭಾಗ, ಮಂಡ್ಯ ಜಿಲ್ಲೆ - ಇವು ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಭಾಗಗಳು. ಈ ಪ್ರದೇಶ ಕೂಡ ಶುಷ್ಕ ಭೂಮಿಯೇ. ಇಲ್ಲಿನ ವಾರ್ಷಿಕ ಮಳೆಯ ಮೊತ್ತ 380-508ಮಿಮೀ. ಮಣ್ಣು ಮರಳುಮಿಶ್ರಿತ ಗೋಡು, ಕೆಲವೆಡೆ ಕ್ಷಾರೀಯವಾಗಿದೆ. ಸಾಮಾನ್ಯವಾಗಿ ಈ ಪ್ರದೇಶವನ್ನು ಅಭಾವ ಪರಿಸ್ಥಿತಿಯ ವಲಯವೆಂದು ಪರಿಗಣಿಸಲಾಗಿದೆ. ಆದರೆ ಮಂಡ್ಯ ಜಿಲ್ಲೆಯಲ್ಲಿ ಕಾಲುವೆ ನೀರಾವರಿ ಸೌಲಭ್ಯವಿರುವೆಡೆಯಲ್ಲೆಲ್ಲ ಬತ್ತ, ಕಬ್ಬುಗಳ ಎರಡೆರಡು ಬೆಳೆಗಳನ್ನು ಬೆಳೆಯಲಾಗುತ್ತದೆ. ರಾಗಿ, ಮತ್ತಿತರ ಧಾನ್ಯಗಳು ಇಲ್ಲಿನ ಇತರ ಬಗೆಯ ಬೆಳೆಗಳು. ಹುರುಳಿ, ಹರಳುಗಳನ್ನೂ ಬೆಳೆಯಲಾಗುವುದು. ಕಣಿವೆ ಪ್ರದೇಶಗಳಲ್ಲಿ ತೆಂಗು ಮತ್ತು ಅಡಕೆಗಳನ್ನು ಕಾಣಬಹುದು.

**8. ಆಗ್ನೇಯದ ಒಣ ಪ್ರದೇಶ :** ಇದು ಮಟ್ಟಸ ಪ್ರದೇಶ. ಕೋಲಾರ, ಬೆಂಗಳೂರು, ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಪ್ರದೇಶಗಳನ್ನು ಒಳಗೊಂಡಿದೆ. ಇಲ್ಲಿನ ಮಳೆಯ ಪರಿಮಾಣ ವರ್ಷಕ್ಕೆ 760ಮಿಮೀ. ಮಣ್ಣು ಕೆಂಪು ಗೋಡು ಬಗೆಯದು. ರಾಗಿ ಇಲ್ಲಿನ ಮುಖ್ಯ ಬೆಳೆ. ಕೆರೆ ನೀರಾವರಿ ಸೌಲಭ್ಯವಿರುವೆಡೆಯಲ್ಲಿ ಬತ್ತವನ್ನೂ ಅಡಕೆಯನ್ನೂ ಬೆಳೆಯಲಾಗುತ್ತದೆ. ತರಕಾರಿ ಹಾಗೂ ಹಣ್ಣಿನ ಗಿಡಗಳನ್ನೂ ಗಣನೀಯ ಪ್ರಮಾಣದಲ್ಲಿ ಬೆಳೆಯುವುದುಂಟು.

**ನೀರಾವರಿ :** ಕರ್ನಾಟಕದಲ್ಲಿ ನೀರಾವರಿ ಸೌಕರ್ಯವಿರುವ ಭೂಮಿ 24,91,871 ಹೆಕ್ಟೇರುಗಳು ಉಳಿದೆಲ್ಲ ಜಮೀನುಗಳಲ್ಲಿ, ಕೃಷಿಗೆ ಆಧಾರ ಮಳೆ. ಅದರಲ್ಲಿನ ಉತ್ಪನ್ನ ಮಳೆಯಷ್ಟೇ ಅನಿಶ್ಚಿತ. ಇದನ್ನು ತಪ್ಪಿಸಲು ನೀರಾವರಿ ಸೌಕರ್ಯ ಹೆಚ್ಚಿಸುವ ದಿಕ್ಕಿನಲ್ಲಿ ಬೃಹತ್ ಪ್ರಯತ್ನ ನಡೆದಿದೆ.

ವ್ಯವಸಾಯಕ್ಕೆ ಬಾವಿ, ಕಾಲುವೆ, ಕೆರೆಗಳಿಂದ ನೀರೊದಗುತ್ತದೆ. ಬಾವಿಗಳಿಂದ ನೀರೆತ್ತಿ ಸಾಗುವಳಿ ಮಾಡುವುದು ಕರ್ನಾಟಕದಲ್ಲಿ ಹಿಂದಿನಿಂದ ಬಂದ ಪದ್ಧತಿ. 1998-99ರ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಬಾವಿಗಳಿಂದ 4,78,818 ಹೆಕ್ಟೇರುಗಳಿಗೆ ನೀರೊದಗಿದ್ದುದು ತಿಳಿದುಬಂದಿದೆ. ಬಾವಿಗಳ ಸಂಖ್ಯೆ ಹಾಗೂ ಅವುಗಳಿಂದ ಕೃಷಿಗೆ ಒದಗುವ ಆಸರೆ ಬೆಳಗಾಂವಿ, ಕೋಲಾರ, ಬಿಜಾಪುರ, ಜಿಲ್ಲೆಗಳಲ್ಲಿ ಹೆಚ್ಚು. ಹಾಗೆಯೇ ಬೆಂಗಳೂರು, ತುಮಕೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲೂ ಗಣನೀಯ. ಉಳಿದ ಜಿಲ್ಲೆಗಳಲ್ಲಿ ಅವುಗಳ ಸಂಖ್ಯೆ ಸಾಧಾರಣ. ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳ ಬಾವಿಗಳ ಸಂಖ್ಯೆ ಕಡಿಮೆ.

ಜಲಾಶಯ, ಅಣೆಕಟ್ಟು ಇವುಗಳಲ್ಲಿ ನೀರನ್ನು ಸಂಗ್ರಹಿಸಿ ಕಾಲುವೆಗಳ ಮುಖಾಂತರ ಅದನ್ನು ಹತ್ತಾರು ಕಿಮೀ ಹರಿಸಿ ಕೃಷಿಗೆ ನೀರು ಒದಗಿಸುತ್ತಾರೆ. ಹೀಗೆ ಕಾಲುವೆಗಳ ಆಸರೆಯಲ್ಲಿ ಸಾಗುವಳಿಯಾಗುತ್ತಿರುವ ಭೂಮಿ 9,52,021 ಹೆಕ್ಟೇರುಗಳು (1998-99). ಇದೇ ರೀತಿ ಕೆರೆಗಳ ಆಸರೆಯಲ್ಲಿ ಕೃಷಿಯಾಗುತ್ತಿದ್ದ ಭೂವಿಸ್ತೀರ್ಣ 2,54,965 ಹೆಕ್ಟೇರುಗಳು. ರಾಯಚೂರು, ಬಳ್ಳಾರಿ, ಶಿವಮೊಗ್ಗ, ಮಂಡ್ಯ, ಮೈಸೂರು, ಚಿತ್ರದುರ್ಗ -ಈ ಜಿಲ್ಲೆಗಳಲ್ಲಿ ನಾಲೆ ಬಯಲಿನ ಪ್ರದೇಶ ಹೆಚ್ಚು. ಉಳಿದೆಡೆ ಕೆರೆಗಳೇ ನೀರಾವರಿಗೆ ಆಧಾರ. ಸುಮಾರು 21 ಲಕ್ಷಕ್ಕೂ ಹೆಚ್ಚು ಹೆಕ್ಟೇರುಗಳಿಗೆ ನೀರಾವರಿ ಒದಗಿಸಲಾಗಿದೆ. ಈಗ ನಿರ್ಮಾಣವಾಗುತ್ತಿರುವ ತುಂಗಭದ್ರಾ ಮೇಲ್ಮಟ್ಟದ ನಾಲೆ, ಘಟಪ್ರಭಾ ಎರಡನೆಯ ಹಂತ, ಮಲಪ್ರಭಾ, ಕೃಷ್ಣಾ ಮೇಲ್ದಂಡೆ, ಹೇಮಾವತಿ, ಹಾರಂಗಿ ಈ ದೊಡ್ಡ ಪ್ರಮಾಣದ ಯೋಜನೆಗಳು ಮತ್ತು ಮಧ್ಯಮ ಪ್ರಮಾಣದ ಇನ್ನೂ ಅನೇಕ ಯೋಜನೆಗಳು ಮುಗಿದಾಗ ರಾಜ್ಯದ ನೀರಾವರಿ ವಿಸ್ತೀರ್ಣದ ಪ್ರಮಾಣ ಅಖಿಲ ಭಾರತ ನೀರಾವರಿ ಶೇಕಡ ಪ್ರಮಾಣದ 201ಕ್ಕಿಂತ ಹೆಚ್ಚಾಗಬಹುದು.

**ಬೆಳೆಗಳು :** ಹವಾಗುಣ ಒಟ್ಟಾರೆ ಹಿತಕರವಾಗಿರವುದರಿಂದ ರಾಜ್ಯದಲ್ಲಿ ಹಲವಾರು ಬೆಳೆಗಳನ್ನು ಬೆಳೆಯುತ್ತಾರೆ. ಬೆಳೆಗಳಲ್ಲಿ ಇಷ್ಟು ವೈವಿಧ್ಯ ಬೇರೆ ಯಾವ ರಾಜ್ಯದಲ್ಲೂ ಕಂಡುಬರುವುದಿಲ್ಲ. ಧಾನ್ಯಗಳಲ್ಲಿ ಜೋಳ, ರಾಗಿ, ಬತ್ತ, ಮುಸುಕಿನ ಜೋಳ, ಸಜ್ಜೆ, ಗೋದಿ, ಬಾರ್ಲಿ, ಸಾಮೆ, ನವಣೆ, ಹಾರಕ; ಬೇಳೆ ಬೆಳೆಗಳಲ್ಲಿ ತೊಗರಿ ಅಲಸಂದೆ ಹೆಸರು ಉದ್ದು ಅವರೆ ಹುರುಳಿ ಕಡಲೆ; ಎಣ್ಣೆ ಬೆಳೆಗಳಲ್ಲಿ ನೆಲಗಡಲೆ ಕುಸುಮೆ ಎಳ್ಳು ಹುಚ್ಚೆಳ್ಳು ಹರಳು ಅಗಸೆ; ನಾರು ಬೆಳೆಗಳಲ್ಲಿ ಹತ್ತಿ ಪುಂಡಿ; ಸಾಂಬಾರು ಬೆಳೆಗಳಲ್ಲಿ ಮೆಣಸಿನಕಾಯಿ ಸಾಸುವೆ ಕೊತ್ತಂಬರಿ ಜೀರಿಗೆ ಈರುಳ್ಳಿ ಬೆಳ್ಳುಳ್ಳಿ- ಹೀಗೆ ಅನೇಕ ಬೆಳೆಗಳು ರಾಜ್ಯದ ಅನೇಕ ಭಾಗಗಳಲ್ಲಿ ಬೆಳೆಯುತ್ತವೆ. ಇದೇ ರೀತಿ ಕಾಫಿ ಟೀ ಏಲಕ್ಕಿ ಗೋಡಂಬಿ ವೀಳೆಯದೆಲೆ ಕೋಕೋ ತೆಂಗು ಅಡಕೆ ಮೆಣಸು ಇಂಥ ತೋಟದ ಬೆಳೆಗಳು, ಮಾವು ಸಪೋಟ ಬಾಳೆ ಹಲಸು ದಾಳಿಂಬೆ ನಿಂಬೆ ಅಂಜೂರ ಸೀತಾಫಲ ಕಲ್ಲಂಗಡಿ ಕರಬೂಜ ಇಂಥ ಹಣ್ಣಿನ ಬೆಳೆಗಳನ್ನು ಹವಾ ಹಾಗೂ ನೀರಾವರಿ ಅನುಕೂಲವಿರುವೆಡೆ ಬೆಳೆಯುತ್ತಾರೆ. ಹಲವಾರು ತರಕಾರಿ ಬೆಳೆಗಳು ಹೂವಿನ ಪೊದೆಗಳು, ಹೂವಿನ ಮರಗಳು, ಪಟ್ಟಣಗಳಲ್ಲಿ ಸುತ್ತಮುತ್ತ ಮಾರುಕಟ್ಟೆ ಅನುಕೂಲವಿರುವೆಡೆ ಹಾಗೂ ಪಟ್ಟಣ ಉದ್ಯಾನವನಗಳಲ್ಲಿ ವ್ಯಾಪಕವಾಗಿ ಕೃಷಿಯಾಗುತ್ತಿವೆ. ಭಾರತದ ಇತರ ರಾಜ್ಯಗಳೊಂದಿಗೆ ಹೋಲಿಸಿದರೆ ಕರ್ನಾಟಕಕ್ಕೆ ರಾಗಿ ವ್ಯವಸಾಯದಲ್ಲಿ ಪ್ರಥಮ ಸ್ಥಾನವೂ ಹರಳು ಮತ್ತು ಹತ್ತಿ ವ್ಯವಸಾಯದಲ್ಲಿ ದ್ವಿತೀಯ ಸ್ಥಾನವೂ ಜೋಳ ಮತ್ತು ತಂಬಾಕು ಕೃಷಿಯಲ್ಲಿ ಮೂರನೆಯ ಸ್ಥಾನವೂ ಸೇಂಗ ಕೃಷಿಯಲ್ಲಿ ನಾಲ್ಕನೆಯ ಸ್ಥಾನವೂ ಇನ್ನಿತರ ಎಣ್ಣೆಬೀಜಗಳ ಕೃಷಿಯಲ್ಲಿ ಐದನೆಯ ಸ್ಥಾನವೂ ಲಭಿಸುತ್ತದೆ. ಕರ್ನಾಟಕದ ಬೆಳೆಗಳ ಕ್ಷೇತ್ರವಾರು ವಿಸ್ತೀರ್ಣ ಮತ್ತು ವಾರ್ಷಿಕ ಉತ್ಪನ್ನದ ಅಂಕಿ ಅಂಶಗಳನ್ನು ಮುಂದಿನ ಪುಟದ ಪಟ್ಟಿಯಲ್ಲಿ ಕೊಟ್ಟಿದೆ. ಕೆಲವು ಬೆಳೆಗಳ ಬಗ್ಗೆ ಮುಂದೆ ವಿವರಗಳನ್ನು ನೀಡಿದೆ.

**ಜೋಳ :** ರಾಜ್ಯದ ಉತ್ತರಭಾಗದಲ್ಲಿ ಜೋಳ ಸಾಮಾನ್ಯ ಜನರ ಮುಖ್ಯ ಆಹಾರ ಬೆಳೆ. ಈ ಬೆಳೆಯ ವಿಸ್ತೀರ್ಣ ಸುಮಾರು 18,49,867 ಹೆಕ್ಟೇರುಗಳು. ಇದೊಂದು ಉತ್ತಮ ಪೌಷ್ಟಿಕ ಗುಣಗಳನ್ನುಳ್ಳ ಆಹಾರ. ಜೋಳದ ದಂಟು ಅಥವಾ ಕಡ್ಡಿ ದನಗಳಿಗೆ ಮೇವಾಗಿ ಬಳಕೆಯಾಗುತ್ತದೆ. ಗುಲ್ಬರ್ಗ, ಬಿಜಾಪುರ, ರಾಯಚೂರು, ಧಾರವಾಡ, ಬೆಳಗಾಂವಿ, ಜೋಳ ಬೆಳೆಯುವ ಮುಖ್ಯ ಜಿಲ್ಲೆಗಳು. ಬೇಸಗೆ ಹಾಗೂ ಮುಂಗಾರು ಕಾಲಗಳಲ್ಲಿ ಸ್ವಲ್ಪಮಟ್ಟಿನ ಬೆಳೆ ಹಾಕಿದರೂ ಜೋಳದ ಬೆಳೆ ಮುಖ್ಯವಾಗಿ ಹಿಂಗಾರಿನಲ್ಲೇ. ರಾಜ್ಯದಲ್ಲಿ ಜೋಳದ ಒಟ್ಟು ಉತ್ಪನ್ನ 12,54,000 ಟನ್ನುಗಳು. ಇತ್ತೀಚೆಗೆ ಜನಪ್ರಿಯವಾಗುತ್ತಿರುವ ಸಿ.ಎಸ್.ಎಚ್.1-ಮತ್ತು ಸಿ.ಎಸ್.ಎಚ್.2-ಈ ಹೈಬ್ರಿಡ್ ತಳಿಗಳು ಸ್ಥಳೀಯ 2-3 ರಷ್ಟು ಹೆಚ್ಚು ಇಳುವರಿ ಕೊಡುತ್ತವೆ. ಜೋಳ ಬಹುವಾಗಿ ಮಳೆ ಆಶ್ರಿತ ಬೆಳೆ. ನೀರಾವರಿ ಸೌಕರ್ಯ ಇದ್ದರೆ ಕನಿಷ್ಠ ಪಕ್ಷ ಈಗಿನ ಎರಡರಷ್ಟು ಇಳುವರಿ ಪಡೆಯುವುದು ಸಾಧ್ಯ.

**ಬತ್ತ :** ರಾಜ್ಯದಲ್ಲಿ ಇದು ಮುಖ್ಯವಾದ ನೀರಾವರಿ ಬೆಳೆ. ಇದರ ವಿಸ್ತೀರ್ಣ 14,26,805 ಹೆಕ್ಟೇರುಗಳು. ಉತ್ಪನ್ನ, 32,13,000 ಟನ್ನುಗಳು. ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಮಳೆ ಆಸರೆಯಲ್ಲಿ ಇದನ್ನು ಬೆಳೆಯುತ್ತಾರೆ. ಇಲ್ಲಿ ಮಳೆಯಿಂದ ಒದಗುವ ನೀರು ಅಪಾರವಾಗಿದ್ದು ನೀರಾವರಿಯಷ್ಟೆ ಖಚಿತವಾಗಿದ್ದು ಸಮೃದ್ಧವಾಗಿರುತ್ತದೆ. ಸಾಮಾನ್ಯ ಮಳೆ ಬೀಳುವ ಕೆಲವೆಡೆ ಬತ್ತವನ್ನು ನೀರಾವರಿಯಿಲ್ಲದೆ ಮಳೆಯ ಆಶ್ರಯದಲ್ಲೇ ಬೆಳೆಯುವುದುಂಟು. ಆದರೆ ಇಂಥಲ್ಲಿ ಇಳುವರಿ ತೀರಾ ಕಡಮೆ. ಬತ್ತವನ್ನು ಮಳೆಗಾಲ, ಚಳಿಗಾಲ ಹಾಗೂ ಬೇಸಗೆ ಕಾಲಗಳಲ್ಲಿ ಬೆಳೆಯಬಹುದು. ಜೂನ್-ಜುಲೈನಲ್ಲಿ ನಾಟಿಮಾಡಿ ನವೆಂಬರ್-ಡಿಸೆಂಬರ್‌ನಲ್ಲಿ ಕೊಯ್ಲು ಇಲ್ಲವೆ ಫೆಬ್ರುವರಿ-ಮಾರ್ಚ್‌ನಲ್ಲಿ ನಾಟಿ, ಜೂನ್-ಜುಲೈನಲ್ಲಿ ಕೊಯ್ಲು ಸಾಮಾನ್ಯ. (ಬಿ.ವಿ.ವಿ.)

ಡಿಸೆಂಬರ್‌ನಲ್ಲಿ ನಾಟಿ ಮಾಡಿ ಮಾರ್ಚ್-ಏಪ್ರಿಲ್‌ನಲ್ಲಿ ಕೊಯ್ಲು ಮಾಡುವುದೂ ಉಂಟು. ಬತ್ತದ ಬೆಳೆಯ ವಿಸ್ತೀರ್ಣವನ್ನು ತೆಗೆದುಕೊಂಡರೆ ಶಿವಮೊಗ್ಗ ಜಿಲ್ಲೆಗೆ ಪ್ರಥಮ ಸ್ಥಾನ. ಅನಂತರ ಕ್ರಮವಾಗಿ ದಕ್ಷಿಣ ಕನ್ನಡ, ಉಡುಪಿ, ಧಾರವಾಡ, ಉತ್ತರ ಕನ್ನಡ, ತುಮಕೂರು, ಮೈಸೂರು, ಬೆಳಗಾಂವಿ, ಮಂಡ್ಯ, ಹಾಸನ, ಚಿಕ್ಕಮಗಳೂರು, ರಾಯಚೂರು ಜಿಲ್ಲೆಗಳು ಬರುತ್ತವೆ. ಉಳಿದ ಜಿಲ್ಲೆಗಳಲ್ಲಿ ನೀರಿನ ಅನುಕೂಲ ಇರುವೆಡೆಯಲ್ಲೆಲ್ಲ ಬತ್ತ ಬೆಳೆದೇ ಬೆಳೆಯುತ್ತಾರೆ. ಇತ್ತೀಚೆಗೆ ಜನಪ್ರಿಯವಾಗಿರುವ ಸುಧಾರಿತ ತಳಿಗಳು ಐ.ಆರ್.8, ಜಯ ಮತ್ತು ಮಧು.

**ರಾಗಿ :** ರಾಜ್ಯದ ಬಹುತೇಕ ಜನತೆಯ ಮುಖ್ಯ ಆಹಾರ. ಪೌಷ್ಟಿಕ ಆಹಾರವೆಂದೂ ಹೆಸರಾಗಿದೆ. ಇದು ಮುಖ್ಯವಾಗಿ ಮಳೆಯ ಆಶ್ರಯದ ಬೆಳೆ. ಇದನ್ನು ಜೂನ್-ಜುಲೈನಲ್ಲಿ ಬಿತ್ತಿ, ನವೆಂಬರ್- ಡಿಸೆಂಬರ್‌ನಲ್ಲಿ ಕಟಾವು ಮಾಡುತ್ತಾರೆ. ಕಾರುರಾಗಿಯನ್ನು ಏಪ್ರಿಲ್- ಮೇನಲ್ಲಿ ಬಿತ್ತಿ ಸೆಪ್ಟೆಂಬರ್- ಅಕ್ಟೋಬರ್‌ನಲ್ಲಿ ಕುಯ್ಲು ಮಾಡುತ್ತಾರೆ. ಬೆಳೆಯ ಒಟ್ಟು ವಿಸ್ತೀರ್ಣ 9,39,000 ಹೆಕ್ಟೇರುಗಳು. ಇದರಲ್ಲಿ ಕಾಲುಭಾಗ ಬೆಂಗಳೂರು ಜಿಲ್ಲೆಯಲ್ಲೆ ಇದೆ. ಕ್ರಮವಾಗಿ ತುಮಕೂರು, ಹಾಸನ, ಮೈಸೂರು, ಮಂಡ್ಯ, ಕೋಲಾರ ರಾಗಿ ಬೆಳೆಯುವ ಇತರ ಮುಖ್ಯ ಜಿಲ್ಲೆಗಳು. ರಾಜ್ಯದಲ್ಲಿ ರಾಗಿಯ ಒಟ್ಟು ಉತ್ಪನ್ನ 2,73,000 ಟನ್ನುಗಳು. ಈ ಬೆಳೆಯ ಸುಧಾರಣೆ ಕಾರ್ಯಕ್ರಮ ರಾಜ್ಯದಲ್ಲಿ ಕಳೆದ 60ವರ್ಷಕ್ಕೂ ಹಿಂದೆಯೇ ನಡೆದಿತ್ತು. ಎಚ್.22 ಸುಧಾರಿತ ತಳಿ ಜಾರಿಯಲ್ಲಿತ್ತು. ಇತ್ತೀಚೆಗೆ ಪೂರ್ಣ, ಶಕ್ತಿ, ಕಾವೇರಿ ಮುಂತಾದ ಉತ್ತಮ ತಳಿಗಳು ರೂಢಿಗೆ ಬಂದಿವೆ.

**ಗೋದಿ :** ಗೋದಿ ಹಿಂಗಾರಿನಲ್ಲಿ ಬೆಳೆಯುವ ಮುಖ್ಯ ಬೆಳೆ. ಇದರ ವಿಸ್ತೀರ್ಣ 2,51,000 ಹೆಕ್ಟೇರುಗಳು. ವಿಸ್ತೀರ್ಣ ಹೆಚ್ಚಾಗಿಲ್ಲದಿದ್ದರೂ ಇದೊಂದು ಉತ್ತಮವಾದ ಪೌಷ್ಟಿಕ ಆಹಾರವಾದುದರಿಂದ ಇದಕ್ಕೆ ಗಮನ ಹೆಚ್ಚು. ಇದನ್ನು ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಬಿಜಾಪುರ, ಬೆಳಗಾಂವಿ, ರಾಯಚೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ರಾಜ್ಯದಲ್ಲಿ ಇದರ ಉತ್ಪನ್ನ 1.09 ಲಕ್ಷ ಟನ್ನುಗಳು. ಇದನ್ನು ಅಕ್ಟೋಬರ್-ನವೆಂಬರ್‌ನಲ್ಲಿ ಬಿತ್ತಿ ಫೆಬ್ರುವರಿ- ಮಾರ್ಚ್‌ನಲ್ಲಿ ಕೊಯ್ಲು ಮಾಡುತ್ತಾರೆ. ನೀರಾವರಿ ಸೌಕರ್ಯವಿರುವೆಡೆ ಪೂರ್ತಿ ಬೆಳೆಯಾಗಿ ಬೆಳೆದರೆ ಮಳೆ ಆಸರೆಯಲ್ಲಿ ಕುಸುಮೆ, ಅಗಸೆ, ಕಡಲೆ ಇಂಥವುಗಳ ಜೊತೆ ಅಕ್ಕಡಿ ಬೆಳೆಯಾಗಿ ಬೆಳೆಯುತ್ತಾರೆ. ಹತ್ತಿ,ಜೋಳ ಇವುಗಳೊಡನೆ ಸರದಿ ಬೆಳೆಯಾಗಿ ಬೆಳೆಯುವುದೂ ಸಾಮಾನ್ಯ. ಇತ್ತೀಚೆಗೆ ಅಧಿಕ ಇಳುವರಿ ಕೊಡುವ ಚೋಟೆಲರ್ಮ, ಸಫೇದ್‌ಲರ್ಮ, ಯು.ಪಿ.301 ಎಂಬ ತಳಿಗಳು ಜನಪ್ರಿಯವಾಗುತ್ತಿವೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಮುಖ್ಯ ಬೆಳೆಗಳ ಉತ್ಪನ್ನ 1998-99 (ಟನ್ನುಗಳಲ್ಲಿ) | | | | | | |
|---|---|---|---|---|---|---|---|---|
| | | ನೆಲಗಡಲೆ | ಕಬ್ಬು | ಹತ್ತಿ (ಬೇಲುಗಳಲ್ಲಿ) | ಕಡಲೆ | ತೊಗರಿ | ಇತರ ದ್ವಿದಳ ಧಾನ್ಯಗಳು | ಒಟ್ಟು ದ್ವಿದಳ ಧಾನ್ಯಗಳು |
| 1 | 2 | 3 | 4 | 5 | 6 | 7 | 8 | 9 |
| 1 | ಬೆಂಗಳೂರು | 846 | 6,874 | --- | --- | 436 | 189 | 4,461 |
| 2 | ಬೆಂಗಳೂರು ಗ್ರಾ | 25,809 | 104,447 | --- | 35 | 2,151 | 1,217 | 11,132 |
| 3 | ಚಿತ್ರದುರ್ಗ | 198,441 | 54,272 | 30,271 | 1,627 | 3,393 | 610 | 18,587 |
| 4 | ದಾವಣಗೆರೆ | 47,794 | 880,086 | 30,271 | 1,114 | 3,428 | 449 | 9,064 |
| 5 | ಕೋಲಾರ | 71,506 | 267,351 | 31,242 | 15 | 11,239 | 1,011 | 21,480 |
| 6 | ಶಿವಮೊಗ್ಗ | 6,480 | 1,248,548 | 42,405 | 186 | 236 | 239 | 5,425 |
| 7 | ತುಮಕೂರು | 264,184 | 133,329 | 2,020 | 260 | 6,787 | 2,484 | 27,749 |
| **I** | **ಬೆಂಗಳೂರು ವಿಭಾಗ** | **615,060** | **2,694,907** | **136,209** | **3,237** | **27,670** | **6,199** | **97,898** |
| 8 | ಬೆಳಗಾಂವಿ | 73,604 | 12,370,995 | 98,969 | 17,873 | 3,645 | 2,394 | 35,814 |
| 9 | ಬಿಜಾಪುರ | 24,812 | 1,572,334 | 12,667 | 29,390 | 5,191 | 3,340 | 49,210 |
| 10 | ಬಾಗಲಕೋಟೆ | 31,900 | 5,778,116 | 22,129 | 15,170 | 2,602 | 843 | 21,578 |
| 11 | ಧಾರವಾಡ | 40,369 | 310,194 | 160,464 | 15,281 | 611 | 286 | 22,522 |
| 12 | ಗದಗ | 59,178 | 7,900 | 69,246 | 13,291 | 503 | 766 | 21,238 |
| 13 | ಹಾವೇರಿ | 45,151 | 519,669 | 91,997 | 1,169 | 2,216 | 1,515 | 13,508 |
| 14 | ಉತ್ತರ ಕನ್ನಡ | 7,122 | 197,291 | 14,823 | 70 | 95 | 146 | 3,346 |
| **II** | **ಬೆಳಗಾಂವಿ ವಿಭಾಗ** | **282,136** | **20,756,499** | **470,295** | **92,244** | **14,863** | **9,290** | **167,216** |
| 15 | ಬಳ್ಳಾರಿ | 86,799 | 654,922 | 85,696 | 6,070 | 2,234 | 809 | 15,851 |
| 16 | ಬೀದರ್ | 2,664 | 1,770,200 | 3,439 | 18,557 | 41,464 | 167 | 86,902 |
| 17 | ಗುಲ್ಬರ್ಗ | 79,976 | 822,510 | 38,605 | 62,134 | 124,147 | 353 | 235,626 |
| 18 | ರಾಯಚೂರು | 29,015 | 13,748 | 58,421 | 10,077 | 3,429 | 112 | 16,588 |
| 19 | ಕೊಪ್ಪಳ | 31,521 | 200,686 | 18,430 | 5,352 | 2,818 | 789 | 14,424 |
| **III** | **ಗುಲ್ಬರ್ಗ ವಿಭಾಗ** | **229,975** | **3,462,066** | **204,591** | **102,190** | **174,092** | **2,230** | **369,391** |
| 20 | ಚಿಕ್ಕಮಗಳೂರು | 10,020 | 124,488 | 4,898 | 3,476 | 482 | 244 | 14,682 |
| 21 | ದಕ್ಷಿಣ ಕನ್ನಡ | --- | 45,087 | --- | --- | --- | 41 | 2,103 |
| 22 | ಉಡುಪಿ | 5,897 | 137,974 | --- | --- | --- | 153 | 4,960 |
| 23 | ಹಾಸನ | 4,573 | 470,640 | 5,688 | 909 | 858 | 2,124 | 23,864 |
| 24 | ಕೊಡಗು | --- | 718 | 3 | --- | --- | 116 | 116 |
| 25 | ಮಂಡ್ಯ | 7,805 | 4,015,593 | 65 | 38 | 959 | 2,880 | 21,047 |
| 26 | ಮೈಸೂರು | 13,149 | 753,392 | 153,042 | 213 | 1,957 | 6,880 | 34,682 |
| 27 | ಚಾಮರಾಜನಗರ | 23,519 | 2,309,555 | 32,303 | 201 | 572 | 1,494 | 10,930 |
| **IV** | **ಮೈಸೂರು ವಿಭಾಗ** | **64,963** | **7,857,447** | **195,999** | **4,837** | **4,828** | **13,932** | **112,384** |
| | ರಾಜ್ಯ | **1,192,134** | **34,770,919** | **1,007,094** | **202,508** | **221,453** | **31,651** | **746,889** |

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಮುಖ್ಯ ಬೆಳೆಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | | | | | |
|---|---|---|---|---|---|---|---|
| | | ಬತ್ತ | ರಾಗಿ | ಜೋಳ | ಸಜ್ಜೆ | ಮುಸುಕಿನ ಜೋಳ | ಗೋದಿ |
| 1 | 2 | 3 | 4 | 5 | 6 | 7 | 8 |
| 1 | ಬೆಂಗಳೂರು | 7,245 | 48,459 | -- | -- | 1,415 | --- |
| 2 | ಬೆಂಗಳೂರು ಗ್ರಾ | 20,967 | 147,409 | -- | -- | 5,368 | --- |
| 3 | ಚಿತ್ರದುರ್ಗ | 9,422 | 62,409 | 40,287 | 8,649 | 33,386 | 486 |
| 4 | ದಾವಣಗೆರೆ | 118,178 | 35,741 | 56,587 | 914 | 103,680 | 601 |
| 5 | ಕೋಲಾರ | 29,267 | 118,444 | --- | 172 | 14,021 | --- |
| 6 | ಶಿವಮೊಗ್ಗ | 158,633 | 8,702 | 2,215 | -- | 8,295 | 4 |
| 7 | ತುಮಕೂರು | 47,448 | 206,568 | 4,579 | 376 | 6,219 | 6 |
| **I** | ಬೆಂಗಳೂರು ವಿಭಾಗ | **391,160** | **627,732** | **103,668** | **10,111** | **172,384** | **1,097** |
| 8 | ಬೆಳಗಾಂವಿ | 62,731 | 2,625 | 192,490 | 30,894 | 109,370 | 54,399 |
| 9 | ಬಿಜಾಪುರ | 391 | --- | 295,005 | 88,693 | 12,170 | 62,688 |
| 10 | ಬಾಗಲಕೋಟೆ | 197 | --- | 164,903 | 48,855 | 43,402 | 22,207 |
| 11 | ಧಾರವಾಡ | 37,633 | 165 | 56,208 | --- | 18,569 | 43,362 |
| 12 | ಗದಗ | 1,044 | 18 | 84,427 | 1,190 | 18,063 | 35,181 |
| 13 | ಹಾವೇರಿ | 54,375 | 4,756 | 73,706 | 892 | 54,083 | 2,138 |
| 14 | ಉತ್ತರ ಕನ್ನಡ | 89,868 | 4,756 | 73,706 | 892 | 47 | --- |
| **II** | ಬೆಳಗಾಂವಿ ವಿಭಾಗ | **246,239** | **12,320** | **940,445** | **171,416** | **255,704** | **219,975** |
| 15 | ಬಳ್ಳಾರಿ | 68,854 | 6,547 | 94,463 | 170,524 | 32,090 | 2,382 |
| 16 | ಬೀದರ್ | 9,587 | --- | 115,788 | 13,994 | 306 | 8,128 |
| 17 | ಗುಲ್ಬರ್ಗ | 22,202 | 5 | 375,788 | 13,994 | 2,021 | 21,882 |
| 18 | ರಾಯಚೂರು | 117,347 | --- | 174,386 | 65,722 | 249 | 4,158 |
| 19 | ಕೊಪ್ಪಳ | 68,847 | --- | 62,709 | 54,118 | 15,664 | 11,287 |
| **III** | ಗುಲ್ಬರ್ಗ ವಿಭಾಗ | **286,837** | **6,552** | **823,174** | **318,352** | **50,330** | **47,837** |
| 20 | ಚಿಕ್ಕಮಗಳೂರು | 49,841 | 61,058 | 13,104 | --- | 460 | 62 |
| 21 | ದಕ್ಷಿಣ ಕನ್ನಡ | 67,754 | --- | --- | --- | --- | --- |
| 22 | ಉಡುಪಿ | 69.598 | --- | --- | --- | --- | --- |
| 23 | ಹಾಸನ | 66,684 | 135,019 | 3,933 | --- | 5,242 | --- |
| 24 | ಕೊಡಗು | 40,666 | 425 | --- | --- | 1,495 | --- |
| 25 | ಮಂಡ್ಯ | 79,892 | 85,467 | 3,536 | 5 | 22 | --- |
| 26 | ಮೈಸೂರು | 109,666 | 83,670 | 17,492 | 6 | 17,602 | --- |
| 27 | ಚಾಮರಾಜನಗರ | 18,465 | 23,484 | 17,786 | 6 | 9,129 | 10 |
| **IV** | ಮೈಸೂರು ವಿಭಾಗ | **502,566** | **389,123** | **55,851** | **17** | **33,950** | **72** |
| | ರಾಜ್ಯ | **1,426,802** | **1,035,727** | **1,923,138** | **499,896** | **990,786** | **268,981** |

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಇತರೆ ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು | ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು | ಕಡಲೆ | ತೊಗರಿ | ಇತರ ದ್ವಿದಳ ಧಾನ್ಯಗಳು | ಒಟ್ಟು ದ್ವಿದಳ ಧಾನ್ಯಗಳು |
|---|---|---|---|---|---|---|---|
| 9 | 10 | 11 | 12 | 13 | 14 | 15 | 16 |
| 1 | ಬೆಂಗಳೂರು | 149 | 57,268 | --- | 936 | 997 | 11,783 |
| 2 | ಬೆಂಗಳೂರು ಗ್ರಾ | 274 | 173,617 | 50 | 5,522 | 5,531 | 38,525 |
| 3 | ಚಿತ್ರದುರ್ಗ | 14,789 | 169,428 | 2,960 | 7,582 | 1,904 | 34,603 |
| 4 | ದಾವಣಗೆರೆ | 3,383 | 319,084 | 2,151 | 6,657 | 1,970 | 19,713 |
| 5 | ಕೋಲಾರ | 1,070 | 162,974 | 21 | 12,694 | 2,988 | 38,423 |
| 6 | ಶಿವಮೊಗ್ಗ | 139 | 177,988 | 332 | 508 | 1,120 | 11,061 |
| 7 | ತುಮಕೂರು | 3,675 | 268,871 | 47 | 15,946 | 7,125 | 69,514 |
| **I** | **ಬೆಂಗಳೂರು ವಿಭಾಗ** | **23,479** | **1,329,230** | **5,561** | **49,845** | **21,635** | **223,622** |
| 8 | ಬೆಳಗಾಂವಿ | 6,031 | 458,540 | 24,199 | 8,602 | 8,096 | 81,711 |
| 9 | ಬಿಜಾಪುರ | 341 | 459,291 | 48,080 | 14,304 | 9,731 | 121,080 |
| 10 | ಬಾಗಲಕೋಟೆ | 568 | 280,132 | 17,835 | 6,154 | 2,681 | 46,456 |
| 11 | ಧಾರವಾಡ | 2,802 | 158,739 | 25,359 | 2,473 | 1,093 | 55,944 |
| 12 | ಗದಗ | 1,278 | 141,201 | 26,180 | 2,449 | 2,990 | 71,311 |
| 13 | ಹಾವೇರಿ | 12,456 | 202,406 | 1,902 | 7,477 | 6,262 | 45,930 |
| 14 | ಉತ್ತರ ಕನ್ನಡ | --- | 90,311 | 128 | 204 | 1,079 | 7,966 |
| **II** | **ಬೆಳಗಾಂವಿ ವಿಭಾಗ** | **23,476** | **1,790,620** | **143,683** | **41,663** | **31,932** | **430,398** |
| 15 | ಬಳ್ಳಾರಿ | 24,225 | 255,776 | 9,325 | 7,563 | 4,807 | 39,090 |
| 16 | ಬೀದರ್ | 1,118 | 148,921 | 41,731 | 54,354 | 1,519 | 227,078 |
| 17 | ಗುಲ್ಬರ್ಗ | 1,996 | 498,710 | 119,488 | 273,391 | 2,136 | 538,969 |
| 18 | ರಾಯಚೂರು | 2,121 | 363,983 | 14,597 | 19,100 | 909 | 47,030 |
| 19 | ಕೊಪ್ಪಳ | 11,833 | 224,458 | 11,179 | 13,481 | 6,513 | 53,082 |
| **III** | **ಗುಲ್ಬರ್ಗ ವಿಭಾಗ** | **41,293** | **1,491,848** | **196,320** | **367,889** | **15,884** | **905,249** |
| 20 | ಚಿಕ್ಕಮಗಳೂರು | 1,330 | 125,855 | 3,670 | 1,035 | 1,272 | 28,782 |
| 21 | ದಕ್ಷಿಣ ಕನ್ನಡ | --- | 67,754 | --- | --- | 286 | 4,491 |
| 22 | ಉಡುಪಿ | --- | 69,598 | --- | --- | 681 | 11,759 |
| 23 | ಹಾಸನ | 243 | 211,121 | 3,937 | 3,730 | 7,424 | 57,986 |
| 24 | ಕೊಡಗು | --- | 42,586 | --- | --- | 850 | 850 |
| 25 | ಮಂಡ್ಯ | 70 | 168,992 | 57 | 2,060 | 6,450 | 41,678 |
| 26 | ಮೈಸೂರು | 3 | 228,439 | 923 | 6,687 | 17,920 | 87,731 |
| 27 | ಚಾಮರಾಜನಗರ | 83 | 69,747 | 748 | 2,487 | 3,689 | 27,417 |
| **IV** | **ಮೈಸೂರು ವಿಭಾಗ** | **1,729** | **984,092** | **9,335** | **15,999** | **38,572** | **260,694** |
| | **ರಾಜ್ಯ** | **89,977** | **5,595,790** | **354,899** | **475,396** | **108,023** | **1,819,963** |

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಮುಖ್ಯ ಬೆಳೆಗಳ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | | | | |
|---|---|---|---|---|---|---|
| | | ನೆಲಗಡಲೆ | ಕಬ್ಬು | ಹತ್ತಿ | ಅಕ್ಕಿ | ರಾಗಿ |
| 1 | 2 | 3 | 4 | 5 | 6 | 7 |
| 1 | ಬೆಂಗಳೂರು | 885 | 67 | --- | 21,102 | 103,596 |
| 2 | ಬೆಂಗಳೂರು ಗ್ರಾ. | 24,656 | 1,018 | --- | 61,073 | 247,161 |
| 3 | ಚಿತ್ರದುರ್ಗ | 161,072 | 772 | 26,795 | 27,541 | 98,169 |
| 4 | ದಾವಣಗೆರೆ | 37,712 | 12,519 | 26,284 | 390,808 | 61,248 |
| 5 | ಕೋಲಾರ | 86,894 | 3,803 | 30 | 79,828 | 223,034 |
| 6 | ಶಿವಮೊಗ್ಗ | 5 399 | 11,233 | 18,011 | 383,617 | 12,549 |
| 7 | ತುಮಕೂರು | 190,123 | 1,017 | 1,343 | 136,903 | 296,350 |
| I | ಬೆಂಗಳೂರು ವಿಭಾಗ | **506,741** | **30,429** | **72,463** | **1,100,872** | **1,042,107** |
| 8 | ಬೆಳಗಾಂವಿ | 86,020 | 124,020 | 65,829 | 114,147 | 2,325 |
| 9 | ಬಿಜಾಪುರ | 66,436 | 13,456 | 8,727 | 541 | --- |
| 10 | ಬಾಗಲಕೋಟೆ | 32,217 | 49,449 | 15,225 | 316 | --- |
| 11 | ಧಾರವಾಡ | 39,937 | 3,628 | 86,875 | 35,730 | 148 |
| 12 | ಗದಗ | 84,441 | 77 | 62,230 | 2,565 | 26 |
| 13 | ಹಾವೇರಿ | 37,851 | 6,078 | 79,382 | 83,333 | 4,079 |
| 14 | ಉತ್ತರ ಕನ್ನಡ | 4,053 | 1,775 | 6,286 | 157,039 | 116 |
| II | ಬೆಳಗಾಂವಿ ವಿಭಾಗ | **350,955** | **198,483** | **324,554** | **393,671** | **6,694** |
| 15 | ಬಳ್ಳಾರಿ | 93,803 | 7,834 | 66,412 | 224,87 | 5,840 |
| 16 | ಬೀದರ್ | 3,767 | 24,518 | 3,616 | 5,825 | --- |
| 17 | ಗುಲ್ಬರ್ಗ | 118,005 | 8,658 | 20,113 | 41,335 | 4 |
| 18 | ರಾಯಚೂರು | 50,040 | 134 | 49,208 | 395,453 | --- |
| 19 | ಕೊಪ್ಪಳ | 53,391 | 1,956 | 19,182 | 233,409 | --- |
| **III** | ಗುಲ್ಬರ್ಗ ವಿಭಾಗ | **319,006** | **43,100** | **158,531** | **900,709** | **5,844** |
| 20 | ಚಿಕ್ಕಮಗಳೂರು | 7,547 | 1,560 | 3,270 | 118,813 | 104,235 |
| 21 | ದಕ್ಷಿಣ ಕನ್ನಡ | --- | 565 | --- | 141,211 | --- |
| 22 | ಉಡುಪಿ | 2,956 | 1,729 | --- | 122,106 | --- |
| 23 | ಹಾಸನ | 4,203 | 5,327 | 5,225 | 156,248 | 241,479 |
| 24 | ಕೊಡಗು | --- | 7 | 2 | 85,142 | 40 |
| 25 | ಮಂಡ್ಯ | 8,982 | 30,630 | 44 | 245,663 | 164,759 |
| 26 | ಮೈಸೂರು | 11,790 | 9,441 | 59,668 | 333,026 | 133,160 |
| 27 | ಚಾಮರಾಜನಗರ | 17,842 | 17,490 | 12,738 | 59,350 | 35,338 |
| **IV** | ಮೈಸೂರು ವಿಭಾಗ | **2,406,719** | **610,773** | **1,191,893** | **5,849,863** | **2,788,301** |
| | ರಾಜ್ಯ | **1,230,022** | **338,761** | **636,495** | **3,656,811** | **1,734,076** |

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಮುಖ್ಯ ಬೆಳೆಗಳ ಉತ್ಪನ್ನ (ಟನ್ನುಗಳಲಿ) | | | | | |
|---|---|---|---|---|---|---|---|
| | | ಜೋಳ | ಸಜ್ಜೆ | ಮುಸುಕಿನ ಜೋಳ | ಗೋದಿ | ಉಪತೃಣ ಬೆಳೆಗಳು | ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು |
| 8 | 9 | 10 | 11 | 12 | 13 | 14 | 15 |
| 1 | ಬೆಂಗಳೂರು | --- | --- | 4,175 | --- | 112 | 128,985 |
| 2 | ಬೆಂಗಳೂರು ಗ್ರಾ. | --- | --- | 16,189 | --- | 204 | 324,627 |
| 3 | ಚಿತ್ರದುರ್ಗ | 47,048 | 6,113 | 105,152 | 546 | 7,235 | 291,804 |
| 4 | ದಾವಣಗೆರೆ | 123,346 | 515 | 383,332 | 474 | 1,449 | 961,172 |
| 5 | ಕೋಲಾರ | --- | 81 | 47,194 | --- | 778 | 350,915 |
| 6 | ಶಿವಮೊಗ್ಗ | 3,730 | --- | 32,134 | 2 | 72 | 432,104 |
| 7 | ತುಮಕೂರು | 4,770 | 176 | 16,144 | 8 | 1,740 | 456,091 |
| I | ಬೆಂಗಳೂರು ವಿಭಾಗ | **178,894** | **6,885** | **604,320** | **1,030** | **11,590** | **2,945,698** |
| 8 | ಬೆಳಗಾಂವಿ | 213,104 | 8,901 | 306,391 | 61,350 | 2,865 | 709,083 |
| 9 | ಬಿಜಾಪುರ | 204,686 | 64,614 | 35,920 | 45,667 | 121 | 351,549 |
| 10 | ಬಾಗಲಕೋಟೆ | 145,695 | 52,375 | 121,873 | 28,030 | 217 | 348,506 |
| 11 | ಧಾರವಾಡ | 43,197 | --- | 65,302 | 30,657 | 1,814 | 176,848 |
| 12 | ಗದಗ | 56,695 | 598 | 65,112 | 25,021 | 576 | 150,593 |
| 13 | ಹಾವೇರಿ | 93,390 | 589 | 175,258 | 1,557 | 8,661 | 366,867 |
| 14 | ಉತ್ತರ ಕನ್ನಡ | 253 | --- | 94 | --- | --- | 157,502 |
| II | ಬೆಳಗಾಂವಿ ವಿಭಾಗ | **757,020** | **127,077** | **769,950** | **192,282** | **14,254** | **2,260,948** |
| 15 | ಬಳ್ಳಾರಿ | 119,499 | 25,148 | 99,860 | 2,193 | 9,731 | 486,958 |
| 16 | ಬೀದರ್ | 119,423 | 6,398 | 715 | 7,040 | 764 | 140,165 |
| 17 | ಗುಲ್ಬರ್ಗ | 237,907 | 47,736 | 5,859 | 10,947 | 859 | 344,647 |
| 18 | ರಾಯಚೂರು | 130,587 | 42,536 | 816 | 1,772 | 504 | 571,668 |
| 19 | ಕೊಪ್ಪಳ | 44,562 | 26,932 | 55,687 | 4,097 | 2,849 | 367,536 |
| **III** | ಗುಲ್ಬರ್ಗ ವಿಭಾಗ | **651,978** | **148,750** | **162,937** | **26,049** | **14,707** | **1,910,974** |
| 20 | ಚಿಕ್ಕಮಗಳೂರು | 12,101 | --- | 1,567 | 58 | 795 | 237,569 |
| 21 | ದಕ್ಷಿಣ ಕನ್ನಡ | --- | --- | --- | --- | --- | 141,211 |
| 22 | ಉಡುಪಿ | --- | --- | --- | - -- | --- | 122,106 |
| 23 | ಹಾಸನ | 4,304 | --- | 17,271 | --- | 145 | 419,447 |
| 24 | ಕೊಡಗು | --- | --- | 5,800 | --- | --- | 91,402 |
| 25 | ಮಂಡ್ಯ | 3,618 | 2 | 77 | --- | 43 | 414,162 |
| 26 | ಮೈಸೂರು | 20,258 | 3 | 75,139 | --- | 1 | 561,587 |
| 27 | ಚಾಮರಾಜನಗರ | 15,066 | 548 | 34,231 | 14 | 55 | 144,602 |
| **IV** | ಮೈಸೂರು ವಿಭಾಗ | **55,347** | **553** | **134,085** | **72** | **1,039** | **2,132,086** |
| | ರಾಜ್ಯ | **1,643,239** | **283,265** | **1,671,292** | **219,433** | **41,590** | **9,249,706** |

**ಸಜ್ಜೆ :** ಮಳೆ ಆಶ್ರಯದಲ್ಲಿ ಬೆಳೆಯಲಾಗುವ ಇನ್ನೊಂದು ಮುಖ್ಯ ಆಹಾರದ ಬೆಳೆ. ಬಿಜಾಪುರ, ಬಾಗಲಕೋಟೆ, ಗುಲ್ಬರ್ಗ, ರಾಯಚೂರು, ಕೊಪ್ಪಳ ಹಾಗೂ ಬೆಳಗಾಂವಿ ಜಿಲ್ಲೆಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮುಖ್ಯವಾಗಿ ಇದು ಮುಂಗಾರು ಬೆಳೆ. ಜೂನ್-ಜುಲೈನಲ್ಲಿ ಬಿತ್ತಿ ನವೆಂಬರ್‌ನಲ್ಲಿ ಕುಯ್ಲು ಮಾಡುತ್ತಾರೆ. ಈ ಬೆಳೆಯ ನೆಲದ ವಿಸ್ತೀರ್ಣ 4,17,113 ಹೆಕ್ಟೇರುಗಳು. ಉತ್ಪನ್ನ ಸುಮಾರು 2,83,265 ಟನ್ನುಗಳು. ಬೆಳೆಯು ನೆಲದ ಬಹುಭಾಗ ಬೆಳಗಾಂವಿ ಜಿಲ್ಲೆಯಲ್ಲಿದೆ. ಅನಂತರ ಅನುಕ್ರಮವಾಗಿ ರಾಯಚೂರು, ಬಿಜಾಪುರ, ಗುಲ್ಬರ್ಗ, ಚಿತ್ರದುರ್ಗ ಜಿಲ್ಲೆಗಳು ಬರುತ್ತವೆ. ಎಚ್‌ಬಿ 1, ಎಚ್‌ಬಿ 2 ಮುಂತಾದ ಅಧಿಕ ಇಳುವರಿ ಕೊಡುವ ಸಜ್ಜೆ ತಳಿಗಳು ಜನಪ್ರಿಯವಾಗುತ್ತಿವೆ. ಇವನ್ನು ನೀರಾವರಿಯಲ್ಲಿ ಬೆಳೆದಾಗ ಉತ್ತಮ ಇಳುವರಿ ಬರುವುದು ಕಂಡುಬಂದಿದೆ. ಎಚ್‌ಬಿ 3 ಮಳೆಯ ಆಶ್ರಯದಲ್ಲಿ ಬೆಳೆಯುವುದಕ್ಕೆ ಅನುಕೂಲವಾದ ತಳಿ.

**ದ್ವಿದಳ ಧಾನ್ಯಗಳು :** ಈ ಬೆಳೆಗಳನ್ನು ಸಾಧಾರಣವಾಗಿ ಅಕ್ಕಡಿ ಬೆಳೆ, ಅಂದರೆ ರಾಗಿ, ಜೋಳ ಇಂಥ ಇತರ ಬೆಳೆಗಳ ಮಧ್ಯೆ 8"-6" ಅಂತರದಲ್ಲಿ ಸಾಲುಗಳಾಗಿ ಬಿತ್ತಿ ಬೆಳೆಯುತ್ತಾರೆ. ಒಟ್ಟು ದ್ವಿದಳಧಾನ್ಯ ಬೆಳೆಯ ವಿಸ್ತೀರ್ಣ 18,19,963 ಹೆಕ್ಟೇರುಗಳು. ಇದರಲ್ಲಿ ಸುಮಾರು 5,38,969 ಹೆಕ್ಟೇರುಗಳು ಗುಲ್ಬರ್ಗ ಜಿಲ್ಲೆಯಲ್ಲಿದೆ. ದ್ವಿದಳ ಧಾನ್ಯಗಳಲ್ಲಿ ತೊಗರಿಗೆ ಪ್ರಥಮ ಸ್ಥಾನ. 47,53,962 ಹೆಕ್ಟೇರು ನೆಲದಲ್ಲಿ ಕೃಷಿಯಾಗುತ್ತಿದೆ. ಕಡಲೆಗೆ ಎರಡನೆಯ ಸ್ಥಾನ, ದ್ವಿದಳಧಾನ್ಯ ಬೆಳೆಗಳಿಗೆ ಅವುಗಳ ಪ್ರಾಮುಖ್ಯಕ್ಕೆ ಅನುಗುಣವಾದ ಗಮನ ಸಿಕ್ಕಿಲ್ಲ. ಈ ಬೆಳೆಗಳ ಸುಧಾರಣೆಯ ದಿಕ್ಕಿನಲ್ಲಿ ಹೆಚ್ಚು ಕೆಲಸ ಆಗಿಲ್ಲ. ಅದರಲ್ಲೂ ಹುರುಳಿ ಬೆಳೆಯ ವಿಷಯದಲ್ಲಿ ಏನೂ ಕೆಲಸ ಆಗಿಲ್ಲ. ಪ್ರಚಲಿತ ಬಳಕೆಯಲ್ಲಿರುವ ಸುಧಾರಿತ ದ್ವಿದಳಧಾನ್ಯ ಬೆಳೆಗಳು ಇವು: ತೊಗರಿ-ಸಿ.29, ಟಿ.21 ಮತ್ತು ಎಸ್.52; ಕಡಲೆ-ಅಣಗೇರಿ, ಹೆಸರು-ಜವಹರ್ 45, ಪಿ.ಎಸ್.7 ಮತ್ತು ಪಿ.ಎಸ್.16; ಉದ್ದು-ಕೊರೆಗಾಂವ್ 3, ಕೃಷ್ಣಾ, ಉಪು 1, ಮತ್ತು ಎಲ್.4; ಅಲಸಂದೆ-ಸಿ.152, ಇ.ಸಿ.4216 ಮತ್ತು ಟೈಪ್ 2.

**ಕಬ್ಬು :** ನೀರಾವರಿ ಆಶ್ರಿತ ಬೆಳೆ ಇದು. 12ರಿಂದ 15 ತಿಂಗಳ ಬೆಳೆಯಾದ್ದರಿಂದ ಅಷ್ಟು ಕಾಲವೂ ನೀರಿನ ಸೌಕರ್ಯ ಇರುವುದು ಅಗತ್ಯ. ಕೆರೆ ಬಯಲುಗಳಲ್ಲಿ ಕೆರೆಯಲ್ಲಿ ನೀರಿಲ್ಲದ ಸಮಯದಲ್ಲಿ ಬಾವಿಯಿಂದ ನೀರೆತ್ತಿ ಕಬ್ಬಿಗೆ ಅಗತ್ಯವಾದ ನೀರನ್ನು ಒದಗಿಸಿಕೊಳ್ಳುತ್ತಾರೆ. ನಾಲಾಬಯಲುಗಳಲ್ಲಿ ವರ್ಷವೆಲ್ಲ ಕಬ್ಬನ್ನು ಬೆಳೆಯುತ್ತಾರೆ. ಇಂಥ ಕಡೆ ಬೆಳೆದ ಕಬ್ಬಿನ ನೆಲದ ವಿಸ್ತೀರ್ಣ ಸಾವಿರಾರು ಎಕರೆಗಳಿರುವುದರಿಂದ ಅಲ್ಲಿ ಸಕ್ಕರೆ ಕಾರ್ಖಾನೆಗಳಿಳಿವೆ. ಬೆಳೆದ ಕಬ್ಬಿನಿಂದ ಸಕ್ಕರೆ ತಯಾರಿಸುತ್ತಾರೆ. ರಾಜ್ಯದಲ್ಲಿ ಕಬ್ಬಿನ ಬೆಳೆ ನೆಲದ ವಿಸ್ತೀರ್ಣ 3,38,761 ಹೆಕ್ಟೇರುಗಳು. ಬೆಳಗಾಂವಿ, ಮಂಡ್ಯ, ಬಳ್ಳಾರಿ, ರಾಯಚೂರು, ಬೀದರ್, ಕೋಲಾರ, ಶಿವಮೊಗ್ಗ, ಹಾಸನ, ಚಿತ್ರದುರ್ಗ, ತುಮಕೂರು ಮತ್ತು ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರಮುಖವಾಗಿ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಕಬ್ಬಿನ ಉತ್ಪನ್ನ 3,47,70,919 ಮೆ. ಟನ್ನುಗಳು. ವ್ಯಾಪಕವಾಗಿ ರೂಢಿಯಲ್ಲಿರುವ ಕಬ್ಬಿನ ತಳಿಗಳು: ತಡವಾಗಿ ಕೊಯ್ಲಿಗೆ ಬರುವ ಸಿಒ 419, ಶೀಘ್ರವಾಗಿ ಕಟಾವು ಮಾಡಬಲ್ಲ ಪಿ.ಸಿ.225, ಸಿ.ಒ.740 ಹಾಗೂ ಮಧ್ಯಮಾವಧಿಯ ಸಿ.ಒ.449.

**ಎಣ್ಣೆ ಕಾಳುಗಳು :** ಸೇಂಗ, ಹರಳು, ಎಳ್ಳು, ಸಾಸುವೆ, ಅಗಸೆ, ಹುಚ್ಚೆಳ್ಳು, ಕುಸುಬೆ ಇವು ಕೆಲವು ಮುಖ್ಯ ಎಣ್ಣೆಕಾಳು ಬೆಳೆಗಳು. ಇವುಗಳಲ್ಲಿ ಪ್ರಧಾನವಾದದ್ದು ಸೇಂಗ. ಇದರ ನೆಲದ ವಿಸ್ತೀರ್ಣ ಸುಮಾರು 12,30,022 ಹೆಕ್ಟೇರುಗಳು. ಕುಸುಬೆ ಮತ್ತು ಎಳ್ಳು ಅನಂತರದವು. ಸೇಂಗ ಉತ್ಪನ್ನ 11,92,134 ಮೆ. ಟನ್ನಿಗೂ ಹೆಚ್ಚಾಗಿದೆ. ಗದಗ, ಹಾವೇರಿ, ಬಾಗಲಕೋಟೆ, ಬಳ್ಳಾರಿ, ಹಾಸನ, ಬೆಳಗಾಂವಿ, ಧಾರವಾಡ, ರಾಯಚೂರು, ಬಿಜಾಪುರ, ಕೋಲಾರ, ದಾವಣಗೆರೆ, ಗುಲ್ಬರ್ಗ, ಚಿತ್ರದುರ್ಗ - ಇವು ಸೇಂಗ ಬೆಳೆಯುವ ಜಿಲ್ಲೆಗಳಲ್ಲಿ ಮುಖ್ಯವಾದವು. ಇದರ ಬೆಳೆ ಬಹುಮಟ್ಟಿಗೆ ಮಳೆ ಆಶ್ರಯದಲ್ಲೇ. ಇದರ ಸುಧಾರಿತ ತಳಿಗಳು ಹಾಗೂ ಕೃಷಿಕ್ರಮಗಳ ಬಗ್ಗೆ ಸಾಕಷ್ಟು ಸಂಶೋಧನೆ ನಡೆದಿದೆ. ನೀರಾವರಿಯಲ್ಲಿ ಸ್ಪ್ಯಾನಿಷ್ ಇಂಪ್ರೂವ್ಡ್ ಟಿ.ಎಂ.ವಿ. 2, ಎಸ್.206 ಮತ್ತು ಎಚ್.ಜಿ.8, ಮಳೆ ಆಸರೆಯಲ್ಲಿ ಎಚ್.ಜಿ.10 ಮತ್ತು ಎಸ್.ಬಿ.11 - ಇವು ಪ್ರಚಲಿತ ರೂಢಿಯಲ್ಲಿರುವ ತಳಿಗಳು.

**ಹತ್ತಿ :** ಇದೊಂದು ಪ್ರಮುಖ ವಾಣಿಜ್ಯ ಬೆಳೆ. ನಾರು ಬೆಳೆಗಳಲ್ಲಿ ಪ್ರಧಾನವಾದುದು. ಇದರ ನೆಲದ ವಿಸ್ತೀರ್ಣ ಸುಮಾರು 6,36,495 ಹೆಕ್ಟೇರುಗಳು. ಇದನ್ನು ರಾಜ್ಯದ ಕಪ್ಪುಮಣ್ಣಿನಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಜಯಧರ್, ಲಕ್ಷ್ಮೀ ಸುಯೋಧರ್, ವೆಸ್ಟರ್ನ್ ಜಿ, ಎ.ಕೆ.22/235, ಮೈ.14, ರಾಯಚೂರು 51, ಹಂಪಿ, ಭಾಗ್ಯ (ಜಿ.ಎಸ್.23) - ಈ ತಳಿ ಹತ್ತಿಗಳನ್ನು ಮಳೆ ಬೆಳೆಯಾಗಿ ಬೆಳೆಯುತ್ತಾರೆ. ಮೈಸೂರು ವಿಜಯ, ಹಂಪಿ 170, ಸಿ.ಒ.2, ವಿಬಾರ್, ಸೀ ಐಲೆಂಡ್, ವರಲಕ್ಷ್ಮಿ ಹೈಬ್ರಿಡ್-ಇವುಗಳನ್ನು ನೀರಾವರಿಯಲ್ಲಿ ಬೆಳೆಯುತ್ತಾರೆ. ಈ ನೀರಾವರಿ ಬೆಳೆಗಳು ಹೆಕ್ಟೇರಿಗೆ 28 ಕ್ವಿಂಟಲ್ ಇಳುವರಿ ಕೊಡುತ್ತವೆ. ವರಲಕ್ಷ್ಮಿ ಹಾಗೂ ಹೈಬ್ರಿಡ್ 4 ತಳಿಗಳ ಇಳುವರಿ ಹೆಕ್ಟೇರಿಗೆ 40 ಕ್ವಿಂಟಲ್‌ವರೆಗೂ ಹೋಗುತ್ತದೆ.

ಇದುವರೆಗೂ ಲಕ್ಷ್ಮೀ ತಳಿ ಒಟ್ಟು ಹತ್ತಿ ಬೆಳೆಯ ವಿಸ್ತೀರ್ಣದ ಅರ್ಧಕ್ಕೂ ಹೆಚ್ಚು ಹೆಕ್ಟೇರುಗಳನ್ನು ಆವರಿಸಿತ್ತು. ಈಗ ಅದರ ಬದಲು ಹಂಪಿ ಹಾಗೂ ಭಾಗ್ಯ ತಳಿಗಳು ಪ್ರಿಯವಾಗುತ್ತಿವೆ. ಉದ್ದದ ಎಳೆ ಹತ್ತಿಗಳಿಗೆ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಇದೆ. ಈ ಕಾರಣದಿಂದ ತುಂಗಭದ್ರಾ ಆಯಕಟ್ಟಿನಲ್ಲಿ ವರಲಕ್ಷ್ಮಿ ತಳಿಯ ವಿಸ್ತೀರ್ಣ ವೇಗವಾಗಿ ಹೆಚ್ಚುತ್ತಿದೆ. ರಾಯಚೂರು, ಧಾರವಾಡ, ಬಿಜಾಪುರ, ಮೈಸೂರು, ಕೊಪ್ಪಳ, ಹಾವೇರಿ, ಗದಗ, ಬಳ್ಳಾರಿ ಹತ್ತಿ ಬೆಳೆಯುವ ಮುಖ್ಯ ಜಿಲ್ಲೆಗಳು. ರಾಜ್ಯದಲ್ಲಿ ಹತ್ತಿ ಉತ್ಪನ್ನ ಸುಮಾರು 9,76,876 ಬೇಲುಗಳು.

**ತೋಟದ ಬೆಳೆಗಳು :** ಹಣ್ಣು, ಕಾಫಿ, ಟೀ, ತರಕಾರಿ ಇಂಥ ಬೆಳೆಗಳನ್ನು ತೋಟದ ಬೆಳೆಗಳು ಎಂದು ಪರಿಗಣಿಸುತ್ತಾರೆ. ಕರ್ನಾಟಕದಲ್ಲಿ ಇಂಥ ಬೆಳೆಗಳು ವ್ಯಾಪಕವಾಗಿವೆ. ಹಣ್ಣಿನ ಬೆಳೆಗಳಲ್ಲಿ ಪ್ರಮುಖವಾದುವು ಮಾವು, ಜಂಬೀರ ಜಾತಿಯವು. ಹಲಸು, ಬಾಳೆ, ದ್ರಾಕ್ಷಿ, ಸೀಬೆ, ಸಪೋಟ, ಅನಾನಸು, ಇವು ರಾಜ್ಯದಲ್ಲಿನ ಕೆಲವು ಜನಪ್ರಿಯ ಹಣ್ಣಿನ ಬೆಳೆಗಳು.

ರಾಜ್ಯದಲ್ಲಿ ಮಾವು ಬೆಳೆಯುವ ಜಿಲ್ಲೆಗಳಲ್ಲಿ ಕೋಲಾರ ಮುಖ್ಯವಾದ್ದು. ಬೆಂಗಳೂರು, ತುಮಕೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ ಜಿಲ್ಲೆಗಳಲ್ಲೂ ಸಾಕಷ್ಟು ಮಾವಿನ ತೋಟಗಳಿವೆ. ತಂಪಾದ ಹಾಗೂ ಹೆಚ್ಚು ಮಳೆ ಬೀಳದ ಸನ್ನಿವೇಶ ಮತ್ತು ಚೆನ್ನಾಗಿ ಗಾಳಿಯಾಡುವ ನೀರು ಬಸಿಯುವ ಮಣ್ಣು ಮಾವಿನ ಬೆಳೆಗೆ ಅನುಕೂಲ. ಬಾದಾಮಿ, ರಸಪುರಿ, ನೀಲಂ, ಮಲಗೋವಾ, ತೀರಪ್ರದೇಶಗಳಲ್ಲಿ ಬೆಳೆಯುವ ಮುಂಡಪ್ಪ, ಬೆನೆಟ್, ಬಾದಾಮಿ, ಕಾಳಿಪಾಕ್, ತಾರೀಪಾಡಿ ರಾಜ್ಯದ ಪ್ರಮುಖ ಮಾವಿನ ಜಾತಿಗಳು. ಸಸಿಗಳನ್ನು ಬಹುತೇಕ ಓಟೆಯಿಂದಲೇ ಬೆಳೆಸುತ್ತಾರೆ. ಉತ್ತಮ ಮಟ್ಟದ ತಳಿಗಳನ್ನು ಕಸಿಮಾಡಿ ವೃದ್ಧಿಪಡಿಸುವುದುಂಟು.

ಕಿತ್ತಳೆ, ನಿಂಬೆ, ಮೋಸಂಬಿ, ಮಾದಳ, ಚಕ್ಕೋತ, ಹೇರಳೆ ಇವು ಜಂಬೀರ ಜಾತಿಯ ಗಿಡಮರಗಳು. ರಾಜ್ಯದಲ್ಲಿ ಕಿತ್ತಳೆ, ನಿಂಬೆ, ಮೋಸಂಬಿಯನ್ನೂ ಬೆಳೆಯಲಾಗುತ್ತದೆ. ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳು ಕಿತ್ತಳೆ ಕೃಷಿಗೆ ಪ್ರಸಿದ್ಧ. ಕಿತ್ತಳೆ ಬಹುಮಟ್ಟಿಗೆ ಕಾಫಿತೋಟಗಳಲ್ಲಿನ ಮಧ್ಯಂತರದ ಬೆಳೆ. ಕೆಲವು ಕಡೆ ಇದನ್ನು ಶುದ್ಧ ಬೆಳೆಯಾಗಿಯೂ ಬೆಳೆಯುವುದುಂಟು. ಚೆನ್ನಾಗಿ ನೀರು ಬಸಿಯುವ ಮಣ್ಣು ಇದಕ್ಕೆ ಆವಶ್ಯಕ. ಆದ್ದರಿಂದಲೇ ಬೆಟ್ಟದ ಇಳಿಜಾರಿನಲ್ಲಿ ಕಿತ್ತಳೆ ಬೆಳೆ ಹೊಂದಿಕೊಂಡಿದೆ. ಬೀಜದಿಂದ ಸಸಿಮಾಡಿ ಬೆಳೆಸುವುದು ವಾಡಿಕೆ. ಹಣ್ಣು ಕಸಿಮಾಡಿ ಬೆಳೆಸುವುದೂ ಸಾಧ್ಯ. ಮಲೆನಾಡಿನಲ್ಲಿ ಕಿತ್ತಳೆಗೆ ನೀರಾವರಿ ಅಗತ್ಯವಿರುವುದಿಲ್ಲ. ಆದರೆ ಬೇಸಗೆಯಲ್ಲಿ ಸ್ವಲ್ಪ ನೀರು ಕಟ್ಟುವುದು ರೂಢಿಯಲ್ಲಿದೆ. ನಿಂಬೆ ಕಡಿಮೆಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿಯಲ್ಲಿ ಬೆಳೆಯುವ ಜಾತಿ. ಇದನ್ನು ರಾಜ್ಯದ ಎಲ್ಲ ಭಾಗಗಳಲ್ಲೂ ಕಾಣಬಹುದು.

ಹಲಸು ಪ್ರಕೃತಿಯಲ್ಲಿ ತಾನೇತಾನಾಗಿ ಬೆಳೆದು ಫಲಕೊಡುವ ಗಿಡ. ಮಲೆನಾಡಿನ ಕಾಡುಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ಮೈದಾನ ಸೀಮೆಯಲ್ಲಿ ಅಲ್ಲಲ್ಲಿ ಒಂಟಿಯಾಗಿ ಬೆಳೆಯುತ್ತದೆ. ಇತ್ತೀಚೆಗೆ ಈ ಬೆಳೆಯ ಸುಧಾರಣೆ ಕೆಲಸ ನಡೆಯುತ್ತಿದೆ.

ದ್ರಾಕ್ಷಿ ಜನಪ್ರಿಯವಾಗುತ್ತಿರುವ ಇನ್ನೊಂದು ಹಣ್ಣಿನ ಬೆಳೆ. ಮಾರುಕಟ್ಟೆ ಅನುಕೂಲವಿರುವ ಬೆಂಗಳೂರು, ಧಾರವಾಡ, ಬೆಳಗಾಂವಿ, ಇಂಥ ಪಟ್ಟಣಗಳ ಸುತ್ತಮುತ್ತ ಇದನ್ನು ಬೆಳೆಯುವ ನೆಲ ಅತಿವೇಗವಾಗಿ ಬೆಳೆಯುತ್ತಿದೆ. ಅನಾಬ್ ಷಾಹಿ, ತಾಮಸನ್ ಸೀಡ್‌ಲೆಸ್ ಮುಂತಾದ ಸುಧಾರಿತ ತಳಿಗಳನ್ನು ಬೆಂಗಳೂರು, ಧಾರವಾಡ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ.

ಕಾಫಿ, ಏಲಕ್ಕಿ, ಟೀ, ತೆಂಗು, ಅಡಕೆ ಇವು ರಾಜ್ಯದ ಮುಖ್ಯ ಪ್ಲಾಂಟೇಷನ್ ಬೆಳೆಗಳು. ಕಾಫಿ ವ್ಯವಸಾಯ ಇತರ ಬೆಳೆಗಳಂತಲ್ಲದೆ ಒಂದು ಕೈಗಾರಿಕೆ ಉದ್ಯಮದಂತೆ ನಡೆಯುತ್ತಿದೆ. ಇದರ ರಫ್ತಿನಿಂದ ವರ್ಷಕ್ಕೆ ಸಾಕಷ್ಟು ವಿದೇಶಿ ವಿನಿಮಯ ಗಳಿಕೆಯಾಗುತ್ತಿದೆ. ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳು ಕಾಫಿ ಬೆಳೆಗೆ ಪ್ರಸಿದ್ಧ. ಅರ‍್ಯಾಬಿಕ, ರೊಬಸ್ಟ ಇವು ಸಾಮಾನ್ಯವಾಗಿ ಬಳಕೆಯಲ್ಲಿರುವ ತಳಿಗಳು (ನೋಡಿ: ಕಾಫಿ).

ತೆಂಗು ರಾಜ್ಯದ ಎಲ್ಲ ಭಾಗಗಳಲ್ಲೂ ಬೆಳೆಯುವುದಾದರೂ ಮುಖ್ಯವಾಗಿ ಹಾಸನ ಜಿಲ್ಲೆಯ ಪೂರ್ವ ತಾಲ್ಲೂಕುಗಳಲ್ಲಿ, ಅರಸೀಕೆರೆ, ತಿಪಟೂರು ಪ್ರದೇಶಗಳಲ್ಲಿ ಹಾಗೂ ತೀರಪ್ರದೇಶದಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವ್ಯಾಪಕವಾಗಿದೆ. ರಾಜ್ಯದಲ್ಲಿ ಇದರ ವಿಸ್ತೀರ್ಣ ಸುಮಾರು 5.14 ಲಕ್ಷ ಹೆಕ್ಟೇರುಗಳು. ಮಳೆ 7.62ಮೀ ರಿಂದ 18.288ಮೀ ಇರುವಂಥ ಹಾಗೂ ನೀರು ಬಸಿದುಹೋಗಿ ಸಾಕಷ್ಟು ನೀರು ಉಳಿಸಿಕೊಳ್ಳಬಲ್ಲ ಆಳವಾದ ಕೆಂಪು ಗೋಡುಮಣ್ಣಿನ ಪ್ರದೇಶಗಳಲ್ಲಿ ತೆಂಗಿನ ಬೆಳೆ ಹೆಚ್ಚಾಗಿದೆ.

ಅಡಕೆಯನ್ನು ಚಿಕ್ಕಮಗಳೂರು ಶಿವಮೊಗ್ಗ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ತುಮಕೂರು, ಜಿಲ್ಲೆಯ ಮೈದಾನ ಪ್ರದೇಶದಲ್ಲಿ ಬೆಳೆಯುತ್ತಾರೆ. ಪ್ರಸ್ತುತ ವ್ಯವಸ್ಥಿತ ತರಕಾರಿ ಬೇಸಾಯ ಪಟ್ಟಣಗಳ ಹೊರ ಅಂಚಿನಲ್ಲೇ. ಎಲೆಕೋಸು, ಹೂಕೋಸು, ಗೆಡ್ಡೆ ಕೋಸು, ಬೀನ್ಸ್, ಅವರೆ, ಹುರುಳಿ ಮುಂತಾದವು ತರಕಾರಿಗಳಲ್ಲಿ ಪ್ರಧಾನವಾದವು. (ಬಿ.ವಿ.ವಿ.)

**ಕೃಷಿ ವಿಶ್ವವಿದ್ಯಾಲಯ, ಧಾರವಾಡ :** ಕರ್ನಾಟಕದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳಲ್ಲೊಂದು. ಇನ್ನೊಂದು ಬೆಂಗಳೂರಿನಲ್ಲಿದೆ. ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಪ್ರತ್ಯೇಕವಾಗಿ ಸ್ಥಾಪಿಸುವ ಅಗತ್ಯವನ್ನು ಮನಗಂಡು ರಾಜ್ಯ ಸರ್ಕಾರ 1986ರಲ್ಲಿ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ಸೇರುತ್ತವೆ.

ಘಟಿಕೋತ್ಸವದಲ್ಲಿ ಪದವಿಪ್ರದಾನ ಮಾಡುತ್ತಿರುವ ರಾಜ್ಯಪಾಲ ಟಿ.ಎನ್.ಚತುರ್ವೇದಿ

ಈ ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿ ಅಧ್ಯಯನ ಕೇಂದ್ರಗಳನ್ನೂ ಕಾಲೇಜುಗಳನ್ನೂ ಹೊಂದಿದೆ. ಒಟ್ಟು ಏಳು ಶೈಕ್ಷಣಿಕ ಕೇಂದ್ರಗಳಲ್ಲಿರುವ ಒಂಬತ್ತು ಕಾಲೇಜುಗಳಲ್ಲಿ ಸ್ನಾತಕ ಬೋಧನಾ ಚಟುವಟಿಕೆಗಳು ನಡೆಯುತ್ತಿವೆ. ಧಾರವಾಡದಲ್ಲಿ ಕೃಷಿ, ಕೃಷಿ ಮಾರಾಟ ಮತ್ತು ಸಹಕಾರ ಹಾಗೂ ಗ್ರಾಮೀಣ ಗೃಹ ವಿಜ್ಞಾನ ಪದವಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ. ರಾಯಚೂರು ಕೇಂದ್ರದಲ್ಲಿ ಕೃಷಿ ಮತ್ತು ಕೃಷಿ ಎಂಜಿನಿಯರಿಂಗ್; ಬೀದರ್‌ನಲ್ಲಿ ಪಶುವೈದ್ಯಕೀಯ, ಬಿಜಾಪುರ ಮತ್ತು ಭೀಮರಾಯನ ಗುಡಿಯಲ್ಲಿ ಕೃಷಿ; ಅರಭಾವಿಯಲ್ಲಿ ತೋಟಗಾರಿಕೆ, ಶಿರಸಿಯಲ್ಲಿ ಅರಣ್ಯವಿಜ್ಞಾನ ಪದವಿಗಳಿಗೆ ಶಿಕ್ಷಣ ಸೌಲಭ್ಯವಿದೆ. ಸ್ನಾತಕೋತ್ತರ ಪದವಿ ಕೇಂದ್ರಗಳು ಧಾರವಾಡ, ರಾಯಚೂರು, ಶಿರಸಿ, ಬೀದರ್ ಮತ್ತು ಅರಭಾವಿಗಳಲ್ಲಿವೆ.

ಕೃಷಿ ವಿಶ್ವವಿದ್ಯಾಲಯ ಕೃಷಿ, ಪಶುವಿಜ್ಞಾನಗಳ ಶಿಕ್ಷಣ ನಿಕಾಯಗಳನ್ನು ಹೊಂದಿದೆ. ಅಧ್ಯಯನ ಮಂಡಲಿಗಳು ಮತ್ತು ಶೈಕ್ಷಣಿಕ ಪರಿಷತ್ತುಗಳಿವೆ. ವಿಶ್ವವಿದ್ಯಾಲಯದಲ್ಲಿ ಒಟ್ಟು 2,234 ವಿದ್ಯಾರ್ಥಿಗಳು ವಿವಿಧ ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳಿಗಾಗಿ ಅಭ್ಯಾಸ ಮಾಡುತ್ತಿದ್ದಾರೆ (2003). ವಿಶ್ವವಿದ್ಯಾಲಯ ವಿವಿಧ ಕೃಷಿ ವಲಯಗಳಲ್ಲಿ ಒಟ್ಟು 33 ಸಂಶೋಧನ ಕೇಂದ್ರಗಳನ್ನು ನಡೆಸುತ್ತಿದೆ. ಅವು ಅಂಕೋಲ, ಅಣ್ಣಿಗೇರಿ, ಅರಭಾವಿ, ಬಾಗಲಕೋಟೆ, ಬೈಲಹೊಂಗಲ, ಬೆಳಗಾಂವಿ, ಬೆಳವಟಗಿ, ಭೀಮರಾಯನ ಗುಡಿ, ಬೀದರ್, ಬಿಜಾಪುರ, ಜೆನವಾಡಾ, ದೇವಣಿ, ಎಂ.ಆರ್.ಎಸ್. ಧಾರವಾಡ -5, ಎ.ಆರ್.ಎಸ್. ಧಾರವಾಡ -7, ಗದಗ, ಗಂಗಾವತಿ, ಗುಲ್ಬರ್ಗ, ಹಗರಿ, ಹನುಮನಹಟ್ಟಿ, ಕವಡಿಮಟ್ಟಿ, ಕಲ್ಲೋಳಿ, ಮಾಲನೂರ, ಮುಂಡಗೋಡ, ಮುಗದ, ನಿಪ್ಪಾಣಿ, ಪ್ರಭುನಗರ, ರಾಯಚೂರು, ಶಿರಸಿ (ಬತ್ತ), ಶಿರಸಿ (ಮೆಣಸು), ಸಿರಗುಪ್ಪ, ಸಂಕೇಶ್ವರ, ದೇವಿಹೊಸೂರು, ಅಲಮೇಲ್. ಹೊಸದಾಗಿ ಜಾರಿಗೆ ಬಂದ ರಾಷ್ಟ್ರೀಯ ಕೃಷಿ ತಾಂತ್ರಿಕ ಯೋಜನೆಯಡಿ 60 ಸಂಶೋಧನ ಯೋಜನೆಗಳು ಆರಂಭವಾಗಿವೆ. ಇವುಗಳ ಅಂದಾಜು ವಿನಿಯೋಗ 11.63 ಕೋಟಿ ರೂಪಾಯಿ.

ವಿಶ್ವವಿದ್ಯಾಲಯದ ಸಂಶೋಧನೆ, ಪ್ರಯೋಗ ಮತ್ತು ಪರಿಶೀಲನೆಯ ಪರಿಣಾಮವಾಗಿ 15 ಸಂಕರಣ ತಳಿಗಳನ್ನೂ 87 ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಲಾಗಿದೆ. ಇದರಲ್ಲಿ ಜೋಳ, ಬತ್ತ, ಗೋದಿ, ಸೋಯಬೀನ್, ಸೇಂಗ, ಸೂರ್ಯಕಾಂತಿ, ಹಸುರು ಮೆಣಸಿನಕಾಯಿ, ಫ್ರೆಂಚ್ ಬೀನ್ ಮತ್ತು ಕಬ್ಬು ಸೇರಿವೆ. ವಿವಿಧ ಬೆಳೆ ರೋಗಗಳ ನಿಯಂತ್ರಣಕ್ಕೂ ಆದ್ಯತೆ ನೀಡಲಾಗಿದೆ. ವಿಶ್ವವಿದ್ಯಾಲಯವು ವಿಸ್ತರಣ ನಿರ್ದೇಶನಾಲಯವಿದೆ. ಅದರ ಮುಖ್ಯ ಕಾರ್ಯಗಳೆಂದರೆ ತಾಂತ್ರಿಕ ವರ್ಗಾವಣೆ, ಸಿಬ್ಬಂದಿ ತರಬೇತಿ, ಪ್ರಕಟಣೆ, ವಿಸ್ತರಣಾ ಶಿಕ್ಷಣ, ಸಂಶೋಧನ ಕೇಂದ್ರಗಳು ಮತ್ತು ರೈತರ ನಡುವೆ ಸಂಪರ್ಕಸೇವೆ ಏರ್ಪಡಿಸುವುದು. ಇದಕ್ಕಾಗಿ ವಸ್ತುಪ್ರದರ್ಶನ, ಪ್ರಾತ್ಯಕ್ಷಿಕೆ, ಸುದ್ದಿ ಮಾಧ್ಯಮಗಳು ಮತ್ತು ಕೃಷಿ ಮೇಳಗಳನ್ನು ಸಾಧನಗಳಾಗಿ ಬಳಸಿಕೊಳ್ಳಲಾಗಿದೆ. ರೈತ ಮಹಿಳೆಯರಲ್ಲಿ ಕೃಷಿ ಕುರಿತ ಹೊಸ ಆವಿಷ್ಕಾರಗಳ ಬಗ್ಗೆ ಅರಿವುಂಟುಮಾಡಲು ಕಾಳಜಿ ವಹಿಸಲಾಗುತ್ತಿದೆ. ಕೃಷಿ ವಿಶ್ವವಿದ್ಯಾಲಯ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ 1995-2000 ಅವಧಿಗೆ ಸರದಾರ್ ಪಟೇಲ್ ಪ್ರಶಸ್ತಿ ಪಡೆದಿದೆ. ಇಲ್ಲಿನ ಹಲವು ವಿಜ್ಞಾನಿಗಳು ಜವಹರಲಾಲ್ ನೆಹರೂ ಪ್ರಶಸ್ತಿ, ಸರ್.ಸಿವಿ.ರಾಮನ್ ಪ್ರಶಸ್ತಿ ಸೇರಿದಂತೆ ವಿವಿಧ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈ ವಿಶ್ವವಿದ್ಯಾಲಯದಲ್ಲಿ ಇಲ್ಲಿಯವರೆಗೆ ಜಿ.ವಿ.ಗೌಡ (1986-89), ಆರ್.ಕೆ.ಹೆಗಡೆ (1989-91), ಎನ್.ಎಲ್.ಮೌರ್ಯ (1991), ಪಿ.ವಿ.ರೈ (1991-94), ಎಂ.ಮಹದೇವಪ್ಪ (1994-2000) ಮತ್ತು ಎಸ್.ಎ.ಪಾಟೀಲ (2000ದಿಂದ) ಇವರು ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. *

**ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು :** ಕರ್ನಾಟಕದಲ್ಲಿ ಕೃಷಿ ಶಿಕ್ಷಣ ಹಾಗೂ ಸಂಶೋಧನೆಗಾಗಿ ಬೆಂಗಳೂರು ನಗರದ ಹೆಬ್ಬಾಳದಲ್ಲಿ ನೆಲೆಗೊಂಡ ವಿಶ್ವವಿದ್ಯಾಲಯ. ಸ್ಥಾಪನೆ 1965. 1899ರಲ್ಲಿ ಮೈಸೂರು ಸರ್ಕಾರ ಕೃಷಿ ಸಂಶೋಧನೆ ಹಾಗೂ ಶಿಕ್ಷಣವನ್ನು ಪ್ರೋತ್ಸಾಹಿಸಲು ಜರ್ಮನ್ ರಾಷ್ಟ್ರೀಯನಾದ ಲೆಹಮನ್ ಎಂಬಾತನನ್ನು ಮೊದಲ ಕೃಷಿ ತಜ್ಞನನ್ನಾಗಿ ನೇಮಿಸಿತು. ಆತ ಈಗಿನ ಸೆಂಟ್ರಲ್ ಕಾಲೇಜ್ ಕಟ್ಟಡದ ಪಕ್ಕದಲ್ಲಿ ಒಂದು ಕೃಷಿ ಸಂಶೋಧನ ಪ್ರಯೋಗಾಲಯ ಹಾಗೂ ಹೆಬ್ಬಾಳದಲ್ಲಿ 30 ಎಕರೆ ಜಾಗದಲ್ಲಿ ಒಂದು ಪ್ರಾಯೋಗಿಕ ಕ್ಷೇತ್ರವನ್ನು ಸ್ಥಾಪಿಸಿದ. ಈ ಕ್ಷೇತ್ರದಲ್ಲಿ ಸಂಶೋಧನ ಪ್ರಗತಿ ಕಂಡ ಅನಂತರ ಅದೇ

ಸ್ಥಳದಲ್ಲಿ 1913ರಲ್ಲಿ ಮೈಸೂರು ಕೃಷಿ ಶಾಲೆ ಸ್ಥಾಪಿಸಲಾಯಿತು. ರಾಜ್ಯ ಕೃಷಿ ಇಲಾಖೆಯ ನಿರ್ದೇಶಕರಾಗಿದ್ದ (1907) ಕೀಟಶಾಸ್ತ್ರಜ್ಞ ಹಾಗೂ ಶಿಲೀಂಧ್ರ ಶಾಸ್ತ್ರಜ್ಞ ಕೆನಡದ ಲೆಸ್ಲೀ ಕೋಲ್‍ಮನ್‍ರನ್ನು (ನೋಡಿ) ಕೃಷಿ ಶಾಲೆಯ ಮೊದಲ ಪ್ರಾಂಶುಪಾಲರನ್ನಾಗಿ ನೇಮಿಸಲಾಯಿತು. ಮೊದಲಿಗೆ ಈ ಶಾಲೆ ಎರಡು ವರ್ಷಗಳ ಪೋಸ್ಟ್ ಸೆಕೆಂಡರಿ ಟ್ರೈನಿಂಗ್ ಕೋರ್ಸ್ ನಡೆಸುತ್ತಿತ್ತು. ಅನಂತರ ಅದನ್ನು ಮೂರು ವರ್ಷಗಳ ಅವಧಿಯ ಪೋಸ್ಟ್ ಸೆಕೆಂಡರಿ ಡಿಪ್ಲೊಮಾ ಕೋರ್ಸ್ ಆಗಿ ಬದಲಾಯಿಸಲಾಯಿತು. ಕೋಲ್‍ಮನ್ ಅವರ ನೇತೃತ್ವದಲ್ಲಿ ಮೈಸೂರು ಕೃಷಿ ಶಾಲೆ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಹಾಗೂ ಬರ್ಮಾ (ಈಗಿನ ಮಯನ್‍ಮಾರ್), ಶ್ರೀ ಲಂಕಾ ಹಾಗೂ ದಕ್ಷಿಣ ಆಫ್ರಿಕ ದೇಶಗಳಲ್ಲೂ ಪ್ರಖ್ಯಾತವಾಯಿತು. ಈ ಖ್ಯಾತಿಯಿಂದಾಗಿ ಕೋಲ್‍ಮನ್ ಅವರು ಕೃಷಿ ಶಾಲೆಯನ್ನು ಕೃಷಿ ಕಾಲೇಜಾಗಿ ಪರಿವರ್ತಿಸುವ ಕನಸು ಕಂಡರು. ಅವರ ಕನಸು ನನಸಾಗುವುದು ತಡವಾದರೂ ಆಗ ರಾಜ್ಯ ಕೃಷಿ ಅಧಿಕಾರಿಯಾಗಿದ್ದ ಎಂ.ಎ.ಶ್ರೀನಿವಾಸನ್ ಅವರ ಆಸಕ್ತಿಯಿಂದಾಗಿ 1946ರಲ್ಲಿ 3 ವರ್ಷಗಳ ಸ್ನಾತಕ ಪದವಿ (ಬ್ಯಾಚೆಲರ್ ಡಿಗ್ರಿ) ಕೋರ್ಸ್‍ನೊಂದಿಗೆ ಕೃಷಿ ಕಾಲೇಜು ಸ್ಥಾಪಿತವಾಯಿತು. ಕೃಷಿ ಕಾಲೇಜಿನ ನಿರ್ವಹಣೆ ಕೃಷಿ ಇಲಾಖೆಯ ಅಧೀನದಲ್ಲಿದ್ದು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಟ್ಟಿತ್ತು. ಸ್ನಾತಕ ಪದವಿ ಕೋರ್ಸಿಗೆ ಎರಡು ವರ್ಷಗಳ ಇಂಟರ್‍ಮೀಡಿಯೇಟ್ ಮುಗಿಸಿದ ವಿದ್ಯಾರ್ಥಿಗಳಿಗೆ ಪ್ರವೇಶವಿತ್ತು. ಮುಂದೆ ರಾಜ್ಯ ಸರ್ಕಾರ ಇಂಟರ್‍ಮೀಡಿಯೇಟ್ ಕೋರ್ಸ್ ಬದಲಿಗೆ ಒಂದು ವರ್ಷದ ಪದವಿ ಪೂರ್ವ (ಪ್ರೀಯೂನಿವರ್ಸಿಟಿ) ಪರೀಕ್ಷೆ ಜಾರಿಗೆ ತಂದಾಗ ಕೃಷಿ ಸ್ನಾತಕ ಪದವಿಯನ್ನು ನಾಲ್ಕು ವರ್ಷದ ಕಾರ್ಯಕ್ರಮವನ್ನಾಗಿ ಬದಲಾಯಿಸಲಾಯಿತು.

ಕೃಷಿ ಕಾಲೇಜಿಗೆ ಒಂದು ಹೊಸ ವಿಸ್ತಾರವಾದ ಕಟ್ಟಡದ ಆವಶ್ಯಕತೆಯನ್ನು ಮನಗಂಡಿದ್ದ ಆಗಿನ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಮೈಸೂರು ಕೃಷಿ ಕಾಲೇಜಿನ ಶಂಖುಸ್ಥಾಪನೆ ನೆರವೇರಿಸಿದ್ದರು (1956). ಅನಂತರ 1959ರಲ್ಲಿ ಬೆಂಗಳೂರು ನಗರದ ಬಳ್ಳಾರಿ ರಸ್ತೆಯಲ್ಲಿರುವ ಹೊಸ ಕಟ್ಟಡಕ್ಕೆ ಕೃಷಿ ಕಾಲೇಜು ವರ್ಗಾವಣೆಗೊಂಡಿತು.

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ರಾಜ್ಯ ವಿಧಾನಮಂಡಲದಲ್ಲಿ ವಿಶ್ವವಿದ್ಯಾನಿಲಯ ಅಧಿನಿಯಮ (1963ರ ಅಧಿನಿಯಮ 22) ಅಂಗೀಕೃತವಾದ ಅನಂತರ 1964ರಲ್ಲಿ ಕೃಷಿ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂತು. ವಿಶ್ವವಿದ್ಯಾಲಯದ ಉದ್ಘಾಟನೆಯನ್ನು ಆಗಿನ ರಾಷ್ಟ್ರಪತಿಗಳಾದ ಜಾಕೀರ್ ಹುಸೇನ್ ಅವರು ವಿಧ್ಯುಕ್ತವಾಗಿ ನೆರವೇರಿಸಿದರು (1965 ಅಕ್ಟೋಬರ್ 1). ಕೆ.ಸಿ.ನಾಯಕ್ ಕೃಷಿ ವಿಶ್ವವಿದ್ಯಾಲಯದ ಮೊದಲ ಕುಲಪತಿ (1964-73), ಕೃಷಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎಂ.ಪುಟ್ಟರುದ್ರಯ್ಯ ಅವರು ಮೊದಲ ಶಿಕ್ಷಣ ನಿರ್ದೇಶಕರು. ಅನಂತರ ಎಚ್.ಆರ್.ಅರಕೆರೆ (1973-79), ಆರ್.ದ್ವಾರಕೀನಾಥ್ (1979-81), ಎನ್.ಜಿ.ಪೆರೂರ್ (1981-85), ಎಸ್.ವಿ.ಪಾಟೀಲ್ (1985-88), ಆರ್.ವಿ.ರಾಮಕೃಷ್ಣ (1988), ಕೆ.ಕೃಷ್ಣಮೂರ್ತಿ (1989-92), ಕೆ.ವಿ.ದೇವರಾಜ್ (1992-95), ಜಿ.ಕೆ.ವೀರೇಶ್ (1995-98), ಎಸ್.ಬಿಸಲಯ್ಯ (1998-2001) ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಈಗಿನ ಕುಲಪತಿ ಎ.ಎಂ.ಕೃಷ್ಣಪ್ಪ, (2001).

1986ರಲ್ಲಿ ಈ ವಿಶ್ವವಿದ್ಯಾಲಯವನ್ನು ವಿಭಜಿಸಿ ಧಾರವಾಡದಲ್ಲಿ ಮತ್ತೊಂದು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಮೊದಲಿಗೆ ಕೃಷಿ ವಿಜ್ಞಾನ ಬೋಧನೆಯೊಂದಿಗೆ ಪ್ರಾರಂಭವಾದ ಕೃಷಿ ವಿಶ್ವವಿದ್ಯಾಲಯ ಪ್ರಸ್ತುತ 9 ವಿಷಯಗಳಲ್ಲಿ ಸ್ನಾತಕ ಪದವಿಗಳನ್ನೂ 47 ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನೂ 34 ವಿಷಯಗಳಲ್ಲಿ ಪಿಎಚ್.ಡಿ. ಪದವಿಗಳನ್ನೂ ಪ್ರದಾನ ಮಾಡುತ್ತಿದೆ. ಕರ್ನಾಟಕದ ಕೃಷಿ ಕಾಲೇಜುಗಳ ವಿವರ ಹೀಗಿದೆ: ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಮಂಡ್ಯ; ಶಿವಮೊಗ್ಗ ಹಾಗೂ ಹಾಸನಗಳಲ್ಲಿ ಕೃಷಿ ಕಾಲೇಜುಗಳು; ಮಂಗಳೂರಿನಲ್ಲಿ ಮೀನುಗಾರಿಕೆ ಕಾಲೇಜು; ಮೂಡಿಗೆರೆಯಲ್ಲಿ ತೋಟಗಾರಿಕೆ ಕಾಲೇಜು, ಪೊನ್ನಂಪೇಟೆಯಲ್ಲಿ ಅರಣ್ಯಶಾಸ್ತ್ರ ಕಾಲೇಜು; ಚಿಂತಾಮಣಿಯಲ್ಲಿ ರೇಷ್ಮೆ ಕೃಷಿ ಕಾಲೇಜು; ಬೆಂಗಳೂರಿನ ಹೆಬ್ಬಾಳ ಆವರಣದಲ್ಲಿ ಪಶುವೈದ್ಯಕೀಯ ಹಾಗೂ ಹೈನು ತಂತ್ರಜ್ಞಾನ ಕಾಲೇಜು. ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಮಾರುಕಟ್ಟೆ ಮತ್ತು ಸಹಕಾರ ಹಾಗೂ ಕೃಷಿ ಇಂಜಿನಿಯರಿಂಗ್ ಸ್ನಾತಕ ಪದವಿಗಳನ್ನು ಬೋಧಿಸಲಾಗುತ್ತಿದೆ. ಈ ಎಲ್ಲ ಕಾಲೇಜುಗಳಲ್ಲಿ ಸು.2,343 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ವಿಶ್ವವಿದ್ಯಾನಿಲಯದ ಪ್ರಮುಖ ಅಧ್ಯಯನ ವಿಭಾಗಗಳಿವು: ಕೃಷಿ ಜೀವತಂತ್ರಜ್ಞಾನ, ಕೃಷಿ ಅರ್ಥಶಾಸ್ತ್ರ, ಕೃಷಿ ವಿಸ್ತರಣೆ, ಕೃಷಿ ಸೂಕ್ಷ್ಮ ಜೀವವಿಜ್ಞಾನ, ಬೇಸಾಯವಿಜ್ಞಾನ, ಆನುವಂಶಿಕತೆ ಹಾಗೂ ಸಸ್ಯಸಂವರ್ಧನೆ, ಬೆಳೆ ಶರೀರಕ್ರಿಯಾಶಾಸ್ತ್ರ, ಸಸ್ಯರೋಗಶಾಸ್ತ್ರ, ಕೃಷಿ ಕೀಟವಿಜ್ಞಾನ, ಕುಕ್ಕುಟ ವಿಜ್ಞಾನ, ಪಶುವೈದ್ಯಕೀಯ, ಅಂಗಶಾಸ್ತ್ರ, ಪಶು ಆನುವಂಶಿಕತೆ ಮತ್ತು ಪಶುಸಂವರ್ಧನೆ, ಹೈನುತಂತ್ರಜ್ಞಾನ, ಮೀನು ಉತ್ಪಾದನೆ ಹಾಗೂ ನಿರ್ವಹಣೆ.

ಪ್ರಾದೇಶಿಕ ಭಾಷೆ ಶಿಕ್ಷಣಮಾಧ್ಯಮವಾಗಿರಬೇಕೆಂಬ ಸಂಸತ್ತಿನ ತೀರ್ಮಾನದಂತೆ ಕೃಷಿ ವಿಶ್ವವಿದ್ಯಾಲಯದಲ್ಲಿ 1970ರಲ್ಲಿ ಪ್ರಾರಂಭಿಸಲಾದ ಕನ್ನಡ ಅಧ್ಯಯನ ವಿಭಾಗ ಕನ್ನಡವನ್ನು ಕೃಷಿ ಶಿಕ್ಷಣ ಮಾಧ್ಯಮಕ್ಕೆ ಅನುವಾಗುವಂತೆ ಮೊದಲ ಹೆಜ್ಜೆಯಾಗಿ ಕೃಷಿವಿಜ್ಞಾನದ ವಿವಿಧ ವಿಷಯಗಳಲ್ಲಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ನಿರ್ಮಿಸುವ ಕಾರ್ಯ ಕೈಗೊಂಡಿದೆ. ಈ ವಿಭಾಗ ಇದುವರೆಗೆ 230ಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪ್ರಕಟಿಸಿದೆ.

ವಿಶ್ವವಿದ್ಯಾಲಯ ಕರ್ನಾಟಕ ರಾಜ್ಯವನ್ನು ಹವಾಮಾನದ ಆಧಾರದ ಮೇಲೆ ವಿವಿಧ ಕೃಷಿ ಹವಾಮಾನ ವಲಯಗಳೆಂದು ವಿಂಗಡಿಸಿ ಆಯಾ ವಲಯಗಳಲ್ಲಿನ ಬೆಳೆಗಳಿಗನುಸಾರವಾಗಿ ಸಂಶೋಧನೆ ನಡೆಸಲು 23 ಕೃಷಿ ಹಾಗೂ ಪ್ರಾದೇಶಿಕ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದೆ.

ಕೃಷಿ ವಿಶ್ವವಿದ್ಯಾಲಯ ಸಂಶೋಧನ ಪ್ರಕಟಣೆಗಳನ್ನಾಧರಿಸಿ ಅಖಿಲ ಭಾರತ ಶ್ರೇಣೀಕರಣದಲ್ಲಿ ಎಲ್ಲಾ ಕೃಷಿ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ 4ನೆಯ ಸ್ಥಾನವನ್ನೂ ಎಲ್ಲ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಮೂರನೆಯ ಸ್ಥಾನವನ್ನೂ ಗಳಿಸಿದೆ. ಮಂಗಳೂರಿನ ಮೀನುಗಾರಿಕೆ ಕಾಲೇಜು ಎಲ್ಲ ಸಂಸ್ಥೆಗಳಲ್ಲೂ 3ನೆಯ ಸ್ಥಾನವನ್ನೂ ಭಾರತದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಮೊದಲನೆಯ ಸ್ಥಾನವನ್ನೂ ಗಳಿಸಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಜೂನಿಯರ್ ಫೆಲೋಷಿಪ್ ಗಳಿಕೆಯಲ್ಲಿ ಈ ವಿಶ್ವವಿದ್ಯಾಲಯ 4ನೆಯ ಸ್ಥಾನವನ್ನು ಪಡೆದಿದೆ. ಜಲಾನಯನ ನಿರ್ವಹಣೆಯಲ್ಲಿ ಸತತವಾಗಿ ಎರಡು ಬಾರಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿದೆ. ವಿಶ್ವವಿದ್ಯಾಲಯದ ಎರಡು ವಿಭಾಗಗಳಾದ ಕೀಟವಿಜ್ಞಾನ ವಿಭಾಗ ಹಾಗೂ ಕೃಷಿ ಸೂಕ್ಷ್ಮ ಜೀವವಿಜ್ಞಾನ ವಿಭಾಗಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನೀಡುವ ಸ್ಪರ್ಧಾತ್ಮಕ ಅನುದಾನಗಳನ್ನು ಪಡೆದಿರುವ ಮೊತ್ತಮೊದಲ ಹಾಗೂ ಏಕೈಕ ವಿಶ್ವವಿದ್ಯಾಲಯ ಇದಾಗಿದೆ.

ಭಾರತದ ಜೀವವೈವಿಧ್ಯದ ನಕ್ಷೆ ರಚಿಸಲು ಭಾರತ ಸರ್ಕಾರದ ಜೀವತಂತ್ರಜ್ಞಾನ ವಿಭಾಗ ವಿಶ್ವವಿದ್ಯಾಲಯವನ್ನು ಕೇಂದ್ರ ಕಾರ್ಯಸ್ಥಾನವಾಗಿ ಗುರುತಿಸಿದೆ ಹಾಗೂ ಚಿಟ್ಟೆಗಳ ಸಂಗ್ರಹಾವರಣ ಸ್ಥಾಪಿಸಲು ಸಹ ಆಯ್ಕೆ ಮಾಡಿದೆ. ಸಂಶೋಧನೆಗಾಗಿ ಕೃಷಿ ವಿಜ್ಞಾನಗಳಲ್ಲಿ (ಎರಡು) ಹಾಗೂ ಮೀನುಗಾರಿಕೆ ವಿಜ್ಞಾನವನ್ನೊಳಗೊಂಡಂತೆ ಪಶುವೈದ್ಯಕೀಯ ಮತ್ತು ಸಂಬಂಧಿ ವಿಜ್ಞಾನಗಳಲ್ಲಿ (ಐದು) ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಈ ವಿಶ್ವಾವಿದ್ಯಾಲಯಗಳಿಸಿದೆ. (ಎನ್.ಎಸ್.ವಿ.)

ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ **:** ಈ ಕೇಂದ್ರ ಕರ್ನಾಟಕ ಸರ್ಕಾರದ ವ್ಯವಸಾಯ ಇಲಾಖೆಯ ಅಧೀನದಲ್ಲಿ 1957ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯಲ್ಲಿ ಪ್ರಾರಂಭವಾಯಿತು. ಮೂಡಿಗೆರೆಗೆ ಪಟ್ಟಣಕ್ಕೆ 2ಕಿಮೀ ದೂರದಲ್ಲಿ ಕಡೂರು-ಮಂಗಳೂರು ರಸ್ತೆಯಲ್ಲಿದೆ. ಕುದುರೆಗುಂಡಿ ತಿಮ್ಮಶೆಟ್ಟಿ ಎಂಬ ಕಾಫಿ ಬೆಳೆಗಾರರು ತಮ್ಮ ತೋಟದ ಭೂಮಿಯನ್ನು ಈ ಕೇಂದ್ರಕ್ಕೆ ನೀಡಿದರು. ಮಲೆನಾಡಿನ ಈ ಭಾಗದಲ್ಲಿ ಏಲಕ್ಕಿ ಬೆಳೆ ಅಧಿಕವಾಗಿದ್ದುದರಿಂದ ಆರಂಭದಲ್ಲಿ ಈ ಬೆಳೆಯ ಅಭಿವೃದ್ಧಿಗಾಗಿ ಈ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಲಾಯಿತು. 1965ರಲ್ಲಿ ಇದು ಹೆಬ್ಬಾಳಿನ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿತು. ಏಲಕ್ಕಿ ಬೆಳೆಯುವ ಪ್ರದೇಶ ಕಡಿಮೆಯಾದಂತೆ ಇದರ ಕಾರ್ಯವ್ಯಾಪ್ತಿ ಇತರ ಬೆಳೆಗಳಿಗೂ ವಿಸ್ತರಿಸಿತು.

ಏಲಕ್ಕಿ ಬೆಳೆಗೆ ವಿಶೇಷ ಪ್ರಾಶಸ್ತ್ಯ ನೀಡಿ ಸಂಶೋಧನೆ ನಡೆಸಿದ್ದರ ಫಲವಾಗಿ ಅಧಿಕ ಇಳುವರಿ ಕೊಡುವ ಮೂಡಿಗೆರೆ- 1 ಮತ್ತು ಮೂಡಿಗೆರೆ-2 ಏಲಕ್ಕಿ ತಳಿಗಳನ್ನು ರೂಪಿಸಿ ಬಿಡುಗಡೆಗೊಳಿಸಲಾಗಿದೆ. ಬತ್ತ, ಕರಿಮೆಣಸು, ಶುಂಠಿ, ಅಡಕೆ ಮತ್ತು ಇತರ ತೋಟದ ಬೆಳೆಗಳ ಬಗ್ಗೆಯೂ ಸಂಶೋಧನೆಗಳು ನಡೆಯುತ್ತಿವೆ. ಅಧಿಕ ಇಳುವರಿ ಮತ್ತು ಬೆಂಕಿರೋಗ ನಿರೋಧಕ ಬತ್ತದ ತಳಿಗಳಾದ ಐ.ಇ.ಟಿ. 7191, ಕೆ.ಎಚ್.ಪಿ. 2, ಹೇಮಾವತಿ, ಕೆ.ಎಚ್.ಆರ್.ಎಸ್. 26 ತಳಿಗಳನ್ನು ಸಾಗುವಳಿಗೆ ಬಿಡುಗಡೆ ಮಾಡಲಾಗಿದೆ. ಬತ್ತದ ಬೇಸಗೆ ಹಂಗಾಮಿಗೆ ಸೂಕ್ತವಾದ ರಾಶಿ, ಸಿ.ಟಿ.ಎಚ್.1, ಹಾಗೂ ಸಿ.ಟಿ.ಎಚ್.3 ತಳಿಗಳನ್ನು ರೂಪಿಸಿ ಬಿಡುಗಡೆ ಮಾಡಲಾಗಿದೆ. ಬೋಳಾದ ಗುಡ್ಡಗಾಡು ಪ್ರದೇಶಕ್ಕೆ ಸಪೋಟ ಮತ್ತು ಸೀಬೆ ಹಣ್ಣು ಸಾಗುವಳಿ ಸೂಕ್ತವೆಂದು ಶಿಫಾರಸು ಮಾಡಲಾಗಿದೆ.

ವಿವಿಧ ಬಗೆಯ ತೋಟಗಾರಿಕೆ ಬೆಳೆಗಳನ್ನು ಪ್ರಯೋಗಾರ್ಥವಾಗಿ ಬೆಳೆದು ಅವುಗಳ ಗುಣಸಾಮರ್ಥ್ಯಗಳನ್ನೂ ಸ್ಥಳೀಯ ಪರಿಸರಕ್ಕೆ ಅವುಗಳ ಯಥಾರ್ಥತೆಯನ್ನೂ ಕಂಡುಕೊಳ್ಳಲು ಕೇಂದ್ರ ಶ್ರಮಿಸಿದೆ. ಈ ಬೆಳೆಗಳಿಗೆ ತಗಲುವ ಕೀಟಬಾಧೆಗಳನ್ನು ಪರೀಕ್ಷಿಸಿ ಸೂಕ್ತ ಕ್ರಿಮಿನಾಶಕ ಔಷಧಗಳನ್ನು ಸಲಹೆ ಮಾಡುವ ಕಾರ್ಯಯೋಜನೆ ನಡೆದಿದೆ. ಸದ್ಯದಲ್ಲಿ ಈ ಕೇಂದ್ರದಲ್ಲಿ ಸಂಶೋಧನೆಗಾಗಿ ಬೆಳೆಯಲಾಗುತ್ತಿರುವ ಬೆಳೆ ಮತ್ತು ಅವುಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) ಈ ಮುಂದಿನಂತಿದೆ: ಸಪೋಟ (20.70), ಸೀಬೆ (1.20), ಗೋಡಂಬಿ ಮತ್ತು ಸಪೋಟ (2.10), ಕಾಫಿ (4.04), ತೆಂಗು ಮತ್ತು ಕಾಫಿ (0.62), ಚಿಕ್ಕೆ (0.20), ವೆನಿಲಾ (0.20), ಅಡಕೆ (0.40), ಬತ್ತ (1.60), ತೆಂಗು ಮತ್ತು ಅಡಕೆ (0.62), ಏಲಕ್ಕಿ (2.06) ಮತ್ತು ಇತರೆ (6.85). ಕೇಂದ್ರದ ಒಟ್ಟು ವಿಸ್ತೀರ್ಣ 178.54 ಹೆಕ್ಟೇರ್.

ಗುಡ್ಡಗಾಡು ಮತ್ತು ಮಲೆನಾಡು ಪ್ರದೇಶದಲ್ಲಿ ಬೆಳೆಯುವ ಬೆಳೆಗಳ ತಳಿ ಅಭಿವೃದ್ಧಿ, ರೋಗ ನಿವಾರಣೆ ವಿಧಾನಗಳ ಆವಿಷ್ಕಾರ, ಕೃಷಿ ಅರಣ್ಯ ಮತ್ತು ಮಣ್ಣುತೇವಾಂಶ ಸಂರಕ್ಷಣೆ ಬಗ್ಗೆ ಅಧ್ಯಯನ ಮಾಡುವುದು ಈ ಕೇಂದ್ರದ ಮುಖ್ಯ ಗುರಿ. ಜೊತೆಗೆ ಈ ಕೇಂದ್ರಕ್ಕೆ ಹೊಂದಿಕೊಂಡಂತೆ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲಾಗಿದೆ (1991). ಇಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಕಾರ್ಯಗಳು ನಡೆಯುತ್ತಿವೆ. ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಕೃಷಿ ವಸ್ತು ಪ್ರದರ್ಶನ ಸೇರಿದಂತೆ ಕೃಷಿ ಮೇಳ ಏರ್ಪಡುತ್ತದೆ. ರೈತರು ಮತ್ತು ತೋಟಗಾರರ ಸಮಸ್ಯೆಗಳಿಗೆ ಸೂಕ್ತ ಸಲಹೆಗಳನ್ನು ನೀಡುವುದು, ಖುದ್ದಾಗಿ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಹಾರ ಒದಗಿಸುವುದು ವಿಸ್ತರಣ ಕಾರ್ಯದ ಅಡಿಯಲ್ಲಿ ಬರುತ್ತದೆ. ವೆನಿಲಾ ಸೇರಿದಂತೆ ವಿವಿಧ ಲಾಭದಾಯಕ ಬೆಳೆಗಳ ಮತ್ತು ಸಸ್ಯಗಳ ಸಸಿಗಳನ್ನು ಬೆಳೆಸಿ ರೈತರಿಗೆ ಮತ್ತು ತೋಟಗಾರರಿಗೆ ಒದಗಿಸುವ ಕಾರ್ಯವೂ ವ್ಯಾಪಕವಾಗಿ ನಡೆದಿದೆ. *

**ಕೃಷ್ಣ :** 1941-. ಕರ್ನಾಟಕ ವಿಧಾನಸಭಾ ಅಧ್ಯಕ್ಷರು (2004 ಜೂನ್), ಮಾಜಿ ಸಚಿವರು. ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಕೊತ್ತಮಾರನಹಳ್ಳಿಯಲ್ಲಿ 1941 ಜುಲೈ 1 ರಂದು ಜನಿಸಿದರು. ಇವರ ತಂದೆ ಹನುಮೇಗೌಡ, ತಾಯಿ ನಂಜಮ್ಮ. ಆರಂಭದ ಶಿಕ್ಷಣ ಹಳ್ಳಿಯಲ್ಲೇ ಆಯಿತು. ಅನಂತರ ಇವರು ಬೆಂಗಳೂರು



ವಿಶ್ವವಿದ್ಯಾಲಯ ದಿಂದ ಬಿ.ಎ., ಬಿ.ಎಲ್. ಪದವಿ ಪಡೆದರು. 1970ರ ದಶಕದ ಪ್ರಾರಂಭದಲ್ಲಿ ಶಾಲಾ ಶಿಕ್ಷಕ ರಾಗಿ ಸೇವೆ ಸಲ್ಲಿಸಿದರು. ತಮ್ಮ ಸರಳತೆ ಹಾಗೂ ಸೌಜನ್ಯದ ವ್ಯಕ್ತಿತ್ವದಿಂದ ಸಾರ್ವಜನಿಕರ ಪ್ರೀತಿವಿಶ್ವಾಸ ಗಳನ್ನು ಗಳಿಸಿದರು. ಇವರು 1978ರಲ್ಲಿ ಸಂತೆಬಾಚಹಳ್ಳಿ ಕ್ಷೇತ್ರದಿಂದ ಕೃಷ್ಣರಾಜಪೇಟೆ ತಾಲ್ಲೂಕು ಮಂಡಳಿಗೆ ಚುನಾಯಿತರಾದರು. 1983 ರಲ್ಲಿ ಮೊದಲ ಬಾರಿಗೆ ಕೃಷ್ಣರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದರಾದರೂ ಸಫಲ ರಾಗಲಿಲ್ಲ. 1985ರ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಶೀಲರಾದರು. ಅನಂತರ ಎಸ್.ಆರ್.ಬೊಮ್ಮಾಯಿಯವರ ಸಂಪುಟದಲ್ಲಿ ರೇಷ್ಮೆ ಮತ್ತು ಪಶುಸಂಗೋಪನೆ ಖಾತೆ ಸಚಿವರಾಗಿ ಸೇವೆ ಸಲ್ಲಿಸಿದರು. 1989ರ ಚುನಾವಣೆಯಲ್ಲಿ ಜನತಾದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿದರೂ ಸಫಲರಾಗಲಿಲ್ಲ. 1994ರಲ್ಲಿ ಅದೇ ಪಕ್ಷದಿಂದ ಸ್ಪರ್ಧಿಸಿ ವಿಧಾನಸಭೆಗೆ ಚುನಾಯಿತರಾದರು. 1997ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ಜನಪ್ರಿಯ ರಾಜಕಾರಣಿ ಎನಿಸಿದ್ದ ಜಿ.ಮಾದೇಗೌಡರ ವಿರುದ್ಧ ಸ್ಪರ್ಧಿಸಿ ಜಯ ಗಳಿಸಿ ರಾಜ್ಯದ ಗಮನ ಸೆಳೆದರು. 1999ರ ಲೋಕಸಭಾ ಚುನಾವಣೆಯಲ್ಲಿ ಚಿತ್ರನಟ ಅಂಬರೀಶ್ ವಿರುದ್ಧ ಸ್ಪರ್ಧಿಸಿ ಸೋತರು.

ಅನಂತರ 2004ರ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣರಾಜಪೇಟೆ ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸಿದರು. ಕಾಂಗ್ರೆಸ್-ಜ್ಯಾತ್ಯತೀತ ಜನತಾದಳ ಸಂಯುಕ್ತ ಸರ್ಕಾರ ರಚಿಸಿದಾಗ ಜೂನ್ 10ರಂದು ವಿಧಾನಸಭಾಧ್ಯಕ್ಷರಾಗಿ ಆಯ್ಕೆಗೊಂಡರು. ಮಂಡ್ಯ ಜಿಲ್ಲೆಯಿಂದ ವಿಧಾನಸಭಾಧ್ಯಕ್ಷ ಪದವಿ ಗಳಿಸಿದವರಲ್ಲಿ ಇವರು ಎರಡನೆಯವರು. ಈ ಮೊದಲು ಎಸ್.ಎಂ.ಕೃಷ್ಣ (ನೋಡಿ) ಅವರು 1989ರಲ್ಲಿ ವಿಧಾನಸಭಾಧ್ಯಕ್ಷರಾಗಿದ್ದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಇಂದ್ರಮ್ಮ ಇವರ ಪತ್ನಿ. *

**ಕೃಷ್ಣ I :** ರಾಷ್ಟ್ರಕೂಟ ವಂಶದ 2ನೆಯ ದೊರೆ (ಸು.756-74). ದಂತಿದುರ್ಗನ ಚಿಕ್ಕಪ್ಪ ಮತ್ತು ಉತ್ತರಾಧಿಕಾರಿ. ದಂತಿದುರ್ಗ ರಾಷ್ಟ್ರಕೂಟ ರಾಜ್ಯವನ್ನು ಸ್ಥಾಪಿಸಲು ಇವನು ನೆರವಾಗಿದ್ದು, ಅವನು ಮಕ್ಕಳಿಲ್ಲದೆ ಮೃತನಾದ ಮೇಲೆ ಇವನು ಅಧಿಕಾರಕ್ಕೆ ಬಂದ. ಶುಭತುಂಗ, ಅಕಾಲವರ್ಷ ಎಂಬುದು ಈತನ ಬಿರುದುಗಳು.

ಇವನು ಪಟ್ಟಾಭಿಷಿಕ್ತನಾಗುವ ಮುನ್ನ ರಾಷ್ಟ್ರಕೂಟ ಸಿಂಹಾಸನಕ್ಕಾಗಿ ಅಂತಃಕಲಹಗಳು ಉಂಟಾಗಿದ್ದುವು. ಅವನ್ನು ಕೃಷ್ಣ ಹತ್ತಿಕ್ಕಿ ರಾಜನಾದಂತೆ ತೋರುತ್ತದೆ. ಸಿಂಹಾಸನಕ್ಕೆ ಪ್ರತಿಸ್ಪರ್ಧಿಯಾಗಿದ್ದವನು ದಕ್ಷಿಣ ಗುಜರಾತಿನಲ್ಲಿ ಆಳುತ್ತಿದ್ದ 2ನೆಯ ಕರ್ಕ. ಇವನೇ ಶಾಸನಗಳಲ್ಲಿ ಕೃಷ್ಣನಿಂದ ಪರಾಜಿತನಾದನೆಂದು ಹೇಳಿರುವ ರಾಹಪ್ಪ ಎಂದು ಊಹಿಸಲಾಗಿದೆ. ಕೃಷ್ಣ ಪಟ್ಟಕ್ಕೆ ಬರುತ್ತಿದ್ದಂತೆಯೇ ಚಳುಕ್ಯರ ವಿರುದ್ಧದ ಕಾರ್ಯಾಚರಣೆಗಳನ್ನು ಮುಂದುವರಿಸಿದ. ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ, ಪ್ರಾಯಶಃ ರಣರಂಗದಲ್ಲಿ ಕೊಂದು ಚಳುಕ್ಯರ ವಶದಲ್ಲಿದ್ದ ರಾಜ್ಯಕ್ಕೆಲ್ಲ ತಾನೇ ಅಧಿಪತಿಯಾದ. ಮುಂದೆ ರಾಜ್ಯವನ್ನು ವಿಸ್ತರಿಸಲು ಗಂಗವಾಡಿಯ ಮೇಲೆ

ದಂಡೆತ್ತಿಹೋಗಿ ಶ್ರೀಪುರುಷನನ್ನು ಎದುರಿಸಿ ಮಣ್ಣೆಯಲ್ಲಿ (ಬೆಂಗಳೂರು ಜಿಲ್ಲೆ) ನೆಲೆ ಹೂಡಿದ. ಆದರೆ ಗಂಗವಾಡಿ ಪೂರ್ಣವಾಗಿ ಇವನ ಕೈ ಸೇರಲಿಲ್ಲ. ಸು.769ರಲ್ಲಿ ಶ್ರೀಪುರುಷ ಸಾಮಂತನಾಗಲು ಒಪ್ಪಿಕೊಂಡಂತೆ ತೋರುತ್ತದೆ.

ಈ ಸುಮಾರಿನಲ್ಲಿ ಕೃಷ್ಣ ತನ್ನ ಮಗ ಗೋವಿಂದನನ್ನು ಯುವರಾಜನಾಗಿ ಮಾಡಿದ. ಈತ 768ರಲ್ಲಿ ವೆಂಗಿಯ ಚಾಳುಕ್ಯರ ಮೇಲೆ ದಂಡೆತ್ತಿ ಹೋದ. 769ರಲ್ಲಿ ರಾಷ್ಟ್ರಕೂಟ ಸೈನ್ಯ ಕೃಷ್ಣಾ ಮತ್ತು ಮುಸೀ ನದಿಗಳ ಸಂಗಮ ಪ್ರದೇಶವನ್ನು ತಲುಪಿತ್ತು. ಆಗ ವೆಂಗಿಯ ಅಧಿಪತಿಯಾಗಿದ್ದ 4ನೆಯ ವಿಷ್ಣುವರ್ಧನ ರಾಷ್ಟ್ರಕೂಟರ ವೈರವನ್ನು ಬಯಸದೆ ತನ್ನ ರಾಜ್ಯದ ಪಶ್ಚಿಮ ಭಾಗಗಳನ್ನೆಲ್ಲ ಕೃಷ್ಣನಿಗೆ ಒಪ್ಪಿಸಿದ್ದಲ್ಲದೆ, ರಾಜಕುಮಾರಿ ಶೀಲಭಟ್ಟಾರಿಕಾಳನ್ನು ಕೃಷ್ಣನ ಕಿರಿಯ ಮಗನಾದ ಧ್ರುವನಿಗೆ ಮದುವೆ ಮಾಡಿಕೊಟ್ಟ.

ಕೃಷ್ಣ ಸು.774ರಲ್ಲಿ ಮೃತನಾದ. ಚಳುಕ್ಯ ಸಾಮ್ರಾಜ್ಯವನ್ನು ಮುಳುಗಿಸಿ, ಗಂಗರು ಮತ್ತು ವೆಂಗಿಯ ಚಾಳುಕ್ಯರನ್ನು ಸೋಲಿಸಿ, ಉತ್ತರ ದಕ್ಷಿಣವಾಗಿ ವಿಂಧ್ಯದ ದಕ್ಷಿಣದಿಂದ ಬೆಂಗಳೂರು ಜಿಲ್ಲೆಯವರೆಗೆ ಮತ್ತು ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ ಪೂರ್ವದಲ್ಲಿ ಸುಮಾರು ಹೈದರಾಬಾದ್ ವರೆಗಿನ ವಿಶಾಲ ಪ್ರದೇಶವನ್ನು ಸಾಧಿಸಿಕೊಂಡು, ರಾಷ್ಟ್ರಕೂಟರನ್ನು ದಕ್ಷಿಣ ಭಾರತದ ಬೃಹತ್ ಶಕ್ತಿಯಾಗಿ ಬೆಳೆಸಿದ್ದು ಕೃಷ್ಣನ ಮಹತ್ವದ ಸಾಧನೆ.

ಎಲ್ಲೋರದಲ್ಲಿ ಏಕಶಿಲೆಯಲ್ಲಿ ಕಂಡರಿಸಿರುವ ಕೈಲಾಸ ದೇವಾಲಯ ಇವನ ಕಾಲದ ಮಹತ್ ಕಲಾಸಾಧನೆ. (ಕೆ.ಎಸ್.ಎಸ್.)

**ಕೃಷ್ಣ II :** ರಾಷ್ಟ್ರಕೂಟ ದೊರೆ (878-914). ಇವನಿಗೂ ಶುಭತುಂಗ, ಅಕಾಲವರ್ಷ ಎಂಬ ಬಿರುದುಗಳಿದ್ದುವು. ಒಂದನೆಯ ಅಮೋಘವರ್ಷ ನೃಪತುಂಗ ಇವನ ತಂದೆ.

ಅಮೋಘವರ್ಷ ಮೃತನಾಗುವಾಗ ಬಹು ವೃದ್ಧನಾಗಿದ್ದರಿಂದ, ಪಟ್ಟಕ್ಕೆ ಬರುವ ಹೊತ್ತಿಗೆ ಕೃಷ್ಣನಿಗೂ ಸಾಕಷ್ಟು ವಯಸ್ಸಾಗಿತ್ತು. ಈತ ಸ್ವತಃ ಚೇದಿ ರಾಜಕುಮಾರಿಯೊಬ್ಬಳನ್ನು ಮದುವೆಯಾಗಿದ್ದನಲ್ಲದೆ, ಮುಂದೆ ಅನೇಕ ರಾಷ್ಟ್ರಕೂಟ ಮನೆತನದವರು ಚೇದಿವಂಶದೊಡನೆ ಸಂಬಂಧ ಬೆಳೆಸಿ, ಈ ಎರಡು ಮನೆತನಗಳ ಸಂಬಂಧವನ್ನು ಗಟ್ಟಿಮಾಡಿ ಕೊಂಡರಾದ್ದರಿಂದ, ಕೃಷ್ಣನ ಕಾಲದ ರಾಜಕೀಯ ಆಗುಹೋಗುಗಳಲ್ಲಿ ಚೇದಿ ವಂಶದವರು ಬಹಳ ಸಹಕಾರ ನೀಡುತ್ತಿದ್ದರು. ಇವನ ಕಾಲದಲ್ಲಿ ದಕ್ಷಿಣದ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಯಾಗುತ್ತಿತ್ತು. ಪಲ್ಲವರ ಬಲ ಕ್ಷೀಣವಾಗಿ ಚೋಳರು ತಲೆಯೆತ್ತುತ್ತಿದ್ದರು. ಇದನ್ನು ಗಮನಿಸಿದ ಕೃಷ್ಣ ತನ್ನ ಮಗಳನ್ನು ಚೋಳ 1ನೆಯ ಆದಿತ್ಯನಿಗೆ ವಿವಾಹ ಮಾಡಿಕೊಟ್ಟ. ಇವರ ಮಗ ಕನ್ನರನಿಗೂ ಆದಿತ್ಯನ ಇನ್ನೊಬ್ಬ ಹೆಂಡತಿಯಲ್ಲಿ ಜನಿಸಿದ 1ನೆಯ ಪರಾಂತಕನಿಗೂ ಮುಂದೆ ಸಿಂಹಾಸನಕ್ಕಾಗಿ ಕಲಹವಾದಾಗ ಕೃಷ್ಣ ತನ್ನ ಮೊಮ್ಮಗ ಕನ್ನರನ ಪರ ವಹಿಸಿದ. ಆಗ ವಲ್ಲಾಳವೆಂಬಲ್ಲಿ ನಡೆದ ಯುದ್ಧದಲ್ಲಿ (911) ಪರಾಂತಕನೇ ಜಯ ಗಳಿಸಿದ.

ವೆಂಗಿಯಲ್ಲಿ ಆಳುತ್ತಿದ್ದ 3ನೆಯ ವಿಜಯಾದಿತ್ಯ ಹಿಂದೆ ಅಮೋಘವರ್ಷನ ಕಾಲದಲ್ಲಿ ರಾಷ್ಟ್ರಕೂಟರಿಂದ ಅನುಭವಿಸಿದ ಸೋಲಿಗೆ ಪ್ರತೀಕಾರವಾಗಿ ಕಾರ್ಯಾಚರಣೆ ಆರಂಭಿಸಿದ. ಮೊದಲು ರಾಷ್ಟ್ರಕೂಟರ ಸಾಮಂತರಾಗಿದ್ದ ಗಂಗ ಮತ್ತು ನೊಳಂಬರ ರಾಜ್ಯಗಳ ಮೇಲೆ ದಾಳಿ ಮಾಡಿ ಜಯ ಗಳಿಸಿದ. ಅನಂತರ ರಾಷ್ಟ್ರಕೂಟ ರಾಜ್ಯದ ಈಶಾನ್ಯ ಭಾಗಗಳನ್ನು, ಅಂದರೆ ಚಕ್ರಕೂಟ ಪ್ರದೇಶವನ್ನೂ ಬಿರಾರಿನ ಅಚಲಪುರವನ್ನೂ ಆಕ್ರಮಿಸಿದ. ಚಕ್ರಕೂಟದ ಬಳಿಯ ಕಿರಣಪುರದಲ್ಲಿ ಆಗ ಕೃಷ್ಣ ಮತ್ತು ಅವನ ಮೈದುನ ಶಂಕರಗಣ ಬೀಡುಬಿಟ್ಟಿದ್ದರೂ ಲೆಕ್ಕಿಸದೆ ವಿಜಯಾದಿತ್ಯ ಅವರ ಮೇಲೆ ಬಿದ್ದ. ಈ ಯುದ್ಧದಲ್ಲಿ ವಿಜಯಾದಿತ್ಯನ ಕೈ ಮೇಲಾಗಿರಬೇಕೆಂದು ಪೂರ್ವ ಚಾಳುಕ್ಯ ಶಾಸನಗಳ ಹೆಮ್ಮೆಯ ಹೇಳಿಕೆಗಳಿಂದ ತಿಳಿಯುತ್ತದೆ. ಇದರಿಂದ ಬುದ್ಧಿ ಕಲಿತ ಕೃಷ್ಣ ಗುಜರಾತ್ ಮತ್ತಿತರೆಡೆಗಳ ಸಾಮಂತರಿಂದ ಸೈನ್ಯವನ್ನು ಒಟ್ಟು ಹಾಕಿ, ಉತ್ತರ ಕರ್ನಾಟಕದ ಭಾಗದಲ್ಲಿ ಸಾಮಂತರಾಗಿ ಆಳುತ್ತಿದ್ದ ಚಾಳುಕ್ಯ ವಂಶದ ಬದ್ದೆಗನ ನೇತೃತ್ವದಲ್ಲಿ ಒಂದು ದಳವನ್ನು ರಚಿಸಿ, ಇನ್ನೊಂದು ದಳದ ನೇತೃತ್ವವನ್ನು ತಾನೇ ವಹಿಸಿ ವೆಂಗಿಯ ಮೇಲೆ ನಡೆದ. ಈ ಹೊತ್ತಿಗೆ ವಿಜಯಾದಿತ್ಯ ಮೃತನಾಗಿದ್ದರಿಂದ ವೆಂಗಿಯಲ್ಲಿ ಅವನ ಮಗ ಭೀಮ ಆಳುತ್ತಿದ್ದ. ಆ ಭೀಮನನ್ನು ಸೆರೆ ಹಿಡಿದು ವೆಂಗಿಯನ್ನು ಪೂರ್ಣವಾಗಿ ವಶಪಡಿಸಿಕೊಂಡ. ವೆಂಗಿ ಪತನಾನಂತರ ಗಂಗರೂ ನೊಳಂಬರೂ ಪುನಃ ತಮ್ಮ ರಾಜ್ಯಗಳನ್ನು ಸಾಧಿಸಿಕೊಂಡರು. ಕೆಲಕಾಲಾನಂತರ ವೆಂಗಿ ರಾಜ್ಯವನ್ನು ಭೀಮನಿಗೆ ವಹಿಸಿಕೊಟ್ಟು ಅವನು ರಾಷ್ಟ್ರಕೂಟರ ಸಾಮಂತನಾಗಿರುವ ವ್ಯವಸ್ಥೆಯಾಯಿತು. ಎಷ್ಟು ದಿನಗಳ ಕಾಲ ಈ ಸ್ಥಿತಿ ಮುಂದು ವರಿಯಿತೆಂದು ತಿಳಿಯುವುದಿಲ್ಲ ವಾದರೂ ಕೃಷ್ಣನ ಕಾಲದಲ್ಲೇ ಭೀಮ ಸ್ವತಂತ್ರನಾದ. ಅವನು ರಾಷ್ಟ್ರಕೂಟ ರಾಜ್ಯದ ಮೇಲೆ ನುಗ್ಗುವ ಸಾಹಸವನ್ನು ಮಾಡಲಿಲ್ಲ. ಕೃಷ್ಣನೂ ಅತ್ತ ಗಮನ ಹರಿಸಲಿಲ್ಲ.

ಗುಜರಾತಿನ ರಾಷ್ಟ್ರಕೂಟರು ಕೃಷ್ಣನ ಆಳಿಕೆಯಲ್ಲಿ ಇವನೊಡನೆ ಸ್ನೇಹದಿಂದಲೇ ಇದ್ದರು. ಕೃಷ್ಣ ಅಭಿಷಿಕ್ತನಾದ ಹೊಸದರಲ್ಲಿ ಮಾಳವದಲ್ಲಿದ್ದ ಗೂರ್ಜರ ಪ್ರತೀಹಾರ ಭೋಜ ರಾಷ್ಟ್ರಕೂಟ ರಾಜ್ಯದ ಮೇಲೆ ಒಮ್ಮೆ ದಂಡೆತ್ತಿ ಬಂದ. ಆ ಸಂದರ್ಭದಲ್ಲಿ ನಡೆದ ಯುದ್ಧದಲ್ಲಿ ರಾಷ್ಟ್ರಕೂಟರು ಸೋಲನ್ನನುಭವಿಸಿದರೂ ಶೀಘ್ರದಲ್ಲೇ ಕೃಷ್ಣನೂ ಗುಜರಾತಿನ ರಾಷ್ಟ್ರಕೂಟ ಶಾಖೆಯ ಕೃಷ್ಣನೂ ಜೊತೆಗೂಡಿ ಭೋಜನನ್ನು ಅಟ್ಟಿ ಉಜ್ಜಯಿನಿಯವರೆಗೂ ನಡೆದರು. ಆದರೆ ಆ ಪ್ರದೇಶವನ್ನು ಪೂರ್ಣವಾಗಿ ಆಕ್ರಮಿಸಲಿಲ್ಲ. ರಾಷ್ಟ್ರಕೂಟ ರಾಜ್ಯದ ಎಲ್ಲೆಯನ್ನು ಮಾತ್ರ ಅವನು ಬಿಗಿಪಡಿಸಿಕೊಂಡ ಸು.900ರ ಹೊತ್ತಿಗೆ ಗುಜರಾತ್ ರಾಷ್ಟ್ರಕೂಟರ ಆಳಿಕೆ ಕೊನೆಗೊಂಡಿತು. ಅಲ್ಲಿ ಆಳುತ್ತಿದ್ದ ಕೃಷ್ಣ ಪ್ರಾಯಶಃ ಮಕ್ಕಳಿಲ್ಲದೆ ಮೃತನಾದಾಗ, ಆ ಭಾಗವೆಲ್ಲ ಮಾನ್ಯಖೇಟದ ರಾಷ್ಟ್ರಕೂಟರ ನೇರ ಆಡಳಿತಕ್ಕೆ ಒಳಗಾದಂತೆ ತೋರುತ್ತದೆ.

ಇವನ ಕಾಲದಲ್ಲಿ ಅರಬರ ಜೊತೆ ಸ್ನೇಹ ಬೆಳೆಯಿತು. ಅನೇಕ ಅರಬರು ಈ ದೇಶದಲ್ಲಿ ನೆಲಸಲಾರಂಭಿಸಿದರು. 3ನೆಯ ಇಂದ್ರನ ಒಂದು ಶಾಸನದಲ್ಲಿ ಒಬ್ಬ ತಾಜಿಕ (ಅರಬ) ಕೃಷ್ಣನ ಕೈ ಕೆಳಗೆ ಸಂಜಾನವನ್ನು ಆಳುತ್ತಿದ್ದ ಪ್ರಸ್ತಾಪವಿದೆ.

ತನ್ನ ತಂದೆಯಂತೆ ಕೃಷ್ಣನೂ ಜೈನಮತಾವಲಂಬಿ. ಆದಿಪುರಾಣದ ಉತ್ತರ ಭಾಗವನ್ನು ಬರೆದ ಗುಣಭದ್ರ ಈತನ ಗುರು. ಕೊಕ್ಕಲನ ಮಗಳೂ ಶಂಕರಗಣನ ಸೋದರಿಯೂ ಆದ ಚೇದಿವಂಶದ ರಾಜಕುಮಾರಿಯೊಬ್ಬಳು ಈತನ ಪತ್ನಿ. ಇವನಿಗೆ ಜಗತ್ತುಂಗನೆಂಬ ಮಗನಿದ್ದ. ಆದರೆ ಜಗತ್ತುಂಗ ತಂದೆಗಿಂತ ಮುಂಚೆಯೇ ಗತಿಸಿದ್ದನಾದ್ದರಿಂದ ಆತನ ಹೆಂಡತಿಯಾದ ಚೇದಿವಂಶದ ಲಕ್ಷ್ಮಿಯಲ್ಲಿ ಜನಿಸಿದ. ಕೃಷ್ಣನ ಮೊಮ್ಮಗ ಇಂದ್ರ III ಕೃಷ್ಣನ ಮರಣಾನಂತರ (ಸು.914) ರಾಷ್ಟ್ರಕೂಟ ಸಿಂಹಾಸನವನ್ನೇರಿದ. (ಎಂ.ಎಚ್.)

**ಕೃಷ್ಣ III :** ರಾಷ್ಟ್ರಕೂಟ ವಂಶದ ದಕ್ಷ ಚಕ್ರವರ್ತಿ (ಸು.939-67) ಮುಮ್ಮಡಿ ಅಮೋಘವರ್ಷನ ಮಗ. ಕನ್ನರ ಎಂಬುದು ಇವನ ಹೆಸರಿನ ಪ್ರಾಕೃತ ರೂಪ. ಅಕಾಲವರ್ಷ, ವಲ್ಲಭನರೇಂದ್ರ, ಪೃಥ್ವೀವಲ್ಲಭ ಇವು ಇವನ ಬಿರುದುಗಳು.

ಇವನು ಯುವರಾಜನಾಗಿದ್ದಾಗಲೇ ಗೋವಿಂದನ ಪಂಗಡದವರಾದ ಅಚಲಾಪುರದ ದಂತಿಗ ಮತ್ತು ವಪ್ಪುಗರನ್ನು ಹತ್ತಿಕ್ಕಿದ. ಗಂಗರ ಮುಮ್ಮಡಿ ರಾಚಮಲ್ಲನನ್ನು ಕೊಂದು ತನ್ನ ಭಾವ ಇಮ್ಮಡಿ ಬೂತುಗನಿಗೆ ಗಂಗರಾಜ್ಯದ ಪಟ್ಟಗಟ್ಟಿ ಗಂಗರ ಸಹಕಾರ ತನ್ನ ಕಡೆಗೆ ಉಳಿಯುವಂತೆ ಮಾಡಿಕೊಂಡ. ಉತ್ತರದಲ್ಲಿ ತನ್ನ ಬಂಧುಗಳೇ ಆಗಿದ್ದ ಚೇದಿರಾಜರನ್ನು ಸೋಲಿಸಿದ್ದಲ್ಲದೆ ಬುಂದೇಲಖಂಡದ ಮೇಲೆ ದಂಡೆತ್ತಿ ಹೋಗಿ ಕಲಿಂಜರ ಮತ್ತು ಚಿತ್ರಕೂಟಗಳನ್ನು ಗೆದ್ದ.

ಪಟ್ಟಕ್ಕೆ ಬಂದ ತರುಣದಲ್ಲಿಯೇ ಇವನ ಅಧಿಕಾರವನ್ನು ಪ್ರಶ್ನಿಸಿದ ಲಲ್ಲೆಯ ಎಂಬ ಮಾಂಡಲಿಕನನ್ನು ಭಾವ ಬೂತುಗ ಹತ್ತಿಕ್ಕಿದ. ಅನಂತರ ಕೃಷ್ಣನ ಗಮನ ದಕ್ಷಿಣದತ್ತ ಹರಿಯಿತು. ಇಮ್ಮಡಿ ಬೂತುಗನ ನೆರವಿನಿಂದ ತಮಿಳುನಾಡಿಗೆ ನುಗ್ಗಿ ಹೊಸದಾಗಿ ತಲೆಯೆತ್ತಿದ್ದ ಚೋಳರನ್ನು ಸೋಲಿಸಿ ತೊಂಡೈಮಂಡಲವನ್ನು ವಶಪಡಿಸಿಕೊಂಡ (ಸು.943). ಅಲ್ಲಿ

ದೊರೆತಿರುವ ಇವನ ಅನೇಕ ಶಾಸನಗಳಿಂದ ತೊಂಡೈಮಂಡಲ ಇವನ ಆಳಿಕೆಯ ಕೊನೆಯವರೆಗೂ ರಾಷ್ಟ್ರಕೂಟ ಸಾಮ್ರಾಜ್ಯದ ಭಾಗವಾಗಿ ಉಳಿದಿತ್ತೆಂಬುದು ಸ್ಪಷ್ಟ. ಆಗಿನ ಚೋಳ ರಾಜ ಪರಾಂತಕ ರಾಷ್ಟ್ರಕೂಟರನ್ನು ಓಡಿಸಲು ನಡೆಸಿದ ಪ್ರಯತ್ನ ಕೈಗೂಡದೆ ಕಡೆಗೆ ತಕ್ಕೋಲಂನಲ್ಲಿ ನಿರ್ಣಾಯಕ ಯುದ್ಧ ನಡೆದು ಪೂರ್ಣವಾಗಿ ಸೋತುಹೋದ. ಇಲ್ಲಿ ಚೋಳ ರಾಜಕುಮಾರ ರಾಜಾದಿತ್ಯನನ್ನು ಬೂತುಗ ಕೊಂದ. ಇಲ್ಲಿ ದೊರೆತ ಜಯದಿಂದ ಕೃಷ್ಣ ದಕ್ಷಿಣದ ತುದಿಯವರೆಗೂ ನಿರಾಂತಕವಾಗಿ ನುಗ್ಗಲು ಅವಕಾಶವಾಯಿತು. ಈ ಗೆಲುವಿಗೆ ಮುಖ್ಯ ಕಾರಣನಾದ ಬೂತುಗನಿಗೆ ಬನವಾಸಿ 12,000, ಬೆಳ್ವಲ 300, ಪುರಿಗೆರೆ 300, ಕಿಸುಕಾಡು 70 ಮತ್ತು ಬಾಗೆನಾಡು 70ನ್ನು ಮೆಚ್ಚಿಕೆಯಾಗಿ ಕೊಟ್ಟ. ಪಾಂಡ್ಯ, ಕೇರಳರನ್ನು ಸೋಲಿಸಿ ಲಂಕೆಯ ಅರಸನಿಂದ ಕಪ್ಪವನ್ನು ಪಡೆದ. ರಾಮೇಶ್ವರದಲ್ಲಿ ಜಯಸ್ತಂಭವನ್ನು ನಿಲ್ಲಿಸಿ ಕೃಷ್ಣೇಶ್ವರ, ಗಂಡಮಾರ್ತಂಡಾದಿತ್ಯ ಮೊದಲಾದ ದೇವಾಲಯಗಳನ್ನು ಕಟ್ಟಿಸಿದ. ಈ ವಿಜಯಗಳ ಕುರುಹಾಗಿ ಕಂಚಿಯುಂ ತೊಂಡೈಯುಂ ಕೊಂಡ ಎಂಬ ಬಿರುದನ್ನು ಧರಿಸಿದ. ಗೆದ್ದ ಭಾಗಗಳನ್ನು ಸ್ಥಿರಪಡಿಸಲು ಸಾಕಷ್ಟು ಕಾಲ ಆರ್ಕಾಟಿನ ಮೇಲ್ಪಾಡಿ ಎಂಬಲ್ಲಿ ತಂಗಿದ್ದ. ಆದರೆ ಇವನ ದಕ್ಷಿಣದ ದಂಡಯಾತ್ರೆಯ ಕಾಲದಲ್ಲಿ ಬುಂದೇಲಖಂಡದಲ್ಲಿ ಚಂದೇಲರು ಪ್ರಬಲರಾಗಿ ಚಿತ್ರಕೂಟ ಮತ್ತು ಕಾಲಂಜರ ಕೋಟೆಗಳನ್ನು ವಶಪಡಿಸಿಕೊಂಡರು. 963ರ ಹೊತ್ತಿಗೆ ಕೃಷ್ಣ ಆಗ ಗಂಗವಾಡಿಯನ್ನಾಳುತ್ತಿದ್ದ ಇಮ್ಮಡಿ ಮಾರಸಿಂಹನನ್ನು ಜೊತೆಗಿಟ್ಟುಕೊಂಡು ಪುನಃ ಉತ್ತರದ ಕಡೆಗೆ ದಂಡೆತ್ತಿ ಹೋಗಿ ಗೂರ್ಜರ ಪ್ರತೀಹಾರರು ಮತ್ತು ಮಾಳವದ ಪರಮಾರರನ್ನು ಸೋಲಿಸಿ ಮಾಳವದ ಬಹುಭಾಗ ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಉಳಿಯುವಂತೆ ಮಾಡಿದ. ವೆಂಗಿಯಲ್ಲಿಯೂ ಕೃಷ್ಣ ಇಮ್ಮಡಿ ಅಮ್ಮನನ್ನು ಓಡಿಸಿ ಯುದ್ಧಮಲ್ಲನ ಮಗ ಬಾಡಪನನ್ನು ಸಿಂಹಾಸನದ ಮೇಲೆ ಕೂರಿಸಿ ವೆಂಗಿ ರಾಷ್ಟ್ರಕೂಟರ ಅಧೀನದಲ್ಲಿರುವಂತೆ ಮಾಡಿದ. ಹೀಗೆ ನರ್ಮದೆಯ ದಕ್ಷಿಣಕ್ಕಿರುವ ಪ್ರದೇಶವೆಲ್ಲ ಕೃಷ್ಣನ ಅಂಕೆಗೆ ಒಳಪಟ್ಟಂತಾಯಿತು. ಜಬ್ಬಲಪುರದ ಬಳಿ ಜೂರ ಎಂಬಲ್ಲಿ ಇರುವ ಇವನ ಪ್ರಶಸ್ತಿಶಾಸನ ಕನ್ನಡದಲ್ಲಿದೆ. ಇದು ಇವನ ಸಾಧನೆಗಳನ್ನು ಸುಂದರವಾಗಿ ವರ್ಣಿಸಿದೆ.

ಮುಮ್ಮಡಿ ಕೃಷ್ಣ ಚಾಣಾಕ್ಷ ದೊರೆ, ಸಮರ್ಥ ಆಡಳಿತಗಾರ, ಧೀರ ಸೈನಿಕ. ಕುಂದುತ್ತಿದ್ದ ರಾಷ್ಟ್ರಕೂಟರ ವರ್ಚಸ್ಸನ್ನು ಹೆಚ್ಚಿಸಿದ ಶೂರ. ಇಡೀ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಂಧ್ಯದಿಂದ ರಾಮೇಶ್ವರದ ವರೆಗಿನ ಭಾಗವನ್ನೆಲ್ಲ ಹಿಡಿತದಲ್ಲಿಟ್ಟುಕೊಂಡಿದ್ದ ಏಕೈಕ ದೊರೆ.

ಕೃಷ್ಣ ಸು.967ರಲ್ಲಿ ಮೃತನಾದ. ಇವನ ಮಕ್ಕಳು ಮುಂಚೆಯೇ ಸತ್ತಿದ್ದರಿಂದ ತಮ್ಮನಾದ ಖೊಟ್ಟಿಗ ಅನಂತರ ಪಟ್ಟಕ್ಕೆ ಬಂದ. (ಎಂ.ಎಚ್.)

**ಕೃಷ್ಣ** (ಸೇವುಣ) : ದೇವಗಿರಿಯ ಸೇವುಣರ 2ನೆಯ ಸಿಂಘಣನ ಮೊಮ್ಮಗ ಮತ್ತು ಜೈತುಗಿಯ ಮಗ. ಇವನ ಆಳಿಕೆಯ ಅವಧಿ 1247-61. ಸಿಂಘಣನಿಗಿಂತ ಮೊದಲೇ ಜೈತುಗಿ ಕಾಲವಾದ್ದರಿಂದ ಸಿಂಘಣನ ಅನಂತರ ಕೃಷ್ಣನೇ ಸಿಂಹಾಸನವನ್ನೇರಿದ (1247). ಶಾಸನಗಳಲ್ಲಿ ಇವನ ಹೆಸರು ಕನ್ಹ, ಕನ್ನಪ, ಕಂಧಾರ, ಕನ್ಹಾರ ಎಂದೆಲ್ಲ ಉಲ್ಲೇಖಿತವಾಗಿದೆ. ರಾಜ್ಯಭಾರವನ್ನು ವಹಿಸಿಕೊಂಡ ಅನಂತರ ಈತ ಮಾಳವದೇಶದ ದೊರೆಯಾಗಿದ್ದ. ಜೈತುಗಿದೇವನನ್ನೂ ಗುಜರಾತಿನ ವೀಸಲದೇವನನ್ನೂ ಸೋಲಿಸಿದರೂ ಇದರಿಂದ ಇವನ ರಾಜ್ಯ ವಿಸ್ತಾರವೇನೂ ಆಗಲಿಲ್ಲ. ಈ ದಾಳಿಗಳು ಸು.1250ರಲ್ಲಿ ನಡೆದಿರಬಹುದು.

ಉತ್ತರದಲ್ಲಿ ಲಭ್ಯವಾದ ಈ ವಿಜಯಗಳಿಂದ ಕೃಷ್ಣ ಉತ್ಸಾಹಗೊಂಡು ಹೊಯ್ಸಳ ರಾಜ್ಯದ ಮೇಲೆ ಆಕ್ರಮಣ ನಡೆಸಿದಾಗ ಚಿತ್ರದುರ್ಗದ ಕೆಲವು ಭಾಗಗಳು ಇವನ ವಶವಾದುವು. ಕೃಷ್ಣನ ಮಂತ್ರಿಯಾಗಿದ್ದ ಚಾವುಂಡರಸ ಕುಕ್ಕನೂರಿನಲ್ಲಿ ಬೀಡುಬಿಟ್ಟಿದ್ದ ಸಮಯದಲ್ಲಿ ಹೊಯ್ಸಳರು ಪಾಂಡ್ಯರನ್ನು ಎದುರಿಸುತ್ತಿದ್ದುದರಿಂದ ಇದೇ ತಕ್ಕ ಸಮಯವೆಂದು ಚಾವುಂಡರಸ ಕಾವೇರಿಯ ತೀರದವರೆಗೂ ದಾಳಿ ನಡೆಸಿದ. ಹೊಯ್ಸಳ ದೊರೆ 3ನೆಯ ನರಸಿಂಹ ಅಸಹಾಯಕನಾಗಿದ್ದ.

ಕೃಷ್ಣ ಗೋವೆಯ ಕದಂಬರನ್ನು ಸೋಲಿಸಲು ಚಂದ್ರದೇವ ಮತ್ತು ಕೇಶವದೇವ ಎಂಬ ತನ್ನ ಮಂತ್ರಿಗಳನ್ನು ಕಳುಹಿಸಿದ. ಅವರ ದೊರೆ ಷಷ್ಠದೇವ ಸೋತು ಕೃಷ್ಣನ ಸಾಮಂತನಾದ. ಹಾನುಗಲ್ಲಿನ ಕದಂಬರು ಕೃಷ್ಣನ ಸಾಮಂತರಾಗಿದ್ದರು. ಕೃಷ್ಣ ಗುತ್ತವೊಳಲಿನ ಗುತ್ತರ ಮೇಲೂ ಯುದ್ಧ ಮಾಡಿದ. ಮೂರನೆಯ ಗುತ್ತನನ್ನು ಸೋಲಿಸಿದ. ಅವನು ಕೃಷ್ಣನ ಸಾಮಂತನಾದ. ಅವಿಧೇಯನಾಗಿದ್ದ ಸೌಂದತ್ತಿಯ ರಟ್ಟರಾಜ ಲಕ್ಷ್ಮೀದೇವನಿಗೂ ಮಹಾಪ್ರಧಾನ ನಾಗರಸನ ನೇತೃತ್ವದಲ್ಲಿ ಹೊರಟ ಸೇವುಣ ಸೈನ್ಯದಿಂದ ಸೋಲಾಯಿತು. ಅವನೂ ಸೇವುಣರ ಸಾಮಂತನಾದ. ವಂಶ ಪಾರಂಪರ್ಯವಾಗಿ ಬಂದಿದ್ದ ತೆಲುಂಗರಾಯ ಸ್ಥಾಪನಾಚಾರ್ಯ ಎಂಬ ಬಿರುದು ಕೃಷ್ಣನಿಗಿತ್ತಾದರೂ ಕಾಕತೀಯರೂ ಸೇವುಣರೂ ಆ ಕಾಲದಲ್ಲಿ ಮಿತ್ರರಾಗಿದ್ದರು. ಆಭೀರ ರಾಜ ಕಾಮಪಾಲನೂ ಕೃಷ್ಣನಿಂದ ಪರಾಜಯ ಹೊಂದಿದ. ಕೃಷ್ಣನ ಆಡಳಿತಕ್ಕೆ ಕೋಸಲವೂ ಸೇರಿತ್ತೆಂದು ತಿಳಿದುಬರುತ್ತದೆ.

ಕೃಷ್ಣನ ರಾಜ್ಯ ದಕ್ಷಿಣದಲ್ಲಿ ನೊಳಂಬವಾಡಿಯವರೆಗೂ ಪೂರ್ವದಲ್ಲಿ ಛತ್ತೀಸ್‍ಗಢದವರೆಗೂ ಉತ್ತರದಲ್ಲಿ ಮಾಳ್ವದವರೆಗೂ ಹರಡಿತ್ತು. ಇವನು ಕೇವಲ ಯುದ್ಧಾಸಕ್ತನಾಗಿರದೆ ಸಾಂಸ್ಕೃತಿಕ ಕಾರ್ಯಗಳಲ್ಲೂ ಆಸಕ್ತಿ ವಹಿಸಿದ್ದ. ಕೃಷ್ಣನ ಆಶ್ರಯದಲ್ಲಿ ಸೂಕ್ತಿಮುಕ್ತಾವಲೀ ಎಂಬ ಸಂಸ್ಕೃತ ಗ್ರಂಥವನ್ನು ಜಲ್ಹಣಪಂಡಿತನೂ ಕಲ್ಪತರು ಎಂಬ ಸಂಸ್ಕೃತ ಗ್ರಂಥವನ್ನು ಅಮಲಾನಂದನೂ ರಚಿಸಿದರು. ಬ್ರಾಹ್ಮಣ, ಶೈವ, ವೀರಶೈವ, ಜೈನ ಮತ್ತು ಮಹಾನುಭಾವ ಪಂಥದ ಮುನಿಗಳಿಗೆ ಮತ್ತು ದೇವಾಲಯಗಳಿಗೆ ಇವನಿಂದ ಆಶ್ರಯ ದೊರಕಿತೆಂದು ಶಾಸನಗಳಿಂದ ತಿಳಿಯುತ್ತದೆ. ಚಕ್ರಧರ ಸ್ವಾಮಿ ಕೋಸಲ ದೇಶದಲ್ಲಿ ತಂಗಿದ್ದ ಸಮಯದಲ್ಲಿ ಕೃಷ್ಣ ಅಲ್ಲಿಗೆ ಹೋಗಿ (1256) ಆ ಮುನಿಯ ದರ್ಶನ ಭಾಗ್ಯವನ್ನು ಪಡೆದನೆಂದು ಲೀಲಾಚರಿತ ಗ್ರಂಥ ತಿಳಿಸುತ್ತದೆ. ಕೃಷ್ಣ 14 ವರ್ಷಗಳ ಕಾಲ ರಾಜ್ಯವಾಳಿದ. ಸೇವುಣರಾಜ್ಯ ಇವನ ಕಾಲದಲ್ಲಿ ಪ್ರಭಾವಶಾಲಿಯಾಗಿತ್ತು. ಇವನು 1261ರಲ್ಲಿ ಮರಣ ಹೊಂದಿದ. *

**ಕೃಷ್ಣ, ಎಂ.ಎಚ್.** : 1892-1947. ಪ್ರಸಿದ್ಧ ಪುರಾತತ್ವಜ್ಞರು, ಮೈಸೂರು ಹಟ್ಟಿ ಕೃಷ್ಣೈಂಗಾರ್ಯ ಎಂಬುದು ಇವರ ಪೂರ್ಣ ಹೆಸರು. 1892 ಆಗಸ್ಟ್ 19ರಂದು ಜನಿಸಿದರು. ಮೊದಲು ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿಯೂ ಅನಂತರ ಮಹಾರಾಜ ಕಾಲೇಜಿನಲ್ಲಿಯೂ ವ್ಯಾಸಂಗ ನಡೆಸಿ ಮಹಾರಾಜ ಹೈಸ್ಕೂಲಿನಲ್ಲಿ ಉಪಾಧ್ಯಾಯರಾದರು. ಮುಂದೆ ಮದರಾಸು ವಿಶ್ವವಿದ್ಯಾಲಯದಲ್ಲಿ ಇತಿಹಾಸದಲ್ಲಿ ವ್ಯಾಸಂಗ ನಡೆಸಿ ಎಂ.ಎ. ಪದವೀಧರರಾದರು (1916). 1924ರಲ್ಲಿ ಉನ್ನತ ವ್ಯಾಸಂಗ ವೇತನ ಪಡೆದು ಲಂಡನ್ನಿಗೆ ತೆರಳಿದರು. ಲಂಡನ್ ವಿಶ್ವವಿದ್ಯಾಲಯ ಮತ್ತು ಬ್ರಿಟಿಷ್ ಮ್ಯೂಸಿಯಂಗಳಲ್ಲಿ ಎರಡು ವರ್ಷ ವ್ಯಾಸಂಗ ನಡೆಸಿದ ಇವರಿಗೆ ಪ್ರಸಿದ್ಧ ಪುರಾತತ್ವಜ್ಞರಾದ ಸರ್ ಫ್ಲಿಂಡರ್ಸ್ ಪೇಟ್ರಿ, ಇ.ಎ.ಗಾರ್ಡನರ್, ಎಚ್.ಡಿ.ಬಾರ್ನೆಟ್, ಎಫ್.ಡಿ.ಥಾಮಸ್, ಜೆ.ಅಲನ್ ಮೊದಲಾದವರಿಂದ ಮಾರ್ಗದರ್ಶನ ದೊರೆತು, ಇವರು ಪುರಾತತ್ವದ ಹಲವು ಮುಖಗಳಲ್ಲಿ ಅಭ್ಯಾಸ ನಡೆಸಿದರು. ಮುಖ್ಯವಾಗಿ ನಾಣ್ಯಶಾಸ್ತ್ರವನ್ನು ವ್ಯಾಸಂಗ ಮಾಡಿ ಬ್ರಿಟಿಷ್ ಮ್ಯೂಸಿಯಂನಲ್ಲಿದ್ದ ನಾಣ್ಯರಾಶಿಯಲ್ಲಿ ದಕ್ಷಿಣ ಭಾರತದ ನಾಣ್ಯಗಳನ್ನು ಕುರಿತು ವಿವರಪೂರ್ಣವಾದ ಅಭ್ಯಾಸದಿಂದ ಪ್ರೌಢ ಪ್ರಬಂಧವನ್ನು ರಚಿಸಿದರು. ಈ ಪ್ರಬಂಧಕ್ಕಾಗಿ ಇವರಿಗೆ ಡಿ.ಲಿಟ್. ಪದವಿ ದೊರೆಯಿತು. ಇದರೊಂದಿಗೆ ಇವರು ಈಜಿಪ್ಟಿನಲ್ಲಿ ಉತ್ಖನನದ ಬಗ್ಗೆ ಅನುಭವವನ್ನು ಪಡೆದು ಬಂದರು.

ಇಂಗ್ಲೆಂಡಿನಿಂದ 1926ರಲ್ಲಿ ಹಿಂದಿರುಗಿದ ಅನಂತರ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಉಪಪ್ರಾಧ್ಯಾಪಕರಾದರು.

1928ರಲ್ಲಿ ವೆಂಕಟೇಶ್ವರುಲು ಅವರ ಅನಂತರ ಪ್ರಾಧ್ಯಾಪಕರಾದರು. 1929 ಫೆಬ್ರವರಿ 6ರಂದು ತಮ್ಮ ಪ್ರಾಧ್ಯಾಪಕ ಹುದ್ದೆಯೊಂದಿಗೆ ಪುರಾತತ್ತ್ವ ಇಲಾಖೆಯ ಒಪ್ಪೊತ್ತಿನ ನಿರ್ದೇಶಕರಾಗಿಯೂ ಅಧಿಕಾರ ವಹಿಸಿಕೊಂಡರು. ಈ ಎರಡು ಹುದ್ದೆಗಳಲ್ಲಿಯೂ 1944ರ ಜೂನ್ ವರೆಗೂ ಮುಂದುವರೆದ ಇವರು ಆ ವರ್ಷ ಜುಲೈ 1ರಿಂದ ಪುರಾತತ್ತ್ವ ಇಲಾಖೆಯ ಪೂರ್ಣ ಕಾಲದ ನಿರ್ದೇಶಕರಾದರು. ಈ ಕೆಲಸದಲ್ಲಿ ಮುಂದುವರಿಯುತ್ತಿದ್ದಾಗಲೇ 1947 ಡಿಸೆಂಬರ್ 23ರಂದು ಹಠಾತ್ತಾಗಿ ನಿಧನಹೊಂದಿದರು.

ತುಂಬ ಸರಳ ಸ್ವಭಾವದ ಕೃಷ್ಣ ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಗೌರವ ಸಂಪಾದಿಸಿದ್ದರು. ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿ ಆ ಇಲಾಖೆಯ ಕೆಲಸಗಳನ್ನು ಬಹುಮುಖವಾಗಿ ವಿಸ್ತರಿಸಿದ ದಕ್ಷ ಅಧಿಕಾರಿಗಳಾಗಿದ್ದರು. ಆಗಿನ ಮೈಸೂರು ಸಂಸ್ಥಾನದ ಪುರಾತತ್ತ್ವದ ಬಗ್ಗೆ ಇವರು ನಡೆಸಿದ ಅನೇಕ ಸಂಶೋಧನೆಗಳು ಮಹತ್ತ್ವಪೂರ್ಣವಾದುವು. ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ಇವರು ವೈಜ್ಞಾನಿಕ ರೀತಿಯ ಭೂಶೋಧನೆಯನ್ನು ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ನಡೆಸಿದರು. ಇವರ ನಿರ್ದೇಶಕತ್ವದಲ್ಲಿ ಸಹಸ್ರಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದುವು. ಚಂದ್ರವಳ್ಳಿ ಶಾಸನ, ಹಲ್ಮಿಡಿ ಶಾಸನ -ಇವು ಇವರ ಕಾಲದ ಮುಖ್ಯ ಶಾಸನಶೋಧಗಳು. ವಾಸ್ತುಕಲೆ ಮತ್ತು ಶಿಲ್ಪಕಲೆಗಳನ್ನು ಕುರಿತಂತೆ ಇವರು ನಡೆಸಿದ ಸಂಶೋಧನೆಗಳು ನೂರಾರು. ಅನೇಕ ದೇವಾಲಯಗಳ ಮತ್ತು ಶಿಲ್ಪಗಳ ವಿವರವಾದ ಅಭ್ಯಾಸ ನಡೆಸಿ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿದರು. ಇವಲ್ಲದೆ ದಕ್ಷಿಣ ಭಾರತದ ಅನೇಕ ರಾಜಮನೆತನಗಳು ಹಾಕಿಸಿದ ನಾಣ್ಯಗಳ ವಿವರಣೆಗಳನ್ನು ಕೊಟ್ಟರು. 1929ರಿಂದ 45ರವರೆಗಿನ 17 ವಾರ್ಷಿಕ ವರದಿಗಳು ಈ ಎಲ್ಲ ವಿವರಗಳನ್ನೊಳಗೊಂಡು ವಿಷಯವೈವಿಧ್ಯದಿಂದ ಕೂಡಿ ಹೆಚ್ಚು ಆಕರ್ಷಕವಾಗಿ ಪ್ರಕಟಗೊಂಡು ಭಾರತದಲ್ಲಿಯೇ ಅತ್ಯಂತ ಶ್ರೇಷ್ಠವಾದ ವರದಿಗಳೆಂದು ಖ್ಯಾತವಾದುವು. ಇವುಗಳೊಂದಿಗೆ ಕೃಷ್ಣ ಅವರು ಮೈಸೂರು ಮತ್ತು ಹಾಸನ ಜಿಲ್ಲೆಗಳ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಅನುಬಂಧಗಳನ್ನೂ ಹಲವು ಪ್ರಸಿದ್ಧ ಪ್ರವಾಸಿ ಕ್ಷೇತ್ರಗಳಿಗೆ ಜನಪ್ರಿಯ ಕೈಪಿಡಿಗಳನ್ನೂ ಪ್ರಕಟಿಸಿದರು. ಬೇಲೂರು, ಹಳೆಬೀಡು, ಶ್ರವಣಬೆಳಗೊಳ, ಶ್ರೀರಂಗಪಟ್ಟಣ, ತಲಕಾಡು ಮತ್ತು ನಂದಿಯ ಕೈಪಿಡಿಗಳಲ್ಲದೆ ಆಗಿನ ಇಡೀ ಮೈಸೂರು ಸಂಸ್ಥಾನಕ್ಕೇ ಅನ್ವಯಿಸುವಂತೆ ಒಂದು ಕೈಪಿಡಿಯನ್ನೂ ಹೊರತಂದರು. ಹಿಂದೂ ದೇಶದ ಚರಿತ್ರಸಾರ, ಕನ್ನಡ ನಾಡಿನ ಚರಿತ್ರೆ, ಅಜಂತ ಮತ್ತು ಎಲ್ಲೋರ ಇವು ಇವರು ಕನ್ನಡದಲ್ಲಿ ಪ್ರಕಟಿಸಿರುವ ಗ್ರಂಥಗಳು. ಇವಲ್ಲದೆ ಇವರ ಅನೇಕ ಲೇಖನಗಳು ಹಲವು ಸಂಶೋಧನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು 1934ರಲ್ಲಿ ಮೈಸೂರಿನಲ್ಲಿ ನಡೆದ ಪ್ರಾಚ್ಯ ಸಮ್ಮೇಳನದ ಕಾರ್ಯದರ್ಶಿಯೂ 1942ರಲ್ಲಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ಮಾನವಶಾಸ್ತ್ರ ವಿಭಾಗದ ಅಧ್ಯಕ್ಷರೂ ಆಗಿದ್ದರು. (ಎಂ.ಎಚ್.)

**ಕೃಷ್ಣ, ಎಸ್.ಎಂ. :** 1932-. ಕರ್ನಾಟಕ ರಾಜ್ಯದ ಮಾಜಿ ಮುಖ್ಯ ಮಂತ್ರಿ (1999-2004). ಮಹಾರಾಷ್ಟ್ರದ ರಾಜ್ಯಪಾಲರು (2004). ಇವರು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಸೋಮನಹಳ್ಳಿಯಲ್ಲಿ 1932 ಮೇ 1ರಂದು ಜನಿಸಿದರು. ತಂದೆ ಎಸ್.ಸಿ.ಮಲ್ಲಯ್ಯ, ತಾಯಿ ತಾಯಮ್ಮ. ಇವರ ತಂದೆ ಎಸ್.ಸಿ.ಮಲ್ಲಯ್ಯನವರು ದೀರ್ಘಕಾಲ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು; ದೀರ್ಘಕಾಲ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಿದ್ದರು. ಮಂಡ್ಯ ಜಿಲ್ಲೆಯ ಪ್ರತ್ಯೇಕ ರಚನೆಗಾಗಿ ಶ್ರಮಿಸಿದ ಪ್ರಮುಖರಲ್ಲಿ ಅವರೂ ಒಬ್ಬರು.

ಕೃಷ್ಣ ಅವರ ಪ್ರಾಥಮಿಕ ಶಿಕ್ಷಣ ಸೋಮನಹಳ್ಳಿಯಲ್ಲಿ ನಡೆಯಿತು. ಅನಂತರ ಇವರ ವಿದ್ಯಾಭ್ಯಾಸ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಮುಂದುವರಿಯಿತು. ಮಹಾಜನ ಶಾಲೆ ಮತ್ತು ಮಹಾರಾಜ ಕಾಲೇಜಿನಲ್ಲೂ ವ್ಯಾಸಂಗ ಮಾಡಿ ಬಿ.ಎ. ಪದವಿ ಗಳಿಸಿ ತರುವಾಯ ಬೆಂಗಳೂರಿನಲ್ಲಿ ಬಿ.ಎಲ್. ಪದವಿ ಪಡೆದರು. ಕಾಲೇಜಿನ ದಿನಗಳಲ್ಲಿ ಇವರು ಉತ್ಸಾಹದಿಂದ ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದು ಉತ್ತಮ ವಾಗ್ಮಿ ಎಂಬ ಹೆಸರು ಪಡೆದಿದ್ದರು. ಮುಂದೆ ಇವರು ಅಮೆರಿಕಕ್ಕೆ ತೆರಳಿ ಡಲ್ಲಾಸ್‌ನ ಮೆಥಾಡಿಸ್ಟ್ ವಿಶ್ವವಿದ್ಯಾಲಯದ ಎಂ.ಸಿ.ಎಲ್. ಪದವಿ ಪಡೆದರು. ಅಮೆರಿಕದಲ್ಲಿ ಕೆನಡಿಯವರು ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದ್ದಾಗ ಅವರ ಪರವಾಗಿ ಇವರೂ ಪ್ರಚಾರ ಮಾಡಿದ್ದರು.

ಇವರು ಸ್ವದೇಶಕ್ಕೆ ಹಿಂದಿರುಗಿ ಅನಂತರ ವಕೀಲ ವೃತ್ತಿ ಆರಂಭಿಸಿದರು. ಜೊತೆಗೆ ಬೆಂಗಳೂರಿನ ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಕಾನೂನಿನ ಪ್ರಾಧ್ಯಾಪಕರಾಗಿದ್ದರು.

ಇವರು ಚಿಕ್ಕಂದಿನಿಂದಲೂ ರಾಜಕಾರಣದಲ್ಲಿ ಆಸಕ್ತಿ ತಳೆದಿದ್ದರು. ಒಮ್ಮೆ ಸೋಮನಹಳ್ಳಿಗೆ ಮಹಾತ್ಮಗಾಂಧೀಜಿಯವರು ಭೇಟಿ ನೀಡಿದ್ದರು. ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದ ಗಣ್ಯರು ಬೆಂಗಳೂರು-ಮೈಸೂರು ಸಂಚಾರದ ನಡುವೆ ಇವರ ತಂದೆಯವರೊಡನೆ ಮನೆಗೆ ಭೇಟಿ ನೀಡುತ್ತಿದ್ದರು. ಹಾಗಾಗಿ ರಾಜ್ಯದ ಹಲವಾರು ರಾಜಕೀಯ ಮುಖಂಡರ ಪರಿಚಯ ಕೃಷ್ಣರಿಗಿತ್ತು. ಕೃಷ್ಣರು ಒಳ್ಳೆಯ ಮಾತುಗಾರರು. ಇವರು 1962ರ ವಿಧಾನಸಭೆಯ ಚುನಾವಣೆಗೆ ಮದ್ದೂರು ಕ್ಷೇತ್ರದಿಂದ ಸ್ಪರ್ಧಿಸಿ ಆ ಮೂಲಕ ರಾಜಕೀಯ ಪ್ರವೇಶ ಮಾಡಿದರು. ಮೊದಲ ಪ್ರಯತ್ನದಲ್ಲೇ ಯಶಸ್ವಿಯಾದರು. ಆಗ ಅಂದಿನ ಪ್ರಮುಖ ನಾಯಕರಲ್ಲೊಬ್ಬರಾಗಿದ್ದ ಮದ್ದೂರಿನ ಎಚ್.ಕೆ.ವೀರಣ್ಣಗೌಡರನ್ನು ಇವರು ಸೋಲಿಸಿದ್ದು ಎಲ್ಲರ ಗಮನ ಸೆಳೆಯಿತು. ಪ್ರಜಾಸಮಾಜವಾದಿ ಪಕ್ಷದ ಯುವ ಸದಸ್ಯರೆಂಬ ಖ್ಯಾತಿಗೆ ಇವರು ಪಾತ್ರರಾದರು.

ಮುಂದೆ ಇವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗುವವರೆಗೆ ನಾಲ್ಕು ದಶಕಗಳ ಕಾಲ ರಾಜಕೀಯದಲ್ಲಿ ಮುಂದುವರಿದರು. 1968ರಲ್ಲಿ ಲೋಕಸಭೆಗೆ ಆಯ್ಕೆಯಾದರು. 1969ರಲ್ಲಿ ಕಾಂಗ್ರೆಸ್ ಪಕ್ಷ ವಿಭಜಿತವಾದಾಗ ಇವರು ಇಂದಿರಾಗಾಂಧಿಯವರ ನೇತೃತ್ವದ ಆಡಳಿತ ಕಾಂಗ್ರೆಸ್ ಪಕ್ಷವನ್ನು ಸೇರಿದರು.

1971ರಲ್ಲಿ ಇವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಮಂಡ್ಯ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಆಯ್ಕೆಯಾದರು. 1972ರಲ್ಲಿ ಲೋಕಸಭಾ ಸದಸ್ಯತ್ವವನ್ನು ತ್ಯಜಿಸಿ ಡಿ. ದೇವರಾಜ ಅರಸು ಸಂಪುಟದಲ್ಲಿ ಕೈಗಾರಿಕೆ, ವಾಣಿಜ್ಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದರು. ಮತ್ತು ವಿಧಾನ ಪರಿಷತ್ ಸದಸ್ಯರಾಗಿ ಚುನಾಯಿತರಾದರು. 1980ರಲ್ಲಿ ಮತ್ತೆ ತಮ್ಮ ಜಿಲ್ಲೆಯಿಂದ ಲೋಕಸಭೆಗೆ ಸ್ಪರ್ಧಿಸಿ ಗೆದ್ದರು. 1982ರಲ್ಲಿ ಭಾರತದ ನಿಯೋಗದ ಪ್ರತಿನಿಧಿಯಾಗಿ ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಭಾಗವಹಿಸಿದರು. ಇಂದಿರಾ ಗಾಂಧಿಯವರ ಸಂಪುಟದಲ್ಲಿ ಕೈಗಾರಿಕೆ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದರು (1983-84). ಕೃಷ್ಣರು ತಮ್ಮ ವ್ಯಕ್ತಿತ್ವ ಮತ್ತು ಸ್ನೇಹಪರತೆಯಿಂದ ಇಂದಿರಾ ಗಾಂಧಿಯವರ ಕುಟುಂಬದ ಆಪ್ತರಲ್ಲೊಬ್ಬರಾದರು.

ಅನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಇವರಿಗೆ ಯಶಸ್ಸು ದೊರಕದಿದ್ದುದರಿಂದ ಕೇಂದ್ರ ಸಂಪುಟದ ಸಚಿವರಾಗುವ ಅವಕಾಶ ತಪ್ಪಿಹೋಯಿತು. ಆಗ ಇವರು ರಾಜ್ಯದ ರಾಜಕೀಯಕ್ಕೆ ಮರಳಿದರು. 1989ರಲ್ಲಿ ರಾಜ್ಯ ವಿಧಾನಸಭೆಗೆ ಆರಿಸಿ ಬಂದು ಅದರ ಸಭಾಪತಿಯಾಗಿ ಆಯ್ಕೆಯಾದರು. ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ (1992-94) ಇವರು ಉಪಮುಖ್ಯಮಂತ್ರಿಯಾಗಿ ಜವಾಬ್ದಾರಿ ನಿರ್ವಹಿಸಿದರು (1993-94). 1996ರಲ್ಲಿ ರಾಜ್ಯಸಭಾ ಸದಸ್ಯರಾಗಿ ಚುನಾಯಿತರಾದರು.

1999ರಲ್ಲಿ ಇವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ನೇಮಿತರಾದರು. ಪಕ್ಷವನ್ನು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮುನ್ನಡೆಸುವ ಅತ್ಯಂತ ಗುರುತರವಾದ ಹೊಣೆ ಇವರ

ಮೇಲೆ ಬಿತ್ತು. ಆಗ ಇವರು ರಾಜ್ಯಾದ್ಯಂತ ನಿರಂತರ ಪ್ರವಾಸ ಕೈಗೊಂಡರು. ಪಕ್ಷದ ಕಾರ್ಯಕರ್ತರನ್ನು ಒಗ್ಗೂಡಿಸಿದರು. ಪಕ್ಷ ಮೂರನೆಯ ಎರಡು ಭಾಗ ಬಹುಮತದೊಂದಿಗೆ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಆರಿಸಿ ಬಂತು. ಲೋಕಸಭೆಗೂ ಗಣನೀಯ ಸಂಖ್ಯೆಯ ಸದಸ್ಯರು ಚುನಾಯಿತರಾದರು. ಈ ಸಾಧನೆಗೆ ಪಾರಿತೋಷಕವೆಂಬಂತೆ ಎಸ್.ಎಂ.ಕೃಷ್ಣ ಅವರು 1999ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾದರು.

ಇವರು ಮುಖ್ಯಮಂತ್ರಿಗಳಾದ ಮೇಲೆ ರಾಜ್ಯದ ಆರ್ಥಿಕ ಮತ್ತು ಆಡಳಿತ ಕ್ಷೇತ್ರದಲ್ಲಿ ಕೆಲವೊಂದು ಬದಲಾವಣೆಗಳನ್ನು ತಂದರು. ತಂತ್ರಾಂಶ ಜಾಗತೀಕರಣಕ್ಕೆ ಸ್ಪಂದಿಸಿದ ಇವರು ಬೆಂಗಳೂರು ಭಾರತದ ಪ್ರಥಮ (ಸಾಫ್ಟ್‌ವೇರ್) ಕೇಂದ್ರವಾಗುವಂತೆ ಮಾಡಿದರು. ಬೆಂಗಳೂರು ನಗರದಲ್ಲಿ ಹಲವಾರು ಮೇಲು ಸೇತುವೆಗಳನ್ನು ನಿರ್ಮಿಸಿ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಿದರು. ವಿಧಾನ ಸೌಧದ ಬಳಿ ವಿಕಾಸಸೌಧ ಎಂಬ ಬೃಹತ್ ಸಚಿವಾಲಯವನ್ನು ನಿರ್ಮಿಸಿದ್ದು ಇವರ ಮುಖ್ಯ ಸಾಧನೆಗಳಲ್ಲೊಂದು. ಇವರ ಕಾರ್ಯಾವಧಿಯಲ್ಲಿ ರಾಜ್ಯದಲ್ಲಿ ಹೆದ್ದಾರಿಗಳ ದುರಸ್ತು ಮತ್ತು ಅಗಲಗೊಳಿಸುವ ಕಾರ್ಯ ಆದ್ಯತೆ ದೊರೆಯಿತು. ತಾಲ್ಲೂಕು ಮತ್ತು ಜಿಲ್ಲಾ ಕಚೇರಿಗಳಲ್ಲಿ ಕಂಪ್ಯೂಟರ್ ಮತ್ತಿತರ ಸಲಕರಣೆಗಳನ್ನು ಸಜ್ಜುಗೊಳಿಸಿದರು. ಇದರಿಂದ ಜನಸಾಮಾನ್ಯರು ಅತ್ಯಲ್ಪ ಕಾಲದಲ್ಲಿ ಕೆಲವೊಂದು ಭೂದಾಖಲೆಗಳನ್ನು ಪಡೆಯುವುದು ಸಾಧ್ಯವಾಯಿತು. ಸ್ತ್ರೀ ಸಬಲೀಕರಣದ ಅಂಗವಾಗಿ ಸ್ತ್ರೀಶಕ್ತಿ ಸಂಘಗಳು ರಾಜ್ಯಾದ್ಯಂತ ಸ್ಥಾಪನೆಯಾದವು. ಇವರು ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಜಾರಿಗೆ ತಂದರು. ಇವರ ಅಧಿಕಾರಾವಧಿಯ ಹೆಚ್ಚು ಕಾಲ ಬರಗಾಲದ ಭೀಕರ ಛಾಯೆ ಆವರಿಸಿದ್ದರಿಂದ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಲ್ಲಿ ಸರ್ಕಾರ ಹೆಚ್ಚಾಗಿ ಸವಾಲುಗಳನ್ನೇ ಎದುರಿಸಬೇಕಾಯಿತು. ಕಾಡುಗಳ್ಳ ವೀರಪ್ಪನ್‌ನಿಂದ ವರನಟ ರಾಜಕುಮಾರ್ ಅಪಹರಣ ಮತ್ತು ರಾಜಕಾರಣಿ ನಾಗಪ್ಪ ಅಪಹರಣ ಹಾಗೂ ಹತ್ಯೆ ಕೃಷ್ಣ ಸರ್ಕಾರಕ್ಕೆ ದೊಡ್ಡ ಸಮಸ್ಯೆಗಳನ್ನು ತಂದಿದ್ದವು.

ಕೃಷ್ಣ 2004ರಲ್ಲಿ ವಿಧಾನಸಭೆಗೆ, ಅವಧಿಗೆ ಮುನ್ನವೇ ಚುನಾವಣೆ ಘೋಷಿಸಿದರು. ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸಿದರು. ಪಕ್ಷಕ್ಕೆ ಬಹುಮತ ಲಭಿಸದೆ ಮುಖ್ಯಮಂತ್ರಿ ಹುದ್ದೆಯಿಂದ ಹೊರಗುಳಿಯಬೇಕಾಯಿತು. ಬೆಂಗಳೂರು ನಗರ ಕಾಂಗ್ರೆಸ್‌ಗೆ ಅಧಿಕ ಸ್ಥಾನಗಳು ದೊರಕಿದುವು. 2004 ಡಿಸೆಂಬರ್ 6ರಂದು ಇವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

'ಎಸ್.ಎಂ.ಕೃಷ್ಣ ಬದುಕು-ಸಾಧನೆ' ಎಂಬ ಬೃಹತ್ ಗೌರವ ಗ್ರಂಥ ಇವರ 68ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಪ್ರಕಟವಾಯಿತು. ಪ್ರೇಮಾ ಇವರ ಪತ್ನಿ. ಈ ದಂಪತಿಗಳಿಗೆ ಇಬ್ಬರು ಪುತ್ರಿಯರಿದ್ದಾರೆ. (ಡಿ.ಎಸ್.ಜೆ.)

**ಕೃಷ್ಣಗಿರಿ ಕೃಷ್ಣರಾಯ :** 1890-1966. ಪ್ರಸಿದ್ಧ ಗಮಕಿ. ಹಾಸನದಲ್ಲಿ ಜನಿಸಿದರು. ಇವರ ತಂದೆ ಕೃಷ್ಣಗಿರಿ ಅನಂತಯ್ಯ. ತಾಯಿ ನಾಮಗಿರಿಯಮ್ಮ. ಇವರ ಪೂರ್ವಜರು ಆಂಧ್ರದವರು. ಮಾತೃಭಾಷೆ ತೆಲುಗು. ಅವರು ಮೈಸೂರಿಗೆ ಬಂದು ನೆಲಸಿದರು. ತಂದೆತಾಯಿಯರ ಮೂರನೆಯ ಪುತ್ರರಾಗಿ ಜನಿಸಿದ ಇವರು ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು ಸೋದರಮಾವನ ಪೋಷಣೆಯಲ್ಲಿ ಬಾಲ್ಯವನ್ನು ಕಳೆದರು. ಬೆಂಗಳೂರಿನ ಕೋಟೆ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಮುಂದುವರಿದರಾದರೂ ಪದವಿ ಪಡೆಯಲಾಗದೆ ಅದೇ ಕಾಲೇಜಿನಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿ ಅನಂತರ ಕಾಲೇಜಿನ ಗ್ರಂಥಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಕೃಷ್ಣರಾಯರು ಬಾಲ್ಯದಲ್ಲಿಯೇ ಪಿಟೀಲು ವಾದನವನ್ನು ಅಭ್ಯಾಸ ಮಾಡಿ ತಮ್ಮ ಸಂಗೀತಪ್ರಜ್ಞೆಯನ್ನು ಬೆಳೆಸಿಕೊಂಡರು. ಮನೆಯಲ್ಲಿ ಇವರಿಗೆ ಅಕ್ಕ ಮತ್ತು ಸೋದರತ್ತೆ, ಚಿಕ್ಕಪ್ಪ ರಾಮಚಂದ್ರರಾಯ ಇವರಿಂದ ಪ್ರೋತ್ಸಾಹ ದೊರಕಿತು. ಉಪವಿಭಾಗಾಧಿಕಾರಿಯಾಗಿದ್ದ ರಾಮಚಂದ್ರರಾಯರು ರಾಮಾಯಣ ವಾಚನದಲ್ಲಿ ನಿಪುಣರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಸಂಗೀತ ವಿದ್ವಾನ್ ಸುಬ್ಬಣ್ಣನವರಲ್ಲಿ ಕೃಷ್ಣರಾಯರು 2 ವರ್ಷ ಸತತವಾಗಿ ಶಾಸ್ತ್ರೀಯ ಸಂಗೀತಾಭ್ಯಾಸ ಮಾಡಿ ಉತ್ತಮ ಸಂಗೀತ ಗಾರರಾದರು. ಜೊತೆಗೆ ಕ್ರಮೇಣ ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯಗಳನ್ನು ರೂಢಿಸಿಕೊಂಡರು. ಕಾನಕಾನಹಳ್ಳಿ ವರದಾಚಾರ್ಯ, ಬಿ.ಎಂ.ಶ್ರೀ. ಮೊದಲಾದವರ ಸ್ನೇಹಲಾಭ, ಎಂ.ಆರ್.ಶ್ರೀ. ಅಂಥವರ ಬಂಧುತ್ವ ಸಂಪರ್ಕಗಳಿಂದ ಇವರ ಮನಸ್ಸು ಸಾಹಿತ್ಯ ಮತ್ತು ಗಮಕಗಳ ಕಡೆ ತಿರುಗಿತು. ಆ ಕಾಲದಲ್ಲಿ ಭಾರತವನ್ನು ವಾಚಿಸುವುದರಲ್ಲಿ ಪ್ರಖ್ಯಾತರಾಗಿದ್ದ ಬಿಂದೂರಾಯರ ಸ್ನೇಹ 1919ರ ಸುಮಾರಿನಲ್ಲಿ ದೊರಕಿ ಅಂದಿನಿಂದ ಕೃಷ್ಣರಾಯರು ಸುಮಾರು 30 ವರ್ಷ ಗಮಕದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಟಿ.ಎಸ್. ವೆಂಕಣ್ಣಯ್ಯ, ಕುವೆಂಪು, ಮೊದಲಾದವರ ಸಖ್ಯಗಳಿಸಿದರು. ಕುವೆಂಪು ಅವರ ಚಿತ್ರಾಂಗದಾ, ಶ್ರೀರಾಮಾಯಣ ದರ್ಶನಂ ಕಾವ್ಯಗಳನ್ನು ಅಚ್ಚಾಗುವುದಕ್ಕೆ ಮುಂಚೆಯೇ ಓದಿ (1938-40) ಅವರ ಮೆಚ್ಚುಗೆ ಪಡೆದರು. ಭಾರತವನ್ನು ಮಾತ್ರವಲ್ಲ, ಇತರ ಕಾವ್ಯಗಳನ್ನು ಓದುವುದರಲ್ಲೂ ಸಮರ್ಥರು ಎನಿಸಿಕೊಂಡರು.

ಸಂಗೀತಕ್ಕೆ ಸಾಹಿತ್ಯ, ಸಾಹಿತ್ಯಕ್ಕೆ ಸಂಗೀತ ಇವೆರಡನ್ನೂ ಬೆಸೆದು ಗಮಕ ಕೆಡದಂತೆ, ರಸಭಂಗವಾಗದಂತೆ ಓದುತ್ತಿದ್ದುದು ಇವರ ವೈಶಿಷ್ಟ್ಯ. ಕಾವ್ಯದ ಭಾವಾರ್ಥ ರಸಗಳನ್ನು ಓದಿನಲ್ಲೇ ವ್ಯಕ್ತಪಡಿಸುವ ನೈಪುಣ್ಯವನ್ನೂ ಪಡೆದುಕೊಂಡಿದ್ದರು. ಪ್ರತಿಯೊಂದು ಪದ್ಯವನ್ನೂ ಸ್ವಲ್ಪಮಟ್ಟಿಗೆ ವಿವರಿಸಿ ಅದರ ಭಾವ ಸಹೃದಯರ ಮನಸ್ಸಿಗೆ ತಾಕಿ ಅದು ಅಚ್ಚಳಿಯದೆ ಉಳಿಯುವಂತೆ ವಾಚನಮಾಡುತ್ತಿದ್ದರು. ಭಾರತವನ್ನೇ ಹೆಚ್ಚಾಗಿ ಓದುತ್ತಿದ್ದುದರಿಂದ ಭಾರತದ ಕೃಷ್ಣರಾಯರೆಂದೇ ಪ್ರಸಿದ್ಧರಾದರು.

ಇವರು ಮೃದುಸ್ವಭಾವದವರು, ಸ್ನೆಹಪರರು, ಸಹೃದಯರು, ಹಾಸ್ಯ ಪ್ರಿಯರು. ಅನೇಕರಿಗೆ ಗಮಕಕಲೆಯನ್ನು ಕಲಿಸಿದರು. ಇವರ ಶಿಷ್ಯವೃಂದದಲ್ಲಿ ಬಿ.ಎಸ್.ಎಸ್.ಕೌಶಿಕ್ ಅವರು ಹೆಸರಾಂತ ಗಮಕಿಗಳು. 1935ರಲ್ಲಿ ಬೇಲೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೃಷ್ಣರಾಯರು ಗಮಕಗೋಷ್ಠಿಯ ಅಧ್ಯಕ್ಷರಾಗಿದ್ದರು. ಇವರು 1966ರಲ್ಲಿ ಬೆಂಗಳೂರಿನಲ್ಲಿ ನಿಧನಹೊಂದಿದರು. (ಕೆ.ಟಿ.ಆರ್.ಐ.)

**ಕೃಷ್ಣದೇವರಾಯ :** ವಿಜಯನಗರ ಸಾಮ್ರಾಜ್ಯವನ್ನು ಆಳಿದ ತುಳುವ ವಂಶದ ಪ್ರಖ್ಯಾತ ಅರಸು (1509-29). ಸಾಳುವ ನರಸಿಂಹನ ಮಹಾದಂಡ ನಾಯಕನಾಗಿದ್ದ ನರಸನಾಯಕನ ಮಗ. ತಾಯಿ ನಾಗಲಾದೇವಿ.

ಬಲ ಅಣ್ಣನಾದ ವೀರನರಸಿಂಹನ ಮರಣಾನಂತರ ಕೃಷ್ಣದೇವರಾಯ ಪಟ್ಟಕ್ಕೆ ಬಂದ (1509). ಆಗ ವಿಜಯನಗರ ಸಾಮ್ರಾಜ್ಯ ಒಳ ಹೊರ ಶತ್ರುಗಳಿಂದ ಮತ್ತು ದೀರ್ಘಕಾಲದ ದುರಾಡಳಿತದಿಂದ ದುರ್ಬಲವಾಗಿ ಇವನು ಮೊದಲು ರಾಜ್ಯದ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಆಂತರಿಕ ಸುವ್ಯವಸ್ಥೆಯ ಸ್ಥಾಪನೆಗಾಗಿ ಹೆಣಗಿದ. ಮದುವೆ ಸುಂಕ ಮೊದಲಾದ ಕಿರುಕುಳದ ರೀತಿಯ ಕೆಲವು ತೆರಿಗೆಗಳನ್ನು ರದ್ದುಮಾಡಿ ಜನರ ವಿಶ್ವಾಸ ಗಳಿಸಿದ. ಹೆಚ್ಚು ಭೂಮಿಯನ್ನು ಆಬಾದಿಗೆ ತರಲು ಜನರನ್ನು ಪ್ರೋತ್ಸಾಹಿಸಿ ರಾಜ್ಯಾದಾಯವನ್ನು ಹೆಚ್ಚಿಸಿದ. ಪ್ರಾಂತ್ಯಾಧಿಕಾರಿಗಳು ಮತ್ತು ಸಾಮಂತರು ನಿರ್ದಿಷ್ಟ ಸಂಖ್ಯೆಯ ಸೈನಿಕರನ್ನು ರಾಜನಿಗೆ ಒದಗಿಸಬೇಕೆಂಬ ಕಟ್ಟುಪಾಡು ಮಾಡಿ ರಾಜ್ಯದ ಸೇನಾಬಲವನ್ನು ಹೆಚ್ಚಿಸಿದ.

ಈ ಕಾರ್ಯಕ್ರಮಗಳ ಅನಂತರ ಶತ್ರುನಿಗ್ರಹ ಕಾರ್ಯವನ್ನು ಕೈಗೊಂಡ. ಆಗ ಉತ್ತರ ಪೂರ್ವ ಪಶ್ಚಿಮ ಗಡಿ ಭಾಗಗಳಲ್ಲಿ ಬಹಮನೀ ಗಜಪತಿ ಮತ್ತು ಬಿಜಾಪುರದವರ ಒತ್ತಡ ಬಲವಾಗಿತ್ತು. ಈ ಸಮಯದಲ್ಲಿ ಕೃಷ್ಣದೇವರಾಯ ಚಾಣಾಕ್ಷತನದಿಂದ ಪೋರ್ಚುಗೀಸರ ಸ್ನೇಹ ಮಾಡಿ ಮುಸಲ್ಮಾನರ ಬಲ ಮುರಿಯಲು ಸೈನ್ಯವನ್ನು ಸಂಘಟಿಸಿದ. ಇದೇ ಸಮಯದಲ್ಲಿ ಗುಲ್ಬರ್ಗದ ಮಹಮ್ಮದ್ ಷಾ ದಾಳಿ ಮಾಡಿದೊಡನೆ (1509) ಬಹು ದೊಡ್ಡ ಸೈನ್ಯದೊಂದಿಗೆ ಕೃಷ್ಣದೇವರಾಯ ಅವನ ಮೇಲೇರಿ ಹೋದ. ಬಿಜಾಪುರದ ಯೂಸುಫ್ ಆದಿಲ್ ಷಾನೂ ಮಹಮ್ಮದ್ ಷಾನೊಡನೆ ಸೇರಿಕೊಂಡ. ಆದರೆ ಈ ಯುದ್ಧದಲ್ಲಿ ಮಹಮ್ಮದ್ ಷಾ ಗಾಯಗೊಂಡು ಓಡಿಹೋದ. ಆದಿಲ್ ಷಾ ಮರಣ ಹೊಂದಿದ. ದಕ್ಷಿಣದಲ್ಲಿ ತೊಂದರೆ ಕೊಡುತ್ತಿದ್ದ ಉಮ್ಮತ್ತೂರು ಪಾಳೆಯಗಾರನನ್ನು ಸದೆಬಡಿದು ಉಮ್ಮತ್ತೂರು, ಶಿವಸಮುದ್ರ ಶ್ರೀರಂಗಪಟ್ಟಣದ ಭಾಗಗಳನ್ನು ತನ್ನ ರಾಜ್ಯದಲ್ಲಿ ಭದ್ರಪಡಿಸಿಕೊಂಡ.

ಅನಂತರ ಇವನ ಆತ್ಮರಕ್ಷಕ ದಾಳಿಗಳು ರಾಜ್ಯ ವಿಸ್ತಾರದ ದಾಳಿಗಳ ಸ್ವರೂಪ ತಳೆದವು. ಉದಯಗಿರಿ ಕೊಂಡವೀಡು ರಾಜ್ಯಗಳನ್ನು ಆಕ್ರಮಿಸಿದ ಉತ್ಕಲದ ಗಜಪತಿ ಪ್ರತಾಪರುದ್ರನ ಮೇಲೆ ದಂಡೆತ್ತಿ ಹೋಗಿ ಮೊದಲು ಉದಯಗಿರಿಯನ್ನು ಮುತ್ತಿದ (1513). ಇವನನ್ನು ಎದುರಿಸಿದ ಪ್ರತಾಪರುದ್ರನನ್ನು ಓಡಿಸಿದ. 18 ತಿಂಗಳ ಮುತ್ತಿಗೆಯ ಅನಂತರ ಉದಯಗಿರಿ ಇವನ ವಶವಾಯಿತು. ಕೊಂಡವೀಡನ್ನು ಆಕ್ರಮಿಸಲು ಸಾಳುವ ತಿಮ್ಮರಸನನ್ನು ಕಳುಹಿಸಿದ. ಅವನು ಕಂದುಕೂರು, ವಿನುಕೊಂಡ, ನಾಗಾರ್ಜುನಕೊಂಡಗಳನ್ನು ಹಿಡಿದು ಕೊಂಡವೀಡನ್ನು ತಲಪುವ ಹೊತ್ತಿಗೆ ರಾಯನೂ ಅವನೊಡನೆ ಸೇರಿ ಆ ಕೋಟೆಯನ್ನು ಆಕ್ರಮಿಸಿ ಗಜಪತಿ, ವೀರಭದ್ರ ಮತ್ತು ಅವನ ಹೆಂಡತಿಯನ್ನು ಸೆರೆಹಿಡಿದ (1515). ದಾಳಿಯ ಮುಂದುವರಿಕೆಯಿಂದ ಕರಾವಳಿಯ ವಿಜಯವಾಡ, ರಾಜ ಮಹೇಂದ್ರಿ, ಸಿಂಹಾಚಲಗಳೂ ತೆಲಂಗಾಣದ ನಲಗೊಂಡ, ವಾರಂಗಲ್ ಪ್ರದೇಶಗಳೂ ಒಂದರ ಮೇಲೊಂದರಂತೆ ವಶವಾದುವು. ಈ ಸಂದರ್ಭದಲ್ಲಿ ಗಜಪತಿಯ ನೆರವಿನಿಂದ ಎದುರಿಸಿದ ಗೋಲ್ಕೊಂಡದ ಶಿತಾಬಖಾನನನ್ನು ಮಣಿಸಿದ. ಪೊತನೂರಿನಲ್ಲಿ ವಿಜಯಸ್ತಂಭ ಸ್ಥಾಪಿಸಿದ. ಇವನ ಸೈನ್ಯಕ್ಕೆ ಸೋಲೇ ಇಲ್ಲವೆಂಬಂತಾಯಿತು. ಇವನ ಸೈನ್ಯ ಮತ್ತೆ ಮುನ್ನಡೆದು ಗಜಪತಿಯ ರಾಜಧಾನಿ ಕಟಕವನ್ನು ಮುತ್ತಿತು (1518). ರಾಯನನ್ನು ಎದುರಿಸಲಾರದ ಪ್ರತಾಪರುದ್ರ ಸಂಧಿ ಮಾಡಿಕೊಂಡು ತನ್ನ ಮಗಳು ಜಗನ್ಮೋಹಿನಿಯನ್ನು ಇವನಿಗೆ ಮದುವೆ ಮಾಡಿಕೊಟ್ಟ. ರಾಯ ತಾನು ಆಕ್ರಮಿಸಿದ್ದ ಕೃಷ್ಣಾನದಿಯ ಉತ್ತರ ಭಾಗವನ್ನೆಲ್ಲ ಉದಾರವಾಗಿ ಗಜಪತಿ ಅರಸನಿಗೆ ಬಿಟ್ಟುಕೊಟ್ಟ. ಉತ್ಕಲದ ಗಜಪತಿಯ ಸೋಲು ಗೋಲ್ಕೊಂಡ ಸುಲ್ತಾನ ತಲೆಯೆತ್ತುವಂತೆ ಮಾಡಿತು. ಅವನು ಹಲವು ಸ್ಥಳಗಳನ್ನು ಆಕ್ರಮಿಸಿ ವಿಜಯನಗರದ ಮೇಲೆ ದಂಡೆತ್ತಿ ಬಂದ. ಸಾಳುವ ತಿಮ್ಮರಸನ ನಾಯಕತ್ವದಲ್ಲಿ ಕಳಿಸಲಾದ ವಿಜಯನಗರದ ಸೈನ್ಯ ಸುಲ್ತಾನನ್ನು ಮಣಿಸಿ ಆಕ್ರಮಿತ ಪ್ರದೇಶಗಳಿಂದ ಓಡಿಸಿತು.

ಇವನ ದಾಳಿಗಳಲ್ಲಿ ರಾಯಚೂರು ಮುತ್ತಿಗೆ (1520) ಮತ್ತು ಪತನ ಬಹು ಮಹತ್ವವುಳ್ಳದ್ದು. ರಾಯಚೂರು ಮತ್ತು ಮುದ್ಗಲ್ಲು ಕೋಟೆಗಳಿಗಾಗಿ ಗುಲ್ಬರ್ಗ, ಬಿಜಾಪುರ ಮತ್ತು ವಿಜಯನಗರದವರ ನಡುವೆ ಯಾವಾಗಲೂ ಕದನಗಳಾಗುತ್ತಿದ್ದವು. ಆಗ ಅದನ್ನು ಆಕ್ರಮಿಸಿದ್ದ ಬಿಜಾಪುರದ ಇಸ್ಮಾಯಿಲ್ ಆದಿಲ್‌ಷಾನನ್ನು ಸೋಲಿಸಿ ರಾಯಚೂರನ್ನು ವಿಜಯನಗರದ ಪರಿಧಿಯಲ್ಲಿ ಸೇರಿಸಿಕೊಂಡ. ಮುಂದೆ ಸಂಧಾನಕ್ಕೆಂದು ಮುದ್ಗಲ್ಲಿಗೆ ಬರಲು ಒಪ್ಪಿದ್ದ ಬಿಜಾಪುರದ ಸುಲ್ತಾನ ಬಾರದಿದ್ದಾಗ ಇವನು ರೊಚ್ಚಿಗೆದ್ದು ಗಡಿ ದಾಟಿ ಬಿಜಾಪುರವನ್ನು ಹೊಕ್ಕ. ಸಾಗರದಲ್ಲಿ ಮತ್ತೆ ಎರಡೂ ಸೈನ್ಯಗಳು ತಾಕಲಾಡಿದವು (1523). ಸುಲ್ತಾನನ ಸೈನ್ಯಕ್ಕೆ ಖಚಿತವಾದ ಸೋಲಾಯಿತು. ಇವನು ಗುಲ್ಬರ್ಗದವರೆಗೂ ಸಾಗಿ ಅದನ್ನೂ ವಶಪಡಿಸಿಕೊಂಡ. ಅಲ್ಲಿ ಬಂಧಿತರಾಗಿದ್ದ ಬಹಮನೀ ರಾಜಕುಮಾರರನ್ನು ಬಿಡಿಸಿ ಹಿರಿಯರಿಗೆ ರಾಜ್ಯಾಧಿಕಾರ ಕೊಟ್ಟು ಮರಳಿದ. ಈ ಸಾಧನೆಯ ಕುರುಹಾಗಿ 'ಯವನರಾಜ್ಯಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನು ಧರಿಸಿದ.

ಇವನ ಪ್ರತಾಪದ ವ್ಯಾಪ್ತಿ ದಕ್ಷಿಣ ಭಾರತದಲ್ಲೆಲ್ಲ ಹಬ್ಬಿತ್ತು. ಅಲ್ಲದೆ ಸಿಂಹಳದ ಇವನು ವಿಜಯಬಾಹುವಿನ ವಿರುದ್ಧ ಸಂಚು ನಡೆದಾಗ ಈತ ಹಸ್ತಕ್ಷೇಪ ಮಾಡಿ ದಂಗೆಯನ್ನು ಹತ್ತಿಕ್ಕಿ ವಿಜಯಬಾಹುವಿನ ಮಗನಾದ ಭುವನೈಕಬಾಹುವನ್ನು ಸಿಂಹಾಸನದ ಮೇಲೆ ಕೂರಿಸುವ ವ್ಯವಸ್ಥೆ ಮಾಡಿದ.

ರಾಯನ ಆಳಿಕೆಯ ಕೊನೆಯ ವರ್ಷಗಳಲ್ಲಿ ಶಾಂತಿ ನೆಲಸಿತ್ತು. ಆಗ ತನ್ನ ಆರು ವರ್ಷದ ಮಗ ತಿರುಮಲನನ್ನು ಇವನು ಯುವರಾಜನನ್ನಾಗಿ ಮಾಡಿದ. ಆದರೆ ಅಲ್ಲಿಂದ ಒಂದು ವರ್ಷದೊಳಗೇ ಇವನ ಮಂತ್ರಿ ಸಾಳುವ ತಿಮ್ಮರಸನ ಮಗ ತಿಮ್ಮದಂಡನಾಯಕ ವಿಷಪ್ರಯೋಗ ಮಾಡಿದ್ದರಿಂದ ಈ ಬಾಲಕ ಮೃತನಾದ. ಇದರಿಂದ ರೊಚ್ಚಿಗೆದ್ದ ರಾಯ ತಂದೆ ಮಕ್ಕಳಿಬ್ಬರನ್ನೂ ಸೆರೆಗೆ ದೂಡಿದ. ತಿಮ್ಮ ಸೆರೆಯಿಂದ ತಪ್ಪಿಸಿಕೊಂಡು ಗುತ್ತಿಗೆ ಹೋಗಿ ದಂಗೆಯೆದ್ದ. ರಾಯ ಅವನನ್ನು ಸೋಲಿಸಿ, ತಂದೆ ಮಕ್ಕಳಿಬ್ಬರ ಕಣ್ಣು ಕಿತ್ತು ಮತ್ತೆ ಸೆರೆಗೆ ಅಟ್ಟಿದ ಎಂದು ನೂನಿಜ್ ತಿಳಿಸುತ್ತಾನೆ. ಆದರೆ ಇದರ ಸತ್ಯಾಂಶ ಸ್ಪಷ್ಟವಿಲ್ಲ.

ಕೃಷ್ಣದೇವರಾಯನಿಗೆ ಚಿನ್ನಾದೇವಿ, ತಿರುಮಲಾದೇವಿ ಎಂಬ ಇಬ್ಬರು ರಾಣಿಯರಿದ್ದರು. ಇಬ್ಬರು ಗಂಡುಮಕ್ಕಳು. ಒಬ್ಬ ತಿರುಮಲ ಕೃಷ್ಣದೇವರಾಯ ಸಾಯುವಾಗ ಹದಿನೆಂಟು ತಿಂಗಳಿನ ಕೂಸಾಗಿದ್ದವನು ಇನ್ನೊಬ್ಬ. ರಾಯನಿಗೆ ಇಬ್ಬರು ಹೆಣ್ಣು ಮಕ್ಕಳೂ ಇದ್ದರು. ಅವರಲ್ಲಿ ಹಿರಿಯಳಾದ ತಿರುಮಲಾಂಬೆಯ ಗಂಡನೇ ಅರವೀಡು ಮನೆತನದ ಅಳಿಯ ರಾಮರಾಯ. ಇವಳ ತಂಗಿ ವೇಂಗಳಾಂಬಾ, ರಾಮರಾಯನ ತಮ್ಮ ತಿರುಮಲನನ್ನು ಮದುವೆಯಾಗಿದ್ದಳು.

ಚಿನ್ನಾದೇವಿ, ಕೃಷ್ಣದೇವರಾಯ, ತಿರುಮಲಾದೇವಿ - ತಿರುಮಲೆ ದೇವಾಲಯದಲ್ಲಿರುವ ಕಂಚಿನ ಪ್ರತಿಮೆಗಳು

ಇವನು ಕವಿಪೋಷಕನೂ ಸ್ವತಃ ಕವಿಯೂ ಆಗಿದ್ದ. ಜಾಂಬವತೀ ಕಲ್ಯಾಣ ಎಂಬ ನಾಟಕ ಮತ್ತು ಇತರ ಸಂಸ್ಕೃತ ಗ್ರಂಥಗಳನ್ನೂ ಆಮುಕ್ತಮಾಲ್ಯದಾ ಎಂಬ ತೆಲುಗು ಕಾವ್ಯವನ್ನೂ ಬರೆದಿರುವನೆಂದು ಪ್ರತೀತಿ. ಇವನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆನ್ನಿಸಿಕೊಂಡ ವಿವಿಧ ಭಾಷಾವಿದ್ವಾಂಸರಿದ್ದರು. ಅವರಲ್ಲಿ ಮಹಾಕವಿ ಅಲ್ಲಸಾನಿಪೆದ್ದನ ತೆಲುಗು ವಿದ್ವಾಂಸರಲ್ಲಿ ಮುಖ್ಯನಾದವನು. ಕುಮಾರವ್ಯಾಸ ಭಾರತವನ್ನು ಪೂರ್ತಿಮಾಡಿದ. (8 ಪರ್ವಗಳು) ತಿಮ್ಮಣ್ಣ ಕವಿ ಕನ್ನಡ ವಿದ್ವಾಂಸರಲ್ಲಿ ಮುಖ್ಯನಾದವನು. ಕರ್ನಾಟ ಕೃಷ್ಣರಾಯ ಭಾರತ ಕಥಾಮಂಜರಿ ಎಂದೇ ಈ ಗ್ರಂಥವನ್ನು ಕೃಷ್ಣದೇವರಾಯನಿಗೆ ಅರ್ಪಿಸಲಾಗಿದೆ.

ಮಧ್ವ ಸಂಪ್ರದಾಯದ ಪ್ರಸಿದ್ಧ ಯತಿಗಳಾದ ವ್ಯಾಸರಾಯರು ರಾಜಗುರುಗಳಾಗಿದ್ದು ವಿಜಯನಗರದಲ್ಲಿ ವಿಶ್ವವಿದ್ಯಾಲಯವನ್ನು ನಡೆಸಿದರು. ದಾಸಶ್ರೇಷ್ಠರಾದ ಪುರಂದರದಾಸರು ದಾಸಸಾಹಿತ್ಯದ ನಿರ್ಮಾಣ ಮತ್ತು ಪ್ರಚಾರಕಾರ್ಯವನ್ನು ಈತನ ಕಾಲದಲ್ಲಿ ಮಾಡಿದರು. ಕನಕದಾಸರೂ ಈ ಕಾಲದ ಶ್ರೇಷ್ಠ ಕೀರ್ತನಕಾರರು.

ಇವನು ಅನೇಕ ಊರು, ಅಣೆಕಟ್ಟು, ನಾಲೆ, ಕೆರೆ, ದೇವಾಲಯ ಮತ್ತು ಇತರ ಕಟ್ಟಡಗಳನ್ನು ಕಟ್ಟಿಸಿದ. ನಾಗಲಾಪುರವೆಂಬ ಹೆಸರಿನಲ್ಲಿ ವಿಜಯನಗರದ ಒಂದು ವಿಸ್ತರಣೆಯನ್ನು ರೂಪಿಸಿದ. ತನ್ನ ಪಟ್ಟಾಭಿಷೇಕ ಸಂದರ್ಭದಲ್ಲಿ ವಿರೂಪಾಕ್ಷ ದೇವಾಲಯದಲ್ಲಿ ಒಂದು ಬೃಹತ್ ಮಂಟಪವನ್ನು ರಚಿಸಿದ. ಹಂಪೆಯ ಹಜಾರರಾಮ ಮತ್ತು ವಿಠ್ಠಲ ದೇವಾಲಯಗಳು ಈತನೇ ಕಟ್ಟಿಸಿದವುಗಳಿರಬಹುದು. ತನ್ನ ಉದಯಗಿರಿ ವಿಜಯದಲ್ಲಿ ಅಲ್ಲಿಂದ ತಂದ ಕೃಷ್ಣವಿಗ್ರಹವನ್ನು ಸ್ಥಾಪಿಸಲು ಹಂಪೆಯ ಕೃಷ್ಣಸ್ವಾಮಿ ದೇವಾಲಯವನ್ನು ಕಟ್ಟಿಸಿದ. ವಿಜಯನಗರದಲ್ಲಿ ಅನೇಕ ಲೋಕೋಪಯೋಗಿ ಕಟ್ಟಡಗಳನ್ನು ಕಟ್ಟಿಸಿದ್ದಲ್ಲದೆ,ಇತರ ಹಲವೆಡೆಗಳ ದೇವಾಲಯಗಳಲ್ಲಿ ರಾಯಗೋಪುರಗಳನ್ನೂ ಮಂಟಪಗಳನ್ನೂ ಕಟ್ಟಲು ಕಾರಣನಾದ.

ಪೋರ್ಚುಗೀಸ್ ಪ್ರವಾಸಿಗಳು ಕಂಡ ಆಗಿನ ವಿಜಯನಗರದ ವೈಭವದ ವರ್ಣನೆಯನ್ನು ನೀಡಿದ್ದಾರೆ. ಇವನು ಆಗಿನ ಭಾರತದಲ್ಲಿಯೇ ಏಕೆ, ಪ್ರಪಂಚದಲ್ಲೇ ಅತ್ಯಂತ ಶೂರ ಸಮರ್ಥ ಶ್ರೀಮಂತ ಮುತ್ಸದ್ದಿ, ಸಾಹಿತ್ಯ ಸಂಸ್ಕೃತಿಪ್ರಿಯ, ಸಾಮ್ರಾಟರಲ್ಲಿ ಅಗ್ರಗಣ್ಯ. ಕನ್ನಡ ರಾಜ್ಯರಮಾರಮಣ, ಆಂಧ್ರಭೋಜ, ಚತುಸ್ಸಮುಯ ಸಮುದ್ಧರಣರಾಯ, ಯವನರಾಜ್ಯಪ್ರತಿಷ್ಠಾಪನಾಚಾರ್ಯ ಮುಂತಾದ ಬಿರುದುಗಳಲ್ಲಿ ಕೃಷ್ಣದೇವರಾಯನ ಬಹುಮುಖ ವ್ಯಕ್ತಿತ್ವದ ಚಿತ್ರ ಸಿಗುತ್ತದೆ. ಹಿಂದು ಧರ್ಮದ ರಕ್ಷಣೆಯೇ ಮುಖ್ಯವಾಗಿದ್ದ ಆ ಕಾಲದಲ್ಲಿ ಕೃಷ್ಣದೇವರಾಯ ಈ ಕೆಲಸವನ್ನು ಎಷ್ಟು ಸಮರ್ಥವಾಗಿ ನಿರ್ವಹಿಸಿದನೆಂದರೆ ಧರ್ಮ ನಾಲ್ಕೂ ಕಾಲುಗಳನ್ನು ಭದ್ರವಾಗಿ ಊರಿ ಗುಟುರು ಹಾಕುವ ಸಶಕ್ತ ಹೋರಿಯಂತೆ ಇದೆ ಎನ್ನುತ್ತಾನೆ ಆಗಿನ ಒಬ್ಬ ಕವಿ ಸೋಮನಾಥ. ಕೃಷ್ಣದೇವರಾಯ ತನ್ನ 42ನೆಯ ವಯಸ್ಸಿನಲ್ಲಿ 1529ರಲ್ಲಿ ನಿಧನ ಹೊಂದಿದ. (ಜೆ.ಆರ್.ಪಿ.)

**ಕೃಷ್ಣಪ್ಪ, ಬಿ. :** -1955. ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರಥಮ ಕನ್ನಡ ಪ್ರಾಧ್ಯಾಪಕರೂ ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ

ಗೌರವ ಕಾರ್ಯದರ್ಶಿಗಳೂ ಆಗಿದ್ದು, ಕನ್ನಡ ನುಡಿ ಸೇವೆಯಲ್ಲಿ ನಿರತರಾಗಿದ್ದ ವಿದ್ವಾಂಸರು, ಮೈಸೂರಿನವರು. 1907ರಲ್ಲಿ ಬಿ.ಎ. ಪದವೀಧರರಾಗಿ ಹಳೆ ಮೈಸೂರು ಸಂಸ್ಥಾನದ ಅನೇಕ ಕಡೆಗಳಲ್ಲಿ ಏಳೆಂಟು ವರ್ಷ ಗಳ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿ, 1915ರಲ್ಲಿ ಮೈಸೂರಿಗೆ ಬಂದರು. ಅಲ್ಲಿ ಕುರುಡ-ಮೂಗರ ಶಾಲೆಯ ಮುಖ್ಯೋಪಾಧ್ಯಾಯರಾದರು. ಮುಂದೆ ಕನ್ನಡ ಭಾಷೆ ಸಾಹಿತ್ಯಗಳಲ್ಲಿ ಎಂ.ಎ. ಪದವಿ ಪಡೆದು ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿ ಕೆಲಸ ಮಾಡಿದರು. ಅನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು.

ಬಿ.ಕೃಷ್ಣಪ್ಪನವರು ವಿದ್ಯಾದಾಯಿನಿ ಮಾಸಪತ್ರಿಕೆ ಮತ್ತು ಕರ್ಣಾಟಕ ಗ್ರಂಥಮಾಲೆ ಪತ್ರಿಕೆಗಳಿಗೆ ಕೆಲಕಾಲ ಸಂಪಾದಕರಾಗಿದ್ದರಲ್ಲದೆ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಉಪಾಧ್ಯಕ್ಷರೂ ಆಗಿದ್ದರು (1919-26).

ಟಿ.ಶ್ರೀನಿವಾಸ ರಾಘವಾಚಾರ್ಯರೊಡನೆ ಕೃಷ್ಣಪ್ಪನವರು ಕನ್ನಡ ಕೈಪಿಡಿಯ ಮೊದಲ ಸಂಪುಟದ ಮೊದಲನೆಯ ಭಾಗವಾದ ಹಳಗನ್ನಡ ವ್ಯಾಕರಣವನ್ನು ಬರೆದಿದ್ದಾರೆ. ಅಭಿಜ್ಞಾನ ಶಾಕುಂತಲ ನಾಟಕದ ಗದ್ಯಾನುವಾದವನ್ನೂ ವಿಮರ್ಶೆಯನ್ನೂ ಕನಕೋರ್ಣಾರ್ಜುನ ಎಂಬ, ವನಸ್ಪತಿ ಶಾಸ್ತ್ರಕ್ಕೆ ಸಂಬಂಧಿಸಿದ, ಗ್ರಂಥವನ್ನೂ ಟ್ರೋಜನ್ ದಂಡಯಾತ್ರೆ, ಯವನವೀರ ಕಥಾವಳಿ ಮೊದಲಾದ ಕಥಾಸಾಹಿತ್ಯ ಕೃತಿಗಳನ್ನೂ ಇವರು ರಚಿಸಿದ್ದಾರೆ. (ಜಿ.ಸಿ.ಎ.)

**ಕೃಷ್ಣಮೂರ್ತಿ, ಕೆ. :** 1923-97. ಸಂಸ್ಕೃತ ಭಾಷೆ ಮತ್ತು ಸಾಹಿತ್ಯಗಳ ಕ್ಷೇತ್ರಗಳಲ್ಲಿ ಚಿರಸ್ಮರಣೀಯವಾದ ಕೆಲಸಗಳನ್ನು ಮಾಡಿ ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದ ಕರ್ನಾಟಕದ ವಿರಳ ವಿದ್ವಾಂಸರಲ್ಲಿ ಒಬ್ಬರು. ಹಾಸನ ಜಿಲ್ಲೆ ಕೇರಳಾಪುರದಲ್ಲಿ 1923 ಜುಲೈ 30ರಂದು ಜನಿಸಿದರು. ತಂದೆ ಎನ್.ವೆಂಕಟೇಶಯ್ಯ, ತಾಯಿ



ಗೌರಮ್ಮ. ತಂದೆಯವರು ಸಂಸ್ಕೃತ ಪಂಡಿತರು. ಇವರು ತಂದೆಯಿಂದ ಪ್ರಭಾವಿತರಾದರು. ಇವರ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಅರಕಲಗೂಡಿನಲ್ಲಿಯೂ ಪ್ರೌಢಶಾಲೆಯ ಮತ್ತು ಕಾಲೇಜಿನ ವಿದ್ಯಾಭ್ಯಾಸ ಮೈಸೂರಿನಲ್ಲೂ ಜರುಗಿದವು (1943). ಮೈಸೂರು ವಿಶ್ವವಿದ್ಯಾನಿಲಯದಿಂದ ಉನ್ನತಶ್ರೇಣಿಯಲ್ಲಿ ಚಿನ್ನದ ಪದಕದೊಂದಿಗೆ ಸಂಸ್ಕೃತ ಎಂ.ಎ.ಪದವಿ ಪಡೆದರು. ಮುಂಬೈ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ದೊರಕಿತು (1947). ಇವರು ಬಿ.ಟಿ. ಮತ್ತು ಕನ್ನಡ ಪಂಡಿತ ಪರೀಕ್ಷೆಗಳಲ್ಲೂ ಉತ್ತೀರ್ಣರಾಗಿದ್ದರು. ಬೋಧನಾ ವೃತ್ತಿಯನ್ನು ಸ್ವೀಕರಿಸಿದ ಇವರು ಆರಂಭದ ಹದಿನೈದು ವರ್ಷ (1944-58) ಬಾಗಲಕೋಟೆ, ಮೈಸೂರು ಮತ್ತು ಕುಮಟ ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಬಳಿಕ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಸ್ಕೃತ ವಿಭಾಗದ ಮುಖ್ಯಸ್ಥರಾದರು (1959). ಅಲ್ಲಿಂದ ನಿವೃತ್ತಿ ಹೊಂದಿದ ಮೇಲೆ (1983) ಪ್ರಶಾಂತನಿಲಯದ ಶ್ರೀಸತ್ಯಸಾಯಿ ವಿಶ್ವವಿದ್ಯಾಲಯದಲ್ಲಿ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ತರುವಾಯ ಮೈಸೂರಿನಲ್ಲಿ ನೆಲಸಿದರು.

ಪ್ರತಿಭೆ, ವ್ಯುತ್ಪತ್ತಿ ಮತ್ತು ವ್ಯಾಸಂಗಗಳ ತ್ರಿವೇಣಿ ಸಂಗಮವಾಗಿದ್ದ ಇವರು ಮಹಾನ್ ವಿದ್ವಾಂಸರಾಗಿದ್ದರು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇವರು 80ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ವಾದಿರಾಜನ ಯಶೋಧರಚರಿತ, ಸಾಯಣನ ಸುಭಾಷಿತ, ಸುಧಾನಿಧಿ, ಆನಂದವರ್ಧನನ ಧ್ವನ್ಯಾಲೋಕ, ಕುಂತಕನ ವಕ್ರೋಕ್ತಿ ಜೀವಿತ, ಅಭಿನವಭಾರತಿಯ ಟೀಕೆಯೊಂದಿಗೆ ಭರತನ ನಾಟ್ಯಶಾಸ್ತ್ರ, ಕವಿರಾಜಮಾರ್ಗ - ಇವು ಇವರ ಸವಿಮರ್ಶ ಗ್ರಂಥ ಸಂಪಾದನ ಕೃತಿಗಳು, ಬುದ್ಧಚರಿತ, ನಾಗಾನಂದ, ರತ್ನಾವಳಿ, ಮಾಲವಿಕಾಗ್ನಿಮಿತ್ರ, ಉತ್ತರರಾಮಚರಿತ - ಇವು ಇವರು ಪ್ರಕಟಿಸಿದ ಇತರ ಸಂಸ್ಕೃತ ಕೃತಿಗಳು. ಕನ್ನಡ ಪ್ರತಿಮಾ ನಾಟಕ, ಕನ್ನಡ ಕಿರಾತಾರ್ಜುನೀಯ, ಕನ್ನಡ ಮೃಚ್ಛಕಟಿಕ, ಕನ್ನಡ ಉತ್ತರರಾಮಚರಿತ, ಕನ್ನಡ ಯಜ್ಞಫಲ, ಮತ್ತು ಭಾಸನ ಆರು ನಾಟಕಗಳು - ಇವು ಇವರ ಕೆಲವು ಕನ್ನಡ ಅನುವಾದಗಳು. ಕನ್ನಡ ಕಾವ್ಯಾಲಂಕಾರ ಕನ್ನಡ ಕಾವ್ಯಪ್ರಕಾಶ, ಕನ್ನಡ ಧ್ವನ್ಯಾಲೋಕಲೋಚನ ಮತ್ತು ಲೋಚನಸಾರ, ವಾಮನನ ಕಾವ್ಯಾಲಂಕಾರ ಸೂತ್ರವೃತ್ತಿ, ಕನ್ನಡ

ಕಾವ್ಯಮೀಮಾಂಸೆ ಮತ್ತು ಔಚಿತ್ಯ ವಿಚಾರ ಚರ್ಚೆ ಇವು ಕಾವ್ಯಮೀಮಾಂಸೆಯ ಗ್ರಂಥಾನುವಾದಗಳು. ಆನಂದವರ್ಧನನ ಕಾವ್ಯಮೀಮಾಂಸೆ, ಕನ್ನಡದಲ್ಲಿ ಕಾವ್ಯತತ್ತ್ವ, ರಸೋಲ್ಲಾಸ, ಸೃಜನಶೀಲತೆ ಮತ್ತು ಪಾಂಡಿತ್ಯ, ಸಮ್ ಥಾಟ್ಸ್ ಆನ್ ಇಂಡಿಯನ್ ಏಸ್ತೆಟಿಕ್ಸ್ ಅಂಡ್ ಲಿಟರರಿ ಕ್ರಿಟಿಸಿಸಂ, ದಿ ಧ್ವನ್ಯಾಲೋಕ ಅಂಡ್ ಇಟ್ಸ್ ಕ್ರಿಟಿಕ್ಸ್, ಭಾರತೀಯ ಕಾವ್ಯಮೀಮಾಂಸೆ ತತ್ತ್ವ ಮತ್ತು ಪ್ರಯೋಗ, ಎಸ್ಸೇಸ್ ಇನ್ ಸಂಸ್ಕೃತ್ ಕ್ರಿಟಿಸಿಸಂ, ನ್ಯೂ ಬೇರಿಂಗ್ಸ್ ಆಫ್ ಲಿಟರರಿ ಥಿಯರಿ ಅಂಡ್ ಕ್ರಿಟಿಸಿಸಂ ಇವರ ಕಾವ್ಯತತ್ತ್ವ ವಿಮರ್ಶನ ಪುಸ್ತಕಗಳು. ಇವುಗಳಲ್ಲದೆ ಭವಭೂತಿ, ಕಾಳಿದಾಸ, ಪಾಣಿನಿ, ಬಾಣ ಮತ್ತು ಭಾಸನ ಮೇಲೆ ಪರಿಚಯಾತ್ಮಕ ಹೊತ್ತಗೆಗಳನ್ನೂ ರಚಿಸಿದ್ದಾರೆ. ಹಿಂದೂಸ್ಥಾನ್ ಕ್ವಾರ್ಟರ್ಲಿ, ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ, ಅನಾಲ್ಸ್ ಆಫ್ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಪೂನಾ ಓರಿಯಂಟಲಿಸ್ಟ್, ಆರ್ಯನ್‌ಪಾತ್ ಮುಂತಾದ ವಿದ್ವತ್ಪತ್ರಿಕೆಗಳಲ್ಲಿ 300 ಸಂಪ್ರಬಂಧಗಳನ್ನು ಇವರು ಪ್ರಕಟಿಸಿದ್ದಾರೆ. ಕನ್ನಡದಲ್ಲಿ 16ಕ್ಕೂ ಹೆಚ್ಚು ಗ್ರಂಥ, 20ಕ್ಕೂ ಹೆಚ್ಚು ಅನುವಾದ, 60ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಾಶಿಸಿದ್ದಾರೆ. ವಿವಿಧ ಪತ್ರಿಕೆಗಳಲ್ಲಿ 500ಕ್ಕೂ ಹೆಚ್ಚು ಪುಸ್ತಕಗಳನ್ನು ವಿಮರ್ಶಿಸಿದ್ದಾರೆ.

ಇವರು ಪಿ.ವಿ.ಕಾಣೆ, ಎಸ್.ಕೆ.ಡೇ, ವಿ.ರಾಘವನ್ ಅವರ ಸಾಲಿನ ವಿದ್ವಾಂಸರು. ಆರ್.ಶಾಮಶಾಸ್ತ್ರಿ ಮತ್ತು ಎಂ.ಹಿರಿಯಣ್ಣ ನವರ ಅನಂತರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಕೀರ್ತಿಯನ್ನು ಎತ್ತಿಹಿಡಿದವರು. ಕನ್ನಡಕ್ಕೆ ಇವರ ಕೊಡುಗೆ ತುಂಬ ದೊಡ್ಡದು. ಇವರು ಕನ್ನಡಿಸದ ಮುಖ್ಯ ಸಂಸ್ಕೃತ ಅಲಂಕಾರ ಗ್ರಂಥ'ವೇ ಇಲ್ಲವೆನ್ನಬಹುದು. ಶಾಸ್ತ್ರಗ್ರಂಥಗಳನ್ನು ಅನುವಾದಿಸಿರುವುದೂ ಜೊತೆಗೆ ಪದ್ಯವನ್ನು ಪದ್ಯವಾಗಿ ಅನುವಾದಿಸಿರುವುದೂ ಇವರ ಭಾಷಾಂತರದ ವಿಶೇಷತೆ ಎನ್ನಬೇಕು. ತದೇಕಚಿತ್ತದ ಇವರ ದುಡಿಮೆಯಲ್ಲಿ ಹಳತೂ ಹೊಸತೂ ಪೂರ್ವ ಪಶ್ಚಿಮಗಳೂ ಸಂಗಮಿಸಿವೆ. ಇವರ ಅನನ್ಯವಾದ ವಿದ್ವತ್ತಿನಲ್ಲಿ ಆಳ-ಅಗಲಗಳಿರುವಂತೆ, ಒಳನೋಟ-ಖಚಿತತೆಗಳಿವೆ.

ಇವರ ಪಾಂಡಿತ್ಯಕ್ಕಾಗಿ, ಸಂಸ್ಕೃತ ಕನ್ನಡ ಸಾಹಿತ್ಯಗಳಿಗೆ ಇವರು ಸಲ್ಲಿಸಿದ ಸೇವೆಗಾಗಿ ಇವರಿಗೆ ಅನೇಕ ಪ್ರಶಸ್ತಿಗಳೂ ಬಹುಮಾನಗಳೂ ಸಂದಿವೆ. ಕೇರಳ ವಿಶ್ವವಿದ್ಯಾಲಯದ ಸೇತು ಪಾರ್ವತಿ ಪುರಸ್ಕಾರ (1964), ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ (1970, 1980), ಮೈಸೂರು ಸರ್ಕಾರದ ಸಾಹಿತ್ಯ ಬಹುಮಾನ (1972), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1973), ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಗೌರವ (1977), ಭಾರತ ಸರ್ಕಾರದ ರಾಷ್ಟ್ರಪತಿಗಳ ಸರ್ಟಿಫಿಕೇಟ್ ಆಫ್ ಆನರ್ (1978), ಮುಂಬಯಿಯ ಕಾಣೆ ಚಿನ್ನದ ಪದಕ (1980), ಉತ್ತರ ಪ್ರದೇಶದ ಸಂಸ್ಕೃತ ಅಕಾಡೆಮಿ ಪ್ರಶಸ್ತಿ (1985), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1990) ಇವು ಉಲ್ಲೇಖಿಸಬಹುದಾದವು. ಇಂಗ್ಲಿಷಿನಲ್ಲಿ ಆನಂದಭಾರತಿ, ಕನ್ನಡದಲ್ಲಿ ಅಭಿಜ್ಞಾನ ಎಂಬ ಅಭಿನಂದನ ಗ್ರಂಥಗಳನ್ನು ಇವರ ಶಿಷ್ಯರೂ ಸ್ನೇಹಿತರೂ ಅಭಿಮಾನಿಗಳೂ ಇವರಿಗೆ ಅರ್ಪಿಸಿದ್ದಾರೆ (1995). ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು, ಸಮಿತಿ, ಗೋಕಾಕ್ ವರದಿ ಸಮಿತಿ, ಡಿಕ್ಷನರಿ ಆಫ್ ಅಲಂಕಾರಶಾಸ್ತ್ರ ಸಮಿತಿ, ಭಾರತೀಯ ಜ್ಞಾನಪೀಠದ ಸಂಸ್ಕೃತ ಆಯ್ಕೆ ಸಮಿತಿಗಳಲ್ಲಿ ಇವರು ಸದಸ್ಯರಾಗಿದ್ದರು. ಲಂಡನ್ನಿನ ಭಾರತೀಯ ವಿದ್ಯಾಭವನದ ಶಾಖೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಇವರು ಕೆಲಕಾಲ ಕೆಲಸ ಮಾಡಿದ್ದರು (1990). ಇವರು 1997 ಜುಲೈ 19ರಂದು ನಿಧನಹೊಂದಿದರು.

(ಎನ್.ಎಸ್.ಟಿ.)

**ಕೃಷ್ಣಮೂರ್ತಿ,ಪಿ.ಎನ್.** : 1849-1911. ಮೈಸೂರು ಸಂಸ್ಥಾನದ ದಿವಾನರು (1901-06). ಪೂರ್ಣಯ್ಯ ನರಸಿಂಗರಾವ್ ಕೃಷ್ಣಮೂರ್ತಿ ಇವರ ಪೂರ್ಣನಾಮ. ಇವರು ದಿವಾನ್ ಪೂರ್ಣಯ್ಯನವರ ಸಂತತಿಯವರು. ಅವರಿಂದ ನಾಲ್ಕನೆಯ ತಲೆಮಾರಿನವರಾದ ಇವರು 1849ರ ಆಗಸ್ಟ್ 12ರಂದು ಜನಿಸಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಮದರಾಸು ವಿಶ್ವವಿದ್ಯಾಲಯದಿಂದ ನ್ಯಾಯಶಾಸ್ತ್ರದಲ್ಲಿ ಪದವಿ ಪಡೆದು, ಅನಂತರ ಮೈಸೂರಿನಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಸರ್ಕಾರದ ಸೇವೆಗೆ ಸೇರಿದರು (1870). ಕ್ರಮ ಕ್ರಮವಾಗಿ ಮೇಲೇರುತ್ತ ಮುಖ್ಯ ನ್ಯಾಯಾಧೀಶರಾಗಿಯೂ ಕೌನ್ಸಿಲ್ ಆಫ್ ರೀಜೆನ್ಸಿಯ ಸದಸ್ಯರಾಗಿಯೂ ಇದ್ದರು. ಸರ್.ಕೆ.ಶೇಷಾದ್ರಿ ಅಯ್ಯರ್ ಅವರು ದಿವಾನ್ ಪದವಿಯಿಂದ ನಿವೃತ್ತರಾಗಲು 1901ರಲ್ಲಿ ಕೃಷ್ಣಮೂರ್ತಿಯವರು ಆ ಪದವಿಗೆ ನೇಮಿಸಲ್ಪಟ್ಟರು. 1902ರಲ್ಲಿ ರೀಜೆನ್ಸಿ ಕೊನೆಗೊಂಡು ನಾಲ್ವಡಿ ಕೃಷ್ಣರಾಜ ಒಡೆಯರು ಸ್ವತಃ ರಾಜ್ಯಭಾರ ವಹಿಸಿಕೊಂಡಾಗ ಇವರು ಅವರ ಮೊದಲನೆಯ ದಿವಾನರಾದರು.

ಇವರ ದಿವಾನ್‌ಗಿರಿಯಲ್ಲಿ ಗ್ರಾಮಾಭಿವೃದ್ಧಿ, ವಿದ್ಯಾಭ್ಯಾಸ, ನೀರಾವರಿ ಕಾಮಗಾರಿಗಳು ಅಭಿವೃದ್ಧಿಗೊಂಡವು. ಇವರು ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಕ್ರಮಪಡಿಸಿ ಆ ಶಾಖೆಗೆ ಕಂಟ್ರೋಲರ್ ಎಂಬ ಅಧಿಕಾರಿಯನ್ನು ನೇಮಕ ಮಾಡಿದರು. ನೇಯ್ಗೆ, ರೇಷ್ಮೆ ವ್ಯವಸಾಯ, ಮರದ ಕೆಲಸ ಮುಂತಾದ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ನೂತನ ವಿಧಾನಗಳನ್ನೊಳಗೊಂಡ ತರಬೇತಿನೀಡಲು ಚನ್ನಪಟ್ಟಣವೇ ಮೊದಲಾದ ಹಲವೆಡೆಗಳಲ್ಲಿ ವೃತ್ತಿ ಶಿಕ್ಷಣ ಶಾಲೆಗಳನ್ನೇರ್ಪಡಿಸುವ ವ್ಯವಸ್ಥೆ ಮಾಡಿದರು. ಲಂಬಾಣಿಗಳೇ ಮುಂತಾದ ಹಿಂದುಳಿದ ವರ್ಗಗಳಿಗೆ ಶಾಲೆಗಳನ್ನು ಏರ್ಪಡಿಸಿದರು. 1902-3ರಲ್ಲಿ ಅಲಿಘರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಲು

ಎರಡು ವಿದ್ಯಾರ್ಥಿ ವೇತನಗಳನ್ನು ಕೊಟ್ಟರು. ಮೈಸೂರು ಮಹಾರಾಣಿ ಶಾಲೆಯನ್ನು ಕಾಲೇಜನ್ನಾಗಿ ಮಾಡಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟರು. ಅಲ್ಲದೆ ವಿಧವೆಯರ ವಿದ್ಯಾಭ್ಯಾಸಕ್ಕೆ ಮೂವತ್ತು ವಿದ್ಯಾರ್ಥಿವೇತನಗಳನ್ನು ಒದಗಿಸಿದರು. ಇವರು ಬೆಂಗಳೂರಿನಲ್ಲಿ ಟಾಟಾ ವಿಜ್ಞಾನಮಂದಿರದ ಸ್ಥಾಪನೆಗೆ ನೆರವಾಗಿ, ಪ್ರತಿವರ್ಷವೂ ಮೈಸೂರು ಸರ್ಕಾರ 50ಸಾವಿರ ರೂಪಾಯಿ ಧನಸಹಾಯವನ್ನು ಕೊಡುವಂತೆ ಏರ್ಪಾಡು ಮಾಡಿದರು. 1903ರಲ್ಲಿ 8 ಜಿಲ್ಲಾ ಬೋರ್ಡುಗಳು ಮತ್ತು 77 ತಾಲ್ಲೂಕು ಬೋರ್ಡುಗಳು ಮತ್ತು 38 ಯೂನಿಯನ್ನುಗಳನ್ನು ಸ್ಥಾಪಿಸಿ ಸ್ಥಳೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸಿದರು.

ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ನೀರು ಸರಬರಾಜು ವ್ಯವಸ್ಥೆ, ಮೈಸೂರು ಅರಮನೆಯ ಪುನರ್ನಿರ್ಮಾಣ, ಕಾವೇರಿ ವಿದ್ಯುತ್ ಯೋಜನೆಯ ಮೊದಲ ಹಂತದ ಪೂರೈಕೆ ಮತ್ತು ಎರಡನೆಯ ಹಂತದ ಆರಂಭ ಇವರ ಕಾಲದಲ್ಲಾದವು. ಬೆಂಗಳೂರು ನಗರಕ್ಕೆ ವಿದ್ಯುತ್ ಸರಬರಾಜನ್ನು ಒದಗಿಸಿ ಅದು ಇಡೀ ಭಾರತದಲ್ಲೇ ವಿದ್ಯುದೀಕರಣವಾದ ಮೊದಲ ನಗರವೆಂಬ ಹೆಮ್ಮೆ ಗಳಿಸಲೂ ಕೃಷ್ಣಮೂರ್ತಿಯವರು ಕಾರಣರಾದರು. ಇವರು 1906ರ ಮಾರ್ಚ್ 30ರಂದು ದಿವಾನ್ ಪದವಿಯಿಂದ ನಿವೃತ್ತರಾದರು. 1911ರಲ್ಲಿ ನಿಧನಹೊಂದಿದರು.

ಇವರ ಬಹುಮುಖ ಸೇವೆಗಾಗಿ ಬ್ರಿಟಿಷ್ ಸರ್ಕಾರ ಇವರಿಗೆ ಸಿ.ಐ.ಇ. (1897) ಮತ್ತು ಕೆ.ಸಿ.ಐ.ಇ. (1903) ಪ್ರಶಸ್ತಿಗಳನ್ನು ನೀಡಿತ್ತು.

(ಎ.ವಿ.ಎ.)

**ಕೃಷ್ಣಮೂರ್ತಿರಾವ್, ಎಸ್.ವಿ. :** 1902-68. ರಾಜಕಾರಣಿ ಮತ್ತು ಲೇಖಕರು. ಸಂತೆಬೆನ್ನೂರು ವಾದಿರಾಯಾಚಾರ್ ಕೃಷ್ಣಮೂರ್ತಿರಾವ್ ಇವರ ಪೂರ್ಣ ಹೆಸರು. ಶಿವಮೊಗ್ಗ ಜಿಲ್ಲೆಯ ನಲ್ಲೂರಿನಲ್ಲಿ 1902 ನವೆಂಬರ್ 15ರಂದು ಜನಿಸಿದರು. ಶಿವಮೊಗ್ಗ, ತುಮಕೂರುಗಳಲ್ಲಿ ವಿದ್ಯಾಭ್ಯಾಸ ಮಾಡಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್‌ಸಿ. ಪದವಿಯನ್ನೂ ಪುಣೆಯ ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ. ಪದವಿಯನ್ನೂ ಗಳಿಸಿ 1927ರಲ್ಲಿ ವಕೀಲಿ ವೃತ್ತಿ ಕೈಗೊಂಡು ಶಿವಮೊಗ್ಗದಲ್ಲಿ ನೆಲೆಸಿದರು.

ಕೃಷ್ಣಮೂರ್ತಿರಾಯರು ಕಾಂಗ್ರೆಸ್ಸಿನ ಸದಸ್ಯರಾಗಿ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ಶಿಕ್ಷೆ ಅನುಭವಿಸಿದರು. 1945ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. 1947ರಲ್ಲಿ ವಿಧಾನಸಭೆಯ ಸದಸ್ಯರಾಗಿಯೂ 1947-52ರವರೆಗೆ ಭಾರತ ಸಂವಿಧಾನ ಸಭೆಯ ಸದಸ್ಯರಾಗಿಯೂ ತಾತ್ಕಾಲಿಕ ಲೋಕಸಭೆಯ ಸದಸ್ಯರಾಗಿಯೂ ಇದ್ದು 1952-62ರ ಅವಧಿಯಲ್ಲಿ ರಾಜ್ಯಸಭೆಯ ಸದಸ್ಯರಾಗಿ, 1962-67 ರಲ್ಲಿ ಲೋಕಸಭೆಯ ಸದಸ್ಯರಾಗಿದ್ದರು. 1952-62 ರವರೆಗೆ ರಾಜ್ಯ ಸಭೆಯ ಅಧ್ಯಕ್ಷರಾಗಿ ಮತ್ತು 1962-67ರ ವರೆಗೆ ಲೋಕಸಭೆಯ ಉಪಾಧ್ಯಕ್ಷರಾಗಿ ಸೇವೆಸಲ್ಲಿಸಿದರು. ಇದರೊಂದಿಗೆ ಅನೇಕ ಸ್ಥಾಯಿ ಸಮಿತಿಗಳ ಅಧ್ಯಕ್ಷರಾಗಿ, ಸದಸ್ಯರಾಗಿ ಕಾರ್ಯನಿರ್ವಹಿಸಿದರು.

ಇವರು ಅನೇಕ ಸಂಸದೀಯ ನಿಯೋಗಗಳ ನೇತಾರರಾಗಿ ರಷ್ಯ, ಚೀನ, ಇಂಗ್ಲೆಂಡ್, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್ ಮುಂತಾದ ರಾಷ್ಟ್ರಗಳಿಗೆ ಭೇಟಿ ಕೊಟ್ಟಿದ್ದರು.

ಕೃಷ್ಣಮೂರ್ತಿರಾಯರು ಸ್ವಯಂ ಲೇಖಕರೂ ಭಾಷಾಭಿಮಾನಿಯೂ ಆಗಿದ್ದರು, ಶಿವಮೊಗ್ಗದ ಕರ್ನಾಟಕ ಸಂಘವನ್ನು ಕಟ್ಟಿ ಅದರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಈ ಸಂಘ ಕನ್ನಡದ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿತು. ಎ.ಆರ್.ಕೃಷ್ಣಶಾಸ್ತ್ರಿಗಳು ಪ್ರಬುದ್ಧ ಕರ್ನಾಟಕದಲ್ಲಿ ಹೇಳಿದಂತೆ ಕನ್ನಡಕ್ಕೆ ಒಂದು ಗುಡಿಯನ್ನು ಕಟ್ಟಿತು. ಇವರು ಸಾಹಿತ್ಯ ಪರಿಷತ್ತಿನ ಸದಸ್ಯರಾಗಿದ್ದರು. ದೆಹಲಿಯಲ್ಲಿ ಕನ್ನಡ ಸಂಘಕ್ಕೆ ನಿವೇಶನ ಒದಗಿಸಿಕೊಟ್ಟು ಸಂಸ್ಥೆ ಕಟ್ಟಿದರು. ಇವರು ಎಂ.ವಿಶ್ವೇಶ್ವರಯ್ಯನವರ 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯ' ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. 'ದಕ್ಷಿಣಆಫ್ರಿಕಾದಲ್ಲಿ ಸತ್ಯಾಗ್ರಹ', 'ಮಹಿಳೆಯರಿಗೆ' ಈ ಎರಡು ಗ್ರಂಥಗಳೂ ಗಾಂಧೀ ಸಾಹಿತ್ಯದ ಅನುವಾದಗಳು. ಜವಾಹರಲಾಲ ನೆಹರೂ ಅವರ 'ದಿ ಡಿಸ್ಕವರಿ ಆಫ್ ಇಂಡಿಯ'ವನ್ನು ಭಾರತ ದರ್ಶನ ಎಂದು ಅನುವಾದಿಸಿದ್ದಾರೆ. ದೆಹಲಿಯಿಂದ ತಮ್ಮ ಮಗಳಿಗೆ ಬರೆದ ಪತ್ರಗಳನ್ನು ದಿಲ್ಲಿಯ ಪತ್ರಗಳು ಎಂದು ಪ್ರಕಟಿಸಿದ್ದಾರೆ. ಇವರ ಸ್ವತಂತ್ರ ಕೃತಿ ಲೂಯಿಪಾಶ್ಚರ್ ಆಕರ್ಷಣೀಯವಾಗಿ ನಿರೂಪಿತವಾಗಿರುವ ಜೀವನ ಕಥೆ. ಆಂಟೊನಿನ ವ್ಯಾಲೆಂಟಿನ ಅವರು ಐನ್‌ಸ್ಟೀನ್‌ನ ವಿಚಾರವಾಗಿ ಬರೆದ ನಾಟಕವನ್ನು ಕನ್ನಡಕ್ಕೆ ತಂದಿದ್ದಾರೆ. ಇವರು ಅಕ್ಟೋಬರ್ 1968ರಲ್ಲಿ ದೆಹಲಿಯಲ್ಲಿ ನಿಧನಹೊಂದಿದರು. (ಕೆ.ಸಿ.)

**ಕೃಷ್ಣಮೂರ್ತಿ ಪುರಾಣಿಕ :** 1911-85. ಕನ್ನಡದ ಜನಪ್ರಿಯ ಕಾದಂಬರಿಕಾರರು. 1911, ಸೆಪ್ಟೆಂಬರ್ 5ರಂದು ಬಿಜಾಪುರ ಜಿಲ್ಲೆಯ ಬಿಳಗಿಯಲ್ಲಿ ಜನಿಸಿದರು. ತಂದೆ ತಮ್ಮಣ್ಣ ಭಟ್ಟ, ತಾಯಿ ಲಕ್ಷ್ಮೀಬಾಯಿ. ಪುರಾಣಿಕರು ಮುಲ್ಕಿ ಪರೀಕ್ಷೆ ಮುಗಿಸಿ ಬಾಗಲಕೋಟೆಯ ಬಸವೇಶ್ವರ ಪ್ರೌಢಶಾಲೆಯಲ್ಲಿ ಓದು ಮುಂದುವರಿಸಿದರು. ಆಗಲೇ ಇವರು ಕವನ ರಚಿಸತೊಡಗಿದ್ದರು. ಇವರ ಪ್ರತಿಭೆಯನ್ನು ಯಲಗುರ್ದರಾವ್ ಧಾರವಾಡಕರರು ಗುರುತಿಸಿ ಇವರನ್ನು ಪ್ರೋತ್ಸಾಹಿಸಿದರು. ಮಂಗಳವೇಢೆ ಶ್ರೀನಿವಾಸರಾಯರು, ಪ್ರಕಟಿಸುತ್ತಿದ್ದ 'ಕನ್ನಡಿಗ' ಪತ್ರಿಕೆಗೂ ಅಲ್ಲಿಂದಲೇ ಹೊರಡುತ್ತಿದ್ದ 'ಕರ್ನಾಟಕ ವೈಭವ'ಕ್ಕೂ ಇವರು ಲೇಖನ ಬರೆಯುತ್ತಿದ್ದರು. ಆಗ ಇವರು ಅನೇಕ ರಾಷ್ಟ್ರಪ್ರೇಮದ ಕವನಗಳನ್ನು ರಚಿಸತೊಡಗಿದ್ದರು. ಗೆಳೆಯರೊಂದಿಗೆ ಬಲಭೀಮ ವಾಚನಾಲಯ ಕಟ್ಟಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮ ಆಗ ಬಿರುಸಾಗತೊಡಗಿತ್ತು. ರಾಷ್ಟ್ರೀಯ ಭಾವನೆಯಿಂದ ಉದ್ದೀಪಿತರಾದ ಇವರು ಶಾಲೆಯಲ್ಲಿ ರಾಷ್ಟ್ರೀಯ ವಿಚಾರ ಜಾಗೃತಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಒಮ್ಮೆ ಶಾಲಾ ಇನ್‌ಸ್ಪೆಕ್ಟರರು ಶಾಲೆಗೆ ಬಂದಿದ್ದಾಗ ಅಲ್ಲಿ ತೂಗುಹಾಕಿದ್ದ ಜಾರ್ಜ್ ಬಾದಶಹ ಮತ್ತು ವಿಕ್ಟೋರಿಯ ರಾಣಿಯ ಚಿತ್ರಗಳನ್ನು ಇವರು ತೆಗೆದುಹಾಕಿ ಗಾಂಧೀಜಿ ಮತ್ತು ನೆಹರೂ ಚಿತ್ರಗಳನ್ನು ತೂಗು ಹಾಕಿ ಇನ್‌ಸ್ಪೆಕ್ಟರ್‌ರ ಅಸಮಾಧಾನಕ್ಕೆ ಕಾರಣರಾದರು. ಜಾರ್ಜ್ ಚಕ್ರವರ್ತಿಯ ಚಿತ್ರವನ್ನು ಸುಟ್ಟು ಹಾಕಲಾಗಿದೆಯೆಂಬ ದೂರು ಪೋಲಿಸರನ್ನು ಮುಟ್ಟಿತು. ಅವರು ಪುರಾಣಿಕರನ್ನು ದಸ್ತಗಿರಿ ಮಾಡಿದರು. ಜಾರ್ಜರ ಚಿತ್ರವನ್ನು ಸುಟ್ಟು ಹಾಕಲಿಲ್ಲವೆಂದು ಶಾಲೆಯ ಮುಖ್ಯೋಪಾಧ್ಯಾಯರಾದ ಎಚ್.ಎಫ್.ಕಟ್ಟೀಮನಿಯವರು ಸಾಕ್ಷಿ ಹೇಳಿ ಇವರನ್ನು ಬಿಡಿಸಿದರು.

ಇವರು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಇವರು ಗೆಳೆಯರನ್ನು ಕೂಡಿಸಿ ರಾಷ್ಟ್ರಭಕ್ತಿಯ ಹಾಡು ಹಾಡಿ ಕೊನೆಯಲ್ಲಿ ಭಾರತ ಮಾತಾ ಕಿ ಜೈ ಎಂದು ಘೋಷಣೆ ಕೂಗಿಸುತ್ತಿದ್ದರು. ಒಂದು ದಿನ ಪೋಲೀಸ್ ಸಬ್‌ಇನ್‌ಸ್ಪೆಕ್ಟರರು ಪುರಾಣಿಕರ ವರ್ತನೆಯ ಬಗ್ಗೆ ಅವರ ತಂದೆಗೆ



ದೂರು ನೀಡಿದರು. ಇಂಥ ನಡತೆಯನ್ನು ತಿದ್ದಿಕೊಳ್ಳದಿದ್ದರೆ ಬಂಧಿಸುವುದಾಗಿ ಎಚ್ಚರಿಸಿದರು. ಆದರೆ ಪುರಾಣಿಕರು ಇದಕ್ಕೆ ಹೆದರಲಿಲ್ಲ. ಸ್ವಾತಂತ್ರ್ಯಯೋಧ ಹನುಮಂತರಾವ್ ಕೌಜಲಗಿಯವರ ಸಂಪರ್ಕ ಪಡೆದು ಅವರೊಂದಿಗೆ ಕೆರೂರು ಬಳಿಯ ಮುಗುಟಗೇರಿಯಲ್ಲಿ ಸೇಂದಿಗಿಡ (ಈಚಲುಮರ) ಕಡಿಯುವ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಸತ್ಯಾಗ್ರಹ ಮಾಡಿ ದಣಿದ ಹುಡುಗರು ಮನೆ ಮನೆಗೆ ಹೋಗಿ ಕದನ್ನ ಬೇಡಿ ತಂದು ಹಸಿವೆ ಹಿಂಗಿಸಿಕೊಳ್ಳುತ್ತಿದ್ದರು. ಆದರೆ ಮುಖ್ಯ ಶಿಬಿರದಲ್ಲಿದ್ದವರು ಮೃಷ್ಟಾನ್ನ ಉಣ್ಣುವುದನ್ನು ನೋಡಿ ಕಿಡಿಕಾರಿದರು. ಚಹದಂಗಡಿಗೆ ಹೋಗುವುದೂ ಆಗ ಹಿರಿಯರ ದೃಷ್ಟಿಯಲ್ಲಿ ಒಂದು ಅಪರಾಧವಾಗಿತ್ತು.

ಮುಂದೆ ಪುರಾಣಿಕರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದು ಮುಂದುವರಿಸಿದರು. ವಿದ್ಯಾರ್ಥಿನಿಲಯದ ಶುಲ್ಕ ತುಂಬಲಾಗದೆ ಇವರು ವಿದ್ಯಾರ್ಥಿಗಳಿಗೆ ಊಟಬಡಿಸುವ ಕೆಲಸಮಾಡುತ್ತಿದ್ದರು. ಆ ಕಾಲದಲ್ಲಿ ಇವರು ಭಾಷಣ, ಪ್ರಬಂಧ, ಲೇಖನ ಮುಂತಾದ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ಅನೇಕ ಬಹುಮಾನ ಪಡೆದರು.

ಇವರು ತಮ್ಮ 23ನೆಯ ವಯಸ್ಸಿನಲ್ಲಿ ಅಕ್ಕ ಅಬಚಿತಾಯಿಯ ಮಗಳು ಗಂಗಾ ಅವರನ್ನು ಮದುವೆಯಾದರು (1935). ಇವರಿಗೆ 4 ಹೆಣ್ಣು, 3 ಗಂಡು ಮಕ್ಕಳು. ಪುರಾಣಿಕರು ಪದವೀಧರರಾಗಿ ಗೋಕಾಕ ಪುರಸಭಾ ಪ್ರೌಢಶಾಲೆಯಲ್ಲಿ ಸು.35 ವರ್ಷಗಳಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದರು (1936-71). ಕಥೆಗಾರರಾಗಿಯೂ ಕಾದಂಬರಿಕಾರರಾಗಿಯೂ ಕವಿಯಾಗಿಯೂ ಅಪಾರ ಜನಪ್ರಿಯತೆಗಳಿಸಿದರು. ರಾಮೂನ ಕತೆಗಳು - ಇವರ ಮೊದಲ ಕಥಾ ಸಂಗ್ರಹ (1946), ಮೊದಲ ಕವನಸಂಗ್ರಹ ಬಾಳಕನಸು' (1947). ಮೊದಲ ಕಾದಂಬರಿ 'ಮುಗಿಲ ಮಲ್ಲಿಗೆ' (1948). ಇವರು 80 ಕಾದಂಬರಿಗಳನ್ನೂ 14 ಕಥಾಸಂಗ್ರಹಗಳನ್ನೂ 3 ಕವನ ಸಂಕಲನಗಳನ್ನೂ 11 ಸರಳ ರಗಳೆಯ ಸಂಗ್ರಹಗಳನ್ನೂ ಅನೇಕ ಮಕ್ಕಳ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಇವರ ಕೃತಿಗಳ ಒಟ್ಟು ಸಂಖ್ಯೆ 116.

ಇವರ ಕಾದಂಬರಿಗಳಲ್ಲಿ ಮುಗಿಲ ಮಲ್ಲಿಗೆ, ಮುತ್ತೈದೆ, ಭಾಗೀರಥಿ, ಬೆವರಿನ ಬೆಲೆ, ವೇಷಧಾರಿ, ಧರ್ಮದೇವತೆ, ಪಾವನಗಂಗಾ, ಕುಲವಧು, ಮನಸೋತ ಮನದನ್ನೆ, ಹಸಿರುತೋರಣ, ಸನಾದಿಅಪ್ಪಣ, ಹಾಲುಂಡ ತವರು ಇವು ತುಂಬ ಜನಪ್ರಿಯವಾಗಿವೆ. ಸಾತ್ವಿಕ ಜೀವನ, ಸುಸಂಸ್ಕೃತ ಬದುಕು, ಸಂಸ್ಕೃತಿ ಪ್ರೇಮ, ರಾಷ್ಟ್ರಪ್ರೇಮ, ಆದರ್ಶ, ಹಳ್ಳಿಯ ಬದುಕು -ಬವಣೆಗಳನ್ನು ತಮ್ಮ ಕಥೆ ಕಾದಂಬರಿಗಳಲ್ಲಿ ಇವರು

ಹೃದಯಂಗಮವಾಗಿ ತಂದಿದ್ದಾರೆ. ಆ ಕಾಲಕ್ಕೆ ಇವರ ಕಾದಂಬರಿಗಳು ಅಪಾರ ಸಂಖ್ಯೆಯ ಮಹಿಳಾ ಓದುಗವರ್ಗವನ್ನು ಸೃಷ್ಟಿಸಿದ್ದವು. ಕನ್ನಡದಲ್ಲಿ ವಾಚನಾಭಿರುಚಿಯನ್ನು ಬೆಳೆಯಿಸಿದ ಮಹನೀಯರಲ್ಲಿ ಇವರ ಹೆಸರೂ ಮುಂಚೂಣಿಯಲ್ಲಿ ನಿಲ್ಲುತ್ತದೆ.

ಸನಾದಿ ಅಪ್ಪಣ್ಣ, ಪಾವನಗಂಗಾ, ದೇವರಕೂಸು, ಅನಿರೀಕ್ಷಿತ, ಭಾಗೀರಥಿ, ಕುಲವಧು, ಧರ್ಮದೇವತೆ -ಈ ಕಾದಂಬರಿಗಳು ಕನ್ನಡ ಚಲನಚಿತ್ರಗಳಾಗಿ ಹೆಸರು ಮಾಡಿವೆ. ಮುತ್ತೈದೆ ಎಂಬ ಕಾದಂಬರಿ ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಚಲನಚಿತ್ರವಾಗಿದೆ.

ಇವರ ಸಾಹಿತ್ಯ ಸಾಧನೆಗಾಗಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ತರಳಬಾಳು ಜಗದ್ಗುರುಗಳಿಂದ ಕಾದಂಬರಿ ಶ್ರೀ ಪ್ರಶಸ್ತಿ (1969), ಶೃಂಗೇರಿ ಜಗದ್ಗುರುಗಳಿಂದ ಶಾರದಾಂಬಾ ಬಂಗಾರದ ಪದಕ (1972), ಹೊನ್ನಾವರದ ಶೃಂಗಾರ ಮಂಟಪ ಪ್ರಶಸ್ತಿ (1973), ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1974) ಬಂದಿವೆ. ಕಾದಂಬರಿ ದರ್ಶನ ಎಂಬ ಗೌರವ ಗ್ರಂಥವನ್ನು ಇವರಿಗೆ ಸಮರ್ಪಿಸಲಾಗಿದೆ (1974). ಇವರು 1985 ನವೆಂಬರ್ 9ರಂದು ನಿಧನರಾದರು. (ಎಸ್.ಎಂ.ಕೆ.)

**ಕೃಷ್ಣಮೂರ್ತಿ, ವೈ. ಎನ್. :** 1926-99. ಕನ್ನಡ ಸಾಹಿತ್ಯ ಹಾಗೂ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ವೈ.ಎನ್.ಕೆ. ಎಂಬ ಮೂರಕ್ಷರಗಳಿಂದ ಚಿರಪರಿಚಿತರಾಗಿದ್ದ ಹೆಸರಾಂತ ಪತ್ರಕರ್ತ ಮತ್ತು ಲೇಖಕ.



1926ರ ಮೇ 16ರಂದು ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಓದಿ ಬಿ.ಎಸ್.ಸಿ.ಪದವಿ ಪಡೆದರು (1946). ಕನ್ನಡದಲ್ಲಿ ಉನ್ನತ ಮೊದಲ ದರ್ಜೆಯ ಅಂಕಗಳನ್ನು ಗಳಿಸಿದ ಖ್ಯಾತಿ ಇವರದು. ವಿದ್ಯಾರ್ಥಿಯಾಗಿದ್ದಾಗಲೆ ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ ತಾಳಿದ್ದರು. ದೇಶಬಂಧು ದಿನಪತ್ರಿಕೆ ಮತ್ತು ಛಾಯಾ ಮಾಸಪತ್ರಿಕೆಗಳಲ್ಲಿ ಕೆಲಸ ಮಾಡುತ್ತ ತಮ್ಮ ವೃತ್ತಿ ಜೀವನ ಆರಂಭಿಸಿದರು. ವರದಿಗಾರರಾಗಿ ಪ್ರಜಾವಾಣಿ ದಿನಪತ್ರಿಕೆ ಸೇರಿದರು (1949). ಅದೇ ಪತ್ರಿಕೆಯಲ್ಲಿ ಕ್ರಮವಾಗಿ ಬಡ್ತಿ ಪಡೆಯುತ್ತ ಹೋದರು. ಉಪಸಂಪಾದಕರಾಗಿದ್ದವರು ಉಪಸುದ್ದಿ ಸಂಪಾದಕರಾದರು (1965). 1974ರಲ್ಲಿ ಸುದ್ದಿ ಸಂಪಾದಕರಾಗಿ, 1977ರಲ್ಲಿ ಸಂಪಾದಕರಾಗಿ ನೇಮಕಗೊಂಡು 1983ರ ವರೆಗೂ ಆ ಹುದ್ದೆಯಲ್ಲಿದ್ದರು. ಮುಂದೆ ಸುಮಾರು ಒಂದು ವರ್ಷಕಾಲ ಸಲಹೆಗಾರರೆಂದು ಕೆಲಸ ಮಾಡಿದರು (1983-84).

ವೈ.ಎನ್.ಕೆ. ಹಲವು ದೇಶಗಳನ್ನು ಸುತ್ತಿದ್ದರು. 1977ರಲ್ಲಿ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಮೊರಾರ್ಜಿದೇಸಾಯಿ ಅವರೊಂದಿಗೆ ರಷ್ಯ ಪ್ರವಾಸ ಕೈಗೊಂಡರು. ಎರಡು ವರ್ಷಗಳ ಅನಂತರ ಹಂಗರಿ, ಫೋಲೆಂಡ್ ಮತ್ತು ಚೆಕೊಸ್ಲೊವಾಕಿಯ ದೇಶಗಳಿಗೆ ಭೇಟಿಕೊಡಲು ಆಹ್ವಾನ ಪಡೆದರು. ಮರುವರ್ಷ ಅಮೆರಿಕಕ್ಕೆ ಭೇಟಿಕೊಡಲು ಆಹ್ವಾನ ಪಡೆದರು. ಜರ್ಮನ್ ಸರ್ಕಾರದ ಆಹ್ವಾನದ ಮೇಲೆ ಪಶ್ಚಿಮ ಜರ್ಮನಿಗೆ ಹೋದರು (1982). 1984ರಲ್ಲಿ ಬ್ರಿಟನ್, ಅಮೆರಿಕ, ಕೆನಡ ದೇಶಗಳಿಗೆ ಭೇಟಿ ನೀಡಿದರು.

ಇವರು ಸಾಹಿತ್ಯವನ್ನು ಸೃಷ್ಟಿಸಿರುವುದರ ಜೊತೆಗೆ ಸಾಹಿತಿಗಳನ್ನೂ ಸೃಷ್ಟಿಸಿದರು. ನವ್ಯ ಸಾಹಿತ್ಯದ ಅನೇಕ ಲೇಖಕರು ವೈ.ಎನ್.ಕೆ.ಯವರ ಸೃಷ್ಟಿ. ಕಾವ್ಯವನ್ನು ಜನತೆಗೆ ಮುಟ್ಟಿಸುವ ಕೆಲಸವನ್ನು ಪ್ರಜಾವಾಣಿಯಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸಿದರು. ನವ್ಯಸಾಹಿತ್ಯಕ್ಕೆ ಇವರು ಕೊಟ್ಟ ಬೆಂಬಲ, ಪ್ರೋತ್ಸಾಹ ಅಸದೃಶ್ಯವಾದದ್ದು. ಅದನ್ನು ಜನಪ್ರಿಯಗೊಳಿಸುವಲ್ಲಿಯೂ ಸಮರ್ಥವಾಗಿ ದುಡಿದರು.

ಛಾಯಾಗ್ರಹಣ, ಚಿತ್ರಕಲೆ, ಟೇಬಲ್ ಟೆನ್ನಿಸ್, ಗಾಲ್ಫ್, ಯೋಗ, ನಾಟಕ, ಚಲನಚಿತ್ರ ಮೊದಲಾದ ಹಲವು ವಿಷಯಗಳಲ್ಲಿ ಇವರಿಗೆ ಆಸಕ್ತಿ ಇತ್ತು. ಸಂಸ್ಕಾರ ಹೊಸ ಅಲೆಯ ಚಿತ್ರದ ವಿಷಯದಲ್ಲಿ ಇವರು ಅಪಾರ ಆಸಕ್ತಿ ವಹಿಸಿದ್ದರು. ವಂಶವೃಕ್ಷ, ಹಂಸಗೀತೆ, ಕನ್ನೇಶ್ವರರಾಮ, ಫಣಿಯಮ್ಮ ಮೊದಲಾದ ಚಿತ್ರಗಳ ಯಶಸ್ಸಿಗೆ ಇವರೂ ಕಾರಣರಾಗಿದ್ದರು. ಚೆನ್ನೈ, ನವದೆಹಲಿ ಚಲನಚಿತ್ರೋತ್ಸವಗಳ ಜೊತೆ ಇವರ ಸಂಬಂಧ ನಿಕಟವಾದುದಾಗಿತ್ತು. ನಾಲ್ಕನೆಯ ಅಂತಾರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದ ಪ್ರಕಾಶನ ಸಮಿತಿಗೆ ಇವರು ಅಧ್ಯಕ್ಷರಾಗಿದ್ದರು (1985). ಬೆಂಗಳೂರಿನಲ್ಲಿ ನಡೆದ ಚಲನಚಿತ್ರೋತ್ಸವ ವ್ಯವಸ್ಥಾಪಕ ಸಮಿತಿಯಲ್ಲಿ ಒಬ್ಬ ಸದಸ್ಯರಾಗಿದ್ದರು.

ಇವರು 1991ರಲ್ಲಿ ಕನ್ನಡಪ್ರಭ ಸಂಪಾದಕರಾಗಿ ನೇಮಕಗೊಂಡರು. ಒಂದು ದಶಕದ ಕಾಲ ಆ ಪತ್ರಿಕೆಯ ಸಂಪಾದಕರಾಗಿದ್ದರು. ಆ ಪತ್ರಿಕೆಯ ಸಾಹಿತ್ಯಿಕ ಮೌಲ್ಯವನ್ನು ಬಹುವಾಗಿ ಹೆಚ್ಚಿಸಿದರು. ಅದರ ಸಂಪಾದಕೀಯ ಪುಟದಲ್ಲಿ ಹಲವಾರು ಸಿದ್ಧಪ್ರಸಿದ್ಧರು ಸಾಹಿತ್ಯಕ ಲೇಖನಗಳನ್ನು ಬರೆಯುವಂತಾದದ್ದು ಇವರ ಶ್ರಮದ ಫಲ. ಅನೇಕ ಹೊಸ ಅಂಕಣಗಳನ್ನು ಪ್ರಾರಂಭಿಸಿದರು.

ಇವರು ಕನ್ನಡದಲ್ಲಿ ಹಲವು ಕೃತಿಗಳನ್ನು ರಚಿಸಿದ್ದಾರೆ. ಇವರು ಸಂಪಾದಿಸಿದ ಪುಸ್ತಕ ಜಾಕ್ ಲಂಡನ್, ಮುಂದೇನು ರಾಮನ್, ಇದು ಸುದ್ದಿ ಇದು ಸುದ್ದಿ, ಹೈಡ್ ಪಾರ್ಕ್, ಬರಲಿದೆ ಬರಲಿದೆ - ಇವೆಲ್ಲ ಪತ್ರಿಕೋದ್ಯಮಕ್ಕೆ ಸಂಬಂಧಿಸಿದವು. ಕಾಲಕ್ರೀಡೆ, ಪದ್ಯ ಇಷ್ಟು ಲೈಟ್ ಆದರೆ ಹೇಗೆ ಸ್ವಾಮಿ, ತೀರ್ಥರೂಪ, ವಂಡರ್ ಕಣ್ಣು - ಮೊದಲಾದವು ಹಾಗೂ ವಂಡರ್‌ಮಾಲೆಯ ಕೆಲವು ಪುಸ್ತಕಗಳು - ಇವು ಇವರ ಪ್ರತಿಭೆಗೆ ಸಾಕ್ಷಿಯಾಗಿವೆ. ಇವರ ವಂಡರ್ ಅಂಕಣ ಕನ್ನಡ ಪ್ರಭದಲ್ಲಿ ಪ್ರಕಟವಾಗುತ್ತಿತ್ತು. ಕೈಲಾಸಂ ಅವರ ಆಪ್ತರಲ್ಲಿ ಒಬ್ಬರಾಗಿದ್ದ ಇವರು ಅನೇಕ ದೃಷ್ಟಿಗಳಿಂದ ಕೈಲಾಸಂ ಅವರ ಬರೆವಣಿಗೆಯನ್ನೇ ಅನುಸರಿಸಿದರು, ಅನುಕರಿಸಿದರು. ಭಾಷೆಯನ್ನು ಯಾವ ರೀತಿಯಾಗಿ ದುಡಿಸಿಕೊಳ್ಳಬಹುದು ಎಂಬುದನ್ನು ತಮ್ಮ ಬರೆವಣಿಗೆಯಲ್ಲಿ ತೋರಿಸಿದರು. ಭಾಷೆ ಬಳಕೆಯಲ್ಲಿ ಬಗೆ ಬಗೆಯ ಕಸರತ್ತು ಮಾಡಿ ತಮ್ಮ ಬರೆವಣಿಗೆಗೊಂದು ಸೊಗಸು ಕೊಟ್ಟರು.

ಇವರು ಪತ್ರಿಕೋದ್ಯಮದಲ್ಲಿ ಸಲ್ಲಿಸಿದ ಅಸಾಧಾರಣ ಸೇವೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1986), ಹಾಸ್ಯ ಕವನಗಳ ಸಂಕಲನಕ್ಕಾಗಿ 1988ರಲ್ಲಿ ರಾಜ್ಯ ಪತ್ರಿಕಾ ಅಕಾಡೆಮಿಯ ಪ್ರಶಸ್ತಿ (1995) ಹಾಗೂ ಹಾಸ್ಯ ಬರೆಹಗಳಿಗಾಗಿ 1995ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿವೆ.

ಇವರು 1999ರ ಅಕ್ಟೋಬರ್ 15ರಂದು ವಿಮಾನದಲ್ಲಿ ಪಯಣಿಸುತ್ತಿದ್ದಾಗಲೆ ಹೃದಯಾಘಾತದಿಂದ ನಿಧನಹೊಂದಿದರು. (ಎಚ್.ಎಂ.ಎಸ್‌ಎ.)

**ಕೃಷ್ಣರಾಜ ಒಡೆಯರ್ I :** ಮೈಸೂರು ರಾಜವಂಶದ ದೊರೆ (1713-32). ಇಮ್ಮಡಿ ಕಂಠೀರವ ನರಸರಾಜನ ಮಗ. ಇವನಿಗೆ ದೊಡ್ಡ ಕೃಷ್ಣರಾಜ ಎಂದೂ ಹೆಸರಿತ್ತು. ತಂದೆಯ ಕಾಲದಲ್ಲಿ ರಾಜ್ಯಾಡಳಿತ ದಳವಾಯಿಗಳ ಕೈವಶವಾಗಿದ್ದ ಪರಿಸ್ಥಿತಿಯಲ್ಲಿ ಸಿಂಹಾಸನವನ್ನೇರಿದ ಕೃಷ್ಣರಾಜನೂ ದಕ್ಷನಾಗಿರಲಿಲ್ಲವಾಗಿ ಸಮೀಪವರ್ತಿಗಳಾದ ದಳವಾಯಿ ದೇವರಾಜ ಮತ್ತು ಸರ್ವಾಧಿಕಾರಿ ನಂಜರಾಜ ಎಂಬ ಬಂಧುಗಳು ಈತನನ್ನು ತಮ್ಮ ಕೈಗೊಂಬೆಯಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು.

ಇವನ ಕಾಲದಲ್ಲಿ ಬಾಲಾಘಾಟ್ ಪ್ರದೇಶವನ್ನು ಆಳುತ್ತಿದ್ದ ಸಾದತ್ತುಲ್ಲಾಖಾನ್ ಮೈಸೂರಿನ ಬೊಕ್ಕಸದ ಅಪಾರ ಸಂಪತ್ತನ್ನು ದೋಚುವ ಹವಣಿಕೆಯಿಂದ ಕಡಪ, ಕರ್ನೂಲು ಮತ್ತು ಸವಣೂರಿನ ನವಾಬರನ್ನೂ ಗುತ್ತಿಯ ಮರಾಠ ನಾಯಕನನ್ನೂ ಕೂಡಿಕೊಂಡು ಮೈಸೂರಿನ ಮೇಲೆ ಆಕ್ರಮಣ ಮಾಡಲು ಸಿದ್ಧನಾಗಿದ್ದಾಗ ಮತ್ತೊಂದು ದಿಕ್ಕಿನಿಂದ ಸೀರ್ಯದ

ಅಮೀರ್‌ಖಾನನೂ ನುಗ್ಗಿಬಂದ. ಎರಡು ಸೈನ್ಯಗಳೂ ಶ್ರೀರಂಗಪಟ್ಟಣ ತಲುಪಿ ಒಟ್ಟಿಗೆ ಆ ನಗರವನ್ನು ಸಾದತ್ತುಲ್ಲಾ ಖಾನನ ನಾಯಕತ್ವದಲ್ಲಿ ಮುತ್ತಿದಾಗ ಹೆದರಿದ ಕೃಷ್ಣರಾಜ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು ಆಕ್ರಮಣದಿಂದ ಪಾರಾದ. ಯುದ್ಧದಲ್ಲಿ ಪಾಲ್ಗೊಂಡ ಐವರು ನಾಯಕರಿಗೂ ತಲಾ 12 ಲಕ್ಷ ರೂಪಾಯಿಗಳನ್ನು ಕೊಟ್ಟು ಉಳಿದ 40ಲಕ್ಷ ರೂಗಳನ್ನು ಸಾದತ್ತುಲ್ಲಾಖಾನ್ ತಾನೇ ಕಬಳಿಸಿದ. ದುರಾಶಾಪೀಡಿತರಾದ ಮರಾಠರು ಎರಡು ವರ್ಷಗಳ ಅನಂತರ ಮತ್ತೆ ದಾಳಿ ಮಾಡಿ, ಕೃಷ್ಣರಾಜನಿಂದ ಪುನಃ ಹಣ ಪಡೆದರು. ಹೀಗೆ ಹಣದ ಅಪವ್ಯಯವಾಗಿ ಬೊಕ್ಕಸ ಬರಿದಾಯಿತು. ಈ ನಷ್ಟವನ್ನು ತುಂಬಿಕೊಳ್ಳಲು 1728ರಲ್ಲಿ ದಳವಾಯಿ ದೇವರಾಜನ ನೇತೃತ್ವದಲ್ಲಿ ಮೈಸೂರು ಸೈನ್ಯ ಮಾಗಡಿ ಕೆಂಪೇಗೌಡನನ್ನು ಎದುರಿಸಿ, ಅವನನ್ನು ಸೆರೆಹಿಡಿದು, ಸಾವನದುರ್ಗದಲ್ಲಿ ಶೇಖರವಾಗಿದ್ದ ಹಣವನ್ನು ದೋಚಿಕೊಂಡಿತಾದರೂ ಸ್ಥಿತಿ ಉತ್ತಮ ಗೊಳ್ಳಲಿಲ್ಲ. ರಾಜಕಾರಣದಲ್ಲಿ ಕೃಷ್ಣರಾಜ ಫಲಪ್ರದನಾಗಲಿಲ್ಲ. ಕಷ್ಟಪರಂಪರೆಗಳನ್ನು ಅನುಭವಿಸಿ 1732ರಲ್ಲಿ ಮೃತನಾದ. ಅನಂತರ ಇವನ ದತ್ತುಪುತ್ರ 7ನೆಯ ಚಾಮರಾಜ ಅರಸನಾದ.

ಕೃಷ್ಣರಾಜ ದೈವಭಕ್ತನೂ ಉದಾರಿಯೂ ಆಗಿದ್ದ. ಈತ ಕಂಚಿಯ ವರದರಾಜ, ಮೇಲುಕೋಟೆಯ ಚೆಲುವರಾಯ ಮುಂತಾದ ಅನೇಕ ದೇವಾಲಯಗಳಿಗೆ ದಾನ ಮಾಡಿದುದಲ್ಲದೆ ಕಳಲೆಯಲ್ಲಿ ಅಗ್ರಹಾರವೊಂದನ್ನು ನಿರ್ಮಿಸಿದನೆಂದು 1722ರ ತಿರುಮಲಾರ್ಯನಿಂದ ರಚಿತವಾದ, ಒಂದು ಶಾಸನ ತಿಳಿಸುತ್ತದೆ.

ಕಳಲೆಯ ವೀರರಾಜನ ಸಕಲವೈದ್ಯಸಂಹಿತಸಾರಾರ್ಣವ ಮತ್ತು ಆಂಧ್ರ ವಚನ ಭಾರತಮು, ಚನ್ನೈಯನ ಭಗವದ್ಗೀತಾ ಟೀಕೆ, ಚೆಲುವಾಂಬೆಯ ತುಲಾ ಕಾವೇರೀ ಮಹಾತ್ಮ್ಯ, ವರನಂದಿಕಲ್ಯಾಣ, ಬಾಲವೈದ್ಯದ ಚಲುವನ ರತ್ನಶಾಸ್ತ್ರ ಮತ್ತು ಕನ್ನಡ ಲೀಲಾವತಿ, ರಂಗಯ್ಯನ ಕಾವೇರಿ ಮಾಹಾತ್ಮ್ಯ ಮುಂತಾದ ಕೃತಿಗಳು ಈತನ ಕಾಲದಲ್ಲಿ ರಚಿತವಾದುವು. (ಬಿ.ಕೆ.ಜಿ.)

**ಕೃಷ್ಣರಾಜ ಒಡೆಯರ್ II :** ಮೈಸೂರು ರಾಜವಂಶದ ದೊರೆ (1734-66). ದೊಡ್ಡ ಕೃಷ್ಣರಾಜನ ಎರಡನೆಯ ದತ್ತುಪುತ್ರ. ಮೊದಲನೆಯ ದತ್ತುಪುತ್ರ ಚಾಮರಾಜನ ಅನಂತರ, ತನ್ನ ಐದನೆಯ ವರ್ಷದಲ್ಲಿ ಸಿಂಹಾಸನಾರೋಹಣ ಮಾಡಿದ. ಇಮ್ಮಡಿ ಕೃಷ್ಣರಾಜ ಒಡೆಯರ್ ಎಂದು ನಾಮಾಂಕಿತನಾದ. ಈತನ ಕಾಲದಲ್ಲೂ ಹಿಂದಿನಂತೆಯೇ ನಂಜರಾಜಯ್ಯ, ದೇವರಾಜಯ್ಯ ಎಂಬ ದಳವಾಯಿ ಸೋದರರು ಸರ್ವಶಕ್ತರಾಗಿದ್ದರು. ನಂಜರಾಜಯ್ಯನ ಕೈವಾಡ ಕೊನೆಯವರೆಗೂ ನಡೆಯಿತು. ದೂರಾಲೋಚನೆಯಿಂದ ತನ್ನ ಮಗಳನ್ನು ಒಡೆಯರಿಗೆ ಧಾರೆಯೆರೆದು ಕೊಟ್ಟ ನಂಜರಾಜನಿಗೆ ಸ್ವಾರ್ಥಸಾಧನೆಯೇ ಮೂಲಗುರಿಯಾಗಿದ್ದು, ತನ್ನ ಸರ್ವಾಧಿಕಾರವನ್ನು ಬಲಪಡಿಸಲು ಇವನು ತೀವ್ರ ಪ್ರಯತ್ನ ಮಾಡಿದ.

ಕಾಲಾನಂತರದಲ್ಲಿ ದಳವಾಯಿ ಸೋದರರಲ್ಲಿ ಉಂಟಾದ ಒಡಕನ್ನು ಸದುಪಯೋಗಪಡಿಸಿಕೊಳ್ಳಲು ಯೋಚಿಸಿದ ಇಮ್ಮಡಿ ಕೃಷ್ಣರಾಜ, ಅಂದಿನ ಹಲವಾರು ಕದನಗಳಲ್ಲಿ ಕೀರ್ತಿ ಗಳಿಸಿದ್ದ ಹೈದರನ ನೆರವನ್ನು ಬೇಡಿದ. ತನ್ನ ಅಧಿಕಾರವನ್ನು ವಿಸ್ತರಿಸಲು ಹೊಂಚುಹಾಕಿ ಕಾಯುತ್ತಿದ್ದ ತೀಕ್ಷ್ಣಮತಿಯಾದ ಹೈದರನಿಗೆ ಈ ಬೇಡಿಕೆ ಸದವಕಾಶವನ್ನೊದಗಿಸಿತು. ರಾಜನ ಅದೃಷ್ಟ ಆಗಲೂ ಕುದುರಲಿಲ್ಲ. ನಂಜರಾಜನನ್ನು ಕೆಳಗಿಳಿಸಿದ ಹೈದರ್ ಅಧಿಕಾರವನ್ನು ತಾನೇ ವಹಿಸಿಕೊಂಡು ರಾಜನಿಗೆ ಕೇವಲ ಮೂರು ಲಕ್ಷ ವರಹಗಳನ್ನು ಅಶನಾರ್ಥವಾಗಿ ನೀಡುತ್ತಿದ್ದ. 1766ರಲ್ಲಿ ಇಮ್ಮಡಿ ಕೃಷ್ಣರಾಜ ನಿಧನನಾದಾಗ ಹೈದರ್ ಅವನ ಹಿರಿಯ ಮಗ ನಂಜರಾಜನಿಗೆ ಪಟ್ಟ ಕಟ್ಟಿದ್ದರೂ ರಾಜನ ಭೃತ್ಯವನ್ನೂ ನಿಲ್ಲಿಸಿ ಅರಮನೆಯ ಆಭರಣಗಳನ್ನೆಲ್ಲ ಸುಲಿದುಕೊಂಡು ತನ್ನ ಸ್ವಂತ ಭಟರನ್ನು ಅರಮನೆಯ ಕಾವಲಿಗೆ ನಿಲ್ಲಿಸಿದ. ಕೃಷ್ಣರಾಜನ ನಿರ್ವೀರ್ಯವಾದ ಹಾಗೂ ದೂರಾಲೋಚನೆಯಿಲ್ಲದ ವರ್ತನೆಯಿಂದ ಮೈಸೂರು ರಾಜತ್ವ ಮಸುಕಾಯಿತು. (ಎಚ್.ಆರ್.ಡಿ.ಜಿ.)

**ಕೃಷ್ಣರಾಜ ಒಡೆಯರ್ III :** 1794-1868. ಮೈಸೂರು ಸಂಸ್ಥಾನದ ದೊರೆ (1799-1831). 8ನೆಯ ಚಾಮರಾಜ ಒಡೆಯರು ಸಂತಾನವಿಲ್ಲದೆ ಮೃತರಾದ ಕಾರಣ ಮಹಾರಾಣಿ ಲಕ್ಷಮ್ಮಣ್ಣಿಯವರು ಎರಡು ವರ್ಷದ ಬಾಲಕ ಕೃಷ್ಣರಾಜನನ್ನು ದತ್ತು ತೆಗೆದುಕೊಂಡಿದ್ದರು. 1799ರ ಶ್ರೀರಂಗಪಟ್ಟಣ ದಾಳಿಯಲ್ಲಿ ಟಿಪ್ಪುಸುಲ್ತಾನ ಮಡಿದ ಮೇಲೆ ವಿಜಯಿಗಳಾದ ಬ್ರಿಟಿಷರು ಮೈಸೂರಿನ ರಾಜವಂಶದವರಿಗೆ ಅಧಿಕಾರ ವಹಿಸುವ ತೀರ್ಮಾನ ಮಾಡಿದ್ದರಿಂದ ಕೃಷ್ಣರಾಜರು ಮುಮ್ಮಡಿ ಕೃಷ್ಣರಾಜ ಒಡೆಯರ್ ಎಂಬ ಅಭಿಧಾನದಿಂದ ಸಿಂಹಾಸನಾರೋಹಣಮಾಡಿದರು. ಹಳೆಯ ಮೈಸೂರು ಸಂಸ್ಥಾನದ, ದಕ್ಷಿಣ ಕರ್ನಾಟಕದ ಒಂಬತ್ತು ಜಿಲ್ಲೆಗಳು ಇವರ ಆಳಿಕೆಗೆ ಒಳಪಟ್ಟವು. ಮುಮ್ಮಡಿ ಕೃಷ್ಣರಾಜರು ಪ್ರಾಪ್ತ ವಯಸ್ಕರಾಗುವವರೆಗೂ ರಾಜ್ಯದ ಸೂತ್ರ ದಿವಾನ್ ಪೂರ್ಣಯ್ಯನವರ ಕೈಯಲ್ಲಿರಬೇಕೆಂದು ತೀರ್ಮಾನವಾಯಿತು. ಅಲ್ಲದೆ ರಾಜ್ಯದ ವ್ಯವಹಾರಗಳ ಮೇಲೆ ಗಮನವಿಡಲು ಬ್ಯಾರಿ ಕ್ಲೋಸ್ ಬ್ರಿಟಿಷರ ಪ್ರತಿನಿಧಿಯಾಗಿ (ರೆಸಿಡೆಂಟ್) ಅಧಿಕಾರ ವಹಿಸಿಕೊಂಡ.

ಮೈಸೂರು ಸಂಸ್ಥಾನದ ಆಡಳಿತ ಹೇಗಿರಬೇಕು ಎಂಬುದರ ಬಗ್ಗೆ ವೆಲ್ಲೆಸ್ಲಿಯ ಸ್ಪಷ್ಟ ಲೇಖನಗಳು ಮತ್ತು ಆಡಳಿತದಲ್ಲಿ ನುರಿತಿದ್ದ ಪೂರ್ಣಯ್ಯನವರ ದಿಗ್ದರ್ಶನವಿದ್ದುದರಿಂದ ರಾಜ್ಯದ ಆಡಳಿತ ವ್ಯವಸ್ಥಿತವಾಯಿತು. ಆದರೆ ಟಿಪ್ಪುವಿನ ಮುಷ್ಟಿಯಲ್ಲಿ ಮುದುಡಿಹೋಗಿದ್ದ ಅಥವಾ ಪ್ರಬಲವಾಗಿದ್ದ ಹಲವು ಶಕ್ತಿಗಳು ಮತ್ತೆ ಗರಿಗೆದರಲು ಪ್ರಯತ್ನಪಟ್ಟಿದ್ದರಿಂದ ಆಳಿಕೆಯ ಮೊದಲ ವರ್ಷಗಳಲ್ಲಿ ಅಶಾಂತಿ ತಲೆದೋರಿತು. ಹಿಂದೆ ಟಿಪ್ಪುವಿನ ಆಶ್ರಯದಲ್ಲಿದ್ದ ಧೋಂಡಿಯಾವಾಘ್ 1799ರಲ್ಲಿ ಶಿವಮೊಗ್ಗ, ನಗರ ಮುಂತಾದ ರಾಜ್ಯದ ವಾಯುವ್ಯ ಭಾಗಗಳ ಕೋಟೆಗಳನ್ನು ಹಿಡಿದು ಸ್ವಾತಂತ್ರ್ಯ ಸಾರಿಕೊಂಡ. ಆದರೆ ಬ್ರಿಟಿಷ್ ಮತ್ತು ಮೈಸೂರು ಸೈನ್ಯಗಳು ಧೋಂಡಿಯಾವಾಘನನ್ನು ಮೈಸೂರು ಪ್ರಾಂತ್ಯದಿಂದ ಓಡಿಸಿ ರಾಜ್ಯದ ಭಾಗಗಳನ್ನು ವಶಪಡಿಸಿಕೊಂಡದ್ದಲ್ಲದೆ ಕೊನೆಗೆ 1800ರಲ್ಲಿ ಉತ್ತರ ಕರ್ನಾಟಕದ ಕೊನಗಲ್‌ನಲ್ಲಿ ಅವನನ್ನು ಕೊಂದರು.

1800ರಲ್ಲಿ ಮಂಜರಾಬಾದಿನ ಕೃಷ್ಣಪ್ಪನಾಯಕ ಅರಕೆರೆಯಲ್ಲಿ ತಳ ಊರಿ ಬಿಸಲೆ ಘಾಟಿನ ಸುತ್ತಮುತ್ತ ಹಾವಳಿ ಆರಂಭಿಸಿದ. 1802ರಲ್ಲಿ ಅವನ ಬಲವನ್ನೂ ಹತ್ತಿಕ್ಕಲಾಯಿತು. ದಿವಾನ್ ಪೂರ್ಣಯ್ಯನವರ ನೇತೃತ್ವದಲ್ಲಿ ಬೆಳೆದ ಮೈಸೂರು ಸೈನ್ಯ ಹಲವು ವಿಧಗಳಲ್ಲಿ ಕೀರ್ತಿಗಳಿಸಿತು. 1802ರಲ್ಲಿ ವೈನಾಡಿನ ಬಂಡಾಯ, 1803ರ ಮರಾಠ ಕದನ, 1804-5ರಲ್ಲಿ ಚಿತ್ತೂರಿನಲ್ಲಿ ಅಶಾಂತಿ, 1806ರಲ್ಲಿ ವೆಲ್ಲೂರಿನಲ್ಲಿ ವಿರೋಧ, 1809ರಲ್ಲಿ ಬ್ರಿಟಿಷ್ ಸೈನ್ಯದ ದಂಗೆ ಇತ್ಯಾದಿಗಳ ವಿರುದ್ಧ ಮೈಸೂರು ಸೈನ್ಯ ಬ್ರಿಟಿಷ್ ಆಡಳಿತಕ್ಕೆ ಸಹಾಯ ಮಾಡಿತು. ಪೂರ್ಣಯ್ಯ 11 ವರ್ಷಗಳ ದಿವಾನ್ ಪದವಿಯನ್ನು ನಿರ್ವಹಿಸಿ, ರಾಜ್ಯದ ಆಯವ್ಯಯವನ್ನು ಬಹುಮಟ್ಟಿಗೆ ಸುಧಾರಿಸಿ, ಹಲವು ಜನೋಪಯೋಗಿ ಕಾರ್ಯಗಳನ್ನು ಮಾಡಿ, 1811ರಲ್ಲಿ ದಿವಾನಗಿರಿಯಿಂದ ನಿವೃತ್ತರಾಗಿ 1812ರಲ್ಲಿ ಮೃತರಾದರು.

ಅನಂತರ ರಾಜ್ಯ ಸೂತ್ರಗಳನ್ನು ಕೃಷ್ಣರಾಜ ಒಡೆಯರೇ ವಹಿಸಿಕೊಂಡು ತಾವೇ ನೇಮಿಸಿದ ದಿವಾನರುಗಳ ಮೂಲಕ ರಾಜ್ಯವಾಳಲಾರಂಭಿಸಿದರು. ಬ್ರಿಟಿಷರಿಗೆ ನಿಷ್ಠಾವಂತರಾಗಿ, ಅವರ ಹಲವು ಕಾರ್ಯಾಚರಣೆಗಳಲ್ಲಿ ಮೈಸೂರು ಸೈನ್ಯದ ಸಹಾಯವನ್ನು ಒದಗಿಸಿದರು. ಈ ಕಾರ್ಯಗಳಿಂದಾಗಿ ಮತ್ತು ಎರಡು ಕ್ಷಾಮಗಳಿಂದ ಮೈಸೂರು ಬೊಕ್ಕಸದ ಸ್ಥಿತಿ ಕಳವಳಕಾರಿಯಾಯಿತು. ದೇಶದಲ್ಲಿ ಕ್ಷೋಭೆ ಕಾಣಿಸಿಕೊಂಡಿತು. 1830ರಲ್ಲಿ ಕುಂಸಿಯ ಸಾದರಮಲ್ಲನೆಂಬವನು ಬೂದಿಬಸವಪ್ಪ ಎಂಬ ಹೆಸರಿನಿಂದ ತಾನು ಕೆಳದಿ ರಾಜವಂಶಕ್ಕೆ ಸೇರಿದವನೆಂದೂ ಕೆಳದಿಯ ರಾಜ್ಯದ ನ್ಯಾಯ ಹಕ್ಕುದಾರನೆಂದೂ ಆ ಪ್ರಾಂತ್ಯದಲ್ಲಿ ಸಾಕಷ್ಟು ಬೆಂಬಲ ಗಳಿಸಿಕೊಂಡು ಬಂಡಾಯವನ್ನು ಆರಂಭಿಸಿದ. ಈ ಬಂಡಾಯವನ್ನು ಹತ್ತಿಕ್ಕಲು ಮುಮ್ಮಡಿ ಕೃಷ್ಣರಾಜರು ಬ್ರಿಟಿಷರ ಬೆಂಬಲವನ್ನು ಕೋರಬೇಕಾಯಿತು. ಬಂಡಾಯವನ್ನು ಮುರಿದರೂ ಆಗಿನ ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ಬೆಂಟಿಂಕನು ಕೃಷ್ಣರಾಜರು ಆಡಳಿತ ನಿರ್ವಹಿಸಲು ಅಶಕ್ತರೆಂದು ಸಾರಿ ಮೈಸೂರು ಸಂಸ್ಥಾನವನ್ನು ಬ್ರಿಟಿಷರ ನೇರ ಆಡಳಿತಕ್ಕೆ ಒಳಪಡಿಸಿ ರಾಜರಿಗೆ ವರ್ಷಾಶನವನ್ನೀಯುವ ಏರ್ಪಾಡು ಮಾಡಿದ (1831).

ಮುಮ್ಮಡಿ ಕೃಷ್ಣರಾಜ ಒಡೆಯರು ಹಲವು ರೀತಿಯಲ್ಲಿ ಪ್ರಯತ್ನಿಸಿದರೂ ಮುಂದೆ ಬ್ರಿಟಿಷರೇ ನೇಮಿಸಿದ್ದ ವಿಚಾರಣಾ ಸಮಿತಿಯೊಂದು ಮೈಸೂರಿನ ಕಷ್ಟ ಆರ್ಥಿಕಸ್ಥಿತಿಗೆ ಹಾಗೂ ನಗರದ ಬಂಡಾಯಕ್ಕೆ ಒಡೆಯರ ರಾಜನೀತಿ ಕಾರಣವಲ್ಲವೆಂದು ಸ್ಪಷ್ಟಪಡಿಸಿದರೂ ಇವರಿಗೆ ರಾಜ್ಯಾಧಿಕಾರ ಪುನಃ ದಕ್ಕಲಿಲ್ಲ. ಜೀವಿತದ ಕೊನೆಯ ವರ್ಷಗಳಲ್ಲಿ ಬ್ರಿಟಿಷ್ ಸರ್ಕಾರ ಮೈಸೂರು ರಾಜವಂಶದವರಿಗೆ ರಾಜ್ಯ ಸೇರಬೇಕೆಂದು ತೀರ್ಮಾನಿಸಿದರೂ ಅದು ಜಾರಿಗೆ ಬಂದದ್ದು ಇವರ ಮರಣಾನಂತರ, 1881ರಲ್ಲಿ.

ಅನೇಕ ಗೊಂದಲ, ದಂಗೆ, ಯುದ್ಧ, ಕ್ಷೋಭೆ ಹಾಗೂ ಕ್ಷಾಮಗಳ ಶ್ರೇಣಿಯಲ್ಲಿ ಏರಿಳಿದು ಜೀವನಪರ್ಯಂತ ಹೋರಾಟದ ಬದುಕನ್ನೇ ಬಾಳಿದ ಮುಮ್ಮಡಿ ಕೃಷ್ಣರಾಜ ಒಡೆಯರು 1868ರಲ್ಲಿ ನಿಧನಹೊಂದಿದರು.

ಧರ್ಮಭೀರುವಾಗಿದ್ದ ಇವರು ಅನೇಕ ದಾನ ಕಾರ್ಯಗಳನ್ನು ನಡೆಸಿದರು. ನಂಜನಗೂಡು, ಮೇಲುಕೋಟೆ, ಶ್ರೀರಂಗಪಟ್ಟಣ, ಚಾಮುಂಡಿಬೆಟ್ಟ ಇತ್ಯಾದಿ ದೇವಾಲಯಗಳಿಗೂ ಅನೇಕ ಮಠಗಳಿಗೂ ದಾನದತ್ತಿಗಳನ್ನಿತ್ತರು. ಅನೇಕ ಅಗ್ರಹಾರಗಳನ್ನು ಸ್ಥಾಪಿಸಿದರು. ಸೋಸಲೆ, ಮೂಗೂರು, ಮುಡುಕುತೊರೆ, ತಲಕಾಡು, ಬಿಳಿಗಿರಿರಂಗನಬೆಟ್ಟ, ಚಾಮುಂಡಿಬೆಟ್ಟ ಮೊದಲಾದೆಡೆಗಳ ದೇವಾಲಯಗಳ ಜೀರ್ಣೋದ್ಧಾರ ಮಾಡಿದರು. ಮೈಸೂರಿನ ಲಕ್ಷ್ಮೀರಮಣ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ಮತ್ತು ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಗಳ ಮಹಾಗೋಪುರಗಳು ಇವರ ಕಾಲದ ರಚನೆಗಳು. (ಎಚ್.ಆರ್.ಡಿ.ಜಿ.)

ಮುಮ್ಮಡಿ ಕೃಷ್ಣರಾಜರಿಗೆ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರವಾದ ಒಲವಿತ್ತು. ಇವರ ಆಶ್ರಯದಲ್ಲಿ ಪ್ರಸಿದ್ಧ ವಿದ್ವಾಂಸರು, ಕವಿಗಳು, ಶಿಲ್ಪಿಗಳು ಮತ್ತು ಸಂಗೀತಗಾರರು ಕಲಾಸೃಷ್ಟಿಯಲ್ಲಿ ನಿರತರಾಗಿದ್ದರು. ವೀಣೆ ವೆಂಕಟಸುಬ್ಬಯ್ಯ, ಕುಣಿಗಲು ರಾಮಶಾಸ್ತ್ರಿ, ಸೋಸಲೆ ಗರಳಪುರಿಶಾಸ್ತ್ರಿ, ಅಳಿಯ ಲಿಂಗರಾಜ, ಕೆಂಪುನಾರಾಯಣ, ದೇವಚಂದ್ರ, ದೇವಲಾಪುರದ ನಂಜುಂಡ, ಬಸವಪ್ಪಶಾಸ್ತ್ರಿ ಮೊದಲಾದವರನ್ನು ಹೆಸರಿಸಬಹುದು. ರಾಜರು ಇಂಥ ಕವಿಗಳಿಗೆ, ಕಲಾವಿದರಿಗೆ ಆಶ್ರಯ ನೀಡಿದುದೆ ಅಲ್ಲದೆ ಸ್ವತಃ ಕನ್ನಡದಲ್ಲಿ ಹೇರಳವಾಗಿ ಕೃತಿರಚನೆ ಮಾಡಿದ್ದಾರೆ. ಸಂಸ್ಕೃತದಲ್ಲಿ ಕೃಷ್ಣಕಥಾಪುಷ್ಪಮಂಜರಿ, ರಾಮಾಯಣ ಕಥಾಪುಷ್ಪಮಂಜರಿ, ಚಾಮುಂಡಿ ಮಂಗಳಮಾಲಿಕಾ ಎಂಬ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲಿ ಸುಮಾರು ಐವತ್ತೊಂಬತ್ತು ಗ್ರಂಥಗಳು ಇವರ ಹೆಸರಿನಲ್ಲಿವೆ. ಇವು ಇವರ ವಿದ್ವತ್ತು ಪ್ರತಿಭೆಗಳಿಗೆ ಸಾಕ್ಷಿಯಾಗಿವೆ.

ಇವರು ಶೃಂಗಾರಪ್ರಧಾನವಾದ ರತ್ನಾವಳಿ ನಾಟಕವನ್ನು ಗದ್ಯದಲ್ಲಿ ವತ್ಸರಾಜಕಥೆ ಎಂಬ ಹೆಸರಿನಲ್ಲಿ ಬರೆದಿದ್ದಾರೆ. ಸೌಗಂಧಿಕಾಪರಿಣಯವನ್ನು ಭಾಮಿನೀ ಷಟ್ಪದಿಯಲ್ಲಿಯೂ ಗದ್ಯದಲ್ಲಿಯೂ ಬರೆದಿದ್ದಾರೆ. ಕೃಷ್ಣಕಥಾಸಂಗ್ರಹ ಇವರ ಇನ್ನೊಂದು ಗ್ರಂಥ. ಇದರಲ್ಲಿ ಕೃಷ್ಣನ ಅನೇಕ ಅವತಾರಗಳು ವರ್ಣಿತವಾಗಿವೆ. ರಾಮಾವತಾರದ ಕಥೆ 77 ಅಧ್ಯಾಯಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ಬೌದ್ಧಾವತಾರ ಕಪಿಲಾವತಾರಗಳೂ ದತ್ತಾತ್ರೇಯ ವೃತ್ತಾಂತವೂ ವೆಂಕಟೇಶಮಹಾತ್ಮೆ, ಶ್ರೀನಿವಾಸ ಕೊರವಂಜಿಯ ವೇಷ ಧರಿಸಿದ ಪ್ರಸಂಗಗಳೂ ಇಲ್ಲಿ ಸೇರಿವೆ.

ಸಂಸ್ಕೃತ ಭಾಷೆಯಲ್ಲಿದ್ದು ಸಾಮಾನ್ಯ ಜನರಿಗೆ ನಿಲುಕದಿದ್ದ ಭಾರತ ಭಾಗವತಗಳನ್ನು ಇವರು ತಿಳಿಯಾದ ಕನ್ನಡದಲ್ಲಿ ಗದ್ಯರೂಪದಲ್ಲಿ ಬರೆದಿದ್ದಾರೆ. ಕಾಳಿದಾಸನ ಶಾಕುಂತಲ, ವಿಕ್ರಮೋರ್ವಶೀಯ, ಮಾಳವಿಕಾಗ್ನಿ ಮಿತ್ರ ನಾಟಕಗಳು ಕನ್ನಡ ಗದ್ಯರೂಪದಲ್ಲಿವೆ. ಪಂಚತಂತ್ರದ ನೀತಿಕಥೆಗಳನ್ನು ಕನ್ನಡದಲ್ಲಿ ಬಾಲಹಿತಾರ್ಥವಾಗಿ ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ಪದ್ಮಪುರಾಣಾಂತರ್ಗತವಾದ ಅರ್ಕಪುಷ್ಕರಿಣಿ ಮಹಾತ್ಮ್ಯವೂ ಅಖಂಡ ಕಾವೇರಿ ಮಹಾತ್ಮ್ಯವೂ ಸಾಮಾನ್ಯ ಜನರಿಗಾಗಿ ಬರೆದ ಕೃತಿಗಳು. ಅಖಂಡ ಕಾವೇರಿ ಮಹಾತ್ಮ್ಯ ಟೀಕು ಸ್ಕಾಂದ ಪುರಾಣದ ಆಧಾರದ ಮೇಲೆ ರಚಿತವಾದುದು. ಇದರಲ್ಲಿ ಸಂಸ್ಕೃತ ಶ್ಲೋಕಗಳಿಗೆ ವಿವರಣಾತ್ಮಕ ಟೀಕೆಯಿದೆ. ಶ್ರೀತತ್ತ್ವನಿಧಿ ಮುಮ್ಮಡಿಯವರಿಂದ ರಚಿತವಾದ ಒಂದು ವಿಶಿಷ್ಟ ಗ್ರಂಥ. ಇದರಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ ಮತ್ತು ಕೌತುಕನಿಧಿ ಎಂಬ ಒಂಬತ್ತು ನಿಧಿಗಳಿವೆ. ಅವುಗಳಲ್ಲಿರುವ ವಿಷಯಗಳನ್ನು ಸುಲಭವಾಗಿ ಅರಿತುಕೊಳ್ಳಲು ಸಾಧ್ಯವಾಗುವಂತೆ ಚಿತ್ರಗಳನ್ನು ಕೊಡಲಾಗಿದೆ. ಈಗ ಉಪಲಬ್ಧವಿರುವ ಹಸ್ತಪ್ರತಿಯಲ್ಲಿ ಸುಮಾರು ನಾಲ್ಕು ಸಾವಿರ ಚಿತ್ರಗಳಿವೆ. ಈ ಚಿತ್ರಗಳ ಕಲಾಕೌಶಲ ಅದ್ಭುತವಾದುದು. ಕೊನೆಯದಾದ ಕೌತುಕ ನಿಧಿಯಲ್ಲಿ ಪುರಾತನ ಕಾಲದಿಂದ ರೂಢಿಯಲ್ಲಿ ಬಂದಿರುವ ಹಸ್ತಿಬಂಧಾದಿ ಕ್ರೀಡೆಗಳ ವಿವರಣೆ, ಚತುರಂಗಾದಿ ಆಟಗಳ ನಿರೂಪಣೆ ವಿವರವಾಗಿ ಬಂದಿವೆ. ಇದೊಂದು ಸಣ್ಣ ವಿಶ್ವಕೋಶ. ಸಂಖ್ಯಾರತ್ನಮಾಲಾ, ತ್ರೇತಾಗ್ನಿ, ತ್ರಿಮೂರ್ತಿಗಳು, ಗುಣತ್ರಯ, ಪಂಚಮಹಾಪಾತಕಗಳು, ಪಂಚಪ್ರಾಣ, ಪಂಚೇಂದ್ರಿಯಗಳು ಮುಂತಾದವುಗಳ ಸಾರಸಂಗ್ರಹ ಇಲ್ಲಿದೆ.

ಮುಮ್ಮಡಿ ಕೃಷ್ಣರಾಜರದು ಕನ್ನಡದಲ್ಲೊಂದು ಸಂಧಿಕಾಲ. ಈ ಕಾಲದಲ್ಲಿ ರಚನೆಗೊಂಡ ವಾಙ್ಮಯರಾಶಿಯಲ್ಲಿ ಹಳೆಯವು ಹೊಸವು ಹಲವು ಇವೆ. ಇಪ್ಪತ್ತನೆಯ ಶತಮಾನದ ಪ್ರಾರಂಭಕಾಲ ಕನ್ನಡ ಸಾಹಿತ್ಯದ ನವೋದಯ ಕಾಲವಾಗಿದ್ದು ಅದರ ಹಿನ್ನೆಲೆ, ಹತ್ತೊಂಬತ್ತನೆಯ ಶತಮಾನದಲ್ಲಿ ಇವರ ಆಳಿಕೆಯ ದಿನಗಳಲ್ಲಿ ರೂಪುಗೊಂಡಿತೆಂದು ಹೇಳಬೇಕು. (ಎಚ್.ಕೆ.ಆರ್.ಜಿ.)

**ಕೃಷ್ಣರಾಜ ಒಡೆಯರ್ IV :** 1884-1940. ಮೈಸೂರು ಸಂಸ್ಥಾನದ ಮಹಾರಾಜರು (1895-1940) 9ನೆಯ ಚಾಮರಾಜ ಒಡೆಯರ ಮಗ. ತಂದೆಯ ನಿಧನಾನಂತರ 1895ರಲ್ಲಿ ಸಿಂಹಾಸನಾರೋಹಣ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಾಪ್ತವಯಸ್ಕರಾಗುವವರೆಗೆ (1902) ಅವರ ತಾಯಿ ಮಹಾರಾಣಿ ಕೆಂಪರಾಜಮ್ಮಣ್ಣಿಯವರು ರಾಜ್ಯಭಾರವನ್ನು ನೋಡಿಕೊಂಡರು. ಕೃಷ್ಣರಾಜರಿಗೆ ಕಾಲಕ್ಕನುಗುಣವಾದ ಹೊಸ ರೀತಿಯ ವಿದ್ಯೆ ಕೊಡಿಸಲಾಯಿತು. ಮೊದಲಿಗೆ ಜೆ.ಜೆ.ವಿಟ್ಲೆ, ಅನಂತರ ಸ್ಟೂವರ್ಟ್ ಫ್ರೇಸರ್ ಇವರ ಅಧ್ಯಾಪಕರಾಗಿದ್ದರು. ಜೊತೆಗೆ ಕೃಷ್ಣರಾಜರು ರಾಜ್ಯಾದ್ಯಂತ ಪ್ರವಾಸ ಮಾಡಿ ಜನಸಾಮಾನ್ಯರನ್ನು ಭೇಟಿಮಾಡಿ ಆಡಳಿತಾನುಭವ ಪಡೆದುಕೊಂಡರು ದೇಶದ ಸಂಪತ್ತನ್ನು ಪ್ರತ್ಯಕ್ಷವಾಗಿ ಅರಿತುಕೊಂಡರು. ಉತ್ತರ ಭಾರತದ ಅನೇಕ ರಾಜ್ಯಗಳಲ್ಲೂ ಇವರು ಪ್ರವಾಸ ಮಾಡಿದರು. ಪ್ರವಾಸ ಮತ್ತು ಭೇಟಿಗಳೇ ಕೃಷ್ಣರಾಜರ ಜನಪ್ರಿಯತೆಗೆ ಕಾರಣ. ಇವರು 1900ರಲ್ಲಿ ಕಾಠಿಯಾವಾಡದ ಉಪಶಾಖೆಗೆ ಸೇರಿದ ರಾಣಾ ಥಲಬಾಸ್ ಸಿಂಗ್‌ಜೀಯವರ ಪುತ್ರಿ ಪ್ರತಾಪಕುಮಾರಿ ದೇವಿಯವರನ್ನು ವಿವಾಹವಾದರು.

ಕೃಷ್ಣರಾಜ ಒಡೆಯರು ರಾಜ್ಯಾಡಳಿತವನ್ನು 1902ರಲ್ಲಿ ವಹಿಸಿಕೊಂಡರು. ಪ್ರವಾಸಾನುಭವದಿಂದ ರಾಜ್ಯದ ಕೊರತೆಗಳನ್ನು ಕೂಲಂಕಷವಾಗಿ ತಿಳಿದಿದ್ದ ಇವರು ಜನತೆಯಲ್ಲಿ ಪ್ರಜಾಸರ್ಕಾರದ ಬಗ್ಗೆ ಇದ್ದ ಒಲವನ್ನು ಅರಿತುಕೊಂಡಿದ್ದರು. ಸಂಸ್ಥಾನದ ಕಾನೂನು ರಚನೆಯ ಕಾರ್ಯದಲ್ಲಿ ಅಧಿಕಾರಿಗಳು ಮತ್ತು ಸಾರ್ವಜನಿಕ ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ 1907ರಲ್ಲಿ ನ್ಯಾಯವಿಧಾಯಕ ಸಭೆಯನ್ನು ರಚಿಸಿದರು. ಸ್ತ್ರೀಯರಿಗೂ ಮತದಾನದ ಹಕ್ಕನ್ನು ಕಲ್ಪಿಸಿದರು. ವಿದ್ಯಾಭ್ಯಾಸ, ಜನಾರೋಗ್ಯ ರಕ್ಷಣೆ, ನೀರಾವರಿ, ವ್ಯವಸಾಯಾಭಿವೃದ್ಧಿ ಮೊದಲಾದ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಅನೇಕ ಇಲಾಖೆಗಳನ್ನು ವ್ಯವಸ್ಥೆಗೊಳಿಸಿ, ತಾವೇ ಮೇಲ್ವಿಚಾರಣೆ ನಡೆಸಿ ಮೈಸೂರು ಸಂಸ್ಥಾನವನ್ನು ಪ್ರಗತಿಪಥದಲ್ಲಿ ಸಾಗಿಸಿದರು.

ಕೃಷ್ಣರಾಜ ಒಡೆಯರು ಪ್ರವಾಸಪ್ರಿಯರು, ಧರ್ಮಭೀರುಗಳು. 1931ರಲ್ಲಿ ಕೈಲಾಸ ಮಾನಸಸರೋವರ ಯಾತ್ರೆಯನ್ನೂ 1937ರಲ್ಲಿ ಯುರೋಪ್ ಪ್ರವಾಸವನ್ನೂ ಮಾಡಿದರು. ಇವರ ಸಹೋದರರಾದ ಯುವರಾಜ ಕಂಠೀರವ ನರಸರಾಜ ಒಡೆಯರ ವಿದೇಶ ಪ್ರವಾಸದ ಅನುಭವ ಕೃಷ್ಣರಾಜ ಒಡೆಯರ ರಾಜ್ಯಸುಧಾರಣೆಗೆ ಅನೇಕ ವಿಧದಲ್ಲಿ ಸಹಾಯಕವಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಪಿ.ಎನ್. ಕೃಷ್ಣಮೂರ್ತಿ, ವಿ.ಪಿ.ಮಾಧವರಾವ್, ಎಂ.ವಿಶ್ವೇಶ್ವರಯ್ಯ, ಕಾಂತರಾಜ ಅರಸು, ಆಲ್ಬಿಯನ್ ಬ್ಯಾನರ್ಜಿ, ಮಿರ್ಜಾ ಇಸ್ಮಾಯಿಲ್ - ಇವರು ದಿವಾನರಾಗಿ ರಾಜ್ಯದ ಪ್ರಗತಿಗಾಗಿ ಶ್ರಮಿಸಿದರು. ಮುಂಬಯಿ ಪ್ರಾಂತ್ಯದ ಸೇವೆಯಲ್ಲಿದ್ದ ಎಂ.ವಿಶ್ವೇಶ್ವರಯ್ಯನವರನ್ನು ಕರೆಸಿ ಮುಖ್ಯ ಎಂಜಿನಿಯರಾಗಿ ನೇಮಿಸಿದರು. 1912ರಲ್ಲಿ ಅವರನ್ನು ದಿವಾನರನ್ನಾಗಿ ನೇಮಿಸಿ ಅವರಿಂದ ರಾಜ್ಯಕ್ಕೆ ಹಲವಾರು ಆಧುನಿಕ ಯೋಜನೆಗಳು ಕಾರ್ಯಗತಗೊಳ್ಳುವಂತೆ ಪ್ರೇರಕರೂ ಪೋಷಕರೂ ಆಗಿ ನಿಂತವರು ನಾಲ್ವಡಿಯವರು. ಮೈಸೂರು ಸಂಸ್ಥಾನ ಪ್ರಗತಿಪರ ಸಂಸ್ಥಾನವೆಂದು ಕರೆಸಿಕೊಳ್ಳಲು ನಾಲ್ವಡಿಯವರು, ಎಂ.ವಿಶ್ವೇಶ್ವರಯ್ಯನವರು ಮತ್ತು ಸರ್ ಇಸ್ಮಾಯಿಲರು ನೀಡಿದ ಕೊಡುಗೆಗಳು ಅಮೂಲ್ಯವಾದವು. ಇದರ ಪರಿಣಾಮವಾಗಿ ಮೈಸೂರು ಸಂಸ್ಥಾನ ಭಾರತದ ಮಾದರಿ ರಾಜ್ಯ ಎನಿಸಿತು. ವಿಶ್ವಪ್ರಸಿದ್ಧವಾದ ಕೃಷ್ಣರಾಜ ಸಾಗರ ಮತ್ತು ಬೃಂದಾವನ ಹಾಗೂ ಭದ್ರಾವತಿಯ ಕಬ್ಬಿಣದ ಕಾರ್ಖಾನೆ, ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ (1916) - ಇವು ಕೃಷ್ಣರಾಜರ ಮಹತ್ತರ ಸಾಧನೆ. ಇವರು ಮೈಸೂರು ವಿಶ್ವವಿದ್ಯಾನಿಲಯದ ಮೊದಲ ಕುಲಾಧಿಪತಿಯಾಗಿದ್ದರು. ಮಹಾತ್ಮ ಗಾಂಧಿಯವರಿಂದ ರಾಜರ್ಷಿ ಎಂಬ ಬಿರುದನ್ನು ಪಡೆದು, ಆದರ್ಶ ರಾಜನೆನಿಸಿಕೊಂಡು, ಹಿಂದಿನ ಒಡೆಯರುಗಳ ಕನಸುಗಳನ್ನು ನನಸಾಗಿಸಿ, ತನುಮನಧನಗಳನ್ನು ಸವೆಸಿ, ಅನೇಕ ಸುಧಾರಣೆಗಳನ್ನು ಮಾಡಿ, ಅನೇಕ ಉದ್ಯಮ ಸಂಸ್ಥೆಗಳನ್ನು ಸ್ಥಾಪಿಸಿ ಮೈಸೂರು ರಾಜ್ಯಕ್ಕೆ ರಾಮರಾಜ್ಯ ಎಂಬ ಖ್ಯಾತಿ ದೊರಕಿಸಿ ಕೊಟ್ಟ ಕೀರ್ತಿ ಇವರದು.

ನಾಲ್ವಡಿ ಕೃಷ್ಣರಾಜ ಒಡೆಯರು ಬಲಾರಸ್ ಹಿಂದು ವಿಶ್ವವಿದ್ಯಾಲಯದ ಪ್ರಥಮ ಕುಲಾಧಿಪತಿಗಳಾಗಿದ್ದರು. ಆ ವಿಶ್ವವಿದ್ಯಾಲಯ 1921ರಲ್ಲಿ ಇವರಿಗೆ ಡಾಕ್ಟರ್ ಆಫ್ ಲಾ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಚಾಮರಾಜ ಒಡೆಯರು 1888ರಲ್ಲಿ ಏರ್ಪಡಿಸಿದ್ದ ದಸರ ವಸ್ತು ಪ್ರದರ್ಶನವನ್ನು ನಾಲ್ವಡಿ ಕೃಷ್ಣರಾಜ ಒಡೆಯರು 1907ರಲ್ಲಿ ಮತ್ತೆ ಪ್ರಾರಂಭಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರು ಸಂಗೀತಾದಿ ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿ ಮೈಸೂರಿನ ಕೀರ್ತಿಯನ್ನು ಹೆಚ್ಚಿಸಿದರು. ವೈಣಿಕ ಶಿಖಾಮಣಿ ಶೇಷಣ್ಣ, ಭಕ್ಷಿ ಸುಬ್ಬಣ್ಣ, ಬಿಡಾರಂ ಕೃಷ್ಣಪ್ಪ, ಮೈಸೂರು ವಾಸುದೇವಾಚಾರ್ಯ, ತಚ್ಚೂರು ಶಿಂಗರಾಚಾರ್ಯ, ಚಿಂತಲಪಲ್ಲಿ ವೆಂಕಟರಾವ್, ವೀಣೆ ಶಿವರಾಮಯ್ಯ, ವೀಣೆ ವೆಂಕಟಗಿರಿಯಪ್ಪ, ಬಿ.ದೇವೇಂದ್ರಪ್ಪ, ಆರ್.ಎನ್.ಕೇಶವಮೂರ್ತಿ, ಎಂ.ಎಸ್.ಶಿವರುದ್ರಪ್ಪ ಇವರೇ ಮೊದಲಾದ ಸಂಗೀತಗಾರರೂ, ಜಟ್ಟಿ ತಾಯಮ್ಮ, ತಿರುಮಕೂಡಲು ಸುಂದರಮ್ಮ ಮೊದಲಾದ ನಾಟ್ಯ ಕಲಾವಿದೆಯರೂ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದರು. ಆಗಾಗ್ಗೆ ಹೊರಗಿನ ಪ್ರಾಂತ್ಯಗಳ ಪ್ರಸಿದ್ಧ ಉತ್ತರಾದಿ ದಕ್ಷಿಣಾದಿ ಸಂಗೀತ ವಿದ್ವಾಂಸರನ್ನು ಇವರು ಮೈಸೂರಿಗೆ ಆಹ್ವಾನಿಸಿ ಗೌರವಿಸಿದರು. ಕರ್ನಾಟಕ ಸಂಗೀತದ ವಾದ್ಯವೃಂದವನ್ನು ಏರ್ಪಡಿಸಿದವರು ಕೃಷ್ಣರಾಜ ಒಡೆಯರು.

ಹೀಗೆ ಆದರ್ಶ ಪ್ರಭುವಾಗಿ ಹಲವು ಲೋಕೋಪಕಾರಿ ಕಾರ್ಯಗಳನ್ನು ಮಾಡಿ, ಸಾಹಿತ್ಯ ಸಂಸ್ಕೃತಿ ಸಂವರ್ಧನೆಯನ್ನು ಸಾಧಿಸಿ ಜನಪ್ರಿಯರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು 1940ರಲ್ಲಿ ನಿಧನಹೊಂದಿದರು. (ವಿ.ಎಸ್.ಎಸ್.; ಎಚ್.ಆರ್.ಡಿ.ಜಿ.)

**ಕೃಷ್ಣರಾಜನಗರ** : ಮೈಸೂರು ಜಿಲ್ಲೆಯ ಉತ್ತರ ಭಾಗದ ಒಂದು ತಾಲ್ಲೂಕು, ಆ ತಾಲ್ಲೂಕಿನ ಕೇಂದ್ರ. ದಕ್ಷಿಣದಲ್ಲಿ ಹುಣಸೂರು ತಾಲ್ಲೂಕು, ಆಗ್ನೇಯದಲ್ಲಿ ಮೈಸೂರು ತಾಲ್ಲೂಕು, ಈಶಾನ್ಯ ಮತ್ತು ಪೂರ್ವದಲ್ಲಿ ಮಂಡ್ಯ ಜಿಲ್ಲೆ ಉತ್ತರದಲ್ಲಿ ಹಾಸನ ಮತ್ತು ಮಂಡ್ಯ ಜಿಲ್ಲೆಗಳು ಮತ್ತು ಪಶ್ಚಿಮದಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಇವೆ. ಈ ತಾಲ್ಲೂಕಿನ ಮೇರೆಗಳು. ವಿಸ್ತೀರ್ಣ 602.4ಚ.ಕಿಮೀ. ಜನಸಂಖ್ಯೆ 2,39,155. ಕಸಬೆ, ಹೆಬ್ಬಾಳು, ಚುಂಚನಕಟ್ಟೆ, ಸಾಲಿಗ್ರಾಮ, ಮಿರ್ಲೆ, ಹೊಸ ಅಗ್ರಹಾರ ಹೋಬಳಿಗಳು. ಒಟ್ಟು 173 ಗ್ರಾಮಗಳಿವೆ.

ಪಶ್ಚಿಮದಿಂದ ಪೂರ್ವಾಭಿಮುಖವಾಗಿ ತಾಲ್ಲೂಕು ಇಳಿಜಾರಾಗಿದೆ. ಎತ್ತರದ ಬೆಟ್ಟಗಳಾಗಲಿ, ಕಾಡುಗಳಾಗಲಿ ಇಲ್ಲ. ಎತ್ತರದ ಪ್ರದೇಶಗಳಲ್ಲಿ ಕಿರಿ ಪೊದೆಗಳೂ ತಗ್ಗಿನಲ್ಲಿ ಮುಳ್ಳಿನ ಗಿಡಗಳೂ ಇಲ್ಲಿನ ಸ್ವಾಭಾವಿಕ ಸಸ್ಯಗಳು. ಅಲ್ಲಲ್ಲಿ ತೋಪುಗಳುಂಟು. ಇಲ್ಲಿಯ ಮಣ್ಣು ಮರಳು ಮಿಶ್ರಿತ ಕೆಂಪು ಅಥವಾ ಕಂದು ಜೇಡಿ. ಮಣ್ಣಿನ ಗುಣದಲ್ಲಿ ಅಲ್ಲಲ್ಲಿ ವ್ಯತ್ಯಾಸವಿದ್ದರೂ ನೀರಾವರಿಯ ಅನುಕೂಲವಿರುವೆಡೆಯಲ್ಲಿ ಅದನ್ನು ವ್ಯವಸಾಯಕ್ಕೆ ಚೆನ್ನಾಗಿ ಅಳವಡಿಸಿಕೊಳ್ಳಲಾಗಿದೆ. ತಾಲ್ಲೂಕಿನ ಉತ್ತರ ಭಾಗದಲ್ಲಿ ಅತ್ಯಂತ ಪ್ರಾಚೀನವಾದ ಧಾರವಾಡ ಪದರಶಿಲೆಗಳಿವೆ. ಉಳಿದ ಭಾಗಗಳು ಪರ್ಯಾಯದ್ವೀಪೀಯ ನೈಸ್ ಶಿಲೆಯಿಂದ ಕೂಡಿವೆ. ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಸಾಮಾನ್ಯವಾಗಿಯೂ ಅಕ್ಟೋಬರ್‌ನಲ್ಲಿ ಹೆಚ್ಚಾಗಿಯೂ ಮಳೆಯಾಗುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 953ಮಿಮೀ.

ಕಾವೇರಿ ನದಿ ಈ ತಾಲ್ಲೂಕಿನ ನಡುವೆ ಪ್ರವಹಿಸುತ್ತದೆ. ಚುಂಚನಕಟ್ಟೆಯ ಬಳಿ ಇಕ್ಕಟ್ಟಾದ ಕಣಿವೆಯಲ್ಲಿ ಬಂಡೆಗಳ ಮೇಲಿಂದ ದುಮುಕಿ ಮುಂದೆ ಹೇಮಾವತಿ ಮತ್ತು ಲಕ್ಷ್ಮಣತೀರ್ಥಗಳೊಂದಿಗೆ ಕೂಡಿಕೊಳ್ಳುತ್ತದೆ. ಕೃಷ್ಣರಾಜಸಾಗರ ಕಟ್ಟೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿದೆಯಾದರೂ ಆ ಜಲಾಶಯದ ನೀರು ಕೃಷ್ಣರಾಜನಗರದ ಭಾಗದಲ್ಲೂ ಹರಡಿದೆ.

ಕಾವೇರಿಯ ಅಣೆಕಟ್ಟುಗಳಿಂದ ಈ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಒದಗಿಬಂದಿದೆ. ಕಾಲುವೆಗಳ ಒಟ್ಟು ಉದ್ದ 161ಕಿಮೀ ಗಳಿಗಿಂತಲೂ ಹೆಚ್ಚು. ಈ ತಾಲ್ಲೂಕಿನ ಮುಖ್ಯ ಬೆಳೆ ಬತ್ತ. ಕಬ್ಬಿನ ಬೆಳೆ ಈಚೆಗೆ ರೂಢಿಗೆ ಬಂದಿದೆ. ರಾಗಿ ಇಲ್ಲಿಯ ಮುಖ್ಯ ಖುಷ್ಕಿ ಬೆಳೆ. ಎಣ್ಣೆ ಬೀಜಗಳು, ದ್ವಿದಳ ಧಾನ್ಯಗಳು ಮತ್ತು ಹೊಗೆಸೊಪ್ಪು ಇತರ ಬೆಳೆಗಳು. ಇಲ್ಲಿ ತೋಟದ ಬೇಸಾಯವೂ ಬಾಗಾಯ್ತು ಉಂಟು. ತೋಟದ ಬೆಳೆಗಳೆಂದರೆ ಬಾಳೆ, ವೀಳೆಯದೆಲೆ, ಗೆಣಸು ಮತ್ತು ತರಕಾರಿಗಳು.

ಈ ತಾಲ್ಲೂಕಿನಲ್ಲಿ ಅನೇಕ ಗೃಹಕೈಗಾರಿಕೆಗಳುಂಟು. ಅಲ್ಲಲ್ಲಿ ಹತ್ತಿಬಟ್ಟೆ ಮತ್ತು ಕಂಬಳಿಗಳನ್ನು ತಯಾರಿಸುತ್ತಾರೆ.

ಮೈಸೂರು-ಹಾಸನ ರೈಲು ಮತ್ತು ರಸ್ತೆಗಳು ಈ ತಾಲ್ಲೂಕಿನ ಮುಖಾಂತರ ಹಾದುಹೋಗುತ್ತವೆ. ಕೃಷ್ಣರಾಜನಗರದಿಂದ ನೆರೆಯ ತಾಲ್ಲೂಕು ಕೇಂದ್ರಗಳಿಗೆ ರಸ್ತೆಗಳಿವೆ. ಮಿರ್ಲೆ, ಸಾಲಿಗ್ರಾಮ, ಹೊಸ ಅಗ್ರಹಾರ ಮತ್ತು ಹೆಬ್ಬಾಳು ಈ ತಾಲ್ಲೂಕಿನ ಮುಖ್ಯ ಸ್ಥಳಗಳು. ಚುಂಚನಕಟ್ಟೆ, (ನೋಡಿ) ಕಪ್ಪಡಿ ಪವಿತ್ರ ಸ್ಥಳಗಳು. ಚುಂಚನಕಟ್ಟೆಯಲ್ಲಿ ಜನವರಿ ತಿಂಗಳಲ್ಲಿ ದೊಡ್ಡ ಜಾತ್ರೆಯಾಗುತ್ತದೆ. ದನಗಳ ಪ್ರದರ್ಶನ ಈ ಜಾತ್ರೆಯ ಮುಖ್ಯ ಆಕರ್ಷಣೆ.

ಕೃಷ್ಣರಾಜನಗರ ಈ ತಾಲ್ಲೂಕಿನ ಕೇಂದ್ರ. ಜನಸಂಖ್ಯೆ 30,603. ಇದು ತಾಲ್ಲೂಕಿನ ಪ್ರಮುಖ ಸಾರಿಗೆ ಹಾಗೂ ವ್ಯಾಪಾರ ಕೇಂದ್ರ. ಇಲ್ಲಿ ಅನೇಕ ಬತ್ತದ ಗಿರಣಿಗಳಿವೆ. ಹಿಂದೆ ಕಾವೇರಿ ನದಿಯ ದಂಡೆಯಲ್ಲಿ ನದಿ ಎಡಕ್ಕೆ ತಿರುಗುವಲ್ಲಿ ಈ ಊರಿದ್ದು ಇದಕ್ಕೆ ಎಡತೊರೆ ಎಂಬ ಹೆಸರು ಇತ್ತು. ಕೃಷ್ಣರಾಜ ಸಾಗರದ ನಿರ್ಮಾಣ ಆದ ಮೇಲೆ ಅದರಿಂದ ಈ



ಅರ್ಕೇಶ್ವರ ದೇವಾಲಯ, ಕೃಷ್ಣರಾಜನಗರ

ಎಡತೊರೆಯ ಒಂದು ಭಾಗ ಆಗಾಗ ಮುಳುಗಡೆಯಾಗುತ್ತಿದ್ದುದರಿಂದ ಹೊಸ ಪಟ್ಟಣವನ್ನು ಹಳೆಯ ಊರಿಗೆ 3ಕಿಮೀ ದೂರದಲ್ಲಿ ಎತ್ತರವಾದ ಸ್ಥಳದಲ್ಲಿ ನಿರ್ಮಿಸಿ (1934) ನಾಲ್ವಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿ ಕೃಷ್ಣರಾಜನಗರ ಎಂದು ನಾಮಕರಣ ಮಾಡಲಾಯಿತು. ಎಡತೊರೆಯ ಹಳೆಯ ನಿವೇಶನದಲ್ಲಿ ಪ್ರಸಿದ್ಧವಾದ ಅರ್ಕೇಶ್ವರ ದೇವಾಲಯವಿದೆ. ದೇವಾಲಯದ ಪಕ್ಕದಲ್ಲಿ ನದಿಗೆ ಇಳಿಯಲು ಪಾವಟಿಗೆಗಳಿವೆ. ಇದೊಂದು ಸುಂದರ ತಾಣವಾಗಿದೆ. ಇದು ಪವಿತ್ರ ಸ್ಥಳವೂ ಹೌದು. ರಥಸಪ್ತಮಿಯ ದಿನ ಸೂರ್ಯ ರಶ್ಮಿ ನೇರವಾಗಿ ಗರ್ಭಗುಡಿಯ ಲಿಂಗದ ಮೇಲೆ ಬೀಳುವುದು ಇಲ್ಲಿಯ ವೈಶಿಷ್ಟ್ಯ. ಆ ದಿನ ದೊಡ್ಡ ಜಾತ್ರೆ ನಡೆಯುತ್ತದೆ. ದೇವಾಲಯ ಬಹುಶಃ ಮೂಲತಃ ಚೋಳರ ಕಾಲದ್ದು. ಈಗಿನ ಹೆಚ್ಚಿನ ಭಾಗ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಕಟ್ಟಡ. 11ನೆಯ ಶತಮಾನದಲ್ಲಿ ಗಂಗರನ್ನು ಸೋಲಿಸಿ ರಾಜೇಂದ್ರ ಚೋಳ ಈ ಸ್ಥಳವನ್ನು ವಶಪಡಿಸಿಕೊಂಡಿದ್ದ. (ಕೆ.ಆರ್.ಆರ್.; ಟಿ.ಎಲ್.ಕೆ.)

**ಕೃಷ್ಣರಾಜಪೇಟೆ** : ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಈಶಾನ್ಯ, ಪೂರ್ವ ಮತ್ತು ಆಗ್ನೇಯ ದಿಕ್ಕಿನಲ್ಲಿ ನಾಗಮಂಗಲ ಮತ್ತು ಪಾಂಡವಪುರ ತಾಲ್ಲೂಕುಗಳೂ ದಕ್ಷಿಣ ಮತ್ತು ನೈರುತ್ಯದಲ್ಲಿ ಮೈಸೂರು ಜಿಲ್ಲೆಯೂ ಉತ್ತರ ಮತ್ತು ವಾಯವ್ಯ ದಿಕ್ಕುಗಳ ಹಾಸನ ಜಿಲ್ಲೆಯೂ ಈ ತಾಲ್ಲೂಕನ್ನು ಸುತ್ತುವರಿದಿವೆ. 1891ರವರೆಗೆ ಇದಕ್ಕೆ ಅತ್ತಿಗುಪ್ಪೆ ಎಂಬ ಹೆಸರಿತ್ತು. ಆಗ ಇದು ಹಾಸನ ಜಿಲ್ಲೆಗೆ ಸೇರಿತ್ತು. ಆ ವರ್ಷ ಇದಕ್ಕೆ ಕೃಷ್ಣರಾಜಪೇಟೆ ಎಂದು ನಾಮಕರಣ ಮಾಡಿ ಮೈಸೂರು ಜಿಲ್ಲೆಗೆ ವರ್ಗಾಯಿಸಲಾಯಿತು. 1939ರಲ್ಲಿ ಮೈಸೂರು

ಜಿಲ್ಲೆಯನ್ನು ಒಡೆದು ಮಂಡ್ಯ ಜಿಲ್ಲೆಯನ್ನು ನಿರ್ಮಿಸಿದಾಗ ಇದು ಪಾಂಡವಪುರ ಉಪವಿಭಾಗಕ್ಕೆ ಸೇರಿತು. ತಾಲ್ಲೂಕಿನ ವಿಸ್ತೀರ್ಣ 906.3 ಚ.ಕಿಮೀ. ಜನಸಂಖ್ಯೆ 2,47,757. ಅಕ್ಕಿಹೆಬ್ಬಾಳು ಕೃಷ್ಣರಾಜಪೇಟೆ, ಕಿಕ್ಕೇರಿ, ಸೀಳನೆರೆ, ಸಂತೆಬಾಚಹಳ್ಳಿ ಮತ್ತು ಬೂಕನಕೆರೆ ಈ ತಾಲ್ಲೂಕಿನ ಹೋಬಳಿಗಳು. ಒಟ್ಟು 317 ಗ್ರಾಮಗಳಿವೆ.

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಬೆಟ್ಟಗುಡ್ಡಗಳಲ್ಲಿ ಚೆನ್ನಗಿರಿ ಮತ್ತು ಜೆಲ್ಲಿ ಬೆಟ್ಟಗಳು ಮುಖ್ಯವಾದವು. ಜೆಲ್ಲಿ ಬೆಟ್ಟ ಕೃಷ್ಣರಾಜಪೇಟೆಗೆ ಸು.5ಕಿಮೀ ದೂರದಲ್ಲಿದೆ. ಬೆಣಚುಕಲ್ಲು ಮತ್ತು ಬೂದುಬಣ್ಣದ ಶಿಲೆಗಳು ಇಲ್ಲಿವೆ. ದಕ್ಷಿಣದ ಗವಿಬೆಟ್ಟ ಭಾಗದಲ್ಲಿ ಗಟ್ಟಿಯಾದ ಕೆಂಪು ಶಿಲೆಗಳಿವೆ. ಇದರ ಎತ್ತರ ಸಮುದ್ರಮಟ್ಟದಿಂದ ಸು.750 ರಿಂದ 900ಮೀ. ಸೀಳನೆರೆ ಹಳ್ಳಿಯ ಬಳಿ ಕ್ರೋಮೈಟ್ ನಿಕ್ಷೇಪಗಳಿವೆ. ಕೃಷ್ಣರಾಜಪೇಟೆಯ ಪಶ್ಚಿಮಕ್ಕೆ ಬೆಳ್ಳಿಬೆಟ್ಟದ ಬಳಿ ಚಿನ್ನ ದೊರೆಯುವುದೆಂದು ಭಾವಿಸಲಾಗಿದೆ. ಹೇಮಾವತಿ ನದಿ ಕಿಕ್ಕೇರಿ ಹೋಬಳಿಯ ಗುಡ್ಡೆ ಹೊಸಹಳ್ಳಿಯ ಬಳಿ ಈ ತಾಲ್ಲೂಕನ್ನು ಪ್ರವೇಶಿಸಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿದು ಕಾವೇರಿಯನ್ನು ಸೇರಿಕೊಳ್ಳುತ್ತದೆ.

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣಿನ ಪ್ರದೇಶ ಹೆಚ್ಚು. ಕೆಲವು ಕಡೆಗಳಲ್ಲಿ ಜೇಡಿಮಣ್ಣಿನ ನೆಲವಿದೆ. ಹೆಚ್ಚು ಪ್ರದೇಶ ಬಂಜರು ನೆಲ. ಪೊದೆ ಅಥವಾ ಕುರುಚಲು ಗಿಡಗಳಿಂದ ಕೂಡಿದ ಕಾಡುಗಳು ಅಲ್ಲಲ್ಲಿ ಕಂಡುಬರುತ್ತವೆ.

ತಾಲ್ಲೂಕಿನಲ್ಲಿ ಮುಂಗಾರು ಮತ್ತು ಹಿಂಗಾರು ಮಾರುತಗಳಿಂದ ಮತ್ತು ಏಪ್ರಿಲ್‌ನಿಂದ ನವೆಂಬರ್‌ವರೆಗೆ ನೈಋತ್ಯ ಮಾರುತಗಳಿಂದ ಮಳೆಯಾಗುವುದು. ಅಕ್ಟೋಬರ್ ಮಳೆಯ ಶಿಖರ ಮಾಸ. ಮಾರ್ಚ್-ಮೇ ತಿಂಗಳುಗಳಲ್ಲಿ ಉಷ್ಣತೆ ಹೆಚ್ಚು.

ಕೃಷ್ಣರಾಜಪೇಟೆಯ ಮುಖ್ಯ ವೃತ್ತಿ ವ್ಯವಸಾಯ; ಸೇ.90ರಷ್ಟು ಜನ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. 24,344 ಎಕರೆಗಳಷ್ಟು ಭೂಮಿ ಕೃಷಿ ಯೋಗ್ಯವಲ್ಲ. ಸು.1,10,755 ಎಕರೆ ಭೂಮಿ ಸಾಗುವಳಿಗೆ ಒಳಪಟ್ಟಿದೆ. ಈ ತಾಲ್ಲೂಕಿನ ವ್ಯವಸಾಯ ಮಳೆಯನ್ನೇ ಬಹುವಾಗಿ ಅವಲಂಬಿಸಿದೆ. ಕೆರೆ, ಕಾಲುವೆ ಮತ್ತು ಬಾವಿಗಳೂ ಇವೆ.

ಈ ತಾಲ್ಲೂಕಿನಲ್ಲಿ ಕಾರು ಮತ್ತು ಹೈನು ಎಂಬ ಎರಡು ಬೆಳೆಗಳನ್ನು ಬೆಳೆಯುವರು. ಕಾರು ಬೆಳೆ ಜೂನ್-ಜುಲೈ ತಿಂಗಳುಗಳಲ್ಲೂ ಹೈನು ಬೆಳೆ ಡಿಸೆಂಬರ್-ಜನವರಿಗಳಲ್ಲೂ ಕಟಾವಾಗುತ್ತದೆ. ರಾಗಿ, ಬತ್ತ, ಹುರುಳಿ ಮತ್ತು ಜೋಳ ಇಲ್ಲಿನ ಮುಖ್ಯ ಬೆಳೆಗಳು. ಕಬ್ಬು, ನೆಲಗಡಲೆ, ಬಾಳೆ, ತೆಂಗು, ಹೊಗೆಸೊಪ್ಪು, ಇವನ್ನೂ ಬೆಳೆಯುತ್ತಾರೆ. ಇಲ್ಲಿ ಬನ್ನೂರು ಜಾತಿಯ ಕುರಿ ಸಾಕಣೆ ಇದೆ. ದನ ಮತ್ತು ಕೋಳಿ ಸಾಕಣೆಯೂ ಸಾಕಷ್ಟು ರೂಢಿಯಲ್ಲಿದೆ. (ಪಿ.ಎಚ್.)

ಈ ತಾಲ್ಲೂಕಿನ ಅಗ್ರಹಾರಬಾಚಹಳ್ಳಿ, ಅಘಲಯ, ಕಿಕ್ಕೇರಿ, ಗೋವಿಂದನಹಳ್ಳಿ, ತೆಂಗಿನಘಟ್ಟ, ತೊಣಚಿ, ಮಾದಾಪುರ ಮತ್ತು ಹೊಸಹೊಳಲು (ಆಯಾ ಲೇಖನಗಳನ್ನು ನೋಡಿ) ಈ ಸ್ಥಳಗಳು 12-13ನೆಯ ಶತಮಾನಗಳಲ್ಲಿ ಕಟ್ಟಿದ ಹೊಯ್ಸಳ ದೇವಾಲಯಗಳಿಗೆ ಪ್ರಸಿದ್ಧವಾಗಿವೆ. ಅಂಕನಹಳ್ಳಿಯಲ್ಲಿ ವ್ಯಾಸನತೋಳುಕಲ್ಲು ರೀತಿಯ ಮಾಸ್ತಿಕಲ್ಲುಗಳಿವೆ. ಸಾಸಲು ವೀರಶೈವರ ಯಾತ್ರಾಸ್ಥಳ. ತೆಂಡೆಕೆರೆಯಲ್ಲಿ ಒಂದು ಲಿಂಗಾಯತ ಮಠವಿದೆ. ಹೇಮಾವತಿ ದಡದಲ್ಲಿರುವ ಹೇಮಗಿರಿಯ (ನೋಡಿ) ಜಾತ್ರೆ ಈ ಸುತ್ತಿಗೆ ಪ್ರಸಿದ್ಧ. ಕಿಕ್ಕೇರಿ ಮತ್ತು ಸಿಂದಘಟ್ಟಗಳಲ್ಲಿ ರೇಷ್ಮೆ ನೂಲುವಿಕೆ ಮುಖ್ಯ ಉದ್ಯಮವಾಗಿದೆ.

ಕೃಷ್ಣರಾಜಪೇಟೆ ಈ ತಾಲ್ಲೂಕಿನ ಕೇಂದ್ರ. ಮಂಡ್ಯಕ್ಕೆ ವಾಯುವ್ಯ ದಿಕ್ಕಿನಲ್ಲಿದ್ದು ಪಾಂಡವಪುರ ರೈಲ್ವೆ ನಿಲ್ದಾಣದಿಂದ 33ಕಿಮೀ ಮತ್ತು ಮೈಸೂರಿಗೆ 53ಕಿಮೀ ದೂರದಲ್ಲಿದೆ. ಜನಸಂಖ್ಯೆ 22,473. 1891ರ ವರೆಗೂ ಇದನ್ನು ಅತ್ತಿಗುಪ್ಪೆ ಎಂದು ಕರೆಯುತ್ತಿದ್ದರು. ಇದು ತಾಲ್ಲೂಕಿನ ವ್ಯಾಪಾರ ಕೇಂದ್ರ. ಮೈಸೂರು-ಹಾಸನ ರಸ್ತೆ ಈ ಊರಿನ ಮೂಲಕ ಹೋಗುತ್ತದೆ. ಇಲ್ಲಿಂದ ನಾಗಮಂಗಲ, ಅಕ್ಕಿಹೆಬ್ಬಾಳು, ಮೇಲುಕೋಟೆ, ಪಾಂಡವಪುರ, ಮಂಡ್ಯ ಮುಂತಾದ ಕಡೆಗಳಿಗೆ ಮಾರ್ಗಸಂಪರ್ಕವಿದ್ದು ವಾಹನ ಸೌಕರ್ಯವಿದೆ. *

**ಕೃಷ್ಣರಾಜ, ಶಾಲ್ಯದ :** 1748-75. ಮೈಸೂರು ರಾಜರ ವಂಶದವನಾದ ಈತ ಕನ್ನಡ, ಸಂಸ್ಕೃತ, ತೆಲುಗು ಭಾಷೆಗಳಲ್ಲಿ ಗ್ರಂಥಗಳನ್ನು ಬರೆದಿರುವಂತೆ ತಿಳಿದುಬರುತ್ತದೆ. ಈತನನ್ನು ಶಾಲ್ಯದ ಅರಸು ಎಂದು ಕರೆಯುವುದೂ ಉಂಟು. ಅಕ್ಷರಾದಿ ನಿಘಂಟು, ಅಧ್ಯಾತ್ಮ ರಾಮಾಯಣದ ಉತ್ತರಕಾಂಡ, ಅನುಭವರಸಾಯನ, ಟೀಕಿನ ಕೀರ್ತನೆ, ಧರ್ಮಗುಪ್ತಚರಿತ್ರೆ, ನಳನಾಟಕ, ನಿಜದೀಪಿಕಾರತ್ನ, ನಿರ್ಣಯಶಿಖಾಮಣಿ, ಬಾಹಟದ ಟೀಕೆ, ಭಕ್ತಿಮಾರ್ಗಸರೋವರ, ಮೋಕ್ಷಲಕ್ಷ್ಮೀಮಂದಿರ, ಯಯಾತಿಕಾವ್ಯ, ವಿವೇಕಾಭರಣ, ವ್ರತಚರ್ಯೆ, ಷಟ್ಪ್ರತ್ಯಯ, ಸದಾಶಿವಶತಕ, ಅಪ್ರಸ್ತುತ (ಪ್ರಶಂಸಾಶತಕ) ಪ್ರಾಣೇಶ್ವರಶತಕ - ಇವು ಈತನ ಕೃತಿಗಳು. ಇವುಗಳಲ್ಲಿ ಕೆಲವು ಸಂಸ್ಕೃತ ಗ್ರಂಥಗಳಿರಬಹುದೆಂದು ಕವಿಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ. ಹತ್ತು ಗ್ರಂಥಗಳು ಮಾತ್ರ ದೊರಕಿವೆ. ಜಗತ್ತಿನಲ್ಲಿ ಬೇಗುದಿಗೊಳ್ಳುವ ಜನರನ್ನು ನೋಡಿ ಕರುಣದಿಂದ ಭಕ್ತಿ, ಜ್ಞಾನ, ವೈರಾಗ್ಯಪರವಾದ ಗ್ರಂಥಗಳನ್ನು ತಾನು ಬರೆದುದಾಗಿ ಹೇಳಿಕೊಂಡಿರುವ ಇವನು ಷಟ್ಪದಿ, ಶತಕ, ಕೀರ್ತನೆ, ಯಕ್ಷಗಾನ ಈ ಎಲ್ಲ ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದಾನೆ.

ವಿವೇಕಾಭರಣ ಭಾಮಿನೀಷಟ್ಪದಿಯಲ್ಲಿದೆ. ಶ್ರೀರಂಗಪಟ್ಟಣದ ತ್ರಯಂಬಕ ಗುರು ತನ್ನ ಶಿಷ್ಯ ನರಸಾರ್ಯನಿಗೆ ನಿಗಮಾರ್ಥಗಳನ್ನು ಉಪದೇಶಿಸಿದ. ಆ ಉಪದೇಶ ಸಾರವನ್ನು ಸಂಸ್ಕೃತದಲ್ಲಿ ಜ್ಞಾನಸರ್ವಸ್ವ ಎಂಬ ಗ್ರಂಥದಲ್ಲಿ ನರಸಾರ್ಯ ನಿರೂಪಿಸಿದ. ಅದನ್ನು ಕನ್ನಡಿಸುವಂತೆ ಇವನಿಗೆ ಹೇಳಲು ಇವನು ಅದನ್ನು ವಿವೇಕಾಭರಣ ಎಂಬ ಗ್ರಂಥದಲ್ಲಿ ನೆರವೇರಿಸಿದ. ಪೂರ್ವ ಪುರಾಣೋಕ್ತಿಗಳ ಘನಸಾರವನ್ನು ನರಸಾರ್ಯನ ಗ್ರಂಥದಿಂದ ತೆಗೆದು ಎಲ್ಲರಿಗೂ ತಿಳಿಯುವಂತೆ, ತಿಳಿವು ನೆಲೆಗೊಳ್ಳುವ ಹಾಗೆ, ಶಾಸ್ತ್ರದ ಬಳಕೆ ತಲೆದೋರುವ ಹಾಗೆ, ಸಂದೇಹ ಉದಿಸದಂತೆ, ನಂಬಿಕೆ ಹುಟ್ಟುವಂತೆ ಕೃಷ್ಣರಾಜ ನಿರೂಪಿಸಿದ. ಇದರೊಳಗೆ ತನ್ನನ್ನು ನೋಡುವವನಿಗೆ ನಿಜಭಾವ ಕಾಣಿಸುವುದು ಎಂದಿದ್ದಾನೆ ಕವಿ.

ಸದಾಶಿವಶತಕದಲ್ಲಿ ಸದಾಶಿವ ಎಂದು ಕೊನೆಗೊಳ್ಳುವ ನೂರೊಂದು ವೃತ್ತಗಳಿವೆ. ಆರ್ತನಾಗಿ ಭಕ್ತಿಯಿಂದ ಮನಸ್ಸಿನ ಭಾವವನ್ನು ಕವಿ ಇಲ್ಲಿ ಹೊರಪಡಿಸಿರುವುದನ್ನು ಕಾಣಬಹುದು. ಪ್ರಾಣೇಶ್ವರಾ ಎಂಬ ಪದದಿಂದ ಕೊನೆಯಾಗುವ 102 ವೃತ್ತಗಳ ಗ್ರಂಥ ಪ್ರಾಣೇಶ್ವರಶತಕ. ನೀತಿಯನ್ನು ಇಲ್ಲಿ ಅನ್ಯೋಕ್ತಿರೂಪವಾಗಿ ಬೋಧಿಸಲಾಗಿದೆ.

ಟೀಕಿನ ಕೀರ್ತನೆಯಲ್ಲಿ ವೇದಾಂತವನ್ನು ಬೋಧಿಸುವ ಪದಗಳೂ ಅವುಗಳ ಮೇಲಿನ ವ್ಯಾಖ್ಯಾನವೂ ಇವೆ. ಭಕ್ತಿಮಾರ್ಗ ಸರೋವರದಲ್ಲಿ 86 ಕೀರ್ತನಗಳಿವೆ. ನಿಜದೀಪಿಕಾರತ್ನದಲ್ಲಿ ಹಾಡು, ವಚನ, ಸಾಂಗತ್ಯ ಮೂರೂ ಬರುತ್ತವೆ. ಧರ್ಮಗುಪ್ತ ಚರಿತ್ರೆ ಒಂದು ಯಕ್ಷಗಾನ. ಅನುಭವರಸಾಯನ ಗದ್ಯಗ್ರಂಥ; ಗುರು ಶಿಷ್ಯರ ಸಂವಾದದ ಮೂಲಕ ಜ್ಞಾನಮೋಕ್ಷಗಳ ತಿಳಿವಳಿಕೆಯನ್ನು ಕೊಡುತ್ತದೆ. ಈ ಗ್ರಂಥದಲ್ಲಿ ಅಂದಿನ ವ್ಯವಹಾರದಲ್ಲಿದ್ದ ಸರಳ ಸುಲಭ ಕನ್ನಡದ ಬಳಕೆ ಕಂಡುಬರುತ್ತದೆ. ಪುಟ್ಟ ಪುಟ್ಟ ವಾಕ್ಯಗಳನ್ನು ರಮ್ಯವಾಗಿ ಹೆಣೆದಿರುವುದು ಇಲ್ಲಿನ ವೈಶಿಷ್ಟ್ಯ. ಭಾಷೆ ಹೊಸಗನ್ನಡ ಗದ್ಯಕ್ಕೆ ಹತ್ತಿರವಾಗಿದೆ. *

**ಕೃಷ್ಣರಾಜಸಾಗರ :** ಮಂಡ್ಯ ಜಿಲ್ಲೆಯಲ್ಲಿ ಕನ್ನಂಬಾಡಿಯ ಬಳಿ ಕಾವೇರಿ ನದಿಗೆ ಕಟ್ಟೆ ಕಟ್ಟಿ ನಿರ್ಮಿಸಿರುವ ಜಲಾಶಯ. ಮೈಸೂರು ನಗರಕ್ಕೆ ವಾಯುವ್ಯದಲ್ಲಿ 16ಕಿಮೀ ದೂರದಲ್ಲಿದೆ. ಈ ಕಟ್ಟೆಯನ್ನು ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿಗಳ ಸಂಗಮದ ಸ್ಥಳದಿಂದ ಕೆಳಗೆ ಕಾವೇರಿಗೆ ಅಡ್ಡಲಾಗಿ ಇತಿಹಾಸಪ್ರಸಿದ್ಧ ಶ್ರೀರಂಗಪಟ್ಟಣಕ್ಕೆ 14ಕಿಮೀ ಮೇಲುಗಡೆ ಕಟ್ಟಲಾಗಿದೆ. ಈ ಜಲಾಶಯವನ್ನು ಕಟ್ಟುವ ಯೋಚನೆ 1870ರಿಂದಲೂ ಇತ್ತು. 1900ರಲ್ಲಿ ಮೈಸೂರು ಸರ್ಕಾರ ಕೆ.ಶೇಷಾದ್ರಿ ಅಯ್ಯರ್ ದಿವಾನರಾಗಿದ್ದಾಗ ಕೋಲಾರದ ಚಿನ್ನದ ಗಣಿಗಳಿಗೆ ವಿದ್ಯುತ್ತನ್ನು ಒದಗಿಸಲು ಶಿವಸಮುದ್ರದ ವಿದ್ಯುತ್ಕೇಂದ್ರದ ಯೋಜನೆ ಕೈಗೊಂಡಿತು. ಬೇಸಗೆಯಲ್ಲಿ ನದಿಯ ಪ್ರವಾಹ 50 ಕ್ಯೂಸೆಕ್ಕುಗಳಿಗೆ ಇಳಿಯುತ್ತಿದ್ದುದರಿಂದ

ಶಿವಸಮುದ್ರದ ಮೇಲಿನ ಅಣೆಕಟ್ಟುಗಳಲ್ಲಿ ತಾತ್ಕಾಲಿಕವಾಗಿ ನೀರನ್ನು ಕೂಡಿಡಲು ವರ್ಷಕ್ಕೆ ಅರ್ಧ ಲಕ್ಷ ರೂಪಾಯಿ ವ್ಯಯಮಾಡಬೇಕಾಗುತ್ತಿತ್ತು. ವಿಶ್ವೇಶ್ವರಯ್ಯನವರು ಮೈಸೂರಿನ ಪ್ರಧಾನ ಎಂಜನಿಯರಾಗಿ ಬಂದಾಗ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿಯಲ್ಲಿ ಕಲ್ಲುಗಾರೆಯ ಕಟ್ಟೆ ಕಟ್ಟಿ ಜಲಾಶಯ ನಿರ್ಮಿಸಿ, ಚಿನ್ನದ ಗಣಿಗಳಿಗೆ ವಿದ್ಯುತ್ತನ್ನೂ ಮಂಡ್ಯ ಮತ್ತು ಮಳವಳ್ಳಿಯ ಬೆಂಗಾಡು ಭೂಮಿಗೆ ನೀರನ್ನೂ ಒದಗಿಸುವುದಕ್ಕೆ 1911ರ



ಕೃಷ್ಣರಾಜಸಾಗರ ಅಣೆಕಟ್ಟು

ನವೆಂಬರಿನಲ್ಲಿ 89ಲಕ್ಷ ರೂಪಾಯಿ ಖರ್ಚಿನ ಒಂದು ಯೋಜನೆ ತಯಾರಿಸಿದರು. ಅದರಂತೆ ಕೆಲಸ ಪ್ರಾರಂಭವಾಯಿತು. ಜಲಾಶಯವನ್ನು 124 ಅಡಿಗಳಿಗೆ ಏರಿಸುವ ಯೋಜನೆಯನ್ನು ತಯಾರಿಸಿದ್ದರೂ ಮದರಾಸು ಸರ್ಕಾರದ ಆಕ್ಷೇಪಣೆಯಿಂದಾಗಿ ಮೊದಲು ಕೇಂದ್ರ ಸರ್ಕಾರದಿಂದ 80 ಅಡಿಗಳ ಎತ್ತರಕ್ಕೆ ಕಟ್ಟಲು ಅನುಮತಿ ದೊರೆಯಿತು. ಆದರೆ ವಿಶ್ವೇಶ್ವರಯ್ಯನವರು 124 ಅಡಿ ಎತ್ತರದ ಕಟ್ಟೆಗೆ ಸಾಕಾಗುವಂತಹ ತಳಪಾಯವನ್ನೇ ಹಾಕಿದರು. ಚಿನ್ನದ ಗಣಿಗಳೊಂದಿಗೆ ಮಾಡಿಕೊಂಡ ಒಪ್ಪಂದದಂತೆ 1915ರ ಜೂನ್‌ನಲ್ಲಿ 50 ಅಡಿ ಆಳದ ನೀರನ್ನು ಜಲಾಶಯದಲ್ಲಿ ಶೇಖರಿಸಿದರು. ಆಗ ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿದ್ದರು.

ಮದಾರಾಸು ಸರ್ಕಾರ ತಂಜಾವೂರಿನ ಭೂಮಿಗೆ ನೀರು ಸಾಲದೆ ಹೋಗುತ್ತದೆಂದು ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿತ್ತು. ದೀರ್ಘ ಚರ್ಚೆಯ ಅನಂತರ 1924ರಲ್ಲಿ ಮೈಸೂರು-ಮದರಾಸು ಸರ್ಕಾರಗಳಿಗೆ ಈ ಮುಂದಿನಂತೆ ಒಪ್ಪಂದವಾಯಿತು.

1. ಕೃಷ್ಣರಾಜಸಾಗರದ ಕಟ್ಟೆಯನ್ನು 130 ಅಡಿ ಎತ್ತರಕ್ಕೆ ಎತ್ತಿ ಜಲಾಶಯದಲ್ಲಿ 124 ಅಡಿ ಎತ್ತರದ ನೀರನ್ನು ಶೇಖರಿಸಿ 49,229 ಮಿಲಿಯನ್ ಸಲೆ ಅಡಿ ನೀರನ್ನು ಕೂಡಿಟ್ಟು 1,25,000 ಎಕರೆಗಳಿಗೆ ನೀರನ್ನು ಮೈಸೂರು ಸರ್ಕಾರ ಒದಗಿಸಿಕೊಳ್ಳಬಹುದು. 2. ಇದಲ್ಲದೆ ಕಾವೇರಿ ಮತ್ತು ಅದರ ಉಪನದಿಗಳಿಗೆ ಅಡ್ಡಲಾಗಿ ಒಟ್ಟು 45,000 ಮಿಲಿಯನ್ ಸಲೆ ಅಡಿ ನೀರನ್ನು ಕೂಡಿಟ್ಟು ಇನ್ನೂ 1,10,000 ಎಕರೆಗಳಿಗೆ ನೀರಾವರಿಯನ್ನು ವಿಸ್ತರಿಸಬಹುದು. 3. ಕಾವೇರಿ ಮತ್ತು ಉಪನದಿಗಳಿಂದ ಈಗ ಇರುವ ನಾಲೆಗಳ ಕೆಳಗೆ ನೀರಿನ ತೆರಿಗೆಯನ್ನು ಹೆಚ್ಚಿಸಿ ಆಗ ಇದ್ದ ನೀರಾವರಿಯನ್ನು 33.33% ರಷ್ಟು ಹೆಚ್ಚಿಸಬಹುದು. 1974ರಲ್ಲಿ ಈ ಒಪ್ಪಂದದ ಅವಧಿ ಮುಗಿಯಿತು.

1924ರಲ್ಲಿ ಕಾವೇರಿ ಮತ್ತು ಉಪನದಿಗಳಲ್ಲಿ ಅಭೂತಪೂರ್ವವಾದ ಪ್ರವಾಹ ಬಂತು. 1924ರಲ್ಲಿ ಇಲ್ಲಿ 2.8 ಲಕ್ಷ ಸಲೆ ಅಡಿ ನೀರು ಒಂದು ಸೆಕೆಂಡಿನಲ್ಲಿ ಹರಿಯಿತು. ಇದರಿಂದಾಗಿ ಜಲಾಶಯದ ಕೋಡಿಯನ್ನು 3.5 ಲಕ್ಷ ಕ್ಯೂಸೆಕ್ಸ್ ನೀರನ್ನು ಸುರಕ್ಷಿತವಾಗಿ ಕಟ್ಟೆಯಿಂದ ಬಿಡುವ ಹಾಗೆ ಕಟ್ಟಬೇಕಾಯಿತು. ಜಲಾಶಯದ ಒಟ್ಟು ಜಲಾನಯನ ಭೂಮಿ 10,619ಚ.ಕಿಮೀ.

ಇಲ್ಲಿ ನದಿಯ ತಳ ಸಮುದ್ರಮಟ್ಟದ ಮೇಲೆ 2,344' ಎತ್ತರದಲ್ಲಿದೆ. ಕಟ್ಟೆಯನ್ನು ಗ್ರಾನೈಟ್‌ನೈಸ್ ಬಂಡೆಯ ತಳಪಾಯದ ಮೇಲೆ ಕಟ್ಟಲಾಗಿದೆ. ತಳಪಾಯದ ಸರಾಸರಿ ಆಳ 16', ಕಟ್ಟೆಯ ಅಗಲ ತಳಪಾಯದಲ್ಲಿ 111', ನದಿಯ ತಳದ ಮೇಲೆ ಕಟ್ಟೆಯ ಗರಿಷ್ಠ ಎತ್ತರ 134'. ಕಟ್ಟೆಯ ಮೇಲುಗಡೆ ರಸ್ತೆಯ ಅಗಲ 14.25', ಕಟ್ಟೆಯ ಉದ್ದ 8,600.

ಕಟ್ಟೆಯಲ್ಲಿ ಒಟ್ಟು 48,330 ಮಿಲಿಯನ್ ಸಲೆ ಅಡಿ ನೀರು ಹಿಡಿಯುತ್ತದೆ. ಜಲಾಶಯದ ನೀರು ಮೇಲುಗಡೆ 50 ಚದರ ಮೈಲಿಯಷ್ಟು ಹರಡಿರುತ್ತದೆ. ಸರೋವರದ ಸರಾಸರಿ ಉದ್ದ 40ಕಿ.ಮೀ. ಅಗಲ 8ಕಿ.ಮೀ. ಕಟ್ಟೆಯ ನೀರಿನಲ್ಲಿ ಒಟ್ಟು 31,943 ಎಕರೆ ಭೂಮಿ ಮುಳುಗಡೆಯಾಗಿದೆ. ಈ ಪೈಕಿ 9,520 ಎಕರೆ ತರಿ, 13,923 ಎಕರೆ ಹಿಡುವಳಿಯಲ್ಲಿದ್ದ ಖುಷ್ಕಿ. 8,500 ಎಕರೆ ಸರ್ಕಾರದ ವಶದಲ್ಲಿದ್ದ ಪಾಳು ಭೂಮಿ. ಕಟ್ಟೆಯನ್ನು ಮಾರಿಕಣಿವೆ ಕಟ್ಟೆಯಂತೆಯೇ ಗ್ರಾನೈಟ್ ಕಲ್ಲು ಮತ್ತು ಸುರ್ಕಿಗಾರೆಯಿಂದ ಕಟ್ಟಲಾಗಿದೆ. ಕಟ್ಟೆಯ ತಳಪಾಯದಲ್ಲಿ 90 ಲಕ್ಷ ಸಲೆ ಅಡಿ ಕಲ್ಲು ಮತ್ತು ಮಣ್ಣನ್ನು ತೆಗೆದಿದ್ದಾರೆ. ಇದರ ತಳಪಾಯದ ಕಲ್ಲಿನ ಮೇಲೆ ಚದರ ಅಡಿಗೆ 9 ಟನ್ನಿನ ಗರಿಷ್ಠ ಒತ್ತಡದ ತ್ರಾಸ ಬೀಳುತ್ತದೆ. ಕಲ್ಲುಗಾರೆಯ ತೂಕ ಸಲೆ ಅಡಿಗೆ 146 ಪೌಂಡ್. ಕಲ್ಲುಗಾರೆಯ ಕಟ್ಟೆಯ ತೂಕ ಮತ್ತು ಕೂಡಿಟ್ಟ ನೀರಿನ ಒತ್ತಡ ಇವನ್ನೆಲ್ಲ ಗಣನೆಗೆ ತೆಗೆದುಕೊಂಡಾಗ ತಳಪಾಯದ ಮೇಲೆ 8.9 ಟನ್ನಿನ ಗರಿಷ್ಠ ಒತ್ತಡದ ತ್ರಾಸ ಬೀಳುತ್ತದೆ. (ಪೆರಿಯಾರ್ ನದಿಗೆ ಅಡ್ಡವಾಗಿ 170' ಎತ್ತರವಾದ ಕಾಂಕ್ರೀಟಿನ ಕಟ್ಟೆಯ ತಳದ ಮೇಲೆ ಚದರ ಅಡಿಗೆ 9 ಟನ್ ತ್ರಾಸ ಬೀಳುತ್ತದೆ). ಕೃಷ್ಣರಾಜ ಸಾಗರ ಕಟ್ಟೆ 30 ಮಿಲಿಯನ್ ಸಲೆ ಅಡಿ ಕಲ್ಲುಗಾರೆಯಿಂದ ಕೂಡಿದ್ದು ಆಗ್ಗೆ ಭಾರತದಲ್ಲಿಯೇ ಅತ್ಯಂತ ದೊಡ್ಡ ಕಲ್ಲುಗಾರೆಯ ಕಟ್ಟೆಯಾಗಿತ್ತು.

ಹಿನ್ನೀರಲ್ಲಿ ಮುಳುಗಿದ್ದು ಈಗ ಸ್ಥಳಾಂತರಗೊಂಡಿರುವ ವೇಣುಗೋಪಾಲಸ್ವಾಮಿ ದೇವಾಲಯ

ಕಟ್ಟೆಯಲ್ಲಿ ಹಲವು ತೂಬುಗಳಿವೆ. ಒಂದು ತೂಬಿನಿಂದ ನೀರು 350' ಉದ್ದವಾದ ಸಣ್ಣ ಸುರಂಗದ ಮೂಲಕ ಹರಿದು 3,500 ಎಕರೆ ಭೂಮಿಗೆ ನೀರಾವರಿಯನ್ನು ಒದಗಿಸುವ ಬಲದಂಡೆಯ ನಾಲೆಗೆ ಹೋಗುತ್ತದೆ. ಉತ್ತರ ದಡದ ತೂಬಿನಿಂದ ವಿಶ್ವೇಶ್ವರಯ್ಯ ನಾಲೆಗೆ (ಹಿಂದೆ ಇರ್ವಿನ್ ನಾಲೆ ಎಂಬ ಹೆಸರಿತ್ತು) ನೀರನ್ನು ಬಿಟ್ಟು ಮಂಡ್ಯ ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ 1,20,000 ಎಕರೆ ಭೂಮಿಗೆ ನೀರಾವರಿಯನ್ನು ಒದಗಿಸಿದ್ದಾರೆ. ಜಲಾಶಯದ ನೀರು 124' ಮಟ್ಟದಲ್ಲಿದ್ದಾಗ 1.42 ಲಕ್ಷ ಕ್ಯೂಸೆಕ್ಸುಗಳಷ್ಟು ನೀರನ್ನು ಹೊರಸಾಗಿಸಲು ನಡುಹೊಳೆಯಲ್ಲಿ 8 ಬಾಗಿಲುಗಳು, 50' ಎತ್ತರದಲ್ಲಿ 3 ಮತ್ತು 80' ಎತ್ತರದಲ್ಲಿ 16 ಬಾಗಿಲುಗಳಿವೆ. 1924ರಲ್ಲಿ ಬಂದಂಥ ಮಹಾಪ್ರವಾಹವನ್ನು ನಿಯಂತ್ರಿಸಲು 103' ಮಟ್ಟದ 48 ಬಾಗಿಲುಗಳ ಮೇಲುಗಡೆ 114' ಮಟ್ಟದಲ್ಲಿ 48 ಬಾಗಿಲುಗಳನ್ನೂ ಇಟ್ಟಿದೆ. ಇವುಗಳಲ್ಲಿ ಕೆಳಗಿನ ಬಾಗಿಲುಗಳನ್ನು ಕೈಯಿಂದ ಎತ್ತಬೇಕು. ಮೇಲಿನ ಕಂಡಿಗಳಿಗೆ ಎಂ.ವಿಶ್ವೇಶ್ವರಯ್ಯ ಅವರ ಉಪಜ್ಞೆಯಾದ ಸ್ವಯಂಚಾಲಿತ ಬಾಗಿಲುಗಳಿವೆ. ಈ ಕೋಡಿ ಬಾಗಿಲುಗಳೆಲ್ಲವುಗಳಿಂದ ಒಟ್ಟು 3.5 ಲಕ್ಷ ಕ್ಯೂಸೆಕ್ಸುಗಳ ಪ್ರವಾಹವನ್ನು ನದಿಯಲ್ಲಿ ಸುರಕ್ಷಿತವಾಗಿ ಬಿಡಬಹುದು.

ಜಲಾಶಯದಲ್ಲಿ ಮುಳುಗಿಹೋಗಿದ್ದ ಹೊಯ್ಸಳ ಕಾಲದ ವೇಣು ಗೋಪಾಲಸ್ವಾಮಿ ದೇವಾಲಯ ಬೇಸಗೆಯಲ್ಲಿ ಹೊರಗೆ ಕಾಣುತ್ತಿದ್ದು ಪ್ರೇಕ್ಷಕರು ಹೋಗಿ ನೋಡಿ ಬರುತ್ತಿದ್ದರು. ಈಗ ಅದನ್ನು ಸ್ಥಳಾಂತರಿಸಿ ಸಮೀಪದ ದಂಡೆಯ ಮೇಲೆ ಪುನರ್‌ನಿರ್ಮಿಸಲಾಗಿದೆ. ಮಿರ್ಜಾ ಇಸ್ಮಾಯಿಲ್ ದಿವಾನರಾಗಿದ್ದ ಕಾಲದಲ್ಲಿ ಕಟ್ಟೆಯ ಹಿಂದುಗಡೆ ಕಾಶ್ಮೀರದ ಶಾಲಿಮಾರ್ ತೋಟವನ್ನು ಹೋಲುವ ಬೃಂದಾವನವನ್ನು ನದಿಯ ಎರಡು ದಡಗಳಲ್ಲಿಯೂ ನಿರ್ಮಿಸಿದರು. ಇದು ಸುಂದರ ವಿಹಾರ ಸ್ಥಳ. ದೇಶದ ನಾನಾ ಭಾಗಗಳಿಂದ ಹಾಗೂ ವಿದೇಶಗಳಿಂದ ಪ್ರೇಕ್ಷಕರು ಇಲ್ಲಿಗೆ ಬರುತ್ತಾರೆ. ಕೃಷ್ಣರಾಜಸಾಗರದಲ್ಲಿ ಆಧುನಿಕ ಜಲಾಭಾರ ಶಾಸ್ತ್ರದ ಒಂದು ಪ್ರಯೋಗಶಾಲೆ ಇದೆ. ಒಂದು ಜೂನಿಯರ್ ಕಾಲೇಜಿದೆ. *

**ಕೃಷ್ಣರಾಯ, ಅ.ನ. :** 1908-71. ಅನಕೃ ಎಂಬ ಮೂರಕ್ಷರಗಳಿಂದ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಪರಿಚಿತರಾದ ಇವರ ಪೂರ್ಣ ಹೆಸರು ಅರಕಲಗೂಡು ನರಸಿಂಗರಾವ್ ಕೃಷ್ಣರಾವ್. ಕೃಷ್ಣರಾಯರು 1908 ಮೇ 9ರಂದು ಕೋಲಾರದಲ್ಲಿ ಜನಿಸಿದರು. ತಂದೆ ನರಸಿಂಗರಾಯ, ತಾಯಿ ಅನ್ನಪೂರ್ಣಮ್ಮ. ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಓದನ್ನು ಮುಗಿಸಿ ಕೃಷ್ಣರಾಯರು ಬೆಂಗಳೂರಿನ ದೇಶೀಯ ವಿದ್ಯಾಶಾಲೆಗೆ ಸೇರಿದರು. ರಾಷ್ಟ್ರೀಯ ಭಾವನೆಗಳ ಕೇಂದ್ರವಾಗಿದ್ದ ಆ ಶಾಲೆಯಲ್ಲಿ ಸಂಪದ್ಗಿರಿರಾಯರಂಥ, ಕಂದಾಡೆ ಕೃಷ್ಣಯ್ಯಂಗಾರ್ಯರಂಥ ಅಧ್ಯಾಪಕರು ಶಿಷ್ಯರ ಹೃದಯ ಮನಸ್ಸುಗಳನ್ನು ರೂಪಿಸುತ್ತಿದ್ದರು. ಕೃಷ್ಣರಾಯರಿಗೆ ಓದಿನ ಗೀಳು ಹತ್ತಿತು; ಗಾಂಧಿ, ವಿವೇಕಾನಂದರ ಪರಿಚಯವಾಯಿತು. ಅವರ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದರು. ಶಾಲೆಯ ಓದಿಗೆ ಗಮನ ಕೊಡಲಿಲ್ಲವಾಗಿ ಆ ಕಾಲದ ಎಂಟ್ರೆನ್ಸ್ ಪರೀಕ್ಷೆಯನ್ನು ದಾಟುವುದು ಕೃಷ್ಣರಾಯರಿಗೆ ಸಾಧ್ಯವಾಗಲಿಲ್ಲ.

ತಂದೆ ನರಸಿಂಗರಾಯರಿಗೆ ನಾಟಕದ ಹುಚ್ಚು. ಕರ್ನಾಟಕ ರಂಗಭೂಮಿಯ ಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದರು. ಎ.ವಿ.ವರದಾಚಾರ್ಯರಂಥ ಶ್ರೇಷ್ಠಕಲಾವಿದರನ್ನು ಕಟ್ಟಿಕೊಂಡು ಅವರು ನಾಟಕ ಪ್ರದರ್ಶನಗಳಿಗಾಗಿ ಹವ್ಯಾಸಿ ಕ್ಲಬ್ ಒಂದನ್ನು ನಡೆಸುತ್ತಿದ್ದರು. ಇದರಿಂದ ಸಹಜವಾಗಿಯೇ ಕೃಷ್ಣರಾಯರಿಗೆ ಎಳವೆಯಿಂದಲೂ ರಂಗಭೂಮಿಯ ಪರಿಚಯವಾಯಿತು. ವರದಾಚಾರ್ಯರ ನಾಟಕಗಳನ್ನು ಇವರು ತಪ್ಪದೆ ನೋಡುತ್ತಿದ್ದರು. ಅವರ ಅಭಿನಯಕ್ಕೆ ಮಾರುಹೋದರು. ಆ ಕಾಲದಲ್ಲಿ ರಂಗದ ಮೇಲೆ ಬರುತ್ತಿದ್ದ ನಾಟಕಗಳೆಲ್ಲ ಪೌರಾಣಿಕ ವಸ್ತುವನ್ನು ಅವಲಂಬಿಸಿರುತ್ತಿದ್ದುವು. ಅಪರೂಪವಾಗಿ ಐತಿಹಾಸಿಕ ಪ್ರಸಂಗಗಳೂ ನಾಟಕರೂಪ ತಾಳುತ್ತಿದ್ದವು. ಈ ನಾಟಕಗಳು ಹದಿಹರೆಯದ ಕೃಷ್ಣರಾಯರಿಗೆ ಕಂದಾಚಾರದ ನಾಟಕಗಳಾಗಿ ಕಂಡವು. ತಮ್ಮ ಸುತ್ತಣ ಸಮಾಜದ ಸಮಸ್ಯೆಗಳು ಸಂಗತಿಗಳು ಏಕೆ ರಂಗದ ಮೇಲೆ ಬರಬಾರದು ಎಂಬ ಪ್ರಶ್ನೆ ಇವರನ್ನು ಕಾಡುತ್ತಿತ್ತು. ಒಂದು ಸಲ ಇವರು ವರದಾಚಾರ್ಯರಿಗೇ ಈ ಪ್ರಶ್ನೆ ಹಾಕಿದ್ದರು. ಅಂಥ ನಾಟಕಗಳನ್ನು ಯಾರು ಬರೆಯುತ್ತಾರೆ ಎಂದು ಆಚಾರ್ಯರು ನಿರಾಶೆಯಿಂದ ಕೇಳಿದರು. ಕೃಷ್ಣರಾಯರು ಮರುದಿನವೇ ತಾವು ಅಂಥ ನಾಟಕವೊಂದನ್ನು ಬರೆದು ಕೊಡುವುದಾಗಿ ಹೇಳಿ ಆಚಾರ್ಯರನ್ನು ತಬ್ಬಿಬ್ಬು ಮಾಡಿದರು. ಅಷ್ಟೇ ಅಲ್ಲ, ಅಂದು ಇಡೀ ರಾತ್ರಿ ಕುಳಿತು ಒಂದು ನಾಟಕ ಬರೆದು ಬೆಳಗ್ಗೆ ಅದನ್ನು ಆಚಾರ್ಯರ ಕೈಯಲ್ಲಿಟ್ಟರು. ಅದೊಂದು ಸಾಮಾಜಿಕ ನಾಟಕ. ಅದರ ಹೆಸರು ಮದುವೆಯೋ ಮನೆ ಹಾಳೋ? ಎಂದು. ಅದು ಕೃಷ್ಣರಾಯರ ಮೊದಲ ಕೃತಿ (1924). ಅದರೊಂದಿಗೇ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೊಸ ಅಧ್ಯಾಯವೊಂದು ತೊಡಗಿತು. ಕೃಷ್ಣರಾಯರು ಹೀಗೆ ನಾಟಕಕಾರರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟು ಮುಂದೆ ಹತ್ತಿರ ಹತ್ತಿರ ಅರ್ಧಶತಮಾನ ಕಾಲ ಕಾವ್ಯವೊಂದನ್ನು ಬಿಟ್ಟು ಮಿಕ್ಕ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಕೆಲಸ ಮಾಡಿ, ಪ್ರಭಾವಶಾಲಿಯಾಗಿ ಖ್ಯಾತಿಗಳಿಸಿದರು.



ಕೃಷ್ಣರಾಯರು ಸು.190 ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 112 ಕಾದಂಬರಿಗಳು, 9 ಕಥಾಸಂಗ್ರಹಗಳು, 24 ನಾಟಕಗಳು, 24 ವಿಮರ್ಶೆ ಹಾಗೂ ಪ್ರಬಂಧ ಸಂಕಲನಗಳು, 9 ಜೀವನ ಚರಿತ್ರೆಗಳು, 3 ಅನುವಾದಗಳು, 9 ಸಂಪಾದಿತ ಗ್ರಂಥಗಳು. ಹೀಗೆ ನಾನಾ ಪ್ರಕಾರಗಳಲ್ಲಿ ಕೃಷ್ಣರಾಯರು ದುಡಿದಿದ್ದರೂ ಕಾದಂಬರಿಕಾರರೆಂದೇ ಇವರು ಪ್ರಸಿದ್ಧರಾಗಿದ್ದಾರೆ. ಇವರ ಕಾದಂಬರಿಗಳಲ್ಲಿ ಹದಿನೈದನ್ನು ಬಿಟ್ಟರೆ ಉಳಿದವೆಲ್ಲ ಸಾಮಾಜಿಕ ಕಾದಂಬರಿಗಳು. ಈ ಕಾದಂಬರಿಗಳಲ್ಲಿ ಇವರು ಸಮಕಾಲೀನ ಜೀವನದ ಬೇರೆ ಬೇರೆ ಮುಖಗಳನ್ನು ತೋರಿಸಿದ್ದಾರೆ. ಕಲಾವಿದರ ಸಮಸ್ಯೆಗಳು, ಆಧುನಿಕ ವಿದ್ಯಾಭ್ಯಾಸದ ಪರಿಣಾಮ, ಭಾರತೀಯ ಸಂಸ್ಕೃತಿಯ ಮೌಲ್ಯಗಳ ಮಹತ್ವ, ಅವಿಭಕ್ತ ಕುಟುಂಬ ಜೀವನ, ಒಡೆಯುತ್ತಿರುವ ಬದುಕು, ವೇಶ್ಯಾ ಸಮಸ್ಯೆ, ಲಂಚಗುಳಿತನ, ಸ್ತ್ರೀಸ್ವಾತಂತ್ರ್ಯ, ಜೈಲುಗಳ ಸುಧಾರಣೆ, ದಾಂಪತ್ಯ ವಿಚ್ಛೇದನ, ಜಾತೀಯತೆಯ ಭೂತ, ರಾಜಕೀಯ ದೊಂಬರಾಟ, ಪವಿತ್ರ ಪ್ರೇಮ, ಕೊಳಚೆಯ ಕಾಮ, ಪಾನನಿರೋಧದ ಸಮಸ್ಯೆ, ಶ್ರೀಮಂತಿಕೆಯ ಡೌಲು, ಬಡತನದ ದಾರುಣತೆ, ಪೂರ್ವಪಶ್ಚಿಮಗಳ ಸಂಗಮ, ಧಾರ್ಮಿಕತೆಯ ಸೋಗು, ಆಡಳಿತದ ಅಬ್ಬರ, ಆರ್ಭಟಗಳು, ಸ್ವಾತಂತ್ರ್ಯದ ಕೆಚ್ಚು, ಬದುಕಿನ ಮೇಲೆ ವಿಜ್ಞಾನದ ಪ್ರಭಾವ -ಹೀಗೆ ನಾನಾ ಸಂಗತಿಗಳನ್ನು ಕುರಿತು ಕೃಷ್ಣರಾಯರು ವಿಚಾರ ಮಾಡಿದ್ದಾರೆ. ತಮ್ಮ ವಿಚಾರಗಳನ್ನು ಪ್ರತಿಪಾದಿಸಲು ಇವರು ಕಾದಂಬರಿಯನ್ನು ಬಳಸಿಕೊಂಡರು. ಕಥನಕೌಶಲ, ನಿರರ್ಗಳವಾದ ಶೈಲಿ, ಸಂಭಾಷಣೆಯ ಚಾತುರ್ಯ -ಇವುಗಳಿಂದ ಓದುಗರನ್ನು ಸೆರೆಹಿಡಿದರು; ತಮ್ಮ ಕಾಲದ ಅತ್ಯಂತ ಜನಪ್ರಿಯ ಲೇಖಕ ಎನ್ನಿಸಿಕೊಂಡರು.

ಕೃಷ್ಣರಾಯರು ತಮ್ಮ ಬರೆವಣಿಗೆಯ ಆರಂಭಕಾಲದಲ್ಲಿ ರಚಿಸಿದ ಕಲಾವಿದರ ಜೀವನವನ್ನು ಕುರಿತ ಸಂಧ್ಯಾರಾಗ, ಉದಯರಾಗ,ಸಾಹಿತ್ಯರತ್ನ, ನಟಸಾರ್ವಭೌಮ ಮೊದಲಾದ ಕಾದಂಬರಿಗಳೇ ಇವರ ಶ್ರೇಷ್ಠ ಕೃತಿಗಳೆಂದು ಪರಿಗಣಿತವಾಗಿವೆ. ಇವರ ಮುಂದಿನ ಬರೆಹಗಳಲ್ಲಿ ಗಾತ್ರದ ಪ್ರಮಾಣವನ್ನು ಗುಣಕಾಯ್ದುಕೊಳ್ಳುವುದು ಸಾಧ್ಯವಾಗಲಿಲ್ಲ. ಅವರ ಪಾತ್ರಗಳಲ್ಲಿ ವೈವಿಧ್ಯದ ಬಲವಿಲ್ಲದಿರುವುದೇ ಒಂದು ದೋಷ. ಬೇರೆ ಬೇರೆ ಸಂದರ್ಭಗಳಿಗೆ ಸಮಸ್ಯೆಗಳಿಗೆ ಬೇಕಾದ ಬೇರೆ ಬೇರೆ ಪಾತ್ರಗಳು ಅನಕೃ ಅವರ ಕುಲುಮೆಯಲ್ಲಿ ಕರಗಿಹೋಗಿ ತಮ್ಮತನಗಳನ್ನು ಕಳೆದುಕೊಂಡು ಸಾಧಾರಣೀಕೃತವಾಗಿಬಿಡುತ್ತವೆ. ಇವರ ಯಾವುದೇ ಕಾದಂಬರಿಯನ್ನು ಎತ್ತಿಕೊಂಡರೂ ಅಲ್ಲಿನ ಪಾತ್ರಗಳನ್ನು ಇನ್ನೆಲ್ಲಿಯೋ ನೋಡಿದ್ದೇವಲ್ಲ ಎನ್ನಿಸಿಬಿಡುತ್ತದೆ. ಸಮಕಾಲೀನ ಜೀವನ ಸಮಸ್ಯೆಗಳ ವಿಸ್ತಾರವನ್ನು, ವಿವಿಧ ಪರಿಗಳನ್ನು ಅನಕೃ ವಿವರವಾಗಿ ಗುರುತಿಸಿ, ವರ್ಣಿಸಲು ಸಮರ್ಥರಾಗಿದ್ದರೂ ಸಾಹಿತ್ಯ ಚರಿತ್ರೆಯಲ್ಲಿ ಇವರ ಹೆಸರು ಇವರ ಮೊದಲ ಕೃತಿಗಳಿಂದಲೇ ನಿಲ್ಲಬೇಕಾಗುತ್ತದೆಂಬುದು, ಸಮಕಾಲೀನ ಸಾಹಿತ್ಯದ ಒಂದು ಸೋಜಿಗವಾಗಿದೆ. ಸಾಹಿತ್ಯವನ್ನು ಜನಪ್ರಿಯಗೊಳಿಸಿದ ಕನ್ನಡ ಕಾದಂಬರಿಕಾರರಲ್ಲಿ ಅನಕೃ ಇಂದಿಗೂ ಅದ್ವಿತೀಯರು ಎಂಬುದಾಗಿ ವಿಮರ್ಶಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಕೃಷ್ಣರಾಯರ ಕೊನೆಕೊನೆಯ ಕಾದಂಬರಿಗಳಂತೂ ಬರೆವಣಿಗೆಯ ಯಾಂತ್ರಿಕತೆಯಿಂದ ತುಂಬ ಜಾಳುಜಾಳಾಗಿಹೋಗಿವೆ.

ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು ಮೊದಲಾದ ಕಾದಂಬರಿಗಳಲ್ಲಿ ಕೃಷ್ಣರಾಯರು ಸೂಳೆಯರ ಜೀವನವನ್ನೂ ಆ ಜೀವನದ ಸಮಸ್ಯೆಗಳನ್ನೂ ಚಿತ್ರಿಸಿದ್ದಾರೆ. ಆ ಕಾದಂಬರಿಗಳು ಪ್ರಕಟವಾದಾಗ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೋಲಾಹಲವಾಯಿತು. ಕೃಷ್ಣರಾಯರ ಮೇಲೆ ಅಶ್ಲೀಲತೆಯ ಆರೋಪ ಬಂತು. ಆಗ ಇವರು ತಮ್ಮ ನಿಲವನ್ನು ಸಮರ್ಥಿಸಿಕೊಳ್ಳಲು ಸಾಹಿತ್ಯ ಮತ್ತು ಕಾಮಪ್ರಚೋದನೆ ಎಂಬ ಗ್ರಂಥವನ್ನೇ ಬರೆಯ ಬೇಕಾಯಿತು. ಈ ಕಾದಂಬರಿಗಳಲ್ಲಿ ಸೂಳೆಯರ ದುಃಖಕ್ಕಿಂತ ಸುಖವೇ ಹೆಚ್ಚಾಗಿ ವರ್ಣಿತವಾಗಿದೆಯೆಂಬುದಂತೂ ನಿಜ. ಗೃಹಲಕ್ಷ್ಮಿ, ರುಕ್ಮಿಣಿ ಮೊದಲಾದ ಕಾದಂಬರಿಗಳಲ್ಲಿ ಇವರು ಭಾರತೀಯ ಸ್ತ್ರೀಯನ್ನು ಆ

ಸಂಸ್ಕೃತಿಯ ಪ್ರತೀಕವನ್ನಾಗಿ ಚಿತ್ರಿಸಿದ್ದಾರೆ. ಅವುಗಳಲ್ಲಿ ಬರುವ ಸಮಾಜ ಜೀವನದ ಚಿತ್ರಣದಲ್ಲಿ ಕಥೆಯನ್ನು ಭಾವುಕತೆಯೇ ಆಳುವಂತೆ ತೋರುತ್ತದೆ. ಯಾವುದೇ ಪಾತ್ರಗಳನ್ನು ನಿರ್ಮಿಸುವಲ್ಲಿ ಕೃಷ್ಣರಾಯರಿಗೆ ಒಳ್ಳೆಯ ಹಾಗೂ ಕೆಟ್ಟ ತುದಿಗಳು ಮಾತ್ರ ತಿಳಿದಿವೆ. ಬಹುಪಾಲು ಜೀವನ ಈ ಎರಡರ ನಡುವೆ ಇದೆ ಎಂಬುದನ್ನು ಇವರು ಸಾಮಾನ್ಯವಾಗಿ ಲಕ್ಷಿಸುವುದಿಲ್ಲ. ಕಲಾವಿದರಾಗಿ ಇವರ ಸೋಲಿಗೆ ಈ ದೃಷ್ಟಿಯೂ ಒಂದು ಕಾರಣವಿರಬಹುದು. ಕೃಷ್ಣರಾಯರ ಐತಿಹಾಸಿಕ ಕಾದಂಬರಿಗಳಲ್ಲಿ ಬಹುಪಾಲು ಕಾದಂಬರಿಗಳು ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದವು. ಬೆಂಗಳೂರು ಕೆಂಪೇಗೌಡನನ್ನೂ ಕಿತ್ತೂರು ಚೆನ್ನಮ್ಮನನ್ನೂ ಕುರಿತು ಇವರು ಒಂದೊಂದು ಕಾದಂಬರಿಯನ್ನು ಬರೆದಿದ್ದಾರೆ.

ಇವರ ಸಣ್ಣಕಥೆ ಮತ್ತು ನಾಟಕಗಳಲ್ಲಿಯೂ ಕಾದಂಬರಿಯ ವಸ್ತುಗಳೇ ಅನೇಕ ಸಲ ಕಾಣಿಸಿಕೊಳ್ಳುತ್ತವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ತೀವ್ರವಾಗಿ ಉದ್ಭವಿಸಿದ ಕೋಮುವಾರು ಗಲಭೆಗಳಿಗೆ ಸಂಬಂಧಿಸಿದಂತೆ ಇವರು ಬರೆದ ಕಥೆಯೊಂದು ಸರ್ಕಾರದ ಬಹಿಷ್ಕಾರಕ್ಕೆ ಒಳಗಾಗಿತ್ತು. ಇವರ ಕೆಲವು ನಾಟಕಗಳು ರಂಗಭೂಮಿಯ ಮೇಲೂ ಯಶಸ್ವಿಯಾಗಿವೆ. ಸಂಧ್ಯಾರಾಗ ಕಾದಂಬರಿ ಬೆಳ್ಳಿತೆರೆಯ ಮೇಲೆ ಕಾಣಿಸಿಕೊಂಡಿದೆ.

ಕೃಷ್ಣರಾಯರ ವಿಮರ್ಶಾತ್ಮಕ ಪ್ರಬಂಧಗಳು ಹಲವು ಸಂಪುಟಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ನಾಟಕಕಲೆ, ಸಜೀವ ಸಾಹಿತ್ಯ, ಸಮದರ್ಶನ, ಸಂಸ್ಕೃತಿಯ ವಿಶ್ವರೂಪ, ಸಾಹಿತ್ಯ ಮತ್ತು ಜೀವನ, ಸಾಹಿತ್ಯ ಮತ್ತು ಯುಗಧರ್ಮ ಮೊದಲಾದವು ಉಲ್ಲೇಖನೀಯವಾಗಿವೆ. ಕನ್ನಡದ ದಾರಿ, ಅಖಂಡ ಕರ್ನಾಟಕ, ಕರ್ನಾಟಕದ ಹಿತಚಿಂತನೆ, ಬಳ್ಳಾರಿ ಸಮಸ್ಯೆ ಮೊದಲಾದ ಗ್ರಂಥಗಳಲ್ಲಿ ಕೃಷ್ಣರಾಯರು ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಚರ್ಚಿಸಿದ್ದಾರೆ. ತಮ್ಮವೇ ಆದ ಸಲಹೆ ಸೂಚನೆಗಳನ್ನು ಮಂಡಿಸಿದ್ದಾರೆ. ಕರ್ನಾಟಕದ ಕಲಾವಿದರು ಎಂಬ ಹೆಸರಿನ ಎರಡು ಸಂಪುಟಗಳಲ್ಲಿ ಕನ್ನಡನಾಡಿನ ಕಲಾವಿದರನೇಕರ ಸಾಧನೆ ಸಿದ್ಧಿಗಳನ್ನು ನಿರೂಪಿಸಿ, ಕರ್ನಾಟಕದ ಕಲಾಶ್ರೀಮಂತಿಕೆ ಯಾವ ಬಗೆಯದೆಂಬುದನ್ನು ವಿವೇಚಿಸಿದ್ದಾರೆ. ಅಷ್ಟಾಗಿ ಬೆಳಕಿಗೆ ಬಾರದ ಕಲಾವಿದರ ಸಾಧನೆಗಳನ್ನೂ ಗಮನಿಸಿ ಅವರನ್ನು ನಾಡವರ ಕಣ್ಣಿಗೆ ಬೀಳುವಂತೆ ಮಾಡಿದ್ದು ಕೃಷ್ಣರಾಯರ ಹೆಚ್ಚುಗಾರಿಕೆ. ಕನ್ನಡ ಕುಲರಸಿಕರು ಎಂಬ ಗ್ರಂಥ'ದಲ್ಲಿ ಪ್ರಖ್ಯಾತರಾದ ಕನ್ನಡ ಲೇಖಕರು, ವಿದ್ವಾಂಸರು, ಸಂಶೋಧಕರ ವ್ಯಕ್ತಿಚಿತ್ರಗಳಿವೆ. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಬಸವಣ್ಣನವರ ಅಮೃತವಾಣಿ ಮೊದಲಾದ ಗ್ರಂಥಗಳು ವೀರಶೈವ ಸಾಹಿತ್ಯದಲ್ಲಿ ಇವರಿಗಿದ್ದ ಪ್ರವೇಶವನ್ನು ಸೂಚಿಸುತ್ತವೆ. ಕೃಷ್ಣರಾಯರು ಕಲಾವಿಮರ್ಶಕರೂ ಆಗಿದ್ದರು. ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ ಎಂಬ ಗ್ರಂಥದಲ್ಲಿ ರವಿವರ್ಮನ ಕೃತಿಗಳನ್ನು ಸವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಚಿತ್ರಕಲೆ ಎಂಬುದು ಇಂಥ'ದೇ ಇನ್ನೊಂದು ಗ್ರಂಥ. ಗಾಂಧೀ, ವಿವೇಕಾನಂದ, ಬಸವೇಶ್ವರ, ಕಬೀರ್ ಮೊದಲಾದವರ ಜೀವನ ಚರಿತ್ರೆಗಳನ್ನು ಕೃಷ್ಣರಾಯರು ರಚಿಸಿದ್ದಾರೆ. ನನ್ನನ್ನು ನಾನೇ ಕಂಡೆ ಎನ್ನುವುದು ಸ್ವಯಂ ಸಂದರ್ಶನಗಳನ್ನೊಳಗೊಂಡ ಗ್ರಂಥ. ಇದರಲ್ಲಿ ಇವರು ತಮ್ಮ ವಿಚಾರಗಳನ್ನು ವಿನೂತನವಾಗಿ ನಿರೂಪಿಸಿದ್ದಾರೆ. ಬರೆಹಗಾರನ ಬದುಕು ಎನ್ನುವುದು ಇವರ ಆತ್ಮಕಥೆ. ಇದನ್ನು ಇವರು ದಿನಪತ್ರಿಕೆಯೊಂದರ ವಾರದ ಪುರವಣಿಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. (1972). ಇದು ಪುಸ್ತಕರೂಪದಲ್ಲಿ ಪ್ರಕಟವಾಯಿತು. ಎರಡು ಸಂಪುಟಗಳಲ್ಲಿ ಗಾರ್ಕಿಯ ಕಥೆ'ಗಳನ್ನೂ ಭಾರತದ ಕಥೆ' (ದಿ ಸ್ಟೋರಿ ಆಫ್ ಇಂಡಿಯ) ಎಂಬ ಪುಸ್ತಕವನ್ನೂ ಇವರು ಅನುವಾದಿಸಿದ್ದಾರೆ. ಒಂಬತ್ತು ಪುಸ್ತಕಗಳನ್ನು ಕೃಷ್ಣರಾಯರು ಸಂಪಾದಿಸಿ ಪ್ರಕಟಿಸಿದ್ದಾರೆ. ಕನ್ನಡದ ಕಥೆ'ಗಳನ್ನೂ ಪ್ರೇಮ ಗೀತೆಗಳನ್ನೂ ಪ್ರಾತಿನಿಧಿಕವಾಗಿ ಆಯ್ದು ಮೊದಲಬಾರಿಗೆ ಪ್ರಕಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮಾಕ್ಸಿಂ ಗಾರ್ಕಿಯ ಬಗೆಗೆ ಇವರು ಸಂಪಾದಿಸಿರುವ ಗ್ರಂಥ' ವಿಶಿಷ್ಟ ರೀತಿಯದಾಗಿದೆ. ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿಯವರನ್ನು ಕುರಿತು ಇವರು ಇಂಗ್ಲಿಷಿನಲ್ಲಿಯೂ ಬರೆದಿದ್ದಾರೆ.

ಕೃಷ್ಣರಾಯರು ಕನ್ನಡದಲ್ಲಿ ಪ್ರಗತಿಶೀಲಸಾಹಿತ್ಯ ಚಳವಳಿಯ ಪ್ರವರ್ತಕರು. ಇವರು ತಮ್ಮ ಧ್ಯೇಯಸಾಧನೆಗಾಗಿ ಒಂದು ಗುಂಪನ್ನೇ ಕಟ್ಟಿದ್ದರು. ಹೊಸ ಲೇಖಕರ ಒಂದು ಪಡೆಯನ್ನೇ ನಿರ್ಮಿಸಿದರು. ಉತ್ಸಾಹ ಉದ್ವೇಗಗಳಿಂದ ಸಾಹಿತ್ಯಕ್ಕೆ ಹೊಸ ತಿರುವು ತಂದುಕೊಟ್ಟರು. ಈ ಚಳವಳಿ ಕೇವಲ ಚಳವಳಿಯಾಗಿ ಉಳಿಯಿತೇ ವಿನಾ ಪರಂಪರೆಯಾಗಲಿಲ್ಲ, ಪರಂಪರೆಯ ಭಾಗವಾಗಲಿಲ್ಲ. ಆದರೆ ಇದಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶೇಷ ಸ್ಥಾನವಿದೆಯೆಂಬುದನ್ನು ಮರೆಯುವ ಹಾಗಿಲ್ಲ. ಕೃಷ್ಣರಾಯರು ಬೆಳಕಿಗೆ ತಂದ ಲೇಖಕರಲ್ಲಿ ಒಬ್ಬಿಬ್ಬರಾದರೂ ಕನ್ನಡದಲ್ಲಿ ಇಂದು ಮಹತ್ವದ ಹೆಸರು ಪಡೆದಿದ್ದಾರೆ. ವಿಶಿಷ್ಟವಾದ ಕೆಲಸ ಮಾಡಿದ್ದಾರೆ.

ಕೃಷ್ಣರಾಯರು ಪತ್ರಿಕೋದ್ಯಮ, ಚಲನಚಿತ್ರೋದ್ಯಮಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದರು. ಕನ್ನಡ ನುಡಿ ಮತ್ತು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳಿಗೆ ಇವರು ಕೆಲಕಾಲ ಸಂಪಾದಕರಾಗಿದ್ದರು. ಕಥಾಂಜಲಿ, ವಿಶ್ವವಾಣಿ ಎಂಬ ಪತ್ರಿಕೆಗಳನ್ನು ಇವರೇ ಪ್ರಕಟಿಸುತ್ತಿದ್ದರು. ಉದ್ದೇಶ, ವಿನ್ಯಾಸಗಳಲ್ಲಿ ಆ ಪತ್ರಿಕೆಗಳು ಆದರ್ಶಪ್ರಾಯವಾಗಿದ್ದುವು. ಕೆಲವು ಕನ್ನಡ ಚಲನಚಿತ್ರಗಳ ನಿರ್ಮಾಣದೊಂದಿಗೂ ಇವರ ಸಂಪರ್ಕವಿತ್ತು. ಕೃಷ್ಣರಾಯರು ನಡೆಸಿದ ಸಾಹಿತ್ಯಕ ಜಗಳಗಳಿಗೆ ಲೆಕ್ಕವಿಲ್ಲ. ತಮ್ಮನ್ನು ಹಲವು ಕಾಳಗಗಳ ಕಲಿ ಎಂದು ತಾವೇ ಒಂದು ಕಡೆ ವರ್ಣಿಸಿಕೊಂಡಿದ್ದಾರೆ. ಕನ್ನಡದ ಬಗೆಗೆ ಯಾರಿಂದಲೇ ಆಗಲಿ, ಯಾವುದೇ ಮೂಲೆಯಿಂದಾಗಲಿ ಅಪಸ್ವರ ಬಂದಾಗ ಕೃಷ್ಣರಾಯರು ಗರ್ಜಿಸುತ್ತಿದ್ದರು. ತಮ್ಮ ಸ್ವಂತ ವಿಚಾರಗಳನ್ನು ಪ್ರತಿಪಾದಿಸಲು ಇವರು ಯಾವಾಗಲೂ ಹಿಂದೆ ಮುಂದೆ ನೋಡಿದವರಲ್ಲ. ಇವರ ಕನ್ನಡ ಅಭಿಮಾನ ಅಪೂರ್ವವಾದದ್ದು. ನನ್ನಂಥವರು ಕನ್ನಡಕ್ಕೆ ಅನೇಕರಿದ್ದಾರೆ. ಆದರೆ ನನಗಿರುವುದು ಒಂದೇ ಕನ್ನಡ - ಎನ್ನುವುದು ಇವರದೇ ಒಂದು ಮಾತು. ಕನ್ನಡ ನಾಡಿನ ಏಕೀಕರಣಕ್ಕಾಗಿ, ಏಕೀಕೃತ ನಾಡಿನ ಸರ್ವಾಂಗೀಣ ಪ್ರಗತಿಗಾಗಿ ಇವರು ತಮ್ಮ ಜೀವನವನ್ನೇ ಮುಡುಪಿಟ್ಟಿದ್ದರು. ನಾಡಿನ ಉದ್ದಗಲಗಳಲ್ಲೆಲ್ಲ ಸಂಚರಿಸಿ ಜಾಗೃತಿಯ ಜಯಘಂಟೆಯನ್ನು ಬಾರಿಸಿದರು. ನಾಡಿನ ಹೊರಗೂ ಸಂಚರಿಸಿ ಕನ್ನಡ ಸಾಹಿತ್ಯಕ, ಸಾಂಸ್ಕೃತಿಕ ಹಿರಿಮೆಯ ಜಯಘೋಷ ಮಾಡಿದರು. ಕೃಷ್ಣರಾಯರು ಶುದ್ಧ ಕನ್ನಡಿಗರು, ವೀರ ಕನ್ನಡಿಗರು, ಕನ್ನಡಿಗರ ಆತ್ಮಾಭಿಮಾನವನ್ನು ಇವರ ಹಾಗೆ ಉಕ್ಕಿಸಿದವರು ಹಲವರಿಲ್ಲ.

ಕೃಷ್ಣರಾಯರು ಜನರ ಪ್ರೀತಿ ಅಗಾಧ ವಿಶ್ವಾಸಗಳನ್ನು ಪಡೆದಿದ್ದರು. ಸಾಹಿತಿಯಾಗಿ, ವಾಗ್ಮಿಯಾಗಿ ಜನಪ್ರಿಯತೆಯ ಶಿಖರವನ್ನೇರಿದ್ದರು. ಮಣಿಪಾಲದಲ್ಲಿ 1960ರಲ್ಲಿ ನಡೆದ 42ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯ 1970ರಲ್ಲಿ ಇವರಿಗೆ ಗೌರವ ಡಾಕ್ಟೊರೇಟ್ ಪ್ರಶಸ್ತಿಯನ್ನಿತ್ತು ಗೌರವಿಸಿತು. ಗೋವ ಕನ್ನಡ ಸಂಘದವರು 1970ರಲ್ಲಿ ಇವರಿಗೆ ರಸಚೇತನ (ಸಂ. ಶಾ.ಮಂ.ಕೃಷ್ಣರಾಯ) ಎಂಬ ಗೌರವ ಗ್ರಂಥವನ್ನು ಒಪ್ಪಿಸಿದರು (1971). ಮೈಸೂರು ರಾಜ್ಯದ ಸಾಹಿತ್ಯ ಅಕಾಡೆಮಿಗೆ ಇವರು ಮೊದಲ ಅಧ್ಯಕ್ಷರಾಗಿದ್ದರು. *

**ಕೃಷ್ಣರಾಯ, ನಾಡಿಗೇರ :** 1908-92. ವಿಡಂಬನ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ ಸಾಹಿತಿ, ಪತ್ರಿಕೋದ್ಯಮಿ, ನಗೆ ಚಿತ್ರಣಕ್ಕೆ ಒಂದು ಮಾದರಿಯನ್ನೂ ಹರಟೆಗೆ ಒಂದು ಶೈಲಿಯನ್ನು ರೂಪಿಸಿದವರು. 1908 ಮೇ 18ರಂದು ಹರಿಹರದಲ್ಲಿ ಜನಿಸಿದರು. ತಂದೆ ದತ್ತಾತ್ರೇಯ ರಾಯ. ಇವರ ಸೋದರರಾದ ನಾಡಿಗೇರ ಗೋವಿಂದರಾಯರೂ ಸಾಹಿಲೆಯಾದರು. ಎರಡು ಹರಟೆ ಸಂಕಲನಗಳನ್ನು ಬರೆದಿದ್ದಾರೆ. ಇವರ ಇನ್ನೊಬ್ಬ ಸೋದರ ನಾಡಿಗೇರ ಮಾಧವರಾಯ (ಮಾದಿಗೇರ) ಒಂದು ಹರಟೆ ಸಂಕಲನ ಪ್ರಕಟಿಸಿದ್ದಾರೆ. ಅಚ್ಯುತರಾವ್, ಆನಂದರಾವ್ ಉಳಿದ ಇಬ್ಬರು ಸಹೋದರರು.

ಐದನೆಯ ಫಾರಂನಲ್ಲಿ ಅನುತ್ತೀರ್ಣರಾದಾಗ (1924-25) ಜವಳಿಅಂಗಡಿ ಗುಮಾಸ್ತರಾಗಿ ವೃತ್ತಿಯನ್ನು ಆರಂಭಿಸಿದರು. ಜೀವನೋಪಾಯಕ್ಕಾಗಿ ಹಲವು ವೃತ್ತಿಗಳನ್ನು ನಿರ್ವಹಿಸಿ ಅನುಭವ ಪಡೆದರು. ಜೀವನ ಎನ್ನುವುದು ಬೇವು ಬೆಲ್ಲದ ಮಿಶ್ರಣ, ಅರೆಕಹಿ, ಅರೆಸಿಹಿ, ಸ್ವಲ್ಪ ನಗು, ಕೊಂಚ ಅಳು, ತುಸುಕೋಪ, ನಸುತಾಪ -

ಇದು ನಾಡಿಗೇರರ ಸಿದ್ಧಾಂತ. ಇವರು ಕೆಲಕಾಲ ಮೈಸೂರಿನ ಮಾಡರ್ನ್ ಹೋಟೆಲ್‌ನಲ್ಲಿ ಕೆಲಸ ಮಾಡಿದರು (1930-31). ಕೆಲವು ದಿನ ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ದಿನಗೂಲಿಯಾಗಿ ದುಡಿದರು. ಲಕ್ಕವಳ್ಳಿ ಕಾಡಿನಲ್ಲಿ ಇದ್ದಿಲು ಸುಡಿಸುವ ಕಾರ್ಯದ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸಿದರು (1931-34). ಇದೇ ಅವಧಿಯಲ್ಲಿ ವಿವಾಹವಾದರು (1934). ಇವರ ಪತ್ನಿ ಇಂದಿರಮ್ಮ. 1935ರಲ್ಲಿ 'ಲೋಕಮತ' ಪತ್ರಿಕೆಯ ಸಹ ಸಂಪಾದಕರಾದರು. ಅಲ್ಲಿಂದ ಹೊರಬಂದು ಒಂದೂವರೆ ವರ್ಷಗಳ ಕಾಲ ಶ್ಯಾನುಭೋಗರಾಗಿ ಲೆಕ್ಕ ಬರೆದರು. ಕಂದಾಯ ವಸೂಲಿ ಮಾಡಿದರು.

1937ರಲ್ಲಿ ಮತ್ತೆ ಪತ್ರಿಕೋದ್ಯಮವನ್ನು ಪ್ರವೇಶಿಸಿದ ನಾಡಿಗೇರರು ಸಂಯುಕ್ತ ಕರ್ನಾಟಕ (1937-39), ಕಥಾಂಜಲಿ ಹಾಗೂ ಪ್ರಜಾಮತ (1940-44), ದೇಶಬಂಧು (1944) ಪತ್ರಿಕೆಗಳ ಸಹಸಂಪಾದಕರಾಗಿ ದುಡಿದರು. ಕೆಲವು ತಿಂಗಳು ನೀಲಕಂಠೇಶ್ವರ ಪ್ರಿಂಟಿಂಗ್ ಪ್ರೆಸ್‌ನ ವ್ಯವಸ್ಥಾಪಕರಾಗಿದ್ದರು. ಸಂಜಯ ವಾರಪತ್ರಿಕೆಯ ಸಂಪಾದಕರೂ (1946-47) ಆಗಿದ್ದ ಇವರು ಅನಂತರ ಸುಗ್ಗಿ (1947) ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದರು. ಪ್ರಜಾಮತ, ಜನವಾಣಿ, ಸತ್ಯ, ಕ್ರಾಂತಿ, ತಾಯಿನಾಡು ಪತ್ರಿಕೆಗಳಲ್ಲಿ ಸಹಸಂಪಾದಕರಾಗಿಯೂ ಜನಪ್ರಗತಿ, ಮಲ್ಲಿಗೆ, ಮೈಸೂರು ಪ್ರಭಾ, ಉಷಾ ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದರು (1961-72).

ಒಂದೇ ಕಲ್ಲಿನಿಂದ ಎರಡು ಹಕ್ಕಿ ಎಂಬ ಕಿರುಹಾಸ್ಯ ಲೇಖನದಿಂದ ಬರೆವಣಿಗೆಯನ್ನಾರಂಭಿಸಿದ ಇವರು 45 ಕಾದಂಬರಿಗಳನ್ನೂ 25 ಹರಟೆ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ನರಕದಲ್ಲಿ ಸ್ವರ್ಗ ಎಂಬುದು ಪೆರ್ರಿ ಬರ್ಗನ್ ಕುಷ್ಠರೋಗಿಗಳ ಬಗ್ಗೆ ಬರೆದ ಕೂವಾಕ್ ಅಲೋನ್ ಎಂಬುದರ ಭಾಷಾಂತರ. ಪುಢಾರಿ ಪುಟ್ಟಯ್ಯ ಎಂಬ ಹಾಸ್ಯ ನಾಟಕ, ಶ್ರೀಹರಿಹರಕ್ಷೇತ್ರ ಎಂಬ ಕ್ಷೇತ್ರಪರಿಚಯ ಮತ್ತು ರಾಷ್ಟ್ರಪತಿ ವಿ.ವಿ.ಗಿರಿ ಎಂಬ ಜೀವನ ಚರಿತ್ರೆಯನ್ನೂ ಇವರು ರಚಿಸಿದ್ದಾರೆ.

ಇವರು ರಂಗಭೂಮಿಯ ನಟರಾಗಿಯೂ ದುಡಿದಿದ್ದಾರೆ. ತ್ರಿಶಂಕುನರಕ, ಇಬ್ಬರು ಸುಂದರಿಯರು ಎಂಬ ಕೃತಿಗಳಲ್ಲಿ ಕಲಾವಿದರ ನೋವು, ಸಮಾಜ ಅವರನ್ನು ನೋಡುವ ದೃಷ್ಟಿ, ನಡೆಸಿಕೊಳ್ಳುವ ರೀತಿಯನ್ನು ನಗೆಯ ಪರಿಸರದಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಚಲನಚಿತ್ರರಂಗವೂ ಇವರಿಗೆ ಅಪರಿಚಿತವಲ್ಲ. ನಟಶೇಖರ ಚಿತ್ರಕ್ಕೆ ಇವರು ಬರೆದ ಸಂಭಾಷಣೆ ಹಲವರ ಮೆಚ್ಚುಗೆ ಗಳಿಸಿದೆ. ಈ ಕ್ಷೇತ್ರದ ಒಳ ಹೊರಗನ್ನು ತಿಳಿದಿದ್ದ ಇವರು ಚಿತ್ರವ್ಯೂಹ, ಪ್ರಣಯ ಕೋಲಾಹಲ, ಕವಲೊಡೆದ ಪ್ರೇಮ, ತೆರೆಮರೆಯ ಸುಂದರಿಯರು ಎಂಬ ಕಾದಂಬರಿಗಳಲ್ಲಿ ಚಲನಚಿತ್ರದ ನಟನಟಿಯರ ಬದುಕಿನ ಚಿತ್ರವನ್ನು ನೀಡಿದ್ದಾರೆ. ಈ ಕಾದಂಬರಿಗಳು ಜನಪ್ರಿಯವಾಗಿವೆ.

ಇವರು ಬರೆಹಕ್ಕೆ ಸಾಮಾನ್ಯ ವಸ್ತುವನ್ನು ಆಯ್ದುಕೊಂಡರೂ ಪ್ರತಿಯೊಂದು ಬರೆಹದಲ್ಲೂ ವೈಶಿಷ್ಟ್ಯವಿರುವುದನ್ನು ಕಾಣಬಹುದು. ಹೇಳುವ ರೀತಿಯಿಂದಾಗಿ ಅದು ಥಟ್ಟನೆ ಮನಮುಟ್ಟುತ್ತದೆ. ಜೀವನದ ವಿವಿಧ ಮಗ್ಗುಲುಗಳಲ್ಲಿ ಕಂಡು ಬರುವ ಅರೆಕೊರೆಗಳನ್ನು ರಂಜನೀಯವಾಗಿ ತಿಳಿಸುತ್ತಲೇ ಜನರನ್ನು ತಿದ್ದಲು ಇವರು ಪ್ರಯತ್ನಿಸಿದರು. ಸುತ್ತಮುತ್ತ ನಡೆಯುತ್ತಿರುವ ಅನಾಚಾರ, ಅನ್ಯಾಯ, ಅಪವ್ಯಯವನ್ನು ಚಿತ್ರಿಸುವವರನ್ನು ಸಂದರ್ಭದಲ್ಲಿ ವ್ಯಂಗ್ಯ ಪರಿಣಾಮಕಾರಿಯಾಗಿ ಬಳಕೆಯಾಗಿದೆ. ಕಸದಬುಟ್ಟಿ ಸಂಕಲನದ ಪಾನನಿರೋಧ, ನಮ್ಮ ಚಿತ್ರಗಳಲ್ಲಿನ ಹಾಸ್ಯ, ನವಯೋಜನೆ, ಚುನಾವಣೆ ಪ್ರಬಂಧಗಳಲ್ಲೂ ಹರಕು ಮುರಕುವಿನಲ್ಲಿ ಬರುವ ಜೀವನದ ಗುರಿ, ಯುದ್ಧದ ಪ್ರಯೋಜನಗಳು ಮುಂತಾದ ಪ್ರಬಂಧಗಳಲ್ಲೂ ಈ ಅಂಶವನ್ನು ಕಾಣಬಹುದು.

ರನ್ನಗನ್ನಡಿ 14 ಸಣ್ಣಕಥೆಗಳ ಸಂಕಲನ. ವಾಸ್ತವತೆ ಮತ್ತು ವೈವಿಧ್ಯವನ್ನು ಇಲ್ಲಿಯ ಕಥೆಗಳಲ್ಲಿ ಕಾಣಬಹುದು. ಬಡತನದ ಬವಣೆ, ಹೆಣ್ಣಿನ ಸಹನೆ, ಅಸಹಾಯಕತೆ,ಹೋರಾಟ, ಅಂತಿಮವಾಗಿ ಆಮಿಷಗಳಿಗೆ ಶರಣಾಗತಿ ಇವನ್ನು ಜ್ಯೋತಿ ಕಥೆಯಲ್ಲಿ ಚಿತ್ರಿಸಲಾಗಿದೆ. ದಾಂಪತ್ಯದ ವಿರಸಕ್ಕೆ ಸಂಬಂಧಿಸಿದ ಕಥೆಗಳು ಅಪರಾಧಿ, ಜ್ಞಾನೋದಯ, ಸಿದ್ದಪ್ಪನ ಕತೆ, ಕಣ್ಣಿದ್ದರೂ ಕುರುಡು. ಯೋಗಿಯೊಬ್ಬನ ಸಂಯಮ ಭಗ್ನವಾಗುವುದು ಮನೋನಿಗ್ರಹದ ವಸ್ತು. ಮಹತ್ವಾಕಾಂಕ್ಷೆ ಕನಸಿನ ಲೋಕಕ್ಕೂ ವಾಸ್ತವ ಜಗತ್ತಿಗೂ ಇರುವ ಅಂತರವನ್ನು ತಿಳಿಸುತ್ತದೆ. ತಮ್ಮನ್ನು ತಾವೆ ವಿಡಂಬಿಸಿಕೊಳ್ಳುವ ನಾಡಿಗೇರರು ಗೇಡಿನಾರ್ ಎಂಬ ಹೆಸರಿನಲ್ಲೂ ಬರೆದಿದ್ದಾರೆ.

ಇದಿರೇಟು ಇವರ ಮೊದಲ ಕಾದಂಬರಿ. ವೆಂಕೋಬಾಚಾರಿ, ಎರಡು ಮತ್ತೊಂದು, ಬೆಂಕಿಯ ಹೂ, ಜಾನಕಿ, ಬಂಗಾರದ ಬಳ್ಳಿ, ಪ್ರೇಮದ ಮಂಟಪ, ಮಧುರಸ್ಮೃತಿ, ಮೂವರು ಗೆಳತಿಯರು ಮೊದಲಾದ ಕಾದಂಬರಿಗಳಲ್ಲಿ ಹೆಣ್ಣಿನ ಚಿತ್ರಣ, ಅವಳ ಶೃಂಗಾರ ನಾಜೂಕು, ಸಂಭಾಷಣೆಗಳನ್ನು ನಿಜಜೀವನದಲ್ಲಿ ಕಂಡು ಕೇಳಿಬರುವಂತೆಯೇ ಚಿತ್ರಿಸಿದ್ದಾರೆ. ಇದರಿಂದಾಗಿ ಪಾತ್ರಗಳಿಗೆ ಜೀವಂತಿಕೆ ಬಂದಿದೆ. ಕೈಹಿಡಿದವಳ ಪುಣ್ಯದಲ್ಲಿ ಗ್ರಾಮಗಳ ಪರಿಚಯ, ರಾಜಕೀಯದ್ವೇಷ, ದಾಯಾದಿ ಮಾತ್ಸರ್ಯಗಳ ಜೊತೆಗೆ ಗೃಹಿಣಿಯ ಅರ್ಥ, ವೇಶ್ಯಾವೃತ್ತಿಯಲ್ಲಿರುವವರ ಅಸೂಯೆ ಮೊದಲಾದುವನ್ನು ಕಾಣಬಹುದು. ದಿಕ್ಕೆಟ್ಟದೇಶ ಕಾದಂಬರಿಯಲ್ಲಿ ಭ್ರಷ್ಟರಾಜಕಾರಣಿಗಳು, ಅವರಿಂದ ಲಾಭ ಪಡೆಯುವ ಪತ್ರಿಕೋದ್ಯಮಿಗಳು ಅವರಿಂದಾಗಿ ದಿಕ್ಕೆಟ್ಟು ಹಾಳಾಗುವ ದೇಶದ ಕಥೆ ಇದೆ. ಈ ಎಲ್ಲ ಕಾದಂಬರಿಗಳಲ್ಲೂ ನಾಡಿಗೇರರ ಸರಸಸಂಭಾಷಣೆ, ಸಹಜವಾಗಿ ನಡೆದುಹೋಗುವ ಘಟನೆಗಳು, ತಮ್ಮತನವನ್ನು ತಾವೆ ಪ್ರದರ್ಶಿಸಿಕೊಳ್ಳುವ ಪಾತ್ರಗಳು ಮೊದಲಾದುವನ್ನು ಕಾಣಬಹುದು.

ನಾಡಿಗೇರರು 1944ರಲ್ಲಿ ಅ.ನ.ಕೃ. ಅವರ ನೇತೃತ್ವದಲ್ಲಿ ಸ್ಥಾಪಿತವಾದ ಪ್ರಗತಿಶೀಲ ಸಾಹಿತ್ಯ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಇವರ 61ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ನಟನಕಲಾಸಂಘ ಇವರನ್ನು ಸನ್ಮಾನಿಸಿತು (1968). ಇವರಿಗೆ ನಾಡಿಗೇರ್ ಎಂಬ ಸಂಭಾವನಾ ಗ್ರಂಥವನ್ನು ಅರ್ಪಿಸಲಾಗಿದೆ. ಇವರು 1992ರಲ್ಲಿ ನಿಧನರಾದರು.

(ಎಂ.ಎಲ್.ಎಸ್.)

**ಕೃಷ್ಣರಾಯ, ಮುದವೀಡು** : 1874-1947. ಕರ್ನಾಟಕದ ಏಕೀಕರಣಕ್ಕೆ ಶ್ರಮಿಸಿದ ಹಿರಿಯರು. ರಂಗಭೂಮಿಯ ನಟ, ಪತ್ರಿಕೋದ್ಯಮಿ ಮತ್ತು ಲೇಖಕರು. ಇವರು 1874 ಜುಲೈ 24ರಂದು ಬಾಗಲಕೋಟೆಯಲ್ಲಿ



ಜನಿಸಿದರು. ಚಿಕ್ಕಂದಿನಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡು ಚಿಕ್ಕಮ್ಮನ ಆಶ್ರಯದಲ್ಲಿ ಬೆಳೆದರು. ಧಾರವಾಡದಲ್ಲಿ ಮೆಟ್ರಿಕ್ ತರಗತಿಯವರೆಗೂ ವ್ಯಾಸಂಗ ಮಾಡಿದರು. ಭಾರತ ಸ್ವಾತಂತ್ರ್ಯ ಆಂದೋಲನದಿಂದ ಪ್ರಭಾವಿತ ರಾದರು. ಅದರಿಂದಾಗಿ ವ್ಯಾಸಂಗವನ್ನು ಮುಂದು ವರಿಸಲಾಗಲಿಲ್ಲ. ಲೋಕ ಮಾನ್ಯ ಟಿಳಕರ ಪ್ರಭಾವಕ್ಕೆ ಒಳಗಾದ ಇವರು ಅನೇಕ ರಾಜಕೀಯ ಸಮ್ಮೇಳನ ಗಳಲ್ಲಿ ಭಾಗವಹಿಸಿದರಲ್ಲದೆ ಕಾರಾಗೃಹ ವಾಸವನ್ನು ಅನುಭವಿಸಿದರು. ಬೆಳಗಾಂವಿ ಯಲ್ಲಿ 1924ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಇವರು ಸಕ್ರಿಯ ಪಾತ್ರ ವಹಿಸಿದ್ದರು. ಉತ್ತಮ ವಾಗ್ಮಿಗಳಾಗಿದ್ದ ಇವರದು ಸಿಂಹಗರ್ಜನೆ. ಸಭೆ ಸಮಾರಂಭಗಳಲ್ಲಿ ತತ್ಕ್ಷಣದ ಅನುವಾದದಲ್ಲಿ ಇವರು ಎತ್ತಿದ ಕೈ ಎನಿಸಿದ್ದರು. ನೆಹರೂ, ರಾಜಾಜಿ, ಪಟ್ಟಾಭಿ ಸೀತಾರಾಮಯ್ಯ ಮುಂತಾದ ರಾಷ್ಟ್ರ ನಾಯಕರು ಕರ್ನಾಟಕದ ತಮ್ಮ ಕಾರ್ಯಕ್ರಮಗಳಲ್ಲಿ ತಮ್ಮ ಭಾಷಣಗಳ ಅನುವಾದಕ್ಕಾಗಿ ಕೃಷ್ಣರಾಯರನ್ನು ಕರೆದೊಯ್ಯುತ್ತಿದ್ದರು.

ಕನ್ನಡದ ಆಂದೋಲನವನ್ನು ಕೃಷ್ಣರಾಯರು ತಮ್ಮ ಎಳವೆಯಲ್ಲಿಯೇ ಪ್ರಾರಂಭಿಸಿದರು. ಮರಾಠಿ ಪ್ರಾಬಲ್ಯವಿದ್ದ ಉತ್ತರ ಕರ್ನಾಟಕದಲ್ಲಿ ಇವರು ತಮ್ಮ ಬರೆಹ-ಭಾಷಣಗಳಿಂದ ಕನ್ನಡದ

ಜಾಗೃತಿಯನ್ನುಂಟುಮಾಡಿ, ತರುಣರಲ್ಲಿ ಹೊಸ ಚೈತನ್ಯವನ್ನು ತುಂಬಿ ಅವರು ಕನ್ನಡಕ್ಕಾಗಿ ದುಡಿಯಲು ಕಾರಣರಾದರು. ಕರ್ನಾಟಕದ ಏಕೀಕರಣಕ್ಕಾಗಿ ಇವರು ತಮ್ಮ ಜೀವನದುದ್ದಕ್ಕೂ ಶ್ರಮಿಸಿದರು.

ಕೃಷ್ಣರಾಯರ ಪತ್ರಿಕಾವ್ಯವಸಾಯವೂ ಗಣ್ಯವಾದುದು. ಇವರು ಕರ್ನಾಟಕ ವೃತ್ತ ಮತ್ತು ಕರ್ನಾಟಕ ಧನಂಜಯ ಎಂಬ ಪತ್ರಿಕೆಗಳನ್ನು ಸುಮಾರು ಕಾಲು ಶತಮಾನ ಕಾಲ ನಡೆಸಿದರು. ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣವನ್ನು ಕುರಿತಂತೆ ತಮ್ಮ ಗಡುಸಾದ ಗದ್ಯಶೈಲಿಯಲ್ಲಿ ಅಗ್ರಲೇಖನಗಳನ್ನು ಬರೆದು ಪ್ರಕಟಿಸಿದ್ದರು.

ರಂಗಭೂಮಿಯ ಕಲಾವಿದರೂ ಆಗಿದ್ದ ಕೃಷ್ಣರಾಯರು 1907ರಲ್ಲಿ ಭಾರತ ಕಲೋತ್ತೇಜಕ ನಾಟಕ ಮಂಡಳಿ ಎಂಬ ನಾಟ್ಯವಿಲಾಸಿ ಸಂಸ್ಥೆಯನ್ನು ಸಂಘಟಿಸಿದರು. ಪ್ರೇಮಭಂಗ ಮೊದಲಾದ ಹಲವು ನಾಟಕಗಳನ್ನು ಬರೆದು ಆಡಿಸಿದರಲ್ಲದೆ ತಾವೂ ಹಲವು ಪಾತ್ರಗಳನ್ನು ನಿರ್ವಹಿಸಿದರು. ಇವರಿಂದ ಅನೇಕ ಶ್ರೇಷ್ಠ ನಾಟಕ ಕಂಪನಿಗಳು ಸ್ಫೂರ್ತಿಗೊಂಡು ಬೆಳೆದುವು.

ಕಾದಂಬರಿಕಾರರೂ ಆಗಿದ್ದ ಕೃಷ್ಣರಾಯರು ಚಿತ್ತೂರು ಮುತ್ತಿಗೆ, ರಾಮರಾಜ್ಯ ವಿಯೋಗ, ಪ್ರೇಮಭಂಗ ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ. ಬೆಳಗಾಂವಿಯಲ್ಲಿ 1939ರಲ್ಲಿ ನಡೆದ 24ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೃಷ್ಣರಾಯರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಯಿತು. (ವಿ.ಎಸ್.)

**ಕೃಷ್ಣರಾವ್, ಯು.ಎಸ್.**[1] **:** 1912-2005. ಪ್ರಸಿದ್ಧ ಭರತನಾಟ್ಯ ಪ್ರವೀಣರು. ಉಭಯಕರ್ ಶಿವರಾವ್ ಕೃಷ್ಣರಾವ್ ಇವರ ಪೂರ್ಣ ಹೆಸರು. ಇವರು 1912 ಡಿಸೆಂಬರ್ 31ರಂದು ಉತ್ತರ ಕನ್ನಡ ಜಿಲ್ಲೆಯ ಕುಮಟ ಸಮೀಪದ ಮಲ್ಲಾಪುರ ಎಂಬಲ್ಲಿ ಜನಿಸಿದರು. ತಂದೆ ಶಿವರಾವ್, ತಾಯಿ ಗಿರಿಜಾಬಾಯಿ. ಇವರದು ವ್ಯಾಪಾರಸ್ಥ ಮನೆತನ. ಕೃಷ್ಣರಾವ್ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ ರಸಾಯನ ವಿಜ್ಞಾನದಲ್ಲಿ ಎಂ.ಎಸ್ಸಿ. ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದರು. ಹಲವು ವರ್ಷ ಸೆಂಟ್ರಲ್ ಕಾಲೇಜಿನಲ್ಲಿ ರಸಾಯನ ವಿಜ್ಞಾನದಲ್ಲಿ ಅಧ್ಯಾಪಕರಾಗಿ ದುಡಿದರು.

ಬಾಲ್ಯದಿಂದಲೂ ಭರತನಾಟ್ಯದಲ್ಲಿ ಹೆಚ್ಚು ಒಲವು ಹೊಂದಿದ್ದ ಇವರು ಖ್ಯಾತ ನಾಟ್ಯಕಲಾವಿದ ರಾಮಗೋಪಾಲ್ ಅವರಿಂದ ಪ್ರಭಾವಿತರಾದರು. ಮನೆಯವರ ಕಣ್ಣು ತಪ್ಪಿಸಿ ನೃತ್ಯಕಲೆಯನ್ನು ಅಭ್ಯಾಸಮಾಡುತ್ತಿದ್ದ ಕೃಷ್ಣರಾಯರಿಗೆ, ಇವರ ಗುರು ಕೋಲಾರದ ಪುಟ್ಟಪ್ಪನವರು ಮೈಸೂರುಶೈಲಿಯ ಭರತನಾಟ್ಯವನ್ನು ಕಲಿಸಿದರು. ಅನಂತರ ಇವರು ಪಂದನಲ್ಲೂರು ಶೈಲಿಯ ನೃತ್ಯಾಭ್ಯಾಸ ಮಾಡಿದ್ದು ಪಂದನಲ್ಲೂರು ಮೀನಾಕ್ಷಿಸುಂದರಂ ಪಿಳ್ಳೆಯವರಲ್ಲಿ. ಕೃಷ್ಣರಾಯರು ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಇವರ ಶಿಷ್ಯೆಯಾಗಿದ್ದ ಚಂದ್ರಭಾಗಾದೇವಿಯವರನ್ನು ಒಲಿದು ಮದುವೆಯಾದರು. ಇಬ್ಬರೂ ನೃತ್ಯಕಲೆಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡರು.

ಇವರು ಭರತನಾಟ್ಯದ ಬೆಳವಣಿಗೆ, ಏಳಿಗೆ, ಅಭಿವೃದ್ಧಿಗಾಗಿ ಅನೇಕ ರೀತಿಯಲ್ಲಿ ದುಡಿದರು. ಬೆಂಗಳೂರು ವಿಶ್ವವಿದ್ಯಾಲಯದ ನೃತ್ಯ ವಿಭಾಗದಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ಭಾರತ ಹಾಗೂ ಅನ್ಯದೇಶಗಳ ಕಲಾಭಿಲಾಷಿ ವಿದ್ಯಾರ್ಥಿಗಳಿಗೆ ನೃತ್ಯ ಗುರುಗಳಾದರು. ಅವರಿಗೆ ಈ ಕಲೆಯಲ್ಲಿ ಆಸಕ್ತಿ ಮೂಡಿಸಿದರು. ನೃತ್ಯದ ಬಗ್ಗೆ ಅನೇಕ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ಇವರು ನೀಡಿದರು. ಹಲವಾರು ಲೇಖನ ಹಾಗೂ ಪುಸ್ತಕಗಳನ್ನೂ ಬರೆದಿದ್ದಾರೆ. ತಮ್ಮ ಮನೆಯಲ್ಲೇ ಒಂದು ನೃತ್ಯ ಪ್ರಸರಣ ಕೇಂದ್ರ ತೆರೆದು, ಅಲ್ಲಿ ನೃತ್ಯ ಪ್ರದರ್ಶನಗಳನ್ನು ಹಮ್ಮಿಕೊಂಡರು. ಕಲಾರಸಿಕರಿಗೆ, ಪರದೇಶಗಳ ಗೌರವಾನ್ವಿತರಿಗೆ, ಪ್ರತಿನಿಧಿಗಳಿಗೆ, ಪ್ರವಾಸಿಗಳಿಗೆ ನೃತ್ಯದ ರಸದೌತಣ ನೀಡಿದ್ದಾರೆ.

ಚಂದ್ರಭಾಗಾದೇವಿ ಕೃಷ್ಣರಾವ್ ದಂಪತಿಗಳು ಹಲವು ಬಾರಿ ದೇಶ-ವಿದೇಶ ಪ್ರವಾಸ ಮಾಡಿದರು. ಈ ದಂಪತಿಗಳು ಲಂಡನ್ನಿನ ಸಂಗೀತ ವೃತ್ತದಲ್ಲಿ (ಏಷ್ಯನ್ ಮ್ಯೂಸಿಕ್ ಸರ್ಕಲ್) ಅನೇಕ



ನೃತ್ಯಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಈ ಸಂಸ್ಥೆಯಲ್ಲಿ ನೃತ್ಯಕಾರ್ಯಕ್ರಮ ನೀಡಲು, ನೃತ್ಯಕಲಿಸಲು, ಉಪನ್ಯಾಸ ಹಾಗೂ ನೃತ್ಯ ಸಂಯೋಜನೆ ಮಾಡಲು ಆಗಿನ ಮೈಸೂರು ಸರ್ಕಾರ ಇವರನ್ನು ಪ್ರತಿನಿಧಿಗಳಾಗಿ ಕಳುಹಿಸಿತ್ತು. ಇಂಗ್ಲೆಂಡ್, ಐರ್ಲೆಂಡ್,ಪಶ್ಚಿಮ ಜರ್ಮನಿ, ಫ್ರಾನ್ಸ್, ಬೆಲ್ಜಿಯಂ, ಅಮೆರಿಕ, ಹಾಂಗ್‍ಕಾಂಗ್, ಬ್ಯಾಂಕಾಕ್, ಸಿಂಗಪುರ, ಕೌಲಾಲಂಪುರ, ಕೊಲೊಂಬೊ -ಹೀಗೆ ಎಲ್ಲ ಕಡೆ ಪ್ರವಾಸ ಮಾಡಿ ನೃತ್ಯ ಕಾರ್ಯಕ್ರಮದ ಜೊತೆಗೆ ಉಪನ್ಯಾಸ, ಪ್ರಾತ್ಯಕ್ಷಿಕೆ ಹಾಗೂ ನೃತ್ಯ ಸಂಯೋಜನೆ ಮಾಡಿ ಪ್ರದರ್ಶನಗಳನ್ನು ನೀಡಿದರು. ಆ ದೇಶಗಳ ದೂರದರ್ಶನಗಳಲ್ಲೂ ನೃತ್ಯ ಪ್ರದರ್ಶನ ಹಾಗೂ ಉಪನ್ಯಾಸ ನೀಡಿ ಈ ದಂಪತಿಗಳು ವಿದೇಶಗಳಲ್ಲೂ ತುಂಬ ಜನಪ್ರಿಯತೆ ಗಳಿಸಿದರು. ಕೆನಡದ ಮಾಂಟ್ರಿಯಲ್‍ನಲ್ಲಿರುವ ಕಲಾಭಾರತಿ ಸಂಸ್ಥೆಯ ಆಹ್ವಾನದ ಮೇರೆಗೆ ಅಲ್ಲಿ ಭಾರತೀಯ ನೃತ್ಯ ಪರಂಪರೆಯ ಬಗ್ಗೆ ಉಪನ್ಯಾಸ ನೀಡಿ ಅಲ್ಲಿಯ ವಿದ್ಯಾರ್ಥಿಗಳಿಗೆ ಇವರು ನೃತ್ಯ ಕಲಿಸಿದರು.

ಕೃಷ್ಣರಾವ ದಂಪತಿಗಳು ಕನ್ನಡದಲ್ಲಿ ಬರೆದ ಆಧುನಿಕ ಭಾರತದಲ್ಲಿ ನೃತ್ಯಕಲೆ ಎಂಬ ಪುಸ್ತಕವನ್ನು ಮೈಸೂರು ವಿಶ್ವವಿದ್ಯಾನಿಲಯ ಹೊರತಂದಿದೆ. ಲಾಸ್ಯರಂಜನ ಎಂಬ ಕೃತಿ ಇಂಗ್ಲಿಷಿಗೆ ಅನುವಾದವಾಗಿದೆ. ಕೃಷ್ಣರಾವ್‍ರವರು ಭರತನಾಟ್ಯದ ಪಾರಿಭಾಷಿಕ ಶಬ್ದಗಳ ಒಂದು ನಿಘಂಟನ್ನು ಬರೆದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ. ತರಗತಿಯ ಪಠ್ಯಪುಸ್ತಕವಾಗಿ ಕನ್ನಡದಲ್ಲಿ ನೃತ್ಯಕಲೆ ಎಂಬ ಪುಸ್ತಕವನ್ನು ದಂಪತಿಗಳು ರಚಿಸಿದ್ದಾರೆ. ಎ ಪನೋರಮ ಆಫ್ ಇಂಡಿಯನ್ ಡಾನ್ಸ್ ಎಂಬುದು ಇವರು ಬರೆದ ಇನ್ನೊಂದು ಪುಸ್ತಕ.

ಇವರು ಅನೇಕ ಸಹಾಯಾರ್ಥ ನೃತ್ಯ ಪ್ರದರ್ಶನಗಳನ್ನು ನೀಡಿ ಸಮಾಜಸೇವೆಯನ್ನು ಮಾಡಿದ್ದಾರೆ. ವಿಶ್ವವಿಖ್ಯಾತರಾದ ಇವರ ಶಿಷ್ಯರ ಸಂಖ್ಯೆ ಅಪಾರ. ಇಂದ್ರಾಣಿ ರೇಹಮಾನ್, ಸೋನಾಲ್ ಮಾನಸಿಂಗ್, ಸುಧಾರಾಣಿ ರಘುಪತಿ, ಪ್ರತಿಭಾ ಪ್ರಹ್ಲಾದ್, ರೇವತಿಸತ್ಯು, ಕಾಮದೇವ್ ಈ ದಂಪತಿಗಳ ಪ್ರಮುಖ ಶಿಷ್ಯ-ಶಿಷ್ಯೆಯರು.

ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳಿಂದ ಇವರಿಗೆ ಗೌರವ ಸಂದಿದೆ. ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರ್ಕಾರದ ಶಾಂತಲಾ ನಾಟ್ಯ ಪ್ರಶಸ್ತಿ, ರಾಷ್ಟ್ರಪತಿಗಳಿಂದ ಇವರು ಕೊಲ್ಕತ್ತದಲ್ಲಿ ಪಡೆದ ರಾಷ್ಟ್ರೀಯ ಪ್ರಶಸ್ತಿ (1988) ಇವು ಕೆಲವು. ಕರ್ನಾಟಕದಲ್ಲಷ್ಟೇ ಅಲ್ಲದೆ ಇವರನ್ನು ಕೆನಡದ ಮಾಂಟ್ರಿಯಲ್‍ನ ಕಲಾಭಾರತಿ ಸಂಸ್ಥೆ ಕೂಡ ಸನ್ಮಾನಿಸಿದೆ. ಚೆನ್ನೈನ ಶ್ರೀ ಭರತಾಲಯ ಸಂಸ್ಥೆ ಇವರನ್ನು ಸನ್ಮಾನಿಸಿದೆ. ಚೆನ್ನೈನ ಕಲೈಮಗಳ್ ಸಭೆಯ ಗೌರವ ಸನ್ಮಾನವೂ ಇವರಿಗೆ ದೊರೆತಿದೆ. ಗಾಯನ ಸಮಾಜ, ಗಾನಕಲಾಪರಿಷತ್ತು, ಕರ್ನಾಟಕ ನೃತ್ಯಕಲಾಪರಿಷತ್ತು, ನೂಪುರ, ದೂರದರ್ಶನ ಪ್ರಶಸ್ತಿ ಇವು ಇವರಿಗೆ ದೊರೆತ ಇನ್ನು ಕೆಲವು ಗೌರವಗಳು. ಕೃಷ್ಣರಾವ್ ಚಂದ್ರಭಾಗಾದೇವಿ ದಂಪತಿಗಳು ದೇಶ ವಿದೇಶಗಳಲ್ಲಿ ಪ್ರದರ್ಶಿಸಿದ ದಿ ಟೆಂಪ್ಟೇಷನ್ ಆಫ್ ಬುದ್ಧ, ರಾಣಿ ಶಾಂತಲಾ, ಗೀತ ಗೋವಿಂದ, ಕಾಮ ದಹನ ಇವು ತುಂಬ ಪ್ರಸಿದ್ಧವಾದ ಪ್ರದರ್ಶನಗಳು. ಇವರು 2005 ಮಾರ್ಚ್ 6ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. (ಎಚ್.ಆರ್.ಎಲ್.)

**ಕೃಷ್ಣರಾವ್, ಯು.ಎಸ್. 2 :** 1914-. ಹೆಸರಾಂತ ನೃತ್ಯಪಟು. ಶಾಂತಲಾ ನಾಟ್ಯಪ್ರಶಸ್ತಿ ವಿಜೇತರು. ದಕ್ಷಿಣ ಕನ್ನಡ ಜಿಲ್ಲೆಯ ಉಚ್ಚಿಲದ ಸಂಪ್ರದಾಯಸ್ಥ ಕುಟುಂಬದಲ್ಲಿ 1914 ನವೆಂಬರ್ 9ರಂದು ಜನಿಸಿದರು. ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು. ಅನಂತರ ಕದ್ರಿಯ ವಿದ್ಯಾಬೋಧಿನಿ ಶಾಲೆಯಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದರು (1934). ನೃತ್ಯದಲ್ಲಿದ್ದ ಆಸಕ್ತಿಯಿಂದಾಗಿ ಶಾಸ್ತ್ರೀಯವಾಗಿ ನೃತ್ಯಾಭ್ಯಾಸಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಅಂತಾರಾಷ್ಟ್ರೀಯ ಖ್ಯಾತಿಯ ನೃತ್ಯಪಟು ಉದಯ ಶಂಕರ ತಂಡದ ಕೆ.ಕೆ.ಶೆಟ್ಟಿ ಇವರ ಮೊದಲ ಗುರು. ಇವರು ಕಥಕ್ಕಳಿ ಅಭ್ಯಸಿಸಿದ್ದು ನೃತ್ಯಗುರು ಮಹಾಲಿಂಗಂ ಅವರಲ್ಲಿ ನೃತ್ಯರಂಗದಲ್ಲಿ ಹೊಸ ಅಲೆ ಎಬ್ಬಿಸಿದ ನಾಟ್ಯ ಕಲಾನಿಪುಣ ರಾಜನ್ ಅಯ್ಯರ್ ಅವರಿಂದ ಕಥಕ್ಕಳಿ ಹಾಗೂ ಭರತನಾಟ್ಯ ಎರಡನ್ನೂ ಅಭ್ಯಾಸ ಮಾಡಿದರು. ಅಲ್ಲದೆ, ಅವರೊಂದಿಗೆ ಅನೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ಅನಂತರ ಕದ್ರಿಯಲ್ಲಿ ತಮ್ಮದೇ ಆದ ನೃತ್ಯವಿದ್ಯಾಲಯವನ್ನು ಸ್ಥಾಪಿಸಿದರು. ದಕ್ಷಿಣ ಕನ್ನಡದ ಎಲ್ಲ ಊರುಗಳಲ್ಲೂ ನೃತ್ಯ ಪ್ರದರ್ಶನ ನೀಡಿ ಮನೆ ಮಾತಾದರು. ಸಾವಿರಕ್ಕೂ ಹೆಚ್ಚು ನೃತ್ಯಪ್ರದರ್ಶನಗಳನ್ನು ನೀಡಿದ ದಾಖಲೆ ಇವರದು. ತಮ್ಮ ನೃತ್ಯ ವಿದ್ಯಾಲಯದ ರಜತ ಮಹೋತ್ಸವ ಸಮಾರಂಭವನ್ನು ಮುಂಬಯಿಯಲ್ಲಿ ನಡೆಸಿದರು. ನವದೆಹಲಿಯಲ್ಲಿ ಅಂದಿನ ರಾಷ್ಟ್ರಪತಿ ಎಸ್.ರಾಧಾಕೃಷ್ಣನ್ ಅವರ ಸಮ್ಮುಖದಲ್ಲಿ ನೃತ್ಯಪ್ರದರ್ಶನ ನೀಡಿ ಪ್ರಶಸ್ತಿಪತ್ರ ಪಡೆದ ಹೆಗ್ಗಳಿಕೆ ಇವರದು. ಜನತೆಯಲ್ಲಿ ನೃತ್ಯಾಭಿರುಚಿಯನ್ನು ಬೆಳೆಸುವಲ್ಲಿ ಇವರು ಅಪಾರ ಶ್ರಮವಹಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ನೂರಾರು ಜನರಿಗೆ ನೃತ್ಯ ಕಲಿಸಿದ್ದಾರೆ. ಇವರ ಐವರು ಮಕ್ಕಳೂ ನೃತ್ಯ ಹಾಗೂ ಸಂಗೀತ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ನೃತ್ಯರಂಗದಲ್ಲಿ ಇವರ ಸಾಧನೆಗಾಗಿ ಅನೇಕ ಪ್ರಶಸ್ತಿ-ಗೌರವಗಳು ಲಭಿಸಿವೆ. ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನೀಡಿದ ಕರ್ನಾಟಕ ಕಲಾತಿಲಕ ಬಿರುದು (1981), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1992), ಕರ್ನಾಟಕ ಸರ್ಕಾರದ ಶಾಂತಲಾ ನಾಟ್ಯ ಪ್ರಶಸ್ತಿ (1988) ಹಾಗೂ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿವೆ. (1972). ಇವರು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಹಾಗೂ ತಂಜಾವೂರಿನ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. (ಎಚ್.ಆರ್.ಎಲ್.)

**ಕೃಷ್ಣರಾವ್, ಎಂ.ವಿ. :** ಪ್ರಸಿದ್ಧ ಇತಿಹಾಸಜ್ಞ, ರಾಜನೀತಿಜ್ಞ. ಇವರು ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಖ್ಯಾತವಿದ್ವಾಂಸ ಥಾಮಸ್ ಡೆನ್‌ಹ್ಯಾಮ್, ಸಿ.ಆರ್.ರೆಡ್ಡಿ, ರಾಧಾಕುಮುದ ಮುಖರ್ಜಿ, ಎಸ್.ವಿ.ವೆಂಕಟೇಶ್ವರ, ಎಂ.ಎಚ್.ಕೃಷ್ಣ ಮೊದಲಾದವರ ಶಿಷ್ಯರಾಗಿದ್ದು, ಅವರಿಂದ ಜೀವನದ ವಿಶಾಲ ದೃಷ್ಟಿ, ವಿದ್ಯಾರ್ಜನೆಯಲ್ಲಿ ಆಳವಾದ ಸಂಶೋಧನಾತ್ಮಕ ಆಸಕ್ತಿ ಮತ್ತು ಪ್ರೌಢವಾದ ವಿದ್ವತ್ತನ್ನು ಗಳಿಸಿಕೊಂಡರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದ ತರುವಾಯ ರಾಜ್ಯಶಾಸ್ತ್ರದಲ್ಲಿ ಹೆಚ್ಚಿನ ಪಾಂಡಿತ್ಯ ಗಳಿಸುವ ದೃಷ್ಟಿಯಿಂದ ಲಂಡನ್ನಿಗೆ ತೆರಳಿ, ಲಾಸ್ಕಿಯ ಶಿಷ್ಯರಾದರು. ಇದರ ಫಲವಾಗಿ ಗ್ರೋತ್ ಆಫ್ ಲಿಬರಲಿಸಂ ಇನ್ ಇಂಡಿಯ ಇನ್ ದಿ ನೈನ್‌ಟೀನ್ತ್ ಸೆಂಚುರಿ ಎಂಬ ಗ್ರಂಥ ರಚಿಸಿದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಂಶೋಧನೆ ಮತ್ತು ಬೋಧನೆಯಲ್ಲಿ ನಿರತರಾದರು. ಇವರು ಒಳ್ಳೆಯ ವಾಗ್ಮಿತೆಯನ್ನೂ ವಿಷಯದ ಮೇಲೆ ಪ್ರಭುತ್ವವನ್ನೂ ಪಡೆದಿದ್ದರು. ಇವರು ಮೊದಲು ರಾಜ್ಯಶಾಸ್ತ್ರದ ಉಪಪ್ರಾಧ್ಯಾಪಕರೂ ಅನಂತರ ಇತಿಹಾಸದ ಪ್ರಾಧ್ಯಾಪಕರೂ ಆದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹುದ್ದೆಯಿಂದ 1956ರಲ್ಲಿ ಇವರು ನಿವೃತ್ತರಾದರು. ಅನಂತರ ಒಂದೂವರೆ ದಶಕಗಳ ಕಾಲ ಕರ್ನಾಟಕದ ಇತಿಹಾಸ, ಸಂಸ್ಕೃತಿಗಳ ವಿಚಾರವಾಗಿ ಆಳವಾದ ಅಧ್ಯಯನ ಸಂಶೋಧನೆಗಳಲ್ಲಿ ನಿರತರಾಗಿದ್ದರಲ್ಲದೆ ಬೆಂಗಳೂರಿನ ಕಾಲೇಜೊಂದರಲ್ಲಿ ಅಧ್ಯಾಪಕ ವೃತ್ತಿಯನ್ನು ಮುಂದುವರಿಸಿದರು. ಬೆಂಗಳೂರು ನಗರದ ಅನೇಕ ಪ್ರಮುಖ ಐತಿಹಾಸಿಕ ಸಾಂಸ್ಕೃತಿಕ ಸಭೆಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಉಪಾಧ್ಯಕ್ಷತೆ, ಪ್ರೌಢಶಾಲಾ ಉಪಾಧ್ಯಾಯ ಸಂಘದ ಅಧ್ಯಕ್ಷತೆ, ಮಿಥಿಕ್ ಸೊಸೈಟಿಯ ಅಧ್ಯಕ್ಷತೆ, ಆಚಾರ್ಯ ತುಳಸಿಯವರಿಂದ ಪ್ರಚಲಿತವಾದ ಅಣುವ್ರತ ಸಮಿತಿಯ ಕರ್ನಾಟಕ ಸಮಿತಿಯ ನಿರ್ದೇಶಕತ್ವ - ಇವು ಇವರ ಚಟುವಟಿಕೆಗಳಲ್ಲಿ ಕೆಲವು.

ವಿದ್ವತ್ ಲೋಕಕ್ಕೆ ಇವರ ಕೊಡುಗೆ ಗಮನಾರ್ಹ. ಕೌಟಿಲ್ಯನ ಅರ್ಥಶಾಸ್ತ್ರವನ್ನು ಕುರಿತ ಇವರ ಸಂಶೋಧನಾತ್ಮಕ ಲೇಖನಗಳು ಪುರಾತನ ಭಾರತೀಯ ರಾಜನೀತಿಯ ಅಧ್ಯಯನಕ್ಷೇತ್ರದಲ್ಲಿ ಉತ್ತಮ ಕೊಡುಗೆಗಳಾಗಿವೆ. 19ನೆಯ ಶತಮಾನದಲ್ಲಿ ಭಾರತದ ರಾಜಕಾರಣದಲ್ಲಿ ಬೆಳೆದುಬಂದ ಉದಾರತಾವಾದದ ಮೇಲಿನ ಇವರ ಅಧ್ಯಯನ ಉತ್ತಮವಾದ ಶಾಸ್ತ್ರೀಯ ಬರೆವಣಿಗೆಗೂ ಭಾಷಾಪ್ರೌಢಿಮೆಗೂ ಹೆಸರಾಗಿದೆ. ಪ್ರಾಚೀನ ಕರ್ನಾಟಕದಲ್ಲಿ 7 ಶತಮಾನಗಳ ಕಾಲ ರಾಜ್ಯವಾಳಿ ಸಂಸ್ಕೃತಿಯ ಬೆಳೆವಣಿಗೆಗೆ ಗಮನಾರ್ಹ ಕಾಣಿಕೆ ನೀಡಿದ ಗಂಗವಂಶದ ಚರಿತ್ರೆಯ ಮೇಲೆ ಇವರು ರಚಿಸಿದ ಹೊತ್ತಗೆ ತಲಕಾಡಿನ ಗಂಗರು ಇಂದಿಗೂ ಆ ವಂಶದ ಮೇಲಿನ ಅಧಿಕಾರಯುತ ಗ್ರಂಥಗಳಲ್ಲೊಂದು. ಕರ್ನಾಟಕದ ಇತಿಹಾಸದ ಮೇಲೆ ಇವರು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಗ್ಲಿಂಪ್ಸಸ್ ಆಫ್ ಕರ್ನಾಟಕ ಹಿಸ್ಟೊರಿ ಮತ್ತು ಕರ್ನಾಟಕ ಇತಿಹಾಸ ದರ್ಶನ -ಇವು ಮುಖ್ಯವಾದವು. ಕರ್ನಾಟಕ ಇತಿಹಾಸ ದರ್ಶನ ಕನ್ನಡ ನಾಡಿನ 2000 ವರ್ಷಗಳ ಇತಿಹಾಸದ ಸಮಗ್ರ ನೋಟವನ್ನೊದಗಿಸುವ ದೊಡ್ಡ ಕೃತಿ. ಇವರ ಜೀವನದ ಕೊನೆಗಾಲದಲ್ಲಿ ಪ್ರಕಟವಾದ ಈ ಪುಸ್ತಕ ಇವರ ಆಳವಾದ ವಿದ್ವತ್ತು ಮತ್ತು ವಿಶಾಲವಾದ ಅನುಭವಗಳ ದ್ಯೋತಕವಾಗಿದೆ.

ಕೃಷ್ಣರಾಯರು ಬ್ರಿಟನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿಯ ಗೌರವ ಸದಸ್ಯತ್ವ ಪಡೆದಿದ್ದರು. ರಾಜ್ಯ ಸರ್ಕಾರದ ಆಶ್ರಯದಲ್ಲಿ ನಡೆದ ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಇತಿಹಾಸದ ರಚನೆಯಲ್ಲೂ ಇವರು ಭಾಗವಹಿಸಿದ್ದರು. ಕನ್ನಡ ವಿಶ್ವಕೋಶದ ಇತಿಹಾಸ ಉಪಸಮಿತಿಯ ಅಧ್ಯಕ್ಷರಾಗಿದ್ದ ಇವರ ಹಲವು ಲೇಖನಗಳು ಕನ್ನಡ ವಿಶ್ವಕೋಶದಲ್ಲಿ ಪ್ರಕಟವಾಗಿವೆ. ಇವರು 1971ರಲ್ಲಿ ನಿಧನ ಹೊಂದಿದರು. *

**ಕೃಷ್ಣವರ್ಮ I :** ಬನವಾಸಿಯ ಕದಂಬ ವಂಶದ ತ್ರಿಪರ್ವತ ಶಾಖೆಯ ಮೊದಲ ಅರಸ (ಸು.430-60) ಕಾಕುತ್ಸ್ಥವರ್ಮನ ಕಿರಿಯ ಮಗ.

ಕಾಕುತ್ಸ್ಥವರ್ಮನ ಉತ್ತರಾಧಿಕಾರಿಯಾಗಿ ಇವನ ಅಣ್ಣ ಶಾಂತಿವರ್ಮ ಬನವಾಸಿಯಲ್ಲಿ ಸಿಂಹಾಸನಸ್ಥನಾದಾಗ ಇವನು ತ್ರಿಪರ್ವತದಿಂದ ಸ್ವತಂತ್ರವಾಗಿ ಆಳಲಾರಂಭಿಸಿದ. ತ್ರಿಪರ್ವತವನ್ನು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಶ್ರೀಪರ್ವತ (ಶ್ರೀಶೈಲ) ಎಂದು ಕೆಲವರು ಗುರುತಿಸಿದ್ದರೆ, ಕೆಲವರು ಇದು ಹಾಸನ ಜಿಲ್ಲೆಯ ಹಳೇಬೀಡೆಂದು ಅಭಿಪ್ರಾಯಪಟ್ಟಿದ್ದಾರೆ. ಇದು ಬೆಳಗಾಂವಿ

ಜಿಲ್ಲೆ ಮೂರುಗೋಡು ತ್ರಿಪರ್ವತ ಎಂದು ಪಾಠಕ್ ಅವರ ಅಭಿಪ್ರಾಯವಿದೆ. ದ.ಕ.ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಬೆಟ್ಟ ತ್ರಿಪರ್ವತವೆಂದೂ ಹೆಸರಾಗಿತ್ತೆಂದೂ ಕದಂಬ ಅರಸ ಶಿಶಿಲದಿಂದ ಆಳಿದನೆಂದೂ ಐತಹ್ಯವಿದೆ.

ಸೇಂದ್ರಕರ ಸಾಮಂತರಾಗಿದ್ದು ಕದಂಬರ ವಿರುದ್ಧ ದಂಗೆ ಎದ್ದ ನಾಗವಂಶೀಯರನ್ನು ಇವನು ಸೋಲಿಸಿ ಅವರ ರಾಜ್ಯವನ್ನು ಕಸಿದುಕೊಂಡ. ಇದಲ್ಲದೆ ಪಲ್ಲವರನ್ನು ಸಹ ಈತ ಕದನದಲ್ಲಿ ಎದುರಿಸಬೇಕಾಯಿತು. ಶಾಸನಗಳಲ್ಲಿ ಈ ಪಲ್ಲವದೊರೆಯನನ್ನು ನಣಕ್ಕಾಸ ಪಲ್ಲವನೆಂದು ಕರೆಯಲಾಗಿದೆ. ಇವರಿಬ್ಬರ ನಡುವೆ ನಡೆದ ಕದನದಲ್ಲಿ ಕೃಷ್ಣವರ್ಮ ಸೋಲನ್ನನುಭವಿಸಿದ. ಆದರೆ ಈತನ ಬಂಧುವಾದ ಕೇಕೆಯ ಶಿವಸ್ಕಂದವರ್ಮ ಕೃಷ್ಣವರ್ಮನ ಪೂರ್ವವೈಭವವನ್ನು ಸಂಪಾದಿಸಿಯೇ ತೀರುವೆನೆಂದು ನಿಶ್ಚಯಿಸಿ ಉಗ್ರವಾದ ತಪಸ್ಸನ್ನಾಚರಿಸಿದನೆಂದು ದಾವಣಗೆರೆ ತಾಲ್ಲೂಕಿನ ಒಂದು ಶಾಸನದಲ್ಲಿ ಹೇಳಿದೆ. ಕೃಷ್ಣವರ್ಮ ಅಶ್ವಮೇಧಯಾಗವನ್ನು ಮಾಡಿದನೆಂಬುದು ಇತರ ಶಾಸನಗಳಿಂದ ತಿಳಿದಿದೆ. ಆದ್ದರಿಂದ ಹೀಗೆ ಪಲ್ಲವರಿಂದ ಸೋಲಿಸಲ್ಪಟ್ಟ ಕೃಷ್ಣವರ್ಮ ಅನಂತರ ಕೇಕಯ ಮುಂತಾದ ಇತರ ಸಮರ್ಥ ಸಾಮಂತರ ನೆರವಿನಿಂದ ಪಲ್ಲವರನ್ನು ಸೋಲಿಸಿ, ಆ ವಿಜಯದ ಅನಂತರ ಈ ಯಾಗ ಮಾಡಿರಬಹುದು. ಬಹುಶಃ ಈ ಸಂದರ್ಭದಲ್ಲಿ ಈತನ ಅಣ್ಣನ ಮಗನಾದ ಮೃಗೇಶವರ್ಮ ಇವನಿಗೆ ಬೆಂಬಲವನ್ನು ನೀಡಿರಬೇಕು.

ಈತನಿಗೆ ಇಬ್ಬರು ಮಕ್ಕಳು - ವಿಷ್ಣುವರ್ಮ ಮತ್ತು ದೇವವರ್ಮ. ಕಿರಿಯನಾದ ದೇವವರ್ಮನನ್ನು ಈತ ಉತ್ತರಾಧಿಕಾರಿಯಾಗಿ ಆರಿಸಿದ. ಇದಕ್ಕೆ ಕಾರಣ ಗೊತ್ತಿಲ್ಲ. ಹಿರಿಯನಾದ ವಿಷ್ಣುವರ್ಮ ಕೇಕಯ ರಾಜಪುತ್ರಿಯ ಮಗ. ಕೃಷ್ಣವರ್ಮನ ಭಗಿನಿಯನ್ನು ಗಂಗವಂಶದ ಮುಮ್ಮುಡಿ ಮಾಧವ ಮದುವೆಯಾಗಿದ್ದ. (ಬಿ.ಆರ್.ಜಿ)

**ಕೃಷ್ಣವರ್ಮ II :** ಬನವಾಸಿಯ ಕದಂಬ ವಂಶದ ಅರಸ (ಸು.516-40). ತ್ರಿಪರ್ವತಶಾಖೆಯ ಸಿಂಹವರ್ಮನ ಮಗ.

ಈತ ಬನವಾಸಿಯಲ್ಲಿ ಆಳುತ್ತಿದ್ದ ಸೋದರಸಂಬಂಧಿಯಾದ ಹರಿವರ್ಮನನ್ನು ಸೋಲಿಸಿ ಆ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇಬ್ಭಾಗವಾಗಿದ್ದ ಕದಂಬ ರಾಜ್ಯ ಇವನ ಕಾಲದಲ್ಲಿ ಪುನಃ ಒಟ್ಟುಗೂಡಿತು. ಬನವಾಸಿಯನ್ನು (ವೈಜಯಂತಿ) ಪುನಃ ತನ್ನ ರಾಜಧಾನಿಯಾಗಿ ಮಾಡಿಕೊಂಡ. ಇದು ಈತನ ಆಳಿಕೆಯ ಎಂಟನೆಯ ವರ್ಷದೊಳಗೆ ನಡೆದ ಘಟನೆ. ಆದರೆ ಈತನನ್ನು ಚಳುಕ್ಯ ಪುಲಕೇಶಿ ಸೋಲಿಸಿದನೆಂದೂ ತನ್ಮೂಲಕ ಕದಂಬರಾಜ್ಯ ಅಸ್ತವಾಯಿತೆಂದೂ ಹೇಳಲಾಗಿದೆ. ಆದರೆ ಈ ಕುರಿತು ಹೆಚ್ಚಿನ ವಿವರಗಳು ತಿಳಿದಿಲ್ಲ. ಇಮ್ಮಡಿ ಕೃಷ್ಣವರ್ಮನಿಗೆ ಅಜವರ್ಮ ಮತ್ತು ರವಿವರ್ಮರೆಂಬ ಇಬ್ಬರು ಮಕ್ಕಳಿದ್ದರು. ಆದರೆ ಇವರು ಬಹುಶಃ ಸಾಮಂತ ಪದವಿಯಿಂದಲೇ ತೃಪ್ತರಾಗಿರಬೇಕಾಯಿತು. (ಬಿ.ಆರ್.ಜಿ.)

**ಕೃಷ್ಣಶಾಸ್ತ್ರಿ, ಎಚ್. :** 1870-1928. ಖ್ಯಾತ ಶಾಸನತಜ್ಞರು. ಬೆಂಗಳೂರು ಜಿಲ್ಲೆ ಹೊಸಕೋಟೆಯಲ್ಲಿ ಜನಿಸಿ, ಬೆಂಗಳೂರಿನಲ್ಲಿ ಬಿ.ಎ. ವರೆಗೆ ಓದಿ ಅನಂತರ ಭಾರತ ಸರ್ಕಾರದ ಶಾಸನ ಇಲಾಖೆಯನ್ನು ಸೇರಿ ಜರ್ಮನ್ ವಿದ್ವಾಂಸರಾದ ಹುಲ್ಷ್‌ರ ಸಹಾಯಕರಾದರು. ಶಾಸನತಜ್ಞರಾಗಿ ದೇಶವಿದೇಶಗಳಲ್ಲಿ ಸಂಚರಿಸಿದ ಇವರಿಗೆ ಕನ್ನಡ, ಇಂಗ್ಲಿಷ್, ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಪ್ರಭುತ್ವವಿತ್ತು. 1908ರಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಹುದ್ದೆಗೂ 1920ರಲ್ಲಿ ಗವರ್ನಮೆಂಟ್ ಎಪಿಗ್ರಫಿಸ್ಟ್ ಫಾರ್ ಇಂಡಿಯಾ ಮುಖ್ಯಾಧಿಕಾರಿಯ ಹುದ್ದೆಗೂ ನೇಮಕಗೊಂಡರು. ಇವರ ಪಾಂಡಿತ್ಯ ಮತ್ತು ಕಾರ್ಯದಕ್ಷತೆಗೆ ಮೆಚ್ಚಿ ಭಾರತ ಸರ್ಕಾರ 1912ರಲ್ಲಿ ರಾವ್ ಸಾಹೇಬ್ ಮತ್ತು 1920ರಲ್ಲಿ ರಾವ್ ಬಹದ್ದೂರ್ ಬಿರುದುಗಳನ್ನಿತ್ತು ಸನ್ಮಾನಿಸಿತು. 1924ರಲ್ಲಿ ಕೋಲಾರದಲ್ಲಿ ನಡೆದ 10ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಇವರು ಆಯ್ಕೆಯಾದರು. 1925ರಲ್ಲಿ ಹುದ್ದೆಯಿಂದ ನಿವೃತ್ತರಾದರು.

ಕೃಷ್ಣಶಾಸ್ತ್ರಿಗಳು ಸಂಪಾದಿಸಿದ ದಕ್ಷಿಣ ಭಾರತ ಶಾಸನಗಳಿಗೆ ಸಂಬಂಧಿಸಿದ ವಾರ್ಷಿಕ ವರದಿಗಳು, ಎಪಿಗ್ರಾಫಿಯಾ ಇಂಡಿಕಾದ 17ನೆಯ ಸಂಪುಟ, 16 ಮತ್ತು 18ನೆಯ ಸಂಪುಟಗಳ ಕೆಲವು ಸಂಚಿಕೆಗಳು ಮತ್ತು ದಕ್ಷಿಣ ಭಾರತ ಶಾಸನಗಳ 2ನೆಯ ಸಂಪುಟದ 4ನೆಯ ಭಾಗ ಮತ್ತು 4 ಹಾಗೂ 5ನೆಯ ಸಂಪುಟಗಳು ಇತಿಹಾಸಕಾರರಿಗೆ ಅಮೂಲ್ಯ ಆಧಾರ ಗ್ರಂಥಗಳಾಗಿವೆ. ದಕ್ಷಿಣ ಭಾರತ ಶಾಸನಗಳ ಅನುಕ್ರಮ ಸಂಚಿಕೆಗಳ 2ನೆಯ ಸಂಪುಟದ 5ನೆಯ ಭಾಗ ಮತ್ತು 3ನೆಯ ಸಂಪುಟದ 3ನೆಯ ಭಾಗವನ್ನು ಇವರು ಹೊರತಂದರು. ಮಸ್ಕಿಯ ಅಶೋಕನ ಶಾಸನ, ಮಹಾಬಲಿಪುರದ ಶಿವದೇವಾಲಯವೊಂದರಲ್ಲಿರುವ ಎರಡು ವಿಗ್ರಹಗಳು, ಐದು ಪಲ್ಲವ ಶಾಸನಗಳು ಇವುಗಳ ಮೇಲೆ ಬರೆದ ಮತ್ತು ಎಪಿಗ್ರಾಫಿಯಾ ಇಂಡಿಕಾದಲ್ಲಿ ಪ್ರಕಟವಾಗಿರುವ ಇವರ ಸಂಶೋಧನಾತ್ಮಕ ಪ್ರಬಂಧಗಳು ಇವರ ಪ್ರತಿಭೆಯನ್ನು ವ್ಯಕ್ತಪಡಿಸುತ್ತವೆ. ಹಿಂದು ಪ್ರತಿಮಾಶಿಲ್ಪಗಳ ಅಧ್ಯಯನದಲ್ಲಿ ಇಂದಿಗೂ ಉತ್ತಮ ಸಹಾಯಕ ಗ್ರಂಥವಾಗಿರುವ ದಕ್ಷಿಣ ಭಾರತದ ಪ್ರತಿಮೆಗಳನ್ನು ಕುರಿತ ಇವರ ಸಚಿತ್ರ ಗ್ರಂಥ 1916ರಲ್ಲಿ ಪ್ರಕಟವಾಯಿತು. ಇವರು 1928ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. (ಎಚ್.ಎಂ.ಎಸ್.ಆರ್.)

**ಕೃಷ್ಣಶಾಸ್ತ್ರೀ, ಎ.ಆರ್. :** 1890-1968. ಹೊಸಗನ್ನಡದ ಅಶ್ವಿನೀ ದೇವತೆಗಳಲ್ಲಿ ಒಬ್ಬರೆಂದು ಪ್ರಸಿದ್ಧರಾದ ಲೇಖಕರು. ಇವರು 1890 ಫೆಬ್ರವರಿ 12ರಂದು ಮೈಸೂರು ನಗರದಲ್ಲಿ ಜನಿಸಿದರು. ತಂದೆ ಅಂಬಳೆ ರಾಮಕೃಷ್ಣಶಾಸ್ತ್ರಿಗಳು ಮೈಸೂರಿನ ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿದ್ದುದ್ದರಿಂದ ಶಾಸ್ತ್ರಿಗಳಿಗೆ ಚಿಕ್ಕಂದಿನಲ್ಲಿಯೇ ಸಂಸ್ಕೃತಭಾಷಾ ಸಾಹಿತ್ಯಗಳ ಪ್ರವೇಶಕ್ಕೆ ಅನುಕೂಲವಾಯಿತು. ಮೈಸೂರಿನ ವೆಸ್ಲಿಯನ್ ಮಿಷನ್ ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಮುಗಿಸಿದಮೇಲೆ, ಮಹಾರಾಜ ಕಾಲೇಜಿನಲ್ಲಿ ಬಿ.ಎಂ.ಶ್ರೀಕಂಠಯ್ಯ ಮತ್ತು ಎಂ.ಹಿರಿಯಣ್ಣನವರ ಶಿಷ್ಯರಾಗಿ ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ಮುಖ್ಯ ವಿಷಯಗಳಾಗಿ ಆರಿಸಿಕೊಂಡು 1913ರಲ್ಲಿ ಬಿ.ಎ. ಪದವಿ ಗಳಿಸಿದರು. ಅನಂತರ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ವಿಶೇಷವಾಗಿ ವ್ಯಾಸಂಗಮಾಡಿ 1915ರಲ್ಲಿ ಎಂ.ಎ. ಪದವಿ ಪಡೆದರು.

ಮೈಸೂರು ಜಿಲ್ಲಾ ಕಚೇರಿಯಲ್ಲಿ ಕೆಲವು ತಿಂಗಳುಗಳ ಕಾಲ ಕೆಲಸ ಮಾಡಿದ ಮೇಲೆ ಶಾಸ್ತ್ರಿಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಬೋಧಕರಾಗಿ ನೇಮಕಗೊಂಡರು (1915). ಕೀಳುವವರಿಲ್ಲದೆ ಮೂಲೆಗುಂಪಾಗಿದ್ದ ಕನ್ನಡವನ್ನು ಮೇಲೆತ್ತಲು ಅಲ್ಲಿ ಇವರು ಮಾಡಿದ ಮುಖ್ಯವಾದ ಮೂರು ಕೆಲಸಗಳಿವು: ಮೊದಲನೆಯದಾಗಿ ಇಂಗ್ಲಿಷ್ ಸಾಹಿತ್ಯಾಭ್ಯಾಸದಿಂದ ತಾವು ಪಡೆದ ಜ್ಞಾನದಿಂದ ಕನ್ನಡದ ಬೋಧನೆಗೆ ಹೊಸ ತಿರುವನ್ನು ಕೊಟ್ಟು, ಕನ್ನಡದ ವಿಷಯದಲ್ಲಿ ವಿದ್ಯಾರ್ಥಿಗಳಲ್ಲಿ ಉತ್ಸಾಹವನ್ನು ತುಂಬಿ ಕನ್ನಡಕ್ಕೆ ಕನ್ನಡದ ಉಪಾಧ್ಯಾಯನಿಗೆ ಒಂದು ಗೌರವದ ಸ್ಥಾನವನ್ನು ತಂದುಕೊಟ್ಟರು. ಎರಡನೆಯದಾಗಿ ಕನ್ನಡದ ವಿಷಯದಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಅರಳಿಸಲು ಯೋಗ್ಯವಾದ, ನಾಡಿನ ಕರ್ನಾಟಕ ಸಂಘಗಳಿಗೆ ಮಾತೃಪ್ರಾಯವಾದ ಸೆಂಟ್ರಲ್ ಕಾಲೇಜಿನಲ್ಲಿ ಕರ್ನಾಟಕ ಸಂಘವೊಂದನ್ನು ಸ್ಥಾಪಿಸಿದರು (1918). ವಿಜ್ಞಾನವನ್ನು ಕನ್ನಡದ ಮೂಲಕ ಬೋಧಿಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದು ಸಂಘ; ತಮ್ಮ ಸಹೋದ್ಯೋಗಿಗಳ ನೆರವಿನಿಂದ ಹಾಗೆ ತೋರಿಸಿಕೊಟ್ಟವರು ಶಾಸ್ತ್ರಿಗಳು. ಮೂರನೆಯದಾಗಿ ಎಂಬತ್ತು ವರ್ಷಗಳಿಗೂ ಮಿಕ್ಕು ನಡೆದುಬಂದ ಕನ್ನಡದ ಉತ್ಕೃಷ್ಟ ತ್ರೈಮಾಸಿಕವಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ಪ್ರಬುದ್ಧ ಕರ್ನಾಟಕ ಪತ್ರಿಕೆಯನ್ನು ಹೊಸಗನ್ನಡದ ಪುನರುಜ್ಜೀವನ ಕಾರ್ಯಕ್ಕೆ ಪ್ರೇರಕಶಕ್ತಿಯಾಗಿ ರೂಪಿಸಿದವರು (1919) ಶಾಸ್ತ್ರಿಗಳೇ. ಅದೇ ವರ್ಷ ಇವರಿಗೆ ಮೈಸೂರಿನ ಓರಿಯೆಂಟಲ್ ಲೈಬ್ರರಿಗೆ ವರ್ಗವಾಗಲು, ಅಲ್ಲಿ ಶಾಮಶಾಸ್ತ್ರಿಗಳ ನೇತೃತ್ವದಲ್ಲಿ ನಯಸೇನನ

ಧರ್ಮಾಮೃತವನ್ನು ಸಂಪಾದಿಸಿ, ಪೀಠಿಕೆಯೊಡನೆ ಅದನ್ನು ಅಚ್ಚಿಗೆ ಸಿದ್ಧಪಡಿಸಿದರು. 1927ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ತರಗತಿಗಳು ತೆರೆಯುವಂತಾಗಲು ಶಾಸ್ತ್ರಿಗಳು ತೆರೆಯಮರೆಯಲ್ಲಿ ಕೆಲಸಮಾಡಿ, ಅದು ಅಸ್ತಿತ್ವಕ್ಕೆ ಬಂದಾಗ ಕೆಲವು ತಿಂಗಳ ಕಾಲ ಆ ತರಗತಿಗಳಿಗೆ ಪಾಠ ಹೇಳಿದರು. ಅದೇ ವರ್ಷ ಮತ್ತೆ ಸೆಂಟ್ರಲ್ ಕಾಲೇಜಿಗೆ ಕನ್ನಡದ ಉಪಪ್ರಾಧ್ಯಾಪಕರಾಗಿ ಹೋಗಿದ್ದು, 1939ರಲ್ಲಿ ವೆಂಕಣ್ಣಯ್ಯನವರು ದಿವಂಗತರಾದಾಗ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ, ಕನ್ನಡ ಪ್ರಾಧ್ಯಾಪಕರೂ ಇಲಾಖೆಯ ಮುಖ್ಯರೂ ಆಗಿ 1946ರ ಆಗಸ್ಟ್ ತಿಂಗಳವರೆಗೂ ಆ ಹುದ್ದೆಯಲ್ಲಿದ್ದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೂವತ್ತುವರ್ಷಗಳ ಕಾಲ ಶಾಸ್ತ್ರಿಗಳು ಕನ್ನಡ ಬೋಧಕರಾಗಿ ಹೊಸ ಪೀಳಿಗೆಯನ್ನು ಸೃಷ್ಟಿಮಾಡಿದರಲ್ಲದೆ, ಕನ್ನಡದ ಮುನ್ನಡೆಗಾಗಿ ಹಲವು ಸಂಘ ಸಂಸ್ಥೆಗಳ ಸದಸ್ಯರಾಗಿ ಕೆಲಸ ಮಾಡಿದರು. 1942ರಿಂದ 1946ರವರೆಗೆ ಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಪ್ರಧಾನ ಸಂಪಾದಕರಾಗಿದ್ದುದಲ್ಲದೆ, ಕುಮಾರವ್ಯಾಸ ಭಾರತದ ಯುದ್ಧ ಪಂಚಕದ ಪರಿಷ್ಕರಣ ಸಮಿತಿಯ ಸದಸ್ಯರಾಗಿದ್ದು ಕರ್ಣ ಶಲ್ಯ ಗದಾ ಪರ್ವಗಳು ಕ್ಷಿಪ್ರವಾಗಿ ಹೊರಬೀಳಲು ಕಾರಣರಾದರು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಬುದ್ಧ ಕರ್ಣಾಟಕ ವರ್ಗವಾಗುವವರೆಗೂ ಅದರ ಸಂಪಾದಕರಾಗಿದ್ದರಲ್ಲದೆ ಮೈಸೂರಿನಲ್ಲಿ ಪ್ರಾಧ್ಯಾಪಕರಾದಾಗಲೂ ಅದರ ಸಂಪಾದಕತ್ವವನ್ನು ವಹಿಸಿಕೊಂಡು ಅದು ಕಾಲಕ್ಕೆ ಸರಿಯಾಗಿ ಬರುವಂತೆ ಮಾಡಿ ಪತ್ರಿಕೆಯ ಗುಣಮಟ್ಟವನ್ನು ಹೆಚ್ಚಿಸಿದರು. ಈ ಪತ್ರಿಕೆಯ ಮೂಲಕ ವಿದ್ವತ್ತಿಗೆ, ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಬರೆಯುವ ತರುಣ ಲೇಖಕರಿಗೆ ಪ್ರೋತ್ಸಾಹ ಕೊಟ್ಟಂತೆ ಶಾಸ್ತ್ರಿಗಳು ತಮ್ಮ ಲೇಖನಗಳಿಂದ ಕಾವ್ಯ ಪರೀಕ್ಷೆಯ ಹೊಸ ವಿಮರ್ಶನ ಮಾರ್ಗವನ್ನು ನಿರ್ಮಿಸಿದರು. ಹಾಗೆಯೇ ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆಯ ಸಂಪಾದಕರಾಗಿ ಅದರ ಮಟ್ಟವನ್ನು ಕಾಯ್ದುಕೊಂಡು ಬಂದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಪ್ರಾರಂಭವಾದಂದಿನಿಂದ ಅದು ಮುಗಿಯುವವರೆಗೆ ಅದರ ಸದಸ್ಯರಾಗಿದ್ದರು. ಎಲ್ಲಕ್ಕೂ ಮಿಗಿಲಾಗಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ ಕನ್ನಡ ನಿಘಂಟಿನ ಪ್ರಥಮ ಸಂಪಾದಕರಾಗಿದ್ದು (1943-57) ಅದಕ್ಕೆ ಒಂದು ಖಚಿತರೂಪವನ್ನು ಕೊಟ್ಟವರು ಶಾಸ್ತ್ರಿಗಳು. ಇವರ ಸಾರ್ವಜನಿಕಸೇವೆ ಎಲೆಮರೆಯ ಕಾಯಿಯಂತಿರುತ್ತಿತ್ತು. ಅಂತೆಯೇ ಅದು ಮಾಗಿ ತುಂಬ ಫಲಪ್ರದವಾಯಿತು.

ಶ್ರೇಷ್ಠ ಅಧ್ಯಾಪಕರಾಗಿ ಶಾಸ್ತ್ರಿಗಳು ಹೊಸ ಪೀಳಿಗೆಯ ಲೇಖಕರನ್ನು ಗುರುತಿಸಿ, ಅವರನ್ನು ಕೃತಿರಚನೆಗೆ ಪ್ರೋತ್ಸಾಹಿಸಿದುದು ಮಾತ್ರವಲ್ಲದೆ ತಾವೇ ಕನ್ನಡದಲ್ಲಿ ಘನವಾದ ಗದ್ಯಕೃತಿಗಳನ್ನು ರಚಿಸಿದರು. ಇವರ ಗ್ರಂಥಗಳು ಇವು: ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ (ವೆಂಕಣ್ಣಯ್ಯನವರೊಡನೆ, 1917); ಸ್ವಾಮಿ-ಶಿಷ್ಯ ಸಂವಾದ, ಭಾಗ-1 (ವೆಂಕಣ್ಣಯ್ಯನವರೊಡನೆ 1923); ಕನ್ನಡ ಕೈಪಿಡಿ ಭಾಗ-I ಕಾವ್ಯಲಕ್ಷಣ ವಿಭಾಗ (1928); ಹರಿಶ್ಚಂದ್ರ ಕಾವ್ಯ ಸಂಗ್ರಹ (ವೆಂಕಣ್ಣಯ್ಯನವರೊಡನೆ, 1931); ಭಾಸಕವಿ (1933); ಸಂಸ್ಕೃತ ನಾಟಕ (1937); ನಾಗಮಹಾಶಯ, (1939); ಸರ್ವಜ್ಞ ಕವಿ (1948); ಭಾಷಣಗಳು ಮತ್ತು ಲೇಖನಗಳು (ಭಾಗ-1, 1948, ಭಾಗ-2 1949). ಸಂಯುಕ್ತ ಸಂಪುಟ, (1960); ಶ್ರೀಪತಿಯ ಕಥೆಗಳು (1948); ವಚನ ಭಾರತ (1950); ಕಥಾಮೃತ (1952); ಕವಿಜಿಹ್ವಾಬಂಧನಂ (1952); ಬಂಕಿಮಚಂದ್ರ (1960); ನಿರ್ಮಲಭಾರತೀ (1960); ನಿಬಂಧಮಾಲಾ (1963).

ಕೃಷ್ಣಶಾಸ್ತ್ರಿಗಳ ಕೃತಿಗಳನ್ನು ಸಂಪಾದಿತ, ಅನುವಾದಿತ, ಸ್ವತಂತ್ರ್ಯ ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಪೀಠಿಕೆಯೊಡನೆ ಕೂಡಿದ ನಯಸೇನನ ಧರ್ಮಾಮೃತ, ಮೈಸೂರಿನ ಓರಿಯೆಂಟಲ್ ಲೈಬ್ರರಿಗಾಗಿ, ಕವಿಜಿಹ್ವಾಬಂಧನಂ -ಇವು ಶಾಸ್ತ್ರಿಗಳ ಸಂಪಾದಿತ ಗ್ರಂಥಗಳು. ಶರಶ್ಚಂದ್ರ ಚಕ್ರವರ್ತಿಯವರ ಪ್ರಸಿದ್ಧ ಬಂಗಾಲಿ ಮೂಲಕೃತಿಯ ಅನುವಾದ ನಾಗಮಹಾಶಯ. ರವೀಂದ್ರ ಶತಮಾನೋತ್ಸವ ಸಂದರ್ಭದಲ್ಲಿ ದೆಹಲಿಯ ಸಾಹಿತ್ಯ ಅಕಾಡೆಮಿಗಾಗಿ ಬಂಗಾಲಿಯಿಂದ ಅನುವಾದಗೊಂಡ ರವೀಂದ್ರನಾಥ ಠಾಕೂರರ ಲೇಖನಗಳ ಸಂಗ್ರಹವೇ ನಿಬಂಧಮಾಲಾ. ಇದು ಶಾಸ್ತ್ರಿಗಳ ಕೊನೆಯ ಗ್ರಂಥ. ಸ್ವತಂತ್ರಕೃತಿಯನ್ನು ಓದಿದಷ್ಟು ಸೊಗಸಾಗಿರುವುದೇ ಈ ಅನುವಾದಗಳ ವೈಶಿಷ್ಟ್ಯ. ಧ್ವನಿತತ್ತ್ವದ ವಿಸ್ತಾರವಾದ ವಿವೇಚನೆಯೊಂದನ್ನು ಬಿಟ್ಟರೆ ಅಲಂಕಾರಶಾಸ್ತ್ರದ ಎಲ್ಲ ವಿಷಯಗಳನ್ನೂ ಸಂಗ್ರಹವಾಗಿ ಸಾರವತ್ತಾಗಿ ತಿಳಿಸುವ ಕೈಪಿಡಿಯ ಭಾಗವೇ ಕಾವ್ಯಲಕ್ಷಣ ವಿಭಾಗ. ರಾಘವಾಂಕನ ಕೃತಿಗಳ, ಅದರಲ್ಲೂ ಹರಿಶ್ಚಂದ್ರ ಕಾವ್ಯದ ಘನವಾದ ವಿಮರ್ಶೆ ಹರಿಶ್ಚಂದ್ರ ಕಾವ್ಯಸಂಗ್ರಹ ಪೀಠಿಕೆ. ಭಾಸಕವಿ ಶಾಸ್ತ್ರಿಗಳ ಮೊದಲ ಪಂಡಿತಕೃತಿ. ಭಾಸನ ಕಾಲ, ದೇಶ, ಕೃತಿ, ಕರ್ತೃತ್ವಗಳ ವಿಚಾರವಾಗಿ ಅದುವರೆಗೂ ನಡೆದ ವಿದ್ವಾಂಸರ ವಾದಗಳನ್ನು ನಿರೂಪಿಸಿ ಅವನನ್ನು ತೂಗಿ ನೋಡಿ, ತಮ್ಮ ಅಭಿಪ್ರಾಯವನ್ನು ಹೇಳಿ, ಸ್ವಪ್ನವಾಸವದತ್ತ, ಪ್ರತಿಮಾ, ಪಂಚರಾತ್ರ ನಾಟಕಗಳ ಕಲಾಸೌಂದರ್ಯವನ್ನು ವಿಸ್ತಾರವಾಗಿ ತಿಳಿಸಿ, ಮಿಕ್ಕ ನಾಟಕಗಳನ್ನು ಪರಿಚಯಮಾಡಿಕೊಡುವ ಗ್ರಂಥವಿದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಹತ್ತನೆಯ ಕುಸುಮವಾಗಿ ಅರಳಿದ ಸಂಸ್ಕೃತದ ನಾಟಕ ಅಪೂರ್ವವೂ ಅದ್ವಿತೀಯವೂ ಆದ ಗ್ರಂಥ. ಪಂಡಿತ ಪತ್ರಿಕೆಗಳಲ್ಲಿ ಚದರಿಹೋಗಿದ್ದ ಅಸಂಖ್ಯಾತ ಲೇಖನಗಳನ್ನು ಪರಿಶೀಲಿಸಿ, ಸಂಸ್ಕೃತ ನಾಟಕಗಳನ್ನು ಅಭ್ಯಾಸಮಾಡಿ, ತಮ್ಮ ಸ್ವಂತ ಅನುಭವಗಳನ್ನು ಸೇರಿಸಿ ರಚಿಸಿದ ಈ ಗ್ರಂಥದಲ್ಲಿ ಸಂಸ್ಕೃತ ನಾಟಕದ ಉತ್ಪತ್ತಿ ಮತ್ತು ಬೆಳೆವಣಿಗೆಯನ್ನು ಹೇಳಿರುವುದಲ್ಲದೆ, ಅಶ್ವಘೋಷನಿಂದ ಕೃಷ್ಣಮಿಶ್ರನವರೆಗೆ ರಚಿತವಾದ ನಾಟಕಗಳ ವಿಮರ್ಶೆಯನ್ನೂ ಕೊಟ್ಟಿದೆ. ಕವಿಯ ಕಾಲದೇಶ ಕೃತಿಗಳನ್ನು ಸಂಗ್ರಹವಾಗಿ ನಿರೂಪಿಸಿ, ಬಳಿಕ ಅಡಕವಾಗಿ ನಾಟಕದ ಸಾರಾಂಶವನ್ನು ತಿಳಿಸಿ, ಅನಂತರ ವಿಮರ್ಶೆಯನ್ನು ಕೊಟ್ಟಿರುವುದು ಇಲ್ಲಿನ ಪದ್ಧತಿ. ಪಾತ್ರಗಳ ಗುಣದೋಷಗಳನ್ನು, ನಾಟಕಗಳ ಕಲಾಸೌಂದರ್ಯವನ್ನು ಹಿಡಿದಿಡುವ ಸೂತ್ರಪ್ರಾಯವಾದ ಮಾತುಗಳು, ವಾಕ್ಯಗಳು, ಇಲ್ಲಿ ಪುಟಪುಟದಲ್ಲೂ ಕಂಗೊಳಿಸುತ್ತಿವೆ. ವಿಷಯವನ್ನು ಸಮರ್ಥಿಸಲು ನಾಟಕಗಳಿಂದ ವಾಕ್ಯಗಳನ್ನೂ ಪದ್ಯಗಳನ್ನೂ ಅಲ್ಲಲ್ಲಿ ಉದ್ಧರಿಸಿದೆ. ಗ್ರಂಥದ ಕೊನೆಯಲ್ಲಿ 650 ನಾಟಕಗಳ ಪಟ್ಟಿ ಇದೆ. ಹತ್ತು ವರ್ಷಗಳ ಪರಿಶ್ರಮದಿಂದ ರಚಿತವಾದ ಈ ಗ್ರಂಥ ಇವರ ವಿದ್ವತ್ತಿಗೂ ರಸಜ್ಞತೆಗೂ ಸಾಕ್ಷಿಯಾಗಿದೆ. ಇಂಥ ಗ್ರಂಥ ಭಾರತೀಯ ಭಾಷೆಗಳಲ್ಲಾಗಲಿ, ಇಂಗ್ಲಿಷಿನಲ್ಲಾಗಲಿ ಇಲ್ಲವೆಂಬುದು ವಿದ್ವಾಂಸರ ಮತ. ಅಂಗೈಯಗಲದ ಅರವತ್ನಾಲ್ಕು ಪುಟಗಳಲ್ಲಿ ಸರ್ವಜ್ಞನ ಜೀವನ ಹಾಗೂ ವಚನಗಳನ್ನು ಅವನ ಮಾತುಗಳಿಂದಲೇ ಪರಿಚಯ ಮಾಡಿಕೊಡುವ, ಪ್ರಚಾರೋಪನ್ಯಾಸ ಮಾಲೆಯ ಚಿಕ್ಕಪುಸ್ತಕ ಸರ್ವಜ್ಞಕವಿ. ಭಾಷಣಗಳು ಮತ್ತು ಲೇಖನಗಳು ಎಂಬ ಗ್ರಂಥದಲ್ಲಿ ಹೈದರಾಬಾದಿನ ಸಾಹಿತ್ಯ ಸಮ್ಮೇಳನದ (1941) ಅಧ್ಯಕ್ಷ ಭಾಷಣವೂ ವಿಶೇಷ ಸಾಹಿತ್ಯೋತ್ಸವದ ಆರಂಭ ಭಾಷಣವೂ (1947) ನಾಲ್ಕು ಲೇಖನ ಗುಚ್ಛಗಳೂ ಇವೆ. ಮೊದಲ ಎರಡು ಲೇಖನ ಗುಚ್ಛಗಳಲ್ಲಿ ಹಿಂದಿನ ಮತ್ತು ಇಂದಿನ ಕವಿಗಳ ಹಾಗೂ ಅವರ ಕೃತಿಗಳಿಗೆ ಸಂಬಂಧಪಟ್ಟ ಲೇಖನಗಳೂ ತರುಣಸಾಹಿತಿಗಳಿಗೆ ಮಾರ್ಗದರ್ಶನ ಮಾಡತಕ್ಕ ಲೇಖನಗಳೂ ಮೂರನೆಯ ಗುಚ್ಛದಲ್ಲಿ ಹನ್ನೆರಡು ಗ್ರಂಥಗಳ ಮೇಲೆ ಲೇಖಕರು ಬರೆದಿರುವ ವಿಮರ್ಶೆಗಳೂ ನಾಲ್ಕನೆಯದರಲ್ಲಿ ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿ ಇವರು ಬರೆದ ವಿವಿಧ ವಿಷಯಗಳ ಮೂವತ್ತೆರಡು ಸಂಪಾದಕೀಯಗಳೂ ಇವೆ. ಭಾಷಣಗಳಲ್ಲಿ ಶಾಸ್ತ್ರಿಗಳ ಉಜ್ವಲವಾದ ಕನ್ನಡದ ಅಭಿಮಾನ, ಲೇಖನಗಳಲ್ಲಿ ಇವರು ಕನ್ನಡ ಸಾಹಿತ್ಯಕ್ಕೆ ತಂದುಕೊಟ್ಟ ಹೊಸದೃಷ್ಟಿ ಸುಸ್ಪಷ್ಟವಾಗಿ ಗೋಚರಿಸುತ್ತವೆ. ಶ್ರೀಪತಿ ಎಂಬ ಕಾವ್ಯನಾಮದಿಂದ ಪ್ರಬುದ್ಧ ಕರ್ಣಾಟಕಕ್ಕೆ ಶಾಸ್ತ್ರಿಗಳು ಬರೆದ ಹದಿಮೂರು ಸಣ್ಣಕಥೆಗಳೇ ಶ್ರೀಪತಿಯ ಕಥೆಗಳು. ಮಧ್ಯಮ ವರ್ಗದ ಜನರ ಕಷ್ಟಕಾರ್ಪಣ್ಯಗಳನ್ನೂ ನಂಬಿಕೆಗಳನ್ನೂ ಕಣ್ಣಿಗೆ ಕಟ್ಟುವಂತೆ ಈ ಕಥೆಗಳು ಚಿತ್ರಿಸುವುವಲ್ಲದೆ, ಸ್ತ್ರೀಯರ ವಿಷಯದಲ್ಲಿ ಲೇಖಕರ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತವೆ. ಇದೊಂದೇ ಶಾಸ್ತ್ರಿಗಳ ಸ್ವತಂತ್ರ ಸೃಜನಾತ್ಮಕ ಕೃತಿ. ಇವೆಲ್ಲಕ್ಕೂ ಮಿಗಿಲಾಗಿ ಕೃಷ್ಣಶಾಸ್ತ್ರಿಗಳಿಗೆ ಕೀರ್ತಿ ತಂದ ಕೃತಿ ವಚನಭಾರತ. ಇಂದಿನ ಜೀವನಕ್ಕೆ ಅಗತ್ಯವಾದ ಧರ್ಮ ನೀತಿಗಳನ್ನೊಳಗೊಂಡು ವ್ಯಾಸಭಾರತದ ಹದಿನೆಂಟು ಪರ್ವಗಳ ಕಥೆ ವಚನಭಾರತದಲ್ಲಿ ಸರಳ ಸುಂದರ ಗದ್ಯದಲ್ಲಿ ಮೂಲದ ಗಾಂಭೀರ್ಯವನ್ನು ಬಿಟ್ಟುಕೊಡದೆ ಹೊಸಗನ್ನಡದಲ್ಲಿ ಬಟ್ಟಿಯಿಳಿದು ಬಂದಿದೆ. ಹಲವು ಸಂಸ್ಕರಣಗಳನ್ನು ಓದಿ ನೋಡಿ, ತೂಗಿ ವಿಮರ್ಶೆ ಮಾಡಿ, ಆರು ತಿಂಗಳಲ್ಲಿ ಬರೆದ ಗ್ರಂಥ ಇದು. ನಾನೂರು ಪುಟಗಳ ಕಥೆ ಒಂದು ತೂಕವಾದರೆ ಇದರ ವಿದ್ವತ್ಪೂರ್ಣವಾದ ಪೀಠಿಕೆಯೇ ಒಂದು ತೂಕ. ಮಹಾಭಾರತದ ಹುಟ್ಟು, ಬೆಳೆವಣಿಗೆ, ಅದು ಪ್ರತಿಪಾದಿಸುವ ತತ್ತ್ವ, ಆಧುನಿಕ ಯುಗಕ್ಕೆ ಅದರ ಸಂದೇಶ - ಇವೇ ಮೊದಲಾದ ಹಲವು

ವಿಷಯಗಳನ್ನೊಳಗೊಂಡ ಪೀಠಿಕೆ ಪ್ರೌಢವೂ ಸರಳವೂ ಆಗಿದೆ. ಇಷ್ಟು ಸರಳ ಸುಂದರವಾದ ಗದ್ಯಭಾರತ ಇನ್ನಾವ ಭಾಷೆಯಲ್ಲಿಯೂ ರಚಿತವಾಗಿರಲಾರದು. ಸಂಸ್ಕೃತ ಭಾಷೆಯಲ್ಲಿ ಸೋಮದೇವನಿಂದ ರಚಿತವಾದ ಕಥಾಸರಿತ್ಸಾಗರದ ಸಾರಸಂಗ್ರಹವೇ ಕಥಾಮೃತ. ಬೃಹತ್ಕಥೆ, ಗುಣಾಢ್ಯ, ಸಮಾಜ, ನೀತಿ ಇವೇ ಮೊದಲಾದ ಹಲವು ವಿಷಯಗಳನ್ನೊಳಗೊಂಡ ಪ್ರೌಢವಾದ ಪೀಠಿಕೆ ಈ ಗ್ರಂಥಕ್ಕೂ ಇದೆ. ಬಂಕಿಮಚಂದ್ರರ ಲೇಖನಗಳು ಮತ್ತು ಕೃತಿಗಳನ್ನು ಮೂಲದಲ್ಲಿಯೇ ಅಭ್ಯಾಸ ಮಾಡಿ ಬರೆದ ಗ್ರಂಥ ಬಂಕಿಮಚಂದ್ರ. ಸಂಕ್ಷಿಪ್ತ ಬಂಗಾಲಿ ಸಾಹಿತ್ಯಚರಿತ್ರೆ ಮತ್ತು ಬಂಕಿಮರ ಜೀವನಚರಿತ್ರೆಯಾದ ಮೇಲೆ, ಕಾದಂಬರಿಗಳ ಕಥಾಸಾರವನ್ನು ಸಂಕ್ಷೇಪವಾಗಿ ನಿರೂಪಿಸಿ ಆ ಬಳಿಕ ಶಾಸ್ತ್ರಿಗಳು ವಿಸ್ತಾರವಾಗಿ ಕೃತಿ ವಿಮರ್ಶೆ ಮಾಡಿದ್ದಾರಲ್ಲದೆ, ಇವರ ಇತರ ಕೃತಿಗಳ ಲೇಖನಗಳ ಹಕ್ಕಿನೋಟವೂ ಇಲ್ಲಿದೆ. ಬಂಕಿಮಚಂದ್ರ ಗ್ರಂಥ ವಿಮರ್ಶೆಯ ಒಂದು ರಸದೂಟ. ಇದರ ರಚನೆಗೆ ಶಾಸ್ತ್ರಿಗಳಿಗೆ ಎಂಟು ವರ್ಷ ಕಾಲ ಹಿಡಿಯಿತು. ಇಂಥ ಕೃತಿ ಬಂಗಾಲಿ ಭಾಷೆಯಲ್ಲಿಯೂ ಇಲ್ಲವೆಂಬುದು ವಿದ್ವಾಂಸರ ಅಭಿಮತ. ನಿರ್ಮಲ ಭಾರತೀ ಎಂಬ ಸಚಿತ್ರ ಕಿರುಹೊತ್ತಿಗೆ ಮಕ್ಕಳಿಗಾಗಿ ಸರಳವಾದ ಭಾಷೆಯಲ್ಲಿ ಮಹಾಭಾರತದ ಇಡೀ ಕಥೆಯನ್ನು ತಿಳಿಸುತ್ತದೆ. ಈ ಪುಸ್ತಕದಲ್ಲಿ ದೊಡ್ಡ ಚಿತ್ರಗಳೊಡನೆ ಮಕ್ಕಳ ಕುತೂಹಲವನ್ನು ಕೆರಳಿಸುವ ಬಿಲ್ಲು ಬಾಣ ಗದೆ ಈಟಿ ಚತುರಂಗ ಸೇನೆ ಶಂಖ ಕೊಂಬು ಕಹಳೆ ಮುಂತಾದ ಚಿಕ್ಕ ಚಿಕ್ಕ ಚಿತ್ರಗಳಿರುವುದು ಒಂದು ವೈಶಿಷ್ಟ್ಯ.

ಹೈದರಾಬಾದಿನಲ್ಲಿ 1941ರಲ್ಲಿ ನಡೆದ ಇಪ್ಪತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. 1956ರಲ್ಲಿ ಶಾಸ್ತ್ರಿಗಳ ಶಿಷ್ಯರೂ ಮಿತ್ರರೂ ಅಭಿವಂದನೆ ಎಂಬ ವಿದ್ವತ್ ಪ್ರಬಂಧಗಳ ಸಂಪುಟವನ್ನು ಇವರಿಗೆ ಅರ್ಪಿಸಿದರು. ಮೈಸೂರು ವಿಶ್ವವಿದ್ಯಾನಿಲಯ 1960ರಲ್ಲಿ ಇವರಿಗೆ ಡಿ.ಲಿಟ್. ಪದವಿಯನ್ನು ಕೊಟ್ಟು ಗೌರವಿಸಿತು. ಇವರ ಗ್ರಂಥ' ಬಂಕಿಮಚಂದ್ರಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಲಭಿಸಿತು (1961).

ಸಂಸ್ಕೃತ, ಕನ್ನಡ, ಇಂಗ್ಲಿಷ್, ಬಂಗಾಲಿ ಭಾಷೆಗಳಲ್ಲಿ ಘನವಾದ ಪಾಂಡಿತ್ಯವನ್ನೂ ತಮಿಳು ತೆಲುಗು ಭಾಷೆಗಳಲ್ಲಿ ಸಲಿಗೆಯನ್ನೂ ಹೊಂದಿದ್ದ ಶಾಸ್ತ್ರಿಗಳು ಕನ್ನಡ ಬರೆವಣಿಗೆಯ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವ ಹೊಂದಿದ್ದರು: ವಿಷಯವನ್ನು ಚೆನ್ನಾಗಿ ತಿಳಿಯದೆ ಏನನ್ನೂ ಬರೆಯಬಾರದು. ತಿಳಿದ ವಿಷಯವನ್ನು ತಿಳಿಯಾದ ಬಿಗಿಯಾದ ಅಡಕವಾದ ಭಾಷೆಯಲ್ಲಿ ಹೇಳಬೇಕು. ಅನಾವಶ್ಯಕವಾದ ಸಂಸ್ಕೃತ ಪದಗಳಿಂದ ಭಾಷೆಯನ್ನು ಹೊರೆಯಾಗಿಸಬಾರದು. ವಿಷಯ ನಿರೂಪಣೆ ಸರಳವೂ ಸ್ಪಷ್ಟವೂ ಅಸಂದಿಗ್ಧವೂ ಆಗಿರಬೇಕು. ಶಾಸ್ತ್ರಿಗಳ ಬರೆವಣಿಗೆಯಲ್ಲಿ ಈ ಎಲ್ಲ ಗುಣಗಳನ್ನೂ ಸಂಪೂರ್ಣವಾಗಿ ಕಾಣುತ್ತೇವೆ. ತಮ್ಮ ಪಾಂಡಿತ್ಯದಿಂದ ಶಾಸ್ತ್ರಿಗಳು ಬರೆವಣಿಗೆಯನ್ನು ಎಲ್ಲಿಯೂ ಹೊರೆಯಾಗಿಸಿಲ್ಲ. ಶಾಸ್ತ್ರಿಗಳು ಗದ್ಯಶೈಲಿ ಸುಂದರ, ಸರಳ; ವಾಕ್ಯಗಳು ಸಾಮಾನ್ಯವಾಗಿ ಚಿಕ್ಕವಾಗಿರುತ್ತವೆ. ನಡೆ ಎಲ್ಲಿಯೂ ಕುಂಟುವುದಿಲ್ಲ. ಆಡುಮಾತಿನ ಬಳಕೆ ಯಥೇಚ್ಛ. ಆದರೂ ಭಾಷೆ ಬಿಗಿಯಾದುದು. ಸ್ವಾನುಭವದಿಂದ ಉಕ್ಕಿಬಂದ ಸೂಕ್ತಿಗಳು ಹೇರಳವಾಗಿ ಸಿಗುತ್ತವೆ. ಅಲ್ಲಲ್ಲಿ ಬರುವ ಸಹಜವಾದ ಉಪಮಾನ ರೂಪಕಗಳಂತೂ ಮೋಹಕ.

ಸಂಪ್ರದಾಯದಲ್ಲಿ ಹುಟ್ಟಿ ಬೆಳೆದು, ಅದಕ್ಕೆ ವಿರೋಧಿಯಲ್ಲದಿದ್ದರೂ ಧರ್ಮ ನೀತಿ ನಡೆ ಮುಂತಾದ ವಿಚಾರಗಳನ್ನು ಧಾರಾಳವಾಗಿ ಸ್ವತಂತ್ರವಾದ ವಾತಾವರಣದಲ್ಲಿ ನಡೆಸಬೇಕು ಎಂದು ನಂಬಿ ಅದರಂತೆ ಮನೋವೃತ್ತಿಯನ್ನು ಬೆಳೆಸಿಕೊಂಡು ಜೀವನ ನಡೆಸಿದ ಕೃಷ್ಣಶಾಸ್ತ್ರಿಗಳು ಕನ್ನಡ ನಾಡಿಗೆ ಕನ್ನಡವೇ ಗತಿ; ದೇಶದಲ್ಲಿ ಅದು ಮೊದಲಸ್ಥಾನವನ್ನು ಪಡೆದ ರಾಣಿಯಂತೆ ಮೆರೆಯಬೇಕು ಎಂದು ಸಾರಿ ಹೇಳಿ, ಇದೇ ಮಂತ್ರವನ್ನು ತಮ್ಮ ಬಾಳಿನ ಉದ್ದಕ್ಕೂ ಜಪಿಸುತ್ತ ತಮ್ಮ ಎಪ್ಪತ್ತೆಂಟನೆಯ ವಯಸ್ಸಿನಲ್ಲಿ 1968 ಫೆಬ್ರವರಿ 1ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. (ಎಚ್.ಎಂ.ಎಸ್.)

ಶಾಸ್ತ್ರಿಗಳ ಗೌರವಾರ್ಥಗಾಗಿ ಪ್ರಬುದ್ಧ ಕರ್ಣಾಟಕದ 50ನೆಯ ಸಂಪುಟದ ಮೊದಲ ಸಂಚಿಕೆಯನ್ನು ನೆನಪಿನ ಸಂಚಿಕೆಯಾಗಿ ಪ್ರಕಟಿಸಲಾಯಿತು. ಶಾಸ್ತ್ರಿಗಳ ವ್ಯಕ್ತಿತ್ವವನ್ನೂ ಅವರ ಸಾಹಿತ್ಯವನ್ನೂ ಕುರಿತಂತೆ ಲೇಖನಗಳಿರುವ ಈ ಸಂಚಿಕೆ ಅನಂತರ ಎ.ಆರ್.ಕೃ. ಜೀವನ -ಸಾಧನೆ ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲೂ ಪ್ರಕಟವಾಯಿತು (1971). *

**ಕೃಷ್ಣಸೂಕ್ತಿ :** ಉಡುಪಿಯಿಂದ ಪ್ರಕಟವಾಗುತ್ತಿದ್ದ ಒಂದು ಮಾಸ ಪತ್ರಿಕೆ. 1905ರಲ್ಲಿ ಕೆರೋಡಿ ಸುಬ್ಬರಾಯರು ಈ ಪತ್ರಿಕೆಯನ್ನು ಪ್ರಾರಂಭಿಸಿದರು. ಅವರ ಅನಂತರ ರಾಜಗೋಪಾಲಕೃಷ್ಣರಾಯರು ಸಂಪಾದಕರಾಗಿ ಅನೇಕ ವರ್ಷಗಳ ಕಾಲ ಪತ್ರಿಕೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದರು. ಸಣ್ಣಕಥೆಗಳು, ವಿಚಾರಪೂರಿತ ಲೇಖನಗಳು ಮತ್ತು ಪ್ರಬಂಧಗಳು ಇದರಲ್ಲಿ ಪ್ರಕಟವಾಗುತ್ತಿದ್ದುವು. (ಎನ್.ಕೆ.)

**ಕೃಷ್ಣಾ :** ಕರ್ನಾಟಕದ ಪ್ರಮುಖ ನದಿಗಳಲ್ಲಿ ಒಂದು. ಉತ್ತರ ಕರ್ನಾಟಕದ ಭಾಗಕ್ಕೆ ಅತ್ಯಂತ ಉಪಯುಕ್ತವಾದ ನದಿ. ಪವಿತ್ರ ನದಿಯೆಂದೂ ಹೆಸರು ಗಳಿಸಿದೆ. ಸ್ಥಳೀಯರಲ್ಲಿ ಇದಕ್ಕೆ ಹಿರೇಹೊಳೆ ಎಂಬ ಹೆಸರಿದೆ. ಶಾಸನಗಳಲ್ಲಿ ಪೆರ್ದೊರೆ, ಸಂಸ್ಕೃತದಲ್ಲಿ ಕೃಷ್ಣವೇಣೀ ಎಂಬ ಹೆಸರುಗಳು ಕಂಡುಬರುತ್ತವೆ.

ಕೃಷ್ಣಾ ನದಿಯ ಒಟ್ಟು ಜಲಾನಯನ ಪ್ರದೇಶದ ಸೇ.43.74ರಷ್ಟು ಅಂದರೆ 111,000.74ಚ.ಕಿಮೀ ಪ್ರದೇಶ ರಾಜ್ಯದಲ್ಲಿದೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದ ಸೇ.58.66 ಆಗುತ್ತದೆ. ಇದರಲ್ಲಿ ಹರಿಯುವ ಸರಾಸರಿ ನೀರಿನ ಪ್ರಮಾಣ 969.44ಟಿ.ಎಂ.ಸಿ. ಸಹ್ಯಾದ್ರಿ ಶ್ರೇಣಿಯಲ್ಲಿ ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ಮಹಾಬಲೇಶ್ವರದ ಬಳಿ ಇದರ ಉಗಮ. ಅಲ್ಲಿಂದ ಆ ರಾಜ್ಯದ ಸಾತಾರಾ, ಸಾಂಗಲಿ, ಕೊಲ್ಹಾಪುರ ಜಿಲ್ಲೆಗಳ ಮೂಲಕ ಹರಿದು ಕರ್ನಾಟಕವನ್ನು ಪ್ರವೇಶಿಸುವುದು. ಕರ್ನಾಟಕಕ್ಕೆ ಕೃಷ್ಣಾನದಿಯ ಮೊದಲ ಸಂಪರ್ಕ ಒದಗುವುದು ಬೆಳಗಾಂವಿ ಜಿಲ್ಲೆಯ ಅಥಣಿ ತಾಲ್ಲೂಕಿನ ವಾಯವ್ಯದ ಅಂಚಿನಲ್ಲಿ. ಅಲ್ಲಿ ಕಾನವಾಡದ ಬಳಿ ಸು.2ಕಿಮೀ ದೂರದವರೆಗೆ ತಾಲ್ಲೂಕಿನ ಎಲ್ಲೆಯನ್ನು ಸೋಕಿ ಹರಿಯುತ್ತದೆ. ಮುಂದೆ ಕೊಲ್ಹಾಪುರ ಜಿಲ್ಲೆಯ ಮೂಲಕ ಪ್ರವಹಿಸಿ ಮತ್ತೆ ಅಥಣಿ ತಾಲ್ಲೂಕಿನ ಮಂಗವತಿ ಬಳಿಯಿಂದ ಸು.16ಕಿಮೀ ದೂರದವರೆಗೆ ಆ ತಾಲ್ಲೂಕು ಮತ್ತು ಕೊಲ್ಹಾಪುರ ಜಿಲ್ಲೆಯ ಗಡಿರೇಖೆಯಾಗಿ ಹರಿಯುತ್ತದೆ. ಈ ಭಾಗದಲ್ಲಿ ನದಿ ಮೊದಲು ಆಗ್ನೇಯಕ್ಕೆ, ಅನಂತರ ಪಶ್ಚಿಮಕ್ಕೆ, ದಕ್ಷಿಣಕ್ಕೆ ಮತ್ತು ಮತ್ತೆ ಆಗ್ನೇಯಕ್ಕೆ, ಹೀಗೆ ಸುತ್ತಿ ಬಳಸಿ ಹರಿಯುವುದು ವಿಶೇಷ. ಈ ಆಗ್ನೇಯದ ತಿರುವಿನೊಡನೆ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ್ಳಿ ಬಳಿ ಕರ್ನಾಟಕದ ನೆಲವನ್ನು ಪೂರ್ಣವಾಗಿ ಪ್ರವೇಶಿಸುತ್ತದೆ. ಇಲ್ಲಿಂದ ಬೆಳಗಾಂವಿ, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳ ನಡುವೆ ಇದರ ಹರಿವು. ಬೆಳಗಾಂವಿ ಜಿಲ್ಲೆಯಲ್ಲಿ ಇದರ ಹಾದಿ ಸುತ್ತುಬಳಸಿನದು. ಕಲ್ಲೋಳ್ಳಿಯಿಂದ ಅಥಣಿ ತಾಲ್ಲೂಕಿನ ಮಂಜರಿಯವರೆಗೆ ಆಗ್ನೇಯಾಭಿಮುಖ, ಅಲ್ಲಿಂದ ಈಶಾನ್ಯಕ್ಕೆ ತಿರುವು. ಅದೇ ತಾಲ್ಲೂಕಿನ ಉಗರದ ಬಳಿ ಪೂರ್ವಕ್ಕೆ ತಿರುಗಿ ಮತ್ತೆ ಆಗ್ನೇಯಾಭಿಮುಖವಾಗಿ ರಾಯಬಾಗ ತಾಲ್ಲೂಕಿನ ಖೇಮಲಾಪುರದ ಬಳಿ ಉತ್ತರಾಭಿಮುಖವಾಗುತ್ತದೆ. ರಾಜ್ಯದ ಪ್ರವೇಶದಿಂದ ಈ ಸ್ಥಳದವರೆಗೂ ಈ ನದಿಯೇ ಎಡದಂಡೆಯಲ್ಲಿ ಅಥಣಿ ತಾಲ್ಲೂಕು, ಬಲದಂಡೆಯಲ್ಲಿ ಚಿಕ್ಕೋಡಿ ಮತ್ತು ರಾಯಬಾಗ ತಾಲ್ಲೂಕುಗಳು ಇವುಗಳ ನಡುವಿನ ಗಡಿರೇಖೆ. ಇಲ್ಲಿಂದ ಸ್ವಲ್ಪ ದೂರ ಇದು ಅಥಣಿ ತಾಲ್ಲೂಕಿನ ಭಾಗವನ್ನು ಕ್ರಮಿಸುತ್ತದೆ. ಇಲ್ಲಿ ಉತ್ತರಕ್ಕೆ ಹರಿದು ಆಗ್ನೇಯಕ್ಕೆ ತಿರುಗಿ ಅಥಣಿ ತಾಲ್ಲೂಕಿನ ಸೇಗುಣಸಿಯ ಬಳಿ ಮತ್ತು ಆ ತಾಲ್ಲೂಕು ಮತ್ತು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಗಡಿರೇಖೆಯಾಗುತ್ತದೆ. ಜಮಖಂಡಿ ತಾಲ್ಲೂಕಿನ ಮುತ್ತೂರಿನ ಬಳಿ ಬಾಗಲಕೋಟೆ ಜಿಲ್ಲೆಯನ್ನು ಪೂರ್ಣವಾಗಿ ಪ್ರವೇಶಿಸಿ ಮೊದಲು ಜಮಖಂಡಿ ತಾಲ್ಲೂಕಿನ ಒಳಗೆ ಹರಿದು ಸ್ವಲ್ಪದೂರ ಬೀಳಗಿ ತಾಲ್ಲೂಕಿನ ವಾಯವ್ಯಭಾಗದಲ್ಲಿ ಸಾಗಿ ಅಲ್ಲಿಂದ ಎಡದಂಡೆಯಲ್ಲಿ ಬಿಜಾಪುರ, ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲ್ಲೂಕುಗಳು ಮತ್ತು ಬಲದಂಡೆಯಲ್ಲಿನ ಬಾಗಲಕೋಟೆ ಜಿಲ್ಲೆಯ ಬೀಳಗಿ, ಬಾಗಲಕೋಟೆ ಮತ್ತು ಹುನಗುಂದ ತಾಲ್ಲೂಕುಗಳು - ಇವುಗಳ ನಡುವಿನ ಗಡಿರೇಖೆಯಾಗಿ ಹರಿದು ಮುಂದೆ ಸ್ವಲ್ಪ ದೂರ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆಯ ಗಡಿಯಾಗಿ ಪ್ರವಹಿಸುತ್ತದೆ. ಈ ಜಿಲ್ಲೆಯಲ್ಲಿ ನದಿಯ ಸಾಮಾನ್ಯ ಹರಿವು ಆಗ್ನೇಯಾಭಿಮುಖವಾಗಿದ್ದು, ಈ

ಜಿಲ್ಲೆಯಲ್ಲಿನ ಹರಿವಿನ ಮೊದಲ ಸುಮಾರು ಮೂರನೆಯ ಒಂದು ಭಾಗದಲ್ಲಿ ಸುತ್ತುಬಳಸಾಗಿ ಕ್ರಮಿಸುತ್ತದೆ. ಜಮಖಂಡಿಯ ಉತ್ತರದಲ್ಲಿರುವ ಮುತ್ತೂರಿನಿಂದ ತಾಲ್ಲೂಕನ್ನು ಬಿಡುವವರೆಗೆ ಸಮಸ್ಥಿತಿಯಲ್ಲೇ ಸಾಗಿ, ಅಲ್ಲಿ ಇದ್ದಕ್ಕಿದ್ದಂತೆ ದಕ್ಷಿಣಕ್ಕೆ ತಿರುಗಿ ಬೀಳಗಿ ತಾಲ್ಲೂಕಿನ ಗಲಗಲಿಯ ಬಳಿ ಪೂರ್ವಕ್ಕೆ ಪ್ರವಹಿಸಲಾರಂಭಿಸಿ ಮತ್ತೆ ಉತ್ತರ, ಪೂರ್ವ, ದಕ್ಷಿಣ ಹೀಗೆ ತಿರುಗುತ್ತ ಬಾಗೇವಾಡಿಯ ಅಂಚನ್ನು ಮುಟ್ಟುತ್ತದೆ. ಈ ತಾಣದಿಂದ ನದಿಯ ಗಮನ ಸುಮಾರು ನೇರವೇ, ಪೂರ್ವ ಆಗ್ನೇಯಾಭಿಮುಖವಾಗಿ. ಆದರೆ ಬೀಳಗಿ ತಾಲ್ಲೂಕಿನ ಈಶಾನ್ಯದಲ್ಲಿ ತಕ್ಕಲಕಿಯ ಬಳಿ ಇಬ್ಭಾಗವಾಗಿ ಮತ್ತೆ ಚಿಮ್ಮಲಗಿಯ ಬಳಿ ಒಂದಾಗಿ ಒಂದು ದೊಡ್ಡ ದ್ವೀಪವನ್ನು ನಿರ್ಮಿಸಿದೆ. ಮತ್ತೆ ಮುದ್ದೇಬಿಹಾಳ ತಾಲ್ಲೂಕಿನ ದೇವೂರಿನ ಬಳಿ ದಕ್ಷಿಣಕ್ಕೆ ತಿರುಗಿ ಘಟಪ್ರಭಾ ನದಿ ಸಂಗಮವಾಗುವ ಸ್ಥಳದಿಂದ ಜಿಲ್ಲೆಯ ಎಲ್ಲೆಯವರೆಗೆ ಪೂರ್ವಕ್ಕೆ ಸಾಗುತ್ತದೆ. ಆ ಭಾಗದಲ್ಲಿ ಪುನಃ ಈಶಾನ್ಯಕ್ಕೆ ತಿರುವು. ಅಲ್ಲಿಂದ ಮುಂದೆ ಈ ನದಿ ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳ ಗಡಿರೇಖೆಯಾಗಿ ಈಶಾನ್ಯಾಭಿಮುಖವಾಗಿ ಪ್ರವಹಿಸುತ್ತದೆ. ಮುಂದೆ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಗಡಿಯಾಗಿ ಆಂಧ್ರಪ್ರದೇಶ ತಲಪುವವರೆಗೂ ಸಾಗುತ್ತದೆ. ಗುಲ್ಬರ್ಗ ಗಡಿಯನ್ನು ಪ್ರವೇಶಿಸುವೆಡೆಯಲ್ಲಿ ಒಂದೆರಡು ಸಣ್ಣ ದ್ವೀಪಗಳನ್ನು ನಿರ್ಮಿಸಿರುವುದಲ್ಲದೆ ಇಲ್ಲಿ ನಾರಾಯಣಪುರ ಗ್ರಾಮದ ಬಳಿ ಇದ್ದಕ್ಕಿದ್ದಂತೆ 200 ಅಡಿಗಳಷ್ಟು ದುಮುಕಿ ಜಲದುರ್ಗ ಜಲಪಾತವನ್ನು ನಿರ್ಮಿಸಿದೆ. ಗುಲ್ಬರ್ಗ, ರಾಯಚೂರು ಗಡಿಯಾಗಿ ಹರಿಯುವ ಭಾಗದ ಮೊದಲರ್ಧ, ಅಂದರೆ ಶಾಹಪುರ ತಾಲ್ಲೂಕಿನ ಗೌಡೂರಿನವರೆಗೆ, ಈಶಾನ್ಯಾಭಿಮುಖವಾಗಿ ನದಿ ಸಾಗುತ್ತದೆ. ಅಲ್ಲಿ ಒಂದು ದೊಡ್ಡ ಕವಲಾಗಿ ಸುತ್ತಿ ಮತ್ತೆ ಚನ್ನೂರಿನಿಂದ ರಾಜ್ಯದ ಗಡಿ ಬಿಡುವವರೆಗೂ ಆಗ್ನೇಯಾಭಿಮುಖವಾಗಿ ಗಮಿಸುತ್ತದೆ. ಕೊನೆಯ ಭಾಗದಲ್ಲೂ ಸಣ್ಣಸಣ್ಣ ದ್ವೀಪಗಳನ್ನು ನಿರ್ಮಿಸಿದೆ. ರಾಯಚೂರು ತಾಲ್ಲೂಕಿನ ಈಶಾನ್ಯದಲ್ಲಿ ಬುಡದಿಪಾಡು ಗ್ರಾಮದ ಬಳಿ ರಾಜ್ಯದ ಎಲ್ಲೆಯನ್ನು ಬಿಡುತ್ತದೆ. ಮುಂದೆ ಆಂಧ್ರ ಪ್ರದೇಶದ ಮೂಲಕ ಹರಿದು ಮಚಲಿಪಟ್ಟಣದ ಬಳಿ ಬಂಗಾಲ ಕೊಲ್ಲಿಯನ್ನು ಸೇರುತ್ತದೆ. ಉಗಮ ಸ್ಥಾನದಿಂದ ಸಮುದ್ರವನ್ನು ಸೇರುವವರೆಗೆ ನದಿಯ ಒಟ್ಟು ಉದ್ದ 1,400ಕಿಮೀ ಕರ್ನಾಟಕ ರಾಜ್ಯದಲ್ಲಿ ನದಿಯ ಹರಿವಿನ ಉದ್ದ 483 ಕಿಮೀ.

ಬೆಳಗಾಂವಿ ಜಿಲ್ಲೆಯ ಮೊದಲ ಭಾಗದಲ್ಲಿ ನದಿ ಕಡಿದಾದ ಕರಿ ಎರೆಮಣ್ಣಿನ ಅಥವಾ ಜಂಬುಮಣ್ಣಿನ ದಂಡೆಗಳ ಮಧ್ಯೆ ಹರಿಯುತ್ತದೆ. ಮುಂದೆ ಈ ಜಿಲ್ಲೆಯ ಪೂರ್ವಭಾಗ ಹಾಗೂ ಬಿಜಾಪುರ ಜಿಲ್ಲೆಯ ಪ್ರದೇಶದಲ್ಲಿ ವಿಶಾಲವಾದ ಎರೆಮಣ್ಣಿನ ಹರವು, ಪಕ್ಕಗಳಲ್ಲಿ, ಅದರಲ್ಲೂ ಬಲದಂಡೆಯಲ್ಲಿ, ಎತ್ತರವಾದ ಎರೆಮಣ್ಣಿನ ಮೆಟ್ಟಲುಮೆಟ್ಟಲಾದ ವಿಶಾಲ ಪ್ರದೇಶಗಳು ಇರುತ್ತವೆ. ಜಮಖಂಡಿ ತಾಲ್ಲೂಕಿನ ಪಡಸಲಗಿ ಮುಂತಾದೆಡೆಗಳಲ್ಲಿ ಮಾತ್ರ ನದಿಯ ಪಾತ್ರದಲ್ಲಿ ಗಟ್ಟಿಬಂಡೆಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಈ ನದಿಯ ಪ್ರದೇಶ ಸುತ್ತಲ ಪ್ರದೇಶಗಳಿಗಿಂತ ವಿಶಿಷ್ಟ ರೀತಿಯದಾಗಿ ಎದ್ದುಕಾಣುತ್ತದೆ. ನದಿಯ ಉತ್ತರ ಭಾಗ ಟ್ರ್ಯಾಪ್ ಶಿಲೆಯ ಪ್ರದೇಶವಾದರೆ, ದಕ್ಷಿಣಭಾಗ ಕಲಾದಗಿ ವ್ಯವಸ್ಥೆಯ ಮರಳು ಶಿಲೆಯ ಪ್ರದೇಶ. ಇವೆರಡರ ಮಧ್ಯೆ ಪ್ರವಾಹದ ಕಾಲದಲ್ಲಿ ಬಂದು ಸೇರಿರುವ ಮೆಕ್ಕಲಿನ ಫಲವತ್ತಾದ ಭೂಮಿ. ಬಿಜಾಪುರ ಜಿಲ್ಲೆಯಲ್ಲಿ ಘಟಪ್ರಭಾ ನದಿ ಸೇರುವವರೆಗೆ ನದಿ ಅನೇಕ ಸೀಳುಗಳಾಗಿ, ಹರಿದು, ಮಧ್ಯೆಮಧ್ಯೆ ಮೇಲೆದ್ದ ಬಂಡೆಗಳ ಸಣ್ಣ ದ್ವೀಪಗಳನ್ನು ನಿರ್ಮಿಸಿರುವುದು ಕಾಣುತ್ತದೆ. ಸ್ವಲ್ಪ ದೂರ ಕಣಶಿಲೆಯ ಪ್ರದೇಶದ ಮೂಲಕವೂ ಸಾಗುತ್ತದೆ. ಈ ಭಾಗದಲ್ಲಿ ನದಿಯಲ್ಲಿ ಸಣ್ಣ ಪಾತಗಳು ಉಂಟಾಗಿವೆ. ಇದುವರೆಗಿನ ನದಿಯ ಪಾತ್ರ ಕಿರಿದು. ಮುಂದೆ ಘಟಪ್ರಭಾ ನದಿಯ ಸಂಗಮ ಸ್ಥಾನದ ಬಳಿ ನದಿಯ ಪಾತ್ರ ಸು.500ಮೀ. ಇದ್ದು ಮುಂದೆ ಮಲಪ್ರಭಾ ಸಂಗಮದ ಅನಂತರ ಸು.600-700ಮೀ. ಅಗಲವಾಗಿರುತ್ತದೆ. ಬಿಜಾಪುರ ಜಿಲ್ಲೆಯ ಭಾಗದಲ್ಲಿ ನದಿ ಹರಿಯುವಾಗ ಕಣಶಿಲೆ, ಟ್ರ್ಯಾಪ್ ಶಿಲೆ, ಮರಳುಶಿಲೆ ಇತ್ಯಾದಿ ವಿವಿಧ ರೀತಿಯ ಶಿಲಾಪ್ರದೇಶಗಳನ್ನು ದಾಟಿ ಬರುವುದರಿಂದ ನದಿಯ ದಂಡೆಯಲ್ಲಿ ಮತ್ತು ಪಾತ್ರದಲ್ಲಿ ಅನೇಕ ರೀತಿಯ ಕಲ್ಲುಗುಂಡುಗಳ ಹರಹುಗಳನ್ನು ಕಾಣಬಹುದು. ರಾಯಚೂರು ಗುಲ್ಬರ್ಗ ಪ್ರದೇಶಗಳಲ್ಲಿ ನದಿ ಶಿಲಾಪ್ರದೇಶದಿಂದ ವಿಶಾಲ ಕರಿಮಣ್ಣಿನ ಪ್ರಸ್ಥಭೂಮಿಗೆ ಬರುತ್ತದೆ. ಸುಮಾರು 5ಕಿಮೀ ದೂರದಲ್ಲಿ 139ಮೀ. ಹೀಗೆ ತ್ವರಿತವಾಗಿ ಇಳಿಯುತ್ತದೆ. ಇಳಿಯುವ ಭಾಗದಲ್ಲಿ ನದಿಯ ಹರಿವಿನ ವೇಗ ಅಧಿಕ. ರಾಯಚೂರು - ಗುಲ್ಬರ್ಗ ಭಾಗದಲ್ಲಿ ಸಾಮಾನ್ಯವಾಗಿ ಬಂಡೆಯ ಮೇಲೆ ಹರಿಯುತ್ತದೆ. ಬಂಡೆಗಳ ಮೇಲೆ ಜಿಗಿದು ಅಬ್ಬರದಿಂದ ತುಂತುರಿನ ರಾಶಿಯನ್ನು ಸಿಂಪಡಿಸುತ್ತ ಹರಿಯುವ ದೃಶ್ಯ ಸಾಮಾನ್ಯ. ಈ ಭಾಗದಲ್ಲಿ ನದಿಯ ಪಾತ್ರ ಅರ್ಧದಿಂದ ಮುಕ್ಕಾಲು ಕಿಮೀಗಳಷ್ಟು ಅಗಲವಾಗಿದ್ದು ಮಧ್ಯೆ ಮಧ್ಯೆ ದ್ವೀಪಗಳನ್ನು ನಿರ್ಮಿಸಿರುವುದುಂಟು. ದಂಡೆಗಳು ಹೆಚ್ಚು ಕಡಿದಾಗಿರುವುದಿಲ್ಲ.

ಕೃಷ್ಣಾ ನದಿ ಪ್ರಸ್ಥಭೂಮಿ ಪ್ರದೇಶದ ನದಿಯಾಗಿ ಮುಂಗಾರು ಮಳೆಯೇ ಪ್ರಧಾನ ನೀರಿನ ಆಸರೆಯಾಗಿರುವುದಿಂದ ಜೂನ್‌ನಿಂದ ಡಿಸೆಂಬರ್‌ವರೆಗೆ ನದಿಯ ಪ್ರವಾಹ ಅಧಿಕವಾಗಿರುತ್ತದೆ. ಈ ಕಾಲದಲ್ಲಿ ಅಗಾಧಪ್ರಮಾಣದ ನೀರು ಹಲವು ಬಾರಿ ಎರಡು ದಂಡೆಗಳನ್ನೂ ಮೀರಿ ಏರಿ ಹರಿದುಹೋಗುತ್ತದೆ. ಈ ಕಾಲದಲ್ಲಿ ಹರಿಯುವ ನೀರಿನ ಪ್ರಮಾಣ ನೈಲ್ ನದಿಯದಕ್ಕಿಂತ ಎರಡು ಪಟ್ಟಿನಷ್ಟು ಎಂದು ಹೇಳಲಾಗಿದೆ. ಆದರೆ ಬೇಸಗೆಯ ದಿನಗಳಲ್ಲಿ ನದಿ ಸುಮಾರು ತಳಮುಟ್ಟಿ ಹರಿಯುತ್ತದೆ. ಆಗ ಹರಿವಿನ ಪ್ರಮಾಣ ಒಂದು ನೂರು ಕ್ಯೂಸೆಕ್ಕುಗಳಿಗಿಂತ ಹೆಚ್ಚಿರುವುದಿಲ್ಲ. ಮಳೆಗಾಲದ ಭೋರ್ಗರೆತದ ತುಂಬು ಪ್ರವಾಹದ ಬದಲು ನದಿ ಸೀಳುಸೀಳಾಗಿ ಸಣ್ಣ ಧಾರೆಗಳಾಗಿ ಹರಿಯುತ್ತ ನದಿಯ ಪಾತ್ರದಲ್ಲಿ ಬಂಡೆಯ ದ್ವೀಪಗಳನ್ನು ಕರಿಮರಳಿನ ಹರಹನ್ನೂ ಪ್ರದರ್ಶಿಸುವುದು ಕಾಣುತ್ತದೆ.

ಕೃಷ್ಣಾ ನದಿಯಷ್ಟನ್ನೇ ತೆಗೆದುಕೊಂಡರೆ, ಕರ್ನಾಟಕ ರಾಜ್ಯದಲ್ಲಿ ಅದರ ಹರಿವಿನ ಉದ್ದ ನದಿಯ ಒಟ್ಟು ಉದ್ದದ ಸು.$^{1}/_{3}$ ಭಾಗದಷ್ಟೇ ಇದ್ದಂತೆ ಕಂಡರೂ ಕರ್ನಾಟಕದ ಪ್ರಸ್ಥಭೂಮಿಯ $^{2}/_{3}$ ರಷ್ಟು ಭಾಗ ಕೃಷ್ಣಾ ವ್ಯವಸ್ಥೆಗೆ ಸೇರಿದ್ದಾಗಿದೆ. ತನ್ನ ಹರಿವಿನ ಮಾರ್ಗದಲ್ಲಿ ಇದು ಕೂಡಿಸಿಕೊಳ್ಳುವ ಉಪನದಿಗಳು ಅನೇಕ. ಕರ್ನಾಟಕ ರಾಜ್ಯದಲ್ಲಿ ಸೇರುವ ಉಪನದಿಗಳಲ್ಲಿ ಮೊದಲನೆಯದು ದೂಧ್‌ಗಂಗಾ. ಇದು ಚಿಕ್ಕೋಡಿ ತಾಲ್ಲೂಕಿನೆಡೆಯಿಂದ ಪೂರ್ವಾಭಿಮುಖವಾಗಿ ಹರಿದು ಕೃಷ್ಣಾನದಿ ಚಿಕ್ಕೋಡಿ ತಾಲ್ಲೂಕಿನ ಅಂಚನ್ನು ಪ್ರವೇಶಿಸುವಲ್ಲಿಯೇ ಅದರ ಬಲದಂಡೆಯಲ್ಲಿ ಸೇರುತ್ತದೆ. ಮುಂದೆ ಬೇಸಗೆಯಲ್ಲಿ ಬತ್ತಿಹೋಗುವ ಹಲವಾರು ತೊರೆಗಳು ಕೃಷ್ಣಾನದಿಯನ್ನು ಕೂಡಿದರೂ ಬೆಳಗಾಂವಿ ಜಿಲ್ಲೆಯ ಭಾಗದಲ್ಲಿ ಹೆಸರಿಸಬಹುದಾದ ಉಪನದಿಗಳೆಂದರೆ ದೂಧ್‌ನಾಲಾ ಮತ್ತು ಅಗರಣಿ. ದೂಧ್‌ನಾಲಾ ರಾಯಭಾಗ ತಾಲ್ಲೂಕಿನಲ್ಲಿ ಉತ್ತರಕ್ಕೆ ಹರಿದು ಚಿಂಚಲಿಯ ಬಳಿಯಲ್ಲಿ ಸಂಗಮವಾಗುತ್ತದೆ. ಅಗರಣಿ, ಅಥಣಿ ತಾಲ್ಲೂಕಿನಲ್ಲಿ ದಕ್ಷಿಣಾಭಿಮುಖವಾಗಿ ಬಂದು ಐನಾಪುರದ ಸ್ವಲ್ಪಪೂರ್ವದಲ್ಲಿ ಬಣಜವಾಡ ಬಳಿ ಸೇರುತ್ತದೆ. ಈ ನದಿಗಳೆಲ್ಲ ಚಿಕ್ಕವು, ಸಾಮಾನ್ಯವಾಗಿ ಅದೇ ಪ್ರದೇಶದಲ್ಲಿ ಹುಟ್ಟಿ 60-70ಕಿಮೀಗಳಿಗಿಂತ ಹೆಚ್ಚು ಉದ್ದವಿಲ್ಲದೆ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವುವು. ಬಿಜಾಪುರ ಜಿಲ್ಲೆ ಹಾಗೂ ಮುಂದೆ ಕೊಪ್ಪಳ, ಬಾಗಲಕೋಟೆ, ಗುಲ್ಬರ್ಗ, ರಾಯಚೂರು ಜಿಲ್ಲೆಯ ಭಾಗಗಳಲ್ಲೂ ಇಂಥ ತೊರೆಗಳು ಅನೇಕವಿವೆ. ಬಾಗಲಕೋಟೆ ಭಾಗದ ಉಪನದಿಗಳಲ್ಲಿ ಘಟಪ್ರಭಾ ಮತ್ತು ಮಲಪ್ರಭಾ ಮುಖ್ಯವಾದವು. ಇವೆರಡೂ ಸಹ್ಯಾದ್ರಿಪರ್ವತ ಪ್ರದೇಶದಲ್ಲಿ ಹುಟ್ಟಿ ಕೃಷ್ಣಾ ನದಿಯ ದಕ್ಷಿಣದ ಪ್ರದೇಶದಲ್ಲಿ ಹರಿದು ಬರುವವು. ಘಟಪ್ರಭಾ ಬೀಳಗಿ ತಾಲ್ಲೂಕಿನ ಹಿರೇಮುರ್ಮಟ್ಟಿಯ ಬಳಿ ಕೃಷ್ಣಾ ನದಿಯ ಬಲಶಾಖೆಯನ್ನು ಕೂಡುತ್ತದೆ. ಮಲಪ್ರಭಾ ಹುನಗುಂದ ತಾಲ್ಲೂಕಿನ ಪ್ರಸಿದ್ಧ ಕೂಡಲಸಂಗಮ ಕ್ಷೇತ್ರದಲ್ಲಿ ಸೇರುತ್ತದೆ. ಬಿಜಾಪುರ ಜಿಲ್ಲೆಯ ಬಹುಭಾಗದಲ್ಲಿ ಪ್ರವಹಿಸಿ ಗುಲ್ಬರ್ಗ ಜಿಲ್ಲೆಯಲ್ಲಿ ಮುನ್ನಡೆಯುವ ಡೋಣಿ ನದಿ ಕೃಷ್ಣಾನದಿಯ ಉತ್ತರದ ಉಪನದಿಗಳಲ್ಲಿ ಒಂದು. ಇದು ಸುರಪುರ ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಉಮ್ಮಾಪುರದ ಬಳಿ ಕೃಷ್ಣಾ ನದಿಯನ್ನು ಕೂಡುತ್ತದೆ. ಮುಂದಿನ ಉಪನದಿಗಳಲ್ಲಿ ಸಣ್ಣ ತೊರೆಗಳನ್ನು ಬಿಟ್ಟರೆ ಭೀಮಾನದಿ ಮುಖ್ಯವಾದುದು. ಇದು ಗುಲ್ಬರ್ಗ ಜಿಲ್ಲೆಯ ಪೂರ್ವದ ಅಂಚಿನಲ್ಲಿ ಕೃಷ್ಣಾ ನದಿ ರಾಜ್ಯದ ಎಲ್ಲೆಯನ್ನು ಬಿಡುವಲ್ಲಿ ಗುಂಡ್ಲೂರು ಸಂಗಮದಲ್ಲಿ ಸಂಗಮಿಸುತ್ತದೆ.

ಬಹು ಪ್ರಯೋಜನಕಾರಿಯಾದ ಕೃಷ್ಣಾ ನದಿ ಉತ್ತರ ಕರ್ನಾಟಕ ಭಾಗದ ಅತಿ ದೊಡ್ಡ ನದಿಯಾದರೂ ಅದನ್ನು ನೀರಾವರಿಗೆ ಇದುವರೆಗೂ

ಸರಿಯಾಗಿ ಬಳಸಿಕೊಳ್ಳಲಾಗಿರಲಿಲ್ಲ. ಈವರೆಗೂ ಇದಕ್ಕೆ ಯಾವ ಅಣೆಕಟ್ಟೂ ಇರಲಿಲ್ಲ. ನದಿಯ ಪಾತ್ರದ ಪಕ್ಕದ ಪ್ರದೇಶಗಳಿಗೆ ಫಲವತ್ತಾದ ಮಣ್ಣನ್ನು ತಂದು ಹಾಕುವುದರಷ್ಟರಲ್ಲಿ ಮಾತ್ರ ನದಿಯ ಉಪಯೋಗವಿತ್ತು. ಕೆಲವೆಡೆಗಳಲ್ಲಿ ನದಿಯ ಪಕ್ಕದಲ್ಲಿ ಬಾವಿಗಳನ್ನು ತೋಡಿ ಏತದಿಂದ ಬೇಸಾಯ ಮಾಡಲಾಗುತ್ತಿತ್ತು. ಮಹಾರಾಷ್ಟ್ರದಲ್ಲಿ ಕಟ್ಟಿರುವ ಕೃಷ್ಣಾ ಅಣೆಕಟ್ಟಿನಿಂದ ಬೆಳಗಾಂವಿ ಜಿಲ್ಲೆಯ ಕೆಲವು ಭಾಗಗಳಿಗೆ ನೀರೊದಗಲಾರಂಭವಾಯಿತು. ಅಲ್ಲಿಂದ ಬರುವ ಕೃಷ್ಣಾ ವಿಸ್ತರಣ ನಾಲೆ ಅಥಣಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ನದಿಯ ಎಡದಂಡೆಯ ಪ್ರದೇಶಕ್ಕೆ ನೀರೊದಗಿಸುತ್ತದೆ. ಈಚೆಗೆ ಕರ್ನಾಟಕ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾರ್ಯವನ್ನು ಕೈಗೊಂಡಿದೆ. ಇದು ಕರ್ನಾಟಕದ ಬೃಹತ್ ನೀರಾವರಿ ಯೋಜನೆಗಳಲ್ಲಿ ಒಂದು. ಈ ಯೋಜನೆಯ ಪ್ರಕಾರ ನದಿಗೆ ಎರಡು ಕಟ್ಟೆಗಳನ್ನು ಕಟ್ಟಲಾಗಿದೆ. ಮೊದಲನೆಯದು ಕೃಷ್ಣಾ-ಘಟಪ್ರಭಾ ಸಂಗಮದಿಂದ ಸ್ವಲ್ಪ ಪೂರ್ವದಲ್ಲಿ ಆಲಮಟ್ಟಿ ಗ್ರಾಮದ ಬಳಿ ಇದೆ.

ಇಲ್ಲಿ ನದಿ ಬೆಟ್ಟಗಳ ಪ್ರದೇಶವನ್ನು ಹಾಯುವುದರಿಂದ ಭದ್ರ ಕಟ್ಟೆಗೆ ಅನುಕೂಲವಾಗಿರುವುದಲ್ಲದೆ, ಜಲಸಂಗ್ರಹಕ್ಕೆ ವಿಸ್ತಾರವಾದ ಪ್ರದೇಶ ಸಹ ದೊರಕುವುದರಿಂದ ಈ ಸ್ಥಳವನ್ನು ಆಯ್ಕೆಮಾಡಲಾಗಿದೆ. ಎರಡನೆಯದು ನಾರಾಯಣಪುರ ಕಟ್ಟೆ. ಆಲಮಟ್ಟಿಯಿಂದ ಮತ್ತಷ್ಟು ಕೆಳಗೆ ಮಲಪ್ರಭಾ - ಕೃಷ್ಣಾ ಸಂಗಮದಿಂದ ಕೆಲವೇ ಮೈಲಿಗಳ ಅಂತರದಲ್ಲಿ ಮುದ್ದೇಬಿಹಾಳ ತಾಲ್ಲೂಕಿನ ಸಿದ್ದಾಪುರಗ್ರಾಮದ ಬಳಿ ಕಟ್ಟಲಾಗುತ್ತಿದೆ. ಈ ಜಲಾಶಯಗಳ ನೆರವಿನಿಂದ ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಯ ಪ್ರದೇಶಗಳಲ್ಲಿ 8,43,353 ಹೆಕ್ಟೇರುಗಳಷ್ಟು (20.84 ಲಕ್ಷ ಎಕರೆಗಳು) ವಿಸ್ತಾರದ ಭೂಮಿಗೆ ನೀರಾವರಿ ಸೌಲಭ್ಯ ಒದಗಲಿದೆ. ಇದರಿಂದ ವಾರ್ಷಿಕ ಸು.15.54 ಮಿಲಿಯನ್ ಮೆಟ್ರಿಕ್ ಟನ್ ಅಧಿಕ ಆಹಾರ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಈ ಯೋಜನೆಯ ಅಂದಾಜು ವೆಚ್ಚ 285 ಕೋಟಿ ರೂಪಾಯಿಗಳು.

ಕೃಷ್ಣಾ ಮೇಲ್ದಂಡೆ ಯೋಜನೆಗಳ ಹಣಕಾಸು ವೆಚ್ಚ ಮತ್ತು ನೀರಾವರಿ ಸಾಮರ್ಥ್ಯದ ಅಂಕಿಅಂಶಗಳು

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಕೋಟಿ ರೂ.ಗಳಲ್ಲಿ | | ನೀರಾವರಿ ಸಾಮರ್ಥ್ಯ (ಹೆಕ್ಟೇರ್‌ಗಳಲ್ಲಿ) | |
|---|---|---|---|---|---|
| | | ಇತ್ತೀಚಿನ ವೆಚ್ಚ | **2000ದ ಮಾರ್ಚ್ ವರೆಗಿನ ಖರ್ಚು** | ಅಂತಿಮ ಸಾಮರ್ಥ್ಯ | **2000ದ ಮಾರ್ಚ್ ವರೆಗಿನ ಸಾಮರ್ಥ್ಯ** |
| | ಪ್ರಮುಖ ಯೋಜನೆಗಳು | | | | |
| 1 | ಕೃಷ್ಣಾ ಮೇಲ್ದಂಡೆ I ಮತ್ತು II | 9,066.21 | 5,329.84 | 6,22,020 | 3,07,181 |
| 2 | ಹಿಪ್ಪರಗಿ | 524.21 | 37.75 | 59,690 | – |
| 3 | ಘಟಪ್ರಭಾ III | 871.00 | 425.13 | 1,78,064 | 48,487 |
| 4 | ಮಲಪ್ರಭಾ | 703.71 | 559.96 | 2,18,191 | 1,76,074 |
| 5 | ಬೆಣ್ಣೆತೊರೆ | 195.42 | 164.15 | 20,236 | 8,302 |
| 6 | ಭದ್ರಾ | 170.00 | 167.43 | 1,05,570 | 1,05,570 |
| 7 | ತುಂಗಭದ್ರಾ ಎಲ್‌ಬಿಸಿ | 319.90 | 259.30 | 2,44,381 | 2,44,199 |
| 8 | ತುಂಗಭದ್ರಾ ಆರ್ ಬಿ ಎಚ್‌ಎಲ್‌ಸಿ | 79.48 | 50.29 | 80,910 | 70,439 |
| 9 | ದೂಧ್‌ಗಂಗಾ | 110.00 | 12.57 | 19,668 | – |
| 10 | ಮಾರ್ಕಂಡೇಯ | 134.53 | 21.32 | 32,375 | – |
| 11 | ರಮ್ಥಾಲ್ ಏತನೀರಾವರಿ | 114.05 | - - | 22,260 | – |
| 12 | ಭೀಮಾ ಹರಿವು | 85.18 | 0.49 | 42,170 | – |
| 13 | ಭೀಮಾ ಏತನೀರಾವರಿ | 153.00 | 5.00 | 24,282 | – |
| 14 | ತುಂಗಾ ಮೇಲ್ದಂಡೆ 11 | 832.46 | 39.40 | 94,700 | – |
| 15 | ಸಿಂಗಟಲ್ಲೂರ್ | 123.00 | 19.06 | 20,241 | – |
| | ಒಟ್ಟು | **13,581.34** | **7,091.69** | **17,84,758** | **9,60,252** |

ಮಧ್ಯಮ ಯೋಜನೆಗಳು

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಕೋಟಿ ರೂ.ಗಳಲ್ಲಿ | | ನೀರಾವರಿ ಸಾಮರ್ಥ್ಯ (ಹೆಕ್ಟೇರ್‌ಗಳಲ್ಲಿ) | |
|---|---|---|---|---|---|
| | | ಇತ್ತೀಚಿನ ವೆಚ್ಚ | 2000ದ ಮಾರ್ಚ್ ವರೆಗಿನ ಖರ್ಚು | ಅಂತಿಮ ಸಾಮರ್ಥ್ಯ | 2000ದ ಮಾರ್ಚ್ ವರೆಗಿನ ಸಾಮರ್ಥ್ಯ |
| | ಮಧ್ಯಮ ಯೋಜನೆಗಳು | | | | |
| 16 | ಅಮರಜಾ | 97.50 | 89.74 | 8,903 | 6,639 |
| 17 | ಕೆಳಮುಲ್ಲಾಮಾರಿ | 115.00 | 101.77 | 9,713 | 2,611 |
| 18 | ಹಿರೇಹಳ್ಳ | 120.81 | 112.90 | 8,103 | – |
| 19 | ಮಸ್ಕಿನಾಲಾ | 38.50 | 32.78 | 2,833 | – |
| 20 | ರಾಣಿಕೆರೆ ಫೀಡರ್ ಕಾಲುವೆ | 9.49 | 9.49 | 3,328 | 283 |
| 21 | ಗಂಧೋರಿ ನಾಲಾ | 153.00 | 26.16 | 8,094 | – |
| 22 | ಇಟಗಿ ಸಾಸಲ್‌ವಾಡ | 12.15 | 0.53 | 5,700 | – |
| 23 | ಮುಲ್ಲಾಮಾರಿ ಮೇಲ್ದಂಡೆ | 19.92 | 19.65 | 3,279 | 3,279 |
| 24 | ಬಾಸಪುರ | 14.02 | 1.05 | 2,276 | – |
| 25 | ಹೊದಿರಾಯನ ಹಳ್ಳ | 11.87 | 0.7 | – | – |
| 26 | ಕಾಗಿಣಾ | 51.91 | -- | 7,689 | – |
| 27 | ಹರಿನಾಲಾ | 30.60 | 19.38 | 4,370 | – |
| | ಒಟ್ಟು | **14,256.11** | **7,505.61** | **18,48,866** | **9,73,064** |

ಕೃಷ್ಣಾ ನದಿಯಲ್ಲಿ ಬೇಸಗೆ ಕಾಲದಲ್ಲಿ ಕಡಿಮೆ ಪ್ರವಾಹ ವಿರುವುದರಿಂದ ಆಗ ಹಲವೆಡೆಗಳಲ್ಲಿ ನದಿಯನ್ನು ದಾಟಬಹುದು. ಕೆಲವು ಸ್ಥಳಗಳಲ್ಲಿ ಹರಿಗೋಲುಗಳಿಂದಲೂ ತಗ್ಗುಪಟ್ಟೆಗಳಿಂದಲೂ (ಕಾಸ್‌ವೇ) ದಾಟುವ ಸೌಲಭ್ಯವಿದೆ. ನದಿಗೆ ಅಡ್ಡಲಾಗಿ ಕರ್ನಾಟಕದ ಭಾಗದಲ್ಲಿ 7 ಮುಖ್ಯ ಸೇತುವೆಗಳಿವೆ. ಅನುಕ್ರಮವಾಗಿ ಅವು ಈ ಸ್ಥಳಗಳಲ್ಲಿವೆ: ಬೆಳಗಾಂವಿ ಜಿಲ್ಲೆಯ ಅಂಕಲಗಿ (ಚಿಕ್ಕೋಡಿ- ಕಾನವಾಡ- ಮಿರಜ ರಸ್ತೆ), ಕುಡಚಿ (ರಾಯಬಾಗ-ಮಿರಜ ರಸ್ತೆ), ದರೂರು (ರಾಯಬಾಗ-ಅಥಣಿ ರಸ್ತೆ), ಬಿಜಾಪುರ ಜಿಲ್ಲೆಯ ಪಡಸಲ್ಗಿ (ಜಮಖಂಡಿ -ಬಿಜಾಪುರ ರಸ್ತೆ), ಗಲಗಲಿ (ಮುಧೋಳ-ಬಿಜಾಪುರ ರಸ್ತೆ), ಕೊಲ್ಹಾರ (ಬಿಜಾಪುರ-ಹುಬ್ಬಳ್ಳಿ ರಸ್ತೆ), ಗುಲ್ಬರ್ಗ ಜಿಲ್ಲೆಯ ತಿಂಥಿಣಿ (ಗುಲ್ಬರ್ಗ- ಬಳ್ಳಾರಿ ರಸ್ತೆ), ರಾಯಚೂರು ಜಿಲ್ಲೆಯ ದೇವರಸುಗೂರು (ರಾಯಚೂರು- ಮಹಬೂಬ್‌ನಗರ-ಹೈದರಾಬಾದು ರಸ್ತೆ), ಹುಬ್ಬಳ್ಳಿ-ಪುಣೆ, ಗದಗ- ಸೊಲ್ಲಾಪುರ, ಗುಂತಕಲ್ಲು-ಮುಂಬಯಿ ಈ ರೈಲು ಮಾರ್ಗಗಳು ಅನುಕ್ರಮವಾಗಿ ಬೆಳಗಾಂವಿ ಜಿಲ್ಲೆಯ ಕುಡಚಿ, ಬಿಜಾಪುರ ಜಿಲ್ಲೆಯ ಆಲಮಟ್ಟಿ ಮತ್ತು ರಾಯಚೂರು ಜಿಲ್ಲೆಯ ಕರೆಕಲ್ ಬಳಿಯಲ್ಲಿ ಕೃಷ್ಣಾನದಿಯನ್ನು ಹಾದುಹೋಗುತ್ತವೆ.

ಹಿಂದಿನ ಅನೇಕ ಬರೆಹಗಳಲ್ಲಿ ಕೃಷ್ಣಾನದಿಯ ಉಲ್ಲೇಖವಿದೆ. ಸ್ಕಾಂದಪುರಾಣದ ಕೃಷ್ಣಾಮಾಹಾತ್ಮ್ಯ ವಿಭಾಗದಲ್ಲಿ ಹೇಳಿರುವಂತೆ ಸ್ವರ್ಗದಿಂದ ಈ ನದಿಯನ್ನು ಭೂಲೋಕಕ್ಕೆ ತರಲಾಯಿತು. ಕಲಿಯುಗದಲ್ಲಿ ಧರ್ಮಗ್ಲಾನಿಯಿಂದ ಬೇಸತ್ತ ಋಷಿಗಳು ನಾರದನನ್ನು ಮೊರೆಹೊಕ್ಕಾಗ ನಾರದ ತನ್ನ ತಂದೆ ಬ್ರಹ್ಮನನ್ನು ಪ್ರಾರ್ಥಿಸಿದ. ಆಗ ಬ್ರಹ್ಮ ಅನೇಕ ತೀರ್ಥಗಳನ್ನು ಸೃಷ್ಟಿಸಿದ. ಹಾಗೆಯೇ ನಾರಾಯಣನನ್ನು ಧರ್ಮರಕ್ಷಣೆಗೆ ಪ್ರಾರ್ಥಿಸಿದಾಗ ನಾರಾಯಣನ ಶರೀರದಿಂದ ಈ ನದಿ ಹುಟ್ಟಿತೆಂದೂ ಆದ್ದರಿಂದಲೇ ಇದಕ್ಕೆ ಕೃಷ್ಣಾ ನದಿ ಎಂಬ ಹೆಸರು ಬಂತೆಂದೂ ಹೇಳುವರು. ಜೊತೆಗೆ ಸಹ್ಯಾದ್ರಿಯ ದೊರೆ ನಾರಾಯಣನನ್ನು ಕುರಿತು ತಪಸ್ಸನ್ನು ಮಾಡಿದಾಗ ನಾರಾಯಣ ಪ್ರತ್ಯಕ್ಷನಾಗಿ ವರರೂಪವಾಗಿ ಕೃಷ್ಣಾ ನದಿಯಾಗಿ ಹರಿದನೆಂದೂ ಹೇಳುವರು. ಕೃಷ್ಣಾ ಎಂದರೆ ಪಾಪವನ್ನೆಲ್ಲಾ ಕೊಚ್ಚಿಕೊಂಡು ಹೋಗುವುದು ಎಂಬ ಅರ್ಥವೆಂದೂ ಹೇಳುವುದುಂಟು.

ಪದ್ಮ ಮತ್ತು ಬ್ರಹ್ಮ ಪುರಾಣಗಳಲ್ಲೂ ಕೃಷ್ಣಾ ನದಿಯ ಮಹಿಮೆ ಕುರಿತು ಹೇಳಿದೆ. ಕೃಷ್ಣಾ ನದಿಯನ್ನು ದಕ್ಷಿಣದ ಗಂಗೆ ಎಂದೂ ಕರೆಯುತ್ತಾರೆ. ಮಲಪ್ರಭಾ ಕೃಷ್ಣಾ ನದಿಯನ್ನು ಸೇರುವ ಕೂಡಲ ಸಂಗಮದ ಹತ್ತಿರ ಜಾತವೇದ ಮುನಿಯ ಆಶ್ರಮವಿತ್ತೆಂದೂ ಐತಿಹ್ಯವಿದೆ. ಬಸವೇಶ್ವರರ ಆರಾಧ್ಯದೈವ ಕೂಡಲಸಂಗಮ (ನೋಡಿ) ಇಲ್ಲೇ ಇದೆ. ಅದೊಂದು ಪವಿತ್ರಸ್ಥಳವಾಗಿದೆ.

ಬೆಳಗಾಂವಿ ಜಿಲ್ಲೆಯಲ್ಲಿ ಚಿಕ್ಕೋಡಿ ತಾಲ್ಲೂಕಿನ ವಡೂರು, ರಾಯಬಾಗ ತಾಲ್ಲೂಕಿನ ಸಪ್ತಸಾಗರ, ಬಿಜಾಪುರ ಜಿಲ್ಲೆಯಲ್ಲಿ ಬಿಜಾಪುರ ತಾಲ್ಲೂಕಿನ ಬಬ್ಲಾದ, ಜೈನಾಪುರ, ಬಾಗೇವಾಡಿ ತಾಲ್ಲೂಕಿನ ಚಿಮ್ಮಲಗಿ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಮುತ್ತೂರು, ಶೂರ್ಪಾಲಿ, ಗುಲ್ಬರ್ಗ ಜಿಲ್ಲೆಯಲ್ಲಿ ಸುರಪುರ ತಾಲ್ಲೂಕಿನ ಛಾಯಾಭಗವತಿ, ತಿಂಥಿಣಿ, ಯಾದಗಿರಿ ತಾಲ್ಲೂಕಿನ ಭೀಮಾ -ಕೃಷ್ಣಾ ಸಂಗಮ, ರಾಯಚೂರು ಜಿಲ್ಲೆಯಲ್ಲಿ ರಾಯಚೂರು ತಾಲ್ಲೂಕಿನ ದೇವರಸುಗೂರು, ಕಡಲೂರು, ಕೊರ್ವ (ನಾರದಗಡ್ಡೆ) ರಾಮಗಡ್ಡೆ ಇವು ಕೃಷ್ಣಾ ನದಿಯ ದಂಡೆಯಲ್ಲಿರುವ ಪುಣ್ಯ ಕ್ಷೇತ್ರಗಳಲ್ಲಿ ಕೆಲವು. *

**ಕೃಷ್ಣಾಚಾರ್ಯ, ಗರಣಿ :** 1857-1918. ಪ್ರಸಿದ್ಧ ವಿದ್ವಾಂಸರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಕೃಷ್ಣಾಚಾರ್ಯ ತಿಮ್ಮಣ್ಣಾಚಾರ್ಯ ಗರಣಿ ಇವರ ಪೂರ್ಣ ಹೆಸರು. ತುಮಕೂರು ಜಿಲ್ಲೆ ಗರಣಿ ಇವರ ಜನ್ಮಸ್ಥಳ. ಪ್ರಸಿದ್ಧ ವ್ಯಾಕರಣ ಪಂಡಿತರಾಗಿದ್ದ ಇವರು ಮೊದಲು ಮದರಾಸಿನ ಕ್ರಿಶ್ಚನ್ ಕಾಲೇಜಿನಲ್ಲೂ ಅನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲೂ ಕನ್ನಡ ಪಂಡಿತರಾಗಿ ಕೆಲಸ ಮಾಡಿದರು. ಮೈಸೂರು ಮಹಾರಾಜರ ಆಸ್ಥಾನವಿದ್ವಾಂಸರೂ ಆಗಿದ್ದರು. ಕನ್ನಡದಲ್ಲಿ ಇವರು ಬರೆದಿರುವ ಕೆಲವು ಮುಖ್ಯ ಕೃತಿಗಳಿವು: ಕರ್ಣಾಟಕ ಭಾಷಾ ವಿಷಯವು, ಕರ್ನಾಟಕ ಭಾಷಾ ಸಮೀಕರಣೋಪನ್ಯಾಸ, ಕಾದಂಬರೀ ಕಥೆ, ನಾಗಾನಂದ ನಾಟಕಂ, ಸ್ಮೃತಿಧರ್ಮ ಪದ್ಧತಿ. ಸಂಸ್ಕೃತದಲ್ಲಿ ಧಾತುರೂಪಾವಳಿ, ಶಬ್ದರತ್ನಾವಳಿ ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ. ಇವರು 1918 ಅಕ್ಟೋಬರ್ 1ರಂದು ನಿಧನಹೊಂದಿದರು.*

**ಕೃಷ್ಣಾನಂದಾ, ಕಾಮತ :** 1934-2002. ವಿಜ್ಞಾನಿ, ಲೇಖಕ, ಛಾಯಾಗ್ರಾಹಕ, ಕಲಾವಿದ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ 1934 ಸೆಪ್ಟೆಂಬರ್ 29ರಂದು ಹುಟ್ಟಿದರು. ತಂದೆ ಲಕ್ಷ್ಮಣ ಕಾಮತ, ತಾಯಿ ರಮಾಬಾಯಿ. ಹೊನ್ನಾವರದ ನ್ಯೂ ಇಂಗ್ಲಿಷ್ ಹೈಸ್ಕೂಲಿನಲ್ಲಿ ಓದಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವಿಜ್ಞಾನ ಪದವಿ ಪಡೆದು, ಕರ್ನಾಟಕ ವಿಶ್ವವಿದ್ಯಾಲಯ ದಿಂದ ಸ್ನಾತಕೋತ್ತರ ಪದವೀಧರರಾಗಿ ನ್ಯೂ ಯಾರ್ಕ್‌ನ ಸ್ಟೇಟ್ ಯೂನಿ ವರ್ಸಿಟಿಯಲ್ಲಿ ಕೀಟಶಾಸ್ತ್ರ ಕುರಿತು ಸಂಶೋಧನೆ ಮಾಡಿ ಡಾಕ್ಟೊರೇಟ್ ಪಡೆದರು. ಕೆಲಕಾಲ ರಾಜಸ್ಥಾನದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು ಅನಂತರ ಬೆಂಗಳೂರಿನಲ್ಲಿ ನೆಲಸಿದರು. ಛಾಯಾಗ್ರಹಣ, ಸಾಹಿತ್ಯ ರಚನೆ, ಚಿತ್ರಕಲೆ, ಪ್ರವಾಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರಿಗೆ ಕೊಂಕಣಿ, ಇಂಗ್ಲಿಷ್, ಮರಾಠಿ, ಹಿಂದಿ ಭಾಷೆಗಳ ಮೇಲೂ ಪ್ರಭುತ್ವವಿತ್ತು. ಇಂಗ್ಲಿಷ್, ಕೊಂಕಣಿ ಭಾಷೆಗಳಲ್ಲೂ ಇವರು ಲೇಖನ ಪುಸ್ತಕಗಳನ್ನು ಬರೆದಿದ್ದಾರೆ.



ಕೀಟಶಾಸ್ತ್ರದ ಮತ್ತು ಪರಿಸರ ಅಧ್ಯಯನದ ಪಂಡಿತರಾಗಿದ್ದ ಕಾಮತರು ಕನ್ನಡ ಸಾಹಿತ್ಯದಲ್ಲೂ ಆಸಕ್ತಿ ವಹಿಸಿದ್ದರು. ನಾನು ಅಮೇರಿಕೆಗೆ ಹೋಗಿದ್ದೆ (1969) ಎಂಬುದು ಇವರ ಪ್ರಸಿದ್ಧ ಪ್ರವಾಸ ಸಾಹಿತ್ಯ ಕೃತಿ. ವಂಗದರ್ಶನ (1972), ನಾ ರಾಜಸ್ಥಾನದಲ್ಲಿ (1974), ಕಲಾರಂಗ (1982), ಬಸ್ತರ ಪ್ರವಾಸ (1991), ಮಧ್ಯಪ್ರದೇಶದ ಮಡಿಲಲ್ಲಿ (1993), ಪ್ರವಾಸಿಯ ಪ್ರಬಂಧಗಳು (2000) -ಇವು ಇತರ ಕೃತಿಗಳು. ಇವರು ಭಗ್ನಸ್ವಪ್ನ ಎಂಬ ಕಾದಂಬರಿಯನ್ನು ಬರೆದಿದ್ದಾರೆ. ತಮ್ಮ ಪತ್ನಿ ಜ್ಯೋತ್ಸ್ನಾ ಕಾಮತರಿಗೆ ಬರೆದ ಪತ್ರಗಳು ಪ್ರೇಯಸಿಗೆ ಪತ್ರಗಳು ಎಂಬ ಹೆಸರಿನಲ್ಲಿ ಪ್ರಕಟವಾಗಿವೆ.

ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ಕುರಿತು ಇವರು ಪ್ರಾಣಿಪರಿಸರ (1975), ಪಶುಪಕ್ಷಿ ಪ್ರಪಂಚ (1990), ಸಸ್ಯ ಪ್ರಪಂಚ (1992), ಸಸ್ಯ ಪರಿಸರ (1994), ಕಾಗೆಯ ಕಾಯಕ (1999), ಇರುವೆಯ ಇರುವು (1999), ಸರ್ಪಸಂಕುಲ (1999), ಕೀಟ ಜಗತ್ತು (1992) ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಕರ್ನಾಟಕದ ಕಾವಿಕಲೆಯನ್ನು ಕುರಿತು ಅಧ್ಯಯನ ಮಾಡಿ ಕಾವಿಕಲೆ ಎಂಬ ಪುಸ್ತಕವನ್ನು ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ರಚಿಸಿದ್ದಾರೆ. ಇವರು ಬರೆದ ಕೊನೆಯ ಕೃತಿ ಮರುಪಯಣ (2001). ಇವರ ಕೃತಿಗಳಲ್ಲಿ ನವುರಾದ ಹಾಸ್ಯವನ್ನೂ ಸೂಕ್ಷ್ಮಾವಲೋಕನ ದೃಷ್ಟಿಯನ್ನೂ ಗುರುತಿಸಬಹುದು. ಹೀಗಾಗಿ ಇವು ಓದುಗರ ಮೆಚ್ಚುಗೆ ಗಳಿಸಿವೆ.

ನಾನು ಅಮೇರಿಕೆಗೆ ಹೋಗಿದ್ದೆ, ಪ್ರಾಣಿ ಪರಿಸರ, ಬಸ್ತರ ಪ್ರವಾಸ ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಬಹುಮಾನಗಳೂ ಸಾಹಿತ್ಯ ಯಾತ್ರೆ ಎಂಬ ಕೃತಿಗೆ 1994ರಲ್ಲಿ ಗೌರೀಶ ಕಾಯ್ಕಿಣಿ ಪ್ರತಿಷ್ಠಾನದ ಪ್ರಶಸ್ತಿಯೂ ಲಭಿಸಿವೆ. ಇವರು 2002 ಫೆಬ್ರವರಿ 20ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. (ಎಸ್.ಎಂ.ಕೆ.)

**ಕೆಂಗಲ್ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಒಂದು ಪ್ರವಾಸಿ ತಾಣ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಚನ್ನಪಟ್ಟಣದಿಂದ ಸು.3ಕಿಮೀ ದೂರದಲ್ಲಿದೆ. ಇದು ವಂದರಗುಪ್ಪೆ ಗ್ರಾಮಕ್ಕೆ ಸೇರಿದೆ. ಇಲ್ಲಿ ಪ್ರಸಿದ್ಧ ಹನುಮಂತರಾಯನ ಗುಡಿ ಇದೆ.

ಹನುಮಂತರಾಯ ದೇವಾಲಯ

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಪ್ರಸಿದ್ಧ ರಾಜಕಾರಣಿ ಕೆಂಗಲ್ ಹನುಮಂತಯ್ಯನವರು ಈ ದೇವಾಲಯದ ಜೀರ್ಣೋದ್ಧಾರ ಮಾಡಿಸಿದರು. ಆಂಜನೇಯ ಮೂರ್ತಿಯನ್ನು ಕೆಂಪು ಗ್ರ್ಯಾನೈಟ್ ಕಲ್ಲಿನಿಂದ ನಿರ್ಮಿಸಲಾಗಿದೆ. ದೇವಾಲಯಕ್ಕೂ ಕೆಂಪು ಕಲ್ಲು ಬಳಸಲಾಗಿದೆ. ಪ್ರಾಯಃ ಅದಕ್ಕಾಗಿ ಈ ಊರಿಗೆ ಮತ್ತು ದೇವಾಲಯಕ್ಕೆ ಕೆಂಗಲ್ ದೇವರು ಎಂದು ಹೆಸರು ಬಂದಿರಬೇಕು. ಈ ಮೂರ್ತಿಯನ್ನೂ ಮಾಧ್ವ ಯತಿಗಳಾದ ವ್ಯಾಸರಾಯರು ಪ್ರತಿಷ್ಠಾಪಿಸಿದರೆಂದು ತಿಳಿದುಬರುತ್ತದೆ. ಈ ದೇವಾಲಯದಲ್ಲಿ ರಾಮ, ಲಕ್ಷ್ಮಣ ಹಾಗೂ ಸೀತಾದೇವಿಯರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಮುಂದೆ ಒಂದು ಸುಂದರವಾದ ಉದ್ಯಾನವಿದೆ. ಇಲ್ಲಿನ ಒಂದು ಕುತೂಹಲದ ಸಂಗತಿಯೆಂದರೆ ಕೆರೆಯನ್ನು ಹನುಮಂತನ ಗದೆಯ ಆಕಾರದಲ್ಲಿ ಕಟ್ಟಿರುವುದು. ಯಾತ್ರಿಗಳಿಗೆ ತಂಗಲು ಇಲ್ಲಿ ಕೊಠಡಿ ವ್ಯವಸ್ಥೆಯಿದೆ, ಕಲ್ಯಾಣಮಂಟಪವಿದೆ. ಪ್ರತಿ ವರ್ಷ ಇಲ್ಲಿ ದೊಡ್ಡ ಪ್ರಮಾಣದಲ್ಲಿ ದನಗಳ ಜಾತ್ರೆ ನಡೆಯುತ್ತದೆ. ಇಲ್ಲೊಂದು ಸರ್ಕಾರಿ ನೆಡುತೋಪು ಇದೆ. (ಎಸ್.ಜಿ.ಎ.)

**ಕೆಂಚನಗುಡ್ಡ:** ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ಒಂದು ಗ್ರಾಮ. ತುಂಗಭದ್ರಾ ನದಿ ದಂಡೆಯ ಮೇಲೆ ಸಿರಗುಪ್ಪದ ನೈಋತ್ಯಕ್ಕೆ 5ಕಿಮೀ ದೂರದಲ್ಲಿದೆ. ಇಲ್ಲಿನ ಗುಡ್ಡದ ಮೇಲೆ ಮತ್ತು ಕೆಳಗೆ ಎರಡು ಕೋಟೆಗಳಿವೆ. ಮೊದಲು ಕೆಳಗಿನ ಕೋಟೆಯಲ್ಲಿ ಜನ ವಾಸಿಸುತ್ತಿದ್ದರು. ಅನಂತರ ಈ ಗ್ರಾಮದಲ್ಲಿ ನೆಲೆಸಿದರು. ಸ್ಥಳೀಯ ಅಧಿಪತಿ ಕೆಂಚನಗೌಡ ಎಂಬುವನು ಗುಡ್ಡದ ಮೇಲೆ ಕೋಟೆ ಕಟ್ಟಿದ್ದರಿಂದ ಅದಕ್ಕೆ ಕೆಂಚನಗುಡ್ಡ ಎಂಬ ಹೆಸರು ಬಂತು. ಈ ಗುಡ್ಡದ ಬುಡದಲ್ಲಿ ಗಂಗಾಧರ ದೇವಾಲಯವಿದೆ.

ಇಲ್ಲಿನ 1708ರ ಶಾಸನ ಒಂದರಲ್ಲಿ ಕೆಂಚನಗೌಡನ ವಂಶಾವಳಿ ಇದೆ. ಇವನ ಮನೆತನದವರು ಸಿರಗುಪ್ಪದ ಮುಖ್ಯಸ್ಥರಾಗಿದ್ದರು. ಕೆಂಚನಗೌಡ ಮೇಲಿನ ಕೋಟೆ ಮತ್ತು ದೇವಾಲಯವನ್ನು ಕಟ್ಟಿಸಿದ. ಕೆಂಚನಗೌಡನಿಗೆ ಮೂರು ಮಕ್ಕಳಿದ್ದು ಅವರಲ್ಲಿ ವಿರೂಪಾಕ್ಷ ಎಂಬುವನ್ನು ತಂದೆಯ ಉತ್ತರಾಧಿಕಾರಿಯಾದ ಎಂಬ ವಿಷಯವಿದೆ. ಕೆಂಚನಗೌಡನ ಮೂರು ಮಂದಿ ಗಂಡುಮಕ್ಕಳಲ್ಲಿ ಪಂಪಾಪತಿ ಎಂಬುವನ ಮರಣದ

ಅನಂತರ ಆತನ ಹೆಂಡತಿ ತಂಗಮ್ಮ ಗದ್ದುಗೆಯೇರಿದಳೆಂದೂ ಅವಳ ಇಬ್ಬರು ಮಕ್ಕಳನ್ನು ಟಿಪ್ಪು ಸೆರೆಹಿಡಿದು ಒಬ್ಬನನ್ನು ಕೊಂದು ಇನ್ನೊಬ್ಬನನ್ನು ಮತಾಂತರಗೊಳಿಸಿದನೆಂದೂ ಮುಸ್ಲಿಂ ಮತ ಸ್ವೀಕರಿಸಿದ ತನ್ನ ಮಗ ರಾಜ್ಯಕ್ಕೆ ಉತ್ತರಾಧಿಕಾರಿಯಾಗಬಾರದೆಂಬ ಉದ್ದೇಶದಿಂದ ತಂಗಮ್ಮ ಬ್ರಿಟಿಷರಿಗೆ ರಾಜ್ಯವನ್ನು ವಹಿಸಿಕೊಟ್ಟು ಜೀವಾವಧಿ ನಿವೃತ್ತಿ ವೇತನ ಪಡೆದಳೆಂದೂ ಸ್ಥಳೀಯರ ಹೇಳಿಕೆ. ಕೆಂಚನಗುಡ್ಡ ಪಾಳೆಯಪಟ್ಟು ಹರಿಪಂತ್ ಎಂಬುವನ ಮಗನ ಹೆಸರಿನಲ್ಲಿ ಮರಾಠನೊಬ್ಬನ ಅಧೀನದಲ್ಲಿತ್ತು. ಆದರೆ 1792ರ ಇಂಗ್ಲಿಷರ ಮತ್ತು ಟಿಪ್ಪುಸುಲ್ತಾನರ ಸಂಧಿಯಲ್ಲಿ ಇದರ ಬಗ್ಗೆ ಪ್ರಸ್ತಾಪವಿರಲಿಲ್ಲ. ಟಿಪ್ಪು ಈ ಭಾಗವನ್ನು ಹರಿಪಂತನ ಸೇವೆಯಲ್ಲಿದ್ದ ನರಹರಿಶಾಸ್ತ್ರಿ ಎಂಬುವನಿಗೆ ಅವನ ಯಾವುದೋ ಉಪಕಾರಕ್ಕಾಗಿ ಬಿಟ್ಟುಕೊಟ್ಟಿದ್ದ. ಮುಂದೆ ಅಲ್ಲಿಯ ದೇಶಾಯಿಣಿ ತಂಗಮ್ಮ ಪಾಳೆಯಪಟ್ಟನ್ನು ಹಿಡಿದಿದ್ದಳು. ಕಂಪನಿಯ ಸೂಚನೆಯಂತೆ ಮನ್ರೋ ಆ ಜಾಗೀರನ್ನು ವಶಪಡಿಸಿಕೊಂಡ ಎಂದು ಬ್ರಿಟಿಷ್ ದಾಖಲೆಗಳು ತಿಳಿಸುತ್ತವೆ.

ಕೆಂಚನಗುಡ್ಡದಲ್ಲಿ ಸಿದ್ಧಮಲ್ಲಯ್ಯ ಎಂಬ ಸಂತರ ಗುಹೆ ಇದೆ. ಇದರ ಹತ್ತಿರ ಒಂದು ಕನ್ನಡ ಶಾಸನವಿದೆ. ರಾಘವೇಂದ್ರರ ಶಿಷ್ಯರೊಬ್ಬರ ಬೃಂದಾವನವೂ ಇಲ್ಲಿದೆ. *

**ಕೆಂಪರಾಜ ಅರಸು, ಡಿ. :** -1982. ಹಿರಿಯ ತಲೆಮಾರಿನ ಚಲನಚಿತ್ರ ನಿರ್ಮಾಪಕ ಮತ್ತು ನಟ. ಗುಬ್ಬಿ ಫಿಲ್ಮ್ ಕಂಪನಿ ತಯಾರಿಸಿದ ಜೀವನನಾಟಕ ಚಿತ್ರದ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು (1942). ಅನಂತರ ಕೃಷ್ಣಾಲೀಲಾ (1947), ಭಕ್ತರಾಮದಾಸ (1948) ಚಿತ್ರಗಳಲ್ಲಿ ಅಭಿನಯಿಸಿದರು. ಕೆಂಪರಾಜ ಪ್ರೊಡಕ್ಷನ್ಸ್ ಲಾಂಛನದಲ್ಲಿ ತಾವೇ ಮೂರು ಚಿತ್ರಗಳನ್ನು ನಿರ್ಮಿಸಿದರು. ಈ ಚಿತ್ರಗಳಲ್ಲಿ ಬಹು ತಾರಾಗಣ ವಿರುತ್ತಿತ್ತು. ಇವರು ಅಂದಿನ ದಿನಗಳಲ್ಲಿ ಅದ್ದೂರಿ ಸಿನಿಮಾ ನಿರ್ಮಾಪಕರೆಂದು ಹೆಸರುಗಳಿಸಿದ್ದರು.

1954ರಲ್ಲಿ ಶನಿಮಹಾರಾಜನ ಕತೆಯುಳ್ಳ ರಾಜಾವಿಕ್ರಮ ಎಂಬ ಚಿತ್ರವನ್ನು ನಿರ್ಮಿಸಿದರು. ಈ ಚಿತ್ರ ಗಳಿಕೆಯಲ್ಲಿ ವಿಕ್ರಮ ಸಾಧಿಸಿತು. ಅನಂತರ ಅದೇವರ್ಷ ಕೌಂಟ್ ಆಫ್ ಮಾಂಟೆ ಕ್ರಿಸ್ಟೋ ಎಂಬ ಫ್ರೆಂಚ್ ಕಥೆಯನ್ನು ಆಧರಿಸಿ ಜಲದುರ್ಗ ಎಂಬ ಚಿತ್ರ ನಿರ್ಮಿಸಿದರು. ಆದರೆ ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಗಲಿಲ್ಲ. 1957ರ ವರೆಗೆ ಇವರಿಗೆ ಚಲನಚಿತ್ರಗಳಲ್ಲಿ ಯಾವ ಅವಕಾಶಗಳೂ ದೊರೆಯಲಿಲ್ಲ. ಪುನಃ ತಮ್ಮ ಸ್ವಂತ ಲಾಂಛನದಲ್ಲಿ ನಳದಮಯಂತಿ ಚಿತ್ರವನ್ನು ಕನ್ನಡ, ತೆಲುಗು ಭಾಷೆಗಳೆರಡರಲ್ಲೂ ನಿರ್ಮಿಸಿದರು (1957). ನಳನ ಪಾತ್ರವನ್ನು ತಾವೇ ನಿರ್ವಹಿಸಿದರು. ಚಿತ್ರದ ಹಾಡುಗಳನ್ನೂ ಇವರೇ ರಚಿಸಿದರು. ತೆಲುಗು ಚಿತ್ರರಂಗದ ಹೆಸರಾಂತ ತಾರೆ ಭಾನುಮತಿ ಈ ಚಿತ್ರದಲ್ಲಿ ದಮಯಂತಿ ಪಾತ್ರವಹಿಸಿದ್ದರು.

ಇವರು ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು (1978). ಭಾರತೀಯ ವಾಕ್ಚಿತ್ರದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಸಂಸ್ಥೆ ಪ್ರಕಟಿಸಿದ ಸ್ಮರಣಸಂಚಿಕೆಯಲ್ಲಿ (1981) ಇವರು ತಮ್ಮ ಕಾಲದ ಚಲನಚಿತ್ರರಂಗದ ಅನುಭವಗಳನ್ನು ದಾಖಲಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸರು ಇವರ ಸಹೋದರರು. ಪ್ರಯೋಗಶೀಲರೂ ಸಾಹಸಿ ಚಿತ್ರೋದ್ಯಮಿಯೂ ಆಗಿದ್ದ ಇವರು 1982 ಮೇ 18ರಂದು ನಿಧನಹೊಂದಿದರು. (ಜಿ.ಎಂಯು.)

**ಕೆಂಪಣ್ಣಗೌಡ :** ಸು.1480. ಕನ್ನಡದ ಮೊದಲ ಯಕ್ಷಗಾನ ಕವಿ. ಕರಿರಾಯ ಚರಿತ್ರೆ, ನಳಚರಿತ್ರೆ, ಶನಿಚರಿತ್ರೆ ಎಂಬ ಯಕ್ಷಗಾನ ಕಾವ್ಯಗಳನ್ನು ಬರೆದಿದ್ದಾನೆ. ತಾನು ಅಂದೇನಪುರದ ಓದೋ ಕೆಂಪಯ್ಯನ ಮಗ ಎಂದು ಹೇಳಿಕೊಂಡಿದ್ದಾನೆ. ಈ ಅಂದೇನಪುರ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಲೋಕಪಾವನಿ ನದಿಯ ದಡದಲ್ಲಿರುವ ಈಗಿನ ಅಂದೇನಹಳ್ಳಿ. ಇವನ ತಾತ ಜೀರಿಗೆ ಕೆಂಪಯ್ಯ. ನಳಚರಿತ್ರೆಯ ಕೊನೆಯಲ್ಲಿ ದುರ್ಮತಿ ಸಂವತ್ಸರದ ಜೇಷ್ಠ ಬಹುಳ ಬುಧವಾರ ಮಧ್ಯಾಹ್ನದ ಕಾಲದ ಒಳಗೆ ಸಂಪೂರ್ಣಂ ಎಂದು ಹಸ್ತಪ್ರತಿಕಾರನೊಬ್ಬ ಹೇಳಿದ್ದಾನೆ. ಇದು 1480ಕ್ಕೆ ಸರಿಹೋಗುತ್ತದೆ. ಆದ್ದರಿಂದ ಕೆಂಪಣ್ಣಗೌಡ 15ನೇಯ ಶತಮಾನದ ಉತ್ತರಾರ್ಧದವನಾಗಿರಬೇಕು. ಇವನ ಕಾವ್ಯಗಳು ಆ ಹೊತ್ತಿಗೆ ಸಾಕಷ್ಟು ಪ್ರಸಿದ್ಧಿ ಪಡೆದಿದ್ದಿರಬೇಕು. ಇವನ ತಂದೆಯ ಹೆಸರು ಓದೋ ಕೆಂಪಯ್ಯ ಎಂದಿರುವುದರಿಂದ ಆತ ಕಾವ್ಯಗಳನ್ನು ಓದುವ ಗಮಕಿಯಾಗಿದ್ದಿರಬಹುದೆಂದು ಊಹಿಸಬಹುದು. ಕರಿರಾಯಚರಿತ್ರೆಯಲ್ಲಿ ಕೆಂಪಣ್ಣಗೌಡ ತನ್ನ ಬಗ್ಗೆ ಹೀಗೆ ಹೇಳಿಕೊಂಡಿದ್ದಾನೆ:

ಸೂಕ್ಷ್ಮದೊಳೀಕೃತಿ ಸುಲಭವಾಗಿರಲು
ಯಕ್ಷಗಾನವನು ಮಾಡಿದವರಾರೆನಲು

ಸವುಭಾಗ್ಯ ಸಕಲ ಗುಣ ಸಂಪನ್ನ
ಸುವಿವೇಕಿ ಕೆಂಪಯ್ಯನಾತನರ್ಧಾಂಗಿ

ಲಲನಾರತುನವೆಂಬ ತಿಮ್ಮಮಾಂಬ
ಸಲೆಗರ್ಭಾಬ್ಧಿ ಚಂದ್ರ ನೆರೆ ಜಾಣ

ಸುವಿವೇಕಿ ಕೆಂಪಣ್ಣಗೌಡನೀ ಕಥೆಯ
ಸವಿವರದೊಳು ಪೇಳಿದನು ತಾನು

ಸಕಲಕವಿಗಳಿಗೆ ಸಾಷ್ಟಾಂಗವೆರಗಿ
ಅಕಲಂಕ ಕನ್ನಡದಿ ಪೇಳಿದನು ಬಿನ್ನಾಣದಿಂದ

- ಮೇಲಿನ ಈ ಪದ್ಯ ಇವನ ಮೂರು ಕಾವ್ಯಗಳಲ್ಲೂ ಸಿಗುತ್ತದೆ.

ಈತ ರಚಿಸಿದ ಕರಿರಾಯಚರಿತ್ರೆ, ನಳಚರಿತ್ರೆ ಮತ್ತು ಶನಿಚರಿತ್ರೆ ಈ ಮೂರೂ ಕಾವ್ಯಗಳನ್ನು ಬಿಟ್ಟರೆ ಕನ್ನಡದಲ್ಲಿ ಮತ್ತಾವ ಯಕ್ಷಗಾನ ಕಾವ್ಯಗಳೂ ದೊರೆತಿಲ್ಲ. ಕರಿಭಂಟನ ಕಾಳಗ, ಯಕ್ಷಗಾನ ಪ್ರಸಂಗ ಬರೆದವನೆಂದೂ ಹದಿನೇಳನೆಯ ಶತಮಾನದಲ್ಲಿದ್ದವನೆಂದೂ ಕೆಂಪಣ್ಣಗೌಡನನ್ನು ಮೊದಲು ಗುರುತಿಸಲಾಗಿತ್ತು. ಆದರೆ ಕರಿರಾಯಚರಿತ್ರೆ, ನಳಚರಿತ್ರೆ, ಶನಿಚರಿತ್ರೆಗಳ ಮೂಲ ಓಲೆಯ ಪ್ರತಿಗಳು ಈ ಕಾವ್ಯಗಳು ನಮ್ಮ ಪ್ರಾಚೀನ ಶಿಷ್ಟಕಾವ್ಯ ಸಂಪ್ರದಾಯದ ಚಂಪೂ ರೀತಿಯ ದೇಶೀಯ ಕಾವ್ಯಗಳು ಎಂಬುದಕ್ಕೆ ಸಾಕ್ಷಿಯಾದವು. ಹಳಗನ್ನಡದ ಚಂಪೂವಿನಂತೆ ಇಲ್ಲಿಯೂ ಪದ್ಯಗಳ ಅನಂತರ ಗದ್ಯ ವಿವರಣೆ ಬರುತ್ತದೆ. ಈ ಗದ್ಯ ಭಾಗ ಯಕ್ಷಗಾನ ಪ್ರಸಂಗಗಳಲ್ಲಿ ಬರುವಂತಹ ಪಾತ್ರಗಳು ಆಡುವ ಮಾತುಗಳಲ್ಲ; ಇದೊಂದು ಕಾವ್ಯ ಸಂಪ್ರದಾಯವೇ ಆಗಿದೆ. ಈ ಮೂರೂ ಕಾವ್ಯಗಳನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಒಂದೇ ಸಂಪುಟದಲ್ಲಿ ಮುದ್ರಿಸಿ ಪ್ರಕಟಿಸಿದೆ. ಅಂದೇನಹಳ್ಳಿಯಲ್ಲಿ ಈಗಲೂ ಈತನ ವಂಶಸ್ಥರಿದ್ದಾರೆಂದು ತಿಳಿದುಬರುತ್ತದೆ. (ಎಚ್.ಕೆ.ಆರ್.ಜಿ.)

**ಕೆಂಪುನಾರಾಯಣ :** 19ನೆಯ ಶತಮಾನದ ಆದಿಭಾಗದಲ್ಲಿದ್ದ ಬ್ರಾಹ್ಮಣ ಕವಿ. ಮುದ್ರಾಮಂಜೂಷವು ಎಂಬ ಗದ್ಯಗ್ರಂಥದ ಕರ್ತೃ. ಈತ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಕವಿಯಾಗಿದ್ದ. ಮೂಲ ಹೆಸರು ನಾರಾಯಣಶರ್ಮ. ಕವಿಯಾಗಿ ಕೆಂಪುನಾರಾಯಣನೆಂದು ಪ್ರಸಿದ್ಧ.

ಮುದ್ರಾಮಂಜೂಷ ಗ್ರಂಥ'ದ ರಚನೆಯ ಕಾಲ 1823. ರಾಜತಂತ್ರನಿಪುಣನಾದ ಚಾಣಕ್ಯನೆಂಬ ಬ್ರಾಹ್ಮಣ ತನ್ನನ್ನು ಅವಮಾನಗೊಳಿಸಿದ ನವನಂದರನ್ನು ಕೊಂದು, ಚಂದ್ರಗುಪ್ತ ಮೌರ್ಯನನ್ನು ಮಗಧ ರಾಜ್ಯದ ಚಕ್ರವರ್ತಿಯಾಗಿ ಮಾಡಿದ ವಿಷಯ ಇದರ ಕಥಾವಸ್ತು. ವಿಶಾಖದತ್ತನ ಮುದ್ರಾರಾಕ್ಷಸ ಈ ಗ್ರಂಥರಚನೆಗೆ ಪ್ರಮುಖ ಆಧಾರ. ಮಹಾಭಾರತ, ಕ್ಷೇಮೇಂದ್ರನ ಬೃಹತ್ಕಥೆ, ಮಹದೇವನ ಮುದ್ರಾರಾಕ್ಷಸ ನಾಟಕ ಕಥಾ, ರವಿನರ್ತಕನ ಮುದ್ರಾರಾಕ್ಷಸ ಕಥಾಸಾರ ಮುಂತಾದ ಕೆಲವು ಗ್ರಂಥ'ಗಳಿಂದಲೂ ಈತ ನೆರವು ಪಡೆದಿದ್ದಾನೆ. ಆದರೂ ಈ ಕೃತಿ

ಭಾಷಾಂತರವಲ್ಲ, ಸ್ವತಂತ್ರ ಸೃಷ್ಟಿ. ಕಥೆಯಲ್ಲಿ ಕೆಲವು ಸ್ವತಂತ್ರ ಕಲ್ಪನೆಗಳನ್ನು ಸೇರಿಸಿದ್ದಾನೆ. ಮೂಲದಲ್ಲಿಯ ಕೆಲವನ್ನು ಬಿಟ್ಟಿದ್ದಾನೆ, ಮಾರ್ಪಾಟು ಮಾಡಿಕೊಂಡಿದ್ದಾನೆ. ವರ್ಣನೆಗಳಲ್ಲಿ ನೀತಿನಿರೂಪಣೆಗಳಲ್ಲಿ ಕವಿ ಬಾಣನ ಕಾದಂಬರಿಗೆ, ಶುಕ್ರನೀತಿ, ಕಾಮಂದಕ, ನೀತಿಸಾರಗಳಿಗೆ ಋಣಿಯಾಗಿದ್ದಾನೆ. ಇವನ ಗ್ರಂಥದ ಪೂರ್ವಾರ್ಧದ ಮೊದಲ ಭಾಗಗಳಲ್ಲಿ ಭರ್ತೃಹರಿಯ ನೀತಿಶತಕದಿಂದ, ಇತರ ಸುಭಾಷಿತ ಗ್ರಂಥಗಳಿಂದ ಆಯ್ದ ಕೆಲವು ಸಂಸ್ಕೃತ ಶ್ಲೋಕಗಳಿವೆ.

ಮುದ್ರಾಮಂಜೂಷದ ಪ್ರಧಾನ ರಸ ವೀರ. ಶೃಂಗಾರಕ್ಕೆ ಇಲ್ಲಿ ಎಡೆ ಇಲ್ಲ. ಅಲ್ಲಲ್ಲಿ ತಿಳಿಹಾಸ್ಯ ಮಿಂಚುತ್ತದೆ. ಕವಿಗೆ ವಾಚಕರ ಆಸಕ್ತಿ ಎಲ್ಲಿಯೂ ಕುಗ್ಗದಂತೆ ಕಥೆ ಹೇಳುವ ಜಾಣ್ಮೆಯಿದೆ. ಭಾಷಾಶೈಲಿ ಏಕರೂಪವಾಗಿಲ್ಲ. ಸಂಧಿಕಾಲದ ವಿಷಮತೆಯನ್ನೊಳಗೊಂಡಿದೆ. ಗದ್ಯ ಪ್ರೌಢವಾಗಿದ್ದರೂ ಲಲಿತವಾಗಿದೆ, ಜೀವಪೂರ್ಣವಾಗಿದ್ದು ಶಕ್ತಿಯುತವಾಗಿದೆ. ಸಂಸ್ಕೃತ ಭೂಯಿಷ್ಠವಾಗಿದ್ದರೂ ಸರಳವಾಗಿದೆ. ಕನ್ನಡದ ಗದ್ಯಸಾಹಿತ್ಯದ ಬೆಳೆವಣಿಗೆಯಲ್ಲಿ ಕೃತಿ ಒಂದು ವಿಶಿಷ್ಟ ಘಟ್ಟವನ್ನು ನಿರೂಪಿಸುತ್ತದೆ. ಗದ್ಯಗ್ರಂಥಗಳ ಸಾಲಿನಲ್ಲಿ ಈ ಕೃತಿಗೆ ಒಂದು ಮಹತ್ತ್ವದ ಸ್ಥಾನ ದೊರಕಿದೆ. (ಎಚ್.ಎಂ.ಎಸ್.)

**ಕೆಂಪೇಗೌಡ I** : ಯಲಹಂಕ ಪಾಳೆಯಗಾರ ವಂಶದ ಪ್ರಭು (ಸು.1513-69). ಬೆಂಗಳೂರನ್ನು ಸ್ಥಾಪಿಸಿ ಅಲ್ಲೇ ನೆಲಸಿದ್ದರಿಂದ ಬೆಂಗಳೂರು ಕೆಂಪೇಗೌಡ ಎಂದು ಪ್ರಸಿದ್ಧನಾಗಿದ್ದಾನೆ.

ಆವತಿ ವಂಶಕ್ಕೆ ಸೇರಿದ್ದ ಈತ ವಿಜಯನಗರದ ಕೃಷ್ಣದೇವರಾಯ ಮತ್ತು ಅಚ್ಯುತರಾಯರ ಸಾಮಂತನಾಗಿ ಯಲಹಂಕನಾಡನ್ನು ಆಳುತ್ತಿದ್ದ. ಒಮ್ಮೆ ತನ್ನ ಪ್ರವಾಸಕಾಲದಲ್ಲಿ ಶಿವನಸಮುದ್ರಂ (ಈಗಿನ ಬೆಂಗಳೂರು ಪ್ರದೇಶ) ಕೋಟೆಯ ರಚನೆಗೆ ಅನುಕೂಲವಾಗಿರುವುದನ್ನು ಕಂಡು ಅಚ್ಯುತರಾಯನ ಅನುಮತಿಯಿಂದ ಅಲ್ಲೊಂದು ದುರ್ಗ ನಿರ್ಮಾಣಮಾಡಿ ಬೆಂಗಳೂರು ಎಂದು ಕರೆದು ತನ್ನ ರಾಜಧಾನಿಯಾಗಿ ಮಾಡಿಕೊಂಡ (ಆದರೆ ಬೆಂಗಳೂರು ಇದಕ್ಕೂ ಮುಂಚಿನಿಂದಲೂ ಇತ್ತೆಂದೂ ಕೆಂಪೇಗೌಡ ಅಲ್ಲಿ ಕೋಟೆ ಕಟ್ಟಿರಬೇಕು ಎಂದೂ ಊಹಿಸಲು ಆಧಾರಗಳಿವೆ). ಇದೇ ಸಂದರ್ಭದಲ್ಲಿ ಅಚ್ಯುತರಾಯ 30,000 ವರಹ ಆದಾಯವಿದ್ದ ಹಳೆ ಬೆಂಗಳೂರು, ವರತೂರು, ಬೇಗೂರು, ಹಲಸೂರು, ಕೆಂಗೇರಿ, ತಲಗಟ್ಟಪುರ, ಜಿಗಣಿ, ಕುಂಬಳಗೋಡು, ಕಾನಳ್ಳಿ, ಬಾಣಾವರ, ಹೆಸರಘಟ್ಟ ಮುಂತಾದ 12 ಹೋಬಳಿಗಳನ್ನು (ಬೆಂಗಳೂರಿನ ಸುತ್ತಣ ಪ್ರದೇಶ) ಕೆಂಪೇಗೌಡನಿಗೆ ಕೊಟ್ಟ. ಈತ ಈ ಆದಾಯವನ್ನು ಉಪಯೋಗಿಸಿಕೊಂಡು ಬೆಂಗಳೂರನ್ನು ವಿಸ್ತರಿಸಿ, ಪೇಟೆಗಳನ್ನು ಸ್ಥಾಪಿಸಿ, ವ್ಯಾಪಾರಿಗಳನ್ನೂ ಕುಶಲಕರ್ಮಿಗಳನ್ನೂ ನೆಲೆಗೊಳಿಸಿದ. ಬೆಂಗಳೂರು ಕೋಟೆಯನ್ನು ಕಟ್ಟುವ ಸಂದರ್ಭದಲ್ಲಿ ಕೆಂಪೇಗೌಡನ ಸೊಸೆ ಲಕ್ಷ್ಮಮ್ಮ ತಾನೇ ಬಲಿಯಾದಳೆಂಬ ಪ್ರತೀತಿ ಇದೆ. ಕೆಂಪೇಗೌಡ ಅವಳ ಜ್ಞಾಪಕಾರ್ಥವಾಗಿ ಕೋರಮಂಗಲದಲ್ಲಿ ಒಂದು ದೇವಾಲಯವನ್ನು ಸ್ಥಾಪಿಸಿ ಅವಳ ಮೂರ್ತಿಯನ್ನು ಪ್ರತಿಷ್ಠಾಪಿಸಿದ. ಆ ನಗರದ ಬೆಳೆವಣಿಗೆಯ ಭವಿಷ್ಯ ಸೂಚಕವೆಂಬಂತೆ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ, ಪೂರ್ವದಲ್ಲಿ ಅಲಸೂರು ಕೆರೆಯ ಏರಿಯ ಮೇಲಿನ ಬಂಡೆಯ ಮೇಲೆ, ಪಶ್ಚಿಮದಲ್ಲಿ ಕೆಂಪಾಂಬುಧಿ ಕೆರೆಯ ಏರಿಯ ಬಂಡೆಯ ಮೇಲೆ, ಉತ್ತರದಲ್ಲಿ ಹೆಬ್ಬಾಳದ ರಸ್ತೆಯಲ್ಲಿ ಮತ್ತು ದಕ್ಷಿಣದಲ್ಲಿ ಲಾಲ್‌ಬಾಗಿನ ಎತ್ತರವಾದ ಬಂಡೆಯ ಮೇಲೆ ಒಂದೊಂದು ಕಾವಲು ಗೋಪುರಗಳನ್ನು ನಿರ್ಮಿಸಿದ.

1550ರಲ್ಲಿ ಇವನು ಶಿವಗಂಗೆ ಬೆಟ್ಟವನ್ನು ಆಕ್ರಮಿಸಿಕೊಂಡ. ಇವನ ಏಳಿಗೆ ಕೀರ್ತಿಗಳಿಂದ ಹಲವು ಸಾಮಂತರಿಗೆ ಅಸೂಯೆ ಉಂಟಾಯಿತು. ಇವರಲ್ಲಿ ಜಗದೇವರಾಯ ಎಂಬುವನು ಕೆಂಪೇಗೌಡನನ್ನು ತುಳಿಯಲು ಪಿತೂರಿ ಮಾಡಿದ. ವಿಜಯನಗರದ ಅರಸರಿಗೂ ಕೆಂಪೇಗೌಡನಿಗೂ ಇದ್ದ ಸ್ನೇಹವನ್ನು ಮುರಿಯಲೂ ಪ್ರಯತ್ನಿಸಿದ. ಕೆಂಪೇಗೌಡ ಜಗದೇವರಾಯನ ಪ್ರಲೋಭನಕ್ಕೆ ಒಳಗಾಗದೆ ವಿಜಯನಗರದ ಅರಸುಗಳ ಬಗ್ಗೆ ತನಗಿದ್ದ ರಾಜಭಕ್ತಿ ಅಚಲವಾದುದೆಂದು ತೋರಿಸಿದ. ಇದರಿಂದ ಕುಪಿತನಾದ ಜಗದೇವರಾಯ ವಿಜಯನಗರದ ರಾಮರಾಯ ರಾಜಧಾನಿಯಲ್ಲಿಲ್ಲದ ಕಾಲದಲ್ಲಿ ಅಲ್ಲಿಗೆ ಬಂದ ಕೆಂಪೇಗೌಡನನ್ನೂ ಅವನ ಸಂಗಡಿಗರನ್ನೂ ಸೆರೆಮನೆ ಸೇರುವಂತೆ ಮಾಡಿದ. ಜಗದೇವರಾಯನ ಮಾತನ್ನು ನಂಬಿದ ಸದಾಶಿವರಾಯ, ಯಲಹಂಕನಾಡನ್ನು ಜಗದೇವರಾಯನಿಗೆ ಕೊಟ್ಟ. 5 ವರ್ಷಗಳ ಕಾಲ ಕೆಂಪೇಗೌಡ ಸೆರೆಮನೆವಾಸವನ್ನನುಭವಿಸ ಬೇಕಾಯಿತು. ರಾಜಧಾನಿಗೆ ಹಿಂದಿರುಗಿದ ಅನಂತರ, ನಿಜಸ್ಥಿತಿಯನ್ನರಿತ ರಾಮರಾಯ ಕೆಂಪೇಗೌಡನನ್ನು ಬಿಡುಗಡೆ ಮಾಡಿ ಬೆಂಗಳೂರನ್ನು ಮತ್ತೆ ಅವನಿಗೆ ಕೊಟ್ಟು ಗೌರವಿಸಿ ಕಳುಹಿಸಿದ. ಕೆಂಪೇಗೌಡ ಪ್ರಜಾಪೋಷಕನಾಗಿ, ಧರ್ಮಪ್ರಭುವಾಗಿ ರಾಜ್ಯವಾಳಿ, ಪ್ರಜಾವತ್ಸಲ, ಅರಿಗಳಿಗೆ ಗಂಡಭೇರುಂಡ ಎಂಬ ಬಿರುದುಗಳನ್ನು ಪಡೆದ. ಈತ 1569ರಲ್ಲಿ ಕಾಲವಾದ.

ಶಿವಗಂಗೆಯ ಗಂಗಾಧರ ದೇವಾಲಯದಲ್ಲಿರುವ ಕೆಂಪೇಗೌಡನ ಕಂಚಿನ ಪ್ರತಿಮೆ

ಕೆಂಪೇಗೌಡ ಧರ್ಮಿಷ್ಠ. ಕುಲದೈವ ಭೈರವನಾದರೂ ಇವನ ಒಲುಮೆ ಶೈವಧರ್ಮದೆಡೆಗಿದ್ದಂತೆ ತೋರುತ್ತದೆ. ಈತ ಅನೇಕ ಜನಹಿತಕಾರ್ಯಗಳನ್ನು ಮಾಡಿದ. ತನ್ನ ಕುಲದಲ್ಲಿ ವಿವಾಹವಯಸ್ಕರಾದ ಕನ್ಯೆಯರ ಬೆರಳುಗಳನ್ನು

ಕತ್ತರಿಸುವ ಕ್ರೂರ ಸಂಪ್ರದಾಯವನ್ನು ನಿಲ್ಲಿಸಿದ. ತಾನು ಸ್ಥಾಪಿಸಿದ ಬೆಂಗಳೂರಿನ ಬಳಿಯಲ್ಲಿ ಕೆಂಪಾಂಬುಧಿ ಕೆರೆಯನ್ನಲ್ಲದೆ ಸಮೀಪದಲ್ಲಿ ಹಲವು ಅಗ್ರಹಾರಗಳನ್ನೂ ದೇವಾಲಯಗಳನ್ನೂ ನಿರ್ಮಿಸಿದ. ಬೆಂಗಳೂರಿನ ಗವಿಪುರದಲ್ಲಿರುವ ಗವಿ ಗಂಗಾಧರೇಶ್ವರ ದೇವಾಲಯ, ಬಸವನ ಗುಡಿಯಲ್ಲಿರುವ 11 ಅಡಿ ಎತ್ತರದ ವೃಷಭವಿರುವ ದೊಡ್ಡ ಬಸವಣ್ಣನ ಗುಡಿ, ಅದರ ಸಮೀಪದ ಗಣಪತಿ, ಆಂಜನೇಯ, ನಂದೀಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯ ಇವು ಈತನ ಕಾಲದ ರಚನೆಗಳು. ಇಷ್ಟೇ ಅಲ್ಲದೆ ಅಲಸೂರಿನ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡಿಸಿದ (ಬೆಂಗಳೂರಿನಲ್ಲಿ ಕೇಶವ ದೇವಾಲಯವೊಂದನ್ನು ಕಟ್ಟಿಸಿದ್ದನೆಂಬ ಪ್ರತೀತಿ ಇದೆ. ಇದು ಈಗ ಉಳಿದಿಲ್ಲ). ಮಾಗಡಿಯಲ್ಲೂ ದೇವಾಲಯಗಳ ಜೀರ್ಣೋದ್ಧಾರ ಮಾಡಿರುವನಲ್ಲದೆ ಅಲ್ಲಿ ಛತ್ರಗಳನ್ನು ಕಟ್ಟಿಸಿದ. ಕೆಂಪೇಗೌಡ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಭೈರವ ನಾಣ್ಯಗಳನ್ನು ಟಂಕಿಸಿದ. *

**ಕೆಂಪೇಗೌಡ II :** ಯಲಹಂಕ ಪಾಳೆಯಗಾರರ ವಂಶದ ಪ್ರಭು (ಸು.1578-1658). ಮಾಗಡಿ ಪ್ರಭುಗಳಲ್ಲಿ ಪ್ರಮುಖ. ಮೊದಲು ಬೆಂಗಳೂರಿನಿಂದ ಆಳುತ್ತಿದ್ದ ಈತ ಮಾಗಡಿ ಕೋಟೆಯನ್ನು ಅಭಿವೃದ್ಧಿಗೊಳಿಸಿ ಅಲ್ಲಿ ಪಟ್ಟಣವನ್ನು ನಿರ್ಮಿಸಿದ. 1623ರಲ್ಲಿ ವಿಜಯನಗರ ಸಮ್ರಾಟನ ಪರವಾಗಿ ಗುಡೇಮಾರನಹಳ್ಳಿಯ ತಳವಾರನಾದ ಗಂಗನಿಂದ ಸಾವನದುರ್ಗವನ್ನು ವಶಪಡಿಸಿಕೊಂಡನಲ್ಲದೆ ಸುತ್ತಣ ಹುಲಿಕಲ್ಲು, ಹುಲಿಯೂರುದುರ್ಗ, ಹುತ್ರಿದುರ್ಗ, ಭೈರನದುರ್ಗ, ಕುಣಿಗಲುಗಳನ್ನೂ ಗೆದ್ದ. ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಪ್ರತಿನಿಧಿ ಶ್ರೀರಂಗರಾಯನನ್ನು ಸೋಲಿಸಿ ಅಪಾರ ದ್ರವ್ಯ ಗಳಿಸಿದ. 1638ರಲ್ಲಿ ಈತ ಬಹಮನೀ ಸುಲ್ತಾನರ ಪ್ರತಿನಿಧಿ ರಣದುಲ್ಲಾಖಾನನಿಗೆ ಶರಣಾಗತನಾಗಬೇಕಾಗಿ ಬಂದು ಬೆಂಗಳೂರನ್ನು ಅವನಿಗೆ ಬಿಟ್ಟು, ತನ್ನ ರಾಜಧಾನಿಯನ್ನು ಮಾಗಡಿಗೆ ವರ್ಗಾಯಿಸಿಕೊಂಡ. ಈ ಕಾರಣದಿಂದ ಇವನಿಗೆ ಮಾಗಡಿ ಕೆಂಪೇಗೌಡ ಎಂದೇ ಹೆಸರಾಯಿತು.

ಕೆಂಪೇಗೌಡ ಅನೇಕ ದೇವಾಲಯಗಳ, ಹಳ್ಳಿಗಳ ಮತ್ತು ಕೆರೆಗಳ ನಿರ್ಮಾಪಕ. ಬೆಂಗಳೂರಿನ ಬಳಿ ಕೆಂಪಾಪುರ ಅಗ್ರಹಾರ, ಹೆಸರಘಟ್ಟದ ಬಳಿ ವರಕಂಡಾಪುರದ ಅಗ್ರಹಾರ ಮತ್ತು ಸಾವನದುರ್ಗದ ಬಳಿಯ ನೆಲಪಟ್ಟಣ, ಬೆಂಗಳೂರಿನ ಈಗಿನ ಬಿನ್ನಿ ಮಿಲ್ಲಿನ ಕೆರೆ ಮತ್ತು ಕಾರಂಜಿಕೆರೆ -ಇವು ಇವನ ಕಾಲದ ರಚನೆಗಳು. ಬೆಂಗಳೂರಿನ ಅಲಸೂರುಪೇಟೆ ಸೋಮೇಶ್ವರ ದೇವಾಲಯದ ಭಿತ್ತಿಗಳ ಮೇಲೆ ಇವನು ಗಿರಿಜಾಕಲ್ಯಾಣದ ಶಿಲ್ಪಗಳನ್ನು ಕೆತ್ತಿಸಿದ. ಮಾಗಡಿ ರಂಗನಾಥ ದೇವಾಲಯವನ್ನು ಅಭಿವೃದ್ಧಿಪಡಿಸಿದ. ಮಾಗಡಿಯ ಸೋಮೇಶ್ವರ ದೇವಾಲಯವನ್ನು ಪೂರ್ಣಗೊಳಿಸಿದ್ದೂ ಈತನ ಪ್ರಮುಖ ಸಾಧನೆಗಳಲ್ಲೊಂದು. *

**ಕೆಂಭಾವಿ :** ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಒಂದು ಗ್ರಾಮ. ಹೋಬಳಿ ಕೇಂದ್ರ. ಸುರಪುರದ ವಾಯುವ್ಯಕ್ಕೆ 29ಕಿಮೀ ಅಂತರದಲ್ಲಿದೆ. ಇಲ್ಲಿ ರೇವಣಸಿದ್ಧೇಶ್ವರ ಮತ್ತು ಭೋಗಣ್ಣನ ದೇವಾಲಯಗಳಿವೆ. ಬಹಮನೀ ಸುಲ್ತಾನರ ಅನೇಕ ಸ್ಮಾರಕಗಳೂ ಇರುವುವಲ್ಲದೆ ಸುತ್ತಿನ ಜನ ಪವಿತ್ರವೆಂದು ಪರಿಗಣಿಸುವ ಕೆಲವು ಮುಸ್ಲಿಮ್ ಸಮಾಧಿಗಳಿವೆ. ಇಲ್ಲಿ ಪ್ರತಿ ಸೋಮವಾರ ಸಂತೆಯಾಗುತ್ತದೆ. ಸುಪ್ರಸಿದ್ಧ ವಚನಕಾರ ಭೋಗಣ್ಣ ಈ ಊರಿನವನು. ತಾಳಿಕೋಟೆಯ ಶಾಸನದಲ್ಲಿ (1184) ಈ ಊರಿನ ಹೆಸರಿನ ಉಲ್ಲೇಖವಿದೆ. ಇಲ್ಲಿ ಸಿಕ್ಕಿರುವ ಕೆಲವು ಶಾಸನಗಳಿಂದ ಇದೊಂದು ಜೈನ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಬಿಜಾಪುರದ ಸುಲ್ತಾನ ವಿಜಯನಗರದ ಕೃಷ್ಣದೇವರಾಯನೊಡನೆ ಯುದ್ಧದಲ್ಲಿ ಸೋತಿದ್ದು ಇಲ್ಲಿಯೆ. (ಎಸ್.ಎಸ್.ಬಿ.)

**ಕೆಂಭಾವಿಯ ಭೋಗಣ್ಣ :** ಪುರಾತನ ವಚನಕಾರರಲ್ಲೊಬ್ಬ. ದೇವರ ದಾಸಿಮಯ್ಯ ತನ್ನ ವಚನಗಳಲ್ಲಿ ಕೆಂಭಾವಿಯ ಭೋಗಯ್ಯನ ಹಿಂದಾಡಿಹೋದ ...... ನಂಬದೆ ಕರೆದವರ ಹಂಬಲನೊಲ್ಲ ನಮ್ಮ ರಾಮನಾಥ ಎಂದಿರುವುದರಿಂದ ಈತ ದಾಸಿಮಯ್ಯನಿಗಿಂತ ಪ್ರಾಚೀನನೆಂದು ಊಹಿಸಲಾಗಿದೆ. ಇವನನ್ನು ಕುರಿತು ಹರಿಹರ ಒಂದು ರಗಳೆಯನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಗುಲ್ಬರ್ಗ ಜಿಲ್ಲೆಯ ಕೆಂಭಾವಿಯ ಶಿವಪುರದಲ್ಲಿ ಈತ ವಾಸವಾಗಿದ್ದನೆಂದೂ, ಶಿವಭಕ್ತರೆಲ್ಲ ಒಂದೇ ಕುಲದವರು ಎಂದು ನಂಬಿದ್ದ ಇತರ ಎಲ್ಲ ಕುಲದವರನ್ನು 'ಗೋಜಾಗತ' ಮಾಡಲು, ಇದನ್ನು ಸಹಿಸದ ಬ್ರಾಹ್ಮಣರೂ ಆ ಊರಿನ ರಾಜ ಚಂದಿಮರಸನಿಗೆ ದೂರಿತ್ತರೆಂದೂ ಆಗ ಅವನು ಭೋಗಣ್ಣನನ್ನು ಊರಿನಿಂದ ಹೊರಕ್ಕೆ ಕಳಿಸಿದಾಗ ಊರಲ್ಲಿದ್ದ ಲಿಂಗಗಳೂ ಭೋಗಣ್ಣನ ಹಿಂದೆ ಕುಣಿಯುತ್ತ ಹೋದವೆಂದೂ, ಇವನ ಮಹಿಮೆಯನ್ನು ಕಣ್ಣಾರೆ ಕಂಡ ಬ್ರಾಹ್ಮಣರು ರಾಜನ ಮೊರೆಹೊಕ್ಕು ಇವನನ್ನು ಹಿಂದಕ್ಕೆ ಕರೆಸಿಕೊಂಡರೆಂದೂ ಪ್ರತೀತಿ.

ಕನ್ನಡ ಸಾಹಿತ್ಯದಲ್ಲಿ ಭೋಗಣ್ಣ ಎಂಬ ಹೆಸರಿನ ಇಬ್ಬರು ವಚನಕಾರರು ಕಂಡುಬರುತ್ತಾರೆ. ನಿಜಗುರುಭೋಗಸಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನರಚನೆ ಮಾಡಿದವನೊಬ್ಬ. ಚೆನ್ನಬಸವಣ್ಣ ಪ್ರಿಯ ಭೋಗಮಲ್ಲಿಕಾರ್ಜುನ ಲಿಂಗ ಎಂಬ ಅಂಕಿತವನ್ನು ಹೊಂದಿ ಸು.102 ವಚನಗಳನ್ನು ಬರೆದ ಪ್ರಸಾದ ಭೋಗಣ್ಣ ಇನ್ನೊಬ್ಬ. ಕನ್ನಡ ಸಾಹಿತ್ಯದಲ್ಲಿ ನಿಜಗುರು ಭೋಗೇಶ್ವರ ಎಂಬ ಅಂಕಿತವುಳ್ಳ ಕೆಲವು ವಚನಗಳು ಕಂಡುಬರುವುದರಿಂದ, ಈ ವಚನಗಳು ಕೆಂಭಾವಿ ಭೋಗಣ್ಣನ ವಚನಗಳಿರಬೇಕೆಂದೂ ಈತ ಒಬ್ಬ ಪ್ರಸಿದ್ಧ ವಚನಕಾರನಾಗಿದ್ದಿರಬಹುದೆಂದೂ ಊಹಿಸಬಹುದಾಗಿದೆ. (ಎಂ.ಎಚ್.ಕೆ.)

**ಕೆಕ್ಕಾರ :** ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ಊರು. ಹೊನ್ನಾವರದಿಂದ 15ಕಿಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಕೆಕ್ಕಾರ ಮಠವಿದೆ. ಲಕ್ಷ್ಮೀನರಸಿಂಹ, ವಿಷ್ಣು, ವಿನಾಯಕ ಮತ್ತು ಅಮ್ಮನವರ ಗುಡಿಗಳಿವೆ. ವಿಜಯನಗರ ಕಾಲದ ವಿಷ್ಣು ವಿಗ್ರಹ ಮತ್ತು ಅನೇಕ ಸಮಾಧಿಗಳು ಕೆಕ್ಕಾರ ಮಠದ ಸಮೀಪದ ಕೆರೆಯ ಬಳಿ ಇವೆ. ಇಲ್ಲಿನ ಮಠ ಹವ್ಯಕ ಬ್ರಾಹ್ಮಣರ ಮಠವಾಗಿದ್ದು ದೊಡ್ಡ ವ್ಯವಸ್ಥೆ ಹೊಂದಿದೆ. ಇಲ್ಲಿ ರಾಮಚಂದ್ರ ಭಾರತಿಯವರ ಸಮಾಧಿ ಇದೆ. ರಾಮನವಮಿಯಲ್ಲಿ ಇಲ್ಲಿ ಜಾತ್ರೆ ಸೇರುತ್ತದೆ.

ದುರ್ಗಾಪರಮೇಶ್ವರಿ ದೇವಾಲಯವನ್ನು ಸ್ಥಳೀಯರು ಅಮ್ಮನವರ ಗುಡಿ ಎಂದು ಕರೆಯುತ್ತಾರೆ. ಇದಕ್ಕೆ ಗರ್ಭಗುಡಿ ಇದೆ. ಪ್ರಾಕಾರದಲ್ಲಿ ಒಂದು ಸ್ತಂಭ ಇದೆ. ಮುಖಮಂಟಪದ ಎರಡು ಸ್ತಂಭಗಳಲ್ಲಿ ವಿವಿಧ ಬಗೆಯ ಚಿತ್ರಗಳನ್ನೂ ರಾಮಾಯಣದ ಘಟನೆಗಳನ್ನೂ ಚಿತ್ರಿಸಲಾಗಿದೆ. ಇಲ್ಲಿನ ಕಂಬದ ಮೇಲೊಂದು ಶಾಸನವಿದೆ (1078). ಮಹಾಸಾಮಂತಾಧಿಪತಿ ಪ್ರಚಂಡ ದಂಡನಾಯಕನೊಬ್ಬ ಗೋಕರ್ಣದಲ್ಲಿ ಮರಣ ಹೊಂದಿದ ವಿಚಾರವನ್ನು ತಿಳಿಸುತ್ತದೆ.

ಇನ್ನೊಂದು ವೀರಗಲ್ಲು ಕವಡೇವರಸ ದೇಗುಲದಲ್ಲಿದೆ. ಇದು ಹೊನ್ನಾವರಪುರದ ಕವಡೇವರಸ ಮತ್ತು ಗೋಕರ್ಣದ ಅಧಿಪತಿಯ ನಡುವೆ ನಡೆದ ಯುದ್ಧದಲ್ಲಿ ಮಡಿದ ವೀರನಿಗಾಗಿ ನಿಲ್ಲಿಸಿದ್ದು. ಮಹಾಸತಿ ದೇವಾಲಯದಲ್ಲಿ 978ರ ಶಾಸನ ದೊರೆತಿದ್ದು ಅದರಲ್ಲಿ ಕೈಕೇಯ ಅರಸುಗಳ ಉಲ್ಲೇಖವಿದೆ. ಇನ್ನೊಂದು ಶಾಸನ ಹಳೆಮಠದ ಹಿತ್ತಲಿನಲ್ಲಿದೆ. ಇದರಲ್ಲಿ ಅರೆಕಾಲ ಪರಮೇಶ್ವರಿ ಮೂರ್ತಿ ಇದೆ. ಇದನ್ನು ಪೂಜಿಸುತ್ತಾರೆ. ಇದು 8ನೆಯ ಶತಮಾನಕ್ಕೆ ಸೇರಿದ್ದು ಇದರಲ್ಲಿ ಕೆಲವು ವ್ಯಕ್ತಿಗಳ ಉಲ್ಲೇಖಗಳಿವೆ. ಆವರಣದೊಳಗೆ ಹುಲಿದೇವರ ಗುಡಿಯಿದೆ. ಇಲ್ಲಿ ಮಠದ ಹೆಸರಲ್ಲಿ ರಾಮನವಮಿಯಂದು ಜಾತ್ರೆ ನಡೆಯುತ್ತದೆ. ಸಮೀಪದ ಬೀರೇದೇವರ ಹೆಸರಿನಲ್ಲಿ ಜಾತ್ರೆ ಸೇರುತ್ತದೆ. ಆಗ ಕೆಂಡಕೊಂಡ ನಡೆಯುತ್ತದೆ. (ಎಸ್.ಎಚ್ಇ.)

**ಕೆದಂಬಾಡಿ ಜತ್ತಪ್ಪ ರೈ :** 1916-2003. ಕನ್ನಡದಲ್ಲಿ ಬೇಟೆ ಸಾಹಿತ್ಯವನ್ನು ಸೃಷ್ಟಿಸಿ ಬೇಟೆಯ ನೆನಪುಗಳು ಎಂಬ ಕೃತಿಯನ್ನು ರಚಿಸಿದ ಮೃಗಯಾ ಸಾಹಿತಿ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಪಾಣಾಜೆ ಗ್ರಾಮದ ಕೆದಂಬಾಡಿಯಲ್ಲಿ 1916 ಫೆಬ್ರವರಿ 11ರಂದು ಜನಿಸಿದರು. ಇವರ ತಂದೆ ಮುಂಡ್ರಾಡಿ ಪಿಲಿಮಜಲು ದಾಸ ರೈ, ತಾಯಿ ಕೆದಂಬಾಡಿ ಸೀತಮ್ಮ.

ಪ್ರಾರಂಭದಲ್ಲಿ ಮರ್ಧಾಳ ಮತ್ತು ಬೆಳ್ಳಾರೆ ಪ್ರಾಥಮಿಕ ಶಾಲೆಯಲ್ಲಿ, ಬಳಿಕ ಪುತ್ತೂರು ಬೋರ್ಡು ಹೈಸ್ಕೂಲಿನಲ್ಲಿ, ಮುಂದೆ ಪೆರಡಾಲದ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು. ಮಂಗಳೂರು ಸರಕಾರಿ ಕಾಲೇಜಿನಲ್ಲಿ ಕನ್ನಡ ವಿದ್ವಾನ್ ಪ್ರವೇಶ ಪರೀಕ್ಷೆ

ತೆಗೆದುಕೊಂಡು ಮದರಾಸು ಪ್ರಾಂತ್ಯದಲ್ಲೇ ಮೊದಲ ಸ್ಥಾನ ಪಡೆದು ಉತ್ತೀರ್ಣರಾದರೂ ಓದು ಮುಂದುವರಿಸದೆ ಊರಿಗೆ ಮರಳಿದರು.

ಹಳ್ಳಿಗೆ ಬಂದು ಮಣ್ಣಿನ ಮಗನಾಗಿ, ಕೃಷಿಕನಾಗಿ, ಹಂದಿ, ಕೋಳಿ ಸಾಕಣೆ, ಬೇಟೆ, ಕಂಬಳ, ಕೋಳಿಕಟ್ಟು, ಸಾಹಿತ್ಯ, ಸಂಗೀತ, ಯಕ್ಷಗಾನ, ಪುಸ್ತಕ ಪಠಣ, ಕಾವ್ಯವಾಚನ, ಒಳಾಂಗಣ ಆಟಗಳು, ಬಾಲ್ ಬ್ಯಾಡ್ಮಿಂಟನ್, ಪಂಚಾಯತಿಕೆ, ಪಾಕಶಾಸ್ತ್ರ ಮೊದಲಾದ ಕೂಟಗಳಲ್ಲಿ ಸಮೃದ್ಧ ಜೀವನದ ಆರು ದಶಕಗಳನ್ನು ಕಳೆದರು. ಆದರೆ ಈ ಬೇಟೆಗಾರ ಬಂಟನಲ್ಲಿ ಓರ್ವ ಸೃಜನಶೀಲ ಬರೆಹಗಾರ ಮರೆಯಾಗಿದ್ದ ಎಂಬುದು ಬೆಳಕಿಗೆ ಬಂದದ್ದು ತುಂಬ ತಡವಾಗಿ. ಬಹುಶಃ ಕನ್ನಡದಲ್ಲಿ ಬೇಟೆ ಸಾಹಿತ್ಯ ಬರೆದವರಲ್ಲಿ ಜತ್ತಪ್ಪ ರೈಗಳು ಅಗ್ರ ಪಂಕ್ತಿಯವರು. 'ಬೇಟೆಯ ನೆನಪುಗಳು' (1978) ಇವರ ಚೊಚ್ಚಲ ಕೃತಿ. ಈ ಕೃತಿ ಕನ್ನಡ ಓದುಗ ಪ್ರಪಂಚವನ್ನು ಅಯಸ್ಕಾಂತದಂತೆ ಸೆಳೆಯಿತು. ಕುವೆಂಪು ಅವರ ಬರೆಹಗಳಲ್ಲಿ ಇಣುಕಿದ ಬೇಟೆಯ ಅನುಭವ ರೈ ಅವರಲ್ಲಿ ವಿಶ್ವರೂಪದರ್ಶನವನ್ನೇ ಮಾಡಿಸಿತು. ಹೀಗೆ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟ ರೈಗಳು ಮತ್ತೆ ತಿರುಗಿ ನೋಡಿದ್ದೇ ಇಲ್ಲ. ಈ ಪ್ರೇರಣೆಯಲ್ಲೇ 'ಈಡೊಂದು ಹುಲಿಯೆರಡು' (1979), 'ಬೇಟೆಯ ಉರುಳು' (1982), 'ಬೆಟ್ಟದ ತಪ್ಪಲಿನಿಂದ ಕಡಲ ತಡಿಗೆ' (1988) ಎಂಬ ಕೃತಿಗಳನ್ನು ಪ್ರಕಟಿಸಿ ಕನ್ನಡದ ಜಿಮ್ ಕಾರ್ಬೆಟ್ ಎಂದು ಮನೆಮಾತಾದರು. ಈ ಕೃತಿಗಳನ್ನು ಓದುತ್ತಿದ್ದರೆ ಕಳೆದುಹೋದ ಕಾಲಖಂಡದ ಬದುಕು ಮನಃಪಟಲದ ಮೇಲೆ ವರ್ಣರಂಜಿತವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಇವರ ಈ ಕೃತಿಗಳು ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಮಂತ ಜನಪದ ಬದುಕಿನ ಹಗೇವುಗಳಾಗಿವೆ. ಕರ್ಮಯೋಗಿ ಬೆಳ್ಳಾರೆ ನಾರಾಯಣ ಶೇಕ (1984), ತಲೆಬುರುಡೆ ಬಿಡಿಸಿದ ಕೊಲೆ ರಹಸ್ಯ (ಅನುವಾದ 1994). ಇವು ಇವರು ರಚಿಸಿದ ಇನ್ನೆರಡು ಕನ್ನಡ ಕೃತಿಗಳು.

ತುಳುವಿನಲ್ಲಿ ಒಳ್ಳೆಯ ಸಾಹಿತ್ಯ ಕೃತಿಗಳು ರಚನೆಯಾಗಿಲ್ಲ ಎಂಬ ಅಪವಾದವಿದ್ದ ಕಾಲಕ್ಕೆ ಕನ್ನಡದ ಪ್ರಸಿದ್ಧ ಕವಿ ಸಾಹಿತಿಗಳ ಹಾಗೂ ಭಾರತೀಯ ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಕೃತಿಗಳನ್ನು ತುಳುವಿಗೆ ಅನುವಾದಿಸಿ, ತುಳು ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಇವರು ಮೊದಲಿಗರು. ಅನೇಕ ಸುಭಾಷಿತಗಳನ್ನು ತುಳು ಭಾಷೆಗೆ ರೂಪಾಂತರಗೊಳಿಸಿದ್ದಾರೆ. ತುಳುತ್ತಪೊರ್ಲು (1982) ಎಸ್.ವಿ.ಪರಮೇಶ್ವರ ಭಟ್ಟರ ಇಂದ್ರಚಾಪ. ಸಂಸ್ಕೃತ ಸುಭಾಷಿತಗಳು ಮತ್ತು ದಾಸರ ಹಾಡುಗಳನ್ನು ಅಜ್ಜಬಿರು (1982) ಎಂದೂ, ಡಿ.ವಿ.ಜಿ. ಅವರು ಕನ್ನಡಕ್ಕೆ ಅನುವಾದಿಸಿದ ಉಮರ್ ಖಯ್ಯಾಮನ ರುಬಾಯತ್‌ಗಳನ್ನು ಕುಜಲಿ ಪೂಜೆ' (1989) ಎಂದೂ, ಆಂಗ್ಲಕವಿ ಬ್ರೌನಿಂಗನ ದಿ ಪೈಡ್ ಪೈಪರ್ ಆಫ್ ಹ್ಯಾಮಲಿನ್ ಹಾಗೂ ಕುವೆಂಪುರವರ ಬೊಮ್ಮನ ಹಳ್ಳಿಯ ಕಿಂದರಜೋಗಿ'ಯನ್ನು 'ಅಸನಿಯಾಗೊ ಕಾಂತಗಜೋಗಿ' (1994) ಎಂದೂ ತುಳುವಿಗೆ ತಂದುಕೊಟ್ಟಿದ್ದಾರೆ. ಈ ಸಂಕಲನಗಳು ತುಳು ಕವಿತೆಯ ಸೊಗಸನ್ನೂ ಇವರ ಅನುವಾದ ಸಾಮರ್ಥ್ಯವನ್ನೂ ಎತ್ತಿ ತೋರಿಸುತ್ತವೆ.

ಪಡಿಲಿ ಪಂಪೆ (1982, ಎಂ.ಆರ್.ಶ್ರೀ. ಅವರ ನಾಗರಿಕ), ಯಮನ ಸೋಲು (1982, ಕುವೆಂಪು ಅವರ ಯಮನ ಸೋಲು), ತುಳು ಕಾಬೂಲಿವಾಲ (1986, ಠಾಕೂರರ ಕಾಬೂಲಿವಾಲ ಕತೆ), ಸೂದ್ರೆ ಏಕಲವ್ಯ (1986, ಕುವೆಂಪು ಅವರ ಬೆರಳ್ಗೆ ಕೊರಳ್ ಹಾಗೂ ಗೋವಿಂದ ಪೈಗಳ ಹೆಬ್ಬೆರಳು) ಈ ನಾಲ್ಕು ನಾಟಕಗಳು ಕೆದಂಬಾಡಿಯವರ ತುಳು ರೂಪಾಂತರಗಳು.

'ತುಳು ಚೋಮನದುಡಿ' (1983, ಶಿವರಾಮ ಕಾರಂತರ ಚೋಮನದುಡಿ) ಮದಪ್ಪಂದಿ ನೆಂಪು (1984, ನಿರಂಜನರ ಚಿರಸ್ಮರಣೆ), ಸಿರಿ ರಾಮಾಶ್ವಮೇಧ (1988, ಮುದ್ದಣನ ಶ್ರೀರಾಮಾಶ್ವಮೇಧ) ಸೊಗಸಾದ ತರ್ಜುಮೆಗಳಾಗಿದೆ.

ಶೃಂಗಾರಶಯ್ಯ, ಜ್ವಾಲಾಮುಖಿ ಎಂಬ ಕನ್ನಡ ಕಾದಂಬರಿಗಳನ್ನೂ, ತುಳು ಭಗವದ್ಗೀತೆಯನ್ನೂ ಅಳಿಕೆ ರಾಮಯ್ಯ ರೈ ಜೀವನಚರಿತ್ರೆಯನ್ನೂ ಇವರು ರಚಿಸಿದ್ದಾರೆ. ತಬ್ಬಲಿ (ಕೃತಿಕಾರನ ಬದುಕು ಬರೆಹ) ಎಂಬ ಕೃತಿಯನ್ನೂ ರಚಿಸಿರುವುದಾಗಿ ತಿಳಿದುಬರುತ್ತದೆ. ಇವು ಪ್ರಕಟವಾಗಿಲ್ಲ.

ಸಹಜ ಕಸುವು ತುಂಬಿದ ತುಳ್ಳು ಭಾಷೆಯ ಬನಿ, ಬಿಗಿ, ಚೆಲುವುಗಳನ್ನು ಹೊಮ್ಮಿಸುವ ಕೃತಿಗಳನ್ನು ನೀಡಿದ ಕೆದಂಬಾಡಿಯವರು ಉತ್ತಮ ವಾಗ್ಮಿ ಮತ್ತು ಸಂಭಾಷಣ ಪಟು. ತಾಳಮದ್ದಲೆ ಕೂಟಗಳಲ್ಲಿ ಇವರು ಒಳ್ಳೆಯ ಅರ್ಥಧಾರಿಗಳೂ ಆಗಿದ್ದರೆಂದು ಹೇಳಲಾಗಿದೆ. ಇವರ ವ್ಯಕ್ತಿತ್ವದ ಉಲ್ಲಾಸಪ್ರವೃತ್ತಿ ಇತರರಿಗೆ ಸ್ಫೂರ್ತಿದಾಯಕವಾಗಿರುತ್ತಿತ್ತು.

ಇವರಿಗೆ ಅನೇಕ ಸನ್ಮಾನ, ಪ್ರಶಸ್ತಿ, ಗೌರವಗಳು ದೊರಕಿವೆ. ಇವರು ಪುತ್ತೂರು ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮೊತ್ತ ಮೊದಲ ಗೌರವ ಪ್ರಶಸ್ತಿ ಇವರಿಗೆ ಲಭ್ಯವಾಗಿತ್ತು (1995). ಇವರ ಅಸನಿಯಾಗೊ ಕಾಂತಗಜೋಗಿ ಎಂಬ ಕೃತಿಗೆ ಪುಸ್ತಕ ಬಹುಮಾನ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ ಪ್ರಶಸ್ತಿ (1997), ಪೊಳಲಿ ಶೀನಪ್ಪ ಹೆಗ್ಗಡೆ ಪ್ರಶಸ್ತಿ ಲಭಿಸಿದ್ದವು. ಇವರ 'ಬೇಟೆಯ ನೆನಪುಗಳು' ಭಾರತದ 12 ಭಾಷೆಗಳಲ್ಲಿ ಭಾಷಾಂತರವಾಗಿದೆ. ಈ ಕೃತಿಯನ್ನು ನ್ಯಾಷನಲ್ ಬುಕ್ ಟ್ರಸ್ಟ್‌ಗಾಗಿ ರೆಮಿನಿಸೆನ್ಸಸ್ ಆಫ್ ಎ ಹಂಟರ್ ಎಂಬುದಾಗಿ ಸಿ.ಎನ್.ರಾಮಚಂದ್ರನ್ ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ (1999). ಇವರಿಗೆ ಮೃಗಯಾ ಸಾಹಿತ್ಯ ನಿರ್ಮಾತೃ, ತುಳು ಭಾಷಾ ಭೀಷ್ಮ ಮೊದಲಾದ ಬಿರುದುಗಳು ಬಂದಿವೆ. ಇವರು 2003 ಜೂನ್ 22ರಂದು ನಿಧನಹೊಂದಿದರು. (ವಿ.ಎನ್.)

**ಕೆಮ್ಮಣ್ಣುಗುಂಡಿ** : ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿರುವ ಗಿರಿಧಾಮ. ಕಲ್ಲತ್ತಗಿರಿಯ ಸಮೀಪದಲ್ಲಿದೆ.

ಹಿಂದೆ ಕೆಮ್ಮಣ್ಣುಗುಂಡಿ ಮತ್ತು ಕಲ್ಲತ್ತಗಿರಿಗಳು ಕಾಫಿ ತೋಟದ ಯುರೋಪಿಯನರಿಗೆ ಬೇಸಗೆಯ ಗಿರಿಧಾಮಗಳಾಗಿದ್ದವು. ಕಲ್ಲತ್ತಗಿರಿಯ (1,876ಮೀ) ಉತ್ತರದಲ್ಲಿ ಯುರೋಪಿಯನರು ಕಟ್ಟಿಸಿದ ಬಂಗಲೆಗಳಿವೆ.

ಗಿರಿಧಾಮ, ಕೆಮ್ಮಣ್ಣುಗುಂಡಿ

ಇವನ್ನೆಲ್ಲ ಉಪಯೋಗಿಸಿಕೊಂಡು ಇಲ್ಲಿ ಉತ್ತಮ ಗಿರಿಧಾಮವನ್ನು ರೂಪಿಸಲಾಗಿದೆ. ಸುಲಭ ರಸ್ತೆ ಸಂಪರ್ಕ, ತಂಪಾದ ಹವೆ, ನೈಸರ್ಗಿಕ ಸೌಂದರ್ಯ, ಆಧುನಿಕ ಅನುಕೂಲತೆಗಳು -ಇವುಗಳಿಂದ ಕೆಮ್ಮಣ್ಣುಗುಂಡಿ ವಿಶ್ರಾಂತಿಧಾಮವಾಗಿದೆ. ಇಲ್ಲಿನ ಹೆಬ್ಬೆ ಜಲಪಾತ ಪ್ರವಾಸಿಗಳನ್ನು ಆಕರ್ಷಿಸುತ್ತದೆ. (ವಿ.ಜಿ.ಕೆ.)

ಕಲ್ಲತ್ತಗಿರಿ ಮತ್ತು ಕೆಮ್ಮಣ್ಣುಗುಂಡಿ ಭಾಗಗಳಲ್ಲಿ ಕಬ್ಬಿಣದ ಅದಿರು ಅಧಿಕವಾಗಿದೆ. ಎಂ.ವಿಶ್ವೇಶ್ವರಯ್ಯನವರು ಇದನ್ನು ಬಳಸಿಕೊಳ್ಳುವ ಯೋಜನೆಯನ್ನು ರೂಪಿಸಿದರು. ಇಲ್ಲಿಯ ಅದಿರನ್ನು ಭದ್ರಾವತಿಯ ಕಬ್ಬಿಣದ ಕಾರ್ಖಾನೆಗೆ ರವಾನಿಸುವ ವ್ಯವಸ್ಥೆಯಾಯಿತು (1918). ಈಗ

ಹೆಬ್ಬೆ ಜಲಪಾತ

ಆಧುನಿಕ ಯಂತ್ರಗಳ ಸಹಾಯದಿಂದ ಕಬ್ಬಿಣದ ಗಣಿಗಾರಿಕೆಯ ಕಾರ್ಯ ಮುಂದುವರಿದಿದೆ. *

**ಕೆರೂರ ವಾಸುದೇವಾಚಾರ್ಯ :** 1866-1921. ಸಾಹಿತಿ, ಪತ್ರಿಕೋದ್ಯಮಿ. ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ ಎಂದು ಎನಿ ಸಿರುವ ಇಂದಿರೆಯ (1908) ಕರ್ತೃ. ಬಿಜಾಪುರ ಜಿಲ್ಲೆಯ ಬಾಗಲ ಕೋಟೆಯಲ್ಲಿ (ಈಗ ಜಿಲ್ಲೆ) ಜನಿಸಿದರು. ಧಾರವಾಡದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ, ಪ್ರೌಢಶಿಕ್ಷಣಕ್ಕಾಗಿ ಪುಣೆಯ ಫರ್ಗ್ಯೂಸನ್ ಕಾಲೇಜಿಗೆ ಸೇರಿದರಾದರೂ ಮಧ್ಯದಲ್ಲಿಯೇ ಕಾಲೇಜನ್ನು ಬಿಟ್ಟರು. ಖಾಸಗಿಯಾಗಿ ವ್ಯಾಸಂಗ ಮಾಡಿ ಆಗಿನ ಎಚ್.ಪಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ (1888) ಬಾಗಲಕೋಟೆಯಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು. ಜೊತೆಗೆ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ತೊಡಗಿದ್ದರು. ಉತ್ತರ ಕರ್ನಾಟಕದ ಸಾಂಸ್ಕೃತಿಕ ಜೀವನಕ್ಕೆ ಕನ್ನಡದ ಅಸ್ಮಿತೆಯನ್ನು ತಂದುಕೊಟ್ಟದ್ದು ಕೆರೂರರ ವಿಶಿಷ್ಟವಾದ ಸಾಧನೆ. ಇವರು ಶುಭೋದಯ ಮತ್ತು ಸಚಿತ್ರ ಭಾರತ ಎಂಬ ಪತ್ರಿಕೆಗಳ ಸಂಪಾದಕರಾಗಿದ್ದರು. ಇವು ಇವರ ಧೀರ ವಿಚಾರವಾದಿ ಲೇಖನಗಳಿಗೆ ಪ್ರಸಿದ್ಧವಾಗಿದ್ದುವು.

ಕೆರೂರರ ಸಾಹಿತ್ಯರಚನೆ ಸಂಕೀರ್ಣವಾದುದು. ಪ್ರಾರಂಭದಲ್ಲಿ ಇವರು ಪದ್ಯಗಳನ್ನು ಬರೆದರಾದರೂ ಅನಂತರ ಗದ್ಯರಚನೆಯತ್ತ ತಿರುಗಿದರು. ಇವರು ಬರೆದ ಯದುಮಹಾರಾಜ ಸ್ವತಂತ್ರ ಐತಿಹಾಸಿಕ ಕಾದಂಬರಿ. ಪ್ರೇಮವಿಜಯ, ಬೆಳಗಿದ ದೀಪಗಳು, ತೊಳೆದ ಮುತ್ತು -ಇವು ಇವರ ಸಣ್ಣಕಥೆಗಳ ಸಂಗ್ರಹಗಳು. ಇವರು ನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ನಳದಮಯಂತಿ ಎಂಬುದು ಇವರ ಸ್ವತಂತ್ರ ನಾಟಕ. ಷೇಕ್ಸ್‌ಪಿಯರ್‌ನ ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ಮತ್ತು ದಿ ಮರ್ಚೆಂಟ್ ಆಫ್ ವೆನಿಸ್ ಎಂಬ ನಾಟಕಗಳನ್ನು ವಸಂತಯಾಮಿನೀ ಸ್ವಪ್ನ ಚಮತ್ಕಾರ ಮತ್ತು ಸುರತ ನಗರದ ಶ್ರೇಷ್ಠಿ ಎಂಬ ಹೆಸರಿನಿಂದ ಕನ್ನಡಕ್ಕೆ ಭಾಷಾಂತರಿಸಿದರು. ಆಲಿವರ್ ಗೋಲ್ಡ್‌ಸ್ಮಿತ್ತನ ಷೀ ಸ್ಟೂಪ್ಸ್ ಟು ಕಾನ್ಕರ್ ಎಂಬ ನಾಟಕವನ್ನು ಪತಿವಶೀಕರಣ ಒಂದು ಭಾಷಾಂತರಿಸಿದರು. ಕೆರೂರರ ಗದ್ಯ ಬುದ್ಧಿಭಾವಗಳ ಸಂಕೀರ್ಣತೆಯಿಂದ, ತಾಕಲಾಟದಿಂದ, ವಿಭಿನ್ನ ಅನುಭವಗಳ ಬೆರಕೆಯಿಂದ ಮಿಶ್ರಲೋಹದಂತೆ ಕಾಂತಿಯುಳ್ಳದ್ದಾಗಿದೆ. ಆ ಕಾಲಕ್ಕೆ ಉತ್ತರ ಕರ್ನಾಟಕದ ಉಳಿದ ಬರೆಹಗಾರರು ಜನಪದ ಸಾಹಿತ್ಯವನ್ನು ಪರಿಷ್ಕರಿಸುವ ಪ್ರಯತ್ನದಲ್ಲಿದ್ದಾಗ ಕೆರೂರರು ಒಮ್ಮೆಲೆ ಸುಶಿಕ್ಷಿತ ಪ್ರಜ್ಞೆಯ ವಿದಗ್ಧ ಸಾಹಿತ್ಯವನ್ನು ನಿರ್ಮಿಸಿದ್ದು ಗಮನಾರ್ಹವಾದುದು. ಪರಿಣತವಾದ ಹಾಸ್ಯಪ್ರಜ್ಞೆ, ಪರಿಶ್ರಮ, ಪಾಂಡಿತ್ಯ ಮತ್ತು ಸ್ವತಂತ್ರ ವಿಚಾರಲಹರಿ -ಇವು ಕೆರೂರರ ಸಾಹಿತ್ಯಕ ವ್ಯಕ್ತಿತ್ವದ ಕೆಲವು ಲಕ್ಷಣಗಳಾಗಿವೆ.

ಕೆರೂರರ ಜ್ಞಾಪಕಾರ್ಥವಾಗಿ ಬಾಗಲಕೋಟೆಯ ವಾಸುದೇವ ವಿನೋದಿನಿ ನಾಟ್ಯ ಸಭೆಯವರು 1964ರಲ್ಲಿ ವಾಸುದೇವಪ್ರಶಸ್ತಿ ಎಂಬ ಸ್ಮಾರಕ ಸಂಪುಟವನ್ನು ಪ್ರಕಟಿಸಿದ್ದಾರೆ. (ಕೆ.ಕೆ.ಕೆ.)

**ಕೆರೂರು :** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಒಂದು ಪಟ್ಟಣ. ಬಿಜಾಪುರಕ್ಕೆ ದಕ್ಷಿಣದಲ್ಲಿ ಬಾದಾಮಿಯ ವಾಯವ್ಯಕ್ಕೆ 17ಕಿಮೀ ದೂರದಲ್ಲಿದೆ. 35 ಹಳ್ಳಿಗಳನ್ನೊಳಗೊಂಡ ಹೋಬಳಿ ಕೇಂದ್ರ. ಇಲ್ಲಿ ಪಾಳುಬಿದ್ದಿರುವ ಒಂದು ಕೋಟೆ ಇದೆ. ಕೈಮಗ್ಗದ ಬಟ್ಟೆಗಳಿಗೆ ಈ ಸ್ಥಳ ಬಹು ಪ್ರಸಿದ್ಧ. ಇಲ್ಲಿನ ಬನಶಂಕರಿ ದೇವಾಲಯ ಮುಖ್ಯವಾದುದು. *

**ಕೆರೆಗೆ ಹಾರ :** ಜನಪ್ರಿಯ ಜನಪದ ಕಥನ ಕವನಗಳಲ್ಲೊಂದು. ಊರಿನ ಹಿತಕ್ಕಾಗಿ ಗುರುಹಿರಿಯರ ಮಾತಿನಂತೆ ಕೆರೆಗೆ ಆಹುತಿಯಾದ ತ್ಯಾಗಜೀವಿ ಹೆಣ್ಣು ಮಗಳೊಬ್ಬಳ ಜ್ವಲಂತ ಚಿತ್ರಣ, ಆಹುತಿಯಾದ ಹೆಂಡತಿಗಾಗಿ ತನ್ನ ಪ್ರಾಣವನ್ನೇ ಅರ್ಪಿಸಿ ಅಮರನಾದ ಗಂಡನ ತ್ಯಾಗ - ಇದು ಕವನದ ವಸ್ತು. ಕೆರೆಗೆಹಾರ ಭಾರತೀಯ ಜನಪದ ಸಾಹಿತ್ಯದಲ್ಲಿ ಮಾತ್ರವೇ ಅಲ್ಲ, ಜಗತ್ತಿನ ಯಾವುದೇ ಜನಪದ ಸಾಹಿತ್ಯದ ಅತ್ಯುತ್ತಮ ಕೃತಿಗಗೆ ಸರಿಸಮವಾಗಿ ನಿಲ್ಲಬಲ್ಲ ಸತ್ವದಿಂದ ಕೂಡಿದ ಸುಮಾರು ನೂರ ಇಪ್ಪತ್ತು ಸಾಲುಗಳುಳ್ಳ ಕವಿತೆ. ಹಳ್ಳಿಯ ಮುಗ್ಧಜೀವಿಗಳ ತ್ಯಾಗ, ಪರೋಪಕಾರ, ಉದಾತ್ತ ಸಂಸ್ಕಾರವಂತ ಹಿರಿಬಾಳಿನ ಉಜ್ವಲಚಿತ್ರಣ ಕಥೆಯ ಉದ್ದಕ್ಕೂ ಪಡಿಮಿಡಿಯುತ್ತಿದೆ.

ಕಲ್ಲನಕೇರಿ ಮಲ್ಲನ ಗೌಡ ಕೆರೆಯೊಂದನ್ನು ಕಟ್ಟಿಸಲು, ಕೆರೆಗೆ ಬೊಗಸೆ ನೀರೂ ಬಾರದಿದ್ದನ್ನು ಕಂಡು ಜೋಯಿಸರಲ್ಲಿ ಹೋಗಿ ಶಾಸ್ತ್ರ ಕೇಳಿದ. ಹಿರಿಸೊಸೆ ಮಲ್ಲವ್ವನನ್ನು ಹಾರವ ಕೊಟ್ಟರೆ ನೀರು ಬರುವುದು ಎಂದ ಜೋಯಿಸನ ಮಾತಿಗೆ, ಹಿರಿಸೊಸೆ ಹಾರವಾದರೆ ಹಿರಿತನಕೆ ಯಾರಿಲ್ಲ ಕಿರಿಸೊಸೆ ಭಾಗೀರಥೀನ ಹಾರ ಕೊಡಬೇಕೆಂದು ಮನೆಯಲ್ಲಿ ತೀರ್ಮಾನವಾಯಿತು. ಕೊನೆ ಸಲ ತಂದೆತಾಯಿ ಬಂಧುಬಳಗಗಳನ್ನು ನೋಡಿಕೊಂಡು ಬರಲು ಭಾಗೀರಥಿ ತವರುಮನೆಗೆ ಬಂದಳು. ಇವಳ ಬಾಡಿದ ಮೋರೆ ನೋಡಿದ ತಂದೆತಾಯಿಗಳು ಕಾರಣವನ್ನು ಕೇಳಿದಾಗ, ಭಾಗೀರಥಿ ನಿಜವನ್ನು ಮರೆಮಾಚಿ ನಮ್ಮತ್ತಿ ನಮ್ಮಾವ ಬ್ಯಾರೆ ಇಡುತಾರಂತೆ ಎಂದಾಗ ಇಟ್ಟರೆ ಇಡಲಿ ನಿನಗೆ ಬೇರೆ ಸಂಸಾರ ಹೂಡಲು ಎಲ್ಲ ಅನುಕೂಲ ಮಾಡಿಕೊಡುತ್ತೇವೆ ಎನ್ನುತ್ತಾರೆ. ಭಾಗೀರಥಿ ಗೆಳತಿಯ ಮನೆಗೆ ಹೋದಾಗ ತಡೆಯಲಾರದೆ ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡುತ್ತಾರೆ ಎಂದು ಹೇಳಿದಳು. ಅದಕ್ಕೆ ಸ್ನೇಹಿತೆ ಕೊಟ್ಟರೆ ಕೊಡಲೇಳು ಇಟ್ಟಂಗ ಇರಬೇಕು ಎಂದು ಹೇಳಿದಮೇಲೆ ಭಾಗೀರಥಿ ಕೆರೆಗೆ ಹಾರವಾಗಲು ನಿರ್ಣಯಿಸಿದಳು.

ತವರು ಮನೆಯಿಂದ ಭಾಗೀರಥಿ ಅತ್ತೆಯ ಮನೆಗೆ ಹಿಂದಿರುಗಿ ಬಂದ ಮೇಲೆ ಗಂಗೆ ಪೂಜೆಮಾಡಿ ಕೆರೆಗೆ ಹಾರ ಕೊಡಲು ನಿರ್ಣಯಿಸಿದರು. ಸಣ್ಣ ಸೊಸಿ ಭಾಗೀರಥಿ ಕೆರೆಗ್ಹಾರವಾದಳು.

ಭಾಗೀರಥಿಯ ಗಂಡ, ಮಾದೇವರಾಯ ಯುದ್ಧಕ್ಕೆ ಹೋಗಿದ್ದವನು ಕೆಟ್ಟ ಕನಸು ಕಂಡು, ಬೆತ್ತಲೆ ಕುದುರೆಯೇರಿ ಬಂದು ಹೆಂಡತಿ ಕೆರೆಗೆ ಹಾರವಾದ ಸಂಗತಿ ತಿಳಿದು ದುಃಖಪಟ್ಟು, ಸಿಗಲಾರದ ಸತಿಯನ್ನು ನೆನೆದು ಅದೇ ಕೆರೆಗೆ ಆಹುತಿಯಾದ.

ಪದ್ಯದ ಒಂದೊಂದು ಸಾಲಿನಲ್ಲೂ ಕ್ರಿಯೆಯು ಒಂದೊಂದು ಹೆಜ್ಜೆಯಲ್ಲೂ ಮಹಾಕೃತಿಯಲ್ಲಿ ಕಾಣಬರುವ ಅನಿವಾರ್ಯತೆ ಇದೆ. ಕಥೆಯ ಸನ್ನಿವೇಶಗಳು ದೃಶ್ಯದಂತೆ ಕಣ್ಣಿಗೆ ಕಟ್ಟುತ್ತವೆ. ಶೈಲಿ ಸರಳವಾಗಿದೆ. ಹಾರ ಕೊಡುತಾರಂತ ತಿಳಿದಾಗ ಭಾಗೀರಥಿಯ ಮನಸ್ಸಿನಲ್ಲಿ ಮೂಡಿದ ಸೂಕ್ಷ್ಮ ಹೊಯ್ದಾಟ, ದಂಡಿನಲ್ಲಿದ್ದ ಗಂಡ ಮಾದೇವರಾಯನಿಗೆ ಕನಸಿನಲ್ಲಿ ಕಂಡ ದೃಶ್ಯ, ಆತ ಇದ್ದಕ್ಕಿದ್ದಂತೆ ಬತ್ತಲೆಗುದರೆ ಹತ್ತಿಬಂದ ಸನ್ನಿವೇಶ - ಇವು ಧ್ವನಿಪೂರ್ಣವಾಗಿ ನಿರೂಪಿತವಾಗಿದ್ದು ಉತ್ತಮ ಕಾವ್ಯತ್ವದಿಂದ ಕೂಡಿದೆ. ಇಡೀ ಕಥೆ ಧ್ವನಿರಮ್ಯತೆಯಿಂದ, ಗಂಭೀರತೆಯಿಂದ, ಉಜ್ವಲ ಪಾತ್ರಚಿತ್ರಣದಿಂದ ಕಳೆ ಕಟ್ಟುತ್ತದೆ. ಗಂಡ ಸತ್ತಾಗ ಹೆಣ್ಣು ಸತಿ ಹೋಗುವ ಪದ್ಧತಿ ಹಿಂದಿನಿಂದಲೂ ನಡೆದುಬಂದದ್ದು. ಆದರೆ ಒಂದು ಹೆಣ್ಣಿಗಾಗಿ ಗಂಡು ಪ್ರಾಣಬಿಡುವ ಸಂಗತಿ ಅಪರೂಪ. ಈ ಕಾವ್ಯ ಅಂಥ ಅಪೂರ್ವ ಪ್ರೇಮದುರಂತ ಸಂಗತಿಗೆ ಸಾಕ್ಷಿಯಾಗಿದೆ. ಇಂತಹ ಕೃತಿಯನ್ನು ಕಟ್ಟಿದ್ದ ಅಜ್ಞಾತ ವ್ಯಕ್ತಿ ಶ್ರೇಷ್ಠಕವಿ ಎಂಬ ಪ್ರಶಂಸೆಗೆ ಪಾತ್ರನಾಗಿದ್ದಾನೆ. (ಜಿ.ಆರ್.ಐ.)

**ಕೆರೆಮನೆ ಮಹಾಬಲ ಹೆಗಡೆ :** 1927-. ಪ್ರಸಿದ್ಧ ಯಕ್ಷಗಾನ ಕಲಾವಿದರು. ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಗುಣವಂತೆಯಲ್ಲಿ 1927 ಜೂನ್ 30ರಂದು ಜನಿಸಿದರು. ತಂದೆ ರಾಮ ಹೆಗಡೆ, ತಾಯಿ ಮಹಾದೇವಿ. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ, ಇವರ



ಚಿಕ್ಕಪ್ಪ ಕೆರೆಮನೆ ಶಿವರಾಮ ಹೆಗಡೆ ಮತ್ತು ವೆಂಕಟರಮಣ ಯಾಜಿಗಳು ನಡೆಸುತ್ತಿದ್ದ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯಲ್ಲಿ ರಂಗ ಪ್ರವೇಶಿಸಿದರು. ಆರಂಭದಲ್ಲಿ ಶಿವರಾಮ ಹೆಗಡೆ, ವೆಂಕಟರಮಣ ಯಾಜಿಯವರಿಂದ ತರಬೇತಿ ಪಡೆದರು. ಅನಂತರ ಇನ್ನೊಬ್ಬ ಪ್ರಸಿದ್ಧ ಕಲಾವಿದ ಮೂಡ್ಕಣಿ ನಾರಾಯಣ ಹೆಗಡೆಯವ ರಿಂದ ಹಸ್ತಾಭಿನಯದ ವಿಶೇಷ ತರಬೇತಿ ಪಡೆದರು. ಭಾಗವತಿಕೆಯಲ್ಲಿ ತರಬೇತಿ ಪಡೆದದ್ದು ಅಜ್ಜ ಮಹಾಬಲ ಹೆಗಡೆಯವರಿಂದ. ಇವರು ವೆಂಕಟರಮಣ ಯಾಜಿಗಳಲ್ಲಿ ಹೆಚ್ಚಿನ ವ್ಯಾಸಂಗ ಮಾಡಿದರು. ಕರ್ಣಪರ್ವದ ವೃಷಸೇನ ಇವರು ನಿರ್ವಹಿಸಿದ ಮೊದಲ ಪಾತ್ರ.

ಯಕ್ಷಗಾನದ ಚತುರಂಗಗಳಾದ ಹಾಡುಗಾರಿಕೆ, ಅರ್ಥಗಾರಿಕೆ, ಕುಣಿತ, ಅಭಿನಯ - ಈ ನಾಲ್ಕೂ ಅಂಗಗಳಲ್ಲಿ ವಿಶೇಷ ಪರಿಣತಿಯುಳ್ಳ ಪರಿಪೂರ್ಣ ಕಲಾವಿದ ಎಂಬ ಖ್ಯಾತಿಗೆ ಇವರು ಪಾತ್ರರಾಗಿದ್ದಾರೆ. ಇದಲ್ಲದೆ ಇವರಿಗೆ ಬಣ್ಣಗಾರಿಕೆಯ ನೈಪುಣ್ಯ, ವಾದ್ಯಗಳನ್ನು ನುಡಿಸುವ ಚಾಕಚಕ್ಯತೆ, ವೇಷಭೂಷಣಗಳನ್ನು ನಿರ್ಮಿಸುವ ಕಲೆಗಾರಿಕೆ ಕೂಡ ಕರಗತವಾಗಿವೆ. ಕನ್ನಡ ಸಾಹಿತ್ಯದ ಗಾಢ ಅಧ್ಯಯನ ಮಾಡಿರುವ ಇವರು ಪಾತ್ರಗಳನ್ನು ಸರ್ವಾಂಗ ಸುಂದರವಾಗಿ ನಿಲ್ಲಿಸುತ್ತಾರೆ. ಕೌರವ, ಶ್ರೀಕೃಷ್ಣ, ಸುಧಾಮ, ಸುಧನ್ವ ಯಾವುದೇ ಪಾತ್ರವಿರಲಿ, ಅದರಲ್ಲಿ ಸಮಗ್ರತೆ ತರುತ್ತಾರೆ. ಪಾತ್ರ ನಿರ್ವಹಿಸುವಾಗ ಇವರಿಗೆ ನುರಿತ ಭಾಗವತನೆ ಬೇಕು. ಪ್ರಸಂಗದ ಪ್ರತಿ ಪದವನ್ನೂ ಸ್ವರಪ್ರಸ್ತಾರ ಹಾಕಿ ನಿರೂಪಿಸುವ ಇವರು ಭಾಗವತರು ಅಪಸ್ವರವೆತ್ತಿದರೆ, ಲಯ ತಪ್ಪಿದರೆ ಸಹಿಸುವುದಿಲ್ಲ. ಇದಕ್ಕೆ ಕಾರಣ ಇವರಲ್ಲಿರುವ ಹಾಡುಗಾರಿಕೆಯ ಖಚಿತ ಜ್ಞಾನ.

ಇವರ ಅಜ್ಜ ಮಹಾಬಲ ಹೆಗಡೆ ಮಧುರಕಂಠದ ಭಾಗವತರು. ಚಿಕ್ಕಪ್ಪ ಶಿವರಾಮ ಹೆಗಡೆ ಹೆಸರಾಂತ ನಟರು. ಶಿವರಾಮ ಹೆಗಡೆಯವರ ತಂದೆ ಶಂಭು ಹೆಗಡೆಯವರು ಕಾವ್ಯರಚನೆಯಲ್ಲಿ ಎತ್ತಿದ ಕೈ. ಇವರು ಅಜ್ಜನ ಕಂಠಶಕ್ತಿ, ಚಿಕ್ಕಪ್ಪನ ಕಲಾಪ್ರೌಢಿಮೆ, ಇನ್ನೊಬ್ಬ ಅಜ್ಜನ ಕಾವ್ಯಾಭಿರುಚಿ ಪಡೆದು ಯಕ್ಷಗಾನದ 'ಮಹಾಬಲ' ಎಂದೇ ಹೆಸರಾಗಿದ್ದಾರೆ. ಇಡಗುಂಜಿ ಶ್ರೀ ಮಹಾಗಣಪತಿ ಯಕ್ಷಗಾನ ಮೇಳದೊಂದಿಗೆ ಬೆಳೆದ ಇವರು ಶಿವರಾಮ ಹೆಗಡೆ, ಕೊಂಡದಕುಳಿ ರಾಮಹೆಗಡೆ, ಲಕ್ಷ್ಮಣ ಹೆಗಡೆ, ಶಂಕರನಾರಾಯಣ ಸಾಮಗ, ಜಲವಳ್ಳಿ ವೆಂಕಟೇಶ ರಾಮದಾಸ ಮೊದಲಾದ ಅನೇಕ ಕಲಾವಿದರೊಂದಿಗೆ ಪಾತ್ರ ನಿರ್ವಹಿಸಿದ್ದಾರೆ.

ಇವರು ಸ್ತ್ರೀಪಾತ್ರಗಳಿಂದ ಆರಂಭಿಸಿ ಪುರುಷ ಪಾತ್ರಗಳವರೆಗೆ ಬಡ್ತಿ ಪಡೆದರು. ಪಟ್ಟಾಭಿಷೇಕದ ಉದಾತ್ತರಾಮ, ಭಕ್ತ ಸುಧನ್ವ, ಚಂದ್ರಾವಳಿ ವಿಲಾಸದ ಶೃಂಗಾರಕೃಷ್ಣ, ಖಳನಾಯಕ ಕಂಸ, ಸತ್ಯಹರಿಶ್ಚಂದ್ರ, ಪ್ರಚಂಡ ವಿಶ್ವಾಮಿತ್ರ, ಸ್ತ್ರೀಲಂಪಟ ಕೀಚಕ, ಛಲದಂಕಮಲ್ಲ ಕೌರವ, ಬೇಡರ ಕಣ್ಣಪ್ಪ, ರುಕ್ಮಾಂಗದ, ಬ್ರಹ್ಮಕಪಾಲದ ಈಶ್ವರ, ಕೊಲ್ಲೂರು ಮಹಾತ್ಮೆಯ ಷಣ್ಮುಖ, ಭೀಷ್ಮವಿಜಯದ ಭೀಷ್ಮ ಹೀಗೆ ರಾಜನಿಂದ ಕಂಕನ ವರೆಗೆ ಎಲ್ಲ ಬಗೆಯ ಪಾತ್ರವಹಿಸಿ ಪಾತ್ರಗಳು ಮೈತುಂಬುವಂತೆ ಅಭಿನಯಿಸಿದ್ದಾರೆ.

ಇವರೊಬ್ಬ ಕಲಾವಿದರಷ್ಟೆ ಅಲ್ಲ ವಿಮರ್ಶಕರೂ ಚಿಂತಕರೂ ಆಗಿದ್ದಾರೆ. ಇತರರ ಪಾತ್ರಗಳನ್ನು ವಿಮರ್ಶಿಸುವಂತೆ ತಮ್ಮ ಪಾತ್ರಗಳನ್ನು ವಿಮರ್ಶೆ ಮಾಡುವ ಸಾಕ್ಷಿಪ್ರಜ್ಞೆ ಇವರಲ್ಲಿದೆ. ಯಕ್ಷಗಾನ ಒಂದು ಶಾಸ್ತ್ರೀಯ ಕಲೆಯೆಂದು ವಾದಿಸುವ ಇವರು ಪ್ರಸಂಗದಲ್ಲಿ ಕನ್ನಡ ಕಾವ್ಯರಚನೆಯ ನಿಯಮಗಳಿವೆ, ಭಾಗವತಿಕೆಯಲ್ಲಿ ತಾಳಲಯಗಳ ಖಚಿತತೆ ಇದೆ, ಅಭಿನಯದಲ್ಲಿ, ಹಸ್ತಾಭಿನಯದಲ್ಲಿ ನೃತ್ಯದ ಮುದ್ರೆಗಳಿವೆ, ಕುಣಿತದಲ್ಲಿ ನೃತ್ಯದ ಶಿಸ್ತು ಇದೆಯೆಂದು ಖಚಿತವಾದ ದಾಖಲೆಗಳೊಂದಿಗೆ ವಾದಿಸುತ್ತಾರೆ. ಸಾಭಿನಯ ಉಪನ್ಯಾಸ ನೀಡುವಾಗ ಇವರ ವಿದ್ವತ್ತು ವ್ಯಕ್ತ ವಾಗುತ್ತದೆ. ಇವರು ಪ್ರಯೋಗಪ್ರಿಯರು. ರಾತ್ರಿಯಿಂದ ಬೆಳಗಾಗುವವರೆಗೆ ನಡೆಯುವ ಯಕ್ಷಗಾನವನ್ನು ಒಂದು ಗಂಟೆ, ಮೂರು ಗಂಟೆ ಅವಧಿಯಲ್ಲಿ ಮೊಟ್ಟಮೊದಲು ಪ್ರಯೋಗಿಸಿದವರು. ಭಾಗವತಿಕೆ, ಅರ್ಥಗಾರಿಕೆಯಿಲ್ಲದ ಮೂಕಾಭಿನಯದ ಯಕ್ಷಗಾನವನ್ನು ಶಿವರಾಮ ಕಾರಂತರು ಪ್ರಯೋಗಕ್ಕೆ ತಂದಾಗ ಮಹಾಬಲ ಹೆಗಡೆಯವರು ಯಕ್ಷರಂಗ ಸೇರಿಕೊಂಡರು.

ಮೂರು ದಶಕ ಕಾಲ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯಲ್ಲಿ (1942-69) ದುಡಿದು ಗುರುಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮ, ಅಮೃತೇಶ್ವರಿ ಯಕ್ಷಗಾನ ಮಂಡಳಿ, ಪಂಚಲಿಂಗೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ. ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ, ಉಚಗಾರು -ಈ ಸಂಸ್ಥೆಗಳಲ್ಲಿ ಇವರು ಪಾತ್ರವಹಿಸಿದ್ದಾರೆ. ಕೇಂದ್ರ ಸರಕಾರದ ಸಾಂಸ್ಕೃತಿಕ ಸಂಸ್ಥೆಯ ವತಿಯಿಂದ ಮಾಯಾ ರಾವ್ ತಂಡದೊಂದಿಗೆ ಈಜಿಪ್ಟ್, ನೆದರ್ಲೆಂಡ್ಸ್, ಜರ್ಮನಿ ಮತ್ತು ಗ್ರೀಸ್‌ಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿದರು (1982), ಅಲ್ಲಿ ಇವರು ಭಾಗವತಿಕೆ, ಪಾತ್ರ ಒಟ್ಟೊಟ್ಟಿಗೆ ಮಾಡಿದರು.

ಇವರಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲೂ ಆಸಕ್ತಿಯಿದೆ. ಶ್ರೀಪಾದರಾವ್ ಪಡುಕೋಣೆ ಮತ್ತು ನಾರಾಯಣರಾವ್ ಮುಜುಮದಾರರಲ್ಲಿ (ಧಾರವಾಡ) ಶಾಸ್ತ್ರೀಯ ಸಂಗೀತಾಭ್ಯಾಸ ಮಾಡಿ ಅನೇಕ ಖಾಸಗಿ ಕಛೇರಿಗಳಲ್ಲಿ ಹಾಡಿದ್ದಾರೆ. ಸಂಗೀತ, ಸಾಹಿತ್ಯ, ನೃತ್ಯಪ್ರಕಾರಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಉತ್ತಮ ವಾಗ್ಮಿಗಳಾದ ಇವರು ಅನೇಕ ಸಭೆ, ಸಮಾರಂಭಗಳಲ್ಲಿ ತಮ್ಮ ವಿದ್ವತ್ಪೂರ್ಣ ವಿಚಾರಗಳಿಂದ ಶ್ರೋತೃಗಳನ್ನು ಸೆರೆಹಿಡಿದಿದ್ದಾರೆ. ಮಹಾದೇವಿ ಇವರ ಧರ್ಮಪತ್ನಿ. ಇವರಿಗೆ ಮೂವರು ಮಕ್ಕಳು: ಎರಡು ಗಂಡು, ಒಂದು ಹೆಣ್ಣು.

ಇವರ ಸಾಧನೆಯನ್ನು ಗಮನಿಸಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ (1991). ಕರ್ನಾಟಕ ರಾಜ್ಯ ಸರ್ಕಾರ 1986ರಿಂದ ಮಾಸಿಕ ಗೌರವಧನ ನೀಡಿ ಗೌರವಿಸಿದೆ. ಮದರಾಸಿನ ಶ್ರುತಿ ಸಂಸ್ಥೆ, ಎಡನೀರು ಮಠ, ಪೇಜಾವರ ಮಠ, ಶಿರೂರು ಮಠ (ಉಡುಪಿ), ಯಕ್ಷಲೋಕ (ಮಂಗಳೂರು), ಯಕ್ಷರಂಗ (1992) ಮೂರೂರು ದೇವರು ಹೆಗಡೆ ಪ್ರತಿಷ್ಠಾನ, ಬೆಂಗಳೂರು ಗಾಯನ ಸಮಾಜ, ಕಲಾಸಂಗಮ, ಹೊನ್ನಾವರ ಮೊದಲಾದ ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. (ಎಸ್.ಎಂ.ಕೆ.)

**ಕೆರೆಮನೆ ಶಂಭು ಹೆಗಡೆ :** 1938-. ಪ್ರಸಿದ್ಧ ಯಕ್ಷಗಾನ ಕಲಾವಿದರು. 1938 ಅಕ್ಟೋಬರ್ 6ರಂದು ಜನಿಸಿದರು. ತಂದೆ ಕೆರೆಮನೆ ಶಿವರಾಮ ಹೆಗಡೆ, ತಾಯಿ ಮೂಕಾಂಬಿಕಾ. ಎಸ್.ಎಸ್.ಎಲ್.ಸಿ.ವರೆಗೆ ಓದಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಎರಡು ವರ್ಷ (1959-60) ದುಡಿದರು. ಯಕ್ಷಗಾನ ಕಲೆಯ ಮೇಲಿನ ಅಭಿಮಾನದಿಂದ ನೌಕರಿಯನ್ನು ತ್ಯಜಿಸಿ ಸಂಪೂರ್ಣ ಜೀವಿತವನ್ನು ಯಕ್ಷಗಾನ ಕಲೆಯ ಅಭಿವೃದ್ಧಿಗಾಗಿ ಮೀಸಲಿಟ್ಟರು. ಇವರು ತಮ್ಮ ತಂದೆಯಿಂದ ಯಕ್ಷಗಾನ ಶಿಕ್ಷಣ ಪಡೆದರು. ಪ್ರಾರಂಭದಲ್ಲಿ ಯಕ್ಷಗಾನ ಪಟು ವರದ ಹಾಸ್ಯಗಾರರು ತರಬೇತಿ ನೀಡಿದರು. ಇವರು ಆಗ ಸಾಮಾಜಿಕ ಮತ್ತು ಪೌರಾಣಿಕ ನಾಟಕಗಳಲ್ಲೂ ಭಾಗವಹಿಸುತ್ತಿದ್ದರು.

ಸಂಗೀತ ವಿದ್ವಾಂಸ ಎಂ.ಎಸ್.ನಟರಾಜನ್ ಅವರ ಪರಿಚಯವಾಗಿ (1965) ಮೈಸೂರಿನ ಸಂಗೀತ ನಾಟಕ ಅಕಾಡೆಮಿ ಶಿಷ್ಯವೇತನ ಪಡೆದು ದೆಹಲಿಯ ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕೋರಿಯೋಗ್ರಫಿ ಎಂಬ ಸಂಸ್ಥೆಯಲ್ಲಿ ಮೂರು ವರ್ಷ ಅಭ್ಯಾಸ ಮಾಡಿ ಡಿಪ್ಲೊಮಾ ಪಡೆದರು (1966-69). ಆ ಸಂಸ್ಥೆಯ ನಿರ್ದೇಶಕರೂ ಪ್ರಿನ್ಸಿಪಾಲರೂ ಆಗಿದ್ದ ಮಾಯಾ ರಾವ್ ಭಾರತೀಯ ನೃತ್ಯಗಳ ಪರಿಚಯ ಮಾಡಿಕೊಟ್ಟು, ನೃತ್ಯ ಸಂಯೋಜನೆಯಲ್ಲಿ ಇವರಿಗೆ ತರಬೇತಿ ನೀಡಿ ತಮ್ಮ ತಂಡದೊಂದಿಗೆ ದೇಶವಿದೇಶಗಳ ನೃತ್ಯ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋದರು. ದೆಹಲಿಯ ಮೂರು ವರ್ಷಗಳ ವಾಸ ಇವರಿಗೆ ಭಾರತೀಯ ಹಾಗೂ ವಿದೇಶೀಯ ಕಲಾವಿದರೊಂದಿಗೆ ಸಂಪರ್ಕ ಬೆಳೆಸಲು ಕಾರಣವಾಯಿತು; ಕಲೆಯನ್ನು ನೋಡುವ ದೃಷ್ಟಿಯನ್ನು ಬದಲಾಯಿಸಿತು; ಯಕ್ಷಗಾನಕ್ಕೆ ಹೊಸ ಮೆರುಗು ನೀಡಲು ಪ್ರೇರೇಪಿಸಿತು. ದೆಹಲಿಯಿಂದ ಬಂದ ಬಳಿಕ ಎಂ.ಎಸ್.ನಟರಾಜನ್ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಮೈಸೂರು ಸಾಂಸ್ಕೃತಿಕ ತಂಡದಲ್ಲಿ ಯಕ್ಷಗಾನ ತಂಡದ ನೇತೃತ್ವ ವಹಿಸಿ ಭಾರತದ ಬೇರೆಬೇರೆ ಭಾಗಗಳಲ್ಲಿ ಪ್ರದರ್ಶನ ನೀಡಿದರು. ಕೆಲವು ಕಾರಣಗಳಿಂದ ಇಡಗುಂಜಿ ಮೇಳ ಸ್ಥಗಿತಗೊಂಡಿದ್ದರಿಂದ ಇವರು ಬೇರೆಬೇರೆ ಮೇಳಗಳಲ್ಲಿ ದುಡಿದು ಹೆಸರು ಗಳಿಸಿದರು.



1973ರಲ್ಲಿ ಇವರು ಶ್ರೀಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯನ್ನು ಪುನರುಜ್ಜೀವನಗೊಳಿಸಿದರು. ಪ್ರೇಕ್ಷಕರು ಮೂರು ಕಡೆಯಿಂದ ಕುಳಿತು ನೋಡುವಂತಹ ಅರ್ಧಚಂದ್ರಾಕಾರದ ವೇದಿಕೆಯನ್ನು ಮೊದಲಬಾರಿಗೆ ಪ್ರಯೋಗಕ್ಕೆ ತಂದರು. ಇವರ ಮೇಳ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲದೆ ಭಾರತದ ಬೇರೆಬೇರೆ ಭಾಗಗಳಲ್ಲಿ ಪ್ರದರ್ಶನ ನೀಡಿತು. ಈ ಸಂಸ್ಥೆ 1985ರವರೆಗೆ ತಿರುಗಾಟ ಮಾಡಿ ಜನಪ್ರಿಯತೆ ಪಡೆಯಿತು.

ಇವರು ನಿರ್ವಹಿಸಿದ ಪಾತ್ರಗಳು ಇತರರಿಗಿಂತ ಭಿನ್ನವಾಗಿರಲು ಕಾರಣ ಇವರು ಕೋರಿಯೋಗ್ರಫಿಯಲ್ಲಿ ಪಡೆದ ತರಬೇತಿ. ಹಿತಮಿತವಾದ ಕುಣಿತ, ಸ್ಪಷ್ಟ ಅರ್ಥಗಾರಿಕೆ, ಆಕರ್ಷಕ ಬಣ್ಣಗಾರಿಕೆ, ಪಾತ್ರಗಳ ಅಂತಃಸತ್ವವನ್ನು ವಿಸ್ತರಿಸುವ ಪೌರಾಣಿಕ ಜ್ಞಾನ ಇವು ಇವರನ್ನು ಪ್ರೇಕ್ಷಕರ ಸಮೀಪಕ್ಕೆ ತಂದುವು. ಶ್ರೀಕೃಷ್ಣ, ಹರಿಶ್ಚಂದ್ರ, ಕಾರ್ತವೀರ್ಯನ ಪಾತ್ರಗಳಿಗೆ ಇವರು ಹೊಸ ಆಯಾಮ ನೀಡಿದರು. ಹಾಗೆಯೇ ಆರಂಭದಲ್ಲಿ ಇವರು ಅಭಿನಯಿಸುತ್ತಿದ್ದ ಸುಭದ್ರಾ, ಅಂಬೆ, ಕೈಕೆಯಿ ಮೊದಲಾದ ಸ್ತ್ರೀ ಪಾತ್ರಗಳಿಗೂ ಜೀವ ತುಂಬಿದರು. ಲಂಕಾದಹನದ ಹನುಮಂತ, ಚಂದ್ರಹಾಸದ ಮದನ, ಭೀಷ್ಮವಿಜಯದ ಸಾಳ್ವ ಪಾತ್ರಗಳು ಇವರ ಅಭಿನಯದ ಸ್ಮರಣೀಯ ಪಾತ್ರಗಳು. ರಾವಣನಂತಹ ಪಾತ್ರದ ಕ್ರೂರತೆ ಮಾನವತೆಗಳನ್ನು ಸಂಯೋಜಿಸಿ ಅದನ್ನೊಂದು ಹೊಸ ಸೃಷ್ಟಿಯಾಗಿ ನಿಲ್ಲಿಸುವ ಜಾಣ್ಮೆ ಇವರದು.

ಇವರು ಐದು ಸಾವಿರಕ್ಕಿಂತ ಹೆಚ್ಚು ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ರಾಜನಿಂದ ಸೇವಕನವರೆಗೆ ಒಂದು ನೂರ ಐವತ್ತಕ್ಕಿಂತ ಹೆಚ್ಚು ಪಾತ್ರ ಮಾಡಿದ್ದಾರೆ. ಅರವತ್ತಕ್ಕಿಂತ ಹೆಚ್ಚು ಪ್ರಸಂಗಗಳಲ್ಲಿ ಪರಿಣತಿ ಪಡೆದಿದ್ದಾರೆ. ಕರ್ಣ, ಕಂಸ, ಅರ್ಜುನ, ಭೀಮ, ಕೀಚಕ, ಕೌರವ, ಸೈರೇಂಧ್ರಿ, ದಾರುಕ, ಮದನ ಹೀಗೆ ಯಾವುದೇ ಪಾತ್ರ ಮಾಡಲಿ ಅದರಲ್ಲಿ ಜೀವ ತುಂಬುವ, ಹೊಸ ನೋಟ ನೀಡುವ ಕಲೆಗಾರಿಕೆ ಇವರಿಗೆ ಕರಗತವಾಗಿದೆ. ಉಡುಪಿಯ ಸಂಸ್ಥೆಯೊಂದು ಸರ್ವಶ್ರೇಷ್ಠ ಪುರುಷವೇಷಧಾರಿ ಎಂದು ಇವರನ್ನು ಗುರುತಿಸಿದೆ. ಪರ್ವ ಎಂಬ ಕನ್ನಡ ಚಲನಚಿತ್ರದಲ್ಲಿ ಇವರು ಪೋಷಕಪಾತ್ರ ವಹಿಸಿದ್ದರು.

ಪ್ರತಿವರ್ಷ ತಮ್ಮ ತಂದೆ ಕೆರೆಮನೆ ಶಿವರಾಮ ಹೆಗಡೆಯವರ ಸಂಸ್ಮರಣ ದಿನವನ್ನಾಚರಿಸಿ ಕಲಾವಿದರನ್ನು ಸತ್ಕರಿಸಿ ಗೌರವಿಸುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ. 1986ರಿಂದ ಹೊನ್ನಾವರ ತಾಲ್ಲೂಕಿನ ಗುಣವಂತೆಯಲ್ಲಿ ಯಕ್ಷಗಾನ ಕಲಾಕೇಂದ್ರ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ತರಬೇತಿ ನಿಡುತ್ತಿದ್ದಾರೆ.

ಇವರ ಕಲಾಸಾಧನೆಗಾಗಿ ಅನೇಕ ಪ್ರಶಸ್ತಿ ಗೌರವಗಳು ಲಭ್ಯವಾಗಿವೆ. ಇವುಗಳಲ್ಲಿ ಮುಖ್ಯವಾದವು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2000), ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1993). ಇವರು ಕರ್ನಾಟಕ ನಾಟಕ ಅಕಾಡೆಮಿ (1978-81), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ (1984-87)ಗಳ ಸದಸ್ಯರಾಗಿದ್ದರು. ಅಲ್ಲದೆ ನಾಗಪುರದ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರದ ಕಾರ್ಯಕ್ರಮ ಸಮಿತಿಯ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ (1987-90). ಈಗ ಇವರು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ. ಇವರು ತಮ್ಮ ಯಕ್ಷಗಾನ ತಂಡದೊಂದಿಗೆ ಚೀನ (1994), ಬ್ರಿಟನ್ (1995) ಬಾಂಗ್ಲಾದೇಶ, ಬೆಹರೇನ್, ಫ್ರಾನ್ಸ್, ಇಂಗ್ಲೆಂಡ್, ಸ್ಪೇನ್, ನೇಪಾಲ ಮೊದಲಾದ ದೇಶಗಳಿಗೆ ಭೇಟಿ ನೀಡಿದ್ದಾರೆ. ಇವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಸ್ತುತ ಅಧ್ಯಕ್ಷರಾಗಿದ್ದಾರೆ (2005). (ಎಸ್.ಎಂ.ಕೆ.)

**ಕೆರೆಮನೆ ಶಿವರಾಮ ಹೆಗಡೆ :** 1907-92. ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಕಲಾವಿದರು. ತಂದೆ ಶಂಭು ಹೆಗಡೆ, ತಾಯಿ ಸುಬ್ಬಮ್ಮ. 1907 ಜೂನ್ 21ರಂದು ಇವರ ಜನನ. ಪ್ರತಿ ನಿತ್ಯ ರಾಮಾಯಣ ಮಹಾಭಾರತಗಳ ಪಠಣ ನಡೆಯುತ್ತಿದ್ದ ಮನೆಯ ವಾತಾವರಣದಲ್ಲಿ ಬೆಳೆದ ಶಿವರಾಮ ಹೆಗಡೆಯವರು ಯಕ್ಷಗಾನ ಕಲಾವಿದರಾದ ಕೆ.ಸದಾನಂದ ಹೆಗಡೆ, ಮೂಡ್ಕಣಿ ನಾರಾಯಣ ಹೆಗಡೆ, ಬಾಬುಭಟ್ಟ, ಸೋದರ ಮಾವ ಗಣಪತಿಭಟ್ಟ ಇವರ ಮಾರ್ಗದರ್ಶನದಿಂದ ಹದಿನಾರನೆಯ ವಯಸ್ಸಿನಲ್ಲಿಯೇ ಗೆಜ್ಜೆಕಟ್ಟಿ ರಂಗಸ್ಥಳಕ್ಕೆ ಇಳಿದರು.



ಸ್ವಲ್ಪ ಕಾಲ ಬಸ್ ಕಂಡಕ್ಟರ್, ಖಾನಾವಳಿ ಮಾಲೀಕ, ಗುಮಾಸ್ತ ಮುಂತಾದ ಉದ್ಯೋಗ ನಡೆಸಿದ್ದರೂ ಮತ್ತೆ ಯಕ್ಷಗಾನ ಕ್ಷೇತ್ರಕ್ಕೆ ಮರಳಿ 1935ರಲ್ಲಿ ಶ್ರೀ ಇಡಗುಂಜಿ ಮಹಾಗಣಪತಿ ಪ್ರಸಾದಿತ ಯಕ್ಷಗಾನ ಮಂಡಳಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಲ್ಲದೆ ಸಂಸ್ಥೆಯ ಮೂಲಕ ಹಲವು ಕಲಾವಿದರಿಗೆ ಆಶ್ರಯ ನೀಡಿದರು. ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಮೇಳ ನಡೆಸಿ 1958-59ರಲ್ಲಿ ಅದನ್ನು ಸ್ಥಗಿತಗೊಳಿಸಿದರು. ಮೇಳದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದರು.

ತಮ್ಮ ಮೇಳ ಸ್ಥಗಿತಗೊಳಿಸಿದ ಬಳಿಕವೂ ಬೇರೆ ಬೇರೆ ಮೇಳಗಳಲ್ಲಿ ವೇಷ ಹಾಕಿ ಯಕ್ಷಗಾನ ಪ್ರೇಮಿಗಳನ್ನು ರಂಜಿಸಿದರು. ಮೂರೂರಿನ ಮಹಾವಿಷ್ಣು ಪ್ರಾಸಾರಿಕ ಯಕ್ಷಗಾನ ಮಂಡಳಿ ಕೊಲ್ಲೂರುಮೇಳ ಸಂಯುಕ್ತ ಮೇಳಗಳಲ್ಲಿ ಪಾಲ್ಗೊಂಡರು. ಇವರ ಮಗ ಶಂಭು ಹೆಗಡೆ (ನೋಡಿ) ಇಡಗುಂಜಿ ಮೇಳವನ್ನು ಪುನರ್‌ಸಂಘಟಿಸಿದಾಗಲೂ (ಸು.1973) ಇವರು ಪಾತ್ರ ವಹಿಸಿದರು. ಆಗ ಇವರು ದೇವೇಂದ್ರ, ಅತಿಕಾಯ, ಪಾತ್ರಗಳನ್ನು ಮಾಡಿದರು. ಹೆಗಡೆಯವರು ತೆಂಕು ಬಡಗು ಎರಡೂ ತಿಟ್ಟುಗಳ ಕಲಾವಿದರನ್ನು ಗೌರವ ಪ್ರೀತಿಯಿಂದ ಕಾಣುತ್ತಿದ್ದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಡೇರೆ ಪದ್ಧತಿಯ ಆಟವನ್ನು ಆಚರಣೆಗೆ ತಂದವರಲ್ಲಿ ಇವರು ಮೊದಲಿಗರು. ಲೋಂಡಾ, ಕಲಘಟಗಿ, ಸಾಂಗ್ಲಿ, ನಾಸಿಕ, ಮುಂಬಯಿ ಮುಂತಾದೆಡೆಗಳಲ್ಲೂ ಇವರು ಯಕ್ಷಗಾನ ಪ್ರದರ್ಶಿಸಿದರು. 1949ರಲ್ಲಿ ಇವರೇ ನಿರ್ದೇಶಿಸಿ ಅಭಿನಯಿಸಿದ ಭೀಷ್ಮ ವಿಜಯ ಚಲನಚಿತ್ರಕ್ಕೂ ಅಳವಡಿಸಲ್ಪಟ್ಟಿತು. ಆಕಾಶವಾಣಿಯ ಧಾರವಾಡ ಕೇಂದ್ರದವರು ಇವರ ಅನೇಕ ಯಕ್ಷಗಾನ ರೂಪಕಗಳನ್ನು ಪ್ರಸಾರ ಮಾಡಿದ್ದಾರೆ. 1968ರಲ್ಲಿ ಇವರ ಜರಾಸಂಧವನ್ನು ದೂರದರ್ಶನದ ಮೂಲಕ ದೆಹಲಿಯಲ್ಲಿ ಬಿತ್ತರಿಸಲಾಯಿತು.

ಕೆರೆಮನೆ ಶಿವರಾಮ ಹೆಗಡೆಯವರು ಅಭಿನಯಿಸಿದ ಉತ್ಕೃಷ್ಟ, ಪಾತ್ರಗಳೆಂದರೆ ದುರ್ಯೋಧನ, ಜರಾಸಂಧ, ಕಂಸ, ಅಕ್ರೂರ, ಸುಧನ್ವ, ಆಂಜನೇಯ, ವಾಲ್ಮೀಕಿ, ಅರ್ಜುನ, ದುಷ್ಟಬುದ್ಧಿ, ಭದ್ರಸೇನ, ಕೀಚಕ, ಭೀಮ, ಭೀಷ್ಮ, ಕೌರವ - ಈ ಹಿರಿಯ ಕಲಾವಿದರನ್ನು ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ 1965ರಲ್ಲಿ ರಾಜ್ಯಪ್ರಶಸ್ತಿಯನ್ನೂ, ಕೇಂದ್ರ ಸಂಗೀತನಾಟಕ ಅಕಾಡೆಮಿ ರಾಷ್ಟ್ರಪ್ರಶಸ್ತಿಯನ್ನೂ ನೀಡಿ ಗೌರವಿಸಿದುವು (1971). ಯಕ್ಷಗಾನಕ್ಕೆ ಹೊಸ ಆಯಾಮ ನೀಡಿದ ಅಭಿಜಾತ ಕಲಾವಿದರಾದ ಇವರು 1992ರಲ್ಲಿ ನಿಧನಹೊಂದಿದರು. (ಬಿ.ಎ.ಕೆ.)

**ಕೆರೆಯ ಪದ್ಮರಸ** : ಸು.1165. ವೀರಶೈವ ಕವಿ. ದೀಕ್ಷಾಬೋಧೆ, ಸಾನಂದಚರಿತ್ರೆ ಎಂಬ ಗ್ರಂಥಗಳ ಕರ್ತೃ. ಈತ ಹರಿಹರನ ಸಮಕಾಲೀನನೂ ರಾಘವಾಂಕನಿಗೆ ಹತ್ತಿಪ್ಪತ್ತು ವರ್ಷ ಹಿರಿಯನೂ ಆಗಿದ್ದಿರಬಹುದೆಂದು ವಿದ್ವಾಂಸರ ಊಹೆ. ಈತನ ಮುತ್ತಜ್ಜ ಕುಲ್ಲಕುರಿಕೆಯಲ್ಲಿ ದೊರೆಯಾಗಿದ್ದ ಶಿವಯೋಗಿ ಮಲ್ಲಿಕಾರ್ಜುನ ಪಂಡಿತ (ಮಲ್ಲರಸ), ಅಜ್ಜ ಸಕಲೇಶ ಮಾದರಸ, ತಂದೆ ಮಾಯಿದೇವ, ತಾಯಿ ಮಂಗಲೆ, ಮಗ ಕುಮಾರ ಪದ್ಮರಸ. ಈತ ಹೊಯ್ಸಳ ಒಂದನೆಯ ನರಸಿಂಹನ ಮಂತ್ರಿಯೂ ದಂಡೇಶನೂ ಆಗಿದ್ದನಲ್ಲದೆ ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲೂ ಕವಿಯಾಗಿದ್ದಂತೆಯೂ ತಿಳಿಯುತ್ತದೆ. ಬೇಲೂರಿನಲ್ಲಿ ಒಂದು ಕೆರೆಯನ್ನು ಕಟ್ಟಿಸಿದ್ದರಿಂದ ಕೆರೆಯ ಪದ್ಮರಸನೆಂದು ಪ್ರಸಿದ್ಧನಾದ. ಈತನಿಗೆ ಸಕಲಶಾಬ್ದಿಕಸಾರ್ವಭೌಮ, ತಾರ್ಕಿಕ ಕವಿ ಚಕ್ರವರ್ತಿ, ಶರಣಕವಿ, ಶ್ರೀಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯ ಎಂಬ ಬಿರುದುಗಳಿದ್ದಂತೆ ತಿಳಿದುಬರುತ್ತದೆ. ಈತ ನರಸಿಂಹ ಬಲ್ಲಾಳನ ಸಭೆಯಲ್ಲಿ ಪ್ರಸಿದ್ಧ ವಾಗ್ಮಿಯಾಗಿದ್ದು ವಾದದಲ್ಲಿ ಆಂಧ್ರದೇಶದ ತ್ರಿಭುವನ ತಾತನೆಂಬುವನನ್ನು ಸೋಲಿಸಿದ ಮುಂತಾದ ವಿಷಯಗಳು ಪದ್ಮಣಾಂಕನ ಪದ್ಮಪುರಾಣದಲ್ಲಿ ಸಮಗ್ರವಾಗಿ ನಿರೂಪಿತವಾಗಿವೆ.

ಕನ್ನಡದಲ್ಲಿರುವ ದೀಕ್ಷಾಬೋಧ ಕೃತಿ ರಗಳೆಯ ರೂಪದಲ್ಲಿದೆ ಅಲ್ಲಲ್ಲಿ ಕಂದವೃತ್ತಗಳೂ ಬಳಕೆಯಾಗಿವೆ. ಈ ಗ್ರಂಥವನ್ನು ಮೂರು ಸ್ಥಲಗಳಾಗಿ ವಿಭಾಗಿಸಲಾಗಿದೆ. ಇದರಲ್ಲಿ ವೀರಶೈವ ದೀಕ್ಷೆಯನ್ನು ಪಡೆಯುವುದಕ್ಕೆ ಬೇಕಾದ ವಿಷಯಗಳು ಗುರುಶಿಷ್ಯ ಸಂವಾದ ರೂಪದಲ್ಲಿ ನಿರೂಪಿತವಾಗಿವೆ. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳ ಕನ್ನಡ ಅನುವಾದಗಳೂ ಕಂಡುಬರುತ್ತವೆ. ಈ ಗ್ರಂಥದಲ್ಲಿ ಕಾವ್ಯತ್ವಕ್ಕಿಂತ ಹೆಚ್ಚಾಗಿ ಅನುಭಾವ ಮತ್ತು ತತ್ವನಿರೂಪಣೆ ಕಂಡುಬರುತ್ತದೆ.

ಸಾನಂದಚರಿತ್ರೆ ಸಂಸ್ಕೃತದಲ್ಲಿದೆ. ಕೆರೆಯ ಪದ್ಮರಸನ ಮಗ ಕುಮಾರ ಪದ್ಮರಸ ಈ ಗ್ರಂಥವನ್ನೇ ಷಟ್ಪದಿಯಲ್ಲಿ ಕನ್ನಡಕ್ಕೆ ತಂದುಕೊಟ್ಟಿದ್ದಾನೆ. (ಸಿ.ಒ.)

**ಕೆರೆಸಂತೆ** : ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಒಂದು ಗ್ರಾಮ. ಕಡೂರು-ಬಾಣಾವರ ನಡುವಣ ಪ್ರಧಾನರಸ್ತೆಗೆ ಸಮೀಪವಾಗಿ ಕಡೂರಿನಿಂದ 18ಕಿಮೀ ದೂರದಲ್ಲಿದೆ.

ಹೊಯ್ಸಳರ ಕಾಲದಲ್ಲಿ ಇದೊಂದು ಪ್ರಮುಖ ಅಗ್ರಹಾರವೂ ವ್ಯಾಪಾರ ಕೇಂದ್ರವೂ ಆಗಿತ್ತು. ಹಿಮಗಿರಿ ಅಥವಾ ಹೇಮಗಿರಿ ಬೆಟ್ಟದ ಬುಡದಲ್ಲಿರುವ ವಿಶಾಲ ಕೆರೆಗೆ ವಿಷ್ಣು ಸಮುದ್ರವೆಂಬ ಹೆಸರಿದೆ. ಹಿಂದೆ ಈ ಕೆರೆಗೆ ಮತ್ತು ಕೆರೆಸಂತೆ ಗ್ರಾಮಕ್ಕೆ ವಿಷ್ಣುಸಮುದ್ರ ಎಂಬ ಹೆಸರೇ ಅನ್ವಯವಾಗುತ್ತಿತ್ತು. ಈ ಊರನ್ನು ಹೇಮಾವತಿಪಟ್ಟಣವೆಂದೂ ಉಲ್ಲೇಖಿಸಿದೆ. ಇಲ್ಲಿನ ಶಾಸನಗಳಲ್ಲಿ ಊರನ್ನೂ ಕೆರೆಯನ್ನೂ ವಿಶೇಷವಾಗಿ ಬಣ್ಣಿಸಲಾಗಿದೆ. ಕೆರೆಯ ತೂಬನ್ನು ಒಂದು ಶಾಸನದಲ್ಲಿ ರಾಯರಾಯಪುರಂಗೊಂಡ ತೂಬು ಎಂದು ಕರೆದಿದೆ. ರಾಯರಾಯಪುರ ಎಂದರೆ ತಲಕಾಡು; 'ತಲಕಾಡುಗೊಂಡ' ಎಂಬುದು ವಿಷ್ಣುವರ್ಧನನ ಅಭಿಮಾನದ ಬಿರುದುಗಳಲ್ಲೊಂದು. ಆತನ ಪತ್ನಿ ರಾಜಲದೇವಿಯ ಸೋದರಮಾವನಾದ ಮಂಚಿಯರಸ ಈ ಪ್ರದೇಶವನ್ನು ಆಳುತ್ತಿದ್ದ ಈತ ಮಂಜೇಶ್ವರ ದೇವಾಲಯವನ್ನು (1141) ಕಟ್ಟಿಸಿದ. ಇದಲ್ಲದೆ ಶಾಸನಗಳಿಂದ ತಿಳಿದುಬರುವ ಆಲಯಗಳೆಂದರೆ ಒಡೇಶ್ವರ (1136), ನಖರೇಶ್ವರ (1143), ಸಿದ್ದೇಶ್ವರ (1181), ಹಿಮಗಿರಿ ಲಕ್ಷ್ಮೀನರಸಿಂಹ (1223), ಆದಿನಾಥ ಮತ್ತು ಪಾರ್ಶ್ವನಾಥ (12-13ನೆಯ ಶತಮಾನ) ಜನಾರ್ದನ (ಬೇರೆ ಬೇರೆ ಕಾಲದ ಭಾಗಗಳಿವೆ) ಮತ್ತು ಶಂಭುಲಿಂಗೇಶ್ವರ (1223). ಆದರೆ ಬಹಳಷ್ಟು ದೇವಾಲಯಗಳು ಹಾನಿಹೊಂದಿವೆ ಇಲ್ಲವೇ ನಾಶವಾಗಿವೆ. ಈಗಿನ ಪಾಳು ಗುಡಿಗಳಲ್ಲಿ ವೀರಭದ್ರ, ಗಣೇಶ, ತ್ರಿಕೂಟೇಶ್ವರ, ಮಹಾಲಕ್ಷ್ಮಿ, ಆಂಜನೇಯ ಮುಂತಾದವುಗಳಿವೆ. ಜಿನಬಸದಿಯ ಚಾವಣಿಯಲ್ಲಿ ಹೊಯ್ಸಳ ಕಾಲದ ಕನ್ನಡ ವರ್ಣಮಾಲೆ ಇತ್ತೀಚೆಗೆ ಪತ್ತೆಯಾಗಿದೆ.

ಬೆಟ್ಟದ ಮೇಲಿನ ಶಿವಾಲಯವನ್ನು ಮಲ್ಲಿಕಾರ್ಜುನ ದೇವಾಲಯವೆಂದು ಕರೆಯುತ್ತಾರೆ. ಬಂಡೆಯ ಚಾಚಿನಿಂದಾದ ಆಸರೆಯಲ್ಲಿ ಈ ಗುಡಿ ರೂಪುಗೊಂಡಿದೆ. ಬುಡದಲ್ಲಿ ಸಿದ್ಧರಮಠ ಮತ್ತು ಶಾಲಾಕಟ್ಟಡಗಳಿವೆ. ಶಾಲೆಯ ಆವರಣದಲ್ಲಿ ಹೊಯ್ಸಳ ಶಿಲ್ಪಗಳನ್ನೂ ಶಾಸನಗಳನ್ನೂ ತಂದು ಇರಿಸಲಾಗಿದೆ. ಹಳೆಯ ಊರನ್ನು ತೊರೆದು ಹೊಸ ಊರನ್ನು ಕಟ್ಟಿಕೊಳ್ಳಲಾಗಿದೆ. ಪ್ರತಿ ವರ್ಷ ಜನವರಿಯ ಸುಮಾರಿಗೆ ಇಲ್ಲಿ ನಡೆಯುವ ಜಾತ್ರೆ ಬಹಳ ಪ್ರಸಿದ್ಧ. (ಎಚ್.ಎಂ.ಎನ್.ಆರ್.)

**ಕೆಲಸದ ಹಾಡುಗಳು** : ಕೆಲಸದ ಸಮಯಗಳಲ್ಲಿ ಶ್ರಮವನ್ನು ಹಗುರ ಮಾಡಿಕೊಳ್ಳುವುದಕ್ಕೂ ಉತ್ಸಾಹ ಪಡೆವುದಕ್ಕೂ ಗ್ರಾಮೀಣ ಜನ ಬಳಸುವ ಹಾಡುಗಳು (ವರ್ಕ್ ಸಾಂಗ್ಸ್). ಇಲ್ಲಿ ಕೆಲಸ ಎಂಬ ಪದ ಜನಬಳಕೆಯಲ್ಲಿರುವ ವಿವಿಧ ಕಾಯಕಗಳನ್ನು ಸೂಚಿಸುವುದರಿಂದ ಈ ಹಾಡುಗಳನ್ನು ಕಾಯಕ ಗೀತೆಗಳು ಎಂದೂ ಕರೆವುದಿದೆ.

ಕೆಲಸದ ಹಾಡುಗಳ ಬಳಕೆ ಜನಪದದಲ್ಲಿ ಆದಿಯಿಂದಲೂ ರೂಢಿಯಲ್ಲಿದೆ. ಇವನ್ನು ವ್ಯಕ್ತಿಗಳು ಒಂಟಿಯಾಗಿಯೂ ಗುಂಪಾಗಿಯೂ ಹಾಡುವುದುಂಟು. ಹಳ್ಳಿಗರಲ್ಲಿ ಮಾತ್ರವಲ್ಲದೆ ಮುಂದುವರಿದ, ನಾಗರಿಕರೆನಿಸಿಕೊಂಡವರಲ್ಲಿಯೂ ಈ ಗೀತೆಗಳನ್ನು ಕ್ವಚಿತ್ತಾಗಿ ಕಾಣಬಹುದು. ಇವು ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಕಂಡುಬರುತ್ತವೆ. ವೈಜ್ಞಾನಿಕವಾಗಿ ಮುಂದುವರಿದ ಯಂತ್ರೋಪಕರಣಗಳ ಸೌಲಭ್ಯ ಹೆಚ್ಚಿದಂತೆ, ನಾಗರಿಕತೆ ಬೆಳೆದಂತೆ ಇಂಥ ಹಾಡುಗಳ ಬಳಕೆ ಕಡಿಮೆಯಾಗುತ್ತ ಬರುತ್ತಿದೆ. ಈ ಹಾಡುಗಳನ್ನು ಎಲ್ಲ ವೃತ್ತಿಯವರೂ ಬಳಸುತ್ತಾರೆ. ಎಲ್ಲರ ಉದ್ದೇಶವೂ ಒಂದೇ. ಆದರೆ ಆಯಾ ಕೆಲಸಕ್ಕನುಗುಣವಾಗಿ ಹಾಡುವ ಗೀತೆಗಳಿಗೆ ಆಯಾ ಕೆಲಸದ ಹೆಸರೇ ಬರಬಹುದು. ಉದಾಹರಣೆಗೆ, ರಾಗಿ ಬೀಸುವ ಸಮಯದಲ್ಲಿ ಹಾಡುವ ಪದಗಳನ್ನು ರಾಗಿಕಲ್ಲಿನ ಪದಗಳು ಎಂದೂ ಗಾಡಿಹೊಡೆಯುವಾಗಿನ ಪದಗಳನ್ನು ಗಾಡೀ ಪದಗಳೆಂದೂ ಕರೆಯುವುದು ವಾಡಿಕೆಯಾಗಿದೆ.

ಮನೆಗೆಲಸಗಳಿಗೆ, ಬೇಸಾಯಕ್ಕೆ, ಗೃಹಕೈಗಾರಿಕೆಗಳಿಗೆ ಮತ್ತು ಇತರ ನಾನಾ ವೃತ್ತಿಗಳಿಗೆ ಸಂಬಂಧಿಸಿದಂತೆ ಈ ಕೆಲಸದ ಹಾಡುಗಳವೆ. ರಾಗಿ ಬೀಸುವಾಗ, ಬತ್ತಕುಟ್ಟುವಾಗ, ಹೊಲದಲ್ಲಿ ಕಳೆಕೀಳುವಾಗ, ನಾಟಿ ಮಾಡುವಾಗ, ಧಾನ್ಯಗಳನ್ನು ಒನೆಯುವಾಗ, ನೆಲಗಡಲೆ ಸುಲಿಯುವಾಗ, ಕಣದಲ್ಲಿ ದವಸಧಾನ್ಯಗಳನ್ನು ತೂರುವಾಗ ಸ್ತ್ರೀಯರು ಹಾಡುಗಳನ್ನು ಹೇಳಿಕೊಂಡು ತಮ್ಮ ಕೆಲಸ, ಶ್ರಮವನ್ನು ಕಡಿಮೆಮಾಡಿಕೊಳ್ಳುತ್ತಾರೆ. ರಾಗಿ ಬೀಸುವಾಗ ಸ್ತ್ರೀ ಒಬ್ಬಂಟಿಗಳಾಗಿಯೂ ಕೆಲವು ಸಮಯಗಳಲ್ಲಿ ಇಬ್ಬರು ಜೊತೆಯಾಗಿಯೂ ಹಾಡುವುದುಂಟು.

ಹಿಂದೆ ಯಂತ್ರಸೌಕರ್ಯವಿರಲಿಲ್ಲವಾಗಿ ಸ್ತ್ರೀಯರು ಮುಂಜಾನೆ ಎದ್ದು ಬೆಳಕು ಹರಿಯುವವರೆಗೆ ಬೀಸುತ್ತಿದ್ದರು. ಅಂಥ ಸಂದರ್ಭದಲ್ಲಿನ ಕೆಲವು ಗೀತೆಗಳನ್ನಿಲ್ಲಿ ನೋಡಬಹುದು:

ಮೂಡು ಮುಂದಾಗಿ ಹೂಡೇವು ರಾಗೀ ಕಲ್ಲು
ರೂಢಿಗೆ ಈಶ್ವರನ ಮಡದೀಯು - ಗೌರಮ್ಮನ
ಹೂಡೇವು ಹೊನ್ನ ಗೆರಸೀಯ

ಕಲ್ಲು ಹಿಡಿವಾಗ ಒಳ್ಳೊಳ್ಳೆ ನುಡಿ ನುಡಿಯೆ
ಸೊಲ್ಲುಸೊಲ್ಲಿಗೆ ಶಿವ ಬರಲಿ - ಈ ಮನೆ
ಮಲ್ಲಯ್ಯ ಬರಲಿ ಮನದಾಗೆ

ಬಿದಿರೆ ಬೆಟ್ಟದ ಮೇಲೆ ಚದುರೆ ರಾಗಿಯ ಕಲ್ಲೆ
ಮದನಾರಿ ನೆಂಬೊ ಹಿಡಿಗೂಟ - ಹಿಡುಕೊಂಡು
ಮೊದಲೇ ಸಿರಿಗೌರಿ ನೆನೆದೇವು

ಕಲ್ಲು ಬಿಟ್ಟೇವೆಂದು ಎಲ್ಲರೂ ಕೇಳಿರಿ
ಕುಕ್ಕೇಲಿ ರಾಗಿ ಬಿಳಿ ಎಲೆ - ತಕ್ಕೊಂಡು
ಮತ್ತೆ ರಾತ್ರಿಕೆ ಬರುತೀವಿ

ಉಳಿದ ಸಮಯಗಳಲ್ಲಿ ಗೀತಗಳನ್ನು ಗುಂಪಾಗಿಯೇ ಹಾಡುತ್ತಿರುತ್ತಾರೆ. ಹೀಗೆ ಗುಂಪಾಗಿ ಹಾಡುವಾಗ ಮುಮ್ಮೇಳ ಹಿಮ್ಮೇಳಗಳು ಕಂಡುಬರುತ್ತವೆ. ಮುಮ್ಮೇಳ ಎಂದರೆ ಮೊದಲು ಹಾಡುವವರ ಗುಂಪು. ಅವರು ಗೀತೆಯಲ್ಲಿನ ಕಥೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ ಅಥವಾ ಗೀತೆಯ ಮುಕ್ತಾಯದತ್ತ ಸಾಗುತ್ತಾರೆ. ಹಿಮ್ಮೇಳದವರು ಮೊದಲು ಹಾಡಿದವರ ಪಲ್ಲವಿಯನ್ನು ಮಾತ್ರ ಪುನರುಚ್ಚರಿಸಿಕೊಂಡು ಹೋಗುತ್ತಾರೆ.

ಇನ್ನು ಪುರುಷರು ಗಾಡಿ ಹೊಡೆಯುವಾಗ, ಬತ್ತದ ಹುಲ್ಲನ್ನು ಒಕ್ಕುವಾಗ, ರೋಣುಗಲ್ಲು ಹೊಡೆಯುವಾಗ, ದನ ಕಾಯುವಾಗ, ಹುಟ್ಟು ಹಾಕುವಾಗ, ಮೀನು ಹಿಡಿಯುವಾಗ, ಮನೆ ಕಟ್ಟುವಾಗ, ಗದ್ದೆಕೆಲಸ ಮಾಡುವಾಗ, ಹೊಲ ಉಳುವಾಗ ಹಾಡುಗಳನ್ನು ಹೇಳುವುದರ ಮೂಲಕ ತಮ್ಮ ಬೇಸರವನ್ನು ಕಳೆದುಕೊಳ್ಳುವುದನ್ನು ಗಮನಿಸಬಹುದು. ಕಾಯಕದ ದೈಹಿಕ ಶ್ರಮಕ್ಕನುಗುಣವಾಗಿ ಗೀತೆಗಳ ರಾಗ ಲಯ ಗತಿಗಳನ್ನು ಏರಿಸಿ ಇಳಿಸುವುದು ಅನಿವಾರ್ಯವಾಗುತ್ತದೆ. ಕಾಯಕದ ಹಾಡುಗಳಲ್ಲಿ ಪ್ರೇಮಗೀತೆಗಳು, ಶೋಕಗೀತೆಗಳು, ದೈವಿಕ ಆವರಣಕ್ಕೆ ಒಳಪಟ್ಟ ಸೂತ್ರ ರೂಪದ ಗೀತಗಳು, ಮಿಶ್ರಗೀತಗಳು, ಕಥನಗೀತಗಳು, ಹಾಸ್ಯಗೀತಗಳು ಕಂಡುಬರುತ್ತವೆಯಾದರೂ ಸಾಮಾನ್ಯವಾಗಿ ಪ್ರೇಮಗೀತಗಳೇ ಹೆಚ್ಚು. ಹಿಂದೆ ಒಂದೂರಿಂದ ಮತ್ತೊಂದು ಊರಿಗೆ ಹತ್ತಾರು ಮೈಲಿಗಳ ದೂರ ಪ್ರಯಾಣವನ್ನೂ ಗಾಡಿಗಳಲ್ಲಿ ಮಾಡುತ್ತಿದ್ದುದುಂಟು. ಆ ಸಮಯದಲ್ಲಿ ಗಟ್ಟಿಯಾಗಿ ಪದಗಳನ್ನು ಹೇಳುತ್ತ ಗಾಡಿ ಹೊಡೆಯುತ್ತಿದ್ದರೆ ದಾರಿ ಸಾಗಿದ್ದೆ ತಿಳಿಯುತ್ತಿರಲಿಲ್ಲ. ಹಾಡಿನಿಂದ ಎತ್ತುಗಳಿಗೂ ಹಿತವೆನಿಸುತ್ತಿತ್ತೆಂದು ತೋರುತ್ತದೆ. ಅನೇಕ ಗಾಡಿಗಳು ಒಟ್ಟಿಗೆ ಹೋಗುತ್ತಿದ್ದರೆ, ಒಂದು ಗಾಡಿಯವರು ಮತ್ತೊಂದು ಗಾಡಿಯವರನ್ನೋ ದಾರಿಯಲ್ಲಿ ಕಂಡ ಹೆಣ್ಣುಗಳನ್ನೊ ಅಥವಾ ಮತ್ತೇನನ್ನೋ ಕುರಿತು ಹಾಡು ಕಟ್ಟಿ ಹೇಳುವುದು ವಾಡಿಕೆ ಆಗಿತ್ತು.

ಬಂಡಿ ಹೊಡೆಯೋನ ಬಂಡಾಟ ನೋಡಿರೋ
ಬಾರುಕೋಲ್ಹಿಡಿದು ಬಲಗೈಲಿ - ಹಿಡಕೊಂಡು
ಬೋರಾಡಿ ಘಟ್ಟ ಇಳಿಸ್ಯಾನು

ಕಬ್ಬು ಕಡಿಯೋನೆ ಉಬ್ಬು ನೇರುಳ್ಳೋನೆ
ಗೊಬ್ಬರದ ಗಾಡಿ ಹೊಡೆಯೋನೆ - ತಮ್ಮಯ್ಯನ
ಉಬ್ಬು ತಿದ್ದವಳೆ ಶ್ರೀಗೌರಿ

ಹಾಡು ಬಂದರೆ ಹಾಡು ಗಾಳಿ ಬಂದರೆ ತೂರೋ
ಹಾಡೇಲೊ ಗೆಣಯ ನನದ್ಯಾಲಿ - ಬಲ್ಲಂಥ
ಜಾಣ ನೀ ಒಡದ್ದೇಲೊ

ಹೋರಿಯ ಹೊಡಕಂಡು ಕೋರ್ ಹುಡುಗಿ ನಾ ಕಂಡೆ
ಗೋರಿಕಾಯಂತ ಎದೆಯೋಳ - ನಾ ಕಂಡು
ಹೋರಿಯ ಹೊಡೆಯಾಕೆ ಮನಸಿಲ್ಲ

ಕೆಂಪಾನೆ ಹೆಣ್ಣಿಗೂ ಸಂಪಿಗೆ ಹೂವಿಗೂ
ಅಂತರದಲ್ಲಾಡೊ ಹುಣುಸೇಯ - ದೋರ್ಹಣ್ಣೂ
ಎಂತೋರು ಬಾಯಿ ಬಿಡುತಾರೆ

ಅಮೇರಿಕದ ತೋಟಗಳಲ್ಲಿ ಕೂಲಿಗಳಾಗಿ ಕೆಲಸಮಾಡುವ ನಿಗ್ರೋಗಳಲ್ಲಿ ಹೆಚ್ಚಾಗಿ ಈ ಕೆಲಸದ ಹಾಡುಗಳ ಬಳಕೆಯಿತ್ತು. ಫ್ರಾನ್ಸ್ ದೇಶದಲ್ಲಿ ಕೆಲಸದ ಸಮಯದಲ್ಲಿ ಸ್ತ್ರೀಪುರುಷರು ಒಟ್ಟಾಗಿ ಪ್ರೇಮಗೀತಗಳನ್ನು ಹಾಡುತ್ತಿದ್ದರು. ಜಪಾನಿನಲ್ಲಿ ಹಗ್ಗಹೊಸೆಯುವ ಸಮಯದ ಇಂಥ ಹಾಡುಗಳ ಬಳಕೆ ಇತ್ತು. ಹಿಂದೆ ಸಮುದ್ರದಲ್ಲಿ ಯಾನಮಾಡುತ್ತಿದ್ದ ನಾವಿಕರು ತಮ್ಮ ಬೇಸರಿಕೆಯನ್ನು ಕಳೆಯುವುದಕ್ಕಾಗಿ ಗೀತಗಳನ್ನು ಹಾಡಿಕೊಳ್ಳುತ್ತಿದ್ದರು. ಕೇರಳದಲ್ಲಿ ಈಗಲೂ ದೋಣಿಗಳನ್ನು ನಡೆಸುವ ಸ್ಪರ್ಧೆಗಳೇರ್ಪಟ್ಟಾಗ ಅಲ್ಲದೆ ಮಿಕ್ಕ ಕಾಲಗಳಲ್ಲಿ ಕೂಡ ಗುಂಪುಗುಂಪಾಗಿ ಗೀತಗಳನ್ನು ಹೇಳಿಕೊಂಡು ಹುರುಪಿನಿಂದ ಹುಟ್ಟುಹಾಕುವುದನ್ನು ಕಾಣಬಹುದು. ಕರ್ನಾಟಕದ ಕರಾವಳಿಯ ಮೀನುಗಾರರಿಗೆ ಬೇಸರ ಕಳೆಯಲು ಹಾಡುವುದು ರೂಢಿಯಲ್ಲುಂಟು. *

**ಕೆಳದಿ :** ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನಲ್ಲಿ ಸಾಗರಕ್ಕೆ 8ಕಿಮೀ ಉತ್ತರಕ್ಕಿರುವ ಗ್ರಾಮ, ಐತಿಹಾಸಿಕ ಸ್ಥಳ.

ಹನ್ನೆರಡನೆಯ ಶತಮಾನದಲ್ಲಿ ಈ ಊರು ಸಾಂತರರ ಅಧೀನದಲ್ಲಿತ್ತು. ಪೊಂಬುಚ್ಚಪುರವರಾಧೀಶ್ವರನಾಗಿದ್ದ ಮಹಾಮಂಡಳೇಶ್ವರ ತ್ರಿಭುವನಮಲ್ಲ ಭುಜಬಲ ಪ್ರತಾಪ ಶಾಂತರಸನ ತ್ರುಟಿತ ಶಾಸನವೊಂದು ಇಲ್ಲಿ ದೊರೆತಿದೆ. ಊರು ಪ್ರವರ್ಧಮಾನಕ್ಕೆ ಬಂದುದು 16ನೆಯ ಶತಮಾನದ ಆರಂಭದಲ್ಲಿ, ವಿಜಯನಗರದ ಕೃಷ್ಣದೇವರಾಯನ ಆಳಿಕೆಯಲ್ಲಿ. ಇಲ್ಲಿಯೇ ಹುಟ್ಟಿ ಬೆಳೆದ ಸಾಮಾನ್ಯ ಮನೆತನವೊಂದಕ್ಕೆ ಸೇರಿದ್ದ ಚೌಡಗೌಡನೆಂಬ ರೈತನಿಗೆ ನಿಕ್ಷೇಪವೊಂದು ದೊರೆತುದಾಗಿಯೂ ಅದರ ಸಹಾಯದಿಂದ ಇಲ್ಲಿ ಸಣ್ಣ ಪಾಳೆಯಪಟ್ಟೊಂದನ್ನು ಅವನು ಕಟ್ಟಿಕೊಂಡು ಮುಂದೆ ತನ್ನ ಪ್ರಭಾವವನ್ನು ಬೆಳೆಸಿಕೊಂಡನೆಂದೂ ಐತಿಹ್ಯವಿದೆ. ಇವನ ಪರಾಕ್ರಮಕ್ಕೆ ಮೆಚ್ಚಿ ಕೃಷ್ಣದೇವರಾಯ ಎಂಟು ಮಾಗಣೆಗಳ ನಾಯಕತ್ವವನ್ನು ಕೊಟ್ಟು ಇವನನ್ನು ನಾಯಕನನ್ನಾಗಿ ಮಾಡಿದ. ಹೀಗೆ ಕೆಳದಿ ಸು.1500ರಲ್ಲಿ ಒಂದು ಪುಟ್ಟ ಸಂಸ್ಥಾನದ ರಾಜಧಾನಿಯಾಯಿತು. ಚೌಡಪ್ಪನಾಯಕ ಇಲ್ಲಿ ಅರಮನೆ, ಕೋಟೆ, ಕೆರೆಗಳನ್ನು ನಿರ್ಮಿಸಿದ. ಜೊತೆಗೆ ಸುಂದರವಾದ ರಾಮೇಶ್ವರ ದೇವಾಲಯವನ್ನೂ ಕಟ್ಟಿಸಿದ. ಮುಂದೆ 60 ವರ್ಷಗಳ ಕಾಲ ಇದು ಇವನ ವಂಶದವರ ರಾಜಧಾನಿಯಾಗಿತ್ತು. ಅನಂತರ ರಾಜಧಾನಿಯನ್ನು ಇದರ ಸಮೀಪದಲ್ಲಿಯೇ ಇದ್ದ ಇಕ್ಕೇರಿಗೂ ಆಮೇಲೆ ಬಿದನೂರಿಗೂ ಬದಲಾಯಿಸಲಾಯಿತಾದರೂ ಈ ಊರು ನಾಯಕನ ಆಳಿಕೆ ಕೊನೆಗೊಳ್ಳುವವರೆಗೂ ಆ ರಾಜ್ಯದ ಒಂದು ಪ್ರಮುಖ ನಗರವಾಗಿಯೇ ಮುಂದುವರಿಯಿತು. ಅನಂತರ ಇದರ ಪ್ರಾಮುಖ್ಯ ಇಳಿಮುಖವಾಗಿ ಕಡೆಗೆ ಒಂದು ಸಾಮಾನ್ಯ ಹಳ್ಳಿಯಾಗಿ ಉಳಿಯಿತು. ಇಲ್ಲಿ ವಿಸ್ತಾರವಾಗಿ ಹರಡಿರುವ ಹಳೆಯ ಊರಿನ ನಿವೇಶನಗಳು, ದೇವಾಲಯಗಳು, ಕೆರೆ, ಮಠಗಳು, ಅದರ ಹಿಂದಿನ ವೈಭವವನ್ನು ಸೂಚಿಸುತ್ತವೆ.

ವೀರಭದ್ರ ದೇವಾಲಯದ ಭುವನೇಶ್ವರಿಯಲ್ಲಿರುವ ಗಂಡಭೇರುಂಡ, ಕೆಳದಿ

ಈಗ ಇಲ್ಲಿ ಉಳಿದುಬಂದಿರುವ ಅವಶೇಷಗಳಲ್ಲಿ ಮುಖ್ಯವಾದವು ಒಂದೇ ಆವರಣದಲ್ಲಿ ನಿಂತಿರುವ ಮೂರು ದೇವಾಲಯಗಳು - ನಡುವೆ ರಾಮೇಶ್ವರ ದೇವಾಲಯ, ಅದರ ಬಲಕ್ಕೆ ವೀರಭದ್ರ ದೇವಾಲಯ,

ಎಡಕ್ಕೆ ಪಾರ್ವತಿ ದೇವಾಲಯ. ಇವುಗಳಲ್ಲಿ ಮೊದಲು ಕಟ್ಟಿದುದು ರಾಮೇಶ್ವರ ದೇವಾಲಯ. ಹುತ್ತವೊಂದರಲ್ಲಿ ರಾಮೇಶ್ವರ ಲಿಂಗ ದೊರೆಯಿತೆಂದೂ ಅದಕ್ಕೆ ಮೊದಲು ಸಾಮಾನ್ಯ ಗುಡಿಸಲು ಕಟ್ಟಿಸಿ ಚೌಡಪ್ಪಗೌಡ ಪೂಜಿಸುತ್ತಿದ್ದನೆಂದೂ ಮುಂದೆ ಕೆಳದಿಯ ನಾಯಕನಾದ ಮೇಲೆ ಶಿಲಾಮಯ ದೇವಾಲಯವನ್ನು ಕಟ್ಟಿಸಿದನೆಂದೂ ಐತಿಹ್ಯವಿದೆ. ಮುಂದೆ ಸದಾಶಿವನಾಯಕನ ಮತ್ತು ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ಈ ಕಟ್ಟಡ ಪೂರ್ಣವಾಯಿತೆಂದು ಇತರ ಆಧಾರಗಳಿಂದ ನಿರ್ಧರಿಸಬಹುದು. ಈ ದೇವಾಲಯ ಕೆಳದಿಯ ನಾಯಕರ ಕಾಲದ ವಾಸ್ತು ಶೈಲಿಯ ಮಾದರಿಯಾಗಿದ್ದು, ಹೊಯ್ಸಳ, ದ್ರಾವಿಡ ಮತ್ತು ಇಸ್ಲಾಮಿ ಶೈಲಿಗಳ ಮಿಶ್ರಣವನ್ನಿಲ್ಲಿ ಕಾಣಬಹುದು. ಚೌಕನಾದ ಗರ್ಭಗೃಹ, ಸುತ್ತಲೂ ಪ್ರದಕ್ಷಿಣಾಪಥ ಮುಂದೆ ಎರಡು ಕಂಬಗಳಿಂದ ಕೂಡಿದ ರಂಗಮಂಟಪ ಮತ್ತು ದೊಡ್ಡದಾದ ಮುಖಮಂಟಪಗಳಿರುವ ಈ ದೇವಾಲಯ ಎತ್ತರವಾದ ಜಗತಿಯ ಮೇಲಿದೆ. ಜಗತಿಯ ದಿಂಡೊಂದರ ಮೇಲೆ ಕಿರುಚಿತ್ರಗಳೂ ಸರಳವಾದ ಗೋಡೆಗಳ ಮೇಲೆ ಅಲ್ಲಲ್ಲಿ ತೆಳುಪುಬ್ಬು ಶಿಲ್ಪಗಳಲ್ಲಿ ಬಿಡಿಸಿರುವ ಕಣ್ಣಪ್ಪ; ಗರುಡ ಹನುಮರು ಹಣ್ಣೊಂದಕ್ಕಾಗಿ ಕಿತ್ತಾಡುತ್ತಿರುವುದು; ಒಂಟೆ, ಆನೆ, ಯಾಳಿ ಕ್ರೋಧೋನ್ಮತ್ತವಾದ ಆನೆ ಯೋಧನೊಬ್ಬನನ್ನು ಸೀಳುತ್ತಿರುವುದು ಮೊದಲಾದ ಮೂರ್ತಿಗಳು ಇವೆ. ಮುಖಮಂಟಪದ ಸುತ್ತಲೂ ದ್ರಾವಿಡ ರೀತಿಯ ಅರೆಮಂಟಪಗಳನ್ನು ಹೊತ್ತ ಅರೆಗಂಬಗಳಿವೆ; ಒಳಭಾಗದಲ್ಲಿ ಜಗುಲಿಯಿದೆ. ಮೂರು ಕಡೆ ಪ್ರವೇಶವುಳ್ಳ ಈ ತೆರೆದ ಮಂಟಪದ ಒಳ ಚಾವಣಿ ಸರಳವಾದುದು. ನಡುವಣ ಅಂಕಣದಲ್ಲಿ ಮಾತ್ರ ಪದ್ಮಗಳಿವೆ. ಪಶ್ಚಿಮದ ಗೋಡೆಗೆ ಹೊಂದಿಕೊಂಡಿರುವ ಅರೆಮಂಟಪಗಳೆರಡರಲ್ಲಿ ಗಣಪತಿ ಮತ್ತು ಮಹಿಷಾಸುರ ಮರ್ದಿನಿಯ ಮೂರ್ತಿಗಳಿವೆ. ನಡುವಣ ಶೈವ ದ್ವಾರಪಾಲಕರುಳ್ಳ ಪ್ರವೇಶದ್ವಾರ ನಂದಿಯನ್ನುಳ್ಳ ಕಿರಿದಾದ ರಂಗಮಂಟಪಕ್ಕೆ ಸೇರಿದಂತಿದೆ. ಮುಕ್ಕಾಲು ಮೀಟರಿನಷ್ಟು ಎತ್ತರವಿರುವ, ಹೊಳಪಿನ ಮೈಯುಳ್ಳ ಲಿಂಗವಿರುವ ಗರ್ಭಗೃಹ ಬಾಗಿಲುವಾಡದ ಮೇಲೆ ನಿಂತಿರುವ ರಾಮೇಶ್ವರನ ಮೂರ್ತಿಯುಂಟು. ಗರ್ಭಗೃಹದ ಮೇಲೆ ಚೌಕಾಕೃತಿಯ ದ್ರಾವಿಡ ರೀತಿಯ ಶಿಲಾಗೋಪುರ, ಅದರ ನಾಲ್ಕು ಮೂಲೆಗಳಲ್ಲಿಯೂ, ನಂದಿ, ತುದಿಯಲ್ಲಿ ಲೋಹ ಕಲಶ ಇವೆ.

ವೀರಭದ್ರದೇವಾಲಯ ರಾಮೇಶ್ವರ ದೇವಾಲಯಕ್ಕೆ ಸೇರಿದಂತೆಯೇ ಇದೆ. ಆ ದೇವಾಲಯ ನಿರ್ಮಾಣವಾದ ಮೇಲೆ ಒಂದು ತಲೆಮಾರು ಈಚೆಗೆ ಇದನ್ನು ಕಟ್ಟಿದ್ದುದಾಗಿ ತೋರುತ್ತದೆ.



ವೀರಭದ್ರ ದೇವಾಲಯದ ಅಲಂಕೃತ ಮೇಲ್ಛಾವಣಿ

ಬಹುಮಟ್ಟಿಗೆ ರಾಮೇಶ್ವರ ದೇವಾಲಯದಂತೆಯೇ ಇರುವ ಈ ಗುಡಿಯಲ್ಲಿ ಶಿಲ್ಪಗಳು ಹೆಚ್ಚು. ಹೊರ ಗೋಡೆಯ ಮೂರ್ತಿಶಿಲ್ಪಗಳಲ್ಲಿ ಕುತೂಹಲವನ್ನು ಕೆರಳಿಸುವುದು ವಾಸ್ತುಪುರುಷ ಎನ್ನಲಾದ ಮೂರ್ತಿ. ಆನೆಯ ಕಾಲುಗಳಂಥ ದಪ್ಪಕಾಲುಗಳು, ಆನೆಯ ಸೊಂಡಿಲಿನಂಥ ಕೈಗಳು, ಪಕ್ಷಿಯ ಬೆನ್ನಿನಂಥ ದೇಹ, ಸಿಂಹದ ಮುಖ, ನೀಳವಾದ ಗಡ್ಡವಿರುವ ಈ ವಿಚಿತ್ರ ಮೂರ್ತಿಯ ಸುತ್ತಲೂ ಬಗೆಬಗೆಯ ಮಿಥುನ ಮತ್ತು ಇತರ ಮೂರ್ತಿಶಿಲ್ಪಗಳುಂಟು. ಈ ದೇವಾಲಯದ ಮುಖಮಂಟಪಕ್ಕೆ ಮಾತ್ರ ಮುಂದೆ ಒಂದು ಮುಖಭದ್ರವುಂಟು. ಈ ಮುಖಮಂಟಪದ ಪಶ್ಚಿಮದ ಗೋಡೆಗೆ ಸೇರಿದಂತೆ ಉನ್ನತವಾದ ದಕ್ಷಬ್ರಹ್ಮ ಮತ್ತು ನರಸಿಂಹನ ಮೂರ್ತಿಗಳು ಮೂಲ ವೀರಭದ್ರನ ಮೂರ್ತಿಯ ಇಕ್ಕೆಲಗಳಲ್ಲಿ ಕೈಮುಗಿದು ನಿಂತಂತಿದ್ದು ಭವ್ಯವಾಗಿವೆ. ಮಂಟಪದ ಹನ್ನೆರಡು ಅಂಕಣಗಳ ಒಳಚಾವಣಿಗಳ ಶಿಲ್ಪ ಅಪೂರ್ವ.

ಸುಂದರವಾಗಿ ಸುರುಳಿಸುರುಳಿಯಾಗಿ ಬಿಡಿಸಿರುವ ವಿಶಾಲವಾದ ಪದ್ಮಗಳೂ ಸುತ್ತಣ ಅಂಕಣಗಳಲ್ಲಿ ನಡುವೆ ಸೂರ್ಯ ಮತ್ತು ಅವನನ್ನು ಬಳಸಿದ ಗ್ರಹಗಳೂ ಇವೆ. ಇದರ ಮುಂದಿನ ಅಂಕಣದಲ್ಲಿ ದೊಡ್ಡದಾಗಿ ವಿವರವಾಗಿ ಬಿಡಿಸಿರುವ ಗಂಡಭೇರುಂಡ ಮೂರ್ತಿಯಿದೆ. ಇದು ಅಚ್ಯುತರಾಯನ ನಾಣ್ಯಗಳ ಮೇಲಿರುವ ಪಕ್ಷಿಯನ್ನು ಹೋಲುತ್ತದೆ. ಬಳ್ಳಿಯ ಸುರುಳಿಗಳ ನಡುವೆ ವಿಶಾಲವಾಗಿ ಹರಡಿಕೊಂಡಿರುವ ರೆಕ್ಕೆಗಳು, ಅಗಲವಾಗಿ ಬಿಟ್ಟಿರುವ ಹಿಂಭಾಗದ ಪುಕ್ಕಗಳು, ಎರಡು ಕಡೆಯೂ ಚಾಚಿರುವ ಎರಡು ಬಲವಾದ ಕೊಕ್ಕುಗಳು, ಒಂದೊಂದು ಕೊಕ್ಕಿನಲ್ಲಿಯೂ ಕಚ್ಚಿ ಹಿಡಿದಿರುವ ಸಿಂಹಗಳು, ಆ ಸಿಂಹಗಳ ಕಾಲುಗುರುಗಳಿಗೆ ಸಿಕ್ಕಿಕೊಂಡು ಘೀಳಿಡುತ್ತಿರುವ ಆನೆಗಳು, ಇವುಗಳಿಂದ ಕೂಡಿರುವ, ತನ್ನ ಕಾಲುಗಳಲ್ಲಿಯೂ ಮದ್ದಾನೆಗಳನ್ನು ಹಿಡಿದು ಲೀಲಾಜಾಲವಾಗಿ ಮೇಲೇರಿ ಹೋಗುತ್ತಿರುವಂತೆ ಕಡೆಯಲಾಗಿರುವ ಈ ಗಂಡಭೇರುಂಡ ಒಂದು ಶ್ರೇಷ್ಠ ಶಿಲ್ಪ. ಕಂಬಗಳ ಮೇಲಿನ ಮೂರ್ತಿಗಳ ಪೈಕಿ ಬಹುಶಃ ಈ ದೇವಾಲಯವನ್ನು ಕಟ್ಟಿಸಿದ ಕೆಳದಿ ನಾಯಕ ಭದ್ರಪ್ಪ ನಾಯಕನದೂ ಒಂದು.

ಮಾದವಾಡಿ ಸೀಮೆಯ ಮಾಲವಳ್ಳಿ ಅಥವಾ ಆಳವಾಳವೆಂಬ ಗ್ರಾಮದಲ್ಲಿ ದೊರೆತ ವೀರಭದ್ರಮೂರ್ತಿಯನ್ನು ಸಂಕಣ್ಣನಾಯಕ ಕೆಳದಿಗೆ ತಂದು ಇಲ್ಲಿ ಪ್ರತಿಷ್ಠೆ ಮಾಡಿದನೆಂದು ಕೆಳದಿನೃಪವಿಜಯ, ಕೆಳದಿ ಸಂಸ್ಥಾನದ ರಾಯರ ವಂಶಾವಳಿ ಮೊದಲಾದುವು ತಿಳಿಸುತ್ತವೆ. ಚಿಕ್ಕದಾದ ಈ ವೀರಭದ್ರನ ಮೂರ್ತಿ ಸಾಮಾನ್ಯವಾದುದು. ದೇವಾಲಯದ ಮುಂದಿರುವ ಧ್ವಜಸ್ತಂಭವನ್ನು 1681ರಲ್ಲಿ ನಿಲ್ಲಿಸಿದುದಾಗಿ ಅದರ ಮೇಲಿನ ಶಾಸನದಿಂದ ವ್ಯಕ್ತವಾಗುತ್ತದೆ.

ರಾಮೇಶ್ವರ ದೇವಾಲಯದ ಎಡಪಕ್ಕದಲ್ಲಿರುವ ಪಾರ್ವತಿಯ ಗುಡಿ ಚಿಕ್ಕದು. ಗರ್ಭಗೃಹ ಮಾತ್ರ ಕಲ್ಲಿನ ಕಟ್ಟಡ, ಮುಂದಿನ ಭಾಗ ಇಟ್ಟಿಗೆಯದು. ಮುಂದಿನ ಮಂಟಪದ ಒಳಭಾಗದ ಮರದ ಕೆತ್ತನೆ ಸುಂದರವಾಗಿದೆ.

ನಾಯಕರು ಕಟ್ಟಿಸಿದ ಕೆಳದಿಯ ಕೆರೆ ದೊಡ್ಡದಾಗಿದೆ. ಇದನ್ನು ಕಟ್ಟುವಾಗ ಕೆಳದಿ ಎಂಬ ವೇಶ್ಯೆ ಆತ್ಮಾರ್ಪಣೆ ಮಾಡಿಕೊಂಡುದಾಗಿಯೂ ಅವಳ ಹೆಸರಿನಲ್ಲಿ ಈ ಊರಿಗೆ ಕೆಳದಿ ಎಂಬ ಹೆಸರು ಬಂತೆಂದೂ ದಂತಕಥೆಯೊಂದುಂಟು. ಕೆಳದಿಯಲ್ಲಿ ನಾಯಕರ ಕಾಲದಲ್ಲಿ ಕಟ್ಟಿಸಿದ್ದ ಮಹಂತಿನ ಮಠ ಈಗಿನ ಕೆಳದಿ ಗ್ರಾಮಕ್ಕೆ ಸಮೀಪದ ಬಂದಗದ್ದೆಯಲ್ಲಿದೆ. ಈ ಮಠ ದೊಡ್ಡದಾಗಿ ಭವ್ಯವಾಗಿದೆ. ಕೆಳದಿ ಅರಸರು ಕಟ್ಟಿಸಿದ್ದ ಸಂಪಕಟ್ಟೆ ಕೆರೆ ಈಗ ಪಾಳು ಬಿದ್ದಿದೆ. ಇಲ್ಲಿ ಚಿಕ್ಕದಾದ ಆಂಜನೇಯ, ವೆಂಕಟರಮಣ, ಗೋಪಾಲಕೃಷ್ಣ, ವೀರಭದ್ರ ಮೊದಲಾದ ದೇವಾಲಯಗಳೂ ಜೈನ ಬಸದಿಯೂ ಇವೆ. ಇವೆಲ್ಲವೂ ಆಗಿನ ಕೆಳದಿ ನಗರಕ್ಕೆ ಸೇರಿದುವಾಗಿದ್ದುವು. (ಎಂ.ಎಚ್.)

**ಕೆಳದಿ ರಾಜವಂಶ :** 16ನೆಯ ಶತಮಾನದಾರಭ್ಯ 18ನೆಯ ಶತಮಾನದ ಮೂರನೆಯ ಪಾದದ ವರೆಗೆ ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಆಳಿದ ಒಂದು ಮನೆತನ. ಈ ವಂಶದವರು ಮೊದಲು ವಿಜಯನಗರದ ಸಾಮಂತರಾಗಿದ್ದು, ಆ ರಾಜ್ಯದ ಪತನಾನಂತರ ಸ್ವತಂತ್ರರಾದರು.

ಕೆಳದಿ ಅರಸರ ರಾಜ್ಯ ಅದರ ಉಚ್ಛ್ರಾಯಸ್ಥಿತಿಯಲ್ಲಿ ಈಗಿನ ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಬಹುಭಾಗ, ಉತ್ತರ ಕನ್ನಡ, ಧಾರವಾಡ, ಚಿತ್ರದುರ್ಗ ಜಿಲ್ಲೆಗಳ ಕೆಳಭಾಗ ಮತ್ತು ಕೇರಳದ ಸ್ವಲ್ಪ ಭಾಗಗಳನ್ನು ಒಳಗೊಂಡಿತ್ತು. ಈ ರಾಜ್ಯದ ರಾಜಧಾನಿಗಳು ಕ್ರಮವಾಗಿ ಕೆಳದಿ, ಇಕ್ಕೇರಿ ಮತ್ತು ಕೊನೆಗೆ ಬಿದನೂರು

ಕೆಳದಿ ಅರಸರ ವಂಶಾವಳಿ :




(ನಗರ), ಸ್ವಲ್ಪಕಾಲ ಭುವನಗಿರಿ ಅಥವಾ ಕವಲೆದುರ್ಗ ಆಗಿದ್ದುವು. ಆದ್ದರಿಂದ ಈ ಅರಸರನ್ನು ಇತಿಹಾಸಕಾರರು ಕೆಳದಿ, ಇಕ್ಕೇರಿ ಅಥವಾ ಬಿದನೂರಿನ ನಾಯಕರೆಂದು ಕರೆದಿದ್ದಾರೆ. ಆದರೆ ಈ ವಂಶ ಕೆಳದಿಯಿಂದ ಬಂದಿದ್ದರಿಂದಲೂ ತಮ್ಮನ್ನು ಯಾವಾಗಲೂ ಕೆಳದಿನಾಯಕರೆಂದು ಕರೆದುಕೊಂಡಿರುವುದರಿಂದಲೂ ಕೆಳದಿ ಎಂಬ ಹೆಸರೇ ಉಚಿತ. ಮಲೆನಾಡಿನ ರಾಜ್ಯವಾದ ಇದಕ್ಕೆ ಮಲೆರಾಜ್ಯವೆನ್ನುವ ಹೆಸರೂ ಇತ್ತು. ಗಂಡಭೇರುಂಡ ಈ ವಂಶದವರ ರಾಜಲಾಂಛನವಾಗಿತ್ತು.

ಈ ವಂಶದ ಇತಿಹಾಸದ ರಚನೆಗೆ ಹಿರಿಯ ಬಸವಪ್ಪನಾಯಕ ರಚಿಸಿದ ಶಿವತತ್ತ್ವರತ್ನಾಕರ ಎಂಬ ಸಂಸ್ಕೃತ ವಿಶ್ವಕೋಶ, ಲಿಂಗಣ್ಣ ವಿರಚಿತ ಕೆಳದಿನೃಪವಿಜಯ ಎಂಬ ಕನ್ನಡ ಚಂಪೂಗ್ರಂಥ, ಆ ಕಾಲದ ವಿಪುಲ ಶಾಸನಗಳು ಮತ್ತು ಪೆಟ್ರೊ ಡೆಲವೆಲ್ಲೆ, ಪೀಟರ್ ಮಂಡಿ, ಅಲೆಗ್ಸಾಂಡರ್ ಹ್ಯಾಮಿಲ್ಟನ್ ಮುಂತಾದ ವಿದೇಶಿ ಪ್ರವಾಸಿಗಳ ಬರೆಹಗಳು ಸಹಾಯಕವಾಗಿವೆ. ಇವಲ್ಲದೆ ಪೋರ್ಚುಗೀಸ್ ರಾಜಕೀಯ ದಾಖಲೆಗಳೂ ಅಮೂಲ್ಯ ವಿಷಯಗಳನ್ನು ಒದಗಿಸುತ್ತವೆ.

ಈ ವಂಶದ ಅರಸರು ಶೌರ್ಯ, ದಾನ, ಸ್ವಧರ್ಮನಿಷ್ಠೆ, ಪರಧರ್ಮಸಹಿಷ್ಣುತೆ ಮತ್ತು ವಿದ್ಯಾಪ್ರೋತ್ಸಾಹಗಳಲ್ಲಿ ವಿಜಯನಗರದ ಅರಸರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಯಥಾಶಕ್ತಿಯಾಗಿ ಅನುಸರಿಸಿದರು. ಆದ್ದರಿಂದಲೇ ಕೆಳದಿ ರಾಜ್ಯ ವಿಜಯನಗರದ ಹಾಗೆ ಜನಪ್ರಿಯವಾಗಿತ್ತು. ಈ ದೃಷ್ಟಿಯಲ್ಲಿ ಕೆಳದಿ ರಾಜ್ಯ ವಿಜಯನಗರದ ಪರಂಪರೆಯನ್ನು ಮುಂದುವರಿಸಿದ ಅದರ ಸಂತಾನ ಎನ್ನಬಹುದು.

**ರಾಜಕೀಯ ಇತಿಹಾಸ:** ಈ ವಂಶದ ಮೂಲಪುರುಷ ಚೌಡಗೌಡ (ಸು.1500-30). ಇವನು ಸ್ವಶ್ರಮದಿಂದ ಕೆಳದಿಯ ಸುತ್ತಣ ಪ್ರದೇಶದಲ್ಲಿ ಒಂದು ಪಾಳೆಯಪಟ್ಟನ್ನು ಸ್ಥಾಪಿಸಿ ವಿಜಯನಗರದ ಅರಸರಿಂದ ಮಾನ್ಯ ಪಡೆದ. ಇವನ ಮಗ ಸದಾಶಿವನಾಯಕ (ಸು.1530-67) ಬಹು ಪರಾಕ್ರಮಶಾಲಿ. ವಿಜಯನಗರದ ಅರಸರ ಪರವಾಗಿ ಬಿಜಾಪುರದ ಸುಲ್ತಾನನನ್ನು ಪರಾಜಯಗೊಳಿಸಿದ್ದಲ್ಲದೆ ಇತರ ಅನೇಕ ಯುದ್ಧಗಳಲ್ಲೂ ನೆರವಾಗಿ, ಅವರಿಂದ ಮಂಗಳೂರು, ಬಾರಕೂರು, ಚಂದ್ರಗುತ್ತಿ ಪ್ರಾಂತ್ಯಗಳನ್ನು ಪಡೆದು ಕೆಳದಿ ರಾಜ್ಯದ ವಿಸ್ತಾರಕ್ಕೂ ಕೀರ್ತಿಗೂ ಕಾರಣನಾದ. ಹಿಂದಿದ್ದ ಸಣ್ಣ ಪಾಳೆಯಪಟ್ಟು ಇವನ ಕಾಲದಲ್ಲಿ ರಾಜ್ಯವಾಯಿತು. ಇವನ ಆಳಿಕೆಯ ಕೊನೆಯ ಭಾಗದಲ್ಲಿ ರಕ್ಕಸತಂಗಡಿ ಕದನದಿಂದಾಗಿ ವಿಜಯನಗರ ಸಾಮ್ರಾಜ್ಯದ ಪತನವಾಯಿತು. ಅನಂತರ ಕೆಳದಿಯ ಅರಸರು ಬಹುತೇಕ ಸ್ವತಂತ್ರರಾಗಿಯೇ ಆಳಿದರು. ಆದರೂ ವಿಜಯನಗರದ ವಂಶಿಕರಾದ ಸದಾಶಿವ, ತಿರುಮಲ, ಶ್ರೀರಂಗ ಇವರನ್ನು ನಿಮಿತ್ತಮಾತ್ರಕ್ಕೆ ಸಾರ್ವಭೌಮರೆಂದು ಗೌರವಿಸುತ್ತಿದ್ದರು.

ಸದಾಶಿವನಾಯಕ (ದೊಡ್ಡಸಂಕಣ್ಣನಾಯಕ) ಮೃತನಾದಮೇಲೆ ಅವನ ಮಗ ಚಿಕ್ಕಸಂಕಣ್ಣನಾಯಕ (ಸು.1567-82) ರಾಜ್ಯವಾಳಿದ. ಈ ಕಾಲದ ಆಳಿಕೆಯ ಬಗ್ಗೆ ಇರುವ ಇನ್ನೊಂದು ಅಭಿಪ್ರಾಯ ಹೀಗಿದೆ; ದೊಡ್ಡ ಸಂಕಣ್ಣ ನಾಯಕ ಸದಾಶಿವನ ಮಗ. ಇವನು 1567-82ರ ವರೆಗೆ ರಾಜ್ಯವಾಳಿ ಅನಂತರ ತನ್ನ ತಮ್ಮ ಚಿಕ್ಕಸಂಕಣ್ಣನಿಗೆ ಅಧಿಕಾರ ವಹಿಸಿದ, ಚಿಕ್ಕಸಂಕಣ್ಣನೂ ಇವನ ತಮ್ಮ ರಾಮರಾಜಯ್ಯನೂ ಸ್ವಲ್ಪ ಕಾಲ (ಸು.1570-82) ಜೊತೆಯಾಗಿ ರಾಜ್ಯಭಾರ ಮಾಡಿದರು.



ನಗರದ ಕೋಟೆಯ ದ್ವಾರ

ಅನಂತರದ ರಾಜ ವೆಂಕಟಪ್ಪನಾಯಕ (1582-1629). ಈತ ಸಮರ್ಥನೂ ದೂರದರ್ಶಿಯೂ ಆಗಿದ್ದ. ಇವನ ಕಾಲದಲ್ಲಿ ಈ ಸಂಸ್ಥಾನ ಅಧೀನತೆಯಿಂದ ಪೂರ್ಣವಾಗಿ ಮುಕ್ತವಾಯಿತು. ಇದನ್ನು ಸಹಿಸದ ಬಿಜಾಪುರದ ಸುಲ್ತಾನ ಕೆಳದಿಯನ್ನು ವಶಪಡಿಸಿಕೊಳ್ಳಲು ಕಳಿಸಿದ ಸೇನೆಯನ್ನು ವೆಂಕಟಪ್ಪ ಹಿಮ್ಮೆಟ್ಟಿಸಿ, ಅದರ ಸ್ಮಾರಕವಾಗಿ ಹಾನಗಲ್ಲಿನಲ್ಲಿ ವಿಜಯಸಂಭವನ್ನು ನಿರ್ಮಿಸಿದ. ಅನಂತರ ಸಾತಳಲು, ಬೆಳವಂದೂರು, ಮುಂಡಗದ್ದೆ, ಹೊನ್ನೂರು, ಹಾರ್ನಹಳ್ಳಿ ಮೊದಲಾದ ಪಾಳೆಯಗಾರರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ. ರಾಜ್ಯ ಪಶ್ಚಿಮಕ್ಕೆ ಸಮುದ್ರದವರೆಗೂ ವಿಸ್ತರಿಸಿತು. ಗೇರುಸೊಪ್ಪೆಯ ಭೈರಾದೇವಿಯನ್ನು ಸೋಲಿಸಿ, ಪೋರ್ಚುಗೀಸರ ಪ್ರಭಾವವನ್ನು ಕುಗ್ಗಿಸಿ ಲಾಭದಾಯಕವಾದ ಮೆಣಸಿನವ್ಯಾಪಾರವನ್ನು ತನ್ನ ಹಿಡಿತಕ್ಕೆ ತಂದು, ದೇಶದ ಸಂಪತ್ತನ್ನು ಹೆಚ್ಚಿಸಿದ. ಅನಂತರ ಆಳಿದ ಇವನ ಮೊಮ್ಮಗ ವೀರಭದ್ರನಾಯಕನ (1629-45) ಕಾಲದಲ್ಲಿ ರಾಜ್ಯ ಅನೇಕ ವಿಪತ್ತುಗಳನ್ನು ಎದುರಿಸಬೇಕಾಯಿತು. ಸೋದೆ ಮತ್ತು ಬಿಳಗಿ ಅರಸರು, ತರೀಕೆರೆ, ಬಾಣಾವರದ ಪಾಳೆಯಗಾರರು ಇವನ ಮೇಲೆ ಪಿತೂರಿ ಹೂಡಿ ಸಜ್ಜುಗೊಳಿಸಿದ್ದ ದಾಳಿಯನ್ನು ವೀರಭದ್ರನಾಯಕ ಸಾಮೋಪಾಯದಿಂದ ನಿಲ್ಲಿಸಿದ. ಆದರೆ ಬಿಜಾಪುರದ ಆದಿಲ್‌ಶಾಹೀ ದೊರೆಯ ದಂಡನಾಯಕ ಇವನ ರಾಜ್ಯದಲ್ಲಿ ಹಾವಳಿ ಮಾಡಿದ. ಪೋರ್ಚುಗೀಸರು ಸಮಯ ಸಾಧಿಸಿ ರಾಜ್ಯದ ಕೆಲವು ಭಾಗಗಳನ್ನೂ ಹಲವು ಅನುಕೂಲಗಳನ್ನೂ ಪಡೆದರು. ರಾಜ್ಯ ಶಿಥಿಲವಾಯಿತು.

ಶಿವಪ್ಪನಾಯಕ (1645-60) ಈ ವಂಶದ ಪ್ರಮುಖದೊರೆ. ರಾಜಧಾನಿ ಬಿದನೂರನ್ನು ವೃದ್ಧಿಮಾಡಿ, ದೇಶದ ಇತರ ಭಾಗಗಳಿಂದ ವ್ಯಾಪಾರಿಗಳೂ ಕುಶಲಕೆಲಸಗಾರರೂ ಬಂದು ನೆಲಸಲು ಸಹಾಯಕನಾದ. ಈತ ತನ್ನ ರಾಜ್ಯದ ಗಡಿಯನ್ನು ಸಕ್ಕರೆಪಟ್ಟಣ ಮತ್ತು ಹಾಸನದವರೆಗೆ ವಿಸ್ತರಿಸಿದ. ತುಳುನಾಡಿನ ದಾಳಿಯಿಂದ ಇವನ ರಾಜ್ಯ ಕಾಸರಗೋಡಿನವರೆಗೆ ವಿಸ್ತರಿಸಿದ್ದಲ್ಲದೆ ಅಲ್ಲಿನ ಅತುಳೈಶ್ವರ್ಯ ಇವನ ಪಾಲಿಗೆ ಬಂತು. 1646ರಲ್ಲಿ ವಿಜಯನಗರದ ಅರಸ ಶ್ರೀರಂಗರಾಯ ಸೋತು ಓಡಿ ಬಂದಾಗ, ಶಿವಪ್ಪನಾಯಕ ಅವನಿಗೆ ಆಶ್ರಯಕೊಟ್ಟು, ಬೇಲೂರು, ಸಕ್ಕರೆಪಟ್ಟಣಗಳ ಆಧಿಪತ್ಯವನ್ನು ವಹಿಸಿಕೊಟ್ಟ. ಶ್ರೀರಂಗರಾಯನ ಪರವಾಗಿ ಶ್ರೀರಂಗಪಟ್ಟಣವನ್ನು ಮುತ್ತಿದ. ಅನಂತರ ವೆಲ್ಲೂರನ್ನು ವಶಪಡಿಸಿಕೊಂಡ. ಅರಬ್ಬೀಸಮುದ್ರದ ದ್ವೀಪವೊಂದನ್ನು ಹಿಡಿದುಕೊಂಡು ಬಸವರಾಜದುರ್ಗವನ್ನು ಕಟ್ಟಿದ. ಕಂದಾಯದ ವಸೂಲಿಗಾಗಿ ಭೂಕಂದಾಯದ ಶಿಸ್ತು, ಪ್ರಹರಪಟ್ಟಿ ಅಥವಾ ಅಡಿಕೆ ಹಾಲತ್ತು ಎಂಬ ನಿಬಂಧನೆಗಳನ್ನು ಮಾಡಿದ. ಪೋರ್ಚುಗೀಸರನ್ನು ಹಲವು ಯುದ್ಧಗಳಲ್ಲಿ ಸೋಲಿಸಿ ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿ, ಕೆಳದಿರಾಜ್ಯದ ಕೀರ್ತಿ, ಬಲ ಮತ್ತು ವರ್ಚಸ್ಸನ್ನು ಹೆಚ್ಚಿಸಿದ.

ಕೇವಲ ಒಂದು ವರ್ಷ ಆಳಿದ ಶಿವಪ್ಪನಾಯಕನ ತಮ್ಮ ವೆಂಕಟಪ್ಪನಾಯಕನ ಆಳಿಕೆ (1660-61) ಸತ್ವಹೀನವಾಗಿತ್ತು. ಇವನ ಮರಣಾನಂತರ ರಾಜ್ಯದ ಬಲ ಕುಗ್ಗಲು ಪ್ರಾರಂಭವಾಯಿತು. ದಕ್ಷಿಣದಲ್ಲಿ ಮೈಸೂರು, ಉತ್ತರದಲ್ಲಿ ಬಿಜಾಪುರ ಇವುಗಳೊಂದಿಗೆ ಪದೇಪದೇ ಯುದ್ಧವಾದದ್ದೇ ಇದಕ್ಕೆ ಕಾರಣ. ಈ ಮಧ್ಯೆ ಶಿವಾಜಿ ಕೆಳದಿ ರಾಜ್ಯದ ತೀರಪ್ರದೇಶಗಳಿಗೆ ಬಿರುಗಾಳಿಯಂತೆ ನುಗ್ಗಿ, ಕುಂದಾಪುರವನ್ನು ಸೂರೆ ಮಾಡಿ, ಅನೇಕ ಗ್ರಾಮಗಳನ್ನು ಲೂಟಿಮಾಡಿ ಹಿಂದಿರುಗಿದ. ಶಿವಪ್ಪನಾಯಕನ ಹಿರಿಯಮಗ ಭದ್ರಪ್ಪನಾಯಕನ ಕಾಲದಲ್ಲಿ (ಸು.1661-63) ರಾಜಧಾನಿ ಬಿದನೂರು ಮತ್ತು ಭುವನಗಿರಿ ಕೋಟೆಗಳನ್ನು ಬಿಜಾಪುರದ ಸುಲ್ತಾನರು ಆಕ್ರಮಿಸಿದರು. ಇವನ ತಮ್ಮ ಹಿರಿಯ ಸೋಮಶೇಖರನಾಯಕ (ಸು.1663-71) ತನ್ನ ದುರ್ನಡತೆಯಿಂದ ಜನರಿಂದಲೇ ಕೊಲೆಯಾದ. ಅನಂತರ ಅವನ ರಾಣಿ ಚೆನ್ನಮ್ಮಾಜಿ (1671-97) ಆಡಳಿತ ನಡೆಸಿದಳು. ರಾಜ್ಯದಲ್ಲಿ ನಡೆಯುತ್ತಿದ್ದ ಒಳಸಂಚಿನಿಂದ ಪ್ರಾಣಕ್ಕೆ ಅಪಾಯವೆಂದು ತಿಳಿದು ಭುವನಗಿರಿಗೆ (ಕವಲೇದುರ್ಗ) ಹೋದಳು. ಸಾಹಸಿಯೂ ಸಮರ್ಥಳೂ ಆದ ಈಕೆಯ ಕಾಲದಲ್ಲಿ ಬಸವಾಪಟ್ಟಣ ಮತ್ತು ಇತರ ಪ್ರದೇಶಗಳು ಕೆಳದಿ ಸಂಸ್ಥಾನಕ್ಕೆ ಬಂದುವು. ಹುಲಿಕೆರೆಯಲ್ಲಿ ಕೋಟೆಯನ್ನು ಕಟ್ಟಿ ಅದಕ್ಕೆ ಚೆನ್ನಗಿರಿ ಎಂದು ನಾಮಕರಣ ಮಾಡಿದಳು. ಮುಗಲರ ಕೈಗೆ ಸಿಕ್ಕದ ಹಾಗೆ ಅಲೆಯುತ್ತಿದ್ದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ಕೊಟ್ಟು ಔರಂಗಜೇಬನನ್ನೂ ಎದುರಿಸಿದಳು. ಇವಳ ಅನಂತರ ಆಳಿದ ದತ್ತುಪುತ್ರ ಬಸವಪ್ಪನಾಯಕ (1697-1714) ರಾಜ್ಯವನ್ನು ಬಿಗಿಪಡಿಸಿದ್ದಲ್ಲದೆ ಧರ್ಮ, ಸಾಹಿತ್ಯಗಳಿಗೆ ಪ್ರೋತ್ಸಾಹವಿತ್ತ.

ಅನಂತರ ಆಳಿದ ಇಮ್ಮಡಿ ಸೋಮಶೇಖರನಾಯಕ (1714-39) ಶಿರಾದ ಮೇಲೆ ದಾಳಿ ನಡೆಸಿ ಅಜ್ಜಂಪುರ, ಸಂತೆಬೆನ್ನೂರು ಮೊದಲಾದ ಸ್ಥಳಗಳನ್ನು ಕಸಿದುಕೊಂಡು ಮಲಬಾರಿನ ಚಿಕ್ಕಪುಟ್ಟ ಸಂಸ್ಥಾನಗಳಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು, ಕೆಳದಿ ಸಂಸ್ಥಾನವನ್ನು ಶಕ್ತಿಯುತವಾಗಿ ಮಾಡಿದ. ಇವನ ದತ್ತುಪುತ್ರ ಇಮ್ಮಡಿ ಬಸವಪ್ಪನಾಯಕ (1739-54) ಚಿತ್ರದುರ್ಗದ ಮದಕರಿನಾಯಕನನ್ನು ಕೊಂದ. ಅದೇ ಸಂದರ್ಭದಲ್ಲಿ ಆರ್ಕಾಟಿನ ನವಾಬ ಚಂದಾಸಾಹೇಬನನ್ನೂ ಸೆರೆಹಿಡಿದ. ಇವನ ಕಾಲದಲ್ಲಿ ರಾಜ್ಯ ಉಚ್ಛ್ರಾಯಸ್ಥಿತಿಗೇರಿತು. ಆಡಳಿತ ಉತ್ತಮವಾಗಿತ್ತು. ಇವನ ದತ್ತುಪುತ್ರ ಕೆಲವೇ ದಿನಗಳಕಾಲ ರಾಜ್ಯವಾಳಿ ಕೊಲೆಯಾದ. ಅನಂತರ ಬಸವಪ್ಪನಾಯಕನ ಹೆಂಡತಿ ವೀರಮ್ಮಾಜಿ (1756-63) ಮುಮ್ಮಡಿ ಸೋಮಶೇಖರನಾಯಕನನ್ನು ದತ್ತು ತೆಗೆದುಕೊಂಡು ಆಡಳಿತ ಸೂತ್ರವನ್ನು ತಾನೇ ಹಿಡಿದಳು. ಮರಾಠರ ಹಾವಳಿ ದಿನೇ ದಿನೇ ಜಾಸ್ತಿಯಾಗಲು ಅವರನ್ನು ಹಣ ಕೊಟ್ಟು ತೃಪ್ತಿಪಡಿಸಲು ಪ್ರಜೆಗಳ ಮೇಲೆ ಸೇ.50ರ ತೆರಿಗೆ ವಿಧಿಸಿದಳು. ಅವಳ ನಡತೆ ಮತ್ತು ಈ ಕ್ರಮದಿಂದ ಜನ ಕ್ರುದ್ಧಗೊಂಡರು. ಈ ರೀತಿ ಕುಗ್ಗಿ ಬಲಹೀನವಾಗಿದ್ದ ರಾಜ್ಯಕ್ಕೆ ಹೈದರ್ ಅಲಿ ನುಗ್ಗಿ ಬಿದನೂರನ್ನು 1763ರಲ್ಲಿ ವಶಪಡಿಸಿಕೊಂಡ. ವಿಜಯನಗರ ಸಾಮ್ರಾಜ್ಯಕ್ಕೆ ಅನುಪಮ ಸೇವೆ ಸಲ್ಲಿಸಿ ಅದರ ಸಂಪ್ರದಾಯ ಧ್ಯೇಯಗಳನ್ನು ಸಮರ್ಥವಾಗಿ ಮುಂದುವರಿಸಿ ಸೋದೆ, ಬಿಳಗಿ, ತರೀಕೆರೆ, ಬಸವಾಪಟ್ಟಣ, ಚಿತ್ರದುರ್ಗ ಮುಂತಾದುವುಗಳ ಚಿಕ್ಕಪುಟ್ಟ ಅರಸುಗಳ ಕೂಡ ಒಡನಾಟ ಬಡಿದಾಟಗಳೊಡನೆ ರಾಜ್ಯನಿರ್ವಹಣೆ ಮಾಡಿ ಭಾರಿ ಶತ್ರುಗಳಾದ ಆದಿಲ್‌ಶಾಹೀ, ಮುಗಲರು, ಮರಾಠರು ಮತ್ತು ಮೈಸೂರು ಅರಸರೊಡನೆ ಯುದ್ಧ ಹೂಡಿ, ವಿದೇಶೀಯರಾದ ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಇಂಗ್ಲಿಷರೊಡನೆ ವ್ಯಾಪಾರಕ್ಕಾಗಿ ಕುಶಲ ವ್ಯವಹಾರ

ನಡೆಸಿ ಸು.250 ವರ್ಷಗಳ ಕಾಲ ಕರ್ನಾಟಕದ ಪ್ರಬಲ ರಾಜಕೀಯ ಶಕ್ತಿಯಾಗಿದ್ದ ಕೆಳದಿ ರಾಜ್ಯ ಕೊನೆಗೊಂಡಿತು. (ಜಿ.ಎಸ್.ಡಿ.;ಎಚ್.ವಿ.ಎಸ್.)

**ಆಡಳಿತ ವ್ಯವಸ್ಥೆ :** ಕೆಳದಿ ಅರಸರ ಆಡಳಿತ ಕ್ರಮ ವಿಜಯನಗರದ ಆಡಳಿತ ಪದ್ಧತಿಯನ್ನೇ ಅನುಸರಿಸಿತ್ತು. ಈ ನಾಯಕರು ಸಾಮಂತರಾಗಿದ್ದಾಗಲೂ ತಮ್ಮ ರಾಜ್ಯದೊಳಗೆ ಪೂರ್ಣ ಸ್ವತಂತ್ರರಾಗಿದ್ದರು. ರಾಜಮನೆತನ ವಂಶಪಾರಂಪರ್ಯವಾಯಿತು. ಎಲ್ಲ ವಿಷಯಗಳಲ್ಲಿಯೂ ರಾಜನದೇ ಸರ್ವೋಚ್ಚ ಅಧಿಕಾರ. ರಾಜ ಪಟ್ಟಕ್ಕೇರುವಾಗ ವೈಭವದಿಂದ ಪಟ್ಟಾಭಿಷೇಕ ನಡೆಸಿಕೊಳ್ಳುತ್ತಿದ್ದ. ಸಾಮಾನ್ಯವಾಗಿ ರಾಜನ ಹಿರಿಯಮಗನೇ ಯುವರಾಜ; ಯುವರಾಜನನ್ನಾರಿಸುವ ಅಧಿಕಾರವೂ ರಾಜನದೇ. ಕೆಲವು ವೇಳೆ ರಾಜರು ತಮ್ಮ ರಾಜಪದವಿಯನ್ನು ಮಕ್ಕಳಿಗೆ ಒಪ್ಪಿಸಿ ತಾವು ವಿಶ್ರಮಿಸುತ್ತಿದ್ದುದೂ ಉಂಟು. ಸದಾಶಿವನಾಯಕ ತನ್ನ ರಾಜ್ಯವನ್ನು ಭದ್ರಪ್ಪನಾಯಕನಿಗೆ ಒಪ್ಪಿಸಿ ತಾನು ಕಾಡಿಗೆ ಹೋದನೆಂದು ಶಿವತತ್ತ್ವ ರತ್ನಾಕರ ತಿಳಿಸುತ್ತದೆ. ವೆಂಕಟಪ್ಪನಾಯಕ ತನ್ನ ಮೊಮ್ಮಗ ವೀರಭದ್ರನಾಯಕನಿಗೆ ರಾಜ್ಯಭಾರವನ್ನು ವಹಿಸಿ ತಾನು ವಿಶ್ರಾಂತಿಯನ್ನು ಪಡೆದನಂತೆ. ಉತ್ತರಾಧಿಕಾರಿ ಕಿರಿಯವನಿದ್ದಾಗ ರಾಜಪ್ರತಿನಿಧಿ ಆಳುತ್ತಿದ್ದುದುಂಟು. ವೆಂಕಟಪ್ಪನಾಯಕನ ಮೊಮ್ಮಗ ವೀರಭದ್ರನಾಯಕ ಚಿಕ್ಕವನಿದ್ದಾಗ ಶಿವಪ್ಪನಾಯಕ ಅವನ ಪರವಾಗಿ ರಾಜ್ಯಭಾರ ನಡೆಸಿದ.

ಪ್ರಜೆಗಳ ರಕ್ಷಣೆ ರಾಜರ ಆದ್ಯಕರ್ತವ್ಯವಾಗಿದ್ದು ನ್ಯಾಯನಿರ್ವಹಣೆಯಲ್ಲಿ ಅವರು ವಿಶೇಷ ಆಸಕ್ತಿ ವಹಿಸುತ್ತಿದ್ದರು. ರಾಜ್ಯದ ಅಭಿವೃದ್ಧಿಗಾಗಿ ಅನೇಕ ಉಪಯೋಗಿ ಕೆಲಸಗಳನ್ನು ಅವರು ಮಾಡಿಸಿರುವುದನ್ನು ಕಾಣಬಹುದು. ಹಲವು ಅಗ್ರಹಾರಗಳನ್ನು, ಕೆರೆ ದೇವಾಲಯಗಳನ್ನು ಕಟ್ಟಿಸಿದುದಲ್ಲದೆ ರಾಜ್ಯದಲ್ಲಿ ವ್ಯಾಪಾರದ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಆರ್ಥಿಕವಾಗಿ ಕೆಳದಿರಾಜ್ಯ ಸುಭದ್ರವಾಗುವಂತೆ ಮಾಡಿದ್ದರು. ಆಡಳಿತದಲ್ಲಿ ರಾಜರಿಗೆ ನೆರವಾಗಲು ಪ್ರಧಾನರು, ಮಂತ್ರಿಗಳು ಇರುತ್ತಿದ್ದರು. ಆಡಳಿತಾಂಗಕ್ಕೆ ಸಂಬಂಧಿಸಿದಂತೆ ಕರಣಿಕರು, ಭಂಡಾರಿ, ಪಾರುಪತ್ಯಗಾರ, ಸೇನಬೋವ, ನಾಡಧಿಕಾರಿ ಮೊದಲಾದ ಅಧಿಕಾರಿಗಳ ಹೆಸರುಗಳು ಕಂಡುಬರುತ್ತವೆ.



ದೇವಗಂಗೆ

ವಿಸ್ತಾರವಾಗಿದ್ದ ಸಂಸ್ಥಾನವನ್ನು ಆಡಳಿತದ ಸೌಲಭ್ಯಕ್ಕಾಗಿ ಹಲವು ಭಾಗಗಳಾಗಿ ವಿಂಗಡಿಸಲಾಗಿತ್ತು. ಮಂಡಲ, ರಾಜ್ಯ, ಕಂಪಣ, ವೇಂಠೆಯ, ನಾಡು, ಹೋಬಳಿ, ಸೀಮೆ, ಸ್ಥಳ, ಪೇಟೆ, ಗ್ರಾಮ ಮೊದಲಾದ ಹೆಸರುಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಆದರೆ ರಾಜ್ಯವನ್ನು ಭಾಗ ಅಥವಾ ಉಪಭಾಗಗಳಾಗಿ ವಿಂಗಡಿಸುವಲ್ಲಿ ಯಾವ ಒಂದು ನಿರ್ದಿಷ್ಟವಾದ ನಿಯಮವನ್ನೂ ಪಾಲಿಸುತ್ತಿದ್ದಂತೆ ತೋರದು. ಗ್ರಾಮವೇ ಚಿಕ್ಕ ಆಡಳಿತ ಭಾಗವಾಗಿದ್ದು ಅದರ ಆಡಳಿತ ಭಾಗವನ್ನು ನೋಡಿಕೊಳ್ಳಲು ಪಾರುಪತ್ಯಗಾರರಿರುತ್ತಿದ್ದರು. ಸುಂಕಸಾರಿಗೆಗಳನ್ನು ಎತ್ತುವುದು, ದುರ್ಗಗಳ ರಕ್ಷಣೆ, ಗ್ರಾಮಾಡಳಿತದ ಹೊಣೆ ಈ ಪಾರುಪತ್ಯಗಾರರಿಗೆ ಸೇರಿದ್ದು ರಾಜ್ಯ ನಿರೂಪ ಇವರಿಗೆ ಕಳುಹಿಸಲಾಗುತ್ತಿತ್ತು. ನಾಡಧಿಕಾರಿಗಳು ನಾಡಿನ ಆಡಳಿತಕ್ಕೆ ಹೊಣೆಗಾರರಾಗಿದ್ದರು. ದಾನದತ್ತಿಗಳನ್ನು ಕೊಡುವಾಗ ಈ ಅಧಿಕಾರಿಗಳು, ನಾಡಿನವರು, ಗಣಪಣಗಳು ಮತ್ತು ಗ್ರಾಮಾಧಿಕಾರಿಗಳ ಒಪ್ಪಿತವನ್ನು ಪಡೆಯುತ್ತಿದ್ದರು. ಸೇನಬೋವ ಗ್ರಾಮಗಳಲ್ಲಿ ನಡೆಯುವ ಎಲ್ಲ ಆಡಳಿತ ವ್ಯವಹಾರಗಳನ್ನೂ ಬರೆದಿಡುವ ಅಧಿಕಾರಿ. ದಾನ, ಕ್ರಯ, ವರ್ಗಾವಣೆ ಮುಂತಾದ ಯಾವ ವ್ಯವಹಾರವಾದರೂ ಅದನ್ನು ಸೇನಬೋವನ ಕಡತದಲ್ಲಿ ನಮೂದಿಸಬೇಕಾಗಿತ್ತು.

ಇಕ್ಕೇರಿಯ ಅಘೋರೇಶ್ವರ ದೇವಾಲಯ, ಮುಂಭಾಗದ ಒಂದು ನೋಟ

**ಆರ್ಥಿಕ-ಸಾಮಾಜಿಕ ಸ್ಥಿತಿ :** ರಾಜ್ಯದ ಬೊಕ್ಕಸಕ್ಕೆ ಭೂಮಿಯ ಮೇಲಿನ ಕಂದಾಯವಲ್ಲದೆ ಅನೇಕ ಬಗೆಯ ತೆರಿಗೆ ಸುಂಕಗಳ ಮೂಲಕ ಆದಾಯ ಬರುತ್ತಿತ್ತು. ನಾಯಕರ ಕಾಲದಲ್ಲಿ ಭೂ ಕಂದಾಯವನ್ನೆತ್ತಲು ಅತ್ಯಂತ ಉತ್ತಮವಾದ ಪದ್ಧತಿ ಆರಂಭವಾಯಿತು. ಶಿವಪ್ಪನಾಯಕನ ಶಿಸ್ತು ಎಂದು ಪ್ರಸಿದ್ಧವಾಗಿರುವ ಭೂ ಸುಧಾರಣೆಯ ಪದ್ಧತಿಯನ್ನು ಜಾರಿಗೆ ತಂದ ಶಿವಪ್ಪನಾಯಕ ಭೂಮಿಯನ್ನು ಸರ್ಕಾರದ ಖರ್ಚಿನಿಂದ ಸಾಗುವಳಿ ಮಾಡಿಸಿ ಅದರ ಹುಟ್ಟುವಳಿಯ ಮೇಲೆ ರಾಜಾದಾಯವನ್ನು ಗೊತ್ತುಪಡಿಸಿದ. ಭೂಮಿಯನ್ನು ಅಳತೆ ಮಾಡಿಸಿದುದಲ್ಲದೆ ಉತ್ತಮ, ಮಧ್ಯಮ, ಕನಿಷ್ಠ, ಅಧಮ ಮತ್ತು ಕೀಳು ಎಂದು ಐದು ಬಗೆಯಾಗಿ ವಿಭಾಗಮಾಡಿ ಆಯಾ ಭೂಮಿಯ ಉತ್ಪತ್ತಿಯ ಪ್ರಮಾಣಕ್ಕನುಸಾರವಾಗಿ ಕಂದಾಯವನ್ನು ಗೊತ್ತುಪಡಿಸಿದ. ಇದರಿಂದ ಕೃಷಿಕರು ನ್ಯಾಯವಾದ ಕಂದಾಯವನ್ನು ಸರ್ಕಾರಕ್ಕೆ ಸಲ್ಲಿಸುವಂತಾದುದೇ ಅಲ್ಲದೆ ಕಂದಾಯವನ್ನು ಕೊಡದೆ ತಪ್ಪಿಸಿ ಕೊಳ್ಳಲೂ ಸಾಧ್ಯವಿಲ್ಲದಂತಾಗಿ ರಾಜ್ಯದ ಆದಾಯ ಹೆಚ್ಚಿತು. ಹೀಗೆ ಆಧುನಿಕ ರೀತಿಯ ಭೂಕಂದಾಯವನ್ನು ನಿರ್ಧರಿಸಿದವರಲ್ಲಿ ಕೆಳದಿ ನಾಯಕರು ಮೊದಲಿಗರು. ಇದರೊಂದಿಗೆ ಸಿದ್ದಾಯ, ಬಿಟ್ಟಿ, ಬಿರಾಡ, ಮೇಲುವಣ, ಸ್ಥಳಸುಂಕ, ಉಂಬಳಿ, ವರ್ತನೆ, ಮಡಿಹಡಿಕೆ, ದಿವಗಾರಿಕೆ, ಬನದಸೋಗೆ, ಹರವರಿ, ಉಡುಗೊರೆ, ಸೇನಬೋವನ ವರ್ತನೆ, ಮಣಿಹದ ವಾರ, ಅರೆವಾಸಿ, ಸಂಬಂಧಗಾಣಿಕೆ, ಮೂಲವೀಸ ಮುಂತಾದ ಹಲವು ರೀತಿಯ ತೆರಿಗೆಗಳೂ ಸಾಮಾನುಸರಂಜಾಮುಗಳ ಸಾಗಾಣಿಕೆಯ ಮೇಲಿನ ಸುಂಕಗಳೂ ರಾಜ್ಯದ ಮುಖ್ಯ ಆದಾಯ ಮೂಲಗಳಾಗಿದ್ದುವು. ಹೊರಗಿನಿಂದ ಬರುತ್ತಿದ್ದ ಹಡಗು ಮತ್ತು ದೋಣಿಗಳ ಮೇಲೆ ಸುಂಕ ವಿಧಿಸುತ್ತಿದ್ದುದಲ್ಲದೆ ಊರಿಂದ ಊರಿಗೆ ಸಾಮಾನು ಸಾಗಿಸುತ್ತಿದ್ದ ಎತ್ತಿನ ಹೇರು ಮತ್ತು ತಲೆಹೊರೆಗಳ ಮೇಲೂ ಸುಂಕದ ಠಾಣೆಗಳಲ್ಲಿ ಸುಂಕವನ್ನು ಎತ್ತುತ್ತಿದ್ದರು. ಗುತ್ತಿ, ಆರಗ, ಕುಪಟೂರು, ಕಳಸ ಮುಂತಾದ ಅನೇಕ ಊರುಗಳಲ್ಲಿ ಇಂಥ ಸುಂಕದ ಠಾಣೆಗಳಿದ್ದುವು. ಮುಖ್ಯವಾಗಿ ಘಟ್ಟದ ಕೆಳಗಿನಿಂದ ಮೇಲಕ್ಕೆ ಸಾಗುತ್ತಿದ್ದ ಎತ್ತಿನ ಹೇರುಗಳ ಮೇಲಿನ ಸುಂಕದ ವಿವರಗಳು ಅನೇಕ ತಾಮ್ರಶಾಸಗಳಲ್ಲಿ ಬರುತ್ತವೆ. ಯುರೋಪಿನ ದೇಶಗಳೊಂದಿಗೆ ಭಟ್ಕಳದ ಮೂಲಕ ಮೆಣಸು ಮೊದಲಾದ ಸಂಬಾರ ಪದಾರ್ಥಗಳ ವ್ಯಾಪಾರ ಹೇರಳವಾಗಿ ಅಭಿವೃದ್ಧಿಯಾಯಿತು. ಈ ಪದಾರ್ಥಗಳಿಗೆ ಬದಲಾಗಿ ಅರಬ್ಬೀ ಕುದುರೆಗಳು ಮತ್ತು ಬೆಲೆ ಬಾಳುವ ಪದಾರ್ಥಗಳು ಹೊರಗಿನಿಂದ ಬರುತ್ತಿದ್ದುವು. ಇದರಿಂದ ರಾಜ್ಯದ ಆರ್ಥಿಕ ಸ್ಥಿತಿ ಸುಭದ್ರವಾಗಿತ್ತು. ರಾಜರು ಅನೇಕ ಮಠಗಳಿಗೆ, ದೇವಾಲಯಗಳಿಗೆ,

ಅನ್ನಛತ್ರಗಳಿಗೆ ಭೂಮಿಯನ್ನು ಉತ್ತಾರ ಹಾಕಿಕೊಟ್ಟಿದ್ದಾರೆ. ಸ್ಥಳದಿಂದ, ಸ್ಥಳಕ್ಕೆ ಸಾಗಿಸುತ್ತಿದ್ದ ಅನೇಕ ಸರಕುಗಳ ಮೇಲಿನ ಸುಂಕವನ್ನು ಈ ಮಠಮಾನ್ಯಗಳ ವೆಚ್ಚಕ್ಕಾಗಿ ಬಿಟ್ಟು ನೂರಾರು ತಾಮ್ರಶಾಸನಗಳನ್ನು ಹಾಕಿಸಿದ್ದಾರೆ. ಅನೇಕ ಮಹತ್ತಿನ ಮಠಗಳು, ಶೃಂಗೇರಿ, ಕೂಡಲಿ, ಉಡುಪಿ ಮುಂತಾದ ಮಠಗಳು ಇಂಥ ದತ್ತಿಗಳನ್ನು ಪಡೆದುವು. ಭೂಮಿಯ ಒಡೆತನ ವಂಶಪಾರಂಪರ್ಯವಾಗಿತ್ತು. ರಾಜ್ಯದ ಕೆಲವುಭಾಗಗಳಲ್ಲಿ ಅಳಿಯಸಂತಾನಕಟ್ಟು ಜಾರಿಯಲ್ಲಿತ್ತು. ಮಕ್ಕಳಿಲ್ಲದವರ ಆಸ್ತಿಗೆ ಅಣ್ಣತಮ್ಮಂದಿರೋ ಜ್ಞಾತಿಗಳೋ ಹಕ್ಕುದಾರರಾಗಿದ್ದರು. ಅವರಿಲ್ಲದಾಗ ಮೃತನ ಹೆಂಡತಿಗೂ, ಅವಳೂ ಇಲ್ಲದಾಗ ಕೆರೆ ಕಟ್ಟಿಸಲೋ ದೇವಸ್ಥಾನಗಳಿಗೋ ಆಸ್ತಿ ಸೇರಬೇಕೆಂದು ನಿಯಮವಿತ್ತು.

ಕೆಳದಿಯ ವೀರಭದ್ರ ದೇವಾಲಯದ ಮುಂದಿರುವ ದೀಪಸ್ತಂಭ

ಎಲ್ಲ ಮತಗಳಿಗೂ ಕೆಳದಿ ನಾಯಕರು ಸಮಾನ ಪ್ರೋತ್ಸಾಹ ನೀಡುತ್ತಿದ್ದುದರಿಂದ ಶೈವ, ವೈಷ್ಣವ, ಇಸ್ಲಾಂ, ಕ್ರೈಸ್ತ ಮುಂತಾದ ಮತಗಳ ಜನರೆಲ್ಲ ಒಟ್ಟಾಗಿ ಬಾಳುತ್ತಿದ್ದರು. ಜಾತಿಮತಗಳು ಅನೇಕ ಬಗೆಯಾಗಿ ಹರಡಿ ಹಲವು ಉಪಜಾತಿಗಳೂ ಕುಲಗಳೂ ಹುಟ್ಟಿಕೊಂಡಿದ್ದುವು. ಹದಿನೆಂಟು ಜಾತಿ ನೂರೊಂದು ಕುಲಗಳಿದ್ದುವೆಂದು ಶಾಸನಗಳು ಸೂಚಿಸುತ್ತವೆ. ಬ್ರಾಹ್ಮಣರು ವಿದ್ಯಾಪೀಠಗಳಲ್ಲಿ ದೇವಾಲಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದು ವಿದ್ಯಾವಂತರೆನಿಸಿಕೊಂಡಿದ್ದರು. ಇವರಲ್ಲಿ ಹಲವರು ಉನ್ನತ ಹುದ್ದೆಗಳಲ್ಲಿದ್ದು ಆಡಳಿತಗಾರರೂ ದಂಡನಾಯಕರೂ ಮಂತ್ರಿಗಳೂ ಆಗಿದ್ದರು. ವೃತ್ತಿ ಸಂಘಗಳೂ ವಣಿಕ್‌ಶ್ರೇಣಿಗಳೂ ಪ್ರಬಲವಾಗಿದ್ದುವು. ರಾಜರಿಗೆ ಹಲವರು ಪತ್ನಿಯರಿರುತ್ತಿದ್ದರು. ಅದರಂತೆ ಶ್ರೀಮಂತ ವರ್ಗವೂ ಒಬ್ಬಳಿಗಿಂತ ಹೆಚ್ಚು ಮಂದಿ ಹೆಂಡಿರನ್ನು ಹೊಂದಲು ಅವಕಾಶವಿತ್ತು. ಗಂಡ ತೀರಿಕೊಂಡಾಗ ಹೆಂಡತಿ ಸಹಗಮನ ಮಾಡುವ ಸತಿಪದ್ಧತಿ ವಿಶೇಷವಾಗಿ ಜಾರಿಯಲ್ಲಿತ್ತು. ಈ ರಾಜ್ಯದ ನಾನಾ ಭಾಗಗಳಲ್ಲಿ ದೊರೆತಿರುವ ನಾಯಕರ ಕಾಲದ ಒಕ್ಕೈಮಾಸ್ತಿಕಲ್ಲುಗಳು, ಮಹಾಸತಿಯ ಮೂರ್ತಿಯನ್ನು ಬಿಡಿಸಿರುವ ಶಿಲ್ಪಗಳು ಊರೂರಿನಲ್ಲಿಯೂ ಗುಂಪುಗುಂಪಾಗಿ ದೊರೆತಿರುವುದನ್ನು ನೋಡಿದಲ್ಲಿ ಈ ಪದ್ಧತಿ ಎಷ್ಟು ವಿಸ್ತಾರವಾಗಿ ಹರಡಿತ್ತೆಂಬುದು ಸ್ಪಷ್ಟಪಡುವುದು. ರಾಜರು, ದಂಡನಾಯಕರು ಮೊದಲಾದ ಅಧಿಕಾರಿಗಳು ತೀರಿದಾಗ ಮಾತ್ರವಲ್ಲ, ಸಾಮಾನ್ಯ ಪ್ರಜೆಗಳು ತೀರಿಕೊಂಡಾಗಲೂ ಅವರ ಹೆಂಡಿರು ತಮ್ಮ ಗಂಡನ ಜೊತೆ ಚಿತೆಯೇರಿಯೋ, ಗುಣಿಯಲ್ಲಿ ಹೂಳಲ್ಪಟ್ಟೋ ಸಹಗಮನ ಮಾಡುತ್ತಿದ್ದ ಹಲವು ಸಂದರ್ಭಗಳು ಶಾಸನಗಳಲ್ಲಿ, ಕಾವ್ಯಗಳಲ್ಲಿ ಹಾಗೂ ಹೊರದೇಶದ ಯಾತ್ರಿಕರ ವರ್ಣನೆಗಳಲ್ಲಿ ಕಂಡುಬರುತ್ತವೆ. ಶಿವಪ್ಪನಾಯಕನೊಂದಿಗೆ ಅವನ ಹೆಂಡಿರಲ್ಲಿ ಇಬ್ಬರು -- ಲಿಂಗಮ್ಮಾಜಿ, ನಾಗಮ್ಮಾಜಿ, ಸಹಗಮನ ಮಾಡಿದರು. ಸಹಗಮನವನ್ನು ಕಣ್ಣಾರೆ ಕಂಡ ಯಾತ್ರಿಕ ಪೆಟ್ರೋಡೆ ಲ ವೆಲ್ಲೆ ಸತಿಯರಾಗುತ್ತಿದ್ದ ಹೆಂಗಸರು ಸ್ವಂತ ಇಚ್ಛೆಯಿಂದ ಆಚರಿಸುತ್ತಿದ್ದದ್ದನ್ನೂ, ಅವರ ಧೈರ್ಯ ಸ್ಥೈರ್ಯಗಳನ್ನೂ ಮೆಚ್ಚಿ ಸಹಗಮನ ನಡೆಯುತ್ತಿದ್ದ ರೀತಿಯನ್ನೂ ವಿವರಿಸಿದ್ದಾನೆ. ವಿಜಯನಗರದಲ್ಲಿ ಇದ್ದಂತೆ ವೇಶ್ಯಾಸ್ತ್ರೀಯರು ರಾಜಾಸ್ಥಾನಗಳಲ್ಲಿ ಇರುತ್ತಿದ್ದರು.

**ಲಲಿತ'ಕಲೆ', ಸಾಹಿತ್ಯ :** ವೈಭವದಿಂದ ಜರುಗುತ್ತಿದ್ದ ರಾಜರ ಒಡ್ಡೋಲಗಗಳು ಸಂಗೀತ, ನೃತ್ಯಗಳಿಗೆ ಪ್ರೋತ್ಸಾಹ ದೊರಕಲು ಅವಕಾಶ ಮಾಡಿಕೊಟ್ಟಿದ್ದುವು. ಹಬ್ಬ ಹರಿದಿನಗಳಲ್ಲಿ ಅರಮನೆ, ದೇವಾಲಯಗಳಲ್ಲಿ ವಿಶೇಷವಾದ ಉತ್ಸವಗಳು, ನೃತ್ಯ ಮೇಳ ಸಂಗೀತ ಕುಸ್ತಿ ಮುಂತಾದುವು ನಡೆಯುತ್ತಿದ್ದುವು. ನಾಟ್ಯಶಾಲೆಗಳಿದ್ದುದಕ್ಕೂ ಆಧಾರಗಳಿವೆ. ವೆಂಕಟಪ್ಪನಾಯಕ ನಾಟ್ಯಶಾಲೆಯೊಂದನ್ನು ಕಟ್ಟಿಸಿದ್ದ.

ನಾಯಕರು ಸಾಹಿತ್ಯರಚನೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಅನೇಕ ಶಾಸ್ತ್ರಗ್ರಂಥ'ಗಳೂ ಕಾವ್ಯಗಳೂ ಇವರ ಆಸ್ಥಾನದ ವಿದ್ವಾಂಸರಿಂದ ರಚಿತವಾದವು. ವೆಂಕಟಪ್ಪನಾಯಕನ ಆಸ್ಥಾನದಲ್ಲಿ ತಿರುಮಲಭಟ್ಟ, ರಂಗನಾಥ ದೀಕ್ಷಿತ, ಅಶ್ವಪಂಡಿತ, ಭಟ್ಟೋಜಿ ದೀಕ್ಷಿತ ಮೊದಲಾದ ಪಂಡಿತರಿದ್ದರು. ಅವರು ಶಿವಗೀತ, ಶಿವಾಷ್ಟಪದಿ, ತಂತ್ರಸಾರಭಾಷ್ಯ, ಮಾನಪ್ರಿಯ, ತತ್ತ್ವಕೌಸ್ತುಭ ಮೊದಲಾದ ಶಾಸ್ತ್ರ ಗ್ರಂಥಗಳನ್ನು ರಚಿಸಿದ್ದಾರೆ. ಸ್ವತಃ ನಾಯಕರೇ ಸಾಹಿತ್ಯರಚನೆ ಮಾಡಿದ್ದಾರೆ. ಬಸವಪ್ಪನಾಯಕ ಶಿವತತ್ತ್ವರತ್ನಾಕರವೆಂಬ ವಿಶ್ವಕೋಶಸದೃಶ ಉದ್ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ತನ್ನ ವಂಶದ ಚರಿತ್ರೆಯನ್ನೂ ಸೇರಿಸಿದ್ದಾನೆ. ಸುಭಾಷಿತ ಸುರದ್ರುಮ ಎಂಬುದೂ ಈತನಿಂದ ರಚಿತವಾದುದು. ಸೋಮಶೇಖರ ನಾಯಕನ ಮಂತ್ರಿ ನಿರ್ವಾಣಯ್ಯ ಶಿವಪೂಜಾವಿಧಾನವನ್ನೂ ಇಮ್ಮಡಿ ಬಸವಪ್ಪನಾಯಕನ ಮಂತ್ರಿ ಷಡಕ್ಷರಿ ವೀರಶೈವಧರ್ಮ ಶಿರೋಮಣಿಯನ್ನೂ ಮರಿತೋಂಟದಾರ್ಯನೆಂಬ ಕವಿ ವೀರಶೈವಾನಂದ ಚಂದ್ರಿಕೆಯನ್ನೂ ಬರೆದಿದ್ದಾರೆ. (ಎಂ.ಎಚ್.)



ರಾಮೇಶ್ವರ ದೇವಾಲಯ

**ವಾಸ್ತು ಶಿಲ್ಪ :** ಕೆಳದಿ ಅರಸರ ಆಳಿಕೆಗೆ ಸಂಬಂಧಿಸಿದ ಶಿವತತ್ತ್ವರತ್ನಾಕರ, ಕೆಳದಿನೃಪವಿಜಯ ಮುಂತಾದ ಸ್ಥಳೀಯ ಕೃತಿಗಳಲ್ಲೂ ಪಯೆಸ್, ಡೆ ಲ ವೆಲ್ಲೆ ಮುಂತಾದ ವಿದೇಶೀಯರ ಬರೆಹಗಳಲ್ಲೂ ಅನೇಕ ಸಮಕಾಲೀನ ಕೋಟೆಕೊತ್ತಳಗಳ, ಸುಂದರ ನಗರಗಳ ವೈಭವಯುತ ಅರಮನೆ ಮತ್ತು ದೇವಾಲಯಗಳ ವರ್ಣನೆಗಳು ದೊರಕುತ್ತವೆ. ಈ ವಾಸ್ತು ಕೃತಿಗಳಲ್ಲಿ ಹಲವು ಇಂದಿಗೂ ಉಳಿದುಬಂದಿವೆ.

ಸಮಕಾಲೀನ ಕ್ಷಾತ್ರವಾಸ್ತುಗಳ ಪೈಕಿ ಶಿವಮೊಗ್ಗ ಜಿಲ್ಲೆಯ ನಗರದಲ್ಲಿರುವ (ಬಿದನೂರು) ಕೋಟೆ ಇದ್ದುದರಲ್ಲಿ ಒಳ್ಳೆಯ ಸ್ಥಿತಿಯಲ್ಲಿ

ಉಳಿದಿದೆ. ಕೆಳದಿ ಅರಸರು ತಮ್ಮ ರಾಜಧಾನಿಯನ್ನು 1638ರ ಹೊತ್ತಿಗೆ ಅಲ್ಲಿಗೆ ಬದಲಾಯಿಸಿದ್ದರೂ ಈಗ ಅಲ್ಲಿರುವ ಬಹುತೇಕ ಕಟ್ಟಡಗಳನ್ನು ಶಿವಪ್ಪನಾಯಕನ ಕಾಲದಲ್ಲಿ ಕಟ್ಟಿರಬಹುದೆಂದು ನಂಬಲಾಗಿದೆ. ಕೆಳದಿ ರಾಜವಂಶದ ಪತನದ (1763) ಅನಂತರ, ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲೂ ಈ ಕೋಟೆ ಊರ್ಜಿತ ಸ್ಥಿತಿಯಲ್ಲಿದ್ದು, ಅನಂತರ ಶಿಥಿಲವಾಗಲಾರಂಭಿಸಿತು. ಕೋಟೆ ಪೂರ್ಣವಾಗಿ ಕಲ್ಲು ಕಟ್ಟಡ; ವಿನ್ಯಾಸದಲ್ಲಿ ಮಾವಿನಕಾಯಂತಿದ್ದು ಸುತ್ತಲೂ ಕಂದಕದಿಂದ ಆವೃತ್ತವಾಗಿದೆ. ಅದೇ ಜಿಲ್ಲೆಯ ಚನ್ನಗಿರಿಯಲ್ಲಿ ಎರಡು ಸುತ್ತಿನ ಕೋಟೆಯಿದೆ. ಅದು ರಾಣಿ ಚೆನ್ನಮ್ಮಾಜಿ ಕಟ್ಟಿಸಿದ್ದೆಂದು ತಿಳಿದುಬರುತ್ತದೆ. ಹಾಗೆಯೇ ಕವಲೆದುರ್ಗ, ಹೊನ್ನಾವರ, ಕುಮಟ, ಭಾರಂಗಿ ಮುಂತಾದೆಡೆಗಳಲ್ಲೂ ಆ ಕಾಲದ ಕೋಟೆಗಳ ಅವಶೇಷಗಳಿವೆ.



ಇಕ್ಕೇರಿಯ ಅಘೋರೇಶ್ವರ ದೇವಾಲಯ, ಪ್ರವೇಶದ್ವಾರದ ಹೋರನೋಟ

ಲೌಕಿಕ ವಾಸ್ತುಕೃತಿಗಳಿಗೆ ಸಂಬಂಧಿಸಿದಂತೆ ನಗರದ ಒಳಕೋಟೆಯ ಒಳಭಾಗದಲ್ಲಿದ್ದ ಶಿವಪ್ಪನಾಯಕನ ಕಾಲದ ಅರಮನೆಯ ಕೆಲವು ಕಂಬಗಳು ಮತ್ತು ಅಡಿಪಾಯಗಳು ಮಾತ್ರವೆ ಉಳಿದಿವೆ. ಅವುಗಳಲ್ಲಿ ದರ್ಬಾರು, ಹಜಾರ, ಒಳಕೋಣೆ ಮುಂತಾದುವು ಇದ್ದ ಸ್ಥಳಗಳನ್ನು ಮಾತ್ರ ಗುರುತಿಸಬಹುದು. ಇಕ್ಕೇರಿ ಮತ್ತು ಕೆಳದಿಯ ಅರಮನೆಗಳಲ್ಲಿ ಏನೂ ಉಳಿದಿಲ್ಲವೆಂದೇ ಹೇಳಬಹುದು. ಈ ಕೋಟೆಗಳ ರಚನೆಯಲ್ಲಿ ಭಾರತೀಯ - ಇಸ್ಲಾಮೀ ಸಂಪ್ರದಾಯದ ಛಾಯೆ ಬಹುವಾಗಿ ಕಾಣುತ್ತದೆ. ಅಲ್ಲದೆ 17 ಮತ್ತು 18ನೆಯ ಶತಮಾನಗಳಲ್ಲಿ ದಕ್ಷಿಣ ಭಾರತದ ಐರೋಪ್ಯ ವಾಸ್ತುಶಿಲ್ಪಗಳ ಕೈವಾಡ, ಅಲ್ಲಿಯ ಸಂಪ್ರದಾಯದ ಪ್ರಭಾವ ಕೆಳದಿ ಕಟ್ಟಡಗಳಲ್ಲೂ ಇರುವ ಸೂಚನೆಗಳಿವೆ. ಇವುಗಳ ವ್ಯವಸ್ಥಿತ ಅಧ್ಯಯನ ಇನ್ನೂ ನಡೆದಿಲ್ಲ.

ಈ ಕಾಲದ ವೈಭವದ ದ್ಯೋತಕವಾದ ಕೆಲವು ಕೊಳಗಳು ಇನ್ನೂ ಒಳ್ಳೆಯ ಸ್ಥಿತಿಯಲ್ಲಿ ಉಳಿದಿವೆ. ಇವುಗಳಲ್ಲಿ ನಗರದ (ನೋಡಿ) ಸಮೀಪದಲ್ಲಿರುವ ದೇವಗಂಗೆ ಒಂದು ವಿಚಿತ್ರ ರೀತಿಯ ಕೃತಿ. ಇಲ್ಲಿ 285' ಉದ್ದ 98' ಅಗಲದ ಪ್ರಾಂಗಣದ ಮಧ್ಯೆ ಅನೇಕ ಕೊಳಗಳು ನಿರ್ಮಿತವಾಗಿವೆ. ಕೊಳಗಳ ತಳವಿನ್ಯಾಸ ಪದ್ಮ, ನಕ್ಷತ್ರ ಮುಂತಾದ ಆಕಾರಗಳಲ್ಲಿವೆ. ಇವೆಲ್ಲಕ್ಕೂ ಬೆಟ್ಟದೆಡೆಯಿಂದ ಹರಿಯುತ್ತಿದ್ದ ಚಿಕ್ಕ ಝರಿಯೊಂದನ್ನು ತಿರುಗಿಸಿ ನೀರು ಒದಗಿಸಲಾಗುತ್ತಿತ್ತು. ಈ ಕೊಳಗಳನ್ನು ಅಂತಃಪುರದವರ ಜಲಕ್ರೀಡೆಗಾಗಿ ಕಟ್ಟಲಾಗಿತ್ತೆಂದು ಪ್ರತೀತಿ. ಚಂಪಕಾ ಸರಸ್ಸು ಎಂದು ಕರೆಯುವ ಇನ್ನೊಂದು ಸುಂದರ ಕೊಳ ಶಿವಮೊಗ್ಗ ಜಿಲ್ಲೆಯ ಆನಂದಾಪುರದಲ್ಲಿದೆ.

ಕೆಳದಿ ಅರಸರ ಆಳಿಕೆಯ ಕಾಲದಲ್ಲಿ, ಅವರು ಆಳುತ್ತಿದ್ದ ಮಲೆನಾಡಿನ ಭಾಗಗಳಲ್ಲಿ ಒಂದು ವಿಶಿಷ್ಟ ರೀತಿಯ ದೇವಾಲಯ ರಚನಾಶೈಲಿ ಬೆಳೆದು ಬಂದಿತು. ಇದೇ ಕಾಲದಲ್ಲಿ ದಕ್ಷಿಣ ಭಾರತದ ಇತರೆಡೆಗಳಲ್ಲಿ ಪ್ರಚಲಿತವಾಗಿದ್ದ ವಿಜಯನಗರ ರೀತಿಯ ದ್ರಾವಿಡ ವಾಸ್ತುಶೈಲಿಯ ಮತ್ತು ಹಿಂದೆ ಇದೇ ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ಮೆರೆದಿದ್ದ ಹೊಯ್ಸಳ ವಾಸ್ತುಶೈಲಿಯ ಮಿಶ್ರಣ ಇಲ್ಲಿ ಕಂಡುಬರುತ್ತದೆ. ಈ ಸಂಕರ ಶೈಲಿಯನ್ನು ಇಕ್ಕೇರಿ ಶೈಲಿ ಅಥವಾ ಮಲೆನಾಡು ಶೈಲಿಯೆಂದು ಕರೆಯುವ ರೂಢಿಯಿದೆ. ಇಕ್ಕೇರಿಯಲ್ಲಿರುವ ಸು.1520ರಲ್ಲಿ ಕಟ್ಟಲಾಗಿರುವ ಅಘೋರೇಶ್ವರ ದೇವಾಲಯ ಈ ಶೈಲಿಗೆ ಒಳ್ಳೆಯ ಉದಾಹರಣೆ (ನೋಡಿ:ಇಕ್ಕೇರಿ). ಜಗತಿಯ ಮೇಲೆ ರಚಿತವಾಗಿರುವ ಈ ದೇವಾಲಯದ ತಳವಿನ್ಯಾಸ ಸುಮಾರು ಚತುರಸ್ರಾಕಾರವಾಗಿದೆ. ಆದರೆ ಪರಿಗದ ಓಟವನ್ನು ಅಲ್ಲಲ್ಲಿ ಹಿಂದಕ್ಕೆ ಮುಂದಕ್ಕೆ ಜಗ್ಗಿರುವುದರಿಂದ ಅಂಚುಗಳು ದಂತಪಂಕ್ತಿಯಂತೆ ಕಾಣುತ್ತವೆ. ಈ ಅಂಶಗಳು ಹೊಯ್ಸಳ ಶೈಲಿಯ ಅನುಕರಣೆ. ಗುಡಿಯಲ್ಲಿ ಗರ್ಭಗೃಹ, ತೆರೆದ ಸುಕನಾಸಿ ಮತ್ತು ಮುಂದೆ ಮಂಟಪ ಇವೆ. ಗರ್ಭಗೃಹದ ಹೊರಭಿತ್ತಿಯ ಮೇಲೆ ದೇವಕೋಷ್ಠಗಳು, ಸಿಂಹಪಟ್ಟಿಕೆ ಮತ್ತು ಗೋಪುರಗಳ ಅಲಂಕರಣವಿದೆ. ಸೂರಿನ ಭಾಗದಲ್ಲಿ 'S' ಆಕಾರದ ಕಪೋತವಿದೆ. ಮೇಲಿನ ಗೋಪುರ ಎರಡು ತಲಗಳಲ್ಲಿದೆ. ಚಿಕ್ಕ ಗೋಪುರಗಳ ಮತ್ತು ನಿಂತ ಸಿಂಹಗಳ ಶಿಲ್ಪಗಳಿಂದ ಇದು ಅಲಂಕೃತವಾಗಿದೆ. ಮಂಟಪದ ಹೊರಗೋಡೆಯ ಮೇಲೂ ಅಲ್ಪ ಉಬ್ಬಿನ ಶಿಲ್ಪಗಳು, ಜಾಲಂಧ್ರಗಳು ಮತ್ತು ಕಮಾನಿನಾಕೃತಿಯ ಕೋಷ್ಠಗಳು ಇವೆ. ಗರ್ಭಗೃಹದಲ್ಲಿ ಪ್ರದಕ್ಷಿಣಾಪಥವಿದೆ. ಈ ದೇವಾಲಯದಲ್ಲಿ ಆಳವಾಗಿ ಕೆತ್ತಿದ ದಿಂಡುಗಳ ಸರಗಳುಳ್ಳ ಜಗತಿ, ಸುಕನಾಸಿಯ ಮೇಲೆ ಚಾಚಣಿಕೆಯಿರುವ ಕಲ್ಲಿನ ಶಿಖರ, ಗುಂಡಾದ ಮತ್ತು ಷೋಡಶ ಮುಖದ ಕಂಬಗಳು, ದ್ವಾರ ಮತ್ತು ಹೊರಗೋಡೆಯ ಅಲಂಕರಣ ವಿನ್ಯಾಸಗಳು ಹೊಯ್ಸಳಶೈಲಿಯ ಅಂಶಗಳನ್ನೂ ತಲಗಳು ಮತ್ತು ದ್ವಾರವಿರುವ ಗೋಪುರ, ಚತುರಸ್ರಾಕಾರದ ಮಂಟಪ, ಸಿಂಹಬೋದಿಗೆಯನ್ನುಳ್ಳ ಅನೇಕ ಕಂಬಗಳು ಮತ್ತು ಅರೆಕಂಬಗಳು ಮತ್ತು ಸುಕನಾಸಿಯಿಂದಾರಂಭವಾಗುವ ಪ್ರದಕ್ಷಿಣಾ ಪಥ ಇವು ದ್ರಾವಿಡ ಶೈಲಿಯ ಅಂಶಗಳನ್ನೂ ತೋರಿಸುತ್ತವೆ.

ಮೇಲಿನ ಮಾದರಿಯಲ್ಲಿರುವ ಇಲ್ಲಿನ ಪಾರ್ವತಿ ಗುಡಿಯ ನವರಂಗದ ಬಾಗಿಲುವಾಡ ಮತ್ತು ಕಿಟಕಿಗಳಲ್ಲಿ ಚೂಪುತಲೆಯ ಕಮಾನುಗಳನ್ನು ಉಪಯೋಗಿಸಿರುವುದು ವಿಶೇಷ. ಈ ಅಂಶ ಭಾರತೀಯ ಮುಸ್ಲಿಮ್ ವಾಸ್ತುಶೈಲಿಯಿಂದ ಬಂದಿದ್ದಾಗಿದೆ.

ಸುಮಾರು 1512ರಲ್ಲಿ ಕಟ್ಟಿರಬಹುದಾದ ಕೆಳದಿಯ (ನೋಡಿ) ರಾಮೇಶ್ವರ ದೇವಾಲಯ ಇದೇ ಮಿಶ್ರಶೈಲಿಯಲ್ಲಿರುವ ಚಿಕ್ಕ ಕಟ್ಟಡ. ಈ ಗುಡಿಯ ಜಗತಿಯ ಹೊರಮೈಯ ಒಂದು ದಿಂಡಿನ ಮೇಲೆ ವಾದ್ಯಗಾರರ ಮತ್ತು ನರ್ತಕರ ಶಿಲ್ಪಗಳಿವೆ. ಮೇಲಿನ ಗೋಪುರ ಚತುರಸ್ರಾಕಾರದಲ್ಲಿದೆ. ವಿನ್ಯಾಸದಲ್ಲಿ ಗರ್ಭಗೃಹ, ಪ್ರದಕ್ಷಿಣ ಪಥಕ್ಕೆಡೆಯಿರುವ ಸುಕನಾಸಿ, ಚಿಕ್ಕ ನವರಂಗ ಮತ್ತು ಮುಖಮಂಟಪವಿರುವ ಈ ಗುಡಿಯ ಮುಂದಿನ ಮಂಟಪದಲ್ಲಿ ಸುತ್ತಲೂ ಒರಗು ಬೆಂಚುಗಳಿರುವುದು ವಿಶೇಷ. ಕೆಳದಿಯ ವೀರಭದ್ರ ದೇವಾಲಯ ರಚನೆ (ಸು.1530-40), ನಗರದ ನೀಲಕಂಠೇಶ್ವರ ಮತ್ತು ಆಂಜನೇಯ ದೇವಾಲಯಗಳು, ಹಂಪನೂರ ರಂಗನಾಥಸ್ವಾಮಿ ದೇವಸ್ಥಾನ, ಮೆಳಿಗೆಯ ಜೈನಬಸದಿ ಮೊದಲಾದ ಇದೇ ಕಾಲದ ಇತರ ಕಟ್ಟಡಗಳಲ್ಲೂ ಕೆಳದಿ ವಾಸ್ತುಸಂಪ್ರದಾಯದ ಅಚ್ಚನ್ನು ಕಾಣಬಹುದು.

ಕೆಳದಿಶೈಲಿಯ ಶಿಲ್ಪಗಳು ಸಮಕಾಲೀನ ವಿಜಯನಗರ ಮತ್ತು ಅನಂತರದ ಶಿಲ್ಪಸಂಪ್ರದಾಯದಲ್ಲೇ ಇವೆ. ವಾಸ್ತುರಚನೆಯಲ್ಲಿ ಹಲವು ಹೊಯ್ಸಳ ಅಂಶಗಳು ಈ ಕಾಲದ ಕಟ್ಟಡಗಳಲ್ಲಿ ಕಂಡುಬಂದರೂ ಅವುಗಳ

ರಚನೆಗೆ ಒರಟುಕಲ್ಲುಗಳನ್ನು ಉಪಯೋಗಿಸಿರುವುದರಿಂದ, ಹೊಯ್ಸಳ ಕಾಲದ ಶಿಲ್ಪಗಳ ನಯನಾಜೂಕು, ಸೂಕ್ಷ್ಮ ಅಲಂಕರಣಗಳು ಇವುಗಳಲ್ಲಿ ಮೂಡಿಬಂದಿಲ್ಲ. ದೇವಾಲಯಗಳ ಹೊರಗೋಡೆಗಳ ಶಿಲ್ಪಗಳು ವಾಸ್ತುವಿನ್ಯಾಸದಲ್ಲಿ ಹೊಯ್ಸಳ ಶೈಲಿಯ ಸ್ಥಾನವನ್ನೇ ಅಲಂಕರಿಸಿದ್ದರೂ ಒಂದೊಂದೇ ಶಿಲ್ಪಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿದರೆ ಇವು ಹೊಯ್ಸಳ ಶಿಲ್ಪಗಳ ಅತಿ ಅಸಮರ್ಪಕ ಅನುಕರಣೆಗಳಂತೆ ಕಾಣುತ್ತವೆ. ಶಿಲ್ಪಗಳಲ್ಲಿ ಸ್ವಲ್ಪಮಟ್ಟಿನ ಒರಟುತನ ಎದ್ದುಕಾಣುವ ಅಂಶ. ಹೆಚ್ಚಿನವೆಲ್ಲ ಶಾಸ್ತ್ರ ಮತ್ತು ಸಂಪ್ರದಾಯದ ಹಿಡಿತದಲ್ಲಿ ಸಿಕ್ಕಿಕೊಂಡು ಶಿಲ್ಪಿಯ ಸ್ವಪ್ರತಿಭೆಯ ಸುಲಭ ಪ್ರಕಟನೆಗೆ ದಾರಿಮಾಡಿಕೊಟ್ಟಿಲ್ಲ. ಆದರೆ ಇಕ್ಕೇರಿ ದೇವಾಲಯದ ನಂದಿ, ಕೆಳದಿಯ ವೀರಭದ್ರ ದೇವಾಲಯದ ಭುವನೇಶ್ವರಿಗಳು ಈ ಕಾಲದ ಉತ್ತಮ ಮಟ್ಟದ ಶಿಲ್ಪಗಳೆನ್ನಬಹುದು. ವೀರಭದ್ರ ದೇವಾಲಯದ ಗಂಡಭೇರುಂಡವಿರುವ ಭುವನೇಶ್ವರಿ ಒಂದು ಅಸದೃಶ ಕಲಾಕೃತಿ. ಈ ಕಾಲದ ದೇವಾಲಯಗಳ ಮೇಲಿರುವ ನರ್ತಕರು, ವಾದ್ಯಗಾರರು ಮುಂತಾದ ಶಿಲ್ಪಗಳೂ ಅನೇಕ ವೀರಗಲ್ಲು ಮತ್ತು ಮಾಸತಿಕಲ್ಲುಗಳೂ ಸಮಕಾಲೀನ ಸಾಮಾಜಿಕ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತವೆ.

**ನಾಣ್ಯಗಳು :** ಈ ವಂಶದ ಅರಸರ ಚಿನ್ನದ ನಾಣ್ಯಗಳು ಇಕ್ಕೇರಿ ವರಹಗಳು ಎಂದು ಪ್ರಸಿದ್ಧವಾಗಿವೆ. ಇವುಗಳಲ್ಲಿ ಸದಾಶಿವನಾಯಕನ ಕಾಲದವು ಮಾತ್ರ ದೊರಕಿವೆ. ಇತರ ಅರಸರ ಆಳಿಕೆಯಲ್ಲೂ ಇದೇ ರೀತಿಯ ನಾಣ್ಯಗಳನ್ನೇ ಪುನಃಪುನಃ ಅಚ್ಚುಹಾಕುತ್ತಿದ್ದರೆಂದೂ ಪ್ರಾಯಶಃ ಈ ಕಾರಣದಿಂದಲೇ ಆ ಅರಸುಮನೆತನದ ಇತರ ರಾಜರ ನಾಣ್ಯಗಳಾವುವೂ ದೊರೆತಿಲ್ಲವೆಂದೂ ಕೆಲವು ವಿದ್ವಾಂಸರ ಅಭಿಪ್ರಾಯ.

ಸದಾಶಿವನಾಯಕನ ನಾಣ್ಯಗಳು ವಿಜಯನಗರದ ಹರಿಹರ, ದೇವರಾಯ, ಸದಾಶಿವರಾಯ ಮುಂತಾದವರ ನಾಣ್ಯಗಳ ಮಾದರಿಯಲ್ಲಿವೆ. ವೃತ್ತಾಕಾರದ ಈ ನಾಣ್ಯಗಳ ಮುಮ್ಮುಖದಲ್ಲಿ ಬಲಗೈಯಲ್ಲಿ ತ್ರಿಶೂಲವನ್ನೂ ಎಡಗೈಯಲ್ಲಿ ಮೃಗವನ್ನೂ ಹಿಡಿದು, ಎಡತೊಡೆಯ ಮೇಲೆ ಪಾರ್ವತಿಯನ್ನು ಕುಳ್ಳಿರಿಸಿಕೊಂಡಿರುವ ಉಮಾಮಹೇಶ್ವರನ ಚಿತ್ರ, ಹಿಮ್ಮುಖದಲ್ಲಿ ಎರಡು ಅಥವಾ ಮೂರು ಅಡ್ಡ ಗೆರೆಗಳ ಮಧ್ಯೆ 'ಶ್ರೀಸದಾಶಿವ' ಎಂಬ ನಾಗರಾಕ್ಷರದ ಬರೆವಣಿಗೆ ಇವೆ. (ಎಸ್.ಎನ್.)

**ಕೆಳವಾಡಿ :** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ಸ್ಥಳ. ಬಾದಾಮಿಗೆ ಉತ್ತರದಲ್ಲಿ ಸು.18ಕಿಮೀ ದೂರದಲ್ಲಿದೆ. ಗುಳೇದಗುಡ್ಡ ರೋಡ್ ರೈಲ್ವೆ ನಿಲ್ದಾಣಕ್ಕೆ ಸಮೀಪದಲ್ಲಿದೆ. ಗ್ರಾಮದ ಪೂರ್ವಭಾಗಕ್ಕೆ ಕೊಳದ ತಟದಲ್ಲಿ ಸುಂದರವಾದ ಶಿಲ್ಪದಿಂದ ಕೂಡಿದ ಪ್ರಾಚೀನ ರಂಗನಾಥ ದೇವಾಲಯವಿದೆ. ಈ ಊರು ಈಗ ಚಿಕ್ಕ ಗ್ರಾಮವಾದರೂ ಯರಂಬರಿಗೆಯ ಸಿಂದರ ರಾಜ್ಯದಲ್ಲಿ ಇದು ಕೆಳವಾಡಿ 300 ಎಂಬ ಒಂದು ಮಂಡಲವಾಗಿದ್ದು ಆ ರಾಜ್ಯದ ಒಂದು ಮುಖ್ಯ ಊರಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. (ಎಸ್.ಜೆವಿ.)

**ಕೇಕಯ ವಂಶ :** ಸು.5-8ನೆಯ ಶತಮಾನಗಳ ಅವಧಿಯಲ್ಲಿ ಚಿತ್ರದುರ್ಗ, ಶಿವಮೊಗ್ಗ, ಹಾಸನ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿದ್ದ ಸಾಮಂತ ಮನೆತನ. ರಾಮಾಯಣಾದಿ ಗ್ರಂಥಗಳಲ್ಲಿ ಈ ಮನೆತನದ ಉಲ್ಲೇಖವಿದ್ದರೂ ಈ ವಂಶದವರು ಉತ್ತರ ಭಾರತದಲ್ಲಿ ಆಳಿದುದರ ಬಗ್ಗೆ ಶಾಸನೇತ್ಯಾದಿ ಚಾರಿತ್ರಿಕ ಆಧಾರಗಳು ಇಲ್ಲ. ಆದರೂ ಮೂಲತಃ ಈ ಮನೆತನದವರು ಪಂಜಾಬ್ ಪ್ರದೇಶದವರೆಂದೂ ಊಹಿಸಲಾಗಿದೆ. ಕರ್ನಾಟಕದಲ್ಲಿ ಈ ಮನೆತನಕ್ಕೆ ಸೇರಿದ ಹಲವರು ಶಾಸನೋಕ್ತರಾಗಿದ್ದಾರೆ. ಈ ಮನೆತನದ ಅರಸರ ಅತ್ಯಂತ ಪ್ರಾಚೀನ ಉಲ್ಲೇಖ ಚಿತ್ರದುರ್ಗ ಜಿಲ್ಲೆಯ ಅಣಜಿ ಗ್ರಾಮದ ಶಾಸನದಲ್ಲಿದೆ. ಸುಮಾರು ಐದನೆಯ ಶತಮಾನಕ್ಕೆ ಸೇರಬಹುದಾದ ಈ ಶಾಸನದಲ್ಲಿ ಉಕ್ತನಾದ ಶಿವಾನಂದ ವರ್ಮ ಕೇಕಯ ಕುಲದವನು. ಸೋಮವಂಶೋದ್ಭವನಾದ ಈತ ಆತ್ರೇಯ ಗೋತ್ರಜನಾಗಿದ್ದು ಇಕ್ಷ್ವಾಕು ಮುಂತಾದ ರಾಜಕುಲದವರೊಡನೆ ವೈವಾಹಿಕ ಸಂಬಂಧ ಪಡೆದಿದ್ದ.

ಹಲ್ಮಿಡಿ ಶಾಸನದಲ್ಲಿ ಕೇಕಯ ವಂಶವನ್ನು ಪಲ್ಲವರೊಡಗೂಡಿಸಿ, ಆ ಎರಡು ಮನೆತನದವರನ್ನೂ ಕದನದಲ್ಲಿ ಇರಿದುದಾಗಿ ಹೇಳಿದೆ. ಆದರೆ ಅರಸರ ಹೆಸರನ್ನು ಹೇಳಿಲ್ಲ. 8ನೆಯ ಶತಮಾನದ ಶಾಸನವೊಂದರಿಂದ ಪಲ್ಲವ ಗೋಪಾಲದೇವನೂ ಕೇಕಯರಿಗೆ ಸಂಬಂಧಿಸಿದವನೆಂದು ತಿಳಿದಿದೆ. ಭೋಜ ಅಶಂಕಿತವರ್ಮನ ಹಿರೇಗುತ್ತಿ ತಾಮ್ರಶಾಸನ ನಂದಿಪಲ್ಲಿ ಕೈಕಯಾನ್ವಯಕ್ಕೆ ಸೇರಿದ ಕೊತ್ತಿಪೆಗ್ಗಿಲಿ ಎಂಬಾತನನ್ನು ಹೆಸರಿಸಿದೆ. ಇನ್ನೊಬ್ಬ ಅಶಂಕಿತವರ್ಮನ ಶಾಸನದಲ್ಲಿ ಇದೇ ವಂಶದಲ್ಲಿ ಜನಿಸಿದ ಏಲಕೆಲ್ಲನ ಉಲ್ಲೇಖವಿದೆ. ಕದಂಬ ರವಿವರ್ಮನ ಶಾಸನವೊಂದರಲ್ಲಿಯೂ ಸಹ ಇದೇ ಕುಲದ 'ಕೆಲ್ಲ' ಎಂಬ ನಾಮಾಂತ್ಯವುಳ್ಳ ಚಿತ್ರಸೇನ ಮಹಾಕೆಲ್ಲನ ಪ್ರಸ್ತಾಪವಿದೆ. ಈತ ವಿಜಯಾಂಬುದ್ವೀಪದಲ್ಲಿ ಆಳುತ್ತಿದ್ದನೆಂದಿದೆ. ಇವರ ನಡುವಣ ಸಂಬಂಧ ತಿಳಿಯದು. ಕದಂಬ ಕೃಷ್ಣವರ್ಮನ ಪತ್ನಿಯೊಬ್ಬಳು ಈ ವಂಶಕ್ಕೆ ಸೇರಿದವಳು. ಈಕೆಯ ಹೆಸರುಗೊತ್ತಿಲ್ಲ. ಈ ದಂಪತಿಗಳಿಗೆ ಜನಿಸಿದಾತ ವಿಷ್ಣುಶರ್ಮ. ಅಂತೆಯೇ ಕದಂಬ ಮೃಗೇಶವರ್ಮನ ಪತ್ನಿ ಪ್ರಭಾವತಿ ಕೇಕಯ ಮಹಾಕುಲ ಪ್ರಸೂತಳು. ಈಕೆಯ ಮಗ ರವಿವರ್ಮ.

ಕೆಕ್ಕಾರ್ ಗ್ರಾಮದ 8ನೆಯ ಶತಮಾನದ ಶಾಸನದಲ್ಲಿ ಇನ್ನೊಬ್ಬ ಕೇಕಯ ಅಣ್ಣಿಯರಸನ ಪ್ರಸ್ತಾಪವಿದೆ. ಈತನನ್ನು ಪಯೊಗುಂಡ ಪುರವರೇಶ್ವರನೆಂದು ಶಾಸನದಲ್ಲಿ ವರ್ಣಿಸಿರುವುದರಿಂದ ಈ ಮನೆತನದವರು ಪಶ್ಚಿಮ ತೀರಪ್ರದೇಶದಲ್ಲಿ ಅಧಿಕಾರದಲ್ಲಿದ್ದವರೆಂದೂ ಊಹಿಸಬಹುದು. ಈತನ ಲಾಂಛನ ಸಿಂಹ. (ಬಿ.ಆರ್.ಜಿ.)

**ಕೇಶವನ್, ಬಿ.ಎಸ್. :** 1909-2000. ಭಾರತದ ಗ್ರಂಥಾಲಯ ವಿಜ್ಞಾನಿ. ಭಾರತದಲ್ಲಿ ಗ್ರಂಥಾಲಯೋದ್ಯಮವನ್ನು ಒಂದು ಉದಾತ್ತ ಉದ್ಯಮವನ್ನಾಗಿ ಪರಿವರ್ತಿಸುವಲ್ಲಿ ಸತತವಾಗಿ ಪರಿಶ್ರಮಿಸಿದವರು. ಶಿಕ್ಷಕ, ಗ್ರಂಥಪಾಲ ಮತ್ತು ಹಿರಿಯ ಯೋಜಕರಾಗಿ ರಾಷ್ಟ್ರೀಯ ಕ್ಷೇತ್ರಗಳಲ್ಲಿ ಹೆಚ್ಚಿನ ಕೆಲಸ ಮಾಡಿದ್ದಾರೆ. ಇವರ ಪೂರ್ಣ ಹೆಸರು ಬಳ್ಳಾರಿ ಶಾಮಣ್ಣ ಕೇಶವನ್.

ಇವರು 1909 ಮೇ 10ರಂದು ಮದರಾಸಿನಲ್ಲಿ ಜನಿಸಿದರು. ಮದರಾಸಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿ ಪಡೆದು ಅನಂತರ ಲಂಡನ್ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಭಾಷೆಯಲ್ಲಿ ಎಂ.ಎ. ಪದವಿಯನ್ನಲ್ಲದೆ ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾವನ್ನು ಪಡೆದರು. ಏಳು ವರ್ಷಗಳ ಅನಂತರ ಭಾರತಕ್ಕೆ ಮರಳಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಹಪ್ರಾಧ್ಯಾಪಕರಾಗಿ ನೇಮಕಗೊಂಡರು.

ಮುಂದೆ ಇವರು ದೆಹಲಿಯ ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನ ಮಂಡಳದ ಆರ್ಥಿಕ ಸಂಪನ್ಮೂಲಗಳ ಹಾಗೂ ಔದ್ಯೋಗಿಕ ನಿಘಂಟು ಕಚೇರಿಯಲ್ಲಿ ಸಹಕಾರ್ಯದರ್ಶಿಯಾಗಿ (1944) ಭಾರತದ

ಸಂಪತ್ತು (ದಿವೆಲ್ತ್ ಆಫ್ ಇಂಡಿಯ) ಎಂಬ ಗ್ರಂಥ ಪ್ರಕಟಣೆಯಲ್ಲಿ ಪ್ರಮುಖವಾಗಿ ದುಡಿದರು. ಇದಾದ ಎರಡು ವರ್ಷಗಳ ತರುವಾಯ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಲ್ಲಿ ಅಧಿಕಾರಿಗಳಾದರು. ಇವರು ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯದ ಪ್ರಥಮ ಗ್ರಂಥಪಾಲರಾಗಿ ನೇಮಕಗೊಂಡಿದ್ದು 1948ರಲ್ಲಿ. ಆಗ ಈ ಗ್ರಂಥಾಲಯಕ್ಕೆ ಸುಸಜ್ಜಿತ ಕಟ್ಟಡವಿರಲಿಲ್ಲ. ವೈಸರಾಯ್ ನಿವಾಸವಾಗಿದ್ದ ಬಿಲ್ವಡೇರ್ ಅರಮನೆಯನ್ನು ಗ್ರಂಥಾಲಯಕ್ಕೆ ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾದರು. ಈ ಗ್ರಂಥಾಲಯವನ್ನು ಬೆಳೆಸಿದ ಮತ್ತು ಇದನ್ನು ಅಧುನಾತನಗೊಳಿಸಿದ ಕೀರ್ತಿ ಇವರದು. ಇವರು ಮಾಡಿದ ಇನ್ನೊಂದು ಕೆಲಸವೆಂದರೆ ಅಲ್ಲಿ ಭಾಷಾ ವಿಭಾಗವನ್ನಾರಂಭಿಸಿದ್ದು. ರಾಷ್ಟ್ರೀಯ ಗ್ರಂಥಸೂಚಿಗಾಗಿ (ನ್ಯಾಷನಲ್ ಬಿಬ್ಲಿಯಾಗ್ರಫಿ) ಇವರು

ಪ್ರಾರಂಭಿಸಿದ ಯೋಜನೆ 1958ರಲ್ಲಿ ಕಾರ್ಯಗತವಾಯಿತು. ಇವರು ರಾಷ್ಟ್ರೀಯ ಗ್ರಂಥಾಲಯದ ಗ್ರಂಥಸಂಗ್ರಹವನ್ನು ಹೆಚ್ಚಿಸಿದ್ದಲ್ಲದೆ ಅಪೂರ್ವ ವೈಯಕ್ತಿಕ ಸಂಗ್ರಹಗಳನ್ನು ಕಲೆಹಾಕಿದರು. ಕೇಂದ್ರೀಯ ಸಂದರ್ಭ ಗ್ರಂಥಾಲಯವನ್ನು ಪ್ರಾರಂಭಿಸಿದರು.

ಕೇಂದ್ರ ರಾಷ್ಟ್ರೀಯ ಭೌತ ಪ್ರಯೋಗಾಲಯದ ಒಂದು ಅಂಗವಾಗಿದ್ದ ಭಾರತ ರಾಷ್ಟ್ರೀಯ ವೈಜ್ಞಾನಿಕ ಕೇಂದ್ರವನ್ನು ಪ್ರತ್ಯೇಕಿಸಿ ಅದಕ್ಕೆ ಪ್ರಥಮ ನಿರ್ದೇಶಕರಾಗಿ ಇವರನ್ನು ನೇಮಿಸಲಾಯಿತು. ಅನಂತರ ಭಾರತ ಸರ್ಕಾರ ಇವರನ್ನು ಗ್ರಂಥಾಲಯದ ಸಲಹೆಗಾರರಾಗಿ ನೇಮಿಸಿತು. ಗ್ರಂಥಾಲಯ ವಿಜ್ಞಾನದಲ್ಲಿ ಸಂದರ್ಶ ಪ್ರಾಧ್ಯಾಪಕರಾಗಿ ದೆಹಲಿ ವಿಶ್ವವಿದ್ಯಾಲಯ ಇವರನ್ನು ನೇಮಕ ಮಾಡಿತು. ಯುನೆಸ್ಕೋ ಇವರನ್ನು ಮನಿಲಾದಲ್ಲಿ ನಡೆದ ಏಷ್ಯದ ರಾಷ್ಟ್ರೀಯ ಗ್ರಂಥಾಲಯಗಳ ಸಮ್ಮೇಳನಕ್ಕೆ ಮುಖ್ಯ ಕಾರ್ಯಕರ್ತರಾಗಲು ಆಮಂತ್ರಿಸಿತು (1964). ಭಾರತ ಸರ್ಕಾರದಿಂದ ಇವರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತದ್ದು 1960ರಲ್ಲಿ.

ಕೇಶವನ್ ಭಾರತೀಯ ಗ್ರಂಥಾಲಯ ಸಂಘದ ಅಧ್ಯಕ್ಷರಾಗಿ ಒಂದು ದಶಕದ ಕಾಲ ಸೇವೆ ಸಲ್ಲಿಸಿದರು. ಇವರು ಗ್ರಂಥಸೂಚಿ ಕುರಿತ ಅಂತಾರಾಷ್ಟ್ರೀಯ ಸಮಿತಿ, ಯುನೆಸ್ಕೋದ ಪ್ರಲೇಖನ ಹಾಗೂ ಪರಿಭಾಷಾ ಸಮಿತಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಗ್ರಂಥಪಾಲಕರ ಸಮಿತಿಯ ಹಾಗೂ ವಿಶ್ವವಿದ್ಯಾಲಯಗಳ ಪಠ್ಯಕ್ರಮ ಮಂಡಳಿಗಳ ಸದಸ್ಯರಾಗಿದ್ದರು. ಅಂತಾರಾಷ್ಟ್ರೀಯ ಪ್ರಲೇಖನ ಮಂಡಳದ ಆಫ್ರೋ- ಏಷ್ಯನ್ ವಿಭಾಗಕ್ಕೆ ಇವರು ಉಪಾಧ್ಯಕ್ಷರಾಗಿದ್ದರು. ಪ್ರಲೇಖನ ವಿಷಯದಲ್ಲಿ ಯುನೆಸ್ಕೋದ ಸಲಹೆಗಾರರಾಗಿದ್ದರು. ಅಲ್ಲದೆ ಭಾರತೀಯ ಮಾನಕ ಸಂಸ್ಥೆಯ ಪ್ರಲೇಖನ ವಿಭಾಗ ಸಮಿತಿಯ ಅಧ್ಯಕ್ಷರಾಗಿದ್ದರು. ಜೊತೆಗೆ ಇವರು ಭಾರತದ ರಾಷ್ಟ್ರೀಯ ಗ್ರಂಥ ಸಂಸ್ಥೆಯ ಸದಸ್ಯರಾಗಿದ್ದರಲ್ಲದೆ ಇರಾನಿನ ಪ್ರಲೇಖನ ಕೇಂದ್ರ ಸ್ಥಾಪನೆಗೆ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಯುನೆಸ್ಕೋದ ತಜ್ಞರಾಗಿ ಸೇವೆ ಸಲ್ಲಿಸಿದ್ದರು. ರಾಷ್ಟ್ರೀಯ ಗ್ರಂಥಾಲಯವನ್ನು ಕುರಿತು ಇವರು ಬರೆದ ಇಂಡಿಯಾಸ್ ನ್ಯಾಷನಲ್ ಲೈಬ್ರರಿ ಎಂಬ ಕೃತಿ ಉಪಯುಕ್ತವಾಗಿದೆ. ಇವರು 2000 ಫೆಬ್ರವರಿ 16ರಂದು ನಿಧನರಾದರು. (ಟಿ.ಎಲ್.ಬಿ.)

**ಕೇಶವಮೂರ್ತಿ, ಆರ್.ಆರ್. :** 1914-. ಹೆಸರಾಂತ ಪಿಟೀಲು ವಿದ್ವಾಂಸರು. ರುದ್ರಪಟ್ಟಣಂ ರಾಮಸ್ವಾಮಯ್ಯ ಕೇಶವಮೂರ್ತಿ ಎಂಬುದು ಇವರ ಪೂರ್ತಿ ಹೆಸರು. 1914 ಮೇ 25ರಂದು ಜನಿಸಿದರು. ತಂದೆ



ಆರ್. ರಾಮಸ್ವಾಮಯ್ಯ, ತಾಯಿ ಆರ್.ಸುಬ್ಬಮ್ಮ. ತಂದೆಯೇ ಇವರ ಮೊದಲ ಸಂಗೀತ ಗುರು. ತಂದೆ ರಾಮಸ್ವಾಮಯ್ಯ ಉತ್ತಮ ಸಂಗೀತ ಬೋಧಕರಾಗಿದ್ದರು. ಮನೆಯ ಸಂಗೀತದ ವಾತಾವರಣದಿಂದಾಗಿ ಕೇಶವಮೂರ್ತಿಯವರು ತಮ್ಮ ಎಳೆಯ ವಯಸ್ಸಿನಿಂದಲೇ ಸಂಗೀತ ಕಛೇರಿಗಳನ್ನು ನೀಡಲು ಪ್ರಾರಂಭಿಸಿದರು. ಹೆಚ್ಚಿನ ಸಂಗೀತಾಭ್ಯಾಸಕ್ಕಾಗಿ ಮೈಸೂರಿಗೆ ಬಂದರು (1923). ಅಲ್ಲಿ ಸಂಗೀತ ರತ್ನ ಚಿಕ್ಕರಾಮರಾಯರಲ್ಲಿ ಹಾಗೂ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರಲ್ಲಿ ಸಂಗೀತಾಭ್ಯಾಸ ಮಾಡಿಸಿದರು. ಅನಂತರ 1934ರಲ್ಲಿ ಬೆಂಗಳೂರಿಗೆ ಬಂದು ನೆಲೆಸಿದರು. ಅದೇ ವರ್ಷ ಭಾರತದಾದ್ಯಂತ ಅನೇಕ ಕಛೇರಿಗಳನ್ನು ನಡೆಸಿದರು. ಇದಲ್ಲದೆ ಹೆಸರಾಂತ ವಿದ್ವಾಂಸರಾದ ಮೈಸೂರು ವಾಸುದೇವಾಚಾರ್ಯ, ಅರಿಯಕುಡಿ ರಾಮಾನುಜಯ್ಯಂಗಾರ್, ಆಲತ್ತೂರು ಸೋದರರು, ಪಲ್ಲಡಂ ಸಂಜೀವರಾವ್, ಮುಸುರಿ ಸುಬ್ರಹ್ಮಣ್ಯ ಅಯ್ಯರ್, ಟೈಗರ್ ವರದಾಚಾರ್ಯ, ಬಿಡಾರಂ ಕೃಷ್ಣಪ್ಪ, ಚೆಂಬೈ ವೈದ್ಯನಾಥ ಭಾಗವತರ್ ಮೊದಲಾದವರ ಸಂಗೀತ ಕಛೇರಿಗಳಲ್ಲಿ ಪಿಟೀಲು ಪಕ್ಕವಾದ್ಯ ನುಡಿಸಿದ್ದಾರೆ. ಸಾಮಾನ್ಯವಾಗಿ ಎಲ್ಲರೂ ನಾಲ್ಕು ತಂತಿ ಪಿಟೀಲು ನುಡಿಸಿದರೆ. ಇವರು ಏಳುತಂತಿ ಪಿಟೀಲಿನಲ್ಲೇ ಅಭ್ಯಾಸವನ್ನು ಕರಗತ ಮಾಡಿಕೊಂಡಿದ್ದು ಒಂದು ವಿಶೇಷ. ಏಳುತಂತಿಪಿಟೀಲು ಒಂದು ಹೊಸ ಆವಿಷ್ಕಾರ, ಇದರಲ್ಲಿ ಇನ್ನೊಬ್ಬ ಹೆಸರಾಂತ ಕಲಾವಿದರು ಮೈಸೂರು ಟಿ.ಚೌಡಯ್ಯನವರು.

ಕೇಶವಮೂರ್ತಿ ಬಹುಭಾಷಾ ಪ್ರೇಮಿ. ಇವರು ಸಂಸ್ಕೃತ, ತೆಲುಗು, ತಮಿಳು, ಹಿಂದಿ ಭಾಷೆಗಳಲ್ಲಿ ಪರಿಣತಿ ಸಾಧಿಸಿದ್ದಾರೆ. ಇವರು ರಚಿಸಿರುವ ಗ್ರಂಥಗಳು ವಿದ್ಯಾರ್ಥಿಗಳಿಗೆ ಹಾಗೂ ವಿದ್ವಾಂಸರಿಗೆ ಪ್ರಿಯವಾಗಿ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿವೆ. ಬಾಲಶಿಕ್ಷೆ, ವಾಗ್ಗೇಯಕಾರ ಕೃತಿಗಳು, ಲಕ್ಷ್ಯ ಲಕ್ಷಣ ಪದ್ಧತಿ, ರಾಗ ಲಕ್ಷಣ ಮತ್ತು ರಾಗಕೋಶ, ಸಂಗೀತ ಲಕ್ಷ್ಯವಿಜ್ಞಾನ, ಹಿಂದೂಸ್ಥಾನಿ ರಾಗಕೋಶ, ಭಾರತೀಯ ವಾಗ್ಗೇಯಕಾರರು, ಬಹತ್ತರ ರಾಗಮಾಲಿಕ, ಕ್ಷೇತ್ರಯ್ಯ ಪದಗಳು ಹಾಗೂ ಕಚೇರಿ ಪದ್ಧತಿ ಇವು ಇವರು ಕನ್ನಡದಲ್ಲಿ ರಚಿಸಿರುವ ಕೆಲವು ಸಂಗೀತ ಗ್ರಂಥಗಳು. ಇವು ಸಂಗೀತದ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳಾಗಿವೆ.

ಇವರು ತಮ್ಮ ಗುರುಗಳಾದ ಬಿಡಾರಂ ಕೃಷ್ಣಪ್ಪನವರ ಹೆಸರಿನಲ್ಲಿ ಸಂಗೀತ ವಿದ್ಯಾಲಯವನ್ನು ಪ್ರಾರಂಭಿಸಿದ್ದರು. ಸುಗಮಸಂಗೀತ ಮತ್ತು ವಾದ್ಯಸಂಗೀತಗಳೆರಡನ್ನೂ ಇಲ್ಲಿ ಕಲಿಸುವ ಏರ್ಪಾಡಿದೆ. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕಲಾವಿದರು ಈ ವಿದ್ಯಾಲಯದಿಂದ ಹೊರಬಂದಿದ್ದಾರೆ. ಎಚ್.ಎಂ.ವಿ. ಕಂಪನಿ ಇವರ ಪಿಟೀಲುವಾದನದ ಎಂಟು ಧ್ವನಿ ಸುರುಳಿಗಳನ್ನು ಹೊರತಂದಿದೆ.

ಇವರಿಗೆ ಅನೇಕ ಪ್ರಶಸ್ತಿಗಳೂ ಬಿರುದುಗಳೂ ಲಭಿಸಿವೆ. ಇವುಗಳಲ್ಲಿ ಮುಖ್ಯವಾದವು ಗಾನ ಸಾಹಿತ್ಯ ಶಿರೋಮಣಿ, ಸಂಗೀತ ವಿದ್ಯಾಸಾಗರ, ಸಂಗೀತಶಾಸ್ತ್ರಪ್ರವೀಣ, ಲಯಕಲಾನಿಪುಣ, ಸಂಗೀತಕಲಾ ಪ್ರಪೂರ್ಣ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಂಗೀತನೃತ್ಯ ಅಕಾಡೆಮಿ ಪ್ರಶಸ್ತಿ, ಕನಕ-ಪುರಂದರ ಪ್ರಶಸ್ತಿ (1993), ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಗಾಯನ ಸಮಾಜದ ಸಂಗೀತ ಕಲಾರತ್ನ ಪ್ರಶಸ್ತಿ ಲಭ್ಯವಾಗಿವೆ. ಕೇಶವಮೂರ್ತಿಯವರು ಗಾನಕಲಾಪರಿಷತ್, ಪುರಂದರ ಸೇವಾ ಸಮಿತಿ ಹಾಗೂ ಶ್ರೀರಂಗಪಟ್ಟಣದ ತ್ಯಾಗರಾಜಪೀಠ ಇವುಗಳ ಏಳಿಗೆಗಾಗಿಯೂ ದುಡಿದಿದ್ದಾರೆ.

ಈಗ ಇವರು ರಾಗಗಳ ರಸ, ಭಾವಗಳನ್ನು ಕುರಿತು ಸಂಶೋಧನೆ ನಡೆಸುತ್ತಿದ್ದಾರೆ. (ಎಚ್.ಆರ್.ಎಲ್.)

**ಕೇಶವಮೂರ್ತಿ, ಎಚ್.ಆರ್. :** 1919 . ಪ್ರಸಿದ್ಧ ನೃತ್ಯಪಟು. ಶಾಂತಲಾ ನಾಟ್ಯ ಪ್ರಶಸ್ತಿ ವಿಜೇತರು (1998). ತಂದೆ ಬಿ.ರಾಮಸ್ವಾಮಯ್ಯ, ತಾಯಿ ಸೀತಮ್ಮ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹೊಚಿಹಳ್ಳಿಯಲ್ಲಿ 1919 ಜೂನ್ ತಿಂಗಳಲ್ಲಿ ಜನಿಸಿದರು. ಹೊಚಿಹಳ್ಳಿ, ತುಮಕೂರು ಹಾಗೂ ಮೈಸೂರಿನಲ್ಲಿ ಎಸ್.ಎಸ್.ಎಲ್.ಸಿ. ಯವರೆಗೆ ವಿದ್ಯಾಭ್ಯಾಸ ಮಾಡಿದರು. ಶಾಲೆಯ ವಿದ್ಯಾಭ್ಯಾಸದ ಜೊತೆಗೆ ಸಂಗೀತಾಭ್ಯಾಸವನ್ನೂ ಹಿರಿಯ ಗುರುಗಳಿಂದ ಕಲಿತರು. ಇದೇ ವೇಳೆಗೆ ಸಂಗೀತ ಕಛೇರಿಗಳನ್ನೂ ನೀಡುತ್ತಿದ್ದರು. ಅನಂತರ ನೃತ್ಯಕಲೆಯ ಕಡೆಗೆ ಆಕರ್ಷಿತರಾಗಿ ಬೆಂಗಳೂರಿಗೆ ಬಂದು ಸೋಹನ್‌ಲಾಲ್‌ರಲ್ಲಿ ಕಥಕ್ ನೃತ್ಯಾಭ್ಯಾಸಕ್ಕೆ ತೊಡಗಿದರು. ಅಲ್ಲಿಂದ ಮುಂದೆ ನಟುವನಾರ್ ಗುಂಡಪ್ಪನವರಲ್ಲಿ ಭರತನಾಟ್ಯದಲ್ಲಿ ಶಿಕ್ಷಣ ಪಡೆದರು.

ನೃತ್ಯಕಲೆಗೆ ಸಮರ್ಪಿತವಾದ, ತಮ್ಮ ಕನಸಿನ ಕೂಸಾದ ಕೇಶವ ನೃತ್ಯಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು (1949). ಅಲ್ಲಿ ಪ್ರಾರಂಭದ ದಿನಗಳಲ್ಲಿ ಕಥಕ್ ಹಾಗೂ ಭರತನಾಟ್ಯ ಎರಡೂ ಪ್ರಕಾರಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದವರು, ಕ್ರಮೇಣ ಭರತನಾಟ್ಯದ ಬೋಧನೆಗಷ್ಟೇ ತಮ್ಮನ್ನು ತೊಡಗಿಸಿಕೊಂಡರು. ಇವರ ಅನೇಕ ಶಿಷ್ಯರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ, ಯಶಸ್ಸನ್ನು ಪಡೆದಿದ್ದಾರೆ. ಭರತನಾಟ್ಯವನ್ನು ಕಲಿಸುವುದರ ಜೊತೆಗೆ ಕನ್ನಡ, ಸಂಸ್ಕೃತ, ಹಿಂದಿ

ಭಾಷೆಗಳಲ್ಲಿ ಚಾರಿತ್ರಿಕ, ಪೌರಾಣಿಕ ಹಾಗೂ ಸಾಮಾಜಿಕ ವಿಷಯಗಳನ್ನು ತೆಗೆದುಕೊಂಡು ನೃತ್ಯರೂಪಕ ಹಾಗೂ ನೃತ್ಯನಾಟಕಗಳನ್ನು ಸಿದ್ಧಪಡಿಸಿ ಪ್ರಸ್ತುತಪಡಿಸಿ ಯಶಸ್ಸು ಗಳಿಸಿದರು. ಕನ್ನಡ ಕವಿಕಾವ್ಯದರ್ಶನ ಎಂಬ ಮಾಲಿಕೆಯಲ್ಲಿ ನೃತ್ಯ ನಾಟಕ ಹಾಗೂ ರೂಪಕಗಳ ಮೂಲಕ ಕನ್ನಡ ಕಾವ್ಯ ಹಾಗೂ ಸಾಹಿತ್ಯವನ್ನೂ ಪರಿಚಯಿಸಿದರು. ಕೇಶವ ನೃತ್ಯಶಾಲೆಯ ಕಲಾತಂಡ ಕರ್ನಾಟಕದ ಎಲ್ಲ ಪ್ರಮುಖ ನಗರಗಳಲ್ಲೂ ಕಾರ್ಯಕ್ರಮ ನೀಡಿದೆ. ಭಾರತದ ಪ್ರಮುಖ ನಗರಗಳಾದ ದೆಹಲಿ, ಮುಂಬಯಿ, ಕೋಲ್ಕತ್ತ, ಚೆನ್ನೈ ಹಾಗೂ ತಿರುವನಂತ ಪುರಗಲ್ಲೂ ತಮ್ಮ ತಂಡದ ಮೂಲಕ ನೃತ್ಯ ಪ್ರದರ್ಶನ ನೀಡಿದ್ದಾರೆ. ಜರ್ಮನಿ ಹಾಗೂ ಇಂಗ್ಲೆಂಡ್‌ಗಳಲ್ಲೂ ಈ ವೃಂದ ಭರತನಾಟ್ಯ ಪ್ರದರ್ಶಿಸಿದೆ. ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿರುವ ಕೇಶವ ನೃತ್ಯಶಾಲೆ ಸುಸಜ್ಜಿತ ಗ್ರಂಥಾಲಯವನ್ನೂ ಹೊಂದಿದೆ. ನೃತ್ಯಕಲೆಗಾಗಿಯೇ ತಮ್ಮನ್ನು ಸಮರ್ಪಿಸಿಕೊಂಡಿರುವ ಕೇಶವಮೂರ್ತಿಯವರು ಈ ಕಲೆಯ ಏಳ್ಗೆಗಾಗಿ ದುಡಿಯುತ್ತಿದ್ದಾರೆ.



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಇವರು ಹಲವುಬಾರಿ ನಾಮಕರಣಗೊಂಡು ಕಲೆಯ ಬೆಳೆವಣಿಗೆಗಾಗಿ ದುಡಿದಿದ್ದಾರೆ. ವಿದ್ವತ್ ಪರೀಕ್ಷೆಯ ಮುಖ್ಯ ಪರೀಕ್ಷಕರಾಗಿ ನೃತ್ಯಲೋಕಕ್ಕೆ ಸೇವೆ ಸಲ್ಲಿಸಿದ್ದಾರೆ. ಭರತನಾಟ್ಯ ಪಠ್ಯ ಪುಸ್ತಕ ಸಮಿತಿಯ ಮುಖ್ಯಸ್ಥರಾಗಿ ಪಠ್ಯಪುಸ್ತಕಗಳನ್ನು ಹೊರತರುವುದರಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕಲೆ ಕುರಿತಂತೆ ವಿಶೇಷ ಉಪನ್ಯಾಸಗಳು ಹಾಗೂ ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. ಇವರು ರಚಿಸಿರುವ ನಾಟ್ಯವಿಚಾರಸಂಗ್ರಹ ಎಂಬುದು ಬಹು ಮುಖ್ಯವಾದ ಆಕರ ಗ್ರಂಥವೆನಿಸಿದೆ. ಇದಲ್ಲದೆ ನಾಡಿನ ಪತ್ರಿಕೆಗಳಿಗೆ ನೃತ್ಯ ಸಂಬಂಧವಾದ ಪ್ರಬಂಧ ಲೇಖನಗಳನ್ನೂ ಬರೆದಿದ್ದಾರೆ.

ನೃತ್ಯರಂಗಕ್ಕೆ ಇವರು ಇಲ್ಲಿಸಿರುವ ಸೇವೆಯನ್ನು ಗುರುತಿಸಿ ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ - ಗೌರವ ನೀಡಿ ಸನ್ಮಾನಿಸಿವೆ. ಅವುಗಳಲ್ಲಿ ಮುಖ್ಯವಾದವು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಬಿರುದು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನೃತ್ಯಕಲಾಪರಿಷತ್ತಿನ ನೃತ್ಯಕಲಾಶಿರೋಮಣಿ, ಕರ್ನಾಟಕ ನವೋದಯ ಸಂಸ್ಥೆಯ ಅಚಲ ಪ್ರಶಸ್ತಿ, ಬೆಂಗಳೂರು ಗಾಯನ ಸಮಾಜದ ಗೌರವ, 69ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ಕರ್ನಾಟಕ ಸರ್ಕಾರದ ಶಾಂತಲ ಪ್ರಶಸ್ತಿ (1998). ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಇವರಿಗೆ ಲಭ್ಯವಾಗಿದೆ.

ಇವರ ಪುತ್ರಿ ವಸಂತಲಕ್ಷ್ಮಿ, ಪುತ್ರ ಶ್ಯಾಮಪ್ರಸಾದ್ ಹಾಗೂ ಲಲಿತಾ ಶ್ರೀನಿವಾಸ್ ಇವರು ಕೇಶವಮೂರ್ತಿಯರ ಶಿಷ್ಯರಲ್ಲಿ ಪ್ರಮುಖರು. ಕೇಶವಮೂರ್ತಿಯವರ ನೃತ್ಯ ಪರಂಪರೆಯನ್ನು ಇವರೆಲ್ಲ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. (ಎಚ್.ಆರ್.ಎಲ್.)

**ಕೇಶವರ್ಣಿ :** ಸು.1359. ಜೈನಕವಿ. ಗೊಮ್ಮಟಸಾರ, ಅಮಿತ ಗತಿಶ್ರಾವಕಾಚಾರ ಇವುಗಳಿಗೆ ಕರ್ನಾಟಕವೃತ್ತಿಯನ್ನು ಬರೆದಿದ್ದಾನೆ. ಈತ ಅಭಯಸೂರಿ ಸಿದ್ಧಾಂತಚಕ್ರವರ್ತಿಯ ಶಿಷ್ಯ. ದೇವಚಂದ್ರ (ಸು.1838) ತನ್ನ ರಾಜಾವಳೀಕಥೆಯಲ್ಲಿ ಇವನು ಸಾರತ್ರಯಕ್ಕೂ ಕನ್ನಡ ವ್ಯಾಖ್ಯಾನಗಳನ್ನು ಬರೆದಿರುವಂತೆ ಹೇಳುತ್ತಾನೆ. ಒಂದನೆಯ ಮಂಗರಾಜ (ಸು.1360) ಈತನನ್ನು ಸಾರತ್ರಯವೇದಿ ಎಂದು ಹೇಳಿರುವುದರಿಂದಲೂ ಕವಿ ತನ್ನನ್ನು ಸಾರತ್ರಯವೇದಿ ಎಂದು ಹೇಳಿಕೊಂಡಿರುವುದರಿಂದಲೂ ದೇವಚಂದ್ರ ಹೇಳುವ ಸಂಗತಿ ನಿಜವಿರಬಹುದೆಂದು ತೋರುತ್ತದೆ. ಇವನು ಜಿತೇಂದ್ರಮಾಲೆಗೂ ಕನ್ನಡ ಟೀಕೆಯನ್ನು ಬರೆದಿರುವಂತೆ ತಿಳಿಯುತ್ತದೆ.

ಗೊಮ್ಮಟಸಾರದ ವೃತ್ತಿಯ ಹೆಸರು ಜೀವತತ್ತ್ವಪ್ರದೀಪಿಕಾ. ಇದು ಜೀವಕಾಂಡ, ಕರ್ಮಕಾಂಡ ಎಂಬ ಎರಡು ಭಾಗಗಳನ್ನೊಳಗೊಂಡಿದೆ. ಇದನ್ನು ಧರ್ಮಭೂಷಣ ಭಟ್ಟಾರಕರ ಆಜ್ಞೆಯಿಂದ ಸು.1359ರಲ್ಲಿ ರಚಿಸಿದಂತೆ ತಿಳಿಯುತ್ತದೆ. ಈ ಕನ್ನಡ ಟೀಕೆಯನ್ನು ನೇಮಿಚಂದ್ರ (16ನೆಯ ಶತಮಾನ) ಕೆಲವು ಶ್ರಾವಕರ ಆಗ್ರಹದ ಮೇರೆಗೆ ಸಂಸ್ಕೃತ ಭಾಷೆಯಲ್ಲಿ ಜೀವತತ್ತ್ವಪ್ರದೀಪಿಕಾ ಎಂಬ ಹೆಸರಿನಿಂದ ಅನುವಾದ ಮಾಡಿದ್ದಾನೆ. ನೇಮಿಚಂದ್ರನ ಸಂಸ್ಕೃತ ಟೀಕೆ ತೋಡರಮಲ್ಲನ ಹಿಂದಿ ಟೀಕೆಯೊಡನೆ ಮುದ್ರಿತವಾಗಿದೆ. ಕೇಶಪ್ರವರ್ಣಿಯ ಕನ್ನಡ ವೃತ್ತಿ ಈವರೆಗೆ ಪ್ರಸಿದ್ಧವಾಗಿಲ್ಲ. (ಎ.ಎಸ್.ಯು.)

**ಕೇಶವ ಶರ್ಮಾ, ಗಲಗಲಿ :** 1893-1966. ಪ್ರಸಿದ್ಧ ಸಂಸ್ಕೃತ ಪಂಡಿತರು. ಬಿಜಾಪುರದ ಬಡ ಕುಟುಂಬವೊಂದರಲ್ಲಿ 1893 ಮಾರ್ಚ್ 13ರಂದು ಜನಿಸಿದರು. ಕೇಶವ ರಂಗ ಭಟ್ಟ ಜೋಶಿ ಎಂಬುದು ಇವರ ನಿಜನಾಮ. ಇವರ ತಂದೆ ರಂಗ ಭಟ್ಟರು ಜೋತಿಷ್ಯಶಾಸ್ತ್ರದಲ್ಲಿ ಶ್ರೇಷ್ಠಪಂಡಿತರು. ಕೇಶವ ಶರ್ಮರು ಹುಟ್ಟಿದಮೇಲೆ ರಂಗಭಟ್ಟರು ತಮ್ಮ ಕುಟುಂಬವನ್ನು ಬಾಗಲಕೋಟೆ ಬಳಿಯ ಕೃಷ್ಣಾ ತೀರದ ಗಲಗಲಿಗೆ ಸ್ಥಳಾಂತರಿಸಿದರು. ಅಲ್ಲಿಯೇ ಕೇಶವ ಶರ್ಮರ ಪ್ರಾಥಮಿಕ ಶಾಲಾ ಶಿಕ್ಷಣ ಆರಂಭವಾಯಿತು. ಪ್ರತಿಕೂಲ ಪರಿಸ್ಥಿತಿಯಲ್ಲಿಯೇ ಇವರ ಬಾಲ್ಯಜೀವನ ನಡೆಯಿತು. ಕನ್ನಡ ಮುಲ್ಕಿ ಪರೀಕ್ಷೆಯಾದ ಮೇಲೆ ಇವರು ಶಿಕ್ಷಕ ವೃತ್ತಿಯನ್ನು ಆರಂಭಿಸಿದರು. ಜ್ಞಾನಾರ್ಜನೆಯ ಹಂಬಲವಿದ್ದ ಕೇಶವ ಶರ್ಮರು ಗಲಗಲಿಯ ಸುಪ್ರಸಿದ್ಧ ಸಂಸ್ಕೃತ ಪಂಡಿತಸಹೋದರರಾದ ಕೂರ್ಮಾಚಾರ್ಯ ಗಲಗಲಿ ಹಾಗೂ ಸುಬ್ರಹ್ಮಣ್ಯಾಚಾರ್ಯ ಗಲಗಲಿ ಅವರ ಬಳಿ ಸಂಸ್ಕೃತ ವ್ಯಾಕರಣ, ಸಾಹಿತ್ಯಾಧ್ಯಯನ ಮಾಡಿದರು. ಅನಂತರ ಗ್ರಂಥರಚನೆಗೆ ಆರಂಭಿಸಿದರು. 1918ರಲ್ಲಿ ಪಂಡಿತರಾಜ ಜಗನ್ನಾಥ ಎಂಬ ಸಂಸ್ಕೃತ ಕವಿಯನ್ನು ಕುರಿತ ಪರಿಚಯಗ್ರಂಥವನ್ನು ಕನ್ನಡದಲ್ಲಿ ರಚಿಸಿದರು. ಈ ಗ್ರಂಥಕ್ಕೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾರಿತೋಷಕ ದೊರಕಿತು. ಅನಂತರ ಪಾಣಿನಿಯ ಬಗ್ಗೆಯೂ ಅಂಥ'ದೇ ಇನ್ನೊಂದು ಗ್ರಂಥ' ರಚಿಸಿದರು. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ, ವ್ಯಾಕರಣ, ಅಲಂಕಾರಗಳನ್ನು ಕುರಿತು, ಕನ್ನಡ ಹಾಗೂ ಸಂಸ್ಕೃತಗಳಲ್ಲಿ ಹಲವಾರು ಪಾಂಡಿತ್ಯಪೂರ್ಣ ಲೇಖನಗಳನ್ನು ಬರೆದರು. ವಂಗ ಭಾಷೆಯನ್ನು ಕಲಿತು ಗೀತಾಂಜಲಿಯನ್ನು ಕನ್ನಡಕ್ಕೆ ಯಶಸ್ವಿಯಾಗಿ ಅನುವಾದಿಸಿದರು. ಅನಂತರ ನೂರಜಹಾನ್ ಎಂಬ ಒಂದು ಸ್ವತಂತ್ರ ಕಾದಂಬರಿಯನ್ನು ರಚಿಸಿದರು. ಜೋತಿಷ್ಯಶಾಸ್ತ್ರದಲ್ಲಿ ಇವರಿಗೆ ಆಳವಾದ ಅನುಭವವಿತ್ತು. ತಮ್ಮ ತಂದೆಯ ಕೊನೆಯ ಆಸೆಯನ್ನು ಈಡೇರಿಸುವುದಕ್ಕಾಗಿ ಜೋತಿಷ್ಯಕ್ಕೆ ಕೈ ಹಾಕಿ ಕೆಲವು ಜೋತಿಷ್ಯ ಗ್ರಂಥಗಳನ್ನೂ ರಚಿಸಿದರು. 1922ರಲ್ಲಿ ಇವರು ಮೈಸೂರಿಗೆ ತೆರಳಿ ಅಲ್ಲಿ ಒಂದು ವರ್ಷವಿದ್ದು ಪಂಡಿತ ಪರೀಕ್ಷೆಯಲ್ಲಿ ಉಜ್ಜ್ವಲ ಯಶಸ್ಸನ್ನು ಸಂಪಾದಿಸಿದರು. ಮುಂದೆ ಪಂಡಿತ ಕೇಶವ ಶರ್ಮಾ ಗಲಗಲಿ ಎಂದು ಖ್ಯಾತನಾಮರಾದರು. ಸುಮಾರು 25 ವರ್ಷಗಳ ಕಾಲ (1912-37) ಸಂಸ್ಕೃತ, ಇಂಗ್ಲಿಷ್, ಪಾಲಿ, ವಂಗ ಹಾಗೂ ಮರಾಠಿ ಭಾಷೆಗಳ ಆಳವಾದ ಅಧ್ಯಯನ ಮಾಡಿ ಅವುಗಳ ಮೇಲೆ ಪ್ರಭುತ್ವ ಸ್ಥಾಪಿಸಿಕೊಂಡರು. ಕಾಂಚೀವರಂನಿಂದ ಹೊರಡುತ್ತಿದ್ದ ಮಂಜುಭಾಷಿಣಿ ಹಾಗೂ ಮದರಾಸಿನ ಸಹೃದಯ ಎಂಬ ಸಂಸ್ಕೃತ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಕೇಶವಶರ್ಮರು 1966ರಲ್ಲಿ ನಿಧನಹೊಂದಿದರು. 'ಸಾಲಂಕೃತ ಸಾಹಿತ್ಯ' ಎಂಬುದು ಇವರ ಲೇಖನ ಸಂಗ್ರಹ, ಇವರ ಪುತ್ರ ಎಚ್.ಜಿ.ಜೋಶಿ ಇದನ್ನು ಪ್ರಕಟಿಸಿದ್ದಾರೆ. (ಎನ್.ಕೆ.ಕೆ.)

**ಕೇಶವೈನ್, ಶೇಷಗಿರಿ ನಾರಾಯಣ :** 1889-1964. ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ರಾಜಕೀಯ ಧುರೀಣರು ಮತ್ತು ಸಹಕಾರಿ ಬ್ಯಾಂಕಿಂಗ್ ಸಂಸ್ಥೆಗಳ ಸ್ಥಾಪಕರು. ಉತ್ತರ ಕನ್ನಡ ಜಿಲ್ಲೆ ಶಿರಸಿಯಿಂದ 17ಕಿಮೀ ದೂರದಲ್ಲಿರುವ ಮಳಗಿ ಗ್ರಾಮದಲ್ಲಿ 1889 ಮಾರ್ಚ್ 22ರಂದು ಜನಿಸಿದರು. ತಂದೆ ರಾಮ ಚಂದ್ರರಾವ್ ತಾಯಿ ರುಕ್ಮಿಣಿ. ಮೂಲಾ ನಕ್ಷತ್ರ ದಲ್ಲಿ ಹುಟ್ಟಿದ್ದರಿಂದ ಶಿರಸಿಯ ಕೇಶವೈನ್ ಕುಟುಂಬಕ್ಕೆ ಇವರನ್ನು ದತ್ತಕ ಕೊಡಲಾಯಿತು. ದತ್ತಕ ತಂದೆ ನಾರಾಯಣ ರಾಯ, ತಾಯಿ ಪದ್ಮಾವತಿ. ಕೇಶವೈನ್ ಪ್ರಾಥಮಿಕ ಶಿಕ್ಷಣವನ್ನು ಶಿರಸಿಯಲ್ಲಿ ಮುಗಿಸಿ, ಮುಂದಿನ ಎಸ್.ಎಸ್.ಸಿ. ವರೆಗಿನ ಓದನ್ನು ಕಾರವಾರದಲ್ಲಿ ಮಾಡಿದರು. ಅನಂತರ ಇವರ ಮನೆತನದ ಕಸಬಾಗಿದ್ದ ಕೃಷಿ ಮತ್ತು ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

1905ರಲ್ಲಿ ಸ್ಥಾಪನೆಗೊಂಡ ಶಿರಸಿ ರೂರಲ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಮುಚ್ಚುವ ಸ್ಥಿತಿಯಲ್ಲಿದ್ದಾಗ (1906) ಅದರ ಆಡಳಿತ ಇವರ ಕೈಗೆ ಬಂತು. ತಮ್ಮ ಪ್ರಾಮಾಣಿಕತೆ, ಸ್ವಪ್ರಯತ್ನ ಮತ್ತು ಶ್ರದ್ಧೆಯಿಂದ ಕೇಶವೈನ್ ಅದನ್ನು ಬೆಳೆಯಿಸಿ ಶಿರಸಿ ಅರ್ಬನ್ ಬ್ಯಾಂಕ್ ಸ್ಥಾಪಿಸಿದರು (1913). ಜಾಗತಿಕ ಆರ್ಥಿಕ ಕುಸಿತದಿಂದ (1930-40) ರೈತರು, ತೋಟಗಾರರು, ವ್ಯಾಪಾರಿಗಳು ಆರ್ಥಿಕವಾಗಿ ಕಂಗಾಲಾದಾಗ ಅವರ ನೆರವಿಗೆ ನಿಂತರು. ಇಂದು ಈ ಬ್ಯಾಂಕು ಶಿರಸಿ ಅರ್ಬನ್ ಸೌಹಾರ್ದ ಬ್ಯಾಂಕಾಗಿ ಪರಿವರ್ತನೆಗೊಂಡು ಹದಿನಾರು ಶಾಖೆಗಳನ್ನು ಹೊಂದಿದೆ. ಕೇಶವೈನ್ ಬ್ಯಾಂಕಿನ ಅಧ್ಯಕ್ಷರಾಗಿ, ವ್ಯವಸ್ಥಾಪಕ ನಿರ್ದೇಶಕರಾಗಿ ಸಲ್ಲಿಸಿದ ಸೇವೆಗಾಗಿ ಸ್ಥಳೀಯರು ಅದನ್ನು ಕೇಶವೈನ್ ಬ್ಯಾಂಕ್ ಎಂದೇ ಕರೆಯುತ್ತಿದ್ದರು (1964). ಈ ಬ್ಯಾಂಕಿನ ಅಭಿವೃದ್ಧಿಗೆ ಅವಿಶ್ರಾಂತವಾಗಿ ದುಡಿದುದರಿಂದ ಇವರ ಜೀವಿತಾವಧಿಯಲ್ಲೇ ಇವರ ಬೃಹತ್ ಭಾವಚಿತ್ರದ ಅನಾವರಣ ಮಾಡಿ, ಚೆಕ್ ಹಾಳೆಗಳ ಮೇಲೆ ಇವರ ಭಾವಚಿತ್ರ ಮುದ್ರಿಸಿ ಗೌರವಿಸಲಾಯಿತು. ಇವರ ನಿಧನಾನಂತರ ಇವರ ಶಿಲಾ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಇವರ ಜೀವನ ಸಾಧನೆ ಕುರಿತಂತೆ ಬೆಳಕಿನ ಬದುಕು ಎಂಬ ಗ್ರಂಥ ಪ್ರಕಟಿಸಲಾಗಿದೆ.

ಪ್ರಾರಂಭದಿಂದಲೂ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯುವ ಗುಂಪಿನಲ್ಲಿದ್ದ ಕೇಶವೈನ್ ಶಿರಸಿಯ ಮಾರಿಕಾಂಬಾ ದೇವಾಲಯದ ಧರ್ಮದರ್ಶಿಗಳಾಗಿದ್ದಾಗ ಸ್ವಾತಂತ್ರ್ಯಯೋಧರಿಗೆ ದೇವಾಲಯದಲ್ಲಿ ಆಶ್ರಯ ನೀಡಿದರು. ಹರಿಜನರ ದೇವಾಲಯ ಪ್ರವೇಶಿಸಲು ತಂಡದ ನೇತೃತ್ವ ವಹಿಸಿದರು. 1934ರಲ್ಲಿ ಗಾಂಧೀಜಿಯವರು ಕರ್ನಾಟಕಕ್ಕೆ ಬಂದಿದ್ದಾಗ ಇವರ ಮನೆಯಲ್ಲಿ ಅತಿಥಿಗಳಾಗಿ ತಂಗಿದ್ದರು. ಕೇಶವೈನ್ ಮಾರಿಕಾಂಬಾ ದೇವಸ್ಥಾನದಲ್ಲೂ ನಡೆಯುತ್ತಿದ್ದ ಪ್ರಾಣಿವಧೆಯನ್ನು ನಿಲ್ಲಿಸಿದರು. ಅವರು ಪ್ರಾಣಿವಧೆ ನಿಲ್ಲಿಸಿದ ಸುದ್ದಿಯನ್ನು ತಿಳಿದ ಮಹಾತ್ಮ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಇವರನ್ನು ಅಭಿನಂದಿಸಿ ಬರೆದರು (1942).

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರು ಮಾಡಿದ ಸೇವೆಯನ್ನು ಗುರುತಿಸಿ ಪ್ರಥಮ ಚುನಾವಣೆಯಲ್ಲಿ (1937) ಉತ್ತರ ಕನ್ನಡ ಜಿಲ್ಲೆಯ ಅಭ್ಯರ್ಥಿಯಾಗಿ ಗಾಂಧೀಜಿಯವರು ಕೇಶವೈನ್‌ರ ಹೆಸರನ್ನು ಘೋಷಿಸಿದರು. ಎರಡನೆಯ ಮಹಾಯುದ್ಧ ಆರಂಭವಾದಾಗ (1939) ಬ್ರಿಟಿಷ್ ಸರ್ಕಾರ ಭಾರತೀಯರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿತು. ಆಗ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹಕ್ಕೆ ಕರೆ ನೀಡಿದರು. ಗಾಂಧೀಜಿಯವರ ಆದೇಶದಂತೆ ಇವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಸತ್ಯಾಗ್ರಹಿಯಾಗಿ ಹಾಲ್ಲೊಂಡು ಹಿಂಡಲಗಾ ಜೈಲಿನಲ್ಲಿ ಒಂದು ವರ್ಷದ ಸಾದಾ ಶಿಕ್ಷೆ ಅನುಭವಿಸಿದರು (1940). ಕೆನರಾ ಜಿಲ್ಲಾ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ 83 ಗ್ರಾಮೀಣ ಶಾಲೆಗಳನ್ನು ತೆರೆದು 25 ವರ್ಷ ನಡೆಸಿ ಜಿಲ್ಲಾ ಶಿಕ್ಷಣ ಬೋರ್ಡಿಗೆ ವಹಿಸಿಕೊಟ್ಟರು. ಮೂರು ಬಾರಿ ಶಿರಸಿ ನಗರಸಭಾ ಸದಸ್ಯರಾಗಿ ಮಾರಿಕಾಂಬಾ ದೇವಾಲಯದ ಧರ್ಮದರ್ಶಿಗಳಾಗಿ, ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ, ಹರಿಜನ ಸೇವಕ ಸಂಘದ ಉತ್ತರ ಕನ್ನಡ ಜಿಲ್ಲಾಧ್ಯಕ್ಷರಾಗಿ, ಶಿವಮೊಗ್ಗ- ಕಾರವಾರಗಳಲ್ಲಿದ್ದ ಬಾಲಕಾಶ್ರಮಗಳ ಆಡಳಿತ ಸಮಿತಿಯ ಪದಾಧಿಕಾರಿಯಾಗಿ, ರೈತ ತೋಟಗಾರರ ಸಂಘದ ಪ್ರತಿನಿಧಿಯಾಗಿ, ಸಹಕಾರ ಧುರೀಣರಾಗಿ, ಸ್ವಾತಂತ್ರ್ಯ ಸೇನಾನಿಯಾಗಿ, ಜಿಲ್ಲೆಯ ಪ್ರಥಮ ಶಾಸಕನಾಗಿ ಇವರು ಅಪೂರ್ವ ಸೇವೆ ಸಲ್ಲಿಸಿದರು. ಇವರು 1964 ಸೆಪ್ಟೆಂಬರ್ 21ರಂದು ಶಿರಸಿಯಲ್ಲಿ ನಿಧನಹೊಂದಿದರು. (ಎಸ್.ಎಂ.ಕೆ.)

**ಕೇಶಾಲಂಕಾರ :** ದೈಹಿಕ ಶೃಂಗಾರದ ಒಂದು ಬಗೆ. ಈ ವಿಚಾರದಲ್ಲಿ ಗಂಡಸರಿಗಿಂತ ಸ್ತ್ರೀಯರಲ್ಲಿ ಹೆಚ್ಚು ಆಸಕ್ತಿ ಹಾಗೂ ಒಲವು ಕಂಡು ಬರುತ್ತದೆ. ಪ್ರಾಚೀನ ಕಾಲದಿಂದ ಕನ್ನಡ ಮಹಿಳೆಯರು ಕೇಶಾಲಂಕಾರ ಕಲೆಯಲ್ಲಿ ನಿಪುಣರೆನಿಸಿ ಕೊಂಡಿದ್ದಾರೆ. ಪ್ರಾಚೀನ ಕರ್ನಾಟಕದ ಶಿಲ್ಪಕಲೆಯಲ್ಲಿ ಮೂಡಿಬಂದ ಮಹಿಳೆಯರ ಅಲಂಕಾರಗಳನ್ನು ಗಮನಿಸಿದರೆ, ಆ ಕಾಲದ ಕನ್ನಡ ಕಾವ್ಯಗಳನ್ನವಲೋಕಿಸಿದರೆ ಇದು ವೇದ್ಯವಾಗುವುದು. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ದೊರೆಯುವ ಜಡೆಮುಡಿಗಳ ವರ್ಣನೆಯನ್ನು, ವೈವಿಧ್ಯವನ್ನು ಶಿಲ್ಪದ ಮೂರ್ತಿಮಂತ ರೂಪದೊಂದಿಗೆ ಸಮನ್ವಯಗೊಳಿಸಿ ನೋಡಿದಾಗ ಆ ಕಾಲದ ಕೇಶಾಲಂಕಾರದ ವೈವಿಧ್ಯಮಯ ಚಿತ್ರ ನಮಗೆ ಕಂಡುಬರುತ್ತದೆ.

ಕುಡಿವುಗುರಿಂದಳಲ್ಮುಡಿಯ ಗಂಟು ಸಡಲ್ಚಿಸಿ ಗಂಧತೈಲಮಂ ಕುಡಿತೆಯೊಳಾಂತು ನೆತ್ತಿಯೊಳಗೊತ್ತಿ ಬಿದಿರ್ಚುತೆ ಕೇಶಪಾಶಮಂ,

ಸಹಜ ದಿವ್ಯಸುಗಂಧದ ಕೇಶಪಾಶಮಂ ಮೃಗಗಂಧಿ ಪೂಸಿದಳುಪಾಸಿತ ಚಂಪಕ ಗಂಧತೈಲಮಂ,

ಇತ್ಯಾದಿ ವರ್ಣನೆಗಳನ್ನು ಓದಿದಾಗ ಅಂದಿನ ಮಹಿಳೆಯರು ಕೇಶಾಲಂಕಾರಕ್ಕಾಗಿ ಗಂಧ, ಚಂಪಕ, ಮಲ್ಲಿಗೆ, ದವನಗಳ ಎಣ್ಣೆಗಳನ್ನು ಉಪಯೋಗಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಚಾಳುಕ್ಯರ ರಾಜಧಾನಿಗಳಾದ ಐಹೊಳೆ, ಪಟ್ಟದಕಲ್ಲುಗಳಲ್ಲಿಯ ಶಿಲ್ಪಾಲಂಕೃತ ದೇವಾಲಯಗ ಪ್ರಾಚೀನ ದೇವಾಲಯಗಳಾಗಿವೆಯಷ್ಟೆ. ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯಗಳ ಮೂರ್ತಿ ಅನೇಕ ವಿಗ್ರಹಗಳ ಜಡೆ ಮುಡಿಗಳು ಸುಂದರವಾಗಿವೆ. ಐಹೊಳೆಯ ದುರ್ಗಾ, ಲಾಡ ಖಾನ ಮೊದಲಾದ ದೇವಾಲಯಗಳ ಕೇಶಾಲಂಕಾರ ವೈವಿಧ್ಯ ಮಯವಾಗಿದೆ. ಅವುಗಳಲ್ಲಿ ಬಿಡುಮುಡಿ, ಸೋಗೆ ದುರುಂಬು, ಮುತ್ತಿನ ಮುಡಿ, ಎಳಲ್ಮುಡಿ, ಬಳಲ್ಮುಡಿ, ಗೋಡಂಬಿಮುಡಿ ಇವು ಆ ಕಾಲದ ಕೇಶಾಲಂಕಾರಗಳನ್ನು ಎತ್ತಿತೋರುತ್ತವೆ. ಚಾಳುಕ್ಯ ವಿಕ್ರಮಾದಿತ್ಯನ ರಾಣಿಯರಾದ ಲೋಕಮಹಾದೇವಿ. ತ್ರೈಲೋಕ್ಯ ಮಹಾದೇವಿಯರು ಪಟ್ಟದಕಲ್ಲಿನಲ್ಲಿ ಕಟ್ಟಿಸಿದ ದೇವಾಲಯಗಳು ಲೋಕೇಶ್ವರ, ತ್ರೈಲೋಕೇಶ್ವರ ದೇವಾಲಯಗಳೆಂದು ಪ್ರಸಿದ್ಧವಾಗಿವೆ. ಈಗ ಆ ದೇವಾಲಯಗಳಿಗೆ ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯ ಗಳೆನ್ನುವರು. ಶಿಲ್ಪಕಲೆಯ ಆಗರವಾಗಿರುವ ಆ ದೇವಾಲಯಗಳಲ್ಲಿ ಶಿಲಾಬಾಲಿಕೆಯರು ಕಟ್ಟಿದ ಬಿಡುಮುಡಿಯನ್ನು ಕಾಣಬಹುದು.

1 ಪ್ರಾಚೀನ ಕೇಶಾಲಂಕಾರಗಳಲ್ಲಿ ಕಾಣುವಂಥ ಬಿಡುಮುಡಿ ಕಟ್ಟುವುದು ಕಠಿಣವೆನಿಸುವುದೇನೋ ನಿಜ; ಆದರೆ ಅದು ಕಲಾಪೂರ್ಣವಾಗಿದೆ. ಮೊದಲು ಒಂದು ಸಿಂಬಿ ಇಟ್ಟು ದೊಡ್ಡ ಗಂಟನ್ನು ಕಟ್ಟಬೇಕು. ಉಳಿದರ್ಧ ಕೂದಲನ್ನು ಓರಣವಾಗಿ ಬಾಚಿ ಅರ್ಧ ಚಂದ್ರಾಕಾರದ ಸಿಂಬಿಯನ್ನು ಒಳಗಿಟ್ಟುಸುತ್ತಲೂ ಕೂದಲನ್ನು ಸುತ್ತಿ ಅದನ್ನು ಮುಡಿಯ ಕೆಳಭಾಗದಿಂದ ನೆಟ್ಟಗೆ ಮುಡಿಯವರೆಗೆ ಬರುವಂತೆ ಸುತ್ತಿ ಪಿನ್ನುಗಳನ್ನು ಹಾಕಿದರೆ ಬಿಡುಮುಡಿ ಸಿದ್ಧವಾಗುತ್ತದೆ.

2 ಮುಡಿ ನವಿಲಂತೆ ನರ್ತಿಕುಂ ಎನ್ನುವಂತೆ ನವಿಲು ಗರಿಗೆದರಿ ಕುಣಿಯುತ್ತಿರುವಂತೆ ತೋರುವ ಸೋಗೆ ದುರುಂಬನ್ನು ಐಹೊಳೆಯ ದೇವಾಲಯಗಳಲ್ಲಿ ಕಾಣಬಹುದು.

ನೆತ್ತಿಯ ಮೇಲೆ ಕೂದಲುಗಳನ್ನು ಮಾತ್ರ ತೆಗೆದುಕೊಂಡು ಸಣ್ಣ ತುರುಬೊಂದನ್ನು ನೆತ್ತಿಯ ಮೇಲೆ ಕಟ್ಟಿ ಹಿಂಭಾಗದ ಕೂದಲನ್ನು ಚೆನ್ನಾಗಿ ಬಾಚಿ ಅನೇಕ ವಿಭಾಗಗಳಾಗಿ ಮಾಡಿ ನವಿಲುಗರಿಯಂತೆ ಒಂದರ ಮೇಲೊಂದು ಗರಿ ಬರುವ ಹಾಗೆ ತಲೆಯ ಸುತ್ತಲೂ ಕಟ್ಟಬೇಕು. ಈ ಸೋಗೆದುರುಬು ಮಹಿಳೆಯರ ಕೇಶಾಲಂಕಾರ ನಿಪುಣತೆಗೆ ಸಾಕ್ಷಿಯಾಗಿದೆ.

3 ಆ ಕಾಲದ ಅರಮನೆಗಳಲ್ಲಿ ಮುತ್ತು ರಾಶಿರಾಶಿಯಾಗಿರುತ್ತಿತ್ತು. ಮಹಿಳೆಯರು ಮುಡಿಯ ಅಲಂಕಾರದ ಸಾಧನವಾಗಿ ಮುತ್ತಿನ ಎಳೆಗಳನ್ನು ಉಪಯೋಗಿಸುತ್ತಿದ್ದರು. ಪಟ್ಟದಕಲ್ಲಿನ ತ್ರಿಲೋಕೇಶ್ವರ ದೇವಾಲಯದಲ್ಲಿರುವ ಶಿಲ್ಪಸುಂದರಿ ಮುತ್ತಿನ ಮುಡಿಯಿಂದ ಅಲಂಕೃತಳಾಗಿದ್ದಾಳೆ. ತಲೆಯ ಸುತ್ತಲೂ ಮೂರೆಳೆಯ ಮುತ್ತಿನ ಸರವನ್ನು ಅಂದವಾಗಿ ಸುತ್ತಲಾಗಿದೆ. ನೆತ್ತಿಯ ಮೇಲೆ ಮುತ್ತಿನ ಗೊನೆಯನ್ನಿಟ್ಟು ಎಲ್ಲ ಕೂದಲನ್ನೂ ತಲೆಯ ಎಡಭಾಗದಿಂದ ಮುರಿಗೆ ಮಾಡಿ ಮುತ್ತಿನ ಗೊನೆಯ ಸುತ್ತಲೂ ಎತ್ತಿ ಸುತ್ತಿದ್ದಾರೆ. ಆ ಮುಡಿ ಗಟ್ಟಿಯಾಗಿರಲು ಮುತ್ತಿನ ಎರಡೆಳೆಯನ್ನು ಕಲಾತ್ಮಕವಾಗಿ ಸುತ್ತ ಸುತ್ತಿದ್ದಾರೆ. ತೋರಮುಡಿಯೊಳೆ ಮುತ್ತಿನ ಶೃಂಗಾರವೊಪ್ಪಿತ್ತು -ಎಂಬಂತೆ ತೋರುವುದು ಮುತ್ತಿನ ಮುಡಿ.

4 ಅದೇ ದೇವಾಲಯದಲ್ಲಿರುವ ಇನ್ನೋರ್ವ ಶಿಲ್ಪಸುಂದರಿ ತನ್ನ ದುಂಡಗಿನ ಮುಖಕ್ಕೊಪ್ಪುವಂತೆ ಗೋಡಂಬಿಮುಡಿ ಕಟ್ಟಿದ್ದಾಳೆ. ತಲೆಗೂದಲನ್ನೆಲ್ಲ ಬಾಚಿ, ಒಳಗೆ ಗೋಡಂಬಿಯಾಕಾರದ ಸಿಂಬಿಯನ್ನಿಟ್ಟು ಅದರ ಸುತ್ತಲೂ ಕೂದಲನ್ನು ಸುತ್ತಿ ತಲೆಯ ಮೇಲ್ಭಾಗದಲ್ಲಿ ಎದ್ದು ಕಾಣುವಂತೆ ಕಟ್ಟಿದ ಈ ಮುಡಿಗೆ ಆಭರಣಗಳ ಆವಶ್ಯಕತೆಯಿಲ್ಲ. ನಾರಿಗೆ ಮುಡಿಯೇ ಶೃಂಗಾರವಾಗಿದೆ.

5 ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಶಿಲಾಬಾಲಿಕೆಯರಲ್ಲಿ ಕಂಡುಬರುವ ಮುಡಿಗಳಲ್ಲಿ ಎಳಲ್ಮುಡಿ ಸುಂದರವಾಗಿದೆ. ಅರ್ಧಚಂದ್ರಾಕೃತಿಯ ಸಿಂಬಿಗೆ ಕೂದಲನ್ನು ಸುತ್ತಿ ತಲೆಯ ಮೇಲ್ಭಾಗದಲ್ಲಿ ಎದ್ದುಕಾಣುವಂತೆ ಕಟ್ಟಿದ ಮುಡಿಯ ಮಧ್ಯದಲ್ಲೊಂದು ಹರಳು ಹುಗಿಸಿದ ಕೇಶಾಭರಣವಿದೆ. ಹಳೇಬೀಡು, ಬೇಲೂರು ದೇವಾಲಯಗಳ ಶಿಲಾಬಾಲಿಕೆಯರ ಮುಡಿಗಳು ಅಜಂತ ಚಿತ್ರಗಳ ಮುಡಿಗಳಂತೆ ಪ್ರಸಿದ್ಧವಾಗಿವೆ. ಈ ಮುಡಿಗಳನ್ನೂ ತಲೆಗಿಂತಲೂ ಎತ್ತರವಾಗಿ ಕಟ್ಟಲಾಗಿದೆ. ಒಂದು ಸುತ್ತು ಜಡೆಯನ್ನು ಚಕ್ರಾಕಾರವಾಗಿ ಸುತ್ತಿದ್ದಾರೆ. ಅದರ ಸುತ್ತಲೂ ಮಲ್ಲಿಗೆಮಾಲೆ, ಅದರ ಮೇಲೆ ಕೂದಲನ್ನು ದುಂಡಗೆ ಸುತ್ತಿದ್ದಾರೆ. ಮತ್ತೊಂದು ಜಡೆಯನ್ನು ಅದರ ಸುತ್ತಲೂ ಸುತ್ತಲಾಗಿದೆ. ಬೀಸಣಿಕೆಯ ಆಕಾರದ ಜಡೆಮುಡಿ ಅಂದವಾಗಿ ತೋರುತ್ತದೆ. ಜಡೆಗೆ ಕಟ್ಟಿದ ಜರದ ಗೊಂಡೆಗಳು ಹಿಂಭಾಗದಲ್ಲಿ ನರ್ತಿಸುತ್ತವೆ. ಈ ಜಡೆಮುಡಿಗೆ ಸಿರಿಮುಡಿ, ಬೇಲೂರ ಮುಡಿ, ಬೀಸಣಿಕೆಮುಡಿ ಎಂದು ಹೆಸರುಂಟು. ವಿಜಯನಗರದ ಅರಸರ ಕಾಲದ ಶಿಲ್ಪಸುಂದರಿಯರ ಮುಡಿಗಳೆಲ್ಲ ಬಂಬಲ್ಮುಡಿ ಅಥವಾ ತೆಕ್ಕೆದುರುಂಬುಗಳಾಗಿವೆ. ಬಂಬಲ್ಮುಡಿ ಎಂದರೆ ದೊಡ್ಡಮುಡಿ; ತೆಕ್ಕೆದುರುಬೂ ಅದೇ ಅರ್ಥವುಳ್ಳದ್ದು. ದೊಡ್ಡ ಅಳತೆಯ ಗಂಗಾವನವನ್ನು (ಬನ್) ಕೂದಲಿನ ಮಧ್ಯದಲ್ಲಿಟ್ಟು ದೊಡ್ಡ ಮುಡಿಯನ್ನು ಕಟ್ಟಿದ್ದಾರೆ. ಆ ಕಾಲದ ಶಿಲ್ಪಗಳಲ್ಲಿ ಈ ಮುಡಿಯೊಂದೇ ಎದ್ದು ತೋರುವುದು. ವಿಜಯನಗರದಲ್ಲಷ್ಟೇ ಅಲ್ಲ ಆ ಅರಸರು ಕಟ್ಟಿಸಿದ ದೇವಾಲಯಗಳಲ್ಲೆಲ್ಲ ಬಂಬಲ್ಮುಡಿಯೇ ಕಂಡುಬರುತ್ತದೆ.

ಆಧುನಿಕ ಕಾಲದ ಕೇಶಾಲಂಕಾರ ದಿನಕ್ಕೊಂದು ಬಗೆಯಾಗಿ ಮಾರ್ಪಡುತ್ತಿದೆ. ಇಂದಿನ ಮಹಿಳೆಯರು ಕೇಶಾಲಂಕಾರಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಶಿಲಾಬಾಲಿಕೆಯರ ಜಡೆಮುಡಿಗಳು ಚಲನಚಿತ್ರ ಜಗತ್ತಿಗೆ ಪ್ರವೇಶಿಸಿ ಆ ಮೂಲಕ ಎಲ್ಲೆಡೆ ಪ್ರಸಾರವಾಗುತ್ತಿವೆ. ಮಹಿಳೆಯರ ಸೌಂದರ್ಯಾಭಿವೃದ್ಧಿಗೆ ಕೇಶಾಲಂಕಾರ ಒಂದು ಮಹತ್ತ್ವದ ಸಾಧನವಾಗಿದೆ.

ಮುಖದ ಆಕೃತಿಗೆ, ದೇಹದ ಗಾತ್ರಕ್ಕೆ, ಎತ್ತರಕ್ಕೆ ತಕ್ಕಂತೆ ಮುಡಿ ಕಟ್ಟುವ ಕಲೆ ಬೆಳೆದುಬರುತ್ತಿದೆ. ದೊಡ್ಡದೊಡ್ಡ ಪಟ್ಟಣಗಳಲ್ಲಿ ಕುಶಲ ಕೇಶಾಲಂಕಾರ ಕಲೆಯಲ್ಲಿ ನಿಪುಣೆಯರಾದವರು ಮುಡಿಕಟ್ಟುವ ಉದ್ಯೋಗ ಕೈಕೊಂಡಿದ್ದಾರೆ. ಅಂಥವರು ಮುಡಿ ಕಟ್ಟಲು ವಿದ್ಯುತ್ ಸಲಕರಣೆಗಳನ್ನೂ ಬಳಸುತ್ತಾರೆ. ಅವರು ಪರಿಶ್ರಮಪಟ್ಟು ಕಟ್ಟುವ ಮುಡಿಗಳನ್ನು ನೋಡುವುದೆಂದರೆ ಕಣ್ಣಿಗೊಂದು ಹಬ್ಬ.

ಪಟ್ಟದಕಲ್ಲು, ಅಜಂತ, ಬೇಲೂರು ಮುಡಿಗಳ ಅನುಕರಣೆ ಚಿತ್ರಪ್ರಪಂಚದಲ್ಲಿ ಪ್ರಾರಂಭವಾಗಿ, ಆಧುನಿಕ ಮಹಿಳೆಯರ ಕೇಶಾಲಂಕಾರಕ್ಕೆ ಮಾರ್ಗದರ್ಶಕವಾಗಿದೆ. ಇಂದಿನ ಮಹಿಳೆಯರು ಪೇಟೆಯಲ್ಲಿ ದೊರೆಯುವ ಗಂಗಾವನ, ಸಿಂಬಿಗಳನ್ನು ಬಳಸುತ್ತಾರೆ. ಅವು ಚಕ್ರಾಕಾರ, ಅರ್ಧಚಂದ್ರಾಕಾರ ಹಾಗೂ ದೊಡ್ಡ ಮುಡಿಗಳ ಆಕಾರದಲ್ಲಿ ದೊರೆಯುತ್ತವೆ. ಅಂಥ ಸಿಂಬಿಗಳನ್ನು ಉಪಯೋಗಿಸಿ ಚಿತ್ತಾಕರ್ಷಕವಾಗಿ, ವೈವಿಧ್ಯಪೂರ್ಣವಾಗಿ ನಾನಾ ರೀತಿಯಾಗಿ ಮುಡಿಗಳನ್ನು ಕಟ್ಟುತ್ತಾರೆ. ದುಂಡಗಿನ ಮುಖಕ್ಕೆ ತಲೆಗಿಂತ ಎತ್ತರವಾಗಿ ಕಾಣುವ ಮುಡಿ ಒಪ್ಪುತ್ತದೆ. ತಲೆಯ ಹಿಂಭಾಗದಲ್ಲಿ ಅರ್ಧ ಚಂದ್ರಾಕಾರದ ಗಂಗಾವನ ಹಾಕಿ ಆ ಭಾಗದ ಕೂದಲನ್ನು ಏರಿಸಿ ಬಾಚಬೇಕು. ಮುಂದೆ ನಡು ಬೈತಲೆ ಇರಬೇಕು. ನೆತ್ತಿಯ ಹಿಂಭಾಗದ ಕೂದಲನ್ನು ಕೂಡಿಸಿ ಅಲ್ಲೊಂದು ದೊಡ್ಡ ಗಂಗಾವನ ಹಾಕಿ ಮುಡಿ ಕಟ್ಟಿದರೆ ದುಂಡಗಿನ ಮುಖದ ಅಂದ ಹೆಚ್ಚುವುದು. ಅಂಡಾಕೃತಿ

ಮುಖವುಳ್ಳವರು ಚಕ್ರಾಕಾರದ ದೊಡ್ಡ ಅಳತೆಯ ಗಂಗಾವನ ಹಾಕಿ ಬಂಬಲ್ಲುಮುಡಿಯಂತೆ ಕಾಣುವ ಮುಡಿಯನ್ನು ಕಟ್ಟಿದ್ದರೆ ಒಪ್ಪುತ್ತದೆ. ಎತ್ತರವಾಗಿರುವವರು ಉದ್ದವಾಗಿರುವ ಗಂಗಾವನ ಹಾಕಿ ಎಡಭಾಗದಿಂದ ಆ ಗಂಗಾವನಕ್ಕೆ ಕೂದಲುಗಳನ್ನು ಸುತ್ತಿ ಮುಡಿ ತಲೆಯ ಕೆಳಭಾಗದಲ್ಲಿ ಬರುವಂತೆ, ಅಂದರೆ ಬಳಲ್ಲುಮುಡಿಯಂತೆ ಕಟ್ಟಿದರೆ ಅವರ ನಿಲುವು ಹೆಚ್ಚು ಎತ್ತರವಾಗಿ ಕಾಣುವುದಿಲ್ಲ. ಚೌಕೋನಾಕೃತಿಯ ಮುಖವುಳ್ಳವರು ಸಮವಾಗಿ ಬಾಚಿಕೊಂಡು ಮುಡಿ ಅಗಲವಾಗಿ ಕಾಣುವಂತೆ ಗಂಗಾವನ ಹಾಕಿ ಅರ್ಧಕೂದಲಿನಿಂದ ದುಂಡಗಿನ ಮುಡಿ ಕಟ್ಟಬೇಕು. ಉಳಿದರ್ಧ ಕೂದಲ ಜಡೆ ಹೆಣೆದು ಆ ಮುಡಿಯ ಸುತ್ತಲೂ ಸುತ್ತ ಬೇಕು. ಮೇಲೊಂದು ಅರೆಬಿರಿದ ಮಲ್ಲಿಗೆ ಮಾಲೆ ಹಾಕಿದರೆ ಜಡೆ ಮುಡಿಯ ಅಂದ ಹೆಚ್ಚು ವುದು. ಇತ್ತೀಚೆಗೆ ಮುಖದ ಗಾತ್ರಕ್ಕಿಂತ ದೊಡ್ಡದಾದ ಮುಡಿಯನ್ನು ತಲೆಗಿಂತ ಎತ್ತರವಾಗಿ ಕಾಣುವಂತೆ ಕಟ್ಟುವರು. ತರುಣಿಯರು ಎರಡು ಜಡೆ ಹೆಣೆದುಕೊಳ್ಳುವರು. ಇಲ್ಲವೆ ಬಾಬ್‌ಕಟ್ ಮಾಡಿಸಿಕೊಂಡು ನಡುಬೈತಲೆ ತೆಗೆಯುವರು. ಪೋನಿ ಟೇಲ್ ಕಟ್ಟುವುದೂ (ಕುದುರೆಯ ಬಾಲದಂಥ ಜುಟ್ಟು) ವಾಡಿಕೆಯಾಗಿದೆ.

ಜಡೆ ಕಟ್ಟುವುದು ಒಂದು ವಿಶಿಷ್ಟ ಕಲೆ. ಬೈತಲೆಯನ್ನು ನಡುವಿಗೆ ತೆಗೆಯುವವರಿದ್ದಾರೆ, ಎಡಕ್ಕೋ ಬಲಕ್ಕೋ ತೆಗೆಯುವವರಿದ್ದಾರೆ. ಸ್ವಲ್ಪವೇ ನಡುಬೈತಲೆ ತೆಗೆದು ಕೂದಲನ್ನೆಲ್ಲ ಹಿಂದಕ್ಕೆ ಬಾಚುವವರಿದ್ದಾರೆ. ಕೆಲವರು ಹಾಗೆಯೇ ಎಲ್ಲ ತಲೆಗೂದಲನ್ನೂ ಬೈತಲೆ ತೆಗೆಯದೆ ಹಿಂದಕ್ಕೆ ಬಾಚುತ್ತಾರೆ. ಜಡೆ ಒಂದೇ ಆದಾಗ ಮೂರು ಕಾಲಿನದಾಗಬಹುದು. ಐದು ಕಾಲಿನದಾಗಬಹುದು. ಎರಡು ಜಡೆ ಹಾಕುವುದು ಬಾಲ್ಯ ಯೌವನಗಳಲ್ಲಿ ಸಹಜ. ಜಡೆ ಬಿಗಿಯಾಗಿರಬಹುದು. ಸಡಿಲವಾಗಿರಬಹುದು. ಎರಡು ಜಡೆಗಳ ತುದಿಗಳನ್ನೂ ಎತ್ತಿ ಜಡೆ ಮೂಲಗಳಲ್ಲಿ ಗಂಟುಕಟ್ಟುವ ವಾಡಿಕೆಯೂ ಇದೆ. ನೀಳವಾದ ಜಡೆಯ ತುದಿಯಲ್ಲೆರಡು ಗೊಂಡೆ ಕಟ್ಟುವುದು ಒಂದು ಬಗೆಯ ಅಲಂಕರಣವಾದರೆ ಜಡೆಯನ್ನು ಅರ್ಧವೇ ಹೆಣೆದು ಅದರ ಮೂಲದಲ್ಲಿ ಒಂದು ಉಣ್ಣೆಯ ದಪ್ಪದಾರ ಬಿಗಿದರೆ ಮತ್ತೊಂದು ಅಲಂಕರಣವಾಗುತ್ತದೆ. ನಿತಂಬದವರೆಗೂ ನೀಳವಾಗಿ ಬಳಕುತ್ತಿರುವ ಜಡೆ ಎಲ್ಲ ಶೃಂಗಾರಪ್ರಿಯರ ಆದರ್ಶವೆನ್ನಿಸಿದೆ. ಬೇಕೆಂದವರು ಮಲ್ಲಿಗೆ ಮೊಗ್ಗನ್ನು ಹೆಣೆದು ನಾಗರ ಜಡೆ ಕಟ್ಟುತ್ತಾರೆ. ಕೇದಗೆ ಹೂವಿನ ಜಡೆ ಹಾಕುವವರಿದ್ದಾರೆ.



ಉಟ್ಟ ಸೀರೆಯ ಬಣ್ಣ, ಮುಡಿದ ಹೂವಿನ ಬಣ್ಣ ಒಂದೇ ಆಗಿರುವಂತೆ ಬಣ್ಣದ ಹೊಂದಾಣಿಕೆಯನ್ನು ಸಾಧಿಸಬಹುದು. ಮೊದಲಿನ ಕಾಲದಲ್ಲಿ ಬಣ್ಣಬಣ್ಣದ ಹೂಮಾಲೆಯನ್ನು ಮುಡಿಯ ಸುತ್ತಲೂ ಕಟ್ಟಿಕೊಳ್ಳುವುದು ಅಲಂಕಾರವೆನಿಸಿತ್ತು. ಈಗ ಹೂಮಾಲೆಗಿಂತ ಬಿಡಿಹೂವನ್ನು ಮುಡಿದುಕೊಳ್ಳುವುದು ಸಾಮಾನ್ಯವಾಗುತ್ತಿದೆ. ಅದು ಜಡೆಯ ನಡುವಿಗೆ ಇರಬಹುದು. ಇಲ್ಲವೆ ಕಿವಿಯ ಬಳಿ ಕರ್ಣಪೂರವಾಗಿರಬಹುದು.

ಕೇಶಾಲಂಕರಣಕ್ಕೆ ತೈಲ, ಪುಷ್ಪಗಳಂತೆ ಹಲಕೆಲವು ಆಭರಣಗಳನ್ನೂ ತೊಟ್ಟುಕೊಳ್ಳಬಹುದು. ನೆತ್ತಿಯಲ್ಲಿ ಹಾಕುವ ನಾಗರ, ಜಡೆಯ ಮೇಲರ್ಧದ ಮೇಲಕ್ಕೆ ಧರಿಸುವ ಜಡೆಬಿಲ್ಲೆ, ತುರುಬಿನ ನಡುವೆ, ಓರೆಯಲ್ಲಿ ಧರಿಸುವ ತುರುಬು ಹೂ, ಜಡೆಯ ತುದಿಯಲ್ಲಿ ತೊನೆದಾಡುವಂತೆ ಕಟ್ಟುವ ಗೊಂಡೆ ಇವು ಕೆಲವು ಪ್ರಸಿದ್ಧ ಆಭರಣಗಳು; ಇವುಗಳ ಮಾಟ ಮಾದರಿಗಳು ಕಾಲಕಾಲಕ್ಕೆ ವ್ಯತ್ಯಾಸವಾಗುತ್ತ ಬಂದಿವೆ. ನಾಗರ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಿದ್ದರೂ ಉಳಿದ ಆಭರಣಗಳನ್ನು ಕೆಲವು ಮಾರ್ಪಾಟುಗಳೊಂದಿಗೆ ಬಳಸುವುದುಂಟು.

ಸ್ತ್ರೀಯರಂತೆಯೇ ಗಂಡಸರಲ್ಲಿಯೂ ಕೇಶಾಲಂಕಾರದ ಬಗೆಗಳನ್ನು ಕಾಣಬಹುದು. ನಾನಾ ಬಗೆಯ ಶಿಖೆಗಳುಂಟು. ಒಬ್ಬೊಬ್ಬ ವ್ಯಕ್ತಿಯ ಹೆಸರಿನಲ್ಲಿಯೇ ಕೇಶಾಲಂಕಾರವನ್ನು ಗುರುತಿಸುವ ಪರಿ ಗಂಡಸರಲ್ಲಿದೆ. ಬಚ್ಚನ್ ಸ್ಟೈಲ್, ಬೆಕ್ಹಾಮ್ ಸ್ಟೈಲ್, ರೊನಾಲ್ಡೋಸ್ಟೈಲ್, ಪ್ರೀಸ್ಲಿಸ್ಟೈಲ್ ಇತ್ಯಾದಿ ಕೇಶಾಲಂಕಾರದ ಹೆಸರುಗಳನ್ನು ನಾವು ಕಾಣುತ್ತೇವೆ. ಕೃತಕ ಕೂದಲಿನ ವಿಗ್ ಮಾದರಿಗಳನ್ನು ಧರಿಸುವುದು ಈಗೀಗ ಜನಪ್ರಿಯತೆ ಗಳಿಸುತ್ತಿದೆ. *

**ಕೇಶಿ ದಂಡನಾಯಕ :** ಈತ ರನ್ನನ (ಸು.993) ಸಾಹಸಭೀಮವಿಜಯ (ಗದಾಯುದ್ಧ) ಕಾವ್ಯವನ್ನು ತಿದ್ದಿದನೆಂಬುದು ಆ ಗ್ರಂಥದ, ವನರುಹಭವನೆನಿಸಿದ ದಂಡನಾಯಕಂ ಕೇಶಿ ತಿರ್ದೆ ಪೇಳ್ದಂ, ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ರನ್ನನ ಗ್ರಂಥವನ್ನು ತಿದ್ದಿರುವುದನ್ನು ನೋಡಿದರೆ ಈತ ದೊಡ್ಡ ವಿದ್ವಾಂಸನಾಗಿರಬೇಕು. ಈ ಕೇಶಿದಂಡನಾಯಕನೇ 1023 ಮತ್ತು 1048ರ ಗುತ್ತಿ ಹಾಗೂ ಕುಡಿತಿನಿ ಶಾಸನಗಳಲ್ಲಿ ಉಲ್ಲೇಖಿತನಾಗಿರುವ ಕೇಶಿ ಅಥವಾ ಕೇಶಿರಾಜ ಎಂಬ ಒಂದು ಅಭಿಪ್ರಾಯವೂ 1012ರ ಕೋಟವಿಮಚಗಿ ಶಾಸನದಲ್ಲಿ ಬಂದಿರುವ ದಣ್ಡನಾಯಕ ಕೇಶವಯ್ಯನೇ ಇವನು ಎಂಬ ಇನ್ನೊಂದು ಅಭಿಪ್ರಾಯವೂ ಇವೆ. (ಎಸ್.ಜಿಎ.)

**ಕೇಶಿರಾಜ :** ಸು.1260. ಕನ್ನಡದ ಪ್ರಸಿದ್ಧ ವೈಯಾಕರಣ. ಶಬ್ದಮಣಿದರ್ಪಣಂ ಎಂಬ ಹಳಗನ್ನಡ ವ್ಯಾಕರಣ ಗ್ರಂಥದ ಕರ್ತೃ. ಈತನ ಅಜ್ಜ (ತಾಯಿಯ ತಂದೆ) ಕವಿಸುಮನೋಬಾಣ, ತಂದೆ ಸೂಕ್ತಿಸುಧಾರ್ಣವದ ಕರ್ತೃ ಚಿದಾನಂದ ಮಲ್ಲಿಕಾರ್ಜುನ. ಜನ್ನ (ಸು.1230) ಇವನ ಸೋದರಮಾವ. ಇಂಥ ವಿದ್ವತ್ ಪರಿಸರದಲ್ಲಿ ಬೆಳೆದ ಕೇಶಿರಾಜ ಕವಿಯೂ ಶಾಸ್ತ್ರಕಾರನೂ ಆದುದು ಸಹಜವೇ ಆಗಿದೆ. ಈತ ಶಬ್ದಮಣಿದರ್ಪಣದ ಕೊನೆಯ ಪದ್ಯವೊಂದರಲ್ಲಿ ಚೋಳಪಾಲಕಚರಿತೆ, ಶ್ರೀಚಿತ್ರಮಾಲೆ, ಸುಭದ್ರಾಹರಣ, ಪ್ರಬೋಧಚಂದ್ರ, ಕಿರಾತ ಎಂಬ ಕೃತಿಗಳನ್ನು ಬರೆದಿರುವಂತೆ ಹೇಳಿಕೊಂಡಿದ್ದಾನೆ. ಆದರೆ ಶಬ್ದಮಣಿದರ್ಪಣ ಗ್ರಂಥವನ್ನುಳಿದು ನಮಗೆ ಈತನ ಬೇರೆ ಯಾವುದೇ ಗ್ರಂಥ ದೊರೆತಿಲ್ಲ. ಇವುಗಳಲ್ಲಿ ಸುಭದ್ರಾಹರಣ ಮತ್ತು ಪ್ರಬೋಧಚಂದ್ರ ನಾಟಕಗಳಾಗಿರಬೇಕೆಂಬುದು ಕೆಲವರ ಅಭಿಪ್ರಾಯ. ಲಾಕ್ಷಣಿಕನೆಂದು ಇವನ ಖ್ಯಾತಿಯನ್ನು ಕವಿಮಲ್ಲ (ಸು.1400) ಮತ್ತು ಈಶ್ವರಕವಿ (ಸು.1450) ಕೊಂಡಾಡಿದ್ದಾರೆ. ಕೇಶಿರಾಜನಿಗೆ ಸುಕವಿ, ಕರ್ನಾಟಕ ಲಕ್ಷಣಶಿಕ್ಷಾಚಾರ್ಯ ಎಂಬ ಬಿರುದುಗಳು ಇದ್ದಂತೆ ತಿಳಿಯುತ್ತದೆ.

ಶಬ್ದಮಣಿದರ್ಪಣಂ ಕನ್ನಡದಲ್ಲಿ ಸ್ವತಂತ್ರವಾಗಿ ರಚಿತವಾಗಿರುವ ವ್ಯಾಕರಣಗಳಲ್ಲಿ ಮೊದಲನೆಯದು. ಸೂತ್ರಗಳು ಕಂದಪದ್ಯದಲ್ಲಿವೆ. ವೃತ್ತಿ ಗದ್ಯದಲ್ಲಿದೆ. ಇದು ಹಳಗನ್ನಡ ಭಾಷೆಗೆ ಬರೆದ ವ್ಯಾಕರಣ ಗ್ರಂಥವಾಗಿದ್ದು, 13ನೆಯ ಶತಮಾನಕ್ಕೆ ಮೊದಲು ಹಳಗನ್ನಡ ಭಾಷೆಯ ಸ್ಥಿತಿಗತಿಗಳು ಹೇಗಿದ್ದುವೆಂಬ ಬಗೆಗೆ ಸವಿಸ್ತಾರವೂ ಸಪ್ರಮಾಣವೂ ಆದ ವಿವೇಚನೆಯನ್ನೊಳಗೊಂಡಿದೆ. ಇದರಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಎಂಬ ಎಂಟು ಪ್ರಕರಣಗಳಿವೆ.

ಈ ಎಂಟು ಪ್ರಕರಣಗಳಲ್ಲಿ ಕೇಶಿರಾಜ ಪೂರ್ವಸೂರಿಗಳು ಹೇಳಿದ ವಿಷಯಗಳನ್ನೇ ವಿವರಿಸಿದ್ದರೂ ಅನೇಕ ಹೊಸ ವಿಷಯಗಳನ್ನೂ ಚರ್ಚಿಸಿ ಸ್ವಂತಿಕೆಯನ್ನು ವ್ಯಕ್ತಪಡಿಸಿದ್ದಾನೆ. ಗ್ರಂಥದ ಆದಿಯಲ್ಲಿ ಮುಖ್ಯವಾಗಿ ಗ್ರಂಥಕಾರನ ಪರಿಚಯಾತ್ಮಕವಾದ ಒಂದು ಪೀಠಿಕೆಯ ಭಾಗವೂ ಅಂತ್ಯದಲ್ಲಿ ಪ್ರಯೋಗಸಾರವೆಂಬ ಒಂದು ಚಿಕ್ಕ ಶಬ್ದಾರ್ಥನಿರ್ಣಯ ಭಾಗವೂ ಸೇರಿಕೊಂಡಿವೆ. ಸಂಧಿಪ್ರಕರಣದಲ್ಲಿ ವರ್ಣಗಳ ಶ್ರಾವಣ, ಚಾಕ್ಷುಷ ಎಂಬ ವಿಭಜನೆ, ರಳ ಕುಳ ಕ್ಷಳಗಳ ವಿಚಾರ, ಲಾಂತ ಶಬ್ದಗಳು, ನಿತ್ಯಬಿಂದು, ಅಬಿಂದು, ವಿಕಲ್ಪಬಿಂದುಗಳು, ನಿಯತದ್ವಿತ್ವ, ಶಿಥಿಲದ್ವಿತ್ವ, ಸ್ವರ, ವ್ಯಂಜನ, ಸಂಧಿಗಳು, ಸಂಧಿ ವಿಸಂಧಿ, ಸಂಧಿದೋಷ, ವಿಕಲ್ಪಸಂಧಿ ವಿಷಯಗಳು, ನಾಮಪ್ರಕರಣದಲ್ಲಿ ಕೃತ್ತಾದಿಯಾದ ಲಿಂಗಚತುಷ್ಟಯಗಳು, ಸಮಸಂಸ್ಕೃತಗಳು, ನಾಮಭೇದಗಳು, ಸರ್ವನಾಮಗಳು, ಲಿಂಗ, ವಚನ, ವಿಭಕ್ತಿ, ಇತ್ಯಾದಿಗಳು, ಸಮಾಸ ಪ್ರಕರಣದಲ್ಲಿ ಲೋಪಾಗಮಾದೇಶಗಳು, ತತ್ಪುರುಷ, ಕರ್ಮಧಾರಯ, ಅವ್ಯಯೀಭಾವ ಕ್ರಿಯಾ ಗಮಕ ಮುಂತಾದ ಸಂಸ್ಕೃತ ಕನ್ನಡ ಸಮಾಸಗಳು, ತದ್ಧಿತಪ್ರಕರಣದಲ್ಲಿ ಬಗೆಬಗೆಯ ಅರ್ಥಗಳನ್ನು ಕೊಡುವ ತದ್ಧಿತ ಪ್ರತ್ಯಯಗಳನ್ನು ಹಚ್ಚಿದ ಪುಂಸ್ತ್ರೀವಾಚಕಗಳಾದ ತದ್ಧಿತ ನಾಮಗಳು ಹಾಗೂ ತದ್ಧಿತ ಭಾವನಾಮಗಳು, ಆಖ್ಯಾತ ಪ್ರಕರಣದಲ್ಲಿ ಪುರುಷವಾಚಕ ಮತ್ತು ಕಾಲವಾಚಕ ಪ್ರತ್ಯಯಗಳು ಸೇರತಕ್ಕ ರೀತಿ ಪರಿಸರಗಳು, ವಿಧ್ಯರ್ಥ ಮತ್ತು ಸತಿಸಪ್ತಮಿಗಳು, ಧಾತುಪ್ರಕರಣದಲ್ಲಿ ಧಾತುಗಳು ಮತ್ತು ಅವುಗಳ ಅರ್ಥವಿವರಣೆ, ಅಪಭ್ರಂಶ ಪ್ರಕರಣದಲ್ಲಿ ಕನ್ನಡದಲ್ಲಿ ಬಳಕೆಯಾಗುವ ರೂಢಿಯ ಸಂಸ್ಕೃತ ಪದಗಳ ಹಾಗೂ ಸಂಸ್ಕೃತ ಸಮಾಸ ಪದಗಳ ತದ್ಭವರೂಪಗಳು, ಸಂಸ್ಕೃತ-ಕನ್ನಡ ಪದಗಳೊಡನೆ ಸಮಾನವಾಗಿ ಕೂಡಿ ಸಮಾಸವಾಗಬಹುದಾದ ತತ್ಸಮ ಶಬ್ದ, ಇತ್ಯಾದಿಗಳು, ಅವ್ಯಯ ಪ್ರಕರಣದಲ್ಲಿ ಬೇರೆಬೇರೆ ಸಂದರ್ಭಗಳಿಗೆ ಅರ್ಥಗಳಿಗೆ ಬಳಸತಕ್ಕ ಅವ್ಯಯಗಳು, ಕೊನೆಯದಾಗಿ ಪ್ರಯೋಗಸಾರದಲ್ಲಿ ಕೆಲವು ಕ್ಲಿಷ್ಟ ಪದಗಳ ಅರ್ಥವಿವರಣೆ ಪ್ರತಿಪಾದಿತವಾಗಿವೆ.

ಕೇಶಿರಾಜ ಇಮ್ಮಡಿ ನಾಗವರ್ಮನ (ಸು.1150) ಶಬ್ದಸ್ಮೃತಿ, ಭಾಷಾಭೂಷಣ ಈ ಎರಡೂ ವ್ಯಾಕರಣಗ್ರಂಥಗಳನ್ನೇ ಸೂತ್ರ, ವೃತ್ತಿ ಮತ್ತು ಪ್ರಯೋಗಗಳಲ್ಲಿ ಮುಖ್ಯವಾಗಿ ಆಧರಿಸಿದ್ದಾನೆ. ಆದರೆ ಕೆಲವೆಡೆ ಹಿಂದೆ ಹೇಳಿದ್ದ ವಿಷಯಗಳನ್ನು ವಿಸ್ತರಿಸಿಯೂ ಹೆಚ್ಚಿನ ವಿಷಯಗಳನ್ನು ಸೇರಿಸಿಯೂ ತನ್ನ ಗ್ರಂಥವನ್ನು ಹೆಚ್ಚು ಉಪಯುಕ್ತವಾಗುವಂತೆ ಮಾಡಿದ್ದಾನೆ. ಹೀಗೆ ವಿವರಿಸಿ ವಿಶ್ಲೇಷಿಸುವಾಗ ಇವನಲ್ಲಿ ಶಾಸ್ತ್ರದೃಷ್ಟಿ, ಪ್ರಾಮಾಣಿಕತೆಗಳು ಕಂಡುಬರುತ್ತವೆ. ನಿರಾಧಾರವಾಗಿ ಏನನ್ನೂ ಹೇಳಲು ಪ್ರಯತ್ನಿಸಿಲ್ಲ. ಸಂದೇಹ ಬಂದ ಕಡೆ ಹಾಗೆಂದು ಒಪ್ಪಿಕೊಂಡಿದ್ದಾನೆ. ತನಗೆ ಒಪ್ಪಿಗೆಯಾಗದಿರುವುದನ್ನು ಕಂಠೋಕ್ತವಾಗಿ ನಿಷೇಧಿಸಿದ್ದಾನೆ. ಆತ್ಮವಂಚನೆ ಪರವಂಚನೆಗಳು ಇವನಲ್ಲಿ ಕಂಡುಬರುವುದಿಲ್ಲ. ಪ್ರಯೋಗಗಳ ಸಂಗ್ರಹಣೆಯೂ ಸಂಯೋಜನೆಯೂ ವ್ಯಾಕರಣಾಂಶಗಳ ವಿಶದೀಕರಣಕ್ಕೆ ಸಹಾಯಕವಾಗಿರುವಂತೆಯೇ ಈತನ ಕಾವ್ಯ ಮನೋಧರ್ಮದ, ಸರಸಪ್ರವೃತ್ತಿಯ ಪ್ರತೀಕಗಳೂ ಆಗಿ ಪರಿಣಮಿಸಿವೆ. ಪ್ರತಿಭೆ, ಪಾಂಡಿತ್ಯ, ವಿದ್ವಜ್ಜನಸೇವೆ, ಸತತಾಭ್ಯಾಸ ಇವು ಕೇಶಿರಾಜನಲ್ಲಿ ಮೈದುಂಬಿಕೊಂಡಿದ್ದವು. ಹಾಗಾಗಿ ಶುಷ್ಕವಾಗಬಹುದಾಗಿದ್ದ ವ್ಯಾಕರಣದ ಅಭ್ಯಾಸ ಆಕರ್ಷಕವಾಗಿದೆ. ಪ್ರಯೋಗಗಳನ್ನು ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ, ಹೊನ್ನ, ಹಂಪ, ಸುಜನೋತ್ತಂಸಹಂಸ ಮುಂತಾದ ಕವಿಗಳ ಗ್ರಂಥಗಳಿಂದ ತೆಗೆದುಕೊಂಡಿರುವುದಾಗಿ ಹೇಳಿದ್ದಾನೆ. ಈ ಕವಿಗಳ ಗ್ರಂಥಗಳಿಂದಲ್ಲದೆ ರನ್ನ, ನಾಗಚಂದ್ರ, ನಾಗವರ್ಮ, ನೇಮಿಚಂದ್ರ, ಹಂಸರಾಜ, ಬ್ರಹ್ಮಶಿವ ಮೊದಲಾದವರ ಗ್ರಂಥಗಳಿಂದಲೂ ಉದಾಹೃತವಾದ ಪದ್ಯಗಳು ದೊರೆಯುತ್ತವೆ. ಸಾಂಪ್ರದಾಯಿಕವಾಗಿ ಹೇಳಬೇಕಾದ್ದನ್ನು ಹೇಳಿ, ಬಳಿಕ ತನ್ನ ನಿಲುವನ್ನು ಈತ ಆಗಿಂದಾಗ್ಗೆ ವ್ಯಕ್ತಪಡಿಸಿದ್ದಾನೆ. ಕನ್ನಡ ಭಾಷೆಯ ಸ್ವರೂಪವನ್ನು ಈ ಒಂದು ಪದ್ಯದಲ್ಲಿ ಸಂಕ್ಷೇಪವಾಗಿ ಹೇಳಿದ್ದಾನೆ: ಗಮಕಸಮಾಸದಿಂ ರಳಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ ಸಮುಚಿತಮಾಗಿ ಬರ್ಪಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ ಮಮಹಪಭೇದದಿಂ ವಿರಹಿತಾವ್ಯಯ ಸಂಸ್ಕೃತಲಿಂಗದಿಂ ಪದೋತ್ತಮಶಿಥಿಲದಿಂ ಯತಿವಿಲಿಂಘನದಿಂದರಿದಲ್ತೆ ಕನ್ನಡ. ಇದರಿಂದ ಕೇಶಿರಾಜನಿಗೆ ಕನ್ನಡ ಭಾಷೆಯ ಬಗ್ಗೆ ಇದ್ದ ತಿಳಿವಳಿಕೆ ಹಾಗೂ ಸೂಕ್ಷ್ಮ ದೃಷ್ಟಿ ಎದ್ದುತೋರುತ್ತವೆ.

ಶಬ್ದಮಣಿದರ್ಪಣ ಪ್ರಧಾನವಾಗಿ ವಿಧ್ಯಾತ್ಮಕ ಅಥವಾ ಆದರ್ಶ (ಪ್ರಿಸ್ಕ್ರಿಪ್ಟಿವ್) ರೀತಿಯ ವ್ಯಾಕರಣವಾದರೂ ವಿವರಣಾತ್ಮಕ ಅಥವಾ ವರ್ಣನಾತ್ಮಕ (ಡಿಸ್ಕ್ರಿಪ್ಟಿವ್) ರೀತಿಯ ನಿರೂಪಣ ದೃಷ್ಟಿಯನ್ನೂ ಅದು ಒಳಗೊಂಡಿದೆ. ವ್ಯಾಕರಣಾಂಶಗಳ ವಿಶ್ಲೇಷಣೆಯಲ್ಲಿಯೂ ನಿರೂಪಣ ಕ್ರಮದಲ್ಲಿಯೂ ಅಲ್ಲಲ್ಲಿ ಕೆಲವು ಲೋಪದೋಷಗಳನ್ನು, ಅನೌಚಿತ್ಯಗಳನ್ನು ಭಾಷಾತಜ್ಞರು ಎತ್ತಿ ತೋರುವುದುಂಟು. ಹೀಗಿದ್ದೂ ಹಳಗನ್ನಡ ಭಾಷಾಸ್ವರೂಪವನ್ನು ಪ್ರಾಮಾಣಿಕವಾದ ರೀತಿಯಲ್ಲಿ ನಿಷ್ಠೆಯಿಂದ ವಿವರಿಸುವ ಪ್ರಯತ್ನದಿಂದಾಗಿ ಇದು ಪ್ರಸಿದ್ಧವಾಗಿದೆ. ಕೇಶಿರಾಜನ ವ್ಯಕ್ತಿತ್ವ ಶಬ್ದಮಣಿದರ್ಪಣದಲ್ಲಿ 'ಮನದೊಳೋವರಿಯಿಲ್ಲ ಬುದ್ಧಿಯೊಳ್ ವಿಸಂಚವಿಲ್ಲ' ಎನ್ನುವಂತೆ ಪ್ರತಿಬಿಂಬಿತವಾಗಿದೆ. ಈ ಎಲ್ಲ ದೃಷ್ಟಿಗಳಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೇಶಿರಾಜ ಮಾದರಿಯ ಶಾಸ್ತ್ರಕಾರನಾಗಿ ಕಂಡುಬರುತ್ತಾನೆ. (ಎಸ್.ಜಿ.ಎ.)

**ಕೇಶಿರಾಜ, ಕೊಂಡಗುಳಿ :** ಸು.1160. ವೀರಶೈವ ಕವಿ. ಷಡಕ್ಷರಕಂದ ಎಂಬ ಗ್ರಂಥದ ಕರ್ತೃ. ಬಿಜಾಪುರ ಜಿಲ್ಲೆಯ ಸಿಂದಗಿ ಗ್ರಾಮಕ್ಕೆ 16ಕಿಮೀ ಆಗ್ನೇಯಕ್ಕಿರುವ ಕೊಂಡಗುಳಿ ಇವನ ಜನ್ಮಸ್ಥಳ. ಈತನ ತಂದೆ ಹೊಳಲಮರಸ, ತಾಯಿ ದುರ್ಗಾದೇವಿ ಎಂದು ಶಿಕಾರಿಪುರದ ಶಾಸನಗಳಲ್ಲಿ ಹೇಳಿದೆ. ಈತನ ಹೆಂಡತಿ ಗಂಗಾದೇವಿ, ಗುರು ವಿರೂಪಾಕ್ಷ, ಸೋಮನಾಥ' ಇಷ್ಟದೈವ. ಕೇಶಿರಾಜ ದೊಡ್ಡ ವಿದ್ವಾಂಸನಾಗಿದ್ದಂತೆ ಶಿವಾನುಭವಿಯೂ ಆಗಿದ್ದ. ಸ್ವಲ್ಪ ಕಾಲ ಈತ ಕಲ್ಯಾಣದ ಸಮೀಪದ ಶಿವಪುರ ಎಂಬ ಗ್ರಾಮದಲ್ಲಿ ನೆಲಸಿದ್ದು ಅಲ್ಲಿ ಲಿಂಗಾರ್ಚನೆ ಜಂಗಮದಾಸೋಹ ಮೊದಲಾದವನ್ನು ನಡೆಸುತ್ತಿದ್ದ. ಇವನ ಶಾಸ್ತ್ರ ಪಾಂಡಿತ್ಯ, ವಿಚಾರಲಹರಿ ಮತ್ತು ಮಹತ್ವದ ಸದ್ಗುಣಗಳು ಸಮಕಾಲೀನ ಜನರ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿದವು. ತರ್ದವಾಡಿ ನಾಡಿನ ರಾಜಧಾನಿಯಾದ ಮಂಗಳವಾಡದಲ್ಲಿ ಸೊಲ್ಲಾಪುರ ಜಿಲ್ಲೆ ಆಳುತ್ತಿದ್ದ ಕಳಚುರಿ ವಂಶೀಯನಾದ ಪೆರ್ಮಾಡಿ ಎಂಬ ರಾಜ ಈತನ ಕೀರ್ತಿ, ವಿದ್ವತ್ತು ಮೊದಲಾದುವನ್ನು ಕಂಡು ತನ್ನ ಮಂತ್ರಿಯಾಗಿ ನೇಮಿಸಿಕೊಂಡ. ಅಂದಿನಿಂದ ಕೇಶಿರಾಜನಿಗೆ ದಣ್ಣಾಯಕ ಎಂಬ ಬಿರುದು ಬಂತು.

ಈತ ಸಕಲಶಾಸ್ತ್ರ ಪಂಡಿತನೂ ರಾಜನೀತಿ ವಿಶಾರದನೂ ಆಗಿದ್ದುದರಿಂದ ಇವನ ಆಡಳಿತ ಜನಪ್ರಿಯವೆನಿಸಿತು. ಶರಣನಾಗಿ ಶಿವಶರಣರ ಉದಾರ ತತ್ತ್ವಗಳನ್ನು ಈತ ಪ್ರಸಾರ ಮಾಡತೊಡಗಿದ್ದರಿಂದ ಅಸಮಾಧಾನಗೊಂಡ ಕೆಲವರು ರಾಜನಲ್ಲಿ ದೂರಿತ್ತರು. ಇದರಿಂದ ರಾಜನಿಗೂ ಕೇಶಿರಾಜನಿಗೂ ವಿರಸವುಂಟಾಯಿತು. ಕೇಶಿರಾಜ ಮಂತ್ರಿಪದವಿಯನ್ನು ತೊರೆದು ತನ್ನ ಗ್ರಾಮವಾದ ಕೊಂಡಗುಳಿಗೆ ತೆರಳಿದ. ತನ್ನ ತಪ್ಪನ್ನರಿತ ರಾಜ ಕ್ಷಮಾಪಣೆ ಕೇಳಿ ರಾಜಧಾನಿಗೆ ವಾಪಸಾಗುವಂತೆ ಕರೆ ಕಳಿಸಲು ಅದನ್ನು ವಿನಯಪೂರ್ವಕವಾಗಿ ನಿರಾಕರಿಸಿದ. ಭೀಮಾ ನದಿಯಲ್ಲಿ ಬಿದ್ದ ಇಷ್ಟಲಿಂಗವನ್ನು ಕರಸ್ಥಳಕ್ಕೆ ಬರಿಸಿದ್ದು ಈತ ಮೆರೆದನೆನ್ನಲಾದ ಪವಾಡ. ಕೊಂಡಗುಳಿಯಲ್ಲೇ ಈತ ಶಿವಲಿಂಗದಲ್ಲಿ ಐಕ್ಯನಾದನೆಂದು ಪ್ರತೀತಿ. ಅಲ್ಲಿ ಇವನ ಹೆಸರಿನ ಒಂದು ದೇವಾಲಯವಿದೆ. ಇಲ್ಲೇ ಈತನ ಸಮಾಧಿಯೂ ಇದೆಯೆಂದು ಹೇಳುತ್ತಾರೆ. ಹಂಪೆಯ ಹರಿಹರ ರಾಘವಾಂಕರು ಅನುಕ್ರಮವಾಗಿ ತಮ್ಮ ಗಿರಿಜಾಕಲ್ಯಾಣ ಮತ್ತು ಹರಿಶ್ಚಂದ್ರ ಕಾವ್ಯಗಳಲ್ಲಿ ಈತನನ್ನು ಸ್ಮರಿಸಿದ್ದಾರೆ. ಪಾಲ್ಕುರಿಕೆ ಸೋಮನಾಥನ ಸಹಸ್ರಗಣನಾಮದಲ್ಲಿ ಇವನ ಹೆಸರಿನ ಉಲ್ಲೇಖವಿದೆ. ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಮತ್ತು ಇತರ ವೀರಶೈವ ಗ್ರಂಥಗಳಲ್ಲಿ ಈತನ ವಿಷಯವಾಗಿ ಅನೇಕ ಉಲ್ಲೇಖಗಳಿವೆ. ಶಿಕಾರಿಪುರದ 119 ಮತ್ತು 123ನೆಯ ಶಾಸನಗಳಲ್ಲಿ ಇವನನ್ನು ಬಣ್ಣಿಸಲಾಗಿದೆ. ವೀರಶೈವರಲ್ಲಿ ಈತ ಮಹಿಮಾಪುರುಷನೆಂಬ ನಂಬಿಕೆಯುಂಟು.

ಕೇಶಿರಾಜನ ಷಡಕ್ಷರ ಕಂದಕ್ಕೆ ಮಂತ್ರಮಹತ್ವದ ಕಂದ ಎಂಬ ಹೆಸರೂ ಇದೆ. ಇದರಲ್ಲಿ 110 ಕಂದಪದ್ಯಗಳಿವೆ. ಓಂ ನಮಃ ಶಿವಾಯ ಎಂಬ ಮಂತ್ರದ ಮಾಹಾತ್ಮ್ಯವನ್ನು ಬಗೆಬಗೆಯಾಗಿ ಬಣ್ಣಿಸಲಾಗಿದೆ. ಕಾವ್ಯಬಂಧ ಪ್ರೌಢವಾದುದು. ಈತ ವಚನಗಳನ್ನೂ ಬರೆದಿರುವಂತೆ ತಿಳಿಯುತ್ತದೆ. ಆದರೆ ವಚನಗಳು ಉಪಲಬ್ಧವಿಲ್ಲ.

1195ರಲ್ಲಿ ಅಬ್ಬಲೂರು ಶಾಸನದಲ್ಲಿ ಒಬ್ಬ ಕೇಶಿರಾಜನ ಉಲ್ಲೇಖವಿದೆ. ಇವನು ಗುಲ್ಬರ್ಗ ಜಿಲ್ಲೆಯ ಜೇವರಗಿ ತಾಲ್ಲೂಕಿನಲ್ಲಿರುವ

ಕೊಂಡಗುಳಿಯವನು. ಅಲ್ಲಿ ದೊರಕಿರುವ ಒಂದು ಶಾಸನದಲ್ಲಿ ಈತ ಕಟ್ಟಿಸಿದ ಸೋಮೇಶ್ವರ ದೇವಾಲಯದ ವಿಷಯವಿದೆ. ವೀರಶೈವ ಪರಂಪರೆಯಲ್ಲಿ ಪ್ರಸಿದ್ಧನಾದ ಕೊಂಡಗುಳಿ ಕೇಶಿರಾಜ ಈತನೇ ಇರಬಹುದು ಎಂಬ ಅಭಿಪ್ರಾಯವೂ ಇದೆ. *

**ಕೈಕಿಣಿ :** ಉತ್ತರ ಕನ್ನಡ ಜಿಲ್ಲೆ; ಭಟ್ಕಳ ತಾಲ್ಲೂಕಿನಲ್ಲಿರುವ ಒಂದು ಗ್ರಾಮ, ಐತಿಹಾಸಿಕ ಸ್ಥಳ. ಭಟ್ಕಳದಿಂದ 13ಕಿಮೀ ದೂರದಲ್ಲಿದೆ. ಈ ಊರಿಗೆ ಬಸದಿ ಎಂಬ ಹೆಸರೂ ಇದೆ. ಇಲ್ಲಿ ಪ್ರಾಚೀನ ಪಾರ್ಶ್ವನಾಥ ಬಸದಿ ಇದೆ. ಇತ್ತೀಚೆಗೆ ಇದನ್ನು ಜೀರ್ಣೋದ್ಧಾರ ಮಾಡಲಾಗಿದೆ. ಈ ಬಸದಿಯಲ್ಲಿ 22 ಶಿಲಾಶಾಸನಗಳಿವೆ. ಇವುಗಳಲ್ಲಿ ಹೆಚ್ಚಿನವು ವೀರಗಲ್ಲುಗಳು, ಎರಡು ಮಾಸ್ತಿ ಕಲ್ಲುಗಳು. ಒಂದು ಶಾಸನದಲ್ಲಿ ಈ ಹಳೆಯ ಪಟ್ಟಣ ಕೈಕಿಣಿಯು 24 ತೀರ್ಥಂಕರರನ್ನು ನೋಡಿದೆ ಎಂದು ಉಲ್ಲೇಖಿಸಿದೆ. 1422ರ ವೀರಗಲ್ಲೊಂದು ಹಾಡುವಳ್ಳಿ ಹಾಗೂ ಗೇರುಸೊಪ್ಪೆಯ ನಡುವೆ ನಡೆದ ಹೋರಾಟವನ್ನು ವಿವರಿಸಿದರೆ ಕೆಲವು ಶಾಸನಗಳು ವಿಜಯನಗರ ಹಾಗೂ ಹಾಡುವಳ್ಳಿಯ ಮಧ್ಯೆ ನಡೆದ ಕಾಳಗವನ್ನು ಬಣ್ಣಿಸಿವೆ. ಒಂಬತ್ತು ವೀರಗಲ್ಲುಗಳು ಪಾರ್ಶ್ವನಾಥ ಬಸದಿಗೆ ನೀಡಲಾದ ದಾನಗಳ ಬಗ್ಗೆ ಮಾಹಿತಿ ನೀಡುತ್ತವೆ. ಕೋಟೇಶ್ವರ ನಾಯಕನ 1427ರ ಶಾಸನ ಕಾಸರಗೋಡು ಹಾಗೂ ಹೊನ್ನಾವರದ ಮಧ್ಯೆ ನಡೆದ ಕದನವನ್ನು ಸಾರುತ್ತದೆ. ಈ ಊರಿನಲ್ಲಿ ಮಹಿಷ ಮರ್ದಿನಿಯ ಮಂದಿರ ಇದೆ. ವಿಜಯನಗರ ಕಾಲದಲ್ಲಿ ಇಲ್ಲಿ ವೈಶ್ಯರು ಹೆಚ್ಚಾಗಿದ್ದರು. ಹೊನ್ನ ಮಾಸ್ತಿ ಹೆರಾಡಿ ಹತ್ತಿರ ಹಾಗೂ ತೆರ್ನಮಕ್ಕಿಯಲ್ಲಿ ರೋಮನ್ ಕ್ಯಾಥೊಲಿಕ್ ಚರ್ಚ್‌ಗಳಿವೆ. (ಎಸ್.ಎಚ್.ಇ.)

**ಕೈಗಾರಿಕೆಗಳು :** ಕರ್ನಾಟಕ ಸಣ್ಣದೊಡ್ಡ ಕೈಗಾರಿಕೆಗಳ ಬೆಳೆವಣಿಗೆಗೆ ಅನುಕೂಲವಾದ ಪರಿಸರವನ್ನುಳ್ಳ ಪ್ರದೇಶ. ಇಲ್ಲಿ ವಿದ್ಯುತ್ತು, ಖನಿಜಸಂಪತ್ತು, ವ್ಯವಸಾಯ ಮತ್ತು ಅರಣ್ಯ ಉತ್ಪನ್ನಗಳು ಧಾರಾಳವಾಗಿರುವವಲ್ಲದೆ ಇಲ್ಲಿನ ಉತ್ತಮ ವಾಯುಗುಣ ಹಾಗೂ ಜನಬಲ ಕೈಗಾರಿಕಾ ಪ್ರಗತಿಗೆ ಸಹಾಯಕವಾಗಿವೆ. ಈ ಲೇಖನದಲ್ಲಿ ಕರ್ನಾಟಕದಲ್ಲಿ ಕೈಗಾರಿಕೆಗಳ ಪ್ರಾಚೀನ ಇತಿಹಾಸ, ಈಚಿನ ಬೆಳೆವಣಿಗೆ, ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ, ಕೈಗಾರಿಕಾ ಬೆಳೆವಣಿಗೆಗೆ ಹಾಕಿಕೊಳ್ಳಲಾದ ಕಾರ್ಯಕ್ರಮಗಳು, ರಾಜ್ಯದ ಕೈಗಾರಿಕಾನೀತಿ ಮತ್ತು ಪ್ರೋತ್ಸಾಹ (ಕೈಗಾರಿಕಾ ಎಸ್ಟೇಟುಗಳು, ಕೈಗಾರಿಕಾ ಬಂಡವಾಳ, ಇತ್ಯಾದಿ), ಕೈಗಾರಿಕಾ ಪ್ರಗತಿಯ ಗತಿ (ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು, ಪ್ರಾದೇಶಿಕ ಅಸಮತೋಲ ಇತ್ಯಾದಿ), ಹೊಸ ಆರ್ಥಿಕ ನೀತಿಯ ಅಡಿಯಲ್ಲಿ ಆಗುತ್ತಿರುವ ಬದಲಾವಣೆಗಳು - ಇವುಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲಾಗಿದೆ.

**ಇತಿಹಾಸ :** ಪ್ರಾಚೀನ ಕರ್ನಾಟಕದ ಕೈಗಾರಿಕೆಯನ್ನು ಕುರಿತು ಸಮಗ್ರ ಹಾಗೂ ವೈಜ್ಞಾನಿಕ ಅಧ್ಯಯನಕ್ಕೆ ಮಾಹಿತಿಯ ಕೊರತೆಯಿದೆ. ಆ ಕಾಲದ ನೂರಾರು ಶಾಸನಗಳು, ಮಿತಾಕ್ಷರಾ, ಮಾನಸೋಲ್ಲಾಸ, ವಚನಸಾಹಿತ್ಯ ಮತ್ತು ಇತರ ಸಾಹಿತ್ಯ ಕೃತಿಗಳು ಹಾಗೂ ವಿಜಯನಗರದ ಕಾಲದಲ್ಲಿ ಬಂದು ಹೋದ ವಿದೇಶೀ ಪ್ರವಾಸಿಗರ ಬರೆಹಗಳು ಮುಂತಾದ ಆಕರಗಳಲ್ಲಿ ಪ್ರತ್ಯಕ್ಷವಾಗಿಯೋ ಪ್ರಾಸಂಗಿಕವಾಗಿಯೋ ಅಲ್ಲಿ ಇಲ್ಲಿ ಕಾಣುವ ಕೆಲವು ಅಂಶಗಳ ಆಧಾರದ ಮೇಲೆ ಅಂದಿನ ಕೆಲವು ಪ್ರಮುಖ ಕೈಗಾರಿಕೆಗಳನ್ನು ಗುರುತಿಸಬಹುದು. ಆದರೂ ಕೈಗಾರಿಕೆಗಳಲ್ಲಿ ಅನುಸರಿಸುತ್ತಿದ್ದ ಹಲವು ವಿಧಾನಗಳು, ವಿವಿಧ ಕೈಗಾರಿಕಾ ಕೇಂದ್ರಗಳು ಮುಂತಾದ ಅಂಶಗಳ ಬಗ್ಗೆ ಮಾಹಿತಿ ದೊರಕುವುದು ಅಲ್ಪ.

ಆ ಕಾಲದ ಕೈಗಾರಿಕೆಗಳ ಸಾಮಾನ್ಯ ಲಕ್ಷಣವೆಂದರೆ, ಅವು ಕಸುಬು ರೀತಿಯವು. ಉತ್ಪಾದನೆಯ ವಿಧಾನ ಸರಳ ಮತ್ತು ಅತಿ ಖರ್ಚಿನದಲ್ಲದ್ದು, ಸಾಮಾನ್ಯವಾಗಿ ಉತ್ಪಾದನ ಕೇಂದ್ರ ಕಾರ್ಮಿಕನ ಮನೆಯೋ ಕುಟೀರವೋ ಆಗಿರುತ್ತಿತ್ತು. ಕೈಗಾರಿಕೆಗೆ ಅಗತ್ಯವಾದ ಕಚ್ಚಾ ಪದಾರ್ಥಗಳು ಅನತಿದೂರದಲ್ಲಿ ಉಪಲಬ್ಧವಿರುತ್ತಿದ್ದುವು. ತಯಾರಾದ ಸಾಮಾನುಗಳು ಮಾಮೂಲು ಪೇಟೆಯಲ್ಲೋ ವಾರದ ಸಂತೆಗಳಲ್ಲೋ ಮಾರಾಟ ವಾಗುತ್ತಿದ್ದುವು.

ನೇಯ್ಗೆ, ಶಿಲ್ಪ ಇತ್ಯಾದಿ ಕೆಲವು ಕಸಬುಗಳಲ್ಲಿ ಉತ್ತಮ ಕಾರ್ಯಕೌಶಲವನ್ನು ಕಾಣಬಹುದಿತ್ತು. ಇವು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ, ಹಲವಾರು ತಲೆಮಾರುಗಳಿಂದ ಬಂದ ಕಸಬುಗಳಾಗಿದ್ದವು. ಕೆಲವು ಸುಪ್ರಸಿದ್ಧ ಆಚಾರ್ಯರ ಶಿಷ್ಯವೃತ್ತಿಯಲ್ಲಿ ಕಸಬುಗಳನ್ನು ಅಭ್ಯಾಸಿಗಳಾಗಿ ಕಲಿಯುತ್ತಿದ್ದುದರ ಸೂಚನೆ ಮಿತಾಕ್ಷರಾದಲ್ಲಿದೆ. ಇಂಥ ವಾತಾವರಣದಲ್ಲಿ ಹೊಸಹೊಸ ಪ್ರಯೋಗಗಳಿಗೆ ಅವಕಾಶ ಸಹಜವಾಗಿಯೇ ಇರುತ್ತಿತ್ತು.

ಪ್ರತಿಯೊಂದು ಕಸಬಿನವರೂ ತಮ್ಮದೇ ಆದ ಶ್ರೇಣಿಯನ್ನು ಹೊಂದಿದ್ದರು. ಅಂಥ ಶ್ರೇಣಿಯ ಅಧಿಕಾರವ್ಯಾಪ್ತಿ ಅಥವಾ ಹತೋಟಿಯಲ್ಲಿ ತಮ್ಮ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ದೊಡ್ಡ ದೊಡ್ಡ ಊರುಗಳಲ್ಲಿ, ಪಟ್ಟಣ ಮತ್ತು ರಾಜಧಾನಿಗಳಲ್ಲಿ ಈ ಶ್ರೇಣಿಗಳು ಹೆಚ್ಚಿನ ಅಧಿಕಾರ ಮತ್ತು ಪ್ರಭಾವವನ್ನು ಹೊಂದಿರುತ್ತಿದ್ದುವು. ಅಲ್ಲದೆ, ಮಿತಾಕ್ಷರಾ ತಿಳಿಸುವಂತೆ, ತಮ್ಮದೇ ಆದ ನೀತಿನಿಯಮಗಳನ್ನು ರೂಪಿಸಿಕೊಳ್ಳುವ ಅಧಿಕಾರ ಈ ಶ್ರೇಣಿಗಳಿಗಿತ್ತು. ನೇಯ್ಗೆಯವರ, ಚಮ್ಮಾರರ, ಗಾಣಿಗರ, ಲೋಹಕಾರರ, ಕಲ್ಲುಕುಟಿಗರ -ಹೀಗೆ ಹಲವಾರು ಕಸಬಿನವರ ಶ್ರೇಣಿಗಳಿದ್ದುವು.

ಎನ್.ಜಿ.ಎಫ್ ಕಾರ್ಖಾನೆ, ಬೆಂಗಳೂರು

ಪ್ರಾಚೀನ ಭಾರತದ ಬೇರೆಡೆಗಳಲ್ಲಿದ್ದಂತೆ ಕರ್ನಾಟಕದಲ್ಲೂ ನೇಯ್ಗೆ ಕೈಗಾರಿಕೆ ಬಹಳ ಅಭಿವೃದ್ಧಿ ಹೊಂದಿತ್ತು. ನೇಯ್ಗೆಯವರ ಶ್ರೇಣಿಯನ್ನು ಮಿತಾಕ್ಷರಾ ಹಾಗೂ ಹಲವಾರು ಶಾಸನಗಳು ಹೆಸರಿಸುತ್ತವೆ. 1087ರ ಶಾಸನವೊಂದು ದಾನವಾಗಿ ಕೊಟ್ಟ ನೈವಮನೆಯನ್ನು ಹೆಸರಿಸುವುದು ಗಮನಾರ್ಹವಾಗಿದೆ. ನೇಯ್ಗೆಯವರ ನೂಲು ಮತ್ತು ಮಗ್ಗಗಳ ಮೇಲೆ ತೆರಿಗೆ ಹಾಕುತ್ತಿದ್ದರು. ಅಲ್ಲದೆ ನೇಯ್ದ ಬಟ್ಟೆಗಳು ಚೀಲಗಳಲ್ಲೋ ಗಂಟುಗಳಲ್ಲೋ ಮಾರುಕಟ್ಟೆಯನ್ನು ತಲುಪಿದಾಗ ಅವುಗಳ ಮೇಲೆ ಸುಂಕವನ್ನು ತೆರಬೇಕಾಗಿತ್ತು. ಕೆಲವು ಸಂದರ್ಭಗಳಲ್ಲಿ ಇಂಥ ತೆರಿಗೆಗಳನ್ನು ಹಾಕದೆ ಕೈಗಾರಿಕೆಗೆ ಪ್ರೋತ್ಸಾಹ ನೀಡಿದ ನಿದರ್ಶನಗಳೂ ಉಂಟು. ಉತ್ತಮ ದರ್ಜೆಯ ಬಟ್ಟೆಗಳು ಕರ್ನಾಟಕದಲ್ಲಿ ತಯಾರಾಗುತ್ತಿದ್ದುವು. ಕಲ್ಯಾಣ ಪಟ್ಟಣದ ಪೇಟೆಯಲ್ಲಿ ಉಪಲಬ್ಧವಾಗಿದ್ದ ಬಟ್ಟೆಗಳನ್ನು ಸೋಮೇಶ್ವರ ತನ್ನ ವಿಕ್ರಮಾಂಕಾಭ್ಯುದಯಂ ಗ್ರಂಥದಲ್ಲಿ ವರ್ಣಿಸಿದ್ದಾನೆ. 'ಅಲ್ಲಿನ ಬಟ್ಟೆಗಳು ದೃಷ್ಟಿಗಗೋಚರ, ಕೇವಲ ಸ್ಪರ್ಶದಿಂದ ಮಾತ್ರ ತಿಳಿಯಲು ಸಾಧ್ಯ; ಅತಿ ಹಗುರವಾಗಿದ್ದಾಗ್ಯೂ ಬಹಳ ಬೆಲೆಬಾಳುವ ಈ ಬಟ್ಟೆಗಳು ಧರಿಸಿದವರ ಅಂಗಾಂಗಳು ಸ್ಪಷ್ಟವಾಗಿ ಕಾಣುವಷ್ಟು ಪಾರದರ್ಶಕವಾಗಿದ್ದುವು ಎಂದು ಇಂಥದೇ ವರ್ಣನೆಯನ್ನು ಮಾರ್ಕೋ ಪೋಲೋ ಸಹ ಕೊಟ್ಟಿದ್ದಾನೆ. 18ನೆಯ ಶತಮಾನದಲ್ಲೂ ಈ ಕೈಗಾರಿಕೆ ದೇಶದ ಹಲವಾರು ಭಾಗಗಳಲ್ಲಿ ಪ್ರವರ್ಧಮಾನವಾಗಿದ್ದು ಅತ್ಯುತ್ತಮ ಹಾಗೂ ಸುಂದರವಾದ ಬಟ್ಟೆಗಳನ್ನು ನೇಯಲಾಗುತ್ತಿತ್ತೆಂಬ ಅಂಶ ಬುಕನಾನನ ವರ್ಣನೆಯಿಂದಲೂ ಸ್ಪಷ್ಟವಾಗುತ್ತದೆ. ಮುಖ್ಯವಾಗಿ ಹತ್ತಿ, ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳು ತಯಾರಾಗುತ್ತಿದ್ದವು. ರೇಷ್ಮೆ ಬಟ್ಟೆಗಳ ಪಟ್ಟೆ, ಪಟ್ಟಾವಳಿ, ಚೀನ, ಮಹಾಚೀನ, ದೇವಾಂಗ ಮುಂತಾದ ಹೆಸರುಗಳನ್ನು ಗಮನಿಸಬಹುದು. ರೇಷ್ಮೆ ಕೈಗಾರಿಕೆಗೆ ಹಲವಾರು ಸ್ಥಳಗಳು ಪ್ರಸಿದ್ಧವಾಗಿದ್ದುವು. ದಕ್ಷಿಣ ಕನ್ನಡದ ಚೋಳೂರು ಮತ್ತು ಕಾವೂರುಗಳು ಪ್ರಾಚೀನ ಕಾಲದಿಂದಲೂ ರೇಷ್ಮೆ ನೇಯ್ಗೆಗೆ ಪ್ರಸಿದ್ಧವೆನಿಸಿದ್ದುವು.

ಧಾರವಾಡ ಜಿಲ್ಲೆಯ 12ನೆಯ ಶತಮಾನದ ಶಾಸನವೊಂದು ಬರಗಿರಿಯ ಸೋಮಗೌಂಡ ಎಂಬುವನನ್ನು ಪಟ್ಟಗಾಱಕುಳಭೂಷಣ ಎಂದು ವರ್ಣಿಸಿರುವುದು ಗಮನಾರ್ಹವಾಗಿದೆ. ಬಹಮನೀ ಸುಲ್ತಾನರ ಆಳಿಕೆಯಲ್ಲಿ ಗುಲ್ಬರ್ಗ ನೇಯ್ಗೆ ಕೈಗಾರಿಕೆಯ ಪ್ರಮುಖ ಕೇಂದ್ರವೆನಿಸಿದ್ದು, ಇಲ್ಲಿ ತಯಾರಾದ ಉತ್ತಮ ರೇಷ್ಮೆ ಬಟ್ಟೆಗಳು ಅಗ್ಗದ ಬೆಲೆಗೆ ಸಿಗುತ್ತಿದ್ದುವು. ಹಾಗೆಯೇ ರಾಯಚೂರಿನಲ್ಲಿ ತಯಾರಾದ ಪಗಡಿಗಳಿಗೆ ಅಮೀರರುಗಳಿಂದ ಬಹಳ ಬೇಡಿಕೆಯಿತ್ತು. ಇದೇ ಕಾಲದಲ್ಲಿ ಬಿಜಾಪುರ ನೇಯ್ಗೆ ಕೈಗಾರಿಕೆಯ ಪ್ರಸಿದ್ಧ ಕೇಂದ್ರವೆನಿಸಿತ್ತು. ಕ್ಯಾಲಿಕೋ ಮತ್ತು ಮಸ್ಲಿನ್ ಬಟ್ಟೆಗಳು ಇಲ್ಲಿನ ಪ್ರಧಾನವಾದ ತಯಾರಿಕೆಗಳಾಗಿದ್ದುವು. ಇಲ್ಲಿ ತಯಾರಾದ ಬಟ್ಟೆಗಳು ಪರ್ಷಿಯ, ಅರೇಬಿಯ, ಮತ್ತು ಪೂರ್ವ ಆಫ್ರಿಕ ದೇಶಗಳಿಗೆ ರಫ್ತಾಗುತ್ತಿದ್ದುವು. ಪೋರ್ಚುಗೀಸ್ ವ್ಯಾಪಾರಿಗಳು ಈ ಬಟ್ಟೆಗಳನ್ನು ಕೊಳ್ಳಲು ಸ್ವತಃ ಬಿಜಾಪುರಕ್ಕೆ ಬಂದು ಹೋಗುತ್ತಿದ್ದರೆಂದು ಬಾರ್ಬೋಸ ಹೇಳಿದ್ದಾನೆ.

ಉಣ್ಣೆಯಲ್ಲಿ ಮೇಲೆ ಧರಿಸುವ ವಸ್ತ್ರಗಳನ್ನು ಹಾಗೂ ಮುಖ್ಯವಾಗಿ ಕಂಬಳಿಗಳನ್ನು ನೇಯುತ್ತಿದ್ದರು. ಬಹುಶಃ ದಾವಣಗೆರೆ, ದೊಡ್ಡಬಳ್ಳಾಪುರ ಮುಂತಾದೆಡೆಗಳಲ್ಲಿ ಕಂಬಳಿಗಳನ್ನು ನೇಯುತ್ತಿದ್ದಂತೆ ಕಾಣುತ್ತದೆ. ಸ್ವಲ್ಪ ಒರಟಾದ ತುಪ್ಪಟವನ್ನು ಕಂಬಳಿ ನೇಯಲು ಉಪಯೋಗಿಸುತ್ತಿದ್ದರು. ವಾಲವಾಸಾ ಅಂದರೆ ದನದ ಕೂದಲಿನಿಂದ ಮಾಡಿದ ಬಟ್ಟೆಯನ್ನು ಮಿತಾಕ್ಷರಾ ಗ್ರಂಥ ಹೆಸರಿಸಿದೆ.



ಎಚ್.ಎಂ.ಟಿ. ಕಾರ್ಖಾನೆಯ ಒಳನೋಟ, ಬೆಂಗಳೂರು

ನೇಯ್ಗೆ ಬಟ್ಟೆಗಳ ಮೇಲೆ ಕಸೂತಿ ಕೆಲಸ ಮಾಡುತ್ತಿದ್ದುದ್ದುಂಟು. ಅವುಗಳ ಮೇಲೆ ಹಲವಾರು ಚಿತ್ರಗಳನ್ನು ಕಾಣಬಹುದಾಗಿತ್ತು. ವಿಜ್ಞಾನೇಶ್ವರ, ಸೋಮೇಶ್ವರ ಮತ್ತು ಹರಿಹರ ಇವರ ಕೃತಿಗಳಲ್ಲಿ ಕಂಡುಬರುವಂತೆ, ಬಟ್ಟೆಗಳ ಮೇಲೆ ಚಕ್ರ ಸ್ವಸ್ತಿಕ ಆನೆ ಕುದುರೆ ರಥ ಸಿಂಹ ಜಿಂಕೆ ಗಿಡ ಬಳ್ಳಿ ಹೂವುಗಳೇ ಮೊದಲಾದ ಚಿತ್ರಗಳಿರುತ್ತಿದ್ದವು. ಕೆಲವು ಬಟ್ಟೆಗಳ ಮೇಲೆ ಅಕ್ಷರಗಳಿದ್ದುದರಿಂದ ಅವು ಪುಸ್ತಕದಂತೆ ಕಾಣುತ್ತಿದ್ದುವಂತೆ.

ಚಿಪ್ಪಿಗರು ಕೈಸೂಜಿ ಮತ್ತು ದಾರಗಳಿಂದ ಬಟ್ಟೆಗಳನ್ನು ಹೊಲಿಯುತ್ತಿದ್ದರು. ಬೇಲೂರಿನ ಶಾಸನವೊಂದು (1139) ಚಿಪ್ಪಿಗರನ್ನು ವಸ್ತ್ರಖಂಡಿತ ಶ್ರಿಂಗಾರ ಚಿತ್ರೋದ್ಭವರ್, ಅನೇಕ ವಸ್ತ್ರಖಂಡಿತ ಶ್ರಿಂಗಾರವಿದ್ಯಾಪ್ರವೀಣರ್ ಎಂದು ವರ್ಣಿಸುವುದಷ್ಟೇ ಅಲ್ಲದೆ, ಚಿಪ್ಪಿಗಗೊತ್ತಳಿಯನ್ನು ಅಂದರೆ ಚಿಪ್ಪಿಗರ ಶ್ರೇಣಿಯನ್ನು ಹೆಸರಿಸುತ್ತದೆ. ಪ್ರಸಿದ್ಧ ವಚನಕಾರರಲ್ಲೊಬ್ಬನಾದ ಸೂಜಿಕಾಯಕದ ರಾಮಿತಂದೆಯನ್ನು (ಸು.1160) ಚಿಪ್ಪಿಗರ ಶ್ರೇಣಿಗೆ ಸೇರಿದ್ದವ.

ವಾಣಿಜ್ಯ ಮಹತ್ವವುಳ್ಳ ಕಬ್ಬು ಬೆಳೆಯುವೆಡೆಗಳಲ್ಲಿ ಕಬ್ಬನ್ನು ಗಾಣದಲ್ಲಿ ಅರೆದು, ಹಾಲನ್ನು ತೆಗೆದು, ಅದನ್ನು ಮರಳಿಸಿ ಸಕ್ಕರೆ ಹಾಗೂ ಬೆಲ್ಲವನ್ನು ಮಾಡುತ್ತಿದ್ದರು. ಈ ಕೈಗಾರಿಕೆಯ ಮೇಲೆ ಆಲೆದೆಱೆ ಎಂಬ ತೆರಿಗೆಯನ್ನು ವಿಧಿಸುತ್ತಿದ್ದರು. 'ಸಕ್ಕರೆ ಮರಳಿನಂತೆ ಕಾಣುತ್ತಿತ್ತು. ಸಕ್ಕರೆ ಪುಡಿಯಂತಿತ್ತು. ಅದನು ಪೊಟ್ಟಣಗಳಲ್ಲಿ ಕಟ್ಟುತ್ತಿದ್ದರು. ಏಕೆಂದರೆ ಸಕ್ಕರೆ ಅಚ್ಚು ಹುಯ್ಯುವುದು ಅವರಿಗೆ ತಿಳಿದಿರಲಿಲ್ಲ' ಎಂಬುದು ಬಾರ್ಬೋಸನ ಹೇಳಿಕೆ. ವರ್ಥೇಮ ಎಂಬ ಪ್ರವಾಸಿ ಭಟ್ಕಳದಲ್ಲಿ ಹೇರಳವಾಗಿ ಸಕ್ಕರೆ ತಯಾರಾಗುತ್ತಿತ್ತೆಂಬುದನ್ನು ಪ್ರಸ್ತಾಪಿಸಿ, ಕಲ್ಲುಸಕ್ಕರೆಯನ್ನೂ ಮಾಡುತ್ತಿದ್ದರು ಎಂದು ತಿಳಿಸುತ್ತಾನೆ. ವಿಜಯನಗರದ ಕಾಲದಲ್ಲಿ ಭಟ್ಕಳದಿಂದ ಸಕ್ಕರೆಯನ್ನು ರಫ್ತು ಮಾಡುತ್ತಿದ್ದರು. ಬೆಲ್ಲವನ್ನು ತೆಂಗಿನ ಹಾಲಿನಿಂದಲೂ ಮಾಡುತ್ತಿದ್ದರು.

ಎಣ್ಣೆ ತೆಗೆಯುವುದು ಹೆಚ್ಚು ಭಾಗಗಳಲ್ಲಿ ಕಂಡುಬರುವ ಕೈಗಾರಿಕೆಯಾಗಿತ್ತು. ಎಳ್ಳು ಹರಳು ಕುಸುಬೆ ಮುಂತಾದ ಎಣ್ಣೆಬೀಜಗಳನ್ನು ಗಾಣಗಳಲ್ಲಿ ಅರೆದು ಎಣ್ಣೆ ತೆಗೆಯುತ್ತಿದ್ದರು. ತೆಂಗಿನಿಂದಲೂ ಎಣ್ಣೆಯನ್ನು ತೆಗೆಯುತ್ತಿದ್ದರು. ಅಲ್ಲದೆ, ಕೆಲವು ಸುಗಂಧದ್ರವ್ಯಗಳನ್ನು ಬೆರೆಸಿ, ಸುಗಂಧಯುತವಾದ ತೈಲಗಳನೂ ಮಾಡುತ್ತಿದ್ದರು. ಸಾಮಾನ್ಯವಾಗಿ ಇವರು ಉಪಯೋಗಿಸುತ್ತಿದ್ದುದ್ದು ಕಲ್ಲುಗಾಣ. ಶಾಸನಗಳು ಕೈಗಾಣ (ಕೈಗಳಿಂದ ತಿರುಗಿಸುವಂಥದು), ಮೆಟ್ಟುಗಾಣ (ಕಾಲುಗಳಿಂದ ತುಳಿಯುವಂಥದು), ಎತ್ತುಗಾಣ (ಎತ್ತುಗಳಿಂದ ತಿರುಗಿಸುವಂಥದು) ಎಂಬ ಮೂರು ವಿಧವಾದ ಗಾಣಗಳನ್ನು ಹೆಸರಿಸುತ್ತವೆ. ಈ ಕಸಬಿನವರನ್ನು ತೆಲ್ಲಿಗ, ಗಾಣಿಗ ಎಂದು ಕರೆಯಲಾಗುತ್ತಿತ್ತು. ಇವರ ಶ್ರೇಣಿ ತೆಲ್ಲಿಗ ನಖರವೆಂದು ಶಾಸನಗಳಲ್ಲಿ ಉಕ್ತವಾಗಿದೆ. ಈ ಜನರು ಅಂದಿನ ಸಮಾಜದಲ್ಲಿ ಸಾಕಷ್ಟು ಪ್ರಭಾವಶಾಲಿಗಳಾಗಿದ್ದಂತೆ ತೋರುತ್ತದೆ.

ಮಣ್ಣಿನ ಮಡಕೆ ಕುಡಿಕೆಗಳು, ಪಾತ್ರೆಗಳು, ಗೊಂಬೆಗಳು ಮುಂತಾದವು ಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲೂ ಕುಂಬಾರರಿಂದ ತಯಾರಾಗುತ್ತಿದ್ದವು. ಬಿದ್ರಿ ಕೆಲಸವೆಂದು ಪ್ರಸಿದ್ಧವಾಗಿರುವ ಬೀದರ್ ಮತ್ತು ಸುತ್ತಲ ಪ್ರದೇಶದಲ್ಲಿ ತಯಾರಾಗುತ್ತಿದ್ದ ಸಾಮಾನುಗಳು ಮಧ್ಯಯುಗದಲ್ಲಿ ಭಾರತದಲ್ಲಿ ಮಾತ್ರವಲ್ಲದೆ ಹೊರದೇಶಗಳಲ್ಲೂ ಹೆಸರನ್ನು ಗಳಿಸಿದ್ದುವು. ಗಾಜಿನ ಬಳೆ ಮಣಿ ಮುಂತಾದುವುಗಳನ್ನೂ ಮಾಡುತ್ತಿದ್ದರು. 18ನೆಯ ಶತಮಾನದಲ್ಲಿ ಗಾಜಿನ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆ ಹೆಚ್ಚು ಅಭಿವೃದ್ಧಿ ಹೊಂದಿತ್ತು.

ದೇಶದಲ್ಲಿ ಹೇರಳವಾಗಿ ಸಿಗುತ್ತಿದ್ದ ಹಲವಾರು ಬಗೆಯ ಮರಗಳಿಂದ ವಿವಿಧ ಆಸನಗಳು, ಗಾಡಿ ಮುಂತಾದ ವಾಹನಗಳು ದೋಣಿ ಮತ್ತು ಹಡಗುಗಳನ್ನು ಬಡಗಿಗಳು ಮಾಡುತ್ತಿದ್ದರು. ಅಲ್ಲದೆ, ಗೃಹನಿರ್ಮಾಣ, ವ್ಯವಸಾಯ ಹಾಗೂ ನೀರಾವರಿ ಕಾರ್ಯಗಳಿಗೆ ಸಂಬಂಧಿಸಿದಂತೆ ಹಲವಾರು ಉಪಕರಣಗಳನ್ನೂ ಅವರು ತಯಾರಿಸುತ್ತಿದ್ದರು.

ಹಲವು ಬಗೆಯ ಪಾದರಕ್ಷೆಗಳು, ನೀರು ತುಂಬುವ ಚೀಲಗಳು, ಹಗ್ಗಗಳು ಇತ್ಯಾದಿ ಚರ್ಮದ ಪದಾರ್ಥಗಳನ್ನು ಚಮ್ಮಾರರು ತಯಾರಿಸುತ್ತಿದ್ದರು.

ಕರ್ನಾಟಕದಲ್ಲಿ ಗಣಿ ಉದ್ಯಮ ಸಾಕಷ್ಟು ಪ್ರಗತಿಯನ್ನು ಸಾಧಿಸಿತ್ತು. ಚಿನ್ನ, ತಾಮ್ರ ಮತ್ತು ಕಬ್ಬಿಣದ ಗಣಿಗಳ ಕೆಲಸ ಬಹು ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ (ನೋಡಿ: ಗಣಿಗಾರಿಕೆ).

ಚಿನ್ನ-ಬೆಳ್ಳಿಯ ಆಭರಣಗಳು, ದೇವತಾಮೂರ್ತಿಗಳು, ಹರಿವಾಣಗಳು ಹೀಗೆ ಲೋಹದಿಂದ ನಾನಾ ಬಗೆಯ ಪಾತ್ರೆ ಪದಾರ್ಥಗಳನ್ನು ತಯಾರಿಸಲಾಗುತ್ತಿತ್ತು. ಇದಲ್ಲದೆ ಮನೆಬಳಕೆಯ ಪಾತ್ರೆಗಳು ಚೊಂಬು, ತಟ್ಟೆ, ಸೌಟು, ಕನ್ನಡಿ ಮುಂತಾದವನ್ನು ಕಂಚು ಅಥವಾ ಹಿತ್ತಾಳೆಯಿಂದ ತಯಾರಿಸುತ್ತಿದ್ದರು. ದೇವತಾವಿಗ್ರಹಗಳನ್ನು ಕಂಚು ಅಥವಾ ಪಂಚ ಲೋಹದಿಂದ ಎರಕಹೊಯ್ದು ತಯಾರಿಸುತ್ತಿದ್ದರು. ಶಾಸನಗಳಲ್ಲಿ ಬೋಗಾಱ ಮಹಾನಖರದ, ಅಂದರೆ ಲೋಹಕಾರರ ಶ್ರೇಣಿಗಳ ಉಲ್ಲೇಖವಿದೆ.

ಕಡೆಯದಾಗಿ ಯುದ್ಧದ ಆಯುಧಗಳನ್ನು ಹೆಸರಿಸಬಹುದು. ಪ್ರಧಾನವಾಗಿ ಕಬ್ಬಿಣ ಮತ್ತು ಉಕ್ಕಿನಿಂದ ಕತ್ತಿ, ಭಲ್ಲೆ, ಗುರಾಣಿ, ಬಾಣ, ಬಾಕು ಇತ್ಯಾದಿ ಹಲವಾರು ಆಯುಧಗಳು ತಯಾರಾಗುತ್ತಿದ್ದುವು. (ಎಸ್.ಜಿ.)

**ಬೆಳೆವಣಿಗೆ :** ಪ್ರಾಚೀನ ಕರ್ನಾಟಕದಲ್ಲಿ ಬಹುತೇಕ ಕೈಗಾರಿಕೆಗಳು ಗೃಹ ಕೈಗಾರಿಕೆಗಳ ಮಟ್ಟದಲ್ಲಷ್ಟೇ ಇದ್ದರೆ, 19ನೆಯ ಶತಮಾನದ ಅಂತ್ಯದ ಹೊತ್ತಿಗೆ ಆಧುನಿಕ ರೀತಿಯ ವ್ಯವಸ್ಥಿತ ಕೈಗಾರಿಕಾರಂಗ ಉಗಮವಾಗುವ ಸೂಚನೆಗಳು ಕಂಡುಬಂದವು. ಟಿಪ್ಪುಸುಲ್ತಾನನ ಕಾಲದಲ್ಲಿ ದೇಶದ ಸಂಪನ್ಮೂಲಗಳನ್ನು ರೂಢಿಸುವ ಅದರಲ್ಲೂ ಬ್ರಿಟಿಷರ ವಿರುದ್ಧದ

ಕಾರ್ಯಾಚರಣೆಗೆ ಸಹಾಯಕವಾಗುವಂತೆ ನೌಕೆಗಳು, ಮದ್ದುಗುಂಡುಗಳು ಮತ್ತು ತುಪಾಕಿಗಳ ತಯಾರಿಕೆ, ಉಕ್ಕು ಉತ್ಪಾದನೆ ಮುಂತಾದವಕ್ಕೆ ಪ್ರೋತ್ಸಾಹ ನೀಡಲಾಯಿತು. ಕರ್ನಾಟಕದಲ್ಲಿ ತಯಾರಾದ ಉಕ್ಕು ಉತ್ತಮ ದರ್ಜೆಯದಾಗಿದ್ದು ಹೊರದೇಶಗಳಿಗೂ ರಫ್ತಾಗುತ್ತಿತ್ತು. ಆದರೆ ಕರ್ನಾಟಕ ಬ್ರಿಟಿಷರ ನೇರ ಆಡಳಿತ ಅಥವಾ ಪ್ರಭಾವಕ್ಕೆ ಒಳಗಾದಾಗ ಈ ಕೈಗಾರಿಕೆಗಳು ಮೂಲೆಗುಂಪಾದವು. ಐರೋಪ್ಯ ರಾಷ್ಟ್ರಗಳಿಂದ ಕೈಗಾರಿಕಾ ಸರಕುಗಳನ್ನು ಆಮದು ಮಾಡಿಕೊಳ್ಳಲಾರಂಭಿಸಿದುದರಿಂದ ಸ್ಥಳೀಯ ಕೈಗಾರಿಕೆಗಳಿಗೆ ಭಾರಿ ಪೆಟ್ಟು ಬಿತ್ತು.

ಆದರೂ ಭಾರತದ ಕೈಗಾರಿಕಾ ಇತಿಹಾಸದಲ್ಲಿ ಕರ್ನಾಟಕದ ಸ್ಥಾನ ಗಮನಾರ್ಹವಾದುದು. ಇಲ್ಲಿ 19ನೆಯ ಶತಮಾನದ ಕೊನೆಯಲ್ಲಿಯೇ ವ್ಯವಸ್ಥಿತ ರೀತಿಯ ಕೈಗಾರಿಕೆಗಳು ಪ್ರಾರಂಭವಾದುವು. ಜಾನ್ ಟೇಲರ್ ಮತ್ತು ಪುತ್ರರ ಕೋಲಾರದ ಚಿನ್ನದ ಗಣಿ ಕಂಪನಿ (1880), ರಾಯಚೂರು ದೋ ಆಬ್ ಪ್ರದೇಶದ ಚಿನ್ನದ ಗಣಿ (1882), ಮೈಸೂರು ಸ್ಪಿನ್ನಿಂಗ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಬೆಂಗಳೂರು (1883), ಬೆಂಗಳೂರು ಕಾಟನ್ ಮತ್ತು ಸಿಲ್ಕ್ ಮಿಲ್, ದಾವಣಗೆರೆ ಕಾಟನ್ ಜಿನ್ನಿಂಗ್ ಫ್ಯಾಕ್ಟರಿ, ಗುಲ್ಬರ್ಗದ ಎಂ.ಎಸ್.ಕೆ. ಮಿಲ್ಸ್, ಬೆಂಗಳೂರಿನ ಕಾಫಿ ಕ್ಯೂರಿಂಗ್ ವರ್ಕ್ಸ್ (1884), ಶಿವಮೊಗ್ಗದ ಮ್ಯಾಂಗನೀಸ್ ಕಂಪನಿ (1900) ಮುಂತಾದ ಉದ್ಯಮಗಳು ಈ ಕಾಲದಲ್ಲಿ ಹುಟ್ಟಿಕೊಂಡುವು.

ಕೈಗಾರಿಕೀಕರಣಕ್ಕೆ ಪ್ರಾರಂಭದಿಂದಲೂ ಸರ್ಕಾರದ ಪ್ರೋತ್ಸಾಹವಿತ್ತು. 1884ರಷ್ಟು ಹಿಂದೆಯೇ ಸರ್ಕಾರ ಎರಡು ಹತ್ತಿ ಗಿರಣಿಗಳ ಸ್ಥಾಪನೆಗೆ ನೆರವು ದೊರಕಿಸಿಕೊಟ್ಟಿತ್ತು. ಮುಂದೆ 20ನೆಯ ಶತಮಾನದ ಆರಂಭದಲ್ಲಿ ಸರ್ಕಾರ ಔದ್ಯೋಗೀಕರಣದಲ್ಲಿ ಬಹಳ ಉತ್ಸಾಹ ತೋರಿತು. ಕೋಲಾರದಲ್ಲಿ ಚಿನ್ನದ ಉತ್ಪಾದನೆ, ಬೆಂಗಳೂರಿನಲ್ಲಿ ಅನೇಕ ಕೈಗಾರಿಕೆಗಳ ಸ್ಥಾಪನೆ ಮುಂತಾದವು ಕೈಗಾರಿಕೀಕರಣದ ಫಲದ ರುಚಿಯನ್ನು ತೋರಿಸಿಕೊಟ್ಟುವು. 1902ರಲ್ಲಿ ಶಿವಸಮುದ್ರದಿಂದ ವಿದ್ಯುತ್ ಉತ್ಪಾದನೆ ಆರಂಭವಾದಾಗ ಕರ್ನಾಟಕ ರಾಜ್ಯದ ಕೈಗಾರಿಕಾ ಇತಿಹಾಸ ಒಂದು ಹೊಸ ಯುಗವನ್ನು ತಲಪಿತು. ವಿದ್ಯುತ್ ಉತ್ಪಾದನೆ ಆರಂಭವಾದ ಒಂದು ದಶಕದೊಳಗಾಗಿ, ವಿದ್ಯುತ್ತನ್ನು ಬಳಸಿಕೊಂಡು ಉತ್ಪಾದಿಸುವ ಘಟಕಗಳ ಸಂಖ್ಯೆ ಸುಮಾರು 80ಕ್ಕೆ ಏರಿತು. ಉಳಿದ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದ ಸಾಧನೆ ಆ ದಿನಗಳಲ್ಲಿ ವಿಶೇಷ ಮಹತ್ವದ್ದಾಗಿತ್ತು.

ಕೈಗಾರಿಕೆಗಳ ಸ್ಥಾಪನೆಯ ಪ್ರಯತ್ನಗಳ ಅನುಭವದ ಪೂರ್ಣ ಸಂಘಟನಾಕಾರ್ಯ 1911ರಲ್ಲಿ ಮೈಸೂರು ಆರ್ಥಿಕ ಸಮ್ಮೇಳನದೊಂದಿಗೆ ಆರಂಭವಾಯಿತೆನ್ನಬಹುದು. ಈ ರಾಜ್ಯದ ಕೈಗಾರಿಕಾನೀತಿಯನ್ನು ರೂಪಿಸಿದವರಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರು ಪ್ರಮುಖರು. ಕೈಗಾರಿಕೀಕರಣ ಇಲ್ಲವೆ ವಿನಾಶ ಎಂಬ ಮಂತ್ರವನ್ನು ಇವರು ಉಚ್ಚರಿಸಿದ್ದರು. ಕಾರ್ಯತತ್ಪರರಾಗಿದ್ದ ಇವರು ಅನೇಕ ಕೈಗಾರಿಕೆಗಳಿಗೆ ಬುನಾದಿಯನ್ನು ಹಾಕಿದರು. ಇವರ ಕುಶಾಗ್ರಮತಿಯಿಂದಾಗಿ ಅನೇಕ ಮೂಲ ಸಾಮಗ್ರಿಗಳ ಹಾಗೂ ದಿನೋಪಯೋಗಿ ವಸ್ತುಗಳ ಉತ್ಪಾದನೆಯ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದವು. 1913ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸ್ಥಾಪನೆಯಾಯಿತು. ಕೈಗಾರಿಕೆಗಳ ಸ್ಥಾಪನೆಯ ಬಗ್ಗೆ ಪರಿಶೀಲನೆ, ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಸಲಹೆ ಮತ್ತು ನೆರವು ನೀಡುವುದು ಇವು ಈ ಇಲಾಖೆಯ ಮುಖ್ಯ ಉದ್ದೇಶಗಳಾಗಿದ್ದವು. ವಿಶ್ವೇಶ್ವರಯ್ಯನವರ ಸಲಹೆಯ ಮೇರೆಗೆ ರಾಜ್ಯದ ನಿಸರ್ಗ ಸಂಪನ್ಮೂಲಗಳನ್ನು ಕುರಿತ ಸಮೀಕ್ಷೆಯೊಂದನ್ನು ಸಹ ಕೈಗೊಳ್ಳಲಾಯಿತು. 1913ರಲ್ಲಿ ಪ್ರಕಟವಾದ ಈ ಸಮೀಕ್ಷೆ ರಾಜ್ಯದಲ್ಲಿ ಯಾವಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯತೆಗಳಿವೆ ಎನ್ನುವ ಅಂಶವನ್ನು ಬೆಳಕಿಗೆ ತಂದಿತು.

1914ರ ವೇಳೆಗೆ ಅನೇಕ ಅಕ್ಕಿ ಗಿರಣಿಗಳು, ಹೆಂಚಿನ ಕಾರ್ಖಾನೆಗಳು, ಸಿಗರೇಟ್ ಕಾರ್ಖಾನೆಗಳು, ಕಬ್ಬಿಣ ಮತ್ತು ಹಿತ್ತಾಳೆ ಫೌಂಡ್ರಿಗಳು ಸ್ಥಾಪಿತವಾಗಿದ್ದುವು. 1913-14ರಲ್ಲಿ ಮೈಸೂರು ಸಂಸ್ಥಾನದ ಭಾಗದಲ್ಲಿ ಗಣಿಗಳನ್ನು ಬಿಟ್ಟು 72 ಕಾರ್ಖಾನೆಗಳಿದ್ದುವು. ಇವು 1.6 ಕೋಟಿ ರೂಪಾಯಿ ಮೌಲ್ಯದ ಸರಕುಗಳನ್ನು ಉತ್ಪಾದಿಸುತ್ತಿದ್ದುವು. ಈ ಕಾರ್ಖಾನೆಗಳಲ್ಲಿ 4,451 ಕಾರ್ಮಿಕರಿದ್ದರು.

1914-24ರ ದಶಕದಲ್ಲಿ ರಾಜ್ಯದ ಕೈಗಾರಿಕಾ ಪ್ರಗತಿ ಗಮನಾರ್ಹವಾಗಿ ನಡೆಯಿತು. ಈ ಅವಧಿಯಲ್ಲಿ ರಾಜ್ಯದಲ್ಲಿ ಅನೇಕ ಹೊಸ ಕೈಗಾರಿಕೆಗಳು ಜನ್ಮತಾಳಿದ್ದವು. ಅಸ್ತಿತ್ವದಲ್ಲಿದ್ದ ಅನೇಕ ಕೈಗಾರಿಕೆಗಳು ವ್ಯವಸ್ಥಿತ ಕೈಗಾರಿಕೆಗಳಾಗಿ ಪರಿವರ್ತನೆಗೊಂಡುವು. ವಿಶ್ವೇಶ್ವರಯ್ಯನವರ ಆರ್ಥಿಕ ಯೋಜನೆಗಳು ಮತ್ತು ಅಂದಿನ ಮೈಸೂರು ಸಂಸ್ಥಾನದ ಸರ್ಕಾರದ ಪ್ರಗತಿಪರ ನೀತಿ ಇದಕ್ಕೆ ಮುಖ್ಯ ಕಾರಣಗಳು. ಈ ದಶಕದಲ್ಲಿ ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಸರ್ಕಾರಿ ಸಾಬೂನು ಕಾರ್ಖಾನೆ, ಸರ್ಕಾರಿ ಇಂಡಸ್ಟ್ರಿಯಲ್ ವರ್ಕ್‌ಷಾಪ್ -ಇವು ಸರ್ಕಾರಿ ವಲಯದಲ್ಲಿಯೂ ಮಿನರ್ವ ಮತ್ತು ಕೃಷ್ಣರಾಜೇಂದ್ರ ಜವಳಿ ಗಿರಣಿಗಳು, ಮಹಾಲಕ್ಷ್ಮಿ ಉಲ್ಲನ್ ಮತ್ತು ಸಿಲ್ಕ್ ಟೆಕ್ಸ್‌ಟೈಲ್ ಮಿಲ್ಸ್, ಮೈಸೂರು ಪ್ರೀಮಿಯರ್ ಮೆಟಲ್ ಫ್ಯಾಕ್ಟರಿ, ಸ್ಟ್ಯಾಂಡರ್ಡ್ ಟೈಲ್ ಅಂಡ್ ಕ್ಲೇ ವರ್ಕ್ಸ್, ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ, ಕಿಯೊಲಿನ್ ಸಿಂಡಿಕೇಟ್, ಮೈಸೂರು ಆಸ್‌ಬಸ್ಟಾಸ್, ಸಿಂಧುವಳ್ಳಿ ಕ್ರೋಮೈಟ್ ಮತ್ತು ಇತರ ಅನೇಕ ಉದ್ಯಮಗಳು ಖಾಸಗಿ ವಲಯದಲ್ಲಿ ಸ್ಥಾಪಿತವಾದವು.

ಬೆಂಗಳೂರಿನ ಹೊರವಲಯದ ಕೈಗಾರಿಕಾಪ್ರದೇಶ

ಕೈಗಾರಿಕಾಭಿವೃದ್ಧಿಯ ದೃಷ್ಟಿಯಿಂದ 1924ರ ಅನಂತರದ ಎರಡು ದಶಕಗಳು ಮಹತ್ವಪೂರ್ಣವಾಗಿದ್ದವು. ಭಾರತ ಸರ್ಕಾರದ ವಾಣಿಜ್ಯ ನೀತಿ, ದಿವಾನ್ ಮಿರ್ಜಾ ಇಸ್ಮಾಯಿಲ್‌ರವರ ಆಸಕ್ತಿ, ಎರಡನೆಯ ಮಹಾಯುದ್ಧದಿಂದಾಗಿ ಒದಗಿ ಬಂದ ಸದವಕಾಶ ಇವು ಈ ಕಾಲದ ಪ್ರಗತಿಗೆ ಮುಖ್ಯಕಾರಣಗಳು. ಈ ಕಾಲದಲ್ಲಿ ಕಾಗದ, ಸಿಮೆಂಟು, ವ್ಯವಸಾಯೋಪಯೋಗಿ ಉಪಕರಣಗಳು, ಪೋರ್ಸಲಿನ್ ಸರಕುಗಳು, ಲ್ಯಾಂಪು, ಟ್ರಾನ್ಸ್‌ಫಾರ್ಮರು, ಬ್ಯಾಟರಿ, ಇನ್ಸುಲೇಟರ್ ಮೊದಲಾದ ವಿದ್ಯುಚ್ಛಕ್ತಿ ಸರಕುಗಳು, ಗಾಜು ಮತ್ತು ಎನಾಮಲ್ ವಸ್ತುಗಳು, ಬೇಕ್‌ಲೈಟ್ ಉತ್ಪನ್ನಗಳು, ಬೆಂಕಿಕಡ್ಡಿ, ಯಂತ್ರೋಪಕರಣಗಳು, ಅರಗು ಮತ್ತು ಬಣ್ಣಗಳು, ಸ್ಟೋನ್‌ವೇರ್ ಕೊಳವೆಗಳು, ಸಕ್ಕರೆ, ಆಲ್ಕೋಹಾಲ್, ರಾಸಾಯನಿಕ ವಸ್ತುಗಳು ಮತ್ತು ಗೊಬ್ಬರ, ಕ್ರೋಮ್ ಮತ್ತು ಚರ್ಮದ ಸಾಮಾನುಗಳು, ಶುದ್ಧಗೊಳಿಸಿದ ಹೊಗೆಸೊಪ್ಪು ಮತ್ತು ಕಾಫಿ, ವನಸ್ಪತಿ ತೈಲ ಮತ್ತು ತುಪ್ಪ, ಫಿಲೆಚರ್ ರೇಷ್ಮೆ, ರಸ್ತೆ ನಿರ್ಮಾಣದ ವಸ್ತುಗಳು ಮೊದಲಾದವುಗಳ ಉತ್ಪಾದನೆಗಾಗಿ ಅನೇಕ ಕಾರ್ಖಾನೆಗಳು ಹುಟ್ಟಿದುವು.

ಎರಡನೆಯ ಮಹಾಯುದ್ಧ ಸಹಜವಾಗಿಯೇ ಕೈಗಾರಿಕಾಕ್ಷೇತ್ರಕ್ಕೆ ಹೊಸ ಹುರುಪನ್ನು ತುಂಬಿತು. ಬೆಂಗಳೂರಿನ ಹಿಂದೂಸ್ತಾನ್ ಏರ್‌ಕ್ರಾಫ್ಟ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಮೊದಲಾದ ರಾಷ್ಟ್ರೀಯ ಪ್ರಾಮುಖ್ಯದ ಕೈಗಾರಿಕೆಗಳು, ರೇಡಿಯೋ ಅಂಡ್ ಎಲೆಕ್ಟ್ರಿಕಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಕಿರ್ಲೋಸ್ಕರ್ ಲಿಮಿಟೆಡ್, ಮೈಸೂರು ಕೆಮಿಕಲ್ ಆಂಡ್ ಫರ್ಟಿಲೈಸರ್ಸ್‌ಗಳಂಥ ದೊಡ್ಡ ಕೈಗಾರಿಕೆಗಳು ಸ್ಥಾಪಿತವಾದದ್ದು ಈ ಕಾಲದಲ್ಲಿಯೇ. ಬೆಲೆ ಮತ್ತು ಬೇಡಿಕೆಗಳಲ್ಲಿನ ಏರಿಕೆ ಈ ಕೈಗಾರಿಕೆಗಳ ಸ್ಥಾಪನೆ ಮತ್ತು ಪ್ರಗತಿಗೆ ಮುಖ್ಯ

ಕಾರಣಗಳಾಗಿದ್ದುವು. ಸರ್ಕಾರ ಸಹ ಈ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಹಾಗೂ ಆರಂಭಿಸುವ ಧೋರಣೆಯನ್ನು ಪ್ರಕಟಿಸಿತು. ಈ ಅವಧಿಯಲ್ಲಿ ಉತ್ತೇಜನಗೊಂಡ ಅತಿ ಮುಖ್ಯ ಕೈಗಾರಿಕೆಗಳೆಂದರೆ ಹತ್ತಿಬಟ್ಟೆ, ವನಸ್ಪತಿ, ಬಣ್ಣ ತಯಾರಿಕೆ, ಪೊಟಾಷ್ ಲವಣ, ಮೊಲಾಸಿಸ್, ಕಾಸ್ಟಿಕ್ ಸೋಡಾ, ಕ್ಲೋರಿನ್, ಸಿಮೆಂಟ್, ರೇಡಿಯೋ ಉಪಕರಣ, ಪ್ಲಾಸ್ಟಿಕ್, ವಿದ್ಯುತ್ ಸಲಕರಣೆಗಳು, ಸೋಡಾ, ಎಲೆಕ್ಟ್ರೋ ಕೆಮಿಕಲ್ಸ್, ಹುರಿಹಗ್ಗ, ಛಾಯಾಚಿತ್ರ ಸಾಮಗ್ರಿ ಇತ್ಯಾದಿ.

ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಸಂಸ್ಥಾನದ ಕೈಗಾರಿಕಾನೀತಿ ಎರಡು ಪ್ರಮುಖ ಅಂಶಗಳನ್ನೊಳಗೊಂಡಿತ್ತು. ಮೊದಲನೆಯದಾಗಿ, ಸರ್ಕಾರವೇ ಕೆಲವು ಪ್ರಮುಖ ಕೈಗಾರಿಕೆಗಳನ್ನು ಸ್ಥಾಪಿಸಿ ಔದ್ಯೋಗೀಕರಣಕ್ಕೆ ನೆರವಾಗಿತ್ತು. ಎರಡನೆಯದಾಗಿ, ಖಾಸಗೀ ಬಂಡವಾಳದಾರರಿಗೆ ಸರ್ಕಾರ ಕೈಗಾರಿಕೆಗಳನ್ನು ಸ್ಥಾಪಿಸಲು ತುಂಬಾ ಉತ್ತೇಜನ ನೀಡುತ್ತಿತ್ತು. ಇಷ್ಟೇ ಅಲ್ಲದೆ ಖಾಸಗೀ ಬಂಡವಾಳಿಗರೊಡನೆ ತಾನೂ ಪಾಲ್ಗೊಳ್ಳುವ ಉತ್ಸಾಹವನ್ನು ಸಹ ತೋರುತ್ತಿತ್ತು. ಈಗ ಅತ್ಯಂತ ಪ್ರಚಾರದಲ್ಲಿರುವ ಸಂಯುಕ್ತ ಕ್ಷೇತ್ರ ಕೈಗಾರಿಕೆ ಪ್ರಯತ್ನವನ್ನು ಮೈಸೂರು ಸಂಸ್ಥಾನ ಬಹಳ ಹಿಂದೆಯೇ ಪ್ರಯೋಗಿಸಿತ್ತು.

ಬೆಂಗಳೂರಿನ ಹೊರವಲಯದ ಕೈಗಾರಿಕಾಪ್ರದೇಶ

ಮೈಸೂರು ಸಂಸ್ಥಾನದ ಕೈಗಾರಿಕಾ ಪ್ರಗತಿಯ ಮತ್ತೊಂದು ಪ್ರಮುಖ ಅಂಶವೆಂದರೆ ಪ್ರಾರಂಭದಿಂದಲೂ ಈ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆಯುತ್ತ ಬಂದದ್ದು. ಇದಕ್ಕೆ ಸಹ ಯೋಜನೆಯನ್ನು ರೂಪಿಸಿದ ಶ್ರೇಯಸ್ಸು ಎಂ.ವಿಶ್ವೇಶ್ವರಯ್ಯನವರದು. ಈ ರಾಜ್ಯದ ಗೃಹಕೈಗಾರಿಕೆಗಳಾದ ನೇಯ್ಗೆ, ಕುಂಬಾರಿಕೆ, ಹೆಂಚು ತಯಾರಿಕೆ, ಗಾಣದಿಂದ ಎಣ್ಣೆ ಹಿಂಡುವಿಕೆ, ಬುಟ್ಟಿ ತಯಾರಿಕೆ, ಚಿನ್ನದ ಕೆಲಸ, ಕಬ್ಬಿಣದ ಕೆಲಸ, ಮರಗೆಲಸ, ಚಾಪೆ ತಯಾರಿಕೆ, ಚರ್ಮದ ಕೆಲಸ, ಬೀಡಿ ತಯಾರಿಕೆ ಮತ್ತು ಅಗರಬತ್ತಿ ಉದ್ಯಮಗಳ ಪ್ರೋತ್ಸಾಹ ಅತ್ಯಂತ ಅಗತ್ಯವೆಂಬುದನ್ನು ಮನಗಾಣಲಾಯಿತು. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಾದಂತೆ ಈ ಕೈಗಾರಿಕೆಗಳು ಅಭಿವೃದ್ಧಿ ಹೊಂದಲಾರಂಭಿಸಿದವು.

ಲಭ್ಯವಿರುವ ಅಂಕಿ ಅಂಶದ ಪ್ರಕಾರ 1920ರಲ್ಲೇ ರಾಜ್ಯದಲ್ಲಿ ವಿದ್ಯುತ್ ಕೇಂದ್ರ, ಹತ್ತಿ ಬಟ್ಟೆ ಗಿರಣಿ ಮತ್ತು ಚಿನ್ನದ ಗಣಿಯನ್ನುಳಿದು, ಇತರ 29 ದೊಡ್ಡ ಕೈಗಾರಿಕೆಗಳಿದ್ದವು. ಇವುಗಳ ಬಂಡವಾಳ ಸುಮಾರು ರೂ.5 ಕೋಟಿ. ಈ ಕೈಗಾರಿಕೆಗಳಲ್ಲಿ 16,500 ಉದ್ಯೋಗಿಗಳಿದ್ದರು. 1944ರ ವೇಳೆಗೆ ರಾಜ್ಯದಲ್ಲಿ ಒಟ್ಟು 313 ದೊಡ್ಡ ಕಾರ್ಖಾನೆಗಳಿದ್ದುವು. ಇವುಗಳಲ್ಲಿ ಉದ್ಯೋಗಿಗಳ ಸಂಖ್ಯೆ 1,00,000. ಇವುಗಳಲ್ಲಿ 26 ಅತಿ ದೊಡ್ಡ ಕೈಗಾರಿಕೆಗಳು ಯುದ್ಧಕ್ಕೆ ಅಗತ್ಯವಾದ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದವು. ಯುದ್ಧಮುಗಿಯುವ ವೇಳೆಗೆ ಇವು ರೂ.11 ಕೋಟಿ ಮೊತ್ತದ ಸಾಮಗ್ರಿಗಳನ್ನು ಸರಬರಾಜು ಮಾಡಿದ್ದವು.

ಮೈಸೂರು ಸಂಸ್ಥಾನವನ್ನು ಬಿಟ್ಟು ಕರ್ನಾಟಕದ ಉಳಿದ ಭಾಗಗಳಲ್ಲಿ ಕೈಗಾರಿಕಾಭಿವೃದ್ಧಿ ವ್ಯವಸ್ಥಿತವಾಗಿಯಾಗಲಿ ಗಣನೀಯವಾಗಿಯಾಗಲಿ ಇರಲಿಲ್ಲ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆದ ಹೆಂಚಿನ ಕಾರ್ಖಾನೆಗಳು, ಶಹಾಬಾದಿನ ಸಿಮೆಂಟ್ ಕಾರ್ಖಾನೆ, ಹುಬ್ಬಳ್ಳಿಯ ಲೋಹ ಕೈಗಾರಿಕೆಗಳು ಮತ್ತು ರೈಲ್ವೆ ಕಾರ್ಖಾನೆ, ಗುಲ್ಬರ್ಗ ಧಾರವಾಡ ಬೆಳಗಾಂವಿಯ ಬಟ್ಟೆ ಗಿರಣಿಗಳು, ಕೊಡಗಿನ ಮರಗೆಲಸ ಕಾರ್ಖಾನೆಗಳು ಉಲ್ಲೇಖಾರ್ಹ.

**ಪಂಚವಾರ್ಷಿಕ ಯೋಜನೆಗಳು :** ಸ್ವಾತಂತ್ರ್ಯಾನಂತರ 1948 ಮತ್ತು 1956ರಲ್ಲಿ ಭಾರತ ಸರ್ಕಾರದ ಕೈಗಾರಿಕಾನೀತಿಗಳು ರೂಪಿತವಾದವು. ರಾಜ್ಯ ಸರ್ಕಾರಗಳು ಈ ನೀತಿಗಳಿಗನುಗುಣವಾಗಿ ನಡೆಯಬೇಕಾಯಿತು. 1951ರಲ್ಲಿ ಪ್ರಾರಂಭವಾದ ಪಂಚವಾರ್ಷಿಕ ಯೋಜನೆ ಕೈಗಾರಿಕಾ ಪ್ರಗತಿ ರಾಷ್ಟ್ರದಲ್ಲಿ ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತಿತು. ರಾಜ್ಯ ಸರ್ಕಾರಗಳು ಸಹ ಪಂಚವಾರ್ಷಿಕ ಯೋಜನೆಗಳನ್ನು ರಾಷ್ಟ್ರೀಯ ನೀತಿಗನುಗುಣವಾಗಿ ರೂಪಿಸಿದವು. ಕೈಗಾರಿಕಾ ಕ್ಷೇತ್ರದ ಯೋಜನೆಗಳು ಆರ್ಥಿಕ ಯೋಜನೆಯ ಚೌಕಟ್ಟಿನೊಳಗೇ ನಡೆಯಬೇಕಾಗಿ ಬಂತು. ರಾಷ್ಟ್ರದ ಮಿಶ್ರ ಆರ್ಥಿಕ ವ್ಯವಸ್ಥೆಯ ನೀತಿಗನುಗುಣವಾಗಿ ರಾಜ್ಯದಲ್ಲಿ ಸಹ ಕೈಗಾರಿಕಾ ರಂಗದಲ್ಲಿ ಮೂರು ಕ್ಷೇತ್ರಗಳು ರೂಪಿತವಾದವು. ಅವುಗಳೆಂದರೆ, ಸಾರ್ವಜನಿಕ ಕ್ಷೇತ್ರ, ಖಾಸಗಿ ಕ್ಷೇತ್ರ ಮತ್ತು ಸಂಯುಕ್ತ ಕ್ಷೇತ್ರ. ಅವಶ್ಯವಿರುವ ಕಡೆ ಸಹಕಾರ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಉತ್ತೇಜಿಸುವ ನೀತಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಪ್ಪಿಕೊಂಡವು.

ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ರಾಜ್ಯದ ಕೈಗಾರಿಕಾ ಪ್ರಗತಿ ಗಣನೀಯ ಪ್ರಮಾಣದಲ್ಲಿ ನಡೆದಿದೆಯೆಂದು ಹೇಳಬೇಕು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳ ಮೇಲೆ ಮಾಡಲಾದ ವೆಚ್ಚ 1.3 ಕೋಟಿ ರೂಪಾಯಿಗಳು. ಇದು ಒಟ್ಟು ಯೋಜನಾ ವೆಚ್ಚದ ಸೇ.3ರಷ್ಟಾಗಿತ್ತು. ಮೊದಲನೆಯ ಯೋಜನೆಯ ಅವಧಿಯಲ್ಲಿ ಸಾಬೂನು ಕಾರ್ಖಾನೆ, ವಿದ್ಯುತ್ ಉಪಕರಣ ಮತ್ತು ಪಿಂಗಾಣಿ ಕೈಗಾರಿಕೆಗಳನ್ನು ಬಹಳವಾಗಿ ಅಭಿವೃದ್ಧಿಗೊಳಿಸಲಾಯಿತು. ಇವೆಲ್ಲವೂ ಸರ್ಕಾರೀ ಕ್ಷೇತ್ರದ ಉದ್ಯಮಗಳಾಗಿದ್ದುವು. ಇವಲ್ಲದೆ ಭದ್ರಾವತಿ ಕಬ್ಬಿಣ ಕಾರ್ಖಾನೆಯನ್ನು ವಿಸ್ತರಿಸಲಾಯಿತು. ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಮುಖ್ಯವಾಗಿ ನೇಕಾರರ ಸಹಕಾರ ಸಂಘಗಳನ್ನು ಹೆಚ್ಚಾಗಿ ಸ್ಥಾಪಿಸಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಪ್ರಗತಿ ಅತ್ಯಂತ ಮಹತ್ವದ್ದಾಗಿತ್ತು. ಮೊದಲನೆಯ ಯೋಜನೆಗೆ ಹೋಲಿಸಿದಂತೆ ಕೈಗಾರಿಕಾ ಕ್ಷೇತ್ರದ ಮೇಲೆ ವೆಚ್ಚವನ್ನು ತುಂಬಾ ಹೆಚ್ಚಿಸಲಾಯಿತು. ಈ ಯೋಜನೆಯಲ್ಲಿ ಕೈಗಾರಿಕಾ ಕ್ಷೇತ್ರದ ಮೇಲೆ 8.87 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಇದರಲ್ಲಿ ಹೆಚ್ಚಿನಂಶದ ವೆಚ್ಚವನ್ನು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿಡಲಾಯಿತು. ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳ ಉತ್ಪಾದನೆಯಲ್ಲಿನ ಹೆಚ್ಚಳ, ಉತ್ಪಾದನೆಯ ದಕ್ಷತೆಯ ವಿಸ್ತರಣೆ, ಕೈಗಾರಿಕಾ ಎಸ್ಟೇಟ್‌ಗಳ ಸ್ಥಾಪನೆ, ಖಾಸಗಿ ಕಾರ್ಖಾನೆಗಳ ಉತ್ಪಾದನೆಯಲ್ಲಿನ ಹೆಚ್ಚಳ ಈ ಯೋಜನೆಯ ಅತಿ ಮುಖ್ಯ ಅಂಶಗಳಾಗಿದ್ದವು. ಈ ಯೋಜನೆಯ ಅವಧಿಯಲ್ಲಿ ಶಿವಮೊಗ್ಗದಲ್ಲಿ ಒಂದು ಹೊಸ ಗಂಧದೆಣ್ಣೆ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಸರ್ಕಾರಿ ಸಾಬೂನು ಕಾರ್ಖಾನೆಯನ್ನು ವಿಸ್ತರಿಸಲಾಯಿತು. ವಾಸ್ತವವಾಗಿ ಯೋಜನೆಯ ಅವಧಿಯಲ್ಲಿ ಸಾಬೂನು ಉತ್ಪಾದನೆ 610 ಟನ್‌ಗಳಿಂದ 1,524 ಟನ್‌ಗಳಿಗೆ ಏರಿತು. ಹಾಗೆಯೇ ಪಿಂಗಾಣಿ ಕಾರ್ಖಾನೆಯ ವಿಸ್ತರಣೆಯಿಂದಾಗಿ ಅದರ ಉತ್ಪನ್ನ ವರ್ಷಕ್ಕೆ 2,540 ಟನ್‌ಗಳಿಗೆ ಏರಿತು. 1960ರಲ್ಲಿ ರಾಜ್ಯ ಸರ್ಕಾರ ಚನ್ನಪಟ್ಟಣದ ರೇಷ್ಮೆ ಕಾರ್ಖಾನೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸ್ಥಾಪಿತವಾದ ಕೈಗಾರಿಕಾ ಎಸ್ಟೇಟುಗಳು ಹೊಸ ಕೈಗಾರಿಕೆಗೆ ಬೇಕಾಗುವ ಎಲ್ಲ ಆವಶ್ಯಕತೆಗಳನ್ನೂ ಒದಗಿಸುವ ಉದ್ದೇಶವನ್ನು ಇಟ್ಟುಕೊಂಡಿದ್ದವು. ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್, ನೀರು, ಒಳಚರಂಡಿ, ರಸ್ತೆ,

ಉಗ್ರಾಣ, ಅಂಚೆ ಕಚೇರಿ, ಬ್ಯಾಂಕು ಮೊದಲಾದ ಅನುಕೂಲಗಳನ್ನು ಎಸ್ಟೇಟುಗಳಲ್ಲಿ ಒದಗಿಸಿಕೊಡುವುದರ ಮೂಲಕ ಹೊಸ ಕೈಗಾರಿಕೆಗಳನ್ನು ಅಸ್ತಿತ್ವಕ್ಕೆ ತರುವುದು ಇದರ ಮುಖ್ಯ ಗುರಿ. ಇವುಗಳನ್ನು ದೊರಕಿಸಿಕೊಡುವುದರಿಂದ ಸಣ್ಣ ಕೈಗಾರಿಕೆಗಳ ತೀವ್ರ ಹಾಗೂ ಸಮನ್ವಯ ರೀತಿಯ ಅಭಿವೃದ್ಧಿ ಸಾಧ್ಯವೆಂಬುದನ್ನು ರಾಜ್ಯದ ಎರಡನೆಯ ಯೋಜನೆಯ ಅವಧಿಯಲ್ಲಿ ಮನಗಾಣಲಾಯಿತು. ಎರಡನೆಯ ಯೋಜನೆಯ ಅವಧಿಯಲ್ಲಿ ಬೆಂಗಳೂರು, ಹುಬ್ಬಳ್ಳಿ, ರಾಮನಗರ, ಮೈಸೂರು, ಹರಿಹರ, ಬೆಳಗಾಂವಿ, ಮಂಗಳೂರು ಮತ್ತು ಗುಲ್ಬರ್ಗದಲ್ಲಿ 8 ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಯಿತು. ರಾಜ್ಯದಲ್ಲಿ ಗ್ರಾಮೀಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ, ಗ್ರಾಮಾಂತರ ಕಸಬುದಾರರಿಗೆ ಪೀಠೋಪಕರಣ ತಯಾರಿಕೆಗೆ ಆಧುನಿಕ ಸಲಕರಣೆ ಮತ್ತು ಯಂತ್ರಗಳ ಬಳಕೆ. ಮರಗೆಲಸ ಹಾಗೂ ಕಮ್ಮಾರಿಕೆ ಇವುಗಳ ಬಗ್ಗೆ ತರಬೇತಿ ನೀಡಲು ಏಳು ಮಾದರಿ ಕೇಂದ್ರಗಳನ್ನು ಸ್ಥಾಪಿಸಲಾಯಿತು.

ಬೆಂಗಳೂರು, ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶ

ಈ ಯೋಜನೆಯ ಅವಧಿಯಲ್ಲಿ ನೇಮಿಸಲಾದ ಕೈಗಾರಿಕಾ ಸಹಕಾರ ಸಂಘಗಳ ಕ್ರಿಯಾಸಮಿತಿ ತನ್ನ ಶಿಫಾರಸುಗಳನ್ನು ಸರ್ಕಾರಕ್ಕೆ ಸಲ್ಲಿಸಿತು. ಇದೇ ರೀತಿ 1959ರಲ್ಲಿ ಮೈಸೂರು ಸಣ್ಣ ಕೈಗಾರಿಕೆ ಮತ್ತು ಕರಕುಶಲ ಕಸಬುಗಳ ಮಂಡಳಿಯನ್ನು ರಚಿಸಲಾಯಿತು. ಇದರ ಮುಖ್ಯ ಉದ್ದೇಶ ಸಣ್ಣಕೈಗಾರಿಕೆಗಳ ಅಭಿವೃದ್ಧಿಯನ್ನು ಕುರಿತು ಸರ್ಕಾರಕ್ಕೆ ಸಲಹೆಗಳನ್ನು ನೀಡುವುದಾಗಿತ್ತು. ಈ ಮಂಡಳಿಯ ಶಿಫಾರಸುಗಳ ಫಲವಾಗಿ ಈ ಯೋಜನೆಯ ಅವಧಿಯಲ್ಲಿ 123 ಕರಕುಶಲ ಸಂಘಗಳು ನಿರ್ಮಾಣವಾದವು. ಈ ಸಂಘಗಳು ಆಸಕ್ತಿ ತಳೆದಿದ್ದ ಕಸಬುಗಳೆಂದರೆ ಬಲೆ ನೇಯ್ಗೆ, ಗಂಧದ ಕೆತ್ತನೆ, ದಂತದ ಕೆತ್ತನೆ, ಲೋಹ ಸಾಮಗ್ರಿ, ಮರದ ಆಟದ ಸಾಮಾನುಗಳು ಇತ್ಯಾದಿ.

ಈ ಯೋಜನೆಯ ಅವಧಿಯಲ್ಲೇ ಮೈಸೂರು ಸಣ್ಣ ಕೈಗಾರಿಕೆಗಳ ಕಾರ್ಪೋರೇಷನ್ ಅಸ್ತಿತ್ವಕ್ಕೆ ಬಂತು. ಈ ಕಾರ್ಪೊರೇಷನ್ನಿನ ಪ್ರಮುಖ ಕಾರ್ಯಗಳೆಂದರೆ ಕೈಗಾರಿಕಾ ಎಸ್ಟೇಟುಗಳ ನಿರ್ಮಾಣ, ಅವುಗಳ ವ್ಯವಸ್ಥಾಪನೆ, ಮುಖ್ಯ ಕೈಗಾರಿಕಾ ಕೇಂದ್ರಗಳಲ್ಲಿ ಉಕ್ಕು, ಇದ್ದಿಲು, ಕಬ್ಬಿಣೇತರ ಲೋಹ ಮುಂತಾದ ಕಚ್ಚಾಮಾಲು ಸಂಗ್ರಹ, ಕೋಠಿಗಳ ಪ್ರಾರಂಭ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಮಾರುಕಟ್ಟೆಯನ್ನು ಒದಗಿಸುವುದಾಗಿತ್ತು. ಯೋಜನೆಯ ಎರಡನೆಯ ವರ್ಷದಲ್ಲಿ ಕೈಮಗ್ಗ ಉದ್ಯಮವನ್ನು ವ್ಯವಸ್ಥಿತಗೊಳಿಸಲು ಮೈಸೂರು ರಾಜ್ಯ ಹತ್ತಿ ಮತ್ತು ಉಣ್ಣೆ ನೇಕಾರರ ಸಂಘ ಮತ್ತು ಮೈಸೂರು ರಾಜ್ಯ ರೇಷ್ಮೆ ಕೈಮಗ್ಗ ನೇಕಾರರ ಕೇಂದ್ರ ಸಹಕಾರ ಸಂಘಗಳನ್ನು ರಚಿಸಲಾಯಿತು. ಯೋಜನೆಯ ಕರಡಿನಲ್ಲಿ ಪ್ರಕಟಿಸಿದಂತೆ ಕೈಗಾರಿಕಾ ಸಹಕಾರವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಯೋಜನೆಯ ಅವಧಿಯಲ್ಲಿ 210 ಕೈಮಗ್ಗ ಸಹಕಾರ ಸಂಘಗಳಿಗೆ ಸುಮಾರು 2,000 ವಿದ್ಯುತ್‌ಚಾಲಿತ ಮಗ್ಗಗಳನ್ನು ಒದಗಿಸಲಾಯಿತು. ಇಷ್ಟೇ ಅಲ್ಲದೆ 35 ಹುರಿಹಗ್ಗ ಸಹಕಾರ ಸಂಘಗಳಿಗೆ ವ್ಯವಸ್ಥಾಪನೆ ಮತ್ತು ಬಂಡವಾಳ ವೆಚ್ಚವನ್ನು ದೊರಕಿಸಿಕೊಡಲಾಯಿತು. ಒಟ್ಟಿನಲ್ಲಿ ಹೇಳುವುದಾದರೆ, ಎರಡನೆಯ ಪಂಚವಾರ್ಷಿಕ ಯೋಜನೆ ರಾಜ್ಯದ ಕೈಗಾರಿಕಾ ಪ್ರಗತಿಗೆ ಅತ್ಯಂತ ದಕ್ಷವಾದ ಬುನಾದಿಯನ್ನು ಹಾಕಿತು. ಮುಖ್ಯವಾಗಿ ಈ ಯೋಜನೆಯಲ್ಲಿ ಅಸ್ತಿತ್ವಕ್ಕೆ ಬಂದ ಕೈಗಾರಿಕೆಗಳು ಮುಂದಿನ ಯೋಜನೆಯ ಅವಧಿಯಲ್ಲಿ ಫಲ ಕೊಡುವ ನಿರೀಕ್ಷೆ ಇತ್ತು. ರಾಜ್ಯದಲ್ಲಿ ಕೈಗಾರಿಕೋದ್ಯಮಿಗಳು ಮುಂದೆ ಬರುವುದಾದರೆ, ಅವರಿಗೆ ಎಲ್ಲ ವಿಧವಾದ ನೆರವು ಸರ್ಕಾರದ ವತಿಯಿಂದ ದೊರೆಯುತ್ತದೆಂಬ ಖಾತ್ರಿಯ ಮಾನಸಿಕ ವಾತಾವರಣ ಏರ್ಪಟ್ಟಿತು. ಈ ಯೋಜನೆಯಲ್ಲಿ ವಿದ್ಯುತ್ ಕೊರತೆಯುಂಟಾದರೂ ಈ ಅಡಚಣೆಯಲ್ಲೂ ಕೈಗಾರಿಕೆಗಳು ಸಾಕಷ್ಟು ಮಟ್ಟಿಗಿನ ಉತ್ಪಾದನ ಪ್ರಗತಿಯನ್ನು ತೋರಿದವು.

ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮೊದಲೆರಡು ಯೋಜನೆಗಳಲ್ಲಿ ಕೈಗೊಂಡಿದ್ದ ಕೈಗಾರಿಕೀಕರಣವನ್ನು ತೀವ್ರಗೊಳಿಸಲಾಯಿತು. ಎರಡನೆಯ ಯೋಜನೆಯಂತೆಯೇ ಮೂರನೆಯ ಯೋಜನೆಯಲ್ಲೂ ಪ್ರಸ್ತುತ ಕೈಗಾರಿಕೆಗಳಲ್ಲಿನ ಉತ್ಪಾದನೆಯ ವಿಸ್ತರಣೆ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ ಮತ್ತು ಸರ್ಕಾರದ ನೆರವು ಇವು ಕೈಗಾರಿಕಾ ನೀತಿಯ ಮುಖ್ಯ ಉದ್ದೇಶಗಳಾಗಿದ್ದವು. ಈ ಯೋಜನೆಯಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ರೂ.11.99 ಕೋಟಿಗಳನ್ನು ವೆಚ್ಚಮಾಡಲಾಯಿತು. ಯೋಜನೆಯ ಅವಧಿಯಲ್ಲಿ ಪ್ರಾರಂಭವಾದ ಶರಾವತಿ ವಿದ್ಯುತ್ ಕೇಂದ್ರ ವಿದ್ಯುತ್‌ಕೊರತೆಯ ಸಮಸ್ಯೆಯನ್ನು ಬಹು ಮಟ್ಟಿಗೆ ಬಗೆಹರಿಸಿತು.

ದೊಡ್ಡ ಕೈಗಾರಿಕಾ ಕ್ಷೇತ್ರದ ಅತ್ಯಂತ ಮುಖ್ಯ ಬೆಳವಣಿಗೆಯೆಂದರೆ, ಸರ್ಕಾರ ಎನ್.ಜಿ.ಇ.ಎಫ್. ಸ್ಥಾಪನೆಗಾಗಿ 650 ಲಕ್ಷ ರೂ.ಗಳನ್ನು ಒದಗಿಸಿದ್ದು. ಈ ಕೈಗಾರಿಕೆ ಬೃಹತ್ ಪ್ರಮಾಣದ್ದಾಗಿದ್ದು ಟ್ರಾನ್ಸ್‌ಫಾರ್ಮರ್, ಮೋಟಾರ್ ಸ್ವಿಚ್‌ಗೇರ್ ಹಾಗೂ ವಿದ್ಯುತ್ ಯಂತ್ರ ಸಲಕರಣೆಗಳ ಉತ್ಪಾದನೆಗೆ ತೊಡಗಿತು. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ವೃದ್ಧಿಗೊಳಿಸುವುದು ಅನಿವಾರ್ಯವಾದ್ದರಿಂದ ಈ ಯೋಜನೆಯಲ್ಲಿ ಪಿಂಗಾಣಿ ಕಾರ್ಖಾನೆಯನ್ನು ಮತ್ತೂ ವಿಸ್ತರಿಸಲಾಯಿತು.

ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಕ್ಷೇತ್ರಗಳಲ್ಲಿ ಸಹ ಕೆಲವು ಮುಖ್ಯ ಬೆಳವಣಿಗೆಗಳು ಈ ಯೋಜನಾವಧಿಯಲ್ಲಿ ಆದುವು. ಸರ್ಕಾರಿ ರೇಷ್ಮೆ ಕಾರ್ಖಾನೆಯಲ್ಲಿ 1,500 ಕದಿರುಗಳ ಸಾಮರ್ಥ್ಯದ ಘಟಕವನ್ನು ಹೊಂದಿಸಲಾಯಿತು ಮತ್ತು ಈ ಕಾರ್ಖಾನೆಯನ್ನು ಜಪಾನಿನ ಸಹಕಾರದಿಂದ ಆಧುನೀಕರಿಸಲಾಯಿತು. ಬಾಗಲಕೋಟೆಯ ಸಹಕಾರಿ ನೂಲುಗಿರಣಿ ಉತ್ಪಾದನೆಯಲ್ಲಿ ಅತ್ಯಂತ ಹೆಚ್ಚಿನ ದಾಖಲೆಯನ್ನು ಸ್ಥಾಪಿಸಿತು. ಸಹಕಾರಿ ಮತ್ತು ಖಾಸಗಿ ಗಿರಣಿಗಳಿಗೆ ಈ ಯೋಜನೆಯಲ್ಲಿ 4,300 ವಿದ್ಯುತ್‌ಮಗ್ಗಗಳನ್ನು ಒದಗಿಸಲಾಯಿತು.

ಉತ್ಪಾದನೆಯನ್ನು ವಿಸ್ತರಿಸುವ ದೃಷ್ಟಿಯಿಂದ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ವಿಶಿಷ್ಟ ಉಕ್ಕು ಉತ್ಪಾದನೆಯಾಗುವಂತೆ ಕೈಗಾರಿಕೆಯನ್ನು ವಿಸ್ತರಿಸಲಾಯಿತು. ತುಂಗಭದ್ರಾ ಉಕ್ಕು ಘಟಕದಲ್ಲಿ ಸಹ ಹೊಸ ಬಗೆಯ ಉತ್ಪನ್ನಗಳನ್ನು ಆರಂಭಿಸಲಾಯಿತು. ರಾಸಾಯನಿಕ ಕೈಗಾರಿಕೆಗಳನ್ನು ಸಹ ವಿಸ್ತರಿಸಲಾಯಿತು. ಹಾಸನದ ಉಪಕರಣಗಳ ಕಾರ್ಖಾನೆಯನ್ನು ಸಹ ವಿಸ್ತರಿಸಲಾಯಿತು.

ಕೈಗಾರಿಕಾ ಎಸ್ಟೇಟ್‌ಗಳ ನಿರ್ಮಾಣದ ಕಾರ್ಯ ಮುಂದುವರಿಸಿ ಈ ಯೋಜನೆಯ ಅವಧಿಯಲ್ಲಿ 12 ಎಸ್ಟೇಟ್‌ಗಳನ್ನು ಸ್ಥಾಪಿಸಲಾಯಿತು. ಇವುಗಳಲ್ಲಿ 216 ಶೆಡ್ಡುಗಳು ಉತ್ಪಾದನೆಯಲ್ಲಿ ತೊಡಗಿದ್ದವು. ಈ ಎಸ್ಟೇಟುಗಳಲ್ಲಿ ಎಲ್ಲ ಉತ್ಪಾದಕರಿಗೂ ಅನುಕೂಲವಾಗುವಂಥ' ಸೌಕರ್ಯವನ್ನು ಕಲ್ಪಿಸುವ ಉದ್ದೇಶದಿಂದ ಸರ್ಕಾರವೇ ಅನೇಕ ಯಂತ್ರೋಪಕರಣಗಳನ್ನು ಖರೀದಿ ಮಾಡಿತು.

ಮೂರನೆಯ ಯೋಜನೆಯ ಅವಧಿಯಲ್ಲಿ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಪೋಷಕವಾಗುವಂತೆ ರಾಜ್ಯ ಕೈಗಾರಿಕಾ ವಿನಿಯೋಜನೆ ಮತ್ತು ಅಭಿವೃದ್ಧಿ ಕಾರ್ಪೋರೇಷನ್ ಅಸ್ತಿತ್ವಕ್ಕೆ ಬಂತು. ರೂ.5 ಕೋಟಿ ಅಧಿಕೃತ ಬಂಡವಾಳದೊಂದಿಗೆ ಆರಂಭವಾದ ಈ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ ಕೈಗಾರಿಕೆಗಳಿಗೆ ಬಂಡವಾಳವನ್ನು ದೊರಕಿಸಿಕೊಡುವುದು

ಮತ್ತು ಹೊಸ ಕೈಗಾರಿಕೆಗಳು ಅಸ್ತಿತ್ವಕ್ಕೆ ಬರುವಂತೆ ಪ್ರೋತ್ಸಾಹ ನೀಡುವುದು. ಈ ಯೋಜನೆಯ ಅವಧಿಯಲ್ಲಿ, ರಾಜ್ಯ ಸರ್ಕಾರ ಅನೇಕ ಸಮೀಕ್ಷೆಗಳಿಗೆ ಏರ್ಪಾಡು ಮಾಡಿತು. ಇವುಗಳಲ್ಲಿ ಮುಖ್ಯವಾಗಿದ್ದ ಸಮೀಕ್ಷೆಗಳೆಂದರೆ, ಆನ್ವಯಿಕ ಆರ್ಥಿಕ ಸಂಶೋಧನ ರಾಷ್ಟ್ರೀಯ ಮಂಡಳಿ ಮತ್ತು ರಾಜ್ಯದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಪ್ರಕಟಿಸಿದ ಕೈಗಾರಿಕೆಗಳ ಸಂಪನ್ಮೂಲ ಮತ್ತು ಸ್ಥಾಪನೆಗೆ ಸಂಬಂಧಿಸಿದ ಅಧ್ಯಯನಗಳು. ಒಟ್ಟಿನಲ್ಲಿ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯ ದೃಷ್ಟಿಯಿಂದ ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿ ಒಂದು ಸಂಧಿಕಾಲವಾಗಿತ್ತು. ರಾಜ್ಯದಲ್ಲಿ ಕೈಗಾರಿಕಾ ಪ್ರಗತಿಯ ಪ್ರಜ್ಞೆ ಈ ಅವಧಿಯಲ್ಲಿ ಕೈಗಾರಿಕೋದ್ಯಮಿಗಳ ಮನಸ್ಸಿನಲ್ಲಿ ಆಳವಾಗಿ ಬೇರೂರಿತು.

ರಾಷ್ಟ್ರೀಯ ಆರ್ಥಿಕ ಯೋಜನೆಗನ್ವಯವಾಗಿ ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿದ ಅನಂತರ ಮುಂದಿನ 3 ವರ್ಷಗಳಲ್ಲಿ ಕೇವಲ ವಾರ್ಷಿಕ ಯೋಜನೆಗಳನ್ನು ಮಾತ್ರ ಕೈಗೊಳ್ಳಲಾಯಿತು. 1966-69ರ ಮೂರು ವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೈಗಾರಿಕಾ ಕ್ಷೇತ್ರದ ಮೇಲೆ ಮಾಡಿದ ವೆಚ್ಚ ಅನುಕ್ರಮವಾಗಿ 227 ಲಕ್ಷ, 276 ಲಕ್ಷ ಮತ್ತು 346 ಲಕ್ಷ ರೂ.ಗಳಾಗಿದ್ದವು. ಈ ವರ್ಷಗಳಲ್ಲಿ ಮೂರನೆಯ ಯೋಜನೆಯ ಕೈಗಾರಿಕಾ ಉತ್ಪನ್ನ ವಿಸ್ತರಣೆ ಮತ್ತು ಹೊಸ ಕೈಗಾರಿಕೆಗಳ ಸ್ಥಾಪನೆಯ ನೀತಿಯನ್ನೇ ಮುಂದುವರಿಸಲಾಯಿತು. 1966-67ರಲ್ಲಿ ಮೈಸೂರು ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಇದರ ಮುಖ್ಯ ಉದ್ದೇಶ ರಾಜ್ಯದ ನಾನಾ ಭಾಗಗಳಲ್ಲಿ ಕೈಗಾರಿಕೆಗಳಿಗೆ ಯೋಗ್ಯವಾದ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡು ಉದ್ಯಮ ಸಾಹಸಿಗಳಿಗೆ ಹಂಚುವುದಾಗಿತ್ತು. 1967-68ರಲ್ಲಿ ಸರ್ಕಾರ ಕೆಲವು ಮಹತ್ವದ ವರದಿಗಳನ್ನು ಪ್ರಕಟಿಸಿತು. ಅವುಗಳೆಂದರೆ ಐದನೆಯ ಉಕ್ಕು ಕಾರ್ಖಾನೆ ಸ್ಥಾಪಿಸಲು ಹೊಸಪೇಟೆಯ ಅರ್ಹತೆ, ಮೈಸೂರು ರಾಜ್ಯದಲ್ಲಿ ದೊಡ್ಡ ಗಾತ್ರದ ಸಾರಜನಕ ಗೊಬ್ಬರ ಯೋಜನೆಗೆ ಅವಕಾಶ ಮತ್ತು ಹೊಳೆನರಸೀಪುರದ ಸಮೀಪ ಸಿಮೆಂಟು ಆಸ್ಬೆಸ್ಟಾಸ್ ಉತ್ಪಾದನೆಯ ಘಟಕವೊಂದನ್ನು ಸ್ಥಾಪಿಸುವುದು. ಆ ವರ್ಷ ರಾಜ್ಯದಲ್ಲಿ ಮೊದಲ ಬಾರಿಗೆ 83 ಟನ್ ತೆಂಗಿನ ನಾರು ರಫ್ತು ಮಾಡಿದ್ದು ಒಂದು ವಿಶೇಷ. ಇಷ್ಟೇ ಅಲ್ಲದೆ ರೇಷ್ಮೆ ತಳಿ ಅಭಿವೃದ್ಧಿಯ 31 ಕೇಂದ್ರಗಳನ್ನು ಸ್ಥಾಪಿಸಲಾಯಿತು. 1968-69ರಲ್ಲಿ 660 ವಿದ್ಯುತ್‌ಚಾಲಿತ ಮಗ್ಗಗಳನ್ನು ಅಳವಡಿಸಲಾಯಿತು. ಆ ವರ್ಷ ಸರ್ಕಾರ ಹೊಸ ಉದ್ಯಮಗಳಿಗೆ ಉತ್ತೇಜನವನ್ನು ನೀಡುವ ದೃಷ್ಟಿಯಿಂದ, ಅನೇಕ ರಿಯಾಯಿತಿಗಳನ್ನು ಪ್ರಕಟಿಸಿತು. ಅವುಗಳೆಂದರೆ ವಿದ್ಯುತ್ ತೆರಿಗೆ ರಿಯಾಯಿತಿ, ವ್ಯಾಪಾರ ತೆರಿಗೆ ವಿನಾಯಿತಿ, ಆಕ್ಟ್ರಾಯ್ ತೆರಿಗೆ ವಿನಾಯಿತಿ ಮತ್ತು ಉತ್ಪನ್ನಗಳನ್ನು ಸರ್ಕಾರವೇ ಖರೀದಿ ಮಾಡುವುದು. ಸಹಜವಾಗಿಯೇ ಈ ಯೋಜನೆ ಕೈಗಾರಿಕೋದ್ಯಮಿಗಳಿಗೆ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಕಷ್ಟು ಪ್ರೋತ್ಸಾಹ ನೀಡಿತ್ತು.

ನಾಲ್ಕನೆಯ ಯೋಜನೆಯ ಪ್ರಾರಂಭದ ವರ್ಷ, ಅಂದರೆ 1969ರಲ್ಲಿ ಮೈಸೂರು ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಒಂದು ಮುಖ್ಯವಾದ ಸಮೀಕ್ಷೆಯನ್ನು ಪ್ರಕಟಿಸಿತು. ಕೈಗಾರಿಕೆಗೆ ಸಂಬಂಧಿಸಿದಂತೆ ಈ ಸಮೀಕ್ಷೆ ಅನೇಕ ವಿಷಯಗಳನ್ನು ಬೆಳಕಿಗೆ ತಂದಿತು. ಈ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಒಟ್ಟು 9657 ಕೈಗಾರಿಕಾ ಘಟಕಗಳಿದ್ದುವು. ಹಿಂದುಸ್ಥಾನ್ ಏರೋನಾಟಿಕ್ಸ್ ಮತ್ತು ರಕ್ಷಣಾ ಕೈಗಾರಿಕೆಗಳನ್ನು ಬಿಟ್ಟು. ಇವುಗಳಲ್ಲಿ ಹೂಡಿದ್ದ ಬಂಡವಾಳ ರೂ.318 ಕೋಟಿ ಉದ್ಯೋಗಸ್ಥರ ಸಂಖ್ಯೆ 2.8 ಲಕ್ಷ. ಕೇವಲ ಬೆಂಗಳೂರು ನಗರದಲ್ಲೇ ರಾಜ್ಯದ ಸೇ.40ರಷ್ಟು ಕೈಗಾರಿಕೆಗಳು ಕೇಂದ್ರೀಕೃತವಾಗಿದ್ದು, ಒಟ್ಟು ಬಂಡವಾಳ ಹೂಡಿಕೆಯಲ್ಲಿ ಸೇ.66.6ರಷ್ಟು ಈ ಕೈಗಾರಿಕೆಗಳಲ್ಲಿ ವಿನಿಯೋಜಿತವಾಗಿತ್ತು. ಈ ಕೈಗಾರಿಕೆಗಳಲ್ಲಿ 167 ಮಾತ್ರ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಗುಂಪಿಗೆ ಸೇರಿದ್ದು, ಉಳಿದವು ಸಣ್ಣ ಪ್ರಮಾಣದ ಕೈಗಾರಿಕೆಗಳ ಗುಂಪಿಗೆ ಸೇರಿದವಾಗಿದ್ದವು.

ನಾಲ್ಕನೆಯ ಯೋಜನೆಯಲ್ಲಿ ಕೈಗಾರಿಕೆಗಳ ಮೇಲೆ ರೂ.982.79 ಲಕ್ಷ ವೆಚ್ಚವಾಗಿರುವ ದಾಖಲೆಯಿದೆ. ಇದರಲ್ಲಿ ರೂ.148.53 ಲಕ್ಷಗಳನ್ನು ಸರ್ಕಾರದ ಕೈಗಾರಿಕೆಗಳ ಮೇಲೂ ರೂ.834.26 ಲಕ್ಷಗಳನ್ನು ರಾಜ್ಯದ ಕೈಗಾರಿಕಾ ಬಂಡವಾಳ ವಿನಿಯೋಜನೆ ಹಾಗೂ ಅಭಿವೃದ್ಧಿ ಮಂಡಳಿಯ ಪಾಲುದಾರಿಕೆಗೂ ವೆಚ್ಚ ಮಾಡಲು ವಿನಿಯೋಜಿಸಲಾಗಿತ್ತು. ನಾಲ್ಕನೆಯ ಯೋಜನೆಯ ಕೈಗಾರಿಕಾ ನೀತಿಯ ಲಕ್ಷಣವೆಂದರೆ ಹೊಸ ಘಟಕಗಳನ್ನು ಆರಂಭಿಸುವ ಬದಲು ಇರುವ ಕೈಗಾರಿಕಾ ಯೋಜನೆಗಳ ವಿಸ್ತರಣೆ ಹಾಗೂ ಆಧುನೀಕರಣಕ್ಕೆ ಕ್ರಮಕೈಗೊಳ್ಳುವುದು. ಇದರ ಜೊತೆಗೆ, ರಾಜ್ಯದ ಕೈಗಾರಿಕಾ ಬಂಡವಾಳ ವಿನಿಯೋಜನೆ ಮತ್ತು ಅಭಿವೃದ್ಧಿ ಮಂಡಳಿ ಹಾಗೂ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗಳ ಮೂಲಕ ಹೊಸ ಉದ್ಯಮಗಳಿಗೆ ನಾನಾ ಸೌಲಭ್ಯಗಳು ಹಾಗೂ ರಿಯಾಯಿತಿಯನ್ನು ದೊರಕಿಸಿಕೊಡುವುದು. ಮೊದಲ ಮೂರು ಯೋಜನೆಗಳಂತೆಯೇ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಕಾರ್ಯವನ್ನು ನಾಲ್ಕನೆಯ ಯೋಜನೆಯಲ್ಲೂ ಮನಗಾಣಲಾಯಿತು. ಕೈಗಾರಿಕೆಗಳ ಪ್ರಗತಿಯ ದೃಷ್ಟಿಯಿಂದ ತೀರಾ ಹಿಂದುಳಿದಿರುವ ಜಿಲ್ಲೆಗಳನ್ನು ಆಯ್ದು ಅವುಗಳಲ್ಲಿ ಕೈಗಾರಿಕೆಗಳು ಬೆಳೆಯುವಂತೆ ನೋಡಿಕೊಳ್ಳುವ ನಿರ್ಧಾರ ನಾಲ್ಕನೆಯ ಯೋಜನೆಯ ಮತ್ತೊಂದು ಮಹತ್ವದ ಅಂಶವಾಗಿತ್ತು.

ಕರ್ನಾಟಕ ರಾಜ್ಯ ಭಾರತದ ಪಂಚವಾರ್ಷಿಕ ಯೋಜನೆಯ ಚೌಕಟ್ಟಿಗನುಗುಣವಾಗಿ 4 ಪಂಚವಾರ್ಷಿಕ ಯೋಜನೆಗಳಲ್ಲಿ ಪಡೆದಿರುವ ಪ್ರಗತಿಯನ್ನು ಸಮಗ್ರವಾಗಿ ಸಮೀಕ್ಷಿಸಿದಾಗ, ಅನೇಕ ಕೈಗಾರಿಕೆಗಳಲ್ಲಿ ಉತ್ಪಾದನೆಯ ದೃಷ್ಟಿಯಿಂದ ತೀವ್ರಪ್ರಗತಿ ನಡೆದಿರುವುದು ಗೋಚರವಾಗುತ್ತದೆ.

**ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆ :** 1974-79ರ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹ ಕೈಗಾರಿಕಾ ಕ್ಷೇತ್ರಕ್ಕೆ ಮಹತ್ವದ ಸ್ಥಾನವನ್ನು ನೀಡಲಾಯಿತು. ಈ ಯೋಜನೆಯಲ್ಲಿ ಕೈಗಾರಿಕೆಗಳ ಮೇಲೆ ರೂ.54 ಕೋಟಿಗಳನ್ನು ಗಣಿ ಉದ್ಯಮವನ್ನೂ ಒಳಗೊಂಡಂತೆ ವೆಚ್ಚಮಾಡುವ ನಿರೀಕ್ಷೆಯಿತ್ತು. ಈ ವೆಚ್ಚ ಒಟ್ಟು ಯೋಜನಾವೆಚ್ಚದ ಸೇ.4ರಷ್ಟಾಗುತ್ತದೆ. ಇದರಲ್ಲಿ ರೂ.30 ಕೋಟಿಗಳನ್ನು ದೊಡ್ಡ ಹಾಗೂ ಮಧ್ಯಮ ಗಾತ್ರದ ಕೈಗಾರಿಕೆಗಳ ಮೇಲೂ ರೂ.21.5 ಕೋಟಿಗಳನ್ನು ಸಣ್ಣ ಹಾಗೂ ಗ್ರಾಮೀಣ ಕೈಗಾರಿಕೆಗಳ ಮೇಲೂ ವೆಚ್ಚಮಾಡಲು ಉದ್ದೇಶಿಸಲಾಯಿತು.

ಕೈಗಾರಿಕಾ ನೀತಿಗೆ ಸಂಬಂಧಿಸಿದಂತೆ 5ನೆಯ ಯೋಜನೆಯಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದು, ಪ್ರಸ್ತುತದಲ್ಲಿರುವ ಕೈಗಾರಿಕೆಗಳ ಉತ್ಪಾದನ ಸಾಮರ್ಥ್ಯ ಸಂಪೂರ್ಣವಾಗಿ ಬಳಕೆಯಾಗುವಂತೆ ನೋಡಿಕೊಳ್ಳುವುದು ಮುಖ್ಯ ಉದ್ದೇಶಗಳಾಗಿದ್ದುವು, ಕರ್ನಾಟಕದಲ್ಲಿ ಲಭ್ಯವಿರುವ ಕಬ್ಬಿಣದ ಅದುರನ್ನು ಬಳಸಿಕೊಳ್ಳಲು ಈ ರಾಜ್ಯದಲ್ಲಿ ಹೊಸ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸುವ ಅಗತ್ಯವನ್ನು ಮನಗಾಣಲಾಯಿತು. ವಾಸ್ತವವಾಗಿ ಭಾರತ ಸರ್ಕಾರ ಹೊಸಪೇಟೆಯ ಬಳಿ ಹೊಸ ಉಕ್ಕು ಕೈಗಾರಿಕೆಯ ನಿರ್ಮಾಣವನ್ನು ಕೈಗೊಂಡಿತ್ತು. ಈ ಕಾರ್ಖಾನೆಗೆ ರೂ.800 ಕೋಟಿ ವೆಚ್ಚವನ್ನು ನಿರೀಕ್ಷಿಸಲಾಗಿತ್ತು. ಇದು ಸಂಪೂರ್ಣಗೊಂಡಾಗ ಸುಮಾರು 6000 ಜನರಿಗೆ ಉದ್ಯೋಗವನ್ನು ದೊರಕಿಸಿಕೊಡುವ ನಿರೀಕ್ಷೆ ಇತ್ತು. ಕುದುರೆಮುಖದಲ್ಲಿ ಲಭ್ಯವಿರುವ ಕಬ್ಬಿಣದ ಅದುರನ್ನು ಗಮನದಲ್ಲಿಟ್ಟುಕೊಂಡರೆ ರಾಜ್ಯದಲ್ಲಿ ಇನ್ನೂ ಒಂದು ಉಕ್ಕು ಕಾರ್ಖಾನೆಯ ಸ್ಥಾಪನೆಗೆ ಅವಕಾಶವಿದೆ ಎಂಬುದನ್ನು 5ನೆಯ ಯೋಜನೆಯಲ್ಲಿ ಮನಗಾಣಲಾಗಿತ್ತು. ಕೃಷಿಗೆ ಪೂರಕವಾಗುವ ಕೈಗಾರಿಕೆಗಳಿಗೆ ಯೋಜನೆಯಲ್ಲಿ ಮಹತ್ವದ ಸ್ಥಾನವನ್ನು ನೀಡಲಾಯಿತು. ರಾಜ್ಯದಲ್ಲಿ ಇನ್ನೂ 25 ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಿ ಸಕ್ಕರೆಯ ಉತ್ಪಾದನೆಯನ್ನು ವೃದ್ಧಿಸಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಯೋಜಿಸಲಾಗಿತ್ತು. ಹೆಚ್ಚಾಗಿ ಮಧ್ಯಮ ಗಾತ್ರದ ಕೈಗಾರಿಕೆಗಳು ಸಹಕಾರ ಕ್ಷೇತ್ರದಲ್ಲಿ ಅಥವಾ ಸಂಯುಕ್ತ ಮಾಲೀಕತ್ವದ ರೀತಿಯಲ್ಲಿ ಸ್ಥಾಪನೆಯಾಗಬೇಕೆಂಬುದು ಸರ್ಕಾರದ ಉದ್ದೇಶವಾಗಿತ್ತು. ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಉತ್ಪಾದನೆ 1,16,000 ಟನ್‌ಗಳಿಂದ ಯೋಜನೆಯ ಅಂತ್ಯದ ವೇಳೆಗೆ 2,84,000 ಟನ್‌ಗಳಿಗೆ ಏರಬೇಕೆಂದು ಆಶಿಸಲಾಗಿತ್ತು.

ಐದನೆಯ ಯೋಜನೆಯಲ್ಲಿ ಕೈಗಾರಿಕಾ ಎಸ್ಟೇಟ್‌ಗಳಿಗೆ ಸಂಬಂಧಿಸಿದಂತೆ ಒಂದು ಬೃಹತ್ ಕಾರ್ಯಕ್ರಮವನ್ನು ರೂಪಿಸಲಾಯಿತು.

ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಅಗತ್ಯವಿರುವ ಕಡೆಗಳಲ್ಲಿ ವರ್ಷವೊಂದಕ್ಕೆ 24ರಿಂದ 32 ಶೆಡ್ಡುಗಳ ನಿರ್ಮಾಣ ಮಾಡಬೇಕೆಂದು ತೀರ್ಮಾನಿಸಲಾಯಿತು. ಈ ಶೆಡ್ಡುಗಳಲ್ಲಿ ಕೈಗಾರಿಕಾ ಯಂತ್ರೋಪಕರಣಗಳನ್ನು ಕಂತುಪಾವತಿಯ ಸೌಲಭ್ಯದ ಮೇಲೆ ಒದಗಿಸಲು ನಿರ್ಧರಿಸಲಾಯಿತು.

ಒಟ್ಟಿನಲ್ಲಿ 5ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾ ಪ್ರಗತಿಯ ದೃಷ್ಟಿಯಿಂದ ಸರ್ಕಾರ ಬಹಳ ಆಶಾದಾಯಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿತು.

**ಕೈಗಾರಿಕಾ ನೀತಿ ಮತ್ತು ಪ್ರೋತ್ಸಾಹ :** ಕರ್ನಾಟಕ ರಾಜ್ಯದ ಕೈಗಾರಿಕಾ ನೀತಿ 3 ಮುಖ್ಯ ಉದ್ದೇಶಗಳನ್ನು ಹೊಂದಿದೆ. ಅವುಗಳೆಂದರೆ ರಾಜ್ಯದಲ್ಲಿ ಕೈಗಾರಿಕೆಗೆ ಬಂಡವಾಳ ವಿನಿಯೋಜನೆಯನ್ನು ಉತ್ತೇಜಿಸುವುದು. ಅದರ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ರಾಜ್ಯದ ಬೊಕ್ಕಸಕ್ಕೆ ಕೈಗಾರಿಕಾ ಕ್ಷೇತ್ರದಿಂದ ಆದಾಯ ಹೆಚ್ಚಾಗಿ ಬರುವಂತೆ ಮಾಡುವುದು. ಈ ಉದ್ದೇಶಗಳನ್ನು ಪೂರೈಕೆ ಮಾಡುವಾಗ ಅನೇಕ ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. ದೊಡ್ಡ ಗಾತ್ರದ ಕೈಗಾರಿಕೆಗಳನ್ನು ಸರ್ಕಾರದ ವತಿಯಿಂದಲೇ ಪ್ರಾರಂಭಿಸುವುದು ಇತ್ತೀಚಿನ ವರೆಗಿನ ಗುರಿಯಾಗಿತ್ತು. ಸರ್ಕಾರದ ಬಂಡವಾಳವನ್ನು ನಿರೀಕ್ಷಿಸುವವರಿಗೆ ಅದನ್ನು ದೊರಕಿಸಿಕೊಡುವುದು ಮತ್ತು ಕೈಗಾರಿಕೆಯ ದೃಷ್ಟಿಯಿಂದ ಹಿಂದುಳಿದಿರುವ ಪ್ರದೇಶಗಳನ್ನು ಆಯ್ದು ಅವುಗಳಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗುವಂತೆ ಮಾಡುವುದು ಇವೂ ಮುಖ್ಯವಾದವು.

ರಾಜ್ಯದಲ್ಲಿ ಕೈಗಾರಿಕಾ ಬಂಡವಾಳಕ್ಕೆ ಕೊರತೆಯಿರುವುದು, ಉದ್ಯಮ ಸಾಹಸತೆ ಅಲ್ಪಪ್ರಮಾಣದಲ್ಲಿರುವುದು ತಿಳಿದ ವಿಷಯವಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ರಾಜ್ಯದ ಹೊರಭಾಗಗಳಿಂದ ಇವೆರಡನ್ನೂ ಸ್ವೀಕರಿಸಲು ಕೈಗಾರಿಕಾನೀತಿ ಅವಕಾಶ ಮಾಡಿಕೊಟ್ಟಿದೆ. ಪರರಾಜ್ಯಗಳಿಂದ ಮತ್ತು ಹೊರದೇಶಗಳಿಂದ ದೊರೆಯುವ ಬಂಡವಾಳ ಮತ್ತು ಉದ್ಯಮ ಸಾಹಸತೆಗಳನ್ನು ಬೆಸೆದು ರಾಜ್ಯದಲ್ಲಿ ಕೈಗಾರಿಕಾ ಕ್ರಾಂತಿಯುಂಟಾಗುವಂತೆ ಮಾಡುವ ಧ್ಯೇಯವನ್ನು ಕೈಗಾರಿಕಾನೀತಿ ಹೊಂದಿದೆ. ಈ ಕಾರ್ಯಕ್ರಮ ಯಶಸ್ವಿಯಾಗುವಂತೆ ಮಾಡಲು ಸರ್ಕಾರ ಅನೇಕ ಆಕರ್ಷಣೆಗಳನ್ನು ಉದ್ಯಮಸಾಹಸಿಗಳಿಗೆ ನೀಡಲು ಸಿದ್ಧವಾಗಿದೆ. ಹೀಗೆ ಕೈಗಾರಿಕೆಗಳು ಅಸ್ತಿತ್ವಕ್ಕೆ ಬರುವಾಗ ಆರ್ಥಿಕ ಕೇಂದ್ರೀಕರಣವನ್ನು ತಪ್ಪಿಸುವ ಮತ್ತು ಅವ್ಯವಸ್ಥಿತವಾಗಿ ಕೈಗಾರಿಕೆಗಳು ಬೆಳೆಯದ ಹಾಗೆ ನೋಡಿಕೊಳ್ಳುವ ಕಡೆ ತೀವ್ರ ಲಕ್ಷ್ಯವನ್ನು ನೀಡಲಾಗುತ್ತದೆ.

ಸಣ್ಣ ಕೈಗಾರಿಕೆಗಳಲ್ಲದೆ ಕೈಕಸಬು, ಕುಶಲವೃತ್ತಿಗಳನ್ನು ಪೋಷಿಸುವುದು ಕರ್ನಾಟಕ ರಾಜ್ಯದ ಕೈಗಾರಿಕಾನೀತಿಯ ಮುಖ್ಯ ಧ್ಯೇಯವಾಗಿದೆ. ಈ ದೃಷ್ಟಿಯಿಂದಲೇ ಕೈಕಸಬು, ಖಾದಿ ಉದ್ಯಮ, ಹುರಿಹಗ್ಗ, ಚರ್ಮ ಮುಂತಾದ ಕೈಗಾರಿಕೆಗಳನ್ನು ತೀವ್ರವಾಗಿ ಪೋಷಿಸಲಾಗುತ್ತದೆ. ಈ ಕಾರ್ಯವನ್ನು ಈ ಕೈಗಾರಿಕೆಗಳಿಗೆ ಸಂಬಂಧಿಸಿದ ಹಾಗೆ ಸಲಹಾಬೋರ್ಡ್‌ಗಳ ರಚನೆ ಹಾಗೂ ಅಭಿವೃದ್ಧಿ ಕಾರ್ಪೋರೇಷನ್‌ಗಳ ರಚನೆಯ ಮೂಲಕ ಕೈಗೊಳ್ಳಲಾಗುತ್ತಿದೆ.

ಕೇವಲ ಕೆಲವು ಜಿಲ್ಲೆಗಳಲ್ಲಿ ಮಾತ್ರ ಕೈಗಾರಿಕೆಗಳು ಕೇಂದ್ರೀಕೃತವಾಗಿರುವ ಅಂಶವನ್ನು ಕೈಗಾರಿಕಾನೀತಿ ಮನಗಂಡಿದೆ. ಆದ್ದರಿಂದ ಮುಂದೆ ಕೈಗಾರಿಕೆಗಳು ಅಸ್ತಿತ್ವಕ್ಕೆ ಬರುವಾಗ ಕೈಗಾರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಇವು ಬೆಳೆಯುವಂತೆ ನೋಡಿಕೊಳ್ಳಲಾಗುತ್ತದೆ. ಇದಕ್ಕೆ ಅಗತ್ಯವಾದ ಅನುಕೂಲಗಳನ್ನು ಒದಗಿಸಿಕೊಡುವ ಎಲ್ಲ ಜವಾಬ್ದಾರಿಯನ್ನೂ ಸರ್ಕಾರ ವಹಿಸುತ್ತದೆ.

1966ರಲ್ಲಿ ಮೈಸೂರು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಬೋರ್ಡನ್ನು ರಚಿಸಲಾಯಿತು. ಕೈಗಾರಿಕೆಗಳಿಗೆ ಪ್ರಗತಿಯನ್ನು ಸಾಧಿಸಲು ಅವಕಾಶವಿರುವ ಪ್ರದೇಶಗಳಲ್ಲಿ ಅವು ಅಸ್ತಿತ್ವಕ್ಕೆ ಬರುವಂತೆ ನೆರವು ನೀಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಸರ್ಕಾರ ಕೈಗಾರಿಕಾಭಿವೃದ್ಧಿ ಪ್ರದೇಶಗಳನ್ನು ಘೋಷಿಸುತ್ತದೆ. ಈ ಪ್ರದೇಶಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಅನಂತರ ಅದನ್ನು ಅಭಿವೃದ್ಧಿ ಬೋರ್ಡಿಗೆ ವಹಿಸುತ್ತದೆ. ರಸ್ತೆ, ನೀರು, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಆ ಪ್ರದೇಶಗಳಿಗೆ ದೊರಕಿಸಿಕೊಟ್ಟು ಕೈಗಾರಿಕೆಗಳು ಆ ಪ್ರದೇಶಕ್ಕೆ ಪ್ರವೇಶಿಸುವಂತೆ ಈ ಬೋರ್ಡ್ ಆಕರ್ಷಿಸುತ್ತದೆ.

ಹೊಸ ಕೈಗಾರಿಕೆಗಳಿಗೆ ಅನೇಕ ವಿಧದಲ್ಲಿ ನೆರವು ದೊರಕಿಸಿಕೊಡುತ್ತಿರುವ ಮತ್ತೊಂದು ಸಂಸ್ಥೆಯೆಂದರೆ ಕರ್ನಾಟಕದ ರಾಜ್ಯ ಕೈಗಾರಿಕಾ ವಿನಿಯೋಗ ಮತ್ತು ಅಭಿವೃದ್ಧಿ ಕಾರ್ಪೋರೇಷನ್. ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ ನೆರವಾಗುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಅನೇಕ ಹೊಸ ಕೈಗಾರಿಕೆಗಳನ್ನು ಅಸ್ತಿತ್ವಕ್ಕೆ ತರುವುದರಲ್ಲಿ ಕಾರ್ಪೋರೇಷನ್ ಸಕ್ರಿಯ ಪಾತ್ರವಹಿಸುತ್ತದೆ. ಕಾರ್ಪೋರೇಷನ್ ನಡೆಸುತ್ತಿರುವ ಮತ್ತೊಂದು ಉಪಯುಕ್ತ ಕಾರ್ಯವೆಂದರೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆರ್ಥಿಕ ಸಮೀಕ್ಷೆಗಳನ್ನು ಕೈಗೊಂಡಿರುವುದು. ಕರ್ನಾಟಕ ರಾಜ್ಯ ಹಣಕಾಸು ಮಂಡಳಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳನ್ನೊಳಗೊಂಡ ಈ ಕಾರ್ಪೋರೇಷನ್ ರಾಜ್ಯದ ಆಯ್ದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಅಸ್ತಿತ್ವಕ್ಕೆ ತರುವ ಯೋಜನೆಯನ್ನು ಹಾಕಿಕೊಂಡಿದೆ.

ಸಣ್ಣ ಹಾಗೂ ಮಧ್ಯಮಗಾತ್ರದ ಕೈಗಾರಿಕೆಗಳಿಗೆನೆರವನ್ನೊದಗಿ ಸುತ್ತಿರುವ ಅತಿ ಮುಖ್ಯ ಸಂಸ್ಥೆಯೆಂದರೆ ಕರ್ನಾಟಕ ರಾಜ್ಯ ಹಣಕಾಸು ಮಂಡಳಿ. ಇದು ದಕ್ಷವಾಗಿ ಕೆಲಸಮಾಡುತ್ತಿರುವ ಹಣಕಾಸು ಸಂಸ್ಥೆಗಳಲ್ಲೊಂದು. ವಿಶ್ವಬ್ಯಾಂಕಿನಿಂದ ವಿದೇಶೀ ವಿನಿಮಯದ ನೆರವಿಗಾಗಿ ಅನುಮತಿಯನ್ನು ಮಂಡಳಿ ಪಡೆದುಕೊಂಡಿದೆ. ವಿದೇಶೀ ವಿನಿಮಯದ ವಿತರಣೆಯ ಅವಕಾಶವನ್ನು ಮಂಡಳಿ ಪಡೆದುಕೊಂಡಿದೆ. ರಾಷ್ಟ್ರದ ಇತರ ಹಣಕಾಸು ಮಂಡಳಿಗಳೊಡನೆ ಹೋಲಿಸಿದಂತೆ ರಾಷ್ಟ್ರದಲ್ಲೇ ಮೊದಲ ಮೂರು ಮಂಡಳಿಗಳಲ್ಲಿ ಒಂದು ಸ್ಥಾನವನ್ನು ರಾಜ್ಯ ಮಂಡಳಿ ಪಡೆದುಕೊಂಡಿತು.

ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕು ಸಹಕಾರ ಕ್ಷೇತ್ರದ ಕೈಗಾರಿಕೆಗಳಿಗೆ ಹಣವನ್ನೊದಗಿಸುತ್ತಿರುವ ಮುಖ್ಯ ಮೂಲ. ಇದು ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸಲು ವ್ಯಕ್ತಿಗಳಿಗೆ ಸಹ ಹಣವನ್ನೊದಗಿಸುತ್ತದೆ. ಕೆಲವು ಸೂಕ್ಷ್ಮ ಉಪಕರಣಗಳ ಕೈಗಾರಿಕೆಗಳವರೆಗೆ ಅನೇಕ ವಿಧದ ಕೈಗಾರಿಕೆಗಳಿಗೆ ಈ ಸಂಸ್ಥೆ ಹಣವನ್ನೊದಗಿಸಿದೆ. ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೇರ ನೆರವನ್ನು ಪಡೆಯುವಂತೆ ಮಾಡಲು ಈ ಸಂಸ್ಥೆಗೆ ಶಿಖರಪ್ರಾಯ ಸ್ಥಾನ ಕೊಡಲಾಗಿದೆ.

1960ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕಾರ್ಪೋರೇಷನ್ ಮುಖ್ಯವಾಗಿ ರಾಜ್ಯದ ಸಣ್ಣ ಕೈಗಾರಿಕೆಗಳಿಗೆ ಅನೇಕ ರೀತಿಯ ಸೇವಾಕಾರ್ಯಗಳನ್ನು ಮಾಡುವುದರಲ್ಲಿ ಉದ್ಯುಕ್ತವಾಗಿತ್ತು. ಸರ್ಕಾರದ ಪರವಾಗಿ ಕೈಗಾರಿಕಾ ಎಸ್ಟೇಟ್‌ಗಳ ನಿರ್ಮಾಣ, ಉಕ್ಕು ಮತ್ತು ಕಬ್ಬಿಣ ಮುಂತಾದ ಪಡಿತರ ವಸ್ತುಗಳ ಮಾರಾಟ ಇತ್ಯಾದಿಗಳು ಇದರ ಮುಖ್ಯ ಕರ್ತವ್ಯಗಳಾಗಿದ್ದುವು. 1972-73ರ ಅನಂತರ ಈ ಸಂಸ್ಥೆ ಕಾರ್ಯದ ದೃಷ್ಟಿಯಿಂದ ಬಹುಮಟ್ಟಿಗೆ ಪುನರ್‌ರೂಪಿತವಾಯಿತು. ಕೈಗಾರಿಕಾ ಎಸ್ಟೇಟ್‌ಗಳ ನಿರ್ಮಾಣ ಮತ್ತು ಮೇಲ್ವಿಚಾರಣೆ, ಕಚ್ಚಾಪದಾರ್ಥಗಳ ಶೇಖರಣೆ ಮತ್ತು ವಿತರಣೆ, ಸಣ್ಣ ಪ್ರಮಾಣದ ಉದ್ಯಮಗಳಿಗೆ ನೆರವು, ರಫ್ತು ಕೈಗಾರಿಕೆಗಳಿಗೆ ಉತ್ತೇಜನ ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳತೊಡಗಿತು.

ರಾಜ್ಯ ತನ್ನ ಮಿಶ್ರ ಆರ್ಥಿಕ ವ್ಯವಸ್ಥೆಯ ಧೋರಣೆಗನುಗುಣವಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಬಂದಿದೆ. ವಾಸ್ತವವಾಗಿ ವರ್ಷದಿಂದ ವರ್ಷಕ್ಕೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಮೇಲೆ ಹೂಡಿರುವ ಬಂಡವಾಳ ಮತ್ತು ಅದರ ವ್ಯಾಪ್ತಿ ಹೆಚ್ಚಾಗುತ್ತಾ ಬಂದಿದೆ. ಇಲ್ಲಿ ನಾವು ರಾಜ್ಯದ ಸಾರ್ವಜನಿಕ ಕ್ಷೇತ್ರದ ಪ್ರಮುಖ ಕೈಗಾರಿಕೆಗಳ ಬೆಳವಣಿಗೆಯ ಪ್ರವೃತ್ತಿಯನ್ನು ಸ್ಥೂಲವಾಗಿ ವಿವೇಚಿಸಬಹುದು.

ರಾಜ್ಯದ ಸಾರ್ವಜನಿಕ ಕೈಗಾರಿಕೆಗಳಲ್ಲೆಲ್ಲಾ ಮೈಸೂರು ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಅತ್ಯಂತ ದೊಡ್ಡದು. ಎನ್.ಜಿ.ಇ.ಎಫ್ ಕೈಗಾರಿಕೆ ಸಾರ್ವಜನಿಕ ಕ್ಷೇತ್ರದಲ್ಲಿ ಮತ್ತೊಂದು ಮಹತ್ವವಾದ ಕೈಗಾರಿಕೆಯಾಗಿತ್ತು. 1973-74ರಲ್ಲಿ ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ತಾಮ್ರದ ಉತ್ಪಾದನೆಯನ್ನು

ನಡೆಸಿದ ಯಶಸ್ಸು ಚಿತ್ರದುರ್ಗ ತಾಮ್ರ ಕಂಪನಿಯದು. ಹಟ್ಟಿ ಚಿನ್ನದ ಗಣಿಯೊಡನೆ ಈ ಕೈಗಾರಿಕೆ ಹಾಸನ ಮತ್ತು ಗುಲ್ಬರ್ಗ ಜಿಲ್ಲೆಗಳ ತಾಮ್ರ ನಿಕ್ಷೇಪಗಳ ಅಭಿವೃದ್ಧಿಯ ಜವಾಬ್ದಾರಿಯನ್ನು ಹೊತ್ತುಕೊಂಡಿತ್ತು. ಸಾರ್ವಜನಿಕ ಕ್ಷೇತ್ರದ ಮೈಸೂರು ಸಕ್ಕರೆ ಕಾರ್ಖಾನೆ ಸಹ ಉತ್ಪಾದನೆಯ ದೃಷ್ಟಿಯಿಂದ ಮುಖ್ಯವಾದುದು.

ಸಾರ್ವಜನಿಕ ಕೈಗಾರಿಕಾ ಕ್ಷೇತ್ರದಲ್ಲಿನ ದುರ್ಬಲ ಕೈಗಾರಿಕೆಗಳಲ್ಲಿ ಒಂದೆಂದರೆ ರೇಡಿಯೋ ಅಂಡ್ ಎಲೆಕ್ಟ್ರಿಕಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ರೇಡಿಯೋ ರಿಸೀವರ್‌ಗಳ ಉತ್ಪಾದನೆ ಇದರ ಮುಖ್ಯಕಾರ್ಯ.

ಸರ್ಕಾರದ ಮೇಲ್ವಿಚಾರಣೆಯ ಇನ್ನೊಂದು ಉದ್ದಿಮೆ ಮೈಸೂರ್ ಪೇಪರ್ ಮಿಲ್ಸ್ ಲಿಮಿಟೆಡ್. ಮೈಸೂರು ಮತ್ತು ಶಿವಮೊಗ್ಗದ ಗಂಧದೆಣ್ಣೆ ಕಾರ್ಖಾನೆಗಳೂ ಈಚೆಗೆ ಸಮಸ್ಯೆಗಳನ್ನೆದುರಿಸಬೇಕಾಗಿ ಬಂತು. ಕಚ್ಚಾಸಾಮಗ್ರಿಯ ಅಭಾವದಿಂದ ಅವು ದುಸ್ಥಿತಿಗೆ ಒಳಗಾದವು.

ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಅತಿಮುಖ್ಯವಾದ ಪಾತ್ರವನ್ನು ವಹಿಸುತ್ತಿರುವ ಮತ್ತೊಂದು ಸಂಸ್ಥೆಯೆಂದರೆ ಮೈಸೂರು ಮಿನರಲ್ಸ್ ಲಿಮಿಟೆಡ್. ಇದು 1966ರಲ್ಲಿ ಅಸ್ತಿತ್ವಕ್ಕೆ ಬಂತು. ರಾಜ್ಯದ ಗಣಿಕೈಗಾರಿಕೆಯ ಉತ್ಪಾದನೆಯ ಸರ್ವ ಜವಾಬ್ದಾರಿಯನ್ನೂ ಈ ಸಂಸ್ಥೆ ಹೊತ್ತುಕೊಂಡಿತು.

ಸಾರ್ವಜನಿಕ ಕ್ಷೇತ್ರದಲ್ಲಿ ಹೆಸರಿಸಬಹುದಾದ ಇನ್ನೂ ಕೆಲವು ಕೈಗಾರಿಕೆಗಳನ್ನು ಕೈಗಾರಿಕೆಗಳೆಂದರೆ ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್, ಮೈಸೂರ್ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಮತ್ತು ಗೌರ್ನಮೆಂಟ್ ಸ್ಯಾಂಡಲ್ ವುಡ್ ಫ್ಯಾಕ್ಟರಿ.

ಭಾರತದಲ್ಲಿ 1990ರ ದಶಕದ ಆದಿಯಲ್ಲಿ ಆರ್ಥಿಕ ಉದಾರೀಕರಣದ ಹಾದಿ ಅನುಸರಿಸತೊಡಗಿದ್ದರ ಅಂಗವಾಗಿ ಕರ್ನಾಟಕ ರಾಜ್ಯ ಈ ಮಾರ್ಗದಲ್ಲಿ ಕ್ರಮಿಸುತ್ತಿದೆ. ಹಿಂದಿನ ನಾಲ್ಕು ದಶಕಗಳಲ್ಲಿ ಸಾಧಿಸಲಾದ ಪ್ರಗತಿಯ ಎಳೆಗಳನ್ನು ಕೂಡಿಸಿಕೊಂಡು ಕೈಗಾರಿಕೀಕರಣದ ವೇಗವರ್ಧನೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ದೇಶದ ಐದು ಪ್ರಮುಖ ಕೈಗಾರಿಕಾ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಈಚಿನ ವರ್ಷಗಳಲ್ಲಿ ರಾಜ್ಯ ದೃಢವಾಗಿ ಮುನ್ನಡೆದಿದೆ. ವಿದ್ಯುನ್ಮಾನ, ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ, ಸಿವಿಲ್ ಎಂಜಿನಿಯರಿಂಗ್, ಮೋಟಾರ್ ವಾಹನ, ಸಿದ್ಧಪಡಿಸಿದ ಉಡುಪು, ಜೈವಿಕ ತಂತ್ರಜ್ಞಾನ, ಆಹಾರ ಸಂಸ್ಕರಣ ಈ ಕ್ಷೇತ್ರಗಳಲ್ಲಿ ಗಮನಾರ್ಹ ಬೆಳವಣಿಗೆಗಳಾಗಿವೆ. ವಿದೇಶಿ ನೇರ ಬಂಡವಾಳವೂ ರಾಜ್ಯಕ್ಕೆ ಹರಿದುಬರುತ್ತಿದೆ.

ರಾಜ್ಯದಲ್ಲಿ ದೃಢವಾದ ಹಾಗೂ ಚೈತನ್ಯಪೂರ್ಣವಾದ ಕೈಗಾರಿಕಾ ಅಸ್ತಿಭಾರ ನಿರ್ಮಾಣವಾಗಿದೆ. ಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯ ಇತರ ಹಲವು ರಾಜ್ಯಗಳಿಗಿಂತ ಮುಂದಾಗಿದೆ. ಮಾಹಿತಿ ತಂತ್ರಜ್ಞಾನ ಮತ್ತು ಇತರ ಸಹಕೈಗಾರಿಕೆಗಳ ಕ್ಷೇತ್ರದಲ್ಲಿ ರಾಜ್ಯ ವಿಶ್ವದ ಮಾರುಕಟ್ಟೆಯಲ್ಲಿ ಒಂದು ಭದ್ರವಾದ ಸ್ಥಾನ ದೊರಕಿಸಿಕೊಂಡಿದೆ.

1993ರಲ್ಲಿ ರಾಜ್ಯ ಸರ್ಕಾರ ಹೊಸ ಕೈಗಾರಿಕಾ ನೀತಿಯನ್ನು ಘೋಷಿಸಿಕೊಂಡಿತು. ಆರ್ಥಿಕ ಉದಾರೀಕರಣದ ಅಡಿಯಲ್ಲಿ ಕೈಗಾರಿಕೆಗಳಿಗೆ ಹಲವಾರು ಉತ್ತೇಜನಗಳನ್ನೂ ರಿಯಾಯಿತಿಗಳನ್ನೂ ನೀಡಲಾಯಿತು. ಕೈಗಾರಿಕಾ ಉದ್ದೇಶಗಳಿಗಾಗಿ ಕೃಷಿ ಜಮೀನನ್ನು ಕೊಳ್ಳಲು ಅವಕಾಶ ದೊರಕಿಸಿಕೊಡಲಾಯಿತು. 1996ರಲ್ಲಿ ಜಾರಿಗೆ ಬಂದ ಕೈಗಾರಿಕಾ ನೀತಿಯ ಒಂದು ಮುಖ್ಯ ಅಂಶವೆಂದರೆ ಮೂಲ ಸೌಲಭ್ಯಗಳಿಗೆ (ಅಧೋರಚನೆ) ನೀಡಿದ ಪ್ರಾಶಸ್ತ್ಯ, ಕೈಗಾರಿಕೆಗಳು ಮತ್ತು ರಾಜ್ಯ ಅಧಿಕರಣಗಳ ಸಹಯೋಗದಲ್ಲಿ ಅಭಿವೃದ್ಧಿ ಸಾಧಿಸುವ ನೀತಿ ಜಾರಿಗೆ ಬಂತು.

ವಿದ್ಯುನ್ಮಾನ, ದೂರಸಂಪರ್ಕ, ತಂತ್ರಾಂಶ ಮತ್ತು ಇಂಥ ಇತರ ಉದ್ಯಮಗಳ ವಲಯಗಳಿಗೆ ಸಂಬಂಧಿಸಿದಂತೆ ಕ್ರೋಢೀಕೃತಗೊಳಿಸುವ ಉದ್ದೇಶದಿಂದ 1997ರಲ್ಲಿ ಘೋಷಿಸಲಾದ ಮಾಹಿತಿ ತಂತ್ರಜ್ಞಾನ ನೀತಿ ಒಂದು ಪ್ರಮುಖ ಹೆಜ್ಜೆ. ಮರುವರ್ಷ ರಾಜ್ಯದಲ್ಲಿ ಒಂದು ಪ್ರತ್ಯೇಕ ಮಾಹಿತಿ ತಂತ್ರಜ್ಞಾನ ಇಲಾಖೆಯನ್ನು ಸ್ಥಾಪಿಸಲಾಯಿತು. ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆ ರೂಪಿಸಲು ಒಂದು ವಿಶೇಷ ಕಾರ್ಯಪಡೆ ಅಸ್ತಿತ್ವಕ್ಕೆ ಬಂತು. ಸಹಸ್ರಮಾನದ ಮಾಹಿತಿ ತಂತ್ರಜ್ಞಾನ ನೀತಿಯನ್ನು ಕುರಿತಂತೆ ಮಾಹಿತಿ ಎಂಬ ಹೆಸರಿನಲ್ಲಿ ನೀತಿ ಸಂಹಿತೆಯನ್ನು ರೂಪಿಸಲಾಯಿತು. ಅಂತೆಯೇ ಸಹಸ್ರಮಾನ ಜೈವಿಕ ತಂತ್ರಜ್ಞಾನ ನೀತಿ ಸಂಹಿತೆಯೂ ಜಾರಿಗೆ ಬಂದಿದೆ. ಈ ನಿಟ್ಟಿನಲ್ಲಿ ಪ್ರಗತಿ ಸಾಧಿಸಲು ಹಾಗೂ ಕ್ರಾಂತಿಯನ್ನು ಇನ್ನೊಂದು ಮಜಲಿಗೆ ಮುಂದೂಡಲು ಅಗತ್ಯವಾದ ತರಬೇತಿ ಭೂಮಿಕೆ ಸಿದ್ಧವಾಗಿದೆ.

ಕೈಗಾರಿಕಾ ಚಟುವಟಿಕೆಗಳನ್ನು ವಿಕೇಂದ್ರೀಕರಿಸುವುದು ಒಂದು ಮುಖ್ಯ ಕ್ರಮವೆನಿಸಿದೆ. ತರಬೇತಿ ಮತ್ತು ವಿಸ್ತರಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ತಾಲ್ಲೂಕು ಕೈಗಾರಿಕಾ ಕೇಂದ್ರಗಳು, ಸಣ್ಣ ಉದ್ಯಮಗಳ ಸಹಾಯ ಕೇಂದ್ರಗಳು, ಶಿಕ್ಷಣ ಸಂಸ್ಥೆಗಳಲ್ಲಿ ಗಣಕೀಕರಣ ವ್ಯವಸ್ಥೆ, ಕರಕುಶಲ ಕೈಗಾರಿಕೆಗಳ ಪ್ರವರ್ತನೆ ಹಾಗೂ ಸಂರಕ್ಷಣೆ, ಪುಷ್ಪೋದ್ಯಮ ವನಗಳು, ಪ್ರಾದೇಶಿಕ ವಿಮರ್ಶೆ ಸಂಪರ್ಕ ಸ್ಥಾಪನೆ, ಚರ್ಮೋದ್ಯಮ ವಿನ್ಯಾಸ ಮತ್ತು ಅಭಿವೃದ್ಧಿ ಕೇಂದ್ರ, ಪಿಂಗಾಣಿ ಸಂಸ್ಥೆ, ರಫ್ತು ಮಾಹಿತಿ ವಿನಿಮಯ ಕೇಂದ್ರ ಇವನ್ನು ಸ್ಥಾಪಿಸಲಾಗಿದೆ. ರಾಜ್ಯ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯದ ಜೊತೆಗೆ ಹಲವಾರು ವೃತ್ತಿಪರ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಕರ್ನಾಟಕ ಉದ್ಯೋಗ ನಿಗಮ ಮುಂತಾದ ಹಲವು ಸಂಸ್ಥೆಗಳು ವಿವಿಧ ನಿಟ್ಟುಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ತಂತ್ರಜ್ಞಾನ, ನವೋನ್ಮೇಷ, ನೂತನ ಪದಾರ್ಥೋತ್ಪಾದನೆ, ಹೊಸ ಹೊಸ ಪ್ರಕ್ರಿಯೆಗಳ ಅನುಷ್ಠಾನ, ಆಧುನಿಕ ವ್ಯವಹಾರ ವಿಧಾನಗಳು -ಇವೆಲ್ಲ ಜಗತ್ತಿನ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ರೂಪುಗೊಂಡಿವೆ.

ಸುಮಾರು ಒಂದು ದಶಕದಲ್ಲಿ ಆದ ಸುಧಾರಣೆ ಹಾಗೂ ಪ್ರಗತಿಯ ಹಿನ್ನೆಲೆಯಲ್ಲಿ 2001ರಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಜಾರಿಗೆ ತರಲಾಯಿತು. 2006ರವರೆಗೆ ಜಾರಿಯಲ್ಲಿದೆಯೆಂದು ಯೋಜಿಸಲಾದರೂ ನೀತಿಯಲ್ಲಿ ಸೇ.10-12ರ ವಾರ್ಷಿಕ ಸರಾಸರಿ ದರದಲ್ಲಿ ಕೈಗಾರಿಕೆಗಳ ಬೆಳವಣಿಗೆ ಸಾಧಿಸುವ ಗುರಿ ಹೊಂದಲಾಗಿದೆ. ಇದರ ವಾರ್ಷಿಕ ಅಂದಾಜು ವೆಚ್ಚ ರೂ.20,000 ಕೋಟಿ. ವಾರ್ಷಿಕವಾಗಿ ಕನಿಷ್ಠ 1.50 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಆಶಿಸಲಾಗಿದೆ. ಈ ಹೊಸ ಕೈಗಾರಿಕೆ ನೀತಿಯಲ್ಲಿ ಇಟ್ಟುಕೊಳ್ಳಲಾಗಿರುವ ಗುರಿಗಳೆಂದರೆ, ರಾಜ್ಯದಲ್ಲಿ ಸಹಜವಾದ ಅನುಕೂಲ ಹೊಂದಿರದ ಹಾಗೂ ಆಯಕಟ್ಟಿನ ಸ್ವರೂಪದವುಗಳಾದ ವಲಯಗಳ ಶೀಘ್ರಬೆಳವಣಿಗೆಗೆ ಉತ್ತೇಜನ, ತಂತ್ರಜ್ಞಾನದ ಏರಿಕೆ, ಉತ್ಪನ್ನಗಳು ಹಾಗೂ ಪ್ರಕ್ರಿಯೆಗಳ ಮೌಲ್ಯವರ್ಧನ, ಕೃಷಿ, ತೋಟಗಾರಿಕೆ ಪಶುಸಂಗೋಪನೆ, ಖನಿಜ, ಮಾನವ ಬಂಡವಾಳಗಳ ಸಾಮರ್ಥ್ಯ ಹಾಗೂ ಸಂಪನ್ಮೂಲಗಳ ಅನುಕೂಲತಮ ಬಳಕೆ, ಹೊಸಮಾರುಕಟ್ಟೆಗಳ ಅನ್ವೇಷಣೆ ಹಾಗೂ ಸಂಪಾದನೆ, ಜ್ಞಾನಾಧಾರಿತ ಕೈಗಾರಿಕೆ ಹಾಗೂ ಸೇವೆಗಳಿಗೆ ಉತ್ತೇಜನ, ಖಾಸಗಿ ವಲಯವನ್ನು ಬೆಳವಣಿಗೆಯ ಮುಖ್ಯ ಸಾಧನವಾಗಿ ಬಳಸಿಕೊಳ್ಳುವುದು, ಕೈಗಾರಿಕೆಗಳಿಗೆ ಶ್ರೇಷ್ಠ ಗುಣಮಟ್ಟದ ಅಧೋರಚನೆ (ಮೂಲಸೌಲಭ್ಯ) ಲಭ್ಯವಾಗುವಂತೆ ಏರ್ಪಾಡು ಮತ್ತು ಸಣ್ಣಕೈಗಾರಿಕೆಗಳ ಭವಸಾಮರ್ಥ್ಯದ ಸಂಪೂರ್ಣ ಪ್ರಯೋಜನ.

ಈ ಗುರಿಗಳನ್ನು ಸಾಧಿಸಲು ಕೈಗಾರಿಕಾ ನೀತಿಯ ಅನುಷ್ಠಾನದಲ್ಲಿ ಖಾಸಗಿ ವಲಯದೊಂದಿಗೆ ಸಹಭಾಗಿತ್ವ, ಸ್ಥಳೀಯ ಕೈಗಾರಿಕೆಗಳಲ್ಲಿ ಸ್ಪರ್ಧೆಯ ವಾತಾವರಣ ಮೂಡಿಸುವುದು, ಸ್ಪರ್ಧಾತ್ಮಕ ಕೈಗಾರಿಕಾ ಅಧೋರಚನೆಗೆ ಅಗತ್ಯವಾದ ನೀತಿನಿರೂಪಣೆ, ಪರಸ್ಪರವಾಗಿ ವರ್ತಿಸುವ ಹಾಗೂ ಪರಸ್ಪರ ಪ್ರಯೋಜನಕಾರಿಯಾಗಿ ಕಾರ್ಯನಿರ್ವಹಿಸುವ ಸಂಸ್ಥೆಗಳ ರಚನೆ, ಜಾಗತಿಕ ಮಾರುಕಟ್ಟೆಯಲ್ಲಿ ರಾಜ್ಯಕ್ಕೆ ಅನುಕೂಲವಾಗಿರುವ ಪ್ರವೃತ್ತಿಗಳನ್ನು ಗಮನಿಸಿ ಅವಕ್ಕೆ ಉತ್ತೇಜನ, ಅತಿ ಸಣ್ಣ ಹಾಗೂ ಮಧ್ಯಮ ಗಾತ್ರದ ಕೈಗಾರಿಕೆಗಳ ತಂತ್ರಜ್ಞಾನದ ಉನ್ನತಿಗೆ ಸಹಾಯ ನೀಡಿಕೆ ಮುಂತಾದ ಕ್ರಮಗಳನ್ನು ಅನುಸರಿಸಲಾಗುತ್ತಿದೆ.

(ಸಿ.ಕೆ.ಆರ್.)

**ಕೈದಾಳ** : ತುಮಕೂರು ತಾಲ್ಲೂಕಿನ ಒಂದು ಗ್ರಾಮ. ತುಮಕೂರಿನ ದಕ್ಷಿಣಕ್ಕೆ ಸು.5ಕಿಮೀ ದೂರದಲ್ಲಿದೆ.

ಇದು ಹಿಂದೆ ಒಂದು ಪುಟ್ಟ ರಾಜ್ಯದ ಮುಖ್ಯ ನಗರವಾಗಿತ್ತು. ಇದಕ್ಕೆ ಕ್ರೀಡಾಪುರವೆಂಬ ಹೆಸರಿತ್ತು. ಇದು ಶಿಲ್ಪಿ ಜಕಣಾಚಾರಿಯ ಜನ್ಮಸ್ಥಳ ಎನ್ನಲಾಗಿದೆ. ಜಕಣಾಚಾರಿಯ ಮಗ ಡಕಣಾಚಾರಿ ಬೇಲೂರು ಚೆನ್ನಿಗರಾಯ ಮೂರ್ತಿಯಲ್ಲಿ ದೋಷವನ್ನು ಕಂಡು ಅದನ್ನು ತೋರಿಸಿದಾಗ ಜಕಣಾಚಾರಿ ತನ್ನ ಬಲಗೈಯನ್ನು ಕತ್ತರಿಸಿಕೊಂಡ, ಅನಂತರ ತನ್ನ ಹುಟ್ಟೂರಾದ ಕೈದಾಳಕ್ಕೆ ಬಂದು ಅಲ್ಲಿ ಚೆನ್ನಿಗರಾಯನ ದೇವಾಲಯ ನಿರ್ಮಿಸಲು ಜಕಣಾಚಾರಿಗೆ ಪುನಃ ಕೈ ಬಂತು. ಆದ್ದರಿಂದ ಆ ಊರಿಗೆ ಕೈದಾಳವೆಂಬ ಹೆಸರಾಯಿತು ಎಂದು ಐತಿಹ್ಯವಿದೆ.



ಚೆನ್ನಕೇಶವಮೂರ್ತಿ

1150-51ರಲ್ಲಿ ಹೊಯ್ಸಳ 1ನೆಯ ನರಸಿಂಹನ ಸಾಮಂತನಾಗಿದ್ದ ಬಾಚಿ ಅಥವಾ ಗುಳೇಬಾಚಿ ಎಂಬುವನು ಇಲ್ಲಿ ಶಿವ, ವಿಷ್ಣು ಮತ್ತು ಜಿನ ದೇವಾಲಯಗಳನ್ನು ಕಟ್ಟಿಸಿದನೆಂದು ಇಲ್ಲಿನ ಒಂದು ಶಾಸನದಿಂದ ತಿಳಿದುಬರುತ್ತದೆ. ಈಗ ಚೆನ್ನಕೇಶವ ಮತ್ತು ಗಂಗಾಧರೇಶ್ವರ ದೇವಾಲಯಗಳು ಮಾತ್ರ ಉಳಿದಿವೆ.

ಚೆನ್ನಕೇಶವ ದೇವಾಲಯ ದ್ರಾವಿಡ ವಾಸ್ತುಶೈಲಿಯಲ್ಲಿದೆ. ಮೂಲತಃ ಇದು ಹೊಯ್ಸಳ ಕಾಲದ ದೇವಾಲಯವಾಗಿದ್ದರೂ ಅನಂತರದ ಕಾಲಗಳಲ್ಲಿ ಬಹುವಾಗಿ ನವೀಕೃತವಾಗಿರುವಂತೆ ತೋರುತ್ತದೆ. ಈ ದೇವಾಲಯದ ಮಹಾದ್ವಾರದ ಮೇಲಿನ ಗೋಪುರ ವಿಜಯನಗರ ಕಾಲದಲ್ಲಿ ನಿರ್ಮಿತವಾದ್ದು, ಚೆನ್ನಿಗರಾಯನ ಮೂಲವಿಗ್ರಹ ಬಹು ಸುಂದರವಾಗಿದೆ. ವಿಗ್ರಹ $5^1/_2$' ಎತ್ತರವಿದ್ದು $2^1/_2$' ಎತ್ತರದ ಪೀಠದ ಮೇಲೆ ಸ್ಥಾಪಿತವಾಗಿದೆ. ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರದ ಚಿತ್ರಗಳಿವೆ. ಮಹಾದ್ವಾರದ ಬಲಬದಿಯ ಕಂಬವೊಂದರ ಮೇಲೆ ಪತ್ನೀಸಹಿತ, ಚೆನ್ನಕೇಶವನ ವಿಗ್ರಹವಿದೆ. ಎಡಗಡೆಯ ಕಂಬದ ಮೇಲೆ ಅಂಜಲಿಬದ್ಧನೂ ಉತ್ತರೀಯಧಾರಿಯೂ ಖಡ್ಗಭೂಷಿತನೂ ಆದ ಮೂರ್ತಿಯನ್ನು ಕೆತ್ತಲಾಗಿದೆ. ಇದು ಜಕಣಾಚಾರಿಯ ಮೂರ್ತಿಯೆಂದು ಹೇಳಿಕೆ. ಆದರೆ ಇದು ದೇವಾಲಯವನ್ನು ನಿರ್ಮಿಸಿದ ಬಾಚಿ ಸಾಮಂತನ ಮೂರ್ತಿಯಾಗಿರಬಹುದು.

ಚೆನ್ನಕೇಶವ ಮಂದಿರದ ಪೂರ್ವದಲ್ಲಿರುವ ಗಂಗಾಧರೇಶ್ವರ ದೇವಾಲಯವೂ ದ್ರಾವಿಡ ಶೈಲಿಗೆ ಸೇರಿದ್ದು. ಇದರ ನವರಂಗದಲ್ಲಿ ಹೊಯ್ಸಳ ಶೈಲಿಯಲ್ಲಿ ಕೆತ್ತಲಾದ ಕರಿಕಲ್ಲಿನ ನಯವಾದ ನಾಲ್ಕು ಕಂಬಗಳುಂಟು. ಈ ಕಂಬಗಳ ತಳಭಾಗದ ನಾಲ್ಕು ಪಕ್ಕಗಳಲ್ಲೂ ಶಿವ, ಬ್ರಹ್ಮ, ವಿಷ್ಣು, ಭೈರವ, ಕೃಷ್ಣ, ಗಣಪತಿ, ವೀರಭದ್ರ ಮುಂತಾದ ದೇವತೆಗಳ ಉಬ್ಬುಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಗೋಡೆಗಳ ಹೊರವಲಯ ಆನೆ ಮತ್ತು ಹೂವಿನ ಚಿತ್ರ ಪಟ್ಟಿಕೆಗಳಿಂದ ಅಲಂಕೃತವಾಗಿದೆ. (ಬಿ.ಕೆ.ಜಿ.)

**ಕೈಫಿಯತ್ತು** : ಪಾರ್ಸಿಭಾಷೆಯ ಈ ಮಾತಿಗೆ ಸಮಾಚಾರ ಎಂಬುದು ಸಾಮಾನ್ಯವಾದ ಅರ್ಥ. ಇಂದೂ ನ್ಯಾಯಸ್ಥಾನಗಳಲ್ಲಿ ಸಾಕ್ಷಿ ನುಡಿಯುವವರ ಕಡೆಯಿಂದ ಪ್ರಮಾಣ ಮಾಡಿಸಿ ಪಡೆಯುವ ಹೇಳಿಕೆಗಳನ್ನು ಕೈಫೀತು ಅನ್ನುತ್ತಾರೆ. ಈ ಮಾತು ಬಿಜಾಪುರದ ಆದಿಲ್‍ಶಾಹೀಗಳ ಕಾಲದಲ್ಲಿ ಕನ್ನಡ ಭಾಷೆಗೆ ಬಂದು ಸೇರಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಕನ್ನಡ ನಾಡಿನಲ್ಲೆಲ್ಲ ವಿಶೇಷವಾಗಿ ಪ್ರಚುರಗೊಂಡಿತು. ಅಂದಿಗಾಗಲೇ ಈ ಮಾತಿನ ಅರ್ಥ ವಿಶಾಲಗೊಂಡು ಚಾರಿತ್ರಿಕ ನಿರೂಪಣೆಯೆಂಬ ಬಣ್ಣವೂ ಬಂದಿತು.

ಹೈದರ್ ಮತ್ತು ಟಿಪ್ಪು ಕಾಲದಲ್ಲಿ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಅನೇಕ ಮಂದಿ ಇತಿಹಾಸಪ್ರಿಯರಾದ ಪಾರ್ಸಿ ಲಿಪಿಕಾರರಿದ್ದರು. ಒಂದು ಐತಿಹಾಸಿಕ ಘಟನೆ ಕುರಿತು ಯಾರು ಏನು ಹೇಳಿದರೂ ತತ್‍ಕ್ಷಣ ಅವರು ಅದನ್ನು ಬರೆದಿಡುತ್ತಿದ್ದರು. ಆ ಕಾಲದಲ್ಲಿ ಸುಲ್ತಾನರಿಗೆ ಸೋತ ಅನೇಕ ಹಿರಿಯ, ಕಿರಿಯ ಪಾಳೆಯಗಾರರು ಸಂಸಾರಸಮೇತರಾಗಿ ರಾಜಧಾನಿಯಲ್ಲಿದ್ದರಷ್ಟೆ. ಪಾರ್ಸಿ ಲಿಪಿಕಾರರಿಗೆ ಅವರಿಂದ ನೇರವಾಗಿ ವಿಷಯಗಳನ್ನು ಕೇಳಿ ತಿಳಿದುಕೊಳ್ಳುವ ಆಸಕ್ತಿ, ಬರೆದಿಡಬೇಕೆಂಬ ಉತ್ಸಾಹಗಳಿದ್ದಂತೆ ನಿರ್ಭಾಗ್ಯ ಪಾಳೆಯಗಾರರಿಗೂ ತಮ್ಮ ಮನೆತನದ ಗತವೈಭವವನ್ನು ಕುರಿತು ಹೇಳಿ ಬರೆಯಿಸಲು ಆಶೆ, ಆತುರ ಇತ್ತು. ಹೀಗಾಗಿ ಹೇಳಿ ಬರೆಯಿಸುವವರ ಗುಂಪೊಂದು, ಹೇಳಿದ್ದನ್ನು ಬರೆದಿಡುವವರ ಗುಂಪೊಂದು -ಇವೆರಡೂ ಗುಂಪುಗಳ ಸಹಕಾರ ಫಲವಾಗಿ ಕೈಫಿಯತ್ತುಗಳು ವಿಪುಲವಾಗಿ ಸೃಷ್ಟಿಯಾದುವು. ಸಾಮಾನ್ಯವಾಗಿ ಇವೆಲ್ಲ ಪಾಳೆಯಗಾರರ ಜೀವನಚರಿತ್ರೆಗಳೇ ಆಗಿದ್ದುವು.

ಶ್ರೀರಂಗಪಟ್ಟಣದ ಪತನಾನಂತರ ಪಾರ್ಸಿಭಾಷೆಗೆ ಇದ್ದ ರಾಜಪದ ಕೊಂಚಕಾಲ ಕನ್ನಡಕ್ಕೂ ಮರಾಠಿಗೂ ಲಭ್ಯವಾಯಿತು. ಅನೇಕ ಪಾರ್ಸಿ ಕೈಫಿಯತ್ತುಗಳು ಕನ್ನಡಕ್ಕೂ ಮರಾಠಿಗೂ ಭಾಷಾಂತರಗೊಂಡವು. ಈ ಹಂತದಲ್ಲಿ ಕೈಫಿಯತ್ತು ಕಪಿಯಾತು ಆಯಿತು.

ದಕ್ಷಿಣ ಭಾರತದಲ್ಲಿ ಸಂಚಾರ ಮಾಡಿ, ಇತಿಹಾಸ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಪ್ರಾಚೀನ ವಸ್ತು, ಗ್ರಂಥ ಮುಂತಾದವನ್ನು ಸಂಗ್ರಹ ಮಾಡಿದವರಲ್ಲಿ ಮುಖ್ಯರಾದ ಬುಕ್ಯಾನನ್, ಎಲಿಯಟ್, ಮೆಕೆಂಜಿ, ಸಿ.ಪಿ.ಬ್ರೌನ್, ವಿಲ್ಕ್ಸ್ ಮೊದಲಾದವರು ತಾವು ಭೇಟಿ ಮಾಡಿದ ಹಳಬರನೇಕರ ಕಡೆಯಿಂದ ಕೈಫಿಯತ್ತುಗಳನ್ನು ಪಡೆದರು. ಇವುಗಳಲ್ಲೆಲ್ಲ ಮೆಕೆಂಜಿ ಸಂಗ್ರಹವೇ ಬಹಳ ದೊಡ್ಡದು; ಪ್ರಖ್ಯಾತವೂ ಅಮೂಲ್ಯವೂ ಆದುದು. ಈ ಸಂಗ್ರಹದ ಬಹುಭಾಗ ಲಂಡನ್ನಿನ ಇಂಡಿಯ ಆಫೀಸ್ ಗ್ರಂಥಾಲಯ ಸೇರಿತು. ಕೊಂಚಭಾಗ ಕಲ್ಕತ್ತೆಯ ಇಂಪೀರಿಯಲ್ ಗ್ರಂಥಾಲಯಕ್ಕೆ ಹೋಯಿತು. ಉಳಿದ ಅಷ್ಟಿಷ್ಟು ಮದರಾಸಿನ ಓರಿಯಂಟಲ್ ಹಸ್ತಪ್ರತಿ ಗ್ರಂಥಾಲಯಕ್ಕೆ ಬಂದು ಬಿತ್ತು.

ಮೈಸೂರು ಸಂಸ್ಥಾನದ ಇತಿಹಾಸ ಬರೆಯಲು ನಿಯುಕ್ತನಾದ ವಿಲ್ಕ್ಸ್ ಶ್ರೀರಂಗಪಟ್ಟಣಕ್ಕೆ ಬಂದು ಸಂಸ್ಥಾನದ ಚರಿತ್ರೆಗೆ ಸಂಬಂಧಪಟ್ಟ ಸಾಹಿತ್ಯವನ್ನೆಲ್ಲ ದಿವಾನ್ ಪೂರ್ಣಯ್ಯನವರ ಸಹಕಾರದಿಂದ ಪಡೆದುಕೊಂಡ. ಒಡೆಯರ ಮನೆತನದ ಅರಮನೆ ಸರಸ್ವತೀ ಭಂಡಾರವೆಲ್ಲ ಅವನದಾಯಿತು. ಟಿಪ್ಪುವಿನ ಮರಣಾನಂತರ ಅವನ ಅಮೂಲ್ಯವಾದ ಸಮಗ್ರ ಗ್ರಂಥ ಭಂಡಾರ ವಿಲಾಯಿತಿಗೆ ಸಾಗಿತು. ಅಲ್ಲದೆ ಕೈಫಿಯತ್ತುಗಳ ರಚನೆಗಾಗಿಯೇ

ಪೂರ್ಣಯ್ಯನವರು ಸಂಸ್ಥಾನದ ನಾನಾ ಭಾಗಗಳ ಹಿರಿಯರನ್ನು ಆರಿಸಿ ಕರೆಸಿದರು. ಅವರಲ್ಲಿ ಕೆಲವರು ಇತಿಹಾಸಕಾರರೂ ಇದ್ದರು. ಪೂರ್ಣಯ್ಯನವರ ಅನುಜ್ಞೆಯಂತೆ ಅವರೆಲ್ಲ ಇತಿಹಾಸ ರಚನೆಯಲ್ಲಿ ತೊಡಗಿದರು. ಕೆಲವರು ತಾವೇ ಬರೆದರು; ಬರೆಹಗಾರರಲ್ಲದ ಇತರರು ಹೇಳಿ ಬರೆಯಿಸಿದರು. ನೂರಾರು ಕೈಫಿಯತ್ತುಗಳು ಸಿದ್ಧವಾದುವು. ಈ ಗ್ರಂಥ ರಾಶಿಯನ್ನೆಲ್ಲ ಅಂದರೆ ಇತಿಹಾಸದ ಮೂಲ ಸಾಮಗ್ರಿಯನ್ನೆಲ್ಲ ವಿಲ್ಕ್ಸ್ ತೆಗೆದುಕೊಂಡು ಹೋದ. ಹೀಗಾಗಿ ಮೈಸೂರು ಚರಿತ್ರೆಗೆ ಬೇಕಾದ ಕೈಫಿಯತ್ತುಗಳೆಲ್ಲ ವಿದೇಶೀ ಗ್ರಂಥಭಂಡಾರವನ್ನು ಸೇರಿದುವು. *

**ಕೈಲಾಸ :** ತಾಯಿನಾಡು ಪ್ರಕಾಶನ ಸಂಸ್ಥೆ 1963ರ ಆಗಸ್ಟ್ ತಿಂಗಳಲ್ಲಿ ಆರಂಭಿಸಿದ ಕನ್ನಡ ಮಾಸಪತ್ರಿಕೆ. ಕಿರೀಟ ಅಷ್ಟದಳಾಕಾರದ 148 ಪುಟಗಳ ಈ ಪತ್ರಿಕೆ ಜನಾಭಿರುಚಿಯನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಎಡೆಕೊಡುತ್ತಿತ್ತು. ಇದರಲ್ಲಿ ಕಾಣಬರುತ್ತಿದ್ದ ಲೇಖನ ವೈವಿಧ್ಯದಿಂದ ಇದಕ್ಕೆ ಸರಿದೂಗುವಂತಿದ್ದ ವರ್ಣಚಿತ್ರಬಾಹುಳ್ಯದಿಂದ ಪತ್ರಿಕೆ ಬಹು ಬೇಗ ಜನಪ್ರಿಯವಾಯಿತು. ಮೊದಲನೆಯ ಸಂಚಿಕೆಯನ್ನು ಪ್ರಾಯೋಗಿಕ ಸಂಚಿಕೆ ಎಂದು ಕರೆದು ಕನ್ನಡ ನಾಡಿನಲ್ಲೆಲ್ಲ ಉಚಿತವಾಗಿ ಹಂಚಿದ್ದು ಈ ಪತ್ರಿಕೆಯ ವೈಶಿಷ್ಟ್ಯ. ಇಂಥ ಪ್ರಯೋಗವನ್ನು ಬಹುಶಃ ಯಾವ ಪತ್ರಿಕೆಯೂ ಆಗ ಮಾಡಿರಲಿಲ್ಲ. ಕಿರಿಯ ಬರೆಹಗಾರರ ಬೆನ್ನುತಟ್ಟಿ ಹೊಸ ಲೇಖಕರ ಒಂದು ಪೀಳಿಗೆಯನ್ನು ಪತ್ರಿಕೆ ನಿರ್ಮಿಸಿತು. ಬರೆಹಗಾರರಲ್ಲದಿದ್ದರೂ ಜೀವನದ ಹಲವಾರು ಕ್ಷೇತ್ರಗಳಲ್ಲಿ ಕೆಲಸಮಾಡಿ ಅಪೂರ್ವವಾದ, ಸ್ವಾರಸ್ಯಕರವಾದ ಅನುಭವಗಳನ್ನು ಪಡೆದಿರತಕ್ಕವರಿಂದ ವಿಷಯಸಂಗ್ರಹಿಸಿ, ಲೇಖನಗಳನ್ನು ಪ್ರಕಟಿಸುವುದರಲ್ಲಿ ಈ ಪತ್ರಿಕೆ ಹೊಸ ಹಾದಿಯನ್ನೇ ತೆರೆಯಿತೆನ್ನಬೇಕು. ಎನ್.ಎಸ್.ಸೀತಾರಾಮಶಾಸ್ತ್ರಿ, ಎಸ್.ವೆಂಕಟರಾವ್ ಇವರ ಸಂಯುಕ್ತ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಈ ಪತ್ರಿಕೆ 1967ರಲ್ಲಿ ನಿಂತುಹೋಯಿತು. *

**ಕೈಲಾಸಂ, ಟಿ.ಪಿ. :** 1884-1946. ಇಪ್ಪತ್ತನೆಯ ಶತಮಾನದ ಮೊದಲ ನಾಲ್ಕು ದಶಕಗಳಲ್ಲಿ ಹೊಸ ನಾಟಕ ಸೃಷ್ಟಿಯಿಂದ ಕನ್ನಡ ನಾಟಕ ಕ್ಷೇತ್ರವನ್ನು ಬೆಳಗಿದ ಜನಪ್ರಿಯ ನಾಟಕಕಾರರು. ಕೈ ಎಂಬ ಸಂಕ್ಷಿಪ್ತನಾಮದಿಂದ ಪ್ರಸಿದ್ಧರಾಗಿದ್ದಾರೆ. ಪ್ರಸಿದ್ಧ ನಾಟಕಕಾರರಲ್ಲದೆ ನುರಿತ ನಟರೂ ನಿರ್ದೇಶಕರೂ ಆದ ಇವರು ತಮ್ಮ ಅನೇಕ ನಾಟಕಗಳನ್ನು ಆಡಿಸಿದರಲ್ಲದೆ ಅವುಗಳಲ್ಲಿ ಪಾತ್ರವಹಿಸಿದ್ದೂ ಉಂಟು.

ಇವರು 1884 ಜುಲೈ 29ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ಹಿರಿಯರಿದ್ದದ್ದು ತಂಜಾವೂರಿನ ಬಳಿಯ ಒಂದು ಗ್ರಾಮದಲ್ಲಿ.

ತಂದೆ ತ್ಯಾಗರಾಜ ಪರಮಶಿವ ಅಯ್ಯರ್ ಅವರು ಬೆಂಗಳೂರಿನಲ್ಲಿ ಮುನ್ಸೀಫರಾಗಿ ಜೀವನ ಪ್ರಾರಂಭಿಸಿ ಶ್ರೇಷ್ಠನ್ಯಾಯಾಧೀಶರ ಪದವಿಗೆ ಏರಿ ನಿವೃತ್ತರಾದರು. ಅವರ ಮೂವರು ಗಂಡು ಮಕ್ಕಳಲ್ಲಿ ಕೈಲಾಸಂ ಹಿರಿಯರು. ಉಳಿದಿಬ್ಬರು ಎಳೆಯ ವಯಸ್ಸಿನಲ್ಲಿಯೆ ತೀರಿಕೊಂಡರು. ಕೈಲಾಸಂ ಅವರ ಬಾಲ್ಯದ ವಿದ್ಯಾಭ್ಯಾಸ ನಡೆದದ್ದು ಬೆಂಗಳೂರು, ಮೈಸೂರು, ಹಾಸನಗಳಲ್ಲಿ. ಇವರು ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸು ಮಾಡಿದ್ದು ಮದರಾಸಿನ ಸರ್.ಪಿ.ಎಸ್. ಶಿವಸ್ವಾಮಿ ಅಯ್ಯರ್ ಅವರ ಹಿಂದು ಹೈಸ್ಕೂಲಿನಲ್ಲಿ. ಕೈಲಾಸಂ ವಿ.ಎಸ್.ಶ್ರೀನಿವಾಸ ಶಾಸ್ತ್ರಿಗಳ ನೆಚ್ಚಿನ ಶಿಷ್ಯರು. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಭೂವಿಜ್ಞಾನದಲ್ಲಿ ಪ್ರಥಮ ದರ್ಜೆಯಲ್ಲಿ ಬಿ.ಎ. ಪದವಿ ಪಡೆದ ಅನಂತರ ಎಂ.ಎ. ಪದವಿಗಾಗಿ ಎರಡು ವರ್ಷ ವ್ಯಾಸಂಗ ನಡೆಸಿದರು. ಅನಂತರ ಮೈಸೂರು ಸರ್ಕಾರದ ಮಾಸಿಕ ವಿದ್ಯಾರ್ಥಿವೇತನ ಪಡೆದು ಲಂಡನ್ನಿಗೆ ತೆರಳಿ (1908) ರಾಯಲ್ ಕಾಲೇಜ್ ಆಫ್ ಸೈನ್ಸ್ (ಈಗ ಇಂಪೀರಿಯಲ್ ಕಾಲೇಜು) ಸೇರಿ ಶಾಸ್ತ್ರಾಧ್ಯಯನ ಮಾಡಿ ಏಳು ವಿಷಯಗಳಲ್ಲಿ ಮೊದಲ ದರ್ಜೆಯ ಪ್ರಶಸ್ತಿ ಗಳಿಸಿದರು. ಅನಂತರ ರಾಯಲ್ ಜಿಯಲಾಜಿಕಲ್ ಸೊಸೈಟಿಗೆ ಒಂದು ಪ್ರಬಂಧ ಬರೆದುಕೊಟ್ಟು ಆ ಸಂಸ್ಥೆಯ ಫೆಲೊ ಆದರು. ಹಾಗೆ ಫೆಲೊಷಿಪ್ ಪಡೆದ ಭಾರತೀಯರಲ್ಲಿ ಇವರೇ ಮೊದಲಿಗರು. ಕೈಲಾಸಂ ಅವರು ವಿದ್ಯಾರ್ಜನೆ ಜ್ಞಾನಾರ್ಜನೆಗಳಲ್ಲಿ ಹೇಗೋ ಹಾಗೆ ಕ್ರೀಡಾರಂಗದಲ್ಲಿಯೂ ಅಮಿತವಾದ ಆಸಕ್ತಿಯನ್ನು ಮೆರೆದರು. ಹಾಕಿ, ಫುಟ್‌ಬಾಲ್‌ಗಳಲ್ಲಿ ಅಜೇಯ ಗೋಲ್‌ಕೀಪರ್ ಆಗಿದ್ದರು. ಇವರು ಲಂಡನ್ನಿನಲ್ಲಿದ್ದಾಗ ಪ್ರೊಫೆಸರ್ ಯೂಜೀನ್ ಸ್ಯಾಂಡೋರ ಶಿಷ್ಯರಾಗಿ ವ್ಯಾಯಾಮ ಪಟುವೆನಿಸಿಕೊಂಡು ಶರೀರದ ಸ್ನಾಯುಗಳ ಮೇಲೆ ಅಸಾಮಾನ್ಯ ಹತೋಟಿ ಪಡೆದುಕೊಂಡರು. ಪಾಶ್ಚಾತ್ಯ ಸಂಗೀತವನ್ನು ಕೇಳಿ ಕಲಿತು ಅದರಲ್ಲೂ ಸಾಕಷ್ಟು ಪರಿಶ್ರಮ ಗಳಿಸಿದರು. ಭಾರತೀಯ ಸಂಗೀತಕ್ಕೂ ಅದಕ್ಕೂ ಇರುವ ಸಾಮ್ಯ ವೈಷಮ್ಯಗಳನ್ನು ಗುರುತಿಸಿಕೊಂಡರು. ಅಲ್ಲಿನ ಗಾಯಕರೊಡನೆ ಬೆರೆತು, ಅವರು ಇಂಗ್ಲಿಷಿನಲ್ಲೊ ಫ್ರೆಂಚಿನಲ್ಲೊ ಜರ್ಮನ್ ಭಾಷೆಯಲ್ಲೊ ಯಾವ ಹಾಡನ್ನೇ ಹಾಡಲಿ ಅದಕ್ಕನುಗುಣವಾಗಿ ಕನ್ನಡ ಭಾಷೆಯಲ್ಲಿ ಅದೇ ರಾಗ ತಾಳ ಲಯಕ್ಕೆ ಹೊಂದಿಸಿಕೊಂಡು ಹಾಡಿ ಅವರನ್ನು ಅಚ್ಚರಿಗೊಳಿಸಿದುದುಂಟು. ಇಟಿಸ್ ಎ ಲಾಂಗ್ ವೇ ಟು ಟಿಪ್ಪರೇರೀ.... ಎಂಬ ಹಾಡಿಗೆ ಪ್ರತಿಯಾಗಿ ನಮ್ ತಿಪ್ಪಾರಳ್ಳಿ ಬಲು ದೂರ, ನಡಿಯಾಕ್ ಬಲುದೂರ ಎಂದು ಹಾಡಿ ಕನ್ನಡ ತಿಳಿಯದಿದ್ದ ಪ್ರೇಕ್ಷಕರಿಂದಲೂ ನಾಲ್ಕಾರು ಬಾರಿ ಒನ್ಸ್ ಮೋರ್ ಗಿಟ್ಟಿಸಿದವರಿವರು. ಇವರ ಮಾತೃಭಾಷೆ ತಮಿಳಾದರೂ ಕನ್ನಡದ ಬಗ್ಗೆ ಕೈಲಾಸಂ ಅವರಿಗಿದ್ದ ಅಭಿಮಾನಕ್ಕೆ ಇದೊಂದು ನಿದರ್ಶನ. ಕೈಲಾಸಂ ತಮ್ಮ ಜೀವನವಿಡೀ ತಾವು ಭಾರತೀಯ, ಕನ್ನಡಿಗ ಎಂಬ ಪ್ರಜ್ಞೆಯಿಂದ ಎಂದೂ ದೂರವಾಗಲಿಲ್ಲ.

ಕೈಲಾಸಂ ಅವರ ತಂದೆ ರಾಮಾಯಣ ಅಧ್ಯಯನವನ್ನು ಚೆನ್ನಾಗಿ ಮಾಡಿದ್ದವರು. ದೊಡ್ಡಪ್ಪ ಸರ್.ಟಿ.ಸದಾಶಿವಯ್ಯರ್ (ಅವರೂ ಮುನ್ಸಿಫ್ ಪದವಿಯಿಂದ ಶ್ರೇಷ್ಠ ನ್ಯಾಯಾಧೀಶ ಪದವಿಗೆ ಏರಿದ್ದವರೆ) ಮಹಾಭಾರತದ ಅಧ್ಯಯನ ಮಾಡಿದ್ದವರು. ಆ ಇಬ್ಬರೂ ತಮ್ಮ ಮಕ್ಕಳಿಗೆ ಮಹಾಭಾರತದಲ್ಲಿನ ವೀರ ವ್ಯಕ್ತಿಗಳ ಕತೆಗಳನ್ನು ರೋಚಕವಾಗಿ ಹೇಳುತ್ತಿದ್ದರು. ಕೈಲಾಸಂ ಅವರಿಗೆ ಅದು ಚೆನ್ನಾಗಿ ಹಿಡಿಸಿರಬೇಕು. ಕೈಲಾಸಂ ಆಗಲೇ ಸಂಸ್ಕೃತವನ್ನೂ ಐಚ್ಛಿಕ ಭಾಷೆಯನ್ನಾಗಿ ಕಲಿತು, ತಮ್ಮ ಮಾವ ಅಮೃತಲಿಂಗ ಅಯ್ಯರವರಲ್ಲಿ ಚೆನ್ನಾಗಿ ಅಭ್ಯಾಸ ಮಾಡಿಕೊಂಡು, ಮಹಾಭಾರತವನ್ನು ತಾವಾಗಿಯೇ ಓದಿಕೊಂಡು, ಮುಂದಕ್ಕೆ ಕಾಳಿದಾಸ, ಭವಭೂತಿ, ಭಾಸ ಮೊದಲಾದ ಮಹಾಕವಿಗಳ ಕೃತಿಗಳನ್ನೂ ಅಭ್ಯಾಸ ಮಾಡಿದರು. ಇವರ ಮೆಚ್ಚಿನ ಕವಿ ಭಾಸ. ಕೈಲಾಸಂ ಇಂಗ್ಲಿಷ್ ಭಾಷೆಯಲ್ಲಿ ಬರೆದ ದಿ ಪರ್ಪಸ್, ದಿ ಫುಲ್‌ಫಿಲ್‌ಮೆಂಟ್, ಕರ್ಣ - ಈ ನಾಟಕಗಳಲ್ಲಿ ಇವರ ರಾಮಾಯಣ ಮಹಾಭಾರತಗಳ ಜ್ಞಾನವನ್ನು ಗುರುತಿಸಬಹುದು.

ಲಂಡನ್ನಿನಲ್ಲಿ ಇವರು ಇದ್ದ ಏಳು ವರ್ಷಗಳಲ್ಲಿ ವಿವಿಧ ನಾಟಕ ಮಂದಿರಗಳಲ್ಲಿ ನಡೆಯುತ್ತಿದ್ದ ನಾಟಕಗಳನ್ನು ಅವಲೋಕಿಸಿದರು. ಷೇಕ್ಸ್‌ಪಿಯರ್, ಆಸ್ಕರ್ ವೈಲ್ಡ್, ಮೋಲಿಯರ್, ಇಬ್ಸೆನ್, ಬರ್ನಾರ್ಡ್ ಷಾ, ಗಾಲ್ಸ್‌ವರ್ದಿ ಮುಂತಾದ ಪ್ರತಿಭಾವಂತರ ನಾಟಕಗಳ ಪ್ರದರ್ಶನದಿಂದಾಗಿ ನಾಟಕ ಕ್ಷೇತ್ರದಲ್ಲಿ ಒಂದು ನವೀನ ಯುಗವೇ ಆಗ ಆರಂಭವಾಗಿತ್ತು. ಈ ನಾವೀನ್ಯದ ಬೃಹತ್ ದರ್ಶನ ಪಡೆದ ಕೈಲಾಸಂ ಅಲ್ಲಿನ ಪ್ರದರ್ಶನ ತಂತ್ರಗಳನ್ನೂ ಕರತಲಾಮಲಕ ಮಾಡಿಕೊಂಡರು. ಆಗಿನ ಮಹಾ ನಟನಟಿಯರಾಗಿದ್ದ ಎಲ್ಲೆನ್‌ಟೆರಿ ಜೂನಿಯರ್, ಹೆನ್ರಿ ಅರ್ವಿಂಗ್ ಜೂನಿಯರ್, ಹೆನ್ರಿ ಐನ್ಲಿ, ಅಯಾನ್ ಹೇ, ಸರ್ ಜಾನ್ ಫೋರ್ಬ್ಸ್ ರಾಬರ್ಟ್‌ಸನ್, ಬೀರ್‌ಬ್ಯಾಂ, ಟ್ರೀ ಮುಂತಾದವರನ್ನು ಭೇಟಿಮಾಡಿ ಅವರ ಪಾತ್ರಾಭಿನಯಗಳನ್ನು ಕುರಿತು ಸುದೀರ್ಘ ಚರ್ಚೆ ನಡೆಸಿದರು. ಕ್ರಮೇಣ ಅವರನ್ನೆಲ್ಲ ಅನುಕರಿಸಿ ಆಯಾ ಪಾತ್ರಗಳನ್ನು ಅವರೆದುರಿಗೆ ಮಾಡಿತೋರಿಸಿ ಅವರ ಮೆಚ್ಚುಗೆ ಗಳಿಸಿದರು. ಇವರು ವಿಜ್ಞಾನ ಮತ್ತು ಕ್ರೀಡಾಶಾಸ್ತ್ರಗಳಲ್ಲಿ ಪಾಂಡಿತ್ಯ ಸಂಪಾದಿಸಿದ್ದಲ್ಲದೆ ನಾಟಕಾಭಿನಯ ಶಾಸ್ತ್ರದಲ್ಲೂ ಪಾರಂಗತರಾಗಿ, ಏಳು ವರ್ಷಗಳಲ್ಲಿ ವಿವಿಧ ಮುಖಗಳ ಅಧ್ಯಯನ ಮುಗಿಸಿ 1915ರ ಡಿಸೆಂಬರ್‌ನಲ್ಲಿ ಮೈಸೂರಿಗೆ ಮರಳಿ, ಸರ್ಕಾರದ ಭೂಗರ್ಭ ಶಾಖೆಯಲ್ಲಿ

ಪ್ರೊಬೇಷನರಿ ನೌಕರಿ ಹಿಡಿದರು. ಐದುವರ್ಷ ಕೋಲಾರದ ಚಿನ್ನದ ಗಣಿ, ಹಾಸನ, ಶಿವಮೊಗ್ಗ, ಭದ್ರಾವತಿ, ಲಕ್ಕವಳ್ಳಿ, ತರೀಕೆರೆ, ಎಡೇಹಳ್ಳಿ ಮೊದಲಾದ ಸ್ಥಳಗಳಲ್ಲಿ ಕೆಲಸಮಾಡಿ ವಿವಿಧ ಮಾದರಿಯ ಕಲ್ಲುಗಳನ್ನು ಶೇಖರಿಸಿ, ಪರೀಕ್ಷಿಸಿ ಅವುಗಳಿಗೆಲ್ಲ ಹೆಸರು ಕೊಟ್ಟರು. ಭೂಗರ್ಭ ಶಾಸ್ತ್ರದಲ್ಲಿ ಪೂರ್ಣ ಪಾಂಡಿತ್ಯ ಹಾಗೂ ಸಹಜಾಸಕ್ತಿಗಳಿದ್ದರೂ ಕೈಲಾಸಂ 1920 ಜುಲೈ 1ರಂದು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ವಸಂತಸೇನೆಯಲ್ಲಿ ಶಕಾರನ ಪಾತ್ರದಲ್ಲಿ ಕೈಲಾಸಂ

ಕೈಲಾಸಂ ಶಿವಮೊಗ್ಗದಲ್ಲಿ ಕೆಲಸದಲ್ಲಿದ್ದಾಗ (1918), ಆಗ್ಗ ನ್ಯಾಯವಾದಿಯಾಗಿದ್ದ (ಅನಂತರ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ) ಶಂಕರನಾರಾಯಣರಾಯರ ಒತ್ತಾಯದಿಂದ ಸ್ಕೌಟ್ ತತ್ತ್ವಗಳನ್ನು ಪ್ರತಿಪಾದಿಸಲು ಸಹಾಯವಾಗುವಂತೆ ನಾಟಕವೊಂದನ್ನು ರಚಿಸಬೇಕಾಯಿತು. ಕೈಲಾಸಂ ತುಂಗಾತೀರದಲ್ಲಿ ತಿಂಗಳ ಬೆಳಕಿನಲ್ಲಿ ನಾಟಕವನ್ನು ಬಾಯಲ್ಲಿ ಹೇಳುತ್ತ ಹೋದರು. ಕತೆಗಾರ ಆನಂದರು ಅದನ್ನು ಬರೆದುಕೊಂಡರು. ಕೈಲಾಸಂ ತಾವಾಗಿ ಯಾವತ್ತೂ ಬರೆದುದಿಲ್ಲ. ಇದುವರೆಗೆ ಅಚ್ಚಾಗಿರುವ ಅವರ ನಾಟಕಗಳೆಲ್ಲ ಹೀಗೆಯೇ ರಚಿತವಾಗಿ ಹೊರಬಿದ್ದಿರುವುದು. ಆಗ ಹೊರಬಂದ ನಾಟಕ ಮಕ್ಕಳ ಸ್ಕೂಲ್ ಮನೇಲಲ್ವೇ ಅಥವಾ ಟೊಳ್ಳುಗಟ್ಟಿ ಎಂಬ ಏಕಾಂಕ. ಅದೇ ಸಮಯಕ್ಕೆ ಬೆಂಗಳೂರಿಗೆ ಬಂದ ವಿಶ್ವಕವಿ ರವೀಂದ್ರನಾಥ ಠಾಕೂರರ ಸಮ್ಮುಖದಲ್ಲಿ ಇದರ ಪ್ರದರ್ಶನವಾಗಿ, ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಕೈಲಾಸಂ ಕರ್ನಾಟಕ ನಾಟಕ ಪ್ರಹಸನ ಪ್ರಪಿತಾಮಹರಾಗಿದ್ದರು. ಚೊಚ್ಚಲ ನಾಟಕದ ಪದಾರ್ಪಣದಿಂದ ಕನ್ನಡ ರಂಗಭೂಮಿಯಲ್ಲೇ ಕ್ರಾಂತಿ ಎಬ್ಬಿಸಿದ ಮಹಾವ್ಯಕ್ತಿ ಕೈಲಾಸಂ. ಅನಂತರ 28 ವರ್ಷಗಳ ಅವಧಿಯಲ್ಲಿ ಹೋಂ ರೂಲು, ಬಹಿಷ್ಕಾರ, ಗಂಡಸ್ಕತ್ರಿ, ನಮ್ಬ್ರಾಹ್ಮಣ್ಕೆ, ಬಂಡ್ವಾಳ್ವಿಲ್ಲದ್ಬಡಾಯಿ, ನಮ್ ಕ್ಲಬ್ಬು, ಅಮ್ಮಾವ್ರ ಗಂಡ, ಸತ್ತವನ ಸಂತಾಪ, ಅನುಕೂಲಕ್ಕೊಬ್ಬಣ್ಣ, ಸೀಕರ್ಣೆ ಸಾವಿತ್ರಿ, ಶೂರ್ಪನಖಾ ಕುಲವೈಭವ ಅಥವಾ ನಮ್ ಕಂಪ್ನಿ, ತಾಳೀಕಟ್ಟೋಕ್ಕೂಲೀನೇ, ಪೋಲಿಕಿಟ್ಟಿ, ಬಹಿಷ್ಕಾರ, ವೈದ್ಯನ ವ್ಯಾಧಿ, ಸೂಳೆ ಎಂಬ ನಾಟಕಗಳನ್ನು ರಚಿಸಿದರು. ತಮ್ಮ ಕಾಲದ ಮಧ್ಯಮವರ್ಗದ ಬ್ರಾಹ್ಮಣ ಸಮಾಜದ ಸಮಸ್ಯೆಗಳೇ ಇವರ ನಾಟಕಗಳ ವಸ್ತು. ತಾವರೆಕೆರೆ ಎಂಬುದು ಇವರ ಸಣ್ಣಕತೆಗಳ ಸಂಗ್ರಹ. ಇಂಗ್ಲಿಷಿನಲ್ಲಿ ದಿ ಪರ್ಪಸ್ ಏಕಲವ್ಯ, ದಿ ಕರ್ಸ್ ಅಥವಾ ಕರ್ಣ, ದಿ ಬರ್ಡನ್ ಮತ್ತು ದಿ ಫುಲ್‌ಫಿಲ್‌ಮೆಂಟ್ ಎಂಬ ನಾಟಕಗಳನ್ನು ಬರೆದು ಆ ಮೂಲಕ ಭಾರತದ ಪುರಾಣ ಕಥೆಗಳನ್ನು ಕನ್ನಡೇತರರಿಗೆ ಪರಿಚಯಿಸಿದರು. ಲಿಟ್ಲ್ ಲೇಸ್ ಅಂಡ್ ಪ್ಲೇಸ್ ಎಂಬುದು ಇಂಗ್ಲಿಷ್‌ನಲ್ಲಿ ಪ್ರಕಟವಾಗಿರುವ ಕವನ ಸ್ರಂಗಹ. ಇವಲ್ಲದೆ ಇನ್ನೂ ಅಪೂರ್ಣಾವಸ್ಥೆಯಲ್ಲಿದ್ದ ಪ್ರಕಟಗೊಳಿಸಬಹುದಾಗಿದ್ದ ಅನೇಕ ಪೌರಾಣಿಕ ಸಾಮಾಜಿಕ ನಾಟಕಗಳೂ ಇವೆ. ಕೀಚಕ, ಮೊಮ್ಮಗಳ ಮುಯ್ಯಿ, ಹೆಣ್ಣಿನ ಬಾಳು ಕಣ್ಣೀರೇನೆ, ಶಂಬರನ ಶೃಂಗಾರ ಅಥವಾ ಮುಟ್ಟುಗಳಿಗೆ ಮುಟ್ಟು ಅಥವಾ ವಿವಿಧ ವಿನೋದ್ಹಾವಳಿ ಎಂಬ ಕೆಲವು ನಾಟಕಗಳು ಇವರ ನಿಧನಾನಂತರ ಪ್ರಕಟವಾಗಿವೆ. ದಿ ಪರ್ಪಸ್, ಕರ್ಣ, ಕೀಚಕ, ಅಮ್ಮಾವ್ರ ಗಂಡ, ಹೋಂ ರೂಲು, ಬಂಡ್ವಾಳ್ವಿಲ್ಲದ್ಬಡಾಯಿ ನಾಟಕಗಳನ್ನು ಅನುಕ್ರಮವಾಗಿ ಸಂಸ್ಕೃತ, ಮರಾಠಿ, ಬಂಗಾಲಿ, ತೆಲುಗು, ಹಿಂದಿ ಮತ್ತು ಉತ್ತರ ಕರ್ನಾಟಕದ ದೇಸೀ ಭಾಷೆಗಳಿಗೆ ಪರಿವರ್ತಿಸಲಾಗಿದೆ.

ಲಂಡನ್ನಿನ ರಂಗಮಂದಿರಗಳಲ್ಲಿ ತಾವು ಅಭ್ಯಸಿಸಿದ ನಾಟಕಗಳಿಂದ ಕೈಲಾಸಂ ಅನೇಕಾನೇಕ ಹೊಸ ವಿಷಯಗಳನ್ನು ಗ್ರಹಿಸಿದರು. ಇಬ್ಸೆನ್, ಷಾ, ಗಾಲ್ಸ್‌ವರ್ದಿಯಂಥ ನಾಟಕಕಾರರ ಕೆಚ್ಚೆದೆ, ಪ್ರಖರ ಬುದ್ಧಿ, ಆಗಿನ ಜನಜೀವನದಲ್ಲಿನ ಅನ್ಯಾಯ, ದುರ್ವ್ಯಾಪಾರ, ದುರ್ನಡತೆಗಳನ್ನು ಕಂಡು ನಾಟಕಕಾರರು ಕನಲಿದುದು, ದೀನದಲಿತರ ಮನಃಕ್ಲೇಶಗಳು - ಅವರ ಮನವನ್ನು ಕದಡಿ, ಕರುಳು ಕರಗಿಸಿ ಮನ ಮರುಗುವಂತೆ ಮಾಡಿದುವು. ನಿಜ ಜೀವನಕ್ಕೆ ದೂರವಾದ ಅನೇಕಾನೇಕ ನಿರರ್ಥಕ ಗೊಡ್ಡು ಸಂಪ್ರದಾಯಗಳನ್ನು ರೂಢಮೂಲವಾಗಿ ಕಿತ್ತೊಗೆಯಬೇಕೆಂಬ ದೃಢಸಂಕಲ್ಪ, ಇಂತಿದ್ದ ಜನಜೀವನವನ್ನು ರಂಗಸ್ಥಳದಲ್ಲಿ ಆ ಜನತೆಯ ಎದುರಿಗೇ ಪ್ರತಿಬಿಂಬಿಸಿ ತನ್ಮೂಲಕವಾದರೂ ಸಮಾಜ ಜೀವನವನ್ನು ಪರಿಷ್ಕರಿಸುವ ಅವರ ಸಾಹಸಪೂರ್ಣ ಪ್ರಯತ್ನಗಳು -ಇವು ಕೈಲಾಸಂ ಅವರ ಮನಸ್ಸಿನ ಮೇಲೆ ತುಂಬ ಪರಿಣಾಮ ಬೀರಿದುವು. ಜೊತೆಗೆ ಈ ಪ್ರಯತ್ನಗಳ ಸಾಧನವಾಗಿ ಅವರೆಲ್ಲ ಜನತೆಯ ದಿನಬಳಕೆಯ ಭಾಷೆಯನ್ನು ಬಳಸಿಕೊಂಡದ್ದೂ ಇವರಿಗೆ ಮೆಚ್ಚುಗೆಯಾಯಿತು. ಅವರ ಸತ್ಯಪ್ರಿಯತೆ, ಕುಶಲಮತಿ, ಸಮಾಜದ ಕೆಲವಾರು ಜನದ ಮೂಲಕವೆ ಹೊಸ ಹೊಸ ಸಂದೇಶಗಳನ್ನು ಜನತೆಗೆ ನೀಡುವ ಕ್ರಮ ಎಲ್ಲಕ್ಕಿಂತ ಹೆಚ್ಚಾಗಿ ಅವರು ಜೀವನದ ನೋವುನಲಿವುಗಳ ಕಟುಸತ್ಯಕ್ಕೆ ಹಾಸ್ಯದ ಹೊದಿಕೆಯನ್ನು ಅಳವಡಿಸಿರುವ ಜಾಣ್ಮೆ -ಇವು ಕೈಲಾಸಂ ಅವರಿಗೆ ತುಂಬ ಪ್ರಿಯವಾದವು. ಚಿಕ್ಕಂದಿನಿಂದಲೂ ತಮ್ಮಲ್ಲಿ ಸುಪ್ತವಾಗಿದ್ದ ಶುದ್ಧಹಾಸ್ಯದ ಪ್ರವೃತ್ತಿಯನ್ನು ಈ ನಾಟಕತಂತ್ರ ಶಿಕ್ಷಣ ಬೆಳಕಿಗೆ ತಂದಿತು.

ಅನುಕರಣದಲ್ಲಿ ಅದ್ವಿತೀಯರೂ ಅಭಿನಯದಲ್ಲಿ ಸಿದ್ಧಹಸ್ತರೂ ಪಾಶ್ಚಾತ್ಯ ಭಾರತೀಯ ಸಂಗೀತಶಾಸ್ತ್ರ ಪಂಡಿತರೂ ಇವೆರಡೂ ಪದ್ಧತಿಯ ಹಾಡುಗಳನ್ನು ನುಡಿಯುವುದರಲ್ಲಿ ಕಟುತರ ಅಭ್ಯಾಸ ನಡೆಸಿ ಜ್ಞಾನವೃದ್ಧಿ ಮಾಡಿಕೊಂಡವರೂ ಆದ ಕೈಲಾಸಂ ತಮ್ಮ ಭಾರತೀಯತೆ, ಪರಂಪರಾಗತವಾಗಿಯೂ ವಂಶಪಾರಂಪರ್ಯದಿಂದಲೂ ಬಂದ ಉಚ್ಚ ಸಂಸ್ಕೃತಿ ಇವನ್ನು ಮರೆಯದೆ ತಮ್ಮ ಕೃತಿರಚನೆಯಿಂದ ಅವಕ್ಕೆ ಕುಂದಣವಿಕ್ಕಿದರು. ಭಾರತೀಯರಿಗೆ ಪುರಾಣಗಳೇ ಉಸಿರು. ಅಂತೆಯೇ ರಾಮಾಯಣ, ಭಾರತ, ಭಾಗವತಾದಿ ಮಹಾಕಾವ್ಯಗಳ ದಿವ್ಯ ವ್ಯಕ್ತಿಗಳ ದರ್ಶನವನ್ನು ಸಾಮಾಜಿಕ ನಾಟಕಗಳ ಸಂಭಾಷಣೆಯ ನೇಯ್ಗೆಯಲ್ಲಿ ಹಾಸುಹೊಕ್ಕಾಗಿ ನಯವಾಗಿ ಹೊಂದಿಸಿ ಸಮಾಜದ ರೋಗರುಜಿನ ದೌರ್ಬಲ್ಯಗಳಿಗೆ ಆಯಾ ಸಮಾಜ ಜೀವಿಗಳಲ್ಲಿ ಅನುಭವಿಕರಾದವರು ತಾವಾಗಿ ಸ್ವಾಭಾವಿಕವಾಗಿ ಲೀಲಾಜಾಲವಾಗಿ ಸಿದ್ಧೌಷಧಗಳನ್ನು ಕಂಡುಕೊಳ್ಳುವಂತೆ ಪ್ರಚೋದಿಸಿದರು. ಅಂತೆಯೇ ಇವರ ಎಲ್ಲ ನಾಟಕಗಳೂ ಸದ್‌ಬುದ್ಧಿ ಮತ್ತು ಸತ್‌ಕ್ರಿಯೆಗಳನ್ನು ಪ್ರಚೋದನ ಗೊಳಿಸುವಂತಿವೆ.

ಕನ್ನಡದಲ್ಲಿ ಆಡುಭಾಷೆಯನ್ನು ಬಳಸಿ ನಾಟಕ ರಚಿಸಿದವರಲ್ಲಿ ಕೈಲಾಸಂ ಅಗ್ರಗಣ್ಯರು. ಪಾಶ್ಚಾತ್ಯ ನಾಟಕಗಳಲ್ಲಿ ಆಗ ಪ್ರಚಲಿತವಾಗಿದ್ದ ಈ ನೂತನ ವಿಧಾನವನ್ನು ಕನ್ನಡಕ್ಕೆ ತಂದುಕೊಂಡ ಕೀರ್ತಿಯೂ ಇವರದೇ. ಇವರು ಬಳಸಿದ ಆಡುಭಾಷೆಯಾದರೋ ಅಚ್ಚಕನ್ನಡವಲ್ಲ. ಅರ್ಧಮರ್ಧ ಇಂಗ್ಲಿಷ್ ಬೆರೆತ ಕಲಬೆರಕೆ ಭಾಷೆ, ಅದಕ್ಕೆ ಕಾರಣ ವಿದ್ಯಾವಂತರೆಂದು ಆಗ ಮೆರೆಯುತ್ತಿದ್ದ ಮೈಸೂರಿನ ಮಧ್ಯಮವರ್ಗದ ನಾಗರಿಕರು. ಅವರು ತಮ್ಮ

ನಿತ್ಯವ್ಯವಹಾರದಲ್ಲಿ. ಬಳಸುತ್ತಿದ್ದುದ್ದೇ ಈ ಭಾಷೆ. ಒಮ್ಮೊಮ್ಮೆ ಇಲ್ಲಿನ ಬೆರಕೆ ಅತಿರೇಕಕ್ಕೂ ಹೋಗಿ ಅಸಹ್ಯವಾಗುತ್ತಿದ್ದುದಲ್ಲದೆ ಕನ್ನಡಕ್ಕೆ ಇದರಿಂದ ಎಂಥ ಅಪಚಾರವಾಗುತ್ತಿದೆಯೆಂಬ ಕಲ್ಪನೆಯೂ ಅವರಿಗೆ ಇರುತ್ತಿರಲಿಲ್ಲ. ಏನು ಮಿಸ್ಟರ್ ಕೈಲಾಸಂ ನಿಮ್ಮ ಡ್ರಾಮಾಸ್‌ನಲ್ಲೆಲ್ಲ ಹಾಫ್ ಎ ಡಜನ್ ಇಂಗ್ಲಿಷ್ ವರ್ಡ್ಸ್‌ಗೆ ಒಂದು ಕನ್ನಡ ವರ್ಡ್ ಯೂಸ್ ಮಾಡ್ತೀರಲ್ಲ. ಹ್ಯಾಗೆ ಅಂಡರ್‌ಸ್ಟ್ಯಾಂಡ್ ಆಗತ್ತೆ ಆರ್ಡಿನರಿ ಪೀಪಲ್‌ಗೆ ಎಂದು ತುಂಬಿದ ಸಭೆಯಲ್ಲಿ ಒಬ್ಬರು ಕೈಲಾಸಂ ಅವರನ್ನು ಪ್ರಶ್ನಿಸಿದರಂತೆ. ಅದಕ್ಕೆ ಕೈಲಾಸಂ ನೀವು ಕೇಳಿದ ಪ್ರಶ್ನೆ ಹಾಗೇನೇ ಎಂದು ಉತ್ತರಿಸಿದರಂತೆ! ಕೈಲಾಸಂ ತಮ್ಮ ನಾಟಕಗಳಲ್ಲಿ ಉಪಯೋಗಿಸಿರುವ ಭಾಷೆ ಅದನ್ನಾಡುತ್ತಿರುವ ಸಮಾಜದ ಮುಖಕ್ಕೆ ಕನ್ನಡಿ ಹಿಡಿದಂತಿದೆ. ಸ್ವಲ್ಪ ಅತಿ ಎನಿಸುವಂತೆ ಉತ್ಪ್ರೇಕ್ಷಿಸಿ, ವಿಡಂಬಿಸಿ ನಾಟಕಕಾರ ಅದನ್ನು ಪ್ರೇಕ್ಷಕರ ಮನಮುಟ್ಟಿಸುತ್ತಾನೆ. ಈ ಆಡುಭಾಷೆಯ ಉಪಯೋಗವೂ ಸಮಯೋಚಿತ. ಬೇಕೆಂದೇ ಅದನ್ನು ಜಗ್ಗಿಸುವ ಚಟವೂ ಕೈಲಾಸಂಗಿಲ್ಲ. ಅಂತೆಯೇ ಒಂದು ಇಂಗ್ಲಿಷ್ ಪದವನ್ನೂ ಬೆರೆಸದೆ ಶುದ್ಧವಾಗಿ ಅರ್ಥವತ್ತಾಗಿ ಆದರೂ ಸರಳವಾಗಿ ಮಾತನಾಡುವ ಜನರೂ ಸಮಾಜದಲ್ಲಿ ಹೇರಳವಾಗಿದ್ದಾರೆಂಬುದನ್ನೂ ಕೆಲವು ನಾಟಕಗಳಲ್ಲಿ ಕಾಣಬಹುದು. ಹೊಸ ವಿದ್ಯಾಭ್ಯಾಸ ಪದ್ಧತಿಯಿಂದ ಸಂಸ್ಕೃತಿಯನ್ನು ಮರೆತು ಸಭ್ಯತೆಯ ಗೆರೆದಾಟಿದ ಜನತೆ ಸಮಾಜವನ್ನು ಎಂಥ ದುಃಸ್ಥಿತಿಗೆ ತಂದು ನಿಲ್ಲಿಸಿದೆ ಎಂಬುದನ್ನು ಅನೇಕ ನಾಟಕಗಳು ಎತ್ತಿ ತೋರುತ್ತವೆ. ಈ ದುಸ್ಥಿತಿಗಳಿಂದ ಕೂಡಿದ ಸಮಾಜದಲ್ಲೂ ಸಜ್ಜನರೂ ಸುಶಿಕ್ಷಿತರೂ ಆದ ಹಿರಿಯರೂ ಕಿರಿಯರೂ ಇನ್ನೂ ಇದ್ದಾರೆ. ಅವರ ಹಿರಿತನವನ್ನು ಕಂಡುಕೊಂಡು ಅದಕ್ಕೆ ಮನ್ನಣೆಯಿತ್ತು ಸಮಾಜ ಜೀವನವನ್ನು ಅಂಥವರ ಸಹಾಯ ಸಹಾನುಭೂತಿ ಸಹಕಾರಗಳಿಂದ ಸುಧಾರಿಸಬಹುದು ಎಂಬ ಧ್ವನಿಯಂತೂ ಈ ನಾಟಕಗಳಲ್ಲಿ ಎದ್ದು ಕಾಣುತ್ತದೆ. ಸಮಾಜದಲ್ಲಿ ಟೊಳ್ಳೂ ಇದೆ. ಗಟ್ಟಿಯೂ ಇದೆ. ಪರಿಸ್ಥಿತಿ ಸನ್ನಿವೇಶಗಳ ಪ್ರಭಾವದಿಂದ ಹಾಸ್ಯದ ಕುಲುಮೆಯಲ್ಲಿ ಸಮಾಜಜೀವಿ ಕುದಿದಾಗ ಟೊಳ್ಳು ಮಾಯವಾಗಿ ಗಟ್ಟಿ ಉಳಿಯುತ್ತದೆ. ಅಂಥ ಗಟ್ಟಿ ಉಳಿಯಲೆಂಬುದೇ ಕೈಲಾಸಂ ಕೃತಿಗಳ ಉದ್ದೇಶ. ಹಾಗಾದಾಗ ಸಮಾಜದ ಉದ್ಧಾರ ತಾನೇ ತಾನಾಗಿ ಆಗುತ್ತದೆ ಎಂಬ ಘನತತ್ತ್ವ ಇವರ ನಾಟಕಗಳ ಧ್ವನಿ.

ಇವರು ಪಾಶ್ಚಾತ್ಯ ಸಾಮಾಜಿಕ ಹಾಗೂ ಪೌರಾಣಿಕ ನಾಟಕಾವಲೋಕನ ಮತ್ತು ಅಧ್ಯಯನಗಳಿಂದ ಪ್ರೇರಿತರಾದರಷ್ಟೇ ಹೊರತು ವಸ್ತುತಃ ಅವುಗಳನ್ನೇ ಇಲ್ಲಿಗೆ ತಂದುಕೊಳ್ಳಲಿಲ್ಲ. ಕನ್ನಡ ಸಮಾಜದಿಂದ ಎತ್ತಿಕೊಂಡ ಕಥಾವಸ್ತುವನ್ನು ಬಳಸಿಕೊಂಡು ತಮ್ಮದೇ ಆದ ವೈಖರಿಯಿಂದ ನಾಟಕ ಕಟ್ಟಿರುವುದು ಕೈಲಾಸಂ ಅವರ ವೈಶಿಷ್ಟ್ಯ. ಆಗ ಜಿಲ್ಲಾಧಿಕಾರಿಗಳಾಗಿದ್ದ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಕೈಲಾಸಂರ ಬಗ್ಗೆ ಅಪಾರ ಗೌರವ ಹೊಂದಿದ್ದು ಅವರನ್ನು ತಮ್ಮ ಮನೆಯಲ್ಲಿ ಕೆಲವು ದಿನಗಳು ಅತಿಥಿಯಾಗಿ ಸತ್ಕರಿಸಿ ಅವರ ನಾಟಕ ಪ್ರದರ್ಶನಗಳಿಗೆ ಪ್ರೋತ್ಸಾಹ ನೀಡಿದರು.

ಇತರರು ನಡೆದು ಸವೆಸಿದ ಜಾಡು ಹಿಡಿಯದೆ ನಾಟಕ ಪ್ರಪಂಚದಲ್ಲಿ ಹೊಸ ಹಾದಿ ಹಾಕಿಕೊಟ್ಟ ಹಿರಿತನ ಕೈಲಾಸಂ ಅವರದು. ಸಮಾಜಜೀವನದ ವೈವಿಧ್ಯ, ಅಂಕುಡೊಂಕುಗಳಿಗೆ ಭೂತಗನ್ನಡಿ ಹಿಡಿದು ಅದರ ಉಬ್ಬಿದ ಪ್ರತಿಬಿಂಬಗಳನ್ನು ನಮ್ಮೆದುರಿಗೆ ನಿಲ್ಲಿಸಿ, ಬಾಳನ್ನು ಆಳವಾಗಿ ಹೊಕ್ಕು, ಜನತೆಯ ಕಷ್ಟ ಕಾರ್ಪಣ್ಯ, ಮರೆಮೋಸ, ಸಾವುನೋವುಗಳನ್ನು ತೀಕ್ಷ್ಣವಾಗಿ ಪರಿಶೀಲಿಸಿ ಸಮಾಜಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಎದುರಾಗುವ ಕಣ್ಣೀರಿನ ಕಡಲನ್ನು ಕೈಲಾಸಂ ತಮ್ಮ ಹಾಸ್ಯದ ಹರಿಗೋಲಿನಿಂದ ದಾಟಿಸುತ್ತಾರೆ. ಜನಮನದಲ್ಲಿ ತಾಂಡವವಾಡುತ್ತಿರುವ ನೋವುನಲಿವು ಆಸೆ ಆಮಿಷಗಳನ್ನು ತಾವೂ ಅನುಭವಿಸುವುದಲ್ಲದೆ ತಾವು ಸೃಷ್ಟಿಸಿದ ಪಾತ್ರಗಳಿಗೆ ಜೀವಕಳೆ ತುಂಬಿ ತಾವು ಮಾತ್ರ ದೂರ ನಿಲ್ಲುವುದು ಕೈಲಾಸಂ ನಾಟಕ ನಿರೂಪಣೆಯ ವೈಖರಿ. ಸಂವಿಧಾನ ಚಾತುರ್ಯ, ರಸೈಕ್ಯತೆ, ಸಂಭಾಷಣೆಯಲ್ಲಿ ಭಾವಪೂರ್ಣವಾಗಿ ಅರ್ಥಪೂರ್ಣವಾಗಿ ಜೀವನದ ಸಮಸ್ಯೆಗಳ ವಿವೇಚನೆ, ಸನ್ನಿವೇಶಗಳ ರಸಸ್ಥಾನ ಹಿಡಿದು ಮಿಡಿಯಬಲ್ಲ ಅಮಿತಶಕ್ತಿ -ಇವು ಕೈಲಾಸಂ ಕೃತಿಗಳ ಸಾಮಾನ್ಯ ಲಕ್ಷಣಗಳು.

ಇವರು ಒಬ್ಬ ಮಹಾ ವಿಸ್ಮಯಕಾರ ವ್ಯಕ್ತಿ. ವಾಕ್ಚತುರ, ರಸಿಕ, ನಗೆಗಾರ, ಪ್ರಾಜ್ಞ, ವೇದಾಂತಿ, ಅಭಿನಯಚತುರ. ಇವರಲ್ಲಿ ಕುಂದುಬರುವ ಒಂದು ಅಸಾಧಾರಣ ಶಕ್ತಿಯೆಂದರೆ ಪರಸ್ಪರ ಸಂಬಂಧವಿಲ್ಲದ ಭಾವಗಳ ಅಥ'ವಾ ಮಾತುಗಳ ಅನಿರೀಕ್ಷಿತ ಸಂಯೋಜನೆ ಅಥ'ವಾ ವೈದೃಶ್ಯ ನಿರೂಪಣೆ'ಯಿಂದ ಥ'ಟ್ಟನೆ ಬುದ್ಧಿಗೆ ಆನಂದವನ್ನುಂಟುಮಾಡುವ ಚತುರೋಕ್ತಿ.

ಮದರಾಸಿನಲ್ಲಿ 1945ರಲ್ಲಿ ನಡೆದ 29ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಕೈಲಾಸಂ ಅವರನ್ನು ಆಯ್ಕೆ ಮಾಡಿತ್ತು. ಈ ಸಮ್ಮೇಳನದಲ್ಲಿ ಇವರು ತಮ್ಮ ಅಧ್ಯಕ್ಷಭಾಷಣದಲ್ಲಿ 'ಹಿರಿಯರುಂ ಕಿರಿಯರುಂ ಕಿಲಕಿಲನೆ ನಕ್ಕಿರಡು ಕಣ್ಣಹನಿಯಿತ್ತರೆನಗದುವನಿತೆ ಸಾಕು' ಎಂಬುದಾಗಿ ತಮ್ಮ ಅಂತರಂಗದ ಹಂಬಲವನ್ನು ಅಭಿವ್ಯಕ್ತಪಡಿಸಿದರು. ಅನಂತರ ಕೆಲವೇ ದಿನಗಳಲ್ಲಿ ಕೈಲಾಸಂ ಬೆಂಗಳೂರಿನಲ್ಲಿ ತಮ್ಮ ವಿಶ್ವಾಸಿಗಳೂ ಬಂಧುಗಳೂ ಆದ ವಿ.ಟಿ.ಶ್ರೀನಿವಾಸನ್ ಅವರ ಮನೆಯಲ್ಲಿ ನಿಧನಹೊಂದಿದರು (1946). (ಬಿ.ಎಸ್.ಆರ್.,ಕೆ.ವಿ.ಐ.)

**ಕೈವಾರ** : ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಒಂದು ಗ್ರಾಮ. ಪವಿತ್ರ ಕ್ಷೇತ್ರ. ಚಿಂತಾಮಣಿಯಿಂದ ನೈರುತ್ಯಕ್ಕೆ ಬೆಂಗಳೂರು ಮಾರ್ಗದಲ್ಲಿ 13ಕಿಮೀ ದೂರದಲ್ಲಿದೆ. ಇದು ಹೋಬಳಿ ಕೇಂದ್ರ.

ಕೈವಾರ ಮಹಾಭಾರತದಲ್ಲಿ ಬರುವ ಏಕಚಕ್ರಪುರವೆಂದು ಹೇಳುವರು. ಅರಗಿನ ಮನೆಯಿಂದ ತಪ್ಪಿಸಿಕೊಂಡ ಪಾಂಡವರು ಕೆಲವು ಕಾಲ ಇಲ್ಲಿದ್ದರೆಂದೂ ಈ ಗ್ರಾಮದ ಹತ್ತಿರವಿರುವ ಚಿದಂಬರಗಿರಿ ಅಥವಾ ಚಿಕ್ಕಬೆಟ್ಟದಲ್ಲಿ ಇದ್ದ ಬಕಾಸುರನನ್ನು ಭೀಮ ಕೊಂದು ಅವನ ಶವವನ್ನು ಬೆಟ್ಟದ ಗುಹೆಯೊಂದರಲ್ಲಿ ಮುಚ್ಚಿಟ್ಟನೆಂಬುದೂ ಸ್ಥಳಪುರಾಣ. ಬಕಾಸುರನಿದ್ದನೆಂದು ಹೇಳುವ ಒಂದು ಗವಿ ಬೆಟ್ಟದಲ್ಲಿದೆ. ಕೆಲವೊಮ್ಮೆ ಮಳೆಯ ದಿನಗಳಲ್ಲಿ ಕೊರಕಲುಗಳಿಂದ ಕೆಂಪು ಅಥವಾ ಬಿಳಿಯ ಬಣ್ಣದ ಮಣ್ಣಿನ ರಾಡಿಯ ನೀರು ಒಸರುತ್ತದೆ. ಇದು ಬಕಾಸುರನ ರಕ್ತ ಎಂದು ಸ್ಥಳೀಯರ ನಂಬಿಕೆ.

ಇಲ್ಲಿ ಅಮರನಾರಾಯಣ, ಭೀಮೇಶ್ವರ, ನಕುಲೇಶ್ವರ ಸಹದೇವೇಶ್ವರ ದೇವಾಲಯಗಳಿವೆ. ಇವೆಲ್ಲ 1283ಕ್ಕೆ ಮುಂಚೆಯೇ ಇದ್ದುವೆಂದು ಇಲ್ಲಿ ದೊರಕಿರುವ ತಮಿಳು ಶಾಸನಗಳಿಂದ ತಿಳಿದುಬರುತ್ತದೆ. ಬಹುಶಃ ಇವು 1280ರ ರಚನೆಗಳು. ಆದರೆ ಎಲ್ಲವೂ ಬಹುವಾಗಿ ನವೀಕೃತವಾಗಿವೆ.



ಅಮರನಾರಾಯಣ ದೇವಾಲಯದ ಅರ್ಧಮಂಟಪ

ಅಮರನಾರಾಯಣ ದೇವಾಲಯ ಇಲ್ಲಿಯ ಪ್ರಧಾನ ಗುಡಿ ಹಾಗೂ ಮುಖ್ಯ ವಾಸ್ತು ಕೃತಿ. ಇಟ್ಟಿಗೆಗಳಿಂದ ಕಟ್ಟಿದ ಶಿಖರವನ್ನುಳ್ಳ ಗರ್ಭಗೃಹ, ಸಣ್ಣ ಸುಕನಾಸಿ, ನಾಲ್ಕು ಕಂಬಗಳಿರುವ ನವರಂಗ, ಉತ್ತರ ಭಾಗದಲ್ಲಿ ಒಂದು ಸಣ್ಣ ಗುಡಿ ಮತ್ತು ಮುಖಮಂಟಪಗಳಿಂದ ಕೂಡಿದೆ. ಮುಖಮಂಟಪ ಸುಂದರವಾಗಿದ್ದು ಮುಂದಿನ ಎರಡು ಕಂಬಗಳ ಮೇಲೆ ವಿಮಾನ, ಸಿಂಹ ಮತ್ತು ಇತರ ಪ್ರಾಣಿಗಳ ಚಿತ್ರಗಳನ್ನು ಕೆತ್ತಲಾಗಿದೆ.

ಉತ್ತರ ಭಾಗದ ಕಂಬದ ಮೇಲೆ ಹಾರುತ್ತಿರುವ ಸಿಂಹ, ಮಕರ ಮತ್ತು ಗಂಧರ್ವರ ಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಮಹಾದ್ವಾರ ಉತ್ತಮ ಕೆತ್ತನೆಗಳಿಂದ ಕೂಡಿದೆ. ದಕ್ಷಿಣ ದ್ವಾರಸ್ತಂಭದ ಮೇಲೆ ಹಂಸ, ನವಿಲು, ಸಿಂಹ, ಹುಲಿ ಮತ್ತು ಸವಾರಿ ಆನೆಗಳನ್ನು ಚಿತ್ರಿಸಿದೆ. ಉತ್ತರ ದ್ವಾರಸ್ತಂಭ ಮತ್ತು ದಾರವಂದಗಳ ಮೇಲೆ ಗಂಧರ್ವರ ಶಿಲ್ಪಗಳಿವೆ. 25' ಚಚ್ಚೌಕದ ನವರಂಗದ ದಕ್ಷಿಣ ಭಾಗದಲ್ಲಿ ಕಲ್ಲಿನ ಕಿಟಕಿಯೂ ಉತ್ತರ ಭಾಗದಲ್ಲಿ ವಿಜಯನಗರ ಸಾಮ್ರಾಜ್ಯ ಕಾಲದ ಸೀತಾರಾಮಲಕ್ಷ್ಮಣರ ಪ್ರತಿಮೆಗಳಿರುವ ಸಣ್ಣ ಗುಡಿಯೂ ಇವೆ. ನವರಂಗದ ಚಾವಣಿಯ ಮಧ್ಯದಲ್ಲಿ ಒಂಬತ್ತು ಫಲಕಗಳುಂಟು. ನಡುವೆ ಹಂಸವಾಹನ ತ್ರಿಮುಖ ಬ್ರಹ್ಮನನ್ನು ಸುತ್ತಲೂ ಅಷ್ಟದಿಕ್ಪಾಲಕರನ್ನೂ ಕಡೆಯಲಾಗಿದೆ. ಇಲ್ಲಿಯ ಕಂಬಗಳ ಮೇಲೆ ವಿವಿಧ ದೇವತೆಗಳ, ಗಂಧರ್ವರ ಮತ್ತು ಸಿಂಹಗಳ ಚಿತ್ರಗಳಿವೆ. ಸುಕನಾಸಿ ಚಿಕ್ಕದು. ಗರ್ಭಗುಡಿಯಲ್ಲಿ ಅಮರನಾರಾಯಣನ ಸುಂದರ ಪ್ರತಿಮೆ ಇದೆ.

ಭೀಮೇಶ್ವರ ದೇವಾಲಯ ಅಮರನಾರಾಯಣ ದೇವಾಲಯಕ್ಕಿಂತ ದೊಡ್ಡದು. ಇದರಲ್ಲಿ ಗರ್ಭಗುಡಿ, ಸುಕನಾಸಿ, ಅರ್ಧಮಂಟಪ ಮತ್ತು ರಂಗಮಂಟಪಗಳುಂಟು. ಇಲ್ಲಿರುವ ಹದಿನಾರು ಮುಖಗಳ ಕಂಬಗಳ ಮೇಲೆ ದೇವತೆಗಳ, ವೀರರ, ಹೂ ಬಳ್ಳಿ ಎಲೆಗಳ ಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಮತ್ತು ಮುಂಭಾಗದ ಕಂಬಗಳು ವಿಜಯನಗರದ ಶೈಲಿಗೆ ಸೇರಿದವು. ಚಾವಣಿಯ ಕೆತ್ತನೆಗಳು ಮತ್ತು ಕೆಲವು ತಮಿಳು ಶಾಸನಗಳು 1294ರ ಸುಮಾರಿಗೆ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲಕ್ಕೆ ಸೇರುತ್ತವೆ. ಆಗ ಇದ್ದ ದೇವಾಲಯುವನ್ನು ಅಚ್ಯುತರಾಯ ಕೃಷ್ಣದೇವರಾಯರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿರಬಹುದು.

ಸಹದೇವೇಶ್ವರ ಮತ್ತು ನಕುಲೇಶ್ವರ ಮಂದಿರಗಳು ಸಣ್ಣವು. ಸಹದೇವೇಶ್ವರ ಮಂದಿರದ ಗೋಡೆಗಳ ಮೇಲೆ ಅನೇಕ ತಮಿಳು ಶಾಸನಗಳುಂಟು. ಬಹುಶಃ ಹೊಯ್ಸಳ ಸಾಮಂತನಾಗಿದ್ದ 1280-90ರ ಸುಮಾರಿನಲ್ಲಿ ಕೈವಾರ ನಾಡಿನ ರಾಜ್ಯಪಾಲನಾಗಿದ್ದ ಚೋಳ ದುಟ್ಟರಾದಿತ್ಯ ರಾಜನಾರಾಣಯನ ಉಲ್ಲೇಖಗಳು ಈ ಶಾಸನಗಳಲ್ಲಿವೆ. ಇಲ್ಲಿಯ ಶಿವದೇವಾಲಯಗಳನ್ನು ಈತ ಕಟ್ಟಿಸಿರಬಹುದು.

ನಾರೇಯಣಯೋಗಿಗಳೆಂಬ ಪ್ರಸಿದ್ಧ ಸಂತರು ಈ ಊರಿನಲ್ಲಿ ನೆಲಸಿದ್ದರು. ಅವರ ಸಮಾಧಿ ಮತ್ತು ದೇವಾಲಯ ಪವಿತ್ರ ತಾಣವಾಗಿದೆ. ಎಂ.ಎಸ್.ರಾಮಯ್ಯನವರು ಸ್ಥಾಪಿಸಿದ ಟ್ರಸ್ಟ್ ಈ ಊರಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿದೆ. (ಬಿ.ಕೆ.ಜಿ.)

**ಕೈವಾರ ನಾರೇಯಣ ಯೋಗಿ** (ಕೈವಾರ ನಾರಣಪ್ಪ) : 1730-1840. ಪ್ರಸಿದ್ಧ ಸಂತರು. ಚಿಂತಾಮಣಿ ತಾಲ್ಲೂಕು ಕೈವಾರ ಗ್ರಾಮದಲ್ಲಿ ಜನಿಸಿ, ನೆಲಸಿ ಮುಕ್ತರಾದವರು. ಇವರ ತಂದೆ ಕೊಂಡಪ್ಪ, ತಾಯಿ ಮುದ್ದಮ್ಮ. ಇವರು ತೆಲುಗು ಬಣಜಿಗರು, ಉದ್ಯೋಗ ವ್ಯವಸಾಯ ಮತ್ತು ಬಳೆಗಾರ ವೃತ್ತಿ. ಇವರ ವಿದ್ಯಾಭ್ಯಾಸ ಕೂಲಿಮಠದಲ್ಲಿ ನಡೆಯಿತು. ಇವರು ಮುನಿಯಮ್ಮನೆಂಬುವರನ್ನು ಮದುವೆ ಆದರು. ಈ ದಂಪತಿಗಳಿಗೆ ಮೂವರು ಮಕ್ಕಳು ಎರಡು ಗಂಡು, ಒಂದು ಹೆಣ್ಣು.

ನಾರಾಯಣಪ್ಪನವರಿಗೆ ಬಾಲ್ಯದಿಂದಲೇ ಆಸ್ತಿಕತೆ, ದೈವಭಕ್ತಿಗಳು ಬೆಳೆದುವು. ಆಕಸ್ಮಿಕಾಗಿ ಇವರಿಗೆ ವೆಂಕಟಗಿರಿಗುಡ್ಡದ ಕಣಿವೆಯಲ್ಲಿ ಒಬ್ಬ ಸಿದ್ಧಪುರುಷರ ಸಂದರ್ಶನವಾಯಿತು. ಅವರು ನಾರಣಪ್ಪನವರಿಗೆ ಒಂದು ಮಂತ್ರವನ್ನು ಉಪದೇಶಿಸಿ, ಬಾಯಲ್ಲಿ ಬೆಣಚು ಕಲ್ಲನ್ನಿಟ್ಟುಕೊಂಡು ಇದನ್ನು ಜಪಿಸುತ್ತಿರಬೇಕೆಂದೂ ಯಾವಾಗ ಬೆಣಚುಕಲ್ಲು ಸಕ್ಕರೆಯಂತೆ ಕರಗಿಹೋಗುವುದೋ ಆಗ ಮಂತ್ರ ಸಿದ್ಧಿಸಿತೆಂದು ತಿಳಿಯಬೇಕೆಂದೂ ಹೇಳಿದರು. ನಾರಣಪ್ಪನವರು ಅದೇಪ್ರಕಾರ ಜಪಿಸಿ ಮಂತ್ರಸಿದ್ಧಿ ಪಡೆದರಂತೆ. ಇವರ ಭಕ್ತಿಗೆ ಮೆಚ್ಚಿ ಕೈವಾರದ ಅಮರನಾರಾಯಣಸ್ವಾಮಿ ಗೊಲ್ಲನ ವೇಷದಲ್ಲಿ ಬಂದು ತತ್ತ್ವಮಸಿ ಎಂಬ ಮಹಾವಾಕ್ಯವನ್ನು ಉಪದೇಶಿಸಿದನಂತೆ. ನಾರಣಪ್ಪನವರು ವಿರಕ್ತರಾಗಿ ಸಂನ್ಯಾಸವನ್ನು ಸ್ವೀಕರಿಸಿ ಯೋಗಸಾಧನೆಯಲ್ಲಿ ನಿರತರಾಗಿ ನಾರೇಯಣ ಯೋಗಿಗಳು, ಯತಿಗಳು, ತಾತನವರು ಎಂದು ವಿಖ್ಯಾತರಾದರು.

ಯೋಗಸಾಧನೆ, ಭಜನೆಕೀರ್ತನೆಗಳನ್ನು ರಚಿಸಿ ತತ್ತ್ವವನ್ನು ಬೋಧಿಸುವುದು ನಾರೇಯಣ ಯೋಗಿಗಳ ಮುಖ್ಯ ಕಾರ್ಯಗಳಾಗಿದ್ದುವು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಇವರು ಕೃತಿಗಳನ್ನು ರಚಿಸಿದರು. ವೇದಾಂತ ಸಾರಾವಳಿ ನಾರೇಯಣ ಕವಿ ಶತಕ, ಭೀಮಲಿಂಗಶತಕ, ತಾರಕಬ್ರಹ್ಮಾನಂದಶತಕ, ಶ್ರೀಕೃಷ್ಣ ಚರಿತಾಮೃತ, ಯೋಗಸಾರ, ಕಾಲಜ್ಞಾನ ಮುಂತಾದವು ಇವರ ಕೃತಿಗಳು.

1840ರಲ್ಲಿ ಇವರು ಮುಕ್ತರಾದರೆಂದು ತಿಳಿದುಬರುತ್ತದೆ. ನಾರೇಯಣಾಶ್ರಮದಲ್ಲಿ ಇವರ ಸಮಾಧಿ ಇದೆ. ಇದರ ಬಲಗಡೆ ನಾರಾಯಣ ಯೋಗಿಗಳ ಶಿಲಾಮೂರ್ತಿ ಇರುವ ಮಂದಿರ ಇದೆ. ಎಡಗಡೆ ಇವರು ನೆಟ್ಟ ಅಶ್ವತ್ಥವೃಕ್ಷ ಮತ್ತು ತೋಡಿಸಿದ ಬಾವಿ ಇದೆ.

ಪ್ರತಿವರ್ಷ ಜ್ಯೇಷ್ಠ ಶುದ್ಧ ತದಿಗೆಯಂದು ಯೋಗಿಗಳ ಆರಾಧನೋತ್ಸವವೂ ಫಾಲ್ಗುಣ ಬಹುಳ ಪಾಡ್ಯದಲ್ಲಿ ರಥೋತ್ಸವವೂ ವೈಭವದಿಂದ ನಡೆಯುತ್ತವೆ. ನಾರಾಯಣ ಯೋಗಿಗಳ ಆಶ್ರಮ ಒಂದು ಧಾರ್ಮಿಕ ಕೇಂದ್ರವಾಗಿದೆ. (ಎನ್.ಆರ್.ಎಸ್)

**ಕೊಂಗಾಡಿಯಪ್ಪ :** 1861-1951 ಸಮಾಜಸೇವಾಧುರೀಣರು, ವಿದ್ಯಾಭಿಮಾನಿಗಳು. ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರದಲ್ಲಿ ಜನಿಸಿದ ಅಲ್ಲಿಯ ಆಂಗ್ಲೋವರ್ನಾಕ್ಯುಲರ್ ಶಾಲೆಯ ಮುಖ್ಯೋಪಾಧ್ಯಾಯರಾಗಿ ಅನೇಕವರ್ಷ ಸೇವೆಸಲ್ಲಿಸಿದರು. ಸಮಾಜಕ್ಕೆ ಸೇವೆ ಸಲ್ಲಿಸಲು

ಯೋಗ್ಯವಾದಂಥ ವಿದ್ಯೆಯನ್ನು ಒದಗಿಸಬೇಕೆಂಬ ಧ್ಯೇಯಕ್ಕಾಗಿ ದುಡಿದರು. ವಿದ್ಯಾರ್ಥಿಗಳು ಒಳ್ಳೆಯ ನಡತೆಯುಳ್ಳವರಾಗಿರಬೇಕೆಂಬ ಸದುದ್ದೇಶದಿಂದ ಸಾಮೂಹಿಕ ಭಜನೆ, ಗೀತಾ ಪಾರಾಯಣ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ತಮಗೆ ಸಾರ್ವಜನಿಕರಿಂದ ಕೊಡಲ್ಪಟ್ಟ ಗೌರವನಿಧಿಯೊಂದನ್ನು ಸಂಪೂರ್ಣವಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಿ, ತನ್ಮೂಲಕ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳು ದೊರೆಯುವಂತೆ ಮಾಡಿದ್ದಾರೆ. ಇವರ ಸ್ಮರಣಾರ್ಥವಾಗಿ ಸ್ಥಾಪಿತವಾಗಿರುವ ಲೋಕಸೇವಾನಿರತ ಕೊಂಗಾಡಿಯಪ್ಪ ಸ್ಮಾರಕ ವಿದ್ಯಾಸಂಸ್ಥೆ ದೊಡ್ಡಬಳ್ಳಾಪುರದಲ್ಲಿದೆ. ಇದರ ಆಶ್ರಯದಲ್ಲಿ ಪ್ರೌಢಶಾಲೆ ಮತ್ತು ಕಾಲೇಜು ನಡೆಯುತ್ತಿವೆ. ಇವರು ದೊಡ್ಡಬಳ್ಳಾಪುರ ಪುರಸಭೆಯ ಪ್ರಥಮ ಅಧ್ಯಕ್ಷರಾಗಿದ್ದರು.

ಇವರ ನಿಸ್ವಾರ್ಥ ಸೇವೆಯನ್ನು ಮೆಚ್ಚಿ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ ಲೋಕಸೇವಾನಿರತ ಎಂಬ ಬಿರುದನ್ನು ನೀಡಿದ್ದರು. (ಎಚ್.ಎಲ್.ಎಸ್.)

**ಕೊಂಗಾಳ್ವ ವಂಶ :** ಹಾಸನ ಜಿಲ್ಲೆಯ ಅರಕಲಗೂಡು ಮತ್ತು ಅದರ ಪಕ್ಕದಲ್ಲಿನ ಉತ್ತರ ಕೊಡಗಿನ ಕೆಲವು ಭಾಗಗಳನ್ನು ಒಳಗೊಂಡಿದ್ದ ಏಳು ಸಾವಿರ ಸೀಮೆ ಎಂಬ ಪ್ರದೇಶವನ್ನು 11-12ನೆಯ ಶತಮಾನಗಳಲ್ಲಿ ಆಳುತ್ತಿದ್ದ ರಾಜಮನೆತನ. ಕೊಂಗಾಳ್ವರ ರಾಜ್ಯ ಸು.880ರಲ್ಲಿ ಗಂಗ ಎಱೆಯಪ್ಪನು ಆಳುತ್ತಿದ್ದ ಕೊಂಗಲನಾಡು 8000 ಪ್ರದೇಶಕ್ಕೆ ಸರಿಸಮವಾಗಿದ್ದಿತೆಂದು ಕಾಣುತ್ತದೆ.

ಸು.1004-05ರಲ್ಲಿ ಚೋಳ ರಾಜರಾಜ ಪನಸೋಗೆಯ ಕಾಳಗದಲ್ಲಿ ಶತ್ರುಗಳನ್ನು ಸದೆಬಡಿಯುವವರೆಗೂ ಹೋರಾಡಿದ ಮನಿಜನೆಂಬುವನ ಶೌರ್ಯವನ್ನು ಮೆಚ್ಚಿ, ಅವನಿಗೆ ಪಟ್ಟವನ್ನು ಕಟ್ಟಿ ನಾಡನ್ನು ಕೊಡಬೇಕೆಂದು ಪಂಚವನ್ ಮಾರಾಯನಿಗೆ (ರಾಜೇಂದ್ರ ಚೋಳ) ಆದೇಶ ನೀಡಿದ್ದರಿಂದ ಪಂಚವನ್ ಮಾರಾಯ ಮನಿಜನಿಗೆ 'ಕ್ಷತ್ರಿಯಶಿಖಾಮಣಿ ಕೊಂಗಾಳ್ವ' ಎಂಬ ಬಿರುದನ್ನು ಕೊಟ್ಟು ಮಾಲವ್ವಿ ಗ್ರಾಮವನ್ನು

ನೀಡಿದನೆಂದು (ಸೋಮವಾರಪೇಟೆ ತಾಲ್ಲೂಕು ಮಾಲಂಬಿ) ಒಂದು ಶಾಸನದಿಂದ ತಿಳಿಯುತ್ತದೆ. ಈ ಮನಿಜ ಕೊಂಗಾಳ್ವ ರಾಜವಂಶದ ಆದ್ಯ ಮಾಂಡಲಿಕನೆಂದು ತಿಳಿಯಬಹುದು.

ಸು.1020ರ ಶಾಸನವೊಂದರಲ್ಲಿ ಬಡಿವ ಕೊಂಗಾಳ್ವನೆಂಬವನ ಉಲ್ಲೇಖ ಸಿಕ್ಕುತ್ತದೆ. ಇದೇ ಸಮಯದಲ್ಲಿರಬಹುದಾದ ಕಾಡವ ಕೊಂಗಾಳ್ವ ಎಂಬ ಮತ್ತೊಬ್ಬನೂ ಕಾಣಬರುತ್ತಾನೆ. ಆದರೆ ಇವನಿಗೂ ಮನಿಜನಿಗೂ ಇದ್ದ ಸಂಬಂಧ ತಿಳಿಯದು. ಅನಂತರ ಆಳಿದ ರಾಜೇಂದ್ರ ಚೋಳ ಪೃಥ್ವೀ ಮಹಾರಾಜ ಅಥವಾ ರಾಜೇಂದ್ರ ಚೋಳ ಕೊಂಗಾಳ್ವ ಪ್ರಬಲನಾದ ದೊರೆ. 1022 ಮತ್ತು 1026ರ ಎರಡು ಶಾಸನಗಳಲ್ಲಿ ಈತ ಹೊಯ್ಸಳ ನೃಪಕಾಮನ ಮೇಲೆ ಯುದ್ಧಮಾಡಿ ಜಯಗಳಿಸಿದ ಪ್ರಸ್ತಾಪವಿದೆ. ಬಹುಶಃ ಕೊಂಗಾಳ್ವರು ಚೋಳರ ಪರವಾಗಿ ಈ ಯುದ್ಧಗಳಲ್ಲಿ ಭಾಗವಹಿಸಿರಬೇಕು. ರಾಜೇಂದ್ರ ಚೋಳ ಕೊಂಗಾಳ್ವನ ಅನಂತರ ಸುಮಾರು ಮೂರು ದಶಕಗಳ ವರೆಗಿನ ಕೊಂಗಾಳ್ವರ ಯಾವ ಶಾಸನಗಳೂ ದೊರಕಿಲ್ಲ. 1059ರ ಮುಳೂರು ಶಾಸನದಲ್ಲಿ ಎರಡನೆಯ ರಾಜೇಂದ್ರ ಚೋಳನ ಹೆಸರು ಕಂಡುಬರುತ್ತದೆ. ಈತನ ತಂದೆ ರಾಜಾಧಿರಾಜ ಮತ್ತು ಪತ್ನಿ ಪೋಚಬ್ಬರಸಿ ಎಂದು ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಬಹುದು. ರಾಜೇಂದ್ರ ಚೋಳನ ಮಗ ಇಮ್ಮಡಿ ರಾಜಾಧಿರಾಜ. ಇವನ ಪತ್ನಿ ರುಕ್ಮಿಣಿದೇವಿ. ಈಕೆ ಒಂದು ವಿಗ್ರಹವನ್ನು ಪ್ರತಿಷ್ಠೆ ಮಾಡಿದ ಉಲ್ಲೇಖ ಮುಳ್ಳೂರಿನ ಶಾಸನವೊಂದರಲ್ಲಿ ಕಾಣಬರುತ್ತದೆ.

ಇಮ್ಮಡಿ ರಾಜಾಧಿರಾಜನ ಅನಂತರ ರಾಜೇಂದ್ರ ಪ್ರಿಥುವೀ ಕೊಂಗಾಳ್ವ (ಸು.1066-1105) ಆಳಿದ. ಈತನ ಪತ್ನಿ ಪದ್ಮಲದೇವಿ. ಕೊಂಗಾಳ್ವರು ಚೋಳ ರಾಜರ ಹೆಸರುಗಳನ್ನು ಅನುಕರಿಸಿದ್ದು ಮಾತ್ರವಲ್ಲದೆ ಅವರ ಬಿರುದುಗಳನ್ನೂ ಹೊಂದಿದ್ದರೆಂಬುದು 1079ರ ಶಾಸನವೊಂದರಲ್ಲಿ ದೊರಕುವ ಜಟಾಚೋಳಕುಳೋದಯಾಚಳಗಭಕ್ತಿಮಾಳಿ ಒರೆಯೂರು ಪುರವರಾಧೀಶ್ವರ ಇತ್ಯಾದಿ ಬಿರುದುಗಳಿಂದ ತಿಳಿಯುತ್ತದೆ. ತ್ರಿಭುವನಮಲ್ಲ ಚೋಳ, ಕೊಂಗಾಳ್ವ ಅದಟಾರಾದಿತ್ಯ ಎಂಬ ಬಿರುದುಗಳು ರಾಜೇಂದ್ರ ಪ್ರಿಥುವೀ ಕೊಂಗಾಳ್ವನಿಗೆ ಇದ್ದಂತೆ ತೋರುತ್ತದೆ. ಈ ಸಮಯದಲ್ಲಿ ಚಾಳುಕ್ಯರು ಪ್ರಬಲರಾಗುತ್ತಿದ್ದುದನ್ನು ಗಮನಿಸಿದ ರಾಜೇಂದ್ರ ಕೊಂಗಾಳ್ವ ಅವರ ವಿರೋಧವನ್ನು ಕಟ್ಟಿಕೊಳ್ಳಲು ಇಚ್ಛಿಸದೆ ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿರಬೇಕು. 1079ರ ಶಾಸನದಿಂದಲೇ ಚಂಗಾಳ್ವರು ಸಾಲಿಗ್ರಾಮದ ಮೇಲೆ ಮುತ್ತಿಗೆ ಹಾಕಿದಾಗ ತ್ರಿಭುವನಮಲ್ಲ ಕೊಂಗಾಳ್ವನ ಸೈನಿಕರಾದ ತ್ರೈಲೋಕ್ಯಸೆಟ್ಟಿ ಮತ್ತು ಚಳುಕಸೆಟ್ಟಿ ಎಂಬುವರು ಧೈರ್ಯದಿಂದ ಕಾದಾಡಿ ಚಂಗಾಳ್ವರನ್ನು ಸೋಲಿಸಿ ಮರಣ ಹೊಂದಿದರೆಂದು ತಿಳಿದುಬರುತ್ತದೆ. ಸು.1105ರಲ್ಲಿ ಚಂಗಾಳ್ವರು ಮತ್ತೊಮ್ಮೆ ಸಾಲಿಗ್ರಾಮದಲ್ಲಿ ಎದುರಿಸಿದಾಗ ರಾಜೇಂದ್ರ ಪ್ರಿಥುವೀ ಕೊಂಗಾಳ್ವನ ಪರವಾಗಿ ಹೋರಾಡಿದ ಮಾಸಯ್ಯನೆಂಬುವನು ಸತ್ತನೆಂದು ಒಂದು ವೀರಗಲ್ಲು ತಿಳಿಸುತ್ತದೆ. ರಾಜೇಂದ್ರ ಶೂರನಷ್ಟೆ ಅಲ್ಲದೆ ಧರ್ಮಿಷ್ಠನೂ ಆಗಿದ್ದ. ಇವನು ಹೊಸಹಳ್ಳಿಯ ವೀರಸಿದ್ಧೇಶ್ವರ ದೇವರಿಗೆ ದಾನಗಳನ್ನು ನೀಡಿದ ವಿವರಗಳನ್ನು ಎರಡು ಶಾಸನಗಳು ತಿಳಿಸುತ್ತವೆ. ಇವನು ಜೈನಬಸದಿಗಳಿಗೂ ದತ್ತಿಗಳನ್ನು ಬಿಟ್ಟಿದ್ದ.

ಇವನ ಅನಂತರ ವೀರಚೋಳ ಕೊಂಗಾಳ್ವದೇವ ರಾಜನಾದ. ಸು.1120ರಲ್ಲಿ ಆಳುತ್ತಿದ್ದ ಇವನಿಗೆ ದುದ್ಧಮಲ್ಲನೆಂಬ ಇನ್ನೊಂದು ಹೆಸರೂ ಇತ್ತೆಂದು ಊಹಿಸಬಹುದು. ಪ್ರಭಾಚಂದ್ರಸಿದ್ಧಾಂತ ಮುನಿಯ ಶಿಷ್ಯನಾಗಿ ಈತ ಹೆಣ್ಣಿಗಡಂಗ ಎಂಬಲ್ಲಿ ತಂಗಿದ್ದಾಗ ಜಿನಾಲಯವೊಂದರ ನಿರ್ಮಾಣಕ್ಕಾಗಿ ಪ್ರಭಾಚಂದ್ರದೇವನೆಂಬ ಮುನಿಗೆ ಒಂದು ಗ್ರಾಮವನ್ನು ದಾನ ಮಾಡಿದನೆಂದು ಒಂದು ಶಾಸನ ತಿಳಿಸುತ್ತದೆ.

ಅನಂತರ ಸುಮಾರು ಅರ್ಧ ಶತಮಾನದ ಕಾಲದ ಕೊಂಗಾಳ್ವ ರಾಜರ ವಿಷಯವೇ ತಿಳಿಯದು. ತ್ರಿಭುವನಮಲ್ಲ ವೀರದುದ್ಧ ಕೊಂಗಾಳ್ವದೇವ ಆಳುತ್ತಿದ್ದನೆಂದು 1171 ಮತ್ತು 1177ರ ಎರಡು ಶಾಸನಗಳಿಂದ ತಿಳಿದುಬರುತ್ತದೆ. ಇವನಿಗೆ ತ್ರಿಭುವನಮಲ್ಲ ಮತ್ತು ವೀರಚೋಳ ಎಂಬ ಹೆಸರುಗಳೂ ಇದ್ದುವು. ಇವನು ಮೊಳತೆಬೀಡಿನಿಂದ ರಾಜ್ಯವಾಳುತ್ತಿರುವಾಗ (1171) ಹೊಯ್ಸಳರು ಇಲ್ಲಿಗೆ ಮುತ್ತಿಗೆ ಹಾಕಿದರು. ಈ ಯುದ್ಧದಲ್ಲಿ ಹೊಯ್ಸಳರದೇ ಮೈಲುಗೈಯಾಯಿತು. 1177ರ ಅನಂತರ ಕೊಂಗಾಳ್ವ ರಾಜವಂಶ ಅಳಿಸಿಹೋದಂತೆ ಕಾಣುತ್ತದೆ.

ಕೊಂಗಾಳ್ವರು ಜೈನ ಮತ್ತು ಶೈವ ಧರ್ಮಗಳಿಗೆ ಪ್ರೋತ್ಸಾಹವನ್ನು ಕೊಟ್ಟರು. ಅದರಲ್ಲಿಯೂ ಜೈನಧರ್ಮ ಇವರ ಆಶ್ರಯವನ್ನು ವಿಶೇಷವಾಗಿ ಪಡೆಯಿತು. ಮುಳ್ಳೂರು ಆ ಕಾಲದಲ್ಲಿ ಜೈನಕೇಂದ್ರವಾಗಿತ್ತು. ಇಲ್ಲಿ ಅನೇಕ ಜೈನಬಸದಿಗಳಿದ್ದವು. ಇಲ್ಲಿಯ ಗುರು ಪರಂಪರೆಯಲ್ಲಿ ಖ್ಯಾತನಾದವನು ತಿಪುಳ ಗಣ ನಂದಿಸಂಘ ಅರುಂಗಳಾನ್ವಯಕ್ಕೆ ಸೇರಿದ ಪುಷ್ಪಸೇನ ಸಿದ್ಧಾಂತನ ಶಿಷ್ಯ ಗುಣಸೇನ ಪಂಡಿತ. ಹೊಯ್ಸಳ ಎರೆಯಂಗನ ಪತ್ನಿ ಏಚಲದೇವಿಗೂ ಗುರುವಾಗಿದ್ದ ಈತ 1064ರಲ್ಲಿ ಮುಳ್ಳೂರಿನಲ್ಲಿ ಸಮಾಧಿ ಹೊಂದಿದ. ವೀರ ಕೊಂಗಾಳ್ವನ ಗುರುವಾಗಿದ್ದ ಪ್ರಭಾಚಂದ್ರಸಿದ್ಧಾಂತದೇವ ಇನ್ನೊಬ್ಬ ಖ್ಯಾತ ಜೈನಮುನಿ. ಮುಳ್ಳೂರಿನಲ್ಲಿರುವ ಪಾರ್ಶ್ವನಾಥ ಬಸದಿಯನ್ನು ಇಮ್ಮಡಿ ರಾಜೇಂದ್ರನ ಪತ್ನಿ ಪೋಚಬ್ಬರಸಿಯೂ ಚಂದ್ರನಾಥ ಬಸದಿಯನ್ನು ಎರಡನೆಯ ರಾಜಾಧಿರಾಜ ಕೊಂಗಾಳ್ವನೂ ಶಾಂತೀಶ್ವರ ಬಸದಿಯನ್ನು ಒಂದನೆಯ ರಾಜಾಧಿರಾಜನೂ ಕಟ್ಟಿಸಿದ್ದಕ್ಕೆ ಶಾಸನಾಧಾರಗಳಿವೆ. ಈ ಬಸದಿಗಳು ಮತ್ತು ಇಲ್ಲಿಯ ಜಿನವಿಗ್ರಹಗಳು ಕೊಂಗಾಳ್ವರ ಕಾಲದ ಕಲಾನೈಪುಣ್ಯವನ್ನು ಸಾರುತ್ತವೆ.

ಕೊಂಗಾಳ್ವರ ವಂಶವೃಕ್ಷವನ್ನು ಉಪಲಬ್ಧ ಆಧಾರಗಳ ಮೇಲೆ ಈ ರೀತಿ ರಚಿಸಬಹುದು:

ಮನಿಜ (1004-05)
|
ಬಡಿವ (ಕಾಡವ) (1020-21)
|
ರಾಜೇಂದ್ರ ಪೃಥ್ವೀ ಮಹಾರಾಜ I (1022-26)
(ರಾಜೇಂದ್ರ ಚೋಳ ಕೊಂಗಾಳ್ವ)
|
ರಾಜಾಧಿರಾಜ I ರಾಜೇಂದ್ರ ಚೋಳ ಕೊಂಗಾಳ್ವ II (1058, ಪತ್ನಿ ಪೋಚಬ್ಬರಸಿ)
|
ರಾಜಾಧಿರಾಜ II (ಪತ್ನಿ ರುಕ್ಮಿಣೀದೇವಿ)
|
ರಾಜೇಂದ್ರ ಪ್ರಿಥುವೀ ಕೊಂಗಾಳ್ವ III (1066-1105, ಪತ್ನಿ ಪದ್ಮಲದೇವಿ)
(ತ್ರಿಭುವನಮಲ್ಲ ಚೋಳ ಕೊಂಗಾಳ್ವ, ಅದಟರಾದಿತ್ಯ)
|
ದುದ್ಧಮಲ್ಲ (ಸು.1120)
|
ವೀರದುದ್ಧ ಕೊಂಗಾಳ್ವ (1171-77)
(ತ್ರಿಭುವನಮಲ್ಲ ವೀರಚೋಳ)

(ಎ.ವಿ.ಎನ್.)

**ಕೊಂಗುಣಿವರ್ಮ** : ತಲಕಾಡು ಗಂಗವಂಶದ ಮೂಲಪುರುಷ (ಸು.325-50). ದಡಿಗ ಎಂದೂ ಇವನ ಹೆಸರು. ಈತನ ಬಗ್ಗೆ ಸ್ಪಷ್ಟ ಚಾರಿತ್ರಿಕ ಆಧಾರಗಳು ಕಡಿಮೆ. ದೊರಕುವ ಅನೇಕ ಪ್ರತೀತಿಗಳನ್ನು ಹೀಗೆ ಸಂಗ್ರಹಿಸಬಹುದು: ಅಯೋಧ್ಯೆಯಲ್ಲಿ ಪದ್ಮನಾಭ ಆಳುತ್ತಿದ್ದ. ಈತನಿಗೆ ಶಾಸನ ದೇವತೆಯ ಆಶೀರ್ವಾದದಿಂದ ರಾಮ ಮತ್ತು ಲಕ್ಷ್ಮಣರೆಂಬ ಇಬ್ಬರು ಮಕ್ಕಳು ಹುಟ್ಟಿದ್ದರು. ಸ್ವಲ್ಪ ಕಾಲದಲ್ಲಿಯೇ ಉಜ್ಜಯಿನಿಪುರದ ಮಹೀಪಾಲನೆಂಬ ಅರಸು ಪದ್ಮನಾಭನ ಮೇಲೆ ದಂಡೆತ್ತಿ ಬರಲು ಪದ್ಮನಾಭ ತನ್ನ ಮಕ್ಕಳಿಗೆ ದಡಿಗ ಮತ್ತು ಮಾಧವರೆಂದು ಹೆಸರಿಟ್ಟು ಅವರನ್ನೂ ಮಗಳಾದ ಅಲಬ್ಬೆಯನ್ನೂ 48 ಬ್ರಾಹ್ಮಣರ ಜೊತೆಗೆ ದಕ್ಷಿಣ ಭಾರತಕ್ಕೆ ಕಳುಹಿಸಿದ. ಅವರು ಅನೇಕ ದಿನ ಪ್ರಯಾಣ ಮಾಡಿ ದಕ್ಷಿಣ ಪೇರೂರಿಗೆ (ಪ್ರಾಯಶಃ ಈಗಿನ ಕಡಪ ಜಿಲ್ಲೆಯ ಗಂಗ ಪೇರೂರು) ಬಂದು ಅಲ್ಲಿಯ ಜೈನಗುರು ಸಿಂಹನಂದಿ ಆಚಾರ್ಯರಿಗೆ ತಮ್ಮ ಕಷ್ಟವನ್ನು ನಿವೇದಿಸಿಕೊಂಡರು. ಸಿಂಹನಂದಿ ಆಚಾರ್ಯರು ಕೃಪೆತೋರಿ ದಡಿಗ ಹಾಗೂ ಮಾಧವರನ್ನು ಸಾಕಿ ಸಕಲ ವಿದ್ಯಾಪಾರಂಗತರನ್ನಾಗಿ ಮಾಡಿ ಪದ್ಮಾವತಿ ದೇವಿಯಿಂದ ಪಡೆದ ಒಂದು ಕತ್ತಿಯನ್ನು ಅವರಿಗೆ ಕೊಟ್ಟರು. ಮಾಧವ ತನ್ನ ಶಕ್ತಿಯನ್ನೆಲ್ಲ ಪ್ರಯೋಗಿಸಿ ಕತ್ತಿಯಿಂದ ಆ ದೊಡ್ಡ ಕಲ್ಲಿನ ಕಂಬವೊಂದನ್ನು ಒಂದೇ ಏಟಿಗೆ ತುಂಡರಿಸಲಾಗಿ ಇದನ್ನೇ ಶುಭಶಕುನವೆಂದು ಅರಿತ ಸಿಂಹನಂದಿ ಆಚಾರ್ಯರು ಕರ್ಣಿಕಾರ ಪುಷ್ಪದಿಂದ ಮಾಡಿದ ಕಿರೀಟವನ್ನು ಅವರಿಗೆ ತೊಡಿಸಿ, ಅವರನ್ನು ಗಂಗವಾಡಿ ತೊಂಬತ್ತಾರು ಸಾವಿರ ಪ್ರಾಂತ್ಯದ ಅಧಿಪತಿಗಳನ್ನಾಗಿ ಮಾಡಿದರು. ಆಗ ಅವರ ರಾಜಧಾನಿ ಕುವಳಾಪುರ (ಈಗಿನ

ಕೋಲಾರ). ನಂದಿದುರ್ಗ ಇವರ ಒಂದು ಅಭೇದ್ಯವಾದ ಕೋಟೆ. ದಡಿಗನ ಕಾಲದಲ್ಲಿ ಗಂಗರಾಜ್ಯ ಉತ್ತರದಲ್ಲಿ ಮರಂಡಲೆಯುವರೆಗೆ, ಪೂರ್ವದಲ್ಲಿ ತೊಂಡೈಮಂಡಲದವರೆಗೆ, ಪಶ್ಚಿಮದಲ್ಲಿ ಸಮುದ್ರದವರೆಗೆ ಹಾಗೂ ದಕ್ಷಿಣದಲ್ಲಿ ಕೊಂಗುದೇಶದವರೆಗೂ ವಿಸ್ತರಿಸಿತ್ತು. ದಡಿಗ ಹಾಗೂ ಮಾಧವರು ತಮ್ಮ ಕೊಂಕಣದ ದಂಡಯಾತ್ರೆಯ ಸಮಯದಲ್ಲಿ ಶಿವಮೊಗ್ಗದ ಬಳಿ ಇರುವ ಮಂಡಲಿಯನ್ನು ಆಕ್ರಮಿಸಿ, ಸಿಂಹನಂದ್ಯಾಚಾರ್ಯರ ಆದೇಶದ ಮೇರೆಗೆ ಅಲ್ಲಿ ಒಂದು ಚೈತ್ಯಾಲಯವನ್ನು ಕಟ್ಟಿಸಿದ್ದರು.

ಕೋಲಾರ ಜಿಲ್ಲೆಯಲ್ಲಿ ಆಳುತ್ತಿದ್ದ ದಡಿಗ ತನ್ನ ರಾಜ್ಯದ ಪೂರ್ವದಲ್ಲಿ ಅಂದರೆ ಪಾಲಾರ್ ನದಿಯಾಚೆಗೆ ಆಳುತ್ತಿದ್ದ ಮಹಾಬಲಿ ಬಾಣರನ್ನು ಸೋಲಿಸಿ ಬಾಣವಂಶದಾವಾನಲ ಎಂಬ ಬಿರುದನ್ನು ಪಡೆದ ಎಂದು ಅನಂತರದ ಕಾಲದ ಕೆಲವು ಶಾಸನಗಳಲ್ಲಿ ಹೇಳಿಕೆಗಳಿವೆ. ಶಾಸನಗಳ ಪ್ರಕಾರ 2ನೆಯ ಮಾಧವ ಇವನ ಮಗ.

ಮುಂದೆ ಗಂಗವಂಶದಲ್ಲಿ ಆಳಿದ ಹಲವು ಅರಸರೂ ತಮ್ಮ ಹೆಸರಿನ ಜೊತೆಗೆ ಕೊಂಗುಣಿವರ್ಮ ಎಂದು ಸೇರಿಸಿಕೊಳ್ಳುತ್ತಿದ್ದರೆಂದು ತೋರುತ್ತದೆ. (ಎಂ.ಎಸ್.ಕೆ.)

**ಕೊಂಡಜ್ಜಿ :** ಹಾಸನ ಜಿಲ್ಲೆ ಹಾಸನ ತಾಲ್ಲೂಕಿನ ಒಂದುಗ್ರಾಮ. ಸಾಲಗಾಮೆ ಹೋಬಳಿಗೆ ಸೇರಿದ್ದು, ಹಾಸನ ನಗರಕ್ಕೆ ಉತ್ತರದಲ್ಲಿ 16ಕಿಮೀ ದೂರದಲ್ಲಿದೆ. ಇಲ್ಲಿನ ಚನ್ನಕೇಶವ (ಅಲ್ಲಾಳನಾಥ) ದೇವಾಲಯ ಪ್ರಸಿದ್ಧವಾದದ್ದು. ಇದು 14ನೆಯ ಶತಮಾನದಲ್ಲಿ ಕಟ್ಟಿದ್ದೆಂದು ತಿಳಿದುಬರುತ್ತದೆ. ವಿಜಯನಗರದ ಮಧ್ಯಕಾಲದಲ್ಲಿ ಪಾಳುಬಿದ್ದ ದೇವಾಲಯ ಮತ್ತೆ ಊರ್ಜಿತಗೊಂಡಿದೆ. ದೇವಾಲಯದಲ್ಲಿರುವ ಮೂಲ ವಿಗ್ರಹ 14' ಎತ್ತರವಿದೆ. ಈ ದೇವಾಲಯಕ್ಕೆ ಎರಡು ಫರ್ಲಾಂಗ್ ದೂರದಲ್ಲಿ ಮತ್ತು ಈಗಿರುವ ಗ್ರಾಮಕ್ಕೆ ಪಶ್ಚಿಮದಲ್ಲಿ ಬೃಹತ್ ಶಿಲಾಸಮಾಧಿಗಳ ಸಮೂಹವಿದೆ. ಈ ಗ್ರಾಮದ ಹತ್ತಿರ ಇರುವ ಸೀಗೆಗುಡ್ಡದ ಮೇಲಿನಿಂದ ಸುತ್ತಣ ಪ್ರಕೃತಿಯ ಚೆಲುವನ್ನು ಆಸ್ವಾದಿಸಬಹುದು. *

**ಕೊಂಡರಹಳ್ಳಿ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ 18ಕಿಮೀ ದೂರದಲ್ಲಿರುವ ಒಂದು ಹಳ್ಳಿ. ಮೊದಲು ಇದೊಂದು ಅಗ್ರಹಾರವಾಗಿತ್ತು. 11ನೆಯ ಶತಮಾನದಲ್ಲಿ ಈ ಊರು ಚೋಳರ ಆಳಿಕೆಗೆ ಒಳಪಟ್ಟಿತ್ತೆಂದು ಇಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿ ದ್ರಾವಿಡ ಶೈಲಿಯಲ್ಲಿ ಕಟ್ಟಲಾದ ಧರ್ಮೇಶ್ವರ ದೇವಾಲಯವಿದೆ. ಇದರ ಪ್ರಾಕಾರದಲ್ಲಿ 1065ರ ಶಾಸನ ಒಂದಿದೆ. ಈ ದೇವಾಲಯ ದಕ್ಷಿಣಾಭಿಮುಖವಾಗಿದ್ದು ಇದರಲ್ಲಿರುವ ಲಿಂಗ ಪೂರ್ವಾಭಿಮುಖವಾಗಿದೆ. ಲಿಂಗಕ್ಕೆ ಎದುರಾಗಿರುವ ಗೋಡೆಯಲ್ಲಿ ಸಾಲುರಂಧ್ರಗಳ ವಾತಾಯನವಿದೆ. ದೇವಾಲಯದಲ್ಲಿ ಮೂರು ಗುಡಿಗಳಿದ್ದು, ಮಧ್ಯದ ಕೋಣೆಯಲ್ಲಿ ಲಿಂಗವಿರುವ ಸುಕನಾಸಿಯೂ ಆಚೀಚೆ ಪಾರ್ವತಿ ಮತ್ತು ಗಣಪತಿಯ ಗುಡಿಗಳೂ ಇವೆ. ಸುಕನಾಸಿಯ ಪ್ರವೇಶದ್ವಾರದ ಬಲಗಡೆ ದುರ್ಗಾದೇವಿ ಮತ್ತು ಎಡಗಡೆ ಭೈರವಮೂರ್ತಿಗಳಿವೆ. ದೇವಾಲಯದ ನವರಂಗ ನಾಲ್ಕು ಕಂಬಗಳಿಂದ ಕೂಡಿದ್ದು. ನವರಂಗದ ಆಗ್ನೇಯ, ಈಶಾನ್ಯ ಮತ್ತು ನೈಋತ್ಯ ದಿಕ್ಕುಗಳಲ್ಲಿರುವ ಕಂಬಗಳ ಮೇಲೆ ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಚಾವಣಿ ಸಮತಟ್ಟಾಗಿದೆ. ಏಳು ಚದರಡಿಗಳಷ್ಟು ವಿಸ್ತಾರವಾಗಿರುವ ಈ ಚಾವಣಿಯ ಮಧ್ಯದಲ್ಲಿ ಅಷ್ಟದಿಕ್ಪಾಲಕ ವಿಗ್ರಹಗಳನ್ನುಳ್ಳ ಕಮಲದ ಹೂವಿನ ಕೆತ್ತನೆ ಇದೆ. (ಕೆ.ಆರ್.ಆರ್.)

**ಕೊಂಡ ಹಾಯುವುದು :** ದೇವರಿಗೆ ಹರಕೆ ಹೊತ್ತವರು ಗೊತ್ತಾದ ದಿನ ನಿಗಿನಿಗಿ ಉರಿಯುತ್ತಿರುವ ಕೆಂಡದ ಕೊಂಡದಲ್ಲಿ ಬರಿಗಾಲಿನಲ್ಲಿ ನಡೆದುಹೋಗುವ ಒಂದು ಜನಪದ ಸಂಪ್ರದಾಯ. ಇದನ್ನು ಕೆಂಡದ ಮೇಲೆ ನಡೆಯುವುದು ಎಂದೂ ಕರೆಯುತ್ತಾರೆ. ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಸಂಪ್ರದಾಯ ಇಂದಿಗೂ ಉಳಿದುಬಂದಿದೆ. ಸಾಮಾನ್ಯವಾಗಿ ಹೆಣ್ಣು ದೇವತೆಗಳ ಗುಡಿಗಳ ಎದುರು ಇಂಥ ಕೊಂಡಗಳಿರುತ್ತವೆ. ಇವು ಉಗ್ರ ಅಥವಾ ತಾಮಸ ದೇವತೆಗಳ ಗುಡಿಗಳೆದುರೇ ಇರುವುದು ಹೆಚ್ಚು.

ಕೊಂಡ ಹಾಯಬೇಕಾಗಿರುವ ಹಿಂದಿನ ದಿನ ಭಕ್ತರು ಮಡಿ ಉಪವಾಸವಿದ್ದು, ಕೊಂಡಕ್ಕೆ ಬೇಕಾಗುವ ಸೌದೆ ಕಡಿದು ತಂದು ಅದನ್ನು ಕೊಂಡದಲ್ಲಿ ತುಂಬಿ ಬೆಂಕಿ ಹಚ್ಚುತ್ತಾರೆ. ಮಾರನೆಯ ದಿನ ಕೊಂಡ ಹಾಯುವ ವೇಳೆಗೆ ಸೌದೆಯೆಲ್ಲಾ ಉರಿದು ಕೆಂಡವಾಗಿರುತ್ತದೆ. ಅನಂತರ ಒಂದು ಜವಣಿಗೆಯಿಂದ ಕೊಳ್ಳಿಗಳನ್ನು ಈಚೆ ಎಳೆದು, ಕೆಂಡವನ್ನು ಮಟ್ಟಸ ಮಾಡುತ್ತಾರೆ. ಕೆಂಡದ ಮೇಲಿರುವ ಬೂದಿಯನ್ನು ತೆಗೆಯುತ್ತಾರೆ. ಈ ರೀತಿ ಕೆಂಡದ ಕೊಂಡ ನಿರ್ಮಿಸಿದ ಅನಂತರ, ದೇವರನ್ನು ಹೊತ್ತ ಜನ, ಅವರ ಹಿಂದೆ ದೇವರ ಬಸವ, ಅದರ ಹಿಂದೆ ಕೆಂಡ ತುಳಿಯುವುದಾಗಿ ಹರಕೆ ಹೊತ್ತುಕೊಂಡ ಭಕ್ತರು ಕೆಂಡವನ್ನು ಹಾಯುತ್ತಾರೆ. ಸಾಮಾನ್ಯವಾಗಿ ಕೊಂಡ ನಾಲ್ಕೈದು ಹೆಜ್ಜೆಗಳಲ್ಲಿ ದಾಟಬಹುದಾಗಿರುವಷ್ಟು ವಿಸ್ತಾರವಾಗಿರುತ್ತದೆ. ಕೆಂಡ ತುಳಿದ ಜನರ ಕಾಲಿನಲ್ಲಿ ಬೊಬ್ಬೆ ಬಂದಿರುವುದಿಲ್ಲ; ಕಾಲಿನಲ್ಲಿ ಗಾಯವಾಗಿರುವುದಿಲ್ಲ. ನೆಲದ ಮೇಲೆ ನಡೆದಷ್ಟೇ ಸಲೀಸಾಗಿ ಕೆಂಡದ ಮೇಲೆ ಈ ಜನ ಹಾದು ಬಂದಿರುತ್ತಾರೆ. ಕೆಂಡ ತಮ್ಮ ಕಾಲನ್ನು ಸುಡದಿರಲು ದೇವರಲ್ಲಿ ತಮಗಿರುವ ನಂಬಿಕೆಯೇ ಕಾರಣವೆಂದು ಇವರು ಹೇಳುತ್ತಾರೆ. ಕೊಂಡಗಳನ್ನು ಹಗಲು ಕೊಂಡ, ಇರುಳು ಕೊಂಡ ಎಂದು ವಿಂಗಡಿಸುವುದು ವಾಡಿಕೆ. ಕೆಂಡದ ಮೇಲೆ ನಡೆಯುವುದು ಒಂದು ಧಾರ್ಮಿಕ ಆಚರಣೆ. ಜನ ತಮಗೆ ಏನಾದರೂ ತೊಂದರೆಯೋ ಕಾಯಿಲೆಯೋ ಆದಾಗ ಅದು ಪರಿಹಾರವಾದರೆ ದೇವರ ಜಾತ್ರೆಯಲ್ಲಿ ಕೊಂಡ ಹಾಯುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಈ ಹರಕೆ ತೀರಿಸುವ ಉದ್ದೇಶದಿಂದ ಕೊಂಡ ಹಾಯುತ್ತಾರೆ. ಕೊಂಡ ಹಾಯುವ ಜನ ತುಂಬ ಕಟ್ಟುನಿಟ್ಟಾಗಿರಬೇಕು. ಮೈಲಿಗೆ ಮಾಡಿಕೊಳ್ಳಬಾರದು; ಉಪವಾಸವಿರಬೇಕು; ಎಲ್ಲಕ್ಕಿಂತ ಮಿಗಿಲಾಗಿ ದೇವರಲ್ಲಿ ನಂಬಿಕೆ ಇಡಬೇಕು. ವಿಜ್ಞಾನ ಇದನ್ನು ನಂಬದಿದ್ದರೂ ಕೆಂಡದ ಮೇಲೆ ನಡೆಯಲು ಮನಸ್ಥೈರ್ಯ ಬಹಳ ಅಗತ್ಯ ಎಂದು ಹೇಳುತ್ತದೆ. ಕೆಲವು ಕಡೆಗಳಲ್ಲಿ ಭಕ್ತರ ತಲೆಯ ಮೇಲೆ ಬಾಳೆಯ ಎಲೆಯನ್ನಿಟ್ಟು, ಅದರ ಮೇಲೆ ಕೆಂಡವನ್ನು ಹಾಕಿ ಅನಂತರ ನೀರು ಹೊಯ್ಯುವುದೂ ಉಂಟು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಜನ ಬೆಂಕಿಗೆ ಕೊಟ್ಟಿರುವ ಮಹತ್ವ. ಬೆಂಕಿಯನ್ನು ಹಾಯುವುದರ ಮೂಲಕ ವ್ಯಕ್ತಿತ್ವ ಶುದ್ಧವಾಗುತ್ತದೆ. ಕಾಯಿಲೆ ಕಸಾಲೆಗಳು ದೂರವಾಗುತ್ತವೆ. ಮಳೆಬೆಳೆಗಳು ವೃದ್ಧಿಯಾಗುತ್ತವೆ. ನಿಸರ್ಗದಿಂದ ಉಂಟಾಗಬಹುದಾದ ಹಾನಿ ತಪ್ಪುತ್ತದೆ ಎಂಬ ನಂಬಿಕೆ ಪ್ರಬಲ ಕಾರಣ. ಸೀತೆಯ ಅಗ್ನಿಪ್ರವೇಶ ಪ್ರಸಂಗವನ್ನು ಈ ಸಂಪ್ರದಾಯ ನೆನಪಿಗೆ ತರುತ್ತದೆ. ಇಂಥದೇ ಆಚರಣೆ ದಕ್ಷಿಣ ಕನ್ನಡ, ಕೊಡಗು, ಉತ್ತರ ಕೇರಳ ಪ್ರದೇಶಗಳಲ್ಲಿ ಒತ್ತೆಕೋಲ ಎಂಬ ಹೆಸರಿನಲ್ಲಿ ರೂಢಿಯಲ್ಲಿದೆ ಎಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ದೇವರ ಸಾಕ್ಷಿಯಲ್ಲಿ ತಾವು ಪರಿಶುದ್ಧರೆಂಬದನ್ನು ದೈವದ್ರೋಹ ಅಥವಾ ಜನದ್ರೋಹ ಮಾಡಿಲ್ಲವೆಂಬುದನ್ನು ರುಜುವಾತು ಪಡಿಸಿಕೊಳ್ಳಲು ಜನಪದರು ಬೆಳೆಸಿ ಉಳಿಸಿಕೊಂಡು ಬಂದಿರುವ ಪದ್ಧತಿ ಇದೆಂದು ಹೇಳಬಹುದು. (ಟಿ.ಎನ್.ಎಸ್.)

**ಕೊಂತಿಪೂಜೆ :** ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬಂದರೂ ಕರ್ನಾಟಕದ ಬಹುಭಾಗಗಳಲ್ಲಿ ಆಚರಣೆಯಲ್ಲಿರುವ ಒಂದು ವಿಶಿಷ್ಟ ಜನಪದ ಸಂಪ್ರದಾಯ. ಇದು ಪ್ರತಿವರ್ಷ ಕಾರ್ತಿಕಮಾಸದ ಬೆಳದಿಂಗಳ ರಾತ್ರಿಗಳಲ್ಲಿ ಹದಿನಾರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ (ಕೆಲವು ಕಡೆ ದೀವಳಿಗೆಯ ತಿಂಗಳಿನ ಮೊದಲನೆಯ ಅಥವಾ ಕಡೆಯ ಸೋಮವಾರ ಪ್ರಾರಂಭವಾಗಿ ಒಂದು ತಿಂಗಳ ಕಾಲ ನಡೆಯುವುದೂ ಉಂಟು). ಆದರ್ಶಸತಿ, ಮಾತೆ ಎಂದೆನಿಸಿದ ಕುಂತಿಯನ್ನು (ಆಡುಮಾತಿನಲ್ಲಿ ಕೊಂತಿ ಆಗಿದೆ) ತಮಗೂ ಸತ್‌ಸಂತಾನ, ಸತ್‌ಕೀರ್ತಿ ಲಭಿಸಲೆಂಬ ಉದ್ದೇಶದಿಂದ ಹಳ್ಳಿಯ ಹೆಣ್ಣುಮಕ್ಕಳು ಪೂಜಿಸುತ್ತಾರೆ. ಮೈನೆರೆದ ಕನ್ಯೆಯನ್ನು ಗುಡ್ಡು ಕೂಡಿಸುವುದು, ಪ್ರಸ್ತ ಇವುಗಳಿಗೂ ಕೊಂತಿ ಪೂಜೆಗೂ ಸಾಂಕೇತಿಕ ಸಂಬಂಧವಿರುವಂತೆ ತೋರುತ್ತದೆ. ಕೊಂತಿಯನ್ನು ಹೆಚ್ಚಾಗಿ ಒಕ್ಕಲಿಗರು, ಹರಿಜನರು, ಗೊಲ್ಲರು, ಕುಂಚಿಟಿಗರು, ಬೆಸ್ತರು, ಕೆಲವು ಕಡೆ ಶಿವ ಭಕ್ತರು ಪೂಜಿಸುವರು.

ಕೊಂತಿಪೂಜೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಸೋಮವಾರ ಪ್ರಾರಂಭವಾಗುತ್ತದೆ. ಅಂದು ರಾತ್ರಿ ಹೆಂಗಸರು ಕೊಂತಿಯನ್ನು ಕೂಡಿಸುವ ಸ್ಥಳವನ್ನು ಹಸುವಿನ ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸಿ ಪಡಸಾಲೆಯ ಪಶ್ಚಿಮ ದಿಕ್ಕಿನ ಗೋಡೆಯ ಮೇಲೆ, ನೆಲದಿಂದ ಒಂದು ಮೊಳ ಮೇಲಕ್ಕಾದಂತೆ, ಹಸಿ ಎರೆಮಣ್ಣಿನಿಂದ ಅಥವಾ ಸಗಣಿಯಿಂದ ಕುದುರೆಗೊರಸಿನ ಆಕೃತಿಯ ಒಂದು ಪ್ರಾಕಾರವನ್ನು ಬಿಡಿಸುವರು. ಇದೇ ಋತುಮತಿಯಾದ ಕೊಂತಿಯನ್ನು ಕೂರಿಸುವ ಗುಡಿಸಲು. ಪ್ರಾಕಾರದ ಒಳಗಡೆ ಎರೆಮಣ್ಣಿನಿಂದ ತಿದ್ದಿ ಮಾಡಿದ ಸುಂದರವಾದ ಸ್ತ್ರೀವಿಗ್ರಹವನ್ನು ಇಡುವರು. ಇದೇ ಕೊಂತಿ. ಕೆಲವು ಕಡೆ ಸಣ್ಣ ಗುಂಡುಕಲ್ಲನ್ನೇ ಕೊಂತಿಯೆಂದು ಭಾವಿಸಿ ಪೂಜಿಸುವುದೂ ತೇಗದ ಮರದಲ್ಲೂ ಬಳಪದ ಕಲ್ಲಿನಲ್ಲೂ ಕೊಂತಿಯ ವಿಗ್ರಹ ಮಾಡಿಟ್ಟುಕೊಳ್ಳುವುದೂ ಉಂಟು. ಕೊಂತಿಯನ್ನು ಹುಚ್ಚೆಳ್ಳು ಹೂ ಮುಂತಾದ ಹೂಪತ್ರೆಗಳಿಂದ ಅಲಂಕರಿಸುವರು. ಪೂಜಾ ಸಾಮಗ್ರಿಗಳನ್ನೂ ತಿಂಡಿಪದಾರ್ಥಗಳನ್ನೂ ಮುಂದೆ ಇಟ್ಟು ಎಲ್ಲರೂ ಭಕ್ತಿಯಿಂದ ಪೂಜಿಸುವರು. ಪೂಜೆಯ ಸಮಯದಲ್ಲಿ ತಪ್ಪದೆ ಕೊಂತಿಪದಗಳನ್ನು ಹಾಡುವರು. ಇವು ಜನಪದ ಮಹಿಳೆಯರ ಸಾಂಘಿಕ ಸೃಷ್ಟಿಯಾಗಿದ್ದು ತುಳುನಾಡಿನ ಪಾಡ್ದನಗಳಂತೆ, ದಕ್ಕಿಬಲಿಯ ಹಾಡುಗಳಂತೆ, ಬಯಲು ನಾಡಿನ ತಿಂಗಳಮಾವನ ಹಾಡುಗಳಂತೆ ವಿಶಿಷ್ಟ ಗೀತೆಗಳಾಗಿವೆ; ಬೆಡಗಿನ ಭಾವಗೀತೆಗಳ ಬೆರಗಿನ ಧಾಟಿಗಳಿಗೆ ಪ್ರಸಿದ್ಧವಾಗಿವೆ.

ಕೊಂತಿಪದಗಳ ವಸ್ತು ಪ್ರಧಾನವಾಗಿ ಕೊಂತಿಯ ಬಾಲ್ಯದಿಂದ ಅವಳ ಒಸಗೆಯ ವರೆಗಿನ ಘಟನೆಗಳೇ ಆದರೂ ಸಮಗ್ರ ಭಾರತದ ಕಥೆಯನ್ನೇ ಸ್ಥೂಲವಾಗಿ ಒಳಗೊಂಡಿದೆ. ಹಾಡುವ ಎರಡು ಗುಂಪುಗಳಲ್ಲಿ ಒಂದು ಗುಂಪಿನವರು ಪಲ್ಲವಿಯನ್ನೂ ಇನ್ನೊಂದು ಗುಂಪಿನವರು ಪದಗಳನ್ನೂ ರಾಗಬದ್ಧವಾಗಿ ಹಾಡುವರು.

ಒನ್ಕೊಂತಿ ಪೂಜೆ, ಒನ್ನೆಲ್ಲ ತಾರ್‍ಸಿ  
ಇಂಬಿಗೆ ಹೋದಣ್ಣ, ಏನೇನು ತಂದಾನು  
ಇಂಬಾಳೆ ತಂದಾನು, ಮುಂಬಾಳೆ ತಂದಾನು  
ಇಷ್ಟೆಲ್ಲನೂ ತಂದೋನS ನಮ್ಕೊಂತಿಗೆ ಹೂವೇಕೆ ತರಲಿಲ್ಲವೋS;

ಇದು ಕೊಂತಿಪೂಜೆಯ ನಾಂದಿ ಹಾಡು. ಈ ಹಾಡು ಏಡ್ಕೊಂತಿ ಪೂಜೆ, ಮೂರ್ಕೊಂತಿ ಪೂಜೆ ಎಂದು ಹತ್ತರವರೆಗೆ ಮುಂದುವರಿಯುತ್ತದೆ. ಕೆಲವು ಕಡೆ ಈ ನಾಂದಿ ಹಾಡಿಗೆ ಬದಲಾಗಿ

ಕೊಂತೆಮ್ಮ ನಿನಗುಡಿಗೇ  
ಎಂತೇವು ಬರಬೇಕು  
ಮುತ್ತೀನ ಬಳುತಾಲೇ ಮುದುಕೀರು  
ಮುತ್ತೀನ ಬಳುತಾಲೇ ಮುದಕೀರು ಬಂದಾರೆ  
ಕೊಂತೆಮ್ಮನ ಗುಡಿಗೇ ಕಲಿಯಾಯ್ತು

ಒಂದು ದೀಪಕ್ಕೆ ಒಂದೇ ಬತ್ತಿಯನ್ಹಾಕಿ ಒಂದು ಮಾನೆಣ್ಣೆ ಆಳಾದ್ಹೂದು ಎಂಬ ಹಾಡನ್ನು, ತೂಗುದೀಪ ಉರಿದುವಮ್ಮ ತಾಯಿ ಕೊಂತಿ ಗುಡಿಯಲ್ಲಿ ಭಾಗುವಂತರಾಡುತಾರಮ್ಮ ಎಂಬ ಪಲ್ಲವಿಯೊಂದಿಗೆ ಹಾಡುವರು. ಇದು ಎರಡು ದೀಪಕ್ಕೆ, ಮೂರು ದೀಪಕ್ಕೆ ಎಂದು ಐದು ನುಡಿಗಳವರೆಗೆ ಮುಂದುವರಿಯುತ್ತದೆ.

ಮಲ್ಲಿಗೆ ಹೂವ ತಂದ ಕೊಂತಮ್ಮ ಚೆಲಕ ಬಟ್ಟಲ ನೀಡೋS; ಶಿವರಾಯ ದಂಡೆತ್ತಿ ಕೇಳಿ ಬಂದಾS ಸಾಲುಮಲ್ಲಿಗೆ ಕೊಂತಮ್ಮನ ಮುಡಿಗೆರಡು ಮುತ್ತಿನ ಕುಚ್ಚು; ತಣ್ಣೀರು ತನುವಾಯಿತೋ ಕೊಂತಮ್ಮ ತಾವರೆ ಕೊಳವಾಯಿತೋ; ಅಜ್ಜೆಚ್ಚಳ ಬೆಳದಿಂಗಳೋ ಕೊಂತಮ್ಮನಿಗೆ ನಿತ್ಯ ವೈಭೋಗವೋ; ಓಕುಳೋಕುಳಿಯ ಬೆಟ್ಟದ ಮೇಲಿರುವ ನೆಲ್ಲಿಮರಕ್ಕೆ ಚಲ್ಲಿದರೋಕುಳಿಯS; ಏನಾದರೇನಾಗಿತ್ತೋ ಹಸ್ತಿನಾಪುರದ ರಾಜ್ಯವು ದಾಯಾದಿ ಪಾಲಾಗಿತ್ತೋ - ಈ ಮೊದಲಾದ ಪಲ್ಲವಿಗಳನ್ನೊಳಗೊಂಡ ಕೊಂತಿಯ ಪದಗಳು ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತವೆ.

ಪೂಜೆಯ ಕೊನೆಯ ದಿನ ರಾತ್ರಿ ಕೊಂತಿಯನ್ನು ವಿಸರ್ಜಿಸುತ್ತಾರೆ. ಅದಕ್ಕಾಗಿ ಮಣ್ಣಿನಲ್ಲಿ ಕೊಂತಿ ಮತ್ತು ಪಾಂಡುವಿನ ದೊಡ್ಡ ವಿಗ್ರಹಗಳನ್ನು ಮಾಡಿ ಇಬ್ಬರು ವಯಸ್ಸಿನ ಹುಡುಗರಿಗೆ ಹೆಣ್ಣು ಗಂಡಿನ ವೇಷ ಹಾಕಿ ಅವರಿಂದ ವಿಗ್ರಹಗಳನ್ನು ಹೊರಿಸಿಕೊಂಡು ಮೆರವಣಿಗೆಯೊಂದಿಗೆ ಊರ ಹೊರಗೆ ರಾಗಿ ಅಥವಾ ನವಣೆಯ ಹೊಲಕ್ಕೆ ಬರುವರು. ಹೊಲದಲ್ಲಿ ಒಂದೆಡೆ ವಿಗ್ರಹಗಳನ್ನು ಒಟ್ಟಿಗೆ ಇಟ್ಟು ಪೂಜಿಸಿ ಒಸಗೆಯ ಶಾಸ್ತ್ರ ತೀರಿಸಿ ಮನೆಗೆ ತೆರಳುವರು.

ಬಾಳೆಯ ತೋಟದಲ್ಲಿ ಬಾಲನಾಡುತ ಬಂದ  
ಬಾಲೇಸ್ತ್ರೀ ಶಿವನ ಪಾದಕ್ಕೆ ಎತ್ತಿದಳಾರತಿಯ  
ಶ್ರೀ ದ್ರೌಪದಿ ಬೆಳಗಿದಳಾರತಿಯ

ಇದು ಕೊಂತಿಪೂಜೆಯ ಮುಕ್ತಾಯ ಗೀತೆ. ಅಲ್ಲಿಗೆ ಮನೆಯಲ್ಲಿ ಪ್ರಾರಂಭವಾದ ಕೊಂತಿಪೂಜೆ ಬಾಳಿಗೆ ಸಂಕೇತವೋ ಎನ್ನುವಂತೆ ಬಯಲಿನಲ್ಲಿ ಮುಕ್ತಾಯವಾಗುತ್ತದೆ. ಇದು ಹಳ್ಳಿಗರಷ್ಟೇ ಸರಳವಾದ, ಅರ್ಥವತ್ತಾದ ಒಂದು ಕಟ್ಟಳೆ. ಕೊಂತಿ ಪೂಜೆ ಸಂಪ್ರದಾಯದ ವಿವರಣೆಯೊಂದಿಗೆ ಪದಗಳನ್ನು ಸಂಗ್ರಹಿಸಿ ಡಿ.ಲಿಂಗಯ್ಯ ಅವರು ಕೊಂತಿಪೂಜೆ ಎಂಬ ಕಿರುಹೊತ್ತಗೆಯನ್ನು ಪ್ರಕಟಿಸಿದ್ದಾರೆ (1967). ಕ್ಯಾತನಹಳ್ಳಿ ರಾಮಣ್ಣ ಅವರ ಕೊಂತಿಪೂಜೆ ಒಂದು ಅಧ್ಯಯನ ಈ ವಿಷಯದ ಬಗ್ಗೆ ಬಂದಿರುವ ಇನ್ನೊಂದು ಕೃತಿ. *

**ಕೊಂಬಿನ ಸಾಮಾನುಗಳು** : ಎಮ್ಮೆ, ದನ ಮುಂತಾದ ಪ್ರಾಣಿಗಳ ಕೊಂಬಿನಿಂದ ನಾಜೂಕಾದ ಸಾಮಾನುಗಳನ್ನು ತಯಾರಿಸುವ ಕಲೆ ಭಾರತದಲ್ಲಿ ಬಹಳ ಹಿಂದಿನಿಂದ ಕೈಕಸಬಾಗಿ ಉಳಿದುಬಂದಿದೆ. ಮುಖ್ಯವಾಗಿ ಗುಜರಾತ್, ರಾಜಸ್ಥಾನ, ಬಿಹಾರ, ಒರಿಸ್ಸ ಹಾಗೂ ಕರ್ನಾಟಕ ರಾಜ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕುಮಟ, ತಾಲ್ಲೂಕುಗಳಲ್ಲಿಯೂ ಬೆಳಗಾಂವಿ ಜಿಲ್ಲೆಯ ಖಾನಾಪುರದಲ್ಲಿಯೂ ಈ ಕಸಬಿನವರನ್ನು ಇಂದಿಗೂ ಕಾಣಬಹುದು.

ಕೊಂಬಿನಿಂದ ತಯಾರಿಸಿದ ವಸ್ತುಗಳು

ಮೊದಲು ಡೊಂಬಾರಿ ಜನ ಈ ಸಾಮಾನುಗಳನ್ನು ತಯಾರಿಸುತ್ತಿದ್ದರಾದರೂ ಅವರು ತಯಾರಿಸುತ್ತಿದ್ದ ಸಾಮಾನುಗಳು ಅಷ್ಟು ನಯವಾಗಿಯೂ ಕಲಾತ್ಮಕವಾಗಿಯೂ ಇರುತ್ತಿರಲಿಲ್ಲ. ಈ ಕಲೆಯನ್ನು ಉತ್ತಮಪಡಿಸಬೇಕೆಂಬ ಉದ್ದೇಶದಿಂದ ಹನುಮಂತರಾವ್ ಕೌಜಲಗಿಯವರು ಡೊಂಬಾರಿ ಜನರನ್ನು ಕಲೆ ಹಾಕಿ ಅವರಿಗೆ ಪ್ರೋತ್ಸಾಹ ಕೊಟ್ಟಿದ್ದುಂಟು. ಆದರೆ ಅಲೆಮಾರಿಗಳಾದ ಡೊಂಬಾರಿಗಳು ಒಂದು ಕಡೆ ನೆಲೆನಿಲ್ಲದೆ ಹೊರಟುಹೋದರಾದ ಕಾರಣ ಕೌಜಲಗಿಯವರ ಉದ್ದೇಶ ನೆರವೇರಲಿಲ್ಲ. ಅನಂತರ ಸು.1938ರಲ್ಲಿ ಕೌಜಲಗಿಯವರೂ ಎಸ್.ಕೆ.ಕಲ್ಲಾಪುರ ಅವರೂ ಒಂದಾಗಿ ಹೊನ್ನಾವರದಲ್ಲಿ ಒಂದು ತರಬೇತು ಸಂಸ್ಥೆಯನ್ನು ಸ್ಥಾಪಿಸಿದರು. ಇಲ್ಲಿ ತರಬೇತಿ ಕೊಡಲು ನುರಿತ ಶಿಕ್ಷಕರನ್ನು ಬಿಹಾರ, ಒರಿಸ್ಸಗಳಿಂದ ಕರೆಸಲಾಗಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಗೂ 15 ರೂಪಾಯಿ ವಿದ್ಯಾರ್ಥಿವೇತನ ಸಿಗುತ್ತಿತ್ತು. ಈ ಸಂಸ್ಥೆ ಮೂರು ವರ್ಷಗಳವರೆಗೆ ತರಬೇತು ಕೊಟ್ಟು ಸು.30-40 ಜನರನ್ನು ತಯಾರಿಸಿತು. ಹೀಗೆ ತರಬೇತಿ ಪಡೆದವರಲ್ಲಿ ಯಾರೂ ಈ ಕಸಬನ್ನು ಮಾಡುವವರ ಮನೆತನದವರಾಗಿರಲಿಲ್ಲ ಎಂಬುದು ಗಮನಾರ್ಹವಾದ ವಿಷಯ.

ಮುಂದೆ 1942ರಲ್ಲಿ ತರಬೇತು ಪಡೆದ 15 ಜನ ಒಂದಾಗಿ ಒಂದು ಸಹಕಾರಿ ಸಂಘವನ್ನು ಸ್ಥಾಪಿಸಿದರು. ಆರು ವರ್ಷಗಳಲ್ಲಿ ಸದಸ್ಯರ ಸಂಖ್ಯೆ 80ಕ್ಕೆ ಏರಿತು. ಸಂಘ ತಯಾರಿಸಿದ ಸಾಮಾನುಗಳನ್ನು ಮುಂಬಯಿಯ ಗೃಹಕೈಗಾರಿಕೆ ಮತ್ತು ಚಿಕ್ಕ ಉದ್ದಿಮೆ ಸಾಮಾನುಗಳ ಮಾರಾಟ ಮಳಿಗೆಯವರು ಕೊಂಡು ಮಾರುತ್ತಿದ್ದರು. ಆಗ ಈ ಸಾಮಾನುಗಳಿಗೆ ಪರದೇಶದ ಜನರ ಬೇಡಿಕೆ ಬಹಳಷ್ಟಿತ್ತು. ಕ್ರಮೇಣ ಆ ಬೇಡಿಕೆ ಕಡಿಮೆಯಾದಂತೆ ಕೊಂಬಿನ ಸಾಮಾನಿನ ತಯಾರಿಕೆ ಹಿಂದೆ ಬಿತ್ತು.



ಕೊಂಬಿನಿಂದ ತಯಾರಿಸಿದ ಆಧುನಿಕ ಕಲಾವಸ್ತುಗಳು

ಕುಶಲಕಲೆಗಳಿಗೆ ಸರ್ಕಾರ ಈಗ ನೀಡುತ್ತಿರುವ ಪ್ರೋತ್ಸಾಹದಿಂದ ಈ ಕಲೆ ಅಭಿವೃದ್ಧಿ ಹೊಂದಬಹುದೆಂಬ ಭರವಸೆ ಕಂಡುಬರುತ್ತಿದೆ.

ವಸ್ತುಗಳ ತಯಾರಿಕೆಗೆ ಮೊದಲು ಕೊಂಬುಗಳನ್ನು ಸ್ವಚ್ಛಪಡಿಸಿ ಹದಮಾಡಬೇಕಾಗುತ್ತದೆ. ಬಾಚಣಿಕೆ ಮಾಡಬೇಕಾದಾಗ ಪೊಳ್ಳಾದ ಕೊಂಬಿನ ಒಳಭಾಗವನ್ನು ಕಾಯಿಸಿ ಅದನ್ನು ಅಗಲ ಮಾಡಿ ಒತ್ತಡದ ಉಪಕರಣದಲ್ಲಿ 15-20 ನಿಮಿಷಗಳವರೆಗೆ ಇಡುತ್ತಾರೆ. ಅನಂತರ ನೀರಿಗೆ ಹಾಕಿ ಸ್ವಚ್ಛ ಮಾಡುತ್ತಾರೆ. ಆ ಮೇಲೆ ಅಳತೆಗೆ ತಕ್ಕಂತೆ ಕತ್ತರಿಸಿಕೊಂಡು ಮೇಲ್ಮೈಯನ್ನು ತಿಕ್ಕಿ, ಬಾಚಣಿಕೆಗಳನ್ನು ಮಾಡುತ್ತಾರೆ. ಸಿದ್ಧವಾದ ಬಾಚಣಿಕೆಗಳನ್ನು ಉಪ್ಪು ಕಾಗದದಿಂದ ಉಜ್ಜಿ ಶೃಂಗಕಾಂತ ಮರದ ಎಲೆ ಮತ್ತು ಕರಿ ಸೀಮೆಸುಣ್ಣದ ಪುಡಿಯಿಂದ ತಿಕ್ಕಿ ನಯ ಮಾಡುತ್ತಾರೆ. ಕೊಂಬಿನಿಂದಾದ ವಸ್ತುಗಳಲ್ಲಿ ಬಾಚಣಿಕೆಗಳು, ಹೂದಾನಿಗಳು, ಪ್ರಾಣಿಪಕ್ಷಿ ನಮೂನೆಗಳು ಬಹು ಜನಪ್ರಿಯವೆನಿಸಿವೆ. ಗೋಡೆಯ ಅಲಂಕಾರಕ್ಕಾಗಿ ಸಿದ್ಧಪಡಿಸಿದ ಜಿಂಕೆ ಮತ್ತು ಕಾಡೆಮ್ಮೆಯ ಕೊಂಬುಗಳ ಮಾರಾಟವೂ ಹಿಂದಿನಿಂದ ಲಾಭದಾಯಕವೆನಿಸಿದೆ. *

**ಕೊಟ್ಟಣದ ಸೋಮವ್ವೆ :** ಸು.1160 ವಚನಕಾರ್ತಿ. ಬಸವಣ್ಣನವರ ಸಮಕಾಲೀನ ನಿರ್ಲಜ್ಜ ಶಾಂತಯ್ಯ ಇವಳ ಗುರು. ಇವಳ ಸ್ಥಳ ಕಲ್ಯಾಣ. ಕೊಟ್ಟಣ ಕಟ್ಟುವುದು ಇವಳ ಕಾಯಕವಾಗಿದ್ದು ಪರಮದಾಸೋಹಿಯಾಗಿದ್ದಳು.

ಈಕೆ ನಿರ್ಲಜ್ಜೇಶ್ವರಾ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿರುವಂತೆ ತಿಳಿದುಬರುತ್ತದೆ. ಎಲ್ಲ ಶರಣರಂತೆ ತನ್ನ ಅನುಭಾವವನ್ನು ವ್ಯಕ್ತಪಡಿಸಲು ತನ್ನ ಕಾಯಕವನ್ನೇ ದೃಷ್ಟಾಂತವನ್ನಾಗಿ ಉಪಯೋಗಿಸಿಕೊಂಡಿದ್ದಾಳೆ. 'ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ' ಅಕ್ಕಿಯಿಲ್ಲ. ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ, ಅರಿಯದುದುದ ಹೋಗಲಿ, ಅರಿದು ಬೆರೆದೆನಾದೊಡೆ ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ, ಒಲ್ಲೆ ಒಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ - ಎಂಬ ಇವಳ ಒಂದೇ ವಚನ ಉಪಲಬ್ಧವಿದ್ದು ವ್ರತ, ಆಚಾರ, ನಿಷ್ಠೆ, ವಿವೇಕಗಳಿಂದೊಡಗೂಡಿದ್ದು ಈಕೆ ಏರಿದ ಎತ್ತರವನ್ನೂ ಗಳಿಸಿದ ಅನುಭಾವಸಂಪತ್ತಿಯನ್ನೂ ಸಾರಿಹೇಳುತ್ತದೆ.

ಸರ್ವಪುರಾತನರ ವಚನಗಳ ಶೀಲಸಂಪಾದನೆಯ ವಚನಗಳು ಎಂಬ ಭಾಗದಲ್ಲಿ, ಹದಿನಾರು ಮಂದಿ ಶರಣೆಯರ ವಚನಗಳೊಂದಿಗೆ ಸೋಮವ್ವೆಯ ವಚನವೂ ಸೇರಿದೆ. (ಎಸ್.ಆರ್‌ಎ.)

**ಕೊಟ್ಟೂರಪ್ಪ :** 1888-1976. ಕನ್ನಡ ರಂಗಭೂಮಿಯ ಪ್ರಸಿದ್ಧ ನಟರು. ಭಕ್ತಿರಸಪ್ರಧಾನವಾದ ಪಾತ್ರಗಳ ಅಭಿನಯಕ್ಕೆ ಹೆಸರಾಗಿದ್ದವರು. ಹುಟ್ಟಿದ್ದು ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕಿನ ಸೋಗೆ ಎಂಬ ಹಳ್ಳಿಯಲ್ಲಿ. ಇವರ ತಂದೆಗೆ ಬಯಲುನಾಟಕಗಳನ್ನು ಆಡಿಸುವ ಹವ್ಯಾಸವಿತ್ತು. ಹೀಗಾಗಿ ಬಾಲ್ಯದಲ್ಲಿಯೇ ಇವರಿಗೆ ನಾಟಕ ಮತ್ತು ಸಂಗೀತದ ಕಡೆ ಒಲವು ಮೂಡಿತು. ನಿಜಗುಣ ಶಿವಯೋಗಿಗಳ ವಚನಗಳು, ಶಿಶುನಾಳ ಷರೀಫರ ತತ್ತ್ವಪದಗಳು, ಸರ್ಪಣಪ್ಪನವರ ಹಾಡುಗಳು ಇವರ ಎಳೆಯ ಮನಸ್ಸಿನ ಮೇಲೆ ಪ್ರಭಾವ ಬೀರಿದುವು. ಸಂಸ್ಕೃತ ವ್ಯಾಸಂಗಕ್ಕೆಂದು ಹಡಗಲಿಯ ಸಂಸ್ಕೃತ ಪಾಠಶಾಲೆಯನ್ನು ಸೇರಿದ ಇವರಿಗೆ, ಅಲ್ಲಿಯ ಸಂಸ್ಕೃತ ಉಪಾಧ್ಯಾಯರಾಗಿದ್ದ ತುಂಬಿನಕೆರೆ ವೀರಪ್ಪಶಾಸ್ತ್ರಿಗಳು ಸಂಸ್ಕೃತಕ್ಕಿಂತ ಹೆಚ್ಚಾಗಿ ನಾಟಕದ ಬಗ್ಗೆ ಹೇಳಿಕೊಟ್ಟರಲ್ಲದೆ ತಾವು ಪ್ರಯೋಗಿಸಿದ ಹರಿಶ್ಚಂದ್ರ ನಾಟಕದಲ್ಲಿ ಇವರಿಗೆ ಲೋಹಿತಾಶ್ವನ ಪಾತ್ರವನ್ನು ಕೊಟ್ಟರು. ಇದೇ ಕೊಟ್ಟೂರಪ್ಪನವರ ಮೊದಲ ರಂಗಪ್ರವೇಶ; ಆಗಿನ್ನೂ ಇವರು ಎಂಟು ವರ್ಷಗಳ ಬಾಲಕ.

ರಂಗಭೂಮಿಯ ಬಗ್ಗೆ ಒಲವು ಮೂಡಿದ್ದರಿಂದ ಕೊಟ್ಟೂರಪ್ಪನವರು ಶಿರಹಟ್ಟಿ ವೆಂಕೋಬರಾವ್ ಅವರ ನಾಟಕ ಕಂಪನಿಯನ್ನು ಸೇರಿದರು. ಆ ಕಂಪನಿ ಪ್ರದರ್ಶಿಸಿದ ಪದ್ಮಾವತೀಪರಿಣಯ, ಶ್ರೀರಾಮಪಾದುಕಾಪಟ್ಟಾಭಿಷೇಕ ಮೊದಲಾದ ನಾಟಕಗಳಲ್ಲಿ ಅಭಿನಯಿಸಲು ಇವರಿಗೆ ಅವಕಾಶ ದೊರೆಯಿತು. ಕಂಪನಿಯ ಜೊತೆಗೆ ಹರಿಹರ, ಹುಬ್ಬಳ್ಳಿ, ಬೆಳಗಾಂವಿ, ಸೊಲ್ಲಾಪುರ, ಗೋವ ಮುಂತಾದ ಕಡೆ ಸಂಚರಿಸಿದರು. ಬೆಳಗಾಂವಿಯಲ್ಲಿದ್ದಾಗ ಗೋವದ ಹರಿರಾಮ ರಘುನಾಥ್ ಎಂಬುವರ ಪರಿಚಯವಾಗಿ, ಅವರಿಂದ ಹಾರ್ಮೋನಿಯಂ ಕಲಿತರು. ಬೆಂಗಳೂರಿನಲ್ಲಿ ಪಿಟೀಲು ತಾಯಪ್ಪನವರಲ್ಲಿ, ಮೈಸೂರಿನಲ್ಲಿ ಬಿಡಾರಂ ಕೃಷ್ಣಪ್ಪನವರಲ್ಲಿ ಶಿಷ್ಯವೃತ್ತಿ ಮಾಡಿ ಸಂಗೀತವನ್ನು ಕಲಿತರು.

ಅನಂತರ ಇವರು ಪ್ರಸಿದ್ಧ ಚಾಮುಂಡೇಶ್ವರಿ ನಾಟಕ ಕಂಪನಿಯನ್ನು ಸೇರಿದರು. ಇಲ್ಲಿದ್ದಾಗ ಇವರು ಆಂಜನೇಯ, ನಾರದ ಮುಂತಾದ ಭಕ್ತಿರಸ ಪ್ರಧಾನವಾದ ಪಾತ್ರಗಳನ್ನೂ ವೀರ ಅಭಿಮನ್ಯು ನಾಟಕದಲ್ಲಿ ವೀರ ಅಭಿಮನ್ಯು, ನೂರ್‌ಜಹಾನ್ ನಾಟಕದಲ್ಲಿ ಷಹಜಹಾನ್, ಪಾದುಕಾ ಪಟ್ಟಾಭಿಷೇಕದಲ್ಲಿ ಭರತ, ಗಯ ಚರಿತ್ರೆಯಲ್ಲಿ ಗಯ ಮುಂತಾದ ಪಾತ್ರಗಳನ್ನೂ ವಹಿಸಿ ತಮ್ಮ ಅಭಿನಯಕಲೆಯನ್ನು ಪ್ರದರ್ಶಿಸಿ, ಪ್ರಸಿದ್ಧರಾದರು. ಎಂ.ಎಸ್. ರಾಮಸ್ವಾಮಿಯವರ ದಾನಶೂರ ಕರ್ಣ ನಾಟಕದಲ್ಲಿ ಕರ್ಣನ ಪಾತ್ರಕ್ಕೆ ಆಯ್ಕೆಯಾದ ಕೊಟ್ಟೂರಪ್ಪನವರು, ಆ ಪಾತ್ರವನ್ನು ಅತ್ಯುತ್ತಮವಾಗಿ ನಿರ್ವಹಿಸಿ ಜನಮೆಚ್ಚುಗೆಯನ್ನೂ ಅಭಿನವ ಕರ್ಣ ಎಂಬ ಬಿರುದನ್ನೂ ಗಳಿಸಿಕೊಂಡರು. ತುಕಾರಾಮ ನಾಟಕದ ಸಂತ ತುಕಾರಾಮನ ಪಾತ್ರ ಇವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿತು. ಭೀಷ್ಮ ಪ್ರತಿಜ್ಞೆ ನಾಟಕದಲ್ಲಿ ಇವರು ಅಭಿನಯಿಸಿದ ಭೀಷ್ಮನ ಪಾತ್ರ ನಾಲ್ವಡಿ ಕೃಷ್ಣರಾಜ ಒಡೆಯರ ಮೆಚ್ಚುಗೆಗೂ ಪಾತ್ರವಾಯಿತು. ಚಾಮುಂಡೇಶ್ವರಿ ನಾಟಕ ಕಂಪನಿಯ ಪ್ರಾಕ್ಟೀಸ್ ಮ್ಯಾನೇಜರಾಗಿಯೂ ಇವರು ಸ್ವಲ್ಪ ಕಾಲ ಕಾರ್ಯನಿರ್ವಹಿಸಿದರು. ಹೊಸ ಹೊಸ ಹಾಡುಗಳಿಗೆ ಮರಾಠಿ ಮಟ್ಟುಗಳನ್ನು ಅಳವಡಿಸಿದ್ದು ಇವರ ಒಂದು ಸಾಧನೆ. ಚಾಮುಂಡೇಶ್ವರಿ ನಾಟಕ ಕಂಪನಿ ನಿಂತ ಮೇಲೆ (1937) ಕೊಟ್ಟೂರಪ್ಪನವರು ಬ್ಯಾಟಪ್ಪನವರ ಕಂಪೆನಿಯನ್ನು ಸೇರಿ ಅಲ್ಲಿ ಸುಮಾರು ಎರಡು ವರ್ಷವಿದ್ದು ಅನಂತರ ಮತ್ತೆ ಪ್ರಾರಂಭವಾದ ಚಾಮುಂಡೇಶ್ವರಿ ಕಂಪೆನಿಯನ್ನು ಸೇರಿದರು. ಆಮೇಲೆ ಮಳವಳ್ಳಿ ಸುಂದರಮ್ಮನವರ ನಾಟಕ ಕಂಪೆನಿ ಸೇರಿ ಆರು ವರ್ಷಗಳ ಕಾಲ ಅಲ್ಲಿದ್ದರು.

ಚಲನಚಿತ್ರ ರಂಗದಲ್ಲೂ ಇವರು ಸೇವೆ ಸಲ್ಲಿಸಿದ್ದಾರೆ. ತಿಲೋತ್ತಮೆಯಲ್ಲಿ ನಾರದರಾಗಿ, ವೆಂಕಟೇಶ ಮಹಾತ್ಮ್ಯೆಯಲ್ಲಿ ಹಾತೀರಾಮ

ಬಾಲಾಜಿಯಾಗಿ ಅಭಿನಯ ನೀಡಿದ್ದಾರೆ. ಕೊಟ್ಟೂರಪ್ಪನವರ ನಾದಮಾಧುರ್ಯ ಮತ್ತು ಮಾತಿನ ಗತ್ತನ್ನು ಕೊಲಂಬೊ, ಎಚ್.ಎಂ.ವಿ. ಮುಂತಾದ ಗ್ರಾಮೊಫೋನ್ ಕಂಪನಿಗಳು ಧ್ವನಿಮುದ್ರಿಸಿಕೊಂಡಿವೆ.

ಸುಮಾರು ಎಪ್ಪತ್ತು ವರ್ಷಗಳಷ್ಟು ದೀರ್ಘಕಾಲ ರಂಗಭೂಮಿಯ ಸೇವೆಸಲ್ಲಿಸಿದ ಕೊಟ್ಟೂರಪ್ಪನವರು ಅರಮನೆ ಗುರುಮನೆಗಳಿಂದ ಸನ್ಮಾನಿತರಾಗಿದ್ದರು. ಅಭಿನಯವಿಶಾರದ, ಗಾನವಿಶಾರದ ಮುಂತಾದವು ಇವರಿಗೆ ಬಂದ ಬಿರುದುಗಳಲ್ಲಿ ಕೆಲವು. ರಾಜ್ಯ ಸಂಗೀತ ನಾಟಕ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತ್ತು (1965). (ಜಿ.ಜಿ.ಎಂ.)

**ಕೊಟ್ಟೂರು** : ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಕಸಬೆಯಿಂದ 19ಕಿಮೀ ನೈರುತ್ಯಕ್ಕಿರುವ ಊರು. ಇದು ಹೊಸಪೇಟೆ - ಕೊಟ್ಟೂರು ರೈಲುಮಾರ್ಗದ ಕೊನೆಯ ನಿಲ್ದಾಣ. ಕೂಡ್ಲಿಗಿ, ಹರಪನಹಳ್ಳಿ, ಹಗರಿ ಬೊಮ್ಮನಹಳ್ಳಿ, ಹೂವಿನ ಹಡಗಲಿ, ಜಗಳೂರು - ಈ ಸ್ಥಳಗಳೊಡನೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿದ್ದು ಈ ಭಾಗದ ಮುಖ್ಯ ವ್ಯಾಪಾರಸ್ಥಳವಾಗಿದೆ. ಇಲ್ಲಿ ನಿಯಂತ್ರಿತ ಮಾರುಕಟ್ಟೆ ಇದೆ. ಪ್ರತಿ ಗುರುವಾರ ಸಂತೆ ಸೇರುತ್ತದೆ. ಹತ್ತಿ ನೇಯ್ಗೆ ಈ ಊರಿನ ಮುಖ್ಯ ಉದ್ಯಮಗಳಲ್ಲೊಂದು.

ಕೊಟ್ರಬಸಪ್ಪ, ಕೊಟ್ಟೂರ ಬಸಪ್ಪ, ಕೊಟ್ಟೂರ ಸ್ವಾಮಿ, ಕೊಟ್ಟೂರೇಶ್ವರ ಎಂಬ ಹೆಸರು ಗಳಿಸಿರುವ ಬಸಪ್ಪಲಿಂಗ ಸ್ವಾಮಿ ಎಂಬ ವೀರಶೈವ ಸಂತರ ಸಂಪರ್ಕದಿಂದ ಕೊಟ್ಟೂರು ಧಾರ್ಮಿಕ ಕೇಂದ್ರವಾಗಿಯೂ ಪ್ರಸಿದ್ಧವಾಗಿದೆ. ಬಸವಲಿಂಗ ಕವಿಯ ಕೊಟ್ಟೂರು ಬಸವೇಶ್ವರ ಪುರಾಣದಲ್ಲಿ (1679) ಇವರ ಮಹಿಮೆ ವರ್ಣಿತವಾಗಿದೆ. ಆದರೆ ಇವರ ಕಾಲ ಸರಿಯಾಗಿ ತಿಳಿದಿಲ್ಲ. ಜೈನರು ಪ್ರಬಲರಾಗಿದ್ದ ಕಾಲದಲ್ಲಿ ಈ ಶರಣರು ಬಂದು ವೀರಶೈವ ಧರ್ಮವನ್ನು ಇಲ್ಲಿ ನೆಲೆಗೊಳಿಸಿದರು ಎನ್ನಲಾಗಿದೆ. ಇಲ್ಲಿನ 'ಮೂರು ಕಲ್ಲು ಮಠ' ದಪ್ಪ ಕಲ್ಲುಗಳಲ್ಲಿ ಕಟ್ಟಿರುವ ಕದಂಬ ನಾಗರ ಶಿಖರಗಳನ್ನುಳ್ಳ ತ್ರಿಕೂಟಾಚಲ. ಕೊಟ್ರಬಸಪ್ಪ ಇಲ್ಲಿಯ ಲಿಂಗವನ್ನು ಸ್ಥಾಪನೆ ಮಾಡಿದರೆಂದು ಪ್ರತೀತಿ. ಊರ ಮಧ್ಯದಲ್ಲಿ ಕೊಟ್ರಬಸಪ್ಪ ದೇವಾಲಯವಿದೆ. ಇದು ಹಿಂದೆ ವೀರಭದ್ರ ದೇವಾಲಯವಾಗಿದ್ದಂತೆ ತಿಳಿಯುತ್ತದೆ. ಊರಿನ ಪೂರ್ವಭಾಗದಲ್ಲಿ ಕೊಟ್ರಬಸಪ್ಪನವರ ಸಮಾಧಿ ಇದೆ. ಇದು ದೊಡ್ಡ ಆಯಾಕಾರದ ಕಲ್ಲುಕಟ್ಟಡ, ಸುತ್ತಲೂ ದೊಡ್ಡ ಪ್ರಾಕಾರವಿದೆ. ಈ ಕಟ್ಟಡ ಅನೇಕ ಶಿಲ್ಪಗಳಿಂದ (ಕೆಲವು ವರ್ಣರಂಜಿತ), ಉತ್ತಮ ಕೆತ್ತನೆಯುಳ್ಳ ಕಂಬಗಳಿಂದ ಅಲಂಕೃತವಾಗಿದೆ. ಕೊಟ್ಟೂರೇಶ್ವರರ ವಾರ್ಷಿಕ ರಥೋತ್ಸವ (ಫೆಬ್ರವರಿ) ಮತ್ತು ಕಾರ್ತಿಕಮಹೋತ್ಸವ (ನವೆಂಬರ್) ಬಹು ಜನರನ್ನು ಆಕರ್ಷಿಸುತ್ತವೆ. ಕೊಟ್ಟೂರಿನಲ್ಲಿ ಹಿಂದೆ ಒಂದು ಕೋಟೆ ಇತ್ತು. ಈಗ ಹಾಳಾಗಿದೆ. ಕೆಲವು ಶಿಲಾಶಾಸನಗಳೂ ಇಲ್ಲಿವೆ. *

**ಕೊಡಗನೂರು** : ದಾವಣಗೆರೆ ಜಿಲ್ಲೆಯ ಅದೇ ತಾಲ್ಲೂಕಿನಲ್ಲಿ ಕಸಬೆಯಿಂದ ಆಗ್ನೇಯಕ್ಕಿರುವ ಒಂದು ಗ್ರಾಮ. ಹುಬ್ಬಳ್ಳಿ - ಅರಸೀಕೆರೆ ರೈಲುಮಾರ್ಗದ ಒಂದು ನಿಲ್ದಾಣ. ಇಲ್ಲಿ 10ನೆಯ ಶತಮಾನದ ಶಾಸನಗಳೂ ಪುರಾತನ ದೇವಾಲಯಗಳೂ ಇವೆ. ಒಂದು ಶಾಸನದ ಪ್ರಕಾರ ಇದು ಒಂದು ಅಗ್ರಹಾರ. ದಕ್ಷಿಣ ಅಯ್ಯಾವೊಳೆ ಎಂದು ಪ್ರಸಿದ್ಧವಾಗಿತ್ತು. ಗ್ರಾಮದ ಪುರಾತನ ಕಲ್ಲೇಶ್ವರ ದೇವಾಲಯವನ್ನು ಪುನರ್ನಿರ್ಮಾಣ ಮಾಡಲಾಗಿದೆ. ಇದರ ನವರಂಗದಲ್ಲಿರುವ ನಾಲ್ಕು ಕಂಬಗಳು ಮಾತ್ರ ಇದರ ಪುರಾತನತ್ವವನ್ನು ತೋರಿಸಿ ಕೊಡುತ್ತವೆ. ಒಂದು ಶಾಸನದ ಪ್ರಕಾರ 12ನೆಯ ಶತಮಾನಕ್ಕೆ ಸೇರಿದ್ದೆಂದು ಹೇಳುವ ವಿಷ್ಣುದೇವಾಲಯ ಈಗ ಇಲ್ಲ. ಆದರೆ ಊರ ಅಶ್ವತ್ಥಕಟ್ಟೆಯಲ್ಲಿ ಮುಕ್ಕಾದ ವಿಷ್ಣುವಿಗ್ರಹವಿದೆ. 17ನೆಯ ಶತಮಾನದ ಹನುಮಂತದೇವರ ಗುಡಿಯನ್ನು ಹೊಸದಾಗಿ ಕಟ್ಟಲಾಗಿದೆ. ಊರಿನ ಹತ್ತಿರದ ಒಂದು ದಿಣ್ಣೆಯ ಮೇಲೆ ಬಳಪದ ಕಲ್ಲಿನ ಒಂದು ಆಸೀನ ದುರ್ಗಾದೇವಿಯ ವಿಗ್ರಹವಿದೆ. ವಿಗ್ರಹಕ್ಕೆ ನಾಲ್ಕು ಕೈಗಳು, ಮೇಲೆ ಕಿರೀಟವಿದ್ದು ತಲೆಯ ಹಿಂದಿನಿಂದ ಜ್ವಾಲೆಗಳು ಉದ್ಭವಿಸುತ್ತಿರುವಂತೆ ಕೆತ್ತಲಾಗಿದೆ. ಇದೇ ವಿಗ್ರಹವನ್ನೇ ಕೊಡಗನೂರಿನ 'ಬನದ-ಶಂಕರಿ' ಎಂದು ದೊಡ್ಡ ಮಾಗಡಿಯ ಶಾಸನದಲ್ಲಿ ಹೇಳಿದೆ. ಈ ಶಾಸನ 1518ರದು. ಈ ವಿಗ್ರಹ ಹೊಯ್ಸಳರ ಕಾಲದ್ದಾಗಿದೆ. ಊರಿಗೆ ಮೂರು ಫರ್ಲಾಂಗ್ ದೂರಕ್ಕೆ ಈಶಾನ್ಯ ದಿಕ್ಕಿನಲ್ಲಿ ಮಲಕನ ದೇವರ ಗುಡಿ ಇದೆ. ಈ ಗುಡಿಯ ಹೊರಗೋಡೆಗಳು ಮತ್ತು ಮೇಲಿನ ಭಾಗವೆಲ್ಲ ಮಣ್ಣಿನ ದಿಬ್ಬದಿಂದ ಮುಚ್ಚಿಹೋಗಿ ಎದುರುಗಡೆಯಿಂದ ಗುಡಿಯ ಒಳಭಾಗ ಕಾಣಿಸುತ್ತದೆ. ಈ ದೇವಾಲಯ 12ನೆಯ ಶತಮಾನಕ್ಕೆ ಸೇರಿದ್ದಿರಬಹುದು. ಸ್ಥಳೀಯ ಶಾಸನದಲ್ಲಿ ಹೇಳಿರುವ (1101) ಸೋಮೇಶ್ವರ ದೇವಾಲಯ ಇದೇ ಇರಬಹುದೆಂದು ಊಹೆ. *

**ಕೊಡಗಿನ ಗೌರಮ್ಮ** : 1912-39. ಕನ್ನಡದ ಹೆಸರಾಂತ ಕಥೆಗಾರ್ತಿ. ಕೊಡಗು ಜಿಲ್ಲೆ ಮಡಿಕೇರಿಯ ಹವ್ಯಕ ಬ್ರಾಹ್ಮಣ ಮನೆತನವೊಂದರಲ್ಲಿ ಜನಿಸಿದರು. ಇವರ ತಂದೆ ರಾಮಯ್ಯ, ತಾಯಿ ನಂಜಕ್ಕ. ಮಡಿಕೇರಿಯ ಶಾಲೆಯಲ್ಲಿ ಗೌರಮ್ಮನವರ ವ್ಯಾಸಂಗ ನಡೆಯಿತು. 1928ರಲ್ಲಿ ಸಮೀಪದ ಬಂಧು ಬಿ.ಟಿ.ಗೋಪಾಲಕೃಷ್ಣ ಎಂಬುವರೊಂದಿಗೆ ಇವರ ವಿವಾಹವಾಯಿತು. ಈ ದಂಪತಿಗಳಿಗೆ ಒಂದು ಗಂಡು ಮಗುವಿತ್ತು (1931).

ಗೌರಮ್ಮ ಮನೆಗೆಲಸದ ಜೊತೆಗೆ, ಬಿಡುವಿನ ವೇಳೆಯಲ್ಲಿ ಪುಸ್ತಕಗಳನ್ನು ಓದತೊಡಗಿದರು. ಮಿಸೆಸ್ ಬಿ.ಟಿ.ಜೀ.ಕೃಷ್ಣ ಎಂಬ ಹೆಸರಿನಿಂದ ಕಥೆಗಳನ್ನು ಬರೆಯಲಾರಂಭಿಸಿದರು. ಇವರು ಬರೆದ ಕಥೆಗಳಲ್ಲಿ ಮನುವಿನ ರಾಣಿ ಎಂಬುದು ಇವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿತು.

ಬದುಕನ್ನು ನೋಡಬಲ್ಲ ಕಣ್ಣು, ಸಹಾನುಭೂತಿಯ ಮನಸ್ಸು, ಸರಳವಾದ ಭಾಷೆ, ಸಹಜವಾದ ಕಥನ ಈ ಮುಂತಾದ ಗುಣಗಳನ್ನು ಮನುವಿನ ರಾಣಿ ಕಥೆಯಲ್ಲಿ ಗುರುತಿಸಬಹುದು. ಗೌರಮ್ಮನವರು ಬರೆದು ಪ್ರಕಟಿಸಿದ ಹಲವು ಕಥೆಗಳನ್ನು ಸೇರಿಸಿ ಸಂಕಲನ ರೂಪದಲ್ಲಿ ಪ್ರಕಟಿಸಲು ಪ್ರಕಾಶಕ ದ.ಬಾ.ಕುಲಕರ್ಣಿ ಅವರು ಪ್ರಯತ್ನಿಸಿದರು. ಆದರೆ ಈ ಪುಸ್ತಕ ಪ್ರಕಟವಾಗುವ ಮುನ್ನವೆ, ತಮ್ಮ ಮನೆಯ ಸಮೀಪದ ಹೊಳೆಯಲ್ಲಿ ಈಜಲು ಹೋಗಿದ್ದ ಗೌರಮ್ಮನವರು ನೀರಿನಲ್ಲಿ ಮುಳುಗಿ ಅಕಾಲ ಮರಣಕ್ಕೆ ತುತ್ತಾದರು. ಗೌರಮ್ಮನವರ ಪುಸ್ತಕವನ್ನು ಚಿಗುರು ಎಂಬ ಹೆಸರಿನಿಂದ ಪ್ರಕಟಿಸಬೇಕೆಂದಿದ್ದ ಪ್ರಕಾಶಕರು ಅನಂತರ ಕಂಬನಿ ಎಂಬ ಹೆಸರಿನಿಂದ ಪ್ರಕಟಿಸಿದರು.

ಗೌರಮ್ಮನವರು ಹೊಸಕಾಲದ ಉನ್ನತ ಪ್ರೇರಣೆಗಳಿಗೆ ಮನ ತೆತ್ತಿದ್ದವರು. ಮಹಾತ್ಮಗಾಂಧೀ ಅವರು ಕೊಡಗಿನಲ್ಲಿ ಪ್ರವಾಸಮಾಡಿದಾಗ, ಗೌರಮ್ಮನವರು ಸತ್ಯಾಗ್ರಹ ಮಾಡಿ ಗಾಂಧೀಜಿಯವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅವರ ದೇಶಸೇವೆಯ ನಿಧಿಗಾಗಿ ತಮ್ಮ ಆಭರಣಗಳನ್ನು ಮುಡುಪಾಗಿ ಕೊಟ್ಟರು ಎಂಬ ಸಂಗತಿಯನ್ನು ಇಲ್ಲಿ ಸ್ಮರಿಸಬಹುದು. (ಎಂ.ವಿ.ಐ.)

**ಕೊಡಗು** [1]: ಕೊಡಗು ಜಿಲ್ಲೆ ಮಡಿಕೇರಿಯಿಂದ ಪ್ರಕಟವಾಗುತ್ತಿರುವ

ವಾರಪತ್ರಿಕೆ. 1921 ಜೂನ್ 1ರಲ್ಲಿ ಪ್ರಾರಂಭವಾಯಿತು. ರಾಷ್ಟ್ರೀಯ ಹೋರಾಟದಲ್ಲಿ ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಗೆ ತುತ್ತಾಗಿ ಭದ್ರತಾ ಇಡುಗಂಟನ್ನು ಎರಡುಬಾರಿ ಕಳೆದುಕೊಂಡು, 1942ರಲ್ಲಿ ಸುಮಾರು 6

ತಿಂಗಳ ವರೆಗೆ ಮುಟ್ಟುಗೋಲು ಹಾಕಲ್ಪಟ್ಟು ವಿವಿಧ ಕಷ್ಟಗಳನ್ನೆದುರಿಸಬೇಕಾಗಿ ಬಂದರೂ ಪತ್ರಿಕೆ ತನ್ನ ರಾಷ್ಟ್ರೀಯ ಧ್ಯೇಯದಿಂದ ವಿಚಲಿತವಾಗದೆ ನಡೆದುಬಂದಿದೆ. ಇದರಲ್ಲಿ ರಾಜಕೀಯ ಆರ್ಥಿಕ ಸಾಮಾಜಿಕ ವಿಷಯಗಳು, ಧರ್ಮ, ಕೃಷಿ, ಆರೋಗ್ಯ ಇತ್ಯಾದಿಗಳಿಗೆ ಸಂಬಂಧಿಸಿದ ಲೇಖನಗಳು, ಕಥೆ, ಕವನ, ಜಿಲ್ಲಾ ಹಾಗೂ ಇತರ ವರ್ತಮಾನಗಳು, ಓದುಗರ ಓಲೆಗಳು ಪ್ರಕಟವಾಗುತ್ತವೆ. ಪ್ರಾರಂಭದಿಂದ 1964ರ ವರೆಗೆ ಪಂದ್ಯಂಡ ಬೆಳ್ಯಪ್ಪ ಸಂಪಾದಕರಾಗಿದ್ದರು. ಅನಂತರ ಬಿ.ಡಿ.ಗಣಪತಿಯವರು ಸಂಪಾದಕರಾಗಿದ್ದರು. ಪತ್ರಿಕೆಯ ಸುವರ್ಣ ಮಹೋತ್ಸವವನ್ನು 1972ರಲ್ಲಿ ಆಚರಿಸಲಾಯಿತು. (ಬಿ.ಡಿ.ಜಿ.)

**ಕೊಡಗು ²** : ಕರ್ನಾಟಕದ ನೈಋತ್ಯ ಭಾಗದಲ್ಲಿರುವ ಒಂದು ಜಿಲ್ಲೆ. ಉತ್ತರ ಅಕ್ಷಾಂಶ $11^0$ 56' - $12^0$ 50' ಮತ್ತು ಪೂರ್ವ ರೇಖಾಂಶ $75^0$ 22' - $76^0$ 12' ನಡುವೆ ಹಬ್ಬಿದೆ. ಈ ಜಿಲ್ಲೆ ಪೂರ್ವದಲ್ಲಿ ಮೈಸೂರು, ಉತ್ತರದಲ್ಲಿ ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದಲೂ ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೇರಳ ರಾಜ್ಯದಿಂದಲೂ ಸುತ್ತುವರಿದಿದೆ. ಕೊಡಗಿನ ಗರಿಷ್ಠ ಉದ್ದ ದಕ್ಷಿಣೋತ್ತರವಾಗಿ 96ಕಿಮೀ; ಗರಿಷ್ಠ ಅಗಲ ಪೂರ್ವಪಶ್ಚಿಮವಾಗಿ 64ಕಿಮೀ ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳೂ ಹನ್ನೊಂದು ಹೋಬಳಿಗಳೂ 304 ಗ್ರಾಮಗಳೂ ಇರುವ ಕೊಡಗು ಜಿಲ್ಲೆಯ ಒಟ್ಟು ವಿಸ್ತೀರ್ಣ 4,104ಚ.ಕಿಮೀ. ಜನಸಂಖ್ಯೆ 5,45,322. ಇದರ ಆಡಳಿತ ಕೇಂದ್ರ ಮಡಿಕೇರಿ.

ಇಲ್ಲಿರುವ ಪಶ್ಚಿಮ ಘಟ್ಟಗಳ ಮುಖ್ಯ ಶ್ರೇಣಿ ಕೊಡಗಿನ ಬೆನ್ನುಮೂಳೆಯಂತಿದೆ. ಇದು ವಾಯವ್ಯದಿಂದ ದಕ್ಷಿಣಕ್ಕೆ, ಸುಬ್ರಹ್ಮಣ್ಯದಿಂದ ಬ್ರಹ್ಮಗಿರಿಯ ಪಶ್ಚಿಮಾಗ್ರದವರೆಗೆ ಹಬ್ಬಿದೆ. ಇದರ ಉದ್ದ 96ಕಿಮೀ ಗಿಂತಲೂ ಹೆಚ್ಚು. ಇದರಿಂದ ಪೂರ್ವದ ಕಡೆಗೆ ಕೈಬೆರಳುಗಳಂತೆ ಸಾಗಿರುವ ಉನ್ನತ ಶ್ರೇಣಿಗಳು ಹಲವಾರು. ಸುಬ್ರಹ್ಮಣ್ಯ ಅಥವಾ ಪುಷ್ಪಗಿರಿಯಲ್ಲಿ ಪರ್ವತ ಹೆಗ್ಗಂಟಿನ ಎತ್ತರ ಸಮುದ್ರಮಟ್ಟಕ್ಕಿಂತ 1908ಮೀ. ಈ ಎಡೆಯಿಂದ ಕವಲೊಡೆಯುವ ಹಲವು ಶ್ರೇಣಿಗಳ ಪೈಕಿ ಅತ್ಯಂತ ಮುಖ್ಯವಾದ್ದು ಕೋಟೆಬೆಟ್ಟ; ಮಡಿಕೇರಿಯಿಂದ 14ಕಿಮೀ ಉತ್ತರದಲ್ಲಿರುವ ಇದರ ಎತ್ತರ 1792ಮೀ. ಮಡಿಕೇರಿಯ ಬಳಿ ಆರಂಭವಾಗಿ ಪಶ್ಚಿಮಕ್ಕೆ ಸಾಗುವುದು ಬೇಂಗುನಾಡು ಶ್ರೇಣಿ. ಇದಕ್ಕೂ ಘಟ್ಟಗಳ ಮುಖ್ಯ ಶ್ರೇಣಿಗೂ ನಡುವೆ ಅತ್ಯಂತ ಕಿರಿದಾದ ಕೋನ ಏರ್ಪಟ್ಟಿದೆ. ಇವೆರಡೂ ಕೂಡುವೆಡೆಯಲ್ಲಿರುವುದೇ ಬ್ರಹ್ಮಗಿರಿ. ಕಾವೇರಿ ನದಿ ಇಲ್ಲಿ ಉಗಮಿಸುತ್ತದೆ. ಇದಕ್ಕೆ ಉತ್ತರಕ್ಕಿರುವುದು ಸಂಪಾಜೆ ಕಣಿವೆ. ಮಂಗಳೂರು ರಸ್ತೆ ಈ ಮೂಲಕ ಸಾಗುತ್ತದೆ. ಬ್ರಹ್ಮಗಿರಿಯೆಡೆಯಿಂದ ಮುಂದಕ್ಕೆ ಪಶ್ಚಿಮ ಘಟ್ಟಗಳ ಮುಖ್ಯಶ್ರೇಣಿ ಸಾಗುವುದು ಆಗ್ನೇಯಾಭಿಮುಖವಾಗಿ. ತುಂಬೆಮಲೆ, ಇಗ್ಗುತಪ್ಪ ದೇವರ ಶಿಖರ, ತಡಿಯಂಡಮೋಳು ಮತ್ತು ಸೋಮಮಲೆ ಮುಖ್ಯ ಶಿಖರಗಳು. ಈ ಶ್ರೇಣಿಗೆ ದಕ್ಷಿಣದಲ್ಲಿರುವ ಪೆರಿಯಂಬಾಡಿ ಘಾಟಿನ ಮೂಲಕ ಕಣ್ಣಾನೂರಿಗೆ ರಸ್ತೆಯುಂಟು. ಕೊಡಗಿನ ಆಗ್ನೇಯ ತುದಿಯಲ್ಲಿರುವ ಶ್ರೇಣಿ ಮಲೆನಾಡು. ಇದೂ ಬ್ರಹ್ಮಗಿರಿಯ ಹೊರಗವಲೂ ಕೊಡಗಿನ ದಕ್ಷಿಣದ ಎಲ್ಲೆಗಳು, ವೈನಾಡಿನಿಂದ ಕೊಡಗನ್ನು ಪ್ರತ್ಯೇಕಿಸುವ ಶ್ರೇಣಿಗಳು ಇವು. ಇಲ್ಲಿರುವ ಅತ್ಯುನ್ನತ ಶಿಖರ ದವಸಿಬೆಟ್ಟ. ಇದರ ಸುತ್ತಣಪ್ರದೇಶ ಬಹಳ ಚೆಲುವಾಗಿದೆ. ಅದರ ಹೆಸರು ಹುಯಲೆ ಮಲೆ. ಕೊಡಗಿನ ಪಶ್ಚಿಮದ ಎಲ್ಲೆಯ ಬಳಿ ಇರುವ ಶಿಖರಗಳಲ್ಲಿ ಮುಖ್ಯವಾದವು ಹನುಮನಬೆಟ್ಟ ಮತ್ತು ಪೆರಮಾಲೆಮಲೆ. ಬ್ರಹ್ಮಗಿರಿಯಿಂದ ಕಿಗ್ಗಟ್ಟನಾಡಿನ ಕಡೆಗೆ ಅನೇಕ ಕವಲುಗಳು ಹಬ್ಬಿವೆ. ಇವು ಕಡಿದುಮಲೆಗಳು. ವಿರಾಜಪೇಟೆಯ ಬಳಿಯ ಅಂಬಟೆ ಬೆಟ್ಟ, ಬೆಟ್ಟಂಗಾಲ, ಕುಂಡದಬೆಟ್ಟ, ಸಿದ್ದೇಶ್ವರ ಬೆಟ್ಟ ಇವು ಮುಖ್ಯ. ಇನ್ನು ಕೆಲವು ಕವಲುಗಳು ಪೂರ್ವದ ಕಡೆಗೆ ಜಾರಿ, ಏರಿಳಿದು ಸಾಗಿ, ವಿಶಾಲವಾದ ಬತ್ತದ ಬಯಲುಗಳು ಆಲಿಂಗಿಸಿಕೊಂಡಿವೆ. ಬೇಂಗುನಾಡು ಶ್ರೇಣಿ ಮಡಿಕೇರಿಯ ದಕ್ಷಿಣದಲ್ಲಿ ಎರಡು ಕವಲುಗಳಾಗಿ ಮುನ್ನಡೆಯುತ್ತದೆ. ಒಂದು ಕವಲು ನೂರೊಕ್ಕಲು ಬೆಟ್ಟದಲ್ಲಿ ಪರ್ಯವಸಾನಗೊಂಡರೆ ಇನ್ನೊಂದು ಕವಲು ಡೊಂಕುಡೊಂಕಾಗಿ ಕುಶಾಲನಗರದ ಕಡೆಗೆ ಸಾಗುತ್ತದೆ. ಇದರ ಉನ್ನತ ಶಿಖರ ಕಲ್ಲೂರುಬೆಟ್ಟ. ಇಲ್ಲಿ ತೇಗದ ಕಾಡು ವಿಶೇಷ. ಕೋಟೆಬೆಟ್ಟದ ಉತ್ತರಕ್ಕಿರುವುದು ಸಂತೆಹಳ್ಳಿ ಬೆಟ್ಟಗಳು. ಮುಕ್ರಿಬೆಟ್ಟವೇ ಇವುಗಳ ತುದಿ. ಕೊಡಗಿನ ಉತ್ತರದ ಗಡಿಯಿಂದ ಕಾವೇರಿಯ ಕಡೆಗೆ ಒಂದು ಶ್ರೇಣಿ ಹಬ್ಬಿದೆ. ಮಾಲಂಬಿ ಮತ್ತು ಕನಗಲುಬೆಟ್ಟ ಇದರ ಮುಖ್ಯಶಿಖರಗಳು.

ದಕ್ಷಿಣದ ಕಾಶ್ಮೀರ ಎಂದು ಕರೆಯುವ ಇಡೀ ಕೊಡಗು ಪ್ರದೇಶ ಪರ್ವತಮಯವಾಗಿದ್ದರೂ ಸ್ಥಳದಿಂದ ಸ್ಥಳಕ್ಕೆ ಇದರ ಲಕ್ಷಣ ವ್ಯತ್ಯಾಸವಾಗುತ್ತದೆ. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಮಡಿಕೇರಿ ಪ್ರಸ್ಥಭೂಮಿಯ ಎತ್ತರ ಕೋಟೆಯ ಬಳಿಯಲ್ಲಿ ಸಮುದ್ರಮಟ್ಟದಿಂದ 1270ಮೀ. ಪೂರ್ವದ ಕುಶಾಲನಗರದ ಬಳಿ 907ಮೀ. ಸರಾಸರಿ 1170ಮೀ. ಎತ್ತರವಿರುವ ಈ ಪ್ರಸ್ಥಭೂಮಿ ಮಡಿಕೇರಿಯ ಉತ್ತರಕ್ಕೆ 42ಕಿಮೀ ದೂರದಲ್ಲಿರುವ ಸೋಮವಾರಪೇಟೆಯ ವರೆಗೂ ಹಬ್ಬಿದೆ. ಸೋಮವಾರಪೇಟೆಯ ಬಳಿ ಪರ್ವತಗಳು ಅಷ್ಟು ಕಡಿದಾಗಿಲ್ಲ.



ಚೆಲಾವರ ಜಲಪಾತ, ನಾಪೋಕ್ಲು

ಅಲ್ಲಿ ನಡುನಡುವೆ ಹಸುರು ಇಳಿಜಾರುಗಳೂ ದಟ್ಟ ಕಾಡುಗಳೂ ಉಂಟು. ಇವು ಯುರೋಪಿನ ಉದ್ಯಾನ ನೆಲದ ದೃಶ್ಯವನ್ನು ನೆನಪಿಗೆ ತರುತ್ತವೆ ಎಂದು ಹೇಳುವುದುಂಟು. ಮಡಿಕೇರಿಯ ಬಳಿಯ ಬೆಟ್ಟಗಳು ಒತ್ತೊತ್ತು, ಕಡಿದು, ಕಣಿವೆಗಳ ಆಳ ಹೆಚ್ಚು. ಕಾಡು ಬಲು ದಟ್ಟ. ಕುಶಾಲನಗರದ ಬಳಿಗೆ ಸಾಗಿದಂತೆ ಕರ್ನಾಟಕ ಪ್ರಸ್ಥಭೂಮಿಯ ವಿಶಾಲ ಬಯಲುಗಳು ಆರಂಭವಾಗುತ್ತವೆ. ಇಲ್ಲಿ ನಡುನಡುವೆ ಒಂಟಿ ಬೆಟ್ಟಗಳುಂಟು. ವಿರಾಜಪೇಟೆಯ ಕಡೆಯಲ್ಲಿ-ಬೆಪ್ಪುನಾಡು ಮತ್ತು ಕಡ್ಯೆಟ್ ನಾಡುಗಳಲ್ಲಿ ಅರಣ್ಯ ದಟ್ಟವಾಗಿಲ್ಲ. ವಿಶಾಲ ಗದ್ದೆ ಬಯಲುಗಳ ಹೆಗಲ ಮೇಲೆ ಚೆಲುವಾದ ಹುಲ್ಲಿನ ದಿಬ್ಬಗಳನ್ನು ಕಾಣಬಹುದು. ಕೊಡಗಿನ ಪೂರ್ವ ಎಲ್ಲೆಯ ಬಳಿ ಕಾವೇರಿ ಮತ್ತು ಲಕ್ಷ್ಮಣತೀರ್ಥಗಳ ನಡುವೆ- ಪರ್ಣಪಾತೀ ವೃಕ್ಷಗಳ ವಿಶಾಲ ಕಾಡುಂಟು. ಇದಕ್ಕೆ


ಕೊ ಡ ಗು
ಸೋಮವಾರಪೇಟೆ
ಮಡಿಕೇರಿ
ವಿರಾಜಪೇಟೆ
ಕುಶಾಲನಗರ
ಭಾಗಮಂಡಲ
ತಲಕಾವೇರಿ
ಸಂಪಾಜೆ
ಅಮ್ಮತ್ತಿ
ಗೋಣಿಕೊಪ್ಪಲು
ಪೊನ್ನಂಪೇಟೆ
ಶ್ರೀಮಂಗಲ
ಕುಟ್ಟ
0 10 20
ಕಿಲೋಮೀಟರುಗಳು

ಪಶ್ಚಿಮದಲ್ಲಿ ನಿತ್ಯಹಸುರುಕಾಡು ಹಬ್ಬಿದೆ. ಬಿದಿರುಮೆಳೆ ವಿಶೇಷ. ಒಟ್ಟಿನಲ್ಲಿ ಪರ್ವತಶಿಖರಗಳು ಹುಲ್ಲಿನಿಂದಲೂ ಕಣಿವೆಗಳು ಮತ್ತು ಪರ್ವತಸಾನುಪ್ರದೇಶದ ತೆರವಾದ ಸ್ಥಳಗಳು ನಿತ್ಯಹಸುರುಕಾಡುಗಳಿಂದಲೂ ಕೂಡಿವೆ. ಇಡೀ ಕೊಡಗು ಹಸುರುಮಯ. ಇಲ್ಲಿ ನಿಸರ್ಗ ಸಸ್ಯವೇ ಹೇರಳ. ಅಲ್ಲಲ್ಲಿ ಕಾಫಿ ಮತ್ತು ಇತರ ಬೆಳೆಗಳಿಗಾಗಿ ಇದನ್ನು ತೆಗೆಯಲಾಗಿದೆ.



ಓಂಕಾರೇಶ್ವರ ದೇವಾಲಯ, ಮಡಿಕೇರಿ

ಧಾರವಾಡ ಶಿಲಾರಚನೆಗೆ ಸೇರಿದ ಗಾರ್ನಿಟಿಫೆರಸ್ ಬಯೊಟೈಟ್, ಸಿಲ್ಲಿಮನೈಟ್ ಮತ್ತು ಗಾರ್ನಿಟಿಫೆರಸ್ ನೈಸ್‍ಗಳೂ ಪದರಶಿಲೆಗಳೂ ಜಿಲ್ಲೆಯಲ್ಲಿ ವಿಶೇಷವಾಗಿ ಹರಡಿವೆ. ಮಧ್ಯೆ ಮಧ್ಯೆ ಡಾಲೆರೈಟ್, ಬೆಣಚು, ಗ್ರ್ಯಾನೈಟ್ ಮತ್ತು ಚಾರ್ನ್‍ಕೈಟ್ ಶಿಲೆಗಳ ಅಂತರ್‍ಚಾಚುಗಳಿವೆ. ಎತ್ತರದ ಭಾಗಗಳಲ್ಲಿ ಜಂಬಿಟ್ಟಿಗೆಯ ಮಣ್ಣು, ನದಿದಡಗಳಲ್ಲಿ ಮತ್ತು ಕಣಿವೆಗಳಲ್ಲಿ ಮೆಕ್ಕಲು ಮಣ್ಣಿನ ಹರಹು ಇದೆ. ಬಹಳ ಕೆಳದರ್ಜೆಯ ಕಾಗೆಬಂಗಾರದ ನಿಕ್ಷೇಪಗಳು ಕುಶಾಲನಗರ, ಮಡಿಕೇರಿ ಬಳಿಯಲ್ಲೂ ಮತ್ತು ಶ್ರೀಮಂಗಲನಾಡಿನ ಕೆಲವು ಪ್ರದೇಶಗಳಲ್ಲೂ ಇವೆ. ಮಡಿಕೇರಿ ಮತ್ತು ಸಿದ್ಧಾಪುರದ ಬಳಿಯಲ್ಲಿ ಕ್ಯಾನೈಟ್ ದೊರಕುತ್ತದೆ. ಜಿಲ್ಲೆಯ ಖನಿಜಸಂಪತ್ತು ಅಲ್ಪ.

ಕೊಡಗಿನ ಮುಖ್ಯ ನದಿ ಕಾವೇರಿ (ನೋಡಿ). ಬ್ರಹ್ಮಗಿರಿಯಲ್ಲಿ ಇದರ ಉಗಮ. ಇದು ಸಿದ್ಧಾಪುರದವರೆಗೂ ಆಗ್ನೇಯಾಭಿಮುಖವಾಗಿ ಹರಿದು, ಅಲ್ಲಿಂದ ಈಶಾನ್ಯಕ್ಕೆ ದಿಕ್ಕು ಬದಲಾಯಿಸಿ, ಸ್ವಲ್ಪ ದೂರ ಜಿಲ್ಲೆಯ ಪೂರ್ವ ಗಡಿಯಾಗಿ ಪರಿಣಮಿಸಿ, ಶಿರಂಗಾಲದ ಬಳಿ ಜಿಲ್ಲೆಯನ್ನು ಬಿಡುತ್ತದೆ. ಇದರ ಎರಡು ಮುಖ್ಯ ಉಪನದಿಗಳಾದ ಹೇಮಾವತಿ ಮತ್ತು ಲಕ್ಷ್ಮಣತೀರ್ಥಗಳು ಕ್ರಮವಾಗಿ ಉತ್ತರ ಮತ್ತು ದಕ್ಷಿಣ ಕೊಡಗುಗಳಲ್ಲಿ ಹರಿಯುತ್ತವೆ. ಹೇಮಾವತೀಯೇ ಕೊಡಗಿನ ಉತ್ತರತಮ ಗಡಿರೇಖೆ. ಕೊಡಗಿನಲ್ಲಿ ಕಾವೇರಿಯನ್ನು ಸೇರುವ ಉಪನದಿಗಳು, ಕನ್ನಿಕೆ, ಕಕ್ಕಬೆ, ಕಾಡನೂರು ಹೊಳೆ, ಮುತ್ತಾರುಮುಡಿ, ಚಿಕ್ಕಹೊಳೆ ಮತ್ತು ಹಾರಂಗಿ. ಕಕ್ಕೆಹೊಳೆ, ಚೇರನಹೊಳೆ, ಮಾದಪುರ ಮತ್ತು ಹಟ್ಟಿಹೊಳೆ -ಇವು ಹಾರಂಗಿಯ ಉಪನದಿಗಳು. ಪಶ್ಚಿಮಕ್ಕೆ ಹರಿಯುವ ಒಂದು ಮುಖ್ಯ ನದಿಯೆಂದರೆ ಬರಪೊಳೆ. ಇದು ನೈಋತ್ಯದಲ್ಲಿ ಮಲಬಾರಿನ ಕಡೆಗೆ ಸಾಗುತ್ತದೆ. ಸಾರತ್, ಕುಮಾರಧಾರಾ ಮತ್ತು ಪಯಸ್ವಿನಿ ಇತರ ನದಿಗಳು. ಸಾರತ್ 434' ಎತ್ತರದಿಂದ ದುಮುಕುತ್ತದೆ. ಕೊಡಗಿನ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ಇವನ್ನು ಸುಲಭವಾಗಿ ದಾಟಬಹುದು.

ಕೊಡಗು ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಹಿತಕರ. ಪೂರ್ವಕ್ಕಿಂತ ಪಶ್ಚಿಮ ಭಾಗ ಹೆಚ್ಚು ತಂಪಾಗಿರುತ್ತದೆ. ಏಪ್ರಿಲ್-ಮೇಗಳಲ್ಲಿ ಗರಿಷ್ಠ ಉಷ್ಣತೆ. ಜನವರಿಯಲ್ಲಿ ಕನಿಷ್ಠ. ಮಳೆಯೂ ಪೂರ್ವಕ್ಕಿಂತ ಪಶ್ಚಿಮದಲ್ಲಿ ಅಧಿಕ. ಭಾಗಮಂಡಲದಲ್ಲಿ ವಾರ್ಷಿಕ ಮಳೆ 6030ಮಿಮೀ. ಜಿಲ್ಲೆಯ ಪೂರ್ವದ ಎಲ್ಲೆಯಲ್ಲಿರುವ ಕುಶಾಲನಗರದಲ್ಲಿ 1120ಮಿಮೀ. ಜಿಲ್ಲೆಯ ಸರಾಸರಿ ಮಳೆ 2725ಮಿಮೀ. ಸರಾಸರಿ ವರ್ಷದಲ್ಲಿ 118 ಮಳೆದಿನಗಳು.

ಕೊಡಗಿನ ಪ್ರಾಣಿಗಳು ನೆರೆಯ ಪ್ರದೇಶಗಳ ಪ್ರಾಣಿಗಳಿಗಿಂತ ಭಿನ್ನವಲ್ಲ. ಕೊಡಗಿನಲ್ಲಿ ಅವಕ್ಕೆ ಕಾಡುಗಳ ರಕ್ಷಣೆಯೂ ಯಥೇಚ್ಛವಾಗಿ ಕುಡಿಯುವ ನೀರೂ ಇರುವುದರಿಂದ ಅವು ಇಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಇಲ್ಲಿಯ ಮಾಂಸಾಹಾರಿ ಮೃಗಗಳು ಮಳೆಗಾಲದಲ್ಲಿ ನೆರೆಯ ಜಿಲ್ಲೆಗಳಿಗೆ ಹೋಗುತ್ತವೆ. ಹೊಳೆಗಳಿರುವಲ್ಲಿ ಅತ್ಯಂತ ಕಡಿದಾದ ಬೆಟ್ಟಗಳು ಇಲ್ಲದಿರುವಲ್ಲಿ ದೊಡ್ಡ ದೊಡ್ಡ ಮೃಗಗಳುಂಟು. ಉತ್ತರ ಪೂರ್ವ ದಕ್ಷಿಣ ಪ್ರದೇಶಗಳಲ್ಲಿ ಅನೇಕ ಬಗೆಯ ಪ್ರಾಣಿಗಳಿವೆ. ಕಪ್ಪು ಬೂದು ಮತ್ತು ಕಂದು ಬಣ್ಣಗಳ ಕೋತಿಗಳು ಹೇರಳ. ನಾಯಿ ಜಾತಿಯ ಪ್ರಾಣಿಗಳಲ್ಲಿ ಕೆನ್ನಾಯಿ ಮುಖ್ಯವಾದ್ದು. ಈ ಪ್ರಾಣಿ ತೋಳವನ್ನು ಹೋಲುತ್ತದೆ, ಬಹು ಭಯಂಕರ. ಹುಲಿ, ಕಿರುಬ, ಹುಲಿಬೆಕ್ಕು, ಕಾಡುಹಂದಿ, ಕರಡಿ, ಕತ್ತೆ ಕಿರುಬ, ಮುಳ್ಳುಹಂದಿ, ಪುನುಗು ಬೆಕ್ಕುಗಳೂ ಮುಂಗುಸಿ, ಆಮೆ, ಜಿಂಕೆ, ಸಾಂಬಾರ್‍ಗಳು, ಆನೆ, ಕಾಡೆಮ್ಮೆಗಳೂ ಇವೆ. ನಾಗರಹಾವು, ಹೆಬ್ಬಾವುಗಳು, ವಿಶೇಷ ನದಿಗಳಲ್ಲಿ ಮೊಸಳೆ ಇರುವುದುಂಟು. ಗಿಡುಗ, ಹದ್ದು, ಮಿಂಚುಳ್ಳಿ, ಮರಕುಟುಕ, ಕೋಗಿಲೆ, ಮೈನಾ ಮುಂತಾದ ಹಕ್ಕಿಗಳಿವೆ.

ಕೊಡಗು ಜಿಲ್ಲೆಯ ಮೂರನೆಯ ಒಂದು ಭಾಗ ಅರಣ್ಯಾವೃತ. ರಕ್ಷಿತ ಅರಣ್ಯ ಪ್ರದೇಶಗಳೂ ಸೇರಿ 1,25,952ಹೆ. ಅರಣ್ಯವಿದೆ. ತೇಗ, ಬೀಟೆ, ಹೊನ್ನೆ, ಶ್ರೀಗಂಧ ಇವು ಮುಖ್ಯವಾದ ಮರಗಳು. ತೇಗದ ಮರಗಳ ಕಾಡುಗಳನ್ನು ಸರ್ಕಾರದ ಅರಣ್ಯ ಇಲಾಖೆ ಅಭಿವೃದ್ಧಿಪಡಿಸುತ್ತಿದೆ. ಬೆಂಕಿಕಡ್ಡಿ ಕೈಗಾರಿಕೆಗೆ ಆವಶ್ಯವಾದ ಮೆದುಮರಗಳನ್ನೂ ನೆಟ್ಟು ಬೆಳೆಸಲಾಗುತ್ತಿದೆ. ಕೊಡಗಿನ ಜನರ ಮುಖ್ಯ ಕಸಬು ಕೃಷಿ. ಬತ್ತ, ರಾಗಿ ಮುಖ್ಯ ಬೆಳೆಗಳು. ಕಾಫಿ, ಕೊಡಗಿನ ಮತ್ತೊಂದು ಮುಖ್ಯ ಕೃಷಿ ಉತ್ಪನ್ನ (ಸು.83,150ಹೆ). ಕಿತ್ತಳೆ ಬೆಳೆಯೂ ವಿಶೇಷ. ಏಲಕ್ಕಿ, ಮೆಣಸು ಬೆಳೆಯುತ್ತಾರೆ. ಅಡಕೆ ಇನ್ನೊಂದು ಫಸಲು. ಮಡಿಕೇರಿಯ ಬಳಿ ಚಹ ತೋಟವೂ ಉಂಟು. ಮಾವುಕೂಟ, ಜೋಡುಪಾಲ, ಸಂಪಾಜೆ ಮತ್ತು ಕಡಮಕಲ್ಲುಗಳಲ್ಲಿ ರಬ್ಬರ್ ತೋಟಗಳಿವೆ. ಬೆಟ್ಟದ ಕೆಳಗೆ ಸಂಪಾಜೆ, ಪೆರಾಜೆ ಮತ್ತು ಚೆಂಬುಗಳಲ್ಲಿ ತೆಂಗು ಮತ್ತು ಗೇರು ಬೆಳೆಯುತ್ತಾರೆ.

ಅಗಸ್ತ್ಯೇಶ್ವರ ದೇವಾಲಯ, ಬಲಮುರಿ

ಜೇನುಸಾಕಣೆ ಕೊಡಗಿನ ಒಂದು ಮುಖ್ಯ ಉದ್ಯಮ. ಭಾಗಮಂಡಲದಲ್ಲಿ ಮಧುವನ ಎಂಬ ಜೇನುಸಾಕಣೆ ಕೇಂದ್ರವಿದೆ. ಕೊಡಗು ಜೇನು ಉತ್ಪಾದಕರ ಸಂಘ ಈ ಉದ್ಯಮದ ಬೆಳೆವಣಿಗೆಗಾಗಿ ಶ್ರಮಿಸುತ್ತಿದೆ. ಭಾಗಮಂಡಲದ ಕೇಂದ್ರದಲ್ಲಿ ಜೇನುಸಾಕುವ ತರಬೇತು ನೀಡಲಾಗುತ್ತಿದೆ. ಶನಿವಾರಸಂತೆ ಮತ್ತು ಶಿರಂಗಾಲದಲ್ಲಿ ಕೈಮಗ್ಗದ ಬಟ್ಟೆ ತಯಾರಾಗುತ್ತದೆ. ಶನಿವಾರಸಂತೆಯಲ್ಲಿ ನೇಯ್ಗೆಯ ಶಾಲೆಯುಂಟು. ಶಿರಂಗಾಲದಲ್ಲಿ ಕೈಮಗ್ಗ ನೇಕಾರರ ಸಹಕಾರ ಸಂಘ ಸ್ಥಾಪಿತವಾಗಿದೆ. ವಿರಾಜಪೇಟೆ ತಾಲ್ಲೂಕಿನ ಮಲೆನಾಡಿನಲ್ಲಿ ಬೆತ್ತದ ಸಾಮಾನು ಮಾಡುವವರ ಒಂದು ಸಹಕಾರ ಸಂಘವುಂಟು. ಪೊನ್ನಂಪೇಟೆಯ ಬಳಿಯ ಮಡಕೆಬೀಡು ಕುಂಭ ಕೈಗಾರಿಕೆಯ ಕೇಂದ್ರ. ಇಲ್ಲಿ ಇದರ ಒಂದು ಶಾಲೆ ಇದೆ. ಮಡಿಕೇರಿಯಲ್ಲಿ ಪ್ಲಾಸ್ಟಿಕ್

ಚೀಲ ತಯಾರಿಸುವ ಕಾರ್ಖಾನೆಯೂ ತುಕ್ಕುಹಿಡಿಯದ ಉಕ್ಕಿನ ಪಾತ್ರೆ ತಯಾರಿಸುವ ಕಾರ್ಖಾನೆಯೂ ಇವೆ. ಕೂಡಿಗೆಯಲ್ಲಿ ಕಾಫಿ ಪರಿಷ್ಕರಣ ಕಾರ್ಖಾನೆಯುಂಟು. ಮಡಿಕೇರಿಯಲ್ಲಿ ಒಂದು ಸರ್ಕಾರಿ ಮುದ್ರಣಾಲಯವೂ ವಾಹನಗಳ ದುರಸ್ತಿ ಕಾರ್ಯಾಗಾರವೂ

ಕಣ್ವಮುನೀಶ್ವರ ದೇವಾಲಯ, ಬಲಮುರಿ

ಇವೆ. 1954ರಲ್ಲಿ ಸರ್ಕಾರ ಮೂರ್ಕಲ್‍ನಲ್ಲಿ ಒಂದು ಮರ ಕೊಯ್ಯುವ ಕಾರ್ಖಾನೆ ಸ್ಥಾಪಿಸಿತು. ಕೊಡಗಿನ ಮುಖ್ಯಬೆಳೆ ಬತ್ತವಾದ್ದರಿಂದ ಇಲ್ಲಿ ಹಲವು ಅಕ್ಕಿ ಗಿರಣಿಗಳಿವೆ. ಮಡಿಕೇರಿಯಲ್ಲಿ ನಾಲ್ಕು ಸಣ್ಣ ಎಂಜಿನಿಯರಿಂಗ್ ಕಾರ್ಯಾಗಾರಗಳೂ ಸೋಮವಾರಪೇಟೆ ಮತ್ತು ಕೂಡಿಗೆಗಳಲ್ಲಿ ಒಂದೊಂದು ವ್ಯವಸಾಯೋಪಕರಣ ಕಾರ್ಖಾನೆಯೂ ಉಂಟು. ಕಾಫಿ ತೋಟಗಳಿಗೆ ಅವಶ್ಯವಾದ ಉಪಕರಣಗಳು ಇಲ್ಲಿ ತಯಾರಾಗುತ್ತವೆ. ರಾಜ್ಯದ ಇತರ ಜಿಲ್ಲೆಗಳಲ್ಲಿರುವಂತೆ ಕೊಡಗಿನಲ್ಲೂ ಹಲವು ಜಾತಿ ಮತಗಳ ಜನ ಇದ್ದಾರೆ. ಎರವರು, ಕುಡಿಯರು, ಬೆಟ್ಟ ಕುರುಬರು, ಜೇನು ಕುರುಬರು, ಕೊರಗರು, ಪಣಿಯರು -ಇವರು ಗಿರಿಜನರು; ಹರಿಜನರೂ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇಲ್ಲಿನ ಕೊಡವರು ವಿಶಿಷ್ಟ ಜನ. ಕದಂಬ ವಂಶದ ಚಂದ್ರವರ್ಮ ಇವರ ಮೂಲಪುರುಷನೆಂದು ಹೇಳುತ್ತಾರೆ.

ರಾಜಾಸೀಟು, ಮಡಿಕೇರಿ

ಶತ್ರುಗಳ ಆಕ್ರಮಣದಿಂದಾಗಿ ಸ್ವಂತ ರಾಜ್ಯ ತೊರೆದುಬಂದು ಕೊಡಗಿನಲ್ಲಿ ನೆಲಸಿದ ಕದಂಬ ಸೈನಿಕರು ಇವರ ಮೂಲಪುರುಷರಿರಬಹುದೆಂದು ಹೇಳಲಾಗಿದೆ. ಕೊಡಗಿನ ಜನರ ಸಂಸ್ಕೃತಿ ವಿಶಿಷ್ಟವಾದ್ದು. ಕತ್ತಿ ಕೋವಿಗಳು ಇವರಿಗೆ ಪ್ರಿಯ. ಹುತ್ತರಿಯ ಕುಣಿತ, ಬೊಳಕಾಟ, ಕೋಲಾಟ ಮೊದಲಾದವು ಕೊಡಗಿನ ಜನಪದ ನೃತ್ಯಗಳು. ಇವು ವೀರರಸ ಪ್ರಧಾನ. ಹುತ್ತರಿ ಹಬ್ಬದ ಸಮಯದಲ್ಲಿ ಕೋಲಾಟ ಮುಖ್ಯವಾದ್ದು. ಪರಿಯಕುಳಿ ಎಂಬುದು ಯುದ್ಧ ನೃತ್ಯ. ಬೊಳಕಾಟ ಅಖಿಲ ಭಾರತ ಪ್ರಸಿದ್ಧಿ ಪಡೆದಿದೆ. ಕೈಲ್‍ಪೋಳ್ದ್, ಕಾವೇರಿ ಸಂಕ್ರಮಣ, ಹುತ್ತರಿ, ಶಿವರಾತ್ರಿ, ಉಗಾದಿ, ಷಷ್ಠಿ, ವಿಷ್ಣು ಸಂಕ್ರಮಣ -ಇವು ಕೊಡವರ ಮುಖ್ಯ ಹಬ್ಬಗಳು. ಕೊಡಗರ ಉಡುಪೂ ವೈಶಿಷ್ಟ್ಯಪೂರ್ಣ. ಗಂಡಸರು ಹಬ್ಬಹರಿದಿನ ವಿವಾಹ ಸಮಯಗಳಲ್ಲಿ ಜರಿಪೇಟ, ಕರಿಯ ಮೇಲಂಗಿ, ಜರಿಯ ನಡುದಟ್ಟಿ, ತೊಟ್ಟು, ಬಲಗಡೆಗೆ ಬೆಳ್ಳಿಯ ಒರೆಯಲ್ಲಿ ಕತ್ತಿ ಧರಿಸುತ್ತಾರೆ. ಸೆರಗನ್ನು ಹಿಂದಕ್ಕೆ ಬಿಟ್ಟು ವಿಶಿಷ್ಟ ರೀತಿಯಲ್ಲಿ ಸೀರೆ ಉಡುವುದೂ ತುಂಬುತೋಳಿನ ರವಿಕೆ ತೊಡುವುದು ಸ್ತ್ರೀಯರ ಕ್ರಮ. ವಿಶೇಷ ದಿನಗಳಲ್ಲಿ ಇವರು ತಲೆಗೆ ಜರಿಹೊದಿಕೆ ಕಟ್ಟುತ್ತಾರೆ. ಕೊಡವರಿಗೆ ಅವರದೇ ಆದ ಭಾಷೆಯಿದೆ. ಅದು ಕೊಡವ ನುಡಿ. ಅದಕ್ಕೆ ಲಿಪಿಯಿಲ್ಲ. ಅದು ಕನ್ನಡ ತಮಿಳು ಮಲಯಾಳಂ ಶಬ್ದಗಳಿಂದ ಕೂಡಿದೆ. ಕನ್ನಡ ಮೂಲ ಶಬ್ದಗಳೇ ಅಧಿಕ. ಅಪ್ಪನೆರವಂಡ ಅಪ್ಪಚ್ಚಕವಿ, ನಡಿಕೇರಿಯಂಡ ಚಿಣ್ಣಪ್ಪ ಇವರು ಕೊಡವ ಭಾಷೆಯ ಮುಖ್ಯ ಕೃತಿಕಾರರು. ಕನ್ನಡ ಕೊಡಗಿನ ವ್ಯವಹಾರ ಭಾಷೆ.

ಕೊಡಗಿನ ಜಿಲ್ಲಾ ಕೇಂದ್ರವಾದ ಮಡಿಕೇರಿಗೂ ಜಿಲ್ಲೆಯ ಮುಖ್ಯ ಸ್ಥಳಗಳಿಗೂ ಒಳ್ಳೆಯ ರಸ್ತೆಗಳುಂಟು. ಬೆಂಗಳೂರು, ಮೈಸೂರು, ಮಂಗಳೂರು, ಹಾಸನ, ಚಿಕ್ಕಮಗಳೂರು, ಉಡುಪಿ, ತಲಚೇರಿ, ಕಣ್ಣಾನೂರು ಮುಂತಾದ ಕಡೆಗಳಿಗೆ ಬಸ್ ಮಾರ್ಗಗಳಿವೆ. ಕುಶಾಲನಗರದಲ್ಲಿ ಕೊಡಗು

ಭಗಂಡೇಶ್ವರ ದೇವಾಲಯ, ಭಾಗಮಂಡಲ

ಜಿಲ್ಲೆಯನ್ನು ಪ್ರವೇಶಿಸಿ, ಮಡಿಕೇರಿಯ ಮಾರ್ಗವಾಗಿ ಸಂಪಾಜೆಗೆ ಸಾಗಿ ಮುಂದುವರಿಯುವ ಮೈಸೂರು -ಮಂಗಳೂರು ಹೆದ್ದಾರಿ, ಮಡಿಕೇರಿಯಿಂದ ಸಿದ್ದಾಪುರ ವಿರಾಜಪೇಟೆಗಳ ಮೂಲಕ ಕಣ್ಣಾನೂರು ತಲಪುವ ಮಡಿಕೇರಿ - ತಲಚೇರಿ ಹೆದ್ದಾರಿ, ಮಡಿಕೇರಿಯಿಂದ ಮಾದಾಪುರ, ಸೋಮವಾರಪೇಟೆ, ಶನಿವಾರ ಸಂತೆಗಳ ಮೂಲಕ ಸಾಗುವ ಮಡಿಕೇರಿ - ಕೊಡ್ಲಿಪೇಟೆ ಹೆದ್ದಾರಿ, ಮಡಿಕೇರಿಯಿಂದ ಮೂರ್ನಾಡು ಮೂಲಕ ವಿರಾಜಪೇಟೆ ತಲಪುವ ದಾರಿ, ಮಡಿಕೇರಿ - ಭಾಗಮಂಡಲ ಮಾರ್ಗ, ವಿರಾಜಪೇಟೆಯಿಂದ ಗೋಣಿಕೊಪ್ಪಲು, ತಿತ್ತಿಮತ್ತಿ ಮತ್ತು ಆನೇಚೌಕೂರು ಮಾರ್ಗ, ವಿರಾಜಪೇಟೆ ಹುಣಸೂರು ಹೆದ್ದಾರಿ, ಗೋಣಿಕೊಪ್ಪಲಿನಿಂದ ಪೊನ್ನಂಪೇಟೆ ಹುದಕೇರಿ ಕುಟ್ಟಗಳ ಮೂಲಕ ಸಾಗುವ ಗೋಣಿಕೊಪ್ಪಲು ಮಾನಂದವಾಡಿ ಹೆದ್ದಾರಿ, ನಾಪೊಕ್ಲು ಕಕ್ಕಬೆ ಕಡಂಗ ಕದನೂರು ವಿರಾಜಪೇಟೆ ಹೆದ್ದಾರಿ, ಕುಶಾಲನಗರದಿಂದ ಕೂಡಿಗೆಯ ಮೂಲಕ ಮಡಕೇರಿ ಕೊಡ್ಲಿಪೇಟೆ ಹೆದ್ದಾರಿಯನ್ನು ಸೇರುವ ದಾರಿ, ಕೂಡಿಗೆ-ಶಿರಂಗಾಲ ಮಾರ್ಗ - ಇವು ಜಿಲ್ಲೆಯ ಮುಖ್ಯ ರಸ್ತೆಗಳು ಕೊಡಗಿನಲ್ಲಿ ರೈಲುಮಾರ್ಗವಿಲ್ಲ.

ಜಿಲ್ಲೆಯ ಕೇಂದ್ರ ಮಡಿಕೇರಿ, ಇದು ಪ್ರವಾಸಿ ಕೇಂದ್ರ ಕೂಡ. ತಲಕಾವೇರಿ, ಭಾಗಮಂಡಲ, ರಾಮಸ್ವಾಮಿ ಕಣಿವೆ, ಕೂಡಿಗೆ, ನಾಲ್ಕುನಾಡು ಅರಮನೆ, ಇಗ್ಗುತಪ್ಪದೇವರ ಶಿಖರ, ಚೆಟ್ಟಳ್ಳಿ ಇವು ಇತರ ಪ್ರೇಕ್ಷಣೀಯ ಸ್ಥಳಗಳು.

ವಿರಾಜಪೇಟೆ, ಪೊನ್ನಂಪೇಟೆ, ಗೋಣಿಕೊಪ್ಪಲು, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ, ಕುಶಾಲನಗರ, ಶುಂಟಿಕೊಪ್ಪ -ಇವು ಇತರ ಮುಖ್ಯ ಊರುಗಳು. ಅಮ್ಮತ್ತಿ, ಸಿದ್ದಾಪುರ, ಪೊಲ್ಲಿಬೆಟ್ಟ, ತಿತ್ತಿಮತ್ತಿ, ಬಾಳೆಲೆ -ಇವು ಕಾಫಿ ವ್ಯವಸಾಯ ಕೇಂದ್ರಗಳು. ಪೊಲ್ಲಿಬೆಟ್ಟ, ತಿತ್ತಿಮತ್ತಿ, ಬಾಳೆಲೆ -ಇವು ಕಿತ್ತಳೆ ತೋಟಗಳಿಗೂ ಪ್ರಸಿದ್ಧವಾಗಿವೆ. (ಎಂ.ಆರ್.ಆರ್.)

ಕರ್ನಾಟಕ ಭಾಗದ ಸಹ್ಯಾದ್ರಿಯ ದಕ್ಷಿಣ ತುದಿಯಲ್ಲಿರುವ ಈ ಜಿಲ್ಲೆ ಐತಿಹಾಸಿಕವಾಗಿ ಸಾಂಸ್ಕೃತಿಕವಾಗಿ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ.

ಕೊಡವರ ಆರಾಧ್ಯದೈವ: ಇಗ್ಗುತಪ್ಪ

ಈ ಜಿಲ್ಲೆಯ ವಿಶೇಷ ಹೆಸರಾದ ಕೊಡಗು ಪದದ ಮೂಲ ಅಸ್ಪಷ್ಟ. ಕನ್ನಡದ ಕುಡು (ಮಲೆಯ ಪ್ರದೇಶ) ಕೊಡಗು ಆಗಿದೆ; ಹಲವಾರು ಮಲೆಗಳ ಇಳಿಜಾರುಗಳಿರುವುದರಿಂದ ಮೂಲತಃ ಕೊಡಿಮಲೆನಾಡು ಎಂದಿದ್ದ ಇದು ಕೊಡಗಾಗಿ ರೂಪಾಂತರವಾಗಿದೆ; ಕೊಡಗು ಎಂದರೆ ಪಶ್ಚಿಮಕ್ಕಿರುವ ನಾಡು, ಈ ಜಿಲ್ಲೆ ಪಶ್ಚಿಮಕ್ಕಿರುವುದರಿಂದ ಈ ಹೆಸರು ಬಂತು ಎಂದು ಊಹೆಗಳಿವೆ. ಕೊಡಗಿನಲ್ಲಿ ಪ್ರಸಿದ್ಧವಾಗಿರುವ ಕಾವೇರಿ ಮಾಹಾತ್ಮ್ಯವೆಂಬ ಪೌರಾಣಿಕ ಗ್ರಂಥದ ಪ್ರಕಾರ ಇದಕ್ಕೆ ಬ್ರಹ್ಮಕ್ಷೇತ್ರ, ಮತ್ಸ್ಯದೇಶ ಮತ್ತು ಕ್ರೋಡದೇಶ ಎಂಬ ಹೆಸರುಗಳೂ ಇವೆ. ಈ ಹೆಸರುಗಳ ಮೂಲದ ಬಗ್ಗೆ ಹಲವು ಪೌರಾಣಿಕ ಕಥೆಗಳಿವೆ. ಕೊಡಗಿನ ಇತಿಹಾಸ ಕ್ರಿ.ಶ.2ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ. ತಮಿಳು ಸಂಘಂ ಸಾಹಿತ್ಯದಲ್ಲಿ ಕುಡಗು ನಾಡಿನ ಉಲ್ಲೇಖವಿದ್ದು, ಇದು ಪಾಂಡ್ಯರಾಜ್ಯದೊಳಗಿದ್ದಂತೆ ಹೇಳಿಕೆಗಳಿವೆ. 4ನೆಯ ಶತಮಾನದಾರಭ್ಯ ಗಂಗ, ಕದಂಬ, ಚೋಳರ ವಶದಲ್ಲಿತ್ತು. 11-12ನೆಯ ಶತಮಾನದಲ್ಲಿ ಕೊಂಗಾಳ್ವರು, ಚಂಗಾಳ್ವರು ಇಲ್ಲಿ ಆಳುತ್ತಿದ್ದರು. ಅನಂತರ ಇದು ಹೊಯ್ಸಳ, ವಿಜಯನಗರ ರಾಜ್ಯಗಳ ಆಳಿಕೆಗೊಳಪಟ್ಟಿತ್ತು. ಪುನಃ ಸ್ವಲ್ಪಕಾಲ ಚಂಗಾಳ್ವರ ಕೈಸೇರಿತು. ಸ್ವಲ್ಪ ಕಾಲ ಹಲವು ಪಾಳೆಯಗಾರರ ವಶದಲ್ಲಿತ್ತು. ಅನಂತರ ಹಾಲೇರಿ ವಂಶದವರು ರಾಜ್ಯವಾಳಿದರು. 1780-89ರವರೆಗೆ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನ್ ಆಕ್ರಮಿಸಿದ್ದರು. 1834ರಲ್ಲಿ ಬ್ರಿಟಿಷರ ಆಳಿಕೆಗೊಳಪಟ್ಟು ಪ್ರತ್ಯೇಕ ಸಂಸ್ಥಾನದ ಸ್ಥಾನವನ್ನು ಹೊಂದಿತ್ತು. ಆ ಕಾಲದಲ್ಲಿ ಬೆಂಗಳೂರಿನಲ್ಲಿರುತ್ತಿದ್ದ ಮೈಸೂರು ಚೀಫ್ ಕಮಿಷನರ್ ಆಡಳಿತ ನಡೆಸುತ್ತಿದ್ದ. ಇವನ ಅಧೀನದಲ್ಲಿ ಕೊಡಗಿನಲ್ಲಿ ಒಬ್ಬ ಸೂಪರಿಂಟೆಂಡೆಂಟ್ ಇರುತ್ತಿದ್ದ. ಕ್ಯಾಪ್ಟನ್ ಲೇಹಾರ್ಡಿ ಕೊಡಗಿನ ಮೊದಲ ಸೂಪರಿಟೆಂಡೆಂಟ್. ಆ ವರೆಗೂ ಕೊಡಗು ರಾಜ್ಯಕ್ಕೆ ಸೇರಿದ್ದ ಪುತ್ತೂರು ಮತ್ತು ಸುಳ್ಯಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾಯಿಸಿದ್ದರಿಂದ ಕೊಡಗು ರಾಜ್ಯದ ವಿಸ್ತಾರ ಕಡಿಮೆಯಾಯಿತು. ಕೊಡಗು ಇದೇ ಸ್ಥಿತಿಯಲ್ಲೇ ಮುಂದುವರಿದು 1947ರಲ್ಲಿ ಭಾರತ ಸ್ವತಂತ್ರವಾದಾಗ ಕೇಂದ್ರ ಸರ್ಕಾರದ ಗೃಹಖಾತೆಯ ನೇರ ಆಡಳಿತಕ್ಕೆ ಒಳಪಟ್ಟಿತು. 1951ರಲ್ಲಿ ಕೊಡಗು 'ಸಿ' ರಾಜ್ಯವೆಂದು ಘೋಷಿತವಾಗಿ ಇಲ್ಲಿ 24 ಸದಸ್ಯರ ಲೆಜಿಸ್ಲೆಟೀವ್ ಅಸೆಂಬ್ಲಿ ಸ್ಥಾಪಿತವಾಯಿತು. 1956ರಲ್ಲಿ ರಾಜ್ಯ ಮರುವಿಂಗಡಣೆಯಾದಾಗ ಕೊಡಗು ಮೈಸೂರು ರಾಜ್ಯದ ಭಾಗವಾಗಿ ಸೇರಿತು.

ಈ ಜಿಲ್ಲೆಯಲ್ಲಿ ವಿರಾಜಪೇಟೆ, ಸುಂಟಿಕೊಪ್ಪ ಬಳಿ ... 

ಈ ಜಿಲ್ಲೆಯಲ್ಲಿ ವಿರಾಜಪೇಟೆ, ಸುಚಮಕೇರಿ, ಅಂದಗೋವೆ, ದೊಡ್ಡಬಿಲ್ಲ, ಕಿರೇಬಿಲ್ಲ, ಕೊಡಗರಹಳ್ಳಿ, ಹೆಗ್ಗಡೆಹಳ್ಳಿ ಇವುಗಳ ಬಳಿ ಬೃಹತ್ ಶಿಲಾಸಮಾಧಿ ಯುಗದ ಕಲ್ಲುಗುಡ್ಡೆ ಸಮಾಧಿಗಳಿವೆ. ಹಿಂದೆ ಉತ್ಖನನ ನಡೆದಿರುವ ಕೆಲವು ಈ ರೀತಿಯ ಸಮಾಧಿಗಳಲ್ಲಿ ಕಲ್ಲುತೊಟ್ಟಿಯ ರೀತಿಯವೂ ತುದಿ ಚೂಪಿನ ಮಡಕೆಯ ರೀತಿಯವೂ ಕಂಡುಬಂದಿವೆ. ಇವುಗಳಲ್ಲಿ ವಿಚಿತ್ರ ರೀತಿಯ ಮಡಕೆ ಕುಡಿಕೆಗಳು, ಎಲುಬುಗಳು, ಕಬ್ಬಿಣದ ಆಯುಧಗಳು, ಕಲ್ಲಿನ ಮಣಿಗಳು, ಆಟದ ಬೊಂಬೆಗಳು, ರಾಗಿ ಕಾಳು ಇತ್ಯಾದಿ ವಸ್ತುಗಳು ಸೇರಿವೆ.

ಪ್ರಾಚೀನ ವಾಸ್ತುಶಿಲ್ಪದೃಷ್ಟಿಯಿಂದ ಬಹು ಮಹತ್ವದ ಕೃತಿಗಳು ಕೊಡಗಿನಲ್ಲಿ ಇಲ್ಲವೆಂದೇ ಹೇಳಬಹುದು. ಶನಿವಾರಸಂತೆಯ ಬಳಿಯ ಮುಳ್ಳೂರು (ನೋಡಿ) ಹಿಂದೆ ಜೈನ ಕೇಂದ್ರವಾಗಿದ್ದು ಇಲ್ಲಿ ಕೊಂಗಾಳ್ವರ ಕಾಲದ ಕೆಲವು ಬಸದಿಗಳ ಅವಶೇಷಗಳಿವೆ; ಈಗ ಬಸದಿಗಳು ಜೀರ್ಣೋದ್ಧಾರಗೊಂಡಿವೆ. ಶುಂಟಿಕೊಪ್ಪ ಬಳಿಯ ಬೆಟಗೇರಿಯಲ್ಲಿ ವಿಜಯನಗರ ಕಾಲದ ಒಂದು ಜೈನ ಬಸದಿ ಇದೆ. ಇದು ಕಗ್ಗಲ್ಲಿನ ಸಾಮಾನ್ಯ ರಚನೆ. ಹೊರಮಲೆ ಹಾಲೇರಿ ರಾಜರ ಒಂದು ಶಾಖೆಯ ಕೇಂದ್ರವಾಗಿತ್ತು. ಇಲ್ಲಿ ಅರಮನೆಯ ಅವಶೇಷಗಳು ಮತ್ತು ಒಂದು ಭದ್ರಕಾಳಿ ದೇವಾಲಯ ಇದೆ. ಕೊಡಗಿನ ಪ್ರಸಿದ್ಧವಾದ ವಾಸ್ತು ಕೃತಿಗಳೆಂದರೆ 18-19ನೆಯ ಶತಮಾನಕ್ಕೆ ಸೇರಿದ ಮಡಿಕೇರಿಯಲ್ಲಿರುವ ಕೋಟೆ, ಓಂಕಾರೇಶ್ವರ ದೇವಾಲಯ, ರಾಜರ ಸಮಾಧಿಗಳು ಮತ್ತು ಇಗರ್ಜಿ (ನೋಡಿ: ಮಡಿಕೇರಿ), ಕೊಡಗಿನ ಇಗ್ಗುತಪ್ಪ ದೇವರ ಶಿಖರ (ನೋಡಿ), ಇರ್ಪು (ನೋಡಿ), ಭಾಗಮಂಡಲ (ನೋಡಿ) ಮೊದಲಾದೆಡೆಯ ದೇವಾಲಯಗಳು ವಾಸ್ತುಶಿಲ್ಪ ದೃಷ್ಟಿಯಿಂದಲ್ಲದಿದ್ದರೂ ಪವಿತ್ರ ಸ್ಥಾನಗಳಾಗಿ ಪ್ರಸಿದ್ಧವಾಗಿವೆ. *

1973ರಲ್ಲಿ ಪ್ರಕಟವಾಗಿರುವ ಎಪಿಗ್ರಾಫಿಯ ಕರ್ನಾಟಿಕ ನವಮಾಲಿಕೆಯ ಮೊದಲ ಸಂಪುಟದಲ್ಲಿ ನೂರಕ್ಕೂ ಹೆಚ್ಚು ಕೊಡಗಿನ ಶಾಸನಗಳು ಪ್ರಕಟವಾಗಿವೆ. ಹೆಚ್ಚಿನವು ಶಿಲಾಶಾಸನಗಳು. ಕೆಲವು ತಾಮ್ರ ಶಾಸನಗಳು, ಪಾತ್ರೆಗಳ ಹಾಗೂ ಲೋಹದ ಮುದ್ರೆಗಳ ಮೇಲಣ ಬರೆಹಗಳೂ ಇವೆ. ಈ ಶಾಸನಗಳು ಗಂಗ, ಕೊಂಗಾಳ್ವ, ಚಂಗಾಳ್ವ, ವಿಜಯನಗರ, ಬೇಲೂರು ನಾಯಕರು, ಕೊಡಗಿನ ಒಡೆಯರು ಮತ್ತು ಬ್ರಿಟಿಷರ ಕಾಲಕ್ಕೆ ಸೇರಿದವು. ಹೆಚ್ಚಿನ ಶಾಸನಗಳು ಕನ್ನಡದಲ್ಲಿವೆ. ಸಂಸ್ಕೃತ, ಪಾರಸೀ, ಇಂಗ್ಲಿಷ್ ಹಾಗೂ ಗ್ರಂಥಲಿಪಿಯವೂ ಇವೆ. (ಎಸ್.ಕೆ.)

**ಕೊಡಚಾದ್ರಿ** : ಸಹ್ಯಾದ್ರಿ ಶ್ರೇಣಿಯ ಒಂದು ಶಿಖರ. ಶಿವಮೊಗ್ಗ ಜಿಲ್ಲೆ ಮತ್ತು ಕುಂದಾಪುರ ತಾಲ್ಲೂಕಿನ ಮಧ್ಯೆ ಇದೆ. ಸಮುದ್ರ ಮಟ್ಟದಿಂದ 1344ಮೀ ಎತ್ತರವಿದ್ದು ಶಿಖರದ ಪಾದದಲ್ಲಿರುವ ಗ್ರಾಮಗಳಿಂದ ಸು.600ಮೀ ಗಳಿಗಿಂತ ಎತ್ತರವಾಗಿದೆ. ಪಶ್ಚಿಮದ ಕಡೆ ದಕ್ಷಿಣ ಕನ್ನಡ ಜಿಲ್ಲಾ ಪ್ರದೇಶದ ಮೈದಾನಕ್ಕೆ 1200ಮೀ ಎತ್ತರದಲ್ಲಿದೆ. ಶಿವಮೊಗ್ಗದ ಕಡೆ ದಟ್ಟ ಕಾಡುಗಳಿಂದ ಕೂಡಿದೆ. ಶಿಖರದ ಬುಡದಲ್ಲಿರುವ ದುರ್ಗಾದೇವಿಯ ನಿವಾಸವೆನ್ನುವ ನಿಬಿಡವಾದ ಅರಣ್ಯವನ್ನು ಅಂಬಾವನವೆಂದು ಕರೆಯುತ್ತಾರೆ. ಶಿಖರದ ಮಾರ್ಗಮಧ್ಯದಲ್ಲಿ ಹುಲಿ ದೇವರ ಗುಡಿಯಿದೆ. ಅಲ್ಲಿ 32 ಬಾಹುಗಳುಳ್ಳ ಒಂದು ಮೂರ್ತಿಯಿದೆ. ಶಿಖರದ ಮೇಲುಭಾಗ ವಿಶಾಲವಾಗಿಲ್ಲ. ಕೊಡಚಾದ್ರಿ ಪಶ್ಚಿಮಘಟ್ಟಗಳ ಪ್ರದೇಶದ ಒಂದು ಸುಂದರ ನೆಲೆ. ಶಿಖರದ ಮೇಲಿಂದ ಪಶ್ಚಿಮದಲ್ಲಿ ಸಮುದ್ರವನ್ನೂ ಮೋಡಗಳಿಲ್ಲದ ದಿನ ಹಡಗುಗಳನ್ನೂ ಕಾಣಬಹುದು. ಇಲ್ಲಿಯದು ಅತ್ಯಂತ ಆಹ್ಲಾದದಾಯಕ ವಾಯುಗುಣ. ಅಮೂಲ್ಯ ಔಷಧ ಮೂಲಿಕೆಗಳು ಇಲ್ಲಿ ಬೆಳೆಯುತ್ತವೆ. ಶಿಖರದ ಕೆಳಗಡೆ ಕಾಲಭೈರವ ಮತ್ತು ಉಮಾಮಹೇಶ್ವರ ದೇವಾಲಯಗಳಿವೆ. ಈ ದೇವಾಲಯಗಳ ಮಧ್ಯೆ ಇರುವ ಒಂದು ಕೊಳ ಸೌಪರ್ಣಿಕ ನದಿಯ ಉಗಮಸ್ಥಳ. ಆದಿಶಂಕರಾಚಾರ್ಯರು ಸರಸ್ವತಿಯನ್ನು ಕುರಿತು ಇಲ್ಲಿ ತಪಸ್ಸನ್ನಾಚರಿಸುತ್ತಿದ್ದರೆಂದು ಹೇಳಲಾಗಿದೆ. *

**ಕೊಡವ ಭಾಷೆ ಮತ್ತು ಸಾಹಿತ್ಯ :** ಕೊಡಗು ಪ್ರದೇಶದ ಮೂಲ ನಿವಾಸಿಗಳಾದ ಈ ಮಾತನ್ನಾಡುವ ಜನಾಂಗವಿಶಿಷ್ಟವನ್ನು ಕೊಡವರು ಅಥವಾ ಕೊಡಗರು ಎಂದೂ ಭಾಷೆಯನ್ನು ಕೊಡವ, ಕೊಡಗ ಎಂದೂ ನಿರ್ದೇಶಿಸಲಾಗುತ್ತದೆ. ಕೊಡವರು ಮಾತ್ರವಲ್ಲದೆ ಕೊಡಗಿನಲ್ಲಿ ವಾಸವಿರುವ ಇತರ ಜಾತಿಗಳಾದ ಅಯಿರಿ, ಮೇದ ಮುಂತಾದವರೂ ಈ ಭಾಷೆಯನ್ನಾಡುತ್ತಾರೆ. ಕೊಡವರು ತಮ್ಮ ಮನೆಗಳಲ್ಲೂ ಹೊರಗೆ ಇತರ ಕೊಡವರೊಡನೆ ಮಾತಾಡುವಾಗಲೂ ಉಪಯೋಗಿಸುವುದು ಕೊಡವ ಮಾತನ್ನೇ. ಹೊರಗಣ ವ್ಯವಹಾರಕ್ಕೆ ಮಾತ್ರ ಕನ್ನಡವನ್ನು ಉಪಯೋಗಿಸುತ್ತಾರೆ.

ಕೊಡಗು ದಕ್ಷಿಣ ದ್ರಾವಿಡ ಪಂಗಡಕ್ಕೆ ಸೇರಿದ ಭಾಷೆ. ಈ ಭಾಷೆಗೆ ಲಿಪಿಯಿಲ್ಲ. ಲಿಖಿತ ರೂಪಗಳೇನೂ ದೊರೆಯದೆ ಇರುವುದರಿಂದ ಈ ಭಾಷೆಯ ಹಳೆಯ ಸ್ವರೂಪ ಹೇಗಿತ್ತೆಂದೂ ತಿಳಿಯಲು ಸಾಧ್ಯವಿಲ್ಲವಾಗಿದೆ. ಪ್ರಚಲಿತ ಕೊಡಗು ಭಾಷೆಯಲ್ಲಿ ಅ ಇ ಇ ಉ ಎ ಎ ಒ ಎಂಬ ಏಳು ಹ್ರಸ್ವ ಸ್ವರಗಳೂ ಆ ಈ ಈ ಊ ಏ ಏ ಓ ಎಂಬ ಏಳು ದೀರ್ಘಸ್ವರಗಳೂ ಕ ಗ ಙ; ಚ ಜ ಞ; ಟ ಡ ಣ; ತ ದ ನ; ಪ ಬ ಮ; ಯ ರ ಲ ವ ಶ ಷ ಸ ಹ ಳ ಎಂಬ ವ್ಯಂಜನಗಳೂ ಇವೆ. ಕೊಡಗು ಮಾತಿನಲ್ಲಿ ಮಹಾಪ್ರಾಣ ಇಲ್ಲ. ಪದಾದಿಯಲ್ಲಿ ಸಂಯುಕ್ತ ವ್ಯಂಜನಗಳು ಅನ್ಯ ಭಾಷೆಯಿಂದ ಎರವಲು ಬಂದ ಪದಗಳಲ್ಲಿ ಮಾತ್ರ ಬರುತ್ತವೆ. ಪ್ರೇಮ, ಬ್ರಹ್ಮ, ತ್ರಿವೇಣಿ, ತ್ಯಾಗ, ದೃಢ, ದ್ವೇಷ ಇತ್ಯಾದಿ (ಸಂ). ಪದಮಧ್ಯದಲ್ಲಿ ದ್ವಿತ್ವಗಳು ದೇಶೀಯ ಪದಗಳಲ್ಲಿಯೂ ಬರುತ್ತವೆ. ಅಪ್ಪೆ, ಅಬ್ಬಿ, ಎತ್ತಟಿ ಇತ್ಯಾದಿ. ಸಂಯುಕ್ತ ವ್ಯಂಜನಗಳು ಅನ್ಯದೇಶ್ಯ ಪದಗಳಲ್ಲಿ ಒಂದು ರೂಪಿಮದೊಳಗೆ ಬರಬಹುದು; ಆದರೆ ದೇಶ್ಯ ಪದಗಳಲ್ಲಿ ಅವು ಎರಡು ರೂಪಿಮಗಳು ಸಂಧಿಯಾಗುವುದರಿಂದ, ಇಲ್ಲವೆ ಸ್ವರಲೋಪ ಕ್ರಿಯೆಯಿಂದ ಫಲಿಸುತ್ತವೆ. ಶಬ್ದಗಳಲ್ಲಿ ದ್ವಿವರ್ಣ (ಡೈಸಿಲಬಿಕ್) ಮತ್ತು ತ್ರಿವರ್ಣ (ತ್ರೈಸಿಲಬಿಕ್) ಮಿತಿಯ ಶಬ್ದಗಳು ಅಧಿಕ ಸಂಖ್ಯೆಯಲ್ಲಿವೆ. ಪುಂ, ಸ್ತ್ರೀ, ನಪುಂಸಕವೆಂಬ ಮೂರು ಲಿಂಗಪ್ರಭೇದಗಳು ಏಕವಚನದಲ್ಲೂ ಪ್ರಥಮ ಪುರುಷ ಸರ್ವನಾಮದಲ್ಲೂ ಇವೆ. ಬಹುವಚನದಲ್ಲಿ ಸ್ತ್ರೀ ಪುಂಗಳಿಗಾಗಿ ಒಂದು ರೂಪ ಮಾತ್ರ ಇದೆ. ಉದಾ ಅವಂ (ಪು), ಅವ (ಳ್) (ಸ್ತ್ರೀ) ಅದ್ (ನಪುಂ), ಅವು - ಅಯಂಗ (ಸ್ತ್ರೀ - ಪುಂ ಬಹುವಚನ). ಪೂರ್ಣಕ್ರಿಯಾಪದದಲ್ಲಿ ವಚನ ವ್ಯತ್ಯಾಸ ಮಾತ್ರ ಪರಿಗಣಿತವಾಗುತ್ತದೆ. ಲಿಂಗ ನಿರ್ದೇಶನವಿಲ್ಲ. ಉದಾ: ಬಂದೆ - ನಾನು ಬಂದೆ; ಬಾತ - ನಾವು ಬಂದೆವು; ಬಂದಿಯ - ನೀನು ಬಂದೆ; ಬಂದಿರ - ನೀವು ಬಂದಿರಿ; ಬಾತ - ಅವನು, ಅವಳು, ಅದು, ಅವರು, ಅವುಗಳು, ಬಂದನು, ಬಂದಳು, ಬಂದಿತು, ಬಂದರು, ಬಂದುವು; ಅಂದರೆ ಲಿಂಗ - ವಚನ ಭೇದಗಳನ್ನರಿಯಲು ವಾಕ್ಯದಲ್ಲಿ ಸರ್ವನಾಮವಿದ್ದರೆ ಮಾತ್ರ ಸಾಧ್ಯ.

ಭಾಷಾದೃಷ್ಟಿಯಿಂದ ಕೊಡವ ಭಾಷೆ ತಮಿಳು ಮಲೆಯಾಳಂಗಳಿಗೆ ಹೆಚ್ಚು ಸಮೀಪವಾಗಿದೆಯೆಂದು ಭಾಷಾವಿಜ್ಞಾನಿಗಳು ಹೇಳುತ್ತಾರೆ. ಆದರೆ ಬಾಹ್ಯ ವ್ಯವಹಾರವೆಲ್ಲ ಕನ್ನಡದ ಮೂಲಕವೇ ನಡೆಯ ಬೇಕಾಗಿರುವುದ ರಿಂದಲೂ ಭೌಗೋಳಿಕವಾಗಿಯೂ ಕನ್ನಡ ಪ್ರದೇಶ ಕೊಡಗನ್ನು ಸುತ್ತುವರಿದಿರುವುದರಿಂದಲೂ ಕೊಡಗು ಭಾಷೆಯ ಮೇಲೆ ಕನ್ನಡದ ಪ್ರಭಾವ ಅನಿವಾರ್ಯವೆ ಆಗಿದೆ. ಪದಕೋಶದಲ್ಲಿ ಕನ್ನಡಕ್ಕೂ ಕೊಡಗಿಗೂ ಸಮಾನವಾಗಿರುವ ಹಲವು ಪದಗಳಿವೆ. ಅಘೋಷ, ಘೋಷ ವ್ಯತ್ಯಾಸವಿರುವ ಸ್ಪರ್ಶ ಸ್ಫೋಟಕ ವ್ಯಂಜನಗಳು ಕನ್ನಡದಂತೆ ಕೊಡಗಿನಲ್ಲಿಯೂ ಇವೆ. ಕನ್ನಡದಲ್ಲಿ ಪ ಕಾರ ಹ ಕಾರವಾಗುವುದೊಂದು ಚಾರಿತ್ರಿಕ ಪ್ರಕ್ರಿಯೆ. ಕೊಡಗಿನಲ್ಲಿಯೂ 'ಹ' ಧ್ವನಿ ಧ್ವನಿಮಾ ಮಟ್ಟಕ್ಕೇರಿದೆ. ಉತ್ತಮಪುರುಷ ಸರ್ವನಾಮದ ಬಹುವಚನದಲ್ಲಿ ಅಭಿವ್ಯಾಪಕ (ಇನ್‌ಕ್ಲೂಸಿವ್) ಮತ್ತು ವ್ಯಾವರ್ತಕ (ಎಕ್ಸ್‌ಕ್ಲೂಸಿವ್) ಎಂಬ ವ್ಯತ್ಯಾಸ ತಮಿಳು, ಮಲೆಯಾಳಂ, ತುಳು - ತೆಲುಗುಗಳಲ್ಲಿ ಈಗಲೂ ಪ್ರಚಲಿತವಾಗಿದೆ. ಹಳೆಗನ್ನಡದಲ್ಲಿದ್ದ ಈ ಪ್ರಕ್ರಿಯೆ ಹೊಸಗನ್ನಡದಲ್ಲಿ ಇಲ್ಲವಾಗಿರುವಂತೆ ಕೊಡಗಿನಲ್ಲೂ ಇಲ್ಲವಾಗಿದೆ. ಪೂರ್ಣ ಕ್ರಿಯಾಪದದಲ್ಲಿ ಲಿಂಗನಿರ್ದೇಶನವಿಲ್ಲದಿರುವ ಪ್ರಕ್ರಿಯೆ, ಕನ್ನಡದ ಉಪಭಾಷೆಯಾದ ಗೌಡ ಕನ್ನಡವನ್ನು ಹೋಲುತ್ತದೆ. ಉದಾ: ನಾ ಬಂದೆ (ಗೌಕ; ಕೊ); ನಾವು ಬಂದೆ (ಗೌಕ), ನಾವು ಬಾತ್ (ಕೊ); ನೀ ಬಂದ (ಗೌಕ), ನೀ ಬಂದಿಯ (ಕೊ); ಅದ್ ಬಾತ್ (ಗೌಕ), ಅವ ಬಾತ್ (ಕೊ), ಅಂದರೆ ಅವಳು ಬಂದಳು, ಅದ ಬಾತ್ (ಗೌಕ); ಅಂದರೆ ಅದು ಬಂದಿತು. ಅವು ಬಂದೂ (ಗೌಕ); ಅಯಂಗ - ಅವು ಬಾತ್ (ಕೊ) ಅಂದರೆ ಅವರು ಬಂದರು: ಪೂರ್ಣ ಕ್ರಿಯೆ ಉತ್ತಮ ಪುರುಷ ಬಹುವಚನಗಳಿಗೆ ಏಕರೂಪವಿರುವುದು ಕೊಡಗು ಮತ್ತು ಗೌಡ ಕನ್ನಡಗಳೆರಡರಲ್ಲಿಯೂ ಕಂಡುಬರುತ್ತದೆ. ಗೌಡ ಕನ್ನಡದಲ್ಲಿ ಪ್ರಥಮ ಪುರುಷದಲ್ಲಿ ಲಿಂಗನಿರ್ದೇಶನವಿಲ್ಲದಿರುವಂತೆ ಕೊಡಗಿನಲ್ಲಿಯೂ ಇಲ್ಲವಾಗಿದೆ. ಕೊಡಗು ವಚನವ್ಯತ್ಯಯವನ್ನೂ ತೋರಿಸುವುದಿಲ್ಲ. ಈ ಅಂಶಗಳು ಕೊಡಗು -ಕನ್ನಡಗಳ ಪರಸ್ಪರ ಪ್ರಭಾವವನ್ನು ನಿರ್ದೇಶಿಸುತ್ತವೆ. ಈಗಿನ ಕೊಡಗು ಭಾಷೆಯಲ್ಲಿ ಪಾರಸೀ, ಅರಬ್ಬೀ, ಉರ್ದು ಪದಗಳು ಕೆಲವು ಸೇರ್ಪಡೆಯಾಗಿ ದಿನಬಳಕೆಯಲ್ಲಿವೆ ಉದಾ: ಹುಕುಂ, ಹಜಾಮ, ಹುಷಾರ್ ಇತ್ಯಾದಿ.

ಕೊಡವ ಭಾಷೆಯನ್ನು ಮೊದಲಿಗೆ ಪರಿಚಯಿಸಿಕೊಟ್ಟವರು ಕಾಲ್ಡ್‌ವೆಲ್, ಗ್ರೇಟರ್ ಮುಂತಾದ ವಿದ್ವಾಂಸರು. ಈ ಭಾಷೆಗೆ ಮೊಟ್ಟಮೊದಲು ವ್ಯಾಕರಣ ರಚಿಸಿದವನು ಕೋಲ್ ಎಂಬಾತ.

ಕೊಡವ ಭಾಷೆಯ ಜನಪದ ಹಾಡುಗಳು ಅಥವಾ ಇತರ ಕೆಲವು ಇತ್ತೀಚಿನ ಸಾಹಿತ್ಯ ರಚನೆಗಳನ್ನೆಲ್ಲ ಕನ್ನಡ ಲಿಪಿಯಲ್ಲಿಯೆ ಬರೆಯಲಾಗಿದೆ. ಇಂಥ ಲಿಖಿತ ಸಾಹಿತ್ಯವೂ ಕಡಿಮೆಯೇ. ಇದರಲ್ಲಿ ಪಟ್ಟೋಲೆ ಪಳಮೆ (ಕೊಡಗು ಜನಪದ ಹಾಡುಗಳು, ಅವರ ರೀತಿ, ನಡತೆಗಳು ಮುಂತಾದುವುಗಳ ಸಂಗ್ರಹ ಎಸ್.ಚಿಣ್ಣಪ್ಪ, 1924) ಅಪ್ಪಚ್ಚು ಕವಿಯ ನಾಲ್ಕು ನಾಟಕ (ಪುರಾಣ ಕಥೆಗಳನ್ನು ಸಾಂಪ್ರದಾಯಿಕ ನಾಟಕರೂಪಕ್ಕೆ ಅಳವಡಿಸಿದುದು ಪುನರ್ಮುದ್ರಣ 1968), ಕುತ್ತುಂಬೊಳಿಚ್ಚ (ಬಿ.ಡಿ.ಗಣಪತಿ, 1972) ಇವು ಜನಪ್ರಿಯ ಕೃತಿಗಳು. ಪಳಮೆ ಎಂಬ ಹಾಡುಗಳು ಸಾಮೂಹಿಕ ಕಾರ್ಯಕ್ರಮಗಳಲ್ಲಿ ಅಂದರೆ ನೃತ್ಯ, ಮದುವೆ, ಸಾವು ಮುಂತಾದ ಸಂದರ್ಭಾನುಸಾರ ಹಾಡುವಂಥವುಗಳು. ಇವು ಹೊರತು ಇನ್ನೇನೂ ಹೆಚ್ಚಿನ ಸಾಹಿತ್ಯಕೃಷಿ ಕೊಡವ ಭಾಷೆಯಲ್ಲಿ ನಡೆದಿಲ್ಲ. ಆದರೆ ಕೊಡವ ಭಾಷೆಗೆ ಈಗ ಪ್ರತ್ಯೇಕ ಅಕಾಡೆಮಿ ರಚಿತವಾಗಿದ್ದು ಹೆಚ್ಚಿನ ಕಾರ್ಯಗಳನ್ನು ನಿರೀಕ್ಷಿಸಬಹುದಾಗಿದೆ (ನೋಡಿ: ಅಕಾಡೆಮಿಗಳು). (ಕೆ.ಕೆಯು.ಜಿ.)

**ಕೊಡೆಕಲ್ಲು :** ಗುಲ್ಬರ್ಗ ಜಿಲ್ಲೆಯ ವಾಯವ್ಯ ಭಾಗದಲ್ಲಿ ಸುರಪುರ ತಹಸೀಲಿನಲ್ಲಿ ಕೃಷ್ಣಾ ನದಿಯ ಉತ್ತರಕ್ಕೆ ಸು.16ಕಿಮೀ ದೂರದಲ್ಲಿರುವ ಊರು.

ಈ ಊರಿನಲ್ಲಿ ಪ್ರಾಚೀನ ಸಾಂಸ್ಕೃತಿಕ ಅವಶೇಷಗಳು ದೊರೆತಿವೆ. ಕಲ್ಲಿನ ಸಣ್ಣ ಆಯುಧಗಳು ಈ ಗ್ರಾಮದ ಸುತ್ತಲೂ ಸಿಗುತ್ತವೆ. ಅವು ಇಲ್ಲಿ ಹಿಂದಕ್ಕಿದ್ದ ಸೂಕ್ಷ್ಮಶಿಲಾಯುಗ ಸಂಸ್ಕೃತಿಯನ್ನು ನಿದರ್ಶಿಸುತ್ತವೆ. ಈ ಗ್ರಾಮದಿಂದ 4-5ಕಿಮೀ ಅಂತರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕಾಲಕ್ಕೆ ಸೇರಬಹುದಾದ ಒಂದು ದೊಡ್ಡ ಬೂದಿಯ ದಿನ್ನೆ ಮತ್ತು ಅದರ ಸಮೀಪದಲ್ಲಿಯೆ ಆ ಸಂಸ್ಕೃತಿಯ ಒಂದು ನೆಲೆ ಇದೆ. ಬೂದಿಯ ದಿನ್ನೆಯ ಕೆಳಭಾಗದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಆದಿಭಾಗದ ಕಾಲದ ಅವಶೇಷಗಳು ಕಂಡುಬಂದಿವೆ. ಇಂಗಾಲ 14 ಪರೀಕ್ಷೆಯಿಂದ ಈ ಅವಶೇಷಗಳ ಕಾಲ ಸು.ಕ್ರಿ.ಪೂ.2300 ಎಂದು ತಿಳಿದಿದೆ. ಇಲ್ಲಿ ಚೆನ್ನಾಗಿ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿಗಳು, ಬೂದುಬಣ್ಣದ ಮಣ್ಣಿನ ಪಾತ್ರೆಗಳು, ಅಸ್ಥಿಗಳು ಸಿಕ್ಕಿವೆ. ಈ ಊರಿನ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಬೃಹತ್ ಶಿಲಾಗೋರಿಗಳಿವೆ. ಅವು ದುಂಡಾದ ಕುಪ್ಪರಿ ಕೋಣೆ ಗೋರಿ ರೀತಿಯವು.

ಕೊಡೆಕಲ್ಲಿಗೆ ಧಾರ್ಮಿಕ ಮಹತ್ವವೂ ಉಂಟು. ವರ್ಷದುದ್ದಕ್ಕೂ ಪ್ರವಾಸಿಗಳು ಇಲ್ಲಿಯ ಚೆನ್ನಬಸವೇಶ್ವರ ದೇವಾಲಯಕ್ಕೆ ಭೇಟಿಕೊಡುವರು. ಜಾತ್ರೆಯ ವೇಳೆಯಲ್ಲಿ ಸಾವಿರಾರು ಜನ ಸೇರುತ್ತಾರೆ. ಇಲ್ಲಿಯ ದರ್ಗಾ ಹಿಂದುಗಳಿಗೂ ಮುಸಲ್ಮಾನರಿಗೂ ಪವಿತ್ರ ಸ್ಥಳ. (ಎ.ಎಂ.ಎ.)

**ಕೊಡೇಕಲ್ಲು ಬಸವಣ್ಣ :** ಸು.15ನೆಯ ಶತಮಾನದ ಶಿವಶರಣ. ಕಲ್ಯಾಣದ ಬಸವಣ್ಣನ ಬದ್ಧ ಅನುಯಾಯಿಯಾಗಿದ್ದು ಹಿಂದು - ಮುಸ್ಲಿಂ ಈ ಎರಡೂ ಸಮುದಾಯಗಳ ಪ್ರೀತಿ ವಿಶ್ವಾಸ ಪಡೆದಿದ್ದ ಸಂತ. ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಕೋಡೇಕಲ್ಲಿನಲ್ಲಿ ನೆಲಸಿದ್ದರಿಂದ ಇವನಿಗೆ ಕೊಡೇಕಲ್ಲು ಬಸವಣ್ಣ ಎಂಬ ಹೆಸರು ಬಂದಿತ್ತು. ವೀರಶೈವ ಅಷ್ಟಾವರಣಗಳನ್ನು ತೊರೆದು, ಲಿಂಗವಿರಹಿತನಾಗಿ ಆರೂಢನಾಗಿದ್ದ. ನಾಥಪಂಥದ ಪ್ರಭಾವಕ್ಕೊಳಗಾಗಿ ಯೋಗ, ಪವಾಡ ಮೆರೆದ; ಮಹ್ಮದೀಯ ಸುಲ್ತಾನರ ಆಳಿಕೆಯಲ್ಲಿ ಜೀವಿಸಿದ್ದ ಈತ ಧರ್ಮ ಸಮನ್ವಯಕ್ಕಾಗಿ ಶ್ರಮಿಸಿದ. ಕುದುರೆ ಏರಿ ದೇಶಾದ್ಯಂತ ಸಂಚಾರ ಮಾಡಿ ಅಲ್ಲಾ ಅಲ್ಲಮ ಈರ್ವರೂ ಒಂದೇ ಎಂಬ ಸಂದೇಶ ಸಾರಿದ. ಮುಸ್ಲಿಮರ ಮೆಚ್ಚುಗೆಗಳಿಸಿ ಅವರಿಂದ ಪೈಗಂಬರರ ಅವತಾರ ಎಂದು ಕರೆಸಿಕೊಂಡ.



ಕೊಡೇಕಲ್ಲು ಬಸವಣ್ಣಮಂದಿರ

ಆದರೆ ಅದೇ ಕಾಲದಲ್ಲಿ ವಚನ ಸಾಹಿತ್ಯದ ರಕ್ಷಣೆಗಾಗಿ ಕಂಕಣ ಬದ್ಧನಾದ. ಕಲ್ಯಾಣಕ್ಕೆ ಹೋಗಿ ಅಲ್ಲಿ ಶರಣರ ವಚನಗಳ ಹಸ್ತಪ್ರತಿಗಳನ್ನು ಮಹಮ್ಮದೀಯ ಮೂಲಭೂತವಾದಿಗಳಿಂದ ರಕ್ಷಿಸಲು ಕ್ರಮಕೈಗೊಂಡ. ಪಾರಸೀ ಲಿಪಿಯಂತೆ ಕಾಣುವ ಅಮರಗನ್ನಡ ಲಿಪಿಯನ್ನು ಸೃಷ್ಟಿಸಿ ಅದರಲ್ಲಿ ಸಾಹಿತ್ಯ ರಚಿಸಿದನಂತೆ. ಅಲ್ಲದೆ ತನ್ನದೇ ಆದ ಸಾಹಿತ್ಯ ಸಂಪ್ರದಾಯವನ್ನು ಹುಟ್ಟು ಹಾಕಿ ದೇಶೀ ಛಂದಸ್ಸಿನಲ್ಲಿ ಕಾವ್ಯ ರಚಿಸಿದ. ಬಸವಣ್ಣನ ಕಾಲಜ್ಞಾನ ಎಂಬ ಇವನ ಕೃತಿ ಪ್ರಸಿದ್ಧವಾಗಿದೆ. ಹಿಂದೆ ಇದನ್ನು ಹಾಡಿ ಪ್ರಚುರಗೊಳಿಸಲು ತರಬೇತಾದ ಸಾರುವ ಅಯ್ಯಗಳು ಎಂಬ ಒಂದು ದಂಡೇ ನಿರ್ಮಾಣವಾಗಿತ್ತು. ಅವರನ್ನು ಕರ್ನಾಟಕದ ದಕ್ಷಿಣ ಭಾಗದಲ್ಲಿ ಕರಪಲ್ಲದವರು (ಕರಪಾಲ) ಎಂದು ಕರೆಯುತ್ತಿದ್ದರು. ಸಾತ್ವಿಕ ಜೀವನ, ಜನಸೇವೆ ಮತ್ತು ಧಾರ್ಮಿಕ ಸಾಧನೆಗಳಿಗೆ ಹೆಸರಾದ ಇವನಿಗೆ ಅನೇಕ ಮಂದಿ ಶಿಷ್ಯರಿದ್ದರು. ಅವರು ದೇಶದ ವಿವಿಧ ಭಾಗಗಳಲ್ಲಿ ನೆಲಸಿ ಈತನ ತತ್ವ ಪ್ರಚಾರ ಮಾಡಿದರು. ಅವರಲ್ಲಿ ಕೊಡೇಕಲ್ಲು ಸಮೀಪದ ತಿಂಥಿಣಿ ಮೋನಪ್ಪ, ಮೈಸೂರು ಸಮೀಪದ ಕೃಷ್ಣರಾಜನಗರ ತಾಲ್ಲೂಕಿನ ಕಪ್ಪಡಿಯಲ್ಲಿ ನೆಲೆಸಿದ್ದ ಮಗ ರಾಚಪ್ಪ, ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನಪುರದಲ್ಲಿ ನೆಲೆಸಿ ಸಮಾಧಿಸ್ಥನಾದ ಮಂಟೆಸ್ವಾಮಿ ಇವರು ಮುಖ್ಯರು. ಇವರಲ್ಲಿ ಅನೇಕರು ಕೊಡೇಕಲ್ಲು ಸಂಪ್ರದಾಯದ ಸಾಹಿತ್ಯ ರಚಿಸಿದ್ದಾರೆ. ಅವರ ಅನೇಕ ಶಾಖಾ ಮಠಗಳು ಇವೆ.

ಕೊಡೇಕಲ್ಲಿನಲ್ಲಿರುವ ಬಸವಣ್ಣನ ಮಂದಿರ ಮುಸ್ಲಿಂ ವಾಸ್ತುಶಿಲ್ಪ ಶೈಲಿಯಲ್ಲಿದೆ. ಅದರಲ್ಲಿರುವ ಗಲ್ಲೀಫ ಹೊದಿಸಿದ ಈತನ ಸಮಾಧಿಯೂ ಅದೇ ಮಾದರಿಯಲ್ಲಿದೆ. ಆ ಸಮಾಧಿಯ ಮೇಲೆ ವಚನಗಳನ್ನು ಕೆತ್ತಿ ಅಲಂಕರಿಸಲಾಗಿದೆ. ಹಿಂದು ಮತ್ತು ಮುಸ್ಲಿಂ ಈ ಎರಡೂ ಸಂಪ್ರದಾಯ ರೀತಿಯಲ್ಲಿ ಇಲ್ಲಿ ಒಮ್ಮೆಲೇ ಪೂಜೆ ನಡೆಯುತ್ತದೆ. ಇಲ್ಲಿನ ಕೊಡೇಕಲ್ಲು ಹಿಂದು-ಮುಸ್ಲಿಂ ಸಂಸ್ಕೃತಿಗಳ ಸಾಮರಸ್ಯದ ನೆಲೆಯಾಗಿದೆ. (ಎಂ.ಜಿ.ಬಿ.)

**ಕೊಡ್ಲಿಪೇಟೆ :** ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿಗೆ ಸೇರಿದ ಪಟ್ಟಣ. ಮಡಿಕೇರಿಯಿಂದ 71ಕಿಮೀ ದೂರದಲ್ಲಿದೆ. ಇಲ್ಲಿಂದ ಸುಮಾರು ಒಂದೂವರೆ ಕಿಮೀ ಉತ್ತರದಲ್ಲಿ ಕೊಡಗು ಹಾಸನ ಜಿಲ್ಲೆಗಳ ಮೇರೆಯಾಗಿ ಹೇಮಾವತಿ ನದಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಮಡಿಕೇರಿ-ಸಕಲೇಶಪುರ ರಸ್ತೆ ಈ ಊರನ್ನು ಹಾದುಹೋಗುತ್ತದೆ. ಇಲ್ಲಿಂದ ಅರಕಲಗೂಡು, ಸಕಲೇಶಪುರ ಮತ್ತು ಮಡಿಕೇರಿವರೆಗಿನ ಎಲ್ಲ ಊರುಗಳಿಗೂ ನೇರವಾದ ಬಸ್ಸು ಸಂಚಾರದ ಸೌಲಭ್ಯಗಳುಂಟು. ಭಾನುವಾರ ಸಂತೆ ಜರುಗುತ್ತದೆ. ಏಲಕ್ಕಿ ಬೆಳೆಯುವ ಸಕಲೇಶಪುರ ಪ್ರದೇಶದೊಡನೆ ಇದು ವ್ಯಾಪಾರಸಂಬಂಧವನ್ನಿಟ್ಟುಕೊಂಡಿದೆ. ಕೊಡಗು ರಾಜರ ಕಾಲದಲ್ಲಿ ಇದು ಮುಖ್ಯವಾದ ವ್ಯಾಪಾರಸ್ಥಳವಾಗಿತ್ತು. (ಡಿ.ಎನ್.ಕೆ.)

**ಕೊಣನೂರು :** ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಒಂದು ಊರು. ಹಾಸನದಿಂದ ದಕ್ಷಿಣಕ್ಕೆ 56ಕಿಮೀ ದೂರದಲ್ಲೂ ಅರಕಲಗೂಡಿಗೆ ದಕ್ಷಿಣದಲ್ಲಿ 24ಕಿಮೀ ದೂರದಲ್ಲೂ ಕಾವೇರಿ ನದಿಯ ಎಡದಂಡೆಯ ಮೇಲಿದೆ. ಇಲ್ಲಿ ಕೋಳಲ ಗೋಪಾಲಸ್ವಾಮಿ ದೇವಾಲಯ ಇರುವುದರಿಂದ ಪ್ರಥಮದಲ್ಲಿ ಇದನ್ನು ಕೋಳಲೂರು ಎಂದು ಕರೆಯುತ್ತಿದ್ದರು. ಹೈದರ್ ಅಲಿಯಿಂದ ಅಧಿಕಾರಚ್ಯುತನಾದ ದಳವಾಯಿ ನಂಜರಾಜ ಈ ಊರನ್ನು ಜಹಗೀರಾಗಿ ಪಡೆದು ಇಲ್ಲಿ ನೆಲೆಸಿದ್ದ.

ಪ್ರತಿ ಗುರುವಾರ ಸೇರುವ ಸಂತೆಯಲ್ಲಿ ಬತ್ತ ಮತ್ತು ಅಡಕೆಯ ವ್ಯಾಪಾರ ಹೆಚ್ಚು. ಕೊಣನೂರಿಗೆ ತಾಲ್ಲೂಕಿನ ಮತ್ತು ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಿಂದ ಉತ್ತಮ ಮಾರ್ಗಗಳಿವೆ. ಇಲ್ಲಿ ಬಿ.ಎಂ. ಶೆಟ್ಟಿ ಪ್ರಥಮ ದರ್ಜೆ ಕಾಲೇಜು ಇದೆ (1954). *

**ಕೊಣ್ಣೂರು :** ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನಲ್ಲಿ ಘಟಪ್ರಭಾ ನದಿಯ ಬಲದಂಡೆಯ ಮೇಲಿರುವ ಊರು. ಗೋಕಾಕ ರೋಡ್ ರೈಲ್ವೆ ನಿಲ್ದಾಣದಿಂದ 5ಕಿಮೀ ದೂರದಲ್ಲಿದೆ.

ಈ ಊರು ಪ್ರಾಚೀನ ಅವಶೇಷಗಳಿಂದ ಪ್ರಸಿದ್ಧವಾಗಿದೆ. ಊರೊಳಗೆ ಒಂದು ತೀರ್ಥಂಕರ ದೇವಾಲಯ ಇದೆ. ಇಲ್ಲಿನ ಒಂದು ಶಿಲಾಶಾಸನದ ಪ್ರಕಾರ ಸೌಂದತ್ತಿಯ ರಟ್ಟರ ಪ್ರಾಂತ್ಯದಲ್ಲಿದ್ದ ಇದು ಜೈನಧರ್ಮದ ಕೇಂದ್ರಗಳಲ್ಲಿ ಒಂದಾಗಿದ್ದು ಇದನ್ನು ಕೊಂಡನೂರು ಎಂದು ಕರೆಯಲಾಗಿತ್ತು. ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಮಂಡಲೇಶ್ವರನಾದ ರಟ್ಟವಂಶದ ಎರಡನೆಯ ಸೇನ ಇಲ್ಲಿ ಒಂದು ಜೈನಬಸದಿಯನ್ನು ಕಟ್ಟಿಸಿ 1087ರಲ್ಲಿ ಅದಕ್ಕೆ ದತ್ತಿಯನ್ನು ಬಿಟ್ಟ. ಈ ಜೈನದೇವಾಲಯ ಕಾಲಾಂತರದಲ್ಲಿ ಜೀರ್ಣೋದ್ಧಾರ ಹೊಂದಿತ್ತು. ಮೊದಲಿನ ಅಧಿಷ್ಠಾನ ಮತ್ತು ಗರ್ಭಗುಡಿ ಮತ್ತು ಅಂತರಾಳದ ಹೊರ ಬದಿಯಗೋಡೆಗಳ ಭಾಗಗಳು ಮಾತ್ರ ಉಳಿದಿವೆ. ಇದಲ್ಲದೆ ಸುಮಾರು 11ನೆಯ ಶತಮಾನದ ಕದಂಬನಾಗರ ಶೈಲಿಯ ಶಿಖರವುಳ್ಳ ಚಿಕಲೇಶ್ವರ ಎಂಬ ಮತ್ತೊಂದು ದೇವಾಲಯವಿದೆ. ಇದರಲ್ಲೂ ಮೊದಲಿನ ಗರ್ಭಗುಡಿ ಮಾತ್ರ ಉಳಿದಿದೆ.

ಗ್ರಾಮದ ವಾಯುವ್ಯ ದಿಕ್ಕಿಗೆ ಸು.1ಕಿಮೀ ದೂರದಲ್ಲಿ ನದಿಯ ದಂಡೆಯ ಮೇಲೆ ಒಂದು ಶಿಲಾ ತಾಮ್ರಯುಗದ ವಾಸ್ತವ್ಯದ ನೆಲೆಯಿದೆ. ಇದರಲ್ಲಿ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿಗಳು, ನೀಳ ಚಕ್ಕೆಕಲ್ಲಿನ ಸೂಕ್ಷ್ಮ ಉಪಕರಣಗಳು, ಅಪರೂಪವಾಗಿ ನೇರಳೆ ವರ್ಣದ ರೇಖಾಚಿತ್ರಗಳುಳ್ಳ ಬೂದು ಹಾಗೂ ಕೆಂಪು ಬಣ್ಣದ ಸುಟ್ಟ ಗಡಿಗೆ ಮಡಕೆಗಳು, ಭೂಮಿಯ ಸುಣ್ಣದ ಸಂಪರ್ಕದಿಂದ ಗಟ್ಟಿಯಾದ ಪ್ರಾಣಿಗಳ ಎಲುಬುಗಳು ಮತ್ತು ವಿಪರೀತ ಶಾಖದಿಂದ ಉಂಟಾದ ಬೂದಿ ಕಿಟ್ಟದ ಉಂಡೆಗಳು ಮುಂತಾದ ಅವಶೇಷಗಳು ವಿಶಾಲ ಪ್ರದೇಶದಲ್ಲಿ ಹರಡಿವೆ. ಊರಿನ ದಕ್ಷಿಣಕ್ಕೆ, ಸಮೀಪದ ಬಯಲಿನಲ್ಲಿ ಬೃಹತ್ ಶಿಲಾಸಂಸ್ಕೃತಿಯ ಸು.100 ದಾರಿಕೋಣೆ ಗೋರಿಗಳಿವೆ. (ಎ.ಎಸ್.)

**ಕೊಪ್ಪ :** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಈ ತಾಲ್ಲೂಕು ಚಿಕ್ಕಮಗಳೂರಿನ ವಾಯುವ್ಯಕ್ಕೆ ಪಶ್ಚಿಮಘಟ್ಟಪ್ರದೇಶದಲ್ಲಿದೆ. ನರಸಿಂಹರಾಜಪುರ, ಶೃಂಗೇರಿ, ಮೂಡಿಗೆರೆ ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕುಗಳ ಮಧ್ಯದಲ್ಲಿದೆ. ವಿಸ್ತೀರ್ಣ 572.4ಚ.ಕಿಮೀ. ಜನಸಂಖ್ಯೆ 87,663. ಈ ತಾಲ್ಲೂಕಿನಲ್ಲಿ ಮೂರು ಹೋಬಳಿಗಳೂ 80 ಗ್ರಾಮಗಳೂ ಇವೆ.

ಈ ತಾಲ್ಲೂಕಿನಲ್ಲಿ ಪಶ್ಚಿಮ ಘಟ್ಟ ಶ್ರೇಣಿ ಹಾದು ಹೋಗುವುದರಿಂದ ಇದು ಬೆಟ್ಟಗುಡ್ಡಗಳಿಂದಲೂ ದಟ್ಟವಾದ ಅರಣ್ಯಗಳಿಂದಲೂ ಕೂಡಿದೆ. ಮೇಟಿಪರ್ವತದಿಂದ ಆಗುಂಬೆವರೆಗಿನ ಘಟ್ಟಸಾಲಿನ ಮಧ್ಯಭಾಗದಲ್ಲಿ ಬರುವ ಬೆಟ್ಟಗುಡ್ಡಗಳು ಈ ತಾಲ್ಲೂಕಿನ ಭೌತಿಕ ಲಕ್ಷಣವನ್ನು ನಿರ್ಧರಿಸಿವೆ. ವರಾಹ ಪರ್ವತ (1457.2ಮೀ.) ಮೇಟಿ ಪರ್ವತ, ನರಸಿಬೆಟ್ಟ ಮೊದಲಾದ ಎತ್ತರದ ಪರ್ವತಗಳಿವೆ. ಈ ತಾಲ್ಲೂಕಿನ ಸರಾಸರಿಮಳೆಯ ಪ್ರಮಾಣ 3002ಮಿಮೀ. ಇದ್ದು ಜಿಲ್ಲೆಯಲ್ಲಿ ಎರಡನೆಯ ಸ್ಥಾನ ಪಡೆದಿದೆ. ಇದರಿಂದಾಗಿ ಇಲ್ಲಿಯ ಜಲಸಂಪತ್ತು ಅಪಾರ. ಈ ತಾಲ್ಲೂಕಿನ ಸೆರಗಿನಲ್ಲೇ ಇರುವ ಗಂಗಾಮೂಲದಲ್ಲಿ ತುಂಗಾ ಮತ್ತು ಭದ್ರಾ ನದಿಗಳು ಹುಟ್ಟಿ ತಾಲ್ಲೂಕಿನ ಬೆಟ್ಟಗಳ ಸಾಲುಗಳಿಂದ ಅವು ಪ್ರತ್ಯೇಕಗೊಳ್ಳುತ್ತವೆ. ಇವಲ್ಲದೆ ನಂದಿನಿ, ಸೀತಾ, ನಳಿನಿ ಮೊದಲಾದ ಸಣ್ಣ ಹೊಳೆಗಳೂ ಝರಿಗಳೂ ಇವೆ. ಬೆಟ್ಟಗಳ ಮಧ್ಯದಲ್ಲಿ ಇರುವ ಕಿರಿ ಅಗಲದ ಕಣಿವೆಗಳು ಮಾತ್ರ ವಸತಿ ಮತ್ತು ಬೇಸಾಯಕ್ಕೆ ಅನುಕೂಲವಾಗಿವೆ. ಇಲ್ಲಿ ಹೆಚ್ಚಾಗಿ ಗಟ್ಟಿಮಣ್ಣು ಮತ್ತು ಕೆಮ್ಮಣ್ಣು ಕಂಡುಬರುತ್ತವೆ. ಈ ಮಣ್ಣು ಅಡಕೆ ಮತ್ತು ಬತ್ತದ ಬೆಳೆಗೆ ಅನುಕೂಲವಾಗಿವೆ.

ಈ ತಾಲ್ಲೂಕಿನ ಅರಣ್ಯ ಪ್ರದೇಶದ ವಿಸ್ತೀರ್ಣ 14,670 ಹೆಕ್ಟೇರುಗಳು. ಇಲ್ಲಿಯ ಕಾಡುಗಳಲ್ಲಿ ತೇಗ, ಶ್ರೀಗಂಧ, ಮತ್ತಿ, ನಂದಿ, ಹಲಸು, ಹೆಬ್ಬಲಸು, ದಬ್ಬೆ, ನೇರಳೆ, ಬೀಟೆ ಮೊದಲಾದ ಮರಗಳಿವೆ. ಇಲ್ಲಿ ಬಿದಿರು ಕಾಡುಗಳೂ ಉಂಟು. ಕಾಗದ ತಯಾರಿಸಲು ಬೊಂಬನ್ನು ಇಲ್ಲಿಂದ ಸಾಗಿಸಲಾಗುತ್ತದೆ. ಕಾಡುಗಳಲ್ಲಿ ಹಲಸು, ನೇರಳೆ, ಚೊಬ್ಬೆ, ಬಕ್ಕಲ, ಹಾಲಿ ಮೊದಲಾದ ಹಣ್ಣುಗಳ ಮರಗಳಿವೆ. ಅಂಟವಾಳ, ಸೀಗೆಕಾಯಿ, ಕಾಡು ಮೆಣಸು ಮೊದಲಾದವು ಬೆಳೆಯುತ್ತವೆ.

ಈ ಪ್ರದೇಶದಲ್ಲಿ ಪ್ರಾಣಿಸಂಪತ್ತೂ ವಿಪುಲವಾಗಿದೆ. ಮಲೆನಾಡಿನ ಎಲ್ಲ ಜಾತಿಯ ಪ್ರಾಣಿಗಳೂ ಇಲ್ಲಿ ಕಂಡುಬರುತ್ತವೆ. ನದಿಗಳಲ್ಲಿ ಅಧಿಕವಾಗಿ ದೊಡ್ಡ ಜಾತಿಯ ಮೀನುಗಳೂ ಮೊಸಳೆಗಳೂ ಇವೆ.

ಇಲ್ಲಿನ ಮುಖ್ಯ ಕಸಬು ಕೃಷಿ ಮತ್ತು ಪ್ಲಾಂಟೇಷನ್ ಉದ್ಯಮ. ಕಾಫಿ, ರಬ್ಬರ್, ಅಡಕೆ, ಮೆಣಸು, ಏಲಕ್ಕಿ ತೋಟದ ಬೆಳೆಗಳು. ಅಡಕೆ, ಏಲಕ್ಕಿ ಬೆಳೆಗಳನ್ನು ನೀರಿನ ಸೌಲಭ್ಯವಿರುವಲ್ಲಿ ಬೆಳೆಯುತ್ತಾರೆ. ಈಚೆಗೆ ಹೆಚ್ಚು ಹೆಚ್ಚು ವೆನಿಲಾ ಬೆಳೆಯಲಾಗುತ್ತಿದೆ. ಕಾಫಿ ಬೆಳೆಯ ಸಂಶೋಧನೆಗಾಗಿ ಈ ತಾಲ್ಲೂಕಿನಲ್ಲಿ ಬಾಳೆಹೊನ್ನೂರಿನ ಬಳಿ ಒಂದು ಸಂಶೋಧನ ಕೇಂದ್ರವಿದೆ. ಈ ತಾಲ್ಲೂಕಿನಲ್ಲಿ ಹೆಚ್ಚು ಮಳೆ ಬೀಳುವುದರಿಂದ ಇಳಿಜಾರು ಪ್ರದೇಶಗಳಲ್ಲಿ ಮಾತ್ರ ಕಾಫಿ ಚೆನ್ನಾಗಿ ಬೆಳೆಯುತ್ತದೆ. ಅರ್‍ಯಾಬಿಕಾ ಮತ್ತು ರೋಬಸ್ಟ ಕಾಫಿ ತಳಿಗಳನ್ನು ಬೆಳೆಯಲಾಗುತ್ತದೆ. ರೊಬಸ್ಟ ಕಾಫಿ ಸಾಮಾನ್ಯವಾಗಿ ದೃಢವಾಗಿ ಬೆಳೆಯುತ್ತದೆ. ನದಿ ಬಯಲುಗಳಲ್ಲಿ ಮಣ್ಣು ಫಲವತ್ತಾಗಿದೆ. ಬತ್ತ ಮುಖ್ಯ ಆಹಾರ ಬೆಳೆ. ಬತ್ತದ ಒಳ್ಳೆಯ ಇಳುವರಿ ಬರುತ್ತದೆ.

ಈ ತಾಲ್ಲೂಕಿನಲ್ಲಿ ರಬ್ಬರ್ ಕಾರ್ಖಾನೆಯೊಂದಿದೆ. ಕೊಪ್ಪ ಮತ್ತಿತರ ಕಡೆಗಳಲ್ಲಿ ಅಕ್ಕಿ ಗಿರಣಿಗಳಿವೆ. ಮರ ಕುಯ್ಯುವ ಕಾರ್ಖಾನೆ ಇದೆ. ಬಿದಿರಿನ ವಸ್ತುಗಳನ್ನು ತಯಾರಿಸುವುದು, ಗಾಡಿ ಕೂಡಿಸುವುದು, ಪಾತ್ರೆ ರಿಪೇರಿ, ಪೀಠೋಪಕರಣಗಳನ್ನು ಮಾಡುವುದು ಮೊದಲಾದ ಕೈಕಸಬುಗಳು ರೂಢಿಯಲ್ಲಿವೆ. ಜೇನು ಸಾಕಣೆ ಉದ್ಯಮ ವ್ಯಾಪಕವಾಗಿದೆ. ಅಡಕೆ, ಬತ್ತ ಮತ್ತಿತರ ಉತ್ಪನ್ನಗಳ ಮತ್ತು ಹೊರಗಿನಿಂದ ಬರುವ ವಸ್ತುಗಳ ವ್ಯಾಪಾರ ಅನೇಕರಿಗೆ ಉದ್ಯೋಗ ಒದಗಿಸಿದೆ.

ಇತ್ತೀಚಿನವರೆಗೂ ಈ ತಾಲ್ಲೂಕು ಸಾರಿಗೆ ಸಂಪರ್ಕದ ದೃಷ್ಟಿಯಿಂದ ಬಹು ಹಿಂದೆ ಉಳಿದಿತ್ತು. ಹಿಂದೆ ಆಗುಂಬೆ ಮತ್ತು ಚಾರ್ಮಾಡಿ ಘಾಟಿಗಳ ಮೂಲಕ ದಕ್ಷಿಣಕನ್ನಡ ಜಿಲ್ಲೆಗೆ ಮಾರ್ಗಗಳಿದ್ದವು. ಏಲಕ್ಕಿ, ಮೆಣಸು, ಅಕ್ಕಿ ಇತ್ಯಾದಿಗಳು ಎತ್ತುಗಳ ಮೇಲೆ ಸಾಗುತ್ತಿದ್ದವು. ಅಲ್ಲಿಂದ ಉಪ್ಪು, ಸೀಮೆಎಣ್ಣೆ, ಬಟ್ಟೆ ಮುಂತಾದವು ಬರುತ್ತಿದ್ದುವು. 20ನೆಯ ಶತಮಾನದಲ್ಲಿ ಪ್ಲಾಂಟೇಷನ್ ಸಾಗುವಳಿ ಬಂತು. ಸ್ವಾತಂತ್ರ್ಯೋತರ ಕಾಲದಲ್ಲಿ ರಸ್ತೆ ನಿರ್ಮಾಣ ಕಾರ್ಯ ತ್ವರಿತವಾಗಿ ನಡೆಯಿತು. ಸಾರಿಗೆವ್ಯವಸ್ಥೆ ಸುಧಾರಿಸಿದೆ. ಚಿಕ್ಕಮಗಳೂರು-ಬಾಳೆಹೊನ್ನೂರು-ಕೊಪ್ಪರಸ್ತೆ; ತರೀಕೆರೆ-ಕೊಪ್ಪರಸ್ತೆ; ಹರಿಹರಪುರ-ಕೊಪ್ಪರಸ್ತೆ; ಮೇಗುಂದ-ಕಿಗ್ಗ ಹರಿಹರಪುರರಸ್ತೆ; ಜಯಪುರ-ಮೇಗುಂದರಸ್ತೆ; ಕೊಪ್ಪ-ತೀರ್ಥಹಳ್ಳಿರಸ್ತೆ ಮೊದಲಾದವು ಈ ತಾಲ್ಲೂಕಿನ ಮುಖ್ಯ ಮಾರ್ಗಗಳು. ದುರ್ಗಮ ಅರಣ್ಯ ಮತ್ತು ಬೆಟ್ಟಗುಡ್ಡಗಳಿಂದ ಕೂಡಿದ್ದ ಈ ಪ್ರದೇಶದ ನೆನಪೇ ಒಂದು ಕಾಲಕ್ಕೆ ಭಯವನ್ನು ತರುತ್ತಿತ್ತು. ತಪ್ಪು ಮಾಡಿದವನನ್ನು ಕೊಪ್ಪಕ್ಕೆ ಹಾಕು ಎಂಬ ಮಾತು ಸರ್ಕಾರಿ ವಲಯದಲ್ಲಿ ಗಾದೆಯೇ ಆಗಿಬಿಟ್ಟಿತ್ತು. ಆದರೆ ಈಗ ನಡೆದಿರುವ ಅಭಿವೃದ್ಧಿ ಕಾರ್ಯಕ್ರಮಗಳು, ಕಾಡುಗಳನ್ನು ಕಡಿದು ಸಾಗುವಳಿ, ಆಧುನಿಕ ಸಾರಿಗೆಸಂಪರ್ಕ, ಆರೋಗ್ಯಯೋಜನೆ, ಕಡಿಮೆಯಾಗುತ್ತಿರುವ ಮಳೆ ಇವೆಲ್ಲ ಈ ಮಾತನ್ನು ಇಂದು ಸುಳ್ಳಾಗಿಸಿವೆ.

ಕೊಪ್ಪ ತಾಲ್ಲೂಕಿನಲ್ಲಿ ಜಯಪುರ, ಮೇಗುಂದ, ಹೊಸೂರು, ಹಿರೇಗದ್ದೆ, ಎಲೆಮಡ್ಲು, ಚಾವಲ್‌ಮನೆ, ಹಿರೇಕೊಡಿಗೆ, ಮೇಗೂರು, ಹಾಲ್ಮತ್ತೂರು ಮುಂತಾದ ಗ್ರಾಮಗಳು ಅಭಿವೃದ್ಧಿಹೊಂದಿವೆ. ಜಂಬಿಟ್ಟಿಗೆ (ನೋಡಿ) ಮತ್ತು ಹರಿಹರಪುರ (ನೋಡಿ) ಪುಣ್ಯಸ್ಥಳಗಳೆಂದು ಪರಿಗಣಿತವಾಗಿವೆ. ಹರಿಹರಪುರ 1897ರವರೆಗೂ ಕೊಪ್ಪ ತಾಲ್ಲೂಕಿನ ಕೇಂದ್ರವಾಗಿತ್ತು. ಹರಿಹರಪುರಕ್ಕೆ 8ಕಿಮೀ ದೂರದಲ್ಲಿರುವ ಬಂಡಿಗಡಿಯಲ್ಲಿ ಒಂದು ಸ್ಮಾರ್ತ ಮಠ ಮತ್ತು ಗೋಪಾಲಕೃಷ್ಣ ದೇವಾಲಯ ಇವೆ. ತಾಲ್ಲೂಕಿನ ಸೆರಗಿನಲ್ಲಿ ಪಶ್ಚಿಮಘಟ್ಟ ಶ್ರೇಣಿಯಲ್ಲಿ ಬರುವ ವರಾಹಪರ್ವತದಲ್ಲಿರುವ ಗಂಗಾಮೂಲ ತುಂಗಾ ಭದ್ರಾ, ನೇತ್ರಾವತಿ ನದಿಗಳ ಉಗಮ ಸ್ಥಾನ, ಪವಿತ್ರಕ್ಷೇತ್ರ. ಹರಿಹರಪುರದ ನರಸಿಂಹ, ಜಂಬಿಟ್ಟಿಗೆಯ ನೀಲಕಂಠೇಶ್ವರ ಮೊದಲಾದ ದೇವತೆಗಳ ರಥೋತ್ಸವಗಳು ಈ ತಾಲ್ಲೂಕಿನಲ್ಲಿ ಪ್ರಸಿದ್ಧವಾದವು.

ಕೊಪ್ಪ ಈ ತಾಲ್ಲೂಕಿನ ಮುಖ್ಯ ಊರು ಮತ್ತು ಆಡಳಿತ ಕೇಂದ್ರ. ಶಿವಮೊಗ್ಗದ ನೈಋತ್ಯಕ್ಕೆ 65ಕಿಮೀ ದೂರದಲ್ಲಿ ಆಗುಂಬೆ ರಸ್ತೆಯಲ್ಲಿದೆ. ಜನಸಂಖ್ಯೆ 5115.

ಪೀಠೋಪಕರಣಗಳ ತಯಾರಿಕಾ ಉದ್ಯಮ, ಮರ ಕೊಯ್ಯುವ ಮಿಲ್ಲು, ದಿನಸಿ, ಜವಳಿ, ಏಲಕ್ಕಿ, ಅಡಕೆಗಳಿಗೆ ಸಂಬಂಧಿಸಿದ ವ್ಯಾಪಾರ ಉದ್ಯಮಗಳಿವೆ.

ಈ ಪಟ್ಟಣ ಹಿಂದೆ ಮೇಲುಕೊಪ್ಪ, ಕೆಳಕೊಪ್ಪ ಮತ್ತು ಬಾಳಗಡಿ ಎಂಬ ಮೂರು ಭಾಗಗಳಿಂದ ಕೂಡಿತ್ತು. ಮೇಲುಕೊಪ್ಪದಲ್ಲಿರುವ ವೀರಭದ್ರನ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ ಮತ್ತು ಮುಖಮಂಟಪಗಳಿವೆ. ಹೊರ ಗೋಡೆಯಲ್ಲಿ ಶಿವನ ಲೀಲೆಗಳನ್ನು ಕೆತ್ತಲಾಗಿದೆ. ದಕ್ಷಿಣದ ಗೋಡೆಯಲ್ಲಿ ಶಿವ ತ್ರಿಪುರಗಳನ್ನು ನಾಶಮಾಡಿದ ದೃಶ್ಯ ಚೆನ್ನಾಗಿದೆ. ಶಿವನ ಬಲಗಡೆ ಮಯೂರ ಆರೂಢನಾಗಿರುವ ಸುಬ್ರಹ್ಮಣ್ಯನ ಚಿತ್ರವಿದೆ. ಪಶ್ಚಿಮದ ಗೋಡೆಯ ಮೇಲೆ ಶಿವ ಮಾರ್ಕಂಡೇಯನನ್ನು ರಕ್ಷಿಸುವ ದೃಶ್ಯವಿದೆ. ಉತ್ತರದ ಗೋಡೆಯ ಮೇಲೆ ಶಿವಪಾರ್ವತಿಯರು ನಂದೀರೂಢರಾಗಿರುವ ದೃಶ್ಯವಿದೆ. ವೀರಭದ್ರನ ಮೂಲ ವಿಗ್ರಹ ಭಿನ್ನವಾಗಿದ್ದು ಈಗ ಆ ಸ್ಥಾನದಲ್ಲಿ ಬೇರೊಂದು ವಿಗ್ರಹ ಇಡಲಾಗಿದೆ. ಇಲ್ಲಿ ವೀರಭದ್ರ ಮತ್ತು ಭದ್ರಕಾಳಿಯರ ಲೋಹದ ವಿಗ್ರಹಗಳೂ ಇವೆ. ಕೊಪ್ಪಕ್ಕೆ 10ಕಿಮೀ ದೂರದಲ್ಲಿರುವ ಹರಿಹರಪುರದಲ್ಲಿ ದಕ್ಷ ಯಜ್ಞಮಾಡುತ್ತಿದ್ದ; ಅದಕ್ಕೆ ಆಹ್ವಾನ ದೊರಕದಿದ್ದರಿಂದ ಅವಮಾನಿತನಾದ ಶಿವ ಯಜ್ಞವನ್ನೇ ನಾಶಮಾಡಲು ವೀರಭದ್ರನನ್ನು ಕಳುಹಿಸಿದ. ಆಜ್ಞೆಯನ್ನು ನೆರವೇರಿಸಿದ ವೀರಭದ್ರ ಅದಮ್ಯಕೋಪದಿಂದ ಇಲ್ಲಿಗೆ ಬಂದು ನೆಲೆಸಿದ. ಆದ್ದರಿಂದ ಈ ಊರಿಗೆ ಕೋಪ ಅಥವಾ ಕೊಪ್ಪವೆಂದು ಹೆಸರಾಯಿತು ಎಂದು ಸ್ಥಳ ಐತಿಹ್ಯವಿದೆ. (ಡಿ.ಎಸ್.ಜೆ.)

**ಕೊಪ್ಪಳ** : ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ. ರಾಜ್ಯದ ಈಶಾನ್ಯ ಭಾಗದಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶದಲ್ಲಿದೆ. ಹಿಂದಿನ ರಾಯಚೂರು ಜಿಲ್ಲೆಯನ್ನು ವಿಭಜಿಸಿ 1997ರಲ್ಲಿ ಹೊಸ ಜಿಲ್ಲೆ ಕೊಪ್ಪಳವನ್ನು ರಚಿಸಲಾಯಿತು. ಇದರಲ್ಲಿ ನಾಲ್ಕು ತಾಲ್ಲೂಕುಗಳಿವೆ-ಕೊಪ್ಪಳ, ಗಂಗಾವತಿ ಕುಷ್ಟಗಿ ಮತ್ತು ಯಲಬುರ್ಗ. 20 ಹೋಬಳಿಗಳು, 618 ಗ್ರಾಮಗಳಿವೆ. ಈ ಜಿಲ್ಲೆಯನ್ನು ಉತ್ತರದಲ್ಲಿ ಬಾಗಲಕೋಟೆ ಮತ್ತು ರಾಯಚೂರು, ಪೂರ್ವದಲ್ಲಿ ರಾಯಚೂರು ಮತ್ತು ಬಳ್ಳಾರಿ, ದಕ್ಷಿಣದಲ್ಲಿ ಬಳ್ಳಾರಿ ಹಾಗೂ ಪಶ್ಚಿಮದಲ್ಲಿ ಗದಗ ಜಿಲ್ಲೆಗಳು ಸುತ್ತುವರಿದಿವೆ. ವಿಸ್ತೀರ್ಣ, 8,458ಚ.ಕಿಮೀ. ಜನಸಂಖ್ಯೆ 11,93,496.


ಕೊಪ್ಪಳ ಜಿಲ್ಲೆ
ಹನುಮಸಾಗರ
ಕೈಗುಪ್ಪೆ
ದೋತಿಹಾಳ
ಗುಡದೂರು
ಚತ್ತರ್
ಮಂಗ್ಳೂರು
ಕುಷ್ಟಗಿ
ತಾವರಗೆರೆ
ಸೌಲಿ
ಯಲಬುರ್ಗ
ಉಪ್ಪಲದೊಡ್ಡಿ
ಹುಲಿಗಿ
ತೊಂಡಿಹಾಳ
ಕನಕಗಿರಿ
ಮೂಗ್ನೂರು
ಸಿದ್ದಾಪುರ
ಕುಕನೂರು
ಇರ್ಕಲ್‌ಗೂಡ
ಬೆಂಕಲ್
ಕುಂಟೋಜಿ
ಇಟಗಿ
ಗಂಗಾವತಿ
ತುಂಗಭದ್ರಾ ನದಿ
ಹೊಸೂರು
ಬನ್ನಿಕೊಪ್ಪ
ಆನೆಗೊಂದಿ
ಮುನಿರಾಬಾದ್
ಕೊಪ್ಪಳ
ಹಿಟ್ನಹಾಳ
ಅಳವಂಡಿ
ತುಂಗಭದ್ರ ಜಲಾಶಯ
0 10 20
ಕಿಲೋಮೀಟರುಗಳು
ಕೊಪ್ಪಳ ಜಿಲ್ಲೆ

**ಪರಿಸರ :** ಈ ಜಿಲ್ಲೆ ದಖನ್ನಿನ ಕಣಿವೆ ಭಾಗದಲ್ಲಿದ್ದು ಸಮುದ್ರ ಮಟ್ಟಕ್ಕೆ ಹೆಚ್ಚು ಎತ್ತರವಲ್ಲದ ಭೂಪ್ರದೇಶದಿಂದ ಕೂಡಿದೆ. ಇದರಿಂದಾಗಿ ಇಲ್ಲಿ ಯಾವ ಪ್ರಮುಖ ಬೆಟ್ಟಸಾಲುಗಳೂ ಕಂಡುಬರುವುದಿಲ್ಲ. ಅಲ್ಲಲ್ಲಿ ಪಶ್ಚಿಮ ಅಥವಾ ಪೂರ್ವ ಘಟ್ಟಸಾಲಿಗೆ ಸೇರದ ಹೆಚ್ಚು ಎತ್ತರವಲ್ಲದ ಗುಡ್ಡಗಳಿವೆ. ಕುಷ್ಟಗಿ ತಾಲ್ಲೂಕಿನಲ್ಲಿ ಕಂಡುಬರುವ ಬಾದಾಮಿ ಬೆಟ್ಟಗಳ ಶ್ರೇಣಿಗೆ ಸೇರಿದ ಸಾಲೊಂದು ಗಂಗಾವತಿ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ. ಕುಷ್ಟಗಿಯಿಂದ 32ಕಿಮೀ ದೂರದಲ್ಲಿರುವ ಜಗದ ಗುಡ್ಡ (736ಮೀ.), ಗಂಗಾವತಿ ತಾಲ್ಲೂಕಿನ ಎಮ್ಮೆಗುಡ್ಡ (821ಮೀ.), ಕನಕಗಿರಿಗೆ ಈಶಾನ್ಯದಲ್ಲಿರುವ ನಿಶಾನಿಗುಡ್ಡ (580ಮೀ.), ಮಾರಿಗುಡ್ಡ (597ಮೀ.), ಇವು ಈ ಜಿಲ್ಲೆಯ ಎತ್ತರದ ಬೆಟ್ಟಗಳು. ಈ ಜಿಲ್ಲೆಯಲ್ಲಿ ಮಳೆ ಕಡಿಮೆ. ಹಾಗಾಗಿ ಸಸ್ಯ ಸಂಪತ್ತೂ ಕಡಿಮೆ. ಕಡಿದಾದ ಮತ್ತು ವಿವಿಧ ಆಕಾರದ ಬಂಡೆಗಳಿಂದ ಆವೃತವಾದ ಪರಿಸರವನ್ನು, ಬಯಲು ಭೂದೃಶ್ಯಗಳನ್ನು ಕಾಣುತ್ತೇವೆ.

ಇಲ್ಲಿನ ಬೆಟ್ಟಗಳು ಪ್ರಾಕೃತಿಕವಾಗಿ ರೂಪಾಂತರ ಹೊಂದಿದ ಪ್ರಾಚೀನ ಶಿಲಾಯುಗಕ್ಕೆ ಸೇರಿದವು. ಅಲ್ಲಲ್ಲಿ ಗ್ರಾನೈಟ್ ಕಲ್ಲಿನ ಬೆಟ್ಟಗಳು ಕಾಣುತ್ತವೆ; ಉಳಿದಂತೆ ಸಮತಟ್ಟಾದ ಬಯಲು ಪ್ರದೇಶ. ಈ ಶಿಲಾ ಪದರದಲ್ಲಿ ನೈಸ್ ಶಿಲೆಗಳು, ಪದರಗಲ್ಲು ಶಿಲೆಗಳು, ಬೆಣಚುಕಲ್ಲುಗಳು ಇವೆ. ಮುಖ್ಯವಾಗಿ ಕೇಂಬ್ರಿಯನ್ ಯುಗಪೂರ್ವದ ರೂಪ ಪರಿವರ್ತನಾ ಪದರಗಲ್ಲುಗಳು ಮತ್ತು ಗ್ರಾನೈಟ್ ಬೆಣಚುಗಲ್ಲು ಬಹುಪಾಲು ಶಿಲೆಗಳು ಧಾರವಾಡ ಶಿಲಾವರ್ಗಕ್ಕೆ ಸೇರಿದವು. ಪರ್ಯಾಯ ದ್ವೀಪ ಸಂಬಂಧವಾದ ಡೈಕ್ ಮಾದರಿಯ ಶಿಲೆಗಳೂ ಕಂಡುಬರುತ್ತವೆ. ಕಲಾದಗಿ ಶ್ರೇಣಿಗೆ ಸೇರಿದ ಕೆಲವು ಶಿಲೆಗಳು ಕುಷ್ಟಗಿ ಸಮೀಪ ಇವೆ. ಇಲ್ಲಿ ಪೆಂಟೆ ಶಿಲೆ ಮತ್ತು ಪುರಳು ಶಿಲೆಯ ಪದರಗಳನ್ನು ಕಾಣಬಹುದು. ಕಣಶಿಲೆಯ ಗುಡ್ಡಗಳು, ಟ್ರ್ಯಾಪ್ ಶಿಲೆಯ ಉಬ್ಬುಗಳು ಗಂಗಾವತಿ ತಾಲ್ಲೂಕಿನಲ್ಲಿವೆ.

ಜಿಲ್ಲೆಯಲ್ಲಿ ಕಬ್ಬಿಣ, ತಾಮ್ರ, ಸೀಸದ ಅದುರು, ಅಭ್ರಕ, ಸ್ಫಟಿಕ ಶಿಲೆ ಮುಂತಾದ ಖನಿಜಗಳಿವೆ. ಸಮೀಪದ ರಾಯಚೂರು ಜಿಲ್ಲೆಯಲ್ಲಿ ಚಿನ್ನದ ನಿಕ್ಷೇಪಗಳಿವೆ. ಜಂಬುಮಣ್ಣು ಮತ್ತು ಕಾವಿಮಣ್ಣಿನ ಭೂಮಿ ಉಪಯುಕ್ತವಾಗಿದೆ. ಕೊಪ್ಪಳ ತಾಲ್ಲೂಕಿನ ಬಹುಭಾಗ ಕಪ್ಪುಮೆಕ್ಕಲು ಮಣ್ಣಿನಿಂದ ಕೂಡಿದ್ದು ಫಲವತ್ತಾಗಿದೆ. ಕಪ್ಪುಮಿಶ್ರಿತ ಕೆಂಪುಮಣ್ಣು ಅಲ್ಲಲ್ಲಿ ಕಂಡುಬರುತ್ತದೆ. ಮರಳು ಮಿಶ್ರಿತ ಕಪ್ಪುಮಣ್ಣು ಅನೇಕ ಕಡೆಗಳಲ್ಲಿ ಹರಡಿದೆ.

ಕಬ್ಬರಗಿ ಜಲಪಾತ, ಕೊಪ್ಪಳ

ಈ ಜಿಲ್ಲೆಯಲ್ಲಿ ಮಳೆ ಕಡಿಮೆ ಬಿದ್ದರೂ ತುಂಗಭದ್ರಾ ಮತ್ತು ಕೃಷ್ಣಾ ನದಿಗಳು ಎರಡೂ ಪಾರ್ಶ್ವಗಳಲ್ಲಿ ಹರಿಯುವುದರಿಂದ ಜಲ ಸಂಪನ್ಮೂಲ ಉತ್ತಮವಾಗಿದೆ. ತುಂಗಭದ್ರಾ ನದಿ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಸರಹದ್ದಾಗಿ ಕ್ರಮಿಸುತ್ತದೆ. ಜಿಲ್ಲೆಯ ಸರಾಸರಿ ಮಳೆ 595ಮಿಮೀ. ಜಿಲ್ಲೆಯಲ್ಲಿ ಹುಟ್ಟಿ ಹರಿಯುವ ತೊರೆಗಳಲ್ಲಿ ನೀರಿನ ಪ್ರಮಾಣ ಕಡಿಮೆ. ಯಲಬುರ್ಗ ತಾಲ್ಲೂಕಿನಲ್ಲಿ ಹುಟ್ಟುವ ಒಂದು ತೊರೆ ಕೊಪ್ಪಳದ ಸಮೀಪ ಹರಿದು ತುಂಗಭದ್ರಾ ಜಲಾಶಯದ ಹಿನ್ನೀರನ್ನು ಸೇರುತ್ತದೆ. ಕುಷ್ಟಗಿ ತಾಲ್ಲೂಕಿನ ಉಪ್ಪಲದೊಡ್ಡಿ ಬಳಿ ಹುಟ್ಟುವ ಕನಕಗಿರಿ ನಾಲಾ ಗಂಗಾವತಿ ತಾಲ್ಲೂಕನ್ನು ಪ್ರವೇಶಿಸಿ ತುಂಗಭದ್ರಾ ನದಿಯನ್ನು ಸೇರುತ್ತದೆ. ತಾವರಗೆರೆ ಬಳಿ ಹುಟ್ಟುವ ಸಿದ್ದಾಪುರ ನಾಲೆ ಕುಂಟೋಜಿ ಬಳಿ ತುಂಗಭದ್ರಾ ನದಿಯನ್ನು ಸೇರುತ್ತದೆ. ಇನ್ನು ಅನೇಕ ಚಿಕ್ಕ ಪುಟ್ಟ ತೊರೆಗಳು ಆಗ್ನೇಯಾಭಿಮುಖವಾಗಿ ಹರಿದು ತುಂಗಭದ್ರಾ ನದಿ ಸೇರುತ್ತವೆ. ತೊರೆ ಮತ್ತು ನಾಲಾಗಳ ಮೂಲಕ ಮಳೆಗಾಲದಲ್ಲಿ ನೀರು ಹರಿದರೂ ಬೇಸಗೆಯಲ್ಲಿ ಹೆಚ್ಚಿನವು ಬತ್ತಿಹೋಗುತ್ತವೆ.

ಜಿಲ್ಲೆಯ ಅತಿ ಉಷ್ಣ ಹವಾಮಾನ ಹಾಗೂ ವಾತಾವರಣದಲ್ಲಿನ ಕಡಿಮೆ ತೇವಾಂಶ ಸಸ್ಯಗಳ ಬೆಳವಣಿಗೆಗೆ ಸಹಾಯಕವಾಗಿಲ್ಲ. ಅಲ್ಲಲ್ಲಿ ಗುಡ್ಡಗಳ ಇಳಿಜಾರಿನಲ್ಲಿ ಪೊದೆ ಕಾಡುಗಳು ಕಂಡುಬರುತ್ತವೆ. ಕುಷ್ಟಗಿ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶ ಇತರೆಡೆಗಿಂತ ಹೆಚ್ಚಿದೆ. ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತೀರ್ಣ 29451 ಹೆಕ್ಟೇರುಗಳು. ಇಲ್ಲಿನ ಕಾಡುಗಳಲ್ಲಿ ಜಾಲ, ಹುಣಿಸೆ, ಹೊಂಗೆ, ಹಾಲೆ, ಮುತ್ತುಗ, ದಿಂಡಿಗ, ಚುಜ್ಜಲು, ಹುರಗಲು, ಹೊನ್ನೆ, ಕಮ್ಮಾರ, ನಲ್ಲಮದ್ದಿ, ಬಿಲ್ವ, ಬಾಗೆ, ಕಕ್ಕೆ, ಸೀತಾಫಲ ಮುಂತಾದ ಗಿಡಮರಗಳಿವೆ. ಅಲ್ಲಲ್ಲಿ ಮುಳ್ಳುಗಿಡಗಳ ಕುರುಚಲು ಕಾಡುಗಳಿವೆ. ಭೂಸವಕಳಿಯನ್ನು ತಡೆಯಲು ನೆಡುತೋಪುಗಳನ್ನು ಬೆಳೆಸಲಾಗಿದೆ.

ಕಾಡುಗಳ ಕೊರತೆಯಿಂದ ಪ್ರಾಣಿಪಕ್ಷಿಗಳ ಸಂಖ್ಯೆಯೂ ಕಡಿಮೆ. ಚಿರತೆ, ತೋಳ, ಕತ್ತೆಕಿರುಬ, ನರಿ, ಕಪಿ ಮತ್ತು ಜಿಂಕೆಗಳು ಅಲ್ಲಲ್ಲಿ ಕಂಡುಬರುತ್ತವೆ. ಹಾವುಗಳ ಸಂತತಿ ಹೆಚ್ಚು. ಚೇಳು, ಹಲ್ಲಿ, ನೀರಹಾವು, ಮಣ್ಣುಮುಕ್ಕ, ನಾಗರಹಾವು ಎಲ್ಲೆಡೆಯೂ ಇವೆ. ಬಾತು, ನೀರಕೋಳಿ, ಕಾಗೆ, ಗಾಜುಗ ಮುಖ್ಯವಾದ ಪಕ್ಷಿಗಳು. ಹಸು, ಎಮ್ಮೆ, ಕುರಿ, ಮೇಕೆ, ಕುದುರೆ ಮತ್ತು ಕೋಳಿ ಮುಖ್ಯ ಸಾಕುಪ್ರಾಣಿಗಳು.

ಹವಾಮಾನ ವರ್ಷದ ಬಹುಭಾಗ ಉಷ್ಣಾಂಶದಿಂದ ಕೂಡಿರುತ್ತದೆ. ಮಳೆ ಕೆಲವು ವರ್ಷಗಳಲ್ಲಿ ಕಡಿಮೆ ಇದ್ದು ಕೆಲವೊಮ್ಮೆ ಹೆಚ್ಚು ಮಳೆ ಆಗುವುದುಂಟು. 2000 ಇಸವಿಯ ಮಳೆಗಾಲದಲ್ಲಿ 701ಮಿಮೀ. ಮಳೆಯಾಗಿತ್ತು. ವರ್ಷದಲ್ಲಿ 41 ಮಳೆ ದಿನಗಳೆಂದು ಗುರುತಿಸಲಾಗಿದೆ. ಮುಂಗಾರಿನಲ್ಲಿ ವರ್ಷದ ಹೆಚ್ಚಿನ ಭಾಗ ಮಳೆಯಾದರೂ ಹಿಂಗಾರಿನಲ್ಲಿ ಚಂಡಮಾರುತದ ಮಳೆ ಬಿರುಸಿನಿಂದ ದೊಡ್ಡ ಪ್ರಮಾಣದಲ್ಲಿ ಬೀಳುತ್ತದೆ. ಉಷ್ಣಾಂಶ ಅಧಿಕವಿರುವ ಭಾಗದಲ್ಲಿರುವ ಈ ಜಿಲ್ಲೆಯ ಕೆಲವೆಡೆ ಗರಿಷ್ಠ ಉಷ್ಣಾಂಶ $40^0$ಸೆ.ಇರುವುದೂ ಉಂಟು. ಹಿಂದಿನ ಜಿಲ್ಲಾ ಕೇಂದ್ರ ರಾಯಚೂರಿನಲ್ಲಿ $45^0$ಸೆ.ವರೆಗೂ ಉಷ್ಣಾಂಶ ಏರುವುದನ್ನು ಸ್ಮರಿಸಬಹುದು. ರಾತ್ರಿವೇಳೆ ಉಷ್ಣಾಂಶ ಬೇಗ ಕಡಿಮೆ ಆಗುತ್ತದೆ. ಡಿಸೆಂಬರ್‌ನಲ್ಲಿ ಗರಿಷ್ಠ ಉಷ್ಣಾಂಶ 29.30ಸೆ. ಇದ್ದರೆ ಕನಿಷ್ಠ ಉಷ್ಣಾಂಶ 17.70 ಸೆ.ಗೆ ಇಳಿಯುತ್ತದೆ. ನವೆಂಬರ್‌ನಿಂದ ಮೇ ವರೆಗೆ ಒಣ ಹವೆ ಇರುವುದು.

**ವ್ಯವಸಾಯ :** ಕೊಪ್ಪಳ ಜಿಲ್ಲೆ ವ್ಯವಸಾಯ ಪ್ರಧಾನವಾದುದು. ಜಿಲ್ಲೆಯ ಸೇ.75 ರಷ್ಟು ಜನರು ವ್ಯವಸಾಯ ಮತ್ತು ಆ ಸಂಬಂಧವಾದ ಕಸಬುಗಳನ್ನು ಅವಲಂಬಿಸಿದ್ದಾರೆ. ಮಳೆ ಕಡಿಮೆ ಪ್ರಮಾಣದಲ್ಲಿ ಬೀಳುವುದರಿಂದ ಸಾಗುವಳಿಗಾರರ ಬದುಕು ಅನಿಶ್ಚಿತ ಆದಾಯವನ್ನು ಆಧರಿಸಿದೆ. ಹಿಂದಿನ ವಿಜಯನಗರ ಕಾಲದ ನಾಲೆಗಳು ಸ್ಥಳೀಯವಾಗಿ ಸೀಮಿತ ಪ್ರದೇಶಗಳಿಗೆ ನೀರೊದಗಿಸುತ್ತಿದ್ದವು. ಸುದೈವವಶಾತ್ ಈ ಜಿಲ್ಲೆಯು ರಾಜ್ಯದ ಪ್ರಮುಖ ನದಿಗಳಾದ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ದೋಆಬ್ ಪ್ರದೇಶದಲ್ಲಿ ಬರುವುದರಿಂದ ನೀರಾವರಿ ಯೋಜನೆಗಳಿಂದ ಜಿಲ್ಲೆ ಹೆಚ್ಚು ಪ್ರಯೋಜನ ಪಡೆದಿದೆ.

ಹೈದರಬಾದ್ ಸಂಸ್ಥಾನದ ಆಡಳಿತದಲ್ಲಿದ್ದಾಗ ತುಂಗಭದ್ರಾ ನದಿಯ ಅಣೆಕಟ್ಟು ಯೋಜನೆಗಳನ್ನು ಕಾರ್ಯಗತಗೊಳಿಸಲು ವಿವಿಧ ಪ್ರಯತ್ನಗಳು ನಡೆದವು. ಆಗಿನ ಮೈಸೂರು ಸಂಸ್ಥಾನ ಮತ್ತು ಮದರಾಸು ಪ್ರಾಂತಗಳು ಈ ಸರಹದ್ದಿನಲ್ಲಿ ಬರುತ್ತಿದ್ದುದರಿಂದ ಅವುಗಳೊಂದಿಗೆ ಸಮಾಲೋಚನೆ ಮತ್ತು ಒಪ್ಪಂದಗಳ ಅಂಗೀಕಾರದಲ್ಲೇ ಸಾಕಷ್ಟು ಕಾಲ ಕಳೆಯಿತು. ಸ್ವಾತಂತ್ರ್ಯ ಬಂದ ಮೇಲೆ 1950ರ ದಶಕದಲ್ಲಿ ತುಂಗಭದ್ರಾ ನದಿಗೆ ಹೊಸಪೇಟೆ ಬಳಿ ಬೃಹತ್ ಜಲಾಶಯ ನಿರ್ಮಿಸುವ ಕಾರ್ಯಯೋಜನೆ ತ್ವರಿತಗೊಂಡಿತು. ಇದು 1968ರ ಹೊತ್ತಿಗೆ ಪೂರ್ಣಗೊಂಡು ಕೊಪ್ಪಳವನ್ನು

ಒಳಗೊಂಡಂತೆ ಹಿಂದಿನ ರಾಯಚೂರು ಜಿಲ್ಲೆಯ - ಈ ಜಲಾಶಯದ ಎಡದಂಡೆ ಕಾಲುವೆ ಮೂಲಕ ಹೆಚ್ಚು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರೆಯಿತು. ಈಗಿನ ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ ತಾಲ್ಲೂಕುಗಳಲ್ಲಿ ನೀರಾವರಿ ಪ್ರದೇಶ ಹೆಚ್ಚಿತು. ಇದಲ್ಲದೆ ಹಳೆಯ ನಾಲಾಗಳು, ಸಣ್ಣ ಪ್ರಮಾಣದ ಅಣೆಕಟ್ಟುಗಳು ಅಥವಾ ಬ್ಯಾರೇಜ್‌ಗಳು ನಿರ್ಮಾಣವಾಗಿದ್ದು ಇವು ಬೇಸಗೆಯ ಬೆಳೆಗಳಿಗೆ ಆಶ್ರಯವಾಗಿವೆ. ಹಾಲಿ ಜಿಲ್ಲೆಯಲ್ಲಿ ಕಾಲುವೆಗಳಿಂದ 63,411 ಹೆಕ್ಟೇರ್, ಕೆರೆಗಳಿಂದ 1763 ಹೆಕ್ಟೇರ್ ಬಾವಿಗಳಿಂದ, 20,262 ಹೆಕ್ಟೇರ್ ಮತ್ತು ಕೊಳವೆ ಬಾವಿಗಳಿಂದ 6363 ಹೆಕ್ಟೇರ್ ಜಮೀನಿಗೆ ನೀರೊದಗುತ್ತಿದೆ.



ಜಿನಶಿಲ್ಪಗಳು, ಚಂದ್ರಾಮ

ಬತ್ತ, ಜೋಳ, ಸಜ್ಜೆ, ಹುರುಳಿ, ಹೆಸರು, ಮುಸುಕಿನ ಜೋಳ, ಕಡಲೆ, ಎಳ್ಳು, ದ್ವಿದಳ ಧಾನ್ಯಗಳು, ಸೂರ್ಯಕಾಂತಿ, ಸೋಯಾಬೀನ್, ಹತ್ತಿ, ತೊಗರಿ, ಹರಳುಬೀಜ, ನೆಲಗಡಲೆ, ಅಗಸೆ ಇವು ಮುಖ್ಯ ಬೆಳೆಗಳಾಗಿವೆ. ತೋಟಗಾರಿಕೆ ಬೆಳೆಗಳಲ್ಲಿ ಮಾವು, ಸಪೋಟ, ಸೀಬೆ, ಬಾಳೆ, ನಿಂಬೆ, ದಾಳಿಂಬೆ, ಅಂಜೂರ ಮೊದಲಾದವು ಪ್ರಮುಖವಾದವು.

ಪಶುಸಂಗೋಪನೆ ಕೃಷಿಯೊಂದಿಗೆ ಜಿಲ್ಲೆಯ ಮುಖ್ಯ ಉಪಕಸಬುಗಳಲ್ಲಿ ಒಂದಾಗಿದೆ. ಇಲ್ಲಿ ಖಿಲಾರ್ ತಳಿಯ ಜಾನುವಾರುಗಳು ಹೆಚ್ಚು. ಅಧಿಕ ಹಾಲು ಉತ್ಪಾದನೆಯ ದೃಷ್ಟಿಯಿಂದ ಮಿಶ್ರತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಜಾನುವಾರು ಮತ್ತು ಕುರಿಗಳ ತಳಿ ಅಭಿವೃದ್ಧಿಗಾಗಿ ವಿವಿಧ ಫಾರಂಗಳನ್ನು ಸ್ಥಾಪಿಸಿದೆ. 1953ರಲ್ಲಿ ಕೊಪ್ಪಳ ತಾಲ್ಲೂಕಿನ ಮುನಿರಾಬಾದಿನಲ್ಲಿ ಸ್ಥಾಪಿಸಲಾದ ಫಾರಂ ಅವುಗಳಲ್ಲಿ ಪ್ರಮುಖವಾದುದು. ಇಲ್ಲಿ ಆಂಧ್ರ ಮತ್ತು ವಿದೇಶಗಳಿಂದ ತಂದ ತಳಿಗಳೊಂದಿಗೆ ಸ್ಥಳೀಯ ತಳಿಗಳ ಸಂಕರ ಮಾಡುವ ಮೂಲಕ ಹೊಸ ತಳಿಗಳನ್ನು ಬೆಳೆಸಲಾಗುತ್ತಿದೆ. ಕೋಳಿಗಳ ತಳಿ ಅಭಿವೃದ್ಧಿಗೆ ಸಹ ಇಲ್ಲಿ ಒಂದು ಕೇಂದ್ರವಿದೆ. ಗಂಗಾವತಿಯಲ್ಲಿ ಪ್ರಾದೇಶಿಕ ಕೋಳಿ ಸಾಕಣೆ ಫಾರಂ ಇದೆ. ಆಗಾಗ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಜಾನುವಾರುಗಳ ಸಂರಕ್ಷಣೆಗಾಗಿ ಗೋಶಾಲೆಗಳಿವೆ. ಮೇವು ಬೆಳೆಸುವ ಫಾರಂಗಳಿವೆ. 1998-99ರ ಅಂಕಿಅಂಶಗಳ ಮೇರೆಗೆ 249,976 ಸ್ಥಳೀಯ ಜಾನುವಾರುಗಳು; 2,165 ವಿದೇಶಿ ತಳಿಯ ಹಸುಗಳು, 8037 ಮಿಶ್ರತಳಿ ಹಸುಗಳು, 90078, ಎಮ್ಮೆಗಳೂ 191912 ಕುರಿಗಳು, 136671 ಮೇಕೆಗಳು ಜಿಲ್ಲೆಯಲ್ಲಿದ್ದವು. ಸಾಕು ಪ್ರಾಣಿಗಳ ಕ್ಷೇಮಾಭಿವೃದ್ಧಿಗೆ ಪಶುಸಂಗೋಪನ ಇಲಾಖೆಯ ಆಸ್ಪತ್ರೆಗಳು, ಚಿಕಿತ್ಸಾಲಯಗಳು ಇವೆ. ಜಿಲ್ಲೆಯಲ್ಲಿ 9 ಪಶುವೈದ್ಯ ಆಸ್ಪತ್ರೆಗಳು, 11 ಚಿಕಿತ್ಸಾಲಯಗಳು, 59 ಪ್ರಾಥಮಿಕ ಪಶುವೈದ್ಯಕೇಂದ್ರಗಳು, 5 ಸಂಚಾರಿ ಚಿಕಿತ್ಸಾಲಯಗಳು, 12 ಕೃತಕ ಗರ್ಭಧಾರಣಾ ಕೇಂದ್ರಗಳಿವೆ.

ಸಾಕಷ್ಟು ಜಲಾಶಯಗಳು ಮತ್ತು ಕೆರೆಕಟ್ಟೆಗಳಿಂದ ಕೂಡಿರುವ ಈ ಜಿಲ್ಲೆಯಲ್ಲಿ ಮೀನುಗಾರಿಕೆ ಸಹ ಬೆಳೆದಿದೆ. 2000-01ರಲ್ಲಿ 3,324 ಮೆಟ್ರಿಕ್‌ಟನ್ ಮೀನನ್ನು ಹಿಡಿಯಲಾಗಿತ್ತು. ಮುನಿರಾಬಾದಿನಲ್ಲಿ ಮೀನು ಸಾಕಣೆ ಅಭಿವೃದ್ಧಿ ಫಾರಂ ಇದೆ.

ಕೃಷಿ ಪ್ರದೇಶದ ಸರ್ವತೋಭಿಮುಖ ಅಭಿವೃದ್ಧಿಗಾಗಿ ಸರ್ಕಾರ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು ಅವನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಮುಖ್ಯವಾಗಿ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ವಹಿಸಲಾಗಿದೆ. ಗಂಗಾವತಿಯ ಗ್ರಾಮಸೇವಕರ ತರಬೇತಿ ಕೇಂದ್ರ, ಸಾಮಾನ್ಯ ಕೃಷಿ ಸಂಶೋಧನ ಕೇಂದ್ರ, ತುಂಗಭದ್ರಾ ಕೃಷಿ ಅಭಿವೃದ್ಧಿ ಕೇಂದ್ರ, ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಗಳು ಗ್ರಾಮೀಣ ಅಭಿವೃದ್ಧಿಗೆ ಪೂರಕವಾಗಿವೆ.

**ಕೈಗಾರಿಕೆ :** ಈ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದಿದೆ. ಇಲ್ಲಿನ ಹವಾಮಾನ ಮತ್ತು ಸಾರಿಗೆ ಸಂಪರ್ಕದ ಕೊರತೆಗಳು ಇದಕ್ಕೆ ಭಾಗಶಃ ಕಾರಣವಾಗಿವೆ. ಒಟ್ಟು 179 ಕಾರ್ಖಾನೆಗಳಿದ್ದು ಅವುಗಳಲ್ಲಿ 6012 ಜನ ಉದ್ಯೋಗಿಗಳಿದ್ದಾರೆ. 2 ಕೈಗಾರಿಕಾ ಪ್ರದೇಶಗಳು, 4 ಕೈಗಾರಿಕಾ ಶೆಡ್ಡುಗಳು, 1 ಕಾರ್ಯನಿರತ ಸಕ್ಕರೆ ಕಾರ್ಖಾನೆ ಇವೆ. 199 ಸಣ್ಣ ಕೈಗಾರಿಕಾ ಘಟಕಗಳಿದ್ದು 965 ಜನ ಉದ್ಯೋಗಿಗಳಿದ್ದಾರೆ. ಒಟ್ಟಾರೆ 3,013 ಉದ್ಯೋಗ ಘಟಕಗಳಲ್ಲಿ 21,665 ಉದ್ಯೋಗಗಳು ಸೃಷ್ಟಿಯಾಗಿವೆ (2001). ಮುನಿರಾಬಾದಿನ ಸಾಲಾರಜಂಗ್ ಸಕ್ಕರೆ ಕಾರ್ಖಾನೆ, ತುಂಗಭದ್ರಾ ಪಲ್ಪ್ ಅಂಡ್ ಬೋರ್ಡ್ ಮಿಲ್ಸ್, ಚಾಮುಂಡಿ ರಾಸಾಯನಿಕ ಮತ್ತು ಗೊಬ್ಬರ ತಯಾರಿಕಾ ಕಾರ್ಖಾನೆ, ಫರೂಕ್ ಅನ್ವರ್ ಎಣ್ಣೆ ಕಾರ್ಖಾನೆ, ಸಹಕಾರಿ ನೂಲು ಕಾರ್ಖಾನೆ, ಹತ್ತಿ ಸಂಸ್ಕರಣ ಘಟಕ -ಇವು ಮುಖ್ಯ ಕೈಗಾರಿಕಾ ಸ್ಥಾವರಗಳು.

ಜಿಲ್ಲೆಯಲ್ಲಿ ವಾಣಿಜ್ಯ ಬೆಳೆಗಳು ಅಧಿಕವಾಗಿ ಬೆಳೆಯುವುದರಿಂದ ಹೊರ ಜಿಲ್ಲೆಗಳು ಮತ್ತು ಹೊರ ರಾಜ್ಯಗಳೊಂದಿಗೆ ವ್ಯಾಪಾರ ವಹಿವಾಟು ಹೆಚ್ಚು. ಎಣ್ಣೆ ಬೀಜಗಳು, ಸೇಂಗಾ ಎಣ್ಣೆ, ದ್ವಿದಳ ಧಾನ್ಯಗಳು ಮತ್ತು ಹತ್ತಿ ಹೊರ ರಾಜ್ಯಗಳಿಗೆ ರಫ್ತಾಗುತ್ತವೆ. ಮಹಾರಾಷ್ಟ್ರದ ಸೋಲಾಪುರ, ಪುಣೆ, ಮುಂಬಯಿ ಹಾಗೂ ತಮಿಳುನಾಡಿನ ಕೊಯಮತ್ತೂರುಗಳಿಗೆ ಇಲ್ಲಿಂದ ಸರಕುಗಳು ಹೋಗುತ್ತವೆ. ಹದವಾಡಿದ ಚರ್ಮಕ್ಕೆ ಹೊಸಪೇಟೆ, ಗದಗಗಳಲ್ಲಿ ಮಾರುಕಟ್ಟೆಗಳಿವೆ. ತೆಂಗಿನಕಾಯಿ, ಬೆಲ್ಲ, ಮರ, ವನಸ್ಪತಿ, ಹೊಗೆಸೊಪ್ಪು, ಕೃತಕ ರೇಷ್ಮೆ ಮೊದಲಾದ ವಸ್ತುಗಳನ್ನು ಜಿಲ್ಲೆಗೆ ಆಮದು ಮಾಡಿಕೊಳ್ಳಲಾಗುವುದು. ಹತ್ತಿ, ಸೇಂಗಾ, ಹುಣಿಸೆಹಣ್ಣು, ಮೆಣಸಿನಕಾಯಿ ಮತ್ತು ಕೈಮಗ್ಗದ ಬಟ್ಟೆಗಳಿಗೆ ಕೊಪ್ಪಳ ದೊಡ್ಡ ವ್ಯಾಪಾರ ಕೇಂದ್ರ.

ಕಾಡಸಿದ್ದೇಶದೇವಾಲಯ, ಮುಧೋಳ

ಬತ್ತ, ಜೋಳ, ಸೇಂಗಾ, ಬೆಲ್ಲ, ಹರಳು, ಸಜ್ಜೆ ಇವುಗಳಿಗೆ ಗಂಗಾವತಿ ಮುಖ್ಯ ವ್ಯಾಪಾರ ಸ್ಥಳ. ಕುಷ್ಟಗಿ, ಯಲಬುರ್ಗ, ಕುಕನೂರು ಇತರ ಮುಖ್ಯ ವ್ಯಾಪಾರ ಕೇಂದ್ರಗಳು. 93 ಕೃಷಿ ಮಾರಾಟ ಸಹಕಾರ ಸಂಘಗಳಿವೆ. 4 ನಿಯಂತ್ರಿತ ಮಾರುಕಟ್ಟೆಗಳು, 12 ಉಪ ಮಾರುಕಟ್ಟೆಗಳಿವೆ.

ಸಹಕಾರಿ ರಂಗ ಆರ್ಥಿಕ ಚಟುವಟಿಕೆಗಳ ಎಲ್ಲ ಕ್ಷೇತ್ರಗಳಲ್ಲೂ ಕೈ ಹಾಕಿದೆ. ಜಿಲ್ಲಾ ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆ ಕೃಷಿ ಸಾಲಗಳನ್ನು ನೀಡುತ್ತ ಬಂದಿದೆ. 172 ಕೃಷಿ ಸಾಲ ನೀಡಿಕೆ ಸಹಕಾರ ಸಂಘಗಳು ಕಾರ್ಯನಿರತವಾಗಿವೆ. ವ್ಯವಸಾಯೇತರ ಸಾಲನೀಡಿಕೆ ಸಹಕಾರ ಸಂಘಗಳ

ಸಂಖ್ಯೆ 55. ಶಾಲೇತರ ಸಹಕಾರ ಸಂಘಗಳ ಸಂಖ್ಯೆ 465 (1998). ಹಾಲು ಉತ್ಪಾದನೆ, ಕೋಳಿ ಸಾಕಣೆ, ಮೀನು ಮಾರಾಟ, ಕಂಬಳಿ ಮಾರಾಟ, ತೋಟಗಾರಿಕೆ ಉತ್ಪನ್ನಗಳ ಮಾರಾಟ ಈ ಎಲ್ಲ ವ್ಯವಹಾರಗಳಲ್ಲೂ ಸಹಕಾರಿ ಸಂಘಗಳ ಪಾತ್ರ ಪ್ರಮುಖವಾಗಿದೆ.

ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ.55.02. ಅದರಲ್ಲಿ ಶೇ.169.15 ಪುರುಷರು, ಶೇ.40.76 ಮಹಿಳೆಯರು ಸಾಕ್ಷರರಾಗಿದ್ದಾರೆ. ಸಾಕ್ಷರತಾ ಆಂದೋಲನ ಯೋಜನೆ ಜಿಲ್ಲೆಯಲ್ಲಿ ಕಾರ್ಯನಿರತ ವಾಗಿರುವುದಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಶಾಲೆಗಳನ್ನು ತೆರೆದು ಶಿಕ್ಷಣ ಒದಗಿಸಲಾಗುತ್ತಿದೆ. ಮಕ್ಕಳನ್ನು ಶಾಲೆಗೆ ಸೇರಿಸಲು ಒಡಂಬಡಿಸಿ ವಿವಿಧ ಯೋಜನೆಗಳನ್ನು ಜಾರಿಗೆ ತಂದು ಅವರಿಗೆ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನವೂ ನಡೆದಿದೆ. ಆದರೆ ಅಜ್ಞಾನ, ಬಡತನ, ಕುಟುಂಬದಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣ ನೀಡುವ 9 ಕಾಲೇಜುಗಳು, ತಾಂತ್ರಿಕ ಶಿಕ್ಷಣ ನೀಡುವ 3 ಪಾಲಿಟೆಕ್ನಿಕ್‌ಗಳು ಇವೆ. ಆರೋಗ್ಯ ಸುಧಾರಣೆಗಾಗಿ 5 ಸರ್ಕಾರಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಭಾರತೀಯ ವೈದ್ಯಪದ್ಧತಿಯ ಚಿಕಿತ್ಸಾಲಯಗಳು ಮತ್ತು ಅನೇಕ ಸರ್ಕಾರಿ ಆರೋಗ್ಯ ಕೇಂದ್ರಗಳು ಇವೆ.

ಸಮಗ್ರ ಗ್ರಾಮ ಸ್ವಸಹಾಯ ಯೋಜನೆ, ಗ್ರಾಮೀಣ ಇಂಧನ ಕಾರ್ಯಕ್ರಮ, ಮಾನವ ದಿನಗಳ ಕೆಲಸಗಳ ಸೃಷ್ಟಿ, ನಿರ್ಮಲ ಗ್ರಾಮ ಯೋಜನೆ, ಇಂದಿರಾ ಆವಾಸ್ ಯೋಜನೆ, ಪ್ರಧಾನ ಮಂತ್ರಿಗಳ ರಸ್ತೆ ನಿರ್ಮಾಣ ಯೋಜನೆ, ಕೊಳವೆ ನೀರು ಸರಬರಾಜು ಯೋಜನೆ ಮೊದಲಾದವು ಗ್ರಾಮಗಳ ನಾಗರಿಕ ಸೌಲಭ್ಯಗಳನ್ನು ಹೆಚ್ಚಿಸಲು ಉದ್ದೇಶಿತವಾಗಿವೆ. ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಸಮಿತಿಗಳು ಗ್ರಾಮೀಣ ಪ್ರದೇಶದ ಪ್ರತಿನಿಧಿಗಳಿಂದ ಕೂಡಿದ್ದು ಈ ಪ್ರದೇಶದ ಅಭಿವೃದ್ಧಿ ಕಾರ್ಯಗಳ ಮುಖ್ಯ ಜವಾಬ್ದಾರಿ ಹೊತ್ತಿವೆ.

**ಸಾರಿಗೆ ಸಂಪರ್ಕ :** ಆರ್ಥಿಕವಾಗಿ ಹಿಂದುಳಿದಿದ್ದು ತುಂಗಭದ್ರಾನದಿ ಮತ್ತು ಕಣಿವೆಗಳಿಂದ ಕೂಡಿದ ಈ ಜಿಲ್ಲೆ ರಸ್ತೆ ಸಂಪರ್ಕದಲ್ಲಿ ತುಂಬಾ ಕನಿಷ್ಠ ಸೌಲಭ್ಯ ಹೊಂದಿದ್ದಿತು. ತುಂಗಭದ್ರಾ ನದಿಗೆ ಸೇತುವೆಗಳಾದ ಮೇಲೆ ಹೊರ ಪ್ರದೇಶಗಳೊಂದಿಗೆ ಹೆಚ್ಚು ಸಂಪರ್ಕವೇರ್ಪಟ್ಟಿತು. ಚೆನ್ನೈ-ಪುಣೆ ರಾಷ್ಟ್ರೀಯ ಹೆದ್ದಾರಿ ಈ ಜಿಲ್ಲೆಯ ಕೊಪ್ಪಳ-ಕುಷ್ಟಗಿ ಮೂಲಕ ಹಾದುಹೋಗಿದ್ದು ಅದರ ಉದ್ದ ಜಿಲ್ಲೆಯಲ್ಲಿ 125ಕಿಮೀ ಬಿಜಾಪುರ ಜಿಲ್ಲೆಯ ಹುನಗುಂದದಿಂದ ಕುಷ್ಟಗಿ ಇರಕಲ್‌ಗಡ ಕೊಪ್ಪಳ ಮೂಲಕ ಬಳ್ಳಾರಿ ಸೇರುವ ಮಾರ್ಗ ಪ್ರಮುಖ ರಾಜ್ಯ ಹೆದ್ದಾರಿಯಾಗಿದೆ. ಕೊಪ್ಪಳದಿಂದ ಹುಬ್ಬಳಿ-ಧಾರವಾಡದೊಡನೆ ಸಂಪರ್ಕಿಸುವ ರಸ್ತೆ ಇನ್ನೊಂದು ಪ್ರಮುಖ ರಸ್ತೆ ಮಾರ್ಗ. ಕೊಪ್ಪಳದಿಂದ ರಾಯಚೂರು, ಗದಗ, ಶೋರಾಪುರ, ಲಿಂಗಸುಗೂರು, ಮುದ್ಗಲ್ ಮೊದಲಾದ ಜಿಲ್ಲೆಯ ಹೊರ ಸ್ಥಳಗಳಿಗೆ ಉತ್ತಮ ರಸ್ತೆ ಸಂಪರ್ಕವಿದೆ. ಜಿಲ್ಲೆಯ ಒಳಗೆ ಜಿಲ್ಲಾ ಕೇಂದ್ರದಿಂದ ಎಲ್ಲ ತಾಲ್ಲೂಕುಗಳನ್ನು ಕೂಡಿಸುವ ಜಿಲ್ಲಾ ರಸ್ತೆಗಳಿವೆ. ಗ್ರಾಮೀಣ ರಸ್ತೆಗಳು ನಿಧಾನಗತಿಯಲ್ಲಿ ಅಭಿವೃದ್ಧಿ ಕಾಣುತ್ತಿವೆ. ಜಿಲ್ಲೆಯಲ್ಲಿ 270ಕಿಮೀ ರಾಜ್ಯ ಹೆದ್ದಾರಿ; 537ಕಿಮೀ ಜಿಲ್ಲಾ ರಸ್ತೆಗಳು ಮತ್ತು 1251ಕಿಮೀ ಗ್ರಾಮ ರಸ್ತೆಗಳಿವೆ. ಭಾರಿ ಸೇತುವೆಗಳ ಸಂಖ್ಯೆ 19 (2001). ಹುಬ್ಬಳ್ಳಿ-ಬಳ್ಳಾರಿ ರೈಲು ಮಾರ್ಗ ಮುನಿರಾಬಾದ್ ಮತ್ತು ಕೊಪ್ಪಳದ ಮೂಲಕ ಹಾದುಹೋಗುತ್ತದೆ. ಅದರ ಉದ್ದ 55ಕಿಮೀ.

**ಇತಿಹಾಸ :** ಕೊಪ್ಪಳ ಜಿಲ್ಲೆ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಆಸುಪಾಸಿನಲ್ಲಿದ್ದು ಪ್ರಾಚೀನ ಕಾಲದಿಂದಲೂ ಜನವಸತಿ ಹೊಂದಿದ ಪ್ರದೇಶವಾಗಿದೆ. ಗಂಗಾವತಿ ತಾಲ್ಲೂಕಿನ ಬೆಂಕಲ್ ಮತ್ತು ಕೆರೆಹಾಳ್ ನೆರೆಯ ರಾಯಚೂರು ಜಿಲ್ಲೆಯ ಮಸ್ಕಿ, ಹಾಳಾಪುರ, ಕಲ್ಲೂರು ಮೊದಲಾದ ಕಡೆಗಳಲ್ಲಿ ಇತಿಹಾಸ ಪೂರ್ವ ಕಾಲದ ನಿವೇಶನಗಳಿದ್ದುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಕೊಪ್ಪಳ ಮತ್ತಿತರ ಕಡೆಗಳಲ್ಲಿ ಬೃಹತ್ ಶಿಲಾ ಸಮಾಧಿಗಳು ದೊರೆತಿವೆ. ಶಿಲಾಯುಗದ ಉಪಕರಣಗಳು, ಮಣ್ಣಿನ ಮಡಿಕೆಗಳು, ಟೆರಕೋಟ ಮೂರ್ತಿಗಳು ಇಲ್ಲಿ ದೊರೆತಿವೆ. ಈ ಆಧಾರಗಳ ಮೇಲೆ ಈ ಪ್ರದೇಶ ದಕ್ಷಿಣ ಭಾರತದ ಅತಿ ಪುರಾತನ ಮಾನವ ನೆಲೆಗಳನ್ನು ಹೊಂದಿದ್ದ ವಲಯಗಳಲ್ಲೊಂದೆಂದು ಹೇಳಬಹುದು.

ಕೊಪ್ಪಳದ ಬಳಿಯ ಮಲಿಮಲ್ಲಪ್ಪ ಬೆಟ್ಟದ ತುದಿಯ ಮೇಲೆ ಅನೇಕ ಹಾಸುಗಲ್ಲಿನ ಕಟ್ಟಡಗಳು ಕಂಡುಬಂದಿವೆ. ಅವನ್ನು ಸ್ಥಳೀಯವಾಗಿ 'ಮೋರಿಯರ ಅಂಗಡಿ' ಎಂದು ಕರೆಯುತ್ತಾರೆ. ಇದು ಮೌರ್ಯರ ಕಾಲದ ವಸತಿಯ ಬಗ್ಗೆ ಮತ್ತು ಆಗ ಉತ್ತರ ಭಾರತದ ಜನ ಇಲ್ಲಿ ಮಾರುಕಟ್ಟೆಗಳನ್ನು ಸ್ಥಾಪಿಸಿ ವಾಣಿಜ್ಯ ವ್ಯವಹಾರಗಳನ್ನು ನಡೆಸುತ್ತಿದ್ದ ಬಗ್ಗೆ ಸುಳಿವು ನೀಡುತ್ತದೆ. ಪೌರಾಣಿಕ ಐತಿಹ್ಯಗಳು ಈ ಪ್ರದೇಶದಲ್ಲೂ ಇತರೆಡೆಗಳಂತೆಯೆ ಅಸ್ತಿತ್ವದಲ್ಲಿವೆ. ಪಾಲ್ಕಿಗುಂಡು ಬೆಟ್ಟ ಮತ್ತು ಮಲಿ ಮಲ್ಲಪ್ಪನ ಬೆಟ್ಟದ ನಡುವಿನ ಬಯಲನ್ನು ಪಾಂಡವರ ವಠಾರ ಎಂದು ಕರೆಯಲಾಗಿದೆ. ಇಲ್ಲೂ ಹಾಸುಗಲ್ಲು ಕಟ್ಟಡಗಳಿವೆ. ಗಂಗಾವತಿ ತಾಲ್ಲೂಕಿನ ಆನೆಗೊಂದಿ (ನೋಡಿ) ರಾಮಾಯಣ ಕಾಲದ ಕಿಷ್ಕಿಂದೆಯ ಭಾಗವಾಗಿತ್ತೆಂದು ನಂಬಿಕೆಯಿದೆ. ಗವಿಮಠ ಬೆಟ್ಟ ಮತ್ತು ಪಾಲ್ಕಿಗುಂಡು ಬೆಟ್ಟದಲ್ಲಿ ಒಂದೊಂದು ಅಶೋಕನ ಶಾಸನಗಳು ದೊರೆತಿವೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ನಡುವೆ ನಡೆಯುತ್ತಿದ್ದ ವಾಣಿಜ್ಯ ಹಾಗೂ ಆಗಿನ ವ್ಯಾಪಾರ ಸರಕುಗಳ ಬಗ್ಗೆ ಮಾಹಿತಿ ನೀಡಿದ್ದಾನೆ. ಮೌರ್ಯ ಸಾಮ್ರಾಜ್ಯದ ಹೊರಗಿನ ದಕ್ಷಿಣ ರಾಜ್ಯಗಳನ್ನು ಚೋಳ, ಪಾಂಡ್ಯ, ಸಾತಿಯಪುತ, ಕೇರಲಪುತ ಮತ್ತು ತಂಬಪನ್ನಿ (ಶ್ರೀಲಂಕಾ) ಎಂದು ಅಶೋಕನ ಶಾಸನಗಳಲ್ಲಿ ಹೆಸರಿಸಲಾಗಿದೆ. ಈ ದೃಷ್ಟಿಯಿಂದ ನೋಡಿದಾಗ ಪೂರ್ವೋಕ್ತ ದೇಶಗಳು ದಖನ್ನಿನ ಹೊರಗಿದ್ದು ಆಂದಿನ ದಖನ್ನಿನ ಪ್ರದೇಶ ಮೌರ್ಯ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿದ್ದದ್ದು ತಿಳಿದುಬರುತ್ತದೆ. ಮೌರ್ಯರ ಶಾಸನಗಳಲ್ಲಿ ಬರುವ ಸುವರ್ಣಗಿರಿಯನ್ನು ಕೊಪ್ಪಳ ಜಿಲ್ಲೆಯ ಕನಕಗಿರಿ ಎಂದು ಕೆಲವು ವಿದ್ವಾಂಸರು ಗುರುತಿಸಿದ್ದರೆ, ಇನ್ನು ಕೆಲವರು ಇದನ್ನು ಮಸ್ಕಿ ಇರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಅದೇನೇ ಇದ್ದರೂ ಈ ಪ್ರದೇಶ ಬಹು ಪುರಾತನ ನಾಗರಿಕತೆ ಮತ್ತು ಸಂಸ್ಕೃತಿಗಳ ನೆಲೆಬೀಡೆಂಬುದು ಸ್ಪಷ್ಟವಾಗಿದೆ.

ಕುಮಾರೇಶ್ವರ ದೇವಾಲಯ

ಮೌರ್ಯ ಸಾಮ್ರಾಜ್ಯದ ಪತನಾನಂತರ ದಖನ್‌ನಲ್ಲಿ ಸ್ಥಾಪಿತವಾದ ಪ್ರಥಮ ಸ್ವತಂತ್ರ ಸಾಮ್ರಾಜ್ಯವೆಂದರೆ ಸಾತವಾಹನರದು. ಇಂದಿನ ಮಹಾರಾಷ್ಟ್ರ ರಾಜ್ಯದ ಪ್ರತಿಷ್ಠಾನ ಅಥವಾ ಪೈಠಣ್ ಅನ್ನು ರಾಜಧಾನಿಯಾಗಿ ಹೊಂದಿದ್ದ ಈ ಸಾಮ್ರಾಜ್ಯದ ಭಾಗವಾಗಿ ಕೊಪ್ಪಳ ಉನ್ನತ ಸ್ಥಿತಿಗೆ ಬಂದಿತು. ಕ್ರಿ.ಪೂ.3ನೆಯ ಶತಮಾನದಿಂದ ಕ್ರಿ.ಶ 2ನೆಯ ಶತಮಾನದವರೆಗೂ ಆಳಿದ ಈ ವಂಶದ ಸಾಮ್ರಾಟರು ಉತ್ತರ ಭಾರತದವರೆಗೂ ತಮ್ಮ ಕೀರ್ತಿ ಪತಾಕೆಯನ್ನು ಹಾರಿಸಿದರು. ಕೊನೆಗೆ ದಕ್ಷಿಣ ಪಥಕ್ಕೆ ಸೀಮಿತವಾದ ಇವರು ತುಂಗಭದ್ರಾ ದಕ್ಷಿಣಕ್ಕೂ ತಮ್ಮ ಆಳಿಕೆಯನ್ನು ಚಾಚಿದ್ದರು. ಸಾತವಾಹನರ ಕಾಲದಿಂದ ಕೊಪ್ಪಳ ಪ್ರಸಿದ್ಧಿ ಪಡೆದಿತ್ತು. ಇಲ್ಲಿನ ಸುತ್ತಮುತ್ತಲ ಬೆಟ್ಟಗುಡ್ಡಗಳಿಗೆ ಕೊಪಣಾದ್ರಿ ಮತ್ತು ಕುಪಣಾಚಲ ಎಂಬ ಹೆಸರುಗಳಿವೆ. ಕೊಪ್ಪಳಕ್ಕೆ ಕೊಪಣ ಅಥವಾ ಕೋಪಣ

ನಗರವೆಂಬ ಹೆಸರಿದ್ದಿತು. ಈ ಜಿಲ್ಲೆಯ ಕವಲೂರು, ಆಳವಂಡಿ, ಮಾದಿನೂರು, ಕುಕ್ಕನೂರು, ಪುರ, ಆನೆಗೊಂದಿ, ಇಟಗಿ ಮತ್ತು ಮುಧುವೊಳಲು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆ.

ಸಾತವಾಹನರ ಅನಂತರ ಕರ್ನಾಟಕದ ಉತ್ತರ ಭಾಗದಲ್ಲಿ ಮತ್ತು ಕರಾವಳಿಯಲ್ಲಿ ಕದಂಬರು ಪ್ರಬಲ ರಾಜ್ಯಸ್ಥಾಪಿಸಿ ಆಳಿದರು. ಆದರೆ ದಕ್ಷಿಣದಲ್ಲಿ ತಲಕಾಡಿನ ಗಂಗರು, ಪೂರ್ವದಲ್ಲಿ ವಾಕಾಟಕರು ಕದಂಬರ ಸಮಕಾಲೀನರಾಗಿ ಆಳಿದರು. ಕದಂಬರು ಈ ಜಿಲ್ಲೆಯ ಮೇಲೆ ಎಷ್ಟು ನಿಯಂತ್ರಣ ಹೊಂದಿದ್ದರು ಎಂದು ಹೇಳಲು ಸ್ಪಷ್ಟ ಆಧಾರಗಳು ಲಭ್ಯವಿಲ್ಲ. ಆದರೆ ಚಿತ್ರದುರ್ಗದ ಬಳಿಯ ಚಂದ್ರವಳ್ಳಿಯಲ್ಲಿ ಕದಂಬರ ಶಾಸನ ದೊರೆತಿರುವುದರಿಂದ ಈ ಜಿಲ್ಲೆಯ ಮೇಲೆ ಒಂದಲ್ಲ ಒಂದು ಕಾಲದಲ್ಲಿ ಭಾಗಶಃವಾಗಿ ಅಥವಾ ಪೂರ್ಣವಾಗಿ ಅವರು ನಿಯಂತ್ರಣ ಹೊಂದಿದ್ದರು ಎಂದು ಹೇಳಬಹುದು. ಇದೇ ವೇಳೆಗೆ ಮಧ್ಯ ಭಾರತದಲ್ಲಿ ಪ್ರಬಲ ರಾಜ್ಯ ಸ್ಥಾಪಿಸಿದ ವಾಕಾಟಕರು ಕುಂತಳ ದೇಶದವರೆಗೂ ತಮ್ಮ ರಾಜ್ಯ ವಿಸ್ತರಿಸಿದ್ದರೆಂದು ತಿಳಿದುಬರುತ್ತದೆ. ಅವರು ಈ ಪ್ರದೇಶವನ್ನು ಸಾಕಷ್ಟು ಕಾಲ ಆಳಿರಬೇಕು.

ಕೊಪ್ಪಳ ಜಿಲ್ಲೆಗೆ ಸಮೀಪದಲ್ಲಿ ಈಗಿನ ಬಿಜಾಪುರ ಜಿಲ್ಲೆಯ ಬಾದಾಮಿಯಲ್ಲಿ 6ನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಚಳುಕ್ಯ ಮನೆತನ ಪರ್ಯಾಯ ದ್ವೀಪದಲ್ಲಿ ಒಂದು ಪ್ರಬಲ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಸಫಲವಾಯಿತು. ಕದಂಬ ರಾಜ್ಯ ಬಹುಮಟ್ಟಿಗೆ ಚಳುಕ್ಯ ಸಾಮ್ರಾಜ್ಯದಲ್ಲಿ ವಿಲೀನವಾಗಿ ಕೆಲವು ಶಾಖೆಗಳ ಆಳಿಕೆ ಮಾತ್ರ ಮುಂದುವರಿಯಿತು. ಬಾದಾಮಿ ಚಳುಕ್ಯರ ಶಾಸನಗಳು ಕೊಪ್ಪಳ ಜಿಲ್ಲೆಯ ಕೊಪ್ಪಳ, ಹಲಗೇರಿ, ಇಟಗಿ ಮತ್ತು ಕುಕನೂರು ಮೊದಲಾದೆಡೆಗಳಲ್ಲಿ ದೊರೆತಿವೆ. ಇವರು 757ರಲ್ಲಿ ರಾಷ್ಟ್ರಕೂಟರಿಂದ ಪರಾಜಯ ಹೊಂದುವವರೆಗೂ ಸಮಗ್ರವಾಗಿ ಆಳಿದರು. ಇವರ ಕಾಲದಲ್ಲಿ ಕೊಪ್ಪಳ ಒಂದು ಪಟ್ಟಣವಾಗಿ ಬೆಳೆಯಿತು. ಚೀನಿ ಪ್ರವಾಸಿ ಯುವಾನ್‌ಚಾಂಗನು ದಾಖಲಿಸಿರುವ ಕೊಂಕಿನಪುಲೋ ಎಂಬುದು ಕೊಪ್ಪಳವೆಂದು ಗುರುತಿಸಲಾಗಿದೆ.

ರಾಷ್ಟ್ರಕೂಟರು, ಬಾದಾಮಿ ಚಳುಕ್ಯರನ್ನು ಸೋಲಿಸಿ ಅವರ ಉತ್ತರಾಧಿಕಾರಿಗಳಾಗಿ ಮಾನ್ಯಖೇಟದಿಂದ ಆಳತೊಡಗಿದ್ದು ಕೊಪ್ಪಳ ಜಿಲ್ಲೆಯ ಇತಿಹಾಸಕ್ಕೆ ಹೊಸ ತಿರುವನ್ನು ನೀಡಿತು. ಆಗ ಕೋಪ್ಪಳ ಅಥವಾ ಕೋಪಣ ನಗರ ಜೈನರ ಪುಣ್ಯಸ್ಥಳವಾಗಿ ಪ್ರಸಿದ್ಧವಾಗಿತ್ತು. ದಕ್ಷಿಣ ಭಾರತದ ಜೈನ ರಾಜಮನೆತನದವರು ವಿಶೇಷವಾಗಿ ಇಲ್ಲಿಗೆ ಯಾತ್ರೆ ಬರುತ್ತಿದ್ದರು. ಕೊಪ್ಪಳ, ಇಟಗಿ, ಅರಕೇರಿ, ಸಂಕನೂರು, ಅಳವಂಡಿ, ಬೆಣಗೇರಿಗಳಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನಗಳು ದೊರೆತಿವೆ. ಕೊಪ್ಪಳದಲ್ಲಿ ರಾಷ್ಟ್ರಕೂಟರ ದಂಡನಾಯಕರಲ್ಲೊಬ್ಬನಾದ ಮಾಮರಸನೆಂಬಾತನಿದ್ದನೆಂದು ತಿಳಿದುಬರುತ್ತದೆ. ರಾಷ್ಟ್ರಕೂಟರ ಸಾಮಂತರೂ ನಿಕಟ ಬಂಧುಗಳೂ ಆಗಿದ್ದ ತಲಕಾಡಿನ ಗಂಗರು ಈ ಪ್ರದೇಶದೊಂದಿಗೆ ಹೆಚ್ಚಿನ ಸಂಪರ್ಕ ಮತ್ತು ಅಧಿಕಾರ ಹೊಂದಿದ್ದರು. ಗಂಗ ಇಮ್ಮಡಿ ಬೂತುಗನ (936-61) ಶಾಸನ ಸಮೀಪದ ಇಟಗಿಯಲ್ಲಿ ದೊರೆತಿದೆ. ಈತ ರಾಷ್ಟ್ರಕೂಟ ಮುಮ್ಮಡಿ ಅಮೋಘವರ್ಷನ ಮಗಳು ರೇವಕನಿಮ್ಮಡಿಯನ್ನು ಮದುವೆಯಾಗಿದ್ದ. ಈ ಸಂದರ್ಭದಲ್ಲಿ ಚಕ್ರವರ್ತಿಯು ಬೂತುಗನಿಗೆ ಪುರಿಗೆರೆ 300, ಬೆಳ್ವೊಲ 300, ಕಿಸುಕಾಡು 70 ಮತ್ತು ಬಾಗೆನಾಡು 70 ಇವುಗಳನ್ನು ನೀಡಿದ್ದ. ಕುಕನೂರಿನ ತಾಮ್ರಶಾಸನ ಇಮ್ಮಡಿ ಮಾರಸಿಂಹನಿಗೆ ಸೇರಿದ್ದು ಅದರಲ್ಲಿ ಗಂಗರ ವಂಶಾವಳಿಯನ್ನು ನೀಡಲಾಗಿದೆ. ಗಂಗಾವತಿ ತಾಲ್ಲೂಕಿನ ಹೆಬ್ಬಾಳದ ಶಾಸನ ಈ ಭಾಗದಲ್ಲಿ ಗಂಗರು ಆಳಿದ್ದಕ್ಕೆ ಸಾಕ್ಷಿಯಾಗಿದೆ.

ಗಂಗ ಮನೆತನಕ್ಕೆ ಕೊಪ್ಪಳ ಪುಣ್ಯಕ್ಷೇತ್ರವಾಗಿದ್ದುದಲ್ಲದೆ ಅಲ್ಲಿ ರಾಜಮನೆತನದ ಅನೇಕ ಸದಸ್ಯರು ಸ್ವಯಂಪ್ರೇರಣೆಯಿಂದ ಸಲ್ಲೇಖನ ವ್ರತ ಕೈಗೊಂಡು ದೇಹತ್ಯಾಗ ಮಾಡಿದ ವಿವರಗಳು ತಿಳಿದುಬರುತ್ತವೆ. ಇವರಲ್ಲಿ ಇಮ್ಮಡಿ ಬೂತುಗನ ಪತ್ನಿ ಪದ್ಮಬ್ಬರಸಿ, ಮಾರಸಿಂಹನ ಅಕ್ಕ ಹಾಗೂ ಚಾಳುಕ್ಯ ಹರಿಗನ ಪತ್ನಿ ಬಿಜ್ಜಬ್ಬರಸಿ ಮೊದಲಾದವರು ಸೇರಿದ್ದಾರೆ. ಕೊಪ್ಪಳದಲ್ಲಿ ಹಲವಾರು ಜೈನ ಮುನಿಗಳು ಮೋಕ್ಷ ಪಡೆದ ವಿವರಗಳು ಅಲ್ಲಿನ ಶಾಸನಗಳಲ್ಲಿ ದೊರೆಯುತ್ತವೆ.

ರಾಷ್ಟ್ರಕೂಟರ ಆಳಿಕೆಯನ್ನು ಕೊನೆಗಾಣಿಸಿ ಚಾಳುಕ್ಯರ ಅಧಿಕಾರವನ್ನು ಮತ್ತೆ ಸ್ಥಾಪಿಸಿದ ಚಾಳುಕ್ಯ ತೈಲಪನ ಮೊದಲ ವರ್ಷದ ಆಳಿಕೆಯ (973) ಶಾಸನ ಮಾದಿನೂರಿನಲ್ಲಿದೆ. ಅದರಲ್ಲಿ ರಾಜನು ಬ್ರಹ್ಮಾಂಡಕ್ರತು ಎಂಬ ಯಾಗವನ್ನು ಮಾಡಿದನೆಂದು ಹೇಳಿದೆ. ಕಲ್ಯಾಣದ ಚಾಳುಕ್ಯರೆಂದು ಪ್ರಸಿದ್ಧರಾದ ಈ ವಂಶದವರ ಆಳಿಕೆಯು 12ನೆಯ ಶತಮಾನದ ಉತ್ತರಾರ್ಧದವರೆಗೂ ಮುಂದುವರಿಯಿತು. ಈ ಯುಗದಲ್ಲಿ ಹೇಮಾವತಿ, ಹೆಂಜೇರು ಮತ್ತು ಕಂಪಿಲಿಯಿಂದ ಆಳಿದ ನೊಳಂಬರು ಈ ಜಿಲ್ಲೆಯ ಕೆಲವು ಭಾಗಗಳನ್ನು ಆಳಿರುವ ಸಂಭವ ಹೆಚ್ಚಿದೆ. ಕಳಚುರಿಗಳು ಅಲ್ಪಾವಧಿಯ ಕಾಲ ಆಳಿದರೂ ಅವರ ಕೆಲ ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಆ ಕಾಲದಲ್ಲಿ ಕುಕನೂರು ಪ್ರಸಿದ್ಧ ಧಾರ್ಮಿಕ ಸ್ಥಳವಾಗಿತ್ತು. ಅಲ್ಲಿನ ಜೇಷ್ಠಾದೇವಿಗೆ ರಾಜರು ಮತ್ತು ದಂಡನಾಯಕರು ನಡೆದುಕೊಳ್ಳುತ್ತಿದ್ದರು.



ವೆಂಕಟಪ್ಪ ಬಾವಿ, ಕನಕಗಿರಿ

ಹೊಯ್ಸಳರು ಮತ್ತು ಸೇವುಣರ ಕಾಲದಲ್ಲಿ ಈ ಪ್ರಾಂತ್ಯ ಅವರಿಬ್ಬರ ನಡುವಿನ ವಿವಾದಾತ್ಮಕ ಪ್ರದೇಶವಾಗಿತ್ತು. ಈ ಎರಡು ರಾಜ್ಯಗಳ ನಡುವೆ ಮಧ್ಯಗಾಮಿ ರಾಜ್ಯದಂತಿದ್ದ ಕಂಪಿಲಿ ರಾಜ್ಯದ ಪ್ರಬಲ ನೆಲೆಗಳಲ್ಲೊಂದಾದ ಕುಮ್ಮಟದುರ್ಗ ಕೊಪ್ಪಳ ತಾಲ್ಲೂಕಿನಲ್ಲಿದೆ. ಮೊದಲು ಕಂಪಿಲಿಯಿಂದ ಬಳ್ಳಾರಿ ಜಿಲ್ಲೆ ಆಳುತ್ತಿದ್ದ ಇಲ್ಲಿನ ಅರಸರು 1315ರಲ್ಲಿ ಕುಮ್ಮಟದುರ್ಗದಿಂದ ಆಳುತ್ತಿದ್ದುದು ಶಾಸನಗಳಿಂದ ಕಂಡುಬರುತ್ತದೆ. ದೇವಗಿರಿಯಲ್ಲಿ ನೆಲೆಸಿದ್ದ ದೆಹಲಿ ಸುಲ್ತಾನರ ಸೈನ್ಯವನ್ನು ಧೈರ್ಯದಿಂದ ಎದುರಿಸಿ ಹುತಾತ್ಮರಾದ ಕಂಪಿಲಿರಾಯ ಮತ್ತು ಕುಮಾರರಾಮ ಈ ಮನೆತನದವರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೊದಲ ಚಟುವಟಿಕೆಗಳು ಪ್ರಾರಂಭವಾದದ್ದು ಈ ಜಿಲ್ಲೆಯ ಆನೆಗೊಂದಿಯಲ್ಲಿ ಎಂದು ತಿಳಿದುಬರುತ್ತದೆ. ವಿಜಯನಗರ ಅರಸರ 1342ರ ಶಾಸನ ಆನೆಗೊಂದಿಯಲ್ಲಿ ದೊರೆತಿದೆ. ಕೊಪ್ಪಳದ 1346ರ ಶಾಸನದಲ್ಲಿ ಹರಿಹರನ ಉಲ್ಲೇಖವಿದೆ. ಆನೆಗೊಂದಿ, ಕನ್ನೇರುಮಡು, ಕೆಸರಟ್ಟಿ, ಕಲ್ಲೂರು, ಬಂಡಿಹಾಳಗಳಲ್ಲಿ ವಿಜಯನಗರದ ಅರಸರ ಮತ್ತು ಮಾಂಡಲಿಕರ ಶಾಸನಗಳು ಲಭ್ಯವಾಗಿವೆ. ವಿಜಯನಗರದ ಆಯಕಟ್ಟಿನ ಪ್ರದೇಶವಾಗಿದ್ದ ಈ ಜಿಲ್ಲೆಯ ಒಡೆತನಕ್ಕಾಗಿ ವಿಜಯನಗರ ಅರಸರು ಮತ್ತು ಬಹಮನೀ ಸುಲ್ತಾನರುಗಳ ನಡುವೆ ಆಗಾಗ ಯುದ್ಧಗಳಾಗುತ್ತಿದ್ದವು. ಕಲ್ಲೂರು ಮತ್ತು ಬಂಡಿಹಾಳದ ಶಾಸನಗಳು ಅಚ್ಯುತರಾಯನ ಕಾಲದಲ್ಲಿ ಅವನ ಮಾಂಡಲಿಕರಾಗಿದ್ದ ಗುಜ್ಜಲವಂಶದ ಅರಸರ ಬಗ್ಗೆ ತಿಳಿಸುತ್ತದೆ.

ತಾಳಿಕೋಟೆಯ ಯುದ್ಧದ ತರುವಾಯವೂ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಸ್ವಲ್ಪ ಕಾಲ ಐತಿಹಾಸಿಕ ಮಹತ್ತ್ವ ಪಡೆದಿತ್ತು. ಆನೆಗೊಂದಿಯಲ್ಲಿ ಆಶ್ರಯ ಪಡೆದ ವಿಜಯನಗರದ ಅರಸು ಮನೆತನದವರು ಅಲ್ಲಿ ತಮ್ಮ ಅಧಿಕಾರವನ್ನು ಮುಂದುವರಿಸಿದರು. ಶ್ರೀರಂಗಪಟ್ಟಣದ ಪ್ರಾಂತ್ಯಾಧಿಕಾರಿಯಾಗಿದ್ದ ಶ್ರೀರಂಗರಾಯ ಆನೆಗೊಂದಿಯ

ಮೂಲದವನೆಂದು ತಿಳಿದುಬರುತ್ತದೆ. 1657ರಲ್ಲಿ ಶಿವಾಜಿಯು ಆನೆಗೊಂದಿ ಮೊದಲಾದ ಒಂಬತ್ತು ಸಮತಗಳನ್ನು ಶ್ರೀರಂಗರಾಯನ ಕುಟುಂಬದ ಪೋಷಣೆಗಾಗಿ ನೀಡಿದ್ದನೆಂದು ಹೇಳಲಾಗಿದೆ. ಈ ಕಾಲದಲ್ಲಿ ಕೊಪ್ಪಳವು ಕೊಪಣನಾಡು ಅಥವಾ ಕೋಪಣವೇಂಟೆಯ ಕೇಂದ್ರ ಸ್ಥಳವಾಗಿದ್ದಿತು.

ಕಂಪಿಲಿ ರಾಜ್ಯ ಪತನಗೊಂಡು ದಖ್ಖಿನ ದೆಹಲಿ ಪ್ರಾಂತ್ಯಾಧಿಕಾರಿಯ ವಶಕ್ಕೆ ಬಂದ ದೋಆಬ್ ಪ್ರಾಂತ್ಯವು ಅಂದರೆ ಕೊಪ್ಪಳ ಜಿಲ್ಲೆ ಮತ್ತು ಈಗಿನ ರಾಯಚೂರು ಜಿಲ್ಲೆಗಳ ಪ್ರದೇಶವು ಮುಂದೆ ಸದಾ ವಿಜಯನಗರ ಮತ್ತು ಬಹಮನೀ ರಾಜ್ಯದ ನಡುವೆ ವಿವಾದಿತ ಪ್ರದೇಶವಾಗಿ ಪರಿಣಮಿಸಿತು. ರಾಯಚೂರಿನೊಂದಿಗೆ ಕೊಪ್ಪಳ ಜಿಲ್ಲೆಯ ಕೆಲವು ಭಾಗಗಳೂ ಆಗಾಗ ಈ ಎರಡು ರಾಜ್ಯ- ಸಾಮ್ರಾಜ್ಯಗಳ ನಡುವೆ ಕೈ ಬದಲಾಯಿಸುತ್ತಿದ್ದುದನ್ನು ಕಾಣಬಹುದು. ರಾಯಚೂರು ಮತ್ತು ಮುದುಗಲ್ಲು ದೀರ್ಘಕಾಲ ಬಿಜಾಪುರ -ಗುಲ್ಬರ್ಗ ಮತ್ತು ಬೀದರ್‌ನಿಂದ ಆಳಿದ ಬಹಮನೀ ರಾಜ್ಯದ ವಶದಲ್ಲಿರುತ್ತಿದ್ದುದ್ದರಿಂದ ಕೊಪ್ಪಳದ ಅನೇಕ ಸ್ಥಳಗಳೂ ಅದರ ಆಳಿಕೆಗೊಳಪಟ್ಟಿದ್ದವು. ಪದೇ ಪದೇ ಬಹಮನೀ ಸೈನ್ಯಗಳು ವಿಜಯನಗರದ ಪ್ರದೇಶಗಳಿಗೆ ನುಗ್ಗಿ ಕೊಲೆ, ಲೂಟಿ ಮತ್ತು ದಬ್ಬಾಳಿಕೆಗಳಲ್ಲಿ ತೊಡಗುತ್ತಿದ್ದವು. ಎರಡನೆಯ ದೇವರಾಯ ಮತ್ತು ಕೃಷ್ಣದೇವರಾಯ ಈ ದಾಳಿಗಳನ್ನು ಯಶಸ್ವಿಯಾಗಿ ಎದುರಿಸಿ ಸುಲ್ತಾನರ ಆಳಿಕೆಯಿಂದ ಈ ಪ್ರದೇಶವನ್ನು ಮುಕ್ತಗೊಳಿಸಿದ್ದರು. 1565ರಲ್ಲಿ ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ಸೈನ್ಯ ಸೋತ ಮೇಲೆ ಈ ಜಿಲ್ಲೆ ಬಹುಮಟ್ಟಿಗೆ ಬಿಜಾಪುರದ ಸುಲ್ತಾನ್‌ಶಾಹಿಯ ಅಧೀನಕ್ಕೊಳಗಾಯಿತು. ಶಿವಾಜಿ 1677ರಲ್ಲಿ ಕೊಪ್ಪಳವನ್ನು ಮುತ್ತಿ ವಶಪಡಿಸಿಕೊಂಡ. ಸ್ವಲ್ಪ ಕಾಲದಲ್ಲೇ ಬಿಜಾಪುರ ರಾಜ್ಯ ಔರಂಗಜೇಬನ ಮಹಾ ದಕ್ಷಿಣ ದಂಡಯಾತ್ರೆಗೆ ಬಲಿಯಾದ ಮೇಲೆ ಅನೇಕ ವರ್ಷಗಳ ಅರಾಜಕತೆಯ ಅನಂತರ ಈ ಜಿಲ್ಲೆ ಹೈದರಾಬಾದಿನ ನಿಜಾಮರ ಆಡಳಿತದಡಿ ಬಂದಿತು.

ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ದಂಡಯಾತ್ರೆಗಳಿಂದಾಗಿ ಈ ಪ್ರದೇಶ ಸ್ವಲ್ಪ ಅವಧಿಗೆ ಮೈಸೂರು ರಾಜ್ಯದ ಭಾಗವಾಗಿತ್ತು. ಆದರೆ 1799ರಲ್ಲಿ ಟಿಪ್ಪು ಬ್ರಿಟಿಷರಿಗೆ ಸಂಪೂರ್ಣವಾಗಿ ಸೋತ ಅನಂತರ ಆದ ರಾಜಕೀಯ ಒಡಂಬಡಿಕೆಯ ಮೇರೆಗೆ ಕೊಪ್ಪಳ ಜಿಲ್ಲೆ ಅಂದಿನ ರಾಯಚೂರು ಜಿಲ್ಲೆಯ ಭಾಗವಾಗಿ ಹೈದರಾಬಾದ್ ಸಂಸ್ಥಾನಕ್ಕೆ ಸೇರಿತು. ಹೈದರಾಬಾದ್ ನಿಜಾಮರ ಸರ್ಕಾರವು ಸಂಸ್ಥಾನವನ್ನು ಜಹಗೀರಿಗಳು, ಪೈಗಗಳು ಮತ್ತು ನಿಜಾಮರ ಖಾಸಾ ಜಮೀನುಗಳೆಂದು ವಿಂಗಡಿಸಿದ್ದಿತು. ಜಹಗೀರಿಗಳನ್ನು ರಾಜ್ಯಕ್ಕೆ ಸೈನ್ಯ ಮೊದಲಾದವನ್ನು ಒದಗಿಸಿ ಉತ್ತಮ ಸೇವೆ ಸಲ್ಲಿಸಿದವರಿಗೆ ನೀಡಲಾಗುತ್ತಿತ್ತು. ಪೈಗಗಳನ್ನು ಅರಮನೆಗೆ ಬೇಕಾದ ಶ್ರೀಮಂತರು ಮತ್ತು ಕುಲೀನರಿಗೆ ಕೊಡಲಾಗುತ್ತಿತ್ತು. ಈ ನಿಜಾಮರ ಖಾಸಾ ಜಮೀನುಗಳನ್ನು ರೈತರು ಗುತ್ತಿಗೆಗೆ ಸಾಗುವಳಿ ಮಾಡುತ್ತಿದ್ದರು. ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳು ನವಾಬ್ ಸಾಲರ್‌ಜಂಗ ಎಂಬ ಜಹಗೀರುದಾರನಿಗೆ ಸೇರಿದ್ದವು. ಕುಷ್ಟಗಿ ತಾಲ್ಲೂಕು ಒಬ್ಬ ದೇಸಾಯಿಯ ಜಹಗೀರಾಗಿದ್ದಿತು. ಆನೆಗೊಂದಿಯೂ ಒಂದು ಪುಟ್ಟ ಜಹಗೀರಾಗಿತ್ತು. ಈ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಶ್ರೀಮಂತ ಮತ್ತು ಪ್ರಭಾವಿ ವರ್ಗದ ಅಲ್ಪಸಂಖ್ಯಾತರ ಕೈಯಲ್ಲಿ ರೈತರೂ ಕಾರ್ಮಿಕರು ಹೀನ ಸ್ಥಿತಿಯಲ್ಲಿ ಬದುಕಬೇಕಾಯಿತು. ಗ್ರಾಮದಲ್ಲಿ ಸರ್ಕಾರದ ಪರವಾಗಿ ಪಟೇಲ ಮತ್ತು ಗ್ರಾಮ ಮುಖ್ಯರಿರುತ್ತಿದ್ದರು. ಈ ಜಹಗೀರುದಾರರುಗಳು ನಿಜಾಮನಿಗೆ ವಾರ್ಷಿಕ ಪೊಗದಿ ಕೊಡುತ್ತಿದ್ದರು. ಅವರಿಗೆ ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ಹೊಂದುವ ಅಧಿಕಾರವಿದ್ದಿತು.

ಈ ಬಗೆಯ ಆಳಿಕೆಯಲ್ಲಿ ಜನಸಾಮಾನ್ಯರ ಹಕ್ಕುಬಾಧ್ಯತೆಗಳು ಕುಂಠಿತಗೊಂಡಿದ್ದುವು. 20ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಭಾರತಾದ್ಯಂತ ಬಲಗೊಳ್ಳುತ್ತಿದ್ದ ಸ್ವಾತಂತ್ರ್ಯಚಳವಳಿಯ ಪ್ರಭಾವ ಹೈದರಾಬಾದ್ ಸಂಸ್ಥಾನವನ್ನೂ ತಟ್ಟದಿರಲಿಲ್ಲ. 1911ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನದಲ್ಲಿ ಈ ಜಿಲ್ಲೆಯ ಹಲವರು ಬಂದು ಭಾಗವಹಿಸಿದರು. ಬೆಳಗಾಂವಿಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸಮ್ಮೇಳನ (1924) ಸ್ವಾತಂತ್ರ್ಯ ಹೋರಾಟದ ಬಗ್ಗೆ ಈ ಪ್ರಾಂತದ ಜನರ ಗಮನ ಸೆಳೆಯುವಲ್ಲಿ ಮುಖ್ಯ ಪಾತ್ರ ವಹಿಸಿತು. 1916-17 ರಿಂದಲೇ ಕೊಪ್ಪಳದಲ್ಲಿ ಒಂದು ಖಾದಿ ಪ್ರಚಾರ ಕೇಂದ್ರ ಪ್ರಾರಂಭಗೊಂಡಿತ್ತು. 1922ರಲ್ಲಿ ಆರ್.ಬಿ.ದೇಸಾಯಿಯವರು ಕುಕನೂರಿನಲ್ಲಿ ವಿದ್ಯಾನಂದ ಗುರುಕುಲವನ್ನು ಸ್ಥಾಪಿಸಿದರು. ಇದು ಜನರಲ್ಲಿ ರಾಷ್ಟ್ರೀಯ ಭಾವನೆ ಬೆಳೆಸಲು ಸಹಕಾರಿಯಾಯಿತು. 1920-21ರಲ್ಲಿ ರಾಯಚೂರಿನಲ್ಲಿ ಪಂಡಿತ ತಾರಾನಾಥರು ಸ್ಥಾಪಿಸಿದ ಹಮ್‌ದರ್ದ್ ರಾಷ್ಟ್ರೀಯ ಶಾಲೆಯು ಸ್ವಾತಂತ್ರ್ಯ ಚಳವಳಿಯ ಗುರಿಗಳನ್ನು ಪ್ರಚಾರಗೊಳಿಸಿತು. ರಾಯಚೂರಿನ ಅಡವಿರಾವ್ ಫಡ್ನಾವಿಸ್, ಆರ್.ಜಿ.ಜೋಷಿ, ಗಾಣದಾಳ್ ನಾರಾಯಣಪ್ಪ, ವೀರಣ್ಣಮಾಸ್ತರ ಮೊದಲಾದವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಚಳವಳಿ ಹರಡಿತು. 1928ರಲ್ಲಿ ರಾಯಚೂರಿನಲ್ಲಿ ಸ್ಥಾಪನೆಗೊಂಡ ಕರ್ನಾಟಕ ಸಂಘ ಇನ್ನೊಂದು ಮುಖ್ಯ ಘಟ್ಟವಾಯಿತು. 1930ರಲ್ಲಿ ಗಾಂಧೀಜಿಯವರು ಕೊಪ್ಪಳ ತಾಲ್ಲೂಕಿನ ಮೂಲಕ ರೈಲಿನಲ್ಲಿ ಹಾದುಹೋದಾಗ ಅವರನ್ನು ಅನೇಕರು ಭೇಟಿಯಾದರು. 1934ರಲ್ಲಿ ರಾಯಚೂರಿನಲ್ಲಿ 20ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. 1938ರಲ್ಲಿ ಹೈದರಾಬಾದ್ ಸಂಸ್ಥಾನದ ಪ್ರದೇಶ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂತು. ಈ ಭಾಗದ ಜನರು ಮೂರು ನಿಟ್ಟಿನಲ್ಲಿ ತಮ್ಮ ಹೋರಾಟವನ್ನು ಮುಂದುವರಿಸಬೇಕಾಗಿತ್ತು. ಒಂದು ಕಡೆ ಬ್ರಿಟಿಷರಿಂದ ವಿಮೋಚನೆ; ಇನ್ನೊಂದು ಕಡೆ ಜಹಗೀರ್‌ದಾರಿ ವ್ಯವಸ್ಥೆ ನಿಜಾಮ್‌ಶಾಹಿಯಿಂದ ಬಿಡುಗಡೆ; ಮೂರನೆಯದಾಗಿ ಕನ್ನಡೇತರ ರಾಜ್ಯದಿಂದ ಹೊರಬಂದು ಕನ್ನಡನಾಡಿನ ಏಕೀಕರಣ ಸಾಧಿಸುವುದು.



ಕೋಟೆ ಅವಶೇಷಗಳ ದೃಶ್ಯ, ಕೊಪ್ಪಳ

ಸಿರೂರು ವೀರಭದ್ರಪ್ಪ ಅಳವಂಡಿ ಶಿವಮೂರ್ತಿಸ್ವಾಮಿ, ಎಲ್.ಕೆ.ಷರಾಫ್, ಡಿ.ಜಿ.ಬಿಂದು, ಜನಾರ್ಧನರಾವ್‌ದೇಸಾಯಿ, ಬುರ್ಲಿಬಿಂದು ಮಾಧವರಾವ್, ಜಿ.ಕೆ.ಪ್ರಾಣೇಶಾಚಾರ್ಯ ಮತ್ತಿತರರು ಜನಜಾಗೃತಿ ಮತ್ತು ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದರು. ಸ್ವಾತಂತ್ರ್ಯ ಚಳವಳಿ ಮತ್ತು ಕರ್ನಾಟಕ ಏಕೀಕರಣ ಚಳವಳಿಗಳು ನಿಧಾನವಾಗಿಯಾದರೂ ದೃಢವಾಗಿ ಪ್ರಗತಿಯಲ್ಲಿದ್ದಾಗಲೇ ಇಲ್ಲಿ ಜನತೆ ಹೊಸ ಸಮಸ್ಯೆಯನ್ನು ಎದುರಿಸಬೇಕಾಯಿತು. 1945ರ ಅನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದು ನಿಚ್ಚಳವಾಗುತ್ತಿದ್ದಂತೆಲ್ಲ ಹೈದರಾಬಾದ್ ಸಂಸ್ಥಾನದ ನಿಜಾಮರು ಭಾರತ ಒಕ್ಕೂಟದಿಂದ ಪ್ರತ್ಯೇಕವಾಗುಳಿಯುವ ಪ್ರಯತ್ನದಲ್ಲಿ ತೊಡಗಿದರು. 1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾಯಿತು. ಅದೇ ತಿಂಗಳ 27ರಂದು ಹೈದರಾಬಾದ್ ರಾಜ್ಯ ಭಾರತ ಒಕ್ಕೂಟದಿಂದ ಪ್ರತ್ಯೇಕವಾಗುಳಿಯಲು ನಿರ್ಧರಿಸಿ ಸ್ವಾತಂತ್ರ್ಯ ಘೋಷಿಸಿಕೊಂಡಿತು. ಜೊತೆಗೆ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿರುವವರನ್ನು ದಮನ ಮಾಡುವುದಕ್ಕಾಗಿ ಜನರಲ್ಲಿ ಭಯ ಹುಟ್ಟಿಸಲು ರಜಾಕಾರರೆಂದು ಕರೆದುಕೊಂಡ ಮುಸ್ಲಿಮ್ ಉಗ್ರವಾದಿಗಳ ಗುಂಪು ಹಿಂಸಾಚಾರಕ್ಕಿಳಿಯಿತು. ಇದರಿಂದ ಅನೇಕಕಡೆ ಭೀಕರ ಲೂಟಿ, ದರೋಡೆ, ಕೊಲೆ ಸುಲಿಗೆ, ಅತ್ಯಾಚಾರಗಳು ನಡೆದವು. ಆಗ ಈ ರಾಜ್ಯದ ಜನರ ರಕ್ಷಣೆಗೆ ಭಾರತ ಸರ್ಕಾರ ಮುಂದಾಗಿ 1948ರ ಸೆಪ್ಟೆಂಬರ್ 13ರಂದು ಪೊಲೀಸ್ ಕಾರ್ಯಾಚರಣೆ ಪ್ರಾರಂಭಿಸಿತು. ಅದೇ ತಿಂಗಳ 18ರಂದು ಹೈದರಾಬಾದ್ ಸಂಸ್ಥಾನವನ್ನು ವಶಪಡಿಸಿಕೊಂಡು ಭಾರತ ಒಕ್ಕೂಟದಲ್ಲಿ ಸೇರಿಸಲಾಯಿತು. 1956 ನವೆಂಬರ್ 1ರಂದು ಭಾಷಾವಾರು ರಾಜ್ಯಗಳ ರಚನೆಯಾದಾಗ ಕೊಪ್ಪಳವೂ ಸೇರಿದಂತೆ ಅಂದಿನ ರಾಯಚೂರು

ಜಿಲ್ಲೆ ಮತ್ತು ಹೈದರಾಬಾದ್ ಕರ್ನಾಟಕ ಭಾಗ ವಿಶಾಲ ಮೈಸೂರು ರಾಜ್ಯದಲ್ಲಿ ಒಂದಾಯಿತು.

ಈ ಜಿಲ್ಲೆ ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಉತ್ತಮ ಪರಂಪರೆ ಹೊಂದಿದೆ. ಶೈವ ಮಠಗಳು, ಅಗ್ರಹಾರಗಳು, ಜೈನ ಕೇಂದ್ರಗಳಿಂದ ಕೂಡಿರುವುದಲ್ಲದೆ ಜನಪದ ಸಾಹಿತ್ಯ ಸಂಪತ್ತಿನಿಂದಲೂ ಕೂಡಿದೆ. ವೀರಶೈವಧರ್ಮ ಹೊಸ ಸಾಂಸ್ಕೃತಿಕ ಪರಿಸರವನ್ನು ಸೃಷ್ಟಿಸಿತು. ಯಲಬುರ್ಗ ತಾಲ್ಲೂಕಿನ ಕುಕನೂರಿನ ಕಲ್ಲೇಶ್ವರ ದೇವಾಲಯ ಮತ್ತು ಅದೇ ತಾಲ್ಲೂಕಿನ ಇಟಗಿಯ ಮಹಾದೇವ ದೇವಾಲಯ ಚಾಳುಕ್ಯ ಪರಂಪರೆಯ ಶಿಲ್ಪ ಮತ್ತು ವಾಸ್ತುಗಳನ್ನು ಹೊಂದಿವೆ. ಕೊಪ್ಪಳದ ಕೋಟೆ ನೆಲಮಟ್ಟದಿಂದ 400' ಎತ್ತರದ ಗುಡ್ಡದ ಮೇಲಿದ್ದು ಅದನ್ನು ವಿನ್ಯಾಸ ಮತ್ತು ಭದ್ರತೆಯ ದೃಷ್ಟಿಯಿಂದ ಐರೋಪ್ಯ ದಂಡನಾಯಕರೂ ಮೆಚ್ಚಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಕೌರೂರು, ಬಳಂಗೆರೆ, ಆಳವಂಡಿ, ತಳಕಲ್ಲು, ಆನೆಗೊಂದಿ, ಮುನಿರಾಬಾದ್ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿವೆ. ಸ್ತ್ರೀ ದೇವತೆಗಳ ಆರಾಧನೆ ಅತ್ಯಂತ ಪೂರ್ವಕಾಲದಿಂದಲೂ ಬಂದ ಬಳುವಳಿ. ಕುಕನೂರಿನ ಮಹಾಮಾಯ, ಜೇಷ್ಠಾದೇವಿ, ಸಂಕನೂರಿನ ಸಂಕಲಾದೇವಿ, ಹೊಸೂರಿನ ಮಹಾಮಾಯಾ, ಹುಲಿಗಿಯ ಹುಲೆಗೆಮ್ಮ ಇವು ಪ್ರಸಿದ್ಧ ಶಕ್ತಿ ದೇವತೆಗಳು. ಕುಷ್ಟಗಿಯ ಅಡವಿರಾಯನ ಜಾತ್ರೆ, ಕೊಪ್ಪಳದ ಗವಿಸಿದ್ಧೇಶ್ವರ ಜಾತ್ರೆ, ಕನಕಗಿರಿ ಜಾತ್ರೆ, ಯಲಬುರ್ಗ ತಾಲ್ಲೂಕಿನ ಮಂಗಳೂರಿನ ಮಂಗಳೇಶ್ವರ ಜಾತ್ರೆಗಳು ಭಕ್ತಾದಿಗಳನ್ನು ಆಕರ್ಷಿಸುತ್ತವೆ.

ಶಾಸ್ತ್ರೀಯ ಸಂಗೀತ ಇಲ್ಲಿ ಹೆಚ್ಚು ಜನಪ್ರಿಯ; ದಾಸ ಪರಂಪರೆಯೂ ಉಂಟು. ಪ್ರಾಚೀನ ಕಾಲದಿಂದಲೂ ಸಾಹಿತ್ಯ ರಚನೆಗೆ, ಕವಿಪಂಡಿತರಿಗೆ ಹೆಸರುವಾಸಿ. ಇತ್ತೀಚಿನ ಸಾರಸ್ವತ ಲೋಕದ ಹಲವಾರು ಸಾಧಕರು ಇಲ್ಲಿನವರು. ಇವರಲ್ಲಿ ಸಿದ್ದಯ್ಯ ಪುರಾಣಿಕ, ಪಾಂಡುರಂಗರಾವ್ ದೇಸಾಯಿ, ಜಯತೀರ್ಥ ರಾಜಪುರೋಹಿತ, ಇಟಗಿ ರಾಘವೇಂದ್ರ, ಕುಷ್ಟಗಿ ರಾಘವೇಂದ್ರರಾವ್, ದೇವೇಂದ್ರ ಕುಮಾರ ಹಕಾರಿ, ಎಚ್.ಎಸ್.ಪಾಟೀಲ, ಬಿ.ಆರ್.ತುಬಾಕಿ, ಗವಿಸಿದ್ದ ಬಳ್ಳಾರಿ, ನಾ.ಭ.ಶಾಸ್ತ್ರಿ,ಕೀರ್ತನಕೇಸರಿ ಜಯರಾಮಾಚಾರ್ಯ, ಮಾಧವರಾವ್ ಮುಧೋಳ (ಉರ್ದು ಮತ್ತು ಕನ್ನಡ ಭಾಷೆಗಳೆರಡರಲ್ಲೂ ಪರಿಣತಿ ಪಡೆದಿದ್ದರು. ಉರ್ದು-ಕನ್ನಡ ನಿಘಂಟಿನಲ್ಲಿ ಇವರು ಕೆಲಸಮಾಡಿದ್ದರು) ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. (ಡಿ.ಎಸ್.ಜೆ.)

**ತಾಲ್ಲೂಕು :** ಕೊಪ್ಪಳ ತಾಲ್ಲೂಕು ಹಾಗೂ ಅದರ ಮುಖ್ಯ ಪಟ್ಟಣ. ದಕ್ಷಿಣಕ್ಕೆ ತುಂಗಭದ್ರಾ ಜಲಾಶಯ, ಪಶ್ಚಿಮಕ್ಕೆ ಧಾರವಾಡ ಜಿಲ್ಲೆ, ಉತ್ತರಕ್ಕೆ ಯಲಬುರ್ಗ ತಾಲ್ಲೂಕು ಮತ್ತು ಪೂರ್ವಕ್ಕೆ ಗಂಗಾವತಿ ತಾಲ್ಲೂಕು ಇವೆ. ಕೊಪ್ಪಳ, ಇರಕಲ್ಲಗಡ, ಇತ್ತಿನಹಾಳ ಮತ್ತು ಅಲವಂಡಿ ಈ ನಾಲ್ಕು ಹೋಬಳಿಗಳಿವೆ. 156 ಹಳ್ಳಿಗಳಿವೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 1,378.6ಚ.ಕಿಮೀ.

ತಾಲ್ಲೂಕಿನ ಬಹುಭಾಗ ಕಪ್ಪುಮೆಕ್ಕಲು ಮಣ್ಣಿನ ಮಟ್ಟಸ ಪ್ರಸ್ಥಭೂಮಿ. ತಾಲ್ಲೂಕಿನ ಈಶಾನ್ಯ ಮತ್ತು ಕೊಪ್ಪಳ ಪಟ್ಟಣದ ಸಮೀಪದಲ್ಲಿ ಗುಡ್ಡಗಳಿವೆ. ತುಂಗಭದ್ರಾನದಿ ತಾಲ್ಲೂಕಿನ ದಕ್ಷಿಣದ ಗಡಿಯಾಗಿತ್ತು. ಈಗ ತುಂಗಭದ್ರಾ ಜಲಾಶಯದ ಹರವಿನಲ್ಲಿ ಆ ಅಂಚಿನ ಭಾಗಗಳು ಮುಳುಗಿವೆ. ತುಂಗಭದ್ರಾ ಅಣೆಕಟ್ಟಿರುವುದು ತಾಲ್ಲೂಕಿನ ಆಗ್ನೇಯದಲ್ಲಿ ಮುನಿರಾಬಾದ್ ಬಳಿ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 594.65ಮಿಮೀ. ಕೃಷಿ ತಾಲ್ಲೂಕಿನ ಮುಖ್ಯ ಜೀವನೋಪಾಯ. ಸಾಗುವಳಿಯಾಗುತ್ತಿರುವ ಒಟ್ಟು 3,40,592 ಎಕರೆಗಳಲ್ಲಿ 5,285ಕ್ಕೂ ಹೆಚ್ಚು ಎಕರೆಗಳಿಗೆ ನೀರಾವರಿ ಸೌಲಭ್ಯವಿದೆ (ಕಾಲುವೆಯಿಂದ 4,702 ಎಕರೆಗಳು, ಬಾವಿಗಳಿಂದ 285 ಎಕರೆಗಳು, ಇತರ ಮೂಲಗಳಿಂದ 150 ಎಕರೆಗಳು). ಜೋಳ (51,940), ನೆಲಗಡಲೆ (37,005), ಹತ್ತಿ (27,835), ಗೋದಿ (7,200), ತೊಗರಿ (5,562), ಬಾಜ್ರ (4,593), ಬತ್ತ (2,942), ಕಬ್ಬು (2,583), ಹುರುಳಿ (1,320), ಹರಳು (260) ಮುಖ್ಯ ಬೆಳೆಗಳು.

ಕೊಪ್ಪಳದಿಂದ 13ಕಿಮೀ ದೂರದಲ್ಲಿರುವ ಕಿನ್ನಾಳು ಗ್ರಾಮ ಮರದ ಕುಶಲ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿನ ಕೆಲವು ಚಿತ್ರಗಾರ ಮನೆತನದವರು ಉತ್ತಮವಾಗಿ ರಚಿಸಿ ಬಣ್ಣಹಾಕಿದ ದೇವವಿಗ್ರಹಗಳು, ಪ್ರಾಣಿಗಳ ಬೊಂಬೆಗಳು, ಹಣ್ಣು ತರಕಾರಿಗಳ ತದ್ರೂಪ ಬೊಂಬೆಗಳು, ನಾಟಕಗಳಲ್ಲಿ ಬಳಸುವ ಕಿರೀಟ, ಮುಖವಾಡ, ತೊಟ್ಟಿಲು, ಪೀಠಗಳನ್ನು ತಯಾರಿಸುತ್ತಾರೆ. ನೇಯ್ಗೆ, ಕೊಂಬಿನಿಂದ ಬಾಚಣಿಗೆಯ ತಯಾರಿಕೆ ಈ ಮೊದಲಾದ ಉದ್ಯಮಗಳೂ ಇಲ್ಲಿವೆ.

ತುಂಗಭದ್ರಾ ನದಿಯ ಉಪನದಿಯಾದ ಹಿರೇಹಳ್ಳದ ಎಡದಂಡೆಯ ಮೇಲಿರುವ ಕೊಪ್ಪಳ ಈ ತಾಲ್ಲೂಕಿನ ಮುಖ್ಯ ಪಟ್ಟಣ. ಜನಸಂಖ್ಯೆ 56,145. ಇದು ತಾಲ್ಲೂಕಿನ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯಾಕೇಂದ್ರ ಹಾಗೂ ಹುಬ್ಬಳ್ಳಿ ಗುಂತಕಲ್ಲು ರೈಲುಮಾರ್ಗದ ಒಂದು ನಿಲ್ದಾಣ. ಬಳ್ಳಾರಿ, ಕುಷ್ಟಗಿ, ಹುಬ್ಬಳ್ಳಿ, ಯಲಬುರ್ಗ, ಗಂಗಾವತಿಗಳಿಗೆ ರಸ್ತೆ ಸಂಪರ್ಕವಿದೆ. ಕೈಮಗ್ಗದ ಬಟ್ಟೆಗಳಿಗೆ ಇದು ಪ್ರಸಿದ್ಧ. ವಾರ್ಷಿಕವಾಗಿ ಜನವರಿಯಲ್ಲಿ ಗವಿಸಿದ್ದೇಶ್ವರ ಜಾತ್ರೆ ನಡೆಯುತ್ತದೆ. ಈ ಪಟ್ಟಣದ ಪಶ್ಚಿಮಕ್ಕೆ ಬೆಟ್ಟಗಳ ಸಾಲು ಹಬ್ಬಿದೆ. ಇವುಗಳಲ್ಲಿ ಪಾಲ್ಕಿ ಗುಂಡು ಅತ್ಯಂತ ಎತ್ತರವಾದ್ದು (2339'). ಪೂರ್ವಕ್ಕಿರುವ ಬೆಟ್ಟಗಳ ಸಾಲಿನಲ್ಲಿ ಗವಿಮಠವಿದೆ. ದಕ್ಷಿಣಕ್ಕೆ ಮತ್ತೊಂದು ಬೆಟ್ಟದ ಸಾಲು ಇದೆ. ಅದನ್ನು ಬಹದ್ದೂರ್ ಬಂಡೆ (1980') ಎನ್ನುತ್ತಾರೆ.

ಗವಿಮಠ ಬೆಟ್ಟದಲ್ಲಿ ನಾಲ್ಕು ಗವಿಗಳಿವೆ. ಅಲ್ಲದೆ ಪುರಾತನವಾದ ವೀರಶೈವ ಮಠ ಮತ್ತು ಜೈನಸಮಾಧಿಗಳೂ ಇವೆ. ಪಾಲ್ಕಿಗುಂಡಿನ ಪಶ್ಚಿಮಕ್ಕಿರುವ ಮಲಿಮಲ್ಲಪ್ಪನ ಬೆಟ್ಟದಲ್ಲಿ ಮೋರಿಯರ ಅಂಗಡಿ ಎಂದು ಕರೆಯುವ ಬೃಹತ್ ಶಿಲಾಯುಗೀನ ಕಲ್ಮನೆ ಸಮಾಧಿಗಳಿವೆ. ಅಶೋಕನ ಎರಡು ಲಘುಪ್ರಸ್ತರ ಧರ್ಮಶಾಸನಗಳು ಸಿಕ್ಕಿದ್ದು ಗವಿಮಠ ಮತ್ತು ಪಾಲ್ಕಿಗುಂಡು ಬೆಟ್ಟಗಳಲ್ಲಿ. ಇವುಗಳಿಂದ ಕೊಪ್ಪಳ ಕ್ರಿ.ಪೂ.3ನೆಯ ಶತಮಾನದಷ್ಟು ಪ್ರಾಚೀನವಾದ್ದೆಂದು ಊಹಿಸಬಹುದು. ಕ್ರಿ.ಶ.9ನೆಯ ಶತಮಾನದಿಂದ 13ನೆಯ ಶತಮಾನದವರೆಗಿನ ಹಲವು ಶಿಲಾಶಾಸನಗಳೂ ಅನಂತರದ ಮುಸ್ಲಿಂ ದಾಖಲೆಗಳೂ ದೊರಕಿವೆ. ಕೊಪಣಪುರವರಾಧೀಶ್ವರರಾದ ಶಿಲಾಹಾರರ ಒಂದು ಶಾಖೆಗೆ ಇದು ರಾಜಧಾನಿಯಾಗಿದ್ದಿರಬಹುದು. ಗಂಗ ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕೊಪ್ಪಳ ಮುಖ್ಯ ಕೇಂದ್ರವಾಗಿದ್ದಿರಲೂಬಹುದು. ಇದನ್ನು ಶಾಸನ ಮತ್ತು ಸಾಹಿತ್ಯಗಳಲ್ಲಿ ಕೊಪಣ, ಕುಪಣ, ಕುಪಿನ ಎಂದು ಕರೆದಿರುವುದಲ್ಲದೆ, ಆದಿತೀರ್ಥ, ಮಹಾತೀರ್ಥ,ವಿದಿತ ಮಹಾ ಕೊಪಣನಗರ ಮುಂತಾಗಿ ಬಣ್ಣಿಸಲಾಗಿದೆ. ಒಂದು ಕಾಲದಲ್ಲಿ ಪ್ರಸಿದ್ಧ ಜೈನಕ್ಷೇತ್ರವಾಗಿತ್ತು. ಇಲ್ಲಿ 722 ಬಸದಿಗಳೂ 24 ಜೈನಸಂಘಗಳೂ ಇದ್ದುವೆಂದು ಹೇಳಲಾಗಿದೆ.ಇಲ್ಲಿ ಅನೇಕ ಜೈನಶಾಸನಗಳೂ ದೊರೆತಿವೆ.

ಇತಿಹಾಸಪ್ರಸಿದ್ಧವಾದ ಕೊಪ್ಪಳದ ಕೋಟೆಯನ್ನು ಕಟ್ಟಿದವರು ಯಾರೆಂಬುದು ತಿಳಿದಿಲ್ಲ. ಟಿಪ್ಪುಸುಲ್ತಾನ 1786ರಲ್ಲಿ ಇದನ್ನು ವಶಪಡಿಸಿಕೊಂಡು, ಫ್ರೆಂಚ್ ಶಿಲ್ಪಿಗಳ ನೆರವಿನಿಂದ ಇನ್ನೂ ಭದ್ರಪಡಿಸಿದನೆಂದು ತಿಳಿದುಬರುತ್ತದೆ. ಕಡಿದಾದ ಮೆಟ್ಟಿಲುಗಳನ್ನೊಳಗೊಂಡಿದೆ. ದಕ್ಷಿಣ ಭಾರತದ ದುರ್ಗಮ ಕೋಟೆಗಳಲ್ಲಿ ಕೊಪ್ಪಳ ಕೋಟೆಯೂ ಒಂದು. ಈ ಕೋಟೆಯನ್ನು 1790ರಲ್ಲಿ ಇಂಗ್ಲಿಷ್ ಮತ್ತು ನಿಜಾಮಿ ಪಡೆಗಳು ಸತತವಾಗಿ ಮುತ್ತಿಗೆ ಹಾಕಿದ್ದುಂಟು. 1858ರಲ್ಲಿ ಈ ದುರ್ಗ ಮುಂಡರಗಿ ಭೀಮರಾಯನ ವಶದಲ್ಲಿತ್ತು. 1949ರ ವರೆಗೆ ಕೊಪ್ಪಳ ನವಾಬ್ ಸಾಲಾರ್‌ಜಂಗನ ಜಹಗೀರಿಯಾಗಿತ್ತು. (ಜೆ.ಆರ್.ಪಿ.,ಎಚ್.ಆರ್.ಆರ್.ಬಿ.)

ಕೊಪ್ಪಳ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಖ್ಯ ಪಾತ್ರವಹಿಸಿತ್ತು. ಸಂಗ್ರಾಮದ ಜ್ವಾಲೆ 1858ರಲ್ಲಿ ಮುಂಡರಗಿ ಭೀಮರಾಯ (ನೋಡಿ) ಹಾಗೂ ಹಮ್ಮಿಗೆ ಕೆಂಚನಗೌಡ ಇವರ ಹೋರಾಟದಿಂದಲೇ ಪ್ರಾರಂಭವಾಯಿತೆನ್ನಬಹುದು. ಹೈದರಾಬಾದು ಕರ್ನಾಟಕದಲ್ಲಿ ಕೊಪ್ಪಳ ಭಾಗದಲ್ಲಿಯೇ ಮೊದಲಿಗೆ ರಾಜಕೀಯ ಚಟುವಟಿಕೆಗಳು ಕಂಡುಬಂದವು. ಬಹಳ ಮೊದಲೇ ಕೀರ್ತನಕೇಸರಿ ಜಯರಾಮಾಚಾರ್ಯರು ಪುರಾಣದ ಕಥೆಗಳಿಗೆ ರಾಜಕೀಯ ರಂಗು ಕೊಟ್ಟು ಸ್ಫೂರ್ತಿ ಹುಟ್ಟುವಂತೆ ಸ್ವಚ್ಛಂದ ಶೈಲಿಯಲ್ಲಿ ಕೀರ್ತನಗಳನ್ನು ಹೇಳತೊಡಗಿ ಕರ್ನಾಟಕದಲ್ಲೆಲ್ಲ ಅಸಹಕಾರ, ಕಾಯಿದೆ ಭಂಗ, ಖಾದಿ ಪ್ರಚಾರ, ನಿಧಿಸಂಗ್ರಹಗಳಿಗಾಗಿ ಅದನ್ನು ಬಳಸಿಕೊಡರು. ಪುಟ್ಟಾಭಟ್ಟ ಜಹಗೀರದಾರ ಮತ್ತು ಹೊಸಪೇಟೆಯ ಚಕ್ರಪಾಣಿ ಆಚಾರ್ಯರು ಈ ಭಾಗದಲ್ಲಿ ಖಾದಿ ಪ್ರಚಾರ ಮಾಡಿದರು.

ಇಲ್ಲಿಯವರಾದ ಬಸವಂತರಾವ್ ಕಾಟರಹಳ್ಳಿ ಮತ್ತು ಹಿರೇಮಠ ಅವರು ಹೈದರಾಬಾದಿನಲ್ಲಿ ಪೋಲಿಸರ ಕಣ್ಣುತಪ್ಪಿಸಿ ರಾಷ್ಟ್ರಧ್ವಜ ಹಾರಿಸಿದರು. 1928ರಷ್ಟು ಮುಂಚೆಯೇ ಕಾಂಗ್ರೆಸ್ಸನ್ನು ಸೇರಿದವರಲ್ಲಿ ಪ್ರಮುಖರೆಂದರೆ ಕೊಪ್ಪಳದವರಾದ ಎಚ್.ಕೊಟ್ರಪ್ಪ, ಹಂಪಿ ನರಸಿಂಗರಾವ್ ಮತ್ತು ಸಿರೂರು ವೀರಭದ್ರಪ್ಪನವರು. ನಿಜಾಮ್ ಮತ್ತು ಬ್ರಿಟಿಷ್ ಸರ್ಕಾರ ಇವರಿಗೆ ಬಹಳ ತೊಂದರೆ ಕೊಟ್ಟಿತ್ತು. 1938ರಲ್ಲಿ ಹೈದರಾಬಾದಿನಲ್ಲಿ ನಡೆದ ವಂದೇ ಮಾತರಂ ವಿದ್ಯಾರ್ಥಿ ಆಂದೋಲನದಲ್ಲಿ ಮತ್ತು 1941ರಲ್ಲಿ ನಡೆದ ವೈಯಕ್ತಿಕ ಸತ್ಯಾಗ್ರಹದಲ್ಲಿ ಕೊಪ್ಪಳದ ವಿದ್ಯಾರ್ಥಿ ಮುಖಂಡ ಇಟಗಿ ವಿರೂಪಾಕ್ಷಯ್ಯನವರ ನೇತೃತ್ವದಲ್ಲಿ ಅನೇಕರು ಸೆರೆಮನೆ ಸೇರಿದರು. ಈ ಭಾಗದಲ್ಲಿದ್ದ ಕುಕನೂರಿನ ವಿದ್ಯಾವಂತ ಗುರುಕುಲ ಅದರ ಸಂಸ್ಥಾಪಕರಾದ ರಾಘವೇಂದ್ರರಾವ್ ದೇಸಾಯಿ ಅವರ ಮುಂಧೋರಣೆಯಿಂದ ರಾಜಕೀಯ ಜಾಗೃತಿಯಲ್ಲಿ ಬಹಳ ಮಹತ್ವದ ಪಾತ್ರ ವಹಿಸಿತು. ಈ ಹೊತ್ತಿಗೆ ನಗರದ ಪ್ರಮುಖ ವಕೀಲರನೇಕರು ರಾಜಕೀಯದಲ್ಲಿ ದುಮುಕಿದರು. ಹಳ್ಳಿಹಳ್ಳಿಗಳಲ್ಲಿ ವಾಚನಾಲಯಗಳು ಸ್ಥಾಪನೆಯಾದವು. ಚಲೇಜಾವ್ ಚಳವಳಿಯಿಂದಾರಂಭಿಸಿ ಸ್ವಾತಂತ್ರ್ಯದವರೆಗೆ ಈ ಭಾಗದಲ್ಲಿ ಆದ ಹೆಚ್ಚಿನ ಜಾಗೃತಿ ಮುಖಂಡರಾದ ಜನಾರ್ದನರಾವ್ ದೇಸಾಯಿ (ವಕೀಲರು), ಪ್ರಾಣೇಶಾಚಾರ್ ಮುಂತಾದವರ ಲಕ್ಷ್ಯವನ್ನು ಸೆಳೆಯಿತು. ತಂಡತಂಡವಾಗಿ ಸತ್ಯಾಗ್ರಹಿಗಳು ಕೊಪ್ಪಳಕ್ಕೆ ಬಂದು ಸೇರಿಯಾದರು. ಭಾರತ ಸ್ವತಂತ್ರವಾದರೂ ಇನ್ನೂ ಜಾಗೀರಾಗಿ ಉಳಿದಿದ್ದ ಕೊಪ್ಪಳ ಭಾಗದಲ್ಲಿ ಅನೇಕ ಕಡೆ ಜನರು ರಾಷ್ಟ್ರಧ್ವಜವನ್ನು ಹಾರಿಸಿ ಸ್ವಾತಂತ್ರ್ಯ ಘೋಷಿಸಿ ಮತ್ತೆ ಸೆರೆಮನೆಗೆ ಹೋದರು. ಈ ಚಳವಳಿಯೇ ಪ್ರಬಲವಾಗಿ ಹೈದರಾಬಾದ್ ಸ್ವಾತಂತ್ರ್ಯಾಂದೋಳನದ ಸ್ವರೂಪ ತಳೆಯಿತು. ಚಳವಳಿ ಹೆಚ್ಚಿದಂತೆ ನಿಜಾಮರ ದಬ್ಬಾಳಿಕೆ ಹೆಚ್ಚಾದಾಗ ಕೊಪ್ಪಳ ಭಾಗದಿಂದ ಜೇಲು ಸೇರಿದ ಬೆಣಕಲ್ ಭೀಮಸೇನರಾವ್ ಎಂಬ ತರುಣ ಸತ್ಯಾಗ್ರಹಿ ಗುಲ್ಬರ್ಗ ಜೈಲಿನಲ್ಲಿ ನಡೆದ ಲಾಠಿ ಪ್ರಹಾರದಲ್ಲಿ ಮೃತನಾದ. ಜನ ರೊಚ್ಚಿಗೆದ್ದರು. ಗದಗಿನಲ್ಲಿ ಪ್ರಾದೇಶಿಕ ಸ್ಟೇಟ್ ಕಾಂಗ್ರೆಸ್ ಕೇಂದ್ರವನ್ನು ತೆರೆದರು. ನಿರಾಶ್ರಿತರಾಗಿ ಹೊರಬರುವ ಕುಟುಂಬಗಳ ವ್ಯವಸ್ಥೆ ಮಾಡಬೇಕಾಯಿತು. ಕೊಪ್ಪಳದ ಗಡಿಯ ಸುತ್ತ ಕಾಂಗ್ರೆಸಿನ ಕಾರ್ಯಕರ್ತರ ಸಶಸ್ತ್ರ ಶಿಬಿರಗಳು ಏರ್ಪಟ್ಟವು. ನಿಜಾಮರ ಪೊಲೀಸು, ಸೈನ್ಯ ಮತ್ತು ರಜಾಕಾರರ ವಿರುದ್ಧ ದಾಳಿ, ಕಚೇರಿಗಳ ನಾಶ ಮೊದಲಾದವು ನಡೆದವು. ಗಡಿಭಾಗದ ಅನೇಕ ಹಳ್ಳಿಗಳು ಸಂಪೂರ್ಣವಾಗಿ ಈ ಕಾರ್ಯಕರ್ತರ ಅಧೀನವಾದವು. ಹೀಗೆ ನಿಜಾಮರ ಸತ್ತೆಯನ್ನು ನಿಷ್ಕ್ರಿಯೆಗೊಳಿಸುವ ಆಂದೋಲನ ತೀವ್ರಗೊಂಡಾಗ ಭಾರತ ಸರ್ಕಾರದಿಂದ ಪೊಲೀಸ್ ಕಾರ್ಯಾಚರಣೆ ನಡೆದು ಹೈದರಾಬಾದಿನೊಂದಿಗೆ ಕೊಪ್ಪಳವೂ ಸ್ವತಂತ್ರವಾಯಿತು. (ಜೆ.ಆರ್.ಪಿ.)

**ಕೊರಟಗೆರೆ :** ತುಮಕೂರು ಜಿಲ್ಲೆಯ ಮಧುಗಿರಿ ಉಪವಿಭಾಗಕ್ಕೆ ಸೇರಿದ ತಾಲ್ಲೂಕು ಮತ್ತು ಅದರ ಕೇಂದ್ರ. ದಕ್ಷಿಣಕ್ಕೆ ತುಮಕೂರು, ಪಶ್ಚಿಮ ಮತ್ತು ಉತ್ತರಕ್ಕೆ ಶಿರಾ ಮತ್ತು ಮಧುಗಿರಿ ತಾಲ್ಲೂಕುಗಳು ಮತ್ತು ಪೂರ್ವಕ್ಕೆ ಕೋಲಾರ ಜಿಲ್ಲೆ ಸುತ್ತುವರಿದಿವೆ. ವಿಸ್ತೀರ್ಣ 648.1ಚ.ಕಿಮೀ. ಜನಸಂಖ್ಯೆ 1,60,669. 251 ಗ್ರಾಮಗಳಿವೆ. ಕಸಬ, ಚನ್ನರಾಯನದುರ್ಗ, ಹೊಳವನಹಳ್ಳಿ ಮತ್ತು ಕೋಳಾಲ ಹೋಬಳಿಗಳು.

ತಾಲ್ಲೂಕಿನ ಬಹು ಭಾಗ ಕಣಶಿಲೆಯ ಬೆಟ್ಟಗುಡ್ಡಗಳಿಂದಲೂ ಅವುಗಳ ನಡುವೆ ತಗ್ಗಿನ ಕಣಿವೆಗಳಿಂದಲೂ ಕೂಡಿದ ಪ್ರದೇಶ. 1138ಮೀ. ಎತ್ತರವಿರುವ ಚನ್ನರಾಯನದುರ್ಗ, 879ಮೀ. ಇರುವ ಕೊರಟಗಿರಿ ಈ ತಾಲ್ಲೂಕಿನಲ್ಲಿವೆ. ಚನ್ನರಾಯನದುರ್ಗದಲ್ಲಿ ಸುವರ್ಣಮುಖಿ ನದಿ ಹುಟ್ಟಿ ತಾಲ್ಲೂಕಿನಲ್ಲಿ 24ಕಿಮೀ ದೂರ ಹರಿದು ರಾಮಪುರದ ಹತ್ತಿರ ಜಯಮಂಗಲಿ ನದಿಯನ್ನು ಸೇರುತ್ತದೆ. ಈ ನದಿಗೆ ಅಡ್ಡಗಟ್ಟೆ ಹಾಕಿ ಚೋರನ ಕಣಿವೆ ಜಲಾಶಯವನ್ನು ನಿರ್ಮಿಸಲಾಗಿದೆ. ದೇವರಾಯನ ದುರ್ಗದಿಂದ ಹರಿಯುವ ಗರುಡಾಚಲ ತೊರೆ ಈ ತಾಲ್ಲೂಕಿನಲ್ಲಿ ಹರಿದು ಹೊಳವನಹಳ್ಳಿಯ ಬಳಿ ಜಯಮಂಗಲಿ ನದಿಯನ್ನು ಸೇರುತ್ತದೆ.

ವರ್ಷಕ್ಕೆ ಸರಾಸರಿ 594.27ಮಿಮೀ. ಮಳೆಯಾಗುತ್ತದೆ. ಆಲ, ಹುಣಿಸೆ, ತೇಗ, ದೂಪ, ಹೊನ್ನೆ ಮರ ಇಲ್ಲಿನ ಅರಣ್ಯೋತ್ಪನ್ನಗಳು, ಮಳೆ ಕಡಿಮೆಯಾಗಿದ್ದರಿಂದ ಕೆರೆ ಮತ್ತು ನೀರಾವರಿ ಬಾವಿಗಳ ಮೇಲೆ ಅವಲಂಬನೆ ಹೆಚ್ಚು. ರಾಗಿ, ಜೋಳ, ಬತ್ತ, ನೆಲಗಡಲೆ, ಕಬ್ಬು, ಮೆಣಸಿನಕಾಯಿ ಮತ್ತು ದ್ವಿದಳಧಾನ್ಯ ತಾಲ್ಲೂಕಿನ ಮುಖ್ಯಬೆಳೆಗಳು.

ಕೊರಟಗೆರೆ ಬೆಟ್ಟ

ಅಗ್ರಹಾರ, ಅಕ್ಕಿರಾಮಪುರ, ಬೂದಗಾವಿ, ಹೊಳವನಹಳ್ಳಿ, ಕ್ಯಾಮೇನಹಳ್ಳಿ ಮತ್ತು ತುಂಬಡಿ ಇವು ಕೊರಟಗೆರೆ ತಾಲ್ಲೂಕಿನ ಮುಖ್ಯ ಗ್ರಾಮಗಳು. ಅಗ್ರಹಾರ ಸಾಂಪ್ರದಾಯಿಕ ವಿದ್ಯಾಕೇಂದ್ರವಾಗಿದ್ದು ಅಲ್ಲಿ ವೀರಭದ್ರ ದೇವಾಲಯವಿದೆ. ಅಕ್ಕಿರಾಮಪುರದಲ್ಲಿ ಹೈದರನ ಕಾಲದಲ್ಲಿ ಪುನರ್ನಿರ್ಮಾಣ ಮಾಡಲಾದ ವೆಂಕಟರಮಣ ದೇವಾಲಯವಿದೆ. ಬೂದಗಾವಿಯಲ್ಲಿ ಸಿದ್ಧರ ಬೆಟ್ಟವಿದ್ದು ಅಲ್ಲಿ ಗೋಸಲ ಸಿದ್ಧೇಶ್ವರಸ್ವಾಮಿಯ ಸಮಾಧಿ ಇದೆ. ಇಲ್ಲಿಯ ಗುಹಾದೇವಾಲಯದ ಬಳಿ ಇರುವ ಬುಗ್ಗೆ ಸುವರ್ಣಮುಖಿಯ ಮೂಲವೆನ್ನುತ್ತಾರೆ. ಕೊರಟಗೆರೆಯ ಪೂರ್ವದಲ್ಲಿ 6ಕಿಮೀ. ದೂರದಲ್ಲಿರುವ ಹೊಳವನಹಳ್ಳಿ ಜಯಮಂಗಲಿ ನದಿ ದಡದಲ್ಲಿದೆ. ಇಲ್ಲೊಂದು ರಾಘವೇಂದ್ರಸ್ವಾಮಿ ಬೃಂದಾವನವಿದೆ. ಹೊಳವನಹಳ್ಳಿಗೆ ಸಮೀಪದಲ್ಲಿರುವ ಕ್ಯಾಮೇನಹಳ್ಳಿಯಲ್ಲಿ ವರ್ಷಕ್ಕೊಮ್ಮೆ ಜರುಗುವ ಆಂಜನೇಯ ಸ್ವಾಮಿ ಜಾತ್ರೆ ಪ್ರಸಿದ್ಧವಾದದ್ದು. ತುಂಬಡಿ ಪ್ರಾಚೀನ ಗ್ರಾಮ. ಗಂಗದೊರೆ ಎರೆಯಪ್ಪನ ಆಜ್ಞೆಯ ಮೇಲೆ ನೊಳಂಬರೊಡನೆ ನಾಗತ್ತರ ಎಂಬುವನು ಇಲ್ಲಿ ಕಾದು ಮಡಿದನೆಂದು ತಿಳಿಸುವ ಒಂದು ಶಾಸನ ಇದೆ. ಇದಕ್ಕೆ ತುಂದೇವಾಡಿ ಎಂದು ಹೆಸರಿತ್ತೆಂದು ಶಾಸನದಿಂದ ತಿಳಿದುಬರುತ್ತದೆ.

ತಾಲ್ಲೂಕಿನ ಕೇಂದ್ರವಾದ ಕೊರಟಗೆರೆ, ಮಧುಗಿರಿ ರಸ್ತೆಯಲ್ಲಿ ತುಮಕೂರಿನಿಂದ 20ಕಿಮೀ ಈಶಾನ್ಯಕ್ಕೆ ಸುವರ್ಣಮುಖಿ ನದಿ ಎಡದಂಡೆಯ ಮೇಲಿದೆ. ಜನಸಂಖ್ಯೆ 13638. ಇಲ್ಲಿಂದ ತುಮಕೂರು, ಮಧುಗಿರಿ, ಗುಬ್ಬಿ, ಶಿರಾ ಇವುಗಳಿಗೆ ನೇರ ರಸ್ತೆಗಳಿವೆ. ಕೊರಟಗೆರೆ ಮಾವತ್ತೂರು ರಸ್ತೆ ಬೆಂಗಳೂರು - ಗುಂತಕಲ್ ರೈಲುಮಾರ್ಗದಲ್ಲಿರುವ ತೊಂಡೆಬಾವಿಗೂ ಹೋಗುತ್ತದೆ.

ಕೊರಟಗೆರೆಯಲ್ಲಿ ಹತ್ತಿ ಉಣ್ಣೆ ನೇಯ್ಗೆಯವರ, ಬಿದಿರು ಕೆಲಸಗಾರರ ಮತ್ತು ಕುಂಬಾರರ ಸಹಕಾರ ಸಂಘಗಳಿವೆ.

ಹೊಳವನಹಳ್ಳಿಯ ಪಾಳೆಯಗಾರನೊಬ್ಬ ಕೊರಟಗೆರೆಯ ಕೋಟೆ ಮತ್ತು ಪೇಟೆಯನ್ನು ಸ್ಥಾಪಿಸಿ, ಪಾಳೆಯಪಟ್ಟಿನ ರಾಜಧಾನಿ ಮಾಡಿಕೊಂಡಿದ್ದ. ಕೋಟೆಯನ್ನು ಟಿಪ್ಪುಸುಲ್ತಾನ್ ಕೆಡವಿಸಿದ್ದರಿಂದ ಅದು ಹಾಳಾಗಿದೆ. ಊರಿನಲ್ಲಿ ಗೋಕುಲದ ಆಂಜನೇಯ ದೇವಾಲಯವುಂಟು. ಅದರ ಬಳಿ ಪಾಳೆಯಗಾರರ ಕುಲದ ಬಯ್ಯಮ್ಮ ಎಂಬುವಳು ಕಟ್ಟಿಸಿದ್ದೆನ್ನುವ ಒಂದು ಕೊಳವಿದೆ. ಹಿಂದೆ ಈ ಊರಿನಲ್ಲಿ ಗಾಜಿನ ಬಳೆ ಕೈಗಾರಿಕೆ ಇತ್ತು.

ಸಮೀಪದ ಕೊರಟಗೆರೆ ಬೆಟ್ಟದ ಮೇಲೆ ಕೋಟೆಯ ಅವಶೇಷಗಳನ್ನು ಕಾಣಬಹುದು. ಇದರ ಒಂದು ಬಾಗಿಲ ಬಳಿ ಹಿಂದೆ ಟಂಕಸಾಲೆ ಇತ್ತೆಂದು ಹೇಳಲಾಗಿದೆ. ಬೆಟ್ಟದ ಮಧ್ಯ ಎತ್ತರದಲ್ಲಿರುವುದು ಗಂಗಾಧರೇಶ್ವರ ದೇವಾಲಯ. ಬೆಟ್ಟದ ನೆತ್ತಿಯ ಮೇಲೆ ಒಂದು ಬಸವಣ್ಣನ ಗುಡಿ ಇದೆ. *

**ಕೊರವಂಜಿ :** ನಗೆ ಲೇಖನಗಳಿಗೇ ಮೀಸಲಾಗಿದ್ದ ಕನ್ನಡ ಮಾಸಪತ್ರಿಕೆ. ಸ್ಥಾಪನೆ 1942ರಲ್ಲಿ. ಪ್ರತಿ ತಿಂಗಳೂ ಒಂದನೆಯ ತಾರೀಖಿನಂದು ಪ್ರಕಟವಾಗುತ್ತಿತ್ತು. ಸಂಪಾದಕರು ರಾ.ಶಿ.(ಎಂ.ಶಿವರಾಂ). ಸಂಪಾದನ ಕಾರ್ಯದಲ್ಲಿ ನಾ.ಕಸ್ತೂರಿಯವರ ಸಹಕಾರ ವಿತ್ತು. ಕೊರವಂಜಿಯ ಮೊದಲ ಸಂಚಿಕೆ ಚಿತ್ರಭಾನು ಸಂವತ್ಸರದ ಉಗಾದಿ ಯಂದು ಹೊರಬಿತ್ತು. ವಾರ್ತೆ ಮತ್ತು ಘಟನೆಗಳನ್ನು ತಿಳಿಹಾಸ್ಯದ ಹಿನ್ನೆಲೆಯಲ್ಲಿ ಕಣಿ ಹೇಳುವಂತೆ ವರದಿ ಮಾಡುವುದು ಈ ಪತ್ರಿಕೆಯ ಗುರಿಯಾಗಿತ್ತು. ಕಣಿ ಹೇಳಲು ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳನ್ನು ಬಳಸಿ ಕೊಂಡದ್ದೇ ಅಲ್ಲದೆ ಪ್ರಪಂಚದ ಇತರ ಭಾಷಾ ಸಾಹಿತ್ಯದಲ್ಲಿ ನೂತನವಾಗಿ ಬಂದ ಪ್ರಕಾರಗಳನ್ನೂ ಕನ್ನಡಕ್ಕೆ ಅಳವಡಿಸಿ ಕೊಂಡಿತು. ಪಂಚ ಪಂಕ್ತಿ ಲಿಮರಿಕ್ಸ್ ಅಣಕವಾಡು, ಲಘುಪದ್ಯ, ಹರಟೆ, ಕಿರುನಾಟಕ ಮುಂತಾದ ಹೊಸ ಪ್ರಕಾರಗಳನ್ನು ಒದಗಿಸಿಕೊಟ್ಟಿತು.




ತಿಳಿವಿಗಾಗಲಿ, ತಿಳಿ ಹಾಸ್ಯಕ್ಕಾಗಲಿ ಇರಬೇಕಾದ ದೃಷ್ಟಿಯನ್ನು ಕನ್ನಡಿಗರಲ್ಲಿ ಕೊರವಂಜಿ ಪ್ರಚಾರ ಮಾಡಿತು. ವಿವಿಧ ಹಂತಗಳ ಜನರ ಮನೋಧರ್ಮಕ್ಕನುಗುಣವಾಗಿ ರಂಜನೀಯ ಲೇಖನಗಳು ಕೊರವಂಜಿಯಲ್ಲಿ ಪ್ರಕಟವಾಗುತ್ತಿದ್ದವು. ಇದು 25 ವರ್ಷಗಳ ಕಾಲ ನಡೆಯಿತು.

ದಾಶರಥಿದೀಕ್ಷಿತ್, ಟಿ.ಸುನಂದಮ್ಮ, ರಾಮಿ, ಕೇಫ, ಅ.ರಾ.ಸೇ., ಇವರ ಜೊತೆಗೆ ಶಿವರಾಮಕಾರಂತ, ಶ್ರೀರಂಗ, ಜಿ.ಪಿ.ರಾಜರತ್ನಂ ಮೊದಲಾದ ಹಿರಿಯರ ಲೇಖನಗಳಿಂದಲೂ ಆರ್.ಕೆ.ಲಕ್ಷ್ಮಣ್ ಮೊದಲಾದವರ ವ್ಯಂಗ್ಯಚಿತ್ರಗಳಿಂದಲೂ ಕೊರವಂಜಿ ರಂಜಿಸಿತು.

ಕೊರವಂಜಿ ಪ್ರಪಂಚದ ಇತರ ಭಾಷೆಗಳ ಹಾಸ್ಯ ಸಾಹಿತ್ಯಕ್ಕೆ ಸಮನಾಗಿ, ಕೆಲವು ವೇಳೆ ಅವುಗಳನ್ನು ಮೀರಿಸಬಲ್ಲ ಔನ್ನತ್ಯವನ್ನು ಸಾಧಿಸಿತ್ತು. ಬೆಳ್ಳಿಯ ಹಬ್ಬವನ್ನು ಆಚರಿಸುವ ಬದಲು ಪತ್ರಿಕೆ ಆರ್ಥಿಕ ಮುಗ್ಗಟ್ಟಿನಿಂದ ನಿಂತುಹೋಯಿತು (1967). ಪತ್ರಿಕೆ ನಿಂತುಹೋದರೂ ಕೊರವಂಜಿ ಸೃಷ್ಟಿಸಿದ ಹಾಸ್ಯ ಲೇಖನ ಪ್ರಕಾರ ಕನ್ನಡ ಸಾಹಿತ್ಯದಲ್ಲಿ ಬೆಳೆದುಕೊಂಡು ಬರುತ್ತಿದೆ (ನೋಡಿ:ಶಿವರಾಂ,ಎಂ). (ಎಂ.ಎಸ್.)

**ಕೊರ್ವ :** ಕೃಷ್ಣಾ ನದಿ ಸುತ್ತುವರಿದಿರುವ ಒಂದು ಸುಂದರ ದ್ವೀಪ ಮತ್ತು ಪುಣ್ಯಕ್ಷೇತ್ರ. ರಾಯಚೂರು ತಾಲ್ಲೂಕಿನಲ್ಲಿ ರಾಯಚೂರು ನಗರಕ್ಕೆ ಈಶಾನ್ಯದಲ್ಲಿ 29ಕಿಮೀ ದೂರದಲ್ಲಿದೆ. ನಾರದಮಹರ್ಷಿ ಈ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಿದ್ದರಿಂದ ಇದನ್ನು ನಾರದಗಡ್ಡೆ ಎಂತಲೂ ಕರೆಯುವರು. ನಾರದ ದೇವಾಲಯವೂ ಒಂದು ವೀರಶೈವ ಮಠವೂ ವೈರಾಗ್ಯ ಚೆನ್ನಬಸವಸ್ವಾಮಿಯ ಸಮಾಧಿಯೂ ಶಿವಯೋಗ ಪೀಠ ಮತ್ತು ಬಸವಣ್ಣ ದೇವಾಲಯವೂ ಇವೆ. ಪ್ರತಿವರ್ಷ ಫಾಲ್ಗುಣದಲ್ಲಿ ನಡೆಯುವ ಜಾತ್ರೆಗೆ ಸಾವಿರಾರು ಮಂದಿ ಸೇರುತ್ತಾರೆ. ದನದ ಜಾತ್ರೆಯೂ ನಡೆಯುತ್ತದೆ. ಕಂಬಳಿ, ಹಿತ್ತಾಳೆ ಪಾತ್ರೆಗಳ ಮತ್ತು ಎತ್ತಿನ ಬಂಡಿ ಮತ್ತು ಎತ್ತುಗಳನ್ನು ಕೊಳ್ಳುವ - ಮಾರುವ ವ್ಯಾಪಾರ ನಡೆಯುತ್ತದೆ.

ನಾರದಗಡ್ಡೆಗೆ ಹತ್ತಿರವಿರುವ ಕೂರ್ಮಗಡ್ಡೆಯೂ ಕೃಷ್ಣಾನದಿ ಸುತ್ತುವರಿದಿರುವ ಒಂದು ದ್ವೀಪ. ಇದನ್ನು ಕುರುಮ ಕ್ಷೇತ್ರವೆಂದೂ ಕರೆಯುತ್ತಾರೆ. ಇಲ್ಲಿ ದತ್ತಾತ್ರೇಯ ಪೀಠ ಮತ್ತು ಶ್ರೀಪಾದವಲ್ಲಭ ಸ್ವಾಮಿಯ ಸಮಾಧಿ ಇವೆ. ದತ್ತಾತ್ರೇಯನ ಮೂಲ ಸ್ಥಾನವೆಂದು ಈ ಸ್ಥಳವನ್ನು ಪರಿಗಣಿಸಿರುವುದರಿಂದ ಇದೊಂದು ಪುಣ್ಯಕ್ಷೇತ್ರವಾಗಿದೆ. ಇಲ್ಲಿರುವ ದತ್ತಾತ್ರೇಯ ಮಂದಿರಕ್ಕೆ ವರ್ಷವಿಡೀ ಯಾತ್ರಿಕರು ಬರುತ್ತಾರೆ. *

**ಕೊಲ್ಲೂರು :** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ 42ಕಿಮೀ ದೂರದಲ್ಲಿರುವ ಒಂದು ಊರು. ಕರ್ನಾಟಕದ ಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಒಂದು.

ಕುಂದಾಪುರ, ಬೈಂದೂರು, ನಾಗೋಡಿಗಳಿಂದ ಬಸ್ ಸೌಕರ್ಯವಿರುವ ಈ ಊರಿಗೆ ಕರ್ನಾಟಕ ಮತ್ತು ಕೇರಳದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಇಲ್ಲಿರುವ ಮೂಕಾಂಬಿಕೆಯ ಸ್ವಯಂಭು ಉದ್ಭವಲಿಂಗ 28ನೆಯ ದ್ವಾಪರಯುಗದಲ್ಲಿ ವೈವಸ್ವತ ಮನ್ವಂತರದಲ್ಲಿ ಕೋಲಮುನಿಯ ಪ್ರಾರ್ಥನೆಯಿಂದ ಪ್ರಕಟವಾಯಿತೆಂದೂ ಈ ಲಿಂಗದಲ್ಲಿ ಪರಾಶಕ್ತಿ ಪರಶಿವನೊಡಗೂಡಿ ಸದಾ ಸನ್ನಿಹಿತಳಾಗಿದ್ದುಕೊಂಡು ಭಕ್ತಜನರನ್ನು ಅನುಗ್ರಹಿಸುತ್ತ ಇರುವಳೆಂದೂ ಮೂಕಾಂಬಿಕೆ ಮೂಕಾಸುರನನ್ನು ಸಂಹರಿಸಿದಳೆಂದೂ ಆ ದೇವಿ ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯರ ತ್ರಿಗುಣಸಮನ್ವಿತೆಯಾಗಿರುವಳೆಂದೂ ಪುರಾಣ ಪ್ರಸಿದ್ಧವಾಗಿದೆ. ಶಂಕರಾಚಾರ್ಯರು ಇಲ್ಲಿಗೆ ಬಂದಿದ್ದ ಉಲ್ಲೇಖವಿದೆ.

ಕೊಲ್ಲೂರಿನಿಂದ ಸುಮಾರು 22ಕಿಮೀ ದೂರದಲ್ಲಿ ಕೊಡಚಾದ್ರಿ (ನೋಡಿ) ಇದೆ. ಇಲ್ಲಿ ಹುಟ್ಟುವ ಸೌಪರ್ಣಿಕಾ ನದಿ ಕೊಲ್ಲೂರ ದೇವಾಲಯದ ಸಮೀಪವೇ ಹರಿಯುತ್ತದೆ. ಸುಪರ್ಣನೆಂಬ ಗರುಡ ಈ ನದಿಯ ತೀರದಲ್ಲಿ ತಪಸ್ಸನ್ನಾಚರಿಸಿ ಸಿದ್ಧಿಪಡೆದನೆನ್ನುವುದರಿಂದ ಇದಕ್ಕೆ ಈ ಹೆಸರು ಬಂದಿದೆ.

ಮೂಕಾಂಬಿಕಾ ದೇವಾಲಯ

ಈಗಿರುವ ಶಿಲಾದೇವಾಲಯವನ್ನು ಕೊಲ್ಲೂರಿನಿಂದ ಸು.5ಕಿಮೀ ದೂರದ ಹಾಲ್ಕಲ್ ಎಂಬಲ್ಲಿ ಕೋಟೆ ಕಟ್ಟಿಕೊಂಡಿದ್ದ ಹೊನ್ನಕಂಬಳಿಯ ಪಾಳೆಯಗಾರ ಬಂಕಿ ಅರಸರ ವಂಶದ ಸಂಕಣ್ಣ ಸಾಮಂತರ ಅಳಿಯ ವೆಂಕಣ್ಣ ಸಾಮಂತ ಶಾ.ಶ. 1140ರಲ್ಲಿ (1218) ಕಟ್ಟಿಸಿದನೆಂದು ತಾಳೆಯೋಲೆಯ ಪುಸ್ತಕಗಳಲ್ಲಿ ಉಲ್ಲೇಖವಿದ್ದರೂ ಇದರ ಕಾಲ ಅಸ್ಪಷ್ಟ. ಕೆಳದಿಯ ವೆಂಕಟಾದ್ರಿನಾಯಕ ಮತ್ತು ವಿಜಯನಗರದ ವೀರವಿರೂಪಾಕ್ಷರಾಯ ಈ ದೇವಾಲಯದ ಪೂಜಾದಿಗಳಿಗೆ ಭೂಮಿದತ್ತಿ ಬಿಟ್ಟಿರುವುದು ತಾಮ್ರ ಮತ್ತು ಶಿಲಾಶಾಸನಗಳಿಂದ ತಿಳಿದುಬರುತ್ತದೆ. ದೇವಾಲಯದಲ್ಲಿರುವ ಲೋಹದ ಪಂಚಮುಖ ಗಣೇಶ ವೈಶಿಷ್ಟ್ಯ ಪೂರ್ಣವಾದ ಸುಂದರ ವಿಗ್ರಹ. ದೇವಾಲಯದ ಸುತ್ತ ಕೆಲವು ಸಣ್ಣ ಗುಡಿಗಳೂ ಶಂಕರಾಚಾರ್ಯರು ಸ್ಥಾಪಿಸಿದರೆನ್ನುವ ಚಂದ್ರಮೌಳೀಶ್ವರ ಗುಡಿಯೂ ಇವೆ.

ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಇಲ್ಲಿ ಮಹಾರಥೋತ್ಸವ ನಡೆಯುತ್ತದೆ. ಶರನ್ನವರಾತ್ರಿಯಲ್ಲಿ ವಿಶೇಷ ಉತ್ಸವಗಳು ನಡೆಯುತ್ತವೆ. ಇಲ್ಲೊಂದು ಪ್ರೌಢಶಾಲೆ ಇದೆ. (ಎಚ್.ಜಿ.)

**ಕೊಲ್ಲೂರು ನದಿ :** ಉಡುಪಿ ಜಿಲ್ಲೆಯ ಒಂದು ನದಿ. ಸೌಪರ್ಣಿಕಾ ಎಂದೂ ಹೆಸರು. ಉದ್ದ ಸು.48ಕಿಮೀ. ಪಶ್ಚಿಮಘಟ್ಟಗಳ ಕೊಡಚಾದ್ರಿ ಶಿಖರದ ಬಳಿ ಹುಟ್ಟಿ ಕುಂದಾಪುರ ತಾಲ್ಲೂಕಿನ ಉತ್ತರ ಭಾಗದಲ್ಲಿ ಪಶ್ಚಿಮಘಟ್ಟಗಳಿಂದ ಕರಾವಳಿಯ ಹತ್ತಿರದವರೆಗೆ ಪಶ್ಚಿಮಾಭಿಮುಖವಾಗಿಯೂ ಅಲ್ಲಿಂದ 15ಕಿಮೀ ದೂರ ದಕ್ಷಿಣಾಭಿಮುಖವಾಗಿ ಕರಾವಳಿಯುದ್ದಕ್ಕೂ

ಹರಿದು ಅರಬ್ಬೀಸಮುದ್ರದಿಂದ ಅನತಿದೂರದಲ್ಲಿ ಕುಂದಾಪುರದ ಬಳಿ ಗಂಗೊಳ್ಳಿ ನದಿಯನ್ನು ಸೇರುವುದು. ಈ ನದಿ ಹರಿಯುವ ಪ್ರದೇಶಗಳಲ್ಲಿ ತುಂಬ ಮಳೆ ಬೀಳುವ ಕಾರಣ ಬಹಳಷ್ಟು ನೀರಿನಿಂದ ತುಂಬಿ ಹರಿಯುವುದು. ಗಂಗೊಳ್ಳಿಪೇಟೆಗೆ 4ಕಿಮೀ ಉತ್ತರದಲ್ಲಿ ಚಕ್ರನದಿ ಎಂಬ ಇನ್ನೊಂದು ಉಪನದಿ ಕೊಲ್ಲೂರು ನದಿಯನ್ನು ಸೇರುವುದು. ಕೊಲ್ಲೂರು ನದಿ ಜಲಯಾನಕ್ಕೆ ಯೋಗ್ಯವಾಗಿದೆ. ಇದು ಗಂಗೊಳ್ಳಿ ನದಿಯನ್ನು ಸೇರುವಲ್ಲಿ ವಿಶಾಲವಾದ ಕುದುರು ಪ್ರದೇಶವನ್ನುಂಟುಮಾಡಿರುವುದು. ಕೊಲ್ಲೂರು ಮೂಕಾಂಬಿಕಾ ಕ್ಷೇತ್ರ ಈ ನದಿಯ ಸಮೀಪದಲ್ಲಿಯೆ ಇದೆ. (ಟಿ.ಪಿ.ಎಸ್.ಆರ್)

**ಕೊಳ್ಳೇಗಾಲ :** ಚಾಮರಾಜನಗರ ಜಿಲ್ಲೆಯಲ್ಲಿ ಪೂರ್ವದ ಕೊನೆಯಲ್ಲಿರುವ ತಾಲ್ಲೂಕು ಮತ್ತು ಅದರ ಮುಖ್ಯಸ್ಥಳ. ಪಶ್ಚಿಮದಲ್ಲಿ ಚಾಮರಾಜನಗರ ತಾಲ್ಲೂಕು, ಯಳಂದೂರು ಮತ್ತು ತಿರುಮಕೂಡಲು ನರಸೀಪುರ ತಾಲ್ಲೂಕುಗಳು, ಉತ್ತರದಲ್ಲಿ ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳು, ಪೂರ್ವ ಮತ್ತು ದಕ್ಷಿಣದಲ್ಲಿ ತಮಿಳುನಾಡು ಇವೆ. ತಾಲ್ಲೂಕಿನ ವಿಸ್ತೀರ್ಣ 2,787.5ಚ.ಕಿಮೀ ಜನಸಂಖ್ಯೆ 336520. ತಾಲ್ಲೂಕಿನಲ್ಲಿ ಒಟ್ಟು 125 ಗ್ರಾಮಗಳಿವೆ. ಕೊಳ್ಳೇಗಾಲ ತಾಲ್ಲೂಕು 1956ರವರೆಗೆ ಮದರಾಸು ರಾಜ್ಯದ ಕೊಯಮುತ್ತೂರು ಜಿಲ್ಲೆಗೆ ಸೇರಿತ್ತು. ಆ ವರ್ಷ ರಾಜ್ಯಗಳ ಪುನರ್ವಿಂಗಡನೆಯಾದಾಗ ಮೈಸೂರು ಜಿಲ್ಲೆಗೆ ಸೇರಿತು.

ಪ್ರಾಕೃತಿಕವಾಗಿ ಕೊಳ್ಳೇಗಾಲ ತಾಲ್ಲೂಕು ಪ್ರಸ್ಥಭೂಮಿಯ ಒಂದು ಭಾಗ. ಅದರ ಆಗ್ನೇಯ ಅಂಚಿನಲ್ಲಿದೆ. ತಾಲ್ಲೂಕಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಪೂರ್ವಘಟ್ಟಗಳ ದಕ್ಷಿಣದ ಕವಲುಗಳು ಹರಡಿವೆ. ಪೂರ್ವದಲ್ಲಿರುವ ಬೆಟ್ಟಗಳಲ್ಲಿ ಮಹದೇಶ್ವರ ಬೆಟ್ಟ ಶ್ರೇಣಿ ಪ್ರಸಿದ್ಧವಾದುದು. ಪಶ್ಚಿಮದಲ್ಲಿ ಬಿಳಿಗಿರಿರಂಗನ ಬೆಟ್ಟದ ಶ್ರೇಣಿ ಇದೆ. ತಾಲ್ಲೂಕಿನ ವಾಯವ್ಯ, ಉತ್ತರ ಮತ್ತು ಪೂರ್ವದ ಅಂಚುಗಳಲ್ಲಿ ಕಾವೇರಿ ನದಿ ಹರಿಯುತ್ತದೆ. ಇದೇ ಆ ಭಾಗದ ಗಡಿರೇಖೆ ಸಹ. ಕಾವೇರಿ ನದಿಯ ಗಗನಚುಕ್ಕಿ ಭರಚುಕ್ಕಿ ಜಲಪಾತಗಳು ಈ ತಾಲ್ಲೂಕಿನ ವಾಯವ್ಯ ಭಾಗದಲ್ಲಿವೆ. ಆಗ್ನೇಯದ ಗಡಿಯಲ್ಲಿ ಪಾಲಾರ್ ಎಂಬ ಚಿಕ್ಕ ನದಿ ಇದೆ. ಚಾಮರಾಜನಗರ, ಯಳಂದೂರು ತಾಲ್ಲೂಕುಗಳಿಂದ ಬರುವ ಸುವರ್ಣಾವತಿ, ಕೊಳ್ಳೇಗಾಲದಿಂದ ಸ್ವಲ್ಪದೂರ ಪೂರ್ವದಲ್ಲಿ ಬಿಳಿಗಿರಿರಂಗನ ಬೆಟ್ಟದಿಂದ ಬರುವ ಗುಂಡ್ಲುಹೊಳೆ ಇದೆ. ಬಿಳಿಗಿರಿರಂಗನ ಬೆಟ್ಟ ಮತ್ತು ಮಹದೇಶ್ವರ ಬೆಟ್ಟಗಳ ನಡುವೆ ತಗ್ಗುಪ್ರದೇಶವಿದೆ. ಇಲ್ಲಿ ಹರಿಯುವ ಉಲಿಕೊಪ್ಪಹಳ್ಳ, ತಟಹಳ್ಳ, ಉಡುತೊರೆ ಹಳ್ಳವನ್ನು ಕೂಡಿ ಈಶಾನ್ಯಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುತ್ತವೆ. ಮಹದೇಶ್ವರ ಬೆಟ್ಟದಿಂದ ಗಿರ್ಲಿಗುಳಿ ಹಳ್ಳ, ಗುಳಿನಾಲಾಗಳು ಉತ್ತರಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುತ್ತವೆ. ಮಹದೇಶ್ವರ ಬೆಟ್ಟದ ಪೂರ್ವಭಾಗದಲ್ಲಿ ಪೂರ್ವಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುವ ಗುಳಿಯಾತನೂರು ಹಳ್ಳ ಮತ್ತು ಯೇಲಕ್ಕಿಯಾತು ಹಳ್ಳಗಳಿವೆ. ಆಗ್ನೇಯದಲ್ಲಿ ಮೆದುಗನಾಳ ಹಳ್ಳ ಪಾಲಾರ್ ನದಿಯನ್ನು ಸೇರುತ್ತದೆ.

ಇಲ್ಲಿಯ ವಾಯುಗುಣ ಜಿಲ್ಲೆಯ ಇತರ ಭಾಗಗಳಲ್ಲಿರುವಂತೆಯೇ. ಮಳೆಯ ವಾರ್ಷಿಕ ಸರಾಸರಿ 791.03ಮಿಮೀ. ತಾಲ್ಲೂಕಿನ ಸುಮಾರು ಅರ್ಧಭಾಗ ಕಾಡುಗಳಿಂದ ಕೂಡಿದೆ. ಬೆಟ್ಟದ ಪ್ರದೇಶಗಳಲ್ಲಿ ದಟ್ಟವಾದ ಕಾಡುಗಳಿವೆ.

ಜನರ ಮುಖ್ಯ ಕಸಬು ಕೃಷಿ. ಅಲ್ಲಲ್ಲಿ ನಿರ್ಮಿಸಿರುವ ಕೆರೆಗಳು ಅಲ್ಪ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುತ್ತವೆ. ಬತ್ತ, ರಾಗಿ ಮುಖ್ಯ ಬೆಳೆಗಳು. ಸ್ವಲ್ಪ ಮಟ್ಟಿಗೆ ತೋಟದ ಬೆಳೆ ಸಹ ಉಂಟು. ರೇಷ್ಮೆ ವ್ಯವಸಾಯ ಮತ್ತು ಕೈಗಾರಿಕೆ ಕೆಲವು ಭಾಗಗಳಲ್ಲಿವೆ. ಕೊಳ್ಳೇಗಾಲ ಬಿಟ್ಟರೆ ತಾಲ್ಲೂಕಿನ ಹೆಚ್ಚಿನ ಪ್ರದೇಶಗಳಿಗೆ ರಸ್ತೆಸಂಪರ್ಕ ಸಹ ಉತ್ತಮವಾಗಿಲ್ಲ. ಕೊಳ್ಳೇಗಾಲದಿಂದ ಲೊಕ್ಕನಹಳ್ಳಿ, ಬಲ್ಲೂರು ಮೂಲಕ ಸಾಗುವ ಸತ್ಯಮಂಗಲ ರಸ್ತೆ; ಹನೂರು, ಅಜ್ಜಿಪುರ ಮೂಲಕ ಹೋಗುವ ಭವಾನಿ ರಸ್ತೆ ಮುಖ್ಯವಾದುವು. ಕೊಳ್ಳೇಗಾಲದಿಂದ ಮಹದೇಶ್ವರ ಬೆಟ್ಟಕ್ಕೆ ಉತ್ತಮ ರಸ್ತೆಯಿದೆ.

ಮುಳ್ಳೂರು, ಸತ್ತೇಗಾಲ, ಸಿಂಗಾನಲ್ಲೂರು, ಹನೂರು, ಅಜ್ಜಿಪುರ, ಬಂಡಹಳ್ಳಿ, ಬಲ್ಲೂರು, ಲೊಕ್ಕನಹಳ್ಳಿ, ಕಾಡಳ್ಳಿ, ಸೆಟ್ಟಳ್ಳಿ, ತೆಲ್ಲನೂರು ಕೆಲವು ಮುಖ್ಯ ಸ್ಥಳಗಳು. ಸಿಂಗಾನಲ್ಲೂರು ಮತ್ತು ಹನೂರುಗಳಲ್ಲಿ ಸಂತೆ ನಡೆಯುತ್ತದೆ. ಸತ್ತೇಗಾಲದಲ್ಲಿ ಪ್ರಾಚೀನ ದೇವಾಲಯಗಳಿವೆ. ಬಸ್ತಿಪುರ ಐತಿಹಾಸಿಕ ಸ್ಥಳ. ಸು.480ರಲ್ಲಿ ಪೂಜ್ಯಪಾದನೆಂಬ ಜೈನಯತಿ ಇಲ್ಲಿ ಇದ್ದನೆಂದು ಪ್ರತೀತಿ. ಇಲ್ಲಿ ದೊರಕಿದ ಪ್ರಾಚೀನ ಜೈನವಿಗ್ರಹಗಳು ಈಗ ಮದರಾಸು ವಸ್ತುಸಂಗ್ರಹಾಲಯದಲ್ಲಿವೆ. ನಿಜಗುಣ ಶಿವಯೋಗಿ ಈ ತಾಲ್ಲೂಕಿನವನೆಂದು ಪ್ರತೀತಿ. ಈತ ಶಂಭುಲಿಂಗನ ಬೆಟ್ಟದ ಸುತ್ತಣ ಪ್ರದೇಶದ ಅರಸನಾಗಿದ್ದು ವಿರಕ್ತನಾದಂತೆ ಹೇಳಿಕೆ. ಮಹದೇಶ್ವರ ಬೆಟ್ಟ (ನೋಡಿ) ಪ್ರಸಿದ್ಧ ಪವಿತ್ರ ಕ್ಷೇತ್ರ. ಈಗ ಪ್ರವಾಸಿಕೇಂದ್ರವಾಗಿಯೂ ಬೆಳೆಯುತ್ತಿದೆ.

ತಾಲ್ಲೂಕಿನ ಆಡಳಿತ ಕೇಂದ್ರ ಕೊಳ್ಳೇಗಾಲ ಪಟ್ಟಣ ಮೈಸೂರಿಗೆ ಸು. 64ಕಿಮೀ ಆಗ್ನೇಯದಲ್ಲಿದೆ. ಜನಸಂಖ್ಯೆ 52450. ಇದು ರೇಷ್ಮೆಕೈಗಾರಿಕೆಯ ಕೇಂದ್ರ. ಇಲ್ಲಿಯ ಜರತಾರಿ ಬಟ್ಟೆಗಳು ಪ್ರಸಿದ್ಧವಾಗಿವೆ.

1972ರ ಆಗಸ್ಟ್ ತಿಂಗಳಲ್ಲಿ ಕೊಳ್ಳೇಗಾಲದಲ್ಲಿ ಮೈಸೂರು ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತ್ತು. *

**ಕೋಗಳಿ :** ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಚಿನ್ನಹಗರಿ ನದಿಯ ಬಲದಂಡೆಯಲ್ಲಿರುವ ಗ್ರಾಮ. ಇದು ಚಾರಿತ್ರಿಕ ಪ್ರಾಮುಖ್ಯವುಳ್ಳ ಸ್ಥಳ. 7ನೆಯ ಶತಮಾನದ ಮಧ್ಯಕಾಲದಿಂದ 10-12ನೆಯ ಶತಮಾನಗಳ ಅವಧಿಯಲ್ಲಿ ನೊಳಂಬವಾಡಿ - 32000 ಪ್ರಾಂತ್ಯದೊಳಗೆ ಇದ್ದ ಸುಮಾರು ಈಗಿನ ಹೂವಿನಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕುಗಳನ್ನೊಳಗೊಂಡಿದ್ದ ಕೋಗಳಿ-500 ಎಂಬ ಚಿಕ್ಕ ವಿಭಾಗವೊಂದರ ಕೇಂದ್ರವಾಗಿತ್ತು. ಇಲ್ಲಿ ಮತ್ತು ಸುತ್ತಮುತ್ತಣ ಸ್ಥಳಗಳಲ್ಲಿ ಹಳೆಯ ದೇವಾಲಯಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಕದಂಬ ಗಂಗ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರದ ಅರಸರ ಹಾಗೂ ಪಾಳೆಯಗಾರರ ಅನೇಕ ಶಾಸನಗಳು ಇಲ್ಲಿವೆ.

ಇಲ್ಲಿರುವ ಒಂದು ಪ್ರಾಚೀನ ಜೈನ ಮಂದಿರ ಗಂಗದೊರೆ ದುರ್ವಿನೀತನಿಂದ ನಿರ್ಮಿತವಾದಂತೆ ಹೇಳಿಕೆ ಇದೆ. 11-12ನೆಯ ಶತಮಾನದ ಕೆಲವು ಶಾಸನಗಳು ಈ ದೇವಾಲಯಕ್ಕೆ ಸಂದ ದತ್ತಿಗಳನ್ನು ವಿವರಿಸುತ್ತವೆ. ಇದಲ್ಲದೆ ಚೆನ್ನಪಾರ್ಶ್ವಬಸ್ತಿ, ಕಲ್ಲೇಶ್ವರ, ವೀರಭದ್ರೇಶ್ವರ ಮತ್ತು ಹನುಮಂತ ದೇವಸ್ಥಾನಗಳೂ ಇಲ್ಲಿವೆ. ಈ ಊರಿನ ಚಾವಡಿಯ ಬಳಿ ವೀರಗಲ್ಲೊಂದು ದೊರೆತಿದೆ. ಚೆನ್ನಪಾರ್ಶ್ವ ಬಸ್ತಿಗೆ ಹೊಯ್ಸಳ ವೀರರಾಮನಾಥ ಮತ್ತು ವೀರಭದ್ರೇಶ್ವರ ದೇವಸ್ಥಾನಕ್ಕೆ ವಿಜಯನಗರದ ಅಚ್ಯುತರಾಯ ಕೊಡುಗೆಗಳನ್ನಿತ್ತ ಬಗ್ಗೆ ಶಾಸನಗಳಿವೆ. ಜೈನಬಸ್ತಿಯ ಹತ್ತಿರ ಎತ್ತರದ ಜಿನಪ್ರತಿಮೆಯೊಂದಿದೆ. (ಎ.)

**ಕೋಟೆಗಳು :** ಕರ್ನಾಟಕದಲ್ಲಿ ಜನ ಊರುಗಳನ್ನು ಕಟ್ಟಿಕೊಂಡು ನೆಲೆಸತೊಡಗಿದಾರಭ್ಯದಿಂದ ಸು.19ನೆಯ ಶತಮಾನದವರೆಗೂ ಊರುಗಳ ಸುತ್ತಲೂ ರಕ್ಷಣೆಯ ಆವರಣಗಳನ್ನು ನಿರ್ಮಿಸುತ್ತಿದ್ದುದು ಸಾಮಾನ್ಯ. ಸುತ್ತಲೂ ಮಣ್ಣಿನ ದಿಬ್ಬವನ್ನು ಏರಿಸುವುದು, ಆಳವಾದ ಕಂದಕವನ್ನು ತೋಡುವುದು, ಇಟ್ಟಿಗೆಯಿಂದಲೋ ಕಲ್ಲಿನಿಂದಲೋ ಗೋಡೆಯನ್ನು ನಿರ್ಮಿಸುವುದು-ಇವು ಸಾಮಾನ್ಯವಾಗಿ ಈ ಕೋಟೆಗಳ ರಚನೆಯಲ್ಲಿ ಕಂಡುಬರುವ ಅಂಶಗಳು. ಶತ್ರುಗಳು ತಮ್ಮ ಮೇಲೆ ನುಗ್ಗಿಬರದಂತೆ ತಡೆಯುವುದಕ್ಕೆ ಮತ್ತು ತಾವು ಸುಭದ್ರವಾದ ಸ್ಥಿತಿಯಲ್ಲಿ ನಿಂತು ಅವರನ್ನು ಸದೆಬಡಿಯುವುದಕ್ಕೆ ಅನುಕೂಲ ಮಾಡಿಕೊಳ್ಳುವುದಕ್ಕಾಗಿ ಕೋಟೆಗಳನ್ನು ರಚಿಸಲಾಗುತ್ತಿತ್ತು. ಅನುಭವ, ಯುದ್ಧತಂತ್ರ, ಆಯುಧಗಳ ಬಳಕೆ, ನಿವೇಶನದ ಪರಿಸರ ಮುಂತಾದವುಗಳನ್ನನುಸರಿಸಿ ಕೋಟೆಗಳ ರಚನೆಯಲ್ಲಿ ಕಾಲಕ್ರಮದಲ್ಲಿ ಅನೇಕ ಮಾರ್ಪಾಟುಗಳಾಗಿರುವುದನ್ನು ಗುರುತಿಸಬಹುದು. ಮೊದಲು ಶತ್ರುಗಳ ದಾಳಿಯನ್ನು ತಡೆಗಟ್ಟಲು ಮಾತ್ರ ರಚಿಸಲಾಗುತ್ತಿದ್ದ ನೇರವಾದ ಗೋಡೆಗಳು ಇರುತ್ತಿದ್ದು ಅದನ್ನು ಸುಲಭವಾಗಿ ಏಣಿಗಳ ಸಹಾಯದಿಂದಲೋ ಉಡಗಳ ಸಹಾಯದಿಂದಲೋ ಏರುವುದು ಸಾಧ್ಯವೆಂಬುದನ್ನು ಕಂಡುಕೊಂಡಾಗ ಗೋಡೆಗಳ ಹತ್ತಿರಕ್ಕೆ ಶತ್ರುಗಳು ಬರದಂತೆ ಅದಕ್ಕೆ ಹೊಂದಿಕೊಂಡ ಹಾಗೆ ಆಳವಾದ ಅಗಲವಾದ

ಕಂದಕಗಳ ನಿರ್ಮಾಣ ಆರಂಭವಾಯಿತು. ಶತ್ರುದಾಳಿಗಳ ಸಮಯದಲ್ಲಿ ಈ ಕಂದಕಗಳಿಗೆ ನೀರು ತುಂಬಿಸುವ ಏರ್ಪಾಟು ಆಗತೊಡಗಿತ್ತು. ಕಂದಕಗಳನ್ನು ದಾಟಿಕೊಂಡು ಶತ್ರು ಲಗ್ಗೆ ಹತ್ತಲು ಪ್ರಯತ್ನಿಸಿದಾಗ ಕೋಟೆಗೋಡೆಗಳ ಮೇಲೆ ನಿಂತು ಗುಂಡುಗಳನ್ನುರುಳಿಸಿ, ಕಾದ ಎಣ್ಣೆಯನ್ನು ಸುರಿದು ಶತ್ರುಗಳನ್ನು ನಾಶಮಾಡಲು ಅನುಕೂಲಿಸುವಂತೆ ಗೋಡೆಯ ಒಳಭಾಗಕ್ಕೆ ಇಳಿಜಾರಾದ ಏಣು ಮಣ್ಣನ್ನು ತುಂಬಿಸುತ್ತಿದ್ದರು. ಇದರಿಂದ ಗೋಡೆಯ ಕೆಲವು ಭಾಗಗಳನ್ನು ಮುಂದಕ್ಕೆ ಚಾಚಿ ಕಟ್ಟಿರುವುದು ಕಂಡುಬರುತ್ತದೆ. ಇಂಥ ಚಾಚುಗೋಡೆಗಳ ಮೇಲೆ ನಿಂತು ಲಗ್ಗೆ ಹತ್ತುವ ಶತ್ರುಗಳ ಮೇಲೆ ಬಾಣಗಳಿಂದಲೋ ಈಟಿಗಳಿಂದಲೋ ಹೊಡೆಯಲು ಅನುಕೂಲ ಉಂಟಾಗುತ್ತದೆ. ಕೋಟೆ ಗೋಡೆಯನ್ನೇರುವುದು ಸಾಧ್ಯವಾಗದಿದ್ದರೂ ಪ್ರವೇಶದ್ವಾರಗಳನ್ನು ಸುಲಭವಾಗಿ ಭೇದಿಸಿಕೊಂಡು ಒಳಹೋಗಲು ಶತ್ರುಗಳಿಗೆ ಸುಲಭವಾಗದಂತೆ ಪ್ರವೇಶದ್ವಾರಗಳ ರಚನೆ ಮತ್ತು ರಕ್ಷಣೆಗೆ ವಿಶೇಷ ಗಮನ ಕೊಡಲಾರಂಭವಾಯಿತು. ಪ್ರವೇಶದ್ವಾರಗಳ ಎರಡೂ ಕಡೆಯೂ ರಕ್ಷಣಾಗೋಪುರಗಳನ್ನು ನಿರ್ಮಿಸುವುದು ಇವುಗಳಲ್ಲೊಂದು. ಅತ್ಯಂತ ಭದ್ರವಾದ ಬಾಗಿಲುಗಳಿಂದ ಈ ದ್ವಾರವನ್ನು ಮುಚ್ಚಿ ತೊಲೆಗಳಂಥ ಭಾರವಾದ ಲಾಳವಿಂಡಿಗೆಗಳನ್ನು ಅಡ್ಡಕೊಟ್ಟಿದ್ದರೂ ಆನೆಗಳ ಸಹಾಯದಿಂದ ಆ ಬಾಗಿಲುಗಳನ್ನು ನೂಕಿಸಿ ಒಡೆದು ತೆಗೆಯುವ ಸಾಹಸದಲ್ಲಿ ಶತ್ರುಗಳು ತೊಡಗಿದಾಗ ಆನೆಗಳು ತಮ್ಮಕುಂಭಸ್ಥಳಗಳಿಂದ ಬಾಗಿಲುಗಳನ್ನು ನೂಕಲು ಸಾಧ್ಯವಾಗದಂತೆ ಹಾರೇಕೋಲುಗಳಂತೆ ದಪ್ಪನಾಗಿಯೂ ಚೂಪಾಗಿಯೂ ಮುಂಚಾಚಿಕೊಂಡ ಮೊಳೆಗಳನ್ನು ಬಾಗಿಲುಗಳಿಗೆ ಅಲ್ಲಲ್ಲಿ ಸೇರಿಸಲಾರಂಭಿಸಿದರು. ಶತ್ರುಗಳು ಕೋಟೆಗೆ ಮುತ್ತಿಗೆ ಹಾಕಿ ಹೆಚ್ಚು ಕಾಲ ಅಲ್ಲಿಯೇ ಬೀಡುಬಿಟ್ಟು ಒಳಗಿದ್ದವರಿಗೆ ನಿತ್ಯಾವಶ್ಯಕ ವಸ್ತುಗಳು ದೊರಕದಂತೆ ಮಾಡುವುದು ಸಾಧ್ಯವಿತ್ತು. ಶತ್ರುಗಳಿಗೆ ಗೋಚರಿಸದಂತೆ ಕೋಟೆಯಿಂದ ಹೊರಗೆ ಹೋಗಿ ಬರಲು ಗುಪ್ತ ದ್ವಾರಗಳು ಇರುತ್ತಿದ್ದವು. ಕೋಟೆಯ ನಡುವೆ ಉನ್ನತವಾದ ಗೋಪುರವೊಂದಿರುತ್ತಿತ್ತು. ಅಲ್ಲಿಂದ ಶತ್ರುಗಳ ಚಲನವಲನವನ್ನು ವೀಕ್ಷಿಸುವ ಅನುಕೂಲವೂ ಇತ್ತು. ಮದ್ದುಗುಂಡುಗಳ ಬಳಕೆ ಆರಂಭವಾದಮೇಲೆ ಕೋಟೆಗಳ ರಚನಾತಂತ್ರದಲ್ಲಿಯೂ ಹಲವು ಬದಲಾವಣೆಗಳು ಆದುವು; ಒಂದು ಸುತ್ತು ಕೋಟೆಯ ಬದಲು ಹಲವು ಸುತ್ತು ಕೋಟೆಗಳನ್ನು ರಚಿಸುವುದು, ಕೋಟೆಯ ಗೋಡೆಗಳ ತುದಿಯಲ್ಲಿ ತೆನೆಗಳನ್ನು ಕಟ್ಟಿ ಮರೆಯಲ್ಲಿ ನಿಂತು ಅವುಗಳ ಮೂಲಕ ಬಂದೂಕಗಳಿಂದ ಗುಂಡು ಹಾರಿಸಲು ಓರೆಯಾದ ಕಿಂಡಿಗಳನ್ನು ಬಿಡುವುದು, ಗೊತ್ತಾದ ಅಂತರಗಳಲ್ಲಿ ಗುಂಡು ಬುರುಜುಗಳನ್ನು ಕಟ್ಟಿ ದೊಡ್ಡ ಫಿರಂಗಿಗಳನ್ನು ನೆಲೆಗೊಳಿಸುವುದು, ಕಂದಕಕ್ಕೆ ಹೊರಮುಖದಲ್ಲಿ ಶತ್ರುಗಳು ಫಿರಂಗಿ ಏಟುಗಳಿಂದ ಕೋಟೆ ಗೋಡೆಯ ಬಿರುಕು ಬಿಡದಂತೆ ರಕ್ಷಿಸಲೋಸುಗ ಮಣ್ಣುದಿಬ್ಬಗಳನ್ನು ನಿರ್ಮಿಸುವುದು, ನೇರವಾದ ಗೋಡೆಯ ಬದಲು ಹಲವು ಕೋಣಾಕೃತಿ ಗೋಡೆಗಳನ್ನು ರಚಿಸುವುದು, ಒಳಗೋಡೆಗೆ ಹೊಂದಿಕೊಂಡಂತೆ ಮದ್ದಿನ ಮನೆಗಳು, ಮದ್ದನ್ನು ತಯಾರಿಸುವ ಯಂತ್ರಗಳು ಮೊದಲಾದುವನ್ನು ರಚಿಸುವುದು ಇತ್ಯಾದಿ. ಇತರೆಡೆಗಳಂತೆ ಕರ್ನಾಟಕದಲ್ಲಿಯೂ ಮಾನವನ ಇತಿಹಾಸ ಆರಂಭವಾಗುವ ಕಾಲದಿಂದ ಹತ್ತೊಂಬತ್ತನೆಯ ಶತಮಾನದ ವರೆಗೂ ರಾಜಮನೆತನಗಳು, ಪಾಳೆಯಪಟ್ಟುಗಳ ಸಣ್ಣಪುಟ್ಟ ಸಂಸ್ಥಾನಗಳು, ತಮ್ಮ ಉಳಿವಿಗೆ ಬೆಳವಣಿಗೆಗೆ ಇಂಥ ಕೋಟೆಗಳನ್ನು ಆಶ್ರಯಿಸಿ ಕೊಂಡಿದ್ದುದ್ದು ಕಂಡುಬರುತ್ತದೆ.

ಮೇಲೆ ತಿಳಿಸಿದ ಎಲ್ಲ ರೀತಿಯ ಬೆಳೆವಣಿಗೆಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಹಿಂದಿನ ಕಾಲದಲ್ಲಿ ಮುಖ್ಯವಾಗಿ ರಾಜರ ನೆಲೆ ವೀಡುಗಳಿಗೆ ಮತ್ತು ಆಯಾ ರಾಜ್ಯದ ಗಡಿಯ ಪ್ರದೇಶಗಳಿಗೆ ಇಂಥ ಕೋಟೆಗಳ ನಿರ್ಮಾಣ ಆವಶ್ಯಕವಾಗಿತ್ತು. ಪ್ರಾಚೀನ ರಾಜಮನೆತನಗಳು ತಮ್ಮ ರಾಜಧಾನಿಗಳಿಗಾಗಿ ಸ್ವಾಭಾವಿಕ ರಕ್ಷಣಾಪರಿಸರಗಳುಳ್ಳ ಸ್ಥಳಗಳನ್ನು ಆರಿಸಿಕೊಂಡು ಜೊತೆಗೆ ಕೋಟೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಇಸಿಲ ಎಂಬ ಊರಿನ ಹೆಸರಿದ್ದು ಅದಕ್ಕೆ ಕೋಟೆ ಎಂಬ ಅರ್ಥ ಇತ್ತು. ಕೋಟೆಯಿಂದಾವೃತವಾಗಿದ್ದ ಊರು ಅದಾಗಿದ್ದಿರಬಹುದು. ಹೀಗಿದ್ದಲ್ಲಿ ಕೋಟೆಗಳು ಕರ್ನಾಟಕದಲ್ಲಿ ಮೌರ್ಯರ ಕಾಲಕ್ಕೇ ಇದ್ದುವು ಎನ್ನುವುದು ಖಚಿತಗೊಳ್ಳುತ್ತದೆ. ಬ್ರಹ್ಮಗಿರಿ ಪರಿಸರದಲ್ಲಿ ಈಗ ಕೋಟೆಯ ಅವಶೇಷಗಳು ಕಂಡುಬರುವುದಿಲ್ಲ. ಕ್ರಿಸ್ತಶಕದ ಆರಂಭ ಕಾಲಕ್ಕೂ ಮುಂಚೆಯೇ ಕೆಲವು ಕೋಟೆಗಳಿದ್ದುದನ್ನು ಕಾಣಬಹುದು. ಗುಲ್ಬರ್ಗ ಜಿಲ್ಲೆಯ ಸನ್ನತಿ ಇಂಥ ಒಂದು ಪ್ರಾಚೀನ ಕೋಟೆ ಹೊಂದಿದ್ದ ಊರು. ಭೀಮಾನದಿ ಬಳಸಿಕೊಂಡು ಹರಿಯುವ ಈ ಸ್ಥಳದಲ್ಲಿ ಮೂರು ಕಡೆ ನೀರಿನ ರಕ್ಷಣೆಯಿದ್ದು ಉಳಿದೊಂದು ಕಡೆ ನೇರವಾದ ಇಟ್ಟಿಗೆ ಗೋಡೆ ಇದೆ. ಇಲ್ಲಿ ಕ್ರಿ.ಪೂ.2-1ನೆಯ ಶತಮಾನದಲ್ಲಿಯೇ ಊರು ಇದ್ದುದು ಅಲ್ಲಿನ ಶಾಸನಗಳಿಂದ ವ್ಯಕ್ತಪಡುವುದರಿಂದ ಆ ಕಾಲಕ್ಕೆ ಈ ಕೋಟೆಯ ನಿರ್ಮಾಣ ಆಗಿದ್ದಿರಬಹುದು. ಇದೇ ರೀತಿ ಮೂರು ಕಡೆ ವರದಾ ನದಿಯಿಂದಾವೃತವಾದ ಬನವಾಸಿಯಲ್ಲೂ ಒಂದು ಇಟ್ಟಿಗೆ ಕೋಟೆಯ ಅವಶೇಷ ಉಳಿದುಬಂದಿದೆ. ಇಲ್ಲಿ ಸಾತವಾಹನರು ಕ್ರಿಸ್ತಶಕದ ಆರಂಭದ ವರ್ಷಗಳಲ್ಲಿ ಆಳುತ್ತಿದ್ದರು. ಮುಂದೆ ಕದಂಬರು ಇದನ್ನು ರಾಜಧಾನಿಯಾಗಿ ಮಾಡಿಕೊಂಡರು. ದಪ್ಪ ಇಟ್ಟಿಗೆಗಳಿಂದ ಎತ್ತರವಾಗಿ ಕಟ್ಟಿದ್ದ ಕೋಟೆ ಭದ್ರವಾದುದಾಗಿತ್ತು. ಸಾತವಾಹನರ ಕಾಲದ ಮತ್ತೊಂದು ಮುಖ್ಯಪಟ್ಟಣವಾಗಿದ್ದ ಚಂದ್ರವಳ್ಳಿಯಲ್ಲಿ ಮನೆಗಳ ಗೋಡೆಗಳಿಗೆ ಕಟ್ಟಿದ್ದ ಇಟ್ಟಿಗೆಗಳಲ್ಲದೆ ದಪ್ಪ ಇಟ್ಟಿಗೆಗಳೂ ದೊರಕಿವೆ. ಅವು ಅಲ್ಲಿ ನಿರ್ಮಿತವಾಗಿದ್ದ ಕೋಟೆಗೆ ಸೇರಿದುವಾಗಿದ್ದುವೆಂದು ಊಹಿಸಲಾಗಿದೆ. ತಲಕಾಡು ಪ್ರಾಚೀನ ರಾಜಧಾನಿಗಳಲ್ಲೊಂದು. ಅಲ್ಲಿಯೂ ಕಾವೇರಿ ನದಿ ಊರನ್ನು ಮೂರು ಕಡೆ ಬಳಸಿದೆ. ಗಂಗರು ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳುವುದಕ್ಕೆ ಮುಂಚೆಯೇ ಇಲ್ಲಿ ಜನವಸತಿಯಿದ್ದ ಕುರುಹುಗಳಿವೆ. ಊರಿನ ಉಳಿದೊಂದು ಕಡೆ ವಿಜಯಪುರದ ಬಳಿ ಈಗಲೂ ಮಣ್ಣಿನ ದಿಬ್ಬಗಳಿರುವುದನ್ನು ಕಾಣಬಹುದು. ಈ ದಿಬ್ಬಗಳು ಆಗ ನಿರ್ಮಿತವಾಗಿದ್ದ ಕೋಟೆಯ ಅವಶೇಷಗಳೆಂದು ತೋರುತ್ತದೆ. ಈ ಮಣ್ಣಿನ ಕೋಟೆಯ ಮುಂಭಾಗದಲ್ಲಿ ಕಂದಕವಿದ್ದುದನ್ನು ಗುರುತಿಸಬಹುದು.

ಮಡಿಕೇರಿ ಕೋಟೆ

ಕದಂಬರು ತಮ್ಮ ರಾಜಧಾನಿಯಾದ ಬನವಾಸಿಯಲ್ಲಿದ್ದ ಕೋಟೆಯನ್ನು ಭದ್ರಪಡಿಸಿದುದಲ್ಲದೆ ಅವರ ಕಾಲದ ಇತರ ಮುಖ್ಯ ಪಟ್ಟಣಗಳಾದ ಉಚ್ಚಂಗಿದುರ್ಗ, ಹಾನಗಲ್ಲು, ಹಲಸಿ, ಅಣಜಿ ಮುಂತಾದ ಕಡೆ ಕೋಟೆಗಳನ್ನು ಕಟ್ಟಿಸಿದ್ದರು. ಅಣಜಿಯಲ್ಲಿ ಈಗಲೂ ಒಂದು ಮಣ್ಣಿನ ಕೋಟೆಯ ಅವಶೇಷ ಉಳಿದು ಬಂದಿದೆ. ಉಚ್ಚಂಗಿದುರ್ಗ, ಹಾನಗಲ್ಲುಗಳಲ್ಲಿ ಇದ್ದ ಕೋಟೆಗಳನ್ನು ಮುಂದೆ ಬಂದ ಪಾಂಡ್ಯರು, ಹೊಯ್ಸಳರು, ಪುನರ್ನಿರ್ಮಾಣಗೊಳಿಸಿದ್ದಾರೆ. ಚಳುಕ್ಯ ಒಂದನೆಯ ಪುಲಕೇಶಿ ಬಾದಾಮಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ 543ರಲ್ಲಿ ಒಂದು ಭದ್ರವಾದ ಕೋಟೆಯನ್ನು ಕಟ್ಟಿಸಿದ್ದುದು ಅವನ ಒಂದು ಶಾಸನದಿಂದ ತಿಳಿದುಬರುತ್ತದೆ. ಇದು ಕಲ್ಲಿನ ಕೋಟೆಯೇ ಆಗಿದ್ದಿರಬೇಕು. ಇದೇ ಚಳುಕ್ಯರ ಕಾಲದ ಒಂದು ಕಲ್ಲಿನ ಕೋಟೆ ಐಹೊಳೆಯಲ್ಲಿ ಉಳಿದುಬಂದಿದೆ. ಇದು ಸು.500ಮೀ. ಅಗಲದ ಅಂಡಾಕಾರ ವಿನ್ಯಾಸದ ಕೋಟೆ. ಆ ಕೋಟೆಯ ಗೋಡೆಗಳ ಮೇಲೆ ಏಳನೆಯ ಶತಮಾನದ ಕಾಲದ ಶಾಸನಗಳಿರುವುದರಿಂದ ಆ ಕಾಲಕ್ಕಾಗಲೇ ಈ ಕೋಟೆ ಇದ್ದದ್ದು ನಿರ್ವಿವಾದ. ಆ ಕೋಟೆಯ ನಾಲ್ಕು ಕಡೆಯ ಮಹಾದ್ವಾರಗಳಲ್ಲಿಯೂ ಚೌಕಾಕಾರದ ಅಟ್ಟಾಲಕಗಳಿದ್ದು ಕೋಟೆಯ ಸುತ್ತಲೂ ಕಂದಕವೂ ಇದ್ದಿರಬೇಕೆಂದು ಈಗ ಉಳಿದಿರುವ ಅವಶೇಷಗಳಿಂದ ತಿಳಿಯಬಹುದಾಗಿದೆ.

ಈ ಗೋಡೆ ಆಯತಾಕಾರದ ದಪ್ಪ ಕಲ್ಲಿನ ದಿಮ್ಮಿಗಳನ್ನು ಸೇರಿಸಿ ರಚಿತವಾದದ್ದು.

ಕರ್ನಾಟಕದ ಉತ್ತರ ಭಾಗದಲ್ಲಿ ರಾಷ್ಟ್ರಕೂಟರ ಕಾಲದ ಕೆಲವು ಕೋಟೆಗಳಿದ್ದಿರಬೇಕು. ಆದರೆ ಈಗ ಅವು ಶಿಥಿಲವಾಗಿಯೋ ಪುನರ್ನಿರ್ಮಾಣಗೊಂಡೋ ಇರುವುದರಿಂದ ಅವುಗಳ ಮೂಲ ರಚನೆಯ ಸ್ವರೂಪವನ್ನು ಕಂಡುಕೊಳ್ಳುವುದು ಅಸಾಧ್ಯ.

ಬೇಕಲ್ ಕೋಟೆ

ಕಲ್ಯಾಣದ ಚಾಳುಕ್ಯರ ಕಾಲದ ಅನೇಕ ಕೋಟೆಗಳ ವರ್ಣನೆಗಳು ಸಾಹಿತ್ಯದಲ್ಲೂ ಶಾಸನದಲ್ಲೂ ಕಂಡುಬರುತ್ತವೆ. ಆದರೆ ಇವರ ರಾಜಧಾನಿಯಾದ ಕಲ್ಯಾಣದಲ್ಲಿಯೇ ಆ ಕಾಲದ ಕೋಟೆ ಉಳಿದುಬಂದಿಲ್ಲ. ಆಳಂದ ತಾಲ್ಲೂಕಿನ ನಿಂಬರ್ಗ ಮೊದಲಾದ ಸ್ಥಳಗಳಲ್ಲಿ ಊರನ್ನು ಸುತ್ತಿರುವಂತೆ ಕಲ್ಲುಕೋಟೆಗಳಿವೆ. ಉತ್ತರ ಕರ್ನಾಟಕದ ಹಲವೆಡೆಗಳಲ್ಲಿ ಈ ಕಾಲದ ಕೋಟೆಗಳು ಉಳಿದು ಬಂದಿರುವ ಸಾಧ್ಯತೆ ಇದೆ.

ಕಾಕತೀಯರ ಕಾಲದಲ್ಲಿ ನಿರ್ಮಿತವಾದ ಭದ್ರವಾದ ಕೋಟೆಯ ಭಾಗವೊಂದು ಈಗ ರಾಯಚೂರಿನಲ್ಲಿ ಉಳಿದುಬಂದಿದೆ. ಕಾಕತೀಯರ ರಾಣಿ ರುದ್ರಮಹಾದೇವಿ ಕಟ್ಟಿಸಿದ ಈ ಕೋಟೆಗೆ ಬೃಹದ್‌ಗಾತ್ರದ ಹಲವು ಮೀಟರುಗಳಷ್ಟು ಉದ್ದವಾಗಿರುವ ದಪ್ಪ ಕಲ್ಲಿನ ದಿಮ್ಮಿಗಳನ್ನು ಸೇರಿಸಿ ಕಟ್ಟಿರುವ ಈ ಕೋಟೆ ಆಶ್ಚರ್ಯವನ್ನುಂಟುಮಾಡುವಂತಿದೆ. ಅವುಗಳಲ್ಲಿ ಒಂದು ಅತ್ಯಂತ ದೊಡ್ಡದಾದ ಕಲ್ಲಿನ ದಿಮ್ಮಿಯನ್ನು ಆ ಕೋಟೆಯ ಗೋಡೆಗೆ ತಂದು ಸೇರಿಸಿದ ರೀತಿಯನ್ನು ಅದೇ ಕಲ್ಲಿನ ಮೇಲಿರುವ ಒಂದು ರೇಖಾಚಿತ್ರ ಚಿತ್ರಿಸುತ್ತದೆ. ಗುಂಡಾದ ಮರದ ತುಂಡುಗಳ ಮೇಲೆ ಈ ಬಂಡೆಕಲ್ಲುಗಳನ್ನುರುಳಿಸಿ ಹತ್ತಾರು ಜೊತೆ ಕೋಣಗಳ ಸಹಾಯದಿಂದ ಅದನ್ನೆಳೆಸುತ್ತಿರುವುದು ಮತ್ತು ಹಿಂದೆ ಉದ್ದವಾದ ಹೆದ್ದವನ್ನು ಕೊಟ್ಟು ಹತ್ತಾರು ಜನ ಮೀಟುತ್ತಿರುವುದನ್ನು ಬಹು ಸೊಗಸಾಗಿ ತೋರಿಸಿದೆ. ಆಗ ಕೋಟೆಗಳನ್ನು ಕಟ್ಟಿಸುತ್ತಿದ್ದ ರೀತಿ ಇದರಿಂದ ವ್ಯಕ್ತವಾಗುತ್ತದೆ.

ಹೊಯ್ಸಳರ ಕಾಲದ ಕೋಟೆಗಳ ಕುರುಹು ಉಳಿದುಬಂದಿರುವುದು ಹಳೇಬೀಡಿನಲ್ಲಿ. ಇಲ್ಲಿ ಬೆಣ್ಣೆಗುಡ್ಡದ ಬುಡದಲ್ಲಿ ಪೂರ್ವಕ್ಕೆ ಅರಮನೆಯನ್ನು ಬಳಸಿದ ಭದ್ರವಾದ ಚೌಕನಾದ ಕೋಟೆ ಮತ್ತು ಊರನ್ನು ಬಳಸಿದ್ದ ಮತ್ತೊಂದು ದೊಡ್ಡದಾದ ಕೋಟೆ ನಿರ್ಮಾಣವಾಗಿದ್ದುವು. ದೊಡ್ಡ ದೊಡ್ಡ ಗುಂಡುಗಳನ್ನು ಒಂದರಮೇಲೊಂದು ಪೇರಿಸಿ ಒಳಭಾಗದಿಂದ ಮಣ್ಣಿನ ಒತ್ತು ಕೊಟ್ಟಿದ್ದುದಲ್ಲದೆ ಅಲ್ಲಲ್ಲಿ ಬತೇರಿಯಂತೆ ಗೋಡೆ ಮುಂಚಾಚಿಕೊಂಡಿತ್ತು. ಕೆಲವು ಕಡೆ ಆಳವಾದ ಅಗಳು ಕೋಟೆಗೆ ರಕ್ಷಣೆಯಾಗಿತ್ತು. ಈಗ ಕೋಟೆ ಅಲ್ಲಲ್ಲಿ ನಾಶವಾಗಿ ಮಣ್ಣಿನ ದಿಬ್ಬಗಳು ಉಳಿದುಕೊಂಡಿವೆ. ಬೇಲೂರಿನಲ್ಲಿ ಅವರೇ ಕಟ್ಟಿಸಿದ ಮಣ್ಣಿನ ಕೋಟೆ ಮತ್ತು ಕಂದಕಗಳ ಅವಶೇಷಗಳು ಈಗಲೂ ಕಂಡುಬರುತ್ತವೆ. ಹಾನೆಯದ ಕೋಟೆಯನ್ನು ವಿಷ್ಣುವರ್ಧನನೂ ಉಚ್ಚಂಗಿದುರ್ಗವನ್ನು ವೀರಬಲ್ಲಾಳನೂ ಗೆದ್ದುದ್ದನ್ನು ಶಾಸನಗಳಲ್ಲಿ ಭವ್ಯವಾಗಿ ವರ್ಣಿಸಲಾಗಿವೆ. ಬಂಕಾಪುರ ಮೊದಲಾದ ಕಡೆ ಈ ಕಾಲದ ಕೋಟೆಗಳು ಉಳಿದುಬಂದಿವೆ.

ದಕ್ಷಿಣದಲ್ಲಿ ಅಲಾಉದ್ದೀನನ ದಂಡನಾಯಕ ಮಲಿಕ್ ಕಾಫೂರ್ ನಡೆಸಿದ ದಾಳಿಗಳಿಂದಾಗಿ ರಾಜಕೀಯ ಸ್ಥಿರತೆಗೆ ಧಕ್ಕೆ ಒದಗಿದುದೂ ಮುಂದೆ ಕರ್ನಾಟಕದ ಉತ್ತರಭಾಗದಲ್ಲಿ ಬಹಮನೀ ಸುಲ್ತಾನರ ರಾಜ್ಯ ಸ್ಥಾಪನೆಯಾದುದೂ ಅದುವರೆಗಿದ್ದ ಕೋಟೆಗಳಿಗಿಂತ ಹೆಚ್ಚು ಸುಭದ್ರವಾದ ಕೋಟೆಗಳನ್ನು ಕಟ್ಟಲು ಪ್ರೇರಕವಾಗಿದ್ದಿರಬಹುದು. ವಿಜಯನಗರ ರಾಜ್ಯ ಸ್ಥಾಪನೆಯಾಗುತ್ತಿದ್ದಂತೆಯೇ ಒಂದು ಸುತ್ತಿನ ಕೋಟೆಗೆ ಬದಲು ಹಲವು ಸುತ್ತು ಕೋಟೆಗಳ ನಿರ್ಮಾಣ ಆರಂಭವಾಯಿತು. ಬಹಮನೀ ಸುಲ್ತಾನರ ಮತ್ತು ವಿಜಯನಗರದರಸರ ನಡುವೆ ಆಗಾಗ ನಡೆಯುತ್ತಿದ್ದ ಯುದ್ಧಗಳಿಂದ, ಈ ಎರಡು ರಾಜ್ಯಗಳ ನಡುವಣ ಆಯಕಟ್ಟಿನ ಸ್ಥಳಗಳಲ್ಲಿ ಮೊದಲಿದ್ದ ಕೋಟೆಗಳನ್ನು ಅತ್ಯಂತ ಸುಭದ್ರವಾಗಿ ನಿರ್ಮಿಸುವ ಆವಶ್ಯಕತೆ ಉಂಟಾಯಿತು. ಇದರೊಂದಿಗೆ ಈ ಕಾಲಕ್ಕೆ ಮದ್ದುಗುಂಡುಗಳ ಬಳಕೆ ಹೆಚ್ಚಾಗಿ ಯುದ್ಧತಂತ್ರ ಬದಲಾಯಿಸಿದ್ದರಿಂದ ಫಿರಂಗಿಗಳ ಹೊಡೆತಗಳನ್ನು ತಡೆಯಬಲ್ಲಂತೆ ಮಾಡಲು ಕೋಟೆಯ ರಚನೆಯಲ್ಲಿಯೂ ಬದಲಾವಣೆ ಕಂಡುಬರುತ್ತದೆ. ಇದರಿಂದಾಗಿ ತಮ್ಮತಮ್ಮ ರಾಜಧಾನಿಗಳ ಸುತ್ತಲೂ ಬಲವಾದ ಕೋಟೆಗಳನ್ನು ಆಯಾ ರಾಜರು ಕಟ್ಟಿಕೊಂಡರು. ವಿಜಯನಗರದ ರಾಜಧಾನಿಯಾಗಿದ್ದ ಹಂಪೆಯಲ್ಲಿ ದಪ್ಪ ಕಗ್ಗಲ್ಲಿನ ದಿಮ್ಮಿಗಳಿಂದ ರಚಿಸಿರುವ ಹಲವು ಸುತ್ತುಗಳಿಂದ ವಿಸ್ತಾರವಾಗಿರುವ ಪಾಳುಬಿದ್ದ ಕೋಟೆಗಳನ್ನು ಈಗಲೂ ಗುರುತಿಸಬಹುದು. ಬೆಟ್ಟಗುಡ್ಡಗಳ ನಡುವೆ ಇದ್ದ ಈ ಊರಿಗೆ ಈ ಕೋಟೆಗಳೂ ಸೇರಿ ಶತ್ರುಗಳಿಗೆ ಇದು ದುರ್ಭೇದ್ಯವಾದುದು ಎನ್ನಿಸಿಕೊಂಡಿತ್ತು. ಹೊರದೇಶದಿಂದ ಬಂದ ಯಾತ್ರಿಕರು ವಿಜಯನಗರದ ಕೋಟೆಯ ಭದ್ರತೆಯನ್ನು ಹೊಗಳಿದ್ದಾರೆ. ಇದಲ್ಲದೆ ವಿಜಯನಗರದ ಅರಸರು ರಾಯಚೂರು, ಮುದ್ಗಲ್ಲು, ಬಾದಾಮಿ ಮೊದಲಾದ ತಮ್ಮ ರಾಜ್ಯದ ಗಡಿಪ್ರದೇಶಗಳಲ್ಲಿ ಬೆಟ್ಟಗಳನ್ನಾವರಿಸಿಕೊಂಡು ಹಲವು ಸುತ್ತು ಕೋಟೆಗಳನ್ನು ರಚಿಸಿದ್ದ ಗಿರಿದುರ್ಗಗಳು ಆ ಕಾಲದ ಕೋಟೆಗಳ ಸುಭದ್ರ ರಚನೆಯ ಪ್ರತೀಕಗಳಾಗಿ ಉಳಿದಿವೆ. ಗಡಿಪ್ರಾಂತಗಳ ಕೋಟೆಗಳ ರಕ್ಷಣೆ ಉಭಯ ಶತ್ರು ರಾಜರಿಗೂ ಅತ್ಯಂತ ಪ್ರಮುಖವಾದುದಾಗಿರುತ್ತಿತ್ತು. ಅದರಿಂದಲೇ ರಾಯಚೂರು ಮತ್ತು ಮುದ್ಗಲ್ಲು ಕೋಟೆಗಳು ಬಹಮನೀ ಮತ್ತು ವಿಜಯನಗರಗಳ ನಡುವೆ ಹಲವು ಬಾರಿ ಕೈ ಬದಲಾಯಿಸಿದ್ದುವು. ರಾಯಚೂರಿನಲ್ಲಿ ಮೊದಲೇ ಇದ್ದ ಕಾಕತೀಯರ ಕೋಟೆ ಗೋಡೆಯೊಂದಿಗೆ ವಿಜಯನಗರ ಅರಸರು, ಅನಂತರ ಬಹಮನೀ ಅರಸರು ಸೇರಿಸಿದ ಹಲವು ಸಾಲು ಕೋಟೆಗಳ ನಡುವೆಯೇ ಊರಿನ ಬಹುಭಾಗ ಇದೆ.



ಗುಮ್ಮನಾಯಕನ ಕೋಟೆ

ಗುಲ್ಬರ್ಗದ ಸುತ್ತಲೂ ಬಹಮನೀ ಅರಸರು ಕಟ್ಟಿದ ಭದ್ರವಾದ ಕೋಟೆ ಈಗಲೂ ಉಳಿದುಬಂದಿದೆ. ಮೊದಲು ಇಲ್ಲಿ ರಾಜಾ ಗುಲ್‌ಚಂದ್ ಎಂಬ ಹಿಂದು ದೊರೆ ಕೋಟೆಯನ್ನು ಕಟ್ಟಿಸಿದ್ದನೆಂಬ ಪ್ರತೀತಿ ಇದೆ. ಈಗಿನ ಕೋಟೆ ಅಲಾಉದ್ದೀನ್ ಹಸನ್ ಬಹಮನೀ ಕಾಲದಲ್ಲಿ ನಿರ್ಮಿತವಾಯಿತು. ಈ ಕೋಟೆ ಹದಿನೈದು ಗುಂಡುಬುರುಜುಗಳನ್ನು 20 ಫಿರಂಗಿ ಬತೇರಿಗಳನ್ನು ಒಳಗೊಂಡಿರುವ ಕಲ್ಲುಕಟ್ಟಡ. ಬಹಮನೀ ರಾಜ್ಯ ಬೆಳೆದಂತೆ ಅದು ನಾಲ್ಕು ಪ್ರಾಂತ್ಯಗಳಾಗಿ

ಒಂದೊಂದು ಪ್ರಾಂತ್ಯದ ಮುಖ್ಯಪಟ್ಟಣವೂ ಕೋಟೆಕೊತ್ತಲಗಳಿಂದ ಭದ್ರಪಡಿಸಲ್ಪಟ್ಟುವು. ಇವುಗಳಲ್ಲಿ ಬೀದರ್ ಒಂದು. ಇಲ್ಲಿ ಮೊದಲೇ ಇದ್ದ ಕೋಟೆ ಕೊತ್ತಲಗಳನ್ನು ಬಲಪಡಿಸಲಾಯಿತು. ವಿಸ್ತಾರವಾದ ರಾಜ್ಯದ ರಾಜಧಾನಿಯಾದ ಮೇಲೆ ಅಹ್ಮದ್ ಷಾ ವಲಿ 1429ರಲ್ಲಿ ಕೋಟೆಯ ನಿರ್ಮಾಣಕಾರ್ಯವನ್ನಾರಂಭಿಸಿ 1432ರಲ್ಲಿ ಪೂರೈಸಿದ. ಭದ್ರವಾದ ಎತ್ತರವಾದ ಕಲ್ಲಿನ ಗೋಡೆಗಳಿಂದ ನಿರ್ಮಿತವಾದ ಈ ಕೋಟೆಯ ಸುತ್ತಲೂ ಹುಟ್ಟುಬಂಡೆಯಲ್ಲಿಯೇ ಆಳವಾಗಿ, ಅಗಲವಾಗಿ ಕಂದಕಗಳನ್ನು ಕೊರೆಸಲಾಯಿತು. ಮುಂದೆ ಮಾಳವದ ಮಹಮ್ಮದ್ ಖಿಲ್ಜಿ ಈ ಕೋಟೆಯನ್ನು ನಾಶಮಾಡಿದರೂ ನಿಜಾಮ್ ಷಾ ಬಹಮನೀ ಹಿಂದೆ ಇದ್ದ ರೀತಿಯಲ್ಲಿಯೇ ಅದನ್ನು ಪುನರ್ನಿರ್ಮಿಸಿದ. ಆದರೆ ಮಹಮ್ಮದ್ ಷಾನ ಕಾಲದಲ್ಲಿ ಮದ್ದಿನ ಬಳಕೆ ಹೆಚ್ಚಾದುದರಿಂದ ಅದಕ್ಕನುಗುಣವಾಗಿ ಕೋಟೆಯ ರಚನೆ ಬದಲಾವಣೆ ಹೊಂದಿತು. ಫಿರಂಗಿಗಳನ್ನು ಅಳವಡಿಸಿದ್ದು, ಗೋಡೆಗಳನ್ನು ಮತ್ತಷ್ಟು ಭದ್ರಪಡಿಸಿದುದು ಇವನ ಕಾಲದಲ್ಲಿಯೇ.

ಬಹಮನೀ ರಾಜ್ಯ 5 ಭಾಗಗಳಾಗಿ ಒಡೆದಮೇಲೆ ಆದಿಲ್‌ಶಾಹೀಗಳ ರಾಜಧಾನಿಯಾದ ಬಿಜಾಪುರದಲ್ಲಿ ಒಂದು ಸಣ್ಣ ಕೋಟೆಯ ನಿರ್ಮಾಣವಾಯಿತು. ರಾಜ್ಯ ವಿಸ್ತಾರವಾದಂತೆಲ್ಲ, ಊರು ಬೆಳೆದಂತೆಲ್ಲ, ಊರನ್ನು ಬಳಸಿದ ದೊಡ್ಡದಾದ ಒಂದು ಕೋಟೆಯನ್ನು ನಿರ್ಮಿಸಲಾಯಿತು. ಇಡೀ ನಗರವನ್ನೇ ಬಳಸಿದ್ದ ಈ ಕೋಟೆಗೆ ಹಲವಾರು ಗುಂಡುಬತೇರಿಗಳು ಇದ್ದುವು. ಒಂದೊಂದು ಬತೇರಿಯ ಮೇಲೂ ಯಾವ ದಿಕ್ಕಿಗಾದರೂ ತಿರುಗಿಸಿ ಗುಂಡು ಹಾರಿಸಬಲ್ಲಂಥ ಫಿರಂಗಿಗಳು ಇದ್ದುವು. ಅದರಲ್ಲಿಯೂ ಪಶ್ಚಿಮದ ದ್ವಾರದ ಸಮೀಪದಲ್ಲಿಯೇ ಮಲ್ಲಿಕ್ ಎ ಮೈದಾನ್ ಎಂಬ ಒಂದು ಭಾರಿ ಫಿರಂಗಿಯನ್ನು ಸ್ಥಾಪಿಸಲಾಗಿತ್ತು. ಇದು ಈಗಲೂ ಅಲ್ಲಿ



ಗುಲ್ಬರ್ಗ ಕೋಟೆ

ಉಳಿದಿದೆ. ಈ ಫಿರಂಗಿಯಿಂದ ಗುಂಡು ಹಾರಿಸಿದಾಗ ಉಂಟಾಗುತ್ತಿದ್ದ ಸಾವುನೋವುಗಳಿಗಿಂತ ಹೆಚ್ಚಾಗಿ ಅದರ ಭಯಂಕರ ಶಬ್ದಕ್ಕೆ ಶತ್ರುಗಳ ಆನೆಗಳೂ ಕುದುರೆಗಳೂ ಸೈನ್ಯಗಳೂ ಚೆಲ್ಲಾಪಿಲ್ಲಿಯಾಗುತ್ತಿದ್ದುವಂತೆ. ಕೋಟೆಯೊಳಗೆ ಪಶ್ಚಿಮದ ಗೋಡೆಗೆ ಸಮೀಪವಾಗಿಯೇ ಒಂದು ಉನ್ನತವಾದ ಬುರುಜು ಇತ್ತು. ಇದರ ಮೇಲೆ ಅತ್ಯಂತ ಉದ್ದವಾದ ಭಾರಿ ಫಿರಂಗಿಯೊಂದು ಬಿದ್ದಿದೆ. ಲಾಂಬ್ ಚಡಿ ಎಂಬ ಈ ಫಿರಂಗಿಯಿಂದ ಬಹುದೂರದವರೆಗೂ ಗುಂಡು ಹಾರಿಸಬಹುದಿತ್ತು. ಸುಲ್ತಾನರ ಕೋಟೆಗಳಲ್ಲೆಲ್ಲಾ ಬಿಜಾಪುರದ ಕೋಟೆ ಅತ್ಯಂತ ವಿಸ್ತಾರವಾದುದೆಂದು ಹೇಳಬಹುದು.

ಬಾದಾಮಿ ಕೋಟೆ

ವಿಜಯನಗರದ ಬಲ ತಾಳಿಕೋಟೆ ಯುದ್ಧವಾದ ಅನಂತರ ಕುಗ್ಗಿ ಆಮೇಲೆ ವಿಜಯನಗರ ಸಾಮ್ರಾಜ್ಯಾದ್ಯಂತ ಅನೇಕ ಪಾಳೆಯಪಟ್ಟುಗಳು ಹುಟ್ಟಿಕೊಂಡುವು. ಒಂದೊಂದು ಪಾಳೆಯಗಾರ ಮನೆತನವೂ ತನ್ನ ರಾಜ್ಯದ ಭದ್ರತೆಗಾಗಿ ಭದ್ರವಾದ ಕೋಟೆಗಳನ್ನು ಕಟ್ಟಿಸಲಾರಂಭಿಸಿತು. ನೂರಾರು ಕೋಟೆಗಳು ಈ ಕಾಲದಲ್ಲಿ ನಿರ್ಮಿತವಾಗಿವೆ. ಇವುಗಳಲ್ಲಿ ಪ್ರಸಿದ್ಧವಾದುದು ಚಿತ್ರದುರ್ಗದ ಕೋಟೆ. ಹಿಂದೆಯೇ ಇಲ್ಲಿ ಇದ್ದಿರಬಹುದಾದ ಕೋಟೆಯನ್ನು ಚಿತ್ರದುರ್ಗದ ನಾಯಕರು ಬಹುವಾಗಿ ಬೆಳೆಸಿದರು. ಇಲ್ಲಿನದು ಪ್ರಸಿದ್ಧವಾದ ಗಿರಿದುರ್ಗ. ಇಡೀ ಬೆಟ್ಟವನ್ನು ಬಳಸಿದಂತಿರುವ ಕೆಳಕೋಟೆಯಿಂದಾರಂಭಿಸಿ ಬೆಟ್ಟದ ತುದಿಯಲ್ಲಿ ಅರಮನೆಯನ್ನು ಸುತ್ತುವರಿದಿದ್ದ, ಕಿರುಕೋಟೆಯವರೆಗೆ ಏಳು ಸುತ್ತು ಕೋಟೆಗಳು ಶತ್ರುಗಳಿಗೆ ದುರ್ಭೇದ್ಯವಾಗಿ ಬೆಟ್ಟವನ್ನು ಬಳಸಿ ಹಬ್ಬಿವೆ. ಇವುಗಳ ಪ್ರವೇಶ ದ್ವಾರಗಳು ಅತ್ಯಂತ ಸುಭದ್ರವಾದ ರೀತಿಯಲ್ಲಿವೆ. ಈ ಕೋಟೆಯ ಗೋಡೆಗಳು ದಪ್ಪ ಕಲ್ಲಿನ ದಿಮ್ಮಿಗಳಿಂದ ನಿರ್ಮಿತವಾಗಿದ್ದುವು. ನಾಯಕರ ಕಾಲದಲ್ಲಿ ಇದಕ್ಕೆ ಗಾರೆಗಚ್ಚುಗಳೇನೂ ಇರಲಿಲ್ಲ. ಮೊದಲ ಮತ್ತು ಎರಡನೆಯ ಕೋಟೆಗಳಿಗೆ ಆಳವಾದ ಕಂದಕಗಳಿದ್ದುವು. ಆ ಕೋಟೆಯಲ್ಲಿ ಒಟ್ಟು 19 ದ್ವಾರಗಳು, 38 ದಿಡ್ಡಿಬಾಗಿಲುಗಳು, 35 ಗುಪ್ತದ್ವಾರಗಳು, 4 ಸುರಂಗ ಮಾರ್ಗಗಳು ಇದ್ದುವೆಂದು ಹೇಳಲಾಗಿದೆ. ಈ ಕೋಟೆಗಳಿಗೆ ಹೊಂದಿಕೊಂಡಂತೆ ಇರುವ ಎಣ್ಣೆಕೊಳ, ತುಪ್ಪದ ಕೊಳ ಎಂದು ಕರೆಯುವ, ಕಲ್ಲಿನಲ್ಲಿಯೇ ಕೊರೆದು ಮಾಡಿರುವ ದೊಡ್ಡ ತೊಟ್ಟಿಗಳೂ ಮದ್ದನ್ನು ಅರೆಯಲು ಉಪಯೋಗಿಸುವ ಭಾರಿಯಾದ 5 ಅಡಿ ವ್ಯಾಸವುಳ್ಳ 4 ಬೀಸುವ ಕಲ್ಲುಗಳೂ ಅವುಗಳನ್ನು ಏಕಕಾಲದಲ್ಲಿ ತಿರುಗಿಸಲು ಸಾಧ್ಯವಾಗುವಂತೆ ಜೋಡಿಸಿರುವ ಹಲ್ಲಿನ ಚಕ್ರವೂ ನಾಯಕರ ಕಾಲದ ಶಕ್ತಿಸಂಕೇತಗಳಾಗಿ ನಿಂತಿವೆ. ಹೊರಗಿನ ಕೋಟೆಗೆ ಇರುವ ನಾಲ್ಕು ಬಾಗಿಲುಗಳಲ್ಲಿ ರಂಗಯ್ಯನ ಬಾಗಿಲು ಮತ್ತು ಸಂತೇ ಬಾಗಿಲು ಪ್ರಸಿದ್ಧವಾದುವು. ಬೆಟ್ಟದ ಬುಡದಲ್ಲಿ ಇರುವ ಒಳಸುತ್ತಿನ ಕೋಟೆ 25' ಹೆಚ್ಚು ಎತ್ತರವಾಗಿದ್ದು ಆಳವಾದ ಕಂದಕಗಳಿಂದ ಕೂಡಿ ಬತೇರಿ, ಜೀನಗಂಡಿ, ಬುರುಜು, ಕೈಪಿಡಿ ಗೋಡೆಗಳಿಂದ ಕೂಡಿದ್ದು ಇದರ ಪ್ರವೇಶದ್ವಾರ ಅತ್ಯಂತ ಭದ್ರವಾದುದು. ಈ ದ್ವಾರದ ಎರಡು ಕಡೆಯೂ ಚೌಕ ಬತೇರಿಗಳಿವೆ. ಒಳಗೆ ಪ್ರವೇಶಿಸುತ್ತಿದ್ದಂತೆ ಬೃಹತ್ ಗಾತ್ರದ ಒಂದು ಅಡ್ಡಗೋಡೆ, ಅದನ್ನು ಬಳಸಿ ಒಳಹೊಕ್ಕರೆ ಅಲ್ಲಿ ಮತ್ತೊಂದು ಬಾಗಿಲು, ಪಕ್ಕದಲ್ಲಿಯೇ ದಿಡ್ಡಿ - ಇವು ಶತ್ರುಗಳು ಸುಲಭವಾಗಿ ಒಳನುಗ್ಗಲು ಸಾಧ್ಯವಿಲ್ಲದಂತೆ ಅಥವಾ ಮುಂದಿನ ಬಾಗಿಲನ್ನು ತೂರಿ ಒಳನುಗ್ಗಿದಾಗ ಅವರ ಮೇಲೆ ಗುಂಡಿನ ಮಳೆಗರೆಯಲು ಅಥವಾ ಕಲ್ಲುಗುಂಡುಗಳನ್ನುರುಳಿಸಿ ನಾಶಪಡಿಸಲು ಅನುಕೂಲವಾಗುವ ರೀತಿಯಲ್ಲಿ

ರಚಿತವಾಗಿವೆ. ಈ ದ್ವಾರದ ಬಳಿ ಗೋಡೆಯ ಮೇಲೆ ವಿಘ್ನವಿನಾಶಕ ಗಣಪತಿ, ಶಕ್ತಿದಾಯಕ ಆಂಜನೇಯ, ವಿಜಯಸ್ಮಾರಕ ಗಂಡಭೇರುಂಡ, ಛಲದ ಸಂಕೇತವಾದ ಘಟಸರ್ಪ ಮುಂತಾದವನ್ನು ಬಿಡಿಸಿರುವುದನ್ನು ನೋಡಬಹುದು. ಈಗ ಚಿತ್ರದುರ್ಗದಲ್ಲಿರುವ ಕೋಟೆಯ ಹೆಚ್ಚಿನ ಭಾಗ, ಮದ್ದಿನಮನೆ ಮುಂತಾದವು ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದ ರಚನೆಗಳು ಎಂಬ ಅಭಿಪ್ರಾಯವೂ ಇದೆ.

ಬೀದರ್ ಕೋಟೆ

ಚಿತ್ರದುರ್ಗದ ಪಾಳೆಯಗಾರರಂತೆ ಕೆಳದಿ ನಾಯಕರು ಮೊದಲು ಕೆಳದಿಯಲ್ಲಿಯೂ ಅನಂತರ ಇಕ್ಕೇರಿಯಲ್ಲಿಯೂ ಕೊನೆಗೆ ಬಿದನೂರಿನಲ್ಲಿಯೂ ರಾಜ್ಯವಾಳಿ ಅಲ್ಲಲ್ಲಿ ಕೋಟೆಗಳನ್ನು ಕಟ್ಟಿಸಿದ್ದಾರೆ. ಇಕ್ಕೇರಿ ಕೋಟೆಯನ್ನು ಆ ಕಾಲದಲ್ಲಿ ಸಂದರ್ಶಿಸಿದ್ದ ಪೋರ್ಚುಗೀಸ್ ಯಾತ್ರಿಕನೊಬ್ಬ ಮೂರು ಬಾಗಿಲುಗಳನ್ನು ದಾಟಿ ಕೋಟೆಯನ್ನು ಪ್ರವೇಶಿಸಬೇಕಾಗಿತ್ತೆಂದೂ ಅವುಗಳಿಗೆ ಬೇರೆ ಬೇರೆ ಕಂದಕಗಳಿದ್ದುವೆಂದೂ ಮೊದಲ ಎರಡು ಕಲ್ಲಿನ ಗೋಡೆಗಳು ದಟ್ಟವಾಗಿ ಬೆಳೆಸಿದ್ದ ಬಿದಿರುವನಗಳು ಸುತ್ತುವರಿದಿದ್ದುವೆಂದೂ ಒಳಗಿನದು ಮಾತ್ರ ಕಲ್ಲಿನ ಕೋಟೆಯೆಂದೂ ತಿಳಿಸುತ್ತಾನೆ. ಹಲವು ಬಗೆಯ ದುರ್ಗಗಳಲ್ಲಿ ವನದುರ್ಗ ಎಂದು ಕರೆಸಿಕೊಳ್ಳುವ ಕೋಟೆಯ ಮಾದರಿ ಇದು ಆಗಿತ್ತೆಂಬುದು ಸ್ಪಷ್ಟ. ಬಿದನೂರಿನಲ್ಲಿ ಶಿವಪ್ಪನಾಯಕ ಕಟ್ಟಿಸಿದ ಕೋಟೆ ಎತ್ತರವಾದ ದಿಬ್ಬದ ಮೇಲಿತ್ತು. ಪ್ರವೇಶದ್ವಾರದ ಎರಡು ಕಡೆಯೂ ಗುಂಡು ಬತೇರಿಗಳೂ ಒಳಗೆ ರಕ್ಷಕರ ಕೋಣೆಗಳೂ ಇದ್ದುವು. ಕೆಳದಿಯ ರಾಣಿ ಚೆನ್ನಮ್ಮಾಜಿ ಚೆನ್ನಗಿರಿಯ ಒಂದು ಗುಡ್ಡದ ಮೇಲೆ ತನ್ನ ಹೆಸರಿನಲ್ಲಿ ಒಂದು ಕೋಟೆಯನ್ನು ಕಟ್ಟಿಸಿದ್ದಾಳೆ (ಸು.1770). ಎರಡು ಸುತ್ತು ಗೋಡೆಗಳಿರುವ ಈ ಕೋಟೆಗೆ ಉಪಯೋಗಿಸಿರುವುದು ಸಣ್ಣಪುಟ್ಟ ಆಕಾರರಹಿತ ಉರುಟು ಕಲ್ಲುಗಳು. ಇವುಗಳ ಮುಂದೆ ಅಗಳುಗಳಿವೆ. ಮುಖ್ಯದ್ವಾರ ಉತ್ತರ ದಿಕ್ಕಿಗಿದೆ. ಶಿವಮೊಗ್ಗ ಜಿಲ್ಲೆಯ ಕವಲೆದುರ್ಗ ಬೆಟ್ಟದ ಮೇಲೆ ನಿರ್ಮಿಸಿದ್ದ ಭುವನಗಿರಿದುರ್ಗ ಎಂಬ ಕೋಟೆ ಶತ್ರುದಾಳಿಗೆ ರಾಜ್ಯ ತುತ್ತಾದಾಗ ಆಶ್ರಯಪಡೆಯಲು ಉಪಯೋಗಿಸುತ್ತಿದ್ದ ಪ್ರಬಲ ದುರ್ಗವಾಗಿತ್ತು. ಇಲ್ಲಿ ಕೋಟೆಗಳ ರಕ್ಷಣೆಯೊಂದಿಗೆ ಸುತ್ತಲೂ ದಟ್ಟವಾದ ಕಾಡಿನ ರಕ್ಷಣೆಯೂ ಇತ್ತು. ಇದು ಒಂದು ಉತ್ತಮವಾದ ವನದುರ್ಗವೂ ಆಗಿತ್ತು. ಇದೇರೀತಿ ಹತ್ತಾರು ಪಾಳೆಯಗಾರ ಮನೆತನಗಳು ಹಲವು ಕಡೆ ಬೆಟ್ಟಗಳ ಮೇಲೋ ಸಮತಟ್ಟಿನ ಭೂಮಿಯ ಮೇಲೋ ಕೋಟೆಗಳನ್ನು ಕಟ್ಟಿಕೊಂಡು ಚಿಕ್ಕ ಚಿಕ್ಕ ಪಾಳೆಯಪಟ್ಟುಗಳನ್ನು ಆಳುತ್ತಿದ್ದುದಕ್ಕೆ ಈಗಲೂ ಅಲ್ಲಲ್ಲಿ ನಿಂತಿರುವ ಕೋಟೆಗಳು ಸಾಕ್ಷಿಗಳಾಗಿವೆ. ಇವುಗಳಲ್ಲಿ ಗಿರಿದುರ್ಗಗಳಿಗೆ ಪಾವಗಡ, ಮಧುಗಿರಿ, ನಿಡುಗಲ್ಲು, ಮಿಡಿಗೇಶಿ, ಕೊರಟಗೆರೆ, ಹುಲಿಯೂರುದುರ್ಗ, ಕಬ್ಬಾಳದುರ್ಗ, ರಾಮದುರ್ಗ, ಗುಡಿಬಂಡೆ, ಸದಾಶಿವಗಡ, ಬೆಟ್ಟದಪುರ, ಸಾವನದುರ್ಗ ಮುಂತಾದುವುಗಳನ್ನು ಉದಾಹರಣೆಗಳಾಗಿ ಹೆಸರಿಸಬಹುದು. ಈ ಗಿರಿದುರ್ಗಗಳು ಸಾಮಾನ್ಯವಾಗಿ ಹಲವು ಸುತ್ತು ಕೋಟೆಗಳನ್ನೊಳಗೊಂಡವು. ಕಡಿದಾದ ಬೆಟ್ಟಗಳನ್ನಾರಿಸಿ ಇವರು ಕೋಟೆಗಳನ್ನು ನಿರ್ಮಿಸುತ್ತಿದ್ದರು. ನೇರವಾಗಿ ಉನ್ನತವಾಗಿ ಮೇಲೇಳುವ ಬೆಟ್ಟಕ್ಕೆ ಆರು ಸುತ್ತು ಕೋಟೆ ಗೋಡೆಗಳನ್ನು ನಿರ್ಮಿಸಿದ, ದುರ್ಗಮವಾಗಿದ್ದ ಕೋಟೆ ಕಬ್ಬಾಳದುರ್ಗ. ಹುಲಿಯೂರುದುರ್ಗ ಗುಂಡಾದ ಸುಲಭವಾಗಿ ವಿರಲಸಾಧ್ಯವಾದ ಬೆಟ್ಟದ ಸುತ್ತ ಕಟ್ಟಿದ ಕೋಟೆಗಳಿಂದ ಕೂಡಿದ್ದು ಮಿಡಗೇಶಿಯ ಕೋಟೆಯನ್ನು ನೇರವಾಗಿ ಮೇಲೆದ್ದ ಬಂಡೆಗಲ್ಲುಗಳನ್ನಾಧರಿಸಿ ಕಟ್ಟಲಾಗಿದೆ. ಈ ಕೋಟೆಯನ್ನು ಪ್ರವೇಶಿಸಲು ಬಂಡೆಗಲ್ಲಿನಲ್ಲಿಯೇ ಕೊರೆದ ಬಾಗಿಲಿನ ಮೂಲಕ ಹೋಗಬೇಕು. ಇವುಗಳಲ್ಲದೆ ಮಾಗಡಿ, ಯಲಹಂಕ, ಬೂದಿಹಾಳು, ಶಿರಾ, ಬಾಣಾವರ, ಐಮಂಗಲ, ಪಿರಿಯಾಪಟ್ಟಣ, ಮಡಿಕೇರಿ ಮುಂತಾದ ನೂರಾರು ಸಣ್ಣ ದೊಡ್ಡ ಕೋಟೆಗಳು, ಅವುಗಳನ್ನು ಬಳಸಿದ ಅಗಳುಗಳು ಈಗಲೂ ಉಳಿದುಬಂದಿವೆ. ಸಣ್ಣಪುಟ್ಟ ಪಾಳೆಯಗಾರರು ತಮ್ಮ ರಕ್ಷಣೆಗಾಗಿ ಕೋಟೆಗಳನ್ನು ಹೇಗೆ ನಂಬಿಕೊಂಡಿದ್ದರೆಂಬುದನ್ನು ಇವುಗಳಲ್ಲಿ ಮನಗಾಣಬಹುದು.

18ನೆಯ ಶತಮಾನದಲ್ಲಿ ಹೈದರ್ ಮತ್ತು ಟಿಪ್ಪು ಇವರು ಮೈಸೂರು ರಾಜ್ಯವನ್ನು ವಿಸ್ತರಿಸುತ್ತ ಈ ಪಾಳೆಯಗಾರರ ಒಂದೊಂದು ಕೋಟೆಯನ್ನು ಹಿಡಿದರು. ರಾಜ್ಯದ ರಕ್ಷಣೆಗೂ ವಿಸ್ತರಣೆಗೂ ಕೋಟೆಗಳ ಪಾತ್ರ ಅವರಿಗೆ ಅತ್ಯಂತ ಮಹತ್ವದ್ದಾಗಿತ್ತು. ಆದ್ದರಿಂದಲೇ ಅವರು ಗೆದ್ದ ಕೋಟೆಗಳನ್ನೆಲ್ಲ ಹೆಚ್ಚು ಭದ್ರಪಡಿಸಿ ಅಲ್ಲಲ್ಲ ಸೈನ್ಯದ ತುಕಡಿಗಳನ್ನು ನೆಲೆಗೊಳಿಸುತ್ತ ಬಂದರು ಹಾಗೂ ಹೊಸ ಹೊಸ ಕೋಟೆಗಳನ್ನು ನಿರ್ಮಿಸುತ್ತ ಬಂದರು. ಈ ಕೋಟೆಗಳ ನಿರ್ಮಾಣಕ್ಕೆ ಹೊಸ ತಂತ್ರವನ್ನು ಬಳಸಿದರು. ಈ ವಿಷಯದಲ್ಲಿ ಇವರಿಗೆ ಫ್ರೆಂಚ್ ಎಂಜಿನಿಯರುಗಳ ನೆರವು ದೊರೆತಂತೆ ತೋರುತ್ತದೆ. ಹಳೆಯ ಹಿಂದು ರೀತಿಯ ಕೋಟೆಗಳನ್ನು ದೊಡ್ಡ ದೊಡ್ಡ ಕಲ್ಲಿನ ತುಂಡುಗಳನ್ನು ಪೇರಿಸಿ ಕಟ್ಟಲಾಗಿತ್ತು. ಫಿರಂಗಿಯ ಗುಂಡಿನ ಏಟುಗಳಿಗೆ ಇವು ಸಡಿಲಗೊಳ್ಳುವ ಅವಕಾಶ ಹೆಚ್ಚಾಗಿತ್ತು. ಆದ್ದರಿಂದಲೇ ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಕೋಟೆಗಳಿಗೆ ಭದ್ರವಾಗಿ ಗಾರೆಗಚ್ಚುಗಳನ್ನು ಹಾಕುವುದು ರೂಢಿಯಾಯಿತು. ಇವರು ನಿರ್ಮಿಸಿದ ಅಥವಾ ಪುನರ್‌ನಿರ್ಮಿಸಿದ ಅನೇಕ ಕೋಟೆಗಳು ಈಗಲೂ ಅತ್ಯಂತ ಭದ್ರವಾದ ಸ್ಥಿತಿಯಲ್ಲಿವೆ. ಟಿಪ್ಪು ಹುಟ್ಟಿದ ಸ್ಥಳವಾದ ದೇವನಹಳ್ಳಿಯಲ್ಲಿ ಊರನ್ನು ಬಳಸಿ ನಿಂತಿರುವ ಕೋಟೆ ಕಲ್ಲಿನದಾಗಿದ್ದು ಮೇಲಿನ ಕೈಪಿಡಿಗೋಡೆಗಳು ಇಟ್ಟಿಗೆ ಗಾರೆಗಳಿಂದ ಕಟ್ಟಿದವು. ಅಲ್ಲಲ್ಲಿ ಗುಂಡು ಬತೇರಿಗಳು, ಫಿರಂಗಿ ಹಾರಿಸುವ ಕಿಂಡಿಗಳು ಇವೆ. ಅವಕ್ಕೆ ಬಳಸಿರುವ ಗಾರೆಗಚ್ಚುಗಳು ಕೂಡ ಸ್ವಲ್ಪವೂ ನಲುಗದೆ ಹೊಸದಾಗಿ ನಿರ್ಮಿಸಿದ ಕೋಟೆಯಂತೆಯೆ ಉಳಿದುಬಂದಿವೆ. ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಎರಡು ಸುತ್ತು ಕೋಟೆಗಳಿವೆ. ಇವುಗಳ ಹಿಂಭಾಗದಲ್ಲಿ ಮತ್ತೊಂದು ಮಣ್ಣಿನ ಕೋಟೆ ಇದ್ದಂತೆ ತಿಳಿದುಬರುತ್ತದೆ.



ಚಿತ್ರದುರ್ಗದ ಏಳುಸುತ್ತಿನ ಕೋಟೆ

ಕೋಟೆಯ ಕೆಲವು ಭಾಗಗಳನ್ನು ಇಟ್ಟಿಗೆಗಾರೆಗಳಿಂದಲೇ ನಿರ್ಮಿಸಲಾಗಿದೆ. ಆ ರಚನೆ ಅತ್ಯಂತ ಗಡುಸಾಗಿದೆ. ಈ ಕೋಟೆಯ ಗೋಡೆಗಳ ಬುಡದಲ್ಲಿಯೇ, ಭೂಮಿಯ ಒಳಭಾಗಕ್ಕೇ ಸೇರಿದಂತೆ, ದಪ್ಪವಾದ ಗೋಡೆಗಳಿಂದ ನಿರ್ಮಿತವಾದ, ಮದ್ದಿನ ಮನೆಗಳೂ ನೆಲಮಾಳಿಗೆಗಳೂ ಉಂಟು.

ರಹಮಾನ್‌ಘರ್ ಟಿಪ್ಪು ಕಟ್ಟಿಸಿದ ಗಿರಿದುರ್ಗಗಳಲ್ಲೊಂದು. ನಂದಿಯನ್ನು ಕಾರನ್‌ವಾಲೀಸ್ ಹಿಡಿದ ಮೇಲೆ ಟಿಪ್ಪು ಇದನ್ನು ಭದ್ರವಾದ ರಕ್ಷಣೆಯ ಸ್ಥಾನವನ್ನಾಗಿ ಮಾಡಲು ಯತ್ನಿಸಿದ. ಬೆಂಗಳೂರಿನಲ್ಲಿ ಇವನು

ಸುರಪುರ ಕೋಟೆ

ಕಟ್ಟಿಸಿದ ಕೋಟೆಯು ಮತ್ತು ಮದ್ದಿನ ಮನೆಗಳ ಸ್ವಲ್ಪಭಾಗ ಮಾತ್ರ ಉಳಿದುಬಂದಿದೆ. ಪಾವಗಡವನ್ನು ಗೆದ್ದಾಗ ಅಲ್ಲಿರುವ ಗಿರಿದುರ್ಗವನ್ನು ಇವನು ಹಲವು ರೀತಿಯಲ್ಲಿ ಅಭಿವೃದ್ಧಿಪಡಿಸಿ ಫಿರಂಗಿಗಳನ್ನು ಸ್ಥಾಪಿಸಲು ಗುಂಡು ಬತೇರಿಗಳು ಮತ್ತು ಕೋವಿಯನ್ನು ಉಪಯೋಗಿಸಲು ಕಿಂಡಿಗಳನ್ನು ಅಳವಡಿಸಿದ. ಎಲ್ಲಕ್ಕಿಂತ ಮೇಲಿರುವ ಸುಲ್ತಾನ್ ಬತೇರಿ ಸುಮಾರು 30 ಮೀಟರ್ ಸುತ್ತಳತೆಯುಳ್ಳ ಗುಂಡು ಬತೇರಿ. ಇದರ ಮೇಲೆ 14 ಫಿರಂಗಿಗಳನ್ನಳವಡಿಸಿಲು ಅವಕಾಶವಿದೆ. ಚಿತ್ರದುರ್ಗ, ಬಳ್ಳಾರಿ, ಮಿಡಿಗೇಶಿ ಮುಂತಾದವು ಹೈದರ್ ಮತ್ತು ಟಿಪ್ಪು ಇವರು ಗೆದ್ದು ಭದ್ರಪಡಿಸಿದ ಕೋಟೆಗಳು. ಟಿಪ್ಪು ಕಟ್ಟಿಸಿದ ಕೋಟೆಗಳಲ್ಲಿ ಅಪರೂಪವಾದುದು ಮಂಜರಾಬಾದಿನಲ್ಲಿ 200' ಎತ್ತರದ ಗುಡ್ಡವೊಂದರ ಮೇಲೆ ಕಟ್ಟಿರುವ ಅಷ್ಟಕೋನಾಕೃತಿಯ ನಕ್ಷತ್ರದಂತಿರುವಂಥ'ದ್ದು. ಇದರ ಎಂಟು ಮೂಲೆಗಳಲ್ಲಿಯೂ ಗುಂಡಾದ ರಕ್ಷಕ ಕೋಟೆಗಳಿವೆ. ಪ್ರವೇಶದ್ವಾರದ ದ್ವಾರಬಂಧವನ್ನು ಬಳ್ಳಿಸುರುಳಿಯಾಕೃತಿ ಮತ್ತು ಹುಲಿಯ ಪಟ್ಟೆಗಳಿಂದ ಅಲಂಕರಿಸಿ ಅರೆಗೋಲಾಕೃತಿಯ ಕಮಾನುಗಳನ್ನು ಅಳವಡಿಸಲಾಗಿದೆ. ಅಲ್ಲದೆ ಅದರ ಒಳಚಾವಣಿಯಲ್ಲಿ ಕೋಟೆಯ ವಿನ್ಯಾಸವನ್ನು ಬಿಡಿಸಿದೆ. ಬಹುಶಃ ಇಷ್ಟೊಂದು ವ್ಯಾಪಕವಾಗಿ ಮತ್ತು ಭದ್ರವಾಗಿ ಕೋಟೆಗಳನ್ನು ನಿರ್ಮಿಸಿದವರಲ್ಲಿ ಟಿಪ್ಪುವೇ ಕೊನೆಯವನೆಂದು ಹೇಳಬಹುದು.

ಉತ್ತರ ಕರ್ನಾಟಕ ಭಾಗದಲ್ಲೂ ಬಹಮನೀ ಮತ್ತು ಬಿಜಾಪುರ ಸುಲ್ತಾನರ ಕಾಲದ ಅನಂತರ ಅನೇಕ ಸಣ್ಣಪುಟ್ಟ ಕೋಟೆಗಳು ನಿರ್ಮಿತವಾದುವು. ಅಲ್ಲಿ ಹಲವು ಜಹಗೀರಿಗಳು, ದೇಸಗತ್ತಿಗಳು ಹುಟ್ಟಿಕೊಂಡವು. ಅವುಗಳ ಮುಖ್ಯಸ್ಥರು ತಮ್ಮ ಸೌಧಗಳ ಭದ್ರತೆಗಾಗಿ ವಾಡೆಗಳನ್ನು ನಿರ್ಮಿಸಿದರು. ಈ ಕೋಟೆಗಳು ಚಿಕ್ಕವು, ಸಾಮಾನ್ಯವಾಗಿ ಚೌಕ ವಿನ್ಯಾಸದವು. ನಾಲ್ಕು ಮೂಲೆಗಳಲ್ಲಿ ಮತ್ತು ನಾಲ್ಕು ದಿಕ್ಕಿನ ಗೋಡೆಗಳಲ್ಲಿ ನಡುವೆ ಗುಂಡುಬತೇರಿಗಳನ್ನು, ಒಂದು ಭಾಗದಲ್ಲಿ ಮಾತ್ರ ಪ್ರವೇಶದ್ವಾರ, ಕೆಲವು ಎಡೆ ಸುತ್ತಲೂ ಕಂದಕಗಳು ಇರುತ್ತಿದ್ದುದುಂಟು. ಇಂಥ ಚಿಕ್ಕ ಕೋಟೆಗಳಲ್ಲಿ ಕೋಟೆಬಾಗಿಲಿಗೆದುರಾಗಿ ಹಿಂಭಾಗದ ಗೋಡೆಗೆ ಹೊಂದಿಕೊಂಡಂತೆ ಮುಖ್ಯ ಸೌಧವೂ ಉಳಿದಂತೆ ಕೆಲವು ಅಧಿಕಾರಿಗಳ ಮತ್ತು ಸೈನ್ಯದವರ ಮನೆಗಳು ಮಾತ್ರ ಇರಲು ಅವಕಾಶ ಇರುತ್ತಿತ್ತು. ಶತ್ರುಗಳ ಚಲನವನ್ನು ಅರಿಯಲು ಕೋಟೆಗೆ ಸಮೀಪದಲ್ಲಿ ಎತ್ತರವಾದ ದಿಬ್ಬದ ಮೇಲೆ ಉನ್ನತವಾದ ವೀಕ್ಷಣಾಗೋಪುರಗಳಿರುತ್ತಿದ್ದುದು ಸಾಮಾನ್ಯ. ಕಿತ್ತೂರು, ತೆಕ್ಕಲಕೋಟೆ ಮೊದಲಾದ ಕಡೆ ಇರುವ ಕೋಟೆಗಳು ಈ ಬಗೆಯವು.

ಕೋಟೆಗಳನ್ನು ಅವುಗಳ ಪರಿಸರ, ರಚನೆ, ರೀತಿಗಳನ್ನಾಧರಿಸಿ ಹಲವು ಬಗೆಯಾಗಿ ವಿಂಗಡಿಸಲಾಗಿದೆ. ಕಾವ್ಯಗಳಲ್ಲಿ, ಶಾಸನಗಳಲ್ಲಿ ನಗರಗಳನ್ನು ವರ್ಣಿಸುವಾಗ ಕೋಟೆಗಳು, ಅಳ್ವೇರಿಗಳು, ತೆನೆಗಳು ಮುಂತಾದುವುಗಳ ವರ್ಣನೆ ವಿವರವಾಗಿ ಕಂಡುಬರುತ್ತದೆ. ಮುಖ್ಯವಾಗಿ ಇವನ್ನು ಗಿರಿದುರ್ಗ, ವನದುರ್ಗ ಮತ್ತು ಜಲದುರ್ಗಗಳೆಂದು ವಿಂಗಡಿಸುವುದು ರೂಢಿ. ಕನ್ನಡನಾಡಿನ ಜನತೆಯ ರಾಜಮನೆತನಗಳ ಆಗುಹೋಗುಗಳಲ್ಲಿ ಮಹತ್ತರ ಪಾತ್ರವನ್ನು ವಹಿಸಿದ ಈ ಕೋಟೆಗಳು ಅಂದಿನ ಶಕ್ತಿಯ, ಸಾಧನೆಗಳ ಸಂಕೇತಗಳಾಗಿ ನಾನಾ ಕಡೆ ಚದುರಿ ನಿಂತಿವೆ.

19ನೆಯ ಶತಮಾನದಲ್ಲಿ, ಕರ್ನಾಟಕದ ಬಹುಭಾಗ ಬ್ರಿಟಿಷರ ಕೈವಶವಾಗಿದ್ದ ಕಾಲದಲ್ಲಿ, ಸ್ಥಳೀಯ ಜನ ಕೋಟೆಗಳಲ್ಲಿ ಆಶ್ರಯಪಡೆದು ಬಲಿಷ್ಠರಾಗಿ ಸರ್ಕಾರಕ್ಕೆ ತೊಂದರೆ ಕೊಡಬಹುದೆಂಬ ದೃಷ್ಟಿಯಿಂದ ಅವರು ಅನೇಕ ಕೋಟೆಗಳನ್ನು ನೆಲಸಮಮಾಡಿದರು ಅಥವಾ ನಿರುಪಯುಕ್ತವಾಗುವಂತೆ ಮಾಡಿದರು. ಅಲ್ಲದೆ ಆ ಕಾಲದಲ್ಲಿ ದೇಶೀ ಪಾಳೆಯಪಟ್ಟುಗಳ ಪರಸ್ಪರ ಕಾದಾಟ ಅಥವಾ ರಕ್ಷಣೆಯ ಪ್ರಶ್ನೆಯೇ ಇರಲಿಲ್ಲವಾಗಿ ಯಾವ ಹೊಸ ಕೋಟೆಗಳ ರಚನೆಯೂ ಆಗಲಿಲ್ಲ. (ಎಂ.ಎಚ್.)

**ಕೋಡಂಗಿ :** ಯಕ್ಷಗಾನ ಆಟಗಳಲ್ಲಿಯ ಒಂದು ಹಾಸ್ಯ ಪಾತ್ರ. ಕೋಡಂಗಿ ಎಂಬ ಮಾತಿಗೆ ಹಾಸ್ಯಗಾರ, ವಿನೋದಗಾರ, ವಿದೂಷಕ, ವಿಚಿತ್ರ ವೇಷ ಧರಿಸಿದ ವ್ಯಕ್ತಿ ಎಂಬ ಅರ್ಥ ಇದೆ.

ಯಕ್ಷಗಾನ ಆಟಗಳಲ್ಲಿ (ತಾಳಮದ್ದಳೆ ಇಲ್ಲದೆ ವೇಷ ಕಟ್ಟಿ ಕುಣಿಯುವುದು) ಪ್ರತಿಯೊಂದು ಪಾತ್ರವನ್ನೂ ರಂಗಸ್ಥಳಕ್ಕೆ ಪ್ರವೇಶಗೊಳಿಸುವುದು ಕೋಡಂಗಿಯ ಕೆಲಸ. ಭಾಗವತರನ್ನು ಬಿಟ್ಟರೆ ಕೋಡಂಗಿ ತಾನೇ ಸೂತ್ರಧಾರನಾಗಿ ಪ್ರೇಕ್ಷಕರಿಗೆ ಪಾತ್ರಗಳ ಪರಿಚಯ ಮಾಡಿಸುತ್ತಾನೆ. ರಂಗ ಪ್ರವೇಶಿಸುತ್ತಾ ಆಟಕೆ ಮೊದಲು ಕೋಡಂಗಿ, ತೋಟಕೆ ಮೊದಲು ಮೂಲಂಗಿ, ಹರೇ ರಮಣ ಗೋವಿಂದ,



ರಮಾರಮಣ ಗೋವಿಂದ ಎಂಬ ಹಾಡಿನೊಂದಿಗೆ ಪ್ರೇಕ್ಷಕರನ್ನು ನಕ್ಕು ನಗಿಸುತ್ತಾನೆ. ಇವನಿಗೆ ರಂಗಸ್ಥಳದಲ್ಲಿ ನಿಲ್ಲಲ್ಲು ಒಂದು ಗೊತ್ತಾದ ಸ್ಥಾನವಿರುತ್ತದೆ. ಇವನು ಅಲ್ಲಿ ನಿಂತು, ಒಂದು ಪಾತ್ರ ರಂಗಸ್ಥಳಕ್ಕೆ ಬಂದಕೂಡಲೇ ತಾವು ಧಾರ್ರೆ ಪೇಳ್ರೆ, ರಾಜಾ ರಘುಕುಲಸೋಮ ಎಂದು ಮುಂತಾಗಿ ಪ್ರಶ್ನೆ ಹಾಕಿ ಪಾತ್ರಗಳ ಬಾಯಿಂದ ತಾನು ಇಂಥ'ವನು, ಇಂಥ'ವಳು ಎಂದು ಹೇಳಿಸುವನು. ಪಾತ್ರ ಮಾತನಾಡುವಾಗ, ಮಾತಿನ ಮಧ್ಯೆ, ಅಲ್ಲವೆ? ಹೌದು, ಆಹಾ, ಮತ್ತೂ ಎಂದೆಲ್ಲಾ 'ಸುಮಾನು' (ಮನಬಂದಂತೆ) ಆಡಿ ಕಥೆ ಮುಂದುವರಿಯಲು ಸಹಾಯ ಮಾಡುವುದು ಇವನ ಕೆಲಸ.

ಕೋಡಂಗಿ ವೇಷ ಯಾವ ಬಗೆಯದಾದರೂ ಆಗಿರಬಹುದು. ಅದು ಪ್ರೇಕ್ಷಕರಲ್ಲಿ ನಗು ಹುಟ್ಟಿಸುವಂತಿರಬೇಕು. ಚಿತ್ರ ವಿಚಿತ್ರ ಬಣ್ಣದ ಬಟ್ಟೆ ಧರಿಸಿ ಉದ್ದನೆಯ ವಿಚಿತ್ರವಾದ ಟೋಪಿ ಹಾಕಿಕೊಳ್ಳುವುದು ಪದ್ಧತಿ.

ಅಂಗಾಂಗಗಳನ್ನು ವಕ್ರವಕ್ರವಾಗಿ ತಿರುಗಿಸುವುದು, ಬಾಯಿಗೆ ಬಂದದ್ದನ್ನು ಮಾತಾಡುವುದು, ಮೂಗಿನಿಂದ ವೀಣೆ ನುಡಿಸುವುದು, ಅಂಗೈಯ ಮುಂಗೈಯ ಮಾಡುತ್ತೇನೆ, ಮುಂಗೈಯ ಅಂಗೈಯ ಮಾಡುತ್ತೇನೆ ಎಂದೆಲ್ಲ ಕೈಯನ್ನು ಹಿಂದಕ್ಕೂ ಮುಂದಕ್ಕೂ ತಿರುಗಿಸುವುದು ಮೊದಲಾದ ಚಿತ್ರ ವಿಚಿತ್ರ ಅಂಗಾಭಿನಯಗಳಿಂದ ಪ್ರೇಕ್ಷಕರ ಬೇಸರಿಕೆಯನ್ನು ಕಳೆಯುತ್ತಾನೆ.ಇವನ ಹಾಸ್ಯ, ಚೇಷ್ಟೆ ಒಮ್ಮೊಮ್ಮೆ ಅತಿ ಎನಿಸುವುದೂ ಉಂಟು.

ಕೆಲವೊಮ್ಮೆ ಮೊಹರಂ ಹಬ್ಬದ ಮೆರವಣಿಗೆಯಲ್ಲೂ ಹುಲಿವೇಷ, ಪಾಳೆಗಾರ ವೇಷಗಳಂತೆ ಕೋಡಂಗಿ ವೇಷವೂ ಬರುವುದುಂಟು. ಇಲ್ಲಿ ಇದೊಂದು ತಮಾಷೆ ವೇಷ ಅಷ್ಟೆ. ಯಕ್ಷಗಾನದ ಕೋಡಂಗಿಗೂ ಈ ವೇಷಕ್ಕೂ ಏನೂ ಸಂಬಂಧ ಕಂಡುಬರುವುದಿಲ್ಲ. (ಜಿ.ಆರ್.ಐ.)

**ಕೋಡಿಹಳ್ಳಿ :** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಬೆಳ್ಳೂರಿನಿಂದ ನೈಋತ್ಯಕ್ಕೆ 6ಕಿಮೀ ದೂರದಲ್ಲಿ ದಡಿಗನಕೆರೆಯ ಕೋಡಿಯ ಬಳಿ ಇರುವ ಒಂದು ಹಳ್ಳಿ. ಹೊಯ್ಸಳರ ಕಾಲದ ಶಾಸನಗಳಲ್ಲಿ ಈ ಊರನ್ನು ಅನಾದಿಯಗ್ರಹಾರ ದಡಿಗನಕೆರೆ ಎಂದು ಉಲ್ಲೇಖಿಸಲಾಗಿದೆ. ಕೆರೆಯ ಉತ್ತರಕ್ಕೆ ದಡಿಗ, ದಕ್ಷಿಣಕ್ಕೆ ಕೋಡಿಹಳ್ಳಿ ಇವೆ. ಕೆರೆಗೂ ಎಡದಂಡೆಯ ಮೇಲಿನ ಊರಿಗೂ ದಡಿಗನಕೆರೆ ಎಂಬ ಹೆಸರೂ ಕೋಡಿಹಳ್ಳಿಗೆ ಸೇರಿದಂತೆ ಕೋಡಿಯ ಬಳಿ ಇರುವ ಈಶ್ವರ ದೇವಾಲಯಕ್ಕೆ ದಡಿಗೇಶ್ವರ ಎಂಬ ಹೆಸರೂ ಇದ್ದು ಈ ಹೆಸರುಗಳು ತಲಕಾಡು ಗಂಗರ ಮೂಲಪುರುಷರಲ್ಲೊಬ್ಬನಾದ ದಡಿಗನ ನೆನಪನ್ನು ತರುತ್ತವೆ. ಮೊದಲಿಗೆ ಈ ಎರಡು ಊರುಗಳೂ ಒಂದೇ ಆಗಿದ್ದಿರಬೇಕೆಂದು ತೋರುತ್ತದೆ.

ದಡಿಗದಲ್ಲಿರುವ ಯೋಗಾನರಸಿಂಹ ದೇವಾಲಯ ಮತ್ತು ಕೋಡಿಹಳ್ಳಿಯಲ್ಲಿರುವ ದಡಿಗೇಶ್ವರ ದೇವಾಲಯಗಳು ಇಟ್ಟಿಗೆಯ ಗೋಡೆಗಳಿಂದ ರಚಿತವಾಗಿವೆ. ಹೊರನೋಟಕ್ಕೆ ಇವು ಈಚಿನ ರಚನೆಗಳಂತೆ ಕಂಡುಬಂದರೂ ಒಳಗಿನ ಕಂಬಗಳು, ನಡುವಣ ದೊಡ್ಡ ಅಂಕಣದ ಚಾವಣಿಯಲ್ಲಿ ಉಬ್ಬಿಸಿ ಬಿಡಿಸಿರುವ ಪೂರ್ಣ ವಿಕಸಿತ ಪದ್ಮ ಮೊದಲಾದವು ಗಂಗರ ಕಾಲದ ರಚನೆಗಳಂತಿವೆ. ಹತ್ತನೆಯ ಶತಮಾನದಲ್ಲಿ ಇಲ್ಲಿ ಜೈನ ವಸತಿಯಿದ್ದ ವಿಷಯ ಕೋಡಿಹಳ್ಳಿಯ ನಿಷಿಧಿ ಶಾಸನವೊಂದರಿಂದ ವ್ಯಕ್ತವಾಗುತ್ತದೆ. ಸಂನ್ಯಾಸವನ್ನು ಪಡೆದು ಎರಡು ಸಲ ನೋಂತು ಮುಡಿಪಿದ ಭವ್ಯನೊಬ್ಬನ ನೆನಪಿಗೆ ಆತನ ಮಗಳು ಬಿಡಕ್ಕ ನಿಷಿಧಿಯನ್ನು ನಿಲ್ಲಿಸಿದ್ದಾಳೆ. ದಡಿಗನಕೆರೆಯಲ್ಲಿ ಪಂಚಬಸದಿಯಿದೆ. ಹೊಯ್ಸಳರ ಕಾಲದಲ್ಲಿ ಮರಿಯಾನೆ ಮತ್ತು ಭರತರು ಬಾಹುಬಲಿ ಕೂಟವನ್ನು ಪ್ರತಿಷ್ಠಾಪಿಸಿದ್ದರು.

ದಡಿಗೇಶ್ವರ ದೇವಾಲಯದಲ್ಲಿ ಗರ್ಭಗೃಹ, ತೆರೆದ ಸುಕನಾಸಿ ಮತ್ತು ನವರಂಗಗಳಿವೆ. ಗರ್ಭಗೃಹದ ಚಾವಣಿಯಲ್ಲಿ ವಿಶಾಲವಾದ ಪದ್ಮಾಕೃತಿ ಇದೆ. ಇಲ್ಲಿನ ದೊಡ್ಡ ಶಿವಲಿಂಗ ಅಗಲವಾದ ಪಾಣಿಪೀಠದ ಮೇಲಿದೆ. ಇದು ನಂದಿ, ನರಸಮಂಗಲಗಳಲ್ಲಿರುವ ಲಿಂಗಗಳಂತಿದೆ. ನವರಂಗದಲ್ಲಿ ಚೌಕನಾದ ಬುಡವುಳ್ಳ ಅಷ್ಟಮುಖದ ಕಂಬಗಳೂ ನಂದಿ, ಸೂರ್ಯ, ಗಣೇಶ, ನಾಗರ ಮೂರ್ತಿಗಳೂ ಇವೆ. ಸೂರ್ಯನ ಹಿಂಭಾಗದಲ್ಲಿ ಲಾಳದಾಕಾರದ ಪ್ರಭಾವಳಿಯಿದೆ. ಇದರ ಮೇಲೆ ಬಿಡಿಸಿರುವ ಬಳ್ಳಿ ಸುರುಳಿ ಗಂಗರ ಶಿಲ್ಪದ ಕುರುಹಾಗಿದೆ. ಇದು ಅರಳುಗುಪ್ಪೆಯ ಈಶ್ವರ ದೇವಾಲಯದಲ್ಲಿನ ಉಮಾಮಹೇಶ್ವರ ಮೂರ್ತಿಯ ಪ್ರಭಾವಳಿಯಂತಿದೆ.

ಯೋಗಾನರಸಿಂಹ ದಡಿಗದ ಪುರಾತನ ದೇವಾಲಯ. ಇಲ್ಲಿನ ಕಂಬಗಳು ಗಂಗ ಸ್ತಂಭರೀತಿಯ ಪ್ರಾರಂಭಿಕ ಘಟ್ಟದ ರಚನೆಗಳಂತೆ ಇವೆ. ಯೋಗಾನರಸಿಂಹನ ಮೂರ್ತಿ ಸುಂದರವಾಗಿದೆ. ಇಲ್ಲಿರುವ ಚೆನ್ನಕೇಶವ ದೇವಾಲಯ ಹೊಯ್ಸಳರ ಕಾಲದ ಬಳಪದ ಕಲ್ಲಿನ ಸಾಧಾರಣ ಕಟ್ಟಡ. ದೇವಾಲಯದಲ್ಲಿರುವ ಐದು ಅಡಿ ಎತ್ತರದ ಚೆನ್ನಕೇಶವ ಮೂರ್ತಿಗೆ ಹೆಚ್ಚು ಅಲಂಕರಣಗಳಿಲ್ಲದೆ ಇದರ ಪ್ರಭಾವಳಿಯಲ್ಲಿ ದಶಾವತಾರವಿದೆ. ದೇವಾಲಯದ ಮುಖಮಂಟಪ ಪಾತಾಳಾಂಕಣಗಳು ವಿಜಯನಗರದ ಕಾಲದಲ್ಲಿ ಸೇರ್ಪಡೆಗೊಂಡಿವೆ. ಇದಲ್ಲದೆ ಸೋಮೇಶ್ವರ ದೇವಾಲಯ ಮತ್ತು ಶಾಂತಿನಾಥ ಬಸದಿ ಇಲ್ಲಿವೆ. ಶಾಂತಿನಾಥ ಬಸದಿಯಲ್ಲಿನ ಸುಂದರವಾದ ಜಿನಬಿಂಬವನ್ನು ಬೇರೆಡೆಯಿಂದ ತಂದು ಇಲ್ಲಿ ಪ್ರತಿಷ್ಠಾಪಿಸಿದುದಾಗಿ ತಿಳಿದುಬರುತ್ತದೆ. (ಎಂ.ಎಚ್.)

**ಕೋನಯ್ಯ :** ಸು.1750. ಬ್ರಾಹ್ಮಣ ಕವಿ. ಕೃಷ್ಣಾರ್ಜುನಸಂಗರ ಎಂಬ ಗ್ರಂಥದ ಕರ್ತೃ. ಹೋತೂರು ಬೆಟ್ಟರಸನ ಮಗ. ಇವನಿಗೆ ಸರಸ ಭಾರತಿ ಎಂಬ ಬಿರುದು ಇದ್ದಂತೆ ತೋರುತ್ತದೆ. ಪೂರ್ವಕವಿಗಳಲ್ಲಿ ವ್ಯಾಸ, ವಾಲ್ಮೀಕಿ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದವರನ್ನು ಸ್ಮರಿಸಿದ್ದಾನೆ.

ಕೃಷ್ಣಾರ್ಜುನಸಂಗರ ಭಾಮಿನೀ ಷಟ್ಪದಿಯಲ್ಲಿದೆ. ಇದಕ್ಕೆ ಗಯಚರಿತೆ ಎಂಬ ಹೆಸರೂ ಇದೆ. ಇದರಲ್ಲಿ 27 ಸಂಧಿ, 1721 ಪದ್ಯ ಇವೆ. ಗಯನೆಂಬ ಗಂಧರ್ವ ಶಿರೋಮಣಿ ಕೃಷ್ಣರಾಯಂಗೆ ದ್ರೋಹವನೆಸಗಿ ಫಲುಗುಣನ ಮರೆಹೋಗಲು ಹರಿ ಕೊಡಹೇಳಲವನನು ಕೊಡನೆನೆ ಕಾದಿದರು ಹರಿನರರು ದ್ವೈತಕಾನನದಿ ಪರಮೇಶನೀರ್ವರ ತಿಳುಹಿ ಸಾಮದಲೊಂದಮಾಡಿದನು - ಇದು ಕಥಾವಸ್ತು. ಮಹಾಭಾರತದ ವನಪರ್ವದಲ್ಲಿಯ ಕಥೆ ತನ್ನ ಗ್ರಂಥಕ್ಕೆ ಆಕರ ಎಂಬುದು ಕವಿಯ ಹೇಳಿಕೆ. ಆದರೆ ವ್ಯಾಸಭಾರತದ ವನಪರ್ವದಲ್ಲಿ ಈ ಕಥೆ ಸಿಕ್ಕುವುದಿಲ್ಲ. ಹಲವೆಡೆ ಸಂಸ್ಕೃತ ಸುಭಾಷಿತಗಳ ರೂಪಾಂತರವಿದೆ. ಕೆಲವು ಪದ್ಯಗಳಲ್ಲಿ ಕವಿಯ ಸ್ವೋಪಜ್ಞತೆಯನ್ನು ಕಾಣಬಹುದಾಗಿದೆ. ಬಂಧ ಸರಳವೂ ಸುಲಭವೂ ಆಗಿದೆ. ಒಟ್ಟಿನಲ್ಲಿ ಗಯಚರಿತೆ ಒಂದು ಸಾಮಾನ್ಯ ಕಾವ್ಯ ಎನ್ನಬಹುದು. (ಎಂ.ಆರ್)

**ಕೋರಮಂಗಲ :** ಹಾಸನ ಜಿಲ್ಲೆ ಹಾಸನ ತಾಲ್ಲೂಕಿನಲ್ಲಿ ಹಾಸನದಿಂದ ಈಶಾನ್ಯಕ್ಕೆ 11ಕಿಮೀ ದೂರದಲ್ಲಿರುವ ಹಳ್ಳಿ. ಇತಿಹಾಸಪ್ರಸಿದ್ಧ ಸ್ಥಳ. ಇಲ್ಲಿ ಮೂರು ಹೊಯ್ಸಳ ದೇವಾಲಯಗಳಿವೆ. ಇಲ್ಲಿರುವ ಬೂಚೇಶ್ವರ ದೇವಾಲಯ ಹೊಯ್ಸಳ ವಾಸ್ತುಶೈಲಿಯ ಉತ್ತಮ ಕೃತಿ. ಈ ಗುಡಿಯನ್ನು ಬೂಚಿರಾಜ ಎಂಬ ಅಧಿಕಾರಿ 2ನೆಯ ಬಲ್ಲಾಳನ ಸಿಂಹಾಸನಾರೋಹಣದ ನೆನಪಿಗಾಗಿ 1173ರಲ್ಲಿ ಕಟ್ಟಿಸಿದ್ದ. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಅದರ ಮುಂದೆ 18 ಕಂಬಗಳಿಂದೆತ್ತಿದ್ದ ಮಹಾಮಂಟಪ ಇವೆ. ಪೂರ್ವಭಾಗದಲ್ಲಿ ಗರ್ಭಗುಡಿಯ ಲಿಂಗದ ನೇರ ಎದುರಾಗಿ ಸೂರ್ಯದೇವರ ಗುಡಿ ಇದೆ. ಪ್ರವೇಶ ದ್ವಾರಗಳು ಮಹಾಮಂಟಪದ ಇಕ್ಕೆಲಗಳಲ್ಲಿವೆ. ಇಡೀ ಘಟಕ ಎತ್ತರದ ಜಾಗದಲ್ಲಿದೆ. ಇದು ಪ್ರಾಯಶಃ ಜಗತಿಯ ಮೇಲಿರಬೇಕು.



ಬೂಚೇಶ್ವರ ದೇವಾಲಯದ ಭಿತ್ತಿಶಿಲ್ಪಗಳು

ಹೊರಮೈಯಲ್ಲಿ ಹೊಯ್ಸಳ ಶೈಲಿಗೆ ಸಾಮಾನ್ಯವಾದ ಶಿಲ್ಪಿತ ಅಧಿಷ್ಠಾನಪಟ್ಟಿಕೆಗಳು, ಭಿತ್ತಿಯ ಮೇಲೆ ದೇವಶಿಲ್ಪಗಳು ಇತ್ಯಾದಿ ಇವೆ. ಹೊರಭಾಗದಲ್ಲಿ ಹಾಗೂ ಶಿಖರದಲ್ಲಿ ಶಿಲ್ಪಗಳಿವೆ. ಶಿಖರದ ಪೂರ್ವಭಾಗದಲ್ಲಿ ಬಿಡಿಸಿರುವ ಇಂದ್ರ ಮತ್ತು ಭಿತ್ತಿಯ ಮೇಲಿನ ಅನೇಕ ಶಿಲ್ಪಗಳು ಸೊಬಗಿನವು. ತಿರುಗಣೆಯಲ್ಲಿ ಮಾಡಿದ ದುಂಡುಕಂಬಗಳು, ದ್ವಾರಬಂಧ ಮತ್ತು ಭುವನೇಶ್ವರಿ ಸುಂದರ ರಚನೆಗಳು. ಗರ್ಭಗುಡಿಯ ನೇರ ಎದುರಿಗೆ ಸೂರ್ಯಗುಡಿ ಇದೆ. ಮಹಾಮಂಟಪ ತೆರೆದಿದ್ದು ಸುತ್ತಲೂ ಕಕ್ಷಾಸನ ಇರುವುದು, ಪಾರ್ಶ್ವದಲ್ಲಿ ದ್ವಾರಗಳಿರುವುದೂ ಈ

ದೇವಾಲಯದ ವೈಶಿಷ್ಟ್ಯ. ಈ ಗುಡಿಯ ಈಶಾನ್ಯದಲ್ಲಿ ಇದೇ ಕಾಲದ ಭೈರವನ ಗುಡಿ ಇದೆ. ನಾಗೇಶ್ವರ, ಗೋವಿಂದೇಶ್ವರ ದೇವಾಲಯಗಳು ಬಹು ಶಿಥಿಲವಾಗಿವೆ. ಇವು ಬೂಚೇಶ್ವರ ಗುಡಿಗಿಂತ ಸ್ವಲ್ಪ ಹಳೆಯವು. ಗರ್ಭಗೃಹ, ಸುಕನಾಸಿ, ನವರಂಗಗಳಿರುವ ಈ ದೇವಾಲಯಗಳಲ್ಲಿ ಸುಕನಾಸಿ ತೆರೆದಂತಿರುವುದು ವಿಶೇಷ. ಇತರ ಹೊಯ್ಸಳ ಶೈಲಿಯ ಅಂಶಗಳೆಲ್ಲ ಇವುಗಳಲ್ಲಿ ಇವೆ. (ಕೆ.ಎಸ್.ಎಸ್.)

**ಕೋಲ್, ಆರ್ಥರ್ ಹೆನ್ರಿ :** -1844. ಮೈಸೂರು ಸಂಸ್ಥಾನದಲ್ಲಿದ್ದ ಈಸ್ಟ್ ಇಂಡಿಯಾ ಕಂಪೆನಿಯ ರೆಸಿಡೆಂಟ್ (1818-27). ಮೊದಲು ಕಂಪೆನಿಯ ಸೇವೆಯಲ್ಲಿ ಗುಮಾಸ್ತನಾಗಿದ್ದು (1801) ವಿಲ್ಕ್ಸ್ ಮೈಸೂರು ಸಂಸ್ಥಾನದ ರೆಸಿಡೆಂಟ್ ಆಗಿದ್ದಾಗ 1806ರಲ್ಲಿ ಆತನ ಕಾರ್ಯದರ್ಶಿಯಾದ. ವಿಲ್ಕ್ಸ್ ಹೆಲಿನಾ ದ್ವೀಪಕ್ಕೆ ಹೋದಮೇಲೆ (1809) ಆತನ ಸ್ಥಾನದಲ್ಲಿ ಹಂಗಾಮಿ ರೆಸಿಡೆಂಟ್ ಆದ. ಖಾಯಂ ರೆಸಿಡೆಂಟಾಗಿ 1812ರಲ್ಲಿ ಕಾರ್ಯನಿರ್ವಹಣೆ ಮಾಡಿದ್ದ. 1818ರಲ್ಲಿ ಸರ್ಕಾರಿ ಲಾಟರಿಗಳ ಸೂಪರಿಂಟೆಂಡೆಂಟ್ ಆಗಿದ್ದ. 1827ರಲ್ಲಿ ರಜೆಯ ಮೇಲೆ ಲಂಡನ್ನಿಗೆ ತೆರಳಿ 1829ರಲ್ಲಿ ನಿವೃತ್ತನಾದ. ಮರಣ 1844. ಈತ "ಬಹಳ ವರ್ಷಗಳವರೆಗೆ ರೆಸಿಡೆಂಟನಾಗಿದ್ದ. ಮೈಸೂರನ್ನು ಬಿಟ್ಟು ಹೋದ ಮೇಲೆ ಮಾರಿಷಸ್ ದ್ವೀಪಕ್ಕೆ ಹೋದ. ಪಾರ್ಲಿಮೆಂಟಿನ ಸದಸ್ಯನಾಗಿಯೂ ಇದ್ದಂತೆ ತೋರುತ್ತದೆ; ಈತನ ಬಗ್ಗೆ ಹೆಚ್ಚು ಮಾಹಿತಿಗಳು ತಿಳಿದುಬಂದಿಲ್ಲ" ಎಂದು ಲೂಯಿ ರೈಸ್ ತಿಳಿಸುತ್ತಾರೆ. ಬೆಂಗಳೂರಿನ ಕೋಲ್ಸ್ ಪಾರ್ಕ್ ಈತನ ಹೆಸರಿನಲ್ಲಿದೆ.

ದಿವಾನ್ ಪೂರ್ಣಯ್ಯನವರ ಬಗ್ಗೆ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅಸಮಾಧಾನವಾಗಿತ್ತಾಗಿ ಮಹಾರಾಜರು ಪ್ರಾಪ್ತವಯಸ್ಸನ್ನು ಮುಟ್ಟುತ್ತಿದ್ದಂತೆಯೇ (1811) ತಾವೇ ಆಡಳಿತ ವಹಿಸಿಕೊಳ್ಳುವ ಅಪೇಕ್ಷೆಯನ್ನು ರೆಸಿಡೆಂಟ್ ಕೋಲ್ ಅವರಿಗೆ ವ್ಯಕ್ತಪಡಿಸಿದಾಗ, ಕೋಲ್ ಪೂರ್ಣಯ್ಯನವರನ್ನು ಆಡಳಿತದಲ್ಲಿ ಉಳಿಸಿಕೊಳ್ಳುವ ಪ್ರಯತ್ನ ನಡೆಸಿದ. ಆದರೆ ಪೂರ್ಣಯ್ಯನವರು ನಿವೃತ್ತರಾದರು. ಮಹಾರಾಜರ ನೇರ ಆಳಿಕೆ ಪ್ರಾರಂಭವಾದ ಅನಂತರದ ರಾಜರ ಆರ್ಥಿಕ ನೀತಿಯ ಬಗ್ಗೆ ಕೋಲ್ ಅಸಮಾಧಾನ ತಾಳಿದ್ದನಲ್ಲದೆ, ಮಹಾರಾಜರಿಗೂ ಈತನಿಗೂ ಸ್ವಲ್ಪಮಟ್ಟಿಗೆ ವಿರಸವೂ ಬೆಳೆದಿತ್ತು. ಮದರಾಸಿನ ಗವರ್ನರ್ ಮನ್ರೊ 1825ರಲ್ಲಿ ಮೈಸೂರಿಗೆ ಬಂದು ಪರಿಸ್ಥಿತಿಯನ್ನು ಪರಿಶೀಲಿಸಿ ವೆಚ್ಚಗಳ ಬಗ್ಗೆ ಕೋಲ್ ಮಾಡಿದ ವರದಿ ಆಧಾರರಹಿತವೆಂದು ತೀರ್ಮಾನಿಸಿದನಲ್ಲದೆ ಇಬ್ಬರಲ್ಲೂ ಸಹಕಾರ ಬೆಳೆಸಲು ಪ್ರಯತ್ನಿಸಿದ. (ವಿ.ಜಿ.ಕೆ.)

**ಕೋಲ್‌ಮನ್ ವೆಸ್ಲಿ, ಸಿ. :** -1954. ಮಂಡ್ಯದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆ ಸ್ಥಾಪನೆಗೆ (1933) ಮೂಲ ಕಾರಣರಾದ ಕೃಷಿ ತಜ್ಞ. ಹಿಂದಿನ ಮೈಸೂರು ಸಂಸ್ಥಾನದ ವ್ಯವಸಾಯ ಇಲಾಖೆಯ ಪ್ರಥಮ ನಿರ್ದೇಶಕ (1908-34). ಕೋಲ್‌ಮನ್ ಮೂಲತಃ ಕೆನಡ ದೇಶದವರು. 1908ರಲ್ಲಿ ಇವರು ವ್ಯವಸಾಯ ಇಲಾಖೆಯ ನಿರ್ದೇಶಕರಾಗಿ ನೇಮಕಗೊಂಡು ಸುಮಾರು ಇಪ್ಪತ್ತೈದು ವರ್ಷಗಳಷ್ಟು ದೀರ್ಘಕಾಲ ಆ ಹುದ್ದೆಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದರು. ಈ ಅವಧಿಯಲ್ಲಿ ವ್ಯವಸಾಯ ಇಲಾಖೆಯನ್ನು ವೈಜ್ಞಾನಿಕವಾಗಿ ಸಜ್ಜುಗೊಳಿಸಿ ಅದು ಪ್ರಗತಿ ಪಥದಲ್ಲಿ ಹೆಜ್ಜೆ ಇಡಲು ನಾಂದಿ ಹಾಡಿದರು. ಅಡಿಕೆ ಬೆಳೆಗೆ ತಗಲುವ ಕೊಳೆರೋಗ, ಕಾಫಿಗೆ ಕಾಡುವ ಬೋರರ್‌ಗಳು ಇವುಗಳ ಕುರಿತಂತೆ ಸಂಶೋಧನೆ ನಡೆಸಿ ವೈಜ್ಞಾನಿಕ ವಿಧಾನಗಳಿಂದ ರೋಗ ನಿಯಂತ್ರಣವನ್ನು ತೋರಿಸಿಕೊಟ್ಟರು. ವಿದೇಶಗಳಿಂದ ವಿವಿಧ ಬಗೆಯ ತರಕಾರಿ ಬೀಜಗಳನ್ನು ತಂದು ಅವುಗಳನ್ನು ಹಣದ ಬೆಳೆಯಾಗಿ ಲಾಭದಾಯಕವಾಗಿ ಬೆಳೆಯುವಂತೆ ರೈತರನ್ನು ಉತ್ತೇಜಿಸಿದರು. ಬೆಂಗಳೂರಿನ ಸುತ್ತಲಿನ ರೈತರು ತರಕಾರಿ ಬೆಳೆಯುವುದರಲ್ಲಿ ಪರಿಣತಿ ಹೊಂದಿರಲು ಅಂದಿನ ಕೋಲ್‌ಮನ್‌ರ ಒತ್ತಾಸೆಯೇ ಪ್ರಮುಖ ಕಾರಣವಾಯಿತು.

1931ರಲ್ಲಿ ಇರ್ವಿನ್ ನಾಲೆಯ ಮೂಲಕ (ಈಗಿನ ವಿಶ್ವೇಶ್ವರಯ್ಯ ನಾಲೆ) ಮಂಡ್ಯ ಜಿಲ್ಲೆಯ ಸುಮಾರು ಒಂದು ಲಕ್ಷದ ಇಪ್ಪತ್ತು ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಿತು. ಈ ಸೌಲಭ್ಯ ಬಳಸಿಕೊಂಡು ಬತ್ತದ ಜೊತೆಗೆ ಕಬ್ಬು ಬೆಳೆಯಲು ಇವರು ಪ್ರೋತ್ಸಾಹಿಸಿದರು. ನಾಲೆಗೆ ನೀರು ಬಂದ ಅನಂತರ ಮಲೇರಿಯಾ ಜ್ವರ ವ್ಯಾಪಿಸಿ ಜನರು ತೊಂದರೆಗೀಡಾದರು. ಈ ನೀರು, ಈ ಕಬ್ಬು ಯಾರಿಗೆ ಬೇಕಾಗಿದೆ ಎನ್ನುವಷ್ಟು ಜನರಲ್ಲಿ ಜಿಗುಪ್ಸೆ ಮನೆಮಾಡಿತು. ಅಲ್ಲದೆ ಕಬ್ಬಿನ ಬೇಸಾಯ ಹೊಸದು. ಉಳುಮೆ, ನೇಗಿಲು, ಗೊಬ್ಬರ ಎಲ್ಲದಕ್ಕೂ ಹಣಬೇಕು. ಆಗ ಕೋಲ್‌ಮನ್ ರೈತರನ್ನು ಹುರಿದುಂಬಿಸಿದರು. ಸರ್ಕಾರದಿಂದ ಸಾಲ ಕೊಡಿಸಿದರು. ನೇಗಿಲು ಮಾದರಿಯನ್ನು ತಾವೇ ಕೊಟ್ಟು ಕೋಲಾರದಲ್ಲಿ ಮಾಡಿಸಿ ಸರಬರಾಜು ಮಾಡಿದರು. ಈಗಲೂ ಆ ನೇಗಿಲಿಗೆ ಮಂಡ್ಯದ ಕಡೆ ಕೋಲಾರದ ನೇಗಿಲು ಎಂಬ ಹೆಸರಿದೆ.

1932ರಲ್ಲಿ ಭಾರತ ಸರ್ಕಾರ ಸಕ್ಕರೆ ಆಮದನ್ನು ಪೂರ್ಣವಾಗಿ ನಿಲ್ಲಿಸಿತು. ಸಕ್ಕರೆ ಕಂಪನಿ ಸ್ಥಾಪಿಸಿದಲ್ಲಿ ಅದು ಲಾಭದಾಯಕ ಉದ್ಯಮವಾಗುತ್ತದೆಂದೂ ರೈತರು ಬೆಳೆಯುವ ಕಬ್ಬನ್ನು ಬಳಸಿ ಸಕ್ಕರೆ ಉತ್ಪಾದಿಸಬಹುದೆಂದೂ ಕೋಲ್‌ಮನ್ ಅವರು ಸರ್ಕಾರಕ್ಕೆ ವರದಿ ನೀಡಿ, ಒಪ್ಪಿಗೆ ಪಡೆದರು. ಆಗ ಸ್ಥಾಪಿತವಾದ ಮೈಸೂರು ಸಕ್ಕರೆ ಕಾರ್ಖಾನೆಗೆ ಇವರನ್ನೇ ಪ್ರಥಮ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸರ್ಕಾರ ನೇಮಿಸಿತು.

ಕೃಷಿ ತಂತ್ರಜ್ಞಾನದ ಸಂಶೋಧನೆ ಮತ್ತು ವಿಸ್ತರಣೆಗಾಗಿ ವಿ.ಸಿ. ಫಾರಂ ಸ್ಥಾಪಿಸಿದರು. ಕಬ್ಬಿನ ತಳಿಯ ಸಂಶೋಧನೆಗಾಗಿಯೇ ಕಾರ್ಖಾನೆಯ ಹೆಸರಿನಲ್ಲಿ ನೂರಾರು ಎಕರೆ ಜಮೀನನ್ನು ಮೀಸಲಾಗಿರಿಸಲಾಯಿತು.

ಇವರು 1934ರಲ್ಲಿ ನಿವೃತ್ತರಾದ ಅನಂತರ ಸ್ವದೇಶಕ್ಕೆ ಮರಳಿದರು. ಸುಮಾರು ಇಪ್ಪತ್ತು ವರ್ಷಗಳ ಅನಂತರ ತಮ್ಮ 80ನೆಯ ಇಳಿ ವಯಸ್ಸಿನಲ್ಲಿ 1953ರಲ್ಲಿ ಮತ್ತೆ ಮೈಸೂರು ಸಂಸ್ಥಾನಕ್ಕೆ ಬಂದು ಭಾವನಾತ್ಮಕ ಸಂಬಂಧ ಹೊಂದಿದ್ದ ಮೈಸೂರು ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುತ್ತಿದ್ದ ತಾವು ಬಲ್ಲ ರೈತಾಪಿ ಜನರನ್ನು ಕರೆಸಿ ಮಾತನಾಡಿದ್ದುಂಟು. 1954 ಜನವರಿ 5ರಂದು ಮೈಸೂರು ಸಕ್ಕರೆ ಕಾರ್ಖಾನೆ ಆವರಣದಲ್ಲಿ ರೈತರು ಇವರನ್ನು ಸನ್ಮಾನಿಸಿ ತಮ್ಮ ಗೌರವವನ್ನು ಸೂಚಿಸಿದರು. ಕೋಲ್‌ಮನ್ ಕೆನಡದಲ್ಲಿ ಕಾರು ಅಪಘಾತವೊಂದರಲ್ಲಿ 1954 ಸೆಪ್ಟಂಬರ್ 14ರಂದು ನಿಧನರಾದರು. (ಎಚ್.ಎಲ್.ಕೆ.)

**ಕೋಲ ಶಾಂತಯ್ಯ :** ಸು.1160. ಹಿರಿಯ ಶರಣ ಹಾಗೂ ವಚನಕಾರ. ಬಸವಣ್ಣ-ಬಿಜ್ಜಳರ ಸಮಕಾಲೀನ. ಈತನನ್ನು ಕೋಲು ಶಾಂತಯ್ಯನೆಂದೂ ಕರೆದಿರುವುದು ಕಂಡುಬರುತ್ತದೆ. ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದಲ್ಲಿ ಬರುವಂತೆ ಈತ ಬಸವಣ್ಣನಲ್ಲಿ ಕಟ್ಟಿಗೆವಿಡಿದು ಮಾಲದಾರ ನಿಯೋಗವನ್ನು ನಡೆಸುವವನಾಗಿದ್ದ. ಈ ಮಾಲದಾರ ನಿಯೋಗದ ಕೆಲಸವೇನೆಂಬುದು ಸ್ಪಷ್ಟವಾಗದಿದ್ದರೂ ಅಲ್ಲಿಯೇ ಬರುವ ಕಟ್ಟಿಗೆದಾರ ಎಂಬುದರಿಂದ ಈತ ಕಟ್ಟಿಗೆ ಅಥವಾ ಕೋಲನ್ನು ಹಿಡಿದು ಕಾಯಕವನ್ನು ನಡೆಸುತ್ತಿದ್ದನೆಂದೂ ಆದುದರಿಂದ ಶಾಂತಯ್ಯ ಕೋಲಶಾಂತಯ್ಯನಾದನೆಂದೂ ಹೇಳಬಹುದಾಗಿದೆ. ವಿವಿಧ ಸಾಹಿತ್ಯ ಮೂಲಗಳಿಂದ ತಿಳಿದುಬರುವಂತೆ ಈತ ಚಿತ್ರದ ಜಂಗಮವನಿರಿದವನನಿರಿದ ಪವಾಡದ ವ್ಯಕ್ತಿಯಾಗಿ ತನ್ನ ಮಹಿಮೆಯನ್ನು ಮೆರೆದಿದ್ದಾನೆ. ಈತನನ್ನು ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ವಿರೂಪಾಕ್ಷ ಪಂಡಿತ ಮೊದಲಾದವರು ಸ್ಮರಿಸಿದ್ದಾರೆ. ಕೋಲಶಾಂತಯ್ಯ ವೀರಶೈವ ಅಮರಗಣಾಧೀಶ್ವರರ ಪಂಕ್ತಿಯಲ್ಲಿ ಒಂದು ಸ್ಥಾನವನ್ನು ಪಡೆದು ಕೊಂಡಿರುವಂತೆಯೇ ವಚನರಚನೆಯಿಂದ ಸಾಹಿತ್ಯದಲ್ಲಿಯೂ ಹಿರಿಯ ಸ್ಥಾನವನ್ನು ಸಂಪಾದಿಸಿಕೊಂಡಿದ್ದಾನೆ.

ಇದುವರೆಗೆ ಈತನ 100 ವಚನಗಳು ದೊರಕಿವೆ. ಇವುಗಳಲ್ಲಿ 64 ಸಾಮಾನ್ಯ ವಚನಗಳು, 36 ಬೆಡಗಿನ ವಚನಗಳು. ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ ಎಂಬುದು ಈತನ ವಚನಗಳ ಅಂಕಿತ. ಎಲ್ಲ ವಚನಕಾರರಂತೆ ಈತನೂ ಷಟ್ಸ್ಥಲಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಈತನ ನೀತಿನಿರೂಪಣವಚನಗಳ ಶೈಲಿ ಉತ್ತಮಮಟ್ಟದ್ದಾಗಿದೆ. (ಬಿ.ಎಸ್.ಎಸ್.)

**ಕೋಲಾಟ :** ಜನಪದ ಮನರಂಜನೆ ಕಲೆಗಳಲ್ಲೊಂದು. ಕೋಲುಗಳ ಮೂಲಕ ಆಟ ಸಾಗುವುದರಿಂದ ಇದಕ್ಕೆ ಕೋಲಾಟವೆಂಬ ಹೆಸರು ಬಂದಿದೆ. ಸಂಗೀತ ಮತ್ತು ನೃತ್ಯಗಳ ಸಮ್ಮಿಲನವಾಗಿರುವ ಈ ಆಟ ಗ್ರಾಮಜೀವನದ ಒಂದು ವಿಶೇಷ ಮನರಂಜನ ಸಾಧನ. ಹೆಚ್ಚಾಗಿ ಸುಗ್ಗಿಯ

ಕಾಲದಲ್ಲಿ, ಹಬ್ಬಹರಿದಿನಗಳಲ್ಲಿ ಪ್ರಚುರವಿದೆ. ಕೋಲಾಟ ಗ್ರಾಮೀಣ ಪ್ರದೇಶದಲ್ಲಿ ಅಪಾರ ಜನಪ್ರಿಯತೆ ಗಳಿಸಿದೆ.

ಕೋಲಾಟದಲ್ಲಿ ಸುಮಾರು ಎಂಟರಿಂದ ಇಪ್ಪತ್ನಾಲ್ಕು ಜನರವರೆಗೆ ಕೋಲು ಹುಯ್ಯುವ ಕಲಾವಿದರಿರುತ್ತಾರೆ. ಹುಡುಗರಂತೆ ದೊಡ್ಡವರೂ ಭಾಗವಹಿಸುತ್ತಾರೆ. ಅಲ್ಲಿ ಕೋಲುಗಳದೇ ಮುಖ್ಯಪಾತ್ರ. ಇವುಗಳನ್ನು ಸಾಮಾನ್ಯವಾಗಿ ನೀರಂಜಿ, ಬೈನೆ, ಸೀಬೆ, ಕಾರೆ ಮುಂತಾದ ಮರಗಿಡಗಳಿಂದ ಮಾಡಲಾಗಿರುತ್ತದೆ. ಆಟದಲ್ಲಿ ಗೆಜ್ಜೆ, ತಾಳ ಮತ್ತು ದಮ್ಮಡಿಗಳನ್ನೂ ಬಳಸಲಾಗುತ್ತದೆ. ತಾಳ ಮತ್ತು ದಮ್ಮಡಿ ಬಾರಿಸಲು ಪ್ರತ್ಯೇಕ ಪರಿಣತರಿರುತ್ತಾರೆ. ಕಲಾವಿದರು ತಮ್ಮ ಕಾಲುಗಳಿಗೆ ಗೆಜ್ಜೆ ಕಟ್ಟಿಕೊಳ್ಳುವುದು ಸಾಮಾನ್ಯ. ಇದರಿಂದ ಅವರ ಕುಣಿತಕ್ಕೆ ಆವೇಶ, ಹುಮ್ಮಸು ಲಭ್ಯವಾಗುತ್ತದೆ. ತಾಳ ಹಾಕುವ ಮತ್ತು ದಮ್ಮಡಿ ಬಡಿಯುವ ಕಾರ್ಯ ಕುಣಿತವನ್ನು ಪುಷ್ಟಿಗೊಳಿಸುತ್ತದೆ.

ಕೋಲಾಟದ ಒಂದು ದೃಶ್ಯ

ಕೋಲಾಟದಲ್ಲಿ ಹಲವಾರು ಪ್ರಭೇದಗಳು ಕಂಡುಬರುತ್ತವೆ. ಆಟಗಾರರು ವೃತ್ತಾಕಾರದಲ್ಲಿ ಸುತ್ತುತ್ತ ತಮ್ಮೆರಡು ಕೈಗಳಲ್ಲಿನ ಕೋಲುಗಳಿಂದ ಒಂದಕ್ಕೊಂದಕ್ಕೆ ಹೊಡೆಯುತ್ತಿದ್ದರೆ ಇದಕ್ಕೆ ಸುತ್ತಕೋಲು ಎನ್ನುತ್ತಾರೆ. ಇದನ್ನು ವಿಶ್ರಾಂತಿಯ ಆಟವೆಂದೂ ಕರೆಯುವುದುಂಟು. ಕೋಲುಗಳು ಇತರರ ಕೋಲುಗಳಿಗೆ ಹೊಡೆದರೂ ಹೊಡೆಯದ ಹಾಗೆ ಹಾರುತ್ತಿದ್ದರೆ ಅದು ಹಾರ್‌ಗಟಕು ಎನಿಸಿಕೊಳ್ಳುತ್ತದೆ. ಇದರಲ್ಲಿ ಆಟಗಾರರು ಸಾಮಾನ್ಯವಾಗಿ ಕೋಲುಗಳನ್ನು ತಲೆಯ ಮೇಲೆ ಎತ್ತಿ ಮತ್ತೊಬ್ಬರ ಕೋಲುಗಳಿಗೆ ಹೊಡೆಯುತ್ತಾರೆ. ತೇರುಕೋಲಿನಲ್ಲಿ ಅರ್ಧ ಜನ ಹಿಂದಕ್ಕೂ ಉಳಿದರ್ಧ ಜನ ಅವರ ಮೇಲೆ ಬಾಗಿದಂತಿದ್ದು ತೇರಿನಂತೆ ಸಾಗುವುದರಿಂದ, ಈ ಹೆಸರು ಬಂದಿರುವಂತೆ ಕಾಣುತ್ತದೆ. ಆಟಗಾರರ ಮನೆಯನ್ನು ದಾಟುತ್ತ ಕೋಲು ಕೊಡುವ ವಿಧಾನ ಮನೆಕೋಲಿನದು. ಪ್ರತಿಯೊಬ್ಬ ಆಟಗಾರನೂ ಒಬ್ಬೊಬ್ಬರನ್ನೇ ದಾಟಿ ಕೋಲುಕೊಡುವ ವಿಧಾನಕ್ಕೆ ಒಂದುಮನೆ ಕೋಲೆಂದೂ ಇಬ್ಬರನ್ನು ದಾಟಿ ಕೋಲು ಕೊಡುವ ವಿಧಾನಕ್ಕೆ ಎರಡುಮನೆ ಕೋಲೆಂದೂ ಕರೆಯುತ್ತಾರೆ.

ಜಡೆಕೋಲು ಎಂಬುದು ಕೋಲಾಟದಲ್ಲಿ ಒಂದು ವಿಶಿಷ್ಟ ಬಗೆ. ಆಟದ ಪ್ರಾರಂಭಕ್ಕೆ ಮೊದಲು ಹಗ್ಗಗಳಿಂದ ಜಡೆಯ ದಿಂಡನ್ನು ಹೆಣೆದು ಒಟ್ಟುಗೂಡಿಸಿ ಅವುಗಳಿಂದ ತುದಿಯ ಜಡೆ ಅಥವಾ ಹಗ್ಗಗಳನ್ನು ಬಿಡಿಯಾಗಿಯೇ ಬಿಡಬೇಕು. ಈ ಬಿಡಿ ಹಗ್ಗಗಳನ್ನೆಲ್ಲ ಸೇರಿಸಿದ ದಿಂಡುಜಡೆಯನ್ನು ಯಾವುದಾದರೊಂದು ಉಪಕರಣಕ್ಕೆ ಕಟ್ಟಿರುತ್ತಾರೆ. ಉಳಿದ ಬಿಡಿ ಹಗ್ಗಗಳನ್ನು ಕಲಾವಿದರು ಸೊಂಟಕ್ಕೆ ಕಟ್ಟಿರುತ್ತಾರೆ. ಕೋಲು ಹುಯ್ಯುವಾಗ ಬಿಡಿಹಗ್ಗಗಳೆಲ್ಲ ಸೇರಿಕೊಂಡು ಜಡೆಯ ಆಕಾರಕ್ಕೆ ತಿರುಗುವುದರಿಂದ ಇದಕ್ಕೆ ಜಡೆಕೋಲು ಎಂಬ ಹೆಸರು ಬಂದಿದೆ. ಗೀಜುಗನ ಕೋಲು ಮತ್ತೊಂದು ವಿಶೇಷ ರೀತಿಯ ಆಟ. ಎರಡು ಕೈಗಳಲ್ಲೂ ಜೋಡಿಸಿಕೊಂಡಿರುವ ಕೋಲುಗಳನ್ನು ಎಡಕ್ಕೊಂದು ಬಾರಿ ಬಲಕ್ಕೊಂದು ಬಾರಿ ಕೊಟ್ಟು, ಮೂರನೆಯ ಏಟಿಗೆ ಎರಡು ಕೈಗಳನ್ನು ಮೇಲೆತ್ತಿ ಹೊಡೆದು ಬಲದಲ್ಲಿದ್ದವನು ಎಡಕ್ಕೆ ಎಡದಲ್ಲಿದ್ದವನು ಬಲಕ್ಕೆ ವೃತ್ತಾಕಾರದಲ್ಲಿ ಸುತ್ತುತ್ತಿರುವುದೇ ಈ ಆಟದ ಸ್ವಾರಸ್ಯ. ಕಾಲುಸಂದಿನ ಕೋಲು ವಿಚಿತ್ರ ರೀತಿಯದು. ಆಟಗಾರರಲ್ಲಿ ಇಬ್ಬಿಬ್ಬರು ಎದುರು ಬದುರು ನಿಂತುಕೊಂಡಿದ್ದು, ಪ್ರತಿಯೊಬ್ಬನೂ ಮೊದಲು ತನ್ನ ಎಡಗಾಲನ್ನು ಎತ್ತಿ ಎರಡು ಕೈಗಳ ಕೋಲುಗಳನ್ನು ಅಲ್ಲಿ ಬಡಿಯುವನು. ಅನಂತರ ಇದೇ ರೀತಿ ಬಲಗಾಲನ್ನು ಎತ್ತಿ ಬಡಿಯುವನು. ಎರಡು ಕಾಲುಗಳಲ್ಲೂ ಈ ರೀತಿ ಕೋಲು ಹುಯ್ದಮೇಲೆ ಮುಂದಕ್ಕೆ ನೆಗೆದು ಮತ್ತೊಬ್ಬನಿಗೆ ಕೋಲು ಕೊಡುವನು. ಇದೇ ರೀತಿ ಪುನರಾವರ್ತನೆ ಸಾಗಿ ಆಟ ಮುಗಿಯುತ್ತದೆ. ಇದು ನೋಡಲು ತುಂಬ ರಂಜನೀಯವಾಗಿರುತ್ತದೆ.

ಉಯ್ಯಾಲೆಯಾಟದಲ್ಲಿ ಉಯ್ಯಾಲೆಯಂಥ ಸುಂದರ ಚಲನೆಯೊಂದು ಕಂಡುಬರುತ್ತದೆ. ಪ್ರಾರಂಭದಲ್ಲಿ ಆಟದ ಜನರು ವೃತ್ತಾಕಾರದಲ್ಲಿ ನಿಂತು ಎಡಕ್ಕೊಮ್ಮೆ ಬಲಕ್ಕೊಮ್ಮೆ ಕೋಲು ಕೊಡುತ್ತಿರುತ್ತಾರೆ. ಅನಂತರ ಮಧ್ಯದಲ್ಲಿ ನಾಲ್ವರು ಎದುರೆದುರಾಗಿ, ಉಳಿದ ನಾಲ್ವರು ಅಕ್ಕಪಕ್ಕದಲ್ಲಿ ನಿಂತು ಕೋಲುಕೊಡುವರು. ಆಮೇಲೆ ಅಕ್ಕಪಕ್ಕದಲ್ಲಿದ್ದವರು ಮಧ್ಯಕ್ಕೆ ಬಂದು, ಮಧ್ಯದಲ್ಲಿದ್ದವರು ಅತ್ತ ಸರಿಯುವರು. ಈ ರೀತಿಯ ವೇಗದ ಆಟದಿಂದಾಗಿ ಉಯ್ಯಾಲೆ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಸ್ಪರ್ಧಾತ್ಮಕವಾಗಿ ಬೆಳೆಯುವುದು ವಾದದ ಕೋಲಿನ ವೈಶಿಷ್ಟ್ಯ. ಇದಕ್ಕೆ ನಿಲ್‌ಕೋಲೆಂದೂ ಹೆಸರಿದೆ. ಸಮಭಾಗವಾಗಿ ನಿಂತ ಆಟಗಾರರು ಪ್ರಶ್ನಾರ್ಥಕವಾದ ಸವಾಲ್-ಜವಾಬ್ ರೀತಿಯ ಹಾಡುಗಳನ್ನು ಹಾಡುತ್ತ ಪರಸ್ಪರ ಆಕರ್ಷಕ ಭಂಗಿಯಲ್ಲಿ ಅಟ್ಟಿಸಿಕೊಂಡು ಹೋಗುವುದೇ ಈ ಆಟದ ತಿರುಳು. ಇದರಲ್ಲಿ ಕೋಲುಗಳು ಮೌನವಾಗಿದ್ದು ಹಾಡು ಮತ್ತು ನಡಿಗೆ ಪ್ರಧಾನವಾಗಿರುತ್ತದೆ. ಕೋಲಾಟದ ಮುಕ್ತಾಯದ ಹಂತದಲ್ಲಿ ಕೊರವಂಜಿ ಕೋಲನ್ನು ಆಡುತ್ತಾರೆ. ಇದರಲ್ಲಿ ಕೊರವಂಜಿ ವೇಷದ ಆಟಗಾರನನ್ನು ಮತ್ತೊಬ್ಬ ಹಿಡಿಯಲು ತೊಡಗುವನು. ಕೋಲು ಹುಯ್ಯುತ್ತಿರುವ ಉಳಿದವರ ಮಧ್ಯದಲ್ಲಿ ಕೊರವಂಜಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವಳು. ಅವಳನ್ನು ಅಟ್ಟಿಸಿಕೊಂಡು ಹೋಗುತ್ತ, ಕಡೆಗೊಮ್ಮೆ ಹಿಡಿಯುವನು.ಇದರ ತರುವಾಯ ಮಂಗಳದೊಡನೆ ಆ ದಿನದ ಕೋಲಾಟ ಕೊನೆಗೊಳ್ಳುತ್ತದೆ.

**ಕೋಲಾಟದ ಪದಗಳು :** ಕೋಲಾಟದಲ್ಲಿ ಬಳಸಲಾಗುವ ಪದಗಳದೂ ಒಂದು ಪ್ರಮುಖ ಪಾತ್ರ. ಆಟಕ್ಕೆ ಸಂಗೀತದ ಆವರಣವನ್ನು ಸೃಷ್ಟಿಸುವುದರ ಮೂಲಕ ಅದರ ಶುಷ್ಕತೆಯನ್ನು ಹೋಗಲಾಡಿಸಿ ರಸವತ್ತಾಗಿಸಿ ಅದನ್ನು ಪರಿಣಾಮರಮಣೀಯತೆಯಲ್ಲಿ ನಾಟಿಸುವಂತೆ ಮಾಡುವುದು ಇವುಗಳ ಉದ್ದೇಶ.

ಇವುಗಳ ರಚನೆಗೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನಿಲ್ಲಿ ಪ್ರಸ್ತಾಪಿಸಬಹುದು. ಈ ಎಲ್ಲ ಗೀತೆಗಳು ಮೂಲತಃ ಕೋಲಾಟಕ್ಕಾಗಿಯೇ ರಚಿತವಾದವುಗಳೆಂದು ಯಾವಾಗಲೂ ಹೇಳಲಾಗುವುದಿಲ್ಲ. ಏಕೆಂದರೆ ಕೋಲಾಟ ತನ್ನ ಆರಂಭದ ಹಂತಗಳಲ್ಲಿ ಇತರ ಜನಪದ ಆಟಗಳಂತೆಯೇ ಒಂದು ಆಟವಾಗಿದ್ದು ಕ್ರಮೇಣ ನೃತ್ಯ ಮತ್ತು ಗೀತೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕಲೆಯಾಗಿ ಮಾರ್ಪಟ್ಟಿತೆಂದು ಹೇಳಬಹುದು. ಇದರಿಂದಾಗಿ ಗೀತೆಗಳು ಕೋಲಾಟಕ್ಕೆ ಆಮೇಲೆ ಬಂದು ಸೇರಿದ ಸಾಧನಗಳೆಂದು ತಿಳಿಯುತ್ತದೆ. ಅಲ್ಲದೆ ಮೊದಮೊದಲು ಬೇರೆ ಬೇರೆ ಸಂದರ್ಭಗಳಲ್ಲಿ ಹಾಡುತ್ತಿದ್ದ ಪದಗಳನ್ನೇ ಪಲ್ಲವಿ ಅನುಪಲ್ಲವಿ ಅಥವಾ ಮುಮ್ಮೇಳ ಹಿಮ್ಮೇಳಗಳನ್ನು ಹೊಂದಿಸಿಕೊಳ್ಳುವುದರ ಮೂಲಕ ಕೋಲಾಟಕ್ಕೆ ಅನ್ವಯಿಸಿಕೊಳ್ಳಲಾಯಿತೆಂದು ತೋರುತ್ತದೆ. ಕೋಲಾಟಕ್ಕಾಗಿ ಮಾಡಲಾದ ರಚನೆಗಳು ಇವುಗಳ ಸಹಜಸ್ಫೂರ್ತಿ ಪ್ರೇರಣೆಗಳ ಆಮೇಲಿನ ಫಲಗಳೆಂದು ಹೇಳಬಹುದು.

ರಚನೆಯ ದೃಷ್ಟಿಯಿಂದ ಕೋಲಾಟದ ಪದಗಳನ್ನು ಭಾವಗೀತಾತ್ಮಕ ಮತ್ತು ಕಥಾತ್ಮಕಗಳೆಂದು ವಿಭಾಗ ಮಾಡಿಕೊಳ್ಳಲು ಸಾಧ್ಯವಿದೆ. ಕೋಲಾಟಕ್ಕಾಗಿ ರಚಿತವಾದ ಗೀತೆಗಳು ಹೆಚ್ಚಾಗಿ ಮೊದಲ ಭಾಗದಲ್ಲಿ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಭಾವಗೀತಾತ್ಮಕ ಗೀತೆಗಳನ್ನು ಮತ್ತೆ ಎರಡು ಭಾಗವಾಗಿ ಮಾಡಿಕೊಳ್ಳಬಹುದು. ಕೋಲಾಟಕ್ಕಾಗಿಯೇ ರಚಿತವಾದವು ಮತ್ತು ಅನ್ಯಸಂದರ್ಭದವುಗಳನ್ನು ಅಳವಡಿಸಿಕೊಂಡವು. ಕೋಲಾಟಕ್ಕಾಗಿ ರಚಿತವಾದ ಗೀತೆಗಳು ತಮ್ಮ ಸ್ವರೂಪದಲ್ಲಿ ಸಾಮಾನ್ಯವಾಗಿ ಚಿಕ್ಕವಾಗಿರುತ್ತವೆ. ಒಂದು ಪಕ್ಷ ದೀರ್ಘವಾಗಿರುವುದಾದರೆ ಪದಪ್ರಾಸಗಳೂ ಪುನರಾವರ್ತನೆಗಳೂ ಮಡುಗಟ್ಟುತ್ತವೆ. ಇಂಥವುಗಳಲ್ಲಿ ತರ್ಕಬದ್ಧ ಅರ್ಥವನ್ನಾಗಲಿ ಕ್ರಿಯೆಯನ್ನಾಗಲಿ ನಿರೀಕ್ಷಿಸುವಂತಿಲ್ಲ. ಬದಲಾಗಿ, ಆಟ ಮತ್ತು

ಕುಣಿತಗಳಿಗನುಗುಣವಾದ ಪದ ನರ್ತನಚರಣಗಳಾಗಿ ಮಾತ್ರ ಇವು ಕಾಣಿಸಿಕೊಳ್ಳುತ್ತವೆ.

ಕೋಲಾಟದ ಪದಗಳಲ್ಲಿ ಕಥನರೂಪದ ಅನೇಕ ರಚನೆಗಳೂ ಸಿಗುತ್ತವೆ. ಈ ಬಗೆಗಿನ ಬಹುತೇಕ ಪದಗಳು ಮೂಲತಃ ಅನ್ಯಸಂದರ್ಭದವಾಗಿದ್ದೂ ಕೋಲಾಟಕ್ಕೆ ಅಳವಡಿಸಿಕೊಂಡಿರುವ ಸಾಧ್ಯತೆ ಹೆಚ್ಚೆಂದು ತೋರುತ್ತದೆ. ಹೀಗೆ ಹೊಂದಿಸಿಕೊಳ್ಳುವಾಗ ಪದಗಳು ಕೋಲಾಟದ ಗತಿಗೆ ಹೊಂದಿಕೊಂಡು ಬದಲಾಗಿಬಿಡುವುದರಿಂದ ಅವುಗಳ ಮೂಲರೂಪವನ್ನು ನಿಜವಾಗಿ ನಿರ್ದೇಶಿಸುವುದು ಕಷ್ಟವಾಗುತ್ತದೆ. ಕಥನಗಳು ದೀರ್ಘವಾಗಿದ್ದಾಗ, ಅವನ್ನು ಮೊಟಕುಗೊಳಿಸಿ ಇಲ್ಲವೆ ಕೆಲವೊಂದು ಭಾಗವನ್ನು ತೆಗೆದುಕೊಂಡು ಉಳಿದುದನ್ನು ಹೇಳದೇ ಬಿಡುವ ಸಂದರ್ಭವುಂಟು. ಆಟದಲ್ಲಿ ವೈವಿಧ್ಯ ತರುವುದಕ್ಕಾಗಿ ಹೀಗೆ ಮಾಡಿಕೊಳ್ಳುತ್ತಾರೆ ಎಂದು ಮೇಲುನೋಟಕ್ಕೆ ಕಂಡರೂ ವಾಸ್ತವವಾಗಿ ದೀರ್ಘಕಥನಗಳನ್ನು ಕೋಲಾಟದ ಸಮಯದಲ್ಲಿ ತರುವುದು ಕಷ್ಟವಿರುವುದು ಕಾರಣವಿರಬೇಕೆಂದು ತೋರುತ್ತದೆ. ಏಕೆಂದರೆ ಕೋಲಾಟ ಉತ್ಸಾಹ ಪ್ರಧಾನವಾಗಿದ್ದು, ಇದಕ್ಕೆ ಭಾವಗೀತಾತ್ಮಕ ಪದಗಳು ಹೊಂದಿಕೊಳ್ಳುವಂತೆ, ಪ್ರಶಾಂತಲಕ್ಷಣದ ನಿಧಾನ ಓಟದ ಕಥನಗೀತೆ ಹೊಂದಿಕೊಳ್ಳಲಾರದೆನಿಸುತ್ತದೆ. ಇದರಿಂದಾಗಿ ಈ ಬಗೆಯ ಕೆಲವು ಗೀತೆಗಳು ಅರ್ಥವಾಗದೆ ಒಗಟಿನ ಸ್ವರೂಪವನ್ನು ಪಡೆದುಕೊಳ್ಳುವುದೂ ಉಂಟು. ಆಗ ಕ್ರಿಯೆ ನಡೆದಂತೆ ತೋರಿದರೂ ಅದು ಅಸ್ಪಷ್ಟತೆಯ ಹಾದಿಯಲ್ಲಿರುತ್ತದೆಯೇ ಹೊರತು, ಸ್ಪಷ್ಟವಾಗಿ ತೋರುವುದಿಲ್ಲ. ಆದ್ದರಿಂದ ಇದರಲ್ಲಿ ಆಟ ಮತ್ತು ಅದರ ವಿವಿಧ ಭಂಗಿಗಳು ಮುಖ್ಯವೇ ಹೊರತು, ಅದಕ್ಕೆ ಸಂಬಂಧಿಸಿದ ಹಾಡು ಯಾವಾಗಲೂ ಪ್ರಧಾನ ಕ್ರಿಯೆಯ ಪಾತ್ರವನ್ನು ವಹಿಸುವುದಿಲ್ಲ ಎಂದು ಹೇಳಬಹುದು. ಒಂದು ಪಕ್ಷ ವಹಿಸಿದರೂ ಮೊದಲೆರಡರ ಒಟ್ಟು ಪರಿಣಾಮವನ್ನು ಪ್ರೇಕ್ಷಕರಿಗೆ ಅತ್ಯಂತ ಸಮರ್ಥ ರೀತಿಯಲ್ಲಿ ವಚನಿಸುವುದು ಇದರ ಪ್ರಮುಖ ಉದ್ದೇಶವಾಗಿರುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ ನೋಡಿದಾಗ ಕೋಲಾಟಕ್ಕೆ ಸಂಬಂಧಿಸಿದ ಗೀತೆಗಳನ್ನು ಒಂದು ಪ್ರತ್ಯೇಕ ಗೀತಪ್ರಕಾರವೆಂದು ಕರೆಯಲು ಸಾಧ್ಯವೇ ಎಂಬ ಸಂದೇಹ ಕಾಡುತ್ತದೆ. ಕೋಲಾಟದ ಉದ್ದೇಶಕ್ಕಾಗಿ ರಚಿತವಾದ ಪದಗಳಲ್ಲಿ ಈ ಪ್ರಶ್ನೆ ಸಹಜವಾಗಿ ಏಳುವುದಿಲ್ಲವಾದರೂ ಇದಕ್ಕಾಗಿ ಅಳವಡಿಸಿಕೊಂಡ ಅನ್ಯಗೀತೆಗಳನ್ನು ಗಮನಿಸಿದಾಗ ಈ ಪ್ರಶ್ನೆ ಉದ್ಭವಿಸುತ್ತದೆ. ಕೆಲವು ಸಮಯದಲ್ಲಿ ಯಾವ ಗೀತೆಗಳನ್ನು ಬೇಕಾದರೂ ಕೋಲಾಟದ ತಂತ್ರಗಳನ್ನು ಬಳಸಿಕೊಂಡು ಹಾಡಬಹುದೆನಿಸುತ್ತದೆ. ಇಂಥ ಸಂದರ್ಭದಲ್ಲಂತೂ ಮೇಲಿನ ಪ್ರಶ್ನೆ ಗಾಢತರವಾಗುತ್ತದೆ. ಆದರೆ ಕೋಲಾಟದ ಮೂಲಗೀತೆಗಳಲ್ಲಾಗಲಿ, ಅಳವಟ್ಟ ಪದಗಳಲ್ಲಾಗಲಿ ಒಂದಲ್ಲ ಒಂದು ರೀತಿಯಲ್ಲಿ ಕೋಲಾಟದ ತಾಂತ್ರಿಕ ಭಾಗ ಕೆಲಸ ಮಾಡುವುದರಿಂದ, ಇದನ್ನು ಒಂದು ಪ್ರತ್ಯೇಕ ಪ್ರಕಾರವಾಗಿ ಪರಿಗಣಿಸುವುದರಲ್ಲಿ ಅರ್ಥವಿದೆ ಎಂದು ಹೇಳಬಹುದು. ಈ ಪ್ರಕಾರವನ್ನು ಕುರಿತಂತೆ ಎಸ್.ವಿ.ರಂಗಣ್ಣನವರ ಕೋಲ್ ಕೋಲ್ ಕೂಡಿ ಬರಲಿ ಬಿ.ಜಿ.ಸಂಕೇಶ್ವರ ಅವರ 'ಕೋಲಿನ ಪದಗಳು', ರಾಮಚಂದ್ರ ವೆಂಕಟೇಶ ಕರಗುದರಿ ಅವರ 'ಕೋಲು ಹಾಡುಗಳು' (1934) ಕ.ರಾ.ಕೃ. ಅವರ 'ಕೋಲು ಮಲ್ಲಿಗೆ ಕೋಲೆ' (1962), ಎಂ.ಸಿ. ವಸಂತಕುಮಾರ್ ಅವರ 'ಕೋಲು ಪದಗಳು' (1970), ಡಿ.ಕೆ.ಈರೇಗೌಡ ಅವರ ಕೋಲಾಟದ ಪದಗಳು (1974) ಇತ್ಯಾದಿ ಗ್ರಂಥಗಳು ಪ್ರಕಟಗೊಂಡಿವೆ. (ಆರ್.ಜಿ.)

**ಕೋಲಾರ** : ಕರ್ನಾಟಕ ರಾಜ್ಯದ ಪೂರ್ವದ ಅಂಚಿನಲ್ಲಿರುವ ಒಂದು ಜಿಲ್ಲೆ. ಇದೇ ಹೆಸರಿನ ತಾಲ್ಲೂಕು ಮತ್ತು ಪಟ್ಟಣ.

ಪಶ್ಚಿಮದಲ್ಲಿ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳು, ಉತ್ತರ ಮತ್ತು ಪೂರ್ವದಲ್ಲಿ ಅನುಕ್ರಮವಾಗಿ ಆಂಧ್ರ ಪ್ರದೇಶದ ಅನಂತಪುರ ಮತ್ತು ಚಿತ್ತೂರು ಜಿಲ್ಲೆಗಳು, ದಕ್ಷಿಣದಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಧರ್ಮಪುರಿ ಜಿಲ್ಲೆಗಳು - ಇವು ಕೋಲಾರ ಜಿಲ್ಲೆಯ ಮೇರೆಗಳು. ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಎಂಬ ಎರಡು ಉಪವಿಭಾಗಗಳು ಇವೆ. ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ ಮತ್ತು ಗೌರಿಬಿದನೂರು, ತಾಲ್ಲೂಕುಗಳು ಚಿಕ್ಕಬಳ್ಳಾಪುರ ಉಪವಿಭಾಗದಲ್ಲೂ ಕೋಲಾರ, ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳು ಕೋಲಾರ ಉಪವಿಭಾಗದಲ್ಲೂ ಇವೆ. ಜಿಲ್ಲೆಯ ವಿಸ್ತೀರ್ಣ 8223ಚ.ಕಿಮೀ. ಇದು ಕರ್ನಾಟಕ ರಾಜ್ಯದ 1/23ರಷ್ಟಿದೆ. ಜನಸಂಖ್ಯೆ 25,23,406 (2001).

ಕೋಲಾರ ಜಿಲ್ಲೆ ಕರ್ನಾಟಕ ಪ್ರಸ್ಥಭೂಮಿಯ ಅಂಚಿನ ಭಾಗವಾಗಿದ್ದು, ಅದರ ಎಲ್ಲೆಗಳು ವಾಯವ್ಯ ಮತ್ತು ದಕ್ಷಿಣ ಭಾಗದಲ್ಲಿ ಪೂರ್ವಘಟ್ಟಗಳ ಬೆಟ್ಟಶ್ರೇಣಿಯನ್ನು ಮುಟ್ಟುತ್ತವೆ. ಜಿಲ್ಲೆಯಲ್ಲೂ ಹಲವು ಬೆಟ್ಟಶ್ರೇಣಿಗಳಿವೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿದುರ್ಗದಿಂದ ಗುಡಿಬಂಡೆಯ ಮೂಲಕ ಮುಂದೆ ಆಂಧ್ರಪ್ರದೇಶದ ಪೆನುಗೊಂಡೆಯೆಡೆಗೆ ದಕ್ಷಿಣೋತ್ತರವಾಗಿ ಹಬ್ಬಿರುವ ಶ್ರೇಣಿ ಮುಖ್ಯವಾದುದು. ಈ ನಂದಿದುರ್ಗ ಶ್ರೇಣಿಯಲ್ಲಿ ನಂದಿದುರ್ಗ (ಎತ್ತರ 1479ಮೀ) ಚಿಕ್ಕಬಳ್ಳಾಪುರದ ಆಗ್ನೇಯಕ್ಕೆ 8ಕಿಮೀ ದೂರದಲ್ಲಿರುವ ಚೆನ್ನರಾಯನ ಬೆಟ್ಟ (1451ಮೀ), ನಂದಿದುರ್ಗದ ಉತ್ತರಕ್ಕೆ 8ಕಿಮೀ ದೂರದಲ್ಲಿರುವ ಸ್ಕಂದಗಿರಿ (1447ಮೀ), ನಂದಿದುರ್ಗದ ಆಗ್ನೇಯ ದಿಕ್ಕಿನಲ್ಲಿರುವ ಬ್ರಹ್ಮಗಿರಿ (1419ಮೀ), ನಂದಿದುರ್ಗದ ಉತ್ತರಕ್ಕಿರುವ ಹರಿಹರೇಶ್ವರ ಬೆಟ್ಟ (1256ಮೀ), ವಾಯುವ್ಯಕ್ಕೆ ಇರುವ ಕಳವರದುರ್ಗ ಮತ್ತು ದಕ್ಷಿಣದಲ್ಲಿರುವ ದಿಬ್ಬಗಿರಿ ಇವು ನಂದಿದುರ್ಗ ಶ್ರೇಣಿಯ ಮುಖ್ಯ ಶಿಖರಗಳು. ಈ ಶ್ರೇಣಿಗೆ ಸಮಾನಾಂತರದಲ್ಲಿ ಸು.50-65ಕಿಮೀ ಪೂರ್ವಕ್ಕೆ ಇನ್ನೊಂದು ಬೆಟ್ಟಸಾಲಿದೆ. ಆಂಧ್ರಪ್ರದೇಶದ ಕಡೆಯಿಂದ ಹಬ್ಬಿರುವ ಈ ಶ್ರೇಣಿ ಈ ಜಿಲ್ಲೆಯಲ್ಲಿ ಗುಮ್ಮನಾಯಕನ ಪಾಳ್ಯದ ಉತ್ತರದಲ್ಲಿ ದೊಂಗಲಕೊಂಡ ಅಥವಾ ದೊಕ್ಕಲದುರ್ಗದ ಬಳಿ ಆರಂಭವಾಗಿ ದಕ್ಷಿಣಾಭಿಮುಖವಾಗಿ ಸಾಗುತ್ತದೆ. ಮುಂದೆ ಸ್ವಲ್ಪ ದೂರ ತಗ್ಗಾಗಿದ್ದು ಮತ್ತೆ ಮುರುಗಮಲೆ, ಅಂಬಾಜಿದುರ್ಗ (1341ಮೀ), ರಹಮಾನ್‌ದುರ್ಗ (1304ಮೀ) ಈ ರೀತಿಯ ಒಂಟಿ ಬೆಟ್ಟಗಳಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲಿಂದಾಚೆಗೆ ಕೋಲಾರ ನಗರದ ಪಶ್ಚಿಮದಿಂದ ಮತ್ತೆ ಅವಿರತವಾಗಿ ದಕ್ಷಿಣದಲ್ಲಿ ವಕ್ಕಲೇರಿ ಮತ್ತು ಟೇಕಲ್ ಬೆಟ್ಟಗಳವರೆಗೂ ಮುಂದುವರಿಯುತ್ತದೆ. ಇವೆರಡರ ಜೊತೆಗೆ ಅಲ್ಲಲ್ಲಿ ಕುಳ್ಳುಗುಡ್ಡಗಳಂತೆ ಕಾಣಿಸಿಕೊಳ್ಳುವ ಇನ್ನೊಂದು ಶ್ರೇಣಿ ಇದೆ. ಇದು ಶ್ರೀನಿವಾಸಪುರದ ಬಳಿ ಆರಂಭವಾಗಿ ಕೋಲಾರ ಪಟ್ಟಣದ ಪೂರ್ವದಲ್ಲಿ ಸಾಗಿ, ಬಂಗಾರಪೇಟೆಯ ದಕ್ಷಿಣಾಗ್ರವನ್ನು ಹಾದು ಕುಪ್ಪಂ ಕಡೆಯ ಘಟ್ಟದವರೆಗೂ ಮುಂದುವರಿಯುತ್ತದೆ. ಇನ್ನೂ ಪೂರ್ವಕ್ಕೆ ವೃತ್ತಾಕಾರವಾಗಿ ಬಾಗಿರುವ ಕೆಲವು ಬೆಟ್ಟಗಳಿವೆ. ಇವುಗಳ ನಡುವೆ ಗ್ರಾಮವಸತಿಗಳಿಗೆ ಅನುಕೂಲವಾಗಿರುವ ಎತ್ತರದ ಕಣಿವೆಗಳು ಇರುವುದು ವಿಶೇಷ.

ಕೋಲಾರ ಜಿಲ್ಲೆ ಬಹುಮಟ್ಟಿಗೆ ನೈಸ್ ಕಣಶಿಲೆಯ ಪ್ರದೇಶ. ಶ್ರೀನಿವಾಸಪುರದಿಂದ ದಕ್ಷಿಣಾಭಿಮುಖವಾಗಿ ಜಿಲ್ಲೆಯ ಅಂಚಿನವರೆಗೆ ಸುಮಾರು 6ಕಿಮೀ ಅಗಲದ ಶಿಸ್ಟ್ ಕಲ್ಲಿನ ಪಟ್ಟೆಯೊಂದು ಹಬ್ಬಿದೆ. ಜಿಲ್ಲೆಯ ಹೆಚ್ಚಿನ ಭಾಗದಲ್ಲಿ ನೆಲ ಅಲ್ಪಸ್ವಲ್ಪ ಏರುತಗ್ಗುಗಳೊಡನೆ ಹರಡಿದ್ದು ಕಣಶಿಲೆಯ ಗುಡ್ಡಬೆಟ್ಟಗಳು ಅಲ್ಲಲ್ಲಿ ಎದ್ದು ನಿಂತಂತಿರುತ್ತವೆ. ದೊಡ್ಡ ದೊಡ್ಡ ಬಂಡೆಗಳನ್ನು ಒಂದರ ಮೇಲೊಂದು ವಿಚಿತ್ರಾಕಾರದಲ್ಲಿ ಪೇರಿಸಿದಂತಿರುವ ಈ ಬೆಟ್ಟಗಳು ಕೋಲಾರ ಜಿಲ್ಲೆಯ ವೈಶಿಷ್ಟ್ಯ. ಶಿಸ್ಟ್ ಕಲ್ಲಿನ ಪಟ್ಟೆಯ ಪ್ರದೇಶ ಆರ್ಥಿಕವಾಗಿ ಮುಖ್ಯವಾದುದು. ಇದಕ್ಕೆ ಹೊಂದಿಕೊಂಡಂತೆ ಕ್ವಾರ್ಟ್ಜೈಟ್, ಬೆಣಚುಕಲ್ಲು ಮುಂತಾದ ವಿವಿಧ ಬಗೆಯ ಶಿಲೆಗಳ ಸಮುದಾಯವಿದೆ. ಪ್ರಸಿದ್ಧವಾದ ಚಿನ್ನದ ಭೂನಿಕ್ಷೇಪಗಳು ಹಬ್ಬಿರುವುದೂ ಇದರ ಜೊತೆಯಲ್ಲೇ. ಇದಲ್ಲದೆ ಜಿಲ್ಲೆಯ ಹಲವು ಭಾಗಗಳಲ್ಲಿ ಉತ್ತರ ದಕ್ಷಿಣ ಅಥವಾ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಡಾಲರೈಟ್‌ನ ಹೊಡೆಸಾಲುಗಳೂ ಇವೆ. ಚಿಕ್ಕಬಳ್ಳಾಪುರ ಶಿಡ್ಲಘಟ್ಟ ಜಂಗಮಕೋಟೆ ಈ ತ್ರಿಕೋನ ಪ್ರದೇಶದಲ್ಲಿ ಮತ್ತು ಸ್ವಲ್ಪಮಟ್ಟಿಗೆ ಶ್ರೀನಿವಾಸಪುರದ ಬಳಿ ಜಂಬುಮಣ್ಣು ಸಹ ಇದೆ. ಕೋಲಾರದ ಚಿನ್ನದ ಗಣಿಗಳು ಜಗತ್ಪ್ರಸಿದ್ಧ. ಇಲ್ಲಿ ಅಲ್ಪಾಂಶ ಬೆಳ್ಳಿಯೂ ದೊರಕುತ್ತದೆ. ಬಂಗಾರಪೇಟೆ ತಾಲ್ಲೂಕಿನ ರಾಮಸಮುದ್ರದ ಬಳಿ ಕೊರಂಡಂ, ಮಾಲೂರು ತಾಲ್ಲೂಕಿನ ಕರಡಿಬಂಡೆ ಬಳಿ ಸುದ್ದೆಮಣ್ಣು ದೊರಕುತ್ತವೆ.

ಜಿಲ್ಲೆಯ ಎತ್ತರದ ಭಾಗಗಳಲ್ಲಿ ಕೆಂಪುಕಲ್ಲು ಮಿಶ್ರಿತ ಮಣ್ಣೂ ನದಿಕಣಿವೆ ಪ್ರದೇಶಗಳಲ್ಲಿ ಎರೆಮಣ್ಣೂ ಸಾಮಾನ್ಯ. ಪೂರ್ವದಂಚಿನ ಶಿಸ್ಟ್ ಪಟ್ಟೆ ಪ್ರದೇಶದಲ್ಲಿ ಕಬ್ಬಿಣದ ಅಂಶ ಹೆಚ್ಚಾಗಿರುವ ಕಪ್ಪು ಮತ್ತು ಕೆಂಪು ಮಣ್ಣು, ಸ್ವಲ್ಪ ಎರೆಭೂಮಿ ಇದೆ.

ನಂದಿದುರ್ಗದ ಭಾಗ ಜಿಲ್ಲೆಯ ಎತ್ತರದ ಪ್ರದೇಶ. ಇದೇ ಜಿಲ್ಲೆಯಲ್ಲಿನ ಮುಖ್ಯ ನೀರ್ಬೇರ್ಪಡೆಯ ಬೆನ್ನಿನ ಪ್ರದೇಶ, ವಿವಿಧ ದಿಕ್ಕುಗಳಿಗೆ ಹರಿಯುವ ಹಲವು ನದಿಗಳ ಉಗಮಸ್ಥಾನ. ಜಿಲ್ಲೆಯನ್ನು ಮುಖ್ಯವಾಗಿ ಉತ್ತರದಲ್ಲಿ ಉತ್ತರ ಪಿನಾಕಿನಿ ದಕ್ಷಿಣದಲ್ಲಿ ಪಾಲಾರ್ ಈ ಎರಡು ನದಿಗಳ ಕಣಿವೆಗಳಾಗಿ ಚಿಕ್ಕಬಳ್ಳಾಪುರ -ಶ್ರೀನಿವಾಸಪುರ ಗೆರೆಯಿಂದ ಬೇರ್ಪಡಿಸಬಹುದು. ಈ ಗೆರೆಯಿಂದ ಉತ್ತರ ಮತ್ತು ದಕ್ಷಿಣಕ್ಕೆ ಭೂಮಿಯ ಸಾಮಾನ್ಯ ಇಳಿವು ಕಾಣಿಸುತ್ತದೆ.

ಜಿಲ್ಲೆಯ ಮಧ್ಯ ಮತ್ತು ಪೂರ್ವಭಾಗಗಳು ಪಾಲಾರ್ ನದೀಕಣಿವೆ ಪ್ರದೇಶ. ಇದು ಅಲೆಅಲೆಯಾಗಿ ಹಬ್ಬಿದೆ. ಕೋಲಾರ ಪಟ್ಟಣದ ಬಳಿ ಇದರ ಎತ್ತರ 800ಮೀ. ಮಾಲೂರಿನಲ್ಲಿ 854ಮೀ. ಅಂಬಾಜಿದುರ್ಗದ ತಪ್ಪಲಿನ ಪ್ರದೇಶ 859ಮೀ. ಎತ್ತರವಿದೆ. ಉತ್ತರಪಿನಾಕಿನಿ ನದೀಕಣಿವೆಯಲ್ಲಿ ಗೌರಿಬಿದನೂರಿನ ಕಡೆಗೆ ಹೋದಂತೆ ನೆಲ ತಗ್ಗುತ್ತದೆ. ಪೂರ್ವದಲ್ಲಿ ಮುಗ್ಲಿ ಮತ್ತು ನಾಯಕನೇರಿ ಕಣಿವೆಮಾರ್ಗಗಳು ಜಿಲ್ಲೆಯ ಎಲ್ಲೆಯಿಂದ ಸ್ವಲ್ಪ ದೂರದಲ್ಲಿವೆ.



ಹುಟ್ಟಿ ವಾಯುವ್ಯ ದಿಕ್ಕಿನಲ್ಲಿ ಹರಿದು, ಮಂಚೇನಹಳ್ಳಿ ಮತ್ತು ಗೌರಿಬಿದನೂರುಗಳ ಬಳಿಯಲ್ಲಿ ಸಾಗಿ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ 55ಕಿಮೀ. ನಂದಿಬೆಟ್ಟದ ಬಳಿ ಹುಟ್ಟಿ ದಕ್ಷಿಣಕ್ಕೆ ಪ್ರವಹಿಸುವ ದಕ್ಷಿಣಪಿನಾಕಿನಿ ಕೋಲಾರ ಜಿಲ್ಲೆಯಲ್ಲಿ ಸ್ವಲ್ಪ ದೂರ ಮಾತ್ರ ಹರಿಯುತ್ತದೆ. ಜಿಲ್ಲೆಯ ಇನ್ನೊಂದು ಮುಖ್ಯ ನದಿ ಪಾಪಘ್ನಿ. ಚಿಕ್ಕಬಳ್ಳಾಪುರದ ಬಳಿಯ ಬೆಟ್ಟದಲ್ಲಿ ಇದರ ಉಗಮ. ಇದು ಈಶಾನ್ಯ ದಿಕ್ಕಿನಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಮೂಲಕ ಹರಿದು, ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ 68ಕಿಮೀ. ಚಿತ್ರಾವತಿ ಇನ್ನೊಂದು ನದಿ. ನಂದಿ ಬೆಟ್ಟಕ್ಕೆ ಉತ್ತರದಲ್ಲಿ 14ಕಿಮೀ ದೂರದಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿದು ಹಿಂದೂಪುರವನ್ನು ಪ್ರವೇಶಿಸುತ್ತದೆ. ಇದು ಉತ್ತರ ಪಿನಾಕಿನಿಯ ಒಂದು ಉಪನದಿ. ಜಿಲ್ಲೆಯಲ್ಲಿ ಇದರ ಹರಿವು 48ಕಿಮೀ. ಇದರ ಜಲಾನಯನ ಪ್ರದೇಶ 538ಚ.ಕಿಮೀ. ಇಲ್ಲಿ 206 ಕೆರೆಗಳಿವೆ. ನಂಗ್ಲಿಹೊಳೆ ಮುಳಬಾಗಿಲಬಳಿಯ ಕುರುಡುಮಲೆಯಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಜಿಲ್ಲೆಯನ್ನು ದಾಟಿ ಹೋಗುತ್ತದೆ. ಇದು ಕೌಂಡಿನ್ಯ ನದಿಯ ಉಪನದಿ. ಕುಮುದ್ವತಿ ನದಿ ಉತ್ತರ ಪಿನಾಕಿನಿಯ ಉಪನದಿ. ಜಿಲ್ಲೆಯಲ್ಲಿ ಇದರ ಉದ್ದ 29ಕಿಮೀ. ಇದು ಮಾಕಳಿದುರ್ಗಕ್ಕೆ ಪಶ್ಚಿಮದಲ್ಲಿ ಉಜನಿ ಬೆಟ್ಟದಲ್ಲಿ ಹುಟ್ಟಿ ಉತ್ತರಕ್ಕೆ ಹರಿದು ಗೌರಿಬಿದನೂರು ತಾಲ್ಲೂಕಿನಲ್ಲಿ ಸಾಗಿ ಜಿಲ್ಲೆಯ ಎಲ್ಲೆಯನ್ನು ದಾಟುತ್ತದೆ. ಕುಶಾವತಿ ಎಂಬ ಹೆಸರಿನ ಎರಡು ಹೊಳೆಗಳು ಈ ಜಿಲ್ಲೆಯಲ್ಲುಂಟು. ಒಂದು ಪಾಪಘ್ನಿಯನ್ನೂ ಇನ್ನೊಂದು ಚಿತ್ರಾವತಿಯನ್ನೂ ಸೇರುತ್ತದೆ. ಮಾರ್ಕಂಡೇಯ ಇನ್ನೊಂದು ಹೊಳೆ. ಕೋಲಾರ ತಾಲ್ಲೂಕಿನ ವಕ್ಕಲೇರಿ ಬೆಟ್ಟಗಳ ಮೇಲೆ ಮತ್ತು ಮಾಲೂರು ತಾಲ್ಲೂಕಿನ ಟೇಕಲ್ ಬೆಟ್ಟಗಳ ಮೇಲೆ ಹುಟ್ಟುವ ಎರಡು ತೊರೆಗಳು ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಎಂಬಲ್ಲಿ ಸೇರಿ ಮಾರ್ಕಂಡೇಯ ನದಿಯಾಗಿ ದಕ್ಷಿಣದತ್ತ ಹರಿದು ವೃಷಭಾವತಿಯನ್ನು ಸೇರಿಕೊಳ್ಳುವುದು. ಜಿಲ್ಲೆಯಲ್ಲಿ 50ಕಿಮೀ ದೂರ ಈ ನದಿ ಹರಿಯುವುದು. ಇದರ ಜಲಾನಯನ ಪ್ರದೇಶದಲ್ಲಿ 274 ಕೆರೆಗಳಿವೆ. ದಕ್ಷಿಣಪಿನಾಕಿನಿ ನದಿ ಹುಟ್ಟುವುದು ಚೆನ್ನರಾಯನ ಬೆಟ್ಟದಲ್ಲಿ. ಶಿಡ್ಲಘಟ್ಟದವರೆಗೆ ಪೂರ್ವಾಭಿಮುಖವಾಗಿ ಹರಿದು, ದಕ್ಷಿಣಕ್ಕೆ ತಿರುಗಿ, ಬೆಂಗಳೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕೋಲಾರ ಜಿಲ್ಲೆಯಲ್ಲಿ ಇದರ ಉದ್ದ 39ಕಿಮೀ. ಜಲಾನಯನ ಪ್ರದೇಶ 580ಚ.ಕಿಮೀ. ಕಾವೇರಿಯ ಉಪನದಿಗಳಲ್ಲಿ ಒಂದಾದ ಅರ್ಕಾವತಿ ಉದಿಸುವುದು ನಂದಿದುರ್ಗದಲ್ಲಿ. ಇದು ಬೆಟ್ಟವನ್ನಿಳಿದು ಜಿಲ್ಲೆಯನ್ನು ದಾಟಿ ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕನ್ನು ಸೇರುತ್ತದೆ. ವೃಷಭಾವತಿ ನದಿ ವಕ್ಕಲೇರಿ ಬೆಟ್ಟದಲ್ಲಿ ಹುಟ್ಟುತ್ತದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ ಹಾಯ್ದು, ಕೊಪ್ಪ -ದೊಡ್ಡ ಕೆರೆಗೆ ನೀರು ಒದಗಿಸಿ, ಕಾಮಸಂದ್ರದ ಬಳಿ ದಕ್ಷಿಣಕ್ಕೆ ಹರಿದು ತಮಿಳುನಾಡು ರಾಜ್ಯದ ಧರ್ಮಪುರಿ ಜಿಲ್ಲೆಯ ಹೊಸೂರು ತಾಲ್ಲೂಕನ್ನು ಪ್ರವೇಶಿಸುತ್ತದೆ. ಕಾಮಸಂದ್ರದ ಬಳಿ ಇದಕ್ಕೆ ಕಟ್ಟೆ ಕಟ್ಟಲಾಗಿದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ 58ಕಿಮೀ. ಜಲಾನಯನ ಪ್ರದೇಶ 347ಚ.ಕಿಮೀ. ಈ ಪ್ರದೇಶದಲ್ಲಿ 264 ಕೆರೆಗಳಿವೆ.

ಜಿಲ್ಲೆಯ ವಾಯುಗುಣ ಹಿತಕರ, ವರ್ಷದಲ್ಲಿ ಸ್ಥೂಲವಾಗಿ ನಾಲ್ಕು ಋತುಗಳಿವೆ: ಡಿಸೆಂಬರ್-ಫೆಬ್ರವರಿ ಶುಷ್ಕ ಹವೆ. ಮಾರ್ಚ್-ಮೇ ಬೇಸಗೆ. ಜೂನ್-ಅಕ್ಟೋಬರ್ ಮಳೆಗಾಲ. ನವೆಂಬರಿನಲ್ಲಿ ಮುಂಗಾರು ಹಿಂದೆ

ಸ್ವಲ್ಪ ಹೆಚ್ಚು ಮಳೆಯಾಗುವ ಬೆಟ್ಟಗುಡ್ಡಗಳಲ್ಲಿ ಚಿಕ್ಕ ಮರ ಮತ್ತು ಕುರುಚಲು ಕಾಡುಗಳಿವೆ. ಈ ಕಾಡುಗಳಲ್ಲಿ ಬೇವು, ಹುಣಿಸೆ, ಗಂಧ, ಹೊಂಗೆ, ಕರಿಜಾಲಿ, ಬಿಳಿಜಾಲಿ, ಕಗ್ಗಲಿ, ಬನ್ನಿ, ಗುಜ್ಜಲು, ಬಿಲ್ವಾರ, ಚುಜ್ಜಲು, ದಿಂಡಿಗ, ನೇರಳೆ, ಚೆನ್ನಂಗಿ, ಪಚರಿ, ನವಿಲಾದಿ, ದೇವದಾರು, ಆಲ, ಬೇಲ, ಮುತ್ತುಗ ಬೆಳೆಯುತ್ತವೆ. ಸೌದೆ, ಶ್ರೀಗಂಧ ಮುಖ್ಯ ಉತ್ಪನ್ನಗಳು. ನಂದಿಬೆಟ್ಟದ ಕಾಡುಗಳಲ್ಲಿ ಕರಡಿ, ಚಿರತೆ, ಕಾಡುಮೊಲ, ಕಾಡುಹಂದಿ ಮತ್ತು ಜಿಂಕೆಗಳಿವೆ.

ವೆಂಕಟೇಶ್ವರದೇವಾಲಯ, ಬಂಗಾರುತಿರುಪತಿ

ದೊಡ್ಡ ನದಿಗಳಿಲ್ಲದಿರುವುದರಿಂದಲೂ ಮಳೆ ಕಡಿಮೆಯಾದ್ದರಿಂದಲೂ ಈ ಜಿಲ್ಲೆಯ ವ್ಯವಸಾಯಕ್ಕೆ ಕೆರೆಗಳು ಮುಖ್ಯ ಆಧಾರ. ಜಿಲ್ಲೆಯಲ್ಲಿ ಉತ್ತಮ ವಿದ್ಯುತ್ ಸಂಪರ್ಕಗಳಿರುವುದರಿಂದ, ನೀರಾವರಿ ಪಂಪ್‌ಗಳೂ ಹೆಚ್ಚು ಸಂಖ್ಯೆಯಲ್ಲಿವೆ. ರಾಗಿ, ಬತ್ತ, ಜೋಳ, ಸಜ್ಜೆ, ಕಾಳುಗಳು, ನೆಲಗಡಲೆ, ಕಬ್ಬು, ಆಲೂಗೆಡ್ಡೆ, ಈರುಳ್ಳಿ ಮತ್ತು ಹೊಗೆಸೊಪ್ಪು ಇಲ್ಲಿಯ ಮುಖ್ಯ ಬೆಳೆಗಳು.

ಚಿನ್ನದ ಗಣಿಗಾರಿಕೆ ಜಿಲ್ಲೆಯ ಒಂದು ದೊಡ್ಡ ಉದ್ಯಮ. ಭಾರತದ ಒಟ್ಟು ಚಿನ್ನದ ಉತ್ಪಾದನೆಯಲ್ಲಿ ಸೇ.99ನ್ನು ಕೋಲಾರ ಚಿನ್ನದ ಗಣಿಗಳಲ್ಲಿ ತೆಗೆಯಲಾಗುತ್ತಿತ್ತು. ಈಗ ಚಿನ್ನದ ಗಣಿಗಾರಿಕೆ ಸ್ಥಗಿತಗೊಳ್ಳುವ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಆಡಳಿತ ನಿಯಂತ್ರಣಕ್ಕೊಳಪಟ್ಟ ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್ ಸಂಸ್ಥೆ ಭಾರಿ ಯಂತ್ರೋಪಕರಣಗಳನ್ನು ತಯಾರಿಸುತ್ತಿದೆ. ಗೌರಿಬಿದನೂರಿನಲ್ಲಿ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿದೆ. ಹಲವು ಸಣ್ಣ ಕೈಗಾರಿಕೆಗಳು ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿ ಮತ್ತು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿವೆ. ಉಕ್ಕಿನ ಸಾಮಾನುಗಳು, ವ್ಯವಸಾಯೋಪಕರಣಗಳು, ಅಲ್ಯುಮಿನಿಯಂ ಪಾತ್ರೆಗಳು, ಹೆಂಚು, ಇಟ್ಟಿಗೆ, ಸ್ಲೇಟ್, ಸೀಸದಕಡ್ಡಿ, ಸಾಬೂನು, ಅಂಟು, ಸುಗಂಧದ್ರವ್ಯಗಳು, ಔಷಧಿಗಳು, ಕಡ್ಡಿಪೆಟ್ಟಿಗೆ, ಪ್ಲಾಸ್ಟಿಕ್ ಸಾಮಾನುಗಳು ಕೂಡ ಕೋಲಾರ ಜಿಲ್ಲೆಯಲ್ಲಿ ತಯಾರಾಗುತ್ತವೆ. ಕಲ್ಲಿಗೆ ಹೊಳಪು ಕೊಡುವುದು, ಬೀಡಿ ಕಟ್ಟುವುದು, ಊದುಬತ್ತಿ ತಯಾರಿಕೆ, ಕೈಮಗ್ಗ, ಕಂಬಳಿ ತಯಾರಿಕೆ, ಗಾಣದಿಂದ ಮತ್ತು ಯಂತ್ರಗಳಿಂದ ಎಣ್ಣೆ ಉತ್ಪಾದನೆ, ಬೆಲ್ಲ ತಯಾರಿಕೆ ಇವೂ ಇವಕ್ಕೆ



ವೀರಾಂಜನೇಯ ಸ್ವಾಮಿ ದೇವಾಲಯ, ಮುಳಬಾಗಿಲು

ಕೋಲಾರ ಜಿಲ್ಲೆಯಲ್ಲಿ ರಸ್ತೆ ಸಂಪರ್ಕ ಚೆನ್ನಾಗಿ ಬೆಳೆದಿದೆ. ರಾಷ್ಟ್ರೀಯ ಹೆದ್ದಾರಿ ನಂ. 4 ಮತ್ತು 7 ಮತ್ತು ರಾಜ್ಯ ಹೆದ್ದಾರಿಗಳು ಇಲ್ಲಿ ಹಾದು ನೆರೆರಾಜ್ಯಗಳಿಗೆ ಸಂಪರ್ಕ ಕಲ್ಪಿಸಿವೆ. ಪ್ರತಿ ಹಳ್ಳಿಗೂ ತಾಲ್ಲೂಕಿಗೂ ಜಾಲದಂತೆ ರಸ್ತೆ ಮಾರ್ಗಗಳು ಹೆಣೆದುಕೊಂಡಿವೆ. ಸರ್ಕಾರಿ ಮತ್ತು ಖಾಸಗಿ ಬಸ್ಸುಗಳೂ ಕಾರುಗಳೂ ಬಂಡಿಗಳೂ ಜನರನ್ನೂ ಸರಕುಗಳನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ಸುಲಭವಾಗಿ ಸಾಗಿಸುತ್ತವೆ. ಹಿಂದೂಪುರ - ಬೆಂಗಳೂರು ರೈಲುಮಾರ್ಗ ಗೌರಿಬಿದನೂರು ಮೂಲಕವೂ ಚೆನ್ನೈ - ಬೆಂಗಳೂರು ರೈಲುಮಾರ್ಗ ಬಂಗಾರಪೇಟೆಯ ಮೂಲಕವೂ ಸಾಗುತ್ತವೆ. ಇನ್ನೊಂದು ರೈಲುಮಾರ್ಗ ಬೆಂಗಳೂರಿನಿಂದ ನಂದಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಕೋಲಾರಗಳ ಮೂಲಕ ಬಂಗಾರ ಪೇಟೆಗೆ ಸಾಗುತ್ತದೆ. ಬಂಗಾರಪೇಟೆಯಿಂದ ಚಿನ್ನದ ಗಣಿ ಪ್ರದೇಶಕ್ಕೆ ರೈಲ್ವೆ ಸಂಪರ್ಕವುಂಟು.

ಕೋಲಾರ ಜಿಲ್ಲೆಯಲ್ಲಿ ಹಲವಾರು ಪ್ರಾಚೀನ ಅವಶೇಷಗಳು ಬೆಳಕಿಗೆ ಬಂದಿವೆ. ಹಳೆಯ ಶಿಲಾಯುಗಕ್ಕೆ ಸಂಬಂಧಿಸಿದ ಯಾವ ಅವಶೇಷಗಳೂ ಇದುವರೆಗೆ ಕಂಡುಬಂದಿಲ್ಲ. ನವಶಿಲಾಯುಗಕ್ಕೆ ಸಂಬಂಧಿಸಿದ ನೆಲೆಗಳು ಬಂಗಾರಪೇಟೆ ತಾಲ್ಲೂಕಿನ ಹುನಗುಂದ, ಬೂದಿಕೋಟೆ ಮತ್ತು ಸೂಲಿಕುಂಟೆ ಗ್ರಾಮಗಳಲ್ಲಿಯೂ ಮಾಲೂರು ತಾಲ್ಲೂಕಿನ ಬನಹಳ್ಳಿ ಗ್ರಾಮದಲ್ಲಿಯೂ ಶಿಡ್ಲಘಟ್ಟ ತಾಲ್ಲೂಕಿನ ತಲಕಾಯಲು ಬೆಟ್ಟಪ್ರದೇಶಗಳಲ್ಲಿಯೂ ಬೆಳಕಿಗೆ ಬಂದಿವೆ. ಅಲ್ಲದೆ ಮಾಲೂರು ತಾಲ್ಲೂಕಿನ ಕೆಂದನಹಳ್ಳಿ ಮತ್ತು ಗಂಗಸಂದ್ರ ಹಳ್ಳಿಗಳ ಸುತ್ತಮುತ್ತಲಿನಲ್ಲಿ ಹೊಸ ಶಿಲಾಯುಗದ ಕಲ್ಲಿನ ಆಯುಧಗಳು ದೊರಕಿವೆ. ಇವು ತಯಾರಿಕೆಯ ಹಲವು ಹಂತಗಳಲ್ಲಿರುವುದರಿಂದ ಈ ಪ್ರದೇಶ ಶಿಲಾಯುಧಗಳನ್ನು ತಯಾರಿಸುವ ಕೇಂದ್ರವಾಗಿದ್ದಿತೆಂದು ಹೇಳಬಹುದು. ಬಂಗಾರಪೇಟೆ ತಾಲ್ಲೂಕಿನಲ್ಲಿ ಚಿನ್ನದ ಗಣಿ ಪ್ರದೇಶದ ನೈಋತ್ಯಕ್ಕೆ ಸು.21ಕಿಮೀ ದೂರದಲ್ಲಿರುವ ಹುನಗುಂದದಲ್ಲಿ ನವಶಿಲಾಯುಗದ ಕಾಲದಲ್ಲಿ ಚಿನ್ನದ ಗಣಿಗಳಿದ್ದವೆಂದೂ ಅಲ್ಲಿ ಚಿನ್ನವನ್ನು ತೆಗೆಯುತ್ತಿದ್ದರೆಂದೂ ಊಹಿಸಲಾಗಿದೆ. ಅಲ್ಲಿರುವ 9ನೆಯ ಶತಮಾನದ ತಮಿಳು ಶಾಸನವೊಂದು ಇದನ್ನು ಪೊನ್‌ಕುನ್ರಂ-ಪೊನ್-ಚಿನ್ನ, ಕುನ್ರಂ-ಬೆಟ್ಟ ಎಂದು ಕರೆದಿದೆ. ಈ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳ ನೆಲೆಗಳು ಕುರುಡುಮಲೆಯಲ್ಲಿ ತ್ರಿಪುರಾಂತಕನ ಮೇಲೆ ಯುದ್ಧಕ್ಕೆ ಹೊರಡುವುದಕ್ಕೆ ಮುಂಚೆ ದೇವತೆಗಳೆಲ್ಲರೂ ಒಂದುಗೂಡಿದ್ದರಂತೆ.

ಸುಮಾರು 4ನೆಯ ಶತಮಾನದಲ್ಲಿ ಗಂಗರಸರು ಇಲ್ಲಿ ತಮ್ಮ ರಾಜ್ಯವನ್ನು ಕಟ್ಟಿ ರಾಜ್ಯಭಾರ ಮಾಡಲಾರಂಭಿಸಿದರು. 7-8ನೆಯ ಶತಮಾನಗಳಲ್ಲಿ ಮಹಾವಲಿ ಬಾಣರಸರು ಪಾಲಾರ್ ನದಿಯ ಪೂರ್ವಪ್ರದೇಶದಲ್ಲಿ ರಾಜ್ಯಭಾರ ಮಾಡುತ್ತಿದ್ದರು. 8, 9 ಮತ್ತು 10ನೆಯ ಶತಮಾನಗಳಲ್ಲಿ ಜಿಲ್ಲೆಯ ಬಹುಭಾಗ ನೊಳಂಬರ ವಶದಲ್ಲಿತ್ತು. 10ನೆಯ ಶತಮಾನದ ಅಂತ್ಯದಲ್ಲಿ ಜಿಲ್ಲೆಯ ಪ್ರದೇಶ ಚೋಳರ ವಶವಾಯಿತು. 12ನೆಯ ಶತಮಾನದ ಹೊತ್ತಿಗೆ ಹೊಯ್ಸಳರ ಆಳಿಕೆಗೆ ಬಂತು. ಆದರೂ ಮಧ್ಯೆ ಮಧ್ಯೆ ಸ್ವಲ್ಪಕಾಲ ತಮಿಳು ಗಂಗರು ಬ್ರಹ್ಮಾಧಿರಾಜರು ಮೊದಲಾದ ವಂಶಗಳವರು ಕೆಲವು ಪ್ರದೇಶಗಳಲ್ಲಿ ಸ್ವತಂತ್ರವಾಗಿಯೂ ಆಳುತ್ತಿದ್ದರು. ಅನಂತರ ವಿಜಯನಗರದರಸರು ಮತ್ತು ಕೆಲವು ಪಾಳೆಯಗಾರರು ಈ ಜಿಲ್ಲೆಯ ರಾಜ್ಯಭಾರ ಮಾಡಿದರು. ಮುಂದೆ ಇದು ಮೈಸೂರು ಸಂಸ್ಥಾನದ ಕಕ್ಷೆಯಲ್ಲಿತ್ತು.

ಇದುವರೆಗೆ ಈ ಜಿಲ್ಲೆಯಲ್ಲಿ ಸಿಕ್ಕಿರುವ ಅತ್ಯಂತ ಪ್ರಾಚೀನ ಶಾಸನ ಸು.370ರದು. ಇದು ಗಂಗಕುಲದ ಕೊಂಗುಣಿವರ್ಮ ಧರ್ಮಮಹಾರಾಜನಿಗೆ ಸಂಬಂಧಿಸಿದ್ದು; ಮಾಲೂರು ತಾಲ್ಲೂಕಿನ ನೊಣಮಂಗಲದಲ್ಲಿರುವ ಪಾಳು ಜೈನಬಸ್ತಿಯಲ್ಲಿದೆ. ಅಂದಿನಿಂದ ಹಿಡಿದು ಇತ್ತೀಚಿನವರೆಗಿನ ಕನ್ನಡ, ಸಂಸ್ಕೃತ, ತಮಿಳು ಮತ್ತು ತೆಲುಗು ಶಾಸನಗಳು ಜಿಲ್ಲೆಯ ಹಲವು ಸ್ಥಳಗಳಲ್ಲಿ ದೊರಕಿವೆ.

ವಿರೂಪಾಕ್ಷ ದೇವಾಲಯ, ವಿರೂಪಾಕ್ಷಪುರ

ನಂದಿಯಲ್ಲಿರುವ ಭೋಗನಂದೀಶ್ವರ (ಸು.800) ಮತ್ತು ಅರುಣಾಚಲೇಶ್ವರ (ಸು.880) ದೇವಾಲಯಗಳು ಜಿಲ್ಲೆಯ ಅತಿ ಪ್ರಾಚೀನ ವಾಸ್ತುಕೃತಿಗಳು. ಆವನಿಯ ರಾಮಲಿಂಗೇಶ್ವರ ದೇವಾಲಯ ಮತ್ತು ಇತರ ದೇವಾಲಯಗಳು ನೊಳಂಬರ ಕಾಲದ ಕಟ್ಟಡಗಳು. ಕೋಲಾರ ತಾಲ್ಲೂಕಿನ ಸೀತಿ ಬೆಟ್ಟದ ಮೇಲಿರುವ ದೇವಾಲಯ ಸಹ ಬಹುಶಃ ನೊಳಂಬರ ಕಾಲಕ್ಕೆ ಸಂಬಂಧಿಸಿದ್ದು. ಕುರುಡುಮಲೆಯ ಚೋಳರ ಕಾಲದ ಸೋಮೇಶ್ವರ ದೇವಾಲಯ ಮತ್ತು ಬೃಹದಾಕಾರದ ಗಣಪತಿ ದೇವಾಲಯಗಳು ಬಹಳ ಪ್ರಸಿದ್ಧವಾಗಿವೆ. ಕೋಲಾರದಲ್ಲಿರುವ ಕೋಲಾರಮ್ಮನ ದೇವಾಲಯ ಚೋಳ ಮತ್ತು ಗಂಗರಸರಿಂದ ನಿರ್ಮಿತವಾದುದೆಂದು ಹೇಳಬಹುದು.

ಮಹಮ್ಮದೀಯರ ಕಾಲದ ಕಟ್ಟಡಗಳಲ್ಲಿ ಗೌರಿಬಿದನೂರಿನ ಹತ್ತಿರವಿರುವ ಹಿರೇಬಿದನೂರಿನ (ನೋಡಿ) ಬಿಜಾಪುರದ ಪ್ರಾಂತ್ಯಾಧಿಕಾರಿಯ ಸಮಾಧಿ ಮತ್ತು ಕೋಲಾರದಲ್ಲಿರುವ ಹೈದರ್ ಅಲಿಯ ತಂದೆಯ ಸಮಾಧಿಗಳು ಉಲ್ಲೇಖಾರ್ಹ. ಖ್ಯಾತ ಎಂಜಿನಿಯರ್ ಎಂ.ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನಹಳ್ಳಿಯಲ್ಲಿ ವಸ್ತು ಸಂಗ್ರಹಾಲಯವಿದೆ.

ಈ ಜಿಲ್ಲೆಯಲ್ಲಿ ಅನೇಕ ಪ್ರಸಿದ್ಧ ಕೋಟೆಗಳಿವೆ. ನಂದಿದುರ್ಗ, ರಹಮಾನ್ ದುರ್ಗ ಪ್ರಖ್ಯಾತವಾದುವು (ಜಿಲ್ಲೆಯ ಅನೇಕ ಮುಖ್ಯಸ್ಥಳಗಳಿಗೆ ಆಯಾ ಶೀರ್ಷಿಕೆಯಲ್ಲಿ ಪ್ರತ್ಯೇಕ ಲೇಖನಗಳಿವೆ). (ಪಿ.ಕೆ.)

**ತಾಲ್ಲೂಕು :** ಜಿಲ್ಲೆಯ ಮಧ್ಯಭಾಗದಲ್ಲಿ ಸ್ವಲ್ಪಮಟ್ಟಿಗೆ ದಕ್ಷಿಣಕ್ಕಿದ್ದು, ಉತ್ತರದಲ್ಲಿ ಚಿಂತಾಮಣಿ, ಶ್ರೀನಿವಾಸಪುರ ತಾಲ್ಲೂಕುಗಳು, ಪೂರ್ವದಲ್ಲಿ ಮುಳಬಾಗಲು ತಾಲ್ಲೂಕು, ದಕ್ಷಿಣದಲ್ಲಿ ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳು ಮತ್ತು ಪಶ್ಚಿಮದಲ್ಲಿ ಬೆಂಗಳೂರು ಜಿಲ್ಲೆಯ ಎಲ್ಲೆಗಳು ಸುತ್ತುವರಿದಿವೆ. ವಿಸ್ತೀರ್ಣ 791.1ಚ.ಕಿಮೀ. ಜನಸಂಖ್ಯೆ 3,41,784. ಕಸಬೆ, ವಕ್ಕಲೇರಿ, ವೇಮಗಲ್ಲು, ನರಸಾಪುರ, ಸುಗಟೂರು, ಹೋಳೂರು, ಹುತ್ತೂರು ಈ ಏಳು ಹೋಬಳಿಗಳು. ಒಟ್ಟು ಗ್ರಾಮಗಳ ಸಂಖ್ಯೆ 361.

ಹಜರತ್ ಬಾಬಾ ಹೈದರ್ ಅಲಿ ದರ್ಗಾ, ಮುಳಬಾಗಿಲು

ತಾಲ್ಲೂಕು ಕಣಶಿಲೆಯ ಪ್ರದೇಶ, ಅಲೆಯಲೆಯಾಗಿ ಸುಮಾರು ಮಟ್ಟಸವಾದ ಭೂಪ್ರದೇಶದಲ್ಲಿ ಅಲ್ಲಲ್ಲಿ ಕಣಶಿಲೆಯ ಬೆಟ್ಟಗುಡ್ಡಗಳಿವೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಕೋಲಾರ ಮತ್ತು ವೇಮಗಲ್ಲು ಬೆಟ್ಟಗಳ ಸಾಲುಗಳು ಇವೆ. ತಾಲ್ಲೂಕಿನ ಉತ್ತರ ಮತ್ತು ಪೂರ್ವಭಾಗ ಪಾಲಾರ್ ನದಿಯ ಹರಿವಿನ ಪ್ರದೇಶ. ತಾಲ್ಲೂಕಿನ ಹೆಚ್ಚುಭಾಗ ಮರಳುಮಿಶ್ರಿತ ಕೆಂಪು ಮಣ್ಣಿನದು. ಹೋಳೂರು ಹೋಬಳಿ ಮತ್ತು ದಲಸನೂರಿನ ಸುತ್ತಮುತ್ತ ಉತ್ಕೃಷ್ಟ ಭೂಮಿ ಇದೆ. ಈ ಭಾಗದಲ್ಲಿ ಕೆಲವೆಡೆ ಕಪ್ಪು ಎರೆ ಮಣ್ಣು ಸಹ ಇದೆ. ವಾರ್ಷಿಕ ಸರಾಸರಿ ಮಳೆ 693.93ಮಿಮೀ. ಪಾಲಾರ್ ನದಿಗೆ ಕಟ್ಟಲಾಗಿರುವ ಸೋಮಾಂಬುಧಿ ಅಗ್ರಹಾರಕೆರೆ ಮತ್ತು ಇತರ ಅನೇಕ ಕೆರೆಗಳು ಮತ್ತು ಬಾವಿಗಳೂ ನೀರಾವರಿ ಸೌಲಭ್ಯವನ್ನು ಒದಗಿಸಿವೆ. ತಾಲ್ಲೂಕಿನ ಮುಖ್ಯ ಬೆಳೆಗಳು ರಾಗಿ ಮತ್ತು ಬತ್ತ. ಸ್ವಲ್ಪಮಟ್ಟಿಗೆ ಕಬ್ಬು,

ವಿಶ್ವೇಶ್ವರಯ್ಯ ವಸ್ತುಸಂಗ್ರಹಾಲಯ, ಮುದ್ದೇನಹಳ್ಳಿ

ಹೋಬಳಿ ಗ್ರಾಮಗಳಲ್ಲದೆ ಬೆಳ್ಳೂರು, ಗರುಡನಪಾಳ್ಯ, ಪಾಪರಾಜನ ಹಳ್ಳಿ, ಸೀತಿ, ಸುಗಟೂರು ತೇರುಹಳ್ಳಿ, ವಾಣರಾಶಿ, ವಕ್ಕಲೇರಿ, ವೇಮಗಲ್ಲು ಮೊದಲಾದವು ಈ ತಾಲ್ಲೂಕಿನಲ್ಲಿನ ಮುಖ್ಯ ಸ್ಥಳಗಳು. ಗರುಡನಪಾಳ್ಯದ ಬಳಿಯ ಚಿಕ್ಕಗುಡ್ಡದಲ್ಲಿ ಸ್ಥಳೀಯವಾಗಿ ಪಾಂಡವರ ಗುಡಿಗಳೆಂದು ಕರೆಯುವ ಬೃಹತ್ ಶಿಲಾಸಮಾಧಿಗಳಿವೆ. ಕೋಲಾರದ ಬಳಿಯ ಬೆಟ್ಟವೊಂದರ ಮೇಲಿರುವ ಪಾಪರಾಜನ ಹಳ್ಳಿಯಲ್ಲಿ ಒಂದು ಶಿವ ದೇವಾಲಯ ಮತ್ತು ಉಸ್ಮಾನ್ ಅಲಿಯ ದರ್ಗಾ ಅಲ್ಲದೆ ಭೂತಗೌಡನ ಗವಿ, ಮುಗಲ್ ಸುಬೇದಾರನ ಕೋಟೆ ಮೊದಲಾದವು ಇವೆ. ಮತ್ತೊಂದು ಬೆಟ್ಟದ ಮೇಲೆ ತೇರುಹಳ್ಳಿ ಗ್ರಾಮದಲ್ಲಿ ಸು.12-13ನೆಯ ಶತಮಾನದ ಗಂಗಾಧರೇಶ್ವರನ ಬೃಹತ್ ದೇವಾಲಯ ಮತ್ತು ಕೆಲವು ಪ್ರಾಗೈತಿಹಾಸಿಕ ಅವಶೇಷಗಳು ಇವೆ. ಬೆಳ್ಳೂರು ಗಂಗರ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಹೊಯ್ಸಳರ ಕಾಲದಲ್ಲಿ ವಿಷ್ಣುವರ್ಧನ ಚತುರ್ವೇದಿ ಮಂಗಲಂ ಎಂದು ಪ್ರಸಿದ್ಧವಾಗಿದ್ದ ಶ್ರೀವೈಷ್ಣವ ಅಗ್ರಹಾರವಾಗಿತ್ತು. ಮಣವಾಲ ಮಹಾಮುನಿಯ ಶಿಷ್ಯರಾದ ಪ್ರತಿವಾದಿ ಭಯಂಕರರ ಅಣ್ಣಾ ಇಲ್ಲಿಯವರೆಂದು ಪ್ರತೀತಿ. ಇಲ್ಲಿ ರಾಮದೇವಾಲಯವಿದೆ. ವೆಂಕಟಾಪುರದಲ್ಲಿ ವೆಂಕಟರಮಣ ದೇವಾಲಯವಿದೆ. ವಕ್ಕಲೇರಿಯ ಬೆಟ್ಟದ ಮೇಲೆ ಪ್ರಾಚೀನ ಮಾರ್ಕಂಡೇಶ್ವರ ದೇವಾಲಯವಿದೆ. ಪ್ರತಿ ಮಾಘ ಮಾಸದಲ್ಲಿ ಸು.20 ದಿನಗಳ ಕಾಲ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ವಾಣರಾಸಿಯಲ್ಲಿ ಸ್ಥಳೀಯ ವೀರ ಇರಳಪ್ಪನ ದೇವಾಲಯವಿದೆ. ಪ್ರತಿ ಚೈತ್ರಮಾಸದಲ್ಲಿ ಇಲ್ಲೂ ದೊಡ್ಡ ಜಾತ್ರೆ ನಡೆಯುತ್ತವೆ. ಹೋಳೂರಿನಲ್ಲಿ ಲಕ್ಷ್ಮೀನಾರಾಯಣ ದೇವಾಲಯವಿದೆ. ಮಾಘ ಶುದ್ಧ ಪಾಡ್ಯಮಿಯಂದು ಜಾತ್ರೆ ನಡೆಯುತ್ತದೆ. ವೇಮಗಲ್ಲಿನಲ್ಲಿರುವ ದರ್ಗಾ ಪ್ರಸಿದ್ಧವಾದುದು.

**ಪಟ್ಟಣ :** ಕೋಲಾರ, ದೊಡ್ಡ ಊರು; ಜಿಲ್ಲೆ ಹಾಗೂ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರಿನಿಂದ 72ಕಿಮೀ ಪೂರ್ವ ಈಶಾನ್ಯಕ್ಕೆ ಹಳೆಯ ಬೆಂಗಳೂರು - ಚೆನ್ನೈ ಹೆದ್ದಾರಿಯ ಮೇಲಿದೆ. ಬೆಂಗಳೂರು - ಬಂಗಾರಪೇಟೆ ರೈಲುಮಾರ್ಗ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. ಜನಸಂಖ್ಯೆ 1,13,299.

ಈ ಊರು ರೈಲುಮಾರ್ಗದ ಉತ್ತರಕ್ಕೆ ಬೆಳೆದಿದೆ. ಪೂರ್ವದಲ್ಲಿ ಅಮಾನಿಕೆರೆ ಇದೆ. ಕೈಗಾರಿಕಾ ತರಬೇತಿ ಕೇಂದ್ರ, ರೇಷ್ಮೆ ತಯಾರಿಕಾ ತರಬೇತಿ ಕೇಂದ್ರ ಇವೆ. ಸುತ್ತಲ ಪ್ರದೇಶದಲ್ಲಿ ಉತ್ಪನ್ನವಾಗುವ ರೇಷ್ಮೆಯ ವ್ಯಾಪಾರ ಈ ನಗರದ ಮೂಲಕ ಸಾಗುತ್ತದೆ. ರೇಷ್ಮೆಮೊಟ್ಟೆ ಕೇಂದ್ರಗಳಿವೆ. ಇಲ್ಲಿನ ಕಂಬಳಿಗಳು ಹೆಸರುವಾಸಿ. ಸರ್ಕಾರದ ಒಂದು ಉಣ್ಣೆನೇಯ್ಗೆ ಕಾರ್ಖಾನೆ ಇದೆ. ಒಂದು ಕೈಗಾರಿಕಾ ಎಸ್ಟೇಟ್, ಅಲ್ಯುಮಿನಿಯಂ ಪಾತ್ರೆಗಳ ಕಾರ್ಖಾನೆ, ಗೋಂದು ಮತ್ತು ಪರಿಮಳ ದ್ರವ್ಯಗಳ ಕಾರ್ಖಾನೆ ಇವೆ.

ಸತ್ಕರಿಸಿದ. ಕಾರ್ತವೀರ್ಯ ಆ ಗೋವನ್ನು ತನಗೆ ಕೊಡಬೇಕೆಂದು ಜಮದಗ್ನಿಯನ್ನು ಪೀಡಿಸಿದ. ಜಮದಗ್ನಿ ಗೋವನ್ನು ಕೊಡಲು ನಿರಾಕರಿಸಲು ಅದನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಲು ಪ್ರಯತ್ನಿಸಿದ. ಆಗ ಜಮದಗ್ನಿಯ ಮಗ ಪರಶುರಾಮನಿಂದ ಕಾರ್ತವೀರ್ಯಾರ್ಜುನನ ಹತನಾದ. ಅನಂತರ ಕಾರ್ತವೀರ್ಯಾರ್ಜುನನ ಮಕ್ಕಳಿಂದ ಜಮದಗ್ನಿಯ ಹತ್ಯೆ ನಡೆಯಿತು. ಜಮದಗ್ನಿಯ ಪತ್ನಿ ರೇಣುಕೆ ಪತಿಯ ದೇಹದೊಡನೆ ಚಿತೆಯೇರಿದಳು. ಇದರಿಂದ ಕುಪಿತನಾದ ಪರಶುರಾಮ ಎಲ್ಲ ಕ್ಷತ್ರಿಯರನ್ನೂ ನಾಶಮಾಡುವುದಾಗಿ ಪಣ ತೊಟ್ಟು ಕಾರ್ತವೀರ್ಯಾರ್ಜುನನ ಎಲ್ಲ ಮಕ್ಕಳನ್ನೂ ಯುದ್ಧದಲ್ಲಿ ಕೊಂದುಹಾಕಿದ. ಆ ಯುದ್ಧಗಳಿಂದ ಉಂಟಾದ ಕೋಲಾಹಲ ಸುತ್ತಲ ಬೆಟ್ಟಗಳಿಂದ ಮಾರ್ದನಿ ಕೊಟ್ಟು ಆ ಪ್ರದೇಶಕ್ಕೆ ಕೋಲಾಹಲವೆಂಬ ಹೆಸರು ಬಂತು. ಅದೇ ಇಂದಿನ ಕೋಲಾರವೆಂದು ಪ್ರತೀತಿ. ರೇಣುಕೆಯ ನೆನಪಿಗಾಗಿ ಇಲ್ಲಿನ ಕೋಲಾರಮ್ಮನ ದೇವಾಲಯವನ್ನು ಕಟ್ಟಲಾಯಿತು. ಇದು ಇಲ್ಲಿಯ ಐತಿಹ್ಯ. ಈಗ ಕೋಲಾರ ಪಟ್ಟಣವಿರುವ ಜಾಗದಲ್ಲಿ ಕೋಲ ಎಂಬ ಗೊಲ್ಲ ನೇಗಿಲಿನಿಂದ ಭೂಮಿಯನ್ನು ಉಳುತ್ತಿರುವಾಗ ಬಚ್ಚಿಟ್ಟ ಹಣ ದೊರಕಿತೆಂದೂ ಚೋಳ ದೊರೆ ಉತ್ತಮಚೋಳ ಆ ಗೊಲ್ಲನನ್ನು ಕಂಚಿಗೆ ಬರುವಂತೆ ಹೇಳಿಕಳುಹಿಸಿದನೆಂದೂ ಆಗ ರೇಣುಕಾದೇವಿ ಕೋಲಾಹಲಮ್ಮನ ರೂಪದಲ್ಲಿ ಕಾಣಿಸಿಕೊಂಡು ಅವನಿಗೆ ಎಚ್ಚರಿಕೆ ಕೊಟ್ಟಿದ್ದರಿಂದ ದೊರೆ ಕೋಲಾರಮ್ಮನ ಹೆಸರಿನಲ್ಲಿ ದೇವಾಲಯವನ್ನೂ ಊರನ್ನೂ ಕಟ್ಟಿಸಿದನೆಂದೂ ಇನ್ನೊಂದು ಕಥೆ ಇದೆ. ಕೋಲನ ನೇಗಿಲು ಹಲ ಎಂಬುದರಿಂದ ಕೋಲಾಹಲ (ಕೋಲಾರ) ಹೆಸರು ಬಂದಿರಬೇಕೆಂಬ ಊಹೆಯೂ ಇದೆ.

ಸು.4ನೆಯ ಶತಮಾನದಿಂದಲೂ ಈ ಊರು ಅಸ್ತಿತ್ವದಲ್ಲಿದ್ದಿರಬೇಕು. ತಲಕಾಡಿನ ಗಂಗವಂಶದ ಅರಸರು ಮೂಲತಃ ಕೋಲಾರದವರಾಗಿದ್ದು ತಮ್ಮನ್ನು ಕೋಲಾಲಪುರವರೇಶ್ವರರೆಂದು ಕರೆದುಕೊಂಡಿದ್ದಾರೆ. ತಲಕಾಡು ರಾಜಧಾನಿಯಾಗುವುದಕ್ಕೆ ಮುಂಚೆ ಕೋಲಾರ ಅವರ ರಾಜಧಾನಿಯಾಗಿದ್ದಿರಬೇಕು. ಇಲ್ಲಿ ಚೋಳ, ಹೊಯ್ಸಳ, ವಿಜಯನಗರ ಮತ್ತು ಪಾಳೆಯಗಾರರ ಕಾಲದ ಶಾಸನಗಳು ದೊರಕಿವೆ. ಆ ಕಾಲಗಳಲ್ಲೂ ಇದೊಂದು ಮುಖ್ಯ ಪಟ್ಟಣವಾಗಿ ಮೆರೆದಿತ್ತು. 15ನೆಯ ಶತಮಾನದಲ್ಲಿ ಇದು ತಿಮ್ಮೇಗೌಡನೆಂಬ ಪಾಳೆಯಗಾರನ ವಶದಲ್ಲಿತ್ತು. ಆತ ಇಲ್ಲಿನ ಕೋಟೆಯನ್ನು ದುರಸ್ತಿ ಮಾಡಿಸಿದ. 1639ರಲ್ಲಿ ಬಿಜಾಪುರದ ಸರದಾರ ಷಾಜಿಯ ವಶಕ್ಕೆ ಬಂತು. ಇಪ್ಪತ್ತು ವರ್ಷಗಳ ಅನಂತರ ಈ ಊರು ಮುಗಲರ ವಶವಾಯಿತು. 1720ರಲ್ಲಿ ಹೈದರನ ತಂದೆ ಫತೆ ಮಹಮ್ಮದ್ ಶಿರಾ ಸುಬೇದಾರರ ಅಧೀನದಲ್ಲಿ ಇದರ ಫೌಜುದಾರನಾದ. 1761ರಲ್ಲಿ ಪಟ್ಟಣ ಹೈದರನ ಅಧೀನಕ್ಕೆ ಬಂತು. 1768ರಲ್ಲಿ ಬ್ರಿಟಿಷ್ ಸೇನಾನಿ ಕ್ಯಾಂಪ್‌ಬೆಲ್ ವಶಪಡಿಸಿಕೊಂಡಿದ್ದ. 1770ರಲ್ಲಿ ಮಾಧವರಾವ್‌ನ ಕೈಸೇರಿತು. 1791ರಲ್ಲಿ ಇದನ್ನು ಕಾರ್ನ್‌ವಾಲಿಸ್ ಗೆದ್ದ. 1792ರ ಸಂಧಿಯ ಪ್ರಕಾರ ಇದು ಮೈಸೂರು ಸಂಸ್ಥಾನಕ್ಕೆ ಸೇರಿತು. ಮೆಕೆಂಜಿ ಎಂಬ ಬ್ರಿಟಿಷ್ ಅಧಿಕಾರಿ 1801ರಲ್ಲಿ ಇದನ್ನು ನೋಡಿದಾಗ ಇಲ್ಲಿ ಮಣ್ಣಿನ ಕೋಟೆಯೂ ಸುತ್ತಣ ಕಂದಕ ಸುಸ್ಥಿತಿಯಲ್ಲಿತ್ತೆಂದೂ ವರ್ಣಿಸಿದ್ದಾನೆ. 19ನೆಯ ಶತಮಾನದ ಉತ್ತರ ಭಾಗದಲ್ಲಿ ಕೋಟೆಯನ್ನು ನೆಲಸಮ ಮಾಡಿ ಕಂದಕವನ್ನು ಮುಚ್ಚಲಾಯಿತು.

ಈ ಊರಿನಲ್ಲಿ ಕೋಲಾರಮ್ಮ, ಸೋಮೇಶ್ವರ, ಆಂಜನೇಯ, ವೆಂಕಟರಮಣ ಮತ್ತು ಕೋದಂಡರಾಮ ದೇವಾಲಯಗಳಿವೆ. ಕೋಲಾರಮ್ಮನ ಇವುಗಳಲ್ಲಿ ಚಾಮುಂಡಾ ವಿಗ್ರಹ ದೊಡ್ಡದು ಇದರ ಎದುರು ಶ್ರೀಯಂತ್ರವನ್ನು ಸ್ಥಾಪಿಸಲಾಗಿದೆ. ಮಧ್ಯದ ಅಂಕಣದಲ್ಲಿ 5' ಎತ್ತರದ ಕಪಾಲಭೈರವಿಯ ಮೂರ್ತಿ ಇದೆ. ಈ ದೇವಿ ಚೇಳುಕಡಿತವನ್ನು ನಿವಾರಿಸುವಳೆಂಬ ನಂಬಿಕೆ ಇದೆ. ದಕ್ಷಿಣದ ಕಡೆಗೆ ನಾಲ್ಕು ಕುಬ್ಜ ಕಂಬಗಳಿರುವ ಇನ್ನೊಂದು ಗುಡಿ ಇದೆ. ಇದರಲ್ಲಿ ಸಪ್ತಮಾತೃಕೆಯರ ಸುದ್ದೆಮಣ್ಣಿನ ದೊಡ್ಡ ವಿಗ್ರಹಗಳೂ ಕೋಲಾರಮ್ಮನ ಉತ್ಸವಮೂರ್ತಿಯೂ ಇವೆ. ಉತ್ತರಕ್ಕಿರುವ ನವರಂಗದಲ್ಲಿ ಚಂಡಿಕೇಶ್ವರ ಮತ್ತು ಚೋಳರಾಜನ ವಿಗ್ರಹಗಳಿವೆ. ಈ ಭಾಗಗಳೆಲ್ಲವೂ ಬಹುಶಃ ಗಂಗರ ಕಾಲದಲ್ಲಿದ್ದಂತೆ ತೋರುತ್ತದೆ. ಇದರಿಂದ ದಕ್ಷಿಣಕ್ಕಿರುವ ಕಟ್ಟಡಗಳು ಚೋಳರ ಕಾಲದ ಸೇರ್ಪಡೆಗಳು. ದೇವಾಲಯದಲ್ಲಿ ರಾಜೇಂದ್ರ ಚೋಳ ಮೊದಲಾದ ಹಲವು ಚೋಳರಾಜರ ತಮಿಳು ಶಾಸನಗಳಿವೆ.

ಷಣ್ಮುಖ, ಮುಳಬಾಗಿಲು

ಸೋಮೇಶ್ವರ ದೇವಾಲಯ ದ್ರಾವಿಡ ಶೈಲಿಯ ದೊಡ್ಡ ಕಟ್ಟಡ. ದೊಡ್ಡ ಪ್ರಾಕಾರದ ಮುಂದೆ ಮಹಾದ್ವಾರ ಮತ್ತು ಮೇಲೆ ಇಟ್ಟಿಗೆಯ ಗೋಪುರ ಇದೆ. ಒಳಭಾಗದ ಮುಖ್ಯ ಗುಡಿಯಲ್ಲಿ ಒಂದು ಗರ್ಭಗೃಹ, ದೊಡ್ಡ ಸುಕನಾಸಿ ಮತ್ತು ನಾಲ್ಕು ಕಂಬಗಳ ನವರಂಗ ಇವೆ. ಮುಂದೆ ಅನೇಕ ಕಂಬಗಳನ್ನುಳ್ಳ ಒಂದು ಮುಖಮಂಟಪವಿದೆ. ಗರ್ಭಗುಡಿಯ ಮೇಲೆ

ಕೋಲಾರದ ಮಕ್ಬರಾ ಇಲ್ಲಿನ ಇಸ್ಲಾಮೀ ಕಟ್ಟಡಗಳಲ್ಲಿ ಮುಖ್ಯವಾದುದು. ಇದು ಒಂದು ಮಂಟಪ. ಇದರಲ್ಲಿ ಹೈದರ್ ಅಲಿಯ 12 ಜನ ಸಂಬಂಧಿಕರ ಗೋರಿಗಳಿವೆ. ಇಲ್ಲಿ ಹೈದರ್ ಅಲಿಯ ತಂದೆ ಫತೆ ಮಹಮ್ಮದ್, ತಾಯಿ ರಜಿಯಾ ಬೇಗಂ ಮತ್ತು ಹಿರಿಯ ಮಲತಾಯಿ ಖೂಲ್ಸಿನ್ ಬೀಬಿ ಇವರ ಗೌರವಾರ್ಥ ವಾರ್ಷಿಕವಾಗಿ ಉರುಸ್ ನಡೆಯುತ್ತದೆ. ಮಕ್ಬರಾದ ಪ್ರಾಂಗಣದಲ್ಲಿ ಒಂದು ದರ್ಗಾ ಮತ್ತು ಮಸೀದಿ ಇವೆ. *

**ಕೋಲಾರ ಚಿನ್ನದ ಗಣಿ** (ಪ್ರದೇಶ): ಕೋಲಾರ ಜಿಲ್ಲೆಯ ಬಂಗಾರ ಪೇಟೆ ತಾಲ್ಲೂಕಿನ ದಕ್ಷಿಣದಲ್ಲಿ ಬೇಟರಾಯನ ಬೆಟ್ಟಸಾಲಿನ ಪೂರ್ವಕ್ಕೆ ಇರುವ ಸ್ಥಳ. ಇದೇ ಹೆಸರಿನ ಪಟ್ಟಣ, ಕೆ.ಜಿ.ಎಫ್. ಎಂದೂ ಪ್ರಸಿದ್ಧ. ಬೆಂಗಳೂರಿನಿಂದ ಸು.90ಕಿಮೀ ಪೂರ್ವಕ್ಕಿದೆ. ಚಿನ್ನದ ಗಣಿ ಪ್ರದೇಶಕ್ಕೂ ಬೆಂಗಳೂರು - ಚೆನ್ನೈ ರೈಲು ಮಾರ್ಗದಲ್ಲಿರುವ ಬಂಗಾರಪೇಟೆ ನಿಲ್ದಾಣಕ್ಕೂ ಚಿನ್ನದ ಗಣಿ ರೈಲ್ವೆ ಸಂಪರ್ಕವಿದೆ.

ಕೋಲಾರ ಚಿನ್ನದ ಗಣಿ ನಗರ ಇಲ್ಲಿ ಆರಂಭವಾದ ಚಿನ್ನದ ಗಣಿ ಕೈಗಾರಿಕೆಯ ಫಲ. ಇದು ಕಾರ್ಮಿಕರ ನಗರ. 1899ರಲ್ಲಿ ಈ ಪ್ರದೇಶದ ಪೌರಾಡಳಿತಕ್ಕಾಗಿ ಒಂದು ಸ್ಯಾನಿಟರಿ ಬೋರ್ಡ್ ಸ್ಥಾಪಿತವಾಯಿತು. 1964ರವರೆಗೂ ಇದರ ನಗರ ಪ್ರದೇಶಕ್ಕೆ ರಾಬರ್ಟ್ ಸನ್ ಪೇಟೆ ಮತ್ತು ಆ್ಯಂಡರ್ಸನ್ ಪೇಟೆ, ಸೊಣ್ಣಕೊಪ್ಪ, ನಾಚಕಪಲ್ಲಿ, ಉರಿಗಾಂ ಮುಂತಾದ ಸ್ಥಳಗಳು ಮತ್ತು ಕಾರ್ಮಿಕ ವಸತಿಗಳು ಸೇರಿದ್ದುವು. 1964ರಲ್ಲಿ ರಾಬರ್ಟ್‌ಸನ್ ಪೇಟೆ ಪೌರಸಭೆ ಬೇರೆಯಾಯಿತು. 1991ರ ಜನಗಣತಿಯ ಅನಂತರ ಕೋಲಾರ ಚಿನ್ನದ ಗಣಿ ಸ್ಯಾನಿಟರಿ ಬೋರ್ಡ್ ಮತ್ತು ಬೆಮೆಲ್ ನಗರ ಇವೆರಡನ್ನೂ ರಾಬರ್ಟ್ ಸನ್ ಪೇಟೆಗೆ ಸೇರ್ಪಡೆ ಮಾಡಲಾಗಿದೆ.

ಕೋಲಾರದ ಚಿನ್ನದ ಗಣಿಗಾರಿಕೆಯ ಪ್ರಾಚೀನ ಇತಿಹಾಸ ನಿಖರವಾಗಿ ಗೊತ್ತಿಲ್ಲ. ಈಗ ನಂದಿದುರ್ಗ ಗಣಿಯ ಭಾಗವಾಗಿರುವ ಕೋರಮಂಡಲ ಗಣಿಯಲ್ಲಿ ಸು.200ಅಡಿ ಆಳದಲ್ಲಿ ನೀರಿನ ಪಾತ್ರೆಗಳೂ ಹಳ್ಳದ ಬದಿಯಲ್ಲಿ ಜನರು ಹೆಜ್ಜೆಯಿಟ್ಟು ಇಳಿದು ಹತ್ತಲು ಅನುವಾಗಿ ಮಾಡಲಾಗಿದ್ದ ಗೂಡುಗಳೂ ಇದ್ದುವು. ಇತಿಹಾಸದ ಉದ್ದಕ್ಕೂ ಇಲ್ಲಿ ಅವ್ಯವಸ್ಥಿತವಾಗಿ ಗಣಿ ಕೆಲಸ ನಡೆಯುತ್ತಿದ್ದಿರಬೇಕು. ಟಿಪ್ಪುಸುಲ್ತಾನ ಇಲ್ಲಿ ಗಣಿಗಾರಿಕೆ ನಡೆಯಿಸಲು ಪ್ರಯತ್ನಿಸಿ ವಿಫಲನಾದನೆಂದು ತಿಳಿದುಬರುತ್ತದೆ. ಸ್ಥಳೀಯರು ಪುರಾತನ ಗಣಿಗಳಿಂದ ಅಷ್ಟಿಷ್ಟು ಚಿನ್ನ ತೆಗೆಯುತ್ತಿದ್ದುದುಂಟು. ಹಿಂದಿನ ಗಣಿಗಾರರು ಸು.300 ಅಡಿ ಆಳದವರೆಗೂ ನೆಲವನ್ನು ತೋಡಿ ಚಿನ್ನ ತೆಗೆದಿದ್ದರೆಂದು ಗೊತ್ತಾಗುತ್ತದೆ. ಹಿಂದಿನ ಗಣಿಗಾರಿಕೆಗೆ ಉಕ್ಕಿನ ಉಪಕರಣಗಳಾಗಲಿ, ಸ್ಫೋಟಕಗಳಾಗಲಿ ಇರಲಿಲ್ಲ. ಬಂಡೆಗೆ ಬೆಂಕಿ ಒಟ್ಟಿ ಅದು ಕಾದಾಗ ನೀರು ಸುರಿದು ಬಂಡೆ ಒಡೆಯಿಸಿ ಚಿನ್ನ ತೆಗೆಯುತ್ತಿದ್ದರೆಂದು ಗೊತ್ತಾಗುತ್ತದೆ. ಆದರೆ ಇದು ಅಪಾಯಕಾರಿಯಾಗಿತ್ತು. ಆದ್ದರಿಂದ 1859ರಲ್ಲಿ ಕಾನೂನಿನ ಮೂಲಕ ಇದನ್ನು ನಿಷೇಧಿಸಲಾಗಿತ್ತು.

ಈಗಿನ ಕೋಲಾರ ಚಿನ್ನದ ಗಣಿಯ ಮೂಲಕರ್ತ ನಿಸ್ಸಂದೇಹವಾಗಿ ಮೈಕಲ್ ಎಫ್. ಲಾವೆಲ್. ಈ ಸ್ಥಳದಲ್ಲಿ ಚಿನ್ನ ತೆಗೆಯುವ ಹಕ್ಕನ್ನು ಈತ 1875ರಲ್ಲಿ ಮೈಸೂರು ಸರ್ಕಾರದಿಂದ ಪಡೆದುಕೊಂಡ. ಆದರೆ ಕರ್ನಾಟಕ ಸರ್ಕಾರದಿಂದ ಗಣಿಗಳನ್ನು ತನ್ನ ಹತೋಟಿಗೆ ತೆಗೆದುಕೊಂಡು ಹಣಕಾಸು ಸಚಿವಾಲಯುದ ಆರ್ಥಿಕ ವ್ಯವಹಾರ ವಿಭಾಗಕ್ಕೆ ಸೇರಿಸಿತು. 1971ರ ಏಪ್ರಿಲ್ ಒಂದರಿಂದ 1972ರ ಮಾರ್ಚ್ 31ರ ತನಕ ಗಣಿಗಳಿಂದ ಉತ್ಪನ್ನವಾದ ಚಿನ್ನ 72,226 ಔನ್ಸ್‌ಗಳೆಂದು ತಿಳಿದುಬಂದಿದೆ. 1972ರ ಏಪ್ರಿಲ್ ಒಂದರಂದು ಕೆ.ಜಿ.ಎಂ.ಯು. ಸಂಸ್ಥೆಯನ್ನು ಉತ್ತಮ ಭವಿಷ್ಯದ ದೃಷ್ಟಿಯಿಂದ ಭಾರತ ಗೋಲ್ಡ್ ಮೈನ್ಸ್ ಪ್ರೈವೇಟ್ ಲಿಮಿಟೆಡ್ ಆಗಿ ಮಾರ್ಪಾಟು ಮಾಡಲಾಯಿತು.

ಈ ಗಣಿ ಪ್ರದೇಶದಲ್ಲಿ ಧಾರವಾಡ ಪದರುಶಿಲಾವರ್ಗವನ್ನು ಛೇದಿಸಿರುವ ಬೆಣಚು ಸಿರಗಳಲ್ಲಿ ಅತಿಸೂಕ್ಷ್ಮ ಕಣಗಳ ರೂಪದಲ್ಲಿ ಚಿನ್ನ ದೊರಕುತ್ತಿತ್ತು. ಈ ಶಿಲಾವರ್ಗ ಸು.80ಕಿಮೀ ಉದ್ದ ಮತ್ತು 5 ಕಿಮೀ ಅಗಲವಿದ್ದು, ಉತ್ತರ ದಕ್ಷಿಣವಾಗಿ ಹರಡಿದೆ. ಇದರ ಪೂರ್ವಕ್ಕೆ ಪೆಂಟೆ ಶಿಲೆಯೂ ಮಧ್ಯದಲ್ಲಿ ಶಿಸ್ಟ್ ಪದರು ಶಿಲೆಯೂ ಮತ್ತು ಪಶ್ಚಿಮಕ್ಕೆ ಫೆರುಜಿನಸ್ ಕ್ವಾರ್ಟ್ಸೈಟ್ ಶಿಲೆಯೂ ಇವೆ. ಇವುಗಳಲ್ಲಿಯೂ ಚಿನ್ನ ದೊರಕುವುದೆಂದು ಪತ್ತೆಯಾಯಿತು. ಚಿನ್ನವಿರುವ ಹಲವಾರು ಶಿಲೆಯ ಸಿರಗಳಲ್ಲಿ ಛಾಂಪಿಯನ್ ಲೋಡ್ ಸಿರವೇ ಮುಖ್ಯವೆನಿಸಿತ್ತು.

ಕೆ.ಜಿ.ಎಫ್.ನಲ್ಲಿ ಮೈಸೂರು, ಛಾಂಪಿಯನ್ ರೀಫ್, ನಂದಿದುರ್ಗ ಮತ್ತು ಗೋಲ್‌ಕೊಂಡ ಗಣಿಗಳಲ್ಲಿ ಕೆಲಸ ನಡೆಯುತ್ತಿತ್ತು. ಮಿತವ್ಯಯ ಮತ್ತು ದಕ್ಷ ಆಡಳಿತ ದೃಷ್ಟಿಯಿಂದ ಮೈಸೂರು ಮತ್ತು ಛಾಂಪಿಯನ್ ರೀಫ್ ಗಣಿಗಳನ್ನೂ ನಂದಿದುರ್ಗ ಮತ್ತು ಗೋಲ್‌ಕೊಂಡ ಗಣಿಗಳನ್ನೂ ಪ್ರತ್ಯೇಕ ಘಟಕಗಳೆಂದು ಪರಿಗಣಿಸಲಾಯಿತು. ಹಲವು ವರ್ಷ ಕೆಲಸಮಾಡಿದ ಉರಿಗಾಂ ಗಣಿಯನ್ನು ಸಂಪೂರ್ಣವಾಗಿ ಮುಚ್ಚಲಾಯಿತು. ಈ ಗಣಿಗಳಲ್ಲೆಲ್ಲ ಛಾಂಪಿಯನ್ ರೀಫ್‌ನ ಗೀಫರ್ಡ್ ಸುರಂಗ ಪ್ರಪಂಚದಲ್ಲೇ ಆಳವಾದುದೆಂದು ತಿಳಿದುಬಂದಿದೆ. ಇದರ ಆಳ 14,000'. ಮೈಸೂರು ಗಣಿಯ ಎಡ್ಗರ್ ಸುರಂಗ, ಛಾಂಪಿಯನ್‌ನ ಬುಲನ್ಸ್ ಸುರಂಗ ಮತ್ತು ನಂದಿದುರ್ಗದ ಹೆನ್ರಿ ಸುರಂಗ - ಇವು ಕೆ.ಜಿ.ಎಫ್.ನಲ್ಲಿರುವ ಇನ್ನಿತರ ಸುರಂಗಗಳು. ಸುರಂಗದ್ವಾರ ಅಡ್ಡಕೊಯ್ತದಲ್ಲಿ ವೃತ್ತಾಕಾರವಾಗಿ ಅಡ್ಡಳತೆ 18' ಗಳಿರುತ್ತವೆ. ವಿದ್ಯುಚ್ಛಕ್ತಿಯಿಂದ ಚಲಿಸುವ ಡುರಾಲ್ಯೂಮಿನ್ ಬೋನು ಪ್ರತಿ ಸುರಂಗದ್ವಾರದಲ್ಲಿ ಎರಡು ಇದ್ದು ಜನರನ್ನು ಮತ್ತು ಸಾಮಗ್ರಿಗಳನ್ನು ಗಂಟೆಗೆ 48ಕಿಮೀ ವೇಗದಲ್ಲಿ ಸಾಗಿಸುವ ಸಾಮರ್ಥ್ಯ ಉಳ್ಳವುಗಳಿವು. ಸುರಂಗದ್ವಾರದ ಮಧ್ಯದ ಒಂದೊಂದು ಗೊತ್ತಾದ ಮಟ್ಟದಲ್ಲಿ ಸಮತಲವಾಗಿ ಸುರಂಗಗಳನ್ನು ತೋಡಿ ಅಲ್ಲಿಂದ ಮೇಲಿರುವಂತೆ ಷಾಫ್ಟನ್ನು ಸ್ಥಾಪಿಸಿ ಲಂಬವಾಗಿ ಸುರಂಗಗಳನ್ನು ತೋಡಲಾಗಿತ್ತು. ಸ್ಥೂಲಾಕಾರದ ಉಕ್ಕಿನ ಉಂಗುರಗಳನ್ನು ಸುರಂಗಗಳಿಗೆ ಆಧಾರಸ್ತಂಭವಾಗಿ ಮೂರು ಅಂಗುಲಗಳ ಅಂತರದಲ್ಲಿ ನಿರಂತರವಾಗಿ ಜೋಡಿಸಲಾಗಿತ್ತು. ಭೂಕುಸಿತದ ತೊಂದರೆಯನ್ನು ತಪ್ಪಿಸಲು ಈ ಕಾರ್ಯವನ್ನು ಕೈಗೊಳ್ಳಲಾಗಿತ್ತು.

ಗುಣಿ ತೋಡಿದಾಗ ಬರುವ ಭೂಜಲವನ್ನು ಆ ಮಟ್ಟದಲ್ಲಿ ಪಾಳುಬಿದ್ದ ಸುರಂಗಗಳಲ್ಲಿ ಕಟ್ಟೆಗಳನ್ನು ಕಟ್ಟಿ ವಿವಿಧ ಗಾತ್ರದ ಪೈಪ್‌ಗಳ ಮೂಲಕ ಹಾಯಿಸಿ ತುಂಬುವ ವ್ಯವಸ್ಥೆಯಿತ್ತು. ತಳದಿಂದ ಮೇಲಕ್ಕೆ ಇಂಥ ಹಲವಾರು ಕಟ್ಟೆಗಳನ್ನು ಕಟ್ಟಿ ಪೈಪ್‌ಗಳ ಮೂಲಕ ಒಂದಕ್ಕೊಂದು ಸಂಬಂಧ ಏರ್ಪಡಿಸಿ ಭೂಜಲವನ್ನು ಮೇಲಕ್ಕೆ ಸಾಗಿಸಲಾಗುತ್ತಿತ್ತು. ಈ ಭೂಜಲವನ್ನು ಕಂಡಿ ಕೊರೆಯುವುದಕ್ಕೂ ಅದುರನ್ನು ತೊಳೆಯುವುದಕ್ಕೂ ಇನ್ನಿತರ ಉದ್ದೇಶಗಳಿಗೂ ಉಪಯೋಗಿಸಲಾಗುತ್ತಿತ್ತು.

ಜೋಡಿಸಲಾಯಿತು. ಸಣ್ಣ ಭೂಕಂಪಗಳಂತೆ ಒತ್ತಡದ ವ್ಯತ್ಯಾಸದಿಂದ ಸಂಭವಿಸುವ ಶಿಲೆಸಿಡಿತ ಬಹಳ ಅಪಾಯಕರವಾದುದು. ಇದು ಪ್ರಾಣಹಾನಿ ಉಂಟುಮಾಡುವುದಲ್ಲದೆ ಮೇಲಿನ ಕಟ್ಟಡಗಳಿಗೆ ನಷ್ಟವನ್ನುಂಟು ಮಾಡುವಂಥದು. ಇಲ್ಲಿನ ಸೀಸ್‌ಮಾಲಜಿ ಭೂಕಂಪನ ಪ್ರಯೋಗ ಶಾಲೆ ಈ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನು ನಡೆಸಿದೆ.

ಇಲ್ಲಿಗೆ 135ಕಿಮೀ ದೂರವಿರುವ ಶಿವಸಮುದ್ರ ವಿದ್ಯುತ್ ಕೇಂದ್ರದಿಂದ ಗಣಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿದೆ. ಈಚೆಗೆ ಚಿನ್ನದ ಗಣಿ ಉದ್ಯಮವನ್ನು ಕೊನೆಗೊಳಿಸಲಾಗಿದೆ. ಈ ನಷ್ಟದಲ್ಲಿ ನಡೆಯುವಂತಾದದು ಈ ಗಣಿ ಉದ್ಯಮದ ಸ್ಥಗಿತತೆಗೆ ಮುಖ್ಯ ಕಾರಣ. ಇದರ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಮತ್ತು ಖಾಸಗಿ ಮಟ್ಟದಲ್ಲಿ ಪ್ರಯತ್ನಗಳು ನಡೆಯುತ್ತಿವೆ.

ಕೋಲಾರ ಚಿನ್ನದ ಗಣಿ ನಗರದಲ್ಲಿ ಸರ್ಕಾರದ ಒಡೆತನದಲ್ಲಿ ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್ ಎಂಬ ಸಂಸ್ಥೆಯೊಂದು ಸ್ಥಾಪಿತವಾಗಿದೆ. ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ರಕ್ಷಣೋತ್ಪಾದನ ಇಲಾಖೆಯ ಆಡಳಿತ ನಿಯಂತ್ರಣಕ್ಕೊಳಪಟ್ಟಿರುವ ಈ ಸಂಸ್ಥೆ ಮಣ್ಣನ್ನು ಅಗೆದು ತಳ್ಳುವ, ಸಾಗಿಸುವ, ಹರಗುವ ಬೃಹತ್ ಯಂತ್ರಗಳ ತಯಾರಿಕೆಯಲ್ಲಿ ತೊಡಗಿದೆ. (ಎಂ.ಎಸ್.ಕೆ.)

**ಕೋಳಿ ಅಂಕ :** ತುಳುನಾಡಿನಲ್ಲಿ ಪ್ರಚಲಿತವಾಗಿರುವ ಮನರಂಜನೆಯ ಜನಪದ ಆಟಗಳಲ್ಲಿ ಒಂದು. ಇದು ಹೆಚ್ಚಾಗಿ ಹಬ್ಬ, ಜಾತ್ರೆ, ನೇಮ, ಕಂಬಳ ಕಳೆದ ಕೂಡಲೇ ಜರುಗುವುದು ಸಂಪ್ರದಾಯ. ಮೂರು ಅಥವಾ ಐದು ದಿನ ನಡೆಯುವುದು ವಾಡಿಕೆ. ಸಾಮಾನ್ಯವಾಗಿ ಮಧ್ಯಾಹ್ನದಿಂದ ಮಧ್ಯರಾತ್ರಿಯ ತನಕ ನಡೆಯುವ ಕೋಳಿ ಅಂಕದ ಸ್ಥಳ ಹೆಚ್ಚಾಗಿ ವಿಶಾಲವಾದ ಬಯಲು, ಇಲ್ಲವೇ ಬೆಳೆ ಕೊಯ್ದ ಗದ್ದೆಯಾಗಿರುತ್ತದೆ.

ಹುಂಜಗಳ ವರ್ಗೀಕರಣದಲ್ಲಿ ಅವುಗಳ ಬಣ್ಣಕ್ಕೆ ಪ್ರಾಧಾನ್ಯ. ಬೊಳ್ಳೆ, ಕರ್ಬೊಳ್ಳೆ, ಕೆಂಪೆ, ಮಂಜಲೆ, ಪಂಚಣಿ, ಕಕ್ಕೆ, ನೀಲೆ, ಕುಪ್ಪುಳೆ, ಗರುಡ, ಬೂದಿ, ಕರಿನೀಲೆ, ಕೆಮ್ಮೈರೆ, ಗಿಡಿಯೆ (ಕಪ್ಪು, ಕೆಂಪು, ಬಿಳಿ, ಕೆಮ್ಮೈರ, ಬೂದಿ), ಮೈಪ್ಪೆ (ಬಿಳಿ, ಕಪ್ಪು, ಹಳದಿ), ಉರಿಯೆ, (ಕಪ್ಪು ಕೆಂಪು), ಬೂದಿ, ಕಾವೆ (ಗರುಡ, ಕೆಂಪು, ಕಪ್ಪು), ಪಂಬದ (ಕಾಲಿನಲ್ಲಿ ಗರಿ ಇರುವುದು), ಗಡ್ಡಮೆ (ಗಡ್ಡದಲ್ಲಿ ಗರಿ ಇರುವುದು). ಕೊಟ್ಟುಚಾಲೆ (ಜುಟ್ಟಿನ ಬುಡದಲ್ಲಿ ಕೆಲವು ಗರಿಗಳು ಎತ್ತರಕ್ಕಿರುವುದು) ಮೊದಲಾದ ನಾನಾ ಪ್ರಭೇದಗಳಿವೆ. ದೊಡ್ಡ ಜಾತಿಯ ಹುಂಜಗಳನ್ನು ಪೈಕಾ ಎಂದೂ ಸಣ್ಣ ಜಾತಿಯವನ್ನು ಜೇಕಾ ಎಂದೂ ಕರೆಯುತ್ತಾರೆ. ಹುಂಜಗಳ ಗರಿಗಳ ಆಕಾರಕ್ಕೆ ಅನುಗುಣವಾಗಿ ಮುಖ್ಯವಾಗಿ ಜಳ್ಳಿ ಮತ್ತು ಪೆರಡಿಂಗ ಎಂಬ ಎರಡು ವರ್ಗಗಳಿವೆ. ಜಳ್ಳಿಯ ಗರಿಗಳು ಉದ್ದವಾಗಿ ಮೊನಚಾಗಿರುತ್ತವೆ. ಪೆರಡಿಂಗದ ಗರಿಗಳು ಹೇಂಟೆಯ ಗರಿಗಳಂತೆ ಉರುಟಾಗಿರುತ್ತವೆ. ಆಕಾರಕ್ಕೆ ಅನುಸಾರವಾಗಿ ಹುಂಜಗಳ ಜುಟ್ಟುಗಳಿಗೆ ಹಾಗಲಕಾಯಿ ಜುಟ್ಟು, ಎಲೆ ಜುಟ್ಟು, ಸಹಸ್ರಜುಟ್ಟು, ಸುತ್ತಿಗೆ ಅಥ'ವಾ ಮುಂಡಾಸು ಜುಟ್ಟು, ರೂಪಾಯಿ ಜುಟ್ಟು ಮುಂತಾದ ಹೆಸರುಗಳಿವೆ.

ಸಮಗಾತ್ರದ ಎರಡು ಹುಂಜಗಳು ಕಾಳಗಕ್ಕೆ ಸಿದ್ಧವಾಗುವಂತೆ ಕೋಳಿಗಳ ಒಡೆಯರು ಅವನ್ನು ಕೆರಳಿಸಿ, ಒಂದರ ಮೇಲೊಂದನ್ನು ಛೂ ಬಿಡುತ್ತಾರೆ. ಈ ರೀತಿ ಎರಡು ಕೋಳಿಗಳು ಜಗಳವಾಡುವಾಗ ಅವುಗಳಲ್ಲಿ ಕೊಕ್ಕೆಯಾಗಿರುವ ಇಟ್ಟಿಮುಳ್ಳು - ಇವು ಇತರ ಎರಡು ಬಾಳುಗಳು. ಕೋಳಿಯ ಬಲಗಾಲಿನ ಹೆಬ್ಬೆರಳಿನ ಬಳಿ ಯಾವಾಗಲೂ ಹಿಮ್ಮುಖವಾಗಿ ಬಾಳನ್ನು ಕಟ್ಟುತ್ತಾರೆ. ಬಡೆಕ್ಕಾಯಿ ಬಾಳಿಗೆ ಅರಿವೆ ಸುತ್ತಿ ದಾರ ಕಟ್ಟುತ್ತಾರೆ. ತೆಸ್ಕಾಯಿ ಬಾಳಿಗೆ ಅರಿವೆಯ ಅಗತ್ಯವಿಲ್ಲ. ಬಾಳುಗಳನ್ನು ಇಡುವ ಚೀಲ ಬಾಳಸೂಡಿ. ಕಾಳಗದಲ್ಲಿ ಸಮಜೋಡಿಯಾದ ಹುಂಜಗಳನ್ನೇ ಆರಿಸಿ ಅವುಗಳ ಕಾಲಿಗೆ ಮೇಲೆ ತಿಳಿಸಿದಂತೆ ಬಾಳು ಕಟ್ಟಲಾಗುತ್ತದೆ. ಅವು ಗರಿ ಕೆದರಿಸಿ, ಬಾಲ ಹಾರಿಸಿ, ಬಹಳ ಹುಮ್ಮಸ್ಸಿನಿಂದ ಕಾದಾಡುತ್ತವೆ. ಆಗ ಒಂದು ಕೋಳಿಯ ಕಾಲಿಗೆ ಹಿಮ್ಮುಖವಾಗಿ ಕಟ್ಟಿದ್ದ ಬಾಳು ಎದುರುಕೋಳಿಯನ್ನು ಇರಿಯುತ್ತದೆ. ಎದುರುಕೋಳಿಯೂ ಸಾಧಾರಣವಾದ ಗಾಯಗಳ ನೋವನ್ನು ಲೆಕ್ಕಿಸದೆ ವೀರಾವೇಶದಿಂದ ಕಾದಾಡುತ್ತದೆ. ಕೋಳಿ ಅಂಕದಲ್ಲಿ ಗಾಯಗೊಂಡ ಕೋಳಿಗಳಿಗೆ ಶುಶ್ರೂಷೆಗಳು ಜರುಗುತ್ತವೆ.



ಕೋಳಿ ಪಂದ್ಯದಲ್ಲಿ ಎರಡು ವಿಧ. ಸಮ ಮತ್ತು ಓಡಿ. ಸಮ ಎಂದರೆ ಕಾಳಗಕ್ಕೆ ಬಿಟ್ಟ ಎರಡು ಕೋಳಿಗಳಲ್ಲಿ ಯಾವುದಾದರೊಂದು ಸತ್ತರೆ ಅಥವಾ ಸೋತು ಓಡಿ ಹೋದರೆ, ಅದು ಗೆದ್ದ ಕೋಳಿಯವನಿಗೆ ದಕ್ಕುತ್ತದೆ. ಓಡಿಯಾದರೆ ಎದುರು ಕೋಳಿ, ಸತ್ತರೆ ಮಾತ್ರ ಅದು ಗೆದ್ದ ಕೋಳಿಯವನಿಗೆ ದೊರೆಯುತ್ತದೆಯೇ ಹೊರತು ಓಡಿಹೋದರೆ ಲಭಿಸುವುದಿಲ್ಲ. ಓಡಿಹೋದ ಅಥವಾ ಸತ್ತಕೋಳಿಯನ್ನು ಒಟ್ಟೆ ಎಂದೂ ಗೆದ್ದುದನ್ನು ಬಂಟ ಎಂದೂ ಕರೆಯುತ್ತಾರೆ. ಸೋಡ್ತಿ ಅಂಕದಲ್ಲಿ ನಿರ್ದಿಷ್ಟ ಸಂಖ್ಯೆಯ ಕೋಳಿಗಳನ್ನು ಕಾಳಗಕ್ಕೆ ಬಿಟ್ಟು, ಗೆದ್ದವುಗಳಿಗೆ ಬಹುಮಾನ ಕೊಡುತ್ತಾರೆ. ಅಂಕದ ಕೋಳಿಗಳ ಲಕ್ಷಣಗಳನ್ನೊಳಗೊಂಡ ಪಂಚಾಂಗವೇ ಕುಕ್ಕುಟ ಪಂಚಾಂಗ. ಇದು ಕೋಳಿ ಕಟ್ಟುವವರಿಗೆ ಉಪಯುಕ್ತ ಕೈಪಿಡಿ. ಕೋಳಿ ಅಂಕ ಈಗ ಹಣವನ್ನು ಬಾಜಿ ಕಟ್ಟಿ ಆಡುವ ಜೂಜೂ ಆಗಿ ಪರಿವರ್ತನೆ ಹೊಂದುತ್ತಿದೆ. (ಬಿ.ಎ.ವಿ.ಆರ್.)

**ಕೋಳಿವಾಡ :** ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಹುಬ್ಬಳಿಯಿಂದ ಪೂರ್ವಕ್ಕೆ 33ಕಿಮೀ ದೂರದಲ್ಲಿರುವ ಒಂದು ಗ್ರಾಮ.

ಜೈನ, ಹಿಂದು ಮತ್ತು ಬೌದ್ಧ ಧಾರ್ಮಿಕ ಅವಶೇಷಗಳು ಇಲ್ಲಿ ದೊರಕಿವೆ. ಇಲ್ಲಿಯ ಗ್ರಾಮದ ಹೊರಗೆ ಕಲಮೇಶ್ವರ ದೇವಾಲಯವಿದೆ. ಅದರ ಪರಿಸರದಲ್ಲಿ ಬೌದ್ಧ ತಾರಾವಿಗ್ರಹವೊಂದು ದೊರಕಿದ್ದು ಅದರ ಪೀಠದ ಮೇಲೆ ಬೌದ್ಧಶಾಸನವಿದೆ. ಹಳ್ಳಿಯಲ್ಲಿ ಸು.14-15ನೆಯ

ಲಾಭದಾಯಕವಾಗಿರುವುದರಿಂದ ಇದಕ್ಕಾಗಿ ಫಾರ್ಮ್‌ಗಳನ್ನು ಸ್ಥಾಪಿಸಿ ಪಟ್ಟಣ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇದನ್ನೇ ಸ್ವತಂತ್ರ ಉದ್ಯಮವಾಗಿ ಕೈಗೊಳ್ಳುವುದೂ ಹೆಚ್ಚುತ್ತಿದೆ. ಗ್ರಾಮಗಳಲ್ಲಿ ಕೋಳಿಸಾಕಣೆ ಹಳೆಯ ಪದ್ಧತಿಯಲ್ಲಿ ನಡೆದರೆ ಫಾರ್ಮ್‌ಗಳಲ್ಲಿ ಸುಧಾರಿತ ಪದ್ಧತಿಗಳು ರೂಢಿಯಲ್ಲಿವೆ.

ಗ್ರಾಮಗಳಲ್ಲಿ ಒಂದು ಕುಟುಂಬ ಸರಾಸರಿ 10 ರಿಂದ 12 ಕೋಳಿಗಳನ್ನು ಸಾಕಬಹುದು. ಇಲ್ಲಿ ಕೋಳಿಗಳು ಹಗಲೆಲ್ಲ ಗದ್ದೆ, ತೋಟ, ಹೊಲ ಮತ್ತು ತಿಪ್ಪೆಗಳಲ್ಲಿ ಅಲೆದು ಆಹಾರ ಸಂಪಾದಿಸಿ ರಾತ್ರಿ ಗೂಡು ಸೇರುತ್ತವೆ. ಹೀಗೆ ಸಾಕುವುದರಿಂದ ಕೋಳಿಗಳ ಉತ್ಪನ್ನ ಕಡಿಮೆ ಇರುವುದರ ಜೊತೆಗೆ, ಇದಕ್ಕೆ ಅನೇಕ ಬಗೆಯ ರೋಗರುಜಿನಗಳು ಬರುವ ಸಂಭವಗಳೂ ಉಂಟು.

ಕೋಳಿ ಮಾಂಸ ಮತ್ತು ಮೊಟ್ಟೆ ಪುಷ್ಟಿಕರ ಆಹಾರ ವಾಗಿರುವುದಲ್ಲದೆ, ಕೋಳಿಗಳಿಂದ ಒಳ್ಳೆಯ ಗೊಬ್ಬರ ಸಹ ದೊರಕುತ್ತದೆ. ಈ ದೃಷ್ಟಿಯಿಂದ ಅಧಿಕ ಆಹಾರ ಉತ್ಪಾದನೆಯ ಯೋಜನೆಯ ಅಂಗವಾಗಿ ಕೋಳಿಸಾಕಣೆಯನ್ನು ಪ್ರೋತ್ಸಾಹಿಸಲು ಹಲವು ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಕೋಳಿ ಫಾರ್ಮ್‌ಗಳನ್ನು ಸ್ಥಾಪಿಸಲು ಸಾಲ ಕೊಡುವುದು. ಮೊದಲ ಐದು ವರ್ಷಗಳ ಆದಾಯದ ಮೇಲೆ ತೆರಿಗೆ ವಿಧಿಸದಿರುವುದು. ಸಾಕುವವರಿಗೆ ಹೆಚ್ಚು ಮೊಟ್ಟೆ ಮಾಂಸ ದೊರಕಿಸುವ ಉತ್ತಮ ತಳಿಗಳನ್ನು ಒದಗಿಸುವುದು ಹಾಗೂ ವೈದ್ಯಕೀಯ ಸಹಾಯ ದೊರಕಿಸಿಕೊಡುವುದು ಈ ಕಾರ್ಯಕ್ರಮಗಳಲ್ಲಿ ಹಲವು.

ಕರ್ನಾಟಕದಲ್ಲಿ ಒಂದು ಕೋಳಿಸಾಕಣೆ ಕೇಂದ್ರವನ್ನು ಸರ್ಕಾರದವರು ಬೆಂಗಳೂರು ಜಿಲ್ಲೆ ಹೆಸರಘಟ್ಟದ ಬಳಿ 1948ರಲ್ಲಿ ಸ್ಥಾಪಿಸಿದರು. ಕೋಳಿಗಳ ಅಭಿವೃದ್ಧಿಗಾಗಿ ರೈತರಿಗೆ ಸುಧಾರಿತ ತಳಿ ಕೋಳಿಗಳನ್ನು ಒದಗಿಸುವುದು ಈ ಕೇಂದ್ರದ ಉದ್ದೇಶ. ಅಲ್ಲಿಂದೀಚೆಗೆ ಯೋಜನೆಗಳ ಅಂಗವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಈ ಕೇಂದ್ರಗಳು ರೈತರಿಗೆ ಸುಧಾರಿತ ತಳಿ ಕೋಳಿಗಳನ್ನು ಒದಗಿಸುವುದರ ಜೊತೆಗೆ, ಕೋಳಿಸಾಕಣೆ ಕೇಂದ್ರಗಳನ್ನು ರೈತರು ಪ್ರಾರಂಭಿಸಲು ಬೇಕಾಗುವ ತಿಳಿವಳಿಕೆ ಮತ್ತು ಸಹಾಯಗಳನ್ನು ನೀಡುತ್ತವೆ. ಹೆಸರಘಟ್ಟದ ಕೋಳಿ ಸಾಕಣೆ ಕೇಂದ್ರ ರಾಜ್ಯಮಟ್ಟದ್ದು. ಮಳವಳ್ಳಿ, ಗುಂಡ್ಲುಪೇಟೆ, ಹಾವೇರಿ, ಬಿಜಾಪುರ, ಗುಲ್ಬರ್ಗ, ಬೀದರ್, ಗಂಗಾವತಿ, ಮಂಗಳೂರು, ಕೊಡಿಗೆ, ದಾವಣಗೆರೆ ಮತ್ತು ಕೋಲಾರಗಳಲ್ಲಿ ಪ್ರಾದೇಶಿಕ ಕ್ಷೇತ್ರಗಳಿವೆ. ಕೋಳಿ ವಿಸ್ತರಣ ಕೇಂದ್ರಗಳು ಕುಮುಟ, ಬೆಳಗಾಂವಿ, ಕುರಿಕುಪ್ಪೆ, ರಾಯಚೂರು, ಪೊನ್ನಂಪೇಟೆ, ತುಮಕೂರು, ಹಾಸನ, ಕುಂದಾಪುರ, ತಿರುಮಕೂಡಲು ನರಸೀಪುರ, ಚಿಕ್ಕಮಗಳೂರು, ಶಿವಮೊಗ್ಗ, ಹೊಳೆನರಸೀಪುರ ಮತ್ತು ರಾಮನಗರಗಳಲ್ಲಿವೆ.

ಕೋಳಿ ಮತ್ತು ಮೊಟ್ಟೆಗಳ ಮಾರಾಟ ಕೇಂದ್ರಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಬೆಂಗಳೂರು, ಮೈಸೂರು, ಧಾರವಾಡ ಮತ್ತು ಗುಲ್ಬರ್ಗಗಳಲ್ಲಿ ಸ್ಥಾಪಿಸಲಾಗಿದೆ. ಇದನ್ನು ಕರ್ನಾಟಕ ಸಹಕಾರಿ ಕೋಳಿ ಸಾಕಣೆ ಮಹಾ ಮಂಡಲದಲ್ಲಿ ವಿಲೀನಗೊಳಿಸಲಾಗಿದೆ. ರಾಜ್ಯದಲ್ಲಿ ಈ ಮಹಾಮಂಡಲದ ಅಡಿಯಲ್ಲಿ 44 ಪ್ರಾಥಮಿಕ ಸಹಕಾರಿ ಸಂಘಗಳು ಕಾರ್ಯನಿರತವಾಗಿವೆ. ಒದಗಿಸುವುದು ಮತ್ತು ಇತರರು ತಂದುಕೊಡುವ ಮೊಟ್ಟೆಗಳನ್ನು ಮಾರಿಮಾಡಿಕೊಡುವ ವ್ಯವಸ್ಥೆಯೂ ಇದೆ.

ಮೇಲಿನ ಸಂಸ್ಥೆಗಳಲ್ಲದೆ ಮೈಸೂರು, ಬೆಂಗಳೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೋಳಿ ಅಭಿವೃದ್ಧಿ ಯೋಜನೆಗಳು ಕಾರ್ಯಗತವಾಗಿವೆ. ವಿಶ್ವ ಆಹಾರ ಯೋಜನೆಯ ಅಂಗವಾಗಿ ಈ ಜಿಲ್ಲೆಗಳಲ್ಲಿ ಸಮತೂಕದ ಕೋಳಿ ಆಹಾರ ತಯಾರಿಸಿ ಸುಲಭ ದರದಲ್ಲಿ ರೈತರಿಗೆ ಮಾರಲು ಮುಸುಕಿನ ಜೋಳದ ಸರಬರಾಜಾಗುತ್ತಿದೆ. ಕಾರ್ಯಗತ ಪೋಷಕಾಂಶ ಕಾರ್ಯಕ್ರಮದಲ್ಲಿ ಕೋಳಿ ಉತ್ಪಾದನೆ ಯೋಜನೆ ಮುಖ್ಯವಾದದ್ದು. ಇದನ್ನು ತಾಲ್ಲೂಕು ಮಟ್ಟದ ಕ್ಷೇತ್ರಗಳಲ್ಲಿ ಆಚರಣೆಗೆ ತರಲಾಗಿದೆ. ಪ್ರತಿ ತಾಲ್ಲೂಕಿನಲ್ಲೂ 10-15 ಕೋಳಿ ಕೇಂದ್ರಗಳನ್ನು ಪ್ರಾರಂಭಿಸಲು ಅಭಿವೃದ್ಧಿ ಕ್ಷೇತ್ರಗಳಿಗೆ ಸಹಾಯ ದೊರಕುತ್ತದೆ. ಪ್ರತಿ ಕೇಂದ್ರಕ್ಕೂ ಕೋಳಿ ಮನೆಗಳು, ಕೋಳಿ ಮತ್ತು ಇತರ ಸಲಕರಣೆಗಳನ್ನು ಕೊಳ್ಳಲು ಸಹಾಯಧನವನ್ನು ಕೋಳಿಮೊಟ್ಟೆ ಇಡಲು ಪ್ರಾರಂಭಿಸುವ ಹಂತದವರೆಗೆ ನೀಡಲಾಗುವುದು.

ಕೋಳಿ ಆರೋಗ್ಯ ನೋಡಿಕೊಳ್ಳಲು ರಾಜ್ಯಸರ್ಕಾರದ ಪಶುಪಾಲನೆ ಮತ್ತು ಪಶುವಿಜ್ಞಾನ ಇಲಾಖೆ ಪಶುವೈದ್ಯ ಆಸ್ಪತ್ರೆಗಳನ್ನು ನಡೆಸುತ್ತಿದೆ. ಜೊತೆಗೆ ಕೋಳಿ ಸಾಕಣೆಕೆ ಅಭಿವೃದ್ಧಿಗಾಗಿ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆ, ಮೈಸೂರು ಜಿಲ್ಲೆಯ ಕೃಷಿ ಅಭಿವೃದ್ಧಿ ಕಾರ್ಮಿಕ ಮತ್ತು ರೈತ ಸಹಾಯ ಸಂಸ್ಥೆ ಇವು ಸಹಾಯ ಮಾಡುತ್ತಿವೆ. ಕೋಳಿಸಾಕಣೆ ಕೇಂದ್ರಗಳನ್ನು ಸ್ಥಾಪಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಕೆಲವು ಖಾಸಗಿ ಸಂಸ್ಥೆಗಳೂ ಸಾಲ ಕೊಡುತ್ತವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದಿನಿಂದಲೂ ಬಳಕೆಯಲ್ಲಿರುವ ನಾಡುಕೋಳಿಗಳಲ್ಲದೆ ಕರ್ನಾಟಕದಲ್ಲಿ ಇರುವ ಮುಖ್ಯ ಕೋಳಿ ತಳಿಗಳೆಂದರೆ ಚಳಿ ಮತ್ತು ತೇವವನ್ನು ತಡೆಯುವ ಶಕ್ತಿಯುಳ್ಳ ಅಮೆರಿಕ ಮೂಲದ ರ್‍ಹೋಡ್ ಐಲೆಂಡ್ ರೆಡ್, ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಸಾಕಲು ಉಪಯುಕ್ತವಾದ ಇಂಗ್ಲಿಷ್ ಮೂಲದ ಆಸ್ಟ್ರಲಾರ್ಪ್, ಹೆಚ್ಚು ತೇವವಿಲ್ಲದ ಪ್ರದೇಶಗಳಿಗೆ ಸೂಕ್ತವಾದ ಮೆಡಿಟರೇನಿಯನ್ ಮೂಲದ ಲೆಗ್‌ಹಾರ್ನ್ ಮತ್ತು ಏಷ್ಯ ಮೂಲದ ಬ್ರಾಹ್ಮ, ಪ್ಲಿಮತ್, ರಾಕ್, ನ್ಯೂ ಹ್ಯಾಂಪ್‌ಷೈರ್ ಎಂಬ ಪಾಶ್ಚಾತ್ಯ ತಳಿಗಳು ದೇಶೀ ಕೋಳಿಗಳು ಹೆಚ್ಚು ರೋಗನಿರೋಧಕ ಸಾಮರ್ಥ್ಯ ಹೊಂದಿದ್ದು ದೇಶದ ವಿವಿಧ ಸನ್ನಿವೇಶಗಳಲ್ಲಿ ಬದುಕಬಲ್ಲವು. ಇವುಗಳಲ್ಲಿ ಮುಖ್ಯವಾದುವು ನಾಡುಕೋಳಿ, ಕಾಶ್ಮೀರಿ, ತಿರ್ಶಿ, ಆಸೀಲ್, ಬಸರಾ, ಚಿತ್ತಗಾಂಗ್, ತೆಲ್ಲಿಚೇರಿ, ಡೋಂಕಿ, ಕಾಳಹಸ್ತಿ ಮುಂತಾದುವು. ಈಗ ಮಾರುಕಟ್ಟೆಗೆ ಮೊಟ್ಟೆಗಾಗಿ ಮತ್ತು ಮಾಂಸಕ್ಕಾಗಿ ಸಾಕಲು ಹೈಬ್ರಿಡ್ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹೈಬ್ರಿಡ್ ತಳಿಗಳು ಒಂದು ವರ್ಷದಲ್ಲಿ ಸರಾಸರಿ 220-280 ಮೊಟ್ಟೆಗಳನ್ನು ಕೊಡುತ್ತವೆ. 20-24 ವಾರ ವಯಸ್ಸಿಗೆ ಇವು ಮೊಟ್ಟೆ ಇಡಲು ಪ್ರಾರಂಭಿಸುತ್ತವೆ. ಹೈಬ್ರಿಡ್ ತಳಿಗಳಲ್ಲಿ ಹೈಲೈನ್, ರಾಣಿ ಶೇವರ್ಸ್, ಆರ್‌ಬರ್ ಏಕರ್ಸ್, ಕೀಸ್ಟೋನ್, ಬಾಬ್‌ಕಾಕ್, ಪೂನಾ ಪರ್ಲ್, ಥಾರನ್‌ಬರ್-808, ಹಿಸೆಕ್ಸ್, ಮೈಚಿಕ್ ಮತ್ತು ಯುಬ್ರೊಗಳು ಮುಖ್ಯವಾದುವು.

ಕೋಳಿಸಾಕಣೆಯಲ್ಲಿ ಆಸಕ್ತರಾದವರಿಗೆ ರಾಜ್ಯಸರ್ಕಾರದ ಪಶುಪಾಲನೆ ಇಲಾಖೆ, ಕೋಳಿ ಸಾಕಣೆಕೆ ಮುಖ್ಯ ಕ್ಷೇತ್ರವಾದ ಹೆಸರಘಟ್ಟ ಮತ್ತು

ದೇಶನೂರು ಗ್ರಾಮದಲ್ಲಿ 1938 ಸೆಪ್ಟೆಂಬರ್ 21ರಂದು ಜನಿಸಿದರು. ಸ್ವಾತಂತ್ರ್ಯ ಹೋರಾಟದ ಪ್ರಖರ ಪರಿಸರದಲ್ಲಿ ಬಾಲ್ಯ ವನ್ನು ಕಳೆದ ಇವರು ತಾಂತ್ರಿಕ ಶಿಕ್ಷಣದತ್ತ ಒಲವು ತೋರಿಸಿ ಬಿ.ಇ. ಪದವಿ ಪಡೆದರು. ಮುಂದೆ ಭಾರತೀಯ ನೌಕಾಪಡೆ ಸೇರಿ ಮೆರೀನ್ ಎಂಜಿನಿಯರಿಂಗ್‌ನಲ್ಲಿ ವಿಶೇಷ, ಪರಿಣತಿ ಹೊಂದಿದರು. ಸಬ್ ಲೆಫ್ಟಿನೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದ ಅವಧಿಯಲ್ಲಿ ವಿವಿಧ ದೇಶಗಳಿಗೆ ಭೇಟಿ ನೀಡಿದರು. 1971ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಪಾಲ್ಗೊಂಡ ಹೆಗ್ಗಳಿಕೆ ಇವರದು.

ಭಾರತೀಯ ಸೇನಾ ಸೇವೆಯಿಂದ ಮುಕ್ತರಾಗಿ ಬಂದ ಮೇಲೆ ಪುಣೆಯಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಸೇವೆಯಲ್ಲಿದ್ದರು. ಶಿಸ್ತಿನ ಸೇವಾ ಕ್ಷೇತ್ರದಲ್ಲೂ ಇವರು ಆಂತರ್ಯವಾಗಿ ಜನಸೇವೆ ಮತ್ತು ದೇಶದ



ಆಗುಹೋಗುಗಳ ಬಗ್ಗೆ ಕಾಳಜಿ ಉಳ್ಳವರಾಗಿದ್ದರು. ಕೌಜಲಗಿ ಮನೆತನ ರಾಜಕೀಯ ಪರಂಪರೆಯನ್ನು ಅಂತರ್ಗತಗೊಳಿಸಿಕೊಂಡು ಬೆಳೆದಿರುವಂಥದ್ದು. ಹಲವು ರಾಜಕೀಯ ನಾಯಕರನ್ನು ರಾಜ್ಯಕ್ಕೆ ನೀಡಿದೆ. ಕಾಂಗ್ರೆಸ್ ಪಕ್ಷ ಸೇರುವ ಮೂಲಕ ಇವರ ರಾಜಕೀಯ ಪ್ರವೇಶ ವಾಯಿತು. ಆರಂಭದಲ್ಲಿ ಬೆಳಗಾಂವಿ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದರು. ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್ ಪಕ್ಷದ ವತಿಯಿಂದ ಅರಭಾವಿ ಕ್ಷೇತ್ರದಿಂದ 1972 ಮತ್ತು 1978ರ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿ ವಿಜೇತರಾದರು. ಅನಂತರ 7ನೆಯ ವಿಧಾನಸಭೆಗೂ 1983ರಲ್ಲಿ ಅದೇ ಪಕ್ಷದಿಂದ ಪುನರಾಯ್ಕೆಯಾದರು. ಇದು ಇವರ ಜನಪ್ರಿಯತೆಗೆ ಹಚ್ಚಿದ ಒರೆಗಲ್ಲಾಗಿದೆ. 1989ರ ಚುನಾವಣೆಯಲ್ಲಿ ಪುನಃ ಆರಿಸಿ ಬಂದ ಇವರು ವಿಧಾನ ಸಭೆಯ ಅಧ್ಯಕ್ಷರಾಗಿ 15-2-93 ರಿಂದ 24-10-99 ರವರೆಗೆ ಸೇವೆ ಸಲ್ಲಿಸಿದ್ದಾರೆ. ಇವರು ವಿವಿಧ ಅವಧಿಯಲ್ಲಿ ಬೇರೆ ಬೇರೆ ಸಚಿವ ಖಾತೆಗಳನ್ನು ನಿರ್ವಹಿಸಿದರು. ಯುವಜನಸೇವೆ ಸಣ್ಣ ಕೈಗಾರಿಕೆ, ರೇಷ್ಮೆ, ಕುಟುಂಬ ಕಲ್ಯಾಣ ಮೊದಲಾದ ಖಾತೆಗಳನ್ನು ನಿರ್ವಹಿಸಿದ ಇವರು ಕಾರ್ಮಿಕ ಸಚಿವರಾಗಿಯೂ ಕೆಲಸ ಮಾಡಿದರು. ಇವರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆಗಿದ್ದರು.

(ಎಸ್.ಎನ್.ಜಿ.)

**ಕೌಜಲಗಿ, ಶ್ರೀನಿವಾಸರಾವ್ :** ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು. ಇವರು ಕಾಂಗ್ರೆಸ್ಸಿನ ಕಾರ್ಯಕರ್ತರೂ ಟಿಳಕರ ಮಿತ್ರರೂ ಆಗಿದ್ದರು. 1906ರ ಸ್ವದೇಶೀ ಚಳವಳಿಯ ಕಾಲಕ್ಕೆ ಬಿಜಾಪುರದಲ್ಲಿ ಶ್ರೀಕೃಷ್ಣ ಪಾಠಶಾಲಾ ಎಂಬ ಶಾಲೆಯನ್ನು ಸ್ಥಾಪಿಸಿ ಕೆಲಕಾಲ ನಡೆಸಿದರು. ಸೂರತ್ ಕರ್ನಾಟಕದ ಪರಮ ಅಭಿಮಾನಿಗಳಾಗಿ, ಕರ್ನಾಟಕದಲ್ಲೆಲ್ಲ ಸಂಚರಿಸಿ ಕಾಂಗ್ರೆಸ್ಸಿನ ಪ್ರಚಾರಕ್ಕಾಗಿ ಶ್ರಮಿಸಿದರು. ಇವರು ಒಳ್ಳೆಯ ವಾಗ್ಮಿಗಳಾಗಿದ್ದರು. ಕನ್ನಡದ ಜೊತೆಗೆ ಮರಾಠಿ, ಇಂಗ್ಲಿಷ್, ಉರ್ದುಗಳಲ್ಲೂ ಚೆನ್ನಾಗಿ ಮಾತನಾಡಬಲ್ಲವರಾಗಿದ್ದರು. ಶ್ರೀಮಂತರೂ ಉದಾರಿಗಳೂ ಆಗಿದ್ದ ಇವರ ಮನೆ ರಾಷ್ಟ್ರೀಯ ಕಾರ್ಯಕರ್ತರಿಗೆ ನೆಲೆಯಾಗಿತ್ತು.

(ಎನ್.ಕೆ.ಕೆ.,ಎಸ್.ಕೆ.)

**ಕೌಜಲಗಿ ಹಣಮಂತರಾವ್ :** 1890-1945. ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀಮಾರ್ಗಾನುಯಾಯಿಗಳು, ಖಾದಿ ಕಾರ್ಯಕರ್ತರು. ಇಂದಿನ ಬಾಗಲಕೋಟೆ ಜಿಲ್ಲೆ ಮುಧೋಳದಲ್ಲಿ 1890 ಡಿಸೆಂಬರ್ 31ರಂದು ಜನಿಸಿದರು. ತಂದೆ ಕೌಜಲಗಿ ಶ್ರೀಪತಿರಾಯರು, ತಾಯಿ ಯಮುನಾಬಾಯಿ.

1908ರಲ್ಲಿ ಟಿಳಕರನ್ನು ಬ್ರಿಟಿಷ್ ಸರ್ಕಾರ ಬಂಧಿಸಿದಾಗ ಇವರು ಗೆಳೆಯರೊಂದಿಗೆ ಬಾಂಬ್ ತಯಾರಿಸುವ ಮಟ್ಟದ ವರೆಗೂ ಮುಂಬರಿದರು. ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಓದುತ್ತಿದ್ದಾಗ ಶಿವಾಜಿ ಜಯಂತಿ ಆಚರಿಸಿ ಅಲ್ಲಿನ ಅಧಿಕಾರಿಗಳ ಆಗ್ರಹಕ್ಕೆ ತುತ್ತಾಗಿ ಅವರು ವಿದ್ಯಾರ್ಥಿನಿಲಯದಿಂದ ಹೊರಬರಬೇಕಾಯಿತು. ಆಗ ಸ್ನೇಹಿತರೊಡನೆ ತಮ್ಮದೇ ಆದ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. 1915ರಲ್ಲಿ ಮುಂಬಯಿಯ ಸಭೆಯೊಂದರಲ್ಲಿ ಗಾಂಧೀಜಿಯವರು ಕ್ರಾಂತಿಕಾರಿಗಳನ್ನು ಕುರಿತು ಆಡಿದ ಕೆಲವು ಮಾತುಗಳನ್ನು ಇವರು ಒಪ್ಪದೆ ಗಾಂಧೀಜಿಯವರನ್ನು ಕಂಡು ಆ ಬಗ್ಗೆ ಚರ್ಚಿಸಿದರು. ಇದೇ ಇವರ ಮತ್ತು ಗಾಂಧಿಯವರ ಪ್ರಥಮ ಭೇಟಿ.

1916ರಲ್ಲಿ ಬಿಜಾಪುರದಲ್ಲಿ ವಕೀಲಿವೃತ್ತಿ ಆರಂಭಿಸಿದರು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಸೈನಿಕರಾಗಿ ಇವರು ಸೇನಾತರಬೇತಿ ಪಡೆದರೆ ಮುಂದೆ ಬ್ರಿಟಿಷರ ವಿರುದ್ಧ ಸಶಸ್ತ್ರಕ್ರಾಂತಿ ಮಾಡಬಹುದು ಎಂಬ ಉದ್ದೇಶದಿಂದ ಸೈನ್ಯ ಸೇರಿದರು. ಆದರೆ ಒಂದು ವರ್ಷದಲ್ಲೇ ಯುದ್ಧ ನಿಂತು ಇವರು ಊರಿಗೆ ಮರಳಿ ಮತ್ತೆ ವಕೀಲಿ ಪ್ರಾರಂಭಿಸಿದರು.

1921ರ ಅಸಹಕಾರ ಚಳವಳಿಯಲ್ಲಿ ಭಾಗವಹಿಸಲು ಇವರು ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿದರು. ಗ್ರಾಮಗಳಲ್ಲಿ ಸಂಚರಿಸಿ ಜನರಲ್ಲಿ ರಾಷ್ಟ್ರಸ್ವಾತಂತ್ರ್ಯದ ಜಾಗೃತಿಯನ್ನುಂಟುಮಾಡಿದರು. ಚರಕದಿಂದ ನೂತು ಖಾದಿ ಬಟ್ಟೆ ಧರಿಸಬೇಕೆಂದೂ ಮದ್ಯಪಾನ ಮಾಡಬಾರದೆಂದೂ ಪ್ರಚಾರ ಮಾಡಿದರು. ಸರ್ಕಾರದ ವಿರುದ್ಧವಾಗಿ ಪ್ರಚಾರ ಮಾಡುತ್ತಿದ್ದರೆಂದು ಸರ್ಕಾರ ಇವರನ್ನು ಬಂಧಿಸಿತು. ಇವರು ಧರಿಸಿದ್ದ ಗಾಂಧೀ ಟೋಪಿಯನ್ನು ತೆಗೆಯಲಿಲ್ಲ, ತಮಗೆ ವಿಧಿಸಿದ ಶಿಕ್ಷೆಯ ವಿರುದ್ಧ ಅಪೀಲು ಹೋಗಿ ಗೆದ್ದರು. ಮುಂದೆ ನ್ಯಾಯಾಲಯಕ್ಕೆ ಅವಮಾನ ಮಾಡಿದರೆಂಬ ಕಾರಣದಿಂದ ಸೊಲ್ಲಾಪುರದ ನ್ಯಾಯಾಧೀಶರು ಒಂದು ವರ್ಷ ಸದ್ವರ್ತನೆಯ ಜಾಮೀನು ಕೊಡಬೇಕೆಂದೂ ಇಲ್ಲವಾದರೆ ಒಂದು ವರ್ಷ ಜೈಲು ಶಿಕ್ಷೆ ಅನುಭವಿಸಬೇಕೆಂದೂ ವಿಧಿಸಿದರು. ಇವರು ಸದ್ವರ್ತನೆಯ ಜಾಮೀನು ಕೊಡುವುದು ಸರಿಯಲ್ಲವೆಂದು ಭಾವಿಸಿ ಬಿಜಾಪುರದ ಜೈಲನ್ನು ಸೇರಿದರು. ಅಲ್ಲಿ ತಮ್ಮ ಜೊತೆ ಕೈದಿಗಳಿಗೆ ಕಾನೂನು ಪ್ರಕಾರ ಶಿಸ್ತಿನಿಂದ ನಡೆದುಕೊಳ್ಳುವಂತೆ ಮಾಡಿ ಜೈಲಿನ ಪರಿಸ್ಥಿತಿಯನ್ನು ಸರ್ಕಾರಕ್ಕೆ ಬರೆದು ಸರ್ಕಾರ ಜೈಲುಗಳನ್ನು ಸುಧಾರಿಸಲು ಒಂದು ಸಮಿತಿಯನ್ನು ನೇಮಿಸುವಂತೆ ಮಾಡಿದರು.

ಬಿಡುಗಡೆಯಾದ ಅನಂತರ ಬಿಜಾಪುರದಲ್ಲಿ ಒಂದು ರಾಷ್ಟ್ರೀಯ ಶಾಲೆ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅವರ ನಿತ್ಯದ ಓದಿನೊಂದಿಗೆ ರಾಷ್ಟ್ರೀಯ ವಿಚಾರವನ್ನು ಬೋಧಿಸುತ್ತಿದ್ದರು. 1924ರಲ್ಲಿ ಬೆಳಗಾಂವಿಯ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷರಾಗಿದ್ದ ಗಾಂಧಿಯವರು ಇವರ ಮೇಲ್ವಿಚಾರಣೆಯ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಪ್ರದರ್ಶನವನ್ನು ಮೆಚ್ಚಿಕೊಂಡರು. ಇವರು ಗಲಗಲಿಯಲ್ಲಿ ಖಾದಿಕೇಂದ್ರವನ್ನು ಪ್ರಾರಂಭಿಸಿ ಸುತ್ತಲ ಗ್ರಾಮಗಳಲ್ಲೆಲ್ಲಾ ಪ್ರಚಾರ ಮಾಡಿ ಖಾದಿ ಹಣಮಂತರಾಯರೆಂದೇ ಪ್ರಸಿದ್ಧರಾದರು. ಇವರು ಭಾರತ ಚರಕಾ ಸಂಘದ ಹುಬ್ಬಳ್ಳಿ ಶಾಖೆಯ ಕಾರ್ಯದರ್ಶಿಗಳಾಗಿ ದುಡಿದರು. ಗ್ರಾಮೋದ್ಯೋಗಗಳಿಗೆ ಹೆಚ್ಚು ಪ್ರಚಾರ ನೀಡಿ ಹೊನ್ನಾವರದಲ್ಲಿ ಒಂದು ಕರಕುಶಲ ವಸ್ತು ತಯಾರಿಕಾ ಕೇಂದ್ರ ಸ್ಥಾಪಿಸಿದರು. ಗಾಂಧೀಜಿ 1934ರಲ್ಲಿ ಪ್ರಾರಂಭಿಸಿದ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕರ್ನಾಟಕ ಶಾಖೆಗೆ ಇವರನ್ನೇ ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಹಿಂದಿನ ಮುಂಬಯಿ ಸರ್ಕಾರ 1938ರಲ್ಲಿ ಇವರನ್ನು ಗ್ರಾಮೋದ್ಯೋಗ ಸಲಹಾಮಂಡಳಿಯ ಸದಸ್ಯರಾಗಿ ನೇಮಿಸಿ ಇವರ ಸಲಹೆಯ ಪ್ರಕಾರ ಹೊನ್ನಾವರದಲ್ಲಿ ಒಂದು ಗ್ರಾಮೋದ್ಯೋಗ ತರಬೇತಿ ಕೇಂದ್ರವನ್ನು ಪ್ರಾರಂಭಿಸಿತು. ಇವರು ನೇಕಾರರ ಪರಿಸ್ಥಿತಿಯನ್ನು ಸುಧಾರಿಸಲು ಶ್ರಮಿಸಿ ಉಣ್ಣೆ ಉದ್ಯಮ ಮತ್ತು ನೇಕಾರರಿಗೆ ಪ್ರೋತ್ಸಾಹ ಕೊಟ್ಟು ಆ ಕೈಗಾರಿಕೆಗಳು ಅಭಿವೃದ್ಧಿಹೊಂದುವಂತೆ ಮಾಡಿದರು.

ಮುಧೋಳ ಸಂಸ್ಥಾನದ ದೊರೆ ಮಾಲೋಜಿರಾವ್ ಘೋರ್ಪಡೆ ಹೆಚ್ಚು ಕಂದಾಯ ವಿಧಿಸಿ ಪ್ರಜೆಗಳ ಸುಲಿಗೆ ಮಾಡುತ್ತಿದ್ದುದನ್ನು ಪುಣೆಯಿಂದ ಪ್ರಕಟವಾಗುತ್ತಿದ್ದ 'ಸಂಸ್ಥಾನೀ ಸ್ವರಾಜ್ಯ' ಪತ್ರಿಕೆಯಲ್ಲಿ ಇವರು ಗುಪ್ತನಾಮದಿಂದ ಲೇಖನ ಬರೆದು ಬಯಲಿಗೆ ತಂದರು. ಪ್ರಜಾಪರಿಷತ್ತನ್ನು ಸ್ಥಾಪಿಸಿ ಅಹಿಂಸಾತ್ಮಕ ಆಂದೋಲನ ಪ್ರಾರಂಭಿಸಿ, ಘೋರ್ಪಡೆ ಸಿಂಹಾಸನದ ತ್ಯಾಗಮಾಡಿ ಮಗನಿಗೆ ಪಟ್ಟಕಟ್ಟುವಂತೆ ಮಾಡಿದರು. ಹೀಗೆ ಇವರು ರಾಮದುರ್ಗ ಮತ್ತು ಜಮಖಂಡಿಗಳಲ್ಲೂ ಪ್ರಜಾಸಂಘಟನೆ ಮಾಡಿದರು.

1930ರ ಕಾನೂನುಭಂಗ ಚಳವಳಿಯಲ್ಲಿ ಭಾಗವಹಿಸಿ ದಂಡಿಯಲ್ಲಿ ಉಪ್ಪನ್ನು ಮಾಡಿ ಕಾನೂನನ್ನು ಉಲ್ಲಂಘಿಸಿದರು. ಅಂಕೋಲೆಯ ಸತ್ಯಾಗ್ರಹ ಶಿಬಿರದಲ್ಲಿ ಇವರು ಬಂಧನಕ್ಕೊಳಗಾದರು. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸತ್ಯಾಗ್ರಹದ ಸರ್ವಾಧಿಕಾರಿಯಾಗಿ ಮತ್ತೆ ಜೈಲು ಕಂಡು 1933ರಲ್ಲಿ ಬಿಡುಗಡೆಯಾದರು.

ಗಾಂಧಿಯವರ ಅಸ್ಪೃಶ್ಯತಾ ನಿವಾರಣಾ ಆಂದೋಲನದ ಕರೆಯಂತೆ ಅವರು ಒಂದು ಹರಿಜನ ಕನ್ಯಾ ಮಂದಿರವನ್ನು ಸ್ಥಾಪಿಸಿ ಕಾಕಾ ಕಾರಖಾನೀಸರನ್ನು ಅದರ ಮೇಲ್ವಿಚಾರಣೆಗೆ ನೇಮಿಸಿ ತಮ್ಮ ಕೈಯಿಂದಲೇ ಅವರಿಗೆ ಸಂಬಳ ಕೊಡುತ್ತಿದ್ದರು. ಬಿಜಾಪುರದ 1943ರ ಬರಗಾಲದಲ್ಲಿ ಜನರಿಗೆ ರಾಟೆ ಹಂಚಿ ನೂಲು ಕೊಳ್ಳುವ ವ್ಯವಸ್ಥೆ ಮಾಡಿ ಯಶಸ್ವಿಯಾಗಿ ಪರಿಹಾರಕಾರ್ಯವನ್ನು ನಡೆಸಿದರು.

ಇವರು ದೀನದಲಿತರ ಸೇವೆಗೆ ಸದಾ ಮುಂದೆಬರುತ್ತಿದ್ದರು. 1938ರಲ್ಲಿ ಬಾಗಲಕೋಟೆಯಲ್ಲಿ ಲಮಾಣಿಗಳ ಸಭೆ ಸೇರಿಸಿ ತಾವೇ ಸಭಾಧ್ಯಕ್ಷರಾಗಿ ಅವರಿಗೆ ಸುಧಾರಣಾಮಾರ್ಗಗಳನ್ನು ತೋರಿದರು. ತಾವೇ ದೇಶಭಕ್ತಿಗೀತೆಗಳನ್ನು ಕಟ್ಟಿ ಹಾಡುತ್ತಿದ್ದರು. ಇವರು 'ಎ ವಿಸಿಟ್ ಟು ಬಿಜಾಪುರ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಈ ದೇಶಭಕ್ತ, ಸುಧಾರಣಾವಾದಿ 1945 ಜೂನ್ 10ರಂದು ನಿಧನರಾದರು. *

**ಕೌಳರು :** ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ವಾಮಾಚಾರದ ತಾಂತ್ರಿಕ ಮತಗಳಲ್ಲಿ ಒಂದು. ಕೌಳ ಮೂಲತಃ ಒಂದು ಶಾಕ್ತಮತ. ಎಂದರೆ ಚಂಡಿ ಇವರ ಆರಾಧ್ಯದೈವ. ಇತರ ದೈವಗಳಿಗಿಂತ, ಬ್ರಹ್ಮ, ವಿಷ್ಣು, ಶಿವರಿಗಿಂತಲೂ ಚಂಡಿಯೇ ದೊಡ್ಡವಳು ಎಂಬುದು ಇವರ ನಂಬಿಕೆ. ಮಾಂಸಾಹಾರ ಸೇವಿಸುತ್ತಿದ್ದು, ಮದ್ಯಪಾನ ಮಾಡುತ್ತಿದ್ದ ಇವರು ಇತರರು ಸಾಮಾನ್ಯವಾಗಿ ನಿಷಿದ್ಧವೆಂದೂ ಪಾಪಕರ್ಮವೆಂದೂ ಭಾವಿಸುತ್ತಿದ್ದ, ಸ್ತ್ರೀಯರೊಡನೆ ಕಾಮುಕ ಸಂಬಂಧ ಮೊದಲಾದ ಕ್ರಿಯೆಗಳನ್ನು ಸಾಧನೆಯ ಅಂಗವೆಂದು ಹೇಳಿಕೊಂಡು ಅನುಸರಿಸುತ್ತಿದ್ದರು. ಅಂಥ ಸಂಬಂಧದಲ್ಲಿ ತಾಯಿ, ತಂಗಿ, ಅನ್ಯ ಸ್ತ್ರೀ ಎಂಬ ಭೇದವನ್ನೇ ಮಾಡುತ್ತಿರಲಿಲ್ಲವೆಂದೂ ಹೇಳಿಕೆಗಳಿವೆ. ತಮ್ಮ ದೈವವಾದ ಚಂಡಿ ಅಥವಾ ಮಹಾಕಾಳಿಯನ್ನು ವಿಶೇಷವಾಗಿ ಮಂಗಳವಾರ ಮತ್ತು ಶುಕ್ರವಾರ ರಾತ್ರಿ ಕೆಂಪು ಹೂಗಳಿಂದ ಪೂಜಿಸುತ್ತಿದ್ದರು. ಇವರು ತಾವೇ ನಿಜವಾದ ಬ್ರಾಹ್ಮಣರೆಂದೂ ವೇದಾರ್ಥವನ್ನು ತಿಳಿದವರಲ್ಲಿ ತಾವೇ ಅಗ್ರಗಣ್ಯರೆಂದೂ ನಂಬಿದ್ದರು. ಬ್ರಾಹ್ಮಣರಂತೆ ಹೋಮವನ್ನು ಮಾಡುತ್ತಿದ್ದರು. ಇವರಲ್ಲಿ ಎರಡು ಪಂಗಡಗಳಿವೆ. ಪೂರ್ವ ಮತ್ತು ಉತ್ತರ. ಇಬ್ಬರೂ ಶಕ್ತಿಯ ಆರಾಧಕರಾದರೂ ಪೂರ್ವಕೌಳರು ಯೋನಿಯ ಚಿತ್ರವನ್ನು ಪೂಜಿಸಿದರೆ, ಉತ್ತರಕೌಳರು ಯೋನಿಯನ್ನೇ ಪೂಜಿಸುತ್ತಿದ್ದರು. ಇದು ಪ್ರತಿಪಕ್ಷದವರಿಂದ ನಮಗೆ ದೊರಕುವ ಕೌಳಮತದ ಚಿತ್ರ. ಆದರೆ ಇದರ ಗುರಿ ಇಂದ್ರಿಯಭೋಗವಲ್ಲ. ಬ್ರಹ್ಮಸಾಯುಜ್ಯ, ಬ್ರಹ್ಮಸಾಕ್ಷಾತ್ಕಾರ. ಅದನ್ನು ಪಡೆಯಲು ಈ ಮತ ಸೂಚಿಸುವ ಮಾರ್ಗ ಮಾತ್ರ ವಿಲಕ್ಷಣವಾದುದು. ಕೌಳಸಾಧನೆಗೆ ಅತ್ಯಗತ್ಯವಾಗಿ ಬೇಕಾಗಿರುವವು ಪಂಚ ಮಕಾರಗಳು: ಮದ್ಯ, ಮಾಂಸ, ಮತ್ಸ್ಯ, ಮುದ್ರಾ, ಮೈಥುನ. ಭೋಗವಸ್ತುಗಳೆಂದು ಇತರರು ಭಾವಿಸುವ ಇವುಗಳ ಮಧ್ಯೆಯೇ ಉಪಾಸನೆ ಸಾಗುತ್ತದೆ. ಕೌಳಮತದ ಸಾಧಕ ಅದ್ಭುತಸಂಯಮಿಯಾಗಿರಬೇಕೆಂದೂ ಎಲ್ಲರಿಗೂ ಆ ಮತ ಸಾಧ್ಯವಿಲ್ಲವೆಂದೂ ಕೌಳಮತದ ಗ್ರಂಥಗಳು ಸ್ಪಷ್ಟಪಡಿಸುತ್ತವೆ.

ಕರ್ನಾಟಕದಲ್ಲಿ ಕೌಳಮತ ಎಷ್ಟರಮಟ್ಟಿಗೆ ಪ್ರಚಾರದಲ್ಲಿತ್ತೆಂಬುದಕ್ಕೆ ಸಾಕಷ್ಟು ಆಧಾರಗಳಿಲ್ಲ. ಶಾಸನಗಳಲ್ಲಿ ಇದರ ಪ್ರಸ್ತಾಪ ದೊರೆಯುವುದಿಲ್ಲ. ಆದರೆ ಈ ಪಂಥೀಯರು ಸ್ವಲ್ಪ ಸಂಖ್ಯೆಯಲ್ಲಾದರೂ ಇದ್ದಿರಬೇಕು. ಸೋಮದೇವನ ಯಶಸ್ತಿಲಕಚಂಪೂ, ಬ್ರಹ್ಮಶಿವನ ಸಮಯಪರೀಕ್ಷೆ, ಈ ಜೈನಕೃತಿಗಳು ಹಾಗೂ ವೀರಶೈವ ಕೃತಿಯಾದ ಶಂಕರದಾಸಿಮಯ್ಯನ ಪುರಾಣ ಕೌಳಮತದ ಬಗ್ಗೆ ಅನೇಕ ಸಂಗತಿಗಳನ್ನು ತಿಳಿಸುತ್ತವೆ. (ಎಂ.ಪಿ.)

**ಕ್ಯಾಂಪ್‌ಬೆಲ್, ಸಿ. :** ಕರ್ನಾಟಕಕ್ಕೆ ಬಂದ (1846) ಕ್ರೈಸ್ತಮತ ಪ್ರಚಾರಕ. ಕನ್ನಡ ಭಾಷೆಯನ್ನು ಚೆನ್ನಾಗಿ ತಿಳಿದಿದ್ದ ಈತ ಕನ್ನಡ ಬೈಬಲ್ ಕೃತಿಯ ಪರಿಷ್ಕರಣ ಸಮಿತಿಯ ಸದಸ್ಯನಾಗಿ ಮೈಗಲ್, ಗ್ಯಾರೆಟ್, ಮೋಗ್ಲಿಂಗ್, ಸ್ಯಾಂಡರ್ಸನ್ ಇವರ ಜೊತೆ ಕೆಲಸಮಾಡಿದ. ಬೈಬಲ್ ಸೂಕ್ತಿಗಳನ್ನಾಧರಿಸಿ ಬರೆದ ಡೈಲಿ ಬ್ರೆಡ್ ಎಂಬ ಇಂಗ್ಲಿಷ್ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿದ (1857). ಅನಂತರ ಬೈಬಲ್‌ನಿಂದ ನೂರಾರು ಪ್ರಸಿದ್ಧ ಸೂಕ್ತಿಗಳನ್ನು ಆಯ್ದು ಕನ್ನಡಕ್ಕೆ ಅನುವಾದಿಸಿದ (1860). ಇವನ ಈ ಕನ್ನಡ ಅನುವಾದ ಕೃತಿಗಳು ಕ್ರೈಸ್ತಗುರುಗಳ ಪ್ರಶಂಸೆಗೂ ಪಾತ್ರವಾಗಿದ್ದುವು. ಈತನಿಗೆ ಪಠ್ಯಪುಸ್ತಕಗಳ ರಚನೆಯಲ್ಲಿ ಅಭಿರುಚಿಯಿತ್ತು. 1849ರಲ್ಲಿ ಕನ್ನಡ ಶಾಲಾ ವ್ಯಾಕರಣವೆಂಬ ಕೃತಿಯನ್ನು ರಚಿಸಿದ. ಈತ ಮಕ್ಕಳಿಗಾಗಿಯೇ ಬಾಲ್ಯೋಪದೇಶ ಎಂಬ ಗ್ರಂಥವನ್ನು ರಚಿಸಿದ್ದಾನೆ (1852). ಕನ್ನಡ ವ್ಯಾಕರಣವನ್ನು ಕುರಿತಂತೆ ಇಂಗ್ಲಿಷ್‌ನಲ್ಲಿ ಎಲಿಮೆಂಟ್ಸ್ ಆಫ್ ಕೆನರೀಸ್ ಗ್ರಾಮರ್ ಫಾರ್ ನೇಟಿವ್ಸ್ ಎಂಬ ಗ್ರಂಥವನ್ನು ಬರೆದಿದ್ದಾನೆ. ಇದು 1870ರಲ್ಲಿ ಪ್ರಕಟವಾಯಿತು. *

**ಕ್ಯಾಸನೂರು ಕಾಡಿನ ಕಾಯಿಲೆ :** ವೈರಸ್ ಸೋಂಕಿನಿಂದ ಮೊದಲು ಮಂಗಗಳಲ್ಲಿಯೂ ತರುವಾಯ ಮನುಷ್ಯರಲ್ಲಿಯೂ 1957ರಲ್ಲಿ ಕಾಣಿಸಿಕೊಂಡ ಒಂದು ಪ್ರಾಣಾಂತಿಕ ವ್ಯಾಧಿ. ಇದು ಮೊಟ್ಟಮೊದಲಿಗೆ ಕಾಣಿಸಿಕೊಂಡದ್ದು ಕರ್ನಾಟಕದ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ (1955-56). ಆರೋಗ್ಯ ಇಲಾಖೆಯ ಪ್ರಥಮ ಹೊಸ ಪರಿಶೋಧನೆಯಿಂದ ಇದು ಬಹುಶಃ ಹೊಸ ಕಾಯಿಲೆ ಇರಬೇಕೆಂಬ ಸಂಶಯ ಮೂಡಿತು. 1957ರ ಆದಿಭಾಗದಲ್ಲಿ ಇದೇ ಕಾಯಿಲೆ ಮತ್ತೆ ಆ ಹಳ್ಳಿಗಳ ಸಮೀಪದಲ್ಲಿ ಉಗ್ರರೀತಿಯಲ್ಲಿ ತಲೆದೋರಿತು. ಇದರ ವಿಶಿಷ್ಟ ಲಕ್ಷಣವೆಂದರೆ ಈ ರೋಗದಿಂದ ಮನುಷ್ಯರು ನರಳುತ್ತಿದ್ದ ಹಳ್ಳಿಗಳ ಸುತ್ತಮುತ್ತಲಿನ ಕಾಡುಗಳಲ್ಲಿ ಮಂಗಗಳು ಅಸ್ವಾಭಾವಿಕವಾಗಿ ಅಧಿಕ ಸಂಖ್ಯೆಯಲ್ಲಿ ಸಾಯುತ್ತಿದ್ದವು. ಅಂದಿನಿಂದ ಪ್ರತಿವರ್ಷವೂ ಬೇಸಗೆಯಲ್ಲಿ ಈ ರೋಗ ಅಲ್ಲಿ ಕಾಣಿಸಿಕೊಳ್ಳುತ್ತಿದೆ. ಕಾಯಿಲೆಯ ಜನರ ರಕ್ತ ಮತ್ತು ಆಗತಾನೆ ಸತ್ತ ಮಂಗಗಳ ಅವಯವಗಳ (ಮಿದುಳು, ಹೃದಯ, ಶ್ವಾಸಕೋಶ, ಪಿತ್ತಜನಕಾಂಗ) ಪರೀಕ್ಷೆಯಿಂದ ರೋಗಕಾರಕ ವೈರಸ್ಸಿನ ಶೋಧವಾಯಿತು. ಮನುಷ್ಯ ಮತ್ತು ಮಂಗಗಳ ಕಾಯಿಲೆ ಒಂದೇ ಎಂದು

ಇದರಿಂದ ಖಚಿತವಾಯಿತು. ವೈರಸ್ಸನ್ನು ಮೊಟ್ಟಮೊದಲು ಕ್ಯಾಸನೂರು ಕಾಡಿನಲ್ಲಿ ಸತ್ತ ಮಂಗದಿಂದಲೂ ಅದೇ ಕಾಡಿನಲ್ಲಿ ಓಡಾಡಿ ಬಂದ ರೋಗಿಗಳಿಂದಲೂ ಪತ್ತೆ ಹಚ್ಚಿದುದರಿಂದ ಈ ಕಾಯಿಲೆಗೆ ಕ್ಯಾಸನೂರು ಕಾಡಿನ ಕಾಯಿಲೆ ಎಂಬ ಹೆಸರು ಬಂದಿದೆ. ಅನಂತರ ಪರೀಕ್ಷೆ ಮಾಡಿದ್ದರಲ್ಲಿ ಕೆಲವು ಜಾತಿಯ ಉಣ್ಣೆಗಳಲ್ಲಿ ಸಹ ಈ ವೈರಸ್ಸಿನ ಶೋಧವಾಗಿದೆ. ಆದ್ದರಿಂದ ಉಣ್ಣೆಗಳ ಕಡಿತದಿಂದ ವೈರಸ್ಸಿನ ಸೋಂಕು ಹರಡಿ ಕಾಯಿಲೆ ವ್ಯಾಪಿಸುವುದೆಂದು ತರ್ಕಿಸಿದ್ದಾರೆ.

**ರೋಗದ ಲಕ್ಷಣಗಳು :** ಇದ್ದಕ್ಕಿದ್ದಂತೆ ಚಳಿಜ್ವರ ಕಾಣಿಸಿಕೊಂಡು ಸತತವಾಗಿ ಒಂದೆರಡು ವಾರಗಳು ಬಿಡದೆ ಇರುತ್ತದೆ. ತಲೆನೋವು ತೀವ್ರವಾಗಿರುವುದು. ಮೈ ಕೈ ಸೊಂಟನೋವು, ಸುಸ್ತು ನಿಶ್ಶಕ್ತಿ ಅತ್ಯಧಿಕ. ಆಗಾಗ ಕೆಲವರಿಗೆ ವಾಂತಿ ಮತ್ತು ಭೇದಿಯಾಗಬಹುದು. ವಿರಳವಾಗಿ ಮತಿವಿಕಲ್ಪವಾಗಲೂಬಹುದು. ಪ್ರಾರಂಭದಲ್ಲಿ ಕಣ್ಣುಗಳು ಕೆಂಪಾಗಿದ್ದು ಕಣ್ಣು ಗುಡ್ಡೆಗಳ ನೋವಾಗುವುದುಂಟು. ಸಾಧಾರಣವಾಗಿ ರೋಗ ಅಂಟಿದ ನಾಲ್ಕಾರು ದಿವಸಗಳ ತರುವಾಯ ಮೂಗು, ಬಾಯಿಗಳಲ್ಲಿ, ಕಫ ವಾಂತಿ ಮತ್ತು ಮಲವಿಸರ್ಜನೆಗಳ ಮೂಲಕ ರಕ್ತಸ್ರಾವವಾಗುವುದು. ಈ ರೋಗದಲ್ಲಿ ವಿಶೇಷ ಬಾಯಾರಿಕೆ, ದಣಿವು ಮತ್ತು ಬಿಳಿಯ ರಕ್ತಕಣಗಳ ಅಭಾವ, ಕೆಂಪು ರಕ್ತಕಣಗಳ ಅಭಾವ, ಕ್ಷೀಣ ರಕ್ತ ಒತ್ತಡ ಮತ್ತು ಕ್ಷೀಣ ಹೃದಯ ಬಡಿತ ವ್ಯಕ್ತಪಟ್ಟಿವೆ. ರೋಗ ಎರಡರಿಂದ ಮೂರು ವಾರಗಳಿದ್ದರೂ ರೋಗಿ ಮುಕ್ತನಾಗಿ ಯಥಾಸ್ಥಿತಿಗೆ ಬರಲು ಒಂದೆರಡು ತಿಂಗಳಾದರೂ ಬೇಕಾಗಬಹುದು.

ಈ ರೋಗ ಸಾಮಾನ್ಯವಾಗಿ ಪ್ರತಿವರ್ಷವೂ ಬೇಸಗೆಯಲ್ಲಿ ಜನವರಿಯಿಂದ ಜೂನ್ ತಿಂಗಳುಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಮಂಗಗಳು ಮತ್ತು ಮನುಷ್ಯರು ಏಕಕಾಲದಲ್ಲಿ ಈ ರೋಗಕ್ಕೆ ತುತ್ತಾಗುವರು. ಇದೇ ಸಮಯದಲ್ಲಿ ಕಾಡಿನಲ್ಲಿ ಉಣ್ಣೆಗಳು ಯಥೇಚ್ಛವಾಗಿರುವುದಲ್ಲದೆ ವೈರಸ್ ಕೂಡ ಈ ಉಣ್ಣೆಗಳಲ್ಲಿ ವಿಪುಲವಾಗಿ ಕಂಡು ಬಂದಿದೆ. ವೈರಸ್ ಯುಕ್ತ ಉಣ್ಣೆಗಳು ಮನುಷ್ಯರ ಮೇಲೂ ಮಂಗಗಳ ಮೇಲೂ ದೊರಕಿವೆ. ಅಂಥ ಕಾಡಿನ ಸಂಪರ್ಕವಾದರೆ ರೋಗ ಸುಲಭವಾಗಿ ಹರಡಲು ಸಾಧ್ಯವಾಗುತ್ತದೆ. ಕಪ್ಪು ಮಂಗ ಮತ್ತು ಕೆಂಪು ಮಂಗಗಳೆರಡೂ ಈ ರೋಗಕ್ಕೆ ತುತ್ತಾಗುತ್ತವೆ. ಕ್ಯಾಸನೂರು ಕಾಡಿನ ಕಾಯಿಲೆ ಮನುಷ್ಯರಲ್ಲಿ ಸಾಂಕ್ರಾಮಿಕವಲ್ಲ.

**ರೋಗನಿರ್ಣಯ :** ರೋಗಿಯನ್ನು ವೈರಸ್ ಪ್ರವೇಶಿಸಿದ 4-6 ದಿವಸಗಳ ತರುವಾಯ ಕಾಯಿಲೆಯ ಚಿಹ್ನೆಗಳು ಪ್ರಕಟವಾಗುತ್ತವೆ. ರೋಗನಿರ್ಣಯಕ್ಕೆ ರಕ್ತ ಪರೀಕ್ಷೆ ಅತಿಮುಖ್ಯ. ಪ್ರಯೋಗಶಾಲೆಯಲ್ಲಿ ರೋಗಿಯ ಮೊದಲ ರಕ್ತವನ್ನು (ಅಕ್ಯೂಟ್‌ಬ್ಲಡ್) ಸಾಕಿದ ಆರೋಗ್ಯ ಬಿಳಿ ಇಲಿಗಳ ಸ್ವಿಸ್ ಆಲ್ಬಿನೋ ಮೈಸ್ ಮಿದುಳಿಗೆ ಚುಚ್ಚುವ ಮೂಲಕ ಕೊಡಲಾಗುವುದು. ಅನಂತರ ಇಲಿಗಳಿಗೆ ಆದ ಪರಿಣಾಮದಿಂದ ವೈರಸ್ಸಿನ ಇರುವಿಕೆಯನ್ನು ಬೇರೆ ವಿಶಿಷ್ಟಪರೀಕ್ಷೆಗಳಿಂದ ಗುರುತಿಸಲಾಗುತ್ತದೆ. ರೋಗಿಯ ಎರಡನೆಯ ರಕ್ತದಲ್ಲಿ (ಕನ್‌ವೇಲೆಸೆಂಟ್ ಬ್ಲಡ್) ಪ್ರತಿ ವಸ್ತುಗಳು ಆಂಟಿಬಾಡೀಸ್ ಎಷ್ಟರಮಟ್ಟಿಗೆ ವೃದ್ಧಿಯಾಗಿವೆ ಎಂದು ಕಂಡುಹಿಡಿದು ರೋಗವನ್ನು ಖಚಿತಪಡಿಸಬಹುದು. ರೋಗಿಯ ರಕ್ತವನ್ನು ಸಾಗಿಸುವಾಗ ಸದಾಮಂಜಿನಗಡ್ಡೆಯ ಸಂಪರ್ಕದೊಡನೆ ಇರಿಸುವುದು ಅತಿಮುಖ್ಯ. ಇಲ್ಲದಿದ್ದರೆ ವೈರಸ್ ನಶಿಸಿಹೋಗಿ ಗುರುತಿಸಲಾಗುವುದಿಲ್ಲ. ಈ ರೋಗ ತಗುಲಿದ ವ್ಯಕ್ತಿಯಿಂದ ಸುಮಾರು 8-10 ದಿವಸಗಳವರೆಗೆ ವೈರಸ್ಸನ್ನು ಗುರುತಿಸಲಾಗಿದೆ.

**ರೋಗದ ಮುನ್ನರಿವು :** ಸಾಧಾರಣವಾಗಿ ರೋಗಿ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆದರೆ ಪೂರ್ಣವಾಗಿ ಗುಣಮುಖನಾಗುತ್ತಾನೆ. ಸರಿಯಾದ ಚಿಕಿತ್ಸೆಯಿಲ್ಲದ ರೋಗಿಗಳು ಸೇ.5ರಿಂದ 10 ಜನರು ಸಾವಿಗೀಡಾಗುತ್ತಾರೆ. ಬದುಕಿದವರೆಲ್ಲರೂ ಯಾವ ಕುಂದೂ ಇಲ್ಲದೆ ಗುಣಮುಖರಾಗುವರು.

**ಚಿಕಿತ್ಸಾಕ್ರಮ:** ಈ ರೋಗದ ವೈರಸ್ ಯಾವ ಔಷಧಿಯೂ ಇಲ್ಲದೆ ನಾಶವಾಗುವುದಿಲ್ಲ. ಆದ್ದರಿಂದ ಚಿಕಿತ್ಸೆ ರೋಗಿಯ ತೊಂದರೆ ನಿವಾರಣೆಗೆ ಮಾತ್ರ.

**ಮುಂಜಾಗರೂಕತೆಯ ಕ್ರಮಗಳು :** ಮುಖ್ಯವಾಗಿ, ಮಂಗಗಳು ಸಾಯುತ್ತಿರುವ ಕಾಡಿಗೆ ಜನರು ಪ್ರವೇಶಿಸಬಾರದು. ಹೋಗಲೇಬೇಕಾದಲ್ಲಿ ಉಣ್ಣೆಗಳನ್ನು ದೂರೀಕರಿಸುವ ಮುಲಾಮನ್ನು ಹಾಕಿಕೊಳ್ಳುವುದು ಮತ್ತು ಮೈತುಂಬ ಬಟ್ಟೆಗಳನ್ನು ಹಾಕಿಕೊಂಡು ಉಣ್ಣೆಗಳು ಕಚ್ಚದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಅಂಥ ಕಾಡಿನಿಂದ ಮರಳಿದ ತರುವಾಯ ಸಾಬೂನು ಹಚ್ಚಿ ಮೈ ಉಜ್ಜಿ ಸ್ನಾನ ಮಾಡಬೇಕು. ಎರಡನೆಯದಾಗಿ ರೋಗಬಾರದಂತೆ ಈ ರೋಗದ ಲಸಿಕೆಯ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕು. ಲಸಿಕೆಯನ್ನು ಪುಣೆಯ ವೈರಸ್ ಸಂಶೋಧನ ಕೇಂದ್ರದಲ್ಲಿ ತಯಾರಿಸಿ ಪ್ರಯೋಗಾರ್ಥವಾಗಿ ಕೆಲವು ಜನರಿಗೆ ಕೊಡಲಾಗಿದೆ. ಇದು ರೋಗವನ್ನು ತಡೆಯಲು ಯಶಸ್ವಿಯಾದಲ್ಲಿ ಆಗ ಅದನ್ನು ರೋಗ ಬರಬಹುದಾದ ಜನರಿಗೆ ವ್ಯವಸ್ಥಿತ ರೀತಿಯಲ್ಲಿ ಕೊಟ್ಟು ರೋಗವನ್ನು ತಡೆಯಬಹುದು. ಕ್ಯಾಸನೂರು ಕಾಡಿನ ಕಾಯಿಲೆಯನ್ನು ನಿರ್ಮೂಲಿಸಲು ಯಶಸ್ವಿಯಾದ ಕ್ರಮ ಕೈಗೊಳ್ಳಬೇಕಾದರೆ ರೋಗ ಸ್ವಾಭಾವಿಕವಾಗಿ ಹರಡುವ ಬಗೆಯನ್ನು ತಿಳಿಯುವುದು ಅತಿಮುಖ್ಯ. ಈ ರೋಗದಲ್ಲಿ ಕಾಡಿನ ಪಾತ್ರ ಉಂಟು. ರೋಗ ಹರಡುವುದಕ್ಕೆ ಜನರು, ಮಂಗಗಳು, ದನಕರುಗಳು, ಇಲಿಗಳು, ಪಕ್ಷಿಗಳು, ಇತರೇ ಕಾಡುಪ್ರಾಣಿಗಳು ಮತ್ತು ಉಣ್ಣೆಗಳ ಪಾತ್ರಗಳನ್ನು ನಿಗದಿ ಮಾಡಬೇಕು. ಹಲವಾರು ಪ್ರಾಣಿಗಳ ಪರೀಕ್ಷೆ ನಿಮಿತ್ತ ಈ ರೋಗ ಹರಡುವ ಬಗ್ಗೆ ತನಿಖೆ ಸತತವಾಗಿ ನಡೆಯುತ್ತಿದೆ.

**ಸಂಶೋಧನೆಯಲ್ಲಿ ತೊಡಗಿರುವ ಸಂಸ್ಥೆಗಳು :** ಕರ್ನಾಟಕ ಜನಾರೋಗ್ಯ ಇಲಾಖೆಯವರು ಮನುಷ್ಯರಿಗೆ ಸಂಬಂಧಪಟ್ಟ ಪರೀಕ್ಷೆ ಮಾಡುತ್ತಿದ್ದಾರೆ. ಇದಕ್ಕಾಗಿ ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ ವಿಶೇಷ ಸಿಬ್ಬಂದಿಯಿದೆ. ರೋಗಾಣುಗಳ ಪರೀಕ್ಷೆಯ ನಿಮಿತ್ತ ಶಿವಮೊಗ್ಗದಲ್ಲಿ ಒಂದು ವೈರಸ್ ಪರಿಶೋಧನ ಪ್ರಯೋಗಶಾಲೆಯನ್ನು ಅಮೆರಿಕದ ರಾಕ್‌ಫೆಲರ್ ಫೌಂಡೇಷನ್ ಸಹಾಯದಿಂದ ಸ್ಥಾಪಿಸಲಾಗಿದೆ. ಪುಣೆಯ ವೈರಸ್ ಸಂಶೋಧನ ಕೇಂದ್ರದವರ ವಿಶೇಷ ಸಿಬ್ಬಂದಿಯವರು ಪ್ರಾಣಿಸಂಶೋಧನೆಗಳಲ್ಲಿ ನಿರತರಾಗಿದ್ದಾರೆ. *

**ಕ್ಯಾಸಲ್‌ರಾಕ್:** ಉತ್ತರ ಕನ್ನಡ ಜಿಲ್ಲೆ ಜೊಯಿಡ ತಾಲ್ಲೂಕಿನಲ್ಲಿರುವ ಸ್ಥಳ. ಜೊಯಿಡ ನಗರದಿಂದ 70ಕಿಮೀ ದೂರದಲ್ಲಿರುವ ಕಲಂಬುಳಿ ಗ್ರಾಮದಲ್ಲಿದೆ. ಕರಂಜಾಲ್ ಮತ್ತು ಚೌಟಾವಾಡಿಯಲ್ಲಿರುವ ಎರಡು ಕಲ್ಲುಗಳು ಕ್ಯಾಸಲ್ ತರಹ ಕಾಣುತ್ತಿದ್ದುದ್ದರಿಂದ ಬ್ರಿಟಿಷರು ಕ್ಯಾಸಲ್‌ರಾಕ್ ಎಂದು ಹೆಸರಿಟ್ಟರು. ಲೋಂಡ ಮತ್ತು ಮಾರ್ಗೋವ ರೈಲ್ವೆ ನಿಲ್ದಾಣಗಳ ಮಧ್ಯೆ ಕ್ಯಾಸಲ್‌ರಾಕ್ ನಿಲ್ದಾಣ ಬರುತ್ತದೆ. ಇಲ್ಲಿ ಮಾರುತಿ, ದತ್ತಮಂದಿರ, ಲಕ್ಷ್ಮಿ, ಚನ್ನಬಾಯಿ ಮುಂತಾದ ದೇವಸ್ಥಾನಗಳಿವೆ. ಫಾಲ್ಗುಣ ಪಂಚಮಿಯಂದು ಚನ್ನಬಾಯಿ ಜಾತ್ರೆ ನಡೆಯುತ್ತದೆ. ಇಲ್ಲಿರುವ ಗರೀಬ ಶಹಾವಾಲಿ ದರ್ಗಾದಲ್ಲಿ ವಾರ್ಷಿಕ ಉರಸ್ ನಡೆಯುತ್ತದೆ. ಇಲ್ಲಿ 1863ರಲ್ಲಿ ನಿರ್ಮಾಣವಾದ ಹೋಲಿಕ್ರಾಸ್ ಎಂಬ ಚರ್ಚ್ ಇದೆ. ಕ್ಯಾಸಲ್‌ರಾಕ್‌ನಿಂದ 3ಕಿಮೀ ಅಂತರದಲ್ಲಿ ಪಂಡರಿ ನದಿಯ ದಂಡೆಯ ಮೇಲೆ ಮಲ್ಲಿಕಾರ್ಜುನ ದೇವಸ್ಥಾನವಿದೆ. ಶಿವರಾತ್ರಿಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. (ಬಿ.ಎನ್.ಎಂ.)

**ಕ್ರೀಡೆಗಳು :** ಕರ್ನಾಟಕದಲ್ಲಿ ಅನೇಕ ರೀತಿಯ ಜನಪದ ಆಟಗಳು ಹಾಗೂ ಪಾಶ್ಚಾತ್ಯ ಕ್ರೀಡೆಗಳು ಪ್ರಚಲಿತವಾಗಿವೆ. ಜನಪದ ಆಟಗಳು (ನೋಡಿ) ತಲತಲಾಂತರದಿಂದ ರೂಢಮೂಲವಾಗಿ ಬೆಳೆದುಬಂದಂಥವು. ಇವು ಬೆಳೆದು ಬಂದ ಬಗೆಗೆ ಆಧಾರಗಳನ್ನು ಕೊಡುವುದು ಕಷ್ಟ. ಇಂಥ ಆಟಗಳಲ್ಲಿ ಕೆಲವಕ್ಕೆ ಸಾಹಿತ್ಯಕ, ಶಾಸ್ತ್ರೀಯ ಚಾರಿತ್ರಿಕ ಗ್ರಂಥಗಳಲ್ಲಿ ವರ್ಣನೆಯ ಅವಕಾಶ ಸಿಕ್ಕಿದ್ದರೆ ಅನೇಕವಕ್ಕೆ ಅಂಥ ಅವಕಾಶ ದೊರೆಯದೇ ಹೋಗಿರುವುದೂ ಉಂಟು. ಎಷ್ಟೋ ಆಟಗಳು ಅಜ್ಞಾತವಾಗಿ ಹುಟ್ಟಿ ಬೆಳೆದು ಬಳಕೆಗೊಂಡು ಸವೆದು ಕಣ್ಮರೆಯಾಗಿರಬಹುದು. ಕರ್ನಾಟಕದ ಜನಪದ ಆಟಗಳ ವೈಶಿಷ್ಟ್ಯ ಮೆಚ್ಚುವಂಥದು. ಅತ್ಯಂತ ಕಡಿಮೆ ಖರ್ಚು, ಅಧಿಕ ಸಂತೋಷಲಾಭ ಇದು ಎಲ್ಲ ಜನಪದ ಆಟಗಳ ಸಾಮಾನ್ಯ ಗುಣ. ಶ್ರೀಮಂತ ಆಟಗಳಾದ ಚದುರಂಗ, ಪಗಡೆ ಮುಂತಾದ ಆಟಗಳಿಗೂ ಅಲ್ಪ ಬಂಡವಾಳ ಸಾಕು. ಜನಪದ ಆಟಗಳಲ್ಲಿ ಒಳಾಂಗಣ ಮತ್ತು ಹೊರಾಂಗಣ ಆಟಗಳು ಎಂದು ಎರಡು

ವಿಧ. ಒಳಾಂಗಣ ಆಟಗಳನ್ನು ಅವರವರ ವಯೋಗುಣ, ಬುದ್ಧಿಮಟ್ಟಕ್ಕೆ ತಕ್ಕಂತೆ ಸ್ತ್ರೀ ಪುರುಷರೀರ್ವರೂ ಆಡಬಹುದು. ಹೊರಾಂಗಣ ಆಟಗಳಲ್ಲಿ ಕುಂಟೇಬಿಲ್ಲೆ, ಕುಂಟಾಟ, ಕಣ್ಣು ಮುಚ್ಚಾಲೆ (ಅವತೇಗುಮ್ಮನಾಟ), ಉಪ್ಪೂಪೆಕಡ್ಡಿ ಇಂಥ ಆಟಗಳನ್ನು ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಆಡಬಹುದು. ಗೋಲಿ, ಗಜ್ಜುಗ, ಚಿಣ್ಣೆಕೋಲು, ಚೆಂಡು, ಬುಗುರಿ, ಮರಕೋತಿ ಇಂಥ ಆಟಗಳನ್ನು ವಿಶೇಷವಾಗಿ ಗಂಡುಮಕ್ಕಳು ಆಡುತ್ತಾರೆ.

ಚಾಮುಂಡಿವಿಹಾರ ಕ್ರೀಡಾಂಗಣ, ಮೈಸೂರು

ಪಾಶ್ಚಾತ್ಯ ವಿದ್ಯಾಭ್ಯಾಸಕ್ರಮ ಕರ್ನಾಟಕದಲ್ಲಿ ಜಾರಿಗೆ ಬಂದಾಗಿನಿಂದ ಶಾಲಾ ಕಾಲೇಜುಗಳಲ್ಲಿ ಪಾಶ್ಚಾತ್ಯ ರೀತಿಯ ಕೆಲವು ಕ್ರೀಡೆಗಳನ್ನು ಪಠ್ಯೇತರ ಚಟುವಟಿಕೆಯಾಗಿ ಪರಿಗಣಿಸಲಾಯಿತು. ಈ ಕ್ರೀಡೆಗಳು ವ್ಯವಸ್ಥಿತವಾಗಿ ಕರ್ನಾಟಕದಲ್ಲಿ ಬಳಕೆಗೆ ಬಂದದ್ದು ಸುಮಾರು 50 ವರ್ಷಗಳ ಹಿಂದೆ. 1927ರಲ್ಲಿ ಆಗಿನ ಮೈಸೂರು ಸರ್ಕಾರ ಒಲಂಪಿಕ್ ಸಮಿತಿಯನ್ನು ನೇಮಕ ಮಾಡಿದ್ದು ಈ ದಿಶೆಯಲ್ಲಿ ಮೊದಲ ಪ್ರಯತ್ನ. ಶಿಕ್ಷಣ ಇಲಾಖೆಯ ನಿರ್ದೇಶಕರು ಅಧ್ಯಕ್ಷರಾಗಿದ್ದ ಈ ಸಮಿತಿ ಮೈಸೂರು ಒಲಂಪಿಕ್ಸ್ ಎಂಬ ಹೆಸರಿನಿಂದ ಹಲವು ಪಂದ್ಯಗಳನ್ನು ನಡೆಸಿತು. ಎ.ಸಿ.ದಾಸ್ ಇದರ ಕಾರ್ಯದರ್ಶಿಯಾಗಿದ್ದರು. ಈ ಸಮಿತಿ ಸು.1947ರವರೆಗೂ ಕಾರ್ಯಪ್ರವೃತ್ತವಾಗಿತ್ತು. ಇದು ನಡೆಸುತ್ತಿದ್ದ ಕ್ರೀಡಾಚಟುವಟಿಕೆಗಳಿಗೆ ಸರ್ಕಾರದ ಪ್ರೋತ್ಸಾಹವೂ ಕ್ರೀಡಾಂಗಣವೊಂದನ್ನು ನಿರ್ಮಿಸಲು ನೆರವೂ ದೊರೆಯಿತು. ಇದರಿಂದಾಗಿ 1946ರಲ್ಲಿ ಬೆಂಗಳೂರಿನಲ್ಲಿ ಕ್ರೀಡಾಂಗಣ ನಿರ್ಮಾಣವಾಯಿತು. ಆ ವರ್ಷ ನಡೆದ 'ಇಂಡಿಯನ್ ಒಲಂಪಿಕ್ ಚಾಂಪಿಯನ್‌ಷಿಪ್' ಪಂದ್ಯ ಈ ಹೊಸ ಕ್ರೀಡಾಂಗಣದಲ್ಲಿಯೇ ನಡೆಯಿತು. ಇಲ್ಲಿಂದ ಮುಂದೆ ಕರ್ನಾಟಕದ ಕ್ರೀಡೇತಿಹಾಸದಲ್ಲಿ ಹೊಸ ಘಟ್ಟ ಆರಂಭವಾಯಿತು. ಸಾರ್ವಜನಿಕರ, ಸಂಘಸಂಸ್ಥೆಗಳ ನೆರವಿನೊಡನೆ ಸರ್ಕಾರದ ಸಹಾಯವೂ ದೊರೆತದ್ದರಿಂದ ಕ್ರೀಡೆಗಳ ಬೆಳೆವಣಿಗೆಗೆ ಹೊಸ ಹುರುಪು ಬಂತು. ಕ್ರಿಕೆಟ್, ಫುಟ್‌ಬಾಲ್, ವಾಲಿಬಾಲ್ ಇತ್ಯಾದಿ ಕ್ರೀಡೆಗಳು ಹೆಚ್ಚು ಪ್ರಚಾರಗೊಂಡವು. ಪ್ರಸ್ತುತ ಲೇಖನದಲ್ಲಿ ಅವುಗಳ ಸಂಕ್ಷಿಪ್ತ ಇತಿಹಾಸವನ್ನು ಕೊಟ್ಟಿದೆ. (ಸಿ.ಎ.ಪಿ)

ಕರ್ನಾಟಕದಲ್ಲಿ ಕ್ರೀಡೆಗಳ ಪ್ರಾಮುಖ್ಯತೆ ಮತ್ತು ಅವುಗಳ ಪ್ರದರ್ಶನ ಹೊಸದೇನಲ್ಲ. ವಿಜಯನಗರ ಸಾಮ್ರಾಜ್ಯದ ನಾಡಹಬ್ಬ ಆಚರಣೆಯ ಸಂದರ್ಭದಲ್ಲಿ ನಡೆಯುತ್ತಿದ್ದ ಉತ್ಸವಗಳಲ್ಲಿ ಕ್ರೀಡಾಸ್ಪರ್ಧೆಗಳು ಬಹಳಷ್ಟು ಆಕರ್ಷಣೆಗೆ ಒಳಗಾಗಿದ್ದವು. ಕುದುರೆಸವಾರಿ, ಕತ್ತಿವರಸೆ ಹಾಗೂ ಕುಸ್ತಿ ಪ್ರಮುಖ ಆಕರ್ಷಣೀಯ ಸ್ಪರ್ಧೆಗಳಾಗಿದ್ದವು. ಇವುಗಳಲ್ಲಿ ಕುಸ್ತಿ ತನ್ನ ಜಾಲವನ್ನು ಭಾರತದಾದ್ಯಂತ ಪ್ರಮುಖವಾಗಿ ಇಡೀ ಕರ್ನಾಟಕವನ್ನು ವಿಶೇಷವಾಗಿ ಆಕರ್ಷಿಸುವಲ್ಲಿ ಯಶಸ್ವಿಯಾಯಿತು. ವಿಜಯನಗರದ ಅನಂತರ ಮೈಸೂರು ಅರಸರ ಆಳಿಕೆಯಲ್ಲಿ ಕ್ರಿಡೆಗಳಿಗೆ ಮಹತ್ವದ ಪ್ರೋತ್ಸಾಹ ಲಭ್ಯವಾಗಿತ್ತು. ಜನಸಮೂಹದ ಕ್ರೀಡೆಯಾಗಿ ಕುಸ್ತಿ ಸ್ಪರ್ಧೆಗಳು ಹಬ್ಬ-ಹರಿದಿನವೆನ್ನದೆ ಜಾತ್ರೆಗಳಲ್ಲಿಯೂ ನಡೆಯಲಾರಂಭಿಸಿದವು ಹಾಗೂ ಕುಸ್ತಿಪಟುಗಳಿಗೆ ಬಹುಮಾನಗಳನ್ನು ಬಿರುದು-ಬಾವಲಿಗಳನ್ನಿತ್ತು ಗೌರವಿಸುವ ಸಂಪ್ರದಾಯವು ಹುಟ್ಟಿಕೊಂಡಿತು.

ಈ ಸಂದರ್ಭದಲ್ಲಿ ಕರ್ನಾಟಕದ ಹೆಮ್ಮೆಯ ಕುಸ್ತಿಪಟುಗಳಾಗಿ ಕೊಪ್ಪಲು ಬಾವಯ್ಯ, ಪೈಲ್ವಾನ್ ಪಾಪಯ್ಯ, ನಿಂಬೆಗೂಂಡಿ, ಬಸಪ್ಪ ಇವರು ಕರ್ನಾಟಕದ ಜನತೆಯ ಪ್ರೀತಿಗೆ ಪಾತ್ರರಾಗಿದ್ದರು (ನೋಡಿ: ಗರಡಿ).

**ದಸರ ಕ್ರೀಡೆಗಳು :** ಮೈಸೂರಿನ ಯದುವಂಶದ ಅರಸರು ವಿಜಯನಗರದ ಪತನದ ಅನಂತರ ಅಲ್ಲಿನ ಸಂಸ್ಕೃತಿಯ ಪ್ರತೀಕವಾದ ನಾಡಹಬ್ಬವನ್ನು ಮೈಸೂರಿನಲ್ಲಿ ಪುನಶ್ಚೇತನಗೊಳಿಸಿದರು. ನವರಾತ್ರಿಯ ಹಬ್ಬವೆಂತಲೂ ದಸರ ಉತ್ಸವವೆಂತಲೂ ಪ್ರಾರಂಭವಾಗುವ ಈ ಹಬ್ಬ ಪ್ರತಿದಿನವೂ ಸ್ಪರ್ಧೆಗಳೊಂದಿಗೆ ಮುಕ್ತಾಯವಾಗುತ್ತಿತ್ತು. ವಿಜಯದಶಮಿಯ ಸಂದರ್ಭದಲ್ಲಿ ಅರಸರ ದರ್ಬಾರಿನಲ್ಲಿ ವಿಶೇಷವಾಗಿ ಜಟ್ಟಿಕಾಳಗ ಹಾಗೂ ಕುಸ್ತಿಗಳನ್ನು ಏರ್ಪಡಿಸಲಾಗುತ್ತಿತ್ತು. ಇಷ್ಟಲ್ಲದೆ ಗೆದ್ದವರಿಗೆ ಬಹುಮಾನ ಬಿರುದುಗಳೊಂದಿಗೆ ಸನ್ಮಾನಿಸಲಾಗುತ್ತಿತ್ತು. ಈ ಸಂಬಂಧ ವಿಶೇಷವಾಗಿ ನಡೆಯುತ್ತಿದ್ದ ಕುಸ್ತಿಸ್ಪರ್ಧೆಗೆ ರಾಜ್ಯ ಹಾಗೂ ರಾಷ್ಟ್ರಗಳಿಂದ ಅತ್ಯುತ್ತಮ ಕುಸ್ತಿಪಟುಗಳನ್ನು ಆಹ್ವಾನಿಸಲಾಗುತ್ತಿತ್ತು. ಪ್ರತಿಷ್ಠೆಯ ಪ್ರತೀಕವಾದ ಈ ಸ್ಪರ್ಧೆಗೆ ವಿಶಿಷ್ಟವಾದ ತಯಾರಿಯೊಂದಿಗೆ ಕುಸ್ತಿಪಟುಗಳಿಗಾಗಿ ಆಯ್ಕೆ ನಡೆಯುತ್ತಿದ್ದು ಇದು ಅರಸರ ಸಮ್ಮುಖದಲ್ಲೇ ನಡೆಯುತ್ತಿದ್ದುದ್ದು ಒಂದು ವಿಶೇಷ. ಇಷ್ಟಲ್ಲದೆ ಬೇರೆ ಸೈನಿಕರ ಕವಾಯಿತು ಪ್ರದರ್ಶನಗಳು, ಕತ್ತಿವರಸೆ, ಕುದುರೆ ಸವಾರಿ, ಭಾರ ಎತ್ತುವ ಸ್ಪರ್ಧೆ ಮೊದಲಾದ ಹತ್ತು ಹಲವು ಕ್ರೀಡಾ ಸ್ಪರ್ಧೆಗಳು ಕುಸ್ತಿಯೊಂದಿಗೆ ಸೇರ್ಪಡೆಯಾಗಲಾರಂಭಿಸಿದವು.

ಮೈಸೂರಿನ ಪೈಲ್ವಾನರು ಕೇವಲ ಮೈಸೂರಿಗಷ್ಟೇ ತಮ್ಮ ಪ್ರತಿಷ್ಠೆ ಬೀರಿರಲಿಲ್ಲ. ಇವರು ಉತ್ತರ ಭಾರತದ ಪೈಲ್ವಾನರ ಗಮನವನ್ನು ಕೂಡ ತಮ್ಮ ಕಡೆ ಸೆಳೆದಿದ್ದರೆಂಬುದಕ್ಕೆ ಜಗಜಟ್ಟಿ ಗಾಮ, ಇಮಾಮ್ ಭಕ್ತಿ, ಹಮೀದ್ ಮತ್ತು ಗಾಮನ ಅಣ್ಣನ ಮಕ್ಕಳಾದ ಬೋಲು ಗೂಗಾ, ಅಸ್ಲಂ, ಅಕ್ರಂ ಮತ್ತು ಅಜಾ, ಗುಂಗಾ, ಗಾಮ, ಕಂದ್ರುಕ್, ಫಜಲ್, ಅಂತೋಣಿ ಮೊದಲಾದವರು ಮೈಸೂರಿಗೆ ಆಗಾಗ್ಗೆ ಬಂದು ಇಲ್ಲಿನ ಜಟ್ಟಿಗಳೊಡನೆ ಬೆರೆತು ಈ ಕಲೆ ಉನ್ನತ ಮಟ್ಟ ಮುಟ್ಟಲು ಸಹಾಯಕರಾಗಿದ್ದುದೇ ಸಾಕ್ಷಿ. ಇಷ್ಟಲ್ಲದೆ ನಾಲ್ವಡಿ ಕೃಷ್ಣರಾಜ ಒಡೆಯರು 1911ರಲ್ಲಿ ದೆಹಲಿಯ ದರ್ಬಾರಿನಲ್ಲಿ ನಡೆದ ಐದನೆಯ ಜಾರ್ಜ್‌ನ ಕಿರೀಟಧಾರಣಾ ಸಮಾರಂಭಕ್ಕೆ ಮೈಸೂರಿನ ಹೆಸರಾಂತ ಪೈಲ್ವಾನರಾಗಿದ್ದ ಪಾಪಯ್ಯ, ದೊಡ್ಡತಿಮ್ಮಯ್ಯ, ಕೊಪ್ಪಲು ಬಸವಯ್ಯ, ಚೆನ್ನಯ್ಯ, ಕುರೇಶಿ ಮುಂತಾದವರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದುದು ಪೈಲ್ವಾನರಿಗೆ ಕೊಡುತ್ತಿದ್ದ ಗೌರವಕ್ಕೆ ಸಾಕ್ಷಿ ಪೈಲ್ವಾನ ಪಾಪಯ್ಯನವರು. ದೆಹಲಿಯ ದರ್ಬಾರಿನಲ್ಲಿಯೂ ಬಹುಮಾನಗಳಿಸಿ ಕರ್ನಾಟಕದ ಕೀರ್ತಿ ಮುಕುಟವನ್ನು ಎತ್ತಿಹಿಡಿದಿದ್ದರು.

**ಕರ್ನಾಟಕದ ಏಕೀಕರಣದ ಅನಂತರ ದಸರ ಕ್ರೀಡಾಕೂಟ :** 1957ರಿಂದ ದಸರ ಕ್ರೀಡೋತ್ಸವ ವ್ಯವಸ್ಥಿತ ರೀತಿಯಲ್ಲಿ ನಡೆಯತೊಡಗಿದೆ. ವಿಜಯನಗರ ಕಾಲದ ಮಹಾನವಮಿ ದಿಬ್ಬದೆದುರು ನಡೆಯುತ್ತಿದ್ದ ಕ್ರೀಡಾ ವೈಭವ ಈಗಿಲ್ಲವಾದರೂ ಅದೇ ಪರಂಪರೆ, ಸಂಪ್ರದಾಯಗಳು ಮುಂದುವರಿದುಕೊಂಡು ಬಂದುವು. ದಸರ ಕ್ರೀಡೆಗಳು ದೈಹಿಕ ಸಾಮರ್ಥ್ಯದ ಪ್ರದರ್ಶನ ಹಾಗೂ ಮನೋಲ್ಲಾಸಗಳನ್ನು ಜನರಿಗೆ ನೀಡುವಂತಹುದೇ ಆಗಿವೆ. ಕರ್ನಾಟಕದ ಏಕೀಕರಣದ ಬಳಿಕ ರಾಜ್ಯಮಟ್ಟದಲ್ಲಿ ದಸರ ಕ್ರೀಡೆಗಳು ಆರಂಭವಾದುವು. 1960ರಲ್ಲಿ ಸ್ಥಾಪಿತವಾದ ರಾಜ್ಯ ಕ್ರೀಡಾಮಂಡಳಿ 1961ರಿಂದ ದಸರ ಕ್ರೀಡೆಗಳನ್ನು ನಡೆಸುವ ಹೊಣೆ ಹೊತ್ತಿದೆ. ಇದು ಮಂಡಳಿಯ ಪ್ರಧಾನ ಕಾರ್ಯಕ್ರಮಗಳಲ್ಲಿ ಒಂದು. ಮೂರು ದಿನಗಳ ಕಾಲ ನಡೆಯುವ ಈ ಕ್ರೀಡೋತ್ಸವಕ್ಕೆ ರಾಜ್ಯದ ಐದು ವಲಯಗಳಾದ ಮೈಸೂರು, ಬೆಂಗಳೂರು ಗ್ರಾಮಾಂತರ, ಬೆಳಗಾಂವಿ, ಗುಲ್ಬರ್ಗ ಮತ್ತು ಬೆಂಗಳೂರಿನ ನಗರಗಳಿಂದ ಆಯ್ದ ಕ್ರೀಡಾಪಟುಗಳು ಭಾಗವಹಿಸುವರು. ಅಥ್ಲೆಟಿಕ್ಸ್‌ಗಳಲ್ಲದೆ ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್, ಟೆನ್ನಿಸ್, ಹಾಕಿ, ಕಬಡ್ಡಿ, ಖೋ-ಖೋ, ಈಜು, ಭಾರವೆತ್ತುವ ಸ್ಪರ್ಧೆ, ಕುಸ್ತಿ, ವಾಲಿಬಾಲ್, ಬ್ಯಾಡ್ಮಿಂಟನ್ ಹಾಗೂ ಅಂಗಸೌಷ್ಟವದ ಸ್ಪರ್ಧೆಗಳೂ ಜರುಗುತ್ತವೆ.

**ಕ್ರೀಡಾ ಸಂಸ್ಥೆಗಳ ಸ್ಥಾಪನೆ ಹಾಗೂ ಅವು ನಡೆದುಬಂದ ಹಾದಿ : ಕರ್ನಾಟಕದಲ್ಲಿ ಆಟೋಟ (ಅಥ್ಲೆಟಿಕ್ಸ್) :** 1927ರಲ್ಲಿ ಅಂದಿನ ಮೈಸೂರು ಸರ್ಕಾರ ಶಿಕ್ಷಣದಲ್ಲಿ ಪಠ್ಯೇತರ ಚಟುವಟಿಕೆಗಳನ್ನು ರೂಢಿಸಲು ಸಾರ್ವಜನಿಕ ಶಿಕ್ಷಣ ನಿರ್ದೇಶಕರನ್ನು ಅಧ್ಯಕ್ಷರನ್ನಾಗಿ ಎ.ಸಿ.ದಾಸ್‌ರವರನ್ನು ಗೌರವ ಕಾರ್ಯದರ್ಶಿಯನ್ನಾಗಿ ನೇಮಿಸುವುದರ ಮೂಲಕ ಮೈಸೂರು ರಾಜ್ಯದಲ್ಲಿ ಆಟೋಟಗಳಿಗೆ (ಅಥ್ಲೆಟಿಕ್ಸ್) ಚಾಲನೆಯನ್ನು ನೀಡಿತು. ಈ ಸಮಿತಿ 1927 ರಿಂದ 1947ರ ತನಕ ವಾರ್ಷಿಕ ಕ್ರೀಡಾ ಚಾಂಪಿಯನ್‌ಷಿಪ್‌ಗಳನ್ನು ಮೈಸೂರು ಒಲಂಪಿಕ್ಸ್ ಎಂದು ಕರೆಯುವುದರ ಮೂಲಕ ನಡೆಸಲಾಗುತ್ತಿತ್ತು. ಎ.ಸಿ.ದಾಸ್‌ರವರು ಪಟ್ಟ ಪರಿಶ್ರಮಕ್ಕೆ ಪೂರಕವಾದಂತೆ ಹಲವು ಉತ್ಸಾಹೀ ಯುವಕರು ಕೈಜೋಡಿಸಿ ಕೆಲವಾರು ಸ್ಪರ್ಧೆಗಳನ್ನು ಈ ಸಂದರ್ಭದಲ್ಲಿ ನಡೆಸಿದರು. ಎ.ಸಿ.ದಾಸ್‌ರ ಪರಿಶ್ರಮ ಅಥ್ಲೆಟಿಕ್ಸ್‌ನ ಬೆಳವಣಿಗೆಗೆ ಒಂದು ಮೈಲಿಗಲ್ಲಾಗಿ ಪರಿಣಮಿಸಿತು. ಒಲಂಪಿಕ್ ಸಮಿತಿಯ ಕಾರ್ಯದರ್ಶಿಯಾಗಿ ಸತತವಾದ ಪ್ರಯತ್ನದೊಂದಿಗೆ ಬೆಂಗಳೂರಿನ ಕ್ರೀಡಾಂಗಣವನ್ನು ನಿರ್ಮಾಣ ಮಾಡುವಂತೆ ಅಂದಿನ ಮೈಸೂರು ಸರ್ಕಾರಕ್ಕೆ ಒತ್ತಡ ತಂದು ಯಶಸ್ವಿಯಾದದ್ದು ಇವರ ಕ್ರಿಯಾಶೀಲತೆಗೆ ಹಿಡಿದ ಕೈಗನ್ನಡಿ. ಇಡೀ ರಾಜ್ಯಕ್ಕೆ ಅಥ್ಲೆಟಿಕ್ಸ್ ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶದಿಂದ 1946ರಲ್ಲಿ ಅಖಿಲ ಭಾರತ ಒಲಂಪಿಕ್ ಚಾಂಪಿಯನ್‌ಷಿಪ್‌ನ್ನು ಸಂಘಟಿಸುವುದರ ಮೂಲಕವೇ ಇಂದಿನ ಕಂಠೀರವ ಕ್ರೀಡಾಂಗಣವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. 1946ರಲ್ಲಿ ಪ್ರಜಾಪ್ರಭುತ್ವದ ತಳಹದಿಯಡಿ ಮೈಸೂರು ರಾಜ್ಯ ಅಮೆಚೂರ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಪೊಲೀಸ್ ವರಿಷ್ಠಾಧಿಕಾರಿ ಚಾಂಡಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಇದು ಕರ್ನಾಟಕದ ಕ್ರೀಡಾಬೆಳವಣಿಗೆಯ ದೃಷ್ಟಿಯಲ್ಲಿ ಮಹತ್ತರವಾದ ಹೆಜ್ಜೆ. ಇವರ ಸಹಾಯಕ್ಕಾಗಿ ಬೆಂಗಳೂರು ಪುರಸಭೆ, ಮೈಸೂರು ರಾಜ್ಯ ಕ್ರೀಡಾಪರಿಷತ್ತು ಹಾಗೂ ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳು ಇದರೊಂದಿಗೆ ಸಂಯೋಜಿತಗೊಂಡು ಕಾರ್ಯನಿರ್ವಹಿಸಲು ಮುಂದಾದವು. ಮೈಸೂರು ರಾಜ್ಯ ಅಮೆಚೂರ್ ಅಥ್ಲೆಟಿಕ್ಸ್ ಸಂಸ್ಥೆ ತನ್ನ ಕಾರ್ಯವ್ಯಾಪ್ತಿಯನ್ನು ಎಲ್ಲ ತಾಲ್ಲೂಕು, ಜಿಲ್ಲೆ ಹಾಗೂ ಶಾಲಾ ಕಾಲೇಜುಗಳಿಗೆ ವಿಸ್ತರಿಸುವುದರ ಮೂಲಕವೇ ತನ್ನ ಮೂಲ ಉದ್ದೇಶವಾದ ಕ್ರೀಡಾ ಬೆಳವಣಿಗೆಗೆ ಮುಂದಾಯಿತು.

ಕರ್ನಾಟಕ ಒಲಂಪಿಕ್ಸ್ ಸಂಸ್ಥೆ ತನ್ನ ಕಾರ್ಯವೈಖರಿಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತ ಬಂದಿದೆ. ಬಹಳಷ್ಟು ಪ್ರಮುಖವಾದ ಕ್ರೀಡಾಕೂಟಗಳನ್ನು ಸಂಘಟಿಸಿದ ಹೆಗ್ಗಳಿಕೆಯೊಂದಿಗೆ ಹಲವಾರು ಕ್ರೀಡಾಪಟುಗಳ ಬೆಳವಣಿಗೆಗೆ ಕಾರಣವಾಗಿದೆ. ಕರ್ನಾಟಕದ ಮಹಿಳೆಯರಾದ ಅಶ್ವಿನಿ ನಾಚಪ್ಪ (ನೋಡಿ), ವಂದನಾರಾವ್, ಏಂಜಲ್ ಮೇರಿ ಜೋಸೆಫ್ (ನೋಡಿ), ರೀತ್ ಅಬ್ರಹಂ, ಎಂ.ಕೆ.ಆಶಾ ಹಾಗೂ ಸುನಿಲ್ ಸುಂದರರಾಜ್ ಶೆಟ್ಟಿ, ಉದಯ್ ಕೆ.ಪ್ರಭು ಮತ್ತು ಈಶನ್ - ಈ ಮೊದಲಾದ ಪುರುಷ ಕ್ರೀಡಾಪಟುಗಳ ಅಭಿವೃದ್ಧಿಗೂ ನೆರವಾಗಿದೆ. (ಎಸ್.ಆರ್.ಯು.)

**ಅಥ್ಲೆಟಿಕ್ಸ್ :** 1952ರಲ್ಲಿ ಮೈಸೂರು ರಾಜ್ಯ ಅಮೆಚೂರ್ ಅಥ್ಲೆಟಿಕ್ಸ್ ಸಂಸ್ಥೆ ಸ್ಥಾಪಿತವಾಯಿತು. ಈ ಸಂಸ್ಥೆಯ ಸ್ಥಾಪನೆಗೆ ಕಾರಣರಾದವರೆಂದರೆ ಕೆ.ಎ.ನೆಟ್ಟಕಲ್ಲಪ್ಪ, ಎ.ಆರ್.ಚಿಕ್ಕಪಾಪಯ್ಯ, ಪಿ.ಐ.ಜೋಸೆಫ್ ಮತ್ತು ಕೆ.ಗುಂಡುರಾವ್. ಸಿ.ಚಾಂಡಿ ಎಂಬುವರು ಈ ಸಂಸ್ಥೆಯ ಮೊದಲ ಅಧ್ಯಕ್ಷರಾದರು. ಈ ಸಂಸ್ಥೆಯ ಉತ್ತೇಜನದಿಂದ ಕೆನೆತ್ ಪೊವೆಲ್, ಡೆರಿಕ್ ಬೂಸ್, ಹೆನ್ರಿ ರೆಬೆಲೋ, ಎ.ಪಿ.ರಾಮಸ್ವಾಮಿ, ಸಿ.ಎಂ.ಮುತ್ತಯ್ಯ, ಬಿರಾದಾರ್, ಉದಯ ಪ್ರಭು ಮೊದಲಾದ ಅನೇಕ ಉತ್ತಮ ಆಟಗಾರರು ಕರ್ನಾಟಕದಲ್ಲಿ ತರಪೇತು ಹೊಂದಿದ್ದರು. 1964ರಲ್ಲಿ ಒಲಂಪಿಕ್ಸ್‌ನಲ್ಲಿ ಕರ್ನಾಟಕದ ಪರವಾಗಿ ಇಬ್ಬರು ಅಥ್ಲೆಟಿಕ್ಸ್ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಇವರಲ್ಲಿ ಒಬ್ಬರು ಕೆನೆತ್ ಪೊವೆಲ್. ಇವರಿಗೆ ಅರ್ಜುನಪ್ರಶಸ್ತಿ ದೊರೆತಿದೆ. ಇವರು ಒಲಂಪಿಕ್ಸ್, ಕಾಮನ್‌ವೆಲ್ತ್ ಮತ್ತು ಇತರ ಕ್ರೀಡೆಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಮಹಿಳೆಯರಲ್ಲಿ ನಿರ್ಮಲಾ ಉತ್ತಯ್ಯ, ಡಯಾನಾ ಸೈಮಸ್, ಐರೀನ್ ಸಲ್ಡಾನಾ, ಮಾರಿ ವರ್ಗಿಸ್, ಜಲಜನಾಥನ್ ಮತ್ತು ಏಂಜಲ್ ಮೇರಿ ಭಾರತದ ಪ್ರತಿನಿಧಿಗಳಾಗಿ ಸ್ಪರ್ಧೆಗಳಲ್ಲಿ ಪಾಲುಗೊಂಡಿದ್ದಾರೆ.

**ಬಾಲ್‌ಬ್ಯಾಡ್ಮಿಂಟನ್ :** ತಂಜಾವೂರಿನಲ್ಲಿ ಹುಟ್ಟಿದ್ದೆಂದು ಪ್ರತೀತಿ ಇರುವ ಈ ಆಟ ಕರ್ನಾಟಕದಲ್ಲಿ ಜನಪ್ರಿಯವಾಗಿದೆ. ಮೈಸೂರು ರಾಜ್ಯ ಬಾಲ್‌ಬ್ಯಾಡ್ಮಿಂಟನ್ ಸಂಸ್ಥೆ ಸ್ಥಾಪಿತವಾದದ್ದು 1955ರಲ್ಲಿ. ಈ ಸಂಸ್ಥೆ ಬಾಲ್‌ಬ್ಯಾಡ್ಮಿಂಟನ್ ಫೆಡರೇಷನ್ ಆಫ್ ಇಂಡಿಯಾದ ಸದಸ್ಯತ್ವವನ್ನು ಪಡೆದಿದೆ. ಮುಖ್ಯವಾಗಿ ರಾಜ್ಯಮಟ್ಟದ, ಕೆಲವು ಬಾರಿ ರಾಷ್ಟ್ರಮಟ್ಟದ ಪಂದ್ಯಗಳನ್ನು ನಡೆಸುವ ಈ ಸಂಸ್ಥೆ ಒಂದು ವರ್ಷದಲ್ಲಿ ಪುರುಷರ, ಮಹಿಳೆಯರ ಮತ್ತು ಬಾಲಕ, ಬಾಲಕಿಯರ ವಿಭಾಗಗಳಿಂದ ಸುಮಾರು 300 ಪಂದ್ಯಗಳನ್ನು ವ್ಯವಸ್ಥೆಗೊಳಿಸುತ್ತದೆ. ಸುಮಾರು 100ಕ್ಕೂ ಹೆಚ್ಚು ಕ್ಲಬ್‌ಗಳು ಈ ಸಂಸ್ಥೆಯ ಸದಸ್ಯತ್ವ ಪಡೆದಿವೆ. ಇದಲ್ಲದೆ ರಾಜ್ಯದಲ್ಲಿರುವ ಬೇರೆಬೇರೆ ಕ್ಲಬ್ಬಿನವರು ಮತ್ತು ಶಾಲಾ ಕಾಲೇಜುಗಳೂ ಕೂಡ ರಾಜ್ಯಮಟ್ಟದ ಪಂದ್ಯಗಳನ್ನು ಏರ್ಪಡಿಸುವುದುಂಟು. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಪಂದ್ಯಗಳಲ್ಲಿ ರಾಜ್ಯದ ಬ್ಯಾಡ್ಮಿಂಟನ್ ಆಟಗಾರರು ಭಾಗವಹಿಸಿದ್ದಾರೆ. ಪ್ರಸಿದ್ಧ ಬ್ಯಾಡ್ಮಿಂಟನ್ ಆಟಗಾರ್ತಿಯಾದ ಜಯಮ್ಮ ಅವರಿಗೆ ಅರ್ಜುನಪ್ರಶಸ್ತಿ ಬಂದಿದೆ. ಪ್ರಕಾಶ್ ಪಡುಕೋಣೆ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ.

**ಬ್ಯಾಸ್ಕೆಟ್ ಬಾಲ್ :** 1891ರಲ್ಲಿ ಅಮೆರಿಕದಲ್ಲಿ ಆರಂಭವಾದ ಈ ಆಟ 1920ರಲ್ಲಿ ಭಾರತದಲ್ಲೂ ಮೊದಲಾಯಿತು. ಕ್ಯಾಪ್ಟನ್ ವಿಜಯಸಾರಥಿ ಮತ್ತು ಎ.ಸಿ.ದಾಸ್ ಇವರ ಪ್ರಯತ್ನದಿಂದ ಈ ಆಟ ಕರ್ನಾಟಕದಲ್ಲಿ ಪ್ರಚಾರಕ್ಕೆ ಬಂತು. 1941ರಲ್ಲಿ ಮೈಸೂರು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಸ್ಥಾಪಿತವಾಯಿತು. 1946ರಲ್ಲಿ ಮೈಸೂರು ಪಂಗಡ ರಾಷ್ಟ್ರೀಯಪ್ರಶಸ್ತಿ ಗೆದ್ದಿತ್ತು. 1951ರಲ್ಲಿ ನಡೆದ ಏಷ್ಯನ್ ಕ್ರೀಡೆಗಳಲ್ಲಿ ಕರ್ನಾಟಕದಿಂದ ಲಕ್ಷ್ಮೀನಾರಾಯಣ, ಪಾಪಯ್ಯ ಮತ್ತು ಅಪ್ಪಯ್ಯ ಆಡಿದರು. ಕರ್ನಾಟಕದಲ್ಲಿ ಮಹಿಳಾ ಆಟಗಾರರ ಮಟ್ಟ ಕೂಡ ಉತ್ತಮವಾಗಿದೆ. 1960, 1963, 1964ರಲ್ಲಿ ಮಹಿಳಾ ಆಟಗಾರರೂ ರಾಷ್ಟ್ರೀಯ ಪ್ರಶಸ್ತಿ ಗೆದ್ದದ್ದು ಇಲ್ಲಿ ಉಲ್ಲೇಖನಾರ್ಹ. 1960ರಲ್ಲಿ ಬಾಲಕರ ತಂಡವೂ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿತ್ತು.

ರಾಜ್ಯದಲ್ಲಿ ಮಿನಿ ಬ್ಯಾಸ್ಕೆಟ್‌ಬಾಲ್ ಪಂದ್ಯ ಆರಂಭವಾದದ್ದು ಇತ್ತೀಚೆಗೆ. 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕರು ಈ ಆಟವನ್ನು ಆಡಬಹುದಾಗಿದೆ. 1970ರಲ್ಲಿ ಎಸ್.ಎ.ರಂಗದೇವ ಮತ್ತು ಕೆ.ರಾಜಗೋಪಾಲ್ ಬಾಂಕಾಕ್ ಏಷ್ಯನ್ ಕ್ರೀಡೆಗಳಲ್ಲಿ ಕರ್ನಾಟಕದ ಪರವಾಗಿ ಭಾರತವನ್ನು ಪ್ರತಿನಿಧಿಸಿದ್ದರು. ಅದೇವರ್ಷ ಎ.ಸಿ.ಪುಷ್ಪ ಕೌಲಾಲಂಪುರ್‌ನಲ್ಲಿ ನಡೆದ ಏಷ್ಯನ್ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಭಾಗವಹಿಸಿದ್ದರು. ಅದೇವರ್ಷ ಏಷ್ಯನ್ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಬಾಲಕರ ಪರವಾಗಿ ಕರ್ನಾಟಕದಿಂದ ಎ.ಅನಿಲ್‌ಕುಮಾರ್ ಆಡಿದರು. ಬಿ.ಮುನಿಯಪ್ಪ ಭಾರತದ ಪ್ರತಿನಿಧಿಯಾಗಿ ಎರಡನೆಯ ಏಷ್ಯನ್ ಗೇಮ್ಸ್‌ನಲ್ಲಿ ಆಡಿದ್ದರು. (ಸಿ.ಎ.ಪಿ.)

**ಫುಟ್‌ಬಾಲ್ :** ಭಾರತದಲ್ಲಿ ಈ ಆಟ 18ನೆಯ ಶತಮಾನದಲ್ಲಿ ಆರಂಭವಾಯಿತು. ಅಖಿಲ ಭಾರತ ಫುಟ್‌ಬಾಲ್ ಸಂಸ್ಥೆ ಸ್ಥಾಪಿತವಾದ ವರ್ಷವೇ (1937) ಕರ್ನಾಟಕದಲ್ಲೂ ಮೈಸೂರು ರಾಜ್ಯ ಫುಟ್‌ಬಾಲ್ ಸಂಸ್ಥೆ ಸ್ಥಾಪಿತವಾಯಿತು. ಇದಕ್ಕೆ ಮೂಲ ಕಾರಣರಾದವರು ಅಂದಿನ ದೈಹಿಕಶಿಕ್ಷಣ ಅಧಿಕಾರಿಗಳಾಗಿದ್ದ ವೆಂಕಟರಮಣ ಎಂಬುವವರು. 1940ರ ಸುಮಾರಿನಲ್ಲಿ ಕರ್ನಾಟಕದಲ್ಲಿ ಬೆಂಗಳೂರು ಬ್ಲೂಸ್, ಬೆಂಗಳೂರು ಸ್ಪೋರ್ಟಿಂಗ್, ಪೊಲೀಸ್ (ಬೆಂಗಳೂರು ಮತ್ತು ಮೈಸೂರು), ಯುನೈಟೆಡ್ ಫ್ರೆಂಡ್ಸ್ ಮತ್ತು ಇಟಾಲಿಯನ್ ಪ್ರಿಸಿಡನ್ಸ್ ಆಫ್ ವಾರ್ ಮೊದಲಾದ ತಂಡಗಳು ತುಂಬ ಪ್ರಸಿದ್ಧವಾಗಿದ್ದುವು.

ಬ್ರಿಟಿಷ್ ಆಳ್ವಿಕೆಯಲ್ಲಿ ಸೈನ್ಯದ ತುಕಡಿಗಳಲ್ಲಿ ಮನರಂಜನೆ ಹಾಗೂ ದೈಹಿಕ ಸಾಮರ್ಥ್ಯಕ್ಕಾಗಿ ಇದ್ದ ಈ ಕ್ರೀಡೆ, ಮೈಸೂರು ಮತ್ತು ಬೆಂಗಳೂರಿನಲ್ಲಿ ಮೊಟ್ಟ ಮೊದಲು ಪ್ರಾರಂಭವಾಯಿತು. ಬೆಂಗಳೂರು ಫುಟ್‌ಬಾಲ್ ಕಮಿಟಿ ಮತ್ತು ಮೈಸೂರು ಫುಟ್‌ಬಾಲ್ ಕಮಿಟಿ ಎಂಬ ನಾಮಾಂಕಿತಗೊಂಡ ಈ ಎರಡು ಸಮಿತಿಗಳು ಇಡೀ ಫುಟ್‌ಬಾಲ್ ಆಟದ ಹಿಡಿತವನ್ನು ಹೊಂದಿದ್ದುವು. ಕರ್ನಾಟಕದಲ್ಲಿ ಫುಟ್‌ಬಾಲ್‌ಗೆ ಮತ್ತೊಂದು ಸ್ಥಾನವೆಂದರೆ ಕೋಲಾರದ ಚಿನ್ನದ ಗಣಿ. ಇಲ್ಲಿ ಬಹಳಷ್ಟು

ಮೇಲಧಿಕಾರಿಗಳು ಇಂಗ್ಲಿಷ್‌ನವರಿದ್ದುದರಿಂದ ಇಲ್ಲಿಯೂ ಈ ಆಟ ತನ್ನ ಪ್ರಾಬಲ್ಯ ಹೊಂದಿತ್ತು. ಮೈಸೂರಿನಲ್ಲಿ ಈ ಆಟಕ್ಕೆ ರಾಜಾಶ್ರಯ ದೊರೆಯುತ್ತಿತ್ತು. ಆ ಸಂದರ್ಭದಲ್ಲಿ ಹಲವು ಫುಟ್‌ಬಾಲ್ ಕ್ಲಬ್‌ಗಳು ಹುಟ್ಟಿಕೊಂಡವು.

ಇಂದು ಈ ಕ್ಲಬ್‌ಗಳು ತನ್ನ ಗತಕಾಲದ ವೈಭವವನ್ನು ಸಾರಿ ಇತಿಹಾಸದ ಪುಟಗಳನ್ನು ಸೇರಿವೆ. ಹತ್ತಾರು ತಂಡಗಳನ್ನು ಹೊಂದಿದ ಮೈಸೂರು ಸಂಸ್ಥಾನ ತನ್ನದೇ ಆದ ಕೆಲವು ಚಾಂಪಿಯನ್‌ಶಿಪ್‌ಗಳನ್ನು ನಡೆಸುವುದರ ಮೂಲಕ ಆಟಗಾರರ ಮತ್ತು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿತ್ತು. ಫುಟ್‌ಬಾಲ್ ಆಟದ ಈ ಬೆಳವಣಿಗೆ ಬೆಂಗಳೂರಿನ ಕೆಲವು ಆಟಗಾರರಿಗೆ ತಮ್ಮದೇ ಆದ ಫುಟ್‌ಬಾಲ್ ಸಂಸ್ಥೆ ಪ್ರಾರಂಭಿಸಬೇಕೆಂಬ ಹಂಬಲ ಕಾಡತೊಡಗಿತು. ಇದಕ್ಕಾಗಿ ಎಲ್ಲ ತಂಡದಿಂದಲೂ ಒಬ್ಬ ಸದಸ್ಯನನ್ನೊಳಗೊಂಡಂತೆ ಕ್ಲಬ್ ಪ್ರಾರಂಭಿಸುವ ಸದುದ್ದೇಶದಿಂದ, ಮದರಾಸಿನ ಜಿಲ್ಲಾ ಕ್ರೀಡಾಸಮಿತಿಯ ಕಾರ್ಯದರ್ಶಿಯರನ್ನು ಸಂಪರ್ಕಿಸಿ ಅವರೊಂದಿಗೆ ಚರ್ಚಿಸಿದ ಅನಂತರ ಈ ಸಂಬಂಧವಾಗಿ ನಿಯಮಾವಳಿಗಳನ್ನು ರೂಪಿಸಲಾಯಿತು. (1933). 1971ರ ವೇಳೆಗೆ ಕರ್ನಾಟಕದಲ್ಲಿ 34 ಫುಟ್‌ಬಾಲ್ ಸಂಸ್ಥೆಗಳಿದ್ದುವು.

ಕರ್ನಾಟಕ ಭಾರತದ ಫುಟ್‌ಬಾಲ್‌ನ ಇತಿಹಾಸದಲ್ಲಿ ಮಹತ್ವ ಸ್ಥಾನವನ್ನು ಅಲಂಕರಿಸಿದ್ದ ದಿನಗಳವು: ಮೈಸೂರಿನ ಹಾಗೂ ಬೆಂಗಳೂರಿನ ತಂಡಗಳಿಂದ ಪ್ರತಿ ವರ್ಷವೂ 2-3 ಆಟಗಾರರು ಪ್ರತಿಷ್ಠಿತ ಬೆಂಗಾಲ್ ತಂಡಗಳಿಗೆ ಆಡುತ್ತಿದ್ದ ಈ ರೀತಿಯ ವಲಸೆಯನ್ನು 1934ರಲ್ಲೇ ನಾವು ಗುರುತಿಸಬಹುದಾಗಿದೆ. ಇಂದಿಗೂ ಈ ಕ್ರಮ ಮುಂದುವರೆಯುತ್ತಿದೆ. ಕರ್ನಾಟಕದ ಆಟಗಾರರಿಲ್ಲದೆ ಭಾರತ ತಂಡವಿಲ್ಲ ಎಂಬ ನಾಣ್ಣುಡಿಗೆ ಬದ್ಧವಾಗಿದ್ದ ಮೈಸೂರು ರಾಜ್ಯದ ಫುಟ್‌ಬಾಲ್ ಆಟಗಾರರು, ಅಂತಾರಾಷ್ಟ್ರೀಯ ಹಾಗೂ ಒಲಂಪಿಕ್‌ಗಳಲ್ಲಿ ತಮ್ಮ ಛಾಪು ಒತ್ತಿದ ವೀರರೂ ಹೌದು. ಇದಕ್ಕೆ ಪೂರಕವಾಗಿ ರಾಷ್ಟ್ರೀಯ ಫುಟ್‌ಬಾಲ್ ಛಾಂಪಿಯನ್‌ಷಿಪ್‌ಗಳಲ್ಲಿ ಮೈಸೂರು ರಾಜ್ಯ ತಂಡ 1946, 1952, 1967 ಮತ್ತು 1969ರಲ್ಲಿ ತನ್ನ ಆಧಿಪತ್ಯವನ್ನು ಪಡೆದು ಇಡೀ ಭಾರತವೇ ನಿಬ್ಬೆರಗಾಗುವಂತೆ ಮಾಡಿತು. ಇಷ್ಟಲ್ಲದೆ ಮೈಸೂರು ರಾಜ್ಯ ರಾಷ್ಟ್ರೀಯ ಪಂದ್ಯಾಟವನ್ನು 1941ರ ವೇಳೆಗೆ, ನಾಲ್ಕು ಬಾರಿ ಪ್ರಾಯೋಜಿಸಿ ಯಶಸ್ಸು ಪಡೆದಿತ್ತು.

ಲಂಡನ್ನಿನಲ್ಲಿ ಜರುಗಿದ (1948) ಒಲಂಪಿಕ್ಸ್‌ನಲ್ಲಿ ಮೊದಲ ಸಲ ಭಾರತ ಭಾಗವಹಿಸಿತು. ಇದುವರೆಗೆ ಒಲಂಪಿಕ್ಸ್‌ನಲ್ಲಿ ಭಾರತದ ಪರವಾಗಿ ಕರ್ನಾಟಕವನ್ನು ಪ್ರತಿನಿಧಿಸಿದ ಕೆಲವರ ಹೆಸರು ಹೀಗಿದೆ: ವರದರಾಜ್ (1948, 1952), ಎಸ್.ಎ.ಬಶೀರ್ (1948), ವಜ್ರವೇಲು (1948), ಎ.ಖಾನ್ (1948), ಜೆ.ಅಂತೋಣಿ (1952), ಎಂ.ಎ.ಸತ್ತಾರ್ (1952), ಜಿ.ಷಣ್ಮುಗಂ (1952), ವೆಂಕಟೇಶ್ (1952), ಕೆಂಪಯ್ಯ (1952), ಕಣ್ಣನ್ (1946, 1952, 1967) -ಈ ವರ್ಷಗಳಲ್ಲಿ ಕರ್ನಾಟಕ ತಂಡ ರಾಷ್ಟ್ರೀಯ ಚಾಂಪಿಯನ್‌ಷಿಪ್ ಪ್ರಶಸ್ತಿ ಪಡೆದಿವೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಫುಟ್‌ಬಾಲ್ ಕ್ರೀಡಾಂಗಣವೊಂದನ್ನು ನಿರ್ಮಿಸಲಾಗುತ್ತಿದೆ. ಮಹಿಳೆಯರು ಕೂಡ ಈ ಆಟದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಭಾರತದ ಅಗ್ರಮಾನ್ಯ ಆಟಗಾರರ ಪಟ್ಟಿಯಲ್ಲಿ ಹಾಗೂ ಭಾರತದ ಫುಟ್‌ಬಾಲ್ ಇತಿಹಾಸದಲ್ಲಿ ಬೆಂಗಳೂರಿನ ಬ್ಲೂಸ್ ಹಾಗೂ ಮೈಸೂರಿನ ಪ್ರೊಶಿಯಲ್ಸ್ ಸೋಶಿಯಲ್ಸ್ ಹೆಸರನ್ನು ಎಂದೆಂದಿಗೂ ಉಳಿಯುವಂತೆ ಮಾಡಿದ ಲಕ್ಷ್ಮೀನಾರಾಯಣ, ರಮಣ, ಧನರಾಜ್, ಅಹಮದ್, ಖಾನ್, ರಾಮನ್, ಟಿ.ಶಣ್ಮುಗನ್, ಅರಮುನಿಗೇಯನ್, ಅಲಪಾತ್ ಅಹಮದ್, ಕೃಷ್ಣೋಜಿರಾವ್ -ಇವರು ಇತರ ಮುಖ್ಯ ಆಟಗಾರರು.

ಜನವರಿ 1969ರಲ್ಲಿ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಮಹತ್ತರವಾದ ಸ್ಥಾನವನ್ನು ಗಳಿಸಿದ ಸಂದರ್ಭ. ಬಾಂಕಾಕ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ರ ಜೊತೆಯಲ್ಲಿ ಆಟವಾಡಲು ದೊರೆತ ಅವಕಾಶ. ಭಾರತದ ಚಾಂಪಿಯನ್‌ರಾದ ಕರ್ನಾಟಕ ರಾಜ್ಯ ತಂಡಕ್ಕೆ ದೊರೆತ ಆಮಂತ್ರಣವೂ ಹೌದು. ಇದಾದ ಬಳಿಕ ಅಂದಿನ ಕರ್ನಾಟಕದ ಮುಖ್ಯ ಮಂತ್ರಿಗಳಾದ ಡಿ.ದೇವರಾಜ ಅರಸುರವರು ಸ್ವತಃ ಆಸಕ್ತಿ ವಹಿಸಿ ಫುಟ್‌ಬಾಲ್ ಕ್ರೀಡಾಂಗಣ ರೂಪು ಪಡೆಯಲು ಕಾರಣರಾದರು. 1975ರಲ್ಲಿ ಫುಟ್‌ಬಾಲ್ ಕ್ರೀಡಾಂಗಣವನ್ನು ನಾಡಿನ ಜನತೆಗೆ ಅರ್ಪಿಸಲಾಯಿತು. ಈ ಕಾರ್ಯದಲ್ಲಿ ಫುಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾಗಿದ್ದ ಎ.ಟಿ.ವಿಜಯರಂಗಮ್ ಅವರ ಸೇವೆಯೂ ಅಪಾರವಾದದ್ದು.

ಕರ್ನಾಟಕದ ಫುಟ್‌ಬಾಲ್ ಆಟ ಜನಪ್ರಿಯತೆಯನ್ನು ಗಳಿಸಿಕೊಂಡಿತು. ಎಷ್ಟು ಬೆಳೆಯಿತೆಂದರೆ ಕಿಟ್ಟಿಯಂಥ' ಮಹಾನ್ ಫುಟ್‌ಬಾಲ್ ಆಟಗಾರರು ತಯಾರಾದರು. ಕಿಟ್ಟಿಯವರ ಆಟವನ್ನು ಕಣ್ಣಾರೆ ಕಂಡವರು ಅವರ ಆಟ ಈಗಿನ ಬೈಚುಂಗ್‌ಬುಟಿಯ ಅವರನ್ನು ಮೀರಿಸುವಂತಿತ್ತು ಎನ್ನುತ್ತಾರೆ. ವರದರಾಜು ಅವರ ಗೋಲ್ ಕೀಪಿಂಗ್ ವೈಖರಿ, ಬಶೀರ್ ಅವರ ಆಟ, ವೇಲುವಿನ ಬರ್ಜರಿ ಸೆಣಸಾಟ ಕರ್ನಾಟಕದ ಜನಮನದಲ್ಲಿ ಇನ್ನೂ ಉಳಿದಿದೆ.

**ಹಾಕಿ :** 1930ರಲ್ಲಿ ಬೆಂಗಳೂರಿನಲ್ಲಿ ಹಾಕಿ ಸಂಸ್ಥೆ ಸ್ಥಾಪನೆಯಾದಂದಿನಿಂದ ಕರ್ನಾಟಕದಲ್ಲಿ ಹಾಕಿ ಆಟ ಪ್ರಾರಂಭವಾಯಿತು. ಹಾಕಿ ಇತಿಹಾಸದಲ್ಲಿ ಕೊಡಗು ಜಿಲ್ಲೆಗೆ ಅಗ್ರಸ್ಥಾನ ದೊರೆತಿದೆ. ಪೀಟರ್, ಉನ್ನಿಕೃಷ್ಣನ್, ಗೋವಿಂದ, ಗಣೇಶ್, ಕಾಳಯ್ಯ ಇವರು ಭಾರತದ ಪರವಾಗಿ ಒಲಂಪಿಕ್ಸ್‌ಗೆ ಆಡಿದ ಆಟಗಾರರು. ಈ ಆಟ ಮಹಿಳೆಯರಲ್ಲೂ ಜನಪ್ರಿಯವಾಗುತ್ತಿದೆ. ಕರ್ನಾಟಕ ಮಹಿಳಾ ಹಾಕಿ ತಂಡ ಅನೇಕ ಬಾರಿ ರಾಷ್ಟ್ರೀಯ ಹಾಕಿ ಪ್ರಶಸ್ತಿ ಗಳಿಸಿದೆ. ಕರ್ನಾಟಕದ ಉತ್ತಮ ಹಾಕಿ ಆಟಗಾರ್ತಿ ಎಲ್ವಿರಾ ಬ್ರಿಟೊ ಅವರಿಗೆ ಅರ್ಜುನ ಪ್ರಶಸ್ತಿ ದೊರೆತಿದೆ.

ಬ್ರಿಟಿಷರ ಆಗಮನದ ಅನಂತರ ಭಾರತದಲ್ಲಿ ಹಾಕಿ ಆಟಕ್ಕೆ ಪ್ರಾಮುಖ್ಯ ಲಭ್ಯವಾಯಿತು. ಕರ್ನಾಟಕದಲ್ಲಿ ಅದರಲ್ಲೂ ಅಂದಿನ ಮೈಸೂರು ರಾಜ್ಯದ ಪ್ರಮುಖ ನಗರಗಳಾದ ಬೆಂಗಳೂರು ಮತ್ತು ಮೈಸೂರು ಸೇನಾ ತುಕಡಿಗಳ ಕೇಂದ್ರ ಸ್ಥಾನವಾದ ಕಾರಣ ಆ ಎರಡೂ ಕೇಂದ್ರಗಳಲ್ಲಿ ಹಾಕಿ ಆಟ ಪ್ರಬಲವಾಗಿ ಬೆಳೆಯಿತು. ಅದರಲ್ಲೂ ಕೇಂದ್ರ ಸೇನಾ ತುಕಡಿಗಳಿದ್ದ ಬೆಂಗಳೂರು ಆ ಆಟದ ಬೆಳೆವಣಿಗೆಗೆ ಪರೋಕ್ಷವಾಗಿ ಇಂಬು ಕೊಟ್ಟಿತು.

ಬೆಂಗಳೂರು ಹಾಕಿ ಸಂಸ್ಥೆ ಪ್ರಾರಂಭವಾದ ಅನಂತರ (1920) ಇಲ್ಲಿನ ಸೇನಾ ಸಿಪಾಯಿಗಳೊಂದಿಗೆ ಈ ಆಟದ ಪಂದ್ಯಗಳು ಏರ್ಪಾಡಾಗುತ್ತಿದ್ದುವು. 10 ವರ್ಷಗಳ ಅನಂತರ ಸಂಸ್ಥೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ, ಮೈಸೂರು ರಾಜ್ಯ ಹಾಕಿ ಸಂಸ್ಥೆ ಎಂದು ನಾಮಕರಣಗೊಂಡಿತು. ಈ ಸಂದರ್ಭದಲ್ಲಿ ಭಾರತದಲ್ಲಿನ ಇತರೆ ಹಾಕಿ ಸಂಸ್ಥೆಗಳ ಕಾರ್ಯವೈಖರಿಯನ್ನು ಅರಿತು ಅದರಲ್ಲೂ ಮುಖ್ಯವಾಗಿ ಪಂಜಾಬ್ ರಾಜ್ಯ ಹಾಕಿ ಸಂಸ್ಥೆಯ ನಿಯಾಮಾವಳಿಗಳನ್ನು ಅಧ್ಯಯನ ಮಾಡಿದ ಬಳಿಕ ಇಲ್ಲಿ ಜಿಲ್ಲಾ ಹಾಕಿ ಸಂಸ್ಥೆಯನ್ನು ಪ್ರಾರಂಭಿಸಲಾಯಿತು.

ಕರ್ನಾಟಕದ ಮಡಿಕೇರಿ ಹಾಕಿ ಆಟದ ಕೇಂದ್ರಸ್ಥಾನವಾಗಿ ಬದಲಾವಣೆ ಹೊಂದಿತು. ಮೊದಲಿನಿಂದಲೂ ಸೈನ್ಯದಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡ ಈ ಗಂಡು ಭೂಮಿ ಇದಕ್ಕೆ ಮೂಲ ಕಾರಣ. ಅನಂತರದ ದಿನಗಳಲ್ಲಿ ಹಾಕಿ ಆಟವನ್ನು ತಮ್ಮ ಬದುಕಿನ ಒಂದು ಜೀವನ ಶೈಲಿಯನ್ನಾಗಿ ಸ್ವೀಕರಿಸಿದ್ದು. ಇಡೀ ಮಡಿಕೇರಿಯಷ್ಟೇ ಅಲ್ಲದೇ ಸುತ್ತಮುತ್ತಲಿನ ಕೊಡವರಿಗೆ ಹಾಕಿ ಎಂದರೆ ಪಂಚಪ್ರಾಣ. ಸುಮಾರು ಐವತ್ತಕ್ಕೂ ಹೆಚ್ಚು ಆಟಗಾರರು ಭಾರತವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ್ದಾರೆ. ಇಷ್ಟೇ ಅಲ್ಲದೆ ದಕ್ಷಿಣ ಕನ್ನಡ, ಬೆಳಗಾಂವಿ, ಧಾರವಾಡ ಜಿಲ್ಲೆಗಳಲ್ಲಿ ಹಾಕಿ ಆಟದ ಪ್ರಭಾವವನ್ನು ಕಾಣಬಹುದು.

ಹಾಕಿ ದಸರ ಕ್ರೀಡಾಕೂಟದ ಮತ್ತೊಂದು ಆಕರ್ಷಕ ಪಂದ್ಯಾವಳಿ ಎನಿಸಿತು. ಇಲ್ಲಿ ರಾಜ್ಯದ ಎಲ್ಲ ಯುವತಂಡಗಳು ಬಂದು ಭಾಗವಹಿಸುವುದು ಎಲ್ಲರ ಗಮನವನ್ನು ಸೆಳೆಯುತ್ತಿತ್ತು.

ಬೆಂಗಳೂರಿನಲ್ಲಿ ತರಬೇತಾದ ಆಟಗಾರರು ಕೇವಲ ಅಂತಾರಾಷ್ಟ್ರೀಯ ಪಂದ್ಯಗಳನ್ನಷ್ಟೇ ಅಲ್ಲದೆ ಒಲಂಪಿಕ್ಸ್‌ನಲ್ಲಿ ಆಡಿದ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಕೆಲವರು ಭಾರತ ತಂಡದ ನಾಯಕರೂ ಆಗಿದ್ದವರು. ಇವರಲ್ಲಿ ಅರ್ಜುನ ಪ್ರಶಸ್ತಿ ವಿಜೇತ ಎಂ.ಪಿ.ಗಣೇಶ್ (ನೋಡಿ) ಭಾರತ

ತಂಡದ ನಾಯಕರಾಗಿ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗಳಿಸಲು ಕಾರಣರಾದರು. ಇದಲ್ಲದೆ ಕಿರಿಯರ ತಂಡದ ಹಾಗೂ ಪುರುಷ ತಂಡದ ತರಬೇತುದಾರರಾಗಿಯೂ ಕಾರ್ಯನಿರ್ವಹಿಸಿದರು.

1965ರಲ್ಲಿ ಪ್ರಥಮ ಮಹಿಳಾ ಆಟಗಾರರಾಗಿ ಅರ್ಜುನ ಪ್ರಶಸ್ತಿಗೆ ಆಯ್ಕೆಯಾದ ಎಲ್ವಿರಾ ಬ್ರಿಟೊ ಕರ್ನಾಟಕದವರೇ ಎಂಬುದು ಹೆಮ್ಮೆಯ ವಿಷಯ. ಇತ್ತೀಚಿನ ಜೂನಿಯರ್ ತಂಡದ ಆಟಗಾರರಾಗಿ ಆಸ್ಟ್ರೇಲಿಯದಲ್ಲಿ ಅತ್ಯುತ್ತಮ ಸಾಧನೆಗೈದ ಚಂಗಪ್ಪ ಕರ್ನಾಟಕದವರು. ಕ್ರಿಕೆಟ್ ಹೊರತುಪಡಿಸಿದರೆ ಅತಿ ಹೆಚ್ಚಿನ ಅರ್ಜುನ ಪ್ರಶಸ್ತಿ ಪಡೆದ ಆಟವೆಂದರೆ ಹಾಕಿ. ಸುಮಾರು ಎಂಟಕ್ಕೂ ಹೆಚ್ಚು ಜನ ಅರ್ಜುನ ಪ್ರಶಸ್ತಿಯನ್ನು ಪಡೆದಿದ್ದಾರೆ. ಇಂದಿಗೂ ಪ್ರತಿವರ್ಷ ನಡೆಯುವ ಕೊಡವರ ಉತ್ಸವದಲ್ಲಿ ಆಕರ್ಷಕವಾದ ಸಂಗತಿ ಎಂದರೆ ಕೊಡವರ ಮಕ್ಕಳ ಹಾಕಿ, ತಮ್ಮ ತಮ್ಮ ಕುಟುಂಬದವರೊಂದಿಗೆ ಸೇರಿ ನಡೆಯುವ ಪಂದ್ಯ ಅಲ್ಲಿನ ಜನತೆ ಹಾಕಿಯನ್ನು ತಮ್ಮ ಸಂಸ್ಕೃತಿಯಲ್ಲಿ ಬೆಸೆದಿರುವುದರ ಸಂಕೇತ. ಕೊಡಗಿನಲ್ಲಿ ಈ ಆಟವನ್ನು ಜನಪ್ರಿಯಗೊಳಿಸಲು ಮತ್ತು ಎಳೆಯ ಪ್ರತಿಭೆಗಳನ್ನು ಗುರುತಿಸಲು ಕರ್ನಾಟಕ ಸರ್ಕಾರ ಕ್ರೀಡಾಶಾಲೆಯನ್ನು ಪ್ರಾರಂಭಿಸಿದೆ. (ಎಸ್.ಆರ್.ಯು.)

**ಕ್ರಿಕೆಟ್ :** ಕರ್ನಾಟಕದಲ್ಲಿ ಕ್ರಿಕೆಟ್ 20ನೆಯ ಶತಮಾನದ ಮೂರನೆಯ ದಶಕದಿಂದಲೂ ಜನಪ್ರಿಯ ಆಟವೆನಿಸಿದೆ. ಬೆಂಗಳೂರಿನಲ್ಲಿರುವ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ ರಾಜ್ಯದ ಕ್ರಿಕೆಟ್ ಆಟದ ಬಗೆಗಿನ ಎಲ್ಲ ವ್ಯವಹಾರಗಳನ್ನೂ ನಡೆಸುವ ಹೊಣೆ ಹೊತ್ತಿದೆ. ಈ ಸಂಸ್ಥೆ 1933-34ರಲ್ಲಿ ಜೆ.ಸಿ.ರೋಲೋ, ಪಿ.ಮೋದಪ್ಪ, ಟಿ.ಮುರಾರಿ, ವೈ.ವಿ.ಕೆ.ಮೂರ್ತಿ, ಎಂ.ಜಿ.ವಿಜಯಸಾರಥಿ, ಎಂ.ಚಿನ್ನಸ್ವಾಮಿ ಮೊದಲಾದವರ ಮೂಲಪ್ರಯತ್ನದಿಂದ ಜನ್ಮತಾಳಿತು. ಸು.50,000 ರೂ.ಗಳ ಒಂದು ನಿಧಿಯನ್ನು ಸೇರಿಸಿ ದೊಡ್ಡ ಪ್ರಮಾಣದಲ್ಲಿ ಕ್ರಿಕೆಟಿಗೆ ಸಂಬಂಧಿಸಿದಂತೆ ಗ್ರಂಥಾಲಯವೊಂದನ್ನು ಸ್ಥಾಪಿಸುವ ಕೆಲಸವನ್ನು ಸಂಘ ಶ್ರದ್ಧೆಯಿಂದ ನಿರ್ವಹಿಸುತ್ತಿದೆ. ಜೊತೆಗೆ ಬೆಂಗಳೂರಿನ ಮಹಾತ್ಮ ಗಾಂಧೀ ರಸ್ತೆಯಲ್ಲಿರುವ ಗಾಂಧೀ ಪ್ರತಿಮೆಯ ಹಿಂಭಾಗದ ದೊಡ್ಡ ಮೈದಾನದಲ್ಲಿ ಕ್ರಿಕೆಟ್ ಕ್ರೀಡಾಂಗಣವೊಂದನ್ನು ಹೊಸದಾಗಿ ನಿರ್ಮಿಸಿದೆ. 1973-74ರಲ್ಲಿ ಈ ಕ್ರೀಡಾಂಗಣದಲ್ಲಿ ವೆಸ್ಟ್ ಇಂಡೀಸ್ ಮತ್ತು ಭಾರತ ತಂಡಗಳ ನಡುವೆ ಪಂದ್ಯ ನಡೆಯಿತು. ಎಂ.ಜಿ. ವಿಜಯಸಾರಥಿ ಈ ಸಂಸ್ಥೆಯ ಈಗಿನ ಕಾರ್ಯದರ್ಶಿಗಳು. ತಿಮ್ಮಪ್ಪಯ್ಯ ಈ ಸಂಸ್ಥೆಯ ಅಧ್ಯಕ್ಷರು. ಈ ಸಂಘದ ಆಶ್ರಯದಲ್ಲಿ ಅನೇಕ ಉತ್ತಮ ಕ್ರಿಕೆಟ್ ಪಟುಗಳು ಬೆಳಕಿಗೆ ಬಂದಿದ್ದಾರೆ. ಇವರಲ್ಲಿ ಮುಖ್ಯರಾದವರೆಂದರೆ ವಿ.ಸುಬ್ರಹ್ಮಣ್ಯಂ, ಜಿ.ಆರ್.ವಿಶ್ವನಾಥ್, ಇ.ಎ.ಎಸ್.ಪ್ರಸನ್ನ, ಬಿ.ಎಸ್.ಚಂದ್ರಶೇಖರ, ಬಿ.ಕೆ.ಕುಂದರನ್, ಬ್ರಿಜೆಶ್ ಪಟೇಲ್ ಮೊದಲಾದವರು.

ಕರ್ನಾಟಕದ ಕ್ರಿಕೆಟ್ ತಂಡ 1934ರಿಂದಲೂ ರಣಜಿ ಟ್ರೋಫಿಯಲ್ಲಿ ಭಾಗವಹಿಸುತ್ತಿದೆ. 1941ರಲ್ಲಿ ಅದು ಎರಡನೆಯ ಸ್ಥಾನವನ್ನು ಗಳಿಸಿತು. 1973ರಲ್ಲಿ ಇ.ಎ.ಎಸ್. ಪ್ರಸನ್ನ ಅವರ ನಾಯಕತ್ವದಲ್ಲಿ ಜಯಪುರದಲ್ಲಿ ನಡೆದ ರಣಜಿ ಪಂದ್ಯದಲ್ಲಿ ಟ್ರೋಫಿ ಕರ್ನಾಟಕದ ತಂಡದ ವಶವಾಯಿತು. ಕರ್ನಾಟಕದ ಅನೇಕ ಮಂದಿ ಆಟಗಾರರು ಟೆಸ್ಟ್ ಸರಣಿಗಳಲ್ಲಿ ಭಾಗವಹಿಸಿದ್ದಾರೆ. 1911ರಲ್ಲಿ ಬಿ.ಜಯರಾಮ್ ಎಂಬುವರು ಭಾರತದ ಪ್ರತಿನಿಧಿಯಾಗಿ ಇಂಗ್ಲೆಂಡಿನಲ್ಲಿ ಆಡಲು ಹೋಗಿದ್ದರು. ಸುಬ್ರಹ್ಮಣ್ಯಂ, ಎ.ಎಸ್.ಕೃಷ್ಣಸ್ವಾಮಿ, ಕುಂದರನ್, ಬಿ.ಎಸ್.ಚಂದ್ರಶೇಖರ, ಇ.ಎ.ಎಸ್.ಪ್ರಸನ್ನ, ಜಿ.ಆರ್.ವಿಶ್ವನಾಥ್, ಬ್ರಿಜೇಶ್ ಪಟೇಲ್, ಕಿರ್ಮಾನಿ, ಸುಧಾಕರರಾವ್ ಉತ್ತಮ ಮಟ್ಟದ ಟೆಸ್ಟ್ ಆಟಗಾರರು. ಕೊನೆಯ ಆರು ಜನ 1976ರಲ್ಲಿ ನ್ಯೂಜಿಲೆಂಡ್ ಮತ್ತು ವೆಸ್ಟ್ ಇಂಡೀಸ್ ತಂಡಗಳೊಡನೆ ನಡೆದ ಪಂದ್ಯಗಳಲ್ಲಿ ಭಾರತದ ಪರವಾಗಿ ಭಾಗವಹಿಸಿದ್ದರು. ಜಯಪ್ರಕಾಶ್, ವಿಜಯಕೃಷ್ಣ, ಇಮ್ತಿಯಾಜ್ ಅಹ್ಮದ್ ಇವರೂ ಒಳ್ಳೆಯ ಕ್ರಿಕೆಟ್ ಪಟುಗಳಾಗಿದ್ದಾರೆ. ಜಿ.ಆರ್.ವಿಶ್ವನಾಥ್, ಬಿ.ಎಸ್.ಚಂದ್ರಶೇಖರ (ನೋಡಿ) ಮತ್ತು ಇ.ಎ.ಎಸ್. ಪ್ರಸನ್ನ ಅವರಿಗೆ ಪದ್ಮಶ್ರೀ ಪ್ರಶಸ್ತಿ ಬಂದಿದೆ. ಅನಿಲ್ ಕುಂಬ್ಳೆ (ನೋಡಿ), ಜಾವಗಲ್ ಶ್ರೀನಾಥ್ (ನೋಡಿ), ರಾಹುಲ್ ದ್ರಾವಿಡ್ (ನೋಡಿ), ವೆಂಕಟೇಶ ಪ್ರಸಾದ್ ಮೊದಲಾದವರು ಅತರಾಷ್ಟ್ರೀಯ ಟೆಸ್ಟ್‌ಪಂದ್ಯಗಳಲ್ಲಿ ಆಡಿ ಕರ್ನಾಟಕಕ್ಕೆ ಕೀರ್ತಿ ತಂದಿದ್ದಾರೆ.

ಮಹಿಳೆಯರೂ ಇತ್ತೀಚೆಗೆ ಕ್ರಿಕೆಟಿನಲ್ಲಿ ಆಸಕ್ತಿ ಬೆಳೆಸಿ ಕೊಂಡಿರುವುದುಂಟು. ಶಾಂತಾ ರಂಗಸ್ವಾಮಿ ಎಂಬುವರು ಭಾರತದ ಮಹಿಳಾ ತಂಡದ ನಾಯಕತ್ವವನ್ನು ವಹಿಸಿದ್ದಾರೆ. (ಸಿ.ಎ.ಪಿ)

**ಕೊಕ್ಕೊ :** ಈ ಆಟ ಮಹಾರಾಷ್ಟ್ರದ ಮೂಲವನ್ನು ಆಧರಿಸಿದ್ದರೂ ಕರ್ನಾಟಕದಲ್ಲಿ ಈ ಆಟಗಳನ್ನು ಬಹಳ ಹಿಂದಿನಿಂದಲೂ ಆಡುತ್ತ ಬಂದಿರುವ ಉದಾಹರಣೆಗಳಿವೆ. ಪ್ರಾರಂಭದಲ್ಲಿ ವಿವಿಧ ರೀತಿಯ ನಿಯಮಗಳಿಂದ ಕೂಡಿದ ಆಟ ಹಲವು ರೂಪಾಂತರವನ್ನು ಹೊಂದಿದ್ದು 1950ರಲ್ಲಿ. ಮೈಸೂರಿನ ಅರಸು ಬೋರ್ಡಿಂಗ್ ಹೋಮ್‌ನ ಶಾಲೆಯ ವತಿಯಿಂದ ಇದರ ಪಂದ್ಯಾವಳಿಗಳನ್ನು ನಡೆಸಲಾಯಿತು. ಶಾಲಾ ಮಟ್ಟದಲ್ಲಿ ಈ ಆಟವನ್ನು ಪ್ರಾರಂಭಿಸಲು ಮೈಸೂರಿನ ಹಲವು ಕ್ರೀಡಾಸಕ್ತರು ಕಾರಣ. ಪ್ರಾರಂಭದಲ್ಲಿ ಮಹಾರಾಜ ಪ್ರೌಢಶಾಲೆ, ಡಿ.ಬನುಮಯ್ಯ ಪ್ರೌಢಶಾಲೆ, ದಳವಾಯಿ ಪ್ರೌಢಶಾಲೆ ಮತ್ತು ಶಾರದಾವಿಲಾಸ ಪ್ರೌಢಶಾಲೆಗಳೊಳಗೊಂಡಂತೆ ಅರಸು ಬೋರ್ಡಿಂಗ್ ಹೋಂ ಪಂದ್ಯವನ್ನು ನಡೆಸಿದ ದಾಖಲೆ ಲಭ್ಯವಿದೆ. ಇದಾದನಂತರ ಎಂ.ಜಿ.ಎಸ್. ಅಂತರ ಕಾಲೇಜುಗಳ ಕ್ರೀಡಾಕೂಟದಲ್ಲಿ ಇದನ್ನು ಏರ್ಪಡಿಸುವುದರೊಂದಿಗೆ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾಲಯಗಳಲ್ಲಿ ಈ ಆಟ ಪ್ರಸಿದ್ಧಿಹೊಂದಿತು. ದಸರ ಕ್ರೀಡಾಕೂಟದ ಮುಖ್ಯ ಆಕರ್ಷಣೆಯಾಗಿ ಕೊಕ್ಕೊ ಮಾರ್ಪಟ್ಟಿತು. ಹಲವು ಸ್ಥಳೀಯ ತಂಡಗಳು ಈ ಆಟವನ್ನು ಕೈಗೆತ್ತಿಗೊಂಡವು (1950-53). ಅವುಗಳಲ್ಲಿ ಮೈಸೂರಿನ ಪಯನೀರ್ಸ್ ಮತ್ತು ತುಮಕೂರಿನ ಪಯನೀರ್ಸ್ ಪ್ರಮುಖವಾದುವು. 1953ರಲ್ಲಿ ಮೈಸೂರು ರಾಜ್ಯ ಕೊಕ್ಕೊ, ಕಬಡ್ಡಿ ಅಸೋಸಿಯೇಷನ್ ಪ್ರಾರಂಭಿಸಲಾಯಿತು.

ಕರ್ನಾಟಕ ರಾಜ್ಯ ಕೊಕ್ಕೊ ಸಂಸ್ಥೆ ಹಲವಾರು ರಾಷ್ಟ್ರೀಯ ಚಾಂಪಿಯನ್ ಷಿಪ್‌ಗಳನ್ನು ತನ್ನ ಮಡಿಲಿಗೇರಿಸಿಕೊಂಡಿದೆ. ಇಷ್ಟಲ್ಲದೆ ಅಖಿಲ ಭಾರತ ವಿಶ್ವವಿದ್ಯಾಲಯ ಚಾಂಪಿಯನ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ತನ್ನ ಸಾಧನೆಯನ್ನು ಗೈದು ಇತಿಹಾಸ ನಿರ್ಮಿಸಿದೆ. ಕರ್ನಾಟಕ ರಾಜ್ಯ ಮಹಿಳಾ ತಂಡ ಹಲವಾರು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿ ಸಾಧನೆಗೈದದ್ದಷ್ಟೇ ಅಲ್ಲದೆ ಎನ್.ಪ್ರಕಾಶ್ ಮತ್ತು ಭಾರ್ಗವಿ ನಾರಾಯಣ್ ಅರ್ಜುನ ಪ್ರಶಸ್ತಿ ವಿಜೇತರಾಗಿ ಈ ಆಟ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಲು ಕಾರಣರಾಗಿದ್ದಾರೆ. ಬೆಂಗಳೂರಿನಲ್ಲಿ ಹೊಂಬೇಗೌಡ ಕೊಕ್ಕೊ ಕ್ರೀಡಾಂಗಣ ಸ್ಥಾಪನೆಗೊಂಡು ಈ ಆಟದ ಏಳಿಗೆಗೆ ಕಾರಣವಾಗಿದೆ.

**ವಾಲಿಬಾಲ್ :** ವೈ.ಎಂ.ಸಿ.ಎ. ಮದರಾಸು ಇವರ ಸಹಕಾರದೊಂದಿಗೆ ಈ ಆಟವನ್ನು ಪ್ರಾರಂಭಿಸಲಾಯಿತು. ಇದಕ್ಕೂ ಕೆಲವು ಆಸಕ್ತ ಯುವಕರು ಬೇರೆ ಬೇರೆ ಚಂಡುಗಳ ಸಹಾಯದಿಂದ ಈ ಆಟವನ್ನು ಆಡುತ್ತಿದ್ದುದು ಉಂಟು.

1949ರಲ್ಲಿ ಕರ್ನಾಟಕ ವಾಲಿಬಾಲ್ ಸಂಸ್ಥೆ ಸ್ಥಾಪನೆಯಾಗುವುದರ ಜೊತೆಗೆ ಕರ್ನಾಟಕದಲ್ಲಿ ವಾಲಿಬಾಲ್ ಆಟ ಪ್ರಾರಂಭವಾಯಿತು. 1952ರಲ್ಲಿ ಮದರಾಸಿನಲ್ಲಿ ಪ್ರಾರಂಭವಾದ ರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಕರ್ನಾಟಕ ಪ್ರಶಸ್ತಿ ಗಳಿಸಿತು. ಕರ್ನಾಟಕದ ಉತ್ತಮ ಆಟಗಾರರಾದ ಅಶ್ವತ್ಥಯ್ಯ, ಶಂಕರನಾರಾಯಣಪ್ಪ ಬಾಲಾಜಿ ಮತ್ತು ಪನೀರ್ ಶೆಲ್ವನ್ ಮೊದಲಾದವರು ಅನೇಕ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. 1954ರಲ್ಲಿ ಹಾಸನದಲ್ಲಿ ಪ್ರಪ್ರಥಮ ಜಿಲ್ಲಾ ವಾಲಿಬಾಲ್ ಸಂಸ್ಥೆ ಪ್ರಾರಂಭಗೊಂಡಿತು. ಅನಂತರದ ದಿನಗಳಲ್ಲಿ ತುಮಕೂರು, ಮಂಡ್ಯ, ಮೈಸೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲಾ ವಾಲಿಬಾಲ್ ಸಂಸ್ಥೆಗಳು ತಲೆ ಎತ್ತಿದುವು. ಕರ್ನಾಟಕ ಏಕೀಕರಣದ ಅನಂತರ (1956) ಹೈದ್ರಾಬಾದ್, ಮುಂಬಯಿ ಹಾಗೂ ಮದರಾಸು ರಾಜ್ಯಗಳಲ್ಲಿ ವಿಲೀನವಾಗಿದ್ದ ಕೆಲವು ಜಿಲ್ಲೆಗಳಾದ ಬೆಳಗಾಂವಿ, ಧಾರವಾಡ, ಬಳ್ಳಾರಿ, ರಾಯಚೂರು, ಬಿಜಾಪುರ, ದಕ್ಷಿಣ ಕನ್ನಡ ಮುಂತಾದ ಜಿಲ್ಲೆಗಳು ಜಿಲ್ಲಾ ವಾಲಿಬಾಲ್ ಸಂಸ್ಥೆಗಳನ್ನು ಪ್ರಾರಂಭಿಸಿದುವು. ನೂರಾರು ಕ್ಲಬ್‌ಗಳು ನೊಂದಾಯಿಸಲ್ಪಟ್ಟು ಕರ್ನಾಟಕ ರಾಜ್ಯ ವಾಲಿಬಾಲ್ ಸಂಸ್ಥೆ ಉತ್ತಮವಾದ ಕಾರ್ಯನಿರ್ವಹಿಸುತ್ತ ಬಂದಿದೆ. 1973ರಲ್ಲಿ ಮಹಿಳೆಯರು ವಾಲಿಬಾಲ್ ಆಟಗಳನ್ನು ಆಡಲು ಪ್ರಾರಂಭಿಸಿದರಷ್ಟೆ ಅಲ್ಲದೆ ಕಾಲೇಜುಗಳು,

ಮಹಿಳೆಯರ ವಾಲಿಬಾಲ್ ಕ್ಲಬ್‌ಗಳನ್ನು ಪ್ರಾರಂಭಿಸಿದುವು. ಬೆಂಗಳೂರು ನಗರ ಇದಕ್ಕೆ ಕೇಂದ್ರ ಸ್ಥಾನವಾಗಿ ಮಾರ್ಪಟ್ಟಿತು. ರಾಜ್ಯ ವಾಲಿಬಾಲ್ ಮಹಿಳೆಯರ ಕ್ರೀಡಾ ಕೂಟಗಳು 1973ರ ಅನಂತರ ಪ್ರಾರಂಭಗೊಂಡವು.

**ಕಬಡ್ಡಿ :** ಕರ್ನಾಟಕದಲ್ಲಷ್ಟೇ ಅಲ್ಲದೆ ಭಾರತದಾದ್ಯಂತ ಹಳ್ಳಿಗಾಡಿನ ಮಕ್ಕಳ ನೆಚ್ಚಿನ ಆಟವಾಗಿ ರೂಪುಗೊಂಡ ಕಬಡ್ಡಿ ನೂರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. 1953ರಲ್ಲಿ ಕೊಕ್ಕೊದ ಜೊತೆ ಜಂಟಿ ಸಂಸ್ಥೆಯಾಗಿ ಪ್ರಾರಂಭವಾದ ಈ ಕಬಡ್ಡಿ ಸಂಸ್ಥೆ 1955ರಲ್ಲಿ ತನ್ನದೇ ಆದ ಸಂಸ್ಥೆಯನ್ನು ಸ್ಥಾಪಿಸಿಕೊಂಡಿತು. 1971ರಲ್ಲಿ ಕರ್ನಾಟಕ ಕಬಡ್ಡಿ ತಂಡ ರಾಷ್ಟ್ರೀಯ ಮಟ್ಟದಲ್ಲಿ ಎರಡನೆಯ ಸ್ಥಾನವನ್ನೂ 1972-1974ರಲ್ಲಿ ಮೊದಲನೆಯ ಸ್ಥಾನವನ್ನೂ ಪಡೆಯಿತು. 1974 ಮತ್ತು 75ರಲ್ಲಿ ಬಾಲಕರ ತಂಡ ರಾಷ್ಟ್ರೀಯ ಪ್ರಶಸ್ತಿ ಗಳಿಸಿತು. ಕರ್ನಾಟಕದಲ್ಲಿ ಕಬಡ್ಡಿ ಆಟಕ್ಕೆ ತವರೂರು ಬೆಂಗಳೂರು. 1962ರಲ್ಲಿ ಸ್ವತಂತ್ರವಾಗಿ ಕರ್ನಾಟಕ ರಾಜ್ಯ ಕಬಡ್ಡಿ ಸಂಸ್ಥೆ ತನ್ನ ಕಾರ್ಯವನ್ನು ಪ್ರಾರಂಭಿಸಿತು. ನೂರಾರು ಕ್ಲಬ್‌ಗಳು ತಮ್ಮ ಸಂಘಗಳನ್ನು ನೊಂದಾಯಿಸುವುದರ ಮೂಲಕವೇ ಕಬಡ್ಡಿ ಆಟ ಒಂದು ಪ್ರಬಲ ಆಟವಾಗಿ ಮಾರ್ಪಟ್ಟಿತು. ಜಾತ್ರೆಗಳಲ್ಲಿ ಹಬ್ಬ ಹರಿದಿನಗಳನ್ನೊಳಗೊಂಡಂತೆ ರಾಜ್ಯೋತ್ಸವ, ರಾಷ್ಟ್ರೀಯ ಹಬ್ಬಗಳು ಹೀಗೆ ಹತ್ತಾರು ಸಂದರ್ಭಗಳಲ್ಲಿ ಈ ಕ್ರೀಡೆಯನ್ನು ಆಡಲು ಪ್ರಾರಂಭಿಸಿದರು. 1979ರಲ್ಲಿ ಮೊಟ್ಟ ಮೊದಲ ಬಾರಿಗೆ ಕರ್ನಾಟಕ ರಾಜ್ಯ ತಂಡ ಮತ್ತು ಬಾಂಗ್ಲಾದೇಶದ ಕಬಡ್ಡಿ ಆಟಗಾರರ ನಡುವೆ ಪಂದ್ಯವನ್ನು ಏರ್ಪಡಿಸಲಾಗಿತ್ತು. 1980ರಲ್ಲಿ ದಕ್ಷಿಣವಲಯ ಮಹಿಳೆಯರ ಕಬಡ್ಡಿ ಪಂದ್ಯಾವಳಿಗಳನ್ನು ಮಂಗಳೂರಿನಲ್ಲಿಯೂ 1983ರಲ್ಲಿ ಮತ್ತೊಮ್ಮೆ ಪುರುಷರ ಮತ್ತು ಮಹಿಳೆಯರ ದಕ್ಷಿಣವಲಯ ಕ್ರೀಡಾಕೂಟವನ್ನು ದಾವಣಗೆರೆಯಲ್ಲಿಯೂ ನಡೆಸಲಾಯಿತು. 2000ದಲ್ಲಿ ಮಂಡ್ಯದಲ್ಲಿ ರಾಷ್ಟ್ರೀಯ ಕಬಡ್ಡಿ ಪಂದ್ಯಾವಳಿಯನ್ನು ಏರ್ಪಡಿಸಲಾಗಿತ್ತು. ಹಲವು ಕನ್ನಡಿಗರು ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ. ಭಾರತ ತಂಡದ ನಾಯಕರಾಗಿದ್ದ ಗೋಪಾಲಪ್ಪ, ಮುನಿವೆಂಕಟಪ್ಪ, ರಮೇಶ್ ಮತ್ತು ಸುರೇಶ್ ಸಹೋದರರು ಹಾಗೂ 1998ರ ಅರ್ಜುನ ಪ್ರಶಸ್ತಿ ವಿಜೇತ ಹೊನ್ನಪ್ಪ ಇವರನ್ನು ಹೆಸರಿಸಬಹುದಾಗಿದೆ.

**ಈಜು ಸಂಘ :** ಮೈಸೂರು ರಾಜ್ಯ ಈಜು ಸಂಘ ಪ್ರಾರಂಭಗೊಂಡು ಹಲವು ವರ್ಷಗಳು ಕಳೆದರೂ ಮೊದಲ ಸಾಧನೆ 1960ರಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ಚಿನ್ನದ ಪದಕ ಪಡೆಯುವುದರೊಂದಿಗೆ ತನ್ನ ಹೆಸರನ್ನು ರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ದಾಖಲಿಸಿತು. ಹಲವಾರು ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ತಮ್ಮ ಮಡಿಲಿಗೇರಿಸಿದ ಈಜುಗಾರರು ಕರ್ನಾಟಕದ ಹೆಸರನ್ನು ಭಾರತ ಕ್ರೀಡಾ ನಕ್ಷೆಯಲ್ಲಿ ಮಿನುಗುವಂತೆ ಮಾಡಿದರು. ಈ ಸಂಬಂಧ ಈಜನ್ನು ಒಂದು ಆಕರ್ಷಕ ಕ್ರೀಡೆಯನ್ನಾಗಿಸಲು ಬೆಂಗಳೂರಿನ ಮಹಾನಗರಸಭೆಯು ಈಜುಕೊಳಗಳನ್ನು ನವೀಕರಿಸಲಾಯಿತು. ಅನಂತರ 1972 ಹಾಗೂ ಇತ್ತೀಚಿನ ದಿನಗಳಲ್ಲಿ ನಮ್ಮ ಕ್ರೀಡಾಪಟುಗಳ ಸಾಧನೆ ಮಹತ್ತರವಾದದ್ದು. ಶಾಲಾ ಕಾಲೇಜುಗಳಿಂದ ಹಿಡಿದು ವಿಶ್ವವಿದ್ಯಾಲಯ ಹಾಗೂ ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಕರ್ನಾಟಕದ ಈಜುಗಾರರದೇ ಸಿಂಹಪಾಲು. ಹಲವಾರು ಬಾರಿ ರಾಷ್ಟ್ರೀಯ ಚಾಂಪಿಯನ್ನರಾಗಿದ್ದುದಲ್ಲದೆ ಅಂತಾರಾಷ್ಟ್ರೀಯ ಕ್ರೀಡಾಪಟುಗಳಾಗಿ ಮೆರೆದವರು ಹಲವರು. ಅಭಿಜಿತ್, ಹಕೀಮುದ್ದೀನ್, ಸತೀಶ್‌ಕುಮಾರ್ - ಇವರು ಏಷ್ಯನ್ ಕ್ರೀಡಾಕೂಟಗಳಲ್ಲಿ ಪದಕ ಪಡೆದವರು. ಮಹಿಳೆಯರ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪ್ರಖ್ಯಾತಿ ಪಡೆದವರೆಂದರೆ ಮೇಘನನಾರಾಯಣ್, ಶೀಬಾಟಂಡನ್, ಲಾರೇನ್, ವರ್ಗೀಸ್, ಪುನೀತಗುಪ್ತ, ಸಜಿನಿಶೆಟ್ಟಿ, ನಿಶಾ ಮಿಲೆಟ್, ಕೇಶಮಾ ಮಿಲೆಟ್, ಶಿವರಂಜನಿ, ಅಂಬಿಕಾ ಅಯ್ಯಂಗಾರ್, ಚಿತ್ರ ಮೊದಲಾದವರು. ಇದಲ್ಲದೆ ಬೆಂಗಳೂರೊಂದರಲ್ಲೇ ಅತ್ಯುತ್ತಮ ಅಂತಾರಾಷ್ಟ್ರೀಯ ಮಟ್ಟದ ಹಲವು ಈಜು ಕೊಳಗಳಿರುವುದು ಒಂದು ಮಹತ್ವದ ಸಾಧನೆ. ಕರ್ನಾಟಕದ ಪ್ರದೀಪ ಅವರು ಭಾರತದಲ್ಲಿ ಗುರುತಿಸಬಹುದಾದ ಒಬ್ಬ ಉದಯೋನ್ಮುಖ ತರಬೇತುದಾರರು. ಈಗಾಗಲೇ ಭಾರತ ತಂಡದ ತರಬೇತುದಾರನಾಗಿ ಕಾರ್ಯನಿರ್ವಹಿಸಿರುವ ಇವರು ಹಲವಾರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಈಜುಗಾರರನ್ನು ನಾಡಿಗೆ ಇತ್ತ ಗೌರವಕ್ಕೆ ಪಾತ್ರರಾಗಿದ್ದಾರೆ.

ಕ್ರೀಡೆಗೆ ಪ್ರೋತ್ಸಾಹ ನೀಡುವ ಸಲುವಾಗಿ ಕರ್ನಾಟಕ ಸರ್ಕಾರ ಕೆಲವು ಪ್ರತ್ಯೇಕ ಇಲಾಖೆ ಹಾಗೂ ಸಂಸ್ಥೆಗಳನ್ನು ಸ್ಥಾಪಿಸಿದೆ. ಈ ಸಂಸ್ಥೆಗಳು ಕ್ರೀಡೆಯ ಪುರೋಭಿವೃದ್ಧಿಗೆ ಕೆಲಸ ಮಾಡುತ್ತಿವೆ.

**ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ :** ಕರ್ನಾಟಕ ಸರ್ಕಾರದ ಅಧೀನದಲ್ಲಿ ಸ್ಥಾಪಿತಗೊಂಡ (1969) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಪ್ರಾರಂಭದಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಸಂಯೋಜಿತವಾಗಿ ಕೆಲಸ ನಿರ್ವಹಿಸುತ್ತಿತ್ತು. ಅನಂತರ 1975ರಲ್ಲಿ ಸ್ವತಂತ್ರ ನಿರ್ದೇಶನಾಲಯವನ್ನು ಹೊಂದಿದ್ದರೂ ಕರ್ನಾಟಕ ಕ್ರೀಡಾಪರಿಷತ್ತಿನ ಎಲ್ಲ ನೌಕರರನ್ನೊಳಗೊಂಡಂತೆ ಸಂಪೂರ್ಣವಾದ ಅಧಿಕಾರ ಹಾಗೂ ನಿಯಮಾವಳಿಗಳನ್ನೊಳಗೊಂಡು ಕರ್ನಾಟಕದ ಯುವಜನ ಸೇವಾ ಮತ್ತು ಕ್ರೀಡಾ ಸಚಿವಾಲಯದಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲಾರಂಭಿಸಿತು (1980). ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇವರು ಯುವಜನರ ಏಳಿಗೆಗಾಗಿ ಸರ್ಕಾರ ರೂಪಿಸಿದ ಕಾರ್ಯಕ್ರಮಗಳನ್ನು ಜಾರಿಗೆ ತರುವ ಹೊಣೆಯನ್ನು ಹೊತ್ತಿದ್ದಾರೆ. ಮೈಸೂರು, ಬೆಂಗಳೂರು, ಬೆಳಗಾಂವಿ, ಗುಲ್ಬರ್ಗ ವಿಭಾಗದಲ್ಲಿ ವಿಭಾಗೀಯ ಜಂಟಿ ನಿರ್ದೇಶಕರುಗಳನ್ನೊಳಗೊಂಡು ಕಾರ್ಯನಿರ್ವಹಿಸುತ್ತಿದೆ. ಇಷ್ಟಲ್ಲದೆ ದಾವಣಗೆರೆ, ಬಳ್ಳಾರಿ, ಬಿಜಾಪುರ, ಕೊಡಗು ಜಿಲ್ಲೆಗಳಲ್ಲಿ ಉಪನಿರ್ದೇಶಕರುಗಳ ಕಚೇರಿಗಳನ್ನೊಳಗೊಂಡಿದೆ. 27 ಜಿಲ್ಲೆಗಳಲ್ಲಿ ಕಚೇರಿಗಳಿವೆ. ಜೊತೆಗೆ ಜಿಲ್ಲಾ ಕೇಂದ್ರಗಳಲ್ಲಿ ವಿವಿಧ ಕ್ರೀಡೆಗಳಲ್ಲಿ ಯುವಕ, ಯುವತಿಯರಿಗೆ ತರಬೇತಿ ಕೊಡಲು ನುರಿತ ತರಬೇತುದಾರರನ್ನು ಇಲಾಖೆ ಹೊಂದಿರುತ್ತದೆ.

**ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು :** ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು ರಾಜ್ಯದಲ್ಲಿನ ಕ್ರೀಡೆಗಳ ಆಯಕಟ್ಟಿಗಾಗಿ ಸ್ಥಾಪನೆಗೊಂಡ ಸಂಸ್ಥೆ. ಇದರ ಅಧ್ಯಕ್ಷ ಹಾಗೂ ಸದಸ್ಯರನ್ನು ಸರ್ಕಾರ ನೇಮಿಸುತ್ತಿತ್ತು. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ಇದರ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದುದುಂಟು. ಆದರೆ, ಕರ್ನಾಟಕ ಸರ್ಕಾರ ಕರ್ನಾಟಕ ಕ್ರೀಡಾ ಪರಿಷತ್ತನ್ನು ಅನೂರ್ಜಿತಗೊಳಿಸಿ 1997-98ರ ಅವಧಿಯಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರವೆಂದು ಪುನಾರಚಿಸಿತು. ಕರ್ನಾಟಕ ಸರ್ಕಾರದ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಅಧ್ಯಕ್ಷರಾಗಿರುವ ಈ ಪ್ರಾಧಿಕಾರದ ಎಲ್ಲ ಕಾರ್ಯಯೋಜನೆಗಳ ಅನುಷ್ಠಾನವನ್ನು ಇದರ ಉಪಾಧ್ಯಕ್ಷರು ನೋಡಿಕೊಳ್ಳುವರು. ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸಮಿತಿಯ ಸದಸ್ಯರುಗಳನ್ನು ಸರ್ಕಾರ ನೇಮಿಸುತ್ತದೆ. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸದಸ್ಯರು ಇದಕ್ಕೆ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಸಮುಚ್ಚಯದಲ್ಲಿ ಕಚೇರಿ ಹೊಂದಿರುವ ಪ್ರಾಧಿಕಾರ ತನ್ನಲ್ಲಿ ನೋಂದಣಿ ಮಾಡಿಕೊಂಡಿರುವ ಕ್ರೀಡಾ ಸಂಸ್ಥೆಗಳಿಗೆ ಅನುದಾನ ಸಂಹಿತೆಯ ಪ್ರಕಾರ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಇಷ್ಟಲ್ಲದೆ, ಕರ್ನಾಟಕ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಿವಿಧ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ದಸರ ಕ್ರೀಡಾಕೂಟ, ಮಹಿಳಾ ಕ್ರೀಡಾಕೂಟಗಳನ್ನೊಳಗೊಂಡಂತೆ ವಿವಿಧ ಕ್ರೀಡೆಗಳಲ್ಲಿ ಸ್ಪರ್ಧೆ, ಪಂದ್ಯಾವಳಿಗಳನ್ನು ಸಂಘಟಿಸಲಾಗುವುದು. ಪ್ರತಿಭಾವಂತ ಕ್ರೀಡಾಪಟುಗಳಿಗೆ ನುರಿತ ಕ್ರೀಡಾತರಬೇತುದಾರರಿಂದ ವಿಶೇಷ ತರಬೇತಿಯನ್ನು ಒದಗಿಸಲಾಗುವುದು. ಇಷ್ಟಲ್ಲದೆ ಪ್ರಾಧಿಕಾರದಿಂದ ನೇಮಕಗೊಂಡಿರುವ ಕ್ರೀಡಾತರಬೇತುದಾರರು ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಕೇಂದ್ರಗಳಲ್ಲಿನ ಕ್ರೀಡಾ ಪ್ರತಿಭೆಗಳಿಗೆ ಕ್ರೀಡಾ ತರಬೇತಿಯನ್ನು ನೀಡುತ್ತಾರೆ. ಪ್ರತಿ ವರ್ಷ ಅತ್ಯುತ್ತಮ ಕ್ರೀಡಾಪಟುಗಳಿಗೆ ಹಾಗೂ ಕ್ರೀಡಾ ತರಬೇತುದಾರರಿಗೆ ಮತ್ತು ಕ್ರೀಡಾ ಪ್ರೋತ್ಸಾಹಕರಿಗೆ ದಸರ ರಾಜ್ಯ ಕ್ರೀಡಾ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ.

**ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ :** ಶಾಲಾ ಕಾಲೇಜು ಬಾಲಕ-ಬಾಲಕಿಯರಲ್ಲಿ ಹಾಗೂ ರಾಜ್ಯದ ಯುವಜನರಲ್ಲಿ ಸಾಹಸ ಕ್ರೀಡಾ ಚಟುವಟಿಕೆಗಳ ಬಗ್ಗೆ ಅಭಿರುಚಿ ಮೂಡಿಸಲು ಜನರಲ್ ತಿಮ್ಮಯ್ಯ

ರಾಷ್ಟ್ರೀಯ ಸಾಹಸ ಅಕಾಡೆಮಿಯ ವತಿಯಿಂದ ಭೂ, ಜಲ ಮತ್ತು ವಾಯು ಸಾಹಸ ಕ್ರೀಡಾ ಚಟುವಟಿಕೆಗಳ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಸಾಹಸ ಕ್ರೀಡಾಚಟುವಟಿಕೆಗಳನ್ನು ನಡೆಸಲು ಅತ್ಯಗತ್ಯವಾಗಿರುವ ಕ್ರೀಡಾ ಸಲಕರಣೆಗಳನ್ನು ನೋಂದಾಯಿತ ಸಾಹಸ ಕ್ರೀಡಾ ಸಂಸ್ಥೆಗಳಿಗೆ ಒದಗಿಸಲಾಗುತ್ತಿದೆ. ರಾಜ್ಯ ಯುವಜನ ಕೇಂದ್ರದ ಹಿಂಭಾಗದಲ್ಲಿ ಸ್ಥಾಪಿತವಾಗಿರುವ ಅಂಗಣದಲ್ಲಿ ಕೃತಕ ಗೋಡೆ ಏರುವ ಸ್ಪರ್ಧೆ ನಡೆಯುತ್ತದೆ. ರಾಜ್ಯದ ನೋಂದಾಯಿತ ಸಾಹಸ ಕ್ರೀಡಾಸಂಸ್ಥೆಗಳ ಸದಸ್ಯರಿಗೆ 700 ಅಡಿಗಿಂತಲೂ ಹೆಚ್ಚಿನ ಎತ್ತರದ ಪರ್ವತಾರೋಹಣ ಮಾಡಿದವರಿಗೆ ಪ್ರೋತ್ಸಾಹ ರೂಪದಲ್ಲಿ ಸಹಾಯಧನ ನೀಡಲಾಗುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರದ ಬಳಿ ಹಾಗೂ ಬಾಗಲಕೋಟೆ ಜಿಲ್ಲೆ ಬಾದಾಮಿಯಲ್ಲಿ ಶಿಲಾರೋಹಣ ಸಂಸ್ಥೆ ಮತ್ತು ಕೇಂದ್ರಗಳನ್ನೂ ಹುಬ್ಬಳ್ಳಿಯ ಉಣಕಲ್ ಕೆರೆ ಬಳಿ ಜಲಸಾಹಸ ಕೇಂದ್ರವನ್ನು ಸ್ಥಾಪಿಸಲಾಗಿದೆ. ಉತ್ತರಕನ್ನಡ ಜಿಲ್ಲೆಯ ಸದಾಶಿವನಗರದಲ್ಲಿನ ಜಲಸಾಹಸ ಕ್ರೀಡಾ ಕೇಂದ್ರದಲ್ಲಿ ಯುವಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ.

**ಕ್ರೀಡಾಯೋಜನೆಗಳು ಹಾಗೂ ಸೌಲಭ್ಯಗಳು :** ಕರ್ನಾಟಕ ಸರ್ಕಾರದಡಿಯಲ್ಲಿ ಕೆಲಸ ನಿರ್ವಹಿಸುವ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಕ್ರೀಡಾ ಪ್ರಾಧಿಕಾರದಿಂದ ಹಮ್ಮಿಕೊಳ್ಳಲಾದ ಹಲವಾರು ಯೋಜನೆಗಳು ಕೆಳಕಂಡಂತಿವೆ.

**ಕ್ರೀಡಾ ಶಾಲೆಗಳು, ಕ್ರೀಡಾ ವಸತಿ ನಿಲಯಗಳು :** ಗ್ರಾಮೀಣ ಪ್ರದೇಶಗಳಲ್ಲಿ ಹುದುಗಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಅವರನ್ನು ಪೋಷಿಸುವ ಮತ್ತು ವಿಕಸನಗೊಳಿಸುವ ಉದ್ದೇಶದಿಂದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೆಂಗಳೂರಿನ ವಿದ್ಯಾನಗರದಲ್ಲಿ ಹಾಗೂ ಕೊಡಗು ಜಿಲ್ಲೆಯ ಕೂಡಿಗೆಯಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದೆ. ಇದಲ್ಲದೆ ಕ್ರೀಡಾವಸತಿ ನಿಲಯಗಳನ್ನು ಬೆಂಗಳೂರು, ಮೈಸೂರು, ದಾವಣಗೆರೆ, ಬಿಜಾಪುರ, ಬೆಳಗಾಂವಿ ಮತ್ತು ಗುಲ್ಬರ್ಗ ಜಿಲ್ಲಾ ಕೇಂದ್ರಗಳಲ್ಲೂ ನಡೆಸಲಾಗುತ್ತಿದೆ.

**ಕ್ರೀಡಾ ತರಬೇತಿ ಕಾರ್ಯಕ್ರಮಗಳು :** ರಾಜ್ಯದ ಎಲ್ಲ 27 ಜಿಲ್ಲಾ ಕೇಂದ್ರಗಳಲ್ಲಿ ಕೋಚಿಂಗ್ ಕೇಂದ್ರಗಳಿದ್ದು ರಾಜ್ಯ ತರಬೇತಿ ಕೇಂದ್ರ ಬೆಂಗಳೂರಿನಲ್ಲಿದೆ. ಎಲ್ಲಾ ಕೇಂದ್ರಗಳಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದ ವತಿಯಿಂದ ಕ್ರೀಡಾ ತರಬೇತುದಾರರನ್ನು ನೇಮಕ ಮಾಡಲಾಗಿದ್ದು, ಇವರು ಅಲ್ಲಿಯ ಸ್ಥಳೀಯ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡುವರು. ಇಷ್ಟಲ್ಲದೆ ಭರವಸೆ ಮೂಡಿಸಿದ ಕ್ರೀಡಾ ಪಟುಗಳಿಗೆ ಹೆಚ್ಚಿನ ಮಟ್ಟದ ಪ್ರೋತ್ಸಾಹ ಮತ್ತು ತರಬೇತಿಯನ್ನು ನೀಡಲಾಗುತ್ತಿದೆ.

**ಗ್ರಾಮೀಣ ಕ್ರೀಡಾಕೂಟಗಳು :** ಕರ್ನಾಟಕ ರಾಜ್ಯ ಶೇಕಡ 90ರಷ್ಟು ಗ್ರಾಮೀಣ ಪ್ರದೇಶಗಳನ್ನೊಳಗೊಂಡ ಕ್ರೀಡಾ ಪ್ರತಿಭೆಗಳನ್ನು ಹೊಂದಿದ್ದು ಅವರುಗಳನ್ನು ಗುರುತಿಸಲು ಮತ್ತು ಅವರಿಗೆ ಭಾಗವಹಿಸಲು ಅವಕಾಶ ಕಲ್ಪಿಸಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಪ್ರತಿವರ್ಷ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಗ್ರಾಮೀಣ ಕ್ರೀಡಾ ಕೂಟಗಳನ್ನು ಏರ್ಪಡಿಸುತ್ತದೆ.

ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟುಗಳನ್ನು ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಕಳುಹಿಸಿಕೊಡಲಾಗುವುದು.

**ಮಹಿಳಾ ಕ್ರೀಡಾಕೂಟಗಳು :** ಬಾಲಕಿಯರು ಮತ್ತು ಮಹಿಳೆಯರಲ್ಲಿ ಹುದುಗಿರುವ ಕ್ರೀಡಾ ಪ್ರತಿಭೆಯ ವಿಕಸನಕ್ಕಾಗಿ ಪ್ರತಿವರ್ಷ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಮಹಿಳಾ ಕ್ರೀಡಾ ಕೂಟಗಳನ್ನು ನಡೆಸಲಾಗುವುದು. ಆಗ ಉತ್ತಮ ಕ್ರೀಡಾಪಟುಗಳನ್ನು ಪತ್ತೆ ಹಚ್ಚುವ ಕಾರ್ಯವೂ ನಡೆಯುತ್ತದೆ.

ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟಗಳು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಕ್ರೀಡಾ ಮನೋಭಾವ ಬೆಳೆಸಲು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖಾ ವತಿಯಿಂದ ಪ್ರತಿವರ್ಷ ಜಿಲ್ಲಾ ವಿಭಾಗ ಮತ್ತು ರಾಜ್ಯಮಟ್ಟದಲ್ಲಿ ಸರ್ಕಾರಿ ನೌಕರರ ಕ್ರೀಡಾ ಕೂಟಗಳನ್ನು ಏರ್ಪಡಿಸಲಾಗುವುದು.

ಕ್ರೀಡೆಗಳಲ್ಲಿ ವಿಶೇಷ ಆಸಕ್ತಿಯಿರುವ ಸರ್ಕಾರಿ ನೌಕರರಿಗೆ ಇದರಿಂದ ಪ್ರೋತ್ಸಾಹ ದೊರೆಯುವುದಲ್ಲದೆ, ಸರ್ಕಾರಿ ನೌಕರರಿಗೆ ಸೇರಿದ ಅನಂತರ ಕ್ರೀಡೆಗಳಲ್ಲಿ ಭಾಗವಹಿಸುವ ಅವಕಾಶ ವಿರಳವಾದ್ದರಿಂದ ಅವರ ಆಸಕ್ತಿ ಕುಂದದಂತೆ, ಕ್ರೀಡಾ ಆಸಕ್ತಿಯನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸುವುದಾಗಿದೆ.

**ಶಾಸಕರ ಕ್ರೀಡಾಕೂಟ :** ರಾಜ್ಯದ ಜನಪ್ರತಿನಿಧಿಗಳಾದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಮೂಡಿಸಲು ಹಾಗೂ ಕ್ರೀಡಾ ಪ್ರತಿಭೆ ಇರುವ ಸದಸ್ಯರಿಗೆ ಆಸಕ್ತಿಯನ್ನು ಬೆಳೆಸಲು ಇಲಾಖೆಯ ವತಿಯಿಂದ ಪ್ರತಿವರ್ಷ ಶಾಸಕರ ಕ್ರೀಡಾಕೂಟವನ್ನು ಸಂಘಟಿಸಲಾಗುತ್ತಿದೆ.

### ಕ್ರೀಡಾ ಕಲ್ಯಾಣ ಯೋಜನೆಗಳು

**ಕ್ರೀಡಾ ವಿದ್ಯಾರ್ಥಿವೇತನ :** ಶಿಕ್ಷಣದಲ್ಲಿ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿವಿಧ ಕ್ರೀಡಾಕೂಟಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದಿದ್ದರೆ, ಅಂಥವರಿಗೆ ಪ್ರೋತ್ಸಾಹ ಮತ್ತು ಉತ್ತೇಜನ ನೀಡಲು ಇಲಾಖೆಯ ವತಿಯಿಂದ ವಾರ್ಷಿಕ ಕ್ರೀಡಾ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.

**ಸಂಕಷ್ಟದಲ್ಲಿರುವ ಕ್ರೀಡಾಪಟುಗಳಿಗೆ ನೆರವು :** ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಶೇಷ ಸಾಧನೆಗೈದ, ಆರ್ಥಿಕವಾಗಿ ದುಃಸ್ಥಿತಿಯಲ್ಲಿರುವ ಕ್ರೀಡಾಪಟುಗಳಿಗೆ ಇಲಾಖೆಯಿಂದ ಮಾಸಾಶನವನ್ನು ನೀಡಲಾಗುತ್ತಿದೆ. ಸಂಕಷ್ಟದಲ್ಲಿರುವ ಕುಸ್ತಿಪಟುಗಳಿಗೂ ಮಾಸಾಶನ ಸೌಲಭ್ಯವನ್ನು ಕಲ್ಪಿಸಲಾಗಿದೆ.

**ವೃತ್ತಿ ಶಿಕ್ಷಣದ ಪ್ರವೇಶಗಳಲ್ಲಿ ಕ್ರೀಡಾ ಮೀಸಲಾತಿ :** ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಅಪೂರ್ವ ಸಾಧನೆ ಮಾಡಿದ ಕ್ರೀಡಾಪಟುಗಳು ಪಾಲಿಟೆಕ್ನಿಕ್, ಎಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯಗಳಂತಹ ಇತರೇ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ್ದರೆ ಕ್ರೀಡಾಸಾಧನೆಯ ಆಧಾರದ ಮೇಲೆ ಅವರಿಗೆ ಸೀಟು ಹಂಚಿಕೆ ಮಾಡಲು ಇಲಾಖೆಯಿಂದ ಸಾಮಾನ್ಯ ಪ್ರವೇಶ ಘಟಕದ ವಿಶೇಷಾಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತಿದೆ.

ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಗೆ ಹಾಗೂ ದ್ರೋಣಾಚಾರ್ಯ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳನ್ನು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಶಿಫಾರಸು ಮಾಡುವುದು.

**ದ್ರೋಣಾಚಾರ್ಯ ಪ್ರಶಸ್ತಿ:** ಈ ಪ್ರಶಸ್ತಿಯನ್ನು ಕೇಂದ್ರ ಸರ್ಕಾರವು 1985 ರಲ್ಲಿ ಸ್ಥಾಪಿಸಿದೆ. ಇದನ್ನು ಯಾವುದೇ ವ್ಯಕ್ತಿ ಅಥವಾ ತಂಡಕ್ಕೆ ತರಬೇತಿಯನ್ನು ನೀಡಿ ಅದು ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ ಅತ್ಯುತ್ತಮ ಸಾಧನೆಯನ್ನು ಸಾಧಿಸಿ ಪದಕ ಪಡೆಯಲು ಕಾರಣವಾದ ತರಬೇತುದಾರರಿಗೆ ನೀಡಲಾಗುತ್ತಿದೆ. ಇದನ್ನು ಪಡೆದವರಿಗೆ ದ್ರೋಣಾಚಾರ್ಯರ ವಿಗ್ರಹ ಮತ್ತು 2,50,000 ರೂ.ಗಳ ನಗದು ಬಹುಮಾನ ಹಾಗೂ ಪ್ರಶಸ್ತಿಯನ್ನು ನೀಡಲಾಗುವುದು.

**ಅರ್ಜುನ ಪ್ರಶಸ್ತಿ :** ಇದು ರಾಷ್ಟ್ರದ ಅತ್ಯುನ್ನತ ಕ್ರೀಡಾ ಪ್ರಶಸ್ತಿ. 1961ರಲ್ಲಿ ಇದನ್ನು ಸ್ಥಾಪಿಸಲಾಗಿದೆ. ಈ ಪ್ರಶಸ್ತಿಯನ್ನು ಪಡೆಯಲು ಕ್ರೀಡಾಪಟುವಿನ ಪ್ರಸ್ತುತ ವರ್ಷದ ಮತ್ತು ಕಳೆದ ಮೂರು ವರ್ಷಗಳ ಸಾಧನೆಯನ್ನು ಪರಿಗಣಿಸಲಾಗುವುದು. ಅವರ ಬದುಕಿನ ಅತ್ಯುತ್ತಮ ಕ್ರೀಡಾ

ಸಾಧನೆಗೆ ಇದನ್ನು ನೀಡಲಾಗುವುದು. ಈ ಪ್ರಶಸ್ತಿ ಕಂಚಿನ ಅರ್ಜುನನ ಪ್ರತಿಮೆಯಿಂದ ಕೂಡಿದ್ದು, ಜೊತೆಯಲ್ಲಿ ಪ್ರಶಸ್ತಿಪತ್ರ ಮತ್ತು ಒಂದೂವರೆ ಲಕ್ಷ ರೂಪಾಯಿಗಳ ನಗದನ್ನು ಹೊಂದಿರುತ್ತದೆ. 1995ರ ಅನಂತರ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಈ ಪ್ರಶಸ್ತಿ ಪಡೆಯಲು ಒಬ್ಬ ಕ್ರೀಡಾ ಪಟು ಒಲಿಂಪಿಕ್, ಏಷ್ಯನ್, ಕಾಮನ್‌ವೆಲ್ತ್ ಮುಂತಾದ ಮನ್ನಣೆ ಪಡೆದ ಆಟಗಳಲ್ಲಿ ಭಾಗವಹಿಸಿದವನಾಗಿರಬೇಕು. ಭಾರತೀಯ ಆಟಗಳಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದವರೂ ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ.

ಅಂಗವಿಕಲ ಕ್ರೀಡಾಪಟುಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪ್ರಶಸ್ತಿ ವಿಜೇತರಾಗಿ ಅತ್ಯುತ್ತಮ ಸಾಧನೆಗೈದವರಿಗೂ ಈ ಪ್ರಶಸ್ತಿ ನೀಡಲಾಗುತ್ತದೆ.

**ಏಕಲವ್ಯ ಪ್ರಶಸ್ತಿ :** ಕರ್ನಾಟಕದ ಉದಯೋನ್ಮುಖ ಆಟಗಾರರನ್ನು ಪ್ರೋತ್ಸಾಹಿಸುವ, ಹೆಚ್ಚಿನ ಸಾಧನೆಗೈಯಲು ಪೂರಕವಾದ ಪ್ರಶಸ್ತಿ. ಕರ್ನಾಟಕ ಸರ್ಕಾರದ ಈ ಪ್ರಶಸ್ತಿ ಏಕಲವ್ಯನ ಕಂಚಿನ ಪ್ರತಿಮೆ, ಐವತ್ತು ಸಾವಿರ ರೂಪಾಯಿ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನೊಳಗೊಂಡಿರುತ್ತದೆ. ಇದು ಕರ್ನಾಟಕದ ಯಾವುದೇ ಕ್ರೀಡಾಪಟು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಗಳಿಸುವ ಸಾಧನೆಯನ್ನು ಅವಲಂಬಿಸಿದೆ. ಕನಿಷ್ಟ ಐದುವರ್ಷಗಳ ಸಾಧನೆಯನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು. ಎಲ್ಲ ವಿಭಾಗದಲ್ಲೂ ಪ್ರಶಸ್ತಿಗಳಿವೆ.

ದೇವರಾಜ್ ಅರಸು ಕ್ರೀಡಾ ಮತ್ತು ಯುವಜನ ಅಭಿವೃದ್ಧಿ ಸಂಸ್ಥೆ ರಾಜ್ಯದಲ್ಲಿ ಯುವಜನ ಸೇವೆ ಹಾಗೂ ಕ್ರೀಡೆಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲು ಹಾಗೂ ಯುವಜನ ಸೇವಾ ಚಟುವಟಿಕೆಗಳ ಬಗ್ಗೆ ಅಧ್ಯಯನ ನಡೆಸಲು ದೇವರಾಜ ಅರಸ್ ಕ್ರೀಡಾ ಮತ್ತು ಯುವಜನ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ವಿವಿಧ ತರಬೇತಿ ಕಾರ್ಯಕ್ರಮಗಳ ರೂಪ ರೇಷೆಗಳನ್ನು ಸಿದ್ಧಪಡಿಸುವುದು ಮತ್ತು ಯುವಜನ ಸೇವಾ ಮತ್ತು ಕ್ರೀಡಾ ಕಾರ್ಯಕ್ರಮಗಳ ಬಗ್ಗೆ ಯೋಜನೆಗಳನ್ನು ಸಿದ್ಧಪಡಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಈ ಸಂಸ್ಥೆಯು ಇಲಾಖೆಯ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ ಶಾಖೆಯಾಗಿ ಕಾರ್ಯನಿರ್ವಹಿಸುವುದು.

### ಕ್ರೀಡಾ ಸೌಲಭ್ಯಗಳು

**ತಾಲ್ಲೂಕು ಮತ್ತು ಜಿಲ್ಲಾ ಕ್ರೀಡಾಂಗಣಗಳು :** ಕ್ರೀಡಾ ಚಟುವಟಿಕೆಗೆ ಪ್ರೇರಕವಾದ ಕ್ರೀಡಾಂಗಣಗಳು ಮತ್ತು ಸೌಲಭ್ಯಗಳು ಬಲು ಆವಶ್ಯಕ. ಈಗಾಗಲೇ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣ ನಿರ್ಮಾಣಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು ಹೊಸ ಜಿಲ್ಲೆಗಳನ್ನು ಹೊರತುಪಡಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಕ್ರೀಡಾ ಚಟುವಟಿಕೆಗಳು ನಡೆಯುತ್ತಿವೆ.

**ಒಳಾಂಗಣ ಕ್ರೀಡಾಂಗಣ :** ಬೆಂಗಳೂರಿನಲ್ಲಿರುವ ಕಂಠೀರವ ಒಳಾಂಗಣ ಕ್ರೀಡಾಂಗಣ ಮತ್ತು ಕೋರಮಂಗಲ ಒಳಾಂಗಣ ಕ್ರೀಡಾಂಗಣಗಳಲ್ಲಿ ಹಾಗೂ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಕ್ರೀಡಾ ಚಟುವಟಿಕೆಗಳನ್ನು ಸಂಘಟಿಸಲಾಗುತ್ತಿದೆ.

**ವಿಶೇಷ ಕ್ರೀಡಾಂಗಣಗಳು :** ಬೆಂಗಳೂರಿನಲ್ಲಿ 4ನೆಯ ರಾಷ್ಟ್ರೀಯ ಕ್ರೀಡೆಗಳನ್ನು ಸಂಘಟಿಸಿದ ಕಾಲಕ್ಕೆ ಕಂಠೀರವ ಒಳಾಂಗಣ ಕ್ರೀಡಾಂಗಣ, ಹೊಂಬೇಗೌಡನಗರ ಕೊಕ್ಕೊ ಕ್ರೀಡಾಂಗಣ, ರಾಜ್ಯ ಫುಟ್‌ಬಾಲ್ ಸಂಸ್ಥೆಯ ಕ್ರೀಡಾಂಗಣವನ್ನು ಬೆಂಗಳೂರಿನಲ್ಲಿ ಹಾಗೂ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣವನ್ನು ಮೈಸೂರಿನಲ್ಲಿ ವಿಶೇಷವಾಗಿ ನಿರ್ಮಾಣ ಮಾಡಲಾಗಿದ್ದು ಇಲ್ಲಿ ಕ್ರೀಡಾ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಸಂಘಟಿಸಲಾಗುತ್ತಿದೆ.

### ಅರ್ಜುನ ಪ್ರಶಸ್ತಿ ಪಡೆದ ಕನ್ನಡಿಗರು

| ಹೆಸರು | ವರ್ಷ | ಆಟ |
|---|---|---|
| ಕೆನೆತ್ ಎಲ್. ಪೊವೆಲ್ | 1965 | ಅಥ್ಲೆಟಿಕ್ಸ್ |
| ಎಲ್ವಿರಾ ಬ್ರಿಟೊ | 1965 | ಹಾಕಿ (ಮಹಿಳಾ) |
| ವಿ.ಜೆ.ಪೀಟರ್ | 1966 | ಹಾಕಿ |
| ಉಷಾ ಸುಂದರ್‌ರಾಜ್ | 1966 | ಟೇಬಲ್ ಟೆನ್ನಿಸ್ |
| ಇ.ಎ.ಎಸ್.ಪ್ರಸನ್ನ | 1966 | ಕ್ರಿಕೆಟ್ |
| ಶೋಭಾ ಮೂರ್ತಿ | 1970 | ಬ್ಯಾಡ್ಮಿಂಟನ್ |
| ಪ್ರಕಾಶ ಪಡುಕೋಣೆ | 1972 | ಬ್ಯಾಡ್ಮಿಂಟನ್ |
| ಜಯಮ್ಮಶ್ರೀನಿವಾಸ್ | 1972 | ಬ್ಯಾಡ್ಮಿಂಟನ್ |
| ಬಿ.ಎಸ್.ಚಂದ್ರಶೇಖರ್ | 1973 | ಕ್ರಿಕೆಟ್ |
| ಎಂ.ಎ.ಗಣೇಶ್ | 1973 | ಹಾಕಿ |
| ಬಿ.ಪಿ.ಗೋವಿಂದ | 1975 | ಹಾಕಿ |
| ಶಾಂತಾರಂಗಸ್ವಾಮಿ | 1975 | ಮಹಿಳಾ ಕ್ರಿಕೆಟ್ |
| ಜಿ.ಆರ್.ವಿಶ್ವನಾಥ್ | 1977 | ಕ್ರಿಕೆಟ್ |
| ಏಂಜಲ್ ಮೇರಿ ಜೋಸೆಫ್ | 1978 | ಅಥ್ಲೆಟಿಕ್ಸ್ |
| ಸಿ.ಸಿ.ಮಾಚಯ್ಯ | 1978 | ಸ್ನೂಕರ್ |
| ಅರವಿಂದ ಸವೂರ್ | 1978 | ಸ್ನೂಕರ್ |
| ಎಸ್.ಎಂ.ಎಚ್.ಕಿರ್ಮಾನಿ | 1980 | ಕ್ರಿಕೆಟ್ |
| ಎನ್.ಪ್ರಕಾಶ್ | 1980 | ಕೊಕ್ಕೊ |
| ಸುಧನ್ವ ಎಸ್.ಮಾನೆ | 1985 | ಹಾಕಿ |
| ವಂದನಾರಾವ್ | 1987 | ಅಥ್ಲೆಟಿಕ್ಸ್ |
| ಡಿ.ವಿ.ಪ್ರಸಾದ್ | 1987 | ಚೆಸ್ |
| ಅಶ್ವಿನಿ ನಾಚಪ್ಪ | 1988 | ಅಥ್ಲೆಟಿಕ್ಸ್ |
| ಪಿ.ಕೆ.ಯಶೋಧರ್ | 1988 | ಪವರ್‌ಲಿಫ್ಟಿಂಗ್ |
| ಜೂಡ್ ಫೆಲಿಕ್ಸ್ | 1993 | ಹಾಕಿ |
| ಅನಿಲ್ ಕುಂಬ್ಳೆ | 1995 | ಕ್ರಿಕೆಟ್ |
| ಮಾಲತಿಹೊಳ್ಳ (ಅಂಗವಿಕಲೆ) | 1995 | ಅಥ್ಲೆಟಿಕ್ಸ್ |
| ಶ್ರೀನಾಥ್, ಜಾವಗಲ್ | 1996 | ಕ್ರಿಕೆಟ್ |
| ಕು.ಯು.ಸುಂದರ್‌ರಾಜ್ (ಅಂಗವಿಕಲ) | 1996 | ಟೇಬಲ್ ಟೆನ್ನಿಸ್ |
| ಕಲ್ಲೇಗೌಡ | 1996 | ಕ್ರಿಕೆಟ್ |
| ಎ.ಬಿ.ಸುಬ್ಬಯ್ಯ | 1996 | ಹಾಕಿ |
| ಅಶಿಶ್ ಬಲ್ಲಾಳ್ | 1996 | ಹಾಕಿ |
| ರೀತ್ ಅಬ್ರಹಾಂ | 1997 | ಅಥ್ಲೆಟಿಕ್ಸ್ |
| ಚೇತನ್ ಬಬೂರ್ | 1997 | ಟೇಬಲ್ ಟೆನ್ನಿಸ್ |
| ಮಹದೇವಯ್ಯ (ಅಂಗವಿಕಲ) | 1997 | ಅಥ್ಲೆಟಿಕ್ಸ್ |
| ಎನ್.ಸಿ.ಈಶನ್ | 1998 | ಅಥ್ಲೆಟಿಕ್ಸ್ |
| ರಾಹುಲ್ ದ್ರಾವಿಡ್ | 1998 | ಕ್ರಿಕೆಟ್ |
| ಶೋಭಾ ನಾರಾಯಣ | 1998 | ಕೊಕ್ಕೊ |
| ಸತೀಶ್‌ರೈ | 1998 | ವೇಟ್‌ಲಿಫ್ಟಿಂಗ್ |
| ಹೊನ್ನಪ್ಪ | 1998 | ಕಬಡ್ಡಿ |
| ವೆಂಕಟೇಶ್ ಪ್ರಸಾದ್ | 1999-2000 | ಕ್ರಿಕೆಟ್ |
| ಅಭಿಜಿತ್ | 1999-2000 | ಈಜು |
| ರಮೇಶ್ | 2001-2002 | ಕಬಡ್ಡಿ |

(ಎಸ್.ಆರ್.ಯು.)

**ಕ್ರೈಸ್ತಧರ್ಮ :** ಕರ್ನಾಟಕದಲ್ಲಿ ಕ್ರೈಸ್ತಧರ್ಮದ ಸ್ಪಷ್ಟ ಗುರುತು ಸಿಕ್ಕುವುದು ಪೋರ್ಚುಗೀಸರು ಭಾರತಕ್ಕೆ ಬಂದ ಕಾಲದಿಂದೀಚೆಗೆ, 16ನೆಯ ಶತಮಾನದ ಆದಿಯಿಂದ ರೋಮನ್ ಕ್ಯಾತೊಲಿಕ್ ಪಂಥದವರೂ 19ನೆಯ ಶತಮಾನದ ಆದಿಯಲ್ಲಿ ಪ್ರಾಟೆಸ್ಟಂಟರ ವಿವಿಧ ಪಂಥಗಳವರೂ ಕರ್ನಾಟಕದಲ್ಲಿ ಕ್ರೈಸ್ತಧರ್ಮವನ್ನು ವ್ಯವಸ್ಥಿತವಾಗಿ ಸ್ಥಾಪಿಸಿದರು.

ಇದಕ್ಕಿಂತ ಹಿಂದೆಯೇ ಕ್ರೈಸ್ತಧರ್ಮ ಕರ್ನಾಟಕದಲ್ಲಿ ಇತ್ತು ಎಂಬುದಕ್ಕೆ ಕೆಲವು ಸಾಕ್ಷ್ಯಾಧಾರಗಳು ದೊರೆತಿವೆ. ಕ್ರಿಸ್ತನ ಹನ್ನೆರಡು ಸ್ವಂತ ಶಿಷ್ಯರಲ್ಲಿ ಒಬ್ಬನಾದ ಸೇಂಟ್ ಥಾಮಸ್ ಸು.ಕ್ರಿ.ಶ.52ರಲ್ಲಿ ಗುಡ್ನಾಫಾರ್ ಎಂಬ ರಾಜನ ಆಮಂತ್ರಣದ ಮೇರೆಗೆ ಭಾರತಕ್ಕೆ ಬಂದನೆಂದೂ ಮಜಾಯ್ ಎಂಬವನ ರಾಜ್ಯದಲ್ಲಿಯೂ ಮತಪ್ರಚಾರ ಮಾಡಿದನೆಂದೂ 3ನೆಯ ಶತಮಾನದ ಸಿರಿಯನ್ ಭಾಷೆಯ ಆ್ಯಕ್ಟ್ಸ್ ಆಫ್ ಸೇಂಟ್ ಥಾಮಸ್‌ನಲ್ಲಿ ಹೇಳಿದೆ. ಗುಡ್ನಾಫಾರ್ ಎಂದರೆ ಮೈಸೂರಿನ ಕುಟ್ನಾಫಾರ್ ಅಥವಾ ಕಂದಪ್ಪ ರಾಜನಿರಬಹುದು ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಮಜ್ದಾಯ್ ರಾಜ ಕೇರಳ ಅಥವಾ ಕೋರಮಂಡಲ್ ಅಥವಾ ಮೈಸೂರಿನವನು ಇರಬಹುದು ಎಂದು ಇನ್ನು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಪರ್ಷಿಯ, ಸಿರಿಯ ಮತ್ತು ಆರ್ಮೇನಿಯ ದೇಶಗಳ ಕ್ರೈಸ್ತ ವರ್ತಕರು ಕನ್ನಡ ಕರಾವಳಿಯಲ್ಲಿ ವ್ಯಾಪಾರಕ್ಕೋಸ್ಕರ ಮತ್ತು ಮತಪ್ರಚಾರಕ್ಕೋಸ್ಕರ ವಸಾಹತುಗಳನ್ನು ಸ್ಥಾಪಿಸಿದ್ದಿರಬಹುದು. ಚೆನ್ನೈ ಸಮೀಪದ ಮೈಲಾಪುರದ ಸೇಂಟ್ ಥಾಮಸನ ಸಮಾಧಿಯ ದೇವಾಲಯಕ್ಕೆ ಉಂಬಳಿಯನ್ನು ಕೊಟ್ಟ ಶಾಸನ ಸಿಕ್ಕಿದೆ. ಇದರಲ್ಲಿ ಬುಕ್ಕರಾಯನ ಹೆಸರಿದೆ. ಇದರ ಕಾಲ 1376 ಎಂದು ಅನುಮಾನಿಸಲಾಗಿದೆ. ಮುಂಬಯಿ ಬಳಿಯ ಕಲ್ಯಾಣ, ಠಾಣಾಗಳಲ್ಲಿ ಮತಪ್ರಚಾರ ಮಾಡುತ್ತಿದ್ದ ಫ್ರಾಯರ್ ಜೋರ್ಡಾನಸ್ 1324ರಲ್ಲಿ ತನ್ನ ಸಹ ಧರ್ಮೋಪದೇಶಕರಿಗೆ ಸಲ್ಲಿಸಿದ ಮನವಿಯ ಫಲವಾಗಿ ಐದು ಮಂದಿ ಡೊಮಿನಿಕನ್ ಸಂನ್ಯಾಸಿಗಳು ಕೆನರಾ (ಕನ್ನಡ ಜಿಲ್ಲೆಗಳು) ಮತ್ತು ಮೈಸೂರು ಪ್ರದೇಶಗಳಿಗೆ ಧರ್ಮಪ್ರಚಾರಕ್ಕಾಗಿ ಬಂದರು. 1328 ರಷ್ಟರಲ್ಲಿ ಈ ಪ್ರದೇಶಗಳಲ್ಲಿ ಒಟ್ಟು 10,000 ಮಂದಿ ಕ್ರೈಸ್ತರಿದ್ದರು. 1483ರಲ್ಲಿ ರತ್ನಖಚಿತವಾದ ಶಿಲುಬೆಯ ಪ್ರತಿಮೆಯೊಂದು ಮಂಗಳೂರಿನ ಬಳಿ ಸಮುದ್ರದಲ್ಲಿ ಸಿಕ್ಕಿತಂತೆ. ಕಾರವಾರದ ಸಮೀಪದ ಅಂಜದೀವ ದ್ವೀಪದಲ್ಲಿ ಪೋರ್ಚುಗೀಸರು ದುರ್ಗವನ್ನು ಕಟ್ಟುವಾಗ ಶಿಲುಬೆಯ ಗುರುತುಳ್ಳ ಕಲ್ಲುಗಳು ಸಿಕ್ಕಿದುವು. 1400ರದು ಎನ್ನಲಾದ ಒಂದು ಕ್ರೈಸ್ತ ಸಮಾಧಿಶಾಸನ ಬೆಂಗಳೂರಿನ ಸಮೀಪದ ಆನೇಕಲ್ಲಿನಲ್ಲಿ ಇದೆ. ದಕ್ಷಿಣ ಕನ್ನಡದ ಕಲ್ಯಾಣಪುರದಲ್ಲಿ ಬಹು ಹಿಂದೆ ಇದ್ದರೆನ್ನಲಾದ ಕ್ರೈಸ್ತರ ಯಾವ ಕುರುಹೂ 16ನೆಯ ಶತಮಾನದ ಹೊತ್ತಿಗೆ ಉಳಿದಿರಲಿಲ್ಲ. ಆದರೆ 1502ರಲ್ಲಿ ವಾಸ್ಕೊಡಗಾಮನ ಎರಡನೆಯ ಪ್ರಯಾಣದ ಕಾಲದಲ್ಲಿ ಮಂಗಳೂರಿನ ಕ್ರೈಸ್ತ ನಿವಾಸಿಗಳು ಒಂದು ರಾಯಭಾರ ನಿಯೋಗವನ್ನು ಪೋರ್ಚುಗೀಸರಲ್ಲಿಗೆ ಕಳಿಸಿದರು ಎಂದು ತಿಳಿದುಬರುತ್ತದೆ. ವಿಜಯನಗರದ ಸಾಮ್ರಾಜ್ಯದಲ್ಲಿ ಕ್ರೈಸ್ತರು ಸೇರಿದಂತೆ ಎಲ್ಲ ಧರ್ಮಗಳ ಜನರು ಸಮಾನ ಸ್ವಾತಂತ್ರ್ಯವನ್ನು ಪಡೆದಿದ್ದರು ಎಂದು ವಿದೇಶೀ ಯಾತ್ರಿಕರು ಬರೆದಿದ್ದಾರೆ. ಇವೆಲ್ಲಾ ಕರ್ನಾಟಕದಲ್ಲಿ ಕ್ರೈಸ್ತ ಧರ್ಮ ಪೋರ್ಚುಗೀಸರು ಬರುವ ಮೊದಲೇ ಇತ್ತೆಂಬುದಕ್ಕೆ ಸಾಕ್ಷಿ.

1510ರಲ್ಲಿ ಗೋವೆ ಪೋರ್ಚುಗೀಸರ ವಶವಾದ ಮೇಲೆ ಅಲ್ಲಿ ಅನೇಕರು ಮತಾಂತರಗೊಂಡರು. 1560ರಲ್ಲಿ ಇಂಕ್ವಿಜಿಷನ್ ಎಂಬ ಧಾರ್ಮಿಕ ನ್ಯಾಯಾಲಯಗಳ ಉಗ್ರಕ್ರಮಗಳನ್ನು ತಪ್ಪಿಸುವುದಕ್ಕೋಸ್ಕರ ಈ ಕ್ರೈಸ್ತರು ಕನ್ನಡ ಜಿಲ್ಲೆಗಳಿಗೆ ಪಲಾಯನ ಮಾಡಿದರು. ಇಕ್ಕೇರಿಯ ನಾಯಕರು ಇವರನ್ನು ಆದರಪೂರ್ವಕ ಬರಮಾಡಿ ಕೃಷಿ ಇತ್ಯಾದಿ ವೃತ್ತಿಗಳಲ್ಲಿ ನಿರತರಾಗುವಂತೆ ಧನಸಹಾಯ ನೀಡಿದರು. ಈ ಜನ ಕ್ರಮೇಣ ಪ್ರತಿಷ್ಠಿತ ವರ್ಗವಾಗಿ ಸ್ಥಾಪಿತವಾದರು. ಶಿವಪ್ಪನಾಯಕನ ರಾಜ್ಯದಲ್ಲಿದ್ದ ಕ್ರೈಸ್ತರ ಸಂಖ್ಯೆಯನ್ನು 6,000 ಎಂದೂ 30,000 ಎಂದೂ ಬೇರೆ ಬೇರೆ ವಿದ್ವಾಂಸರು ನಮೂದಿಸಿದ್ದಾರೆ. 1683ರಲ್ಲಿ ಮರಾಠರು ಗೋವೆಯನ್ನು ಆಕ್ರಮಿಸಿದಾಗಲೂ ಇದೇ ರೀತಿಯಲ್ಲಿ ಕ್ರೈಸ್ತರು ಮತ್ತೊಮ್ಮೆ ಕನ್ನಡ ಜಿಲ್ಲೆಗಳನ್ನು ಪ್ರವೇಶಿಸಿ ನೆಲಸಿದರು. ಸ್ಥಳಾಂತರಗೊಂಡ ಕ್ರೈಸ್ತರಲ್ಲದೆ ಕರ್ನಾಟಕದ ಆಯಾ ಸ್ಥಳಗಳ ಜನರು ಕ್ರೈಸ್ತಧರ್ಮವನ್ನು ಸ್ವೀಕರಿಸಿದುದು ಧರ್ಮಪ್ರಚಾರಕರ ಚಟುವಟಿಕೆಗಳ ಫಲ. 1521ರಲ್ಲಿ ಫ್ರಾನ್ಸಿಸ್ಕನರು ಕನ್ನಡ ಜಿಲ್ಲೆಗಳನ್ನು ಪ್ರವೇಶಿಸಿ ಉಳ್ಳಾಲ, ಫರಂಗಿಪೇಟೆ ಮತ್ತು ಮಂಗಳೂರಿನಲ್ಲಿ ಕ್ರೈಸ್ತ ದೇವಾಲಯಗಳನ್ನು ಸ್ಥಾಪಿಸಿದರು. 1570ರಲ್ಲಿ ಜೆಸ್ವಿಟ್ ಸಂನ್ಯಾಸಿಗಳು ದಕ್ಷಿಣ ಕನ್ನಡದ ಬಸರೂರಿನಲ್ಲಿ ಕ್ರೈಸ್ತ ದೇವಾಲಯವನ್ನು ಕಟ್ಟಿದ್ದರು. ಬೆಳಗಾಂವಿ ಸಮೀಪದ ಖಾನಾಪುರದಲ್ಲಿ 1606ರಲ್ಲೂ ಕಾರವಾರ ಸಮೀಪದ ಸುಂಕೇರಿಯಲ್ಲಿ 1709ರಲ್ಲೂ ಅತ್ತಿಕುರುವಿನಲ್ಲಿ (ಕಿತ್ತೂರು) 1740ರಲ್ಲೂ ಧರ್ಮಪ್ರಚಾರ ಕೇಂದ್ರಗಳು ಸ್ಥಾಪನೆಯಾದವು. ಬಿದನೂರು, ಸೋಂದಾ ರಾಜರ ಅನುಗ್ರಹ ಇವರಿಗೆ ಲಭಿಸಿತ್ತು.

ಇತ್ತ ಮೈಸೂರಿನಲ್ಲಿ 1587ರಲ್ಲಿ ಫ್ರಾನ್ಸಿಸ್ಕನರು ಸುವಾರ್ತೆಗಳನ್ನು ಪ್ರಚಾರ ಮಾಡಿದರು. ರಣಧೀರ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ರಾಜನ ಸಹಾನುಭೂತಿಯನ್ನೂ ಗೌರವವನ್ನೂ ಸಂಪಾದಿಸಿದ್ದ ಗೋವೆಯ ಜೆಸ್ವಿಟ್ ಸಂನ್ಯಾಸಿ ಲಿಯೊನಾರ್ಡೊ ಸಿನ್ನಾಮಿ ಮೈಸೂರಿನಲ್ಲಿ ವ್ಯವಸ್ಥಿತ ಧರ್ಮಬೋಧನೆಯನ್ನು ಆರಂಭಿಸಿದ. 1648ರಲ್ಲಿ ಶ್ರೀರಂಗಪಟ್ಟಣವನ್ನು ತಲಪುವ ಮೊದಲು ಕನ್ನಡ ಜಿಲ್ಲೆಗಳಲ್ಲಿ ಇವನ ದುಡಿಮೆ ನಿರೀಕ್ಷಿಸಿದ ಫಲವನ್ನು ಕೊಡಲಿಲ್ಲವಂತೆ. ಭಾರತೀಯ ಸಂನ್ಯಾಸಿಯಂತೆ ವೇಷಭೂಷಣಗಳನ್ನು ಧರಿಸಿ ಕ್ರೈಸ್ತಧರ್ಮವನ್ನು ಸತ್ಯವೇದವೆಂಬ ಹೆಸರಿನಲ್ಲಿ ಪ್ರಚಾರ ಮಾಡಿದ. ಬಸವಪುರ, ರಾಮಪುರ ಮತ್ತು ಶ್ರೀರಂಗಪಟ್ಟಣದಲ್ಲಿ ಹೆಚ್ಚಾಗಿ ಬ್ರಾಹ್ಮಣರು, ಸೋನೆಗಾರರು, ಒಕ್ಕಲು ಮಕ್ಕಳು ಹೊಸ ಧರ್ಮವನ್ನು ಸ್ವೀಕರಿಸಿದರು. ಕೆಲವು ಆಸ್ಥಾನ ಅಧಿಕಾರಿಗಳೂ ಕ್ರೈಸ್ತರಾದರು.

ಮಿಲಿಗ್ರಸ್ ಚರ್ಚ್, ಮಂಗಳೂರು

ಹೀಗೆ ಆರಂಭವಾದ ಕ್ರೈಸ್ತಧರ್ಮದ ಚರಿತ್ರೆಯಲ್ಲಿ ಕೆಲವು ಏಳುಬೀಳುಗಳನ್ನು ಗಮನಿಸಬಹುದು. ಮಂಗಳೂರು ಮತ್ತು ಬಾರಕೂರುಗಳಿಂದ ಕ್ರೈಸ್ತಮತ ಒಳನಾಡನ್ನು ಪ್ರವೇಶಿಸಿತು. ಕ್ರೈಸ್ತರು ಸ್ಥಿತಿವಂತರೂ ಆಗಿದ್ದು ಪೋರ್ಚುಗೀಸರ ಬೆಂಬಲವನ್ನು ಪಡೆದವರು ಎಂಬ ಕಾರಣದಿಂದ ರಾಜರ, ಅಧಿಕಾರಿಗಳ ಗೌರವಕ್ಕೆ ಪಾತ್ರರಾಗಿದ್ದರು. ವಿಜಯನಗರದ ಆಸ್ಥಾನದಲ್ಲಿ ನಿಮ್ಮೊ ಪೆಜಿರ್ ಎಂಬ ಸಮರ್ಥನಾದ ಕ್ರೈಸ್ತ ಮಂತ್ರಿ ಇದ್ದನೆಂದು ಹೇಳಲಾಗಿದೆ. ಶಿವಪ್ಪನಾಯಕ ದೇಶೀಯ ಕ್ರೈಸ್ತ ಪುರೋಹಿತ ವರ್ಗವನ್ನು ಸ್ಥಾಪಿಸುವ ವಿಷಯವನ್ನು ಚರ್ಚಿಸಲು ಗೋವೆಗೆ ತನ್ನ ಪ್ರತಿನಿಧಿಗಳನ್ನು ಕಳಿಸಿದ್ದ. ಕನ್ನಡ ಜಿಲ್ಲೆಗಳಲ್ಲಿ 16 ಮತ್ತು 17ನೆಯ ಶತಮಾನಗಳಲ್ಲಿ ಪುರೋಹಿತರ ಅಭಾವದಿಂದಾಗಿ ಕ್ರೈಸ್ತರ ಧಾರ್ಮಿಕ ಕ್ಷೇಮಪಾಲನೆಗೆ ಧಕ್ಕೆಯುಂಟಾಯಿತು. ಫಾದರ್ ಜೋಸೆಫ್ ವಾಜ್ ಎಂಬವನು ಈ ಪರಿಸ್ಥಿತಿಯನ್ನು ಬಹಳ ಮಟ್ಟಿಗೆ ಸುಧಾರಿಸಿದ. ಕರ್ನಾಟಕದಲ್ಲಿರುವ ಕ್ರೈಸ್ತರು ಗೋವೆಯ ಬಿಷಪರ ಅಧಿಕಾರವ್ಯಾಪ್ತಿಗೆ ಒಳಪಟ್ಟಿದ್ದರು.

ಫಾದರ್ ಜೆಯೋಕಿಮ್ ಮಿರಾಂಡಾ ಎಂಬುವನು ಬರೆದ ರಿಗ್ಲೊ ಜೆಜು ಎಂಬ ಕೊಂಕಣಿ ಕಾವ್ಯ, ಫಾದರ್ ಸ್ಟೀವನ್ಸ್ 1614ರಲ್ಲಿ ಬರೆದ ಕ್ರಿಸ್ತಾಂವ್ ಪುರಾಣ ಎಂಬ ಬೃಹತ್ ಕಾವ್ಯ ಇವು ಮಂಗಳೂರಿನಲ್ಲಿ ಜನಪ್ರಿಯವಾದುವು. ಫರಂಗಿಪೇಟೆಯಲ್ಲಿ ಪುರೋಹಿತರ ತರಬೇತಿ ಕೇಂದ್ರ ಸೆಮಿನರಿ ಸ್ಥಾಪಿತವಾಯಿತು. ಜೆಸ್ವಿಟರು ಅಂಕೋಲ, ಸುಪ, ಶಿವೇಶ್ವರಗಳಲ್ಲಿ ಕೆಲಸ ಮಾಡುತ್ತಿದ್ದು, ಜೊಯ್ಡಾದಲ್ಲಿ ಒಂದು ವಿದ್ಯಾಕೇಂದ್ರವನ್ನು ತೆರೆದರು. 1637ರಲ್ಲಿ ಬಿಜಾಪುರವನ್ನು 1666ರಲ್ಲಿ ಕನ್ನಡ ಜಿಲ್ಲೆಗಳನ್ನೂ ವಿಕ್ಯಾರಿಯೆಟ್ ಎಪೊಸ್ಟಾಲಿಕ್ ಎಂಬ ಧರ್ಮಕ್ಷೇತ್ರಗಳನ್ನಾಗಿ ಪೋಪ್ ಸ್ಥಾಪಿಸಿದ. 1759ರಲ್ಲಿ ಪೋರ್ಚುಗಲ್ಲಿನ ಆಧಿಪತ್ಯದಿಂದ ಜೆಸ್ವಿಟರನ್ನು ಬಹಿಷ್ಕರಿಸಿದ್ದಾಗ ಕಾರ್ಮೆಲೈಟ್ ಸಂಸ್ಥೆಯವರು ಅವರ ಕೆಲಸವನ್ನು ಮುಂದುವರಿಸಿದರು. ಇವರ ಕಾರ್ಯಕ್ಷೇತ್ರಕ್ಕೆ ಒಳಪಟ್ಟ ಧಾರವಾಡ ಜಿಲ್ಲೆಯ

ತುಮರಿಕೊಪ್ಪ ಹಳ್ಳಿಯಲ್ಲಿ ಮತಪ್ರಚಾರಕಾರ್ಯ ವಿಶೇಷವಾದ ಯಶಸ್ಸನ್ನು ಗಳಿಸಿತು. ಸಂತ ಮೇರಿಯ ಜೀವನಚರಿತ್ರೆಯನ್ನು ಒಳಗೊಂಡ ಹಳೆಯ ತಾಳೆಗರಿಗಳನ್ನು ಇಲ್ಲಿ ಹಲವರ ಮನೆಗಳಲ್ಲಿ ಕಾಣುವುದು ಅಪರೂಪವಲ್ಲ. 1783ರಲ್ಲಿ ಕನ್ನಡ ಜಿಲ್ಲೆಗಳಲ್ಲಿ ಇಪ್ಪತ್ತೇಳು ಕ್ರೈಸ್ತ ದೇವಾಲಯಗಳಿದ್ದುವು.

ಈ ಮಧ್ಯೆ, ಕ್ರೈಸ್ತಧರ್ಮದ ಪ್ರಚಾರಕ್ಷೇತ್ರಗಳಿಗೆ ಧನಸಹಾಯವನ್ನು ಒದಗಿಸಿದುದಕ್ಕೆ ಪ್ರತಿಯಾಗಿ ಬಿಷಪರನ್ನು ನೇಮಕ ಮಾಡುವುದರಲ್ಲಿ ಪೋರ್ಚುಗೀಸ್ ರಾಜನಿಗೆ ಪೋಪ್ ಅಧಿಕಾರ ಕೊಟ್ಟಿದ್ದ. ಪಾದ್ರೊವಾದೊ ಎಂದು ಈ ಒಪ್ಪಂದಕ್ಕೆ ಹೆಸರು ಬಂದಿತ್ತು. ಕನ್ನಡ ಜಿಲ್ಲೆಗಳೇ ಮೊದಲಾದ ಪ್ರದೇಶಗಳಲ್ಲಿ ಪಾದ್ರೊವಾದೊ ಅಧಿಕಾರ ಮಾನ್ಯವೇ ಪೋಪನ ಧರ್ಮ ಪ್ರಚಾರ ಸಂಸ್ಥೆಯ ಅಧಿಕಾರ ಮಾನ್ಯವೇ ಎಂಬುದರ ಬಗ್ಗೆ ಅನೇಕ ವಿವಾದಗಳು ಎದ್ದುವು. ಇತ್ತಂಡದ ಅಧಿಕಾರವ್ಯಾಪ್ತಿಗೆ ಕೆಲವು ಪ್ರದೇಶಗಳು ಸೇರಿದವು. ಈ ಪ್ರಶ್ನೆ 1886ರಲ್ಲಿ ಸಮರ್ಪಕವಾಗಿ ಬಗೆಹರಿಯಿತು.

ಇಂಗ್ಲಿಷರಿಗೆ ಕ್ರೈಸ್ತರು ಸಹಾನುಭೂತಿಯನ್ನು ತೋರಿಸುತ್ತಿದ್ದುದರಿಂದ ಟಿಪ್ಪುಸುಲ್ತಾನ 1784ರಲ್ಲಿ ತನ್ನ ಆಧಿಪತ್ಯದಲ್ಲಿದ್ದ ಕನ್ನಡ ಜಿಲ್ಲೆಗಳು, ಬಿದನೂರು, ಸುಂಕೇರಿ ಪ್ರದೇಶಗಳ ಎಲ್ಲ ಕ್ರೈಸ್ತರನ್ನು ಸಾಮೂಹಿಕವಾಗಿ ಬಂಧಿಸಿ ಶ್ರೀರಂಗಪಟ್ಟಣಕ್ಕೆ ಸಾಗಿಸಿದನೆಂದೂ ಗಂಡಸರು ಹೆಂಗಸರು ಮಕ್ಕಳು ಸೇರಿದಂತೆ ಒಟ್ಟು 30,000 ಕ್ರೈಸ್ತರನ್ನು ಬಂಧಿಸಲಾಯಿತೆಂದೂ ಟಿಪ್ಪುವಿಗೆ ನಿಷ್ಠಾವಂತರಾದ 5,000 ಕ್ರೈಸ್ತರು ಯಾವ ತೊಂದರೆಯನ್ನೂ ಅನುಭವಿಸಲಿಲ್ಲ ಹಾಗೂ ಸೆರೆಯಾಳುಗಳನ್ನು ಬಲಾತ್ಕಾರವಾಗಿ ಮತಾಂತರಗೊಳಿಸಲಾಯಿತಲ್ಲದೆ ಬಗೆಬಗೆಯಲ್ಲಿ ಹಿಂಸಿಸಲಾಯಿತೆಂದೂ ಹೇಳಲಾಗುತ್ತದೆ. ಆದರೆ ಈ ಕ್ರಮದಿಂದ ವಿಶೇಷವಾದ ರಾಜಕೀಯ ಪ್ರಯೋಜನವಾಗಲಿಲ್ಲ ವಾದುದರಿಂದ ಮತ್ತು ಫ್ರೆಂಚ್ ಸರ್ಕಾರದ ಒತ್ತಡದಿಂದ 1789ರಲ್ಲಿ ಕ್ರೈಸ್ತರ ಬಿಡುಗಡೆಯಾಯಿತು. ಕೆಲವರು ಕನ್ನಡ ಜಿಲ್ಲೆಗಳಿಗೆ ಹಿಂದಿರುಗಿ ಬಹಳ ಶ್ರಮಪಟ್ಟು ತಮ್ಮ ಆಸ್ತಿಗಳನ್ನು ಪುನಃ ಪಡೆದರು. ಈ ಕ್ರೈಸ್ತರನ್ನು ಪುನರ್ವಸತಿಗೊಳಿಸುವ ಕೆಲಸದಲ್ಲಿ ಅಬೆಡುಬಾಯಿ ಮತ್ತು ಫಾದರ್ ಫ್ರಾನ್ಸಿಸ್ ಜೇವಿಯರ್ ದೊಡ್ಡಪಾತ್ರವನ್ನು ವಹಿಸಿದರು. ಟಿಪ್ಪುವಿನ ಹಿಂಸಾಚಾರವನ್ನು ತಪ್ಪಿಸಲು 1792ರಲ್ಲಿ ಅನೇಕ ಕ್ರೈಸ್ತರು ಕೊಡಗಿನಲ್ಲಿ ನೆಲಸಿದರು. 1784ರ ಮೊದಲೇ ಕ್ರೈಸ್ತಮತ ಪ್ರಚಾರಕಾರ್ಯ ನಡೆದರೂ ಕೊಡಗಿನಲ್ಲಿ ಆ ಮೊದಲು ಕ್ರೈಸ್ತರಿದ್ದಂತೆ ಕಾಣದು. 1730ರಲ್ಲಿ ರಾಜನ ಆಮಂತ್ರಣವನ್ನು ಸ್ವೀಕರಿಸಿ ಫಾದರ್ ರೆಬೆಲೊ ಎಂಬವನು ಮಡಿಕೇರಿಗೆ ಬಂದಿದ್ದ. ಕ್ರೈಸ್ತರಿಗೆ ಕ್ರೈಸ್ತಧರ್ಮ ಪ್ರಚಾರಕ್ಕೆ ರಕ್ಷಣೆಯನ್ನು ಕೊಡುವುದಾಗಿ ರಾಜ ಆಗ ಆಶ್ವಾಸನೆಯನ್ನು ನೀಡಿದ್ದ.

ಮೈಸೂರು ಪ್ರದೇಶದಲ್ಲಿ ಕ್ರೈಸ್ತಧರ್ಮ ಬಹುಬೇಗನೆ ಹರಡಿತು. 1700ರ ಹೊತ್ತಿಗೆ ಹದಿನೆಂಟು ಮಂದಿ ಮಿಷನರಿಗಳೂ 30,000 ಮಂದಿ ಕ್ರೈಸ್ತರೂ ಇದ್ದರು. ಬಸವಪುರ, ಕಾನಕಾನಹಳ್ಳಿ, ಹಾರುಬರೆ, ಕೆಲಮಂಗಳ ಇವು ಕೆಲವು ಮುಖ್ಯ ಕ್ರೈಸ್ತಧರ್ಮ ಕೇಂದ್ರಗಳಾದವು. ಧರ್ಮಪುರಿಯಿಂದ ಬೆಂಗಳೂರಿಗೆ ಕ್ರೈಸ್ತಮತ ಹಬ್ಬಿತು. ಸಿನ್ನಾಮಿ ಎಂಬುವನು ಕನ್ನಡದಲ್ಲಿ (ಲಿಂಗ್ವ, ಕನರಿಕ, ಮಲಬಾರಿಕ ಎಂದು ಕನ್ನಡವನ್ನು ಅವನು ಹೆಸರಿಸಿದ್ದ) ಧರ್ಮೋಪದೇಶ, ಧರ್ಮೋಪದೇಶ ಸಂಹಿತೆ, ಸಂತರ ಜೀವನ ಚರಿತ್ರೆಗಳು, ಧರ್ಮಸಮರ್ಥನೆ ಮೊದಲಾದ ವಿಷಯಗಳನ್ನು ಕುರಿತು ಪುಸ್ತಕಗಳನ್ನು ಬರೆದ. ನಿಮ್ನವರ್ಗದವರನ್ನು ಮತಾಂತರಗೊಳಿಸಲು ಗೊಡೊರೊ (ಗುಡೂರು) ಮಗ್ಗೆ,ಕಲಗಂಜಿ ಮೊದಲಾದ ಕಡೆಗಳಲ್ಲಿ ಹಲವು ಧರ್ಮೋಪದೇಶಕರು ದುಡಿಯುತ್ತಿದ್ದರು. ಶಿರಾ, ರಾಯಚೂರು, ಕಿತ್ತೂರು, ತುಮರಿಕೊಪ್ಪ, ಸೆಟ್ಟಿಹಳ್ಳಿಗಳಲ್ಲಿ ಕ್ರೈಸ್ತಧರ್ಮ ಪ್ರಚಾರಕಾರ್ಯ 18ನೆಯ ಶತಮಾನದ ಆದಿಭಾಗದಲ್ಲಿ ಭರದಿಂದ ಸಾಗಿತು.

1672ರಲ್ಲಿ ಮೈಸೂರಿನ ರಾಜ ಕೆಲವು ದುರುದ್ದೇಶಿಗಳ ಮಾತುಗಳನ್ನು ಕೇಳಿ ಮಿಷನರಿಗಳನ್ನು ಶ್ರೀರಂಗಪಟ್ಟಣದಿಂದ ಹೊರಗೆ ಹಾಕಿದ್ದ. ಮತ್ತೆ ಅವರಿಗೆ ಪ್ರವೇಶ ದೊರೆತದ್ದು 1684ರಲ್ಲಿ. 1711ರಲ್ಲಿ ಮಾನ್ವೆಲ್ ದೆ ಕೂನ್ಹಾ ಎಂಬ ಜೆಸ್ವಿಟ್ ಸಂನ್ಯಾಸಿಯನ್ನು ಬೆಂಗಳೂರು ಸಮೀಪದ ಕಂಗೊಂಡಿಯಲ್ಲಿ ವಿಧರ್ಮೀಯರು (ದಾಸರೋಗಳು ಎಂದು ಮಿಷನರಿ ವರದಿಗಳು ಇವರನ್ನು ನಿರ್ದೇಶಿಸಿದ್ದಾರೆ), ಹೊಡೆದು ತೀವ್ರವಾಗಿ ಗಾಯಗೊಳಿಸಿದರು. ದೆ ಕೂನ್ಹಾ ಎರಡು ಮೂರು ದಿನಗಳೊಳಗೆ ಅಸು ನೀಗಿದ. ಆನೇಕಲ್ಲಿನಲ್ಲಿ ಇವನ ಸಮಾಧಿ ಇದೆ ಎಂದು ಪ್ರತೀತಿ. ಪೋರ್ಚುಗಲ್ ಆಧಿಪತ್ಯದಿಂದ ಜೆಸ್ವಿಟರನ್ನು ಬಹಿಷ್ಕರಿಸಿದಮೇಲೆ ಮೈಸೂರಿಗೆ ಹೊಸತಾಗಿ ಬಂದ ಧರ್ಮೋಪದೇಶಕರು ಇಲ್ಲವೇ ಇಲ್ಲ ಎನ್ನಬೇಕು. ಆಗ ಇಲ್ಲಿ ದುಡಿಯುತ್ತಿದ್ದ ಹದಿಮೂರು ಜೆಸ್ವಿಟರು ಮತ್ತು ಐವತ್ತೇಳು ಸಹಾಯಕರು ಮೈಸೂರಿನಲ್ಲಿಯೇ ಉಳಿದುಕೊಂಡರು. ಮೈಸೂರು ಪ್ರಾಂತ್ಯವನ್ನು ಕಾರ್ಮೆಲೈಟ್ ಸಂಸ್ಥೆಯವರ ವಶಕ್ಕೆ ಪೋಪ್ ಒಪ್ಪಿಸಿದ. ಆದರೆ ಇವರು ವಹಿಸಿದ ಆಸಕ್ತಿಯ ಚಿಹ್ನೆಯೇನೂ ಕಾಣದು. 1800ರ ಬಳಿಕ ಮೈಸೂರಿನಲ್ಲಿದ್ದ ಸು.25,000 ಕ್ರೈಸ್ತರ ಸಂಖ್ಯೆ ಕಾರಣಾಂತರವಾಗಿ ಬಹಳ ಕ್ಷೀಣಿಸಿತು. ಕೆಲವರು ಸಣ್ಣಪುಟ್ಟ ಸೈನ್ಯಗಳನ್ನು ಸೇರಿ ತಮ್ಮ ಆಚಾರ, ಧರ್ಮವನ್ನು ಕಡೆಗಣಿಸಿದರು. ಇನ್ನು ಕೆಲವರು ಹೆಚ್ಚು ಧಾರ್ಮಿಕ ಸ್ವಾತಂತ್ರ್ಯ ಮತ್ತು ರಕ್ಷಣೆ ಇರುವ ಮದರಾಸು ರಾಜ್ಯದಲ್ಲಿ ನೆಲೆಸಿದರು. ಪ್ಯಾರಿಸಿನ ಫ್ರೆಂಚ್ ಫಾರಿನ್ ಮಿಷನ್ ಸಂಸ್ಥೆಯವರ ಪುರೋಹಿತರು ಮೈಸೂರು ಪ್ರದೇಶದಲ್ಲಿ ಕ್ರೈಸ್ತಧರ್ಮವನ್ನು ರಕ್ಷಿಸಿ, ಊರ್ಜಿತಗೊಳಿಸಿ ಈಗಿರುವ ಸ್ಥಿತಿಗೆ ಕಾರಣರಾದರು.

ಸಂತ ಫಿಲೋಮಿನ ಚರ್ಚ್, ಮೈಸೂರು

ಈವರೆಗೆ ನೋಡಿದ ಚರಿತ್ರೆ ರೋಮನ್ ಕ್ಯಾತೊಲಿಕ್ ಪಂಥದವರದು. ಕರ್ನಾಟಕದಲ್ಲಿ ಪ್ರಾಟೆಸ್ಟಂಟರು ಮತಪ್ರಚಾರ ಮಾಡಿದುದು 1800ರ ಬಳಿಕ. ಕ್ರಿಶ್ಚಿಯನ್ ಫ್ರೆಡರಿಕ್ ಷ್ವಾರ್ಟ್ಸ್ ಎಂಬ ಡೇನಿಶ್ ಲುತೆರನ್ ಮಿಷನರಿ ಮೈಸೂರಿನಲ್ಲಿ ಸುವಾರ್ತೆಗಳನ್ನು ಪ್ರಚಾರ ಮಾಡಿದ ಮೊದಲ ಪ್ರಾಟೆಸ್ಟಂಟ್ ಪಾದ್ರಿ. ಹೈದರ್ ಇವನನ್ನು ಬಹಳವಾಗಿ ಗೌರವಿಸುತ್ತಿದ್ದ. ಲಂಡನ್ ಮಿಷನರಿ ರೇ ಜಾನ್ ಹ್ಯಾಂಡ್ಸ್ ಬಳ್ಳಾರಿಯಲ್ಲಿ (1810), ವೆಸ್ಲಿಯನ್ ಮೆತಡಿಸ್ಟ್ ಮಿಷನರಿ ರೇ ಥಾಮಸ್ ಹಡ್ಸನ್ ಗುಬ್ಬಿಯಲ್ಲಿ (1815), ಬಾಸೆಲ್ ಮಿಷನ್‌ನವರು ಮಂಗಳೂರು (1834) ಮತ್ತು ಧಾರವಾಡ (1837) ಈ ಸ್ಥಳಗಳಲ್ಲಿ ಮಿಷನ್ ನೆಲೆಗಳನ್ನು ಸ್ಥಾಪಿಸಿದರು. ವೆಸ್ಲಿಯನ್ ಮಿಷನ್‌ನವರು ಗುಬ್ಬಿ, ಕುಣಿಗಲು, ತುಮಕೂರು, ಹಾಸನ, ಶಿವಮೊಗ್ಗೆಯಲ್ಲಿ, ಬಾಸೆಲ್ ಮಿಶನ್‌ನವರು ಹುಬ್ಬಳ್ಳಿ, ಬೆಟಗೇರಿ, ಗುಳೇದಗುಡ್ಡ, ಮೈಸೂರು, ಕೋಲಾರ, ಬಿಜಾಪುರಗಳಲ್ಲಿ, ಲಂಡನ್

ಮಿಷನ್‌ನವರು ಬೆಂಗಳೂರು, ಚಿಕ್ಕಬಳ್ಳಾಪುರ, ಗೌರಿಬಿದನೂರುಗಳಲ್ಲಿ ಕಾರ್ಯನಿರತರಾದರು. ಹೆಚ್ಚಾಗಿ ಕೆಳವರ್ಗದ ಜನತೆಗೆ ಕ್ರೈಸ್ತಧರ್ಮವನ್ನು ಇವರು ಬೋಧಿಸಿದರು. ಹ್ಯಾಂಡ್ಸನ್ ಮೊತ್ತಮೊದಲಿಗೆ ಬೈಬಲನ್ನು ಕನ್ನಡಕ್ಕೆ ಭಾಷಾಂತರಮಾಡಿದ.

ಸೋಮವಾರಪೇಟೆ ಚರ್ಚ್

ಕನ್ನಡ ಜಿಲ್ಲೆಗಳು ಬ್ರಿಟಿಷರ ವಶವಾದ ಮೇಲೆ ಗೋವೆಯಿಂದ ಮತ್ತೆ ಪುರೋಹಿತರು ಬರಲಾರಂಭಿಸಿದರು. ಪ್ರತಿಭಾವಂತ ಸ್ಥಳೀಯ ಯುವಕರು ಗೋವೆಯಲ್ಲಿ ತರಬೇತಿಗೊಂಡು ಪುರೋಹಿತರಾಗಿ ಮರಳುತ್ತಿದ್ದರು. 1878ರಲ್ಲಿ ಮಂಗಳೂರು ಮಿಷನ್ ಪ್ರದೇಶವನ್ನು ಜೆಸ್ವಿಟರು ವಹಿಸಿಕೊಂಡರು. 19 ಮತ್ತು 20ನೆಯ ಶತಮಾನಗಳಲ್ಲಿ ಕನ್ನಡ ಜಿಲ್ಲೆಗಳಲ್ಲಿ ಕ್ರೈಸ್ತಧರ್ಮ ಸಮೃದ್ಧವಾಗಿ ಬೆಳೆಯಿತು. ಕರ್ನಾಟಕದ ಇತರ ಭಾಗಗಳಲ್ಲೂ ಇದೇ ಬಗೆಯ ಬೆಳವಣಿಗೆಯನ್ನು ಗುರುತಿಸಬಹುದು.

19ನೆಯ ಶತಮಾನದಿಂದ ಈಚೆಗೆ ಕ್ರೈಸ್ತಧರ್ಮದವರ ಚಟುವಟಿಕೆಗಳು ಧಾರ್ಮಿಕ ವಲಯವನ್ನು ಮೀರಿದುವು. ಈ ಅವಧಿಯಲ್ಲಿ ಹುಟ್ಟಿಬಂದ ಅನೇಕ ಕ್ರೈಸ್ತ ಸಂಸ್ಥೆಗಳು ಕ್ರೈಸ್ತೇತರರಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಟ್ಟು ಕರ್ನಾಟಕದ ಜನತೆಗೆ ಸೇವೆ ಸಲ್ಲಿಸಿವೆ. ಶಿಕ್ಷಣಕ್ಷೇತ್ರದಲ್ಲಿ 1879ರಲ್ಲಿ ಮಂಗಳೂರಿನಲ್ಲಿ ಸ್ಥಾಪನೆಯಾದ ಜೆಸ್ವಿಟರ್ ಸೇಂಟ್ ಅಲಾಸಿಯಸ್ ಕಾಲೇಜು, ಎಪೊಸ್ಟಾಲಿಕ್ ಕಾರ್ಮೆಲ್ ಕನ್ಯಾಸ್ತ್ರೀಯರು (ಸಿಸ್ಟರ್ಸ್) ಹೆಣ್ಣುಮಕ್ಕಳಿಗಾಗಿ ತೆರೆದ ಸೇಂಟ್ ಆಗ್ನಿಸ್ ಕಾಲೇಜು ಮತ್ತು ಸೇಂಟ್ ಆ್ಯನ್ಸ್ ಕಾಲೇಜು, 1882ರಲ್ಲಿ ಪ್ಯಾರಿಸಿನ ಫಾರಿನ್ ಮಿಷನ್ ಸಂಸ್ಥೆಯವರು ತೆರೆದ ಸೇಂಟ್ ಜೋಸೆಫ್ ಕಾಲೇಜುಗಳು ಸ್ಮರಣೀಯವಾಗಿವೆ. ಬೆಥನಿ ಕನ್ಯಾಸ್ತ್ರೀಯರೂ ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಾರೆ. ವೈದ್ಯಕೀಯ ಸೇವಾಕ್ಷೇತ್ರದಲ್ಲಿ ಫಾದರ್ ಮುಲ್ಲರ್ 1891ರಲ್ಲಿ ಹೋಮಿಯೋಪತಿ ಚಿಕಿತ್ಸೆಯನ್ನು ಮಂಗಳೂರಿನಲ್ಲಿ ಕಂಕನಾಡಿ ಆಸ್ಪತ್ರೆಯಲ್ಲಿ ಆರಂಭಿಸಿದ. ಬೆಂಗಳೂರಿನಲ್ಲಿ ಗುಡ್ ಶೆಫರ್ಡ್ ಕನ್ಯಾಸ್ತ್ರೀಯರು ನಡೆಸುವ ಸೇಂಟ್ ಮಾರ್ಥಾ ಆಸ್ಪತ್ರೆ, ಮೈಸೂರಿನ ವೆಸ್ಲಿಯನ್ ಮಿಷನ್ ಅವರ ಹೋಲ್ಸ್‌ವರ್ತ್ ಮೆಮೋರಿಯಲ್ ಆಸ್ಪತ್ರೆ ಉಲ್ಲೇಖಾರ್ಹವಾಗಿವೆ. ಔದ್ಯೋಗಿಕ ತರಬೇತಿಯಲ್ಲಿ ಬಾಸೆಲ್ ಮಿಶನ್‌ನವರ ಕೈಮಗ್ಗದ ನೇಯ್ಗೆ, ಹೆಂಚಿನ ಉದ್ಯಮ, ಅಚ್ಚುಕೂಟ ಪ್ರಖ್ಯಾತವಾದವು. ಜೆಪ್ಪು ಇಂಡಸ್ಟ್ರಿಯಲ್ ವರ್ಕ್‌ಷಾಪ್ ಗಮನಾರ್ಹ. ಇವುಗಳಲ್ಲಿ ಹೆಚ್ಚಿನ ಸಂಸ್ಥೆಗಳು ಈಗಲೂ ನಡೆಯುತ್ತಿವೆ. ಸಾಹಿತ್ಯ ಕ್ಷೇತ್ರದಲ್ಲಿ ಕಿಟ್ಟೆಲ್ ಅವರು ಕನ್ನಡಕ್ಕೆ, ಜೀಗ್ಲರ್ ಅವರು ತುಳು ಭಾಷೆಗೆ, ಮಾಫ್, ಸ್ಟೀವನ್ಸ್ ಅವರು ಕೊಂಕಣಿಗೆ ಸಲ್ಲಿಸಿದ ಸೇವೆ ಅಮೋಘ. ಬೈಬಲ್ ಭಾಷಾಂತರ ಪ್ರಕಟಣೆಯ ಜೊತೆಗೆ, ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಬೇಕಾದ ಪಠ್ಯಪುಸ್ತಕಗಳನ್ನೂ ಪ್ರೌಢ ಸಾಹಿತ್ಯ ಕೃತಿಗಳನ್ನೂ ಬಾಸೆಲ್ ಮಿಶನ್‌ನವರು ಮುದ್ರಿಸಿದರು.

ಕರ್ನಾಟಕದಲ್ಲಿರುವ ಪ್ರಮುಖ ಪ್ರಾಟೆಸ್ಟಂಟ್ ಪಂಥವೆಂದರೆ ಚರ್ಚ್ ಆಫ್ ಸೌತ್ ಇಂಡಿಯ. ವೆಸ್ಲಿ ಮಿಷನ್ನಿನ ಎನ್.ಇ. ತಾಮ್‌ಲಿನ್‌ಸನ್, ರೈಟ್ ರೆವರೆಂಡ್ ಪಿ.ಗುರುಶಾಂತ (ಈ ಎರಡನೆಯವರು ಮೈಸೂರಿನ ಕನ್ನಡಿಗರು) ಮತ್ತು ಲಂಡನ್ ಮಿಷನಿನ ರೇ ಹಿಕ್‌ಲಿಂಗ್ ಇವರ ಮುಂದಾಳುತನದಲ್ಲಿ 1947ರಲ್ಲಿ ಈ ಪಂಥದ ಸ್ಥಾಪನೆಯಾಯಿತು. ವೆಸ್ಲಿಯನ್ ಮಿಷನ್, ಲಂಡನ್ ಮಿಷನ್, ಚರ್ಚ್ ಆಫ್ ಇಂಗ್ಲೆಂಡ್ ಇವುಗಳು ಇದರಲ್ಲಿ ಒಂದುಗೂಡಿವೆ. 1970ರಲ್ಲಿ ಬಾಸೆಲ್ ಮಿಶನ್ ಪಂಥವೂ ಸೇರಿತು. ಧಾರ್ಮಿಕ ನಂಬಿಕೆಗಳಲ್ಲಿ, ಆಚಾರಗಳಲ್ಲಿ, ಆಡಳಿತ ಕ್ರಮದಲ್ಲಿ ಹೊಂದಾಣಿಕೆಯ ಮನೋಭಾವದ ಮೂಲಕ ಏಕರೂಪತೆಯನ್ನು ಸಾಧಿಸುವ ಯಶಸ್ವೀ ಪ್ರಯತ್ನಗಳು ಇಲ್ಲಿ ನಡೆಯುತ್ತಿವೆ. ಇವರಿಗೆ ಸಂಬಂಧಪಟ್ಟಂತೆ ಕರ್ನಾಟಕದಲ್ಲಿ ಮೂರು ಧರ್ಮಪ್ರಾಂತಗಳಿವೆ: (1) ಕೇಂದ್ರ: ಬೆಂಗಳೂರು, ತುಮಕೂರು, ಕೋಲಾರ (2) ಉತ್ತರ: ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಬಳ್ಳಾರಿ, ಗುಲ್ಬರ್ಗ, (3) ದಕ್ಷಿಣ: ಮಂಗಳೂರು, ಮಡಿಕೇರಿ, ಹಾಸನ, ಮೈಸೂರು, ಮಂಡ್ಯ. ಈ ಪಂಥಕ್ಕೆ ಸೇರದ ಲೂತೆರನ್, ಬ್ರದರೆನ್ ಮಿಷನ್, ಪೆಂಟೆಕೋಸ್ಟಲ್ ಮಿಷನ್, ಸೆವೆಂತ್ ಡೇ ಎಡ್ವೆಂಟಿಸ್ಟ್ ಮತ್ತು ಜೆಹೋವಾಸ್ ವಿಟ್‌ನೆಸಸ್ ಎಂಬ ಇತರ ಚಿಕ್ಕಪುಟ್ಟ ಪ್ರಾಟೆಸ್ಟಂಟ್ ಪಂಥಗಳನ್ನೂ ಕರ್ನಾಟಕದಲ್ಲಿ ಅಲ್ಲಲ್ಲಿ ಕಾಣಬಹುದು.

ಕರ್ನಾಟಕದಲ್ಲಿ ಕ್ಯಾತೊಲಿಕರ ಆರು ಸ್ವತಂತ್ರ್ಯ ಧರ್ಮಕ್ಷೇತ್ರಗಳಿವೆ. ಅವು ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಮಂಗಳೂರು, ಬಳ್ಳಾರಿ, ಬೆಳಗಾಂವಿ. ಕ್ಯಾತೊಲಿಕರಲ್ಲೂ ಪ್ರಾಟೆಸ್ಟಂಟರಲ್ಲೂ ಕರ್ನಾಟಕದಲ್ಲಿ ಈಗಿರುವ ಧರ್ಮಾಧ್ಯಕ್ಷರೆಲ್ಲ (ಬಿಷಪ್) ಭಾರತೀಯರೇ.

19ನೆಯ ಶತಮಾನದಲ್ಲಿ ಕ್ರೈಸ್ತರು ಸ್ಥಾಪಿಸಿದ ಶಿಕ್ಷಣ, ಸಾಮಾಜಿಕ ಸಂಸ್ಥೆಗಳ ಪ್ರಭಾವ ಇಡೀ ಭಾರತದಲ್ಲಿ ಹರಡಿತು. ಕ್ರೈಸ್ತ ಧಾರ್ಮಿಕ ವಿಷಯಗಳಲ್ಲೂ ಕರ್ನಾಟಕ ಭಾರತದಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದಿದೆ. ಮಂಗಳೂರಿನ ಸೇಂಟ್ ಜೋಸೆಫ್ ಪಿಟರ್ ಡಯಸೀಜನ್ ಸೆಮಿನರಿಯಲ್ಲಿ ದಕ್ಷಿಣ ಭಾರತದ ನಾನಾ ಭಾಗಗಳಿಗೆ ಬೇಕಾಗುವ ಪುರೋಹಿತರು ತರಬೇತಿಗೊಳ್ಳುತ್ತಾರೆ. ಬೆಂಗಳೂರು ಕ್ರೈಸ್ತ ಧಾರ್ಮಿಕ ಚಟುವಟಿಕೆಗಳ ಬೃಹತ್ ಕೇಂದ್ರವಾಗಿದೆ. ಸೆಲೀಸಿಯನ್, ರಿಡೆಂಪ್ಟರಿಸ್ಟ್ ಮೊದಲಾದ ಸಂನ್ಯಾಸಿ ಸಂಸ್ಥೆಗಳು, ದೇವಶಾಸ್ತ್ರ ಪೀಠಗಳು, ಬೋಧನ ಶೋಧನಾಂಗಗಳು, ಗ್ರಂಥಾಲಯಗಳು ಇಲ್ಲಿವೆ. ಇಲ್ಲಿನ ಯುನೈಟೆಡ್ ತಿಯೊಲೊಜಿಕಲ್ ಕಾಲೇಜು ಭಾರತದಾದ್ಯಂತ ಪ್ರಾಟೆಸ್ಟಂಟರ ಪುರೋಹಿತರಿಗೆ ತರಬೇತಿ ಕೊಡುತ್ತದೆ. ಕ್ಯಾತೊಲಿಕ್ ಬ್ರದರ್ಸ್‌ಗಳಿಗೆ ಸಿ ಆರ್ ಐ ಇನ್‌ಸ್ಟಿಟ್ಯೂಟ್, ಕನ್ಯಾಸ್ತ್ರೀಯರಿಗೆ ಸುದೀಪ್ ಕೇಂದ್ರಗಳು ಧಾರ್ಮಿಕ ತರಬೇತಿಯನ್ನು ಒದಗಿಸುತ್ತವೆ. ನ್ಯಾಷನಲ್ ಬಿಬ್ಲಿಕಲ್, ಕ್ಯಾಟಿಕೆಟಿಕಲ್ ಅಂಡ್ ಲಿಟರ್ಜಿಕಲ್ ಸೆಂಟರ್, ನ್ಯಾಷನಲ್ ಎಕ್ಯುಮೆನಿಕಲ್ ಸೆಂಟರ್ ಇಂಥ ಸಂಸ್ಥೆಗಳಲ್ಲಿ ಕ್ರೈಸ್ತಧರ್ಮದವರ ಒಕ್ಕೂಟ ಮತ್ತು ಕ್ರೈಸ್ತಧರ್ಮವನ್ನು ಭಾರತೀಯ ಸ್ಥಳೀಯ ಭಾವನೆ ಆಚರಣೆಗಳಿಗೆ ಹೊಂದಿಸಿಕೊಳ್ಳುವ ಬಗೆಗೆ ಅಧ್ಯಯನ ಪ್ರಯೋಗಗಳು ನಡೆಯುತ್ತವೆ. ಪ್ರಾಟೆಸ್ಟಂಟರು ನಡೆಸುವ ಇಂಡಿಯ, ಬರ್ಮ, ಸಿಲೋನ್, ಮತ್ತು ಪಾಕಿಸ್ತಾನಗಳ ಬೈಬಲ್ ಸೊಸೈಟಿ ಸಹ ಬೆಂಗಳೂರಿನಲ್ಲಿದೆ. ಬೈಬಲನ್ನು ದೇಶೀಯ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸುವ ಸ್ತುತ್ಯ ಕಾರ್ಯವನ್ನು ಈ ಸಂಸ್ಥೆ ಭಕ್ತಿಶ್ರದ್ಧೆಗಳಿಂದ ನಿರ್ವಹಿಸುತ್ತ ಬಂದಿದೆ. (ಇ.ಎಸ್.)

**ಕ್ಲೋಸ್, ಬ್ಯಾರಿ :** 1756-1813. ಮೈಸೂರು ಸಂಸ್ಥಾನದಲ್ಲಿದ್ದ ಪ್ರಥಮ ಬ್ರಿಟಿಷ್ ರೆಸಿಡೆಂಟ್ (1799-1801). 1771ರಲ್ಲಿ ಮದರಾಸು ಸೈನ್ಯವನ್ನು ಸೇರಿ ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯ ಸೇವೆಯನ್ನು ಪ್ರಾರಂಭಿಸಿದ ಈತ 1780ರ ತಲಚೇರಿ ಕದನದಲ್ಲಿ ಹೈದರನ ಸೈನ್ಯಕ್ಕೆ ಸಿಕ್ಕಿಬಿದ್ದಿದ್ದ. ಅನಂತರ ಬ್ರಿಟಿಷರು ಮತ್ತು ಟಿಪ್ಪುವಿನ ನಡುವೆ ನಡೆದ ಗಡಿನಿರ್ಣಯ ಚರ್ಚೆಯಲ್ಲಿ ಈತ ಭಾಗವಹಿಸಿದ್ದ. 1792 ಮತ್ತು 1799ರಲ್ಲಿ ನಡೆದ ಶ್ರೀರಂಗಪಟ್ಟಣದ ಮುತ್ತಿಗೆಗಳಲ್ಲಿ ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಅಡ್ಜುಟೆಂಟ್ ಜನರಲ್ ಆಗಿ ಪರಿಣಾಮಕಾರೀ ಪಾತ್ರವಹಿಸಿ ಅಂದಿನ ಮುಖ್ಯಸೈನ್ಯಾಧಿಕಾರಿಯಿಂದ ಪ್ರಶಂಸೆಗಳಿಸಿದ. ಟಿಪ್ಪುವಿನ ಪತನಾನಂತರ ಬ್ರಿಟಿಷರ ವಶಕ್ಕೆ ಬಂದ ಅವನ ರಾಜ್ಯದ ಕೆಲವು ಭಾಗಗಳನ್ನು ಮೈಸೂರು ರಾಜವಂಶದವರಿಗೆ ವಹಿಸಿಕೊಡುವ ಸಲುವಾಗಿ ಗೌರ್ನರ್ ಜನರಲ್ ವೆಲ್ಲೆಸ್ಲಿ ರಚಿಸಿದ ಸಮಿತಿಯ ಸದಸ್ಯನಾಗಿ ಕೆಲಸಮಾಡಿದ (1799). ವೆಲ್ಲೆಸ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೈಸೂರು ಸಂಸ್ಥಾನವನ್ನು ಕೊಟ್ಟು, ಅವರ ಆಸ್ಥಾನದಲ್ಲಿ ಕ್ಲೋಸ್‌ನನ್ನು ರೆಸಿಡೆಂಟಾಗಿ ನೇಮಿಸಿದ. 1801ರಲ್ಲಿ ಇವನು ಪುಣೆಗೆ ವರ್ಗವಾದ. ಅಲ್ಲಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿ ಮೇಜರ್ ಜನರಲ್ ಪದವಿಯನ್ನು ಗಳಿಸಿ (1810) ನಿವೃತ್ತನಾಗಿ (1811) ಇಂಗ್ಲೆಂಡಿಗೆ ಹಿಂದಿರುಗಿದ. ಅಲ್ಲಿ ಬಾರೊನೆಟ್ ಪ್ರಶಸ್ತಿ ಗಳಿಸಿದ. 1813ರಲ್ಲಿ ನಿಧನನಾದ.

ಇವನು ದಕ್ಷ ಆಡಳಿತಗಾರ, ಚಾಣಾಕ್ಷ, ರಾಜಕೀಯ ಮುತ್ಸದ್ದಿ ಎಂದು ಹೆಸರುಗಳಿಸಿದ್ದ. ಭಾರತೀಯರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದ ಹಾಗೂ ಅವರ ಭಾಷೆಗಳನ್ನು ಅರಿತಿದ್ದ ಕೆಲವೇ ಆಡಳಿತಗಾರರಲ್ಲಿ ಅವನೊಬ್ಬ ಎಂದು ವೆಲ್ಲೆಸ್ಲಿ ಹೊಗಳಿದ್ದಾನೆ. ದಿವಾನ್ ಪೂರ್ಣಯ್ಯನವರಿಗೆ ಇವನಲ್ಲಿ ಬಹಳ ವಿಶ್ವಾಸವಿತ್ತು. ಮೈಸೂರು ಸಂಸ್ಥಾನದ ಆಡಳಿತವನ್ನು ಸುವ್ಯವಸ್ಥೆಗೆ ತರಲು ಅವರಿಗೆ ಸಾಧ್ಯವಾದುದು ಇವನ ಸಹಕಾರದಿಂದ.

ಇಂಥ ವ್ಯಕ್ತಿಯ ನೆನಪಿಗಾಗಿ ಪೂರ್ಣಯ್ಯನವರು 1800ರಲ್ಲಿ ಒಂದು ಹೊಸ ಊರನ್ನು ಸ್ಥಾಪಿಸಿ ಕ್ಲೋಸ್‌ಪೇಟೆ ಎಂದು ಹೆಸರಿಟ್ಟರು (ಇದು ಇಂದಿನ ರಾಮನಗರ). (ಕೆ.ಎಸ್.ಎಸ್.)

# ಖ

**ಖಂಡೇರಾವ್, ಜೆ.ಎಸ್. :** 1940. ಹೆಸರಾಂತ ಚಿತ್ರ ಕಲಾವಿದರು. ಗುಲ್ಬರ್ಗದಲ್ಲಿ 1940ರಲ್ಲಿ ಜನಿಸಿದರು. ತಂದೆ ಶಂಕರಪ್ಪ, ತಾಯಿ ಬಸಮ್ಮ. ಇವರ ಪ್ರಾಥಮಿಕ ಶಿಕ್ಷಣ ಗುಲ್ಬರ್ಗದ ಅಸಿಫ್ ಗಂಜ್ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಅನಂತರ ಮುಂಬಯಿಯ ಜೆ.ಜೆ. ಕಲಾ ಶಾಲೆಯಲ್ಲಿ ಡಿಪ್ಲೊಮಾ ಮುಗಿಸಿದರು (1963). ಅನಂತರ ಕರ್ನಾಟಕ ವಿಶ್ವ ವಿದ್ಯಾಲಯದ ಪದವಿ ಪಡೆದು ಗುಲ್ಬರ್ಗದಲ್ಲಿ ದಿ ಐಡಿಯಲ್ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಟ್ ಎಂಬ ಕಲಾಸಂಸ್ಥೆ ಸ್ಥಾಪಿಸಿದರು. ಅಲ್ಲಿ ನೂರಾರು ಕಲಾವಿದರನ್ನು ರೂಪಿಸಿದ ಹೆಗ್ಗಳಿಕೆ ಇವರದು. ಗುಲ್ಬರ್ಗದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಸ್ನಾತಕೋತ್ತರ ಲಲಿತಕಲಾ ಶಿಕ್ಷಣ ರೂಪು ತಳೆಯುವಲ್ಲಿ ಇವರು ಮಹತ್ತರ ಪಾತ್ರ ವಹಿಸಿದರು.



ಇವರು ಶರಣಬಸವೇಶ್ವರ ಕಾಲೇಜಿನ ಲಲಿತಕಲಾ ಸ್ನಾತಕೋತ್ತರ ಶಿಕ್ಷಣ ವಿಭಾಗದ ನಿರ್ದೇಶಕರಾಗಿಯೂ ವರ್ಣಚಿತ್ರ ವಿಭಾಗದ ಪ್ರವಾಚಕರಾಗಿಯೂ ಸೇವೆಸಲ್ಲಿಸಿದ್ದಾರೆ. ಕಲಾಶಿಕ್ಷಕರಾಗಿ ಮಾತ್ರವಲ್ಲ ಸೃಜನಶೀಲ ಕಲಾವಿದರಾಗಿಯೂ ರಾಷ್ಟ್ರವ್ಯಾಪಿ ಖ್ಯಾತಿ ಗಳಿಸಿದ್ದಾರೆ. ಅನೇಕ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳಿಗೆ ಪುರಸ್ಕಾರ ದೊರೆತಿದೆ. ಅನೇಕ ಕಲಾಶಿಬಿರಗಳಲ್ಲೂ ಇವರು ಭಾಗವಹಿಸಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದವು - ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1988), ರಾಜ್ಯೋತ್ಸವ ಪ್ರಶಸ್ತಿ (1997), ಕರ್ನಾಟಕ ಚಿತ್ರಕಲಾ ಕ್ಷೇತ್ರದಲ್ಲಿಯ ಅನುಪಮ ಸಾಧನೆಗಾಗಿ ಕರ್ನಾಟಕ ಸರ್ಕಾರದ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ (2002), ಹಂಪಿ ಕನ್ನಡ ವಿಶ್ವವಿದ್ಯಾಲಯ ಇವರಿಗೆ ನಾಡೋಜಪ್ರಶಸ್ತಿ ನೀಡಿ ಗೌರವಿಸಿದೆ. (ಎನ್.ಎಂ.)

**ಖನಿಜಸಂಪತ್ತು :** ಭಾರತದ ಖನಿಜ ಸಂಪತ್ತಿನಲ್ಲಿ ಕರ್ನಾಟಕದ ಪಾತ್ರ ಮುಖ್ಯವಾದದ್ದು. ಭಾರತದಲ್ಲಿ ಉತ್ಪತ್ತಿಯಾಗುವ ಸುಮಾರು ಎಲ್ಲ ಚಿನ್ನವೂ ಕರ್ನಾಟಕದಲ್ಲಿನ ಗಣಿಗಳಿಂದ ಬರುತ್ತಿತ್ತು. ವಿದೇಶದಲ್ಲೆಲ್ಲ ಉತ್ತಮ ದರ್ಜೆಯದೆಂದು ಪ್ರಖ್ಯಾತವಾಗಿರುವ ಕಬ್ಬಿಣದ ಅದುರು ದೊರೆಯುವುದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ. ಇದೇ ಅಲ್ಲದೆ ಇನ್ನೂ ಇತರ ಅನೇಕ ಮುಖ್ಯ ಖನಿಜಗಳಿಗೆ ಕರ್ನಾಟಕ ಹೆಸರುವಾಸಿಯಾಗಿದೆ. ಇಲ್ಲಿ ದೊರೆಯುವ ಖನಿಜಗಳನ್ನು ಅವಲಂಬಿಸಿ ಅನೇಕ ಕೈಗಾರಿಕೆಗಳು ದೇಶದ ನಾನಾ ಭಾಗಗಳಲ್ಲಿ ಸ್ಥಾಪಿತವಾಗಿವೆ.

ಕಬ್ಬಿಣ, ಮ್ಯಾಂಗನೀಸ್, ಕ್ರೋಮೈಟ್, ಚಿನ್ನ, ಬೆಳ್ಳಿ, ತಾಮ್ರ, ಬಾಕ್ಸೈಟ್ ಮತ್ತು ಸೀಸ ಈ ಲೋಹದ ಅದುರುಗಳೂ ಬಿಳಿಜೇಡು, ಅಭ್ರಕ, ಕಬ್ಬಿಣದ ಪಿರೈಟೀಸ್ ಈ ಅಲೋಹದ ಅದುರುಗಳೂ ಕರ್ನಾಟಕದ ಖನಿಜ ನಿಕ್ಷೇಪಗಳಲ್ಲಿ ಮುಖ್ಯವಾದವು. ಇವಲ್ಲದೆ ಅನೇಕ ವಿಧವಾದ ಘರ್ಷಕ ಖನಿಜಗಳು, ಅಗ್ನಿ ನಿರೋಧಕ ಅದುರು, ಕಟ್ಟಡ ಹಾಗೂ ಅಲಂಕಾರ ಶಿಲೆಗಳು ಸಹ ಕರ್ನಾಟಕದಲ್ಲಿ ಹೇರಳವಾಗಿ ದೊರೆಯುತ್ತವೆ. ರಾಜ್ಯದ ಭೂವಿಜ್ಞಾನ ಮತ್ತು ಗಣಿ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಭೂವಿಜ್ಞಾನ ಸರ್ವೇಕ್ಷಣ ಇಲಾಖೆ ಇವು ಸು.19ನೆಯ ಶತಮಾನದಿಂದಲೂ ಕರ್ನಾಟಕದ ಖನಿಜ ನಿಕ್ಷೇಪಗಳನ್ನು ಗುರುತಿಸುವ ಕೆಲಸವನ್ನು ನಡೆಸುತ್ತಿವೆ. ಇತ್ತೀಚೆಗೆ (1971) ಭಾರತದ ಸರ್ವೇಕ್ಷಣ ಸಂಸ್ಥೆಯವರು ಫ್ರಾನ್ಸ್ ದೇಶದ ಸಂಸ್ಥೆಯ ತಾಂತ್ರಿಕ ನೆರವಿನಿಂದ ವೈಮಾನಿಕ ಭೂನಕ್ಷೆಗಳನ್ನು ತಯಾರಿಸುತ್ತಿದ್ದಾರೆ. ಅಲ್ಲದೆ, ತಾಮ್ರ ಮತ್ತು ಇತರ ಅಮೂಲ್ಯ ಲೋಹಗಳ ಅದುರು ನಿಕ್ಷೇಪಗಳ ಪತ್ತೆಗೆ ಗದಗದಿಂದ ನಂಜನಗೂಡುವರೆಗೆ ವೈಮಾನಿಕ ಸರ್ವೇಕ್ಷಣೆಯನ್ನು ಸಹ ನಡೆಸಲಾಗಿದೆ.

ಈ ಲೇಖನದಲ್ಲಿ ವಿವಿಧ ಖನಿಜಗಳು ದೊರೆಯುವ ಸ್ಥಳ, ರೀತಿ ಇತ್ಯಾದಿಗಳ ಸ್ಥೂಲ ವಿವರಣೆಯನ್ನು ನೀಡಲಾಗಿದೆ. ಇತರ ತಾಲ್ಲೂಕು ಮತ್ತು ಜಿಲ್ಲೆಗಳ ಲೇಖನಗಳಲ್ಲೂ ಆಯಾ ಪ್ರದೇಶಗಳಲ್ಲಿ ದೊರಕುವ ಖನಿಜಗಳ ವಿವರಗಳನ್ನು ನೀಡಲಾಗಿದೆ. ಅಲ್ಲದೆ ಈ ಸಂಬಂಧದಲ್ಲಿ ಮುಖ್ಯವಾದ ಹಲವು ಸ್ಥಳಗಳಿಗೂ (ಉದಾ: ಕೆಮ್ಮಣ್ಣುಗುಂಡಿ, ಗುರುಮಠಕಲ್) ಆಯಾ ಶೀರ್ಷಿಕೆಗಳಲ್ಲಿ ಪ್ರತ್ಯೇಕ ಲೇಖನಗಳಿವೆ.

**ಕಬ್ಬಿಣ :** ಕಬ್ಬಿಣದ ಅದುರು ಕರ್ನಾಟಕಕ್ಕೆ ಪ್ರಾಮುಖ್ಯವನ್ನು ಕೊಟ್ಟಿರುವ ಖನಿಜ. ಇದು ಕರ್ನಾಟಕದ ಬಹುಭಾಗಗಳಲ್ಲಿ ಕಬ್ಬಿಣದ ಆಕ್ಸೈಡುಗಳಾದ ಹಿಮಟೈಟ್, ಲೈಮೊನೈಟ್ ರೂಪಗಳಲ್ಲಿ ಸಿಕ್ಕುತ್ತವೆ. ಮುಖ್ಯವಾದ ಅದುರು ನಿಕ್ಷೇಪಗಳು ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಬೆಟ್ಟದ ಕೆಮ್ಮಣ್ಣುಗುಂಡಿ, ಕುದುರೆ ಮುಖ ಬೆಟ್ಟದ ಸಾಲು, ಬಳ್ಳಾರಿ ಜಿಲ್ಲೆಯ ಸಂಡೂರು, ತಾಮ್ರಬೆಟ್ಟ, ದೋಣಿ ಮಲೈ - ಈ ಸ್ಥಳಗಳಲ್ಲಿ ಇವೆ. ದೋಣಿಮಲೈ ಗುಡ್ಡಗಳಲ್ಲಿ ದೊರೆಯುವ ಅದುರು ಶೇ.65ಕ್ಕೂ ಹೆಚ್ಚಿನ ಕಬ್ಬಿಣದ ಅಂಶವನ್ನೊಳಗೊಂಡಿದ್ದು ಪ್ರಪಂಚದ ಉತ್ತಮ ಕಬ್ಬಿಣ ಅದುರುಗಳಲ್ಲೊಂದೆಂದು ಪ್ರಖ್ಯಾತಿ ಗಳಿಸಿದೆ. ಬಾಬಾಬುಡನ್‌ಗಿರಿ, ಕುದುರೆಮುಖ, ಆಗುಂಬೆ, ಕೊಡಚಾದ್ರಿ ಮುಂತಾದ ಪಶ್ಚಿಮಘಟ್ಟದ ಶ್ರೇಣಿಗಳಲ್ಲಿ ಅಯಸ್ಕಾಂತ ಸಂಬಂಧವಾದ ಕಬ್ಬಿಣದ ಅದುರು ಹೇರಳವಾಗಿ ದೊರೆಯುತ್ತದೆ. ಇವಲ್ಲದೆ ಚಿತ್ರದುರ್ಗ, ಧಾರವಾಡ, ಉತ್ತರ ಕನ್ನಡ ಮತ್ತು ತುಮಕೂರು ಜಿಲ್ಲೆಯ ಭಾಗಗಳಲ್ಲೂ ಕಬ್ಬಿಣದ ಅದುರಿನ ಹರಹುಗಳು ಇವೆ.

**ಮ್ಯಾಂಗನೀಸ್ :** ಇದರ ನಿಕ್ಷೇಪಗಳು ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಬಳ್ಳಾರಿ ಜಿಲ್ಲೆಗಳಲ್ಲಿ ಹರಡಿವೆ. ಅತ್ಯುತ್ತಮ ನಿಕ್ಷೇಪಗಳು ಕುಂಸಿಗೆ ಉತ್ತರದಲ್ಲಿರುವ ಶಂಕರಗುಡ್ಡ, ಮಂಡಗದ್ದೆಗುಡ್ಡಗಳಲ್ಲಿ ಸಿಗುತ್ತವೆ. ಕಬ್ಬಿಣ ಯುಕ್ತವಾದ ಅದುರು ಅಡ್ಡಗಡ್ಡಿ ಮತ್ತು ಹೂಮಕ್ಕಿಗುಡ್ಡ ಸಾಲುಗಳ ಮೇಲ್ಭಾಗದಲ್ಲಿದೆ. ಸಣ್ಣ ನಿಕ್ಷೇಪಗಳು ಜೋಳದಹಾಳಿಗೆ ಸು.11ಕಿಮೀ ದಕ್ಷಿಣಕ್ಕೆ ಬಂಡಿಗುಡ್ಡದಲ್ಲೂ ಶಿಕಾರಿಪುರದ ಮಾರ್ಕಂಡೆ, ಇಟ್ಟಿಗೆಹಳ್ಳಿ, ಬಳ್ಳೂರು ಮತ್ತು ನಳಿನೀಕೊಪ್ಪ ಈ ಸ್ಥಳಗಳಲ್ಲೂ ಸಿಗುತ್ತವೆ. ಸಿದ್ಧರಹಳ್ಳಿ, ಬಾಳೆಕಟ್ಟೆ (ತರೀಕೆರೆಗೆ 13ಕಿಮೀ ಉತ್ತರದಲ್ಲಿ), ಮಾವಿನಕೆರೆ ಮುಂತಾದ ಪ್ರದೇಶಗಳಲ್ಲಿ ಸಹ ಇವು ಹರಡಿವೆ. ಚಿತ್ರದುರ್ಗದ ಮ್ಯಾಂಗನೀಸ್ ಅದುರು ಕಬ್ಬಿಣ ಮಿಶ್ರವಾದ ಕೆಳದರ್ಜೆಯ ಅದುರು. ಬಳ್ಳಾರಿಯ ಸಂಡೂರು ಬೆಟ್ಟಸಾಲಿನಲ್ಲಿ ಮ್ಯಾಂಗನೀಸ್ ಪೈರೋಲು ಸೈಟು ಖನಿಜರೂಪದಲ್ಲಿ ಹೇರಳವಾಗಿ ದೊರೆಯುತ್ತದೆ. ಇದು ಇಲ್ಲಿನ ಪ್ರದೇಶಗಳಾದ ರಾಮದುರ್ಗ, ಕಣಿವೆಹಳ್ಳಿ, ಕುಮಾರಸ್ವಾಮಿ ಬೆಟ್ಟ ಮುಂತಾದ ಪ್ರದೇಶಗಳಲ್ಲಿ ಸಹ ಸಿಕ್ಕುವುದು. ತುಮಕೂರಿನ ಚಿಕ್ಕನಾಯಕನಹಳ್ಳಿಯಲ್ಲಿ ಹಾಗೂ ಉತ್ತರ ಕನ್ನಡಜಿಲ್ಲೆಯ ಸುಪ, ಯಲ್ಲಾಪುರ, ದಿಗ್ಗಿ, ಕುಂಬಾರವಾಡ ಬಳಿ ಮತ್ತು ಬೆಳಗಾಂವಿ ಜಿಲ್ಲೆಯ ಕೆಲವೆಡೆಗಳಲ್ಲಿ ಒಳ್ಳೆಯ ಮ್ಯಾಂಗನೀಸ್ ಅದುರು ನಿಕ್ಷೇಪಗಳಿವೆ.

**ಕ್ರೋಮೈಟ್ :** ಇದು ಕರ್ನಾಟಕದಲ್ಲಿ ಹೇರಳವಾಗಿದೆ. ಸಿರ ಮಸೂರ ಹಾಗೂ ಹರಳು ಸಂಗ್ರಹಣೆಗಳ ರೂಪದಲ್ಲಿ ಮೈಸೂರು ಜಿಲ್ಲೆಯ ಕಡಕೊಳದ ಬಳಿಯ ಸಿಂಧುವಳ್ಳಿಯಲ್ಲಿ ದೊರೆಯುವುದು. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಬೈರಾಪುರದಲ್ಲಿ ಈ ಅದುರು ಮುದ್ದೆಯಾಗಿ ಸಿಗುತ್ತದೆ.

**ಚಿನ್ನ :** ಭಾರತದಲ್ಲಿ ಉತ್ಪನ್ನವಾಗುತ್ತಿದ್ದ ಚಿನ್ನದಲ್ಲಿ ಶೇ.90 ಭಾಗ ಕರ್ನಾಟಕ ರಾಜ್ಯದ್ದೇ ಆಗಿತ್ತು. ಕೋಲಾರ ಚಿನ್ನದ ಗಣಿ ಪ್ರದೇಶದ ನಿಕ್ಷೇಪ ಬಹುಮುಖ್ಯವಾದುದು. ಇಲ್ಲಿಯ ವಾರ್ಷಿಕ ಉತ್ಪತ್ತಿ ಸು.4000 ಕೆಜಿ. ರಾಯಚೂರು ಜಿಲ್ಲೆಯ ಹಟ್ಟಿ ಪ್ರದೇಶದಲ್ಲಿ ಸಹ ಸಾಕಷ್ಟು ಚಿನ್ನದ ನಿಕ್ಷೇಪವಿದೆ. ಹೊನ್ನಾಳಿ, ಲಕ್ಕವಳ್ಳಿ, ಕೆಂಪಿನಕೋಟೆ, ಧಾರವಾಡ ಜಿಲ್ಲೆಯ ಗದಗ, ತುಮಕೂರು ಜಿಲ್ಲೆಯ ಬೆಳ್ಳಾರ, ಚಿಕ್ಕಮಗಳೂರು ಮುಂತಾದೆಡೆಗಳಲ್ಲಿ ಹಾಗೂ ಮೈಸೂರು ಮತ್ತು ಹಾಸನ ಜಿಲ್ಲೆಗಳ ಕೆಲವೆಡೆ ಅಲ್ಪಸ್ವಲ್ಪ ಚಿನ್ನದ ನಿಕ್ಷೇಪಗಳಿವೆ. ಶಿವಮೊಗ್ಗ, ಧಾರವಾಡ ಮತ್ತು ಮೈಸೂರು ಜಿಲ್ಲೆಯ ಕೆಲವೆಡೆಗಳಲ್ಲಿ ನದಿಯ ಮೆಕ್ಕಲಿಂದಲೂ ಚಿನ್ನವನ್ನು ಪ್ರತ್ಯೇಕಿಸುವುದು (ಜರಗು ಚಿನ್ನ) ಹಿಂದೆ ರೂಢಿಯಲ್ಲಿತ್ತು. ಸದ್ಯ ಕೋಲಾರದ ಗಣಿಗಳಲ್ಲಿ ದೊರೆಯುವ ಚಿನ್ನದ ಅದುರು ಆರ್ಥಿಕವಾಗಿ ಲಾಭದಾಯಕವಾಗಿಲ್ಲವೆಂಬ ಕಾರಣದಿಂದ ಗಣಿಗಾರಿಕೆಗೆ ಹಿನ್ನಡೆಯಾಗಿದೆ.

ಖನಿಜಗಳನ್ನು ಕುರಿತ ಕೆಲವು ಮುಖ್ಯ ವಿವರಗಳು

| ಅದುರು | ಮುಖ್ಯ ನಿಕ್ಷೇಪಗಳು | ಅದುರಿನ ರೂಪು |
|---|---|---|
| ಚಿನ್ನ | ಕೋಲಾರ, ಹಟ್ಟಿ, ಗದಗ, ಬೆಳ್ಳಾರ | ಬೆಣಚು ಸಿರಗಳಲ್ಲಿ ಚಾಲಿತ ನಿಕ್ಷೇಪ |
| ಬೆಳ್ಳಿ | ಕೋಲಾರ, ಹಟ್ಟಿ | ಚಿನ್ನದೊಂದಿಗೆ ಬೆಳ್ಳಿಯೂ ದೊರೆಯುವುದು |
| ಕಬ್ಬಿಣ | ಕೆಮ್ಮಣ್ಣುಗುಂಡಿ, ದೋಣಿಮಲೈ, ಕುದುರೆಮುಖ | ಹಿಮಟೈಟ್,ಮ್ಯಾಗ್ನಟೈಟ್ ಇಲ್ಲವೆ ಮೋನೈಟ್ |
| ಮ್ಯಾಂಗನೀಸ್ | ಸಂಡೂರು, ಶಿವಮೊಗ್ಗ, ಚಿತ್ರದುರ್ಗ, ತುಮಕೂರು | ಆಕ್ಸೈಡ್ ಅಥವಾ ಮಿಶ್ರ ರೂಪದಲ್ಲಿ ಕಬ್ಬಿಣದೊಂದಿಗೆ |
| ಕ್ರೋಮೈಟ್ | ಬೈರಾಪುರ, ಕಡಕೊಳ, ಸಿಂಧುವಳ್ಳಿ | ಸಿರ, ಮಸೂರ ಇಲ್ಲವೇ ಹರಳು |
| ಕಲ್ನಾರು (ಆಸ್ಬೆಸ್ಟಾಸ್) | ಹೊಳೆನರಸೀಪುರ | ಸಿರ |
| ಬಾಕ್ಸೈಟ್ | ಹಂಗರಿಕೆ, ನವಿಗೆ, ಬೋಕನೂರ್ (ಬೆಳಗಾಂವಿ ಜಿಲ್ಲೆ) | ಮಸೂರ ಇಲ್ಲವೇ ಶೇಷ ನಿಕ್ಷೇಪ |
| ಕುರಂದ (ಕೊರಂಡಂ) | ಹೊಳೆನರಸೀಪುರ, ಮೈಸೂರು, ಶೃಂಗೇರಿ | ಹರಳುರೂಪ ಇಲ್ಲವೇ ಮುದ್ದೆಮುದ್ದೆಗಳಾಗಿ |
| ಡಾಲೋಮೈಟ್ | ಭದ್ರಾವತಿ (ಬಂಡಿಗುಡ್ಡ), ಶಿವಮೊಗ್ಗ (ಶಂಕರಗುಡ್ಡ) | ಮುದ್ದೆ, ಶಿಲಾಪದರು |
| ಬಿಳಿಜೇಡು | ಬಾಗೇಶಪುರ, ತೀರ್ಥಹಳ್ಳಿ | ಪದರು, ಮುದ್ದೆ |
| ಸುಣ್ಣಶಿಲೆ | ಬಂಡಿಗುಡ್ಡ, ಅಮ್ಮಸಂದ್ರ (ತುಮಕೂರು, ಬಾಗಲಕೋಟೆ, ವಾಡಿ ಗುಲ್ಬರ್ಗ), ಸೇಡಂ | ಪದರು, ಮುದ್ದೆ |
| ಮ್ಯಾಗ್ನಸೈಟ್ | ಕಡಕೊಳ, ಸಿಂಧುವಳ್ಳಿ | ಸಿರ,ಮುದ್ದೆ |
| ಬೆಣಚು ಕಲ್ಲು | ಚಿಕ್ಕನಾಯಕನಹಳ್ಳಿ, ಅರಕಿರಿ ಗುಡ್ಡ, ಕೆಂಗೇರಿ, ಗುರುಮಠಕಲ್ | ಸಿರಗಳಲ್ಲಿ, ಮುದ್ದೆಯಾಗಿ |
| ಬಳಪದ ಕಲ್ಲು (ಸೋಪ್ ಸ್ಟೋನ್ ) | ಬಾಣಸಂದ್ರ, ಹಾಸನ, ಮೈಸೂರು | ಮುದ್ದೆಯಾಗಿ |
| ಗ್ರಾನೈಟ್ (ಒರಟು) | ಎಲ್ಲ ಜಿಲ್ಲೆಗಳು - ಮುಖ್ಯವಾಗಿ, ಬೆಂಗಳೂರು ತುಮಕೂರು, ಶಿವಮೊಗ್ಗ ಜಿಲ್ಲೆಗಳು | ಬೆಟ್ಟಗುಡ್ಡಗಳಂತೆ |

**ಬೆಳ್ಳಿ :** ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿ ಪ್ರದೇಶಗಳಲ್ಲಿ, ಚಿನ್ನದ ಜೊತೆಗೆ ಸ್ವಲ್ಪ ಬೆಳ್ಳಿಯೂ ದೊರೆಯುತ್ತದೆ.

**ತಾಮ್ರ :** ಹಸುರು ವರ್ಣದ ಮ್ಯಾಲಕೈಟ್, ನೀಲ ವರ್ಣದ ಅಜುರೈಟ್ ಮತ್ತು ತಾಮ್ರ, ಕಬ್ಬಿಣ, ಸಲ್ಫೈಡಾದ ಚಾಲ್ಕೊ ಪಿರೈಟೀಸು ಈ ಅದುರುಗಳ ಹಲವಾರು ಸಣ್ಣ ನಿಕ್ಷೇಪಗಳು ಕರ್ನಾಟಕದಲ್ಲಿವೆ. ಇವುಗಳಲ್ಲಿ ಮುಖ್ಯವಾದದ್ದು ಚಿತ್ರದುರ್ಗ ಜಿಲ್ಲೆಯ ಇಂಗಳದಾಳು ನಿಕ್ಷೇಪ. ಇತ್ತೀಚೆಗೆ ಇಲ್ಲಿ ಬಹುಮುಖ ಕಾರ್ಯಾಚರಣೆ ನಡೆಯುತ್ತಿದೆ. ತಾಮ್ರದ ಅದುರು ದಾವಣಗೆರೆ, ಮದ್ದೂರು, ಹಾಸನ ಜಿಲ್ಲೆಯ ಕಲ್ಯಾಡಿ, ಧಾರವಾಡ ಜಿಲ್ಲೆಯ ಕಪ್ಪತಗುಡ್ಡ, ನಂಜನಗೂಡು ಬಳಿಯ ಹುಲ್ಲಹಳ್ಳಿ, ರಾಯಚೂರು ಜಿಲ್ಲೆಯ ತಿಂಥಿಣಿ ಈ ಪ್ರದೇಶಗಳಲ್ಲಿಯೂ ಸ್ವಲ್ಪ ಮಟ್ಟಿಗೆ ದೊರೆಯುತ್ತದೆ.

**ಅಲ್ಯೂಮಿನಿಯಂ:** ಕೆಂಪು ಅಥವಾ ಬೂದು ಬಣ್ಣದ ಜಲಯುತ ಅಲ್ಯೂಮಿನಿಯಂ ಆಕ್ಸೈಡ್ (ಬಾಕ್ಸೈಟ್) ಅದುರಿನ ನಿಕ್ಷೇಪಗಳು ಬೆಳಗಾಂವಿ ಜಿಲ್ಲೆಯಲ್ಲಿ ಹೇರಳವಾಗಿವೆ. ಮುಖ್ಯವಾಗಿ ಬೊಕನೂರಿನ ನವಿಗೆಏಣು, ಕರಲೆಬೆಟ್ಟ, ಜಂಜೋಟಿಯ ಉತ್ತರ ವಾಯುವ್ಯಕ್ಕೆ ತಳಾನಿಧಿಘರ್, ವೊಗಲ್‌ಘರ್ ಪ್ರಸ್ಥಭೂಮಿ, ಕಾಸರವಾಡ ಬೆಟ್ಟಪ್ರದೇಶಗಳಲ್ಲಿ ದೊರೆಯುತ್ತವೆ. (ಇಲ್ಲಿಯ ಅದುರನ್ನು ಇಂಡಾಲ್ ಅಲ್ಯೂಮಿನಿಯಂ ಕಾರ್ಖಾನೆಗೆ ಕಳುಹಿಸುತ್ತಿದ್ದಾರೆ). ಈ ಅದುರಿನಲ್ಲಿ ಸೇ.53 ರಷ್ಟು ಅಲ್ಯೂಮಿನಿಯಂ ಇದೆ. ಇತ್ತೀಚೆಗೆ ಲ್ಯಾಟರೈಟ್ ಒಡಗೂಡಿದ ಬಾಕ್ಸೈಟು ನಿಕ್ಷೇಪಗಳನ್ನು ಪಶ್ಚಿಮ ಕರಾವಳಿಯ ಬೈಂದೂರು, ಕುಂದಾಪುರ, ಗೋಕರ್ಣ, ಕುಮಟ ಬಳಿ ಪತ್ತೆಹಚ್ಚಿದ್ದಾರೆ.

**ಇತರ ಲೋಹಗಳು :** ಮೇಲೆ ಕಾಣಿಸಿದ ಮುಖ್ಯ ಲೋಹಗಳಲ್ಲದೆ, ಸೀಸ, ತವರ, ಆಂಟಿಮನಿ ಮುಂತಾದ ಇತರ ಲೋಹ ಖನಿಜಗಳು ಚಿತ್ರದುರ್ಗದ ಬಳಿ ದೊರೆಯುತ್ತವೆ. ಈ ಖನಿಜಗಳು ಹೆಚ್ಚು ಪ್ರಮಾಣದಲ್ಲಿ ದೊರೆಯುವುದಿಲ್ಲವಾದ್ದರಿಂದ ಇಲ್ಲಿ ಹೆಚ್ಚಿನ ಕೆಲಸ ನಡೆದಿಲ್ಲ.

**ಗಂಧಕ :** ಪಿರೈಟ್ ಎಂಬ ಹೊಂಬಣ್ಣದ ಸಲ್ಫೈಡ್ ರೂಪದಲ್ಲಿ ಇದು ದೊರೆಯುತ್ತದೆ. ನಮಗೆ ಬೇಕಾದ ಸಲ್ಫ್ಯೂರಿಕ್ ಆಮ್ಲವನ್ನು ಪಿರೈಟೀಸಿನಿಂದ ಪಡೆಯಬಹುದು.

**ಅಭ್ರಕ :** ಆರ್ಥಿಕವಾಗಿ ಉಪಯುಕ್ತವಾದ ಪಾರದರ್ಶಕ ಹಾಳೆ ಅಥವಾ ಪುಸ್ತಕ ರೂಪದ ಅಭ್ರಕ ಮತ್ತು ವರ್ಮಿಕ್ಯೂಲೈಟ್ ಮೈಕ ಮೈಸೂರು, ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹೇರಳವಾಗಿ ದೊರೆಯುವುದು. ಮಂದೂರು (ಸಾಲಿಗ್ರಾಮ), ಉಂಡವಾಡಿ, ವಡೆಸಮುದ್ರ, ಪಾಂಡವಪುರ, ತಗಡೂರು, ಮಾವಿನಹಳ್ಳಿಗಳು, ಪ್ರಮುಖ ನಿಕ್ಷೇಪಗಳಿರುವ ಸ್ಥಳಗಳು. ಕೆಳದರ್ಜೆಯ ಪುಟ್ಟ ಹಾಳೆಗಳು ಕೃಷ್ಣರಾಜಪೇಟೆ ಹೊಳೆನರಸೀಪುರ ರಸ್ತೆಯಲ್ಲಿರುವ ಕಬ್ಬೂರು ಮತ್ತು ಸೀತಾಪುರ ಬೆಟ್ಟಗಳಲ್ಲಿ ದೊರೆಯುತ್ತವೆ. ವರ್ಮಿಕ್ಯೂಲೈಟ್ ನಿಕ್ಷೇಪಗಳು ತುಮಕೂರಿನ ನಿಡವಂಡ ಮತ್ತು ಕೊರಟಗೆರೆ ಹಾಗೂ ಕೋಲಾರ ಜಿಲ್ಲೆಯ ಬಂಗಾರಪೇಟೆಗಳಲ್ಲೂ ಇವೆ.

**ಮ್ಯಾಗ್ನಸೈಟ್ :** ಹೆಚ್ಚಿನ ಉಷ್ಣವನ್ನು ತಡೆಯುವ ಇಟ್ಟಿಗೆಗಳ ತಯಾರಿಕೆಗೆ ಉಪಯುಕ್ತವಾದ ಈ ಖನಿಜ ಮೈಸೂರು ತಾಲ್ಲೂಕಿನ ಕಡಕೊಳ ಬಳಿಯ ದೊಡ್ಡ ಕಾನ್ಯ, ದೊಡ್ಡ ಕಾಟೂರು ಪ್ರದೇಶಗಳಲ್ಲಿ ಅತ್ಯಲ್ಪ ಸಿಲಿಕಾಂಶ (ಅಲ್ಪ ಬೇಸಿಕ್), ಶಿಲೆಯಲ್ಲಿ ಸರ್ಪೆಂಟೀನ್ ಖನಿಜದೊಂದಿಗೆ ಸಿರಗಳೋಪಾದಿಯಲ್ಲಿ ಸಿಕ್ಕುತ್ತವೆ. ಭಾರತದಲ್ಲಿ ಉತ್ಪನ್ನವಾಗುವ ಮ್ಯಾಗ್ನಸೈಟಿನಲ್ಲಿ ಸೇ.10 ಭಾಗ ಕರ್ನಾಟಕದ ಕೊಡಗು ಜಿಲ್ಲೆಯದು.

**ಕಲ್ನಾರು :** ರೇಷ್ಮೆ ಎಳೆಯ ಹೊಳುಪು ಇದ್ದು ನಾರಿನಂತಿರುವ ಕಲ್ನಾರು ನಿಕ್ಷೇಪಗಳು ಹೊಳೆನರಸೀಪುರದಲ್ಲೂ (ಹಾಸನ ಜಿಲ್ಲೆ) ಇನ್ನೊಂದು ಜಾತಿಯ ಕಲ್ನಾರು ಮಾವಿನಹಳ್ಳಿಯಲ್ಲೂ (ಮೈಸೂರು ಜಿಲ್ಲೆ) ಇವೆ. ಚಿಕ್ಕಮಗಳೂರು ಜಿಲ್ಲೆಯ ಕೆಲವೆಡೆಗಳಲ್ಲಿ ಸಹ ಕಲ್ನಾರು ದೊರೆಯುತ್ತದೆ.

**ಗ್ರಾಫೈಟ್ :** ಕೋಲಾರ ಜಿಲ್ಲೆಯ ಬಂಗಾರಪೇಟೆಯ ಗಣಚಾರಪುರದಲ್ಲಿ ದೊರೆಯುತ್ತದೆ. ಮೈಸೂರಿನ ಮಾವಿನಹಳ್ಳಿ, ಕೊರವಳ್ಳಿ ಮತ್ತು ಸರಗೂರುಗಳಲ್ಲಿನ ಪದರಶಿಲೆಗಳಲ್ಲಿ ಸಹ ದೊರೆಯುವುದು.

**ಕಯನೈಟ್ ಮತ್ತು ಸಿಲಿಮನೈಟ್ :** ಈ ಅಗ್ನಿನಿರೋಧಕ ಖನಿಜಗಳು ಮಾರವಳ್ಳಿ (ಹಾಸನ), ಬೆಟ್ಟದ ಬೀಡು (ಮೈಸೂರು) ಮತ್ತು ಹೊಳೆನರಸಿಪುರಗಳಲ್ಲಿ ದೊರೆಯುತ್ತವೆ. ಕಪ್ಪೂರು, ತುಮಕೂರು, ಭೇರ್ಯ (ಕೃಷ್ಣರಾಜನಗರ), ಚಟ್ನಹಳ್ಳಿ (ಮೈಸೂರು), ಬಾಳೆಕಲ್ಲು, ನುಗ್ಗೇಹಳ್ಳಿ, ಮಾರನಹಳ್ಳಿ (ಹಾಸನ) ಇವು ಸಹ ಈ ಖನಿಜ ದೊರೆಯುವ ಸ್ಥಳಗಳು.

**ಕುರಂದ :** ಗಡುಸಿನಲ್ಲಿ ವಜ್ರದ ಅನಂತರದ್ದಾದ ಈ ಖನಿಜ ಪಾರದರ್ಶಕವಾಗಿರಬಹುದು ಇಲ್ಲವೆ ಅಪಾರದರ್ಶಕವಾಗಿರಬಹುದು. ಅಮೂಲ್ಯ ರತ್ನವಾಗಿ ಅಥವಾ ಘರ್ಷಕವಾಗಿ ಉಪಯೋಗವಾಗುವ ಹಲವು ಬಣ್ಣದ ಮತ್ತು ದರ್ಜೆಯ ಕುರಂದ ನಮ್ಮ ದೇಶದಲ್ಲಿ ಹೇರಳವಾಗಿದೆ. ಶೃಂಗೇರಿಘಟ್ಟ (ಶಿವಮೊಗ್ಗ), ಅರಸೀಕೆರೆ (ಹಾಸನ), ಪಾವಗಡ ಮತ್ತು (ಚಿತ್ರದುರ್ಗ), ಮಧುಗಿರಿ (ತುಮಕೂರು), ಗೌರಿಬಿದನೂರು (ಕೋಲಾರ), ಮಂಡ್ಯ, ಹುಣಸೂರು ಮತ್ತು ಹೆಗ್ಗಡದೇವನಕೋಟೆ (ಮೈಸೂರು) ಈ ಸ್ಥಳದಲ್ಲಿ ಕುರಂದದ ವಿವಿಧ ನಿಕ್ಷೇಪಗಳಿವೆ.

**ರತ್ನಗಳು:** ಕರ್ನಾಟಕದಲ್ಲಿ ವಿವಿಧ ರತ್ನಗಳೂ ದೊರೆಯುತ್ತವೆ. ಇವುಗಳಲ್ಲಿ ಮುಖ್ಯವಾದದ್ದು ನೀಲಪಚ್ಚೆ (ಆಕ್ವಮೆರೀನ್). ಇದು ಮೈಸೂರು ಸಮೀಪದ ಬೆಣಚು ಸಿರಗಳಲ್ಲಿ ಮಿಶ್ರ ಬಣ್ಣದ ವಿಧವಾಗಿ ಸಿಕ್ಕುವುದು. ಹಸುರು ಪಚ್ಚೆಗಳು (ಅಮೆಚ್ಯೂರೈನ್) ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಮೋಟ್ರಿಗಳಲ್ಲಿಯೂ ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿಯಲ್ಲಿಯೂ ದೊರೆಯುತ್ತವೆ. ಪಾರದರ್ಶಕವಾದ ನೀಲಿ ಮತ್ತು ಕೆಂಪು ಕುರಂದದ ಹರಳುಗಳೇ ಅಮೂಲ್ಯ ರತ್ನಗಳು. ಇವು ಹಾಸನ, ಅರಸೀಕೆರೆ, ಮಧುಗಿರಿ (ತುಮಕೂರು), ಮಂಡ್ಯ, ಹುಣಸೂರು, ಹೆಗ್ಗಡದೇವನಕೋಟೆ ಮತ್ತು ಚಟ್ನಹಳ್ಳಿ (ಮೈಸೂರು) ಇಲ್ಲಿ ಸಿಕ್ಕುತ್ತವೆ. ಗುಲ್ಬರ್ಗದಲ್ಲಿ ಕೆಳದರ್ಜೆಯ ರತ್ನಗಳು, ಜಾಸ್ಪರ್ (ಕೆಂಪು ಬೆಣಚು) ರಕ್ತಮಣಿಗಳಂತೆ ಸಿಗುತ್ತವೆ. ಕಂದು, ಕೆಂಪು ಮತ್ತು ವಿವಿಧ ಛಾಯೆಯ ಮಚ್ಚೆಗಳಿದ್ದು ಆಕರ್ಷಕವಾಗಿರುವ ಈ ಜಾತಿಯ ಅಗ್ಗದ ರತ್ನಗಳೆನಿಸಿರುವ ಕಲ್ಲುಗಳು ಬಳ್ಳಾರಿಯ ತಿಮ್ಮಪ್ಪಘರ್ ಮತ್ತು ಗುಲ್ಬರ್ಗದ ಗುರುಮಠಕಲ್ ಪ್ರದೇಶದಲ್ಲಿ ದೊರಕುತ್ತವೆ. ಗುಲ್ಬರ್ಗ ಜಿಲ್ಲೆಯಲ್ಲಿ ಬೆಸಾಲ್ಟ್ ಶಿಲೆಯಲ್ಲಿ ಅಮಥಿಸ್ಟ್ ಒಮ್ಮೊಮ್ಮೆ ದೊರೆಯುತ್ತದೆ.

**ಕಟ್ಟಡ ಶಿಲೆಗಳು :** ಕಟ್ಟಡದ ಶಿಲೆಗಳಿಗೆ ಕರ್ನಾಟಕದಲ್ಲಿ ಕೊರತೆ ಇಲ್ಲ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಹೇರಳವಾಗಿ ಕಣಶಿಲೆಗಳು (ಗ್ರಾನೈಟ್) ಇವೆ. ದೊಡ್ಡಬಳ್ಳಾಪುರದ ಕಣಶಿಲೆಗೆ ಒಳ್ಳೆಯ ಬಣ್ಣವಿದೆ. ಬೆಂಗಳೂರಿನಲ್ಲಿರುವ ವಿಧಾನಸೌಧದ ನಿರ್ಮಾಣ ಈ ಕಲ್ಲಿನಿಂದ ಆಗಿದೆ. ಮೈಸೂರು ಜಿಲ್ಲೆಯಲ್ಲಿ ಇನ್ನೂ ಒಳ್ಳೆಯ ಬಣ್ಣ ಬಣ್ಣದ ಕಟ್ಟಡದ ಶಿಲೆಗಳು ಕರಿಘಟ್ಟ (ಶ್ರೀರಂಗಪಟ್ಟಣ), ಪಾಂಡವಪುರಗಳಲ್ಲಿ ಪಾರ್ಫಿರಿ, ಫೆಲ್‌ಸೈಟುಗಳಾಗಿ ದೊರೆಯುತ್ತವೆ.

**ಸುಣ್ಣಶಿಲೆ:** ಇದು ಕಟ್ಟಡ ಶಿಲೆಯೂ ಹೌದು. ಸಿಮೆಂಟ್ ತಯಾರಿಕೆಗೆ ಮುಖ್ಯ ಕಚ್ಚಾವಸ್ತುವೂ ಹೌದು. ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ಮೈಸೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ಸುಣ್ಣಶಿಲೆಯ ನಿಕ್ಷೇಪಗಳಿವೆ. ಶಿವಮೊಗ್ಗ ಜಿಲ್ಲೆಯ ಬಂಡಿಗುಡ್ಡ, ಗುಲ್ಬರ್ಗದ ಶಾಹಬಾದ, ವಾಡಿ, ಸೇಡಂ ಈ ಪ್ರದೇಶ, ಬಿಜಾಪುರ ಜಿಲ್ಲೆಯ ತಾಳೀಕೋಟೆ, ಕಲಾದಗಿ,ಲೋಕಾಪುರಗಳ ಸುತ್ತಮುತ್ತಣ ಪ್ರದೇಶ, ಬೆಳಗಾಂವಿ ಜಿಲ್ಲೆಯ ನಾಗರಗಾಳಿ ಪ್ರದೇಶ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪ್ರದೇಶ, ತುಮಕೂರಿನ ಅಮ್ಮಸಂದ್ರ

-ಮೊದಲಾದೆಡೆಗಳಲ್ಲಿನ ನಿಕ್ಷೇಪಗಳು ಮುಖ್ಯವಾದವು. ಶಾಹಬಾದ ಮತ್ತು ವಾಡಿಯ ಸುಣ್ಣಶಿಲೆ ಕಡಪ ಕಲ್ಲಿನಂತೆಯೇ ಹಾಸುಗಲ್ಲು ಮತ್ತು ಮೇಲ್ಛಾವಣಿ ಚಪ್ಪಡಿಗಳಾಗಿ ಉಪಯುಕ್ತವಾಗುತ್ತಿದೆ.

**ಬಳಪದ ಕಲ್ಲು** (ಸ್ಟಿಯಟೈಟ್): ಬಳಪದ ತಯಾರಿಕೆ, ಕುಲುಮೆ ಇಟ್ಟಿಗೆ ಮತ್ತು ಕೆತ್ತನೆ ಕೆಲಸಗಳಿಗೆ ಬಳಸುವ ಬಳಪದ ಕಲ್ಲು ತುಮಕೂರಿನ ನಿಟ್ಟೂರು ಮತ್ತು ಬಾಣಸಂದ್ರ ಸುತ್ತಲಿನಲ್ಲಿ ಹಾಗೂ ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಹೇರಳವಾಗಿ ದೊರೆಯುವುದು. ಬೇಲೂರು, ಹಳೇಬೀಡು ದೇವಾಲಯಗಳ ನಿರ್ಮಾಣವಾಗಿರುವುದು ಈ ಕಲ್ಲುಗಳಿಂದ.

**ಗಾಜುಮರಳು ಮತ್ತು ಬೆಣಚು :** ಗಾಜಿನ ತಯಾರಿಕೆಗೆ ಮುಖ್ಯವಾದ ಕಚ್ಚಾವಸ್ತು ಮರಳು ಮತ್ತು ಬೆಣಚು. ಬೆಳ್ಳಿಮರಳೆಂದು ಹೆಸರುಪಡೆದ ಮರಳು ಚಿಕ್ಕನಾಯಕನಹಳ್ಳಿಯಲ್ಲಿ ದೊರೆಯುತ್ತದೆ. ಗುಲ್ಬರ್ಗದ ಅರಕೆರಿ ಗುಡ್ಡದಲ್ಲಿ (ಗುರುಮಠಕಲ್ಲಿಗೆ ಸಮೀಪ) ಬೆಣಚು ಹೇರಳವಾಗಿದೆ.

**ಬಣ್ಣದ ಮಣ್ಣುಗಳು :** ಬಣ್ಣ ತಯಾರಿಕೆಗೆ ಬೇಕಾಗುವ ಬಣ್ಣದ ಮಣ್ಣುಗಳು (ಓಕರ್ಸ್) ಕರ್ನಾಟಕದಲ್ಲಿ ಹೇರಳ ಪರಿಮಾಣದಲ್ಲಿವೆ. ಇವುಗಳಲ್ಲಿ ವಿವಿಧ ಬಣ್ಣಗಳೂ ಇವೆ. ಇವು ಹಳದಿ, ಕೆಂಪು, ಕಂದು, ಹಸುರು ಮುಂತಾದ ಅನೇಕ ಛಾಯೆಯವು. ಚಿತ್ರದುರ್ಗ, ಬಳ್ಳಾರಿ ಮತ್ತು ತುಮಕೂರು ಜಿಲ್ಲೆಯ ಅನೇಕ ಭಾಗಗಳಲ್ಲಿ ರಂಗುರಂಗಾದ ಹಲವು ತರದ ಬಣ್ಣದ ಮಣ್ಣುಗಳು ದೊರೆಯುತ್ತವೆ. ಸಿಮೆಂಟು ನೆಲಕ್ಕೆ ಕೆಂಪು ರಂಗು ಕೊಡಲು ಉಪಯೋಗಕ್ಕೆ ಬರುವ ಕೆಂಪು ಕಾವಿಮಣ್ಣು ಚಿಕ್ಕನಾಯಕನಹಳ್ಳಿಯ ಬಳಿಯ ಗುಡ್ಡಗಳಲ್ಲಿ ಸಿಕ್ಕುತ್ತದೆ. ಹಳದಿ ಮತ್ತು ಕೆಂಪು ಬಣ್ಣದ ಮಣ್ಣುಗಳು ಕೆಮ್ಮಣ್ಣುಗುಂಡಿ, ಸಂಡೂರು, ರಾಮದುರ್ಗ, ಚಿತ್ರದುರ್ಗ, ತುಮಕೂರು, ಹೊಸಪೇಟೆಗಳಲ್ಲಿ ಕಾಣಸಿಗುತ್ತವೆ.

**ಇತರ ಮಣ್ಣುಗಳು :** ಪಿಂಗಾಣಿ ತಯಾರಿಕೆಗೆ ಮೂಲ ಕಚ್ಚಾವಸ್ತುವಾದ ಸುದ್ದೆಮಣ್ಣು ಬೆಂಗಳೂರು ಜಿಲ್ಲೆಯ ಅರ್ಜುನಬೆಟ್ಟಹಳ್ಳಿ ಮತ್ತು ಗೊಲ್ಲಹಳ್ಳಿಗಳಲ್ಲಿ ಸಿಗುತ್ತದೆ. ಬಿಳಿಜೇಡಿನ ತೆರೆದ ಗಣಿಗಳು ಬಾಗೇಶಪುರ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಮಂಡ್ಯ ಮತ್ತು ಮೇಲುಕೋಟೆಗಳಲ್ಲಿ ಇವೆ. ಬಂಗಾರಪೇಟೆಯಲ್ಲೂ ಬಿಳಿಮಣ್ಣಿನ ನಿಕ್ಷೇಪಗಳಿವೆ. ಅಧಿಕ ಕ್ಷಾರಾಂಶವಿರುವ ಮೆದು ಜೇಡು ತುಮಕೂರಿನ ಕರೆಕುರುಬೆ ಮತ್ತು ಜಾನೆಹಾರುಗಳ ಸಮೀಪದಲ್ಲಿ ಹೇರಳವಾಗಿ ದೊರೆಯುತ್ತದೆ. ಬೆಂಗಳೂರಿನ ಸುತ್ತಮುತ್ತ ತಿನ್ನಾಲು ಮತ್ತು ನಂದಗುಡಿಗಳಲ್ಲಿ ಹೊಸಕೋಟೆ ಅಗ್ನಿನಿರೋಧಕ ಜೇಡು ನಿಕ್ಷೇಪಗಳಿವೆ. ಆರ್ಥಿಕ ದೃಷ್ಟಿಯಿಂದ ಚೌಳು ಮಣ್ಣು ಉಪಯುಕ್ತವಾದುದು. ಇದನ್ನು ಎಣ್ಣೆ ಶೋಧಿಸುವ ಮತ್ತು ಶುದ್ಧೀಕರಣ ಕಾರ್ಯಗಳಲ್ಲಿ ಹೆಚ್ಚಿಗೆ ಬಳಸುತ್ತಾರೆ. ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊರವಿಯಲ್ಲಿ ಚೌಳುಮಣ್ಣು ನಿಕ್ಷೇಪ ಹೇರಳವಾಗಿದೆ. ಇದಕ್ಕೆ ಕೊರವಿ ಮಣ್ಣೆಂದೇ ಹೆಸರು ಬಂದಿದೆ. ಇದಕ್ಕೆ ವಿದೇಶಗಳಿಂದ ಹೆಚ್ಚು ಬೇಡಿಕೆ ಉಂಟು.

ವಿವಿಧ ಖನಿಜಗಳನ್ನು ಉತ್ಪಾದಿಸುವ ಕಾರ್ಯ ವಿಶೇಷವಾಗಿ ನಡೆದಿದ್ದು ಇದು ಕರ್ನಾಟಕದ ಒಂದು ಪ್ರಮುಖ ಉದ್ಯಮವಾಗಿ ಬೆಳೆಯುತ್ತಿದೆ. 2002-03ನೆಯ ಸಾಲಿಗೆ ಖನಿಜ ವಿಭಾಗಕ್ಕಾಗಿ 651.52 ಲಕ್ಷರೂ.ಗಳನ್ನು ನಿಗದಿಪಡಿಸಲಾಗಿತ್ತು. ರಾಜ್ಯಕ್ಕೆ ಖನೀಜೋದ್ಯಮದಿಂದ ವಾರ್ಷಿಕ 9754.50 ಲಕ್ಷರೂ.ಗಳ ಆದಾಯ ಬರುತ್ತಿದೆ (2002). (ನೋಡಿ: ಗಣಿಗಾರಿಕೆ.) (ಬಿ.ಪಿ.ಆರ್.)

**ಖಾಂಡ್ಯ :** ಚಿಕ್ಕಮಗಳೂರು ತಾಲ್ಲೂಕಿನ ಒಂದು ಪ್ರಾಚೀನ ಗ್ರಾಮ. ಬಾಳೇಹೊನ್ನೂರಿನಿಂದ 8ಕಿಮೀ ಈಶಾನ್ಯಕ್ಕೆ ಭದ್ರಾನದಿಯ ಬಲದಂಡೆಯಲ್ಲಿ ಆನೆಬಿದ್ದಹಳ್ಳ ಭದ್ರಾನದಿಯನ್ನು ಕೂಡುವ ಸ್ಥಳದಲ್ಲಿದೆ.

ಈ ಸ್ಥಳದಲ್ಲಿ ಪುರಾಣಪ್ರಸಿದ್ಧ ಮಾರ್ಕಂಡೇಯನ ತಂದೆ ಮಾರ್ಕಂಡ ಮುನಿಯ ಆಶ್ರಮವಿತ್ತು ಎನ್ನಲಾಗಿದೆ. ಈ ಮಾರ್ಕಂಡೇಯನ ಹೆಸರಿನಿಂದಲೇ ಊರಿಗೆ ಖಾಂಡ್ಯ ಎಂಬ ಹೆಸರು ಬಂದಿದೆ. ಅವನ ಸ್ಮರಣಾರ್ಥವಾಗಿ ಇಲ್ಲಿನ ಜನಾರ್ದನ ಮತ್ತು ಮಾರ್ಕಂಡೇಶ್ವರ ದೇವಾಲಯಗಳು ಇಲ್ಲಿ ನಿರ್ಮಾಣವಾದುವು ಎಂದು ಪ್ರತೀತಿ. ಇವಲ್ಲದೆ ಇಲ್ಲಿ ಬೀಕೇಶ್ವರ, ನರಸಿಂಹ ಮೊದಲಾದ ದೇವಾಲಯಗಳಿವೆ. ಇವುಗಳಲ್ಲಿರುವ ಹೊಯ್ಸಳ ಮತ್ತು ವಿಜಯನಗರ ಕಾಲದ ಶಾಸನಗಳು ದೇವಾಲಯದ ಸೇವೆಗಾಗಿ ದಾನಮಾಡಿದ ಮತ್ತು ಜಮೀನು ದತ್ತಿನೀಡಿದ ವಿಷಯಗಳನ್ನು ತಿಳಿಸುತ್ತವೆ. ಇಲ್ಲಿನ ಶಾಸನಾಧಾರಗಳಿಂದ ಈ ಊರು ಸುಮಾರು ಸಾವಿರ ವರ್ಷಕ್ಕೂ ಹಿಂದಿನದೆಂದು ಹೇಳಬಹುದು. ಹೊಯ್ಸಳರ ಕಾಲದಲ್ಲಿ ಇದು ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಈ ಊರು ಪುಣ್ಯಸ್ಥಳವಾಗಿದ್ದು ಸುತ್ತಮುತ್ತಲ ಪ್ರದೇಶಗಳ ಜನ ಮೃತರ ಅಸ್ಥಿಯನ್ನು ತಂದು ಭದ್ರಾನದಿಯಲ್ಲಿ ವಿಸರ್ಜಿಸುವ ಪದ್ಧತಿಯುಂಟು. (ಡಿ.ಎಸ್.ಜಿ.)

**ಖಾದ್ರಿ ಶಾಮಣ್ಣ :** 1925-1990. ಕನ್ನಡದ ಪ್ರಸಿದ್ಧ ಪತ್ರಿಕೋದ್ಯಮಿ. ಸ್ಪಷ್ಟ, ನೇರ ಮತ್ತು ಹರಿತ ಬರೆಹಕ್ಕೆ ಹೆಸರಾಗಿದ್ದ ಪತ್ರಕರ್ತ, ಸಂಪಾದಕ. ಇವರು ಬರೆದ ಅಗ್ರಲೇಖನಗಳು ಕನ್ನಡ ಪತ್ರಿಕಾರಂಗಕ್ಕೆ ಹೊಸ ಆಯಾಮವನ್ನು ನೀಡಿದುವು.

ಇವರು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ 1925 ಜೂನ್ 6ರಂದು ಜನಿಸಿದರು. ತಂದೆ ಖಾದ್ರಿ ಶ್ರೀನಿವಾಸ ದೇಶಿಕಾಚಾರ್ಯ, ತಾಯಿ ಲಕ್ಷ್ಮಮ್ಮ. ಸೀನಿಯರ್ ಇಂಟರ್‌ಮೀಡಿಯೆಟ್‌ವರೆಗೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಯನ ಮಾಡಿದರು. ಸ್ವಾತಂತ್ರ್ಯ ಚಳವಳಿಯಿಂದ ಆಕರ್ಷಿತರಾಗಿ ಶಿಕ್ಷಣವನ್ನು ಪೂರ್ಣಗೊಳಿಸಲಿಲ್ಲ. ಗಾಂಧೀಜಿಯವರ ಕರೆಗೆ ಓಗೊಟ್ಟು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು (1942). ಪರಿಣಾಮವಾಗಿ ಬ್ರಿಟಿಷರ ಆಡಳಿತದಲ್ಲಿ ಎರಡು ಬಾರಿ ದೀರ್ಘಾವಧಿ ಸೆರೆವಾಸ ಅನುಭವಿಸಿದರು. ಸೆರೆಮನೆಯಿಂದ ಬಿಡುಗಡೆಯಾದ ಬಳಿಕ 1944ರ ಮಧ್ಯಭಾಗದಲ್ಲಿ ಜನವಾಣಿ ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಸೇರಿದರು. ಸುಮಾರು ಆರು ತಿಂಗಳು ಕಾಲ ಅಲ್ಲಿದ್ದು ಸ್ವಾತಂತ್ರ್ಯ ಚಳವಳಿಗೆ ಮತ್ತಷ್ಟು ಇಂಬು ಕೊಡುವುದರಲ್ಲಿ ಸಕ್ರಿಯ ಪಾತ್ರವಹಿಸಿದರು. ಅನಂತರ 1944ರ ನವೆಂಬರ್‌ನಲ್ಲಿ ಗಾಂಧೀಜಿಯವರ ಆಶ್ರಮಕ್ಕೆ ತೆರಳಿದರು. ಅಲ್ಲಿ ನಯೀತಾಲೀಂ ಶಿಕ್ಷಣ ಶಿಬಿರದಲ್ಲಿ ತರಬೇತಿ ಪಡೆದರು. ಸೇವಾಗ್ರಾಮದಿಂದ ವಿಶೇಷ ಬಾತ್ಮೀದಾರರಾಗಿ ಕನ್ನಡ ಪತ್ರಿಕೆಗಳಿಗೆ ನಿಯತವಾಗಿ ಸುದ್ದಿವರದಿ ಬರೆಹಗಳನ್ನು ರವಾನಿಸುತ್ತಿದ್ದರು.

ಇವರು ಸೇವಾಗ್ರಾಮದಿಂದ ಹಿಂದಿರುಗಿದ್ದು 1946ರಲ್ಲಿ. ಕರ್ನಾಟಕದಲ್ಲಿ ಎಚ್.ಸಿ.ದಾಸಪ್ಪ ದಂಪತಿಗಳ ಸಾಹಚರ್ಯದಲ್ಲಿ ಕಾರ್ಯ ನಿರ್ವಹಿಸಿದರು. ಅನಂತರ ಕರ್ನಾಟಕ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸ್ಥಾಪಿಸುವುದರಲ್ಲಿ ಕಾರ್ಯಶೀಲರಾದರು. ಜಯಪ್ರಕಾಶ್ ನಾರಾಯಣ್ ಮತ್ತು ರಾಮಮನೋಹರ ಲೋಹಿಯಾರಂತಹ ಸಮಾಜವಾದಿ ಧುರೀಣರ ಪ್ರಭಾವ ಆ ವೇಳೆಗಾಗಲೇ ಇವರ ಮೇಲಾಗಿತ್ತು. ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಮುಂಬಯಿಯಲ್ಲಿ ನಡೆಸುತ್ತಿದ್ದ ಜಾಗೃತಿ ಪತ್ರಿಕೆಯ ಸಂಪಾದಕರಾದರು. ಕರ್ನಾಟಕ ಸಮಾಜವಾದೀ ಪತ್ರಿಕೆಯ ಮುಖವಾಣಿಯಾಗಿ ಇದು ಧಾರವಾಡಕ್ಕೆ ಸ್ಥಳಾಂತರಗೊಂಡಿತ್ತು. ಅನಂತರ 1948ರ ಜೂನ್ ತಿಂಗಳಿನಲ್ಲಿ ಈ ಪತ್ರಿಕೆಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ಕರ್ನಾಟಕದಲ್ಲಿ ಅರಸೊತ್ತಿಗೆಯನ್ನು ತೆಗೆಯಬೇಕೆಂಬ ಲೇಖನ ಅದರಲ್ಲಿ ಪ್ರಕಟವಾಯಿತು. ಆಗ ಕೆ.ಸಿ.ರೆಡ್ಡಿಯವರ ಸರ್ಕಾರ ಕೇಳಿದ ಐದು ಸಾವಿರ ರೂಪಾಯಿ ಭದ್ರತಾ ಠೇವಣಿ ಹಣ ಕೊಡಲು ಸಾಧ್ಯವಾಗದೆ ಪತ್ರಿಕೆ ಅವಸಾನ ಕಂಡಿತು. ತರುವಾಯ ಖಾದ್ರಿಯವರು ಪ್ರಜಾವಾಣಿ ಪತ್ರಿಕೆಯಲ್ಲಿ

ಸುದ್ದಿ ಸಂಪಾದಕರಾಗಿ, ಅನಂತರ ಸಹ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ವಿಮಾನ ಕಾರ್ಖಾನೆಯ ಕಾರ್ಮಿಕರೊಡನೆ ಮುಷ್ಕರದಲ್ಲಿ ಭಾಗವಹಿಸಿ ಜೈಲಿಗೆ ಹೋದ ಕಾರಣ (1950) ಸಹ ಸಂಪಾದಕ ಹುದ್ದೆಯನ್ನು ಕಳೆದುಕೊಳ್ಳಬೇಕಾಯಿತು. ತಾತ್ವಿಕ ಕಾರಣಗಳಿಗಾಗಿ ಸ್ವತಂತ್ರ ಭಾರತದಲ್ಲಿ ಮೂರುಬಾರಿ ಸೆರೆವಾಸ ಅನುಭವಿಸಿದರು. ಸುಮಾರು ಒಂದು ದಶಕ ಕಾಲ ತಮ್ಮನ್ನು ಸಕ್ರಿಯವಾಗಿ ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳಲ್ಲಿ ತೊಡಗಿಸಿಕೊಂಡರು (1950-60). ಮಹಾತ್ಮಾಗಾಂಧಿಯವರ ಬರೆಹಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದರು. ವಿನೋಬಾ ಭಾವೆಯವರೊಡನೆ ಭೂದಾನ ಚಳವಳಿಯಲ್ಲಿ ಭಾಗವಹಿಸಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡರು. ಈ ನಡುವೆ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಬೆಂಗಳೂರು ಆವೃತ್ತಿಯಲ್ಲಿ ಸುದ್ದಿಸಂಪಾದಕರಾಗಿ ಕೆಲಸ ಮಾಡಿದರು (1960-63). ಅನಂತರ ಎಂ.ಎಸ್.ರಾಮಯ್ಯನವರು ಆರಂಭಿಸಿದ ಗೋಕುಲ ವಾರಪತ್ರಿಕೆಯಲ್ಲಿ ಸೇವೆ ಸಲ್ಲಿಸಿದರು (1963-65). ಪ್ರಜಾವಾಣಿ ಪತ್ರಿಕೆಗೆ ಮರಳಿದ (1965) ಇವರು 1974ರವರೆಗೆ ಅದರ ಸುದ್ದಿ ಸಂಪಾದಕರಾಗಿದ್ದರು. ಸಂಯುಕ್ತ ಕರ್ನಾಟಕ ಪತ್ರಿಕಾ ಸಮೂಹದ ಮುಖ್ಯ ಸಂಪಾದಕರಾಗಿ ಸಾರಥ್ಯ ವಹಿಸಿ ಅಲ್ಲಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ (1977) ಅದನ್ನು ವಿರೋಧಿಸಿದ ತಮ್ಮ ಹಳೆಯ ಸಮಾಜವಾದೀ ಗೆಳೆಯರೊಡನೆ ಸತತ ಸಂಪರ್ಕ ಇರಿಸಿಕೊಂಡಿದ್ದರು.

1978ರ ಜುಲೈನಲ್ಲಿ ಕನ್ನಡಪ್ರಭ ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡರು. ಇವರ ಸಂಪಾದಕತ್ವದಲ್ಲಿ ಪತ್ರಿಕೆಯ ಸ್ವರೂಪ ಮತ್ತು ವಿಷಯ ವ್ಯವಸ್ಥೆ ಬದಲಾದವು. ಪತ್ರಿಕೆ ಬಹು ಬೇಗನೇ ಉತ್ಕರ್ಷ ಕಂಡಿತು. ಚುಟುಕು ವಾಕ್ಯಗಳು, ಸತ್ವಯುತ ವಾಕ್ಯರಚನೆ ಮತ್ತು ಕ್ರಿಯಾತ್ಮಕ ಅಭಿಪ್ರಾಯಗಳು, ನಿರ್ಭೀತ ಸಂಪಾದಕೀಯ ಬರವಣಿಗೆ ಇವರಿಗೆ ಅಗ್ರಶ್ರೇಣಿಯ ಪತ್ರಿಕಾ ಸಂಪಾದಕ ವರ್ಗದಲ್ಲಿ ಸ್ಥಾನ ದೊರಕುವಂತೆ ಮಾಡಿದವು. ಕನ್ನಡಪ್ರಭ ಪತ್ರಿಕೆ ಸಂಪಾದಕೀಯಗಳಿಗೆ ನವಚೈತನ್ಯ ತುಂಬಿದರು. ಇವರು ನಿಧನರಾಗುವವರೆಗೆ ಈ ಪತ್ರಿಕೆಯ ಸಂಪಾದಕರಾಗಿದ್ದರು.

ಇವರಿಗೆ ಪತ್ರಿಕೋದ್ಯಮದ ಎಲ್ಲ ಪ್ರಕಾರಗಳಲ್ಲೂ ಅಪಾರ ಅನುಭವ ಇದ್ದು ಕನ್ನಡ ಪತ್ರಿಕೋದ್ಯಮಕ್ಕೆ ಅವಿರತ ದುಡಿದು ಅದಕ್ಕೆ ಸೂಕ್ತ ಸ್ಥಾನಮಾನ ಗಳಿಸಿಕೊಟ್ಟರು. ಇವರ ಸಂಪಾದಕೀಯಗಳನ್ನು ಓದುವುದೆಂದರೆ ಒಂದು ಬಗೆಯ ಶಿಕ್ಷಣವೇ ಆಗಿತ್ತು. ಪತ್ರಿಕೋದ್ಯಮ ಶಿಕ್ಷಣದಲ್ಲಿ ಇವರಿಗಿದ್ದ ಒಲವು ಹಲವಾರು ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳೊಡನೆ ಸಂಪರ್ಕಕ್ಕೆ ಅನುವು ಮಾಡಿಕೊಟ್ಟಿತ್ತು. ಥಾಮ್ಸನ್ ಫೌಂಡೇಷನ್ ಫೆಲೋ ಆಗಿ ಇಂಗ್ಲೆಂಡ್‌ನ ಕಾರ್ಡಿಫ್‌ನಲ್ಲಿ ಪತ್ರಿಕೆ ತರಬೇತಿ ಪಡೆದಿದ್ದರು. ಅಮೆರಿಕ, ಜರ್ಮನಿ, ಇರಾನ್, ರಷ್ಯ, ಜಪಾನ್ ಮತ್ತಿತರ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ಬಂದರು.

ಇವರು ಒಬ್ಬ ಉತ್ಕಟ ಕನ್ನಡಾಭಿಮಾನಿಯಾಗಿದ್ದರು. ಇವರು ಕರ್ನಾಟಕದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ (1984) ಸಂದರ್ಭದಲ್ಲಿ ಪರಿಷತ್ತಿನ ಕಲಾಪಗಳಲ್ಲಿ ಇವರು ತೋರಿಸುತ್ತಿದ್ದ ಆಸಕ್ತಿ ಇತರರಿಗೆ ಮಾದರಿಯಾಗಿತ್ತು. ಮೈಸೂರು ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ (1961-62), ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿಯ ಕಾರ್ಯದರ್ಶಿಯಾಗಿ (1964-65), ಪತ್ರಕರ್ತರ ಸೇವೆಯ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ತಮ್ಮ ಅಮೂಲ್ಯ ಕೊಡುಗೆ ನೀಡಿದರು. ಇವರು ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿದ್ದರು (1984-87). ಭಾರತ ಸಂಪಾದಕರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಇವರು 1990 ಮೇ 11ರಂದು ನಿಧನಹೊಂದಿದರು. (ಕೆ.ವಿ.ಎನ್.)

**ಖಾನಾಪುರ** : ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಸಹ್ಯಾದ್ರಿ ಬೆಟ್ಟಗಳ ಪ್ರದೇಶದಲ್ಲಿದ್ದು ಪ್ರಕೃತಿ ಸೌಂದರ್ಯದಿಂದ ಕೂಡಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಬೆಳಗಾಂವಿ, ಈಶಾನ್ಯ ಮತ್ತು ಪೂರ್ವದಲ್ಲಿ ಸಂಪಗಾಂವಿ ತಾಲ್ಲೂಕುಗಳು, ಆಗ್ನೇಯದಲ್ಲಿ ಧಾರವಾಡ, ದಕ್ಷಿಣ ಮತ್ತು ನೈಋತ್ಯಕ್ಕೆ ಉತ್ತರ ಕನ್ನಡ ಜಿಲ್ಲೆ, ಪಶ್ಚಿಮದಲ್ಲಿ ಗೋವ, ವಾಯವ್ಯದಲ್ಲಿ ಮಹಾರಾಷ್ಟ್ರ ರಾಜ್ಯ ಸುತ್ತುವರಿದಿದೆ. ಗುಂಜಿ, ಖಾನಾಪುರ, ಬೀಡಿ - ಇವು ಈ ತಾಲ್ಲೂಕಿನ ಹೋಬಳಿಗಳು. ಈ ತಾಲ್ಲೂಕಿನಲ್ಲಿ ಒಟ್ಟು 220 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,749.1ಚ.ಕಿಮೀ. ಜನಸಂಖ್ಯೆ 2,43,154.

ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಎತ್ತರವಾದ ಬೆಟ್ಟಗಳು, ಈಶಾನ್ಯ ಹಾಗೂ ಪೂರ್ವದಲ್ಲಿ ಬಯಲು ಪ್ರದೇಶ, ದಕ್ಷಿಣ ಹಾಗೂ ನೈಋತ್ಯ ಭಾಗದಲ್ಲಿ ದಟ್ಟವಾದ ಕಾಡು ಇವೆ. ತಾಲ್ಲೂಕಿನ ವಾಯುಗುಣ ಹಿತಕರವಾದದ್ದು. ಇಲ್ಲಿಯ ವಾರ್ಷಿಕ ಸರಾಸರಿ ಮಳೆ 2,090.11ಮಿಮೀ. ತಾಲ್ಲೂಕಿನಲ್ಲಿ ಕಪ್ಪುಮಣ್ಣಿನ ಮತ್ತು ಕೆಂಪುಮಣ್ಣಿನ ನುರುಜು ಭೂಮಿ ಇದೆ. ಮಲಪ್ರಭಾ ನದಿ ತಾಲ್ಲೂಕಿನ ಉತ್ತರಾರ್ಧದಲ್ಲಿ ಹರಿದು ಪೂರ್ವಕ್ಕೆ ಸಾಗುತ್ತದೆ. ತಾಲ್ಲೂಕಿನ ಎಲ್ಲ ಕಡೆಗಳಲ್ಲೂ ಬತ್ತದ ಗದ್ದೆಗಳು ಮತ್ತು ಅಲ್ಲಲ್ಲಿ ಹಣ್ಣಿನ ತೋಟಗಳು ಉಂಟು. ಬತ್ತ, ಮೆಣಸಿನಕಾಯಿ ಇಲ್ಲಿನ ಮುಖ್ಯ ಬೆಳೆಗಳಾದರೂ ಜೋಳ, ನವಣೆ, ಗೋದಿ, ಮೆಕ್ಕೆಜೋಳ, ನೆಲಗಡಲೆ, ಹುರುಳಿ, ತೊಗರಿ, ಎಳ್ಳು, ಹತ್ತಿ, ಕಬ್ಬು ಮತ್ತು ತರಕಾರಿಗಳನ್ನೂ ಬೆಳೆಯುತ್ತಾರೆ. ತಾಲ್ಲೂಕಿನ ದಕ್ಷಿಣ ಭಾಗದಲ್ಲಿರುವ ಕಾಡಿನಲ್ಲಿ ಬಿದಿರು, ಸಾಗುವಾನಿ, ಶಿವನಿ, ಮತ್ತಿ ಮುಂತಾದ ಮರಗಳಿವೆ. ಮರಕಡಿಯುವುದು, ಮರಮುಟ್ಟುಗಳ ತಯಾರಿಕೆ, ಉರುವಲು ಕಟ್ಟಿಗೆ ಸಾಗಿಸುವುದು ಇಲ್ಲಿನ ಕೆಲವರ ಮುಖ್ಯ ಉದ್ಯೋಗ. ಜೇಡಿಮಣ್ಣಿನಿಂದ ಪಿಂಗಾಣಿ ಸಾಮಾನುಗಳನ್ನು ತಯಾರಿಸುವುದು, ಇಟ್ಟಿಗೆಗಳನ್ನು ಮಾಡುವುದು, ಬಂಡಿಗಳಿಗೆ ಮರದ ಚಕ್ರಗಳನ್ನು ಮಾಡುವುದು ಇಲ್ಲಿನ ಜನರ ಉಪಕಸಬು. (ಎಸ್.ಸಿ.ವಿ.)

ಖಾನಾಪುರ ತಾಲ್ಲೂಕಿನ ಲೋಂಡಾ ಒಂದು ಮುಖ್ಯ ರೈಲ್ವೆ ನಿಲ್ದಾಣ. ಇದರ ಸಮೀಪದಲ್ಲಿ ಮ್ಯಾಂಗನೀಸ್ ಗಣಿಗಳಿವೆ. ಬೀಡಿ ಖಾನಾಪುರಕ್ಕೆ ಪೂರ್ವದಲ್ಲಿ 19ಕಿಮೀ ದೂರದಲ್ಲಿದೆ. 1829ರಲ್ಲಿ ಸಂಗೊಳ್ಳಿ ರಾಯಣ್ಣ ಬೀಡಿಯ ಮಾಮಲೆದಾರ್ ಕಚೇರಿಯನ್ನು ಸುಟ್ಟುಹಾಕಿದ. ಬೀಡಿಗೆ 8ಕಿಮೀ ದೂರದಲ್ಲಿ ಹನುಮಂತಗಢದ ಅವಶೇಷವಿದೆ. ಖಾನಾಪುರಕ್ಕೆ 14ಕಿಮೀ ದೂರದಲ್ಲಿರುವ ಡೊಂಗರ್‌ಗಾಂವ್ ಬೆಟ್ಟದ ಮೇಲೆ ಮತ್ಸ್ಯೇಂದ್ರನಾಥನ ಗುಡಿ ಇದೆ. ಖಾನಾಪುರಕ್ಕೆ ದಕ್ಷಿಣದಲ್ಲಿ 14ಕಿಮೀ ದೂರದಲ್ಲಿರುವ ಹಲಶಿಯಲ್ಲಿ (ನೋಡಿ) ಪುರಾತನ ವರಾಹ ಹಾಗೂ ನರಸಿಂಹ ದೇವಾಲಯಗಳಿವೆ. ಬೆಳಗಾಂವಿಯ ದಕ್ಷಿಣಕ್ಕೆ 28ಕಿಮೀ ದೂರದಲ್ಲಿ ಖಾನಾಪುರದ ಉತ್ತರಕ್ಕಿರುವ ಜಾಂಬೋಟಿ ವ್ಯಾಪಾರಸ್ಥಳ. ಖಾನಾಪುರಕ್ಕೆ ವಾಯುವ್ಯದಲ್ಲಿ 30ಕಿಮೀ ದೂರದಲ್ಲಿರುವ ಕಣಕುಂಬಿ ಗ್ರಾಮದ ದೇವಾಲಯಗಳು ಕಣಕುಂಬೇಶ್ವರ ಮತ್ತು ಮಾಹುಲಿದೇವಿ. ಈ ಗ್ರಾಮ ಮಲಪ್ರಭಾ ನದಿಯ ಉಗಮಸ್ಥಾನವೆಂದು ಹೆಸರಾಗಿದೆ. ಖಾನಾಪುರಕ್ಕೆ ಪೂರ್ವದಲ್ಲಿ 11ಕಿಮೀ ದೂರದಲ್ಲಿರುವ ನಂದಗಡ ವ್ಯಾಪಾರಕೇಂದ್ರ. ಇಲ್ಲಿ ಅನೇಕ ಅಕ್ಕಿ ಗಿರಣಿಗಳಿವೆ. ಖಾನಾಪುರದ ವಾಯುವ್ಯಕ್ಕೆ ಸು.13ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಜಲಪಾತ ಅಸೋಗಾ.

ಖಾನಾಪುರ ಈ ತಾಲ್ಲೂಕಿನ ಕೇಂದ್ರ. ಬೆಳಗಾಂವಿ ನಗರದ ದಕ್ಷಿಣಕ್ಕೆ ಸು.28ಕಿಮೀ ದೂರದಲ್ಲಿದೆ. ಇಲ್ಲಿ ನಗರ ಪಂಚಾಯಿತಿಯಿದೆ. ಜನಸಂಖ್ಯೆ 16,563. ಇದು ಬೆಂಗಳೂರು - ಪುಣೆ ರೈಲುಮಾರ್ಗದಲ್ಲಿ ಲೋಂಡಾ ಮತ್ತು ಬೆಳಗಾಂವಿಗಳ ಮಧ್ಯದಲ್ಲಿರುವ ಒಂದು ಪ್ರಮುಖ ನಿಲ್ದಾಣ. ಇಲ್ಲಿಂದ ಬೆಳಗಾಂವಿ, ದಾಂಡೇಲಿ, ಗೋವೆಗಳಿಗೆ ಬಸ್ಸು ಸೌಕರ್ಯವುಂಟು. ಖಾನಾಪುರ ಸಾಗವಾನಿ ಮರಗಳ ಮತ್ತು ಬಿದಿರುಗಳ ಸಂಗ್ರಹ ಸ್ಥಳ, ವ್ಯಾಪಾರ ಕೇಂದ್ರ. ಇಲ್ಲಿ ಪಿಂಗಾಣಿ ಸಾಮಾನು ಮತ್ತು ಮಂಗಳೂರು ಹೆಂಚು ತಯಾರಿಸುವ ಕಾರ್ಖಾನೆಗಳುಂಟು. *

**ಖಾವಾಸ್ ಖಾನ್** : ಬಿಜಾಪುರದ ಆದಿಲ್‌ಶಾಹಿವಂಶದ ದೊರೆಗಳ ಒಬ್ಬ ಸರದಾರನಾಗಿದ್ದ ದೌಲತ್‌ಖಾನನ ಬಿರುದು. ಇಬ್ರಾಹಿಮನ ಮರಣಾನಂತರ ಮುಹಮ್ಮದ್ ಖಾನನಿಗೆ ರಾಜ್ಯ ದೊರಕಿಸಿಕೊಡಲು ಇವನು ಬಹುವಾಗಿ ಶ್ರಮಿಸಿದ. ಈ ಕಾರಣಕ್ಕಾಗಿ ಮುಹಮ್ಮದ್ ಖಾನ್ ಈತನಿಗೆ ಖಾವಾಸ್ ಖಾನ್ ಎಂಬ ಬಿರುದು ನೀಡಿ ಇವನನ್ನು ತನ್ನ ಪ್ರಧಾನಿಯನ್ನಾಗಿ ನೇಮಿಸಿಕೊಂಡ. ಇದರಿಂದ ಇವನಿಗೆ ಅಹಂಕಾರ ಬಂತು.

ತನ್ನ ಶಕ್ತಿ ಬೆಳೆಸಿಕೊಳ್ಳಲು ಯತ್ನಿಸಿ ಪ್ರತಿಸ್ಪರ್ಧಿಗಳನ್ನು ಅಡಗಿಸಿದ. ಈತನ ಅಹಂಕಾರವನ್ನು ನೋಡಿ ಮುಹಮ್ಮದ್ ಖಾನನಿಗೂ ಬೇಸರವಾಯಿತು. ಜನಾಭಿಪ್ರಾಯ ಚೆನ್ನಾಗಿಲ್ಲ ಎನ್ನುವುದನ್ನು ಕಂಡುಕೊಂಡ ಖಾವಾಸ್ ಖಾನ್ ಸಮಯ ಸಾಧಿಸಿ, ಬಿಜಾಪುರದ ಮೇಲೆ ದಂಡೆತ್ತಿಬರಲು ದೆಹಲಿಯ ಬಾದಶಹನಾದ ಶಹಜಹಾನನಿಗೆ ಆಮಂತ್ರಣ ಕೊಟ್ಟ. ಮುಂದೆ ಔರಂಗ್‌ಜೇಬನು ಶಿವಾಜಿಯ ವಿರುದ್ಧ ಹೋರಾಡಲು ಜಯಸಿಂಹನ ನೇತೃತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳಿಸಿದ. ಆ ಸಮಯಕ್ಕೆ ಖಾವಾಸ್ ಖಾನನೂ ಶಿವಾಜಿಯ ಮೇಲೆ ಏರಿಹೋದ. ಎರಡೂ ಸೈನ್ಯಗಳು ಪರಸ್ಪರ ಸಂಧಿಸುವ ಮುನ್ನವೇ ಶಿವಾಜಿಯ ಸೈನ್ಯಕ್ಕೂ ಖಾವಾಸ್ ಖಾನನ ಸೈನ್ಯಕ್ಕೂ ಒಂದು ದುರ್ಗಮ ಪ್ರದೇಶದಲ್ಲಿ ನಿರ್ಣಾಯಕವಾದ ಯುದ್ಧ ನಡೆಯಿತು. ಖಾವಾಸ್ ಖಾನ್ ಯುದ್ಧದಲ್ಲಿ ಗಾಯಗೊಂಡು ಸತ್ತನೆಂಬ ಸುಳ್ಳು ಸುದ್ದಿ ಹರಡಿತು. ಈ ನಡುವೆ ಶಿವಾಜಿ ಮತ್ತು ಜಯಸಿಂಹರ ಮಧ್ಯೆ ಒಪ್ಪಂದವಾಗಿ ಜಯಸಿಂಹ ಮುಂದುವರಿದು ಬಿಜಾಪುರದವರನ್ನು ಸುಲಿಗೆ ಮಾಡತೊಡಗಿದ.

ಖಾವಾಸ್ ಖಾನನ ವಿರೋಧದಿಂದಾಗಿ ಆದಿಲ್ ಶಾಹಿಯ ರಾಜ್ಯಭಾರ ಅಸ್ತವ್ಯಸ್ತಗೊಂಡಿತ್ತು. ಇದನ್ನರಿತ ಔರಂಗ್‌ಜೇಬ್ ಆದಿಲ್ ಶಾಹಿಯನ್ನು ಗೆದ್ದು ಬರಲು ತನ್ನ ಸೇನಾಪತಿಗಳಾದ ಬಹದ್ದೂರ್ ಶಹ ಮತ್ತು ದಿಲೇರ್‌ಖಾನರನ್ನು ಕಳುಹಿಸಿದ. 1675 ಅಕ್ಟೋಬರ್ 19ರಂದು ಬಹದ್ದೂರ್ ಶಹನನ್ನು ಖಾವಾಸ್ ಖಾನ್ ಭೀಮಾ ನದಿಯ ದಂಡೆಯ ಮೇಲೆ ಭೇಟಿ ಮಾಡಿದ. ಆದಿಲ್‌ಶಾಹಿ ರಾಜ್ಯವನ್ನು ವೈಯಕ್ತಿಕ ಸ್ವಾರ್ಥಕ್ಕಾಗಿ ದಮನಮಾಡುವುದೇ ಈ ಭೇಟಿಯ ಉದ್ದೇಶವಾಗಿದೆ ಎಂಬ ಶಂಕೆಯಿಂದ ಖಾವಾಸ್ ಖಾನನ ವಿರೋಧಿಯಾದ ಬಹಲೋಲ್ ಖಾನ್ ಈತನನ್ನು ಬಂಕಾಪುರದಲ್ಲಿ ಕೈದುಮಾಡಿಟ್ಟು, ಆಡಳಿತದ ಹೊಣೆಯನ್ನು ತಾನೇ ಕೈಯಲ್ಲಿ ತೆಗೆದುಕೊಂಡ. ಮಹಮ್ಮದ್ ಖಾನನ ಆಜ್ಞೆಯ ಮೇರೆಗೆ ಖಾವಾಸ್ ಖಾನನನ್ನು 1676 ಜನವರಿ 20ರಂದು ಆತನ ವಾಡೆಯಲ್ಲೇ ಹತ್ಯೆ ಮಾಡಲಾಯಿತು. *

**ಖುರ್ಷಿದ್ ಆಲಂ ಖಾನ್ :** 1919-. ಕರ್ನಾಟಕದ ಮಾಜಿ ರಾಜ್ಯಪಾಲ (1991-99). ಕೇಂದ್ರ ಸರ್ಕಾರದ ಮಾಜಿ ಸಚಿವ. ಉತ್ತರ ಪ್ರದೇಶದ ಫರೂಕಾಬಾದ್ ಜಿಲ್ಲೆಯ ಕೈಮ್‌ಗಂಜ್‌ನಲ್ಲಿ 1919 ಫೆಬ್ರವರಿ 5ರಂದು ಜನಿಸಿದರು. ಪ್ರಾರಂಭಿಕ ಶಿಕ್ಷಣದ ಬಳಿಕ ಆಗ್ರ ವಿಶ್ವವಿದ್ಯಾಲಯದ ಪ್ರತಿಷ್ಠಿತ ಸೇಂಟ್ ಜಾನ್ಸ್ ಕಾಲೇಜಿನ ವಿದ್ಯಾರ್ಥಿಯಾಗಿ ಸೇರಿದರು. ಅಲ್ಲಿ ಬಿ.ಎ. ಪದವಿಯನ್ನು ಅತ್ಯುನ್ನತ ಮಟ್ಟದಲ್ಲಿ ಹಾಗೂ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಇವರು ಅಮೆರಿಕ ಸಂಯುಕ್ತಸಂಸ್ಥಾನದ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದು ಅಲ್ಲಿ ಆಡಳಿತ ಅಧ್ಯಯನದಲ್ಲಿ ಪದವಿ ಪೂರೈಸಿದರು.



ಇವರಿಗೆ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಇತ್ತು. ನವದೆಹಲಿಯ ಜಾಕಿರ್ ಹುಸೇನ್ ಸ್ಮಾರಕ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾಗಿದ್ದರು. ಫರೀದಾಬಾದಿನ ವೈ.ಎಂ.ಸಿ.ಎ. ಎಂಜನಿಯರಿಂಗ್ ಸಂಸ್ಥೆಯ ಆಡಳಿತ ಮಂಡಳಿಯಲ್ಲೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ದೆಹಲಿಯ ಜಮೀಯಾ ಮಿಲಿಯ ಇಸ್ಲಾಮಿಯ ವಿಶ್ವವಿದ್ಯಾಲಯದಲ್ಲಿ ಇವರಿಗೆ ವಿಶೇಷ ಆಸಕ್ತಿಯಿತ್ತು. ಈಗ ಇವರು ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸದಸ್ಯರಾಗಿದ್ದಾರೆ.

ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದು. ಕೇಂದ್ರ ಸರ್ಕಾರದಲ್ಲಿ ವಿದೇಶಾಂಗ, ಪ್ರವಾಸೋದ್ಯಮ, ನಾಗರಿಕ ವಿಮಾನಯಾನ, ಜವಳಿ ಮತ್ತು ವಾಣಿಜ್ಯ ಮೊದಲಾದ ವಿವಿಧ ಖಾತೆಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ವಿದೇಶಾಂಗ ಸಚಿವರಾಗಿ ಜಗತ್ತಿನಾದ್ಯಂತ ವ್ಯಾಪಕ ಪ್ರವಾಸ ಕೈಗೊಂಡ ಅನುಭವ ಇವರಿಗಿದೆ. ಹಲವು ಸಂದರ್ಭಗಳಲ್ಲಿ ವಿಶ್ವಸಂಸ್ಥೆ ಮತ್ತು ಭದ್ರತಾ ಮಂಡಳಿಯ ಅಧಿವೇಶನಗಳನ್ನು ಉದ್ದೇಶಿಸಿ ಮಾತನಾಡಿದ ಕೀರ್ತಿ ಇವರದು.

ನವ ದೆಹಲಿ ಮತ್ತು ಲುವಾಂಡಗಳಲ್ಲಿ ಜರುಗಿದ ನಿರ್ಲಿಪ್ತ ರಾಷ್ಟ್ರಗಳ ವಿದೇಶಾಂಗ ಸಚಿವರ ಸಮ್ಮೇಳನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು. ಅಮೆರಿಕ ಸಂಯುಕ್ತಸಂಸ್ಥಾನದ ರಿಪಬ್ಲಿಕನ್ ಪಕ್ಷದ ಸಮಾವೇಶದಲ್ಲಿ ಇವರು ಭಾರತವನ್ನು ಪ್ರತಿನಿಧಿಸಿದ್ದರು.

ಗೋವ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡಾಗ (1989 ಜುಲೈ 18) ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡು (1991 ಜನವರಿ 6) ಸತತವಾಗಿ ಎಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇವರು ಮಹಾರಾಷ್ಟ್ರ ಮತ್ತು ಕೇರಳದ ಹಂಗಾಮಿ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಇವರಿಗೆ ತೋಟಗಾರಿಕೆ ಮತ್ತು ಓದಿನಲ್ಲಿ ವಿಶೇಷ ಆಸಕ್ತಿ. ಇವರು ಭಾರತದ ರಾಷ್ಟ್ರಪತಿಗಳಾಗಿದ್ದ ಜಾಕಿರ್ ಹುಸೇನ್‌ರ ಅಳಿಯ. ಮಾಜಿ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ಇವರ ಪುತ್ರ. *

**ಖೆಡ್ಡ :** ಕಾಡಾನೆಗಳನ್ನು ಸೆರೆಹಿಡಿದು ಪಳಗಿಸಲು ಯೋಜಿಸಿರುವ ಒಂದು ವಿಶೇಷ ಬಗೆಯ ಬೋನು. ಇಂಥ ಬೋನಿಗೆ ಆನೆಗಳನ್ನು ತರುಬಿ ಅನಂತರ ಪಳಗಿಸುವ ವಿಸ್ತಾರವಾದ ಕಾರ್ಯಾಚರಣೆಗೆ ಖೆಡ್ಡ ಕಾರ್ಯಕ್ರಮವೆನ್ನುತ್ತಾರೆ. ಕಾಡಿನಲ್ಲಿ ಆನೆಗಳ ಸಂಖ್ಯೆ ಹೆಚ್ಚಾಗಿ ಅವು ಜನಗಳಿಗೂ ಬೆಳೆಗಳಿಗೂ ಹಾನಿಯುಂಟುಮಾಡತೊಡಗಿದಾಗ ಅವನ್ನು ಹಿಡಿಯಲಾಗುತ್ತದೆ. ಒಂದೋ ಎರಡೋ ಪುಂಡಾನೆಗಳು ತೊಂದರೆ ಕೊಟ್ಟಾಗ ಅವನ್ನು ಬೆದರಿಸಿ ಕಾಡಿನ ಒಳಭಾಗಕ್ಕೆ ಅಟ್ಟುತ್ತಾರೆ; ಇಲ್ಲವೇ ಬೇರೆ ಉಪಾಯವಿಲ್ಲದೆ ಅಪಾಯ ಮಿತಿ ಮೀರಿದಾಗ ಗುಂಡಿಟ್ಟು ಕೊಲ್ಲುತ್ತಾರೆ. ಬಹುಸಂಖ್ಯೆಯಲ್ಲಿ ಅವನ್ನು ಹಿಡಿಯಬೇಕಾದಾಗ ಮಾತ್ರ ಖೆಡ್ಡ ಯೋಜನೆಯನ್ನು ರೂಪಿಸಲಾಗುತ್ತದೆ. ಖೆಡ್ಡ ಎನ್ನುವ ಪದ ಹಿಂದೂಸ್ತಾನಿಯದು. ಸಣ್ಣ ಗುಂಡಿ ಎಂದು ಇದರ ಅರ್ಥ. ಹಿಂದೆ ಕಾಡಾನೆಗಳನ್ನು ಹಿಡಿಯಲು ಕಂದಕಗಳನ್ನು ತೋಡುತ್ತಿದ್ದುದರಿಂದ ಈ ಪದಕ್ಕೆ ಈ ಅರ್ಥ ಬಂದಿದೆ. ಖೆಡ್ಡಕ್ಕೆ ಹಿಂದಿಯಲ್ಲಿ ಬಂಗಡಿ ಎಂದೂ ಕನ್ನಡದಲ್ಲಿ ಆನೆಪಂಗಡಿ ಎಂದೂ ಹೆಸರಿದೆ. ಈಚೆಗೆ ಆನೆಗಳನ್ನು ಹಿಡಿಯಲು ಗುಂಡಿಗಳನ್ನು ತೋಡುತ್ತಿಲ್ಲ. ಏಕೆಂದರೆ ಗುಂಡಿಗೆ ಕೆಡವಿ ಬೀಳಿಸುವ ಆನೆಗೆ ಊನವಾಗಬಹುದು. ಎಷ್ಟೋ ಆನೆಗಳು ಸಾಯಲೂಬಹುದು. ಆದ್ದರಿಂದ ಈಗ ನೆಲಮಟ್ಟದಲ್ಲೇ ದಪ್ಪ ದಿಮ್ಮಿಗಳಿಂದ ದೊಡ್ಡ ಬೋನೊಂದನ್ನು ನಿರ್ಮಿಸಿ ಅದರಲ್ಲಿ ಆನೆಗಳನ್ನು ಬಂಧಿಸುತ್ತಾರೆ. ಈ ವಿಧಾನ ಕರ್ನಾಟಕದ ವೈಶಿಷ್ಟ್ಯಗಳಲ್ಲಿ ಒಂದೆನಿಸಿ ಪ್ರಸಿದ್ಧವಾಗಿದೆ. ಹೈದರ್ ಅಲಿ, ಟಿಪ್ಪುಸುಲ್ತಾನರ ಕಾಲದಿಂದಲೂ ಈ ಕಾರ್ಯ ವಿಧಾನವನ್ನು ಉತ್ತಮಪಡಿಸುತ್ತ ಬರಲಾಗಿದೆ. ಸದ್ಯಕ್ಕೆ ಮೈಸೂರಿನ ಕಾಕನಕೋಟೆ ಕಾಡಿನ ಕಾರಾಪುರ, ಚಾಮರಾಜನಗರ ತಾಲ್ಲೂಕಿನ ಬೂದಿಪಡಗ ಮುಂತಾದ ಸ್ಥಳಗಳಲ್ಲಿ ಖೆಡ್ಡ ಕಾರ್ಯಾಚರಣೆ ನಡೆಯುತ್ತದೆ. ಇದಕ್ಕೆ ಅಪಾರವಾದ ಹಣವೂ ಜನಶಕ್ತಿಯೂ ಬೇಕಾಗುವುದರಿಂದ ಇಂಥ ಕಾರ್ಯಕ್ರಮವನ್ನು ಅಗತ್ಯ ಬಿದ್ದಾಗ ಮಾತ್ರ ಏರ್ಪಡಿಸಲಾಗುತ್ತದೆ.

ನದಿಯ ಒಂದು ಪಕ್ಕದಲ್ಲಿ ಖೆಡ್ಡ ಬೋನು ಇರುತ್ತದೆ. ಅದರ ಸುತ್ತಲೂ 8'-9' ಆಳವಾದ ಕಂದಕ ತೋಡಿರುತ್ತಾರೆ. ಕಾಡಿನಲ್ಲಿ ಹರಡಿ ಹೋಗಿರುವ ಆನೆಗಳನ್ನು ನದಿಯ ಮುಖಾಂತರ ಅಟ್ಟಿ ಖೆಡ್ಡದ ಒಳಕ್ಕೆ ಸೇರಿಸುವುದೇ ಇಷ್ಟೆಲ್ಲ ಏರ್ಪಾಡಿನ ಉದ್ದೇಶ. ಖೆಡ್ಡಕ್ಕೆ ಮೂರು ಪ್ರವೇಶದ್ವಾರಗಳಿರುತ್ತವೆ. ಒಂದೊಂದು ದ್ವಾರದ ಬಳಿಯೂ ಉದ್ದನೆಯ ಕಾಡುಮರಗಳ ಕಂಬಗಳನ್ನು ಆಳವಾಗಿ ಹೂಳಲಾಗಿದ್ದು ಒಂದೊಂದು

ಅಡ್ಡಪಟ್ಟಿಗಳಿರುವ ಒರಟು ಬಗೆಯ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ. ಈ ಬಾಗಿಲುಗಳು ಮೇಲಿನಿಂದ ಕೆಳಕ್ಕೆ ಮುಚ್ಚಿಕೊಳ್ಳುವಂತಿರುತ್ತವೆ. ಇವಕ್ಕೆ ಬಂಗಾಲದ ಕುಸಿಯುವ ಬಾಗಿಲುಗಳು ಎಂದು ಹೆಸರು. ಖೆಡ್ಡದಿಂದ 10-12 ಮೈಲಿಗಳವರೆಗೆ ಓಡಾಡಲು ಅನುಕೂಲವಾಗುವಂತೆ ನೇರ ದಾರಿಗಳನ್ನೂ ಅಡ್ಡದಾರಿಗಳನ್ನೂ ಮಾಡಿರುತ್ತಾರೆ. ಸೆರೆಸಿಕ್ಕುವ ಮೊದಲೂ ಆಮೇಲೂ ಆನೆಗಳಿಗೆ ಅಸಹಜವೆನ್ನಿಸದಂತೆ ಈ ದಾರಿಗಳನ್ನು ಸೊಪ್ಪುಸದೆಗಳಿಂದ ಮುಚ್ಚಿಬಿಡಲಾಗುತ್ತದೆ. ನೇರದಾರಿಗೂ ಅಡ್ಡದಾರಿಗೂ ನಡುವೆ ಏರ್ಪಡುವ ಒಂದೊಂದು ಆವರಣವೂ ಸುಮಾರು 5-10 ಚದರಮೈಲಿ ವಿಸ್ತಾರವಾಗಿದ್ದು ಒಂದೊಂದರಲ್ಲೂ ಒಂದು ವಾರದವರೆಗೆ ಆನೆಗಳಿಗೆ ಸಾಕಾಗುವಷ್ಟು ನೀರು, ಹುಲ್ಲು ಮತ್ತು ಇತರ ಆಹಾರವಸ್ತುಗಳ ಸೌಲಭ್ಯವನ್ನೇರ್ಪಡಿಸಿರುತ್ತಾರೆ. ಆನೆಗಳು ನದಿಯ ಇನ್ನೊಂದು  ದಡದಿಂದಲೂ ಬರಬಹುದಾದ ಕಾರಣ ಅಲ್ಲೂ ಇದೇ ಬಗೆಯ ಆವರಣಗಳನ್ನೇರ್ಪಡಿಸಿರುತ್ತಾರೆ.



ಸೆರೆಹಿಡಿದ ಆನೆಗಳನ್ನು ಹಗ್ಗದಿಂದ ಬಂಧಿಸುವುದು

**ಕಾರ್ಯಾಚರಣೆ :** ಆನೆಗಳನ್ನು ಸೆರೆಹಿಡಿಯುವುದಕ್ಕೆ 3 ತಿಂಗಳ ಮುಂಚೆಯೇ ಚಟುವಟಿಕೆ ಆರಂಭವಾಗಿ ಹಲವಾರು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಇಂಥ ಸಿದ್ಧತೆಗಳಲ್ಲಿ ಮುಖ್ಯವಾದವು ಇವು: 1) ಕಂದಕದಲ್ಲಿನ ಮಣ್ಣು, ಕಸ ಮುಂತಾದವನ್ನು ತೆಗೆದುಹಾಕುವುದು. 2) ಬಾಗಿಲುಗಳ ರಿಪೇರಿ ಮತ್ತು ಆವಶ್ಯಕವೆಂದರೆ ಹೊಸ ಬಾಗಿಲುಗಳ ನಿರ್ಮಾಣ. 3) ಆನೆಗಳಿಗೆ ಹಗ್ಗ ಬಿಗಿಯಲು ಅಗತ್ಯವಾದ ಕಿರು ಆವರಣಗಳ ನಿರ್ಮಾಣ. 4) ನದಿಗಿಳಿದ ಆನೆಗಳು ಅಕಸ್ಮಾತ್ ತಪ್ಪಿಸಿಕೊಂಡು ಹೋಗಬಹುದಾದ್ದರಿಂದ ಇಂಥ ಅವಕಾಶವಿರುವೆಡೆಯಲ್ಲೆಲ್ಲ ಬಲವಾದ ಕಂಬಗಳನ್ನು ನೆಟ್ಟು ಅಡ್ಡಿ ಏರ್ಪಡಿಸುವುದು. 5) ದಂಡೆಗಳನ್ನೇರಿ ಆನೆಗಳು ತಪ್ಪಿಸಿಕೊಳ್ಳಬಹುದಾದ್ದರಿಂದ ನದೀದಡವನ್ನು ಕಡಿದಾಗಿರುವಂತೆ ಕೊರೆಯುವುದು. 6) ನದಿಯ ಮೂಲಕ ಆನೆಗಳನ್ನು ಖೆಡ್ಡ ಆವರಣದೊಳಕ್ಕೆ ಓಡಿಸುವ ನಯನಮನೋಹರವಾದ ದೃಶ್ಯವನ್ನು ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಜನಕ್ಕೆ ಅನುಕೂಲವಾಗುವಂತೆ ಎತ್ತರವಾದ ವೇದಿಕೆಗಳನ್ನು ನಿರ್ಮಿಸುವುದು ಮತ್ತು ಹಗ್ಗ ಕಟ್ಟುವ ಆವರಣದ ಸುತ್ತಲೂ ಇದೇ ತೆರನಾದ ವೇದಿಕೆಗಳ ನಿರ್ಮಾಣ. 7) ಖೆಡ್ಡದ ವಿಶೇಷ ಅಧಿಕಾರಿಗಳು ಹಾಗೂ ನೌಕರ ವರ್ಗದವರಿಗೆ ವಸತಿ ಮತ್ತು ಆಹಾರ ಸೌಕರ್ಯವನ್ನು ಕಲ್ಪಿಸುವುದು ಮತ್ತು ಜನಗಳಿಗೆ ಹಾಗೂ ದೊಡ್ಡಿಗೆ ಕೂಡುವ ಆನೆಗಳಿಗೆ ನೀರಿನ ಸೌಲಭ್ಯ ಒದಗಿಸುವುದು. 8) ಆನೆಗಳು ನೀರಿಗೆ ಇಳಿಯಬಹುದಾದ ನದೀಭಾಗಗಳ ಎರಡೂ ಕಡೆ ಬಿದಿರಿನ ತೇಲುಸೇತುವೆಗಳನ್ನು ನಿರ್ಮಿಸುವುದು. ಶಿಕಾರಿಗಾರರು ಇವುಗಳ ಮೇಲೆ ನಿಂತು ಆನೆಗಳು ಅಡ್ಡಾದಿಡ್ಡಿ ಓಡದಂತೆ ನೋಡಿಕೊಳ್ಳುತ್ತಾರೆ. 9) ಕಾಡುರಸ್ತೆಗಳ ರಿಪೇರಿ ಹಾಗೂ ಅಲ್ಲಲ್ಲಿ ಶಿಕಾರಿಗಳನ್ನು ನೇಮಿಸುವುದು. ದಾರಿಗಳನ್ನು ಸರಿಪಡಿಸಿ, ಅವುಗಳ ಅಂತರವನ್ನು ಅಳೆದು, ಗುರುತಿಗೆಂದು 44 ಗಜಗಳಿಗೊಂದರಂತೆ ಗೂಟಗಳನ್ನು ಹೂಳಿ ಅವುಗಳ ಬಳಿ ಸೌದೆ ಪೇರಿಸುವುದು. ಆನೆಗಳ ಹಿಂಡನ್ನು ಓಡಿಸುವಾಗ ಈ ಸ್ಥಳಗಳಲ್ಲಿ ಶಿಕಾರಿಗಳಿದ್ದು ಬೆಂಕಿಯನ್ನು ಹೊತ್ತಿಸಿಕೊಂಡು ಆನೆಗಳು ತಪ್ಪಿಸಿಕೊಳ್ಳದಂತೆ ಕಾಯುತ್ತಾರೆ. 10) ಉಪಾಹಾರ ಗೃಹವನ್ನು ತೆರೆಯುವುದು. 11) ಗಾಯಗೊಳ್ಳುವ ಜನಗಳಿಗೂ ಆನೆಗಳಿಗೂ ಅನುಕೂಲವಾಗುವಂತೆ ವೈದ್ಯಾಲಯಗಳನ್ನು ತೆರೆಯುವುದು. 12) ಅಧಿಕಾರಿಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಸಲುವಾಗಿ ವೈರ್‌ಲೆಸ್ ಕೇಂದ್ರವೊಂದನ್ನು ಆರಂಭಿಸುವುದು.

ಇಷ್ಟೆಲ್ಲ ಸಿದ್ಧತೆಗಳು ಮುಗಿದಮೇಲೆ ಅರಣ್ಯ ಅಧಿಕಾರಿಗಳು ಸ್ಥಳೀಯ ಕಾಡುಕುರುಬರೇ ಮುಂತಾದ ಜನರೊಡನೆ ಕೇರಳ ಹಾಗೂ ಕೊಡಗು ಜಿಲ್ಲೆಯ ಗಡಿಯಲ್ಲಿನ ಉನ್ನತವಾದ ಬೆಟ್ಟಪ್ರದೇಶಗಳಲ್ಲಿ ಕಾವಲುನಿಂತು ಕಾಡಾನೆಗಳ ಸಂಚಾರವನ್ನು ಗಮನಿಸಿ ಹಿಂಡಿನಲ್ಲಿನ ಆನೆಗಳ ಸಂಖ್ಯೆ, ಅವುಗಳು ಹೋಗುವ ದಿಕ್ಕು ಮುಂತಾದವುಗಳ ಬಗ್ಗೆ ಖೆಡ್ಡ ಕಾರ್ಯಾಚರಣೆಯ ಮುಖ್ಯಾಧಿಕಾರಿಗಳಿಗೆ ಮಾಹಿತಿಗಳನ್ನು ಒದಗಿಸುತ್ತಾರೆ. ಎಲ್ಲ ಹಿಂಡುಗಳೂ ಸೆರೆಗೆ ಯೋಗ್ಯವಾಗಿರುವುದಿಲ್ಲ. ಹಿಂಡಿನಲ್ಲಿ ಸಾಕಷ್ಟು ಆನೆಗಳಿರಬೇಕು. ಮುದಿಯಾನೆಗಳೂ ಮರಿಗಳೂ ಹೆಚ್ಚಾಗಿ ಇರಬಾರದು. ಇಂಥ ಹಿಂಡುಗಳನ್ನು ಗುರುತಿಸಿ ಹಿಂಬಾಲಿಸಿ ಖೆಡ್ಡದ ಪರಿಧಿಯೊಳಗಿನ ಯಾವುದಾದರೂ ಒಂದು ಆವರಣದೊಳಗೆ ನುಗ್ಗುವಂತೆ ಮಾಡುವುದು ಇವರ ಕೆಲಸ.

ಸಾಕಷ್ಟು ಸಂಖ್ಯೆಯಲ್ಲಿ ಆನೆಗಳು ಆವರಣವೊಂದಕ್ಕೆ ಬಂದಿವೆಯೆಂಬ ಸುದ್ದಿ ತಿಳಿದು ಅನಂತರ ಖೆಡ್ಡದ ಮುಖ್ಯಾಧಿಕಾರಿ ಅವನ್ನು ಸುತ್ತುವರಿಯುವ ಕಾರ್ಯಾಚಟುವಟಿಕೆಗಳನ್ನು ಆರಂಭಿಸಲು ಆಜ್ಞಾಪಿಸುತ್ತಾನೆ. ನದಿಯ ಮೂಲಕ ಹಿಂಡನ್ನು ಓಡಿಸಿ ಖೆಡ್ಡ ಆವರಣದೊಳಕ್ಕೆ ಸೇರಿಸುವ ದಿನಕ್ಕೆ 10-15 ದಿನಗಳ ಮುಂಚೆಯೇ ಸುತ್ತುವರಿಯುವ ಈ ಕಾರ್ಯವನ್ನು ಕೈಗೊಳ್ಳುತ್ತಾರೆ. ಇದಕ್ಕೆ ಬೇಕಾಗುವ ಜನರನ್ನು ಸುತ್ತಮುತ್ತಲಿನ ಹಳ್ಳಿಗಳಿಂದ ಕರೆಸಿ ನೇಮಿಸಿಕೊಳ್ಳಲಾಗುತ್ತದೆ. ಇವರನ್ನು ಪ್ರತಿ ಒಂದು ಮೈಲಿಗೆ 40 ಮಂದಿಯಂತೆ ಒಬ್ಬೊಬ್ಬರಿಗೂ 40 ಮೀಟರ್ ಅಂತರವಿರುವಂತೆ ನಿರ್ದಿಷ್ಟ ಪ್ರದೇಶಗಳ ಸುತ್ತ ನಿಲ್ಲಿಸಲಾಗುತ್ತದೆ. ಇವರ ಮೇಲ್ವಿಚಾರಣೆಗೆ ಪ್ರತಿ 40 ಮಂದಿಯ ಗುಂಪಿಗೆ ಒಬ್ಬ ರೇಂಜರ್, ಇಬ್ಬರು ಫಾರೆಸ್ಟರು ನಾಲ್ಕು ಜನ ಕಾಪುಗಾರರು, ನಾಲ್ಕು ಜನ ಯಜಮಾನರು ಇರುತ್ತಾರೆ.

ಅಲ್ಲದೆ ಇವರೆಲ್ಲರ ಮೇಲುಸ್ತುವಾರಿಗೆಂದು ಪ್ರತಿ ಎರಡು ಮೈಲಿಗಳಿಗೊಬ್ಬ ಗೆಜೆಟೆಡ್ ಅಧಿಕಾರಿಯಿರುತ್ತಾನೆ. ಇಡೀ ದಿನ ಹಗಲು ರಾತ್ರಿ ಎನ್ನದೆ ಬೆಂಕಿಯನ್ನು ಹೊತ್ತಿಸಿ ಉರಿಸಲಾಗುತ್ತದೆ. ಬೆಂಕಿಯನ್ನು ಕಂಡರೆ ಬಹಳ ಹೆದರುವ ಕಾಡಾನೆಗಳು ಈ ಹದ್ದನ್ನು ಮೀರಿ ಹೋಗುವುದಿಲ್ಲ. ಅಕಸ್ಮಾತ್ತಾಗಿ ಆನೆಗಳೇನಾದರೂ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರೆ ಬಿದಿರಿನ ಕಡಕುಗಳನ್ನು ಅಲ್ಲಾಡಿಸುವುದು, ತಮಟೆ ಬಡಿಯುವುದು ಮುಂತಾದವುಗಳಿಂದ ವಿಪರೀತ ಸದ್ದು ಮಾಡಿ ಅವು ಆವರಣದೊಳಗೇ ಇರುವಂತೆ ಮಾಡಲಾಗುತ್ತದೆ. ಕೆಲವು ಬಾರಿ ಆಕಾಶದ

ಕಡೆಗೆ ಗುಂಡು ಹಾರಿಸಿ ಆನೆಗಳಲ್ಲಿ ಭಯವನ್ನುಂಟುಮಾಡುವುದೂ ಇದೆ. ಹಿಂಡಿನಿಂದ ಒಂದೇ ಒಂದು ಆನೆ ತಪ್ಪಿಸಿಕೊಳ್ಳಲು ಬಿಟ್ಟರೂ ಸಾಕು, ಉಳಿದವನ್ನು ಹತೋಟಿಯಲ್ಲಿಡುವುದು ಬಹಳ ಕಷ್ಟವಾಗುತ್ತದೆ.



ಹೊಸದಾಗಿ ಹಿಡಿದ ಆನೆಗಳನ್ನು ಪಳಗಿದ ಆನೆಗಳ ಸಹಾಯದಿಂದ ಎಳೆದೊಯ್ಯುತ್ತಿರುವುದು

ಹೀಗೆ ಆನೆಗಳನ್ನು ಸುತ್ತುವರಿದು ಹಿಡಿದಿರುವ ಆವರಣ ಸುಮಾರು 20-25 ಚದರ ಕಿಮೀ ವಿಸ್ತಾರವಾಗಿದ್ದು ಸು.32ಕಿಮೀ ಸುತ್ತಳತೆಯುಳ್ಳದ್ದಾಗಿರುತ್ತದೆ. ಒಂದು ಆವರಣವನ್ನು ಕಾಯಲು ಸು.900-1000 ಶಿಕಾರಿಗಳು, ಅಧಿಕಾರಿಗಳು ಬೇಕಾಗುತ್ತಾರೆ. ಸುತ್ತುವರಿದ ಜನ ನಿಧಾನವಾಗಿ ಮುಂದುವರಿಯುತ್ತ ಚದುರಿರುವ ಆನೆಗಳನ್ನು ಒಂದೆಡೆ ಸೇರುವಂತೆ ಮಾಡುತ್ತಾರೆ. ಆನೆಗಳನ್ನು ನದಿಗೆ ತರುಬಲು ಗೊತ್ತಾಗಿರುವ ದಿನಕ್ಕೆ ಹಿಂದಿನ ದಿನ ಅವನ್ನು ಕೇವಲ 5 ಚದರ ಕಿಮೀ ಪ್ರದೇಶದಲ್ಲಿ ಗುಂಪುಗೂಡಿಸುತ್ತಾರೆ. ಯಾವುದೇ ಸಂದರ್ಭದಲ್ಲೂ ಇಷ್ಟು ಚಿಕ್ಕ ಪ್ರದೇಶದಲ್ಲಿ ಆನೆಗಳನ್ನು ಒಂದು ದಿನಕ್ಕಿಂತ ಹೆಚ್ಚು ಸಮಯ ಕೂಡಿಡುವಂತಿಲ್ಲ. ಏಕೆಂದರೆ ಮಿತವಾದ ಪ್ರದೇಶದಲ್ಲಿ ಅವಕ್ಕೆ ಮೇವು, ನೀರು ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲವಾದ್ದರಿಂದ ಅವು ಯಾವ ಬೆದರಿಕೆಗೂ ಜಗ್ಗದೆ ಕಾವಲಿನವರನ್ನು ಘಾಸಿಗೊಳಿಸಿ ಅಲ್ಲಿಂದ ತಪ್ಪಿಸಿಕೊಂಡು ಹೋಗಬಹುದು. ನದಿಯ ಮೂಲಕ ಕಾಡಾನೆಗಳನ್ನು ಖೆಡ್ಡ ಆವರಣಕ್ಕೆ ಓಡಿಸುವ ದಿನ ಮುಂಜಾನೆ ಹೆಚ್ಚು ಗದ್ದಲ ಮಾಡದೆ, ಆನೆಗಳನ್ನು ಸು.1.5 ಚದರ ಕಿಮೀ ಪ್ರದೇಶದೊಳಕ್ಕೆ ಕೂಡಿಡಲಾಗುತ್ತದೆ. ಅನಂತರ ನಿಶ್ಚಿತ ಕಾಲಕ್ಕೆ ಸರಿಯಾಗಿ ಹಲವಾರು ಸಾಕಿದ ಆನೆಗಳ ನೆರವಿನಿಂದ, ಕಾಡಾನೆಗಳನ್ನು ನದಿಗಿಳಿಸಲಾಗುತ್ತದೆ. ಸಾಕಿದ ಆನೆಗಳ ಮೇಲೆ ಬಂದೂಕು ಹಿಡಿದು ಸನ್ನದ್ಧರಾಗಿ ಕುಳಿತ ಅಧಿಕಾರಿಗಳ ನೇತೃತ್ವದಲ್ಲಿ ಪರಿಣತರಾದ ಶಿಕಾರಿಗಳು ಬಿದಿರಿನ ಕಡಕುಗಳು, ತಮಟೆಗಳನ್ನು ಬಡಿದು ಅಪಾರವಾಗಿ ಸದ್ದುಮಾಡುತ್ತ ಬಿದಿರಿನಿಂದ ಮಾಡಿದ ಉರಿಕೊಳ್ಳಿಗಳನ್ನು ಹಿಡಿದು ಬೆದರಿಸುತ್ತ ಹಿಂಡು ನದಿಯ ಕಡೆಗೆ ಸಾಗುವಂತೆ ಮಾಡುತ್ತಾರೆ. 15-20ಮೀಗಳಿಗೆ ಒಂದು ಗುಂಪಿನಂತೆ ಹಲವಾರು ಗುಂಪುಗಳಲ್ಲಿ ಹೀಗೆ ಜನ ಕೂಡಿಕೊಂಡು ಈ ರೀತಿ ಸದ್ದುಗದ್ದಲವೆಬ್ಬಿಸಿದಾಗ ಆನೆಗಳ ಗುಂಪು ನಿರ್ವಾಹವಿಲ್ಲದೆ ನದಿಯೆಡೆಗೆ ನುಗ್ಗುತ್ತದೆ. ಹೀಗೆ ಬೆದರಿದ ಆನೆಗಳು ಒಂದೆಡೆ ಸೇರುತ್ತಿದ್ದಂತೆ ಅಲ್ಲಿ ಮುಂಚೆಯೇ ಸಂಗ್ರಹಿಸಿಡಲಾದ ಸೌದೆಗೆ ಸೀಮೆಎಣ್ಣೆ ಸುರಿದು ಬೆಂಕಿಯಿಡುತ್ತಾರೆ. ಇದರಿಂದ ಮತ್ತಷ್ಟು ಬೆದರಿದ ಆನೆಗಳು ಸರಸರನೆ ನದಿಯ ಕಡೆಗೆ ಧಾವಿಸುತ್ತವೆ. ಆನೆಗಳನ್ನು ಬೆದರಿಸಲು ಆಗಿಂದಾಗ್ಗೆ ಹುಸಿಗುಂಡನ್ನು ಹಾರಿಸುವುದೂ ಅಗತ್ಯಬಿದ್ದರೆ ನಿಜವಾದ ಗುಂಡನ್ನು ಹಾರಿಸುವುದೂ ಉಂಟು. ತುಂಬ ಪುಂಡೇಳುವ ಆನೆಗಳಿಗೆ ಏಟು ಬೀಳುವ ಸಂಭವವೂ ಉಂಟು. ಇಷ್ಟೆಲ್ಲ ಒತ್ತಾಯಕ್ಕೆ ಸಿಕ್ಕ ಆನೆಗಳು ಗತ್ಯಂತರವಿಲ್ಲದೆ ನೀರಿಗಿಳಿಯುತ್ತವೆ. ಅವು ನೀರಿಗಿಳಿದ ತತ್‌ಕ್ಷಣ ಶಿಕಾರಿಗಳೂ ಬೇಟೆಯ ಅಧಿಕಾರಿಗಳೂ ಸಾಕಿದ ಆನೆಗಳ ಮೇಲೆ ಕುಳಿತು ಅವನ್ನು ಸುತ್ತುವರಿದಂತೆ ಹಿಂಬಾಲಿಸುತ್ತಾರೆ. ಈ ರೀತಿ ಕಾಡಾನೆಗಳನ್ನು ನದಿಯಲ್ಲಿ ಅಟ್ಟಿಕೊಂಡು ಹೋಗುವ ದೃಶ್ಯ ಬಹಳ ರಮಣೀಯವಾಗಿರುತ್ತದೆ. ನದಿಯ ಆಚೆ ದಡದಲ್ಲಿ ಅಟ್ಟಣೆಗಳ ಮೇಲೆ ಕುಳಿತ ವೀಕ್ಷಕರಿಗೆ ಈ ದೃಶ್ಯ ಸ್ಪಷ್ಟವಾಗಿ ಕಾಣುವಂತಿರುತ್ತದೆ. ನೀರು ಆಳವಾದಾಗ ಲೀಲಾಜಾಲವಾಗಿ ಈಜುವುದು, ಮರಿಗಳು ಕೊಚ್ಚಿಹೋಗದಂತೆ ಅವನ್ನು ಸೊಂಡಿಲಿನಿಂದ ಎತ್ತಿಹಿಡಿದು ಸಾಗಿಸುವುದು. ಭಯದಿಂದ ಘೀಳಿಡುವುದು, ಸೊಂಡಿಲಿನಿಂದ ನೀರೆರಚುವುದು ಮುಂತಾದವು ಬಲು ಆಕರ್ಷಕವಾಗಿರುತ್ತವೆ.

ಹೀಗೆ ಹಂತಹಂತವಾಗಿ ಆನೆಗಳನ್ನು ಅಟ್ಟಿ ಕೊನೆಗೆ ಇರುವ ಒಂದೇ ಪ್ರವೇಶದ್ವಾರದ ಮೂಲಕ ಖೆಡ್ಡ ಆವರಣದೊಳಕ್ಕೆ ಅವನ್ನು ನುಗ್ಗಿಸಿ ಕೂಡಿಡಲಾಗುತ್ತದೆ. ಆನೆಗಳು ನದಿಯಲ್ಲಿ ಸಾಗುವಾಗ ಆಚೀಚೆ ಹೋಗದಂತೆಯೂ ನದಿಯ ದಡವನ್ನು ಹತ್ತಿ ತಪ್ಪಿಸಿಕೊಳ್ಳದಂತೆಯೂ ನದಿಯ ಎರಡು ದಡಗಳುದ್ದಕ್ಕೂ ಜನ ನಿಂತು ಸದ್ದು ಮಾಡುತ್ತಿರುತ್ತಾರೆ. ಖೆಡ್ಡ ಆವರಣದೊಳಕ್ಕೆ ಆನೆಗಳ ಹಿಂಡು ಸಂಪೂರ್ಣವಾಗಿ ನುಗ್ಗಿದೊಡನೆ ಬಾಗಿಲನ್ನು ಮುಚ್ಚಿ ಭದ್ರಪಡಿಸಿಬಿಡುತ್ತಾರೆ. ಕೂಡಲೆ ಕಂದಕದ ಹೊರಭಾಗದ ಬಳಿ 14ಮೀ. ಗಳಿಗೊಬ್ಬನಂತೆ ಆಳುಗಳು ನಿಂತು ಕಾಯತೊಡಗುತ್ತಾರೆ. ಬೆಂಕಿಯನ್ನು ಉರಿಸುವುದು ಮತ್ತು ಬಿದಿರಿನ ಕಡಕುಗಳಿಂದಲೂ ತಮಟೆಗಳಿಂದಲೂ ಗದ್ದಲ ಮಾಡುವುದು ಏಕಪ್ರಕಾರ ನಡೆಯುತ್ತಲೇ ಇರುತ್ತದೆ.

ಆನೆಗಳನ್ನು ಖೆಡ್ಡ ಆವರಣದೊಳಕ್ಕೆ ಸೇರಿಸಿದ ಮೇಲೆ ಅವಕ್ಕೆ ಸಮೃದ್ಧಿಯಾಗಿ ಮೇವನ್ನೂ ನೀರನ್ನೂ ಒದಗಿಸುತ್ತಿದ್ದು ಒಂದೆರಡು ದಿನಗಳ ಅನಂತರ ಇಲ್ಲವೆ ಇನ್ನೂ ಹೆಚ್ಚು ಕಾಲದ ಮೇಲೆ ಅವುಗಳಲ್ಲಿ ಕೆಲವನ್ನು ಆವರಣದಿಂದ ಹೊರಕ್ಕೆ ಬಿಟ್ಟುಕೊಂಡು ಅವುಗಳ ಕಾಲು ಮತ್ತು ಕೊರಳುಗಳಿಗೆ ಭಾರಿ ಭಾರಿ ಹಗ್ಗಗಳನ್ನು ಬಿಗಿದು ಅಲ್ಲಿಂದ ಸಾಗಿಸಿಕೊಂಡು ಹೋಗಿ ಮರಗಳಿಗೆ ಕಟ್ಟಿಹಾಕುವ ಕಾರ್ಯ ನಡೆಯುತ್ತದೆ. ಇದಕ್ಕಾಗಿ ಖೆಡ್ಡ ಆವರಣದ ಬಾಗಿಲಿಂದ ಮುಂದೆ, ಹೊರಭಾಗದಲ್ಲಿ ಕಿರಿದಾದ ಆವರಣವೊಂದನ್ನು ನಿರ್ಮಿಸಲಾಗುತ್ತದೆ. ಈ ಆವರಣಕ್ಕೆ ಹಗ್ಗ ಬಿಗಿಯುವ ಜಾಗ (ರೋಪಿಂಗ್ ಸ್ಟಾಕೇಡ್) ಎಂದು ಹೆಸರು. ಸು.38.1ಮೀ. ಒಳ ಸುತ್ತಳತೆಯುಳ್ಳ ಜಾಗವಿದು. ಇದರ ಸುತ್ತ ಮೂರು ಮೂರು ವರಸೆಗಳಲ್ಲಿ ಭಾರಿ ಮರದ ಕಂಬಗಳನ್ನು ಆಳವಾಗಿ ಹೂಳಲಾಗಿರುತ್ತದೆ. ಇದೇ ಗಾತ್ರದ ಮರಗಳನ್ನು 1.5ಮೀ. ಅಂತರಕ್ಕೊಂದರಂತೆ ಅಡ್ಡಡ್ಡಲಾಗಿ ಹಗ್ಗಗಳಿಂದ ಬಿಗಿದು ಭದ್ರಗೊಳಿಸಿರುತ್ತಾರೆ. ಇದರ ಒಟ್ಟು ಎತ್ತರ ಸು.4.6ಮೀ. ಇರುತ್ತದೆ. ಇದರ ಮೇಲ್ಭಾಗದಲ್ಲಿ ವೀಕ್ಷಕರು ಕುಳಿತು ಆನೆಗಳಿಗೆ ಹಗ್ಗ ಬಿಗಿಯುವ ಸಾಹಸಕಾರ್ಯವನ್ನು ನೋಡಲು ಅನುಕೂಲವಾಗುವಂತೆ 1.8ಮೀ. ಅಗಲದ ಅಟ್ಟಣೆಯೊಂದನ್ನು ನಿರ್ಮಿಸಲಾಗಿರುತ್ತದೆ.

**ಹಗ್ಗಗಳಿಂದ ಬಿಗಿಯುವುದು :** ಒಂದು ಸಲಕ್ಕೆ 4ರಿಂದ 6 ಆನೆಗಳನ್ನು ಬೇರ್ಪಡಿಸಿ, ಹಗ್ಗ ಬಿಗಿಯುವ ಆವರಣದೊಳಕ್ಕೆ ಸಾಗಿಸಲಾಗುತ್ತದೆ. ಕಬ್ಬಿನ ಜಲ್ಲೆ, ಬೆಲ್ಲ, ಸೊಪ್ಪುಸದೆಗಳ ಆಸೆ ತೋರಿಸಿ ಆನೆಗಳನ್ನು ಹಗ್ಗ ಕಟ್ಟುವ ಸ್ಥಳಕ್ಕೆ ಕರದೊಯ್ಯುತ್ತಾರೆ. ಹಗ್ಗ ಬಿಗಿಯುವ ಆವರಣಮುಖದಲ್ಲೂ ದಪ್ಪನಾದ ಬಾಗಿಲು ಇರುತ್ತದೆ. ಆನೆಗಳು ಈ ಆವರಣದೊಳಕ್ಕೆ ಬಂದಕೂಡಲೆ ಬಾಗಿಲನ್ನು ಮುಚ್ಚಿ ಹಗ್ಗದಿಂದ ಬಿಗಿದು ಭದ್ರಮಾಡುತ್ತಾರೆ. ಕಾಡಾನೆಗಳ ಜೊತೆಗೆ 8-10 ಕುಮ್ಕಿ (ಪಳಗಿದ) ಆನೆಗಳನ್ನೂ ಒಳಕ್ಕೆ ಸಾಗಿಸುತ್ತಾರೆ. ಕುಮ್ಕಿ ಆನೆಗಳ ಮೇಲೆ ಪರಿಣತರಾದ ಮಾವುತರು ಕುಳಿತು ಕಾಡಾನೆಗಳನ್ನು ಎಲ್ಲ ದಿಕ್ಕುಗಳಿಂದಲೂ ಒತ್ತಿ ಅವು ಪುಂಡಾಟ ಮಾಡದಂತೆ ನೋಡಿಕೊಳ್ಳುತ್ತಾರೆ. ಕಾಡಾನೆಗಳಿಗೆ ಹಗ್ಗ ಬಿಗಿಯುವ ಕಲೆಯಲ್ಲಿ ವಿಶೇಷ ಶಿಕ್ಷಣ ಹೊಂದಿರುವ ಅನುಭವಶಾಲಿಗಳಾದ ಇನ್ನೂ ಕೆಲವು ಮಾವುತರು ಹಗ್ಗ ಬಿಗಿಯುವ ಆವರಣದ ಕಂಬಗಳಲ್ಲಿನ ಕಿಂಡಿಗಳಲ್ಲಿ ಮರೆಮಾಡಿಕೊಂಡಿದ್ದು ಪಳಗಿದ ಆನೆಗಳ ಮಧ್ಯೆ ಇರುವ ಕಾಡಾನೆಗಳ ಹಿಂಗಾಲುಗಳಿಗೆ ಹೆಬ್ಬೆರಳು ಗಾತ್ರದ ನೂಲುಹಗ್ಗಗಳಿಂದ ಹಲವು ವರಸೆಗಳ ತೊಡಕನ್ನು ಬಿಗಿಯುತ್ತಾರೆ. ಈ ಕಾರ್ಯಕ್ಕೆ ಅನುಕೂಲವಾಗಲೆಂದು ಹಗ್ಗಗಳಿಂದ ಸಡಿಲವಾದ ಕುಣಿಕೆಗಳನ್ನು ಮಾಡಿಕೊಂಡು ಮೊದಲೇ ಆವರಣದ ನೆಲದಮೇಲೆ ಹಾಕಲಾಗಿರುತ್ತದೆ. ಕುಮ್ಕಿ ಆನೆಗಳ ಸಹಾಯದಿಂದ ಕಾಡಾನೆಗಳನ್ನು ಒತ್ತರಿಸಿ ಕುಣಿಕೆಗಳೊಳಕ್ಕೆ ಕಾಲಿಡುವಂತೆ ಮಾಡಲಾಗುತ್ತದೆ. ಜಾಗರೂಕತೆಯಿಂದ ಗಮನಿಸುತ್ತಿರುವ ಮಾವುತರು ಅವು ಕಾಲಿಟ್ಟ ತತ್‌ಕ್ಷಣ ಕುಣಿಕೆಗಳನ್ನು ಎಳೆದು ಬಿಗಿಯುತ್ತಾರೆ. ಅನಂತರ ರಟ್ಟೆಗಾತ್ರದ ಹಗ್ಗಗಳನ್ನು ಇದೇ ರೀತಿ ಬಿಗಿಯಲಾಗುತ್ತದೆ. ಆನೆಗೆ ಗೊತ್ತಾಗದೆ ಇರುವಷ್ಟು ಕೈಚಳಕದಿಂದ ಚತುರತೆಯಿಂದ ಈ ಕೆಲಸ ನಡೆಯುತ್ತದಾದರೂ ಬಂಧನಕ್ಕೊಳಗಾಗಬೇಕೆಂಬ ಸುಳಿವನ್ನು ತಿಳಿದು ಆನೆಗಳು ಭಯಾನಕವಾಗಿ

ಘೀಳಿಡುತ್ತ ರೋಷದಿಂದ ಆವರಣದ ಕಂಬಗಳಿಗೆ ಡಿಕ್ಕಿ ಹೊಡೆದು ವಿರೋಧವನ್ನು ಪ್ರದರ್ಶಿಸುತ್ತವೆ. ಕಾಲುಗಳನ್ನು ಕಟ್ಟಿಹಾಕಿದ ಮೇಲೆ ಕುಮ್ಕಿ ಆನೆಗಳ ಸಹಾಯದಿಂದ ಆನೆಗಳ ಕೊರಳಿಗೆ ಹಗ್ಗವನ್ನು ಬಿಗಿಯಲಾಗುತ್ತದೆ. ಕಾಡಾನೆಗಳಿಗೆ ಹಗ್ಗ ಬಿಗಿಯುವ ಕಾರ್ಯ ಬಲು ಜಾಣ್ಮೆಯ ಕೆಲಸ. ಪಳಗಿದ ಆನೆ ಮತ್ತು ಮಾವುತರ ನಡುವೆ ಹೊಂದಾಣಿಕೆಯಿರಬೇಕು. ಯಾವನೊಬ್ಬನೂ ಅಲಕ್ಷ್ಯದಿಂದ ಇರಬಾರದು. ಇಲ್ಲವಾದರೆ ಮಾರಕ ಪರಿಣಾಮಗಳಾಗಬಹುದು.

ಹೀಗೆ ಎಲ್ಲ ಆನೆಗಳನ್ನೂ ಬಂಧಿಸಿದ ಅನಂತರ ಅವನ್ನು ಪಳಗಿದ ಆನೆಗಳಿಗೆ ಕಟ್ಟಿ ಎಳೆದುಕೊಂಡು ಹೋಗಿ, ಹೊರಕ್ಕೆ ಸಾಗಿಸಿ ಒಳ್ಳೆಯ ನೆರಳಿರುವ ಸ್ಥಳಗಳಲ್ಲಿ ದೊಡ್ಡ ಮರಗಳಿಗೆ ಬೇರೆ ಬೇರೆಯಾಗಿ ಕಟ್ಟಿಹಾಕಲಾಗುತ್ತದೆ. ಇಂಥ ಸ್ಥಳಕ್ಕೆ ಪೀಲ್‌ಖಾನ ಎಂದು ಹೆಸರು. ಹೀಗೆ ಆನೆಗಳನ್ನು ಕಟ್ಟಿಹಾಕಿದ ಮೇಲೆ ಅವು ಬಂಧನದಿಂದ ಪಾರಾಗಲು ಎಳೆದಾಡುತ್ತವೆ. ಎಳೆದಾಡುವ ರಭಸದಲ್ಲಿ ಹಗ್ಗಗಳು ಒತ್ತಿ ಕಾಲಿನ ಚರ್ಮ ಕಿತ್ತು ಹುಣ್ಣಾಗುವ ಸಂಭವ ಉಂಟು. ಆಗ ತಕ್ಕ ಚಿಕಿತ್ಸೆಯನ್ನು ನಡೆಸಿ ಆನೆಗಳಿಗೆ ಊನವಾಗದಂತೆ ನೋಡಿಕೊಳ್ಳಲಾಗುತ್ತದೆ. ಅನಂತರ ಸೆರೆಹಿಡಿದ ಆನೆಗಳನ್ನು ಕುಮ್ಕಿ ಆನೆಗಳ ಸಹಾಯದಿಂದ ದಿನವೂ ನದಿ ಇಲ್ಲವೆ ಯಾವುದಾದರೂ ನೀರಿನ ನೆಲೆಗೆ ಕರೆದೊಯ್ದು ಅವು ನೀರಿನಲ್ಲಿ ವಿರಮಿಸುವಂತೆ ಮಾಡಲಾಗುತ್ತದೆ. ಈ ಕಾಲದಲ್ಲಿ ಅವಕ್ಕೆ ಯಥೇಷ್ಟವಾಗಿ ಸೊಪ್ಪನ್ನೂ ಹುಲ್ಲನ್ನೂ ಹಾಕಲಾಗುತ್ತದೆ. ಜೊತೆಗೆ ರಾಗಿಮುದ್ದೆ, ಕಬ್ಬಿನ ಜಲ್ಲೆ, ಬೆಲ್ಲ ಮುಂತಾದುವನ್ನು ತಿನ್ನಿಸುತ್ತಾರೆ. ಕಾಡಾನೆಗಳನ್ನು ಬಂಧಿಸುವ ಕಾರ್ಯ ಮುಗಿದ ದಿನದಿಂದಲೇ ಅವನ್ನು ಪಳಗಿಸುವ ಕಾರ್ಯ ಆರಂಭವಾಗುತ್ತದೆ. ನಿಧಾನವಾಗಿಯೂ ಕ್ರಮಕ್ರಮವಾಗಿಯೂ ನಡೆಯುವ ಈ ಕಾರ್ಯದಲ್ಲಿ ಅನುಭವಿಗಳಾದ ಮಾವುತರು ಬುದ್ಧಿವಂತಿಕೆಯಿಂದ ಚತುರತೆಯಿಂದ ಕಾರ್ಯನಿರ್ವಹಿಸುತ್ತಾರೆ.

ಪಳಗಿಸುವಿಕೆಯಲ್ಲಿ ಎರಡು ವಿಧಾನಗಳುಂಟು. ಒಂದು ವಿಧಾನದಲ್ಲಿ ಹಲವಾರು ಅಂಕಣಗಳುಳ್ಳ ಒಂದು ಮರದ ಕಟಕಟೆಯನ್ನು ಕಟ್ಟಲಾಗುತ್ತದೆ. ಒಂದೊಂದು ಅಂಕಣವೂ ಸೆರೆಹಿಡಿದ ಆನೆಯ ಗಾತ್ರಕ್ಕಿಂತ ಕೊಂಚ ದೊಡ್ಡದಾಗಿರುತ್ತದೆ. ಇದರಲ್ಲಿ ಆನೆ ಮಂಡಿಯೂರಿ ಕುಳಿತುಕೊಳ್ಳಲು ಮತ್ತು ನಿದ್ದೆ ಮಾಡಲು ಮಾತ್ರ ಸಾಕಾಗುವಷ್ಟು ಅವಕಾಶವಿರುತ್ತದೆ. ಇಂಥ ಅಂಕಣದೊಳಕ್ಕೆ ಒಂದು ಆನೆಯನ್ನು ಹೊಗಿಸಿ ಹಲವಾರು ದಿನಗಳು ಅದು ಅಲ್ಲಿಯೇ ಇರುವಂತೆ ಮಾಡಲಾಗುತ್ತದೆ. ಅದಕ್ಕೆ ಮೇವು ಮತ್ತು ನೀರನ್ನು ಅಲ್ಲಿಯೇ ಒದಗಿಸಲಾಗುತ್ತದೆ. ಪ್ರತಿನಿತ್ಯ 3-4 ಜನ ಅಂಕಣದೊಳಕ್ಕೆ ಸೇರಿಸಲ್ಪಟ್ಟ ಆನೆಯ ಮೈಯನ್ನು ತೆಂಗಿನ ಜುಂಗಿನಿಂದ ಉಜ್ಜುತ್ತಾರೆ. ಮಾನವಸ್ಪರ್ಶಕ್ಕೆ ಆನೆ ಒಗ್ಗಿಕೊಳ್ಳಲೆಂಬುದೇ ಇದರ ಉದ್ದೇಶ. ಕ್ರಮೇಣ ಅದರ ಬೆನ್ನಮೇಲೆ ಕುಳಿತುಕೊಳ್ಳುವ ಅಭ್ಯಾಸವೂ ನಡೆಯುತ್ತದೆ. ಅನಂತರ ಪ್ರತಿದಿನವೂ ಆನೆಯನ್ನು ಒಂದೆರಡು ಪಳಗಿದ ಆನೆಗಳ ಸಹಾಯದಿಂದ (ಆದರೆ ಅದಕ್ಕೆ ಇದನ್ನು ಬಂಧಿಸದೆ) ಹೊರತಂದು ಕೊಂಚ ದೂರ ಕರೆದೊಯ್ಯುತ್ತಾರೆ. ಹೀಗೆ 3-4 ತಿಂಗಳುಗಳು ಮಾಡಿದ ಮೇಲೆ ಅದಕ್ಕೆ ಕೆಲವು ಹಗುರವಾದ ಕೆಲಸಗಳನ್ನು ಕೊಟ್ಟು ಮಾಡಿಸುತ್ತಾರೆ. ಕಾಡಾನೆಯ ಎದುರಿನಲ್ಲಿ ಪಳಗಿದ ಆನೆಗಳಿಂದ ಆ ಕೆಲಸವನ್ನು ಮಾಡಿಸಿ ಅದು ಅವನ್ನು ಅನುಕರಿಸುವಂತೆ ಮಾಡುತ್ತಾರೆ.

ಇನ್ನೊಂದು ವಿಧಾನ ಒರಟಾದುದು ಮತ್ತು ಹೆಚ್ಚು ಸಮಯ ಹಿಡಿಯುವಂಥದು. ಇದರಲ್ಲೂ ಮೇಲೆ ಹೇಳಿದ ರೀತಿಯಲ್ಲೇ ಪಳಗಿಸುವ ಕ್ರಮ ನಡೆಯುವುದಾದರೂ ಆನೆಯನ್ನು ಮರಕ್ಕೆ ಕಟ್ಟಿಹಾಕಿರುತ್ತಾರೆ.

ಪ್ರೌಢ ವಯಸ್ಸಿನ ಆನೆಗಳನ್ನು ಪಳಗಿಸಲು 6 ತಿಂಗಳಿನಿಂದ ವರ್ಷದ ವರೆಗೆ ಬೇಕಾಗುತ್ತದೆ. 6' ಗಳಿಗೂ ಕಡಿಮೆ ಎತ್ತರದ ಕಿರಿ ವಯಸ್ಸಿನ ಆನೆಗಳನ್ನು ಪಳಗಿಸಲು 3-4 ತಿಂಗಳು ಸಾಕು. ಹೆಚ್ಚು ವಯಸ್ಸಾದವು ಪಳಗುವುದು ಬಹಳ ಕಷ್ಟ. ಕೆಲವೊಮ್ಮೆ ಪಳಗಿಸಲು ಸಾಧ್ಯವೇ ಇಲ್ಲ ಎನ್ನಬಹುದು. ಇಂಥವನ್ನು ಸಾಮಾನ್ಯವಾಗಿ ಕಾಡಿನೊಳಕ್ಕೆ ಬಿಟ್ಟು ಬಿಡುತ್ತಾರೆ. (ಎನ್.ಎಸ್.ಕೆ.)

**ಖೊಟ್ಟಿಗ** : ರಾಷ್ಟ್ರಕೂಟ ವಂಶದ ದೊರೆ (ಸು.967-72). ಮುಮ್ಮಡಿ ಕೃಷ್ಣನ ತಮ್ಮ ಮತ್ತು ಉತ್ತರಾಧಿಕಾರಿ. ನಿತ್ಯವರ್ಷ ಎಂಬುದು ಇವನ ಬಿರುದು. ಇವನ ಆಳಿಕೆಯ ಆರಂಭ ಸುಗಮವಾಗಿದ್ದರೂ ಅಂತ್ಯದಲ್ಲಿ ಮಹಾ ದುರ್ಘಟನೆಯೊಂದು ಇವನಿಗೆ ಕಾದಿತ್ತು. ಹಿಂದೆ ಮುಮ್ಮಡಿ ಕೃಷ್ಣನಿಂದ ಪರಾಭವಗೊಂಡಿದ್ದ ಪರಮಾರ ರಾಜ ಸೀಯಕ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದ್ದ. ಬಲಿಷ್ಠನಾಗಿದ್ದ ಕೃಷ್ಣನ ಮರಣಾನಂತರ ಬಂದ ಈ ಹೊಸ ರಾಜನ ಸತ್ವ ಪರೀಕ್ಷಿಸಲೋ ಎಂಬಂತೆ ಇವನ ರಾಜ್ಯದ ಉತ್ತರ ಗಡಿಗಳ ಮೇಲೆ ದಾಳಿಮಾಡಿದ. ರಾಷ್ಟ್ರಕೂಟ ಸೈನ್ಯ ಅವನಿಗೆ ನರ್ಮದಾ ನದಿಯನ್ನು ದಾಟಲು ಅವಕಾಶ ಕೊಡಲಿಲ್ಲ. ಧೃತಿ ಗೆಡದ ಸೀಯಕ ಬಲ ಕೂಡಿಸಿಕೊಂಡು ಪುನಃ ಪ್ರಯತ್ನಿಸಿದ. ಖೊಟ್ಟಿಗ ತನಗೆ ನೆರವಾಗುವಂತೆ ಗಂಗರಾಜ ಮಾರಸಿಂಹನಿಗೆ ಕರೆಕಳುಹಿಸಿದ. ಮಾರಸಿಂಹನ ನೆರವು ತಲಪುವ ವೇಳೆಗೆ ಸೀಯಕ ರಾಷ್ಟ್ರಕೂಟ ರಾಜಧಾನಿಯಾದ ಮಾನ್ಯಖೇಟವನ್ನು ಆಕ್ರಮಿಸಿ (972) ಲೂಟಿ ಹೊಡೆದು, ರಾಜ್ಯದ ಬೊಕ್ಕಸವನ್ನು ಸೂರೆಮಾಡಿ, ದಫ್ತರ ಕಚೇರಿಯಲ್ಲಿದ್ದ ತಾಮ್ರ ಪಟಗಳನ್ನೂ ಹೊತ್ತುಕೊಂಡು ಹೋದ. ಅನಂತರ ಮಾರಸಿಂಹನ ಹೊಡೆತದಿಂದಲೋ ಅಥವಾ ಸ್ವಇಚ್ಛೆಯಿಂದಲೋ ಪರಮಾರರು ರಾಷ್ಟ್ರಕೂಟ ರಾಜ್ಯದಿಂದ ನಿರ್ಗಮಿಸಿದರು. ಆದರೆ ಈ ಅಪಕೀರ್ತಿ ಮತ್ತು ರಾಜ್ಯಕ್ಕೊದಗಿದ ವಿಪತ್ತಿನಿಂದ ಭಗ್ನಹೃದಯಿಯಾದ ಖೊಟ್ಟಿಗ ಅನತಿಕಾಲದಲ್ಲಿ ಸತ್ತ (972). ಈ ಯುದ್ಧದ ಪರಿಣಾಮವಾಗಿ ಗುಜರಾತಿನ ಉತ್ತರ ಭಾಗ ರಾಷ್ಟ್ರಕೂಟರ ಕೈಬಿಟ್ಟು ಹೋಯಿತು. ಇವನಿಗೆ ಮಕ್ಕಳಿಲ್ಲದ್ದರಿಂದ ಇವನ ತಮ್ಮ ನಿರುಪಮನ ಮಗ ಇಮ್ಮಡಿ ಕರ್ಕ ಅನಂತರ ಪಟ್ಟಕ್ಕೆ ಬಂದ. (ಎಚ್.ವಿ.ಎಸ್.,ಕೆ.ವಿ.ವಿ.)

**ಖೋಲೇಶ್ವರ** : ಸೇವುಣ ಸಿಂಘಣನ (1199-1247) ಮಂತ್ರಿ. ಸಿಂಘಣನ ಸಾಮ್ರಾಜ್ಯವಿಸ್ತಾರ ಕಾರ್ಯದಲ್ಲಿ ಪ್ರಧಾನಪಾತ್ರ ವಹಿಸಿದವ.

ಅಂಬೆಜೋಗೈ ಎಂಬಲ್ಲಿ ದೊರಕಿರುವ ಶಾಸನಗಳು ಖೋಲೇಶ್ವರನ ವಿಷಯಗಳನ್ನು ತಿಳಿಸುತ್ತವೆ. ಈತ ಮೌದ್ಗಲ್ಯ ಗೋತ್ರದ ಬ್ರಾಹ್ಮಣ. ತಂದೆ ತ್ರಿವಿಕ್ರಮ, ತಾಯಿ ಕಾಶ್ಯಪ ಗೋತ್ರದ ಚಂದ್ರಾ. ಸಿಂಘಣ ಗುಜರಾತ್ ದಂಡಯಾತ್ರೆಯನ್ನು ಯೋಜಿಸಿದ ಕಾಲದಲ್ಲಿ ಸೈನ್ಯದ ನೇತೃತ್ವವನ್ನು ವಹಿಸಿದ್ದ ಖೋಲೇಶ್ವರ ಮೊದಲು ಲಾಟ ದೇಶಕ್ಕೆ ನುಗ್ಗಿ (ಸು.1216-17) ಸಿಂಹ ಮತ್ತು ಸಿಂಧುರಾಜರನ್ನು ಕೊಂದು, ಶಂಖ ಎಂಬುವನನ್ನು ಸೆರೆಹಿಡಿದ. ಬ್ರೋಚ್ ನಗರವನ್ನು ವಶಮಾಡಿಕೊಂಡು ಸಮುದ್ರತೀರದಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದ. ಇದರಿಂದ ಉತ್ತೇಜಿತನಾದ ಇವನು ಗುಜರಾತಿಗೆ ನುಗ್ಗುವ ಸನ್ನಾಹ ನಡೆಸಿದ. ಪರಮಾರ ದೊರೆ ದೇವಪಾಲನನ್ನು ಸೋಲಿಸಿ, ಸೇವುಣರಿಗೆ ಅಧೀನನನ್ನಾಗಿ ಮಾಡಿದ. ಅಲ್ಲಿಂದ ಮುಂದೆ ಚಾಳುಕ್ಯ ರಾಜಧಾನಿಗೆ ಮುತ್ತಿಗೆ ಹಾಕಿದ. ದಾರಿಯಲ್ಲಿ ಸೇವುಣ ಸೈನ್ಯ ಸಾಕಷ್ಟು ಕಷ್ಟನಷ್ಟಗಳನ್ನುಂಟುಮಾಡಿತು. ಇಂಥ ಪ್ರಸಿದ್ಧ ಸೇನಾಪತಿಯ ಸೈನ್ಯವನ್ನು ಎದುರಿಸುವುದು ಕಷ್ಟವೆಂದು ತಿಳಿದ ಚಾಳುಕ್ಯ ದಂಡನಾಯಕ ಲವಣಪ್ರಸಾದ ಸೇವುಣರೊಡನೆ ಸಂಧಿ ಮಾಡಿಕೊಂಡ. ಉತ್ತರದ ವಿಜಯಗಳನ್ನು ಪೂರೈಸಿಕೊಂಡು ಹಿಂದಿರುಗುವ ಮಾರ್ಗದಲ್ಲಿ ಇವನು ಅನೇಕ ಸಣ್ಣಪುಟ್ಟ ರಾಜರುಗಳನ್ನೂ ಜಯಿಸಿದ. ಚಾಹಂದದಲ್ಲಿ (ಮಹಾರಾಷ್ಟ್ರದ ಚಾಂದ) ಆಳುತ್ತಿದ್ದ ಪರಮಾರ ದೊರೆ ಭೋಜ, ಭಂಭಗಿರಿಯಲ್ಲಿ (ಮಹಾರಾಷ್ಟ್ರದ ಭಾಮೆರ್) ಆಳುತ್ತಿದ್ದ ಲಕ್ಷ್ಮೀದೇವ, ಕಾಶಿಯ ರಾಮಪಾಲ ಮತ್ತು ಹೆಮ್ಮಡಿ, ನಾಗಣ್ಣ ಮುಂತಾದವರು ಇವನಿಂದ ಪರಾಜಿತರಾದ ರಾಜರು.

ಇವನು ಅಚಲಪುರದಲ್ಲಿ ವಿಷ್ಣುದೇವಾಲಯವನ್ನು ಕಟ್ಟಿಸಿದ. ಬಹುಶಃ ಕೊಲ್ಲಾಪುರ ನಗರವನ್ನು ಅಭಿವೃದ್ಧಿಪಡಿಸಿದ. ಈ ಎಲ್ಲ ಮಹತ್ಕಾರ್ಯಗಳಿಂದ ಇವನು ಸೇವುಣರ ಇತಿಹಾಸದಲ್ಲಿ ಮಾತ್ರವಲ್ಲದೆ ಸಮಕಾಲೀನ ಕರ್ನಾಟಕ ಚರಿತ್ರೆಯಲ್ಲೇ ಅತ್ಯಂತ ಸಮರ್ಥ, ದಕ್ಷ ಮಂತ್ರಿ ಮತ್ತು ಸೇನಾಪತಿ ಎಂದು ಹೇಳಬಹುದು.

ಇವನ ಮಗ ರಾಮ. ಈತ ಇವನ ಮರಣಾನಂತರ ಸು.1240ರಲ್ಲಿ ಗುಜರಾತಿಗೆ ಸೇವುಣ ಸೈನ್ಯವನ್ನು ಕೊಂಡೊಯ್ದು ಅಲ್ಲಿಯ ಯುದ್ಧದಲ್ಲಿ ಮೃತನಾದ. (ಎ.ವಿ.ಎನ್.)

**ಖ್ಯಾಡ್ :** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಆಗ್ನೇಯಕ್ಕೆ 8ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಎಡದಂಡೆಯ ಮೇಲಿರುವ ಒಂದು ಗ್ರಾಮ. ಇಲ್ಲಿನ ಆದಿಶಿಲಾಯುಗದ ಸಂಸ್ಕೃತಿಯ ನೆಲೆಯಿಂದ ಪ್ರಸಿದ್ಧವಾಗಿದೆ.

ರಾಬರ್ಟ್ ಬ್ರೂಸ್‌ಫುಟ್ 19ನೆಯ ಶತಮಾನದ ಅಂತ್ಯಭಾಗದಲ್ಲಿ ಇಲ್ಲಿ ಶಿಲಾಯುಗಕ್ಕೆ ಸೇರಿದ ಆಯುಧಗಳನ್ನು ಸಂಗ್ರಹಿಸಿದ. 1949-50 ರಲ್ಲಿ ಮರು ಸಂಶೋಧನೆ ನಡೆಸಿದಾಗ ಆ ನೆಲೆಯ ಶಿಲಾಯುಗ ಸಂಸ್ಕೃತಿಯ ಪೂರ್ಣ ಮಾಹಿತಿಗಳು ಮತ್ತು ಅವುಗಳ ಕಾಲನಿರ್ದೇಶನಕ್ಕೆ ಸಹಾಯಕವಾದ ಭೂವೈಜ್ಞಾನಿಕ ಆಧಾರಗಳು ತಿಳಿದುಬಂದುವು. ಖ್ಯಾಡ್ ಬಳಿಯಿರುವ ನದಿಯ ತಿರುವಿನಲ್ಲಿ ಸಂಗ್ರಹವಾಗಿರುವ ವಿಸ್ತಾರವಾದ ಉಂಡೆಕಲ್ಲುಗಳ ಸ್ತರಗಳಲ್ಲಿ ನೂರಾರು ಸಂಖ್ಯೆಯಲ್ಲಿ ಕಲ್ಲಿನ ಆಯುಧಗಳು ಕಂಡುಬಂದಿವೆ. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಆಯುಧಗಳು ದೊರಕುವುದರಿಂದ ಖ್ಯಾಡ್ ಆದಿಶಿಲಾಯುಗದ ಆಯುಧ ತಯಾರಿಕಾ ಕೇಂದ್ರವೆಂದು ಖಚಿತವಾಗುತ್ತದೆ. ಇಲ್ಲಿ ದೊರಕಿದ ಆಯುಧೋಪಕರಣಗಳಲ್ಲಿ ವಿವಿಧ ರೀತಿಯ ಕೈಕೊಡಲಿಗಳು, ಕ್ಲೀವರ್‌ಗಳು, ಚಕ್ಕೆಕಲ್ಲಿನ ಆಯುಧಗಳು, ಹೆರೆಯುವ ಆಯುಧಗಳು ಮುಖ್ಯವಾದವು. ಈ ಪ್ರದೇಶದಲ್ಲಿ ಉಂಡೆಕಲ್ಲಿನಲ್ಲಿ ಮಾಡಿದ ಆಯುಧಗಳಿಗಿಂತ ಚಕ್ಕೆ ಕಲ್ಲುಗಳ ಮೇಲೆ ಮಾಡಿದ ಆಯುಧಗಳು ಅಧಿಕವಾಗಿವೆ. ಇಲ್ಲಿನ ಕಲ್ಲಿನ ಆಯುಧಗಳು ಪೂರ್ವಶಿಲಾಯುಗದ ಅಬ್ಬೆವಿಲಿಯನ್ ಮತ್ತು ಅಷ್ಯೂಲಿಯನ್ ಕೈಕೊಡಲಿ ಸಂಸ್ಕೃತಿಗಳ ಹಂತಕ್ಕೆ ಸೇರುತ್ತವೆ. ಲೆವಾಲಾಸಿಯನ್ ಸಂಸ್ಕೃತಿ ಹಂತಕ್ಕೆ ಸೇರುವ ಚಕ್ಕೆ ಕಲ್ಲಿನ ಆಯುಧಗಳೂ ಇಲ್ಲಿ ವಿಶೇಷವಾಗಿವೆ. (ಬಿ.ಕೆ.ಜಿ.)

**ಖ್ಯಾತ ಕರ್ಣಾಟಕಗಳು :** ಕನ್ನಡ ಭಾಷೆಯ ಶಾಸನ ಸಾಹಿತ್ಯದಲ್ಲಿಯೂ ಕಾವ್ಯಶಾಸ್ತ್ರಾದಿ ಗ್ರಂಥರಾಶಿಯಲ್ಲಿಯೂ ಇತರ ವರ್ಣವೃತ್ತಗಳಿಗಿಂತ ಹೆಚ್ಚು ಬಳಕೆಯಾಗಿರುವ ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ ಎಂಬ ಆರು ಸಮಚತುಷ್ಪದೀ ವರ್ಣವೃತ್ತಗಳನ್ನು ಈ ಹೆಸರಿಂದ ಕರೆಯುವುದು ರೂಢಿಯಾಗಿದೆ. ಈ ಮಾತಿಗೆ ಮೂಲವಾವುದು ಎಂಬುದು ವಿಚಾರಣೀಯ.

ನಾಗವರ್ಮನ (ಸು.990) ಛಂದೋಂಬುಧಿಯ ಕೆಲವು ಹಸ್ತಪ್ರತಿಗಳಲ್ಲಿ ಸಮವೃತ್ತವಿವರಣೆಯ ದ್ವಿತೀಯಾಧಿಕಾರದ ಅಂತ್ಯಭಾಗದಲ್ಲಿ ಹೀಗೆ ಒಂದು ಪದ್ಯವಿದೆ:

ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂಱಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತೆ ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ
ಗಿರೆ ಮತ್ತೇಭ ಲಘುದ್ವಯತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ
ಹರಿಣಾಕ್ಷೀ ಲಘು ನಾಲ್ಕು ಚಂಪಕಮಿವಾಱುಂ ಖ್ಯಾತ ಕರ್ಣಾಟಕಂ

ಈ ಪದ್ಯದಲ್ಲಿ ಪೂರ್ವೋಕ್ತವಾದ ಆರು ವೃತ್ತಗಳ ಸ್ವರೂಪವನ್ನು ಶೀಘ್ರವಾಗಿ ತಿಳಿಯುವುದಕ್ಕೆ ಅನುಸರಿಸಬಹುದಾದ ಸುಲಭೋಪಾಯವನ್ನು ಸೂಚಿಸಿದೆ. ಆದರೆ ಈ ಪದ್ಯ ಛಂದೋಂಬುಧಿಯ ಮೂಲ ಪಾಠದೊಳಗಿನದಲ್ಲ. ಈಚೆಗೆ ಯಾರೋ ಸೇರಿಸಿದ್ದು ಎಂದು ಊಹಿಸಬಹುದು. ಆ ಕಾಲದಿಂದೀಚೆಗೆ ಮೇಲಿನ ಆರು ವೃತ್ತಗಳಿಗೂ ಖ್ಯಾತ ಕರ್ಣಾಟಕಗಳು ಎಂಬ ಮಾತು ಪ್ರಚಲಿತವಾಗಿರಬೇಕು. ಆ ವೃತ್ತಗಳ ಪ್ರಸಿದ್ಧಿಗೆ ಕೆಲವು ಕಾರಣಗಳಿವೆ. ಕನ್ನಡ ಚಂಪೂಕಾವ್ಯಗಳಲ್ಲಿ ಕಂದ ಮತ್ತು ಗದ್ಯಖಂಡಗಳನ್ನು ಬಿಟ್ಟರೆ, ಬಹುವಿರಳವಾಗಿ ಬರುವ ಕೆಲವು ಅನ್ಯ ವರ್ಣವೃತ್ತಗಳು ಮತ್ತು ದೇಶ್ಯವೃತ್ತಗಳನ್ನು ಬಿಟ್ಟರೆ, ಉಳಿಯುವ ವೃತ್ತಗಳು ಎಂದರೆ ಶಾರ್ದೂಲವಿಕ್ರೀಡಿತಾದಿಗಳೇ. ಚಂಪೂ ಕಾವ್ಯವೆಂದರೆ ಮುಕ್ಕಾಲು ಪಾಲು ಕಂದ, ಕಾಲುಪಾಲು ಈ ಆರು ವೃತ್ತಗಳು ಎಂಬ ಮಾತಿದೆ. ಇಷ್ಟು ಮಾತ್ರವಲ್ಲದೆ, ಕನ್ನಡ ಶಾಸನಗಳಲ್ಲಿಯೂ ವೃತ್ತಕಂದಗಳೋ ವೃತ್ತಗಳೋ ಮಾತ್ರವೇ ಬಳಕೆಯಾಗಿರುವ ಶಾಸ್ತ್ರ ಮತ್ತು ಶತಕಗಳಂಥ ಕೃತಿಗಳಲ್ಲಿಯೂ ಈ ಆರು ವೃತ್ತಗಳಲ್ಲಿ ಯಾವುದಾದರೊಂದನ್ನೋ ಕೆಲವನ್ನೋ ಸಾಮಾನ್ಯವಾಗಿ ಬಳಸಿರುವುದು ಕಂಡುಬರುತ್ತದೆ.

ಖ್ಯಾತ ಕರ್ಣಾಟಕಗಳು ಕನ್ನಡ ಸಾಹಿತ್ಯೋದಯದ ತೀರ ಮೊದಮೊದಲಿನ ಕಾಲದಲ್ಲೇ ಸಂಸ್ಕೃತ ಭಾಷಾಸಾಹಿತ್ಯಗಳ ಪ್ರಭಾವದಿಂದಾಗಿ ರೂಢಿಗೆ ಬಂದು, ನೆಲೆ ನಿಂತು, ಅನಂತರ ಗಾಢವಾಗಿ ವ್ಯಾಪಿಸಿದಂತೆ ತೋರುತ್ತದೆ. ಸುಮಾರು ಏಳನೆಯ ಶತಮಾನದವೆಂದು ಗುರುತಿಸಿರುವ ಶ್ರವಣಬೆಳಗೊಳದ ಶಾಸನಗಳ ಕಾಲಕ್ಕಾಗಲೇ ಈ ವೃತ್ತಗಳೆಲ್ಲ ಕಂಡುಬರುತ್ತವೆ. ಕವಿರಾಜಮಾರ್ಗದಿಂದೀಚಿನ ಕೃತಿಗಳಲ್ಲಿ ಕಾಣುವುದಂತೂ ಸರಿಯೇ. ಸಂಸ್ಕೃತ ಭಾಷಾ ಮರ್ಯಾದೆಗೆ ಒಗ್ಗಿದಂಥ ಈ ವೃತ್ತಗಳು ಕನ್ನಡದ ಜಾಯಮಾನಕ್ಕೆ ಕೂಡ ಒಗ್ಗುವಂತಾದುದು ಆ ಭಾಷೆಯ ಮೇಲೆ ಸಂಸ್ಕೃತದ ವರ್ಚಸ್ಸುಎಷ್ಟರ ಮಟ್ಟಿಗೆ ಬಿದ್ದಿತೆನ್ನುವುದನ್ನು ವ್ಯಕ್ತಗೊಳಿಸುತ್ತದೆ.

ಹೆಸರಿನ ರೀತಿಯಿಂದಾಗಿ ಶಾರ್ದೂಲವಿಕ್ರೀಡಿತ- ಮತ್ತೇಭವಿಕ್ರೀಡಿತಗಳು, ಉತ್ಪಲಮಾಲೆ- ಚಂಪಕಮಾಲೆಗಳು, ಸ್ರಗ್ಧರೆ- ಮಹಾಸ್ರಗ್ಧರೆಗಳು ಸಹಜವಾಗಿಯೇ ಜೋಡಿಗೊಳ್ಳುತ್ತವೆ. ಅವು ಪ್ರಾಯಶಃ ಒಂದನ್ನೊಂದು ಹೋಲುವ ಒಂದು ಗುಂಪಿನ ವೃತ್ತಗಳಿರಬಹುದೆಂಬ ಸಂಶಯವನ್ನು ಉಂಟುಮಾಡುತ್ತವೆ. ಅವುಗಳ ಲಕ್ಷಣ ವಿಮರ್ಶೆಯಿಂದ ಆ ಸಂಶಯ ದೂರವಾಗಿ ಪರಸ್ಪರ ಸಂಬಂಧವೂ ಮನವರಿಕೆಯಾಗುತ್ತದೆ. ಅದನ್ನು ಮುಂದೆ ಗಮನಿಸಬಹುದು. ಪ್ರಸ್ತುತ, ವರ್ಣವೃತ್ತದ ಪ್ರಸ್ತಾರ ವಿಧಾನವನ್ನು ಅನ್ವಯಿಸಿ ಆ ವೃತ್ತಗಳ ಲಕ್ಷಣವನ್ನು ಸಂಸ್ಕೃತ ಹಾಗೂ ಕನ್ನಡ - ತೆಲುಗು ಛಂದೋಗ್ರಂಥಗಳಲ್ಲಿ ಸೂತ್ರರೂಪವಾಗಿಯೋ ಲಕ್ಷಣ - ಲಕ್ಷ್ಯಸಮೀಕರಣ ರೂಪವಾಗಿಯೋ ವಿವರಿಸಿರುವುದು ಕಂಡುಬರುತ್ತದೆ. ಶಾರ್ದೂಲವಿಕ್ರೀಡಿತ, ಚಂಪಕಮಾಲೆ ಮತ್ತು ಸ್ರಗ್ಧರೆಗಳ ಲಕ್ಷಣವನ್ನು ಪಿಂಗಲಾದ್ಯರೂ ಮತ್ತೇಭವಿಕ್ರೀಡಿತ, ಉತ್ಪಲಮಾಲೆ ಮತ್ತು ಮಹಾಸ್ರಗ್ಧರೆಗಳ ಲಕ್ಷಣವನ್ನು ಜಯಕೀರ್ತ್ಯಾದ್ಯರೂ ತಂತಮ್ಮ ಛಂದೋಗ್ರಂಥಗಳಲ್ಲಿ ವಿವರಿಸಿದ್ದಾರೆ. ಆದರೆ ಮೊದಲ ಮೂರರ ವಿವರಣೆಗೆ ದೊರೆತಿರುವ ಸ್ಥಾನ ಉಳಿದವುಗಳಿಗಿಲ್ಲ. ಮತ್ತೇಭ ಮೊದಲಾದ ಮೂರು ವೃತ್ತಗಳಿಗೆ ತಕ್ಕ ಪ್ರಾಚುರ್ಯವಾಗಲಿ ಪರಂಪರೆಯಾಗಲಿ ಸಂಸ್ಕೃತ ಸಾಹಿತ್ಯದಲ್ಲಿ ಇಲ್ಲದಿರುವುದೇ ರವಿಕೀರ್ತಿ ಕೃತವಾದ ಐಹೊಳೆಯ ಶಿಲಾಶಾಸನದಲ್ಲಿ (634) ಬರುವ ವರದಾತುಙ್ಗತರಙ್ಗ ರಙ್ಗ ವಿಲಸದ್ಧಂಸಾವಲೀ ಮೇಖಲಾಂ ಎಂಬುದಾಗಿ ಆರಂಭವಾಗುವ ಒಂದು ವೃತ್ತ ಮತ್ತು ವೆಂಕಟಾಧ್ವರಿಯ (1634) ಲಕ್ಷ್ಮೀಸಹಸ್ರನಾಮದೊಳಗಿನ ಕ್ಷಿಪತು ಕ್ಷಿಪ್ರಮನಲ್ಪಮಪ್ರತಿಹತಸ್ತಾಪತ್ರಯಂ ಮಾಮಕಮ್ ಮತ್ತು ಸರ್ವಾಪಕೃತಿಮೇಪಿ ಕಲಯ ಸ್ವತೀವ ಶೀತಾಮ್ ದಯಾಂ ಎಂಬುದಾಗಿ ಆರಂಭವಾಗುವ ಎರಡು ವೃತ್ತಗಳು - ಇವು ಮಾತ್ರ ಮತ್ತೇಭವಿಕ್ರೀಡಿತಗಳೆಂದು ಗುರುತಿಸಲ್ಪಟ್ಟಿವೆ.

ಮತ್ತೇಭವಾದಿಯಾದ ಮೂರು ವೃತ್ತಗಳೂ ಸಂಸ್ಕೃತದಲ್ಲಿ ಪ್ರಸಿದ್ಧವಾಗಿಲ್ಲ ಎನ್ನುವುದು ಸ್ಪಷ್ಟವೇ. ಆದರೆ ಶಾರ್ದೂಲವಾದಿಯಾದ ಮೂರರಲ್ಲಿ ಕೂಡ ಶಾರ್ದೂಲ, ಸ್ರಗ್ಧರೆಗಳು ಮಾತ್ರ ಸಂಸ್ಕೃತದಲ್ಲಿ ಬಹುವ್ಯಾಪ್ತವಾಗಿದ್ದು, ಚಂಪಕಮಾಲೆಗೆ ಆ ಪ್ರಾಮುಖ್ಯವಿಲ್ಲವಾಗಿದೆ. ಚಂಪಕಮಾಲೆಯನ್ನು ಸಂಸ್ಕೃತ ಛಂದೋಗ್ರಂಥಗಳಲ್ಲಿ ಶಶಿವದನಾ, ಚಿತ್ರಲತಾ, ರುಚಿರಾ, ಸರಸೀ, ಸಲಿಲನಿಧಿ, ಸಿದ್ಧಿ, ಧೃತಶ್ರೀ, ಪಂಚಕಾವಲೀ- ಎಂದು ಬೇರೆ ಬೇರೆ ಹೆಸರಿನಲ್ಲಿ ಲಕ್ಷಣಿಸಿದ್ದರೂ ಅದರ ನಿದರ್ಶನಗಳು ಮಾತ್ರ ಸಂಸ್ಕೃತ ಸಾಹಿತ್ಯದಲ್ಲಿ ಬಹು ವಿರಳ. ಇದಕ್ಕೆ ಕಾರಣವೇನೋ ತಿಳಿಯದು. ಪೂರ್ವಚಾಳುಕ್ಯರಾಜ ಮೂರನೆಯ ಗುಣಗ ವಿಜಯಾದಿತ್ಯನ (844-88) ಸಾತಲೂರು ತಾಮ್ರಶಾಸನದೊಳಗಿನ ಅರಿನೃಪವಾಜಿವಾರಣಪದಾತಿ ಮಹಾಭ್ರವಿರಾಮಮಾರುತಃ ಎಂಬ ಹಾಗೂ ಮಾಘಕವಿಯ (ಸು.750) ಶಿಶುಪಾಲವಧೆಯೊಳಗಿನ ತುರಗಶತಾಕುಲಸ್ಯ ಪರಿತಃ ಪರಮೇಕತುರಂಗ ಜನ್ಮನಃ ಎಂಬ ಆರಂಭವಿರುವ ಎರಡು ವೃತ್ತಗಳೂ ವಾಮನ (ಸು.750-800), ರಾಜಶೇಖರ (880-920) ಮುಂತಾದವರ ಅಲಂಕಾರ ಗ್ರಂಥಗಳೊಳಗಿನ ಹಾಗೂ ಅಮಿತಗತಿಯ ಸುಭಾಷಿತ ರತ್ನ ಸಂದೋಹ ಮೊದಲಾದ ಪದ್ಯಸಂಕಲನಗಳೊಳಗಿನ ಸುಮಾರು ಆರೇಳು ವೃತ್ತಗಳೂ ಚಂಪಕಮಾಲೆಯ ನಿದರ್ಶನಗಳಾಗಿ ಗೋಚರಿಸುತ್ತವೆ. ಹೀಗೆ ದೊರೆತ ನಿದರ್ಶನಗಳಲ್ಲಿ ಕೆಲವು ಕಡೆ ಛಂದಸ್ಸು ವ್ಯತ್ಯಾಸವಾಗಿರುವುದೂ ಉಂಟು.

ಕನ್ನಡ ಸಾಹಿತ್ಯದಲ್ಲಿ ಶಾರ್ದೂಲ ವಿಕ್ರೀಡಿತ ಮೊದಲಾಗಿ ಮೇಲಿನ ಆರು ವೃತ್ತಗಳೂ ಸಮಾನವಾಗಿ ಗಣ್ಯವಾಗಿವೆ. ಪ್ರಮಾಣದಲ್ಲಿ ಸ್ವಲ್ಪ ಹೆಚ್ಚುಕಡಿಮೆಗಳಾಗುತ್ತಿದ್ದರೂ ಕನ್ನಡದ ಪ್ರಾಚೀನ ಚಂಪೂಕಾವ್ಯಗಳಲ್ಲಿ ಇವು

ಮೇಲಿಂದ ಮೇಲೆ ಬರುತ್ತವೆ. ಈ ವೃತ್ತಗಳೂ ಕಂದವೂ ಗದ್ಯದೊಂದಿಗೆ ಕೂಡಿ ಚಂಪುವಿನ ಚೌಕಟ್ಟನ್ನು ರೂಪಿಸುತ್ತವೆ.

ಪೂರ್ವೋಕ್ತ ವೃತ್ತಗಳ ಲಕ್ಷಣವನ್ನೂ ಕನ್ನಡ ಕೈಪಿಡಿಯ ಮೂಲಕ ಪ್ರಸಿದ್ಧವಾಗಿರುವ ನೆನಪಿನ ಸೂತ್ರಗಳನ್ನೂ ಹೀಗೆ ಸಂಗ್ರಹಿಸಬಹುದು.

(i) ಶಾರ್ದೂಲ ವಿಕ್ರೀಡಿತ: ಮಸಜಸತತಗ (ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ); ಕ್ರಮವಾಗಿ 12ನೆಯ ಮತ್ತು ಅಲ್ಲಿಂದ 7ನೆಯ ಅಕ್ಷರಕ್ಕೆ ಯತಿ. (ii) ಮತ್ತೇಭವಿಕ್ರೀಡಿತ: ಸಭರನಮಯಲಗ (ಸಭರಂನಂಮಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಡಿತಂ); ಕ್ರಮವಾಗಿ 13ನೆಯ ಮತ್ತು ಅಲ್ಲಿಂದ 7ನೆಯ ಅಕ್ಷರಕ್ಕೆ ಯತಿ. (iii) ಉತ್ಪಲಮಾಲೆ ಭರನಭಭರಲಗ (ಉತ್ಪಲ ಮಾಲೆಯಪ್ಪುದು ಭರಂನಭಭಂರಲಗಂ ನೆಗೆಟ್ದಿರಲ್); 11ನೆಯ ಅಕ್ಷರಕ್ಕೆ ಯತಿ (ನಾಗವರ್ಮನ ಛಂದೋಂಬುಧಿ). (iv) ಚಂಪಕಮಾಲೆ: ನಜಭಜಜರ (ನಜಭಜಜಂಜರಂಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್); ಕ್ರಮವಾಗಿ 11ನೆಯ ಮತ್ತು ಅಲ್ಲಿಂದ 10ನೆಯ ಅಕ್ಷರಗಳಿಗೆ ಯತಿಯೆಂದು ಪಿಂಗಲ ಕೇದಾರ ಭಟ್ಟರೂ 13ನೆಯ ಅಕ್ಷರಕ್ಕೆ ಎಂದು ನಾಗವರ್ಮನೂ ಹೇಳುತ್ತಾರೆ. (v) ಸ್ರಗ್ಧರೆ: ಮರಭನಯಯಯ (ತೋಱಲ್ ಮಂರಂಭನಂ ಮುಯಗಣಮುಮದೆತಾಂಸ್ರಗ್ಧರಾವೃತ್ತಮಕ್ಕುಂ); ಕ್ರಮವಾಗಿ 7, 7, 7 ನೆಯ ಅಕ್ಷರಗಳಿಗೆ ಯತಿ. (vi) ಮಹಾಸ್ರಗ್ಧರೆ: ಸತತತನಸರರಗ (ಸತತಂನಂಸಂರರಂಗಂ ನೆರೆದೆಸೆಯೆ ಮಹಾ ಸ್ರಗ್ಧರಾವೃತ್ತಮಕ್ಕುಂ); ಕ್ರಮವಾಗಿ 8, 7, 7ನೆಯ ಅಕ್ಷರಗಳಿಗೆ ಯತಿ. (15ನೆಯ ಅಕ್ಷರಕ್ಕೆ ಯತಿಯೆಂದು ನಾಗವರ್ಮ). ಸಂಸ್ಕೃತದಲ್ಲಿ ಯತಿ ನಿಯತ, ಕನ್ನಡದಲ್ಲಿ ಹಾಗೆ ನಿರ್ಬಂಧವಿಲ್ಲ. ನಾಗವರ್ಮ ಬಹುಮಟ್ಟಿಗೆ ಸಂಸ್ಕೃತ ಪರಿಪಾಠಿಯನ್ನು ಅನುಸರಿಸಿ ಖ್ಯಾತಕರ್ಣಾಟಕಗಳಿಗೆ ಯತಿನಿರ್ದೇಶನವನ್ನು ಮಾಡಿದ್ದರೂ ಕವಿಗಳು ಯತಿನಿಯಮವನ್ನು ಬಿಟ್ಟಿದ್ದಾರೆ. ಅಕ್ಷರಗಣ ನಿಯಮದಂತೆ ಪರಿಶೀಲಿಸಿದರೆ ಒಂದೊಂದೂ ವಿಭಿನ್ನ ಲಕ್ಷಣದ ವೃತ್ತಗಳಾಗಿ ತೋರುವ ಖ್ಯಾತ ಕರ್ಣಾಟಕಗಳು, ಗುರುಲಘುಗಳನ್ನು ಗುರುತಿಸಿ, ಧಾಟಿಯನ್ನು ಪರಿಶೀಲಿಸಿದರೆ ಮೂರು ಜೋಡಿಗಳಲ್ಲಿ ಹತ್ತಿರ ಹತ್ತಿರವಾಗುವುದು ಕಂಡುಬರುತ್ತದೆ. ಆ ಮೂರು ಜೋಡಿಗಳು ಇವು: ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತಗಳು; ಉತ್ಪಲಮಾಲೆ, ಚಂಪಕಮಾಲೆಗಳು; ಸ್ರಗ್ಧರೆ, ಮಹಾಸ್ರಗ್ಧರೆಗಳು. ಈ ಅಂಶವನ್ನು ಗಮನಿಸಿ ಉತ್ಪಲ, ಶಾರ್ದೂಲ, ಸ್ರಗ್ಧರೆ ಇವುಗಳ ಮೊದಲಿನ ಗುರುವಿಗೆ ಎರಡು ಲಘುಗಳನ್ನು ಇಟ್ಟು ಚಂಪಕ, ಮತ್ತೇಭ, ಮಹಾಸ್ರಗ್ಧರೆಗಳನ್ನು ಕನ್ನಡಕವಿಗಳು ಮಾಡಿಕೊಂಡಂತೆ ಕಾಣುವುದು ಎಂಬುದಾಗಿ ಒಂದು ಅಭಿಪ್ರಾಯ ವ್ಯಕ್ತಪಟ್ಟಿದೆ. ಸಂಸ್ಕೃತದಲ್ಲಿ ಶಾರ್ದೂಲ ಮತ್ತು ಸ್ರಗ್ಧರೆಗಳು ಗಣ್ಯವೃತ್ತಗಳಾಗಿದ್ದು, ಅವನ್ನು ಕನ್ನಡಕ್ಕೆ ತಂದುಕೊಳ್ಳುವಾಗ ವೈವಿಧ್ಯವನ್ನೂ ಸೌಲಭ್ಯವನ್ನೂ ಹೆಚ್ಚಿಸಿಕೊಳ್ಳಲು ಅವುಗಳ ಆದಿಗುರುವಿಗೆ ದ್ವಿಲಘುವನ್ನಿಟ್ಟು ಆ ಧಾಟಿಯ ಇನ್ನೆರಡು ಹೊಸವೃತ್ತಗಳನ್ನು ಕಲ್ಪಿಸಿಕೊಂಡಿರುವುದು ಸಾಧ್ಯ ಎನ್ನುವುದನ್ನು ಬಲುಮಟ್ಟಿಗೆ ಒಪ್ಪಬಹುದು. ಆದರೆ ಉತ್ಪಲಮಾಲೆ ಸಂಸ್ಕೃತದಲ್ಲಿ ಚಂಪಕಮಾಲೆಯಷ್ಟು ಕೂಡ ಪ್ರಸಿದ್ಧವಾಗಿದ್ದಂತೆ ತೋರದಿರುವುದರಿಂದ ಉತ್ಪಲದ ಆದಿಗುರುವಿಗೆ ದ್ವಿಲಘುವನ್ನಿಟ್ಟು ಚಂಪಕವನ್ನು ಮಾಡಿಕೊಂಡಿದೆಯೆಂದು ತಿಳಿಯುವುದು ಹೇಗೆ ಎಂಬ ಪ್ರಶ್ನೆ ಹುಟ್ಟುತ್ತದೆ. ಚಂಪಕಮಾಲೆಯ ಆದಿ ದ್ವಿಲಘುವಿಗೆ ಗುರುವೊಂದನ್ನಿಟ್ಟು ಉತ್ಪಲಮಾಲೆಯನ್ನೇ ಹೊಸದಾಗಿ ಕಲ್ಪಿಸಿಕೊಂಡಿರಬಹುದು. ಯಾವುದೇ ಪ್ರಭಾವದಿಂದಾಗಲಿ ಕನ್ನಡ ಸಾಹಿತ್ಯದಲ್ಲಿ ಉತ್ಪಲಮಾಲೆ ರೂಢಿಗೆ ಬಂದ ಮೇಲೆ ಅದರ ಆದಿಗುರುವಿಗೆ ದ್ವಿಲಘುವನ್ನಿಟ್ಟು ಚಂಪಕ ಮಾಲೆಯನ್ನು ಮಾಡಿಕೊಂಡಿರಬಹುದು; ಇಲ್ಲವೆ ಉತ್ಪಲಮಾಲೆ, ಚಂಪಕಮಾಲೆಗಳು ಸ್ವತಂತ್ರವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿರಬಹುದು. ಸು.7ನೆಯ ಶತಮಾನದ ಕನ್ನಡ ಶಾಸನಗಳಲ್ಲಿಯೇ ಈ ಎರಡೂ ವೃತ್ತಗಳು ಬಳಕೆಯಾಗಿರುವುದರಿಂದ, ಯಾವ ವೃತ್ತದಿಂದ ಯಾವುದು ಹುಟ್ಟಿತು ಎಂಬುದನ್ನು ನಿಶ್ಚಯಿಸುವುದು ಕಷ್ಟ.

ಪೂರ್ವಪ್ರಸಿದ್ಧವಾದ ವೃತ್ತಗಳಿಂದ ಆದಿಯ ಅಲ್ಪವ್ಯತ್ಯಾಸದೊಡನೆ ಹೊಸ ವೃತ್ತಗಳನ್ನು ಮಾಡಿಕೊಂಡದ್ದು ಎರಡು ರೀತಿಯ ಪ್ರಯೋಜನಗಳಿಗೆ ದಾರಿಮಾಡಿತು, ಒಂದು ವೈವಿಧ್ಯಸಾಧನೆ; ಇನ್ನೊಂದು ಸೌಕರ್ಯಲಾಭ. ಇದರಿಂದಾಗಿ ಏಕಮುಖವಾದ ನಾದಲಯಗಳಲ್ಲಿ ಬಹುಮುಖತೆ ಬಂತು; ಮೂರು ನಿರ್ದಿಷ್ಟವೃತ್ತಗಳಲ್ಲಿ ನೈಪುಣ್ಯವನ್ನು ಸಾಧಿಸಿದ್ದರಿಂದ ಆರು ಬಗೆಯ ವೃತ್ತಗಳ ನಿರ್ವಹಣೆ ಅನಾಯಾಸವಾಗಿ ಕೈಗೂಡುವಂತಾಯಿತು. ಇಷ್ಟಾಗಿ ಕನ್ನಡಕ್ಕೆ ಹೊಂದಿರತಕ್ಕವು ಎಂದರೆ ಪ್ರಾಯಶಃ ಉತ್ಪಲಮಾಲೆ, ಚಂಪಕಮಾಲೆಗಳೆರಡೇ. ಪ್ರಮಾಣದಲ್ಲಿಯೂ ಉಳಿದವುಗಳಿಗಿಂತ ಇವೇ ಹೆಚ್ಚು ಎನ್ನುವುದು ವಿದ್ವಾಂಸರ ಅಭಿಪ್ರಾಯ. ಉತ್ಪಲಚಂಪಕಗಳಲ್ಲಿ ದೇಶ್ಯಶಬ್ದಗಳ ಸೇರಿಕೆಯೂ ಶಾರ್ದೂಲಾದಿಯಾದ ಉಳಿದವುಗಳಲ್ಲಿ ಸಂಸ್ಕೃತಶಬ್ದಗಳ ಹಾಗೂ ಸಮಾಸಗಳ ಸೇರಿಕೆಯೂ ಸಾಮಾನ್ಯ. ಮೊದಲಿನವು ಮೃದುತರವಾದ ಭಾವಗಳಿಗೆ, ಮತ್ತಿನವು ಘನಗಂಭೀರವಾದ ಭಾವಗಳಿಗೆ ಒಗ್ಗಿರತಕ್ಕುವು ಎಂದು ಕೂಡ ಅಭಿಪ್ರಾಯಪಡಲಾಗಿದೆ. ಆಯಾ ವೃತ್ತಗಳ ಹೆಸರಿಗೂ ಅಲ್ಲಿ ವ್ಯಕ್ತವಾಗುವ ಭಾವ ಭಾವನೆಗಳಿಗೂ ಹೊಂದಿಕೆ ಇದೆಯೆಂದು ಒಮ್ಮೊಮ್ಮೆ ತೋರುತ್ತದೆಯಾದರೂ ಹಾಗೆ ಹೊಂದಿಕೆ ಇಲ್ಲದೆಯೂ ಹೋಗಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. *

# ಗ

**ಗಂಗರಾಜ** : ಹೊಯ್ಸಳ ವಿಷ್ಣುವರ್ಧನನ ಪ್ರಸಿದ್ಧ ದಂಡನಾಯಕ. ನೃಪಕಾಮನ ಆಳಿಕೆಯಲ್ಲಿ ದಳಪತಿಯಾಗಿದ್ದ ಏಚ ಇವನ ತಂದೆ, ತಾಯಿ ಪೊಚವ್ವೆ. ದಂಡನಾಯಕ ಬಮ್ಮ ಇವನ ಅಣ್ಣ. ಇವನಿಗೆ ಲಕ್ಷ್ಮಿ ಎಂಬ ಹೆಂಡತಿಯೂ ಬೊಪ್ಪನೆಂಬ ಮಗನೂ ಇದ್ದರು.

ಪ್ರಾಯಶಃ ಗಂಗವಂಶದವನಾದ ಈತ ವಿಷ್ಣುವರ್ಧನನ ಬಲಗೈಯಂತಿದ್ದ. ವಿಷ್ಣುವರ್ಧನನೊಡನೆ ಮೊದಲಿನಿಂದಲೂ ಇದ್ದು ಅವನು ಸಿಂಹಾಸನಾರೋಹಣ ಮಾಡಿದ ವೇಳೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದ. ಹೊಯ್ಸಳರ ಪರವಾಗಿ ಚೋಳರನ್ನು ಓಡಿಸಿ ತಲಕಾಡನ್ನು ಆಕ್ರಮಿಸಿಕೊಂಡದ್ದು ಗಂಗರಾಜನ ಮಹತ್ಸಾಧನೆ. ಈ ಸಂದರ್ಭದಲ್ಲಿ ಗಂಗರಾಜ ತೋರಿದ ಶೌರ್ಯಸಾಹಸಗಳನ್ನು ಅನೇಕ ಶಾಸನಗಳು ಮುಕ್ತಕಂಠದಿಂದ ಹೊಗಳಿವೆ. ಕೊಂಗು, ಚೆಂಗಿರಿಗಳ ಮೇಲೂ ಸಫಲವಾಗಿ ದಾಳಿ ಮಾಡಿ ಹೊಯ್ಸಳ ರಾಜ್ಯ ವಿಸ್ತರಣೆಗೆ ಕಾರಣನಾದದ್ದಲ್ಲದೆ, ಕಣ್ಣೇಗಾಲದ ಕದನದಲ್ಲಿ ಚಾಳುಕ್ಯರ ಸೈನ್ಯವನ್ನು ಸದೆಬಡಿದು ಹೊಯ್ಸಳರ ಸ್ವತಂತ್ರ ಪತಾಕೆಯನ್ನು ಹಾರಿಸಿದ ಕೀರ್ತಿ ಗಂಗರಾಜನದು. ಗಂಗರಾಜನ ಹಿರಿಮೆ, ಸ್ವಾಮಿನಿಷ್ಠೆ ಮತ್ತು ನಿಸ್ವಾರ್ಥಸೇವೆಗೆ ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ, ದ್ರೋಹ ಘರಟ್ಟ, ಸ್ವಾಮಿದ್ರೋಹ ಘರಟ್ಟ ಎಂಬ ಇವನ ಬಿರುದುಗಳೇ ಸಾಕ್ಷಿಯಾಗಿವೆ.

ಗಂಗರಾಜ ಸಮರ್ಥ ದಂಡನಾಯಕ ಮತ್ತು ಪರಾಕ್ರಮಿಯಷ್ಟೇ ಅಲ್ಲದೆ ಧರ್ಮಿಷ್ಠನೂ ಮಹಾದಾನಿಯೂ ಆಗಿದ್ದ. ಹಲವಾರು ಶಾಸನಗಳು ಈತನ ಜಿನಭಕ್ತಿಯನ್ನು ಪುಷ್ಟೀಕರಿಸುತ್ತವೆ. ಶ್ರವಣಬೆಳಗೊಳದ ಬಳಿ ಜಿನನಾಥಪುರವನ್ನು ನಿರ್ಮಿಸಿ ಅದಕ್ಕೆ ವಿಶೇಷ ದಾನ ಮಾಡಿದ. ತಾನು ಪರಾಕ್ರಮದಿಂದ ವಿಜಯಗಳಿಸಿದ ಸಂದರ್ಭಗಳಲ್ಲಿ ಹೊಯ್ಸಳೇಶ್ವರ ಮೆಚ್ಚುಗೆಯಿಂದ ಕೊಟ್ಟ ದಾನಗಳನ್ನು ತನ್ನ ಗುರುವಾದ ಶುಭಚಂದ್ರಸಿದ್ಧಾಂತ ದೇವನಿಗೆ ಸಮರ್ಪಿಸಿದ. ಅವನ ಇಚ್ಛೆಯಂತೆ ಜೈನದೇವಾಲಯಗಳ ಜೀರ್ಣೋದ್ಧಾರ ಮಾಡಿದ. ಕಣ್ಣೇಗಾಲದ ವಿಜಯಾನಂತರ ತನಗೆ ಕೊಡಲ್ಪಟ್ಟ ಪರಮ ಎಂಬ ಗ್ರಾಮವನ್ನು ತನ್ನ ತಾಯಿ, ಹೆಂಡತಿ ಕಟ್ಟಿಸಿದ ದೇವಸ್ಥಾನಕ್ಕೆ ಧಾರೆಯೆರೆದ; ತಲಕಾಡಿನ ವಿಜಯದ ಮುನ್ನ ಕೊಡಲ್ಪಟ್ಟ ಬಿಂಡಿಗನವಿಲೆ ಎಂಬ ಗ್ರಾಮವನ್ನು ಆ ಪವಿತ್ರ ಸ್ಥಳದ ಉಪಯೋಗಾರ್ಥ

ತನ್ನ ಗುರುವಿಗೆ ಕೊಟ್ಟ. ತಲಕಾಡಿನ ವಿಜಯಾನಂತರ ದೊರೆತ ಗೋವಿಂದವಾಡಿ ಗ್ರಾಮವನ್ನು ಶ್ರವಣಬೆಳಗೊಳದ ಗೊಮ್ಮಟೇಶ್ವರ ದೇವರ ಅರ್ಚನೆಗೆ ಉಂಬಳಿ ಬಿಟ್ಟ. ಗೊಮ್ಮಟನ ಸುತ್ತ ಸುತ್ತಾಲಯವನ್ನು ರಚಿಸಿದ. ಅಲ್ಲದೆ ಅಲ್ಲಿಯ ಶಾಸನ ಬಸದಿ ಮತ್ತು ಕತ್ತಲೆಯ ಬಸದಿಗಳನ್ನೂ ನಿರ್ಮಿಸಿದ. ಈತನ ಧರ್ಮಕಾರ್ಯಗಳಿಂದಾಗಿ ಶ್ರವಣಬೆಳಗೊಳ ಮತ್ತೊಂದು ಕೊಪಣ ಕ್ಷೇತ್ರವಾಯಿತೆಂದು ಶಾಸನಗಳು ಬಣ್ಣಿಸುತ್ತವೆ. ತನ್ನ ಬಂಧುಗಳು ಮೃತರಾದನಂತರ ಅವರ ನೆನಪಿಗಾಗಿ ಚೈತ್ಯ ಮಂಟಪಗಳನ್ನು ಕಟ್ಟಿಸಿದ. ಈತ ಧರ್ಮಪರಾಯಣ, ಸತ್ಯವಾಕ್ಯ, ಭಕ್ತಾಗ್ರೇಸರ, ಅನ್ನ, ವಿದ್ಯಾಭೈಷಜ್ಯದಾನಗಳಲ್ಲಿ ನಿರತ ಎಂದೂ ಇವನು ಕಣ್ಣುಹಾಯಿಸಿದೆಡೆ, ಮನವೆಳೆದೆಡೆ, ತಂಗಿದೆಡೆ ಜೈನಗೃಹಗಳನ್ನು ರಚಿಸುತ್ತಿದ್ದನೆಂದೂ ಶಾಸನಗಳು ಈತನನ್ನು ಹೊಗಳಿವೆ.

ಗಂಗರಾಜ 1133ರಲ್ಲಿ ಮೃತನಾದ. ಇವನ ಜ್ಞಾಪಕಾರ್ಥವಾಗಿ ಹಳೇಬೀಡಿನಲ್ಲಿ ದ್ರೋಹಘರಟ್ಟ ಜಿನಾಲಯವನ್ನು (ಪಾರ್ಶ್ವನಾಥ ಬಸದಿ) ಇವನ ಮಗ ಬೊಪ್ಪ ಕಟ್ಟಿಸಿದ. (ಸಿ.ವಿ.ಆರ್.)

**ಗಂಗ ವಂಶ :** ಕರ್ನಾಟಕದಲ್ಲಿ ಆಳಿದ ಪ್ರಮುಖ ರಾಜವಂಶಗಳಲ್ಲಿ ಒಂದು. ಗಂಗವಂಶದವರಲ್ಲಿ ತಲಕಾಡಿನ ಗಂಗರ ಶಾಖೆ ಅತ್ಯಂತ ಪ್ರಮುಖವಾದುದು. ಅಲ್ಲದೆ ಗಂಗವಂಶದ ಇತರ ಶಾಖೆಗಳೂ ಇದ್ದುವು.

**ತಲಕಾಡಿನ ಗಂಗರು :** ನಾಲ್ಕನೆಯ ಶತಮಾನದ ಮಧ್ಯಭಾಗದಿಂದ 10ನೆಯ ಶತಮಾನದ ಅಂತ್ಯದವರೆಗೆ ಕರ್ನಾಟಕದ ದಕ್ಷಿಣ ಭಾಗವನ್ನು ಆಳಿದ ಗಂಗ ಸಂತತಿಯ ಅರಸರು ಪಶ್ಚಿಮ ಗಂಗರೆಂದೂ ಪ್ರಸಿದ್ಧರಾಗಿದ್ದಾರೆ. ಇವರದು ಕನ್ನಡನಾಡಿನ ಇತಿಹಾಸದಲ್ಲೇ ಅತಿದೀರ್ಘಕಾಲ ಆಳಿಕೆ ನಡೆಸಿದ ಮನೆತನ. ಇವರ ಶಾಸನಗಳು ಕೊಡಗು ಜಿಲ್ಲೆಯಿಂದ ಉತ್ತರ ಆರ್ಕಾಟ್ ಜಿಲ್ಲೆಯವರೆಗೂ ಬಳ್ಳಾರಿ ಜಿಲ್ಲೆಯಿಂದ ಸೇಲಂ ಕೊಯಮತ್ತೂರು ಜಿಲ್ಲೆಗಳವರೆಗೂ ದೊರೆತಿವೆ. ಇವರ ಪ್ರಭುತ್ವ ಅಷ್ಟು ವಿಸ್ತಾರವಾದ ಪ್ರದೇಶದ ಮೇಲೆ ಸ್ಥಾಪಿತವಾಗಿತ್ತು. ಇವರ ರಾಜ್ಯವನ್ನು ಗಂಗವಾಡಿ 96,000 ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಶಾಂತಿ ಸುಭಿಕ್ಷೆಗಳ ಬೀಡಾದ ಇವರ ನಾಡಿಗೆ ಶ್ರೀರಾಜ್ಯ ಎಂಬ ಅನ್ವರ್ಥನಾಮವಿತ್ತು. ಪ್ರಜಾನುರಾಗಿಗಳು, ರಾಜನೀತಿಕುಶಲರು ಎಂದು ಕರೆದುಕೊಳ್ಳುವ ಈ ವಂಶದ ಅರಸರು ದಕ್ಷಿಣರಾಜ್ಯ ಸಂರಕ್ಷಣಸಮರ್ಥ, ಕೊಂಗುಣಿವರ್ಮ, ಧರ್ಮಮಹಾರಾಜಾಧಿರಾಜ, ಶ್ರೀವಲ್ಲಭ, ಪೆರ್ಮಾನಡಿ ಮೊದಲಾದ ಬಿರುದುಗಳನ್ನು ಧರಿಸಿದ್ದರು. ಮೈಸೂರು ಜಿಲ್ಲೆಯ ತಲಕಾಡು ಇವರ ರಾಜಧಾನಿ. ಕುವಳಾಲ (ಕೋಲಾರ), ನಂದಗಿರಿ (ನಂದಿಬೆಟ್ಟ) ಸಹ ಮೊದಲು ರಾಜಧಾನಿಗಳಾಗಿದ್ದುವು. ಆನೆ ಈ ವಂಶದವರ ರಾಜಲಾಂಛನ. ಗಂಗಮನೆತನದ ರಾಜರು ತಮ್ಮ ಸುದೀರ್ಘ ಆಳಿಕೆಯ ಕಾಲದಲ್ಲಿ ಕಂಚಿಯ ಪಲ್ಲವರು, ಬನವಾಸಿಯ ಕದಂಬರು, ಬಾದಾಮಿಯ ಚಳುಕ್ಯರು, ಮಳಖೇಡದ ರಾಷ್ಟ್ರಕೂಟರು, ಮಧುರೆಯ ಪಾಂಡ್ಯರು, ಉರೈಯೂರಿನ ಚೋಳರು, ಕಲ್ಯಾಣದ ಚಾಳುಕ್ಯರು ಹಾಗೂ ಹೊಯ್ಸಳ ರಾಜಮನೆತನಗಳೊಡನೆ ಒಂದಿಲ್ಲೊಂದು ರೀತಿಯ ರಾಜಕೀಯ ಸಂಬಂಧವನ್ನು ಹೊಂದಿದ್ದರು. ಬಾದಾಮಿಯ ಚಳುಕ್ಯ ಹಾಗೂ ರಾಷ್ಟ್ರಕೂಟ ಸಾರ್ವಭೌಮ ಮನೆತನಗಳೊಡನೆ ಮಧುರ-ಬಾಂಧವ್ಯ ಹೊಂದಿದ್ದು ಆ ಮನೆತನದ ಸಾಮ್ರಾಟರ ಸಹಾಯಕ್ಕೆ ಹಲವು ಮಂದಿ ಗಂಗರಾಜರು ತಮ್ಮ ಸೈನ್ಯಸಮೇತ ಧಾವಿಸಿ ದಕ್ಷಿಣದಲ್ಲಿ ರಾಮೇಶ್ವರದವರೆಗೂ ಉತ್ತರದಲ್ಲಿ ಉಜ್ಜಯಿನಿಯವರೆಗೂ ತಮ್ಮ ಪರಾಕ್ರಮವನ್ನೂ ಕೀರ್ತಿಯನ್ನೂ ವ್ಯಾಪಿಸುವಂತೆ ಮಾಡಿದರು.

ಗಂಗರು ಉತ್ತರ ಭಾರತದ ಇಕ್ಷ್ವಾಕು ಸಂತತಿಗೆ ಸೇರಿದವರೆಂದೂ ಅಯೋಧ್ಯೆಯಿಂದ ಬಂದು ಇಲ್ಲಿ ರಾಜ್ಯ ಸ್ಥಾಪಿಸಿದರೆಂದೂ ಗಂಗಮನೆತನದ ರಾಜರ ಹಲವು ಶಾಸನಗಳಲ್ಲಿ ವರ್ಣಿಸಲಾಗಿದೆ. ಇದೇ ವರ್ಣನೆಯ ಪ್ರಕಾರ ರಾಜ್ಯಸ್ಥಾಪನೆ ಮಾಡಿದ ದಡಿಗ ಮತ್ತು ಮಾಧವರು ಉತ್ತರದಿಂದ ಬರುವಾಗ ಕಡಪ ಜಿಲ್ಲೆಯ ಪೇರೂರು ಎಂಬಲ್ಲಿ ಸಿಂಹನಂದಿ ಎಂಬ ಜೈನಯತಿಯನ್ನು ಸಂದರ್ಶಿಸಿದರೆಂದೂ ಅವರ ರಾಜಕಳೆಯಿಂದ ಆಕರ್ಷಿತನಾದ ಜೈನಯತಿ ತನ್ನ ಇಷ್ಟದೇವತೆಯಿಂದ ವರ ಪಡೆದು ಅವರಿಗೆ ಕುವಲಾಳ ಅಥವಾ ಇಂದಿನ ಕೋಲಾರದ ಬಳಿಯಲ್ಲಿ ಕರ್ಣಿಕಾರ ಪುಷ್ಪದ ಕಿರೀಟವನ್ನು ತನ್ನ ಕೈಯಿಂದಲೇ ತೊಡಿಸಿ ಖಡ್ಗವನ್ನು ದೊರಕಿಸಿಕೊಟ್ಟನೆಂದೂ ಇವರ ರಾಜ್ಯಕ್ಕೆ ಗಂಗವಾಡಿ 96,000 ಎಂದು ಹೆಸರಾಯಿತೆಂದೂ ವಿವರಿಸಲಾಗಿದೆ. ಶಾಸನಗಳಲ್ಲಿ ಗಂಗರು ಕಾಣ್ವಾಯನಸ ಗೋತ್ರದವರೆಂದೂ ಹೇಳಿಕೊಂಡಿರುವುದರಿಂದ ಇವರು ಉತ್ತರದ ಕಣ್ವಸಂತತಿಗೆ ಸೇರಿದ್ದವರಾಗಿರಬಹುದೆಂದೂ ಚರ್ಚಿಸಲಾಗಿದೆ. ಅಲ್ಲದೆ ಗಂಗರಿಗೆ ಕೊಂಗುಣಿವರ್ಮ ಎಂಬ ಬಿರುದಿದ್ದುದರಿಂದ ಪ್ರಾರಂಭದಲ್ಲಿ ಇವರು ತಮಿಳುನಾಡಿನ ಭಾಗವಾದ ಕೊಂಗುನಾಡಿನಲ್ಲಿ ರಾಜ್ಯ ಸ್ಥಾಪಿಸಿರಬೇಕೆಂದೂ ಹಾಗೂ ಕೊಯಮತ್ತೂರು ಜಿಲ್ಲೆಯಲ್ಲಿರುವ ಪೇರೂರು ಮೇಲೆ ಹೆಸರಿಸಿದ ಸ್ಥಳವಾಗಿರಬೇಕೆಂದೂ ತರ್ಕಿಸಲಾಗಿದೆ. ಆದರೆ ಈ ವಿಷಯಗಳು ವಿವಾದಾಸ್ಪದವಾಗಿವೆ. ಇಕ್ಷ್ವಾಕು ಅಥವಾ ಅಯೋಧ್ಯೆಗೆ ಸಂಪರ್ಕ ಕಲ್ಪಿಸುವ ಮಾಹಿತಿ ಮೊದಲು ಕಾಣಿಸುವುದು 11ನೆಯ ಶತಮಾನದ ಒಂದು ಶಾಸನದಲ್ಲಿ. 10-11ನೆಯ ಶತಮಾನಗಳಲ್ಲಿ ಸಾಮಾನ್ಯವಾಗಿ ದಕ್ಷಿಣ ಭಾರತದ ರಾಜಮನೆತನಗಳು ತಮ್ಮ ಉಗಮಕ್ಕೆ ಸಂಬಂಧಿಸಿದ ಕಥೆಗಳನ್ನು ನಿರ್ಮಿಸಿಕೊಂಡ ಕಾಲವಾದ್ದರಿಂದ ಗಂಗಮನೆತನದ ಈ ಕಥೆಯೂ ತದ್ರೀತಿಯದಾಗಿರಬಹುದು. ಸಿಂಹನಂದಿಯ ಹೆಸರು 7ನೆಯ ಶತಮಾನದ ಕೊನೆಯವರೆಗೂ ತಿಳಿದುಬರುವುದಿಲ್ಲ. 963ರ ಕೂಡಲೂರು ತಾಮ್ರ ಶಾಸನದಲ್ಲಿ ಪ್ರಪ್ರಥಮವಾಗಿ ಗಂಗವಂಶ ಮತ್ತು ಸಿಂಹನಂದಿಯ ಸಂಬಂಧದ ಈ ವಿವರಣೆ ಕಂಡುಬರುತ್ತದೆ. ಅಲ್ಲದೆ ಗಂಗವಂಶದ ಪ್ರಾರಂಭದ ಅರಸರೆಲ್ಲ ಹಿಂದೂಧರ್ಮಾನುಯಾಯಿಗಳಾಗಿದ್ದರು. ಮಿಗಿಲಾಗಿ ಅವರ ಆಳಿಕೆ ಪ್ರಾರಂಭದಲ್ಲಿ ಕಾವೇರಿ ನದಿಯ ಬಯಲಿನಲ್ಲಿ ತಲಕಾಡಿನ ಪ್ರದೇಶದಲ್ಲೇ ಸ್ಥಾಪನೆಯಾಯಿತೆಂದೂ ಅನಂತರ ಕೊಂಗು ಮತ್ತು ಕೋಲಾರದವರೆಗೆ ವಿಸ್ತರಿಸಲ್ಪಟ್ಟಿತೆಂದೂ ಶಾಸನಗಳಿಂದ ವೇದ್ಯವಾಗುತ್ತದೆ. ಪ್ರಾರಂಭದ ರಾಜರ ಶಾಸನಗಳು ಮೈಸೂರು ಮತ್ತು ಅಜುಬಾಜಿನ ಜಿಲ್ಲೆಗಳಲ್ಲೇ ದೊರೆತಿವೆ. ಈ ವಂಶದ ಮೂರನೆಯ ರಾಜನಾದ ಹರಿವರ್ಮನ ಒಂದು ಶಾಸನ ತಲಕಾಡು ಅವರ ರಾಜಧಾನಿಯಾಗಿತ್ತೆಂದು ಅಧಿಕೃತವಾಗಿ ತಿಳಿಸುತ್ತದೆ. ಸ್ಥಳಪುರಾಣಗಳ ಪ್ರಕಾರ ತಲಕಾಡು ಆ ಕಾಲದಲ್ಲಿ ದಟ್ಟವಾದ ಅರಣ್ಯಗಳಿಂದ ಕೂಡಿದ್ದು ಗಜಾರಣ್ಯವೆಂದು ಪ್ರಸಿದ್ಧವಾಗಿತ್ತು. ಮದಗಜ ಗಂಗಲಾಂಛನವಾಗಲು ಈ ಸಂಗತಿಯೇ ಕಾರಣವಿರಬೇಕು. ಈ ವಂಶದ ಮೂಲಪುರುಷರು ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಪ್ರದೇಶದಲ್ಲಿ ಇಂದಿಗೂ ವ್ಯವಸಾಯವನ್ನವಲಂಬಿಸಿ ಕನ್ನಡವನ್ನೇ ಮಾತೃಭಾಷೆಯಾಗುಳ್ಳ ಹಾಗೂ ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿರುವ ಗಂಗಡಿಕಾರ ಎಂಬ ಗುಂಪಿಗೆ ಸೇರಿದವರು. ಆದ್ದರಿಂದ ಇವರ ರಾಜ್ಯಕ್ಕೆ ಗಂಗವಾಡಿ ಎಂದೂ ಇವರ ಸಂತತಿಗೆ ಗಂಗರೆಂದೂ ಹೆಸರಾಯಿತು ಎಂಬುದು ಅಭಿಪ್ರಾಯ. ಗಂಗಸಂತತಿಯ ರಾಜರು ಹೊಂದಿದ್ದ ಪ್ರಜಾನುರಾಗ, ಅತ್ಯಂತ ದೀರ್ಘವಾದ ಆಳಿಕೆ ಮೊದಲಾದ ಅಂಶಗಳು ಇವರು ಹೊರಗಿನಿಂದ ಬಂದವರಾಗಿರದೆ ಈ ಪ್ರದೇಶದ ನಿವಾಸಿಗಳೇ ಇರಬೇಕೆಂಬುದನ್ನು ಸೂಚಿಸುತ್ತವೆ. ಸಾತವಾಹನರ ಆಳಿಕೆಯ ಪತನ ಹಾಗೂ ಅನಂತರ ಉದ್ಭವಿಸಿದ ರಾಜಕೀಯ ಪರಿಸ್ಥಿತಿಗಳ ಸಂದರ್ಭಗಳನ್ನು ಉಪಯೋಗಿಸಿಕೊಂಡು ಕನ್ನಡ ನಾಡಿನಲ್ಲಿ ಕದಂಬ ಮತ್ತು ಬಾಣರಂತೆ ಗಂಗ ಅರಸರೂ ರಾಜ್ಯ ಸ್ಥಾಪಿಸಿರಬೇಕು. ಇವರು ಪ್ರಾರಂಭದಲ್ಲಿ ವೈದಿಕ ಮತಾವಲಂಬಿಗಳಾಗಿದ್ದು ಶಿವ ಹಾಗೂ ವೈಷ್ಣವೋಪಾಸಕರಾಗಿದ್ದು ಅನಂತರ ಜೈನಧರ್ಮವನ್ನು ಸ್ವೀಕರಿಸಿ ಆಸ್ಥಾನವಿದ್ವಾಂಸರಿಂದ ಸಿದ್ಧಪಡಿಸಲ್ಪಟ್ಟ ಗೋತ್ರ ಹಾಗೂ ಮೂಲಕ್ಕೆ ಸಂಬಂಧಿಸಿದ ಪೌರಾಣಿಕ ವರ್ಣನೆಗಳನ್ನು ಅಂಗೀಕರಿಸಿರಬೇಕು.

**ರಾಜಕೀಯ ಇತಿಹಾಸ :** ಗಂಗ ಅರಸರ ವಂಶಾನುಕ್ರಮ ಮತ್ತು ಕಾಲಾನುಕ್ರಮದ ನಿರ್ಣಯ ಸುಲಭವಲ್ಲ. ಇವರ ಹಲವಾರು ಶಾಸನಗಳು ಕೂಟ ಶಾಸನಗಳೆಂದು ವಿವಾದಗಳಿರುವುದಿಂದಲೂ ಸು.8ನೆಯ ಶತಮಾನದವರೆಗಿನ ಇವರ ಶಾಸನಗಳಲ್ಲಿ ಖಚಿತ ಕಾಲಗಣನೆಯ ಪ್ರಕಾರದ ಕಾಲನಿರ್ದೇಶವಿಲ್ಲದಿರುವುದರಿಂದಲೂ ಈ ಸಂದಿಗ್ಧತೆ ಒದಗಿದೆ. ಈ ಮನೆತನದ ಸುಮಾರು 25 ಮಂದಿ ರಾಜರು ಆಳಿಕೆ ನಡೆಸಿದರು. ಕೊಂಗುಣಿವರ್ಮ (ಸು.325-50) ಈ ಸಂತತಿಯ ಆಳಿಕೆಯ ಸ್ಥಾಪಕ. ಇವನಿಗೆ ದಡಿಗ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವನ ತಮ್ಮ ಒಂದನೆಯ ಮಾಧವ (ಸು.350-75) ಕೊಂಗು ಪ್ರದೇಶವನ್ನು ಗೆದ್ದು ಕೋಲಾರ ಪ್ರದೇಶದಲ್ಲಿ ಆಳುತ್ತಿದ್ದ ಬಾಣರನ್ನು ಸೋಲಿಸಿ ರಾಜ್ಯ

ತಲಕಾಡಿನ ಗಂಗರ ವಂಶಾವಳಿ :

- ಕೊಂಗುಣಿವರ್ಮ ( ಸು. 325 - 50 )
  - ಮಾಧವ I ( ಸು. 350 - 75 )
    - ಆರ್ಯವರ್ಮ ಅಥವಾ ಹರಿವರ್ಮ ಅಥವಾ ಕೃಷ್ಣವರ್ಮ I (ಸು.375-400)
      - ಮಾಧವ II ಸಿಂಹವರ್ಮ ( ಸು. 400 - 20)
      - ವಿಷ್ಣುಗೋಪ ( ಸು. 420 - 40)
        - ಮಾಧವ III ( ಸು. 440- 69)
          - ಅವಿನೀತ ( ಸು. 469- 529)
            - ದುರ್ವಿನೀತ ( ಸು. 529 - 79)
              - ಮುಷ್ಕರ ಸು. ( 579 - 604)
                - ಶ್ರೀವಿಕ್ರಮ (ಸು. 629 - 54)
                  - ಭೂವಿಕ್ರಮ (ಸು. 654 - 79)
                    - ಅರಸಾಣೆ (670 - 79)
                  - ಶಿವಮಾರ I (ಸು. 679 - 725)
                    - ಮಗ, ಹೆಸರು ತಿಳಿದಿಲ್ಲ
                      - ಶ್ರೀಪುರುಷ (ಸು. 725 - 88)
                        - ದುಗ್ಗಮಾರ
                        - ಶಿವಮಾರ II
                          - ಮಾರಸಿಂಹ I (796)
                          - ಪೃಥ್ವೀಪತಿ I
                            - ನನ್ನಿಯ ಗಂಗ
                              - ಪೃಥ್ವಿಯಗಂಗ II
                        - ವಿಜಯಾದಿತ್ಯ
                          - ರಾಚಮಲ್ಲ I (816 - 43)
                            - ನೀತಿಮಾರ್ಗ ಎಱೆಗಂಗ (843 - 70)
                              - ರಾಚಮಲ್ಲ II (870- 919)
                              - ಬೂತುಗ I
                                - ಎಱೆಗಂಗ (886 - 920)
                                  - ನರಸಿಂಹ (920 - 33)
                                  - ರಾಚಮಲ್ಲ III (933 - 36 )
                                  - ಬೂತುಗ II (936 - 61)
                                    - ಮರುಳ (961 - 63 )
                                    - ಮಾರಸಿಂಹ II (963 - 74)
                                      - ರಾಚಮಲ್ಲ (974 - 99)
                                    - ನೀತಿಮಾರ್ಗಗೋವಿಂದರಸ
                        - ಜಯಸಿಂಹ
              - ಪೊಲವೀರ ( ಸು. 604 - 29)
            - ಮಗ, ಹೆಸರು ತಿಳಿದಿಲ್ಲ
      - ವೀರವರ್ಮ

*

ವಿಸ್ತರಿಸಿದ. ದಡಿಗ ಮತ್ತು ಮಾಧವರು ಗಂಗ ರಾಜ್ಯ ಸ್ಥಾಪಕರು ಎಂಬ ಹೇಳಿಕೆ ಸಹ ಇದೆ. ಒಂದನೆಯ ಮಾಧವನ ಮಗ ಹರಿವರ್ಮ (ಸು.375-400) ಅನಂತರ ಅಭಿಷಿಕ್ತನಾದ. ಮಾಧವನಿಗೆ ಮೂವರು ಗಂಡು ಮಕ್ಕಳಿದ್ದರೆಂದೂ ಅವರಲ್ಲಿ ಹರಿವರ್ಮ ತಲಕಾಡಿನಲ್ಲೂ ಕಿರಿಯರಾದ ಕೃಷ್ಣವರ್ಮ ಪರುವಿಯಲ್ಲಿ ಮತ್ತು ಆರ್ಯವರ್ಮ ಕೋಲಾರ ಜಿಲ್ಲೆಯ ಕೈವಾರದಲ್ಲೂ ಸ್ವತಂತ್ರರಾಗಿ ಆಳುತ್ತಿದ್ದರೆಂದು ಕೆಲವು ವಿದ್ವಾಂಸರೂ ಬೇರೆ ಬೇರೆ ಶಾಸನಗಳಲ್ಲಿ ಉಕ್ತವಾಗಿರುವ ಈ ಹೆಸರುಗಳು ಹರಿವರ್ಮನ ಬೇರೆ ಬೇರೆ ನಾಮಾಂಕಿತವಾಗಿರಬೇಕೆಂದು ಮತ್ತೆ ಹಲವು ವಿದ್ವಾಂಸರೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹರಿವರ್ಮನ ಮಗ ಇಮ್ಮಡಿ ಮಾಧವ. ಇವನಿಗೆ ಸಿಂಹವರ್ಮ ಎಂಬ ಹೆಸರೂ ಇತ್ತು. ಇವನು ಪಲ್ಲವ ಸ್ಕಂದವರ್ಮನಿಂದ ಅಭಿಷಿಕ್ತನಾದನೆಂದು ಶಾಸನಗಳು ತಿಳಿಸುತ್ತವೆ. ಗಂಗರಾಜ್ಯವನ್ನು ವಿಸ್ತರಿಸುವಲ್ಲಿ ಇವನ ಪಾತ್ರ ಹಿರಿದು. ಇವನ ತಮ್ಮ ವಿಷ್ಣುಗೋಪ (ಸು.420-40) ಮಾಧವನ ಅನಂತರ ಕೆಲಕಾಲ ರಾಜ್ಯವಾಳಿದ. ಅನಂತರ ವಿಷ್ಣುಗೋಪನ ಮಗ 3ನೆಯ ಮಾಧವ (ಸು.440-69) ಅಥವಾ ತಡಂಗಲ ಮಾಧವ ಆಳಿದ. ಇವನು ಪಲ್ಲವ ಮತ್ತು ಕದಂಬ ರಾಜಮನೆತನಗಳೊಡನೆ ಮೈತ್ರಿಯಿಂದಿದ್ದು ರಾಜ್ಯವನ್ನು ವಿಸ್ತರಿಸಿದ. ಪ್ರಜಾನುರಾಗಕ್ಕೂ ದಕ್ಷ ಆಡಳಿತಕ್ಕೂ ಉದಾರ ಮತೀಯ ನೀತಿಗೂ ಪ್ರಸಿದ್ಧನಾಗಿದ್ದ. ತಡಂಗಲ ಮಾಧವ ಬಹುಶಃ ಕದಂಬ ಕೃಷ್ಣವರ್ಮನ ಸಹೋದರಿಯನ್ನು ವಿವಾಹವಾಗಿದ್ದ. ಇವನ ಮಗ ಅವಿನೀತ (ಸು.469-529) ಅನಂತರ ದೊರೆಯಾದ. ಅವಿನೀತ ಪುನ್ನಾಟ ರಾಜನಾದ ಸ್ಕಂದವರ್ಮನ ಪುತ್ರಿಯಾದ ಜೇಷ್ಠಾದೇವಿಯನ್ನು ವಿವಾಹವಾಗಿದ್ದ.



ಗಂಗರ ಲಾಂಛನ

ಅವಿನೀತನ ತರುವಾಯ ಆಳಿದ ಅವನ ಹಿರಿಯ ಮಗ ದುರ್ವಿನೀತ (ಸು.529-79) ಗಂಗ ಸಂತತಿಯ ಸುಪ್ರಸಿದ್ಧ ಪ್ರಭುಗಳಲ್ಲೊಬ್ಬ. ಅವಿನೀತ ಸಾಯುವ ಮೊದಲು ತನ್ನ ಕಿರಿಯ ರಾಣಿಯ ಪುತ್ರನನ್ನು ಸಿಂಹಾಸನಕ್ಕೆ ಹೆಸರಿಸಿ ಮರಣಹೊಂದಿದ್ದರಿಂದ ದುರ್ವಿನೀತ ತನ್ನ ಹಕ್ಕನ್ನು ಸ್ಥಾಪಿಸಲು ಶ್ರಮಿಸಬೇಕಾಯಿತು. ಸುಮಾರು ಐದು ವರ್ಷಗಳ ಕಾಲ ಯುದ್ಧಗಳು ನಡೆದು ಅಂದರಿ, ಆಲತ್ತೂರು, ಪೊರುಳರೆ ಎಂಬ ಕಡೆಗಳಲ್ಲಿ ಬಹುಶಃ ಪಲ್ಲವರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ತನ್ನ ಸಹೋದರನ ಸಹಾಯಕ್ಕೆ ಧಾವಿಸಿದ ಕದಂಬರನ್ನೂ ಸೋಲಿಸಿದ. ಮಾತಾಮಹನಾದ ಸ್ಕಂದವರ್ಮ ಅಪುತ್ರಕನಾಗಿ ಮರಣಹೊಂದಿದ್ದರಿಂದ ಪುನ್ನಾಟ ದೇಶವೂ ಇವನ ಒಡೆತನಕ್ಕೆ ಸೇರಿಕೊಂಡಿತು. ಇವನ ರಾಜ್ಯ ಕೊಯಮತ್ತೂರಿನಿಂದ ಬಳ್ಳಾರಿ ಜಿಲ್ಲೆಯವರೆಗೂ ಹಬ್ಬಿದ್ದಂತೆ ತೋರುತ್ತದೆ. ಸಮಕಾಲೀನ ದಕ್ಷಿಣ ಭಾರತದಲ್ಲಿ ಈತ ಪ್ರಭಾವಿ ದೊರೆಯಾಗಿದ್ದನಲ್ಲದೆ ವಿದ್ವತ್ಪ್ರೇಮಿಯಾಗಿ ಸ್ವತಃ ಕವಿಯಾಗಿ, ಭಾರವಿ ಮೊದಲಾದ ವಿದ್ವಾಂಸರಿಗೆ ಆಶ್ರಯದಾತನಾಗಿದ್ದ. ದುರ್ವಿನೀತ ಬಾದಾಮಿಯ ಚಳುಕ್ಯರೊಡನೆಯೂ ಸಂಬಂಧ ಬೆಳೆಸಿದ್ದ.

ದುರ್ವಿನೀತನ ಮರಣಾನಂತರ ಅವನ ಮಗ ಮುಷ್ಕರ (ಸು.579-604) ಆಳಿದ. ಇವನು ಕೊಂಗುನಾಡಿನಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಲೆತ್ನಿಸಿದ ಪಾಂಡ್ಯ ಚೇರರ ಪ್ರಯತ್ನವನ್ನು ನಿರರ್ಥಕಗೊಳಿಸಿದ. ಅನಂತರ 10ನೆಯ ಶತಮಾನದ ಶಾಸನವೊಂದರ ಪ್ರಕಾರ, ದುರ್ವಿನೀತನ ಇನ್ನೊಬ್ಬ ಮಗ ಪೊಲವೀರ (ಸು.604-29) ಅಧಿಕಾರ ವಹಿಸಿದ. ಕಾಡುವೆಟ್ಟಿ (ಬಹುಶಃ ಪಲ್ಲವರಾಜ) ಮತ್ತು ವಲ್ಲವರಸ (ಬಹುಶಃ ಚಳುಕ್ಯರಾಜ) ಇವರ ಸಹಾಯದಿಂದ ಈತ ರಾಜ್ಯ ಪಡೆದನೆಂದು ಶಾಸನಗಳು ತಿಳಿಸುತ್ತವೆ. ಈ ಹೊರವಂಶಗಳ ಕೈವಾಡಕ್ಕೆ ಕಾರಣವೇನೆಂದು ತಿಳಿದಿಲ್ಲ. ಪೊಲವೀರನ ಅನಂತರ ಮುಷ್ಕರನ ಮಗ ಶ್ರೀವಿಕ್ರಮ (ಸು.629-54), ಅನಂತರ ಇವನ ಮಗ ಭೂವಿಕ್ರಮ (ಸು.654-79) ಆಳಿದರು. ಮುಷ್ಕರ ಸಿಂಧುರಾಜರ ಪುತ್ರಿಯನ್ನು ವರಿಸಿದ್ದ. ಭೂವಿಕ್ರಮ ಪರಾಕ್ರಮಿಯಾಗಿದ್ದು ಪಲ್ಲವರೊಡನೆ ನಿರಂತರವಾಗಿ ಯುದ್ಧಗಳಲ್ಲಿ ತೊಡಗಿದ್ದ. ಬಹುಶಃ ಈ ಕಾಲದಲ್ಲಿ ಗಂಗರು ಚಳುಕ್ಯರ ಸಾಮಂತತ್ವವನ್ನೂ ಅಥವಾ ಸ್ನೇಹವನ್ನೋ ಬೆಳೆಸಿಕೊಂಡಿದ್ದು ಭೂವಿಕ್ರಮ ಚಳುಕ್ಯ-ಪಲ್ಲವ ಯುದ್ಧಗಳಲ್ಲಿ ಭಾಗವಹಿಸಿರಬೇಕು. ಚಳುಕ್ಯ ಒಂದನೆಯ ವಿಕ್ರಮಾದಿತ್ಯನ ರಾಣಿಯಾದ ಗಂಗ ಮಹಾದೇವಿ ಭೂವಿಕ್ರಮನ ಮಗಳು. ಭೂವಿಕ್ರಮ ಪಲ್ಲವರಾಜನನ್ನು ಅನೇಕ ಸಲ ಸೋಲಿಸಿದುದಲ್ಲದೆ ವಿಲಂದೆ ಎಂಬ ಕದನದಲ್ಲಿ ಪಲ್ಲವರಾಜ ಪರಾಜಿತನಾಗಿ ತಲೆತಪ್ಪಿಸಿಕೊಂಡನೆಂದೂ ಪಲ್ಲವರಾಜನ ಕಂಠಿಹಾರವು ಭೂವಿಕ್ರಮನ ವಶವಾಯಿತೆಂದೂ ಶಾಸನಗಳಿಂದ ತಿಳಿದುಬರುತ್ತದೆ.

ಗಂಗದೊರೆ ಭೂವಿಕ್ರಮನಿಗೆ ಕಟ್ಟಾಣೆ ಎಂಬ ಹೆಸರಿತ್ತೆಂದೂ ಆತನ ಮಗ ಅರಸಾಣೆ ಎಂಬಾತನು ಕೆಲವು ಕಾಲ ರಾಜ್ಯವಾಳಿದನೆಂದೂ ಇತ್ತೀಚೆಗೆ ಶೋಧಿತವಾದ ಆಸಂದಿ ಶಾಸನದಿಂದ (ಕಡೂರು 23) ತಿಳಿದುಬರುತ್ತದೆ. ಈ ಅರಸಾಣೆಯು ನೀತಿಶಾಸ್ತ್ರ, ಇತಿಹಾಸ, ಪುರಾಣಗಳಲ್ಲಿ ಪಾರಂಗತನಾಗಿದ್ದನೆಂದು ಹೇಳಲಾಗಿದೆ. ಇವನು ಬಹುಶಃ 670-79ರ ಅವಧಿಯಲ್ಲಿ ಆಳಿರಬಹುದೆಂಬ ಅಭಿಪ್ರಾಯವಿದೆ. ಇದರಿಂದಾಗಿ ಭೂವಿಕ್ರಮನಿಗೆ ಗಂಡು ಮಕ್ಕಳಿರಲಿಲ್ಲವೆಂಬ ಹಿಂದಿನ ವಿದ್ವಾಂಸರ ಅಭಿಪ್ರಾಯವು ಪುನರ್ವಿಮರ್ಶೆಗೆ ಒಳಗಾಗಬೇಕಾಗಿದೆ.

ಭೂವಿಕ್ರಮನ ತಮ್ಮ ಒಂದನೆಯ ಶಿವಮಾರ ಪಟ್ಟಕ್ಕೆ ಬಂದು 679-725 ವರೆಗೆ ಆಳಿದ. ಒಂದನೆಯ ಶಿವಮಾರನ ಕಾಲದಿಂದ ಗಂಗಸಂತತಿಯ ರಾಜರ ಆಳಿಕೆಯನ್ನು ನಿರ್ಧರಿಸಲು ನಿಖರವಾದ ಆಧಾರಗಳು ದೊರೆಯುತ್ತವೆ. ಶಿಷ್ಟಪ್ರಿಯ, ನವಕಾಮ, ಅವನಿಮಹೇಂದ್ರ, ದೇವರಾಜ ಇತ್ಯಾದಿ ಬಿರುದುಗಳನ್ನು ಶಿವಮಾರ ಹೊಂದಿದ್ದ. ರಾಜ್ಯದ ವೈಭವವನ್ನು ಹೆಚ್ಚಿಸಿದ. ಪಲ್ಲವ ಯುವರಾಜನ ಮಕ್ಕಳಾದ ಪಲ್ಲವಾಧಿರಾಜ, ಪಲ್ಲವೇಳಾರಸ, ತುಪ್ಪುರಾಳರಸ ಇತ್ಯಾದಿಗಳು ಇವನ ಸಾಮಂತರಾಗಿದ್ದರು. ಎಜೆಗಂಗ ಎಂಬ ಇನ್ನೊಬ್ಬ ಮಾಂಡಲಿಕನೂ ಇವನ ಅಧೀನದಲ್ಲಿದ್ದ.

ಒಂದನೆಯ ಶಿವಮಾರನ ಅನಂತರ ಅಭಿಷಿಕ್ತನಾದ ಮೊಮ್ಮಗ ಶ್ರೀಪುರುಷ (ಮುತ್ತರಸ, 725-88) ಗಂಗಸಂತತಿಯ ಪ್ರಮುಖರಾಜರಲ್ಲೊಬ್ಬ. ಬಾಲ್ಯದಲ್ಲಿ ಪ್ರಾಂತ್ಯಾಧಿಕಾರಿಯಾಗಿ ಆಡಳಿತ ಶಿಕ್ಷಣ ಪಡೆದಿದ್ದ. 2ನೆಯ ವಿಕ್ರಮಾದಿತ್ಯ ಪಲ್ಲವರ ಮೇಲೆ ಕೈಗೊಂಡ ದಂಡಯಾತ್ರೆಯಲ್ಲಿ ಶ್ರೀಪುರುಷ ಭಾಗವಹಿಸಿದ್ದ. ನಂದಿವರ್ಮ ಪಲ್ಲವಮಲ್ಲನಿಗೂ ಇವನಿಗೂ ಕದನಗಳು ನಡೆದುವು. ಪಲ್ಲವರು ಇವನ ರಾಜ್ಯದಲ್ಲಿ ಕೋಲಾರದವರೆಗೂ ಮುನ್ನುಗ್ಗಿದರು. ಶ್ರೀಪುರುಷ ಅವರನ್ನು ಹಿಂದೂಡಿದ ತನ್ನ ಪರಾಕ್ರಮದ ಸೂಚಕವಾಗಿ ಇವನು ರಣಭಾಜನ, ಭೀಮಕೋಪ, ಪೆರ್ಮ್ಮಾನಡಿ ಮೊದಲಾದ ಬಿರುದುಗಳನ್ನು ಧರಿಸಿದ್ದ. 757ರ ಹೊತ್ತಿಗೆ ಚಳುಕ್ಯ ರಾಜ್ಯ ರಾಷ್ಟ್ರಕೂಟರ ಕೈಸೇರಿತು. ಆಗ ರಾಷ್ಟ್ರಕೂಟ ಕೃಷ್ಣ ತನ್ನ ಸಾರ್ವಭೌಮತ್ವವನ್ನು ಶ್ರೀಪುರುಷ ಒಪ್ಪುವನೆಂದು ಆಶಿಸಿದ್ದ. ಶ್ರೀಪುರುಷ ರಾಷ್ಟ್ರಕೂಟರ ಅಸ್ತಿತ್ವವನ್ನೇ ಗಮನಕ್ಕೆ ತಂದುಕೊಳ್ಳಲಿಲ್ಲ. ಚಳುಕ್ಯರ ಪಕ್ಷಪಾತಿಗಳಾಗಿದ್ದ ಗಂಗರನ್ನು ಸೋಲಿಸಲು ರಾಷ್ಟ್ರಕೂಟ ಕೃಷ್ಣ ಯುದ್ಧ ಹೂಡಿದ. ಮೊದಲು ಕೃಷ್ಣನ ಸೈನ್ಯವನ್ನು ಬಳ್ಳಾರಿ ಜಿಲ್ಲೆಯ ಕಂಪಿಲಿಯವರೆಗೂ ಅಟ್ಟಿದ. ನೊಳಂಬವಾಡಿಯ ನೊಳಂಬರು ಶ್ರೀಪುರುಷನ ಸಾಮಂತರಾಗಿದ್ದರು. ಇವರು ಸ್ವಲ್ಪಕಾಲ ರಾಷ್ಟ್ರಕೂಟ ಪ್ರಭುತ್ವವನ್ನು ಒಪ್ಪಿಕೊಂಡಿದ್ದರೂ ಮುಂದೆ ಗೋವಿಂದ ಮತ್ತು ಧ್ರುವರ ನಡುವೆ ನಡೆದ

ಅಂತಃಕಲಹಗಳ ಸಮಯದಲ್ಲಿ ಗಂಗರೊಡನೆ ಸೇರಿದರು. ಶ್ರೀಪುರುಷನೂ ಕೈಬಿಟ್ಟುಹೋಗಿದ್ದ ತನ್ನ ರಾಜ್ಯದ ಕೆಲವು ಪ್ರದೇಶಗಳನ್ನು ಪುನಃ ವಶಪಡಿಸಿಕೊಂಡ. ಶ್ರೀಪುರುಷನ ಆಳಿಕೆ ಇರುವವರೆಗೂ ಗಂಗರಾಜ್ಯ ರಾಷ್ಟ್ರಕೂಟರ ಸ್ವಾಧೀನವಾಗಲಿಲ್ಲ. ಅನೇಕ ಯುದ್ಧಗಳು ನಡೆದರೂ ಇವನು ತನ್ನ ರಾಜ್ಯವನ್ನು ಪರಾಕ್ರಮದಿಂದ ರಕ್ಷಿಸಿದ. ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಇವನ ಕಾಲದಲ್ಲಿ ಗಂಗರಾಜ್ಯ ಸುಭಿಕ್ಷದಿಂದ ಕೂಡಿದ್ದು ಶ್ರೀರಾಜ್ಯ ಎಂಬ ಅನ್ವರ್ಥನಾಮವನ್ನು ಪಡೆದಿತ್ತು. ಶ್ರೀಪುರುಷ ಜ್ಞಾನಪ್ರಿಯನಾಗಿದ್ದು ಅನೇಕ ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದ್ದ. ಗಜಶಾಸ್ತ್ರ ಎಂಬ ಗ್ರಂಥವನ್ನು ರಚಿಸಿದ.

ಶ್ರೀಪುರುಷನ ಅನಂತರ ಇವನ ಮಗ ಎರಡನೆಯ ಶಿವಮಾರ (ಸೈಗೊಟ್ಟ, ಸು.788-812) ಪಟ್ಟಕ್ಕೆ ಬಂದ. ರಾಷ್ಟ್ರಕೂಟ ಸಿಂಹಾಸನಕ್ಕಾಗಿ ನಡೆದ ಎರಡನೆಯ ಗೋವಿಂದ ಮತ್ತು ಧ್ರುವ ಇವರ ಕಚ್ಚಾಟದಲ್ಲಿ ಶಿವಮಾರ ಹಿರಿಯನಾದ ಗೋವಿಂದನ ಪಕ್ಷವನ್ನು ವಹಿಸಿದ. ಆದರೆ ಜಯಗಳಿಸಿದ ಧ್ರುವ ಶಿವಮಾರನನ್ನು ಸೋಲಿಸಿ ಅವನನ್ನು ಸೆರೆಯಲ್ಲಿಟ್ಟು ತನ್ನ ಮಗ ಕಂಬಯ್ಯನನ್ನು ಗಂಗವಾಡಿಯ ರಾಜ್ಯಪಾಲನಾಗಿ ನೇಮಿಸಿದ. ಧ್ರುವನ ಅನಂತರ ಕಂಬಯ್ಯನಿಗೂ ಅವನ ತಮ್ಮ ಮೂರನೆಯ ಗೋವಿಂದನಿಗೂ ಸಿಂಹಾಸನಕ್ಕೆ ಸ್ಪರ್ಧೆಯಾದ ಸಂದರ್ಭದಲ್ಲಿ ಗೋವಿಂದ ಕಂಬಯ್ಯನನ್ನು ಎದುರಿಸಲು ಶಿವಮಾರನನ್ನು ಸೆರೆಯಿಂದ ಬಿಡುಗಡೆ ಮಾಡಿ ಪುನಃ ಅವನ ರಾಜ್ಯವನ್ನು ಹಿಂದಕ್ಕೆ ಕೊಟ್ಟ. ಆದರೆ ಶಿವಮಾರ ಕಂಬಯ್ಯನ ಪಕ್ಷವನ್ನು ವಹಿಸಿದ. ಗೋವಿಂದ ತನ್ನ ಸಹೋದರನನ್ನು ಶಿಕ್ಷಿಸಿ ಶಿವಮಾರನನ್ನು ಸೋಲಿಸಿ ಪುನಃ ಸೆರೆಯಲ್ಲಿಟ್ಟ. ಶಿವಮಾರ ಅನೇಕ ವರ್ಷ ರಾಷ್ಟ್ರಕೂಟರ ಸೆರೆಮನೆಯಲ್ಲಿದ್ದ. ಕೊನೆಗೆ ಗೋವಿಂದ ತನ್ನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಕರುಣೆ ತೋರಿ ಅವನನ್ನು ಸೆರೆಯಿಂದ ಬಿಡುಗಡೆ ಮಾಡಿ ಸಿಂಹಾಸನವನ್ನು ಹಿಂದಿರುಗಿಸಿದ. ಈ ಮಧ್ಯೆ ಕೆಲಕಾಲ (ಸು.796) ಶಿವಮಾರನ ಮಗನಾದ ಒಂದನೆಯ ಮಾರಸಿಂಹನೂ ರಾಜನಾಗಿದ್ದಂತೆ ತೋರುತ್ತದೆ. ಎರಡನೆಯ ಶಿವಮಾರನ ಅನಂತರ ಅವನ ತಮ್ಮ ವಿಜಯಾದಿತ್ಯ ಸ್ವಲ್ಪಕಾಲ ರಾಜ್ಯವಾಳಿದ. 816ರಲ್ಲಿ ವಿಜಯಾದಿತ್ಯನ ಮಗನಾದ ಒಂದನೆಯ ರಾಚಮಲ್ಲ ಪಟ್ಟಕ್ಕೆ ಬಂದು 843ರವರೆಗೆ ಆಳಿದ. ಈ ವೇಳೆಗೆ ಗಂಗರಾಜ್ಯದ ಸ್ವಲ್ಪಭಾಗ ರಾಷ್ಟ್ರಕೂಟ ಸೇನಾನಿ ಬಂಕೇಶನ ಅಧೀನದಲ್ಲಿತ್ತು. ರಾಚಮಲ್ಲನೂ ಇವನ ಮಗ ಎರೆಗಂಗನೂ (ಸು.843-69) ಸ್ವಾತಂತ್ರ್ಯಕ್ಕಾಗಿ ಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಇವರ ಆಳಿಕೆಯಲ್ಲಿ ರಾಷ್ಟ್ರಕೂಟರಿಗೂ ಗಂಗರಿಗೂ ಅನೇಕ ಯುದ್ಧಗಳು ನಡೆದವು. ಕೊನೆಗೆ ಅಂದಿನ ರಾಷ್ಟ್ರಕೂಟ ದೊರೆ ಒಂದನೆಯ ಅಮೋಘವರ್ಷ ತನ್ನ ಸೇನಾನಿ ಬಂಕೇಶನನ್ನು ಗಂಗರ ವಿರುದ್ಧ ನಿಯೋಜಿಸಿದ. ರಾಜಾಮಾಡು ಎಂಬಲ್ಲಿ ಭೀಕರ ಕದನವಾಯಿತಾದರೂ ಅಷ್ಟೇನೂ ಪರಿಣಾಮ ಕಾರಿಯಾಗಲಿಲ್ಲ. ಕೊನೆಗೆ ಅಮೋಘವರ್ಷ ತನ್ನ ಕುಮಾರಿಯಾದ ಚಂದ್ರೊಬ್ಬಲಬ್ಬೆಯನ್ನು ಗಂಗರಾಜಕುಮಾರ ಒಂದನೆಯ ಬೂತುಗನಿಗೆ ವಿವಾಹ ಮಾಡಿಕೊಡುವುದರ ಮೂಲಕ ಗಂಗ ರಾಷ್ಟ್ರಕೂಟರಿಗೆ ಸಂಬಂಧಿಸಿದಂತೆ ಹೊಸ ಅಧ್ಯಾಯ ಪ್ರಾರಂಭವಾಗಿ ಹಗೆತನ ಕೊನೆಗೊಂಡು ಮಿತ್ರತ್ವವುಂಟಾಯಿತು.

ಒಂದನೆಯ ನೀತಿಮಾರ್ಗನ ಹಿರಿಯ ಮಗನಾದ ಎರಡನೆಯ ರಾಚಮಲ್ಲ ಅನಂತರದ ರಾಜನಾಗಿ ಅಭಿಷಿಕ್ತನಾಗಿ ಸು.870ರಿಂದ 919ರ ವರೆಗೂ ತರುವಾಯ ಅವನ ತಮ್ಮನ ಮಗನಾದ ಎರಡನೆಯ ನೀತಿಮಾರ್ಗ ಎರೆಯಪ್ಪ ಸುಮಾರು 920ರ ವರೆಗೂ ಆಳಿದರು. ಎರೆಯಪ್ಪ ನೊಳಂಬ ಮಹೇಂದ್ರನನ್ನು ಸೋಲಿಸಿ ಆಶ್ರಿತ ರಾಜನನ್ನಾಗಿ ಮಾಡಿಕೊಂಡ. ಎರೆಯಪ್ಪನ ತರುವಾಯ ಅವನ ಮಗನಾದ ನರಸಿಂಹದೇವ ಸ್ವಲ್ಪಕಾಲ ರಾಜ್ಯವಾಳಿದ. ಅನಂತರ ಮೂರನೆಯ ರಾಚಮಲ್ಲ 933ರಲ್ಲಿ ರಾಜನಾಗಿ 935ರ ವರೆಗೂ ಆಳಿದ. ಇವನ ತಮ್ಮನಾದ ಬೂತುಗ ರಾಷ್ಟ್ರಕೂಟ ರಾಜಕುಮಾರಿಯನ್ನು ವರಿಸಿ ಮೂರನೆಯ ರಾಚಮಲ್ಲನನ್ನು ಗದ್ದುಗೆಯಿಂದ ಓಡಿಸಿ ತಾನೇ ರಾಜನಾಗಿ 936ರಿಂದ 961ರ ವರೆಗೆ ಆಳಿದ. ಇಮ್ಮಡಿ ಬೂತುಗ ಮತ್ತು ರಾಷ್ಟ್ರಕೂಟ ಮೂರನೆಯ ಕೃಷ್ಣ ಇವರು ಚೋಳ ರಾಜ್ಯವನ್ನು ಮುತ್ತಿದರು. ಬೂತುಗ ಚೋಳಸೈನ್ಯವನ್ನು ಸೋಲಿಸಿ ಒಂದನೆಯ ಪರಾಂತಕನ ಮಗನಾದ ಎರಡನೆಯ ಆದಿತ್ಯನನ್ನು ಯುದ್ಧದಲ್ಲಿ ಕೊಂದ. ಪರಾಕ್ರಮಿಯಾದ ಬೂತುಗ ಗಂಗಸಂತತಿಯ ಪ್ರಸಿದ್ಧ ರಾಜರಲ್ಲೊಬ್ಬ. ಬೂತುಗನಿಗೆ ಗಂಗಗಾಂಗೇಯ, ನನ್ನಿಯಗಂಗ ಮೊದಲಾದ ಬಿರುದುಗಳಿದ್ದವು. ಇವನ ಮರಣಾನಂತರ ಉತ್ತರಾಧಿಕಾರಿಯಾದ ಹಿರಿಯ ಮಗ ಮರುಳದೇವ (ಸು.961-63) ಕೆಲವೇ ದಿನಗಳಲ್ಲಿ ಮರಣ ಹೊಂದಿದ್ದರಿಂದ ಎರಡನೆಯ ಮಾರಸಿಂಹ ಅರಸನಾದ (963-74).

ಈತ ಗಂಗ ಸಂತತಿಯ ಅತ್ಯಂತ ಸಮರ್ಥ ಪ್ರಭುಗಳಲ್ಲೊಬ್ಬ. ರಾಷ್ಟ್ರಕೂಟ ಮೂರನೆಯ ಇಂದ್ರನ ಪರವಾಗಿ ಮಾಳವ, ಗುಜರಾತಿನವರೆಗೂ ಯಶಸ್ವಿಯಾಗಿ ದಂಡಯಾತ್ರೆ ಕೈಗೊಂಡು ಗೂರ್ಜರ ರಾಜಾಧಿರಾಜ ಎಂಬ ಬಿರುದನ್ನು ಪಡೆದು ತನ್ನ ರಾಜ್ಯವನ್ನು ವಿಸ್ತರಿಸಿದ. ನೊಳಂಬರನ್ನು ಸೋಲಿಸಿ ನೊಳಂಬಕುಲಾಂತಕ ಎಂಬ ಬಿರುದನ್ನು ಹೊಂದಿದ್ದ. ರಾಷ್ಟ್ರಕೂಟ ಖೊಟ್ಟಿಗನನ್ನು ಸೋಲಿಸಿ ಮಾನ್ಯಖೇಟವನ್ನು ಆಕ್ರಮಿಸಿದ್ದ ಪರಮಾರ ಸೀಯಕನೊಡನೆ ಶ್ರಮದಿಂದ ಹೋರಾಡಿ ಅವನನ್ನು ಓಡಿಸಿದ. ಆದರೆ ರಾಷ್ಟ್ರಕೂಟ ರಾಜ್ಯ ಚಾಳುಕ್ಯ ಇಮ್ಮಡಿ ತೈಲಪನ ವಶವಾದಾಗ ನಾಲ್ಕಡಿ ಇಂದ್ರನಿಗೆ ಬೆಂಬಲವಾಗಿ ನಿಂತು ಅವನಿಗೆ ಬಂಕಾಪುರದಲ್ಲಿ ಪಟ್ಟಗಟ್ಟಿದ. ಆದರೂ ಚಾಳುಕ್ಯ ರಾಜ್ಯ ಪ್ರಬಲವಾಗಿ ಇವನ ಶ್ರಮ ವ್ಯರ್ಥವಾದ್ದರಿಂದ ಕೊನೆಗೆ ಸಲ್ಲೇಖನವಿಧಿಯಿಂದ ಶ್ರವಣಬೆಳಗೊಳದಲ್ಲಿ ನಿಧನನಾದ. ಇವನ ಮಗನಾದ ನಾಲ್ಕನೆಯ ರಾಚಮಲ್ಲ ಸತ್ಯವಾಕ್ಯ (974-99) ಮಾರಸಿಂಹನ ಕಾಲದಿಂದಲೂ ಮಂತ್ರಿಯಾಗಿದ್ದ ಚಾವುಂಡರಾಯನ ನಿಷ್ಠೆ ಮತ್ತು ಸಹಕಾರದಿಂದ ಆ ಕಾಲದಲ್ಲಿ ಉದ್ಭವವಾದ ಅಂತಃಕಲಹಗಳಲ್ಲಿ ಮೇಲ್ಮೆಗಳಿಸಿ ರಾಜನಾದ. ಗಂಗರ ಅನೇಕ ವೈರಿಗಳನ್ನು ಸದೆಬಡಿದ ಚಾವುಂಡರಾಯ ವೈರಿಕುಲಕಾಲದಂಡ, ಭುಜವಿಕ್ರಮ, ಸಮರ ಧುರಂಧರ, ವೀರಮಾರ್ತಾಂಡ ಮೊದಲಾದ ಅನೇಕ ಬಿರುದುಗಳನ್ನು ಧರಿಸಿದ್ದ. ಆದರೆ ಚಾಳುಕ್ಯ ತೈಲಪನು ಗಂಗರನ್ನು ನಿರ್ಮೂಲ ಮಾಡಲು ನಿರ್ಧರಿಸಿ ತುಂಡು ಗಂಗರಸರನ್ನೆಲ್ಲಾ ಸವರಿ ಇವನನ್ನೂ ಅಡಗಿಸಿದ. ರಾಚಮಲ್ಲ ತನ್ನ ರಾಜ್ಯದ ದಕ್ಷಿಣ ಭಾಗವನ್ನು ಮಾತ್ರ ಸು.999ರವರೆಗೆ ಆಳಿದ. ಆದರೆ ಆ ವೇಳೆಗೆ ಪ್ರಬಲರಾಗುತ್ತಿದ್ದ ಚೋಳರು ಆಕ್ರಮಣಕ್ಕೆ ನಾಂದಿಯಾಗಿ ಗಂಗರಾಜ್ಯವನ್ನು ವಶಪಡಿಸಿಕೊಂಡರು. ಗಂಗಸಾಮ್ರಾಜ್ಯ ಕೊನೆಗೊಂಡಿತು. ಅನಂತರ ಕೆಲವು ಗಂಗಸಾಮಂತರು ಚಾಳುಕ್ಯರು ಮತ್ತು ಹೊಯ್ಸಳರ ಅಧೀನದಲ್ಲಿ ಸಣ್ಣ ಪುಟ್ಟ ಪ್ರದೇಶಗಳಲ್ಲಿ ಅಧಿಕಾರಿಗಳಾಗಿ ಇದ್ದುದು ಮಾತ್ರ ಇತಿಹಾಸದಲ್ಲಿ ಕಾಣುತ್ತದೆ.

**ಆಡಳಿತ ವ್ಯವಸ್ಥೆ :** ಗಂಗರ ರಾಜ್ಯ ಕೊಡಗು ಜಿಲ್ಲೆಯಿಂದ ಕೋಲಾರ ಜಿಲ್ಲೆಯವರೆಗೂ ಕೊಯಮುತ್ತೂರು-ಸೇಲಂ ಜಿಲ್ಲೆಗಳಿಂದ ಬಳ್ಳಾರಿ, ಧಾರವಾಡ ಜಿಲ್ಲೆಗಳವರೆಗೂ ಇವರ ಪ್ರವರ್ಧಮಾನ ಕಾಲದಲ್ಲಿ ವ್ಯಾಪಿಸಿತ್ತು. ಪ್ರಾರಂಭದಿಂದ ಕೊನೆಯವರೆಗೂ ತಲಕಾಡು ಇವರ ಮುಖ್ಯ ರಾಜಧಾನಿಯಾಗಿತ್ತು. ಚನ್ನಪಟ್ಟಣದ ಬಳಿಯ ಮಂಕುಂದ ಮತ್ತು ನೆಲಮಂಗಲ ತಾಲ್ಲೂಕಿನ ಮಣ್ಣೆ (ಮಾನ್ಯಪುರ) ಹಲವು ಕಾಲ ಉಪರಾಜಧಾನಿಗಳಾಗಿದ್ದವು. ಗಂಗ ಸಂತತಿಯ ರಾಜರು ಆಡಳಿತಕ್ಕೆ ಸಂಬಂಧಿಸಿದಂತೆ ಉದಾತ್ತ ಧ್ಯೇಯಗಳನ್ನು ಹೊಂದಿದ್ದರು. ರಾಜನೀತಿಯಲ್ಲಿ ಪರಿಣತರಾಗಿದ್ದರು. ಪ್ರಜೆಗಳ ಹಿತರಕ್ಷಣೆಗಾಗಿಯೇ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದುದಾಗಿ ಇವರ ಶಾಸನಗಳಲ್ಲಿ ಸಾರಲಾಗಿದೆ. ಮಾಧವ, ಹರಿವರ್ಮ, ಅವಿನೀತ, ದುರ್ವಿನೀತ, ಶ್ರೀಪುರುಷ ಮೊದಲಾದ ಈ ಸಂತತಿಯ ಪೂರ್ವಾರ್ಧದಲ್ಲಿ ಆಳಿದ ರಾಜರು ವೈದಿಕಮತಾವಲಂಬಿ ಗಳಾಗಿದ್ದರು. ಆದರೂ ಇತರ ಪಂಥಗಳಿಗೂ ಉದಾರ ಪ್ರೋತ್ಸಾಹ ನೀಡಿದರು. ವರ್ಣಾಶ್ರಮ ಧರ್ಮಪರಿಪಾಲನೆ, ಗೋಬ್ರಾಹ್ಮಣಸಂರಕ್ಷಣೆ, ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮೊದಲಾದ ರಾಜನ ಕರ್ತವ್ಯಗಳನ್ನು ಪಾಲಿಸುವ ಇವರು ತಮ್ಮನ್ನು ಧರ್ಮ ಮಹಾರಾಜ ಎಂದು ಕರೆದುಕೊಂಡಿದ್ದಾರೆ (ರಾಜತ್ವ ವಂಶಪಾರಂಪರ್ಯವಾಗಿತ್ತು. ಹಿರಿಯ ಮಗ ಉತ್ತರಾಧಿಕಾರಿಯಾಗುತ್ತಿದ್ದ). ರಾಜ ರಾಜ್ಯದ ಸರ್ವಶ್ರೇಷ್ಠ ನ್ಯಾಯಮೂರ್ತಿ ಯಾಗಿದ್ದ. ಸೈನಿಕಪಡೆಯ ಸರ್ವೋಚ್ಚ ದಂಡನಾಯಕನಾಗಿದ್ದು ಯುದ್ಧಗಳಲ್ಲಿ ಸ್ವತಃ ಸೈನ್ಯವನ್ನು ನಡೆಸುತ್ತಿದ್ದ. ದುರ್ವಿನೀತ, ಇಮ್ಮಡಿ ಬೂತುಗ, ಮೂರನೆಯ ಮಾರಸಿಂಹ ಮೊದಲಾದ ಗಂಗರಾಜರು ರಣರಂಗದಲ್ಲಿ ಅಜೇಯರಾಗಿದ್ದರು.

ರಾಜ್ಯದ ಅಭ್ಯುದಯಕ್ಕಾಗಿ ಗಂಗ ಪ್ರಭುಗಳು ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರು. ಜ್ಞಾನವರ್ಧನೆಗಾಗಿ ಅಗ್ರಹಾರಗಳನ್ನು ಸ್ಥಾಪಿಸುತ್ತಿದ್ದರು. ಬ್ರಾಹ್ಮಣ ಮತ್ತು ಜೈನವಿದ್ವಾಂಸರಿಗೆ ಪಕ್ಷಪಾತವಿಲ್ಲದಂತೆ

ಉದಾರ ದಾನದತ್ತಿಗಳನ್ನು ನೀಡುತ್ತಿದ್ದರು. ಈ ಸಂತತಿಯ ಅನೇಕ ಪ್ರಭುಗಳು ಸ್ವತಃ ಪಂಡಿತರೂ ಕವಿಗಳೂ ಆಗಿದ್ದು ಅನೇಕ ಗ್ರಂಥಗಳನ್ನು ರಚಿಸಿದರು. ವ್ಯವಸಾಯಕ್ಕಾಗಿ ಕೆರೆಕಾಲುವೆಗಳನ್ನು ನಿರ್ಮಿಸಿದ್ದರು. ಕ್ರಮಬದ್ಧವಾದ ತೆರಿಗೆಗಳನ್ನು ಮಾತ್ರ ಜಾರಿಗೆ ತರುವುದರ ಮೂಲಕ ವ್ಯಾಪಾರವನ್ನು ಪ್ರೋತ್ಸಾಹಿಸಿದರು. ಗಂಗ ಪ್ರಭುಗಳು ನಿರಂಕುಶಾಧಿಕಾರಿಗಳಾಗಿ ವರ್ತಿಸುತ್ತಿರಲಿಲ್ಲ. ರಾಜನಿಗೆ ಸಹಾಯಕವಾಗಿ ಮಂತ್ರಾಲೋಚನ ಸಭೆಯಿತ್ತು. ಚಾವುಂಡರಾಯ, ಅಸಗಯ್ಯ, ಅಮಾವಾಸಯ್ಯ ಮೊದಲಾದ ಅನೇಕ ಸಚಿವರ ಮತ್ತು ದಂಡನಾಯಕರ ಹೆಸರುಗಳೂ ಅವರ ದಕ್ಷತೆಯೂ ಶಾಸನಗಳಿಂದ ತಿಳಿದುಬರುತ್ತದೆ. ರಾಜ್ಯವನ್ನು ವಿಷಯ (ನಾಡು), ಕಂಪಣ ಮೊದಲಾಗಿ ವಿಂಗಡಿಸಲಾಗಿತ್ತು. ಗ್ರಾಮ ಆಡಳಿತದ ಚಿಕ್ಕ ಘಟಕವಾಗಿತ್ತು. ಗಂಗರಾಜ್ಯ ಗಂಗವಾಡಿ 96,000 ಎಂದು ಕರೆಯಲ್ಪಡುತ್ತಿತ್ತು. ಅದರಲ್ಲಿನ ಹಲವಾರು ಉಪವಿಭಾಗಗಳು, ಪುನ್ನಾಟ 6000, ಕೈವಾರ ವಿಷಯ, ಮುದುಕೊಟ್ಟೂರು ವಿಷಯ, ಕೆರೆಗುಂದನಾಡು 30, ಆವನಿಯನಾಡು 30 ಹಾಗೂ ಪೋಕುಂದ ಎಡೆತೊರೆನಾಡು ಮೊದಲಾದ ವಿಭಾಗಗಳ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿವೆ. ಯುವರಾಜ ಮತ್ತು ಇತರ ರಾಜಕುಮಾರರನ್ನು ಪ್ರಾಂತ್ಯಾಧಿಕಾರಿಗಳಾಗಿ ನೇಮಿಸಲಾಗುತ್ತಿತ್ತು. ಗಂಗಮನೆತನದ ರಾಣಿಯರೂ ಆಡಳಿತದಲ್ಲಿ ಭಾಗವಹಿಸುತ್ತಿದ್ದರು. ಶ್ರೀಪುರುಷನ ರಾಣಿಯರು ಪ್ರಾಂತ್ಯಗಳ ಆಡಳಿತಮುಖ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಗಾವುಣ್ಡ, ಪೆರ್ಗಡೆ ಮೊದಲಾದವರು ಸಣ್ಣ ಘಟಕಗಳ ಅಧಿಕಾರಿಗಳಾಗಿರುತ್ತಿದ್ದರು. ಗ್ರಾಮಸಭೆಗಳು ಊರ್ಜಿತ ಸ್ಥಿತಿಯಲ್ಲಿದ್ದವು. (ಜಿ.ಆರ್.ಆರ್.)

**ಆರ್ಥಿಕ - ಸಾಮಾಜಿಕ ಸ್ಥಿತಿ:** ಈ ಕಾಲದ ಕ್ಷಾತ್ರಸಾಧನೆಗಳನ್ನು ಗಮನಿಸಿದರೆ ಇದಕ್ಕೆ ಪೋಷಕವಾದ ಭದ್ರವಾದ ಸಮೃದ್ಧವಾದ ಆರ್ಥಿಕಸ್ಥಿತಿ ವ್ಯವಸ್ಥೆಗಳು ಇದ್ದಂತೆ ತೋರುತ್ತದೆ. ವ್ಯವಸಾಯ ಮುಖ್ಯವಾದ ಕಸಬಾಗಿತ್ತು. ರಾಜನೂ ಇತರರೂ ಕೆರೆಕಟ್ಟೆಗಳನ್ನು ಕಟ್ಟಿಸಿ ವ್ಯವಸಾಯಕ್ಕೆ ಅನುವಾಗುತ್ತಿದ್ದರು. ಸಾಮಾನ್ಯವಾಗಿ ಪ್ರತಿ ಗ್ರಾಮದಲ್ಲೂ ಒಂದು ಕೆರೆಯಾದರೂ ಇರುತ್ತಿತ್ತು. ಬತ್ತ, ರಾಗಿ, ಜೋಳ, ಹತ್ತಿ ಇತ್ಯಾದಿಗಳು ಮುಖ್ಯ ಬೆಳೆಗಳಾಗಿದ್ದುವು. ತೆಂಗು, ಹಲಸು, ಅಡಕೆ ಮುಂತಾದವುಗಳ ಬೆಳೆ ಹಾಗೂ ಅರಣ್ಯ ಉತ್ಪನ್ನಗಳನ್ನು ರೂಢಿಸುವುದು ಸಹ ಇತ್ತು. ವ್ಯವಸಾಯದ ಜೊತೆಗೆ ಪಶುಸಂಪತ್ತು ರೂಢಿತವಾಗುತ್ತಿತ್ತು. ಮಹಿಷಿ, ಗೋ, ಅಶ್ವ, ಕುಕ್ಕುಟಗಳು ರಾಜ್ಯದಲ್ಲಿ ಸಮೃದ್ಧವಾಗಿದ್ದುವು ಎಂದು ಒಂದು ಶಾಸನ ತಿಳಿಸುತ್ತದೆ. ಆರ್ಥಿಕ ಉತ್ಪಾದನಾ ರಂಗದಲ್ಲಿ ಅನೇಕ ಕಸಬುಗಳು ಅನುಸರಣೆಯಲ್ಲಿದ್ದುವು. ನೇಯ್ಗೆ, ಕಮ್ಮಾರಿಕೆ ಇತ್ಯಾದಿಗಳು ಅವುಗಳಲ್ಲಿ ಮುಖ್ಯ. ದೇಶದಲ್ಲಿ ಭದ್ರವಾದ ಸ್ಥಿತಿ ಇದ್ದುದರಿಂದ ವ್ಯಾಪಾರದ ಹೆಚ್ಚಳವಿತ್ತು. ಆಂತರಿಕ ಹಾಗೂ ಹೊರನಾಡಿನೊಡನೆ ವ್ಯಾಪಾರ ಚೆನ್ನಾಗಿತ್ತೆಂಬುದಕ್ಕೆ ಶಾಸನದಲ್ಲಿ ದೊರಕಿರುವ ಸರಕುಗಳ ಮತ್ತು ತೆರಿಗೆಗಳ ವಿಷಯಗಳಿಂದ ವ್ಯಕ್ತವಾಗುತ್ತದೆ. ಗಂಗರಾಜ್ಯದ ಜನ ಆಗ್ನೇಯ ಏಷ್ಯ ಮೊದಲಾದ ದೇಶಗಳೊಡನೆಯೂ ಸಂಬಂಧವಿಟ್ಟುಕೊಂಡಿದ್ದಿರಬೇಕೆಂಬುದಕ್ಕೆ ಸಾಂದರ್ಭಿಕ ಸಾಕ್ಷ್ಯಗಳು ದೊರಕುತ್ತವೆ. ರಾಜರು ವಿವಿಧ ಮೌಲ್ಯದ ನಾಣ್ಯಗಳನ್ನು ಹೊರಡಿಸುವುದು, ರಸ್ತೆ, ಸೇತುವೆ ಮೊದಲಾದುವನ್ನು ನಿರ್ಮಿಸುವುದು ಇತ್ಯಾದಿ ಕಾರ್ಯಗಳಿಂದ ವ್ಯಾಪಾರಕ್ಕೆ ಉತ್ತೇಜನ ನೀಡುತ್ತಿದ್ದರು.

ನಾಡಿನ ಹಿಂದು ಸಮಾಜದಲ್ಲಿ ವರ್ಣವ್ಯವಸ್ಥೆ ರೂಢಿಯಲ್ಲಿತ್ತು. ಅಲ್ಲದೆ ಜೈನರೂ ಪ್ರಾಯಶಃ ಸ್ವಲ್ಪ ಸಂಖ್ಯೆಯಲ್ಲಿ ಬೌದ್ಧರೂ ಇದ್ದರು. ಈ ವರ್ಣ ವ್ಯವಸ್ಥೆಯ ಜೊತೆಗೆ ಆರ್ಥಿಕ ಸ್ಥಾನಮಾನಗಳಿಂದಾಗಿ ಸಮಾಜ ಹಲವು ಪಂಗಡ ಜಾತಿಗಳಾಗಿ ವಿಭಜಿತವಾಗಿದ್ದರೂ ಅವುಗಳಲ್ಲಿ ಪರಸ್ಪರಾವಲಂಬನೆ ಇತ್ತು. ಈ ಸಮಾಜ ವ್ಯವಸ್ಥೆಯನ್ನು ಉಳಿಸಲು ಗಂಗರಾಜರು ಶ್ರಮಿಸುತ್ತಿದ್ದರು. ಈ ಅರಸರ ಹಲವು ಶಾಸನಗಳಲ್ಲಿ ಇವರು ಅಧಿರಕ್ಷಿತ ಚಾತುರ್ವರ್ಣಾಶ್ರಮರು ಎಂದು ಕರೆದುಕೊಂಡಿದ್ದಾರೆ. ಈ ಜಾತಿಕುಲಗಳವರು ತಮ್ಮ ತಮ್ಮ ಕರ್ತವ್ಯಗಳನ್ನು ರೂಢಿಸಿಕೊಂಡು ಹೋಗಬೇಕೆಂಬ ಕಲ್ಪನೆ ಈ ಕಾಲದಲ್ಲಿ ಬಲವಾಗಿತ್ತು. ಪಿತೃಪ್ರಧಾನವಾದ ಅವಿಭಕ್ತ ಕುಟುಂಬ ಪದ್ಧತಿ ಈ ಕಾಲದಲ್ಲಿ ಸಾಮಾನ್ಯವಾಗಿತ್ತು. ಸ್ತ್ರೀಯರ ಸ್ಥಾನಮಾನಗಳು ಉತ್ತಮವಾಗಿದ್ದುವು. ಕೆಲವೆಡೆ ಸ್ತ್ರೀಯರೇ ಅಧಿಕಾರಿಗಳಾಗಿರುತ್ತಿದ್ದುದೂ ಸ್ವಂತವಾಗಿ ದಾನಗಳನ್ನು ನೀಡಿರುವುದೂ ಇವರಿಗಿದ್ದ ಉನ್ನತ ಸ್ಥಾನದ ಸೂಚಕವಾಗಿವೆ. ಸತ್ಯಶೀಲತೆ, ಸ್ವಾಮಿನಿಷ್ಠೆ, ಶೌರ್ಯ, ತಾಳ್ಮೆ ಈ ವಿಶಿಷ್ಟ ಗುಣಗಳನ್ನು ರೂಢಿಸಬೇಕೆಂಬುದು ಸಮಾಜಜೀವನದ ಮೌಲ್ಯವಾಗಿತ್ತು. ಕೀಳ್ಗುಂಟೆ, ವೇಳೆವಾಳಿ - ಈ ಪದ್ಧತಿಗಳಲ್ಲಿ ಇಂಥ ಮೌಲ್ಯಗಳ ವೀರಪ್ರತಿಪಾದನೆಯನ್ನು ಕಾಣಬಹುದಾಗಿದೆ. ಸಾಮಾನ್ಯವಾಗಿ ಜನ ಸೊಂಟದಿಂದ ಕೆಳಕ್ಕೆ ಮಾತ್ರ ಬಟ್ಟೆ ಧರಿಸುತ್ತಿದ್ದುದು, ಆಭರಣ ಪ್ರಿಯರಾಗಿದ್ದುದು ಅಂದಿನ ಶಿಲ್ಪಗಳಿಂದ ವ್ಯಕ್ತವಾಗುತ್ತದೆ. ಬೇಟೆ, ಕಂದುಕ ಕ್ರೀಡೆ ಇತ್ಯಾದಿ ಹವ್ಯಾಸಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. *

ಈ ಕಾಲದಲ್ಲಿ ದೇವಾಲಯಗಳು, ಮಠಗಳು ಮತ್ತು ಅಗ್ರಹಾರಗಳು ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದುವು. ಇಂಥ ಸಂಸ್ಥೆಗಳಲ್ಲಿ ಆಯಾ ಧರ್ಮಕ್ಕೆ ಸಂಬಂಧಿಸಿದ ವಿಶಿಷ್ಟ ವ್ಯಾಸಂಗಕ್ಕೆ ಅವಕಾಶವಿತ್ತು. ವೈದಿಕ ವಿದ್ಯಾಕೇಂದ್ರಗಳಲ್ಲಿ ವೇದಗಳು, ಉಪನಿಷತ್ತುಗಳು, ಪುರಾಣಗಳು, ಧರ್ಮಶಾಸ್ತ್ರಗಳು ಹಾಗೂ ವ್ಯಾಕರಣ, ತರ್ಕ, ವೈದ್ಯ ಮೊದಲಾದ ವಿಷಯಗಳಲ್ಲಿ ವ್ಯಾಸಂಗಕ್ಕೆ ಅವಕಾಶವಿದ್ದಿತ್ತು. ಬೌದ್ಧ, ಜೈನ ಹಾಗೂ ಹಿಂದು ವಿದ್ವಾಂಸರು ತಮ್ಮ ತಮ್ಮ ಧರ್ಮಗಳ ಪ್ರಚಾರದಲ್ಲಿ ತೊಡಗಿದ್ದರಿಂದ ಅವರು ಎಲ್ಲ ಧರ್ಮಗಳ ತತ್ತ್ವವನ್ನೂ ಅಭ್ಯಸಿಸುತ್ತಿದ್ದು ಆಗಾಗ ಪರಸ್ಪರ ವಾದಗಳೂ ನಡೆಯುತ್ತಿದ್ದವು. ಮುಂದುವರಿದ ವ್ಯಾಸಂಗಕ್ಕೆಂದೇ ಮೀಸಲಾದ ಬ್ರಹ್ಮಪುರಿಗಳೂ ಘಟಿಕಾಸ್ಥಾನಗಳೂ ಇದ್ದವು. ಒಂದನೆಯ ಶಿವಮಾರನ ಹಲ್ಲೆಗೆರೆ ಶಾಸನದಲ್ಲಿ ಉಲ್ಲೇಖಿಸಲಾಗಿರುವ ಘಟಿಕಾಸ್ಥಾನದಲ್ಲಿ ವ್ಯಾಸಂಗಕ್ಕೆ ಸಂಬಂಧಿಸಿದ ವಿವರಗಳು ದೊರೆಯುತ್ತವೆ. ಅಂಥ ಸ್ಥಳಗಳಲ್ಲಿ ವೇದಾರ್ಥ, ವಾಕ್ಯಾರ್ಥ, ಶಾಸ್ತ್ರಾರ್ಥಕ್ಕೆ ಸಂಬಂಧಿಸಿದ ವಿಶೇಷ ಜಿಜ್ಞಾಸೆಗಳೂ ಚರ್ಚೆಗಳೂ ನಡೆಯುತ್ತಿದ್ದವು. ವೈಷ್ಣವ ಕಾಳಾಮುಖ ಜೈನ ಹಾಗೂ ಬೌದ್ಧ ಪಂಥಗಳಿಗೆ ಸಂಬಂಧಿಸಿದ ವಿದ್ಯಾಕೇಂದ್ರಗಳು ಸ್ಥಾಪಿತವಾಗಿದ್ದು ಅವುಗಳ ಮೇಲ್ಮೆಗಾಗಿ ಗಂಗರಸರು ವಿಶೇಷ ಪ್ರೋತ್ಸಾಹ ನೀಡಿದರು. ತಲಕಾಡು, ಶ್ರವಣಬೆಳಗೊಳ, ಬಂಕಾಪುರ ಮತ್ತು ಇತರ ಅನೇಕ ಸ್ಥಳಗಳು ಜ್ಞಾನಕೇಂದ್ರಗಳಾಗಿದ್ದವು. ಗಂಗ ಅರಸರೇ ವಿದ್ಯಾಭಿಮಾನಿಗಳಾಗಿದ್ದು, ಆ ಕಾಲದಲ್ಲಿ ಅನೇಕ ಬ್ರಾಹ್ಮಣರಿಗೂ ವಿದ್ವಾಂಸರಿಗೂ ನಿರ್ಬಾಧಿತವಾಗಿ ಪಾಂಡಿತ್ಯವನ್ನು ಮುಂದುವರಿಸಲೋಸುಗ ಅಗ್ರಹಾರಗಳನ್ನು ನಿರ್ಮಿಸಿಕೊಡಲಾಯಿತು. ಹಲವಾರು ಸಂದರ್ಭಗಳಲ್ಲಿ ವಿದ್ವಾಂಸರಿಗೆ ಪ್ರೋತ್ಸಾಹ ನೀಡಲು ಗ್ರಾಮಗಳನ್ನು, ಭೂಮಿಯನ್ನು ಸರ್ವಮಾನ್ಯವಾಗಿ ನೀಡಲಾಗುತ್ತಿತ್ತು.

ಈ ಕಾಲದಲ್ಲಿ ಬೌದ್ಧ ಮತ್ತು ಜೈನಧರ್ಮಗಳು ಕನ್ನಡನಾಡಿನಲ್ಲಿ ಪ್ರಚಾರದಲ್ಲಿದ್ದವು. ವೇದ ಉಪನಿಷತ್ತುಗಳು ಧರ್ಮಶಾಸ್ತ್ರಗಳು ಮತ್ತು ವೇದವಾಙ್ಮಯಕ್ಕೆ ಸೇರಿದ ಇತರ ಕೃತಿಗಳು ಗಂಗರ ಆಳಿಕೆಯ ಪ್ರಾರಂಭದ ಕಾಲದಿಂದಲೂ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈ ಸಂತತಿಯ ರಾಜರು ಪ್ರಾರಂಭದಿಂದ 8ನೆಯ ಶತಮಾನದ ಉತ್ತರಾರ್ಧದವರೆಗೂ ಹಿಂದುಮತೀಯರಾಗಿದ್ದು ಶೈವ ಮತ್ತು ವೈಷ್ಣವಪಂಥಾವಲಂಬಿಗಳಾಗಿದ್ದರು.

ಜೈನಧರ್ಮವೂ ವೈದಿಕ ಧರ್ಮದಂತೆ ಗಂಗವಾಡಿಯಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಎರಡನೆಯ ಶಿವಮಾರ ಈ ವಂಶದವರಲ್ಲಿ ಜೈನಪಂಥವನ್ನು ಸ್ವೀಕರಿಸಿದ ಪ್ರಪ್ರಥಮ ರಾಜ. ಆ ಕಾಲದಿಂದ ಈ ಧರ್ಮಕ್ಕೆ ಹೆಚ್ಚು ರಾಜಪ್ರೋತ್ಸಾಹ ದೊರಕಿದರೂ ರಾಜರ ಉದಾರ ಧಾರ್ಮಿಕ ನೀತಿಯಿಂದಾಗಿ ಈ ಹಿಂದೆಯೂ ಇದಕ್ಕೆ ಪುರಸ್ಕಾರವಿತ್ತು. ಶ್ರವಣಬೆಳಗೊಳ ಕನ್ನಡ ನಾಡಿನಲ್ಲಿ ಜೈನಧರ್ಮದ ಅತ್ಯಂತ ಪ್ರಸಿದ್ಧ ಕೇಂದ್ರವಾಗಿತ್ತು. ಶಿವಮಾರ ಶ್ರವಣಬೆಳಗೊಳ ಮತ್ತು ಇತರ ಕಡೆಗಳಲ್ಲಿ ಬಸದಿಗಳನ್ನು ಕಟ್ಟಿಸಿದ. ಜೈನ ಸಂನ್ಯಾಸಿ ಮತ್ತು ಸಂನ್ಯಾಸಿನಿಯರ ವಿವರಗಳನ್ನು ಒಳಗೊಂಡಿರುವ ಅನೇಕ ಶಾಸನಗಳು ಈ ಕಾಲದಲ್ಲಿ ಜೈನಧರ್ಮಕ್ಕಿದ್ದ ಹೆಚ್ಚಳದ ಸ್ಥಾನದ ಸೂಚಕವಾಗಿವೆ. ಕೆಲವೆಡೆಗಳಲ್ಲಿ ಗಂಗವಾಡಿ ಜೈನಧರ್ಮದ ಆಗರವೆಂಬ ಮಾತು ಸಹ ಬರುತ್ತದೆ. ಮೂರನೆಯ ಮಾರಸಿಂಹ ಜೈನವಿಧಿಯಾದ ಸಲ್ಲೇಖನವ್ರತದಿಂದ ಮರಣಹೊಂದಿದ. ಅವನ ಕಾಲದ ಶಾಸನಗಳಲ್ಲಿ ಪ್ರಪ್ರಥಮವಾಗಿ ಸಿಂಹನಂದಿ ಹಾಗೂ ಗಂಗರಾಜ್ಯ ಸ್ಥಾಪನೆಗೆ ಸಂಬಂಧಿಸಿದ ಐತಿಹ್ಯ ವರ್ಣಿತವಾಗಿದೆ. ಚಾವುಂಡರಾಯ ಕನ್ನಡನಾಡಿನ ಅಗ್ರಗಣ್ಯ

ಜೈನರಲ್ಲೊಬ್ಬನಾಗಿದ್ದು ಮಂತ್ರಿ ಮತ್ತು ದಂಡನಾಯಕನಾಗಿ ಕೊನೆಯ ಮೂರು ಜನ ಗಂಗ ಪ್ರಭುಗಳಿಗೆ ಸೇವೆ ಸಲ್ಲಿಸಿದ.

**ಲಲಿತಕಲೆ-ಸಾಹಿತ್ಯ :** ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿಗಳು ಈ ಕಾಲದಲ್ಲಿ ಗಂಗರಾಜ್ಯದಲ್ಲಿ ಪ್ರಚಲಿತವಾಗಿದ್ದ ಬಗ್ಗೆ ಶಾಸನದಲ್ಲಿ ಅಲ್ಪಸ್ವಲ್ಪ ಮಾಹಿತಿಗಳು ದೊರಕಿದರೂ ಹೆಚ್ಚಿನ ವಿಷಯಗಳು ತಿಳಿಯುವುದಿಲ್ಲ. ದೇವಾಲಯಗಳಲ್ಲಿ ದೇವದಾಸಿಯರಿದ್ದು ಸಂಗೀತ, ನೃತ್ಯ ಸೇವೆ ಮಾಡುತ್ತಿದ್ದರು. ರಾಜಾಸ್ಥಾನಗಳು ಈ ಕಲೆಗಳಿಗೆ ಪೋಷಕವಾಗಿದ್ದವಲ್ಲದೆ ರಾಜರೂ ಸ್ವತಃ ಈ ಹಲವು ಕಲೆಗಳಲ್ಲಿ ನಿಷ್ಣಾತರಾಗಿದ್ದರು. ಒಂದು ಶಾಸನದಲ್ಲಿ ಚಿತ್ರನಿರ್ಮಾಣದಲ್ಲಿ ನಿಪುಣನಾಗಿದ್ದವನೊಬ್ಬನ ಪ್ರಸ್ತಾಪ ಬರುತ್ತದೆ. ಅಲ್ಲಲ್ಲಿ ಕೊಳಲು, ಕಟುಮುಖ, ಸಮುದ್ರಘೋಷ, ತ್ರಿವಳಿ ಮೊದಲಾದ ವಾದ್ಯಗಳ ಪ್ರಸ್ತಾಪ ದೊರಕುತ್ತದೆ.

ಗಂಗರ ಆಳಿಕೆಯಲ್ಲಿ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಗ್ರಂಥಗಳು ರಚನೆಯಾದವು. ಗಂಗಪ್ರಭುಗಳು ಜ್ಞಾನಪಕ್ಷಪಾತಿಗಳಾಗಿದ್ದುದಲ್ಲದೆ ಅವರಲ್ಲಿ ಅನೇಕರು ಸ್ವತಃ ವಿಶೇಷ ಪಾಂಡಿತ್ಯ ಹೊಂದಿದ್ದು ಗ್ರಂಥರಚನೆ ಮಾಡಿರುವರು. ಅನೇಕ ರಾಜರು ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಪುರಾಣಗಳು, ಸಂಗೀತ ಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳಲ್ಲಿ ವಿಶೇಷ ಪಾಂಡಿತ್ಯ ಹೊಂದಿದ್ದುದಾಗಿ ತಿಳಿದುಬರುತ್ತದೆ. ಇಮ್ಮಡಿ ಮಾಧವ ದತ್ತಕ ಸೂತ್ರಕ್ಕೆ (ಪ್ರಾಯಶಃ ಕಾಮಶಾಸ್ತ್ರ ಗ್ರಂಥ) ವೃತ್ತಿಯನ್ನು ಬರೆದವನೆಂದು ಶಾಸನೋಲ್ಲೇಖವಿದೆ. ದುರ್ವಿನೀತ ಜ್ಞಾನದ ಅನೇಕ ಶಾಖೆಗಳಲ್ಲಿ ಪಾಂಡಿತ್ಯ ಪಡೆದಿದ್ದು ಗುಣಾಢ್ಯನ ವಡ್ಡಕಥೆಯನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿದುದಲ್ಲದೆ ಭಾರವಿಯ ಕಿರಾತಾರ್ಜುನೀಯದ 15 ಸರ್ಗಗಳಿಗೆ ಅಥವಾ 15ನೆಯ ಸರ್ಗಕ್ಕೆ ಟೀಕೆಯನ್ನು ರಚಿಸಿದ. ಶಬ್ದಾವತಾರವನ್ನು ಸಹ ದುರ್ವಿನೀತನೇ ಬರೆದನೆಂಬುದಾಗಿಯೂ ತಿಳಿದುಬರುತ್ತದೆ. ಮಿಗಿಲಾಗಿ ದುರ್ವಿನೀತ ಕನ್ನಡದ ಅತಿಪ್ರಾಚೀನ ಗದ್ಯರಚನೆಕಾರರಲ್ಲಿ ಒಬ್ಬನೆಂದು ಕವಿರಾಜಮಾರ್ಗದಿಂದ ತಿಳಿದುಬರುತ್ತದೆ. ಪ್ರಸಿದ್ಧ ವಿದ್ವಾಂಸರೂ ಕವಿಗಳೂ ಆದ ಪೂಜ್ಯಪಾದ ಮತ್ತು ಭಾರವಿ ದುರ್ವಿನೀತನ ಆಸ್ಥಾನದಲ್ಲಿ ಮನ್ನಣೆ ಪಡೆದಿದ್ದರು. ಶ್ರೀಪುರುಷ ಗಜಶಾಸ್ತ್ರವೆಂಬ ಗ್ರಂಥದ ಕರ್ತೃ. ಶಿವಮಾರ ಗಜಾಷ್ಟಕವೆಂಬ ಕೃತಿಯನ್ನು ರಚಿಸಿದ್ದು, ಇದು ಒನಕೆವಾಡುಗಳಂತೆ ಜನಪ್ರಿಯವಾಗಿತ್ತಂತೆ. ಒಂದನೆಯ ಗುಣವರ್ಮ ಎಱೆಯಪ್ಪನ ಆಸ್ಥಾನ ಕವಿಯಾಗಿದ್ದನೆಂದು ತಿಳಿದುಬರುತ್ತದೆ. ಮೂರನೆಯ ಮಾರಸಿಂಹ ವ್ಯಾಕರಣ, ತರ್ಕ, ತತ್ತ್ವಶಾಸ್ತ್ರ ಮೊದಲಾದವುಗಳಲ್ಲಿ ವಿಶೇಷ ಪರಿಣತಿ ಹೊಂದಿದ್ದ.

ಅನೇಕ ಪ್ರಸಿದ್ಧ ಜೈನ ಆಚಾರ್ಯರೂ ವಿದ್ವಾಂಸರೂ ಆ ಕಾಲದಲ್ಲಿದ್ದು ಉದ್ಗ್ರಂಥಗಳನ್ನು ರಚಿಸಿದರು. ವಿಜಯಕೀರ್ತಿ, ಪೂಜ್ಯಪಾದ, ಅಕಲಂಕ, ಗುಣನಂದಿ, ಅಜಿತಸೇನಾಚಾರ್ಯ, ಚಾವುಂಡರಾಯ ಮೊದಲಾದ ಜೈನ ಆಚಾರ್ಯರು ಮತ್ತು ಕವಿಗಳು ಗಂಗರಾಜರ ಸಮಕಾಲೀನರಾಗಿದ್ದರೆಂದೂ ಹಾಗೂ ಅವರಿಂದ ಪುರಸ್ಕರಿಸಲ್ಪಟ್ಟವರೆಂದೂ ಶಾಸನಗಳಿಂದ ಹಾಗೂ ಅವರು ರಚಿಸಿದ ಕೃತಿಗಳಿಂದ ತಿಳಿದುಬರುತ್ತದೆ. ಚಾವುಂಡರಾಯ ಕನ್ನಡ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿಯೂ ವ್ಯಾಕರಣ ತರ್ಕ ಗಣಿತಶಾಸ್ತ್ರಗಳಲ್ಲಿಯೂ ವಿಶೇಷ ಪಾಂಡಿತ್ಯ ಹೊಂದಿದ್ದ. ಚಾವುಂಡರಾಯ ಪುರಾಣ ಇವನ ಕೃತಿ. ಛಂದೋಂಬುಧಿಯ ಕರ್ತೃ 1ನೆಯ ನಾಗವರ್ಮನೂ ಈ ಕಾಲದವನು. ಗಂಗರ ಉತ್ತರಾರ್ಧಕಾಲ ಕನ್ನಡ ಸಾಹಿತ್ಯದ ಪ್ರಾರಂಭದಿಸೆಯ ಉತ್ಕೃಷ್ಟ ಕಾಲವಾಗಿತ್ತು. (ಜಿ.ಆರ್.ಆರ್.)

**ವಾಸ್ತುಶಿಲ್ಪ :** ತಲಕಾಡಿನ ಗಂಗರ ಕಾಲದ ವಾಸ್ತುಶಿಲ್ಪದ ಮಾದರಿಗಳು ಹೆಚ್ಚು ಉಳಿದುಬಂದಿಲ್ಲ. ಕೆಲವು ಸಂಪೂರ್ಣವಾಗಿ ನಾಶವಾಗಿದ್ದರೆ ಹಲವು ಮುಂದಿನ ತಲೆಮಾರುಗಳಲ್ಲಿ ಬಹುಮಟ್ಟಿಗೆ ಬದಲಾವಣೆ ಹೊಂದಿವೆ. ಗಂಗರು ಕಟ್ಟಿಸಿದ ಬಸದಿಗಳನ್ನೂ ದೇವಾಲಯಗಳನ್ನೂ ಶಾಸನಗಳೇನೋ ತಿಳಿಸುತ್ತವೆ. ಹರಿವರ್ಮನ ಕಾಲದಲ್ಲಿದ್ದ ಮೂಲಸ್ಥಾನೇಶ್ವರ, ಅವಿನೀತನ ಹೆಸರಿನಲ್ಲಿ ಕಟ್ಟಿಸಿದ್ದಿರಬಹುದಾದ ವಿನೀತೇಶ್ವರ, ಮಾಧವ ಅವಿನೀತರು ದತ್ತಿಬಿಟ್ಟ ಅರ್ಹತಾಯತನ, ಶ್ರೀಪುರುಷನ ಕಾಲದಲ್ಲಿ ಕೆಂಚಬ್ಬೆ ಕಟ್ಟಿಸಿದ ಜಿನಬಸದಿ, ಇವಲ್ಲದೆ ನೀತಿಮಾರ್ಗೇಶ್ವರ, ಜಗಧರ ನಗರೇಶ್ವರ, ಶಿವಮಾರೇಶ್ವರ, ಶಿವಮಾರನ ಬಸದಿ ಮುಂತಾದ ಹೆಸರುಗಳು ಅವರ ಕಾಲದ ಶಾಸನಗಳಲ್ಲಿವೆ. ಈಗ ಉಳಿದು ಬಂದಿರುವ ಕಟ್ಟಡಗಳಲ್ಲಿ ಕೆಲವು ಅವುಗಳ ವಾಸ್ತು ಮತ್ತು ಶಿಲ್ಪಶೈಲಿಯಿಂದ ಗಂಗರ ಕಾಲಕ್ಕೆ ಸೇರಿದವೆಂದು ನಿರ್ದಿಷ್ಟವಾಗಿ ಹೇಳಬಹುದಾದರೂ ಅವು ಯಾರ ಕಾಲದಲ್ಲಿ ನಿರ್ಮಾಣವಾದುವೆಂದು ತಿಳಿಸಲು ಶಾಸನಾಧಾರಗಳಿಲ್ಲ. ಆದ್ದರಿಂದ ಗಂಗರ ವಾಸ್ತುಶಿಲ್ಪದ ಹುಟ್ಟು ಬೆಳವಣಿಗೆಗಳನ್ನು ಸ್ಪಷ್ಟವಾಗಿ ಚಿತ್ರಿಸಲು ಆಧಾರಗಳು ಸಾಲವು; ಈಗ ಅಳಿದುಳಿದಿರುವ ಕೆಲವು ಅವಶೇಷಗಳಿಂದ ಅವುಗಳ ಸ್ಥೂಲರೂಪರೇಖೆಗಳನ್ನು ಗುರುತಿಸಬಹುದು.

ಗಂಗರ ಮೊದಲ ಕಟ್ಟಡಗಳು ಇಟ್ಟಿಗೆ, ಗಾರೆ, ಮರಗಳಿಂದ ನಿರ್ಮಿತವಾಗಿರಬೇಕು. ಶಿವಮೊಗ್ಗ ಬಳಿಯ ಮಂಡಲಿಯಲ್ಲಿ ದಡಿಗ ಮಾಧವರು ಕಟ್ಟಿಸಿದ್ದ ಬಸದಿಯನ್ನು ಮುಂದೆ ಅವರ ವಂಶದವರು ಮರವೆಸನಾಗಿ ಮಾಡಿ ಪಟ್ಟದ ಬಸದಿಯೆಂದು ಹೆಸರಿಟ್ಟುದ್ದಾಗಿ ಅಲ್ಲಿಯ ಶಾಸನ ತಿಳಿಸುತ್ತದೆ. ಕೋಲಾರ ಜಿಲ್ಲೆಯ ನೊಣಮಂಗಲದಲ್ಲಿ ಪಾಳುದಿಬ್ಬವೊಂದನ್ನಗೆಯುತ್ತಿದ್ದಾಗ ಬೆಳಕಿಗೆ ಬಂದ ಬಸದಿಯೊಂದರಲ್ಲಿ ದೊರೆತ ಎರಡು ತಾಮ್ರಶಾಸನಗಳು ಗಂಗರಾಜ ಮಾಧವ ಮತ್ತು ಅವನ ಮಗ ಅವಿನೀತ ಅರ್ಹತಾಯತನಕ್ಕೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತವೆ. ಅಗಲವಾದ, ಆದರೆ ತೆಳುವಾದ ಇಟ್ಟಿಗೆಗಳಿಂದ ನಿರ್ಮಿತವಾಗಿದ್ದ ಈ ಬಸದಿಯನ್ನು ಊರಿನವರು ಅಗೆದು ಹಾಕಿರುವುದರಿಂದ ಕಟ್ಟಡದ ವಿನ್ಯಾಸ ಹೇಗಿತ್ತೆಂಬುದು ತಿಳಿಯದು. ಗಂಗರ ಕಾಲದ ಇಟ್ಟಿಗೆಯ ಕಟ್ಟಡಗಳನ್ನು ಇವರ ಮುಖ್ಯಪಟ್ಟಣಗಳಲ್ಲೊಂದಾಗಿದ್ದ ಮಣ್ಣೆಯಲ್ಲಿ (ನೋಡಿ) ನೋಡಬಹುದು. ಇಲ್ಲಿ ಕಪಿಲೇಶ್ವರ, ಸೋಮೇಶ್ವರ ದೇವಾಲಯಗಳ ಜೊತೆಗೆ ಇರುವ, ಈಗ ಸೂಳೆಯರ ಗುಡಿ ಎಂದು ಕರೆಯುವ ದೇವಾಲಯ ಮಾರಸಿಂಹನ ದಂಡನಾಯಕ ಶ್ರೀವಿಜಯ ಕಟ್ಟಿಸಿದ 'ತುಂಗಂ ನಿರ್ಮಳಂ ಸ್ವಮಹಸ್ವಮಂ' ಆದ ಜಿನಾಲಯವಾಗಿರಬೇಕು. ಈಗ ಈ ಎಲ್ಲ ದೇವಾಲಯಗಳೂ ಶಿಥಿಲವಾಗಿವೆ.

ಇವರ ಇಟ್ಟಿಗೆಯ ಕಟ್ಟಡಗಳಲ್ಲಿ ಪ್ರಾಚೀನವೂ ಶ್ರೇಷ್ಠವೂ ಆದದ್ದು ಚಾಮರಾಜನಗರ ತಾಲ್ಲೂಕಿನ ನರಸಮಂಗಲದ (ನೋಡಿ) ರಾಮೇಶ್ವರ ದೇವಾಲಯ. ಇದರ ಕಾಲ ನಿಖರವಾಗಿ ತಿಳಿಯದಾದರೂ ಕಟ್ಟಡದ ರೀತಿ, ಮೂರ್ತಿಗಳ ಕಂಡರಣೆ, ದೇವಾಲಯದ ಕಂಬಗಳು, ಚಾವಣಿ ಮುಂತಾದವನ್ನು ಪರಿಶೀಲಿಸಿದಾಗ ಇದು ಗಂಗರ ಕಾಲದಲ್ಲಿಯೆ ತಕ್ಕಷ್ಟು ಪ್ರಾಚೀನವಾದ್ದೆಂಬುದು ತಿಳಿಯುತ್ತದೆ. ತಳಹದಿ ಮಾತ್ರ ಕಗ್ಗಲ್ಲಿನಲ್ಲಿದ್ದು ಮೇಲಿನ ಕಟ್ಟಡ ಪೂರ್ತಿಯಾಗಿ ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿದ್ದರೂ ಇದರ ಗರ್ಭಗೃಹ ಮತ್ತು ಅದರ ಮೇಲಿನ ಗೋಪುರ 1,200 ವರ್ಷಗಳಿಗೂ ಹೆಚ್ಚು ಕಾಲದಿಂದ ನಿಂತಿರುವುದಷ್ಟೆ ಅಲ್ಲ, ಅದರ ಮೇಲೆ ಗಚ್ಚಿನಲ್ಲಿ ನಿರ್ಮಿಸಿರುವ ಮೂರ್ತಿಗಳು, ನವುರಾದ ಅಲಂಕರಣ ಕೂಡ ಅಚ್ಚಳಿಯದಿರುವುದು ಸೋಜಿಗದ ಸಂಗತಿ. ಹೊರಗೋಡೆಗಳ ಮೇಲೆ ಜೋಡಿ ಅರೆಗಂಬಗಳು, ಮೂರು ಅಂತಸ್ತುಗಳಲ್ಲಿ ಮೇಲೆದ್ದಿರುವ ಗೋಪುರದಲ್ಲಿ ಪಂಜರ, ಕೂಡುಗಳ ನಡುವೆ ಹಲವು ವಿಧವಾದ ಅಪರೂಪ ಭಂಗಿಗಳಲ್ಲಿರುವ ಗಚ್ಚಿನ ಮೂರ್ತಿಗಳಿವೆ. ಇದರ ಒಟ್ಟು ರಚನೆ ಮಹಾಬಲಿಪುರದ ಧರ್ಮರಾಜರಥದ ಮಾದರಿಯಲ್ಲಿದೆ. ಗಂಟೆ ಮತ್ತು ಕಲಶದಾಕಾರದಲ್ಲಿರುವ ದಪ್ಪ ಕಂಬಗಳಿರುವ ನವರಂಗದ ಚಪ್ಪಟೆಯ ಒಳಚಾವಣಿಯಲ್ಲಿ ದೊಡ್ಡದಾದ ಮಧ್ಯದ ಅಂಕಣದಲ್ಲಿ ಸುತ್ತಲೂ ಅಷ್ಟದಿಕ್ಪಾಲಕರೂ ನಡುವೆ ನಟರಾಜನ ಮೂರ್ತಿಯೂ ಇವೆ. ಒಳಗೋಡೆಯ ಮೇಲ್ತುದಿಯ ಸುತ್ತಲೂ ಹಲವು ಭಂಗಿಗಳಲ್ಲಿರುವ ಕುಬ್ಜರ ಮೂರ್ತಿಗಳು, ಪಂಚತಂತ್ರದ ಕಥೆಗಳು, ರಾಮಾಯಣದ ಕಥೆಗಳು ಇವನ್ನು ಸುಂದರವಾಗಿ ಕಡೆದಿದೆ. ದೇವಾಲಯದ ಒಳಗೂ ಸುತ್ತಲೂ ಚಂಡಿಕೇಶ್ವರ, ಸಪ್ತಮಾತೃಕೆಯರು ಪಂಚಾಯತನ ಮೂರ್ತಿಗಳು ಮೊದಲಾದ ಶಿಲಾಮೂರ್ತಿಗಳಿವೆ.

ಚೋಳರು ಗಂಗವಾಡಿಯನ್ನಾಕ್ರಮಿಸಿಕೊಂಡ ಮೇಲೆ ಅಲ್ಲಿದ್ದ ಹಲವು ಇಟ್ಟಿಗೆಯ ಕಟ್ಟಡಗಳನ್ನು ಬದಲಾಯಿಸಿ ಕಲ್ಲಿನ ದೇವಾಲಯಗಳನ್ನು ನಿರ್ಮಿಸಿದರು. ಕೋಲಾರದ ಪಿಡಾರಿಯಾರ್ ಅಥವಾ ಕೋಲಾರಮ್ಮನ ದೇವಾಲಯ ಮೊದಲು ಇಟ್ಟಿಗೆಯದಾಗಿತ್ತು. ರಾಜೇಂದ್ರಚೋಳನ ಅಪ್ಪಣೆಯ ಮೇಲೆ ಉತ್ತಮಚೋಳ ಬ್ರಹ್ಮಮಾರಾಯ ಆ ಕಟ್ಟಡವನ್ನು ತೆಗೆದು ಕಲ್ಲಿನ ದೇವಾಲಯವನ್ನು ನಿರ್ಮಿಸಿದುದಾಗಿ ಶಾಸನವೊಂದು ತಿಳಿಸುತ್ತದೆ.

ಹೆಗ್ಗಡದೇವನಕೋಟೆ ತಾಲ್ಲೂಕು ಕಿತ್ತೂರಿನ (ನೋಡಿ) ರಾಮೇಶ್ವರ ದೇವಾಲಯ, ತಿಪಟೂರು ತಾಲ್ಲೂಕು ಅರಳಗುಪ್ಪೆಯ (ನೋಡಿ) ಕಲ್ಲೇಶ್ವರ ದೇವಾಲಯ, ಕಡೂರು ತಾಲ್ಲೂಕು ಗರ್ಜೆಯ ಈಶ್ವರ ದೇವಾಲಯ, ತಿಪಟೂರು ತಾಲ್ಲೂಕು ನೊಣವಿನಕೆರೆಯ (ನೋಡಿ) ಗಂಗೇಶ್ವರ, ನೊಳಬೇಶ್ವರ ದೇವಾಲಯಗಳು ಮೊದಲು ಇಟ್ಟಿಗೆಯ ಗೋಡೆಗಳನ್ನು ಹೊಂದಿದ್ದಿರಬೇಕು. ಆ ಗೋಡೆಗಳು ಶಿಥಿಲವಾದಮೇಲೆ ಈಚೆಗೆ ಬೇರೆ ಗೋಡೆಗಳನ್ನು ನಿರ್ಮಿಸಿದ್ದು ಹೊರನೋಟಕ್ಕೆ ತೀರ ಸಾಮಾನ್ಯವಾದ ಕಟ್ಟಡಗಳಂತೆ ಕಾಣುತ್ತವೆ. ಆದರೆ ಅವುಗಳ ಒಳಹೊಕ್ಕಾಗ ಗಂಗರ ವಾಸ್ತುರೀತಿಯ ವೈಶಿಷ್ಟ್ಯ ಸ್ಪಷ್ಟವಾಗುತ್ತದೆ. ಸಣ್ಣ ಪ್ರಮಾಣದ ನವರಂಗ, ತೆರೆದ ಸುಕನಾಸಿ, ಚಿಕ್ಕ ಗರ್ಭಗೃಹ, ಚೌಕನಾದ ಬುಡದ ಮೇಲೆ ಗುಂಡಾಗಿ ಮೇಲೆದ್ದ ಅಷ್ಟು ಎತ್ತರವಲ್ಲದ ತೆಳುಗಂಬಗಳು, ಕಂಬಗಳ ಮೇಲುಬದಿಯಲ್ಲಿ ಕಲಶ ಅಥವಾ ಹೂಜಿಯ ಆಕೃತಿ, ನವರಂಗದ ಮಧ್ಯೆ ದೊಡ್ಡ ಅಂಕಣ ಮತ್ತು ಆ ಅಂಕಣದ ಚಾವಣಿಯಲ್ಲಿ ಮಾತ್ರ ಶಿಲ್ಪಕೃತಿ ಸಾಮಾನ್ಯವಾಗಿ ಅಷ್ಟದಿಕ್ಪಾಲಕರು ಮತ್ತು ಅವರ ನಡುವೆ ಶಿವದೇವಾಲಯವಾದರೆ ನಟರಾಜ, ಜಿನಬಸದಿಯಾದರೆ ಜಿನಮೂರ್ತಿ ಇವು ಸಾಮಾನ್ಯ ಲಕ್ಷಣಗಳು. ಕಿತ್ತೂರಿನಲ್ಲಿ ಪಲ್ಲವರೀತಿಯನ್ನನುಕರಿಸುವ ಸಿಂಹಸ್ತಂಭಗಳು ಕೆಲವಿದ್ದ ಕುರುಹುಗಳಿವೆ. ಗರ್ಜೆಯಲ್ಲಿ ಕಂಬಗಳು ಅಷ್ಟಕೋನಾಕೃತಿಯಲ್ಲಿವೆ. ಚೌಕನಾದ ಬುಡದ ನಾಲ್ಕು ಮುಖಗಳ ಮೇಲೆ ತೆಳುವಾಗಿ ಬಿಡಿಸಿದ ಮೂರ್ತಿಶಿಲ್ಪಗಳು, ಆಕರ್ಷಕವಾಗಿವೆ. ಅರಳಗುಪ್ಪೆಯ ದೇವಾಲಯದ ಒಳಚಾವಣಿಯನ್ನಂತೂ ರೂವಾರಿ ಅತ್ಯಂತ ಸುಂದರವಾಗಿ ಬಿಡಿಸಿದ್ದಾನೆ.

ಶಾಂತಿನಾಥ ಬಸದಿ, ಚಂದ್ರಗಿರಿ, ಶ್ರವಣಬೆಳಗೊಳ

ಗಂಗರ ಕಾಲದಲ್ಲಿ ಗವಿಗಳನ್ನು ಕೊರೆಸಿ ದೇವಾಲಯಗಳನ್ನು ಸ್ಥಾಪಿಸಿದ್ದಕ್ಕೆ ದಾಖಲೆಗಳಿಲ್ಲ. ಮೇಲುಕೋಟೆಯಲ್ಲಿ ಕಗ್ಗಲ್ಲಿನ ಮೊರಡಿಯಲ್ಲಿ ಅರ್ಧ ಮಾತ್ರ ಕೊರೆದಿರುವ ಗವಿ ಇವರ ಕಾಲಕ್ಕೆ ಸೇರಿರಬಹುದಾದರೂ ಗವಿ ಪೂರ್ತಿಯಾಗಿಲ್ಲದಿರುವುದರಿಂದಲೂ ಮೂರ್ತಿಶಿಲ್ಪ ಇಲ್ಲದಿರುವುದರಿಂದಲೂ ಇದನ್ನು ಖಚಿತವಾಗಿ ಹೇಳಲುಬಾರದು. ಆದರೆ ಸ್ವಾಭಾವಿಕ ಗವಿಗಳಲ್ಲಿ ಬಂಡೆಗಳ ಮೇಲೆ ಮೂರ್ತಿಗಳನ್ನು ಬಿಡಿಸಿ ಬಸದಿಗಳನ್ನು ನಿರ್ಮಿಸಿದ ಉದಾಹರಣೆಗಳಿವೆ. ನಂದಿಯ ಬಳಿಯ ಗೋಪಿನಾಥ ಗುಡ್ಡದಲ್ಲಿರುವ ಸ್ವಾಭಾವಿಕ ಗವಿಯ ಮೇಲಣ ಬಂಡೆ ಶಾಸನ 8ನೆಯ ಶತಮಾನಕ್ಕೆ ಸೇರಿದ್ದು. ಶ್ರೀರಾಮ ಅಲ್ಲಿ ಚೈತ್ಯಭವನವನ್ನು ನಿರ್ಮಿಸಿದಂತೆಯೂ ಅನಂತರ ಕುಂತಿ ಅದನ್ನು ಪುನರ್ನವೀಕರಿಸಿದಂತೆಯೂ ಜಿನೇಂದ್ರ ಚೈತ್ಯಸನ್ನಿಧಿಯಿಂದ ಆ ಪರ್ವತ ಪುನೀತವಾದುದಾಗಿಯೂ ಆ ಶಾಸನದಲ್ಲಿ ತಿಳಿಸಿರುವುದರಿಂದ ಗಂಗರ ಕಾಲದಲ್ಲಿ ಅದು ಚೈತ್ಯಾಲಯವಾಗಿದ್ದಿರಬೇಕು. ಇದೇ ರೀತಿ ಚಿತ್ತೂರು ತಾಲ್ಲೂಕಿನ ವಳ್ಳಿಮಲೆಯ ಸ್ವಾಭಾವಿಕ ಗುಹೆಯಲ್ಲಿ ಒಂದನೆಯ ರಾಚಮಲ್ಲ ಬಸದಿಯನ್ನು ಮಾಡಿಸಿದನೆಂದು ಅಲ್ಲಿಯ ಶಾಸನ ತಿಳಿಸುತ್ತದೆ. ಅಲ್ಲಿ ಬಂಡೆಯ ಮೇಲೆ ಕೆಲವು ಜಿನಬಿಂಬಗಳನ್ನು ಬಿಡಿಸಿದೆ. ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಮೇಲೆ ಬಂಡೆಯನ್ನು ಕೊರೆದು ಅಖಂಡ ದ್ವಾರವೊಂದನ್ನು ಚಾವುಂಡರಾಯ ಮಾಡಿಸಿದ್ದಾನೆ.

ಇಟ್ಟಿಗೆ ಕಟ್ಟಡಗಳ ಜೊತೆಗೆ ಮೊದಲು ಕೆಲವು ಸರಳವಾದ ಕಲ್ಲಿನ ಕಟ್ಟಡಗಳನ್ನೂ ಗಂಗರು ಕಟ್ಟಿಸಿದ್ದಾರೆ. ಅಗಲವಾದ ದೊಡ್ಡ ದೊಡ್ಡ ತೆಳು ಚಪ್ಪಡಿಗಳನ್ನೇ ಗೋಡೆಗೂ ಚಾವಣಿಗೂ ಉಪಯೋಗಿಸಿ ಕಟ್ಟಿರುವ ಈ ದೇವಾಲಯಗಳು ಶಿಲ್ಪ ದೃಷ್ಟಿಯಿಂದ ತೀರ ಸಾಮಾನ್ಯವಾದ ಕಟ್ಟಡಗಳು. ನೆಲಮಂಗಲ ತಾಲ್ಲೂಕಿನ ತೋಟಗೆರೆಯಲ್ಲಿರುವ ಕೇವಲ 5' ಚೌಕ, 5' ಎತ್ತರವಿರುವ ಒಂದೇ ಅಂಕಣದ ಅರ್ಜುನರಾಯನ ಗುಡಿ ಈ ರೀತಿಯಲ್ಲಿದೆ. ಇದು ಶ್ರೀಪುರುಷನ ಕಾಲಕ್ಕಿಂತ ಹಿಂದಿನದ್ದೆಂದು ತೋರುತ್ತದೆ. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಸಂಪಿಗೆಪುರದಲ್ಲಿರುವ ಶಿವಾಲಯ ಇದೇ ಮಾದರಿಯಲ್ಲಿದೆ. ದೇವಸ್ಥಾನಕ್ಕೆ ಗರ್ಭಗುಡಿ ಸುಕನಾಸಿ ನವರಂಗಗಳಿವೆ. ಇವುಗಳ ಗೋಡೆ ಚಾವಣಿಗಳೆಲ್ಲ ತೆಳುಹಾಸುಗಲ್ಲುಗಳಿಂದ ನಿರ್ಮಿತವಾಗಿವೆ. ಈ ದೇವಾಲಯಗಳಲ್ಲಿರುವ ಪಂಚಾಯತನ ಮೂರ್ತಿಗಳು ಸುಂದರವಾದ ಗಂಭೀರ ಮುಖಮುದ್ರೆಯುಳ್ಳವು. ಇವುಗಳಿಗೆ ಸೇರಿದಂತೆ ಗಂಗರ ಶಾಸನಗಳು ನಿಂತಿವೆ.

ಗಂಗರಿಗೇ ವಿಶಿಷ್ಟವಾದ ವಾಸ್ತುಶೈಲಿ ಇಲ್ಲದಿದ್ದರೂ ಪಲ್ಲವರ ಶೈಲಿಯಿಂದ ಸ್ಫೂರ್ತಿಗೊಂಡು ಮುಂದೆ ಹಲವು ಸುಂದರವಾದ ದೇವಾಲಯಗಳನ್ನೂ ಬಸದಿಗಳನ್ನೂ ಕಲ್ಲಿನಲ್ಲಿ ಕಟ್ಟಿಸಿರುವುದು ಕಂಡುಬರುತ್ತದೆ. ಈ ಗುಂಪಿಗೆ ಸೇರಿದ ಕಟ್ಟಡಗಳಲ್ಲಿ ದೇವನಹಳ್ಳಿ ತಾಲ್ಲೂಕಿನ ಗಂಗಾವಾರದಲ್ಲಿರುವ ತಬ್ಲೇಶ್ವರ ಅಥವಾ ಸೋಮೇಶ್ವರ ದೇವಾಲಯ ಪ್ರಾಚೀನವಾದ್ದೆಂದು ಹೇಳಬಹುದು. ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪಗಳಿರುವ ಈ ದೇವಾಲಯ ಸರಳವಾದ್ದು. ಗರ್ಭಗುಡಿಯ ಮೇಲೆ ಚಿಕ್ಕದಾಗಿ ಒಂದೇ ಅಂತಸ್ತುಳ್ಳ ಗೋಪುರ, ಚೌಕಾಕೃತಿಯ ತಳವಿನ್ಯಾಸ, ಹೊರಗೋಡೆಯಲ್ಲಿ ದೂರದೂರದಲ್ಲೊಂದೊಂದು ಅರೆಗಂಬ, ಬುಡದಲ್ಲಿ ಸರಳವಾದ ದಿಂಡುಗಲ್ಲು, ಮೇಲೆ ಕಿರಿದಾದ ಲೋವೆ, ಒಳಗೆ ಕಿರಿದಾದ ಕಂಬಗಳು, ಇವುಗಳೊಂದಿಗೆ ಪ್ರಾಕಾರದ ಅಂಕಣವೊಂದರಲ್ಲಿ ನಿಂತಿರುವ ಪಲ್ಲವ ರೀತಿಯ ಸಿಂಹಸ್ತಂಭ -ಇವು ಅದರ ಪ್ರಾಚೀನತೆಯನ್ನು ಸೂಚಿಸುತ್ತವೆ. ಮುಳೂರು ಪಟ್ಟಣದಲ್ಲಿರುವ ನಾರಾಯಣಸ್ವಾಮಿ ದೇವಾಲಯ, ಶ್ರವಣಬೆಳಗೊಳದ ಚಂದ್ರಗುಪ್ತಬಸದಿ -ಇವುಗಳ ಮೇಲೂ ಒಂದೇ ಅಂತಸ್ತಿನ ಗೋಪುರಗಳಿದ್ದರೂ ಗ್ರೀವ ಆಮಲಕಗಳ ಬೆಳೆವಣಿಗೆ ಸ್ಪಷ್ಟವಾಗಿದೆ. ಉಳಿದಂತೆ ಕಟ್ಟಡಗಳು ಸರಳವಾದವು. ತಿರುಮಕೂಡಲು ನರಸೀಪುರ ತಾಲ್ಲೂಕಿನ ಬನ್ನೂರಿನ ಹನುಮಂತೇಶ್ವರ ದೇವಾಲಯದ ಮೂಲ ಗುಡಿ, ಮೈಸೂರು ತಾಲ್ಲೂಕಿನ ವರುಣದ ಬೂತೇಶ್ವರ ದೇವಾಲಯ -ಇವು ತಗ್ಗಾದ ಸರಳವಾದ ದೇವಾಲಯಗಳು. ವರುಣದ ದೇವಾಲಯದಲ್ಲಿ ಗೋಡೆಯ ಮೇಲೆ ಲೋವೆಯ ತಳಭಾಗದಲ್ಲಿ ಅತಿ ತೆಳುವಾಗಿ ಬಿಡಿಸಿರುವ ರಾಮಾಯಣದ ಚಿತ್ರಗಳು ಇರುವುದೊಂದು ವಿಶೇಷ.

ನಂದಿಯ (ನೋಡಿ) ಭೋಗನಂದೀಶ್ವರ ದೇವಾಲಯದ ಮೂಲಗುಡಿ, ಬೆಂಗಳೂರು ಬಳಿಯ ಬೇಗೂರಿನ ನಾಗೇಶ್ವರ ದೇವಾಲಯ, ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯ ಪಂಚಕೂಟ ಬಸದಿಯಲ್ಲಿನ ಆದೀಶ್ವರ ಬಸದಿ ಮತ್ತು ಶ್ರವಣಬೆಳಗೊಳದ ಚಾವುಂಡರಾಯ ಬಸದಿ ಇವುಗಳಲ್ಲಿ ಗಂಗರ ಕಾಲದ ವಾಸ್ತುಶಿಲ್ಪದ ಪೂರ್ಣವಿಕಾಸವನ್ನು ನೋಡಬಹುದು. ಬಹುಶಃ ಗಂಗವಂಶದ ಜಯತೇಜನ ಕಾಲದಲ್ಲಿ ರತ್ನಾವಳಿ ಕಟ್ಟಿಸಿದ ಭೋಗನಂದಿಯ ಮೂಲದೇವಾಲಯ ಚೌಕವಿನ್ಯಾಸವುಳ್ಳದ್ದಾಗಿತ್ತು. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗಗಳು ಮಾತ್ರ ಇದ್ದುವು.

ಹೊರಗೋಡೆಯ ಬುಡದ ದಿಂಡುಗಳ ಮೇಲೆ ಮಕರ, ಆನೆ, ಸಿಂಹ ಮತ್ತು ಕುಬ್ಜರ ಮೂರ್ತಿಗಳು, ಗೋಡೆಯ ಮೇಲೆ ಅರೆಗಂಬಗಳು, ನಡುವೆ ಹೆಚ್ಚು ಅಲಂಕೃತವಾದ ಬಳ್ಳಿಯು ಸುರುಳಿಯಂತೆ ಕೊರೆದ ಜಾಲಂಧ್ರಗಳು, ಒಂದೊಂದು ಸುರುಳಿಯಲ್ಲೂ ನೃತ್ಯಗೀತವಾದ್ಯಗಳಲ್ಲಿ ನಿರತರಾದ ಕುಬ್ಜರು, ಲೋವೆಯ ಮೇಲೆ ಅಲ್ಲಲ್ಲಿ ಕೀರ್ತಿಮುಖಗಳು, ಕುಬ್ಜರ ಸಾಲು, ಕೈಪಿಡಿಯ ಸುತ್ತಲೂ ಪಂಜರ ಗಜಪೃಷ್ಠಾಕೃತಿಗಳು, ಅವುಗಳ ಮುಂಭಾಗದ ಲಾಳದಾಕೃತಿಯ ಕಮಾನುಗಳ ಕೆಳಗೆ ಶಿವಲೀಲೆಗಳು ಮತ್ತು ಇತರ ಮೂರ್ತಿಗಳು ಮೂರು ಅಂತಸ್ತುಗಳಲ್ಲಿ ಮೇಲೆದ್ದಿರುವ ಗೋಪುರ ಇವೆಲ್ಲಾ ಸುಂದರವಾಗಿವೆ. ನವರಂಗದ ಕಂಬಗಳ ಮೇಲೂ ತೆಳುವಾಗಿ ಮೂರ್ತಿಗಳನ್ನು ಬಿಡಿಸಿದೆ. ಚಾವಣಿಯಲ್ಲಿ ಪಲ್ಲವ ಶಿಲ್ಪವನ್ನನುಕರಿಸುವ ಅಷ್ಟದಿಕ್ಪಾಲಕರು ಮತ್ತು ನಡುವೆ ಉಮಾಮಹೇಶ್ವರ ಮೂರ್ತಿಗಳು ಪ್ರಸನ್ನ ಗಂಭೀರ ಭಾವವನ್ನು ವ್ಯಕ್ತಪಡಿಸುತ್ತವೆ. ಪಲ್ಲವರ ಕೊನೆಯ ವರ್ಷಗಳಲ್ಲಿ ಬೆಳೆದು ಬಂದ ವಾಸ್ತುರೀತಿಯನ್ನೇ ಹೋಲುವ ಈ ದೇವಾಲಯದ ಪ್ರತಿರೂಪ ಬೆಂಗಳೂರು ಬಳಿಯ ಬೇಗೂರಿನ ನಾಗೇಶ್ವರ ದೇವಾಲಯವೆನ್ನಬಹುದು. ಗಂಗ ಎಱೆಯಪ್ಪನ ಸಾಮಂತ ನಾಗತ್ತರ ಕಟ್ಟಿಸಿರಬಹುದಾದ ಈ ನಾಗೇಶ್ವರ ದೇವಾಲಯ ಗಾತ್ರದಲ್ಲಿ ಸ್ವಲ್ಪ ಚಿಕ್ಕದು. ಇದರ ಗೋಪುರದ ಒಂದೊಂದು ಅಂತಸ್ತಿನಲ್ಲೂ ಮಧ್ಯದ ಗೂಡುಗಳಲ್ಲಿ ಇರುವ ದಕ್ಷಿಣಮೂರ್ತಿ, ವಿಷ್ಣು, ನರಸಿಂಹ, ಸರಸ್ವತಿ ಮೊದಲಾದ ಮೂರ್ತಿಗಳು ಆಕರ್ಷಕವಾಗಿವೆ.

ಭೋಗನಂದೀಶ್ವರ ದೇವಾಲಯ, ನಂದಿಗ್ರಾಮ

ಕಂಬದಹಳ್ಳಿಯ ಆದಿನಾಥ ಬಸದಿ ಮೂರು ಗರ್ಭಗುಡಿಗಳಿರುವ ಒಂದು ತ್ರಿಕೂಟಾಚಲ. ಹೊರಗೋಡೆಗಳ ನಡುವೆ ಒಂದೊಂದು ಆಳವಿಲ್ಲದ ಗೂಡು, ಅದರ ಎರಡು ಕಡೆಯೂ ಅರೆಗಂಬಗಳು ಇವೆ. ಲೋವೆಯ ಕೆಳಗೆ ಒಂದು ಸಾಲು ಹಂಸಪಕ್ಷಿಗಳೂ ಮೇಲೆ ನೀರ್ಗುದುರೆಗಳ ಸಾಲೂ ಇರುವುದರೊಂದಿಗೆ ಎರಡನೆಯ ಅಂತಸ್ತಿನ ನಾಲ್ಕು ಮೂಲೆಗಳಲ್ಲಿಯೂ ಸಿಂಹಗಳು ಪಂಜನ್ನೆತ್ತಿ ಮಲಗಿವೆ. ತುದಿಯ ಆಮಲಕಗಳಲ್ಲಿ ಒಂದು ಗುಂಡಗೂ ಎರಡನೆಯದು ಚೌಕಾಕಾರವಾಗಿಯೂ ಮೂರನೆಯದು ಅಷ್ಟಮುಖವುಳ್ಳದ್ದಾಗಿಯೂ ಇವೆ. ನವರಂಗದ ಕಂಬಗಳು ತುದಿಯಲ್ಲಿ ಕಲಶವುಳ್ಳ ಅಷ್ಟಕೋನಾಕೃತಿಯವು. ಚಾವಣಿಯ ನಡುವಣ ಅಂಕಣದಲ್ಲಿ ಅಷ್ಟದಿಕ್ಪಾಲಕರ ನಡುವೆ ಧರಣೇಂದ್ರ ಯಕ್ಷನ ಮೂರ್ತಿಯಿದೆ. ಈ ನಡುವಣ ಅಂಕಣದ ಸುತ್ತಲೂ ಚಾವಣಿಗೆ ಹಾಕಿರುವ ಹಾಸುಗಲ್ಲುಗಳು ಹೊರಭಾಗಕ್ಕೆ ಚಾಚುವಾಗ ಅಗಲವಾಗುತ್ತ ಹೋಗುವುದರಿಂದ ಸುತ್ತಲೂ ಕಿರಣಗಳು ಹರಡುವಂತೆ ತೋರುತ್ತವೆ.

ಗಂಗರ ಕಾಲದ ಕಟ್ಟಡಗಳಲ್ಲಿ ಬಹುಶಃ ಕೊನೆಯದೂ ದೊಡ್ಡದೂ ಸುಂದರವಾದ್ದೂ ಆದ ಕಟ್ಟಡವೆಂದರೆ ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲಿರುವ ಚಾವುಂಡರಾಯ ಬಸದಿ. ಗೊಮ್ಮಟೇಶ್ವರನ ಪ್ರತಿಷ್ಠೆಯನ್ನು ಮಾಡಿದಾಗಲೇ ಚಾವುಂಡರಾಯ ಈ ಬಸದಿಯನ್ನೂ ಕಟ್ಟಿಸಿರಬೇಕು (ಸು.983). ಎತ್ತರವಾದ ತಳಹದಿಯ ಮೇಲೆ ಗರ್ಭಗೃಹ, ಸುಕನಾಸಿ, ದೊಡ್ಡದಾದ ನವರಂಗ ಇವೆ. ಸರಳವಾದ ಅರೆಗಂಬಗಳು ಮತ್ತು ಗೂಡುಗಳಿಂದ ಹೊರ ಗೋಡೆಗಳು ಅಲಂಕೃತವಾಗಿವೆ. ಮೇಲ್ಭಾಗದಲ್ಲಿ ಲೋವೆಯ ಕೆಳಗಿನ ಹಂಸದ ಸಾಲು, ಲೋವೆಯ ಮುಂಭಾಗದಲ್ಲಿ ಅಲ್ಲಲ್ಲಿ ಅಲಂಕೃತ ಕೀರ್ತಿಮುಖಗಳು, ಮೇಲೆ ನೀರ್ಗುದುರೆಗಳ ಸಾಲು, ಆ ಸಾಲಿನ ಮೇಲೆ ಕೈಪಿಡಿಯ ಶಾಲಾ ಕೂಟ ಪಂಜರಗಳು, ಜಿನರ ಮತ್ತು ಇತರರ ಭಾವಯುಕ್ತವಾದ ಮೂರ್ತಿಗಳು ಇವು ಸರಳವೂ ಸುಂದರವೂ ಆಗಿವೆ. ಗೋಪುರದಲ್ಲಿ ಚೌಕಾಕಾರದ ಇನ್ನೊಂದು ಗುಡಿಯಿದೆ. ಪಾರ್ಶ್ವನಾಥನ ಮೂರ್ತಿಯನ್ನು ಚಾವುಂಡರಾಯನ ಮಗ ಜಿನದೇವಣ್ಣ ಇಲ್ಲಿ ಪ್ರತಿಷ್ಠಾಪಿಸಿದ್ದಾನೆ. ಗಂಗರ ಕಾಲದ ಕಟ್ಟಡಗಳಲ್ಲೆಲ್ಲ ತನ್ನ ಮೊದಲಿನ ಸ್ಥಿತಿಯಲ್ಲಿ ಉಳಿದು ಬಂದಿರುವ ಕಟ್ಟಡವೆಂದರೆ ಇದೊಂದೇ.

ಬಹುಕಾಲ ಗಂಗರ ರಾಜಧಾನಿಯಾಗಿದ್ದ ತಲಕಾಡಿನಲ್ಲಿ ಅವರ ಕಾಲದ ಅನೇಕ ಕಟ್ಟಡಗಳು ಇದ್ದಿರಬೇಕು. ಆದರೆ ಅದರ ಬಹುಭಾಗ ಮರಳಿನಲ್ಲಿ ಹೂತುಹೋಗಿರುವುದರಿಂದಲೂ ಉಳಿದುಬಂದಿರುವ ಕೆಲವು ದೇವಾಲಯಗಳು ಹಳೆಯ ಕಾಲದ ಶಿಲ್ಪವನ್ನು ಉಪಯೋಗಿಸಿ ಪುನರ್ನಿರ್ಮಿತವಾಗಿರುವುದರಿಂದಲೂ ಆ ಕಟ್ಟಡಗಳ ವಾಸ್ತು ರೀತಿಯನ್ನು ಈಗ ಅರಿಯಲು ಸಾಧ್ಯವಿಲ್ಲ. ತಲಕಾಡು, ಹೆಮ್ಮಿಗೆ, ತಿರುಮಕೂಡಲು ನರಸೀಪುರ, ಕಿತ್ತೂರು, ಆವನಿ, ಹೆಬ್ಬಟ ಮೊದಲಾದ ಕಡೆ ಗಂಗರ ಕಾಲದವೆಂದು ಖಚಿತವಾಗಿ ಹೇಳಬಹುದಾದ ಶಿಲ್ಪಗಳು, ಕಂಬಗಳು ಇತರ ಅವಶೇಷಗಳು ಚೆಲ್ಲಾಡಿರುವುದರಿಂದ ಅವರ ಕಾಲದ ಅನೇಕ ಕಟ್ಟಡಗಳು ನಾಶವಾಗಿರುವುದು ಸ್ಪಷ್ಟ.

ತಲಕಾಡಿನ ಗಂಗರ ಕಾಲದ ಮೂರ್ತಿಶಿಲ್ಪ ವಾಸ್ತುಶಿಲ್ಪದಂತೆ ಪಲ್ಲವ ಶಿಲ್ಪದಿಂದಲೇ ಸ್ಫೂರ್ತಿಪಡೆದು ಬೆಳೆದಿದ್ದರೂ ತನ್ನದೇ ಆದ ಹಲವು ವಿಶಿಷ್ಟ ಗುಣಗಳನ್ನು ಪಡೆದಿದೆ. ಗಟ್ಟಿಕಲ್ಲಿನ ಮೇಲೆ ತೆಳುವಾಗಿ ಮೂರ್ತಿಗಳನ್ನು ಬಿಡಿಸಿ ಕೇವಲ ಕೆಲವು ರೇಖೆಗಳಿಂದಲೇ ಮೂರ್ತಿಯ ಭಾವವನ್ನು ಅಭಿವ್ಯಕ್ತಗೊಳಿಸುವ ಬೌದ್ಧ ಶಿಲ್ಪದ ರೀತಿಯಿಂದ ಹಿಡಿದು ಗುಂಡಾಗಿ ಪೂರ್ಣರೂಪದಲ್ಲಿ ಬಿಡಿಸಿದ ಮೂರ್ತಿಗಳವರೆಗೂ ಗಂಗ ರೂವಾರಿಗಳು ಕಲೆಯನ್ನು ರೂಢಿಸಿಕೊಂಡಿದ್ದರು. ತೆಳುವುಬ್ಬು ಶಿಲ್ಪವೇ ಆಗಲಿ ಪೂರ್ಣ ಗಂಡುರೂಪವೇ ಆಗಲಿ, ಅವು ತಾಳಲಯಬದ್ಧವಾಗಿದ್ದು, ಸರಳವಾಗಿ ಭಾವಪೂರ್ಣವಾಗಿ ನೈಜತೆಯನ್ನು ಪ್ರತಿಬಿಂಬಿಸುವಂತೆ ಕಂಡರಿಸುವ ರೀತಿ ಅವರಿಗೆ ಸಿದ್ಧಿಸಿತ್ತು. ಆದ್ದರಿಂದಲೇ ಅವರ ಕಾಲದ ಮೂರ್ತಿಶಿಲ್ಪಗಳು ಹೇರಳವಾಗಿಲ್ಲದಿದ್ದರೂ ಇರುವ ಕೆಲವೇ ಆದರೂ ಪ್ರಭಾವಯುಕ್ತವಾಗಿವೆ. ಇದರೊಂದಿಗೆ ಸ್ಥಳೀಯವಾಗಿ ಬೆಳೆಸಿಕೊಂಡಿದ್ದ ಶಿಲ್ಪಶೈಲಿಯಲ್ಲಿ ಅಲ್ಲಲ್ಲಿಯ ರೂವಾರಿಗಳು ಕಂಡರಿಸಿರುವ ಮೂರ್ತಿಶಿಲ್ಪ ಕೆಲಮಟ್ಟಿಗೆ ಒರಟುತನವನ್ನು ಪ್ರದರ್ಶಿಸಿದರೂ ಅದರಲ್ಲಿ ನೈಜತೆಯನ್ನು ಗುರುತಿಸಬಹುದು. ವೀರಗಲ್ಲುಗಳಲ್ಲಿ ಹೆಚ್ಚಾಗಿ ಇಂಥ ಶಿಲ್ಪವನ್ನು ಕಾಣಬಹುದು.



ಚಾವುಂಡರಾಯ ಬಸದಿ, ಶ್ರವಣಬೆಳಗೊಳ

ಗರ್ಜಿಯ ಕಲ್ಲೇಶ್ವರ ದೇವಾಲಯದ ನವರಂಗದ ಕಂಬಗಳ ಬುಡದಲ್ಲಿ ಚೌಕನೆಯ ಮುಖಗಳ ಮೇಲೆ ಇರುವ ತೆಳುವುಬ್ಬು ಶಿಲ್ಪದಲ್ಲಿ ಕಂಡರಿಸಿರುವ ಹಲವು ಮೂರ್ತಿಗಳಲ್ಲಿ ಒಂದು ಬಗೆಯ ರೂಕ್ಷತೆಯಿದೆ. ಆದರೂ ಅದರಲ್ಲಿ ಕ್ರಿಯೆಯಿದೆ, ನೈಜತೆಯಿದೆ. ಮೂರ್ತಿಯ

ಮನೋಭಾವವನ್ನು ಹೊರಬಿಂಬಿಸುವಲ್ಲಿ ರೂವಾರಿ ಯಶಸ್ವಿಯಾಗಿದ್ದಾನೆ. ತೀಕ್ಷ್ಣವಾಗಿ ನರ್ತಿಸುತ್ತಿರುವ ಅಂಧಾರಿ, ಅವನ ಸುತ್ತಲೂ ನೆರೆದಿರುವ ವಾದ್ಯಕಾರರು, ಗಜಾಸುರನನ್ನು ಸೀಳಿ ಲೀಲಾನರ್ತನದಲ್ಲಿ ತೊಡಗಿರುವ ಅಷ್ಟಭುಜಮೂರ್ತಿ ಗಜಾರಿ, ಭೈರವ, ಅರ್ಧನಾರೀಶ್ವರ ಅಥವಾ ಹರಿಹರ, ಒಂದೊಂದೂ ಭಾವಪೂರ್ಣವಾಗಿ ಸತ್ತ್ವಯುತವಾಗಿವೆ. ಇದೇ ರೀತಿ ಆಸಂದಿಯ ವೀರಭದ್ರ ದೇವಾಲಯದ ಮೆಟ್ಟಲುಗಳ ಮೇಲೆ ಎರಡು ಪಕ್ಕಗಳಲ್ಲಿಯೂ ನಿಲ್ಲಿಸಿರುವ ಪುರಾತನ ಗಂಗ ದೇವಾಲಯವೊಂದರ ಕಟಾಂಜನಗಳ ಮೇಲೆ ಬಿಡಿಸಿರುವ ನಟರಾಜ ತ್ರಿವಿಕ್ರಮ ಮೂರ್ತಿಗಳೂ ಭಾವ ಭಂಗಿ ಚಲನೆಗಳಲ್ಲಿ ಬಾದಾಮಿ ಚಳುಕ್ಯರ ಶಿಲ್ಪವನ್ನು ನೆನಪಿಗೆ ತರುತ್ತವೆ. ಇವುಗಳಿಗಿಂತಲೂ ತೆಳುವಾಗಿ ರೇಖಾಕೃತಿಯಂತೆಯೇ ಕಾಣುವ ರಾಮಾಯಣದ ಕಥೆಯನ್ನು ಬಿಡಿಸಿರುವ ವಿಶಿಷ್ಟವಾದ ಶಿಲ್ಪವನ್ನು ವರುಣದ ಈಶ್ವರ (ಬೂತೇಶ್ವರ) ದೇವಾಲಯದ ಗೋಡೆಯ ಮೇಲೆ ನೋಡಬಹುದು. ಲೋವೆಯ ಕೆಳಗೆ ದೇವಾಲಯದ ಸುತ್ತಲೂ ಚಿತ್ರಿಸಿರುವ ಒಂದು ಸಾಲು ಪಟ್ಟಿಕೆಯಲ್ಲಿ ಆಯಾ ಸನ್ನಿವೇಶಗಳು ಅರ್ಥವತ್ತಾಗಿ ಪ್ರತಿಬಿಂಬಿತವಾಗಿವೆ. ಕಿರಿದರಲ್ಲೇ ಹಿರಿಯ ಭಾವವನ್ನು ಸೆರೆ ಹಿಡಿದಿರುವ ಜಾಣ್ಮೆ ವ್ಯಕ್ತವಾಗಿದೆ.

ಉಮಾಮಹೇಶ್ವರ, ಅರಳಗುಪ್ಪೆ

ತೆಳುವುಬ್ಬು ಶಿಲ್ಪದಲ್ಲಿ ಬಿಡಿಸಿರುವ ನೂರಾರು ವೀರಗಲ್ಲುಗಳ ಶಿಲ್ಪದ ರೀತಿ ಗಂಗರ ಕಾಲಕ್ಕೆ ವಿಶಿಷ್ಟವಾದ್ದು. ಇವುಗಳಿಗೆ ಮಾದರಿಯಾಗಿ ತುಮಕೂರು ತಾಲ್ಲೂಕು ಹಿರೇಗಂಡುಗದಲ್ಲಿನ ವೀರಗಲ್ಲುಗಳಲ್ಲಿ ದ್ವಂದ್ವಯುದ್ಧದಲ್ಲಿ ನಿರತರಾಗಿರುವ ವೀರರನ್ನು ಶಿಲ್ಪಿಸಿರುವ ರೀತಿಯನ್ನು ನೋಡಬಹುದು. ಕೆಚ್ಚಿನಿಂದ ಮುಂದೆ ನುಗ್ಗಿ ಒಬ್ಬರನ್ನೊಬ್ಬರು ಎದುರಿಸುತ್ತಿರುವ ವೀರರ ಮುಖದಲ್ಲಿ ತೋರುವ ದೃಢತೆ ಸಾಹಸ ಧೈರ್ಯಗಳನ್ನು, ದೇಹಸೌಷ್ಠವಗಳನ್ನು ಆಳವಿಲ್ಲದೆ ಸರಳವಾದ ಶಿಲ್ಪದಲ್ಲಿಯೇ ರೂವಾರಿ ಹೊಮ್ಮಿಸಿದ್ದಾನೆ. ಒಂದು ಯುದ್ಧದ ವಿಸ್ತಾರವಾದ ಚಿತ್ರಣವನ್ನೇ ಬಿಡಿಸಿರುವ ಬೇಗೂರಿನ ವೀರಗಲ್ಲು ಗಂಗರ ಕಾಲದ ಸ್ಥಳೀಯ ಶಿಲ್ಪರೀತಿಗೆ ಸರಳತೆಗೆ ನೈಜತೆಗೆ ಹೆಸರಾಗಿದೆ. ರಣರಂಗದ ತುಂಬ ಏಳುತ್ತಿರುವ, ಬೀಳುತ್ತಿರುವ ಕತ್ತಿ ಬಿಲ್ಲು ಬಾಣಗಳನ್ನು ಹಿಡಿದು ಹೋಗುತ್ತಿರುವ ಹಲವು ಭಂಗಿಯ ಕಾಲಾಳುಗಳು, ಏಟು ತಿಂದು ಸತ್ತವರ ಹೆಣದ ರಾಶಿ, ಅವುಗಳ ನಡುವೆ ಕುದುರೆಯ ಮೇಲೆ ಕುಳಿತ ನಾಗತ್ತರ (ಶಾಸನೋಕ್ತ) ವೀರಾವೇಶದಿಂದ ಹಿಮ್ಮೆಟ್ಟಿಸುತ್ತಿರುವ ಶತ್ರುವಿನ ಆನೆ, ಮೂಲೆಯೊಂದರಲ್ಲಿ ಹೆಣವನ್ನೆತ್ತಿ ಒಯ್ಯುತ್ತಿರುವ ಮರುಳು, ಮೇಲೆ ಸ್ವರ್ಗದಲ್ಲಿ ಕುಳಿತ ವೀರನ ಮುಂದೆ ನಡೆಯುತ್ತಿರುವ ನರ್ತನ ಎಲ್ಲವನ್ನೂ ಸಹಜವಾಗಿ ರಸವತ್ತಾಗಿ ಚಿತ್ರಿಸಿದ್ದು ಬೇರೆಡೆ ಕಾಣಲಾಗದ ವಿವರಗಳು ಇಲ್ಲಿ ಬಂದಿವೆ.

ಗಂಗರ ಕಾಲದ ಶೈವ ಮತ್ತು ಜೈನಮೂರ್ತಿಗಳ ಹಲವು ಪ್ರಕಾರಗಳಿವೆ. ವೈಷ್ಣವ ಮೂರ್ತಿಗಳೂ ಕೆಲವಿವೆ. ಶೈವ ಮೂರ್ತಿಗಳಲ್ಲಿ ಮುಖ್ಯವಾಗಿ ಶಿವ ಲೀಲೆಗಳು, ಸಪ್ತಮಾತೃಕೆಯರು, ಮಹಿಷಾಸುರಮರ್ದಿನಿ, ಪಂಚಾಯತನ ಮೂರ್ತಿಗಳು ಮತ್ತು ನವರಂಗದ ಚಾವಣಿಯಲ್ಲಿ ನಟರಾಜನ ಅಷ್ಟದಿಕ್ಪಾಲಕ ಮೂರ್ತಿಗಳು ಹೆಚ್ಚು ಕಂಡುಬರುತ್ತವೆ. ಕುಣಿಗಲಿನಲ್ಲಿ ಈಚಿನ ದೇವಾಲಯವೊಂದರಲ್ಲಿರುವ ಪುರಾತನವಾದ ಮಹಿಷಾಸುರಮರ್ದಿನಿಯ ಮೂರ್ತಿ ಎಂಟು ಅಥವಾ ಒಂಬತ್ತನೆಯ ಶತಮಾನದ ಗಂಗರ ಶಿಲ್ಪವೈಶಿಷ್ಟ್ಯವನ್ನು ಎತ್ತಿಹಿಡಿಯುತ್ತದೆ. ನಂದಿಯಲ್ಲಿರುವ ಮಹಿಷಾಸುರಮರ್ದಿನಿಯಂತಿರುವ ಒಂದು ಮೂರ್ತಿ ತೆಳುವುಬ್ಬು ಶಿಲ್ಪದಲ್ಲಿದ್ದು ಸ್ಥೂಲ ರೂಪರೇಖೆಗಳನ್ನು ಬಿಡಿಸಿದ್ದರೂ ಆಕರ್ಷಕವಾಗಿವೆ. ನಾಲಗೆಯನ್ನು ಹೊರಚಾಚಿರುವ ಕೋಣನ ತಲೆಯ ಮೇಲೆ ಎಡಗಾಲು ಮೆಟ್ಟಿ ಬಲಗಾಲನ್ನು ಅಡ್ಡಗಾಲು ಹಾಕಿ ತ್ರಿಭಂಗಿಯಲ್ಲಿ ಲೀಲಾವಿನೋದದಿಂದ ನಿಂತಿರುವ ಚತುರ್ಭುಜ ಮೂರ್ತಿಯ ಒಂದು ಕಡೆ ಸಿಂಹ, ಇನ್ನೊಂದು ಕಡೆ ಜಿಂಕೆಯಿದ್ದು ವಿಶಿಷ್ಟವಾಗಿದೆ. ಪಲ್ಲವರ ಚೋಳರ ದೇವಾಲಯಗಳಲ್ಲಿರುವಂತೆ ಗಂಗರ ದೇವಾಲಯಗಳಲ್ಲಿರುವ ಸಪ್ತಮಾತೃಕೆಯರ ಮೂರ್ತಿಗಳು ಬೇರೆ ಬೇರೆಯಾಗಿ ಒಂದು ಸಾಲಿನಲ್ಲಿರುತ್ತವೆ. ನೊಣವಿನಕೆರೆಯ ಗಂಗೇಶ್ವರ, ನೊಣಬೇಶ್ವರ ದೇವಾಲಯಗಳ ಬಳಿ ಇದ್ದ ಇಂಥ ಮೂರ್ತಿಗಳು ತೆಳುವಾಗಿ ಬಿಡಿಸಿದ್ದರೂ ಸತ್ವಯುಕ್ತವಾಗಿವೆ.

ನರಸಮಂಗಲದ ರಾಮೇಶ್ವರ ದೇವಾಲಯದ ಗೋಡೆ ಗೋಪುರಗಳ ಮೇಲೆ ಇರುವ ಗಚ್ಚಿನ ಮೂರ್ತಿಗಳೂ ದೇವಾಲಯದ ಒಳಗೂ ಹೊರಗೂ ಇರುವ ಸಪ್ತಮಾತೃಕಾ ಪಂಚಾಯತನ ಮೂರ್ತಿಗಳೂ ಪೂರ್ಣರೂಪದಲ್ಲಿ ಬಿಡಿಸಿದ್ದು ವೈಶಿಷ್ಟ್ಯಪೂರ್ಣವಾಗಿ ಕಲೆಯ ಉತ್ತಮ ಗುಣಗಳನ್ನು ಪ್ರದರ್ಶಿಸುತ್ತವೆ. ವಿಶಾಲ ವಕ್ಷಸ್ಥಳ, ತೆಳು ನಡು, ನೀಳವಾದ ಕೈಕಾಲುಗಳು, ಕೆಲವೇ ಆಭರಣಗಳು ಮಂದಹಾಸಯುಕ್ತವಾದ ಗಂಭೀರ ಮುಖಮುದ್ರೆ, ದಪ್ಪ ಕೆಳದುಟಿಗಳು ಇವುಗಳಿಂದ ನೈಜವಾಗಿ ಅತ್ಯಂತ ಆಕರ್ಷಕವಾಗಿರುವ ಈ ಮೂರ್ತಿಗಳಿಗೆ ಸಾಟಿಯನ್ನು ಎಲ್ಲೋರ, ಮಹಾಬಲಿಪುರಗಳಲ್ಲಿ ಮಾತ್ರ ಕಾಣಬಹುದು. ಈ ದೇವಾಲಯದ ನವರಂಗದ ಒಳಚಾವಣಿಯಲ್ಲಿಯೂ ಇದರಂತೆ ನಂದಿಯ ಭೋಗನಂದೀಶ್ವರ ದೇವಾಲಯ, ಮದ್ದೂರಿನ ದೇಶೇಶ್ವರ ದೇವಾಲಯ, ಚಾಮರಾಜನಗರ ತಾಲ್ಲೂಕು ಆಲೂರಿನ ಅರ್ಕೇಶ್ವರ ದೇವಾಲಯ, ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯ ಮೊದಲಾದ ಗಂಗರ ಕಾಲದ ಹಲವಾರು ದೇವಾಲಯಗಳ ನವರಂಗದ ಚಾವಣಿಗಳಲ್ಲಿಯೂ ನಡುವೆ ನಟರಾಜನನ್ನೂ ಸುತ್ತಲೂ ಅಷ್ಟದಿಕ್ಪಾಲಕರನ್ನೂ ಸುಂದರವಾಗಿ ಬಿಡಿಸಿದೆ. ಇವುಗಳಲ್ಲೆಲ್ಲ ಅತ್ಯಂತ ಆಕರ್ಷಕವೂ ಭವ್ಯವೂ ಆದದ್ದೆಂದರೆ ಅರಳಗುಪ್ಪೆಯ (ನೋಡಿ) ಕಲ್ಲೇಶ್ವರ ದೇವಾಲಯದ ಶಿಲ್ಪ. ನಡುವೆ ತೆಳುವಾಗಿ ನೀಳವಾಗಿ ಅಪಸ್ಮಾರವನ್ನು ತುಳಿದು ನೃತ್ಯಮಗ್ನವಾಗಿರುವ ಸಂಧ್ಯಾತಾಂಡವ ಶಿವನ ಆ ನಾಟ್ಯಭಂಗಿ ಅಪೂರ್ವವಾದ್ದು. ಜಟಾಮುಕುಟ ಸರ್ಪಕುಂಡಲ ಮತ್ತು ಇತರ ಕೆಲವೇ ಆಭರಣಗಳನ್ನು ಧರಿಸಿ ಮೇಲಿನ ಎರಡು ಕೈಗಳಲ್ಲೂ ತ್ರಿಶೂಲಗಳನ್ನು ಹಿಡಿದು ಲಂಬಹಸ್ತವಾಗಿ ತನ್ನ ಸುತ್ತಲೂ ತ್ರಿಘಟೆ, ತಾಳ ಕೊಳಗಳನ್ನು ಬಾರಿಸುತ್ತಿರುವವರನ್ನು ತಲ್ಲೀನಗೊಳಿಸಿ ನರ್ತಿಸುತ್ತಿರುವ ನಟರಾಜನ ಮುಖದ ಪ್ರಸನ್ನತೆ ಅನುಪಮವಾದ್ದು. ಎಂಟು ಮೂಲೆಗಳಲ್ಲೂ ಈ ಮೂರ್ತಿಯಷ್ಟೇ ಸುಂದರವಾಗಿರುವ ಅಷ್ಟದಿಕ್ಪಾಲಕರು ಸತೀಸಮೇತರಾಗಿ ತಮ್ಮ ತಮ್ಮ ವಾಹನಗಳನ್ನೇರಿ ಮೋಡಗಳ ನಡುವೆ ತೇಲಿ ಹೋಗುತ್ತಿರುವುದು, ನಡುವಿನ ನಾಲ್ಕು ಮೂಲೆಗಳಲ್ಲೂ ಗಂಧರ್ವರು ಹೂವಿನ ದಂಡೆಯನ್ನು ಹಿಡಿದು

ಆಕಾಶದಲ್ಲಿ ಚಿಮ್ಮುತ್ತಿರುವುದು ಆ ಸನ್ನಿವೇಶಕ್ಕೆ ಅತ್ಯಂತ ಸೂಕ್ತವಾಗಿ ಹೊಂದಿಕೊಂಡು, ಕ್ರಿಯಾಶೀಲವಾಗಿ, ಭಾವಪೂರ್ಣವಾಗಿ, ನೋಡುವವರನ್ನು ಮಂತ್ರಮುಗ್ಧರಾಗಿ ಮಾಡುತ್ತದೆ.

ಮಹಿಷಾಸುರಮರ್ದಿನಿ, ವರುಣ

ಗಂಗರ ಕಾಲದ ಜಿನಮೂರ್ತಿಗಳು, ಯಕ್ಷಯಕ್ಷಿಯರು ಚಾವಣಿಯಲ್ಲಿಯ ಅಷ್ಟದಿಕ್ಪಾಲಕಾದಿಗಳನೇಕವು ಉಳಿದುಬಂದಿವೆ. ಕಂಬದಹಳ್ಳಿಯ ಆದಿನಾಥನ ಮೂರ್ತಿ, ಶ್ರವಣಬೆಳಗೊಳದ ಶಾಂತಿನಾಥ, ಚಂದ್ರಪ್ರಭ, ಸುಪಾರ್ಶ್ವನಾಥನ ಮೂರ್ತಿಗಳು, ನಿರಾಭರಣವಾಗಿದ್ದರೂ ತಪೋನಿರತವಾಗಿರುವ, ಅವರ ಮುಖದಲ್ಲಿ ಶಾಂತತೆ, ತೇಜಸ್ಸು, ಓಜಸ್ಸು ಹೊಮ್ಮುವಂತೆ ಕಂಡರಿಸಿರುವ ಶಿಲ್ಪ ಶ್ರೇಷ್ಠವಾದ್ದು. ಯಕ್ಷಯಕ್ಷಿಯರನ್ನಂತೂ ಭಾವಯುಕ್ತವಾಗಿ ಸುಂದರವಾಗಿ ಕಡೆದಿದ್ದಾರೆ. ಚಂದ್ರಗುಪ್ತ ಬಸದಿಯಲ್ಲಿರುವ ನಿಂತಿರುವ ಯಕ್ಷನ ಮೂರ್ತಿ ಈ ರೀತಿಯ ಶಿಲ್ಪಕ್ಕೆ ಉತ್ತಮವಾದ ಉದಾಹರಣೆ.

ಗಂಗರ ಮೂರ್ತಿಶಿಲ್ಪದ ಪರಾಕಾಷ್ಠೆಯನ್ನು ಶ್ರವಣಬೆಳಗೊಳದ ದೊಡ್ಡಬೆಟ್ಟದ ಮೇಲಿರುವ ಗೊಮ್ಮಟೇಶ್ವರನಲ್ಲಿ ನೋಡಬಹುದು. ಚಾವುಂಡರಾಯ ಕಡೆಯಿಸಿದ ಈ ಮೂರ್ತಿ ಸನ್ನಿವೇಶ, ಗಾತ್ರ, ರಚನೆ, ರೀತಿ ಎಲ್ಲದರಲ್ಲಿಯೂ ಅದ್ವಿತೀಯವೆನ್ನಿಸಿಕೊಂಡಿದೆ. ಬಾಹುಬಲಿಯ ಚರಿತ್ರೆಯ ಹಿನ್ನೆಲೆಯಲ್ಲಿ ಈ ಮೂರ್ತಿಯನ್ನು ನೋಡಿದಾಗ ಶಿಲ್ಪಿ ಅದೆಷ್ಟು ಸಂಪೂರ್ಣವಾಗಿ ಯಶಸ್ವಿಯಾಗಿದ್ದಾನೆಂದು ತಿಳಿಯದಿರದು. ಬಾಹುಬಲಿಯ ಪರಿಪೂರ್ಣತ್ಯಾಗ, ಆತ್ಮಸಂಯಮಗಳು, ಪ್ರಪಂಚದ ಕಷ್ಟಕಾರ್ಪಣ್ಯಗಳೆಡೆ ಮರುಕ ಬೆರೆತ ಕಿರುನಗೆಯ ನೋಟ, ಹುತ್ತಬಳ್ಳಿಗಳು ಬೆಳೆದರೂ ಅಲುಗದ ನಿಶ್ಚಲತೆ ಎಲ್ಲವೂ ಆ ಮೂರ್ತಿಯಲ್ಲಿ ಎದ್ದುತೋರುತ್ತವೆ. ಈಜಿಪ್ಟನ್ನು ಬಿಟ್ಟರೆ ಬೇರೆಲ್ಲಿಯೂ ಇಂಥ ಅದ್ಭುತವಾದ, ಇಷ್ಟು ಪ್ರಭಾವಯುತವಾದ ಶಿಲ್ಪ ಇಲ್ಲ ಎಂದು ಫರ್ಗ್ಯೂಸನ್ ಹೇಳಿದ್ದಾನೆ. ಇಷ್ಟು ಉನ್ನತವಾದ ಮೂರ್ತಿಯಲ್ಲಿ ಇಂಥ ಸೌಂದರ್ಯವೂ ಇಂಥ ಅತಿಶಯವೂ ಇರುವುದು ಬೇರೆಡೆಯಲ್ಲಿ ಅಸಾಧ್ಯ. ಕ್ಷಿತಿಸಂಪೂಜ್ಯವಾದ ಈ ಗೊಮ್ಮಟೇಶ್ವರ ಜಿನನ ಶ್ರೀರೂಪ ಆತ್ಮೋಪಮವಾದದ್ದೆಂಬುದು ಪ್ರಾಚೀನ ಕವಿವಾಣಿ.

ಮಾನವ ಅಥವಾ ದೇವತೆಗಳ ರೂಪವನ್ನು ಕಂಡರಿಸುವುದರಲ್ಲಷ್ಟೆ ಅಲ್ಲ, ಪ್ರಾಣಿಶಿಲ್ಪಗಳನ್ನು ಕಂಡರಿಸುವುದರಲ್ಲೂ ಅವುಗಳ ರೂಪ ಗುಣ ಸ್ವಭಾವಗಳನ್ನು ಚೆನ್ನಾಗಿ ಸೆರೆ ಹಿಡಿದಿದ್ದಾರೆ ಗಂಗರ ರೂವಾರಿಗಳು. ಕಲ್ಲಿನ ಶಾಸನಗಳ ಮೇಲಿನ ಮತ್ತು ತಾಮ್ರಶಾಸನಗಳ ಮುದ್ರೆಗಳ ಮೇಲಿನ ಆನೆಗಳು, ಅಷ್ಟದಿಕ್ಪಾಲಕರ ವಾಹನಗಳು ಮುಂತಾದವುಗಳಲ್ಲಿ ಇದನ್ನು ನೋಡಬಹುದು.

ಇವರ ಕಾಲದ ಲೋಹಮೂರ್ತಿಗಳು ಹೆಚ್ಚು ಉಳಿದುಬಂದಿಲ್ಲ. ಈಗ ಶ್ರವಣಬೆಳಗೊಳದ ಜೈನಮಠದಲ್ಲಿರುವ ಗಂಗ ನೊಳಂಬ ಕುಲಾಂತಕ ಮಾರಸಿಂಹನ ಅಕ್ಕ ಕುಂದಣಸೋಮಿದೇವಿ ಮಾಡಿಸಿದ ಜಿನಮೂರ್ತಿ ಇಂಥ ಮೂರ್ತಿಗಳಲ್ಲೊಂದು.

**ಶಾಸನಗಳು :** ಸು.700 ವರ್ಷಗಳಷ್ಟು ಕಾಲ ಆಳಿದ ಗಂಗವಂಶದ ರಾಜರ ಶಾಸನಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಆದರೂ ಅವು ಹಲವು ರೀತಿಯಲ್ಲಿ ಮುಖ್ಯವೂ ವೈವಿಧ್ಯಪೂರ್ಣವೂ ಆದಂಥವು. ಮೊದಮೊದಲ ಗಂಗ ರಾಜರ ಇತಿಹಾಸವನ್ನರಿಯಲು ಇವೇ ಪೂರ್ಣ ಆಧಾರ. ಗಂಗರ ಶಾಸನಗಳು ಸ್ಥೂಲವಾಗಿ ಮೂರು ಬಗೆ 1 ತಾಮ್ರಶಾಸನಗಳು, 2 ಶಿಲಾಶಾಸನಗಳು ಮತ್ತು 3 ವೀರಗಲ್ಲುಗಳು. 8ನೆಯ ಶತಮಾನದವರೆಗೂ ಇವರ ಶಿಲಾಶಾಸನಗಳು ಬಲು ವಿರಳವಾಗಿವೆ. 726ರಲ್ಲಿ ಪಟ್ಟಕ್ಕೆ ಬಂದ ಶ್ರೀಪುರುಷನಿಗಿಂತ ಹಿಂದಿನ ರಾಜರ ಶಿಲಾಶಾಸನಗಳೆಂದರೆ ಕೋಲಾರ ಜಿಲ್ಲೆ ಆವನಿಯಲ್ಲಿ ದೊರೆತಿರುವ ತುಂಡುಶಾಸನ, ಚಿಕ್ಕಮಗಳೂರು ಜಿಲ್ಲೆ ಸಿರಿಗುಂದದ ನಿರ್ವಿನೀತನ ಶಾಸನ, ಕೋಲಾರ ಜಿಲ್ಲೆಯ ಕಲ್ಲೂರಿನ ಶ್ರೀವಿಕ್ರಮನ ಶಾಸನ ಮತ್ತು ತಮಿಳುನಾಡಿನ ತಿರುವಳ್ಳೂರಿನ 1ನೆಯ ಶಿವಮಾರನ ಶಾಸನ ಇವಿಷ್ಟೆ. ಆದರೆ ಇದೇ ಅವಧಿಯಲ್ಲಿ ಗಂಗರ ಹಲವಾರು ತಾಮ್ರ ಶಾಸನಗಳು ದೊರೆತಿವೆ.

ಪ್ರಾಚೀನ ಕನ್ನಡ ಅರಸುಮನೆತನಗಳಲ್ಲಿ ಬಹುಶಃ ಗಂಗರಷ್ಟು ತಾಮ್ರಶಾಸನಗಳನ್ನು ಹಾಕಿಸಿರುವವರು ಬೇರೆ ಇಲ್ಲ. ಇದುವರೆಗೂ ಸುಮಾರು ನೂರಕ್ಕೂ ಮೀರಿ ಅವರ ತಾಮ್ರಶಾಸನಗಳು ದೊರೆತಿವೆ. ಇಮ್ಮಡಿ ಮಾರಸಿಂಹನವರೆಗೂ ಗಂಗರಾಜರು ತಾಮ್ರಶಾಸನಗಳನ್ನು ಹಾಕಿಸಿದ್ದಾರೆ. ಮುಂದಿನ ರಾಜರ ತಾಮ್ರಶಾಸನಗಳು ದೊರೆತಿಲ್ಲ.



ಹರಿವರ್ಮನ ಕಾಲದ್ದೆನ್ನುವ ಒಂದು ಕೂಟಶಾಸನ, ಕೂಡಲೂರು

ಗಂಗರ ತಾಮ್ರಶಾಸನಗಳಿಗೂ ಶಿಲಾಶಾಸನಗಳಿಗೂ ಹಲವು ಮುಖ್ಯವಾದ ವ್ಯತ್ಯಾಸಗಳುಂಟು. ತಾಮ್ರಶಾಸನಗಳು ಬಹುಪಾಲು ಸಂಸ್ಕೃತದಲ್ಲಿವೆ; ಶಿಲಾಶಾಸನಗಳು ಕನ್ನಡದಲ್ಲಿವೆ. ತಾಮ್ರಶಾಸನಗಳಲ್ಲಿ ಒಕ್ಕಣೆ ಹೆಚ್ಚು. ಗಂಗವಂಶದ ಮೂಲ ಪುರುಷ ಕೊಂಗುಣಿವರ್ಮನಿಂದ ಆರಂಭಿಸಿ ಶಾಸನ ಕೊರೆಸಿದ ರಾಜನವರೆಗೂ ಪೀಳಿಗೆಯನ್ನು ಸವಿವರವಾಗಿ

ಕೊಟ್ಟಿರುತ್ತವೆ. ಶಿಲಾಶಾಸನಗಳಲ್ಲಾದರೋ ಹೆಚ್ಚು ವಿಷಯಗಳಿರುವುದಿಲ್ಲ; ಅವನ್ನು ಹಾಕಿಸಿದ ರಾಜರ ಹೆಸರು, ಒಮ್ಮೊಮ್ಮೆ ಅವರ ಬಿರುದುಗಳು, ಶಾಸನದ ಕಾಲ ಮತ್ತು ಉದ್ದೇಶಗಳನ್ನು ಅವು ನೇರವಾಗಿ ಸರಳವಾಗಿ ತಿಳಿಸಿರುತ್ತದೆ; ಆವನಿಯ ತುಂಡುಶಿಲಾಶಾಸನ ಇದಕ್ಕೆ ಅಪವಾದ. ಇದು ತಾಮ್ರ ಶಾಸನಗಳಂತೆ ಸಂಸ್ಕೃತದಲ್ಲಿದೆ: ಗಂಗರ ಪೀಳಿಗೆಯನ್ನು ಕೊಡುತ್ತದೆ. ಆದರೆ ನಡುವೆಯೇ ನಿಂತುಹೋಗುವುದರಿಂದ ಇದು ಯಾರ ಕಾಲದ್ದೆಂದು ಹೇಳಲು ಬಾರದು. ಹೀಗೆಯೇ ಗುಂಡ್ಲುಪೇಟೆ ತಾಲ್ಲೂಕಿನ ಶಾಸನವೊಂದರಲ್ಲಿ ಒಂದೂವರೆ ಶ್ಲೋಕಗಳಲ್ಲಿ ಗಂಗವಂಶದ ಪೀಳಿಗೆಯನ್ನು ಕೊಂಗುಣಿವರ್ಮನಿಂದ ಆರಂಭಿಸಿ ಒಂದನೆಯ ಶಿವಮಾರನವರೆಗೆ ಹೀಗೆ ತಿಳಿಸಿದೆ:

ಕೊಂಗುಣಿರ್ಮಾಧವಶ್ಚೈವ ಹರಿಶ್ಚ ವಿಷ್ಣುಗೋಪಮಃ
ಮಾಧವೋಪ್ಯವಿನೀತಶ್ಚ ದುರ್ವಿನೀತಶ್ಚ ಮುಷ್ಕರಃ
ಶ್ರೀವಿಕ್ರಮಶ್ಚ ದುಗ್ಗಶ್ಚ ಶಿವಮಾರಸ್ತಥೈವ ಚ

ವಳ್ಳಿಮಲೆಯ ಗುಹೆಯೊಂದರಲ್ಲಿ ಇರುವ ಒಂದನೆಯ ರಾಜಮಲ್ಲನ ಶಾಸನದಲ್ಲಿನ ಅವನ ಹಿಂದಿನ ಮೂರು ತಲೆಮಾರುಗಳ ಹೆಸರುಗಳನ್ನು, ಎಂದರೆ ಒಂದನೆಯ ಶಿವಮಾರ, ಅವನ ಮಗ ಶ್ರೀಪುರುಷ, ಅವನ ಮಗ ರಣವಿಕ್ರಮ, ಅವನ ಮಗ ರಾಜಮಲ್ಲ ಎಂದು ತಿಳಿಸುವುದೊಂದು ವಿಶೇಷ. ಉಳಿದಂತೆ ಈ ಪೀಳಿಗೆ ಶಿಲಾಶಾಸನಗಳಲ್ಲಿ ಕಂಡುಬರುವುದಿಲ್ಲ. ಆದ್ದರಿಂದಲೇ ಗಂಗರ ವಂಶಾವಳಿಯನ್ನು ಗುರುತಿಸಲು ಶಿಲಾಶಾಸನಗಳಿಗಿಂತ ಹೆಚ್ಚಾಗಿ ತಾಮ್ರಶಾಸನಗಳೇ ಆಧಾರ.

ಗಂಗರ ತಾಮ್ರಶಾಸನಗಳು ಹೆಚ್ಚಾಗಿದ್ದರೂ ಅವುಗಳ ನೈಜತೆಯ ವಿಷಯದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ರೈಸ್ ತಮಗೆ ದೊರೆತ ತಾಮ್ರಶಾಸನಗಳೆಲ್ಲವನ್ನೂ ಸಾಮಾನ್ಯವಾಗಿ ನೈಜವೆಂದೇ ಪ್ರತಿಪಾದಿಸಿದರೆ, ಫ್ಲೀಟ್ ಮೊದಮೊದಲು ಈ ಎಲ್ಲ ಶಾಸನಗಳೂ ಕೂಟಶಾಸನಗಳೆಂದೇ ಹೇಳಿದರು. ಆದರೆ ಕಡೆಗೆ ಪೆನುಗೊಂಡೆ ತಾಮ್ರಶಾಸನವೇ ಮೊದಲಾದ ಕೆಲವನ್ನಾದರೂ ನೈಜವೆಂದು ಫ್ಲೀಟ್ ಒಪ್ಪಿಕೊಳ್ಳಬೇಕಾಯಿತು. ಈಚೆಗೆ ಗಂಗರ ಹಲವು ತಾಮ್ರಶಾಸನಗಳು ದೊರೆತಿರುವುದರಿಂದ ಇವುಗಳ ತೌಲನಿಕ ಅಧ್ಯಯನದಿಂದ ನೈಜ ಮತ್ತು ಕೂಟ ಶಾಸನಗಳನ್ನು ಬೇರ್ಪಡಿಸುವುದು ಸಾಧ್ಯವಾಗಿದೆ. ಈಗ ಪರಿಶೀಲಿಸಿದಾಗ ಅವುಗಳಲ್ಲಿ ಕೆಲವಾದರೂ ಕೂಟಶಾಸನಗಳಿರಬೇಕೆಂಬುದು ವ್ಯಕ್ತವಾಗುತ್ತದೆ. ಇಂಥ ಶಾಸನಗಳಲ್ಲಿ ಗಂಗರ ವಂಶಾವಳಿಯನ್ನು ಸರಿಯಾಗಿ ಕೊಟ್ಟಿದ್ದರೂ ಲಿಪಿ, ಭಾಷೆ, ಕೊಟ್ಟಿರುವ ಕಾಲ ಮುಂತಾದವುಗಳಲ್ಲಿಯೂ ಶಾಸನಗಳನ್ನು ಕೊರೆದಿರುವ ರೀತಿ, ಹಲಗೆಗಳ ಆಕಾರಗಳಲ್ಲಿಯೂ ಅವು ಹುಟ್ಟಿದುವೆಂದು ಹೇಳಲಾದ ಕಾಲದವಲ್ಲದೆ ಬೇರೆಯ ಕಾಲದವರಾಗಿರುತ್ತವೆ. ಸು.5ನೆಯ ಶತಮಾನದಲ್ಲಿದ್ದ 1ನೆಯ ಮಾಧವನದೆಂದು ತಿಳಿಸುವ ನಂದಿಯ ತಾಮ್ರಶಾಸನದ ಲಿಪಿ ಒಂಬತ್ತನೆಯ ಶತಮಾನದ್ದಕ್ಕಿಂತ ಹಿಂದೆ ಹೋಗಲಾರದು; ಕನ್ನಡ ಬೆರೆತ ಸಂಸ್ಕೃತ ಭಾಷೆ, ಅದರಲ್ಲಿಯ ಹೇರಳವಾದ ವ್ಯಾಕರಣದೋಷಗಳು, ಕಂಡರಿಸಿರುವ ಒರಟು ರೀತಿ ಇವುಗಳನ್ನು ನೋಡಿದಾಗ ಇವು ಗಂಗರ ಆಸ್ಥಾನದಲ್ಲಿದ್ದ ವಿಶ್ವಕರ್ಮರಿಂದ ರಚಿತವಾದವೇ ಎಂಬ ಸಂದೇಹ ಬರುತ್ತದೆ. ತಗಡೂರು, ತಂಜಾವೂರು, ಕೂಡಲೂರುಗಳಲ್ಲಿ ದೊರೆತ ಹರಿವರ್ಮನವೆಂದು ಹೇಳಿಕೊಳ್ಳುವ-ಶಾಸನಗಳು, ಮಡಿಕೇರಿಯಲ್ಲಿ ದೊರೆತ ಅವಿನೀತನ ತಾಮ್ರಶಾಸನ ಮುಂತಾದವನ್ನು ಈ ಗುಂಪಿಗೆ ಸೇರಿಸಬಹುದು. ಗಂಗರ ತಾಮ್ರಶಾಸನಗಳಲ್ಲಿ ಸು.12ರಿಂದ 15ರ ವರೆಗೆ ಇಂಥ' ಕೂಟಶಾಸನಗಳಿರಬಹುದೆಂದು ಈಗ ವಿದ್ವಾಂಸರು ಒಪ್ಪುತ್ತಾರೆ.

ಉತ್ತನೂರು ಎಂಬಲ್ಲಿ ದುರ್ವಿನೀತನ ಮೂವತ್ತನೆಯ ವರ್ಷದ ಆಳಿಕೆಯ ಎರಡು ತಾಮ್ರಶಾಸನಗಳು ದೊರತಿವೆ. ಒಂದನ್ನು ಸುಂದರವಾಗಿ ತಪ್ಪಿಲ್ಲದಂತೆ ಕಂಡರಿಸಲಾಗಿದ್ದು, ಅದು ನೈಜಶಾಸನದ ಎಲ್ಲ ಲಕ್ಷಣಗಳನ್ನೂ ಒಳಗೊಂಡಿದೆ. ಆದರೆ ಈ ಎರಡು ಶಾಸನಗಳಲ್ಲಿಯೂ ಬರುವ ವಿಷಯ ಒಂದೇ. ದಾನದ ವಿಷಯವನ್ನೇ ಎರಡೂ ತಿಳಿಸುತ್ತವೆ. ಆದ್ದರಿಂದ ಕೂಟಶಾಸನವೆಂದು ಕಂಡುಬರುವ ತಾಮ್ರಶಾಸನವನ್ನು ದಾನ ಪಡೆದವರ ವಂಶದವರು ಮುಂದೆ ಯಾವಾಗಲೋ ತಮ್ಮ ದಾಖಲೆಗಾಗಿ ಮೂಲಶಾಸನದಿಂದ ಪ್ರತಿ ಮಾಡಿಸಿಕೊಂಡಿದ್ದಿರಬೇಕೆಂಬುದು ಸ್ಪಷ್ಟ. ಈಗ ಕೂಟಶಾಸನಗಳೆಂದು ಸ್ಪಷ್ಟವಾಗಿರುವ ತಾಮ್ರ ಶಾಸನಗಳಲ್ಲಿ ಕೆಲವಾದರೂ ಇಂಥ ಪ್ರತಿಗಳಾಗಿರಬಹುದು.

ಇವರ ತಾಮ್ರಶಾಸನಗಳು ಮೂರರಿಂದ ಏಳು ಹಲಗೆಗಳವರೆಗೆ ಇರುತ್ತವೆ. ಮೊದಮೊದಲ ಅರಸರ ಶಾಸನಗಳ ಹಲಗೆಗಳ ಅಗಲ ಕಿರಿದಾಗಿದ್ದು ಓಲೆಗರಿಯ ಆಕಾರದಲ್ಲಿವೆ. ಹಲಗೆಯ ಒಂದೊಂದು ಮುಖದಮೇಲೂ ಸ್ಫುಟವಾಗಿ ಹಳಗನ್ನಡ ಲಿಪಿಯಲ್ಲಿ ಕಡೆದ 4 ಅಥವಾ 5 ಪಂಕ್ತಿಗಳಿವೆ. ಮುಂದೆ ಕ್ರಮೇಣ ಹಲಗೆಯ ಅಗಲ ಹೆಚ್ಚಾಗಿದೆ. ಸಾಲುಗಳು ಹೆಚ್ಚಿವೆ. ಒಕ್ಕಣೆ ಬೆಳೆದಿದೆ. ಶಾಸನದ ಹಲಗೆಗಳನ್ನು ಎಡಭಾಗದಲ್ಲಿರುವ ರಂಧ್ರಗಳ ಮೂಲಕ ಹಾದುಹೋಗುವ ಒಂದು ಬಳೆಯಿಂದ ಬಂಧಿಸಿ ಬಳೆಯ ತುದಿಗಳನ್ನು ಜೋಡಿಸಿ ಆನೆಯ ಮುದ್ರೆ ಹಾಕಲಾಗುತ್ತಿತ್ತು. ಲಿಪಿ ಆಯಾ ಶತಮಾನದ ಕನ್ನಡದಲ್ಲಿದ್ದರೂ ಭಾಷೆ ಸಂಸ್ಕೃತ, ಪ್ರೌಢಶೈಲಿಯ ಗದ್ಯ; ಶಾಸನಗಳ ಒಕ್ಕಣೆ ಒಂದೇ ಬಗೆ. ಜೈನ ಶಾಸನಗಳಲ್ಲಿ ಮೊದಮೊದಲಿನ ತಾಮ್ರ ಶಾಸನಗಳು ಪೂರ್ತಿಯಾಗಿ ಸಂಸ್ಕೃತದಲ್ಲಿದ್ದರೂ ದುರ್ವಿನೀತನಿಂದೀಚೆಗೆ ದಾನ ಕೊಟ್ಟ ಗ್ರಾಮದ ಎಲ್ಲೆಯನ್ನು ತಿಳಿಸುವಾಗ ಒಮ್ಮೊಮ್ಮೆ ಕನ್ನಡವನ್ನು ಬಳಸುವ ರೂಢಿ ಬಳಕೆಗೆ ಬಂತು. ಗಂಗ ದುರ್ವಿನಿತನ ಆಳಿಕೆಯ ನಾಲ್ಕನೆಯ ವರ್ಷದ ಪೆಣ್ಣೂರು ತಾಮ್ರಶಾಸನದಲ್ಲಿ ಕೊನೆಯ ಒಂದು ವಾಕ್ಯ ಮಾತ್ರ ಕನ್ನಡದಲ್ಲಿದೆ. ಶಾಸನವನ್ನು ಕಂಡರಿಸಿದ ಚೋಮತ್ತಟ್ಟಾರನಿಗೆ ಕೊಟ್ಟ ದತ್ತಿಯನ್ನು ತಿಳಿಸುವ ಮುಕ್ಕಣ್ಣಕತ್ತು ಮಣಮ್ಮನೆಯುಮಪ್ಪಾಟು ಮಟ್ಟಿಯುನ್ತರಕ್ಕುಮ್‌ಒಡೆಅನ್ ಎಂಬ ವಾಕ್ಯ ಆ ಕಾಲದ ಕನ್ನಡದ ಸ್ವರೂಪವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ.



ಶ್ರೀಪುರುಷನ ಶಾಸನ, ತಲಕಾಡು

ಸಾಮಾನ್ಯವಾಗಿ ಈ ಶಾಸನಗಳು ಆರಂಭವಾಗುವುದು ಸ್ವಸ್ತಿ ಜಿತಂ ಭಗವತಾ ಎಂದು. ಮುಂದೆ ಕೊಂಗುಣಿವರ್ಮನಿಂದ, ತಾಮ್ರಶಾಸನವನ್ನು

ಹಾಕಿಸಿದ ರಾಜನವರೆಗೆ ವಂಶಾವಳಿಯನ್ನು ವಿವರಿಸಿರುತ್ತಾರೆ. ಗ್ರಾಮಗಳನ್ನು ದಾನವಾಗಿ ಕೊಟ್ಟ ವಿಷಯವನ್ನು ನಿರೂಪಿಸುವುದೇ ಹೆಚ್ಚು. ಶಾಸನಗಳನ್ನು ಕೊರೆಯುತ್ತಿದ್ದವನ ಬಗ್ಗೆ ವಿಶ್ವಕರ್ಮಾಚಾರ್ಯ ಎಂಬ ಅಧಿಕಾರದ ಹೆಸರನ್ನೆ ತಿಳಿಸುತ್ತಿದ್ದರೂ ಒಮ್ಮೊಮ್ಮೆ ಅವನ ಹೆಸರನ್ನೂ ಕೊಡುತ್ತಿದ್ದುದುಂಟು.

ಗಂಗರ ತಾಮ್ರಶಾಸನಗಳ ರೀತಿ, ಲಿಪಿಯ ಬೆಳೆವಣಿಗೆ, ಅದರ ಸೌಂದರ್ಯ - ಇವಕ್ಕೆ ಹಲವು ಉದಾಹರಣೆಗಳನ್ನು ಕೊಡಬಹುದು. ಕೃಷ್ಣವರ್ಮನ ಕುಡಿಥಿಯಂ ದಾನಶಾಸನ, ಅವಿನೀತನ ಹೊಸಕೋಟೆಯ ತಾಮ್ರಶಾಸನ, ದುರ್ವಿನೀತನ ಪೆಣ್ಣೂರು ದಾನಶಾಸನ, ಗುಮ್ಮರೆಡ್ಡಿಪುರ ಶಾಸನ, ಸುಂದರವಾದ ಲಿಪಿಯುಳ್ಳ 1ನೆಯ ಶಿವಮಾರನ ಹಲ್ಲೆಗೆರೆ ತಾಮ್ರಶಾಸನ (713), ಶ್ರೀಪುರುಷನ ಆಳಿಕೆಯ ಮೊದಲನೆಯ ವರ್ಷದ ಬಾರದೂರು ದಾನಶಾಸನ, ಇಪ್ಪತ್ತೈದನೆಯ ವರ್ಷದ ಜಾವಳಿ ಶಾಸನ, ಐವತ್ತನೆಯ ವರ್ಷದ ದೇವರಹಳ್ಳಿ ಶಾಸನ, 1ನೆಯ ರಾಚಮಲ್ಲನ ಆಳಿಕೆಯ ಮೊದಲನೆಯ ವರ್ಷದ (819) ಪೆರ್ಜರಂಗಿ ದಾನಶಾಸನ - ಇವು ಕೆಲವು. ಇವುಗಳಲ್ಲೆಲ್ಲ ಮಾರಸಿಂಹನ ಏಳು ಹಲಗೆಗಳಿರುವ ಕೂಡಲೂರು ಶಾಸನ ಮಾದರಿಯಾದ್ದು ಮತ್ತು ಚಾರಿತ್ರಿಕವಾಗಿ ಅಮೂಲ್ಯವಾದ್ದು. 963ರಲ್ಲಿ ಹುಟ್ಟಿದ ಈ ಶಾಸನ ಭಾಷೆ, ಲಿಪಿ ಎಲ್ಲದರಲ್ಲಿಯೂ ಸುಂದರವಾಗಿದೆ. ಚೌಕನಾಗಿರುವ ಇದರ ಆನೆಯ ಮುದ್ರೆಯೂ ಆಕರ್ಷಕವಾಗಿದೆ. ಅದರ ಕೆಳಗೆ ಶ್ರೀಮಾರಸಿಂಘದೇವ ಎಂಬ ರಾಜನ ಅಂಕಿತವೂ ಇದೆ. ಮಾರಸಿಂಹನ ಸಂಪೂರ್ಣವಾದ ವಂಶಾವಳಿಯಿದೆ. ಒಬ್ಬೊಬ್ಬ ರಾಜನಿಗೂ ದೀರ್ಘವಾದ ವಿವರಗಳುಂಟು. ಇದೇ ಗಂಗರ ಶಾಸನಗಳಲ್ಲೆಲ್ಲ ಅತ್ಯಂತ ವಿಸ್ತಾರವಾದ ಶಾಸನವೆಂದು ಹೇಳಬಹುದು. ಇದೇ ರಾಜನ ಇದೇ ರೀತಿಯ ಇನ್ನೊಂದು ತಾಮ್ರಶಾಸನ ಧಾರವಾಡ ಜಿಲ್ಲೆಯ ಕಾದಲೂರಿನಲ್ಲಿ ದೊರೆತಿದೆ.

ಜೈನ ಚೈತ್ಯಾಲಯ, ಚಿಕ್ಕಹನಸೋಗೆ

ಶ್ರೀಪುರುಷ ಪಟ್ಟಕ್ಕೆ ಬಂದ ವರ್ಷದಿಂದಲೇ ಶಿಲಾಶಾಸನಗಳೂ ವೀರಗಲ್ಲುಗಳೂ ದೊರೆಯಲಾರಂಭಿಸುತ್ತವೆ. ಇವುಗಳ ಸಂಖ್ಯೆ ಮುಂದೆ ಬೆಳೆಯುತ್ತ ಹೋಗುತ್ತದೆ. ಈ ಶಾಸನಗಳೂ ವೀರಗಲ್ಲುಗಳೂ ಹೆಚ್ಚಾಗಿ ಕಗ್ಗಲ್ಲಿನ ಮೇಲೆಯೇ ಇವೆ. ಇವರ ಪ್ರಾಚೀನಶಾಸನಗಳಲ್ಲೊಂದಾದ, ದುರ್ವಿನೀತನ ಸಿರಿಗುಂದದ ಶಾಸನವನ್ನು ಬಳಪದ ಕಲ್ಲಿನ ತೆಳುಹಲಗೆಯ ಮೇಲೆ ಕಂಡರಿಸಿದೆ. ಹಾಗೆಯೇ ಚಾವುಂಡರಾಯನ ಪ್ರತಾಪವನ್ನು ವರ್ಣಿಸುವ ಶಾಸನವಿರುವ ತ್ಯಾಗದ ಬ್ರಹ್ಮದೇವರ ಕಂಬವೂ ಬಳಪದ ಕಲ್ಲಿನದು. ತಲಕಾಡಿನಲ್ಲಿ ದೊರೆತ ಶ್ರೀಪುರುಷನ ರಾಜ್ಯಾಡಳಿತದ ಒಂದನೆಯ ವರ್ಷದ ಶಿಲಾಶಾಸನದಂತೆ ನಯಗೊಳಿಸಿದ ದೊಡ್ಡದಾದ ಶಿಲಾಫಲಕದ ಮೇಲೆ ಸುಂದರವಾಗಿ ಕಂಡರಿಸಿರುವ ಶಾಸನಗಳು ಕೆಲವಿದ್ದರೂ ಸಾಮಾನ್ಯವಾಗಿ ಒರಟು ಬಂಡೆಯ ಮೇಲೋ ಹದಗೊಳಿಸದ ಕಲ್ಲಿನ ಹಲಗೆಗಳ ಮೇಲೋ ಉಬ್ಬುತಗ್ಗುಗಳ ನಡುವೆಯೇ ಕೊರೆದಿರುವುದೇ ಹೆಚ್ಚು. ಆದರೂ ಅಕ್ಷರಗಳು ದೊಡ್ಡವೂ ಆಳವೂ ಆಗಿರುವುದರಿಂದ ಅವನ್ನು ಗುರುತಿಸಲು ಹೆಚ್ಚು ತೊಂದರೆ ಆಗದು. ಇವುಗಳಲ್ಲಿ ಹೆಚ್ಚು ವಿಷಯ ಇರುವುದಿಲ್ಲ. ಭಾಷೆ ಕನ್ನಡವೇ ಆದರೂ ಆಗಿನ ಆಡುನುಡಿಗಳನ್ನು ಹೆಚ್ಚು ಬಳಸುತ್ತಿದ್ದುದರಿಂದಲೋ ಆಗಿನ ಅನೇಕ ಪಾರಿಭಾಷಿಕ ಪದಗಳು ಈಗ ಬಳಕೆಯಲ್ಲಿಲ್ಲದಿರುವುದರಿಂದಲೊ ಬರೆವಣಿಗೆಯಲ್ಲಿ ತಪ್ಪು ಹೆಚ್ಚಾಗಿರುವುದ ರಿಂದಲೋ ಎಷ್ಟೋ ವೇಳೆ ಈ ಶಾಸನಗಳು ಅರ್ಥಕ್ಕೆ ನಿಲುಕುವುದಿಲ್ಲ. ಮದ್ದೂರು ತಾಲ್ಲೂಕಿನ ತಾಯಲೂರು ಶಾಸನ, ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಶಾಸನ ಮುಂತಾದುವುಗಳಲ್ಲಿರುವಂತೆ ಶಾಸನದ ಕಲ್ಲಿನ ಮೇಲೆ ಗಂಗರ ವಂಶಲಾಂಛನವಾದ ಆನೆಯ ಚಿತ್ರವನ್ನು ಬಿಡಿಸಿರುವುದುಂಟು. ಕೊಡಗಿನ ಬಿಳಿಯೂರು ಪೆಗ್ಗೂರುಗಳಲ್ಲಿ ದೊರೆತ ಗಂಗ ಶಾಸನಗಳ ಮೇಲ್ಭಾಗದಲ್ಲಿ ಆನೆಯೊಂದಿಗೆ ಕಲಶ, ದೀಪಸ್ತಂಭ ಮುಕ್ಕೊಡೆಗಳ ಶಿಲ್ಪವನ್ನೂ ನೋಡಬಹುದು.

ಗಂಗರ ಕೆಲವು ಕಂಬಶಾಸನಗಳೂ ಉಂಟು. ಇವುಗಳಲ್ಲಿ ಶ್ರವಣಬೆಳಗೊಳದ ಕೂಗೆಬ್ರಹ್ಮದೇವರ ಕಂಬದ ಬುಡದಲ್ಲಿರುವ ಮಾರಸಿಂಹನ ಶಾಸನ ಗಂಗರ ಶಿಲಾಶಾಸನಗಳಲ್ಲಿಯೇ ಉದ್ದವಾದ್ದೆನ್ನಬಹುದು. ಇದು ಮಾರಸಿಂಹ ತೀರಿಕೊಂಡ ಅನಂತರ ಅವನ ನೆನಪಿಗಾಗಿ ನಿಲ್ಲಿಸಿದ ಶಾಸನಗಂಬ. ಈ ದೊಡ್ಡ ಶಾಸನದಲ್ಲೂ ಮಾರಸಿಂಹನ ವಂಶಾವಳಿಯನ್ನು ತಿಳಿಸಿಲ್ಲ. ತನ್ನ ಜೀವಿತಕಾಲದಲ್ಲಿ ಮಾರಸಿಂಹ ನಡೆಸಿದ ಯುದ್ಧಗಳನ್ನು ಮತ್ತು ಅವನ ಸಾಧನೆಗಳನ್ನು ಹೃದಯಂಗಮವಾಗಿ ಚಿತ್ರಿಸಿದೆ. ತ್ಯಾಗದ ಬ್ರಹ್ಮದೇವರ ಕಂಬ ಇನ್ನೊಂದು. ರಾಚಮಲ್ಲನ ಮಂತ್ರಿ ಚಾವುಂಡರಾಯನ ಗುಣಗಾನ ಮಾಡುವ ಈ ಕಂಬದ ಮೇಲಿನ ಶಾಸನ ಮೊದಲು ಕಂಬದ ನಾಲ್ಕು ಮುಖಗಳಲ್ಲಿತ್ತು. ಈಗ ಮೂರು ಮುಖಗಳ ಮೇಲೆ ಅಳಿಸಿಹೋಗಿದೆ.

ಗಂಗರ ಕಾಲದ ವೀರಗಲ್ಲುಗಳು ತಮ್ಮದೇ ಆದ ವೈಶಿಷ್ಟ್ಯ ಹೊಂದಿವೆ. ಇವರ ಕಾಲದ ದಾನಶಾಸನಗಳಿಗಿಂತ ವೀರಗಲ್ಲಿನ ಶಾಸನಗಳ ಸಂಖ್ಯೆಯೇ ಹೆಚ್ಚೆಂದು ಹೇಳಬಹುದು. ಸಾಂಪ್ರದಾಯಿಕವಾದ, ಮೂರು ಅಂತಸ್ತುಗಳ ವೀರಗಲ್ಲುಗಳು ಕೆಲವಿವೆ. ಅವುಗಳಲ್ಲಿ ಯಳ್ಳಂಬಳಸೆಯ ವೀರಗಲ್ಲು ದೊಡ್ಡದಾಗಿಯೂ ಅತ್ಯಂತ ಸುಂದರವಾಗಿಯೂ ಇದೆ. ಬೂದುಬಣ್ಣದ ಕಗ್ಗಲ್ಲಿನಲ್ಲಿ ಈಗ ತಾನೇ ಕಡೆದು ನಿಲ್ಲಿಸಿರುವಷ್ಟು ಹೊಸದಾಗಿ ಕಾಣಿಸುವ ಈ ವೀರಗಲ್ಲಿನ ಮೊದಲ ಅಂತಸ್ತು ವೀರರು ಯುದ್ಧದಲ್ಲಿ ತೊಡಗಿರುವುದನ್ನೂ ಎರಡನೆಯದು ಅವರು ಅಪ್ಸರೆಯರ ತೋಳತೆಕ್ಕೆಯಲ್ಲಿ ಸ್ವರ್ಗದೆಡೆಗೆ ಹಾರುತ್ತಿರುವುದನ್ನೂ ಮೇಲಿನ ಅಂತಸ್ತುಗಳಲ್ಲಿ ಸ್ವರ್ಗದಲ್ಲಿ ಸುಖಾಸೀನರಾಗಿ ಕುಳಿತಿರುವ ನಾಲ್ವರು ವೀರರನ್ನೂ ಚಿತ್ರಿಸಿದೆ. ಅಡ್ಡಪಟ್ಟಿಕೆಗಳಲ್ಲಿ ಶ್ರೀಪುರುಷ ಶಿವಮಾರ ಮೊದಲಾದವರು ತೀರಿಕೊಂಡ ವಿಷಯವನ್ನು ತಿಳಿಸುವ ಶಾಸನವಿದೆ. ಆದರೂ ಇವರ ವೀರಗಲ್ಲುಗಳು ಒರಟು ಹಾಸುಗಲ್ಲುಗಳ ಮೇಲಿರುವುದೇ ಹೆಚ್ಚು. ಎಷ್ಟೋ ವೇಳೆ ಈ ಹಾಸುಗಲ್ಲುಗಳಿಗೆ ನಿರ್ದಿಷ್ಟವಾದ ಆಕಾರ, ಅಳತೆ ಇರುವುದಿಲ್ಲ. ಬಂಡೆಯಿಂದ ಸಿಡಿಸಿದ ಈ ಹಲಗೆಗಳು ಯಾವ ಆಕಾರದಲ್ಲಿದ್ದರೆ ಹಾಗೆಯೇ ಅವನ್ನು ಕಂಡರಿಸಲು ಉಪಯೋಗಿಸುತ್ತಾರೆ. ಶಿಲ್ಪವನ್ನೂ ಶಾಸನವನ್ನೂ ಕಂಡರಿಸಿರುವ ಮುಖವನ್ನು ಕೂಡ ನಯಗೊಳಿಸಿರುವುದಿಲ್ಲ. ಇದರಲ್ಲಿ ಹೆಚ್ಚು ಭಾಗ ವೀರರ ಆಕೃತಿಗಳಿಗಾಗಿ ಮೀಸಲು; ಒಂದೇ ಅಂತಸ್ತಿನಲ್ಲಿ ಕತ್ತಿಗುರಾಣಿಗಳನ್ನು ಹಿಡಿದ ವೀರರು ಒಬ್ಬರನ್ನೊಬ್ಬರು ಎದುರಿಸುತ್ತಿರುವಂತೆಯೋ ಆನೆಕುದುರೆಗಳ ಮೇಲೆ ಕುಳಿತು ಯುದ್ಧಮಾಡುತ್ತಿರುವಂತೆಯೋ ತೆಳುವುಬ್ಬುಶಿಲ್ಪದಲ್ಲಿ ಬಿಡಿಸಿದ್ದು ಭಾವಯುಕ್ತವಾಗಿರುತ್ತದೆ. ಈ ಶಿಲ್ಪದ ಸುತ್ತಲೂ ಯುದ್ಧದ ವಿಷಯವನ್ನು ತಿಳಿಸುವ ಒಂದು ಶಾಸನ ಹಿರೇಗುಂಡುಗಲ್ಲಿನಲ್ಲಿದೆ. ಇಂಥ ಇಪ್ಪತ್ತಕ್ಕೂ ಹೆಚ್ಚು ವೀರಗಲ್ಲುಗಳ ಒಂದು ದೊಡ್ಡ ಗುಂಪೇ ಇದೆ. ರಾಷ್ಟ್ರಕೂಟರಿಗೂ ಗಂಗ ಶ್ರೀಪುರುಷ ಶಿವಮಾರರಿಗೂ ಬೇರೆ ಬೇರೆ ಕಡೆ ನಡೆದ ಯುದ್ಧಗಳಲ್ಲಿ ಮಡಿದ ವೀರರ ಸ್ಮಾರಕವಾಗಿ ಇವು ನಿಂತಿವೆ. ಈಗ ಬೆಂಗಳೂರು ವಸ್ತುಸಂಗ್ರಹಾಲಯದಲ್ಲಿರುವ ಬೇಗೂರಿನದಾದ, ಏಳು ಅಡಿ ಉದ್ದ ಏಳು ಅಡಿ ಅಗಲ ಇರುವ ದೊಡ್ಡದೊಂದು ವೀರಗಲ್ಲು, ಗಂಗ ಎಱೆಯಪ್ಪನಿಗೂ ನೊಳಂಬರ ವೀರ ಮಹೇಂದ್ರನಿಗೂ ನಡೆದ ಯುದ್ಧದಲ್ಲಿ ತುಂಬೆಪಾಡಿಯಲ್ಲಿ ಗಂಗರ ಸಾಮಂತನಾಗಿದ್ದ ನಾಗತ್ತರ ಶತ್ರುವಿನ ಆನೆಯನ್ನೆದುರಿಸಿ ತುಮುಲ ಯುದ್ಧ ಮಾಡಿ ಮಡಿದ ವಿಷಯವನ್ನು ತಿಳಿಸುತ್ತದೆ; ಯುದ್ಧದಲ್ಲಿ ಸತ್ತ ವೀರರಿಗಷ್ಟೇ ಅಲ್ಲ ರಾಜರಿಗಾಗಿ ವೇಳೆಗೊಂಡು ಸತ್ತ ವೀರರಿಗಾಗಿ ನಿಲ್ಲಿಸಿರುವ ವೀರಗಲ್ಲುಗಳೂ ಹಲವಿವೆ. ನೀತಿಮಾರ್ಗ ಸ್ವರ್ಗಸ್ಥನಾದಾಗ, ಅವನ ಮನೆಮಗತಿಯಾಗಿದ್ದ (ಎಂದರೆ ಮನೆಯಲ್ಲಿ ಹುಟ್ಟಿದವನಂತೆಯೆ ಇದ್ದು ವಂಶಪಾರಂಪರ್ಯವಾಗಿ ಕೆಲಸ

ಮಾಡುತ್ತ ಬಂದ ಮನೆಯಾಳು) ಅಗರಯ್ಯ ಕೀಳ್ಗುಂಠೆಯಾಗಿ ಅವನೊಂದಿಗೆ ಸಾವನ್ನಪ್ಪಿದ್ದ ವಿಷಯವನ್ನು ದೊಡ್ಡಹುಂಡಿಯ ವೀರಗಲ್ಲೊಂದು ತಿಳಿಸುತ್ತದೆ. ಪರ್ಯಂಕದ ಮೇಲೆ ಮಲಗಿರುವ ರಾಜನನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಅಗರಯ್ಯ ಸಾಯಲು ಸಿದ್ಧವಾಗಿರುವಂತೆ ಆ ಶಾಸನದ ಮೇಲಿರುವ ಶಿಲ್ಪದಲ್ಲಿ ಬಿಡಿಸಿದೆ. ರಾಚಮಲ್ಲ ಕುಂಬಳೆಯಲ್ಲಿ ಸ್ವರ್ಗಸ್ಥನಾದಾಗ ಬೆದನ್ತೆ ರಾಚಯ ಎನ್ನುವವನು ಕಿಚ್ಚು ಹೊಕ್ಕುದನ್ನೂ ಗಂಗ ಚನ್ನಿಯಮ್ಮರಸ ಕಾಲವಾದಾಗ ಕೀಳ್ಗುಂಠೆಯಾದ್ದನ್ನೂ ವೀರಗಲ್ಲುಗಳು ತಿಳಿಸುತ್ತವೆ. ಆತಕೂರಿನಲ್ಲಿ ದೊರೆತ ದೊಡ್ಡದೊಂದು ವೀರಗಲ್ಲು ಸ್ವಾರಸ್ಯವಾದ್ದು. ಗಂಗ ಬೂತುಗ ರಾಷ್ಟ್ರಕೂಟರೊಡನೆ ಸೇರಿ ಚೋಳ ರಾಜಾದಿತ್ಯನ ಮೇಲೆ ತಕ್ಕೋಲದಲ್ಲಿ ಯುದ್ಧ ಮಾಡಿದಾಗ ಮಣಲೆರನೆಂಬ ವೀರ ತೋರಿಸಿದ ಶೌರ್ಯಕ್ಕೆ ಮೆಚ್ಚಿ ಬೇಡಿಕೊ ಎಂದಾಗ, ಕಾಳಿ ಎಂಬ ಬೇಟೆನಾಯಿಯನ್ನು ಮಣಲೆರ ಕೇಳಿ ಪಡೆಯುತ್ತಾನೆ. ಒಮ್ಮೆ ಆ ನಾಯಿಯನ್ನು ಕಾಡುಹಂದಿಯೊಂದರ ಮೇಲೆ ಬಿಟ್ಟಾಗ ನಾಯಿಯೂ ಹಂದಿಯೂ ಒಟ್ಟಿಗೆ ಸಾಯುತ್ತವೆ. ಮಣಲೆರ ಆ ನಾಯಿಗಾಗಿ ವೀರಗಲ್ಲನ್ನು ನಿಲ್ಲಿಸಿ ಅದರ ಪೂಜೆಗಾಗಿ ಭೂಮಿದಾನ ಮಾಡಿದ್ದಾನೆ. ಶಾಸನದ ಮೇಲೆ ನಾಯಿಹಂದಿಗಳು ಕಚ್ಚಾಡುತ್ತಿರುವ ಶಿಲ್ಪವಿದೆ. (ಎಂ.ಎಚ್.)

**ನಾಣ್ಯಗಳು :** ತಲಕಾಡು ಗಂಗರ ನಾಣ್ಯಗಳ ವಿಷಯದಲ್ಲಿ ನಮಗೆ ತಿಳಿದಿರುವ ಮಾಹಿತಿ ಅತ್ಯಲ್ಪ. ಗಂಗರದೆಂದು ಖಚಿತವಾಗಿ ಹೇಳಬಹುದಾದ ಒಂದು ನಾಣ್ಯವೂ ಈವರೆಗೆ ದೊರೆತಿಲ್ಲವೆಂದೇ ಹೇಳಬೇಕು. ಆದರೆ ಗಂಗರು ಆನೆಯನ್ನು ತಮ್ಮ ಲಾಂಛನವನ್ನಾಗಿ ಹೊಂದಿದ್ದರು. ಆದುದರಿಂದ ಬರೆಹವಿಲ್ಲದ ಮತ್ತು ಆನೆಯ ಚಿತ್ರವನ್ನು ಹೊಂದಿರುವ ಚಿನ್ನದ ನಾಣ್ಯಗಳು ಗಂಗರಿಗೆ ಸೇರಿದವೆಂದು ವಿದ್ವಾಂಸರ ಅಭಿಪ್ರಾಯ. ಆದರೆ ಇದರಲ್ಲಿ ಖಚಿತತೆಯಿಲ್ಲ.

ಎಂ.ಎಚ್.ಕೃಷ್ಣ ಅವರು ಐದು ರೀತಿಯ ನಾಣ್ಯಗಳನ್ನು ಗಂಗರವೆಂದು ತಿಳಿಸುತ್ತಾರೆ. ಇವುಗಳು ಚಿನ್ನ ಮತ್ತು ತಾಮ್ರದುಗಳಲ್ಲಿವೆ. ಸು.58-59, 6 ಮತ್ತು 1.5 ಗ್ರೇನ್ ತೂಗುವ ಮೂರು ದರ್ಜೆಯ ಚಿನ್ನದ ನಾಣ್ಯಗಳಿವೆ. ದೊಡ್ಡ ಚಿನ್ನದ ನಾಣ್ಯಗಳ ಮುಮ್ಮುಖದಲ್ಲಿ ಬಲಭಾಗಕ್ಕೆ ನಿಂತಿರುವ ಸಾಲಂಕೃತ ಆನೆ; ಸೊಂಡಲಿನ ಎರಡು ಪಕ್ಕಗಳಲ್ಲಿಯೂ ಪುಷ್ಪಾಲಂಕಾರ; ಮೇಲ್ಭಾಗದಲ್ಲಿ ದೇವ ಎಂಬ ಕನ್ನಡ ಬರೆಹ, ಹಿಮ್ಮುಖದಲ್ಲಿ ಪುಷ್ಪಾಲಂಕಾರ ಇರುತ್ತವೆ. ಈ ನಾಣ್ಯಗಳು ಕಳಿಂಗದೇಶದಲ್ಲಿ ಆಳಿದ ಗಂಗರ ನಾಣ್ಯಗಳಂತೆಯೇ ಇದ್ದರೂ ಕರ್ನಾಟಕದಲ್ಲಿ ಹೇರಳವಾಗಿ ದೊರೆಯುತ್ತವಾದ್ದರಿಂದ ಇವು ತಲಕಾಡು ಗಂಗರ ನಾಣ್ಯಗಳೆಂದೂ ಇದನ್ನೇ ಕಳಿಂಗದ ಗಂಗರು ಅನುಕರಿಸಿದರೆಂದೂ ಕೃಷ್ಣ ಅಭಿಪ್ರಾಯಪಡುತ್ತಾರೆ. ತಲಕಾಡು ಗಂಗರ ತಾಮ್ರದ ನಾಣ್ಯಗಳು ಚಿನ್ನದ ನಾಣ್ಯಗಳಂತೆಯೇ ಇವೆ. ಇವುಗಳ ಮುಮ್ಮುಖದಲ್ಲಿ ಸಾಲಂಕೃತ ಆನೆ ಮತ್ತು ಹಿಮ್ಮುಖದಲ್ಲಿ ಶ್ರೀಪುರುಷ ಹಾಗೂ ಶ್ರೀ ಶ್ರೀ ನನ್ನಿಯಗಂಗ ಎಂಬ ಬರೆಹ ಕಾಣುತ್ತವೆ. (ಎ.ವಿ.ಎನ್.)

**ಇತರ ಗಂಗರ ಶಾಖೆಗಳು :** ಗಂಗವಾಡಿ ಪ್ರದೇಶ ಚೋಳರ ಸ್ವಾಧೀನವಾದ ಅನಂತರ ಗಂಗ ಮನೆತನಕ್ಕೆ ಸೇರಿದ ಹಲವಾರು ಮಾಂಡಲಿಕರು ಸುತ್ತಲಿನ ಪ್ರದೇಶಗಳಲ್ಲಿ ಅಧಿಕಾರದಲ್ಲಿ ಮುಂದುವರಿದಿದ್ದರು. ಅಂತಹ ಗಂಗರ ಇತರ ಶಾಖೆಗಳಿಗೆ ಸೇರಿದ ಮಾಂಡಲಿಕರನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ.

**ಕಾದರವಳ್ಳಿಯ ಗಂಗರು :** ಕಲ್ಯಾಣದ ಚಾಳುಕ್ಯ ಇಮ್ಮಡಿ ಜಯಸಿಂಹನ ಮಾಂಡಲಿಕನಾಗಿ ಗಂಗಕುಲಕ್ಕೆ ಸೇರಿದ ಕಂಚರಸ ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸುತ್ತಲ ಕಾದರವಳ್ಳಿ 30 ಎಂಬ ಸಣ್ಣ ವಿಭಾಗದಲ್ಲಿ ಅಧಿಕಾರದಲ್ಲಿದ್ದ. ಈತ ಕೊಂಗುಣಿವರ್ಮ, ಗಂಗಮಾರ್ತಾಂಡ ಮುಂತಾದ ಬಿರುದುಗಳನ್ನು ಧರಿಸಿದ್ದ. ಆರನೆಯ ವಿಕ್ರಮಾದಿತ್ಯನ ಅಧೀನದಲ್ಲಿ 1099ರಲ್ಲಿ ಮಹಾಮಂಡಲೇಶ್ವರ, ಕುವಳಾಲಪುರವರೇಶ್ವರ, ಛನ್ನವತಿಸಹಸ್ರಮಂಡಲಾಧಿನಾಯಕ, ಗಂಗಮಾರ್ತಾಂಡ, ಪದ್ಮಾವತೀಲಬ್ಧವರ ಪ್ರಸಾದ ಇತ್ಯಾದಿ ಬಿರುದಿದ್ದ ಅರಿಕೇಸರಿದೇವ ಇದೇ ಕಾದರವಳ್ಳಿ 30ರಮನ್ನೆಯ ಸ್ವಾಮ್ಯವನ್ನಾಳುತ್ತಿದ್ದ.

**ಮಂಡಲಿಯ ಗಂಗರು :** ಶಿವಮೊಗ್ಗ ಜಿಲ್ಲೆಯಲ್ಲಿಯೂ ಗಂಗ ಮನೆತನದ ಶಾಖೆಯೊಂದಕ್ಕೆ ಸೇರಿದ ಮಾಂಡಲಿಕರು ಅಧಿಕಾರದಲ್ಲಿದ್ದರು. ಇವರು ಆಳುತ್ತಿದ್ದ ಪ್ರದೇಶ ಮಂಡಲಿ 1000. ಆರ್ನಡಿ ವಿಕ್ರಮಾದಿತ್ಯ ಯುವರಾಜನಾಗಿದ್ದಾಗ ಗಂಗವಾಡಿ ಪ್ರದೇಶಗಳೆಲ್ಲಾ ಅವನ ಅಧಿಕಾರಕ್ಕೊಳಪಟ್ಟಿದ್ದುವು. ಆ ಬಳಿಕ ಪುನಃ ಗಂಗಮನೆತನಕ್ಕೆ ಸೇರಿದ ಮಾಂಡಲಿಕರಿಗೆ ಆತ ಅಧಿಕಾರ ವಹಿಸಿದಂತೆ ತೋರುತ್ತದೆ. ಶಿವಮೊಗ್ಗ ತಾಲ್ಲೂಕಿನಲ್ಲಿ ದೊರೆತ ಕೆಲವು ಶಾಸನಗಳಲ್ಲಿ ಈ ಮಾಂಡಲಿಕರ ವಿವರವಾದ ವಂಶಾವಳಿಯನ್ನು ಕೊಡಲಾಗಿದೆ. ಇವರು ಮೂಲ ಗಂಗ ಮನೆತನಕ್ಕೆ ಸೇರಿದವರೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಯೋಧ್ಯಾಪುರದಲ್ಲಿ ಆಳಿದ ಇಕ್ಷ್ವಾಕುವಂಶಕ್ಕೆ ಸೇರಿದ ಹರಿಶ್ಚಂದ್ರನೆಂಬಾತ ಈ ಮನೆತನದ ಮೂಲ ಪುರುಷ. ಈತನ ಮಗ ಭರತ, ಸೊಸೆ ವಿಜಯಮಹಾದೇವಿ. ಅನಂತರದ 6 ತಲೆಮಾರುಗಳಿಗೆ ಸೇರಿದವರು ಕ್ರಮವಾಗಿ ಗಂಗದತ್ತ, ಭರತ-I, ಗಂಗದತ್ತ-II, ಹರಿಶ್ಚಂದ್ರ-II, ಭರತ-III ಹಾಗೂ ಗಂಗದತ್ತ-III, ಆ ಬಳಿಕ ಈ ಅರಸರು ಅಹಿಚ್ಛತ್ರಪುರದಿಂದ ಆಳತೊಡಗಿದರು. ಅಲ್ಲಿನ ಮೊದಲ ಅರಸ ವಿಷ್ಣುಗುಪ್ತ. ಈತನ ಪತ್ನಿ ಪೃಥ್ವೀಮಹಾದೇವಿ. ಈತನ ಇಬ್ಬರು ಮಕ್ಕಳಲ್ಲಿ ಹಿರಿಯನಾದ ಭಗದತ್ತ ಕಳಿಂಗ ದೇಶದ ರಾಜ್ಯಭಾರ ವಹಿಸಿ ಕಳಿಂಗ ಗಂಗನೆನಿಸಿಕೊಂಡ. ಈತನ ಅನುಜ ಶ್ರೀದತ್ತ. ಅಹಿಚ್ಛತ್ರಪುರದಲ್ಲಿ ಮುಂದುವರಿದಿದ್ದ. ಈತನ ಮನೆತನದ ಪದ್ಮನಾಭನಿಗೆ ರಾಮ, ಲಕ್ಷ್ಮಣರೆಂಬ ಇಬ್ಬರು ಮಕ್ಕಳು. ಉಜ್ಜಯಿನೀಪುರದ ಮಹೀಪಾಲನು ಪದ್ಮನಾಭನ ಮೇಲೆ ದಂಡೆತ್ತಿದಾಗ, ಬಹುಕಾಲ ಮಕ್ಕಳಿಲ್ಲದೆ ಬಳಿಕ ದೈವಕೃಪೆಯಿಂದ ಮಕ್ಕಳನ್ನು ಪಡೆದಿದ್ದ ಪದ್ಮನಾಭ ಅವರನ್ನು ಕಾಪಾಡಲು, ತನ್ನ ಸೋದರಿ ಹಾಗೂ ಮಂತ್ರಿವರ್ಗದವರ ಜೊತೆಗೂಡಿಸಿ ಅವರನ್ನು ದಕ್ಷಿಣಕ್ಕೆ ಕಳುಹಿಸಿದನಂತೆ. ದಡಿಗ ಮತ್ತು ಮಾಧವ ಎಂಬ ಹೆಸರುಗಳನ್ನು ಧರಿಸಿದ್ದ ಈ ರಾಜಕುಮಾರರು ಗಂಗಪೇರೂರಿನಲ್ಲಿ ಸಿಂಹನಂದ್ಯಾಚಾರ್ಯರನ್ನು ಕಂಡರು. ಆ ಯತಿಯ ವರಪ್ರಸಾದದಿಂದ ರಾಜ್ಯವೊಂದನ್ನು ಕಟ್ಟಿದ್ದರು. ಇವರೇ ತಲಕಾಡಿನ ಗಂಗ ಅರಸರು. ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಈ ಕತೆ ನಾಲ್ಕಾರು ಶಾಸನಗಳಲ್ಲಿ ಕಾಣಿಸಿಕೊಂಡಿದೆ. ತಲಕಾಡಿನ ಗಂಗರ ವಂಶಾವಳಿ ಹೆಚ್ಚು ಕಡಿಮೆ ಸರಿಯಾಗಿದೆ. ಆದರೆ 1ನೆಯ ಶಿವಮಾರನ ಬಳಿಕ ನೀಡಿರುವ ವಂಶಾವಳಿಗಳು ಭಿನ್ನವಾಗಿದ್ದು ಅಲ್ಲಿ ತೊಡಕುಗಳಿವೆ. 1085ರಲ್ಲಿ ತ್ರಿಭುವನಮಲ್ಲ ಭುಜಬಳ ಗಂಗ ಪೆರ್ಮಾಡಿ ಗಂಗವಾಡಿಯ ಮಂಡಲಿ ಸಾಸಿರವನ್ನು ತನ್ನ ಅನುಜನಾದ ಗೋವಿಂದನನೊಂದಿಗೆ ಆಳುತ್ತಿದ್ದ. ನಿದಿಗಿ ಗ್ರಾಮದ ಶಾಸನದಲ್ಲಿ ನೀಡಿರುವ ವಂಶಾವಳಿಯಂತೆ ಈತ ಬಹುಶಃ ಕಲಿಗಂಗನ ಮಗ, ಮಾರಸಿಂಹನ ಮೊಮ್ಮಗ. ಬೂತುಗನಿಗೆ ಮರುಳದೇವ, ಗುತ್ತಿಯ ಗಂಗ ಮತ್ತು ಮಾರಸಿಂಗದೇವನೆಂಬ ಮೂವರು ಮಕ್ಕಳು. ಮೂರನೆಯ ಮಾರಸಿಂಗನೇ ಭುಜಬಳಗಂಗನ ಅಜ್ಜ. ಈ ಭುಜಬಳ ಗಂಗನಿಗೆ ಬರ್ಮದೇವನೆಂಬ ಹೆಸರಿದ್ದಂತೆ ತೋರುತ್ತದೆ. ಈತನ ಪತ್ನಿ ಗಂಗಮಹಾದೇವಿ. 1112ನೆಯ ವರ್ಷದ ಒಂದು ಶಾಸನದಲ್ಲಿ ಈತನಿಗೆ ಗಂಗರಸ, ಮಾರಸಿಂಗ, ಗೊಗ್ಗಿ ಮತ್ತು ಕಲಿಯಂಗ ಎಂಬ ನಾಲ್ವರು ಮಕ್ಕಳಿದ್ದಂತೆ ತಿಳಿದುಬರುತ್ತದೆ. ಪುರಲೆ ಮತ್ತು ಹರಕೆರೆ ಶಾಸನಗಳಲ್ಲಿ ಬಹುಶಃ ಇವರನ್ನೇ ಮಾರಸಿಂಗ, ಸತ್ಯಗಂಗ. ರಕ್ಕಸಗಂಗ ಮತ್ತು ಭುಜಬಳಗಂಗನೆಂದು ಹೆಸರಿಸಿದೆ. ಇವರಲ್ಲಿ ಕೊನೆಯವನ ಪತ್ನಿ ಚಂದಲದೇವಿ. ಬಹುಶಃ ಆಳುಪ ಮನೆತನಕ್ಕೆ ಸೇರಿದಾಕೆ. ಮಗ ಸತ್ಯಗಂಗ. ಈತ ಸು.1132ರಲ್ಲಿ ಎಡೆಹಳ್ಳಿಯ ನೆಲೆವೀಡಿನಲ್ಲಿದ್ದ. ಈತನ ತಾತ ಪೆರ್ಮಾಡಿ (ಬರ್ಮದೇವ) ಹೊಯ್ಸಳ ಎರೆಯಂಗನ ಮಗಳನ್ನು ಮದುವೆಯಾದಂತೆ ಪುರಲೆ ಗ್ರಾಮದ ಈ ಶಾಸನದಿಂದ ತಿಳಿದುಬರುತ್ತದೆ. ಹರಕೆರೆ ಶಾಸನದಲ್ಲಿ ನಾಲ್ಕನೆಯವನಾದ ಭುಜಬಳಗಂಗನ ಮಗನ ಹೆಸರನ್ನು ಮಾರಸಿಂಗದೇವನೆಂದು ಕೊಟ್ಟಿದೆ. ಈತನ ಮಗ ನನ್ನಿಯಗಂಗ. ನಿದಿಗಿ ಗ್ರಾಮದಲ್ಲಿ ಕಾಣಿಸಿಕೊಳ್ಳುವ ನನ್ನಿಯಗಂಗ ಪೆರ್ಮಾಡಿ ಈತನೇ ಆಗಿರಬಹುದು. ಹಿರಿಯೂರಿನ ಇನ್ನೊಂದು ಶಾಸನದಲ್ಲಿ ನನ್ನಿಯ ಗಂಗ ಪೆರ್ಮಾಡಿಯ ಪ್ರಸ್ತಾಪವಿದೆ. ಈತನು ಕಲಿಗಂಗನ ಮಗನೆಂದೂ ಮಾರಸಿಂಗನ ಮೊಮ್ಮಗನೆಂದೂ ಶಾಸನದಲ್ಲಿ ಹೇಳಿದಂತಿದೆ. ಇವುಗಳಲ್ಲಿ ನೀಡಿರುವ ವಂಶಾವಳಿಗಳ ವಿವರಗಳು ಈ ರೀತಿ ತೊಡಕುಗಳನ್ನುಂಟುಮಾಡಿವೆ. ನನ್ನಿಯ ಗಂಗನ ಅನಂತರ ಈ ಶಾಖೆಯ ಯಾರೊಬ್ಬರೂ ಕಾಣಿಸಿಕೊಳ್ಳುವುದಿಲ್ಲ.

**ಆಸಂದಿಯ ಗಂಗರು :** ಕಡೂರು ಜಿಲ್ಲೆ ಆಸಂದಿಯನ್ನು ರಾಜಧಾನಿಯಾಗಿ ಪಡೆದಿದ್ದ ಆಸಂದಿ ನಾಡಿನಲ್ಲಿ ಹೊಯ್ಸಳರ ಮಾಂಡಲಿಕರಾಗಿಯೂ ಕೆಲವರು ಗಂಗರು ಆಳುತ್ತಿದ್ದರು. ಈ ಶಾಖೆಗೆ ಸೇರಿದ ಐವರ ಹೆಸರುಗಳು

ಲಭ್ಯವಾಗಿವೆ. ಗಂಗಾನ್ವಯ ಪ್ರಸೂತ, ಗಂಗಕುಳಮಳ ಮಾರ್ತಾಂಡ. ಕೋಳಾಲಪುರವರಾಧೀಶ್ವರ, ಪದ್ಮಾವತೀದೇವೀಲಬ್ಧವರಪ್ರಸಾದ ಮುಂತಾದ ಗಂಗರ ಬಿರುದುಗಳನ್ನು ಧರಿಸಿದ್ದ ಇವರು ವಿಶಿಷ್ಟವಾಗಿ ಕಣ್ಣಂಬಿನಾಥ, ಅಹವಜತ್ತಲಟ್ಟ ಮುಂತಾದ ಬಿರುದುಗಳನ್ನು ಪಡೆದಿದ್ದರು. ಬೇಡರ ಬಂಕಿ ಕಾಡಿನೊಳಗೆ ಅಗ್ಗದರಾಯ ತಪ್ಪಿಸಿಕೊಂಡು ಓಡಿಹೋದಾಗ, ಈ ಶಾಖೆಯ ಮೊದಲ ಅರಸನಾದ ವೈಜರಸ ತನ್ನ ಅಧಿಪತಿಯಾದ ಪೆರ್ಮಾಡಿಯ ಸಮ್ಮುಖದಲ್ಲಿ ಬಾಣವೊಂದನ್ನು ಬಿಟ್ಟಾಗ ಅದು ತಪ್ಪಿಸಿಕೊಂಡು ಓಡುತ್ತಿದ್ದ ಶತ್ರುವಿನ ಮೆದುಳನ್ನು ಭೇದಿಸಿಕೊಂಡು ಗಗನದಲ್ಲಿ ಹಾರುತ್ತಿದ್ದ ಹದ್ದಿನ ಕಣ್ಣಿಗೂ ಬಡಿಯಿತಂತೆ. ಈತನ ಈ ಸಾಹಸಕ್ಕೆ ಮೆಚ್ಚಿದ ಪೆರ್ಮಾಡಿ ಈತನಿಗೆ ಕಣಂಬು ಎಂಬ ಬಿರುದನ್ನಿತ್ತನೆಂದು ಆಸಂದಿಗ್ರಾಮದ ಶಾಸನದಲ್ಲಿ ಹೇಳಿದೆ. ಸುಮಾರು 9ನೆಯ ಶತಮಾನದ ಅಂತ್ಯದಿಂದ 11-13ನೆಯ ಶತಮಾನದವರೆಗೆ ಆಳಿದ ಈ ಮಾಂಡಲಿಕರ ವಂಶಾವಳಿಯನ್ನು ಹೀಗೆ ಗುರುತಿಸಬಹುದು:

ವೈಜರಸ I (ಪತ್ನಿ, ಅಂಗನಾ ಯಾ ಅಂಗಬ್ಬರಸಿ)
|
ಶ್ರೀನಾಥ (ನಾಡರಸ) (ಪತ್ನಿ, ನಾಗಲಾ)
|
ವೈಜರಸ II (ಪತ್ನಿ, ವೈಜಲದೇವಿ)
|
ಬಮ್ಮರಸ (ಪತ್ನಿ, ಗಂಗಾ)
|
ಕೊಂಗುಳಿವರ್ಮ ನರಸಿಂಹ
|
ವೈಜರಸ III

ಮೊದಲನೆಯ ವೈಜರಸನ ಕಾಲವನ್ನು ರೈಸ್‌ರವರು 1081 ಎಂದು ಗುರುತಿಸಿದ್ದಾರೆ. ಆದರೆ ಕೆಲವು ಶಾಸನಗಳಲ್ಲಿ ನೀಡಿರುವ ತೇದಿಗಳ ವಿವರಗಳು ಸರಿಹೊಂದುವುದಿಲ್ಲ. ನರಸಿಂಹ ಸು.1220ರವರೆಗೂ ಅನಂತರವೂ ಅಧಿಕಾರದಲ್ಲಿದ್ದನೆಂದು ಹೇಳಿದೆ. ಬಹುಶಃ ಆತನ ಮಗನಾಗಿರಬಹುದಾದ ಇನ್ನೊಬ್ಬ ವೈಜರಸನ ಹೆಸರು ಅದೇ ವರ್ಷದಲ್ಲಿ ಹೊರಡಿಸಲಾದ ಶಿವಮೊಗ್ಗ ಜಿಲ್ಲೆಯ ಶಾಸನವೊಂದರಿಂದ ತಿಳಿದು ಬರುತ್ತದೆ. ಆ ಶಾಸನದಲ್ಲಿ ಇನ್ನೊಬ್ಬ ಬಮ್ಮರಸನ ಪ್ರಸ್ತಾಪವಿದ್ದರೂ ಅವರಿಬ್ಬರ ನಡುವಣ ಸಂಬಂಧ ಸ್ಪಷ್ಟವಾಗಿಲ್ಲ.

**ಕೋಲಾರದ ತಮಿಳು ಗಂಗರು :** 12-13ನೆಯ ಶತಮಾನಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಅಧಿಕಾರದಲ್ಲಿದ್ದ ಗಂಗ ಮನೆತನದ ಶಾಖೆಯೊಂದಕ್ಕೆ ಸೇರಿದ ಮಾಂಡಲಿಕರು ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕುವಳಾಲಪುರ ಪರಮೇಶ್ವರ, ಗಂಗ ಕುಲೋದ್ಭವ, ಕಾವೇರೀವಲ್ಲಭ, ನಂದಿಗಿರಿನಾಥ' ಇತ್ಯಾದಿ ಬಿರುದಾಂಕಿತರಾದ ಇವರು ತಲಕಾಡಿನ ಗಂಗರೊಡನೆ ಪಡೆದಿದ್ದ ಸಂಬಂಧವೆಂತಹುದೆಂಬುದನ್ನು ಹೇಳಲಾಗದು. ಈ ವಂಶದ ಅರಸರ ಶಾಸನಗಳೆಲ್ಲವೂ ತಮಿಳು ಭಾಷೆಯಲ್ಲಿ ಇವೆ.

ಇವರಲ್ಲಿ ಮೊದಲಿಗ ವೀರಗಂಗ (ಸು.1179-1225) ಮಹಾಮಂಡಲೇಶ್ವರ ಮಾಂಡಲಿಕ ಎನಿಸಿಕೊಂಡು, ನಿಕಿರಿಲಿ ಚೋಳಮಂಡಲದ ಕುವಳಾಲನಾಡು ಮತ್ತು ಆವನಿಯ ನಾಡುಗಳಲ್ಲಿ ಆಳುತ್ತಿದ್ದ. ಇವು ಈಗಿನ ಕೋಲಾರ ಮತ್ತು ಮುಳಬಾಗಲು ತಾಲ್ಲೂಕುಗಳನ್ನೊಳಗೊಂಡ ಪ್ರದೇಶ. ಈತನನ್ನು ಶಾಸನಗಳಲ್ಲಿ ಉತ್ತಮ ಚೋಳಗಂಗ, ಶೆಲ್ವಗಂಗ ಎಂದೂ ಕರೆಯಲಾಗಿದೆ. ಈತ ಹೊಯ್ಸಳ ದಂಡನಾಯಕ ಪೋಲಾಳ್ವನ ಮಗಳನ್ನು ಮದುವೆಯಾದಂತೆ ತೋರುತ್ತದೆ. ಈತನಿಗೆ ಸೋಮಲದೇವಿ ಎಂಬ ಮಗಳೂ ಗಂಗಪೆರುಮಾಳ್ ಎಂಬ ಮಗನೂ ಇದ್ದರು.

ಗಂಗಪೆರುಮಾಳನನ್ನು ಉತ್ತಮಚೋಳಗಂಗ ಗಂಗಪೆರುಮಾಳನೆಂದು ಕರೆಯಲಾಗಿದ್ದು ಈತ ವೀರಗಂಗನ ಮಗನೆಂದು ಶಾಸನಗಳು ಹೇಳಿವೆ. ಈತ ಅಧಿಕಾರಕ್ಕೆ ಬಂದಾಗ ಜಯಂಗೊಂಡ ಚೋಳ ಇಳವಂಜಿರಾಯನ ಆವನಿಯ ನಾಡನ್ನು ತನ್ನ ವಶಪಡಿಸಿಕೊಂಡನಾಗಿ, ಕುವಳಾಲನಾಡು ಮಾತ್ರ ಈತನ ಅಧೀನದಲ್ಲಿ ಉಳಿಯಿತು. ಕುಟ್ಟೇರಿ ಈತನ ರಾಜಧಾನಿ. ಪತ್ನಿಯ ಹೆಸರು ಅರಣವಲ್ಲಿ. ಜಯಂಗೊಂಡ ಚೋಳನೆಂಬಾತನೊಬ್ಬ ಈತನ ಅಧೀನದಲ್ಲಿದ್ದ ಅಧಿಕಾರಿ.

ಈ ಗಂಗಪೆರುಮಾಳನ ಮಗ ವಿಕ್ರಮಗಂಗನೆಂದು ಊಹಿಸಲಾಗಿದೆ. 1225ರಿಂದ 1260ರವರೆಗೆ ಗಂಗಪೆರುಮಾಳ ಆಳಿದ ಬಳಿಕ ವಿಕ್ರಮಗಂಗ ಆತನ ಉತ್ತರಾಧಿಕಾರಿಯಾಗಿ ಅಧಿಕಾರಕ್ಕೆ ಬಂದ. ಆದರೆ ಈತ 2-3 ವರ್ಷಗಳು ಮಾತ್ರ ಆಳಿದಂತೆ ತೋರುತ್ತದೆ. ಗಂಗಕುಲೋದ್ಭವ, ಕಾವೇರೀವಲ್ಲಭ ಮುಂತಾದ ಬಿರುದುಗಳನ್ನು ಹೊಂದಿದ ವೆಟ್ಟುಮ್ಮಾರಬಾಣನೆಂಬಾತ ಉತ್ತಮ ಚೋಳಗಂಗನೆಂದು ಕರೆದುಕೊಂಡ. ಈತನನ್ನು ಒಂದೆರಡು ಶಾಸನಗಳಲ್ಲಿ ಚೋಳ ಗಂಗ, ವೀರಗಂಗನೆಂದು ಕರೆದಿದೆ. ಈತ ವಿಕ್ರಮಗಂಗನ ಮಗನಾಗಿರಬಹುದೆಂಬುದೊಂದು ಊಹೆ.

ಇವರಲ್ಲದೆ ಉತ್ತಮ ಚೋಳಗಂಗ ಪದುಮದೇವ ಮತ್ತು ಆತನ ಮಗ ಗಂಗ ಪೆರುಮಾಳ್ ಎಂಬಿಬ್ಬರು 13ನೆಯ ಶತಮಾನದ ಕೊನೆಯ ಭಾಗದ ಕೆಲವು ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾರೆ. ಗಂಗಕುಲಕ್ಕೆ ಸೇರಿದ ಇವರು ಮೇಲಿನವರಿಗೆ ಹೇಗೆ ಸಂಬಂಧಿಸಿದವರೆಂಬುದು ತಿಳಿಯದು. (ಬಿ.ಆರ್.ಜಿ.)

**ಗಂಗವಾಡಿ :** ತಲಕಾಡಿನ ಗಂಗ ಅರಸರ ಆಳಿಕೆಗೆ ಬಹುಕಾಲ ಒಳಪಟ್ಟಿದ್ದ ದಕ್ಷಿಣ ಕರ್ನಾಟಕದ ಭಾಗವನ್ನೊಳಗೊಂಡಿದ್ದ ಪ್ರಾಂತ್ಯ. ಗಂಗವಾಡಿ ತೊಂಬತ್ತಾರು ಸಾವಿರ ಎಂದೂ ಪ್ರಸಿದ್ಧವಾಗಿತ್ತು.

ಇದರ ವಿಸ್ತಾರ ಎಷ್ಟಿತ್ತೆಂದು ನಿರ್ದಿಷ್ಟವಾಗಿ ಹೇಳಲು ಬಾರದು. ಈಚಿನ ಶಾಸನಗಳು ಈ ಗಂಗವಾಡಿ 96,000 ಪ್ರಾಂತ್ಯದ ಮೇರೆಯಾಗಿ ಉತ್ತರದಲ್ಲಿ ಮರಂದಲೆ, ಪೂರ್ವಕ್ಕೆ ತೊಂಡನಾಡು ಅಥ'ವಾ ತೊಂಡೈಮಂಡಲ, ಪಶ್ಚಿಮಕ್ಕೆ ಚೇರನಾಡು ಮತ್ತು ಸಮುದ್ರ, ದಕ್ಷಿಣಕ್ಕೆ ಕೊಂಗುದೇಶವಿದ್ದುವೆಂದು ತಿಳಿಸುತ್ತವೆ. ಎಂದರೆ ಸ್ಥೂಲವಾಗಿ ಈಗಿನ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳನ್ನೂ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳನ್ನೂ ಒಳಗೊಂಡಿತ್ತೆಂದು ಹೇಳಬಹುದು. ಈ ಗಂಗವಾಡಿ ಹಲವು ಸಣ್ಣದೊಡ್ಡ ನಾಡುಗಳಾಗಿ ವಿಭಾಗಿತವಾಗಿತ್ತು. ಗಂಗಸಾಸಿರ, ಪುನ್ನಾಡು 6,000, ಕೊಂಗನ್ನಾಡು 8,000, ಮಳೆ 1,000, ಮಂಡಲಿ 1,000, ಕೋಲಾರ 300, ಎಡೆನಾಡು 70, ಅರಿದಾಳ್ಕೆ 70, ಬೆದ್ದೊರೆಗೆರೆ 70, ನಿರ್ಗುಂದ 300, ಸೇರೆನಾಡು, ಬಯಲ್ನಾಡು ಮುಂತಾದ ಅನೇಕ ನಾಡುಗಳ ಹೆಸರು ಶಾಸನಗಳಲ್ಲಿವೆ. ಸುಮಾರು 5ನೆಯ ಶತಮಾನದ ಹೊತ್ತಿಗೆ ಮುಮ್ಮಡಿ ಮಾಧವನ ಕಾಲದ ಒಂದು ಶಾಸನದಲ್ಲಿ ಗಂಗರು ಆಳುತ್ತಿದ್ದ ಭಾಗವನ್ನು ಗಾಂಗೇಯ ರಾಜ್ಯ ಎಂದು ಕರೆದಿದೆ. ಮೊದಲ ಗಂಗರಾಜರ ಒಂದೆರಡು ತಾಮ್ರಶಾಸನಗಳಲ್ಲಿ ಗಂಗವಾಡಿ ಎಂಬ ಹೆಸರು ಕಂಡುಬಂದರೂ ಅವು ಕೂಟಶಾಸನಗಳೆಂದೂ 9ನೆಯ ಶತಮಾನಕ್ಕೆ ಹಿಂದಿನವಲ್ಲವೆಂದೂ ಸಿದ್ಧವಾಗಿದೆ. 8ನೆಯ ಶತಮಾನದಲ್ಲಿ ಶ್ರೀಪುರುಷ ಆಳಲಾರಂಭಿಸಿದಾಗ ಇದನ್ನು ಶ್ರೀರಾಜ್ಯವೆಂದೂ ಷಣ್ಣವತಿ ಸಹಸ್ರ ವಿಷಯವೆಂದೂ ಶಾಸನಗಳು ಹೆಸರಿಸುತ್ತವೆ. ಅವನ ಆಳಿಕೆಯ ಮೊದಲನೆಯ ವರ್ಷದ ಶಾಸನಗಳಲ್ಲಿಯೇ ಈ ಹೆಸರುಗಳಿವೆ. ಇದೇ ಕಾಲದಲ್ಲಿಯೇ ಗಂಗಸಾಸಿರ ಎಂಬ ಹೆಸರೂ ಕಂಡುಬರುತ್ತದೆ. ಇದು ಕೋಲಾರದ ಸುತ್ತಮುತ್ತ ಇದ್ದ ಪ್ರಾಂತ್ಯ. ಗಂಗರು ಮೊದಲು ಕೋಲಾರದಿಂದ ಆಳುತ್ತಿದುದ್ದರಿಂದ ಗಂಗರಾಜ್ಯ ಮೊದಲು ಗಂಗಸಾಸಿರ ರಾಜ್ಯವಾಗಿದ್ದು ಮುಂದೆ ಷಣ್ಣವತಿ ಸಹಸ್ರ ರಾಜ್ಯವಾಗಿ ಬೆಳೆದಿರುವುದು ಸಾಧ್ಯ. ರಾಷ್ಟ್ರಕೂಟ ಧ್ರುವ ಈ ರಾಜ್ಯವನ್ನು ಗೆದ್ದು ತನ್ನ ಮಗ ಕಂಬಯ್ಯನನ್ನು ಮಂಡಲಾಧಿಪತಿಯನ್ನಾಗಿ ನೇಮಿಸಿದಾಗ ಇದನ್ನು ಗಂಗಮಂಡಲ ಎಂದು ಕರೆಯಲಾಯಿತು. ಮುಂದಿನ ಶತಮಾನದಲ್ಲಿ ಈ ಮಂಡಲವನ್ನು ಗಂಗವಾಡಿ ಎಂದು ಕರೆದಿದೆ. ಅವಿಧೇಯನ ಪಂಡರಂಗೆಪಲ್ಲಿ ತಾಮ್ರಶಾಸನದ ಕೊನೆಯಲ್ಲಿರುವ ಒಂದು ಕಿರು ಶಾಸನದಲ್ಲಿ ಸರ್ಬರಸ ಎಂಬುವನು ಕನ್ನವಾಡ, ಗಂಗವಾಡ, ಬಲೆಯವಾಡ ಮತ್ತು ರೇನಾಡಗಳನ್ನು ಆಳುತ್ತಿದ್ದನೆಂದು ಹೇಳಿದೆ. ಗಂಗರ ನೀತಿಮಾರ್ಗ, ಬೂತುಗ, ಇಮ್ಮಡಿ ಮಾರಸಿಂಹರ ಶಾಸನಗಳಲ್ಲಿ ಅವರು ಗಂಗವಾಡಿ 96,000 ವನ್ನು ಆಳುತ್ತಿದ್ದ ಉಲ್ಲೇಖವಿದೆ. ಅವರು ಗಂಗವಾಡಿಯನ್ನಲ್ಲದೆ ಬೆಳ್ವಲ 300,

ಪುರಿಗೆರೆ 300, ಬನವಸೆ 12,000, ಕಿಸುಕಾಡು 70, ಬಾಗೆನಾಡು 70ನ್ನು ಆಳುತ್ತಿದ್ದರು. ಈ ರೀತಿಯ ಉಲ್ಲೇಖಗಳು ಗಂಗವಾಡಿ ಎನ್ನುವುದು ಒಂದು ಗೊತ್ತಾದ ವಿಸ್ತಾರವುಳ್ಳ ಪ್ರಾಂತ್ಯವಾಗಿದ್ದು ಅದು 6,000 ನಾಡಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ.

ಚೋಳರು ಗಂಗರನ್ನು ಸೋಲಿಸಿ ಗಂಗವಾಡಿಯ ಅನೇಕ ಭಾಗಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರೂ ಚಾಳುಕ್ಯರು ಗಂಗವಾಡಿ 96,000ದ ಮೇಲಿನ ತಮ್ಮ ಆಧಿಪತ್ಯವನ್ನು ಹೇಳಿಕೊಳ್ಳುತ್ತಾರೆ. 6ನೆಯ ವಿಕ್ರಮಾದಿತ್ಯ ಯುವರಾಜನಾಗಿ ಗಂಗವಾಡಿ 96,000ವನ್ನು ಬಳ್ಳಿಗಾವೆಯಿಂದ ಆಳುತ್ತಿದ್ದ. ಹೊಯ್ಸಳ ವಿನಯಾದಿತ್ಯನೂ ಇದೇ ಪ್ರಾಂತ್ಯವನ್ನಾಳುತ್ತಿದ್ದಂತೆ ಹೇಳಿಕೊಳ್ಳುತ್ತಾನೆ. ಆದರೆ ವಿಷ್ಣುವರ್ಧನ ತಲಕಾಡಿನಲ್ಲಿ ಆಳುತ್ತಿದ್ದ ಚೋಳ ಪ್ರತಿನಿಧಿಯನ್ನು ಸೋಲಿಸಿ ಓಡಿಸಿದಾಗ ಇಡೀ ಪ್ರಾಂತ್ಯ ಹೊಯ್ಸಳರ ಅಧೀನಕ್ಕೆ ಬಂತು. ಮುಂದೆ ಹೊಯ್ಸಳರು ಆಳುತ್ತಿದ್ದ ಅನೇಕ ಪ್ರಾಂತ್ಯಗಳಲ್ಲಿ ಗಂಗವಾಡಿ 96,000 ಮುಖ್ಯವಾದ ಪ್ರಾಂತ್ಯವಾಗಿತ್ತು. ಹೊಯ್ಸಳರ ಪತನಾನಂತರ ಗಂಗವಾಡಿ ಎಂಬ ಪ್ರಾದೇಶಿಕ ಹೆಸರು ಮರೆಯಾಯಿತು. ಆದರೆ ಈ ಪ್ರಾಂತ್ಯದಲ್ಲಿ ಹಿಂದಿನಿಂದಲೂ ನೆಲಸಿ ಆರಂಭಮಾಡಿಕೊಂಡು ಬರುತ್ತಿರುವ ಒಂದು ವರ್ಗದವರಿಗೆ ಗಂಗಡಿಕಾರರೆಂಬ ಹೆಸರಿದ್ದು, ಇದು ಗಂಗವಾಡಿಯ ನೆನಪನ್ನು ಉಳಿಸಿದೆ. ಗಂಗಡಿಕಾರ ಎಂಬುದು ಗಂಗವಾಡಿಕಾರ ಎಂಬುದರಿಂದ ಬಂದ ರೂಪ. (ಎಂ.ಎಚ್.)

**ಗಂಗವಾರ :** ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ದೇವನಹಳ್ಳಿಯಿಂದ 16ಕಿಮೀ ದೂರದಲ್ಲಿದೆ. ಈ ಗ್ರಾಮ ತಲಕಾಡಿನ ಗಂಗರ ಕಾಲದಿಂದಲೂ ಚಟುವಟಿಕೆಗಳ ಕೇಂದ್ರವಾಗಿತ್ತು. ಇಲ್ಲಿ ಗಂಗ, ಚೋಳ ಮತ್ತು ಅನಂತರದ ಕಾಲದ ಹಲವಾರು ಶಾಸನಗಳು ದೊರೆತಿವೆ. ಶಾಸನಗಳಲ್ಲಿ ಈ ಊರನ್ನು ಗಂಗಪುರ ಎಂದು ಕರೆದಿದೆ. ಇಲ್ಲಿರುವ ಪ್ರಾಚೀನ ಸೋಮೇಶ್ವರ ದೇವಾಲಯ ಗಂಗ -ಚೋಳ ವಾಸ್ತುಶೈಲಿಯಲ್ಲಿದೆ. ಇದು ಏಕಕೂಟದ ದೇವಾಲಯ. ಚೋಳದೊರೆ ರಾಜಾಧಿರಾಜ ಈ ದೇವಾಲಯಕ್ಕೆ ದಾನ ನೀಡಿದ ವಿವರ ಇಲ್ಲಿನ ಶಾಸನದಲ್ಲಿ ಉಲ್ಲೇಖಿತವಾಗಿದೆ. ಸೋಮೇಶ್ವರ ದೇವಾಲಯ ಗರ್ಭಗೃಹ, ತೆರೆದ ಸುಕನಾಸಿ, ನವರಂಗ ಮತ್ತು ಮುಂಟಪಗಳಿಂದ ಕೂಡಿದ್ದು ಪಾದಬಂಧ ಅಧಿಷ್ಠಾನವನ್ನು ಹೊಂದಿದೆ. ದೇವಾಲಯದಲ್ಲಿನ ಕಂಬಗಳು ಚತುರಸ್ರ, ಅಷ್ಟಮುಖ ಹಾಗೂ ವೃತ್ತ ದಿಂಡುಗಳನ್ನು ಹೊಂದಿದ ಗಂಗರ ಕಾಲದ ಕಂಬಗಳಂತೆ ಇವೆ. ಸುಕನಾಸಿ ನವರಂಗಕ್ಕೆ ತೆರೆದುಕೊಂಡಿದ್ದು ಇದರ ಎರಡೂ ಗೋಡೆಯಲ್ಲಿ ಎದಿರುಬದಿರಾಗಿ ಎರಡು ಆನೆಗಳನ್ನು ಕೆತ್ತಲಾಗಿದೆ. ದೇವಾಲಯದ ದ್ವಾರಮಂಟಪದ ಎರಡು ಕಂಬಗಳು ಸಿಂಹ ಪೀಠವನ್ನು ಹೊಂದಿರುವುದು ಇಲ್ಲಿನ ವಿಶೇಷವಾಗಿದೆ. ಈ ಮಂಟಪದ ಮೇಲೆ ಕಿರಿದಾದ ದ್ರಾವಿಡ ವಾಸ್ತುವಿನ ಶಾಲ ಗೋಪುರವಿದೆ. 'ಶಾಲ'ದ ಮುಂಭಾಗದಲ್ಲಿ ಸಿಂಹದ ಕೀರ್ತಿಮುಖ ಕಂಡುಬರುತ್ತದೆ. ದೇವಾಲಯದ ಹೊರ ಏರು ವಿನ್ಯಾಸ ಸರಳವಾಗಿದೆ. ವಿಮಾನದಲ್ಲಿ ತಲಗಳಿದ್ದು ಕೀರ್ತಿಮುಖಗಳನ್ನು ಹೊಂದಿದೆ. ದೇವಾಲಯದ ನವರಂಗದಿಂದ ಹೊಂದಿಕೊಂಡಂತೆ ಮತ್ತೊಂದು ಮಂಟಪವಿದ್ದು, ಬಹುಶಃ ಇದು ವಿಷ್ಣು ಗೃಹವಾಗಿದ್ದಂತೆ ತೋರುತ್ತದೆ. ನವರಂಗದಲ್ಲಿ ಕಂಡುಬರುವ ಒಂದು ಪುರುಷವಿಗ್ರಹ, ಬಹುಶಃ ಚೋಳದೊರೆ ರಾಜರಾಜನದಿರಬಹುದು. 1046ರಲ್ಲಿ ರಾಜಾಧಿರಾಜ ಈ ದೇವಾಲಯಕ್ಕೆ ಕೆಲವು ದಾನಗಳನ್ನು ನೀಡಿ ತನ್ನ ಆಳಿಕೆಯ 29ನೆಯ ವರ್ಷದ ನೆನಪಿಗಾಗಿ ಅಶ್ವಮೇಧ ಯಾಗವನ್ನು ಆಚರಿಸಿದ್ದು ಶಾಸನದಿಂದ ತಿಳಿದುಬರುತ್ತದೆ.

ಈ ದೇವಸ್ಥಾನಕ್ಕೆ ಪ್ರಾಕಾರಗಳು ಮತ್ತು ಮೊಗಸಾಲೆಗಳಿದ್ದು ಈಗ ಅವು ಕುಸಿದುಹೋಗಿವೆ. ಮೂಲ ಗರ್ಭಗೃಹ ಪೂರ್ವಾಭಿಮುಖವಾಗಿದ್ದು ಅದರಲ್ಲಿ ಶಿವಲಿಂಗವಿದೆ. ಗರ್ಭಗೃಹದ ಸೂರಿನ ಕೆಳಗೆ ಗೋಡೆಯಲ್ಲಿ ಹಂಸಗಳ ಸಾಲು ಕಂಡುಬರುತ್ತದೆ. ಈಗ ದೇವನಹಳ್ಳಿಯ ವೇಣುಗೋಪಾಲಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಇಟ್ಟಿರುವ ಎರಡು ವಿಗ್ರಹಗಳು ಇಲ್ಲಿಂದ ತೆಗೆದುಕೊಂಡು ಹೋದವೆಂದು ತಿಳಿದುಬರುತ್ತವೆ. ಮಹಾದ್ವಾರದ ಎದುರು ಬಲಿಪೀಠವಿದೆ. ದೇವಾಲಯದ ಎದುರಿಗೆ ಪಾಳು ಬಿದ್ದಿರುವ ಚೋಳಶೈಲಿಯ ವಿಷ್ಣು ಅಥವಾ ದೇವಿಯ ಗುಡಿ ಇದೆ.

ಊರ ಮುಂಭಾಗದಲ್ಲಿ ಕೆಲವು ವೀರಗಲ್ಲುಗಳಿವೆ. ಅಲ್ಲೇ ಒಂದು ಎತ್ತರದ ಪೀಠದ ಮೇಲೆ ಗಂಗಶೈಲಿಯಲ್ಲಿರುವ ದುರ್ಗಾ ವಿಗ್ರಹವಿದೆ. ಈ ಊರಿನ ಸಮೀಪದ ಚೌಡಪ್ಪನಹಳ್ಳಿಯಲ್ಲಿ ಗೋಪಾಲಕೃಷ್ಣ, ಆಂಜನೇಯ, ಮುತ್ತುರಾಯ ಮತ್ತು ಮಹೇಶ್ವರಮ್ಮನವರ ದೇವಾಲಯಗಳಿವೆ. (ಆರ್.ಎಚ್.ಕೆ.)

**ಗಂಗಾಂಬಿಕೆ :** 12ನೆಯ ಶತಮಾನದ ಶಿವಶರಣೆ ಹಾಗೂ ವಚನಕಾರ್ತಿ. ಬಸವಣ್ಣನವರ ಧರ್ಮಪತ್ನಿ. ಅನುಭಾವಿ ಆದರ್ಶಸತಿ ಎನಿಸಿದ ಈಕೆ ಕಳಚುರಿಯ ಬಿಜ್ಜಳನ ಮಹಾಮಂತ್ರಿ ಬಲದೇವನ ಮಗಳು. ರುದ್ರಮುನಿ ಈಕೆಯ ಗುರು. ಮಹಾಮನೆಯ ಮತ್ತು ಅನುಭವಮಂಟಪದ ಕಾರ್ಯದಲ್ಲಿ ಈಕೆ ಪತಿ ಬಸವಣ್ಣನವರಿಗೆ ತುಂಬ ನೆರವಾಗಿದ್ದಳು. ಈಕೆಯ ಪಾತಿವ್ರತ್ಯ ಮತ್ತು ದಾಸೋಹ ಭಾವಗಳನ್ನು ಬಸವಪುರಾಣದಲ್ಲಿ ಬಣ್ಣಿಸಲಾಗಿದೆ. ಗಂಗಾಪ್ರಿಯ ಕೂಡಲಸಂಗಮದೇವ ಎಂಬುದು ಈಕೆಯ ವಚನಗಳ ಅಂಕಿತ. ಇದುವರೆಗೆ ಈಕೆಯ ಎಂಟು ವಚನಗಳು ದೊರಕಿವೆ. ಬಸವಣ್ಣನವರು ಏಕನಿಷ್ಠೆಯಿಂದ ನಿರ್ವಹಿಸುತ್ತಿದ್ದ ಕೆಲಸಕಾರ್ಯಗಳನ್ನು ಗಂಗಾಂಬಿಕೆ ತನ್ನ ಒಂದು ವಚನದಲ್ಲಿ ಹೀಗೆ ವರ್ಣಿಸಿದ್ದಾಳೆ.

ಸಾಂದ್ರವಾಗಿ ಹರಗಣಭಕ್ತಿಯ ಮಾಳ್ಪನೆಂತೊ
ಮಾದಲಾಂಬಿಕಾನಂದನನು
ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯನೋಳ್ಪನೆಂತೊ
ಮಾದರಸನ ಮೋಹದ ಮಗನು ಸಾಂದ್ರವಾಗಿ ಲಿಂಗಾರ್ಚನೆ
ಲಿಂಗತೃಪ್ತಿ ಅನುಗೆಯ್ದನೆಂತೊ ಗಂಗಾಪ್ರಿಯ ಕೂಡಲಸಂಗಮಶರಣ ಚನ್ನಾ

ಈಕೆಯ ಸಮಾಧಿ ಬಿಜಾಪುರ ಜಿಲ್ಲೆಯ ಕಪ್ಪಡಿಸಂಗಮ ಕ್ಷೇತ್ರಕ್ಕೆ ಹತ್ತಿರದಲ್ಲಿದೆ. *

**ಗಂಗಾದೇವಿ :** ಸು.1360. ಹುಟ್ಟುಕನ್ನಡಿತಿಯಾದ ಈಕೆ ಸಂಸ್ಕೃತ ಕವಯಿತ್ರಿ. ಮಧುರಾವಿಜಯಂ ಎಂಬ ಕಾವ್ಯದ ಕರ್ತೃ. ವಿಜಯನಗರದ ಅರಸು ಒಂದನೆಯ ಬುಕ್ಕರಾಯನ ಸೊಸೆ. ಹಿರಿಯ ಕಂಪಣನ ಹೆಂಡತಿ. ಈಕೆ ಪೂರ್ವಕವಿಗಳಲ್ಲಿ ತನ್ನ ಸಮಕಾಲೀನರಾದ ತಿಕ್ಕಯ, ಅಗಸ್ತ್ಯ, ಗಂಗಾಧರ, ವಿಶ್ವನಾಥ - ಇವರನ್ನು ಸ್ಮರಿಸಿದ್ದಾಳೆ.

ಮಧುರಾವಿಜಯಂ ಸಂಸ್ಕೃತದಲ್ಲಿದ್ದು ಚಂಪೂವಿನಲ್ಲಿ ರಚಿತವಾಗಿದೆ. ಇದಕ್ಕೆ ವೀರಕಂಪಣರಾಯಚರಿತೆ ಎಂಬ ಹೆಸರೂ ಇದೆ. ಈ ಕೃತಿ ಸಮಗ್ರವಾಗಿ ದೊರೆತಿಲ್ಲ. ಮೊದಲಿನ ಐದು ಮತ್ತು ಏಳನೆಯ ಸರ್ಗಗಳು ಪೂರ್ಣ ದೊರೆತಿವೆ. ಆರು, ಎಂಟು ಹಾಗೂ ಎಂಟರ ಮುಂದಿನ ಸರ್ಗಗಳಲ್ಲಿ ಕೆಲವು ಭಾಗ ಮಾತ್ರ ದೊರೆತಿವೆ. ಮಧುರಾವಿಜಯಂ ಒಂದು ಐತಿಹಾಸಿಕ ಕಾವ್ಯ. ಕಂಪಣರಾಯ ತನ್ನ ತಂದೆ ಬುಕ್ಕರಾಯನ ಆಜ್ಞಾನುಸಾರ ದಕ್ಷಿಣ ದೇಶಕ್ಕೆ ದಂಡೆತ್ತಿಹೋಗಿ ವನ್ಯರಾಜರನ್ನೂ ರಾಜಗಂಭೀರ (ಪಡವೀಡು) ದುರ್ಗದಲ್ಲಿದ್ದ ಚಂಪರಾಯನನ್ನೂ (ಸಂಭವರಾಯ) ಮಧುರೆಯ ಮಹಮ್ಮದೀಯರನ್ನೂ ಸೋಲಿಸಿದ ಘಟನೆಗಳು (ಕಾಲಾವಧಿ 1360-71) ಈ ಕಾವ್ಯದ ಹಂದರವಾಗಿ ಮೂಡಿಬಂದಿವೆ.

ಗಂಗಾದೇವಿ ತನ್ನ ಕಾವ್ಯವನ್ನು ಮಹಾಕಾವ್ಯ ಸಂಪ್ರದಾಯದಲ್ಲಿ ರಚಿಸಲು ಯತ್ನಿಸಿದ್ದು ಕಾವ್ಯದ ಉದ್ದಕ್ಕೂ ವೀರಕಂಪಣನ ತಂದೆ ಬುಕ್ಕರಾಯನ ವರ್ಣನೆ, ಕಂಪಣನ ಜನನ, ಬಾಲ್ಯ, ಯೌವನ ಹಾಗೂ ಸಾಹಸಮಯ ಘಟನೆಗಳು ಹಾಸುಹೊಕ್ಕಾಗಿವೆ. ಆಸ್ಥಾನದ ವರ್ಣನೆ, ಋತುಗಳ ವರ್ಣನೆ, ವನಕೇಳಿ, ಜಲಕೇಳಿ ಎಲ್ಲವೂ ಹೇರಳವಾಗಿವೆ. ನಗರಾರ್ಣವ ಸರಿದಟವಿಗಳ ವರ್ಣನೆಯನ್ನು ಕವಯಿತ್ರಿ ಬಿಟ್ಟಿಲ್ಲ. ಕಾವ್ಯದಲ್ಲಿ ಹದಿನೆಂಟು ವರ್ಣನೆಗಳೂ ಬರುವಂತೆ ನೋಡಿಕೊಂಡಿದ್ದಾಳೆ. ಇಷ್ಟಾದರೂ ಪರಂಪರಾಗತ ವರ್ಣನೆಗಳಲ್ಲಿಯೂ ಹೊಸ ದೃಷ್ಟಿಯನ್ನು ಬೆರೆಸಿದ್ದಾಳೆ. ಅಲಂಕಾರಗಳ ಬಳಕೆಯಲ್ಲಿ ನಾವೀನ್ಯವಿದೆ. ಹಳೆಯ ಕವಿಸಮಯಗಳೂ ಪ್ರತಿಭಾಮೂಸೆಯಲ್ಲಿ ಮೂಡಿಬಂದಿರುವುದರಿಂದ ಕಾವ್ಯ ರಮಣೀಯವಾಗಿದೆ. ಸರಸೋದಾರ ಪದಗಳು ತನ್ನ ಕಾವ್ಯದಲ್ಲಿ ಮೂಡಿಬಂದಿವೆ ಎನ್ನುವಲ್ಲಿ ಇವಳಿಗೆ ಸಂಸ್ಕೃತ ಭಾಷೆಯ ಮೇಲಿರುವ ಪ್ರಭುತ್ವ ಸುವ್ಯಕ್ತವಾಗುತ್ತದೆ. ಸಾಹಿತ್ಯಕವಾಗಿಯೂ ಚಾರಿತ್ರಿಕವಾಗಿಯೂ ಈ ಕಾವ್ಯಕ್ಕೆ ಮಹತ್ವವಿದೆ. (ಎಂ.ಎಸ್.ಎನ್.)

**ಗಂಗಾಧರ ಚಿತ್ತಾಲ :** 1923-87. ಕನ್ನಡದ ಕವಿಗಳಲ್ಲೊಬ್ಬರು. ಇವರು ಹುಟ್ಟಿದ್ದು ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ

ಹನೇಹಳ್ಳಿಯಲ್ಲಿ. ವಿಠೋಬಾ-ರುಕ್ಮಿಣಿ ದಂಪತಿಗಳ ಏಳು ಮಕ್ಕಳಲ್ಲಿ ನಾಲ್ಕನೆಯವರಾದ ಇವರು ಕನ್ನಡದ ಪ್ರಸಿದ್ಧ ಕತೆಗಾರ- ಕಾದಂಬರಿಕಾರ ಯಶವಂತ ಚಿತ್ತಾಲರ (ನೋಡಿ) ಅಣ್ಣ. 1940ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಇಡೀ ಇಲಾಖೆಗೆ (ಹಳೆಯ ಮುಂಬಯಿ ಪ್ರಾಂತ್ಯಕ್ಕೆ) ಮೊದಲನೆಯ ರ್‍ಯಾಂಕ್ ಪಡೆದು, ಅಸಾಮಾನ್ಯ ವಿದ್ಯಾರ್ಥಿ ಎನ್ನಿಸಿಕೊಂಡವರು. ಕುಮಟ, ಧಾರವಾಡ, ಸಾಂಗ್ಲಿಗಳಲ್ಲಿ ಶಿಕ್ಷಣ ಮುಗಿಸಿ ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. ಪದವಿ ಪಡೆದು, ಮುಂದೆ ಭಾರತ ಸರ್ಕಾರದ ಐ.ಎ. ಮತ್ತು ಎ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂಬಯಿಯಲ್ಲಿ ಸಹಾಯಕ ಮಹಾಲೇಖಾಪಾಲರಾಗಿ, ಅನಂತರ ಲೆಕ್ಕಪರಿಶೋಧನೆಯ ಉಪನಿರ್ದೇಶಕರಾಗಿ, ಅಮೆರಿಕದ ವಾಷಿಂಗ್‍ಟನ್‍ನಲ್ಲಿ, ಲೆಕ್ಕಪರಿಶೋಧನೆಯ ನಿರ್ದೇಶಕರಾಗಿ ಲಂಡನ್‍ನಲ್ಲಿ ಸೇವೆ ಸಲ್ಲಿಸಿದರು. ಇವರು ಸ್ವಲ್ಪ ಕಾಲ ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರಿಶೋಧಕರ ಪ್ರಧಾನ ಕಾರ್ಯದರ್ಶಿಗಳಾಗಿದ್ದಾಗ ಜಗತ್ತಿನ ಹಲವು ದೇಶಗಳ ರಾಜಧಾನಿಗಳಿಗೆ ಭೇಟಿ ನೀಡುವ ಅವಕಾಶ ಒದಗಿತ್ತು. ಕೊನೆಯಲ್ಲಿ ಪಶ್ಚಿಮ ರೈಲ್ವೆಯ ಲೇಖಾಪರಿಶೋಧನೆ ಖಾತೆಯ ಮುಖ್ಯ ಅಧಿಕಾರಿಗಳಾಗಿ ನಿವೃತ್ತರಾದರು (1977). ಮುಂಬಯಿಯ ಉತ್ತರದ ಉಪನಗರಗಳಲ್ಲಿ ಒಂದಾದ ಬೋರಿವಿಲಿಯಲ್ಲಿ ನೆಲೆಸಿದ್ದ ಇವರು 1987ರಲ್ಲಿ ತಮ್ಮ 64ನೆಯ ವಯಸ್ಸಿನಲ್ಲಿ ನಿಧನಹೊಂದಿದರು.

ಕುಮಟದ 'ಗಿಬ್ ಹಾಯ್‍ಸ್ಕೂಲ್' ನಲ್ಲಿ ವಿದ್ಯಾರ್ಥಿಯಾಗಿದ್ದ ಎಳೆಯ ದಿನಗಳಲ್ಲೇ (1938) ಈ ಅಸಾಧಾರಣ ಭಾವಜೀವಿಯಲ್ಲಿ ಕವಿಯಾಗುವ ಪ್ರತಿಭೆಯ ಚಿಹ್ನೆಗಳನ್ನು ಗುರುತಿಸಿದ ಇವರ ಹಿರಿಯ ಅಣ್ಣ ದಾಮೋದರ ಚಿತ್ತಾಲರು ಕಾವ್ಯದ ಸಲುವಾಗಿಯೇ ಇವರನ್ನು ಕುಮಟದ ಶಾಲೆಯಿಂದ ಬಿಡಿಸಿ ಧಾರವಾಡಕ್ಕೆ ಕರೆತಂದು ಅಲ್ಲಿಯ ಪ್ರಖ್ಯಾತ ಕರ್ನಾಟಕ ಹೈಸ್ಕೂಲಿಗೆ ಸೇರಿಸಿದರು. ಅವರು ನಿರೀಕ್ಷಿಸಿದಂತೆ ದ.ರಾ.ಬೇಂದ್ರೆ, ವಿ.ಕೃ.ಗೋಕಾಕ, ಶ್ರೀರಂಗ, ಆನಂದಕಂದ, ಶಂ.ಬಾ.ಜೋಶಿ ಮೊದಲಾದ ಸಾಹಿತ್ಯ ದಿಗ್ಗಜರು ನೆಲೆಸಿದ ಆಗಿನ ಧಾರವಾಡದ ಸಾಹಿತ್ಯಕ ವಾತಾವರಣ ಇವರ ಕಾವ್ಯಸೃಷ್ಟಿಗೆ ತಕ್ಕ ಉತ್ಸಾಹ ತುಂಬಿತು.

ಇವರು 1942ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಧಾರವಾಡ ಕರ್ನಾಟಕ ಕಾಲೇಜಿನಿಂದ ಉಚ್ಚಾಟನೆಗೊಂಡು ವಿದ್ಯಾರ್ಥಿ ಜೀವನದ ಒಂದು ವರ್ಷ ಕಳೆದುಕೊಂಡರು. ಮುಂಬಯಿಗೆ ಬಂದ ಮೇಲೆ ಎಂ.ಎನ್.ರಾಯ್ ಅವರ 'ರ್‍ಯಾಡಿಕಲ್ ಡೆಮಾಕ್ರೆಟಿಕ್ ಪಾರ್ಟಿ'ಯೊಡನೆ ಸಂಬಂಧ ಪಡೆದುಕೊಂಡರು. ರ್‍ಯಾಡಿಕಲ್ ಸ್ಟೂಡೆಂಟ್ಸ್ ಯೂನಿಯನ್‍ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಇವು ಚಿತ್ತಾಲರ ವಿದ್ಯಾರ್ಥಿ ಜೀವನದ ಕೆಲವು ಮಹತ್ವದ ಘಟನೆಗಳು. ಬ್ರಿಟಿಷ್ ಸರಕಾರ ವಿಧಿಸಿದ ಒಂದು ವರ್ಷದ ಶಿಕ್ಷೆ ಮುಗಿಸಿದ ಅನಂತರ ಚಿತ್ತಾಲರು ತಮ್ಮ ಬಿ.ಎ. ಅಭ್ಯಾಸಕ್ಕಾಗಿ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜು ಸೇರಿದರು. ಅಲ್ಲಿದ್ದಾಗ ವಿ.ಕೃ.ಗೋಕಾಕರ ಹಿರಿತನದಲ್ಲಿ ರೂಪಗೊಂಡಿದ್ದ ಸಾಹಿತಿಗಳ ಕೂಟ ವರುಣಕುಂಜದ ಸಂಪರ್ಕ ಒದಗಿತು. ವಿ.ಜಿ.ಭಟ್ಟ, ಸು.ರಂ.ಎಕ್ಕುಂಡಿ, ಆರ್.ವಿ.ಕುಲಕರ್ಣಿ, ವರದರಾಜ ಹುಯಿಲಗೋಳ ಮೊದಲಾದ ತರುಣ ಸಾಹಿತಿಗಳು ವರುಣಕುಂಜದ ಸದಸ್ಯರಾಗಿದ್ದರು.

ಈ ಎಲ್ಲ ಸಂಗತಿಗಳ ಪ್ರಭಾವದಿಂದ ಪ್ರಾರಂಭದ ವರ್ಷಗಳಲ್ಲಿ ಇವರು ಬರೆದ 25 ಕವಿತೆಗಳ ಕಾಲದ ಕರೆ ಎಂಬ ಸಂಕಲನ 1948ರಲ್ಲಿ ಪ್ರಕಟಗೊಂಡಿತು. ವಿ.ಜಿ.ಭಟ್ಟರು ಆರಂಭಿಸಿದ ಪರ್ಣಕುಟಿಯ ಪ್ರಕಾಶನವಾಗಿ ಹೊರಬಂದ ಚಿತ್ತಾಲರ ಚೊಚ್ಚಲ ಸಂಗ್ರಹವನ್ನು ಕಾವ್ಯ ರಸಿಕರು ಉತ್ಸಾಹದಿಂದ ಬರಮಾಡಿಕೊಂಡರು. ಅವರಲ್ಲೊಬ್ಬರಾದ ಕವಿ ಗೋಪಾಲಕೃಷ್ಣ ಅಡಿಗರು ಈ ಕವಿಯ ಪ್ರಥಮ ಸಂಕಲನವನ್ನು ಕೈಗೆತ್ತಿಕೊಂಡಾಗ ನನಗೆ ಮರುಭೂಮಿಯಲ್ಲಿ ಒಯಸಿಸ್ ಕಂಡವನಷ್ಟೇ ಸಂತೋಷವಾಯಿತೆನ್ನಬೇಕು; ಈ ಕವಿಯ ಮನಸ್ಸನ್ನಾಳುತ್ತಿರುವ ಉದಾತ್ತ ಭಾವಗಳು ಇವರಿಗೆ ಭಾಷೆಯ ಮೇಲೆ ಈಗಾಗಲೇ ದೊರೆತಿರುವ ಪ್ರಭುತ್ವ, ಎಲ್ಲಕ್ಕೂ ಮಿಗಿಲಾಗಿ ಇವರ ಒಂದೊಂದು ನುಡಿಯಲ್ಲೂ ಮಿಡಿಯುತ್ತಿರುವ ಯಥಾರ್ಥತೆ, ಒಂದಿನಿತೂ ಸೋಗಿಲ್ಲದ, ನಟನೆಯಿಲ್ಲದ, ಸುಂದರವಾದ ನಿರಾಳವಾದ ಹಾಡುಗಾರಿಕೆ ಇವುಗಳನ್ನು ಕಂಡು ನಾನು ಬೆರಗಾದೆ. ಇಂಥ ಕವಿಗಳು ಒಬ್ಬಿಬ್ಬರಾದರೂ ಕನ್ನಡದಲ್ಲಿ ಆಗಾಗ ಹುಟ್ಟಿಬರುತ್ತಿರುವುದು ಕನ್ನಡದ ಪುಣ್ಯವೆಂದುಕೊಂಡೆ ಎಂದು ಕೊಂಡಾಡಿದರು. ಈ ಕವಿತೆಗಳ ಮುಖ್ಯವಸ್ತುವನ್ನು ಸಂಗ್ರಹವಾಗಿ ಪರಿಚಯಿಸುತ್ತ ಅವರೇ ಮುಂದುವರಿದು, ಮಾನವ ಜೀವನದ ವಿಶಾಲ ಭೂಮಿಯಿಂದ ಚಿಮ್ಮುವ ರಸದೊರತೆಗಳು ಈ ಕವನಗಳು ಎಂದೂ ಕನ್ನಡ ಲೋಕ ಇಂಥ ಉತ್ತಮ ಕವಿಯ ಕಾವ್ಯವನ್ನು ತನ್ನದಾಗಿ ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಳ್ಳದಿದ್ದರೆ ಹಾನಿ ಕವಿಗಲ್ಲ, ಜನತೆಗೆ ಎಂದೂ ಹೇಳಿದರು.

ಪ್ರಥಮ ಸಂಕಲನ ಹುಟ್ಟಿಸಿದ ಭರವಸೆಗಳು ಹುಸಿಗೊಳ್ಳದ ಹಾಗೆ ಚಿತ್ತಾಲರು ವಿಪುಲವಾಗಿ ಅಲ್ಲವಾದರೂ ಸಾಕಷ್ಟು ಬರೆದರು. ಮನುಕುಲದ ಹಾಡು (1961), ಹರಿವ ನೀರಿದು (1971), ಸಂಪರ್ಕ (1983) ಎಂಬ ಸಂಗ್ರಹಗಳನ್ನು ಪ್ರಕಟಗೊಳಿಸಿದರು. ಹಲವು ದೇಶಗಳನ್ನು ಸುತ್ತಾಡಿದವನು ನೋಡಿದ ಜಗತ್ತು, ಮಾಗಿದ ಚಿಂತನಶೀಲ ಮನಸ್ಸಿಗೆ ಅರ್ಥ ಹೊಳೆಯಿಸಿದ ಅನ್ನತ್ವ-ಎಲ್ಲವೂ ಸೃಜನಶೀಲ ಪ್ರತಿಭೆಯ ಸ್ಪರ್ಶಕ್ಕೆ ಜುಮ್ಮುಗುಟ್ಟಿದಾಗ ಸ್ಫುರಿಸಿಕೊಂಡ ಈ ಕವಿತೆಗಳು ಕನ್ನಡ ಕಾವ್ಯಲೋಕವನ್ನು ತಣಿಸಿದವು.

ಮನುಕುಲದ ಹಾಡು ಸಂಗ್ರಹದಲ್ಲಿ 19 ಕವಿತೆಗಳಿವೆ. 'ದುಃಖಗೀತ' ಚಿತ್ತಾಲರ ಉತ್ತಮ ಕವಿತೆಗಳಲ್ಲೊಂದು. ಈ ಕವಿತೆಯ ಹುಟ್ಟಿಗೆ ಪ್ರೇರಣೆಯಿತ್ತ ಅನುಭವವನ್ನು ಕುರಿತು ಕವಿಯೇ ಹೀಗೆ ಹೇಳಿಕೊಂಡಿದ್ದಾರೆ: ಫೆಬ್ರವರಿ 1955ರಲ್ಲಿ ಒಂದು ದಾರುಣವಾದ ದುರಂತ ನಮ್ಮ ಕುಟುಂಬದಲ್ಲಿ ಘಟಿಸಿತು. ನಮ್ಮ ತಂದೆ ಮನೆಯ ಹಿತ್ತಲ ಬಾವಿಯಲ್ಲಿ ಹಾರಿ ದೇಹ ಪರಿತ್ಯಾಗ ಮಾಡಿದರು. ಆ ಅನಾಹುತ ನನ್ನ ಮನಸ್ಸಿನ ಮೇಲೆ ಮಾಡಿದ ಪರಿಣಾಮವೇ ಈ ದುಃಖಗೀತ ಚಿತ್ತಾಲರ ಕಾವ್ಯದ ವಿಮರ್ಶೆಯ ಸಂದರ್ಭದಲ್ಲಿ ವಿಸ್ತೃತ ಚರ್ಚೆಗೆ ಒಳಪಟ್ಟ ಈ ಕವನ ಇವರ ಒಂದು ಶ್ರೇಷ್ಠ ಕವಿತೆ ಎಂದು ಖ್ಯಾತವಾಗಿದೆ. ಇದು ಆಧುನಿಕ ಕನ್ನಡ ಕಾವ್ಯದ ಉತ್ಕೃಷ್ಟ, ಅಭಿಜಾತ, ಕವಿತೆಗಳಲ್ಲೊಂದು. 'ಆಧುನಿಕ ತಾತ್ವಿಕ ಸಂದರ್ಭದಲ್ಲಿ ಜೀವನದ ಅರ್ಥವನ್ನೇ ಆಮೂಲಾಗ್ರವಾಗಿ ಅನ್ವೇಷಿಸುವ ಪ್ರಯತ್ನ ಈ ಕವಿತೆಯಲ್ಲಿದೆ' ಎಂದು ಶಾಂತಿನಾಥ ದೇಸಾಯಿಯವರು ಅಭಿಪ್ರಾಯಪಟ್ಟಿದ್ದಾರೆ. ಹನ್ನೆರಡು ವರುಷಗಳ ಮೇಲೆ, ಫೈಲು, ಕನಸು ತಲೆಯಲ್ಲಿ ತುಂಬಿದಂಥ ಹುಡುಗ, ಖುಶಿ ಇವು ಈ ಸಂಕಲನದಲ್ಲಿರುವ ಇನ್ನು ಕೆಲವು ಅತ್ಯುತ್ತಮ ಕವಿತೆಗಳು.

ಹರಿವ ನೀರಿದು ಸಂಗ್ರಹದಲ್ಲಿ ಹತ್ತು ಕವನಗಳಿವೆ. ಈ ಸಂಗ್ರಹದ ಅತಿ ಮುಖ್ಯ ಕವನವಾದ ಹರಿವ ನೀರಿದು, ದುಃಖಗೀತದ ಹಾಗೆಯೇ ಕನ್ನಡದ ಮಹತ್ವದ ಕವನಗಳಲ್ಲಿ ಒಂದು ಎಂದು ಹಲವು ವಿಮರ್ಶಕರು ಅಭಿಪ್ರಯಪಟ್ಟಿದ್ದಾರೆ. ಈ ಸಂಗ್ರಹದಲ್ಲಿರುವ ಇನ್ನು ಕೆಲವು ಮಹತ್ವದ ಕವಿತೆಗಳೆಂದರೆ ಕಾಮಸೂತ್ರ, ಅಣ್ಣ, ಸುಧೀರ ಹಾಗೂ ತಾಯಿ.

ಸಂಪರ್ಕ ಚಿತ್ತಾಲರ ಕೊನೆಯ ಕವನಸಂಗ್ರಹ. ಕವಿಯ ಕೊನೆಯ ವರ್ಷಗಳಲ್ಲಿ ಇವರನ್ನು ಬಾಧಿಸಿದ್ದ, ಪರಿಹಾರವೇ ಇಲ್ಲದ ಪಾರ್ಕಿನ್ಸನ್ಸ್ ವ್ಯಾಧಿ ಉಲ್ಬಣಾವಸ್ಥೆಗೆ ಹೋದ ಕಾಲದಲ್ಲಿ ಬರೆದ ಕವನಗಳಿವು. ಇಲ್ಲಿ ಹದಿನೆಂಟು ಕವಿತೆಗಳಿವೆ. ಕೀರ್ತಿನಾಥ ಕುರ್ತಕೋಟಿ ಅವರು ಈ ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ ಚಿತ್ತಾಲರ ಸಮಗ್ರ ಕಾವ್ಯಸೃಷ್ಟಿಯ ಆಶಯವನ್ನು ಗುರುತಿಸಿದ್ದಾರೆ. ಚಿತ್ತಾಲರ ಕಾವ್ಯಕ್ಕೆ ಬೆನ್ನೆಲುಬಾಗಿರುವ

ಅದಮ್ಯ ಆಶಾವಾದ, ಎಂಥ ಪ್ರತಿಕೂಲ ಸ್ಥಿತಿಯಲ್ಲಿಯೂ ಬದುಕು ತನ್ನ ಜೀವಸತ್ವವನ್ನು ಪ್ರಕಟಿಸಿಯೇ ತೀರುತ್ತದೆಂಬ ವಾಸ್ತವ ಸತ್ಯ, ಎಂಥ ದುರ್ಭರವಾದ ಪರಿಸ್ಥಿತಿಯಲ್ಲೂ ಜೀವನವಿಮುಖವಾಗದ, ಜೀವನಪರವಾದ ದೃಷ್ಟಿಕೋನ ಚಿತ್ತಾಲರ ಕಾವ್ಯದ ಸಮಗ್ರಲಕ್ಷಣವಾಗಿದೆ ಎಂದಿದ್ದಾರೆ.

ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿತ್ತು. ಇವರನ್ನು ಕುರಿತಂತೆ ಗಂಗಾಧರ ಚಿತ್ತಾಲರ ಕಾವ್ಯಸೃಷ್ಟಿ (ಸಂ: ಶಾಂತಿನಾಥ ದೇಸಾಯಿ, 1987) ಎಂಬ ವಿಮರ್ಶಾಕೃತಿ ಪ್ರಕಟವಾಗಿದೆ. (ವ್ಯ.ಸಿ.)

**ಗಂಗಾಧರ ಮಡಿವಾಳೇಶ್ವರ ತುರಮರಿ :** 1827-77. ಬಾಣನ ಕಾದಂಬರಿಯನ್ನು ಬಾಣಕವಿಯ ಕಾದಂಬರಿ ಎಂಬ ಹೆಸರಿನಲ್ಲಿ ಹೊಸಗನ್ನಡದಲ್ಲಿ ಬರೆದ ಲೇಖಕರು. ಬೆಳಗಾಂವಿ ಜಿಲ್ಲೆ ತುರಮರಿಯಲ್ಲಿ ಜನಿಸಿದ ಇವರು ಅಥಣಿ ಮಠದ ಮಡಿವಾಳ ಸ್ವಾಮಿಗಳ ಆಶ್ರಯದಲ್ಲಿ ಬೆಳೆದು ಅಭಿವೃದ್ಧಿಗೆ ಬಂದರು. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಪಾಂಡಿತ್ಯ ಗಳಿಸಿ ಬೆಳಗಾಂವಿಯ ನಾರ್ಮಲ್ ಶಾಲೆಯಲ್ಲಿ ಕನ್ನಡ ಪಂಡಿತರಾದರು. ಅನಂತರ ಸ್ವಲ್ಪ ಕಾಲ ಆ ಶಾಲೆಯ ಉಪಮುಖ್ಯೋಪಾಧ್ಯಾಯರಾಗಿಯೂ ಕೆಲಸ ಮಾಡಿದರು. ಮರಾಠಿಯ ಪ್ರಾಬಲ್ಯವಿದ್ದ ಉತ್ತರ ಕರ್ನಾಟಕದಲ್ಲಿ ಕನ್ನಡದ ಅಭ್ಯಾಸನಿಷ್ಠೆ ಆಗ ತಾನೇ ಆರಂಭವಾಗಿತ್ತು. ಅಂಥ ಸಮಯದಲ್ಲಿ ಇವರು ಕನ್ನಡ ಶಬ್ದಮಂಜರೀ ಕೋಶವನ್ನು ಬರೆದರು. ಕನ್ನಡ ವಾಚನಾಭಿರುಚಿಯನ್ನು ಹೆಚ್ಚಿಸಲು ಕನ್ನಡ ಕವಿತಾಪದ್ಧತಿ, ಕವಿತಾಸಂಗ್ರಹ, ಕೈವಲ್ಯಪದ್ಧತಿ ಟೀಕೆ ಮುಂತಾದ ಪದ್ಯಸಂಗ್ರಹಗಳನ್ನೂ ಪ್ರಕಟಿಸಿದರು. ಬಾಣಕವಿಯ ಕಾದಂಬರಿಯಲ್ಲಿ ಬರುವ, ಆಗ ನನ್ನ ಪಕ್ಕ ಬಲಿತಿದ್ದಿಲ್ಲ. ಗೋಣು ನಿಲ್ಲುತ್ತಿದ್ದಿಲ್ಲ. ನಡೆಯಲಿಕ್ಕೆ ಕಾಲೊಳಗೆ ಕಸುವು ಇದ್ದಿಲ್ಲ. ಆದುದರಿಂದ ಆಗಾಗ ನನ್ನ ಮೋರೆಯು ನೆಲಕ್ಕೆ ಬಡಿಯುವದು; ಅಡಿಗಡಿಗೆ ಹೋಳ ಮೈಯಲ್ಲಿಯಿಂದ ಬೀಳುವೆನು; ಹೊರಳಾಡುತ್ತ ಹೋಗುವುದರಿಂದ ಮೈಯೆಲ್ಲ ಮಣ್ಣಾಯಿತು; ಹೆಜ್ಜೆಜ್ಜೆಗೆ ತೇಕುಹತ್ತಿ ಎಕವಕ ಬಾಯಿ ಬಿಡಹತ್ತಿದೆನು. ಎಷ್ಟು ಕಷ್ಟವಾದರೂ ಬದುಕಬೇಕೆಂಬ ಆಶೆ ಬಿಡುವುದಿಲ್ಲ. ಈ ರೀತಿಯ ವಾಕ್ಯಗಳು ಇವರ ಓಜಸ್ವೀ ಗದ್ಯಶೈಲಿಯನ್ನು ಪರಿಚಯ ಮಾಡಿಕೊಡುತ್ತವೆ. ಕನ್ನಡ ಗದ್ಯದ ಬೆಳವಣಿಗೆಗೆ ತುರಮರಿಯವರ ಕೊಡುಗೆ ಗಣ್ಯವಾದುದು. (ಕೆ.ಕೆ)

**ಗಂಗಾಧರರಾವ್, ಎಂ.ಎಸ್. :** 1888-1961. ಕನ್ನಡ ರಂಗ ಭೂಮಿಯ ಪ್ರಸಿದ್ಧ ನಟರು. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಮೂಕನಹಳ್ಳಿಯಲ್ಲಿ 1888 ಏಪ್ರಿಲ್ 3ರಂದು ಜನಿಸಿದರು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ತಾಯಿ ಅಣ್ಣಅತ್ತಿಗೆಯರ ಆಶ್ರಯದಲ್ಲೇ ಬೆಳೆದ ಇವರು 73 ವರ್ಷಗಳ ದೀರ್ಘಜೀವನ ನಡೆಸಿ, ಕನ್ನಡನಾಡಿನ ವಿವಿಧ ಭಾಗಗಳು ಹಾಗೂ ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ನಾಟಕಪ್ರದರ್ಶನಗಳನ್ನು ನೀಡಿ ಹುಟ್ಟಿದ ಊರಿಗೇ ಹಿಂದಿರುಗಿ ನಿಧನಹೊಂದಿದರು.

ಇವರ ಬಾಲ್ಯಜೀವನ ಸುಖವಾಗಿರಲಿಲ್ಲ. ವಿದ್ಯೆಯೂ ಹತ್ತಲಿಲ್ಲ. ಆದರೆ ಭಜನೆ, ಸಂಗೀತ, ಹರಿಕಥೆ, ನಾಟಕ ಮೊದಲಾದವುಗಳಲ್ಲಿ ಹೆಚ್ಚಿನ ಆಸಕ್ತಿ ಉಂಟಾಯಿತು. ಆತ್ಮೀಯ ಬಂಧು ವೆಂಕಟನಾರಾಯಣ ಜೋಯಿಸರಿಂದ ಸಂಗೀತ, ಗಮಕಗಳ ಪಾಠ ಆಯಿತು. ಪಿಟೀಲು ವಿದ್ವಾನ್ ಪುಟ್ಟಣ್ಣಯ್ಯನವರಿಂದಲೂ ಪಾಠವಾಯಿತು. ಸ್ವಲ್ಪಕಾಲ ಅಧ್ಯಾಪಕವೃತ್ತಿ, ಪೊಲೀಸ್ ಕಛೇರಿಯಲ್ಲಿ ಗುಮಾಸ್ತೆ, ಮತ್ತೆ ಸ್ವಲ್ಪ ದಿನ ವ್ಯವಸಾಯ, ಕೊನೆಗೆ ಮೂಕಿ ಸಿನಿಮಾ ನಡೆಸುವ ಉದ್ಯೋಗ ಕೈಗೊಂಡಿದ್ದರು. ಗುಬ್ಬಿ ಕಂಪನಿ ನಾಟಕಗಳ ಪ್ರಭಾವದಿಂದ ಧರ್ಮಪಾಲಚರಿತ್ರೆ ನಾಟಕದಲ್ಲಿ ಧರ್ಮಪಾಲನ ಪಾತ್ರ ವಹಿಸಿದರು. ಇದೇ ಸಮಯಕ್ಕೆ ಇವರ ಮದುವೆ ಆಯಿತು.

ನಾಟಕದಲ್ಲಿ ಆಸಕ್ತರಾಗಿದ್ದ ರಾಯರು ಮೊದಲಿಗೆ ತುಮಕೂರಿನಲ್ಲಿದ್ದ ಶ್ರೀ ಸೀತಾಮನೋಹರ ನಾಟಕ ಮಂಡಳಿಯನ್ನು ಸೇರಿದರು. ಅನಂತರ ಗುಬ್ಬಿ ಕಂಪನಿಯನ್ನು ಸೇರಿ ಮುಖ್ಯ ಪಾತ್ರಗಳನ್ನು ವಹಿಸಿದರು. ರೌದ್ರ, ವೀರ, ಅದ್ಭುತ, ಭೀಭತ್ಸ ರಸಗಳನ್ನು ಪ್ರತಿಪಾದಿಸುವ ಪಾತ್ರಗಳಲ್ಲಿ ಪ್ರಖ್ಯಾತರಾದರು. ಈ ಪಾತ್ರಗಳಿಗೆ ಒಪ್ಪುತಕ್ಕ ಅಂಗಸೌಷ್ಠವ ಹೊಂದಿದ್ದು ಚೆನ್ನಾಗಿ ಹಾಡಲೂ ಬಲ್ಲವರಾಗಿದ್ದರು. ಇವರು ಹೆಚ್ಚು ಕಾಲ ಗುಬ್ಬಿ ಕಂಪನಿಯಲ್ಲಿದ್ದರೂ ಶ್ರೀಭಾರತ ಜನಮನೋಲ್ಲಾಸಿನೀ ನಾಟಕಸಭಾ, ಶ್ರೀಲಕ್ಷ್ಮೀಕಾಂತ ವಿಲಾಸ ನಾಟಕ ಸಭಾ, ಶ್ರೀ ಗುಬ್ಬಿ ಚನ್ನಬಸವೇಶ್ವರ ಕೃಪಾಪೋಷಿತ ಲಲಿತಕಲಾವರ್ಧಿನೀ ನಾಟಕ ಸಭಾ, ಶ್ರೀಶಾಂಭವೀ ಪ್ರಸಾದಿಕ ನಾಟಕ ಮಂಡಳಿ, ಶ್ರೀಕೃಷ್ಣ ಮನೋರಂಜಿನೀ ನಾಟಕ ಸಭಾ, ಗುಬ್ಬಿ ಬಾಲಕಲಾವರ್ಧಿನೀ ನಾಟಕ ಸಭಾ, ಆರು ಜನದ ಕಂಪನಿ, ಶ್ರೀ ಮಂಜುನಾಥೇಶ್ವರಿ ನಾಟಕ ಮಂಡಳಿ, ಶೇಷಕಮಲ ಕಲಾ ಮಂಡಳಿ, ಶ್ರೀಚಾಮುಂಡೇಶ್ವರಿ ಕಂಪನಿಯ ಮಿತ್ರರು ಇವೇ ಮೊದಲಾದ ಕಂಪನಿಗಳಲ್ಲಿ ಮಾಲಿಕರಾಗಿ, ಪಾಲುದಾರರಾಗಿ, ನಟರಾಗಿ ಬೇರೆ ಬೇರೆ ಸ್ಥಾನದಲ್ಲಿ ನಿಂತು ಕೆಲಸ ಮಾಡಿದರು.

ರಾಯರು ಪ್ರಹ್ಲಾದ ಚರಿತ್ರೆಯಲ್ಲಿ ಹಿರಣ್ಯಕಶಿಪು, ಶ್ರೀಕೃಷ್ಣಲೀಲಾ ಮತ್ತು ಕಂಸವಧದಲ್ಲಿ ಕಂಸ, ಯಮಗರ್ವಭಂಗದಲ್ಲಿ ಯಮ, ಚಂದ್ರಹಾಸದಲ್ಲಿ ದುಷ್ಟಬುದ್ಧಿ ಮೊದಲಾದ ಪಾತ್ರಗಳನ್ನು ಬಹಳ ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ಇವರ ಅಭಿನಯ ಕೇವಲ ವೀರಅದ್ಭುತ ರಸಗಳ ಪಾತ್ರ ಚಿತ್ರಣಕ್ಕೇ ಮೀಸಲಾಗಿರಲಿಲ್ಲ. ಇತರ ರಸಗಳನ್ನು ಪ್ರತಿಪಾದಿಸುವ ಪಾತ್ರಗಳನ್ನೂ ಇವರು ಸಮರ್ಪಕವಾಗಿ ನಿರ್ವಹಿಸುತ್ತಿದ್ದರು. ಇವರ ಉತ್ತಮ ಅಭಿನಯವನ್ನು ಮೆಚ್ಚಿ ಸಾರ್ವಜನಿಕರು ರಾಯರಿಗೆ ಅಭಿನಯಕಂಠೀರವ, ನಟ ಭಯಂಕರ, ಅಭಿನಯ ಸಮ್ರಾಟ ಮೊದಲಾದ ಬಿರುದುಗಳನ್ನೂ ವಿವಿಧ ಬಗೆಯ ಉಡುಗೊರೆಗಳನ್ನೂ ಕೊಟ್ಟರು. ರಾಯರ ರೌದ್ರಾಭಿನಯ ಕೆಲವು ವೇಳೆ ರಸಿಕರನ್ನು ರಂಗಮಂದಿರದಲ್ಲೇ ಮೂರ್ಛೆಗೊಳಿಸಿದ್ದೂ ಉಂಟು. ಕಂಪನಿಗಳನ್ನು ನಡಸಿದ ರಾಯರು ರಂಗಸಜ್ಜಿಕೆ, ದೀಪಾಲಂಕಾರ, ರಂಗಸಂಗೀತ, ಉತ್ತಮ ಅಭಿನಯ ಇವೇ ಮೊದಲಾದವುಗಳಿಗೆ ಹೆಚ್ಚಿನ ಗಮನ ನೀಡಿದರು. ರಾಯರು ಬಹಳ ಉದಾರಿಗಳಾಗಿದ್ದರು. ಒಮ್ಮೆ ಇವರು ಬಡಬ್ರಾಹ್ಮಣನೊಬ್ಬನಿಗೆ ಏಳೆಂಟು ತೊಲ ಚಿನ್ನದ ಆಭರಣವನ್ನು ದಾನವಾಗಿ ಕೊಟ್ಟಿದ್ದೂ ಉಂಟು. ಧರ್ಮ ಕಾರ್ಯಗಳಿಗಾಗಿ ಯಾಚಿಸಿದವರಿಗೆ ಸಹಾಯದ ಹಸ್ತವನ್ನು ನೀಡಿದರು. ರಾಯರು ರಂಗಭೂಮಿಯಲ್ಲಿ ಬಹಳ ವರ್ಷ ರಾರಾಜಿಸಿದರೂ ಇವರ ಸ್ವಂತ ಜೀವನ ಹಾಗೂ ಕೊನೆಯದಿನಗಳು ಅಷ್ಟು ಸುಖಮಯವಾಗಿರಲಿಲ್ಲ. ಇವರು 1961 ಮಾರ್ಚ್ 12ರಂದು ನಿಧನಹೊಂದಿದರು. (ಎಸ್.ಎ.)



**ಗಂಗಾಧರರಾವ್, ದೇಶಪಾಂಡೆ :** 1871-1960. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕರ್ನಾಟಕದ ನಾಯಕರಲ್ಲೊಬ್ಬರು. ಬೆಳಗಾಂವಿ ಜಿಲ್ಲೆಯ ರಾಯಬಾಗದ ಹತ್ತಿರವಿರುವ ಜಲಾಲಪುರ ಗ್ರಾಮದಲ್ಲಿ 1871 ಮಾರ್ಚ್ 31ರಂದು ಜನಿಸಿದರು. ಬೆಳೆದದ್ದು ಅದರ ಹತ್ತಿರದ ಹುದಲಿಯಲ್ಲಿ. ತಂದೆ ಬಾಳಕೃಷ್ಣ ದೇಶಪಾಂಡೆ. ಬಾಲ್ಯದಲ್ಲಿ ತಂದೆಯಿಂದ ದೊರೆತ ರಾಷ್ಟ್ರೀಯತ್ವದ ಪರಿಕಲ್ಪನೆ, ಮುಂದೆ ಲೋಕಮಾನ್ಯ ಬಾಳಗಂಗಾಧರ ಟಿಳಕರಿಂದ ಪಡೆದ ಕಾಂಗ್ರೆಸ್ ದೀಕ್ಷೆ, ತರುವಾಯ ಮಹಾತ್ಮ ಗಾಂಧಿಯವರ ಅನುಯಾಯಿಯಾಗಿ ಪಡೆದ ಅನುಭವ -ಇವು ಗಂಗಾಧರರಾಯರ ವ್ಯಕ್ತಿತ್ವವನ್ನು ರೂಪಿಸಿದುವು. ಚಿಕ್ಕಂದಿನಲ್ಲಿ ಇವರು ಗೋಪಾಲಕೃಷ್ಣ ಗೋಖಲೆಯವರ ವಿಚಾರಗಳಿಂದಲೂ ಮುಪ್ಪಿನಲ್ಲಿ ರಾಮಭಾವು ರಾನಡೆಯವರ ಆಧ್ಯಾತ್ಮಿಕ ಚಿಂತನೆಗಳಿಂದಲೂ ಪ್ರಭಾವಿತರಾಗಿದ್ದರು.

ಹದಿಮೂರನೆಯ ವಯಸ್ಸಿನಲ್ಲೆ ಗಂಗಾಧರರಾಯರಿಗೆ ಮದುವೆಯಾಯಿತು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿದ್ದಾಗ ಇವರಿಗೆ ಟಿಳಕ, ಅಗರಕರ ಇವರ ಸಂಪರ್ಕ ಬೆಳೆಯಿತು. ಅಲ್ಲಿಯ ಅನೇಕ ಪ್ರಮುಖ ವ್ಯಕ್ತಿಗಳು ಇವರ ಮಿತ್ರರಾದರು. ಟಿಳಕರ ಲೇಖನಗಳು, ಭಾಷಣಗಳು, ಸಂಪಾದಕೀಯ ನುಡಿಗಳು ಗಂಗಾಧರರಾಯರಲ್ಲಿ ಸ್ಫೂರ್ತಿಯನ್ನೂ ಜಾಗೃತಿಯನ್ನೂ ಉಂಟುಮಾಡಿದವು. ಇದರಿಂದ ಇವರಿಗೆ ಟಿಳಕರ ಸಂಪರ್ಕ ಪಡೆಯುವ ಉತ್ಸಕತೆಉಂಟಾಯಿತು. ಇವರು ಅದನ್ನು ಸಾಧಿಸಿದರು. ಗೋಪಾಲಕೃಷ್ಣ ಗೋಖಲೆ, ಜಸ್ಟಿಸ್ ರಾನಡೆ ಅವರನ್ನೂ ಕಂಡರು. ಬಿ.ಎ., ಎಲ್.ಎಲ್.ಬಿ. ಪದವಿ ಪಡೆದ ಅನಂತರ ಸ್ವಲ್ಪ ಕಾಲ ಮುಂಬಯಿಯ ಲೋಕಮತ ಎಂಬ ಮರಾಠಿ ಸಾಪ್ತಾಹಿಕದ ಸಂಪಾದಕರಾಗಿದ್ದರು. ತಂದೆಯ ಅಭಿಲಾಷೆಯಂತೆ ಗಂಗಾಧರ ರಾಯರು ವಕೀಲರಾಗಿ ಬೆಳಗಾಂವಿಗೆ ಬಂದ ಮೇಲೆ ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರಾಗಿ ಲೋಕಮಾನ್ಯ ಟಿಳಕರ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯಾಂದೋಲನದಲ್ಲಿ ಉದ್ಯುಕ್ತರಾದರು. ಸಂಘಟನೆಯ ಕಾರ್ಯ ಕೈಗೊಂಡರು. ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದರು. ಟಿಳಕರ ನಿಷ್ಠಾವಂತ ಅನುಯಾಯಿಯಾಗಿ ಕಾಂಗ್ರೆಸ್ ಕಾರ್ಯಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಬೆಳಗಾಂವಿಯಲ್ಲಿ 'ಸ್ವದೇಶಿವಸ್ತುಭಂಡಾರ' ಅಂಗಡಿಯನ್ನೂ ಗಣೇಶ ವಿದ್ಯಾಲಯ ಎಂಬ ರಾಷ್ಟ್ರೀಯ ಶಾಲೆಯನ್ನೂ ಪ್ರಾರಂಭಿಸಿದರು. 1906ರ ಸೂರತ್ ಕಾಂಗ್ರೆಸ್ ಅಧಿವೇಶನಕ್ಕೆ ಕರ್ನಾಟಕದಿಂದ ಗೆಳೆಯರೊಡನೆ ಹೋಗಿದ್ದು ಅಲ್ಲಿ ಟಿಳಕರ ಪಕ್ಷದವರಿಗೆ ಬೆಂಬಲವಿತ್ತಿದ್ದರು.



1921ರಲ್ಲಿ ಇವರು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಹೊಂದಿದರು. ಅದೇ ವರ್ಷ ನವಲಗುಂದದಲ್ಲಿ ಭಾಷಣ ಮಾಡಿದ್ದಕ್ಕೆ ರಾಜದ್ರೋಹದ ಆಪಾದನೆಯ ಮೇಲೆ ಬ್ರಿಟಿಷ್ ಸರ್ಕಾರ ಇವರನ್ನು ಬಂಧಿಸಿ ಆರು ತಿಂಗಳ ಕಾರಾಗೃಹಶಿಕ್ಷೆ ವಿಧಿಸಿತು. ಲೋಕಮಾನ್ಯ ಟಿಳಕರಿಂದ ಸ್ವಾತಂತ್ರ್ಯ ಚಳವಳಿಯ ಧುರೀಣತ್ವ ಗಾಂಧೀಜಿಯವರಿಗೆ ಬಂದಮೇಲೆ ಇವರು ಗಾಂಧೀಜಿಯವರಿಗೆ ತಮ್ಮ ನಿಷ್ಠೆಯನ್ನು ತೋರಿ ಅವರ ಅಹಿಂಸಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು. 1922ರಲ್ಲಿ ಮಹಾರಾಷ್ಟ್ರ, ಕರ್ನಾಟಕ ಎರಡೂ ಪ್ರಾಂತ್ಯಗಳಲ್ಲಿ ದೀರ್ಘಸಂಚಾರ ಕೈಕೊಂಡರು. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸಕ್ಕೆ ಕರ್ನಾಟಕದ ಹೆಸರನ್ನು ಜೋಡಿಸಲು ಕಾರಣರಾದವರಲ್ಲಿ ಇವರೂ ಒಬ್ಬರು. 1923ರಲ್ಲಿ ಮತ್ತೆ ಇದೇ ಬಗೆಯ ಪ್ರವಾಸ ಕೈಗೊಂಡು ಗಾಂಧೀಯವರ ಧ್ಯೇಯಧೋರಣೆಗಳನ್ನು, ಅವರ ಅಹಿಂಸಾತತ್ವ, ಸ್ವದೇಶೀ ಚಳವಳಿ, ಖಾದೀವ್ರತಗಳನ್ನು ಕುರಿತು ಜನಸಾಮಾನ್ಯರಲ್ಲಿ ತಿಳಿವಳಿಕೆ ಮಾಡಿಕೊಟ್ಟರು. ಇವರು ಅಸ್ಪೃಶ್ಯತಾನಿವಾರಣೆಗೂ ಶ್ರಮಿಸಿದರು.

1924ರಲ್ಲಿ ಗಾಂಧೀಯವರ ಅಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನಕ್ಕೆ ಇವರೇ ಸ್ವಾಗತಾಧ್ಯಕ್ಷರು. ಬೆಳಗಾಂವಿ ಕಾಂಗ್ರೆಸ್ಸು ಅಧಿವೇಶನದ ಸ್ಥಳಕ್ಕೆ ವಿಜಯನಗರದ ಹೆಸರನ್ನು ಇಡಲಾಗಿದ್ದು, ಅದು ವಿಜಯನಗರದ ವೈಭವವನ್ನೂ ವಿದ್ಯಾರಣ್ಯರ ಪುಣ್ಯ ಪ್ರಭಾವವನ್ನೂ ನೆನಪಿಗೆ ತಂದುಕೊಟ್ಟಿತು. ಗಾಂಧೀಜಿ ಕರ್ನಾಟಕ ಸಂಚಾರವನ್ನು ಕೈಗೊಂಡಾಗ ಇವರು ಅವರ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿ ಹೇಳುತ್ತಿದ್ದರು.

ಇವರು ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕರ್ನಾಟಕದ ಪ್ರತಿನಿಧಿಯಾಗಿದ್ದರು.

1930ರ ಉಪ್ಪಿನ ಸತ್ಯಾಗ್ರಹದಲ್ಲಿ ಇವರೇ ಕರ್ನಾಟಕದ ಮೊದಲನೆಯ ಸತ್ಯಾಗ್ರಹಿಯಾಗಿ ಬಂಧಿತರಾದರು. 1932ರಲ್ಲಿ ಹುದಲಿಯಲ್ಲಿ ಇವರು ಗಾಂಧೀ ಸೇವಾ ಸಂಘ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದರು. ಪುಂಡಲೀಕ ಕಾತಗಡೆ ಮತ್ತು ಗೋವಿಂದರಾವ ಯಾಳಗಿ ಮುಂತಾದವರು ಈ ಎಲ್ಲ ಕಾರ್ಯಗಳಲ್ಲೂ ಇವರಿಗೆ ಸಹಾಯಕರಾಗಿದ್ದರು. 1938ರಲ್ಲಿ ಇವರು ಮತ್ತೊಮ್ಮೆ ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. 1941ರ ವೈಯಕ್ತಿಕ ಸತ್ಯಾಗ್ರಹ, 1942ರ ಚಲೇಜಾವ್ ಚಳವಳಿ ಇವುಗಳಲ್ಲಿ ಭಾಗವಹಿಸಿದರು. ಇವರು "ಇದು ಸತ್ಯಾಗ್ರಹವಲ್ಲ, ಜೇಲು ತುಂಬುವುದು ಈ ಚಳವಳಿಯ ಉದ್ದೇಶವಲ್ಲ. ಇದು ಬ್ರಿಟಿಷ್ ಸರ್ಕಾರದ ವಿರುದ್ಧ ಹೂಡಿದ ಬಂಡು ಎಂಬುದನ್ನು ತಿಳಿದು ಪ್ರತಿಯೊಬ್ಬರೂ ತಾವೇ ಮುಖಂಡರಾಗಿ ಈ ಕೊನೆಯ ಹೋರಾಟ ನಡೆಯಿಸಬೇಕು" ಎಂದು ಸಿಂಹಗರ್ಜನೆ ಮಾಡಿ ಜನರನ್ನು ಹುರಿದುಂಬಿಸಿದರು. ಮುಂಬಯಿಯಲ್ಲಿ 8ನೆಯ ಆಗಸ್ಟ್ 1942ರಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನಕ್ಕೆ ಇವರು ಹೋದಾಗ ಅಲ್ಲಿ ಸರ್ಕಾರ ಅವರನ್ನು ಬಂಧಿಸಿತು. 1942ರಿಂದ 1944ರ ವರೆಗೆ ಇವರು ನಾಸಿಕ ಕಾರಾಗೃಹದಲ್ಲಿ ರಾಜಕೀಯ ಕೈದಿಯಾಗಿದ್ದರು. 1945ರಿಂದ 1950ರ ವರೆಗೆ ವಿಧಾಯಕ ಕಾರ್ಯದಲ್ಲಿಯೇ ತೊಡಗಿದ್ದರು.

ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾದಮೇಲೆ ಇವರು ಅಧಿಕಾರ ಪಡೆಯಲು ಪ್ರಯತ್ನಿಸಲಿಲ್ಲ. ಸ್ವಾತಂತ್ರ್ಯವನ್ನು ಗಳಿಸಿಕೊಟ್ಟವರು ತಾವೇ- ಎಂದು ತಮ್ಮ ಪೀಳಿಗೆಯ ಜನ ಅಹಂಕಾರ ತಾಳಬಾರದೆಂದು ಇವರು ಬೋಧಿಸುತ್ತಿದ್ದರು. ಅಧಿಕಾರಲಾಲಸೆ ಇರಬಾರದೆಂದೂ ಉಪದೇಶಿಸಿದರು. ರಾನಡೆಯವರ ಅನುಯಾಯಿಗಳಾಗಿ ಅಧ್ಯಾತ್ಮಚಿಂತನೆಯಲ್ಲಿ ತಮ್ಮ ಕೊನೆಯ ಜೀವನವನ್ನು ಕಳೆದರು. 1960 ಜುಲೈನಲ್ಲಿ ನಿಧನಹೊಂದಿದರು. (ಎಸ್.ಕಿ.ಕಿ.)

**ಗಂಗಾಧರ ಶಾಸನ** : ಕನ್ನಡದ ಆದಿಕವಿ ಪಂಪನ ಜೀವನ ಪುನಾರಚಿಸುವಲ್ಲಿ ಚರಿತ್ರೆಗೆ ಸಹಾಯಕವಾದ ಒಂದು ಅಪೂರ್ವ ಶಾಸನ. ಪಂಪನ ತಮ್ಮ ಜಿನವಲ್ಲಭನಿಂದ ಕೆತ್ತಿಸಲಾದ ಶಾಸನವಿದು. ಕಂಡರಿಸಿದ ಶಿಲ್ಪಿ ಎರೆಯಮ್ಮ. ಉದ್ದೇಶ ಜಿನವಲ್ಲಭನನ್ನು ಸುತ್ತಿಸುವುದೇ ಆಗಿದ್ದರೂ ಪಂಪನ ಚರಿತ್ರೆಯ ಮೇಲೆ ಇದು ಆನುಷಂಗಿಕವಾಗಿ ವಿಶೇಷ ಬೆಳಕನ್ನು ಬೀರಿದೆ. ಪಂಪನ ಅಜ್ಜ, ತಂದೆ, ತಾಯಿ, ಆಕೆಯ ತವರಿನವರು, ಸೋದರ ಹಾಗೂ ಗುರು ಇವರ ಬಗೆಗೆ ಕೆಲವು ಸ್ಪಷ್ಟ ಹೇಳಿಕೆಗಳನ್ನಿದು ಒಳಗೊಂಡಿದೆ. ಈ ಶಾಸನ ಮೊದಲಬಾರಿಗೆ ತೆಲುಗು ಪತ್ರಿಕೆ ಭಾರತಿಯಲ್ಲಿ 1967ರ ಮಾರ್ಚ್ ತಿಂಗಳಿನಲ್ಲಿ ಆಂಧ್ರಪ್ರದೇಶದ ಪುರಾತತ್ತ್ವ ಶಾಖೆಯ ಸಹಾಯಕ ಸಂಚಾಲಕರಾದ ಎನ್. ವೆಂಕಟರಮಣಯ್ಯನವರಿಂದ ಪ್ರಕಾಶಗೊಂಡಿತು. ಅನಂತರ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಪತ್ರಿಕೆಗಳಲ್ಲೂ ಕನ್ನಡ ಶಾಸನ ಸಂಪದ ಎಂಬ ಶಾಸನಗಳ ಸಂಗ್ರಹಗ್ರಂಥದಲ್ಲೂ ಅಚ್ಚಾಯಿತು.

ಗಂಗಾಧರ ಶಾಸನ ಆಂಧ್ರಪ್ರದೇಶದ ಕರೀಮ್‌ನಗರ ಜಿಲ್ಲೆಯಲ್ಲಿದೆ. ಕರೀಮ್‌ನಗರದಿಂದ ಜಗತ್ಯಾಲ ತಾಲೂಕಿಗೆ ಹೋಗುವ ದಾರಿಯಲ್ಲಿ ಕುರ್ಕಿಯಾಲ್ ಎಂಬ ಹಳ್ಳಿಯಿಂದ ಪೂರ್ವದಲ್ಲೂ ಗಂಗಾಧರ ಎಂಬ ಹಳ್ಳಿಯಿಂದ ದಕ್ಷಿಣದಲ್ಲೂ ನೇಲ್ಕೊಂಡಪಲ್ಲಿಯೆಂಬ ಹಳ್ಳಿಯಿಂದ ಈಶಾನ್ಯದಲ್ಲೂ ಎಂದರೆ ಈ ಮಧ್ಯದಲ್ಲಿರುವ ಬೆಟ್ಟದಲ್ಲಿ ಈ ಶಾಸನವನ್ನು ಕೊರೆಯಲಾಗಿದೆ. ಕುರ್ಕಿಯಾಲ್ ಎಂಬ ಹಳ್ಳಿಯ ಸೀಮೆಯ ಒಳಗಡೆಯೇ ಇದು ಬರುತ್ತದೆ. ಬೆಟ್ಟದ ಪಕ್ಕದಲ್ಲಿ ವಾಯವ್ಯದಿಶೆಯಲ್ಲಿ ಪಾತಚೆರುವು ಎಂಬ ಕೆರೆಯೊಂದಿದೆ. ಬಹುಶಃ ಇದುವೆ ಕವಿತಾಗುಣಾರ್ಣವ ತಟಾಕವಾಗಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಬೆಟ್ಟಕ್ಕೆ ಈಗ ಬೊಮ್ಮಲ ಗುಟ್ಟವೆಂದು (ಗೊಂಬೆಗಳ ಗುಡ್ಡ) ಹೆಸರು. ಬೆಟ್ಟದ ನಿಡಿದಾದ ದಾರಿಯಲ್ಲಿ ಸು.125' ಏರಿದಮೇಲೆ ಒಂದು ಬೃಹತ್ ಶಿಲೆಯಿದೆ. ಅದರ ಮೇಲೆ ಸು.4' ಎತ್ತರದ ಸ್ತ್ರೀ ಮೂರ್ತಿಯೊಂದನ್ನು ಕೆತ್ತಿದೆ. ಈ ಮೂರ್ತಿಯನ್ನು ಜನಪದರು ಬೊಮ್ಮಲಮ್ಮನೆಂದು (ಚಕ್ರೇಶ್ವರಿ) ಈಗಲೂ ಪೂಜಿಸುತ್ತಾರೆ. ಈ ವಿಷಯ ಆ ವಿಗ್ರಹದ ಪಾದದಲ್ಲಿಯೆ ಕೆತ್ತಲಾಗಿರುವ ಶಾಸನದಲ್ಲಿ ಸ್ಪಷ್ಟವಿದೆ. ಚಕ್ರೇಶ್ವರಿ ಎಂದರೆ ಅದೇ ವೃಷಭಾದ್ರಿಯಲ್ಲಿದ್ದ ವೃಷಭನಾಥ ತೀರ್ಥಂಕರನ ಯಕ್ಷಿಣಿ. ಆ ವೃಷಭನಾಥ ಜಿನಾಲಯ ಎಲ್ಲಿದ್ದಿತೆಂಬುದು ಈಗ ತಿಳಿಯದು. ಚಕ್ರೇಶ್ವರಿಯ ಜೊತೆಗೆ ಇನ್ನೂ

ಕೆಲವು ಪ್ರತಿಮೆಗಳು ಆಕೆಯ ಎಡಕ್ಕೂ ಬಲಕ್ಕೂ ಇವೆ. ಆಕೆಯ ತಲೆಯ ಮೇಲೆಯೇ ಸ್ವಲ್ಪ ಎತ್ತರದಲ್ಲಿ ಎರಡು ದೊಡ್ಡ ಜಿನಬಿಂಬಗಳೂ ಇವೆ. ಇವು ಬಹಳ ಎತ್ತರದ ಮೇಲಿರುವುದರಿಂದ ಬಹುದೂರದವರೆಗೆ ಗೋಚರಿಸುತ್ತವೆ. ಅದರಲ್ಲೂ ನೇಲ್ಕೊಂಡಪಲ್ಲಿಗೆ ಹೆಚ್ಚು ಸ್ಫುಟವಾಗಿ ಕಾಣಿಸುತ್ತವೆ. ಈ ಶಾಸನದ ಪ್ರಕಾರ, ಇಲ್ಲಿರುವ ಎಲ್ಲ ಪ್ರತಿಮೆಗಳನ್ನೂ ಕೆತ್ತಿಸಿದ ವ್ಯಕ್ತಿ, ಪಂಪನ ತಮ್ಮ ಜಿನವಲ್ಲಭ. ಮೊದಲ ಸಲ ಈ ಶಾಸನವನ್ನು ಪ್ರಕಟಿಸಿದ ವ್ಯಕ್ತಿಗಳು ಗಂಗಾಧರವೆಂಬ ಹಳ್ಳಿಯಿಂದ ಶಾಸನವಿರುವ ಎಡೆಗೆ ನೋಡಲು ಹೋದರಾಗಿ ತಮ್ಮ ಲೇಖನದಲ್ಲವರು ಇದನ್ನು ಗಂಗಾಧರ ಶಾಸನ ಎಂದೇ ಹೆಸರಿಸಿದರು. ಇದಕ್ಕೆ ಇನ್ನೊಂದು ಕಾರಣವೂ ಇದೆ. ಗಂಗಾಧರ ಗ್ರಾಮ ಹತ್ತನೆಯ ಶತಮಾನದಲ್ಲಿ ಜೈನಧರ್ಮಿಗಳಿಗೆ ಒಂದು ಕೇಂದ್ರವಾಗಿತ್ತು. ಇದು ಪಂಪನಿಗೆ ಆಶ್ರಯವನ್ನಿತ್ತ ಎರಡನೆಯ ಅರಿಕೇಸರಿಯ ಪ್ರಥಮ ಪುತ್ರನಾದ ವಾಗ್ರಾಜನಿಗೆ ರಾಜಧಾನಿಯೂ ಆಗಿತ್ತು. ಅವನ ಆಸ್ಥಾನದಲ್ಲಿ ಕವಿಯಾಗಿದ್ದ ಸೋಮದೇವಸೂರಿ ಸಂಸ್ಕೃತಕಾವ್ಯವಾದ ಯಶಸ್ತಿಲಕಚಂಪುವನ್ನು ಗಂಗಾಧರದಲ್ಲಿಯೇ ರಚಿಸಿ ಸಮಾಪ್ತಿಗೊಳಿಸಿದ. ಜೈನಧರ್ಮದ ಕೇಂದ್ರವಾಗಿದ್ದ ಗಂಗಾಧರದ ಹತ್ತಿರವೇ ಬೊಮ್ಮಲಗುಟ್ಟ ಇರುವುದರಿಂದ ಕುರ್ಕಿಯಾಲ್ ಗ್ರಾಮ ಅಷ್ಟು ಪುರಾತನವೆಂದು ತೋರದುದರಿಂದ ಈ ಶಾಸನವನ್ನು ಗಂಗಾಧರ ಶಾಸನ ಎಂದಿರುವಲ್ಲಿ ಔಚಿತ್ಯವಿದೆ. ಕೆಲವರು ಇದನ್ನು ಕುರ್ಕಿಯಾಲ ಶಾಸನವೆಂದೂ ಕರೆದಿದ್ದಾರೆ.

ಜಿನವಲ್ಲಭ ಕೆತ್ತಿಸಿದ ಚಕ್ರೇಶ್ವರಿ

ಈ ಶಾಸನದಲ್ಲಿ 14' 5" ಅಳತೆಯ ಪಂಕ್ತಿಗಳು ಹತ್ತು ಮತ್ತು 4' ಅಳತೆಯ ಪಂಕ್ತಿ ಒಂದು ಹೀಗೆ ಒಟ್ಟು ಹನ್ನೊಂದು ಪಂಕ್ತಿಗಳಿವೆ. ಶಾಸನದ ಲಿಪಿ, ಹತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟ ಹಾಗೂ ಚಾಳುಕ್ಯರ ನಾಡಿನಲ್ಲೊಂದೆಡೆಯಲ್ಲಿ ಈಗಿನ ತೆಲಂಗಾಣ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಕನ್ನಡ ತೆಲುಗು ಲಿಪಿ. ಅಕ್ಷರಗಳು ಎರಡನೆಯ ಅರಿಕೇಸರಿಯ ವೇಮುಲವಾಡದ ಶಾಸನಾಕ್ಷರಗಳನ್ನು ಹೋಲುತ್ತವೆ. ಕನ್ನಡ, ಸಂಸ್ಕೃತ ಮತ್ತು ತೆಲುಗು ಹೀಗೆ ಮೂರು ಭಾಷೆಗಳನ್ನೂ ಇದರಲ್ಲಿ ಬಳಸಲಾಗಿದೆ. ಧೋರಣೆ ಗದ್ಯ ಪದ್ಯಾತ್ಮಕವಾಗಿದೆ. ಓಂ ನಮಃ ಸಿದ್ಧೇಭ್ಯಃ ಎಂಬ ಸಂಸ್ಕೃತ ವಾಕ್ಯದಿಂದ ಜೈನರ ಪಂಚಪರಮೇಷ್ಠಿಗಳಲ್ಲೊಬ್ಬರಾದ ಸಿದ್ಧರ ಸ್ತುತಿಯೊಂದಿಗೆ ಶಾಸನ ಪ್ರಾರಂಭವಾಗುತ್ತದೆ. ತರುವಾಯ ಒಂದು ದೀರ್ಘ ಕನ್ನಡ ಗದ್ಯ, ಅನಂತರದಲ್ಲಿ ಮೂರು ಸಂಸ್ಕೃತ ವೃತ್ತಗಳು (ಎರಡು ಶಾರ್ದೂಲವಿಕ್ರೀಡಿತ, ಒಂದು ಪೃಥ್ವಿ), ಅನಂತರದಲ್ಲಿ ಆರು ಕನ್ನಡವೃತ್ತಗಳು (ನಾಲ್ಕು ಚಂಪಕಮಾಲಾ, ಒಂದು ಮತ್ತೇಭವಿಕ್ರೀಡಿತ, ಒಂದು ತರಳ), ತರುವಾಯದಲ್ಲಿ ಮೂರು ತೆಲುಗು ಪದ್ಯಗಳು (ಕಂದಗಳು) ಬಂದು ಕೊನೆಗೊಂದು ಕನ್ನಡದ ಸಣ್ಣ ಗದ್ಯಭಾಗವಿದೆ. ಶಿಲ್ಪಿ ಬಹಳ ಜಾಗರೂಕತೆಯಿಂದ ಕೆತ್ತಿದ್ದರೂ ಅಲ್ಲಲ್ಲಿ ಕೆಲವು ತಪ್ಪುಗಳಿವೆ. ತೆಲುಗು ಪದ್ಯಗಳಲ್ಲಿ ಅವು ಅಧಿಕ. ಕಾರಣ ಪ್ರಾಯಃ ಶಿಲ್ಪಿಗೆ ತೆಲುಗುಭಾಷೆಯ ಪರಿಚಯವಿಲ್ಲದ್ದಿರಬಹುದೆಂದು ತೋರುತ್ತದೆ. ಆದರೂ ತೆಲುಗು ಸಾಹಿತ್ಯಕ್ಕೆ ಇದು ಬಹುಮುಖ್ಯವಾದ ಶಾಸನ, ಏಕೆಂದರೆ ತೆಲುಗು ಭಾಷೆಯಲ್ಲಿ ಸದ್ಯಕ್ಕೆ ಇಲ್ಲಿನವೇ ಪ್ರಥಮ ಕಂದಪದ್ಯಗಳು.

ಈ ಶಾಸನ ಜಿನವಲ್ಲಭನ ಪ್ರಶಸ್ತಿಯಾದುದರಿಂದ ಇದರಲ್ಲಿ ಆತನ ವಂಶಚರಿತ್ರೆ, ಗುಣಸಂಪತ್ತಿನ ವೈದುಷ್ಯ ಹಾಗೂ ಮತಾಭಿನಿವೇಶನ ಮುಂತಾದ ವಿಷಯಗಳನ್ನು ವರ್ಣಿಸಲಾಗಿದೆ. ವಿವರ ಹೀಗಿದೆ:

ಜಿನವಲ್ಲಭ ವೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಜ್ಜುಕಮ್ಮೆ ಬ್ರಾಹ್ಮಣ ಜಮದಗ್ನಿ ಪಂಚಾರ್ಷೇಯ ಶ್ರೀವತ್ಸ ಗೋತ್ರದಲ್ಲಿ ಹುಟ್ಟಿದ ಗುಂಡಿಕಜ್ಜು ನಿಡುಂಗೊಂಡೆಯ ಅಭಿಮಾನಚಂದ್ರನ ಮೊಮ್ಮಗನಾದ ಭೀಮಪ್ಪಯ್ಯನಿಗೆ ಬೆಳ್ವೊಲದಣ್ಣಿಗೆರೆಯ ಜೋಯಿಸಸಿಂಘನ ಮೊಮ್ಮಗಳಾದ ಅಬ್ಬಣ್ಣಬ್ಬೆ ಉದರದಲ್ಲಿ ಜನಿಸಿದಾತ. ಕೊಂಡಕುಂದಾನ್ವಯದ ದೇಸಿಗಣದ ಪುಸ್ತಕ ಗುಚ್ಛಕ್ಕೆ ಸೇರಿದ ಪಂಡರಂಗಪಲ್ಲಿಯ ಜಯಣಂದಿಸಿದ್ಧಾಂತಭಟಾರರ ಶಿಷ್ಯ. ಸಬ್ಬಿನಾಡ ನಟ್ಟನಡುವಿದ್ದ ಧರ್ಮಪುರದ ಉತ್ತರ ದಿಗ್ಭಾಗದಲ್ಲಿದ್ದ ವೃಷಭಗಿರಿಯಲ್ಲಿ ಅನಾದಿಕಾಲದಿಂದ ತೀರ್ಥಸ್ಥಳವೆಂದು ಪ್ರಸಿದ್ಧವಾದ ಆ ಪರ್ವತದ ದಕ್ಷಿಣ ದಿಶಾಭಾಗದ ಸಿದ್ಧಶಿಲೆಯಲ್ಲಿ ತಮ್ಮ ಕುಲದೈವವೇ ಮೊದಲಾದ ದೇವತೆಗಳನ್ನೂ ಜಿನಬಿಂಬಗಳನ್ನೂ ಚಕ್ರೇಶ್ವರಿಯನ್ನೂ ಆಕೆಯ ಅಕ್ಕಪಕ್ಕದಲ್ಲಿ ಇನ್ನೂ ಕೆಲವು ಪ್ರತಿಮೆಗಳನ್ನೂ ಈತ ಕೆತ್ತಿಸಿದ. ತ್ರಿಭುವನ ತಿಲಕವೆಂಬ ಜಿನಬಸದಿಯನ್ನು ಕಟ್ಟಿಸಿದ. ಕವಿತಾಗುಣಾರ್ಣವವೆಂಬ ಕೆರೆಯನ್ನೂ ಮದನವಿಳಾಸವೆಂಬ ವನವನ್ನೂ ಮಾಡಿಸಿದ. ಅಣ್ಣ ಅಗ್ರಹಾರವಾಗಿ ಪಡೆದ ಧರ್ಮಪುರವನ್ನೂ ಅದರ ಹತ್ತಿರದ ವೃಷಭಗಿರಿಯಲ್ಲಿ ನಡೆಯುವ ಜೈನಾಭಿಷೇಕೋತ್ಸವವನ್ನೂ ನೋಡಲು ಬರುತ್ತಿದ್ದ ಯಾತ್ರಾರ್ಥಿಗಳಿಗೆ ಸನ್ಮಾನದಾನಗಳನ್ನು ಭೀಮನ ತನುಜನೂ ಪಂಪನ ಅನುಜನೂ ಆದ ಜಿನವಲ್ಲಭ ಮಾಡುತ್ತಿದ್ದ. ಈತ ಸಮ್ಯಕ್ತ್ವ ರತ್ನಾಕರ, ಗುಣಪಕ್ಷಪಾತಿ; ಚತುರ ಕವಿತ್ವರಚನೆಯಲ್ಲಿ ಸುಪ್ರಸಿದ್ಧ. ಮತ್ತೆ ಕಾವ್ಯವನ್ನು ವಿವರಿಸುವಲ್ಲಿ, ಸತ್ಪುರುಷರಿಗೆ ಕಾವ್ಯವನ್ನು ಹೇಳಿಕೊಡುವಲ್ಲಿ, ಸುಶ್ರಾವ್ಯವಾಗಿ ಸಂಗೀತವನ್ನು ಹೇಳುವಲ್ಲಿ, ಸರಾಗವಾಗಿ ಕಾವ್ಯವನ್ನು ವಾಚಿಸುವಲ್ಲಿ ಸಾಟಿಯಿಲ್ಲವೆನಿಸಿ ವಾಗ್ವಧೂವರವಲ್ಲಭನೆಂದು ಕೀರ್ತಿತನಾಗಿದ್ದವ.

ಜೈನಧರ್ಮದಲ್ಲಿ ಅತೀವ ಶ್ರದ್ಧೆಯುಳ್ಳ ಜಿನವಲ್ಲಭ ಜಿನಭವನಗಳನ್ನು ನಿರ್ಮಿಸಿ ದ್ವಿಜರಿಗೆ ಆವಾಸಸ್ಥಾನವಾದ ಆ ದಕ್ಷಿಣ ವೃಷಭಾದ್ರಿಯ ಮೇಲೆ ಜಿನಬಿಂಬಗಳನ್ನೂ ಜೈನ ದೇವತೆಗಳನ್ನೂ ಕೆತ್ತಿಸಿ ಅದನ್ನೊಂದು ಚೈತ್ಯಾಲಯದ ಹಾಗೆ ಮಾಡಿಸಿದ. ಪಂಪ ಆ ಧರ್ಮಪುರವನ್ನು ದತ್ತಿಯಾಗಿ ಪಡೆದಿದ್ದನೆನ್ನುವ ವಿಷಯವನ್ನು ಪ್ರತಿಪಾದಿಸುವುವೆಂದು ಅವು ಗಮನಾರ್ಹ. ವೃಷಭಾದ್ರಿ ಜಿನಧರ್ಮದೊಂದಿಗೆ ನೃಪಕುಲತಿಲಕ ಅರಿಕೇಸರಿ ಹಾಗೂ ಕವಿಕುಲತಿಲಕ ಕವಿತಾಗುಣಾರ್ಣವ ಪಂಪ ಇವರುಗಳ ಬಿರುದುಗಳನ್ನು ಹೊತ್ತು ನಿಂತಿತು.

ಶಾಸನ ಮತ್ತು ವಿಕ್ರಮಾರ್ಜುನವಿಜಯಗಳ ವಂಶಾವಳಿ ಹೀಗಿದೆ:

**ಗಂಗಾಧರ ಶಾಸನ**

ಅಭಿಮಾನಚಂದ್ರ (ಭವ್ಯರತ್ನಾಕರ)
(ಗುಂಡಿಕಜ್ಜು ನಿಡುಂಗೊಂಡೆಯನಿವಾಸಿ)

ಬೆಳ್ವೊಲದಣ್ಣಿಗೆರೆಯ ಸಿಂಘ
(ಜೋಯಿಸ)

ಭೀಮಪಯ್ಯ
(ಭಾರ್ಯೆ ಅಬ್ಬಣಬ್ಬೆ)

ಪಂಪ    ಜಿನವಲ್ಲಭ (ಸಮ್ಯಕ್ತ್ವ ರತ್ನಾಕರ)

**ವಿಕ್ರಮಾರ್ಜುನವಿಜಯ**

ಮಾಧವ ಸೋಮಯಾಜಿ
(ಈತನ ಊರು ವೆಂಗಿಮಂಡಲದ ವೆಂಗಿಪಟು)

ಅಭಿಮಾನಚಂದ್ರ

ಕೊಮರಯ್ಯ

ಭೀಮ (ಘ.ಪ್ರತಿ)
(ಅಭಿರಾಮದೇವರಾಯ?)

ಪಂಪ

ಶಾಸನದ ಹಾಗೂ ಪಂಪನ ಕೃತಿಯ ವಿವರಗಳನ್ನು ತೌಲನಿಕವಿಮರ್ಶೆಗೆ ಇಟ್ಟರೆ ವ್ಯಕ್ತವಾಗುವ ಅಂಶಗಳಿವು: 1.ಪಂಪನ ಅಜ್ಜನಾದ ಅಭಿಮಾನಚಂದ್ರ ಜೈನ. ಆತ ಗುಂಡಿಕಜ್ಜಿ ನಿಡುಂಗೊಂಡೆಯ ನಿವಾಸಿಯೆಂಬುದು. 2.ಪಂಪನ ತಾಯಿಯಾಗಿರಬಹುದಾದ (?) ಅಬ್ಬಣಬ್ಬೆ, ಬೆಳ್ವೊಲದ ಅಣ್ಣಿಗೆರೆಯ ಜೋಯಿಸ ಸಿಂಘನೆಂಬುವನ ಮೊಮ್ಮಗಳೆಂಬುದು. 3.ಪಂಪ ದತ್ತಿಯಾಗಿ ಪಡೆದ ಅಗ್ರಹಾರವಾದ ಧರ್ಮಪುರ ಸಬ್ಬಿನಾಡ ನಟ್ಟನಡುವೆ ಇದ್ದಿತೆಂಬುದಲ್ಲದೆ ಅದು ಈಗಿನ ಬೊಮ್ಮಲಗುಟ್ಟದ ಪಕ್ಕದಲ್ಲೆಲ್ಲೊ ಇದ್ದಿತೆಂಬುದು. 4.ಪಂಪನಿಗೆ ಅರಿಕೇಸರಿ ಹಾಕಿಕೊಟ್ಟ ಶಾಸನ ಶಿಲಾಶಾಸನವಾಗಿದ್ದು ಅದು ವೃಷಭಾದ್ರಿಯಲ್ಲಿ ಇದ್ದಿತೆಂಬುದು. ಇವೆಲ್ಲ ಹೊಸವಿಷಯಗಳು.

1.ಗುರುಪರಂಪರೆಯಲ್ಲಿ ದೇವೇಂದ್ರ ಮುನಿಗಳ ಹೆಸರಿಲ್ಲದುದು. 2.ಪಂಪನ ಕೃತಿ ಆದಿಪುರಾಣದ ಹೆಸರಿಲ್ಲದುದು.3.ಅಜ್ಜಂದಿರಾದ ಮಾಧವ ಸೋಮಯಾಜಿ ಹಾಗೂ ಕೊಮರಯ್ಯ ಇವರುಗಳ ಹೆಸರಿಲ್ಲದೆ ಇರುವುದು. 4.ಪಂಪನ ಜೀವನಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೆ, ಆತನ ಇತರ ಬಿರುದುಗಳ ಬಗೆಗೆ ಒಂದಕ್ಷರವೂ ಇಲ್ಲದುದು ಇತ್ಯಾದಿಗಳು ಇಲ್ಲಿನ ಲೋಪಗಳು.

ಪಂಪನ ಅಥ'ವಾ ಜಿನವಲ್ಲಭನ ತಾಯಿಯ ಹೆಸರು ವಬ್ಬಣಬ್ಬೆ ಎಂದೂ ಆಕೆ ಜೋಯಿಸ ಸಿಂಘನ ಮಗಳೆಂದೂ ಜಿನವಲ್ಲಭನ ಗುರುಗಳು ಜಯಗೊಂಡ ಸಿದ್ಧಾಂತ ಭಟಾರರೆಂದೂ ಈ ಶಾಸನವನ್ನು ಮೊದಲ ಬಾರಿ ಪ್ರಕಟಿಸಿದ ವಿದ್ವಾಂಸರು ಓದಿದ್ದರು. ಆದರೆ ಆಕೆಯ ಹೆಸರು ಅಬ್ಬಣಬ್ಬೆ ಎಂದು ಪಿ.ಬಿ.ದೇಸಾಯಿಯವರೂ ಆಕೆ ಜೋಯಿಸಸಿಂಘನ ಮೊಮ್ಮಗಳೆಂದು ಎಂ.ಎಂ. ಕಲ್ಬುರ್ಗಿಯವರೂ ಆತನ ಗುರು ಜಯಣನ್ದಿಸಿದ್ಧಾಂತ ಭಟಾರರೆಂದು ಜಿ.ಎಸ್.ಗಾಯಿ ಅವರೂ ತೀರ್ಮಾನ ಕೊಟ್ಟಿದ್ದಾರೆ. ತಾನು ಪಂಪನ ತಮ್ಮನೆಂದು ಜಿನವಲ್ಲಭ ಸ್ಪಷ್ಟವಾಗಿ ಹೇಳಿಕೊಂಡಿರುವುದರಿಂದ ಆತನ ವಂಶಾವಳಿ ಪಂಪನ ವಂಶಾವಳಿಗೆ ಸರಿಹೋಗುವುದರಿಂದ ಆತನ ಈ ಗಂಗಾಧರ ಶಾಸನ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬನಾದ ಪಂಪನ ಚರಿತ್ರೆಯನ್ನು ಬರೆಯುವಲ್ಲಿ ಅಮೂಲ್ಯವಾದ ಸಾಧನವಾಗಿದ್ದು ಸುಮಾರು ಒಂದು ಸಾವಿರ ವರ್ಷ ತಿಳಿಯದಿದ್ದ ವಿಷಯವನ್ನು ತಿಳಿಸಿ ಹೊಸ ಬೆಳಕನ್ನು ಚೆಲ್ಲಿದೆ. ಈ ಶಾಸನವನ್ನು ಭಾರತ ಸರ್ಕಾರ ರಾಷ್ಟ್ರೀಯ ಸ್ಮಾರಕಗಳಲ್ಲೊಂದೆಂದು ಪರಿಗಣಿಸಿದೆ.
*

**ಗಂಗಾವತಿ :** ಕೊಪ್ಪಳ ಜಿಲ್ಲೆಯ ಒಂದು ತಾಲ್ಲೂಕು; ಆ ತಾಲ್ಲೂಕಿನ ಕೇಂದ್ರ. ಕೊಪ್ಪಳ, ಯಲಬುರ್ಗಿ, ಕುಷ್ಟಗಿ, ರಾಯಚೂರು ಜಿಲ್ಲೆಯ ಸಿಂಧನೂರು, ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ಹೊಸಪೇಟೆ ಈ ತಾಲ್ಲೂಕುಗಳು ಗಂಗಾವತಿ ತಾಲ್ಲೂಕನ್ನು ಬಳಸಿವೆ. ಈ ತಾಲ್ಲೂಕಿನ ವಿಸ್ತೀರ್ಣ 1,325.5ಚ.ಕಿಮೀ. ಜನಸಂಖ್ಯೆ 4,05,076. ಒಟ್ಟು ಗ್ರಾಮಗಳು 157. ಗಂಗಾವತಿ, ವೆಂಕಟಗಿರಿ, ಕನಕಗಿರಿ, ನವಲಿ, ಕರಟಗಿ, ಹುಲಿಹೈದರ್, ಸಿದ್ಧಾಪುರ ಮತ್ತು ಮರ್ಲಿ ಇವು ಹೋಬಳಿಗಳು.

ತಾಲ್ಲೂಕಿನ ಬಹುಭಾಗ ವಿಶೇಷವಾಗಿ ಕಪ್ಪುಮಣ್ಣಿನ ಮಟ್ಟಸಭೂಮಿ. ಕೆಲವು ಕೆಂಪುಮಣ್ಣಿನ ಪಟ್ಟಿಗಳೂ ಮಧ್ಯೆ ಮಧ್ಯೆ ಬರುತ್ತವೆ. ಅಲ್ಲಲ್ಲಿ ಕಣಶಿಲೆಯ ಗುಡ್ಡಗಳೂ ಟ್ರ್ಯಾಪ್‌ಶಿಲೆಯ ಉಬ್ಬುಗಳೂ ಇವೆ. ತಾಲ್ಲೂಕಿನ ಉತ್ತರದಲ್ಲಿರುವ ನಿಶಾನಿಗುಡ್ಡ (580ಮೀ), ಪಶ್ಚಿಮದಲ್ಲಿರುವ ಎಮ್ಮೆಗುಡ್ಡ (821ಮೀ), ಪೂರ್ವದಲ್ಲಿರುವ ಮಾರಿಗುಡ್ಡ (597ಮೀ) ಇವು ಎತ್ತರದ ಬೆಟ್ಟಗಳು. ಈ ತಾಲ್ಲೂಕಿನ ದಕ್ಷಿಣ ಅಂಚಿನಲ್ಲಿ ಈಶಾನ್ಯಾಭಿಮುಖವಾಗಿ ತುಂಗಭದ್ರಾ ನದಿ ಹರಿಯುತ್ತದೆ. ಆದರೆ ತುಂಗಭದ್ರಾ ಜಲಾಶಯದ ಎಡನಾಲೆ ಈ ತಾಲ್ಲೂಕಿನ ಮೂಲಕ ಪ್ರವಹಿಸುವುದರಿಂದ ನೀರಾವರಿ ಉತ್ತಮವಾಗಿದೆ. ವರ್ಷಕ್ಕೆ ಎರಡುಮೂರು ಬೆಳೆಗಳನ್ನು ಬೆಳೆಯುತ್ತಾರೆ. ಕಬ್ಬು, ಬತ್ತ, ಸೇಂಗ, ಔಡಲ, ಜೋಳ ಮುಖ್ಯ ಬೆಳೆಗಳು. ಬತ್ತದ ಗಿರಣಿಗಳೂ ಖಂಡಸಾರಿ ಸಕ್ಕರೆ ಕಾರ್ಖಾನೆಗಳೂ ಬೆಲ್ಲ ತಯಾರಿಕೆ ಕೇಂದ್ರಗಳೂ ಎಣ್ಣೆ ತೆಗೆಯುವ ಮಿಲ್ಲುಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ ತಾಲ್ಲೂಕಿನಲ್ಲಿ ಔದ್ಯೋಗಿಕ ಬೆಳವಣಿಗೆಯಾಗಿದೆ.

ಆನೆಗೊಂದಿ (ನೋಡಿ) ಮತ್ತು ಕನಕಗಿರಿ (ನೋಡಿ) ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಸ್ಥಳಗಳು. ಗಂಗಾವತಿಯಿಂದ 9ಕಿಮೀ ಪಶ್ಚಿಮಕ್ಕಿರುವ ಬೆನಕಲ್ ಎಂಬಲ್ಲಿ ನವಶಿಲಾಯುಗದ ಒಂದು ಬೂದಿ ಗುಡ್ಡ, ಬೃಹತ್ ಶಿಲಾ ಸಮಾಧಿ ಸಂಸ್ಕೃತಿ ಕಾಲದ ಹಲವು ಕಲ್ಲುಗೋರಿಗಳು ಮತ್ತು ಬಂಡೆಗಳ ಮೇಲೆ ಚಿತ್ರಿಸಿರುವ ಪ್ರಾಗೈತಿಹಾಸಿಕ ಚಿತ್ರಗಳು ಇವೆ.

ಕನಕಾಚಲ ದೇವಲಯದ ಪ್ರವೇಶದ್ವಾರ, ಕನಕಗಿರಿ

ಗಂಗಾವತಿ ಈ ತಹಶೀಲಿನ ಮುಖ್ಯ ಪಟ್ಟಣ. ಕೊಪ್ಪಳ-ರಾಯಚೂರು ಮಾರ್ಗದಲ್ಲಿ ಕೊಪ್ಪಳದಿಂದ ಸು.48ಕಿಮೀ ಪೂರ್ವಕ್ಕಿದೆ. ಹಿಂದೆ ಇದಕ್ಕೆ ನೀಲಾವತಿ ಎಂಬ ಹೆಸರಿತ್ತೆಂದು ಐತಿಹ್ಯ. ಊರಿನ ದಕ್ಷಿಣಕ್ಕೆ 3ಕಿಮೀ ಅಂತರದಲ್ಲಿ ತುಂಗಭದ್ರಾ ನದಿ ಹರಿಯುತ್ತದೆ. ತುಂಗಭದ್ರಾ ಜಲಾಶಯದಿಂದ ನೀರಾವರಿ ಪ್ರಾರಂಭವಾದ ಮೇಲೆ ಪಟ್ಟಣ ಶೀಘ್ರವಾಗಿ ಪ್ರಗತಿಹೊಂದುತ್ತಿದೆ. ಹಿಂದೆ ಸಣ್ಣ ಹಳ್ಳಿಯಾಗಿದ್ದ ಗಂಗಾವತಿ ಇಂದು ಪಟ್ಟಣವಾಗಿದೆ. ನೆರೆಹೊರೆಯ ಹಿರೇಜಂತಗಲ್, ಹೊಸಹಳ್ಳಿ, ಜಂಗಮರ ಕಲ್ಗುಡಿ, ದೇಸಾಯಿ ಕ್ಯಾಂಪ್, ಹಿರೂರು, ದೊಡ್ಡಹಟ್ಟಿ ಇವು ಈ ಊರಿಗೆ ಸೇರಿವೆ. ಇಲ್ಲಿ ನಗರಸಭೆ ಇದೆ (ಸ್ಥಾಪನೆ 1953). ನಗರದ ಜನಸಂಖ್ಯೆ 93,249.

ಇಲ್ಲಿ ಒಂದು ಕೃಷಿ ಸಂಶೋಧನಾಲಯ ಇದೆ. ಸಮೀಪದ ಬಪ್ಪರಹಟ್ಟಿಯಲ್ಲಿ ಒಂದು ಗ್ರಾಮಸೇವಕ ತರಬೇತಿ ಕೇಂದ್ರವುಂಟು. ಗಂಗಾವತಿಯಲ್ಲಿ ಅಕ್ಕಿ ಗಿರಣಿಗಳೂ ಖಂಡಸಾರಿ ಸಕ್ಕರೆ ಕಾರ್ಖಾನೆಗಳೂ ಇವೆ. ಇದೊಂದು ವಾಣಿಜ್ಯ ಕೇಂದ್ರ. ಬೆಲ್ಲ ಮತ್ತು ಕೆಲವು ಧಾನ್ಯಗಳು ಇಲ್ಲಿಯ ವ್ಯಾಪಾರ ಸರಕುಗಳು.

ಇಲ್ಲಿ ಸಾಮಾನ್ಯ ರೀತಿಯ ನಗರೇಶ್ವರ, ವೆಂಕಟೇಶ್ವರ ದೇವಾಲಯಗಳಿವೆ. ವಿಜಯನಗರದ ರಾಜರಿಂದ ಕಟ್ಟಲಾದುದೆನ್ನಲಾದ ವಿರೂಪಾಕ್ಷ ದೇವಾಲಯ ಹಳೆಯದು. ಮುದ್ದು ಸಂಗಸ್ವಾಮಿಗಳ ಹಳೆಯ ಮಠವೂ ಈ ಊರಿನಲ್ಲಿದೆ. (ಡಿ.ಕೆ., ಎಸ್.ಜಿ.ಕೆ.)

**ಗಂಗಾವಳಿ [1] :** ಉತ್ತರ ಕನ್ನಡ ಜಿಲ್ಲೆಯ ಒಂದು ನದಿ. ಮುಂಡಗೋಡಿಗೆ ಉತ್ತರದಲ್ಲಿ ಸುಮಾರು 40ಕಿಮೀ ದೂರದಲ್ಲಿ ಧಾರವಾಡ ಜಿಲ್ಲೆಯಲ್ಲಿ ಉಗಮಿಸುವುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ನದಿ ಈಶಾನ್ಯದಿಂದ ನೈಋತ್ಯಕ್ಕೆ ಸುಮಾರು 136ಕಿಮೀ ಹರಿದು ಅಂಕೋಲದಿಂದ 8ಕಿಮೀ ಉತ್ತರಕ್ಕೆ ಕಾಳಿನದಿ ಸಮುದ್ರ ಸೇರುವಲ್ಲಿಂದ ದಕ್ಷಿಣಕ್ಕೆ 32ಕಿಮೀ ದೂರದಲ್ಲಿ ಅರಬ್ಬೀ ಸಮುದ್ರವನ್ನು ಸೇರುವುದು. ಈ ನದಿಯ ಇಕ್ಕೆಲಗಳಲ್ಲಿ ಅರಣ್ಯವಿದೆ. ಯಲ್ಲಾಪುರ ತಾಲ್ಲೂಕಿನ ಮಂಚೇಕೇರಿಯ ಸಮೀಪ ಸುಮಾರು 800' ಧುಮುಕಿ ಮಾಗೋಡು ಜಲಪಾತ (ನೋಡಿ)

ಉಂಟಾಗಿದೆ. ಈ ನದಿಯ ಮೇಲ್ಭಾಗವನ್ನು ಬೇಡ್ತಿ ನದಿಯೆಂದು ಕರೆಯುತ್ತಾರೆ. ಕೆಳಭಾಗ ಗಂಗಾವಳಿಯೆಂದು ಹೆಸರಾಗಿದೆ. ಈ ನದಿಗೆ ಶಿರಸಿಯ ಲಿಂಗದಕೋಣ ಎಂಬಲ್ಲಿ ಹುಟ್ಟಿದ ಶಾಲ್ಮಲಾ ಹೊಳೆ ಸ್ವಾದಿಯ ಸಮೀಪ ಸೋಂದಾ ಹೊಳೆ ಎಂದು ಪ್ರಸಿದ್ಧವಾಗಿ ಬೇಡ್ತಿ ಹೊಳೆಯನ್ನು ಸೇರುತ್ತದೆ. ಶಾಲ್ಮಲಾ ತೀರದಲ್ಲಿ ಸ್ವಾದಿಯ ಅರಸನಾದ ಸದಾಶಿವರಾಯ ಸಾವಿರಾರು ಶಿವಲಿಂಗಗಳನ್ನು ಕಲ್ಲುಬಂಡೆಗಳಲ್ಲಿ ಕೊರೆಯಿಸಿದ್ದಾನೆ. ಇದೊಂದು ಪವಿತ್ರ ಸ್ಥಳ. ಗ್ರಹಣ ಹಾಗೂ ಶಿವರಾತ್ರಿಯ ದಿನ ಸಾವಿರಾರು ಜನರು ಪವಿತ್ರ ಸ್ನಾನಕ್ಕಾಗಿ ಇಲ್ಲಿಗೆ ಬರುತ್ತಾರೆ.

ಶಾಲ್ಮಲಾ ಹಾಗೂ ಬೇಡ್ತಿಗಳು ಒಂದಾಗಿ ಶಿರಸಿ ತಾಲ್ಲೂಕಿನ ಮೆಣಸಿ ಸೀಮೆಯ ಗಡಿಯಲ್ಲಿ ಹರಿಯುತ್ತ ಯಲ್ಲಾಪುರ ತಾಲ್ಲೂಕನ್ನು ಮತ್ತೆ ಸೇರುತ್ತವೆ. ಮೆಣಸಿಯ ಸಮೀಪ ಶಿರಸಿಯಿಂದ 25ಕಿಮೀ ದೂರದಲ್ಲಿ ಗಣೇಶಪಾಲ ಎಂಬ ಸಣ್ಣ ಜಲಪಾತ ಉಂಟಾಗಿ ಅಲ್ಲಿ ನೀರು ಇಬ್ಭಾಗವಾಗಿ ಬೀಳುವುದು. ಇದಕ್ಕೆ ಶಿವಗಂಗಾ ಜಲಪಾತ (ನೋಡಿ) ಎಂಬ ಹೆಸರೂ ಇದೆ. ಮುಂದೆ ಈ ನದಿ ಸಹ್ಯಾದ್ರಿಯ ಅಂಚಿನಲ್ಲಿ, ಅಲ್ಲಿಂದ ಅರಬೈಲ ಘಟ್ಟದಲ್ಲಿ ಹರಿದು ಅಂಕೋಲ ತಾಲ್ಲೂಕನ್ನು ಸೇರುತ್ತದೆ. ಈ ಭಾಗದಲ್ಲಿ ನದಿ ನೀರನ್ನು ಉಪಯೋಗಿಸಿಕೊಂಡು ಬತ್ತ, ಕಬ್ಬು, ಹಸರಣಿಗಿ (ಹೆಸರು), ಉದ್ದು ಹಾಗೂ ಈರುಳ್ಳಿ ಬೆಳೆಯುತ್ತಾರೆ.

ಗಂಗಾವಳಿಗೆ ಉಳುವರೆ ಎಂಬ ಹಳ್ಳಿಯ ಹತ್ತಿರ ಸೇತುವೆಯನ್ನು ಕಟ್ಟಿದ್ದು ಜಿಲ್ಲಾ ಕೇಂದ್ರ ಕಾರವಾರಕ್ಕೂ ಇತರ ತಾಲ್ಲೂಕುಗಳಿಗೂ ಸಾರಿಗೆ ಸಂಪರ್ಕ ಒದಗಿದೆ. (ಜಿ.ಬಿ.ಎನ್.)

**ಗಂಗಾವಳಿ² :** ಉತ್ತರ ಕನ್ನಡ ಜಿಲ್ಲೆ ಅಂಕೋಲಕ್ಕೆ 8ಕಿಮೀ ಉತ್ತರದಲ್ಲಿ ಗಂಗಾವಳಿ ನದಿ ಸಮುದ್ರವನ್ನು ಸೇರುವಲ್ಲಿರುವ ಗ್ರಾಮ. ಇದೊಂದು ಚಿಕ್ಕ ಬಂದರು. ಈ ಗ್ರಾಮದಲ್ಲಿ ಗಂಗೆಯ ದೇವಾಲಯವಿದ್ದು ಗಂಗಾಷ್ಟಮಿಯ ದಿನ ವಿಶೇಷ ಪೂಜೆಯಾಗುತ್ತದೆ. ಗಂಗೆಯ ದೇವಾಲಯದ ಸಮೀಪದಲ್ಲಿಯೇ ಕಾಮೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ವಿಶ್ವಕರ್ಮ ಜ್ಞಾನದಾಹವನ್ನು ಪೂರೈಸಿಕೊಳ್ಳಲು ಕಟ್ಟಿ ಜ್ಞಾನ ಪಡೆದನೆಂಬ ಪ್ರತೀತಿ ಇದೆ. (ಜಿ.ಬಿ.ಎನ್.)

**ಗಂಗೂಬಾಯಿ ಗುಳೇದಗುಡ್ಡ :**-1941 ಕನ್ನಡ ರಂಗಭೂಮಿಯ ಪ್ರಸಿದ್ಧ ಕಲಾವಿದೆ.

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ನಾಯಿಕೆಯ ಪಾತ್ರದಲ್ಲಿ ಕಾಣಿಸಿಕೊಂಡ ಮೊದಲ ಮಹಿಳೆಯಾದ ಎಲ್ಲೂಬಾಯಿ ಗುಳೇದಗುಡ್ಡ (ಬಿಜಾಪುರ) ಇವರ ಸಾಕುತಾಯಿ. ಗುರುಲಿಂಗಪ್ಪ ಗಂಗಣ್ಣ ಸಾಕುತಂದೆ. ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರ್ಗಿಮಠ ಅವರ ಕೊಣ್ಣೂರು ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ (ಸ್ಥಾಪನೆ 1903) ಗೋಕಾಕದಲ್ಲಿ ಮೊಕ್ಕಾಂ ಮಾಡಿದ್ದಾಗ ಅಲ್ಲಿ ತನ್ನ ಸಾಕುತಂದೆತಾಯಿಗಳ ಜೊತೆ ಶನಿಪ್ರಭಾವ ನಾಟಕದಲ್ಲಿ ಲೋಹಿತಾಶ್ವನ ಪಾತ್ರದಲ್ಲಿ ಪ್ರಥಮ ಬಾರಿಗೆ ರಂಗಭೂಮಿಯ ಮೇಲೆ ಕಾಣಿಸಿಕೊಂಡರು. ಈ ಘಟನೆ ಇವರ ರಂಗಭೂಮಿಯ ಬದುಕಿಗೆ ನಾಂದಿಯಾಯಿತು. ಮುಂದೆ ಸೊಲ್ಲಾಪುರ ದಲ್ಲಿದ್ದಾಗ ಶಂಕರರಾವ್ ಸರನಾಯಕ ಎಂಬ ಪ್ರಸಿದ್ಧ ಹಿಂದುಸ್ತಾನೀ ಗವಾಯಿಗಳಲ್ಲಿ ಶಾಸ್ತ್ರೀಯ ಸಂಗೀತವನ್ನು ಕಲಿತರು. ಈ ಮೊದಲು ಇವರಿಗೆ ಕಪಿಲೇಶ್ವರ ಬುವಾ ಎಂಬ ಗವಾಯಿಗಳಿಂದ ಶಾಸ್ತ್ರೀಯ ಸಂಗೀತದ ದೀಕ್ಷೆ ದೊರಕಿತ್ತು.

1916ರಲ್ಲಿ ಬೆಳಗಾಂವಿಯಲ್ಲಿ ಗಂಗೂಬಾಯಿ ಅವರಿಂದ ಪ್ರಥಮ ಸಂಗೀತ ಜಲಸಾ ಕಾರ್ಯಕ್ರಮ ಜರುಗಿತು. ಆಗ ಇವರಿಗೆ ಕೇವಲ ಹದಿನೈದು ವರ್ಷ. ಇಷ್ಟರಲ್ಲಿ ಕೊಣ್ಣೂರು ಕಂಪನಿ ನಿಂತುಹೋಗಿತ್ತು, ಇವರಿಗೆ ಸಂಗೀತದ ವ್ಯಾಸಂಗವು ಮುಗಿದಿತ್ತು. ಇನ್ನು ಏನು ಮಾಡಬೇಕೆಂದು ಯೋಚಿಸುತ್ತಿದ್ದರು. ಅದೇ ಸಮಯದಲ್ಲಿ ಆರಂಭವಾದ ವಾಮನರಾವ್ ಮಾಸ್ತರ ಅವರ ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿಯನ್ನು ಪ್ರವೇಶಿಸಿದರು. ಇವರ ಆಗಮನದಿಂದಾಗಿ ವಾಮನರಾಯರ ನಾಟಕ ಮಂಡಳಿ ಊರ್ಜಿತಕ್ಕೆ ಬಂತು. ಆದವಾನಿ ಮೊಕ್ಕಾಂನಲ್ಲಿ ಇವರು ಅಭಿನಯಿಸಿದ ಲಂಕಾದಹನ ನಾಟಕ ಅಸಂಖ್ಯ ಪ್ರಯೋಗಗಳನ್ನು ಕಂಡಿತು. ಇದರಿಂದಾಗಿ ಗಂಗೂಬಾಯಿಯವರ ಕೀರ್ತಿಯೂ ಸಂಬಳವೂ ಹೆಚ್ಚಿದುವು. ಈ ಕಂಪನಿಯಲ್ಲಿದ್ದಾಗ ಆಡುತ್ತಿದ್ದ ಮಹಾನಂದಾ, ಭಕ್ತಪುಂಡಲೀಕ, ಸಂತ ಸಖೂಬಾಯಿ ನಾಟಕಗಳಲ್ಲಿ ವಾಮನರಾವ್ ಮತ್ತು ಗಂಗೂಬಾಯಿ ಇವರ ಜೋಡಿ ರಸಿಕ ಜನರ ಮನಸೆಳೆಯಿತು. ಬೆಂಗಳೂರು ಮೈಸೂರುಗಳಲ್ಲಿಯೂ ಭಕ್ತಪುಂಡಲೀಕ, ಸಂತ ಸಖೂಬಾಯಿ ನಾಟಕಗಳು ಕಂಪನಿಗೆ ಕೀರ್ತಿಯನ್ನೂ ಹಣವನ್ನೂ ದೊರಕಿಸಿಕೊಟ್ಟವು. ಸಂಗೀತದಲ್ಲಿಯೂ ನಿಪುಣತೆ ಹೊಂದಿದ್ದ ವಾಮನರಾವ್ ಮತ್ತು ಗಂಗೂಬಾಯಿಯವರ ಸಂಗೀತವನ್ನು ಮೈಸೂರು ವಾಸುದೇವಾಚಾರ್ಯರೂ ಟಿ.ರಾಘವ ಅವರೂ ತುಂಬ ಮೆಚ್ಚಿಕೊಂಡಿದ್ದರು. ಬಿಡಾರಂ ಕೃಷ್ಣಪ್ಪನವರೂ ಇವರ ಸಂಗೀತ ಕೇಳಿ ಸಂತೋಷ ಪಟ್ಟುಕೊಂಡಿದ್ದರು. ವಾಮನರಾವ್ ಮಾಸ್ತರರ ಕಂಪನಿಯಲ್ಲಿ ದೊರೆತ ಖ್ಯಾತಿ ಲೋಕಪ್ರಿಯತೆಗಳಿಂದಾಗಿ ಗಂಗೂಬಾಯಿ 1926ರಲ್ಲಿ ಶ್ರೀಕೃಷ್ಣ ಸಂಗೀತ ನಾಟಕಮಂಡಲಿ ಎಂಬ ಸ್ವಂತ ಕಂಪನಿಯೊಂದನ್ನು ಪ್ರಾರಂಭಿಸಿದರು. ಖ್ಯಾತ ಹಾರ್ಮೋನಿಯಂ ವಾದಕ ಮತ್ತು ಸಂಗೀತಗಾರ ಗೋವಿಂದರಾವ್ ಟೇಂಬೆ ಅವರ ನಿರ್ದೇಶನದಲ್ಲಿ ಮರಾಠಿ ನಾಟಕ 'ಮಾನಾಪಮಾನ'ವನ್ನು ಕನ್ನಡಕ್ಕೆ ರೂಪಾಂತರ ಮಾಡಿ ಮೂಲದ ಗೀತಗಳ ಧಾಟಿ ಮಟ್ಟುಗಳನ್ನೇ ಇಟ್ಟುಕೊಂಡು ಆಡಿದರು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಉಡುಪಿಗಳಲ್ಲಿ ಈ ಕಂಪನಿಯ ನಾಟಕಗಳು ಜಯಭೇರಿ ಹೊಡೆದವು. ಖ್ಯಾತ ಗಾಯಕರಾದ ಗುರುರಾವ್ ದೇಶಪಾಂಡೆ, ಬಸವರಾಜ ಮನ್ಸೂರ್, ವೆಂಕಟರಾವ್ ರಾಮದುರ್ಗ ಇವರು ಈ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಗುಬ್ಬಿ ವೀರಣ್ಣನವರು ತಯಾರಿಸಿದ 'ಸುಭದ್ರಾ' ಚಲನಚಿತ್ರದಲ್ಲೂ ಗಂಗೂಬಾಯಿಯವರು ರಂಗಭೂಮಿಯಲ್ಲಿರುವಾಗಲೇ ರುಕ್ಮಿಣಿ ಪಾತ್ರದಲ್ಲಿ ಕಾಣಿಸಿಕೊಂಡು ಪ್ರಸಿದ್ಧಿಹೊಂದಿದರು. ಇನ್ನೂ ಉಜ್ವಲ ಭವಿಷ್ಯವಿದೆ ಎನ್ನುವಾಗಲೇ 1941 ಡಿಸೆಂಬರ್ 10ರಂದು ಕ್ಷಯರೋಗಕ್ಕೆ ತುತ್ತಾಗಿ ಮರಣಹೊಂದಿದರು. ಅಭಿಜಾತ ಸಂಗೀತ, ಅಭಿನಯ ಕಲೆ, ನೀತಿ ನಿಷ್ಠೆ ಬಿಡದ ಕಲೋಪಾಸನೆ, ಸ್ವಂತ ಕಂಪನಿಯ ದಕ್ಷನಿರ್ವಹಣೆ - ಇವುಗಳಿಗಾಗಿ ಗಂಗೂಬಾಯಿ ಗುಳೇದಗುಡ್ಡ ಅವರ ಹೆಸರು ಅವಿಸ್ಮರಣೀಯವಾದುದು. (ಎನ್.ಕೆ.ಕೆ.)

**ಗಂಗೂಬಾಯಿ ಹಾನಗಲ್ :** 1913-. ಸಂಗೀತ ಕ್ಷೇತ್ರದಲ್ಲಿ ಅಖಿಲ ಭಾರತ ಖ್ಯಾತಿ ಪಡೆದ ಅಗ್ರಗಣ್ಯ ಕಲಾವಿದರಲ್ಲಿ ಒಬ್ಬರು. ಸಂಗೀತದಲ್ಲಿ ಸಾಕಷ್ಟು ಅಭಿರುಚಿ ಮತ್ತು ಪರಿಶ್ರಮವಿದ್ದ ಮನೆತನದಲ್ಲಿ ಹುಟ್ಟಿದವರಾಗಿ ಇವರಿಗೆ ಸಂಗೀತದಲ್ಲಿ ಬಾಲ್ಯದಿಂದಲೂ ಅಪೂರ್ವವಾದ ಪ್ರವೇಶ ದೊರೆಯಿತು.

ಇವರ ತಾಯಿ ಅಂಬಾಬಾಯಿ, ಅಜ್ಜಿ ಕಮಲಾಬಾಯಿ ಯವರೂ ಸಂಗೀತ ಬಲ್ಲವ ರಾಗಿದ್ದು ತಮ್ಮ ಒಲವನ್ನು ಇವರಲ್ಲಿ ಬಿತ್ತಿದರು. ಅಂಬಾಬಾಯಿಯವರು ಕರ್ನಾಟಕ ಸಂಗೀತದಲ್ಲಿ ಪರಿಶ್ರಮ ಪಡೆದಿದ್ದರು ಮಗಳಿಗೆ ಹಿಂದುಸ್ಥಾನೀ ಸಂಗೀತದಲ್ಲಿ ಶಿಕ್ಷಣ ಕೊಡಿಸಿದರು. ಗಂಗೂಬಾಯಿ ಯವರ ಪಾಂಕ್ತ ಸಂಗೀತ ಶಿಕ್ಷಣಕ್ಕೆ ನೆರವಾದವರು ಸೋದರಮಾವ ರಾಯಣ್ಣ ಹಾನಗಲ್ ಅವರು. ಸೋದರ ಶೇಷಗಿರಿ ಹಾನಗಲ್ ಅವರು ಮನ್ನಣೆ ಪಡೆದಿರುವ ತಬಲ ವಾದಕರಾಗಿದ್ದರೆ, ಮಗಳು ಕೃಷ್ಣಾ ಹಾನಗಲ್ ಶಾಸ್ತ್ರೀಯ ಹಾಗೂ ಲಲಿತ ಸಂಗೀತದಲ್ಲಿ ಹೆಸರು ಮಾಡಿದ್ದಾರೆ. ಈ ಇಬ್ಬರೂ ಗಂಗೂಬಾಯಿಯವರ ಸಂಗೀತ ಕಛೇರಿಗಳಲ್ಲಿ ಹಿಮ್ಮೇಳ ನುಡಿಸುತ್ತಿದ್ದರು; ಜೊತೆಗೆ ಹಾಡುತ್ತಿದ್ದರು. ಎಳೆವಯಸ್ಸಿನಲ್ಲೇ ಗಂಗೂಬಾಯಿಯವರು ಬೆಳಗಾಂವಿ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತ

ಗೀತೆಯನ್ನು ಹಾಡಿ (1924) ಜನರ ಮೆಚ್ಚುಗೆ ಗಳಿಸಿದರು. ಬಾಲ್ಯದಲ್ಲಿ ಇವರ ಸಂಗೀತ ವಿದ್ಯಾಭ್ಯಾಸ ನಡೆದದ್ದು ಹುಲಗೂರ ಕೃಷ್ಣಾಚಾರ್ಯ, ದತ್ತೋಪಂತ ದೇಸಾಯಿಗಳ ಬಳಿ, ಹುಬ್ಬಳ್ಳಿಯಲ್ಲಿ. ಇಪ್ಪತ್ತರ ಹರಯದಲ್ಲಿ ಗಂಗೂಬಾಯಿಗೆ ಕುಂದಗೋಳದ ಕಿರಾನಾ ಘರಾಣೆಯ ಖ್ಯಾತ ಗಾಯಕ ರಾಮಭಾವು ಕುಂದಗೋಳಕರರ ಕೃಪೆ ಲಭಿಸಿತ್ತು. ಅವರು ಅಂದಿಗೆ ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಸವಾಯಿ ಗಂಧರ್ವರೆಂದು ಖ್ಯಾತರಾಗಿದ್ದವರು; ಅವರು ಕಿರಾನಾ ಘರಾಣೆಯ ಖ್ಯಾತ ಅಬ್ದುಲ್ ಕರೀಂಖಾನರ ಶಿಷ್ಯರು. ಸ್ವರದ ಕೆಲಸದಲ್ಲಿ ಶ್ರುತಿಪಾವಿತ್ರ್ಯದಲ್ಲಿ ಖ್ಯಾಲ್ ಗಾಯನದ ಸೊಗಸುಗಾರಿಕೆಯಲ್ಲಿ ಕಿರಾನಾ ಘರಾಣಾ ಅಂದಿಗೆ ತನ್ನದೇ ಆದ ಪರಂಪರೆಯನ್ನು ಸ್ಥಾಪಿಸಿತ್ತು. ಗಂಗೂಬಾಯಿ ಹುಬ್ಬಳ್ಳಿಯಲ್ಲಿದ್ದುಕೊಂಡು ದಿನವೂ ಕುಂದಗೋಳಕ್ಕೆ ಹೋಗಿ ಬರುತ್ತ ಸಂಗೀತಾಭ್ಯಾಸ ನಡೆಸಿದರು. ಸಾಧನೆಯಲ್ಲಿ ಗಂಗೂಬಾಯಿಯವರದು ಸೋಲದ ಶ್ರದ್ಧೆ. ಕ್ರಮೇಣ ಪೂರಿಯಾ, ತೋಡಿ, ಅಸಾವರಿ, ಶುದ್ಧಕಲ್ಯಾಣ್, ಮಾಲಕಂಸ, ಮಿಯಾಮಲ್ಹಾರ, ದರ್ಬಾರಿ ಕಾನಡ ಮೊದಲಾದ ರಾಗಗಳನ್ನವರು ಹಸ್ತಗತ ಮಾಡಿಕೊಂಡರು. ಸವಾಯಿ ಗಂಧರ್ವರ ಶಿಷ್ಯೆಯಾಗಿ ಮುಂದೆ ಗಂಗೂಬಾಯಿಯವರು 25 ವರ್ಷ ವಯಸ್ಸಿನಿಂದ ಸ್ವತಂತ್ರವಾಗಿ ಸಂಗೀತ ಕಛೇರಿ ಮಾಡಲಾರಂಭಿಸಿದರು. ಗಂಗೂಬಾಯಿಯವರು ಸ್ವಭಾವತಃ ಸರಳ ಮನೋಧರ್ಮದವರು. ಆಡಂಬರ ಇವರಿಗೆ ಸಲ್ಲದು. ಹೀಗಾಗಿ ದೆಹಲಿ ಮತ್ತು ಕಲ್ಕತ್ತ ಪ್ರಸಾರಕೇಂದ್ರಗಳಲ್ಲಿ ಇವರು ಮೊದಲು ಹಾಡಲು ಹೋದಾಗ ಅಲ್ಲಿಯವರು ಉದಾಸೀನರಾಗಿ ಕಂಡು ಅನಂತರ ತಮ್ಮ ತಪ್ಪಿನ ಅರಿವಾಗಿ ಗಂಗೂಬಾಯಿಯವರನ್ನು ಗೌರವಿಸಿದರು. ಕ್ರಮೇಣ ಇವರು ತಮ್ಮ ಘನವಾದ ಸಂಗೀತದಿಂದ ಎಲ್ಲರ ಗೌರವಕ್ಕೂ ಪಾತ್ರರಾದರು. ಇವರ ಖ್ಯಾತಿ ಹೆಚ್ಚುತ್ತಿದ್ದಂತೆ ಟೈಮ್ಸ್ ಆಫ್ ಇಂಡಿಯ, ಹಿಂದುಸ್ಥಾನ್ ಟೈಮ್ಸ್, ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ ಮೊದಲಾದ ಪತ್ರಿಕೆಗಳು ಇವರ ಬಗ್ಗೆ ಲೇಖನಗಳನ್ನು ಪ್ರಕಟಿಸಿ ಇವರ ಗಾಯನ ಕಲೆಯನ್ನು ಹೊಗಳಿದವು. ಮುಂಬಯಿಯ ಗ್ರಾಮಫೋನ್ ಕಂಪನಿಯವರು ಇವರ ಗಾಯನಗಳನ್ನು ಮುದ್ರಿಸಿದರು. ಇಂದಿಗೂ ಗಂಗೂಬಾಯಿಯವರ ರಾಮ ಹರೀಕಾ ಭೇದ ನ ಪಾಯೊ ಎಂಬ ಜೋಗಿಯ ರಾಗದ ಹಾಡು ಮತ್ತು ಮಿಯಾಮಲ್ಹಾರದ ಕಹೆ ಲಾಡಲೀ ಎಂಬ ಹಾಡುಗಳನ್ನು ಹಲವರು ಮೆಚ್ಚಿಕೊಂಡಿದ್ದಾರೆ.

ಸ್ವಾತಂತ್ರ್ಯಪೂರ್ವದ ಲಾಹೋರ್ ಮತ್ತು ಪೆಷಾವರ್ ಕೇಂದ್ರಗಳನ್ನೊಳಗೊಂಡಂತೆ ಗಂಗೂಬಾಯಿಯವರು ದೆಹಲಿ, ಕಲ್ಕತ್ತ, ಲಖನೌ, ಬರೋಡ, ಹೈದರಾಬಾದ್ ಮೊದಲಾದ ಪ್ರಸಾರ ಕೇಂದ್ರಗಳಿಂದ ಹಾಡಿದ್ದಾರೆ. ಕಲ್ಕತ್ತ, ಗ್ವಾಲಿಯರ್, ಪ್ರಯಾಗ, ಅಮೃತಸರ, ಕರಾಚಿ, ಗಯ, ಡೆಹ್ರಾಡೂನ್, ಆಗ್ರ ಮೊದಲಾದ ಮಹಾನಗರಗಳಲ್ಲಿ ಇವರು ಸಾರ್ವಜನಿಕ ಸಂಗೀತ ಕಛೇರಿ ನಡೆಸಿದ್ದಾರೆ. ಪ್ರಸಿದ್ಧ ನ್ಯೂ ಥಿಯೇಟರ್ಸ್ ಚಲನಚಿತ್ರ ಸಂಸ್ಥೆಯ ಕಲಾವಿದರಾದ ಸೈಗಲ್, ಕಾನನ್ ಬಾಲ, ಪಹರಿ ಸನ್ಯಾಲ್ ಮೊದಲಾದವರು ಇವರನ್ನು ತುಂಬ ಮೆಚ್ಚಿಕೊಂಡು ಸತ್ಕರಿಸಿದ್ದರು. ಸಂಗೀತ ಕ್ಷೇತ್ರಗಳಲ್ಲಿ ಪ್ರಸಿದ್ಧರೆನಿಸಿದ ಬಡೆ ಗುಲಾಂ ಅಲಿ ಖಾನ್, ಅಲಾಉದ್ದೀನ್ ಖಾನ್, ಸಿದ್ಧೇಶ್ವರೀ ದೇವಿ, ಪಂಡಿತ ರವಿಶಂಕರ್, ಬಿಸ್ಮಿಲ್ಲಾ ಖಾನ್ ಮೊದಲಾದವರು ಗಂಗೂಬಾಯಿಯವರನ್ನು ಪ್ರಶಂಸಿಸಿದ್ದಾರೆ. ಗಂಗೂಬಾಯಿಯವರು ಭಾರತ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ನೇಪಾಳ, ಪಾಕಿಸ್ತಾನಗಳಿಗೆ ಭೇಟಿಕೊಟ್ಟು ಹಿಂದೂಸ್ಥಾನೀ ಕಚೇರಿ ನೀಡಿದ್ದಾನೆ.

ಇವರ ಅಮೋಘ ಸಂಗೀತಸೇವೆಯನ್ನು ಮನಗಂಡು ಕರ್ನಾಟಕ ಸಂಗೀತ ನಾಟಕ ಅಕಾಡೆಮಿ 1963ರಲ್ಲಿ ಪ್ರಶಸ್ತಿ ಇತ್ತು ಸನ್ಮಾನಿಸಿತು. ಭಾರತ ಸರ್ಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿಯಿತ್ತು ಗೌರವಿಸಿದೆ (1972). ಕರ್ನಾಟಕ ಸರ್ಕಾರ ಇವರಿಗೆ ಶ್ರೀ ಕನಕ ಪುರಂದರ ಪ್ರಶಸ್ತಿ ನೀಡಿದೆ (1992). ಇವಲ್ಲದೆ ಇವರಿಗೆ ಭಾರತಾದ್ಯಂತ ದೊರೆತ ಸನ್ಮಾನಪತ್ರಗಳು, ಸುವರ್ಣಪದಕಗಳು, ಇತರ ಕಾಣಿಕೆಗಳು, ಉಡುಗೊರೆಗಳು, ಅಸಂಖ್ಯಾತ. ಕಾಶಿಯ ನಾಗರೀ ಪ್ರಚಾರಿಣೀ ಸಭೆ ಮತ್ತು ಪ್ರಯಾಗದ ಸಂಗೀತ ಸಮಿತಿಗಳು ಇವರಿಗೆ ಭಾರತೀಯ ಕಂಠಶಿರೋಮಣಿ ಹಾಗೂ ಸ್ವರಶಿರೋಮಣಿ ಎಂಬ ಬಿರುದುಗಳನ್ನಿತ್ತಿವೆ. ಇವರಿಗೆ ಹುಬ್ಬಳ್ಳಿಯಲ್ಲಿ ಪೌರಸನ್ಮಾನ ಮಾಡಲಾಯಿತು (2005).

ಗಂಗೂಬಾಯಿಯವರನ್ನು ಸಂಗೀತ ಗಂಗಾದೇವಿ ಎಂದು ಕವಿಯೊಬ್ಬರು ಬಣ್ಣಿಸಿದ್ದಾರೆ. ಇವರು ಕೇಸರಬಾಯಿ ಕೇರಕರ, ಹೀರಾಬಾಯಿ ಬಡೋದೇಕರ, ಮೋಗೂಬಾಯಿ ಕುರಡೀಕರ ಇವರ ಸಾಲಿನಲ್ಲಿ ನಿಂತಿರುವ ಪ್ರಸಿದ್ಧ ಗಾಯಕಿ ಎನಿಸಿದ್ದಾರೆ. (ಎನ್.ಕೆ.ಕೆ.)

**ಗಂಗೆ-ಗೌರಿ :** ಕನ್ನಡ ಜನಪದ ಸಾಹಿತ್ಯದ ಜನಪ್ರಿಯ ಕಥನ ಕವನಗಳಲ್ಲೊಂದು. ಇದರಲ್ಲಿ ಗಂಗೆ ಗೌರಿಯರ ಪ್ರೀತಿ ಮುನಿಸು ಸವತಿ ಮಾತ್ಸರ್ಯ ಜಗಳಗಳು ವರ್ಣಿಸಲ್ಪಟ್ಟಿವೆ.

ಪಾರ್ವತಿಯ ತಪೋನಿಷ್ಠೆಗೆ ಮನಸೋತ ಪರಮೇಶ್ವರ ಆಕೆಯನ್ನು ವಿವಾಹವಾದ ಬಳಿಕ ಪ್ರೀತಿಯಿಂದ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆಲಿಂಗಿಸಿಕೊಂಡನೆಂಬುದೂ ಭಗೀರಥನ ತಪಃಫಲವಾಗಿ ಗಂಗೆ ದೇವಲೋಕದಿಂದ ಭೂಮಿಗೆ ಧುಮುಕಲಾರಂಭಿಸಿದಾಗ ಆ ವೇಗವನ್ನು ತಾಳಲು ಭೂಮಿ ಅಸಮರ್ಥಳೆಂಬುದನ್ನು ಗ್ರಹಿಸಿದ ಶಿವ ದೃಢವಾಗಿ ನಿಂತು ಆಕೆಯನ್ನು ತನ್ನ ಜಟಾಕಲಾಪದೊಳಗೆ ತಾಳಿಕೊಂಡನೆಂಬುದೂ ಪುರಾಣಪ್ರಸಿದ್ಧ ವಿಷಯ. ಗೌರಿ ಶಿವನ ಪತ್ನಿ; ಶಿವನ ಎಡತೊಡೆ ಅವಳಿಗೆ ಆಸನ. ಗಂಗೆ ಪ್ರಾಸಂಗಿಕವಾಗಿ ಬಂದವಳು. ಆದರೂ ಅವಳಿಗೆ ಶಿವನ ತಲೆಯ ಮೇಲೆ ಸ್ಥಾನ. ಶಿವನ ಪ್ರೇಮಕ್ಕಾಗಿ ಉಗ್ರವಾದ ತಪಸ್ಸುಮಾಡಿ ಅವನನ್ನು ವರಿಸಿ ಮದುವೆಯಾದ ಪತ್ನಿಗೆ ತನ್ನ ಸಮ್ಮುಖದಲ್ಲೇ ಈ ರೀತಿ ಅನ್ಯಸ್ತ್ರೀಯೊಬ್ಬಳು ತನ್ನ ಪತಿಯ ತಲೆಯ ಮೇಲೆ ಕುಳಿತುಕೊಳ್ಳುವಷ್ಟು ಸ್ವಾತಂತ್ರ್ಯ ಪಡೆಯುವುದು ಸಹ್ಯವಾದೀತೆ ಎಂಬ ಸ್ತ್ರೀಸ್ವಭಾವದ ದೌರ್ಬಲ್ಯವನ್ನು ಆಧಾರವಾಗಿಟ್ಟುಕೊಂಡು.

...ಗೌರೀ ಜಹ್ನುಸುತಾಮಸೂಯತಿ; ಕಲಾನಾಥಂ ಕಪಾಲಾನಲಃ|
ನಿರ್ವಿಣ್ಣಃ ಸ ಪಪೌ ಕುಟುಂಬಕಲಹಾದೀಶೋಪಿ ಹಾಲಾಹಲಂ||

ಕೊಂಕು ನುಡಿಗೆ ಪ್ರಸಿದ್ಧ ಉದಾಹರಣೆಯಾದ ವಿಶಾಖದತ್ತನ ಮುದ್ರಾರಾಕ್ಷಸ ನಾಟಕದ ನಾಂದೀ ಪದ್ಯದಲ್ಲೂ ಗೌರಿಗೆ ಗಂಗೆಯ ಮೇಲಿದ್ದ ಅಸೂಯೆ ಅಭಿವ್ಯಕ್ತವಾಗುತ್ತದೆ.

ಧನ್ಯಾಕೇಯಂ ಸ್ಥಿತಾ ತೇ ಶಿರಸಿ? ಶಶಿಕಲಾ; ಕಿಂನು ನಾಮೈತದಸ್ಯಾಃ?
ನಾಮೈವಾಸ್ಯಾಸ್ತದೇತತ್ಪರಿಚಿತಮಪಿ ತೇ ವಿಸ್ಮೃತಂ ಕಸ್ಯ ಹೇತೋಃ|
ನಾರೀಂಪೃಚ್ಛಾಮಿ ನೇಂದುಂ; ಕಥಯತು ವಿಜಯಾ ನ ಪ್ರಮಾಣಂ ಯದೀಂದುಃ
ದೇವ್ಯಾ ನಿಹ್ನೋತುಮಿಚ್ಛೋಃ ಇತಿಸುರಸರಿತಂ ಶಾಠ್ಯಮವ್ಯಾದ್ವಿಭೋರ್ವಃ||

ಶಿವನ ತಲೆಯ ಮೇಲೆ ಸ್ಥಾನ ಪಡೆದಿರುವ ಗಂಗೆಯನ್ನು ನೋಡಿ ಗೌರಿ ತನ್ನಲ್ಲುಂಟಾದ ಅಸೂಯೆಯನ್ನು ಹೊರಗೆಡಹದೆ, ಚುಚ್ಚುನುಡಿಯಿಂದ ಶಿವನನ್ನೇ ಪ್ರಶ್ನಿಸುತ್ತಾಳೆ - ಧನ್ಯಾ ಕೇಯಂ ಸ್ಥಿತಾ ತೇ ಶಿರಸಿ? - ನಿನ್ನ ತಲೆಯ ಮೇಲೆ ಕುಳಿತಿರುವ ಧನ್ಯೆ ಆದ ಈಕೆ ಯಾರು? ಗೌರಿಯ ಅಸೂಯೆ ಅಸಹನೆಗಳನ್ನು ಮನಗಂಡ ಶಿವ, ಗಂಗೆ ತನ್ನ ಜಟೆಯಲ್ಲಿಲ್ಲವೇ ಇಲ್ಲವೊ ಎಂಬಂತೆ, ಗೌರಿ ಕೇಳಿದುದು ತನ್ನ ತಲೆಯ ಮೇಲಿರುವ ಚಂದ್ರ ಕಲೆಯನ್ನುದ್ದೇಶಿಸಿಯೇ ಎಂಬ ಭಾವಬರುವಂತೆ ಉತ್ತರ ಹೇಳುತ್ತಾನೆ, ಶಶಿಕಲೆ ಎಂದು. ಗೌರಿ ಕೇಳುತ್ತಾಳೆ -ಶಶಿಕಲೆ ಎಂಬುದು ಆಕೆಯ ಹೆಸರೇನು? ಶಿವ ಹೇಳುತ್ತಾನೆ: ಹೌದು ಅದು ಅವಳ ಹೆಸರೇ, ಈ ವಿಚಾರ ನಿನಗೆ ಪರಿಚಿತವಾದದ್ದೆ ಆದರೂ ಹೇಗೆ ಮರೆತುಹೋಯಿತು? ಶಿವ ಮಾಡುತ್ತಿರುವ ಈ ಅಪಲಾಪ ಗೌರಿಗೆ ಅರ್ಥವಾಗಿ, ಅವಳು ಗಡಸು ಧ್ವನಿಯಲ್ಲಿ ಹೇಳುತ್ತಾಳೆ. ನಾನು ಚಂದ್ರನನ್ನು (ಕುರಿತು) ಕೇಳುತ್ತಿಲ್ಲ ಹೆಂಗಸನ್ನು ಕುರಿತು ಕೇಳುತ್ತಿದ್ದೇನೆ. ಗೌರಿಯ ಈ ಮಾತಿನ ಅರ್ಥವನ್ನೂ ತಿರುವುಮುರುವು ಮಾಡಿ ಶಿವ ಹೇಳುತ್ತಾನೆ ಹಾಗಾದರೆ ಹೆಂಗಸಾದ (ನಿನ್ನ ಈ ಸಖಿ) ವಿಜಯೆಯೇ ಹೇಳಲಿ, ಇದು ಪ್ರಾಮಾಣಿಕವಾಗಿ ಚಂದ್ರನೇ ಅಲ್ಲವೆ ಎಂಬುದನ್ನು. ಈ ಪ್ರಕಾರವಾಗಿ ಗೌರೀದೇವಿಯಿಂದ ಗಂಗೆಯನ್ನು ಮರೆಯಿಸಬಯಸಿದ ಪರಶಿವನ ಪರಿಜ್ಞಾನ ನಿಮ್ಮನ್ನು ಸಲಹಲಿ ಎಂದು ಕವಿ ಆಶಿಸುತ್ತಾನೆ.

ಇದೇ ಬಗೆಯ, ಆದರೆ ಬೇರೆ ಧಾಟಿಯ ಮತ್ತೊಂದು ಕುಹಕಪೂರ್ಣ ಶ್ಲೋಕದಲ್ಲಿ ಗಂಗೆಯ ಮೇಲೆ ಗೌರಿಗಿದ್ದ ಮಾತ್ಸರ್ಯ ಸ್ಪಷ್ಟವಾಗಿ ಮೂಡಿಬಂದಿದೆ. ಇಲ್ಲೂ ಶಿವ ತನ್ನ ತಲೆಯ ಮೇಲೆ ಗಂಗೆ ಎಂಬ ಯಾವ ಹೆಂಗಸೂ ಇಲ್ಲವೇ ಇಲ್ಲ, ಅಲ್ಲಿರುವುದು ಬರೀ ನೀರು ಎಂದು ಸ್ವಾರಸ್ಯವಾಗಿ ನಿರೂಪಿಸಿ ಗೌರಿಗೆ ತಿಳಿಯಹೇಳಿರುವ ರೀತಿ ಪ್ರತಿಭಾಸಂಪನ್ನವಾಗಿದೆ.

ಮೌಳೌ ಕಿಂನು ಮಹೇಶ? ಮಾನಿನಿ, ಜಲಂ; ಕಿಂ ವಕ್ತ್ರಂ? ಅಂಭೋರುಹಂ;
ಕಿಂ ನೀಲಾಲಕವೇಣಿಕಾ? ಮಧುಕರಾಃ; ಕಿಂಭ್ರೂಲತೇ? ವೀಚಿಕಾಃ;
ಕಿಂ, ನೇತ್ರೇ? ಶಫರೀದ್ವಯಂ; ಕಿಮು ಕುಚೌ? ಪ್ರೇಂಖದ್ರಥಾಂಗದ್ವಯಂ
ಸಾಶಂಕಾಂ ಇತಿ ವಂಚಯನ್ ಗಿರಿಸುತಾಂ ಗಂಗಾಧರಃ ಪಾತು ವಃ||

ಇಲ್ಲಿ ಗೌರಿ ಗಂಗೆಯು ಹೆಸರೆತ್ತದೆಯೇ ಅವಳ ಒಂದೊಂದು ಅವಯವವನ್ನು ನಿರ್ದೇಶಿಸಿ ಶಿವನನ್ನು ಪ್ರಶ್ನಿಸುವ ದಾಟಿ ಗಂಭೀರವಾಗಿದೆ. ಅವಳು ಮೊದಲು ಕೇಳುತ್ತಾಳೆ - ಇದೇನು ನಿನ್ನ ತಲೆಯ ಮೇಲೆ, ಮಹೇಶ? ಶಿವ ಹೇಳುತ್ತಾನೆ ನಿರ್ಲಿಪ್ತನಾಗಿ ನೀರು, ಮಾನಿನಿ. ಇಲ್ಲಿ ಶಿವನಲ್ಲಿ ಏನನ್ನೂ ಮರೆಮಾಚುವ ಪ್ರಸಕ್ತಿಯೇ ಇಲ್ಲ. ಅವನಿಗೆ ಗಂಗೆ ಬರೀ ನೀರು ಅಥ'ವಾ ನದಿ. ಗೌರಿಯ ದೃಷ್ಟಿಯಲ್ಲಿ ಗಂಗೆ ಒಬ್ಬ ರೂಪವತಿಯಾದ ಹೆಂಗಸು, ಆದ್ದರಿಂದಲೇ ಅವಳಿಗೆ ಅಸಹನೆ, ಅಸೂಯೆ. ಶಿವನ ಸಲೀಸಾದ ಉತ್ತರ ಕೇಳಿ ಅವಳು ಪುನಃ ಪ್ರಶ್ನಿಸುತ್ತಾಳೆ (ಈ) ಮುಖವೋ? ಅದು ಕಮಲ. ಈ ನೀಲಕೇಶಗಳ ಜಡೆಯೋ? ಅವು ದುಂಬಿಗಳ ಸಾಲು. ಈ ಎರಡು ಹುಬ್ಬುಗಳು? ಅವು ಅಲೆಗಳು. ಆ ಎರಡು ಕಣ್ಣುಗಳೊ? ಅವು ಎರಡು ಮೀನುಗಳ ಜೋಡಿ. ಆ ಎರಡು ಸ್ತನಗಳು ಅವು ತೂಗಾಡುತ್ತಿರುವ ಚಕ್ರವಾಕಗಳು! ಆಶಂಕೆಗೊಂಡ ಗೌರಿಯನ್ನು ಈ ರೀತಿ ವಂಚಿಸುತ್ತಿರುವ ಗಂಗಾಧರ ನಿಮ್ಮನ್ನು ಸಲಹಲಿ.

ಇದೇ ಬಗೆಯ ಮತ್ತೂ ಒಂದು ಶ್ಲೋಕದ ವಸ್ತುವೂ ಗೌರಿಯ ಅಸೂಯೆಯೇ ಆಗಿದೆ.

ಏಷಾ ತೇ ಹರ! ಕಾ ಸುಗಾತ್ರಿ? ಕತಮಾ? ಮೂರ್ಧ್ನಿ ಸ್ಥಿತಾ; ಕಿಂ ಜಟಾ?
ಹಂಸಃ ಕಿಂ ಭಜತೇ ಜಟಾಂ? ನಹಿ, ಶಶೀ; ಚಂದ್ರೋಜಲಂ ಸೇವತೇ?
ಮುಗ್ಧೇ! ಭೂತಿರಿಯಂ; ಕುತ್ರೋತ್ರ ಸಲಿಲಂ? ಭೂತಿಸ್ತರಂಗಾಯತೇ
ಏವಂ| ಯೋ ವಿನಿಗೂಹತೇ ತ್ರಿಪಥಗಾಂ ಪಾಯಾತ್ಸವಃ ಶಂಕರಃ ||

ಮೇಲಿನ ಶ್ಲೋಕಗಳು ಸಂವಾದರೂಪದಲ್ಲಿದ್ದರೆ ಮುಂದಿನ ಶ್ಲೋಕದಲ್ಲಿ ಗಂಗೆಯನ್ನು ತನ್ನ ತಲೆಯ ಮೇಲೇರಿಸಿಕೊಂಡಿರುವ ಶಿವನನ್ನು ಗೌರಿ ನೇರವಾಗಿಯೇ ಕೋಪದಿಂದ ತರಾಟೆಗೆ ತೆಗೆದುಕೊಳ್ಳುವುದನ್ನು ಕಾಣಬಹುದು.

ಸಂಪ್ರಾಪ್ತಂ ಮಕರಧ್ವಜೇನ ಮಥನಂ ತ್ವತ್ತೋಮದರ್ಥೇ ಪುರಾ
ತದ್ಯುಕ್ತಂ ಬಹುಮಾರ್ಗಗಾಂ ಮಮ ಪುರೋ ನಿರ್ಲಜ್ಜ ವೋಢುಸ್ತವ?
ತಾಮೇನಾಮನುನಯಸ್ವ ಭಾವಕುಟಿಲಾಂ; ಹೇ ಕೃಷ್ಣಕಂಠ ! ಗ್ರಹಂ
ಮುಂಚೇತ್ಯಾಹ ರುಷಾ ಯಮದ್ರಿತನಯಾ (ಲಕ್ಷ್ಮೀಶ್ಚ) ಪಾಯಾತ್ಸ ವಃ ||

ಹಿಂದೆ ನನಗಾಗಿ ಮನ್ಮಥನೂ ನಿನ್ನ ದೆಸೆಯಿಂದ ಕಷ್ಟಕ್ಕೀಡಾದ. ಹಾಗಿರುವಾಗ ಎಲೌ ಲಜ್ಜೆಯಿಲ್ಲದವನೆ! ನನ್ನ ಮುಂದೆಯೇ ಗಂಗೆಯನ್ನು ತಲೆಯ ಮೇಲೆ ಹೊತ್ತುಕೊಂಡಿರುವೆಯಲ್ಲ, ಇದು ನಿನಗೆ ತರವೆ? ಕುಟಿಲ ಪ್ರೇಮದ ಅವಳ ಅನುನಯವನ್ನೇ ಮಾಡು ಓ ನೀಲಕಂಠ! ಬಿಡು ನನ್ನ ಆಲಿಂಗನವನ್ನು ಎಂಬುದಾಗಿ ಗೌರಿ ಕೋಪದಿಂದ ಯಾದವನನ್ನುದ್ದೇಶಿಸಿ ನುಡಿದಳೋ ಆ ಶಿವ ನಿಮ್ಮನ್ನು ಸಲಹಲಿ.

ಶಿಷ್ಟಕವಿಗಳೂ ಜನಪದರೂ ಕಾವ್ಯವನ್ನು ಸೃಷ್ಟಿಸಿದ್ದಾರೆ. ಆದರೆ ಗಂಗೆಗೌರಿಯರ ಸವತಿಮಾತ್ಸರ್ಯದ, ಸವತಿ ಪ್ರೀತಿಯ ಚಿತ್ರಗಳು ಕಾವ್ಯಪುರಾಣಗಳಲ್ಲಿಗಿಂತ ಹೆಚ್ಚು ಯಶಸ್ವಿಯಾಗಿ ಜನಪದ ಸಾಹಿತ್ಯದಲ್ಲಿ ಕಾಣಿಸಿಗುತ್ತವೆ. ಈ ಯಶಸ್ಸಿಗೆ ಕಾರಣ, ಬಹುಶಃ ಇಲ್ಲಿ ಅವರೂ ಜನಪದರಾಗಿಯೇ ಕಾಣಿಸಿಕೊಳ್ಳುವುದಾಗಿರಬಹುದು. ಜನಪದ ಸಾಹಿತ್ಯದಲ್ಲಿ ಗಂಗೆಗೌರಿಯರ ಸಂಬಂಧದ ಬಗ್ಗೆ ಅನೇಕ ಪಾಠಾಂತರಗಳು ಸಿಕ್ಕುತ್ತವೆ. ಅವುಗಳಲ್ಲಿ ಮುಖ್ಯವಾದ ಪಾಠಾಂತರಗಳ ಆಧಾರದಮೇಲೆ ಆ ಇಬ್ಬರ ಜೀವನದ ಕೆಲವು ಚಿತ್ರಗಳನ್ನು ಇಲ್ಲಿ ಕೊಡಲಾಗಿದೆ.

ನೀಲಮ್ಮ ಮೀಯುವಾಗ ನೀರಿನಲ್ಲಿ ಮಲ್ಲಯ್ಯನ ಕಳಸವನ್ನು ಕಾಣುತ್ತಾಳೆ. ಸ್ನಾನಮಾಡಿ ಮಲಗಿದಮೇಲೆ ಅವಳಿಗೆ ಒಂದು ಕನಸು ಬೀಳುತ್ತದೆ. ಮಲ್ಲಯ್ಯ ಕನಸಿನಲ್ಲಿ ಕಾಣಿಸಿಕೊಂಡು ಕನ್ನೆಯರು ಹುಟ್ಟಿದರೆ ತನಗೆ ಕೊಡುವಂತೆ ಕೇಳುತ್ತಾನೆ. ಕನಸೊಡೆದು ಎದ್ದ ಆಕೆ ಹೆಣ್ಣು ಹುಟ್ಟಿದರೆ ಲಿಂಗಕ್ಕೆ ಸಂತೋಷದಿಂದ ಧಾರೆ ಎರೆದೆನೆಂದು ಹಿಗ್ಗುತ್ತಾಳೆ. ಅದರಂತೆ ಅವಳಲ್ಲಿ ಗಿರಿಜೆ ಹುಟ್ಟುತ್ತಾಳೆ. ಅದನ್ನು ತಿಳಿದು ಗಿರಿಯ ಮಲ್ಲಯ್ಯ ಬೆಟ್ಟದಷ್ಟು ಹೊನ್ನನ್ನು ಹೊರಿಸಿಕೊಂಡು ಅವಳನ್ನು ಕೇಳಲು ಬರುತ್ತಾನೆ. ಮಲ್ಲಯ್ಯನ ಮುಂದೆ ಬಣ್ಣದ ಹಚ್ಚಡದ ಬಸವಯ್ಯ ಬಂದು ನಮ್ಮ ಮಠಕ್ಕೆ ಹೆಣ್ಣನ್ನು ಕೊಡಿ ಎಂದು ಕೇಳುತ್ತಾನೆ. ಮಲ್ಲಯ್ಯನ ಬೈರಾಗಿ ಬಾಳನ್ನು ಗಿರಿಜೆಯ ತಂದೆತಾಯಿಯರು ಜರಿಯುತ್ತಾರೆ. ಅದರಿಂದ ಗಿರಿಜೆಗೆ ದುಃಖವಾಗುತ್ತದೆ. ಮಲ್ಲಯ್ಯನಿಗೆ ತನ್ನನ್ನು ಕೊಡಬೇಕೆಂದು ತಾಯಿಯನ್ನು ಒತ್ತಾಯಿಸುತ್ತಾಳೆ. ಮಲ್ಲಯ್ಯನ ಕಷ್ಟಕರ ಜೀವನವನ್ನು ತಾಯಿ ವಿವರಿಸುತ್ತಾಳೆ. ಗಿರಿಜೆ ಎಲ್ಲ ತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ಕೋಪಗೊಂಡ ತಂದೆತಾಯಿಯರು ಅವಳನ್ನು ಹೊರಗೆ ತಳ್ಳಿಬಿಡುವುದಾಗಿ ಹೆದರಿಸುತ್ತಾರೆ. ಅತ್ತ ಮಲ್ಲಯ್ಯ ಗಿರಿಜೆಯ ಯೋಚನೆಯಲ್ಲಿಯೇ ಮಲಗಿದ್ದು ಅವಳನ್ನು ಗೆದ್ದು ತರಲು ಮತ್ತೆ ಹೊರಡುತ್ತಾನೆ. ಜಂಗಮನ ವೇಷದಲ್ಲಿ ಬಂದ ಅವನು ಕೆರೆಯಲ್ಲಿ ನೀರು ಮೊಗೆಯುತ್ತಿದ್ದ ಗಿರಿಜೆಯನ್ನು ಕಾಣುತ್ತಾನೆ. ಆ ಚಲುವೆಯನ್ನು ಕಂಡು ತನ್ನ ಜಪವನ್ನೇ ಮರೆತುಬಿಡುತ್ತಾನೆ. ಅವರಿಬ್ಬರಲ್ಲಿ ಸರಸ ಸಂಭಾಷಣೆ ನಡೆದು ಪ್ರೇಮಾಂಕುರವಾಗುತ್ತದೆ. ಅವಳನ್ನು ಕೊಡಲು ತಂದೆತಾಯಿಯರೂ ಒಪ್ಪುತ್ತಾರೆ. ಮದುವೆ ವಿಜೃಂಭಣೆಯಿಂದ ನಡೆಯುತ್ತದೆ.

ಇನ್ನೊಂದು ಪಾಠಾಂತರ ಹೀಗಿದೆ: ಭೂಲೋಕದಲ್ಲಿ ಗೌರಿಯು ಅವತಾರವಾದ ಮೇಲೆ ಸುಂದರ ಯುವತಿಯಾಗಿ ಬೆಳೆದುನಿಂತ ಅವಳನ್ನು ಯಾರಿಗೆ ಕೊಡಬೇಕೆಂಬುದು ತಂದೆ ತಾಯಿಗಳಿಗೆ ದೊಡ್ಡ ಸಮಸ್ಯೆಯಾಗಿ ಹೋಯಿತು. ಯಾವ ವರನನ್ನೂ ಅವಳು ಒಪ್ಪದೆ ನಿರಾಶೆಯನ್ನುಂಟು ಮಾಡಿದಳು. ಯಾರಿಗೆ ಕೊಡಲಿ ಎಂದು ತಂದೆ ಮಗಳನ್ನೇ ಕೇಳುತ್ತಾನೆ. ಬ್ರಾಹ್ಮಣನಿಗೆ ಕೊಡಲೆ ಎಂದರೆ ಅವರ ಕಟ್ಟುನಿಟ್ಟಾದ ಜೀವನ ತನಗೆ ಒಗ್ಗದೆಂದು ಹೇಳಿ ನಿರಾಕರಿಸುತ್ತಾಳೆ. ಹೀಗೆಯೇ ಶಿವಭಕ್ತರು, ಕೋಮಟಿಗರು, ಒಕ್ಕಲಿಗರು, ತುರುಕರು, ಕುಂಬಾರರು, ಕುರುಬರು, ನಾಯ್ಕರು, ಗೊಲ್ಲರು ಮುಂತಾದ ವಿವಿಧ ಜಾತಿಯ ವಿವಿಧ ಕಸಬಿನವರನ್ನು ಸೂಚಿಸಿದರೂ ಹಲವು ಕಾರಣಗಳನ್ನು ಹೇಳಿ ಬೇಡವೆನ್ನುತ್ತಾಳೆ. ಕೊನೆಗೆ ಶಿವಗಂಗೆಯ ಸಂನ್ಯಾಸಿ ಮಠದಲ್ಲಿರುವ ಜಂಗಮನಿಗೆ ಕೊಟ್ಟು ಲಗ್ನ ಮಾಡಬಹುದೆಂದು ಮಗಳು ತಿಳಿಸಲು ಅದನ್ನು ಕೇಳಿದ ತಂದೆ ತಾಯಿಯರು ವಿಸ್ಮಯಗೊಳ್ಳುತ್ತಾರೆ. ಜಂಗಮಜೀವನದ ಅಸಹನೀಯವಾದ ಸ್ಥಿತಿಯನ್ನು ವಿವರಿಸುತ್ತಾರೆ. ಆದರೂ ಅವಳು ಕೇಳುವುದಿಲ್ಲ. ಕೋಪಗೊಂಡ ಅವರು ಈಕೆ ನಮ್ಮ ಘನತೆಯನ್ನು ಹಾಳುಮಾಡುವ ಹೆಣ್ಣು ಎಂದುಕೊಂಡು ಕಣ್ಣು ಕಟ್ಟಿ ಕಾಡಿಗೆ ಬಿಡುತ್ತಾರೆ. ಅಲ್ಲಿ ಗೌರಮ್ಮ ಹನ್ನೆರಡು ಬೆಟ್ಟದ ನಡುವೆ ಕುಳಿತು ಶಿವನನ್ನು ಕುರಿತು ತಪಸ್ಸು ಮಾಡುತ್ತಾಳೆ. ಶಿವ ಮುದಿ ಜಂಗಮನ ವೇಷ ಧರಿಸಿ ಜೋಳಿಗೆ ಹಿಡಿದು ಭಿಕ್ಷೆಗೆ ಬರುತ್ತಾನೆ. ಕಾಡಿನಲ್ಲಿ ಅವಳೇನನ್ನು ಕೊಟ್ಟಾಳು? ಕೊನೆಗೆ ಶಿವ ತನ್ನ ನಿಜರೂಪವನ್ನು ತೋರಿ ಅವಳನ್ನು ತನ್ನೊಂದಿಗೆ ಮಠಕ್ಕೆ ಕರೆದುಕೊಂಡು ಹೋಗಿ ಅವಳ ತಂದೆ ತಾಯಿಗಳನ್ನು ಕರೆಸಿ ವಿಜೃಂಭಣೆಯಿಂದ ಮದುವೆ ಮಾಡಿಕೊಳ್ಳುತ್ತಾನೆ.

ಜನಪದ ಸಾಹಿತ್ಯದಲ್ಲಿ ಗಂಗೆ ಕಾಣಿಸಿಕೊಳ್ಳುವುದು ಹೀಗೆ:

ಉಂಡುಟ್ಟು ಮಂಚದ ಮೇಲೆ ಮಲಗಿದ ಗಿರಿಮಾಜಿಗೆ ಕನಸಿನಲ್ಲಿ ಶಿವ ಕಾಣಿಸಿ ಗರ್ಭಿಣಿಯಾದ ಅವಳೊಡಲಲ್ಲಿ ಹೆಣ್ಣುಮಕ್ಕಳು ಹುಟ್ಟಿದರೆ ತನಗೆ ಕೊಡುವಂತೆ ಕೇಳುತ್ತಾನೆ. ಗಿರಿಮಾಜಿಗೆ ನವಮಾಸಗಳು ತುಂಬಿ ದಿನ ಹತ್ತಿರವಾಗಲು ಪತಿ ಗಿರಿರಾಯ ಸೂಲಗಿತ್ತಿ ಸಂಗಮ್ಮನನ್ನು ಹುಡುಕಿ ಕರೆತರುತ್ತಾನೆ. ಎರಡು ಹೆಣ್ಣುಮಕ್ಕಳು ಜನಿಸುತ್ತವೆ. ಆದರೆ ಹಿರಿಯ ಹೆಣ್ಣು ಹುಟ್ಟಿದ ಗಳಿಗೆಯಲ್ಲಿ ಶಕುನ ಸರಿತೋರದೆ, ಹುಟ್ಟಿದ ಮನೆಗೆ ಅವಳು ಕಂಟಕಪ್ರಾಯಳಾಗುವಳೆಂದು ಸಂಗಮ್ಮನೂ ಪುರೋಹಿತರೂ ಹೇಳಿದ ಮೇಲೆ ತೊಟ್ಟಿಲ ಸಮೇತ ಹೊಳೆಗೆ ಬಿಟ್ಟು ಬರುತ್ತಾನೆ, ಗಿರಿರಾಯ. ಮೀನು ಹಿಡಿಯುವಾಗ ಅಂಬಿಗರ ಗಂಗನಿಗೆ ಆ ಮಗು ಸಿಕ್ಕುತ್ತದೆ. ಹೀಗೆ ಗಂಗೆ ಅಂಬಿಗರ ಮನೆಯಲ್ಲಿ ಬೆಳೆದು ದೊಡ್ಡವಳಾಗುತ್ತಾಳೆ.

ಜನಪದ ಸಾಹಿತ್ಯದಲ್ಲಿ ಗಂಗೆ-ಗೌರಿಯರ ಜಗಳ ಒಂದು ಅತಿ ಮೋಜಿನ ಪ್ರಸಂಗವೆನಿಸಿದೆ. ಈ ಜಗಳದಲ್ಲಿ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕಂಡುಬರುವ ಇಬ್ಬರು ಹೆಂಗಸರ ಜಗಳ, ಸವತಿಮಾತ್ಸರ್ಯಗಳು ಪ್ರತಿಬಿಂಬಿತವಾಗಿದೆ.

ಗಂಗೆಯನ್ನು ತರುವ ಪೂರ್ವದಲ್ಲಿಯೇ ಗೌರಿಯ ಮುನಿಸು ಪ್ರಾರಂಭವಾಗುತ್ತದೆ. ತೊಳತೊಳತೊಳಗುತ್ತಿರುವ ಗಂಗೆಯನ್ನು ಸ್ವಪ್ನದಲ್ಲಿ ಕಂಡ ಶಿವ ಪಕ್ಕದಲ್ಲಿ ಮಲಗಿದ್ದ ಗೌರಿಗೆ ಹೇಳುತ್ತಾನೆ. ಅವನು ಯಾಕೆ

ಹೇಳುತ್ತಿದ್ದಾನೆಂದು ಅವಳಿಗೆ ಅರ್ಥವಾಗುತ್ತದೆ. 'ಮಕ್ಕಾಳಿರ್ಲೇಳಿ ಮನೆತುಂಬ' ಎಂದು ವ್ಯಂಗ್ಯವಾಗಿ ನುಡಿದು ಮಗ್ಗುಲಾಗುತ್ತಾಳೆ. ಆದರೆ ಮರುದಿನ ಶಿವ ವೇಷ ಧರಿಸಿ ಹೊರಟೇಬಿಡುತ್ತಾನೆ. ಭೂಲೋಕಕ್ಕೆ ಬಂದ ಶಿವ ನೀರನ್ನು ಮೊಗೆಯುತ್ತಿರುವ ಗಂಗೆಯನ್ನು ಕಂಡು ಜಪ ಮಾಡುತ್ತಿರುವಂತೆ ತಾನು ನಟಿಸುತ್ತಿದ್ದೇನೆಂಬುದನ್ನೂ ಮರೆಯುತ್ತಾನೆ. ಇವನ ಸ್ಥಿತಿಯನ್ನು ಕಂಡ ಗಂಗೆ 'ಜಪವ ಮರಿಸವ್ರ ಮಗಳಲ್ಲ' ಎಂದು ಹಾಸ್ಯ ಮಾಡುತ್ತಾಳೆ. ಹಾಸ್ಯಕ್ಕಿಂತ ಹೆಚ್ಚಾಗಿ ಇಲ್ಲಿ ನಾನು ಬಡವರ ಮನೆಯ ಹುಡುಗಿ ಎಂಬ ದೈನ್ಯದ ಭಾವ ಎದ್ದುಕಾಣುತ್ತದೆ. ಶಿವ ಗಂಗೆಯನ್ನು ತರುತ್ತಿರುವ ಸುದ್ದಿಯನ್ನು ಗಿಣಿರಾಮನಿಂದ ತಿಳಿದು ಗೌರಿ ಅಪ್ಪನ ಮನೆಗೆ ಹೊರಡುತ್ತಾಳೆ. ಅವರು ಬರುವ ಹೊತ್ತಿಗೆ ರಾಡ್ಮುಂಡ್ಗೆ (ಮಂಡಿಗದ್ದಗಳನ್ನು ಸೇರಿಸಿ ಮಲಗುವುದು) ಹಾಕಿ ಮಲಗು ಹೋಗು ಎಂದು ಅಪ್ಪ ಬುದ್ಧಿ ಹೇಳಿ ಕಳಿಸುತ್ತಾನೆ. ಕದ ತೆಗೆಯದೆ ಮಲಗಿದ್ದ ಗೌರಿಯನ್ನು ಹೆದರಿಸಿ ಕದ ತೆಗೆಸುತ್ತಾನೆ ಶಿವ. ಗೌರಿ ಊಟಕ್ಕೆ ಎರಡು ಮಣೆಗಳನ್ನು ಹಾಕುತ್ತಾಳೆ. 'ಇಬ್ಬರುಂಟೇನೆ ಪುರುಷ್ಯರು?' ಎಂದು ಕೇಳಿದ ಶಿವನಿಗೆ 'ಸಿವ್ನ ಕೆಂಜಡೆಯ ಮುಡಿವಳಗೆ ಇರುವ ಸಿವ್ಗಂಗೇಗೆ ಒಂದು, ನಿಮಗೊಂದು' ಎಂದು ಉತ್ತರಿಸುತ್ತಾಳೆ. ಶಿವ ಅಪ್ರತಿಭನಾಗುತ್ತಾನೆ. ಅನಂತರ ಗೌರಿ ಗಂಗೆಗೆ ಹರಸುತ್ತ 'ಅಂಬುಗನ ಮಗಳೆ ಸುಖಬಾಳೊ' ಎನ್ನುತ್ತಾಳೆ. ಅಂಬಿಗನ ಮಗಳು ಎಂದು ಕರೆದಳಲ್ಲ ಎಂದು ಗಂಗೆಗೆ ಚುರುಕ್ ಎನಿಸುತ್ತದೆ. 'ಕೆಂಪೇರ ಜಗಳ ಶಂಖ ಬಾರಿಸಿದ್ಹಂಗೆ' ಮೊದಲಾಗುತ್ತದೆ, ಜಗಳ. ಆಗಾಗ ಇಂಥ ಸಣ್ಣಪುಟ್ಟ ಜಗಳಗಳು ಇದ್ದೇ ಇರುತ್ತವೆ. ಹೀಗೆ ಇರುವಾಗ ಒಮ್ಮೆ ತಾನು ಮುಡಿದು ಮಿಕ್ಕಿದ ಹೂವನ್ನು ಗೌರಿ ಗಂಗೆಗೆ ಕಳಿಸುತ್ತಾಳೆ. ಒಳ್ಳೊಳ್ಳೆ ಹೂವನ್ನೆಲ್ಲ ತಾನು ಮುಡಿದು ಬಾಡಿ ಬತ್ತಿದ ಹೂವನ್ನು ಕಳಿಸಿದ್ದಾಳೆ ಎಂದುಕೊಂಡು ಗಂಗೆ ಅವನ್ನು ಬೀದಿಗೆ ಚೆಲ್ಲುತ್ತಾಳೆ, ಬೇಲಿಗೆ ಎಸೆಯುತ್ತಾಳೆ. ಇದನ್ನೆಲ್ಲ ತಿಳಿದ ಗೌರಿ, ಗಂಗೆ ಬೆಸ್ತರ ಹುಡುಗಿಯೆಂದೂ ಅವಳ ತಂದೆ ಅಣ್ಣಂದಿರು ಮೀನು ಸೀಗಡಿ ಮಾರುವವರೆಂದೂ ಅವಳ ಬಂಧು ಬಳಗ ಸುಣ್ಣ ಸುಡುವವರೆಂದೂ ಜರೆಯುತ್ತಾಳೆ. ಸರಿ, ಪರಸ್ಪರ ಜಡೆ ಹಿಡಿದು ಜಗಳ ಪ್ರಾರಂಭಿಸುತ್ತಾರೆ. ಕುಸ್ತಿಯಲ್ಲಿ ಗಂಗೆ ಕೆಳಗೆ, ಗೌರಿ ಮೇಲೆ. ಜಗಳ ನಡೆಯುತ್ತಿದ್ದಾಗ ಗೌರಿ ಹೊರಗಾಗುತ್ತಾಳೆ. ಮಳೆದೇವರು ಗಾಳಿದೇವರುಗಳನ್ನು ಕರೆದು ಗಂಗೆ ಆಣೆ ಭಾಷೆ ತೆಗೆದುಕೊಳ್ಳುತ್ತಾಳೆ. ಭೂಮಿಯ ಮೇಲಿನ ನೀರನ್ನೆಲ್ಲ ಮಾಯ ಮಾಡುತ್ತಾಳೆ. ಗೌರಿ ನೀರನ್ನು ತರಲು ಮಗನಾದ ಚೆನ್ನವೀರನನ್ನು ಕಳಿಸುತ್ತಾಳೆ. ಹುಡುಕಿ ಹುಡುಕಿ ಸಾಕಾದ ಅವನನ್ನು ಕಾಶಿಗೆ ಹೋಗು ಎನ್ನುತ್ತಾಳೆ ಗೌರಿ. ಕಾಶಿಯಲ್ಲೂ ನೀರಿಲ್ಲ. ಅಲ್ಲಿಂದ ಬಳಲಿ ಬರುವಾಗ ಗಂಗೆ ನೋಡುತ್ತಾಳೆ. ಅಲ್ಲೊಂದು ಹಳ್ಳವನ್ನು ಸೃಷ್ಟಿಮಾಡುತ್ತಾಳೆ. ಆ ಹಳ್ಳದಲ್ಲಿ ಮನ ದಣಿಯ ನೀರು ಕುಡಿದು ಸ್ನಾನ ಮಾಡಿ ಬುತ್ತಿ ಬಿಚ್ಚುತ್ತಾನೆ ವೀರಣ್ಣ. ಎರಡು ಪಾಲುಮಾಡಿ ಚಿಕ್ಕವ್ವನಾದ ಗಂಗೆಗೆ ಒಂದು ಪಾಲನ್ನು ಬಿಟ್ಟು ಉಳಿದದ್ದನ್ನು ತಾನು ಉಣ್ಣುತ್ತಾನೆ. ಆಮೇಲೆ ಹನ್ನೆರಡು ಕಂಬ ಅಡ್ಡೆ ನೀರು ಮೊಗೆದು ಹೆಗಲ ಮೇಲೆ ಹೊತ್ತು ಮೂರು ಹೆಜ್ಜೆ ಹೋಗುವಷ್ಟರಲ್ಲಿ ಸವತಿ ಗೌರಿಗಾಗಿ ನೀರು ಹೋಗುತ್ತಿದೆ ಎಂದು ತಿಳಿದ ಗಂಗೆ ಹಳ್ಳದಲ್ಲಿದ್ದ ಮತ್ತು ಅಡ್ಡೆಯಲ್ಲಿದ್ದ ನೀರನ್ನೆಲ್ಲ ಮಾಯ ಮಾಡುತ್ತಾಳೆ. ಇದು ಗಂಗೆಯ ಮಾಯ ಎಂದು ಅವನಿಗೆ ತಿಳಿದುಹೋಗುತ್ತದೆ. ಮೂವತ್ತು ದಿನದಿಂದ ಊಟ ಇಲ್ಲದೆ ಗೌರಿ ಬಳಲುತ್ತಿದ್ದು ಕೈಲಾಸಗಿರಿಯಲ್ಲಿರುವ ಶಿವನ ಬಳಿಗೆ ಮಗನನ್ನು ಕಳಿಸುತ್ತಾಳೆ. ಶಿವನಿಗೆ ಜಗಳದ ವಿಷಯವನ್ನು ಹೇಳುತ್ತಾನೆ, ವೀರಣ್ಣ. ಶಿವ ಬರುತ್ತಾನೆ. ಗೌರಿ ಹೊರಗೆ ಕೂತಿದ್ದಾಳೆ. ಹಾಲು ಮೊಸರು ತುಪ್ಪ ಜೇನುಗಳ ಅಡ್ಡೆಯನ್ನು ತರಲೇ ಎಂದು ಕೇಳುತ್ತಾನೆ. ಯಾವುದರಿಂದಲೂ ತನ್ನ ಸೂತಕ ಕಳೆಯುವುದಿಲ್ಲ ಎನ್ನುತ್ತಾಳೆ. ಗಂಗೆಯ ಬಳಿಗೆ ಹೋಗು ಎನ್ನುತ್ತಾನೆ. ಸತ್ತರೂ ಆಕೆಯ ಬಳಿಗೆ ಹೋಗಲಾರೆ ಎನ್ನುತ್ತಾಳೆ. ವಿಧಿಯಿಲ್ಲದೆ ಮಗನನ್ನು ಕಳಿಸುತ್ತಾಳೆ. ನಿನಗೆ ಬೇಕಾದರೆ ಒಂದು ಚೆಂಬು ಕೊಡುತ್ತೇನೆ. ನಿನ್ನವ್ವನಿಗೆ ಇಲ್ಲ, ಎನ್ನುತ್ತಾಳೆ ಗಂಗೆ. 'ನಮ್ಮ ಬಾವಿಯಲ್ಲಿ ಕಪ್ಪೆ ಇರುತ್ತವೆ, ಅದು ಕಲಕುನೀರು, ಮೀನು ಇರುತ್ತವೆ. ಅದು ಹೊಲಸುನೀರು' ಎಂದು ಕಟಕಿಯಾಡಿದ ಮೇಲೆ ಬರಿಗೈಯಲ್ಲಿ ಹಿಂದಿರುಗುತ್ತಾನೆ, ವೀರಣ್ಣ. ಪೆಟ್ಟಿಗೆಯಲ್ಲಿದ್ದ ಪಟ್ಟೆಸೀರೆ ಉಟ್ಟುಕೊಂಡು ಆಭರಣಗಳನ್ನೆಲ್ಲ ಧರಿಸಿಕೊಂಡು ಐದು ಜನ ಮಕ್ಕಳನ್ನು ಕರೆದುಕೊಂಡು ಗೌರಿಯೇ ಹೊರಡುತ್ತಾಳೆ. ಎಷ್ಟು ಕೂಗಿದರೂ ಗಂಗೆ ಬಾಗಿಲು ತೆಗೆಯುವುದಿಲ್ಲ. ಉಟ್ಟಿದ್ದ ಪಟ್ಟೆ ಸೀರೆ ಆಭರಣಗಳು ಐದು ಜನ ಮಕ್ಕಳು ಏನು ಬೇಕಾದರೂ ಕೊಡುವೆನೆಂದರೂ ಉತ್ತರ ಬರುವುದಿಲ್ಲ. ಕೊನೆಗೆ ನನ್ನ ಭಾಗದ ಗಂಡನನ್ನು ಕೊಡುತ್ತೇನೆ ಎಂದಾಗ, ಹಾಲು ಅನ್ನ ಮುಟ್ಟಿ ಭಾಷೆ ಮಾಡಿಸಿಕೊಂಡು, ಗಂಗಮ್ಮ ಬಾಗಿಲು ತೆಗೆಯುತ್ತಾಳೆ. ಮಳೆದೇವರು ಗಾಳಿ ದೇವರನ್ನು ಕರೆದು ಆಣೆ ಭಾಷೆ ಬಿಡಿಸುತ್ತಾಳೆ. ಗುಡುಗು ಮಿಂಚುಗಳು ಕಾಣಿಸಿ ಜಡಿಮಳೆ ಸುರಿಯುತ್ತದೆ. ಸೂತಕ ತೀರಿಸಿಕೊಂಡು, ಇಬ್ಬರೂ ಜೊತೆಯಲ್ಲಿ ಈಜಾಡಿ, ಜೊತೆಯಲ್ಲಿ ಹಾಲು ಅನ್ನ ಉಂಡು, ಆಮೇಲೆ ಇವತ್ತು ರಾತ್ರಿ ಶಿವನನ್ನು ಕಳುಹು ಎಂಬ ಗಂಗೆಯ ಮಾತನ್ನು ಕೇಳಿ 'ಎಲ್ಲಾದ್ರೂ ಉಂಟೇನೆ' ಎಂದು ಹೇಳಿ ಮಾತಿಗೆ ತಪ್ಪುತ್ತಾಳೆ. ಗಂಗೆ-ಗೌರಿಯರ ಕೇಶಾಕೇಶಿ ಮತ್ತೆ ಪ್ರಾರಂಭವಾಗುತ್ತದೆ. ಎರಡು ಮೂರು ಪೆಟ್ಟು ತಿಂದ ಗಂಗೆ ಕೈಬೀಸಿ ಮಳೆರಾಯನನ್ನು ಕರೆಯುತ್ತಾಳೆ. ಗಂಗೆ ಮೊಣಕಾಲುದ್ದ ನೀರಲ್ಲಿ ನಿಂತರೆ, ಗೌರಿ ಕೊಚ್ಚಿಹೋಗುತ್ತಾಳೆ. ಬೇಟೆಗೆ ಹೋಗಿದ್ದ ಶಿವ ಬರುತ್ತಾನೆ. ಗಂಗೆಯನ್ನು ಬೆಸ್ತರ ಮನೆಗೆ ಕಳಿಸುತ್ತ 'ವರ್ಷಕ್ಕೊಮ್ಮೆ ಮಾರಿ ಹಬ್ಬದಲ್ಲಿ ನೀನು ಬಾ. ನಡು ಊರಲ್ಲಿ ನಿನ್ನ ಪೂಜಿಸುತ್ತಾರೆ. ಕುರಿಕೋಳಿಗಳ ನಿನಗೆ ಕಡಿತಾರೆ' ಎಂದು ಹೆಳುತ್ತಾನೆ. 'ಬ್ರಾಹ್ಮಣರ ಮನೆಯಲ್ಲಿ ಸೇರಿಕೊ, ವರ್ಷಕೊಮ್ಮೆ ಗೌರಿಹಬ್ಬದಲ್ಲಿ ನೀನು ಬಾ, ಮಲ್ಲಿಗೆ ಹೂವಿನ ಪೂಜೆ ನಿನಗೆ ಮಾಡುತ್ತಾರೆ' ಎಂದು ಗೌರಿಗೆ ಹೇಳಿಕಳಿಸುತ್ತಾನೆ. 'ನಿಮ್ಮಿಬ್ಬರ ಮಧ್ಯದಲ್ಲಿ ಶಿವರಾತ್ರಿ ಹಬ್ಬ. ಆ ಹಬ್ಬದಲ್ಲಿ ನಾ ಬರುತ್ತೀನಿ' ಎಂದು ಶಿವ ಮೂವರಿಗೂ ಮೂರು ಹಬ್ಬ ನಿಯಮಿಸುತ್ತಾನೆ. *

**ಗಂಗೊಳ್ಳಿ :** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಒಂದು ಊರು. ಕುಂದಾಪುರದ ಉತ್ತರಕ್ಕೆ 3ಕಿಮೀ ದೂರದಲ್ಲಿ (ರಸ್ತೆ 19ಕಿಮೀ) ಗಂಗೊಳ್ಳಿ ನದಿ ಅರಬ್ಬೀಸಮುದ್ರವನ್ನು ಸೇರುವಲ್ಲಿ ಇದೆ. ಇದೊಂದು ವ್ಯಾಪಾರ ಕೇಂದ್ರ. ಇಲ್ಲಿರುವ ಬಂದರಿನ ಮೂಲಕ ಒಳ-ಹೊರ ವ್ಯಾಪಾರ ನಡೆಯುತ್ತದೆ. ಜಲಮಾರ್ಗ ಉಪಯುಕ್ತವಾಗಿದೆ. ಸೆಪ್ಟೆಂಬರ್ ತಿಂಗಳಿಂದ ಎಂಟು ತಿಂಗಳುಗಳ ಕಾಲ ಇಲ್ಲಿಯ ಜನ ಮೀನು, ಇಮಾರತಿ ಕಟ್ಟಿಗೆ, ಸುಣ್ಣದ ಶಿಂಪು ಹಾಗೂ ತೆಂಗಿನ ನಾರಿನಿಂದ ತಯಾರಿಸಲ್ಪಟ್ಟ ವಸ್ತುಗಳ ಸಾಗಾಣಿಕೆಯಲ್ಲಿ ತೊಡಗಿರುತ್ತಾರೆ. ಮೀನುಗಾರಿಕೆ ಇಲ್ಲಿಯ ಮುಖ್ಯ ಉದ್ಯೋಗ.

ರಾಜ್ಯ ಸರ್ಕಾರದ ಯೋಜನೆಯಂತೆ ಇಲ್ಲಿ ಮೀನುಗಾರಿಕೆಗೆ ಯಾಂತ್ರಿಕ ದೋಣಿಗಳನ್ನು ಪೂರೈಸಿದ್ದರಿಂದ ಮೀನಿನ ಉತ್ಪಾದನೆ ಹಾಗೂ ರವಾನೆ ಸುಲಲಿತವಾಗಿದೆ. ಗಂಗೊಳ್ಳಿಯಲ್ಲಿ ಮೂರು ಶೀತಲಗೃಹಗಳನ್ನು ನಿರ್ಮಿಸಲಾಗಿದೆ.

ಗಂಗೊಳ್ಳಿಯ ಬೆಟ್ಟಗಳ ಇಳುಕಲುಗಳಲ್ಲಿ ಗೇಣಸು, ಶುಂಠಿ, ಮೆಣಸು, ಬಯಲು ಪ್ರದೇಶಗಳಲ್ಲಿ ಕಬ್ಬು ಬತ್ತವನ್ನು ಜೊತೆಗೆ ಮಾವು, ಹಲಸು, ಸಪೋಟ, ಬಾಳೆ, ಪಪಾಯಿ ಮತ್ತು ಅನಾನಸುಗಳನ್ನು ಬೆಳೆಯುತ್ತಾರೆ.

ಕುಂದಾಪುರ ಗಂಗೊಳ್ಳಿಯ ನಡುವೆ ಮುಕ್ಕಾಲು ಕಿಮೀ ಸೇತುವೆಯಿದ್ದು ಸಂಚಾರ ಸಂಪರ್ಕ ಸುಲಭವೆನಿಸಿದೆ. ಗಂಗೊಳ್ಳಿಯ ಸುತ್ತ ಅರಣ್ಯವಿದೆ. ಕತ್ತದ ಉದ್ಯೋಗ, ಮೃದುಕಟ್ಟಿಗೆಯಿಂದ ಕಡ್ಡಿಪೆಟ್ಟಿಗೆಯ ತಯಾರಿ ಮತ್ತು ಬಿದಿರಿನ ಕೈಕಸಬುಗಳಿಗೆ ಸಾಕಷ್ಟು ಅವಕಾಶವಿದೆ. ಮೀನಿನ ತಳಿ ಅಭಿವೃದ್ಧಿಯ ಕಾರ್ಯವೂ ಉಂಟು.

ಗಂಗೊಳ್ಳಿ ಪಶ್ಚಿಮ ಸಮುದ್ರತೀರದ ನದೀದಡದಲ್ಲಿರುವ ಸುಂದರ ತಾಣ. ಇಲ್ಲಿ ಬೈಂದೂರು-ಗಂಗೊಳ್ಳಿ ನಡುವೆ ಇರುವ ಮರಸಾಮಿ ಮುಂತಾದ ಆಕರ್ಷಕ ಪ್ರದೇಶಗಳಿವೆ. ಗಂಗಾವಳಿ ಉಪನದಿಗಳ ಮಧ್ಯೆ ಇರುವ ಪುಟ್ಟ ನಡುಗಡ್ಡೆಗಳಲ್ಲಿನ ವನಸಂಪತ್ತು ಹರ್ಷ ತರುವಂಥದು. ಈ ಪ್ರದೇಶ ದೋಣಿಯಾಟಕ್ಕೆ ಉತ್ತಮ ಸ್ಥಳ. ಟಿಪ್ಪುಸುಲ್ತಾನನ ಕಾಲದಲ್ಲಿ ಇದೊಂದು ಬಳಕೆಯ ಬಂದರಾಗಿತ್ತು. ಕುಂದಾಪುರದ ಬಂದರು ಮತ್ತು ಸುಂಕದಕಟ್ಟೆ ಇಲ್ಲಿದೆ. ಕುಂದಾಪುರಕ್ಕೆ ಕಡೆಕೋಡಿ ಎಂಬಲ್ಲಿ ದೀಪಸ್ತಂಭ ಇದೆ. ಗಂಗೊಳ್ಳಿಯಲ್ಲಿ ಆಧುನಿಕ ಪೌರ ಸೌಲಭ್ಯಗಳೆಲ್ಲ ಇವೆ. (ಜಿ.ಬಿ.ಎನ್.)

**ಗಂಜೀಫ :** ವಿವಿಧ ಆಕಾರಗಳ ಚಿತ್ರ ಹಾಗೂ ಸಂಖ್ಯೆಗಳಿಂದ ಕೂಡಿದ ಕಾಗದದ ಎಲೆಗಳಿರುವ ಕಟ್ಟು; ಮತ್ತು ಇವುಗಳಿಂದ ಆಡುವ ಆಟ. ಗಂಜೀಫು, ಗಂಜೀಫಿ, ಗಂಜೀಫಾ ಎಂದೂ ಇದನ್ನು ಕರೆಯುವುದಿದೆ. ಕ್ರೀಡಾಪತ್ರ, ದೇವರಾಟದ ಎಲೆ ಎಂಬ ಹೆಸರುಗಳೂ ಪ್ರಚಾರದಲ್ಲಿದೆ. ಒಂದು ಬಗೆಯ ಇಸ್ಪೀಟ್ ಎಂದೂ ಹೇಳಬಹುದು. ಪಾರಸಿ ಮತ್ತು ಹಿಂದಿಯಲ್ಲಿ ಇದು ಗಂಜೀಫಾ; ಮರಾಠಿಯಲ್ಲಿ ಗಂಜೀಫ್; ಪಾರಸಿ

ಭಾಷೆಯಲ್ಲಿ ಗಂಜ್ ಎಂದರೆ ಹಣ; ಗಂಜೀಫಾ ಎಂದರೆ ಹಣವನ್ನು ಪಣವಾಗಿ ಇಟ್ಟು ಆಡುವ ಆಟ. ಈ ಆಟದ ಎಲೆಗಳ ಮೇಲೆ ಬಿಡಿಸಲಾಗುತ್ತಿದ್ದ ಚಿತ್ರಗಳನ್ನು ಅನುಸರಿಸಿ ವಿಕಾಸಗೊಂಡಿರುವ ಕಲಾ ಪ್ರಕಾರವನ್ನು ಗಂಜೀಫಾ ಕಲೆ ಎಂದು ಕರೆಯಲಾಗಿದೆ. ಪ್ರಾಚೀನ ಭಾರತದಲ್ಲಿ ಹುಟ್ಟಿದ ಈ ಆಟವನ್ನು ಇತರ ದೇಶಗಳವರು ಮಾರ್ಪಡಿಸಿಕೊಂಡು ಬೇರೆಬೇರೆ ಹೆಸರುಗಳಿಂದ ಕರೆದರು. ಗಂಜೀಫದ ಎಲೆಗಳು ಆಯತಾಕಾರ, ವೃತ್ತಾಕಾರ, ಮೊಟ್ಟೆಯಾಕಾರಗಳಲ್ಲಿವೆ.



ಗಂಜೀಫ ಕಲೆಯಲ್ಲಿ ಶುಶ್ರುತ: ಕಣ್ಣು ಪರೀಕ್ಷೆ

ಮೈಸೂರು ಶೈಲಿಯ ಗಂಜೀಫದ್ದೂ ಆಯತಾಕಾರ ಮತ್ತು ವೃತ್ತಾಕಾರ. ಈ ಕ್ರೀಡಾಪತ್ರವನ್ನು ವಿಶೇಷ ಚಮತ್ಕಾರಗಳೊಂದಿಗೆ ಕೆಲವೊಮ್ಮೆ ಇಷ್ಟಬಂದಂತೆ ಊಹಿಸಿ ಆಡಬಹುದಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ (1794-1868) ಶ್ರೀತತ್ವನಿಧಿ ಗ್ರಂಥವನ್ನು ಕೈಯಲ್ಲಿ ಬರೆದು ಕಲಾವಿದರಿಂದ ಇದಕ್ಕೆ ಚಿತ್ರಗಳನ್ನು ಬರೆಯಿಸಿದರು. ಇದರಲ್ಲಿ ಸರ್ವಸಾಮ್ರಾಜ್ಯಪೇಟಿಕಾ ಎಂಬ 600 ಎಲೆಗಳ ಸುಂದರ ಆಟದ ವರ್ಣನೆಯನ್ನೊಳಗೊಂಡ, ಆಟಕ್ಕೆ ಬೇಕಾದ ಚಕ್ರವರ್ತಿಗಳ ಹೆಸರುಗಳ ಶ್ಲೋಕಗಳಿವೆ. ಈ ಪ್ರತಿ ಮೈಸೂರಿನ ಪ್ರಾಚ್ಯ ವಸ್ತುಸಂಶೋಧನಾಲಯದ ಗ್ರಂಥಾಲಯದಲ್ಲಿದೆ. ಗಂಜೀಫ ಕಟ್ಟಿನಲ್ಲಿಯ ಸುಂದರ ಕಲಾಕೃತಿಗಳು ಹೆಚ್ಚಿನವರಿಗೆ ತಿಳಿದಿರಲಿಲ್ಲ. ದುರ್ಗಾ ಸಪ್ತಶತೀ, ರಾಮಾಯಣ, ಶಿವಪುರಾಣ, ಮಹಾಭಾರತ, ಭಾಗವತ ಮುಂತಾದವುಗಳಿಂದ ಚಿತ್ರಗಳನ್ನು ಆಯ್ಕೆ ಮಾಡಿ ಬೇರೆ ಬೇರೆ ಆಟಗಳನ್ನು ನಿರ್ಮಿಸಿದ್ದಾರೆ. ಗಂಜೀಫ ಎಲೆಗಳಲ್ಲಿನ ಕಲಾಕೃತಿಗಳು ವಿಶೇಷವಾದವು. ಮೈಭಾಗಗಳು ಉಬ್ಬಾಗಿವೆ. ಆಭರಣದ ಜಾಗ ತಗ್ಗಾಗಿದೆ. ಚಿನ್ನದ ತಗ್ಗಾದ ಆಭರಣ ಜಾಗವೂ ಉಬ್ಬಿರುವ ಮೈಭಾಗವೂ ಹೆಚ್ಚು ಆಟವಾಡಿದರೂ ಸವೆತವಾಗದಿರಲಿ ಎಂದು ವಿಶೇಷ ತಂತ್ರದೊಂದಿಗೆ ಸೂಕ್ಷ್ಮ ಚಿಕಣಿ ಚಿತ್ರಗಳಿಂದ ಕೂಡಿವೆ. ಒಂದೊಂದು ಎಲೆಯನ್ನೂ ನಾಜೂಕಾಗಿ ಸುಂದರವಾಗಿ ಬಿಡಿಸಲಾಗಿದೆ. ಭಾರತದ ಗಂಜೀಫಗಳಲ್ಲಿ ಮೈಸೂರು ಗಂಜೀಫ ತುಂಬಾ ಸುಂದರ.

ಬಂಗಾಲದ ವಿಷ್ಣುಪುರದ ಗಂಜೀಫ ಚಿತ್ರಗಳನ್ನು ಬಟ್ಟೆಗೆ ಮಣ್ಣಿನೊಡನೆ ಅಂಟನ್ನು ಮಿಶ್ರಣ ಮಾಡಿ ದಪ್ಪವಾಗಿ ಮಾಡಿ ಚಿತ್ರಿಸುತ್ತಾರೆ. ಭಾರತದಲ್ಲೇ ದೊಡ್ಡಗಾತ್ರದ ಗಂಜೀಫ ವಿಷ್ಣುಪುರದ್ದು. ದಶಾವತಾರದ ಗಂಜೀಫ ಇಲ್ಲಿ ಪ್ರಸಿದ್ಧವಾಗಿದೆ.

ಒರಿಸ್ಸದ ಗಂಜೀಫ ಮೈಸೂರು ಚಿತ್ರಗಳಿಗಿಂತ ತೆಳುವಾಗಿವೆ. ಇಲ್ಲಿಯ ನವಗುಂಜಾರ ಗಂಜೀಫದ 96 ಎಲೆಗಳು ವಿಶೇಷತೆಯಿಂದ ಕೂಡಿವೆ. ಒರಿಸ್ಸದಲ್ಲಿ ಸಂಪ್ರದಾಯಬದ್ಧವಾದ, ಇಂದಿಗೂ ಜೀವಂತ ವಿರುವಂತೆ ಭಾಸವಾಗುವ ಬೇರೆಬೇರೆ ಆಟಗಳ ಕಟ್ಟನ್ನು ತಯಾರಿಸುತ್ತಾರೆ. ಜೊತೆಗೆ ಗಂಜೀಫ ಇಡಲು ಗಂಜೀಫ ಪೆಟ್ಟಿಗೆಯನ್ನೂ ತಯಾರಿಸುತ್ತಾರೆ. ಪೆಟ್ಟಿಗೆಯ ಸುತ್ತ ಆಟದಲ್ಲಿನ ಚಿತ್ರಗಳನ್ನು ರಚಿಸಿರುತ್ತಾರೆ. ಈ ಚಿತ್ರ ಸಂಪುಟಗಳು ಅಲ್ಲಿ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ರಾಜಸ್ತಾನದಲ್ಲಿ ಚಿಕ್ಕಚಿಕ್ಕ ಗಂಜೀಫ ಮಾಡುತ್ತಾರೆ. ಇಲ್ಲಿನ ಎಲೆಗಳಲ್ಲಿ ಮೊಗಲ್ ಶೈಲಿ ವಿಶೇಷ. ಪತ್ರಗಳ ಹಿಂಭಾಗದಲ್ಲೂ ಚಿತ್ರ ಬಿಡಿಸಿರುವುದನ್ನು ಮೊಗಲ್ ಗಂಜೀಫದಲ್ಲಿ ಕಾಣಬಹುದಾಗಿದೆ. ಶ್ರೀರಂಗಪಟ್ಟಣದ ಮೊಗಲ್ ಗಂಜೀಫಗಳ ಹಿಂಭಾಗದಲ್ಲಿ ಚಿತ್ರಗಳಿವೆ. ಕುಸುರಿ ಕೆಲಸದಿಂದ ಕೂಡಿದ ಈ ಎಲೆಗಳು ರಾಜಸ್ತಾನದವುಗಳಂತೆ ಚಿಕ್ಕ ಚಿಕ್ಕವಾಗಿ ಒಂದೂವರೆ ಇಂಚು ವೃತ್ತದಲ್ಲಿರುತ್ತವೆ. ರಾಜಸ್ತಾನದ ಗಂಜೀಫ ಸಾಂಪ್ರದಾಯಿಕ ಚಿಕಣಿ ಚಿತ್ರಗಳಷ್ಟು ಸುಂದರವಾಗಿರುವುದಿಲ್ಲ.

ಸಾವಂತವಾಡಿಯ ಮರಾಠ ಗಂಜೀಫಗಳು ತೆಳು ಕಾಗದದಲ್ಲಿ ಮಾಡಿದವು. ಇಲ್ಲಿನ ಗಂಜೀಫ ಚಿತ್ರಗಳು ಹೆಚ್ಚು ಪಾರ್ಶ್ವ ಭಂಗಿಯಲ್ಲಿವೆ. ಪುಣೆಯಲ್ಲಿ ಹಿಂದೆ ದಶಾವತಾರದ 120 ಎಲೆಗಳನ್ನು ಮುದ್ರಿಸಿ ಮಾರುತ್ತಿದ್ದರು. ಪುಟ್ಟವಾದ ಈ ಎಲೆಗಳು ಆಟಕ್ಕೆ ಉಪಯೋಗಿಸಲು ಅನುಕೂಲಕರವಾಗಿರುತ್ತವೆ. ಕರ್ನಾಟಕದಲ್ಲಿಯೂ ಹಿಂದೆ ಇವು ಹೆಚ್ಚಾಗಿ ದೊರೆಯುತ್ತಿದ್ದವು.

ಕಾಶ್ಮೀರ ಗಂಜೀಫ ಅಲ್ಲಿನ ಪ್ರಕೃತಿ ಸೌಂದರ್ಯದಿಂದ ಕೂಡಿರುತ್ತಿತ್ತು. ಚಿತ್ತಾರಗಳಲ್ಲಿ ಬಟ್ಟೆಯನ್ನು ಹೆಚ್ಚಾಗಿ ಚಿತ್ರಿಸುತ್ತಿದ್ದ ತೆಳುವರ್ಣಗಳನ್ನೂ ಧಾರಾಳವಾಗಿ ಬಳಸಲಾಗುತ್ತಿತ್ತು. ದಶಾವತಾರ ಪ್ರಸಿದ್ಧವಾಗಿತ್ತು. ಇಂದು ಅಲ್ಲಿ ಗಂಜೀಫ ನಶಿಸಿ ಹೋಗಿದೆ.

ನೇಪಾಳದ ದಶಾವತಾರ ಗಂಜೀಫ ಹಿಂದೆ ದೊರೆಯುತ್ತಿತ್ತು. ಇಲ್ಲಿನ ಗಂಜೀಫ ಎಲೆಗಳ ಸುತ್ತ ಕೈವಾರದಿಂದ ವೃತ್ತವನ್ನೆಳೆಯದೆ ಹಸ್ತದಿಂದ ಹಾಕಲಾಗುತ್ತಿತ್ತು. ದಶಾವತಾರವನ್ನು ವಿಶೇಷ ರೀತಿಯಿಂದ ಕಥೆಯೊಡನೆ ಚಿತ್ರಿಸಲಾಗಿತ್ತು. ಇವನ್ನು ವಿರಳವಾಗಿ ಇಂದಿಗೂ ಅಲ್ಲಿ ಕಾಣಬಹುದು.



ಆಟದ ಎಲೆಯ ಒಂದು ಮಾದರಿ

ಮೊಗಲ್ ಶೈಲಿಯ ಗಂಜೀಫ ಕುಸುರಿ ಕೆಲಸದೊಡನೆ ಅತ್ಯಂತ ನಾಜೂಕಾಗಿ ನಿರ್ಮಾಣವಾಗುತ್ತಿತ್ತು. ಹಳೆಯ ಸಾಂಪ್ರದಾಯಿಕ ಬಣ್ಣವನ್ನು ಉಪಯೋಗಿಸದೆ ಆಧುನಿಕ ತೈಲ ವರ್ಣವನ್ನು ಇವರು ಬಳಸುತ್ತಾರೆ.

ಕೆಲವು ಕಡೆ ತೈಲವರ್ಣವನ್ನು ನೀರಿನ ಪುಡಿ ಬಣ್ಣಗಳ ಮಿಶ್ರಣದಿಂದ ತುಂಬಾ ಹೊಳಪು ಬರುವಂತೆ ಮಾಡುತ್ತಾರೆ.



ವೈದ್ಯರಿಂದ ರೋಗಿಯ ಪರೀಕ್ಷೆ

ಕ್ರೀಡಾಪತ್ರ ನಮ್ಮ ದೇಶದ ಹಲವಾರು ಕಡೆ ಇತ್ತು. ತಮಿಳುನಾಡು, ಕೇರಳ ಮುಂತಾದೆಡೆ ಇದು ಕ್ರಮೇಣ ನಶಿಸಿಹೋಯಿತು. ಲಂಡನ್ನಿನ ವಿಕ್ಟೋರಿಯಾ ಅಂಡ್ ಆಲ್ಬರ್ಟ್ ವಸ್ತುಸಂಗ್ರಹಾಲಯದಲ್ಲಿ ವಿವಿಧ ಬಗೆಯ ಗಂಜೀಫಗಳನ್ನು ಪ್ರದರ್ಶಿಸಲಾಗಿದೆ. ಭಾರತದ ಗಂಜೀಫ ಕಲೆ ಬಗ್ಗೆ ಒಂದು ಪುಸ್ತಕವನ್ನೂ ಅದು ಪ್ರಕಟಿಸಿದೆ. (ಆರ್.ಬಿ.)

**ಗಂಡಭೇರುಂಡ :** ಎರಡು ತಲೆಗಳುಳ್ಳ ಒಂದು ಪೌರಾಣಿಕ ಪಕ್ಷಿ. ಚೂಪು ಕೊಕ್ಕಿನ ತಲೆಗಳನ್ನು ಎರಡು ದಿಕ್ಕುಗಳಿಗೆ ತಿರುಗಿಸಿಕೊಂಡು ರೆಕ್ಕೆಪುಕ್ಕಗಳನ್ನು ಹರಡಿಕೊಂಡಂತೆ ತೋರಿಸುವ ಈ ಪಕ್ಷಿಯ ಚಿತ್ರ ಹಿಂದಿನಿಂದಲೂ ಪ್ರಭುತ್ವಲಾಂಛನವಾಗಿ ಕರ್ನಾಟಕದ ಹಲವು ರಾಜವಂಶಗಳಲ್ಲಿ ಪ್ರಚಲಿತವಾಗಿತ್ತು. ಇದು ಇಂದಿಗೂ ಕರ್ನಾಟಕದ ಸರ್ಕಾರದ ರಾಜ್ಯಮುದ್ರೆಯಲ್ಲಿ ಉಳಿದುಕೊಂಡಿದೆ.

ಈ ಪಕ್ಷಿಯ ಕಲ್ಪನೆ ಬಹು ಪ್ರಾಚೀನವಾದುದು. ಇದರ ಭೌಗೋಳಿಕ ವ್ಯಾಪ್ತಿಯೂ ವಿಶಾಲ. ತುರ್ಕಿ ಮತ್ತು ಇರಾಕ್ ದೇಶಗಳಲ್ಲಿ ದೊರಕಿರುವ, ಕ್ರಿ.ಪೂ.1000ಕ್ಕಿಂತಲೂ ಮುಂಚಿನ, ಕೆಲವು ಹಿಟ್ಟೈಟ್ ಕಲಾಕೇಂದ್ರಗಳಲ್ಲಿ ಗಂಡಭೇರುಂಡ ಶಿಲ್ಪಿತವಾಗಿದೆ. ಆದರೆ ಇದಕ್ಕೂ ಹಿಂದೆ ಈಜಿಪ್ಟ್, ಸುಮೇರಿಯ ಮತ್ತು ಆರ್ಯ ಸಂಸ್ಕೃತಿಗಳಲ್ಲಿ ಪ್ರಚಲಿತವಾಗಿದ್ದ, ರೆಕ್ಕೆಯಿಂದ ಕೂಡಿದ ಸೂರ್ಯಚಕ್ರವೂ ಜೀವವೃಕ್ಷವೂ ಈ ಕಲ್ಪನೆಗೆ ಮೂಲವೆಂದೂ ಇವು ಸಂಯೋಜನೆಗೊಂಡು ಗಂಡಭೇರುಂಡ ರೂಪುಗೊಂಡಿತೆಂದೂ ಅಭಿಪ್ರಾಯವಿದೆ. ಈಜಿಪ್ಟ್, ಅಸ್ಸೀರಿಯ ಮೊದಲಾದ ದೇಶಗಳಲ್ಲಿ ಇದು ಫಲವಂತಿಕೆಯ ಆರಾಧನೆಗೆ (ಫರ್ಟಿಲಿಟಿ ಕಲ್ಟ್) ಸಂಬಂಧಪಟ್ಟ ಚಿಹ್ನೆಯಾಗಿತ್ತು ಎಂದು ಊಹಿಸಲಾಗಿದೆ. ಸಿಥಿಯನರಿಂದ ಇದು ರಷ್ಯ, ಜರ್ಮನಿ ಮೊದಲಾದ ದೇಶಗಳಿಗೆ ಹರಡಿತೆಂದು ಕೆಲವರ ನಂಬಿಕೆ. ಭಾರತ ಉಪಖಂಡಕ್ಕೆ ಸಂಬಂಧಿಸಿದಂತೆ ತಕ್ಷಶಿಲೆಯಲ್ಲಿ ದೊರಕಿರುವ ಕ್ರಿಸ್ತಶಕಾರಂಭ ಕಾಲದ ಒಂದು ಶಿಲ್ಪ ಅತ್ಯಂತ ಪ್ರಾಚೀನವಾದುದು.

ವಿಷ್ಣುವಿನ ವಾಹನನಾದ ಗರುಡ, ಋಗ್ವೇದದಲ್ಲಿ ಬರುವ ಎರಡು ಹಕ್ಕಿಗಳು -ಇವುಗಳಿಂದ ಎರಡು ತಲೆಗಳುಳ್ಳ ಗಂಡಭೇರುಂಡ ಪಕ್ಷಿ ವಿಕಾಸಗೊಂಡಿರಬಹುದೆಂದೂ ಊಹಿಸಲಾಗಿದೆ. ವಿಷ್ಣು ನರಸಿಂಹಾವತಾರವನ್ನು ಎತ್ತಿ ಹಿರಣ್ಯಕಶಿಪುವನ್ನು ಸಂಹಾರ ಮಾಡಿದಮೇಲೂ ಅವನ ಕೋಪ ಶಮನವಾಗದೆ ಇದ್ದು, ಅವನಿಂದ ಇಡೀ ವಿಶ್ವವೇ ನಾಶವಾದೀತೆಂಬ ಅಂಜಿಕೆ ಮೂಡಿದಾಗ ದೇವತೆಗಳ ಪ್ರಾರ್ಥನೆಯಂತೆ ಶಿವ ಶರಭಾವತಾರ ಎತ್ತಿ ನರಸಿಂಹನನ್ನು ಎದುರಿಸಿದ. ಆಗ ವಿಷ್ಣು ಶರಭನನ್ನು ಅಡಗಿಸಲು ಗಂಡಭೇರುಂಡನಾದನೆಂದು ಪುರಾಣಗಳ ಹೇಳಿಕೆ. ಇದು ಶರಭಕ್ಕಿಂತ ಹೆಚ್ಚು ಶಕ್ತಿಯುತವಾದ್ದೆಂದೂ ಶರಭವೇ ಇದಕ್ಕೆ ಆಹಾರವೆಂದೂ ಹೇಳಲಾಗಿದೆ. ಗಂಡಭೇರುಂಡ ಶಕ್ತಿಯ ಪರಾಕಾಷ್ಠೆಯ ಚಿಹ್ನೆಯೆನಿಸಿದೆ. ಬಹುಶಃ ಇದೇ ಕಾರಣದಿಂದ ತಮ್ಮ ಪ್ರಭುತ್ವದ ಪರಮಶಕ್ತಿಯ ಸಂಕೇತವಾಗಿರುವಂತೆ ರಾಜರು ಗಂಡಭೇರುಂಡವನ್ನು ರಾಜಚಿಹ್ನೆಯಾಗಿ ಬಳಸಿಕೊಂಡಿರಬಹುದು.

ಶಿವಮೊಗ್ಗ ಜಿಲ್ಲೆ ಬಳ್ಳಿಗಾವೆಯಲ್ಲಿ ಇದ್ದ ಪ್ರತಿಮೆ ಕರ್ನಾಟಕದ ಗಂಡಭೇರುಂಡ ಶಿಲ್ಪಗಳಲ್ಲಿ ಅತ್ಯಂತ ಪ್ರಾಚೀನವಾದುದು. ಎತ್ತರವಾದ ಸ್ತಂಭವೊಂದರ ಮೇಲೆ ನಿಂತಿದ್ದ ಈ ಶಿಲ್ಪ ಸುಮಾರು ಮಾನವ ಪ್ರಮಾಣವಾದ್ದು. ದೇಹ ಮನುಷ್ಯಾಕಾರದ್ದಾಗಿದ್ದು ಕಂಠದಿಂದ ಮೇಲೆ ಗಿಡುಗ ಪಕ್ಷಿಯದರ ರೀತಿಯ ಎರಡು ತಲೆಗಳಿವೆ. ಇದು ರಾಕ್ಷಸರನ್ನು ನುಂಗುತ್ತಿರುವಂತೆ ಚಿತ್ರಿಸಲಾಗಿದೆ. ಈ ಸ್ತಂಭದ ಅಡಿಯಲ್ಲಿರುವ ಶಾಸನದಲ್ಲಿ ಇದನ್ನು ಭೇರುಂಡೇಶ್ವರ ದೇವರೆಂದು ಹೆಸರಿಸಿದೆ. ಕಲ್ಯಾಣದ ಚಾಳುಕ್ಯರ ಮಹಾಮಂಡಲೇಶ್ವರನಾಗಿದ್ದ ಚಾಮುಂಡರಾಯರಸ ಶಕ 969ರಲ್ಲಿ (1047) ಇದನ್ನು ಸ್ಥಾಪಿಸಿದನೆಂದು ಅದೇ ಶಾಸನದಿಂದ ತಿಳಿಯುತ್ತದೆ.

ಬಳ್ಳಿಗಾವೆಯ ಭೇರುಂಡೇಶ್ವರ

ಹೊಯ್ಸಳ ಶಿಲ್ಪದಲ್ಲಿಯ 'ನಾಶದ ಸರಪಣಿ'ಯ ಶಿಲ್ಪಗಳಲ್ಲಿ ಗಂಡಭೇರುಂಡಕ್ಕೆ ಉಚ್ಚ ಸ್ಥಾನವನ್ನು ನೀಡಲಾಗಿದೆ. ಬೇಲೂರಿನ ಕೇಶವ

ದೇವಾಲಯ (1117) ಮತ್ತು ಕೋರಮಂಗಲದ ಬೂಚೇಶ್ವರ ದೇವಾಲಯಗಳಲ್ಲಿ (1173) ಇದನ್ನು ನೋಡಬಹುದು. ಜಿಂಕೆಯನ್ನು ನುಂಗುತ್ತಿರುವ ಹೆಬ್ಬಾವನ್ನು ಆನೆಯೊಂದು ತನ್ನ ಸೊಂಡಿಲಿನಲ್ಲಿ ಸಿಕ್ಕಿಸಿಕೊಂಡಿದೆ. ಆನೆಯನ್ನು ಸಿಂಹವೂ ಸಿಂಹವನ್ನು ಶರಭವೂ ಶರಭವನ್ನು ಗಂಡಭೇರುಂಡವೂ ಕೊಲ್ಲುತ್ತಿವೆ.

ಗಂಡಭೇರುಂಡ ಈಚಿನ ಒಂದು ಕಲಾಕೃತಿ

ಕರ್ನಾಟಕದಲ್ಲಿ ಗಂಡಭೇರುಂಡವನ್ನು ಲಾಂಛನವಾಗಿ ಬಳಸಲು ಆರಂಭವಾದದ್ದು ಬಹುಶಃ 13ನೆಯ ಶತಮಾನದ ಅಂತ್ಯದಲ್ಲಿ. ಹೊಯ್ಸಳ 3ನೆಯ ನರಸಿಂಹ (1253-92) ಮತ್ತು 3ನೆಯ ಬಲ್ಲಾಳ (1292-1342) ಇವರ ಕಾಲದ ಕೆಲವು ಶಿಲಾಶಾಸನಗಳ ಮೇಲೆ ಗಂಡಭೇರುಂಡವನ್ನು ಬಿಡಿಸಲಾಗಿದೆ. ವಿಜಯನಗರದ ಸಮ್ರಾಟನಾಗಿದ್ದ ಅಚ್ಯುತರಾಯನ (1530-42) ಚಿನ್ನದ ಮತ್ತು ತಾಮ್ರದ ನಾಣ್ಯಗಳ ಮೇಲೆ ಗಂಡಭೇರುಂಡದ ಮುದ್ರೆಯಿದೆ. ನಾಣ್ಯಗಳ ಮುಮ್ಮುಖದಲ್ಲಿ ಗಂಡಭೇರುಂಡ ತನ್ನ ಬೆನ್ನು ಕಾಣುವಂತೆ ಮೇಲಕ್ಕೆ ಹಾರುತ್ತಿರುವುದನ್ನು ತೋರಿಸಿದೆ. ಸೊಂಡಿಲು ಬಾಲಗಳನ್ನೆತ್ತಿಕೊಂಡಿರುವ ಭಯಗ್ರಸ್ತವಾದ ಆನೆಗಳನ್ನು ಆ ಪಕ್ಷಿ ತನ್ನೆರಡು ಕೊಕ್ಕುಗಳಲ್ಲೂ ಕಾಲುಗಳಲ್ಲೂ ಸಿಕ್ಕಿಸಿಕೊಂಡಿದೆ.

ವಿಜಯನಗರ ಚಕ್ರಾಧಿಪತ್ಯದ ಪತನವಾದ ಅನಂತರ ಅನೇಕ ಪಾಳೆಯಗಾರರು ಸ್ವತಂತ್ರರಾಗಿ ಆಳಿದರಷ್ಟೆ. ಮಧುರೆಯ ನಾಯಕರೂ ಕೆಳದಿಯ ನಾಯಕರೂ ಗಂಡಭೇರುಂಡವನ್ನು ಮುಂದುವರಿಸಿಕೊಂಡು ಬಂದರು. 16ನೆಯ ಶತಮಾನಕ್ಕೆ ಸೇರಿದ ಕೆಳದಿಯ ವೀರಭದ್ರ ದೇವಾಲಯದ ಭುವನೇಶ್ವರಿಯಲ್ಲಿರುವ ಗಂಡಭೇರುಂಡಶಿಲ್ಪ ವಿಜಯನಗರದ ಗಂಡಭೇರುಂಡದಂತೆಯೇ ತನ್ನ ಕಾಲುಗಳಲ್ಲಿ ಆನೆಗಳನ್ನು ಸಿಕ್ಕಿಸಿಕೊಂಡಿದೆ. ಬಲಗಡೆಯ ಕಾಲಿಗೆ ಸಿಕ್ಕಿಸಿಕೊಂಡಿರುವ ಆನೆಯ ಸೊಂಡಿಲಿನಿಂದ ಮನುಷ್ಯನೊಬ್ಬ ತೂಗಾಡುತ್ತಿದ್ದಾನೆ. ಗಂಡಭೇರುಂಡ ತನ್ನ ಎರಡು ಕೊಕ್ಕುಗಳಲ್ಲಿಯೂ ಹರಿತವಾದ ಉಗುರುಗಳಿಂದ ತಮ್ಮ ಕಾಲುಗಳಿಂದ ಆನೆಗಳನ್ನು ಎತ್ತಿಕೊಂಡಿರುವ ಸಿಂಹಗಳನ್ನು ಕಚ್ಚಿಕೊಂಡಿದೆ. ಈ ಗಂಡಭೇರುಂಡ ಶಿಲ್ಪ ಒಂದು ಶ್ರೇಷ್ಠ ಕಲಾಕೃತಿ.

ಮೈಸೂರು ರಾಜರು ವಿಜಯನಗರದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಾಗ ತಮ್ಮ ಧ್ವಜದ ಮೇಲೆ ಗಂಡಭೇರುಂಡವನ್ನು ಪ್ರತಿಷ್ಠಾಪಿಸಿಕೊಂಡರು. ಮೈಸೂರು ಅರಸರ ಲಾಂಛನದಲ್ಲಿ ಮಧ್ಯದಲ್ಲಿ ಗಂಡಭೇರುಂಡವೂ ಮೂರು ಪಂಜಾಗಳನ್ನೂರಿ ಮುಂದಿನ ಬಲಪಂಜವನ್ನೆತ್ತಿ ಬಲಕ್ಕೆ ನೋಡುತ್ತ ನಡೆಯುವಂತಿರುವ ಸಿಂಹವೂ ಯಾಳಿಗಳೂ ಇದ್ದುವು. ಮೈಸೂರು ರಾಜ್ಯ ನಿರ್ಮಾಣದೊಡನೆ ಆ ಲಾಂಛನವೂ ಉಳಿದುಬಂದು, ಇಂದಿನ ಕರ್ನಾಟಕ ಸರ್ಕಾರದ ಲಾಂಛನದಲ್ಲಿ, ಭಾರತದ ಲಾಂಛನದ ಕೆಳಗಡೆ ಎರಡು ಸಿಂಹಗಳ ಮಧ್ಯದಲ್ಲಿರುವ ಫಲಕದಲ್ಲಿ ವಿರಾಜಿತವಾಗಿದೆ. *

**ಗಜಾಂಕುಶ** : ಕನ್ನಡ ಸಾಹಿತ್ಯದಲ್ಲಿ ಗಜಾಂಕುಶನೆಂದೂ ಗಜಗನೆಂದೂ ಪ್ರಸಿದ್ಧಿ ಪಡೆದ ವ್ಯಕ್ತಿಯ ನಿಜನಾಮ ನಾರಾಯಣ. ಇಂಡಿ ತಾಲ್ಲೂಕಿನ ಸಾಲೊಟಗಿಯ ಶಿಲಾಲೇಖನದಲ್ಲಿ ಈತನನ್ನು ನಾರಾಯಣ ಗಜಾಂಕುಶನೆಂದು ಕರೆಯಲಾಗಿದೆ. ಈತ ಮಾನ್ಯಖೇಟದ 2ನೆಯ ಕೃಷ್ಣನಿಗೆ (878-914) ಮಂತ್ರಿಯೂ ಸಂಧಿವಿಗ್ರಹಿಯೂ ಆಗಿದ್ದು ಆತನಿಗೆ ಬಲಗೈಯಂತಿದ್ದ. ಈತನ ಊರು ಮಾಹಿಷವಿಷಯದ ಕಾಂಚನ ಮುದುವೊಟಿಲ್. ದಾಮಪಾರ್ಯ ಈತನ ತಂದೆ. ಕೌಂಡಿಣ್ಯ ಗೋತ್ರದ ವಾಜಸನೇಯ ಕಾಣ್ವ ಶಾಖಾಧ್ಯಾಯಿಯಾದ ಈ ನಾರಾಯಣ ಗಜಾಂಕುಶ ರಾಜವಿದ್ಯೆಯಲ್ಲಿ ಪಾರಂಗತನೂ ಕವಿಗಳಲ್ಲಿ ಮುಖ್ಯನೂ ಪ್ರಿಯಂವದನೂ ಧರ್ಮರತನೂ ಆಗಿದ್ದ. ಸಾಲೊಟಗಿಯಲ್ಲಿ ಈತ ವಿಶಾಲವಾದ ಶಾಲೆಯೊಂದನ್ನು ಸ್ಥಾಪಿಸಿದ. ಅದು ಘಟಿಕಾ ಸ್ಥಾನವಾಗಿದ್ದಿತು. ಈ ಶಾಲೆಗೆ ಪಾವಿಟ್ಟಿಗೆ (ಸಾಲೊಟಗಿ) ಗ್ರಾಮದ ಪ್ರಭುವಾದ ಚಕ್ರಾಯುಧಬುಧ ದತ್ತಿಬಿಟ್ಟ ವಿಷಯ ಶಾಸನದಲ್ಲಿ ನಿರೂಪಿತವಾಗಿದೆ.

ಗಜಾಂಕುಶನನ್ನು ದುರ್ಗಸಿಂಹ (ಸು.1031), ಶ್ರೀಧರಾಚಾರ್ಯ, ನಯಸೇನ, ರುದ್ರಭಟ್ಟ, ಆಚಣ್ಣ, ಆಂಡಯ್ಯ, ಕುಮದೇಂದು, ನಾಗರಾಜ, ಮಧುರ, ಪಾರ್ಶ್ವಪಂಡಿತ, ವಾಣೀವಲ್ಲಭ ಮೊದಲಾದ ಕವಿಗಳು ಸ್ತುತಿಸಿದ್ದಾರೆ. ಇವನ ಕೃತಿಗಳಲ್ಲಿ ಉದಾತ್ತಯಶ, ಅರ್ಥಗೌರವ, ಸದರ್ಥದೃಷ್ಟಿ, ಶೌರ್ಯ, ಒಳ್ಪು, ಪ್ರಿಯಚಿತ್ತವೃತ್ತಿ, ಬಿನ್ನಣ ಮೊದಲಾದ ಗುಣಗಳಿವೆಯೆಂದು ಪ್ರಶಂಸಿಸಿದ್ದಾರೆ. ಈತನ ಕೃತಿಗಳನ್ನು ಪ್ರಮಾಣ ಗ್ರಂಥಗಳೆಂದು 2ನೆಯ ನಾಗವರ್ಮ, ಕೇಶಿರಾಜ, ಮಲ್ಲಿಕಾರ್ಜುನ ಮೊದಲಾದವರು ಮನ್ನಿಸಿದ್ದಾರೆ. ಇಷ್ಟಾದರೂ ಇದುವರೆವಿಗೂ ಈತನ ಯಾವುದೇ ಕೃತಿ ಉಪಲಬ್ಧವಿಲ್ಲ. ಕಾವ್ಯಾವಲೋಕನದಲ್ಲಿ ಈತನ ಕೃತಿಯೊಂದರ ಒಂದು ಪದ್ಯ ಉದ್ಧೃತವಾಗಿದೆ. ದುರ್ಗಸಿಂಹ ಗಜಾಂಕುಶನನ್ನು

'ತ್ರಿಜಗನ್ನುತವಾಗ್ವಿಭವದಿನಜಂಗೆ ನೂರ್ಮಡಿಯೆನಿಪ್ಪ ಪೆಂಪಂ ತಳೆದಂ
ವಿಜಿತಾರಿ ದಂಡನಾಯಕ ಗಜಾಂಕುಶಂ ಕುಶಲವಾಂಛಿತಪ್ರಿಯಶೌರ್ಯಂ'

ಎಂದು ಸ್ಮರಿಸಿರುವುದರಿಂದ ಈತ ದಂಡನಾಯಕನೂ ದೊಡ್ಡ ಕವಿಯೂ ಆಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಕವಿಕಾಮ (ಸು.1200) ತನ್ನ 'ಶೃಂಗಾರರತ್ನಾಕರ'ದಲ್ಲಿ ತನಗಿಂತ ಹಿಂದೆ ಇದ್ದ 'ಶೃಂಗಾರ' ಕರ್ತೃಗಳ ಹೆಸರುಗಳನ್ನು ಹೇಳಿರುವ ಪದ್ಯದಲ್ಲಿ ನಾರಾಯಣ ಎಂಬ ಹೆಸರಿನ ಉಲ್ಲೇಖವಿದೆ. ಈ ನಾರಾಯಣನೇ ಗಜಾಂಕುಶನಾಗಿದ್ದು ಈತ ಸ್ಮರಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥವೊಂದನ್ನು ರಚಿಸಿರಬೇಕು.

ಗಜಾಂಕುಶ ತೆಲುಗು ಭಾಷೆಯಲ್ಲೂ ಗ್ರಂಥ ರಚಿಸಿರಬಹುದಾಗಿ ವಿದ್ವಾಂಸರು ಊಹಿಸುತ್ತಾರೆ. ಏಕೆಂದರೆ ಪ್ರಾಚೀನ ತೆಲುಗು ಕವಿಗಳ ಬಗ್ಗೆ ಬರೆಯುತ್ತ ತೆಲುಗು ಕವಿ ಮಡಿಕಿ ಸಿಂಗ (ಸು.1400) 'ಸಕಲನೀತಿಸಮ್ಮತಮು' ಎಂಬ ತನ್ನ ಗ್ರಂಥದಲ್ಲಿ ಗಜಾಂಕುಶ ಎಂಬ ಒಬ್ಬ ಕವಿ ಇದ್ದಂತೆ ತಿಳಿಸಿದ್ದಾನೆ. ತೆಲುಗು ಛಂದೋಗ್ರಂಥ ಕವಿಗಜಾಂಕುಶಮು ಎಂಬುದು ಈತನ ಸಂಸ್ಕೃತ ಕೃತಿಯ ಅನುವಾದವಾಗಿರಬಹುದು ಎಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಗಜಾಂಕುಶನೆಂಬೊಬ್ಬ ಬೇರೆ ಜೈನಕವಿ ಇದ್ದನೆನ್ನುವವರೂ ಇದ್ದಾರೆ. ಇದು ಸರಿಯಲ್ಲ, ಎಲ್ಲರಿಂದಲೂ ಮಾನಿತನಾದ ವ್ಯಕ್ತಿ ಬ್ರಾಹ್ಮಣಕವಿ ಗಜಾಂಕುಶನೊಬ್ಬನೇ ಎನ್ನುವ ಅಭಿಪ್ರಾಯದವರೂ ಇದ್ದಾರೆ. ಹಾಗೆಯೇ ಕನ್ನಡ ಕವಿಗಳು ಸ್ತುತಿಸಿರುವ ಗಜಾಂಕುಶನೂ ಶಾಸನೋಕ್ತ ನಾರಾಯಣ ಗಜಾಂಕುಶನೂ ಭಿನ್ನರೆಂಬ ಅಭಿಪ್ರಾಯವೂ ಇದೆ.

(ಎಸ್.ಜಿ.ಎ.)

**ಗಜೇಂದ್ರಗಡ :** ಗದಗ ಜಿಲ್ಲೆ ರೋಣ ತಾಲ್ಲೂಕಿನಲ್ಲಿರುವ ಒಂದು ಐತಿಹಾಸಿಕ ಸ್ಥಳ ಮತ್ತು ಪಟ್ಟಣ. ಹುಬ್ಬಳ್ಳಿ ಸೊಲ್ಲಾಪುರ ರೈಲುಮಾರ್ಗದ ಮೇಲೆ ಇರುವ ಮಲ್ಲಾಪುರ ರೈಲ್ವೆ ನಿಲ್ದಾಣದ ಪೂರ್ವಕ್ಕೆ ಸು.35ಕಿಮೀ ದೂರದಲ್ಲಿದೆ. ಜನಸಂಖ್ಯೆ 28,227. ಪಟ್ಟಣ ಪುರಸಭೆ ಆಡಳಿತವಿದ್ದು ಪೌರಸೌಲಭ್ಯಗಳಿವೆ.

ಊರ ಬದಿಯಲ್ಲಿರುವ ಬೆಟ್ಟವೊಂದರ ಮೇಲಿರುವ ಗಜೇಂದ್ರಗಡ ಕೋಟೆಯನ್ನು ಶಿವಾಜಿ ಕಟ್ಟಿಸಿದ. ಕೋಟೆಯ ಒಳಭಾಗದಲ್ಲಿ ಒಂದು ಮದ್ದಿನ ಮನೆಯೂ ಎರಡು ಕೊಳಗಳೂ ಇವೆ. ಈ ಊರಿನಲ್ಲಿರುವ ವಿರೂಪಾಕ್ಷ ದೇವಾಲಯ ಜೀರ್ಣಸ್ಥಿತಿಯಲ್ಲಿದೆ. ಅದರ ಸಭಾಮಂಟಪ ಅಪೂರ್ಣವಾಗಿದೆ. ದೇವಾಲಯದ ದ್ವಾರದ ಮೇಲೆ ಸರಸ್ವತಿ ವಿಗ್ರಹವಿದೆ. ಊರಿನ ಹೊರಗೆ ದುರ್ಗಾದೇವಿಯ ದೇವಾಲಯವಿದೆ. ಇದು ಗೋಳಾಕಾರದ ಮುಚ್ಚಿಗೆಯಿಂದಲೂ ದುಂಡನೆಯ ಕಂಬಗಳಿಂದಲೂ ಕೂಡಿದೆ. ಊರಿನ ಸ್ಮಶಾನದ ಹತ್ತಿರ ಇರುವ ಹೊಲದಲ್ಲಿ ಒಂದು ರಾಮಲಿಂಗ ದೇವಾಲಯವಿದೆ. ಅದರಲ್ಲಿ ಮಂಟಪವೂ ದುಂಡನೆಯ ಕಂಬಗಳೂ ಉಂಟು. ನೇಕಾರರ ಕೇರಿಯಲ್ಲಿ ರಾಮ ದೇವಾಲಯವಿದೆ. ಈ ದೇವಸ್ಥಾನ ಅಪೂರ್ಣವಾಗಿದ್ದರೂ ಒಳ್ಳೆಯ ಸ್ಥಿತಿಯಲ್ಲಿದೆ. ಇಲ್ಲಿರುವ ಪಾಂಡುರಂಗ ದೇವಾಲಯ ಪಾಳು ಬಿದ್ದಿದೆ. ಗಜೇಂದ್ರಗಡದ ಸಮೀಪದಲ್ಲಿರುವ ದೊಡ್ಡ ಗವಿ ಒಂದು ಯಾತ್ರಾ ಸ್ಥಳವೆಂದು ಪರಿಗಣಿಸಲಾಗಿದೆ. ಇದರ ಸಮೀಪದಲ್ಲೇ ಸದಾ ಪ್ರವಹಿಸುವ ಎರಡು ತೀರ್ಥಗಳೂ ಸುಮಾರು 15' ಎತ್ತರದ ಎರಡು ದೀಪಸ್ತಂಭಗಳೂ ಇವೆ. ಬಳಿಯಲ್ಲಿರುವ ವೀರಭದ್ರ ಗುಡಿಯ ಬಾಗಿಲುವಾಡದ ಮೇಲೆ ಗಾರೆಯಲ್ಲಿ ರಚಿಸಿದ ವರ್ಣಮಯ ಮೂರ್ತಿಗಳುಂಟು. ಗುಡಿಯ ಮುಂಭಾಗದಲ್ಲಿ ಅಂತರಗಂಗೆ ಎಂಬ ಸಣ್ಣ ಕೊಳವಿದೆ. ವೀರಭದ್ರನ ಗುಡಿಯಲ್ಲಿರುವ ಗವಿಯ ಉತ್ತರಕ್ಕೆ ಮತ್ತೆರಡು ಗವಿಗಳಿವೆ. ಇವೆರಡರ ಮಧ್ಯದಲ್ಲಿ ಗೋಡೆಯಿದೆ. ಈ ಗವಿಗಳಲ್ಲಿ ಎಣ್ಣೆಗೊಂಡ ಮತ್ತು ಅರಸರಗೊಂಡ ಎಂಬ ಎರಡು ತೀರ್ಥಗಳುಂಟು. ಕಲ್ಲೇಶ್ವರ ದೇವಸ್ಥಾನದಲ್ಲೂ ಪಾತಾಳಗಂಗೆಯೆಂಬ ಹೊಂಡ ಇದೆ. ಇಲ್ಲಿನ ಕಾಲಕಾಲೇಶ್ವರ ದೇವಸ್ಥಾನದಲ್ಲಿ ಚಾಳುಕ್ಯ ನಾಲ್ಕನೆಯ ಸೋಮೇಶ್ವರ, ಯಾದವ ಸಿಂಘಣ ಮತ್ತು ವಿಜಯನಗರದ ಇಮ್ಮಡಿ ಹರಿಹರರ ಆಳಿಕೆಗಳ ಕಾಲದ ನಾಲ್ಕು ಶಾಸನಗಳುಂಟು. (ಎಚ್.ಆರ್.ಆರ್.ಬಿ.)

[illegible]

**ಗಜೇಶ ಮಸಣಯ್ಯ :** 12ನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಅಕ್ಕಲಕೋಟೆಯ ಸಮೀಪದಲ್ಲಿರುವ ಕರಜಿಗೆ ಈತನ ಜನ್ಮಸ್ಥಳ. ಈತ ಮನವಳ್ಳಿಯಲ್ಲಿ ಸಮಾಧಿಸ್ಥನಾದನೆಂದು ಪ್ರತೀತಿ. ಇವನ ಕುರುಹಾಗಿ ಗಜೇಶ್ವರ, ಮಸಣಯ್ಯ ಎಂಬ ಹೆಸರಿನ ಎರಡು ದೇವಾಲಯಗಳುಂಟು. ಇವುಗಳಲ್ಲಿ ಒಂದು ಕರಜಿಗೆಯಲ್ಲೂ ಇನ್ನೊಂದು ಅಳಂದ ತಾಲ್ಲೂಕಿನ ಮನವಳ್ಳಿಯಲ್ಲೂ ಇವೆ. ಈತ ಒಮ್ಮೆ ಗುರುದರ್ಶನಕ್ಕೆಂದು ಹೊರಟು, ದಾರಿಯಲ್ಲಿ ಸಿಕ್ಕಿದ ಹೊಳೆಯಲ್ಲಿ ಶಿವಪೂಜಾಮಗ್ನನಾಗಿರಲು, ಭಯಂಕರವಾದ ಮಳೆ ಬಂದು, ಹೊಳೆ ಉಕ್ಕಿ, ಗಜೇಶ ಮಸಣಯ್ಯನಿದ್ದೆಡೆಯಲ್ಲಿ ಇಬ್ಭಾಗವಾಗಿ ಹರಿಯಿತೆಂಬ ಐತಿಹ್ಯವಿದೆ.

ಈತ ಮಹಾಲಿಂಗ ಗಜೇಶ್ವರ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ 62 ವಚನಗಳು ದೊರೆತಿವೆ. ಇವು ಸತಿಪತಿಭಾವದಿಂದ ಕೂಡಿದವುಗಳಾಗಿವೆ. ಇಲ್ಲಿನ ನುಡಿಗಳಲ್ಲಿ ತೀಕ್ಷ್ಣತೆಯಿದೆ; ಧ್ವನಿಯಲ್ಲಿ ಮಾರ್ದವತೆಯಿದೆ; ಭಾಷೆಯಲ್ಲಿ ಮೋಹಕತೆಯಿದೆ; ಭಕ್ತಿಯ ಪರಾಕಾಷ್ಠತೆಯಿದೆ. ಈತನ ವಚನಗಳನ್ನು ಹಿಂದಣ ಎಲ್ಲ ವಚನ ಸಂಗ್ರಹಕಾರರೂ ಉದಾಹರಿಸುತ್ತ ಬಂದಿರುವುದು ಇವುಗಳ ಹಿರಿಮೆಗೆ ಸಾಕ್ಷಿಯಾಗಿದೆ. (ಬಿ.ಎಸ್.ಎಸ್.)

**ಗಣದಾಸಿ ವೀರಣ್ಣ :** ಸು.1160. ಶಿವಶರಣ ಹಾಗೂ ವಚನಕಾರ. ಅಲ್ಲಮಪ್ರಭು, ಬಸವೇಶ್ವರ, ಅಕ್ಕಮಹಾದೇವಿ ಮೊದಲಾದ ಮಹಾಶರಣಶರಣೆಯರ ಸಮಕಾಲೀನ. ಪಾಲ್ಕುರಿಕೆ ಸೋಮನಾಥನ (ಸು.1299) 'ಸಹಸ್ರಗಣನಾಮ'ದಲ್ಲಿ ಈತನ ಹೆಸರು ಉಲ್ಲೇಖಿತವಾಗಿರುವುದರಿಂದ ಅಮರಗಣದಲ್ಲಿ ಪೂಜ್ಯಸ್ಥಾನವನ್ನು ಪಡೆದುಕೊಂಡಿದ್ದನೆಂದು ತಿಳಿಯುತ್ತದೆ. ಈತ ಹಲವಾರು ವಚನಗಳನ್ನು ಬರೆದಿದ್ದಾನೆ. ನಮ್ಮ ಶಾಂತ ಕೂಡಲಸಂಗಮದೇವ ಎಂಬುದು ಈತನ ವಚನಗಳ ಅಂಕಿತ. ಇವನ ವಚನಗಳಲ್ಲಿ ಆಳವಾದ ಚಿಂತನೆ ಹಾಗೂ ಅನುಭವ ಘನೀಭೂತವಾಗಿದೆ. 'ಗಾಳಿಯಿಲ್ಲದ ದೀಪದಂತೆ' ಈತನ ವಚನಗಳು ಅರ್ಥಶ್ರೀಮಂತಿಕೆಯಿಂದ ಸದಾ ಪ್ರಜ್ವಲಿಸುತ್ತವೆ. ಭಾವದೃಢತೆ ವಚನಗಳಲ್ಲಿ ವ್ಯಕ್ತವಾಗಿ ಈತನ ವ್ಯಕ್ತಿತ್ವಕ್ಕೆ ಸ್ಪಷ್ಟವಾದ ನಿಲುವನ್ನು ಕೊಡುತ್ತದೆ. (ಸಿ.ಕೆ.ಎನ್.)

**ಗಣಿಗಾರಿಕೆ :** ಕರ್ನಾಟಕದಲ್ಲಿ ಗಣಿ ಉದ್ಯಮ ಬಹು ಪ್ರಾಚೀನವಾದುದು. ಕ್ರಿ.ಪೂ.3-2ನೆಯ ಸಹಸ್ರಮಾನಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ನವಶಿಲಾಯುಗದ ಸಂಸ್ಕೃತಿಯ ಹಲವು ನೆಲೆಗಳಲ್ಲಿ ಚಿನ್ನದ ವಸ್ತುಗಳು ದೊರಕಿವೆ. ಹಟ್ಟಿ, ಕೋಲಾರ ಮೊದಲಾದ ಚಿನ್ನದ ಗಣಿ ಪ್ರದೇಶಗಳಲ್ಲಿ ಹಿಂದೆ ಚಿನ್ನ ತೆಗೆಯಲು ತೋಡಲಾಗಿದ್ದ ಕುಳಿಗಳೂ ಅವುಗಳ ಬಳಿಯಲ್ಲಿ ಹಲವೆಡೆ ನವಶಿಲಾಯುಗದ ಮಣ್ಣಿನ ಮಡಕೆಗಳ ಅವಶೇಷಗಳೂ ದೊರಕಿವೆ. ಅಲ್ಲದೆ ಹರಪ್ಪ, ಮೊಹೆಂಜೊದಾರೋಗಳಲ್ಲಿ ದೊರೆತಿರುವ ಚಿನ್ನದ ವಸ್ತುಗಳ ವಿಶ್ಲೇಷಣೆಯಿಂದ ಅವು ಕರ್ನಾಟಕದ ಚಿನ್ನದ ಗಣಿಗಳಿಂದ ಬಂದಿರಬೇಕೆಂದು ವಿಜ್ಞಾನಿಗಳು ನಿಷ್ಕರ್ಷಿಸಿದ್ದಾರೆ. ಕ್ರಿ.ಪೂ.2000ದ ಹೊತ್ತಿಗಾಗಲೇ ಕರ್ನಾಟಕದಲ್ಲಿ ಚಿನ್ನವನ್ನು ಗಣಿಗಳಿಂದ ತೆಗೆಯಲಾಗುತ್ತಿತ್ತು ಹಾಗೂ ಅದರ ಉತ್ಪಾದನೆ ಬೇರೆ ದೇಶಗಳಿಗೂ ಕಳುಹಿಸುವಷ್ಟು ಪ್ರಮಾಣದಲ್ಲಿತ್ತು ಎಂಬುದಕ್ಕೆ ಸಾಕ್ಷ್ಯಗಳಿವೆ. ಅಂದಿನಿಂದಲೂ ಚಿನ್ನದ ಗಣಿಗಾರಿಕೆ ಮುಂದುವರಿದುಕೊಂಡು ಬಂದಿದೆ. 19ನೆಯ ಶತಮಾನದ ಉತ್ತರಾರ್ಧ ಮತ್ತು 20ನೆಯ ಶತಮಾನದ ಆದಿಭಾಗದಲ್ಲಿ ಆಧುನಿಕ ಭೂವಿಜ್ಞಾನಿಗಳು ಚಿನ್ನದ ನಿಕ್ಷೇಪಗಳ ಅನ್ವೇಷಣೆಯನ್ನು ನಡೆಸಿದಾಗ ಕರ್ನಾಟಕದ ಹುನಗುಂದ, ಹೊನ್ನಾವರ, ಹೊನ್ನಾಳಿ, ಪುಂಗಾಮ ಮುಂತಾದ ಸ್ಥಳಗಳಲ್ಲಿ ಪ್ರಾಚೀನರು ಚಿನ್ನಕ್ಕಾಗಿ ತೋಡಿದ್ದ ಗಣಿಗಳು ಕಂಡುಬಂದುವು. ಹೊನ್ನು, ಪೊನ್ನು ಪದಗಳನ್ನು ಒಳಗೊಂಡ ಅನೇಕ ಸ್ಥಳನಾಮಗಳು ಬಹುತೇಕ ಹಿಂದೆ ಚಿನ್ನ ಉತ್ಪಾದನೆ ನಡೆಯುತ್ತಿದ್ದ ಸ್ಥಳಗಳೇ ಆಗಿವೆ. ಕೋಲಾರ ಜಿಲ್ಲೆಯ ಉರಿಗಾಂ, ತುಮಕೂರು ಜಿಲ್ಲೆಯ ಅಜ್ಜನಹಳ್ಳಿ ಮತ್ತು ಬೆಳ್ಳಾರ, ಮೈಸೂರು ಜಿಲ್ಲೆಯ ಅಂಬಳೆ, ವಳಗೆರೆ ಮತ್ತು ನರಸಯ್ಯನ ಪಾಳ್ಯ, ಚಿತ್ರದುರ್ಗ ಜಿಲ್ಲೆಯ ಅಜ್ಜನಹಳ್ಳಿ ಮತ್ತು ಹೊನ್ನೆಮರಡಿ, ಶಿವಮೊಗ್ಗ ಜಿಲ್ಲೆಯ ಕುದುರೆಕೊಂಡ, ನ್ಯಾಮತಿ ಮತ್ತು ಪಲವನಹಳ್ಳಿ ಹಾಸನ ಜಿಲ್ಲೆಯ ಕೆಂಪಿನಕೋಟೆ ಮತ್ತು ಎಳವಾರೆ, ಧಾರವಾಡ ಜಿಲ್ಲೆಯ ಕಪ್ಪತಗುಡ್ಡ, ಚಿನ್ನಮುಳಗುಂದ ಮತ್ತು ಹೊಸೂರು, ಗುಲ್ಬರ್ಗ ಜಿಲ್ಲೆಯ ಮಂಗಳೂರು, ರಾಯಚೂರು ಜಿಲ್ಲೆಯ ಮಸ್ಕಿ, ಬುದಿನಿ ಮತ್ತು ವಂದಲಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಜಲಗಾರಗುಂಡಿ ಮತ್ತು ಸಿದ್ದರಹಳ್ಳಿ ಈ ಸ್ಥಳಗಳಲ್ಲೂ ಚಿನ್ನಕ್ಕಾಗಿ ತೋಡಿದ ಗಣಿ ಕುರುಹುಗಳಿವೆ. ಪ್ರಾಚೀನ ಕಾಲದ ಗಣಿಗಾರರು ಕರ್ನಾಟಕದಲ್ಲಿದ್ದ ವಿವಿಧ ಭಾಗಗಳ ಕಲ್ಲು ಹರಹುಗಳನ್ನು ಪರೀಕ್ಷಿಸಿ, ಅಲ್ಲಲ್ಲಿ ಚಿನ್ನ

ದೊರೆಯುವ ಸಾಧ್ಯತೆಯನ್ನು ಅಳೆದಿದ್ದರು. ಅಂತಹ ಸ್ಥಳಗಳಲ್ಲೆಲ್ಲ ಹಲವಾರು ಅಡಿಗಳವರೆಗೆ ಅಗೆದು ಚಿನ್ನ ತೆಗೆದಿದ್ದಾರೆ. ಅಂತಹ ಪ್ರಾಚೀನ ಗಣಿಗಳಲ್ಲಿ ಹಟ್ಟಿಯ ಗಣಿ ಅತ್ಯಂತ ಆಳವಾಗಿತ್ತು (ಸು.640). ಶಿಸ್ಟ್ ಪ್ರದೇಶದಲ್ಲಿ ಬೆಣಚು ಹೊಡೆಗಳು ಇದ್ದರೂ ಅವುಗಳ ಸಮೀಪದಲ್ಲಿ ಪ್ರಾಚೀನ ಕಾಲದ ಗಣಿ ಕೆಲಸದ ಕುರುಹುಗಳಿಲ್ಲದಿದ್ದರೆ, ಅಲ್ಲಿ ಚಿನ್ನ ದೊರಕುವ ಸಾಧ್ಯತೆಯಿಲ್ಲ. ದೊರಕಿದರೂ ಆರ್ಥಿಕವಾಗಿ ಲಾಭದಾಯಕವಾಗುವಷ್ಟಿರುವುದಿಲ್ಲ. ಹಿಂದೆ ಚಿನ್ನದ ಗಣಿಗಳಿದ್ದ ಪ್ರದೇಶಗಳನ್ನು ಬಿಟ್ಟು ಬೇರೆ ಎಲ್ಲಿಯೂ ಚಿನ್ನದ ನಿಕ್ಷೇಪವಿರುವ ಶಿಲಾಸ್ತರಗಳನ್ನು ಗುರುತಿಸಲಾಗಿಲ್ಲ ಎಂದು ಕರ್ನಾಟಕದ ಚಿನ್ನದ ನಿಕ್ಷೇಪಗಳ ಬಗ್ಗೆ ಒಬ್ಬ ಆಧುನಿಕ ಅನ್ವೇಷಕರು ಹೇಳಿರುವುದು ಪ್ರಾಚೀನ ಕಾಲದ ಗಣಿ ಉದ್ಯಮದ ವ್ಯಾಪಕತೆಯನ್ನು ಸೂಚಿಸುತ್ತದೆ.

ಇದೇ ರೀತಿಯಲ್ಲಿ ಇತರ ಲೋಹಗಳು ಬಳಕೆಗೆ ಬಂದ ತಾಮ್ರಶಿಲಾಯುಗ (ಕ್ರಿ.ಪೂ.2ನೆಯ ಸಹಸ್ರಮಾನ) ಮತ್ತು ಕಬ್ಬಿಣದ ಯುಗ (ಕ್ರಿ.ಪೂ.1ನೆಯ ಸಹಸ್ರಮಾನ) ಈ ಕಾಲಗಳಲ್ಲೂ ಚಿನ್ನವಲ್ಲದೆ ಈ ಲೋಹಗಳ ಗಣಿಗಾರಿಕೆಯೂ ಬೆಳೆಯಿತು. ಚಿತ್ರದುರ್ಗ ಜಿಲ್ಲೆಯ ಇಂಗಳದಾಳು, ಗುಲ್ಬರ್ಗ ಜಿಲ್ಲೆಯ ತಿಂಥಿಣಿ, ಹಾಸನ ಜಿಲ್ಲೆಯ ಕಲ್ಯಾಡಿ ಮೊದಲಾದೆಡೆಗಳಲ್ಲಿ ತಾಮ್ರದ ಅದುರಿಗಾಗಿ ತೆಗೆದ ಕುಳಿಗಳು, ಅವುಗಳ ಸಂಸ್ಕರಣಕ್ಕಾಗಿ ಉಪಯೋಗಿಸುತ್ತಿದ್ದ ಮೂಸೆಗಳು ಮತ್ತು ಇತರ ಮಡಕೆಗಳು ಬೆಳಕಿಗೆ ಬಂದಿವೆ. ಕರ್ನಾಟಕದ ಕಬ್ಬಿಣ ಯುಗದ ಬೃಹತ್ ಶಿಲಾಸಮಾಧಿಗಳಲ್ಲಿ ಅನೇಕ ಕಬ್ಬಿಣದ ಆಯುಧಗಳನ್ನು ಶವಾವಶೇಷಗಳೊಡನೆ ಹೂತಿರುವುದು ಕಂಡುಬಂದಿದೆ. ಆ ಆಯುಧಗಳ ಸಂಖ್ಯೆಯನ್ನೇ ಗಮನಿಸಿದರೆ ಕಬ್ಬಿಣ ಈ ದೇಶದಲ್ಲಿ ಅಗ್ಗವಾದ ಲೋಹವಾಗಿತ್ತು, ಅದರ ಉತ್ಪನ್ನ ವಿಶೇಷವಾಗಿ ಆಗುತ್ತಿದ್ದಿರಬೇಕು ಎಂಬುದು ಸ್ಪಷ್ಟವಾಗುತ್ತದೆ. ಬಳ್ಳಾರಿ ಜಿಲ್ಲೆಯ ಕುಡುತಿನಿ ಬಳಿ ಕಬ್ಬಿಣದ ಅದುರನ್ನು ತೆಗೆದು ಸಂಸ್ಕರಿಸಲಾಗುತ್ತಿತ್ತೆಂದು ಹೇಳಲಾಗಿದೆ.

ಕರ್ನಾಟಕದ ಗಣಿಗಳಿಂದ ಕ್ರಿಸ್ತಶಕಾರಂಭದ ಹೊತ್ತಿಗೆ ಉತ್ತಮ ರತ್ನಗಳನ್ನು ಅಗೆದು ತೆಗೆಯುವ ಕಾರ್ಯವೂ ನಡೆಯುತ್ತಿತ್ತು. 2ನೆಯ ಶತಮಾನದಲ್ಲಿದ್ದ ಗ್ರೀಕ್ ಭೂಗೋಳಕಾರ ಟಾಲೆಮಿ ಪುನ್ನಾಟ ದೇಶದಲ್ಲಿ (ದಕ್ಷಿಣ ಕರ್ನಾಟಕ, ಕಾವೇರಿ ಕಪಿನಿಗಳ ಮಧ್ಯವರ್ತಿ ಪ್ರದೇಶ) ದೊರಕುತ್ತಿದ್ದ ವೈಡೂರ್ಯ ರೋಮ್‌ಗೆ ರಫ್ತಾಗುತ್ತಿತ್ತೆಂದು ತಿಳಿಸಿದ್ದಾನೆ.

ಹೀಗೆ ಕ್ರಿಸ್ತಪೂರ್ವ ಮತ್ತು ಕ್ರಿಸ್ತಶಕಾರಂಭದ ಕಾಲದಿಂದಲೂ ಬೆಳೆದು ಬಂದಿದ್ದ ಗಣಿ ಉದ್ಯಮ ಮುಂದಿನ ಶತಮಾನಗಳಲ್ಲೂ ಮುಂದುವರಿಯಿತು. ಚಾಳುಕ್ಯ ಸೋಮೇಶ್ವರ ರಚಿಸಿದ ಮಾನಸೋಲ್ಲಾಸ ಎಂಬ ಗ್ರಂಥದಲ್ಲಿ (12ನೆಯ ಶತಮಾನ) 'ಖನಿಶಾಸ್ತ್ರ'ದ ಬಗ್ಗೆ ವಿವರಗಳನ್ನು ನೀಡಿದ್ದಾನೆ. ಖನಿಜಗಳ ದೊರೆಯುವಿಕೆಯನ್ನು ತೀರ್ಮಾನಿಸಲು ಅನೇಕ ತಂತ್ರ ವಿಧಾನಗಳನ್ನು ನಿರೂಪಿಸಿದ್ದಾನೆ. ಚಿನ್ನ ಬೆಳ್ಳಿ ಅಮೂಲ್ಯ ರತ್ನಗಳು ದೊರೆಯುವ ಸ್ಥಳಗಳನ್ನು ರಕ್ಷಿತ ಪ್ರದೇಶವಾಗಿ ಕಾಯ್ದುಕೊಳ್ಳಬೇಕೆಂದು ಸೂಚಿಸಿದ್ದಾನೆ. ಆ ಕಾಲದಲ್ಲಿ ಗಣಿಗಳ ಮೇಲ್ವಿಚಾರಣೆಗಾಗಿ 'ಖನ್ಯಾಧಿಕಾರಿ' ಎಂಬ ಅಧಿಕಾರಿ ಇರುತ್ತಿದ್ದ. ಬೇಲೂರಿನ ಒಂದು ಶಾಸನದಲ್ಲಿ ಆಕರ ಮಂಡಲಿಕ ಎಂಬ ಗಣಿ ಮೇಲ್ವಿಚಾರಣೆಗಾಗಿ ಇದ್ದ ಅಧಿಕಾರಿಯ ಉಲ್ಲೇಖವಿದೆ. ಧಾರವಾಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಹಾಗೂ ತುಂಗಾ, ಭದ್ರಾ ನದಿಯ ದಡಗಳಲ್ಲಿನ ಮೆಕ್ಕಲಿನಿಂದ ಚಿನ್ನವನ್ನು ಶೇಖರಿಸಲಾಗುತ್ತಿತ್ತು (ಜರಗು ಚಿನ್ನ). ಗದಗಿನಲ್ಲಿ ದೊರೆತ 12ನೆಯ ಶತಮಾನದ ಒಂದು ಶಾಸನದಲ್ಲಿ ಜರಗು ಚಿನ್ನದ ಮೇಲಿನ ತೆರಿಗೆಯ ಪ್ರಸ್ತಾಪವಿದೆ. ಬಳ್ಳಾರಿ ಜಿಲ್ಲೆಯ ಪ್ರದೇಶ ಪ್ರಶಸ್ತ ವಜ್ರಗಳ ಉತ್ಪಾದನೆಗೆ ಪ್ರಸಿದ್ಧವಾಗಿತ್ತು. ಗುಬ್ಬಿ, ಚಿಕ್ಕನಾಯಕನಹಳ್ಳಿ, ಚನ್ನಪಟ್ಟಣ, ಮಾಗಡಿ ಪ್ರದೇಶಗಳಲ್ಲಿ ಕಬ್ಬಿಣದ ಗಣಿಗಾರಿಕೆ ಇತ್ತು. ಮಳೆಯಿಂದ ಹರಿದು ಬಂದ ಮರಳಿನಿಂದ ಕಪ್ಪು ಮರಳನ್ನು ಬೇರ್ಪಡಿಸಿ ಕಬ್ಬಿಣದ ತಯಾರಿಕೆಗೆ ಉಪಯೋಗಿಸಲಾಗುತ್ತಿತ್ತು ಎನ್ನಲಾಗಿದೆ. ಚಿಕ್ಕನಾಯಕನಹಳ್ಳಿ ಪ್ರದೇಶದಲ್ಲಿ ಗಣಿಗಳಿಂದ ಕಬ್ಬಿಣದ ಅದುರನ್ನು ತೆಗೆಯಲಾಗುತ್ತಿತ್ತು. ಆದಿಲ್‌ಶಾಹೀ ಅರಸರ ಕಾಲದಲ್ಲೂ ಉತ್ತರ ಕರ್ನಾಟಕದ ಕೆಲವೆಡೆಗಳಲ್ಲಿ ಕಬ್ಬಿಣದ ಅದುರನ್ನು ತೆಗೆಯಲಾಗುತ್ತಿತ್ತು. ನೀಲಮಣಿ, ಪದ್ಮರಾಗ ಮೊದಲಾದ ಅಮೂಲ್ಯ ಕಲ್ಲುಗಳನ್ನು ತೆಗೆಯಲಾಗುತ್ತಿತ್ತು. ಅವರ ರಾಜ್ಯದಲ್ಲಿದ್ದ ವಜ್ರ ಗಣಿಗಳ ಬಗ್ಗೆ ವಿಶೇಷ ಉಲ್ಲೇಖಗಳು ಕಂಡುಬರುತ್ತವೆ. ಟಿಪ್ಪು ಸುಲ್ತಾನ್ ಗಣಿ ಉದ್ಯಮವನ್ನು ವಿಶೇಷವಾಗಿ ಪ್ರೋತ್ಸಾಹಿಸುತ್ತಿದ್ದ ಎನ್ನಲಾಗಿದೆ. ಇವನ ಕಾಲದಲ್ಲಿ ಕರ್ನಾಟಕದಲ್ಲಿ ತಯಾರಾದ ಉಕ್ಕಿನ ವಸ್ತುಗಳು ವಿದೇಶಗಳಿಗೂ ರಫ್ತಾಗುತ್ತಿದ್ದುವು. ಆದರೆ ಕರ್ನಾಟಕ ವಿದೇಶೀಯರ ಆಳಿಕೆಗೆ ಒಳಪಟ್ಟಾಗಿನಿಂದ ಇತರ ಎಲ್ಲ ಉದ್ಯಮಗಳಂತೆ ಗಣಿಗಾರಿಕೆಯೂ ಅವನತಿ ಹೊಂದಿತು.

ಗಣಿ ಕೈಗಾರಿಕೆ ಮತ್ತೆ ತಲೆಯೆತ್ತಿದುದು 1874ರ ಸುಮಾರಿಗೆ. ಲಾವೆಲ್ ಎಂಬಾತ 5,000 ಪೌಂಡು ಬಂಡವಾಳ ಹೂಡಿ ಉರಿಗಾಂ ಬಳಿ ಚಿನ್ನದ ಗಣಿ ತೋಡಲು ಸಣ್ಣದೊಂದು ಕಂಪನಿಯನ್ನು ಪ್ರಾರಂಭಿಸಿದ. ಮೊದಲ ದಿವಸಗಳಲ್ಲಿ ಅನೇಕ ಎಡರುತೊಡರುಗಳನ್ನು ಅನುಭವಿಸಿದರೂ 1881ರ ಸುಮಾರಿಗೆ ಕೆಲಸ ಒಂದು ಸ್ಥಿಮಿತಕ್ಕೆ ಬಂತು. ಗಣಿ ಕೆಲಸದಲ್ಲಿ ನುರಿತ ಜಾನ್ ಟೇಲರ್ ಕಂಪನಿ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಂಡಿತು. 1892ರಿಂದೀಚೆಗೆ ಆಧುನಿಕ ರೀತಿಯಲ್ಲಿ ಗಣಿಗಾರಿಕೆ ಕರ್ನಾಟಕದಲ್ಲಿ ಮೊದಲಾಯಿತೆಂದು ಹೇಳಬಹುದು.

ಈಗ ಕರ್ನಾಟಕದ ನಾನಾ ಭಾಗಗಳಲ್ಲಿ ಅನೇಕ ರೀತಿಯ ಖನಿಜಗಳನ್ನು ಉತ್ಪಾದಿಸುವ ಕಾರ್ಯ ನಡೆಯುತ್ತಿದೆ. ರಾಜ್ಯದಲ್ಲಿ ಒಟ್ಟು ಸುಮಾರು 223 ಕೆಲಸ ನಡೆಯುತ್ತಿರುವ ಗಣಿಗಳಿವೆ. 50,000ಕ್ಕೂ ಹೆಚ್ಚು ಜನರು ಗಣಿಗಾರಿಕೆಯಲ್ಲಿ ತೊಡಗಿದ್ದಾರೆ. ವರ್ಷಂಪ್ರತಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಖನಿಜೋತ್ಪತ್ತಿ ರಾಜ್ಯದಲ್ಲಿ ನಡೆಯುತ್ತಿದೆ. ಪ್ರತಿ ಜಿಲ್ಲೆಯೂ ವಿಶಿಷ್ಟ ಖನಿಜಗಳಿಗೆ ಹೆಸರಾಗಿದೆ. ಕೋಲಾರ ಮತ್ತು ರಾಯಚೂರುಗಳು ಚಿನ್ನಕ್ಕೆ ಹೆಸರಾದರೆ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ ಮೊದಲಾದವು ಕಬ್ಬಿಣದ ಅದುರುಗೆ ಪ್ರಸಿದ್ಧವಾಗಿವೆ. ಹಾಸನದಲ್ಲಿ ಕ್ರೋಮೈಟ್, ಬೆಳಗಾಂವಿಯಲ್ಲಿ ಬಾಕ್ಸೈಟ್ ಅಧಿಕವಾಗಿ ಸಿಗುತ್ತವೆ. ಮ್ಯಾಂಗನೀಸ್ ಅದುರು ಬೆಳಗಾಂವಿ, ಬಳ್ಳಾರಿ, ಉತ್ತರಕನ್ನಡ, ಶಿವಮೊಗ್ಗ, ತುಮಕೂರುಗಳಲ್ಲಿ ಹೇರಳವಾಗಿದೆ. ಕೋಲಾರ, ರಾಯಚೂರುಗಳು ಬೆಳ್ಳಿಗೂ ಆಸರೆ, ಕಲ್ನಾರು ಅದಿರು ಹಾಸನ, ಚಿಕ್ಕಮಗಳೂರುಗಳಲ್ಲಿ ದೊರೆಯುತ್ತದೆ. ಕೆಯೋಲಿನ್‌ಗೆ ಬೆಳಗಾಂವಿ, ಬೆಂಗಳೂರು, ತುಮಕೂರು ಕೋಲಾರಗಳು ಮುಖ್ಯ ಆಗರಗಳಾಗಿವೆ. ಬಣ್ಣದ ಮಣ್ಣು ಚಿಕ್ಕಮಗಳೂರು, ಹಾಸನಗಳಲ್ಲಿ ಸಿಗುತ್ತದೆ. ಡಾಲೋಮೈಟ್ ಚಿತ್ರದುರ್ಗ, ತುಮಕೂರು, ಶಿವಮೊಗ್ಗಗಳಲ್ಲಿದೆ. ಕಯಾನೈಟ್ ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿದೆ. ತಾಮ್ರದ ಗಣಿಗಳಿಗೆ ಚಿತ್ರದುರ್ಗ ಮುಖ್ಯ ಆಕರ, ಖನಿಜ ಸಂಪತ್ತು ಮತ್ತು ಗಣಿಗಾರಿಕೆಯಲ್ಲಿ ಭಾರತದಲ್ಲಿ ಕರ್ನಾಟಕ ಪ್ರಮುಖ ಸ್ಥಾನ ಗಳಿಸಿದೆ. ಕೆಲವು ಮುಖ್ಯ ಗಣಿ ಉದ್ಯಮಗಳ ಸ್ಥೂಲ ಪರಿಚಯವನ್ನು ಕೆಳಗೆ ನೀಡಲಾಗಿದೆ.

**ಚಿನ್ನ :** 1880ರಿಂದ 1915ರವರೆಗೆ ಕರ್ನಾಟಕದ ನಾನಾ ಭಾಗಗಳಲ್ಲಿ ಚಿನ್ನಕ್ಕಾಗಿ ಶೋಧನೆ ನಡೆಯಿತು. ಹಾಸನ ಜಿಲ್ಲೆಯ ಕೆಂಚನಕೋಟೆ, ಚಿತ್ರದುರ್ಗದಲ್ಲಿನ ಅಜ್ಜನಹಳ್ಳಿ, ಧಾರವಾಡ ಜಿಲ್ಲೆಯ ಗದಗಿನ ಹತ್ತಿರ, ತುಮಕೂರು ಜಿಲ್ಲೆಯ ಬೆಳ್ಳಾರ, ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ, ಕುದುರೆಕೊಂಡ, ಮೈಸೂರು ಜಿಲ್ಲೆಯ ಅಂಬಳೆ, ವಳಗೆರೆ ಈ ಸ್ಥಳಗಳಲ್ಲಿ ಆಳವಾದ ಗಣಿಗಳನ್ನು ತೋಡಲಾಯಿತು. ಆದರೆ ನಾನಾ ಕಾರಣಗಳಿಂದ ಕೈಗಾರಿಕೆ ಮುಂದುವರಿಯದೆ ಒಂದನೆಯ ಮಹಾಯುದ್ಧದ ಸುಮಾರಿಗೆ ಈ ಎಲ್ಲ ಕಡೆಗಳಲ್ಲೂ ಗಣಿ ಕೆಲಸ ನಿಂತುಹೋಯಿತು.

ಕೋಲಾರ ಜಿಲ್ಲೆಯ ಉರಿಗಾಂ ಮತ್ತು ರಾಯಚೂರು ಜಿಲ್ಲೆಯ ಹಟ್ಟಿ ಈ ಸುತ್ತಲಿನ ಪ್ರದೇಶದಲ್ಲಿ ಮಾತ್ರ ಕೈಗಾರಿಕೆ ನಿಲ್ಲದೆ ಇದುವರೆಗೂ ನಡೆದುಕೊಂಡು ಬಂದಿತು. 1903ರಲ್ಲಿ ವಿದ್ಯುತ್ತಿನ ಸಹಾಯ ಕೋಲಾರದ ಗಣಿಗಳಿಗೆ ದೊರೆತುದರ ಫಲವಾಗಿ ಗಣಿ ಕೆಲಸ ವಿಶೇಷವಾಗಿ ಏಳಿಗೆ ಹೊಂದಲು ಸಾಧ್ಯವಾಯಿತು. ಗಣಿಯ ಆಡಳಿತವನ್ನು 1956ರಲ್ಲಿ ಮೈಸೂರು ಸರ್ಕಾರ, 1962ರಿಂದ ಭಾರತ ಸರ್ಕಾರದ

ಕೋಲಾರ ಗೋಲ್ಡ್ ಮೈನಿಂಗ್ ಅಂಡರ್‌ಟೇಕಿಂಗ್ಸ್ ಸಂಸ್ಥೆ ವಹಿಸಿಕೊಂಡಿದ್ದುವು. 1972ರಿಂದ ಈ ಸಂಸ್ಥೆ ಭಾರತ ಗೋಲ್ಡ್ ಮೈನ್ಸ್ ಪ್ರೈವೇಟ್ ಲಿ. ಎಂದಾಯಿತು. (ಬಿ.ಪಿ.ಆರ್.)

ಈಗ ಮೈಸೂರು, ಛಾಂಪಿಯನ್ ರೀಫ್ಸ್ ಮತ್ತು ನಂದಿದುರ್ಗ ಈ ಮೂರು ಗಣಿಗಳಲ್ಲಿ ಮಾತ್ರ ಚಿನ್ನದ ಅದುರಿನ ಉತ್ಪನನ ನಡೆಯುತ್ತಿದೆ. ಈ ಶತಮಾನದ ಮಧ್ಯಕಾಲದವರೆಗೂ ಉತ್ಪಾದಕ ಗಣಿಗಳ ಕೆಲಸದ ಅಧಿಕ ಭಾಗ ಛಾಂಪಿಯನ್ ಸಿರವೆಂಬ ಹೆಸರಿನ ಒಂದು ಪ್ರಧಾನವಾದ ಸಿರದ ಜಾಡನ್ನು ತೋಡಿ ಚಿನ್ನ ತೆಗೆಯುವುದರಲ್ಲಿ ನಿರತವಾಗಿತ್ತು. ಈ ಸಿರದ ಅದುರಿನ ನಾಲೆಯ ನಿಕ್ಷೇಪಗಳು ಕಡಿಮೆಯಾಗುತ್ತ ಬರಲು ಮೇಲುಮೈಯಲ್ಲಿ ಹಳಬರು ತೋಡಿರುವ ಜಾಡುಗಳನ್ನು ಗಮನಿಸಿ ಚಿನ್ನವಿರಬಹುದಾದ ಎಡೆಗಳನ್ನು ಹುಡುಕಿ ಗಣಿಯ ಸ್ವಾಮ್ಯದ ನೆಲದ ಉತ್ತರ ಮತ್ತು ಪಶ್ಚಿಮದ ಕಡೆಗಳಲ್ಲಿ ಓರಿಯಂಟಲ್ ಸಿರ ಎಂಬ ಮತ್ತೊಂದು ಲಾಭಕರವಾದ ಸಿರದ ನಾಲೆಯಿರುವುದನ್ನು ಕಂಡುಹಿಡಿಯಲಾಯಿತು. ಈ ಓರಿಯಂಟಲ್ ಸಿರವನ್ನೇ ಬಹುವಿಸ್ತಾರವಾಗಿ ಅಭಿವೃದ್ಧಿಗೊಳಿಸಲಾಯಿತು.

ಪ್ರಪಂಚದ ಅಳತೆಯಿಂದ ನೋಡಿದರೆ ಕೋಲಾರದ ಚಿನ್ನದ ಗಣಿಯ ಪ್ರದೇಶದಲ್ಲಿ ದೊರೆಯುವ ಚಿನ್ನ ಅಲ್ಪ ಪರಿಮಾಣದ್ದು. ಆದರೆ ಬೇರೆ ಅನೇಕ ಕಾರಣಗಳಿಂದ ಇದಕ್ಕೆ ಪ್ರಾಧಾನ್ಯ ದೊರೆತಿದೆಯಲ್ಲದೆ ಖ್ಯಾತಿಯೂ ಬಂದಿದೆ. ಈ ದೊಡ್ಡ ಉಪಖಂಡದಲ್ಲಿ ಇದೊಂದರಲ್ಲೇ ಚಿನ್ನ ನಿರಂತರವಾಗಿ ದೊರೆಯುತ್ತಿದ್ದದ್ದು. ಇದರಷ್ಟು ಆಳಕ್ಕೆ ಪ್ರಪಂಚದಲ್ಲೇ ಮತ್ತಾವ ಗಣಿಯೂ ಇಳಿದಿಲ್ಲ; ನೆಲದ ಮಟ್ಟದಿಂದ ಇದು 10,500'ಗಳಷ್ಟು ಕೆಳಕ್ಕೆ ಹೋಗಿದೆ. ವಾಯುನಿಯಂತ್ರಣ, ರಾಟೆಯ ಯಂತ್ರಗಳು ಮುಂತಾದ ಅತ್ಯಾಧುನಿಕ ಗಣಿಕೆಲಸದ ಕೆಲವು ಪದ್ಧತಿಗಳನ್ನು ಇಲ್ಲಿ ಅಳವಡಿಸಲಾಗಿದೆ. ಗಣಿಗಳು ಆಳವಾಗಿರುವುದರಿಂದಲೂ ನೆಲದ ಒತ್ತಡ ಬಹಳ ಹೆಚ್ಚಾಗಿರುವುದರಿಂದಲೂ ಪದೇಪದೇ ಸಂಭವಿಸುವ ಬಂಡೆಗಳ ಸಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು ಅವುಗಳ ದುಷ್ಪರಿಣಾಮಗಳನ್ನು ಮಿತಗೊಳಿಸಲು ಕೆಳನೆಲದ ಗಣಿ ಕೆಲಸಗಳಿಗೆ ಈಡುಗಳನ್ನು ಕಟ್ಟುವ ಒಂದು ಸುವ್ಯವಸ್ಥೆಯನ್ನು ಗಣಿಗಳು ಏರ್ಪಡಿಸಿಕೊಂಡಿದ್ದವು. ಇಲ್ಲಿ ನಡೆಸಿರುವ ಸಿಡಿತಗಳ ಶೋಧನೆ ಪ್ರಪಂಚದ ಎಲ್ಲ ಭಾಗಗಳಲ್ಲೂ ಇರುವ ಗಣ್ಯ ಗಣಿ ಎಂಜಿನಿಯರುಗಳ ಗಮನವನ್ನು ಸೆಳೆದುವು. ನೆಲವನ್ನು ತುಂಬ ಆಳವಾಗಿ ತೋಡಿದಾಗ ಅಲ್ಲಿ ವಾತಾವರಣ ಸ್ಪರ್ಶವೇ ಇಲ್ಲದ ಬಂಡೆಗಳ ಸುತ್ತ 56.6ಸೆ. ಉಷ್ಣತೆ ಇದ್ದುದು ಕಂಡು ಬಂದಿತು. ಅದರ ಪರಿಣಾಮವಾಗಿ ಅಲ್ಲಿ ಕೆಲಸಮಾಡಲು ಸಹಜವಾಗಿಯೇ ಬಲು ಕಷ್ಟವೆನಿಸಿತು. ಇದಕ್ಕಾಗಿ ಅಮೋನಿಯ ಕೂಲರ್ ನಮೂನೆಯ ವಾಯುಸಂಸ್ಕರಣ (ಏರ್‌ಕಂಡಿಷನಿಂಗ್) ಯಂತ್ರಗಳನ್ನು ಮೇಲು ನೆಲದಲ್ಲಿ ಸ್ಥಾಪಿಸಿ ಸುತ್ತಣ ಗಾಳಿಯನ್ನು 15.1ಸೆ. ಇಳಿಸಿ ಅದನ್ನು ಗಣಿಯ ತೋಡುದಾರಿಗಳ ಮೂಲಕ ಕೆಳಕ್ಕೆ ಒತ್ತಿ ತನ್ಮೂಲಕ ಗಣಿಯೊಳಗಿನ ಗಾಳಿಯ ಉಷ್ಣತೆಗಳನ್ನು ತಡೆದುಕೊಳ್ಳುವಷ್ಟು ಮಟ್ಟಕ್ಕೆ ತರಲಾಯಿತು. ಕೆಲಸಮಾಡುವ ಜಾಗಗಳಿಗೆ ಬಿಡುವುದಕ್ಕೆ ಮುಂಚೆ ಗಾಳಿಯನ್ನು ಇನ್ನೂ ತಂಪಿಸುವುದಕ್ಕಾಗಿ ಒಂದು ಗಣಿಯಲ್ಲಿ ಫ್ರಿಯಾನ್ ಎಂಬುದನ್ನು ಉಷ್ಣತಾಶಾಮಕ ಮಾಧ್ಯಮವಾಗಿ ಬಳಸಿಕೊಂಡು ಎರಡನೆಯ ದರ್ಜೆಯ ಮತ್ತೊಂದು ತಂಪಿಸುವ ಯಂತ್ರವನ್ನು ನೆಲದ ಮಟ್ಟಕ್ಕೆ 8000' ಗಳಷ್ಟು ಆಳಕ್ಕೆ ಇಳಿಸಲಾಯಿತು. ಇಷ್ಟು ಏರ್ಪಾಡುಗಳನ್ನು ಮಾಡಿದರೂ ಕೆಲಸದ ಕೆಲವು ಜಾಗಗಳಲ್ಲಿ ಪರಿಸರದ ಪರಿಸ್ಥಿತಿಗಳು ಬಹಳ ತೀವ್ರವಾಗಿರುವುದು ಕಂಡುಬಂತು. ಶುಷ್ಕ ಮತ್ತು ಆರ್ದ್ರ ಬಲ್ಬ್ ಉಷ್ಣತೆಗಳನ್ನು (ಡ್ರೈ ಅಂಡ್ ವೆಟ್) ಬಲ್ಬ್ ಟೆಂಪರೇಚರ್ಸ್ ಪರಿಣಾಮಕಾರಿಯಾಗಿ ಕೆಳಕ್ಕಿಳಿಸಲು ಸಣ್ಣ ಜಾಗಗಳನ್ನು ತಂಪಿಸುವ ಪ್ರತ್ಯೇಕ ಯಂತ್ರಗಳನ್ನು ಸ್ಥಾಪಿಸಬೇಕಾದ ಘಟ್ಟವನ್ನು ಮುಟ್ಟಲಾಯಿತು.

ಆಳದ ಗಣಿ ಕೆಲಸಕ್ಕಾಗಿ ತೋಡಿದ ಪ್ರದೇಶಕ್ಕೆ ಊರೆಕಟ್ಟುವ ಸಮಸ್ಯೆಯೂ ಹುಟ್ಟಿಕೊಂಡಿತು. ಆಳವಿಲ್ಲದ ಹಿಂದಿನ ಗಣಿಗಳಿಂದ ಪ್ರಾರಂಭಿಸಿ ಇಂದಿನ ಹೇರಾಳದ ಗಣಿಕೆಲಸದ ಪರಿಸ್ಥಿತಿಯ ವರೆಗೆ ಬಗೆಬಗೆಯಾದ ಊರೆಕಟ್ಟುವ ವಿಧಾನಗಳು ವಿಕಾಸಹೊಂದಿದುವು. ಮೊದಲು ಊರೆಗಳೇ ಇರಲಿಲ್ಲ. ಬಳಿಕ ಅಲ್ಲಲ್ಲಿ ಮರದ ದಿಮ್ಮಿಗಳನ್ನು ಊರೆಗೋಲಾಗಿ ನೆಡುತ್ತಿದ್ದರು. ಬಳಿಕ ಕ್ರಿಬ್ ಸೆಟ್ಟುಗಳಿಂದ ಹಿಡಿದು, ಕ್ರಿಬ್ ಸೆಟ್ಟುಗಳಿಗೆ ಶುಷ್ಕ ಕಲ್ಲುಚೂರುಗಳಿಂದ ತುಂಬಿರುವ ಅರೆಗಟ್ಟಿ ಊರೆಗಳು ಮತ್ತು ಪಿಗ್‌ಸ್ಟೈಗಳು, ಕೊನೆಗೆ ಸಂಪೂರ್ಣವಾಗಿ ಬೆಣಚುಕಲ್ಲು ಕಟ್ಟಡದ ಗೋಡೆಗಳು ಈ ರೀತಿಯಲ್ಲಿ ನಡೆದಿದೆ, ಊರೆಗಳ ವಿಕಾಸ. ಈಚಿನ ವರ್ಷಗಳಲ್ಲಿ ಅರೆಯುವಾಗ ತೆಗೆದುಹಾಕಿದ ಕಳಪೆಯ ದೂಳಿನ ಅಂಟು ತೆಗೆದು ನೀರು ಬೆರೆಸಿ ಮರಳು ತುಂಬುವ ವಿಧಾನವೊಂದನ್ನು ಅಷ್ಟು ಆಳವಿಲ್ಲದ ಗಣಿ ಕೆಲಸದ ಕಡೆಗಳಲ್ಲಿ ಜಯಪ್ರದವಾಗಿ ಬಳಸಲಾಯಿತು. ಮರದ ದಿಮ್ಮಿಯ ಕ್ರಿಬ್ ಸೆಟ್ಟುಗಳನ್ನೂ 90 ಪೌಂಡುಗಳ ಅಂಡಾಕಾರದ ರೈಲ್ ಕಮಾನುಗಳನ್ನೂ ಅದುರು ಮತ್ತು ಇತರ ಸಾಮಾನುಗಳನ್ನೂ ಮೇಲಕ್ಕೆಳೆದು ಇಳಿಸುವುದಕ್ಕೂ ಪ್ರಯಾಣದ ಹಾದಿಗಳಿಗೂ ಉಪಯೋಗಿಸಲಾಯಿತು. ಈ ಉದ್ಯಮಕ್ಕೆ ಬೇಕಾದ ಜಲವಿದ್ಯುಚ್ಛಕ್ತಿ ಕಾವೇರಿ ನದಿಯ ಮೇಲಿರುವ ಶಿವಸಮುದ್ರದಿಂದ 144ಕಿಮೀ ಹಾಯ್ದು ಬರುತ್ತಿತ್ತು. ಈ ಶಕ್ತ್ಯುತ್ಪಾದಕ ಯಂತ್ರಾಗಾರವನ್ನು ಕೋಲಾರದ ಗಣಿಯ ಉದ್ಯಮಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿಯೇ ಸ್ಥಾಪಿಸಲಾಯಿತು. ಭಾರತದಲ್ಲಿ ಮೊದಮೊದಲು ಸ್ಥಾಪಿತವಾದ ಯಂತ್ರಾಗಾರಗಳ ಪೈಕಿ ಇದೊಂದು. ಪಾಲಾರ್ ನದಿಗೆ ಸು.11ಕಿಮೀ ದೂರದಲ್ಲಿರುವ ಬೇತಮಂಗಲದಲ್ಲಿನ ಕಟ್ಟೆಯಿಂದ ಈ ಉದ್ಯಮಕ್ಷೇತ್ರಕ್ಕೆ ಶುದ್ಧ ನೀರನ್ನು ಒದಗಿಸಲಾಯಿತು. ಕಂಪನಿಗಳು ಸುಸಜ್ಜಿತವಾದ ಆಸ್ಪತ್ರೆಯನ್ನು ನಡೆಸುತ್ತಿದ್ದುವು. ಸ್ಥಳೀಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಈ ಊರಿನಲ್ಲಿ ಅನೇಕ ಶಾಲೆಗಳೂ ಕಾಲೇಜುಗಳೂ ಪಾಲಿಟೆಕ್ನಿಕ್‌ಗಳೂ ಆರಂಭವಾದುವು. ಜೀವನದ ಇತರ ಸೌಕರ್ಯಗಳನ್ನೂ ಆವಶ್ಯಕತೆಗಳನ್ನೂ ಗಣಿಪ್ರದೇಶದಲ್ಲಿ ಒದಗಿಸಲಾಯಿತು. ಕರ್ನಾಟಕದ ಗಣಿಗಾರಿಕೆಯ ಕ್ಷೇತ್ರದಲ್ಲಿ ಕೋಲಾರದ ಚಿನ್ನದ ಗಣಿಗಳು ಬಹಳ ಚೆನ್ನಾಗಿ ವ್ಯವಸ್ಥಿತವಾಗಿ ಬೆಳೆದುವು. ಆದರೆ ಈಗ ಗಣಿಗಾರಿಕೆ ಮಾಡುವುದು ಆರ್ಥಿಕವಾಗಿ ಲಾಭದಾಯಕ ವಲ್ಲವೆಂಬ ಅಂಶ ಪ್ರಮುಖ ಪರಿಶೀಲನಾ ವಿಷಯವಾಗಿದ್ದು ಈ ಗಣಿಗಳನ್ನು ಮುಚ್ಚಲಾಯಿತು.

ರಾಯಚೂರು ಜಿಲ್ಲೆಯಲ್ಲಿರುವ ಹಟ್ಟಿ ಸಣ್ಣ ಪ್ರಮಾಣದಲ್ಲಿ ಮೊದಲಾದರೂ ದಿನೇ ದಿನೇ ಏಳಿಗೆ ಹೊಂದುತ್ತ ಬಂದು ಉತ್ತಮ ದರ್ಜೆಯ ಗಣಿ ಎಂದು ಹೆಸರು ಪಡೆದುಕೊಂಡಿತು. ಇಲ್ಲಿ 1947ರಿಂದೀಚೆಗೆ ಆಧುನಿಕ ರೀತಿಯಲ್ಲಿ ಕೆಲಸ ಮೊದಲಾಯಿತು. ಗಣಿಗಳು ಮೂರು ಸಾವಿರ ಅಡಿ ಆಳ ಇಳಿದಿವೆ. ವರ್ಷಂಪ್ರತಿ ಮೂರು ಕೋಟಿ ರೂಪಾಯಿ ಬಾಳುವ ಬಂಗಾರ ಉತ್ಪತ್ತಿಯಾಗುತ್ತಿದೆ. ಇಲ್ಲಿನ ಉತ್ಪತ್ತಿಯನ್ನು ದ್ವಿಗುಣಗೊಳಿಸಲು ಯೋಜನೆ ರೂಪಿತವಾಯಿತು.

ಈಚಿನ ವರ್ಷಗಳಲ್ಲಿ ಚಿನ್ನದ ಬೆಲೆ ಏರಿರುವ ಕಾರಣ ರಾಜ್ಯದಲ್ಲಿರುವ ಇತರ ಗಣಿಗಳನ್ನು ಊರ್ಜಿತಗೊಳಿಸಿ ಇನ್ನೂ ಹೆಚ್ಚಿನ ಚಿನ್ನವನ್ನು ಪಡೆಯುವ ಸಾಧ್ಯತೆ ಇದೆ. ಚಿನ್ನದ ಜೊತೆಗೆ ವರ್ಷಂಪ್ರತಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಬೆಳ್ಳಿ ಕೂಡ ದೊರೆಯುತ್ತದೆ.

**ಕಬ್ಬಿಣ :** ಕರ್ನಾಟಕದಲ್ಲಿ ಉತ್ಪುಷ್ಟವಾದ ಕಬ್ಬಿಣದ ಅದುರು ವಿಶೇಷವಾಗಿ ಹರಡಿದ್ದರೂ ದೊಡ್ಡ ಪರಿಮಾಣದಲ್ಲಿ ಕೈಗಾರಿಕೆ ಬೆಳೆದದ್ದು ಈಚಿನ ವರ್ಷಗಳಲ್ಲಿ ಮಾತ್ರ. ಬಾಬಾಬುಡನ್ ಬೆಟ್ಟಗಳಲ್ಲಿರುವ ಕೆಮ್ಮಣ್ಣು ಗುಂಡಿಯಲ್ಲಿ ದೊರೆಯುವ ಅದುರಿನಿಂದ ಭದ್ರಾವತಿಯಲ್ಲಿ ಗಣಿ ಕೆಲಸ ಪ್ರಾರಂಭವಾಯಿತು. ದೊರೆತ ಕಬ್ಬಿಣದ ಅದುರನ್ನು ಸಮೀಪದಲ್ಲಿರುವ 1923ರ ಸುಮಾರಿಗೆ ಭದ್ರಾವತಿಯಲ್ಲಿ ಕರಗಿಸಿ ಬೀಡುಕಬ್ಬಿಣ ತಯಾರಿಸಲಾಯಿತು. ದಕ್ಷಿಣ ಭಾರತದಲ್ಲಿ ಕಬ್ಬಿಣ ಕೈಗಾರಿಕೆಗೆ ಇದೇ ಮೊದಲ ಪ್ರಯತ್ನ. ಈಗ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಕರ್ನಾಟಕದ ಮುಖ್ಯ ಖನಿಜ ಕೈಗಾರಿಕೆಯೆಂದು ಹೆಸರುವಾಸಿಯಾಗಿದೆ.

ಈಚಿನ ವರ್ಷಗಳಲ್ಲಿ ಕಬ್ಬಿಣದ ಅದುರನ್ನು ಹೇರಳವಾಗಿ ರಫ್ತುಮಾಡಲಾಗುತ್ತಿದೆ. 1956ರಿಂದ ಈಚೆಗೆ ಕಬ್ಬಿಣ ಕೈಗಾರಿಕೆಯಲ್ಲಿ ವಿಶೇಷ ಚಟುವಟಿಕೆ ಕಾಣುತ್ತಿದೆ. 1956ರಲ್ಲಿ ಅದುರಿನ ಉತ್ಪಾದನೆ ಮೂರು ಲಕ್ಷ

ಟನ್‌ಗಳಿತ್ತು. ಹದಿನೈದು ವರ್ಷಗಳಲ್ಲಿ ಉತ್ಪನ್ನ ಹತ್ತರಷ್ಟು ಹೆಚ್ಚಿತು. ಕರ್ನಾಟಕದಲ್ಲಿ 1971ರಲ್ಲಿ ಕಬ್ಬಿಣದ ಅದುರಿನ ಒಟ್ಟು ಉತ್ಪಾದನೆ 35 ಲಕ್ಷ ಟನ್ನುಗಳಿಗೂ ಹೆಚ್ಚಿತು. ಮುಖ್ಯವಾದ ಗಣಿಗಳಿರುವುದು ಬಳ್ಳಾರಿ ಜಿಲ್ಲೆಯ ಸಂಡೂರು ಗುಡ್ಡಗಳಲ್ಲಿ. ಇಲ್ಲಿಂದ ವರ್ಷಂಪ್ರತಿ ನಲವತ್ತು ಲಕ್ಷ ಟನ್‌ಗಳಷ್ಟು ಉತ್ತಮವಾದ ಅದುರು ವಿದೇಶಗಳಿಗೆ, ಮುಖ್ಯವಾಗಿ ಜಪಾನ್ ದೇಶಕ್ಕೆ ರಫ್ತಾಗುತ್ತಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಉತ್ತರ ಕನ್ನಡ ಜಿಲ್ಲೆಯ ಅನುಮೋಡ ಈ ಸುತ್ತಲಿನಲ್ಲಿ ಕಬ್ಬಿಣ ಅದುರಿನ ಅನೇಕ ಗಣಿಗಳಿವೆ. ಕುದುರೆ ಮುಖದ ಬಳಿ ದೊರೆಯುವ ಅಯಸ್ಕಾಂತ ಸಂಬಂಧವಾದ ಕಬ್ಬಿಣದ ಅದುರನ್ನು ಪಡೆದು ಪುಡಿಮಾಡಿ, ಆಯಸ್ಕಾಂತಶಕ್ತಿಯಿಂದ ಕಬ್ಬಿಣದ ಸಾರವನ್ನು ಪ್ರತ್ಯೇಕಿಸಿ, ಅದನ್ನು ಕೊಳವೆಗಳ ಮೂಲಕ ಮಂಗಳೂರು ಬಂದರಿಗೆ ರವಾನಿಸಿ, ಹೊರದೇಶಗಳಿಗೆ, ವಿಶೇಷವಾಗಿ ಜಪಾನ್‌ಗೆ ರಫ್ತುಮಾಡುವ ಬೃಹದ್ ಯೋಜನೆ ನಡೆಯುತ್ತಿದ್ದು, ಅದು ಏಷ್ಯಖಂಡದಲ್ಲೇ ಅತ್ಯಂತ ಬೃಹತ್ ಕಬ್ಬಿಣ ಅದುರು ಯೋಜನೆ ಎನ್ನಿಸಿಕೊಂಡಿದೆ. ಪರಿಸರಕ್ಕೆ ಇದರಿಂದ ಆಗಬಹುದಾದ ಹಾನಿಯ ಬಗ್ಗೆ ವಿವಾದವೂ ಸೃಷ್ಟಿಯಾಗಿದೆ.

**ಮ್ಯಾಂಗನೀಸ್ :** ಭೂಶೋಧನ ಇಲಾಖೆಯ ಪರಿಶ್ರಮದಿಂದ ಹೊಸದಾಗಿ ಬೆಳಕಿಗೆ ಬಂದ ಖನಿಜಗಳಲ್ಲಿ ಮ್ಯಾಂಗನೀಸ್ ಅದುರು ಮುಖ್ಯವಾದುದು. ಮೊದಲಿಗೆ ಯುರೋಪಿಯನರು ಶಿವಮೊಗ್ಗದ ಕುಂಸಿಯ ಬಳಿ ದೊಡ್ಡ ಪರಿಮಾಣದಲ್ಲಿ ಗಣಿಗಳನ್ನು ತೋಡಿ ವರ್ಷಂಪ್ರತಿ 50,000 ಟನ್ನಿಗೂ ಹೆಚ್ಚು ಅದುರನ್ನು ತಮ್ಮ ದೇಶಗಳಿಗೆ ತೆಗೆದುಕೊಂಡು ಹೋದರು. ಅದೇ ಸುಮಾರಿಗೆ ನಮ್ಮ ದೇಶೀಯರೂ ಗಣಿ ಕೆಲಸಕ್ಕೆ ಕೈಹಾಕಿ ಸಣ್ಣ ಪರಿಮಾಣದಲ್ಲಿ ಗಣಿಗಳನ್ನು ತೆಗೆದರು. ಈಗಲೂ ಮುಖ್ಯವಾಗಿ ತುಮಕೂರು, ಚಿತ್ರದುರ್ಗ, ಬಳ್ಳಾರಿ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ನೂರಕ್ಕೂ ಹೆಚ್ಚು ಮ್ಯಾಂಗನೀಸ್ ಗಣಿಗಳು ಕೆಲಸ ಮಾಡುತ್ತಿವೆ. ಮುಖ್ಯವಾದ ಗಣಿಗಳು ಬಳ್ಳಾರಿ ಜಿಲ್ಲೆಯ ಸಂಡೂರು, ಕುಮಾರಸ್ವಾಮಿ, ರಾಮನದುರ್ಗ ಬೆಟ್ಟಗಳಲ್ಲಿ, ಶಿವಮೊಗ್ಗ ಜಿಲ್ಲೆಯ ಕುಂಸಿ, ಶಂಕರಗುಡ್ಡ, ತುಪ್ಪೂರು ಬಳಿ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಉತ್ತರ ಕನ್ನಡ ಜಿಲ್ಲೆಯ ಜೊಯ್ದ, ಯಲ್ಲಾಪುರ, ಕುಂಬಾರವಾಡ ಬಳಿ ಇವೆ. ಕುಮಾರಸ್ವಾಮಿ ಬೆಟ್ಟದ ಒಂದು ಗಣಿ ವರ್ಷಂಪ್ರತಿ ಸುಮಾರು ಎರಡು ಲಕ್ಷ ಟನ್‌ಗಳನ್ನು ಉತ್ಪಾದಿಸುತ್ತಿದೆ.

ಉತ್ಪತ್ತಿಯಾದ ಮ್ಯಾಂಗನೀಸ್ ಅದುರಿನ ಬಹುಭಾಗ ಗೋವ ಮತ್ತು ಕಾರವಾರ ಬಂದರುಗಳಿಂದ ವಿದೇಶಗಳಿಗೆ ರಫ್ತಾಗಿ ಹೋಗುತ್ತಿದೆ. ಸ್ವಲ್ಪಮಟ್ಟಿಗೆ ದಾಂಡೇಲಿ ಬಳಿಯ ಫೆರೊ-ಮ್ಯಾಂಗನೀಸ್ ಕಾರ್ಖಾನೆಯಲ್ಲಿ ಉಪಯೋಗವಾಗುತ್ತಿದೆ.

**ಕ್ರೋಮೈಟ್ :** ಕಬ್ಬಿಣ ಕೈಗಾರಿಕೆಯಲ್ಲಿ ಕ್ರೋಮೈಟ್ ಮುಖ್ಯವಾದ ಖನಿಜ. ಹಾಸನ ಜಿಲ್ಲೆಯ ಬೈರಾಪುರದ ಬಳಿ ಈ ಖನಿಜವನ್ನು ಪಡೆಯುವುದಕ್ಕೆ ಕೂಪಗಳನ್ನೂ ಸುರಂಗಗಳನ್ನೂ ತೋಡಲಾಗಿದೆ. ಗಣಿಗಳು ಸುಮಾರು ಐನೂರು ಅಡಿ ಆಳದವರೆಗೆ ಇಳಿದಿವೆ. ಮೈಸೂರು ಜಿಲ್ಲೆಯ ಕಡಕೊಳದ ಬಳಿಯೂ ಒಂದು ಗಣಿ ಇದೆ.

**ತಾಮ್ರ :** 1965ರಿಂದೀಚೆಗೆ ಚಿತ್ರದುರ್ಗ ಬಳಿಯ ಇಂಗಳದಾಳು, (ನೋಡಿ) ಅರಸೀಕೆರೆ ತಾಲ್ಲೂಕಿನ ಕಲ್ಯಾಡಿ ಈ ಸ್ಥಳಗಳಲ್ಲಿ ಹೆಚ್ಚಿನ ಪರಿಶೋಧನೆ ನಡೆದು ಹೊಸದಾಗಿ ಗಣಿಕೈಗಾರಿಕೆ ಪ್ರಾರಂಭವಾಗಿದೆ. ಇಂಗಳದಾಳಿನ ಬಳಿ ಚಿತ್ರದುರ್ಗ ತಾಮ್ರದ ಕಂಪನಿ ಕೆಲಸ ಮಾಡುತ್ತಿದೆ. ಗಣಿ ನೆಲಮಟ್ಟದಿಂದ ಆರುನೂರು ಅಡಿಯವರೆಗೆ ಇಳಿದಿದೆ. ಹಾಸನ ಜಿಲ್ಲೆ ಕಲ್ಯಾಡಿಯಲ್ಲಿ 1972 ರಿಂದ ಕೆಲಸ ಮೊದಲಾಗಿದೆ. ಇದೇ ರೀತಿ ಗುಲ್ಬರ್ಗ ಜಿಲ್ಲೆಯ ತಿಂಥಿಣಿ ಹತ್ತಿರವೂ ನಂಜನಗೂಡಿನ ಕಲ್ಕುಂದದ ಬಳಿಯೂ ತಾಮ್ರಕ್ಕಾಗಿ ಗಣಿಗಳನ್ನು ತೋಡುವ ಉದ್ದೇಶವಿದೆ. ಈಗ ಭಾರತದ ಕೈಗಾರಿಕೆಗಳಿಗೆ ಬೇಕಾಗುವ ತಾಮ್ರವನ್ನು ಬಹು ಬೆಲೆ ಕೊಟ್ಟು ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದೆ. ಈ ಎಲ್ಲ ಗಣಿಗಳಿಂದಲೂ ತಾಮ್ರದ ಸಾರ ಉತ್ಪಾದನೆಯಾದರೆ ಕುಲುಮೆಗಳನ್ನು ಕಟ್ಟಿ ತಾಮ್ರಲೋಹವನ್ನು ಪಡೆಯಲು ಸಹಾಯವಾಗಬಹುದು.

**ಸುಣ್ಣಕಲ್ಲು :** ಕರ್ನಾಟಕದ ಗಣಿ ಉದ್ಯಮದಲ್ಲಿ ಸುಣ್ಣ ಕಲ್ಲಿನ ಗಣಿಗಳು ಪ್ರಮುಖ ಸ್ಥಾನವನ್ನು ಪಡೆದಿವೆ. ಬಿಜಾಪುರ, ಬೆಳಗಾಂವಿ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಉತ್ತಮ ದರ್ಜೆಯ ಸುಣ್ಣಕಲ್ಲು ವಿಶೇಷ ಪ್ರಮಾಣದಲ್ಲಿ ದೊರೆಯುತ್ತದೆ. ಈ ಸುಣ್ಣಕಲ್ಲಿನ ಆಧಾರದ ಮೇಲೆ ನಾಲ್ಕು ದೊಡ್ಡ ಸಿಮೆಂಟ್ ಕಂಪನಿಗಳು ಸ್ಥಾಪನೆಯಾಗಿವೆ. ಅಸೋಸಿಯೇಟೆಡ್ ಸಿಮೆಂಟ್ ಕಂಪನಿಯವರ ಸಿಮೆಂಟ್ ಕಾರ್ಖಾನೆಗಳು ಶಾಹಬಾದ ಮತ್ತು ವಾಡಿ ಬಳಿ ಇವೆ. ಬಾಗಲಕೋಟೆಯಲ್ಲಿ ಇನ್ನೊಂದು ದೊಡ್ಡ ಸಿಮೆಂಟ್ ಕಾರ್ಖಾನೆಯಿದೆ. ಗುಲ್ಬರ್ಗ ಜಿಲ್ಲೆಯ ಸೇಡಂ ಬಳಿ ಸಿಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯ ಅವರು ಒಂದು ಕಾರ್ಖಾನೆಯನ್ನು ಕಟ್ಟಿದ್ದಾರೆ. ಭದ್ರಾವತಿಯ ಬಳಿಯಿರುವ ಬಂಡಿಗುಡ್ಡದಲ್ಲಿ ದೊರೆಯುವ ಸುಣ್ಣಕಲ್ಲಿನಿಂದ ಭದ್ರಾವತಿಯಲ್ಲಿ ಸಿಮೆಂಟ್ ತಯಾರಿಸುತ್ತಾರೆ. ಚಿಕ್ಕನಾಯಕನಹಳ್ಳಿಯ ಬಳಿ ದೊರೆಯುವ ಸುಣ್ಣಕಲ್ಲಿನಿಂದ ಅಮ್ಮಸಂದ್ರದ ಬಳಿ ಮೈಸೂರು ಸಿಮೆಂಟ್ ಕಂಪನಿಯವರು ಸಿಮೆಂಟು ಉತ್ಪಾದಿಸುತ್ತಾರೆ. ಅಲ್ಲದೆ ಇನ್ನೂ ಕೆಲವು ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸುವ ಅವಕಾಶವಿದೆ. ಬಿಜಾಪುರ ಜಿಲ್ಲೆಯ ತಾಳೀಕೋಟೆ, ಗುಲ್ಬರ್ಗ ಜಿಲ್ಲೆಯ ಬಿಜಾಪುರ, ಬೆಳಗಾಂವಿ, ಜಿಲ್ಲೆಯ ನಾಗರಗಾಳಿ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಈ ಸ್ಥಳಗಳ ಬಳಿ ದೊರೆಯುವ ಸುಣ್ಣಕಲ್ಲನ್ನು ಅವಲಂಬಿಸಿ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಬಹುದಾಗಿದೆ. ವರ್ಷಂಪ್ರತಿ 23 ಲಕ್ಷ ಟನ್ ಸುಣ್ಣಕಲ್ಲನ್ನು ಗಣಿಗಳಿಂದ ತೆಗೆಯಲಾಗುತ್ತಿದೆ. ಸಿಮೆಂಟ್ ತಯಾರಿಕೆ ಕರ್ನಾಟಕದ ಮುಖ್ಯ ಖನಿಜ ಕೈಗಾರಿಕೆಗಳಲ್ಲೊಂದಾಗಿದೆ.

ಸಿಮೆಂಟಿಗೆ ಅಲ್ಲದೆ, ಕಟ್ಟಡ ಕಲ್ಲಿಗಾಗಿ ಶಾಹಬಾದ ಬಳಿಯ ಸುಣ್ಣಕಲ್ಲಿನ ಹಲಗೆಗಳು ವಿಶೇಷವಾಗಿ ಬಳಕೆಯಾಗುತ್ತಿವೆ. ಸುಣ್ಣಕಲ್ಲು ತೆಳ್ಳನೆಯ ಹಾಳೆಗಳಾಗಿ ಬಿಟ್ಟುಕೊಳ್ಳುತ್ತದೆ. ಇದರಿಂದ ಉತ್ತಮ ಬಗೆಯ ಕಲ್ಲುಹಲಗೆಗಳನ್ನೂ ಚದುರ ಬಿಲ್ಲೆಗಳನ್ನೂ ತೆಗೆಯಬಹುದು. ನುಣುಪು ಮಾಡಿದ ತಿಳಿನೀಲಿ ಬಣ್ಣದ ಕಲ್ಲುಗಳಿಂದ ಹಾಸಿದ ನೆಲ ಬಹು ರಮ್ಯವಾಗಿ ಕಂಗೊಳಿಸುತ್ತದೆ. ಶಾಹಬಾದಿನ ಹಾಸುಗಲ್ಲುಗಳು ಭಾರತದಲ್ಲೆಲ್ಲ ಪ್ರಸಿದ್ಧವಾಗಿವೆ. ಶಾಹಬಾದ, ವಾಡಿ ಈ ಸುತ್ತಣ ಪ್ರದೇಶದಲ್ಲಿ ಚಪ್ಪಡಿ ತೆಗೆಯುವ ಅನೇಕ ಗಣಿಗಳಿವೆ.

**ಅಲ್ಯುಮಿನಿಯಂ :** ದೇಶದ ಕೈಗಾರಿಕೆಯ ಪ್ರಗತಿಯಲ್ಲಿ ಅಲ್ಯುಮಿನಿಯಂ ಲೋಹ ಮುಖ್ಯ ಸ್ಥಾನ ಪಡೆದುಕೊಂಡಿದೆ. ಅಲ್ಯುಮಿನಿಯಂ ಅದುರನ್ನು ಈಗ ಸದ್ಯದಲ್ಲಿ ಬೆಳಗಾಂವಿಯ ಬಳಿ ತೆಗೆಯಲಾಗುತ್ತಿದ್ದು, 30,000 ಟನ್ ಲೋಹ ವರ್ಷಂಪ್ರತಿ ಉತ್ಪತ್ತಿಯಾಗುತ್ತಿದೆ. ಇದನ್ನು ದ್ವಿಗುಣಗೊಳಿಸಿ 60,000 ಟನ್ ಉತ್ಪಾದಿಸಲು ಯೋಜನೆ ರೂಪಿತವಾಗಿದೆ.

ಅಲ್ಯುಮಿನಿಯಂ ಲೋಹವನ್ನು ಪಡೆಯುವುದಕ್ಕೆ ಹೇರಳವಾದ ವಿದ್ಯುಚ್ಛಕ್ತಿ ಬೇಕು. ಕಾಳಿ, ವರಾಹಿ, ಅಘನಾಶಿನಿ, ಬೇಡ್ತಿ ಮುಂತಾದ ವಿದ್ಯುತ್ ಯೋಜನೆಗಳು ಕಾರ್ಯರೂಪಕ್ಕೆ ಬಂದು ಸುಲಭ ದರದಲ್ಲಿ ಹೇರಳವಾಗಿ ವಿದ್ಯುಚ್ಛಕ್ತಿ ದೊರೆಯುವುದಾದರೆ, ಪಶ್ಚಿಮ ಕರಾವಳಿಯಲ್ಲಿ ದೊರೆಯುವ ಬಾಕ್ಸೈಟಿನಿಂದ ಅಲ್ಯುಮಿನಿಯಂ ಲೋಹವನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಬಹುದು ಎಂದು ನಂಬಲಾಗಿದೆ.

**ಇತರ ಖನಿಜಗಳು :** ಈ ಹಿಂದೆ ವಿವರಿಸಿದ ಮುಖ್ಯ ಖನಿಜಗಳಲ್ಲದೆ ಇತರ ಖನಿಜಗಳಿಗಾಗಿ ಅನೇಕ ಸಣ್ಣ ಗಣಿಗಳು ರಾಜ್ಯದಾದ್ಯಂತ ಹರಡಿವೆ. ಪಿಂಗಾಣಿ ತಯಾರಿಕೆಗೆ ಬೇಕಾಗುವ ಸುದ್ದೆಮಣ್ಣು, ಬೆಣಚು, ಫೆಲ್‌ಸ್ಪಾರ್, ಕೆಂಪು ಕಾವಿ ಮಣ್ಣು, ಗಡಸುತನಕ್ಕೆ ಹೆಸರಾಗಿರುವ ಕುರಂದ, ಗಾರ್ನೆಟ್, ಅತಿಯಾದ ಕಾವನ್ನು ತಡೆಯಬಲ್ಲ ಮ್ಯಾಗ್ನಟೈಟ್ - ಈ ಖನಿಜಗಳಿಗಾಗಿ ಅನೇಕ ಗಣಿಗಳಿವೆ.

ಬೆಂಗಳೂರು ಸುತ್ತಮುತ್ತ ದೊರೆಯುವ ಸುದ್ದೆಮಣ್ಣು, ಫೆಲ್‌ಸ್ಪಾರ್ ಮತ್ತು ಬೆಣಚುಕಲ್ಲನ್ನು ಉಪಯೋಗಿಸಿ ಬೆಂಗಳೂರಿನ ಸರ್ಕಾರಿ ಪಿಂಗಾಣಿ

ಕಾರ್ಖಾನೆ ಅನೇಕ ಬಗೆಯ ಪಿಂಗಾಣಿ ಸಾಮಾನುಗಳನ್ನು ತಯಾರಿಸಿ ಹೊರಗೆ ಕಳುಹಿಸುತ್ತಿದೆ. ಭೂಮಿಯಲ್ಲಿ ದೊರೆಯುವ ಸುದ್ದೆಮಣ್ಣನ್ನು ತೊಳೆದು ಕಲ್ಮಶಗಳೆಲ್ಲವನ್ನೂ ತೆಗೆದು ಶುದ್ಧಪಡಿಸುವುದಕ್ಕಾಗಿ ಹಾಸನ ಜಿಲ್ಲೆಯ ಬಾಗೇಶಪುರದ ಹತ್ತಿರ ಮತ್ತು ಶಿವಮೊಗ್ಗ ಜಿಲ್ಲೆಯ ದೇವಂಗಿಯ ಬಳಿ ಸುದ್ದೆಮಣ್ಣನ್ನು ಶುದ್ಧಿಪಡಿಸುವ ಕಾರ್ಖಾನೆ ಇದೆ. ಬಂಗಾರಪೇಟೆಯ ಸುತ್ತ ದೊರೆಯುವ ಬಿಳಿಯ ಮಣ್ಣಿನಿಂದ ಆಟದ ಗೋಲಿಗಳನ್ನೂ, ಬರೆಯುವ ಬಳಪಗಳನ್ನೂ ವಿಶೇಷವಾಗಿ ತಯಾರು ಮಾಡುತ್ತಾರೆ. ಇಲ್ಲಿ ತಯಾರಾಗುವ ಬಳಪಗಳು ಭಾರತದ ಮೂಲೆಮೂಲೆಗೂ ಹೋಗುತ್ತವೆ. ಪಿಂಗಾಣಿ ಪದಾರ್ಥಗಳನ್ನಲ್ಲದೆ ಬೆಣಚು ಕಲ್ಲಿನಿಂದ ಗಾಜಿನ ಸಾಮಾನುಗಳನ್ನೂ ಫೆರೊಸಿಲಿಕಾನ್ ಎಂಬ ಮಿಶ್ರ ಲೋಹವನ್ನೂ ತಯಾರಿಸಲಾಗುತ್ತಿದೆ.

ಅರಸೀಕೆರೆ ಹತ್ತಿರದ ಕಲ್ಯಾಡಿ ಮತ್ತು ಹೊಳೆನರಸೀಪುರದ ಮಾವಿನಕೆರೆ ಹತ್ತಿರ ಕುರಂಗದ ಕಲ್ಲಿಗಾಗಿ ಗಣಿ ಕೆಲಸ ನಡೆಯುತ್ತಿದೆ.

ಕಡಕೊಳದ ಬಳಿ ಮ್ಯಾಗ್ನಸೈಟ್ ಗಣಿಗಳಿವೆ. ಇವನ್ನು ಜಂಷೆಡ್‌ಪುರದ ಒಂದು ಕಂಪನಿ ನಡೆಸುತ್ತಿದೆ.

**ಕಟ್ಟಡದ ಕಲ್ಲುಗಳು :** ಖನಿಜಗಳಿಗಾಗಿಯೇ ಅಲ್ಲದೆ ಕಟ್ಟಡದ ಕಲ್ಲಿಗಾಗಿ ಕಲ್ಲುಬಂಡೆಗಳನ್ನು ಒಡೆದು, ನೈಜ ಕಲ್ಲಾಗಿ ಇಲ್ಲವೆ ಹಾಸುಬಂಡೆಗಳಾಗಿ, ಕಲ್ಲಾಗಿ ಮಾರಾಟ ಮಾಡುವ ಕೈಗಾರಿಕೆ ದೇಶದಲ್ಲೆಲ್ಲ ಹರಡಿದೆ. ಅನೇಕ ಜನರು ಈ ಕೈಗಾರಿಕೆಯಲ್ಲಿ ನಿರತರಾಗಿದ್ದಾರೆ.

ದಕ್ಷಿಣ ಕರ್ನಾಟಕದ ಕಟ್ಟಡದ ಕಲ್ಲುಗಳು ಬಹು ಪ್ರಸಿದ್ಧಿಯಾದುವು. ಸಾವಿರ ವರ್ಷಕಾಲ ಅಚ್ಚಳಿಯದೆ ಸ್ವಚ್ಛವಾಗಿ ಉಳಿದಿರುವ ಗೊಮ್ಮಟೇಶ್ವರ ಮೂರ್ತಿ ಕರ್ನಾಟಕದಲ್ಲಿ ಸಾಮಾನ್ಯವಾಗಿ ಸಿಗುವ ಕಣಶಿಲೆಯಿಂದ (ಗ್ರಾನೈಟ್) ಕಡೆದದ್ದು. ಬೆಂಗಳೂರು ನಗರದ ಅನೇಕ ಭವ್ಯವಾದ ಕಟ್ಟಡಗಳು ಈ ಕಲ್ಲಿನವೇ. ಬೆಂಗಳೂರು, ಮೈಸೂರುಗಳಂತಹ ದೊಡ್ಡ ನಗರಗಳ ಬೆಳೆವಣಿಗೆ ಅಧಿಕವಾದಂತೆ ಮತ್ತು ಹೆದ್ದಾರಿಗಳ ನಿರ್ಮಾಣ ಹೆಚ್ಚಿದಂತೆ ಕಲ್ಲುಗಣಿಗಾರಿಕೆ ವಿಪರೀತವಾಗಿ ಬೆಳೆದಿದೆ. ಪರಿಸರವಾದಿಗಳು ಆತಂಕ ಪಡುವಷ್ಟು ಕಲ್ಲು ಕೋರೆಗಳ ಸಂಖ್ಯೆ ಹೆಚ್ಚಿದೆ. ಮರಳನ್ನು ತೆಗೆದು ಮಾರುವುದೂ ಹೆಚ್ಚಿದೆ. ಮೈಸೂರು ನಗರದ ಸುತ್ತ ದೊರೆಯುವ ಕೆಲವು ಕಲ್ಲುಗಳು ಅತ್ಯಂತ ರಮಣೀಯವಾದುವು. ಅವುಗಳ ಬಣ್ಣ ಮತ್ತು ಹೊಳಪು ಅಸಾಧಾರಣ. ಈ ಕಲ್ಲುಗಳಿಂದ ಮೈಸೂರಿನ ಅರಮನೆಯ ಅನೇಕ ಭಾಗಗಳನ್ನು ಅಲಂಕರಿಸಿದ್ದಾರೆ. ಶ್ರೀರಂಗಪಟ್ಟಣದಲ್ಲಿರುವ ಹೈದರ್, ಟಿಪ್ಪು ಇವರ ಗೋರಿಗಳ ಸುತ್ತಲೂ ಕನ್ನಡಿಯಂತಿರುವ ಕರಿಕಲ್ಲಿನ ಕಂಬಗಳು ತುರುವೇಕೆರೆ ತಾಲ್ಲೂಕಿನ ಕರಿಕಲ್ಲು ಗುಡ್ಡದಲ್ಲಿ ದೊರೆಯುವ ಕರಿಕಲ್ಲಿನಿಂದ ತಯಾರಾದುವು. ಶ್ರೀರಂಗಪಟ್ಟಣ ಮತ್ತು ಮಂಡ್ಯದ ಹತ್ತಿರವೂ ಬೆಂಗಳೂರಿನ ದಕ್ಷಿಣಕ್ಕೆ ಕನಕಪುರದ ದಾರಿಯಲ್ಲೂ ಚಾಮರಾಜನಗರ ಜಿಲ್ಲೆಯಲ್ಲೂ ಸುಂದರವಾದ ಬಗೆಬಗೆಯ ಬಣ್ಣದ ಕಲ್ಲುಗಳು ಸಿಕ್ಕುತ್ತವೆ. ನುಣುಪು ಮಾಡಿದ ಕಲ್ಲುಗಳನ್ನು ಹೊರ ದೇಶಗಳಿಗೆ ಕಳುಹಿಸುತ್ತಿದ್ದಾರೆ. ನುಣುಪು ಗ್ರಾನೈಟ್ ಕಲ್ಲನ್ನು ತೆಗೆದು ರಫ್ತು ಮಾಡುವುದು ದೊಡ್ಡ ಉದ್ಯಮವಾಗಿ ಬೆಳೆದಿದೆ.

**ಗಣಿಗಾರಿಕೆಯ ಭವಿಷ್ಯ :** ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಕೋಲಾರದ ಚಿನ್ನದ ಗಣಿಯೊಂದನ್ನು ಬಿಟ್ಟು ಬೇರೆ ಯಾವ ಖನಿಜ ಕೈಗಾರಿಕೆಯೂ ದೇಶದಲ್ಲಿರಲಿಲ್ಲ. 1900ರ ಸುಮಾರಿಗೆ ಮೈಸೂರು ಭೂಶೋಧನ ಇಲಾಖೆ ಖನಿಜಗಳಿಗಾಗಿ ಅನ್ವೇಷಣೆ ಮೊದಲುಮಾಡಿತು. ಎಪ್ಪತ್ತೈದು ವರ್ಷಗಳಲ್ಲಿ ಅನೇಕ ಬಗೆಯ ಖನಿಜಗಳನ್ನು ದೇಶದ ನಾನಾ ಭಾಗಗಳಲ್ಲಿ ಪತ್ತೆ ಮಾಡಲಾಯಿತು. ಈ ಖನಿಜಗಳನ್ನವಲಂಬಿಸಿ ಅನೇಕ ಕೈಗಾರಿಕೆಗಳು ತಲೆಯೆತ್ತಿದ್ದುವು. ಪ್ರಕೃತಿದತ್ತವಾದ ಖನಿಜ ಸಂಪತ್ತನ್ನು ಎಷ್ಟು ಜಾಣ್ಮೆಯಿಂದ ದೇಶದ ಅಭಿವೃದ್ಧಿಗೆ ಉಪಯೋಗಿಸಿ ಕೊಳ್ಳಲಾಗುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ದೇಶ ಏಳಿಗೆಯ ದಾರಿಯಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ ಎಂದು ನಂಬಲಾಗಿದೆ. ಚಿನ್ನದ ಗಣಿಗಾರಿಕೆಗೆ ಮಾಮೂಲಿ ಗಣಿಗಳಲ್ಲಲ್ಲದೆ ಚಿತ್ರದುರ್ಗದ ಅಜ್ಜನಹಳ್ಳಿ, ಹಾಸನ ಜಿಲ್ಲೆಯ ಕೆಂಪಿನಕೋಟೆ, ಗದಗಿನ ಕಬುಲಿಯತ ಕಟ್ಟೆ, ತರೀಕೆರೆಯ ಬಿಳಿಯ ಸಿದ್ಧರ ಹಳ್ಳಿ -ಈ ಪ್ರದೇಶಗಳಲ್ಲಿ ಸಾಧ್ಯವಿದೆಯೆನಿಸಿದ್ದು ಈ ಅವಧಿಯಲ್ಲಿ.

ಕಬ್ಬಿಣದ ಅದುರಿನ ಕೈಗಾರಿಕೆ ಮುಂದಿನ ವರ್ಷಗಳಲ್ಲಿ ಹೆಚ್ಚು ಅಭಿವೃದ್ಧಿ ಹೊಂದುತ್ತದೆ. ರಫ್ತಿಗಾಗಿಯೇ ಅಲ್ಲದೆ, ಆಂತರಿಕ ಬೇಡಿಕೆಗಾಗಿ ಹೇರಳವಾಗಿ ಕಬ್ಬಿಣದ ಅದುರು ಬೇಕಾಗುತ್ತದೆ. ಕುದುರೆಮುಖ ಬಳಿ ದೊರೆಯುವ ಕೆಳದರ್ಜೆ ಕಬ್ಬಿಣಕಲ್ಲಿನಿಂದ ಉತ್ತಮ ಕಬ್ಬಿಣಪುಡಿಯನ್ನು ತಯಾರಿಸಿ ರಫ್ತುಮಾಡುವ ಉದ್ಯಮ ಬೃಹತ್ತಾಗಿ ಬೆಳೆದಿದೆ.

ತಾಮ್ರಕ್ಕಾಗಿ ನಡೆಯುತ್ತಿರುವ ಶೋಧನೆಗಳು ಯಶಸ್ವಿಯಾಗಿ, ದೇಶದ ಅಗತ್ಯದ ಬಳಕೆಗೆ ಬೇಕಾಗುವ ತಾಮ್ರವನ್ನು ದೇಶದಲ್ಲಿಯೇ ಪಡೆಯಲು ಸಾಧ್ಯವಾಗುತ್ತದೆಂದು ಊಹಿಸಬಹುದು. ಪಶ್ಚಿಮ ಕರಾವಳಿಯಲ್ಲಿ ದೊರೆಯುವ ಬಾಕ್ಸೈಟ್ ಆಧಾರದ ಮೇಲೆ ಬೃಹತ್ತಾಗಿ ಅಲ್ಯುಮಿನಿಯಂ ಲೋಹ ಕೈಗಾರಿಕೆ ರೂಪುಗೊಳ್ಳುವುದು ಸಾಧ್ಯವೆನಿಸಿದೆ.

ಒಂದು ದೇಶದಲ್ಲಿ ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಏಳಿಗೆ ಹೊಂದಬೇಕಾದರೆ ಅದಕ್ಕೆ ಖನಿಜಗಳು ಮೂಲ ಆಧಾರ. ಕರ್ನಾಟಕದಲ್ಲಿ ಉಪಯುಕ್ತವಾದ ಅನೇಕ ಖನಿಜಗಳು ದೊರೆಯುತ್ತವೆ. ವಿವಿಧ ಖನಿಜಗಳನ್ನು ಗಣಿಗಾರಿಕೆಯ ಮೂಲಕ ತೆಗೆಯುವುದರಿಂದ ರಾಜ್ಯಕ್ಕೆ ಬರುತ್ತಿರುವ ವರಮಾನ ಹೆಚ್ಚಿದೆ. ಖನಿಜಗಳನ್ನು ಕಚ್ಚಾಮಾಲಿನಂತೆ ಹೊರದೇಶಗಳಿಗೆ ರಫ್ತು ಮಾಡುವುದರಿಂದ ದೇಶದ ಏಳಿಗೆಯಾಗುವುದಿಲ್ಲ; ಬುದ್ಧಿ ಬೆಳೆಯುವುದಿಲ್ಲ; ಉದ್ಯೋಗಾವಕಾಶ ಹೆಚ್ಚುವುದಿಲ್ಲ. ಇವು ಹೆಚ್ಚಬೇಕಾದರೆ ಖನಿಜಗಳನ್ನು ಅವಲಂಬಿಸಿದ ಅನೇಕ ಕೈಗಾರಿಕೆಗಳು ಹುಟ್ಟುವಂತಾಗಬೇಕು. ಕಚ್ಚಾಮಾಲುಗಳ ರಫ್ತು ನಿಂತು ಲೋಹ ಉತ್ಪಾದನೆ ಹೆಚ್ಚಾಗಬೇಕು. ಇದು ಸಾರ್ವಜನಿಕ ಅಭಿಪ್ರಾಯ ಮತ್ತು ತಜ್ಞರ ಮತ. ಈ ದಾರಿಯಲ್ಲಿ ಕರ್ನಾಟಕ ಮುಂದೆ ಮುಂದೆ ಹೆಜ್ಜೆ ಇಡುವ ಸೂಚನೆಗಳು ಕಾಣುತ್ತಿವೆ. ಗಣಿಗಾರಿಕೆ ನಿಯಂತ್ರಣ ಮತ್ತು ಪರಿಸರ ಸಂರಕ್ಷಣೆಗಾಗಿ ಸಹ ಯೋಜನೆಗಳನ್ನು ರೂಪಿಸಲಾಗಿದೆ. (ಬಿ.ಪಿ.ಆರ್.)

**ಗಣೇಕಲ್ ಸಂಗವಿಭು :** ಹತ್ತೊಂಬತ್ತನೆಯ ಶತಮಾನದಲ್ಲಿದ್ದ ವೀರಶೈವ ಕವಿ. ಭುವನೈಕನಾಯಕಿಶತಕ, ಬಸವಶತಕ, ಪಂಪಾಶತಕ, ಕುಮಾರವಿಜಯ ಎಂಬ ಗ್ರಂಥಗಳ ಕರ್ತೃ. ಇವನಿಗೆ ಸಂಗಪ್ಪ ಎಂಬ ಹೆಸರೂ ಇದೆ. ಈತ ತನ್ನ ಹುಟ್ಟೂರನ್ನಾಗಲಿ ಗಣೇಕಲ್ಲಿನ ವಿಚಾರವನ್ನಾಗಲಿ ಸ್ಪಷ್ಟವಾಗಿ ತನ್ನ ಕಾವ್ಯಗಳಲ್ಲಿ ಹೇಳಿಕೊಂಡಿಲ್ಲ. ಆದರೆ ಕುಮಾರವಿಜಯದಲ್ಲಿನ ಕೆಲವು ಆಧಾರಗಳ ಮೇಲೆ ಈತ ಆದವಾನಿ ತಾಲ್ಲೂಕಿನ ನಂದವಾರ ಗ್ರಾಮದ ನಾಡಗೌಡ ಮನೆತನದವನಾಗಿದ್ದು, ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಗಣೇಕಲ್ ನಾಡಗೌಡರ ಮನೆತನದ ಹೆಣ್ಣನ್ನು ಮದುವೆಯಾಗಿ ಸಂಸ್ಥಾನದ ರಾಜ್ಯಕಾರಭಾರ ಮಾಡುತ್ತ ತನ್ನ ಜೀವಿತದ ಬಹು ಕಾಲವನ್ನು (1832-56) ಗಣೇಕಲ್ಲಿನಲ್ಲಿ ಕಳೆದು ತನ್ನ ಕಾವ್ಯಗಳನ್ನು ರಚಿಸಿರಬೇಕೆಂದು ಹೇಳಬಹುದು. ಈ ಕಾವ್ಯಗಳ ಹಸ್ತಪ್ರತಿಗಳೆಲ್ಲ ಇವನ ಹುಟ್ಟೂರಾದ ನಂದವಾರದ ಪರಿಸರದಲ್ಲಿ ಸಿಗದೆ ರಾಯಚೂರು ಜಿಲ್ಲೆಯಲ್ಲಿಯೇ ದೊರೆತಿವೆ. ಗಣೇಕಲ್ ಸುತ್ತಣ ಪ್ರದೇಶದಲ್ಲಿ ಈತ ರಚಿಸಿದ ಶತಕಗಳನ್ನೂ ಚಂಪೂಕಾವ್ಯಗಳನ್ನೂ ಓದುವ ಪರಿಪಾಠವಿದೆ. ಲಕ್ಮೀಶ ನನ್ನ ತಮ್ಮ, ಷಡಕ್ಷರಿ ಅಣ್ಣ ಎಂದು ಈತ ಹೇಳಿಕೊಂಡಿರುವುದನ್ನು ನೋಡಿದರೆ ಈ ಇಬ್ಬರು ಜನಪ್ರಿಯ ಕವಿಗಳ ಕಾವ್ಯಗಳನ್ನು ಈತ ವಿಶೇಷವಾಗಿ ಅಭ್ಯಾಸ ಮಾಡಿ ಮೈಗೂಡಿಸಿ ಕೊಂಡಿದ್ದನೆಂದು ತೋರುತ್ತದೆ.

ಕುಮಾರವಿಜಯದಲ್ಲಿ ಮಹಾಕಾವ್ಯದ ಲಕ್ಷಣಗಳೆಲ್ಲ ಇವೆ. ಸತ್ಕವಿ ಕಾಳಿದಾಸ ತಾ ಪೇಳಿದ ಸತ್ಕಥಾಸರಣಿ ವೈಖರಿಯಂ ಬಣ್ಣಿಪೆಂ ಎಂದು ಕುಮಾರಸಂಭವದತ್ತ ಕವಿ ಬೆರಳು ಮಾಡಿ ತೋರಿಸಿದರೂ ಇದು ಕಾಳಿದಾಸನ ಯಥಾವತ್ ಅನುವಾದವಲ್ಲ. ಶತಕಗಳಲ್ಲಿ ಶುಷ್ಕನೀತಿಯಿಲ್ಲ; ಹೇಳುವುದನ್ನು ರಸವತ್ತಾಗಿ ಹೇಳಿದ್ದಾನೆ.

ಭುವನೈಕನಾಯಕೀಶತಕದಲ್ಲಿ ಪಾರ್ವತಿಯ ವರ್ಣನೆ ಮಾಡುವುದರಲ್ಲಿ ಕವಿಯ ಭಕ್ತಿಗೌರವಗಳ ಜೊತೆಗೆ ಅವನ ದೃಷ್ಟಿ ಆಕೆಯ ಅಲೌಕಿಕ ಸೌಂದರ್ಯವನ್ನೂ ಕಂಡಿದೆ. ಪಂಪಾಶತಕವಂತೂ ತುಂಬಿ ಹರಿಯುವ ಪ್ರವಾಹದಂತೆ ನಿರರ್ಗಳವಾಗಿ ಸಾಗುತ್ತದೆ. ಕವಿ ತನ್ನ ಕಾವ್ಯಗಳಲ್ಲಿ ಸಂಸ್ಕೃತಭೂಯಿಷ್ಠವಾದ ಭಾಷೆಯಷ್ಟೇ ಸಮರ್ಥವಾಗಿ ಅಚ್ಚಗನ್ನಡ ಮತ್ತು ಪ್ರಾದೇಶಿಕ ಶಬ್ದಗಳನ್ನು ಸುಂದರವಾಗಿ ಬಳಸಿದ್ದಾನೆ. ಷಡಕ್ಷರಿಯ ಕಾಲಕ್ಕೆ ನಿಂತುಹೋಗಿದ್ದ ಚಂಪೂಯುಗವನ್ನು ತನ್ನವರೆಗೂ ನಡೆಸಿಕೊಂಡು ಬಂದ ಕೀರ್ತಿ ಸಂಗವಿಭುವಿಗೆ ಸಲ್ಲುತ್ತದೆ. (ಜೆ.ಆರ್.ಪಿ.)

**ಗಣೇಶ್, ಎಂ. ಪಿ. :** 1946-. ಒಲಂಪಿಕ್ಸ್‌ನಲ್ಲಿ ಭಾಗವಹಿಸಿದ ಪ್ರಸಿದ್ಧ ಹಾಕಿ ಆಟಗಾರ. 1946 ಜುಲೈ 8ರಂದು ಮಡಿಕೇರಿಯಲ್ಲಿ ಜನಿಸಿದರು. ಪ್ರಾರಂಭದ ದಿನಗಳಲ್ಲಿ ಫುಟ್‌ಬಾಲ್ ಆಟವನ್ನು ಆಡುತ್ತಿದ್ದ ಇವರು 1964ರಲ್ಲಿ ಸೈನ್ಯಕ್ಕೆ ಸೇರಿದ ಅನಂತರ ಹಾಕಿ ಆಟವನ್ನು ಮೈಗೂಡಿಸಿಕೊಂಡರು. ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಸರ್ವಿಸಸ್ ತಂಡದ ಆಟಗಾರರಾಗಿ 1968-73ರ ತನಕ ಮುಂಬಯಿಯನ್ನು ಪ್ರತಿನಿಧಿಸಿದರು. ಆಟದ ಶೈಲಿ ಹಾಗೂ ಸಾಧನೆಯಿಂದಾಗಿ 1970ರಲ್ಲಿ ಭಾರತ ಹಾಕಿ ತಂಡದ ಆಟಗಾರರಾಗಿ ಆಯ್ಕೆಗೊಂಡರು. ಇವರು ಏಷ್ಯನ್ ಕ್ರೀಡೆಗಳಲ್ಲಿ ಎರಡು ಬಾರಿ ಭಾರತವನ್ನು ಪ್ರತಿನಿಧಿಸಿದರು. 1970ರಲ್ಲಿ ಬ್ಯಾಂಕಾಕ್, 1974ರಲ್ಲಿ ತೆಹರಾನ್ ಈ ಎರಡೂ ಸಂದರ್ಭಗಳಲ್ಲಿ ಭಾರತ ತಂಡ ಪಾಕಿಸ್ತಾನಕ್ಕೆ ಸೋತು ಬೆಳ್ಳಿಯ ಪದಕದೊಂದಿಗೆ ಹಿಂದಿರುಗಿತು. 1969ರಿಂದ 74ರ ತನಕ ಹಲವಾರು ಪ್ರದರ್ಶನ ಹಾಗೂ ಟೆಸ್ಟ್ ಪಂದ್ಯಾಟಗಳನ್ನು ಆಡಿದ ಇವರು 1971ರಲ್ಲಿ ಬಾರ್ಸಿಲೋನದಲ್ಲಿ ನಡೆದ ಮೊದಲನೆಯ ವಿಶ್ವಕಪ್ ಪಂದ್ಯಾಟದಲ್ಲಿ ಆಟಗಾರರಾಗಿ ಭಾಗವಹಿಸಿ ಭಾರತಕ್ಕೆ ಕಂಚಿನ ಪದಕವನ್ನು ತಂದುಕೊಟ್ಟರು. 1972ರ ವಿಶ್ವಕಪ್ ಪಂದ್ಯಾಟದಲ್ಲಿ ಮತ್ತೊಮ್ಮೆ ಭಾರತ ಬೆಳ್ಳಿಯ ಪದಕ ಪಡೆಯಲು ನೆರವಾದರು. ಇವರು 1972ರ ಮ್ಯೂನಿಚ್ ಒಲಂಪಿಕ್ಸ್‌ನಲ್ಲಿ ಭಾರತ ತಂಡದ ಆಟಗಾರರಾಗಿದ್ದರು. ಭಾರತಕ್ಕೆ ಆಗ ಕಂಚಿನ ಪದಕ ದೊರಕಿತು. ಇಷ್ಟಲ್ಲದೆ 1972ರ ವಿಶ್ವ 11ರ ತಂಡದಲ್ಲಿ ಇವರು ಸ್ಥಾನ ಗಳಿಸಿದ್ದರು. 1970-74ರ ತನಕ ಏಷ್ಯ 11ರ ತಂಡದ ಆಟಗಾರರಾಗಿದ್ದರು.

ಗಣೇಶ್ ಒಬ್ಬ ಒಳ್ಳೆಯ ತರಬೇತುದಾರರು. 1974-77ರಲ್ಲಿ ಇವರು ಇಟಲಿಯ ತಂಡವೊಂದಕ್ಕೆ ತರಬೇತುದಾರರಾಗಿ ಸೇವೆ ಸಲ್ಲಿಸಿದರು. ಇವರು 1980ರ ಮಾಸ್ಕೋ ಒಲಂಪಿಕ್ ತಂಡದ ಹಾಕಿ ತರಬೇತುದಾರರಾಗಿದ್ದರು. ಆಗ ಭಾರತಕ್ಕೆ ಚಿನ್ನದ ಪದಕ ದೊರಕಿತು. ಭಾರತದ ಕಿರಿಯರ ತಂಡಕ್ಕೆ ಇವರು 1981-85ರಲ್ಲಿ ರಾಷ್ಟ್ರೀಯ ತರಬೇತುದಾರರಾಗಿದ್ದರು.

ಕರ್ನಾಟಕ ಸರ್ಕಾರ 1981ರಲ್ಲಿ ಇವರನ್ನು ಕ್ರೀಡೆಯ ಬೆಳೆವಣಿಗೆಗಾಗಿ ವಿಶೇಷ ಅಧಿಕಾರಿಯಾಗಿ ನೇಮಿಸಿತು. ಅನಂತರ 1986ರಲ್ಲಿ ಭಾರತೀಯ ಕ್ರೀಡಾ ಪ್ರಾಧಿಕಾರದ ಉಪನಿರ್ದೇಶಕರಾಗಿ, ಪ್ರಾಂತೀಯ ನಿರ್ದೇಶಕರಾಗಿ (1991), ದೈಹಿಕ ಶಿಕ್ಷಣದ ಕಾರ್ಯನಿರ್ವಾಹಕ ನಿರ್ದೇಶಕರಾಗಿ (1996) ಜವಾಬ್ದಾರಿಯನ್ನು ಹೊತ್ತು ಕೆಲಸ ನಿರ್ವಹಿಸಿದರು. ಪ್ರಸ್ತುತ ದೆಹಲಿಯ ಭಾರತೀಯ ಕ್ರೀಡಾಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷಿನಲ್ಲಿ ಎಂ.ಎ. ಪದವಿಯನ್ನೂ ಅಳಗಪ್ಪ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನೂ ಪಡೆದಿದ್ದಾರೆ.

ಇವರಿಗೆ ಕರ್ನಾಟಕ ಸರ್ಕಾರದ ಹಲವು ಪ್ರಶಸ್ತಿಗಳು ಮತ್ತು ಭಾರತ ಸರ್ಕಾರದ ಅರ್ಜುನ ಪ್ರಶಸ್ತಿಯೂ (1973) ಲಭಿಸಿವೆ. (ಎಸ್.ಆರ್.ಯು)

**ಗದಗ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಅವುಗಳ ಆಡಳಿತ ಕೇಂದ್ರ. 1997ರ ಜಿಲ್ಲಾ ಮರುವಿಂಗಡಣಾ ಯೋಜನೆಯ ಮೇರೆಗೆ ಧಾರವಾಡ ಜಿಲ್ಲೆಯ ಐದು ತಾಲ್ಲೂಕುಗಳನ್ನು ಬೇರ್ಪಡಿಸಿ ಗದಗ ಜಿಲ್ಲೆಯನ್ನು ರಚಿಸಲಾಯಿತು. ಗದಗ, ರೋಣ, ನರಗುಂದ, ಮುಂಡರಗಿ ಮತ್ತು ಶಿರಹಟ್ಟಿ - ಇವು ತಾಲ್ಲೂಕುಗಳು. ಜಿಲ್ಲೆಯ ಉತ್ತರಕ್ಕೆ ಬಾಗಲಕೋಟೆ, ದಕ್ಷಿಣಕ್ಕೆ ಹಾವೇರಿ, ಪೂರ್ವಕ್ಕೆ ಕೊಪ್ಪಳ ಹಾಗೂ ಬಳ್ಳಾರಿ, ಪಶ್ಚಿಮಕ್ಕೆ ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳು ಇದರ ಮೇರೆಗಳು. ಜಿಲ್ಲೆಯ ವಿಸ್ತೀರ್ಣ 4,657ಚ.ಕಿಮೀ. ಹೋಬಳಿಗಳು 11, ಗ್ರಾಮಗಳು 312. ಜನಸಂಖ್ಯೆ 8,59,042.

ಕರ್ನಾಟಕದ ಉತ್ತರ ಮಧ್ಯ ಭಾಗದಲ್ಲಿರುವ ಈ ಜಿಲ್ಲೆಯು ಪಶ್ಚಿಮದಿಂದ ಪೂರ್ವದತ್ತ ಇಳಿಜಾರಾಗಿರುವ ಪ್ರದೇಶವನ್ನು ಹೊಂದಿದೆ. ಜಿಲ್ಲೆ ಪಾರಂಪರಿಕವಾಗಿ ಬೆಳವಲನಾಡೆಂದು ಪ್ರಸಿದ್ಧವಾಗಿದೆ. ಇದು ಫಲವತ್ತಾದ ಕಪ್ಪುಮಣ್ಣಿನಿಂದ ಕೂಡಿದ್ದು ಸಾಧಾರಣ ಬೆಟ್ಟಗುಡ್ಡಗಳಿಂದ ಕೂಡಿದೆ. ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡ, ನರಗುಂದ ಮತ್ತು ಗಜೇಂದ್ರಗಡದಲ್ಲಿ ಮತ್ತು ಗದಗದ ಬಳಿ ಬೆಟ್ಟಸಾಲುಗಳಿವೆ. ಈ ಬೆಟ್ಟಶ್ರೇಣಿಯ ಅತ್ಯಂತ ಹೆಚ್ಚಿನ ಎತ್ತರ 937ಮೀ. ಈ ಶ್ರೇಣಿ ಗದಗದಿಂದ ಆಗ್ನೇಯದಲ್ಲಿ 48ಕಿಮೀ ಉದ್ದವಾಗಿ ಹಬ್ಬಿ ಎರಡು ತುದಿಗಳಲ್ಲೂ ಸು.6ಕಿಮೀ ಅಗಲವಿದೆ. ಮಧ್ಯದಲ್ಲಿ 16ಕಿಮೀ ಅಗಲವಾಗಿ ವ್ಯಾಪಿಸಿದೆ. ಧಾರವಾಡ ಬಂಡೆಗಳಿಂದ ರಚಿತವಾಗಿರುವ ಪಳೆಯುಳಿಕೆಯ ಬೆಟ್ಟಗಳು ಗದಗದಿಂದ ದಕ್ಷಿಣಕ್ಕೆ ತುಂಗಭದ್ರಾದ ಕಡೆ ಹರಡಿವೆ. ಇಲ್ಲಿ ಕಣಿವೆಗಳು, ಕಂದರಗಳು ಹೆಚ್ಚು. ಎತ್ತರದ ಪ್ರದೇಶಗಳು ಬೋಳಾಗಿವೆ ಅಲ್ಲಿ ದಟ್ಟವಾಗಿ ಹುಲ್ಲು ಬೆಳೆಯುತ್ತದೆ. ಇಲ್ಲಿನ ಭೂಮಿಯ ಫಲವತ್ತತೆ ಪೂರ್ವಕ್ಕೆ ಬಂದಂತೆಲ್ಲ ಕಡಿಮೆಯಾಗಿದೆ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 3,264 ಹೆಕ್ಟೇರ್.

ಜಿಲ್ಲೆಯ ಬಹುಭಾಗ ಪ್ರಾಚೀನ ಬೆಣಚುಕಲ್ಲು ಮತ್ತು ಪದರ ಶಿಲೆಗಳಿಂದ ಕೂಡಿದೆ. ಇವು ಅಗ್ನಿ ಮತ್ತು ಜಲಶಿಲೆಗಳ ಸಂಯೋಗದಿಂದ ರೂಪಾಂತರ ಹೊಂದಿ ಪಸರಿಸಿವೆ. ಪದರ ಶಿಲೆ, ಗ್ರ್ಯಾನೈಟ್ ಮತ್ತು ಬೆಣಚುಕಲ್ಲು ಶಿಲಾ ವರ್ಗವು ಎಲ್ಲ ದಿಕ್ಕುಗಳಲ್ಲೂ ಹರಡಿದೆ. ಮ್ಯಾಂಗನೀಸ್ ಇಲ್ಲಿನ ಪ್ರಮುಖ ಅದಿರುಗಳಲ್ಲೊಂದು. ಕಪ್ಪತಗುಡ್ಡದಿಂದ ಪ್ರಾರಂಭವಾದ ದೋಣಿ ಸಾಲಿನಲ್ಲಿ ತಾಮ್ರದ ಅದಿರಿನ ಅಂಶ ಕಂಡು ಬಂದಿದೆ. ಸೊರಟೂರು ಮತ್ತು ಜಲ್ಲಿಗೇರಿಗಳಲ್ಲಿ ಪೈರೈಟ್ಸ್ ಇದೆ. ಕಪ್ಪತ್ತ ಗುಡ್ಡ ಸಾಲಿನಲ್ಲಿ ಕಬ್ಬಿಣದ ಅದುರು ಹೆಚ್ಚು ಪ್ರಮಾಣದಲ್ಲಿದೆ. ಇಲ್ಲಿ ಹೆಮಟೈಟ್ ನಿಕ್ಷೇಪಗಳಿವೆ. ಆದರೆ ಆರ್ಥಿಕ ದೃಷ್ಟಿಯಿಂದ ಇದು ಹೆಚ್ಚು ಲಾಭಕರವಾಗಿಲ್ಲ. ಚಿನ್ನದ ಅದುರು ಅಲ್ಲಲ್ಲಿ ಕಂಡುಬಂದರೂ ಅಷ್ಟು ಸಾಂದ್ರವಾಗಿಲ್ಲ. ಜಿಲ್ಲೆಯ ಕೆಲವೆಡೆ ಬಳಪದ ಕಲ್ಲು ಕಂಡುಬರುತ್ತದೆ. ಜಿಲ್ಲೆಯ ಕೆಲವು ಕಡೆಗಳಲ್ಲಿ ಹೆಮಟೈಟ್ ನಿಕ್ಷೇಪಗಳು ಕಂಡುಬಂದಿವೆ.

ಇಲ್ಲಿನ ಮಣ್ಣು ವಿವಿಧ ಪ್ರಕಾರದ ವಿಭಜಿತ ಶಿಲಾ ಮಿಶ್ರಣದಿಂದ ಕೂಡಿದೆ. ಹುಳಕೆರೆ, ಎರೆ, ಕೆಂಪು ಮಸಾರಿ, ಮಡಿಕಟ್ಟು, ಮತ್ತು ರೇವೆ ಮಣ್ಣುಗಳು ಸೇರಿವೆ. ರೋಣ, ಗದಗ, ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಮರಳುಮಿಶ್ರಿತ ಮಣ್ಣು ಕಂಡುಬರುತ್ತದೆ. ರೋಣ ಮತ್ತು ನರಗುಂದ ತಾಲ್ಲೂಕುಗಳಲ್ಲಿ ಮಲಪ್ರಭಾ ನದಿಯ ಬಲದಂಡೆಯುದ್ದಕ್ಕೂ ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ತುಂಗಭದ್ರಾ ನದಿಯ ಎಡದಂಡೆಯುದ್ದಕ್ಕೂ ರೇವೆಮಣ್ಣು ಹರಡಿದೆ. ಕಪ್ಪು ಮಣ್ಣು ಫಲವತ್ತಾಗಿದೆ. ಇದು ಜಿಲ್ಲೆಯ ರೋಣ, ಗದಗ, ನರಗುಂದ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ವಾಯುಗುಣ: ಬೇಸಗೆಯಲ್ಲಿ (ಏಪ್ರಿಲ್-ಮೇ) ಅಧಿಕ ಉಷ್ಣಾಂಶವಿರುವುದನ್ನು ಬಿಟ್ಟರೆ ಉಳಿದಂತೆ ಹಿತಕರವಾಗಿರುತ್ತದೆ. ಕೆಲವು ವೇಳೆ ಆ ಅವಧಿಯಲ್ಲಿ 40.4ಸೆ. ನಿಂದ 39.6ಸೆ. ವರೆಗೂ ಇರುತ್ತದೆ. ಜೂನ್ ತಿಂಗಳಲ್ಲಿ ಮುಂಗಾರು ಮಳೆ ಪ್ರಾರಂಭವಾದಾಗ ಉಷ್ಣಾಂಶ ತಗ್ಗುತ್ತದೆ. ಸಾಮಾನ್ಯವಾಗಿ ಜೂನ್-ನವೆಂಬರ್‌ಗಳಲ್ಲಿ ವಾರ್ಷಿಕ ಮಳೆಯ ಅಧಿಕ ಭಾಗ ಬೀಳುತ್ತದೆ. ಸರಾಸರಿ ವಾರ್ಷಿಕ ಮಳೆ 612.30ಮಿಮೀ. ಇದು ಸಾಧಾರಣ ಮಳೆ ಪ್ರದೇಶ. ಮುಂಗಾರು ಮಾರುತದ ಅವಧಿಯಲ್ಲಿ ಬೀಳುವ ಮಳೆ ಹಿಂಗಾರು ಮಾರುತದ ಅವಧಿಗಿಂತ ಸ್ವಲ್ಪ ಹೆಚ್ಚಾಗಿರುತ್ತದೆ. ಹಿಂಗಾರಿನಲ್ಲಿ ಚಂಡಮಾರುತದ ಮಳೆಗಳು


ಗದಗ ಜಿಲ್ಲೆ
ಬಾಗಲಕೋಟೆ ಜಿಲ್ಲೆ
ಬೆಳಗಾಂವಿ ಜಿಲ್ಲೆ
ಮಲಪ್ರಭಾ ನದಿ
ಕೊಣ್ಣೂರು
ಆಲೂರು
ಹಿರೇಹಾಳ
ಸೂದಿ
ಬೈರನಹಟ್ಟಿ
ಹಾಲ್‌ಗೊಪ್ಪ
ಗಜೇಂದ್ರಗಡ
ನರಗುಂದ
ರೋಣ
ಸವಡಿ
ನೀಲಗುಂದ
ನರೇಗಲ್ಲ
ಹೊಂಬಳ
ಕೋಟುಮಾಚಗಿ
ಬೆಟಗೇರಿ
ಕುರ್ತಕೋಟಿ
ಗದಗ
ಲಕ್ಕುಂಡಿ
ನಾಗಾವಿ
ಡಂಬಳ
ಮುಳಗುಂದ
ಕಪ್ಪತಗುಡ್ಡ
ಸೊರಟೂರು
ಶಿರಹಟ್ಟಿ
ಮುಂಡರಗಿ
ದೇವಿಗಾಳ
ಕಲಕೇರಿ
ಕೊರ್ಲಹಳ್ಳಿ
ತುಂಗಭದ್ರ ಜಲಾಶಯ
ಲಕ್ಷ್ಮೇಶ್ವರ
ಬನ್ನಿಕೊಪ್ಪ
ಬೆಳ್ಳಟ್ಟಿ
ಬಿದರಹಳ್ಳಿ
ತುಂಗಭದ್ರಾ ನದಿ
ಹಾವೇರಿ ಜಿಲ್ಲೆ
ಬಳ್ಳಾರಿ ಜಿಲ್ಲೆ
ಕೊಪ್ಪಳ ಜಿಲ್ಲೆ
ಧಾರವಾಡ ಜಿಲ್ಲೆ
0 10 20
ಕಿಲೋಮೀಟರುಗಳು
ಗದಗ ಜಿಲ್ಲೆ

ಬೀಳುವುದುಂಟು. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಮುಂಗಾರು ಅಧಿಕವಾಗಿ ಬಿದ್ದರೆ ಪೂರ್ವ ಭಾಗದಲ್ಲಿ ಹಿಂಗಾರು ಬೀಳುತ್ತದೆ. ಸರಾಸರಿ ಲೆಕ್ಕದಲ್ಲಿ ಪಶ್ಚಿಮ ಭಾಗದಲ್ಲಿ ಮಳೆ ಸರಾಸರಿ ಸ್ವಲ್ಪ ಅಧಿಕ.

ಜಿಲ್ಲೆಯಲ್ಲಿ ಯಾವ ಪ್ರಮುಖ ನದಿಯೂ ಹರಿಯುವುದಿಲ್ಲ. ತುಂಗಭದ್ರಾ ನದಿ ದಕ್ಷಿಣದ ಅಂಚಿನಲ್ಲಿ ಹರಿದರೆ ಮಲಪ್ರಭಾ ನದಿ ಉತ್ತರದ ಅಂಚಿನಲ್ಲಿ ಹರಿಯುತ್ತದೆ. ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಿಗೂ ಬಳ್ಳಾರಿ ಜಿಲ್ಲೆಗೂ ಮೇರೆಯಾಗಿ ತುಂಗಭದ್ರಾ ನದಿ ಹರಿಯುತ್ತದೆ. ಶಿರಹಟ್ಟಿ ಹಳ್ಳ ಮತ್ತು ಹಿರೇಹಳ್ಳಗಳು ಈ ಜಿಲ್ಲೆಯಲ್ಲಿ ಹುಟ್ಟಿ ಆಗ್ನೇಯಾಭಿಮುಖವಾಗಿ ಹರಿದು ತುಂಗಭದ್ರಾ ನದಿಯನ್ನು ಸೇರಿಕೊಳ್ಳುತ್ತವೆ. ಮಲಪ್ರಭಾ ನದಿ ಈ ಜಿಲ್ಲೆಗೂ ಬಾಗಲಕೋಟೆ ಜಿಲ್ಲೆಗೂ ಸರಹದ್ದಾಗಿ ಹರಿಯುತ್ತದೆ. ನರಗುಂದ ತಾಲ್ಲೂಕಿನ ಲಕ್ಮಾಪುರದ ಬಳಿ ಜಿಲ್ಲೆಗೆ ತಾಗಿ ಹರಿದು ರೋಣ ತಾಲ್ಲೂಕಿನ ಹಡಗಲಿ ಗ್ರಾಮದವರೆಗೂ ಮುಂದುವರಿಯುತ್ತದೆ. ಮಲಪ್ರಭಾ ನದಿಗೆ ಈ ಜಿಲ್ಲೆಯ ಮೂಲಕ ಹರಿಯುವ ಮುಖ್ಯ ಉಪನದಿಗಳಲ್ಲೊಂದಾದ ಬೆಣ್ಣೆಹಳ್ಳ ರೋಣ ತಾಲ್ಲೂಕಿನ ಮೆಣಸಿಗೆಯ ಬಳಿ ಅದನ್ನು ಸೇರುತ್ತದೆ. ಈ ಹೊಳೆಗೆ ಗೂಗಿಹಳ್ಳ, ತುಪರಿಹಳ್ಳ, ಹಂದಿಗನ ಹಳ್ಳಗಳು ಕೂಡಿಕೊಳ್ಳುತ್ತವೆ. ಇನ್ನೊಂದು ಹಿರೇಹಳ್ಳ. ಅದನ್ನು ಉತ್ತರಾಭಿಮುಖವಾಗಿ ಗದಗ ಮತ್ತು ರೋಣ ತಾಲ್ಲೂಕುಗಳಲ್ಲಿ ಹರಿದು ಬೇಲೆರಿಯ ಹತ್ತಿರ ಮಲಪ್ರಭಾ ನದಿಯನ್ನು ಸೇರುತ್ತದೆ. ಪವಡಿ ಬಳಿ ಹರಿಯುವ ಆಲೂರು ಹಳ್ಳ ಈ ನದಿಗೆ ಸೇರುವ ಉಪಹಳ್ಳ.



ತೋಂಟದಾರ್ಯ ಮಠ, ಗದಗ

**ವ್ಯವಸಾಯ ಮತ್ತು ನೀರಾವರಿ :** ಈ ಜಿಲ್ಲೆಯಲ್ಲಿ ಶೇ.70 ಮಂದಿ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಪಶ್ಚಿಮ ಕರಾವಳಿಯಿಂದ ಬೀಸುವ ಮುಂಗಾರು ಮಾರುತಗಳು ಇಲ್ಲಿಯ ವ್ಯವಸಾಯಕ್ಕೆ ಹೆಚ್ಚು ಅನುಕೂಲಕರವಾಗಿವೆ. ಈಶಾನ್ಯ ಮಾರುತಗಳಿಂದ ಹಿಂಗಾರು ಮಳೆ ಜಿಲ್ಲೆಯ ಎಲ್ಲ ಭಾಗಗಳಿಗೆ ಸಾಧಾರಣವಾಗಿ ಬೀಳುತ್ತದೆ. ಇಲ್ಲಿನ ವ್ಯವಸಾಯದ ಜಮೀನು, ಮಳೆ ಮಾರುತಗಳನ್ನು ಅವಲಂಬಿಸಿದೆ. ಒಣ ಬೆಳೆಗಳು ಬೆಳೆಯುವ ಜಿರಾಯತು ಜಮೀನು ಮತ್ತು ನೀರಾವರಿ ಬೆಳೆ ಬೆಳೆಯುವ ಬಾಗಾಯತು ಜಮೀನುಗಳೆಂದು ಇಲ್ಲಿಯ ಬೇಸಾಯದ ನೆಲವನ್ನು ವಿಂಗಡಿಸಬಹುದು. ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಕಟ್ಟಿದ ಅನೇಕ ಕೆರೆಗಳು ಮತ್ತು ಜಲಾಶಯಗಳು ಇಂದಿಗೂ ಉಪಯುಕ್ತವಾಗಿವೆ. ಶಿರಹಟ್ಟಿ ತಾಲ್ಲೂಕಿನ ಮಜ್ಜೂರು, ಮಾಗಡಿ, ಶಿಟ್ಟಿಕೇರಿ, ಮುಂಡರಗಿ ತಾಲ್ಲೂಕಿನ ಡಂಬಳ ಕೆರೆಗಳು ಹೆಸರಿಸಬಹುದಾದಂಥವು. ಮಲಪ್ರಭಾ ಬಲದಂಡೆ ಯೋಜನೆಯಿಂದ ನರಗುಂದ, ಗದಗ ಮತ್ತು ರೋಣ ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ. ತುಂಗಭದ್ರಾ ನದಿಯಿಂದ ತೀರ ಪ್ರದೇಶದ ಜಮೀನುಗಳಿಗೆ ನೀರಾವರಿ ಅನುಕೂಲ ಒದಗಿದೆ. ಜಿಲ್ಲೆಯಲ್ಲಿ ಕಾಲುವೆಗಳಿಂದ 34,621 ಕೆರೆಗಳಿಂದ 2,030 ಮತ್ತು ಬಾವಿಗಳಿಂದ 7,373 ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಈ ಜಿಲ್ಲೆಯು ಎಲ್ಲ ತಾಲ್ಲೂಕುಗಳಲ್ಲೂ ವಿಶೇಷವಾಗಿ ಜೋಳ ಬೆಳೆಯುತ್ತದೆ. ಬೆಳವಲನಾಡು ಗೋಧಿ, ಜೋಳ, ಹತ್ತಿ, ಗೋವಿನಜೋಳಕ್ಕೆ (ಮೆಕ್ಕೆಜೋಳ) ಪ್ರಸಿದ್ಧ. ಗದಗನ್ನು ರಾಜ್ಯದ ಗೋದಿಯ ಕಣಜವೆಂದು ಕರೆಯುತ್ತಾರೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಎಳ್ಳನ್ನು ಬೆಳೆಯುತ್ತಾರೆ. ಹೆಸರು, ಕಡಲೆ, ಹುರುಳಿ, ತೊಗರಿ ಮುಂತಾದ ಬೆಳೆಗಳು ಸಾಮಾನ್ಯವಾಗಿ ಜಿಲ್ಲೆಯ ಎಲ್ಲ ಭಾಗಗಳಲ್ಲೂ ಬೆಳೆಯುತ್ತವೆ. ಎಣ್ಣೆ ಕಾಳುಗಳನ್ನೂ ಮುಖ್ಯವಾಗಿ ಶೇಂಗಾವನ್ನೂ ಶಿರಹಟ್ಟಿ, ಮುಂಡರಗಿ, ರೋಣ ತಾಲ್ಲೂಕುಗಳಲ್ಲಿ ಬೆಳೆದರೆ, ಕುಸುಬೆ, ಎಳ್ಳು, ಔಡಲ ಇವು ಬೆಳವಲನಾಡಿನಲ್ಲಿ ವಿಶೇಷವಾಗಿ ಬೆಳೆಯುತ್ತವೆ. ಜಿಲ್ಲೆಯ ಕಪ್ಪು ಮಣ್ಣಿನ ಪ್ರದೇಶದಲ್ಲಿ ಹೆಚ್ಚಾಗಿ ಹತ್ತಿ ಬೆಳೆಯುವುದು. ನೀರಾವರಿ ಪ್ರದೇಶದಲ್ಲಿ ಬತ್ತ ಬೆಳೆಯುತ್ತಾರೆ. ದ್ರಾಕ್ಷಿ, ಪೇರಲ, ಬೋರೆ, ಮಾವು, ಬಾಳೆ, ನಿಂಬೆ, ಬದನೆ, ಬೆಂಡೆ, ಹೀರೆ, ಪಡುವಲ, ಬಟಾಟೆ, ಗೆಣಸು, ಈರುಳ್ಳಿ ಮೊದಲಾದವು ಈ ಜಿಲ್ಲೆಯಲ್ಲಿ ಬೆಳೆಯುತ್ತವೆ. ಗೋದಿಯನ್ನು 35,181, ಮುಸುಕಿನ ಜೋಳವನ್ನು 18,063, ಜೋಳವನ್ನು 84,427, ಸಜ್ಜೆಯನ್ನು 1,190 ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತದೆ (1998-99).

**ಕೈಗಾರಿಕೆ :** ಜಿಲ್ಲೆಯಲ್ಲಿ ಗ್ರಾಮೀಣ ಸಂಪನ್ಮೂಲ ಬಳಸಿಕೊಂಡು ಅಸ್ತಿತ್ವಕ್ಕೆ ಬಂದ ಕೈಗಾರಿಕೆಗಳೇ ಹೆಚ್ಚು. ಕೈಮಗ್ಗ, ಕಂಬಳಿ ನೇಯುವುದು, ಬೀಡಿ ಕಟ್ಟುವುದು, ಬಿದಿರು ವಸ್ತುಗಳು, ಚುರಮುರಿ (ಮಂಡಕ್ಕಿ) ಅವಲಕ್ಕಿ ಮತ್ತು ರೇಷ್ಮೆ ಇವುಗಳ ತಯಾರಿಕೆ, ಚರ್ಮ ಹದ ಮಾಡುವುದು. ವಿದ್ಯುತ್ ಮಗ್ಗಗಳಿಂದ ಸೀರೆ, ಕುಪ್ಪಸ ತಯಾರಿಕೆ ಕುಂಬಾರಿಕೆ ಮುಂತಾದ ವಿವಿಧ ಉದ್ದಿಮೆಗಳಲ್ಲಿ ಸಾವಿರಾರು ಜನ ನಿರತರಾಗಿದ್ದಾರೆ. ಗದಗ, ನರಗುಂದ ಇವು ಹತ್ತಿಯ ಉದ್ದಿಮೆಗೆ ಪ್ರಸಿದ್ಧ. ಗದಗದಲ್ಲಿ ಬಟ್ಟೆ ತಯಾರಿಸುವ ಕಾರ್ಖಾನೆಯಿದೆ. ನರಗುಂದ, ಹುಲಕೋಟಿ, ಲಕ್ಷ್ಮೇಶ್ವರಗಳಲ್ಲಿ ನೂಲಿನ ಗಿರಣಿಗಳಿವೆ. ಮೇಲಿನ ಎಲ್ಲ ಸ್ಥಳಗಳಲ್ಲೂ ಹತ್ತಿ ಹಿಂಡುವ ಕಾರ್ಖಾನೆಗಳಿವೆ. ಗದಗ ಜಿಲ್ಲೆ ಕೈಮಗ್ಗದ ಬಟ್ಟೆಗಳಿಗೂ ಪ್ರಸಿದ್ಧ. ರೋಣ ತಾಲ್ಲೂಕಿನಲ್ಲಿ ಖಾದಿ ಬಟ್ಟೆ ತಯಾರಾಗುತ್ತದೆ. ಗದಗ, ಬೆಟಗೇರಿ, ಗಜೇಂದ್ರಗಡ, ಶಿರೋಳ ಇವು ಕೈಮಗ್ಗದ ಸೀರೆ, ಕುಪ್ಪಸ ಮುಂತಾದವುಗಳಿಗೆ ಪ್ರಸಿದ್ಧ. ಗಜೇಂದ್ರಗಡ, ಶಿರೋಳಗಳಲ್ಲಿ ಕಣಗಳು (ರವಿಕೆಬಟ್ಟೆ) ಪ್ರಸಿದ್ಧ. ನರಗುಂದ ಗುಡಾರ ತಯಾರಿಸುವುದಕ್ಕೆ ಪ್ರಸಿದ್ಧ. ತಂಬಳೆ, ಲಕ್ಕುಂಡಿ, ಕೊಣ್ಣೂರುಗಳಲ್ಲಿ ಕಂಬಳಿ ತಯಾರಿಸುವ ಉದ್ಯಮವಿದೆ. ಗದಗದಲ್ಲಿ ಹಿತ್ತಾಳೆ ಪಾತ್ರೆ ತಯಾರಿಸುತ್ತಾರೆ.

ಗ್ರಾಮೋದ್ಯಮಗಳಾದ ಗಾಣದ ಎಣ್ಣೆ, ಸೋಪು, ಚರ್ಮ ಹದಮಾಡುವುದು, ಖಾದಿ ಬಟ್ಟೆ ತಯಾರಿಕೆ ಗದಗ, ರೋಣ, ನರಗುಂದ ಇವುಗಳಲ್ಲಿ ಹರಡಿದೆ. ಗದಗಶಹರು ಮುದ್ರಣ ಕ್ಷೇತ್ರದಲ್ಲಿ ಪ್ರಮುಖವಾಗಿದೆ. ತಿಜೋರಿ, ಕಪಾಟು, ಕುರ್ಚಿ, ಮೇಜು, ಮುಂತಾದವುಗಳ ತಯಾರಿಕೆ ಗದಗ, ನರಗುಂದದಲ್ಲಿ ಹೆಚ್ಚು. ಜಿಲ್ಲೆಯಲ್ಲಿ 31 ಬಟ್ಟೆ ಗಿರಣಿಗಳಿವೆ. 5 ರಾಸಾಯನಿಕ ಕಾರ್ಖಾನೆಗಳಿವೆ. 20 ಎಂಜನಿಯರಿಂಗ್ ಕೇಂದ್ರಗಳು, 50 ಇತರ ಉದ್ದಿಮೆಗಳಿವೆ. 24 ಕೈಗಾರಿಕಾ ಕೇಂದ್ರಗಳಿದ್ದರೆ 5 ಕೈಗಾರಿಕಾ ಎಸ್ಟೇಟ್‌ಗಳಿವೆ. ಈ ಉದ್ಯಮಗಳ ಒಟ್ಟು ಉದ್ಯೋಗಿಗಳು 15,448. ಹತ್ತಿಯ ಕೈಮಗ್ಗದ ಬಟ್ಟೆಗಳು, ಮೆಣಸಿನಕಾಯಿ, ಶೇಂಗಾ, ಗೋದಿ, ಜೋಳ ಮುಂತಾದವು ಈ ಜಿಲ್ಲೆಯ ಪ್ರಮುಖ ರಫ್ತು ವಸ್ತುಗಳಾಗಿವೆ. ಮನೆ ಕಟ್ಟುವ ಸಾಮಗ್ರಿಗಳು, ಯಂತ್ರಗಳು, ಔಷಧಿ, ಇಂಧನ, ದಿನಬಳಕೆಯ ಸಾಮಗ್ರಿಗಳು, ಅಲಂಕಾರ ವಸ್ತುಗಳು, ಏಲಕ್ಕಿ, ಕಾಫಿಬೀಜ, ಹೋಗೇಸೊಪ್ಪು ಮೊದಲಾದವು ಹೆಚ್ಚಾಗಿ ಹೊರಗಡೆಯಿಂದ ಬರುತ್ತವೆ. ಗದಗ, ಲಕ್ಷ್ಮೇಶ್ವರ ನಗರಗಳು ಬೆಳವಣಿಗೆಯಾದಂತೆಲ್ಲ ಜಿಲ್ಲೆಯ ವಾಣಿಜ್ಯ ಚಟುವಟಿಕೆ ಹೆಚ್ಚುತ್ತಿದೆ. ಜಿಲ್ಲೆಯಲ್ಲಿ ಒಟ್ಟು 22 ನಿಯಂತ್ರಿತ ಮಾರುಕಟ್ಟೆಗಳಿವೆ. ವಾಣಿಜ್ಯ ವ್ಯಾಪಾರಗಳಿಗೆ ಸಂಬಂಧಿಸಿದಂತೆ ವಿವಿಧ

ಸಂಸ್ಥೆಗಳು ಸ್ಥಾಪಿತವಾಗಿವೆ. ಗದಗಿನಲ್ಲಿರುವ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆ ಆರ್ಥಿಕ ಚಟುವಟಿಕೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ.

ಸರಸ್ವತಿ ದೇವಾಲಯ, ಗದಗ

ಈ ಜಿಲ್ಲೆಯಲ್ಲಿ ಹಣಕಾಸು ಮತ್ತು ಬ್ಯಾಂಕಿಂಗಿಗೆ ಸಂಬಂಧಿಸಿದ ವಿವಿಧ ಸಂಸ್ಥೆಗಳಿವೆ. ಕರ್ನಾಟಕ ರಾಜ್ಯ ಹಣಕಾಸು ನಿಗಮ ವಿವಿಧ ಸಂಘ ಸಂಸ್ಥೆಗಳಿಗೆ ಮತ್ತು ಕೈಗಾರಿಕೆಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ. ಸಹಕಾರ ವ್ಯವಸ್ಥೆಯಿಂದ ರೈತರಿಗೆ, ಕೈಕಸಬಿನವರಿಗೆ ಆರ್ಥಿಕ ನೆರವು ದೊರೆಯುತ್ತಿದೆ. ಜಿಲ್ಲೆಯಲ್ಲಿ 44 ವಾಣಿಜ್ಯ ಬ್ಯಾಂಕ್‌ಗಳು, 35 ಗ್ರಾಮೀಣ ಬ್ಯಾಂಕ್‌ಗಳು ಇವೆ (2001). ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳು ಸೇರಿ 101 ಸಹಕಾರಿ ನಗರ ಬ್ಯಾಂಕ್‌ಗಳಿವೆ. 232 ಇತರ ಸಹಕಾರ ಬ್ಯಾಂಕ್‌ಗಳಿವೆ. 17 ಭೂ ಅಭಿವೃದ್ಧಿ ಬ್ಯಾಂಕ್‌ಗಳಿವೆ. 514 ಸಾಲ ಸಹಕಾರ ಸಂಘಗಳಿವೆ.

**ಸಾರಿಗೆ ಸಂಪರ್ಕ :** ಗದಗದಿಂದ ವಿವಿಧ ತಾಲ್ಲೂಕುಗಳಿಗೆ ಮತ್ತು ಜಿಲ್ಲೆಯ ಹೊರ ಊರುಗಳಿಗೆ ರಸ್ತೆ ಮಾರ್ಗಗಳಿವೆ. 46ಕಿಮೀ ರಾಷ್ಟ್ರೀಯ ಹೆದ್ದಾರಿ, 203ಕಿಮೀ ರಾಜ್ಯ ಹೆದ್ದಾರಿ, 663ಕಿಮೀ ಜಿಲ್ಲಾ ಮುಖ್ಯ ರಸ್ತೆಗಳಿವೆ. ಜಿಲ್ಲೆಯಲ್ಲಿ ಗ್ರಾಮೀಣ ರಸ್ತೆಗಳೂ ಸೇರಿದಂತೆ ಇವುಗಳ ಒಟ್ಟು ಉದ್ದ 2,594ಕಿಮೀ. ಈ ಜಿಲ್ಲೆಯೊಂದಿಗೆ ಹೊರಗಿನ ಸಂಪರ್ಕ ಕಲ್ಪಿಸುವ ಕೆಲವು ಮುಖ್ಯ ರೈಲುಮಾರ್ಗಗಳಿವೆ. ಹುಬ್ಬಳ್ಳಿ ಬೆಂಗಳೂರು ರೈಲು ಮಾರ್ಗ ಈ ಜಿಲ್ಲೆಯಲ್ಲಿ ಗದಗದ ಮೂಲಕ ಹಾಯ್ದು ಹೋಗುತ್ತದೆ. ಹುಬ್ಬಳ್ಳಿಯಿಂದ ಗುಂತಕಲ್ಲು, ಸೊಲ್ಲಾಪುರ ಗೋವ ಕಡೆಗಳಿಗೆ ರೈಲುಮಾರ್ಗಗಳಿವೆ. ಗದಗ ಕರ್ನಾಟಕದ ದೊಡ್ಡ ರೈಲು ಜಂಕ್ಷನ್‌ಗಳಲ್ಲೊಂದಾಗಿದೆ. ಜಿಲ್ಲೆಯಲ್ಲಿ 62ಕಿಮೀ ಬ್ರಾಡ್‌ಗೇಜ್ ಮತ್ತು 50ಕಿಮೀ ಮೀಟರ್ ಗೇಜ್ ರೈಲು ಮಾರ್ಗವಿದೆ (2001).

**ಶಿಕ್ಷಣ :** ಗದಗ ಜಿಲ್ಲೆ ಹಿಂದೆ ಧಾರವಾಡ ಜಿಲ್ಲೆಯ ಭಾಗವಾಗಿತ್ತು. ಜಿಲ್ಲಾ ಕೇಂದ್ರ ಧಾರವಾಡ, ಹುಬ್ಬಳ್ಳಿ ಇವು ಉತ್ತರ ಕರ್ನಾಟಕದಲ್ಲೇ ಹೆಚ್ಚು ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದ್ದ ಸ್ಥಳಗಳು. ಅಲ್ಲಿನ ಕರ್ನಾಟಕ ಕಾಲೇಜು, ಕೃಷಿ ಶಿಕ್ಷಣ ಕಾಲೇಜು, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಂದ ಗದಗ ಜಿಲ್ಲೆಯ ವಿದ್ಯಾರ್ಥಿಗಳು ಉಪಯೋಗ ಪಡೆಯುತ್ತಿದ್ದಾರೆ. 1950ರಲ್ಲಿ ಸ್ಥಾಪಿತವಾದ ಕರ್ನಾಟಕ ವಿಶ್ವವಿದ್ಯಾಲಯ ಉನ್ನತ ಶಿಕ್ಷಣದ ಅನುಕೂಲವನ್ನು ಒದಗಿಸಿತು. ಗದಗ-ಬೆಟಗೇರಿ ಪುರಸಭೆಯ ವ್ಯಾಪ್ತಿಯಲ್ಲಿ ಮತ್ತು ಇತರೆಡೆ ಕಾಲೇಜುಗಳು, ಕಿರಿಯ ಕಾಲೇಜುಗಳು ಸ್ಥಾಪಿತವಾಗಿವೆ. ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ ಸೇ.66.27. ಪುರುಷರ ಸಾಕ್ಷರತೆ ಸೇ.79.55, ಸ್ತ್ರೀಯರ ಸಾಕ್ಷರತೆ ಸೇ.52.58. ಜಿಲ್ಲೆಯಲ್ಲಿ 697 ಪ್ರಾಥಮಿಕ ಶಾಲೆಗಳೂ 170 ಪ್ರೌಢ ಶಾಲೆಗಳೂ 35 ಪದವಿಪೂರ್ವ ಕಾಲೇಜುಗಳೂ 23 ಸಾಮಾನ್ಯ ಶಿಕ್ಷಣ ಕಾಲೇಜುಗಳೂ 8 ಪಾಲಿಟೆಕ್ನಿಕ್‌ಗಳೂ 2 ಎಂಜನಿಯರಿಂಗ್ ಕಾಲೇಜುಗಳೂ 4 ಭಾರತೀಯ ವೈದ್ಯ ಶಿಕ್ಷಣ ಸಂಸ್ಥೆಗಳೂ ಇವೆ. ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕಾಗಿ ಜಿಲ್ಲೆಯಲ್ಲಿ 826 ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ (2000-01).

ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯಗಳು ಅಭಿವೃದ್ಧಿಗೊಂಡಿವೆ. 7 ಸರ್ಕಾರಿ ಆಸ್ಪತ್ರೆಗಳು, 2 ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು ಇವೆ. 29 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 6 ಪ್ರಾಥಮಿಕ ಆರೋಗ್ಯ ಘಟಕಗಳಿವೆ. ಜನಾರೋಗ್ಯ ರಕ್ಷಣೆಗಾಗಿ ಸರ್ಕಾರ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಕುಡಿಯುವ ನೀರು ಸರಬರಾಜಿಗಾಗಿ 2,793 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. 387 ಕೊಳವೆನೀರು ಸರಬರಾಜು ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. 296 ನೀರು ಸರಬರಾಜು ಯೋಜನೆಗಳು ಅನುಷ್ಠಾನಗೊಂಡಿವೆ. ನಿರ್ಮಲ ಗ್ರಾಮ ಯೋಜನೆ ಅಡಿಯಲ್ಲಿ 1,853 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಕೊಳಚೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ 152 ಮನೆಗಳನ್ನು ನಿರ್ಮಿಸಲಾಗಿದೆ (2000-01). ಹಸುರು ಯೋಜನೆಯಲ್ಲಿ 9.14 ಲಕ್ಷ ಮರಗಳನ್ನು ನೆಡಲಾಗಿದೆ.

**ಇತಿಹಾಸ ಮತ್ತು ಸಂಸ್ಕೃತಿ :** ಈ ಜಿಲ್ಲೆ ಪ್ರಾಚೀನ ಕಾಲದಿಂದ ಜನ ವಸತಿ ಹೊಂದಿದ್ದ ಪ್ರದೇಶ. ತುಂಗಭದ್ರಾ, ಮಲಪ್ರಭಾ ನದಿಗಳ ದಂಡೆಯಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯಿದೆ. ಈ ಜಿಲ್ಲೆಯಲ್ಲಿನ ರೋಣ ತಾಲ್ಲೂಕಿನ ಮೆಣಸಗಿ, ಶಿರಹಟ್ಟಿ ತಾಲ್ಲೂಕಿನ ಕೊಂಚಿಗೇರಿ, ನಿಟ್ಟೂರು ಮುಂತಾದ ಸ್ಥಳಗಳಲ್ಲಿ ಪುರಾತನ ಶಿಲಾಯುಗದ ಶಿಲಾಯುಧಗಳು ದೊರಕಿವೆ.



ವೀರನಾರಯಣ ದೇವಸ್ಥಾನ, ಗದಗ

ನವ ಶಿಲಾಯುಗದ ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ನೆಲೆಗಳು ನರಗುಂದ ತಾಲ್ಲೂಕಿನ ಅರಿಶಿನಗೋತಿ, ಬೈರನಹಟ್ಟಿ, ಹಾಳಗುಪ್ಪ, ಕರಗೋವಿನಕುಪ್ಪ, ಲಿಂಗಧಾಳ ಮತ್ತು ಶಿರೋಳ, ರೋಣ ತಾಲ್ಲೂಕಿನ

ಮಣ್ಣೂರು, ಮೆಣಸಗಿ, ನಿಡಗುಂದಿ, ನಿಡಗುಂದಿಕೊಪ್ಪ, ಸವಡಿ, ಶಿರಹಟ್ಟಿ ತಾಲ್ಲೂಕಿನ ಬಲ್ಲೆರು ಮೊದಲಾದ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ. ರೋಣ ತಾಲ್ಲೂಕಿನ ಹಿರೇಹಾಳದಲ್ಲಿ ನವಶಿಲಾ ಸಂಸ್ಕೃತಿ ಅಂಶಗಳು ಬೆಳಕಿಗೆ ಬಂದಿವೆ. ಇಲ್ಲಿಯೇ ದಕ್ಷಿಣ ಭಾರತದ ಕಬ್ಬಿಣ ಯುಗಕ್ಕೆ ಸಂಬಂಧಿಸಿದ ವಾಸದ ನೆಲೆ ದೊರೆತಿದೆ. ಇಂಧನ ನೆಲೆಗಳನ್ನು ನರಗುಂದ ತಾಲ್ಲೂಕಿನ ಕೊಪ್ಪ, ರೋಣ ತಾಲ್ಲೂಕಿನ ಉಣಚಗೇರಿ ಮುಂತಾದೆಡೆಗಳಲ್ಲಿ ಕಾಣಬಹುದು. ಉಣಚಗೇರಿಯಲ್ಲಿ ಹಳ್ಳವೊಂದರ ಪಕ್ಕದಲ್ಲಿ ತುಂಡು ಎಲುಬುಗಳಿದ್ದ ಅನೇಕ ಮಡಕೆ ಸಮಾಧಿಗಳನ್ನು ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ ನುರುಜು ಕೂಡಿದ ಶಿಲಾವೃತ್ತಗಳು ಇವೆ. ಬೃಹತ್ ಶಿಲಾಸಮಾಧಿ ಕಾಲದ ಶಿಲಾವೃತ್ತಗಳನ್ನು ರೋಣ ತಾಲ್ಲೂಕಿನ ಗಜೇಂದ್ರಗಡ, ಉಣಚಗೇರಿ, ಈ ಸ್ಥಳಗಳಲ್ಲಿ ಗುರುತಿಸಲಾಗಿದೆ. ಈ ಪ್ರದೇಶದಲ್ಲಿ ಇವುಗಳನ್ನು ಪಾಂಡವರ ಮನೆ, ಪಾಂಡವರ ಕಟ್ಟೆ ಎಂದು ಕರೆಯುವ ರೂಢಿ. ಆದಿಕಾಲದಲ್ಲಿ ಪ್ರಚಲಿತವಿದ್ದ ಕೆಂಪು ಮಡಕೆಗಳು, ಗಾಜಿನ ಮಣಿ ಇತ್ಯಾದಿ ವಸ್ತು ದೊರಕಿರುವ ಅನೇಕ ನೆಲೆಗಳಿವೆ. ಮುಂಡರಗಿ ತಾಲ್ಲೂಕಿನ ಶೀರೆನಹಳ್ಳಿ, ರೋಣ ತಾಲ್ಲೂಕಿನ ಬೆಣಚಕಟ್ಟೆ, ಹಿರೇಹಾಳ, ಕಂಟೋಜಿ, ಶಿರಹಟ್ಟಿ, ಬಟ್ಟೂರು, ಹೊಳಲಾಪುರ, ಹುಲ್ಲೂರು, ಜೀರೆಮಾದಾಪುರ, ಲಕ್ಷ್ಮೇಶ್ವರ, ನವಭಾವನೂರು, ನಿಟ್ಟೂರು, ಸಂಕದಾಳ, ಯಳವತ್ತಿ, ಬೆಳ್ಳಟ್ಟಿ, ಚವತಾಳ್, ಇಟಗಿ, ನಾಗರಮಡುವು, ತಂಗೋಡ ಹೀಗೆ ಇಲ್ಲಿನ ನೆಲೆಗಳನ್ನು ಗುರುತಿಸಬಹುದು. ಶಿರಹಟ್ಟಿ ತಾಲ್ಲೂಕಿನ ಇಟಗಿಯ ನೆಲೆಯಲ್ಲಿ ವೈದಿಕ ಯಜ್ಞಗಳಲ್ಲಿ ಉಪಯೋಗಿಸಲಾಗುತ್ತಿದ್ದ ಉಖಾಪಾತ್ರ ಎಂಬ ವಿಶಿಷ್ಟ ರೀತಿಯ ಮಣ್ಣಿನ ಪಾತ್ರೆ ದೊರೆತಿರುವುದು ಕುತೂಹಲಕಾರಿ.

ಇತರೆ ಅನೇಕ ಸ್ಥಳಗಳಂತೆ ಇಲ್ಲಿನ ವಿವಿಧ ಸ್ಥಳಗಳಿಗೂ ಪೌರಾಣಿಕ ಹಿನ್ನೆಲೆಯಿದೆ. ಗದಗ ತಾಲ್ಲೂಕಿನ ಲಕ್ಕುಂಡಿಯನ್ನು ಶ್ರೀರಾಮ ಸ್ಥಾಪಿಸಿದನೆಂದು ಪ್ರತೀತಿ. ಅದು ರಾಮರ ದತ್ತಿ ಅಗ್ರಹಾರವಾಗಿತ್ತು. ಅಲ್ಲಲ್ಲಿ ಪಾಂಡವರ ಕಟ್ಟೆಗಳ ಬಗ್ಗೆ ಕೇಳಿಬರುತ್ತದೆ.

**ಇತಿಹಾಸ :** ಇತಿಹಾಸ ಕಾಲದಲ್ಲಿ ಮೌರ್ಯರು ಮತ್ತು ಸಾತವಾಹನರು ಈ ಜಿಲ್ಲೆಯನ್ನು ಆಳಿದ್ದು ಐತಿಹಾಸಿಕ ಆಧಾರಗಳಿಂದ ತಿಳಿದುಬರುತ್ತದೆ. ಮುಂದೆ ಮೂರನೆಯ ಶತಮಾನದಿಂದ ಆಳಿಕೆ ನಡೆಸಿದ ಬನವಾಸಿಯ ಕದಂಬರು ತಮ್ಮ ರಾಜ್ಯವನ್ನು ಇಲ್ಲಿಯವರೆಗೂ ವಿಸ್ತರಿಸಿದ್ದರು. ಬಾದಾಮಿ ಚಳುಕ್ಯರು 5-8ನೆಯ ಶತಮಾನದಲ್ಲಿ ಆಳಿದರು. ಆಗ ಇದು ಅವರ ಸಾಮ್ರಾಜ್ಯದ ಹೃದಯಭಾಗದಲ್ಲಿದ್ದಿತು. ಈ ಸಾಮ್ರಾಜ್ಯ ವ್ಯವಸ್ಥೆ ಮುಂದೆ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಳುಕ್ಯರ ಕಾಲದ ವರೆಗೂ ಮುಂದುವರಿಯಿತು. ಆಗ ಈ ಪ್ರದೇಶ ಬೆಳವಲ 300, ಕಿಸುಕಾಡು 70, ಪುರಿಗೆರೆ 300 ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿದ್ದಿತು.

ಈ ಪ್ರಾಂತ ಐತಿಹಾಸಿಕ ಮಹತ್ವ ಪಡೆದಿದ್ದು ಸಾಮಾನ್ಯವಾಗಿ ಇದನ್ನು ಸಾಮ್ರಾಟರ ಮನೆತನದ ಸದಸ್ಯರು ಮತ್ತು ರಕ್ತಸಂಬಂಧಿಗಳು ಆಳುತ್ತಿದ್ದರು. ಅವರನ್ನು ಮಾಂಡಲಿಕ ಅಥವಾ ಮಹಾಮಂಡಲೇಶ್ವರ ರೆಂದು ಕರೆಯಲಾಗುತ್ತಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಗಂಗರು ಮತ್ತು ರಾಷ್ಟ್ರಕೂಟ ಮನೆತನಗಳ ಅನ್ಯೋನ್ಯತೆಯಿಂದ ಗಂಗರಾಜರು ಈ ಪ್ರಾಂತ್ಯವನ್ನು ಕೆಲಕಾಲ ಆಳಲು ಅವಕಾಶವಾಯಿತು. ರಾಷ್ಟ್ರಕೂಟರು ಶತ್ರುಗಳಿಂದ ಪೀಡನೆಗೊಳಗಾಗಿದ್ದಾಗ ಗಂಗ ಇಮ್ಮಡಿ ಬೂತುಗ (936-61) ಅವರ ಸಹಾಯಕ್ಕೆ ಹೋದ. ಇದರಿಂದ ಸುಪ್ರೀತನಾದ ರಾಷ್ಟ್ರಕೂಟ ಮುಮ್ಮಡಿ ಅಮೋಘವರ್ಷ ತನ್ನ ಮಗಳು ರೇವಕ ನಿಮ್ಮಡಿಯನ್ನು ಕೊಟ್ಟು ವಿವಾಹ ಮಾಡಿದ. ಮೂರನೆಯ ಕೃಷ್ಣನ ವಿರುದ್ಧ ದಂಗೆಯೆದ್ದ ಲಲ್ಲೆಯನನ್ನು ಬೂತುಗ ನಿರ್ಮೂಲ ಮಾಡಿದ. ರಾಷ್ಟ್ರಕೂಟರ ಶತ್ರುವಾಗಿದ್ದ ಚೋಳ ಯುವರಾಜನಾದ ರಾಜಾದಿತ್ಯನನ್ನು ಬೂತುಗ ರಣರಂಗದಲ್ಲಿ ಕೊಂದು ಸಾಮ್ರಾಜ್ಯದ ಪ್ರತಿಷ್ಠೆಯನ್ನು ಹೆಚ್ಚಿಸಿದ. ಇದರಿಂದ ಬೂತುಗನಿಗೆ ಪುರಿಗೆರೆ 300, ಬೆಳ್ವೊಲ 300, ಕಿಸುಕಾಡು 70 ಮತ್ತು ಬಾಗೆನಾಡು 70 ಪ್ರಾಂತಗಳನ್ನು ಕೊಡಲಾಯಿತು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಪ್ರದೇಶ ಸಾಮ್ರಾಜ್ಯದ ಹಿಡಿತದಿಂದ ಬಿಡುಗಡೆಗೊಳ್ಳತೊಡಗಿತು.

ದ್ವಾರಸಮುದ್ರದಲ್ಲಿ ಹೊಯ್ಸಳರು, ದೇವಗಿರಿಯಲ್ಲಿ ಸೇವುಣರು ಪ್ರಬಲರಾಗಿ ರಾಜ್ಯ ವಿಸ್ತರಣೆ ಮಾಡಿದಾಗ ಹಿಂದಿನ ಸಾಮ್ರಾಜ್ಯ ವ್ಯವಸ್ಥೆ ಹೋಗಿ ಪ್ರಾಂತೀಯ ರಾಜ್ಯಗಳು ಹುಟ್ಟಿಕೊಂಡುವು. ಹೊಯ್ಸಳ ವಿಷ್ಣುವರ್ಧನ ತನ್ನ ರಾಜ್ಯದ ವಿಸ್ತರಣೆಯ ವಿಜಯಯಾತ್ರೆಯಲ್ಲಿ ಬೆಳುವಲ, ಅಣ್ಣಿಗೆರೆ, ಗದಗ ಮುಂತಾದ ಪಟ್ಟಣಗಳನ್ನು ವಶಪಡಿಸಿಕೊಂಡು ಮಲಪ್ರಭಾ ನದಿಯವರೆಗೂ ಸೈನ್ಯವನ್ನು ಮುನ್ನಡೆಸಿದ. ಲೊಕ್ಕಿಗುಂಡಿ ಇವನ ಅಧೀನದಲ್ಲಿತ್ತು. ವಿಷ್ಣುವರ್ಧನ ಗದಗದಲ್ಲಿ ಪಂಚನಾರಾಯಣ ದೇವಾಲಯಗಳಲ್ಲೊಂದನ್ನು ಕಟ್ಟಿಸಿದ. ಈ ಕಾಲದಲ್ಲೇ ಕಲ್ಯಾಣಿ ಚಾಳುಕ್ಯರು ಕಟ್ಟಿಸಿದ ಮೂರು ದೇವಾಲಯಗಳು ಗದಗದಲ್ಲಿವೆ. 11-12ನೆಯ ಶತಮಾನದಲ್ಲಿ ಗದಗ ಉತ್ಕರ್ಷದಲ್ಲಿದ್ದ ಪಟ್ಟಣವಾಗಿತ್ತು. ಕುಮಾರವ್ಯಾಸ (ನೋಡಿ) ಗದಗಿನ ವೀರನಾರಾಯಣನಿಂದ ಸ್ಫೂರ್ತಿ ಪಡೆದು ಕರ್ಣಾಟ ಭಾರತ ಕಥಾಮಂಜರಿಯನ್ನು (ಕುಮಾರವ್ಯಾಸ ಭಾರತ) ರಚಿಸಿದ್ದು ಸುಪರಿಚಿತವಾಗಿದೆ.

ತ್ರಿಕೂಟೇಶ್ವರ ದೇವಾಲಯ, ಗದಗ

ಹೊಯ್ಸಳರು ಮತ್ತು ಸೇವುಣರ ನಡುವಿನ ಸಂಘರ್ಷದ ಸ್ಥಳವಾಗಿದ್ದ ಈ ಜಿಲ್ಲೆಯು ಸೊರಟೂರಿನಲ್ಲಿ ಹೊಯ್ಸಳ ಎರಡನೆಯ ಬಲ್ಲಾಳನ ಸೈನ್ಯಕ್ಕೂ ಸೇವುಣ ಭಿಲ್ಲಮನ ಸೈನ್ಯಕ್ಕೂ ನಿರ್ಣಾಯಕ ಯುದ್ಧ ನಡೆದು ಸೇವುಣರನ್ನು ಕೃಷ್ಣಾ ನದಿಯ ಆಚೆಗೆ ಹಿಮ್ಮೆಟ್ಟಿಸಲಾಯಿತು. ಮುಂದೆಯೂ ಈ ಪ್ರದೇಶ ಸೇವುಣ ಹೊಯ್ಸಳರ ಸ್ಪರ್ಧೆಯ ತಾಣವಾಗಿತ್ತು. ವಿಜಯನಗರದ ಆಡಳಿತ ಕಾಲದಲ್ಲಿ ಇದು ವಿಜಯನಗರದ ಒಂದು ಪ್ರಾಂತವಾಯಿತು. 1565ರ ತಾಳಿಕೋಟೆ ಯುದ್ಧದ ತರುವಾಯ ಬಿಜಾಪುರದ ಸುಲ್ತಾನಶಾಹಿ ರಾಜ್ಯ ಈ ಜಿಲ್ಲೆಯ ಮೇಲೆ ಹತೋಟಿ ಸಾಧಿಸಲು ಮುಂದಾಯಿತು. ಈಗಿನ ದಾವಣಗೆರೆ ಜಿಲ್ಲೆಯಲ್ಲಿರುವ ಹರಸನಹಳ್ಳಿಯಲ್ಲಿ ಅಸ್ತಿತ್ವಕ್ಕೆ ಬಂದ ಪಾಳೆಯಪಟ್ಟಿನ ನಾಯಕರು ಬಿಜಾಪುರದ ಸುಲ್ತಾನರಿಗೆ ಕಪ್ಪ ಕೊಟ್ಟುಕೊಂಡು ಈ ಜಿಲ್ಲೆಯ ಕೆಲವು ಪ್ರದೇಶಗಳೂ ಸೇರಿಕೊಂಡಂತೆ ಆ ಪ್ರದೇಶವನ್ನು ಆಳಿಕೊಂಡು ಬಂದರು. ಮುಂದೆ ಔರಂಗಜೇಬ್ ಬಿಜಾಪುರ ರಾಜ್ಯವನ್ನು ನಾಶಪಡಿಸಿದ ಅನಂತರ ಮೊಗಲ್ ಸುಬೇದಾರನೊಬ್ಬ ಸಮೀಪದ ಸವಣೂರಿನಲ್ಲಿ ನೆಲೆಯೂರಿದ. ಆಗ ಈ ಜಿಲ್ಲೆಯ ಬಹು ಭಾಗಗಳು ಮೊಗಲರ ಅಧಿಕಾರಕ್ಕೆ ಬಂದವು. ಅಂತಿಮವಾಗಿ ಸವಣೂರು ಪ್ರಾಂತ್ಯ ಮರಾಠರ ಕೈಗೂ ತರುವಾಯ ಬ್ರಿಟಿಷರ ಕೈಗೂ ಬಂತು.

1830ರಲ್ಲಿ ಧಾರವಾಡ ಜಿಲ್ಲೆಯ ರಚನೆಯಾಗಿ ಈ ಪ್ರದೇಶ ಮುಂಬಯಿ ಪ್ರಾಂತ್ಯಕ್ಕೆ ಸೇರಿತು. 1857-58ರಲ್ಲಿ ನರಗುಂದದ ಬಾಬಾ

ಸಾಹೇಬ, ಮುಂಡರಗಿ ಭೀಮರಾಯ (ನೋಡಿ) - ಇವರು ಬ್ರಿಟಿಷರ ವಿರುದ್ಧದ ದಂಗೆಯಲ್ಲಿ ಭಾಗವಹಿಸಿದ್ದರು. ಭೀಮರಾಯ ಇನಾಂದಾರರ ಮನೆತನಕ್ಕೆ ಸೇರಿದವನಾಗಿದ್ದು ಸುತ್ತಮುತ್ತಲ ಜಮೀನ್ದಾರರನ್ನು ಸಂಘಟಿಸಿ ರೈತರ ಬೆಂಬಲ ಪಡೆದು ಡಂಬಳ, ಗದಗ ಮತ್ತು ಕೊಪ್ಪಳಗಳನ್ನು ವಶಪಡಿಸಿಕೊಂಡ. ನರಗುಂದದ ಬಾಬಾಸಾಹೇಬ (ನೋಡಿ) ಇವನಿಗೆ ನೆರವಾಗಿ ದಂಗೆಯೆದ್ದ. ಬಾಬಾಸಾಹೇಬ ಬ್ರಿಟಿಷ್ ದಳಪತಿ ಮ್ಯಾನ್ಸನ್‌ನನ್ನು ಸುರೆಬಾನದಲ್ಲಿ ಎದುರಿಸಿ ಹತ್ಯೆ ಮಾಡಿದ. ಬ್ರಿಟಿಷರು ಸೈನ್ಯಬಲದಿಂದಲೂ ಯುಕ್ತಿಯಿಂದಲೂ ಈ ಇಬ್ಬರು ಬಂಡಾಯಗಾರರನ್ನು ಹತ್ಯೆಗೈದರು. ಮುಂಬಯಿ ಪ್ರಾಂತದಲ್ಲಿ ಧಾರವಾಡ ಜಿಲ್ಲೆಗೆ ಸೇರಿದ್ದ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಸಣ್ಣಪುಟ್ಟ ಸಂಸ್ಥಾನಗಳು ಅಸ್ತಿತ್ವದಲ್ಲಿದ್ದವು. ಅವು ಸ್ವಾತಂತ್ರ್ಯಾನಂತರ ಧಾರವಾಡ ಜಿಲ್ಲೆಯ ಭಾಗವಾದವು. ಧಾರವಾಡ ಜಿಲ್ಲೆ ಭಾಷಾವಾರು ಪ್ರಾಂತ ರಚನೆಯಾದಾಗ ವಿಶಾಲ ಮೈಸೂರು ರಾಜ್ಯಕ್ಕೆ ಸೇರಿತು.



ತ್ರಿಕೂಟೇಶ್ವರ ದೇವಾಲಯದ ಗೋಪುರ, ಗದಗ

ಇತಿಹಾಸಕಾಲದಲ್ಲಿ ಈ ಜಿಲ್ಲೆಯಲ್ಲಿ ಸಂಸ್ಕೃತಿ ಮತ್ತು ಕಲೆಗಳಿಗೆ ಪ್ರಸಿದ್ಧವಾದ ಅನೇಕ ಊರುಗಳು ಇದ್ದುವು. ಅವುಗಳಲ್ಲಿ ಗದಗ, ಲಕ್ಷ್ಮೇಶ್ವರ ಮತ್ತು ಲಕ್ಕುಂಡಿಗಳು ಪ್ರಮುಖವಾದವು. ಗದಗದಲ್ಲಿ ಚಾಳುಕ್ಯ ಶೈಲಿಯ ಮೂರು ದೇವಾಲಯಗಳಿವೆ. ಅವುಗಳಲ್ಲಿ ತ್ರಿಕೂಟೇಶ್ವರ ದೇವಾಲಯ ಅತ್ಯಲಂಕರಣದಿಂದಲೂ ವಿಸ್ತಾರದಿಂದಲೂ ಕೂಡಿದೆ. ಹೊಯ್ಸಳ ವಿಷ್ಣುವರ್ಧನ ನಿರ್ಮಿಸಿದ ವೀರನಾರಾಯಣ ದೇವಾಲಯ ಜಕಣಾಚಾರಿಯಿಂದ ನಿರ್ಮಿಸಲ್ಪಟ್ಟಿತೆಂದು ಐತಿಹ್ಯವಿದೆ. ಗದಗದಿಂದ 11ಕಿಮೀ ದೂರದಲ್ಲಿರುವ ಲಕ್ಕುಂಡಿ ಪ್ರಾಚೀನ ಕಾಲದಲ್ಲಿ ಲೊಕ್ಕಿಯಗುಂಡಿ ಎಂದು ಪ್ರಸಿದ್ಧವಾಗಿತ್ತು. ಬೆಳ್ವೊಲದ 18 ಅಗ್ರಹಾರಗಳಲ್ಲಿ ಇದೂ ಒಂದು. ದಾನ ಚಿಂತಾಮಣಿ ಅತ್ತಿಮಬ್ಬೆ ಇಲ್ಲಿ ಬ್ರಹ್ಮಜಿನಾಲಯವನ್ನು ಕಟ್ಟಿಸಿದಳು. ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ (ನೋಡಿ) ಇತಿಹಾಸ ಕಾಲದಲ್ಲಿ ಪುಲಿಗೆರೆ, ಪುರಿಗೆರೆ, ಪುಲಿಕರ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿತ್ತು. 11ನೆಯ ಶತಮಾನದಲ್ಲಿ ಲಕ್ಷ್ಮರಸನೆಂಬಾತ ಇಲ್ಲಿ ಲಕ್ಷ್ಮೇಶ್ವರ ದೇವಾಲಯವನ್ನು ಕಟ್ಟಿಸಿದ್ದರಿಂದ ಈ ಊರಿಗೆ ಅದೇ ಹೆಸರು ಬಂದಿರಬೇಕೆಂಬ ಅಭಿಪ್ರಾಯವಿದೆ. ಮುಂಡರಗಿ ತಾಲ್ಲೂಕಿನ ಡಂಬಳ (ನೋಡಿ) ಇನ್ನೊಂದು ಪ್ರಾಚೀನ ಧಾರ್ಮಿಕ ಕೇಂದ್ರ. ಇಲ್ಲಿ ಬೌದ್ಧ ವಿಹಾರಗಳು, ಚೈತ್ಯಾಲಯಗಳು ಮತ್ತು ದೇವಾಲಯಗಳು ಇವೆ. ಅವುಗಳಲ್ಲಿ ದೊಡ್ಡ ಬಸಪ್ಪ ದೇವಾಲಯ ಪ್ರಸಿದ್ಧವಾದದ್ದು.

ಇದಲ್ಲದೆ ಶಿರಹಟ್ಟಿ ತಾಲ್ಲೂಕಿನ ದೇವಿಗಾಳ, ಸೊರಟೂರು, ಶ್ರೀಮಂತಗಡಕೋಟೆ, ಗುದಗೇರಿ, ಯೆಲವತ್ತಿ, ರೋಣ ತಾಲ್ಲೂಕಿನ ಗಜೇಂದ್ರಗಡ, ಸವಡಿ, ಸುದಿ, ಗದಗ ತಾಲ್ಲೂಕಿನ ಹೊಂಬಳ, ಮೂಲಗುಂದ, ನಾಗಾವಿ, ನೀಲಗುಂದ, ನರಗುಂದ ತಾಲ್ಲೂಕಿನ ಕೊಣ್ಣೂರು, ಮುಂಡರಗಿ ತಾಲ್ಲೂಕಿನ ಕೊರಳಹಳ್ಳಿ, ಆಲೂರು, ತಾಮ್ರಗುಂಡಿ, ಬಿದರಹಳ್ಳಿ, ನಾಗರಹಳ್ಳಿ - ಇವು ದೇವಾಲಯಗಳು, ಕವಿ ಕಲಾವಿದರು, ಕೋಟೆಗಳು ಮುಂತಾದವಕ್ಕೆ ಹೆಸರಾಗಿವೆ.

ರಾಜ್ಯದ ಇತರ ಭಾಗಗಳಂತೆ ಇಲ್ಲಿಯೂ ಜನಪದ ಸಂಸ್ಕೃತಿ ಪಸರಿಸಿದೆ. ಬಸಪ್ಪ, ಭಂಡಪ್ಪ, ದ್ಯಾಮವ್ವ, ದುರ್ಗವ್ವ, ರೇಣುಕ, ಹುಲಿಗೆವ್ವ, ಜೋತಿಬಾ, ಖಂಡೋಬಾ - ಇಲ್ಲಿನ ಜನಪದ ದೇವತೆಗಳು. ಸಂಗೀತಗಾರರಾದ ಪಂಡಿತ ಭೀಮಸೇನ ಜೋಶಿ, ಪುಟ್ಟರಾಜ ಗವಾಯಿ ಸಾಹಿತಿಗಳಾದ ಹುಯಿಲಗೋಳ ನಾರಾಯಣರಾಯ, ಎನ್.ಕೆ.ಕುಲಕರ್ಣಿ, ಆಲೂರ ವೆಂಕಟರಾಯ, ಸಂ.ಶಿ.ಭೂಸನೂರ ಮಠ, ಗಿರಡ್ಡಿ ಗೋವಿಂದರಾಜ, ಆರ್.ಸಿ.ಹಿರೇಮಠ, ಜಿ.ಬಿ.ಜೋಶಿ, ಕೀರ್ತಿನಾಥ ಕುರ್ತಕೋಟಿ, ಶಾಂತಕವಿ, ಗರೂಡ ಸದಾಶಿವರಾಯ, ಮಹಾಂತೇಶಶಾಸ್ತ್ರೀ, ಎಚ್.ಎಸ್.ಹೂಗಾರ, ಸಿದ್ಧರಾಮ ಜಂಬಲದಿನ್ನಿ, ಚಿತ್ರಕಲೆಯ ಟಿ.ಪಿ.ಅಕ್ಕಿ, ಎಂ.ಎ.ಚಟ್ಟಿ ಮೊದಲಾದವರು ಈ ಜಿಲ್ಲೆಯವರು. (ಸಿ.ವಿ.ಕೆ.)

**ತಾಲ್ಲೂಕು ಮತ್ತು ಮುಖ್ಯ ಪಟ್ಟಣ :** ಇದು ಗದಗ, ರೋಣ, ಮುಂಡರಗಿ, ನರಗುಂದ ತಾಲ್ಲೂಕುಗಳನ್ನೊಳಗೊಂಡ ಉಪವಿಭಾಗದ ಕೇಂದ್ರವೂ ಆಗಿದೆ. ಈ ತಾಲ್ಲೂಕನ್ನು ಆಗ್ನೇಯದಲ್ಲಿ ಮುಂಡರಗಿ, ದಕ್ಷಿಣದಲ್ಲಿ ಶಿರಹಟ್ಟಿ, ತಾಲ್ಲೂಕುಗಳೂ ಪಶ್ಚಿಮದಲ್ಲಿ ಧಾರವಾಡ ಜಿಲ್ಲೆ ಮತ್ತು ನವಲಗುಂದ, ಉತ್ತರದಲ್ಲಿ ರೋಣ ಮತ್ತು ಪೂರ್ವದಲ್ಲಿ ಕೊಪ್ಪಳ ಜಿಲ್ಲೆ ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 1,098.5 ಚ.ಕಿಮೀ. ಜನಸಂಖ್ಯೆ 2,06,908. ಗದಗ, ಬೆಟಗೇರಿ ಎರಡು ಹೋಬಳಿಗಳಿದ್ದು ಒಟ್ಟು 57 ಗ್ರಾಮಗಳಿವೆ.

ತಾಲ್ಲೂಕಿನ ಹೆಚ್ಚು ಭಾಗ ಎರೆಮಣ್ಣಿನ ಪ್ರದೇಶ. ಅಲ್ಲಲ್ಲಿ ಧಾರವಾಡ ಶಿಲಾಶ್ರೇಣಿಗೆ ಸೇರಿದ ಕಲ್ಲಿನ ಗುಡ್ಡಗಳೂ ಇವೆ. ಅದರಲ್ಲೂ ಗದಗದಿಂದ ದಕ್ಷಿಣ ಪ್ರದೇಶ ಈ ರೀತಿಯದು. ಈ ಭಾಗದ ಕಪ್ಪತ ಗುಡ್ಡ ಶ್ರೇಣಿಯಲ್ಲಿ ಚಿನ್ನದ ನಿಕ್ಷೇಪವಿದೆ. ತಾಲ್ಲೂಕು ದಕ್ಷಿಣದಿಂದ ವಾಯವ್ಯ, ಉತ್ತರಕ್ಕೆ ಇಳಿಜಾರಾಗಿದೆ. ದೊಡ್ಡ ನದಿಗಳಾವುವೂ ಇಲ್ಲ. ವಾರ್ಷಿಕ ಸರಾಸರಿ ಮಳೆ ಸು.635ಮಿಮೀ. ಕಪ್ಪತಗುಡ್ಡ ಭಾಗದ ಕುರುಚಲ ಗಿಡಗಳ ಪ್ರದೇಶವನ್ನು ಬಿಟ್ಟರೆ ಮಿಕ್ಕ ಎರೆಭೂಮಿ ಪ್ರದೇಶ ಫಲವತ್ತಾದುದು. ಹೆಚ್ಚಿನ ವ್ಯವಸಾಯ ಮಳೆಯ ಆಧಾರದಿಂದ. ಬಾವಿಗಳ ಸಂಖ್ಯೆಯೂ ಕಡಿಮೆ. ತಾಲ್ಲೂಕಿನಲ್ಲಿ 2,49,821 ಎಕರೆ ಭೂಮಿ ಆಬಾದಿನಲ್ಲಿದೆ. ಬೀಳುಭೂಮಿ 21,348 ಎಕರೆಗಳು (1951). ಹತ್ತಿ, ಜೋಳ, ಗೋದಿ ತಾಲ್ಲೂಕಿನ ಮುಖ್ಯ ಬೆಳೆಗಳು. ಸೇಂಗಾ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ.

ಗದಗ ತಾಲ್ಲೂಕು ಸು.14ನೆಯ ಶತಮಾನದವರೆಗೆ ಬೆಳುವಲ 300 ಎಂಬ ಪ್ರಾಚೀನ ವಿಭಾಗದಲ್ಲಿತ್ತು. ಉತ್ತಮ ಶಿಲ್ಪಗಳಿಂದ ಕೂಡಿದ ಶಂಕರಲಿಂಗಪ್ಪ ದೇವಾಲಯವಿರುವ, 11ರಿಂದ 16ನೆಯ ಶತಮಾನಗಳಲ್ಲಿ ಅಗ್ರಹಾರವಾಗಿದ್ದ ಹೊಂಬಳ, ಪ್ರಾಚೀನ ವಿದ್ಯಾಕೇಂದ್ರವೆನಿಸಿದ್ದ 11-12 ನೆಯ ಶತಮಾನದ ದೇವಾಲಯಗಳಿರುವ ಕೋಟುಮಚಗಿ, ಬೌದ್ಧ ನಾಗಾರ್ಜುನನ ಸಂಬಂಧವಿತ್ತೆಂದು ಹೇಳುವ ನಾಗಾವಿ, 12ನೆಯ ಶತಮಾನದ ಶಾಸನಗಳು ಮತ್ತು ನಾರಾಯಣ ದೇವಾಲಯವಿರುವ ನೀಲಗುಂದ, ಪ್ರಾಚೀನ ಅಗ್ರಹಾರ ಸೊರಟೂರು ಮುಂತಾದ ಹಲವು ಚಾರಿತ್ರಿಕ ಸ್ಥಳಗಳು ಈ ತಾಲ್ಲೂಕಿನಲ್ಲಿವೆ. *

ಲಕ್ಕುಂಡಿ (ನೋಡಿ) ಅನೇಕ ದೇವಾಲಯಗಳಿಂದ ಪ್ರಸಿದ್ಧವಾಗಿದೆ. ಕವಿ ನಯಸೇನನಿಗೆ ಸಂಬಂಧಿಸಿದೆಯೆಂಬುದು ಹಾಗೂ ಅಜಿತಪುರಾಣ ಬರೆಯಿಸಿ ರನ್ನನಿಗೆ ಆಶ್ರಯ ನೀಡಿದ ಅತ್ತಿಮಬ್ಬೆಯ ಸಂಪರ್ಕ ವಿದ್ದಿತೆಂಬುದು ಈ ತಾಲ್ಲೂಕಿನ ಮುಳಗುಂದದ ಖ್ಯಾತಿ. ಗದಗದಿಂದ 9ಕಿಮೀ ದೂರವಿರುವ ಬೆಳದಡಿಯಲ್ಲಿ ಶ್ರೀರಾಮಚಂದ್ರನ ದೇವಾಲಯ ಮತ್ತು 16ಕಿಮೀ ದೂರದಲ್ಲಿ ತಿರುಪತಿಯೆಂದು ಖ್ಯಾತಿ ಗಳಿಸಿರುವ

ವೆಂಕಟಾಪುರದಲ್ಲಿ ವೆಂಕಟರಮಣ ಹಾಗೂ ಮಹಾಲಕ್ಷ್ಮಿಯ ದೇವಾಲಯ ಮತ್ತು ಬ್ರಹ್ಮಾನಂದರ ಸಮಾಧಿ ಇವೆ.

ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣವಾದ ಗದಗ ಹುಬ್ಬಳ್ಳಿ-ಗುಂತಕಲ್ಲು ರೈಲುಮಾರ್ಗದಲ್ಲಿ ಹುಬ್ಬಳ್ಳಿಗೆ 59ಕಿಮೀ ಪೂರ್ವಕ್ಕಿದೆ. ಪಕ್ಕದ ಬೆಟಗೇರಿಯನ್ನೂ ಸೇರಿಸಿ ಗದಗ-ಬೆಟಗೇರಿ ಪುರಸಭೆ ಇಲ್ಲಿ ವ್ಯವಸ್ಥಿತವಾಗಿದೆ. ಗದಗ-ಬೆಟಗೇರಿಯ ಜನಸಂಖ್ಯೆ 95,426. ಹಲವು ಶಾಲೆಗಳು, ಒಂದು ಕಾಲೇಜು, ಆಸ್ಪತ್ರೆಗಳು ಇತ್ಯಾದಿ ನಗರ ಸಾಮಾನ್ಯವಾದುವೆಲ್ಲ ಇಲ್ಲಿವೆ. ಗದಗ ಅರಳೆ ವ್ಯಾಪಾರ ಕೇಂದ್ರ. ಇದರ ದೊಡ್ಡ ಮಾರುಕಟ್ಟೆ, ವಖಾರುಗಳು ಇಲ್ಲಿವೆ. ಅರಳೆ ಉತ್ಪನ್ನ ಮತ್ತು ಮಾರಾಟದಲ್ಲಿ ಕರ್ನಾಟಕ ರಾಜ್ಯದ ಈಜಿಪ್ಟ್ ಎಂದು ಹೇಳುವಷ್ಟು ಪ್ರಸಿದ್ಧವಾಗಿದೆ. ಅರಳೆ ಸಂಸ್ಕರಿಸುವ ಕಾರ್ಖಾನೆಗಳು ಸ್ಥಾಪಿತವಾಗಿವೆ. ಬಟ್ಟೆ ಮತ್ತು ದವಸದ ಮಾರುಕಟ್ಟೆಗಳೂ ಇವೆ. ಇದು ತಾಲ್ಲೂಕಿನ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಬೆಳೆದಿದೆ. ಕೈಮಗ್ಗ ಮತ್ತು ಯಂತ್ರಮಗ್ಗಗಳಿಂದ ನೇಯ್ಗೆ ಉದ್ಯಮ ಪ್ರಮುಖವಾಗಿದೆ. ಎಣ್ಣೆ ತೆಗೆಯುವುದು, ನೂಲು ಉತ್ಪಾದನೆ, ಬೀಡಿ ಕಟ್ಟುವುದು ಇತರ ಉದ್ಯಮಗಳು. ದಕ್ಷಿಣ ಮಧ್ಯ ರೈಲ್ವೆಯಲ್ಲಿ ಗದಗ ಒಂದು ಕೂಡುನಿಲ್ದಾಣ. ಇಲ್ಲಿಂದ ಸೊಲ್ಲಾಪುರಕ್ಕೆ ಮೀಟರ್‌ಗೇಜಿನ ರೈಲುಮಾರ್ಗ ಇದೆ. ಗದಗದಲ್ಲೊಂದು ಸಣ್ಣ ರೈಲ್ವೆ ಕಾರ್ಯಾಗಾರವುಂಟು.



ಅನಂತನಾಥ ಬಸದಿ, ಲಕ್ಷ್ಮೇಶ್ವರ

ಇಲ್ಲಿನ ಸ್ಥಳಪುರಾಣದ ಪ್ರಕಾರ ಗದಗಿನ ಪೂರ್ವ ಹೆಸರು ಕ್ರತುಪುರ. ಈಗ ಊರಿನ ಹೆಸರು ಗದಗ್, ಗದುಗು ಎಂದು ಹಿಂದಿನ ರೀತಿಗಳಲ್ಲಿ ಬಳಕೆಯಲ್ಲಿದೆ. ಗದುಗೆಂಬ ಹೆಸರು ಇಲ್ಲಿರುವ ತೋಂಟದಾರ್ಯರ (ಸಿದ್ಧಲಿಂಗೇಶ್ವರರ) ಗದ್ದುಗೆಯಿಂದ ಬಂದಿರಬಹುದೆಂದೂ ಒಂದು ಹೇಳಿಕೆ. ಗಜಗ, ಕಲ್ಲುಗ, ಗಟ್ಟಿಗು ಇತ್ಯಾದಿ ಹೆಸರುಗಳಿಂದ ಬಂದಿರಬಹುದೆಂಬ ಅಭಿಪ್ರಾಯವೂ ಇದೆ. ಗದಗ ಒಂದು ಕಾಲದಲ್ಲಿ ಮಹಾ ಅಗ್ರಹಾರವಾಗಿ ಮೆರೆದ ಪಟ್ಟಣವೆಂಬುದು ಇಲ್ಲಿ ದೊರೆತಿರುವ ಚಾಳುಕ್ಯ, ಹೊಯ್ಸಳ, ಯಾದವ, ವಿಜಯನಗರ ಕಾಲದ ಹಲವು ಶಾಸನಗಳಿಂದ ತಿಳಿಯುತ್ತದೆ. ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬನಾದ ಕ್ರತು ಗದಗಿನ ಸಮೀಪದಲ್ಲಿರುವ ಕಪ್ಪತಗುಡ್ಡದಲ್ಲಿ ತಪಸ್ಸು ಮಾಡಿದ. ಕಪೋತರೋಮ ಎಂಬ ರಾಕ್ಷಸನ ಕಿರುಕುಳವನ್ನು ತಪ್ಪಿಸಲು ದೇವರು ವೀರನಾರಾಯಣನ ರೂಪದಲ್ಲಿ ಕಾಣಿಸಿಕೊಂಡು ರಾಕ್ಷಸನನ್ನು ವಧಿಸಿದ. ಕ್ರತುವಿನ ಪ್ರಾರ್ಥನೆಯಂತೆ ನಾರಾಯಣ ಇಲ್ಲಿಯೇ ಉಳಿದ. ಜನಮೇಜಯ ಸರ್ಪಯಾಗ ಮಾಡಿದ ಅಗ್ರಹಾರವೇ ಗದಗ. ರಾಷ್ಟ್ರಕೂಟ 3ನೆಯ ಇಂದ್ರನ ಒಂದು ಶಾಸನ (918) ಇಲ್ಲಿನ ಶಾಸನಗಳಲ್ಲಿ ಅತಿ ಪ್ರಾಚೀನವಾದುದು.

ಇಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯ ಮೂರು ದೇವಾಲಯಗಳು ಇವೆ. ಪ್ರಮುಖವಾದುದು ತ್ರಿಕೂಟೇಶ್ವರ ದೇವಾಲಯ. ಮೂಲತ ದ್ವಿಕೂಟವಾಗಿದ್ದ ಈ ದೇವಾಲಯದ ಪೂರ್ವಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಪಾಣಿಪೀಠದ ಮೇಲೆ ಮೂರು ಲಿಂಗಗಳಿವೆ. ಗರ್ಭಗುಡಿಯ ಮುಂದೆ ಅರ್ಧಮಂಟಪ ಮತ್ತು ಅದರ ಮುಂದೆ ತೆರೆದ ಮಹಾಮಂಟಪ ಇವೆ. ಮಹಾಮಂಟಪದಲ್ಲಿ ಚಾವಣಿ ಮತ್ತು ದೂಲಗಳ ಮಧ್ಯೆ ಜಾಲಂಧ್ರಗಳಿವೆ. ಕಂಬಗಳು ಮತ್ತು ಅನೇಕ ಅಲಂಕರಣ ಶಿಲ್ಪಗಳು ಸುಂದರವಾಗಿವೆ. ಶಿಖರ ಈಚಿನದು. ತ್ರಿಕೂಟೇಶ್ವರ ಗುಡಿಯ ಆವರಣದಲ್ಲೇ ದಕ್ಷಿಣಕ್ಕೆ ಇರುವ ಸರಸ್ವತೀಗುಡಿ ಚಿಕ್ಕದು. ಗರ್ಭಗುಡಿ ಮತ್ತು ತೆರೆದ ಮಂಟಪ ಮಾತ್ರ ಇವೆ. ಬಹುಸೂಕ್ಷ್ಮವಾಗಿ ಕೆತ್ತಿರುವ ವಿನ್ಯಾಸಗಳಿರುವ ಇಲ್ಲಿನ ಕಂಬಗಳು ಇಡೀ ಚಾಳುಕ್ಯ ಸಂಪ್ರದಾಯದಲ್ಲೇ ಬಹುಸುಂದರ ರಚನೆಗಳೆಂದು ಪ್ರಸಿದ್ಧವಾಗಿವೆ. ಹಾಗೆಯೇ ಭುವನೇಶ್ವರಿ ಮತ್ತು ಗೋಡೆಗಳಲ್ಲಿನ ಕುಸುರಿ ಕೆಲಸವೂ ಚೆನ್ನಾಗಿವೆ. ಇಲ್ಲಿನ ಆಳೆತ್ತರದ, ಕುಳಿತ ಭಂಗಿಯ ಸರಸ್ವತೀ ವಿಗ್ರಹ ಮುರಿದಿದ್ದರೂ ಅದರಲ್ಲಿರುವ ಸಹಜ ಸುಂದರ ಪ್ರಮಾಣ, ಭಾವಲಾಲಿತ್ಯ, ವಸ್ತ್ರ ಆಭರಣಗಳ ಕೆತ್ತನೆಯ ನವಿರು ಕೆಲಸ ಇವುಗಳಿಂದಾಗಿ ಮೋಹಕವಾಗಿದೆ. ಊರ ಮಧ್ಯದಲ್ಲಿರುವ ಸೋಮೇಶ್ವರ ಅತ್ಯಲಂಕರಣದಿಂದ ಕೂಡಿದ ಇನ್ನೊಂದು ಚಾಳುಕ್ಯ ಶೈಲಿಯ ಗುಡಿ.

ಕನ್ನಡ ಮಹಾಭಾರತದ ಕರ್ತೃ ಕುಮಾರವ್ಯಾಸನ ಪ್ರೇರಕ ದೈವವೆಂದು ಪ್ರಸಿದ್ಧವಾಗಿರುವ ವೀರನಾರಾಯಣಸ್ವಾಮಿಯ ದೇವಸ್ಥಾನ 1117ರಲ್ಲಿ ಹೊಯ್ಸಳ ವಿಷ್ಣುವರ್ಧನ ನಿರ್ಮಿಸಿದ ಪಂಚನಾರಾಯಣ ದೇವಾಲಯಗಳಲ್ಲಿ ಒಂದೆಂದೂ ಜಕಣಾಚಾರಿಯಿಂದ ನಿರ್ಮಿಸಲ್ಪಟ್ಟಿತೆಂದೂ ಐತಿಹ್ಯ. "ಕೃತಪುರಮಹಾತ್ಮೆಯ" ಪ್ರಕಾರ ಕೃತಮುನಿಯ ರಕ್ಷಣೆಗಾಗಿ ಬದರಿಯಿಂದ ನಾರಾಯಣ ಬಂದು ಇಲ್ಲಿ ನೆಲಸಿದ. 11-12ನೆಯ ಶತಮಾನದ ಕೆಲವು ಹಳೆಯ ಭಾಗಗಳಿದ್ದರೂ ಇಂದು ಇದು ಬಹುವಾಗಿ ನವೀಕೃತವಾಗಿದೆ. ಇತ್ತೀಚೆಗೆ ದೇವಸ್ಥಾನ ಜೀರ್ಣೋದ್ಧಾರವಾಗಿತ್ತು (1962). ದೇವಸ್ಥಾನದ ಸುತ್ತ ಸುಮಾರು 300' ಉದ್ದ 200' ಅಗಲದ ಪ್ರಾಕಾರ ಇದೆ. ಪೂರ್ವದ್ವಾರದ ಮೇಲೆ ಎತ್ತರವಾದ ಗೋಪುರ ಇದೆ. ಒಳ ಅಂಗಣ 50' ಉದ್ದ 20' ಅಗಲ ಇದೆ. ಇಲ್ಲಿರುವ ಮಧ್ಯದ ನಾಲ್ಕು ಕಂಬಗಳಲ್ಲಿ ದಶಾವತಾರ ಚಿತ್ರಗಳಿವೆ. ನರಸಿಂಹ ವಿಗ್ರಹವಿರುವ ಇಲ್ಲಿನ ಎರಡನೆಯ ಕಂಬ ಕುಮಾರವ್ಯಾಸ ಕಂಬವೆಂದು ಪ್ರಸಿದ್ಧವಾಗಿದೆ. ಕುಮಾರವ್ಯಾಸ ಇಲ್ಲಿ ಕುಳಿತು ವೀರನಾರಾಯಣನಿಂದ ಸ್ಫೂರ್ತಿ ಪಡೆದು ಕನ್ನಡ ಭಾರತವನ್ನು ರಚಿಸಿದನೆಂದು ಹೇಳಲಾಗಿದೆ. ಗರ್ಭಗುಡಿಯ ಮೇಲಿನ ವಿಮಾನ ಸುಮಾರು 20' ಎತ್ತರವಿದೆ. ವಿಮಾನ ಹನ್ನೊಂದು ಹಂತಗಳಿಂದಾದುದು. ಗರ್ಭಗುಡಿಯಲ್ಲಿ ಕಪ್ಪು ಶಿಲೆಯ ಪ್ರಭಾವಳಿ ಸಹಿತವಾಗಿ 8' ಎತ್ತರವಿರುವ ವೀರನಾರಾಯಣಸ್ವಾಮಿಯ ಮೂರ್ತಿ ಇದೆ. ಮೂರ್ತಿಯ ಎತ್ತರ ಸುಮಾರು 5 1/4' ಪ್ರಭಾವಳಿಯಲ್ಲಿ ದಶಾವತಾರ ಚಿತ್ರಗಳನ್ನು ಕೆತ್ತಲಾಗಿದೆ. ಸ್ವಾಮಿಯ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖ, ಮತ್ತೊಂದು ಅಭಯಹಸ್ತ ಇವೆ. ಎಡಗೈಯಲ್ಲಿ ಬೆಂಡು ಇವೆ. ದೇವಾಲಯದಲ್ಲಿ ಗರ್ಭಗುಡಿಯಿಂದ ಬಲಕ್ಕೆ ಶ್ರೀ ರಾಘವೇಂದ್ರಸ್ವಾಮಿಯವರ ಬೃಂದಾವನ, ಕುಮಾರವ್ಯಾಸಮಂಟಪ ಮತ್ತು ಲಕ್ಷ್ಮೀನರಸಿಂಹ, ಈಶ್ವರ ಮತ್ತು ಹನುಮಂತ ದೇವಾಲಯಗಳು ಇವೆ. ವರ್ಷದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೂ ಉಪನ್ಯಾಸಗಳೂ ಭಾರತವಾಚನ ಇತ್ಯಾದಿ ಕಾರ್ಯಕ್ರಮಗಳೂ ನಡೆಯುತ್ತಿರುತ್ತವೆ. ಶ್ರಾವಣ ಬಹುಳ ಬಿದಿಗೆಯಲ್ಲಿ ರಾಘವೇಂದ್ರಸ್ವಾಮಿಗಳ ಆರಾಧನೆ, ಪುಷ್ಯ ಶುದ್ಧ ಚತುರ್ದಶಿ ಅಥವಾ ಹುಣ್ಣಿಮೆಯಂದು ಕುಮಾರವ್ಯಾಸ ಜಯಂತಿ ವಿಜೃಂಭಣೆಯಿಂದ ನಡೆಯುತ್ತವೆ. ಗದಗಿನಲ್ಲಿ ತೋಂಟದ ಸಿದ್ಧಲಿಂಗೇಶ್ವರ ಮಠವಿದೆ. ಇಲ್ಲಿನ ತೋಂಟದಾರ್ಯರ ಜಾತ್ರೆ ಬಹುಜನರನ್ನು ಆಕರ್ಷಿಸುತ್ತದೆ. ಜೋಡು ಹನುಮಾನ್, ಶಂಕರಲಿಂಗ, ದುರ್ಗಾ, ವೀರಭದ್ರ, ವಿಠೋಬ ಮುಂತಾದವು ಈ ಪಟ್ಟಣದ ಇತರ ದೇವಸ್ಥಾನಗಳು. (ಪಿ.ವಿ.ಆರ್.)

**ಗದ್ದಗಿಮಠ, ಬಿ.ಎಸ್. :** 1917-1960. ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಆದ್ಯರಲ್ಲೊಬ್ಬರು. ಬಿಜಾಪುರ ಜಿಲ್ಲೆ



ಕೆರೂರಿನಲ್ಲಿ 1917 ಜನವರಿ 17ರಂದು ಜನಿಸಿದರು. ಇವರ ತಂದೆ ಜನಪದ ಗೀತೆಗಳನ್ನು ಹಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಇಂಥ ಪರಿಸರದಲ್ಲಿ ಬೆಳೆದ ಇವರನ್ನು ಜಾನಪದ ಕ್ಷೇತ್ರಆಕರ್ಷಿಸಿತು. ಕನ್ನಡದಲ್ಲಿ ಎಂ.ಎ. ಪದವಿ ಪಡೆದಮೇಲೆ, ಉತ್ತರ ಕರ್ನಾಟಕದ ನಾನಾ ಭಾಗಗಳಲ್ಲಿ ಸಂಚರಿಸಿ ಜನಪದ ಗೀತೆಗಳನ್ನು ಸಂಶೋಧಿಸಿ, ಸಂಗ್ರಹಿಸಿ ಕನ್ನಡ ಜನಪದ ಗೀತೆಗಳು ಎಂಬ ಪ್ರೌಢ ಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು. (1955). ಕರ್ನಾಟಕದಲ್ಲಿ ಜಾನಪದ ಕ್ಷೇತ್ರದಲ್ಲಿ ಪಿಎಚ್.ಡಿ. ಪದವಿ ಪಡೆದ ಪ್ರಥಮರೂ ಇವರೇ.

ಜನಪದ ಸಾಹಿತ್ಯ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಇವರು ಬಹುವಾಗಿ ಶ್ರಮಿಸಿದರು. ಜನಪದ ಗೀತೆಗಳನ್ನು, ನಾಡಪದಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಅದಕ್ಕಾಗಿ ಜನಪದ ಕಾವ್ಯಮಾಲೆ ಎಂಬ ಒಂದು ಮಾಲೆಯನ್ನು ಆರಂಭಿಸಿದರು. ಇವರು ಪ್ರಕಟಿಸಿರುವ ಗ್ರಂಥಗಳಿವು: ನಾಲ್ಕು ನಾಡ ಪದಗಳು, ಕಂಬಿಯ ಹಾಡುಗಳು, ಜನತಾಗೀತಗಳು ಲೋಕಗೀತಗಳು, ಕುಮಾರರಾಮನ ದುಂದುಮೆಗಳು. ಇವರು ಸ್ವತಃ ಜನಪದ ದಾಟಿಯಲ್ಲಿ ಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದರು.

ಇವರು ಬೆಳಗಾಂವಿಯ ಲಿಂಗರಾಜ ಕಾಲೇಜಿನಲ್ಲಿ ವ್ಯಾಯಾಮ ಶಿಕ್ಷಕರಾಗಿ ಸ್ವಲ್ಪಕಾಲ ಕೆಲಸಮಾಡಿದರು. ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡರು. ಆ ಹುದ್ದೆಯಲ್ಲಿದ್ದಾಗಲೇ 1960ರ ಅಕ್ಟೋಬರ್ 30ರಂದು ಹೃದಯಾಘಾತದಿಂದ ನಿಧನಹೊಂದಿದರು.

ಕನ್ನಡ ಜನಪದ ಗೀತಗಳು ಎಂಬ ಇವರ ಪ್ರೌಢಪ್ರಬಂಧವನ್ನು ಇವರ ನಿಧನಾನಂತರ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿತು (1963). ತರೀಕೆರೆಯಲ್ಲಿ 1967ರಲ್ಲಿ ನಡೆದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನದ ಸಭಾಮಂಟಪಕ್ಕೆ ಇವರ ಹೆಸರಿಡಲಾಗಿತ್ತು. (ಸಿ.ಕೆ.ಎನ್.)

**ಗಬ್ಬೂರು :** ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಒಂದು ಗ್ರಾಮ, ಐತಿಹಾಸಿಕ ಸ್ಥಳ. ಹೋಬಳಿ ಕೇಂದ್ರ. ದೇವದುರ್ಗಕ್ಕೆ ಆಗ್ನೇಯದಲ್ಲಿ, ರಾಯಚೂರು ಮಾರ್ಗದಲ್ಲಿದೆ. ಈ ಗ್ರಾಮಕ್ಕೆ ಗೊಬ್ಬೂರು ಎಂಬ ಹೆಸರೂ ಇದೆ. ಇದು 12-13ನೆಯ ಶತಮಾನಗಳಲ್ಲಿ ಗೋಪುರಗ್ರಾಮ ಎಂಬ ಹೆಸರಾಗಿದ್ದ ಅಗ್ರಹಾರ ಮತ್ತು ವಿದ್ಯಾಕ್ಷೇತ್ರವಾಗಿತ್ತು. ಇಲ್ಲಿ ಚಂಡಿ ದರ್ವಾಜ ಎಂಬ ಹಳೆಯ ದ್ವಾರವೂ ಅನೇಕ ದೇವಾಲಯಗಳೂ ಶಿಲಾಶಾಸನಗಳೂ ಇವೆ. ಮಲೇಶಂಕರ, ವೆಂಕಟೇಶ್ವರ, ಈಶ್ವರ, ಬಂಗಾರ ಬಸಪ್ಪ ಮತ್ತು ಹನುಮಂತ ದೇವಾಲಯಗಳು ಮುಖ್ಯವಾದವು. ಮಲೇಶಂಕರ ದೇವಾಲಯದ ಮುಂದೆ ದೊಡ್ಡ ಕಲ್ಯಾಣಿ ಇದೆ. ವೆಂಕಟೇಶ್ವರ ದೇವಾಲಯದಲ್ಲಿಯ ಹೊರಭಾಗದ ಕೆತ್ತನೆಯ ಕೆಲಸ ಮತ್ತು ಕಲ್ಲಿನಲ್ಲಿ ಕೊರೆದ ಆನೆಗಳು ನೋಡತಕ್ಕವು. ಇದರ ಪೂರ್ವಕ್ಕೆ ಇರುವ ಕಲ್ಯಾಣಿಯನ್ನು ಸಾತ್ ಬಾವಡಿ ಎಂದು ಕರೆಯುತ್ತಾರೆ. ಗಣ್ಣಿಗುಡಿಮಠದ ಮಹಾದ್ವಾರದ ಕೆತ್ತನೆ ಕೆಲಸ ಬಹಳ ಸುಂದರವಾಗಿದೆ. ಒಂದು ಕಾಲದಲ್ಲಿ ಊರ ಸುತ್ತಲೂ ಇದ್ದ ಕೋಟೆಯ ಅವಶೇಷಗಳು ಕಾಣಸಿಗುತ್ತವೆ. ಆರನೆಯ ಚಾಳುಕ್ಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದ ಸು.1109ರ ಶಾಸನದ ಪ್ರಕಾರ (ಈ ಶಾಸನ ಇಂದು ಹೈದರಾಬಾದಿನಲ್ಲಿರುವ ಪುರಾತತ್ತ್ವ ವಸ್ತು ಸಂಗ್ರಹಾಲಯದಲ್ಲಿದೆ) ಬ್ರಹ್ಮಜಿನಾಲಯವೆಂಬ ಜೈನ ಮಂದಿರವೊಂದು ಇಲ್ಲಿದ್ದಿತ್ತು. ಅಂದು ಈ ಊರಿಗೆ ಹಿರಿಯ ಗೊಬ್ಬೂರು ಎಂದು ಹೆಸರಿತ್ತೆಂದು ತಿಳಿದುಬರುತ್ತದೆ. ಬಂಗಾರ ಬಸಪ್ಪನ ಗುಡಿಯಲ್ಲಿ ಒಂದು ಶಾಸನವೂ ಗಣೇಶನ ಮತ್ತು ಎರಡು ನಂದಿಗಳ ವಿಗ್ರಹಗಳೂ ಇವೆ. ಜೇಡರ ದಾಸಿಮಯ್ಯನ ಶಿಷ್ಯ ಮತ್ತು ಪುತ್ರ ಇಲ್ಲಿಯ ಗಜೇಶ್ವರ ದೇವರಿಗೆ ದತ್ತಿ ಕೊಟ್ಟಿರುವ ಉಲ್ಲೇಖ ಇಲ್ಲಿಯ ಇನ್ನೊಂದು ಶಾಸನದಲ್ಲಿದೆ. (ಜೆ.ಆರ್.ಪಿ.)

**ಗಮಕ ಕಲೆ :** ಕಾವ್ಯಗಳ ವಿವಿಧ ಛಂದೋಶೈಲಿಯ ಜಾಡನ್ನು ಹಿಡಿದು ಕಥಾನಕ ರೀತಿಗನುಗುಣವಾಗಿ ರಮ್ಯವಾಗಿ ರಸವತ್ತಾಗಿ ವಾಚಿಸಿ ಅರ್ಥಭಾವರಸಗಳನ್ನು ಶ್ರೋತೃಗಳಿಗೆ ಮನದಟ್ಟುಮಾಡುವ ಈ ಕಲೆ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಕವಿ (ಸಂಗ್ರಹ) ಗಮಕಿ ವಾದಿ ವಾಗ್ಮಿ ಎಂಬ ಪದಗಳು ಸಾಹಿತ್ಯದಲ್ಲಿ ಬಹಳ ಹಿಂದಿನಿಂದ ರೂಢಿಯಲ್ಲಿವೆ. ರಾಜರ ಆಸ್ಥಾನಗಳಲ್ಲಿ ಕವಿಗಮಕಿಗಳಿಗೂ ವಾದಿವಾಗ್ಮಿಗಳಿಗೂ ಪ್ರಮುಖ ಸ್ಥಾನವಿತ್ತು. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ

ಕವಿ ಗಮಕಿ ವಾದಿ ವಾಗ್ಮಿ
ಪ್ರವರರ ಪಂಡಿತರ ನೆಗಟ್ದಮಾತಱಿವರಸ
ಬ್ಬವದರೊಡನಂತೊಸೆದ
ನ್ನವಾಸದೋಲಗದೊಳಿರ್ಪನಾಗಳ್ ಹರಿಗಂ

ಎಂಬ ಪದ್ಯ ಮೇಲಿನ ಮಾತಿಗೆ ಸೂಚಕವಾಗಿ ಇದೆ. ಶಾಂತಿಪುರಾಣದಲ್ಲಿ ಪೊನ್ನ ತನ್ನನ್ನು

ಇದಿರ್ಗೆ ಬರೆ ಪೊನ್ನಿಗಂ ಕಿಡಿ
ಸದಿರಂ ಕವಿ ಗಮಕಿ ವಾದಿ ವಾಗ್ಮಿಗಳ ಕವಿ
ತ್ವದ ಗಮಕತ್ವದ ವಾದಿ
ತ್ವದ ವಾಗ್ಮಿತ್ವದ ಪೊಡರ್ಪುಮಂ ದರ್ಪಮುಮಂ

ಎಂದು ಹೊಗಳಿಕೊಂಡಿದ್ದಾನೆ. ಇದರಿಂದ ಕೆಲವೊಮ್ಮೆ ಕವಿಗಳಾದವರು ಗಮಕಿಗಳೂ ಆಗಿರುತ್ತಿದ್ದರೆಂಬ ಮಾತು ಸ್ಪಷ್ಟವಾಗುತ್ತದೆ. ಅಂದಿನ ಸಮಾಜದಲ್ಲಿ ಕವಿಯನ್ನು ಬಿಟ್ಟರೆ ಗಮಕಿಗೆ ಪ್ರಮುಖ ಸ್ಥಾನ ದೊರೆತಿತ್ತು. ಕನ್ನಡ ಶಾಸನಗಳಲ್ಲಿ ಗಮಕ ಹಾಗೂ ಗಮಕಿಯನ್ನು ಕುರಿತು ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. 1068ರ ಒಂದು ಶಾಸನ ಮಹಾಮಂಡಳೇಶ್ವರ ಗಂಗರಸನನ್ನು ಕವಿಗಮಕಿವಾದಿವಾಗ್ಮಿಪ್ರಿಯ ಎಂದು ಕರೆದಿದೆ. 1255ರ ಶಾಸನದಲ್ಲಿ ತ್ರೈವಿದ್ಯಬಾಳಚಂದ್ರ ಎಂಬುವನು ಕವಿತ್ವ ಗಮಕತ್ವ ವಾದಿತ್ವ ವಾಗ್ಮಿತ್ವಗಳಲ್ಲಿ ಅನುಪಮ ಪಾಂಡಿತ್ಯವನ್ನು ಹೊಂದಿದ್ದನೆಂದು ಹೇಳಿದೆ. ಈ ಕಲೆಯಲ್ಲಿ ಪುರುಷರಲ್ಲದೆ ಸ್ತ್ರೀಯರೂ ನಿಪುಣೆಯರಾಗಿರುತ್ತಿದ್ದರು. 1533ರ ಅಚ್ಯುತರಾಯನ ಕಾಲದ ಒಂದು ಶಾಸನ ತಿರುಮಲಮ್ಮ ಎಂಬುವಳು ಕವಯಿತ್ರಿಯಾಗಿದ್ದುದಲ್ಲದೆ ಪ್ರಸಿದ್ಧ ಗಮಕಿಯೂ ಆಗಿದ್ದಳೆಂದು ತಿಳಿಸುತ್ತದೆ. ದೇವಸ್ಥಾನಗಳಲ್ಲಿ ಪುರಾಣಗಳನ್ನು ಓದಲು (ಗಮಕಿಸು) ದತ್ತಿಗಳನ್ನು ಕೊಟ್ಟಿದ್ದಕ್ಕೆ ಶಾಸನಗಳಲ್ಲಿ ಉಲ್ಲೇಖ ಕಂಡುಬರುತ್ತದೆ. ತಾಳಗುಂದದ ದೇವಾಲಯದಲ್ಲಿರುವ ಒಂದು ಶಾಸನದಲ್ಲಿ ಪುರಾಣ ಹೇಳುವವರಿಗಾಗಿ ದತ್ತಿ ಕೊಟ್ಟಿರುವ ವಿಷಯ ಉಲ್ಲೇಖವಾಗಿದೆ. *

ಈ ಕಲೆಯ ಬಗ್ಗೆ ಕನ್ನಡ ಕಾವ್ಯಗಳಲ್ಲಿಯೂ ಉಲ್ಲೇಖ ಕಂಡುಬರುತ್ತವೆ. ಪ್ರಾಚೀನ ಗ್ರಂಥಗಳಲ್ಲಿ ಕವಿರಾಜಮಾರ್ಗದಲ್ಲಿನ ಉಲ್ಲೇಖವನ್ನು ಗಮನಿಸಬಹುದು:

ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂ
ಚ್ಚಾರಣೆಯಿಂದಮದ್ಭುತರಸಂ ನಿಬಿಡೋಕ್ತಿಗಳಿಂದಮಲ್ತೆ ಶೃಂ|

ಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂದಂ ಪ್ರಸನ್ನಗಂ
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಿಂ||

ಎಂಬ ಪದ್ಯದಲ್ಲಿ ರಸೋತ್ಪತ್ತಿಯನ್ನುಂಟುಮಾಡುವುದೇ ಗಮಕದ ಲಕ್ಷಣವೆಂದು ಹೇಳಿದೆ. (ಕೆ.ಟಿ.ಆರ್.ಐ.)

ಆದಿಪುರಾಣ, ಪಂಚತಂತ್ರ, ನಂಬಿಯಣ್ಣನ ರಗಳೆ, ಮೋಹನತರಂಗಿಣಿ, ಕುಮಾರವ್ಯಾಸಭಾರತ, ಜೈಮಿನಿಭಾರತ, ಹರಿಶ್ಚಂದ್ರಕಾವ್ಯ, ವಿವೇಕಚಿಂತಾಮಣಿ, ಸೊಬಗಿನಸೋನೆ, ರಾಜಶೇಖರವಿಳಾಸ, ಪ್ರಭುಲಿಂಗಲೀಲೆ, ಗಿರಿಜಾಕಲ್ಯಾಣ, ಕಂಠೀರವ ನರಸರಾಜವಿಜಯ, ಭರತೇಶವೈಭವ ಮೊದಲಾದ ಕಾವ್ಯಗಳಲ್ಲಿ ಗಮಕ ಕಲೆಯು ಪ್ರಸ್ತಾಪವಿದೆ. ಶಾಂತಿನಾಥನ ಸುಕುಮಾರಚರಿತೆಯಲ್ಲಿ ನಾಗಶ್ರೀ ಎಂಬುವಳು ಕಾವ್ಯವನ್ನು ಜನ ಮೆಚ್ಚುವಂತೆ ಓದಿದಳು ಎಂಬುದರ ವರ್ಣನೆಯಿದೆ. ಭರತೇಶವೈಭವದಲ್ಲಿ ಭರತನ ಮುಂದೆ ಕನ್ಯೆಯೊಬ್ಬಳು ಕಾವ್ಯವನ್ನು ಹೀಗೆ ಓದಿದಳಂತೆ:

ಪಡಲಿಗೆಗಿಟ್ಟು ಹೊತ್ತಗೆಯ ದಾರವನೊತ್ತಿ
ಸಡಲಿಸಿ ಕಿರಿದೋಲೆಗಳನು|
ಎಡಗೈಯೊಳಾಂತೋದಿದಳು ಬಲಗೈಯಿಂದ
ಮಿಡಿವುತ ಭಾರಿ ದಂಡಿಗೆಯ||

ಅಲ್ಲದೆ ಭರತನ ಆಸ್ಥಾನದಲ್ಲಿ ಸಂಗೀತಗೋಷ್ಠಿ ನಡೆಯುತ್ತಿದ್ದಾಗ ಭೂಪಾಳಿ, ಧನ್ಯಾಸಿ, ಮಲಹರಿ ಮೊದಲಾದ ರಾಗಗಳಲ್ಲಿ ವೀಣೆ, ದಂಡಿಗೆ (ತಂಬೂರಿ) ನುಡಿಸುತ್ತ ಜಿನನನ್ನು ಕುರಿತು ಹಾಡುವ ಚಿತ್ರ ಮನೋಜ್ಞವಾಗಿದೆ. ಕಂಠೀರವ ನರಸರಾಜವಿಜಯದಲ್ಲಿ. ನಾಟ್ಯಶಾಲೆಯಲ್ಲಿ ಒಬ್ಬಳು ನಾರಿ ಭಾಗವತವಿಲಾಸದ ಪುಣ್ಯಕಥೆಗಳ ಭಾಸುರಗಾನರಸದೊಳೋದಿ ಬಹುಸಂತೋಷವನಿತ್ತಳರಸನಿಗೆ, ಮತ್ತೊರ್ವಳು ಭಾರತದ ಕಥೆಯ ಬಲು ಬಿತ್ತರದಲ್ಲಿ ನಲವಿಂದ ಬತ್ತೀಸರಾಗದೊಳೋದಿ ಭೂಪಾಲನ ಚಿತ್ತಕ್ಕೆ ಬಂದಳು, ಕಾಮಿನಿಯೋರ್ವಳು ನಗುತಾಗ ಹರುಷದೆ ರಾಮಾಯಣ ಪುಣ್ಯಕಥೆ'ಯ ಪ್ರೇಮದೊಳೋದಿ ಕಂಠೀರವನರಸೇಂದ್ರಭೂಪಾಲನ ಮೆಚ್ಚಿಸಿದಳು ಎಂಬ ಈ ಮಾತುಗಳಿಂದ ಸ್ತ್ರೀಯರೂ ಗಮಕಿಗಳಾಗಿದ್ದು ಆಸ್ಥಾನದಲ್ಲಿ ರಾಜರ ಆಶ್ರಯದಲ್ಲಿರುತ್ತಿದ್ದರೆಂಬ ವಿಷಯ ವಿದಿತವಾಗುತ್ತದೆ.

ಕುಮಾರವ್ಯಾಸ ಗಾಯಕನ ಲಕ್ಷಣವನ್ನು ಹೀಗೆ ವರ್ಣಿಸಿದ್ದಾನೆ:

ಗ್ರಾಮ ಮೂರರ ಸಂಚರಣೆಗಳ
ಸೀಮೆಯಲಿ ಸರಿಗಮ ಪದನಿಗಳ
ನೇಮ ತಪ್ಪದೆ ಹರಣ ಭರಣದ ಹೆಂಪುತಿರುಪುಗಳ|
ಕೋಮಲಿತ ಶಾರೀರ ಹೃದಯದ
ರಾಮಣೀಯಕ ರಚನೆಯಲಿ ಸ
ನಾಮನೆನಿಸುವನೆ ಗಾಯಕನರಸ ಕೇಳೆಂದ||

ಈ ಎಲ್ಲ ಲಕ್ಷಣಗಳೂ ಗಮಕಿಗೂ ಸಲ್ಲತಕ್ಕವೇ. ಗಮಕದಲ್ಲಿ ಸಂಗೀತ ಗೌಣ. ಸಾಹಿತ್ಯದ ಸೊಬಗನ್ನು ವ್ಯಕ್ತಪಡಿಸಲು ಎಷ್ಟು ಸಂಗೀತ ಬೇಕೋ ಗಮಕಕ್ಕೆ ಅಷ್ಟು ಸಾಕು.

ನಿಜಗುಣ ಶಿವಯೋಗಿ ಗಮಕಿಗಳ ಲಕ್ಷಣವನ್ನು ಹೀಗೆ ನಿರೂಪಿಸಿದ್ದಾನೆ:

ಗಾನತಾನಮಾನಂಗಳಂ ತೋರಿ ಯತಿಚರಣಾರ್ಥೋಲೇಖಾದಿ ಸಾಂದರ್ಭಿಕ ಮಿಶ್ರವರಿತು, ಪದಸಂವ್ಯಕ್ತಿಗೈದು ಕೇಳ್ವರಿಗಿಂಪುಗೊಳಿಸಿ ಮೃದು ಮಧುರ ವ್ಯಕ್ತ ವರ್ಣೋಚ್ಚಾರಣದಿಂ ಭಾವಸೂಚಕರಾದ ಗಮಕಿಗಳಿಂದುದ್ಗೀತರಾಗಿ

ಷಡಕ್ಷರಿ ಗಮಕದ ರೂಪರೇಖೆಗಳನ್ನು ವರ್ಣಿಸಿರುವ ರೀತಿಯಿದು:

ಕವಿ ವಿಬುಧರ ಕಿವಿಯೊಳ್ ಸೂ
ಸುವ ನವರಸಮಿಳಿದು ತಿಳಿವಿ ತನುವಂ ಮನಮಂ|
ಕವಿದು ಪೊರಸೂಸಿತೆನೆ ಪೊ
ಣ್ಮುವ ಸುಖಬಾಷ್ಪಂ ತುಳುಂಕೆ ಪೇಳ್ವುದು ಕೃತಿಯಂ

ಲಕ್ಷ್ಮೀಶ ಗಮಕದ ವಿಚಾರವಾಗಿ ಕೆಲವು ಅಭಿಪ್ರಾಯಗಳನ್ನು ನೀಡಿದ್ದಾನೆ. ಲವಕುಶರು ವಾಲ್ಮೀಕಿ ರಾಮಾಯಣವನ್ನು ಓದಿದ ರೀತಿಯನ್ನು ತಿಳಿಸಿ, ಆ ಕಾಲದಲ್ಲಿ ಗಮಕದ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಗಮಕದ ಲಕ್ಷಣಗೀತಗಳನ್ನೇ ತನ್ನ ಕಾವ್ಯದಲ್ಲಿ ಕವಿ ಪರ್ಯಾಯವಾಗಿ ಸೂಚಿಸಿರುವಂತೆ ತೋರುತ್ತದೆ. ಅಲ್ಲದೆ ಆತ ಕಾವ್ಯವನ್ನು ಓದುವಾಗ ಈ ವಿಷಯಗಳನ್ನು ಗಮನಿಸಬೇಕೆಂದು ಸೂಚನೆ ನೀಡಿದ್ದಾನೆ:

ಚತುರ ಪದಗತಿಯ ಸರಸಧ್ವನಿಯ ವರ್ಣಶೋ
ಭಿತದಲಂಕಾರದ ಸುಲಕ್ಷಣದ ಲಾಲಿತ|
ಶ್ರುತಿರಂಜನದ ವಿಶೇಷಾರ್ಥ ಸಂಚಿತದ ವಿಸ್ತಾರದಿಂ ಪೊಸತೆನಿಸುವ
ನುತ ಸತ್ಕವಿ ಪ್ರೌಢತರ ಸುಪ್ರಬಂಧದಂತೆ|| (ಕೆ.ಟಿ.ಆರ್.ಐ.)

ಇನ್ನು ಇಡೀ ಕಾವ್ಯವನ್ನು ಓದಿ ಪರಿಣತರಾಗಿದ್ದ ಗಮಕಿಗಳಿಗೆ ಆ ಕಾವ್ಯದ ಹೆಸರಿನೊಂದಿಗೆ ಅವರನ್ನು ನಿರ್ದೇಶಿಸಿರುವುದು ಕಂಡುಬರುತ್ತದೆ. ಬಸವಪುರಾಣವನ್ನು ಓದುವುದರಲ್ಲಿ ನಿಷ್ಣಾತನಾಗಿದ್ದ ಉದಯಗಿರಿಯ ವರದಾನಿ ರಾಮಯ್ಯನಿಗೆ ಬಸವಪುರಾಣ ರಾಮಯ್ಯನೆಂಬ ಹೆಸರಿತ್ತೆಂದು ಶಿವತತ್ತ್ವಚಿಂತಾಮಣಿಯಿಂದ ತಿಳಿದುಬರುತ್ತದೆ. ಗುಬ್ಬಿಯ ಮಲ್ಲಣಾರ್ಯ ಬಸವಪುರಾಣವನ್ನು ಸುಂದರವಾಗಿ ಹಾಡುತ್ತಿದ್ದುದರಿಂದ ಬಸವಪುರಾಣದ ಮಲ್ಲಣಾರ್ಯ ಎಂಬ ಹೆಸರು ರೂಢಿಯಲ್ಲಿತ್ತೆಂದು ತಿಳಿಯುತ್ತದೆ. ಹರಿಶ್ಚಂದ್ರ ಸಾಂಗತ್ಯ, ಸಾನಂದ ಗಣೇಶ ಸಾಂಗತ್ಯಗಳ ಕರ್ತೃವಾದ ಗಿರಿಯನಿಗೆ ಓದುವ ಗಿರಿಯ ಎಂಬ ಹೆಸರಿತ್ತು. ವಚನಗಳನ್ನು ಗಮಕ ಶೈಲಿಯಲ್ಲಿ ಓದುತ್ತಿದ್ದರೆಂಬುದಕ್ಕೆ ಸಿದ್ಧರಾಮಚಾರಿತ್ರ, ಶೂನ್ಯಸಂಪಾದನೆ, ಪ್ರೌಢದೇವರಾಯನ ಕಾವ್ಯ ಮೊದಲಾದ ಕಾವ್ಯಗಳಲ್ಲಿ ಸಾಕ್ಷಿಗಳು ದೊರೆಯುತ್ತವೆ. ಬಸವಣ್ಣನವರ–

ತಾಳಮಾನಸರಿಸವ ನಾನರಿಯೆ
ಓಜೆ ಬಜಾವಣೆ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವಾ ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ

ಎಂಬ ವಚನ ಮೇಲಿನ ಮಾತಿಗೆ ಪುಷ್ಟಿ ನೀಡುತ್ತದೆ. ಗಮಕಿಗಳು ಹೇಗೆ ಹಾಡಬೇಕು ಎಂಬುದನ್ನು ನೀತಿಸಾರದಲ್ಲಿ ಈ ರೀತಿ ಹೇಳಿದೆ:

ಎಡರದೆ ತಡೆಯದೆ ತಲೆಯಂ
ಕೊಡಹದೆ ಕುಡುವಹಿಲಜಾಡ್ಯವೆನಿಸದೆ ರಸಮಂ
ಕೆಡಸದೆ ಸರ್ವರ ಚಿತ್ತ
ಕ್ಕೊಡಂಬಡಲೋದುವನೆ ಗಮಕಿ ಕನ್ನಡ ಜಾಣಾ

ಸಂಭಾಷಣೆಯನ್ನೇ ಜೀವಾಳವಾಗುಳ್ಳ ನಾಟಕದಲ್ಲಿಯೂ ಗಮಕ ಕಲೆಗೆ ಮಹತ್ವದ ಸ್ಥಾನವಿದೆ. ನಾಟಕ ನೋಡುವ ಸಹೃದಯರ ಮನಸ್ಸಿಗೆ ಒಂದೆಡೆ ರಂಗಪರಿಕರಗಳು, ವೇಷಭೂಷಣಗಳು ಸಂತೋಷವನ್ನುಂಟುಮಾಡಿದರೆ ಇನ್ನೊಂದೆಡೆ ನಟರ ಹಾವಭಾವ ಭಂಗಿ ಮಾತುಗಾರಿಕೆಯ ಕೌಶಲ ಗತ್ತು ಮೊದಲಾದವು ಮನರಂಜಿಸುತ್ತವೆ. ಪಾತ್ರಗಳು ಸಹೃದಯರನ್ನು ರಂಜಿಸಬೇಕಾದರೆ ನಟನಿಗೆ ಈ ಕಲೆಯ ಅಭ್ಯಾಸ ಸ್ವಲ್ಪವಾದರೂ ಇರಬೇಕು. ಕನ್ನಡ ರಂಗಭೂಮಿಯಲ್ಲಿ ಟೈಗರ್ ವರದಾಚಾರ್ಯ, ಗರುಡನಗಿರಿ ನಾಗೇಶರಾಯ ಮೊದಲಾದವರು ಕಂದಪದ್ಯಗಳನ್ನು ಸೊಗಸಾಗಿ ಹಾಡುತ್ತಿದ್ದರಂತೆ. ಷಟ್ಪದಿಗಳನ್ನು ಹಾಡುವುದರಲ್ಲಿ ಆಸ್ಥಾನ ವಿದ್ವಾನ್ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ಯರೂ ಚಿಕ್ಕರಾಮರಾಯರೂ ಸಿದ್ಧಹಸ್ತರಾಗಿದ್ದರಂತೆ. ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳು ಭಾರತವಾಚನದಲ್ಲಿ ನಿಸ್ಸೀಮರಾಗಿದ್ದರೆಂದು ತಿಳಿದುಬರುತ್ತದೆ. ಯಕ್ಷಗಾನದಲ್ಲಿ ಹಾಡುವವನನ್ನು ಭಾಗವತನೆಂದು ಕರೆದರೂ ಗಮಕದ ಅಂಶ ಅವನ ಹಾಡುಗಾರಿಕೆಯಲ್ಲಿ ಕಂಡುಬರುತ್ತದೆ. ಜನಪದ ಗೀತೆಗೂ ಗಮಕಕ್ಕೂ ಇರುವ ನಿಕಟಸಂಬಂಧವನ್ನು ಗುರುತಿಸಬಹುದು. ಇಲ್ಲಿಯ ಹಾಡುಗಾರಿಕೆಯಲ್ಲಿ ಲಯ ಸ್ವಚ್ಛಂದವಾಗಿದ್ದು ಗಮಕದ ಸ್ವರೂಪ ಕಂಡುಬರುತ್ತದೆ.

ಕನ್ನಡದ ಹಲವಾರು ಕಾವ್ಯಗಳನ್ನು ಒಂದು ಕಾಲಕ್ಕೆ ಹಳ್ಳಿಹಳ್ಳಿಯಲ್ಲೂ ವಾಚನ ಮಾಡಿಸುತ್ತಿದ್ದರು. ಗದುಗಿನ ಭಾರತ, ಜೈಮಿನಿಭಾರತ ಅಂದು ಹೆಚ್ಚು ಜನಪ್ರಿಯವಾಗಿದ್ದವೆಂದು ತಿಳಿಯುತ್ತದೆ. ಶ್ರೀರಾಮಾಯಣದರ್ಶನಂ ಕಾವ್ಯವನ್ನು ಗಮಕಿಗಳು ಸೊಗಸಾಗಿ ಹಾಡುತ್ತಿದ್ದಾರೆ. ಕರ್ನಾಟಕದ ಗಮಕಿಗಳಲ್ಲಿ ಕೃಷ್ಣಗಿರಿ ಕೃಷ್ಣರಾಯ, ಕಳಲೆ ಸಂಪತ್ಕುಮಾರಾಚಾರ್ಯ, ಭಾರತದ ಬಿಂದೂರಾಯ, ಕೆ.ಟಿ.ರಾಮಸ್ವಾಮಿ ಅಯ್ಯಂಗಾರ್ಯ, ಎಚ್.ಕೆ.ರಾಮಸ್ವಾಮಿ, ಚಂದ್ರಶೇಖರಯ್ಯ, ರಾಘವೇಂದ್ರ ರಾಯ, ಶಕುಂತಲಾಬಾಯಿ, ಕೌಶಿಕ ಮೊದಲಾದವರು ಪ್ರಸಿದ್ಧ ಗಮಕಿಗಳು. *

**ಗರಡಿ :** ಕುಸ್ತಿ ಮೊದಲಾದ ಅಂಗಸಾಧನೆಗಳಿಗಾಗಿ ಗೊತ್ತಾದ ಸ್ಥಳ. ಆ ಸ್ಥಳವಿರುವ ಮನೆ. ಗರಡಿಗಾಗಿ ಮನೆ ಇರುವುದು ಹೆಚ್ಚಾಗಿ ದಕ್ಷಿಣ ಭಾರತದಲ್ಲೆ. ಉತ್ತರದವರು ಬಯಲಲ್ಲಿಯೆ ಕುಸ್ತಿ ಮುಂತಾದವನ್ನು ಅಭ್ಯಾಸ ಮಾಡುತ್ತಾರೆ. ಗರಡಿ ಮನೆಯೊಳಗೆ ಕುಸ್ತಿ ಕಲಿಯುವ ಸ್ಥಳಕ್ಕೆ ಮಟ್ಟಿ ಎಂದೂ ಸ್ಪರ್ಧೆಯಲ್ಲಿ ಭಾಗವಹಿಸಿ ಕುಸ್ತಿ ಮಾಡುವ ಸ್ಥಳಕ್ಕೆ ಅಖಾಡ (ಗೋದಾ) ಎಂದೂ ಕರೆಯುತ್ತಾರೆ. ಗರಡಿ ಮಾಡುವುದು ಎಂದರೆ ಸಾಧನೆ ಮಾಡುವುದು, ವ್ಯಾಯಾಮ ಮಾಡುವುದು ಎಂಬುದಷ್ಟೇ ಅಲ್ಲದೆ ಕುಸ್ತಿ ಮಾಡುವುದು ಎಂಬ ಅರ್ಥವೂ ರೂಢಿಯಲ್ಲಿದೆ. ವಿರಾಟಪರ್ವದಲ್ಲಿ ಬರುವ ಮಲ್ಲಯುದ್ಧವನ್ನಿಲ್ಲಿ ನೆನೆಯಬಹುದು. ಭೀಮ, ದುರ್ಯೋಧನ, ಕೀಚಕ ಮೊದಲಾದವರು ಮಲ್ಲಯುದ್ಧದಲ್ಲಿಯೂ ಸಿದ್ಧಹಸ್ತರಾಗಿದ್ದರು. ಪಂಪನ ಆದಿಪುರಾಣದಲ್ಲಿ ವರ್ಣಿತವಾಗಿರುವ ಭರತ ಬಾಹುಬಲಿಗಳ ಮಲ್ಲಯುದ್ಧ ಪ್ರಸಂಗ ಅತ್ಯಂತ ಪ್ರಸಿದ್ಧವಾದುದು. ಹಿಂದಿನ ಕಾಲದಲ್ಲಿ ಕುಸ್ತಿ ಕಲೆಗೆ ಬಹಳ ಪ್ರೋತ್ಸಾಹವಿತ್ತು. ರಾಜಮಹಾರಾಜರುಗಳೇ ಈ ಕಲೆಯಲ್ಲಿ ಪರಿಣತಿ ಹೊಂದಿದ್ದರಲ್ಲದೆ ಪ್ರಖ್ಯಾತ ಪೈಲ್ವಾನರುಗಳನ್ನು ಸಾಕಿಕೊಂಡು ಈ ಕಲೆಗೆ ಪ್ರೋತ್ಸಾಹವೀಯುತ್ತಿದ್ದರು. ಸಂಗೊಳ್ಳಿ ರಾಯಣ್ಣ, ಮೈಸೂರಿನ ರಣಧೀರ ಕಂಠೀರವ ನರಸಿಂಹರಾಜ ಒಡೆಯರ್ ಮೊದಲಾದವರು ಈ ಕಲೆಯಲ್ಲಿ ಅಸಾಧಾರಣ ಚತುರತೆಯನ್ನು ಸಂಪಾದಿಸಿದ್ದರು. ರಣಧೀರ ಕಂಠೀರವ ನರಸಿಂಹರಾಜ ಒಡೆಯರು ಮಾರುವೇಷದಲ್ಲಿ ಹೋಗಿ ತಿರುಚ್ಚಿರಾಪಳ್ಳಿ ಜಟ್ಟಿಯನ್ನು ಸೋಲಿಸಿದ ಕಥೆ ಇತಿಹಾಸಪ್ರಸಿದ್ಧ. ಹಿಂದಿನ ಕಾಲದಲ್ಲಿ ಸೈನಿಕರಿಗೆ ಕಡ್ಡಾಯವಾಗಿ ಗರುಡಿ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಮದಕರಿನಾಯಕರ ಕಾಲದಲ್ಲಿದ್ದ ಗರಡಿ ಮನೆಗಳನ್ನು ಚಿತ್ರದುರ್ಗದ ಕೋಟೆಯಲ್ಲಿ ನಾವು ಇಂದೂ ಕಾಣಬಹುದಾಗಿದೆ. ಹಳ್ಳಿಯಾದರೆ ಒಂದು. ಊರೆಂದರೆ ನಾಲ್ಕೈದು ಗರಡಿ ಮನೆಗಳಿದ್ದ ಕಾಲವೊಂದಿತ್ತು.

ಮಟ್ಟಿಪೂಜೆ

ಹಿಂದಿನ ಕಾಲದ ಗರಡಿ ಮನೆಗಳು ವಿಶಾಲವಾಗಿರದೆ ಚಿಕ್ಕವಾಗಿರುತ್ತಿದ್ದುವು. ದೂರದಿಂದ ನೋಡಿಯೇ ಸುಲಭವಾಗಿ ಅವನ್ನು ಪತ್ತೆಮಾಡಬಹುದಾಗಿತ್ತು. ಗರಡಿಯ ಹೊರ ಗೋಡೆಗಳ ಮೇಲೆ ಕೆಮ್ಮಣ್ಣಿನ ದೊಡ್ಡದೊಡ್ಡ ಹಾಗೂ ಉದ್ದುದ್ದ ಪಟ್ಟೆಗಳನ್ನು ಹಾಕಿರುತ್ತಿದ್ದರು. ಹಾಗೂ ಗರಡಿಯ ಮುಂದೆ ದಪ್ಪದಪ್ಪ ಕಲ್ಲುಗುಂಡುಗಳನ್ನು ಇಟ್ಟಿರುತ್ತಿದ್ದರು. ಬಾಗಿಲಿನಲ್ಲಿ ಗರುಡನ ಅಥವಾ ಹನುಮಂತನ ಚಿತ್ರಪಟವಿರುತ್ತಿತ್ತು. ಗರಡಿ ಮನೆಗಳಿಗೆ ಎಲ್ಲೋ ಒಂದು ಸಣ್ಣ ಕಿಟಕಿ ಇದ್ದರೆ ಅದೇ ಹೆಚ್ಚು. ಒಳಗಡೆ ಹೆಚ್ಚು ಗಾಳಿ, ಬೆಳಕು ಪ್ರವೇಶ ಮಾಡುತ್ತಿರಲಿಲ್ಲ.



ಪೈಲ್ವಾನ್ ಪಾಪಯ್ಯ

ಬಾಗಿಲು ಚಚ್ಚೌಕವಾಗಿದ್ದು ಸುಮಾರು 2½ ಅಡಿ ಅಗಲ ಹಾಗೂ 2½ ಅಡಿ ಎತ್ತರವಿರುತ್ತಿತ್ತು. ಆ ಮನೆಗೆ ಆ ಬಾಗಿಲು ತುಂಬ ಚಿಕ್ಕದೆಂದೇ ಹೇಳಬೇಕು. ಅಲ್ಲದೆ ಅದರ ದಪ್ಪ ½' ಇರುತ್ತಿತ್ತಾಗಿ ಅದನ್ನು ತಳ್ಳಿಕೊಂಡು ಒಳಗೆ ಹೋಗಬೇಕಾದರೆ ಸಾಕಷ್ಟು ತಾಕತ್ತು ಇರಬೇಕಾಗುತ್ತಿತ್ತು. ಈ ಬಾಗಿಲಿನ ಇನ್ನೊಂದು ವೈಶಿಷ್ಟ್ಯವೆಂದರೆ ಮುಂಭಾಗದಲ್ಲಿ ಬೀಗ ಹಾಕಿಕೊಳ್ಳಲು ಚಿಲಕವಿರುತ್ತಿರಲಿಲ್ಲ. ಆದರೆ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು ಅಗಳಿ ಇರುತ್ತಿತ್ತು. ಸಾಧಾರಣವಾಗಿ ಒಂದೇ ಊರಿನಲ್ಲಿ 3, 4 ಗರಡಿ ಮನೆಗಳಿದ್ದು ಅವಕ್ಕೆಲ್ಲ ಹೆಸರಾಂತ ಉಸ್ತಾದರ ನಾಮಕರಣವಿರುತ್ತಿತ್ತು. ಅಲ್ಲದೆ ಒಂದು ಗರಡಿಯವರಿಗೂ ಇನ್ನೊಂದು ಗರಡಿಯವರಿಗೂ ಪೈಪೋಟಿಯಲ್ಲದೆ ವಿರೋಧವೂ ಇರುತ್ತಿತ್ತು. ಹೀಗೆ ವಿರೋಧವಿದ್ದುದರಿಂದಲೇ ಗರಡಿ ಮನೆಗಳಿಗೆ ಬಾಗಿಲಿನ ಮುಂಭಾಗದಲ್ಲಿ ಬೀಗ ಹಾಕಿಕೊಳ್ಳಲು ಚಿಲಕವಿರುತ್ತಿರಲಿಲ್ಲ. ಕಾರಣ ಗರಡಿ ಮನೆಯೊಳಗೆ ಸಾಧನೆ ನಡೆಸುತ್ತಿರುವಾಗ, ಆಗದವರು ಚಿಲಕ ಹಾಕಿ ಹೊರಟುಬಿಟ್ಟರೆ ಒಳಗಡೆ ಇದ್ದವರು ಗಾಳಿ ಬೆಳಕು ಇಲ್ಲದೆ ಅಲ್ಲಿಯೇ ಸಾಯಬೇಕಾಗುತ್ತಿತ್ತು. ಸಾಧನೆ ಮಾಡುವಾಗ ಉಸ್ತಾದ್ (ಗುರು) ತನ್ನ ಶಾಗಿರ್ದು(ಶಿಷ್ಯ) ಪೈಲ್ವಾನರುಗಳಿಗೆ ಹೇಳಿಕೊಡುವ ಡಾವುಗಳನ್ನು ಅವನ ಎದುರಾಳಿಗಳು ಯಾರಾದರೂ ಬಂದು ನೋಡಿಕೊಳ್ಳಬಹುದೆಂಬ ಕಾರಣದಿಂದ ಬಹುಶಃ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು ಅಗಳಿ ಇರುತ್ತಿತ್ತು. ಗರಡಿ ಮನೆಯೊಳಗೆ ಪ್ರವೇಶ ಮಾಡಿದ್ದೇ ಆದರೆ ಗುಹೆಯೊಳಗೆ ಪ್ರವೇಶ ಮಾಡಿದ ಅನುಭವವಾಗುತ್ತಿತ್ತು.

ಗರಡಿ ಮನೆಗಳು ಚಿಕ್ಕವಾಗಿದ್ದು ಗಾಳಿ ಬೆಳಕು ಪ್ರವೇಶ ಮಾಡದಂತಿದ್ದುದಕ್ಕೆ ಇನ್ನೊಂದು ಕಾರಣವೆಂದರೆ ಮೈ ಬೆವರು ಶೀಘ್ರವಾಗಿ

ಹೊರಬೀಳಬೇಕೆಂಬುದೇ ಆಗಿತ್ತು. ಹೆಣ್ಣುಮಕ್ಕಳಾರೂ ಗರಡಿಮನೆಯನ್ನು ಪ್ರವೇಶಮಾಡಬಾರದು ಎಂಬ ನಿಯಮವಿತ್ತು. ಒಂದು ವೇಳೆ ಪ್ರವೇಶ ಮಾಡಿದರೆ ಅಂಥವರ ತಲೆಗೂದಲೆಲ್ಲ ಉದುರಿಹೋಗುತ್ತದೆ ಎಂಬ ನಂಬಿಕೆಯೂ ಇತ್ತು. ಬಹಶಃ ಸಾಧನೆ ಮಾಡುವ ಪೈಲ್ವಾನನಿಗೆ ಹೆಂಗಸಿನ ದೃಷ್ಟಿ ತಗಲಬಾರದು, ಆತ ಆಕೆಯ ಬಲೆಗೆ ಬೀಳಬಾರದು ಎಂಬುದು ಈ ಕಟ್ಟಳೆಯ ಉದ್ದೇಶವೆಂದು ತೋರುತ್ತದೆ.

ಹಿಂದೆ ಗರಡಿಮನೆಗಳು ಹೊರಗಡೆಯಿಂದ ಬಂದ ಪೈಲ್ವಾನರುಗಳಿಗೆ ಇಳಿದುಕೊಳ್ಳುವ ವಸತಿಗೃಹಗಳೂ ಆಗಿದ್ದುವು. ಕೊಲ್ಹಾಪುರದ ಕಡೆಯ ಗರಡಿಮನೆಗಳಲ್ಲಿಯಂತೂ ವಸತಿ ಸೌಕರ್ಯದ ಜೊತೆ ಊಟದ ಸೌಕರ್ಯವೂ ಇರುತ್ತಿತ್ತು.

ಈಗೀಗ ಕಟ್ಟುತ್ತಿರುವ ಗರಡಿಗಳನ್ನು ವ್ಯಾಯಾಮಶಾಲೆಗಳು ಎಂದು ಕರೆಯುತ್ತಾರೆ. ಇವು ವಿಶಾಲವಾಗಿದ್ದು ಗಾಳಿ ಬೆಳಕು ಹೆಚ್ಚು ಬರುವಂತಿರುತ್ತವೆ. ವ್ಯಾಯಾಮ ಶಾಲೆಯಲ್ಲಿ ಸುತ್ತಲೂ ಎತ್ತರವಾದ ನಿಲುಗನ್ನಡಿಗಳನ್ನು ನಿಲ್ಲಿಸಿರುತ್ತಾರೆ. ಹೀಗಿರುವುದರಿಂದ ಸಾಧನೆ ಮಾಡುವವರಿಗೆ ತಮ್ಮ ದೇಹದ ಅಂಗಾಂಗಗಳನ್ನು ಪೂರ್ಣವಾಗಿ ನೋಡಿಕೊಳ್ಳುವ ಅವಕಾಶವಿರುತ್ತದೆ. ಇಂಥ ವ್ಯಾಯಾಮಶಾಲೆಗಳಲ್ಲಿ ಕುಸ್ತಿಗಿಂತ ದೇಹದ ಅಂಗಸೌಷ್ಠವಕ್ಕೆ ಹೆಚ್ಚು ಪ್ರಾಧಾನ್ಯವಿರುತ್ತದೆ. ಮೈಸೂರು ಮತ್ತು ಮಹಾರಾಷ್ಟ್ರದಲ್ಲಿ ಸುವ್ಯವಸ್ಥಿತವಾದ ಗರಡಿ ಮನೆಗಳಿವೆ. ಈಗ ವ್ಯಾಯಾಮ ಶಾಲೆಗೆ ಹೋದರೆ ದೇಹದ ಅಂಗಾಂಗಗಳ ಕಾಂತಿಯನ್ನು ಹೆಚ್ಚಿಸಿಕೊಳ್ಳಲು ಬೇಕಾದ ವ್ಯಾಯಾಮ ಮಾಡಿಕೊಂಡು ಬರಬಹುದು; ಕುಸ್ತಿ ಮಾಡಬೇಕೆಂಬ ನಿಯಮವೇನಿಲ್ಲ. ಅಂತೆಯೇ ಈಗಿನ ವ್ಯಾಯಾಮ ಶಾಲೆಗಳಲ್ಲಿ ದೇಹದ ಅಂಗಗಾಂಗಳನ್ನು ಸುದೃಢವಾಗಿಸಲು ಬೇಕಾದ ವ್ಯಾಯಾಮ ಸಾಮಗ್ರಿಗಳನ್ನು ಕಾಣಬಹುದು. ಸಂಗೀತದ ಹಿನ್ನೆಲೆಯಲ್ಲಿ ವ್ಯಾಯಾಮ ಮಾಡುವ ಪದ್ಧತಿಯೂ (ಏರೋಬಿಕ್ಸ್) ಇತ್ತೀಚೆಗೆ ಪ್ರಚಲಿತವಾಗಿದೆ.

ಪ್ರಾಚೀನಕಾಲದಿಂದಲೂ ಗರಡಿ ಕಲೆ ಕರ್ನಾಟಕದಲ್ಲಿ ಪ್ರಚಲಿತವಿದ್ದರೂ ಅದಕ್ಕೊಂದು ನಿರ್ದಿಷ್ಟ ನೆಲೆ ದೊರೆತದ್ದು ವಿಜಯನಗರ ಅರಸರ ಕಾಲದಲ್ಲಿ. ಮೈಸೂರಿನಲ್ಲಿ ಸು.1610ರಲ್ಲಿ ಆರಂಭವಾದ ನವರಾತ್ರಿ ಉತ್ಸವದ ಕುಸ್ತಿಕಲೆ ಕೊನೆಯ ಅರಸರಾದ ಜಯಚಾಮರಾಜೇಂದ್ರ ಒಡೆಯರ್ ಕಾಲದವರೆಗೂ ಮೈಸೂರು ಸಂಸ್ಥಾನದಲ್ಲಿ ಅನೂಚಾನವಾಗಿ ನಡೆಯುತ್ತಾ ಬಂತು. 1970ರಲ್ಲಿ ಮಹಾರಾಜರ ಮಾನ್ಯತೆ ರದ್ದಾಗಿ ಕುಸ್ತಿ ಕಲೆಯೂ ನಿಂತಿತು. ಆದರೆ ಇಲ್ಲಿ ಮಹಾರಾಜರು ನಡೆಸುತ್ತಿದ್ದ ವಿಜಯದಶಮಿಯನ್ನು ಸರ್ಕಾರ ನಾಡಹಬ್ಬವಾಗಿ ಆಚರಿಸಲಾರಂಭಿಸಿತು. ಸಾಂಪ್ರದಾಯಿಕವಾಗಿ ನಡೆದುಬರುತ್ತಿದ್ದ ಕುಸ್ತಿಯನ್ನು ಕರ್ನಾಟಕ ಕ್ರೀಡಾ ಪರಿಷತ್ತಿಗೆ ವಹಿಸಲಾಯಿತು. ಮಹಾರಾಜರು ಕುಸ್ತಿ ಪಂದ್ಯಗಳಿಗೆ ನೀಡುತ್ತಿದ್ದ ರಾಜಧನ ರದ್ದಾದ ಬಳಿಕ ಸರ್ಕಾರವೇ ಹಣವನ್ನು ಭರಿಸುತ್ತ ಬಂದಿದೆ.

ಮಲ್ಲಕಂಬ ಕಸರತ್ತು

ಮೈಸೂರಿನ ಅಲಂಕಾರ್ ಹೋಟೆಲ್ ಮಾಲಿಕರಾಗಿದ್ದ ಎಂ.ಗೋವಿಂದಪ್ಪ, ಅಶೋಕ ಹೋಟೆಲ್ ಮಾಲಿಕರಾಗಿದ್ದ ಬಿ.ಪುಟ್ಟಪ್ಪ, ಆರ್.ಗುರು ಮತ್ತು ಅನೇಕ ಪೈಲ್ವಾನರು, ಉಸ್ತಾದರು, ಖಲೀಫರು ಕುಸ್ತಿ ಕಲೆಯ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಮೈಸೂರಿನ ಪೋಲೀಸ್ ಅಧಿಕಾರಿಯಾಗಿದ್ದ ಡಿ.ಎನ್. ಮುನಿಕೃಷ್ಣ ಚನ್ನಯ್ಯ ಕುಸ್ತಿ ಅಖಾಡಕ್ಕೆ



ಕೆ.ವಿ.ಅಯ್ಯರ್ ಅವರ ದೇಹದಾರ್ಢ್ಯ ಪ್ರದರ್ಶನ

ಹೊಸ ರೂಪ ದೊರೆಯುವಂತೆ ಮಾಡಿದರು (1988). 1961ರಿಂದ 1967ರ ವರೆಗೆ ಪ್ರತಿ ಭಾನುವಾರ ನಾಡ ಕುಸ್ತಿಗಳು ಮೈಸೂರು ಗರಡಿ ಸಂಘದ ವತಿಯಿಂದ ನಡೆಯುತ್ತಿದ್ದುವು. ಆದರೆ ಈಗ ದಸರ ಸಂದರ್ಭದಲ್ಲಿ ಮಾತ್ರ ನಡೆಯುತ್ತಿವೆ.

ಮೈಸೂರು ದಸರ ಕುಸ್ತಿ ಮೂಲತಃ ವಿಜಯನಗರ ಕಾಲದಿಂದಲೂ ಬೆಳೆದು ಬಂದಿದೆ. ವಿಜಯನಗರದ ಅರಸರ ಪತನಾನಂತರ ದಸರ ಕುಸ್ತಿಯನ್ನು ಬೆಳೆಸಿಕೊಂಡು ಅದಕ್ಕೆ ಪ್ರೋತ್ಸಾಹ ಕೊಟ್ಟು ಕುಸ್ತಿ ಕಲೆ ಅಳಿಯದಂತೆ ನಡೆಸಿಕೊಂಡು ಬಂದವರು ಮೈಸೂರು ರಾಜವಂಶದವರು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಸರ ಕುಸ್ತಿಯನ್ನು ಜಗನ್ಮೋಹನ ಅರಮನೆಯಲ್ಲಿ, ಅನಂತರ ಅರಮನೆಯ ಮುಂದೆ ನಡೆಸಲಾಗುತಿತ್ತು. ಪ್ರತಿ ವರ್ಷ ದಸರ ಮಹೋತ್ಸವದ ಕಾಲದಲ್ಲಿ ಕುಸ್ತಿ ಕಲೆಗಾಗಿ ಅರಮನೆಯ ನಿಧಿಯಿಂದ ಹಣ ತೆಗೆದಿರಿಸಲಾಗುತ್ತಿತ್ತು. ಭಾರತದ ನಾನಾ ಭಾಗಗಳಿಂದ ಪೈಲ್ವಾನರನ್ನು ಕರೆಸಿ ಕುಸ್ತಿ ಪಂದ್ಯ ಏರ್ಪಡಿಸಿ ಜಯಶಾಲಿಗಳಾದವರಿಗೆ ಸೂಕ್ತ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಲಾಗುತ್ತಿತ್ತು.

ಮೈಸೂರಿನ ಸಾಹುಕಾರ ಚನ್ನಯ್ಯ ಮತ್ತು ಪೈಲ್ವಾನ್ ಶಿವನಂಜಪ್ಪನವರು 1958ರಲ್ಲಿ ಗರಡಿ ಸಂಘವನ್ನು ಸ್ಥಾಪಿಸಿದರು. ಮೈಸೂರು ಪುರಸಭೆ ದೊಡ್ಡಕೆರೆ ಮೈದಾನದಲ್ಲಿ ನಿವೇಶನವೊಂದನ್ನು ಗರಡಿ ಸಂಘಕ್ಕೆ ನೀಡಿತು. ಅಲ್ಲಿ ಕುಸ್ತಿ ಅಖಾಡವನ್ನು ನಿರ್ಮಿಸಲಾಯಿತು (1962). ಈ ಅಖಾಡವನ್ನು ಅಂದಿನ ಮೈಸೂರಿನ ರಾಜ್ಯಪಾಲರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಉದ್ಘಾಟಿಸಿದರು. ಈ ಅಖಾಡದ ಸಂಸ್ಥಾಪಕರಾದ ಚನ್ನಯ್ಯ ನವರ ನೆನಪಿನಲ್ಲಿ ಚನ್ನಯ್ಯ ಕುಸ್ತಿ ಅಖಾಡ ಎಂದು ನಾಮಕರಣ ಮಾಡಲಾಗಿದೆ. ಅಂದಿನಿಂದ ದಸರ ಕುಸ್ತಿಗಳು ಈ ಅಖಾಡದಲ್ಲೇ ನಡೆಯುತ್ತಿವೆ.

1962ರ ದಸರ ಕುಸ್ತಿಯಲ್ಲಿ ಪೈಲ್ವಾನ್ ರಾಮದಾಸ, ಪೈಲ್ವಾನ್ ದೊಡ್ಡಲಿಂಗ, ಪೈಲ್ವಾನ್ ಕುಚೇಲಯ್ಯ ಇವರು ಚಿನ್ನದ ಪದಕ ಸ್ವೀಕರಿಸಿದರು. ಕುಸ್ತಿ ಪಂದ್ಯಗಳ ಗುತ್ತಿಗೆದಾರರೂ ಪ್ರೋತ್ಸಾಹಕರೂ ಆದ ಎಂ.ಗೋವಿಂದಪ್ಪ, ಬಿ.ಪುಟ್ಟಪ್ಪ, ಇವರನ್ನೂ ಸನ್ಮಾನಿಸಿ



ಶಂಕರ್ ಚಕ್ರವರ್ತಿ

ಅವರಿಗೆ ಸುವರ್ಣ ಪದಕ ನೀಡಲಾಯಿತು. 1975ರಲ್ಲಿ ಮೈಸೂರು ನಗರದ ಗಣ್ಯ ವ್ಯಕ್ತಿಗಳಿಂದ ಆರ್ಥಿಕ ನೆರವು ಪಡೆದು ದೊಡ್ಡಕೆರೆ ಮೈದಾನದಲ್ಲಿ ಕ್ರೀಡಾಂಗಣವೊಂದನ್ನು ನಿರ್ಮಿಸಲಾಯಿತು. 1975ರಿಂದ ಮೈಸೂರು ದಸರ ಕುಸ್ತಿಯನ್ನು ಕರ್ನಾಟಕ ರಾಜ್ಯ ಸರ್ಕಾರ ನಡೆಸಿಕೊಂಡು ಬರುತ್ತಿದೆ. ಕುಸ್ತಿ ಪಟುವಿನ ತೂಕ ಹಾಗೂ ವಯಸ್ಸಿನಾಧಾರದ ಮೇಲೆ ಅನೇಕ ವಿಭಾಗಗಳಾಗಿ ವಿಂಗಡಿಸಿ ಪ್ರಶಸ್ತಿಗಳನ್ನು ಕೊಡಲಾಗುತ್ತಿದೆ. 58-65ಕೆಜಿಯ ದಸರ ಕಿಶೋರ್ ಪ್ರಶಸ್ತಿ, 69ಕೆಜಿಯ ದಸರಾ ಕುಮಾರ್ ಪ್ರಶಸ್ತಿ, 79ಕೆಜಿಯ ದಸರ ಕೇಸರಿ ಪ್ರಶಸ್ತಿ ಮತ್ತು 85ಕೆಜಿವರೆಗೆ ದಸರ ಕಂಠೀರವ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಮೈಸೂರಿನ ಪ್ರಸಿದ್ಧ ಗರಡಿ ಮನೆಯಾದ ಅಹಮ್ಮದ್ ಸಾಹೇಬ್ ಗರಡಿಯ ಪೈಲ್ವಾನ್ ಪಾಪಯ್ಯ ಕರ್ನಾಟಕ ಕುಸ್ತಿ ಕಲೆಗೆ ಹೆಸರು ತಂದು ಕೊಟ್ಟವರು. ದೆಹಲಿಯಲ್ಲಿ ಕುಸ್ತಿ ಪ್ರದರ್ಶನ ನೀಡಿ ಕುಸ್ತಿ ಕಂಠೀರವ ಎಂಬ ಬಿರುದನ್ನು ಮತ್ತು ಬಂಗಾರದ ಪದಕವನ್ನು ಇವರು ಪಡೆದಿದ್ದರು (1911). ಶ್ರೀನಿವಾಸಣ್ಣನ ಬಂಡೀಕೇರಿ ಗರಡಿಯ ಚಿಕ್ಕಯ್ಯ, ಪೈಲ್ವಾನ್ ಸ್ಟಾರ್ ರಾಮು, ಸಾಬೂಲಾಲ್ ಮುಂತಾದವರು ಹಿಂದೆ ಕರ್ನಾಟಕಕ್ಕೆ ಕೀರ್ತಿ ತಂದ ಹೆಸರಾಂತ ಕುಸ್ತಿಪಟುಗಳಾಗಿದ್ದರು. ಕರ್ನಾಟಕದ ಪೈಲ್ವಾನ್ ಚಂಬಾ ಮುದ್ನಾಲ್ ಭಾರತಕೇಸರಿ ಪ್ರಶಸ್ತಿ ಪಡೆದಿದ್ದಾರೆ. ಪೈಲ್ವಾನ್ ಬಸಪ್ಪ ಪೂಜಾರಿ, ಪೈಲ್ವಾನ್ ಮಠಪತಿ, ಫಾರೂಕ್ ಅವರು ಕರ್ನಾಟಕ ಕೇಸರಿ ಬಿರುದನ್ನು ಪಡೆದಿದ್ದರು. ಪೈಲ್ವಾನ್ ಚಿನ್ನ, ಅರ್ಜುನ ಖಾನಾಪುರ, ಚಂದ್ರು ಕುರುವಿನಕೊಪ್ಪ, ಪೈಲ್ವಾನ್ ರುದ್ರ ಮೂಗ, ಪೈಲ್ವಾನ್ ಮುಕುಂದ, ಟೈಗರ್ ಬಾಲಾಜಿ, ಚಂದ್ರಶೇಖರ್, ಮೈಸೂರು ಪಾಲಹಳ್ಳಿ ವಿಜೇಂದ್ರ ಮುಂತಾದವರು. ಕರ್ನಾಟಕದ ಹೆಸರಾಂತ ಕುಸ್ತಿಪಟುಗಳು. ಮಹಾಪೂರ್ ಕೇಸರಿ ಪ್ರಶಸ್ತಿ, ಕರ್ನಾಟಕ ಕುಮಾರ್, ದಸರ ಕಂಠೀರವ ದಸರ ಕೇಸರಿ, ದಸರ ಕುಮಾರ್ ಮುಂತಾದ ಬಿರುದುಗಳನ್ನು ಮೈಸೂರಿನ ಶಂಕರ್ ಚಕ್ರವರ್ತಿ ಪಡೆದಿದ್ದಾರೆ.

**ಮಟ್ಟಿ :** ಗರಡಿಮನೆಯಲ್ಲಿ ಅತ್ಯಂತ ಪ್ರಧಾನವಾದ ಭಾಗವೆಂದರೆ ಮಟ್ಟಿ. ಅಂದರೆ ಕುಸ್ತಿ ಮಾಡುವ ಸ್ಥಳ. ಈ ಮಟ್ಟಿ ಕನಿಷ್ಠ 14' ಇರುವ ಒಂದು ಚೌಕ. ಇಂಥ ಮಟ್ಟಿಯಲ್ಲಿ ಒಂದು ಜೊತೆ ಅಥವಾ ಎರಡು ಜೊತೆ ಜಟ್ಟಿಗಳು ಕುಸ್ತಿ ಮಾಡಬಹುದು. ಕುಸ್ತಿ ಮಾಡುವ ಸ್ಥಳವನ್ನು ಸುಮಾರು ಒಂದು ಅಡಿ ಆಳದವರೆಗೂ ಹುಡಿಮಣ್ಣಿನಿಂದ ತುಂಬಿರಬೇಕು. ಇದಕ್ಕೆ ಕೆಮ್ಮಣ್ಣು ಶ್ರೇಷ್ಠ. ಉತ್ತಮದರ್ಜೆಯ ಮೃದುವಾದ ಮಣ್ಣನ್ನು ತುಂಬುವುದರಿಂದ ಚರ್ಮಕ್ಕೆ ತಗಲುವ ಅಪಾಯಗಳು ಕಡಿಮೆ. ಮಣ್ಣಿನಲ್ಲಿ ಸಣ್ಣ ಸಣ್ಣ ಮರಳು ಮತ್ತು ನುರುಜುಗಲ್ಲುಗಳಿಲ್ಲದಂತೆ ಮಾಡಲು ಮಣ್ಣನ್ನು ಜರಡಿ ಆಡಿಸಿರುತ್ತಾರೆ.

ಕೆಮ್ಮಣ್ಣು 100 ಚೀಲ, ಜೇಕಿನಗೆಡ್ಡೆಯ ಪುಡಿ 10 ಚೀಲ, ಕರ್ಪೂರ, ಕುಂಕುಮ 20 ಪೌಂಡುಗಳು, ಟಿಂಕ್ಚರ್ 46 ಪೌಂಡು, ದೇವದಾರು ಎಣ್ಣೆ 20 ಪೌಂಡು, ಗಂಧದ ಹುಡಿ 20 ಪೌಂಡು, ಅತ್ತರು 20 ತೊಲ, ಎಳ್ಳೆಣ್ಣೆ 20 ಮಣ - ಇವೇ ಮೊದಲಾದ ಸಾಮಗ್ರಿಗಳನ್ನು ಬೆರಸಿದ ಮಟ್ಟಿ ಆರೋಗ್ಯದಾಯಕವೆಂಬುದು ಸಾಂಪ್ರದಾಯಿಕ ನಂಬಿಕೆ. ಲಡತ್ ಮಾಡಿ ಮುಗಿದ ಮೇಲೆ ಪೈಲ್ವಾನರು ಈ ಮಟ್ಟಿಯಲ್ಲಿ ಉದುದ್ದವಾದ ಗುಂಡಿಯನ್ನು ತೆಗೆದು, ಕತ್ತನ್ನು ಮಾತ್ರ ಹೊರಗೆಬಿಟ್ಟು ಅದರಲ್ಲಿ ಮಲಗಿಕೊಳ್ಳುತ್ತಾರಲ್ಲದೆ ದೇಹದ ತುಂಬ ಮಣ್ಣನ್ನು ಮುಚ್ಚಿಸಿಕೊಳ್ಳುತ್ತಾರೆ. ಹೀಗೆ ಮಟ್ಟಿಯಲ್ಲಿ ಮಲಗಿ ವಿಶ್ರಾಂತಿ ಪಡೆಯುವುದರಿಂದ ದೇಹದ ಕಾವೆಲ್ಲವೂ ಆರಿಹೋಗುತ್ತದೆ. ಅಲ್ಲದೆ ಶರೀರಕ್ಕೆ ತಂಪೊದಗಿ, ಒಂದು ರೀತಿಯ ಕಾಂತಿಯುಂಟಾಗುತ್ತದೆ. ಇದಕ್ಕೆ ಮಟ್ಟಿ ತೆಗೆದುಕೊಳ್ಳುವುದೆಂದು ಹೇಳುತ್ತಾರೆ. ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದಲ್ಲಿ ರಾಘವೇಂದ್ರ ಸ್ವಾಮಿಗಳು ಹಲವಾರು ಆಯುರ್ವೇದಿಯ ಔಷಧಿಗಳನ್ನು ಬೆರಸಿದ ಮಟ್ಟಿಯನ್ನು ರೋಗಚಿಕಿತ್ಸೆಗಾಗಿ ಬಳಸುತ್ತಿದ್ದರು. ಹೀಗೆ ಮಟ್ಟಿ ತೆಗೆದುಕೊಳ್ಳುವುದೂ ಒಂದೇ, ಒಂದು ಸೇರು ಹಾಲು ಕುಡಿಯುವುದೂ ಒಂದೇ ಎಂದು ನಂಬಿಕೆ. ಕುಸ್ತಿ ಮಾಡುವಾಗ ಪೈಲ್ವಾನರಿಗೆ ಅಕಸ್ಮಾತ್ ಗಾಯಗಳೇನಾದರೂ ಆದರೆ ಅವರು ಯಾವ ವೈದ್ಯನ ಬಳಿಗೂ ಹೋಗುವುದಿಲ್ಲ. ಗಾಯದ ಮೇಲೆ ಈ ಮಟ್ಟಿಯ ಮಣ್ಣನ್ನು ಮೆತ್ತುತ್ತಾರೆ. ನವರಾತ್ರಿಯಲ್ಲಿ ಈ ಮಟ್ಟಿಗೆ ಹೊಸ ಮಣ್ಣು ಸೇರಿಸಿ ಉಸ್ತಾದರೆಲ್ಲ ಸೇರಿ ಪೂಜೆ ಮಾಡುತ್ತಾರೆ. ವರಮಹಾಲಕ್ಷ್ಮಿ ಹಬ್ಬದ ದಿನ ಹೊಸ ಮಣ್ಣು ತರುವುದು ವಾಡಿಕೆ. ತಂದ ಮಣ್ಣನ್ನು ಪೂಜಿಸುತ್ತಾರೆ. ಕುಸ್ತಿಯ ಸ್ಪರ್ಧೆ ಇರುವ ದಿವಸ ಮಟ್ಟಿಯ ಮಣ್ಣನ್ನು ಒಂದೆಡೆ ದೊಡ್ಡ ರಾಶಿಯಾಗಿ ಏರುಹಾಕಿ ಅದರೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಪೈಲ್ವಾನರುಗಳ ಕಾಚ, ಹನುಮಾನ್ ಚಡ್ಡಿ, ವ್ಯಾಯಾಮ ಸಾಮಗ್ರಿಗಳೆಲ್ಲವನ್ನೂ ಇಟ್ಟು ಪೂಜೆ ಮಾಡುತ್ತಾರೆ. ಆ ದಿವಸ ಗರಡಿಮನೆಯಲ್ಲಿ ಯಾರೂ ಕುಸ್ತಿ ಮಾಡುವುದಿಲ್ಲ. ಕುಸ್ತಿ ಮುಗಿದ ಮಾರನೆಯ ದಿವಸವೆ ಏರು ಹಾಕಿದ ಮಟ್ಟಿಯ ಮಣ್ಣನ್ನು ಒಡೆದು ದೈನಂದಿನ ಸಾಧನೆ ನಡೆಸುತ್ತಾರೆ.

**ವ್ಯಾಯಾಮಸಾಮಗ್ರಿಗಳು :** ಹಿಂದಿನ ಕಾಲದಲ್ಲಿ ಗರಡಿಮನೆಗಳಲ್ಲಿ ವ್ಯಾಯಾಮಸಾಮಗ್ರಿಗಳು ಹೆಚ್ಚು ಇರುತ್ತಿರಲಿಲ್ಲ. ದಂಡೆ ಒತ್ತುವುದು. ಬಸ್ಕಿ ಹೊಡೆಯುವುದು ಮತ್ತು ಮಟ್ಟಿ ಕುರಾಯಿಸುವುದು ಇವಿಷ್ಟೇ ಅಂದಿನ ಪ್ರಧಾನ ವ್ಯಾಯಾಮಗಳಾಗಿದ್ದುವು. ಅಲ್ಲಿನ ಸಾಮಾನ್ಯ ವ್ಯಾಯಾಮ ಸಾಮಗ್ರಿಗಳೆಂದರೆ ಡಂಬೆಲ್ಸ್, ಲೋಡು (ಗದೆ), ಬಳಪದ ಕಲ್ಲಿನಿಂದ ಮಾಡಿದ್ದು ಕುತ್ತಿಗೆಗೆ ಸಿಕ್ಕಿಸಿಕೊಳ್ಳುವ ಗಾಲಿ, ರಂಧ್ರವಿರುವ ಕಬ್ಬಿಣದ ಗುಂಡು, ಮಲ್ಲಗಂಬ, ದಂಡೆ ಹೊಡೆಯುವಾಗ ಹಿಡಿದುಕೊಳ್ಳಲು ಉಪಯೋಗಿಸುವ, ಮರದಿಂದ ಮಾಡಿದ ಕೈಹಿಡಿಗಳು, ಮಣೆ, ಮಟ್ಟಿ ಕುರಾಯಿಸುವ ದೊಡ್ಡ ಗುದ್ದಲಿ - ಮೊದಲಾದುವು. ಈ ಎಲ್ಲ ವ್ಯಾಯಾಮಸಾಮಗ್ರಿಗಳೂ ಕುಸ್ತಿಕಲೆಗೆ ಸಹಾಯಕವಾಗುವಂಥವು.

ಪೈಲ್ವಾನರುಗಳ ಆರಾಧ್ಯದೈವವೆಂದರೆ ಮೌಲಾಲಿ ಮತ್ತು ಹನುಮಂತ. ಆದ್ದರಿಂದಲೆ ಎಲ್ಲ ಗರಡಿಮನೆಗಳಲ್ಲೂ ಹನುಮಂತ ಮತ್ತು ಮೌಲಾಲಿ ದೇವರುಗಳನ್ನು ಕಾಣಬಹುದು. ಮೌಲಾಲಿ ಆಕಾರವಿಲ್ಲದ ದೇವರು. ಸಾಮಾನ್ಯವಾಗಿ ಗರಡಿಮನೆಗಳಲ್ಲಿ ಕೆಳಗಡೆ ಮೂರು ಗುಂಡು, ಮೇಲ್ಗಡೆ ಒಂದು ಗುಂಡನ್ನು ಇಟ್ಟು ಇದನ್ನೆ ಮೌಲಾಲಿ ದೇವರೆಂದು ಪೂಜಿಸುತ್ತಾರೆ. ಕುಸ್ತಿ ಇರುವ ದಿವಸ ಪೈಲ್ವಾನರು ಅಖಾಡವನ್ನು ಪ್ರವೇಶಿಸುವಾಗ ಯಾಲಿ ಮೌಲಾಲಿ, ಯಾಲಿ ಮದಾತ್, ಯಾಲಿ ಉಸ್ತಾದ್, ಜೈ ಭಜರಂಗಬಲಿ ಮುಂತಾದ ಘೋಷಣೆಗಳನ್ನು ಕೂಗುತ್ತಾರೆ. ಇತ್ತೀಚೆಗೆ ಹಿಂಕಣ್ಣು ಮುಂಕಣ್ಣು ಲಾಗ ಹಾಕಿಕೊಂಡು ಬರುವುದೂ ರೂಢಿಯಲ್ಲಿದೆ. ಜಟ್ಟಿಗಳ ಅಧಿದೇವತೆ ನಿಂಬಜಾದೇವಿ.

**1 ಮಲ್ಲಕಂಬ :** ಮಲ್ಲಕಂಬಗಳಲ್ಲಿ ಮೂರು ವಿಧ: (i). ನೇಣು ಮಲ್ಲಕಂಬ (ii). ಹುಗಿದಿರುವ ಮಲ್ಲಕಂಬ (iii). ಬೆತ್ತದ ಮಲ್ಲಕಂಬ. ಇವುಗಳ ಮೆಲೆ ವ್ಯಾಯಮ ಮಾಡುವುದರಿಂದ ತೊಡೆಗಳಿಗೆ ಅಸಾಧಾರಣವಾದ ಶಕ್ತಿ ಹಾಗೂ ಬಿಗಿ ಬರುತ್ತದಲ್ಲದೆ ದೇಹವನ್ನು ಹೇಗೆ ಬೇಕೋ ಹಾಗೆ ಮಣಿಸುವುದಕ್ಕೆ ಸಾಧ್ಯವಾಗುತ್ತದೆ.

ದಾದಾ ಬಾಲಂಭಟ್ಟ ಎಂಬಾತ ಮಲ್ಲಕಂಬದ ಮೇಲೆ ವ್ಯಾಯಾಮ ಮಾಡುವುದನ್ನು ಕಂಡುಹಿಡಿದ. ಇದಕ್ಕೆ ಸಂಬಂಧಿಸಿದಂತೆ ಕಥೆಯೊಂದಿದೆ. ಪ್ರಖ್ಯಾತ ಜಟ್ಟಿಯೊಬ್ಬನ ಸವಾಲನ್ನು ಎದುರಿಸಿ ಅವನ ಜೊತೆ ಕುಸ್ತಿ ಮಾಡಲು ಒಪ್ಪಿಕೊಂಡ ಬಾಲಂಭಟ್ಟ ಅವನನ್ನು ಸೋಲಿಸುವ ಬಗೆಯನ್ನು ಕುರಿತು ತೀವ್ರವಾಗಿ ಯೋಚಿಸತೊಡಗಿದ.ಈ ಯೋಚನೆ ಯಲ್ಲಿರುವಾಗಲೇ ಒಂದು ದಿವಸ ಅವನಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ಕೋತಿಯೊಂದು ಮರದ ಕೊಂಬೆಯ ಮೆಲೆ ಲಾಗ ಹಾಕುತ್ತಾ ಅನೇಕ ರೀತಿಯ ಕಸರತ್ತು ಮಾಡುತ್ತಿರುವುದನ್ನು ಕಂಡ. ಅದು ಅವನಿಗೊಂದು ಸೂಚನೆಯನ್ನೊದಗಿಸಿತು. ಮಾರನೆಯ ದಿನವೇ ನುಣುಪಾದ ಮರದ ಕಂಬವನ್ನು ತಂದು ನೆಲದಲ್ಲಿ ನೆಟ್ಟು ಅದರ ಮೇಲೆ ಕಸರತ್ತು ಮಾಡಲು ಪ್ರಾರಂಭಿಸಿದ. ಆದ್ದರಿಂದಾಗಿ ಆತ ತನ್ನ ಎದುರಾಳಿಯನ್ನು ಸುಲಭವಾಗಿ ಸೋಲಿಸಿದ. ಮಲ್ಲಕಂಬದ ಮೇಲೆ ನಡೆಸುವ ವಿವಿಧ ಚಟುವಟಿಕೆಗಳ ಸ್ಪರ್ಧೆಯನ್ನು ಈಗಲೂ ಮಹಾರಾಷ್ಟ್ರದಲ್ಲಿ ನಡೆಸುತ್ತಾರೆ.

**2 ಡಂಬೆಲ್ಲುಗಳು:** ವಿವಿಧ ತೂಕಗಳ ಡಂಬೆಲ್ಲುಗಳನ್ನು ಎರಡೂ ಕೈಯಲ್ಲಿ ಹಿಡಿದುಕೊಂಡು ದೀರ್ಘಶ್ವಾಸ ಎಳೆದುಕೊಂಡು ಕೈಗಳನ್ನು ಒಂದಾದ ಮೇಲೆ ಒಂದರಂತೆ ಮೇಲೆತ್ತಿ, ನಿಧಾನವಾಗಿ ಉಸಿರುಬಿಡುತ್ತ ಕೆಳಗೆ ಇಳಿಸಬೇಕು. ಈ ವ್ಯಾಯಾಮದಿಂದ ಮುಂಗೈ ಮತ್ತು ತೋಳುಗಳಿಗೆ ಬಲ ಬರುತ್ತದೆ.

**3 ಗದೆ ಅಥವಾ ಲೋಡು:** ವಿವಿಧ ತೂಕಗಳ ಗದೆಗಳಿರುತ್ತವೆ. ಸಮ ತೂಕವುಳ್ಳ ಎರಡು ಗದೆಗಳನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಮೂಗಿನ ನೇರದಲ್ಲಿ ನಿಲ್ಲಿಸಿಕೊಳ್ಳಬೇಕು. ಅನಂತರ ಒಂದು ಕೈಯಲ್ಲಿ ಹಿಡಿದಿರುವ ಗದೆಯನ್ನು ಮೂಗಿನ ನೇರದಲ್ಲಿಯೆ ನಿಲ್ಲಿಸಿಕೊಂಡು, ಇನ್ನೊಂದು ಕೈಯಲ್ಲಿರುವ ಗದೆಯನ್ನು ತಲೆಯ ಮೇಲೆ ಎತ್ತಿ ಬೆನ್ನ ಹಿಂದೆ ಇಳಿಸಿ ಅನಂತರ ಮೊದಲಿದ್ದ ಸ್ಥಾನಕ್ಕೇ, ಅಂದರೆ ಮುಂಭಾಗದಿಂದ ಮೇಲೆತ್ತಿ ಮೂಗಿನ ನೇರಕ್ಕೇ ನಿಲ್ಲಿಸಿ ಕೊಳ್ಳಬೇಕು. ತತ್ಕ್ಷಣವೇ ಮತ್ತೊಂದು ಕೈಯಲ್ಲಿರುವ ಗದೆಯನ್ನು ತಲೆಯ ಮೇಲೆ ಎತ್ತಿ ಬೆನ್ನ ಹಿಂದೆ ಇಳಿಸಿ ಮುಂದುಗಡೆಯಿಂದ ಮೂಗಿನ ನೇರಕ್ಕೆ, ತಂದು ನಿಲ್ಲಿಸಿಕೊಳ್ಳಬೇಕು. ಹೀಗೆ ಒಂದಾದ ಮೇಲೊಂದರಂತೆ, ಗದೆಗಳನ್ನು ತಿರುಗಿಸಬೆಕು. ಇದರಿಂದ ಮುಂಗೈ ಮತ್ತು ತೋಳುಗಳಿಗೆ ಅಸಾಧಾರಣ ಶಕ್ತಿಬರುತ್ತದೆ.



ಮಲ್ಲಕಂಬದ ಅಭ್ಯಾಸದಲ್ಲಿರುವ ಕುಸ್ತಿಪಟು

**4 ಗಾಲಿ :** ಸಿಮೆಂಟಿನ ಈ ಗಾಲಿ 1½' ಸುತ್ತಳತೆಯದಾಗಿದ್ದು ತುಂಬ ಭಾರವಾಗಿರುತ್ತದೆ. ಇದರ ಮಧ್ಯೆ ತಲೆ ನುಗ್ಗುವಷ್ಟು ರಂಧ್ರವೊಂದಿರುತ್ತದೆ. ಈ ಗಾಲಿಯನ್ನು ನಿಲ್ಲಿಸಿಕೊಂಡು, ಕುಕ್ಕುರುಗಾಲಿನಲ್ಲಿ ಕುಳಿತು ರಂಧ್ರದ ಮಧ್ಯೆ ತಲೆಯನ್ನು ತೂರಿಸಿ ಗಾಲಿಯನ್ನು ಕುತ್ತಿಗೆಗೆ ಸಿಗಿಸಿಕೊಂಡು ಮೇಲೇಳಬೇಕು. ಮೇಲೆದ್ದು ಗರಡಿಮನೆಯ ಒಳಭಾಗದಲ್ಲಿಯೇ ಒಂದೆರಡು ನಿಮಿಷ ಸುತ್ತಾಡಬೇಕು. ಹೀಗೆ ಮಾಡುವುದರಿಂದ ಕುತ್ತಿಗೆಗೆ ಬಲ ಬರುತ್ತದೆ.

**5 ಗುಂಡು :** ಇದು ಭಾರವಾದ ಕಬ್ಬಿಣದ್ದಾಗಿದ್ದು ಮಧ್ಯೆ ಒಂದು ಅಂಗುಲ ಅಥವಾ ಎರಡು ಅಂಗುಲಗಳಷ್ಟು ಅಗಲವಾದ ರಂಧ್ರವಿರುತ್ತದೆ. ಈ ರಂಧ್ರದ ಮಧ್ಯೆ ದಪ್ಪನಾದ ಕೋಲೊಂದನ್ನು ತಳ್ಳಿ ಕೈಯಿಂದ ಆ ಕೋಲನ್ನು ಹಿಡಿದು ಮುಂಗೈ ತ್ರಾಣದಿಂದ ಆ ಗುಂಡನ್ನು ಮೇಲೆತ್ತಬೇಕು. ಹೀಗೆ ಮಾಡುವುದರಿಂದ ಕೈಗಳಿಗೆ ಬಲ ಬರುತ್ತದೆ.

**6 ಗುದ್ದಲಿ :** ಇದು ವ್ಯವಸಾಯದ ಗುದ್ದಲಿಗಿಂತ ಆಕಾರದಲ್ಲಿ ದೊಡ್ಡದಾಗಿದ್ದು, ಭಾರವಾಗಿರುತ್ತದೆ. ಪ್ರತಿಯೊಬ್ಬ ಪೈಲ್ವಾನನೂ ಕುಸ್ತಿ ಮಾಡಿಯಾದ ಮೇಲೆ ಈ ಗುದ್ದಲಿಯಿಂದ ಮಟ್ಟಿಯನ್ನು ಪೂರ್ತಿ ಕುರಾಯಿಸುತ್ತಾನೆ. ಇದರಿಂದ ಎದೆ ವಿಶಾಲವಾಗುತ್ತದೆ. ಮುಂಗೈಗಳು, ತೋಳುಗಳು ಮತ್ತು ಸೊಂಟಕ್ಕೆ ಹೆಚ್ಚಿನ ಶಕ್ತಿ ಬರುವುದಲ್ಲದೆ ದಮ್ಮುಕಸ್ತು ನಿಲ್ಲುತ್ತದೆ.

*

**ಗರುಡಗಂಬ :** ದೇವಾಲಯಗಳ ಮುಂದಿರುವ ಕಲ್ಲಿನ ಧ್ವಜಸ್ತಂಭ ಅಥವಾ ದೀಪಸ್ತಂಭ. ಗರುಡಗಂಬಗಳನ್ನು ನಿಲ್ಲಿಸುವ ಪದ್ಧತಿ ವಿಜಯನಗರ ಕಾಲದಿಂದೀಚೆಗೆ ಬಂದಂತೆ ತೋರುತ್ತದೆ. ಬೇಲೂರಿನ ಕೇಶವ ದೇವಾಲಯದ ಮುಂದೆ ಇರುವ ಖಗಧ್ವಜಸ್ತಂಭವನ್ನು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಜಕ್ಕನೃಪ ನಿಲ್ಲಿಸಿದ. ವಿಷ್ಣು ದೇವಾಲಯಗಳ ಮುಂದಿನ ಈ ಕಂಬಗಳು ಗರುಡಧ್ವಜಗಳನ್ನು ಸೂಚಿಸುತ್ತವೆ. ಶಿವದೇವಾಲಯಗಳ ಮುಂದೆ ನಿಲ್ಲಿಸಿರುವ ಕಂಬಗಳನ್ನೂ ಗರುಡ ಗಂಬಗಳೆಂದೇ ಕರೆಯುವ ವಾಡಿಕೆಯಿದೆ.

ವಿಜಯನಗರ ಕಾಲದಿಂದೀಚೆಗೆ ನಿಲ್ಲಿಸಿರುವ 'ಇಂಥ' ಕಂಬಗಳು ಧ್ವಜಸ್ತಂಭ ಅಥವಾ ದೀಪಸ್ತಂಭಗಳಾಗಿರಬಹುದು. ಆದರೆ ಹೊಯ್ಸಳರ ಕಾಲದಲ್ಲಿ ಶಿವ ದೇವಾಲಯಗಳ ಬಳಿ ನಿಲ್ಲಿಸುತ್ತಿದ್ದ ಕೆಲವು ವಿಶಿಷ್ಟವಾದ ಕಂಬಗಳಿಗೆ ಗರುಡಗಂಬಗಳೆಂಬ ಹೆಸರು ಬಂದಿರಬೇಕು. ಆ ಕಾಲದಲ್ಲಿ ರಾಜನಿಗೆ ನಿಷ್ಠರಾಗಿ, ಅವನ ಪ್ರಾಣರಕ್ಷಣೆಯೇ ತಮ್ಮ ಕರ್ತವ್ಯವೆಂದು ತಿಳಿದು, ರಾಜನ ಮರಣಾನಂತರ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದ ಲೆಂಕರಿಗೆ ಗರುಡರೆಂಬ ಹೆಸರಿತ್ತು. ಸ್ವಾಮಿನಿಷ್ಠೆಯಲ್ಲಿ ತಾವು ಗರುಡನಿಗಿಂತ ಕಡಿಮೆಯೇನೂ ಅಲ್ಲವೆಂದು ಇವರು ಭಾವಿಸುತ್ತಿದ್ದುದರಿಂದ ಬಹುಶಃ ಇವರಿಗೆ ಈ ಹೆಸರು ಬಂದಿರಬೇಕು. ಸ್ವಾಮಿಗಾಗಿ ಸತ್ತವರ ನೆನಪಿಗಾಗಿ ಕಂಬಗಳನ್ನು ನಿಲ್ಲಿಸಿ ಶಾಸನ ಹಾಕಿಸುತ್ತಿದ್ದದ್ದುಂಟು. ಆನೆಯ ಮೇಲೆ ಕುಳಿತು ಗರುಡನೊಂದಿಗೆ ಸೆಣಸುತ್ತಿರುವ ಲೆಂಕರ ಮೂರ್ತಿಗಳನ್ನು ಹೊತ್ತ ಮೂರು ಕಂಬಗಳು ಆಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ಮುಂದೆ ಇವೆ. ಇಮ್ಮಡಿ ಬಲ್ಲಾಳನ ಮರಣಾನಂತರ ಗರುಡನಾದ ಕುವರಲಕ್ಷ್ಮ ಮತ್ತು ಅವನನ್ನು ಅನುಸರಿಸಿದ ಸಾವಿರ ಲೆಂಕರು ಮತ್ತು ಅವರ ಹೆಂಡಿರ ನೆನಪಿಗಾಗಿ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಬಳಿ ಕಂಬವನ್ನು ನಿಲ್ಲಿಸಲಾಗಿದೆ. ಹೊಯ್ಸಳ ದೇವಾಲಯದಲ್ಲಿ ಈಗ ಊರೆಕಂಬವಾಗಿರುವ ಪ್ರೌಢದೇವರಾಯ ಕಂಬ ರವಳಬೋವನೆಂಬ ಗರುಡನೊಬ್ಬನ ನೆನಪಿಗಾಗಿ ನಿಲ್ಲಿಸಿದ್ದು.



ಗದುಗಿನ ವೀರನಾರಾಯಣ ದೇವಾಲಯದ ಎದುರಿನ ಗರುಡಗಂಬ

ಬಸರಾಳಿನಲ್ಲಿ ಮಲ್ಲಿಕಾರ್ಜುನ ದೇವಾಲಯದ ಮುಂದಿನ ಕಂಬದ ಮೇಲೆ ಶಾಸನವಿಲ್ಲದಿದ್ದರೂ ಮೇಲಿನಿಂದ ಹಾರಿ ಪ್ರಾಣತ್ಯಾಗ ಮಾಡಲು ಸಿದ್ಧನಾಗಿರುವ ಗರುಡನ, ಅವನನ್ನು ಅನುಸರಿಸುತ್ತಿರುವ ಅವನ ಹೆಂಡತಿಯ ಮೂರ್ತಿಗಳಿರುವುದರಿಂದ ಅದು ಗರುಡಗಂಬವೆಂದು ಸ್ಪಷ್ಟ. ಗರುಡ ಗಂಬಗಳ ಮೇಲೆ ದೀಪ ಹಚ್ಚಿಡುವ ಪದ್ಧತಿಯೂ ಕೆಲವೆಡೆ ಇತ್ತು. ದೇವಾಲಯಗಳಲ್ಲಲ್ಲದೆ ಕಾಡಿನಲ್ಲಿ ದೇವರಕಾರ್ಯ ನಡೆಯುವ ಸ್ಥಳಗಳಲ್ಲಿ ಬನಗಳಲ್ಲಿ ಈ ಸ್ತಂಭಗಳು ಕಂಡುಬರುತ್ತವೆ. ಒಂದು ಗ್ರಾಮದ ನಿರ್ಮಾಣದ ಕುರುಹಾಗಿಯೂ ಈ ಸ್ತಂಭಗಳನ್ನು ನೆಡುತ್ತಿದ್ದರು. *

**ಗರುಡನಗಿರಿ :** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಬಾಣಾವರ ದಿಂದ 11ಕಿಮೀ ಈಶಾನ್ಯದಲ್ಲಿರುವ ಒಂದು ಗಿರಿದುರ್ಗ. ಸಮುದ್ರ ಮಟ್ಟದಿಂದ 1,057ಮೀ ಎತ್ತರದಲ್ಲಿದೆ. ಇದರ ಮೊದಲ ಹೆಸರು ನೊಣಬನಕಲ್ಲು. ಮೈಸೂರಿನ ಅರಸರು ತಮ್ಮ ರಾಜ್ಯದ ಗಡಿರಕ್ಷಣೆಗಾಗಿ 1660ರಲ್ಲಿ ಇಲ್ಲಿ ಕೋಟೆ ಕಟ್ಟಿಸಿದಾಗ ಗರುಡನಗಿರಿ ಎಂಬ ಹೆಸರು ಬಂತು. ಚಿನಕುರುಳಿ ಯುದ್ಧದಲ್ಲಿ ಹೈದರ್ ಅಲಿಯನ್ನು ತ್ರಿಯಂಬಕ ಮಾಮ ಸೋಲಿಸಿದ ಮೇಲೆ 1770ರಲ್ಲಿ ಈ ಕೋಟೆ ಮರಾಠರ ವಶಕ್ಕೆ ಬಂತು. ಅನಂತರ ಶಾಂತಿಸಂಧಾನವಾಗಿ ಗರುಡನಗಿರಿ ಮತ್ತೆ ಮೈಸೂರು ರಾಜ್ಯಕ್ಕೆ ಸೇರಿತು. ಟಿಪ್ಪು ಸುಲ್ತಾನನ ಮರಣದ ಅನಂತರ ಬ್ರಿಟಿಷರ ವಶವಾಗಿ, ಸ್ವಲ್ಪ ಕಾಲ ಮೈಸೂರು ಸೈನ್ಯದ ಠಾಣ್ಯವಾಗಿತ್ತು. *

**ಗರುಡರು :** ವಿಶೇಷವಾಗಿ ಕನ್ನಡನಾಡಿನಲ್ಲಿ, ಅದರಲ್ಲೂ ಹೊಯ್ಸಳರ ಕಾಲದಲ್ಲಿ, ರಾಜರಿಗೆ ನೆಚ್ಚಿನ ಬಂಟರಾಗಿ, ಅವರಿಗಾಗಿ ಪ್ರಾಣವನ್ನೇ ಪಣವಾಗಿಟ್ಟು ಕಾದುತ್ತಿದ್ದು, ಅವರು ಸತ್ತಾಗ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದ ವಿಶಿಷ್ಟ ಅಂಗರಕ್ಷಕರು. ಕರ್ನಾಟಕದ ಇತಿಹಾಸದ ವಿವಿಧ ಕಾಲಗಳಲ್ಲಿದ್ದ ಅಂಕಕಾರರು, ಲೆಂಕರು ಮತ್ತು ವೇಳೆಕಾರರಂತೆ ಇವರು ಕೂಡ ಅದೇ ಬಗೆಯ ಯೋಧರು. ಕರ್ನಾಟಕದ ಹೊರಗಡೆಯೂ ರಾಜರು ಇಂಥ ನಿಷ್ಠಾವಂತ ಸೇವಕರನ್ನು ನೇಮಿಸಿಕೊಳ್ಳುವ ಪದ್ಧತಿ ಇತ್ತು. ಕೇರಳದಲ್ಲಿ ಈ ಪದ್ಧತಿ ಇತ್ತೆಂಬುದು ಮಾರ್ಕೊಪೋಲೋನ ಬರವಣಿಗೆಗಳಿಂದ ಗೊತ್ತಾಗುತ್ತದೆ.

ವಿಷ್ಣುವಾಹನನಾದ ಗರುಡನಂತೆ ಇವರಿಗೆ ತಮ್ಮ ಪ್ರಭುವಿನಲ್ಲಿ ಅನನ್ಯ ಭಕ್ತಿನಿಷ್ಠೆಗಳಿದ್ದುದರಿಂದ ಇವರು ಗರುಡರೆಂದು ಹೆಸರಾದರು. ಗರುಡಪಟ್ಟವನ್ನು ಸ್ವೀಕರಿಸಲು ಸಾಮಾನ್ಯವಾಗಿ ಅನೇಕರು ಮುಂದೆ ಬರುತ್ತಿದ್ದರು. ಅವರ ನಿಯಮ, ನಿಷ್ಠೆ ಹಾಗೂ ಪರಾಕ್ರಮಗಳನ್ನು ಗಮನಿಸಿ ಅರ್ಹರಾದವರಿಗೆ ರಾಜ ಅನುಮತಿ ನೀಡುತ್ತಿದ್ದ. ಗರುಡಪಟ್ಟವನ್ನು ಸ್ವೀಕರಿಸಿದವರು ಮೊಣಕಾಲಿನ ಮೇಲೆ ತೊಡರೊಂದನ್ನು ಧರಿಸುತ್ತಿದ್ದರು. ತಮ್ಮ ಪ್ರಭುವಿಗೆ ಸೋಲೊದಗದಂತೆ ರಕ್ಷಿಸಲು ಇವರು ವೀರಪ್ರತಿಜ್ಞೆ ಮಾಡುತ್ತಿದ್ದರು.

ಗರುಡರ ಪರಾಕ್ರಮ, ಸಾಧನೆ ಮತ್ತು ಪ್ರಾಣತ್ಯಾಗಗಳಿಗೆ ಸಂಬಂಧಿಸಿದ ಅನೇಕ ಪ್ರಸಂಗಗಳು ಕನ್ನಡ ಶಾಸನಗಳಲ್ಲಿ ದೊರೆಯುತ್ತವೆ. ಸು.865ರಲ್ಲಿ ನೀತಿಮಾರ್ಗ ಗಂಗರಾಜ ಮರಣಹೊಂದಿದಾಗ ಆತನ ಗರುಡರಾಗಿದ್ದ ರಾಸೇಯ ಮತ್ತು ಬೇಬಿಯಮ್ಮ(ಣ್ಣ)ರು ಪ್ರಾಣಾರ್ಪಣೆ ಮಾಡಿದರು. ರಾಷ್ಟ್ರಕೂಟ ಕಾಲದಲ್ಲೂ ಈ ಪದ್ಧತಿಯಿತ್ತು. ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರಬಲ್ಲಾಳನ ಅಂಗರಕ್ಷಕ ದಳದ ಅಧಿಪತಿಯಾಗಿದ್ದ ಕುವರಲಕ್ಷ್ಮನ ಹೆಸರು ಉಲ್ಲೇಖಾರ್ಹವಾದ್ದು. ಕುವರಲಕ್ಷ್ಮನೂ ಇವನ ವೀರಪತ್ನಿ ಸುಗ್ಗಲದೇವಿಯೂ ಇವನ ಅಧೀನದಲ್ಲಿದ್ದ ಯೋಧರೂ ಗರುಡರಾಗಿದ್ದರು. ತಮ್ಮ ದೊರೆಗಾಗಿ ಬದುಕುವುದಾಗಿ, ಅವನಿಗಾಗಿ ಸಾಯುವುದಾಗಿ ಅವರು ಪ್ರತಿಜ್ಞೆ ಮಾಡಿದ್ದರು. ವೀರಲಕ್ಷ್ಮನಿಗೂ ಅವನ ಪ್ರಭುವಾದ ಬಲ್ಲಾಳ ದೊರೆಗೂ ನಡುವೆ ಯಾವ ಭಿನ್ನಭಾವವೂ ಇರಲಿಲ್ಲ. ದೊರೆ ಅವನನ್ನು ತನ್ನ ಮಗನಂತೆಯೇ ಸಾಕಿದ. ತನ್ನ ಕೀರ್ತಿಯಲ್ಲೂ ದೊರೆತನದ ಮರ್ಯಾದೆಯಲ್ಲೂ ಅವನೂ ಪಾಲ್ಗೊಳ್ಳುವಂತೆ ಮಾಡಿದ. ದೊರೆ 1220ರಲ್ಲಿ ಮರಣಹೊಂದಿದಾಗ ಕುವರಲಕ್ಷ್ಮನೂ ಅವನ ಪತ್ನಿಯೂ ಅವನ ಸಾವಿರ ಯೋಧರ ಪಡೆಯೊಡನೆ ಪ್ರಾಣಾರ್ಪಣೆ ಮಾಡಿದರೆಂದು ಹಳೇಬಿಡಿನ ಶಾಸನದಿಂದ ತಿಳಿದುಬರುತ್ತದೆ. ಹೊಯ್ಸಳ ವೀರ ಸೋಮೇಶ್ವರನ ಮರಣದೊಡನೆ ಅವನ ಗರುಡನಾದ ಕಾಮೆಯ ನಾಯಕ ಪ್ರಾಣಾರ್ಪಣೆ ಮಾಡಿಕೊಂಡ.

ಆ ಕಾಲದಲ್ಲಿ ಈ ಪದ್ಧತಿಗೆ ಧಾರ್ಮಿಕ ಬೆಂಬಲವಿತ್ತು. ಶ್ರದ್ಧೆ ಮತ್ತು ನಿಷ್ಠೆಯಿಂದ ತಮ್ಮ ಪ್ರಮಾಣವಚನಕ್ಕೆ ಬದ್ಧರಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದರಿಂದ ತಮಗೆ ವೀರಸ್ವರ್ಗ ಲಭಿಸುವುದೆಂದು ಗರುಡರು ನಂಬಿದ್ದರು. ಗರುಡರ ಸ್ಮರಣಾರ್ಥವಾಗಿ ವೀರಗಲ್ಲುಗಳನ್ನು ನೆಡಿಸುತ್ತಿದ್ದದ್ದುಂಟು. ಗರುಡಗಂಬಗಳೆಂಬ ಹೆಸರು ಇವರಿಂದ ಬಂದಿರಬಹುದೆಂದು ಹೇಳಲಾಗಿದೆ (ನೋಡಿ: ಗರುಡಗಂಬ). *

**ಗರೂಡ ಸದಾಶಿವರಾವ್ :** 1879-1954. ರಂಗಭೂಮಿಯ ಸುಪ್ರಸಿದ್ಧ ನಟ, ನಾಟಕಕಾರ, ರಂಗನಿರ್ಮಾಪಕ, ಗರೂಡ ಎಂಬುದು ಮನೆತನದ ಹೆಸರು. ತಂದೆ ಕೊಪ್ಪಳದ ಗುರುನಾಥ ಶಾಸ್ತ್ರಿಗಳು. ಎಳೆತನದಲ್ಲಿ ತಾಯಿಯನ್ನು ಕಳೆದುಕೊಂಡ ಇವರು ಕಲಬುರ್ಗಿಯಲ್ಲಿ ಸೋದರಮಾವನ ಮನೆಯಲ್ಲಿ ಬೆಳೆದರು. ಮೊದಲಿನಿಂದ ಸಂಗೀತ ಸಾಹಿತ್ಯಗಳ ಕಡೆ ಒಲವಿದ್ದ ಇವರು

ಕನ್ನಡ ನಾಟಕ ಮಂಡಳಿಯ ಸತ್ಯ ಹರಿಶ್ಚಂದ್ರ ನಾಟಕ ನೋಡಿ ದಾಗ, ಹೆಚ್ಚು ಸಂಸ್ಕಾರ ಗೊಂಡಿದ್ದ ಅಂದಿನ ಮರಾಠೀ ನಾಟಕಗಳೊಂದಿಗೆ ಆ ಕನ್ನಡ ನಾಟಕವನ್ನು ಹೋಲಿಸಿ ಹೀಯಾಳಿಸಿದ ಗೆಳೆಯರ ಮೇಲೆ ಹುರುಡು ಗಟ್ಟಿ, ಪರಿಷ್ಕಾರ ಗೊಂಡ ಕನ್ನಡ ನಾಟಕವನ್ನು ರಚಿಸಿ ಪ್ರಯೋಗಿಸುವುದಾಗಿ ಪಣ ತೊಟ್ಟು, ಮಾರ್ಕಂಡೇಯ ಎಂಬ ತಮ್ಮ ಮೊದಲ ನಾಟಕವನ್ನು ಬರೆದು, ಶಿವ ಪ್ರಾಸಾದಿಕ ನಾಟಕ ಮಂಡಳಿ ಯನ್ನು ಕಟ್ಟಿ ಪ್ರಯೋಗಿಸಿ ಕಲ್ಬುರ್ಗಿಯ ಪ್ರೇಕ್ಷಕರನ್ನು ಮೆಚ್ಚಿಸಿದರು (1894). ಎರಡನೆಯ ನಾಟಕ ಬಂಧವಿಮೋಚನೆ. ಮುಂದೆ ಹನ್ನೆರಡು ವರ್ಷಗಳ ಕಾಲ ನಾಟಕಕಾರರಾಗಿ, ನಾಟ್ಯಶಿಕ್ಷಕರಾಗಿ ಕಲ್ಬುರ್ಗಿ, ಹೊಂಬಳ, ಕೊಪ್ಪಳ, ಬಿಜಾಪುರ, ಧಾರವಾಡಗಳ ಹಲವಾರು ನಾಟಕ ಸಂಸ್ಥೆಗಳಲ್ಲಿ ದುಡಿದರು.

ಕೊಣ್ಣೂರು ನಾಟಕ ಮಂಡಳಿಯ ವ್ಯವಸ್ಥಾಪಕ ಶಿವಮೂರ್ತಿಸ್ವಾಮಿ ಕಣಬರಗೀಮಠ ಅವರ ನೆರವಿನಿಂದ 1919ರಲ್ಲಿ ಗರೂಡರು ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯನ್ನು ಕಟ್ಟಿದರು. ತಾವೇ ರಂಗನಾಟಕಗಳನ್ನು ರಚಿಸಿ, ಕಲಾವಿದರನ್ನು ಹುಡುಕಿ, ಆರಿಸಿ ಕರೆತಂದು, ನಿಷ್ಕೃಷ್ಟವಾದ ಶಿಕ್ಷಣ ಕೊಟ್ಟು, ಸಾರ್ಥಕಪ್ರಯೋಗಗಳನ್ನು ಮಾಡಿದರು. ಮುಂದಿನ ಮೂರು ದಶಕಗಳಲ್ಲಿ ದತ್ತಾತ್ರೇಯ ಮಂಡಳಿ ಕನ್ನಡ ನಾಡಿನ ಎಲ್ಲ ಮುಖ್ಯಪಟ್ಟಣಗಳಲ್ಲಿ ನಾಟಕಗಳನ್ನು ಆಡಿದುದಲ್ಲದೆ, ಮಹಾರಾಷ್ಟ್ರದ ಪುಣೆ, ಸಾಂಗಲಿ, ಕೊಲ್ಹಾಪುರಗಳಲ್ಲಿ ಪ್ರವಾಸ ಮಾಡಿ ಯಶಸ್ಸನ್ನು ಗಳಿಸಿತು. ಮನೋಜ್ಞವಾದ ಅಭಿನಯ ಕಲೆ ಹಾಗೂ ಶುದ್ಧ ಸಾಹಿತ್ಯಕ ನಾಟಕಗಳಿಂದಾಗಿ ಅತ್ಯಂತ ಪ್ರಸಿದ್ಧಿಗೆ ಬಂತು.

ಗರೂಡರು ಒಟ್ಟಾರೆ ಐವತ್ತನಾಲ್ಕು ರಂಗನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಚೌತಿಯ ಚಂದ್ರ, ವತ್ಸಲಾಹರಣ, ಶಕ್ತಿವಿಲಾಸ, ಪಾದುಕಾಪಟ್ಟಾಭಿಷೇಕಗಳಂಥ ಪೌರಾಣಿಕ ನಾಟಕಗಳೂ ಎಚ್ಚಮನಾಯಕನಂಥ ಐತಿಹಾಸಿಕ ನಾಟಕವೂ ವಿವೇಕವಿಜಯ, ಬಲ ಸಿಂಹತಾರಾದಂಥ ಕಾಲ್ಪನಿಕ ಕಥಾವಸ್ತುವನ್ನು ಆಧರಿಸಿದ ನಾಟಕಗಳೂ ವಿಷಮ ವಿವಾಹ, ಉಗ್ರ ಕಲ್ಯಾಣ ದಂಥ ಸಾಮಾಜಿಕ ನಾಟಕ ಗಳೂ ಮಹಾತ್ಮಾ ಕಬೀರ ಮೊದಲಾಗಿ ಸಂತ ಜೀವನ ದರ್ಶನವನ್ನು ಪ್ರತಿಬಿಂಬಿಸಿದ ನಾಟಕಗಳೂ ಇವೆ. ಇವು ವೈಯಕ್ತಿಕವಾಗಿ ಗರೂಡರಿಗೆ ಅಪಾರವಾದ ಕೀರ್ತಿಯನ್ನೂ ಇವರ ಮಂಡಳಿಗೆ ಯಶಸ್ಸನ್ನೂ ತಂದುಕೊಟ್ಟವು.

ಇವರು ಹುಟ್ಟು ನಟರು. ಅಭಿನಯಕಲೆಯನ್ನೂ ಧ್ವನಿ ಬಳಕೆಯನ್ನೂ ಅವಿರತವಾಗಿ ಅಭ್ಯಸಿಸಿ ಆ ಕಲೆಗಳಿಗೆ ಶಾಸ್ತ್ರದ ಮಹತಿಯನ್ನು ಕೊಟ್ಟವರು. ಅಶೋಕ, ದಶರಥ, ಎಚ್ಚಮನಾಯಕ, ಕಬೀರದಾಸ ಮೊದಲಾಗಿ ಇವರು ಅಭಿನಯಿಸಿದ ಭೂಮಿಕೆಗಳು ಅಭಿನಯಕೇಸರಿ, ಕರ್ನಾಟಕ ನಾಟಕಾಲಂಕಾರ ಎಂಬ ಪ್ರಶಸ್ತಿಗಳನ್ನು ಇವರಿಗೆ ಗಳಿಸಿಕೊಟ್ಟವು.

ಇವರ ನಾಟಕಗಳಲ್ಲಿ, ಪ್ರದರ್ಶನಗಳಲ್ಲಿ, ಸಂಗೀತಕ್ಕಿಂತ ಹೆಚ್ಚಾಗಿ ಅಭಿನಯಕ್ಕೆ ಪ್ರಾಧಾನ್ಯ. ರಾಷ್ಟ್ರಪ್ರೇಮ ಹಾಗೂ ಭಾರತೀಯ ಸಂಸ್ಕೃತಿಯ ಉದಾತ್ತತೆಯ ಸೆಳಕುಗಳು ಇವರ ನಾಟಕಗಳಲ್ಲಿ ಹಾಸುಹೊಕ್ಕಾಗಿದ್ದವು. ಎಂದೇ ಅಂದಿನ ವಿಮರ್ಶಕರ ಕಣ್ಣಿನಲ್ಲಿ ಗರೂಡರು ನಟರಾಗಿ, ನಾಟಕಕಾರರಾಗಿ, ದೇಶಸೇವಕರಾಗಿ, ಧರ್ಮಪ್ರಸಾರಕರಾಗಿ ಕನ್ನಡ ರಂಗಭೂಮಿಗೆ ದೇಗುಲದ ಪಾವಿತ್ರ್ಯವನ್ನು ತಂದುಕೊಟ್ಟ ದ್ರಷ್ಟಾರರಾದರು. (ಎಚ್.ಕೆ.ಆರ್.)

**ಗಳಗನಾಥ [1] :** ಹಾವೇರಿ ಜಿಲ್ಲೆ ಹಾವೇರಿ ತಾಲ್ಲೂಕಿನಲ್ಲಿರುವ ಒಂದು ಪುಣ್ಯಕ್ಷೇತ್ರ. ಸುಂದರ ತಾಣ. ವರದಾ ಮತ್ತು ತುಂಗಭದ್ರಾ ನದಿಗಳ ಸಂಗಮಸ್ಥಳದಲ್ಲಿದೆ.

ಇಲ್ಲಿರುವ ಗಳಗೇಶ್ವರ ದೇವಸ್ಥಾನದಿಂದ ಈ ಸ್ಥಳಕ್ಕೆ ಗಳಗನಾಥ ಎಂಬ ಹೆಸರು ಬಂದಿದೆ. ಈ ದೇವಾಲಯವನ್ನು ಗಳಗೇಶ್ವರ ಮುನಿ ಸ್ಥಾಪಿಸಿದರೆಂದು ಪ್ರತೀತಿ. ಈ ದೇವಾಲಯ 80' ಉದ್ದ 40' ಅಗಲವಿದೆ.

ಗಳಗೇಶ್ವರ ಮಂದಿರ

ಇದರ ಮೇಲ್ಛಾವಣಿಯನ್ನು ನಾಲ್ಕು ಸುಂದರವಾದ ಸ್ತಂಭಗಳು ಅಂದವಾಗಿ ಎತ್ತಿ ಹಿಡಿದಿವೆ. ದೇವಾಲಯದ ಸುತ್ತಲೂ ಗೋಡೆಯ ಮೇಲೆ ಪೌರಾಣಿಕ ಕಥೆಗಳನ್ನು ಕೆತ್ತಲಾಗಿದೆ. ಈ ದೇವಾಲಯದ ಕಟ್ಟಡದ ವೈಶಿಷ್ಟ್ಯವೆಂದರೆ ಇದರ ಅಡಿಪಾಯ. ಇದರ ಆಕಾರ ಪಿರಮಿಡ್‌ನಂತಿದೆ. ನದಿಯ ನೆರೆಹಾವಳಿಯಿಂದ ಈ ದೇವಾಲಯವನ್ನು ರಕ್ಷಿಸಲು ಗೋಡೆಗಳನ್ನು ಕಟ್ಟಲಾಗಿದೆ. ಇಲ್ಲಿ ಒಂದು ಹನುಮಂತದೇವರ ಗುಡಿಯೂ ಇದೆ. ಈ ಊರಲ್ಲಿ ಕಲ್ಯಾಣ ಚಾಳುಕ್ಯರ ಆರು ಶಾಸನಗಳು ದೊರೆತಿವೆ. ಹೊಯ್ಸಳ ವಿಷ್ಣುವರ್ಧನ ಇಲ್ಲಿಂದ ದಾನಮಾಡಿದ ಸಂಗತಿ ತಿಳಿದುಬರುತ್ತದೆ. ಈ ಗ್ರಾಮದ ಸಮೀಪದಲ್ಲಿ ಅನೇಕ ಬೃಹತ್ ಶಿಲಾ ಸಮಾಧಿಗಳು ಬೆಳಕಿಗೆ ಬಂದಿವೆ. ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥರು (ನೋಡಿ) ಈ ಸ್ಥಳದವರು. (ಎಸ್.ಎಸ್.ಬಿ.)

**ಗಳಗನಾಥ [2] :** 1869-1942 ಕನ್ನಡದ ಹೊಸ ಹುಟ್ಟಿನ ಕಾಲದ ಪ್ರಾರಂಭದಲ್ಲಿ ತಮ್ಮ ವಿಪುಲವಾದ ಬರೆವಣಿಗೆಯಿಂದ ನಾಡಿನಲ್ಲಿ ಕನ್ನಡ ಭಾಷಾ ಜಾಗೃತಿಯನ್ನುಂಟುಮಾಡಿದ ಪ್ರಸಿದ್ಧ ಲೇಖಕರು. ಇವರ ಪೂರ್ಣ ಹೆಸರು ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥ. ವೆಂಕಣ್ಣ, ವೆಂಕಟೇಶ ಎಂಬುವು ಮನೆತನದ ಹೆಸರುಗಳು. ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ಗಳಗನಾಥ' ಎಂಬ ಹಳ್ಳಿಯಲ್ಲಿ ಇವರು 1869 ಜನವರಿ 5ರಂದು ಜನಿಸಿದರು. ಇವರ ತಂದೆ ಊರಿನ ಕುಲಕರ್ಣಿಯಾಗಿದ್ದರು. ಗಳಗನಾಥ'ರಿಗೆ ಬಾಲ್ಯದಲ್ಲೇ ಸಂಸ್ಕೃತ ಅಧ್ಯಯನಮಾಡುವ ಅವಕಾಶ ದೊರೆಯಿತು. ವರದಾ ಹಾಗೂ ತುಂಗಭದ್ರಾ ನದಿಗಳ ಸಂಗಮ ಸ್ಥಾನದ ಹತ್ತಿರ ರಮಣೀಯ ಸ್ಥಳದಲ್ಲಿರುವ ಗಳಗನಾಥದ ಗಳಗೇಶ್ವರ ದೇವಾಲಯ ಇವರ ಪ್ರಥಮ ಪಾಠಶಾಲೆಯಾಯಿತಲ್ಲದೆ ಅಲ್ಲಿ ಇವರಿಗೆ ಅಕ್ಕರೆಯ ಗುರುಕುಲ ಶಿಕ್ಷಣ ದೊರೆತು ಪ್ರಾಥಮಿಕ ಶಾಲೆಯ ಅಭ್ಯಾಸ ನಡೆಯಿತು. ಹಾವನೂರಿನಲ್ಲಿ ಮುಲ್ಕಿ ಪರೀಕ್ಷೆ ಮುಗಿಸಿದ ಅನಂತರ ಶಿಕ್ಷಕನಾಗಬೇಕೆಂಬ ಹಂಬಲದಿಂದ ಇವರು ಧಾರವಾಡ ಟ್ರೇನಿಂಗ್ ಕಾಲೇಜಿಗೆ ಸೇರಿದರು (1886). ಕಾಲೇಜಿನ ಎಲ್ಲ ಪರೀಕ್ಷೆಗಳಲ್ಲೂ ಮೇಲ್ತರಗತಿಯಲ್ಲಿ ತೇರ್ಗಡೆ ಹೊಂದಿ ಮೂರು ವರ್ಷದ ಶಿಕ್ಷಕ ತರಬೇತಿಯನ್ನು ಮುಗಿಸಿ (1889) ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಉತ್ತಮ ಶಿಕ್ಷಕರೆಂದು ಹೆಸರು ಗಳಿಸಿದರು.

ಗಳಗನಾಥರು ನರೇಂದ್ರದಲ್ಲಿ ಶಿಕ್ಷಕರಾಗಿದ್ದಾಗ ಪ್ರಬುದ್ಧ ಪದ್ಮನಯನೆ ಎಂಬ ತಮ್ಮ ಮೊದಲ ಕಾದಂಬರಿಯನ್ನು ರಚಿಸಿದರು (1898). ಈ ಕಾದಂಬರಿ ಇವರ ಸಾಹಿತ್ಯಕ ಜೀವನಕ್ಕೆ ಹೊಸ ತಿರುವು ಕೊಟ್ಟಿತು. ಆದರೆ ಪ್ರಾಪಂಚಿಕ ಜೀವನದಲ್ಲಿ ಅದೇ ಘಟ್ಟದಲ್ಲಿ ಇವರಿಗೆ ಅಪಾರ ದುಃಖವನ್ನುಂಟುಮಾಡಿದ ಘಟನೆಗಳು ಜರುಗಿದುವು. ಇವರ ಮೊದಲನೆಯ ಹೆಂಡತಿ ಜೀವೂಬಾಯಿ ತೀರಿಕೊಂಡರು. ಇದಾದ ಕೆಲವೇ ದಿನಗಳಲ್ಲಿ ಇವರ ತಂದೆಯವರೂ ತೀರಿಕೊಂಡರು. ಮೊದಲನೆಯ ಹೆಂಡತಿಗೆ ಮಕ್ಕಳಿರಲಿಲ್ಲವಾಗಿ ಗಳಗನಾಥರು ಮುಂದೆ ಎರಡನೆಯ ವಿವಾಹ ಮಾಡಿಕೊಂಡರು. ಎರಡನೆಯ

ಹೆಂಡತಿ ಗಂಗೂಬಾಯಿಯವರಿಗೂ ಬಹಳ ದಿನಗಳವರೆಗೆ ಮಕ್ಕಳಿರಲಿಲ್ಲ. ಅನಂತರ ಇವರಿಗೆ ಎರಡು ಹೆಣ್ಣುಮಕ್ಕಳಾದವು. ಈ ಮಧ್ಯೆ ಗಳಗನಾಥರು ಮುಖ್ಯೋಪಾಧ್ಯಾಯರಾಗಿದ್ದರು. ಗುತ್ತಲ ದಲ್ಲಿರುವಾಗ ಆಯ್ದ ಕೆಲವೇ ಮುಖ್ಯೋಪಾಧ್ಯಾಯರ ಗುಂಪಿನ ಸದಸ್ಯರಾಗಿ ಮುಂಬಯಿ ಪ್ರಾಂತ್ಯ ದಲ್ಲಿ ಸಂಚಾರಮಾಡಿಬಂದರು. ಗುತ್ತಲದಲ್ಲಿರುವಾಗಲೆ ಇವರ ಜೀವನ ಇನ್ನೊಂದು ತಿರುವು ಪಡೆಯಿತು. ನೌಕರಿಯ ಸೇವಾ ವಧಿ ಇನ್ನೂ ಹತ್ತು ವರುಷ ಉಳಿದಿರುವಾಗಲೇ ನೌಕರಿ ಬಿಟ್ಟು (1912) ಅಗಡಿಯ ಶೇಷಾಚಲ ಸ್ವಾಮಿಗಳ ಸನ್ನಿಧಾನದಲ್ಲಿ ಆಶ್ರಮ ಮಾದರಿಯ ಶಾಲೆಯನ್ನು ಸ್ಥಾಪಿಸಿದರು. ಇದೇ ಸಂದರ್ಭದಲ್ಲಿ ಶೇಷಾಚಲ ಪ್ರೆಸ್ ಸ್ಥಾಪಿತವಾಯಿತು. ಇವರು ಸದ್ಬೋಧಚಂದ್ರಿಕೆ ಎಂಬ ಮಾಸಿಕವನ್ನು ಹೊರತಂದರು. ಈ ಪತ್ರಿಕೆ ಆಗ 7,000 ಚಂದಾದಾರರನ್ನು ಹೊಂದಿತ್ತು. ಇದರಲ್ಲಿ ಗಳಗನಾಥರ ಅನೇಕ ಸಾಹಿತ್ಯಕೃತಿಗಳು ಧಾರಾವಾಹಿಯಾಗಿ ಪ್ರಕಟವಾದವು. ಮರಾಠಾ ಇತಿಹಾಸ, ರಜಪೂತ ಇತಿಹಾಸ ಮತ್ತು ಕನ್ನಡಿಗರ ಇತಿಹಾಸವನ್ನು ಸಾಮಗ್ರಿಯಾಗಿಟ್ಟುಕೊಂಡು ಹನ್ನೆರಡು ವರ್ಷಗಳ ಅವಧಿಯಲ್ಲಿ 20 ಕಾದಂಬರಿಗಳು ಹೊರಬಂದುವು.

ಶೇಷಾಚಲ ಸ್ವಾಮಿಗಳು ದೈವಾಧೀನರಾದ ಅನಂತರ ಗಳಗನಾಥರು ಹಾವೇರಿಗೆ ಬಂದು ಹೊಸದೊಂದು ಪಾಠಶಾಲೆ ಮತ್ತು ಪ್ರೆಸ್ ಪ್ರಾರಂಭಿಸಿ 1919ರಲ್ಲಿ ಸದ್ಗುರು ಎಂಬ ಹೊಸ ಮಾಸಿಕವನ್ನು ಹೊರಡಿಸಿದರು. ಇದೆಲ್ಲಕ್ಕಾಗಿ ಮಾಡಿದ ಸಾಲ ಮಾತ್ರ ಇವರ ಜೀವನದುದ್ದಕ್ಕೂ ಬೆಳೆದುಬಂತು. 1929ರಲ್ಲಿ ಇವರ ಷಷ್ಟ್ಯಬ್ದಿ ಸಮಾರಂಭ ಜರುಗಿತು. ಸಾಲ ತೀರಿಕೆಗಾಗಿ ಅನಂತರವೂ ಇವರು ಪುಸ್ತಕಗಳನ್ನು ಬರೆದು ಅಚ್ಚು ಮಾಡಿಸಿ ಕನ್ನಡನಾಡಿನ ಮೂಲೆಮೂಲೆಗಳಲ್ಲಿ ಸುತ್ತಾಡಿ ಗ್ರಂಥಗಳನ್ನು ತಲೆಯ ಮೇಲೆ ಹೊತ್ತು ಮಾರಿದರು. ಇವರು ಕ್ಯಾನ್ಸರ್ ರೋಗಕ್ಕೆ ಬಲಿಯಾಗಿ 1942 ಏಪ್ರಿಲ್ 22ರಂದು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ ತಮ್ಮ ನಿಧನಹೊಂದಿದರು.

ಗಳಗನಾಥರ ಜೀವನದಲ್ಲಿ ಧಾರವಾಡ ಮಹತ್ತ್ವದ ಸ್ಥಾನವನ್ನು ಪಡೆದಿದೆ. ಅದು ಇವರನ್ನು ಸಾಹಿತಿಯನ್ನಾಗಿ ರೂಪಿಸಿದ ಕ್ಷೇತ್ರ. ಟ್ರೇನಿಂಗ್ ಕಾಲೇಜಿನ ವಾತಾವರಣ ಇವರಿಗೆ ತುಂಬ ಅನುಕೂಲಕರವಾಗಿತ್ತು. ಪಂಡಿತರಾದ ಕಿತ್ತೂರ ಅಯ್ಯನವರು, ಧೊಂಡೋ ನರಸಿಂಹ ಮುಳಬಾಗಲ ಅವರು ತಮ್ಮ ಪ್ರಭಾವ ಬೀರಿ ಗಳಗನಾಥರಿಗೆ ಕನ್ನಡ ಕಲಿಸಿದರು. ಅದೇ ಪ್ರಕಾರ ಪ್ರಭಾವ ಬೀರಿದವರು ರೊದ್ದ ಶ್ರೀನಿವಾಸರಾಯರು ಹಾಗೂ ಕರಂದೀಕರರು. ಕರಂದೀಕರರ ಅಚ್ಚುಕಟ್ಟು, ಶಿಸ್ತು, ಗಳಗನಾಥರಿಗೂ ಬಂದುವು. ಆ ಸಮಯದಲ್ಲಿ ಅಪ್ರತ್ಯಕ್ಷವಾಗಿ ಇವರ ಜೀವನದ ಮೇಲೆ ಪ್ರಭಾವ ಬೀರಿದ ಮರಾಠಿ ವ್ಯಕ್ತಿಗಳೆಂದರೆ ಲೋಕಮಾನ್ಯ ಟಿಳಕ ಹಾಗೂ ಹರಿ ನಾರಾಯಣ ಆಪ್ಟೆ ಅವರು.

ಆಗ ಉತ್ತರ ಕರ್ನಾಟಕದಲ್ಲಿ ಟಿಳಕ ಹಾಗೂ ಆಪ್ಟೆಯವರ ಹೆಸರುಗಳು ಮನೆಮಾತಾಗಿದ್ದುವು. ಟಿಳಕರ ಕೇಸರಿ, ಆಪ್ಟೆಯವರ ಕರಮಣೂಕ ಪತ್ರಿಕೆಗಳು ಹೆಚ್ಚು ಪ್ರಚಾರದಲ್ಲಿದ್ದುವು. ಕನ್ನಡ ಪತ್ರಿಕೆಗಳ ಅಭಾವದಿಂದಾಗಿ ಕನ್ನಡಿಗರು ಮರಾಠಿ ಪತ್ರಿಕೆಗಳನ್ನೇ ಓದುತ್ತಿದ್ದರು. ಇಷ್ಟೇ ಅಲ್ಲದೆ ಪೇಶ್ವೆ ಕಾಲದ ರಾಜಭಾಷೆಯಾದ ಮರಾಠಿ ತನ್ನ ರಾಜಕೀಯ ಮುದ್ರೆಯನ್ನೊತ್ತಿ ತನ್ನದೇ ಆದ ವಿಶಿಷ್ಟ ಪ್ರಭಾವವನ್ನು ಬೀರುತ್ತಿತ್ತು. ಈ ಎರಡು ಪತ್ರಿಕೆಗಳನ್ನೂ ಗಳಗನಾಥರು ತಪ್ಪದೆ ಓದುತ್ತಿದ್ದರಲ್ಲದೆ ತಮ್ಮ ಗೆಳೆಯರೊಂದಿಗೆ ಅದರಲ್ಲಿನ ವಿಷಯಗಳನ್ನು ಚರ್ಚಿಸುತ್ತಿದ್ದರು. ಟಿಳಕರ ವಿಚಾರಧಾರೆ ಇವರ ಮನಸ್ಸನ್ನು ಸಂಪೂರ್ಣ ಆಕರ್ಷಿಸಿತ್ತು. ಅಷ್ಟೇ ಸತ್ತ್ವಶಾಲಿಯಾಗಿ ಆಪ್ಟೆಯವರ ಕಾದಂಬರಿಗಳಲ್ಲಿಯ ಕಲ್ಪನಾವೈಭವದ ವೈಖರಿ ಮನಸ್ಸನ್ನು ಬೆರಗುಗೊಳಿಸುತ್ತಿತ್ತು. ಆ ಭಾಗದ ಕನ್ನಡ ಜನತೆ ಮರಾಠಿ ವ್ಯಾಮೋಹದಲ್ಲಿದ್ದುದು ಇವರಿಗೆ ಕಂಡುಬಂತು. ಟಿಳಕರ ವಿಚಾರಧಾರೆಯನ್ನೂ ಆಪ್ಟೆಯವರ ಕಾದಂಬರಿ ಕಥೆಗಳನ್ನೂ ಕನ್ನಡದಲ್ಲಿಯೇ ಹೇಳಿ ಕನ್ನಡಿಗರ ವಾಚನಾಭಿರುಚಿಯನ್ನು ಬೆಳೆಸುವ ಉತ್ಕಟ ಆಶೆ ಮೂಡಿತು. ಅದೇ ಕಾಲಕ್ಕೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಕನ್ನಡ ಗ್ರಂಥಕರ್ತರಿಗೆ ಬಹುಮಾನ ಕೊಡುವ ಪರಿಪಾಠವನ್ನು ಹಾಕಿದರು. ಆ ಸಂದರ್ಭದಲ್ಲಿ ಇವರು ಬರೆದ ಪ್ರಥಮ ಕಾದಂಬರಿ ಪ್ರಬುದ್ಧ ಪದ್ಮನಯನೆಗೆ ಬಹುಮಾನ ದೊರಕಿತು. ಹೀಗೆ 1898ರಲ್ಲಿ ಆರಂಭವಾದ ಇವರ ಬರೆವಣಿಗೆ 1942ರ ವರೆಗೂ ಅವ್ಯಾಹತವಾಗಿ ಸಾಗಿತು. ನರೇಂದ್ರ, ಶಿರಗುಪ್ಪ, ಅಗಡಿ, ಹಾವೇರಿ ಮೊದಲಾದ ಸ್ಥಳಗಳಲ್ಲಿ ಇವರು ನೆಲೆನಿಂತು ಕನ್ನಡಕ್ಕಾಗಿ ದುಡಿದರು. ಸರಳತೆ, ಅನುಕಂಪ, ಗುರಿಯನ್ನು ಸಾಧಿಸುವಲ್ಲಿ ನಿಸ್ಸೀಮ ತ್ಯಾಗ, ಉಜ್ವಲ ಸ್ವಾಭಿಮಾನ, ಮಡಿವಂತ ಜೀವನ ಮೊದಲಾದುವುಗಳಿಗೆ ಸಂಕೇತವಾಗಿದ್ದ ಗಳಗನಾಥರು ಶುಚಿಯಾದದ್ದನ್ನೇ ನೋಡಿದರು, ಮಾಡಿದರು, ಬರೆದರು. ಪ್ರಾಥಮಿಕ ಶಾಲೆಯ ಕಿರುಬಯಲಿನಲ್ಲಿಯೇ ತಮ್ಮ ಶಕ್ತಿಯನ್ನು ಸಂಪೂರ್ಣ ವ್ಯಯಗೊಳಿಸದೆ ಅಲ್ಲಿಗೆ ಸಲ್ಲುವಷ್ಟನ್ನು ಸಲ್ಲಿಸಿ ಹೊರಜಗತ್ತಿಗೂ ಜಾಗೃತಚೇತನ ಶಕ್ತಿಯನ್ನು ಒದಗಿಸಿದರು.

ಬಂಗಾಲಿ ಸಾಹಿತ್ಯಕ್ಕೆ ಬಂಕಿಮ್‌ಚಂದ್ರ, ಮರಾಠಿ ಸಾಹಿತ್ಯಕ್ಕೆ ಹರಿ ನಾರಾಯಣ ಆಪ್ಟೆ ಯಾವ ಬಗೆಯ ಸೇವೆಯನ್ನು ಸಲ್ಲಿಸಿದರೋ ಅದೇ ಬಗೆಯ ಸೇವೆಯನ್ನು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದವರಲ್ಲಿ ಗಳಗನಾಥರು ಪ್ರಮುಖರು. ಇವರು ವಿಶೇಷವಾಗಿ ಹರಿ ನಾರಾಯಣ ಆಪ್ಟೆಯವರ ಗ್ರಂಥಗಳನ್ನು ಅನುವಾದಿಸಿಕೊಟ್ಟು ಕನ್ನಡಿಗರಿಗೆ ಕಾದಂಬರಿ ಸಾಹಿತ್ಯದ ಪರಿಚಯ ಮಾಡಿಸಿದರು. ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ಯುಗಪ್ರವರ್ತಕ ಲೇಖಕರಾದ ಆಪ್ಟೆಯವರ ಕಥಾನಕಪ್ರಾಧಾನ್ಯ, ವ್ಯಕ್ತಿದರ್ಶನ, ಮೂರ್ತಿಮಂತ ಪ್ರಸಂಗವರ್ಣನೆ, ವೈಚಿತ್ರ್ಯ ಮತ್ತು ಅದ್ಭುತಗಳ ನಿರೂಪಣೆಯಲ್ಲಿ ಪಳಗಿದ ಚಿತ್ತಾಕರ್ಷಕ ಶೈಲಿಯನ್ನೇ ಗಳಗನಾಥರೂ ಅನುಸರಿಸಿದರು. ಅನುಸರಣೆ ಇದ್ದರೂ ಅದು ಸಂಪೂರ್ಣ ಅನುಕರಣೆಯಲ್ಲ. ಒಂದು ಉದಾತ್ತವಾದ ಭಾವನೆಯಿಂದ ದಿವ್ಯವಾದ ಆದರ್ಶದಿಂದ, ಅದ್ಭುತವಾದ ದೃಷ್ಟಿಯಿಂದ ಜನರಲ್ಲಿ ಪ್ರೇಮ, ದಯೆ, ತ್ಯಾಗ, ಸ್ವಾತಂತ್ರ್ಯಸ್ವಾಭಿಮಾನಗಳು ಒಡಮೂಡಬೇಕು, ನೆಲೆನಿಲ್ಲಬೇಕು, ಬೆಳೆಗಬೇಕು ಎಂಬ ಹೆಗ್ಗುರಿಯಿಂದ ಗಳಗನಾಥರು ಸಾಹಿತ್ಯವನ್ನು ಸೃಜಿಸಿದರು. ಪ್ರಾಯಶಃ ಇದೇ ಕಾರಣದಿಂದ ಇವರು ಸಮಕಾಲೀನ ಚಿತ್ರಣವನ್ನು ಕೊಡುವ ಸಾಮಾಜಿಕ ಕಾದಂಬರಿ ರಚನೆಗೆ ತೊಡಗಲಿಲ್ಲವೆಂದು ತೋರುತ್ತದೆ.

ಗಳಗನಾಥರು ರಚಿಸಿದ ಸಾಹಿತ್ಯ ವಿಪುಲವಾದುದು, ವೈವಿಧ್ಯ ಮಯವಾದುದು. ಇದನ್ನು ಕಾದಂಬರಿ, ಪೌರಾಣಿಕ ಕಥೆ, ಚರಿತ್ರೆ ಹಾಗೂ ನಿಬಂಧಗಳೆಂದು ವಿಂಗಡಿಸಬಹುದು. ಇವರ 24 ಕಾದಂಬರಿಗಳು, 9 ಪೌರಾಣಿಕ ಕಥೆಗಳು, 3 ಸತ್ಪುರುಷ ಚರಿತ್ರೆಗಳು, 8 ನಿಬಂಧಗಳು (ಪ್ರಬಂಧಗಳು) ಪ್ರಕಟಗೊಂಡಿವೆ. ಮಹಾಭಾರತದ 18 ಪರ್ವಗಳಲ್ಲಿ ಮೊದಲಿನ ಎರಡು ಪರ್ವಗಳು ಅಚ್ಚಾಗಿವೆ. ಮಿಕ್ಕಿನ ಪರ್ವಗಳು ಅಚ್ಚಾಗಿಲ್ಲ. ಕಲಿಕುಠಾರದ 2ನೆಯ ಭಾಗ ಮತ್ತು ಬಿಚ್ಚುಗತ್ತಿಯ 2ನೆಯ ಭಾಗ ಅಚ್ಚಾಗಿಲ್ಲ. ಕಾದಂಬರಿಗಳಲ್ಲಿ ಆರು ಸ್ವತಂತ್ರ, ಮಿಕ್ಕವು ಅನುವಾದಿತ. ಅನುವಾದಿತ ಕಾದಂಬರಿಗಳನ್ನು ಅನುವಾದಗಳೆಂದು ಹೇಳುವುದಕ್ಕಿಂತ ರೂಪಾಂತರಗಳೆಂದು ಕರೆಯುವುದೇ ಹೆಚ್ಚು ಸಮಂಜಸ. ಏಕೆಂದರೆ ಕಮಲಕುಮಾರಿ ಕೃತಿಯೊಂದೇ ಶಬ್ದಶಃ ಅನುವಾದ.

ಕಾಲಾನುಕ್ರಮವಾಗಿ ಹೊರಬಂದ ಗಳಗನಾಥರ ಕೃತಿಗಳ ಪಟ್ಟಿ ಹೀಗಿದೆ:

**ಕಾದಂಬರಿಗಳು :** 1.ಪದ್ಮನಯನೆ ಅಥವಾ ಪ್ರಬುದ್ಧ ಪದ್ಮನಯನೆ ಸ್ವತಂತ್ರ ರಮ್ಯಾದ್ಭುತ ಕಾದಂಬರಿ. 2.ಕಮಲಕುಮಾರಿ ಮರಾಠಿ ಇತಿಹಾಸಕ್ಕೆ ಸಂಬಂಧಪಟ್ಟ ಆಪ್ಟೆಯವರ ಕೃತಿ. ಗಡ ಆಲಾ ಪಣ ಸಿಂಹ ಗೇಲಾ (ಕೋಟೆ ಕೈವಶವಾಯಿತು ಆದರೆ ಸಿಂಹ ಹೋಯಿತು) ಇದಕ್ಕೆ ಮೂಲ. 3.ಮೃಣಾಲಿನಿ ಅಥವಾ ರಾಣಿ ಮೃಣಾಲಿನಿ. ಇದು ಬಂಕಿಮ ಚಂದ್ರರ ಮೃಣಾಲಿನಿ ಕೃತಿಯ ಮರಾಠಿ ಅನುವಾದದ ಅನುವಾದ. 4.ವೈಭವ: ಇದು ಮೌರ್ಯರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಚಾಣಕ್ಯನ ಕಾರಸ್ಥಾನ ಇದರ ಇನ್ನೊಂದು ಹೆಸರು. ಈ ಕಥೆ ಮುದ್ರಾರಾಕ್ಷಸ (ಸಂಸ್ಕೃತ) ಹಾಗೂ ಕೆಂಪುನಾರಾಯಣನ ಮುದ್ರಾಮಂಜೂಷಗಳಿಂದ ಭಿನ್ನವಾಗಿದೆ. 5.ಕುಮುದಿನಿ

ಅಥವಾ ಬಾಲಕ್ಕೆ ಬಡಿದಾಟ: ಇದು ಗಳಗನಾಥರ ಎರಡನೆಯ ಸ್ವತಂತ್ರ ಕಾದಂಬರಿ ಹಾಗೂ ಕರ್ನಾಟಕ ಇತಿಹಾಸಕ್ಕೆ ಸಂಬಂಧಪಟ್ಟ ಮೊದಲ ಕಾದಂಬರಿ (1913). ಚಂದ್ರಗಿರಿಯಲ್ಲಿ ಬಾಳಿದ ವಿಜಯನಗರದ ರಾಜಮನೆತನದ ಚಿತ್ರವೇ ಇದರ ವಸ್ತು. 6. ಈಶ್ವರೀಸೂತ್ರ: ಉಷಃಕಾಲ ಎಂಬ ಮರಾಠಿ ಗ್ರಂಥ'ದ ಅನುವಾದ. ಮರಾಠರ ಇತಿಹಾಸಕ್ಕೆ ಸಂಬಂಧಪಟ್ಟಿದೆ. 7. ಕ್ಷಾತ್ರತೇಜ: ಇದು ಮರಾಠಿ ಕೃತಿ ರೂಪನಗರೇಚಿ ರಾಜಕನ್ಯಾ ಎಂಬುದರ ಅನುವಾದ, ರಜಪೂತರ ಇತಿಹಾಸಕ್ಕೆ ಸಂಬಂಧಪಟ್ಟಿದೆ; ರಜಪೂತರ ಕ್ಷಾತ್ರ ತೇಜಸ್ಸನ್ನೇ ಎತ್ತಿ ತೋರುತ್ತದೆ 8. ಧರ್ಮರಹಸ್ಯ ಅಥವಾ ಸತ್ಸಮಾಗಮಪ್ರಭಾವ: ಇದಕ್ಕೆ ಮೂಲ ಮರಾಠಿಯ ಸಮ್ರಾಟ ಅಶೋಕ, ಅಶೋಕ ಅಥವಾ ಆರ್ಯಾವೃತ್ತಾಂತಲಾ ಪಹಿಲಾ ಎಂಬ ಎರಡು ಕೃತಿಗಳು. ಚಕ್ರವರ್ತಿ ರಾಜಾ ಚಂಡಾಶೋಕ ಧರ್ಮಾಶೋಕನಾದುದೇ ಇದರ ವಸ್ತು. 9. ಸತ್ವಸಾರ ಅಥವಾ ಶೌರ್ಯಸಂಜೀವಿನಿ: ರಜಪೂತರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಇದು ಗಳಗನಾಥರ 3ನೆಯ ಸ್ವತಂತ್ರ ಕಾದಂಬರಿ. ಮೇವಾಡದ ಪ್ರತಾಪಸಿಂಹನ ಕಥೆಯೇ ಇದರ ವಸ್ತು. 10. ತಿಲೋತ್ತಮೆ ಅಥವಾ ಸರಸಪ್ರೇಮ: ಅಕ್ಬರನ ಕಾಲದಲ್ಲಿದ್ದ ರಾಣಾ ಮಾನಸಿಂಗನ ಮಗ ಜಗತ್ಸಿಂಗನ ಪ್ರೇಮಕಥೆ. ರಜಪೂತರ ಇತಿಹಾಸಕ್ಕೆ ಸಂಬಂಧಪಟ್ಟಿದೆ. 11. ಕನ್ನಡಿಗರ ಕರ್ಮಕಥೆ: ವಿಜಯನಗರದ ಪತನವನ್ನು ಸೂಚಿಸುವ ಕಾದಂಬರಿ. ಇದಕ್ಕೆ ಮೂಲ ವಜ್ರಾಘಾತ ಎಂಬ ಮರಾಠಿ ಕೃತಿ. 12. ಶಿವಪ್ರಭುವಿನ ಪುಣ್ಯ: ಮರಾಠಿ ಐತಿಹಾಸಿಕ ಕಾದಂಬರಿಯ ಅನುವಾದ. ಶಿವಾಜಿಯ ಅನಂತರದಲ್ಲಿ ಆತನ ಮನೆಯಲ್ಲಿ ನಡೆದ ಘಟನೆಗಳೇ ಇದರ ವಸ್ತು. 13. ಕುರುಕ್ಷೇತ್ರ: ಇದು ಪಾಣೀಪತಚಾ ಮೋಹಿಮ್ ಎಂಬುದರ ಅನುವಾದ. ಪೇಶ್ವೆಗಳ ಇತಿಹಾಸಕ್ಕೆ ಸಂಬಂಧಪಟ್ಟಿದೆ. 14. ಮರಾಠರ ಅಭ್ಯುದಯ: ಇದು ಶಿವಾಜಿ ಅಫಜಲಖಾನನನ್ನು ಕೊಂದ ಕಥೆಯನ್ನು ವಿವರಿಸುತ್ತದೆ. ಮರಾಠಿಯಿಂದ ಅನುವಾದಿತ. 15. ಛತ್ರಪತಿ: ಛತ್ರಪತಿ ಶಿವಾಜಿಯ ಕಥೆಗೆ ಸಂಬಂಧಿಸಿದೆ. 16. ಮಾಧವ ಕರುಣಾವಿಲಾಸ: ಗಳಗನಾಥ'ರ ನಾಲ್ಕನೆಯ ಸ್ವತಂತ್ರ ಕಾದಂಬರಿ. ಇದು ತಮ್ಮ ಹಿರಿಯ ಕೃತಿಯೆಂದು ಅವರೇ ಹೇಳಿಕೊಂಡಿದ್ದಾರೆ. ಕನ್ನಡ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಿದ ಮಹಾಕೃತಿಯಿದು. ವಿಜಯನಗರ ರಾಜ್ಯಸ್ಥಾಪನೆಯ ವಿಷಯ ಇದರ ವಸ್ತು. 17. ಗೃಹಕಲಹ: ಮರಾಠಿ ಕೃತಿಯ ಅನುವಾದ. ಮರಾಠರ ಇತಿಹಾಸಕ್ಕೆ ಸಂಬಂಧಪಟ್ಟಿದೆ. 18. ರಾಣಾ ರಾಜಸಿಂಹ: ರಜಪೂತ ಇತಿಹಾಸಕ್ಕೆ ಸಂಬಂಧಿಸಿದ ಮರಾಠಿ ಕೃತಿಯ ಅನುವಾದ. 19. ಧಾರ್ಮಿಕ ತೇಜ ಅಥವಾ ಪರಹಿತದಕ್ಷತಾ: ಇದೂ ರಜಪೂತರ ಇತಿಹಾಸಕ್ಕೆ ಸಂಬಂಧಿಸಿದೆ. ಬುಂದೇಲ ಖಂಡದ ರಾಜಾ ಛತ್ರಸಾಲನ ಕಥೆ. ಮರಾಠಿಯಿಂದ ಅನುವಾದಿತ. 20. ಸಂಸಾರಸುಖ: ಮರಾಠಿಯಿಂದ ಅನುವಾದಿತ, ಮುಗಲರ ಇತಿಹಾಸಕ್ಕೆ ಸಂಬಂಧಪಟ್ಟಿದೆ. 21. ಸ್ವರಾಜ್ಯ ಸುಗಂಧ: ಅನುವಾದಿತ ಕೃತಿ. ಮರಾಠರ ಇತಿಹಾಸಕ್ಕೆ ಸಂಬಂಧಿಸಿದೆ. 22. ಸತ್ಯಾದರ್ಶ 23. ದುರ್ಗದ ಬಿಚ್ಚುಗತ್ತಿ: ಚಿತ್ರದುರ್ಗದ ನಾಯಕರ ಇತಿಹಾಸಕ್ಕೆ ಸಂಬಂಧಪಟ್ಟಿದೆ (ಇದು ಗಳಗನಾಥರ ಐದನೆಯ ಸ್ವತಂತ್ರ ಕಾದಂಬರಿ. ಒಂದನೆಯ ಭಾಗ ಮಾತ್ರ ಅಚ್ಚಾಗಿದೆ.) 24.ಭಗವತೀ ಕಾತ್ಯಾಯಿನಿ: ಪೌರಾಣಿಕ ಕಾದಂಬರಿ, ಗಳಗನಾಥರ ಆರನೆಯ ಸ್ವತಂತ್ರ ಕಾದಂಬರಿ.

**ಪೌರಾಣಿಕ ಕಥೆಗಳು :** 1.ಗಿರಿಜಾಕಲ್ಯಾಣ. 2.ಉತ್ತರರಾಮಚರಿತ್ರ. 3.ನಳ ಚರಿತ್ರ. 4.ಚಿದಂಬರಚರಿತ್ರ. 5.ಭಾಗವತಾಮೃತ 6.ಶೈವ ಸುಧಾರ್ಣವ. 7.ತುಲಸೀರಾಮಾಯಣ. 8.ಮಹಾಭಾರತ (ಆದಿಪರ್ವ ಮತ್ತು ಸಭಾಪರ್ವ ಮಾತ್ರ ಅಚ್ಚಾಗಿವೆ).

**ಸತ್ಪುರುಷರ ಚರಿತ್ರೆಗಳು :** 1.ನಿರ್ಯಾಣ ಮಹೋತ್ಸವ. 2.ಸದ್ಗುರು ಪ್ರಭಾವ 3. ಕಲಿಕುತಾರ (1ನೆಯ ಭಾಗ ಮಾತ್ರ ಅಚ್ಚಾಗಿದೆ).

**ನಿಬಂಧಗಳು :** 1.ದಾಂಪತ್ಯ, 2.ಕುಟುಂಬ, 3.ಸುಂದರಲೇಖ ಸಮುಚ್ಚಯ, 4.ನಿಬಂಧಶಿಕ್ಷಣ, 5.ಕನ್ಯಾಶಿಕ್ಷಣ, 6.ರಾಜನಿಷ್ಠೆ, 7.ಶ್ರೇಷ್ಠ ಸದುಪದೇಶ, 8.ಬ್ರಾಹ್ಮಣಪ್ರಾಪ್ತಿ ಸಾಧನೆ.

ಕಲ್ಪಕತೆ, ಭಾವೋದ್ರೇಕ, ಐತಿಹಾಸಿಕ ವ್ಯಕ್ತಿಗಳ ಮೂಲಕ ವೀರ ಸಾಹಸ ರಸಿಕತೆ, ಸಾಧುಸಂತರ ಪಾತ್ರಗಳ ಮೂಲಕ ಸದುಪದೇಶ - ಇವನ್ನು ಕನ್ನಡ ಜನತೆಗೆ ಗಳಗನಾಥರು ತಮ್ಮ ಹಲವಾರು ಕೃತಿಗಳ ಮೂಲಕ ಒದಗಿಸಿದ್ದಾರೆ. ಇವರ ಕೃತಿಗಳಲ್ಲಿ ಮಾನವೀಯ ಹೋರಾಟ ರಾಷ್ಟ್ರೀಯತೆಯಲ್ಲಿ ಪರ್ಯವಸಾನವಾಗಿ ಈಶ್ವರೀಭಾವದತ್ತ ನಡೆಯುತ್ತದೆ. ಕೃತಿಗಳಲ್ಲಿ ಸಮಕಾಲೀನ ರಾಜಕೀಯ ಆಂದೋಲನಗಳ ಪ್ರಭಾವ ಇಲ್ಲದಿದ್ದರೂ ಸನಾತನ ಧರ್ಮದ ಪುನರುಜ್ಜೀವನದ ಹೆಬ್ಬಯಕೆ ಇತ್ತೆಂಬುದು ಸ್ಪಷ್ಟವಿದೆ. ಈ ಅಂಶ ಗಳಗನಾಥರ ಜೀವನಕಾಲದ ಭಾರತೀಯ ಸಾಹಿತ್ಯದ ಲಕ್ಷಣವೇ ಆಗಿತ್ತು. ಆದ್ದರಿಂದ ಅವು ಆಗಿನ ಕಾಲಕ್ಕೆ ತಕ್ಕಂತೆ ಜನರ ಮನೋಧರ್ಮವನ್ನು ಸಂಸ್ಕಾರಗೊಳಿಸಿದ, ಜಾಗೃತಿಯನ್ನುಂಟುಮಾಡಿದ ಕೃತಿಗಳಾದವು.

ಗಳಗನಾಥರು ಸಂಸ್ಕೃತ ಭಾಷೆ ಹಾಗೂ ಸಾಹಿತ್ಯಗಳಲ್ಲಿ ವಿಶೇಷ ಅಭಿಮಾನವುಳ್ಳವರಾಗಿದ್ದರೂ ಸಂಸ್ಕೃತ ಶಬ್ದಗಳ ಜಡಪ್ರಯೋಗಗಳಿಗೆ ಮರುಳಾಗದೆ, ಔಚಿತ್ಯವರಿತು ಉಪಯೋಗಿಸಿ ಅದಕ್ಕೆ ತಿರುಳ್ಗನ್ನಡ ಶಬ್ದಗಳನ್ನೂ ಕೆಲವು ಸಲ ಮನೆಮಾತುಗಳ ಪಡೆನುಡಿಗಳನ್ನೂ ಗಾದೆಮಾತುಗಳನ್ನೂ ಬೆರಸಿ ಹಾಳತವಾದ ಶೈಲಿಯೊಂದನ್ನು ಸೃಷ್ಟಿಸಿದರು. ಅಷ್ಟೇ ಅಲ್ಲ, ಉತ್ತರ, ಮಧ್ಯ, ದಕ್ಷಿಣ ಕನ್ನಡಗಳಿಗೆ ಸಮಾನ ಬೆಲೆ ಕೊಟ್ಟು ಎಲ್ಲರಿಗೂ ಅರ್ಥವಾಗಬಲ್ಲ ಕನ್ನಡ ಒಂದೇ ಎಂಬುದನ್ನು ತಮ್ಮ ಕೃತಿಗಳ ಮೂಲಕ ವ್ಯಕ್ತಪಡಿಸಿದರು. ಮೈಸೂರಿನ ಮಹಾರಾಜ ಕಾಲೇಜಿನ ಕರ್ಣಾಟಕ ಸಂಘ ಇವರಿಗೆ ಅರ್ಪಿಸಿದ ಮಾನಪತ್ರವೇ ಇದಕ್ಕೆ ಸಾಕ್ಷಿ. (ಕೆ.ಎಸ್.ಡಿ.)

**ಗಾಂವಕರ, ಎಸ್.ಡಿ. :** 1925-96. ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಶಿಕ್ಷಣ ತಜ್ಞ, ರಾಜಕಾರಣಿ. ಸಖಾರಾಮ ದತ್ತಾತ್ರೇಯ ಗಾಂವಕರ ಇವರ ಪೂರ್ತಿ ಹೆಸರು. ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಹನಕೋನದಲ್ಲಿ 1925 ಸೆಪ್ಟಂಬರ್ 2ರಂದು ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಕಾರವಾರದಲ್ಲಿ ಪಡೆದರು. ಅನಂತರ ಧಾರವಾಡದ ಕರ್ನಾಟಕ ಕಾಲೇಜು, ಬೆಳಗಾಂವಿಯ ಆರ್.ಎಲ್.ಕಾನೂನು ಕಾಲೇಜಿನಲ್ಲಿ ಶಿಕ್ಷಣಪಡೆದರು. ಕಾರವಾರದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ (1952) ಅಪಾರ ಯಶಸ್ಸು ಗಳಿಸಿ ಜನಪ್ರಿಯರಾದರು.

ಕಾರವಾರ ನಗರಸಭೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 26ನೆಯ ವಯಸ್ಸಿನಲ್ಲೇ ಇವರು ತಾವೊಬ್ಬ ದಕ್ಷ ಆಡಳಿತಗಾರರೆಂಬುದನ್ನು ತೋರಿಸಿದರು. ರಾಜಕೀಯ, ಸಾರ್ವಜನಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೆಲಸಗಳಲ್ಲಿ ಉತ್ಸಾಹದಿಂದ ದುಡಿಯುವುದು ಇವರ ಜಾಯ



ಮಾನವಾಗಿತ್ತು. ಕೆಲಕಾಲ ಇವರು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಮಿತಿಯ ಕಮಿಶನರ್ ಆಗಿ ದುಡಿದರು (1960-72). ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ, ಬೋಟ ಬಿಲ್ಡಿಂಗ್ ಯಾರ್ಡ್ ಸಮಿತಿಯ ಸದಸ್ಯ, ಜಿಲ್ಲಾ ಸಹಕಾರಿ ಬ್ಯಾಂಕಿನ ನಿರ್ದೇಶಕ, ಕೊಂಕಣ ಮರಾಠಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಕೆನರಾ ಬ್ಯಾಂಕ್ ನಿರ್ದೇಶಕ, ಜನತಾ ಕೋ ಆಪರೇಟೀವ್ ಸ್ಟೋರ್ಸ್ ಸಂಸ್ಥಾಪಕ, ಬಾಡದ ಶಿವಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ - ಹೀಗೆ ಬಹುಮುಖವಾಗಿ ಸೇವೆ ಸಲ್ಲಿಸಿದರು. ಮಹಾರಾಷ್ಟ್ರದ ಕೊಲಾಬಾದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಇವರನ್ನು ನೇಮಿಸಲಾಯಿತು (1961). ಕೆಲವು ತಿಂಗಳುಗಳಲ್ಲಿಯೆ ರಾಜಕೀಯ, ರಂಗಪ್ರವೇಶಿಸಿ ರಾಜೀನಾಮೆ ನೀಡಿದರು.

ಇವರು ಕಾಂಗ್ರೆಸ್ ಪಕ್ಷದಿಂದ ಕರ್ನಾಟಕ ವಿಧಾನಸಭೆಗೆ ಪ್ರಥಮ ಬಾರಿಗೆ ಆಯ್ಕೆಯಾದರು (1957). ವಿಧಾನಸಭೆಯಲ್ಲಿ ಕಾರವಾರ ಕ್ಷೇತ್ರವನ್ನು

ಪ್ರತಿನಿಧಿಸಿದ್ದರು (1962-74). ವಿಧಾನ ಪರಿಷತ್ತಿನ ಉಪಸಭಾಪತಿಗಳಾಗಿದ್ದ (1966-68) ಇವರು, ಅನಂತರ ವಿಧಾನ ಪರಿಷತ್ತಿನ ಸಭಾಪತಿಗಳಾಗಿಯೂ ಸೇವೆ ಸಲ್ಲಿಸಿದರು (1972-74). ಸಭಾಪತಿ ಹುದ್ದೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ಮೂರನೆಯ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಂಡು (1996) ನಿಧನಹೊಂದುವವರೆಗೂ ಕಾರ್ಯನಿರ್ವಹಿಸಿದರು.

ಆಫ್ರಿಕದ ಮಲಾವಿಯಲ್ಲಿ ನಡೆದ ಜಾಗತಿಕ ಸಂಸದೀಯ ಸಮ್ಮೇಳನದಲ್ಲಿ ನಿಯೋಗದ ಸದಸ್ಯರಾಗಿ ಭಾಗವಹಿಸಿದರು (1972). ರೋಟರಿ ಸಂಸ್ಥೆಯ ಸದಸ್ಯರಾಗಿ ಯುರೋಪ್, ಅಮೆರಿಕ ಮೊದಲಾದ ರಾಷ್ಟ್ರಗಳಲ್ಲಿ ಪ್ರವಾಸ ಕೈಗೊಂಡರು. ಇವರು ಶ್ರೇಷ್ಠ ಸಂಸದೀಯ ಪಟುವೆಂದು ಹೆಸರು ಗಳಿಸಿದ್ದರು. ತಮ್ಮ ಸ್ವಂತ ಪ್ರತಿಭೆಯಿಂದ ಉನ್ನತ ಸ್ಥಾನ ಗಳಿಸಿದ ಇವರು 1996 ಮೇ 21ರಂದು ನಿಧನಹೊಂದಿದರು. ಕುಸುಮಾ ಇವರ ಧರ್ಮಪತ್ನಿ. ಇವರಿಗೆ ಎರಡು ಗಂಡು ಎರಡು ಹೆಣ್ಣು ಮಕ್ಕಳು. (ಆರ್.ಜಿ.ಆರ್.)

**ಗಾಂವಕಾರ, ಸ.ಪ. :** 1887-1972. ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಣತಜ್ಞ, ದಕ್ಷ ಆಡಳಿತಗಾರ, ಸಮಾಜ ಸುಧಾರಕ ಮತ್ತು ಕವಿ. ಸಣ್ಣಪ್ಪ ಪರಮೇಶ್ವರಪ್ಪ ಗಾಂವಕಾರ ಇವರ ಪೂರ್ಣ ಹೆಸರು. ಉತ್ತರ

ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ ತೊರ್ಕೆ ಗ್ರಾಮದಲ್ಲಿ 1887 ಜನವರಿ 11ರಂದು ಜನಿಸಿದರು. ಏಳು ಗಂಡು ಮಕ್ಕಳ ಪೈಕಿ ಇವರು ನಾಲ್ಕನೆಯವರು. ಪ್ರಾಥಮಿಕ ಶಿಕ್ಷಣದ ಅನಂತರ ಉಪಾಧ್ಯಾಯ ವೃತ್ತಿಗೆ ತರಬೇತು ಪಡೆದರು. ಅನಂತರ ತದಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾದರು. ಈ ವೃತ್ತಿಯಲ್ಲಿ ನಿರತರಾಗಿದ್ದಾಗಲೆ ಇವರು ಖಾಸಗಿಯಾಗಿ ವ್ಯಾಸಂಗ ಮಾಡಿ ಧಾರವಾಡದಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದರು. ಧಾರವಾಡ ಸಾಂಗ್ಲಿ ಗಳಲ್ಲಿ ಶಿಕ್ಷಣ ಮುಂದುವರಿಸಿ ನಲ್ವತ್ತನೆಯ ವರ್ಷಕ್ಕೆ ಬಿ.ಎ.ಪದವೀಧರರಾದರು. ಅನಂತರ ಇವರಿಗೆ ಹುಬ್ಬಳ್ಳಿಯ ಸ್ಕೂಲ್ ಬೋರ್ಡಿನ ಆಡಳಿತಾಧಿಕಾರಿಯ ಹುದ್ದೆ ದೊರಕಿತು. 12 ವರ್ಷ ಈ ಹುದ್ದೆ ನಿರ್ವಹಿಸಿ ನಿವೃತ್ತರಾದರು. ಅನಂತರ ಗಾಂಧಿಯವರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಸ್ವಾತಂತ್ರ್ಯಾನಂತರ ಮುಂಬಯಿ ಪ್ರಾಂತ್ಯದಲ್ಲಿ ಖೇರ್ ಮುಖ್ಯಮಂತ್ರಿತ್ವದಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಸರ್ಕಾರದಲ್ಲಿ ಇವರು ಉಪಮಂತ್ರಿಗಳಾಗಿ ದುಡಿದರು. ಇವರ ಮನಸ್ಸು ಅಸ್ಪೃಶ್ಯತಾ ನಿವಾರಣೆ ಮತ್ತು ದೀನದಲಿತೋದ್ಧಾರ, ಮಹಿಳಾ ಶಿಕ್ಷಣಗಳ ಕಡೆಗೆ ಹರಿಯಿತು. ಉತ್ತರಕನ್ನಡ ಜಿಲ್ಲೆಯ ಹಿಂದುಳಿದ ಜನಾಂಗವಾದ ಹಾಲಕ್ಕಿಒಕ್ಕಲಿಗರ ಏಳ್ಗೆಗಾಗಿ ಶ್ರಮಿಸಿದರು. ವಾಚನಾಲಯ, ವಿದ್ಯಾರ್ಥಿ ವಸತಿ ಸೌಕರ್ಯ, ರೈತರ ಸಂಘಟನೆ, ಪ್ರೌಢಶಾಲೆ ಸ್ಥಾಪನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದರು. ಅಂಕೋಲದಲ್ಲಿ ಕಾಲೇಜು ಸ್ಥಾಪನೆಯಾಗಲು ಇವರೂ ಕಾರಣರು. ಗಾಂಧೀ ತತ್ತ್ವ ಮತ್ತು ಜೀವನವಿಧಾನಗಳ ಶಿಕ್ಷಣ ಪ್ರಚಾರಗಳಿಗಾಗಿ ಇವರು ಗಾಂಧಿನಿವಾಸವನ್ನು ಸ್ಥಾಪಿಸಿದರು. ಇವರಿಗೆ ಅರವಿಂದರ ತತ್ತ್ವದಲ್ಲೂ ವಿಶೇಷವಾದ ಆಸಕ್ತಿ ಇತ್ತು. ಮತಾಂತರ ಹೊಂದಿದ ಹಿಂದುಗಳನ್ನು ಪುನಃ ಹಿಂದುಮತಕ್ಕೆ ಸೇರಿಸಿಕೊಳ್ಳಬೇಕೆಂಬ ಆರ್ಯಸಮಾಜದ ವಿಚಾರದಲ್ಲಿ ಇವರಿಗೆ ಶ್ರದ್ಧೆ ಇತ್ತು. ಇವರು ಸ್ವಲ್ಪಕಾಲ ಆರ್ಯಸಮಾಜದ ಕಾರ್ಯಕರ್ತರಾಗಿದ್ದರು.

ಇವರು ಕವಿಗಳೂ ಹೌದು. ಮುಗಿಲು ಎಂಬುದು ಇವರ ಮೊದಲ ಕವನಸಂಕಲನ. ರವೀಂದ್ರನಾಥ ಠಾಕೂರರ ಗೀತಾಂಜಲಿಯನ್ನು ಸರಳ ಶೈಲಿಯಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಪ್ರಕೃತಿ-ಪ್ರೀತಿ, ಪ್ರೇರಣೆ-ಶೋಧನೆ ಇವು ಇವರ ಇನ್ನೆರಡು ಕವನಸಂಕಲನಗಳು. *

**ಗಾಣಗಾಪುರ** (ದೇವರ ಗಾಣಗಾಪುರ) : ಗುಲ್ಬರ್ಗ ಜಿಲ್ಲೆ ಅಫಜಲಪುರ ತಾಲ್ಲೂಕಿನ ಒಂದು ಊರು - ರಾಯಚೂರು. ಪುಣೆ ರೈಲುಮಾರ್ಗದಲ್ಲಿರುವ ಗಾಣಗಾಪುರ ರೈಲ್ವೆ ನಿಲ್ದಾಣದಿಂದ 16ಕಿಮೀ ದಕ್ಷಿಣಕ್ಕೆ ಭೀಮಾ ಮತ್ತು ಅಮರಜ ನದಿಗಳ ಸಂಗಮದ ಹತ್ತಿರ ಇದೆ.

ಶ್ರೀಗುರುಚರಿತ್ರೆ ಎಂಬ ಗ್ರಂಥದಲ್ಲಿ ಇದನ್ನು ಗಾಣಗಾಭವನ, ಗಂಧರ್ವಭವನ, ಗಂಧರ್ವಪುರ ಎಂಬುದಾಗಿ ಕರೆಯಲಾಗಿದೆ. ದತ್ತ ಸಂಪ್ರದಾಯದ ಪ್ರಸಿದ್ಧ ಸಂತರಾದ ನರಸಿಂಹ ಸರಸ್ವತಿಯವರು ವಾಡಿ ಎಂಬ ಊರಿನಿಂದ ಇಲ್ಲಿಗೆ ಬಂದು 23ವರ್ಷ ನೆಲೆಸಿದ್ದು ತಮ್ಮ ಸಂಪ್ರದಾಯವನ್ನು ಬೆಳೆಸಿದರು.

ಇಲ್ಲಿ ನರಸಿಂಹ ಸರಸ್ವತಿಯವರ ಮಠ ಇದೆ. ಮಠದ ಆವರಣದಲ್ಲಿ ಮಹಾದೇವ ಪಾರ್ವತಿಯರ ಮೂರ್ತಿಯೂ ಅಶ್ವತ್ಥವೃಕ್ಷದ ಪೊದರಿನಲ್ಲಿ ನಾಗನಾಥ, ಹನುಮಂತ ಮೂರ್ತಿಗಳೂ ತುಲಸಿ ಬೃಂದಾವನವೂ ಇವೆ. ಮಠಕ್ಕೆ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಮಹಾದ್ವಾರಗಳಿವೆ. ಮಠದಲ್ಲಿರುವ ಗುರುಪಾದುಕೆ ಮುಖ್ಯ ಆಕರ್ಷಣೆ. ಗರ್ಭಗುಡಿಯ ಮಧ್ಯದಲ್ಲಿ ಇಟ್ಟಿರುವ ಪಾದುಕೆಗಳನ್ನು ಭಕ್ತಾದಿಗಳು ಬೆಳ್ಳಿಯ ಕಿಟಕಿ ಮೂಲಕ ನೋಡುವರು. ಈ ಪಾದುಕೆಗಳನ್ನು ನಿರ್ಗುಣ ಪಾದುಕೆಗಳೆಂದೂ ವಾಡಿಯಲ್ಲಿರುವ ಪಾದುಕೆಗಳನ್ನು ಮನೋಹರ ಪಾದುಕೆಗಳೆಂದೂ ಕರೆಯುತ್ತಾರೆ.

ಇಲ್ಲಿರುವ ಸಂಗಮೇಶ್ವರ ದೇವಾಲಯದ ಎದುರು ನರಸಿಂಹ ಸರಸ್ವತಿಯವರ ತಪೋಭೂಮಿ ಇದೆ. ನದೀಸಂಗಮದಿಂದ ಊರಿಗೆ ಬರುವಾಗ ಷಟ್‌ಕುಲತೀರ್ಥ, ನರಸಿಂಹತೀರ್ಥ, ಚಕ್ರತೀರ್ಥ, ಮನ್ಮಥತೀರ್ಥ, ಭಾಗೀರಥೀತೀರ್ಥ, ಪಾಪವಿನಾಶಿನೀತೀರ್ಥ, ಕೋಟಿತೀರ್ಥ ಮತ್ತು ರುದ್ರಪಾದತೀರ್ಥಗಳು ಸಿಕ್ಕುತ್ತವೆ. ದತ್ತಜಯಂತಿ ಮತ್ತು ನರಸಿಂಹ ಸರಸ್ವತಿಯವರ ಪುಣ್ಯತಿಥಿಯಂದು ಗಾಣಗಾಪುರಕ್ಕೆ ಸಾವಿರಾರು ಮಂದಿ ಭಕ್ತರು ಬರುತ್ತಾರೆ. (ಡಿ.ಕೆ.; ಎಸ್.ಜಿ.ಕೆ.)

**ಗಾಣದ ಕನ್ನಪ್ಪ :** ಹನ್ನೆರಡನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಇವನಿಗೆ ಗಾಳದ ಕನ್ನಪ್ಪ ಎಂಬ ಹೆಸರೂ ಇದೆ. ಕಲ್ಯಾಣದಲ್ಲಿದ್ದ ಈತ ತನ್ನ ಮಡದಿ ರೇಚವ್ವೆಯೊಡನೆ ಮೀನು ಹಿಡಿದು ಮಾರಿ ಬಂದ ಹಣದಿಂದ ಜಂಗಮದಾಸೋಹ ನಡೆಸುತ್ತಿದ್ದ. ದಂಪತಿಗಳಿಬ್ಬರೂ ಬಸವೇಶ್ವರನ ಸನ್ನಿಧಿಯಲ್ಲಿ ನಡೆಯುತ್ತಿದ್ದ ಶಿವಾನುಭವ ಸದ್ಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದು ಲಿಂಗಭಕ್ತಿಯುಳ್ಳವರಾಗಿ, ಷಟ್ಸ್ಥಲಾಚರಣೆಯಲ್ಲಿ ನಿರತರಾಗಿದ್ದರು.

ಕನ್ನಪ್ಪ ಗುಪ್ತಭಕ್ತಿಯುಳ್ಳ ಶರಣ. ಒಂದು ದಿನ ಇವನಿಗೆ ಗಣಪರ್ವ ಮಾಡಬೇಕೆಂಬ ಇಚ್ಛೆಯಾಗಿ ಲಿಂಗಪೂಜೆಯಲ್ಲಿ ನಿರತನಾಗಿರುವಾಗ ನಿನಗೇನು ಬೇಕು, ಬೇಡ ಎಂಬ ಶಬ್ದಗಳು ಕಿವಿಗೆ ತಾಕಿದವು. ಕನ್ನಪ್ಪ ಸುವರ್ಣಮತ್ಸ್ಯವೊಂದು ಬೇಕೆಂದು ಉಚ್ಚರಿಸಿದ. ಅನಂತರ ಮೀನು ಹಿಡಿಯಲು ಹೋದಾಗ ಇವನ ಬಯಕೆ ಫಲಿಸಿತು. ಸುವರ್ಣಮತ್ಸ್ಯವನ್ನು ಮಾರಿಬಂದ ಹಣದಿಂದ ಪ್ರಸಾದವಿನಿಯೋಗಕ್ಕೆ ಸಿದ್ಧಗೊಳಿಸಿ ಜಂಗಮರನ್ನು ಆಹ್ವಾನಿಸಿದ. ಅವರು ಕನ್ನಪ್ಪನ ಮನೆಯಲ್ಲಿನ ಮೀನಿನ ವಾಸನೆ ತಾಳಲಾರದೆ ಬಸವಣ್ಣನವರ ಮನೆಗೆ ಹೊರಟುಬಂದರು. ಆಗ ಕನ್ನಪ್ಪ ಬಸವಣ್ಣನ ಮನೆಗೆ ಬಂದು ಜಂಗಮರನ್ನು ಆಹ್ವಾನಿಸಲು, ಜಂಗಮರು ಇವನನ್ನು ಬೈದು, ಮನೆಯೆಲ್ಲಾ ಹೊಲಸು ನಾತವೆಂದು ಛಂಗಿಸಿ ಇವನ ಲಿಂಗವನ್ನು ಕಿತ್ತೆಸೆದರು. ಅನಂತರ ಅವರು ಬಸವಣ್ಣನ ಮನೆಯಲ್ಲೇ ಆರೋಗಣೆಗೆಂದು ಕುಳಿತು ಲಿಂಗಾರ್ಚನೆಗೆ ತೊಡಗಿದಾಗ ಸೆಜ್ಜೆಗಳಲ್ಲಿ ಅವರ ಲಿಂಗವೇ ಇಲ್ಲದಂತಾಯಿತು. ಬಸವಣ್ಣ ವಿಷಯ ತಿಳಿದು ಕನ್ನಪ್ಪನಲ್ಲಿಗೆ ಬಂದು ಜಂಗಮರ ತಪ್ಪನ್ನು ಮನ್ನಿಸಬೇಕೆಂದೂ ಅವರ ಲಿಂಗಗಳನ್ನು ಕೊಡಿಸಬೇಕೆಂದೂ ಕೇಳಿದ. ಅದಕ್ಕೆ ಕನ್ನಪ್ಪ ತಾನೀಗ ತ್ರಿಪುರಾಂತಕೇಶ್ವರನ

ಕೆರೆಗೆ ಹೋಗುತ್ತಿದ್ದೇನೆಂದೂ ಜಂಗಮರೂ ಅಲ್ಲಿಗೆ ಬರಲೆಂದೂ ಹೇಳಿ ಕೆರೆಯ ಬಳಿ ಬಂದು ಶಿವನನ್ನು ಧ್ಯಾನಿಸತೊಡಗಿದ. ಇವನ ಧ್ಯಾನದಿಂದ ಕಣ್ಮರೆಯಾಗಿದ್ದ ಜಂಗಮರ ಲಿಂಗಗಳೆಲ್ಲವೂ ನೀರಿನಲ್ಲಿ ತೇಲಿಬಂದವು. ಆಗ ಜಂಗಮರು ಕನ್ನಪ್ಪನಿಗೆ ವಂದಿಸಿ, ತಮ್ಮ ಅಪರಾಧವನ್ನು ಮನ್ನಿಸಬೇಕೆಂದು ಕೇಳಿಕೊಂಡು ಆತನನ್ನೇ ತಮ್ಮ ಗುರುವೆಂದು ಸ್ವೀಕರಿಸಿದರು. ಇದು ಕನ್ನಪ್ಪ ಮೆರೆದನೆನ್ನಲಾದ ಪವಾಡ. ಕಿಕ್ಕೇರಿಯ ಆರಾಧ್ಯ ನಂಜುಂಡನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ (ಸು.1550), ಸಂಪಾದನೆಯ ಪರ್ವತೇಶ್ವರನ ಚತುರಾಚಾರ್ಯಪುರಾಣ, ಉತ್ತರ ದೇಶದ ಬಸವಲಿಂಗದೇವನ ಭೈರವೇಶ್ವರ ಕಾವ್ಯದ ಕಥಾಸಾಗರ - ಈ ಗ್ರಂಥಗಳಲ್ಲಿ ಇವನ ಕಥೆ ನಿರೂಪಿತವಾಗಿದೆ.

ಇದುವರೆಗೆ ಈತನ 10 ವಚನಗಳು ದೊರೆತಿವೆ. ಕೆಲವು ಬೆಡಗಿನ ವಚನಗಳಂತಿವೆ. ಗುಹೇಶ್ವರ ನಲ್ಲಯ್ಯ, ಗುಹೇಶ್ವರನ ಶರಣ ಅಲ್ಲಮ, ಕನ್ನಯ್ಯಪ್ರಿಯ ಅಲ್ಲಮ ಎಂಬುವು ಇವನ ವಚನಗಳ ಅಂಕಿತ. ಇವನ ವಚನಶೈಲಿಯ ಮಾದರಿಗಾಗಿ ಒಂದು ವಚನವನ್ನು ಉದಾಹರಿಸಿದೆ:

> ನಾ ಬಂದುದಕ್ಕೆ ಮಾಡಿದೆ. ನೀ ಕಳುಹಿದವರ ಕೊಂದೆ. ನೀವಿರಿಸಿದಂತಿದ್ದು ಎನಗಿನ್ನು ಬಂಧಮೋಕ್ಷವೇಕೆ ? ಕನ್ನಯ್ಯಪ್ರಿಯ ಗುಹೇಶ್ವರನ ಶರಣ ಅಲ್ಲಮನಲ್ಲಿ ಲೇಪವಾದವಂಗೆ. (ಆರ್.ಎಸ್.ಪಿ.)

**ಗಾದೆ :** ಜನಪದ ಸಾಹಿತ್ಯದ ಬಹು ಮುಖ್ಯ ಪ್ರಕಾರಗಳಲ್ಲೊಂದು. ಗಾದೆ ಎಂಬ ಪದ ಸಂಸ್ಕೃತದ ಗಾಥಾ ಎಂಬುದರ ನೇರ ತದ್ಭವವಾಗಿರಬಹುದು. ಇಲ್ಲವೆ ಪ್ರಾಕೃತದ 'ಗಾಹೆ' ಎಂಬ ಪದದ ರೂಪಾಂತರವಾಗಿರಬಹುದು. ಗಾದೆಗೆ ಸಂವಾದಿಯಾಗಿ ಸಾಮತಿ, ಸೂಕ್ತಿ, ಸೂತ್ರ, ಲೋಕೋಕ್ತಿ, ಪ್ರಾಚೀನೋಕ್ತಿ, ಸಾರೋಕ್ತಿ, ಉದ್ಧರಣೆ, ಹೇಳಿಕೆ, ವಿಧಿ, ನಿಯಮ, ಪ್ರಮಾಣ, ನಾಣ್ಣುಡಿ ಮುಂತಾದ ಪದಗಳು ಬಳಕೆಯಲ್ಲಿದ್ದರೂ ಗಾದೆ ಶಬ್ದವೇ ಹೆಚ್ಚು ಪ್ರಚಾರದಲ್ಲಿದೆ.

ಗಾದೆಯ ಲಕ್ಷಣಗಳನ್ನು ಒಂದೇ ಮಾತಿನಲ್ಲಿ ಸೂತ್ರೀಕರಿಸಿ ಹೇಳುವುದು ಕಷ್ಟಸಾಧ್ಯವಾದ ಕೆಲಸ. ಏಕೆಂದರೆ ಗಾದೆಯ ವಸ್ತುವ್ಯಾಪ್ತಿ ಅನಂತವಾದುದು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಗಾದೆ ತನ್ನೊಳಗುಮಾಡಿಕೊಳ್ಳದ ವಿಷಯಗಳಿಲ್ಲ. ಅದು ಒಂದು ರೀತಿಯಲ್ಲಿ ಜನಸಾಮಾನ್ಯರ ವಿಶ್ವಕೋಶ. ಪರಂಪರಾನುಗತವಾಗಿ ಬರುವ ಜ್ಞಾನದಿಂದ ಯಾರೋ ಒಬ್ಬ ಅನುಭವಿ ವಿವೇಕಿ ನುಡಿದ ಸಾಮಯಿಕ ಸೊಳ್ನುಡಿ ಜನತೆಯ ಅಂಗೀಕಾರ ಮುದ್ರೆಯನ್ನು ಪಡೆದು, ಪರಿಮಿತ ವಲಯದಲ್ಲಿ ಮೊದಲು ಸಲುವಳಿ ಪಡೆಯುತ್ತದೆ. ಅನಂತರ ಅದರ ಸತ್ತ್ವಕ್ಕೂ ಸ್ವಾರಸ್ಯಕ್ಕೂ ಸತ್ಯತೆಗೂ ಮಾರುಹೋಗುವಂಥ ಇತರ ಜನರೂ ಅದನ್ನು ಬಳಸತೊಡಗುತ್ತಾರೆ. ಹೀಗಾಗಿ ಅದು ಒಂದು ಸಮಾಜದ ಸಾರ್ವಜನಿಕ ಸ್ವತ್ತಾಗಿ ಚಲಾವಣೆಯಾಗುತ್ತದೆ. ಸಂಕ್ಷಿಪ್ತತೆ ಅಥವಾ ಸಂಕೀರ್ಣತೆ, ವಿವೇಚನೆ, ತೀಕ್ಷ್ಣತೆ ಅಥವಾ ಒಗಚುತನ ಹಾಗೂ ಜನಪ್ರಿಯತೆ ಗಾದೆಯ ನಾಲ್ಕು ಪ್ರಮುಖ ಲಕ್ಷಣಗಳು. ಪ್ರತಿಯೊಂದು ಗಾದೆಯೂ ಒಂದು ರೀತಿಯಲ್ಲಿ ಬಿಡಿ ಕವಿತೆ. ಅದರಲ್ಲಿ ಛಂದೋಬದ್ಧತೆ, ಪ್ರಾಸಾನುಪ್ರಾಸ ಆಲಂಕಾರಿಕ ಅಭಿವ್ಯಕ್ತಿ, ಕಾವ್ಯದ ಬಿಗುಪು, ಬಂಧುರತೆ, ಸೂಚ್ಯಭಾವ ವ್ಯಂಗ್ಯ ವೈಚಾರಿಕತೆಗಳು ಸಹಜವಾಗಿ ರೂಪುಗೊಂಡಿರುತ್ತವೆ. ಸಾಹಿತ್ಯದ ಸಮಸ್ತ ಚಟುವಟಿಕೆಗಳನ್ನೂ ಸೃಜನಾತ್ಮಕ ಶಕ್ತಿಯನ್ನೂ ಒಳಗೊಂಡಿರುವ ಗಾದೆಯ ಭಾಷೆ ಸಾಂಕೇತಿಕ. ಭಾವ ಬಹುಮಟ್ಟಿಗೆ ರೂಪಕ. ಇವುಗಳಲ್ಲದೆ ನಾಟಕೀಯತೆ ಹಾಗೂ ಸಮತೋಲ ಗುಣಗಳೂ ಗಾದೆಯಲ್ಲಿ ಗೋಚರಿಸುತ್ತವೆ. ಗಾದೆಗಳು ಮಾನವಸ್ವಭಾವಕ್ಕೆ ಒಡ್ಡಿದ ಪ್ರತೀಕಗಳಾಗಿವೆ; ಸಮಾಜದ ಪ್ರತಿಬಿಂಬಗಳಾಗಿವೆ; ಸಂಸ್ಕೃತಿಯ ಪ್ರತಿನಿಧಿಗಳಾಗಿವೆ. ಏಕೆಂದರೆ ಅವುಗಳಲ್ಲಿ ಬದುಕಿನ ಎಲ್ಲ ಕ್ಷೇತ್ರಗಳ ಅನುಭವಗಳಿಗೂ ಅಭಿವ್ಯಕ್ತಿ ದೊರೆತಿದೆ. ರೀತಿನೀತಿ, ನಂಬಿಕೆ, ನಡಾವಳಿ, ಆಚಾರವಿಚಾರಗಳೆಲ್ಲವನ್ನೂ ಅವು ಒಳಗೊಂಡಿವೆ. 'ಗಾದೆ ವೇದಕ್ಕೆ ಸಮ' ಎಂಬ ಗಾದೆಯೇ ಅವುಗಳ ಅಗ್ಗಳಿಕೆಯನ್ನು ಎತ್ತಿ ಹೇಳುತ್ತದೆ. 'ಊಟಕ್ಕೆ ಮೊದಲು ಉಪ್ಪಿನಕಾಯಿ; ಮಾತಿಗೆ ಮೊದಲು ಗಾದೆ' ಎಂಬ ಗಾದೆಯೇ ಗಾದೆಗಳ ತೀವ್ರಾವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಗಾದೆಯಿಲ್ಲದ ಭಾಷೆಯಿಲ್ಲ; ಭಾಷೆಯಿಲ್ಲದ ಜನಾಂಗವಿಲ್ಲ. ಗಾದೆಗಳ ಮಹತ್ತ್ವವನ್ನು ಅರಿತುಕೊಂಡ; ಯಾವ ವ್ಯಕ್ತಿಯೂ ಅವುಗಳ ಸೌಂದರ್ಯ, ಸಾರ್ಥಕತೆ, ಜೀವಂತಿಕೆಗಳನ್ನು ಮೆಚ್ಚದಿರಲಾರ. ಗಾದೆ ಜೀವನಕ್ಕೆ ಕೇವಲ ವ್ಯಂಜಕ ಮನರಂಜಕ ಸೂಕ್ತಿ ಮಾತ್ರವಲ್ಲ; ಅದು ಸಾರ್ಥಕ ಜೀವನಸೂತ್ರ ಹಾಗೂ ವಿವೇಕದ ದಾರಿದೀಪ. ಗಾದೆ ಬೋಧಿಸುವ ಸನ್ಮಾರ್ಗವಿಡಿದು ನಡೆದರೆ ಒಬ್ಬನ ಬಾಳು ಭವ್ಯವೂ ಬೆಲೆಯುಳ್ಳದ್ದೂ ಆಗುವುದರಲ್ಲಿ ಸಂದೇಹವಿಲ್ಲ. ಸಮಾಜದಲ್ಲಿ ಗಾದೆಗಳಿಗೆ ಎಂದಿನಿಂದಲೂ ಮಹತ್ತ್ವ ಸಲ್ಲುತ್ತ ಬಂದಿದೆ. ಗಾದೆಗಳು ವಿದ್ಯಾವಂತರಲ್ಲದ ಆದರೆ ಆಳವಾದ ಜೀವನಾನುಭವವನ್ನುಳ್ಳ ಜನಪದರಿಗೆ ತಮ್ಮ ಅಭಿಪ್ರಾಯಗಳನ್ನು ಮನಮುಟ್ಟುವಂತೆ ಹೇಳಲು ತುಂಬ ಸಹಕಾರಿಯಾಗಿವೆ.

ನಿರಂತರ ಚಲಾವಣೆಯೇ ಗಾದೆಯ ಜೀವಂತಿಕೆ ಹಾಗೂ ಶಾಶ್ವತ ಮೌಲ್ಯದ ಮುಖ್ಯ ಕುರುಹು. ಗಾದೆಗಳ ಭಂಡಾರ ನಿಂತ ನೀರಿನ ಮಡುವಿನಂತಲ್ಲ; ಅಪಾರ ಸಾಗರದಂತೆ. ಅದರಲ್ಲಿ ಹಳೆಯ ಹೊಸ ಗಾದೆಗಳ ಸಮ್ಮಿಳನ, ಹುಟ್ಟು, ಸಾವು ನಿತ್ಯವಾಗಿರುತ್ತದೆ. ತಿಳಿಹಾಸ್ಯ, ಕಟುವ್ಯಂಗ್ಯ, ವಿಡಂಬನೆ, ಅನ್ಯೋಕ್ತಿ ಹಾಗೂ ಪಕ್ಷಿಪ್ರಾಣಿ ಪದಾರ್ಥಗಳ ಹೋಲಿಕೆ ಇತ್ಯಾದಿಗಳ ಮುಖಾಂತರ ಗಾದೆಗಳು ವಿವೇಕ ಜಾಗೃತಿಗೊಳಿಸುತ್ತವೆ. ಅವು ಸದಾ ಒಳ್ಳೆಯ ಬುದ್ಧಿಯನ್ನು ಹೇಳುತ್ತಿರಬೇಕೆಂಬ ನಿಯಮವಿದ್ದರೂ ಅಪವಾದಗಳುಂಟು. ಒಟ್ಟಾರೆ ಗಾದೆಗಳು ಮೂರ್ತಿಶಿಲ್ಪದಂತೆ ಸೂಕ್ಷ್ಮ ಹಾಗೂ ಸಂಕೀರ್ಣ ಸ್ವಭಾವವುಳ್ಳ ಸುಭಾಷಿತಗಳು ಎನ್ನಬಹುದು.

ಗಾದೆಗಳ ಬಗ್ಗೆ ಕನ್ನಡದ ಪ್ರಸಿದ್ಧ ವಿದ್ವಾಂಸರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸ್ಥೂಲವಾಗಿ ಹೀಗೆ ಕ್ರೋಡೀಕರಿಸಬಹುದು: 'ತಲೆತಲಾಂತರದಿಂದ ಶೇಖರವಾಗಿರುವ ಅನುಭವವು ಯಾವನಾದರೊಬ್ಬನ ಬಾಯಲ್ಲಿ ಮಾತಾಗಿ ಹೊರಬೀಳುವುದು. ಜನ ಆ ಮಾತಿನ ಸೊಬಗಿಗೂ ಅದರ ಹಿಂದಿರುವ ಅನುಭವಕ್ಕೂ ಮೆಚ್ಚಿ ಅದನ್ನು ನಾಣ್ಯವಾಗಿ ಸಂಗ್ರಹಿಸುವರು. ಜ್ಞಾತಾಜ್ಞಾತವಾಗಿ ಅದನ್ನು ಸಾಧ್ಯವಾದಂತೆಲ್ಲ ಅವರಿವರೆನ್ನದೆ ತಿದ್ದುವರು; ಉಜ್ಜಿ ಹೊಳಪಿಕ್ಕುವರು. ಹೀಗೆ ಸಿದ್ಧವಾದ ಮೊಹರೆವಾಕ್ಯವು ಗಾದೆ' ಎಂದು ದೇವುಡು ನರಸಿಂಹಶಾಸ್ತ್ರಿ ಬರೆದಿದ್ದಾರೆ.

ಗಾದೆ ಸಾವಿರ ಮಾತಿನ ಸರದಾರ. ಗಾದೆಮಾತುಗಳೆಂದರೆ ಅಚ್ಚುಕಟ್ಟಾದ ನಿರ್ಣಯಗಳಲ್ಲ; ವಿವೇಕಜಾಗೃತಿ ಉಂಟು ಮಾಡುವ ಸುಭಾಷಿತಗಳು. ಅವು ಒಂದು ಬಗೆಯ ವಕ್ರೋಕ್ತಿಗಳು. ಅವುಗಳ ಧ್ವನಿತಾರ್ಥ ಹಿಡಿಯಲು ವ್ಯಾವಹಾರಿಕ ಜ್ಞಾನದಷ್ಟೇ ಪಾರಮಾರ್ಥಿಕ ತಿಳಿವಳಿಕೆಯೂ ಬೇಕು. ಗಾದೆಗಳು ಧರ್ಮ ಅರ್ಥ ಕಾಮಗಳ ವಿವೇಕಕ್ಕಾಗಿ ನೀಡಿದ ಸೂಕ್ತಿಗಳು. ಗಾದೆಗಳು ಹೊಸ ಸುಭಾಷಿತಗಳ ಮಸೆಗಲ್ಲು; ವಿವೇಕದ ಒರೆಗಲ್ಲು ಎಂದಿದ್ದಾರೆ ದ.ರಾ.ಬೇಂದ್ರೆ.

ಗಾದೆಗಳು ಜೀವನದ ಅನುಭವಗಳಿಂದ ಜನಿತವಾದ ಜಾಣ್ಮೆಯನ್ನು ಸ್ವಾರಸ್ಯವಾಗಿ ಬಹಳ ಕಡಿಮೆ ಪದಗಳಲ್ಲಿ ಅಡಕಮಾಡಿ ಹೇಳುತ್ತವೆ. ಗಾದೆಯ ಮಾತು ಎಂದರೆ ಸಾವಿರಕ್ಕೊಂದು ಮಾತು. ಕಿರಿದರಲ್ಲಿ ಹಿರಿದಾದ ಅರ್ಥವನ್ನು ಅದು ತುಂಬಿಕೊಂಡಿದೆ. ಬಿಂದಿಗೆಯಲ್ಲಿ ಕಡಲನ್ನು ತುಂಬಿದಂತೆ ಲೋಕಾನುಭವ, ಸಂಸ್ಕೃತಿ, ನೀತಿ - ಇವುಗಳ ತ್ರಿವೇಣಿಸಂಗಮವನ್ನು ಅಲ್ಲಿ ಕಾಣಬಹುದು ಎಂಬುದು ಎಂ.ಮರಿಯಪ್ಪಭಟ್ಟರ ಮಾತು.

ಒಂದು ಗುಂಪಿನ ಜಾಣ್ಮೆ, ಜೀವನಾನುಭವ, ಅಭಿವ್ಯಕ್ತಿಯ ನವುರು ಗಾದೆಗಳಲ್ಲಿಯ ಹಾಗೆ ಸ್ಪಷ್ಟವಾಗಿ ಜನಪದ ಸಾಹಿತ್ಯದ ಮಿಕ್ಕೆಲ್ಲೂ ಗೋಚರಿಸುವುದಿಲ್ಲ. ಏಕೆಂದರೆ ಗಾದೆ ವಿಶಾಲವಾದ ಜೀವನಾನುಭವದ ಆಧಾರದಿಂದ ರೂಪಗೊಂಡ ಸಂಕ್ಷಿಪ್ತ ಅಭಿವ್ಯಕ್ತಿಯಾಗಿದೆ ಎನ್ನುತ್ತಾರೆ ಹಾ.ಮಾ.ನಾಯಕ.

ಗಾದೆಗಳು ಜನತೆಯ ಸಂಸ್ಕೃತಿಯ ಶಿಲಾಶಾಸನಗಳು. ಅವುಗಳಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಅಂಶಗಳು ಕೆತ್ತಲ್ಪಟ್ಟಿವೆ. ಗಾದೆಗಳ ಭಂಡಾರ ಒಂದು ಜನಾಂಗದ ವಿಶ್ವಕೋಶ ಎಂಬುದು ಟಿ.ವೆಂಕಟರಮಣಯ್ಯನವರ ನುಡಿ.

ಅತ್ಯುತ್ತಮವಾದ ಸಹಜ ಗಾದೆಯೊಂದು ಅದು ಹುಟ್ಟಿದ ಸಮಾಜದ ಸಾಂಸ್ಕೃತಿಕ ಐತಿಹಾಸಿಕ ಹಾಗೂ ಧಾರ್ಮಿಕ ಅಂಶಗಳನ್ನು ಗರ್ಭೀಕರಿಸಿಕೊಂಡು ರೂಪುಗೊಂಡಿರುತ್ತದೆ. ಕನ್ನಡದ ಉದ್ದಾಮ ಕವಿಗಳೆಲ್ಲರೂ ತಮ್ಮ ಕೃತಿಗಳಲ್ಲಿ ಇಂಥ ಗಾದೆಗಳನ್ನು ಬಳಸಿಕೊಂಡಿದ್ದಾರೆ. ನಯಸೇನ, ಬಸವಣ್ಣ, ಹರಿದಾಸರು, ಸರ್ವಜ್ಞ ಮುಂತಾದ ಜನತಾಕವಿಗಳು ಜನಪದ ಗಾದೆಗಳನ್ನು ಸೂರೆಮಾಡಿ

ತಮ್ಮ ಕೃತಿಗಳಲ್ಲಿ ಅತ್ಯಂತ ಸಾರ್ಥಕವಾಗಿ ಬಳಸಿಕೊಂಡು, ಗಾದೆಗಳಿಗೂ ತಮ್ಮ ಕೃತಿಗಳಿಗೂ ಅಮರತ್ವ ಒದಗಿಸಿದ್ದಾರೆ.

ಜ್ಞಾನದ ಆಗರವೂ ಅನುಭವದ ಸಾಗರವೂ ಆದ ಗಾದೆಗಳಲ್ಲಿ ಅನೇಕ ಪ್ರಕಾರಗಳುಂಟು. ಸ್ಥೂಲವಾಗಿ ಅವನ್ನು ಗ್ರಂಥಸ್ಥ ಗಾದೆಗಳು, ಜನಬಳಕೆಯ ಕಂಠಸ್ಥ ಗಾದೆಗಳು ಎಂದು ವಿಂಗಡಿಸಿಕೊಳ್ಳಬಹುದು. ಗ್ರಂಥಸ್ಥ ಗಾದೆಗಳು ಲೇಖಕರ ಗಮನವನ್ನು ಸೆಳೆದುಕೊಂಡು ಅವರ ಗ್ರಂಥಗಳಲ್ಲಿ ಅನೇಕ ಮಾರ್ಪಾಟುಗಳನ್ನು ಹೊಂದಿ ಅಥವಾ ತಮ್ಮ ಮೂಲಸ್ವರೂಪದಲ್ಲೇ ಸೇರ್ಪಡೆಗೊಂಡಂಥವು. ಮತ್ತು ಹೆಚ್ಚಾಗಿ ವಿದ್ಯಾವಂತರ ವರ್ಗದಲ್ಲಿ ಪ್ರಚಾರದಲ್ಲಿರುವಂಥವು. ಇವುಗಳಲ್ಲಿ ಒಂದು ತೆರನಾದ ಏಕರೂಪತೆ, ನಾವೀನ್ಯ ಹಾಗೂ ಬೆಡಗು ಕಾಣಬರುತ್ತದೆ. ಇಂಥ ಅನೇಕ ಗಾದೆಗಳನ್ನು ಪ್ರತಿಭಾವಂತರಾದ ಕವಿಗಳು ತಾವೇ ಸೃಷ್ಟಿಸಿಕೊಂಡು ಬಳಸಿರಬಹುದು ಅಥವಾ ಪ್ರಚಲಿತವಿರುವ ಗಾದೆಗಳನ್ನು ಆರಿಸಿಕೊಂಡು ಅವುಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡಿರಬಹುದು. ಹೇಗೆ ಮಾಡಿದ್ದರೂ ಗ್ರಂಥಸ್ಥ ಗಾದೆಗಳು ಸಂಸ್ಕಾರಗೊಂಡ ಮುತ್ತುರತ್ನಗಳಿದ್ದಂತೆ.

ಗ್ರಂಥಸ್ಥವಾಗದ, ಆದರೆ ಜನಸಾಮಾನ್ಯರ ಆಡುನುಡಿಯಲ್ಲಿ ಧಾರಾಳವಾಗಿ ಬಳಕೆಯಲ್ಲಿರುವ ಗಾದೆಗಳಲ್ಲಿ ಬಹುಪಾಲಿನವು ಹುಟ್ಟುಗಾದೆಗಳು. ಇವು ಪ್ರಾಚೀನತೆ ಹಾಗೂ ಪ್ರಭಾವದ ದೃಷ್ಟಿಯಿಂದ ಅತ್ಯಂತ ಮಹತ್ವವುಳ್ಳವು. ಇವನ್ನು ಯಾರು ಯಾವಾಗ ಸೃಷ್ಟಿಸಿದರೆಂಬುದನ್ನು ಕಂಡುಹಿಡಿಯಲಾಗುವುದಿಲ್ಲ. ಹೀಗೆ ಜನಸಾಮಾನ್ಯರ ಆಡುನುಡಿಯಲ್ಲಿ ಪರಂಪಾರನುಗತವಾಗಿ ಬಳಕೆಯಲ್ಲಿರುವ ಗಾದೆಗಳನ್ನು ಜನಪದ ಗಾದೆಗಳೆನ್ನಬಹುದು. ಅವು ಹುಟ್ಟಿದ ಹಿನ್ನೆಲೆಯಲ್ಲಿರುವ ಒಂದು ಬಗೆಯ ಒರಟುತನ ಅವುಗಳಲ್ಲಿ ಎದ್ದುಕಾಣುತ್ತದೆ. ಆದರೆ ಜನಪದ ಗಾದೆಗಳೆಲ್ಲ ಅಸಂಸ್ಕೃತವಾದ ಅನಾಗರಿಕರ ಅಶ್ಲೀಲ ನುಡಿಗಳೆನ್ನುವಂತಿಲ್ಲ. ವಾಸ್ತವವಾಗಿ ಒಂದು ಭಾಷೆಯಲ್ಲಿ ರೂಢಿಯಲ್ಲಿರುವ ಗಾದೆಗಳಲ್ಲಿ ಬಹುಪಾಲಿನವು ಜನಪದರಿಂದ ಸೃಷ್ಟಿಸಲ್ಪಟ್ಟವೆಂಬುದು ಅವುಗಳ ಸಮರ್ಥ ವಿಶ್ಲೇಷಣೆಯಿಂದ ಮಾತ್ರ ತಿಳಿದುಬರುತ್ತದೆ. ಮೇಲಿನ ವಿಭಜನೆಯಲ್ಲಿ ಮತ್ತೆ ಗಾದೆಗಳನ್ನು ವ್ಯಾವಸಾಯಿಕ ಗಾದೆಗಳು, ವೈದ್ಯ ಕುರಿತ ಗಾದೆಗಳು, ವೃತ್ತಿಸೂಚಕ ಗಾದೆಗಳು, ನೀತಿಬೋಧಕ ಗಾದೆಗಳು, ನಗೆ ಗಾದೆಗಳು ಇತ್ಯಾದಿಯಾಗಿ ವಿಂಗಡಿಸುತ್ತ ಹೋಗಲು ಸಾಧ್ಯವಿದೆ. ಐತಿಹಾಸಿಕ ಹಾಗೂ ಪೌರಾಣಿಕ ಪ್ರಸಂಗಗಳನ್ನು ಸೂಚಿಸುವ ಗಾದೆಗಳೂ ಇಲ್ಲಿ ಕಾಣಸಿಗುತ್ತವೆ. ಆದರೆ ಸಾಮಾಜಿಕ, ಧಾರ್ಮಿಕ ಪರಿಸರವನ್ನು ಸೂಚಿಸುವ ಗಾದೆಗಳ ಸಂಖ್ಯೆ ಹೆಚ್ಚು. (ಪಿ.ಕೆ.ಆರ್.;ಎಸ್.ಟಿ.)

ಈ ಹಿನ್ನೆಲೆಯಲ್ಲಿ ಕನ್ನಡ ಗಾದೆಗಳ ವಸ್ತು, ವ್ಯಾಪ್ತಿ, ವೈಶಿಷ್ಟ್ಯಗಳನ್ನು ಸ್ಥೂಲವಾಗಿ ಪರಿಶೀಲಿಸಬಹುದು. ಒಂದು ಗಾದೆ ತಲೆಮಾರಿನಿಂದ ತಲೆಮಾರಿಗೆ, ವ್ಯಕ್ತಿಯಿಂದ ವ್ಯಕ್ತಿಗೆ ಇಳಿದು ಉಳಿದುಬರುವಲ್ಲಿ ಪ್ರಾಸ ಅಥವಾ ಲಯಬದ್ಧತೆ ಬಹು ಮುಖ್ಯ ಕಾರಣವಾಗುತ್ತದೆ.

ಎಳೀಲಾರದ ಎತ್ತು ಮೆಳೇ ಮೇಲೆ ಬಿತ್ತು

ಎಂಬ ಈ ಗಾದೆಯಲ್ಲಿ ಆದಿಪ್ರಾಸ ಹಾಗೂ ಅಂತ್ಯಪ್ರಾಸ ಎರಡೂ ಇದ್ದು ಕೇಳುಗನ ಸ್ಮರಣೆಯಲ್ಲುಳಿಯಲು ಸಹಾಯಕವಾಗಿದೆ. ಕೋಗಿಲೆಯಂತದೂ ಕಾಲಬಂದಂಗೆ ಕಾಗೆ ಗೂಡಲ್ಲಿ ಕತೆ ಹಾಕ್ತದೆ, ಮುದ್ದಾದ ಮುದಿಗಂಡ ಮೂರನೆಯೋಳಿಗೆ ಎಂಬ ಗಾದೆಗಳಲ್ಲಿ ಕಂಡುಬರುವ ಕಕಾರ ಮಕಾರಗಳ ಅನುಪ್ರಾಸ ನೆನಪಿನಲ್ಲುಳಿಯಲು ಅನುವಾಗಿದೆ. ಉಪಮೆ, ರೂಪಕ, ಅತ್ಯುಕ್ತಿ, ವಿರೋಧಾಭಾಸ ಮುಂತಾದ ಅಲಂಕಾರವಿಶೇಷಗಳ ಮೂಲಕ ಒಂದು ಅನುಭವವನ್ನು ಮನದಲ್ಲಿ ಅಚ್ಚೊತ್ತಿದಂತೆ ಮೂಡಿಸುವುದು ಗಾದೆಯ ಇನ್ನೊಂದು ಗುಣ. ಅಂಥ ಒಂದು ಗಾದೆಯನ್ನು ಇಲ್ಲಿ ಗಮನಿಸಬಹುದು:

ಅತ್ತೆ ಮನೇಲಿ ಹೆಂಗಿದ್ದಿ ಮಗಳೆ ಅಂದ್ರೆ
ಮುಳ್ಳಾಗೆ ಹಾದಿ ನಡೆದಂಗೆ
ಮೊಳಕೈಗೆ ಚಿಲಕ ಹೊಡೆದಂಗೆ

ಪ್ರೀತಿಯಿಂದ ಸಾಕಿದ ಮಗಳು ಮದುವೆಯಾದ ಮೇಲೆ ಗಂಡನ ಮನೆಯಲ್ಲಿ ಕೆಲವು ದಿನ ಇದ್ದು ತೌರಿಗೆ ಬಂದಿರುತ್ತಾಳೆ. ಬಹುದಿನಗಳಿಂದ ಅಗಲಿದ್ದ ತಾಯಿಗೆ ಮಗಳು ಅತ್ತೆಯ ಮನೆಯಲ್ಲಿ ಹೇಗಿದ್ದಳು ಎಂಬುದನ್ನು ತಿಳಿದುಕೊಳ್ಳುವ ಕಾತರ, ಕುತೂಹಲ; ಮಗಳನ್ನು ಕೇಳುತ್ತಾಳೆ. ಆದರೆ ಮಗಳಿಂದ ಬಂದ ಉತ್ತರ ಮಾತ್ರ ಮಾರ್ಮಿಕವಾಗಿದೆ. ಇಲ್ಲಿ ಬಳಸಿರುವ ಎರಡು ಉಪಮೆಗಳು ಆಕೆ ಅನುಭವಿಸಿದ ಕಷ್ಟಪರಂಪರೆಯನ್ನು ಧ್ವನಿಪೂರ್ಣವಾಗಿ ಸಮರ್ಥವಾಗಿ ಚಿತ್ರಿಸುತ್ತವೆ. ಕೆಲವು ಗಾದೆಗಳು ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿದ್ದು ಆಯಾ ಸಂಸ್ಕೃತಿಯ ಗುಣಾವಗುಣಗಳನ್ನು ಪ್ರತಿಬಿಂಬಿಸುತ್ತವೆ. ತಿರ್ಕೊಂಡು ತಿಂದ್ರು ಕರ್ಕೊಂಡು ಉಣ್ಣು; ಹೂವ ಹಂಚಿ ಮುಡಿ, ಹಣ್ಣ ಹಂಚಿ ತಿನ್ನು ಎಂಬ ಗಾದೆಗಳು ಒಳ್ಳೆಯದು ಎಲ್ಲರಿಗೂ ದೊರಕಬೇಕು, ಯಾವಾಗಲೂ ಒಬ್ಬರಿಗೊಬ್ಬರು ನೆರವಾಗಬೇಕು ಎನ್ನುವ ಅಂಶವನ್ನೂ ಜನಸಾಮಾನ್ಯರ ತ್ಯಾಗಗುಣವನ್ನೂ ನಮ್ಮ ನೆಲದ ಸಂಸ್ಕೃತಿಯನ್ನೂ ಪ್ರತಿನಿಧಿಸುತ್ತವೆ. ತಲೆ ಬಿಟ್ಟು ಸಾಸೇವು ಇಕ್ಕಾತ್ತರ ಎಂಬ ಗಾದೆ ಹಿರಿಯನನ್ನು ಬಿಟ್ಟು ಕಿರಿಯನಿಗೆ ಮದುವೆ ಮಾಡಬಹುದೆ? ಎನ್ನುವ ಅರ್ಥವನ್ನೊಳಗೊಂಡಿರುವುದರ ಜೊತೆಗೆ ಕ್ರಮಬದ್ಧವಾದ ಹಂತಗಳನ್ನು ಅನುಸರಿಸಬೇಕು, ಮೊದಲು ಹಿರಿಯದಕ್ಕೆ ಹೆಚ್ಚು ಬೆಲೆಯುಳ್ಳದ್ದಕ್ಕೆ ಮಹತ್ತ್ವ ನೀಡಬೇಕು ಎಂಬ ಅಂಶವನ್ನು ಪರ್ಯಾಯವಾಗಿ ಸೂಚಿಸುತ್ತದೆ. ಅಕ್ಕೀ ಮೇಲಾಸೆ ನೆಂಟರ ಮೇಲೆ ಪ್ರೀತಿ ಎಂಬ ಗಾದೆ ಮನಸ್ಸಿಲ್ಲದ ಮನಸ್ಸಿನಿಂದ ಉಪಚರಿಸುವ ಜನರನ್ನು ಕುರಿತು ಹಂಗಿಸಿ ಹೇಳಿದ್ದಾಗಿದೆ. ಜೊತೆಗೆ ಮನೆಗೆ ಬಂದ ಅತಿಥಿಗಳನ್ನು ಪ್ರೀತಿಯಿಂದ ಉಪಚರಿಸಬೇಕು ಎಂಬ ಗೃಹಸ್ಥಧರ್ಮದ ಮರ್ಮವನ್ನು ಈ ಗಾದೆ ಧ್ವನಿಸುತ್ತದೆ. ಅಲ್ಪನಿಗೆ ಐಶ್ವರ್ಯ ಬರೋವತ್ಗೆ ಅರ್ಧ ರಾತ್ರೀಲಿ ಕೊಡೇ ಹಿಡಿಸಿಕಂಡನಂತೆ ಎನ್ನುವ ಗಾದೆ ಧಿಡೀರನೆ ಸಾಹುಕಾರನಾದ ವ್ಯಕ್ತಿಯೊಬ್ಬನ ಡಾಂಭಿಕತನವನ್ನೂ ಅವನ ಕುಸಂಸ್ಕೃತಿಯನ್ನೂ ಪ್ರತಿಬಿಂಬಿಸಿದೆ. ಕೀತ ಬೆಳ್ಳಿಗೆ ಉಚ್ಚೆ ಉಯ್ಯೋ ಅಂದ್ರೆ ಜಲ್ಮಾಲ್ ಕಟ್ಟಿ ಆರ್ತಿಂಗ್ಳಾಯ್ತು ಅಂದ್ನಂತೆ. ಈ ಗಾದೆ ವ್ಯಕ್ತಿಯೊಬ್ಬನ ಜಿಪುಣತನದ ಪರಾಕಾಷ್ಠೆಯನ್ನೂ ಅವನ ಸ್ವಾರ್ಥಮನೋಭಾವವನ್ನೂ ಎತ್ತಿಹಿಡಿಯುತ್ತದೆ. ಮನುಷ್ಯ ಸ್ವಾರ್ಥಿ ನಿಜ. ಆದರೆ ಆತನಲ್ಲಿ ಪರೋಪಕಾರ ಗುಣ ಸ್ವಲ್ಪವಾದರೂ ಇರಬೇಕು ಎಂಬ ಅಂಶವನ್ನು ಉಪಮೆಯ ಮೂಲಕ ಗಾದೆ ಸೂಚಿಸುತ್ತದೆ. ಮೇಲುನೋಟಕ್ಕೆ ಗಾದೆ ಅಶ್ಲೀಲವೆನಿಸಬಹುದು. ಆದರೆ ಒಳನೋಟ ಅರ್ಥಗರ್ಭಿತವಾಗಿದೆ. ಬಂಜೆಮನೆ ಚಂದ ಬಸ್ತೀಗುಡಿ ಚಂದ ಎನ್ನುವ ಗಾದೆಯಲ್ಲಿ ಹೊರನೋಟಕ್ಕೆ ಎರಡು ಮನೆಗಳ ಸ್ವಚ್ಛತೆಯನ್ನೂ ಸುಂದರತೆಯನ್ನೂ ಕುರಿತು ಆಡುವಂತೆ ತೋರಿದರೂ ಆಂತರಿಕವಾಗಿ ನೆಮ್ಮದಿಯಿಲ್ಲದ ಬದುಕನ್ನೂ ಸಂತೋಷವನ್ನೂ ಕುರಿತು ಹೇಳಿದುದಾಗಿದೆ. ಬಂಜೆಯ ಮನೆ ಸುಂದರ ವಾಗಿದ್ದೂ ಅಲ್ಲಿ ನಲಿವಿಲ್ಲ. ಸಂತೋಷವಿಲ್ಲ. ಕಾರಣ ಅವಳಿಗೆ ಮಕ್ಕಳಿಲ್ಲ. ಬಸದಿ ಅಥವಾ ಗುಡಿಯಲ್ಲಿರುವ ದೇವರ ಸಾನ್ನಿಧ್ಯ ಸುಂದರವಾಗಿರುವುದರ ಜೊತೆಗೆ ಶುಭದಾಯಕವೂ ಆಗಿರುತ್ತದೆ. ಮನಸ್ಸಿಗೆ ನೆಮ್ಮದಿಯನ್ನೂ ಆನಂದವನ್ನೂ ಅದು ನೀಡುತ್ತದೆ. ಒಂದು ವಸ್ತು ಸುಂದರವಾಗಿದ್ದರೆ ಸ್ವಚ್ಛವಾಗಿದ್ದರೆ ಸಾಲದು, ಅದು ಒಳಿತನ್ನುಂಟು ಮಾಡುವುದಾಗಿರಬೇಕು, ಸಂತೋಷವನ್ನು ಕೊಡುವಂಥದ್ದಾಗಬೇಕು ಎಂಬ ಅಂಶವೂ ಈ ಗಾದೆಯಿಂದ ಧ್ವನಿತವಾಗುತ್ತದೆ. ಬದುಕಿದರೆ ಬಾಯ್ ಬಡ್ಕತರೆ; ಕೆಟ್ಟರೆ ತಿಗಾ ಬಡ್ಕತರೆ ಎಂಬ ಗಾದೆ ಹೊಟ್ಟೆಕಿಚ್ಚಿನ ಜನರ, ಅಸೂಯಾಪರರ ಬದುಕಿನ ರೀತಿಯನ್ನು ಹೇಳುತ್ತದೆ. ಅಂಥವರು ಇನ್ನೊಬ್ಬರಿಗೆ ಒಳಿತಾದರೆ ಸಹಿಸಲಾರರು, ಕೆಡುಕಾದರೆ ಅದನ್ನು ಕಂಡು ಸಂತೋಷಪಡುವರು. ಇವರಿಂದ ಸಮಾಜಕ್ಕಾಗಲಿ ನೆರೆಹೊರೆಯವರಿಗಾಗಲಿ ಎಂದೂ ಒಳಿತಾಗುವುದಿಲ್ಲ. ಪ್ರಪಂಚದಲ್ಲಿ ಈ ಮನೋಭಾವದ ಜನರೇ ಸುತ್ತಮುತ್ತ ಹೆಚ್ಚು. ಅವರಿಂದ ದೂರ ಇರಬೇಕು ಎಂದು ಈ ಗಾದೆ ಎಚ್ಚರಿಕೆ ನೀಡುತ್ತದೆ.

ಸಾಹಿತ್ಯಕ ದೃಷ್ಟಿಯಿಂದಲೂ ಗಾದೆಗಳು ಗಮನಾರ್ಹವಾಗಿವೆ. ಅರೀದುಡುಗ ಆರಂಭಮಾಡಿ ವಡೇ ವಲ ಕೂದು ಮೆದೇ ಆಕ್ದ ಎಂಬ ಗಾದೆಯನ್ನು ಗಮನಿಸಬಹುದು. ಬೇಸಾಯದ ತಿಳಿವಳಿಕೆಯಿಲ್ಲದ, ವಿವೇಕವಿಲ್ಲದ ಎಳೆಯ ಪ್ರಾಯದ ಹುಡುಗನ ಆತುರ, ಅಚಾತುರ್ಯ, ಅದರಿಂದಾದ ನಷ್ಟ ಮೊದಲಾದವನ್ನು ಗಾದೆ ಧ್ವನಿಪೂರ್ಣವಾಗಿ ಚಿತ್ರಿಸಿದೆ. ವಿವೇಕವಿಲ್ಲದ ಹುಡುಗ ಸಲ್ಲದ ಕೆಲಸ ಮಾಡಿದನೆಂದು ವಾಚ್ಯವಾಗಿ ಹೇಳದೆ 'ವಡೇ ವಲ ಕೂದು ಮೆದೇ ಆಕ್ದ' ಎಂದು ಸೂಚ್ಯವಾಗಿ

ಹೇಳುವಲ್ಲಿ ಗಾದೆಯಲ್ಲಿ ಸಾಹಿತ್ಯಕ ಸೊಗಸು ಕಂಡುಬರುತ್ತದೆ. ಬಡವನೆಂಡ್ತಿ ಬೇಲೀ ಉವ್ವ (ಹೂವು). ಈ ಗಾದೆ ಬಡವನ ಹೆಂಡತಿಯ ಸೌಂದರ್ಯವನ್ನೂ ಅವಳ ಅಸಹಾಯಕತೆಯನ್ನೂ ಬಡತನ ಬಡವರಿಗೆ ಎಂಥ ಶಾಪ ಎಂಬುದನ್ನೂ ಸುಂದರವಾಗಿ ಹೇಳುತ್ತದೆ. ಬೇಲಿಯಲ್ಲಿ ಬಿಟ್ಟಿರುವ ಹೂ ದಾರಿಹೋಕರಿಗೆ ಹೇಗೆ ಸುಲಭವಾಗಿ ದೊರೆಯುತ್ತದೆಯೋ ಅದನ್ನು ಹೇಗೆ ಯಾರು ಬೇಕಾದರೂ ಕೊಯ್ದು ಮುಡಿಯುವಲ್ಲಿ ಯಾವ ನಿರ್ಬಂಧವೂ ಇಲ್ಲವೋ ಹಾಗೆಯೇ ಬಡವನ ಹೆಂಡತಿಯ ಪಾಡು ಎಂಬುದನ್ನು ಬೇಲಿ ಉವ್ವ ಎಂಬ ಉಪಮಾನದೊಂದಿಗೆ ಹೇಳಿರುವ ರೀತಿ ಅನನ್ಯವಾಗಿದೆ. ಇಂಥ ಗಾದೆಗಳಲ್ಲಿ ಸಾಹಿತ್ಯಕಾಂಶ ಮಡುಗಟ್ಟಿದೆ.

ವೃತ್ತಿಗೆ ಸಂಬಂಧಿಸಿದ ಗಾದೆಗಳಲ್ಲಿ ಬೇಸಾಯ ಕುರಿತ ಗಾದೆಗಳು ಕನ್ನಡದಲ್ಲಿ ಅಪಾರವಾಗಿ ದೊರೆಯುತ್ತವೆ. ಈ ಗಾದೆಗಳಲ್ಲಿ ರೈತರ ಬೇಸಾಯ ಕ್ರಮ, ಮಳೆಯ ಗುಣಸ್ವಭಾವ, ಮಳೆಗಳ ಬಗೆ, ಪರಿಣಾಮ, ಉಪಯೋಗ ಮೊದಲಾದ ಸಂಗತಿಗಳು ಅನುಭವದ ಹರಳಾಗಿ ಮೂಡಿಬಂದಿವೆ. ಆದದ್ದು ಆದ್ರಿ ಮಳೇಲಿ ಚೆಲ್ಲು; ಮಿಕ್ಕಿದ್ದು ಮಿಕ್ಸಿರಿ (ಮೃಗಶಿರ) ಮಳೇಲಿ ಚೆಲ್ಲು ಎಂಬ ಗಾದೆಯಲ್ಲಿ ಯಾವ ಮಳೆಯಲ್ಲಿ ಹೆಚ್ಚು ಬಿತ್ತಬೇಕು ಎನ್ನುವ ಅಂಶ ಸೂಚಿತವಾಗಿದೆ. ಉತ್ತರೆ ಮಳೆ ಉಯ್ದರೆ ಉತ್ತೆತ್ತು ಉಕ್ಕೆ ದೋಣೇಲಿ ನೀರ್ ಕುಡಿತದೆ; ಉತ್ತರೆ ಮಳೆ ಉಯ್ದರೆ ಉತ್ತೆತ್ತು ನೀರಿಗೆ ಬೀಳ್ತದೆ ಎಂಬ ಈ ಎರಡು ಗಾದೆಗಳು, ಉತ್ತರೆ ಮಳೆಯ ಬಿರುಸು, ಸಮೃದ್ಧಿ ಹಾಗೂ ಆ ಕಾಲದ ಬಿಸಿಲ ಝಳವನ್ನು ಸೂಚಿಸುತ್ತವೆ. ಎತ್ತು ಮಾರು ಮಿಂಚಿದರೆ ಕುರ್ತೇಟು ಮಳೆ ಎನ್ನುವ ಗಾದೆ ಮಳೆಯ ಬಗ್ಗೆ ಜನಪದರಿಗಿರುವ ನಂಬಿಕೆಯೊಂದನ್ನು ಸೂಚಿಸುತ್ತದೆ. ಜೊತೆಗೆ ಜನಪದರು ಹೇಗೆ ಸೂಕ್ಷ್ಮವಾಗಿ ವಾತಾವರಣದ ಬದಲಾವಣೆಯನ್ನು ಗಮನಿಸಿ ಅರಿಯಬಲ್ಲರು ಎಂಬುದಕ್ಕೆ ನಿದರ್ಶನವಾಗಿದೆ. ಅಸಲೇ ಮಳೆ ಕೈತುಂಬ ಬೆಳೆ; ಆರಿದ್ರೆ ಇಲ್ದಿದ್ರೆ ದರಿದ್ರ ಕಂಡಿತ ಎಂಬ ಗಾದೆ ಆಯಾ ಮಳೆಯಿಂದ ರೈತರಿಗೆ ಆಗುವ ಲಾಭನಷ್ಟಗಳನ್ನು ತಿಳಿಸುತ್ತದೆ. ಕೆಬ್ಬೆ ಹೊಲಮಾಡಿದರೆ ಕಿಬ್ಬೊಟ್ಟೆಗೂ ಹಿಟ್ಟು ಸಿಗಲ್ಲ ಎಂಬ ಗಾದೆ ಬೇಸಾಯದ ಮರ್ಮವನ್ನು ಹೇಳುತ್ತದೆ. ಕೆಂಪುಮಣ್ಣಿನಿಂದ ಕೂಡಿದ ಹೊಲಕ್ಕೆ ಹೆಚ್ಚು ನೀರು ಬೇಕು, ಸಾಲದ್ದಕ್ಕೆ ಭೂಮಿಯೂ ಗಟ್ಟಿ. ಉಳುವುದಾಗಲಿ ಬೆಳೆಯುವುದಾಗಲಿ ತೀರ ಕಷ್ಟದ ಕೆಲಸ. ಅಂಥ ಭೂಮಿಯನ್ನು ಸಾಗುವಳಿ ಮಾಡಬಾರದು ಎಂದು ಎಚ್ಚರಿಕೆಯನ್ನು ಈ ಗಾದೆ ನೀಡುತ್ತದೆ. ಬೇಸಾಯ ವಿಷಯ ಕುರಿತಂತೆ ಹುಟ್ಟಿಕೊಂಡ ಗಾದೆ ಕೆಲವೊಮ್ಮೆ ಪ್ರಾದೇಶಿಕವೂ ಆಗಿರಬಹುದು. ಅನುರಾಧೆ ಮಳೆ ಬಂದರೆ ನಮ್ಮ ರಾಗಿ ನಮ್ಮದು ಎಂಬ ಒಂದು ಗಾದೆ ರಾಗಿ ಹೆಚ್ಚು ಬೆಳೆಯುವ ಪ್ರದೇಶದಲ್ಲಿ ಹುಟ್ಟಿಕೊಂಡದ್ದು ಎಂದು ಹೇಳಬಹುದು. ಹಾಗೆಯೇ ಸ್ವಾತಿಮಳೆ ಬಿದ್ರೆ ಮುತ್ತಿನಂಥ ಜೋಳ ಎಂಬ ಗಾದೆ ಜೋಳವನ್ನು ಹೆಚ್ಚಾಗಿ ಬೆಳೆವ ಪ್ರದೇಶದಲ್ಲಿ ಹುಟ್ಟಿಕೊಂಡದ್ದಿರಬಹುದು.

ಹಾಸ್ಯವನ್ನು ವಸ್ತುವಾಗುಳ್ಳ ಗಾದೆಗಳಲ್ಲಿ ಹಾಸ್ಯ ಕೆಲವೊಮ್ಮೆ ನವುರಾಗಿ ಮೊನಚಾಗಿ ವಿಡಂಬನಾತ್ಮಕವಾಗಿ ನಿರೂಪಿತವಾಗಿರುವುದುಂಟು. ಕೆಲವೊಮ್ಮೆ ನಗಿಸುವುದೇ ಗಾದೆಯ ಉದ್ದೇಶವಾಗಿಬಿಡಬಹುದು. ಸಾಯ್ತಿನಿ ಸಾಯ್ತೀನಿ ಅಂತಾ ಸಾವ್ರ ಕೋಳಿ ತಿಂದ, ಮುತ್ತಿನಂಗೆ ಅವನೇ ನನ್ನ ಮುದಿಗಂಡ; ಮುತ್ತಿನಂಥ ಗಂಡ ಮೂರನೆಯವಳಿಗೆ; ಗಂಜೀಗೇ ಗತಿ ಇಲ್ಲ ನಂಜಿಕೋ ಬುಲಾವ್; ಸೆಟ್ಟರೆ ನಿಮ್ಮ ಮಗ ಬಿದ್ದ ಅಂದರೆ ಫಾಯಿದೆ ಕಾಣದೆ ಬಿದ್ದಿರಲಾರ ಎಂದಂತೆ; ಕೈಲಿ ಕಿಸೀದ ಗಂಡ ಮಲಗೋ ಹೊತ್ತಿಗೆ ಸರಿಯಾಗಿ ಮುನಿಸಿಕೊಂಡ; ಹೆಡ್ಡಾ ನಿನಗೆ ಹೆಣ್ಣು ಯಾರು ಕೊಟ್ಟಾರು ಅಂದ್ರೆ ನಮ್ಮನೇಲೇ ನಾಲ್ಕೈದವೆ; ಮದುವೆ ಆಗೋ ಗಂಡಿಗೆ ಅದೇ ಇಲ್ಲ ಅಂದಂಗೆ; ಯಾಲಕ್ಕಿ ಅಂತ ನನ್ನಳಿಯ ಏಳು ಮುದ್ದೆ ಉಂಡ ಮೊದಲಾದ ಗಾದೆಗಳು ಈ ಮಾದರಿಯವು. ನೀತಿಬೋಧೆ ಗಾದೆಯ ಮುಖ್ಯ ಉದ್ದೇಶಗಳಲ್ಲೊಂದು. ಜಲ ನೋಡಿ ಬಾವಿ ತೆಗಿ, ಕುಲ ನೋಡಿ ಹೆಣ್ಣು ತತ್ತ, ಕುಲ ಬಿಟ್ಟರೂ ಛಲ ಬಿಡಬಾರದು. ಆಳಾಗಿ ದುಡಿ ಅರಸಾಗಿ ಉಣ್ಣು ಎಂಬ ಗಾದೆಗಳಲ್ಲಿ ಈ ಅಂಶ ಪ್ರಖರವಾಗಿದೆ.

ಕೆಲವೊಮ್ಮೆ ಗಾದೆಗಳು ಇತಿಹಾಸವನ್ನು ವಸ್ತುವಾಗಿಸಿಕೊಂಡಿರಬಹುದು. ಹಳ್ಳೀದೇವರ ತಲೆ ಹೊಡೆದು ದಿಳ್ಳೀ ದೇವರ ಡೊಳ್ಳು ಬೆಳೆಸಿದ ಎಂಬ ಗಾದೆ ಮುಸ್ಲಿಂ ರಾಜರು ದಂಡಯಾತ್ರೆ ನಡೆಸಿ ಕೊಳ್ಳೆಹೊಡೆದು ಲೂಟಿ ಮಾಡಿ ಸಂಪತ್ತು ದೋಚಿಕೊಂಡು ಹೋಗಿ ದೆಹಲಿಗೆ ತುಂಬಿಕೊಂಡದ್ದನ್ನು ತಿಳಿಸುವಂತಿದೆ.

ಕುಂತು ಕುಣಿಗಲು ಗೆದ್ದ
ನಿಂತು ಮಾಗಡಿ ಗೆದ್ದ
ಮಾತಿಲ್ಲದೆ ಗೆದ್ದ ಮದುರೇನ

ಎಂಬ ಗಾದೆ ಮಾಗಡಿ ಕೆಂಪೇಗೌಡನಿಗೆ ಸಂಬಂಧಪಟ್ಟದ್ದು. ಇಲ್ಲಿ ಮದುರೆ ಯಾವುದು ಎಂಬ ಸಮಸ್ಯೆ ಉಂಟಾಗುತ್ತದೆ. ಗಾದೆಗಳು ಚಾರಿತ್ರಿಕ ಸಂಶೋಧನೆಗಳಿಗೂ ಸಹಾಯಕವಾಗಬಲ್ಲವು. ಸಂಶೋಧನೆ ನಡೆದರೆ ಗಾದೆಗಳು ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಸಾಮರ್ಥ್ಯ ಹೊಂದಿವೆ.

ಪುರಾಣ ಪುಣ್ಯಕಥೆಗಳ ಪರಿಚಯದಿಂದ ಅವು ತಮ್ಮ ಮೇಲೆ ಬೀರಿದ ಪ್ರಭಾವದಿಂದ ಕನ್ನಡದಲ್ಲಿ ಹಲವಾರು ಪೌರಾಣಿಕ ಗಾದೆಗಳು ಸೃಷ್ಟಿಯಾಗಿವೆ. ಅಳಿಲಸೇವೆ ಮಳಲಭಕ್ತಿ, ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು. ಹೆಣ್ಣಿನಿಂದ ರಾವಣ ಕೆಟ್ಟ, ಮಣ್ಣಿನಿಂದ ಕೌರವ ಕೆಟ್ಟ, ಗಾಂಧಾರಿ ಗರ್ಭ ಗುದ್ದಿಕಂಡಂಗೆ, ಸಾರಂಗಧರನ ಕೈಕಾಲ್ ಕಡಿಸ್ದೋಳು, ಎಂಟನೇ ಶನಿ ಹೆಗಲೇರಿಕಂಡಂಗೆ ಈ ಗಾದೆಗಳು ರಾಮಾಯಣ, ಮಹಾಭಾರತ, ಸಾರಂಗಧರನ ಕಥೆ, ಶನಿಮಹಾತ್ಮೆ ಮೊದಲಾದ ಕಥೆಗಳ ಅರಿವಿನಿಂದ ಹುಟ್ಟಿಕೊಂಡವಾಗಿವೆ.

ಗಾದೆಗಳು ಪ್ರಾಣಿವಿಜ್ಞಾನಿಗಳಿಗೆ, ಸಮಾಜಶಾಸ್ತ್ರಜ್ಞರಿಗೆ, ಮಾನವ ಶಾಸ್ತ್ರಜ್ಞರಿಗೆ ಭಾಷಾವಿಜ್ಞಾನಿಗಳಿಗೆ ಸಂಶೋಧನೆಗೆ ಸಾಮಗ್ರಿಯನ್ನೊದಗಿಸಬಲ್ಲವು.

ಅಮ್ಮ ಪಟ್ಟಕ್ಕೆ ಬರುವಾಗ್ಗೆ ಅಪ್ಪ ಚಟ್ಟಕ್ಕೆ
ಆಡೋ ಹುಡುಗಿಗೊಂದು ಕಾಡೋ ಕೂಸು

ಈ ಎರಡು ಗಾದೆಗಳು ಹಿಂದೆ ನಮ್ಮ ಸಮಾಜದಲ್ಲಿ ಅನುಷ್ಠಾನದಲ್ಲಿದ್ದ ಬಾಲ್ಯವಿಹಾಹಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತವೆ. ಅಂಬಲಿ ಕುಡಿದೋನು ಮಡಕೆ ಹೊತ್ತಾನೆ ಎಂಬ ಗಾದೆಯಲ್ಲಿ ಮಡಕೆ ಪದ ಭಾಷಾವಿಜ್ಞಾನದೃಷ್ಟಿಯಿಂದ ಗಮನಾರ್ಹವಾಗಿದೆ. ಈ ಪದ ಮೂಲತಃ ತೆಲುಗು ಭಾಷೆಯದು. ಅಲ್ಲಿ ಮಡಕಾ ಅಂದರೆ ನೇಗಿಲು ಎಂದರ್ಥ. ತೆಲುಗಿನ ಸಂಪರ್ಕವಿರುವ ಹಿಂದೂಪುರ, ಮಧುಗಿರಿಯ ಕಡೆ ನೇಗಿಲಿಗೆ ಮಡಕೆ ಎಂಬ ಪದವನ್ನು ಬಳಸುತ್ತಾರೆ. ಆ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಮೇಲೆ ತೆಲುಗಿನ ಪ್ರಭಾವ ಎಷ್ಟರಮಟ್ಟಿಗೆ ಆಗಿದೆ ಎಂಬುದಕ್ಕೆ ನಿದರ್ಶನವಾಗಿದೆ. ಕೊತ್ತಿ ಕೊಂದ ಪಾಪ ತಿತ್ತಿ ಹೊಕ್ಕರೂ ಬಿಡದು ಎಂಬ ಗಾದೆಯಲ್ಲೂ ಅಷ್ಟೆ. ತಿತ್ತಿ ಎಂಬ ಪದ ತಿರುಪತಿ - ತಿರುಪ್ತಿ > ತಿರಿಪ್ತಿ > ತಿಪ್ತಿ > ತಿರ್ತಿ > ತಿತ್ತಿ ಆಗಿರುವಂತೆ ತೋರುತ್ತದೆ. ಬಾಳೆಗೆ ಗೊನೆ ಚೇಳಿಗೆ ಬಸಿರು ಎಂಬ ಗಾದೆ ಪ್ರಾಣಿವಿಜ್ಞಾನದ ದೃಷ್ಟಿಯಿಂದ ಗಮನಾರ್ಹವಾಗಿದೆ. ಚೇಳು ಬಸಿರಾದರೆ ಮರಿ ಹಾಕಿದ ಮೇಲೆ ಸಾಯುತ್ತದೆ ಎಂಬುದು ಜನಪದರ ನಂಬಿಕೆ. ವಾಸ್ತವವಾಗಿ ವೈಜ್ಞಾನಿಕವಾಗಿ ಇದು ಎಷ್ಟರಮಟ್ಟಿಗೆ ಸತ್ಯ ಅಥವಾ ಇಲ್ಲ ತಿಳಿಯಬೇಕಾಗಿದೆ. ಹಾವು ತನ್ನ ಮೊಟ್ಟೆ ತಾನೆ ತಿಂದ್ಹಂಗೆ ಎಂಬುದು ಇಂಥದೇ ಸಮಸ್ಯೆಯುಳ್ಳ ಇನ್ನೊಂದು ಗಾದೆ. ಈ ತೆರನ ಗಾದೆಗಳು ಕನ್ನಡದಲ್ಲಿ ಹಲವಾರಿವೆ. ಈ ಎಲ್ಲ ದೃಷ್ಟಿಯಿಂದಲೂ ಗಾದೆಗಳ ಅಧ್ಯಯನ ಕಾರ್ಯ ವ್ಯಾಪಕವಾಗಿ ನಡೆಯಬೇಕಾಗಿದೆ.

ಕನ್ನಡದಲ್ಲಿ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಗಾದೆಗಳಿವೆಯೆಂದು ಅಂದಾಜು ಮಾಡಬಹುದಾಗಿದೆ. ಕನ್ನಡ ಗಾದೆಗಳ ಸಂಗ್ರಹಕಾರ್ಯಕ್ಕೆ ಸುಮಾರು ಒಂದೂಕಾಲು ಶತಮಾನಗಳ ಇತಿಹಾಸವಿದ್ದು ಇದುವರೆಗೆ ಹಲವು ಗಾದೆಗಳ ಸಂಕಲನಗಳು ಪ್ರಕಟವಾಗಿವೆ.

1852ರಲ್ಲಿ ಮಂಗಳೂರಿನಿಂದ ಪ್ರಕಟವಾದ ಕನ್ನಡ ಗಾದೆಗಳು ಕನ್ನಡದ ಪ್ರಪ್ರಥಮ ಗಾದೆಗಳ ಸಂಕಲನ. ಗುಣ ಸಂಖ್ಯೆಗಳೆರಡರಲ್ಲೂ ಮಹತ್ತ್ವದ್ದೆನಿಸಿದ ಈ ಗ್ರಂಥದಲ್ಲಿ 3,457 ಗಾದೆಗಳಿವೆ. ಈ ಕೃತಿ ಗಾದೆಗಳನ್ನು ಸಂಗ್ರಹಿಸುವ ಕಡೆ ಕನ್ನಡಿಗರ ಗಮನ ಸೆಳೆಯಿತು. ಗಾದೆಗಳನ್ನು ಅಕಾರಾದಿಯಾಗಿ ಸಂಕಲಿಸಿ ಪ್ರಕಟಿಸುವ ಕ್ರಮಕ್ಕೂ ಈ ಕೃತಿಯೇ ಮಾರ್ಗದರ್ಶಕವೆನ್ನಬಹುದು. ಅನಂತರ 1874ರಲ್ಲಿ ಮಂಗಳೂರಿನ ಬಾಸೆಲ್

ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪಾಜಿಟರಿಯವರಿಂದ ಪ್ರಕಟವಾದ ಸಹಸ್ರಗಾಥಾಮೃತ ಕಲಶವು ಒಂದು ಸಾವಿರ ಸುಂದರ ಗಾದೆಗಳ ಸಂಕಲನ. ಇದೇ ಪ್ರಕಾಶಕರ ಆಶ್ರಯದಲ್ಲಿ ಶದ್ರಾಚ್ ಐಮನ್ ಮತ್ತು ಉಭಯದ ನರಸಿಂಹರಾವ್ ಅವರು ಸಂಪಾದಿಸಿದ ಪಾಪ್ಯುಲರ್ ಕೆನರೀಸ್ ಪ್ರಾವರ್ಬ್ಸ್ ಅಂಡ್ ದೆರ್ ಇಂಗ್ಲಿಷ್ ಈಕ್ವಿವಲೆಂಟ್ಸ್ ಎಂಬ ಕೃತಿ 1894ರಲ್ಲಿ ಪ್ರಕಟವಾಯಿತು. ಈ ಸಮಯದಲ್ಲೇ ಹಣಮಂತ ಗೋವಿಂದ ಜೋಶಿ ಅವರ ಸಾಮತಿ ಸಂಗ್ರಹ-ಕನ್ನಡ ಗಾದೆಗಳೂ ಅವುಗಳ ಸಮಾನಾರ್ಥಕ ಇಂಗ್ಲಿಷ್ ನುಡಿಗಳೂ ಎಂಬ ಕೃತಿ ಬೆಳಗಾಂ ಸಮಾಚಾರ್ ಪ್ರೆಸ್‌ನಿಂದ ಪ್ರಕಟವಾಯಿತು. ಇದು 1906ರಲ್ಲಿ ಮರುಮುದ್ರಣವನ್ನು ಕಂಡಿತು. ಇದೇ ಅವಧಿಯಲ್ಲಿ ಕನ್ನಡ ನಿಘಂಟೊಂದನ್ನು ಪ್ರಕಟಿಸಿದ ಕಿಟ್ಟೆಲ್ ಅವರು ಗಾದೆಗಳ ಸಂಗ್ರಹಕಾರರಾಗಿಯೂ ದುಡಿದಿರುವುದು ಮಹತ್ತ್ವದ ವಿಷಯವಾಗಿದೆ. ಅನಂತರ ಬಾಸೆಲ್ ಬುಕ್ ಅಂಡ್ ಟ್ರಾಕ್ಟ್ ಡಿಪಾಜಿಟರಿಯ 'ತ್ರೀ ಹಂಡ್ರೆಡ್ ಕೆನರೀಸ್ ಪ್ರಾವರ್ಬ್ಸ್' ಎಂಬ ಸಂಕಲನ 1903ರಲ್ಲಿ ಪ್ರಕಟವಾಯಿತು. 1911ರಲ್ಲಿ ಮೈಸೂರಿನ ಕ್ರೌನ್ ಪ್ರೆಸ್‌ನಿಂದ ಪ್ರಕಟವಾದ 'ನೂತನ ಸಹಸ್ರಗಾಥಾ ಕುಸುಮ ಮಂಜರಿ' ಒಂದು ಸಾವಿರ ಗಾದೆಗಳನ್ನುಳ್ಳ ಸಂಗ್ರಹ. ಈ ಕೃತಿಯ ಸಂಗ್ರಹಕಾರರು ಸಿ.ಸಿಂಗಪ್ಪ. ಸುಮಾರು 300 ಕನ್ನಡ ಗಾದೆಗಳನ್ನು ಇಂಗ್ಲಿಷಿನ ಸಮಾನಾರ್ಥಕ ಗಾದೆಗಳೊಡನೆ ಬಾಸೆಲ್ ಮಿಶನ್ ಬುಕ್ ಅಂಡ್ ಟ್ರಾಕ್ಟ್ ಡಿಪಾಜಿಟರಿ ಪ್ರಕಾಶನದಿಂದ ಎ ಹ್ಯಾಂಡ್ ಬುಕ್ ಆಫ್ ಕೆನರೀಸ್ ಪ್ರಾವರ್ಬ್ಸ್ ವಿತ್ ಇಂಗ್ಲಿಷ್ ಈಕ್ವಿವಲೆಂಟ್ಸ್ ಎಂಬ ಹೆಸರಿನಿಂದ ಯು.ಬಿ.ನರಸಿಂಗರಾವ್ ಅವರು ಸಂಗ್ರಹಿಸಿ ಪ್ರಕಟಿಸಿದರು. 1500 ಕನ್ನಡ ಗಾದೆಗಳನ್ನು ಅವುಗಳ ಉದ್ದೇಶ ವಿವರಣೆಯೊಂದಿಗೆ ಕರ್ನಾಟಕ ಲೋಕೋಕ್ತಿ ನಿಧಾನ ಎಂಬ ಹೆಸರಿನಿಂದ 1919ರಲ್ಲಿ ಕೆನರೀಸ್ ಮಿಶನ್ ಬುಕ್ ಅಂಡ್ ಟ್ರಾಕ್ಟ್ ಡಿಪಾಜಿಟರಿಯವರು ಪ್ರಕಟಿಸಿದರು. ಈ ಕೃತಿ 1912ರಲ್ಲಿ ಪ್ರಕಟವಾಗಿದ್ದ ಕೃತಿಯ ಪುನರ್‌ಮುದ್ರಣ. ಇವಿಷ್ಟು ಕ್ರೈಸ್ತ ಮಿಷನರಿಗಳಿಂದ ಹೊರಬಂದ ಗಾದೆಯ ಸಂಕಲನಗಳು. ಈ ಸಂದರ್ಭದಲ್ಲಿ ಕನ್ನಡ ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದಂತೆಯೇ ಬಾಸೆಲ್ ಮಿಶನರಿಯವರೇ ಕೊಡಗು ಭಾಷೆಯ ಗಾದೆಗಳನ್ನು ಮೊಟ್ಟಮೊದಲಿಗೆ ಸಂಗ್ರಹಿಸಿ ಕನ್ನಡ ಲಿಪಿಯಲ್ಲಿ 'ಕೊಡವ ಪಡಿಮ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದು (1886) ಗಮನಾರ್ಹ ಸಂಗತಿಯಾಗಿದೆ.

ಅನಂತರ 1944ರಲ್ಲಿ ಪ್ರಕಟವಾದ ಎಚ್.ಎಸ್. ಅಚ್ಚಪ್ಪನವರ 'ಕನ್ನಡ ಗಾದೆಗಳು' ಒಂದು ಅಪೂರ್ವ ಸಂಗ್ರಹ. ಹಾಗೆಯೇ ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದಿಂದ 1956ರಲ್ಲಿ ಪ್ರಕಟವಾದ ಜಂಗಮಕೋಟೆ ಕೃಷ್ಣಶಾಸ್ತ್ರಿಗಳ ಗಾದೆಗಳ ಭಂಡಾರ ಎಂಬ ಕೃತಿ ಇನ್ನೊಂದು ಮಹತ್ತ್ವದ ಸಂಗ್ರಹವಾಗಿದೆ. ಇದರಲ್ಲಿ 3,872 ಗಾದೆಗಳನ್ನು ವಿಷಯಾನುಸಾರ ವರ್ಗೀಕರಿಸಿ ಕೆಲವು ಗಾದೆಗಳಿಗೆ ವಿವರಣೆ ವ್ಯಾಖ್ಯಾನಗಳನ್ನು ಕೊಡಲಾಗಿದೆ. ಇದರಲ್ಲಿ ಕೆಲವು ಸಂಸ್ಕೃತ ಸೂಕ್ತಿಗಳೂ ಸೇರಿವೆ. ಸಂಸ್ಕೃತ ಸೂಕ್ತಿಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟಿರುವುದಾಗಿ ಹೇಳಿರುವುದರಿಂದ ಕೆಲವೊಮ್ಮೆ ಕನ್ನಡದ ನಿಜವಾದ ಗಾದೆಗಳು ಯಾವುವು, ಕೃತಕ ಗಾದೆಗಳು ಯಾವುವು ಎಂಬ ಸಮಸ್ಯೆ ಎದುರಾಗುತ್ತದೆ. ಇದೇ ವರ್ಷದಲ್ಲಿ ಪಡುವಾರಿ ಸುಬ್ಬಣ್ಣಶೆಟ್ಟಿಯವರ ಗಾದೆಗಳ ಗುಚ್ಛ, ಕೆ. ವೆಂಕಟರಾಯಾಚಾರ್ಯರ ಸೂಕ್ತಿಗಳು ಮತ್ತು ಬೇಬಿ ಸರೋಜಿನಿಯವರ ಗಾದೆಗಳು ಮತ್ತು ಜ್ಞಾನೋಕ್ತಿಗಳು ಎಂಬ ಸಂಕಲನಗಳು ಪ್ರಕಟವಾಗಿವೆ. ಅನಂತರ ಕುರಾಡಿ ಸೀತಾರಾಮ ಅಡಿಗರ 'ಕನ್ನಡ ಗಾದೆಗಳು' 1957ರಲ್ಲಿ ಪ್ರಕಟವಾಯಿತು. ಇದರಲ್ಲಿ 387 ಗಾದೆಗಳಿವೆ. ಎಂ.ಸಂಜೀವಶೆಟ್ಟಿಯವರ 'ನಾಡುನುಡಿಗಳು' ಎರಡು ಭಾಗಗಳಾಗಿ ಪ್ರಕಟವಾಗಿದ್ದು (1954) ಭಾಗ ಒಂದರಲ್ಲಿ 225 ಗಾದೆಗಳೂ ಭಾಗ ಎರಡರಲ್ಲಿ 234 ಗಾದೆಗಳೂ ಇವೆ.

ಬೆಂಗಳೂರಿನ ಸುದರ್ಶನಂ ಅಂಡ್ ಕಂಪನಿ ಪ್ರಕಟಿಸಿದ (1960) ಎಚ್.ಎಂ.ರಾಮಾರಾಧ್ಯರ ಗಾದೆಗಳ ಗೀತಗಳು ಗಾದೆಗಳನ್ನು ಪೋಣಿಸಿ ಕಟ್ಟಿದ ಸುಂದರ ಹಾಡುಗಳ ಸಂಕಲನ. ಇವರು ಗಾದೆಗಳನ್ನು ಬಳಸಿಕೊಂಡು ಗೀತಗಳು ಹಾಗೂ ನಾಟಕಗಳನ್ನು ರಚಿಸುವ ವಿಶಿಷ್ಟ ಪ್ರಯೋಗಗಳನ್ನು ನಡೆಸಿದ್ದಾರೆ. ಗಾದೆಗಳನ್ನು ಜೋಡಿಸಿ ರಚಿಸಿದ ದೀಪ ನುಂಗೊ ಅತ್ತೆಗೆ ದೀವಟಿಗೆ ನುಂಗೊ ಸೊಸೆ ಎಂಬ ಇವರ ನಾಟಕ ಹೊನ್ನ ಬಿತ್ತೇವು ಹೊಲಕೆಲ್ಲ ಎಂಬ ಗ್ರಂಥದಲ್ಲಿ ಪ್ರಕಟವಾಗಿದೆ. ಈ ನಾಟಕದ ಪ್ರಯೋಗ ತಂತ್ರ ಅತ್ಯಂತ ಕುತೂಹಲಕಾರಿಯಾಗಿದೆ. ಗಮನಿಸಬಹುದಾದ ಮತ್ತೊಂದು ಕೃತಿಯೆಂದರೆ ದಕ್ಷಿಣ ಭಾರತ ಭಾಷಾ ಸಂಸ್ಥೆ ಪ್ರಕಟಿಸಿದ ನಾಲ್ ನುಡಿ-ನಾಣ್ನುಡಿ (1962). ಇದರಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿನ 467 ಸಮಾನ ಗಾದೆಗಳನ್ನು ಎಂ.ಮರಿಯಪ್ಪಭಟ್ಟ, ಎನ್.ವೆಂಕಟರಾವ್, ಆರ್‌ಪಿ.ಸೇತುಪಿಳ್ಳೆ, ಎಸ್.ಕೆ.ನಾಯರ್ ಅವರು ಕ್ರಮವಾಗಿ ಸಂಕಲಿಸಿದ್ದಾರೆ. ಟಿ.ವಿ.ವೆಂಕಟರಮಣಯ್ಯನವರ ಕನ್ನಡ ಗಾದೆಗಳ ಕೋಶ 1963ರಲ್ಲಿ ಪ್ರಕಟವಾಯಿತು. ಇದು 4,234 ಗಾದೆಗಳನ್ನೊಳಗೊಂಡಿದ್ದು, ವಿಷಯಾನುಸಾರವಾಗಿ ಗಾದೆಗಳನ್ನು ವಿಭಜಿಸಿರುವ ಈ ಕೃತಿ ಉಲ್ಲೇಖನೀಯ ಸಂಗ್ರಹವಾಗಿದೆ. (1964, ಮರುಮುದ್ರಣ), ಪುತ್ತಿಗೆ ಶ್ರೀನಿವಾಸರಾಯರ ಕನ್ನಡ ತುಳು ಗಾದೆಗಳು ಎಂಬ ಸಂಕಲನ 1967ರಲ್ಲಿ ಪ್ರಕಟವಾಯಿತು.

ಜಾನಪದ ಸ್ನಾತಕೋತ್ತರ ಮಟ್ಟದ ಒಂದು ಅಧ್ಯಯನ ವಿಷಯವಾಗಿ ವಿಶ್ವವಿದ್ಯಾನಿಲಯದ ಮೆಟ್ಟಿಲೇರಿದ ತರುವಾಯ ಗಾದೆಗಳ ಸಂಗ್ರಹಣೆ, ಸಂಪಾದನೆ, ವಿಶ್ಲೇಷಣೆ, ಪ್ರಕಟಣೆಗಳಲ್ಲಿ ಹೊಸ ಚೇತನವುಂಟಾಯಿತೆನ್ನಬಹುದು. ಸಂಗ್ರಹಕಾರರು ಗ್ರಾಮಾಂತರ ಪ್ರದೇಶಗಳನ್ನು ಪ್ರವೇಶಿಸಿ ಕೃಷಿಗೆ ತೊಡಗಿದುದರ ಫಲವಾಗಿ ಅಜ್ಞಾತವಲಯದಲ್ಲಿ ಹುದುಗಿದ್ದ ಅಪೂರ್ವ ಗಾದೆಗಳು ಬೆಳಕಿಗೆ ಬಂದವು. ಈ ಬಗೆಯ ಜಾನಪದ ದೃಷ್ಟಿಯಿಂದ ಗಾದೆಗಳ ಸಂಗ್ರಹಕಾರ್ಯ ನಡೆಸಿದ ಕೀರ್ತಿ ರಾಗೌ ಅವರಿಗೆ ಸಲ್ಲುತ್ತದೆ. 1968ರಲ್ಲಿ ಪ್ರಕಟವಾದ ಇವರ ನಮ್ಮ ಗಾದೆಗಳು ಸಂಕಲನ ಹಲವಾರು ದೃಷ್ಟಿಗಳಿಂದ ಮಹತ್ತ್ವದ ಕೃತಿಯಾಗಿದೆ. ರಾಗೌ ಅವರು ಈವರೆಗೆ, 2,200 ಗಾದೆಗಳನ್ನು ಬೆಳಕಿಗೆ ತಂದಿದ್ದಾರೆ. ಈ ಸಂಕಲನ ಗಾದೆಗಳ ಸ್ವರೂಪಲಕ್ಷಣಾದಿಗಳನ್ನು ಕುರಿತ ವಿದ್ವತ್‌ಪೂರ್ಣ ಪ್ರಸ್ತಾವನೆ, ಇದು ಅತ್ಯುಪಯುಕ್ತ ಮಾಹಿತಿಗಳಿಂದ ಕೂಡಿದ್ದು ಈ ಕ್ಷೇತ್ರದಲ್ಲಿ ಕೆಲಸಮಾಡುವವರಿಗೆ ದಾರಿದೀಪವಾಗಿದೆ. ಇದೇ ಲೇಖಕರ ಮತ್ತೊಂದು ಶ್ರೇಷ್ಠ ಸಂಕಲನ ಕಿಟ್ಟೆಲ್ ಕೋಶದ ಗಾದೆಗಳು (1969). ಇದರಲ್ಲಿ ಕಿಟ್ಟೆಲ್ ಕೋಶದಲ್ಲಿ ಉದಾಹರಿಸಿರುವ 4,260 ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿದೆ.

1969ರಲ್ಲಿ ಪ್ರಕಟವಾದ ಅಚ್ಚಪ್ಪನವರ 'ಗ್ರಂಥಸ್ಥ ಗಾದೆಗಳು' ಕವಿರಾಜ ಮಾರ್ಗದಿಂದ ಮುದ್ದಣನ ವರೆಗಿನ ಕೆಲವು ಕಾವ್ಯಗಳಿಂದ ಆಯ್ದ ಗಾದೆಗಳು, ಉದ್ಧರಣೆಗಳು, ಸಾಮತಿಗಳು, ಜಾಣ್ನುಡಿಗಳು, ಸೂಕ್ತಿಗಳು, ರೂಪಕಗಳು ಇತ್ಯಾದಿಗಳನ್ನೊಳಗೊಂಡ ಸಂಕಲನ.

1971ರಲ್ಲಿ ಮಂಗಳೂರಿನ ಪಲಚಂವಿ ಪ್ರಕಾಶನದಿಂದ ಪ್ರಕಟವಾಗಿರುವ ಬಿ.ಎ.ವಿವೇಕ ರೈ ಅವರ ತುಳು ಗಾದೆಗಳು ಉಲ್ಲೇಖನೀಯ ಕೃತಿ. ಇದರಲ್ಲಿ 704 ತುಳು ಗಾದೆಗಳಿಗೆ ಸಂವಾದಿಯಾದ ಕನ್ನಡ ಗಾದೆ ಇಲ್ಲವೇ ಅರ್ಥವಿವರಣೆಯನ್ನು ಕೊಡಲಾಗಿದೆ. ವಿಸ್ತಾರವಾದ ಪ್ರಸ್ತಾವನೆ, ತುಳು ಕನ್ನಡ ಅರ್ಥಕೋಶಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಬಸಯ್ಯ ವಿರೂಪಾಕ್ಷಯ್ಯ ಮಠದ ಅವರ ಸಾವಿರ ಮಾತಿನ ಸರದಾರ ಎಂಬ ಸಂಕಲನ ಶ್ರೀ ಗುರುಲಿಂಗ ಜಂಗಮ ಗ್ರಂಥ ಪ್ರಸಾರಕ ಸಂಘ, ಹಳ್ಳಿಗುಡಿ, ಗದಗ ತಾಲ್ಲೂಕದಿಂದ ಪ್ರಕಟವಾಗಿದೆ (1972). ಇದರಲ್ಲಿ ಒಂದು ಸಾವಿರ ಗಾದೆಗಳಿವೆ. ಇದೇ ವರ್ಷ ಪ್ರಕಟವಾದ ಎಸ್.ವಿ.ಪರಮೇಶ್ವರಭಟ್ಟರ 'ನೆನಪಿಗೆ ಬಂದ ಗಾದೆಗಳು' 200 ಗಾದೆಗಳ ಸಂಕಲನ. ತುಳು ಗಾದೆಗಳ ಸಂಗ್ರಹಕಾರ್ಯದಲ್ಲಿ ತೊಡಗಿದ ಮತ್ತೊಬ್ಬರು ಬಿ.ದೂಮಪ್ಪ ಮಾಸ್ಟರ್. 1973ರಲ್ಲಿ ಪ್ರಕಟವಾದ ಇವರ ಮಾದಿರನ ಗಾದೆ ಎಂಬ ಸಂಕಲನದಲ್ಲಿ ಸಾವಿರ ಗಾದೆಗಳಿವೆ. ಇವುಗಳನ್ನು ಕನ್ನಡ ಲಿಪಿಯಲಿ ಗೀತರೂಪದಲ್ಲಿ ಪೋಣಿಸಿದೆ. ಚೌಡೇಗೌಡ ಬೀಡನಹಳ್ಳಿ ಅವರ ಪ್ರಾದೇಶಿಕ ಗಾದೆಗಳು 1973ರಲ್ಲಿ ಪ್ರಕಟವಾಯಿತು. ಗಾದೆಗಳ ಸಂಕಲನ ಗ್ರಂಥಗಳಲ್ಲಿ ಇನ್ನೊಂದು ಮಹತ್ತ್ವದ ಕೃತಿ ಎಂದರೆ ಸುಧಾಕರ ಅವರ ನಮ್ಮ ಸುತ್ತಿನ ಗಾದೆಗಳು ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದೆ (1973). ಕಾಳೇಗೌಡ ನಾಗವಾರ ಅವರ

ಬೀದಿಮಕ್ಕಳು ಬೆಳೆದೊ ಒಂದು ಉತ್ತಮ ಸಂಕಲನ. ಮೈಲಹಳ್ಳಿ ರೇವಣ್ಣ ಅವರ ದೀಪದ ಕೆಳಗೆ ಕತ್ತಲೆ ಎಂಬ 1412 ಗಾದೆಗಳ ಸಂಕಲನ ಇತ್ತೀಚಿನ ಕೃತಿ (2003).

ಜನಪದ ಗಾದೆಗಳಂತೆ ಅನೇಕ ಸ್ವತಂತ್ರ ಗಾದೆಗಳೂ ರಚಿತವಾಗಿವೆ. ಅವುಗಳಲ್ಲಿ ಹೆಚ್ಚು ಗಾದೆಗಳು ಅನುಕರಣೆಯಿಂದ ಮೂಡಿದವಾಗಿವೆ. ಉದಾ: ಊರಿಗೆ ಬಂದವಳು ನೀರಿಗೆ ಬರೋದಿಲ್ಲವೆ ಎಂಬ ಗಾದೆಗೆ ಸಂವಾದಿಯಾಗಿ ಸಿಟಿಗೆ ಬಂದವಳು ಸಿನಿಮಾಕ್ಕೆ ಬರೋದಿಲ್ಲವೆ ಇತ್ಯಾದಿ. ಇಂಥ ಗಾದೆಗಳನ್ನು ನಾ.ಕಸ್ತೂರಿ, ಎಸ್.ವಿ.ಪರಮೇಶ್ವರಭಟ್ಟ, ಎಚ್.ಜೆ.ಲಕ್ಕಪ್ಪಗೌಡ ಮೊದಲಾದವರು ರಚಿಸಿದ್ದಾರೆ.

ಗಾದೆಗಳ ಸಂಗ್ರಹಕಾರ್ಯದ ಜೊತೆಗೆ ವಿಮರ್ಶೆ ವಿಶ್ಲೇಷಣೆಗಳ ಕಾರ್ಯವೂ ನಡೆದಿದೆ. ಈ ಸಾಲಿನ ಮೊದಲ ಸ್ತುತ್ಯ ಪ್ರಯತ್ನವೆಂದರೆ ಪ್ರಹ್ಲಾದ ಕುಲಕರ್ಣಿಯವರ ನಾಣ್ಣುಡಿ ಎಂಬ ಕೃತಿ (1936). ಗಾದೆಗಳ ಉಗಮ, ವಿಕಾಸ, ಸ್ವರೂಪಗಳ ಅಧ್ಯಯನದ ಆವಶ್ಯಕತೆಯನ್ನು ಇಷ್ಟು ಹಿಂದೆಯೇ ಅರಿತುಕೊಂಡದ್ದು ಶ್ರೀಯುತರ ವೈಶಿಷ್ಟ್ಯವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾದ ಎ.ಕೆ.ರಾಮನುಜನ್ ಅವರ ಗಾದೆಗಳು (1955) ಎಂಬ ಚಿಕ್ಕ ಪುಸ್ತಕ ಗಾದೆಗಳ ವೈಚಾರಿಕ ಅಧ್ಯಯನದ ಆವಶ್ಯಕತೆಯನ್ನು ಎತ್ತಿ ತೋರಿಸುತ್ತದೆ. ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟವಾದ ನಂ.ತಪಸ್ವೀಕುಮಾರ್ ಅವರ 'ಕನ್ನಡ ಗಾದೆಗಳ ಸಮೀಕ್ಷೆ' ಒಂದು ವಿದ್ವತ್ಪೂರ್ಣ ಕೃತಿ (1972). ಈ ಕೃತಿಯಲ್ಲಿ ಗಾದೆಗಳ ಹುಟ್ಟು, ಬೆಳೆವಣಿಗೆ, ಸ್ವರೂಪ, ಸಾಹಿತ್ಯಕ, ಸಾಮಾಜಿಕ ಮೌಲ್ಯಗಳನ್ನು ಸಮರ್ಪಕ ರೀತಿಯಲ್ಲಿ ವಿವೇಚಿಸಲಾಗಿದೆ. ಇಷ್ಟಲ್ಲದೆ ಗಾದೆಗಳನ್ನು ಕುರಿತ ಹಲವಾರು ಲೇಖನಗಳು ವಿವಿಧ ಲೇಖಕರ ಕೃತಿಗಳಲ್ಲಿ, ಪತ್ರಿಕೆಗಳಲ್ಲಿ ಚೆದುರಿಹೋಗಿವೆ. ಗಾದೆಗಳನ್ನು ಕುರಿತಂತೆ ನಾನಾದೃಷ್ಟಿಕೋನದ ಅಧ್ಯಯನ ಅಗತ್ಯ ಎಂಬುದನ್ನು ಈ ಲೇಖನಗಳು ತೋರಿಸಿಕೊಟ್ಟಿವೆ. (ಪಿ.ಕೆ.ಆರ್.)

**ಗಾಳಿ :** ಜನಪದ ನಂಬಿಕೆಗಳ ಪ್ರಕಾರ ಜನರಿಗೆ ಕೇಡುಂಟುಮಾಡುವ ಒಂದು ಕ್ಷುದ್ರ ಶಕ್ತಿ. ಗಾಳಿಯನ್ನು ಪೀಡೆ, ಪಿಶಾಚಿ, ದೆವ್ವ, ದಯ್ಯ, ಜಕ್ಕಣಿ, ರಾಹು, ಗಾಳಿಸೋಂಕು ಮುಂತಾದ ಹೆಸರಿನಿಂದಲೂ ಕರೆಯುತ್ತಾರೆ. ಅಕಾಲಮರಣಕ್ಕೆ ತುತ್ತಾದವರು, ಜೀವನದಲ್ಲಿ ಜಿಗುಪ್ಸೆಹೊಂದಿ ಆತ್ಮಹತ್ಯೆ ಮಾಡಿಕೊಂಡವರು, ಅತೃಪ್ತಿಯಿಂದ ಸತ್ತವರು ಅಥವಾ ಉತ್ತರಕ್ರಿಯಾದಿಗಳು ಕ್ರಮಬದ್ಧವಾಗಿ ನಡೆಯದೆ ಹೂಳಲ್ಪಟ್ಟವರು ಗಾಳಿಯಾಗಿ ಕಾಡುತ್ತಾರೆ ಎಂಬ ನಂಬಿಕೆಯಿದೆ. ಸಾಮಾನ್ಯವಾಗಿ ಸ್ತ್ರೀಯರಿಗೆ ಪುರುಷಗಾಳಿ, ಪುರುಷರಿಗೆ ಸ್ತ್ರೀಗಾಳಿ ಹಿಡಿಯುತ್ತದೆಂದು ಹೇಳುವುದುಂಟು. ಸ್ತ್ರೀಯರಿಗೆ ಸ್ತ್ರೀಗಾಳಿ, ಪುರುಷರಿಗೆ ಪುರುಷಗಾಳಿ ಹಿಡಿದರೆ ಹೆಚ್ಚು ಅಪಾಯವಂತೆ. ಹುಣಿಸೇಮರ, ಆಲದಮರ, ಹಾಗೂ ಶ್ಮಶಾನದ ಸುತ್ತಮುತ್ತಲಿನ ಪ್ರದೇಶ ಗಾಳಿಯ ವಾಸಸ್ಥಾನ. ಈ ಜಾಗದಲ್ಲಿ ಮಟಮಟ ಮಧ್ಯಾಹ್ನದಲ್ಲಿ ಒಬ್ಬರೇ ಇದ್ದಾಗ ಗಾಳಿ ಅವರನ್ನು ಹಿಡಿಯುತ್ತದೆಯಂತೆ. ಅಮಾವಾಸ್ಯೆ ಮತ್ತು ಹುಣ್ಣಿಮೆ ದಿವಸಗಳಲ್ಲಿ ಇದು ಜಾಸ್ತಿ.

ಗಾಳಿಗೆ ಇಂಥದೇ ನಿಶ್ಚಿತರೂಪವೆಂಬುದಿಲ್ಲ. ಕುರಿ, ನಾಯಿ, ಬೆಕ್ಕು ಮುಂತಾದ ಯಾವುದಾದರೊಂದು ಪ್ರಾಣಿರೂಪದಲ್ಲಿ ಬಂದು ವ್ಯಕ್ತಿಯ ಕಾಲಿನ ಮಧ್ಯದಲ್ಲಿ ನುಸುಳಿಹೋದಂತಾಗುವುದು, ಪಕ್ಕದಲ್ಲಿ ಹಾದು ಹೋಗುವುದು, ಇದ್ದಕ್ಕಿದ್ದಂತೆ ಹಾಗೆಯೇ ದೊಡ್ಡದಾಗಿ ಬೆಳೆಯುವುದು ಅಥವಾ ಆ ಕ್ಷಣದಲ್ಲೇ ಮಾಯವಾಗುವುದು, ಇಲ್ಲವೇ ಅಕ್ಕಪಕ್ಕದಲ್ಲಿದ್ದ ಮರವನ್ನು ಜೋರಾಗಿ ಅಲ್ಲಾಡಿಸಿ ಒಂದು ರೀತಿಯ ಭಯೋತ್ಪಾದಕ ಶಬ್ದವನ್ನುಂಟುಮಾಡುವುದು ಈ ಮೊದಲಾದ ಬಾಹ್ಯಾಚರಣೆಗಳ ಮೂಲಕ ಮನುಷ್ಯರನ್ನು ಗಾಳಿ ಹಿಡಿಯುವುದೆಂದು ನಂಬಿಕೆ. ಗಾಳಿ ಹಿಡಿದಾಗ ಹಿಡಿದ ವ್ಯಕ್ತಿಗೆ ಆ ಸ್ಥಳದಲ್ಲೇ ಮೈ ನಡುಗಿದಂತಾಗಿ ಜ್ವರ ಬರುವುದು, ಅನಂತರ ಚೇಷ್ಟೆ ಪ್ರಾರಂಭವಾಗುವುದು- ಇದ್ದಕ್ಕಿದ್ದಂತೆ ಹುಚ್ಚನಂತೆ ಓಡಾಡುವುದು, ವಿಚಿತ್ರವಾಗಿ ಕೂಗಾಡುವುದು, ಮೈಕೈಗಳನ್ನು ಕುಣಿಸುವುದು, ಆ ಸಮಯದಲ್ಲಿ ನಾಲ್ಕಾರು ಮಂದಿ ಹಿಡಿದುಕೊಂಡರೂ ಬಗ್ಗದಿರುವುದು, ವಿಚಿತ್ರ ರೀತಿಯಲ್ಲಿ ವರ್ತಿಸುವುದು, ತನಗೆ ಬರದ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವುದು ಮೊದಲಾದ ಕ್ರಿಯೆಗಳು ನಡೆಯುತ್ತವೆ. ಗಾಳಿಯ ಉಪಶಮನವಾದ ಅನಂತರ ಗಾಳಿ ಹಿಡಿದ ಸಂದರ್ಭದಲ್ಲಿ ತಾನೇನು ಮಾಡಿದೆನೆಂಬ ಪರಿವೆ ಆ ವ್ಯಕ್ತಿಗೆ ಇರುವುದಿಲ್ಲ. ಗಾಳಿ ಸ್ವಜನರನ್ನೂ ಅನ್ಯರನ್ನೂ ಹಿಡಿಯುತ್ತವಂತೆ. ಒಟ್ಟಿನಲ್ಲಿ ಗಾಳಿಗೆ ಯಾರಾದರೊಬ್ಬರ ಆಶ್ರಯ ಬೇಕಾಗಿರುತ್ತದೆ.

ಮುತ್ತೈದೆಯರು ಆಕಸ್ಮಿಕವಾಗಿಯಾಗಲಿ ದುರ್ಮರಣ ಕ್ಕೊಳಗಾಗಿಯಾಗಲಿ ಸತ್ತರೆ ಗಾಳಿಯಾಗುವರಂತೆ. ಇವರನ್ನು ಜಕ್ಕಣಿಯರು ಎಂದು ಕರೆಯುತ್ತಾರೆ. ಗಾಳಿಯಾದ ಇವರ ಆತ್ಮಕ್ಕೆ ತೃಪ್ತಿಯನ್ನುಂಟು ಮಾಡಲು ಮತ್ತು ಕುಟುಂಬದವರಿಗೆ ಕೆಡಕುಂಟಾಗದಿರಲೆಂದು ವರ್ಷಕ್ಕೊಂದು ಸಾರಿ ಮುತ್ತೈದೆ ಪೂಜೆಯನ್ನು ಹೂವು ವೀಳ್ಯದೊಂದಿಗೆ ಆಚರಿಸಿ ಆ ದಿವಸ ಮುತ್ತೈದೆಯರಿಗೆ ಹೂವು ಅರಿಶಿನ ಕುಂಕುಮ ಫಲ ತಾಂಬೂಲ ಕೊಟ್ಟು ಪೂಜಿಸುವುದರೊಂದಿಗೆ ವಿಶೇಷ ಅಡುಗೆ ಮಾಡಿ ಊಟ ಹಾಕುವುದರಿಂದ ಉಪಶಮನ ಮಾಡಿಕೊಳ್ಳುವುದುಂಟು.

ಗಾಳಿಗಳಲ್ಲಿ ಹಲವು ರೀತಿಗಳುಂಟು: ಅರಿವಿಲ್ಲದ ಗಾಳಿ, ಅರಿವಿನ ಗಾಳಿ ಅರಿವಿನ ಗಾಳಿಯಾದರೆ ಗಾಳಿ ಮೈ ಮೇಲೆ ಬಂದ ತತ್‌ಕ್ಷಣ ಮಾತಾಡುತ್ತದೆ. ಅರಿವಿಲ್ಲದ ಗಾಳಿಯಾದರೆ ಮಾತಾಡುವುದಿಲ್ಲ. ಮಾತನಾಡದ ಗಾಳಿಯಿಂದ ಅಪಾಯ ಹೆಚ್ಚು ಎಂದು ನಂಬಿಕೆ. ಕೊಳ್ಳಿ ದೆವ್ವ ಅಥವಾ ಪ್ಯಾಕೊಳ್ಳಿ ದೆವ್ವ ಎಂಬ ಒಂದು ಗಾಳಿ ಓಡಾಡುವಾಗ ಪಂಜಿನಂತೆ ಬೆಂಕಿ ಉರಿಯುತ್ತಿರುತ್ತದಂತೆ. ದೆವ್ವಗಳಲ್ಲಿ ಕೆಲವು ಸೌಮ್ಯಸ್ವಭಾವದವಾಗಿದ್ದು ಅವು ಸುಮ್ಮನೆ ಮನುಷ್ಯನನ್ನು ದಾರಿ ತಪ್ಪಿಸುವುದು ಇಲ್ಲವೇ ಸ್ವಲ್ಪ ಹೆದರಿಕೆಯನ್ನುಂಟುಮಾಡುವ ಚೇಷ್ಟೆಯಷ್ಟೇ ಮಾಡಿ ಕೈ ಬಿಡುತ್ತವೆಯಂತೆ. ಇವುಗಳಿಂದ ಪ್ರಾಣಕ್ಕೆ ಅಪಾಯವಿಲ್ಲ. ಮೈಮೇಲೆ ದೆವ್ವ ಬಂದಾಗ ಅದನ್ನು ಬಿಡಿಸುವುದಕ್ಕೆ ಜನ ಕೆಲವು ವಿಶಿಷ್ಟ ಆಚರಣೆಗಳಲ್ಲಿ ತೊಡಗುತ್ತಾರೆ. ದೆವ್ವ ಮೈಮೇಲೆ ಬಂದ ವ್ಯಕ್ತಿಯ ಮುಂದೆ ಕುಳಿತು ಅವನಿಗೆ ಅಥವಾ ಅವಳಿಗೆ ಅನೇಕ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ. ಆಗ ದೆವ್ವ ಕೆಲವು ವೇಳೆ ಸರಿಯಾದ ಉತ್ತರವನ್ನು ಹೇಳಿ ತನ್ನ ಪೂರ್ವೋತ್ತರಗಳನ್ನು ತಿಳಿಸುವುದರೊಂದಿಗೆ ತಾನು ಬಂದಿರುವ ಉದ್ದೇಶವನ್ನು ತಿಳಿಸಿ, ತಾನು ಬಿಟ್ಟುಹೋಗಬೇಕಾದರೆ ಮಾಡಬೇಕಾದ ಕ್ರಿಯೆಗಳನ್ನು ತಿಳಿಸುತ್ತದೆ. ಗಾಳಿ ಬಿಡಿಸುವ ಕ್ರಿಯೆ ಸಾಮಾನ್ಯವಾಗಿ ಊರಿನ ಗ್ರಾಮದೇವತೆಯ ಗುಡಿಯಲ್ಲಿ ಅಥವಾ ಅಲ್ಲಿನ ಯಾವುದಾದರೊಂದು ಪ್ರಮುಖ ದೇವಸ್ಥಾನದಲ್ಲಿ ನಡೆಯುತ್ತದೆ. ಮಂತ್ರವಿದ್ಯೆಯನ್ನು ಕಲಿತ ವ್ಯಕ್ತಿ ಆ ಕ್ರಿಯೆಗಳನ್ನು ನಡೆಸಿಕೊಡುತ್ತಾನೆ. ದೆವ್ವ ಬಿಟ್ಟುಹೋದ ಗುರುತಿಗಾಗಿ ಕಲ್ಲು ಹುಯ್ಯುವುದು ಎಂಬ ಕಾರ್ಯ ನಡೆಯುತ್ತದೆ. ಸುಮಾರು ಎರಡು ಅಡಿ ಉದ್ದ ಒಂದೂವರೆ ಅಡಿ ಅಗಲವಿರುವ ಕಲ್ಲಿನ ಮೇಲೆ ಮನುಷ್ಯನ ಆಕೃತಿಯನ್ನು ಹೋಲುವ ರೇಖೆಯನ್ನು ಬಿಡಿಸಿ ಅದನ್ನು ದೇವಸ್ಥಾನದ ಒಂದು ಪಕ್ಕದಲ್ಲಿ ನೆಟ್ಟು ಪೂಜೆಮಾಡಿ ದೆವ್ವ ಬಯಸಿದ ಬಟ್ಟೆಬರೆ ಭಕ್ಷ್ಯ ಮೊದಲಾದವುಗಳನ್ನು ಇಟ್ಟು ಗಾಳಿ ಹಿಡಿದಿರುವ ವ್ಯಕ್ತಿಯನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ಪೂಜಿಸಿ ದೆವ್ವ ಬಿಟ್ಟು ಹೋದ ಗುರುತಿಗಾಗಿ ದೆವ್ವ ಹಿಡಿದ ವ್ಯಕ್ತಿಯ ತಲೆಕೂದಲನ್ನು ಕಿತ್ತು ಕಲ್ಲಿನ ಮೇಲೆ ಇಡುತ್ತಾರೆ. ಇಷ್ಟೆಲ್ಲ ಕಾರ್ಯಗಳನ್ನು ದೆವ್ವ ಬಿಡಿಸುವಿಕೆಯಲ್ಲಿ ಪರಿಣತಿ ಪಡೆದ ವ್ಯಕ್ತಿ ನಿರ್ವಹಿಸುತ್ತಾನೆ. ಕೆಲವು ವೇಳೆ ಗಾಳಿ ಹೆಚ್ಚು ತಕರಾರು ಮಾಡಿದರೆ ಅಂಥದನ್ನು ಬಿಡಿಸಲು ದಕ್ಷರಾದ ಮಾಂತ್ರಿಕರನ್ನು ಕರೆಸಿ ವಿಧಿವತ್ತಾಗಿ ಉಗ್ರಸ್ವರೂಪದ ಪೂಜೆಯನ್ನು ಮಾಡಿಸುವುದೂ ಉಂಟು. ಇಂಥ ಪೂಜೆಗಳನ್ನು ಅಮಾವಾಸ್ಯೆಯ ದಿನದಂದು ಶ್ಮಶಾನದಲ್ಲಿ ನಡೆಸುತ್ತಾರೆ. ಇದಕ್ಕೆ ಸಾಕಷ್ಟು ಹಣ ವೆಚ್ಚವಾಗುವುದುಂಟು.

ಕೆಲವು ಸಂದರ್ಭಗಳಲ್ಲಿ ಅವಿವಾಹಿತರಾಗಿ ಸತ್ತವರು ಗಾಳಿಯಾಗಿ ಬಂದು ಯಾರದಾದರೂ ಹೆಗಲೇರಿ ತಾನು ಬಿಟ್ಟು ಹೋಗಬೇಕಾದರೆ ಅವರೊಂದಿಗೆ ಮದುವೆ ಮಾಡಿಕೊಡಬೇಕೆಂದು ಒತ್ತಾಯಪಡಿಸುತ್ತವೆಯಂತೆ. ಆಗ ಈಡು ಕಟ್ಟುವುದು ಎಂಬ ಕ್ರಿಯೆ ನಡೆಯುತ್ತದೆ. ನಾಲ್ಕಾಣೆಯನ್ನು ಗಾಳಿ ಬಂದ ವ್ಯಕ್ತಿಯ ಮೇಲೆ ದೇವರ ಹೆಸರಿನಲ್ಲಿ ಮೂರು ಬಾರಿ ನಿವಾಳಿಸಿ ಆ ಹಣವನ್ನು ಜೋಪಾನವಾಗಿ ಇಡುತ್ತಾರೆ. ಇದಕ್ಕೆ ಮುಡುಪು ಕಟ್ಟುವುದು ಎಂದೂ ಕರೆಯುತ್ತಾರೆ. ಆಗ ಗಾಳಿ ಸಮಾಧಾನ ಸ್ಥಿತಿಗೆ ಬರುತ್ತದೆಯಂತೆ; ಅನಂತರ ಗಾಳಿ ಹೇಳಿರುವ ವಾಯಿದೆ

ಮುಗಿಯುವುದರೊಳಗೆ ಎಲ್ಲಿಯಾದರೂ ಈ ಗಾಳಿಯಂತೆ ಆಗಿರುವ ಮತ್ತೊಂದು ಮನೆಯವರನ್ನು (ಅಂದರೆ ಹುಡುಗನಾಗಿದ್ದರೆ ಹುಡುಗಿ, ಹುಡುಗಿಯಾಗಿದ್ದರೆ ಹುಡುಗ) ಹುಡುಕಿ ಎರಡು ಮನೆಯವರು ಪರಸ್ಪರ ಒಪ್ಪಿಗೆ ಪಡೆದು ಶಾಸ್ತ್ರೋಕ್ತವಾಗಿ ಮಾಮೂಲಿ ಮದುವೆಯಂತೆಯೇ ಒಂದು ಶುಭದಿವಸ ಮದುವೆಗೆ ಬೇಕಾದ ಸಾಮಾನುಗಳನ್ನೆಲ್ಲ ಉಪಯೋಗಿಸಿ ಎರಡು ಮಣೆಗಳನ್ನಿಟ್ಟು ಅವುಗಳ ಮೇಲೆ ಪುರುಷ ಮತ್ತು ಸ್ತ್ರೀಯರು ಧರಿಸುವ ಬಟ್ಟೆಗಳನ್ನಿಟ್ಟು ಮಂಗಲ ಕಾರ್ಯವನ್ನು ಮಾಡುವಂತೆಯೇ ಎಲ್ಲ ಕಾರ್ಯಗಳನ್ನೂ ಕ್ರಮವಾಗಿ ಮಾಡುತ್ತಾರೆ. ಆಗ ಗಾಳಿಯು ಬಿಡುಗಡೆ ಯಾಗುತ್ತದೆಂದು ನಂಬಿಕೆಯಿದೆ.

ಗಾಳಿ ಬಿಡಿಸಲು ಹಲವಾರು ಕಡೆಗಳಲ್ಲಿ ಹಲವಾರು ವಿಧಾನಗಳನ್ನು ಅನುಸರಿಸುತ್ತಾರೆ. ಗಾಳಿಗಳಲ್ಲಿ ವೈವಿಧ್ಯ ಇರುವಂತೆಯೇ ಅವುಗಳ ಬಿಡಿಸುವಿಕೆಯಲ್ಲಿಯೂ ಅನೇಕ ವಿಧಾನಗಳಿವೆ. ಕರ್ನಾಟಕದಲ್ಲಿ ಮಹದೇಶ್ವರ ಬೆಟ್ಟ, ಧರ್ಮಸ್ಥಳ, ಬಿಜಾಪುರದ ಗೋಲಗುಂಬಜ್ ಮೊದಲಾದ ಪುಣ್ಯಕ್ಷೇತ್ರಗಳಲ್ಲಿ ಗಾಳಿ ಬಿಡಿಸುವ ಪರಿಪಾಠ ಇಂದಿಗೂ ಕಂಡುಬರುತ್ತದೆ.

ಗಾಳಿ ಸಾಮಾನ್ಯವಾಗಿ ಯಾರಿಗೂ ಗೋಚರಿಸುವುದಿಲ್ಲ. ಬಹಳ ಅಪರೂಪವಾಗಿ ಯಾರಿಗಾದರೂ ಕಂಡರೆ ಕಂಡವರಿಗೆ ಅಪಾಯ ಇಲ್ಲವೇ ಅಂಥವರು ವಿಶೇಷ ಗುಣವುಳ್ಳ ಕಣ್ಣಿನವರೆಂದು ತಿಳಿಯುವುದುಂಟು.

ಇಂದಿಗೂ ಅನೇಕರಲ್ಲಿ ಗಾಳಿಯ ಬಗ್ಗೆ ನಂಬಿಕೆ, ಹೆದರಿಕೆ ಇದ್ದು, ಭಯಭಕ್ತಿಯಿಂದ ಪೂಜೆಮಾಡುವವರ ಸಂಖ್ಯೆಯೂ ಸಾಕಷ್ಟು ಪ್ರಮಾಣದಲ್ಲಿ ಇರುವುದು ಕಂಡುಬರುತ್ತದೆ. ಗಾಳಿ ಬಿಡಿಸುವ ಅಥವಾ ಅದರ ಉಪದ್ರವವನ್ನು ನಿವಾರಿಸುವ ಅನೇಕ ಮಾಂತ್ರಿಕರು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಹಾಗೂ ಮಾಡರಹಳ್ಳಿಯಲ್ಲಿದ್ದರು. ಈಗ ಅವರ ಸಂಖ್ಯೆ ಬಹಳಷ್ಟು ಕಡಿಮೆಯಾಗಿದ್ದು ಅನೇಕರು ತಮ್ಮ ವಿದ್ಯೆಯನ್ನು ಬಿಟ್ಟು ಬೇರೆ ಬೇರೆ ವೃತ್ತಿಯನ್ನು ಅವಲಂಬಿಸುತ್ತಿದ್ದಾರೆ. (ಟಿ.ಎಸ್.ಆರ್.)

**ಗಿರಿ, ವಿ.ವಿ. :** 1894-1980. ಭಾರತದ ಮಾಜಿ ರಾಷ್ಟ್ರಪತಿ (1969-74). ವರಾಹಗಿರಿ ವೆಂಕಟಗಿರಿ ಎಂಬುದು ಇವರ ಪೂರ್ಣ ಹೆಸರು. ಒರಿಸ್ಸದ ಗಂಜಾಂ ಜಿಲ್ಲೆಯ ಬರ್ಹಾಂಪುರದಲ್ಲಿ 1894 ಆಗಸ್ಟ್ 10ರಂದು ಏಳು ಗಂಡು ಐದು ಹೆಣ್ಣುಮಕ್ಕಳ ಸಂಸಾರದಲ್ಲಿ ಎರಡನೆಯ ಮಗನಾಗಿ ಜನಿಸಿದರು. ಇವರ ತಂದೆ ಜೋಗಯ್ಯ ಪಂತುಲು ವಕೀಲರು; ರಾಜಕಾರಣದಲ್ಲೂ ಅವರಿಗೆ ಆಸಕ್ತಿಯಿತ್ತು. ತಮ್ಮ ಮಗ ತಮ್ಮಂತೆಯೇ ವಕೀಲನಾಗಬೇಕೆಂಬುದು ಅವರ ಬಯಕೆಯಾಗಿತ್ತು. ಬಾಲ್ಯದಲ್ಲಿ ಗಿರಿಯವರಿಗೆ ಮಾರ್ಗದರ್ಶನ ನೀಡಿದವರು ಶಿಕ್ಷಕ ರಾಮಲಿಂಗಂ. ಆಗಿನ ಅವರ ಚಟುವಟಿಕೆಗಳು ಗಾಂಧೀಜಿವರ ಸತ್ಯಾಗ್ರಹವೇ

ಮುಂತಾದ ಅನಂತರದ ಚಳವಳಿಗಳಲ್ಲಿ ಭಾಗವಹಿಸಲು ಗಿರಿಯವರಿಗೆ ಪೂರ್ವಭಾವಿ ಸಿದ್ಧತೆಯನ್ನೊದಗಿಸಿದುವು. ಗಿರಿಯವರು ಮದರಾಸಿನಲ್ಲಿ ಕೇಂಬ್ರಿಜ್ ಸೀನಿಯರ್ ಪರೀಕ್ಷೆ ಮಾಡಿ ಅನಂತರ ಐರ್ಲೆಂಡಿನ ಡಬ್ಲಿನ್ ರಾಷ್ಟ್ರೀಯ ವಿದ್ಯಾಲಯವನ್ನು ಸೇರಿ ಕಿಂಗ್ಸ್ ಇನ್‌ನಲ್ಲಿ ಬ್ಯಾರಿಸ್ಟರ್ ಆದರು. ಇವರು ಬಿ.ಎ. ಪದವಿಗೆ ಸಾಹಿತ್ಯ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಂವಿಧಾನ, ನ್ಯಾಯ, ಅಂತಾರಾಷ್ಟ್ರೀಯ ಕಾನೂನುಗಳನ್ನು ಆರಿಸಿಕೊಂಡಿದ್ದರು. ಅಲ್ಲಿ ಅನೇಕ ಭಾರತೀಯ ವಿದ್ಯಾರ್ಥಿಗಳು ಸೇರಿ ಕ್ರಾಂತಿಕಾರಿ ಸಂಘವನ್ನು ಸ್ಥಾಪಿಸಿಕೊಂಡರು. ರಾಷ್ಟ್ರಪ್ರೇಮವನ್ನು ತೋರಿಸಲು ವಿದೇಶೀ ಅರಿವೆಗಳನ್ನು ಸುಟ್ಟುಹಾಕಿದರು. ಐರ್ಲೆಂಡು ಇಂಗ್ಲೆಂಡಿನಿಂದ ಸ್ವತಂತ್ರವಾಗಲು ಹೋರಾಟದ ಹವಣಿಕೆಯಲ್ಲಿದ್ದದ್ದನ್ನು ಕಂಡಾಗ ಗಿರಿಯವರಿಗೆ ಭಾರತ ಐರ್ಲೆಂಡ್‌ಗಳ ಆಶೋತ್ತರಗಳಲ್ಲಿದ್ದ ಸಾಮ್ಯ ಗೋಚರವಾಯಿತು. ಐರ್ಲೆಂಡಿನವರು ಇಂಗ್ಲೆಂಡಿನವರಿಗಿಂತ ಹೆಚ್ಚಾಗಿ ಭಾರತೀಯರನ್ನು ಗೌರವಿಸುತ್ತಿದ್ದದ್ದನ್ನು ಗಿರಿಯವರು ಗಮನಿಸಿದರು. ಐರ್ಲೆಂಡಿನ ನಾಯಕ ಡ ವಲೇರ ಅವರನ್ನು ಗಿರಿಯವರು ಸಂದರ್ಶಿಸಿದರು.

ಗಿರಿಯವರು 1914ರಲ್ಲಿ ಗಾಂಧೀಜಿಯವರನ್ನು ಲಂಡನ್ನಿನಲ್ಲಿ ಸಂದರ್ಶಿಸಿದರು. ಗಾಂಧೀಜಿಯವರ ಎಲ್ಲ ವಿಚಾರಗಳನ್ನೂ ಉದಾಹರಣೆಗೆ ಅಹಿಂಸೆಯನ್ನು, ಆಗ ಗಿರಿಯವರು ಒಪ್ಪುತ್ತಿರಲಿಲ್ಲವಾದರೂ ಗಾಂಧೀಜಿಯವರಿಂದ ಬಹುಮಟ್ಟಿಗೆ ಪ್ರಭಾವಿತರಾದರು. ಯುದ್ಧದಲ್ಲಿ ಬ್ರಿಟಿಷರಿಗೆ ನೆರವಾಗಲು ಗಾಂಧೀಜಿಯವರ ಮಾತಿನಂತೆ ಗಿರಿಯವರು ರೆಡ್ ಕ್ರಾಸ್ ಸಂಸ್ಥೆ ಸೇರಿದ್ದರೂ ಅನಂತರ ವಿಚಾರ ಮಾಡಿದಾಗ ತಾವು ಅದಕ್ಕೆ ಸೇರಿದ್ದು ತಪ್ಪೆನಿಸಿ ಕೂಡಲೇ ಗಾಂಧೀಜಿಯವರಿಗೆ ಪತ್ರ ಬರೆದು ಆ ಸಂಸ್ಥೆಯಿಂದ ಬಿಡುಗಡೆ ಹೊಂದಿದರು. ಈ ಕ್ರಮ ಆಗ ಕಾನೂನುಬಾಹಿರವಾಗಿತ್ತಾದರೂ ಗಿರಿಯವರು ಹೆದರಲಿಲ್ಲ.

1916ರಲ್ಲಿ ಲಂಡನ್ನಿನಲ್ಲಿ ಜರುಗಿದ ಈಸ್ಟರ್ ದಂಗೆಯ ಅನಂತರ ಸಂಭವಿಸಿದ ದುರ್ಘಟನೆಗಳ ವಿಶೇಷ ಪರಿಣಾಮ ಗಿರಿಯವರ ಮೇಲಾಯಿತು. ಬಂದರು, ಗಣಿ ಮತ್ತು ರೈಲ್ವೆಗಳ ಸುಸಂಘಟಿತ ಕಾರ್ಮಿಕರು ಮುಷ್ಕರದ ಮೂಲಕ ಏನು ಮಾಡಬಲ್ಲರೆಂಬುದು ಗಿರಿಯವರಿಗೆ ಮನವರಿಕೆಯಾಯಿತು. ಭಾರತಕ್ಕೆ ಮರಳಿದ ಮೇಲೆ ಇದೇ ರೀತಿ ಕಾರ್ಮಿಕ ಶಕ್ತಿಯನ್ನು ಸಂಘಟಿಸಿ ಅದನ್ನು ರಾಜಕೀಯ ಹೋರಾಟದಲ್ಲಿ ಬಳಸಿಕೊಳ್ಳಬೇಕೆಂದು ನಿರ್ಧರಿಸಿದರು. ಆ ವೇಳೆಗಾಗಲೇ ಬ್ರಿಟಿಷ್ ಸರ್ಕಾರಕ್ಕೆ ಇವರ ಮೇಲೆ ಸಂಶಯ ಬಂದಿತ್ತು. ಆಗಿನ ಸೆಕ್ರೆಟರಿ ಆಫ್ ಸ್ಟೇಟ್ ಚೇಂಬರ್ಲಿನ್ ಕಾಮನ್ಸ್ ಸಭೆಯಲ್ಲಿ ಹೇಳಿಕೆ ಕೊಡುತ್ತ, ಗಿರಿಯವರಿಗೂ ಐರಿಷ್ ನಾಯಕರಿಗೂ ಸಂಪರ್ಕವಿದೆಯೆಂದು ಘೋಷಿಸಿದ. ಇದರ ಪರಿಣಾಮವಾಗಿ ಗಿರಿಯವರಿಗೆ ಅಮೆರಿಕಕ್ಕೆ ಹೋಗಲು ರಹದಾರಿ ಸಿಗಲಿಲ್ಲ. ಸ್ವದೇಶಕ್ಕೆ ಮರಳಿದರು. 1917ರಲ್ಲಿ ಸರಸ್ವತೀಬಾಯಿಯವರೊಡನೆ ಗಿರಿಯವರ ವಿವಾಹವಾಯಿತು. ಸರಸ್ವತೀಬಾಯಿ ಗಿರಿಯವರು ಬಳ್ಳಾರಿ ಜಿಲ್ಲೆಯವರು.

ಕಾರ್ಮಿಕ ಕ್ಷೇತ್ರವೆಂದರೇನೆಂಬುದು ಇನ್ನೂ ತಿಳಿಯದಿದ್ದ ಆ ಸಮಯದಲ್ಲಿ ಗಿರಿಯವರು ಆ ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದರು. 1915ರಲ್ಲಿಯೇ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಸದಸ್ಯರಾಗಿ ಸೇರಿದ್ದ ಇವರು ಮಹಾತ್ಮ ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲೂ ಕೆಲವು ದಿನ ಇದ್ದರು.

ಇವರು ಭಾರತಕ್ಕೆ ಮರಳಿದ ಅನಂತರ ಆಗ ಸುಪ್ರಸಿದ್ಧ ಬ್ಯಾರಿಸ್ಟರರೂ ರಾಜಕಾರಣಿಯೂ ಆಗಿದ್ದ ಟಿ.ಪ್ರಕಾಶಂ ಅವರನ್ನು ವೃತ್ತಿಸಂಬಂಧವಾಗಿ ಭೇಟಿಮಾಡಿದರು. ಗಿರಿಯವರು ಅಡ್ವೊಕೇಟ್ ಆಗಿ ಸೇರಿದಾಗ ಗಂಜಾಮಿನ ಜಿಲ್ಲಾ ನ್ಯಾಯಾಧೀಶ ಇವರಿಗೆ ಮುನ್ಸಿಫ್ ಸ್ಥಾನ ಕೊಡಿಸುವುದಾಗಿ ಹೇಳಿದನೆಂದೂ ಇವರ ಕ್ರಾಂತಿಕಾರಿ ವಿಚಾರಗಳನ್ನು ಅರಿತ ಮೇಲೆ ಆತ ಹೆದರಿದನೆಂದೂ ಹೇಳಲಾಗಿದೆ. ಗಿರಿಯವರು ವಕೀಲವೃತ್ತಿಯಲ್ಲಿ ಐದು ವರ್ಷ ಕಳೆಯುವುದರೊಳಗಾಗಿ ಸ್ವಾತಂತ್ರ್ಯ ಹೋರಾಟ ಇವರನ್ನು ಸೆಳೆಯಿತು. 1916ರಲ್ಲಿ ಇವರು ಲಖನೌದಲ್ಲಿ ಸೇರಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. 1921ರಲ್ಲಿ ಸತ್ಯಾಗ್ರಹ ಚಳವಳಿಯಲ್ಲಿ ಗಂಜಾಮಿನಲ್ಲಿ ಸತ್ಯಾಗ್ರಹ ಹೂಡಿ ಬಂಧಿತರಾದರು. ಇವರು ಜೈಲಿನಲ್ಲಿದ್ದಾಗ ರಾಜಕೀಯ ಧುರೀಣರ ಸ್ನೇಹವನ್ನು ಗಳಿಸಿಕೊಳ್ಳುವ ಅವಕಾಶ ಸಿಕ್ಕಿತು. ಕಾರಾಗೃಹದ ಸುಧಾರಣೆಗಾಗಿ ಅದರ ಒಳಗೆ ಸಂಘಟನೆ, ಆಂದೋಲನಗಳನ್ನು ಪ್ರಾರಂಭಿಸಿದರು.

ಕಾರಾಗೃಹದಿಂದ ಹೊರಬಂದ ಕೂಡಲೇ ಖರಗ್‌ಪುರದ ರೈಲ್ವೆ ಕಾರ್ಮಿಕ ನಿಯೋಗವೊಂದು ಗಿರಿಯವರನ್ನು ಸಂದರ್ಶಿಸಿ ತಮ್ಮ ಸಂಘವನ್ನು ಸಂಘಟಿಸಬೇಕೆಂದು ಕೋರಿತು. ಕೂಡಲೇ ಗಿರಿಯವರು ಒಪ್ಪಿಕೊಂಡು ಬಂಗಾಲ-ನಾಗಪುರ ರೈಲ್ವೆ ಸಂಘವನ್ನು ಸ್ಥಾಪಿಸಿದರು. ಒಂದೇ ದಶಕದಲ್ಲಿ ಈ ಸಂಘ ದೊಡ್ಡದಾಗಿ ಬೆಳೆಯಿತು. ಇಲ್ಲಿ ಗಿರಿ ಅವರು ಅತ್ಯಂತ

ಯಶಸ್ವಿಯಾದ ಮುಷ್ಕರವನ್ನು ಸಂಘಟಿಸಿದರು. ಈ ಸಂದರ್ಭದಲ್ಲಿ ಸು.60,000 ಕಾರ್ಮಿಕರು ಒಂದು ತಿಂಗಳ ಕಾಲ ಕೆಲಸಕ್ಕೆ ಹಾಜರಾಗದಿದ್ದಾಗ ಅವರ ಕುಟುಂಬಗಳ ರಕ್ಷಣೆ ಪೋಷಣೆಗಳ ವ್ಯವಸ್ಥೆಯ ಪ್ರತಿಯೊಂದು ವಿವರವನ್ನೂ ಗಿರಿಯವರು ಪ್ರತ್ಯಕ್ಷ ಪ್ರವಾಸ, ಭೇಟಿಗಳಿಂದ ನಿಯಂತ್ರಿಸಿದರು. ಇಂಥ ಬೃಹತ್ ಮುಷ್ಕರವನ್ನು ಗೌರವಯುತವಾಗಿ ನಿರ್ವಹಿಸಿ, ಕಾರ್ಮಿಕ ಸಂಘಟನೆಯ ಸಾಮರ್ಥ್ಯ ಆಡಳಿತವರ್ಗಕ್ಕೆ ಗೊತ್ತಾಗುವಂತೆ ಮಾಡಿದರು. ಆ ಸಂಘವನ್ನು ಸರ್ಕಾರ ಮನ್ನಿಸಬೇಕಾಯಿತು. ಇವರು ಅಖಿಲ ಭಾರತ ರೈಲ್ವೆ ಕೆಲಸಗಾರರ ಫೆಡರೇಷನ್ನಿನ ಅಧ್ಯಕ್ಷರಾಗಿದ್ದರು. ಎರಡು ಬಾರಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಇದ್ದರು. 1927ರಲ್ಲಿ ಜಿನೀವದಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಇವರು ಭಾರತದ ಕಾರ್ಮಿಕರ ನಿಯೋಗಿಯಾಗಿ ಭಾಗವಹಿಸಿದ್ದರು. 1927-30ರ ಅವಧಿಯಲ್ಲಿ ಹಲವು ಮುಷ್ಕರಗಳನ್ನು ಸಂಘಟಿಸಿದರಾದರೂ ಇವರು ಮುಷ್ಕರಗಳನ್ನು ಎಂದೂ ಸ್ವಾಗತಿಸುತ್ತಿರಲಿಲ್ಲ. ಕಾರ್ಮಿಕರು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ, ಮಾಲೀಕರಿಗೆ ಮುನ್ಸೂಚನೆ ಕೊಟ್ಟು, ಸಂಧಾನದ ಎಲ್ಲ ಪ್ರಯತ್ನಗಳೂ ವಿಫಲವಾದಾಗ, ಮುಷ್ಕರ ಹೂಡಬೇಕೆಂಬುದು ಇವರ ಮತ. ಕಾರ್ಮಿಕ ಕ್ಷೇತ್ರದಲ್ಲಿ ಗಿರಿಯವರಿಗೆ ಎಂ.ಎನ್.ಜೋಶಿಯವರು, ಮಾರ್ಗದರ್ಶಕರಾಗಿದ್ದರು.

ತಮ್ಮ ತಂದೆ ಕೇಂದ್ರ ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿದ್ದರೂ (1927-30) ಗಿರಿಯವರು ವಿಧಾನ ಸಭಾ ಪ್ರವೇಶಕ್ಕಾಗಿ ಪ್ರಯತ್ನ ಮಾಡಿದವರಲ್ಲ. ಆದರೆ ಕಾರ್ಮಿಕರ ಹಿತ ಪಾರ್ಲಿಮೆಂಟರಿ ಚಟುವಟಿಕೆಗಳಿಂದ ಸಾಧಿತವಾಗುವುದೆಂದು ಅನ್ನಿಸಿದ ಅನಂತರ ಸದಸ್ಯಸ್ಥಾನಕ್ಕಾಗಿ ಪ್ರಯತ್ನಿಸಿದರು. 1934ರಲ್ಲಿ ಕೇಂದ್ರ ವಿಧಾನ ಸಭೆಗೆ ಚುನಾಯಿತರಾದರು (1934-37). ಆಗ ಇವರು ಕಾರ್ಮಿಕರ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯಲು ಯತ್ನಿಸಿದರು. ಭಾರತದಲ್ಲೇ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವುದು ಉಳಿತಾಯದ ಮಾರ್ಗವೆಂದು ಆಗಲೇ ಸೂಚಿಸಿದ್ದರು. ಭಾರತದಲ್ಲಿ ಆರ್ಥಿಕ ಯೋಜನೆಗಳ ಮಾತು ಹೊಸದಾಗಿದ್ದ ಆ ಕಾಲದಲ್ಲಿ ಗ್ರಾಮೀಣ ಪ್ರಗತಿಗಾಗಿ ಆರ್ಥಿಕ ಯೋಜನೆಯೊಂದನ್ನು ರೂಪಿಸಿ ಕೇಂದ್ರ ವಿಧಾನ ಮಂಡಲದ ಮುಂದೆ ಗಿರಿಯವರು ಮಂಡಿಸಿದ್ದರು. ಕೈಗಾರಿಕೆಗಳ ವ್ಯಾಜ್ಯಗಳಲ್ಲಿ ಸಂಧಾನದ ಸಾಧನಗಳಾಗಿ ಮಂಡಳಿಗಳು ಇರಬೇಕೆಂದು ಆಗ ವಾದಿಸಿದ್ದ ಪರಿಣಾಮವಾಗಿ ಇಂದು ಆ ಬಗ್ಗೆ ಅನೇಕ ಕಾನೂನುಗಳಾಗಿ ಕಾರ್ಮಿಕ ಸಂಸ್ಥೆಗಳು ವಿಪುಲ ಸೌಲಭ್ಯ ಪಡೆದಿವೆ.

1937-39ರಲ್ಲಿ ಮದರಾಸಿನಲ್ಲಿ ಕಾರ್ಮಿಕ, ಕೈಗಾರಿಕೆ ಮತ್ತು ಸಹಕಾರ ಮಂತ್ರಿಯಾಗಿದ್ದ ಗಿರಿಯವರು ಕಾರ್ಮಿಕ ನೀತಿಯನ್ನು ಸ್ಪಷ್ಟೀಕರಿಸುತ್ತ ಮಾಲೀಕರ, ಕಾರ್ಮಿಕರ ಮತ್ತು ಸರ್ಕಾರದ ತ್ರಿಪಕ್ಷ ಸಮ್ಮೇಳನವನ್ನು ಕರೆದರು. ಆಗ ಆ ಪ್ರಾಂತ್ಯದ ಮುಖ್ಯಮಂತ್ರಿಯಾಗಿದ್ದ ರಾಜಗೋಪಾಲಾಚಾರಿಯವರು ಇದನ್ನು ಗಿರಿಯವರ ದರ್ಬಾರ್ ಎಂದು ನಗೆಯಾಡಿದ್ದರು. ಆಗಿನ ರಾಜ್ಯಪಾಲರೂ ಇದರ ಬಗ್ಗೆ ತಾತ್ಸಾರಭಾವ ತಳೆದಿದ್ದರು. ಭಾರತೀಯ ವಲಸೆಗಾರರ ಸಮಸ್ಯೆಯನ್ನೂ ಇವರು ಆಗ ಕೈಗೆತ್ತಿಕೊಂಡರು. 1938ರಲ್ಲಿ ಕಾಂಗ್ರೆಸ್ ರಚಿಸಿದ ರಾಷ್ಟ್ರೀಯ ಯೋಜನಾ ಆಯೋಗಕ್ಕೆ ಇವರು ಸಂಚಾಲಕರಾದರು. ಭಾರತದ ಪಂಚವಾರ್ಷಿಕ ಯೋಜನೆಗಳ ಭಾವನೆ ರೂಪುಗೊಂಡದ್ದು ಆಗ.

ಪ್ರಕಾಶಂ ಅವರು ಮದರಾಸಿನಲ್ಲಿ ರಚಿಸಿದ ಸರ್ಕಾರದಲ್ಲೂ ಇವರು ಮಂತ್ರಿಯಾಗಿದ್ದರು (1946-47). ಅನಂತರ ಇವರು ಸಿಂಹಳದಲ್ಲಿ ಭಾರತದ ಹೈಕಮಿಷನರಾಗಿದ್ದರು (1947-51). ಲೋಕಸಭಾ ಸದಸ್ಯರಾಗಿದ್ದರು (1952-57). ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿಯಾಗಿಯೂ ಇದ್ದರು (1952-54). ಕಾರ್ಮಿಕ ನೀತಿಯ ವಿಚಾರವಾಗಿ ಭಿನ್ನಾಭಿಪ್ರಾಯ ಬಂದುದರಿಂದ ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. 1958ರಲ್ಲಿ ಸಾಮಾಜಿಕ ಕಾರ್ಯದ ಭಾರತೀಯ ಸಮ್ಮೇಳನದ ಚುನಾಯಿತ ಅಧ್ಯಕ್ಷರಾಗಿದ್ದರು. ಕಾರ್ಮಿಕ ಅರ್ಥಶಾಸ್ತ್ರದ ಭಾರತೀಯ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದರು. ಭಾರತೀಯ ಕಾರ್ಮಿಕ ಸಂಘ ಚಳವಳಿ, ಕಾರ್ಮಿಕ ಅರ್ಥಶಾಸ್ತ್ರ ಇವುಗಳ ಬೆಳೆವಣಿಗೆಗೆ ಗಿರಿಯವರು ಬಹಳಮಟ್ಟಿಗೆ ಕಾರಣ.

ಇವರು 1958-60ರಲ್ಲಿ ಉತ್ತರ ಪ್ರದೇಶಕ್ಕೂ 1961-65ರಲ್ಲಿ ಕೇರಳಕ್ಕೂ 1965-67ರಲ್ಲಿ ಮೈಸೂರು ರಾಜ್ಯಕ್ಕೂ ರಾಜ್ಯಪಾಲರಾಗಿದ್ದರು. 1967 ಮೇ 13 ರಿಂದ 1969 ಮೇ 3ರ ವರೆಗೆ ಭಾರತದ ಉಪರಾಷ್ಟ್ರಪತಿಯಾಗಿಯೂ ರಾಜ್ಯಸಭೆಯ ಅಧ್ಯಕ್ಷರಾಗಿಯೂ ಇದ್ದರು. ಆಗ ಜಾಕಿರ್ ಹುಸೇನ್ ನಿಧನರಾದ್ದರಿಂದ ಅವರ ಸ್ಥಾನವನ್ನು ವಹಿಸಿಕೊಂಡರು. ಮುಂದೆ ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸಿ ಜಯಶೀಲರಾಗಿ ಭಾರತದ ರಾಷ್ಟ್ರಪತಿಯಾಗಿ ಐದು ವರ್ಷಗಳ ಕಾಲ ಆ ಹುದ್ದೆಯನ್ನು ಅಲಂಕರಿಸಿ 1974 ಆಗಸ್ಟ್ 23ರಂದು ನಿವೃತ್ತರಾದರು. 1975ರಲ್ಲಿ ಇವರಿಗೆ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗಿರಿಯವರು ಒಳ್ಳೆಯ ಲೇಖಕ, ವಾಗ್ಮಿ. ಇಂಡಸ್ಟ್ರಿಯಲ್ ರಿಲೇಷನ್ಸ್ (1956), ಲೇಬರ್ ಪ್ರಾಬ್ಲಮ್ಸ್ ಇನ್ ಇಂಡಿಯನ್ ಇಂಡಸ್ಟ್ರಿ (1958) ಮುಂತಾದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇವು ಇಂದಿಗೂ ಆಯಾ ಕ್ಷೇತ್ರಗಳಲ್ಲಿ ಪ್ರಮಾಣ ಗ್ರಂಥಗಳಾಗಿವೆ. 1980ರಲ್ಲಿ ಇವರು ನಿಧನಹೊಂದಿದರು (ಜೆ.ಆರ್.ಪಿ.)

**ಗಿರೀಶ್ ಕಾರ್ನಾಡ** : 1938-. ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ನಾಟಕಕಾರ, ನಟ, ಚಲನಚಿತ್ರನಿರ್ದೇಶಕ. 1938 ಮೇ 19ರಂದು ಜನಿಸಿದರು. ತಂದೆ ರಘುನಾಥ ಕಾರ್ನಾಡ್, ವೈದ್ಯರು. ತಾಯಿ ಕೃಷ್ಣಬಾಯಿ. ಗಿರೀಶ್ ಕಾರ್ನಾಡ್‌ರು 1958ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರ ಮತ್ತು ಸಂಖ್ಯಾಕಲನಶಾಸ್ತ್ರದಲ್ಲಿ ಬಿ.ಎ. ಪದವಿ ಗಳಿಸಿದರು. ಅನಂತರ ಮುಂಬಯಿಯಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ರೋಡ್ಸ್ ವಿದ್ಯಾರ್ಥಿವೇತನ ಪಡೆದು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. 1963ರಲ್ಲಿ ಆಕ್ಸ್‌ಫರ್ಡಿನ ಬಿ.ಎ. ಪದವಿ ಸಂಪಾದಿಸಿದರು. ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್ ಯೂನಿಯನ್ನಿನ ಅಧ್ಯಕ್ಷರೂ ಇದ್ದರು. ಯೂನಿಯನ್ನಿಗೆ ಪ್ರಪ್ರಥಮವಾಗಿ ಮಹಿಳೆಯರಿಗೂ ಪ್ರವೇಶ ದೊರಕಿದ್ದು ಕಾರ್ನಾಡರ ಅಧ್ಯಕ್ಷತೆಯ ಅವಧಿಯಲ್ಲಿ. ಕಾರ್ನಾಡರು ಇಂಗ್ಲೆಂಡಿನಿಂದ ಭಾರತಕ್ಕೆ ಹಿಂದಿರುಗಿದ ಮೇಲೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಸಂಸ್ಥೆಯ ಮದರಾಸು ಶಾಖೆಯಲ್ಲಿ ಉಪವ್ಯವಸ್ಥಾಪಕರಾದರು (1963-69); ಅನಂತರ ಅದರ ವ್ಯವಸ್ಥಾಪಕರಾದರು (1969-70).



ಇವರು ಹವ್ಯಾಸಿ ರಂಗಭೂಮಿಯ ಒಳ್ಳೆಯ ನಟರೆಂದೂ ನಾಟಕ ಲೇಖಕರೆಂದೂ ಹೆಸರುಗಳಿಸಿದ್ದಾರೆ. ಇವರು 1961 ರಲ್ಲಿ ಪ್ರಕಟಿಸಿದ ಯಯಾತಿ ನಾಟಕ ಹಲವು ಬಾರಿ ರಂಗಭೂಮಿಯ ಮೇಲೆ ಪ್ರದರ್ಶಿತವಾಗಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಪುರಾಣದ ಯಯಾತಿಯನ್ನು ಆಧುನಿಕ ದೃಷ್ಟಿಕೋನದಿಂದ ಪರಿವೀಕ್ಷಿಸಿ ಅವನ

ಬಾಳಿನ ದುರಂತತೆಯನ್ನು ಎತ್ತಿ ತೋರುವ ಯಯಾತಿಯ ತಂತ್ರ ಅತ್ಯಂತ ಯಶಸ್ವಿಯಾಗಿದೆ. ಭಾರತೀಯ ಇತಿಹಾಸದ ವಾದಗ್ರಸ್ತ ಸುಲ್ತಾನರಲ್ಲೊಬ್ಬನ ಬಾಳಿನ ಸುತ್ತ ಹೆಣೆದಿರುವ 'ತುಘಲಕ್' ನಾಟಕವೂ (1964) ನವೀನ ತಂತ್ರದಿಂದ ಕೂಡಿ, ಅವನ ಬಾಳಿನ ಕಥೆಗೆ ಹೊಸ ಆಯಾಮವೊಂದನ್ನು ನೀಡುತ್ತದೆ. ಅದು ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷ್, ಹಿಂದಿ ಮತ್ತು ಮರಾಠಿಯಲ್ಲೂ ರಂಗಪ್ರಯೋಗಗೊಂಡು ಆ ಭಾಷೆಗಳ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಮಾ ನಿಷಾದ (1964), ಹಯವದನ (1977), ಅಂಜುಮಲ್ಲಿಗೆ (1980), ಹಿಟ್ಟಿನ ಹುಂಜ (1980), ನಾಗಮಂಡಲ (1988), ತಲೆದಂಡ (1990), ಅಗ್ನಿ ಮತ್ತು ಮಳೆ (1995), ಟಿಪ್ಪುವಿನ ಕನಸುಗಳು ಇವು ಕಾರ್ನಾಡರು ಬರೆದ ಇತರ ನಾಟಕಗಳು. ಇವರ ಯಯಾತಿಗೆ ರಾಜ್ಯಪ್ರಶಸ್ತಿಯೂ (1961) ತುಘಲಕ್‌ಗೆ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ (1969) ಲಭಿಸಿವೆ. 1971ರಲ್ಲಿ ಭಾರತೀಯ ಭಾಷೆಗಳಲ್ಲಿ ಸೃಷ್ಟಿಯಾದ ನಾಟಕಗಳ ಪೈಕಿ ಅತ್ಯುತ್ಕೃಷ್ಟವಾದದ್ದೆಂದು ಭಾರತೀಯ ನಾಟ್ಯ ಸಂಘದ ಬಹುಮಾನ ಗಳಿಸಿದ ಹಯವದನದಲ್ಲಿ ಯಕ್ಷಗಾನದ ತಂತ್ರವನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ. ಕಾರ್ನಾಡರು ನಾಟಕಗಳಿಗೆ ಆಯ್ದುಕೊಳ್ಳುವ ವಸ್ತು ಪುರಾಣ, ಇತಿಹಾಸ, ಜನಪದಗಳಾದರೂ ಅವರ ಕೃತಿಗಳಲ್ಲಿ ಸಮಕಾಲೀನ ಸಮಸ್ಯೆ ಸಂವೇದನೆಗಳನ್ನು ಅರ್ಥೈಸುವ ಪ್ರಾಮಾಣಿಕ ಪ್ರಯತ್ನ ಗಮನಾರ್ಹ.

ಗಿರೀಶ್ ಕಾರ್ನಾಡರು ಹೆಚ್ಚು ಪ್ರಸಿದ್ಧಿ ಪಡೆದದ್ದು ಯು.ಆರ್.ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯನ್ನು ಆಧರಿಸಿ ತಯಾರಿಸಲಾದ ಅದೇ ಹೆಸರಿನ ಕನ್ನಡ ಚಲನಚಿತ್ರದಿಂದಾಗಿ. ಸಂಸ್ಕಾರದ ಚಿತ್ರಕಥಾ ಲೇಖಕರೂ ಅದರಲ್ಲಿ ಪ್ರಾಣೇಶಾಚಾರ್ಯನ ಪಾತ್ರ ವಹಿಸಿದವರೂ ಗಿರೀಶ್‌ಕಾರ್ನಾಡರೇ. ತುಂಬ ವಾದಗ್ರಸ್ತವಾದ ಈ ಚಿತ್ರ ಮೊದಲು ಭಾರತದ ಸೆನ್ಸಾರ್ ಬೋರ್ಡಿನಿಂದ ಬಹಿಷ್ಕೃತವಾಗಿ ಅನಂತರ ಒಪ್ಪಿಗೆಯ ಮುದ್ರೆ ದೊರಕಿಸಿಕೊಂಡಿತು. ಇದು ಅನೇಕ ವಿಮರ್ಶಕರ ಮೆಚ್ಚುಗೆ ಗಳಿಸಿತಲ್ಲದೆ, 1971ರ ಶ್ರೇಷ್ಠ ಚಿತ್ರವೆಂದು ರಾಷ್ಟ್ರಪತಿಗಳ ಸ್ವರ್ಣಪದಕ ಗಳಿಸಿತು. ಬಿ.ವಿ.ಕಾರಂತರ ಸಹಯೋಗದಲ್ಲಿ ಇವರು ನಿರ್ದೇಶಿಸಿದ ಎಸ್.ಎಲ್.ಭೈರಪ್ಪನವರ ವಂಶವೃಕ್ಷ ಕಾದಂಬರಿ ಆಧಾರಿತ ಚಿತ್ರವೂ ತುಂಬ ಯಶಸ್ಸು ಗಳಿಸಿತು. ಇದರ ಚಿತ್ರಕಥೆಯನ್ನು ಬರೆದವರೂ ಕಾರ್ನಾಡರೇ. ಇದರಲ್ಲೂ ಕಾರ್ನಾಡರು ಪಾತ್ರವಹಿಸಿದ್ದಾರೆ. ಇದಕ್ಕೆ ರಾಜ್ಯ ಪ್ರಶಸ್ತಿಯೂ ಫಿಲ್ಮ್‌ಫೇರ್ ಪ್ರಶಸ್ತಿಯೂ ದೊರಕಿವೆ. ಇವರು ನಿರ್ದೇಶಿಸಿರುವ ಇನ್ನೊಂದು ಚಿತ್ರ ಶ್ರೀಕೃಷ್ಣ ಆಲನಹಳ್ಳಿಯವರ ಕಾಡು ಕಾದಂಬರಿಯನ್ನು ಆಧರಿಸಿದ್ದು. ಉತ್ಸವ್ ಇವರು ನಿರ್ದೇಶಿಸಿದ ಹಿಂದಿ ಚಿತ್ರ. ನಿಶಾಂತ್ ಎಂಬ ಹಿಂದಿ ಚಿತ್ರದಲ್ಲಿ ಕಾರ್ನಾಡರು ಅಭಿನಯಿಸಿದ್ದಾರೆ. ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯನ್ನು ಆಧರಿಸಿ ಅದೇ ಹೆಸರಿನ ಚಿತ್ರವನ್ನು ನಿರ್ದೇಶಿಸಿ, ಅಭಿನಯಿಸಿದ್ದಾರೆ (1999). ಇವರ ನಾಟಕಗಳು ವಿದೇಶಗಳಲ್ಲೂ ಪ್ರದರ್ಶಿಸಲ್ಪಟ್ಟಿವೆ. ಇವು ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಸಾಹಿತ್ಯ, ರಂಗಭೂಮಿ, ಚಲನಚಿತ್ರ - ಇವುಗಳ ನಡುವೆ ನಿಕಟಬಾಂಧವ್ಯ ಇದ್ದಾಗಲೇ ಹೊಸಹೊಸ ಪ್ರಯೋಗಗಳು ಸಾಧ್ಯವೆಂದೂ ಬಂಗಾಲದಲ್ಲಿ ಇವು ಮೂರೂ ಪರಸ್ಪರ ಪೂರಕವಾಗಿರುವುದರಿಂದಲೇ ಅಲ್ಲಿಯ ಚಲನಚಿತ್ರ ನವ್ಯತೆಯ ಹಾದಿ ಹಿಡಿದಿದೆಯೆಂದೂ ಭಾವಿಸಿರುವ ಕಾರ್ನಾಡರು ಈ ಮೂರೂ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಗಣಿತಶಾಸ್ತ್ರದ ಶಿಸ್ತಿನಂತೆಯೇ ರಂಗಕರ್ಮ ಕೂಡ ಎಂಬುದು ಕಾರ್ನಾಡರ ನಂಬುಗೆ. ಸ್ವತಃ ಗಣಿತಶಾಸ್ತ್ರದ ವಿದ್ಯಾರ್ಥಿಯಾಗಿ, ವಿದೇಶಯಾತ್ರೆ ಮಾಡಿ ಅಲ್ಲಿಯ ರಂಗಭೂಮಿ, ಚಿತ್ರರಂಗವನ್ನು ವೀಕ್ಷಿಸಿರುವ ಗಿರೀಶ ಕಾರ್ನಾಡರು ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಲ್ಲೂ ನವ್ಯ ವಿಧಾನವನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ತೆರೆಯ ಮೇಲೆ ಪ್ರಸಿದ್ಧರಾದ ಮತ್ತು ಹಣ ದೊರಕಿಸುವ ಭರವಸೆ ಇರುವ ನಟನಟಿಯರನ್ನು ಬಿಟ್ಟು ತಾವು ಚಿತ್ರೀಕರಿಸಲಿರುವ ಕಥೆಗೆ ಸೂಕ್ತರಾದವರನ್ನು ಅಭಿನಯಕ್ಕೆ ಆರಿಸಿಕೊಳ್ಳುವುದೂ ವೇಷಭೂಷಣಗಳಿಗಾಗಲಿ ಚಿತ್ರನಿರ್ಮಾಣ ಶಾಲೆಯ ಪೂರ್ವಸಿದ್ಧ ದೃಶ್ಯ ಸಂಯೋಜನೆಗಾಗಲಿ ಪ್ರಾಮುಖ್ಯ ಕೊಡದೆ ಹೊರಾಂಗಣದ ಸಹಜ ಪರಿಸರದಲ್ಲಿ ನೇರವಾಗಿ ಚಿತ್ರ ತೆಗೆಯುವುದೂ ಇವರು ಸಾಮಾನ್ಯವಾಗಿ ಅನುಸರಿಸುವ ಕ್ರಮ. ಇವರು ಸ್ವಲ್ಪ ಕಾಲ ಪುಣೆಯ ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ನಿರ್ದೇಶಕರಾಗಿದ್ದರು. ಇವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಪದ್ಮಶ್ರೀ (1974), ಪದ್ಮಭೂಷಣ (1992), ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ(1976) ಮತ್ತು ಜ್ಞಾನಪೀಠ ಪ್ರಶಸ್ತಿಗಳೂ (1998) ದೊರಕಿವೆ. (ಎಚ್.ಎಸ್.ಕೆ.)

**ಗಿರೀಶ್ ಕಾಸರವಳ್ಳಿ :** ಕನ್ನಡದ ಹೊಸ ಅಲೆಯ ಚಿತ್ರ ನಿರ್ದೇಶಕ. ಶಿವಮೊಗ್ಗ ಜಿಲ್ಲೆ ಕಾಸರವಳ್ಳಿಯಲ್ಲಿ ಜನಿಸಿದರು. ಶಿವಮೊಗ್ಗದಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದರು. ಅನಂತರ ಚಲನಚಿತ್ರ ನಿರ್ದೇಶನದ ಬಗೆಗೆ ಆಸಕ್ತಿ ಹೊಂದಿ ಪುಣೆಯ ಚಲನಚಿತ್ರ ಸಂಸ್ಥೆಯಲ್ಲಿ ನಿರ್ದೇಶನದ ಡಿಪ್ಲೊಮಾ ತರಗತಿಗೆ ಸೇರಿದರು. ತರಬೇತಿಯ ಅವಧಿಯಲ್ಲಿ 'ಅವಶೇಷ' ಕಿರುಚಿತ್ರ ನಿರ್ದೇಶಿಸಿದರು. ಈ ಚಿತ್ರ ಅತ್ಯುತ್ತಮ ಪ್ರಯೋಗಾತ್ಮಕ ಚಿತ್ರವೆಂದು ಪ್ರಶಸ್ತಿ ಗಳಿಸಿತು (1975). ಬೆಂಗಳೂರಿನ ಆದರ್ಶ ಚಲನ ಚಿತ್ರ ಸಂಸ್ಥೆಯ ಪ್ರಾಂಶುಪಾಲರಾಗಿಯೂ ಸ್ವಲ್ಪಕಾಲ ಇವರು ಸೇವೆಸಲ್ಲಿಸಿದರು. ಅನಂತರ ಇವರು ಬಿ.ವಿ.ಕಾರಂತರೊಂದಿಗೆ ಚೋಮನ ದುಡಿ, ಸಿ.ಆರ್.ಸಿಂಹರೊಂದಿಗೆ ಕಾಕನಕೋಟೆ ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ಅನುಭವ ಗಳಿಸಿದರು. ಯು.ಆರ್.ಅನಂತಮೂರ್ತಿಯವರ ಕಥೆ ಆಧಾರಿತ ಘಟಶ್ರಾದ್ಧ ಇವರು ಸ್ವತಂತ್ರವಾಗಿ ನಿರ್ದೇಶಿಸಿದ ಮೊದಲ ಚಿತ್ರ (1977). ಈ ಚಿತ್ರ ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ ಗಳಿಸಿತು.

ಅನಂತರ ಇವರು ನಿರ್ದೇಶಿಸಿದ ಹಲವು ಚಿತ್ರಗಳು ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಗಳನ್ನು ಗಳಿಸಿದವು. ಆಕ್ರಮಣ (1980), ಮೂರು ದಾರಿಗಳು (1981), ತಬರನ ಕಥೆ (1987), ಬಣ್ಣದವೇಷ (1988), ಮನೆ (1990), ಕ್ರೌರ್ಯ, ತಾಯಿಸಾಹೇಬ (1996), ದ್ವೀಪ (2002, ಹಸೀನಾ (2005) -- ಇವು ಇವರು ನಿರ್ದೇಶಿಸಿದ ಪ್ರಮುಖ ಚಿತ್ರಗಳು.

ತಬರನ ಕಥೆ (ಪೂರ್ಣಚಂದ್ರ ತೇಜಸ್ವಿ), ಬಣ್ಣದವೇಷ (ಸುಂದರ ನಾಡಕರ್ಣಿ), ತಾಯಿಸಾಹೇಬ (ರಂ.ಶಾ.) ಹಾಗೂ ದ್ವೀಪ (ನಾ.ಡಿಸೋಜ) ಚಿತ್ರಗಳೂ ಇವರಿಗೆ ಸ್ವರ್ಣಕಮಲ ಪ್ರಶಸ್ತಿ ತಂದುಕೊಟ್ಟಿವೆ. ಇವರು ನಿರ್ದೇಶಿಸಿದ ಹಸೀನಾ ಚಿತ್ರಕ್ಕೆ (ಕಥೆ: ಭಾನುಮುಷ್ತಾಕ್) ಅತ್ಯುತ್ತಮ ಸಾಮಾಜಿಕ ಸಂದೇಶವುಳ್ಳ ಚಿತ್ರವೆಂದು ರಾಷ್ಟ್ರಪ್ರಶಸ್ತಿ ಬಂದಿದೆ (2005). ಸಮಾಜ ಅರ್ಥವಂತಿಕೆಯ ಚಿತ್ರ ನಿರ್ಮಾಣದೊಂದಿಗೆ ಗಿರೀಶ್ ಕಾಸರವಳ್ಳಿ ಸೃಜನಶೀಲ ನಿರ್ದೇಶಕರಾಗಿ ಉಳಿದಿದ್ದಾರೆ. ಇವರ ಪತ್ನಿ ವೈಶಾಲಿ. ಅವರು ಕೂಡ ರಂಗಭೂಮಿ ನಟಿ. ಚಲನಚಿತ್ರಗಳಲ್ಲಿ ಅಭಿನಯಿಸುವುದರೊಂದಿಗೆ ಕಿರುತೆರೆಯ ಧಾರಾವಾಹಿಗಳನ್ನು ನಿರ್ದೇಶಿಸುತ್ತಿದ್ದಾರೆ.. (ಜಿ.ಎಂಯು.)

**ಗೀಗೀ ಪದ :** ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಗೀಯ ಗೀಯ ಗೀಗೀ ಹರೇ ಗೀಯ ಗಾs ಎಂಬ ಪಲ್ಲವಿಯೊಂದಿಗೆ ಹಾಡುವ ಒಂದು ಜನಪದ ಗೀತಸಂಪ್ರದಾಯ. ಈ ಗೀಗೀ ಪದದ ಜನನವಾದುದು 1875ರಲ್ಲಿ. ಮೊದಲಿನಿಂದಲೂ ರಾಯಬಾಗ ತಾಲ್ಲೂಕಿನ ಚಿಂಚಲಿ ಗ್ರಾಮದ ಮಾಯಾಮ್ಮನ ಜಾತ್ರೆಯಲ್ಲಿ ಕನ್ನಡ ಲಾವಣಿಕಾರರೂ ಮರಾಠಿ ಲಾವಣಿಕಾರರೂ ಕೂಡಿ ವಾದದ ಲಾವಣಿಗಳನ್ನು ಹಾಡುತ್ತಿದ್ದರು. 1875ರ ಮಾಯಮ್ಮನ ಜಾತ್ರೆಯಲ್ಲಿ ಮರಾಠಿ ಲಾವಣಿಕಾರರು ಡಪ್ಪು ಉಪಯೋಗಿಸಿ ಲಾವಣಿ ಹಾಡಿದರು. ಅದೇ ದಿನ ರಾತ್ರಿ ಕನ್ನಡಿಗರು ಡಪ್ಪು, ತುಂತುಣಿ, ತಾಳ ಬಾರಿಸಿ ಮೇಳ ಮಾಡಿದರು. ತುಂತುಣಿ, ತಾಳ ಬಾರಿಸುವವರು ಗೀಗೀ ದನಿ ಎಳೆದರು. ಈ ರಚನೆ ಮಾಡಿದವರಲ್ಲಿ

ತೇರದಾಳ ಅಣ್ಣು ಯಂಕಾರಾಮ ಮುಖ್ಯನಾದವ. ಇವನೇ ಗೀಗೀ ಶ್ರುತಿ ಹಾಕಿ, ಶ್ರುತಿದೇವ (ಗಣಪತಿ) ಶ್ರುತಿದೇವಿ (ಸರಸ್ವತಿ) ಎಂದು ಹಾಡಿ ಗೀಗೀ ಪದಗಳ ಜನಕನೆಂದು ಕರೆಯಿಸಿಕೊಂಡ. ಅನಂತರ ಚಿಂಚಲಿ ಜಾತ್ರೆಯಲ್ಲಿ ಹಾಡುಗಳನ್ನು ಕೇಳಲು ಜನ ಕೂಡುವ ಸ್ಥಳ (ನಾಕಾಕಟ್ಟೆ) ಗೀಗೀಕಟ್ಟೆ ಎಂದು ಹೆಸರಾಯಿತು. ಗೀಗೀ ಮೇಳದವರಿಗೆ ಚಿಂಚಲಿ ಮೂಲಸ್ಥಳವಾಯಿತು. ಕನ್ನಡ ಲಾವಣಿಯೇ ಗೀಗೀ ಪದವಾಗಿ ಮಾರ್ಪಟ್ಟಿತು. ಅನಂತರ ಕನ್ನಡ ಗೀಗೀ ಪದ ಮರಾಠಿ ಜೀಜೀ ಪದಗಳ ಹುಟ್ಟಿಗೆ ಕಾರಣವಾಯಿತು.

ಗೀಗೀ ಮೇಳ

ಗೀಗೀ ಪದಗಳಲ್ಲಿ ಮುಖ್ಯ ಗೀಗೀ ಹಾಡುಗಾರ 'ಡಪ್ಪಿಗೆ' ಗತ್ತಿನ ಕಡಿತ (ಪೆಟ್ಟು) ಹಾಕಿ ಪದ ಹಾಡುತ್ತಾನೆ. ಅವನ ಹಿಂದೆ ತುಂತುಣಿ ಹಾಗೂ ತಾಳ ಹಿಡಿದ ಇಬ್ಬರು ತಾಳ ಮತ್ತು ಲಯಗಳನ್ನೊಳಗೊಂಡ ಗೀಗೀ ದನಿ ಬೀರುತ್ತಾರೆ. ಜನಾಕರ್ಷಣೆಗಾಗಿ ರಮ್ಯವಾಗಿ ಡಪ್ಪು, ತುಂತುಣಿ ಮತ್ತು ತಾಳ ನುಡಿಸುತ್ತಾರೆ. ಡಪ್ಪು ವರ್ತುಲಾಕಾರದ 2"-3" ದಪ್ಪವಾದ, 4'-5' ಪರಿಘವಿರುವ ಗಾಲಿಗೆ ಮತ್ತು ಅದಕ್ಕಿಂತ ಸಣ್ಣದಾದ ಕಬ್ಬಿಣದ ವರ್ತುಲಕ್ಕೆ ಸೇರಿದಂತೆ ಆಡಿನ ಚರ್ಮದಿಂದ ಹಲಗೆ ತಯಾರಿಸಿ ಎಡಗೈಯಲ್ಲಿ ಹಿಡಿದು ಬಲಗೈಯಿಂದ ಹದರು ಹಚ್ಚಿ ಬೆರಳು ಆಡಿಸಿ ಬಡಿದು ನಾದ ಹೊರಡಿಸುವ ವಾದ್ಯ. ತುಂತುಣಿ ಮರದ ತುಂಡಿನ 1" ಸಿಲಿಂಡರಿನಾಕಾರದ್ದಾಗಿದ್ದು, ಹಿಂಬದಿಗೆ ಮೇಕೆಯ ಆಡಿನ ಚರ್ಮವನ್ನು ಬಿಗಿದು ಒಂದು ಗಜ ಬಿದರಿನ ತುಂಡನ್ನು ಸಿಲಿಂಡರಿಗೆ ಜೋಡಿಸಿ, ಅದರ ತುದಿಯಲ್ಲಿ ಒಂದು ಬೆಣೆಯನ್ನು ಕೂರಿಸಿ ತಂತಿಯನ್ನು ಬೆಣೆಗೂ ಹಿಂಬದಿಯ ಚರ್ಮದ ಮಧ್ಯಕ್ಕೂ ಜೋಡಿಸಿ ತಯಾರಿಸಿದ, ಬಲಗೈಯಲ್ಲಿ ಹಿಡಿದ ಕಡ್ಡಿಯಿಂದ ತಂತಿಯನ್ನು ಮಿಡಿದು ನಾದ ಹೊಮ್ಮಿಸುವ ವಾದ್ಯ. ಗೀಗೀ ಮೇಳದವರಿಗೆ ಚಾಲು ನುಡಿತ, ಏರು ನುಡಿತಗಳೂ ಮುಖ್ಯ. ಇಳುವಿನಲ್ಲಿ ಸೌಮ್ಯ ಸಂಗೀತವಿರುತ್ತದೆ. ಒಮ್ಮೇಳವಾಗಿ (ಸಂಗಡಿಗರು) ಹಾಡುವುದು, ಬಾರಿಸುವುದು ಸಾಗುತ್ತದೆ.

ಗೀಗೀ ಮೇಳದಲ್ಲಿ ಮೊದಲಿಗೆ ಹರದೇಶಿ (ತುರಾಯಿ) ಗೀಗೀ ಮೇಳ, ನಾಗೇಶಿ (ಕಲ್ಕಿ) ಗೀಗೀ ಮೇಳ ಎಂದು ಗಂಡು-ಹೆಣ್ಣಿನ ವಾದದ ಮೇಳಗಳು ಪ್ರಾರಂಭವಾದವು. ಗಂಡಸರ ಪಂಗಡ ಪುರುಷನನ್ನು (ಶಿವ) ಹೆಚ್ಚುಮಾಡಿ ಹಾಡುವುದು, ಹೆಂಗಸರ ಪಂಗಡ ಸ್ತ್ರೀಯನ್ನು (ಶಕ್ತಿ) ಹೆಚ್ಚುಮಾಡಿ ಹಾಡುವುದು ಸಂಪ್ರದಾಯವಾಯಿತು. 1925ರಿಂದ ಈಚೆಗೆ ಗೀಗೀ ಮೇಳದವರು ಲೌಕಿಕ ಹಾಡುಗಾರರಾಗಿ ಮಾರ್ಪಟ್ಟರು. ರಾಷ್ಟ್ರೀಯ ಗೀಗೀಮೇಳಗಳು ಹುಟ್ಟಿಕೊಂಡವು. ಭಾರತದೇಶ, ದೇಶದ ಜನ, ದೇಶದ ಸ್ಥಿತಿ, ಸಂಸ್ಕೃತಿ, ರೀತಿ, ನೀತಿ ಇತ್ಯಾದಿ ಕುರಿತು ಗೀಗೀ ಪದಗಳು ಪ್ರಾರಂಭವಾದವು. ಇಂಥ ಗೀಗೀಮೇಳಗಳಲ್ಲಿ ಹುಲಕುಂದ ಗೀಗೀ ಮೇಳ ಮುಖ್ಯವಾದ್ದು. ಹುಲಕುಂದದ ಭೀಮಸಿಂಗ ಕವಿ, ಶಿವಲಿಂಗ, ಪಾಂಡುರಂಗ, ಚನಬಸು, ಕಂದಭೀಮಸಿಂಗ ಇವರು ಗೀಗೀ ಗಂಗೋತ್ರಿಯನ್ನೇ ಹರಿಸಿದರು. ತಿಗಡೊಳ್ಳಿ ಗೀಗೀಮೇಳ, ಹೊಸೂರು ಗೀಗೀ ಮೇಳ, ಹೊಸಕೋಟೆ ತಮ್ಮಣ್ಣನ ಗೀಗೀಮೇಳ, ಗೋಕಾಂವಿ ಗೀಗೀ ಮೇಳ, ಬದರೆ ಗೀಗೀ ಮೇಳ, ರಾಯಚೂರು ಗೀಗೀ ಮೇಳ, ಬೆಳಗಾಂವಿ ಗೀಗೀ ಮೇಳ, ಬಿಜಾಪುರ ಗೀಗೀಮೇಳ, ಕಲಬುರ್ಗಿ ಗೀಗೀಮೇಳ, ಚಿತ್ರದುರ್ಗ ಗೀಗೀಮೇಳ, ಬೆಂಗಳೂರು ಗೀಗೀಮೇಳ, ಇತ್ಯಾದಿ ಮೇಳಗಳು ಹುಟ್ಟಿಕೊಂಡು ರಾಷ್ಟ್ರದ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಜನಜಾಗೃತಿಯನ್ನುಂಟುಮಾಡಿದವು. ಜ್ಞಾನಪ್ರಸಾರಕಾರ್ಯ ಕೈಗೊಂಡವು. ಇಂದು ಕರ್ನಾಟಕದಲ್ಲಿ ಎರಡು ನೂರಕ್ಕೂ ಹೆಚ್ಚು ಗೀಗೀ ಮೇಳಗಳಿವೆಯೆಂದು ತಿಳಿದುಬರುತ್ತದೆ.

ಗೀಗೀ ಪದದ ಹಾಡುಗಾರರು ಸ್ತೋತ್ರ ಪದಗಳು, ಪೌರಾಣಿಕ ಪದಗಳು, ಐತಿಹಾಸಿಕ ಪದಗಳು, ಚಾರಿತ್ರಿಕ ಪದಗಳು, ಆರ್ಥಿಕ ಪದಗಳು, ಸಾಮಾಜಿಕ ಪದಗಳು, ನೈತಿಕ ಪದಗಳು, ಹಾಸ್ಯದ ಪದಗಳು, ಒಗಟಿನ ಪದಗಳು ಇತ್ಯಾದಿಗಳನ್ನು ಹಾಡುತ್ತಾರೆ. ಪದಗಳ ಮುಕ್ತಾಯದಲ್ಲಿ ಹಾಡು ರಚಿಸಿದ ಕವಿಯ ಊರು ಹೆಸರುಗಳಿರುತ್ತವೆ. ಗೀಗೀ ಪದಗಳು ಜನಮನವನ್ನು ತಿದ್ದುವ, ಜ್ಞಾನ ಹೆಚ್ಚಿಸುವ, ನೀತಿ ತಿಳಿಸುವ, ವೈಚಾರಿಕ ಜನಪದ ಪಂರಪರೆಯ ಗೀತೆಗಳಾಗಿವೆ. ಈ ಪದಗಳಲ್ಲಿ ಜಾನಪದ ಶಬ್ದಸಂಪತ್ತು ಬಹುವಾಗಿವೆ. ಉತ್ತರ ಕರ್ನಾಟಕದಲ್ಲಿ ಗೀಗೀ ಮೇಳ ಕಟ್ಟಿಕೊಂಡು ಗೀಗೀ ಪದ ಹಾಡುವವರು ಹೆಚ್ಚಾಗಿ ಹರಿಜನ ಮಹಿಳೆಯರು. ಸ್ತ್ರೀಪಂಗಡದಲ್ಲಿ ಒಬ್ಬರು ಮುಮ್ಮೇಳ ಹಾಡುಗಾರ್ತಿಯೂ ಹಿಮ್ಮೇಳಕ್ಕೆ ಈರ್ವರು ಪುರುಷರೂ ಇರುತ್ತಾರೆ. ಈ ಕಲೆ ಅವರ ಹೆಮ್ಮೆಯ ಪರಂಪರೆಯಾಗಿದೆ. ಹಾಡುಗಾರರು ತಮಗೆ ಸುಂದರವಾಗಿ ಕಾಣುವ ಇಷ್ಟವಾದ ಉಡುಗೆ ತೊಡುಗೆಗಳನ್ನು ಧರಿಸುತ್ತಾರೆ.

ಗೀಗೀ ಪದಗಳನ್ನು ಚೌಡಿಕೆಯವರೂ ಗೊಂದಲಿಗರೂ ಸಿದ್ಧಕ ಸಿದ್ಧಿಗಳೂ (ಜಾತಿಗಾರರು) ಕರ್ಬಲ್ ಹಾಡುಗಾರರೂ ಹಾಡತೊಡಗಿದ್ದಾರೆ.

ಹುಲಕುಂದ ಭೀಮಕವಿಯ ಸರ್ವೋದಯ ಗ್ರಾಮೀಣ ಜನಪದ ಗೀತೆಗಳು (1962), ಹುಬ್ಬಳ್ಳಿಯ ಕರಡಿ ಪ್ರಕಾಶಕರ 3-4 ಗೀಗೀ ಪದಗಳ ಸಣ್ಣ ಪುಸ್ತಕಗಳು ಈ ಸಾಹಿತ್ಯವನ್ನು ಕುರಿತು ಪ್ರಕಟಗೊಂಡಿವೆ. (ಎನ್.ಎನ್.ಎಸ್.)

**ಗೀತಪ್ರಿಯ :** 1931- ಕನ್ನಡ ಚಲನಚಿತ್ರ ನಿರ್ದೇಶಕ, ಗೀತೆ ಹಾಗೂ ಸಂಭಾಷಣೆಯ ರಚನಕಾರ. ಇವರ ನಿಜವಾದ ಹೆಸರು ಲಕ್ಷ್ಮಣರಾವ್ ಮೋಹಿತೆ. 1931ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ರಾಮರಾವಣ ಮೋಹಿತೆ, ತಾಯಿ ಲಕ್ಷ್ಮೀಬಾಯಿ. ಬೆಂಗಳೂರಿನ ಮಲ್ಲೇಶ್ವರಂ ಪ್ರೌಢಶಾಲೆಯಲ್ಲಿ ಓದಿದ ಇವರಿಗೆ ಕವಿ ಹೊಯಿಸಳರು ಗುರುಗಳಾಗಿದ್ದರು. ಇಂಟರ್‌ಮೀಡಿಯಟ್‌ನಲ್ಲಿ ಜಿ.ಪಿ.ರಾಜರತ್ನಂ ಗುರುಗಳಾಗಿ ದೊರೆತರು. ಸಾಹಿತ್ಯ ದಿಗ್ಗಜಗಳ ಪರಿಚಯ ಪ್ರಭಾವಗಳಿಂದಾಗಿ ಸುಪ್ತವಾಗಿದ್ದ ಇವರ ಸಾಹಿತ್ಯ ರಚನಾಶಕ್ತಿಗೆ ಇಂಬು ದೊರೆಯಿತು. ಪ್ರೌಢಶಾಲೆಯ ದಿನಗಳಲ್ಲೇ ಪದ್ಯ, ಇವರು ನಾಟಕಗಳನ್ನು ಬರೆಯಲಾರಂಭಿಸಿದರು. ಇವರ ರಚನೆಗಳು ಅಂದಿನ ತಾಯಿನಾಡು ಪತ್ರಿಕೆಯಲ್ಲಿ ಬೆಳಕು ಕಂಡವು. ಶಾಲಾದಿನಗಳಲ್ಲಿಯೇ ಉರ್ದು ಶಾಯರಿಗಳು ಇವರನ್ನು ವಿಶೇಷವಾಗಿ ಆಕರ್ಷಿಸಿದವು. ನಾಟಕದತ್ತ ಒಲವು ಬೆಳೆದು ಹವ್ಯಾಸಿ ಕಲಾವಿದರ ಒಡನಾಟ ಒದಗಿ ಬಂತು. ಆ ವೇಳೆಯಲ್ಲಿ ಇವರು

ಬರೆದ ಮದ್ವೆ ಮಾರ್ಕೆಟ್ ನಾಟಕ ಅಂದಿನ ದಿನಗಳಲ್ಲಿ ಅತ್ಯಂತ ಜನಪ್ರಿಯತೆ ಗಳಿಸಿತು. ತಾವೇ ನಾಟಕಗಳಲ್ಲಿ ಕೂಡ ಅಭಿನಯಿಸಿದರು.

ಹೆಸರಾಂತ ಬಿ.ಆರ್.ಕೃಷ್ಣಮೂರ್ತಿಯವರು ಶ್ರೀರಾಮಪೂಜಾ ಚಿತ್ರಕ್ಕೆ ಗೀತರಚನಾಕಾರರಾಗಿ ಇವರನ್ನು ನಿಯೋಜಿಸಿದರು. ಮೋಹಿತೆಯವರಿಗೆ ಗೀತಪ್ರಿಯ ಎಂಬ ಕಾವ್ಯನಾಮ ಇಟ್ಟವರು ಸಂಗೀತ ಸಂಯೋಜಕ



ವಿಜಯಭಾಸ್ಕರ್. ಹೀಗೆ ಗೀತಪ್ರಿಯರಾಗಿ ಇವರು ಚಿತ್ರಗಳಿಗೆ ಗೀತರಚನೆಯ ಜವಾಬ್ದಾರಿ ಹೊತ್ತರು. ಭಾಗ್ಯ ಚಕ್ರ (1956) ಎಂಬುದು ಇವರು ಸಂಭಾಷಣೆ ಹಾಗೂ ಹಾಡು ಗಳನ್ನು ರಚಿಸಿದ ಮೊದಲ ಚಿತ್ರ. ಇವರಲ್ಲಿ ಅಡಗಿದ್ದ ನಿರ್ದೇಶಕ ನನ್ನು ಗುರುತಿಸಿದವರು ಕರ್ನಾಟಕ ಫಿಲಂಸ್ ಸಂಸ್ಥೆ ಯಲ್ಲಿದ್ದ ಎಂ.ವಿ.ವೆಂಕಟಾ ಚಲಂ. ಅವರು ತಮ್ಮ ಮಣ್ಣಿನ ಮಗ ಚಿತ್ರದ ನಿರ್ದೇಶನದ ಹೊಣೆಗಾರಿಕೆ ಯನ್ನು ಇವರಿಗೆ ವಹಿಸಿದರು (1968). ಬೆಂಗಳೂರಿನ ಕಪಾಲಿ ಚಿತ್ರ ಮಂದಿರದಲ್ಲಿ ಶತದಿನೋ ತ್ಸವ ಕಂಡ ಪ್ರಥಮ ಕನ್ನಡ ಚಿತ್ರವೆಂಬ ಹೆಗ್ಗಳಿ ಕೆಗೆ ಈ ಚಿತ್ರ ಪಾತ್ರವಾಯಿತು. ಎಂ.ಪಿ.ಶಂಕರರ ಕಾಡಿನ ರಹಸ್ಯ (1969) ಇವರು ನಿರ್ದೇಶಿಸಿದ ಎರಡನೆಯ ಚಿತ್ರ. ಅದೇ ವರ್ಷ ಮದುವೆ, ಮದುವೆ, ಮದುವೆ, ಎಂಬ ಹಾಸ್ಯ ಚಿತ್ರವನ್ನೂ ಇವರು ನಿರ್ದೇಶಿಸಿದರು. ಇವರು ನಿರ್ದೇಶಿಸಿದ ಬಹುತೇಕ ಚಿತ್ರಗಳ ಸಾಹಿತ್ಯವನ್ನು ರಚಿಸಿದವರು ಇವರೇ. ಹಿಂದಿ, ಮರಾಠಿ, ಉರ್ದು, ಕನ್ನಡ ಭಾಷೆಗಳಲ್ಲಿ ಇವರಿಗಿರುವ ಪರಿಣತಿಯಿಂದಾಗಿ ಕವಿಯಾಗಿ, ಸಾಹಿತಿಯಾಗಿ ತಮ್ಮ ಕಲ್ಪನೆಗಳಿಗೆ ಈ ಚಲನಚಿತ್ರಗಳು ಒಂದು ಯಶಸ್ವಿ ಮಜಲಾಗಿ ಪರಿಣಮಿಸಿದುವು. ಪುಟಾಣಿ ಏಜೆಂಟ್ 1 2 3, ಪ್ರಚಂಡ ಪುಟಾಣಿಗಳು ಇವರ ನಿರ್ದೇಶನದಲ್ಲಿ ಮೂಡಿಬಂದ ಮಕ್ಕಳ ಚಿತ್ರಗಳು. ಪುಟಾಣಿ ಏಜೆಂಟ್ 1 2 3 ಇವರದೇ ನಿರ್ದೇಶನದಲ್ಲಿ ಅನ್ಮೋಲ್ ಸಿತಾರೆ ಎಂಬ ಹೆಸರಿನಲ್ಲಿ ಹಿಂದಿ ಚಲನಚಿತ್ರವಾಗಿ ಪುನರ್‌ನಿರ್ಮಾಣ ಗೊಂಡಿದೆ. ಇವಲ್ಲದೆ ಕನ್ನಡ ಕಾದಂಬರಿಗಳನ್ನು ಆಧರಿಸಿ ಅನೇಕ ಚಲನಚಿತ್ರಗಳನ್ನು ಇವರು ನಿರ್ದೇಶಿಸಿದ್ದಾರೆ. ಯಾವ ಜನ್ಮದ ಮೈತ್ರಿ, ಬೆಸುಗೆ, ಬೆಳುವಲದ ಮಡಿಲಲ್ಲಿ, ಹೊಂಬಿಸಿಲು, ಸುವರ್ಣಸೇತುವೆ ಅವುಗಳಲ್ಲಿ ಮುಖ್ಯವಾದವು.

ಇವರಿಗೆ ಅನೇಕ ಗೌರವ, ಪ್ರಶಸ್ತಿ, ಸನ್ಮಾನಗಳು ದೊರೆತಿವೆ. ಪುಟ್ಟಣ್ಣ ಕಣಗಾಲ್ ಪ್ರಶಸ್ತಿ (1992-93), ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಕೆ.ಸಿ.ಎನ್.ಪ್ರಶಸ್ತಿ (1993), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1992), ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ರಾಜಕುಮಾರ್ ಪ್ರಶಸ್ತಿ (1996-97) -ಇವು ಕೆಲವು ಮುಖ್ಯ ಪ್ರಶಸ್ತಿಗಳು. (ಎಚ್.ಆರ್.ಎಲ್.)

**ಗೀತರೂಪಕಗಳು :** ಕಾವ್ಯನಾಟಕವನ್ನು ಗೀತರೂಪಕವೆನ್ನಬಹುದು. ಶಿವರಾಮ ಕಾರಂತ ಮತ್ತು ಪು.ತಿ.ನರಸಿಂಹಾಚಾರ್ಯರು ಕನ್ನಡದಲ್ಲಿ ಆಧುನಿಕ ಗೀತರೂಪಕಗಳ ಮೂಲ ಪುರುಷರು. ಗೀತಗಳ ಹಾಡುವಿಕೆಯನ್ನು ಕಾರಂತರು ಹಿಂದುಸ್ತಾನೀ ಸಂಗೀತ ಪದ್ಧತಿ ಯಲ್ಲಿರಿಸಿದ್ದಾರೆ. ಇವರ ರೂಪಕಗಳನ್ನು ಸಂಗೀತ ರಹಿತವಾಗಿ ಓದಿದಲ್ಲಿ ನೀರಸವಾಗಿ ಕಾಣಿಸಬಹುದು. ಆದರೆ ರಂಗಭೂಮಿಯ ಮೇಲೆ, ಪ್ರದರ್ಶನದಲ್ಲಿ ಇವು ಸಂಗೀತದೊಡನೆ ಸೇರಿದಾಗ ಸತ್ತ್ವಪೂರ್ಣವಾದ ಹಾಡುಗಳಾಗಿ ಪರಿಣಮಿಸುತ್ತವೆ; ಸಂಗೀತದೊಂದಿಗೆ ಸಮರಸವಾಗಿ ಬೆರೆಯುತ್ತವೆ; ಸಾಹಿತ್ಯ ಸಂಗೀತಗಳೆರಡರ ಸಂಗಮವಾದ ಅದ್ಭುತ ರಸಲೋಕವೊಂದನ್ನು ಕಾಣಿಸುತ್ತವೆ. ಗೀತರೂಪಕಗಳ ಎಲ್ಲ ಪ್ರಕಾರಗಳಿಗೂ ಕಾರಂತರ ರೂಪಕಗಳಲ್ಲಿ ಉದಾಹರಣೆಗಳಿವೆ. ಲವಕುಶ, ಸಾವಿತ್ರಿ ಸತ್ಯವಾನ ರೂಪಕಗಳು ಗಂಭೀರವಾದ ಪೌರಾಣಿಕ ಕಥಾವಸ್ತುವನ್ನೊಳಗೊಂಡವು. ಬುದ್ಧೋದಯ, ಕಿಸಾಗೌತಮಿಗಳು ಚಾರಿತ್ರಿಕ ರೂಪಕಗಳು. ಮುಕ್ತದ್ವಾರವೆಂಬುದು ನರ್ತನಸಹಿತವಾದ ನೇಪಥ್ಯವೇಳ ಗಾನವನ್ನೊಳಗೊಂಡ, ವಿಚಾರಪೂರ್ಣವಾದ ಸುಂದರ ಕಲ್ಪನೆ. ಸೋಮಿಯ ಸೌಭಾಗ್ಯ, ಯಾರೋ ಅಂದರು ರೂಪಕಗಳ ವಸ್ತು ಶೈಲಿಗಳು ಜನಪದದವು. ಸುಲಿಗೆಗೆ ಇಲ್ಲವು ಸಾವು ಎಂಬುದು ವಿಡಂಬನಾತ್ಮಕ ಪ್ರಹಸನ. ಪು.ತಿ.ನರಸಿಂಹಾಚಾರ್ಯರ ಗೀತರೂಪಕಗಳಲ್ಲಿನ ಹಾಡುಗಳು ಕಾವ್ಯಸೌರಭವನ್ನು ಸೂಸುತ್ತಿರುವ ಸುಂದರ ಕವನಗಳು. ಕರ್ನಾಟಕ ಸಂಗೀತಜ್ಞಾನದ ಹಿನ್ನೆಲೆಯಲ್ಲಿ ಹಾಡುಗಳೆಲ್ಲವನ್ನೂ ಛಂದೋಬದ್ಧ ಸಂಗೀತ ಕೃತಿಗಳನ್ನನುಸರಿಸಿ ಇವರು ರಚಿಸಿದ್ದಾರೆ. ಇವರ ರೂಪಕಗಳಲ್ಲಿನ ಕೆಲವು ಬಿಡಿಗೀತಗಳನ್ನು ರಾಗತಾಳನಿಬದ್ಧವಾದ ಸಂಗೀತಕೃತಿಗಳಂತೆಯೇ ಹಾಡಲು ಸಾಧ್ಯ; ಮಾತ್ರವಲ್ಲ, ಹಾಗೆ ಹಾಡಿದಾಗ ಅವುಗಳ ಶೋಭೆಗೂ ಕೊರತೆಯಾಗುವುದಿಲ್ಲ. ಈ ಗೀತರೂಪಕಗಳನ್ನು ಓದುಗಬ್ಬವಾಗಿ, ಸಂಗೀತರಹಿತವಾಗಿ ಹಾಡಿದಾಗಲೂ ಅವುಗಳ ಅನುಪಮ ಸೌಂದರ್ಯದ ಅರಿವಾಗುತ್ತದೆ. ಕವಿಯ ಚಿಂತನಫಲವಾದ ವಿಶ್ಲೇಷಣೆ ವಿಶೇಷಾರ್ಥಗಳು ಮನಮುಟ್ಟುತ್ತವೆ. ರಂಗಭೂಮಿಯ ಮೇಲೆ ಈ ರೂಪಕಗಳನ್ನು ಅಭಿನಯಿಸುವಾಗಲಂತೂ ಅವಕ್ಕೆ ಇನ್ನೂ ಹೆಚ್ಚಿನ ಶೋಭೆಯುಂಟಾಗುತ್ತದೆ. ಆದರೆ ಕವಿಯ ಪ್ರತಿಭಾಮೂಲವಾದ ಚಿಂತನವೈಶಿಷ್ಟ್ಯಗಳನ್ನು ಮಾತ್ರ ಮೊದಲೊಮ್ಮೆ ಗೀತರೂಪಕಗಳನ್ನು ಓದಿರದ ಪ್ರೇಕ್ಷಕರು ಸಂಪೂರ್ಣವಾಗಿ ಅರಿತು ಅನುಭವಿಸುವುದು ಕಷ್ಟಸಾಧ್ಯ. ಆದುದರಿಂದ ಪು.ತಿ.ನ. ಅವರ ಗೀತರೂಪಕಗಳು ರಂಗಪ್ರದರ್ಶನದಲ್ಲಿ ಸಂಗೀತಕ್ಕೆ ಅತ್ಯುತ್ತಮವಾಗಿ ಅಳವಡುವ ಕೃತಿಮಾಲಿಕೆಗಳಾಗಿ ಪರಿಣಮಿಸಲೂ ಸಾಧ್ಯವಿದೆ. ಇವರ ಹಂಸದಮಯಂತಿ, ಗೋಕುಲನಿರ್ಗಮನ ಇವು ಶ್ರವ್ಯ ಗೀತರೂಪಕಗಳ ದೃಷ್ಟಿಯಿಂದ ಅತ್ಯುತ್ತಮವಾದವು. ಡಿ.ವಿ.ಗುಂಡಪ್ಪನವರ ಭಸ್ಮಾಸುರ ಮೋಹಿನಿ, ಗೀತ ಶಾಕುಂತಲ ಎಂಬೆರಡು ಗೀತರೂಪಕಗಳೂ ಇದೇ ವರ್ಗಕ್ಕೆ ಸೇರುವಂಥವು. *

**ಗೀತಾ ನಾಗಭೂಷಣ :** 1942 - ಕನ್ನಡದ ಹೆಸರಾಂತ ದಲಿತ ಲೇಖಕಿ. ಇವರು ಗುಲ್ಬರ್ಗ ಜಿಲ್ಲೆ ಸಾವಳಗಿ ಗ್ರಾಮದಲ್ಲಿ 1942 ಮಾರ್ಚ್ 25ರಂದು ಜನಿಸಿದರು. ತಂದೆ ಶಾಂತಪ್ಪ, ತಾಯಿ ಶರಣಮ್ಮ. ಬಿ.ಎಡ್. ಹಾಗೂ ಕನ್ನಡ ಎಂ.ಎ. ಪದವಿ ಪಡೆದು ಅಧ್ಯಾಪಕಿಯಾಗಿ, ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ

ಸಲ್ಲಿಸಿ 35ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು 26 ಕಾದಂಬರಿ ಗಳನ್ನೂ 5 ನಾಟಕ ಗಳನ್ನೂ 2 ಕಥಾ ಸಂಕಲನಗಳನ್ನೂ ಪ್ರಕಟಿಸಿ ದ್ದಾರೆ. ತಾವರೆಯ ಹೂ ಇವರ ಮೊದಲ ಕಾದಂಬರಿ (1968). ಚಿಂದಿದ ಚಿಗುರು (1969), ಸಪ್ತವರ್ಣದ ಸ್ವಪ್ನ (1973), ಪ್ರೀತಿಸಿದ್ದು ನಿನ್ನನ್ನೇ (1986), ನಿನ್ನ ತೋಳುಗಳಲ್ಲಿ (1987), ನನ್ನ ನಿನ್ನ ನಡುವೆ (1992), ಆಸರೆಗಳು (1996), ಅಭಿಮಾನ (1998) - ಈ ಕೃತಿಗಳು ಮಧ್ಯಮ ವರ್ಗದ ಬದುಕಿನ ಪ್ರೀತಿ, ಪ್ರಣಯ ಮತ್ತು ಕೌಟುಂಬಿಕ ಸಮಸ್ಯೆಗಳ ಸುತ್ತ ಹೆಣೆದ ಜನಪ್ರಿಯ ಸ್ವರೂಪದ ಕಾದಂಬರಿಗಳು. ಹಸಿ ಮಾಂಸ ಮತ್ತು ಹದ್ದುಗಳು (1978), ಮಾಪುರ, ತಾಯಿಯ ಮಕ್ಕಳು (1978), ಆಘಾತ (1980), ಚಿಕ್ಕಿಯ ಹರೆಯದ ದಿನಗಳು (1983), ನೀಲಗಂಗಾ (1986), ದುಮ್ಮಸು (1994), ದಂಗೆ (1997), ಬದುಕು (2001) - ಈ ಕಾದಂಬರಿಗಳಲ್ಲಿ ಸ್ತ್ರೀಪ್ರಪಂಚದ ದುರಂತ ಚಿತ್ರಗಳಿವೆ.

ಜಾತಿವ್ಯವಸ್ಥೆಯ ಅಮಾನವೀಯ ಆಚರಣೆಗಳಿಂದ ಅಪಮಾನಿತರಾದ ದಲಿತವರ್ಗದ ತಾಪತಲ್ಲಣಗಳನ್ನೂ ಬಡತನ, ಪರೌಢ್ಯ, ಲೈಂಗಿಕ ಹಿಂಸೆಗಳಿಂದ ನೊಂದ ಶೋಷಿತ ಸ್ತ್ರೀಯರ ಸಂಕಟ ಸಮಸ್ಯೆಗಳನ್ನೂ ಅವುಗಳಲ್ಲಿ ಸೂಕ್ಷ್ಮತೆ ಭಾವತೀವ್ರತೆಯೊಂದಿಗೆ ಕಲಾತ್ಮಕವಾಗಿ ಅನಾವರಣಗೊಳಿಸಿದೆ. ಅಪೂರ್ವ ಸೃಜನಶೀಲತೆ, ಸಾಮಾಜಿಕ ಕಾಳಜಿ ಇವರ ಕಥೆ ಕಾದಂಬರಿಗಳ ಅನನ್ಯತೆ. ದಲಿತಸಂವೇದನೆ, ಸ್ತ್ರೀಪರತೆ, ಪ್ರತಿಭಟನೆ ಮತ್ತು ಪರಿಷ್ಕಾರದ ಆಶಯಗಳು ಇವರ ಕೃತಿಗಳ ಜೀವಪರ ನೆಲೆಯನ್ನು ಗಟ್ಟಿಗೊಳಿಸಿವೆ.

ಜ್ವಲಂತ (1989), ಅವ್ವ ಮತ್ತು ಇತರ ಕಥೆಗಳು (1993) ಇವು ಕಥಾ ಸಂಕಲನಗಳು. ಜೋಗಿಣಿ ಎಂಬುದು ಕೆಳವರ್ಗದ ಮಹಿಳೆಯರ ಲೈಂಗಿಕ ಶೋಷಣೆಯ ಸುತ್ತ ಹೆಣೆದ ನಾಟಕ. ಅವ್ವ, ಸತ್ತ ಹೆಣ್ಣಿನ ಸುತ್ತ, ಜೀವನಚಕ್ರ, ನೀಲಗಂಗಾ - ಇವು ಮುಗ್ಧ ಗ್ರಾಮೀಣ ಮಹಿಳೆಯರ ಭಾವನಾತ್ಮಕ ಸಂಘರ್ಷಗಳನ್ನೂ ಅವರ ಜ್ವಲಂತ ಸಮಸ್ಯೆಗಳನ್ನೂ ಬಿಂಬಿಸುವ ಇತರ ನಾಟಕಗಳು.

ಅಲೆಮಾರಿ ಜನಾಂಗವಾದ ದುರಗ ಮುರಗಿಯವರನ್ನು ಕುರಿತಂತೆ ಇವರು ಸಂಶೋಧನೆ ನಡೆಸಿ ದುರಗ ಮುರಗಿಯವರ ಸಂಸ್ಕೃತಿ (1993) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಖೇಮಣ್ಣ (1998) ಇವರ ಒಂದು ಸಂಪಾದಿತ ಕೃತಿ.

ಇವರ ಹಸಿ ಮಾಂಸ ಮತ್ತು ಹದ್ದುಗಳು ಕಾದಂಬರಿಗಳು ಮರಾಠಿಗೆ ಅನುವಾದಗೊಂಡಿವೆ. ಹೆಣ್ಣಿನ ಕೂಗು ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಚಲನಚಿತ್ರವಾಗಿದೆ. ಇವರ ಅನೇಕ ಕಥೆಗಳು ತೆಲುಗು ಮತ್ತು ತಮಿಳಿಗೆ ಭಾಷಾಂತರಗೊಂಡಿವೆ.

ಇವರ ಸಾಹಿತ್ಯ ಸೇವೆಗಾಗಿ ಅನೇಕ ಪ್ರಶಸ್ತಿಗಳು ದೊರಕಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ, ಗುಲ್ಬರ್ಗದ ಎಸ್.ಆರ್.ಪಾಟೀಲ ಪ್ರತಿಷ್ಠಾನದ ಕಾಯಕರತ್ನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವ ಪ್ರಶಸ್ತಿ (1995), ಕರ್ನಾಟಕರಾಜ್ಯೋತ್ಸವ ಪ್ರಶಸ್ತಿ (1998) ಮತ್ತು ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ (2002) ಇವರಿಗೆ ಲಭ್ಯವಾಗಿವೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ ಗೌರವಕ್ಕೆ ಇವರು ಪಾತ್ರರಾಗಿದ್ದಾರೆ (2004). ಇವರ ಬದುಕು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಲಭಿಸಿದೆ (2004). ಇವರು ಈಗ ಕರ್ನಾಟಕ ಸಾಹಿತ್ಯ ಅಕಡೆಮಿಯ ಅಧ್ಯಕ್ಷರಾಗಿದ್ದಾರೆ (2005). (ಎಸ್‌ಎಚ್‌ಎ.ಐ.)

**ಗುಂಜಿ:** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರದಿಂದ 13ಕಿಮೀ ದೂರದಲ್ಲಿ ಬೆಳಗಾಂವಿ ಪಣಜಿ ಹೆದ್ದಾರಿಯಲ್ಲಿದೆ. ಇಲ್ಲಿ ಕಮಲೇಶ್ವರ, ಗಣಪತಿ, ರಾವಳನಾಥ, ಮಾವೂಲಿದೇವಿ ಮುಂತಾದ ದೇವಾಲಯಗಳಿವೆ. ಕಮಲೇಶ್ವರ ದೇವಾಲಯದ ಗರ್ಭಗುಡಿ ಮಾತ್ರ ಪುರಾತನವಾದ್ದು, ಶಿವಲಿಂಗ ಪೀಠ ತರುವಾಯದ ಚಾಳುಕ್ಯ ಶೈಲಿಯಲ್ಲಿದೆ. ಗಣಪತಿ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಚಾಳುಕ್ಯ ಶೈಲಿಯ ಶಿವಲಿಂಗ ಮತ್ತು ವಿಷ್ಣು ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ರಾವಳನಾಥ ದೇವಾಲಯ ಇತ್ತೀಚಿನ ಸಿಮೆಂಟ್ ಕಟ್ಟಡವಾಗಿದ್ದು ಸೊಗಸಾಗಿದೆ. ಈ ದೇವಾಲಯದ ಮುಂದೆ ಐದು ವೀರಗಲ್ಲುಗಳಿವೆ. ದೊಡ್ಡದಾದ ಶಿವಲಿಂಗವನ್ನೊಳಗೊಂಡ ಶಿವ ದೇವಾಲಯವೂ ಊರ ಹೊರವಲಯದಲ್ಲಿದೆ. ದಸರ ಮಹೋತ್ಸವದಲ್ಲಿ ಈ ದೇವಾಲಯ ಮತ್ತು ರಾವಳನಾಥ ದೇವಾಲಯದಲ್ಲಿ 5 ದಿನಗಳಕಾಲ ಹಬ್ಬವನ್ನು ಆಚರಿಸಲಾಗುತ್ತದೆ. ಈ ಊರಲ್ಲಿ ಖಾಜಿ ಪೀರ್‌ರ ದರ್ಗಾ ಇದೆ. ಗುಂಜಿಗೆ ಸು.5ಕಿಮೀ ಅಂತರದಲ್ಲಿರುವ ಕಿರವಾಲಿ ಎಂಬ ಸ್ಥಳ ನಾಥಪಂಥದ ಒಂದು ಪ್ರಾಚೀನ ಕೇಂದ್ರವಾಗಿತ್ತು. ಅಲ್ಲಿ ಗೋರಖನಾಥ ಮಠವಿದೆ; ಕಾಲಭೈರವನ ಉಪಾಸನೆ ನಡೆಯುತ್ತದೆ. ನಾಥ'ಪಂಥ'ಕ್ಕೆ ಸೇರಿದ ಮತ್ಸ್ಯೇಂದ್ರನಾಥ ಮಠ ಗುಂಜಿಗೆ ಸು.7ಕಿಮೀ ದೂರದ ದೊಂಗುಗಾಂವ್‌ನಲ್ಲಿದೆ. (ಎಂ.ಬಿ.ಎಚ್.)

**ಗುಂಡಪ್ಪ :** 1898-1969. ಪ್ರಸಿದ್ಧ ನಾಟ್ಯಾಚಾರ್ಯರು. ಖ್ಯಾತ ನರ್ತಕ ಮನೆತನಕ್ಕೆ ಸೇರಿದವರು. ಇವರ ಮುತ್ತಜ್ಜಿ ರಂಗನಾಯಕಮ್ಮ ಪ್ರಖ್ಯಾತ ಕಲಾವಿದೆಯಾಗಿದ್ದು ಮೈಸೂರು ಅರಸರಿಂದ ಸನ್ಮಾನಿತರಾಗಿದ್ದರು. ಅಜ್ಜಿ ರಂಗಮ್ಮನವರು ನಾಟಕ ಕಲೆಯಲ್ಲಿ ನಿಪುಣರಾಗಿದ್ದು, ಬಸವನಹಳ್ಳಿಯ ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ನಾಟ್ಯಸೇವೆಯನ್ನು ಸಲ್ಲಿಸುತ್ತಿದ್ದರು. ಗುಂಡಪ್ಪನವರು ರೆಟ್ಟಪ್ಪನವರಲ್ಲಿ ಸುಮಾರು ಹನ್ನೆರಡು ವರ್ಷ ನೃತ್ಯಾಭ್ಯಾಸ ಮಾಡಿ ಗುರುಗಳ ಸಂಗಡ ಪ್ರದರ್ಶನಗಳಲ್ಲಿ ಭಾಗವಹಿಸಿ, ಅನುಭವ ಪಡೆದರು. ನಾಟ್ಯಾಚಾರ್ಯರಾಗಿ ಅನೇಕ ಶಿಷ್ಯರಿಗೆ ನೃತ್ಯವನ್ನು ಕಲಿಸಿ ಜನಪ್ರಿಯರಾಗಿದ್ದರು. (ಯು.ಎಸ್.ಕೆ.)

**ಗುಂಡಪ್ಪ, ಎಲ್. :** 1903-86. ಹೆಸರಾಂತ ಭಾಷಾಂತರಕಾರ, ಲೇಖಕ. 1903 ಜನವರಿ 8ರಂದು ಹಾಸನ ಜಿಲ್ಲೆ ಮತಿಘಟ್ಟದಲ್ಲಿ ಜನಿಸಿದರು. ಬೇಲವಾಡಿ, ಚಿಕ್ಕಮಗಳೂರು, ಮೈಸೂರುಗಳಲ್ಲಿ ಓದಿ ಕನ್ನಡ ಎಂ.ಎ. ಪದವಿ ಪಡೆದ ಇವರು ಬಿ.ಎಂ.ಶ್ರೀ. ಅವರ ನೇರ ಪ್ರಭಾವಕ್ಕೆ ಒಳಗಾದರು. ಕನ್ನಡದ ಜೊತೆಗೆ ತಮಿಳನ್ನೂ ಕಲಿತರು. ಇವೆರಡೂ ಭಾಷೆಗಳ ಸೋದರ ಸಂಬಂಧವನ್ನು ಚೆನ್ನಾಗಿ ಅರಿತುಕೊಂಡಿದ್ದರು. ಸಂಸ್ಕೃತ ಇಂಗ್ಲಿಷುಗಳನ್ನೂ ಬಲ್ಲವರಾಗಿದ್ದ ಇವರು ಸೃಜನಾತ್ಮಕ ಸಾಹಿತ್ಯ ರಚಿಸುವ ಸಾಮರ್ಥ್ಯ ತಮಗಿದೆಯೆಂದು ವಿದ್ಯಾರ್ಥಿ ದಶೆಯಲ್ಲೇ ತೋರಿಸಿಕೊಂಡರೂ ಅನುವಾದ ಸಂಪಾದನೆಗಳ ಕ್ಷೇತ್ರದಲ್ಲೇ ವಿಶೇಷವಾಗಿ ದುಡಿದರು.



ಬಿ.ಎಂ.ಶ್ರೀ. ಅವರ ಮಾರ್ಗದರ್ಶನದಲ್ಲಿ ಹಾಗೂ ಪಿ.ಎಂ.ಸೋಮಸುಂದರಂ ಅವರ ನೇತೃತ್ವದಲ್ಲಿ ತಮಿಳನ್ನು ಆಳವಾಗಿ ಅಭ್ಯಾಸ ಮಾಡಿದ ಇವರು ತಮಿಳಿನಿಂದ ಅನೇಕ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ತಿರುಕ್ಕುರಳ್, ಮಣಿಮೇಕಲೈ, ಶಿಲಪ್ಪದಿಗಾರಂ, ಅವ್ವೈಯಾರ್ ಎಂಬ ಕೃತಿಗಳು, ಉಲಗನೀತಿ, ಭಾರತಿಯವರ ಕವಿತೆಗಳು, ಶೇಕ್ಕಿಳಾರರ ಪೆರಿಯಪುರಾಣ, ನಾಲ್ಮಣಿ ಕಡುಕು ಇವು ಗುಂಡಪ್ಪನವರ ಕೆಲವು ಪ್ರಸಿದ್ಧ ಅನುವಾದಗಳು. ಸ್ವಾಮಿನಾಥ ಅಯ್ಯರರ ನನ್ನ ಚರಿತ್ರೆಯನ್ನೂ ವರದರಾಜನ್ನರ ತಮಿಳು ಸಾಹಿತ್ಯ ಚರಿತ್ರೆಯನ್ನೂ ಇವರು ಕನ್ನಡಿ ಸಿದ್ದಾರೆ. ತಮಿಳು-ಕನ್ನಡ ಬಾಂಧವ್ಯಕ್ಕೆ ಶ್ರಮಿಸಿದ್ದಕ್ಕಾಗಿ ಇವರಿಗೆ ನಾಗರಕೋಯಿಲಿನಲ್ಲಿ ಬಂಗಾರದ ಪದಕ ನೀಡಿ ಗೌರವಿಸಲಾಗಿತ್ತು. ಸೊಹ್ರಾಬ್ ರುಸ್ತುಂ ಕಥನ ಕವನದ ಅನುವಾದಕ್ಕಾಗಿ ಬಿ.ಎಂ.ಶ್ರೀ. ರಜತ ಮಹೋತ್ಸವ ಪದಕ, ಇತರ ಸಾಧನೆಗಳಿಗಾಗಿ ಗಾಂಧಿ ಶತಮಾನೋತ್ಸವ ಸ್ವರ್ಣ ಪದಕ, ದೇವರಾಜ ಬಹದ್ದೂರ್ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಇವರು ಕನ್ನಡಿಸಿ ಪ್ರಕಟಿಸಿದ ಟಾಲ್‌ಸ್ಟಾಯಿಯ ಕಥೆಗಳೂ ಭಾಸನ ಏಕಾಂಕ ನಾಟಕಗಳೂ ಸ್ವಪ್ನವಾಸವದತ್ತ ನಾಟಕವೂ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ. ನಾಡಪದಗಳು, ಭಾರತ ಕಥಾಮಂಜರಿ, ಕನ್ನಡ ವ್ಯಾಕರಣ ಪಾಠಗಳು, ಥಾಮಸ್ ಆಲ್ವ ಎಡಿಸನ್, ಫ್ಲಾರೆನ್ಸ್ ನೈಟಿಂಗೇಲ್-ಇವು ಇವರು ರಚಿಸಿದ ಕೆಲವು ಗದ್ಯಕೃತಿಗಳು. ಇವರು ಸಂಪಾದಿಸಿದ ಪಂಪನ ಆದಿಪುರಾಣ ಸಂಗ್ರಹವೂ ಉಲ್ಲೇಖನೀಯ. ಪ್ರಾಚೀನ ಕಾವ್ಯಗಳನ್ನು ಸಂಗ್ರಹಿಸಿ ಸಂಪಾದಿಸುವವರಿಗೆ ಇದು ಒಳ್ಳೆಯ ಮಾದರಿ. ಈ ಕೃತಿಗೆ ಇವರು ಬರೆದಿರುವ ಸುಮಾರು ಎಂಬತ್ತು ಪುಟಗಳ ಪೀಠಿಕೆ ಇವರ ವಿದ್ವತ್ತಿಗೆ ಸಾಕ್ಷಿ. ಇವರು ಅಧ್ಯಾಪಕರಾಗಿಯೂ ಹೆಸರು ಗಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇವರು ಹಲವು ವರ್ಷಗಳ ಕಾಲ ಕನ್ನಡ ಸಾಹಿತ್ಯವನ್ನು ಬೋಧಿಸಿದರು. ಬೆಳ್ಳಾವೆ ವೆಂಕಟನಾರಾಯಣಪ್ಪನವರ ಸಂಪಾದಕತ್ವದಲ್ಲಿ ಆರಂಭವಾದ ಇಂಗ್ಲಿಷ್-ಕನ್ನಡ

ನಿಘಂಟಿನ ಸಹಾಯಕ ಸಂಪಾದಕರಾಗಿಯೂ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಸಂಪಾದಕರಾಗಿಯೂ ಕೆಲವು ವರ್ಷ ಕೆಲಸಮಾಡಿದರು. ಇವರು 1986ರಲ್ಲಿ ನಿಧನಹೊಂದಿದರು. (ಎಚ್.ಎಸ್.ಕೆ.)

**ಗುಂಡಪ್ಪ, ಡಿ.ವಿ. :** 1889-1975. ಡಿ.ವಿ.ಜಿ. ಎಂಬ ಮೂರಕ್ಷರದ ಸಂಕ್ಷಿಪ್ತನಾಮದಿಂದ ಪ್ರಸಿದ್ಧರಾಗಿದ್ದ ಸಾಹಿತಿ, ಪತ್ರಿಕೋದ್ಯಮಿ ಮತ್ತು ಸಾರ್ವಜನಿಕ ಸೇವಕರು. ಹುಟ್ಟಿದ್ದು ಕೋಲಾರ ಜಿಲ್ಲೆ ಮುಳಬಾಗಿಲಿನಲ್ಲಿ. ತಂದೆ ದೇವನಹಳ್ಳಿ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಹುಟ್ಟೂರಿನಲ್ಲಿದ್ದು ಆಂಗ್ಲೋ-ವರ್ನಾಕುಲರ್ ಶಾಲೆಯಲ್ಲಿ ಲೋವರ್ ಸೆಕೆಂಡರಿ ವರೆಗೆ ವ್ಯಾಸಂಗ ಮಾಡಿ, ಅನಂತರ ಮೈಸೂರು ಮತ್ತು ಕೋಲಾರ ಪ್ರೌಢಶಾಲೆಗಳಲ್ಲಿ ಮೆಟ್ರಿಕ್ಯುಲೇಷನ್‌ವರೆಗೆ ಶಿಕ್ಷಣ ಪಡೆದರು. ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬಂದ ಗುಂಡಪ್ಪನವರು ಪತ್ರಿಕಾ ಪ್ರಪಂಚದ ಕಡೆಗೆ ಆಕರ್ಷಿತರಾದರು.



ಬೆಂಗಳೂರಿನ ಸೂರ್ಯೋದಯ ಪ್ರಕಾಶಿಕಾ ವಾರಪತ್ರಿಕೆಯಲ್ಲಿ ಎರಡು ವರ್ಷ ಕೆಲಸ ಮಾಡಿದ (1905-06) ಇವರು ಅನಂತರ ಭಾರತಿ ಎಂಬ ಕನ್ನಡ ದಿನಪತ್ರಿಕೆಯನ್ನು ಸ್ವತಃ ಆರಂಭಿಸಿ (1907) ಒಂದು ವರ್ಷಕಾಲ ನಡೆಸಿದರು. ಮೈಸೂರು ಸ್ಟ್ಯಾಂಡರ್ಡ್, ನಡೆಗನ್ನಡಿ, ಮೈಸೂರು ಮೇಲ್, ಇಂಡಿಯನ್ ರಿವ್ಯು ಮುಂತಾದ ಪತ್ರಿಕೆಗಳಿಗೆ ಇವರು ಮೂರು ವರ್ಷಕಾಲ (1908-11) ಲೇಖನಗಳನ್ನು ಬರೆದರು. ಮೈಸೂರುಟೈಮ್ಸ್ ಎಂಬ ವಾರಾರ್ಧ ಪತ್ರಿಕೆಗೆ ಸಹ ಸಂಪಾದಕರಾಗಿದ್ದ (1909-10) ಇವರು ಅನಂತರ ಇಂಗ್ಲಿಷ್‌ನಲ್ಲಿ ಕರ್ನಾಟಕ ಎಂಬ ವಾರಾರ್ಧ ಪತ್ರಿಕೆಯನ್ನು ಪ್ರಾರಂಭಿಸಿ (1921) ಒಂದು ವರ್ಷಕಾಲ ನಡೆಸಿದರು.

ಭಾರತದ ನೂತನ ಸಂಸ್ಥಾನಗಳಲ್ಲಿ ದೇಶೀಯ ಸಂಸ್ಥಾನಗಳ ಹಾಗೂ ಸಂಸ್ಥಾನದ ಪ್ರಜೆಗಳ ಸ್ಥಾನಮಾನಗಳೇನಿರಬೇಕೆಂಬುದನ್ನು ಕುರಿತು ಗುಂಡಪ್ಪನವರು ಗಾಢವಾದ ಅಧ್ಯಯನ ನಡೆಸಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅನೇಕ ಲೇಖನಗಳನ್ನು ಬರೆದರಲ್ಲದೆ ಪ್ರಮುಖರಿಗೆ ಮನವಿಗಳನ್ನೂ ಸಲ್ಲಿಸಿದ್ದರು. ಅಂಥವುಗಳಲ್ಲಿ ಬಿಕನೀರ್ ಮಹಾರಾಜರಿಗೆ (1917), ಮಾಂಟೆಗು ಅವರಿಗೆ (1928) ಮತ್ತು ಬಟ್ಲರ್ ಸಮಿತಿಗೆ (1928) ಸಲ್ಲಿಸಿದ ಮನವಿಗಳನ್ನು ಸ್ಮರಿಸಬಹುದು. ಇದೇ ವಿಷಯವನ್ನು ಕುರಿತು ಇಂಗ್ಲಿಷ್‌ನಲ್ಲಿ ದಿ ಪ್ರಾಬ್ಲಮ್ ಆಫ್ ಇಂಡಿಯನ್ ನೇಟಿವ್ ಸ್ಟೇಟ್ಸ್ (1917), ದಿ ಗೌರ್ನಮೆಂಟ್ ಆಫ್ ಇಂಡಿಯ ಅಂಡ್ ದಿ ಇಂಡಿಯನ್ ಸ್ಟೇಟ್ಸ್ (1926), ಸ್ಟೇಟ್ಸ್ ಅಂಡ್ ದೇರ್ ಪೀಪಲ್ ಇನ್ ದಿ ಇಂಡಿಯನ್ ಕಾನ್‌ಸ್ಟಿಟ್ಯೂಷನ್ (1931) -ಈ ಪುಸ್ತಕಗಳನ್ನು ರಚಿಸಿದ್ದರು. ತಿರುವಾಂಕೂರಿನಲ್ಲಿ 1929ರಲ್ಲಿ ನಡೆದ ದಕ್ಷಿಣ ಭಾರತ ದೇಶೀಯ ಪ್ರಜೆಗಳ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ಗುಂಡಪ್ಪನವರು ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು.

ಗುಂಡಪ್ಪನವರು ಸಲ್ಲಿಸಿದ ಸಾರ್ವಜನಿಕ ಸೇವೆಯೂ ಗಣ್ಯವಾದುದು. ಬೆಂಗಳೂರಿನಲ್ಲಿ ಪಾಪ್ಯುಲರ್ ಎಜ್ಯುಕೇಷನ್ ಲೀಗ್, ಸೋಷಿಯಲ್ ಸರ್ವಿಸ್ ಲೀಗ್ (1915-20), ಪ್ರಜಾಜನಪರಿಷತ್ತು (ಮೈಸೂರು ಪೀಪಲ್ಸ್ ಕನ್‌ವೆನ್‌ಷನ್ 1919), ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತು (ಸ್ಟೇಟ್ಸ್ ಪೀಪಲ್ಸ್ ಕಾನ್‌ಫರೆನ್ಸ್ 1931), ಎರಡನೆಯ ಮಹಾಯುದ್ಧ ಸಮಯದಲ್ಲಿ ಸೆಲ್ಫ್ ಪ್ರೊಟೆಕ್ಷನ್ ಲೀಗ್ (1938-39) ಮೊದಲಾದ ಹತ್ತಾರು ಸಾರ್ವಜನಿಕ ಸಂಘಸಂಸ್ಥೆಗಳ ಮುಖ್ಯ ಪ್ರವರ್ತಕರಾಗಿದ್ದರು. ಬೆಂಗಳೂರು ಪುರಸಭೆಯ ಸದಸ್ಯರಾಗಿ (1912), ಮೈಸೂರು ಸಂಸ್ಥಾನ ಶಾಸನ ಪರಿಷತ್ತಿನ ಸದಸ್ಯರಾಗಿ (1926-40), ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ (1927-43), ಕೌನ್ಸಿಲ್ ಸದಸ್ಯರಾಗಿ (1933-39), ಮಿರ್ಜಾ ಸರ್ಕಾರ ರಚಿಸಿದ್ದ ರಾಜ್ಯಾಂಗ ಸುಧಾರಣಾ ಸಮಿತಿಯ ಸದಸ್ಯರಾಗಿ (1939) ಇವರು ಸೇವೆ ಸಲ್ಲಿಸಿದರು. ಜನತೆಯಲ್ಲಿ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಬೇಕೆಂಬ ಉದ್ದೇಶದಿಂದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿದ (1945) ಇವರು, ತಮ್ಮ ಜೀವನದ ಕೊನೆಯವರೆಗೂ ಈ ಸಂಸ್ಥೆಯ ಸ್ಥಾಪಕ ಕಾರ್ಯದರ್ಶಿಗಳಾಗಿದ್ದು, ಅದರ ಬಹುಮುಖ ಅಭಿವೃದ್ಧಿಗಾಗಿ ದುಡಿದರು. ಈ ಸಂಸ್ಥೆಯ ಮುಖಪತ್ರ ಪಬ್ಲಿಕ್ ಅಫೇರ್ಸ್‌ಗೂ ಇವರು ಸ್ಥಾಪಕ ಸಂಪಾದಕರಾಗಿದ್ದರು (1949-75).

ಸಾಹಿತ್ಯ, ಸಾರ್ವಜನಿಕ ಮತ್ತು ರಾಜಕೀಯಾದಿ ವಿಭಿನ್ನ ಕ್ಷೇತ್ರಗಳಲ್ಲಿ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಏಳು ದಶಕಗಳಷ್ಟು ದೀರ್ಘಕಾಲ ಡಿ.ವಿ.ಜಿ. ನಡೆಸಿದ ವ್ಯವಸಾಯ ಗಮನಾರ್ಹವಾದುದು. ಸತತವಾದ ಪತ್ರಿಕೋದ್ಯಮ, ವಿಪುಲ ಸಾಹಿತ್ಯಸೃಷ್ಟಿ, ಸಂಗೀತಾದಿ ಕಲಾಭಿಜ್ಞತೆ, ರಾಜಕೀಯ ಚರ್ಚೆ, ಸಮಾಜಸೇವೆ, ಹತ್ತಾರು ಸಂಸ್ಥೆಗಳ ನೇತೃತ್ವ, ಇವೆಲ್ಲಕ್ಕೂ ಹಿನ್ನೆಲೆಯಾಗಿ ಉದ್ದಾಮ ಪಾಂಡಿತ್ಯ, ಪ್ರತಿಭೆ, ಶ್ರದ್ಧೆ, ಆದರ್ಶನಿಷ್ಠೆ, ಉದಾರಚಿಂತನೆ, ಪೂರ್ವಸಂಪ್ರದಾಯಕ್ಕೂ ಸಾಂಪ್ರತಲೋಕದ ರೀತಿನೀತಿಗೂ ಸ್ನೇಹಸೇತುವಾಗಿ ಅವೆರಡಕ್ಕೂ ವಿರಸ ಬಾರದಂಥ ಒಂದು ಜೀವನದರ್ಶನವನ್ನು ಜನತೆಗೆ ಕಾಣಿಸುವ ಉತ್ಸಾಹ, ತಮ್ಮ ಪ್ರತಿಭಾ ಸಂಪತ್ತನ್ನು ಬದಿಗಿರಿಸಿ ಸಮಾಜದ ಎಲ್ಲ ವರ್ಗಗಳಲ್ಲೂ ಸರಸವಾಗಿ ಬೆರೆತುಕೊಳ್ಳುತ್ತಿದ್ದ ಸಹೃದಯತೆ ಮೊದಲಾದ ಕಾರಣಗಳಿಂದ ಡಿ.ವಿ.ಜಿ. ಕನ್ನಡ ಜನತೆಯ ಅಕ್ಕರೆಗೆ, ಅಭಿಮಾನಕ್ಕೆ ಪಾತ್ರರಾಗಿದ್ದರು.

ವಸಂತಕುಸುಮಾಂಜಲಿ (1922), ನಿವೇದನ (1924) ಮುಂತಾದ ಕಾವ್ಯ ಮಾಲೆಗಳು; ಜೀವನಸೌಂದರ್ಯ ಮತ್ತು ಸಾಹಿತ್ಯ (1932), ಸಾಹಿತ್ಯ ಶಕ್ತಿ (1950) ಮುಂತಾದ ವೈಚಾರಿಕ ಪ್ರಬಂಧಸಂಚಯಗಳು ಅನುವಾದದ ಆಕಾರ ತಳೆದಿದ್ದರೂ ನೂತನ ಕಾವ್ಯದಂತೆ ಸೊಗಯಿಸುವ ಉಮರನ ಒಸಗೆ (1930), ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ನಾಟಕದ ಪದ್ಯಾನುವಾದ (1936), ಶ್ರೀರಾಮಕಥೆಯ ನೆವದಿಂದ ಧರ್ಮದ್ವೈಧ ಕ್ಲೇಶಗಳಿಗೆ ಪರಿಹಾರವನ್ನು ವಿವೇಚಿಸುವ ಶ್ರೀರಾಮಪರೀಕ್ಷಣಂ (1945), ಬೇಲೂರು ಚೆನ್ನಕೇಶವ ದೇವಾಲಯದ ಮದನಿಕೆಯರ ಶೃಂಗಾರವಿಲಾಸಗಳ ಸಂಗೀತ ಚಿತ್ರಣವಾದ ಅಂತಃಪುರಗೀತೆ (1950), ಶಾಕುಂತಲ ನಾಟಕದ ಸಂದರ್ಭಗಳ ಸಂಗೀತಾನುವಾದ ಗೀತಶಾಕುಂತಲ (1960) ಈ ಪದ್ಯಕಾವ್ಯಗಳು, ಉತ್ತಮ ಜೀವಿತದ ನಡೆವಳಿಕೆಗಳನ್ನು ವರ್ಣಿಸುವ ಬಾಳಿಗೊಂದು ನಂಬಿಕೆ (1950), ಸಂಸ್ಕೃತಿ (1953) ಮುಂತಾದ ಪ್ರಬಂಧಗಳು; ರಂಗಾಚಾರ್ಲು (1911), ಗೋಪಾಲ ಕೃಷ್ಣ ಗೋಖಲೆ (1915), ವಿದ್ಯಾರಣ್ಯರು ಮತ್ತು ಅವರ ಸಮಕಾಲೀನರು (1922) ಮುಂತಾದ ಜೀವನಚರಿತ್ರೆಗಳು; ರಾಜ್ಯಶಾಸ್ತ್ರ (1951), ರಾಜ್ಯಾಂಗದ ತತ್ತ್ವಗಳು (1954) ಮೊದಲಾದ ಶಾಸ್ತ್ರಗ್ರಂಥಗಳು; ಪ್ರವೃತ್ತಿ ನಿವೃತ್ತಿ ಸಮನ್ವಯವನ್ನೂ ಜೀವೋತ್ಕರ್ಷವನ್ನೂ ಪ್ರತಿಪಾದಿಸುವ ಪುರುಷಸೂಕ್ತ (1953) ಮತ್ತು ಈಶೋಪನಿಷತ್ತು (1953) - ಈ ಮೊದಲಾದವು ಇವರ ಸಾಹಿತ್ಯ ಕೃತಿಗಳು.

ಭೋಗೇಚ್ಛೆ ಪಾಪವಲ್ಲ. ಜೀವನದಲ್ಲಿ ಉಲ್ಲಾಸಕ್ಕೆ ಮಹತ್ವದ ಸ್ಥಾನ ಸಲ್ಲುತ್ತದೆ. ಸೌಂದರ್ಯಾನುಭವ ಆತ್ಮೋತ್ಕರ್ಷಕ್ಕೆ ಸಾಧಕವೇ ಆಗಬಲ್ಲದು ಎಂಬುದು ಶೃಂಗಾರಮಂಗಳಂ ಎಂಬ (1970) ಪದ್ಯಮಾಲಿಕೆಯ ಆಶಯ. ಈ ವಿಚಾರಧಾರೆ ಶ್ರೀಕೃಷ್ಣಪರೀಕ್ಷಣಂ (1971) ಎಂಬ ಗೀತರೂಪಕದಲ್ಲಿಯೂ ಪ್ರಕಟವಾಗಿದೆ.

ಡಿ.ವಿ.ಜಿ. ತಮ್ಮ ಅನುಭವಗಳನ್ನು ನೆನಪುಗಳ ರೂಪದಲ್ಲಿ ಸು.1953-75ರಲ್ಲಿ ಪತ್ರಿಕೆಗಳಲ್ಲಿ ಲೇಖನಗಳ ಮಾಲೆಯಾಗಿ ಪ್ರಕಟಿಸಿದರು. ಆ ಲೇಖನಗಳೆಲ್ಲ ಜ್ಞಾಪಕಚಿತ್ರಶಾಲೆ ಎಂಬ ಹೆಸರಿನಲ್ಲಿ 6 ಸಂಪುಟಗಳಲ್ಲಿ ಪ್ರಕಟವಾಗಿವೆ. ಹತ್ತಾರು ಮಂದಿ ಪ್ರಸಿದ್ಧಪುರುಷರ, ವಿದ್ವದ್ರಸಿಕರ ಹಾಗೂ ಸಾಮಾನ್ಯರ ವೃತ್ತಿ ವೈಲಕ್ಷಣ್ಯಗಳ ಚಿತ್ರಣಗಳಿಂದಲೂ ಹಾಸ್ಯ ಸನ್ನಿವೇಶಗಳಿಂದಲೂ ತುಂಬಿ ಡಿ.ವಿ.ಜಿ.ಯವರ ಸ್ವಾರಸ್ಯ ಗ್ರಹಣಪಟುತೆಗೂ ಕಥನಕೌಶಲಕ್ಕೂ ಇವು ನಿದರ್ಶನವಾಗಿವೆ.

ಇವರು ರಚಿಸಿದ ಮಂಕುತಿಮ್ಮನ ಕಗ್ಗ (1948) ಹೊಸಗನ್ನಡದ ಅತ್ಯಂತ ಜನಪ್ರಿಯ ಪದ್ಯಕಾವ್ಯಗಳಲ್ಲೊಂದು. ಇದರಲ್ಲಿ ಜೀವನಾನುಭವದ ರಸಪಾಕ ಸೂತ್ರರೂಪವಾಗಿ ಹೊರಹೊಮ್ಮಿದೆ. ಜೀವನದ ಆಘಾತವ ಗಳನ್ನೆದುರಿಸುವುದರಲ್ಲಿ ಒಂದು ಸ್ಥೈರ್ಯವನ್ನೂ ನಯೋಪಾಯವನ್ನೂ ಬೋಧಿಸುವ ಕಗ್ಗದ ಸೂಚ್ಯುಕ್ತಿಗಳು ಮನಃಸ್ಪರ್ಶಿಯೂ ಅವಿಸ್ಮರಣೀಯವೂ ಆಗಿದ್ದು ಡಿ.ವಿ.ಜಿ.ಯವರಿಗೆ ಆಧುನಿಕ ಸರ್ವಜ್ಞ ಎಂಬ ಅಭಿಧಾನವನ್ನು ತಂದುಕೊಟ್ಟಿವೆ. ಯಾವುದೇ ಕಾರಣದಿಂದ ಮನ ಕುಗ್ಗಿದವರಿಗೆ ಒಲ್ಲೆನೆನದಿರು ಬಾಳನ್ ಒಲವದೇನೆನ್ನದಿರು ಉಲ್ಲಾಸಕೆಡೆಮಾಡು ನಿನ್ನಿನಾದನಿತು ನಿಲ್ಲು ಕೆಚ್ಚೆದೆಯಿಂದಲನ್ಯಾಯಗಳನಳಿಸೆ ಎಲ್ಲಕಂ ಸಿದ್ಧನಿರು-ಮಂಕುತಿಮ್ಮ ಮುಂತಾದ ಸ್ನೇಹವಚನಗಳು ಧೈರ್ಯೋತ್ಸಾಹಪ್ರದಗಳಾಗಿವೆ. ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ಬೆಲ್ಲಸಕ್ಕರೆಯಾಗು ದೀನದುರ್ಬಲರಿಂಗೆ ಎಲ್ಲರೊಳಗೊಂದಾಗು ಮಂಕುತಿಮ್ಮ ಎಂಬ ಪದ್ಯ ಮಾನವ ಪರೋಪ ಕಾರಿಯಾಗಿದ್ದು ಜೀವನದಲ್ಲಿ ಬರುವ ಎಲ್ಲ ಕಷ್ಟಸುಖಗಳಿಗೂ ಮೈಯೊಡ್ಡಿ ಸಾರ್ಥಕವಾಗಿ ಬದುಕಬೇಕೆಂಬುದನ್ನು ವ್ಯಕ್ತಪಡಿಸುತ್ತದೆ. ಮಂಕು ಮುನಿಯನ ಕಗ್ಗ ಎಂಬುದು ಇದೇ ಬಗೆಯ ಇನ್ನೊಂದು ಕೃತಿ.

ಇಂಥದೇ ಚಿಂತನಧೋರಣೆ ಡಿ.ವಿ.ಜಿ.ಯವರ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ (1966) ಎಂಬ ಉಪನ್ಯಾಸ ಗ್ರಂಥದಲ್ಲಿ ಶಾಸ್ತ್ರ ಪರಿಷ್ಕೃತಿಯಿಂದ ವಿಸ್ತರಿಸಲ್ಪಟ್ಟಿದೆ. ಲೋಕಜೀವನ ಗೌರವಾರ್ಹ, ಸಮ್ಯಗ್ಜೀವನವೇ ಭಗವದಾರಾಧನೆ -ಇದು ಭಗವದ್ಗೀತೆಯ ಪ್ರಧಾನೋಪದೇಶವೆಂದಿದ್ದಾರೆ. ಅಂತರಂಗ ಬಹಿರಂಗ ಸಾಮರಸ್ಯವೂ ದ್ವೈತ ಅದ್ವೈತಾದಿ ವಿವಿಧ ಮತ ಸಾಮರಸ್ಯವೂ ಸಾಧ್ಯ ಹಾಗೂ ಅವಶ್ಯವೆಂದು ಡಿ.ವಿ.ಜಿ. ಪ್ರತಿಪಾದಿಸಿದ್ದಾರೆ.

ದೇವರನ್ನು ಕುರಿತ ಒಂದು ವಿಚಾರಲಹರಿಯನ್ನು ಹರಿಸುವ ದೇವರು (1975), ಕಾವ್ಯಸ್ವಾರಸ್ಯ (1975) ಇವು ಡಿ.ವಿ.ಜಿ. ಅವರ ಕೊನೆಗಾಲದ ಕೃತಿಗಳು.

ಬಾಗಲಕೋಟೆಯಲ್ಲಿ 1928ರಲ್ಲಿ ಸಮಾವೇಶಗೊಂಡ ಅಖಿಲ ಕರ್ನಾಟಕ ವೃತ್ತ ಪತ್ರಿಕಾಕರ್ತರ ಪ್ರಥಮ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದುದಲ್ಲದೆ, ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘದ ಪ್ರಥಮಾಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ಮಡಿಕೇರಿಯಲ್ಲಿ 1932ರಲ್ಲಿ ಸೇರಿದ್ದ 18ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಡಿ.ವಿ.ಜಿ. ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ (1933-37) ಇವರು ವಸಂತ ಸಾಹಿತ್ಯೋತ್ಸವ, ಗಮಕ ತರಗತಿ, ಗ್ರಂಥಪ್ರದರ್ಶನ ಮುಂತಾದ ನಾಲ್ಕಾರು ನೂತನ ಯೋಜನೆಗಳನ್ನು ಆರಂಭಿಸಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದೊಂದಿಗೆ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದ (1928-44) ಇವರು 1944ರಲ್ಲಿ ನಡೆದ ಆ ಸಂಘದ ರಜತೋತ್ಸವಕ್ಕೆ ಅಧ್ಯಕ್ಷರಾಗಿದ್ದರು. ಇವರ ಬಹುಮುಖಸೇವೆಗಾಗಿ ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ (ಡಿ.ಲಿಟ್.) ಪದವಿಯನ್ನಿತ್ತು ಗೌರವಿಸಿದೆ (1961). ಶ್ರೀಮದ್ಭಗವದ್ಗೀತಾತಾತ್ಪರ್ಯ ಎಂಬ ಇವರ ಕೃತಿಗೆ 1967ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭ್ಯವಾಗಿದೆ.

ಇವರು 1975, ಅಕ್ಟೋಬರ್ 7ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು.

(ಎಸ್.ಆರ್.ಆರ್.)

**ಗುಂಡೂರಾವ್, ಆರ್ :** 1937-93. ಕರ್ನಾಟಕದ ಮಾಜಿ ಮುಖ್ಯ ಮಂತ್ರಿ. ಕೊಡಗಿನ ಕುಶಾಲನಗರದಲ್ಲಿ 1937 ಸೆಪ್ಟೆಂಬರ್ 27ರಂದು ಜನಿಸಿದರು. ತಂದೆ ಕೆ.ರಾಮರಾವ್ ಶಾಲಾ ಮಾಸ್ತರರಾಗಿದ್ದರು. ತಾಯಿ ಚೆನ್ನಮ್ಮ. ಇಂಟರ್‌ವರೆಗೆ ವಿದ್ಯಾಭ್ಯಾಸ ಮಾಡಿದ ಗುಂಡೂರಾವ್ ಸಹಕಾರ ಕ್ಷೇತ್ರದಲ್ಲಿ ಉದ್ಯೋಗಿಯಾಗಿ ಸ್ವಲ್ಪಕಾಲ ದುಡಿದರು. ಶಕ್ತಿ ಎಂಬ ಪತ್ರಿಕೆಯಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿದರು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ಕೊಡಗಿನಲ್ಲಿ ಜನಪ್ರಿಯರಾದ ಇವರು ಕುಶಾಲನಗರದ ಪುರಸಭಾ ಅಧ್ಯಕ್ಷರಾದರು (1965). 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಬೆಂಗಳೂರಿಗೆ ಬಂದರು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿದಾಗ ಗುಂಡೂರಾಯರು ಯುವನಾಯಕರಾಗಿ ತಮ್ಮನ್ನು ಗುರುತಿಸಿಕೊಂಡರು. ಟೋಕಿಯೊದಲ್ಲಿ ಎಕ್ಸ್‌ಪೋ 70ರ ಪ್ರದರ್ಶನದಲ್ಲಿ ಭಾಗವಹಿಸಲು ಆಯ್ಕೆಯಾದ ವಿದ್ಯಾರ್ಥಿ ಪ್ರತಿನಿಧಿಗಳ ಆಯ್ಕೆಯಲ್ಲಿ ಅನ್ಯಾಯ ನಡೆದಿದೆ ಎಂದು ಚಳವಳಿಯ ನಾಯಕತ್ವ ವಹಿಸಿದ ಇವರು ವೀರೇಂದ್ರ ಪಾಟೀಲರ ಸರ್ಕಾರಕ್ಕೆ ಅಡ್ಡಿ ಯನ್ನುಂಟುಮಾಡಿದರು. ಸೋಮವಾರಪೇಟೆ ಕ್ಷೇತ್ರ ದಿಂದ ವಿಧಾನಸಭೆಗೆ ಸ್ಪರ್ಧಿಸಿ ಆಯ್ಕೆಯಾದರು (1972). ಆಗ ಡಿ.ದೇವರಾಜ ಅರಸು ಅವರ ಸಂಪುಟದಲ್ಲಿ ಸಮಾಚಾರ ಹಾಗೂ ಯುವಜನ ಸೇವಾ ಖಾತೆಯ ಸಚಿವರಾದ ಗುಂಡೂ ರಾಯರು 1975ರಲ್ಲಿ ವಸತಿ ಮತ್ತು ಯುವಜನ ಸೇವೆಯ ಸಚಿವರಾದರು. 1978ರಲ್ಲಿ ವಿಧಾನಸಭೆಗೆ ಮತ್ತೆ ಸೋಮ ವಾರಪೇಟೆ ಕ್ಷೇತ್ರದಿಂದಲೇ ಆಯ್ಕೆಯಾಗಿ ಸಾರಿಗೆ ಹಾಗೂ ಪ್ರವಾಸೋದ್ಯಮ ಸಚಿವರಾದರು. ಎಪ್ಪತ್ತರ ದಶಕದಲ್ಲಿ ಇಂದಿರಾಗಾಂಧಿ ಅವರ ಪರ ನಿಂತ ಗುಂಡೂರಾಯರು ವಿರೋಧ ಪಕ್ಷದ ನಾಯಕರಾದರು; ಸಂಜಯ ಗಾಂಧಿಯವರ ನಿಕಟವರ್ತಿಗಳಾಗಿದ್ದರು. ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷವನ್ನು ಕಟ್ಟುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದರು. ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಶ್ರೀಸಾಮಾನ್ಯನಿಗೆ ಹತ್ತಿರವಾದರು. 1980ರ ಜನವರಿ 12ರಂದು ಕರ್ನಾಟಕದ ಒಂಬತ್ತನೆಯ ಮುಖ್ಯಮಂತ್ರಿಯಾದರು. ರಾಜ್ಯದ ಮುಖ್ಯ ಮಂತ್ರಿಯಾದ ಅತ್ಯಂತ ಕಿರಿಯ ರಾಜಕಾರಣಿ ಎನಿಸಿಕೊಂಡರು.



ಏಳನೆಯ ವಿಧಾನಸಭಾ ಚುನಾವಣೆಯಲ್ಲಿ (1982) ಪರಾಭವಗೊಂಡ ಇವರು ಅನಂತರವೂ ಸಕ್ರಿಯ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ರಾಷ್ಟ್ರ ರಾಜಕಾರಣದತ್ತ ತಮ್ಮ ಒಲವನ್ನು ತೋರಿದ ಇವರು ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾದರು (1989).

ನೇರ ನಡೆನುಡಿಯ ಸ್ನೇಹ ವ್ಯಕ್ತಿತ್ವದ ಅಪರೂಪದ ರಾಜಕಾರಣಿ ಎಂಬ ಖ್ಯಾತಿಗೆ ಗುಂಡೂರಾಯರು ಪಾತ್ರರಾಗಿದ್ದರು. ತಮ್ಮ ಅಧಿಕಾರದ ಅವಧಿಯಲ್ಲಿ ಇವರು ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಕೃಷ್ಣಾ ನದಿಗೆ ಕಾಲುವೆ, ರೈತರ ಪಂಪ್‌ಸೆಟ್‌ಗಳಿಗೆ ರಿಯಾಯ್ತಿಯ ವಿದ್ಯುತ್ ಯೋಜನೆ, ವಿಧಾನ ಸೌಧದ ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆಯ ಸ್ಥಾಪನೆ, ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜು ಆರಂಭ, ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದ ಯೋಜನೆ, ಮೈಸೂರಿನ ಕಲಾಮಂದಿರದ ನಿರ್ಮಾಣ, ಕಾವೇರಿ ಕುಡಿಯುವ ನೀರು ಎರಡನೆಯ ಹಂತದ ಯೋಜನೆಯ ಜಾರಿ, ವಿಶ್ವಕನ್ನಡ ಸಮ್ಮೇಳನ ನಡೆಸಿ ಆ ನೆನಪಿನಲ್ಲಿ ಸುಲಭ ಬೆಲೆಯಲ್ಲಿ ಕನ್ನಡ ಪುಸ್ತಕ ಪ್ರಕಟಣೆ ಇವೇ ಮುಂತಾದ ಇವರ ಗುರುತರ ಗುಣಾತ್ಮಕ ಕಾರ್ಯಗಳು ಮುಖ್ಯವೆನಿಸಿವೆ. ಇವರು ಸ್ವಲ್ಪ ಕಾಲ ಅನಾರೋಗ್ಯಪೀಡಿತರಾಗಿದ್ದು ಲಂಡನ್ನಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿಯೇ 1993 ಆಗಸ್ಟ್ 22ರಂದು ನಿಧನಹೊಂದಿದರು. ಯುವರಾಜಕಾರಣಿ ದಿನೇಶ್ ಗುಂಡೂರಾವ್ ಇವರ ಮಗ.

(ಎಸ್.ಬಿಎಚ್ಎ.)

**ಗುಂಡ್ಲುಪೇಟೆ :** ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಮುಖ್ಯಸ್ಥಳ. ಈ ತಾಲ್ಲೂಕಿನ ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು, ಪೂರ್ವದಲ್ಲಿ ಚಾಮರಾಜನಗರ, ಉತ್ತರದಲ್ಲಿ ನಂಜನಗೂಡು, ಪಶ್ಚಿಮಉತ್ತರದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕು ಇವು ಸುತ್ತುವರಿದಿವೆ. ಕಸಬೆ, ಹಂಗಳ, ಬೇಗೂರು ಮತ್ತು ತೆರಕಣಾಂಬಿ

ಹೋಬಳಿಗಳು ಗ್ರಾಮಗಳು 162. ತಾಲ್ಲೂಕಿನ ವಿಸ್ತೀರ್ಣ 14,062ಚ.ಕಿಮೀ. ಜನಸಂಖ್ಯೆ 2,12,895.

ಪರವಾಸುದೇವ ದೇವಾಲಯ, ಗುಂಡ್ಲುಪೇಟೆ

ತಾಲ್ಲೂಕಿನ ದಕ್ಷಿಣ ಹಾಗೂ ಪಶ್ಚಿಮ ಭಾಗ ಅರಣ್ಯ ಮತ್ತು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಬಂಡೀಪುರ ಮತ್ತು ಬೇರಂಬಾಡಿ ರಕ್ಷಿತ ಅರಣ್ಯಗಳು ಇರುವುದು ಇಲ್ಲಿಯೇ. ಈ ತಾಲ್ಲೂಕಿನ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಜನವಸತಿ ಹೆಚ್ಚು. ಈ ಜನವಸತಿ ಪ್ರದೇಶಗಳು ಮತ್ತು ಅರಣ್ಯಗಳ ನಡುವೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಮೇರೆಗಳಿಗೆ ಸಮಾನಾಂತರವಾಗಿ ಹಬ್ಬಿರುವ ಒಂದು ಬೆಟ್ಟಸಾಲಿದೆ. ಎರಡು ದಿಕ್ಕುಗಳ ಈ ಬೆಟ್ಟದ ಹರವುಗಳು ಗೋಪಾಲಸ್ವಾಮಿ ಬೆಟ್ಟದಲ್ಲಿ ಸಂಧಿಸುತ್ತವೆ. ತಾಲ್ಲೂಕಿನ ದಕ್ಷಿಣ ಗಡಿಯಲ್ಲಿ ಮೋಯರ್ ನದಿ ಹರಿಯುತ್ತದೆ. ಇದೇ ಕರ್ನಾಟಕ ಮತ್ತು ತಮಿಳುನಾಡಿನ ಈ ಭಾಗದ ಗಡಿ ರೇಖೆ. ತಾಲ್ಲೂಕಿನ ಮುಖ್ಯ ನದಿ ಗುಂಡ್ಲುಹೊಳೆ. ಈ ನದಿ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತದೆ. ಮುಂದೆ ನಂಜನಗೂಡಿನಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ತಾಲ್ಲೂಕಿನಲ್ಲಿ ಎರೆಮಣ್ಣು ಇದೆ. ಹೆಚ್ಚು ಭಾಗ ನುರುಜುಭೂಮಿ, ಮಳೆ ಕಡಿಮೆ. ಜೋಳ ಮುಖ್ಯ ಬೆಳೆ. ರಾಗಿ, ಅವರೆ, ಹರಳು ಇತ್ಯಾದಿಗಳ ವ್ಯವಸಾಯ ಸಹ ಇದೆ. ಕೆರೆಗಳಿಂದ ಸ್ವಲ್ಪಮಟ್ಟಿಗೆ ಬತ್ತದ ಬೆಳೆ ಆಗುತ್ತದೆ. ತೋಟಗಳೂ ಇವೆ. ಇಲ್ಲಿಯ ವೀಳ್ಯದ ಎಲೆ ಪ್ರಸಿದ್ಧ.

ಗುಂಡ್ಲುಪೇಟೆ ಈ ತಾಲ್ಲೂಕಿನ ಕೇಂದ್ರ. ಗುಂಡ್ಲುಹೊಳೆಯ ಎಡದಂಡೆಯ ಮೇಲಿರುವ ಈ ಊರು ಮೈಸೂರು - ಉದಕಮಂಡಲ (ಊಟಿ) ಹೆದ್ದಾರಿಯಲ್ಲಿ ಮೈಸೂರಿನ ದಕ್ಷಿಣಕ್ಕೆ 61ಕಿಮೀ ದೂರದಲ್ಲಿದೆ. ಗುಂಡ್ಲುಪೇಟೆಯಿಂದ ಪೂರ್ವಕ್ಕಿರುವ ಚಾಮರಾಜನಗರಕ್ಕೆ, ಪಶ್ಚಿಮದೆಡೆ ಕೇರಳದ ಸುಲ್ತಾನ ಬತ್ತೇರಿ ಮತ್ತು ಮುಂದೆ ಕಣ್ಣಾನೂರಿಗೆ, ವಾಯುವ್ಯದಲ್ಲಿ ಹೆಗ್ಗಡದೇವನಕೋಟೆ ಕಡೆಗೆ ರಸ್ತೆಗಳಿವೆ. ಜನಸಂಖ್ಯೆ 26,368.

ಈ ಊರಿನ ಪ್ರಾಚೀನನಾಮ ವಿಜಯಪುರ. ಇದು ತೆರಕಣಾಂಬಿ ಅರಸರ ವಶದಲ್ಲಿ ಬಹಳ ಕಾಲ ಇತ್ತೆಂದು ತೋರುತ್ತದೆ. 1674ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರು ಈ ಸ್ಥಳ ಬೆಳೆಯಲು ಕಾರಣ. ಇವರು ತಮ್ಮ ಬಾಲ್ಯವನ್ನು ಗುಂಡ್ಲುಪೇಟೆಯ ಸಮೀಪದಲ್ಲಿನ ಹಂಗಳದಲ್ಲಿರುವ ಒಂದು ಕೋಟೆಯಲ್ಲಿ ಬಂಧನದಲ್ಲಿ ಕಳೆಯುತ್ತಿದ್ದಾಗ ಇವರ ತಂದೆ ವಿಧಿವಶರಾಗಲು ಅವರ ಅಂತ್ಯಕ್ರಿಯೆಯನ್ನು ವಿಜಯಪುರದ ಬಳಿ ಇರುವ ಗುಂಡ್ಲುಹೊಳೆ ಬಳಿ ನೆರವೇರಿಸಿ ಮತ್ತೆ ಸೆರೆಮನೆಗೆ ಹಿಂದಿರುಗಿದರು. ಕಾಲಾನಂತರ ತಂದೆಯ ಅಂತ್ಯಕ್ರಿಯೆ ನಡೆದ ಸ್ಥಳದ ಬಳಿ ಒಂದು ಅಗ್ರಹಾರವನ್ನು ಕಟ್ಟಿಸಿ, ವಿಜಯಪುರದ ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಿ, ತಂದೆಯ ಸಮಾಧಿಯ ಮೇಲೆ ಪರವಾಸುದೇವ ದೇವಾಲಯವನ್ನು ಕಟ್ಟಿಸಿದರು. ಅಂದಿನಿಂದ ವಿಜಯಪುರ ಪೇಟೆ ಸ್ಥಳವಾಗಿ ಬೆಳೆದು ಗುಂಡ್ಲುಪೇಟೆ ಎಂಬ ಹೆಸರನ್ನು ಗಳಿಸಿತು. ಈಗ ಅಗ್ರಹಾರವಾಗಲಿ ಕೋಟೆಯಾಗಲಿ ಉಳಿದಿಲ್ಲ. ಪರವಾಸುದೇವ ದೇವಾಲಯ ಟಿಪ್ಪು ಸುಲ್ತಾನನ ಆಳಿಕೆಯವರೆಗೂ ಉತ್ತಮ ಸ್ಥಿತಿಯಲ್ಲಿತ್ತು. ಅನಂತರದ ವರ್ಷಗಳಲ್ಲಿ ಸರಿಯಾದ ರಕ್ಷಣೆಯಿಲ್ಲದೆ ಪಾಳುಬಿದ್ದಿದೆ. ಕಣಶಿಲೆಯಿಂದ ಕಟ್ಟಿರುವ ಈ ದೇವಾಲಯ ಸಾಕಷ್ಟು ವಿಶಾಲವಾಗಿದ್ದು ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ವಿಶಾಲವಾದ ಮತ್ತು ಚೌಕಟ್ಟಾದ 13 ಕಂಬಗಳಿರುವ ನವರಂಗ ಮತ್ತು ಅದಕ್ಕೆ ಉತ್ತರ ಹಾಗೂ ದಕ್ಷಿಣದ ಕಡೆ ಒಂದೊಂದು ಸಣ್ಣ ಕೋಣೆ ಇವೆ. ದೇವಾಲಯದ ಮುಂದುಗಡೆ ಒಂದು ಮುಖಮಂಟಪವಿತ್ತು. ಈಚೆಗೆ ಅದನ್ನು ವಿಜಯನಾರಾಯಣ ದೇವಾಲಯದ ಮುಂಭಾಗಕ್ಕೆ ಸ್ಥಳಾಂತರಿಸಲಾಗಿದೆ. ದೇವಾಲಯದ ವಿನ್ಯಾಸ, ಅಲಂಕೃತವಾದ ಸುಕನಾಸಿಯ ದ್ವಾರ, ಶಿಲ್ಪಗಳು ಮತ್ತು ಕಂಬಗಳು ವಾಸ್ತುಶಿಲ್ಪದ ದೃಷ್ಟಿಯಿಂದ ವಿಶೇಷವಾದದ್ದು. ಈ ದೇವಾಲಯದ ಎಡಪಾರ್ಶ್ವದಲ್ಲಿ ಪರವಾಸುದೇವನ ದೇವಿಯಾದ ಕಮಲವಲ್ಲಿಯ ದೇವಾಲಯವಿದೆ. ಈ ಎರಡೂ ದೇವಾಲಯಗಳ ವಿಗ್ರಹಗಳನ್ನು ಈಗ ವಿಜಯನಾರಾಯಣ ದೇವಾಲಯಕ್ಕೆ ಸ್ಥಳಾಂತರಿಸಲಾಗಿದೆ.

ವಿಜಯನಾರಾಯಣ ದೇವಾಲಯ ಕೋಟೆಯ ಒಳಗಿದೆ. ಇದನ್ನು ಹೊಯ್ಸಳ ವಿಷ್ಣುವರ್ಧನ ಕಟ್ಟಿಸಿದನೆಂದು ಪ್ರತೀತಿ. ಆದರೆ ಇದು ವಿವಿಧ ಹಂತಗಳ ರಚನೆ. ಮುಖಮಂಟಪ ಈಚಿನದು. ನವರಂಗದ ಮೇಲ್ಛಾವಣಿ ವಿಜಯನಗರ ಶೈಲಿಯಂತೆ ಒಳಭಾಗದಲ್ಲಿ ಸಮತಟ್ಟಾಗಿದ್ದು ಮಧ್ಯದಲ್ಲಿ

ಪರವಾಸುದೇವ, ವಿಜಯನಾರಾಯಣ ದೇವಾಲಯ, ಗುಂಡ್ಲುಪೇಟೆ

ಕಮಲವನ್ನು ಕೆತ್ತಲಾಗಿದೆ. ನವರಂಗದ ದಕ್ಷಿಣ ಭಾಗದಲ್ಲಿ ಈಗ ಮೂರು ಕೋಣೆಗಳನ್ನು ಮಾಡಿ ಪರವಾಸುದೇವ ಮತ್ತು ಆತನ ಪತ್ನಿಯರ ವಿಗ್ರಹಗಳನ್ನು ಮತ್ತು ಆಳ್ವಾರರ ವಿಗ್ರಹಗಳನ್ನು ಇಡಲಾಗಿದೆ. 13-14ನೆಯ ಶತಮಾನಕ್ಕೆ ಸೇರಿದ ಮೂಲ ವಿಜಯನಾರಾಯಣ ದೇವಾಲಯ ತಲಕಾಡಿನ ವೈದ್ಯೇಶ್ವರ ದೇವಾಲಯದಂತೆ ಮೂಲತಃ ಗರ್ಭಗೃಹ ಮತ್ತು

ಸುಕನಾಸಿಯನ್ನು ಮಾತ್ರ ಹೊಂದಿತ್ತು. ಅನಂತರ ಶ್ರೀರಂಗಪಟ್ಟಣ ಹಾಗೂ ತೊಣ್ಣೂರಿನಲ್ಲಿರುವಂತೆ ಮುಚ್ಚಿರುವ ಪ್ರದಕ್ಷಿಣಾಪಥವನ್ನು ಕಲ್ಪಿಸಲಾಯಿತು. ಗರ್ಭಗೃಹದ ದ್ವಾರ ಪರವಾಸುದೇವ ದೇವಾಲಯದಲ್ಲಿರುವಂತೆಯೇ ಸುಂದರವಾಗಿದೆ. ಇಲ್ಲಿಯ ಮೂರ್ತಿ ಅಭಯ ಮುದ್ರೆಯಲ್ಲಿ ನಿಂತಿದ್ದು ಬಲಗೈಯಲ್ಲಿ ಕಮಲವನ್ನು ಹಿಡಿದಿದೆ. ಇದರ ಹಿಂಭಾಗದಲ್ಲಿರುವ ತೋರಣದಲ್ಲಿ ದಶಾವತಾರವನ್ನು ಕೆತ್ತಲಾಗಿದ್ದು ಈ ಶಿಲ್ಪ ಹೊಯ್ಸಳರ ಶಿಲ್ಪರಚನೆಯ ಅನುಕರಣೆಯಂತೆ ಕಾಣುತ್ತದೆ. ಇದು ವಿಜಯನಗರದ ಆರಂಭ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಇಲ್ಲಿಯ ಪರವಾಸು ದೇವ ವಿಗ್ರಹ ಸುಂದರವೂ ಸರಳವೂ ಆಗಿದೆ. ತಲೆಯ ಮೇಲ್ಭಾಗ ದಲ್ಲಿ ಬಿಚ್ಚಿರುವ ಹೆಡೆಯುಳ್ಳ ಆದಿಶೇಷನ ಸುರುಳಿಯ ಮೇಲೆ ಶಂಖಚಕ್ರ ಧಾರಿಯಾದ ವಾಸುದೇವ ಸುಖಾಸೀನನಾಗಿದ್ದಾನೆ. ಪರವಾಸುದೇವನ ಉತ್ಸವಮೂರ್ತಿಯೂ ಒಳ್ಳೆಯ ಶಿಲ್ಪ. ಹಸ್ತಿನಾವತಿಯಲ್ಲಿದ್ದ ಈ ವಿಗ್ರಹ ವನ್ನು ಶಿವಸಮುದ್ರಕ್ಕೆ ತಂದು ಅನಂತರ ಇಲ್ಲಿಗೆ ತರಲಾಯಿತೆಂದು ಪ್ರತೀತಿ.

ಈ ದೇವಾಲಯಕ್ಕೆ ಒಂದೂವರೆ ಕಿಮೀ ಈಶಾನ್ಯದಲ್ಲಿ ರಾಮೇಶ್ವರ ದೇವಾಲಯವಿದೆ. ಈಗ ಶಿಥಿಲವಾಗಿರುವ ಈ ಗುಡಿಯನ್ನು 1337ರಲ್ಲಿ ಕುಮಾರ ಕಂಪಣ್ಣನೆಂಬುವನು ಕಟ್ಟಿಸಿದ. ಇದರ ರಚನೆ ತಲಕಾಡಿನ ವೈದ್ಯೇಶ್ವರ ದೇವಾಲಯದಂತಿದೆ. ಚೌಕಟ್ಟಾದ ಗರ್ಭಗೃಹ, ಸುಕನಾಸಿ, ನಾಲ್ಕು ಕಂಬಗಳಿರುವ ನವರಂಗ ಮತ್ತು ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಕೈಸಾಲೆ ಹಾಗೂ ಪ್ರವೇಶ ದ್ವಾರಗಳಿವೆ. ಈ ದೇವಾಲಯವನ್ನು ಕಣಶಿಲೆಯಿಂದ ಕಟ್ಟಿ ಗೋಪುರವನ್ನು ಮಾತ್ರ ಇಟ್ಟಿಗೆಯಿಂದ ರಚಿಸಲಾಗಿದೆ. ದೇವಾಲಯದ ಅಧಿಷ್ಠಾನ ಪಟ್ಟಿಕೆಗಳ ಮೇಲೆ ಅನೇಕ ಕನ್ನಡ ಶಾಸನಗಳಿವೆ. (ಎಂ.ಎಸ್.ಕೆ.)

**ಗುಟ್ಟಹಳ್ಳಿ :** ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಒಂದು ಗ್ರಾಮ. ಕೋಲಾರದ ಆಗ್ನೇಯಕ್ಕೆ ಸು.29ಕಿಮೀ ದೂರದಲ್ಲಿ, ಕೋಲಾರ ಚಿನ್ನದಗಣಿ ಮುಳಬಾಗಲು ಮಾರ್ಗದ ಬಳಿ ಇದೆ.

ಇದು ಭೃಗುಮಹರ್ಷಿಗಳ ತಪೋಭೂಮಿಯಾಗಿತ್ತೆಂದು ಪ್ರತೀತಿ. ಗ್ರಾಮದ ಬಳಿಯಲ್ಲಿ ಸು.40ಮೀ. ಎತ್ತರದ ಒಂದು ಚಿಕ್ಕ ಬೆಟ್ಟ ಇದೆ. ಬೆಟ್ಟದ ಮೇಲೆ ವೆಂಕಟರಮಣಸ್ವಾಮಿ ದೇವಾಲಯವಿದೆ. ಈ ಸ್ಥಳ ಬಂಗಾರ ತಿರುಪತಿ, ಚಿನ್ನ ತಿರುಪತಿ ಎಂದೂ ಪ್ರಸಿದ್ಧವಾಗಿದೆ. ಮಾರ್ಗದಲ್ಲಿ ವರಾಹಸ್ವಾಮಿ, ಲಕ್ಷ್ಮಿ, ವಿಘ್ನೇಶ್ವರ ಮತ್ತು ವೀರ ಆಂಜನೇಯ ದೇವಾಲಯಗಳಿವೆ. ಬೆಟ್ಟದ ಮೇಲೆ ಹತ್ತಿ ಹೋಗಿ ಪೂರ್ವಭಾಗದ ಆರು ಕಿಂಡಿಗಳ ಕಿಟಕಿಯ ಮೂಲಕ ದೇವರ ದರ್ಶನ ಮಾಡಬೇಕು. ವೆಂಕಟರಮಣನ ಮೂರ್ತಿ ಚಿಕ್ಕದಿದ್ದರೂ ಆಕರ್ಷಕವಾಗಿದೆ. ಪುಷ್ಕರಣಿಯ ಆಗ್ನೇಯಕ್ಕೆ ವಿಷ್ಣುಪಾದಗಳು, ನವಿಲುತೀರ್ಥ, ಪಾಪನಾಶನ, ಪವಿತ್ರ ಕಾವೇರಿ ಮುಂತಾದವುಗಳಿವೆ. ಈ ಊರಿಗೆ ಸಮೀಪದಲ್ಲಿ ಆಗ್ನೇಯಕ್ಕಿರುವ ಮತ್ತೊಂದು ಗುಡ್ಡದ ಮೇಲೆ ಅಲಮೇಲುಮಂಗಮ್ಮನವರ ದೇವಾಲಯವಿದೆ.

ಪ್ರತಿ ವರ್ಷ ಮಾಘ ಶುದ್ಧ ಪೂರ್ಣಿಮೆಯಂದು ಒಂದು ವಾರ ಕಾಲ ವಿಶೇಷ ಪೂಜೆ ಮತ್ತು ಜಾತ್ರೆ ನಡೆಯುತ್ತದೆ. ಬ್ರಹ್ಮೋತ್ಸವ ಈ ಸಂದರ್ಭದಲ್ಲಿ ವಿಶೇಷ ಆಕರ್ಷಣೆ. ಶ್ರಾವಣ ಶನಿವಾರಗಳು, ಶಿವರಾತ್ರಿ ಮತ್ತು ತೆಪ್ಪೋತ್ಸವಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಇತರ ದಿನಗಳಿಗಿಂತ ಶನಿವಾರಗಳಲ್ಲಿ ಭಕ್ತರು ಹೆಚ್ಚು ಸೇರುತ್ತಾರೆ. ಈ ಕ್ಷೇತ್ರದಲ್ಲಿ ಆರು ಕಲ್ಯಾಣಮಂಟಪಗಳಿದ್ದು ಅವು ವಿವಾಹಕಾರ್ಯಗಳಿಗೆ ಅನುಕೂಲವಾಗಿವೆ. (ಎ.ಬಿ.ಬಿ.)

**ಗುಡಿಕೋಟೆ :** ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಕಸಬೆ ಯಿಂದ 28ಕಿಮೀ ಪೂರ್ವಕ್ಕಿರುವ ಗ್ರಾಮ, ಹೋಬಳಿ ಕೇಂದ್ರ.

ಇದು ಹಿಂದೆ ಒಂದು ಪಾಳೆಯಪಟ್ಟಿನ ಕೇಂದ್ರವಾಗಿದ್ದು ಪಾಳೆಯಗಾರರ ಕಾಲದಲ್ಲಿ ಕಟ್ಟಿದ ಕೋಟೆ ಊರಿಗೆ ತಾಗಿ ನಿಂತ ಬೆಟ್ಟದ ಮೇಲೆ ಇದೆ. ಆ ಕೋಟೆಗೆ ಹೊಂದಿಸಿರುವ ಬಂಡೆಗಳ ಗಾತ್ರ ಬೆರಗುಗೊಳಿಸುತವಂತಹುದು. ಬ್ರೂಸ್‌ಫುಟ್ ಎಂಬಾತ ಇದರ ವಿಷಯವಾಗಿ ಬರೆಯುತ್ತ ದಕ್ಷಿಣ ಭಾರತದ ಯಾವ ಕೋಟೆಯಲ್ಲಿಯೂ ಇಷ್ಟು ಭಾರಿ ಬಂಡೆಗಳನ್ನು ತಾನು ಕಂಡಿಲ್ಲವೆನ್ನುತ್ತಾನೆ. ಈ ಬೆಟ್ಟವೇರಲು ಅನೇಕ ಕಡಿದಾದ ಒಳದಾರಿಗಳಿವೆ. ಬೆಟ್ಟದ ಮೇಲೆ ಎರಡು ಭಿನ್ನ ರೀತಿಯ ಬಾವಿಗಳಿವೆ. ತೊಟ್ಟಿಲುಬಾವಿ ಎಂದು ಕರೆಯುವ ಒಂದರ ಬಾಯಿ ದೋಣಿಯಂತಿದೆ. ಇನ್ನೊಂದು 35' ಚದುರದ ಚೌಕನೆಯದು. ಇದರ ಒಳಮೈ ಸೈಜುಗಲ್ಲುಗಳಿಂದ ನಿರ್ಮಿತವಾಗಿದೆ. ಅದನ್ನು ನಿರ್ಮಿಸಿರುವ ತಾಣ ಸ್ವಾರಸ್ಯಕರವಾಗಿದೆ. ನೋಡಿದಾಗ ಗೂಡಿನೊಳಗೆ ಬಾವಿ ತೋಡಿಸಿದಂತೆ ಭಾಸವಾಗುತ್ತದೆ. ಏಕೆಂದರೆ ಬಾವಿಯ ಮೇಲೆ ಮುಂಚಾವಣಿಯಂತೆ ಚಾಚಿ ನಿಂತಿರುವ ಬಂಡೆಗಳ ಕೂಡುವಿಕೆ ಹಾಗೆ ಇದೆ. ಈ ಚಾಚುಬಂಡೆಗಳು ತೂಗುಬಂಡೆಗಳಂತೆ ಗೋಚರಿಸುತ್ತವೆ. ಗ್ರಾಮದಲ್ಲಿ ಕೆಲವು ಚಿಕ್ಕ ದೇವಸ್ಥಾನಗಳಿವೆ. ಇಲ್ಲಿಯ ಪಾಳೆಯಗಾರ ಕಟ್ಟಿಸಿದನೆನ್ನಲಾದ ಬೊಮ್ಮಲಿಂಗನ ಕೆರೆಯ ಬಳಿ ಅನೇಕ ನಾಗರಕಲ್ಲುಗಳೂ ಇವೆ. ಕೆಲವು ನಾಗರಕಲ್ಲುಗಳು 6' ಎತ್ತರ ಇವೆ.

ಗುಡಿಕೋಟೆಯ ಪಾಳೆಯಗಾರರು ಬೇಡ ಕುಲದವರು. ಇವರು ಅಸ್ತಿತ್ವಕ್ಕೆ ಬಂದ ತರುಣದಲ್ಲಿಯೇ (ಸು.16ನೆಯ ಶತಮಾನ) ಗುಡಿಕೋಟೆಗೆ ಹೊಂದಿದ ಸುತ್ತಮುತ್ತಲಿನ ಗ್ರಾಮಗಳನ್ನು ಅಧೀನಕ್ಕೆ ತಂದುಕೊಂಡು ಪಾಳೆಯಪಟ್ಟನ್ನು ವಿಸ್ತರಿಸಿದರು. ಇವರು ಚಿತ್ರದುರ್ಗದ ಪಾಳೆಯಗಾರರಿಗೆ ಅಧೀನರಾಗಿದ್ದರೆಂದು ತಿಳಿದುಬರುತ್ತದೆ. ಬಿಳಿಚೋಡು ಮನೆತನಕ್ಕೆ ಸೇರಿದ ಚಿತ್ರದುರ್ಗದ ಪಾಳೆಯಗಾರ 1ನೆಯ ಭರಮಪ್ಪನಾಯಕನ ಹೆಂಡತಿ ಬಂಗಾರವ್ವ ನಾಗಿತಿ ಗುಡಿಕೋಟೆ ಪಾಳೆಯಗಾರರ ಸಂತತಿಯವಳು. ಕೈಬಿಟ್ಟುಹೋಗಿದ್ದ ಅಣಜಿ ಕೋಟೆಯನ್ನು ಹರಪನಹಳ್ಳಿ ಪಾಳೆಯಗಾರರಿಂದ ಗೆದ್ದುಕೊಳ್ಳಲು ಗುಡಿಕೋಟೆ ಪಾಳೆಯಗಾರರು ಭರಮಪ್ಪನಾಯಕನಿಗೆ ನೆರವಾಗಿದ್ದರು. ಈ ಪಾಳೆಯಪಟ್ಟು 1777ರಲ್ಲಿ ಹೈದರ್ ಅಲಿಯಿಂದ ನಾಶವಾಯಿತು. ಎರಡು ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದರೂ ಅವರ ಪೀಳಿಗೆಯ ಬಗೆಗಿನ ಹೆಚ್ಚಿನ ದಾಖಲೆಗಳು ಉಪಲಬ್ಧವಾಗಿಲ್ಲ. ಚೇರನೂರು ಗ್ರಾಮದಲ್ಲಿ ದೊರೆತ ಎರಡು ಶಾಸನಗಳಿಂದ ಒಂದಿಬ್ಬರು ಪಾಳೆಯಗಾರರ ಹೆಸರು ಅವರು ಆಳಿದ ಕಾಲ ತಿಳಿದುಬರುತ್ತದೆ. 1676ರಲ್ಲಿ ಸೊಂಡೂರು ರಾಜಪ್ಪನಾಯಕ ಪಾಳೆಯಗಾರನಾಗಿದ್ದ. ಚೆಲಿಮಿನಾಯಕ ವಿಧಿಸಿದ್ದ ತಲೆಹೊರೆ, ಗಾಡಿಹೊರೆ, ಮಿತಸಂತಾನ ಮತ್ತು ನಾಯಿಂದ ತೆರಿಗೆಗಳಿಗೆ ಈ ರಾಜಪ್ಪ ನಾಯಕ ಚೇಕದಕೆರೆ, ಚಿಕೇರು ವಿಭಾಗದಲ್ಲಿ ಶಾಶ್ವತವಾದ ವಿನಾಯಿತಿ ಕೊಟ್ಟ. ಇವನ ಮಗ ಇಮ್ಮಡಿ ರಾಜಪ್ಪನಾಯಕ 1690ರಲ್ಲಿ ಪಾಳೆಯಗಾರನಾಗಿದ್ದನೆಂದೂ ಅವನಿಗೊಬ್ಬ ಸೋದರನಿದ್ದನೆಂದೂ ತಿಳಿದುಬರುತ್ತದೆ. ಈ ಪಾಳೆಯಗಾರರ ಹೆಸರಿನೊಂದಿಗೆ ಸಂಡೂರು ಎಂದು ಸೇರಿರುವುದರಿಂದ ಮೂಲತಃ ಇವರು ಸಂಡೂರಿನವರಿರಬಹುದು ಎಂದು ಊಹಿಸುವ ಅವಕಾಶವಿದೆ. (ಸಿ.ಕೆ.ಎನ್.)

**ಗುಡಿಗಾರ ವಿಠ್ಠಲ ರಾಮಚಂದ್ರ ಶೆಟ್ಟಿ :** 1930-2002. ಗಂಧದ ಕೆತ್ತನೆಯ ಪ್ರಸಿದ್ಧ ಶಿಲ್ಪಿ. ಉತ್ತರ ಕನ್ನಡ ಜಿಲ್ಲೆಯ ಕುಮಟದಲ್ಲಿ



ಖ್ಯಾತ ಗುಡಿಗಾರ ವಂಶದಲ್ಲಿ 1930ರಲ್ಲಿ ಜನಿಸಿದರು. ತಂದೆ ರಾಮಚಂದ್ರ ಶೆಟ್ಟಿ, ಇವರ ಅಜ್ಜ ನಾರಾಯಣ ಹೂವಯ್ಯ ಶೆಟ್ಟಿ, ಅಜ್ಜನ ಅಣ್ಣ ಗಣಪತಿ ಶೆಟ್ಟಿ ಗುರುಗಳಾಗಿ ತಮ್ಮ ವಿದ್ಯೆಯನ್ನು ಬಾಲಕ ಗುಡಿ ಗಾರನಿಗೆ ಧಾರೆ ಎರೆದರು. 4ನೆಯ ತರಗತಿ ವಿದ್ಯಾಭ್ಯಾಸ ಮುಗಿಸಿದ ಬಳಿಕ 10ನೆಯ ವಯಸ್ಸಿನಲ್ಲಿಯೇ ಕೆತ್ತನೆ ಕೆಲಸದಲ್ಲಿ ತಮ್ಮನ್ನು ತೊಡ ಗಿಸಿಕೊಂಡರು. ಇವರು ಶಿಲ್ಪಕೆತ್ತನೆಯ ತರಬೇತಿಯನ್ನು ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ (1955) ಹಾಗೂ ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ (ಈಗ ಕಾವಾ) ನಡೆಸಿದರು. ಅಂತಾರಾಷ್ಟ್ರೀಯ ವಾಣಿಜ್ಯ

ಮೇಳದಲ್ಲಿ ಪ್ರದರ್ಶಿಸಿದ ಇವರ ಕಲಾಕೃತಿಗಳಿಂದಾಗಿ ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಟ್ಟರು (1958). ರಾಷ್ಟ್ರಪತಿ ಜಾಕಿರ್ ಹುಸೇನರಿಂದ ವಿಶ್ವಕರ್ಮ ಕಲಾಕೃತಿಗೆ ರಾಷ್ಟ್ರಪತಿ ಪ್ರಶಸ್ತಿ ಪಡೆದರು (1969). 1970ರಲ್ಲಿ ರಾಜ್ಯಪ್ರಶಸ್ತಿ ಪಡೆದರು. 1971ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರದರ್ಶನದಲ್ಲಿ ಇವರು ನಿರ್ಮಿಸಿದ ಎಂಟು ಅಡಿ ಎತ್ತರದ ಗಾಂಧೀಜಿಯ ಮೂರ್ತಿ ಎಲ್ಲರ ಗಮನ ಸೆಳೆಯಿತು. ದೆಹಲಿಯಲ್ಲಿ ಜರುಗಿದ ಕಾಂಗ್ರೆಸಿನ ಅಖಿಲ ಭಾರತ ಕಲಾ ಮತ್ತು ಕೈಗಾರಿಕಾ ಬೃಹತ್ ಪ್ರದರ್ಶನದಲ್ಲಿ ಕಾರ್ಯನಿರತ ಕಲಾವಿದರಾಗಿ ದುಡಿದರು (1971). ವಿಷ್ಯ ಉತ್ಸವದಲ್ಲಿ ಅನೇಕ ಪ್ರಾತ್ಯಕ್ಷಿಕೆಗಳನ್ನು ನೀಡಿದರು (1972). 1972ರಲ್ಲಿ ಉತ್ತಮ ಸೇವಾ ಪ್ರಶಸ್ತಿ ಪಡೆದರು. ಭಾರತ ಸರ್ಕಾರ ಇವರನ್ನು ಪಶ್ಚಿಮ ಜರ್ಮನಿಗೆ ಕಳಿಸಿತು (1976). ಜರ್ಮನಿಯಲ್ಲಿ ಜರುಗಿದ ಭಾರತೀಯ ಕರಕುಶಲ ಸಪ್ತಾಹದಲ್ಲಿ ಕಲಾಕೃತಿಗಳ ಪ್ರದರ್ಶನಕ್ಕೆ ಇವರನ್ನು ಆಹ್ವಾನಿಸಲಾಗಿತ್ತು (1978). ಜಪಾನಿ ಮಾದರಿಯ ಮೂರ್ತಿಗಳನ್ನು (ಜಪಾನ ಬುದ್ಧ, ಸೂರ್ಯದೇವ) ನಿರ್ಮಿಸಿಕೊಟ್ಟು ಜಪಾನಿನಲ್ಲೂ ಪ್ರಸಿದ್ಧಿ ಪಡೆದರು (1984). ಇವರು ರಚಿಸಿದ ಕ್ರಿಸ್ತನ ಜೀವಿತಕ್ಕೆ ಸಂಬಂಧಿಸಿದ ಲಾಸ್ಟ್ ಸಪ್ಪರ್ (ಅಂತಿಮ ಭೋಜನ) ದೊಡ್ಡಫಲಕ ಈಗಲೂ ಗೋವ ಚರ್ಚಿನಲ್ಲಿ ಪ್ರದರ್ಶಿತವಾಗಿದೆ.

ಕರ್ನಾಟಕ ಸರಕಾರ ಶಿಲ್ಪಕಲೆಗಾಗಿ ನೀಡುವ ಅಮರಶಿಲ್ಪಿ ಜಕಣಾಚಾರಿ ಪ್ರಶಸ್ತಿ (1978) ನೀಡಿ ಇವರನ್ನು ಗೌರವಿಸಿದೆ. ಲಲಿತಕಲಾ ಅಕಾಡೆಮಿ ಇವರಿಗೆ ರಾಜ್ಯ ಪ್ರಶಸ್ತಿ ನೀಡಿದೆ (1993). ಇವರು 2002 ಆಗಸ್ಟ್ 19ರಂದು ನಿಧನಹೊಂದಿದರು. ಅಮೂಲ್ಯ ಗುಡಿಗಾರಿಕೆಯ ಕಲೆಯನ್ನು ಇವರ ಮಕ್ಕಳಾದ ಅರುಣ, ಉದಯ, ಸಂಜಯ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. (ಆರ್.ಜಿ.ಆರ್.)

**ಗುಡಿಗಾರಿಕೆ :** ಗಂಧದ ಮರ, ಬೆಂಡು, ಕೆಲಮಟ್ಟಿಗೆ ಮಣ್ಣು- ಇವುಗಳ ಕುಶಲಕೆಲಸಕ್ಕೆ ಈ ಹೆಸರಿದೆ. ಮರದ ಕುಶಲ ಕೈಗಾರಿಕೆ ವಾಸ್ತುಶಿಲ್ಪಗಳಷ್ಟೇ ಪ್ರಾಚೀನವಾದುದು. ಅರಮನೆಗಳ, ದೇವಸ್ಥಾನಗಳ, ಹಳೆಯ ಕಾಲದ ಮನೆಗಳ ಮಹಾದ್ವಾರ, ಮೊದಲ ಬಾಗಿಲು, ಛತ್ತು, ರಥ, ಕಿಟಕಿಯ ಚೌಕಟ್ಟುಗಳು ಮೊದಲಾದುವನ್ನು ಚಿತ್ರವಿಚಿತ್ರವಾಗಿ ಕೆತ್ತಿ

ಭಾರತ ಭಾಗ್ಯವಿಧಾತರು. ತಯಾರಿಸಿದವರು -ಶಾಂಬಾ ಅನಂತ ಶೇಟ ಗುಡಿಗಾರ, ಕುಮಟ

ಅಲಂಕರಣ ಮಾಡುವುದು ಹಿಂದಿನಿಂದ ಬಂದಿರುವ ಸಂಪ್ರದಾಯ. ಗಂಧದ ಮರದಲ್ಲಿ ಕೆತ್ತನೆಯ ಕೌಶಲವನ್ನು ತೋರಿಸುವ ಒಂದು ಸಾಂಪ್ರದಾಯಿಕ ಕಾಯಕಕ್ಕೆ ಸಂಬಂಧಿಸಿದವರನ್ನು ಈಗ ಗುಡಿಗಾರರೆನ್ನುತ್ತಾರೆ.

ಕನ್ನಡ ನಾಡಿನ ಗುಡಿಗಾರರು ಗೋವದಿಂದ ಬಂದವರು. ಶಿವಮೊಗ್ಗ ಜಿಲ್ಲೆಯ ಸೊರಬ, ಸಾಗರ ತಾಲ್ಲೂಕುಗಳಲ್ಲಿಯೂ ಉತ್ತರ ಕನ್ನಡದ ಶಿರಸಿ, ಕುಮಟ, ಹೊನ್ನಾವರ, ಸಿದ್ದಾಪುರ ತಾಲ್ಲೂಕುಗಳಲ್ಲಿಯೂ ಇವರು ನೆಲೆಸಿದ್ದಾರೆ. ಜಡೆ, ಬಿಳಿಗೋಡು, ತವಂದೆ, ಜಿಂಗಿಕೊಪ್ಪ, ತಾಳಗುಪ್ಪ,

ಗಂಧದಮೂರ್ತಿಗಳ ಕೆತ್ತನೆ

ಹೊನ್ನೆಕೇರಿ, ಬನವಾಸಿ, ಕೊಪ್ಪ, ಇಸಳೂರ, ಹೆಬ್ಬಳ್ಳಿ, ಖರ್ಲೂ, ಬೀಳಗಿ, ಹೆರೂರಗಳಲ್ಲಿನವರು ಗುಡಿಗಾರಿಕೆಯನ್ನೂ ಕೃಷಿಯನ್ನೂ ಒಟ್ಟಾಗಿ ನಡೆಸಿಕೊಂಡು ಬಂದಿದ್ದಾರೆ. ಕುಮಟ ಹೊನ್ನಾವರಗಳಲ್ಲಿ ಇವರನ್ನು ಶೆಟ್ಟಿಗಳೆಂದು ಕರೆಯುತ್ತಾರೆ. ಸಾಗರ ಸೊರಬಗಳಲ್ಲಿ ವೃತ್ತಿಯಿಂದಲೇ ಇವರನ್ನು ಗುರುತಿಸಬೇಕಾಗುತ್ತದೆ. ಶೆಟ್ಟಿಗಳ ಮನೆಮಾತು ಕೊಂಕಣಿಯಾದರೆ ಉಳಿದವರದು ಕನ್ನಡ.

ಗುಡಿಗಾರರಲ್ಲಿ ಗಂಡಸರು ಗಂಧದ ಕೆಲಸವನ್ನೂ ಹೆಂಗಸರು ಬೆಂಡಿನ ಕೆಲಸವನ್ನೂ ಮಾಡುತ್ತಾರೆ. ಬೆಂಡಿನಿಂದ ಹೂ, ಹೂಮಾಲೆ, ಗುಚ್ಛಗಳನ್ನು ಹೆಂಗಸರು ಮಾಡಿದರೆ ಬಾಸಿಂಗ, ಮೊಗ್ಗಿನ ತುರಾಯಿಗಳನ್ನು ಗಂಡಸರೇ ಮಾಡುತ್ತಾರೆ. ಪ್ರತಿವರ್ಷ ಶ್ರಾವಣ ಭಾದ್ರಪದ ಮಾಸಗಳಲ್ಲಿ ಗುಡಿಗಾರರು ಗಣಪತಿಯನ್ನು ಮಾಡಿ ಮಾರುತ್ತಾರೆ. ಇದೂ ಬಾಸಿಂಗ ತಯಾರಿಕೆಯೂ ತಕ್ಕಮಟ್ಟಿಗೆ ಆದಾಯ ತರುವ ಬಾಬ್ತುಗಳು. ಗಂಧದ ಮರ, ಆನೆದಂತ, ಉಸುಕಿನ ಕಾಗದ, ಮೇಣದ ಪಾಲೀಷು -ಇವು ಗುಡಿಗಾರರ ಕಚ್ಚಾ ಸಾಮಗ್ರಿಗಳು. ತಮ್ಮ ಕೆಲಸದಲ್ಲಿವರು ಗರಗಸ, ಉಜ್ಜುಗೊರಡು, ನಾನಾತರದ ಚಾಣ, ಮೊಳೆ, ತಿರುಪುಮೊಳೆ, ಮರದುಗಳನ್ನು (ಹಿಂಜಸ್) ಬಳಸುತ್ತಾರೆ. ಮೊದಲು ತಾವು ಮಾಡಬಯಸಿದ ಕಲಾಕೃತಿಗೆ ಅಳತೆಗನುಗುಣವಾಗಿ ಮರವನ್ನು ಕತ್ತರಿಸಿಕೊಳ್ಳುತ್ತಾರೆ. ಆಮೇಲೆ ಆ ತುಂಡಿಗೆ ಸಾಮಾನ್ಯ ಕಲಾಕೃತಿಯ ರೂಪಕೊಟ್ಟು ತದನಂತರ ಅದನ್ನು ಸೂಕ್ಷ್ಮ ಕೆತ್ತನೆಯಿಂದ ತಿದ್ದುತ್ತಾರೆ. ಕೊನೆಯಲ್ಲಿ ಉಸುಕಿನ ಕಾಗದ ಮತ್ತು ಮೇಣದ ಪಾಲೀಷಿನಿಂದ ಹೊಳಪು ಕೊಡುತ್ತಾರೆ.

ಗುಡಿಗಾರರ ಕೃತಿಗಳು ವಾಸ್ತು ಮತ್ತು ಶಿಲ್ಪದ ಸಾಂಪ್ರದಾಯಿಕ ಶೈಲಿಯನ್ನು ಹೋಲುತ್ತವೆ. ರಾಮಾಯಣ, ಮಹಾಭಾರತ, ಹಿಂದು ಪುರಾಣಗಳು ಇವರ ಆಕರಗಳು. ದೇವರ ಮೂರ್ತಿಗಳು, ಒಡವೆಯ ಪೆಟ್ಟಿಗೆಗಳು, ಫೋಟೋ ಚೌಕಟ್ಟುಗಳು, ವ್ಯಾಸಪೀಠ, ಕಾಗದವನ್ನು ಕತ್ತರಿಸುವ ಚಾಕುಗಳು, ಬೀಸಣಿಕೆಗಳು, ವಿಸಿಟಿಂಗ್ ಕಾರ್ಡುಗಳು, ಆನೆ, ಹೂಮಾಲೆ ಇತ್ಯಾದಿಗಳನ್ನು ಇವರು ಸಾಮಾನ್ಯವಾಗಿ ತಯಾರಿಸುತ್ತಾರೆ.

ಮುರಲೀಧರ, ಗಂಧ ಹಾಗೂ ಹಸ್ತಿದಂತದ ಸೂಕ್ಷ್ಮ ಕಲಾಕೃತಿ. ತಯಾರಿಸಿದವರು- ಶಾಂಬಾ ಅನಂತ ಶೇಟ ಗುಡಿಗಾರ, ಕುಮಟ

ಈಗೀಗ ಆಧುನಿಕ ಬೇಡಿಕೆಗಳನ್ನು ಗಮನಿಸಿ ಹೊಸ ಹೊಸ ವಸ್ತುಗಳನ್ನು ಸಿದ್ಧಪಡಿಸಿಕೊಡುತ್ತಿದ್ದಾರೆ. ಗುಡಿಗಾರಿಕೆಯಲ್ಲಿ ಕಚ್ಚಾವಸ್ತುವಿನ ಕಿಮ್ಮತ್ತಿಗೂ ಕಲಾಕೃತಿಯ ಬೆಲೆಗೂ ನೇರವಾದ ಸಂಬಂಧವಿಲ್ಲ. ಹತ್ತು ರೂಪಾಯಿಯ ಕಿಮ್ಮತ್ತಿನ ಗಂಧದ ಮರದಿಂದ ಇನ್ನೂರು ರೂಪಾಯಿ ಬೆಲೆಯವರೆಗಿನ ಕಲಾ ಕೃತಿಯನ್ನು ನಿರ್ಮಿಸಬಲ್ಲವರಿದ್ದಾರೆ. ಗುಡಿಗಾರರು ಸ್ವತಂತ್ರ ವೃತ್ತಿಯವರು. ಕೇವಲ ಕೆಲವೇ ಕೆಲಸಗಾರರನ್ನು ನಿಯಮಿಸಿಕೊಳ್ಳುತ್ತಾರೆ. ಬೆಂಗಳೂರು, ಮೈಸೂರು, ತಮಿಳುನಾಡು, ಮುಂಬೈ, ಕೋಲ್ಕತ, ದೆಹಲಿಗಳು ಗುಡಿಗಾರರ ಮಾರುಕಟ್ಟೆಗಳು. ನೂರಕ್ಕೆ ಅರುವತ್ತರಷ್ಟು ಗುಡಿಗಾರರಿಗೆ ಸ್ವಂತ ಜಮೀನಿದ್ದು ಅವರು ಕೃಷಿ ಮಾಡುತ್ತಾರೆ. ಇವರ ಕಲಾಕೃತಿಗಳ ವ್ಯಾಪಾರ ಸಹಕಾರಿ ಸಂಘಗಳ ಮುಖಾಂತರವೂ ನೇರವಾಗಿಯೂ ಆಗುತ್ತದೆ. ಶಿವಮೊಗ್ಗ, ಕುಮುಟಗಳಲ್ಲಿ ಗುಡಿಗಾರರ ತರಬೇತಿಗಾಗಿ ಆರ್ಟಿಸಾನ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಗಳಿರುವುವಲ್ಲದೆ, ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಮತ್ತು ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಗಳಲ್ಲೂ ತರಬೇತಿಯ ಅವಕಾಶವುಂಟು. ಗುಡಿಗಾರರ ಕಲಾಕೌಶಲ ಜಗತ್ಪ್ರಸಿದ್ಧವಾಗಿದೆ. 1871ರಲ್ಲಿ ಅಂತಾರಾಷ್ಟ್ರೀಯ ವಾರ್ಷಿಕ ಪ್ರದರ್ಶನದಲ್ಲಿ ಇವರ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ಪ್ಯಾರಿಸ್‌ನಲ್ಲಿ ನಡೆದ ಜಾಗತಿಕ ವಸ್ತುಪ್ರದರ್ಶನದಲ್ಲಿ ಕೆಲವು ಕೃತಿಗಳು ಬೆಳ್ಳಿಯ ಪದಕಗಳನ್ನು ಪಡೆದಿವೆ. ಇತ್ತೀಚೆಗೆ ಈ ಉದ್ಯೋಗ ಲಾಭದಾಯಕವಿಲ್ಲದ್ದರಿಂದ ಹೊಸ ಪೀಳಿಗೆ ನೌಕರಿಯನ್ನು ಸೇರತೊಡಗಿದೆ. ಇಂದು ಈ ಉದ್ಯೋಗದಲ್ಲಿರುವವರು ಅಭಿಮಾನದಿಂದ ಮಾತ್ರ ಈ ಕಲೆಯನ್ನು ನಡೆಯಿಸಿಕೊಂಡು ಹೋಗುತ್ತಿದ್ದಾರೆ. ಆಲ್ ಇಂಡಿಯ ಹ್ಯಾಂಡಿಕ್ರಾಫ್ಟ್ ಬೋರ್ಡ್ ಈ ಕೈಕಸಬನ್ನು ಸಂರಕ್ಷಿಸುವುದಕ್ಕಾಗಿ ಶ್ರಮಿಸುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತರ ಕನ್ನಡ ಜಿಲ್ಲೆಯ ಗುಡಿಗಾರರು ಹೆಸರು ತಂದುಕೊಟ್ಟಿದ್ದಾರೆ. ಭಾರತದ ರಾಷ್ಟ್ರಪತಿ ಭವನದಲ್ಲಿರುವ ಆಲಂಕಾರಿಕ ಪೀಠೋಪಕರಣಗಳನ್ನು ಕಲಾತ್ಮಕವಾಗಿ ಸೃಷ್ಟಿಸಿದವರು ಗುಡಿಗಾರರು. ಅಮೆರಿಕದ ಮಾಜಿ ಅಧ್ಯಕ್ಷ ಐಸೆನ್ ಹಾವರ್ ಹಾಗೂ ಇಂಗ್ಲೆಂಡಿನ ರಾಣಿ ಎಲಿಜಬೆತ್ ಭಾರತಕ್ಕೆ ಭೇಟಿನೀಡಿದಾಗ ಗಂಧದ ಕೆತ್ತನೆಯ ಕಲಾಕೃತಿಗಳನ್ನು ಕಾಣಿಕೆಯಾಗಿ ನೀಡಲಾಗಿದೆ. ಹೊನ್ನಾವರದ ಎಸ್.ವೆಂಕಪ್ಪ, ಸೊರಬದ ಹಿರಿಯಣ್ಣಪ್ಪ, ಕುಮಟದ ವಾಮನ ಸುಬ್ರಾಯ ಸೇಟ್, ಅದೇ ಊರಿನ ಸುಬ್ರಾಯ ರಾಮಚಂದ್ರ ಸೇಟ್ ಮತ್ತು ಶಂಬಾ ಅನಂತ ಸೇಟ್, ಸಿದ್ದಾಪುರದ ವೆಂಕಟಗಿರಿ ಚಿದಂಬರ ಚಿತ್ರಕ್ ಮೊದಲಾದವರು ಗುಡಿಗಾರಿಕೆಯಲ್ಲಿ ಪ್ರಸಿದ್ಧರು. *

**ಗುಡಿಬಂಡೆ :** ಕೋಲಾರ ಜಿಲ್ಲೆಯ ವಾಯುವ್ಯ ಭಾಗದಲ್ಲಿ ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಸೇರಿದ ಒಂದು ತಾಲ್ಲೂಕು. ಜಿಲ್ಲೆಯ ಅತ್ಯಂತ ಚಿಕ್ಕ ತಾಲ್ಲೂಕು. ಹಿಂದೆ ಬಾಗೇಪಲ್ಲಿಯ ಉಪತಾಲ್ಲೂಕಾಗಿತ್ತು. ದಕ್ಷಿಣದಲ್ಲಿ ಚಿಕ್ಕಬಳ್ಳಾಪುರ, ಪೂರ್ವದಲ್ಲಿ ಶಿಡ್ಲಘಟ್ಟ ಮತ್ತು ಬಾಗೇಪಲ್ಲಿ, ಪಶ್ಚಿಮದಲ್ಲಿ ಗೌರಿಬಿದನೂರು ತಾಲ್ಲೂಕುಗಳು, ಉತ್ತರದಲ್ಲಿ ಸ್ವಲ್ಪ ದೂರದವರೆಗೆ ಆಂಧ್ರಪ್ರದೇಶದ ಗಡಿ ಇವುಗಳಿಂದ ಸುತ್ತುವರಿಯಲ್ಪಟ್ಟಿದೆ. ತಾಲ್ಲೂಕಿನ ವಿಸ್ತೀರ್ಣ 222ಚ.ಕಿಮೀ. ಕಸಬೆ ಮತ್ತು ಸೋಮೇನಹಳ್ಳಿ ಹೋಬಳಿಗಳು. ಒಟ್ಟು ಗ್ರಾಮಗಳು 105. ಜನಸಂಖ್ಯೆ 48,940.

ತಾಲ್ಲೂಕು ಹೆಚ್ಚುಮಟ್ಟಿಗೆ ಕಣಶಿಲೆಯ ಬೆಟ್ಟಗಳ ಪ್ರದೇಶ. ಭೂಮಿ ಉತ್ತರಕ್ಕೆ ಇಳಿಜಾರಾಗಿದ್ದು ಅನೇಕ ಏರು ತಗ್ಗುಗಳಿಂದ ಕೂಡಿದೆ. ನಂದಿಬೆಟ್ಟದ ಉತ್ತರದಲ್ಲಿ ಅವಲುಕೊಂಡ ಎಂಬಲ್ಲಿ ಹುಟ್ಟುವ ಕುಶಾವತಿ ನದಿ ಈ ತಾಲ್ಲೂಕಿನ ಮೂಲಕ ಉತ್ತರಕ್ಕೆ ಹರಿದು ಮುಂದೆ ಚಿತ್ರಾವತಿ ನದಿಯನ್ನು ಸೇರಿಕೊಳ್ಳುತ್ತದೆ. ತಾಲ್ಲೂಕಿನ ಮುಖ್ಯ ಕೆರೆಯಾಗಿರುವ ಬೈರಸಾಗರಕ್ಕೆ ಇದೇ ಮುಖ್ಯ ಆಸರೆ. ಈ ಕೆರೆಯ ಎರಡು ನಾಲೆಗಳಲ್ಲಿ ಒಂದು ಸುಮಾರು 2.5ಕಿಮೀ ದೂರದವರೆಗೂ ಮತ್ತೊಂದು 6.5ಕಿಮೀ ದೂರದವರೆಗೂ ಸಾಗುತ್ತದೆ. ಈ ತಾಲ್ಲೂಕಿನಲ್ಲಿ ನುರುಜುಗಲ್ಲಿನಿಂದ, ಕಲ್ಲುಗಳಿಂದ ಕೂಡಿದ ಭೂಪ್ರದೇಶವೇ ಹೆಚ್ಚು. ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 733.84ಮಿಮೀ. ಮಳೆ ಕಡಿಮೆಯಾದರೂ ಕೆರೆ ಬಾವಿಗಳ ಆಸರೆಯಿಂದ ನೆಲಗಡಲೆ, ರಾಗಿ, ಬತ್ತ, ಕಬ್ಬು, ಆಲೂಗೆಡ್ಡೆ, ಈರುಳ್ಳಿ, ಮೆಣಸಿನಕಾಯಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಗುಡಿಬಂಡೆಯ ಸುತ್ತಮುತ್ತಲೂ ಹುಣಿಸೆ ಮರಗಳನ್ನು ಹೆಚ್ಚಾಗಿ ಕಾಣಬಹುದು. ಮೈದಾನ ಪ್ರದೇಶಗಳಲ್ಲಿ ಮಾವಿನ ತೋಪುಗಳಿವೆ. ಪಶುಸಂಪತ್ತಿನ ಅಭಿವೃದ್ಧಿಗೆ ಹೆಚ್ಚು ಗಮನ ನೀಡಲಾಗುತ್ತಿದ್ದು, ಗುಡಿಬಂಡೆಯಲ್ಲಿ ತಾಲ್ಲೂಕುಮಟ್ಟದ ಒಂದು ಪಶುವೈದ್ಯಾಲಯವೂ ಯಲ್ಲೋಡಿನಲ್ಲಿ ಗ್ರಾಮಮಟ್ಟದ ಪಶುವೈದ್ಯಾಲಯವೂ ಇವೆ.

ಗುಡಿಬಂಡೆ ತಾಲ್ಲೂಕು ಬೆಲ್ಲ ಮತ್ತು ಕಲ್ಲುಸಕ್ಕರೆ ತಯಾರಿಕೆಗೆ, ರೇಷ್ಮೆನೇಯ್ಗೆ ಮತ್ತು ಕೊಟ್ಟಣದ ಅಕ್ಕಿಗೆ ಪ್ರಸಿದ್ಧ. ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರದ ರೈಲು ನಿಲ್ದಾಣಗಳೇ ಈ ತಾಲ್ಲೂಕಿಗೆ ಹತ್ತಿರವಿರುವ ರೈಲುಸಂಪರ್ಕ. ಗುಡಿಬಂಡೆಯಿಂದ ಸುತ್ತಲ ಮುಖ್ಯ ಸ್ಥಳಗಳಿಗೆ ಉತ್ತಮ ಮಾರ್ಗಗಳಿವೆ. *

ಗುಡಿಬಂಡೆ ಈ ತಾಲ್ಲೂಕಿನ ಮುಖ್ಯ ಸ್ಥಳ. ನಂದಿದುರ್ಗ ಬೆಟ್ಟಸಾಲಿನಲ್ಲಿ ಕೋಲಾರದ ವಾಯವ್ಯಕ್ಕೆ 95ಕಿಮೀ ದೂರದಲ್ಲಿದೆ. ಗುಡಿಯಿಂದ ಕೂಡಿದ ಬಂಡೆಯೊಂದರ ದಕ್ಷಿಣದ ಬುಡದಲ್ಲಿ ಈ ಪಟ್ಟಣವಿರುವುದರಿಂದ ಇದಕ್ಕೆ ಗುಡಿಬಂಡೆ ಎಂಬ ಹೆಸರು ಬಂದಿದೆ. ಜನಸಂಖ್ಯೆ 8,794. ಈ ಸುತ್ತಲ ಪ್ರದೇಶಕ್ಕೆ ಇದೇ ವ್ಯಾಪಾರಕೇಂದ್ರ.

ಔರಂಗಜೇಬನ ಕರ್ನಾಟಕ ಭಾಗದ ಫೌಜುದಾರ ಖಾಸಿಂಖಾನ್ ದೊಡ್ಡಬಳ್ಳಾಪುರವನ್ನು ವಶಪಡಿಸಿಕೊಂಡಮೇಲೆ ಗುಡಿಬಂಡೆ ಮತ್ತು ಅದರ ಸುತ್ತಲಿನ ಅರಣ್ಯ ಭಾಗಗಳನ್ನು ಹಾವಳಿ ಬೈರೇಗೌಡನಿಗೆ ಕೊಟ್ಟ. ಹಾವಳಿ ಬೈರೇಗೌಡ ಮಕ್ಕಳಿಲ್ಲದೆ ಮೃತಪಟ್ಟ. ಅವನ ಮೈದುನ ರಾಮೇಗೌಡ ಉತ್ತರಾಧಿಕಾರಿಯಾದ. 1689ರಲ್ಲಿ ಗುಡಿಬಂಡೆ ಚಿಕ್ಕಬಳ್ಳಾಪುರದ ಪಾಳೆಯಗಾರ ಬೈಚೇಗೌಡನ ವಶವಾಯಿತು.

ಹಾವಳಿ ಬೈರೇಗೌಡ ಮೊದಲು ಹಳೆಯ ಗುಡಿಬಂಡೆಯ ಕೋಟೆಯನ್ನೂ ಅನಂತರ ಈಗಿನ ಬಂಡೆಯ ತಳದ ಗುಡಿಬಂಡೆ ಪಾಳೆಯವನ್ನೂ ಸ್ಥಾಪಿಸಿದ. ಕೋಟೆಯ ಭಾಗದಲ್ಲಿ ಈಗಲೂ ಅನೇಕ ಬಂಡೆದ್ವಾರಗಳು, ಬಂಡೆಗಳಲ್ಲಿ ಬಿಡಿಸಿದ ಸೋಪಾನಗಳು, ಸಿಹಿನೀರಿನ ದೋಣೆಗಳು, ಗುಡಿಗಳು, ಹಗೇವುಗಳು, ಮದ್ದಿನ ಉಗ್ರಾಣಗಳು ಇವೆ. ಕೋವಿಯ ಮದ್ದನ್ನು ತಯಾರಿಸಲು ಉಪಯೋಗಿಸುತ್ತಿದ್ದ ಬೀಸುವ ಕಲ್ಲು ಸಹ ಇದೆ.

ಈ ಊರಿನ ಹೆಸರಿಗೆ ಕಾರಣವಾದ ಬಂಡೆಯ ಮೇಲಿರುವ ಗುಡಿ ಅಹೋಬಲ ಓಬಲ ನರಸಿಂಹಸ್ವಾಮಿಯದು. ಇದೊಂದು ನೈಸರ್ಗಿಕ ಗವಿ. ಗವಿಯು ಗರ್ಭಗುಡಿ ಮತ್ತು ಹೊರ ಅಂಕಣವೆಂದು ಎರಡಾಗಿ ವಿಂಗಡಿತವಾಗಿದೆ. ಹೊರ ಅಂಕಣದ ಮಂಟಪದ ದ್ವಾರದಲ್ಲಿ ದ್ವಾರಪಾಲಕ ವಿಗ್ರಹಗಳೂ ಮಂಟಪದ ಉತ್ತರದ ಗೋಡೆಯ ಮೇಲೆ ವಾಮನ, ರಾಮ, ವರಾಹ ಮತ್ತು ಉಗ್ರನರಸಿಂಹಸ್ವಾಮಿಯ ಉಬ್ಬುಚಿತ್ರಗಳೂ ಇವೆ. ಗರ್ಭಗುಡಿಯಲ್ಲಿ ವಿಗ್ರಹದ ಬದಲು ಉದ್ಭವ ಶಿಲೆ ಇದೆ. ಗವಿಯ ಸುತ್ತಲೂ ಕಲ್ಲಿನ ಗೋಡೆ ಇದೆ. ಗುಡಿಬಂಡೆಯಲ್ಲಿ ಎರಡು ಜಿನಾಲಯಗಳೂ ಇವೆ. (ಎಚ್.ಪಿ.ಕೆ.)

**ಗುಡಿಸಿಲು ಕೈಗಾರಿಕೆಗಳು** : ಗುಡಿಸಿಲಿನಲ್ಲಿ ನಡೆಸುವ ಕೈಗಾರಿಕೆಗಳು, ಕುಟೀರ ಕೈಗಾರಿಕೆಗಳು (ಕಾಟೆಜ್ ಇಂಡಸ್ಟ್ರೀಸ್). ಇದು ನಾಗರಿಕತೆಯಷ್ಟೇ ಹಳೆಯದು. ಮನುಷ್ಯ ಸ್ವರಕ್ಷಣೆಗಾಗಿ ಮತ್ತು ಬೇಟೆಗಾಗಿ ಆಯುಧಗಳನ್ನೂ ಉಪಕರಣಗಳನ್ನೂ ತಯಾರಿಸತೊಡಗಿದಾಗ ಈ ಕೈಗಾರಿಕೆಯ ಉದಯವಾಯಿತು. ಅವನು ಮುಂದೆ ಉಡುಪು, ವ್ಯವಸಾಯದ ಉಪಕರಣ ಮುಂತಾದುವನ್ನು ತಯಾರಿಸಲು ಪ್ರಾರಂಭಿಸಿದಾಗ ಇದು ಬೆಳೆಯಿತು. ಪುರಾತನ ನಾಗರಿಕತೆ ಬೆಳೆದಂತೆ ನಾನಾ ಉಪಯುಕ್ತ ಮತ್ತು ಭೋಗ ವಸ್ತುಗಳ ಕೈಗಾರಿಕೆಗಳಿಗೆ ರಾಜರಿಂದಲೂ ಚಕ್ರವರ್ತಿಗಳಿಂದಲೂ ಶ್ರೀಮಂತರಿಂದಲೂ ಪೋಷಣೆ ಒದಗಿತು. ಹೀಗೆ ತಯಾರಿಸಿದ ಸರಕುಗಳು ದೂರದ ಮಾರುಕಟ್ಟೆಗಳಲ್ಲಿ ವಿಕ್ರಯವಾಗುತ್ತಿದ್ದುವು. ಆದರೆ ಕೈಗಾರಿಕಾ ಕ್ರಾಂತಿಯಾದ ಮೇಲೆ ಉಂಟಾದ ತ್ವರಿತ ಮತ್ತು ವ್ಯಾಪಕವಾದ ಕೈಗಾರಿಕೀಕರಣ ಗೃಹ ಕೈಗಾರಿಕೆಗಳ ಕ್ಷೀಣ ದಶೆಗೆ ಕಾರಣವಾಯಿತು. ಆದರೂ ಈ ಕೈಗಾರಿಕೆಗಳು ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ. ಕೆಲವು ಕಾರಣಗಳಿಂದಾಗಿ ಅವು ಇಂದಿಗೂ ಉಳಿದುಬಂದಿವೆ. ಕೆಲವು ಉಪಯುಕ್ತ ವಸ್ತುಗಳಿಗೆ ಬೇಡಿಕೆ ಸ್ಥಳೀಯವೂ ಪರಿಮಿತವೂ ಆಗಿರುತ್ತದೆ. ಅಂಥ ವಸ್ತುಗಳನ್ನು ದೊಡ್ಡ ಕೈಗಾರಿಕೆಗಳಲ್ಲಿ ಬೃಹದ್ಗಾತ್ರದಲ್ಲಿ ಉತ್ಪಾದನೆ ಮಾಡುವುದು ಸಾಧ್ಯವಿಲ್ಲ. ಗುಡಿಸಿಲು ಕೈಗಾರಿಕೆಗಳಲ್ಲಿ ಅವನ್ನು ಸಣ್ಣ ಗಾತ್ರದಲ್ಲಿ ಉತ್ಪಾದಿಸಬಹುದು. ಅದೂ ಅಲ್ಲದೆ ಗೃಹ ಕೈಗಾರಿಕೆಗಳು ಜನಗಳ ರುಚಿ ಮತ್ತು ಬೇಡಿಕೆಗಳಿಗೆ ಅನುಗುಣವಾಗಿ ಸರಕುಗಳನ್ನು ತಯಾರಿಸುತ್ತವೆ. ಈ ಕಾರಣಗಳಿಂದಾಗಿ ಗುಡಿಸಿಲು ಕೈಗಾರಿಕೆಗಳು ಈಗಿನ ಬೃಹತ್ ಕೈಗಾರಿಕಾ ಪ್ರಪಂಚದಲ್ಲೂ ಜೀವಂತವಾಗಿ ಉಳಿದಿವೆ. ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಪ್ರವರ್ಧಮಾನವಾಗಿವೆ. ಈಚೆಗೆ ಸರ್ಕಾರಗಳು ಇವಕ್ಕೆ ಉತ್ತೇಜನ ನೀಡುತ್ತಿವೆ. ಇದಕ್ಕೆ ನಾನಾ ಕಾರಣಗಳುಂಟು. 1 ಈ ಕೈಗಾರಿಕೆಗಳು ಶ್ರಮಜೀವಿಗಳ ಹೆಚ್ಚಳವಿರುವ ಮತ್ತು ಕಡಿಮೆ ಬಂಡವಾಳವಿರುವ ದೇಶಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. 2 ಇವು ಸ್ಥಳೀಯವಾಗಿ ದೊರೆಯುವ ಕಚ್ಚಾಸಾಮಗ್ರಿ ಮತ್ತು ಕುಶಲತೆಯನ್ನು ಉಪಯೋಗಿಸಿಕೊಂಡು ಅನೇಕ ಉಪಯುಕ್ತ ಮತ್ತು ಅನುಭೋಗ ವಸ್ತುಗಳನ್ನು ತಯಾರಿಸುವುದರಿಂದ ದೇಶದ ಆರ್ಥಿಕ ಪ್ರಗತಿಗೆ ಸಹಾಯ ಮಾಡುತ್ತವೆ. 3 ಗುಡಿಸಿಲು ಕೈಗಾರಿಕೆಗಳು ಮನೆಯಲ್ಲೇ ಇರುವ ಮುದುಕರು, ಕುರುಡರು ಮತ್ತು ಮಕ್ಕಳುಗಳ ಸೇವೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಸಹಾಯಕವಾಗುತ್ತದೆ. ಸಮಾನ ಆರ್ಥಿಕ ಅವಕಾಶ ಕಲ್ಪಿಸುವುದಕ್ಕೂ ರಾಷ್ಟ್ರದ ವರಮಾನ ಮತ್ತು ಸಂಪತ್ತಿನ ಸಮಾನ ಹಂಚಿಕೆಗೂ ಕೆಲವು ದೇಶಗಳು ಗುಡಿಸಿಲು ಕೈಗಾರಿಕೆಗಳನ್ನು ಉತ್ತೇಜಿಸುತ್ತಿವೆ. ಈ ರಂಗಗಳಲ್ಲಿ ಗೃಹಕೈಗಾರಿಕೆಗಳು ವ್ಯಾಪಕವಾಗಿ ಕಂಡುಬರುತ್ತವೆ. ಪುಸ್ತಕಗಳನ್ನು ಹೊಲಿಯುವುದು, ನೂಲಿಗೆ ಬಣ್ಣ ಕಟ್ಟುವುದು, ಬಟ್ಟೆಬರೆಗಳ ತಯಾರಿಕೆ; ಬೀಜಗಳಿಂದ ಎಣ್ಣೆ ತೆಗೆಯುವುದು, ಚಿನ್ನ, ಬೆಳ್ಳಿ ಮತ್ತು ಇತರ ಆಭರಣಗಳ ತಯಾರಿಕೆ, ಚರ್ಮವಸ್ತುಗಳ ತಯಾರಿಕೆ, ಚಾಪೆ ಹೆಣೆಯುವುದು, ಸಂಗೀತ ಸಾಧನಗಳ ತಯಾರಿಕೆ, ವ್ಯವಸಾಯೋಪಕರಣಗಳ ತಯಾರಿಕೆ, ಮಣ್ಣಿನ ಕೆಲಸ ಮತ್ತು ಕುಂಬಾರಿಕೆ, ಬಿದಿರು ಮತ್ತು ಬೆತ್ತದ ಸಾಮಾನುಗಳ ತಯಾರಿಕೆ, ಜಮಖಾನದ ತಯಾರಿಕೆ, ಮಣ್ಣಿನ ಪ್ರತಿಮೆಗಳ ತಯಾರಿಕೆ, ತಾಮ್ರದ ಸಾಮಾನುಗಳ ತಯಾರಿಕೆ, ಗರಿಯಿಂದ ಸಾಮಾನುಗಳ ತಯಾರಿಕೆ, ಆಟದ ಸಾಮಾನುಗಳು ಮತ್ತು ಬೊಂಬೆ ಮಾಡುವುದು, ರಬ್ಬರ್ ವಸ್ತುಗಳು ಮತ್ತು ರಬ್ಬರ್ ಅಚ್ಚುಗಳು, ಕಸೂತಿ ಕೆಲಸ ಇತ್ಯಾದಿ.

ಬುಟ್ಟಿ ಹೆಣಿಗೆ

ಗುಡಿಸಿಲು ಕೈಗಾರಿಕೆಗಳಲ್ಲಿ ತೊಡಕಿಲ್ಲದ ಮತ್ತು ಸಾಮಾನ್ಯವಾದ ಉತ್ಪಾದನ ತಂತ್ರಗಳನ್ನು ಉಪಯೋಗಿಸುತ್ತಾರೆ. ಅನೇಕ ಕೈಗಾರಿಕೆಗಳಲ್ಲಿ ಹಳೆಯ ಕಾಲದ ಯಂತ್ರ ಸಲಕರಣೆಗಳಿಂದ ಉತ್ಪಾದನ ಕಾರ್ಯ ನಡೆಯುತ್ತದೆ. ಕೆಲವರು ಸುಧಾರಿಸಿದ ಉತ್ಪಾದನ ಕ್ರಮ ಮತ್ತು ಉಪಕರಣಗಳನ್ನು ಬಳಸುವುದೂ ವಾಡಿಕೆಯಲ್ಲಿದೆ. ಈ ಕೈಗಾರಿಗಕೆಗಳು ತಾಂತ್ರಿಕ ಪ್ರಗತಿಯಿಂದ ಸಂಪೂರ್ಣವಾಗಿ ವಂಚಿತವಾಗಿಯೇನೂ ಇಲ್ಲ. ಆದರೆ ನವೀನ ಉತ್ಪಾದನ ವಿಧಾನಗಳನ್ನು ಅಳವಡಿಸುವುದರಲ್ಲಿ ನಿಧಾನ ಹೆಚ್ಚು. ಕೆಲವು ಕೈಗಾರಿಕೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವುದುಂಟು. ಆಧುನಿಕ ಕಾರ್ಖಾನೆಗಳೊಂದಿಗೆ ಹೊಂದಿಕೊಂಡು ಉತ್ಪಾದನ ಕಾರ್ಯನಿರತವಾದ ಗುಡಿಸಿಲು ಕೈಗಾರಿಕೆಗಳೂ ಇವೆ. ಗಿರಣಿಯ ನೂಲನ್ನು ಬಳಸಿಕೊಂಡು ಮಗ್ಗದಲ್ಲಿ ಬಟ್ಟೆ ನೇಯುವುದು ಒಂದು ಉದಾಹರಣೆ. ಕಮ್ಮಾರಿಕೆಯಲ್ಲಿ ತಿರುಗು ಯಂತ್ರದ ಬಳಕೆ ಹೆಚ್ಚುತ್ತಿದೆ. ಹೀಗೆ ನಿಧಾನವಾಗಿಯಾದರೂ ತಾಂತ್ರಿಕ ಪ್ರಗತಿ ಗುಡಿಸಿಲು ಕೈಗಾರಿಕೆಗಳ ಉತ್ಪಾದನ ಕ್ರಮವನ್ನು ಬದಲಾಯಿಸುತ್ತಿದೆ.

ಅನೇಕ ಗುಡಿಸಿಲು ಕೈಗಾರಿಕೆಗಳಲ್ಲಿ ವಿಶೇಷ ಕುಶಲತೆಯ ಆವಶ್ಯಕತೆಯಿರುವುದಿಲ್ಲ. ಅನೇಕ ಉಪಯುಕ್ತ ಸರಕುಗಳನ್ನು ಸಾಧಾರಣವಾದ ಕುಶಲತೆಯಿಂದಲೇ ಉತ್ಪಾದಿಸಬಹುದು. ಉದಾ: ಬೆತ್ತದ ಕುಕ್ಕೆ, ಹೆಡಗೆ, ಮೊರ ಎಣೆಯುವುದು. ಆದರೆ ಕೆಲವು ಕೈಗಾರಿಕೆಗಳಲ್ಲಿ ಉನ್ನತ ಮಟ್ಟದ ಕುಶಲತೆ ಮತ್ತು ಕೆಲಸಗಾರಿಕೆ ಅಗತ್ಯವಾಗುತ್ತದೆ. ಉದಾ: ಬೆತ್ತದ ಪೀಠೋಪಕರಣಗಳು ವಂಶಪಾರಂಪರ್ಯವಾದ ಕೌಶಲದ ಬಲದಿಂದ ನಡೆಯುವ ಕೈಗಾರಿಕೆಗಳೂ ಉಂಟು. ಕುಶಲ ಕರ್ಮಿ ತನ್ನ ಮಕ್ಕಳಿಗೆ ತರಬೇತಿ ಕೊಟ್ಟು ಅವರನ್ನು ಆ ಕೆಲಸದಲ್ಲಿ ನಿಪುಣರನ್ನಾಗಿ ಮಾಡುತ್ತಾನೆ.

ಈ ಕಾರಣದಿಂದಾಗಿ ಕೆಲವು ಉತ್ಪಾದನ ವಿಧಾನಗಳು ಮತ್ತು ಕೌಶಲಗಳು ಕೆಲವೇ ಕುಟುಂಬಗಳಿಗೆ ಸೀಮಿತವಾಗಿರುತ್ತವೆ. ಈಚಿನ ವರ್ಷಗಳಲ್ಲಿ ಕೆಲವು ವೃತ್ತಿ ಸಂಸ್ಥೆಗಳು ಗುಡಿಸಿಲು ಕೈಗಾರಿಕೆಯಲ್ಲಿ ತೊಡಗಿರುವ ಮತ್ತು ತೊಡಗುವ ಕೆಲಸಗಾರರಿಗೆ ತರಬೇತು ಒದಗಿಸುತ್ತಿವೆ. ಆದಾಗ್ಯೂ ಇದು ಸಾಕಷ್ಟು ವ್ಯಾಪಕವಾಗಿಲ್ಲ. ಗುಡಿಸಿಲು ಕೈಗಾರಿಕೆಯಲ್ಲಿ ತೊಡಗಿರುವ ಬಹಳ ಜನ ಯಾವ ವಿಧವಾದ ವ್ಯವಸ್ಥಿತ ತರಬೇತನ್ನೂ ಪಡೆದಿಲ್ಲದಿರುವುದೇ ಸಾಮಾನ್ಯವಾಗಿದೆ.

ಬೆತ್ತದಿಂದ ಕುರ್ಚಿ ತಯಾರಿಕೆ

ಎಲ್ಲ ಗುಡಿಸಿಲು ಕೈಗಾರಿಕೆಗಳಿಗೂ ಸಾಮಾನ್ಯವಾದ ಕೆಲವು ಸಮಸ್ಯೆಗಳುಂಟು. ಬಂಡವಾಳದ ಅಭಾವ ಒಂದು ಮುಖ್ಯ ಸಮಸ್ಯೆ. ಈ ಕೈಗಾರಿಕೆಗಳಿಗೆ ಅಲ್ಪ ಬಂಡವಾಳವೇ ಸಾಕಾದರೂ ಅಷ್ಟು ಬಂಡವಾಳವನ್ನು ಕೂಡ ಅನೇಕ ಉತ್ಪಾದಕರು ಹೊಂದಿಸಿಕೊಳ್ಳಲು ಅಸಮರ್ಥರಾಗಿರುತ್ತಾರೆ. ಬೃಹತ್ ಕೈಗಾರಿಕೆಗಳಂತೆ ಇದಕ್ಕೂ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳು ಬೇಕಾಗುತ್ತವೆ. ಉಪಕರಣಗಳು, ಯಂತ್ರಗಳು ಮತ್ತು ಕಟ್ಟಡಗಳಿಗಾಗಿ ದೀರ್ಘಾವಧಿ ಸಾಲಗಳು ಅಗತ್ಯ. ಕಚ್ಚಾ ಸಾಮಗ್ರಿಯನ್ನು ಕೊಳ್ಳಲು, ತಯಾರಾದ ಪದಾರ್ಥಗಳನ್ನು ಮತ್ತು ತಯಾರಿಕೆಗೆ ಬೇಕಾದ ವಸ್ತುಗಳನ್ನು ಶೇಖರಿಸಲು ಮಾರಾಟ ಮಾಡಲು ಮತ್ತು ಕೆಲಸಗಾರರಿಗೆ ಕೂಲಿ ಕೊಡಲು ಅಲ್ಪಾವಧಿ ಸಾಲ ಬೇಕಾಗುತ್ತದೆ. ಗುಡಿಸಿಲು ಕೈಗಾರಿಕೆಗಳು ಸಂಘಟಿತ ಉದ್ಯಮಗಳಲ್ಲವಾದ್ದರಿಂದ ಬಂಡವಾಳ ಒದಗಿಸುವುದು ಮತ್ತು ಸಾಲ ಪಡೆಯುವುದು ಸುಲಭವಲ್ಲ. ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳಿಂದ ಹಣ ಪಡೆಯಲು ಇವು ಅಗತ್ಯವಾದ ಆಧಾರ ಮತ್ತು ಆಸ್ತಿ ಒದಗಿಸಲಾರವು. ಈ ಕಾರಣಗಳಿಂದಾಗಿ ಇವು ಸಂಘಟಿತ ಸಂಸ್ಥೆಗಳಿಂದ ಹಣ ಪಡೆಯುವುದು ಕಷ್ಟ. ಗುಡಿಸಿಲು ಕೈಗಾರಿಕೆಗಳಲ್ಲಿ ತೊಡಗಿರುವವರಿಗೆ ಅಗತ್ಯವಾದ ಬಂಡವಾಳ ಬಹುತೇಕ ಒದಗುತ್ತಿರುವುದು ಲೇವಾದೇವಿಗಾರರು ಮತ್ತು ವರ್ತಕರಿಂದ. ಸ್ನೇಹಿತರಿಂದ ಮತ್ತು ಸಂಬಂಧಿಕರಿಂದ ಹಣ ಪಡೆಯುವುದೂ ಸಾಮಾನ್ಯ. ಕೆಲವು ದೇಶಗಳಲ್ಲಿ ಸರ್ಕಾರಗಳು ಪರಿಮಿತ ಗಾತ್ರದಲ್ಲಿ ಈ ಕೈಗಾರಿಗೆಗಳಿಗೆ ಹಣ ಸಹಾಯ ಮಾಡುತ್ತವೆ. ಕೆಲವು ಪರಿಸ್ಥಿತಿಗಳಲ್ಲಿ ಸಹಕಾರ ಸಂಘಗಳು ಹಣವನ್ನೂ ಕಚ್ಚಾ ಸಾಮಾಗ್ರಿಯನ್ನೂ ಒದಗಿಸುತ್ತವೆ. ಭಾರತದಲ್ಲಿ ಈಗ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಇವಕ್ಕೆ ಹಣ ಒದಗಿಸಲು ಆಸಕ್ತಿ ವಹಿಸುತ್ತಿವೆ. ಇಷ್ಟಾದರೂ ಗುಡಿಸಿಲು ಕೈಗಾರಿಕೆಗಳ ಹಣಕಾಸಿನ ಸ್ಥಿತಿ ತೃಪ್ತಿಕರವಾಗಿಲ್ಲವೆಂದೇ ಹೇಳಬೇಕು.

ಕಚ್ಚಾ ಸಾಮಗ್ರಿಯನ್ನು ಹೊಂದಿಸಿಕೊಳ್ಳುವುದು ಗುಡಿಸಿಲು ಕೈಗಾರಿಕೆಗಳ ಮತ್ತೊಂದು ಮುಖ್ಯ ಸಮಸ್ಯೆ. ವಿವಿಧ ವಸ್ತುಗಳ ತಯಾರಿಕೆಯಲ್ಲಿ ತೊಡಗಿರುವ ಅವಕ್ಕೆ ನಾನಾ ಬಗೆಯ ಕಚ್ಚಾ ಸಾಮಗ್ರಿಗಳು ಬೇಕಾಗುತ್ತವೆ. ಇವನ್ನು ಖರೀದಿಸಲು ಬೃಹತ್ ಕೈಗಾರಿಕೆಗಳಿಗಿರುವಷ್ಟು ಸಾಲ ಸೌಲಭ್ಯ ಮತ್ತು ಬಂಡವಾಳ ಕ್ರೋಡೀಕರಣ ಗುಡಿಸಲು ಕೈಗಾರಿಕೆಗಳಿಗೆ ಇರುವುದಿಲ್ಲ. ಕೈಗಾರಿಕೆಯ ಉತ್ಪಾದಕರು ತಮಗೆ ಅಗತ್ಯವಾದ ಕಚ್ಚಾ ಸಾಮಗ್ರಿಯನ್ನು ವರ್ತಕರಿಂದಲೋ ದಳ್ಳಾಳಿಗಳ ಮೂಲಕವೋ ಪಡೆಯುತ್ತಾರೆ. ತಾವು ತಯಾರಿಸಿದ ವಸ್ತುಗಳನ್ನು ಸಾಮಾನ್ಯವಾಗಿ ಅವರಿಗೇ ಮಾರುತ್ತಾರೆ. ಕೆಲವು ವೇಳೆ ಕಚ್ಚಾಸಾಮಾಗ್ರಿಯನ್ನು ಸ್ಥಳೀಯ ವರ್ತಕರಿಂದ ಉದ್ದರಿಯ ಮೇಲೆ ಪಡೆಯುತ್ತಾರೆ. ತಯಾರಿಸಿದ ವಸ್ತುಗಳನ್ನು ಮಾರಿದ ಮೇಲೆ ಅವರಿಗೆ ಹಣ ಸಂದಾಯ ಮಾಡುತ್ತಾರೆ. ಕಚ್ಚಾಸಾಮಗ್ರಿಯ ಮತ್ತು ಉತ್ಪಾದನೆಗೆ ಅಗತ್ಯವಾದ ಇತರ ವಸ್ತುಗಳ ಪೂರೈಕೆ ಸಾಕಾಗದೆ ಗುಡಿಸಿಲು ಕೈಗಾರಿಕೆಗಳ ಉತ್ಪಾದನೆ ಆಗಾಗ್ಗೆ ನಿಲ್ಲುವುದು ಸಾಮಾನ್ಯ.

ಗುಡಿಸಿಲು ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಪದಾರ್ಥಗಳನ್ನು ಮಾರಲು ವ್ಯವಸ್ಥಿತಮಾರುಕಟ್ಟೆಗಳಿಲ್ಲ. ಅವುಗಳ ಉತ್ಪಾದಕರು ಬೃಹದ್ಗಾತ್ರದ ಕೈಗಾರಿಕೆಗಳಂತೆ, ತಮ್ಮ ಸರಕುಗಳ ಮಾರಾಟಕ್ಕೆ ಸೂಕ್ತವಾದ ಮತ್ತು ಸಂಘಟಿತವಾದ ಏರ್ಪಾಡು ಮಾಡಲು ಶಕ್ತರಲ್ಲ. ಅನೇಕ ವೇಳೆ ಸರಕುಗಳನ್ನು ನೇರವಾಗಿ ತಾವೇ ತಮ್ಮ ಹಳ್ಳಿಯ ಅಥವಾ ಸುತ್ತಮುತ್ತಲಿನ ಹಳ್ಳಿಗಳ ಗ್ರಾಹಕರಿಗೆ ವಿಕ್ರಯಿಸುತ್ತಾರೆ. ಕೆಲವರು ಹತ್ತಿರದ ಸಂತೆಗಳಿಗೆ ಸರಕುಗಳನ್ನು ತೆಗೆದುಕೊಂಡು ಹೋಗಿ ವಿಕ್ರಯಿಸುತ್ತಾರೆ. ಹಲವೊಮ್ಮೆ ಸರಕುಗಳನ್ನು ಪಟ್ಟಣಗಳಲ್ಲಿಯ ಸಗಟು ವ್ಯಾಪಾರಿಗೋ ಚಿಲ್ಲರೆ ವ್ಯಾಪಾರಿಗೋ ವಿಕ್ರಯಿಸುವುದುಂಟು. ಮಾರಾಟಕ್ಕೆ ದಳ್ಳಾಳಿಗಳನ್ನು ಅಥವಾ ಬಂಡವಾಳಗರನ್ನು ಆಶ್ರಯಿಸುವ ಸಂದರ್ಭಗಳಿಲ್ಲದಿಲ್ಲ. ಈ ಗುಡಿಸಲು ಕೈಗಾರಿಕೆಗಳು ಮತ್ತು ಕರಕುಶಲ ಕರ್ಮಿಗಳನ್ನು ಪ್ರೋತ್ಸಾಹಿಸಲು 1991ರಲ್ಲಿ ಕರ್ನಾಟಕ ಸರ್ಕಾರ ಒಂದು ಯೋಜನೆಯನ್ನು ಸರ್.ಎಂ.ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಜಾರಿಗೆ ತಂದಿದೆ. ಇದರಿಂದ ಗುಡಿಸಲು ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಒಂದು ಸಾಂಸ್ಥಿಕಸ್ಥಾನ ಲಭಿಸಿದ್ದು ಅವುಗಳಲ್ಲಿ ತೊಡಗಿರುವವರಿಗೆ ತರಬೇತಿ, ಉದ್ಯೋಗ ಮತ್ತು ಧನ ಸಹಾಯ ದೊರೆಯಲು ಅವಕಾಶಗಳು ಕಲ್ಪಿತವಾಗಿವೆ.

ಲೋಹದ ಪಾತ್ರೆ ತಯಾರಿಕೆ

ಗುಡಿಸಿಲು ಕೈಗಾರಿಕೆಗಳು ಪ್ರಾಚೀನ ಕಾಲದಿಂದಲೂ ಬಂದಿವೆ. ಬ್ರಿಟಿಷರ ಕಾಲದಲ್ಲಿ ಯಂತ್ರೋದ್ಯಮ ಕೈಗಾರಿಕೆಗಳ ಪೈಪೋಟಿಯಿಂದ ಇವು ಕ್ಷೀಣಸ್ಥಿತಿಗೆ ಬಂದಿದ್ದುವು. ಸ್ವಾತಂತ್ರ್ಯದ ಅನಂತರ ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳು ಗೃಹಕೈಗಾರಿಕೆಗಳಿಗೆ ಉತ್ತೇಜನ ನೀಡಿ ಅವುಗಳ ಅಭಿವೃದ್ಧಿಗೆ ನಾನಾ ರೀತಿಯಲ್ಲಿ ಶ್ರಮಿಸುತ್ತಿವೆ. ಈ ಕೈಗಾರಿಕೆಗಳು ನಾನಾವಿಧವಾದ ಉಪಯುಕ್ತವಾದ ಮತ್ತು ಭೋಗ ವಸ್ತುಗಳನ್ನು ತಯಾರಿಸುತ್ತಿವೆ. ಗುಡಿಸಿಲು ಕೈಗಾರಿಕೆಗಳು ಮನೆಗೆಲಸದ ಪದಾರ್ಥಗಳಾದ ಕೊಡಗಳು, ನೀರಿನ ಹೂಜಿಗಳು, ಲೋಟಗಳು, ತಟ್ಟೆಗಳು ಮೊದಲಾದವನ್ನು ಹಿತ್ತಾಳೆ ಮತ್ತು ತಾಮ್ರದಿಂದ ತಯಾರಿಸುತ್ತಿವೆ. ಚಿನಿವಾರಿಕೆ ಭಾರತದ ಅತಿ ಪ್ರಾಚೀನ ಗುಡಿಸಿಲು ಕೈಗಾರಿಕೆ; ಇವು ಹಳ್ಳಿ, ಪಟ್ಟಣ ಮತ್ತು ನಗರಗಳಲ್ಲಿ ವ್ಯಾಪಿಸಿದೆ. ಇವು ಚಿನ್ನ ಮತ್ತು ಬೆಳ್ಳಿಯಿಂದ ಅನೇಕ ವಿಧವಾದ ಒಡವೆಗಳನ್ನು ತಯಾರಿಸುತ್ತಿವೆ. ಅಗರಬತ್ತಿ ಮತ್ತು ಧೂಪ ಸರಕು ಕೈಗಾರಿಕೆ ಕೆಲವು

ಸಂಸಾರಗಳಲ್ಲಿ ಮಾತ್ರ ಕಾಣಬರುತ್ತದೆ. ಅವುಗಳಲ್ಲಿ ಮುಸಲ್ಮಾನರವೇ ಹೆಚ್ಚು. ಶ್ರೀಗಂಧದ ಕೆತ್ತನೆ ಕೆಲಸ ಮತ್ತೊಂದು ಚಿರಪರಿಚಿತ ಗೃಹಕೈಗಾರಿಕೆ, ಸುಂದರ ಚಿತ್ರಗಳು, ದೇವರ ಮತ್ತು ಇತರ ಪ್ರತಿಮೆಗಳು ಶ್ರೀಗಂಧದ ಮರದಿಂದ ತಯಾರಾಗುತ್ತವೆ. ಇನ್ನು ಕೆಲವು ಗೃಹ ಕೈಗಾರಿಕೆಗಳು ಬೊಂಬು ಮತ್ತು ಬೆತ್ತದ ಕೆಲಸಗಳಲ್ಲಿ ತೊಡಗಿವೆ. ಅವು ಉಪಯುಕ್ತವಾದ ನಾನಾ ರೀತಿಯ ಬುಟ್ಟಿಗಳು, ಕುರ್ಚಿಗಳು, ಅಚ್ಚುಮಣೆಗಳು ಮತ್ತು ಮಂಚಗಳನ್ನು ಸಹ ತಯಾರಿಸುತ್ತವೆ. ಕೊಂಬಿನ ಬಾಚಣಿಗೆ, ಹೂವಿನ ಕುಂಡಗಳು, ಅಳತೆಕೋಲುಗಳು, ಆಟದ ಸಾಮಾನುಗಳು, ಹಕ್ಕಿಗಳು, ಬೂದಿ ಹರಿವಾಣಗಳು ಮುಂತಾದ ಉಪಯುಕ್ತವಾದ ಸಾಮಾನುಗಳ ತಯಾರಿಕೆಯೂ ಗುಡಿಸಿಲು ಕೈಗಾರಿಕೆಯೇ. ಗ್ರಾಮಪ್ರದೇಶದಲ್ಲಿ ಅನೇಕ ಗುಡಿಸಿಲು ಕೈಗಾರಿಕೆಗಳುಂಟು. ಅವುಗಳಲ್ಲಿ ಬಹುಪಾಲು ಕೃಷಿ ಉಪಕರಣಗಳ ತಯಾರಿಕೆಯಲ್ಲಿ ತೊಡಗಿವೆ. *

**ಗುಡೇಅಂಗಡಿ :** ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನಲ್ಲಿರುವ ಗ್ರಾಮ. ಕುಮಟ ಅಘನಾಶಿನಿಗಳ ಮಧ್ಯೆ ಕುಮಟದಿಂದ 8ಕಿಮೀ ದೂರದಲ್ಲಿದೆ. ಈ ಊರಿನ ಪೂರ್ವಕ್ಕೆ ಅಘನಾಶಿನಿ ನದಿ ಹಾಗೂ ಪಶ್ಚಿಮಕ್ಕೆ ಅರಬ್ಬೀಸಮುದ್ರ ಇದೆ. ಇದರ ಮಧ್ಯದಲ್ಲಿ ಗುಡ್ಡದ ಮೇಲೆ ಬಾಡದ ಕಾಂಚಿಕಾಂಬ ದೇವಸ್ಥಾನ ಇದೆ. ಕಂಚಿದೇಶದಿಂದ ಈ ದೇವರ ಮೂರ್ತಿಯನ್ನು ತರಿಸಿದ್ದರಿಂದ ಅದಕ್ಕೆ ಈ ಹೆಸರು ಬಂತೆಂದು ತಿಳಿದುಬರುತ್ತದೆ. ಗೋಕರ್ಣದ ಕಲಭ ಎಂಬ ಅರಸ ಇದನ್ನು ಸ್ಥಾಪಿಸಿದನೆಂಬ ಪ್ರತೀತಿಯಿದೆ. ಇಲ್ಲಿಯ ಪ್ರಕೃತಿಸೌಂದರ್ಯ ಮನ ಮೋಹಕವಾದುದು. ಸೂರ್ಯೋದಯ ಹಾಗೂ ಸೂರ್ಯಾಸ್ತ ಅಪೂರ್ವವಾದ ದೃಶ್ಯಾವಳಿಗಳನ್ನು ನೀಡುತ್ತದೆ. 1981ರಲ್ಲಿ ಕಾಂಚಿಕಾಂಬ ದೇವಾಲಯದ ಕಟ್ಟಡವನ್ನು ಸಿಮೆಂಟ್‌ನಿಂದ ನಿರ್ಮಿಸಲಾಗಿದೆ. 1982ರಲ್ಲಿ ದೇವಿಯ ಮೂರ್ತಿಯನ್ನು ಪುನಃ ಪ್ರತಿಷ್ಠಾಪಿಸಲಾಯಿತು. ದೇವಾಲಯದ ಒಳಗೆ ಬಲಭಾಗದಲ್ಲಿ ಬಲಮುರಿ ಗಣಪತಿ, ಎಡಭಾಗದಲ್ಲಿ ಲಿಂಗ ಇದೆ.

ಕಾಂಚಿಕಾಂಬಪರಮೇಶ್ವರಿದೇವಿ

ಈ ಸ್ಥಳದಲ್ಲಿ ಚೈತ್ರ ಪೂರ್ಣಿಮೆಯಂದು ಜಾತ್ರೆ ನಡೆಯುತ್ತದೆ. ಜಾತ್ರೆಯ ದಿನಗಳಲ್ಲಿ ನಡೆಯುವ ಹೂವಿನ ಕುಣಿತ ಇಲ್ಲಿಯ ಒಂದು ವಿಶೇಷ. ಇಲ್ಲಿರುವ ರಥ ಆಕರ್ಷಕವೂ ಸುಂದರವೂ ಆಗಿದೆ. ಅಮ್ಮನವರ ಗುಡ್ಡದ ಕೆಳಗೆ ಹಿರೇಹೊಸಬದ ಕಲ್ಪ ಋಷಿ ಸ್ಥಾಪಿಸಿದ್ದೆಂದು ಹೇಳಲಾದ ಒಂದು ಗುಡಿಯಿದೆ. ಬಾಡದಲ್ಲಿ ಜೇಷ್ಠಪುರ ದುರ್ಗೆ ಅಥವಾ ಜಗದಾಂಬಾ ದೇವಾಲಯವಿದೆ. ಗುಡೇಅಂಗಡಿ-ಬಾಡ ಸಮುದ್ರ ತೀರ ಶುಭ್ರವಾಗಿದ್ದು ಆಕರ್ಷಕವಾಗಿದೆ. ಬಾಡದ ಸಮೀಪದ ಊರಾದ ಕಾಗಾಲದಲ್ಲಿ ಗೌಡಸಾರಸ್ವತರ ದೇವಕಿ ಕೃಷ್ಣ ದೇವಾಲಯವಿದೆ. ಏಪ್ರಿಲ್‌ನಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಕಾಗಾಲ ಮತ್ತು ಅಘನಾಶಿನಿ ನಡುವೆ ಗುಡ್ಡದ ಮೇಲೆ ಒಂದು ಕೋಟೆಯಿದ್ದು ಅದರಲ್ಲಿ ಗವಿ ಇದೆ. ಈ ಸ್ಥಳದಲ್ಲಿ ಎರಡು ಮಸೀದಿ ಮತ್ತು ಒಂದು ದರ್ಗಾ ಇವೆ.

ಗುಡೇಅಂಗಡಿಯಲ್ಲಿ ಸೀಗಡಿ ಮೀನಿನ ತಳಿ ಅಭಿವೃದ್ಧಿ ಕೇಂದ್ರವಿದೆ. (ಎಸ್.ಎಚ್‌ಇ.)

**ಗುಡ್ನಾಪುರ :** ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನಲ್ಲಿ ಬನವಾಸಿಯ ವಾಯವ್ಯಕ್ಕೆ ಸು.5ಕಿಮೀ ದೂರದಲ್ಲಿರುವ ಗ್ರಾಮ. ಆದ್ಯ ಕದಂಬರ ಕಾಲದಲ್ಲಿ ಇದು ಬನವಾಸಿ ರಾಜಧಾನಿಯ ಭಾಗವಾಗಿದ್ದಂತೆ ತೋರುತ್ತದೆ. ಇಲ್ಲಿನ ವೀರಭದ್ರ ದೇವಾಲಯದ ಬಳಿ ಸು.20 ಅಡಿ ಉದ್ದದ ಭಗ್ನವಾದ ಒಂದು ಕಲ್ಲಿನ ಕಂಬವಿದ್ದು ಇದು ಬುಡದಲ್ಲಿ ಸು.16 ಅಡಿಗಳವರೆಗೂ ಚೌಕಾಕಾರವಾಗಿದ್ದು ಮೇಲೆ ಅಷ್ಟಕೋನವಾಗಿದೆ.



ಅರಮನೆ ಮತ್ತು ದೇವಾಲಯದ ಆವರಣ

ಕಂಬದ ಮೇಲ್ಭಾಗ ಒಡೆದು ಹಾಳಾಗಿರುವುದರಿಂದ ಇಡೀ ಕಂಬದ ಉದ್ದ ಎಷ್ಟಿತ್ತು ಎಂದು ಹೇಳಲಾಗದು. ಕಂಬದ ನಾಲ್ಕೂ ಮುಖಗಳಲ್ಲಿ ಶಾಸನವೊಂದನ್ನು ಕೆತ್ತಿದೆ. ಇದು ಕದಂಬ ರವಿವರ್ಮನ (ಸು.485-519) ಶಾಸನ. ಇದರಿಂದ ಕದಂಬ ಮಯೂರಶರ್ಮನ ತಂದೆ ಬಂಧುಷೇಣ, ತಾತ ವೀರಶರ್ಮ ಎಂಬ ಹೊಸ ವಿಷಯಗಳು ತಿಳಿದುಬಂದಿವೆ. ಶಾಸನದಲ್ಲಿ ರವಿವರ್ಮ ಮನ್ಮಥನಿಗಾಗಿ ಜಿನಾಲಯವೊಂದನ್ನು ಕಟ್ಟಿದ್ದನೆಂದು ಹೇಳಿರುವುದರಿಂದ ಈ ಕಾಮಜಿನಾಲಯ ಬಾಹುಬಲಿಯ ಆಲಯವೆಂಬುದು ಖಚಿತವಾಗಿದ್ದು ಇದರಿಂದ ಬಾಹುಬಲಿಯ ಕಲ್ಪನೆ ಮತ್ತು ಒಂದು ದೇವಾಲಯ 6ನೆಯ ಶತಮಾನದಲ್ಲಿಯೇ ಇದ್ದಿತು ಎಂಬುದೂ ತಿಳಿದುಬರುತ್ತದೆ. ಪ್ರಸ್ತುತ ಶಾಸನದಲ್ಲಿ ಗುಡ್ನಾಪುರವನ್ನು ಗುಡ್ಡತಟಾಕ ಎಂದು ಕರೆಯಲಾಗಿದೆ. ಈಗಲೂ ಗುಡ್ನಾಪುರಕ್ಕೆ ಹೊಂದಿದಂತೆ, ಆ ಭಾಗದಲ್ಲಿಯೆ ದೊಡ್ಡದೆನಿಸಿದ ಕೆರೆಯಿದೆ. ಇದೇ ಆ ಗುಡ್ಡ ತಟಾಕವೆನ್ನಬಹುದು. ಇದರಿಂದ ಗುಡ್ನಾಪುರದ ಇತಿಹಾಸ ಸು.15 ಶತಮಾನಗಳಷ್ಟಾದರೂ ಪ್ರಾಚೀನವೆನ್ನಬಹುದು.

ಶಾಸನವಲ್ಲದೆ ಇಲ್ಲಿ ಇತರ ಅಪೂರ್ವ ವಿಗ್ರಹಗಳು ದೊರೆತಿವೆ. ಕೆರೆಯ ಸಮೀಪದಲ್ಲಿ ಕೆಸರಿನಲ್ಲಿ ಹುಗಿದುಹೋಗಿದ್ದ ಒಂದು ಜಿನವಿಗ್ರಹ ಮತ್ತೊಂದು ಅಲಂಕೃತ ಪುರುಷವಿಗ್ರಹ ದೊರೆತಿವೆ. ಜಿನಮೂರ್ತಿ ಯೋಗಾಸನದಲ್ಲಿದೆ. ಆದರೆ ಅದರ ಶಿರ ಮತ್ತು ಬಾಹುಗಳು ಈಗ ಅಲಭ್ಯ. ಪುರುಷವಿಗ್ರಹ ಭವ್ಯವಾಗಿ ಅಲಂಕೃತ ಕಿರೀಟವನ್ನು, ಹಾರಗಳನ್ನು

ಧರಿಸಿದೆ. ಅಲ್ಲದೆ ಇನ್ನೊಂದು ಸ್ತ್ರೀವಿಗ್ರಹವೂ ಕುಬ್ಜವಿಗ್ರಹವೂ ಗ್ರಾಮದಲ್ಲಿ ದೊರೆತಿವೆ. ಕುಬ್ಜವಿಗ್ರಹ ಸ್ಥೂಲವಾದ ದುಂಡು ಶರೀರದ ಪುರುಷನದು. ಉಬ್ಬಿದ ಹೊಟ್ಟೆ, ಕುತ್ತಿಗೆ ಕಾಣಿಸದೆ ದೇಹಕ್ಕೆ ಅಂಟಿದಂತಿರುವ ತಲೆ, ಹೊಟ್ಟೆ ಮೊಳಕಾಲವರೆಗೂ ಜೋತು ಬಿದ್ದಂತಿದ್ದು ಕಾಲುಗಳು ಪ್ರತ್ಯೇಕವಾಗಿ ಕಾಣಿಸದಿರುವುದು, ಮೇಲೆಕ್ಕೆತ್ತಿ ಕಟ್ಟಿದ ಗುಂಗುರುಕೂದಲು, ಕಚ್ಚೆಹಾಕಿ ಧೋತರ ಉಟ್ಟು ಹಲವು ಎಳೆಗಳ ಹಾರವನ್ನು ಧರಿಸಿರುವುದು ಈ ಲಕ್ಷಣಗಳನ್ನುಳ್ಳ ಈ ವಿಗ್ರಹ ಸು.3-5ನೆಯ ಶತಮಾನಕ್ಕೆ ಸೇರಿದ ಬೌದ್ಧ ಯಕ್ಷನ ವಿಗ್ರಹವಿರಬಹುದೆಂಬುದೊಂದು ಊಹೆ. ಪುರುಷ ಮತ್ತು ಸ್ತ್ರೀ ವಿಗ್ರಹಗಳು ಭೋಗಾಸನದಲ್ಲಿವೆ. ಸ್ತ್ರೀ ವಿಗ್ರಹ ಎರಡು ಕಂಠಾಭರಣಗಳನ್ನೂ ನಾಲ್ಕು ಹಾರಗಳನ್ನೂ ಧರಿಸಿದೆ. ಇದರ ತಲೆಯ ಹಿಂದಿನ ಪ್ರಭಾಮಂಡಲದ ಹಿಂಬದಿಯಲ್ಲಿ ಸಿಂಹಮುಖವನ್ನು ಕೆತ್ತಿದ್ದು ಅದರ ಬಾಯಿಂದ ಐದು ಎಳೆಗಳ ಮಣಿಸರ ಇಳಿಬಿದ್ದಿದೆ. ಈ ವಿಗ್ರಹಗಳು ಬಾದಾಮಿಯ ಚಳುಕ್ಯರ ಶಿಲ್ಪಗಳನ್ನು ಹೋಲುತ್ತವೆಂದೂ ಇವು ಇಲ್ಲಿನ ಶಾಸನದಲ್ಲಿ ಹೇಳಲಾದ ಮನ್ಮಥ'ರತಿಯರ ವಿಗ್ರಹಗಳೆಂದೂ ಹೇಳಲಾಗಿದೆ. ಇದೇ ಗ್ರಾಮದಲ್ಲಿ ಒಂದೇ ಕಲ್ಲಿನಲ್ಲಿ ಮಾಡಿದ ರತಿಮನ್ಮಥ'ರ ವಿಗ್ರಹ ವೀರಭದ್ರ ದೇವಾಲಯದಲ್ಲಿ ದೊರೆತಿದ್ದು, ಮನ್ಮಥನ ಕೈಯಲ್ಲಿ ಕಬ್ಬಿನ ಜಲ್ಲೆ, ರತಿಯ ಕೈಯಲ್ಲಿ ಕಮಲದ ದಂಟು ಕಾಣಿಸುತ್ತದೆ. ಇದು ಸು.11-12ನೆಯ ಶತಮಾನದ ವಿಗ್ರಹ. (ಬಿ.ಆರ್.ಜಿ.)

**ಗುಡ್ಲು ಕೂಡೋ ಶಾಸ್ತ್ರ :** ಹೆಣ್ಣುಮಕ್ಕಳು ಮೈನೆರೆದಾಗ (ಋತುಮತಿಯಾದಾಗ) ಜನಪದರು ಮಾಡುವ ಶಾಸ್ತ್ರ. ಗೋಡೆಗೆ ಎರಡು ಮೂರು ಬೊಂಬುಗಳನ್ನು ಒರಗಿಸಿ, ಅದಕ್ಕೆ ಅಡ್ಡಲಾಗಿ ಗಳುಗಳನ್ನು ಬಿಗಿದು ಅವುಗಳ ಮೇಲೆ ಅತ್ತಿ, ಆಲ, ಹಲಸು ಈ ಮೂರು ಬಗೆಯ ಮರದ ಸೊಪ್ಪನ್ನು ಹೊದಿಸಿ ಒಳಗೆ ನೆಲ್ಲುಹುಲ್ಲನ್ನು ಹರಡಿ, ಹುಲ್ಲಿನ ಮೇಲೆ ಈಚಲ ಚಾಪೆಯನ್ನು ಹಾಸಿ ಮಾಡುವ ಕೊಠಡಿಯಂಥ ರಚನೆಗೆ ಗುಡ್ಲು ಎನ್ನುತ್ತಾರೆ. ಸಾಮಾನ್ಯವಾಗಿ ಗುಡ್ಲು ತಯಾರಿಸುವವನು ಮೈನೆರೆದ ಹೆಣ್ಣಿನ ಸೋದರಮಾವ. ಹೆಣ್ಣು ಮೈನೆರೆದ ದಿನ ಹೆಣ್ಣಿನ ತಾಯಿಯನ್ನುಳಿದು ಇತರ ಮುತ್ತೈದೆಯರು ಸ್ನಾನ ಮಾಡಿಸಿ (ಮೊದಲ ದಿನ ತಾಯಿ ನೀರು ಹಾಕಿದರೆ ಕೆಟ್ಟದ್ದು ಎಂಬ ನಂಬಿಕೆ ಇದೆ) ಗುಡ್ಲಿಗೆ ಕೂರಿಸಿ, ಎಳ್ಳು ಹುರಿದು ಬೆಲ್ಲ ಕೊಬ್ಬರಿತುರಿ ಕುಟ್ಟಿ ಮಾಡಿದ ಚಿಗಳಿ, ಅಕ್ಕಿಯ ಹಿಟ್ಟು ಹುರಿದು ಬೆಲ್ಲದ ಪಾಕದಲ್ಲಿ ಕಲಸಿ ಮಾಡಿದ ತಂಬಿಟ್ಟು, ಬಾಳೆಹಣ್ಣು, ಕೊಬ್ಬರಿ, ಎಲೆ, ಅಡಕೆ ಮೊದಲಾದವುಗಳನ್ನು ಹೆಣ್ಣುಮಗಳ ಮಡಿಲಿಗೆ ತುಂಬಿ ಅವುಗಳನ್ನು ತಿನ್ನಲು ಆದೇಶಿಸುತ್ತಾರೆ. ಮೈನೆರೆದ ಹೆಣ್ಣನ್ನು ಮೊದಲ ರಾತ್ರಿ ಮಲಗಲು ಬಿಡುವುದಿಲ್ಲ. ಆ ರಾತ್ರಿ ಬೀದಿಯ ಹೆಂಗಳೆಯರು ಮನರಂಜನೆಗಾಗಿ ಹಾಡುತ್ತ ಸ್ವಾರಸ್ಯಕರ ಮಾತುಕತೆ ನಡೆಸುತ್ತ ಕಾಲ ಕಳೆಯುತ್ತಾರೆ.

ಅನಂತರ ಮೈನೆರೆದ ಹೆಣ್ಣಿಗೆ ದಿನ ಬಿಟ್ಟು ದಿನ ಸ್ನಾನ ಮಾಡಿಸುತ್ತಾರೆ. ಮೊದಲು ಮೂರು ದಿನ ಹೆಣ್ಣು ಗುಡ್ಲಿನ ಒಳಗೇ ಕಳೆಯಬೇಕು. ಆಮೇಲೆ ಬೆಚ್ಚನೆಯ ಕೊಠಡಿ, ಹನ್ನೊಂದು ದಿನದ ತನಕ ಸೂತಕ. ಸೂತಕ ಕಳೆಯುವ ತನಕ ಹೆಣ್ಣು ಹೊರಗೆ ಬರುವಂತಿಲ್ಲ. ಅಲ್ಲಿಯವರೆಗೂ ಆಕೆಗೆ ಅನ್ನ, ಬೆಲ್ಲ, ತುಪ್ಪ - ಇವುಗಳಿಂದ ತಯಾರಿಸಿದ ಊಟ. ಉದ್ದು, ಅಕ್ಕಿ, ಗೋದಿ, ಮೆಂತ್ಯ ಈ ನಾಲ್ಕನ್ನೂ ಸೇರಿಸಿ ಮಾಡಿದ ಮೆಂತ್ಯದ ಹಿಟ್ಟು ಮೊದಲಾದ ಪುಷ್ಟಿಕರವಾದ ಆಹಾರ ನೀಡುತ್ತಾರೆ. ಈ ಅವಧಿಯಲ್ಲಿ ಮೈನೆರೆದ ಹೆಣ್ಣಿನ ಹೆಚ್ಚಿನ ಆಹಾರವೆಂದರೆ ಚಿಗಳಿ ಮತ್ತು ಕೊಬ್ಬರಿ. ಎಲೆ ಅಡಿಕೆಯನ್ನೂ ಈ ಸಂದರ್ಭದಲ್ಲಿ ಹೆಣ್ಣು ವಿಶೇಷವಾಗಿ ಉಪಯೋಗಿಸಬೇಕಾಗುತ್ತದೆ.

ಹನ್ನೊಂದನೆಯ ದಿನ ಸೂತಕದ ಕಡೆಯ ದಿನ. ಅಂದು ಸುಣ್ಣಬಣ್ಣ ಬಳಿದು, ಗುಡಿಸಿ ಸಾರಿಸಿದ ಮನೆಯಲ್ಲಿ ಹಬ್ಬದ ವಾತಾವರಣವಿರುತ್ತದೆ. ಕೆಲವು ಕಡೆ ಜೋಯಿಸರನ್ನು ಕರೆಸಿ ಹೆಣ್ಣನ್ನು ಕಳಸದ ಮುಂದೆ ಕೂರಿಸಿ ಕಳಸಕ್ಕೆ ಪೂಜೆ ಮಾಡಿಸುವುದುಂಟು. ದಾಸಯ್ಯನ ಒಕ್ಕಲಾಗಿದ್ದರೆ ಪೂಜೆಗೆ ದಾಸಯ್ಯನನ್ನು ಕರೆಯುತ್ತಾರೆ. ದಾಸಯ್ಯನ ಒಕ್ಕಲಲ್ಲದಿದ್ದರೆ, ಸ್ನಾನಮಾಡಿಸಿದ ಅನಂತರ ಹೆಣ್ಣನ್ನು ಬಾವಿಯ ಬಳಿ ಕರೆದೊಯ್ದು ಆಕೆಯಿಂದ ಗಂಗೆಪೂಜೆ ಮಾಡಿಸಿ, ಮನೆಗೆ ಕರೆದೊಯ್ಯುತ್ತಾರೆ. ಆ ದಿನ ಬಂಧುಜನರಿಗೆ ಔತಣದ ಏರ್ಪಾಡಿರುತ್ತದೆ. (ಕೆ.ಆರ್.)

**ಗುಣಚಂದ್ರ :** ಸು.1650. ಜೈನಕವಿ, ಛಂದಸ್ಸಾರ ಎಂಬ ಶಾಸ್ತ್ರ ಗ್ರಂಥದ ಕರ್ತೃ. ಈತನ ಬಗ್ಗೆ ಹೆಚ್ಚಿನ ವಿಷಯವೇನೂ ತಿಳಿದುಬರುವುದಿಲ್ಲ.

ಛಂದಸ್ಸಾರ ಕನ್ನಡದ ಸಂಕ್ಷಿಪ್ತ ಛಂದೋಗ್ರಂಥ'. ಇದರಲ್ಲಿ ಸಂಜ್ಞಾಪ್ರಕರಣ, ಮಾತ್ರಾಛಂದೋಲಕ್ಷಣ, ಸಮವೃತ್ತ ಪ್ರಕರಣ, ಸಂಕೀರ್ಣ ಪ್ರಕರಣ, ತಾಳವೃತ್ತಾ ಪ್ರಕರಣ ಎಂಬ ಐದು ಅಧಿಕಾರಗಳಿವೆ. ಪ್ರಥಮಾಧಿಕಾರದಲ್ಲಿ ಲಘುಗುರುಗಳು ಗಣಸ್ವರೂಪ ಯತಿಪ್ರಾಸ ಇವುಗಳ ವಿಚಾರವನ್ನು ಕಂದದಲ್ಲಿ ಹೇಳಿದೆ. ದ್ವಿತೀಯಾಧಿಕಾರದಲ್ಲಿ ಆರ್ಯಾ, ಗೀತಿ ಮತ್ತು ಕಂದಗಳನ್ನೂ ಶರಕುಸುಮಾದಿ ಷಟ್ಪದೀ ಭೇದಗಳನ್ನೂ ಲಕ್ಷಣ ಲಕ್ಷ್ಯಪೂರ್ವಕವಾಗಿ ವಿವರಿಸಿದೆ. ತೃತೀಯಾಧಿಕಾರದಲ್ಲಿ ಉಕ್ತಾದಿಯಾಗಿ ಉತ್ಕೃತಿಯವರೆಗೆ ಇರುವ 26 ಛಂದಸ್ಸುಗಳಲ್ಲಿ ಹುಟ್ಟುವ ವರ್ಣಸಮವೃತ್ತಗಳಲ್ಲಿ ಕೆಲವನ್ನು ಸೂತ್ರಪದ್ಧತಿಯಿಂದ ಲಕ್ಷಣಿಸಿದೆ. ಚತುರ್ಥಾಧಿಕಾರದಲ್ಲಿ ದಂಡಕೆ, ಆರ್ಯಾ, ಗೀತಿ, ವೈತಾಳೀಯ, ಅನುಷ್ಟುಭ್ ಷೋಡಶಮಾತ್ರಾ ದ್ವಿಪಾದಾದಿ ಮಾತ್ರಾವೃತ್ತಗಳನ್ನು ಇವುಗಳೊಂದೊಂದರ ಭೇದಗಳನ್ನೂ ಲಕ್ಷಣ - ಲಕ್ಷ್ಯ ಪದ್ಧತಿಯಿಂದಲೂ ಸೂತ್ರಪದ್ಧತಿಯಿಂದಲೂ ವಿವರಿಸಿದೆ. ಇಲ್ಲಿಯೇ ದ್ರುತಮಧ್ಯಾದಿಯಾದ ಅರ್ಧಸಮವೃತ್ತ ಭೇದಗಳನ್ನೂ ಪದಚತುರೂರ್ಧ್ವಾದಿ ವಿಷಮ ವೃತ್ತಕ್ರಮವಾಗಿ ಭೇದಗಳನ್ನೂ ಸೂತ್ರ ಮತ್ತು ಲಕ್ಷಣ ಲಕ್ಷ್ಯಪದ್ಧತಿಗಳಿಂದ ವಿವರಿಸಿದೆ. ಕಡೆಯಲ್ಲಿ ಷಟ್ಪ್ರತ್ಯಯ ವಿಚಾರವಿದೆ. ಕೊನೆಯ ಅಧಿಕಾರದಲ್ಲಿ ಧ್ರುವತಾಳ ಮೊದಲಾದ ತಾಳಗಳನ್ನು ಕುರಿತ ವಿಷಯಗಳ ಪ್ರಸ್ತಾಪವಿದೆ. ದ್ವಿಪದಿ, ಮಾತ್ರೆಗಳ ತ್ರಿಪುಡೆ, ರಗಳೆಯ ಮೂರು ಭೇದಗಳು ಲಾವಳಿ(ಣಿ), ಸೀಸಪದ್ಯ ಇವುಗಳ ಸಂಕ್ಷಿಪ್ತ ವಿಚಾರದೊಡನೆ ಗ್ರಂಥ' ಮುಗಿದಿದೆ. ವಿಷಯ ಮತ್ತು ನಿರೂಪಣೆ ಎರಡರಲ್ಲಿಯೂ ಈ ಗ್ರಂಥ ಸಂಸ್ಕೃತ ಛಂದಶ್ಶಾಸ್ತ್ರದ ಮಾದರಿಯಲ್ಲಿದೆ. ಸಂಸ್ಕೃತ ಛಂದಸ್ಸಿನ ವಿಷಯದಲ್ಲಿ ಕೇದಾರಭಟ್ಟನ 'ವೃತ್ತರತ್ನಾಕರ'ದ ಅನುಸರಣೆಯಿದೆ. ಕನ್ನಡ ಛಂದಸ್ಸಿನ ಅಂಶವೃತ್ತಗಳ ಪ್ರಸ್ತಾಪವೇ ಈ ಗ್ರಂಥ'ದಲ್ಲಿ ಬಿಟ್ಟು ಹೋಗಿರುವುದು ವಿಚಾರಣೀಯ ಅಂಶ. ಮಾತ್ರಾಷಟ್ಪದಿ, ರಗಳೆಯ ಪ್ರಭೇದ ಮೊದಲಾದವುಗಳ ಪ್ರಸ್ತಾಪವಿರುವುದು ಗಮನಾರ್ಹವಾಗಿದೆ. ನಾಗವರ್ಮನ 'ಛಂದೋಂಬುಧಿ'ಯ ಪರಿಷ್ಕಾರ ವಿಶದತೆಗಳು ಗುಣಚಂದ್ರನ ಛಂದಸ್ಸಾರದಲ್ಲಿ ಕಾಣದಿದ್ದರೂ ಆ ಗ್ರಂಥದ ಬಳಿಕ ಗಣ್ಯವಾಗಿರುವ ಪ್ರಾಚೀನ ಕನ್ನಡ ಛಂದೋಗ್ರಂಥವೆಂದರೆ ಇದೊಂದೇ ಎಂದು ಹೇಳಬಹುದು. (ಎಸ್.ಎಸ್.ಎಂ.;ಟಿ.ವಿ.ವಿ.)

**ಗುಣನಂದಿ :** ಸು.900. ಪಂಪಪೂರ್ವಯುಗದ ಜೈನಕವಿ ಹಾಗೂ ಯತಿ. ಇವನು ಸಾಹಿತ್ಯ ವಿದ್ಯಾಪತಿಯೆಂದೂ ಪಂಡಿತನೆಂದೂ ಚಾರಿತ್ರ ಚಕ್ರೇಶ್ವರನೆಂದೂ ತರ್ಕವ್ಯಾಕರಣಾದಿ ಶಾಸ್ತ್ರನಿಪುಣನೆಂದೂ ಈತನಿಗೆ ಮುನ್ನೂರು ಜನ ಶಿಷ್ಯರಿದ್ದರೆಂದೂ ಅವರಲ್ಲಿ ದೇವೇಂದ್ರಮುನಿ ಪ್ರಖ್ಯಾತನಾದವನೆಂದೂ (ಈ ದೇವೇಂದ್ರ ಸೈದ್ಧಾಂತಿಕನೇ ಪಂಪನ ಗುರುವಾಗಿರಬೇಕು) ಶ್ರವಣಬೆಳಗೊಳದ ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಈ ಕವಿಯ ಗುಣವಿಶೇಷಗಳನ್ನು ಕುರಿತು ಕನ್ನಡದ ಹಲವಾರು ಕವಿಗಳು ಕೊಂಡಾಡಿದ್ದಾರೆ. ಭಟ್ಟಾಕಳಂಕ ಈತನನ್ನು ಭಗವಾನ್ ಗುಣನಂದಿ ಎಂದು ಕರೆದು ಗೌರವಿಸಿದ್ದಾನೆ. ಮಲ್ಲಿಕಾರ್ಜುನ ತನ್ನ ಸಂಕಲನ ಗ್ರಂಥದಲ್ಲಿ ಜನ್ನನ ದೇಸಿ ಪಂಪನ ಗುಣಂ ಗುಣನಂದಿಯ ತೊಂಡು .......... ನೆಲಸಿರ್ಪುವೀ ಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್ ಎಂದು ಗುಣನಂದಿಯ ಕಾವ್ಯಗುಣವನ್ನು ಹೊಗಳಿದ್ದಾನೆ. ಪಂಪರನ್ನರ ಜೊತೆಗೆ ಗುಣನಂದಿಯ ಹೆಸರು ಉಲ್ಲೇಖಿತವಾಗಿರುವುದರಿಂದ ಈತ ಪ್ರಸಿದ್ಧ ಕವಿಯಾಗಿರಬೇಕೆಂದು ತೋರುತ್ತದೆ. ಕೇಶಿರಾಜ ತನ್ನ ವ್ಯಾಕರಣಗ್ರಂಥದಲ್ಲಿ ಸುಮಾರ್ಗಮಿದರೊಳೆ ಲಕ್ಷ್ಯಂ ಎಂದು ಹೇಳಿದ ಪ್ರಮಾಣಪುರುಷರಲ್ಲಿ ಗುಣನಂದಿಯ ಹೆಸರೂ ಇದೆ. ಅಲ್ಲದೆ ಇದೇ ಗ್ರಂಥದ ಸಂಧಿಪ್ರಕರಣದಲ್ಲಿ ಪಿರಿಯರ್ ಸಲಿಪರ್ ಎಂದು ಆರಂಭವಾಗುವ ಒಂದು ಸೂತ್ರಕ್ಕೆ (34) ಪ್ರಯೋಗವಾಗಿ (2) 'ಚುರ್ಚಿದವೊಲ್ ಬಿಸಿಲಳುರೆ ಕಿಮುಟ್ಟಿದಲತೆಯಂತೆ ನೊಂದು ಗುಣನಂದಿ' ಎಂಬ ಸಾಲುಗಳನ್ನು ಉದಾಹರಣೆಯಾಗಿ ಕೊಟ್ಟಿದ್ದಾನೆ. ಇದು ಗುಣನಂದಿಯ ಯಾವುದೋ ಗ್ರಂಥದಿಂದ ಆರಿಸಿದ ಪದ್ಯಭಾಗವಾಗಿರಬಹುದು. ನಂಜುಂಡಕವಿ ತನ್ನ ರಾಮನಾಥಚರಿತೆಯಲ್ಲಿ ಇಂಪು ಪಡೆದ ಕವಿತಾರಸಲಹರಿಯ ಸೊಂಪಿನಿಂಪಾದಿಗಳೆರ್ದೆಗೆ ಕಂಪನವನು

ಪುಟ್ಟಿಸುವ ಗುಣನಂದಿಯು ನಾಂ ಪೊಗೞುವೆ ಬಲಗೊಂಬೆ ಎಂದು ಗುಣನಂದಿಯ ವಾಕ್‌ಪಟುತ್ವವನ್ನು ಪ್ರಶಂಸಿಸಿದ್ದಾನೆ. ಇಷ್ಟಾದರೂ ಗುಣನಂದಿಯ ಕನ್ನಡ ಗ್ರಂಥಗಳಾವುವು ಎಂಬುದು ತಿಳಿದುಬಂದಿಲ್ಲ. ಈತ ಸಂಸ್ಕೃತದಲ್ಲಿ ಪೂಜ್ಯಪಾದನ ಜೈನೇಂದ್ರವ್ಯಾಕರಣಕ್ಕೆ ಪ್ರಕ್ರಿಯಾವತಾರವೆಂಬ ವ್ಯಾಖ್ಯಾನ ಗ್ರಂಥವನ್ನು ಬರೆದಿರುವಂತೆ ವಿದ್ವಾಂಸರು ಊಹಿಸಿದ್ದಾರೆ. (ಪಿ.ವಿ.ಸಿ.)

**ಗುಣಭದ್ರ :** ಸು. 9ನೆಯ ಶತಮಾನ. ಜೈನ ಕವಿ. ಉತ್ತರಪುರಾಣ ಎಂಬ ಗ್ರಂಥದ ಕರ್ತೃ. ಆದಿಪುರಾಣಕಾರರಾದ ಜಿನಸೇನರ ಶಿಷ್ಯ; ತ್ರಿಷಷ್ಟಿ ಶಲಾಕಾಪುರುಷರ ಚರಿತ್ರೆಯನ್ನು ವಿಸ್ತಾರವಾಗಿ ವರ್ಣಿಸಬೇಕೆಂಬ ಬಯಕೆಯಿಂದ ಜಿನಸೇನರು ಮಹಾಪುರಾಣವನ್ನು ಆರಂಭಿಸಿದರು; ರಾಷ್ಟ್ರಕೂಟ ಅರಸನಾದ ನೃಪತುಂಗ (ಸು.814-78) ಇವರ ಆಶ್ರಯದಲ್ಲಿದ್ದಾಗ 42 ಪರ್ವಗಳ 15,000 ಶ್ಲೋಕಗಳನ್ನು ಇವರು ರಚಿಸಿದರೂ ಮರಣಕಾಲಕ್ಕೆ ಮೊದಲನೆಯ ತೀರ್ಥಂಕರನಾದ ಆದಿನಾಥನ ಚರಿತ್ರೆಯೇ ಇನ್ನೂ ಮುಗಿದಿರಲಿಲ್ಲ; ಅಷ್ಟು ಬೃಹತ್ತಾದ ಕಲ್ಪನೆ ಜಿನಸೇನರದು. ಗುರುಗಳು ಆರಂಭಿಸಿದ ಮಹಾಕಾರ್ಯವನ್ನು ಸಮರ್ಥವಾಗಿ ಮುಗಿಸಿದ ಮಹಾಕೀರ್ತಿ ಶಿಷ್ಯ ಗುಣಭದ್ರನದು. ಉಳಿದ 23 ತೀರ್ಥಂಕರರ ಚರಿತ್ರೆಯನ್ನೂ ಜೀವಂಧರನೇ ಮುಂತಾದವರ ವೃತ್ತಾಂತವನ್ನೂ ಶಲಾಕಾಪುರುಷರ ಜೀವನವನ್ನೂ ಸಂಕ್ಷಿಪ್ತವಾದರೂ ಸಮಗ್ರವಾಗಿ ನಿರೂಪಿಸಿ, ಮುಂದಿನ ಜೈನಪುರಾಣಕಾರರೆಲ್ಲರಿಗೂ ಏಕಮಾನ್ಯ ಆಕರಗ್ರಂಥ'ವೆನಿಸಿದ ಉತ್ತರಪುರಾಣವನ್ನು ಈತ ಕರ್ನಾಟಕದಲ್ಲಿಯೇ ಬರೆದು ಮುಗಿಸಿದ. ಮುನಿ ಸುವ್ರತನ ಚರಿತ್ರೆಯ ಅಂಗವಾಗಿ ಜೈನ ರಾಮಾಯಣದ ಕಥಾ ಭಾಗವೂ ಇಲ್ಲಿಯೇ ಬರುತ್ತದೆ. ಪ್ರಹೀಣಕಾಲದ ಅಭಿರುಚಿಯನ್ನು ಗಮನಿಸಿ, ಈತ ಅತಿವಿಸ್ತಾರಕ್ಕೆ ಹೋಗಿಲ್ಲ.

ಆದಿಪುರಾಣದ ಕಡೆಯ 4 ಪರ್ವ (ಮತ್ತು ಮೂರು ಶ್ಲೋಕಗಳು) ಮತ್ತು ಉತ್ತರಪುರಾಣದ ಸು.8000 ಶ್ಲೋಕಗಳು ಗುಣಭದ್ರನ ರಚನೆ. ಈತನಿಗೆ ಗುರುಭಕ್ತಿ ಅಪಾರ. ಕಬ್ಬಿನಂತೆ ಪೂರ್ವಾರ್ಧವು ರಸವತ್ತಾಗಿರುತ್ತದೆ ಅದರಂತೆಯೇ ಉತ್ತರಾರ್ಧವು ಆಗಿರಲಿ; ನನ್ನ ಮಾತು ಸವಿಯಾಗಿದ್ದರೆ ಅದಕ್ಕೆ ಗುರುಗಳ ಮಹಿಮೆಯೇ ಕಾರಣ ಎಂದು ಹೇಳಿಕೊಂಡಿದ್ದಾನೆ. ಉತ್ತರಪುರಾಣದಲ್ಲಿ ಕಥಾಭಾಗಕ್ಕೆ, ಘಟನಾಬಾಹುಲ್ಯಕ್ಕೆ ಪ್ರಾಧಾನ್ಯವಿದ್ದರೂ ವರ್ಣನಾಚಮತ್ಕಾರ ಕಡಿಮೆಯಾಗಿಲ್ಲ. ಜಿನಸೇನರ ಸಮಕ್ಕೆ ಬಾರದಿದ್ದರೂ ಇವನ ಕವಿತಾಗುಣದಲ್ಲಿ ಪ್ರಸನ್ನತೆ, ಮಾಧುರ್ಯಗಳಿವೆ. ಧಾರ್ಮಿಕ ಪುರಾಣವೆಂಬ ದೃಷ್ಟಿಯಿಂದ ಇದು ಪೂಜ್ಯ ಗ್ರಂಥವಾಗಿರುವುದಷ್ಟೇ ಅಲ್ಲ ಕಥಾಗಾತ್ರದ ದೃಷ್ಟಿಯಿಂದಲೂ ಗೌರವಾಸ್ಪದವಾಗಿದೆ. ಕಾವ್ಯಸೌಂದರ್ಯದ ದೃಷ್ಟಿಯಿಂದಲೂ ಆದರಣೀಯವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಗ್ರಂಥ ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಕನ್ನಡ, ತಮಿಳು, ಗುಜರಾತಿ ಮುಂತಾದ ಭಾರತೀಯ ಭಾಷೆಗಳಲ್ಲೆಲ್ಲ ಮುಂದಿನ ಜೈನಕಾವ್ಯಕಾರರಿಗೆ ಉಪಜೀವ್ಯವಾದ ಆಧಾರಗ್ರಂಥವೆಂಬ ಅದ್ವಿತೀಯ ಪುರಸ್ಕಾರಕ್ಕೆ ಪಾತ್ರವಾಗಿದೆ.

ಆತ್ಮಾನುಶಾಸನ ಈತನ ಮತ್ತೊಂದು ಧರ್ಮ ನೀತಿವೈರಾಗ್ಯಪರ ಚಿಕ್ಕ ಸಂಸ್ಕೃತ ಗ್ರಂಥ. ಇದರಲ್ಲಿ 272 ಸಂಸ್ಕೃತದ ವಿವಿಧ ವೃತ್ತದಲ್ಲಿಯ ಪದ್ಯಗಳಿವೆ. ಇದರ ಮೇಲೆ ಪ್ರಭಾಚಂದ್ರನ ಸಂಸ್ಕೃತ ಟೀಕೆ ಉಪಲಬ್ಧವಿದೆ. ಇದು ಹಲವು ಭಾಷೆಗಳಲ್ಲಿ ಅನುವಾದಿತವಾಗಿದೆ.

ಉತ್ತರಪುರಾಣದ ಪ್ರಶಸ್ತಿಯಲ್ಲಿ ಶಕ ವರ್ಷ 820ರಲ್ಲಿ ಸಮಾಪ್ತವಾದ ಉಲ್ಲೇಖವಿದೆ. ಮುಂದೆ ರಾಷ್ಟ್ರಕೂಟ ಅರಸ ಅಕಾಲವರ್ಷ, ಬಂಕಾಪುರದ ಅವನ ಸಾಮಂತ ಲೋಕಾದಿತ್ಯರ ಪ್ರಶಂಸೆಯಿದೆ. ಈ ಕಾಲನಿರ್ದೇಶನ ಪುರಾಣರಚನಾ ಕಾಲಕ್ಕೆ ಅನ್ವಯಿಸುವುದೋ ಇಲ್ಲವೆ ಲಿಪೀಕರಣದ ಸಮಾಪ್ತಿಕಾಲಕ್ಕೆ ಅನ್ವಯಿಸುವುದೋ ಸ್ಪಷ್ಟವಿಲ್ಲ. *

**ಗುಣವರ್ಮ I :** ಸು.900. ಜೈನಕವಿ. ಹರಿವಂಶ ಮತ್ತು ಶೂದ್ರಕ ಎಂಬ ಕಾವ್ಯಗಳ ಕರ್ತೃ. ಮಹೇಂದ್ರಾಂತಕ, ಗಂಗಚಕ್ರಾಯುಧಾಂಕ, ಗಂಗರರ್ಜುನ, ಕಾಮದ ಮೊದಲಾದ ಬಿರುದುಗಳುಳ್ಳ ಗಂಗರಾಜ ಎಱೆಯಪ್ಪ (886-920) ಈತನ ಆಶ್ರಯದಾತನಾಗಿದ್ದಂತೆ ತಿಳಿದುಬರುತ್ತದೆ. ಎರಡನೆಯ ನಾಗವರ್ಮ (ಸು.1042), ನಯಸೇನ, ರುದ್ರಭಟ್ಟ, ಪಾರ್ಶ್ವಪಂಡಿತ, 2ನೆಯ ಗುಣವರ್ಮ ಮೊದಲಾದ ಕವಿಗಳು ಇವನನ್ನು ಸ್ಮರಿಸಿದ್ದಾರೆ. ಪಾರ್ಶ್ವಪಂಡಿತನ 'ಗುಣವರ್ಮಂ ಸತ್ಕವಿತಾಗುಣಮುಂ ಭವ್ಯತ್ವಗುಣಮುಮಾತ್ಮ ಯಶೋರಕ್ಷಣಮೆನೆ ಮೆಱೆದಂ ಪೆಸರಂ ಪ್ರಣೂತಮನೆ ಪೇೞ್ದು ನೇಮಿನಾಥಾನ್ವಯಮಂ' ಎಂಬ ಪದ್ಯದಿಂದ ಈತ ನೇಮಿನಾಥಪುರಾಣವನ್ನು (ಹರಿವಂಶ) ಬರೆದಂತೆ ತಿಳಿದುಬರುತ್ತದೆ. ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಈಂದ ಪುಲಿಯಾವೊಲಿರ್ದಳ್ ಎಂಬ ಗುಣವರ್ಮನ ಹರಿವಂಶಪ್ರಯೋಗಂ ಎಂಬ ಉಲ್ಲೇಖವಿರುವುದರಿಂದ (ಸೂತ್ರ 128) ಈ ಮಾತು ಮೇಲಿನ ಹೇಳಿಕೆಗೆ ಪೋಷಕವಾಗಿದೆ. 2ನೆಯ ನಾಗವರ್ಮ ತನ್ನ ಭಾಷಾಭೂಷಣದಲ್ಲಿ

ಎನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನೊತ್ತಿ ಕೀಸುಗಂ

ಎಂಬ ಪದ್ಯವನ್ನು ಉದಾಹರಿಸಿ 'ತಥಾ ಗುಣವರ್ಮ ಕವೇರ್ಭುವನೈಕವೀರಸ್ಯ ಪ್ರಯೋಗ' ಎಂದು ಹೇಳಿದ್ದಾನೆ. ಈ ಪದ್ಯ ಗುಣವರ್ಮನ ಯಾವ ಗ್ರಂಥದಿಂದ ಉದ್ಧೃತವಾಗಿದೆಯೋ ತಿಳಿಯದು. ನಾಗವರ್ಮ ಹೇಳುವುದನ್ನು ನೋಡಿದರೆ ಗುಣವರ್ಮನಿಗೆ ಭುವನೈಕವೀರ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಅಲ್ಲದೆ ನಾಗವರ್ಮ ತನ್ನ ಗ್ರಂಥದಲ್ಲಿ ಇನ್ನೊಂದೆಡೆ ಅಧ್ವನ್ ಶಬ್ದಕ್ಕೆ ಪ್ರಯೋಗ ಹೇಳುವಾಗ ಗುಣವರ್ಮನ ಹೆಸರನ್ನು ಉಲ್ಲೇಖಿಸಿದ್ದಾನೆ. ಇದರಿಂದ ಈತ ಲಕ್ಷಣಗ್ರಂಥ'ಕರ್ತೃವೂ ಆಗಿದ್ದಂತೆ ತೋರುತ್ತದೆ. ಇಷ್ಟಾದರೂ ಇದುವರೆವಿಗೂ ಇವನ ಯಾವುದೇ ಕೃತಿ ದೊರೆತಿಲ್ಲ. ಆದರೆ ಅಭಿನವವಾದಿವಿದ್ಯಾನಂದನ (ಸು.1550) ಸಂಕಲನಗ್ರಂಥ'ವಾದ ಕಾವ್ಯಸಾರದಲ್ಲಿ ಗುಣವರ್ಮನ ಶೂದ್ರಕದಿಂದ ಆಯ್ದುವೆಂದು ಹೇಳುವ ಪದ್ಯಗಳೂ ಹರಿವಂಶದ ಒಂದು ಪದ್ಯವೂ ಇವೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ (ಸು.1250) ಗ್ರಂಥದಲ್ಲೂ ಕೆಲವು ಪದ್ಯಗಳು ಸಂಕಲನಗೊಂಡಿವೆ. ಈ ಪದ್ಯಗಳಲ್ಲಿ ಸಂಸ್ಕೃತ ಪದಗಳು ಹೆಚ್ಚಾಗಿವೆ. ಅಲ್ಲಲ್ಲಿ ತಿರುಳ್ಗನ್ನಡ ನುಡಿಗಳೂ ಬೆರೆತಿವೆ. ಸಮುದ್ರ, ಪುರ, ನಾಯಕನ ಜನನ, ಸೂರ್ಯ, ಚಂದ್ರ, ಮಾಗಿ, ಕಾನನ, ಬೇಟೆ, ಬೇಟ, ಸ್ತ್ರೀಸೌಂದರ್ಯ, ಸಂಭೋಗ, ವೇಶ್ಯಾವಾಟಿಕೆ, ಯುದ್ಧಯಜ್ಞ, ಯುದ್ಧವಿಜಯ ಮೊದಲಾದ ವರ್ಣನೆಗಳು ಪ್ರೌಢವಾಗಿ ನಿರೂಪಿತವಾಗಿವೆ. ಕೆಲವು ಪದ್ಯಗಳಲ್ಲಿ ಕವಿಯ ಪ್ರತಿಭೆ, ಕಲ್ಪನಾಶಕ್ತಿ ಮಿಂಚಿರುವುದು ಕಂಡುಬರುತ್ತದೆ. ಬೆಳಗಪ್ಪ ಜಾವದಲ್ಲಿ ಚಳಿ ಹತ್ತಲು ಅದನ್ನು ತಡೆಯಲಾರದೆ ಭೂವನಿತೆ ತೊಟ್ಟ ಹೊಸ ಕುಪ್ಪಸದ ಮೇಲಿನ ಸೀಮುರ್ತಿನಂತೆ ನೆಲದ ಮೇಲಿನ ಹನಿಗಳು ಇದ್ದುವು ಎಂಬ ಒಂದು ವರ್ಣನೆ ಮನೋಹರವಾಗಿದೆ. ಪದ್ಯಗಳಲ್ಲದೆ ಶೂದ್ರಕ ಕಾವ್ಯಭಾಗದಿಂದ ಆಯ್ದ ಒಂದು ಗದ್ಯಭಾಗವೂ ಕಾವ್ಯಸಾರದಲ್ಲಿ ದೊರೆತಿದೆ. ಇದರಿಂದ ಗುಣವರ್ಮನ ಕೃತಿಗಳು ಚಂಪೂ ಕಾವ್ಯಗಳಾಗಿದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕೆಲವು ಈ ಪದ್ಯಗಳಲ್ಲಿ ಪರೋಕ್ಷವಾಗಿ ಗಂಗರಾಜ ಎರೆಯಪ್ಪನನ್ನು ಹೊಗಳಿರುವುದನ್ನು ನೋಡಿದರೆ ಶೂದ್ರಕಕಾವ್ಯ ಈ ರಾಜನನ್ನು ಕುರಿತದ್ದಾಗಿರಬೇಕೆಂದು ಊಹಿಸಲು ಅವಕಾಶವಿದೆ. ಇದು ನ್ಯಾಯವಾಗಿದ್ದಲ್ಲಿ ಪಂಪರನ್ನರಿಗೆ, ಲೌಕಿಕ ಮತ್ತ ಆಗಮಿಕ (ಧಾರ್ಮಿಕ) ಕಾವ್ಯಸಂಪ್ರದಾಯಕ್ಕೆ ಗುಣವರ್ಮನೇ ಮಾರ್ಗದರ್ಶಿಯಾದನೆಂದು ಹೇಳಬಹುದು. ಇವನ ಕಾವ್ಯಗಳು ದೊರಕುವ ವರೆವಿಗೂ ಇದಮಿತ್ಥಂ ಎಂದು ಏನನ್ನೂ ಹೇಳುವಂತಿಲ್ಲ. ಈಗ ದೊರೆತಿರುವಷ್ಟು ಸಾಮಗ್ರಿಯಿಂದ ಗುಣವರ್ಮ ಪಂಪಪೂರ್ವಯುಗದ ಪ್ರೌಢಕವಿ ಎಂದು ಮಾತ್ರ ಹೇಳಬಹುದು. (ಎಚ್.ಕೆ.ಜೆ.,ಕೆ.ವಿ.)

**ಗುಣವರ್ಮ II :** ಸು.1215. ಜೈನಕವಿ. ಪುಷ್ಪದಂತ ಪುರಾಣ ಮತ್ತು ಚಂದ್ರನಾಥಾಷ್ಟಕಗಳ ಕರ್ತೃ.

ಕವಿ ತನ್ನ ಕೃತಿರಚನೆಯ ಕಾಲದ ಬಗೆಗೆ ತನ್ನ ಬರೆಹಗಳಲ್ಲೆಲ್ಲೂ ನೇರವಾದ ನಿರ್ದೇಶನವನ್ನು ಮಾಡಿಲ್ಲ. ಆದರೆ ಈತ 13ನೆಯ ಶತಮಾನದ ಪೂರ್ವಭಾಗದಲ್ಲಿ ಜೀವಿಸಿದ್ದನೆಂಬುದಕ್ಕೆ ಆಧಾರಗಳುಂಟು. 13ನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿದ್ದ ಜನ್ನನನ್ನು ಈತ ಸ್ಮರಿಸಿರುವುದರಿಂದಲೂ 13ನೆಯ ಶತಮಾನದ ಮಧ್ಯಭಾಗದಲ್ಲಿದ್ದ

ಮಲ್ಲಿಕಾರ್ಜುನ ತನ್ನ ಸೂಕ್ತಿಸುಧಾರ್ಣವದಲ್ಲಿ ಈತನ ಪದ್ಯಗಳನ್ನು ಉದ್ಧರಿಸಿರುವುದರಿಂದಲೂ ಈತನ ಕಾಲ 13ನೆಯ ಶತಮಾನದ ಪೂರ್ವಭಾಗವೆಂದು ನಿಸ್ಸಂದೇಹವಾಗಿ ಹೇಳಬಹುದು. ಈತ ತನ್ನ ಪುಷ್ಪದಂತ ಪುರಾಣದಲ್ಲಿ ಆದರಪೂರ್ವಕವಾಗಿ ಹೆಸರಿಸಿದ ಗುರು ಮುನಿಚಂದ್ರ ಹಾಗೂ ಪೋಷಕ ಶಾಂತಿವರ್ಮ ಹೆಸರುಗಳು 1229ರಲ್ಲಿ ರಚಿತವಾದ ಸೌಂದತ್ತಿಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ಸಂಗತಿಯೂ ಮೇಲೆ ಸೂಚಿಸಿದ ಕಾಲನಿರ್ಣಯಕ್ಕೆ ಪುಷ್ಟಿ ಕೊಡುತ್ತದೆ.

ಪುಷ್ಪದಂತ ಪುರಾಣ ಜೈನ ಸಂಪ್ರದಾಯದಂತೆ ರಚಿತವಾದ ಪುರಾಣಕಾವ್ಯ. ಚಂಪೂಕೃತಿ. ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಒಂಬತ್ತನೆಯವನಾದ ಪುಷ್ಪದಂತನ ಚರಿತ್ರೆ ಈ ಪುರಾಣಕಾವ್ಯದ ಕಥಾವಸ್ತು. ಈ ಕಥಾವಸ್ತು ಗಾತ್ರದಲ್ಲಿ ಕಿರಿದು. ಆದರೆ ಕಥಾನಾಯಕ ಉನ್ನತನೆಂಬ ಕಾರಣದಿಂದ ಕವಿ ಅದನ್ನು ವಿಸ್ತರಿಸಿ 14 ಆಶ್ವಾಸಗಳಾಗಿ ವಿಸ್ತರಿಸಿದ್ದಾನೆ. ಪೋಷಕನೂ ನಾಡಪ್ರಭುವೂ ಆಗಿದ್ದ ಶಾಂತಿವರ್ಮನಿಗೆ ಅದನ್ನು ವಿನಯಪೂರ್ವಕ ಸಮರ್ಪಿಸಿದ್ದಾನೆ. ಗ್ರಂಥದ ಆರಂಭದಲ್ಲಿ ಕುಂದಕುಂದಚಾರ್ಯನಿಂದ ಹಿಡಿದು ಸ್ವಗುರುವಾದ ಮುನಿಚಂದ್ರನ ವರೆಗಿನ ತನ್ನ ಗುರುಪರಂಪರೆಯನ್ನು ಅರುಹಿದ್ದಾನೆ. ಪೂರ್ವದಲ್ಲಿ ಕೃತಿರಚನೆ ಮಾಡಿದಂತೆ ತಿಳಿದುಬಂದ ಸಮಂತಭದ್ರ, ಪೂಜ್ಯಪಾದ, ಕವಿಪರಮೇಷ್ಠಿಗಳ ಹೆಸರುಗಳು ಈ ಗುರುಪರಂಪರೆಯಲ್ಲಿ ಸಮಾವೇಶವಾಗಿರುವುದು ಗಮನಾರ್ಹವಾಗಿದೆ. ಪೂರ್ವದ ಕವಿಗಳಲ್ಲಿ ಪಂಪ, ಪೊನ್ನ,ರನ್ನ, ನಾಗವರ್ಮ, ನಾಗಚಂದ್ರ, ನೇಮಿಚಂದ್ರರನ್ನು ಮಾತ್ರವಲ್ಲದೆ ಹೆಚ್ಚು ಕಡಿಮೆ ಸಮಕಾಲೀನನಾಗಿರ ಬಹುದಾದ ಜನ್ನಕವಿಯನ್ನೂ ಸ್ಮರಿಸಿದ್ದಾನೆ.

ಗುಣವರ್ಮನ ಕಾವ್ಯಬಂಧ ಪ್ರೌಢವಾಗಿದೆ. ಪ್ರಾಸಬದ್ಧವಾಗಿದೆ. ಭಾಷಾಸರಣಿ ತಿಳಿಗನ್ನಡವನ್ನು ಹಿತವಾಗಿ ಒಳಗೊಂಡಿದೆ. ಮೃದುಪದಗತಿಯಲ್ಲಿ ಸುರುಚಿರ ಅರ್ಥವೂ ಅಲ್ಲಲ್ಲಿ ಸೂಸಿದೆ. ಪ್ರಕೃತಿ ವರ್ಣನೆ ಋತುವರ್ಣನೆಗಳು ಮನೋಹರವಾಗಿವೆ. 13ನೆಯ ಶತಮಾನದ ಹೊತ್ತಿಗಾಗಲೆ ಇಳಿಮುಖವಾಗಿದ್ದ ಚಂಪೂ ಶೈಲಿಯನ್ನು ಮತ್ತೆ ಸಮರ್ಥವಾಗಿ ಕೈಗೆತ್ತಿಕೊಂಡ ಕೀರ್ತಿ ಗುಣವರ್ಮನಿಗೆ ಸಲ್ಲುತ್ತದೆ.

ಚಂದ್ರನಾಥಾಷ್ಟಕದಲ್ಲಿ ಮಹಾಸ್ರಗ್ಧರಾವೃತ್ತದಲ್ಲಿ ರಚಿತವಾದ ಸ್ತುತಿಪದ್ಯಗಳಿವೆ. ಕೊಲ್ಹಾಪುರದ ತ್ರಿಭುವನತಿಲಕ ಜಿನಾಲಯದ ಚಂದ್ರನಾಥನಲ್ಲಿ ಕವಿ ತಳೆದ ಭಕ್ತಿ ಅವುಗಳಲ್ಲಿ ಅಭಿವ್ಯಕ್ತವಾಗಿದೆ. ಚಂದ್ರನಾಥಾಷ್ಟಕದ ಪ್ರತಿ ಪದ್ಯದ ಕೊನೆಯಲ್ಲೂ ಚಂದ್ರನಾಥನ ಹೆಸರು ಬಂದಿದೆಯಲ್ಲದೆ ಎಂಟು ಪದ್ಯಗಳ ಕೊನೆಯಲ್ಲಿ ಬರುವ ಒಂಬತ್ತನೆಯ ಪದ್ಯ ಮಾಟ್ಕೆ, ಭವ್ಯರ್ಗೆ ಸೌಖ್ಯಾವಹಮುಂ ಕೊಲ್ಹಾಪುರಶ್ರೀ ತ್ರಿಭುವನಾಲಂಕೃತಂ ಚಂದ್ರನಾಥಂ ಎಂದು ಕೊನೆಗೊಳ್ಳುತ್ತದೆ. (ಎಚ್.ಕೆ.ಜೆ.)

**ಗುತ್ತವಂಶ :** 11-13ನೆಯ ಶತಮಾನಗಳಲ್ಲಿ ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳನ್ನು ಆಳುತ್ತಿದ್ದ ಒಂದು ಸಾಮಂತ ರಾಜಮನೆತನ. ಈ ವಂಶದವರ ರಾಜಧಾನಿ ಗುತ್ತವೊಳಲು (ಧಾರವಾಡ ಜಿಲ್ಲೆ ಹಾವೇರಿ ತಾಲ್ಲೂಕಿನ ಗುತ್ತಲ್).

ಗುತ್ತರ ಉಗಮ ಅಸ್ಪಷ್ಟ. ಈ ವಂಶದವರಿಗೆ ಚಂದ್ರಗುಪ್ತವಂಶೋದ್ಭವ, ಪಾಟಲೀಪುರವರಾಧೀಶ್ವರ, ಗುಪ್ತವಂಶ ತ್ರಿನೇತ್ರ, ಉಜ್ಜಯಿನೀಪುರವರಾಧೀಶ್ವರ, ವಿಕ್ರಮಾದಿತ್ಯವಂಶೋದ್ಭವ ಮುಂತಾದ ಬಿರುದುಗಳಿರುವುದರಿಂದ ಗುತ್ತ ಎನ್ನುವ ಪದ ಗುಪ್ತ ಎಂಬ ಸಂಸ್ಕೃತ ಪದದಿಂದ ಬಂದಿದ್ದು. ಇವರಿಗೂ ಮಗಧದ ಗುಪ್ತರಿಗೂ ಸಂಬಂಧವಿರಬೇಕೆಂದು ಕೆಲವರ ಮತ. ಮತ್ತೆ ಕೆಲವರ ಪ್ರಕಾರ ಇವರು ಮೌರ್ಯ ದೊರೆ ಚಂದ್ರಗುಪ್ತನ ವಂಶದವರು. ಮಗಧದ ಗುಪ್ತರು ಕಣ್ಮರೆಯಾದ ಹಲವು ಶತಮಾನಗಳ ಅನಂತರ ಈ ಗುತ್ತರು ಇತಿಹಾಸದಲ್ಲಿ ಕಾಣಿಸಿಕೊಳ್ಳುತ್ತಾರಾದ್ದರಿಂದ ಈ ಎರಡು ವಂಶಗಳಿಗೂ ಸಂಬಂಧ ಕಲ್ಪಿಸುವುದು ಕಷ್ಟ. ಆದುದರಿಂದ ಈ ಗುತ್ತರು ಕರ್ನಾಟಕದವರೇ ಆಗಿದ್ದು ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳುವುದ ಕ್ಕೋಸ್ಕರ ಭವ್ಯಪರಂಪರೆಯನ್ನು ಹೊಂದಿದ್ದ ಗುಪ್ತರೊಡನೆ ಸಂಬಂಧವನ್ನು ಕಲ್ಪಿಸಿಕೊಂಡಿರಬಹುದು.

ಮಹಾಗುಪ್ತ ಅಥವಾ ಮಾಗುತ್ತ (ಸು.11ನೆಯ ಶತಮಾನ) ಗುತ್ತವಂಶದ ಮೊದಲನೆಯ ದೊರೆ. ಇವನು ಚಾಳುಕ್ಯರ ಸಾಮಂತ ನಾಗಿದಿರಬೇಕು. ಅನಂತರ ಪಟ್ಟವೇರಿದ ಇವನ ಮಗ ಮೊದಲನೆಯ ಗುತ್ತ (ಸು.1090-1108) ಹಾನಗಲ್ಲಿನ ಕದಂಬರನ್ನು ಸೋಲಿಸಿ ಅವರ ರಾಜ್ಯದ ಕೆಲವು ಭಾಗಗಳನ್ನು ವಶಪಡಿಸಿಕೊಂಡ. ಇವನ ಮಗನಾದ ಮಲ್ಲಿದೇವ (ಸು.1108-39) ಬನವಾಸಿಯ ರಾಜ್ಯಪಾಲ ಗೋವಿಂದರಸನ ಆಶ್ರಯದಲ್ಲಿ ಆಳುತ್ತಿದ್ದ. ಇವನಿಗೆ ಜೋಯಿದೇವ I ಎಂಬ ತಮ್ಮನಿದ್ದ. ಇವನ ತಂಗಿ ಬಾಚಲದೇವಿ ನೂಱುಂಬಾಡದ ಕದಂಬ ಬೀರದೇವನನ್ನು ಲಗ್ನವಾಗಿದ್ದಳು. ಮಲ್ಲಿದೇವನ ಅನಂತರ ಬಂದ ಮೊದಲನೆಯ ವಿಕ್ರಮಾದಿತ್ಯನ (ಸು.1139-70) ಆಳಿಕೆಯ ಉತ್ತರಾರ್ಧದಲ್ಲಿ ಚಾಳುಕ್ಯರ ಪ್ರಾಬಲ್ಯ ಕುಸಿದುದರಿಂದ, ಈತ ಕಳಚುರ್ಯರ ಸಾಮಂತನಾಗಿರಬೇಕು. ಇವನು ಹೊಯ್ಸಳರಿಗೆ ಸೇರಿದ್ದ ಬನವಾಸಿ ಪ್ರಾಂತ್ಯದ ಕೆಲವು ಭಾಗಗಳನ್ನು ತನ್ನದನ್ನಾಗಿ ಮಾಡಿಕೊಂಡ. ಇವನ ಮರಣಾನಂತರ ಇವನ ಮಗ ಎರಡನೆಯ ಜೋಯಿದೇವ (1170-83) ಕಳಚುರ್ಯರ ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದು, ನಾಗರಖಂಡ ನಾಡಿನ ಕೆಲವು ಭಾಗಗಳನ್ನೂ ತನ್ನ ಆಧಿಪತ್ಯಕ್ಕೆ ಸೇರಿಸಿಕೊಂಡ. ಇಷ್ಟರಲ್ಲಿಯೇ ಕಳಚುರ್ಯರ ಪ್ರಾಬಲ್ಯ ಕಡಿಮೆಯಾಗಿ ಚಾಳುಕ್ಯರು ಮತ್ತೆ ಶಕ್ತಿಯುತರಾದುದನ್ನು ಗಮನಿಸಿದ ಜೋಯಿದೇವ ಮತ್ತೆ ಚಾಳುಕ್ಯರ ಸಾಮಂತನಾದ. ಇವನ ಅನಂತರ ಪಟ್ಟವೇರಿದ ಇವನ ಸಹೋದರ ಎರಡನೆಯ ಗುತ್ತನ ಮಗನಾದ ಎರಡನೆಯ ವಿಕ್ರಮಾದಿತ್ಯ (1183-1233) ಗುತ್ತವಂಶದ ಪ್ರಮುಖ ದೊರೆ. ಇವನ ಕಾಲದಲ್ಲಿ ಚಾಳುಕ್ಯರ ಅವನತಿಯಾಗಿದ್ದು, ಹೊಯ್ಸಳರೂ ಸೇವುಣರೂ ಪರಸ್ಪರ ಕಲಹದಲ್ಲಿ ನಿರತರಾಗಿದ್ದುದರಿಂದ ವಿಕ್ರಮಾದಿತ್ಯ ಸ್ವತಂತ್ರನಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದ. ವಿಕ್ರಮಾದಿತ್ಯನಿಗೆ ಪಟ್ಟಮಹಾದೇವಿ ಎಂಬ ರಾಣಿಯಿಂದ ತುಳುವಲದೇವಿ ಎಂಬ ಮಗಳೂ ಜೋಯಿದೇವ III ಮತ್ತು ವಿಕ್ರಮಾದಿತ್ಯ III ಎಂಬ ಗಂಡು ಮಕ್ಕಳೂ ಇದ್ದರು. ಪಾಂಡ್ಯವಂಶದ ಸೋವಲದೇವಿ ಇವನ ಇನ್ನೊಬ್ಬ ಪತ್ನಿ. ತಂದೆಯ ಮರಣಾನಂತರ ಪಟ್ಟಕ್ಕೆ ಬಂದ ಮೂರನೆಯ ಜೋಯಿದೇವ (ಸು.1238-48) ಸೇವುಣ ಸಿಂಘಣನ ಮಂತ್ರಿಯಾದ ಬೀಚನಿಂದ ಪರಾಜಿತನಾಗಿ ಸಾಮಂತ ಸ್ಥಿತಿಗಿಳಿದು, ಗುತ್ತವೊಳಲಿನಲ್ಲಿ ಸೇವುಣರ ಪ್ರತಿನಿಧಿಯಾಗಿ ಬಂದ ದಂಡನಾಯಕ ಚಿಕ್ಕದೇವನಿಗೆ ವಿಧೇಯನಾಗಿ ಆಳಿದ. ಇವನ ಅನಂತರ ಇವನ ತಮ್ಮನಾದ ಮೂರನೆಯ ವಿಕ್ರಮಾದಿತ್ಯ (ಸು.1248-59) ಸೇವುಣ ಕೃಷ್ಣನ ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದ. ಇವನಿಗೆ ಮೈಳಲದೇವಿ ಎಂಬ ರಾಣಿಯೂ ವಿಕ್ರಮಾದಿತ್ಯ IV, ಗುತ್ತದೇವ III, ಹರಿಯದೇವ ಮತ್ತು ಜೋಯಿದೇವ IV ಎಂಬ ಮಕ್ಕಳೂ ಇದ್ದರು. ಅನಂತರ ಮೂರನೆಯ ಗುತ್ತದೇವ (1250-80) ರಾಜನಾದ. ಸ್ವಲ್ಪ ಕಾಲದಲ್ಲಿಯೆ ಸೇವುಣರ ಮೇಲೆ ದಂಗೆಯೆದ್ದರೂ ಸೇವುಣ ಕೃಷ್ಣನಿಂದ ಅಡಗಿಸಲ್ಪಟ್ಟು ಸಾಮಂತನಾಗಿಯೇ ಮುಂದುವರಿಯಬೇಕಾಯಿತು. ಇವನ ಕಾಲದಲ್ಲಿ ಸಾಳುವ ತಿಕ್ಕಮನೆಂಬ ಶ್ರೇಷ್ಠ ಸೇವುಣ ಸೇನಾಧಿಪತಿಯ ನೇತೃತ್ವದಲ್ಲಿ ಸೇವುಣ ಸೈನ್ಯ ಹೊಯ್ಸಳರ ಮೇಲೆ ಯುದ್ಧ ಮಾಡುವ ಮಾರ್ಗದಲ್ಲಿ ಗುತ್ತರ ರಾಜಧಾನಿ ಗುತ್ತವೊಳಲಿನಲ್ಲಿ ತಂಗಿದ್ದಾಗ ಈತ ಸೇವುಣ ಸೈನ್ಯಕ್ಕೆ ಬೇಕಾದ ಅನುಕೂಲಗಳನ್ನೆಲ್ಲ ಮಾಡಿಕೊಟ್ಟ. ಮೂರನೆಯ ಗುತ್ತನ ಅನಂತರ, ಇವನ ತಮ್ಮ ಜೋಯಿದೇವನ ಮಗನಾದ ಐದನೆಯ ವಿಕ್ರಮಾದಿತ್ಯ ಸೇವುಣ ರಾಮಚಂದ್ರನ ಆಶ್ರಯದಲ್ಲಿ ಆಳುತ್ತಿದ್ದ. ಇವನ ರಾಣಿ ಪದ್ಮಲದೇವಿ ಶಿವದೇವಾಲಯವೊಂದಕ್ಕೆ ದಾನಗಳನ್ನು ಕೊಟ್ಟ ವಿಚಾರವಿರುವ 1283ರ ಒಂದು ಶಾಸನವೇ ಗುತ್ತರ ಬಗ್ಗೆ ಸಿಗುವ ಕೊನೆಯ ಉಲ್ಲೇಖ. ಸೇವುಣರಾಜ್ಯ ಮಹಮ್ಮದೀಯರ ಕೈಗೆ ಸಿಕ್ಕಿ ನಾಶವಾದ ಅನಂತರ ಗುತ್ತರೂ ನಾಶವಾಗಿರಬೇಕೆಂದು ತೋರುತ್ತದೆ.

ಗುತ್ತರ ವಂಶಾವಳಿ :

- ಮಾಗುತ್ತ
  - ಗುತ್ತ I (ಸು.1090 - 1108)
    - ಮಲ್ಲಿದೇವ (ಸು.1108 - 39)
      - ವಿಕ್ರಮಾದಿತ್ಯ I (ಸು.1139-70 : ಪತ್ನಿ, ಸರಿಯಾದೇವಿ)
        - ಜೋಯಿದೇವ II (ಸು.1170-83)
        - ಗುತ್ತ II (ಪತ್ನಿ, ಪದ್ಮಲದೇವಿ)
          - ವಿಕ್ರಮಾದಿತ್ಯ II (1183-1233) :ಪತ್ನಿಯರು, ಪಟ್ಟಮಹಾದೇವಿ ಮತ್ತು ಪಾಂಡ್ಯವಂಶದ ಸೋವಲದೇವಿ)
            - ತುಳುವಲದೇವಿ (ಗಂಡ, ಸಿಂಗಿದೇವನ ಮಗ ಬಲ್ಲಾಳ)
            - ಜೋಯಿದೇವ III (ಸು.1238-48)
            - ವಿಕ್ರಮಾದಿತ್ಯ III (ಸು. 1248-59 : ಪತ್ನಿ, ಮೈಳಲದೇವಿ)
              - ವಿಕ್ರಮಾದಿತ್ಯ
              - ಗುತ್ತ III (ಸು.1259-80)
              - ಹರಿಯದೇವ
              - ಜೋಯಿದೇವ IV
                - ವಿಕ್ರಮಾದಿತ್ಯ V (1283: ಪತ್ನಿ, ಪದ್ಮಲದೇವಿ)
          - ವಿಜಯಮಹಾದೇವಿ (ಗಂಡ, ಸಾಂತಳಿಗೆ ಮಂಡಳದ ಸಿಂಗಿದೇವ)
        - ಬಾಚಲದೇವಿ (ಗಂಡ, ಲಳಿಯಾದೇವಿಯ ಮಗ ಪಾಂಡ್ಯ)
      - ಲಳಿಯಾದೇವಿ (ಗಂಡ, ನೂಱುಂಬಾಡದ ಕದಂಬ ಕೇತರಸ II)
    - ಜೋಯಿದೇವ I (1124)
    - ಬಾಚಲದೇವಿ (ಗಂಡ, ನೂಱುಂಬಾಡದ ಕದಂಬ ಬೀರದೇವ)

(ಎ.ವಿ.ಎನ್.)

**ಗುಪ್ತ,ಬಿ.ಎನ್.:** ಕರ್ನಾಟಕದ ಹಿರಿಯ ಪತ್ರಿಕೋದ್ಯಮಿ. ಬೈಸಾನಿ ನರಸಿಂಹೇಶ್ವರ ಗುಪ್ತ ಇವರ ಪೂರ್ಣಹೆಸರು. ಆಂಧ್ರಪ್ರದೇಶದ ಚಿತ್ತೂರಿನಲ್ಲಿ 1895 ಡಿಸೆಂಬರ್ 16ರಂದು ಜನಿಸಿದರು. ಮದರಾಸಿನಲ್ಲಿ ವಿದ್ಯಾಭ್ಯಾಸ ಮಾಡಿ ಕರ್ನಾಟಕದಲ್ಲಿ ಅನೇಕ ಕನ್ನಡ ಪತ್ರಿಕೆಗಳ ಹುಟ್ಟು ಬೆಳೆವಣಿಗೆಗಳಿಗೆ ಕಾರಣರಾದ ಇವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನೂ ಸಾಹಸಗಳನ್ನೂ ಮೆರೆದರು. ಇವರು ಮದರಾಸಿನಲ್ಲಿ ಆನಿಬೆಸೆಂಟರ ಪತ್ರಿಕೋದ್ಯಮ ಕಾಲೇಜಿನಲ್ಲಿ ಶಿಕ್ಷಣ ಪಡೆದು ಮದರಾಸಿನಲ್ಲೇ ನ್ಯೂಇಂಡಿಯ (ದಿನಪತ್ರಿಕೆ) ಮತ್ತು ಕಾಮನ್ ವೀಲ್ (ವಾರಪತ್ರಿಕೆ) ಈ ಪತ್ರಿಕೆಗಳ ಸಂಪಾದಕೀಯ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದರು. ಅನಂತರ ಬೆಂಗಳೂರಿನಲ್ಲಿ ನೆಲೆಸಿದರು. ಆಗಿನ ಮೈಸೂರು ಸಂಸ್ಥಾನದ ರಾಜಕೀಯ ಕ್ಷೇತ್ರಕ್ಕೆ ದುಮುಕಿ ಪ್ರಜಾಪಕ್ಷ ಸ್ಥಾಪನೆಗೆ ದುಡಿದರು. ಮೈಸೂರಿನ ಪ್ರಥಮ ರಾಜಕೀಯ ಪಕ್ಷವೂ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಪ್ರಥಮವಾಗಿ



ಮಂಡಿಸಿದ್ದೂ ಆದ ಪ್ರಜಾಪಕ್ಷವನ್ನು ಬೆಳೆಸುವುದಕ್ಕಾಗಿ ಪ್ರಜಾಮತ ವಾರಪತ್ರಿಕೆಯನ್ನು ಪ್ರಕಟಿಸಲು ಗುಪ್ತ ನಿರ್ಧರಿಸಿದರು. ಆದರೆ ಮಿರ್ಜಾ ಇಸ್ಮಾಯಿಲ್ ದಿವಾನರಾಗಿದ್ದ ಮೈಸೂರು ಸರ್ಕಾರ ಅದಕ್ಕೆ ಅನುಮತಿ ಕೊಡಲಿಲ್ಲ. ಗುಪ್ತ ಅವರು ಮದರಾಸಿಗೆ ಹೋಗಿ 1929ರಲ್ಲಿ ಪ್ರಜಾಮತ ಪ್ರಾರಂಭಿಸಿದರಲ್ಲದೆ ಎರಡು ವರ್ಷಗಳ ಅನಂತರ (1931) ಜನವಾಣಿ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಜನವಾಣಿಯಲ್ಲಿ ಪ್ರಕಟವಾದ ಒಂದು ಲೇಖನದಿಂದಾಗಿ ಆ ಪತ್ರಿಕೆ ನಿಂತುಹೋಯಿತು. ಅಷ್ಟರಲ್ಲಿ ಮಿರ್ಜಾ ಅವರು ಆ ಪತ್ರಿಕೆಗಳನ್ನು ಬೆಂಗಳೂರಿನಲ್ಲಿ ಪ್ರಕಟಿಸಲು ಅನುಮತಿ ನೀಡಿದ್ದರಿಂದ ಅವೆರಡೂ ಬೆಂಗಳೂರಿನಿಂದ ಪ್ರಕಟವಾಗಲಾರಂಭಿಸಿದುವು (1933). ಬೆಂಗಳೂರಿಗೆ ಹಿಂದಿರುಗಿದ ಕೂಡಲೆ ಇವರು ಮೈಸೂರು ಕಾಂಗ್ರೆಸ್ ಸ್ಥಾಪನೆಗಾಗಿ ಹೋರಾಡಲು ಪ್ರಾರಂಭಿಸಿದರು. ತಾವೇ ಹಿಂದೆ ಸ್ಥಾಪಿಸಿದ್ದ ಪ್ರಜಾಪಕ್ಷದ ವಿರುದ್ಧವಾಗಿ ಅಭ್ಯರ್ಥಿಗಳನ್ನು ನಿಲ್ಲಿಸಬೇಕಾಯಿತು. ಇವರ ರಾಜಕೀಯ ಚಟುವಟಿಕೆಗಳಿಗೆ ಹೆದರಿ, ಗುಪ್ತರು ಮೈಸೂರಿನವರಲ್ಲವೆಂಬ ಕಾರಣವನ್ನು ನೀಡಿ, ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಸಂಸ್ಥಾನವನ್ನು ಬಿಟ್ಟು ಹೋಗುವಂತೆ ಮೈಸೂರು ಸರ್ಕಾರ ಆಜ್ಞೆ ಮಾಡಿತು. ಇವರು ಹುಬ್ಬಳ್ಳಿಗೆ ತೆರಳಿ (1936) ಅಲ್ಲಿಂದ ಪ್ರಜಾಮತವನ್ನು ಪ್ರಕಟಿಸಲು ಪ್ರಾರಂಭಿಸಿದರು (ಆ ವೇಳೆಗೆ ಜನವಾಣಿಯನ್ನು ಇವರು ಬೇರೆಯವರಿಗೆ ಕೊಟ್ಟಿದ್ದರು.) ಸಂಸ್ಥಾನದೊಳಕ್ಕೆ ಪ್ರಜಾಮತ ಬರಕೂಡದೆಂದು ಮೈಸೂರು ಸರ್ಕಾರ ಬಹಿಷ್ಕಾರ ಹಾಕಿತು. ಸಂಸ್ಥಾನದ ಹೊರಗೆ ಪ್ರಜಾಮತವೆಂಬ ಹೆಸರಿನಲ್ಲೇ ಪತ್ರಿಕೆ ನಡೆಯುತ್ತಿದ್ದರೂ ಇನ್ನೊಂದು ಹೆಸರಿನಲ್ಲಿ ಆ ಪತ್ರಿಕೆಯ ಸಂಚಿಕೆಗಳನ್ನು ಮೈಸೂರು ಸಂಸ್ಥಾನಕ್ಕೆ ಕಳುಹಿಸಲು ಗುಪ್ತ ಪ್ರಾರಂಭಿಸಿದರು. ಆ ಹೆಸರಿನ ಪತ್ರಿಕೆಗೂ ಸರ್ಕಾರ ಬಹಿಷ್ಕಾರ ಹಾಕಿತು.

ಮತ್ತೆ ಪತ್ರಿಕೆಯ ಹೆಸರನ್ನು ಬದಲಾಯಿಸಲಾಯಿತು. ಮತ್ತೆ ಸರ್ಕಾರದ ಬಹಿಷ್ಕಾರ, ಮತ್ತೆ ಹೆಸರಿನ ಬದಲಾವಣೆ; ಹೀಗೆಯೇ ಸಾಗಿತ್ತು. 1938ರಲ್ಲಿ ಮಿರ್ಜಾ ಅವರು ಮತ್ತೆ ಗುಪ್ತ ಅವರನ್ನು ಬೆಂಗಳೂರಿಗೆ ಆಹ್ವಾನಿಸಿದರು. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಗುಪ್ತರು ಜನವಾಣಿಯನ್ನು ಪಡೆದುಕೊಂಡರು. ಬಹಿಷ್ಕಾರಗಳಿಂದಾಗಿ ಪ್ರಜಾಮತ ಪತ್ರಿಕೆ ಸ್ಥಳಾಂತರವಾಗುತ್ತಿದ್ದರೂ ಒಂದು ವಾರವೂ ಅದು ನಿಲ್ಲದೆ ಪ್ರಕಟವಾಗುತ್ತಿತ್ತು. 1948ರಲ್ಲಿ ಗುಪ್ತರು ಇವೆರಡು ಪತ್ರಿಕೆಗಳನ್ನೂ ಮಾರಿದರು. ಪ್ರಜಾಮತ ಆ ವೇಳೆಗೆ 36,000 ಪ್ರತಿಗಳ ಪ್ರಸಾರ ಸಂಖ್ಯೆಯನ್ನು ಮುಟ್ಟಿದ್ದ ಪ್ರಥಮ ಕನ್ನಡ ವಾರಪತ್ರಿಕೆಯಾಗಿತ್ತು. ಅನಂತರ 1959ರಲ್ಲಿ ಇವರು ಜನಪ್ರಗತಿ ವಾರಪತ್ರಿಕೆಯನ್ನು ಕೊಂಡರು. 1961ರಲ್ಲಿ ಮಲ್ಲಿಗೆ ಮಾಸಪತ್ರಿಕೆಯನ್ನು ಸ್ಥಾಪಿಸಿದರು. 1971ರವರೆಗೂ ನಡೆಸಿಕೊಂಡುಬಂದು ಅನಂತರ ಅದನ್ನು ಬೇರೆಯವರಿಗೆ ವಹಿಸಿಕೊಟ್ಟರು.

ಗುಪ್ತರು ಪತ್ರಿಕೋದ್ಯಮ, ರಾಜಕೀಯವಲ್ಲದೆ ವಾಣಿಜ್ಯ ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿದವರು. 1942ರಿಂದ 1946ರವರೆಗೆ ಇವರು ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು (1945-49), ಇವರು ಬೆಂಗಳೂರು ಪುರಸಭೆಯ ಸದಸ್ಯರಾಗಿ (1942-46) ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ (1948) ಹಾಗೂ ಅಕಾಡೆಮಿಕ್ ಕೌನ್ಸಿಲ್‌ನ (1949) ಸದಸ್ಯರಾಗಿ, ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಸೇವೆಸಲ್ಲಿಸಿದರು. ಮೈಸೂರು ಬ್ಯಾಂಕಿನ ಮತ್ತು ಅನೇಕ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳ ನಿರ್ದೇಶಕರಾಗಿದ್ದರು. ಚಲನಚಿತ್ರ ಕ್ಷೇತ್ರದಲ್ಲಿ ವಿಜಯಾ ಟಾಕೀಸ್ ಡಿಸ್ಟ್ರಿಬ್ಯೂಟರ್ಸ್‌ನ ಪಾಲುದಾರರಾಗಿದ್ದರು. ಇದರ ಒಡೆತನದಲ್ಲಿ ಕೆಲವು ಚಿತ್ರಮಂದಿರಗಳೂ ಇದ್ದುವು. ಇವರ ಪ್ರಗತಿ ಪ್ರಕಟನಾಲಯ ಎಂಬತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಇವರು ಜಪಾನ್ ಮತ್ತು ಐರೋಪ್ಯ ದೇಶಗಳ ಪ್ರವಾಸ ಮಾಡಿದ್ದರು. ಇವರು ಅಖಿಲ ಭಾರತ ಉತ್ಪಾದಕ ಸಂಘದ ಉಪಾಧ್ಯಕ್ಷರಾಗಿಯೂ ಅದರ ರಾಜ್ಯಶಾಖೆಯ ಅಧ್ಯಕ್ಷರಾಗಿಯೂ ಇದ್ದರು. ಇವರು ವಿಶ್ವೇಶ್ವರಯ್ಯ ತಾಂತ್ರಿಕ ವಸ್ತುಸಂಗ್ರಹಾಲಯ ಸ್ಥಾಪನೆಗೆ ಮುಖ್ಯ ಕಾರಣರು.

ಗುಪ್ತರದು ಧರ್ಮಕಾರ್ಯಗಳಿಗೆ ಪ್ರಸಿದ್ಧವಾದ ವಂಶ. ಇವರ ತಾತ ಮದರಾಸಿನ ಬೈಸಾನಿ ಮಾಧವಚೆಟ್ಟಿ ಚಾರಿಟೀಸಿನ ಸ್ಥಾಪಕರು. ಗುಪ್ತರು ಅದರ ಅಧ್ಯಕ್ಷರಾಗಿದ್ದರು. 1970ರಲ್ಲಿ ಇವರು ಜನ್ಮಭೂಮಿ ಟ್ರಸ್ಟ್ ಸ್ಥಾಪಿಸಿ ಪತ್ರಿಕೋದ್ಯಮ ಮತ್ತು ಕನ್ನಡ ಸಾಹಿತ್ಯಗಳ ಬೆಳವಣಿಗೆಗೆ ಪೋಷಕರಾದರು. ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳಿಗೆ ಗುಪ್ತರು ಅನೇಕ ದತ್ತಿಗಳನ್ನು ನೀಡಿದ್ದಾರೆ. *

**ಗುಬ್ಬಿ :** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು, ತಾಲ್ಲೂಕಿನ ಕೇಂದ್ರ. ತುಮಕೂರು ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನ ಪೂರ್ವಕ್ಕೆ ತುಮಕೂರು, ಪಶ್ಚಿಮಕ್ಕೆ ತಿಪಟೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಉತ್ತರಕ್ಕೆ ಶಿರಾ ಹಾಗೂ ದಕ್ಷಿಣಕ್ಕೆ ಕುಣಿಗಲು ತಾಲ್ಲೂಕುಗಳಿವೆ. 1886ರವರೆಗೆ ಈ ಪ್ರದೇಶ ಕಡಬ ತಾಲ್ಲೂಕಿನಲ್ಲಿತ್ತು. ತಾಲ್ಲೂಕಿನ ವಿಸ್ತೀರ್ಣ 1,221ಚ.ಕಿಮೀ. ಗುಬ್ಬಿ, ಚಂದ್ರಶೇಖರಪುರ, ಚೇಳೂರು, ಹಾಗಲವಾಡಿ, ನಿಟ್ಟೂರು ಮತ್ತು ಕಡಬ ಹೋಬಳಿಗಳು; ಗ್ರಾಮಗಳ ಸಂಖ್ಯೆ 346. ಜನಸಂಖ್ಯೆ 2,56,144.

ಶಿಂಷಾ ನದಿ ಈ ಪ್ರದೇಶದಲ್ಲಿ ಹರಿದು (ತಾಲ್ಲೂಕಿನಲ್ಲಿ ಈ ನದಿಯ ಉದ್ದ ಸು.34ಕಿಮೀ) ಕಲ್ಲೂರು ಸಮೀಪದಲ್ಲಿ ನಾಗಾ ನದಿಯೊಂದಿಗೆ ಕೂಡಿ ದಕ್ಷಿಣದತ್ತ ಮುಂದೆ ಸಾಗಿದೆ. ಇಲ್ಲಿನ ವಾಯುವ್ಯ ಪ್ರದೇಶದಲ್ಲಿ ಕೆಲವು ಬೆಟ್ಟಗಳಿವೆ. ಉಳಿದ ಪ್ರದೇಶವೆಲ್ಲ ಮಟ್ಟವಾದ ಬಯಲುನಾಡಾಗಿದ್ದು ನೀರಿನ ಅನುಕೂಲತೆಯನ್ನು ಪಡೆದಿದ್ದು ಕೆಂಪು ಮಣ್ಣಿನಿಂದ ಕೂಡಿದೆ. ಸರಾಸರಿ ವಾರ್ಷಿಕ ಮಳೆ 703.39ಮಿಮೀ. ಬತ್ತ, ಜೋಳ, ರಾಗಿ, ಕಡಲೆ, ತೆಂಗು – ಇವು ತಾಲ್ಲೂಕಿನ ಮುಖ್ಯ ಬೆಳೆಗಳು. ಇತರ ಬೆಳೆಗಳು ಹತ್ತಿ, ಹುಣಿಸೆಹಣ್ಣು ಮತ್ತು ಮೆಣಸಿನಕಾಯಿ.

ತಾಲ್ಲೂಕಿನ ಕೇಂದ್ರ ಮತ್ತು ಏಕೈಕ ದೊಡ್ಡ ಊರು ಗುಬ್ಬಿ. ಬೆಂಗಳೂರು-ಪುಣೆ ರೈಲ್ವೆ ಮತ್ತು ಬೆಂಗಳೂರು-ಶಿವಮೊಗ್ಗ ಹಾದಿಯ ನಡುವೆ ಇದ್ದು ತುಮಕೂರಿನಿಂದ 20ಕಿಮೀ ದೂರದಲ್ಲಿದೆ. ಗುಬ್ಬಿಯಲ್ಲಿ ಪುರಸಭೆ ಇದೆ (ಸ್ಥಾಪನೆ 1909). ಜನಸಂಖ್ಯೆ 16,802. ಇದು ಸುತ್ತಣ ಪ್ರದೇಶಕ್ಕೆಲ್ಲ ಮುಖ್ಯವಾದ ವ್ಯಾಪಾರ ಕೇಂದ್ರ. ಬಟ್ಟೆ, ಕಂಬಳಿ, ಅಡಕೆ, ತೆಂಗಿನಕಾಯಿ, ಬೆಲ್ಲ, ಹುಣಿಸೆಹಣ್ಣು, ಬತ್ತ, ರಾಗಿ, ಅರಗು ಮುಂತಾದ ಪದಾರ್ಥಗಳ ವಹಿವಾಟು ನಡೆಯುತ್ತದೆ. ಇಲ್ಲೊಂದು ನಿಯಂತ್ರಿತ ಮಾರುಕಟ್ಟೆಯೂ ಇದೆ. ಈ ಊರಿಗೆ ವಿದ್ಯುತ್ ಸೌಕರ್ಯ 1934ರಲ್ಲಿ ಬಂತು.

ಈ ಊರಿಗೆ ಅಮರಗುಂಡ, ಚಟಕಪುರ ಎಂಬ ಹೆಸರುಗಳೂ ಇದ್ದುವು. ಗುಬ್ಬಿಯನ್ನು ಸು.500 ವರ್ಷಗಳ ಹಿಂದೆ ಮೈಸೂರಿನ ಸಾಮಂತನಾಗಿದ್ದ ಹೊಸಹಳ್ಳಿ ಗೌಡ ಸ್ಥಾಪಿಸಿದನಂತೆ. ಈ ಪ್ರದೇಶ ಅಮರಗುಂಡ ಮಲ್ಲಿಕಾರ್ಜುನನ ಪವಿತ್ರ ಸ್ಥಳ. ಗೋಸಲ ಚೆನ್ನಬಸವೇಶ್ವರ, ಮಲ್ಲಣಾರ್ಯ ಮುಂತಾದ ವೀರಶೈವ ಆಚಾರ್ಯರು ಇಲ್ಲಿದ್ದರು. ಮಲ್ಲಿಕಾರ್ಜುನನು ಪುರಾಣಗಳನ್ನು ಓದುತ್ತಿರುವಾಗ ಸದಾ ಆಲಿಸುತ್ತಿದ್ದ ಎರಡು ಗುಬ್ಬಚ್ಚಿಗಳು ಅವನು ಪುರಾಣವನ್ನು ಓದಿ ಮುಗಿಸಿದ ದಿವಸ ಪ್ರಾಣಬಿಟ್ಟವು. ಆದ್ದರಿಂದ ಈ ಪ್ರದೇಶಕ್ಕೆ ಗುಬ್ಬಿ ಎಂಬುದಾಗಿ ಹೆಸರು ಬಂದಿತು ಎಂಬ ಐತಿಹ್ಯವಿದೆ. ಮಲ್ಲಿಕಾರ್ಜುನ ದೇವಾಲಯದಲ್ಲಿ ಗುಬ್ಬಚ್ಚಿಗಳದೆನ್ನಲಾದ ಸಮಾಧಿಯೊಂದಿದೆ. ಶ್ರೀರಾಮ ಈ ಪ್ರದೇಶದಲ್ಲಿ ಕೆಲವು ಸಮಯವಿದ್ದನೆಂದೂ ನಂಬಿಕೆ.



ಚೆನ್ನಬಸವೇಶ್ವರ ದೇವಾಲಯ

ಗುಬ್ಬಿಯಲ್ಲಿ ಗದ್ದೆಮಲ್ಲೇಶ್ವರ ದೇವಾಲಯವಿದೆ. ಇದರಲ್ಲಿ ಮೂರು ಗರ್ಭಗೃಹಗಳಿದ್ದು ಮೊದಲನೆಯದರಲ್ಲಿ ದಕ್ಷಿಣಾಮೂರ್ತಿ, ಎರಡನೆಯದರಲ್ಲಿ ಪಾರ್ವತಿ ಮತ್ತು ಕೊನೆಯದರಲ್ಲಿ ವೀರಭದ್ರ ಮೂರ್ತಿಗಳಿವೆ. ವೈಲಪ್ಪ ಅಥವಾ ಓಹಿಲಪ್ಪ ದೇವಸ್ಥಾನದಲ್ಲಿ ಭಕ್ತ ಓಹಿಲನ ವಿಗ್ರಹವಿದೆ. ಚೆನ್ನಬಸವೇಶ್ವರ ದೇವಾಲಯ ದೊಡ್ಡದು. ಹೊಸಹಳ್ಳಿಯ ಪಾಳೆಯಗಾರ ಮುಮ್ಮಡಿ ಹೊನ್ನಪ್ಪಗೌಡನ ಕಾಲದಲ್ಲಿದ್ದ ಗುಬ್ಬಿಯಪ್ಪ ಅಥವಾ ಚನ್ನಬಸವಯ್ಯ ಎಂಬ ವೀರಶೈವ ಗುರುವಿನ ಗದ್ದುಗೆ ಇಲ್ಲಿದೆ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಜನಾರ್ದನ ಮತ್ತು ಬ್ಯಾಟರಾಯಸ್ವಾಮಿ ದೇವಾಲಯಗಳೂ ಗುಬ್ಬಿಯಲ್ಲಿವೆ. ಗುಬ್ಬಿ ರೈಲುನಿಲ್ದಾಣದ ಬಳಿ ಇರುವ ಚಿದಂಬರಾಶ್ರಮದಲ್ಲಿ ದತ್ತಾತ್ರೇಯ ಮಂದಿರ ಮತ್ತು ಗುರುಕುಲ ಇವೆ. 15 ಹಾಗೂ 16ನೆಯ ಶತಮಾನಗಳಲ್ಲಿ ಈ ಊರು ಸಾಹಿತ್ಯ ಚಟುವಟಿಕೆಯ ಕೇಂದ್ರವಾಗಿತ್ತು. ಇಲ್ಲಿ ಗುಬ್ಬಿಯ ಮಲ್ಲಣ್ಣ (ನೋಡಿ), ಗುಬ್ಬಿಯ ಮಲ್ಲಣಾರ್ಯ, (ನೋಡಿ) ಪ್ರಭುಗ, ಶಾಂತೇಶ ಮೊದಲಾದ ವೀರಶೈವ ಕವಿಗಳಿದ್ದರು. ನಾಟಕ ಪಿತಾಮಹ ಗುಬ್ಬಿವೀರಣ್ಣ (ನೋಡಿ) ಇದೇ ಊರಿನವರು. (ಎಚ್.ಪಿ.ಕೆ.)

**ಗುಬ್ಬಿಯ ಮಲ್ಲಣಾರ್ಯ :** ಸು.1513. ವೀರಶೈವ ಕವಿ. ಭಾವ ಚಿಂತಾರತ್ನ ಮತ್ತು ವೀರಶೈವಾಮೃತ ಮಹಾಪುರಾಣ ಎಂಬ ಷಟ್ಪದಿ ಕಾವ್ಯಗಳ ಕರ್ತೃ. ಗುಬ್ಬಿ ಈತನ ಜನ್ಮಸ್ಥಳ. ಈತನ ವಂಶಪರಂಪರೆ ಮತ್ತು ಗುರುಪರಂಪರೆ ಪ್ರಖ್ಯಾತವಾದುದು. ಈ ಪರಂಪರೆಯಲ್ಲಿ ಬಂದ ಪ್ರತಿಯೊಬ್ಬರೂ ಸಿದ್ಧಾಂತ ಕೋವಿದರೂ ಪ್ರಕಾಂಡ ಪಂಡಿತರೂ ವಿವಿಧ

ಭಾಷಾವಿಶಾರದರೂ ಆಗಿದ್ದುದು ಕಂಡುಬರುತ್ತದೆ. ವೀರಶೈವಾಮೃತ ಮಹಾಪುರಾಣದಲ್ಲಿ ಕವಿ ತನ್ನ ವಂಶಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ. ಅಮರಗುಂಡದ ಮಲ್ಲಿಕಾರ್ಜುನನ ಶಿಷ್ಯ ಗುರುಭಕ್ತ. ಈ ಗುರುಭಕ್ತನ ಮಗ ದೇಶಿಕಪಟ್ಟವರ್ಧನ ಸೌಂದರ್ಯಮಲ್ಲಿಕಾರ್ಜುನ ಪಂಡಿತ. ಈತನ ಮಗ ನಾಗನಾಥಾರ್ಯ. ಈ ನಾಗನಾಥಾರ್ಯನ ಮಗ ಅಮರಗುಂಡಾರ್ಯ. ಈ ವಂಶದಲ್ಲಿ ಹುಟ್ಟಿದವನು ಗುಬ್ಬಿಯ ಮಲ್ಲಣ್ಣ ಗಣಭಾಷ್ಯರತ್ನಮಾಲೆಯ ಕರ್ತೃ. ಈತನ ಮಗ ಗುರುಭಕ್ತ, ಇವನ ಹೆಂಡತಿ ಸಪ್ಪೆಯಮ್ಮ ಇವರ ಮಗನೇ ಗುಬ್ಬಿಯ ಮಲ್ಲಣಾರ್ಯ.

ಸಿದ್ಧಮಲ್ಲೇಶ ಹಾಗೂ ಶಿವಗಂಗೆಯ ಶಾಂತನಂಜೇಶ್ವರ ಈತನಿಗೆ ಗುರುಗಳಾಗಿದ್ದಂತೆ ತಿಳಿದುಬರುತ್ತದೆ. ಕಾವ್ಯದಲ್ಲಿ ಸಪ್ಪೆಯ ಲಿಂಗಣಾಚಾರ್ಯರನ್ನೂ ಬಿಟ್ಟ ಮುಂಡೆಯಾ ಪ್ರಭುವನ್ನೂ ಸ್ತುತಿಸಿದ್ದಾನೆ. ಇವರಲ್ಲಿ ಸಪ್ಪೆಯ ಲಿಂಗಣಾಚಾರ್ಯ ತನಗೆ ವಿದ್ಯಾದಾನವನ್ನು ಮಾಡಿದಂತೆ ಹೇಳಿಕೊಂಡಿದ್ದಾನೆ. ಗುಮ್ಮಳಾಪುರದ ಶಾಂತೇಶ ಗುರುವರದನಡಿದಳೆದು ನಾನೊಜೆದ ಕೃತಿ ಎಂದಿರುವುದರಿಂದ ಈತನೂ ಕವಿಗೆ ಗುರುವಾಗಿದ್ದಂತೆ ತೋರುತ್ತದೆ. ಗುಬ್ಬಿಯ ಮಲ್ಲಣಾರ್ಯ ಸಂಸ್ಕೃತ ಕನ್ನಡ ಭಾಷೆಗಳೆರಡರಲ್ಲೂ ಪರಿಣತನಾಗಿದ್ದಂತೆಯೂ ಬಸವಪುರಾಣವನ್ನು ಅರ್ಥೈಸುವುದರಲ್ಲಿ ಪ್ರಖ್ಯಾತನಾಗಿದ್ದಂತೆಯೂ ತಿಳಿದುಬರುತ್ತದೆ. ಈತನಿಗೆ ಬಸವಪುರಾಣದ ಮಲ್ಲಣಾರ್ಯ ಎಂಬ ಹೆಸರಿದ್ದಂತೆಯೂ ತಿಳಿದುಬರುತ್ತದೆ. ಚೇರಮಾಂಕ, ಸಿದ್ಧನಂಜೇಶ, ಷಡಕ್ಷರದೇವ ಮೊದಲಾದ ಕವಿಗಳು ಈತನನ್ನು ಸ್ತುತಿಸಿದ್ದಾರೆ. ಗುಬ್ಬಿಯ ಮಲ್ಲಣಾರ್ಯ ಹಲವಾರು ಶಾಸ್ತ್ರಗಳಲ್ಲಿ ಪಾರಂಗತನಾಗಿದ್ದಂತೆ ಚೇರಮಾಂಕನ (ಸು.1526) ವೇದಾಂತ ಸಿದ್ಧಾಂತ ಲಕ್ಷಣ ವೈದ್ಯಭರತ ಸಾಮುದ್ರಿಕ ಜ್ಯೋತಿಷಾಲಂಕಾರ ಸರಸಗೀತಂ ವಾದ್ಯಶಕುನ ಸದ್ವ್ಯಾಕರಣ ಸೂಪ ರತಿಶಾಸ್ತ್ರದೊಳಗೆ ಪರಿಣತನು ಎಂಬ ಮಾತುಗಳಿಂದ ವ್ಯಕ್ತಪಡುತ್ತದೆ. ಕವಿ ತನ್ನ ಕಾವ್ಯದಲ್ಲಿ ಪಾಲ್ಕುರಿಕೆ ಸೋಮ, ಪದ್ಮರಸ, ಹರಿಹರ ಮೊದಲಾದ ಪೂರ್ವಕವಿಗಳನ್ನು ಸ್ತುತಿಸಿದ್ದಾನೆ. ಭಾವಚಿಂತಾರತ್ನವನ್ನು 1513ರಲ್ಲೂ ವೀರಶೈವಾಮೃತ ಮಹಾಪುರಾಣವನ್ನು 1530ರಲ್ಲೂ ಬರೆದು ಮುಗಿಸಿದಂತೆ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ.

ಭಾವಚಿಂತಾರತ್ನ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 9 ಸಂಧಿಗಳೂ 371 ಪದ್ಯಗಳೂ ಇವೆ. ಈ ಕಾವ್ಯಕ್ಕೆ ಸತ್ಯೇಂದ್ರಚೋಳ ಕಥೆ ಎಂಬ ಹೆಸರೂ ಇದ್ದಂತೆ ತಿಳಿದುಬರುತ್ತದೆ. ಈ ಕಾವ್ಯದಲ್ಲಿ ಪಂಚಾಕ್ಷರಿಯ ಮಹಿಮೆಯನ್ನು ನಿರೂಪಿಸಲಾಗಿದೆ. ಇದನ್ನು ನಾಗವಲ್ಲಿಯ ಶಿವಪೂಜೆಯಾರ್ಯರ ಆಜ್ಞೆಯಂತೆ ರಚಿಸಿದುದಾಗಿ ಹೇಳಿಕೊಂಡಿದ್ದಾನೆ.

ತರುಣಿ ಪೊರೆದಣುಗನಶ್ವದ ಖುರದ ಹತಿಯಿಂದೆ
ಹರಭಕ್ತನಳಿಯಲದ ಕೇಳ್ದು ಕೊಲೆಯಂದಮಂ
ಪರಿಕಿಸಿ ನಿಜಾತ್ಮಜಂ ಮೊದಲಳ್ಳಿಗೆಂದ ನುಡಿಗಾ ಮುದ್ದುಮಗನ ತಲೆಯ।
ಅರಸುವೆಡೆಯೊಳು ಮತ್ತೆ ಭಕ್ತವಧೆಯೆಂದು ನಿಜ
ಶಿರದೊಡನೆ ತಱಿದೆಂಟು ತಲೆಗಳಂ ಪಡೆದು ಶಂ
ಕರನೂರ್ಗೆ ಪೋದ ಸತ್ಯೇಂದ್ರಚೋಳನ ಕತೆಯನಿದ ಬೆಳಸಿ ಕೃತಿಮಾಳ್ಪೆನು।

ಇದು ಕಥಾವಸ್ತು. ತಿರುಜ್ಞಾನಸಂಬಂಧರು ಕುಲಚ್ಚರೆಯಗೆ ಪಂಚಾಕ್ಷರೀ ಮಹಿಮೆಯನ್ನು ತಿಳಿಸುವುದಕ್ಕಾಗಿ ದ್ರಾವಿಡದಲ್ಲಿ ಹೇಳಿದ ಸತ್ಯೇಂದ್ರಚೋಳನ ಕಥೆಯನ್ನು ತಾನು ಕನ್ನಡದಲ್ಲಿ ಹೇಳಿರುವುದಾಗಿ ಕವಿ ತಿಳಿಸುತ್ತಾನೆ. ಭಾವಚಿಂತಾರತ್ನವನ್ನು ಆಧರಿಸಿ ಷಡಕ್ಷರಿದೇವ ರಾಜಶೇಖರವಿಳಾಸ ಎಂಬ ಕಾವ್ಯವನ್ನು ಬರೆದಿದ್ದಾನೆ.

ವೀರಶೈವಾಮೃತ ಮಹಾಪುರಾಣ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 8 ಕಾಂಡಗಳೂ 136 ಸಂಧಿಗಳೂ 7099 ಪದ್ಯಗಳೂ ಇವೆ. ಹಲಗೆಯಾರ್ಯರ ಆಜ್ಞೆಯಂತೆ ತಾನು ಈ ಕೃತಿಯನ್ನು ರಚಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ. ಈ ಕಾವ್ಯ ಒಂದು ವೀರಶೈವ ಸಿದ್ಧಾಂತ ಕೋಶದಂತಿದ್ದು ಇದರಲ್ಲಿ ಶಿವನ ಪಂಚವಿಂಶತಿ ಲೀಲೆಗಳೂ ಪುರಾತನ ನೂತನ ಶರಣರ ಕಥೆಗಳೂ ನಿರೂಪಿತವಾಗಿವೆ. ವೇದಾಗಮ ಪುರಾಣೇತಿಹಾಸ ಸ್ಮೃತಿಗಳಿಂದ ಹಲವಾರು ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿ ಅನುವಾದಿಸಿ ಕೊಡಲಾಗಿದೆ. ಈತನ ತರುವಾಯ ಬಂದ ಸಿದ್ಧನಂಜೇಶ ತಾನು ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಿಂದ ನೂತನ ಪುರಾತನರ ಕಥೆಗಳನ್ನು ಸಂಗ್ರಹಿಸಿ ಅವುಗಳನ್ನು ತನ್ನ ಗುರುರಾಜಚಾರಿತ್ರದಲ್ಲಿ ನಿರೂಪಿಸಿದಂತೆ ಹೇಳಿಕೊಂಡಿದ್ದಾನೆ. (ಎನ್.ಬಿ.)

**ಗುಬ್ಬಿಯ ಮಲ್ಲಣ್ಣ:** ಸು.1475. ವೀರಶೈವ ಕವಿ. ವಚನ ವಾಙ್ಮಯವನ್ನು ಪುನರುಜ್ಜೀವನ ಮಾಡಿದವರಲ್ಲಿ ಗಣ್ಯನಾದವ. ಗಣಭಾಷ್ಯ ರತ್ನಮಾಲೆ, ವಾತುಲತಂತ್ರಟೀಕೆ ಎಂಬ ಗ್ರಂಥಗಳ ಕರ್ತೃ. ರಾಮಸ್ತವರಾಜ ಎಂಬ ಒಂದು ತೆಲುಗು ಗ್ರಂಥವನ್ನೂ ಈತ ಬರೆದಿರಬಹುದೆಂದು ಊಹಿಸಲಾಗಿದೆ. ಇವನಿಗೆ ಮಲ್ಲಣಾಚಾರ್ಯ, ಮಲ್ಲಣಾರ್ಯ ಎಂಬ ಹೆಸರುಗಳಿದ್ದಂತೆ ತಿಳಿದುಬರುತ್ತವೆ. ಗುಬ್ಬಿ ಈತನ ಜನ್ಮಸ್ಥಳ. ತಂದೆ ಅಮರಗುಂಡದ ಅಮರಗುಂಡಾರ್ಯ, ಗುರು ಚೆನ್ನಬಸವರಾಜೇಂದ್ರ. ಭಾವ ಚಿಂತಾರತ್ನದ ಕರ್ತೃ ಗುಬ್ಬಿಯ ಮಲ್ಲಣಾರ್ಯ ಈತನ ಮೊಮ್ಮಗ.

ಕವಿಯ ಪೂರ್ವಜರು ವೀರಶೈವ ಧರ್ಮಕ್ಕೂ ಕನ್ನಡ ಸಾಹಿತ್ಯಕ್ಕೂ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಮಲ್ಲಣ್ಣನನ್ನು ಶಾಂತಲಿಂಗದೇಶಿಕ, ಗೂಳೂರು ಸಿದ್ಧವೀರಣಾಚಾರ್ಯ, ಬೋಳಬಸವೇಶ, ಹಲಗೆಯಾಚಾರ್ಯ ಮೊದಲಾದವರು ಸ್ತುತಿಸಿದ್ದಾರೆ. ಈತನ ಮರಿಮಗನಾದ ಶಾಂತೇಶನ ಸಿದ್ದೇಶ್ವರಪುರಾಣದಿಂದ ಗುಬ್ಬಿಯ ಮಲ್ಲಣ್ಣ ತೋಂಟದ ಸಿದ್ಧಲಿಂಗಯತಿಯ (ಸು.1470) ಶಿಷ್ಯನಾಗಿದ್ದಂತೆ ತಿಳಿದುಬರುತ್ತದೆ. ಮಲ್ಲಣ್ಣ ಹಾಗೂ ಈತನ ಗುರು ಚೆನ್ನಬಸವರಾಜೇಂದ್ರನನ್ನು 101 ಸ್ಥಲಗಳಾಗಿ ವಿಂಗಡಿಸಿ ಒಂದೊಂದು ಸ್ಥಲದ ಪರಿಚಯವನ್ನೂ ಮೊದಲು ಮಾಡಿಕೊಟ್ಟು ಅನಂತರ ಅವುಗಳಿಗೆ ವೇದ ಪುರಾಣ ಇತಿಹಾಸಗಳಿಂದ ಪ್ರಮಾಣಗಳನ್ನೂ ಪುರಾತನರ ಕನ್ನಡ ವಚನಗಳನ್ನೂ ಉದಾಹರಿಸಿ ವಿವರಿಸಿದ್ದಾನೆ. ಇದರಲ್ಲಿ ಅಂಗಸ್ಥಲ 44, ಲಿಂಗಸ್ಥಲ 45, ನಿರಂಗಲಿಂಗ ಸ್ಥಲ 12 ಎಂಬ ಮೂರು ವಿಭಾಗಗಳಿವೆ. ಅಂಗಸ್ಥಲದಲ್ಲಿ 234 ಶ್ಲೋಕಗಳೂ 225 ವಚನಗಳೂ ಲಿಂಗಸ್ಥಲದಲ್ಲಿ 195 ಶ್ಲೋಕಗಳೂ 193 ವಚನಗಳೂ ನಿರಂಗಲಿಂಗಸ್ಥಲದಲ್ಲಿ 51 ಶ್ಲೋಕಗಳೂ 67 ವಚನಗಳೂ ಇವೆ. ಇವೆಲ್ಲ 38 ಜನ ಶಿವಶರಣರ ವಚನಗಳಿಂದಲೂ 53 ಸಂಸ್ಕೃತ ಗ್ರಂಥಗಳಿಂದಲೂ ಉದಾಹೃತವಾಗಿವೆ. ಈ ಕ್ರಮ ಮೊಟ್ಟ ಮೊದಲಿಗೆ ಮಲ್ಲಣ್ಣನಲ್ಲಿ ಕಂಡುಬಂದಿದ್ದು, ಇದು ಕವಿಯ ಸ್ವೋಪಜ್ಞತೆಗೆ ಸಾಕ್ಷಿಯಾಗಿದೆ. ಗಣಭಾಷ್ಯರತ್ನ ಮಾಲೆಯನ್ನು ಕುರಿತು ಇದು ಪರಮ ವೀರಶೈವ ಸಿದ್ಧಾಂತ ತತ್ತ್ವಜ್ಞಾನ, ಇದು ವೀರಶೈವ ಪ್ರತಿಷ್ಠಾಪನಾಚಾರ್ಯ, ಇದು ದಿವ್ಯವೇದಾಂತ ಶಿರೋಮಣಿ, ಇದು ಸಮಸ್ತ ಶಾಸ್ತ್ರ ಮುಖ್ಯ ಮುಖದರ್ಪಣ, ಇದು ಮಹಾಜ್ಞಾನಪ್ರವರ್ಧನ, ಪರಮಾನುಭವಸಂಬೋಧ, ಇದು ಸರ್ವಾಚಾರ ಸಂಪನ್ನರ ಸಮಾರೂಢ ಸಂಗ್ರಹ, ಇದು ಪರಮ ರಾಜಯೋಗ ಸಾಧ್ಯ ಸನ್ನಿಧಾನ, ಇದು ರಸಾಮೃತ ಪ್ರಸನ್ನ ಪ್ರಸಾದ, ಇದು ಅಜ್ಞಾನತಿಮಿರಾಂಜನವಪ್ಪ ಮಹಾಪ್ರಸಂಗ ಎಂದು ವಿಶ್ಲೇಷಿಸಿ ಹೇಳಿಕೊಂಡಿದ್ದಾನೆ. ಸರಳತೆ ಈತನ ಶೈಲಿಯ ಲಕ್ಷಣವಾಗಿದೆ.

ಅರ್ಥಾನಾಮರ್ಜನೇ ದುಃಖ ವರ್ಧಿತಾನಾಂ ಚ ರಕ್ಷಣೇ।
ನಾಶೇ ದುಃಖಂ ವ್ಯಯೇ ದುಃಖಮರ್ಥಾತ್ಪುಂಸಃ ಕುತಃ ಸುಖಮ್॥
(ಸ್ಥಲ 10-2)

ಧನವ ಗಳಿಸುವಲ್ಲಿ ದುಃಖವು, ಅದನ್ನು ರಕ್ಷಿಸುವಲ್ಲಿ ದುಃಖವು
ನಾಶವಾಗಿ ಹೋದರೂ ದುಃಖವು, ವೆಚ್ಚಮಾಡಿದಲ್ಲಿಯೂ
ದುಃಖವು. ಈ ಪ್ರಕಾರವಾದ ಅರ್ಥದಿಂದ ಮನುಷ್ಯನಿಗೆ
ಸುಖವೆಲ್ಲಿಯದು?

ವಾತುಲತಂತ್ರಟೀಕೆ ಎಂಬುದು ವಾತುಲತಂತ್ರ ಎಂಬ ಸಂಸ್ಕೃತ ಶೈವಾಗಮ ಗ್ರಂಥಕ್ಕೆ ಬರೆದ ಕನ್ನಡ ಟೀಕೆ. ಈ ಕೃತಿಯಲ್ಲಿ ತತ್ತ್ವಭೇದ, ವರ್ಣಭೇದ, ಚಕ್ರಭೇದ, ವರ್ಗಭೇದ, ಮಂತ್ರಭೇದ, ಪ್ರಣವಭೇದ, ಅಂಗಭೇದ, ಬ್ರಹ್ಮಭೇದ, ಮಂತ್ರಾಜಾತ, ಮಂತ್ರಕೀಲಕ ಎಂಬ ದಶಪಟಲಗಳಿವೆ. ಈ ಗ್ರಂಥಗಳಿಂದ ಕವಿಗೆ ಕನ್ನಡ ಹಾಗೂ ಸಂಸ್ಕೃತ ಭಾಷೆಗಳ ಮೇಲೆ ಹಿಡಿತವಿತ್ತೆಂಬುದು ವಿದಿತವಾಗುತ್ತದೆ. ಶ್ರೇಷ್ಠ ಸಂಕಲನಕಾರನಾಗಿ, ಉತ್ತಮ ಟೀಕಾಕಾರನಾಗಿ, ವಚನ ವಾಙ್ಮಯಕ್ಕೆ ಮಲ್ಲಣ್ಣನಿಂದ ಸಂದ ವಿಶಿಷ್ಟ ಸೇವೆ ಗಣನೀಯವಾದದ್ದು. (ವೈ.ಸಿ.ಬಿ)

**ಗುಬ್ಬಿ ವೀರಣ್ಣ :** ಸು.1890-1972. ಕನ್ನಡ ರಂಗಭೂಮಿಗೆ ತಮ್ಮ ಪ್ರಯೋಗಶೀಲತೆಯಿಂದ ವೈವಿಧ್ಯವನ್ನೂ ವಿಸ್ತಾರವನ್ನೂ ತಂದುಕೊಟ್ಟ ಪ್ರಸಿದ್ಧ ನಟರು, ನಿರ್ದೇಶಕರು. ತಮ್ಮ ಐದನೆಯ ವಯಸ್ಸಿನಲ್ಲಿ ಐದು ರೂಪಾಯಿಗಳ ಸಂಬಳಕ್ಕೆ ಗುಬ್ಬಿ ಶ್ರೀ ಚೆನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘದಲ್ಲಿ ಕೆಲಸಕ್ಕೆ ಸೇರಿ, ಕ್ರಮೇಣ ಅದರ ಮಾಲೀಕರಾಗಿ, ತಮ್ಮ ಪ್ರತಿಭಾವಿಲಾಸದಿಂದ ಆ ಸಂಸ್ಥೆಯನ್ನು ಕನ್ನಡ ರಂಗಭೂಮಿಯ ಪ್ರಾತಿನಿಧಿಕ ಸಂಸ್ಥೆಯನ್ನಾಗಿ ಬೆಳೆಸಿದ ವೀರಣ್ಣನವರು ಐದು ದಶಕಗಳಿಗೂ ಹೆಚ್ಚು ಕಾಲ ನಿಷ್ಠೆಯಿಂದ ರಂಗಭೂಮಿಯ ಸೇವೆ ಮಾಡಿದವರು.

ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ವೀರಣ್ಣನವರ ಜನನ. ತಂದೆ ಗುಬ್ಬಿ ಹಂಪಣ್ಣ, ತಾಯಿ ರುದ್ರಾಂಬೆ. ವೀರಣ್ಣನವರಿಗೆ ಇಬ್ಬರು



ಅಕ್ಕಂದಿರು. ವೀರಣ್ಣನವರ ತಾಯಿಯವರ ಆರೋಗ್ಯ ಸರಿಯಾಗಿರದಿದ್ದುದರಿಂದ ತಂದೆ ಎರಡನೆಯ ಮದುವೆಯಾದರು. ಇದರ ಪರಿಣಾಮವಾಗಿ ಹಂಪಣ್ಣನವರು ಮೊದಲ ಹೆಂಡತಿ ಮತ್ತು ಮಕ್ಕಳನ್ನು ಅಲಕ್ಷಿಸಿದರು. ವೀರಣ್ಣ ನವರ ತಾಯಿ ಕೂಲಿನಾಲಿ ಮಾಡಿ ಮಕ್ಕಳನ್ನು ಸಾಕಬೇಕಾದ ಸ್ಥಿತಿ ಬಂತು. ಆಗ ವೀರಣ್ಣನವರ ಚಿಕ್ಕಪ್ಪನವರಾದ ವೀರಣ್ಣ ಎನ್ನುವ ವರು ಇವರನ್ನು ಕರೆದುಕೊಂಡು ಹೋಗಿ ಗುಬ್ಬಿ ನಾಟಕ ಕಂಪನಿಗೆ ಸೇರಿಸಿದರು. ಅದರ ಮಾಲೀಕ ರಾಗಿದ್ದ ಚಂದಣ್ಣನವರು ಹುಡುಗನಿಗೆ ಚಿಕ್ಕ ಪಾತ್ರಗಳನ್ನು ಕೊಡಲು ಪ್ರಾರಂಭಿಸಿದರು. ಧರ್ಮಪಾಲ ಚರಿತ್ರೆಯಲ್ಲಿ ಸಿರಿಯಾಳ ಕುಮಾರ, ಹರಿಶ್ಚಂದ್ರ ನಾಟಕದಲ್ಲಿ ಲೋಹಿತಾಶ್ವ, ಪಾಂಡವವಿಜಯ ನಾಟಕದಲ್ಲಿ ಮಾಯಾ ಇಂತಹ ಪಾತ್ರಗಳು ಇವರಿಗೆ ಸಿಕ್ಕಿದವು.

ಗುಬ್ಬಿ ಕಂಪನಿ ನಾಟಕ ಸಂಸ್ಥೆಯನ್ನು ಕಟ್ಟಿದವರು ಗುಬ್ಬಿ ಗ್ರಾಮದ ಕೆಲವು ರಸಿಕರು. ಚಂದಣ್ಣ ಎನ್ನುವವರು ಇದರ ಮುಂದಾಳು. ಇವರು ಪ್ರದರ್ಶಿಸಿದ ಪ್ರಥಮ ನಾಟಕ ಕುಮಾರರಾಮ ಎಂಬ ಯಕ್ಷಗಾನ. ಈ ನಾಟಕ ನಡೆಯುತ್ತಿದ್ದ ದಿನ ಆ ದಾರಿಯಲ್ಲಿ ಹಾದು ಹೋಗುತ್ತಿದ್ದ ಚಾಮರಾಜೇಂದ್ರ ಒಡೆಯರ್ ಅವರು ನಾಟಕವನ್ನು ನೋಡಿ ಪ್ರೋತ್ಸಾಹದ ಮಾತುಗಳನ್ನಾಡಿದರು. ಇದರಿಂದ ಪ್ರೋತ್ಸಾಹಗೊಂಡ ಕಂಪನಿಯವರು ಅನಂತರ ಚೋರಕಥೆ', ಜಗನ್ಮೋಹನ ಚರಿತ್ರೆ, ಗುಲೇಬಕಾವಲಿ, ಪಾಂಡವವಿಜಯ, ಸತ್ಯ ಹರಿಶ್ಚಂದ್ರ, ಇಂದ್ರಸಭಾ, ಧರ್ಮಪಾಲಚರಿತ್ರೆ, ಸತ್ಯವರ್ಮಚರಿತ್ರೆ ಇತ್ಯಾದಿ ನಾಟಕಗಳನ್ನು ಪ್ರದರ್ಶಿಸಿ ಹೆಸರು ಗಳಿಸಿದರು. ದಾವಣಗೆರೆಯಲ್ಲಿ ಈ ನಾಟಕ ಕಂಪನಿ ಮೊಕ್ಕಾಂ ಮಾಡಿದ್ದಾಗ ಮಾಲೀಕ ಚಂದಣ್ಣನವರು ತೀರಿಕೊಂಡರು. ಮೂವತ್ತು ವರ್ಷಗಳಿಂದ ನಡೆದು ಬಂದಿರುವ ಸಂಸ್ಥೆ ನಿಂತುಹೋಗಬಾರದೆಂದು ನಿರ್ಧರಿಸಿದ ಊರಿನ ಜನ ಕಂಪನಿಯ ಒಡೆತನವನ್ನು ಇವರಿಗೆ ಮತ್ತು ಚಂದಣ್ಣನವರ ಅಣ್ಣನ ಮಗ ನಾಗರಾಜಯ್ಯನವರಿಗೆ ವಹಿಸಿದರು. ಇವರಿಬ್ಬರೂ 1917 ಜುಲೈ 13ರಂದು ಕಂಪನಿಯ ಮಾಲೀಕರಾದರು. ಆದರೆ ಕೆಲವು ದಿನಗಳ ಅನಂತರ ನಾಗರಾಜಯ್ಯನವರ ಸಹಕಾರ ದೊರೆಯದಿದ್ದುದರಿಂದ ಇವರು ಅವರ ಪಾಲಿನ ಹಣವನ್ನು ಕೊಟ್ಟು ಸಂಪೂರ್ಣವಾಗಿ ತಾವೇ ಮಾಲೀಕರಾದರು.

ಗುಬ್ಬಿ ಕಂಪನಿಯ ನಿಜವಾದ ಇತಿಹಾಸ ಪ್ರಾರಂಭವಾದದ್ದು ವೀರಣ್ಣನವರು ಈ ಸಂಸ್ಥೆಯ ಮಾಲೀಕರಾದ ಮೇಲೆಯೇ. ಯಜಮಾನರಾದ ಕೂಡಲೇ ಇವರು ಗಮನ ಹರಿಸಿದ್ದು ಉತ್ತಮ ನಾಟಕಗಳ ಕಡೆಗೆ. ಅದಕ್ಕಾಗಿ ಬೆಳ್ಳಾವೆ ನರಹರಿಶಾಸ್ತ್ರೀಯವರಿಂದ ಕೃಷ್ಣಲೀಲಾ, ಶ್ರೀಕೃಷ್ಣ ಪಾರಿಜಾತ, ಜಲಂಧರ, ಕೃಷ್ಣಗಾರುಡಿ ಮೊದಲಾದ ನಾಟಕಗಳನ್ನು ಬರೆಸಿ ಪ್ರದರ್ಶಿಸಿದರು. ರಂಗಸಜ್ಜಿಕೆಯಲ್ಲೂ ಅನೇಕ ಸುಧಾರಣೆಗಳನ್ನು ತಂದು ಅದನ್ನು ಶ್ರೀಮಂತಗೊಳಿಸಿದರು. ಹೀಗಾಗಿ ಆ ದಿನಗಳಲ್ಲಿ ಪ್ರತಿ ಪ್ರದರ್ಶನಕ್ಕೆ ಸಾವಿರ ರೂಪಾಯಿ ವರಮಾನ ಬರುವಂತಾಯಿತು. ಸಂಸ್ಥೆಯ ಸುವರ್ಣ ಮಹೋತ್ಸವವನ್ನು 1934ರಲ್ಲಿ ಅದ್ದೂರಿಯಿಂದ ಆಚರಿಸಿದ ವೀರಣ್ಣನವರು ಈ ಸಂದರ್ಭಕ್ಕಾಗಿಯೇ ಬಿ.ಪುಟ್ಟಸ್ವಾಮಯ್ಯನವರಿಂದ ಕುರುಕ್ಷೇತ್ರ ನಾಟಕವನ್ನು ಬರೆಸಿ ಪ್ರದರ್ಶಿಸಿದರು. ರಂಗಸಜ್ಜಿಕೆ, ವೇಷಭೂಷಣಗಳಿಗಾಗಿ ಎಪ್ಪತ್ತು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದರು. ಪ್ರಯೋಗದಲ್ಲಿ ಜೀವಂತಿಕೆಯನ್ನು ತರುವುದಕ್ಕಾಗಿ ನಿಜವಾದ ಆನೆ, ಕುದುರೆಗಳನ್ನೇ ರಂಗದ ಮೇಲೆ ತರಲು ಪ್ರಾರಂಭಿಸಿದರು. ಕುರುಕ್ಷೇತ್ರ ನಾಟಕವನ್ನು ದಿನಕ್ಕೆ ಮೂರು ಬಾರಿ ಪ್ರದರ್ಶಿಸಿ ಪ್ರತಿ ಪ್ರದರ್ಶನದಲ್ಲೂ ಹೊಸತನವನ್ನು ತಂದರು. ಅದುವರೆಗೆ ನಾಟಕ ಕಂಪನಿಗಳು ವಾರಕ್ಕೆ ಮೂರು ಅಥವಾ ನಾಲ್ಕು ದಿನ ನಾಟಕಗಳನ್ನಾಡುತ್ತಿದ್ದರೆ ಹೆಚ್ಚು. ಗುಬ್ಬಿ ಕಂಪನಿ ಪ್ರದರ್ಶಿಸಿದ ಇನ್ನೊಂದು ಪ್ರಸಿದ್ಧ ನಾಟಕ ಬಿ.ಪುಟ್ಟಸ್ವಾಮಯ್ಯನವರಿಂದ ರಚಿತವಾದ ದಶಾವತಾರ. ಬೆಂಗಳೂರು ನಗರದಲ್ಲಿಯೇ ಈ ನಾಟಕ ನೂರಾ ಇಪ್ಪತ್ತೆಂಟು ಪ್ರದರ್ಶನಗಳನ್ನು ಕಂಡಿತು.

ನಾಟಕಕಾರರ ಮಾರ್ಗದರ್ಶನದಲ್ಲಿಯೇ ನಾಟಕದ ರಿಹರ್ಸಲ್ ನಡೆಯುವಂತೆ ವೀರಣ್ಣನವರು ವ್ಯವಸ್ಥೆ ಮಾಡಿದ್ದು, ಪ್ರಯೋಗದ ದೃಷ್ಟಿಯಿಂದ ಗಮನಾರ್ಹ. ವೃತ್ತಿರಂಗಭೂಮಿಯಲ್ಲಿ ಈ ಬಗೆಯ ಪ್ರಯೋಗ ಅದೇ ಮೊದಲು. ಪ್ರತಿಭಾವಂತ ನಾಟಕಕಾರರನ್ನು ಪತ್ತೆಮಾಡಿ ಅವರು ಪ್ರಯೋಗದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದಲ್ಲದೆ, ಪ್ರತಿಭಾವಂತ ನಟರನ್ನು ಗುರುತಿಸಿ ತಮ್ಮ ಸಂಸ್ಥೆಗೆ ಸೇರಿಸಿಕೊಂಡು ಪ್ರೋತ್ಸಾಹಿಸಿದರು. ಇವರಿಂದ ಅನೇಕ ನಟರು ಬೆಳಕಿಗೆ ಬಂದರು. ಸಿ.ಬಿ.ಮಲ್ಲಪ್ಪ, ನಟಭಯಂಕರ ಗಂಗಾಧರರಾಯ, ಜಿ.ನಾಗೇಶರಾಯ, ಆರ್.ನಾಗೇಂದ್ರರಾಯ, ಗುರುಮೂರ್ತಪ್ಪ, ಹೊನ್ನಪ್ಪ ಭಾಗವತರ್, ರಾಘವೇಂದ್ರರಾವ್, ವಾಸುದೇವ ಗಿರಿಮಾಜಿ, ರಾಮಚಂದ್ರಶಾಸ್ತ್ರಿ, ಬಿ.ಆರ್. ಪಂತುಲು, ಸುಬ್ಬಯ್ಯ ನಾಯ್ಡು, ಜಿ.ವಿ.ಅಯ್ಯರ್, ರಾಜಕುಮಾರ್, ಟಿ.ಎನ್.ಬಾಲಕೃಷ್ಣ, ನರಸಿಂಹರಾಜು, ಸುಂದರಮ್ಮ, ಅಶ್ವತ್ಥಮ್ಮ, ಬಿ.ಜಯಮ್ಮ, ಬಿ.ವಿ.ಕಾರಂತ ಮೊದಲಾದ ಹೆಸರಾಂತ ಕಲಾವಿದರು ಒಂದಲ್ಲ ಒಂದು ಕಾಲದಲ್ಲಿ ಗುಬ್ಬಿ ಕಂಪನಿಯಲ್ಲಿದ್ದವರೇ.

ಗುಬ್ಬಿ ನಾಟಕ ಸಂಸ್ಥೆ ಪ್ರದರ್ಶಿಸಿದ ಗುಲೇಬಕಾವಲಿ, ಸದಾರಮೆ, ಕುರುಕ್ಷೇತ್ರ, ಅಕ್ಕಮಹಾದೇವಿ, ಸಂಪೂರ್ಣರಾಮಾಯಣ, ಕೃಷ್ಣಾಲೀಲಾ, ರಾಜಾ ಗೋಪಿಚಂದ, ದಶಾವತಾರ, ಅಣ್ಣ ತಮ್ಮ, ಲವಕುಶ ಮೊದಲಾದ ನಾಟಕಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ ಆಂಧ್ರ ತಮಿಳುನಾಡುಗಳಲ್ಲಿಯೂ ಅಪಾರ ಯಶಸ್ಸನ್ನು ಗಳಿಸಿದವು. ಇವರು ಕಂಪನಿಯ ಸಮಸ್ತ ವ್ಯವಹಾರಗಳನ್ನು ನೋಡಿಕೊಳ್ಳುವುದರ ಜೊತೆಗೆ ಅನೇಕ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತಿದ್ದರು. ಇವರ ಹಾಸ್ಯ ಪಾತ್ರಗಳನ್ನು ನೋಡಿ ಜನ ಹುಚ್ಚೆದ್ದು ಕುಣಿಯುತ್ತಿದ್ದರು. ಸದಾರಮೆಯಲ್ಲಿ ಕಳ್ಳ, ಆದಿಮೂರ್ತಿ; ಪ್ರಭಾಮಣಿವಿಜಯದಲ್ಲಿ ವಿಲೋಚನ; ಗುಲೇಬಕಾವಲಿಯಲ್ಲಿ ಮುತ್ತುಸ್ವಾಮಿ ಮತ್ತು ಕುರುಡು ದೊಂಬಿದಾಸ; ಪ್ರಹ್ಲಾದ ಚರಿತ್ರೆಯಲ್ಲಿ ಸಾಬಿ ಈ ಪಾತ್ರಗಳು ಇವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟವು.

ಮಕ್ಕಳಿಗಾಗಿ ಮಕ್ಕಳಿಂದಲೇ ನಾಟಕಗಳನ್ನು ಆಡಿಸುವ ಉದ್ದೇಶದಿಂದ ಇವರು ಬಾಲಕಲಾವಿವರ್ಧಿನಿ ಎನ್ನುವ ಸಂಸ್ಥೆಯನ್ನು ಕಟ್ಟಿ, ಎಂಟರಿಂದ ಹದಿನಾಲ್ಕು ವರ್ಷದೊಳಗಿನ ಮಕ್ಕಳನ್ನು ಕಲೆಹಾಕಿ ಸಾವಿತ್ರಿ, ಕಬೀರಲೀಲೆ ಮುಂತಾದ ನಾಟಕಗಳನ್ನಾಡಿಸಿದರು. ಇದೇ ಸಮಯದಲ್ಲಿ ಚಿಕ್ಕೋಡಿಯ ಶಿವಲಿಂಗಸ್ವಾಮಿ ಎನ್ನುವವರು ಒಂದು ನಾಟಕ ಸಂಸ್ಥೆಯನ್ನು ಕಟ್ಟಿ, ವಿಪರೀತ ನಷ್ಟಕ್ಕೊಳಗಾಗಿ ವೀರಣ್ಣನವರ ಬಳಿಗೆ ಬಂದರು. ಆ ನಾಟಕ ಸಂಸ್ಥೆಯನ್ನು ವೀರಣ್ಣನವರೇ ವಹಿಸಿಕೊಂಡು ಅದನ್ನು ಒಂದು ವ್ಯವಸ್ಥೆಗೆ ತಂದು ಅಭಿವೃದ್ಧಿಪಡಿಸಿ ಅನಂತರ ಶಿವಲಿಂಗ ಸ್ವಾಮಿಯವರಿಗೆ ವಹಿಸಿಕೊಟ್ಟರು.

ವೀರಣ್ಣನವರು ಚಿತ್ರರಂಗದಲ್ಲಿಯೂ ಗಮನಾರ್ಹ ಕೆಲಸ ಮಾಡಿದ್ದಾರೆ. 1930ರಲ್ಲಿಯೇ ಇವರು ತಮ್ಮ ಕಂಪನಿಗಾಗಿ ಜಾಹೀರಾತು ಮಾಡಲು ಚಿತ್ರ ಮಾಧ್ಯಮವನ್ನು ಉಪಯೋಗಿಸಿಕೊಂಡರು, ಅದು ಮೂಕಿ

ಚಿತ್ರಗಳ ಕಾಲ. 1931ರಲ್ಲಿ ದೇವುಡು ಮತ್ತಿತರೊಡನೆ ಸೇರಿ ಹಿಸ್ ಲವ್ ಅಫೇರ್ (ನಿರ್ದೇಶಕರು: ಬೆಲ್ಜಿಯಂನ ಆಲ್‌ಗುಡ್) ಮತ್ತು ಕಳ್ಳರ ಕೂಟ ಎನ್ನುವ ಚಿತ್ರಗಳನ್ನು ತಯಾರಿಸಿದ್ದರು. ಟಾಕಿ ಯುಗ ಪ್ರಾರಂಭವಾದ ಮೇಲೆ 1942ರಲ್ಲಿ ವೀರಣ್ಣನವರು ಕೆಲವು ಮಿತ್ರರೊಡನೆ ಸೇರಿ ಕರ್ನಾಟಕ ಫಿಲ್ಮ್ಸ್ ಸಂಸ್ಥೆಯನ್ನು ಪ್ರಾರಂಭಿಸಿ, ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ, ಸದಾರಮೆ, ಬೇಡರ ಕಣ್ಣಪ್ಪ ಮೊದಲಾದ ಉತ್ತಮ ಚಿತ್ರಗಳನ್ನು ತಯಾರಿಸಿದರು. ಇವರ ಚಿತ್ರಗಳ ಮೂಲಕ ಅನೇಕ ನಿರ್ದೇಶಕರು, ಕಲಾವಿದರು ಬೆಳಕಿಗೆ ಬಂದರು.

ರಂಗಭೂಮಿ ಮತ್ತು ಚಿತ್ರರಂಗ ಕ್ಷೇತ್ರಗಳಲ್ಲಿ ತಮ್ಮ ಅಸಾಧಾರಣ ಪ್ರತಿಭೆಯನ್ನು ಮೆರೆದ ಇವರಿಗೆ ಬಗೆಬಗೆಯ ಗೌರವಪ್ರಶಸ್ತಿಗಳು ಲಭಿಸಿದವು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ವರ್ಸಟೈಲ್ ಕಾಮೆಡಿಯನ್ ಎಂದು ಕರೆಸಿಕೊಂಡರು. ಜಯಚಾಮರಾಜ ಒಡೆಯರ್ ಅವರು 1942ರಲ್ಲಿ ನಾಟಕರತ್ನ ಎಂಬ ಬಿರುದಿತ್ತು ಗೌರವಿಸಿದರು. ಬೆಂಗಳೂರಿನ ಜನತೆ ಇವರನ್ನು ವಿನೋದರತ್ನಾಕರ ಎಂದು ಕರೆದು ಸನ್ಮಾನಿಸಿತು. ಕೇಂದ್ರ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ಪಡೆದಿದ್ದ ಇವರನ್ನು ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್.ಪದವಿ ನೀಡಿ ಗೌರವಿಸಿತು (1970).

ವೀರಣ್ಣನವರು ತಮ್ಮ ಎಂಬತ್ತೆರಡನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ 1972 ಅಕ್ಟೋಬರ್ 18ರಂದು ನಿಧನಹೊಂದಿದರು. ಇವರ ನೆನಪಿಗಾಗಿ ಕರ್ನಾಟಕ ಸರ್ಕಾರ ಗುಬ್ಬಿವೀರಣ್ಣ ಪ್ರಶಸ್ತಿಯನ್ನು ಸ್ಥಾಪಿಸಿದೆ (1994). ಕನ್ನಡ ರಂಗಭೂಮಿಗೆ ಅಪೂರ್ವ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. (ಬಿ.ವಿ.ವಿ.)

**ಗುಮಟೆಪದ :** ಉತ್ತರ ಕನ್ನಡ ಜಿಲ್ಲೆಯಲ್ಲಿ ಗೀತವಾದನ ನೃತ್ಯಗಳಿಂದ ಕೂಡಿ ಪ್ರಚಲಿತವಿರುವ ಒಂದು ಜನಪ್ರಿಯ ಜನಪದ ಕಲೆ. ಗುಮಟೆ ವಾದ್ಯದ ಗತ್ತಿಗೆ ಅಳವಡಿಸಿಕೊಂಡು ಪದವನ್ನು ಹೇಳುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಈ ಪದಗಳನ್ನು ಗಂಡಸರ ಪದಗಳು ಎಂದೂ ಕರೆಯುತ್ತಾರೆ. ಗುಮಟೆ ಮಣ್ಣಿನ ಕುಂಭದಿಂದ ತಯಾರಿಸಿದ ಒಂದು ಬಗೆಯ ವಾದ್ಯ. ಇದರ ಒಂದು ಬದಿಗೆ ಕೊಡದ ಬಾಯಿಯ ಆಕಾರದ ತೆರಪು ಇದ್ದು ಇನ್ನೊಂದು ಬದಿಗೆ ಚಾಪದ (ಉಡ) ಚರ್ಮದಿಂದ ಮುಚ್ಚಿದ ಅಗಲ ಬಾಯಿ ಇರುತ್ತದೆ.

ವಾದ್ಯ ನುಡಿಸುತ್ತಿರುವ ಗುಮಟೆ ಕಲಾವಿದರು

ಗುಮಟೆಯಲ್ಲಿ ಮೂರು ಬಗೆ: 1 ಗುಮಟೆಯ ಪಾಂಗು. ಚವತಿಯ ಹಬ್ಬದಲ್ಲಿ ದೇವತಾಸ್ತುತಿ ಪದಗಳನ್ನು ಹಾಡುತ್ತ ಸಂಬಾಳ ತಾಳ ಮುಂತಾದ ವಾದ್ಯಪರಿಕರಗಳ ಜೊತೆಯಲ್ಲಿ ಬಾರಿಸುವ ಈ ವಾದ್ಯ ಸುಮಾರು ಒಂದೂಕಾಲು ಅಡಿ ಉದ್ದವಾಗಿದ್ದು ಗೋಲಾಕಾರವಾಗಿರುತ್ತದೆ. 2. ಕೋಲುಗುಮಟೆ, ಕೋಲುಪದ ಹೇಳುವ ಸುಗ್ಗಿಯ ಕಾಲದಲ್ಲಿ ಜಾಗಟೆ (ಜಮಟೆ ಅಥವಾ ದೆಂವಟೆ), ಕಂಸಾಳೆ (ಕಟಾಳ ಅಥವಾ ಕಶಾಳ) - ಇವುಗಳ ಜೊತೆಯಲ್ಲಿ ಬಡಿಯುವ ಈ ವಾದ್ಯ ಸುಮಾರು ಮೂರು ಅಡಿ ಉದ್ದವಾಗಿರುತ್ತದೆ. ಇದರ ಸಪ್ಪಳ ಎಲ್ಲ ಬಗೆಯ ಗುಮಟೆಗಳಿಗೂ ಹಿರಿದು. 3. ಗುಮಟೆ. ಗುಮಟೆಯ ಪದಮಾಡುವ ಕಾಲಕ್ಕೆ ಕಂಸಾಳೆಯ ಜೊತೆಯಲ್ಲಿ ಹೊಡೆಯುವ ಈ ವಾದ್ಯ ಸುಮಾರು ಎರಡೂವರೆ ಅಡಿ ಉದ್ದವಾಗಿರುತ್ತದೆ. ಗುಮಟೆಪದ ಮಾಡಲು ನಾಲ್ಕು ಜನ ಗುಮಟೆ ಬಡಿಯುವವರು, ಒಬ್ಬ ಕಂಸಾಳೆ ಬಾರಿಸುವವ, ಒಬ್ಬ ಕುಣಿಯುವುದರಲ್ಲಿ ಪಳಗಿರುವವ - ಹೀಗೆ ಕಡಿಮೆ ಎಂದರೆ ಆರು ಜನ ಬೇಕು. ಇವರಲ್ಲಿ ಅನುಭವಿಕನಾದವನೊಬ್ಬ ಎಲ್ಲರ ಜೊತೆಯಲ್ಲಿ ಗುಮಟೆ ಹೊಡೆಯುತ್ತ ಮೊತ್ತಮೊದಲು ತನ್ನ ಇಷ್ಟದೇವತೆಯನ್ನು ನೆನೆಯುತ್ತ 'ಶರಣು' ಪದದ ಸೊಲ್ಲನ್ನು ಗುಮಟೆ ಗತ್ತಿಗೆ ಅಳವಡಿಸಿಕೊಂಡು ಹಾಡುತ್ತಾನೆ. ಅವನ ಎತ್ತುಗಡೆಯ ಸೊಲ್ಲು ಮುಗಿದ ಕೂಡಲೆ ಉಳಿದವರೂ ಗುಮಟೆಯನ್ನು ಬಾರಿಸುತ್ತ ತಾಳಲಯಬದ್ಧವಾಗಿ ಹಾಡುತ್ತಾರೆ. ಶರಣು ಪದ ಮುಗಿದ ಮೇಲೆ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ವಿಷಯವಸ್ತುವನ್ನೊಳಗೊಂಡ ದೀರ್ಘ ಪದಗಳನ್ನು ಹಾಡುತ್ತ ಹೋಗುತ್ತಾರೆ. ಕಂಸಾಳೆ ಬಾರಿಸುವವನು ಹಾಡಬೇಕೆಂಬ ನಿಯಮವಿಲ್ಲ. ಹಿಮ್ಮೇಳದ ಮುಂದೆ ಗುಮಟೆ ಪದದ ತಾಳಲಯಕ್ಕೆ ತಕ್ಕ ರೀತಿಯಲ್ಲಿ ಗೆಜ್ಜೆ ಕಟ್ಟಿ ಕುಣಿಯುವವರೂ ಪದವನ್ನು ಹೇಳುವುದಿಲ್ಲ. ಇವನು ಗುಮಟೆಪದದ ಕಾವು ಏರಿದಾಗ ಮಾತ್ರ ಅದಕ್ಕೆ ತಕ್ಕಂತೆ ರಭಸದಿಂದ ಕುಣಿದು 'ಚಬಾಚ್' ಎನ್ನುತ್ತ ತನ್ನ ಮೆಚ್ಚಿಗೆ ವ್ಯಕ್ತಪಡಿಸುತ್ತಾನೆ. ಒಮ್ಮೊಮ್ಮೆ ಗುಮಟೆ ಪದಕ್ಕೆ ಇನ್ನೂ ಹೆಚ್ಚಿನ ರಂಗೇರಿಸುವ ಉದ್ದೇಶದಿಂದ ಮಧ್ಯದಲ್ಲಿ 'ಹಗರಣವೇಶ'ಗಳನ್ನು ತರುವ ಪದ್ಧತಿ ಕೆಲವೆಡೆ ಇದೆ. ಗುಮಟೆ ಬಾರಿಸುವಾಗ ಅದರ ಒಲಿಯ (ಉಲಿ) ಮಾಧುರ್ಯ ಹೆಚ್ಚಿಸುವ ಸಲುವಾಗಿ ಚರ್ಮದ ಬದಿಯ ಬಾಯನ್ನು ಬೆಂಕಿಯಿಂದ ಕಾಸಿ ಕಾಸಿ ಇಡುತ್ತಾರೆ. ಪದಗಳ ಬೇರೆ ಬೇರೆ ರಸಭಾವಗಳಿಗೆ ತಕ್ಕಂತೆ ಗುಮಟೆ ಬಡಿಯುವ ಸುಮಾರು ಹತ್ತು ಬಗೆಯ ಕೈಗಳಿವೆ (ವಿಧಾನ). ಗುಮಟೆ ಪದದ ಒಂದು ಉದಾಹರಣೆ:

ಇಲ್ಲಿ ನಾಮೇ ಹೊಡೆದಾ ಗುಮಟೇಯೋ
ಪಟ್ಣದಲ್ಲಿ ಗೋವಿಂದಾಗರ್ಗಾಲೋ
ಇಲ್ಲಿ ನಾಮೇ ಹೇಳಿದ ಪದನಾವೇ
ಗಿರಿಯಾಮನೇ ತಿಮ್ಮಪ್ಪಗರಗಾಲೋ

ಗುಮಟೆ ಕಲೆಗಾರರು ತಮ್ಮ ಬಿಡುವಿನ ವೇಳೆಯಲ್ಲಿ ಗುಮಟೆ ಪದ ಹಾಡಿ ತಾವೂ ಸಂತೋಷಪಟ್ಟು ಇತರರಿಗೂ ಮನರಂಜನೆ ಒದಗಿಸುತ್ತಾರೆ. ಇವರು ಬೆಂಕಿಯ ಹೊಡತಲ ಪಂಜು ತಯಾರಿಸಿ ಅದರ ಬೆಳಕಿನಲ್ಲಿ ನಡುರಾತ್ರಿಯವರೆಗೆ ಕೆಲವೊಮ್ಮೆ ನಸುಕು ಹರಿಯುವವರೆಗೆ ಗುಮಟೆಪದ ಮಾಡುವುದುಂಟು. (ಎನ್.ಆರ್.ಎನ್.)

**ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು :** 13-17ನೆಯ ಶತಮಾನಗಳಲ್ಲಿ ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಮತ್ತು ಅದರ ಸುತ್ತ ಹೊಂದಿಕೊಂಡಿದ್ದ ನೆರೆ ಪ್ರದೇಶಗಳನ್ನೆಲ್ಲ ಒಳಗೊಂಡಿದ್ದ ಪ್ರದೇಶವನ್ನು ಆಳಿದ ಪಾಳೆಯಗಾರರು. ಇವರು ವೇಕರಿ ಮನೆತನದವರು, ಹಾಲುವ್ಯಾಕರ ಕ್ಷತ್ರಿಯ ಜಾತಿಯವರು, ಅಚ್ಯುತ ಗೋತ್ರ ನಾರಾಯಣಸೂತ್ರದ ಯಜುಶ್ಯಾಖಾನುವರ್ತಿಗಳು ಇವರ ಮನೆ ದೇವರು ಖಾದ್ರಿ ನರಸಿಂಹಸ್ವಾಮಿ ಎಂದು ಇವರ ದಾಖಲೆಗಳಿಂದ ತಿಳಿಯುತ್ತದೆ. ಈ ಪಾಳೆಯಗಾರರ ಇತಿಹಾಸದ ಬಗ್ಗೆ ದೊರಕುವ ಮಾಹಿತಿಗಳು ಅನೇಕ ಅಸಾಂಗತ್ಯ ಅಂಶಗಳಿಂದ ಕೂಡಿದೆ. ಹೊಸ ಸಂಶೋಧನೆಗಳಿಂದಷ್ಟೇ ಇದರ ಪುನರ್ರಚನೆ ಸಾಧ್ಯ. ಈ ಮನೆತನದ ಇತಿಹಾಸವನ್ನು ಸದ್ಯಕ್ಕೆ ಹೀಗೆ ನಿರೂಪಿಸಲಾಗಿದೆ.

ಕಡಪ ಜಿಲ್ಲೆಯ ದೊಡ್ಡ ಪಾಳ್ಯದವರಾದ ನರಸಿಂಹನಾಯಕ ಮತ್ತು ಅವನ ಸೋದರ ಖಾದ್ರಿಪತಿನಾಯಕರು ವಲಸೆ ಬಂದು ಮೊದಲು ಶಿಡ್ಲಘಟ್ಟ ತಾಲ್ಲೂಕಿನ ಯುಗುವಕೋಟೆಯಲ್ಲಿ ನೆಲೆಸಿದರು. ಖಾದ್ರಿಪತಿನಾಯಕ ಸಮೀಪದ ಪಾತಪಾಳ್ಯದಲ್ಲಿದ್ದ ಶ್ರೀಮಂತ ಸೋದರರಾದ ಗುಮ್ಮರೆಡ್ಡಿ, ಲಕ್ಕರೆಡ್ಡಿಯವರ ನೆರವಿನಿಂದ ಅಲ್ಲಿ ಕೋಟೆ ಕಟ್ಟಿ ಪಾತಪಾಳ್ಯ ಮತ್ತು ಭೈರವನ ಬೆಟ್ಟ ಪ್ರಾಂತ್ಯವನ್ನು ಆಳತೊಡಗಿದ. ಖಾದ್ರಿಪತಿನಾಯಕ ಪ್ರಧಾನವಾಗಿ ಭೂ ಅಭಿವೃದ್ಧಿಗೆ ಹೆಚ್ಚು ಗಮನ ಕೊಟ್ಟು ಕೆರೆಕಟ್ಟೆಗಳನ್ನು ನಿರ್ಮಿಸಿ ಕಾಡುಗಳನ್ನು ನೆಲಸಮ ಮಾಡಿ ದೇವರಾಜ ಪಳ್ಳಿ ಮೊದಲಾದ ಅನೇಕ ಹೊಸ ಹಳ್ಳಿಗಳನ್ನು ಸ್ಥಾಪಿಸಿದ. ಇವನು ತೀರಿಕೊಂಡಮೇಲೆ (ಸು.1272) ಅಧಿಕಾರಕ್ಕೆ ಬಂದ ಇವನ ಮಗ

ಚಿನ್ನಮ್ಮನಾಯಕ (ಸು.1272-96) ತಮ್ಮ ಪಾಳೆಯಪಟ್ಟು ಸ್ಥಾಪನೆಗೆ ನೆರವಾದ ಶ್ರೀಮಂತ ಗುಮ್ಮರೆಡ್ಡಿ, ಲಕ್ಕರೆಡ್ಡಿಯವರ ಹೆಸರು ಶಾಶ್ವತವಾಗಿರಬೇಕೆಂಬ ಇಚ್ಛೆಯಿಂದ ತಮ್ಮ ಪಾಳೆಯಕ್ಕೆ ಗುಮ್ಮನಾಯಕನ ಪಾಳ್ಯವೆಂದು ಹೆಸರಿಟ್ಟ. ಕಲ್ಯಾಣದುರ್ಗದಲ್ಲಿ ಒಂದು ಕೋಟೆಯನ್ನು ಕಟ್ಟಿದ್ದಲ್ಲದೆ ಗುತ್ತಿಪಾಳ್ಯ, ಮದ್ದೆಪಲ್ಲಿ ಮತ್ತು ಸುತ್ತಣ ಭಾಗಗಳಲ್ಲಿ ಗೆದ್ದ. ಕೆರೆಕಟ್ಟೆಗಳನ್ನೂ ದೇವಾಲಯಗಳನ್ನೂ ಕಟ್ಟಿಸಿದ. ಮಹಾನಾಯಕಾಚಾರ್ಯ ಎಂಬ ಬಿರುದನ್ನೂ ಧರಿಸಿದ. ಇವನ ಮಗ ಗುಮ್ಮನಾಯಕನ (ಸು.1296-1364) ಕಾಲದಲ್ಲಿ ಆನೆಗೊಂದಿಯ ತಿರುಮಲರಾಯ ದಂಡೆತ್ತಿಬಂದಾಗ, ಅವನಿಗೆ ಹಣ ನೀಡಿದ್ದಲ್ಲದೆ ಅವನ ಸಾಮಂತನಾಗಿರಲು ಒಪ್ಪಿದ. ಮುಂದಿನ ರಾಜರೂ ಕಡೆಯುವರೆಗೆ ವಿಜಯನಗರದ ಅರಸರಿಗೆ ನಿಷ್ಠಾವಂತರಾಗಿದ್ದರು. ಗುಮ್ಮನಾಯಕನ ಮಗ ಲಕ್ಕನಾಯಕನ (ಸು.1314-46) ಅನಂತರ ಆಳಿದ ಕದಿರಪ್ಪನಾಯಕ (ಸು.1363-88) ಸ್ಮರಣೀಯ ಕೆಲಸಗಳನ್ನು ಮಾಡಿದ. ಇವನ ಕಾಲದಲ್ಲಿ ಆಡಳಿತ ಸುಧಾರಣೆ ಆಗಿ ಅದಕ್ಕೆ ಒಂದು ಸುವ್ಯವಸ್ಥಿತ ರೂಪ ಬಂತು. ಜೊತೆಗೆ ಭೂ ಅಭಿವೃದ್ಧಿಯ ದೃಷ್ಟಿಯಿಂದ ಅವನು ಭೂಸಂಬಂಧದ ಅನೇಕ ಕಾಯಿದೆಗಳನ್ನು ರೂಪಿಸಿದ. ಗ್ರಾಮ ಗ್ರಾಮಕ್ಕೆ ಗ್ರಾಮಾಧಿಕಾರಿಗಳನ್ನು ನೇಮಿಸಿದ ಮತ್ತು ಅನೇಕ ಹೊಸ ಗ್ರಾಮಗಳನ್ನು ಸ್ಥಾಪಿಸಿದ. ಇವನು ಆಂಧ್ರದ ಪಾಳೆಯಗಾರರನ್ನು ಗೆಲ್ಲಲು ವಿಜಯನಗರದ ಅರಸನಿಗೆ ಸಹಾಯಮಾಡಿದ್ದ. ಆತ ಇವನಿಗೆ ಮಾನ್ಯ ಜಹಗೀರುಗಳನ್ನಿತ್ತ. ಇವನ ಅನಂತರ ಸಿಂಗಪ್ಪನಾಯಕ (ಸು.1388-1457) ಮತ್ತು ದೊಡ್ಡ ವಸಂತನಾಯಕ (1457-67) ಆಳಿದರು. 3ನೆಯ ವಸಂತನಾಯಕ ವಿಜಯನಗರದ ಮಲ್ಲಿಕಾರ್ಜುನನ ಪರವಾಗಿ ಗುಲ್ಬರ್ಗದ ಮೇಲೆ ದಾಳಿಯಿಟ್ಟು ಅಲ್ಲಿನ ಸುಲ್ತಾನನನ್ನು ಕೊಂದು ಅರಸನಿಂದ ಮತ್ತಷ್ಟು ಪ್ರದೇಶಗಳನ್ನು ಬಹುಮಾನವಾಗಿ ಪಡೆದ. ಇವನ ಅನಂತರ ಆಳಿದ ಮಾಸಲನಾಯಕನು ಪಾತಪಾಳ್ಯ ಮೊದಲಾದ ಅನೇಕ ನೆರೆಪ್ರಾಂತ್ಯದ ಪ್ರದೇಶಗಳನ್ನು ಗೆದ್ದುಕೊಂಡು ರಾಜ್ಯ ವಿಸ್ತರಿಸಿಕೊಂಡ. ತರುವಾಯದ ಪಾಳೆಯಗಾರ ಇಮ್ಮಡಿ ಕದಿರಪ್ಪನಾಯಕ (1482-1508) ವಿಜಯನಗರದ ನವರಾತ್ರಿ ಉತ್ಸವದಲ್ಲಿ ಕಠಾರಿ ಇದಿರಿಸುವ ಶೂರನಿಗೆ ಆಹ್ವಾನ ಬಂದಾಗ ಎದೆಯೊಡ್ಡಿ ತನ್ನ ಸ್ಥೈರ್ಯವನ್ನು ಸ್ಥಾಪಿಸಿ ಸನ್ಮಾನಿತನಾಗಿ ಉಂಬಳಿ ಇನಾಮನ್ನೂ ಶ್ವೇತಛತ್ರಚಾಮರ ಮೊದಲಾದ ಗೌರವರಕ್ಷೆಯನ್ನೂ ದೊರಕಿಸಿಕೊಂಡ. ಅನಂತರ ಮುಮ್ಮಡಿ ವಸಂತನಾಯಕ (1584 -1614) ಮತ್ತು ನಾಲ್ಕನೆಯ ನರಸಿಂಹನಾಯಕ (1614-44) ವಿಜಯನಗರದ ಸಾಮಂತರಾಗಿ ಆಳಿದರು. ಅನಂತರದ ಬಂಗಾರ ತಿಮ್ಮನಾಯಕ (ಸು.1680-1723), ಮೂರನೆಯ ಕದಿರಪ್ಪನಾಯಕ ಮುಂತಾದವರು ಮುಗಲರು ಹಾಗೂ ಮರಾಠರಿಗೆ ಕಪ್ಪ ಒಪ್ಪಿಸುತ್ತ ತಮ್ಮ ಅಧಿಕಾರವನ್ನು ಉಳಿಸಿಕೊಂಡಿದ್ದರು. ಕೊನೆಯ ದೊರೆ ನರಸಿಂಹನಾಯಕ ತನ್ನ ಆಡಳಿತ ವ್ಯವಸ್ಥೆಗೆ ಸಾನಿ ನರಸಿಂಹಯ್ಯ ಎಂಬ ದಳವಾಯಿಯನ್ನು ನೇಮಿಸಿಕೊಂಡ. ಆತ ದಕ್ಷನಾದರೂ ಅಧಿಕಾರಲಾಲಸೆಗೆ ಒಳಗಾಗಿ ಸರ್ವಾಧಿಕಾರಿಯಂತೆ ವರ್ತಿಸಿದ. ಆ ಸಮಯದಲ್ಲಿ ನಾಯಕನ ಹಿರಿಯ ಪತ್ನಿ ರಾಮಕ್ಕ ಆಡಳಿತಸೂತ್ರವನ್ನು ದಳವಾಯಿಯಿಂದ ಹಿಂತೆಗೆದುಕೊಳ್ಳಲು ಬಳ್ಳಾಪುರದ ಪಾಳೆಯಗಾರರ ನೇತೃತ್ವದಲ್ಲಿ ಒಂದು ಸ್ನೇಹಕೂಟವನ್ನು ಗುಟ್ಟಾಗಿ ಸ್ಥಾಪಿಸಿ ಸಾನಿ ನರಸಿಂಹಯ್ಯನ ಉಚ್ಚಾಟನೆಗೆ ಸಂಚುಮಾಡಿದಳು. ಅದು ಫಲಿಸಿ ಅವನು ಅಧಿಕಾರ ತ್ಯಜಿಸಿದರೂ ಕೆಲವೇ ದಿನಗಳಲ್ಲಿ ಪಾಳ್ಯ ಹೈದರನ ದಾಳಿಗೆ ತುತ್ತಾಯಿತು. ನಾಯಕ ಮತ್ತು ನಾಯಕಿ ಸೆರೆಯಾದರು. ಆದರೆ 3ನೆಯ ಮೈಸೂರು ಯುದ್ಧದ ಕಾಲದಲ್ಲಿ ನರಸಿಂಹನಾಯಕ ಆಂಗ್ಲರ ನೆರವನ್ನು ಬೇಡಿದ. ನಾಲ್ಕನೆಯ ಮೈಸೂರು ಯುದ್ಧದ ಕಾಲದಲ್ಲಿ ಅವರ ಸಹಾಯದಿಂದ ತನ್ನ ಪಾಳೆಯಪಟ್ಟನ್ನು ಪಡೆದರೂ ಶೀಘ್ರದಲ್ಲೇ ಆಂಗ್ಲರ ವಚನಭ್ರಷ್ಟತೆಯಿಂದ ಪುನಃ ಅಧಿಕಾರ ಕಳೆದುಕೊಂಡು ಕೆಲವು ದಿನಗಳಲ್ಲೇ ನಿಧನಹೊಂದಿದ. (ಸಿ.ಕೆ.ಎನ್.)

**ಗುಮ್ಮಳಾಪುರದ ಸಿದ್ಧಲಿಂಗೇಶ್ವರ :** 15ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ವೀರಶೈವ ಕವಿ. ಶೂನ್ಯಸಂಪಾದನೆಯ ಸಂಕಲನಕಾರರಲ್ಲೊಬ್ಬ. ತೋಂಟದ ಸಿದ್ಧಲಿಂಗಶಿವಯೋಗಿಯ ಶಿಷ್ಯ. ತಮಿಳುನಾಡಿನಹೊಸೂರು ತಾಲ್ಲೂಕಿನ ಗುಮ್ಮಳಾಪುರ ಇವನ ಜನ್ಮಸ್ಥಳ. 15-16ನೆಯ ಶತಮಾನಗಳಲ್ಲಿ ಇದು ವೀರಶೈವ ಧರ್ಮದ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಶೂನ್ಯಸಂಪಾದನೆಯನ್ನು ಮೊಟ್ಟಮೊದಲು ನಿರ್ಮಿಸಿದ ಶಿವಗಣಪ್ರಸಾದಿ ಮಹಾದೇವಯ್ಯ ಇದೇ ಸ್ಥಳದವನಾಗಿದ್ದಿರಬೇಕೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಶೂನ್ಯಸಂಪಾದನೆ ವಚನಗಳ ಸಂಕಲನ ಗ್ರಂಥ. ಮಹಾದೇವಯ್ಯನ ಶೂನ್ಯ ಸಂಪಾದನೆಯಲ್ಲಿ ಸಿದ್ಧರಾಮನಿಗೆ ದೀಕ್ಷೆಯಾದ ಪ್ರಸಂಗ ಇಲ್ಲದಿರುವುದನ್ನು ಕಂಡು ಕೆಂಚವೀರಣ್ಣೊಡೆಯ (ಪುರಾತನರ ವಚನವಿಡಿದು ಸಾವಿರದ ಏಳುನೂರು ವಚನಗಳಿಂದ) ವರ್ಣಿಸಿದ ದೀಕ್ಷಾಕ್ರಮವನ್ನು ಪರಿಷ್ಕರಿಸಿ ತನ್ನ ಕೃತಿಯನ್ನು ನಿರ್ಮಿಸಿದುದಾಗಿ ಸಿದ್ಧಲಿಂಗೇಶ್ವರ ಹೇಳಿಕೊಂಡಿದ್ದಾನೆ. ಇವನ ಶೂನ್ಯ ಸಂಪಾದನೆಯ ಪ್ರಾರಂಭದ ಧಾಟಿ ಮತ್ತು ಧ್ವನಿ ಹಿಂದಿನ ಸಂಕಲನಗಳಿಗಿಂತ ಬೇರೆಯಾಗಿರುವುದು ಕಂಡುಬರುತ್ತದೆ. ಹಿಂದಿನ ಸಂಕಲನಕಾರರು ಹೇಳಿದ ಪ್ರಭುದೇವರ ಜನ್ಮವೃತ್ತಾಂತವನ್ನು ಇವನು ಸೂಚ್ಯವಾಗಿ ಖಂಡಿಸಿ ಅವನ ಮತ್ತು ಬಸವಾದಿ ಶರಣರ ಕಾರಣಿಕತ್ವವನ್ನು ಸ್ಥಾಪಿಸಿದ್ದಾನೆ. ಉಳಿದ ಮುಖ್ಯಾಂಶಗಳಲ್ಲೆಲ್ಲ ಶಿವಗಣಪ್ರಸಾದಿಯನ್ನೇ ಅನುಸರಿಸಿದ್ದಾನೆ. ಹಿಂದಿನ ಸಂಪಾದನೆಗಳಲ್ಲಿಲ್ಲದ ಒಂದೆರಡು ಹೊಸ ಪ್ರಸಂಗಗಳನ್ನೂ (ಆಯ್ದಕ್ಕಿ ಮಾರಯ್ಯ ಮತ್ತು ಗೋರಕ್ಷನ ಪ್ರಸಂಗ) ಸೇರಿಸಿದ್ದಾನೆ. ಔಚಿತ್ಯವರಿತ ಪರಿಷ್ಕಾರಕುಶಲತೆ ಇವನ ಶೂನ್ಯಸಂಪಾದನೆಯಲ್ಲಿ ಪ್ರಧಾನವಾಗಿ ಎದ್ದುಕಾಣುತ್ತದೆ. ಈತ ಸಂಕಲನಗ್ರಂಥವನ್ನಲ್ಲದೆ ಬೋಳಬಸವೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ ಎಂಬ ಅಂಕಿತವನ್ನಿಟ್ಟುಕೊಂಡು ಸ್ವತಂತ್ರ ವಚನಗಳನ್ನು ಬರೆದಿದ್ದಾನೆ. ಇವನ ಷಟ್ಸ್ಥಲದ ಲಿಂಗಾಂಗ ಸಂಬಂಧದ ನಿರ್ವಚನ ಎಂಬುದರಲ್ಲಿ ವೀರಶೈವ ಸಿದ್ಧಾಂತವನ್ನು ಬೋಧಿಸುವ 15 ವಚನಗಳಿವೆ. (ಎಚ್.ಟಿ.ಎಸ್.)

**ಗುರುದತ್ತ :** 1925-64. ಹಿಂದಿ ಚಿತ್ರರಂಗದಲ್ಲಿ ಪ್ರಸಿದ್ಧಿಯ ಶಿಖರವೇರಿದ ನಟ, ನಿರ್ದೇಶಕ ಹಾಗೂ ನಿರ್ಮಾಪಕ. ಕನ್ನಡಿಗರಾದ ಇವರು 1925 ಜುಲೈ 9ರಂದು ಮೈಸೂರಿನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಕೊಲ್ಕತ್ತದಲ್ಲಿ ಪೂರೈಸಿದರು. ಅನಂತರ ಹೆಸರಾಂತ ನೃತ್ಯ ಪಟು ಉದಯಶಂಕರರ ಬಳಿ ನೃತ್ಯಾಭ್ಯಾಸ ಮಾಡಿದರು. ಪ್ರಭಾತ ಸ್ಟುಡಿಯೋದಲ್ಲಿ ನೃತ್ಯಸಂಯೋಜಕರಾಗಿ ಚಲನಚಿತ್ರರಂಗ ಪ್ರವೇಶಿಸಿದರು. ಅಲ್ಲಿ ಹಿಂದಿ ಚಿತ್ರರಂಗದ ಹೆಸರಾಂತ ನಟ ದೇವಾನಂದರ ಪರಿಚಯ ಗೆಳೆತನ ಲಭಿಸಿತು. ಹಮ್ ಏಕ್ ಹೈ ಚಿತ್ರದ ನೃತ್ಯ ಸಂಯೋಜಕರಾಗಿ ಕೆಲಸ ಮಾಡಿದರು (1946). ಮುಂದೆ ಇವರು ಬಾಂಬೆ ಟಾಕೀಸ್ ಸೇರಿದರು. ಸಹ ನಿರ್ದೇಶಕರಾಗಿ ಲಖರಾನಿ (1945), ಮೋಹನ (1947), ಗರ್ಲ್ಸ್ ಸ್ಕೂಲ್ (1949), ಸಂಗ್ರಾಮ (1950) ಚಲನ ಚಿತ್ರಗಳಲ್ಲಿ ಕೆಲಸ ಮಾಡಿದರು. ದೇವಾನಂದ್ 1950ರಲ್ಲಿ ನವಕೇತನ ಸಂಸ್ಥೆ ಆರಂಭಿಸಿದರು. ಹಿಂದೆ ಇವರಿಗೆ ಕೊಟ್ಟ ಮಾತಿನಂತೆ ತಮ್ಮ ಪ್ರಥಮ ನಿರ್ಮಾಣದ ಚಿತ್ರ ನಿರ್ದೇಶಿಸಲು ಅವಕಾಶ ಕಲ್ಪಿಸಿದರು. ಗುರುದತ್ ನಿರ್ದೇಶಿಸಿದ ಪ್ರಥಮ ಚಿತ್ರ ಬಾಜಿ (1951). ಇದು ಇವರಿಗೆ ಒಳ್ಳೆಯ ಹೆಸರು ತಂದುಕೊಟ್ಟಿತು. ಅನಂತರ ಜಾಲ್ ಚಿತ್ರವನ್ನು ನಿರ್ದೇಶಿಸಿದರು (1952). ಇದೊಂದು ಹೊಸ ಬಗೆಯ ಕುತೂಹಲ ಮೂಡಿಸುವ ಚಿತ್ರ. ಅದಾದ ಬಳಿಕ ಸೈಲಾಬ್ ಎಂಬ ಚಿತ್ರ ನಿರ್ದೇಶಿಸಿದರು (1956).



ನಿರ್ಮಾಪಕ, ನಟ, ನಿರ್ದೇಶಕರಾಗಿ ತಮ್ಮನ್ನು ತೊಡಗಿಸಿಕೊಂಡು ಎಚ್.ಜಿ. ಫಿಲ್ಮ್ಸ್ ಲಾಂಛನದಲ್ಲಿ ಬಾಜ್ ಚಿತ್ರ ನಿರ್ಮಿಸಿದರು (1953). ಇದರಲ್ಲಿ ಗೀತಾಬಾಲಿಯೊಂದಿಗೆ ತಾವೇ ನಾಯಕರಾಗಿ ಅಭಿನಯಿಸಿದರು. ಅನಂತರ ಇವರು ಹಲವು ಚಿತ್ರಗಳನ್ನು ನಿರ್ದೇಶಿಸಿ ಕೆಲವು ಚಿತ್ರಗಳಲ್ಲಿ

ನಟಿಸಿದರು. ಅವುಗಳಲ್ಲಿ ಮುಖ್ಯವಾದುವು. ಆರ್‌ಪಾರ್ (1954), ಮಿಸ್ಟರ್ ಅಂಡ್ ಮಿಸೆಸ್ 55 (1955), ಸಿ.ಐ.ಡಿ. (1956), ಪ್ಯಾಸಾ (1957), ಟ್ವೆಲ್ವೋ ಕ್ಲಾಕ್ (1958), ಚೌದವಿಕಾ ಚಾಂದ್ (1960), ಸಾಹಿಬ್ ಬೀಬಿ ಔರ್ ಗುಲಾಮ್ (1962), ಸೌತೆಲಾಭಾಯಿ (1962), ಬಹುರಾನಿ (1963), ಭರೋಸಾ (1963), ಸಾಂಜ್ ಔರ್ ಸವೇರಾ (1964), ಸುಹಾಗನ್ (1964). ಇವೆಲ್ಲವೂ ಗುರುದತ್ತರ ಜನಪ್ರಿಯತೆಯನ್ನು ಶಿಖರಕ್ಕೇರಿಸಿದ ಚಿತ್ರಗಳು.

ಬಾಜಿ ಚಿತ್ರದಿಂದ ಒಂದೊಂದೇ ಮೆಟ್ಟಿಲೇರುತ್ತ ಯಶಸ್ವಿ ಶಿಖರಕಂಡ ಇವರು ಬಾಜಿ ಚಿತ್ರದ ರೆಕಾರ್ಡಿಂಗ್ ಸಮಯದಲ್ಲಿ ಗಾಯಕಿ ಗೀತಾರಾಯ್ ಅವರ ಪ್ರೇಮದ ಬಲೆಯಲ್ಲಿ ಸಿಲುಕಿ ಅವರನ್ನು ವಿವಾಹವಾದರು (1953 ಮೇ 26). ಗುರುದತ್ ನಿರ್ಮಿಸಿದ ಚಿತ್ರಗಳು ಭಾರತೀಯ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿವೆ. ಪ್ಯಾಸಾ, ಕಾಗಜ್ ಕೆ ಫೂಲ್, ಸಾಹಿಬ್ ಬೀಬಿ ಔರ್ ಗುಲಾಮ್ ಮೊದಲಾದುವು ಉತ್ತಮ ಹಾಡು, ಅಭಿನಯ, ನಿರ್ದೇಶನಗಳಿಂದ ಹೆಸರು ಮಾಡಿದುವು. ಸಾಹಿಬ್ ಬೀಬಿ ಔರ್ ಗುಲಾಮ್ ರಾಷ್ಟ್ರಪತಿಗಳ ರಜತ ಪದಕ ಪಡೆಯಿತು.

ಕಲಾತ್ಮಕತೆ ಮತ್ತು ತಾಂತ್ರಿಕ ಶ್ರೀಮಂತಿಕೆ ಗುರುದತ್ತರ ಚಿತ್ರಗಳ ಜೀವಾಳ. ನೆರಳು ಬೆಳಕುಗಳನ್ನು ಕ್ಯಾಮರದಲ್ಲಿ ಸೆರೆಹಿಡಿಯುವ ಚಾಕಚಕ್ಯತೆ, ಕ್ಯಾಮರ ಕಣ್ಣಿನಲ್ಲಿರುವ ಶಕ್ತಿಯ ಸದ್ಬಳಕೆ, ಹಾಡು ಅಭಿನಯಗಳ ಸಮತೂಕ ನಿರ್ವಹಣೆ, ಪ್ರತಿಯೊಂದು ಫ್ರೇಮಿನಲ್ಲೂ ಜೀವ ತುಂಬುವ ಜಾಣ್ಮೆ, ಜೀವನದ ವಾಸ್ತವತೆಯನ್ನು ಚಿತ್ರಿಸುವ ಕಲೆಗಾರಿಕೆ ಇವೇ ಇವರ ಚಿತ್ರಗಳು ಜನಪ್ರಿಯವಾಗಲು ಕಾರಣವಾದುವು. ಇವರ ಚಿತ್ರಗಳು ಇಂದಿಗೂ ತಾಜಾತನ ಉಳಿಸಿಕೊಂಡಿವೆ. ಖ್ಯಾತಿಯ ಉತ್ತುಂಗದಲ್ಲಿರುವಾಗಲೇ ಜೀವನದಲ್ಲಿ ಜುಗುಪ್ಸೆಗೊಂಡು 1964 ಅಕ್ಟೋಬರ್ 10ರಂದು ಆತ್ಮಹತ್ಯೆ ಮಾಡಿಕೊಂಡರು. (ಎಸ್.ಎಂ.ಕೆ.)

**ಗುರುಪುರ :** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಒಂದು ಗ್ರಾಮ. ಮಂಗಳೂರಿಗೆ 16ಕಿಮೀ ದೂರದಲ್ಲಿ ಈಶಾನ್ಯ ದಿಕ್ಕಿನಲ್ಲಿ ಗುರುಪುರ ನದಿಯ ದಡದಲ್ಲಿದೆ. ಕೆಳದಿ ಅರಸರ ಕಾಲದಲ್ಲಿ ಈ ಊರು ಪ್ರಾಮುಖ್ಯ ಪಡೆದಿತ್ತು. ಇಲ್ಲಿ ಅವರು ಕಟ್ಟಿಸಿದ ವೀರಶೈವ ಗುರುಮಠದಿಂದ ಈ ಊರಿಗೆ ಗುರುಪುರ ಎಂಬ ಹೆಸರು ಬಂತು. ಈಗ ಮಠ ಜೀರ್ಣಾವಸ್ಥೆಯಲ್ಲಿದ್ದರೂ ಹಳೆಯ ಕಟ್ಟಡದ ಶಿಲ್ಪಸೌಂದರ್ಯವನ್ನು ಗುರುತಿಸಬಹುದು. ಮಠದ ಆವರಣದಲ್ಲಿ ನೀಲಕಂಠ ದೇವಾಲಯವಿದೆ. ವರದರಾಜ ವೆಂಕಟರಮಣ ದೇವಾಲಯವೂ ಇಲ್ಲಿದೆ. ಪ್ರತಿವರ್ಷ ಕಾರ್ತೀಕ ಮಾಸದಲ್ಲಿ ದೀಪೋತ್ಸವ ನಡೆಯುತ್ತದೆ. ಗುರು ಮಠಕ್ಕೆ ಸಮೀಪದಲ್ಲೇ ಬಡವರಿಗೆ ಗಂಜಿ ದಾನ ಮಾಡುತ್ತಿದ್ದ ಗಂಜಿಮಠದ ಅವಶೇಷಗಳಿವೆ. (ಎಂ.ಆರ್.ಎ.)

**ಗುರುಬಸವ :** ಸು.1430. ವೀರಶೈವ ಕವಿ. ಯೋಗಾಂಗವಿಭೂಷಣ, ಸದ್ಗುರುರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತ ಗೀತೆ, ಮನೋವಿಜಯ ಎಂಬ ಏಳು ಕಾವ್ಯಗಳನ್ನು ಬರೆದಿರುವುದರಿಂದ ಈತ ಸಪ್ತಕಾವ್ಯಗಳ ಗುರುಬಸವ ಎಂದು ಪ್ರಸಿದ್ಧನಾಗಿದ್ದಾನೆ. ಇವನು ಕೆಲವು ಸ್ವರವಚನಗಳನ್ನು ರಚಿಸಿರುವುದಾಗಿಯೂ ತಿಳಿದುಬರುತ್ತದೆ. ಈತ ವಿಜಯನಗರದ ಪ್ರೌಢದೇವರಾಯನ (1424-46) ಕಾಲದಲ್ಲಿದ್ದಂತೆ ಚೆನ್ನಬಸವ ಪುರಾಣದಿಂದ ತಿಳಿಯುತ್ತದೆ. ಗುರುಬಸವ ತನ್ನ ಕಾವ್ಯಗಳಲ್ಲಿ ಎಲ್ಲಿಯೂ ಸ್ವವಿಷಯವನ್ನು ಹೇಳಿಕೊಂಡಿಲ್ಲ. ಆದರೆ ಚೆನ್ನಬಸವ ಪುರಾಣದಲ್ಲಿ ಬರುವ ಕೆಲವು ಪದ್ಯಗಳಲ್ಲಿ ಗುರುಬಸವನ ಅರಮನೆಗೆ ಕರಸ್ಥಲನಾಗಿದೇವ ಬಂದು ಈತನಿಗೆ ಅನುಭಾವದ ಅರಿವನ್ನು ಮಾಡಿಕೊಟ್ಟಂತೆಯೂ ಗುರುಬಸವ ಪ್ರೌಢರಾಯನ ಆಸ್ಥಾನದಲ್ಲಿ ಪರವಾದಿಗಳೊಡನೆ ವಾದಕ್ಕೆ ನಿಂತು ಅವರನ್ನು ಸೋಲಿಸಿದಂತೆಯೂ ನಿರೂಪಿತವಾಗಿದೆ. ಈ ಸಂಗತಿಗಳಿಂದ ಗುರುಬಸವ ಬಹಳ ಪ್ರಭಾವಶಾಲಿಯೂ ಮಹಿಮಾಶಾಲಿಯೂ ಆಗಿದ್ದು ಸರ್ವರಿಂದಲೂ ಪೂಜ್ಯತೆಯನ್ನು ಪಡೆದಿದ್ದ ವ್ಯಕ್ತಿಯಾಗಿದ್ದಿರಬೇಕೆಂಬ ಅಂಶ ಸ್ಪಷ್ಟವಾಗುತ್ತದೆ. ಆದುದರಿಂದ ಈತನ ಸಪ್ತಕಾವ್ಯಗಳಲ್ಲಿ ಒಂದಾದ ಮನೋವಿಜಯಕ್ಕೆ ವ್ಯಾಖ್ಯಾನವನ್ನು ಬರೆದ ವಿರಕ್ತ ತೋಂಟದಾರ್ಯ ಗುರುಬಸವನನ್ನು ಭಕ್ತಜನಮನೋಮಂದಿರ, ಶಿವಯೋಗಿಜನ ಸೇವಿತಚರಣಾರವಿಂದ, ಷಟ್ಸ್ಥಲಜ್ಞಾನಪ್ರಭಾಪುಂಜರಂಜಿತಾಂತರಂಗ, ವೀರಶೈವ ಮತಸ್ಥಾಪನಾಚಾರ್ಯ ಮುಂತಾಗಿ ಹೊಗಳಿದ್ದಾನೆ.

ಗುರುಬಸವನ ಸಪ್ತಕಾವ್ಯಗಳೂ ಗುರುಶಿಷ್ಯಸಂವಾದ ರೂಪದಲ್ಲಿವೆ. ಇವುಗಳಲ್ಲಿ ವೀರಶೈವ ವೇದಾಂತವನ್ನು ಪ್ರತಿಪಾದಿಸಲಾಗಿದ್ದು ಲಿಂಗಾಂಗಸಾಮರಸ್ಯದ ತಿರುಳನ್ನು ಸಾಮಾನ್ಯ ಜನಕ್ಕೂ ತಿಳಿಯುವಂತೆ ನಿರೂಪಿಸಲಾಗಿದೆ. ಮನೋವಿಜಯ ಕುಸುಮ ಷಟ್ಪದಿಯಲ್ಲಿದೆ. ಇದರಲ್ಲಿ 9 ಪ್ರಕರಣಗಳೂ 355 ಪದ್ಯಗಳೂ ಇವೆ. ಸುವಿವೇಕನೆಂಬ ಜ್ಞಾನಿ ಸಂಸಾರಕ್ಕೆ ಅಲಸಿ ಗುರುಮುಖಾಂತರ ಸ್ವಸ್ವರೂಪಾವಿರ್ಭಾವವನ್ನು ಪಡೆದ ಮಾರ್ಗವನ್ನು ವಿವರಿಸಲಾಗಿದೆ. ಕಲ್ಯಾಣೇಶ್ವರ, ಯೋಗಾಂಗವಿಭೂಷಣ ಇವೆರಡೂ ಪರಿವರ್ಧಿನಿ ಷಟ್ಪದಿಯಲ್ಲಿವೆ. ಕಲ್ಯಾಣೇಶ್ವರದಲ್ಲಿ 102 ಪದ್ಯಗಳಿದ್ದು ಇದರಲ್ಲಿ ಲಿಂಗಾಂಗಸಾಮರಸ್ಯದ ರಹಸ್ಯವನ್ನು ನಿರೂಪಿಸಲಾಗಿದೆ. ಯೋಗಾಂಗವಿಭೂಷಣದಲ್ಲಿ 6 ಸಂಧಿಗಳೂ 278 ಪದ್ಯಗಳೂ ಇವೆ. ಇದರಲ್ಲಿ ಯೋಗಾಭ್ಯಾಸಕ್ರಮ, ಯೋಗವಿಧಾನ ಅವುಗಳ ಅನುಸಂಧಾನ, ಯೋಗಾಸನ ಮುಂತಾದ ವಿಷಯಗಳನ್ನು ಹೇಳಿದೆ. ಸ್ವರೂಪಾಮೃತ, ಸದ್ಗುರುರಹಸ್ಯ ಭಾಮಿನೀಷಟ್ಪದಿಯಲ್ಲಿವೆ. ಸ್ವರೂಪಾಮೃತದಲ್ಲಿ ಮೂರು ಪರಿಚ್ಛೇದಗಳೂ 77 ಪದ್ಯಗಳೂ ಇವೆ. ಜೀವ ಮತ್ತು ಪರಮಾತ್ಮ ಇವುಗಳ ಸ್ವರೂಪವನ್ನು ಈ ಕಾವ್ಯದಲ್ಲಿ ಸ್ವಾರಸ್ಯವಾಗಿ ವಿವರಿಸಲಾಗಿದೆ. ಸದ್ಗುರುರಹಸ್ಯದಲ್ಲಿ ಒಂಬತ್ತು ಉಪದೇಶಗಳೂ 237 ಪದ್ಯಗಳೂ ಇವೆ. ವೃಷಭಗೀತೆ 101 ಪದ್ಯಗಳನ್ನು ಒಳಗೊಂಡಿದ್ದು ಭೋಗಷಟ್ಪದಿಯಲ್ಲಿದೆ. ಬಸವೇಶ್ವರನ ಸ್ತುತಿರೂಪವಾಗಿದೆ. ಜೊತೆಗೆ ವೀರಶೈವಧರ್ಮವನ್ನೂ ಪ್ರತಿಪಾದಿಸುತ್ತದೆ. ಅವಧೂತಗೀತೆಯಲ್ಲಿ 101 ಹಾಡುಗಳಿವೆ. ಇದರಲ್ಲಿ ಅವಧೂತನ ಲಕ್ಷಣವನ್ನು ವಿವರಿಸಿರುವುದಲ್ಲದೆ ವಿರಕ್ತಿಯನ್ನೂ ಬೋಧಿಸಲಾಗಿದೆ. ಈ ಕಾವ್ಯಗಳ ಅವಲೋಕನದಿಂದ ಗುರುಬಸವ ಶ್ರೇಷ್ಠ ಅನುಭಾವಿ ಎಂಬ ವಿಷಯ ವ್ಯಕ್ತವಾಗುತ್ತದೆ. ಗಹನವಾದ ವೇದಾಂತ ವಿಷಯಗಳನ್ನು ಗುರುಶಿಷ್ಯ ಸಂವಾದ ರೂಪದಲ್ಲಿ ಸುಲಭ ಶೈಲಿಯಲ್ಲಿ ನಿರೂಪಿಸಿರುವ ದೃಷ್ಟಿಯಿಂದ ಈತ ಒಳ್ಳೆಯ ಬೋಧಕ ಎಂಬ ಹೊಗಳಿಕೆಗೆ ಪಾತ್ರನಾಗಿದ್ದಾನೆ. (ಎಸ್.ಬಿ.)

**ಗುರುಮಠಕಲ್ :** ಗುಲ್ಬರ್ಗ ಜಿಲ್ಲೆ ಯಾದಗಿರಿ ತಾಲ್ಲೂಕಿನಲ್ಲಿ ಯಾದಗಿರಿಯಿಂದ ಈಶಾನ್ಯಕ್ಕೆ ಸು.40ಕಿಮೀ ದೂರದಲ್ಲಿರುವ ಊರು. ಹೋಬಳಿ ಕೇಂದ್ರ. ಪುರಸಭೆಯ ಆಡಳಿತಕ್ಕೆ ಒಳಪಟ್ಟಿದೆ. ಜನಸಂಖ್ಯೆ 16,927.

ಗುರುಮಠಕಲ್ ಪ್ರಸಿದ್ಧವಾಗಿರುವುದು ಈ ಸುತ್ತಿನ ಪ್ರದೇಶದ ಭೂ ವೈಜ್ಞಾನಿಕ ವೈಶಿಷ್ಟ್ಯಗಳಿಂದ. ಕರ್ನಾಟಕ ಹಾಗೂ ಆಂಧ್ರಪ್ರದೇಶದ ಗಡಿ ಪ್ರದೇಶದಲ್ಲಿರುವ ಈ ಭಾಗದಲ್ಲಿ ಕ್ರಿಟೇಷಿಯನ್ ಯುಗದ ಬೆಸಾಲ್ಟ್ ಶಿಲೆಗಳ ನಡುವೆ ದೊರಕುವ ಅಂತಃಸ್ತರಗಳು ಅನೇಕ ಭೂವಿಜ್ಞಾನಿಗಳ ಗಮನವನ್ನು ಸೆಳೆದಿವೆ. ಈ ಪ್ರದೇಶದಲ್ಲಿ ಮೂರು ಭೂವೈಜ್ಞಾನಿಕ ಕಲ್ಪಗಳಿಗೆ ಸೇರಿದ ಶಿಲೆಗಳಿವೆ. ಅವು 1.ನೀಣೆಕಲ್ಲು- ಪುರಾತನ ಅಥವಾ ಪ್ರೀ ಕೇಂಬ್ರಿಯಲ್ ಕಲ್ಪ. 2.ಬೆಸಾಲ್ಟ್ ಹಾಗೂ ಜಲಜನ್ಯ ಅಂತಃಸ್ತರಗಳು- ಕ್ರಿಟೇಷಿಯನ್ ಕಲ್ಪ. 3.ಲ್ಯಾಟರೈಟ್- ನವೀನ ಕಲ್ಪ.

ಪುರಾತನ ಕಲ್ಪದ ಶಿಲೆಗಳು ನೀಣೆಕಲ್ಲು ಹಾಗೂ ಗ್ರಾನೈಟ್ ಶಿಲೆಗಳನ್ನು ಹೊಂದಿದ್ದು, ಬೆಸಾಲ್ಟ್ ಶಿಲೆಗಳ ತಳಪಾಯವಾಗಿದೆ. ಅನೇಕ ಪೆಗ್‌ಮೆಟೈಟ್ ಮತ್ತು ಡಾಲರೈಟ್ ಶಿಲೆಗಳು ಗ್ರಾನೈಟ್ ಮತ್ತು ನೀಣೆಕಲ್ಲನ್ನು ಭೇದಿಸುತ್ತವೆ. ಕ್ರಿಟೇಷಿಯನ್ ಯುಗದ ಬೆಸಾಲ್ಟ್ ಪದರಪದರವಾಗಿದ್ದು, ಈ ಪ್ರದೇಶದ ಬಿಡುಭಾಗವನ್ನು ಆಕ್ರಮಿಸುತ್ತದೆ. ಜಲಜನ್ಯ ಅಂತಃಸ್ತರಗಳ ದೊರೆಯುವಿಕೆ ಯಾವಾಗಲೂ ಬೆಸಾಲ್ಟ್ ಶಿಲೆಗಳಿಗೆ ಸೀಮಿತವಾಗಿರುತ್ತದೆ. ಬೆಸಾಲ್ಟ್ ಶಿಲೆಗಳ ಮೇಲ್ಭಾಗವು ನಿರಂತರವಾದ ಭೂವೈಜ್ಞಾನಿಕ ಕ್ರಿಯೆಗಳಿಗೊಳಗಾಗಿ ಲ್ಯಾಟರೈಟ್ ಆಗಿ ಪರಿವರ್ತನೆ ಹೊಂದಿದೆ.

ಗುರುಮಠಕಲ್ ಪ್ರದೇಶದಲ್ಲಿ 27 ಅಂತಃಸ್ತರಗಳಿದ್ದು ಬಹುತೇಕ ಎಲ್ಲ ಸ್ತರಗಳೂ ಪಳೆಯುಳಿಕೆಗಳಾಗಿವೆ. ಸಸ್ಯ ಹಾಗೂ ಪ್ರಾಣಿಗಳ

ಅವಶೇಷಗಳು ಹೆಚ್ಚಾಗಿ ಇರುವುದು ಹಾಗೂ ಅತ್ಯಂತ ವಿರಳವಾದ ಮತ್ತು ಅಪರೂಪವಾದ ಪಳೆಯುಳಿಕೆಗಳು ದೊರಕಿರುವುದು ಗಮನಾರ್ಹ. ಆಮೆಯ ಅವಶೇಷ, ಎಲೆಗಳ ಪ್ರತಿರೂಪ, ಸರೀಸೃಪಗಳ ಹಲ್ಲುಗಳು ಇಲ್ಲಿ ದೊರಕುವ ಪಳೆಯುಳಿಕೆಗಳಲ್ಲಿ ವಿಶೇಷ ಸ್ಥಾನವನ್ನು ಪಡೆದಿವೆ.

ಈ ಪ್ರದೇಶದಲ್ಲಿ ದೊರಕುವ ರೂಪಾಂತರ ಹೊಂದಿದ ಜ್ವಾಲಾಮುಖಿಯ ಬೂದಿ (ವಾಲ್ಕೆನಿಕ್ ಆ್ಯಷ್) ಮತ್ತು ಇಗ್ನಿಂಬ್ರೈಟ್ ಅಗ್ನಿಪರ್ವತಕ್ಕೆ ಕುರುಹಾಗಿವೆ. ಇಲ್ಲಿ ದೊರಕುವ ಬೆಣಚುಕಲ್ಲು ಮತ್ತು ಫೆಲ್ಡ್ ಸ್ಪಾರ್ ನಿಕ್ಷೇಪ ಕೈಗಾರಿಕೆಯ ದೃಷ್ಟಿಯಿಂದ ಗಮನಾರ್ಹವಾದದ್ದು. ಈ ಪ್ರದೇಶದ ಸುತ್ತ ಮುತ್ತ ಶಿಲಾಯುಗದ ಕಲ್ಲಿನ ಆಯುಧಗಳು ಸಹ ದೊರಕಿವೆ. (ಟಿ.ಆರ್.ಎಸ್.)

**ಗುರುಲಿಂಗವಿಭು :** ಸು.1550. ವೀರಶೈವ ಕವಿ. ಭಿಕ್ಷಾಟನಚರಿತೆ ಎಂಬ ಕಾವ್ಯದ ಕರ್ತೃ. ಈತ ತನ್ನನ್ನು ಕವಿರಾಯ ಎಂದೂ ಆಶು ಮಧುರಂ ಚಿತ್ರವಿಸ್ತಾರವೆಂದೆಂಬ ನಾಲ್ಕು ಬಗೆಯ ವಿರಚಿಸಲು ಬಲ್ಲ ವಸ್ತುಕ ಕವೀಂದ್ರರ ವರ್ಣಕ ಕವೀಶ್ವರರ ಕರ್ಣಾಭರಣ ಎಂದೂ ಕರೆದುಕೊಂಡಿರುವುದರಿಂದ ಭಿಕ್ಷಾಟನ ಚರಿತ್ರೆಯನ್ನಲ್ಲದೆ ಇತರ ಕೃತಿಗಳನ್ನು ಬರೆದಿರುವಂತೆ ತೋರುತ್ತದೆ. ಆದರೆ ಈತನ ಇತರ ಕೃತಿಗಳು ಸಿಕ್ಕಿಲ್ಲ. ಕಾವ್ಯದಲ್ಲಿ ಕವಿ ಸ್ವವಿಷಯಗಳೇನನ್ನೂ ಹೇಳಿಕೊಂಡಿಲ್ಲ. ಪೂರ್ವಕವಿಗಳಲ್ಲಿ ಬಸವ, ಚೆನ್ನಬಸವ, ಅಲ್ಲಮ, ರೇವಣ್ಣಾರ್ಯ, ಮಡಿವಾಳಮಾಚಿದೇವ, ಸಿದ್ಧರಾಮ, ಮಾದಿರಾಜರನ್ನು ಸ್ಮರಿಸಿದ್ದಾನೆ.

ಭಿಕ್ಷಾಟನಚರಿತೆ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 3 ಸಂಧಿಗಳೂ 155 ಪದ್ಯಗಳೂ ಇವೆ. ಶಿವ ತನ್ನ ಭಿಕ್ಷಾಪಾತ್ರೆಯಾದ ಬ್ರಹ್ಮಕಪಾಲವನ್ನು ಹಿಡಿದು ದ್ವಾರಕೆಗೆ ಬಂದು ಅದನ್ನು ತುಂಬುವಂತೆ ಕೃಷ್ಣನಿಗೆ ಹೇಳಲು, ಆತ ತನ್ನ ತಲೆಯ ರಕ್ತದಿಂದ ಕಪಾಲವನ್ನು ತುಂಬಲಾರದೆ ಭಾರತ ಯುದ್ಧವನ್ನುಂಟುಮಾಡಿ ಅಲ್ಲಿಯ ರಕ್ತಪ್ರವಾಹದಿಂದ ತುಂಬಿದ ಎಂಬುದು ಕಾವ್ಯದ ಕಥಾವಸ್ತು. ಈ ಕಥೆಯನ್ನು ಸೂತನು ನೈಮಿಶಾರಣ್ಯದಲ್ಲಿ ಸನಕಾದಿ ಮುನಿಗಳಿಗೆ ಹೇಳಿದಂತೆ ಉಕ್ತವಾಗಿದೆ. ಕವಿ ಸಂಸ್ಕೃತ ಭಿಕ್ಷಾಟನಚರಿತೆಯನ್ನು ಆಧರಿಸಿ ಈ ಕಾವ್ಯವನ್ನು ಬರೆದಿರಬಹುದೆಂದು ಊಹಿಸಲಾಗಿದೆ. ಕಾವ್ಯದಲ್ಲಿ ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳೂ ಉದ್ಧೃತವಾಗಿವೆ. ಈ ಕಾವ್ಯಕ್ಕೆ ಒಂದು ಕನ್ನಡ ವ್ಯಾಖ್ಯಾನವಿದ್ದು ಇದು ತುಂಬ ಪ್ರೌಢವಾಗಿದೆ. ಈ ವ್ಯಾಖ್ಯಾನದ ಕರ್ತೃ ಯಾರು ಎಂಬುದು ತಿಳಿದಿಲ್ಲ. (ಎನ್.ಬಿ.)

**ಗುರುಶಾಂತಶಾಸ್ತ್ರಿ, ಶಿರಸಿ :** ಗಣ್ಯವಿದ್ವಾಂಸರು. ಮೂಲತಃ ಉತ್ತರ ಕನ್ನಡ ಜಿಲ್ಲೆ ಶಿರಸಿಯವರು. ಇವರು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು ಪಿ.ಆರ್.ಕರಿಬಸವ ಶಾಸ್ತ್ರಿಗಳಲ್ಲಿ ಕನ್ನಡ ಮತ್ತು ವೇದ ವೇದಾಂತ ವಿದ್ಯಾಭ್ಯಾಸ ಮಾಡಿ ಅರಮನೆಯಲ್ಲಿ ವಿದ್ವಾಂಸರಾದರು. ಅನಂತರ ಬೆಂಗಳೂರು ಚಾಮರಾಜ ಸಂಸ್ಕೃತ ಕಾಲೇಜಿನಲ್ಲಿ ವೀರಶೈವ ದರ್ಶನದ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು.

ಇವರು ಕನ್ನಡದಲ್ಲಿ ಲಿಂಗಧಾರಣಚಂದ್ರಿಕೆ, ವೀರಶೈವಾನಂದ ಚಂದ್ರಿಕೆ, ಸಚಿತ್ರ ರೇಣುಕವಿಜಯ, ಉಪನ್ಯಾಸ ಸಂಗ್ರಹ, ಶಿವಲಿಂಗಾರ್ಚನ ಪ್ರಯೋಗ ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಈಶಾವಾಸ್ಯ, ಕೇನ ಮತ್ತು ಸಿದ್ಧಾಂತ—ಈ ಮೂರು ಉಪನಿಷತ್ತುಗಳಿಗೆ ಉಮಚಗಿ ಶಂಕರಶಾಸ್ತ್ರಿಗಳು ಬರೆದಿದ್ದ ವ್ಯಾಖ್ಯಾನವನ್ನು ಅನುಸರಿಸಿ ಕನ್ನಡದಲ್ಲಿ ಭಾವಪ್ರಕಾಶ ಎಂಬ ತಾತ್ಪರ್ಯವನ್ನು ಬರೆದಿದ್ದಾರೆ. ಸಂಸ್ಕೃತ ನ್ಯಾಯಶತಕಕ್ಕೆ ಕನ್ನಡದಲ್ಲಿ ಟೀಕೆಯನ್ನು ರಚಿಸಿದ್ದಾರೆ. ಏಕೋತ್ತರಶತಸ್ಥಲ, ತತ್ತ್ವಪ್ರಕಾಶ, ಶತಸೂತ್ರ ರತ್ನ, ಶ್ರೀಕರಭಾಷ್ಯ ಮತ್ತು ಕ್ರಿಯಾಸಾರ—ಈ ಗ್ರಂಥ'ಗಳನ್ನು ಇವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಮೈಸೂರಿನಿಂದ ಪ್ರಕಟವಾಗುತ್ತಿದ್ದ ಪಂಚಾಚಾರ್ಯ ಪ್ರಭಾ ಎಂಬ ಪತ್ರಿಕೆಗೆ ಇವರು ಕೆಲವು ಕಾಲ ಸಂಪಾದಕರಾಗಿದ್ದರು. ಮಹಾ ವಿದ್ವಾಂಸರೂ ಸರಳ ಜೀವಿಗಳೂ ಆಗಿದ್ದ ಇವರಿಗೆ ಅಂದಿನ ಮೈಸೂರು ಮಹಾರಾಜರು ಪಂಡಿತರತ್ನಂ ಎಂಬ ಬಿರುದನ್ನು ನೀಡಿ ಗೌರವಿಸಿದ್ದರು. (ಬಿ.ಎಸ್.)

**ಗುಲ್ಬರ್ಗ :** ಕರ್ನಾಟಕದ ಒಂದು ವಿಭಾಗ; ಜಿಲ್ಲೆ; ತಾಲ್ಲೂಕು—ಅವುಗಳ ಆಡಳಿತ ಕೇಂದ್ರ ಮತ್ತು ನಗರ. ಗುಲ್ಬರ್ಗ, ರಾಯಚೂರು, ಬೀದರ್, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಗುಲ್ಬರ್ಗ ವಿಭಾಗಕ್ಕೆ ಒಳಪಟ್ಟಿವೆ.

**ಜಿಲ್ಲೆ :** ಗುಲ್ಬರ್ಗ ಜಿಲ್ಲೆ ಕರ್ನಾಟಕದ ಉತ್ತರ ಭಾಗದಲ್ಲಿದೆ. 1956ರಲ್ಲಿ ಭಾರತದ ರಾಜ್ಯಗಳ ಮರುವಿಂಗಡಣೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಕ್ಕೆ ಸೇರಿದ ಮೂರು ಜಿಲ್ಲೆಗಳಲ್ಲಿ ಒಂದು. ಈ ಜಿಲ್ಲೆಯ ಉಳಿದೆರಡು ಜಿಲ್ಲೆಗಳು ಬೀದರ್ ಮತ್ತು ರಾಯಚೂರು. ಉತ್ತರದಲ್ಲಿ ಬೀದರ್ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆ, ಪೂರ್ವದಲ್ಲಿ ಆಂಧ್ರ ಪ್ರದೇಶ, ದಕ್ಷಿಣದಲ್ಲಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಬಿಜಾಪುರ ಮತ್ತು ಮಹಾರಾಷ್ಟ್ರ ಇವು ಗುಲ್ಬರ್ಗ ಜಿಲ್ಲೆಯನ್ನು ಸುತ್ತುವರಿದಿವೆ. ಜಿಲ್ಲೆಯನ್ನು ಗುಲ್ಬರ್ಗ ಮತ್ತು ಯಾದಗಿರಿ ಎಂದು ಎರಡು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಗುಲ್ಬರ್ಗ ಉಪವಿಭಾಗದಲ್ಲಿ ಚಿತ್ತಾಪುರ, ಅಫಜಲಪುರ, ಗುಲ್ಬರ್ಗ, ಆಳಂದ ಮತ್ತು ಸೇಡಂ ತಾಲ್ಲೂಕುಗಳೂ ಯಾದಗಿರಿ ಉಪವಿಭಾಗದಲ್ಲಿ ಚಿಂಚೋಳಿ, ಯಾದಗಿರಿ, ಜೇವರ್ಗಿ, ಶಾಹಪುರ ಮತ್ತು ಸುರಪುರ ತಾಲ್ಲೂಕುಗಳೂ ಇವೆ. 48 ಹೋಬಳಿಗಳೂ 1,386 ಗ್ರಾಮಗಳೂ 12 ಪಟ್ಟಣಗಳೂ ಇರುವ ಗುಲ್ಬರ್ಗ ಜಿಲ್ಲೆಯ ವಿಸ್ತೀರ್ಣ 16,224ಚ.ಕಿಮೀ. ಜನಸಂಖ್ಯೆ 31,24,858. ವಿಸ್ತೀರ್ಣದಲ್ಲಿ ಇದು ರಾಜ್ಯದ ಮೊದಲನೆಯ ಜಿಲ್ಲೆಯಾದರೂ ಜನಸಂಖ್ಯೆಯಲ್ಲಿ ಮೂರನೆಯದು.

ಜಿಲ್ಲೆಯ ಹೆಚ್ಚಿನ ಭಾಗ ದಖನ್ ಟ್ರಾಪ್ ಶಿಲಾಪ್ರದೇಶ. ಜಿಲ್ಲೆಯ ಮಧ್ಯದ ಭಾಗದಲ್ಲಿ ಸ್ವಲ್ಪಮಟ್ಟಿಗೆ ಭೀಮಾವರ್ಗಕ್ಕೆ ಸೇರಿದ ಸುಣ್ಣಕಲ್ಲು ಮತ್ತು ಶೇಲ್ ಪದರಗಳಿವೆ.ದಕ್ಷಿಣ ಮತ್ತು ಪೂರ್ವದ ಅಂಚಿನ ಕೆಲವೆಡೆಗಳಲ್ಲಿ ಬಹು ಪ್ರಾಚೀನವಾದ ಪೆನಿನ್ಸುಲರ್ ನೈಸ್ ಮತ್ತು ಧಾರವಾಡ ವರ್ಗಕ್ಕೆ ಸೇರಿದ ಶಿಲೆಗಳು ಕಂಡುಬರುತ್ತವೆ. ಗುಲ್ಬರ್ಗ ಜಿಲ್ಲೆ ದಖನ್ ಪ್ರಸ್ಥಭೂಮಿಯ ಭಾಗ. ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಇಡೀ ಜಿಲ್ಲೆ ಸಾಮಾನ್ಯವಾಗಿ ಸಮುದ್ರಮಟ್ಟದಿಂದ 300ರಿಂದ 600ಮೀ. ಎತ್ತರದಲ್ಲಿದೆ. ಯಾದಗಿರಿ ಮತ್ತು ಸೇಡಂ ತಾಲ್ಲೂಕಗಳಲ್ಲಿ ಮಾತ್ರ ಕೆಲವು ಭಾಗಗಳು 600ಮೀಗಿಂತ ಎತ್ತರವಾಗಿವೆ. ಆಳಂದ ಮತ್ತು ಯಾದಗಿರಿ ತಾಲ್ಲೂಕುಗಳ ನೆಲ ಏರುತಗ್ಗುಗಳಿಂದ ಕೂಡಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಎತ್ತರವಾದ ಬೆಟ್ಟಗಳಿಲ್ಲ. ವಾಯವ್ಯದಲ್ಲಿ ಪ್ರವೇಶಿಸುವ ಚಿಕ್ಕ ಬೆಟ್ಟಗಳ ಶ್ರೇಣಿಯೊಂದು ಆಗ್ನೇಯಾಭಿಮುಖವಾಗಿ ಸು.90ಕಿಮೀ ದೂರ ಸಾಗಿದೆ. ಶಾಹಪುರ ತಾಲ್ಲೂಕಿನಲ್ಲಿ ಶಾಹಪುರ ಪಟ್ಟಣದ ಬದಿಯಲ್ಲಿ ಮಹಮ್ಮದಪುರ ಬೆಟ್ಟ ಹಬ್ಬಿದೆ. ಸುರಪುರ, ಯಾದಗಿರಿ ಮತ್ತು ಸೇಡಂ ತಾಲ್ಲೂಕುಗಳಲ್ಲೂ ಅಷ್ಟೇನೂ ಎತ್ತರವಿಲ್ಲದ ಕೆಲವು ಬೆಟ್ಟಗಳುಂಟು. ಸುರಪುರ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿರುವ ಕನ್ನಳ್ಳಿ ಮಂಗಳೂರು ಹತ್ತಿರದ ಬೆಟ್ಟದ ಬದಿಯಲ್ಲಿ ಹಿಂದೆ ಚಿನ್ನಕ್ಕಾಗಿ ಪೂರ್ವೇಕ್ಷಣೆ ಮಾಡಿದ್ದುಂಟು. ತಿಂಥಿಣಿ ಹಳ್ಳಿಯ ಸುತ್ತ ತಾಮ್ರನಿಕ್ಷೇಪಗಳಿವೆ. ಯಾದಗಿರಿ, ಸುರಪುರ ತಾಲ್ಲೂಕುಗಳಲ್ಲಿ ಗಾಜಿನ ಕೈಗಾರಿಕೆಗೆ ಉಪಯುಕ್ತವಾದ ಕಣಶಿಲೆ, ಯಾದಗಿರಿಯಲ್ಲಿ ಅಗೇಟ್ ಮತ್ತು ಮರಳು, ಸುರಪುರ ತಾಲ್ಲೂಕಿನಲ್ಲಿ ತೋರಮಲ್ಲಿ, ಗುಲ್ಬರ್ಗದಲ್ಲಿ ಜಿಪ್ಸಂ, ಸುರಪುರ ತಾಲ್ಲೂಕಿನಲ್ಲಿ ಕ್ಯಾಲ್ಸೇರಿಯಸ್ ಪುಡಿ, ಚಿಂಚೋಳಿ ತಾಲ್ಲೂಕಿನಲ್ಲಿ ಫುಲ್ಲರ್ಸ್ ಅರ್ಥ್ ಸಿಗುತ್ತವೆ. ಸಿಮೆಂಟ್ ಕೈಗಾರಿಕೆಗೆ ಉಪಯುಕ್ತವಾದ ಸುಣ್ಣಕಲ್ಲು ಜಿಲ್ಲೆಯ ಹಲವೆಡೆಗಳಲ್ಲುಂಟು. ಸಾಬೂನುಗಲ್ಲು ಯಾದಗಿರಿಯಲ್ಲೂ ಲವಣ ಸುರಪುರದಲ್ಲೂ ದೊರಕುತ್ತವೆ. ಕಟ್ಟಡಗಳಿಗೆ ಉಪಯೋಗಿಸುವ ಉತ್ತಮವಾದ ಕಲ್ಲು ಜಿಲ್ಲೆಯಲ್ಲಿ ಹೇರಳವಾಗಿ ದೊರಕುತ್ತದೆ.

ಜಿಲ್ಲೆಯ ಮುಖ್ಯ ನದಿಗಳು ಕೃಷ್ಣಾ ಮತ್ತು ಭೀಮಾ. ಬೆಳಗಾಂವಿ ಜಿಲ್ಲೆಯಲ್ಲಿ ಕರ್ನಾಟಕವನ್ನು ಪ್ರವೇಶಿಸುವ ಕೃಷ್ಣಾ ನದಿ ಈ ಜಿಲ್ಲೆಯ ದಕ್ಷಿಣ ಎಲ್ಲೆಯಾಗಿ ಹರಿದು ಗುಲ್ಬರ್ಗ ಜಿಲ್ಲೆಯನ್ನು ರಾಯಚೂರು ಜಿಲ್ಲೆಯಿಂದ ಬೇರ್ಪಡಿಸುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿ ಈ ನದಿಯ ಉದ್ದ ಸು.160ಕಿಮೀ. ಸುರಪುರ ತಾಲ್ಲೂಕಿನ ನಾರಾಯಣಪುರದಿಂದ ಸು.3ಕಿಮೀ ಕೆಳಗೆ ಈ ನದಿಯ 60ಮೀ. ಎತ್ತರದ ಜಲದುರ್ಗ ಜಲಪಾತವಿದೆ. ಭೀಮಾ ನದಿ ಮಹಾರಾಷ್ಟ್ರದಿಂದ ಕರ್ನಾಟಕವನ್ನು

ಪ್ರವೇಶಿಸಿ, ಬಿಜಾಪುರ ಜಿಲ್ಲೆಯ ಎಲ್ಲೆಯ ಉದ್ದಕ್ಕೆ ಸ್ವಲ್ಪ ದೂರ ಹರಿದು ಅನಂತರ ಗುಲ್ಬರ್ಗ ಜಿಲ್ಲೆಯನ್ನು ಹೊಕ್ಕು 219ಕಿಮೀ ದೂರ ಸಾಗಿ ಕೃಷ್ಣಾ ನದಿಗೆ ಸೇರುವುದು. ಮಹಾರಾಷ್ಟ್ರದಲ್ಲಿ ಹುಟ್ಟಿ ಅಫಜಲಪುರ ತಾಲ್ಲೂಕಿನಲ್ಲಿ 24ಕಿಮೀ ದೂರ ಹರಿದು ಅಫಜಲಪುರಕ್ಕೆ ಪಶ್ಚಿಮದಲ್ಲಿ ಭೀಮಾನದಿಯನ್ನು ಸೇರುವ ಬೋರಿ, ಮಹಾರಾಷ್ಟ್ರದಲ್ಲಿ ಉಗಮಿಸಿ ಆಳಂದ ತಾಲ್ಲೂಕಿನಲ್ಲಿ ಗುಲ್ಬರ್ಗ ಜಿಲ್ಲೆಯನ್ನು ಹೊಕ್ಕು ಜಿಲ್ಲೆಯಲ್ಲಿ 88ಕಿಮೀ ದೂರ ಹರಿದು ಅಫ಼ಜಲಪುರ ತಾಲ್ಲೂಕಿನ ಗಾಣಗಾಪುರದ ಬಳಿ ಭೀಮಾನದಿಗೆ ಸೇರುವ ಅಮರಜ ನದಿ, ಆಂಧ್ರ ಪ್ರದೇಶದಿಂದ ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸಿ ಸು.64ಕಿಮೀ ದೂರ ಹರಿದು ಚಿತ್ತಾಪುರದ ಹುನಗುಂಟ ಗ್ರಾಮದ ಬಳಿ ಭೀಮೆಯನ್ನು ಕೂಡುವ ಕಾಗಿಣಾ ನದಿ, ಮಹಾರಾಷ್ಟ್ರದಲ್ಲಿ ಹುಟ್ಟಿ ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸಿ ಕಾಗಿಣಾ ನದಿಯನ್ನು ಸೇರುವ ಮುಲ್ಲಾಮಾರಿ ಇವು ಜಿಲ್ಲೆಯ ಇತರ ನದಿಗಳು. ಇಡೀ ಜಿಲ್ಲೆ ಕೃಷ್ಣಾ ಮತ್ತು ಭೀಮಾ ನದಿಗಳ ಜಲಾನಯನ ಭೂಮಿ.

ಗುಲ್ಬರ್ಗ ಜಿಲ್ಲೆಯ ವಾಯುಗುಣ ಶುಷ್ಕ ಮತ್ತು ಆರೋಗ್ಯಕರ. ಇಲ್ಲಿಯ ಹವಾಗುಣ ದಖನ್ ಪ್ರಸ್ಥಭೂಮಿಯ ಮಾದರಿಯದೆ ಆಗಿದೆ. ಫೆಬ್ರವರಿಯಿಂದ ಜೂನ್ ಆರಂಭದವರೆಗೆ ಬೇಸಗೆ. ಅಲ್ಲಿಂದ ಮುಂದೆ ಸೆಪ್ಟೆಂಬರ್ ಅಂತ್ಯದ ವರೆಗೆ ಮಳೆಗಾಲ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 715.5ಮಿಮೀ. ಡಿಸೆಂಬರಿನಿಂದ ಫೆಬ್ರವರಿಯವರೆಗೆ ಚಳಿಗಾಲ. ಆಗಿನ ಮಧ್ಯಕ ದೈನಿಕ ಗರಿಷ್ಠ ಉಷ್ಣತೆ 14.8$^{0}$ಸೆಂ. (58.6$^{0}$ಫ್ಯಾ.) ಮೇ ಅತ್ಯಂತ



ಉಷ್ಣತೆಯ ತಿಂಗಳು. ಆಗಿನ ಮಧ್ಯಕ ದೈನಿಕ ಗರಿಷ್ಠ ಉಷ್ಣತೆ 40.6$^0$ಸೆಂ 105.1$^0$ಫ್ಯಾ). ಕೆಲವು ಸಾರಿ ಹಗಲಿನ ಉಷ್ಣತೆ 45$^0$ಸೆಂ. (113$^0$ಫ್ಯಾ) ವರೆಗೂ ಏರುವುದುಂಟು.

ಗುಲ್ಬರ್ಗ ಜಿಲ್ಲೆಯಲ್ಲಿ ಎರಡು ಬಗೆಯ ಕಾಡುಗಳನ್ನು ಕಾಣಬಹುದು. ಈಶಾನ್ಯ ಭಾಗದ ಪರ್ಣಪಾತಿ ಕಾಡು ಒತ್ತಾಗಿದ್ದು ತೇಗ, ಬೀಟೆ, ನಲ್ಲಮದ್ದಿ, ಹುರಗಲು ಮರಗಳಿಂದ ಕೂಡಿದೆ. ಆಗ್ನೇಯ ಭಾಗದಲ್ಲಿರುವ ಕುರುಚಲು ಕಾಡು ಸೌದೆಗೆ ಮಾತ್ರ ಉಪಯುಕ್ತ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 696ಚ.ಕಿಮೀ. ಇದು ಇಡೀ ಜಿಲ್ಲೆಯ ಸೇ.4ರಷ್ಟು. ಇದರಲ್ಲಿ ಸೇ.41ರಷ್ಟು ಭಾಗ ಚಿಂಚೋಳಿ ತಾಲ್ಲೂಕಿನಲ್ಲೇ ಇದೆ. ಚೌಬೀನೆ, ಸೌದೆ, ಬೀಡಿ ಎಲೆ, ಚರ್ಮ ಹದಮಾಡಲು ಉಪಯೋಗಿಸುವ ತೊಗಟೆ, ಸೀತಾಫಲ, ಜೇನು ಮೇಣ, ಹಣ್ಣು,ರಾಳ, ಗೋಂದು, ಹುಳಿ, ಸೀಗೆ ಇವು ಕೆಲವು ಅರಣ್ಯೋತ್ಪನ್ನಗಳು ಜಿಲ್ಲೆಯ ನೈಸರ್ಗಿಕ ಸಸ್ಯಸಂಪತ್ತು ಅಷ್ಟೇನೂ ಸಮೃದ್ಧವಾಗಿಲ್ಲ.

ಗುಲ್ಬರ್ಗ ಜಿಲ್ಲೆಯಲ್ಲಿ ವನ್ಯಮೃಗಗಳು ಹೆಚ್ಚಾಗಿಲ್ಲ. ಕಾಡುಗಳಲ್ಲಿ ಕೆಲವು ಕಡೆ ಚಿರತೆಗಳೂ ಕಿರುಬಗಳೂ ಉಂಟು. ಹುಲಿಗಳು ಕಾಣಬರುವುದಿಲ್ಲ. ಚಿಂಚೋಳಿಯ ಕಾಡುಗಳಲ್ಲಿ ಕರಡಿಗಳಿದ್ದು, ಅವುಗಳಿಂದ ಪೈರುಗಳಿಗೆ ಹಾನಿಯಾಗುತ್ತಿರುತ್ತದೆ. ಕತ್ತೆಕಿರುಬ, ತೋಳ, ಕಾಡುನಾಯಿ, ಜಿಂಕೆ, ನರಿ ಇವೆ. ಗಿಣಿ, ಮೈನಾ, ಮರಕುಟುಕ, ನವಿಲು, ಗೂಬೆ, ಹದ್ದು, ಹಾಡುವಕ್ಕಿ ಮತ್ತು ಪಾರಿವಾಳಗಳು ಬಹುತೇಕ ವಿರಳವಾಗುತ್ತಿವೆ. ಗೋಸುಂಬೆ, ಚೇಳು, ಚಿಪ್ಪುಹಂದಿ, ನಾಗರಹಾವು, ಮಂಡಲದಹಾವು ಮೊದಲಾದ ಪ್ರಾಣಿಗಳನ್ನು ಕಾಣಬಹುದು.

ಶರಣಬಸವೇಶ್ವರ ದೇವಾಲಯ, ಗುಲ್ಬರ್ಗ

ಅಚ್ಚಕಪ್ಪಿನ, ಸಾಧಾರಣ ಕಪ್ಪಿನ, ಕೆಂಪುಮರಳು ಮಿಶ್ರಿತ ಜೇಡಿಯ, ಜಂಬಿನ ಮತ್ತು ಮೆಕ್ಕಲಿನ ಮಣ್ಣುಗಳು ಜಿಲ್ಲೆಯಲ್ಲಿವೆ. ಒಳಬೇಸಾಯಕ್ಕೆ ಸಹಾಯಕವಾದ ಕಪ್ಪುಮಣ್ಣು ಗುಲ್ಬರ್ಗ, ಜೇವರ್ಗಿ, ಚಿತ್ತಾಪುರ, ಸೇಡಂ, ಚಿಂಚೋಳಿ ಮತ್ತು ಸುರಪುರ ತಾಲ್ಲೂಕುಗಳಲ್ಲಿ ಕಾಣಬಹುದು. ಕೆಲವು ಕಡೆಗಳಲ್ಲಿ ಕಪ್ಪು ಮತ್ತು ಕೆಂಪು ಮಣ್ಣುಗಳು ಮಿಶ್ರಿತವಾಗಿವೆ. ಎತ್ತರದ ಪ್ರದೇಶಗಳಲ್ಲಿ ಕೆಂಪು ಮಣ್ಣು ಸಾಧಾರಣ. ಬಾವಿ ಮತ್ತು ಹೊಳೆಗಳ ನೀರಾವರಿ ಸೌಲಭ್ಯವಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಗುಲ್ಬರ್ಗ ಜಿಲ್ಲೆಗೂ ಪ್ರಯೋಜನವಾಗುತ್ತಿದೆ. ಯಾದಗಿರಿ ತಾಲ್ಲೂಕಿನ ಹತ್ತಿ ಕುಣಿ ಹೊಳೆಯ ನೀರು ಬೇಸಾಯಕ್ಕೆ ಒದಗಿಬಂದಿದೆ. ಚಂದ್ರಂಪಳ್ಳಿ, ಭೀಮಾನದಿ, ಅಮರಜ, ಬೆಣ್ಣೆತೊರೆ, ಮುಲ್ಲಾಮಾರಿ, ಮುಧೋಳ, ಕಾಗಿಣಾ, ಇಂದನಕಲ್ ಇವು ಜಿಲ್ಲೆಯಲ್ಲಿ ಕಾರ್ಯಗತವಾಗಲಿರುವ, ಆಗುತ್ತಿರುವ ಕೆಲವು ನೀರಾವರಿ ಯೋಜನೆಗಳು. ಜಿಲ್ಲೆಯಲ್ಲಿ ಜೋಳ, ತೊಗರಿ, ಸೇಂಗಾ, ಬತ್ತ, ಹತ್ತಿ, ಗೋದಿ ಮತ್ತು ದ್ವಿದಳ ಧಾನ್ಯಗಳನ್ನೂ ಬೆಳೆಯಲಾಗುತ್ತಿದೆ. ಈ ಮುಖ್ಯ ಬೆಳೆಗಳ ಜೊತೆಗೆ ಜಿಲ್ಲೆಯಲ್ಲಿ ಬಾರ್ಲಿ, ಮುಸುಕಿನ ಜೋಳ, ರಾಗಿ, ಹೆಸರು, ತೊಗರಿ, ಕಬ್ಬು, ಹರಳು, ಎಳ್ಳು, ಮೆಣಸಿನಕಾಯಿ, ಈರುಳ್ಳಿ ಮುಂತಾದುವನ್ನು ಬೆಳೆಯುತ್ತಾರೆ.

ಒಳನಾಡಿನಲ್ಲಿ ಮೀನು ಸಾಕುವ ಹಾಗೂ ಬೆಳೆಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗುಲ್ಬರ್ಗದ ಕೆರೆಗಳಲ್ಲಿ ಮೀನುಗಳನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಯಾದಗಿರಿ ವಿಭಾಗದಲ್ಲಿ ಈ ಕಾರ್ಯ ಆರಂಭವಾಗಿದೆ. ಜಿಲ್ಲೆಯಲ್ಲಿ ಪಶುಪಾಲನೆಯೂ ವ್ಯವಸಾಯದ ಒಂದು ಅಂಗವಾಗಿ ಮುಂದುವರಿಯುತ್ತಿದೆ.



ಪ್ರಾಚೀನ ಗೋರಿಗಳು, ಗುಲ್ಬರ್ಗ

ಜಿಲ್ಲೆಯಲ್ಲಿ ಬಹಳ ಜನ ಬೇಸಾಯವನ್ನು ಅವಲಂಬಿಸಿದ್ದಾರೆ. ಗೃಹೋದ್ಯೋಗಗಳಲ್ಲಿ ನೇಕಾರಿಕೆ ಮುಖ್ಯ. ಯಾದಗಿರಿಯಲ್ಲಿ ಕಂಬಳಿಗಳನ್ನು ನೇಯುತ್ತಾರೆ. ಹಿತ್ತಾಳೆ ಪಾತ್ರೆ, ಸೀಗೆ, ಮಸಾಲೆ, ಗಂಧದೆಣ್ಣೆ, ಬೀಡಿ ಕಟ್ಟುವುದು – ಇವು ಇಲ್ಲಿಯ ಕೆಲವು ಹಳೆಯ ಕೈಗಾರಿಕೆಗಳು. ವಿದ್ಯುತ್ತಿನ ಬಳಕೆ ಹೆಚ್ಚಿದಂತೆ ಜಿಲ್ಲೆಯಲ್ಲಿ ಹೊಸ ಕೈಗಾರಿಕೆಗಳು ಬೆಳೆದುಬಂದಿವೆ. ಅನೇಕ ಸಣ್ಣ ಪ್ರಮಾಣದ ಆಧುನಿಕ ಕೈಗಾರಿಕೆಗಳು ಜಿಲ್ಲೆಯ ನಗರಗಳಲ್ಲಿ ಹರಡಿ ವಿಸ್ತರಿಸುತ್ತಿವೆ. ಅವುಗಳಲ್ಲದೆ ವ್ಯವಸಾಯ ಮತ್ತು ಗೃಹೋಪಕರಣಗಳ ಉತ್ಪಾದನೆಯ ಘಟಕಗಳು ಇವೆ. ಮರದ ಪೀಠೋಪಕರಣಗಳ, ಮರ ಕೊಯ್ಯುವ ಕಾರ್ಖಾನೆ, ಚರ್ಮ ಹದ ಮಾಡುವುದು, ಚರ್ಮದ ಪಾದರಕ್ಷೆ, ಚೀಲ ಮುಂತಾದವುಗಳ ತಯಾರಿಕೆಯು ಇಲ್ಲಿದೆ. ಜಿಲ್ಲೆಯಲ್ಲಿ 129 ಕಾರ್ಖಾನೆಗಳು, 11 ಕೈಗಾರಿಕಾ ಪ್ರದೇಶಗಳು, 140 ಕೈಗಾರಿಕಾ ಶೆಡ್ಡುಗಳು ಇವೆ. ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳ ತರಬೇತಿ ಕೇಂದ್ರಗಳಿದ್ದು ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ಮಾಡುತ್ತಿವೆ.

ಗುಲ್ಬರ್ಗ, ಸೇಡಂ, ಯಾದಗಿರಿ, ಶಾಹಪುರ, ಸುರಪುರ, ಶಾಹಬಾದ್, ನಲವಾರ, ಚಿತ್ತಾಪುರ ಮತ್ತು ಸಯ್ಯಾಪುರಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳಿವೆ. ಜಿಲ್ಲೆಯಲ್ಲಿ ಅನೇಕ ಬ್ಯಾಂಕುಗಳಿದ್ದು ವಾಣಿಜ್ಯೋದ್ಯಮಿಗಳಿಗೆ ಆರ್ಥಿಕ ನೆರವು ದೊರೆಯುತ್ತಿವೆ. ಶಾಹಬಾದಿನ ಸಿಮೆಂಟ್ ಕಾರ್ಖಾನೆ, ಗುಲ್ಬರ್ಗದ ಜವಳಿ ಗಿರಣಿ, ಎಣ್ಣೆ ಗಿರಣಿ - ಇವು ಕೆಲವು ದೊಡ್ಡಕೈಗಾರಿಕೆಗಳು. ಇವಲ್ಲದೆ ಸಣ್ಣ ಗಾತ್ರದ ಅನೇಕ ಆಧುನಿಕ ಉದ್ಯಮಗಳಿವೆ.

ಗುಲ್ಬರ್ಗ ಜಿಲ್ಲೆಯಲ್ಲಿ ಎರಡು ಬ್ರಾಡ್‌ಗೇಜ್ ರೈಲು ಮಾರ್ಗಗಳಿವೆ. ಗುಲ್ಬರ್ಗ ನಗರದ ಮೂಲಕ ಹಾದುಹೋಗುವ ಮುಂಬಯಿ- ರಾಯಚೂರು ಮಾರ್ಗವೊಂದು; ವಾಡಿಯಿಂದ ಸಿಕಂದರಾಬಾದಿಗೆ ಇನ್ನೊಂದು. ಯಾದಗಿರಿ, ವಾಡಿ, ಶಾಹಬಾದ, ಗುಲ್ಬರ್ಗ ಮುಖ್ಯ ನಿಲ್ದಾಣಗಳು. ವಾಡಿ - ಸಿಕಂದರಾಬಾದ್ ಮಾರ್ಗದಲ್ಲಿ ವಾಡಿ, ಚಿತ್ತಾಪುರ, ಮಳಖೇಡ ರೋಡ್, ಸೇಡಂ - ಇವು ಮುಖ್ಯ ನಿಲ್ದಾಣಗಳು. ಹುಮನಾಬಾದ್- ಗುಲ್ಬರ್ಗ, ಗುಲ್ಬರ್ಗ-ಶಾಹಪುರ, ಜೇವರ್ಗಿ- ಜೆರಟ್ಟಿ, ಖಾನಾಪುರ- ಲಿಂಗಸುಗೂರು, ಶಾಹಪುರ- ಹತ್ತಿಗುಡೂರ್, ಗುಲ್ಬರ್ಗ- ಕೊಡಂಗಲ್, ಗುಲ್ಬರ್ಗ- ಆಳಂದ, ಆಳಂದ- ವಾಗ್ದಾರಿ ರಸ್ತೆಗಳು ರಾಜ್ಯ ಹೆದ್ದಾರಿಗಳು. ಇವಲ್ಲದೆ ಜಿಲ್ಲಾ ಮತ್ತು ಗ್ರಾಮಾಂತರ ರಸ್ತೆಗಳೂ ಇವೆ.

*

ಗುಲ್ಬರ್ಗ ಜಿಲ್ಲೆ 9ನೆಯ ಶತಮಾನದಲ್ಲಿ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಈ ಜಿಲ್ಲೆಯಲ್ಲಿ ಸೇಡಂ ತಾಲ್ಲೂಕಿನಲ್ಲಿರುವ ಮಳಖೇಡ ರಾಷ್ಟ್ರಕೂಟ ಅರಸರ ರಾಜಧಾನಿಯಾಗಿದ್ದು ಮಾನ್ಯಖೇಟವೆಂದು ಪ್ರಸಿದ್ಧಿ ಹೊಂದಿತ್ತು. ಕಲ್ಯಾಣದ ಚಾಳುಕ್ಯರು ಹತ್ತನೆಯ ಶತಮಾನದ ಅಂತ್ಯಭಾಗದಿಂದ ಆಳತೊಡಗಿದಾಗ ಅವರು ತಮ್ಮ ರಾಜಧಾನಿಯನ್ನು ಜಿಲ್ಲೆಯ ಕಲ್ಯಾಣಕ್ಕೆ ಬದಲಾಯಿಸಿಕೊಂಡರು. 11-12ನೆಯ ಶತಮಾನಗಳ ಶಾಸನಗಳಲ್ಲಿ ಗುಲ್ಬರ್ಗ ಕಲುಂಬರಗಿ, ಕಲುಂಬರಗ ಎಂಬ ಹೆಸರುಗಳಲ್ಲಿ ಖ್ಯಾತಿ ಹೊಂದಿತ್ತು. ಅಳಂದ ತಾಲ್ಲೂಕು ಮತ್ತು ಪರಿಸರದ ಪ್ರದೇಶಗಳು ಅಂದು ಅಳಂದೆ ಸಾಸಿರವೆಂಬ ಪ್ರಾಂತ್ಯದಲ್ಲಿ ಸೇರಿದ್ದುವು. ಕಲ್ಯಾಣದ ಚಾಳುಕ್ಯರ ಅಧೀನರಾಗಿ ಬಾಣ ವಂಶಕ್ಕೆ ಸೇರಿದ ಗೊಂಕರಸ ಮುಂತಾದ ಹಲವಾರು ಸಣ್ಣ ಮಂಡಲದ ಅಧಿಪತಿಗಳು ಚಿತ್ತಾಪುರ ತಾಲ್ಲೂಕಿನ ಪರಿಸರದಲ್ಲಿ ಆಳುತ್ತಿದ್ದರೆಂದು ಇತ್ತೀಚಿನ ಶಾಸನಗಳಿಂದ ತಿಳಿದುಬಂದಿದೆ.



ಬಂದೇ ನವಾಜ್ ದರ್ಗಾ, ಗುಲ್ಬರ್ಗ

ಮಹಮ್ಮದ್ ಬಿನ್ ತುಗಲಕ್ ದೆಹಲಿಯ ಸುಲ್ತಾನನಾಗಿದ್ದಾಗ ದಕ್ಷಿಣಕ್ಕೆ ದಂಡಯಾತ್ರೆ ಮಾಡಿ ವಾರಂಗಲಿನಲ್ಲಿ ಆಳಿದ ಕಾಕತೀಯರನ್ನು ಸೋಲಿಸಿ ಅವರ ರಾಜ್ಯವನ್ನು ಕಸಿದುಕೊಂಡಾಗ ಗುಲ್ಬರ್ಗ ಸಹ ಸುಲ್ತಾನರ ಅಧೀನಕ್ಕೆ ಒಳಪಟ್ಟಿತು. ಇದು 13ನೆಯ ಶತಮಾನದ ಅಂತ್ಯದಿಂದ 45 ವರ್ಷಗಳ ಕಾಲ ಇತ್ತು. ಆದರೆ ಅಲಾಉದ್ದೀನ್ ಹಸನ್ ಗಂಗು ಬಹಮನ್ ಷಾ 1347ರಲ್ಲಿ ಬಹಮನೀ ರಾಜ್ಯವನ್ನು ಸ್ಥಾಪಿಸಿದಾಗ ಗುಲ್ಬರ್ಗ ಅವನ ರಾಜಧಾನಿಯಾಯಿತು. 1424ರವರೆಗೂ ರಾಜಧಾನಿಯಾಗಿ ಇದು ಮೆರೆಯಿತು. ಬಹಮನೀ ರಾಜ್ಯ ಐದು ಭಾಗಗಳಾಗಿ ಒಡೆದಾಗ ಇದರ ಸ್ವಲ್ಪಭಾಗ ಬಿದರೆಯ ಬರೀದ್ ಶಾಹೀ ಸುಲ್ತಾನರ ಅಧೀನದಲ್ಲೂ ಸ್ವಲ್ಪ ಭಾಗ ಬಿಜಾಪುರದ ಆದಿಲ್‌ಶಾಹೀ ಸುಲ್ತಾನರ ಅಧೀನದಲ್ಲೂ ಇತ್ತು.

ಔರಂಗಜೇಬ್ ದಕ್ಷಿಣದ ದಂಡಯಾತ್ರೆ ಕೈಗೊಂಡಾಗ ಗುಲ್ಬರ್ಗ ಅವನ ಕೈವಶವಾಯಿತು. ಔರಂಗಜೇಬನ ಮರಣಾನಂತರ ಮುಗಲ ಸಾಮ್ರಾಜ್ಯದಲ್ಲಿ ಅಂತಃಕಲಹಗಳು ಸಂಭವಿಸಿದಾಗ ಅಲ್ಲಿಯ ರಾಜಕೀಯದಲ್ಲಿ ಬೇಸತ್ತ ಸುಬೇದಾರ ಆಸಫ್ ಜಾ ದಕ್ಷಿಣದ ಪ್ರಾಂತ್ಯಾಧಿಪತಿಯಾಗಿ ಬಂದು ಇಲ್ಲಿ ಸ್ವತಂತ್ರನಾದ. ಇದು ಹೈದರಾಬಾದಿನ ನಿಜಾಂ ವಂಶದ ನಾಂದಿಯಾಯಿತು. ಆ ಸಮಯದಲ್ಲಿ ಸುರಪುರ, ಶಾಹಾಪುರ, ಜೇವರಗಿ ತಾಲ್ಲೂಕುಗಳ ಭಾಗ ಸುರಪುರದ ನಾಯಕರ ಆಡಳಿತದಲ್ಲಿ ಸ್ವತಂತ್ರವಾದ ಸಂಸ್ಥಾನವಾಯಿತು. ಗುಲ್ಬರ್ಗದ ಇತರ ಭಾಗಗಳು ನಿಜಾಂ ರಾಜ್ಯಕ್ಕೆ ಸೇರಿದುವು. 1707-1857ರ ವರೆಗೆ ಸ್ವತಂತ್ರವಾಗಿ ಸುರಪುರದಲ್ಲಿ ಆಳಿದ ಬೇಡರ ಮನೆತನದ ರಾಜಾ ವೆಂಕಟಪ್ಪನಾಯಕ 1857ರ ಕ್ರಾಂತಿಯಲ್ಲಿ ಭಾಗವಹಿಸಿದ. ಬ್ರಿಟಿಷರು ಅವನನ್ನು ದಮನಮಾಡಿ ಅವನಿಂದ ಕಸಿದುಕೊಂಡ ರಾಜ್ಯವನ್ನು ನಿಜಾಮನಿಗೆ ವಹಿಸಿಕೊಟ್ಟರು.

ನಿಜಾಮರ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದ ಸಾಲಾರ್ ಜಂಗ್ ಕೈಗೊಂಡ ಆಡಳಿತ ಸುಧಾರಣೆಗಳಲ್ಲಿ ಸಂಸ್ಥಾನದಲ್ಲಿ ಹಲವಾರು ಜಿಲ್ಲೆಗಳು ಅಸ್ತಿತ್ವಕ್ಕೆ ಬಂದುವು. ಆ ಸಂದರ್ಭದಲ್ಲಿ ಗುಲ್ಬರ್ಗ ಸುರಪುರ ಜಿಲ್ಲೆಯ ಒಂದು ಭಾಗವಾಯಿತು. ಗುಲ್ಬರ್ಗವನ್ನು ಒಂದು ಪ್ರತ್ಯೇಕವಾದ ಜಿಲ್ಲೆಯಾಗಿ ಪರಿವರ್ತಿಸಿದ್ದು 1873ರಲ್ಲಿ. ಅಂದಿನಿಂದ ಆ ಜಿಲ್ಲೆಗೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳಾದುವು. 1956ರಲ್ಲಿ ಕೋಡಂಗಲ್ ಮತ್ತು ತಾಂಡೂರ್ ತಾಲ್ಲೂಕುಗಳು ಆಂಧ್ರಪ್ರದೇಶಕ್ಕೆ ಸೇರಿದುವು. ಉಳಿದ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು.

ಗುಲ್ಬರ್ಗ ಜಿಲ್ಲೆಯು ಮಳಖೇಡ ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಕವಿರಾಜಮಾರ್ಗದ ಕರ್ತೃ ಇಲ್ಲಿಯವನು. ಕವಿ ಪೊನ್ನ, ವಚನಕಾರ ದೇವರ ದಾಸಿಮಯ್ಯ ಇವರೂ ಈ ಜಿಲ್ಲೆಯವರು. ಲಕ್ಷ್ಮೀಶಕವಿಯ ಸ್ಥಳ ಈ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿರುವ ದೇವಪುರವೇ ಎಂಬುದು ಒಂದು ಅಭಿಪ್ರಾಯ. ದ್ವೈತಮತಸ್ಥಾಪಕರಾದ ಮಧ್ವಾಚಾರ್ಯರ ನಾಲ್ವರು ಪ್ರಮುಖ ಶಿಷ್ಯರ ಪೈಕಿ ಒಬ್ಬರಾದ ಅಕ್ಷೋಭ್ಯತೀರ್ಥರ ಶಿಷ್ಯರಾದ ಜಯತೀರ್ಥರು ಮಳಖೇಡದಲ್ಲಿ ನೆಲಸಿದ್ದರು. ಮಧ್ವಾಚಾರ್ಯರ ಗ್ರಂಥಗಳಿಗೆ ಟೀಕೆಗಳನ್ನು ಬರೆದು ಟೀಕಾಚಾರ್ಯರೆಂದು ಪ್ರಸಿದ್ಧರಾಗಿರುವ ಇವರ ಬೃಂದಾವನ ಇಲ್ಲಿದೆ. ಮಹಾಪುರಾಣ, ನಯಕುಮಾರಚರಿತ ಮುಂತಾದ ಅಪಭ್ರಂಶ ಕಾವ್ಯಗಳ ಕರ್ತೃವಾದ ಪುಷ್ಪದಂತ ಕವಿಗೂ ಇದು ನೆಲೆವೀಡಾಗಿತ್ತು. (ಬಿ.ಆರ್.ಜಿ.)

ಈ ಜಿಲ್ಲೆಯಲ್ಲಿ ಪುರಾತತ್ತ್ವ ಅವಶೇಷಗಳು ವಿಪುಲವಾಗಿವೆ. ಸುರಪುರದ ಬಳಿಯಲ್ಲಿ ಆದಿಶಿಲಾಯುಗದ ನೆಲೆಯೊಂದು ದೊರಕಿದೆ. ಅದೇ ತಾಲ್ಲೂಕಿನ ಗುಳ್ಬಾಳ ಎಂಬಲ್ಲಿ ಮತ್ತೊಂದು ನೆಲೆಯನ್ನೂ ಸಂಶೋಧಿಸಲಾಗಿದೆ. ಮಧ್ಯ ಶಿಲಾಯುಗದ ಅನೇಕ ನೆಲೆಗಳು ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ತುಮಕೂರು, ಭೀಮಾಸೇತುವೆ ಮುಂತಾದೆಡೆಗಳಲ್ಲಿ ಕಂಡುಬಂದಿವೆ. ಅಲ್ಲದೆ ಅಫಜಲಪುರ ತಾಲ್ಲೂಕಿನ ಉಡಚಣ ಮತ್ತು ಸೇಡಂ ತಾಲ್ಲೂಕಿನ ಮಳಖೇಡ ಈ ಸ್ಥಳಗಳಲ್ಲೂ ಈ ರೀತಿಯ ಕೆಲವು ಆಯುಧಗಳು ದೊರೆತಿವೆ. ಗುಳ್ಬಾಳ ಮತ್ತು ಸಮೀಪದ ಹಲವು ನೆಲೆಗಳಲ್ಲಿ ಇನ್ನೊಂದು ರೀತಿಯ ಶಿಲಾಯುಗ ಸಂಸ್ಕೃತಿ ಬೆಳಕಿಗೆ ಬಂದಿದೆ. ಈ ಘಟ್ಟದ ಆಯುಧಗಳು ನದಿದಡದಲ್ಲಿರುವ ಪ್ರಾಕ್ಕಾಲೀನ ಹರಹುಗಳಲ್ಲಿ ಮಧ್ಯಶಿಲಾ ಮತ್ತು ಉತ್ತರ ಶಿಲಾಯುಗದ ಆಯುಧಗಳು ದೊರಕುವ ಸ್ತರಗಳ ನಡುವಣ ಸ್ತರಗಳಲ್ಲಿ ದೊರಕಿವೆ. ಸೂಕ್ಷ್ಮಶಿಲಾಯುಗದ ಅನೇಕ ನೆಲೆಗಳು ಈ ಜಿಲ್ಲೆಯ ಸುರಪುರ ತಾಲ್ಲೂಕಿನ ಹುಣಸಿಹೊಳಿ, ಅಳಂದ ತಾಲ್ಲೂಕಿನ ಜವಳಿ, ಶಾಹಾಪುರ, ಇಕ್ಕಳ್ಕಿ ಮುಂತಾದ ಗ್ರಾಮಗಳ ಬಳಿ ದೊರಕಿವೆ. ನವಶಿಲಾಯುಗದ ಸಂಸ್ಕೃತಿ ಕೂಡ ಗುಲ್ಬರ್ಗ ಜಿಲ್ಲೆಯಲ್ಲಿ ಹರಡಿತ್ತು. ಸುರಪುರ ತಾಲ್ಲೂಕಿನ ಕೊಡೇಕಲ್ಲು ಎಂಬಲ್ಲಿ ಈ ಕಾಲದ ಒಂದು ಬೂದಿ ರಾಶಿಯ ಪರೀಕ್ಷೆಯಿಂದ ಇಲ್ಲಿಯ ನವಶಿಲಾಯುಗ ಸಂಸ್ಕೃತಿ ಕ್ರಿ.ಪೂ. 2500ರ ಸುಮಾರಿನಲ್ಲೇ ಪ್ರಚಲಿತವಾಗಿತ್ತೆಂದು ತಿಳಿದುಬಂದಿದೆ. ಈ ಘಟ್ಟದ ಜನ ವ್ಯವಸಾಯ ಮತ್ತು ಪಶುಪಾಲನೆಗಳನ್ನು ಸಾಧಿಸಿದ್ದರೂ ಸಾರಂಗ, ಜಿಂಕೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರೆಂದು ಆಗ ಮೀನುಗಾರಿಕೆ ಸಾಮಾನ್ಯವಾಗಿತ್ತೆಂದೂ ಗೊತ್ತಾಗಿದೆ. ಕೊಡೇಕಲ್ಲು ಅಲ್ಲದೆ ಮುಳ್ಳೂರು, ತೀರ್ಥ, ಕಕ್ಕೇರಿ, ಬೆನಕನ ಹಳ್ಳಿ ಮುಂತಾದೆಡೆಗಳಲ್ಲೂ ಸಮಕಾಲೀನ ಬೂದಿಯ ರಾಶಿಗಳಿವೆ. ಇವಲ್ಲದೆ ಆ ಕಾಲದ ಜನ ನೆಲೆಸಿದ್ದ ಕೆಲವು ನೆಲೆಗಳು ಕೂಡ ಬೀರನೂರು,

ಕನ್ನೆಕೋಳೂರು, ಬೂದನಾಳು ಮುಂತಾದೆಡೆ ಬೆಳಕಿಗೆ ಬಂದಿವೆ. ಹಾವಿನಮೆಟ್ಟಿ, ಕಿರದಹಳ್ಳಿ, ಮಂಗಳೂರು, ಮಾಕನಗವಿ ಮುಂತಾದೆಡೆಗಳಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನದ ಗಣಿಗಳಿದ್ದ ಕುರುಹುಗಳಿವೆ. ಆದರೆ ಇವು ಯಾವ ಕಾಲದವೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಶರಣಬಸವೇಶ್ವರ ದೇವಾಲಯದಲ್ಲಿನ ನಾಗಶಿಲ್ಪ, ಗುಲ್ಬರ್ಗ

ಗುಲ್ಬರ್ಗ ಜಿಲ್ಲೆ ಅಲ್ಲಿಯ ಕಬ್ಬಿಣಯುಗದ ಬೃಹತ್ ಶಿಲಾಸಮಾಧಿಗಳ ಸಂಸ್ಕೃತಿಯ ಅವಶೇಷಗಳಿಗೆ ಹಿಂದಿನಿಂದಲೂ ಪ್ರಸಿದ್ಧವಾಗಿದೆ. ಸುರಪುರ, ಶಾಹಪುರ ಮತ್ತು ಜೇವರಗಿ ತಾಲ್ಲೂಕುಗಳಲ್ಲಿ ಹಗರಟಗಿ, ರಾಜನಕೋಳೂರು, ಚಿಕ್ಕನಹಳ್ಳಿ, ವಿಭೂತಿಹಳ್ಳಿ, ಇಜೇರಿ, ಕೊಲ್ಲೂರು, ಜೇವರಗಿ ಮುಂತಾದೆಡೆಗಳಲ್ಲಿ ಈ ಸಂಪ್ರದಾಯದ ಅನೇಕ ಸಮಾಧಿಗಳನ್ನು ಗುರುತಿಸಲಾಗಿದೆ. ಅವಶೇಷಗಳನ್ನು ಹೂತಿರುವ ಅಥವಾ ಅವಶೇಷಗಳನ್ನು ಜಾಡಿಗಳಲ್ಲಿ ಶೇಖರಿಸಿ ಹೂತಿರುವ ಗುಣಿಗಳ ಸುತ್ತ ರಚಿಸಿದ ಶಿಲಾ ವರ್ತುಲಗಳು ಅಥವಾ ತೊಟ್ಟಿಗಳು ಕಂಡುಬಂದಿವೆ. ಜೇವರಗಿ ಮತ್ತು ಸುತ್ತಲಿನ ಪ್ರದೇಶದಲ್ಲಿ ಹಲವೆಡೆ ದೊಡ್ಡ ಕಲ್ಲುಗಳನ್ನು ಅನೇಕ ಸಮಾನಾಂತರ ಸಾಲುಗಳಲ್ಲಿ ನೆಟ್ಟಿರುವುದು ಕಂಡುಬಂದಿದೆ. ಪ್ರಾಚೀನ ಕಾಲದ ಈ ಶಿಲಾ ಸಾಲುಗಳು ಶವಸಂಸ್ಕಾರ ವಿಧಿಗೆ ಸಂಬಂಧಿಸಿದ್ದೋ ಅಲ್ಲವೋ ಹೇಳುವುದು ಕಷ್ಟ.

ಉತ್ತರ ಭಾರತದಲ್ಲಿ ಕ್ರಿಸ್ತಪೂರ್ವದ ಕೊನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ ಪ್ರಚಲಿತವಿದ್ದ ಔತ್ತರೇಯ ಕಪ್ಪು ಹೊಳಪಿನ ಮಡಕೆ ಚೂರು ಆಳಂದ ತಾಲ್ಲೂಕಿನಲ್ಲಿ ಕಂಡುಬಂದಿವೆ. ಅಲ್ಲದೆ 1940ರ ಸುಮಾರಿನಲ್ಲಿ ಗುಲ್ಬರ್ಗ ತಾಲ್ಲೂಕಿನ ಹೆಬ್ಬಾಳ ಗ್ರಾಮದಿಂದ 225 ಬೆಳ್ಳಿಯ ಒತ್ತು ಮುದ್ರೆಯ ನಾಣ್ಯಗಳು ದೊರಕಿದುವು. ನಾಣ್ಯಗಳು ಮತ್ತು ಔತ್ತರೇಯ ಹೊಳಪಿನ ಬಕ್ಕರೆಗಳು ಗುಲ್ಬರ್ಗ ಜಿಲ್ಲೆ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದ ಕಾಲದಲ್ಲಿ ಬಂದವುಗಳಾಗಿರಬೇಕು. ಆದರೆ ತತ್ಕಾಲೀನ ಶಾಸನಗಳಾಗಲಿ ವಾಸ್ತು ಅವಶೇಷಗಳಾಗಲಿ ಈವರೆಗೆ ದೊರಕಿಲ್ಲ.

ಮೌರ್ಯ ಮತ್ತು ಸಾತವಾಹನ ಯುಗಕ್ಕೆ ಸಂಬಂಧಿಸಿದ ಕೆಲವು ನೆಲೆಗಳು ಆಳಂದ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿವೆ. ಚಿತ್ತಾಪುರ ತಾಲ್ಲೂಕಿನ ಭೀಮಾನದಿಯ ಎಡದಂಡೆಯಲ್ಲಿರುವ ಸನ್ನತಿ ಇವುಗಳ ಪೈಕಿ ಪ್ರಸಿದ್ಧವಾದ್ದು. ಸನ್ನತಿ ಒಂದು ಬೌದ್ಧ ಕೇಂದ್ರವೂ ಪ್ರಾಯಶಃ ಸ್ಥಳೀಯ ಮಾಂಡಲಿಕನೊಬ್ಬನ ರಾಜಧಾನಿಯೂ ಆಗಿದ್ದಂತೆ ತೋರುತ್ತದೆ. ಸನ್ನತಿಯಲ್ಲಿ ದೊರಕಿರುವ ಅಶೋಕನ ಶಾಸನಗಳು ಈ ಜಿಲ್ಲೆಯಲ್ಲಿ ಇದುವರೆಗೆ ದೊರಕಿರುವ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದುವು. ಸಾತವಾಹನರ ಕಾಲದ ಶಾಸನಗಳೂ ದೊರೆತಿವೆ.

ನಾಗಾಯಿ (ನೋಡಿ) ಹಿಂದು, ಜೈನ ಮತ್ತು ಇಸ್ಲಾಂ ಸಂಸ್ಕೃತಿಗಳಿಗೆ ಸಂಬಂಧಿಸಿದ ವಸ್ತು ಅವಶೇಷಗಳಿಗೆ ಪ್ರಸಿದ್ಧವಾಗಿದೆ.

ಸನ್ನತಿಯಲ್ಲಿ (ನೋಡಿ) ಬಾದಾಮಿ ಚಳುಕ್ಯರ ಕಾಲದ ಒಂದು ಶಾಸನ ದೊರಕಿದೆ. ಇದರಲ್ಲಿ ಚಳುಕ್ಯ ರಾಜವಂಶದ ಕೊನೆಗಾಲ ಅಥವಾ ಅನಂತರದ ಸಂಧಿಕಾಲದಲ್ಲಿದ್ದ ಕೆಲವು ತದ್ವಂಶೀಯರ ಹೆಸರುಗಳಿವೆ. ಕಲ್ಯಾಣದ ಚಾಳುಕ್ಯರ, ಕಳಚುರಿಗಳ ಮತ್ತು ದೇವಗಿರಿ ಯಾದವರ ಕಾಲದ ಸುಮಾರು ಇನ್ನೂರಕ್ಕೂ ಹೆಚ್ಚಿನ ಶಾಸನಗಳು ಬೆಳಕಿಗೆ ಬಂದಿವೆ. ಈ ಕಾಲದ ಅನೇಕ ದೇವಾಲಯಗಳು ನಾಗಾವಿ, ಮಳಖೇಡ, ಕಾಳಗಿ, ನಿಂಬರ್ಗಿ, ಚಿಂಚಹನಸೂರು, ಪಡಸಾವಳಿ ಮುಂತಾದೆಡೆಗಳಲ್ಲಿವೆ. ಇವೆಲ್ಲ ಸಮಕಾಲೀನ ಚಾಳುಕ್ಯ ಶೈಲಿಯಲ್ಲಿ ಉತ್ತಮ ರಚನಾವಿನ್ಯಾಸದೊಡನೆ ಕಡೆದ ಹೊಳಪಿನ ದುಂಡುಕಂಬಗಳಿಂದ ಕೂಡಿದ್ದು ಸುಂದರ ಶಿಲ್ಪಗಳಿಂದ ಅಲಂಕೃತವಾಗಿರುವ ಕಟ್ಟಡಗಳು.

ಬಹಮನೀಯರ ರಾಜಧಾನಿಯಾಗಿದ್ದ ಗುಲ್ಬರ್ಗ ನಗರವಲ್ಲದೆ ಈ ಜಿಲ್ಲೆಯ ಇತರ ಭಾಗಗಳಲ್ಲೂ ಇಸ್ಲಾಮೀ ವಾಸ್ತುಶೈಲಿಯ ಅನೇಕ ಕಟ್ಟಡಗಳಿವೆ. ಇವುಗಳಲ್ಲಿ ಫಿರೋಜಾಬಾದ್, ಚಿಂಚೋಳಿ ಮತ್ತು ಚಿತ್ತಾಪುರ ಕೋಟೆಗಳನ್ನು ಹೆಸರಿಸಬಹುದು. ಫಿರೋಜಾಬಾದಿನಲ್ಲಿ 1406ರಲ್ಲಿ ಕಟ್ಟಿದ ಒಂದು ಮಸೀದಿಯಿದೆ. ಸುಲ್ತಾನಾ ಫಾತಿಮಾ ಎಂಬವಳು ಗೋಗಿ ಗ್ರಾಮದ ಕಾಲಿ ಮಸೀದಿಯನ್ನು ಕಟ್ಟಿಸಿದಳು (ಸು.1500). ಇದು ಒಂದು ಸುಂದರ ಕಟ್ಟಡ. ಈ ಮಸೀದಿಯ ಬಳಿಯಲ್ಲಿ ಕೆಲವು ಆದಿಲ್‌ಶಾಹೀ ಅರಸರ ಸಮಾಧಿಗಳುಂಟು. ಶಾಹಪುರ ತಾಲ್ಲೂಕಿನ ಕಡೇಚೂರ್ ಎಂಬಲ್ಲಿರುವ ಮಸೀದಿ, ಯಾದಗಿರಿ ತಾಲ್ಲೂಕಿನ ದೋರನಹಳ್ಳಿ ಮಸೀದಿ ಇವು ಬಿಜಾಪುರದ ಆದಿಲ್‌ಶಾಹೀ ಅರಸರ ಕಾಲದ ಇತರ ಮುಖ್ಯ ಕಟ್ಟಡಗಳು. ಚಿಂಚೋಳಿಯಲ್ಲಿರುವ ಒಂದು ಇಗರ್ಜಿ ಪೋರ್ಚುಗೀಸರು ಕಟ್ಟಿಸಿದ್ದೆಂದು ಹೇಳಲಾಗಿದೆ (ಆದರೆ ಈಗ ಇರುವುದು ಈ ಇಗರ್ಜಿಯ ನವೀಕೃತ ರೂಪ).



ಜುಮ್ಮಾ ಮಸೀದಿ, ಗುಲ್ಬರ್ಗ

ಮುಸ್ಲಿಂ ಅರಸರ ಕಾಲದ ಅನೇಕ ಪಾರಸೀ ಮತ್ತು ಅರಬ್ಬೀ ಶಾಸನಗಳು ಗುಲ್ಬರ್ಗ ಜಿಲ್ಲೆಯಲ್ಲಿವೆ. ಇವುಗಳಲ್ಲಿ ಗುಲ್ಬರ್ಗ ಕೋಟೆಯಲ್ಲಿ ದೊಡ್ಡ ಮಸೀದಿಯಲ್ಲಿರುವ ರಫಿಯ ಶಾಸನ, ಚಿಂಚೋಳಿಯಲ್ಲಿ ನಸ್ತಾಲಿಕ್ ಲಿಪಿಯಲ್ಲಿರುವ ಶಾಸನ, ಆಳಂದಿನಲ್ಲಿರುವ ಫರ್ಹಾದ್ ಖಾನನ ಶಾಸನ (1656-57), ಮಳಖೇಡದ ಅರಬ್ಬೀ ಶಾಸನ (1469-70)

ಉಲ್ಲೇಖಾರ್ಹವಾದವು. ಈ ಕಾಲದ ಬಹಮನೀ, ಆದಿಲ್‌ಶಾಹೀ, ಕುತುಬ್‌ಶಾಹೀ, ಮುಗಲ್ ಮತ್ತು ನಿಜಾಮ್ ಶಾಹಿ ಅರಸರ ನಾಣ್ಯಗಳು ಗುಲ್ಬರ್ಗ ಜಿಲ್ಲೆಯಲ್ಲಿ ದೊರಕಿವೆ. (ಎಸ್.ಎನ್.)

**ತಾಲ್ಲೂಕು :** ಜಿಲ್ಲೆಯ ಮಧ್ಯ ಮತ್ತು ಉತ್ತರ ಭಾಗದಲ್ಲಿರುವ ಈ ತಾಲ್ಲೂಕನ್ನು ಪೂರ್ವದಲ್ಲಿ ಚಿಂಚೋಳಿ, ಚಿತ್ತಾಪುರ ತಾಲ್ಲೂಕುಗಳೂ, ದಕ್ಷಿಣದಲ್ಲಿ ಜೇವರಗಿ, ಪಶ್ಚಿಮದಲ್ಲಿ ಅಳಂದ ಮತ್ತು ಅಫಜಲಪುರ ತಾಲ್ಲೂಕುಗಳೂ ಉತ್ತರದಲ್ಲಿ ಬೀದರ್ ಜಿಲ್ಲೆಯೂ ಸುತ್ತುವರೆದಿವೆ. ಈ ತಾಲ್ಲೂಕಿನ ದಕ್ಷಿಣದಲ್ಲಿ ಹರಿಯುವ ಭೀಮಾ ನದಿ ಈ ತಾಲ್ಲೂಕನ್ನು ಜೇವರಗಿ ತಾಲ್ಲೂಕಿನಿಂದ ಬೇರ್ಪಡಿಸಿದೆ. ಔರಾದ, ಗುಲ್ಬರ್ಗ, ಕಮಲಾಪುರ, ಮಹಗಾಂವ್, ಪರ್ವತಾಬಾದ್ ಮತ್ತು ಪಟ್ಟಣ ಈ ಆರು ಹೋಬಳಿಗಳೂ 144 ಗ್ರಾಮಗಳೂ ಇವೆ. ಈ ತಾಲ್ಲೂಕಿನ ವಿಸ್ತೀರ್ಣ 1,731.6ಚ.ಕಿಮೀ. ಜನಸಂಖ್ಯೆ 6,82,792.

ತಾಲ್ಲೂಕಿನ ಹೆಚ್ಚು ಭಾಗ ಬೂದು ಮತ್ತು ಕಪ್ಪುಮಿಶ್ರಿತ ಅಥವಾ ಆಳವಾದ ಕಪ್ಪುಮಣ್ಣು ಇರುವ ಮಟ್ಟಸ ಪ್ರದೇಶ. ಹೆಚ್ಚಿನ ಬೆಟ್ಟಗಳಾಗಲಿ ಏರುತಗ್ಗುಗಳಾಗಲೀ ಇಲ್ಲ. ಕೆಲವು ಭಾಗಗಳಲ್ಲಿ ಮರಳು ಮಿಶ್ರಿತ ಕೆಂಪುಮಣ್ಣಿನ ಭೂಮಿ ಕಂಡುಬರುತ್ತದೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 753.30ಮಿಮೀ. ತಾಲ್ಲೂಕಿನಲ್ಲಿ ಜೋಳ, ಸೇಂಗಾ, ಸಜ್ಜೆ, ಗೋದಿ, ತೊಗರಿ, ಹತ್ತಿ, ಮೆಣಸಿನಕಾಯಿ ಬೆಳೆಯುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಇದ್ದು ಅವುಗಳ ರಕ್ಷಣೆಗೆ ಸರ್ಕಾರಿ ಪಶುವೈದ್ಯಾಲಯಗಳಿವೆ.

ತಾಲ್ಲೂಕಿಗೆ ರೈಲು ಸಂಪರ್ಕವೂ ಇವೆ, ಜಿಲ್ಲೆಯ ಎಲ್ಲ ಭಾಗಗಳೂ ವಾಹನ ಸಂಪರ್ಕ ಪಡೆದಿವೆ. ತಾಲ್ಲೂಕಿನಲ್ಲಿ ಬ್ಯಾಂಕ್, ವಿದ್ಯುತ್, ಅಂಚೆ-ತಂತಿ, ದೂರವಾಣಿ ಮುಂತಾದ ಸೌಲಭ್ಯಗಳಿವೆ.

**ಪಟ್ಟಣ :** ಗುಲ್ಬರ್ಗ ವಿಭಾಗದ, ಜಿಲ್ಲೆಯ, ತಾಲ್ಲೂಕಿನ ಮತ್ತು ಹೋಬಳಿಯ ಆಡಳಿತ ಕೇಂದ್ರ. ಇತಿಹಾಸಪ್ರಸಿದ್ಧ ನಗರ, ವಿದ್ಯಾಕೇಂದ್ರ. ಚೆನ್ನೈ-ಮುಂಬಯಿ ಬ್ರಾಡ್‌ಗೇಜ್ ರೈಲು ಮಾರ್ಗದಲ್ಲಿದ್ದು ಬೆಂಗಳೂರಿನಿಂದ 626ಕಿಮೀ ದೂರದಲ್ಲಿದೆ. ಜನಸಂಖ್ಯೆ 4,27,929.

ಗುಲ್ಬರ್ಗ ನಗರಕ್ಕೆ ಕಲ್ಬುರ್ಗಿ ಎಂಬ ಹೆಸರು ಸ್ಥಳೀಕರಲ್ಲಿ ಹೆಚ್ಚು ಪ್ರಚಾರದಲ್ಲಿದೆ. 11ನೆಯ ಶತಮಾನದ ಶಾಸನಗಳಲ್ಲಿ ಕಲುಂಬರಗೆ ಎಂದು ಹೆಸರಿಸಲಾಗಿದೆ. ರಾಯವಾಚಕಮು ಎಂಬ ತೆಲುಗು ಗ್ರಂಥದಲ್ಲಿ ಮತ್ತು ಕೆಳದಿನೃಪವಿಜಯದಲ್ಲಿ ಕಲುಬರಿಗ ಎಂಬ ರೂಪ ಕಾಣಿಸಿಕೊಳ್ಳುತ್ತದೆ. ಕಲುಂಬರಗ ಎಂಬ ಪ್ರಾಚೀನ ರೂಪವೇ ಕಲ್ಬುರ್ಗಿಯಾಗಿ ರೂಪಾಂತರಗೊಂಡಿರಬೇಕು. ಗುಲ್ಬರ್ಗ ಎಂಬ ಪದ ಮಹಮ್ಮದಿಯರ ಆಳಿಕೆಯಲ್ಲಿ ಪ್ರಚಾರಕ್ಕೆ ಬಂತು. ಗುಲ್ಬರ್ಗ ಎಂದರೆ ಹೂದೋಟ.

ಗುಲ್ಬರ್ಗ ನಗರ ಅಲೆಯಂತೆ ಏರಿಳಿತಗಳಿಂದ ಕೂಡಿದ ಕರಿ ಎರೆ ಮಣ್ಣಿನ ಪ್ರದೇಶದಲ್ಲಿ ಸು.16ಚ.ಕಿಮೀ ವಿಸ್ತಾರದಲ್ಲಿ ಹಬ್ಬಿದೆ. ಇಲ್ಲಿರುವ ಮನೆಗಳಲ್ಲಿ ಹೆಚ್ಚಿನವು ಕಲ್ಲುಕಟ್ಟಡಗಳು. ರೈಲ್ವೆ ನಿಲ್ದಾಣ ಹಳೆಯ ನಗರದಿಂದ ಸ್ವಲ್ಪ ದೂರದಲ್ಲಿದೆ. ಅಲ್ಲಿಂದ ಪೇಟೆಬೀದಿಗೂ ನಗರದ ವಿವಿಧ ಎಡೆಗಳ ನಡುವೆಯೂ ನಗರ ಬಸ್ ಓಡಾಟ ವ್ಯವಸ್ಥೆ ಉಂಟು. ರೈಲ್ವೆ ನಿಲ್ದಾಣದ ಸುತ್ತ ಒಂದು ಹೊಸ ವಿಸ್ತರಣ ಬೆಳೆದಿದೆ. ಶಾಹಪುರ ರಸ್ತೆಯ ಬಳಿಯಲ್ಲಿ ಸರ್ಕಾರಿ ಕಚೇರಿಗಳೂ ಸರ್ಕಾರಿ ನೌಕರರ ವಸತಿಗೃಹಗಳೂ ಇವೆ. ರೈಲ್ವೆ ನಿಲ್ದಾಣದಿಂದ ಒಂದೂವರೆ ಕಿಮೀ ದೂರದೊಳಗೆ ಐವಾನ್ ಎ ಶಾಹೀ ಬಂಗಲೇ ಇದೆ. ಸರ್ಕಾರಿ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜು ಮತ್ತು ವಿದ್ಯಾರ್ಥಿನಿಲಯ ಕಟ್ಟಡಗಳು ರೈಲು ನಿಲ್ದಾಣದ ಬಳಿಯಲ್ಲೇ ಇವೆ.

ರೈಲ್ವೆ ನಿಲ್ದಾಣದಿಂದ 4ಕಿಮೀ ದೂರದಲ್ಲಿರುವ ನೆಹ್ರೂಗಂಜ್ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಅನೇಕ ಅಂಗಡಿಗಳೂ ಉಪಾಹಾರಗೃಹಗಳೂ ಇವೆ. ಕಾರಾಗೃಹ ಇರುವುದು ಮುಖ್ಯ ಪೇಟೆಬೀದಿಯ ರಸ್ತೆಯ ಬದಿಯಲ್ಲಿ. ಸ್ಟೇಷನ್ ಬಜಾರ್ ಸುತ್ತ ಮತ್ತು ಜಗತ್ ವಿಭಾಗದಲ್ಲಿ ಚಾಳ್‌ಗಳು (ವಾಸಗೃಹಗಳು) ಇವೆ. ಈಚೆಗೆ ಹೊಸಹೊಸ ವಿಸ್ತರಣಗಳು ಬೆಳೆಯುತ್ತಿವೆ. ರೈಲ್ವೆ ನಿಲ್ದಾಣದಿಂದ ಮುಖ್ಯ ಪೇಟೆಬೀದಿಗೆ ಹೋಗುವ ಮಾರ್ಗದಲ್ಲಿರುವ ಮಹಬೂಬ್ ಗುಲ್ಷನ್ ಒಂದು ಸುಂದರ ಉದ್ಯಾನ. ಐವಾನ್ ಎ ಶಾಹೀಯ ಸುತ್ತ ಒಂದು ಉದ್ಯಾನವಿದೆ.

ನಗರ ಔದ್ಯಮಿಕವಾಗಿಯೂ ಬೆಳೆಯಲಾರಂಭಿಸಿದೆ. ಇಲ್ಲಿನ ಎಂ.ಎಸ್.ಕೆ ಮಿಲ್ಸ್ ಎಂಬ ಹತ್ತಿ ಗಿರಣಿ ಕಾರ್ಖಾನೆಗಳಲ್ಲಿ ದೊಡ್ಡದು. ಅಲ್ಲದೆ ಬೇಳೆ ತಯಾರಿಸುವುದು, ಮರ ಕುಯ್ಯುವುದು, ಎಣ್ಣೆ ತೆಗೆಯುವುದು, ಬೀಡಿ ತಯಾರಿಕೆ ಮೊದಲಾದ ಇತರ ಉದ್ಯಮಗಳೂ ಇಲ್ಲಿವೆ.

ಗುಲ್ಬರ್ಗ ರೈಲು ನಿಲ್ದಾಣದ ಬಳಿಯಲ್ಲೇ ಬಸ್ ನಿಲ್ದಾಣ ಇದೆ. ಇಲ್ಲಿಂದ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೂ ರಾಜ್ಯದ ಮತ್ತು ಹೊರಗಿನ ಮುಖ್ಯ ಸ್ಥಳಗಳಿಗೂ ವಾಹನ ಸಂಪರ್ಕವಿದೆ. ಸುತ್ತಣ ಪ್ರದೇಶದೊಳಗಿನ ಉತ್ತಮ ಸಂಪರ್ಕದಿಂದಾಗಿ ಗುಲ್ಬರ್ಗ ವ್ಯಾಪಾರ ಕೇಂದ್ರವೂ ಆಗಿದೆ.

ಬಸವೇಶ್ವರ ಆಸ್ಪತ್ರೆ, ಗುಲ್ಬರ್ಗ

ಗುಲ್ಬರ್ಗದಲ್ಲಿ ಅನೇಕ ಶಾಲಾಕಾಲೇಜುಗಳೂ ಆಸ್ಪತ್ರೆ ಮುಂತಾದವೂ ಉಂಟು. ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಶರಣಬಸವೇಶ್ವರ ಕಾಲೇಜು, ಸೇಠ್ ಶಂಕರಲಾಲ್ ಲಾಹೋಟಿ ಲಾ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ವೈದ್ಯಕೀಯ ಕಾಲೇಜು – ಇವು ಕೆಲವು ಮುಖ್ಯ ಶಿಕ್ಷಣ ಸಂಸ್ಥೆಗಳು. ಗುಲ್ಬರ್ಗ ವಿಶ್ವವಿದ್ಯಾಲಯ (ನೋಡಿ) ಇಲ್ಲಿ ಸ್ಥಾಪಿತವಾಗಿದೆ (1980). ಗುಲ್ಬರ್ಗ ನಗರ ಎಲ್ಲ ಆಧುನಿಕ ಸೌಕರ್ಯಗಳನ್ನೂ ಹೊಂದಿದೆ.

ಶರಣಬಸವೇಶ್ವರ ದೇವಾಲಯ ಮತ್ತು ಖ್ವಾಜಾ ಬಂದೇ ನವಾಜರ ದರ್ಗಾ ಗುಲ್ಬರ್ಗದ ಪ್ರಮುಖ ಧಾರ್ಮಿಕ ಕೇಂದ್ರಗಳು. ಶರಣಬಸವೇಶ್ವರ ದೇವಾಲಯ ಇತ್ತೀಚಿನದಾದರೂ ಬಹು ಸುಂದರವಾಗಿ ರಚಿತವಾಗಿರುವ ವಾಸ್ತುಕೃತಿ. ಇಲ್ಲಿ ಪ್ರಸಿದ್ಧ ವೀರಶೈವ ಸಂತರಾದ ಶರಣಬಸವೇಶ್ವರರ ಗೌರವಾರ್ಥ ವರ್ಷಂಪ್ರತಿ ಚೈತ್ರ ಬಹುಳ ಪಂಚಮಿಯಿಂದ ಹದಿನೈದು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಖ್ವಾಜಾ ಬಂದೇ ನವಾಜರ ದರ್ಗಾದಲ್ಲಿ ಪ್ರತಿವರ್ಷ ಜಿಕೈದಾ ತಿಂಗಳಿನಲ್ಲಿ ಮೂರು ದಿನಗಳ ಕಾಲ ಉರುಸ್ ನಡೆಯುತ್ತದೆ. ಈ ಎರಡು ಸಂದರ್ಭಗಳಲ್ಲೂ ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಕ್ತಾದಿಗಳು ಸೇರುತ್ತಾರೆ.
*

ಸಾಹಿತ್ಯ ಮತ್ತು ಜಾನಪದ ಕ್ಷೇತ್ರಕ್ಕೆ ಈ ಜಿಲ್ಲೆ ಅಪೂರ್ವ ಕೊಡುಗೆ ನೀಡಿದೆ. ಕಡಿದಾಳ ಕೃಷ್ಣರಾವ್, ಎಂ.ಎಸ್.ಲಠೆ, ಪಿ.ಕೆ.ಖಂಡೋಬ ಚೆನ್ನಣ್ಣ ವಾಲೀಕಾರ, ತವಗ ಭೀಮಸೇನರಾವ್, ಗೀತಾ ನಾಗಭೂಷಣ, ಶೈಲಜಾ ಉಡಚಣ, ಎ.ಕೆ.ರಾಮೇಶ್ವರ, ಸೀತಾರಾಮ ಜಾಗಿರದಾರ ಇವರನ್ನು ಹೆಸರಿಸಬಹುದು.

ಗುಲ್ಬರ್ಗದಲ್ಲಿ ಅನೇಕ ಐತಿಹಾಸಿಕ ಸ್ಮಾರಕಗಳಿವೆ. ಇದು ಬಹಮನೀ ಅರಸರ ಮೊದಲ ರಾಜಧಾನಿಯಾಗಿದ್ದರಿಂದ ಕರ್ನಾಟಕದಲ್ಲಿರುವ ಭಾರತೀಯ ಇಸ್ಲಾಮೀ ಸಂಪ್ರದಾಯದಲ್ಲಿರುವ ಮೊದಲ ಕೃತಿಗಳೆಲ್ಲ ಈ

ನಗರದಲ್ಲೇ ಇವೆ. ಆ ಕಾಲದಲ್ಲಿ ಕಟ್ಟಲಾದ ಗುಲ್ಬರ್ಗ ನಗರದ ಕೋಟೆ 15 ಬುರುಜುಗಳನ್ನೂ 20 ತುಪಾಕಿ ಗೋಪುರಗಳನ್ನೂ ಅಳವಡಿಸಿಕೊಂಡು ನಗರವನ್ನು ಸುತ್ತುವರಿದಿರುವ ಬೃಹತ್ ಕಲ್ಲುಕಟ್ಟಡ. ರಾಜ ಗುಲ್‌ಚಂದ್ ಎಂಬ ಹಿಂದು ದೊರೆ ಇದನ್ನು ಮೊದಲು ಕಟ್ಟಿದನೆಂಬುದು ಸ್ಥಳಪ್ರತೀತಿ. ಈತ ಚರಿತ್ರೆಗೆ ತಿಳಿಯದಿರುವ ವ್ಯಕ್ತಿಯಾದರೂ ಗುಲ್ಬರ್ಗ ನಗರ ಇಸ್ಲಾಮೀ ಆಳಿಕೆಯ ಪೂರ್ವದಲ್ಲೂ ಒಂದು ಮುಖ್ಯ ನಗರ ವಾಗಿದ್ದಿರಬೇಕೆಂಬುದು ಅಲ್ಲಿ ಕಂಡುಬಂದಿರುವ ಅನೇಕ ಹಿಂದು ದೇವಾಲಯಗಳ ಅವಶೇಷಗಳಿಂದಲೂ ಒಂದೆರಡು ಶಾಸನಗಳಿಂದಲೂ ತಿಳಿಯುತ್ತದೆ. ಇಲ್ಲಿಯ ಕೋಟೆ ಅಲಾಉದ್ದೀನ್ ಹಸನ್ ಬಹಮನೀಯ (1347-58) ಕಾಲದಲ್ಲಿ ವಿಸ್ತಾರಗೊಂಡಿತ್ತು.

ಗುಲ್ಬರ್ಗ ಕೋಟೆಯೊಳಗಿರುವ ದೊಡ್ಡ ಮಸೀದಿ ಅಪರೂಪ ಶೈಲಿಯಲ್ಲಿರುವ ದೊಡ್ಡ ಕಟ್ಟಡ. 216' ಉದ್ದ ಮತ್ತು 176' ಅಗಲದ ಈ ಕಟ್ಟಡವು 6 ಕಂಬಗಳು ಮೇಲೆ ಎತ್ತಿದ ಅನೇಕ ಗುಮ್ಮಟಗಳಿಂದ ಪೂರ್ಣವಾಗಿ ಆಚ್ಛಾದಿತವಾಗಿದೆ. ಈ ಮಸೀದಿಯನ್ನು ಮಹಮದ್ ಷಾ ಬಹಮನೀಯ ಆಳಿಕೆಯಲ್ಲಿ 1376ರಲ್ಲಿ ಕಟ್ಟಲಾಯಿತೆಂದೂ ಇದರ ಶಿಲ್ಪಿ ಇರಾನಿನ ಕ್ಯಾಸ್ಪಿಯನ್‌ನ ನಿವಾಸಿ ರಫಿ ಎಂಬವನೆಂದೂ ಇಲ್ಲಿಯ ಒಂದು ಶಾಸನದಿಂದ ಗೊತ್ತಾಗುತ್ತದೆ. ಈ ಮಸೀದಿಯ ವಿಶಿಷ್ಟ ವಿನ್ಯಾಸವನ್ನು ಆಧರಿಸಿ ಇದು ಸ್ಪೇನಿನ ಕಾರ್ಡೋವದ ಪ್ರಸಿದ್ಧ ಮಸೀದಿಯನ್ನು ಹೋಲುತ್ತದೆ ಎಂದು ಹೇಳುವುದು ರೂಢಿ. ಈ ಮಸೀದಿಯಲ್ಲಿ ಪ್ರಾರ್ಥನಾ ಕೊಠಡಿ ಇರುವ ಪಶ್ಚಿಮ ಭಾಗ ಉಳಿದ ಭಾಗಕ್ಕಿಂತ ಎತ್ತರವಾಗಿದ್ದು ಅದರ ಮೇಲೆ ದೊಡ್ಡ ಗುಮ್ಮಟಗಳಿವೆ. ಮುಂಭಾಗದ



ಕೋಟೆ ಮಸೀದಿ, ಗುಲ್ಬರ್ಗ

ಹಜಾರದ ಗುಮ್ಮಟಗಳು ಇವಕ್ಕಿಂತ ಕುಳ್ಳು. ಇಲ್ಲಿ ಉಪಯೋಗಿಸಿರುವ ಗುಮ್ಮಟಗಳು ಪಾರಸೀ ಮಾದರಿಯವು. ಗುಲ್ಬರ್ಗ ನಗರದ ಷಾ ಬಜಾರ್ ಮಸೀದಿ ಈ ಕಾಲದ ಇನ್ನೊಂದು ಉಲ್ಲೇಖಾರ್ಹ ಕಟ್ಟಡ. ಇದನ್ನು ಒಂದನೆಯ ಮಹಮ್ಮದ್ ಷಾ ಬಹಮನೀಯ (1358-75) ಕಾಲದಲ್ಲಿ ಕಟ್ಟಿರಬೇಕೆಂದು ಊಹಿಸಲಾಗಿದೆ. ಈ ಮಸೀದಿಯ ಮುಂಭಾಗದ ಇಕ್ಕಡೆಗಳಲ್ಲಿ ಒಂದೊಂದು ಎತ್ತರವಾದ ಮಿನಾರುಗಳೂ ಕಮಾನಿನ ಪ್ರವೇಶದ್ವಾರವೂ ಒಳಗೆ ತೆರೆದ ಅಂಗಳವೂ ಅದರ ಹಿಂದೆ ಪ್ರಾರ್ಥನಾ ಹಜಾರವೂ ಇವೆ.

ಗುಲ್ಬರ್ಗ ಕೋಟೆಯ ದಕ್ಷಿಣ ದ್ವಾರದ ಬಳಿ ತುಗಲಕ್ ಶೈಲಿಯಲ್ಲಿ ಕಟ್ಟಿದ ಕೆಲವು ಸಮಾಧಿಗಳು ಉಳಿದಿವೆ. ಅವುಗಳಲ್ಲಿ ಮೂರನ್ನು ಬಹಮನೀ ವಂಶದ ಮೊದಲ ಮೂವರು ಅರಸರವೆಂದು ಗುರುತಿಸಲಾಗಿದೆ. ಅಲಾ ಉದ್ದೀನ್ ಹಸನ್ ಬಹಮನೀಯ (1347-58) ಸಮಾಧಿ ಈ ಗುಂಪಿನ ಪಶ್ಚಿಮದ ಕೊನೆಯಲ್ಲಿದೆ. ಇದು 4' ಎತ್ತರದ ಜಗತಿಯ ಮೇಲೆ ಕಟ್ಟಲಾಗಿರುವ 40' 6" ಚೌಕದ ಕಟ್ಟಡ. ಇದು ಕಲ್ಲು ಮತ್ತು ಗಾರೆಯಿಂದ ಎತ್ತಲಾದ ಹಜಾರ. ಇದರ ಗೋಡೆಗಳು 20' ಎತ್ತರವಾಗಿವೆ. ಮೇಲೆ ಹೋದಂತೆ ಒಳಬಾಗುವ ರೀತಿಯ ಓರೆಯ ಹೊರಮೈಯನ್ನುಳ್ಳವಾಗಿವೆ. ಚಾವಣಿಯ ಗುಮ್ಮಟ ಸುಮಾರು ಮಟ್ಟಸವಾದ್ದು. ಒಳ ಹಜಾರದಲ್ಲಿ ಗುಮ್ಮಟದ ನೇರ ಕೆಳಗೆ ಮೂರು ಸಮಾಧಿಶಿಲೆಗಳಿವೆ. ಅವುಗಳಲ್ಲಿ ಒಂದು ಅಲಾ ಉದ್ದೀನನದೆಂದು ಹೇಳಲಾಗುತ್ತದೆ. ಅಲಾ ಉದ್ದೀನನ ಮಗ 1ನೆಯ ಮಹಮ್ಮದ್ ಷಾ ಮತ್ತು ಮುಂದಿನ ಅರಸ 2ನೆಯ ಮಹಮ್ಮದ್ ಷಾ ಇವರ ಸಮಾಧಿಗಳೂ ಇಲ್ಲಿವೆ.

ಗುಲ್ಬರ್ಗದ ಬಳಿ ಇರುವ ಹಫ್ತ್ ಗುಂಬಜ್ ಎಂಬ ಏಳು ಸಮಾಧಿಗಳ ಸಮೂಹ, ಊರ ಒಳಗಿರುವ ಖ್ವಾಜಾ ಬಂದೇ ನವಾಜ್ ದರ್ಗಾ ಮತ್ತು ಚೋರ್ ಗುಂಬಜ್ ಈ ಕಾಲದ ಇಲ್ಲಿಯ ಇತರ ಗಮನಾರ್ಹ ಕಟ್ಟಡಗಳು. 15ನೆಯ ಶತಮಾನದ ಖಲಂದರ್ ಖಾನನ ಮಸೀದಿ ಉತ್ತಮ ಪ್ರಮಾಣ, ಸರಳ ಅಲಂಕರಣ ಇವುಗಳಿಂದಾಗಿ ಸುಂದರವಾಗಿ ಎದ್ದುಕಾಣುವ ಕಟ್ಟಡ. ಇದು ಚಿಕ್ಕದಾದರೂ ವಿನ್ಯಾಸ ಮತ್ತು ಸೌಂದರ್ಯದಲ್ಲಿ ಕೈರೋದ ಜಾಮಿ ಅಜರ್ ಮಸೀದಿಯನ್ನು ಹೋಲುತ್ತದೆಯೆಂದು ಹೇಳಲಾಗಿದೆ. ಗುಲ್ಬರ್ಗದಲ್ಲಿ ಈಗ ಹಿರಾಪುರ್ ಮಸೀದಿ ಎನಿಸಿಕೊಂಡಿರುವ ಮಸೀದಿಯನ್ನು ಚಾಂದಬೀಬಿ 1585ರಲ್ಲಿ ಕಟ್ಟಿಸಿದಳು. ವಿಶಿಷ್ಟ ಶೈಲಿಯ ಕಮಾನುಗಳನ್ನುಳ್ಳ ಒಂದು ಮನೋಹರ ಕೃತಿ ಇದು. 1687ರಲ್ಲಿ ಔರಂಗಜೇಬ್ ಖ್ವಾಜಾ ಬಂದೇ ನವಾಜ್ ದರ್ಗಾದ ಬಳಿ ಒಂದು ಮಸೀದಿಯನ್ನು ಕಟ್ಟಿಸಿದ. ಇಲ್ಲಿ ಉಪಯೋಗಿಸಲಾಗಿರುವ ಉದ್ದನೆಯ ಅಲಂಕೃತ ಮಿನಾರುಗಳು, ಶಿಲ್ಪಿತ ಚಜ್ಜಾಗಳು ಮುಂತಾದ ವಾಸ್ತು ಅಂಶಗಳಿಂದ ಈ ಕಟ್ಟಡ ದಕ್ಷಿಣ ಭಾರತದಲ್ಲಿ ಹಿಂದು ಶೈಲಿಗಳ ಕೈಯಲ್ಲಿ ಬೆಳೆದ ಇಸ್ಲಾಮೀ ಸಂಪ್ರದಾಯದ ಶೈಲಿಯ ಉತ್ತಮ ಉದಾಹರಣೆಯಾಗಿದೆಯೆಂದು ಹೇಳಲಾಗಿದೆ. (ಎಸ್.ಎನ್.)

**ಗುಲ್ಬರ್ಗ ವಿಶ್ವವಿದ್ಯಾಲಯ :** ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯ ಗಳಲ್ಲೊಂದು. ಗುಲ್ಬರ್ಗದಲ್ಲಿ ಆಡಳಿತ ಕೇಂದ್ರ ಮತ್ತು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಹೈದರಾಬಾದ್ ಕರ್ನಾಟಕ ಪ್ರದೇಶ ಆರ್ಥಿಕವಾಗಿ ಹಿಂದುಳಿದ ಪ್ರದೇಶವಾದರೂ ಸಾಹಿತ್ಯ, ಸಂಸ್ಕೃತಿ, ಕಲೆಗಳ ದೃಷ್ಟಿಯಿಂದ ತುಂಬ ಸಂಪದ್ಭರಿತವಾದದ್ದು. ಹಿಂದೆ ಈ ಪ್ರದೇಶದ ಜನ ಉನ್ನತ ಶಿಕ್ಷಣ ಪಡೆಯಬೇಕಾದರೆ ಹೈದರಾಬಾದಿಗೋ ಇಲ್ಲವೇ ದೂರದ ಧಾರವಾಡಕ್ಕೋ ಹೋಗಬೇಕಾಗುತ್ತಿತ್ತು. ಈ ಭಾಗದ ಶಿಕ್ಷಣತಜ್ಞರು, ಸಮಾಜಸೇವಕರು ಹಾಗೂ ರಾಜಕೀಯ ಮುಂದಾಳುಗಳ ಪ್ರಯತ್ನಗಳಿಂದ 1980 ಸೆಪ್ಟೆಂಬರ್ 10ರಂದು ಗುಲ್ಬರ್ಗ ವಿಶ್ವವಿದ್ಯಾಲಯ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಅಸ್ತಿತ್ವಕ್ಕೆ ಬಂತು. ಇದಕ್ಕೂ ಮೊದಲು ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಸ್ನಾತಕೋತ್ತರ ಕೇಂದ್ರವನ್ನು 1970ರಲ್ಲಿ ಗುಲ್ಬರ್ಗದಲ್ಲಿ ಪ್ರಾರಂಭ ಮಾಡಲಾಗಿತ್ತು. ಕನ್ನಡ, ರಸಾಯನ ವಿಜ್ಞಾನ, ಗಣಿತ ವಿಜ್ಞಾನ, ಇಂಗ್ಲಿಷ್ ಹಾಗೂ ರಾಜ್ಯಶಾಸ್ತ್ರ—ಈ ಐದು ವಿಷಯಗಳಲ್ಲಿ ಸ್ನಾತಕೋತ್ತರ ವಿಭಾಗಗಳಿದ್ದವು. ಈಗ 34 ವಿಭಾಗಗಳಿವೆ. ಗುಲ್ಬರ್ಗ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬೀದರ್, ಬಳ್ಳಾರಿ, ಕೊಪ್ಪಳ, ರಾಯಚೂರು ಹಾಗೂ ಗುಲ್ಬರ್ಗ—ಈ ಐದು ಜಿಲ್ಲೆಗಳು ಒಳಪಟ್ಟಿವೆ. ಈ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ 147 ಕಾಲೇಜುಗಳಿವೆ. ಇವುಗಳಲ್ಲಿ 35 ಕಾಲೇಜುಗಳು ಸರ್ಕಾರದ ಅನುದಾನ ಪಡೆದಿವೆ. ಇನ್ನುಳಿದ 112 ಕಾಲೇಜುಗಳು ಅನುದಾನ ಪಡೆಯದೇ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲ ಕಾಲೇಜುಗಳಲ್ಲಿ 40000 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು (2003). ಬೀದರ್, ರಾಯಚೂರು, ಸಂಡೂರು, ಹಾಗೂ ಬಳ್ಳಾರಿಗಳಲ್ಲಿ ಈ ವಿಶ್ವವಿದ್ಯಾಲಯದ ಕಕ್ಷೆಗೆ ಒಳಪಟ್ಟ ಸ್ನಾತಕೋತ್ತರ ಕೇಂದ್ರಗಳಿವೆ. ಶೈಕ್ಷಣಿಕವಾಗಿ ಹಿಂದುಳಿದಿರುವ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯ ಈಗ ಈ ಭಾಗದ ಜನರ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವ ಮೂಲಕ ಈ ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಆರು ವಿದ್ವನ್ಮಂಡಳಿ ನಿಕಾಯಗಳಿವೆ. ಕಲಾನಿಕಾಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ಸಂಸ್ಕೃತ ವಿಭಾಗಗಳಿವೆ. ವಾಣಿಜ್ಯ ಹಾಗೂ ವ್ಯಾಪಾರ ನಿರ್ವಹಣೆ ನಿಕಾಯದಲ್ಲಿ ವಾಣಿಜ್ಯ ಹಾಗೂ ವ್ಯಾಪಾರ ನಿರ್ವಹಣೆ ವಿಭಾಗಗಳಿವೆ. ಶಿಕ್ಷಣ ನಿಕಾಯದಲ್ಲಿ ಶಿಕ್ಷಣ ಹಾಗೂ ದೈಹಿಕಶಿಕ್ಷಣ ವಿಭಾಗಗಳಿವೆ. ಕಾನೂನು ನಿಕಾಯ ಕಾನೂನು ವಿಭಾಗವನ್ನು ಹೊಂದಿದೆ. ವಿಜ್ಞಾನ ಹಾಗೂ

ತಂತ್ರಜ್ಞಾನ ನಿಕಾಯದಲ್ಲಿ ಆನ್ವಯಿಕ ವಿದ್ಯುನ್ಮಾನವಿಜ್ಞಾನ, ಜೀವರಸಾಯನವಿಜ್ಞಾನ, ಜೀವತಂತ್ರಜ್ಞಾನ, ಸಸ್ಯವಿಜ್ಞಾನ, ರಸಾಯನವಿಜ್ಞಾನ, ಗಣಕವಿಜ್ಞಾನ, ಭೂವಿಜ್ಞಾನ, ಮಿನರಲ್ ಪ್ರಾಸೆಸಿಂಗ್, ಭೂಗರ್ಭವಿಜ್ಞಾನ, ಔದ್ಯೋಗಿಕ ರಸಾಯನವಿಜ್ಞಾನ, ಉಪಕರಣ ತಂತ್ರಜ್ಞಾನ, ಗಣಿತವಿಜ್ಞಾನ, ಸೂಕ್ಷ್ಮಾಣುಜೀವವಿಜ್ಞಾನ, ಭೌತವಿಜ್ಞಾನ ಸಂಖ್ಯಾವಿಜ್ಞಾನ, ಸಕ್ಕರೆತಂತ್ರಜ್ಞಾನ, ಪ್ರಾಣಿವಿಜ್ಞಾನ ಈ ವಿಭಾಗಗಳಿವೆ. ಸಮಾಜವಿಜ್ಞಾನ ನಿಕಾಯದಲ್ಲಿ ಅರ್ಥಶಾಸ್ತ್ರ, ಇತಿಹಾಸ, ಗ್ರಂಥಾಲಯ ಹಾಗೂ ಮಾಹಿತಿವಿಜ್ಞಾನ, ರಾಜ್ಯಶಾಸ್ತ್ರ, ಮನೋವಿಜ್ಞಾನ, ಸಮಾಜಕಾರ್ಯ, ಸಮಾಜಶಾಸ್ತ್ರ, ಮಹಿಳಾ ಅಧ್ಯಯನ ವಿಭಾಗಗಳಿವೆ.

ರಾಷ್ಟ್ರಕೂಟ ಮಹಾದ್ವಾರ, ಗುಲ್ಬರ್ಗ ವಿಶ್ವವಿದ್ಯಾಲಯ

ಗುಲ್ಬರ್ಗ ವಿಶ್ವವಿದ್ಯಾಲಯ ಜೀವತಂತ್ರಜ್ಞಾನ ವಿಭಾಗ, ಸೂಕ್ಷ್ಮಾಣುಜೀವವಿಜ್ಞಾನ ಹಾಗೂ ಮಹಿಳಾ ಅಧ್ಯಯನ ವಿಭಾಗಗಳನ್ನು ತೆರೆದ ರಾಜ್ಯದ ಪ್ರಪ್ರಥಮ ವಿಶ್ವವಿದ್ಯಾಲಯವೆನಿಸಿದೆ. ಈ ವಿಶ್ವವಿದ್ಯಾಲಯದ ಸಂಶೋಧನೆಯ ಫಲವಾದ ಕಬ್ಬಿನ ಹೊಸ ತಳಿಯನ್ನು ಈ ಪ್ರದೇಶದಲ್ಲಿ ಈಗ ಬೆಳೆಯಲಾಗುತ್ತಿದೆ. ಬೀದರ್‌ನಲ್ಲಿ ಪ್ರಾರಂಭಗೊಂಡಿರುವ ಸಕ್ಕರೆ ತಂತ್ರಜ್ಞಾನ ವಿಭಾಗ ಒಂದು ಮಾದರಿ ವಿಭಾಗವಾಗಿ ಬೆಳೆಯುತ್ತಿದೆ. ರಸಾಯನವಿಜ್ಞಾನ, ಪ್ರಾಣಿವಿಜ್ಞಾನ ಹಾಗೂ ಸೂಕ್ಷ್ಮಾಣುಜೀವವಿಜ್ಞಾನ, ಆನ್ವಯಿಕ ವಿದ್ಯುನ್ಮಾನ ವಿಭಾಗಗಳಲ್ಲಿ ನಡೆದಿರುವ ಸಂಶೋಧನೆಗಳು ಅನೇಕ ಸಂಶೋಧಕರ ಗಮನ ಸೆಳೆದಿವೆ. ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ಆನ್ವಯಿಕ ವಿದ್ಯುನ್ಮಾನ ವಿಭಾಗಗಳು ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ನಡೆಸಿವೆ.

ಇದುವರೆಗೆ ಈ ವಿಶ್ವವಿದ್ಯಾಲಯದಿಂದ 450 ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆದಿದ್ದಾರೆ. ಸದ್ಯ 150 ವಿದ್ಯಾರ್ಥಿಗಳು ಎಂ.ಫಿಲ್. ಪದವಿ ಹಾಗೂ 400 ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಿದ್ದಾರೆ. 22 ಜನ ಗಣ್ಯ ವ್ಯಕ್ತಿಗಳಿಗೆ ಈ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಪರದೇಶಗಳ ಶೈಕ್ಷಣಿಕ ಸಂಸ್ಥೆಗಳ ಸಹಯೋಗದೊಡನೆ ಈ ವಿಶ್ವವಿದ್ಯಾಲಯದ ಸಂಶೋಧಕರು ತಮ್ಮ ಸಂಶೋಧನೆ ನಡೆಸಿದ್ದಾರೆ. ಶ್ರೀ ಗಳಂಗಳಪ್ಪ ಪಾಟೀಲ ಬಸವಾದಿ ಶರಣ ಸಾಹಿತ್ಯ ಕೇಂದ್ರ, ಅಂಬೇಡ್ಕರ್ ಪೀಠ ಹಾಗೂ ಎಸ್.ಎಸ್. ಪಾಟೀಲ ಸೈನ್ಸ್ ಕ್ರಿಯೇಟಿವಿಟಿ ಸೆಂಟರ್ ಇವು ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿವೆ. ಈ ವಿಶ್ವವಿದ್ಯಾಲಯದ ಕಕ್ಷೆಗೆ ಒಳಪಟ್ಟ 21 ಕಾಲೇಜುಗಳಲ್ಲಿ ಯುಜಿಸಿ ನೆರವಿನಿಂದ ವೃತ್ತಿಪರ ಕೋರ್ಸುಗಳು ನಡೆಯುತ್ತಿವೆ.

ಗುಲ್ಬರ್ಗ ವಿಶ್ವವಿದ್ಯಾಲಯ 860 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ವ್ಯಾಪಿಸಿದ್ದು ಸುಸಜ್ಜಿತ ಕಟ್ಟಡಗಳನ್ನು ಹೊಂದಿದೆ. ವಿಶ್ವವಿದ್ಯಾಲಯದ ಬಹುತೇಕ ಎಲ್ಲ ವಿಭಾಗಗಳು ಸ್ವತಂತ್ರ ಕಟ್ಟಡಗಳನ್ನು ಹೊಂದಿವೆ. ಗಣಕವಿಜ್ಞಾನ ವಿಭಾಗ ಅತ್ಯಾಧುನಿಕ ಗಣಕ ಯಂತ್ರಗಳನ್ನು ಹೊಂದಿದೆ. ಗ್ರಂಥಾಲಯದಲ್ಲಿ ಸೌಲಭ್ಯಗಳು ಸಾಕಷ್ಟಿದ್ದು 2 ಲಕ್ಷ ಗ್ರಂಥಗಳನ್ನು ಹೊಂದಿದೆ. ಗ್ರಂಥಾಲಯ ಇಂಟರನೆಟ್ ಸೌಲಭ್ಯ ಹೊಂದಿದ್ದು ವಿದ್ಯಾರ್ಥಿಗಳಿಗೆ ಬಹು ಉಪಯೋಗಿಯಾಗಿದೆ. ಶಿಕ್ಷಕ ಹಾಗೂ ಶಿಕ್ಷಕೇತರರಿಗೆ ವಸತಿಗೃಹಗಳು, ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ವಸತಿನಿಲಯಗಳ ಸೌಲಭ್ಯವಿದೆ. ದೈಹಿಕಶಿಕ್ಷಣ ವಿಭಾಗ ವಿಶ್ವವಿದ್ಯಾಲಯದ ಹೆಮ್ಮೆಯ ಹಾಗೂ ಬೃಹತ್ ವಿಭಾಗವಾಗಿದೆ. ಹೊರಾಂಗಣ ಹಾಗೂ ಒಳಾಂಗಣ ಕ್ರೀಡಾ ಭವನಗಳಿವೆ. ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುತ್ತಲಿದೆ. ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ವರ್ಗದ ಸರ್ವತೋಮುಖ ಬೆಳೆವಣಿಗೆಗೆ ವಿಶ್ವವಿದ್ಯಾಲಯದಲ್ಲಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ.

**ವ್ಯಾಸಂಗ ವಿಸ್ತರಣೆ, ಸಂಶೋಧನೆ ಮತ್ತು ಪ್ರಕಟಣೆ :** ಕನ್ನಡ ಅಧ್ಯಯನ ಸಂಸ್ಥೆ ಮೊದಲು ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯದ ದೊಡ್ಡ ವಿಭಾಗವಾಗಿದ್ದು ಈ ಭಾಗದ ಸಾಹಿತ್ಯಕ ಸಾಂಸ್ಕೃತಿಕ ಬೆಳೆವಣಿಗೆಗೆ ಚಾಲನೆ ನೀಡುತ್ತ ಬಂದಿದೆ. ಸಂಸ್ಥೆಯಲ್ಲಿ ಹಸ್ತಪ್ರತಿ ಭಂಡಾರವಿದೆ. ಈ ಸಂಸ್ಥೆಯ ಕಟ್ಟಡದಲ್ಲಿಯೇ ಶ್ರೀ ಗಳಂಗಳಪ್ಪ ಪಾಟೀಲ ಬಸವಾದಿ ಶರಣ ಸಾಹಿತ್ಯ ಕೇಂದ್ರ ಹಾಗೂ ಪ್ರಸಾರಾಂಗ ವಿಭಾಗಗಳಿವೆ. ಬಸವಾದಿ ಶರಣ ಸಾಹಿತ್ಯ ಕೇಂದ್ರ ಈವರೆಗೆ ಹನ್ನೆರಡು ಗ್ರಂಥಗಳನ್ನು ಪ್ರಕಟಿಸಿದೆ. ಪ್ರಸಾರಾಂಗ ವಿಶ್ವವಿದ್ಯಾಲಯದ ಶೈಕ್ಷಣಿಕ ಪ್ರಗತಿಯ ಮುಖವಾಣಿ. ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಶಿಕ್ಷಕರಿಗೂ ಹಳ್ಳಿಯ ಸಾಮಾನ್ಯ ಜನರಿಗೂ ಸಂಬಂಧವೇರ್ಪಡಿಸಿ ಶೈಕ್ಷಣಿಕ ವಾತಾವರಣವನ್ನು ಸ್ಥಾಪಿಸುವಲ್ಲಿ ಇದು ಮಹತ್ವದ ಕಾರ್ಯ ಮಾಡುತ್ತಿದೆ. ಈವರೆಗೆ 240 ಪುಸ್ತಕಗಳನ್ನು ಪ್ರಕಟಿಸಿದೆ (2003). ವಿಶ್ವವಿದ್ಯಾಲಯದಲ್ಲಿ ಹದಿಮೂರು ದತ್ತಿಗಳನ್ನು ಸ್ಥಾಪಿಸಲಾಗಿದೆ. ಪ್ರತಿ ವರ್ಷ ಈ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ವಿಶ್ವವಿದ್ಯಾಲಯದ ವತಿಯಿಂದ ಕಲಾಗಂಗಾ, ಜ್ಞಾನಗಂಗಾ, ವಿಜ್ಞಾನಗಂಗಾ ಎಂಬ ಮೂರು ಸಂಶೋಧನ ಪತ್ರಿಕೆಗಳನ್ನು ಪ್ರಸಾರಾಂಗ ಪ್ರಕಟಿಸುತ್ತಿದೆ. ಒಂದು ವಾರ್ತಾ ಪತ್ರವೂ ಪ್ರಕಟವಾಗುತ್ತಿದೆ. ಹೈದರಾಬಾದ್ – ಕರ್ನಾಟಕ ಭಾಗದ ಶ್ರೇಷ್ಠ ಲೇಖಕರಿಗೆ, ಕಥೆಗಾರರಿಗೆ, ಪುಸ್ತಕ ಪ್ರಕಾಶಕರಿಗೆ ಹಾಗೂ ಚಿತ್ರಕಲಾವಿದರಿಗೆ ಪ್ರತಿವರ್ಷ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರಶಸ್ತಿ ಪತ್ರ ಹಾಗೂ ಗೌರವಧನ ನೀಡಿ ಪ್ರೋತ್ಸಾಹಿಸುವ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಪ್ರಸಾರಾಂಗ ನಡೆಸಿಕೊಂಡು ಬರುತ್ತಿದೆ. ಈ ಪದ್ಧತಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಇಲ್ಲ.



ಕಾರ್ಯಸೌಧ, ಗುಲ್ಬರ್ಗ ವಿಶ್ವವಿದ್ಯಾಲಯ

**ಸ್ನಾತಕೋತ್ತರ ಕೇಂದ್ರಗಳು :** ಬಳ್ಳಾರಿ, ಸಂಡೂರು, ರಾಯಚೂರು, ಹಾಗೂ ಬೀದರ್‌ಗಳಲ್ಲಿ ಸ್ನಾತಕೋತ್ತರ ಕೇಂದ್ರಗಳಿವೆ. ಬೀದರ್ ಸ್ನಾತಕೋತ್ತರ ಕೇಂದ್ರದಲ್ಲಿ ಸಕ್ಕರೆ ತಂತ್ರಜ್ಞಾನ ಹಾಗೂ ಉರ್ದು ವಿಭಾಗಗಳಿವೆ. ರಾಯಚೂರು ಕೇಂದ್ರದಲ್ಲಿ ಕನ್ನಡ ವಿಭಾಗ, ಉಪಕರಣ ತಂತ್ರಜ್ಞಾನ, ಗಣಕವಿಜ್ಞಾನ, ಆನ್ವಯಿಕ ಗಣಕವಿಜ್ಞಾನದ ಸ್ನಾತಕೋತ್ತರ ಡಿಪ್ಲೊಮಾ ವಿಭಾಗವಿದೆ. ಬಳ್ಳಾರಿ ಸ್ನಾತಕೋತ್ತರ ಕೇಂದ್ರದಲ್ಲಿ ಎಂಬಿಎ

ಹಾಗೂ ಔದ್ಯೋಗಿಕ ರಸಾಯನವಿಜ್ಞಾನ ವಿಭಾಗಗಳಿವೆ. ಸ್ನಾತಕೋತ್ತರ ವಿಭಾಗಗಳ ಜೊತೆಗೆ ಸಂಡೂರು ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ, ಭೂ ವಿಜ್ಞಾನ, ಖನಿಜ ಸಂಸ್ಕರಣ ಹಾಗೂ ಬಿಎಸ್ಸಿ ಕೋರ್ಸ್‌ಗಳನ್ನು ತೆರೆಯಲಾಗಿದೆ. ಭೂ ವಿಜ್ಞಾನ ವಿಭಾಗ ಉನ್ನತ ಸಂಶೋಧನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಪ್ರಶಸ್ತಿ ಹಾಗೂ ಗೌರವಗಳು :** ಗುಲ್ಬರ್ಗ ವಿಶ್ವವಿದ್ಯಾಲಯ ಯು.ಜಿ.ಸಿ.ಯ ನ್ಯಾಕ್ ಸಮಿತಿಯಿಂದ ಮೌಲ್ಯಮಾಪನಕ್ಕೊಳಗಾಗಿದ್ದು ನಾಲ್ಕು ನಕ್ಷತ್ರ ಸ್ಥಾನ ಪಡೆದಿದೆ. ಅನೇಕ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವ್ಯಾಸಂಗ ಮತ್ತು ಸಂಶೋಧನೆಯಲ್ಲಿ ಉತ್ತಮ ಕೊಡುಗೆಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಗೌರವ, ಪ್ರಶಸ್ತಿಗಳನ್ನು ಸ್ವೀಕರಿಸಿದ್ದಾರೆ. 1999ರಲ್ಲಿ ಸಾರ್ಕ್ ಯುವಜನ ಸಮ್ಮೇಳನವನ್ನು ಈ ವಿಶ್ವವಿದ್ಯಾಲಯ ಯಶಸ್ವಿಯಾಗಿ ನಡೆಸಿತು. ಎನ್.ಎಸ್.ಎಸ್. ಘಟಕ ಇಂದಿರಾ ಗಾಂಧಿ ಯುವಜನ ರಾಷ್ಟ್ರೀಯ ಪುರಸ್ಕಾರವನ್ನು ಪಡೆದಿದೆ. ಎಂ.ನಾಗರಾಜ (1980-84) ಈ ವಿಶ್ವವಿದ್ಯಾಲಯದ ಮೊದಲ ಕುಲಪತಿ. ಅನಂತರ ಹಾ.ಮಾ.ನಾಯಕ (1984-87), ಕೆ.ಎಚ್.ಚಲುವರಾಜು (1987-90), ಎನ್.ರುದ್ರಯ್ಯ (1990-96), ಎಂ.ಮುನಿಯಮ್ಮ (1996-99), ಜಿಎಸ್.ಪಾಟೀಲ (1999, ಹಂಗಾಮಿ ಕುಲಪತಿ), ಎಂ.ವಿ.ನಾಡಕರ್ಣಿ (1999-2002) ಕುಲಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ಈಗಿನ ಕುಲಪತಿ ವಿ.ಬಿ.ಕುಟಿನೊ (2002). *

**ಗುಲ್ವಾಡಿ ವೆಂಕಟರಾವ್ :** 1844-1907. ಕನ್ನಡದ ಆದ್ಯ ಸ್ವತಂತ್ರ ಸಾಮಾಜಿಕ ಕಾದಂಬರಿಕಾರರು. ಇಂದಿನ ಉಡುಪಿ ಜಿಲ್ಲೆಯ ಕುಂದಾಪುರದ ಗುಲ್ವಾಡಿ ಇವರ ಹುಟ್ಟೂರು. ಸಾರಸ್ವತ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಗುಲ್ವಾಡಿಯವರು ಬಿ.ಎ. ಪದವೀಧರರಾದ ಅನಂತರ ಪೊಲೀಸ್ ಖಾತೆಯನ್ನು ಸೇರಿದರು. ಇವರದು ಆ ವೃತ್ತಿಗೆ ತಕ್ಕ ಭೀಮಕಾಯ, ಗಂಭೀರ ಮುಖಮುದ್ರೆ. ಪೊಲೀಸ್ ಕೆಲಸದಿಂದ ನಿವೃತ್ತರಾದ ಮೇಲೆ ಸಾಹಿತ್ಯ ರಚನೆಯಲ್ಲಿ ತೊಡಗಿದರು. ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ ಇವರ ಮೊದಲ ಕಾದಂಬರಿ (1898). ಭಾಗೀರಥಿ, ಸೀಮಂತಿನೀ (1907) ಇವು ಇವರ ಇತರ ಕಾದಂಬರಿಗಳು. ಲಾಡುಪ್ರಿಯಾಚಾರ್ಯ (1899) ಎಂಬುದು ಇವರ ಒಂದು ವಿಡಂಬನಾತ್ಮಕ ಬರೆಹ. ಇವರು ಮಿತ್ರೋದಯ ಎಂಬ ಪತ್ರಿಕೆಯನ್ನು ನಡೆಸುತ್ತಿದ್ದುದಾಗಿಯೂ ತಿಳಿಯುತ್ತದೆ.

ಗುಲ್ವಾಡಿಯವರು ಬಾಳಿದ ಕಾಲದಲ್ಲಿ ಭಾರತೀಯ ಸಮಾಜ ಸನಾತನ ಆವರಣದಿಂದ ಹೊರಬಿದ್ದು, ಪಾಶ್ಚಾತ್ಯ ನಾಗರಿಕತೆಯತ್ತ ಸಾಗುತ್ತಿತ್ತು. ಈ ಘರ್ಷಣೆಯಲ್ಲಿ ಈ ಲೇಖಕರದು ಮಧ್ಯಮಾರ್ಗ. ಸನಾತನ ಧರ್ಮದಲ್ಲಿ, ಗುರುಪೀಠಗಳಲ್ಲಿ ಇವರಿಗೆ ಅಚಲ ನಿಷ್ಠೆಯಿತ್ತೆಂಬುದೇನೋ ನಿಜ. ಆ ಮನೋಭಾವದಿಂದಲೇ ಇವರು ದಕ್ಷಿಣಕನ್ನಡ ಜಿಲ್ಲೆಯ ಹಲವೆಡೆ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯವನ್ನು ನಡೆಸಿದರು. ಆದರೆ ಪ್ರಾಮಾಣಿಕತೆಯೇ ಜೀವನದ ಉಸಿರಾಗಿದ್ದ ಇವರಿಗೆ ಹಲವು ಗುರುಪೀಠಗಳ ಡಂಭಾಚಾರ ಸರಿಬರಲಿಲ್ಲ. ಹೊಸ ಶಿಕ್ಷಣದ ಪುರಸ್ಕರ್ತರಾಗಿ ಹಲವು ಶಿಕ್ಷಣ ಮಂದಿರಗಳನ್ನು ಪುನರುಜ್ಜೀವಗೊಳಿಸಿದರು. ಸ್ತ್ರೀಯರ ಏಳ್ಗೆ ಮುಂತಾದ ವಿಷಯಗಳಲ್ಲಿ ಇವರಿಗೆ ಸಹಜವಾದ ಕಳಕಳಿ ಇತ್ತು.

ಹಳತು-ಹೊಸತರ ಸಂಘರ್ಷ ಇವರ ಇಂದಿರಾಬಾಯಿ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಪೊಲೀಸ್ ಖಾತೆಯಲ್ಲಿದ್ದಾಗಿನ ಲೋಕಾನುಭವ ಇಲ್ಲಿ ಸಾಹಿತ್ಯವಾಗಿ ರೂಪುಗೊಂಡಿದೆ. ಇಂದಿರೆಯ ತಂದೆತಾಯಿಗಳು ಸ್ವಾರ್ಥಪರರು. ತಮಗೆ ಆಗದವರನ್ನು ವಿಷಹಾಕಿ ಕೊಲ್ಲಿಸುವುದಕ್ಕೂ ಹೇಸರು. ಒಬ್ಬ ವ್ಯಸನಿಯೊಡನೆ ಮಗಳ ಮದುವೆ ಮಾಡಿಸಿದ್ದರ ಫಲವಾಗಿ ಇಂದಿರ ಬಾಲವಿಧವೆಯಾಗಿ ಅಮೃತ ರಾಯನೆಂಬುವನ ಆಶ್ರಯದಲ್ಲಿ ನಿಲ್ಲುತ್ತಾಳೆ. ಆತನ ಪೋಷಣೆಯಲ್ಲಿ ಆಕೆಯೂ ಭಾಸ್ಕರನೆಂಬ ಅನಾಥ ಹುಡುಗನೊಬ್ಬನೂ ವಿದ್ಯೆ ಕಲಿಯುತ್ತಾರೆ. ಕೊನೆಗೆ ಭಾಸ್ಕರನೊಡನೆ ಇಂದಿರೆಯ ಮರುಮದುವೆಯಾಗುತ್ತದೆ. ಈ ಸಂಬಂಧದಿಂದ ನಿಜವಾದ, ಸದ್ಧರ್ಮದ ವಿಜಯವಾಯಿತೆಂದು ತೋರಿಸಲಾಗಿದೆ. ಕಥೆಯಲ್ಲಿನ ಘಟನೆಗಳು ವಾಸ್ತವಾಂಶದಿಂದ ಕೂಡಿದುವಾಗಿದ್ದು ಯಾವ ದೃಷ್ಟಿಯಿಂದ ನೋಡಿದರೂ ಕಾದಂಬರಿ ಆಧುನಿಕ ಸಮಾಜದ ಕಥನವೆನ್ನಿಸಿಕೊಳ್ಳುತ್ತದೆ. ಈ ಕಾದಂಬರಿಯನ್ನು ಮೆಚ್ಚಿ, ದಕ್ಷಿಣ ಕನ್ನಡದಲ್ಲಿ ಜಿಲ್ಲಾಧಿಕಾರಿಯಾಗಿದ್ದ ಕೌಚ್‌ಮನ್ ಎಂಬಾತ ಇದನ್ನು ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಿದ್ದಾನೆ. (ಎಸ್.ಎಚ್.)

**ಗುಳೇದಗುಡ್ಡ :** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಒಂದು ಪಟ್ಟಣ; ಹೋಬಳಿ ಕೇಂದ್ರ. ಬಾದಾಮಿಯ ಈಶಾನ್ಯಕ್ಕೆ 23ಕಿಮೀ ದೂರದಲ್ಲೂ ಗುಳೇದಗುಡ್ಡ ರೋಡ್ ರೈಲು ನಿಲ್ದಾಣಕ್ಕೆ 10ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 33,991.

ಬಾದಾಮಿ ತಾಲ್ಲೂಕಿನಲ್ಲಿ ಗುಳೇದಗುಡ್ಡ ಅಭಿವೃದ್ಧಿ ಹೊಂದುತ್ತಿರುವ ಒಂದು ಪಟ್ಟಣ. ಇಲ್ಲಿ ತಯಾರಾಗುವ ಕುಪ್ಪುಸದ ಕಣಗಳು, ಭಾರತದಲ್ಲೆಲ್ಲ ಪ್ರಸಿದ್ಧಿಪಡೆದಿವೆ. ಇಳಕಲ್ಲ ಸೀರೆ, ಅಮೀನಗಡದ ಕರದಂಟು, ಗುಳೇದಗುಡ್ಡದ ಕಣ ಇದು ಉತ್ತರ ಕರ್ನಾಟಕದಲ್ಲಿ ಮನೆಮಾತು. ಇಲ್ಲಿ ತಯಾರಾಗುವ ಹತ್ತಿ ಮತ್ತು ರೇಷ್ಮೆ ಬಟ್ಟೆಗಳು ಸೊಲ್ಲಾಪುರ, ಮುಂಬಯಿ, ಪುಣೆ, ಅಹಮದ್‌ನಗರಗಳಿಗೆ ಸಾಗುತ್ತವೆ. ಗುಳೇದಗುಡ್ಡದ ಹತ್ತಿರ ಬೆಲೆಬಾಳುವ ಕಲ್ಲುಗಣಿಗಳುಂಟು.

ಗುಳೇದಗುಡ್ಡ ಪಟ್ಟಣ ಹಿಂದೆ ಇಲ್ಲಿರುವ ಬೆಟ್ಟದ ಮೇಲಿತ್ತು. ಈಗಲೂ ಅಲ್ಲಿ ಪಟ್ಟಣದ ಅವಶೇಷಗಳನ್ನು ಕಾಣಬಹುದು. 1580ರಲ್ಲಿ ಬಿಜಾಪುರದ ಎರಡನೆಯ ಇಬ್ರಾಹೀಂ ಆದಿಲ್ ಷಾ ಇಲ್ಲಿ ಕೋಟೆ ಕಟ್ಟಿಸಿದ. 1705ರಲ್ಲಿ ಇಂದಿನ ಪಟ್ಟಣದ ಸ್ಥಾಪನೆಯಾಯಿತು. 1787ರಲ್ಲಿ ಟಿಪ್ಪುವಿನ ಅಧೀನಕ್ಕೆ ಬಂತು. ಅನಂತರ ಮರಾಠರು ಇದನ್ನು ಲೂಟಿ ಮಾಡಿದಾಗ ಇಲ್ಲಿಯ ನಿವಾಸಿಗಳನೇಕರು ಪಟ್ಟಣ ಬಿಟ್ಟು ಓಡಿ ಹೋದರು. ದೇಸಾಯಿಮನೆತನದ ಪ್ರಭಾವದಿಂದಾಗಿ ಅವರು ಮತ್ತೆ ಇಲ್ಲಿಗೆ ಬಂದು ನೆಲೆಸಿದರು. ಮತ್ತೆ ನರಸಿಂಹನೆಂಬುವವನು ಈ ನಗರವನ್ನು ಲೂಟಿ ಮಾಡಿದ. ಜನ ಪುನಃ ಓಡಿಹೋದರು. 1818ರಲ್ಲಿ ದೇಸಾಯಿ ಪರಿವಾರದವರ ಒತ್ತಾಯ ಮತ್ತು ಸಹಯೋಗದಿಂದಾಗಿ ಜನರಲ್ ಮನ್ರೋ ಜನವಾಸಕ್ಕೆ ಅನುಕೂಲಮಾಡಿಕೊಟ್ಟ. *

**ಗೂಳೂರು :** ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕಿನ ಒಂದು ಗ್ರಾಮ. ತುಮಕೂರಿಗೆ ದಕ್ಷಿಣದಲ್ಲಿ ಸು.4ಕಿಮೀ ದೂರದಲ್ಲಿದೆ.

ಗೂಳೂರು ಗಣಪತಿ

ಇದರ ಸಮೀಪದಲ್ಲಿರುವ ಪ್ರಸಿದ್ಧವಾದ ಕೈದಾಳ ಕ್ಷೇತ್ರ ಸೇರಿದಂತೆ ಇದು ಕ್ರೀಡಾಪುರವೆಂಬ ಹೆಸರಿನ ಪ್ರಾಚೀನ ರಾಜಧಾನಿ

ಯಾಗಿತ್ತೆಂದು ಪ್ರತೀತಿ. ವಿಜಯನಗರದ ಹಾಗೂ ಮೈಸೂರು ಅರಸರ ಕೆಲವು ಶಾಸನಗಳಲ್ಲಿ ಗೂಳೂರು ಸೀಮೆ ಉಕ್ತವಾಗಿರುವುದರಿಂದ ಇದು ಹಲವು ಹಳ್ಳಿಗಳನ್ನೊಳಗೊಂಡ ಒಂದು ಆಡಳಿತ ವಿಭಾಗವಾಗಿತ್ತೆಂದು ತೋರುತ್ತದೆ. ಸಂಸ್ಕೃತದಲ್ಲಿ ಈ ಗ್ರಾಮಕ್ಕೆ ನಂದೀಪುರವೆಂಬ ಹೆಸರಿತ್ತೆಂದು ತಿಳಿದುಬರುತ್ತದೆ. ಶೂನ್ಯಸಂಪಾದನೆ ಮತ್ತು ಅನಾದಿ ವೀರಶೈವ ಸಂಗ್ರಹಗಳ ಕರ್ತೃ ಸಿದ್ಧವೀರಣಾಚಾರ್ಯ, ಸಂಪಾದನೆ ಪರ್ವತೇಶ್ವರ ಮತ್ತು ವಿರಕ್ತ ತೋಂಟದಾರ್ಯ ಮುಂತಾದ ಕವಿಗಳು ಇಲ್ಲಿಯವರು. ಎಡೆಯೂರು ಸಿದ್ಧಲಿಂಗೇಶ್ವರರು ಸ್ವಲ್ಪ ಕಾಲ ಇಲ್ಲಿ ತಂಗಿದ್ದರೆಂಬ ಪ್ರತೀತಿ ಇದೆ.

ಗೂಳೂರು ಬೃಹದ್ ಗಣೇಶ ವಿಗ್ರಹದಿಂದಾಗಿ ಹೆಚ್ಚು ಪ್ರಸಿದ್ಧಿ ಪಡೆದಿದೆ. ಪ್ರತಿವರ್ಷ ಭಾದ್ರಪದ ಚತುರ್ಥಿಯಂದು ಸಾಮಾನ್ಯ ಎತ್ತರದ ಮಣ್ಣಿನ ಗಣೇಶ ವಿಗ್ರಹವೊಂದನ್ನು ಸ್ಥಾಪಿಸಿ, ಅದಕ್ಕೆ ಪ್ರಾಣಪ್ರತಿಷ್ಠೆ ಮಾಡಿ ಪೂಜಿಸಲಾಗುತ್ತದೆ. ಪ್ರಾಣಪ್ರತಿಷ್ಠೆ ಮಾಡಿದ ಚಿಕ್ಕ ಗಣೇಶಮೂರ್ತಿ ಈ ವಿಗ್ರಹದ ಹೊಟ್ಟೆಯೊಳಗಿರುತ್ತದೆ. ಬೃಹದ್ ಗಣೇಶ ವಿಗ್ರಹದ ಎತ್ತರ ಸುಮಾರು ಎಂಟು ಅಡಿಗಳು. ಇದನ್ನು ತಯಾರಿಸಲು ಸುಮಾರು ಎರಡು ತಿಂಗಳ ಕಾಲಾವಕಾಶ ಬೇಕಾಗುತ್ತದೆ. ರಚನೆಯ ಕಾರ್ಯ ಮುಗಿದ ಅನಂತರ ಸುಮಾರು ಒಂದು ತಿಂಗಳ ಕಾಲ ಅದಕ್ಕೆ ಪೂಜೆಪುನಸ್ಕಾರಗಳು ನಡೆಯುತ್ತವೆ. ಹತ್ತಾರು ಕಡೆಗಳಿಂದ ಜನ ಈ ವಿಗ್ರಹದ ದರ್ಶನ ಪಡೆಯಲು ಬರುತ್ತಾರೆ. ನವೆಂಬರ್ - ಡಿಸೆಂಬರ್‌ನಲ್ಲಿ ಈ ಗಣೇಶನ ಜಾತ್ರೆ ನಡೆಯುತ್ತದೆ. ಎಲ್ಲ ಕಾರ್ಯಕಲಾಪಗಳು ಮುಗಿದ ಅನಂತರ ವಿಜೃಂಭಣೆಯಿಂದ ಊರಲ್ಲಿ ಮೆರವಣಿಗೆ ಮಾಡಿ ಮೂರ್ತಿಯನ್ನು ಕೆರೆಯಲ್ಲಿ ವಿಸರ್ಜಿಸಲಾಗುತ್ತದೆ. (ಎಚ್.ಎಂ.ಎನ್.ಆರ್.)

**ಗೂಳೂರು ಸಿದ್ಧವೀರಣ್ಣೊಡೆಯ :** ಸು.1600. ವೀರಶೈವಕವಿ. ಶೂನ್ಯಸಂಪಾದನೆಯ ಸಂಕಲನಕಾರರಲ್ಲೊಬ್ಬ. ತುಮಕೂರು ತಾಲ್ಲೂಕಿನ ಗೂಳೂರು ಈತನ ಜನ್ಮಸ್ಥಳ ಹಾಗೂ ಕಾರ್ಯಕ್ಷೇತ್ರ. ಸಾಹಿತ್ಯಕ್ಷೇತ್ರದಲ್ಲಿ ಶೂನ್ಯಸಂಪಾದನೆಯನ್ನು ಮತ್ತೊಮ್ಮೆ ಪರಿಷ್ಕರಿಸಿದ್ದು ಇವನ ಮುಖ್ಯ ಕಾರ್ಯ. ಶಿವಗಣಪ್ರಸಾದಿ ಮಹಾದೇವಯ್ಯನಿಂದ ರಚಿತವಾಗಿದ್ದ ಈ ಕೃತಿ ಆ ವೇಳೆಗಾಗಲೇ ಕೆಂಚವೀರಣ್ಣೊಡೆಯ (ಹಲಗೆಯದೇವ) ಮತ್ತು ಗುಮ್ಮಳಾಪುರದ ಸಿದ್ಧಲಿಂಗಯತಿಗಳಿಂದ ಪುನರ್ನಿರ್ಮಾಣವನ್ನು ಪಡೆದಿತ್ತು. ಈತ ಇದನ್ನು ಮತ್ತೊಮ್ಮೆ ಕೈಗೆತ್ತಿಕೊಂಡು ಇದಕ್ಕೆ ಅತ್ಯಂತ ಪರಿಷ್ಕೃತ ರೂಪವನ್ನು ಕೊಟ್ಟ. ಇವನ ಶೂನ್ಯಸಂಪಾದನೆಯಲ್ಲಿ ಮೊಟ್ಟಮೊದಲು ನಮ್ಮ ಗಮನವನ್ನು ಸೆಳೆಯುವ ಅಂಶವೆಂದರೆ ಕೃತಿಯನ್ನು ಸಂಧಿಗಳನ್ನಾಗಿ ವಿಭಾಗಿಸಿ ಸಂಪಾದನೆ ಅಥವಾ ಉಪದೇಶ ಎಂದು ಅವುಗಳನ್ನು ಹೆಸರಿಸಿದ್ದು. ಒಂದೊಂದು ಉಪದೇಶದ ಪ್ರಾರಂಭದಲ್ಲೂ ಒಂದು ಕಂದಪದ್ಯವನ್ನು ಬರೆದು ಆ ಸಂಧಿಯಲ್ಲಿ ಬರುವ ಪ್ರಮುಖ ವಿಷಯವನ್ನು ಸೂಚಿಸುತ್ತಾನೆ. ಆಶ್ವಾಸದ ಕೊನೆಯಲ್ಲಿ ಸಮಾಪ್ತಿಯ ಗದ್ಯವನ್ನು ಬರೆದು ಉಪದೇಶದ ಹೆಸರು ಹಾಗೂ ಅದುವರೆಗೂ ಬಳಸಿದ ಸಂಖ್ಯೆಯನ್ನು ಕೊಟ್ಟಿದ್ದಾನೆ. ಮೊದಲನೆಯ ಮೂರು ಶೂನ್ಯಸಂಪಾದನೆಗಳಲ್ಲಿ ಈ ವಿಭಾಗಕ್ರಮವಿಲ್ಲ. ಇವನ ಕೃತಿಯಲ್ಲಿ ಇಪ್ಪತ್ತೊಂದು ಉಪದೇಶಗಳಿವೆ. ಹಿಂದಿನವರಲ್ಲಿ ಇಲ್ಲದಿರುವ ಎರಡು ಸನ್ನಿವೇಶಗಳನ್ನು (ಮೋಳಿಗೆ ಮಾರಯ್ಯ ಮತ್ತು ಘಟ್ಟಿವಾಳಯ್ಯ) ಹೊಸದಾಗಿ ಸೇರಿಸಿದ್ದಾನೆ. ಒಟ್ಟಿನಲ್ಲಿ ಶಿವಗಣ ಪ್ರಸಾದಿ ಮಹಾದೇವಯ್ಯ ಯಾವ ಮಹೋದ್ದೇಶವನ್ನಿಟ್ಟುಕೊಂಡು ಶೂನ್ಯ ಸಂಪಾದನೆಯನ್ನು ಮೊಟ್ಟಮೊದಲು ಸಂಭಾಷಣೆಯ ರೂಪದಲ್ಲಿ ಸಂಗ್ರಹಿಸಿದ್ದನೋ ಅದು ಇತರ ಶೂನ್ಯಸಂಪಾದನೆಗಾರರ ಕೈಯಲ್ಲಿ ವಿಕಾಸಗೊಂಡು ಇವನಲ್ಲಿ ಪೂರ್ಣತೆಯನ್ನು ಪಡೆಯಿತೆಂದು ಹೇಳಬಹುದು. (ಎಚ್.ಟಿ.ಎಸ್.)

**ಗೃಹಕೈಗಾರಿಕೆಗಳು :** ಮನೆಯನ್ನೇ ಕೈಗಾರಿಕಾ ಸ್ಥಳವಾಗಿ ಉಪಯೋಗಿಸಿಕೊಂಡು ಸಾಮಾನ್ಯ ಬಳಕೆ ವಸ್ತುಗಳನ್ನು ಮನೆಯವರೆಲ್ಲ ಪಾಲ್ಗೊಂಡು ತಮ್ಮ ಬಿಡುವಿನ ಸಮಯದಲ್ಲಿ ಉತ್ಪಾದನೆಯಲ್ಲಿ ತೊಡಗುತ್ತಾರೆ. ಕರ್ನಾಟಕ ಗೃಹಕೈಗಾರಿಕೆಗಳು ಹಿಂದಿನಿಂದಲೂ ಪ್ರಸಿದ್ಧ. ಅವುಗಳಲ್ಲಿ ಕುಂಬಾರಿಕೆ, ನೇಯ್ಗೆ, ಬಿದಿರು ಮತ್ತು ಬೆತ್ತದ ಸಾಮಾನುಗಳ ತಯಾರಿಕೆ, ಚಾಪೆ ಹೆಣಿಗೆ, ಚರ್ಮ ವಸ್ತುಗಳ ತಯಾರಿಕೆ, ನೂಲಿಗೆ ಬಣ್ಣ ಕಟ್ಟುವುದು, ಬಟ್ಟೆ ತಯಾರಿಕೆ, ಪುಸ್ತಕಗಳನ್ನು ಹೊಲಿಯುವುದು, ಬೀಜಗಳಿಂದ ಎಣ್ಣೆ ತೆಗೆಯುವುದು, ಚಿನ್ನಬೆಳ್ಳಿ ಮತ್ತು ಇತರ ಆಭರಣಗಳ, ಸಂಗೀತ ವಾದ್ಯಗಳ, ವ್ಯವಸಾಯೋಪಕರಣಗಳ, ಜಮಖಾನದ, ಮಣ್ಣಿನ ಪ್ರತಿಮೆಗಳ ಮತ್ತು ತಾಮ್ರಕಂಚು ಹಿತ್ತಾಳೆ ಸಾಮಾನುಗಳ ತಯಾರಿಕೆ, ಆಟದ ಸಾಮಾನುಗಳ ಅಲಂಕಾರ ವಸ್ತುಗಳ ರಬ್ಬರ್ ವಸ್ತುಗಳ ಮತ್ತು ಅಚ್ಚುಗಳ ತಯಾರಿಕೆ, ರಟ್ಟುಕಟ್ಟುವುದು, ಕಸೂತಿ ವಸ್ತುಗಳ ಉತ್ಪಾದನೆ ಮುಂತಾದ ಹಲವಾರು ಕೈಗಾರಿಕೆಗಳಿವೆ. ಅವುಗಳ ಉತ್ಪಾದನೆಗಳೊಂದಿಗೆ



ಸಹಕರಿಸುವ ನೂರಾರು ಉಪಕೈಗಾರಿಕೆಗಳೂ ಉಂಟು. ಉದಾಹರಣೆಗೆ ಚರ್ಮೋದ್ಯೋಗಕ್ಕೆ ಬೇಕಾದ ಸುಣ್ಣ, ನೂಲಿಗೆ ಬೇಕಾಗುವ ಬಣ್ಣ ಇತ್ಯಾದಿ. ಇವು ಅಲ್ಪಪ್ರಮಾಣ ದಲ್ಲಾದರೂ ತಯಾರಾಗಬಹುದು, ಇಲ್ಲವೆ ಭಾರಿ ಉದ್ಯಮವೇ ಆಗಿರಬಹುದು. ಗೃಹ ಕೈಗಾರಿಕಾ ವಸ್ತುಗಳ ಉತ್ಪಾದನೆಯ ಜೊತೆಯಲ್ಲಿ ಇತರ ವಸ್ತುಗಳೂ ನಮಗೆ ದೊರಕುತ್ತವೆ. ಉದಾಹರಣೆಗೆ ಎಣ್ಣೆ ಉತ್ಪಾದನೆಯ ಜೊತೆಯಲ್ಲಿ ಹಿಂಡಿ, ಅಕ್ಕಿ ಕುಟ್ಟುವುದರಿಂದ ತೌಡು ಇತ್ಯಾದಿಗಳನ್ನು ಹೆಸರಿಸಬಹುದು. ಗೃಹಕೈಗಾರಿಕೆಗಳು ಇತರ ಸಹವಸ್ತು ಗಳನ್ನು ಉತ್ಪಾದಿಸುವುದಲ್ಲದೆ ಹಿರಿಯ ಕೈಗಾರಿಕೋದ್ಯಮಕ್ಕೆ ಕಚ್ಚಾಮಾಲನ್ನೂ ಉಪಯುಕ್ತ ವಸ್ತುಗಳನ್ನೂ ತಯಾರಿಸಿ ರಾಜ್ಯದ ಕೈಗಾರಿಕೋದ್ಯಮದ ಬೆಳೆವಣಿಗೆಗೆ ಸಹಕಾರಿಯಾಗಿದೆ.

ಈ ಎಲ್ಲ ಉದ್ಯಮಗಳಿಗೆ ಬೇಕಾಗುವ ಪ್ರಾಕೃತಿಕ ಕಚ್ಚಾವಸ್ತುಗಳು ಕರ್ನಾಟಕದಲ್ಲಿ ಹೇರಳವಾಗಿವೆ. ಮರದ, ಬಿದಿರಿನ ಮತ್ತು ನಾರಿನ ಉದ್ಯಮಕ್ಕೆ ಕರ್ನಾಟಕದ ಕಾಡುಗಳಲ್ಲಿ ಉತ್ತಮ ಮರಗಳು, ಬಿದಿರು, ನಾರಿನ ಕತ್ತಾಳೆ ಇವು ದೊರೆಯುತ್ತವೆ. ಕಬ್ಬಿಣಕ್ಕೂ ಕೊರತೆ ಇಲ್ಲ. ಕುಂಬಾರಿಕೆಗೆ ಬೇಕಾಗುವ ಜೇಡಿ ಮತ್ತು ಇತರ ಮಣ್ಣುಗಳು ರಾಜ್ಯದ ಅನೇಕ ಕಡೆ ಹೇರಳವಾಗಿ ದೊರೆಯುವುದು. ಜೇನುಸಾಕಣೆಗೆ ವಿಶಾಲವಾದ

ಲೋಹ ಕಲಾಕೃತಿ

ಕಾಡುಗಳೂ ಉದ್ಯಾನವನಗಳೂ ಇವೆ. ಪಶುಸಂಪತ್ತು ಸಮೃದ್ಧಿಯಾಗಿದ್ದು ಚರ್ಮೋದ್ಯೋಗಕ್ಕೆ ಅನುಕೂಲವಾಗಿದೆ. ನಾನಾ ತರಹದ ಎಣ್ಣೆಬೀಜಗಳು ಉದಾಹರಣೆಗೆ, ಹೊಂಗೆ, ಬೇವು, ಹರಳು, ನೆಲಗಡಲೆ, ಎಳ್ಳು, ಹುಚ್ಚೆಳ್ಳು ಇತ್ಯಾದಿಗಳು ಬೆಳೆಯುವುದರಿಂದ ತೈಲೋದ್ಯಮಕ್ಕೆ ಅನುಕೂಲವಿದೆ. ಬತ್ತ ರಾಜ್ಯದ ಒಂದು ಮುಖ್ಯ ಬೆಳೆಯಾಗಿದ್ದು ಕೊಟ್ಟಣದ ಅಕ್ಕಿ ಉದ್ಯಮ ನಡೆದುಕೊಂಡು ಹೋಗುತ್ತಿದೆ. ಕಬ್ಬು ರಾಜ್ಯದ ಇನ್ನೊಂದು ಪ್ರಮುಖ ಬೆಳೆಯಾಗಿದ್ದು, ಬೆಲ್ಲ ಮತ್ತು ಖಂಡಸಾರಿ ಉದ್ಯಮಕ್ಕೂ ಸಿಪ್ಪೆ ಕಾಗದ

ತಯಾರಿಕೆಗೂ ಬರುತ್ತದೆ. ಅಖಾದ್ಯ ತೈಲಗಳ ಉತ್ಪತ್ತಿಯೂ ಸಾಕಷ್ಟು ಇದ್ದು ಈ ತೈಲಗಳನ್ನು ಸಾಬೂನು ತಯಾರಿಕೆಗೆ ಉಪಯೋಗಿಸುತ್ತಾರೆ. ಕಂಬಳಿ ತಯಾರಿಕೆಗೆ ಸಾಕಷ್ಟು ಉಣ್ಣೆಯ ಪೂರೈಕೆ ಇದೆ. ಕತ್ತಾಳೆ ಮುಂತಾದವುಗಳಿಂದ ನಾರಿನ ಉತ್ಪತ್ತಿಯಾಗುತ್ತದೆ.

ಬಣ್ಣದ ಆಟಿಕೆಗಳು

ಆಂದಿನ ಮೈಸೂರು ಸರ್ಕಾರ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಗೃಹಕೈಗಾರಿಕೆಗಳನ್ನು ಉಳಿಸಿಬೆಳಸುವ ದೃಷ್ಟಿಯಿಂದ 1916ರಲ್ಲಿ ಗೃಹಕೈಗಾರಿಕಾ ಸಂಸ್ಥೆಯನ್ನು ಸ್ಥಾಪಿಸಿತು. ಈ ಯೋಜನೆ ನಿಧಾನಗತಿಯಲ್ಲಿ ಸಾಗಿದ್ದು 1939ರಲ್ಲಿ ಒಂದು ವ್ಯಾಪಕ ಯೋಜನೆ ಸಿದ್ಧಪಡಿಸಿ ಜಾರಿಗೊಳಿಸಲಾಯಿತು. ಇದರಂತೆ ಮಾದರಿ ಮಡಕೆಕುಡಿಕೆಗಳ ತಯಾರಿಕೆ, ಗುಂಡಿ ಮತ್ತು ಚರ್ಮ ವಸ್ತುಗಳ ತಯಾರಿಕೆ ಇವೇ ಮೊದಲಾಗಿ 17 ಬಗೆಯ ಗೃಹಕೈಗಾರಿಕೆಗಳು ಸ್ಥಾಪನೆಯಾದವು. ಜೊತೆಗೆ ರಾಜ್ಯದ ಕೆಲವು ಭಾಗಗಳಲ್ಲಿ ತರಬೇತಿ ಕೇಂದ್ರಗಳು ಸ್ಥಾಪಿತವಾದವು. ಮುಂದೆ ಕೈಗಾರಿಕೋದ್ಯಮದ ಬೆಳೆವಣಿಗೆಗೆ ಮತ್ತು ನಿರುದ್ಯೋಗ ನಿವಾರಣೆಗೆ ಗೃಹಕೈಗಾರಿಕೆಗಳ ಅಭಿವೃದ್ಧಿ ಅಗತ್ಯವೆಂಬುದನ್ನು ಮನಗಂಡು ಸರ್ಕಾರ ಕೆಲವು ಮಂಡಳಿಗಳನ್ನು ಸ್ಥಾಪಿಸಿತು. ಅವುಗಳಲ್ಲಿ ಮುಖ್ಯವಾದವು ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಆಯೋಗ, ಅಖಿಲ ಭಾರತ ಕೈಮಗ್ಗದ ಮಂಡಳಿ, ಅಖಿಲ ಭಾರತ ಕುಶಲ ಕೈಗಾರಿಕೆಗಳ ಮಂಡಳಿ, ಅಖಿಲ ಭಾರತ ತೆಂಗಿನ ನಾರಿನ ಕೈಗಾರಿಕಾಭಿವೃದ್ಧಿ ಮಂಡಳಿ ಮತ್ತು ಕೇಂದ್ರ ರೇಷ್ಮೆ ಮಂಡಳಿ ಇತ್ಯಾದಿ. ಇವೆಲ್ಲವೂ ರಾಜ್ಯ ಮಟ್ಟದಲ್ಲಿ ತಮ್ಮ ಮಂಡಳಿಗಳನ್ನು ಹೊಂದಿದ್ದು ಸಂಬಂಧಿಸಿದ ಕೈಗಾರಿಕಾಭಿವೃದ್ಧಿಗೆ ಶ್ರಮಿಸುತ್ತಿವೆ. ಈ ಮಂಡಳಿಗಳ ಮೂಲಕ ಸರ್ಕಾರ ಗೃಹಕೈಗಾರಿಕೆಗಳಿಗೆ ಆರ್ಥಿಕ ನೆರವನ್ನು ಸಾಲ ಮತ್ತು ಸಹಾಯಧನದ ಜೊತೆಗೆ ತಾಂತ್ರಿಕ ಸಹಾಯ ಮತ್ತು ತರಬೇತಿಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಗೃಹಕೈಗಾರಿಕೆಗಳ ಬೆಳೆವಣಿಗೆಯನ್ನು ಪ್ರೋತ್ಸಾಹಿಸುತ್ತಿದೆ.

ಪ್ರಾಚೀನ ಕಾಲದಿಂದ ಗೃಹಕೈಗಾರಿಕೆಗಳು ದೇಶದ ಆರ್ಥಿಕ ಚಟುವಟಿಕೆಯ ಮುಖ್ಯ ಅಂಗವಾಗಿದ್ದುವು. ಆದರೆ ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತದ ಇತರ ಕಡೆಗಳಂತೆಯೇ ಕರ್ನಾಟಕ ರಾಜ್ಯದ ಗೃಹಕೈಗಾರಿಕೆಗಳು ಸರಿಯಾದ ಪ್ರೋತ್ಸಾಹ ದೊರಕದೆ ಥಳುಕಿನ ಇಂಗ್ಲಿಷ್ ವಸ್ತುಗಳೊಡನೆ ಸ್ಪರ್ಧಿಸಲಾರದೆ ಹಿಂದೆ ಬೀಳಬೇಕಾಯಿತು. ಸ್ವಾತಂತ್ರ್ಯಾನಂತರ ಗೃಹಕೈಗಾರಿಕೆಗಳು ಚೇತರಿಸಿಕೊಂಡವು. ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗಿಗಳಾಗಿರುವ ಮತ್ತು ಸಾಕಷ್ಟು ಉದ್ಯೋಗ ಇಲ್ಲದಿರುವ ಜನರಿಗೆ ನೆರವಾಗುವ ಉದ್ದೇಶದ ಯೋಜನೆಯಂತೆ 1950ರಲ್ಲಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಯೋಜನೆಯನ್ನು ಜಾರಿಗೊಳಿಸಿ ಅದರ ಉತ್ತಮ ಫಲಿತಾಂಶಗಳಿಂದ ಮುಂದೆ ಇಡೀ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾಯಿತು. ಈ ಯೋಜನೆಯನ್ವಯ ಅಸ್ತಿತ್ವದಲ್ಲಿದ್ದ ಕೈಗಾರಿಕೆಗಳನ್ನು ವಿಸ್ತರಿಸಲು ಹಾಗೂ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಮೂಹಿಕ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು 1952ರಲ್ಲಿ ರಚಿಸಲಾಯಿತು. ಗ್ರಾಮಾಂತರ ಕೈಗಾರಿಕಾ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಇವು ಗ್ರಾಮಾಂತರ ಪ್ರದೇಶಗಳ ಕಸಬುದಾರರಿಗೆ ಮತ್ತು ಉದ್ಯಮಗಳಿಗೆ ಬಲು ಪ್ರಯೋಜನಕಾರಿಯಾದವು. ಈಗ ಈ ಕಾರ್ಯಕ್ರಮಗಳನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ವಿಲೀನಗೊಳಿಸಲಾಗಿದೆ.

ಎರಡನೆಯ ಯೋಜನೆಯಲ್ಲಿ ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಿಸಲಾಯಿತು. ಏಕೆಂದರೆ ಗ್ರಾಮಾಂತರ ಗೃಹಕೈಗಾರಿಕೆಗಳು ಬೆಳೆದು ಸಣ್ಣ ಕೈಗಾರಿಕೆಗಳ ಮಟ್ಟಕ್ಕೆ ಬರುವುದರಿಂದ ಅವುಗಳ ಅಭಿವೃದ್ಧಿಗೆ ಮೈಸೂರು, ಬೆಂಗಳೂರು, ಹುಬ್ಬಳ್ಳಿ, ರಾಮನಗರ, ಹರಿಹರ, ಬೆಳಗಾಂವಿ, ಮಂಗಳೂರು, ಗುಲ್ಬರ್ಗಗಳಲ್ಲಿ ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಾಣ ಮಾಡಲಾಯಿತು. 1959ರಲ್ಲಿ ಮೈಸೂರು ಸಣ್ಣ ಕೈಗಾರಿಕೆ ಮತ್ತು ಕರಕುಶಲ ಕಸಬುಗಳ ಮಂಡಳಿಯನ್ನು ರಚಿಸಲಾಯಿತು. ಬಲೆನೇಯ್ಗೆ, ಗಂಧದ ಕೆತ್ತನೆ, ದಂತದ ಕೆತ್ತನೆ, ಲೋಹಸಾಮಗ್ರಿ, ಮರದ ಆಟದ ಬೊಂಬೆ ತಯಾರಿಕೆ ಮುಂತಾದ ನಾನಾ ಕಸಬುಗಳು ಉಳಿದು ಕೈಗಾರಿಕೆಗಳು ಅಭಿವೃದ್ಧಿ ಹೊಂದಲು ಸರ್ಕಾರ ಹಲವಾರು ಉತ್ತೇಜನಗಳನ್ನು ಕೈಗೊಂಡಿತು. ಅವುಗಳೆಂದರೆ ಸಾಧ್ಯಾಸಾಧ್ಯತೆಯ ವರದಿ ಸಿದ್ಧಪಡಿಸಲು ಸಹಾಯ, ತೆರಿಗೆ ವಿನಾಯಿತಿ, ವ್ಯಾಪಾರ ತೆರಿಗೆ ರಿಯಾಯಿತಿ, ಅಕ್ಟ್ರಾಯ್ ರಿಯಾಯಿತಿ ಮತ್ತು ಉತ್ಪನ್ನಗಳನ್ನು ಸರ್ಕಾರ ಖರೀದಿ ಮಾಡುವುದು, ಕೈಗಾರಿಕಾ ಶಿಕ್ಷಣ ಕೇಂದ್ರಗಳನ್ನು ತೆರೆದು ಉಚಿತ ಶಿಕ್ಷಣ ಕೊಟ್ಟು ಗೃಹಕೈಗಾರಿಕೆಗಳಿಗೆ ತರಬೇತಿ ಪಡೆದ ಕುಶಲಕರ್ಮಿಗಳನ್ನು ಒದಗಿಸುವುದು ಇದರಲ್ಲಿ ಸೇರಿದೆ.

ಖಾದಿ ಗ್ರಾಮೋದ್ಯೋಗ ಮಂಡಳಿ ಗೃಹಕೈಗಾರಿಕೆಗಳ ತರಬೇತಿ ಶಿಬಿರಗಳನ್ನೂ ನಡೆಸುವುದಲ್ಲದೆ ಕೆಲವು ಕಡೆ ತರಬೇತಿ ಕೇಂದ್ರಗಳನ್ನೂ ತೆರೆದಿದೆ.

ಬಣ್ಣದ ಬುಟ್ಟಿಗಳು

ಕರ್ನಾಟಕದಲ್ಲಿ ಕೈಗಾರಿಕೀಕರಣ ನಡೆದಂತೆ ಗೃಹಕೈಗಾರಿಕೆಗಳ ಸ್ವರೂಪ ಬದಲಾಯಿತು ಮತ್ತು ವಿಸ್ತರಿಸಿತು. ಈ ಬೆಳೆವಣಿಗೆಯಿಂದ ಕೆಲವು ಗೃಹಕೈಗಾರಿಕೆಗಳು ಇತ್ತಿಚೆಗೆ ಅಭಿವೃದ್ಧಿ ಹೊಂದುತ್ತಿವೆ. ಅವುಗಳೆಂದರೆ ಊಟದ ಎಲೆ ಹಾಗೂ ದೊನ್ನೆ ತಯಾರಿಕೆ, ಬಳಪಕಲ್ಲಿನಿಂದ ಸಾಮಾನುಗಳನ್ನು ತಯಾರಿಸುವುದು, ಹುಲ್ಲಿನಿಂದ ಹಲಗೆ, ಹಾಸುಗಳು ಹಾಗೂ ಪ್ಯಾಕಿಂಗ್ ಪದಾರ್ಥಗಳನ್ನು ತಯಾರಿಸುವುದು, ಹಿತ್ತಾಳೆ ತಾಮ್ರ ಮುಂತಾದವುಗಳಿಂದ ಗೃಹೋಪಯೋಗಿ ಪದಾರ್ಥಗಳ ತಯಾರಿಕೆ, ಜಾನುವಾರು ಮತ್ತು ಕೋಳಿ ಆಹಾರ ತಯಾರಿಕೆ, ಬ್ರೆಡ್ ತಯಾರಿಕೆ, ರುಬ್ಬಿದ ಕಾಗದದಿಂದ ಸಾಮಾನುಗಳ ತಯಾರಿಕೆ, ಮಸಾಲೆಪುಡಿ, ಉಪ್ಪಿನಕಾಯಿ, ಹಪ್ಪಳ, ಖಾರದಪುಡಿ ವಿವಿಧ ತಿನಿಸುಗಳು ಮುಂತಾದವುಗಳ ತಯಾರಿಕೆ, ಹಲ್ಲಿನ ಪುಡಿ, ತಿಲಕ, ನಕ್ಕಿ, ಸುಗಂಧ ದ್ರವ್ಯಗಳ ತಯಾರಿಕೆ, ಮೇಣದ ಮತ್ತು ಗೋಂದಿನ ಉದ್ಯಮ, ಸೀಸದಕಡ್ಡಿ, ಸ್ಲೇಟುಗಳ ತಯಾರಿಕೆ ಸೀರೆಗಳಿಗೆ ಫಾಲ್ಸ್ ಹಾಕುವುದು, ಎಂಬ್ರಾಯಿಡರಿ ಮಾಡುವುದು ಸಿದ್ಧ ಉಡುಪುಗಳ ತಯಾರಿಕೆ ಸ್ಕ್ರೀನ್ ಪ್ರಿಂಟಿಂಗ್ ಮುಂತಾದವುಗಳೆಲ್ಲ ಗೃಹಕೈಗಾರಿಕೆಗಳಾಗಿ ಬೆಳೆಯುತ್ತಿವೆ.

ಇಷ್ಟಾದರೂ ರಾಜ್ಯದ ಗೃಹಕೈಗಾರಿಕೆಗಳು ನಾವು ಅಪೇಕ್ಷಿಸಿರುವಂತೆ ನಡೆಯುತ್ತಿಲ್ಲ. ಪ್ರಗತಿ ಸಾಧಿಸುತ್ತಿಲ್ಲವೆಂಬ ಮಾತಿದೆ. ಅದಕ್ಕೆ ಮುಖ್ಯ ಕಾರಣಗಳೆಂದರೆ ಬಂಡವಾಳದ ಅಭಾವ, ಕಚ್ಚಾಸಾಮಗ್ರಿಯ ಕೊರತೆ, ಉತ್ಪಾದಿಸಿದ ವಸ್ತುಗಳನ್ನು ಲಾಭದಾಯಕವಾಗಿ ಮಾರಾಟಮಾಡಲು ಆಗದಿರುವುದು, ಇತರ ಆಧುನಿಕ ತಯಾರಿಕಾ ಉದ್ಯಮಗಳೊಡನೆ ಸ್ಪರ್ಧಿಸಲು ಸಾಧ್ಯವಾಗದಿರುವುದು ಮುಂತಾದವು. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಲ್ಲಿನ ವೈಫಲ್ಯವೂ ಹಿನ್ನೆಡೆಗೆ ಕಾರಣವಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಎಣ್ಣೆಬೀಜಗಳ ಸಂಗ್ರಹ ತೃಪ್ತಿದಾಯಕವಾಗಿಲ್ಲ. ಜೊತೆಗೆ ತಯಾರಿಕಾಘಟ್ಟದಲ್ಲಿ ಉತ್ಪತ್ತಿಯಾಗುವ ಇತರ ವಸ್ತುಗಳನ್ನು ದುರುಪಯೋಗಪಡಿಸಿಕೊಳ್ಳುವುದು, ಬೆಲ್ಲ ತಯಾರಿಕೆಯ ಸಮಯದಲ್ಲಿ ಕಬ್ಬಿನ ರಸ ತೆಗೆದ ಅನಂತರ ಅದರ ಸಿಪ್ಪೆಯನ್ನು ಒಲೆಗೆ ಉರುವಲಾಗಿ ಉಪಯೋಗಿಸಿ ಕಾಗದ ತಯಾರಿಕೆಗೆ ಬೇಕಾದ ಉತ್ಕೃಷ್ಟ ವಸ್ತುವನ್ನು ಹಾಳು ಮಾಡುವುದು, ಕೆಲವೊಂದು ದಂಟುಗಳನ್ನು ವ್ಯರ್ಥವಾಗಿ ಹೊರಗೆ ಹಾಕುವುದು; ಹೊಗೆಸೊಪ್ಪಿನ ದಂಟು - ಇತ್ಯಾದಿ.

ಕೈಯಿಂದ ಹೊಲಿದ ಪಾದರಕ್ಷೆಗಳು

ಆದಾಗ್ಯೂ ಕರ್ನಾಟಕ ರಾಜ್ಯ ಇಂದು ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಅಗ್ರಪಂಕ್ತಿಯಲ್ಲಿದೆ. ಹಿತ್ತಾಳೆ ಕುಸರಿಕೆಲಸ, ಬೀಟೆ ಮತ್ತು ಗಂಧದ ಮರ ಕುಸರಿ ಕೆಲಸ, ಕೊಂಬುಗಳ ಕೆತ್ತನೆ, ದಂತ ಕೆತ್ತನೆಗಳಲ್ಲಿ ಮುಂಚೂಣಿಯಲ್ಲಿದೆ. ಕರಕುಶಲ ವಸ್ತುಗಳ ಅಭಿವೃದ್ಧಿನಿಗಮ ಈ ನಿಟ್ಟಿನಲ್ಲಿ ಪ್ರೋತ್ಸಾಹ ನೀಡುತ್ತಿದೆ. ರಾಜ್ಯದಲ್ಲಿ ಈಗ 2,45,826 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿವೆ. ಇವುಗಳಿಗೆ ಹೂಡಿರುವ ಬಂಡವಾಳ 43,569 ಕೋಟಿ ರೂ.ಗಳು. 14,69,388 ಉದ್ಯೋಗಿಗಳಿದ್ದಾರೆ (1997-98), ಖಾದಿ ಮತ್ತು ಗ್ರಾಮೋದ್ಯೋಗ ನಿಗಮವು ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹನೀಡುತ್ತಿದ್ದು 1.4 ಲಕ್ಷ ಕುಶಲಕರ್ಮಿಗಳು ಇದರ ಪ್ರಯೋಜನ ಪಡೆದಿದ್ದಾರೆ. ಪಾರಂಪರಿಕ ಕುಶಲ ಕಲೆಗಳನ್ನು ಪುನಶ್ಚೇತನಗೊಳಿಸಲು 1991 ಅಕ್ಟೋಬರ್ 2ರಂದು ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ 'ವಿಶ್ವ' ಯೋಜನೆ ಪ್ರಾರಂಭಿಸಲಾಯಿತು. ಕಚ್ಚಾವಸ್ತುಗಳ ಅಭಾವ ನೀಗುವುದು, ಸೂಕ್ತ ಮಾರುಕಟ್ಟೆ ಒದಗಿಸುವುದು, ಯುವಕರಿಗೆ ಕರಕುಶಲ ಉದ್ಯಮದಲ್ಲಿ ತರಬೇತಿ ನೀಡುವುದು ಈ ಯೋಜನೆಯ ಗುರಿ. ಬೃಹತ್ ಉದ್ಯಮಗಳು ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಈ ಕ್ಷೇತ್ರ ಈಗ ದೊಡ್ಡ ಸವಾಲುಗಳನ್ನು ಎದುರಿಸುತ್ತಿದೆ. (ಡಿ.ಜಿ.)

**ಗೃಹ ಮತ್ತು ಗೃಹಾಲಂಕರಣ :** ಕರ್ನಾಟಕದಲ್ಲಿ ಗೃಹಗಳನ್ನು ರಚಿಸುವ ಪದ್ಧತಿ ಆರಂಭವಾದುದು ಸು.4,500 ವರ್ಷಗಳ ಪೂರ್ವದಲ್ಲಿ, ನವಶಿಲಾಯುಗದ ಕಾಲದಲ್ಲಿ. ಆ ಹಿಂದಿನ ಕಾಲಘಟ್ಟದಲ್ಲಿ ಬೇಟೆಗಾರ ಜನಾಂಗಗಳು ಮಾತ್ರ ಈ ನಾಡಿನಲ್ಲಿ ಇದ್ದರಾಗಿ, ವಲಸೆಗಾರರಾದ ಆ ಕಾಲದ ಜನ ಮನೆಗಳನ್ನು ಕಟ್ಟಿಕೊಂಡು ಒಂದೆಡೆ ನಿಲ್ಲುವ ಅವಕಾಶ ಇದ್ದಿರುವುದು ಕಡಿಮೆ. ನವಶಿಲಾಯುಗದ ಕಾಲದಲ್ಲಾದರೋ ವ್ಯವಸಾಯ ಬಳಕೆಗೆ ಬಂದುದರಿಂದ ಮನೆಗಳನ್ನು ಕಟ್ಟಿ ನೆಲೆಸುವುದು ಆವಶ್ಯಕವಾಯಿತು. ಆದರೆ ಆ ಕಾಲದಲ್ಲಿದ್ದ ಮನೆಗಳು ಯಾವ ರೀತಿಯವು ಎಂಬ ಬಗ್ಗೆ ಸಾಕಷ್ಟು ಮಾಹಿತಿಗಳು ದೊರಕುವುದಿಲ್ಲ. ಧಾರವಾಡ ಜಿಲ್ಲೆಯ ಹಳ್ಳೂರು, ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಮತ್ತು ಸಂಗನಕಲ್ಲು, ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಪಿಕ್ಲಿಹಾಳು, ಮೈಸೂರು ಜಿಲ್ಲೆಯ ಹೆಮ್ಮಿಗೆ ಮೊದಲಾದೆಡೆಗಳಲ್ಲಿ ನಡೆದಿರುವ ಉತ್ಖನನಗಳಿಂದ ಕೆಲವು ಸೂಚನೆಗಳು ದೊರಕುತ್ತವೆ. ಈ ಎಲ್ಲ ಸ್ಥಳಗಳಲ್ಲೂ ಕಂಬಗಳಿಗಾಗಿ ಮಾಡಿದ ಗುಳಿಗಳು ಕಂಡುಬಂದಿರುವುದರಿಂದ ಆ ಕಾಲದಲ್ಲಿ ಮರದ ಕಂಬಗಳನ್ನು ನೆಟ್ಟು ಎತ್ತಿದ ಗುಡಿಸಲುಗಳ ರಚನೆ ಸಾಮಾನ್ಯವಾಗಿತ್ತು ಎಂದು ಹೇಳಬಹುದು. ಸಂಗನಕಲ್ಲಿನ ಉತ್ಖನನದಲ್ಲಿ ಬಿದಿರಿನ ಪಡಿಯಚ್ಚನ್ನೊಳಗೊಂಡ ಮಣ್ಣಿನ ಭಾಗಗಳು ದೊರೆತಿವೆ. ಸೀಳಿದ ಬೊಂಬಿನ ಜಾಳಿಗೆಗಳನ್ನು ನಾಲ್ಕರಿಂದ ಆರು ಅಡಿಗಳಷ್ಟು ಎತ್ತರದ ಗೋಡೆಗಳ ಮೇಲೆ ನಿಲ್ಲಿಸಿ ಆ ಜಾಳಿಗೆಗಳಿಗೆ ಮಣ್ಣನ್ನು ಮೆತ್ತಲಾಗಿತ್ತು. ಅಲ್ಲಿ ದೊರೆತಿರುವ ಅತಿದೊಡ್ಡ ಗುಡಿಸಲು 18' ವ್ಯಾಸವುಳ್ಳದ್ದು. ತೆಕ್ಕಲಕೋಟೆಯಲ್ಲಿ ತಗ್ಗುದಿಣ್ಣೆಗಳನ್ನು ಕಲ್ಲುಮಣ್ಣಿನಿಂದ ಮಟ್ಟಸಮಾಡಿ 10'-12' ವ್ಯಾಸದ ವೃತ್ತಾಕಾರದ ತಳವಿನ್ಯಾಸವುಳ್ಳ ಏಕಕೋಣೆಯ ಗುಡಿಸಲುಗಳನ್ನು ನಿರ್ಮಿಸುತ್ತಿದ್ದರೆಂಬುದು ತಿಳಿದುಬಂದಿದೆ. ಅಲ್ಲಿನ ಗೋಡೆಗಳು ಬರಿಯ ಬಿದಿರುದಬ್ಬೆ ಅಥವಾ ಕಡ್ಡಿ ಸೊಪ್ಪುಗಳಿಂದ ಮಾಡಿದ ತಡಿಕೆಗಳೋ ಇಲ್ಲವೆ ಅವುಗಳ ಮೇಲೆ ಮಣ್ಣು ಮೆತ್ತಿದ ತಡಿಕೆ ಗೋಡೆಗಳೋ ಆಗಿರುತ್ತಿದ್ದುವು. ಗೋಡೆಯ ಸುತ್ತ ದಪ್ಪ ಕಲ್ಲುಗುಂಡುಗಳನ್ನು ಜೋಡಿಸಿ ಹೊರಗಿನ ನೀರು ಒಳ ಬರದಂತೆ ಮಾಡಿರುವ ವ್ಯವಸ್ಥೆಯೂ ಕಂಡುಬಂದಿದೆ. ಸುಮಾರು ಇದೇ ವೈಶಿಷ್ಟ್ಯಗಳುಳ್ಳ ಗುಡಿಸಲುಗಳನ್ನು ಇತ್ತೀಚಿನ ಬೋವ ಜನಾಂಗದವರು ಆ ಪ್ರದೇಶದಲ್ಲಿ ರಚಿಸುತ್ತಾರಾಗಿ, ಅವು ಆ ಕಾಲದಿಂದಲೂ ಉಳಿದುಬಂದಿರುವ ಮಾದರಿಗಳಾಗಿರಬಹುದೆಂಬ ಊಹೆಯ ಮೇಲೆ ನವಶಿಲಾಯುಗದ ಕಾಲದ ಗುಡಿಸಲುಗಳಲ್ಲೂ ಬೋವ ಗುಡಿಸಲುಗಳಂತೆ ಚೂಪು ತುದಿಯ ಅರ್ಧಶಂಖುವಿನಾಕಾರದ ಹುಲ್ಲು- ಸೊಪ್ಪಿನ ಚಾವಣಿಯನ್ನು ನಿರ್ಮಿಸಲಾಗುತ್ತಿರಬೇಕೆಂದು ಊಹಿಸಲಾಗಿದೆ. ಹಳ್ಳೂರಿನಲ್ಲಿಯೂ ವೃತ್ತಾಕಾರದ ಗುಡಿಸಿಲಿನ ಅವಶೇಷಗಳು ದೊರತಿವೆ. ಸುಮಾರು 10' ವ್ಯಾಸದ ಈ ಗುಡಿಸಿಲಿನ ಮಧ್ಯಭಾಗದಲ್ಲಿ ಎರಡು ಗುಳಿಗಳಿದ್ದವು. ಬಹುಶಃ ವೃತ್ತಾಕಾರದ ಮೇಲ್ಛಾವಣಿಯನ್ನು ಈ ಗುಳಿಗಳಲ್ಲಿ ನೆಟ್ಟಿದ್ದ ಕಂಬಗಳ ಮೇಲೆ ಹೊದಿಸಲಾಗಿತ್ತೆಂದು ತೋರುತ್ತದೆ. ಹೆಮ್ಮಿಗೆಯಲ್ಲಿ ನಡೆದ ಉತ್ಖನನದಿಂದ ಸುಮಾರು ಆಯಾಕಾರದ ತಳವಿನ್ಯಾಸದ ಪುಟದ ಗೋಡೆಗಳಿದ್ದ ಏಕ ಕೋಣೆಯ ಮನೆಗಳನ್ನು ಕಟ್ಟುವ ರೂಢಿಯೂ ಇದ್ದಿರಬೇಕೆಂದು ತಿಳಿದುಬರುತ್ತದೆ.

ನವಶಿಲಾಯುಗದ ಅನಂತರ ಕ್ರಿ.ಪೂ.1ನೆಯ ಸಹಸ್ರಮಾನದಲ್ಲಿ ಬಂದ ಕಬ್ಬಿಣದ ಯುಗದಲ್ಲಿ ಇದ್ದ ಮನೆಗಳ ಸ್ವರೂಪ ತಿಳಿದಿಲ್ಲ. ಕೆಲವು ನೆಲೆಗಳಲ್ಲಿ ಕಂಬದ ಗುಳಿಗಳು ಮಾತ್ರ ಕಂಡುಬಂದಿವೆ. ಈ ಕಾಲದ ಸಮಾಧಿಗಳಲ್ಲಿ ಕಲ್ಲಿನ ತುಂಡುಗಳನ್ನು ಬಳಸಿ ಗೋಡೆಗಳನ್ನು ಕಟ್ಟುವ, ಕಲ್ಲುಚಪ್ಪಡಿಗಳನ್ನು ಉಜ್ಜಿ ನಯಮಾಡುವ ತಂತ್ರ ಇದ್ದುದಕ್ಕೆ ಮಾಹಿತಿಗಳು ದೊರಕುತ್ತವೆ. ಆದರೆ ಕಲ್ಲನ್ನು ಮನೆಗಳ ನಿರ್ಮಾಣಕ್ಕೆ ಉಪಯೋಗಿಸುತ್ತಿದ್ದ ಬಗ್ಗೆ ಇದುವರೆಗೆ ಯಾವ ಕುರುಹೂ ಬೆಳಕಿಗೆ ಬಂದಿಲ್ಲ. (ಬಿ.ಆರ್.ಜಿ.)

ಕರ್ನಾಟಕದಲ್ಲಿ ಮನೆಗಳನ್ನು ಕಟ್ಟಲು ಇಟ್ಟಿಗೆಯನ್ನು ಬಳಸಲು ಆರಂಭವಾದುದು ಕ್ರಿಸ್ತಶಕಾರಂಭದ ಆಸುಪಾಸಿನಲ್ಲಿ. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಉತ್ಖನನದಲ್ಲಿ ಈ ಕಾಲದ ಪದರಗಳಲ್ಲಿ ಇಟ್ಟಿಗೆಯ ತುಂಡುಗಳು ದೊರೆತಿವೆ. ಕರ್ನಾಟಕದ ಎಲ್ಲೆಯಿಂದ ಅನತಿದೂರದಲ್ಲಿರುವ ಕೊಲ್ಹಾಪುರದ ಬ್ರಹ್ಮಪುರಿ ಪ್ರದೇಶದಲ್ಲಿ ಮತ್ತು ಇತ್ತೀಚೆಗೆ ಬೆಳಗಾಂವಿ ಸಮೀಪದ ವಡಗಾಂವ ಮಾಧವಪುರದಲ್ಲಿ ನಡೆದ ಉತ್ಖನನಗಳಿಂದ ಕ್ರಿಸ್ತಶಕ 1-2ನೆಯ ಶತಮಾನಗಳಲ್ಲಿ ಕಟ್ಟಿರಬಹುದಾದ ಇಟ್ಟಿಗೆಯ ಮನೆಗಳ ಅವಶೇಷಗಳು ದೊರಕಿವೆ. ಈ ಕಾಲದಲ್ಲಿ ಹೆಚ್ಚಿನ ಅಡಿಪಾಯವೇನೂ ಇಲ್ಲದೆ ಗೋಡೆಗಳನ್ನು ಕಟ್ಟಲಾಗುತ್ತಿತ್ತು. ಬಂಧಕ ಸಾಮಗ್ರಿಯಾಗಿ ಮಣ್ಣು ಬಳಕೆಯಾಗುತ್ತಿತ್ತು. ಮನೆಗಳಲ್ಲಿ ಆಯಾಕಾರದ ಎರಡು ಅಥವಾ ಮೂರು ಕೋಣೆಗಳು, ನಡುಮನೆ ಇರುತ್ತಿದ್ದುವು. ಮನೆಯ ಒಟ್ಟು ತಳವಿನ್ಯಾಸ ಸಹ ಆಯಾ ಮನೆಗಳ ಮೇಲೆ ಮರದ ಇಳಿಹಂದರವನ್ನು ಮಾಡಿ ಚಪ್ಪಟೆಯ ಮಣ್ಣು ಹೆಂಚುಗಳನ್ನು ಒಂದರಮೇಲೊಂದು ಕೂಡುವಂತೆ ಜೋಡಿಸಿ ಅವನ್ನು ಬಹುಶಃ ತಂತಿ ಅಥವಾ ಹಗ್ಗದಿಂದ ಬಂಧಿಸಿ ಚಾವಣಿಗಳನ್ನು

ನಿರ್ಮಿಸುವ ಪದ್ಧತಿ ರೂಢಿಗೆ ಬಂದಿತು. ಈ ಕಾಲದಲ್ಲಿ ಬಳಕೆಯಲ್ಲಿದ್ದ ಗೃಹಾಲಂಕರಣದ ವಿಷಯ ಅಸ್ಪಷ್ಟ.

ಬೋವ ಜನರ ವೃತ್ತಾಕಾರದ ಗುಡಿಸಲುಗಳು, ತೆಕ್ಕಲಕೋಟೆ

ಕ್ರಿಸ್ತಶಕಾರಂಭದಿಂದ 18-19ನೆಯ ಶತಮಾನದವರೆಗೆ ಕರ್ನಾಟಕದಲ್ಲಿದ್ದ ಮನೆಗಳ ಸ್ವರೂಪವನ್ನು ತಿಳಿಯಲು ಸಾಕಷ್ಟು ವಾಸ್ತು ಆಧಾರಗಳಿಲ್ಲ. ಹಳೇಬೀಡಿನಲ್ಲಿ ನಡೆದ ಉತ್ಖನನದಿಂದ ಇಟ್ಟಿಗೆ ಮತ್ತು ಕಲ್ಲನ್ನು ಉಪಯೋಗಿಸಿ ಕಟ್ಟಿದ ಹೊಯ್ಸಳ ಕಾಲದ ಕೆಲವು ಗೋಡೆಗಳ ಅವಶೇಷಗಳು ಕಂಡುಬಂದಿದ್ದುವು. ಅಲ್ಲದೆ ಚಪ್ಪಟೆ ಹೆಂಚು ಸಹ ಉಪಯೋಗದಲ್ಲಿದ್ದಂತೆ ಕಂಡುಬಂದಿತು. ಬೃಹತ್ತಾದ ಕಲ್ಲು ಮತ್ತು ಇಟ್ಟಿಗೆಯ ಕಟ್ಟಡಗಳು ಮತ್ತು ಸುಣ್ಣಗಾರೆ ಇಸ್ಲಾಮಿ ಅರಸರ ಆಳಿಕೆಯಲ್ಲಿ ಸು.14-15ನೆಯ ಶತಮಾನದಾರಭ್ಯ ರೂಢಿಗೆ ಬಂದು ಅಂದಿನಿಂದ ಕರ್ನಾಟಕದ ಎಲ್ಲೆಡೆಯೂ ಪ್ರಚಾರಗೊಂಡಿತು. ಗುಲ್ಬರ್ಗ, ಬಿಜಾಪುರ, ಹಂಪೆ, ಬೀದರ್ ಮುಂತಾದ ಸ್ಥಳಗಳಲ್ಲಿ ವಿಶಾಲವಾದ ಕೊಠಡಿಗಳು, ದೊಡ್ಡ ಅಂಗಳಗಳು, ಬುರುಜು, ಚಾವಣಿಗಳು ಇವುಗಳನ್ನು ಒಳಗೊಂಡಿದ್ದ ಬಹುಮಟ್ಟಿಗೆ ಆಯಾಕಾರದ ತಳವಿನ್ಯಾಸವುಳ್ಳ ದೊಡ್ಡ ಅರಮನೆ ಮತ್ತು ಶ್ರೀಮಂತರ ಮನೆಗಳ ಅವಶೇಷಗಳು ಉಳಿದುಬಂದಿವೆ. ಇವೆಲ್ಲ ಕಲ್ಲು ಮತ್ತು ಸುಣ್ಣಗಾರೆಯಲ್ಲಿ ಕಟ್ಟಿದ್ದವು. 14-16ನೆಯ ಶತಮಾನಗಳ ಅವಧಿಗೆ ಸೇರಿದವು. ಗೋಡೆಗಳಿಗೆ ಗಾರೆಯನ್ನು ಬಳಿಯುವುದು ರೂಢಿಯಲ್ಲಿತ್ತು. ಬೀದರ್, ಬಿಜಾಪುರ - ಈ ಸ್ಥಳಗಳಲ್ಲಿ ನಯವಾದ ಬಣ್ಣ ಬಣ್ಣದ ಗಾಜಿನ ಲೇಪದ ಮೆರುಗು ಬಿಲ್ಲೆಗಳಿಂದ ಅಲಂಕರಿಸಲಾಗಿರುವ ಕಟ್ಟಡಗಳು ಇವೆ. ಜೊತೆಗೆ ಭಿತ್ತಿಯ ಮೇಲೆ ವರ್ಣಚಿತ್ರಗಳೂ ಇದ್ದಿರಬಹುದು. *

ಪ್ರಾಚೀನ ಕರ್ನಾಟಕದ ಗೃಹ ಮತ್ತು ಗೃಹಾಲಂಕರಣಕ್ಕೆ ಸಂಬಂಧಿಸಿದ ವಿಷಯಗಳು ಕೆಲವಾರು ಪ್ರಾಚೀನ ಕಾವ್ಯಗಳಲ್ಲೂ ಕಂಡುಬರುತ್ತವೆ. ಇವುಗಳಲ್ಲಿ ಹೆಚ್ಚಿನವು ಅರಮನೆ ಮತ್ತು ಶ್ರೀಮಂತರ ಮನೆಗಳಿಗೆ ಸಂಬಂಧಿಸಿದವು. ಅಲ್ಲದೆ ಹಲವೆಡೆ ವರ್ಣನೆಗಳು ಸ್ಥಿತಿಗಿಂತಲೂ ಕವಿಕಲ್ಪನೆಗಳಾಗಿರುವ ಸಾಧ್ಯತೆಯೂ ಇದೆ. ಉದಾಹರಣೆಗೆ, ಕೆಲವು ಕಾವ್ಯಗಳಲ್ಲಿ ದೊರೆಯುವ ವಜ್ರ, ಪಚ್ಚೆ, ಮಾಣಿಕ್ಯದ ಪುಡಿಗಳಿಂದ ರಂಗವಲ್ಲಿ ಹಾಕುತ್ತಿದ್ದರೆಂಬ ವರ್ಣನೆ ವರ್ತಮಾನ ಉತ್ಪ್ರೇಕ್ಷೆಯಾಗದಿರದು. ದೇಪರಾಜನ ಸೊಬಗಿನ ಸೋನೆಯಲ್ಲಿ ಬರುವ ಚದುರದೇಶದ ಸಸಿವೊಳಲೆಂಬ ಪಟ್ಟಣದ ವರ್ಣನೆ ಹೀಗಿದೆ: ಅಲ್ಲಿನ ರಾಜಬೀದಿ ಮುತ್ತಿನ ರಂಗವಲ್ಲಿಯಿಂದಲೂ ಹೊನ್ನಿನ ತೋರಣದಿಂದಲೂ ಶೋಭಾಯ ಮಾನವಾಗಿತ್ತು. ಆ ಪೊಳಲ ಬೀದಿ ಬೀದಿಗಳಲ್ಲಿಯೂ ರನ್ನದ ಉಪ್ಪರಿಗೆಗಳು, ರೇಷ್ಮೆಯ ಬಾವುಟಗಳು, ಚಿನ್ನದ ನವಿಲ ಉಯ್ಯಾಲೆಗಳು, ಕನ್ನಡಿ ಬಿಗಿದ ತೋರಣಗಳು ಕಂಗೊಳಿಸುತ್ತಿದ್ದುವು. ಶೃಂಗಾರ ಪೇಟೆ, ಸೂಳೆಗೇರಿ, ಮಾತುಳನ ಅರಮನೆಯ ಹೆಬ್ಬಾಗಿಲು ತನಗೆ ಸರಿಸಾಟಿ ಮತ್ತೊಂದಿಲ್ಲವೆಂಬಂತೆ ಮೆರೆಯುತ್ತಿದ್ದುವು. ಬಣ್ಣಬಣ್ಣದ ಉಪ್ಪರಿಗೆ ಮನೆಗಳು, ಮಣಿಮಯವಾದ ಬಾಗಿಲುಗಳು, ಗಜಶಾಲೆ, ಹಯಶಾಲೆಗಳು ಅಂದಿನ ವೈಶಿಷ್ಟ್ಯಗಳಾಗಿದ್ದುವು. ಅಲ್ಲಿ ಗೋಡೆಯನ್ನು ಕೊರೆದು ಹಲವು ಹಕ್ಕಿಗಳ ಗೂಡುಗಳೂ ಬಾಗಿಲುಸಹಿತವಾದ ಹಲವಾರು ಪಂಜರಗಳೂ ಸವಡಿದಂತದ ಬಳೆಗಳೂ ಹೊಸ ಮಾಣಿಕ್ಯದ ಪಾದಪೀಠಗಳಲ್ಲಿ ಸೇರಿಸಿದ್ದ ಇಂದ್ರನೀಲದ ಪುತ್ರಿಕೆ, ಮುತ್ತಿನ ಮೈದೊಡವು, ಹೊನ್ನರನ್ನದ ಬಟ್ಟಲುಗಳು, ಲತಾವನಗಳು, ರನ್ನದ ಜಗಲಿಗಳು, ತಳಿರುಯ್ಯಾಲೆಗಳು ರನ್ನದಿಂದ ಕಂಡರಿಸಿದ ದಾರಿಗಳು, ಮುತ್ತಿನ ಗೊಂಡೆಯಗಳು, ಚಿತ್ರದ ಮೇಲ್ಕಟ್ಟು, ಮಕರಂದ ಮಾಲೆಗಳಿಂದ ಅಲಂಕೃತವಾಗಿತ್ತು. ಕೆಲವು ಕಾವ್ಯಗಳಲ್ಲಿ ಹಬ್ಬಹರಿದಿನಗಳಲ್ಲಿ ಮನೆಗಳನ್ನು ಕಸ್ತೂರಿ ಕುಂಕುಮ ಪನ್ನೀರುಗಳ ಸಾರಣೆ, ಕಾರಣೆ, ಬಳೆಗಳಿಂದ ಅಲಂಕರಿಸುತ್ತಿದ್ದರು. ಪಚ್ಚೆಯಹಾರದ ಮಕರಂದ ತೋರಣಗಳನ್ನು ಕಟ್ಟುತ್ತಿದ್ದರು. ಸುಗಂಧದ್ರವ್ಯಗಳ ಪರಿಮಳ ಭಾರದಿಂದ ಬಿರುಗಾಳಿಯೂ ಕುಸಿದುಹೋಗುತ್ತಿತ್ತು ಎಂಬ ವರ್ಣನೆಗಳಿವೆ. ಗೋವಿಂದ ವೈದ್ಯನ ಪ್ರಕಾರ ಕಂಠೀರವ ನರಸರಾಜನ ಅರಮನೆಗೆ ಎಷ್ಟೋ ನೆಲೆಯುಪ್ಪರಿಗೆಗಳಿದ್ದುವಂತೆ. ಅವುಗಳಲ್ಲಿಯೂ ಜಯಸಿರಿ, ಭಾಗ್ಯಸಿರಿ, ಶಾರದಲಕ್ಷ್ಮಿ, ಧೈರ್ಯಲಕ್ಷ್ಮಿಯರ ಮುಖಾಬ್ಜದಂತೆ ಅವು ಮೆರೆಯುತ್ತಿದ್ದುವಂತೆ. ಈ ಧವಳದುಪ್ಪರಿಗೆಗಳ ಅಂತರಾಂತರದ ಭಿತ್ತಿಯಲಿ...... ಮೋಹರಸವ ಸೂಸುತ ಚೆಲ್ವಾಂತ ಪುತ್ಥಳಿಗಳು ಶೋಭಿಸುತ್ತಿದ್ದುವಂತೆ. ಅಲ್ಲದೆ ಈ ಪುತ್ಥಳಿಗಳು ಭಾರತ ರಾಮಾಯಣ ಭಾಗವತ ಕಥಾಸಂದರ್ಭಗಳನ್ನು ಪ್ರದರ್ಶಿಸುವಂತಿದ್ದುವಲ್ಲದೆ ಶೃಂಗಾರರಸಪೂರಿತವಾದ ಕಾವ್ಯನಾಟಕದಲ್ಲಿಯ ಕಥೆಯ ಸೂಚಕಗಳಾಗಿದ್ದ ಸ್ಮರಧೀರನ ಬಲದಂತೆ, ಅರಸಂಚೆ, ಸೋಗೆನವಿಲು, ಬಣ್ಣದ ಕೋಗಿಲೆ, ಗಿಳಿ, ಚಕ್ರವಾಕ ಮುಂತಾದ ಪಕ್ಕಿಗಳ ಗೊಂಬೆಗಳು ಅಲ್ಲಿ ಶೋಭಿಸುತ್ತಿದ್ದುವಂತೆ. ಹರ್ಮ್ಯಗಳಲ್ಲಿ ಆನೆ, ವರಾಹ, ಕಾಡುಕೋಣ, ಹೆಬ್ಬುಲಿ, ಸಿಂಹ, ಹರಿಣ, ಭೇರುಂಡ ಮುಂತಾದ ಬಗೆಬಗೆಯ ಪ್ರತಿಮೆಗಳು ಸುಶೋಭಿಸುತ್ತಿದ್ದುವಂತೆ. ಅರಮನೆಯೊಳಗೆ ಪ್ರವೇಶದೊಡನೆ ಮೊದಲನೆಯದಾಗಿ ಚಿನ್ನದ ತಗಡುಗಳಲ್ಲಿ ಹುದುಗಿ ನಿಂತಿದ್ದಂತೆ ಕಾಣುವ ಕಂಬಗಳು ಮತ್ತು ಪಟ್ಟೋಳಿಯ (ರೇಷ್ಮೆಬಟ್ಟೆ) ಸರಗೊಂಡೆಯದ ಲೋವೆಯಿಂದ ಅಲಂಕರಿಸಲ್ಪಟ್ಟ ಹಿರಿಯ ಹಜಾರ, ಅಲ್ಲಿಂದ ಮುಂದೆ ಸುರಪನ ಆಸ್ಥಾನಮಂಟಪದ ಪರಿವಿಡಿಯನ್ನೇ ಸೋಲಿಸಿಬಿಡುವಷ್ಟು ಅಂದದ ಚಿತ್ರಶಾಲೆ ಲಕ್ಷ್ಮೀವಿಲಾಸ, ಅದರ ಮುಂದೆ ಒಂದೆಡೆ ದುರ್ಗಾಮಂಟಪ, ಮತ್ತೊಂದೆಡೆ ಗಿರಿಜಾಕಲ್ಯಾಣದ ಕಥೆಯ ಚಾರುತರದ ಚೆಲ್ವಬಿತ್ತರಗಳಂತೆ ಅರಗಿಳಿ ನವಿಲು ಕೋಗಿಲೆ ಕೊಂಚೆ ಕೊಳರ್ವಕ್ಕಿ ಮೊದಲಾದ ಹಕ್ಕಿಗಳ ಪ್ರಣಯಜೀವನವನ್ನೂ ಸುರನಾರಿಯರ ವಿಲಾಸಗಳನ್ನೂ ರೂಪಿಸಿರುವ ಪುತ್ಥಳಿಗಳಿರುವ ಶಾರದಾಮಂಟಪ, ಅದರ ಬಳಿಯಲ್ಲಿಯೇ ಇಂದಿರಾಮಂದಿರ, ಮುಂದೆ ಬಂಗಾರ ಚೌಕಿ, ಮತ್ತೂ ಮುಂದೆ ಮದನವಿಲಾಸ ಇದ್ದುವಂತೆ. ಅರಮನೆಗಳಲ್ಲಿ ಮಣಿಮಯಭವನಗಳೂ ನವರತ್ನದ ತೊಟ್ಟಿಗಳೂ ನಾಟಕಶಾಲೆಗಳೂ ಭೋಜನಶಾಲೆ ಒಳಬೊಕ್ಕಸ ಪೂರ್ಣಭಂಡಾರ ಪೊನ್ನನಿಲಯ ಉಗ್ರಾಣಪಾಕಗಳ ಗೃಹ ಆಯುಧಶಾಲೆಗಳು ಇದ್ದುವಲ್ಲದೆ ಬಿಳಿ ಮುತ್ತು ಕೆನ್ನೀರ ಮುತ್ತು ಕಟ್ಟಾಣಿತೋರಣದ ಮುತ್ತು ಮೊದಲಾದ ಜಾತಿ ಮುತ್ತುಗಳು, ಸಣ್ಣ ಪವಳ ಕೈಕಟ್ಟಿನ ಪವಳ ಬಣ್ಣಸರದ ಪವಳ ಇವುಗಳಂಥ ಪವಳದ ಪಸರಗಳಿಂದ ಕಣ್ಣು ಕೋರೈಸುವಂತೆ ಗೃಹಾಲಂಕಾರ ಮಾಡುತ್ತಿದ್ದರೆಂದು ಕನ್ನಡ ಕಾವ್ಯಗಳಿಂದ ತಿಳಿಯುತ್ತದೆ. ಕತ್ತುರಿ, ಸೇವಂತಿಗೆ, ದುಂಡುಮಲ್ಲಿಗೆ, ಜಾಜಿ, ಸಂಪಿಗೆ ಮೊದಲಾದ ಹೂಗಳಿಂದ ಮನೆಗಳನ್ನು ಅಲಂಕರಿಸುತ್ತಿದ್ದರಂತೆ. ಸೂಳೆಗೇರಿಯ ಸಾಲುಭವನದ ಮಳಿಗೆಗಳೊಳಗೆ ಗಿಳಿಯ ಪಂಜರ, ಪಾರಿವಾಳಗಳ ಪೊಂಗೂಡು, ಕಳಕಂಠಕೇಕಿಯ ದೇಹಿ ಇವುಗಳೆಲ್ಲ ರಾರಾಜಿಸುತ್ತಿದ್ದುವಂತೆ.

ಕನಕದಾಸರು ತಾವು ಕಂಡ ವಿಜಯನಗರದ ವರ್ಣನೆಯಲ್ಲಿ ಹೊಂದಗಡಿನ ಹೊದಕೆಯ ಮನೆ ಬಹಳ ನೇರ (ಎಂದರೆ ತುಂಬ ಅಚ್ಚುಕಟ್ಟಾದುವುಗಳು) ಮನೆಗಳಿಗೆ ಅಂದವಡೆದ ಪಟ್ಟಸಾಲೆಗಳು, ಮುಂದೆಸೆಯಲಿ ತುಳಸಿಯ ಮಂಟಪ - ಎಂದು ಬ್ರಾಹ್ಮಣರ ಕೇರಿಯ ಮನೆಗಳನ್ನು ವರ್ಣಿಸಿದ್ದಾರೆ. ಅರಮನೆ ಸುಂದರವಾಗಿತ್ತು. ಮುಗಿಲನ್ನು ಮುಟ್ಟುವ ಕೋಟೆ ಹೆಬ್ಬಾಗಿಲನ್ನು ಒಳಗೊಂಡಿತ್ತು. ಮುತ್ತಿನ ಚಾವಡಿಯನ್ನು ಮಕರತೋರಣ, ಮಣಿನಿಕರ ಹಿಂಗುಬ್ಬ ಇವುಗಳಿಂದ ಅಲಂಕರಿಸಲಾಗಿತ್ತು. ಜಂತದ ಚಾವಡಿಯಲ್ಲಿ ರಾಜ ಕುಳಿತಿರುವನು ಎಂದು ಅರಮನೆಯನ್ನು ವರ್ಣಿಸಿದ್ದಾರೆ. ಡೊಮಿಂಗೊ ಪೇಯಿಸ್ ಎಂಬುವನು ಈ ಅರಮನೆಯ ದಿವಾನಖಾನೆಯಾದ ಈ ಜಂತದ ಚಾವಡಿಯಲ್ಲಿನ ಕಂಬಗಳು ಮಾತ್ರ

ಕಲ್ಲಿನದಾಗಿದ್ದು, ಗೋಡೆಕಂಬ ಜಂತಿ ಹಲಗೆ ಮೊದಲಾದ ಎಲ್ಲವನ್ನೂ ದಂತದಿಂಲೇ ನಿರ್ಮಿಸಿರುವುದಾಗಿಯೂ ಹೇಳಿದ್ದಾನೆ. ಅಲ್ಲದೆ ಅದರ ತೊಲೆ, ನಾಗವಂದಿಗೆಗಳ ಮೇಲೆ ಗುಲಾಬಿಯ ಹೂಗಳನ್ನೂ ಕಮಲಗಳನ್ನೂ ಕೊರೆಯಲಾಗಿದ್ದು, ಅವುಗಳೂ ಜಂತದಿಂದಲೇ ನಿರ್ಮಿತವಾಗಿದ್ದು ಬಹುಸುಂದರವೂ ಅಮೂಲ್ಯವೂ ಆಗಿದ್ದು ಇಂಥ' ಅಲಂಕರಣ ಮತ್ತೆಲ್ಲಿಯೂ ನೋಡಲಿಕ್ಕೆ ದೊರೆಯಲಾರದೆಂದು ಹೇಳುತ್ತಾನೆ.

ಹಿಂದೆ ಅವಿಭಕ್ತ ಕುಟುಂಬ ಪದ್ಧತಿ ರೂಢಿಯಲ್ಲಿದ್ದುದರಿಂದ ದೊಡ್ಡ ದೊಡ್ಡ ಮನೆಗಳು ಸಾಮಾನ್ಯವಾಗಿ ಇದ್ದಿರಬಹುದು. ಈಗಲೂ ಉತ್ತರ ಕರ್ನಾಟಕದ ಕೆಲವೆಡೆ ಉಳಿದುಬಂದಿರುವ ವಾಡೆಗಳಲ್ಲಿ ಪ್ರಾಚೀನ ಮಾದರಿಯ ಶ್ರೀಮಂತರ ಮನೆಗಳ ಸ್ವರೂಪವನ್ನು ಗುರುತಿಸಬಹುದು. ಅವುಗಳಲ್ಲಿ ವಿಶಾಲ ಪಡಸಾಲೆ, ಅಡುಗೆಮನೆ, ದೇವರಮನೆ, ಉಗ್ರಾಣ, ತೊಟ್ಟಿಮನೆಗಳಿರುತ್ತಿದ್ದುವು. ಊಟದ ಮನೆ ವಿಶಾಲವಾಗಿರುತ್ತಿತ್ತು. ಮಾಡು ಹೆಂಚಿನದು. ಕೊಟ್ಟಿಗೆಗಳು ಪ್ರತ್ಯೇಕವಾಗಿರುತ್ತಿದ್ದುವು.

ಉತ್ತರ ಕನ್ನಡ ಜಿಲ್ಲೆಯ ಐನಕೈ ಸೋಗೆ ಮನೆ

ಇಂದು ಉಳಿದಿರುವ ಹೆಚ್ಚಿನ ವಾಡೆಗಳು 19ನೆಯ ಶತಮಾನದವು. ಸಹಜವಾಗಿ ಇಲ್ಲಿನ ಗೃಹಾಲಂಕರಣ ಆ ಕಾಲಕ್ಕೆ ಒಗ್ಗುವಂಥದ್ದು. ಮನೆಗಳಲ್ಲಿ ಬಾಗಿಲುವಾಡ, ಕಂಬ, ಲೋವೆ ಮುಂತಾದ ಮರದ ಭಾಗಗಳೆಲ್ಲ ಸುಂದರವಾದ ಕೆತ್ತನೆಗಳಿಂದ ಕೂಡಿರುತ್ತವೆ. ಮುಖ್ಯದ್ವಾರದ ಇಕ್ಕೆಲಗಳ ತೋಳುಗಳಲ್ಲೂ ಮೇಲುಗಡೆ ಜಿಗಿಯುತ್ತಿರುವ ಕುದುರೆ ಮುಂತಾದ ಮರದ ಬೊಂಬೆಗಳನ್ನು ಅಳವಡಿಸಲಾಗಿರುತ್ತದೆ. ಪಡಸಾಲೆಯಲ್ಲಿ ಸಾಮಾನ್ಯವಾಗಿ ಆಗಂತುಕರಿಗಾಗಿ ಒಂದು ಮಂಚ ಇಡುವುದು ಅಥವಾ ಜಮಖಾನ ಹಾಸಿ ಹುಲ್ಲಿನ ಅಥವಾ ಹತ್ತಿಯ ದಿಂಬುಗಳನ್ನಿಡುವುದು ರೂಢಿ. ಬಾಗಿಲಿಗೆ ಮಣಿಮಯವಾದ ತೋರಣ ಇರುತ್ತದೆ. ಗೋಡೆಗಳಲ್ಲಿ ರವಿವರ್ಮನ ಚಿತ್ರಪಟಗಳು ಮತ್ತೆ ಕೆಲವು ಮನೆಗಳಲ್ಲಿ ಕಾಡುಕೋಣ, ಜಿಂಕೆ ಹುಲಿ ಆನೆ ಇವುಗಳ ಕೊಂಬು ಹಾಗೂ ಚರ್ಮ ಇವುಗಳಿಂದ ಅಲಂಕರಿಸುವ ರೂಢಿ ಕಾಣಬಹುದು. ಸಗಣಿಯಿಂದ ಸಾರಿಸಿದ ನೆಲ, ನೆಲದ ಅಂಚಿನ ಗೋಡೆಗೆ ತಾಗಿದಂತೆ ಸುಣ್ಣ ಹಾಗೂ ಕೆಂಪು ಮಣ್ಣಿನ ದಪ್ಪ ದಪ್ಪ ಗೆರೆಯ ಕಾರಣೆ (ಕರೆ), ಗೋಡೆಗಳಿಗೆ ದಪ್ಪ ಬಣ್ಣ ಇವು ಇಲ್ಲಿ ಸಾಮಾನ್ಯ. (ಎಂ.ಜೆ.ಬಿ.)

ಪ್ರಾಚೀನ ಕರ್ನಾಟಕದಲ್ಲಿ ಜನಸಾಮಾನ್ಯರ ಮನೆಗಳು ಯಾವ ರೀತಿಯಲ್ಲಿ ಇದ್ದುವು ಎಂಬುದನ್ನು ತಿಳಿಯಲು ಯಾವ ರೀತಿಯ ಆಧಾರಗಳೂ ದೊರಕುವುದಿಲ್ಲ. ಆದರೆ ಜನಪದ ಸಂಪ್ರದಾಯ ಹಿಂದಿನಿಂದಲೂ ಇದ್ದು ಈಗಲೂ ಹೆಚ್ಚು ಬದಲಾವಣೆ ಇಲ್ಲದೆ ಉಳಿದುಬಂದಿದೆಯಾಗಿ, ಈಗಿನ (ಇತ್ತೀಚಿನ ಬೆಳೆವಣಿಗೆಗಳ ವಿನಾ) ಗ್ರಾಮೀಣ ಗೃಹಗಳ ಸ್ವರೂಪವೇ ಅಂದಿನಿಂದಲೂ ಪ್ರಚಲಿತವಾಗಿರಬೇಕೆಂದು ತಿಳಿಯಬಹುದು. ಗ್ರಾಮೀಣ ಗೃಹಗಳು ಬಹು ಸರಳಕೃತಿಗಳು.ಇವು ಸಾಮಾನ್ಯವಾಗಿ ಚಿಕ್ಕವೂ ವೈವಿಧ್ಯರಹಿತವೂ ಆಗಿರುತ್ತವೆ. ಇವುಗಳಲ್ಲಿ ಅಲಂಕರಣವೂ ಕನಿಷ್ಟ.

ಜನಪದ ಗೃಹಗಳ ಒಂದು ವೈಶಿಷ್ಟ್ಯವೆಂದರೆ ಇವುಗಳ ರಚನೆಯಲ್ಲಿ ಕಂಡುಬರುವ ಪರಿಸರದ ಗಾಢಪ್ರಭಾವ. ಇದನ್ನು ಗೃಹ ರಚನೆಗೆ ಉಪಯೋಗಿಸುವ ವಸ್ತುಗಳಲ್ಲೂ ಮತ್ತು ರಚನೆಯ ಆಕಾರದಲ್ಲೂ ಕಾಣಬಹುದು. ಗೃಹಗಳ ರಚನೆಗೆ ಆಯಾ ಸ್ಥಳದಲ್ಲಿ ಸಿಕ್ಕುವ ತುಟ್ಟಿಯಲ್ಲದ ವಸ್ತುಗಳನ್ನಷ್ಟೇ ಆರಿಸಿಕೊಂಡಿರುವುದಲ್ಲದೆ, ಆಯಾ ಪ್ರದೇಶದ ಹವಾಗುಣಕ್ಕನುಗುಣವಾಗಿ ಸ್ವರೂಪವೂ ಇರುತ್ತದೆ. ಈ ದೃಷ್ಟಿಯಿಂದ ಜನಪದ ಗೃಹಗಳಲ್ಲಿ ಸ್ವಲ್ಪಮಟ್ಟಿಗೆ ಪ್ರಾದೇಶಿಕ ಭಿನ್ನತೆ ಕಂಡುಬರುತ್ತದೆ.

ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಹೆಚ್ಚು ಮಳೆ ಬೀಳುವುದರಿಂದ ಇಲ್ಲಿಯ ಜನಪದ ನಿವಾಸಗಳಲ್ಲಿ ಗೋಡೆಗಳು ಕುಳ್ಳಾಗಿ ಇದ್ದು ಚಾವಣಿ ಹೆಚ್ಚು ಇಳಿಜಾರಾಗಿ ಅದರ ಸೂರು ಗೋಡೆಗಿಂತ ತುಂಬ ಮುಂಚಾಚಿರುವಂತೆ ಕಟ್ಟಲಾಗಿರುತ್ತದೆ. ಮಳೆಯ ಇರುಚಲು ಗೋಡೆಗಳ ಮೇಲೆ ಬೀಳಬಾರದೆಂಬುದೇ ಇದರ ಉದ್ದಿಶ್ಯ. ಗೋಡೆಗಳು ಸಾಮಾನ್ಯವಾಗಿ ಮಣ್ಣು ಅಥವಾ ಜಂಬಿಟ್ಟಿಗೆಯವು. ಚಾವಣಿಗಳು (ಇತ್ತೀಚಿಗೆ ಮಂಗಳೂರು ಹೆಂಚು ಬಳಕೆಗೆ ಬಂದಿದೆ) ವಿಶೇಷತಃ ಬಿದಿರು ಅಥವಾ ಮರದಜಂತಿ ಹಂದರದ ಮೇಲೆ ಹುಲ್ಲು, ಗರಿಗಳನ್ನು ಮುಚ್ಚಿಮಾಡಿದವು. ಇಲ್ಲಿಯ ಮನೆಗಳಲ್ಲಿ ಇದ್ದಿಲು ಮುಂತಾದ ಸಾಮಗ್ರಿಗಳನ್ನು ಬೆರಸಿ ಅರೆದು ಮಾಡಿದ ನಯಗಾರೆಯನ್ನು ನೆಲ ಮತ್ತು ಗೋಡೆಯ ಕೆಳಮಟ್ಟಗಳಿಗೆ ಹಚ್ಚುವ ರೂಢಿ ಇದೆ. ಕೆಂಪು ಕಾರಣೆಯ ಸರಳ ಅಲಂಕರಣವೂ ಉಂಟು. ಮನೆಗಳ ಮುಂದೆ ಹೆಬ್ಬಾಗಿಲ ಇಕ್ಕೆಲದಲ್ಲಿ ಜಗಲಿ, ಒಳಗೆ ಹಜಾರ ಮತ್ತು ವಿವಿಧ ಗೃಹಉದ್ದೇಶಗಳಿಗಾಗಿ ಬಳಸಲು ಬೇರೆ ಬೇರೆ ಕೋಣೆಗಳಿರುತ್ತವೆ. ಬಹು ಸರಳವಾದ ಗುಡಿಸಲುಗಳು ಆಕಾಶದಲ್ಲಿ ಸುಮಾರು ಇದೇ ರೀತಿಯಿದ್ದರೂ ಒಳ ಆವರಣದಲ್ಲಿ ಹೆಚ್ಚು ವಿಂಗಡಣೆಗಳಿರುವುದಿಲ್ಲ.

ಉತ್ತರ ಕರ್ನಾಟಕದ ಬಯಲು ಪ್ರದೇಶ ಹಾಗೂ ದಕ್ಷಿಣ ಕರ್ನಾಟಕದ ಮಳೆ ಕಡಿಮೆ ಇರುವ ಚಿತ್ರದುರ್ಗ, ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳು ಮತ್ತು ಅವುಗಳ ಸುತ್ತಲ ಪ್ರದೇಶಗಳಲ್ಲಿ ಆಯಾಕಾರದ ಮಾಳಿಗೆ ಮನೆಗಳು ವಿಶೇಷ. ಇವುಗಳ ಗೋಡೆಗಳು ಹೆಚ್ಚು ಮಟ್ಟಿಗೆ ಮಣ್ಣಿನವು. ಕಲ್ಲು ವಿಶೇಷವಾಗಿ ದೊರಕುವ ಕೆಲವೆಡೆಗಳಲ್ಲಿ ಕಲ್ಲುಚೂರುಗಳನ್ನು ಜೋಡಿಸಿ ಮಾಡಿದ ಗೋಡೆಗಳೂ ಇರುತ್ತವೆ. ಹೆಬ್ಬಾಗಿಲು ಕಿರಿದು ಮತ್ತು ಕುಳ್ಳು. ಒಳಭಾಗದಲ್ಲಿ ಆವಶ್ಯಕತೆಗೆ ತಕ್ಕಂತೆ ಕೋಣೆಗಳೂ ಹಜಾರವೂ ಇರುತ್ತವೆ. ಗೋಡೆಗಳ ಮೇಲೆ ತೊಲೆ ಮತ್ತು ಅಡ್ಡಜಂತಿಗಳನ್ನು ಇಟ್ಟು ಹಂದರ ಮಾಡಿ, ಮೇಲೆ ಕಡ್ಡಿ ಸೊಪ್ಪುಗಳನ್ನು ಜೋಡಿಸಿ, ಅದರ ಮೇಲೆ ಮಣ್ಣನ್ನು ದಪ್ಪಗೆ ಹರವಿ ಮಾಡಿದ ಚಾವಣಿ ಇರುತ್ತದೆ. ಗೋಡೆಗಳು ಇರುಚಲಿನಿಂದ ನೆನೆಯದಂತೆ, ಅವುಗಳ ಮೇಲಂಚಿನಲ್ಲಿ ಮುಂಚಾಚುವ ಲೋವೆ ಕಲ್ಲುಗಳನ್ನೋ ಭೂತಾಳೆ ಪಟ್ಟಿಗಳನ್ನೋ ಜೋಡಿಸಿರುತ್ತಾರೆ. ಮೇಲೆ ಹರವಿದ ಮಣ್ಣು ಮಳೆಯಿಂದ ಕೊಚ್ಚಿಹೊಗದಂತಿರಲೂ ಬಿದ್ದ ನೀರು ಕಟ್ಟಡಕ್ಕೆ ಅಪಾಯವಾಗದಂತೆ ಒಂದೆಡೆಯಿಂದ ಹರಿದುಹೋಗಲೂ ಸುತ್ತಂಚಿನಲ್ಲಿ ಮಣ್ಣುದಿಂಡನ್ನೂ ಅಲ್ಲಲ್ಲಿ ಮಣ್ಣಿನ ದೋಣಿಗಳನ್ನೂ ಒದಗಿಸಿರುತ್ತಾರೆ. ಈ ಕಟ್ಟಡಗಳಿಗೆ ಕಿಟಕಿಗಳಿರುವುದಿಲ್ಲವಾದರೂ ಇದಕ್ಕೆ ಅಪವಾದಗಳೂ ಇಲ್ಲದಿಲ್ಲ. ಮನೆಗಳಿಗೆ ಮಣ್ಣುಗಾರೆ, ಸುಣ್ಣ, ಕಾರಣೆಯ ಪರಿಷ್ಕರಣವಿರುತ್ತದೆ. ಕೋಲಾರ, ಬೆಂಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಗ್ರ್ಯಾನೈಟ್ ಚಪ್ಪಡಿಗಳು ಬಹುವಾಗಿ ದೊರಕುವುದರಿಂದ ಇಲ್ಲಿಯ ಮಾಳಿಗೆ ಮನೆಗಳಲ್ಲಿ ಮಣ್ಣಿನ ಬದಲು ಈ ಕಲ್ಲಿನ ಉಪಯೋಗವೇ ಹೆಚ್ಚು. ಮೊದಲು ಕಲ್ಲಿನ ಕಂಬಗಳನ್ನು ನೆಟ್ಟು, ಅದೇ ಕಲ್ಲಿನ ತೊಲೆಗಳನ್ನು ಜೋಡಿಸಿ, ಮೇಲೆ ಚಪ್ಪಡಿಗಳನ್ನು ಹಾಸುವ ಪದ್ಧತಿ ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಮಳೆ ಕಡಿಮೆ ಬೀಳುವ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾಳಿಗೆ ಮನೆಗಳಲ್ಲದೆ ವೃತ್ತಾಕಾರದ ತಳವಿನ್ಯಾಸವಿರುವ ಗುಡಿಸಲುಗಳೂ ಇವೆ. ಇವು ವಿಶೇಷವಾಗಿ ಒಂದೇ ಕೋಣೆಯವು. ಗೋಡೆ ಮಣ್ಣಿನದು. ಮೇಲೆ ಬಿದಿರಿನ ಅಥವಾ ಕಡ್ಡಿಗಳ ಹಂದರದ ಮೇಲೆ ಹುಲ್ಲು ಮುಚ್ಚಿದ ಶಂಕುತಲೆಯಾಕಾರದ ಚಾವಣಿ ಇರುತ್ತದೆ.

ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿನ ಜನಪದ ನಿವಾಸಗಳು ಸಾಮಾನ್ಯವಾಗಿ ಆಯಾಕಾರದ ಮಣ್ಣುಗೋಡೆಯ ಮನೆಗಳು. ಇವುಗಳಲ್ಲೂ ಮುಂದೆ ಬಾಗಿಲಿನ ಇಕ್ಕೆಲಗಳಲ್ಲಿ ಜಗಲಿ, ಒಳಗೆ ಹಜಾರ ಮತ್ತು ಅನೇಕ

ಕೋಣೆಗಳಿರುತ್ತವೆ. ದೊಡ್ಡ ಮನೆಗಳಲ್ಲಿ ಪುಟದ ಗೋಡೆ (ಅಂದರೆ ಕಲಸಿದ ಮಣ್ಣಿನ ದಪ್ಪ ಉಂಡೆಗಳನ್ನು ಒಂದರ ಮೇಲೊಂದು ಪೇರಿಸಿ ಎತ್ತಿದ ಗೋಡೆ) ಸಾಮಾನ್ಯ. ಬಹು ಎತ್ತರವಾದ ಗೋಡೆಗಳ ಆವಶ್ಯಕತೆ ಇದ್ದಾಗ ಅಥವಾ ಚಿಕ್ಕ ಮನೆಗಳನ್ನು ಕಟ್ಟುವಾಗ ತಡಿಕೆಗೋಡೆಯನ್ನು ಅಂದರೆ, ಬಿದಿರಿನ ಕಂಬಗಳಿಗೆ ಬಿಗಿದ ಬಿದಿರು ದಬ್ಬೆಗಳ ಹಂದರದ ಮೇಲೆ ಕಲಸಿದ ಮಣ್ಣನ್ನು ಮೆತ್ತಿ ಮಾಡಿದ ತೆಳುಗೋಡೆಯನ್ನು ಅಳವಡಿಸುವುದುಂಟು. ಮನೆಗಳ ಚಾವಣಿ ಸಾಮಾನ್ಯವಾಗಿ ಇಪ್ಪಾರು, ಪಕ್ಕದ ಗೋಡೆಗಳ ಎತ್ತರದ ಭಾಗದಲ್ಲಿ ಒಂದು ಬೆಮ್ಮರವನ್ನು ಇಟ್ಟು, ಹಾರು ಎರಡೂ ಕಡೆ ಇಳಿಜಾರಾಗಿರುವಂತೆ ಮಾಡಲಾಗಿರುತ್ತದೆ. ಈ ಹಾರುಗಳು ಬೊಂಬು, ಗಳುಗಳಿಂದ ಆದ ಹಂದರಗಳು, ತೆಂಗಿನ ಗರಿಯಿಂದ ಹೆಣೆದ ಮಟ್ಟಾಳೆಯನ್ನು ಅಥವಾ ಮಣ್ಣಿನ ಅರೆಕೊಳವೆ ಆಕೃತಿಯ ನಾಡಹೆಂಚುಗಳನ್ನು ಮೇಲೆ ಮುಚ್ಚಲು ಉಪಯೋಗಿಸಲಾಗುತ್ತದೆ. ಕೆಲವೆಡೆ ಸೋಗೆ ಮತ್ತು ಹುಲ್ಲನ್ನೂ ಬಳಸುವುದುಂಟು. ಮಣ್ಣಿನ ತಡಿಕೆ ಅಥವಾ ಪುಟದ ಗೋಡೆಗಳನ್ನು ಆಯಾಕಾರದಲ್ಲಿ ಕಟ್ಟಿ ಒಂದು ಗೋಡೆಯನ್ನು ಎತ್ತರಕ್ಕೆ ಮಾಡಿ ಅದಕ್ಕೆ ಸಮಕೋನದಲ್ಲಿರುವ ಗೋಡೆಗಳನ್ನು ಇಳಿಜಾರಾಗಿರುವಂತೆ ರೂಪಿಸಿ ಇದರ ಮೇಲಿನ ಚಾವಣಿ ಒಂದೇ ಕಡೆಗೆ ಇಳಿಜಾರಾಗಿರುವಂತೆ ಮಾಡಿದ ಒಪ್ಪಾರು ಕಟ್ಟಡಗಳೂ ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಇಂಥ ಕಟ್ಟಡಗಳನ್ನು ದನ, ಎಮ್ಮೆಗಳನ್ನು ಕಟ್ಟಲು ಕೊಟ್ಟಿಗೆಯಾಗಿ ಉಪಯೋಗಿಸುವುದೇ ಹೆಚ್ಚು. ಒಂದು ವಿಶಿಷ್ಟ ರೀತಿಯ ವಿಶೇಷವಾಗಿ ಸ್ವಲ್ಪ ಸ್ಥಿತಿವಂತರಿಗೇ ಸೇರಿದ ತೊಟ್ಟಿಮನೆಗಳು ಕರ್ನಾಟಕದ ಹಲವೆಡೆಗಳಲ್ಲಿವೆ. ಇವು ರಚನಾವಿಧಾನದಲ್ಲಿ ಇತರವಂತೆಯೇ ಇದ್ದರೂ ವಿನ್ಯಾಸ ಮಾತ್ರ ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ಇವುಗಳಲ್ಲಿ ಆಯ ಅಥವಾ ಚೌಕತಳ ವಿನ್ಯಾಸವಿದ್ದು ಮಧ್ಯೆ ಒಂದು ತೆರೆದ (ಮುಚ್ಚು ಇಲ್ಲದ) ತೊಟ್ಟಿ ಇರುತ್ತದೆ. ತೊಟ್ಟಿಯ ಸುತ್ತಲೂ ಪಡಸಾಲೆ, ಅದರ ಸುತ್ತಲೂ ಕೋಣೆಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ. ಮುಂದೆ ಮುಂಬಾಗಿಲಿನ ಇಕ್ಕೆಲಗಳಲ್ಲಿ ಜಗಲಿಗಳಿರುತ್ತವೆ. ಈ ತೊಟ್ಟಿ ಮನೆಗಳು ವಿಶಾಲವಾಗಿದ್ದು, ಒಂದು, ಎರಡು ಅಥವಾ ಮೂರು ಅಂಕಣಗಳ ತೊಟ್ಟಿಮನೆಗಳು ಇತ್ಯಾದಿಯಾಗಿ ವಿವಿಧ ಪರಿಮಾಣಗಳಲ್ಲಿರುತ್ತವೆ. (ಎಸ್.ಎನ್.)

ಜನಪದ ಗೃಹಾಲಂಕರಣ ಬಹು ಸರಳ. ಸುಣ್ಣ ತೊಡೆಯುವುದು ಸಾಮಾನ್ಯವಾಗಿ ಎಲ್ಲೆಡೆಯೂ ಕಂಡುಬರುತ್ತದೆ. ವರ್ಷಕ್ಕೊಮ್ಮೆ ಅಥವಾ ಹಬ್ಬಹರಿದಿನಗಳಲ್ಲಿ ನೀರಿನಲ್ಲಿ ಸುಣ್ಣವನ್ನು ಗಟ್ಟಿಯಾಗಿ ಕಲೆಸಿ, ಸಣ್ಣಕುಂಚದಿಂದ ತೊಟ್ಟಿಯ ಅಂಚು, ಗೋಡೆಯ ಕೆಳಭಾಗ ಕಂಬದ ಕೆಳಗೆ ನೆಲವನ್ನು ಬಿಟ್ಟು ಒಂದಂಗುಲ ಎತ್ತರಕ್ಕೆ ಒಂದೆರಡು ಇಂಚು ಅಗಲದ ಪಟ್ಟಿಗಳನ್ನೆಳೆಯುವ ರೂಢಿ ಅಲ್ಲಲ್ಲಿ ಕಂಡುಬರುತ್ತದೆ. ಹಳ್ಳಿಗಳಲ್ಲಿ ಇದಕ್ಕೆ ಕಿರುಸುಣ್ಣ ಎಂದು ಹೇಳುತ್ತಾರೆ. ಚಂದ್ರದಿಂದ ರಂಗೋಲಿ ಬಿಡುವುದು ಹಳ್ಳಿಗರ ಗೃಹಾಲಂಕರಣದ ಮತ್ತೊಂದು ವಿಧಾನ. ಚಂದ್ರವನ್ನು ನೀರಿನಲ್ಲಿ ಕರಗಿಸಿ, ತೊಟ್ಟಿ ಮನೆಗಳಲ್ಲಿ ಈಚಲುಗರಿಯ ಸೋಗೆಗಳಿಂದ ಮಾಡಿದ ಕುಂಚದ ಮೂಲಕ ಅಚ್ಚುಕಟ್ಟಾಗಿ ಎರಡೆರಡು ಎಳೆಗಳನ್ನು ಎಳೆಯುತ್ತಾರೆ. ಗ್ರಾಮಾಂತರ ಜನ ಇದನ್ನು ಕಾರ್ಲಿ (ಕರೆ) ಬಿಡುವುದು ಎನ್ನುತ್ತಾರೆ. ಕೆಮ್ಮಣ್ಣಿನಿಂದ ಹೊಸ್ತಿಲು ಸಾರಿಸುವುದು ಅವರ ಗೃಹಾಲಂಕರಣದ ಮತ್ತೊಂದು ವಿಧಾನ. ಧೂಳಿನಂತಿರುವ ಕೆಮ್ಮಣ್ಣನ್ನು ನೀರಿನಲ್ಲಿ ಗಟ್ಟಿಯಾಗಿ ಕಲಸಿ ಮನೆಯ ಹೊಸ್ತಿಲು ಮತ್ತು ಬಾಗಿಲಿನ ಚೌಕಟ್ಟಿನ ತಳಭಾಗಗಳಿಗೆ ಆರು ಅಂಗುಲ ಎತ್ತರಕ್ಕೆ, ಸಾರಿಸುತ್ತಾರೆ. ನೆಲಕ್ಕೆ ಸಗಣಿ ಸಾರಿಸುವುದು ಹೆಚ್ಚು. ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಮಣ್ಣಿನ ನೆಲಕ್ಕೆ ಒಂದಂಗುಲ ಎತ್ತರಕ್ಕೆ ಮರಳು ಹಾಗೂ ಮಣ್ಣು ತುಂಬಿ, ಅದರ ಮೇಲೆ ಗೇರುಬೀಜದ ಎಣ್ಣೆಯನ್ನು ಬಳಿದು ಸಾರಣೆ ಮಾಡುತ್ತಾರೆ. ಅನಂತರ ಸಾಕಷ್ಟು ತೆಂಗಿನ ಹೂವನ್ನು ತೆಗೆದು, ತೆಂಗಿನ ಸಿಪ್ಪೆಯ ಸಹಾಯದಿಂದ ನೆಲವನ್ನು ಉಜ್ಜಿದರೆ, ನೆಲವು ಕರ್ರಗಿನ ಸಿಮೆಂಟಿನಂತೆ ಮಿರುಗುತ್ತದೆ. ಇದು ಗುಡಿಸಿಲುಗಳ ಅಂದವನ್ನು ಹೆಚ್ಚಿಸುತ್ತದೆ.

ಕೆಲವೆಡೆ ಗೊಂಬೆಗಳಿಂದ ಮನೆಗಳನ್ನು ಸಿಂಗರಿಸುವ ರೂಢಿ ಇದೆ. ಮಣ್ಣಿನಿಂದ ಮಾಡಿ ಬಣ್ಣ ಹಚ್ಚಿದ ಗಿಳಿ, ಆನೆ, ಬಸವ, ಹುಲಿ, ಜಿಂಕೆ ಮುಂತಾದ ಗೊಂಬೆಗಳನ್ನು ನಡುವೆ ಕೃಷ್ಣ, ಅಕ್ಕಪಕ್ಕದಲ್ಲಿ ಮರದ ಗಿಳಿಗಳು, ಹಾಗೆಯೇ ಬಸವ, ಹುಲಿಮುಖ, ಆನೆಮುಖ, ಜಿಂಕೆಮುಖ ಹೀಗೆ ಸಾಲಾಗಿ ಗೋಡೆಗಳಿಗೆ ನೇತುಹಾಕಿ ಗೃಹವನ್ನು ಅಲಂಕರಿಸುತ್ತಾರೆ. ಕೆಲವು ಮನೆಗಳಲ್ಲಿ ಮರದಿಂದ ಮಾಡಿದ ಕುದುರೆಮುಖವನ್ನು ಗೋಡೆಗೆ ಅಂಟಿಸಿ ಅದರ ಅಕ್ಕಪಕ್ಕಗಳಲ್ಲಿ ಗಿಳಿಗಳನ್ನು ಅಂಟಿಸುವುದುಂಟು. ಜಿಂಕೆಕೊಂಬನ್ನು ನಯಗೊಳಿಸಿ ಒಳ್ಳೆಯ ಮರದ ಹಲಗೆಯಲ್ಲಿ ಪ್ರಾಣಿಮುಖದ ಆಕಾರ ಬರುವಂತೆ ರೂಪಿಸಿ ಅದರಲ್ಲಿ ಕೊಂಬನ್ನು ಸೇರಿಸಿ ಗೋಡೆಗೆ ತೂಗುಹಾಕುವುದುಂಟು. ಮೂರು ಗಿಳಿಗಳನ್ನೊಳಗೊಂಡ ನಿಲುವನ್ನು ಗೋಡೆಗೆ ತೂಗುಹಾಕುವುದೂ ಉಂಟು. ಬೇಟೆಯ ಹವ್ಯಾಸವುಳ್ಳವರ ಮನೆಗಳಲ್ಲಿ ಹುಲಿ, ಸಿಂಹಗಳ ಚರ್ಮವನ್ನೂ ಕಾಡುಕೋಣದ ಕೊಂಬು, ಆನೆಯ ದಂತ ಇವುಗಳನ್ನೂ ಗೋಡೆಗೆ ತೂಗುಹಾಕುವುದುಂಟು. ಬತ್ತದ ಗೊನೆಗಳು ಚೆನ್ನಾಗಿ ಮಾಗಿದಾಗ, ತೆನೆಗಳನ್ನು ಕತ್ತರಿಸಿ, ಅವುಗಳನ್ನು ಒಂದೇ ಸಮನಾಗಿ ಜೋಡಿಸಿ, ಹೆಣೆದು ಗಂಟೆಯಾಕಾರದ ಗುಚ್ಛವನ್ನು ತಯಾರಿಸಿ ದೇವರ ಕೋಣೆಯಲ್ಲಿ ದೇವರ ಪಟದ ಆ ಕಡೆ ಈ ಕಡೆಗಳಲ್ಲಿ ತೂಗಿಸುವುದುಂಟು. ಬತ್ತದ ತೆನೆಗಳನ್ನು ಕೆಳಗೆ ತೂಗುಬಿಟ್ಟು, ಒಂದಕ್ಕೊಂದು ಹೆಣೆದು ಬತ್ತದ ತೋರಣವನ್ನು ಮಾಡಿ ಬಾಗಿಲಿಗೆ ಕಟ್ಟುವುದೂ ಉಂಟು. ಹಳ್ಳಿಗಳಲ್ಲಿ ಇದನ್ನು ಬಾಗಿಲು ಬತ್ತ ಎನ್ನುತ್ತಾರೆ.

ಹಸುರು ಗಿಡಗಳ ಮೂಲಕ ಕಂಗೊಳಿಸುತ್ತಿರುವ ಒಳ ಗೃಹಾಲಂಕರಣ

ಸ್ವಲ್ಪ ಅನುಕೂಲವಂತರ ಮನೆಗಳಲ್ಲಿ ಬಳೆಗಳ ಚೂರು ಹಾಗೂ ಸಣ್ಣ ದೊಡ್ಡ ಮಣಿಗಳಿಂದ ಬಾಗಿಲುತೋರಣವನ್ನು ಮಾಡಿ ಬಾಗಿಲಿಗೆ ಕಟ್ಟಿ ಅದರ ಸರಪಳಿಗಳನ್ನು ಚಿತ್ರಪಟಗಳ ಮೇಲೆ ತೂಗಬಿಡುವುದು. ಬಣ್ಣಬಣ್ಣದ ಸಣ್ಣ ಮಣಿಗಳಿಂದ ಮಾಡಿದ ಸರಸ್ವತಿ, ಲಕ್ಷ್ಮಿ, ಕಾಮಧೇನು, ಪಟ್ಟದ ಆನೆ, ಪಟ್ಟದ ಕುದುರೆ ಮುಂತಾದ ರಚನೆಗಳನ್ನೊಳಗೊಂಡಂತೆ ವಿವಿಧ ನಮೂನೆಯ ಚಿತ್ತಾಕರ್ಷಕ ತಟ್ಟೆಗಳನ್ನು ಗೋಡೆಗಳಲ್ಲಿ ಅಲಂಕಾರಕ್ಕಾಗಿ ತೂಗುಹಾಕುವುದು. ಕಸೂತಿ ಹಾಕಿದ ಕೊಕ್ಕೆ ಸೂಜಿಯಿಂದ ಹೆಣೆದ ಪರದೆಗಳನ್ನು ಬಾಗಿಲುಗಳಿಗೆ ಇಳಿಬಿಡುವುದು. ಮುಖ್ಯ ಹಜಾರಗಳಲ್ಲಿ ಕೆತ್ತನೆ ಕೆಲಸಗಳಿಂದ ಅಲಂಕರಿಸಿದ ಅತ್ಯುತ್ತಮ ಮರದಿಂದ ಮಾಡಿದ ಆಕರ್ಷಕ ಚಿತ್ರಗಳನ್ನು ಬಿಡಿಸಿದ ಚೌಕದ ಹಲಗೆಯನ್ನು ಮಾಡಿಗೆ ಮೊಳೆಗಳಿಂದ ಕೂರಿಸುವುದು, ಕುಸುರಿ ಕೆಲಸದ ಕಂಬಗಳಿಗೆ ಬೆಳ್ಳಿಯ ಹೂಗಳನ್ನು ಅಂಟಿಸುವುದು, ಹಿತ್ತಾಳೆಯ ರೇಕುಗಳನ್ನು ಬಿಚ್ಚಿ ಎಳೆಯುವುದು ಮುಂತಾದವನ್ನು ಕಾಣಬಹುದು. (ಎಂ.ಜೆ.ಬಿ.)

ಕರ್ನಾಟಕಕ್ಕೆ ಐರೋಪ್ಯ ಸಂಪರ್ಕ ಒದಗಿಬಂದ ಕಾಲದಿಂದ ಇಲ್ಲಿನ ಗೃಹನಿರ್ಮಾಣದ ತಂತ್ರ ಮತ್ತು ಸ್ವರೂಪದಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡುವು. ಟಿಪ್ಪುಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಕಟ್ಟಿದ ಅವನ ಅರಮನೆ, ಬೆಂಗಳೂರಿನ ಅರಮನೆ ಮುಂತಾದೆಡೆಗಳಲ್ಲಿನ ಐರೋಪ್ಯ ರೀತಿಯ ಪಾವಟಿಗೆ, ಟೆರೆಸ್ ಚಾವಣಿ ಇವುಗಳು ಬಹುಶಃ ಫ್ರೆಂಚ್ ತಂತ್ರಜ್ಞರ ಮೂಲಕ ಬಳಕೆಗೆ ಬಂದಿತ್ತು. ಆದರೆ ಐರೋಪ್ಯ ಗೃಹನಿರ್ಮಾಣತಂತ್ರದ ಪ್ರಭಾವ ದಿನೇ ದಿನೇ ವರ್ಧಿಸಲಾರಂಭವಾದುದು 19ನೆಯ ಶತಮಾನದ ಆದಿಭಾಗದಿಂದ. ಶ್ರೀರಂಗಪಟ್ಟಣ, ಬೆಂಗಳೂರು, ಮೈಸೂರು, ಮಂಗಳೂರು, ಬಳ್ಳಾರಿ, ಬೆಳಗಾಂವಿ ಪಟ್ಟಣಗಳಲ್ಲಿ ಎಲ್ಲಾ ರೀತಿಯ ದೊಡ್ಡ ಗೃಹಗಳು ಹೆಚ್ಚು ಮಟ್ಟಿಗೆ ಐರೋಪ್ಯ ಅಧಿಕಾರಿಗಳಿಗೆ ನಿರ್ಮಿತವಾದುವು. ಮೈಸೂರು, ಬೆಂಗಳೂರು ಮೊದಲಾದೆಡೆಗಳಲ್ಲಿ ಈ ರೀತಿಯ ಮನೆಗಳನ್ನು ಕಟ್ಟುವುದು ಉನ್ನತಸ್ಥಾನದ ಒಂದು ಚಿಹ್ನೆಯಾಗಿ ಅನೇಕ ಸ್ಥಳೀಯ ಶ್ರೀಮಂತರೂ ಆ ವಿಧಾನಗಳನ್ನು ಅನುಕರಿಸಲಾರಂಭಿಸಿದರು. ಹಿಂದಿನ ಕಾಲದಲ್ಲಿ ಮನೆಗಳ ಮುಂದೆ ಜಗಲಿಗಳಿದ್ದು ಅವು ಬೀದಿಯೆಡೆಗೆ ತೆರೆದುಕೊಂಡಂತಿದ್ದ ಕಟ್ಟಡಗಳು ಬಹುಸಾಮಾನ್ಯವಾಗಿದ್ದರೆ, ಈಗ ದೊಡ್ಡ ಸುತ್ತುಗೋಡೆ ಇರುವ ಆವರಣದ ಮಧ್ಯದಲ್ಲಿ ಮನೆಯನ್ನು ನಿರ್ಮಿಸಿ ಸುತ್ತಲೂ ತೋಟ ಬೆಳೆಸುವ ಅಥ' ವಾ ಮನೆಯ ಮುಂದೆ ಸ್ವಲ್ಪ ಜಾಗವನ್ನು ಬಿಟ್ಟು ಕಾಂಪೌಂಡ್ ಕಟ್ಟಿ, ಮನೆ ರಸ್ತೆಯಿಂದ ಸ್ವಲ್ಪ ಹಿಂದೆ ಇರುವಂತೆ ಕಟ್ಟುವ ಸಂಪ್ರದಾಯ ವಿಶೇಷವಾಗಿ ಬೆಳೆಯಿತು. ಗೃಹರಚನೆಯಲ್ಲಿ ವರಾಂಡ, ದೊಡ್ಡ ಹಜಾರ, ಅಡುಗೆಕೋಣೆ, ಓದುವ ಕೋಣೆ, ಮಲಗುವ ಕೋಣೆ ಹೀಗೆ ಪ್ರತ್ಯೇಕ ಉದ್ದೇಶಗಳಿಗಾಗಿ ಪ್ರತ್ಯೇಕ ಕೋಣೆಗಳನ್ನು ದೊಡ್ಡದಾಗಿ ಅಳವಡಿಸುವ ರೂಢಿ ಬಂತು. ತೊಟ್ಟಿ ಮನೆಗಳಿಗೆ ಬದಲಾಗಿ ಪೂರ್ಣ ಮುಚ್ಚಿದ ಮಾಳಿಗೆಯ ಮನೆಗಳನ್ನು ಕಟ್ಟುವುದೂ ಜಂತಿಗಳನ್ನು ಗೋಡೆಗಳ ಮೇಲೆ ಅಡ್ಡಡ್ಡವಾಗಿ ಹಾಸಿ ಮೇಲೆ ಇಟ್ಟಿಗೆ ಚದರಗಳನ್ನು ಒತ್ತಾಗಿ ಜೋಡಿಸಿ ಮಾಡಿದ ಮಟ್ಟುಚಾವಣಿಯನ್ನು (ಮದ್ರಾಸ್ ಟೆರೇಸ್) ಹಾಕುವುದೂ ರೂಢಿಗೆ ಬಂದುವು. ಕೆಲವೆಡೆ ಎರಡು ಮೂರು ಅಂತಸ್ತಿನ ಮನೆಗಳೂ ರಚಿತವಾದುವು. ಮನೆಗಳ ಮುಂಭಾಗದಲ್ಲಿ ಐರೋಪ್ಯ ರೀತಿಯ ಡೋರಿಕ್, ಕೋರಿಂಥಿಯನ್ ಮೊದಲಾದ ಕಂಬಗಳನ್ನು ಅಳವಡಿಸಿರುವುದೂ ಅಲ್ಲಲ್ಲಿ ಕಂಡುಬರುತ್ತದೆ. 19ನೆಯ ಶತಮಾನದ ಗೃಹನಿರ್ಮಾಣದಲ್ಲಿ ಕಂಡುಬಂದ ಇನ್ನೊಂದು ಮುಖ್ಯ ಬದಲಾವಣೆ ಮಂಗಳೂರು ಹೆಂಚಿನ ಅಳವಡಿಕೆ. ಬಾಸೆಲ್ ಮಿಶನ್‌ರವರಿಂದ 1865ರಲ್ಲಿ ಮಂಗಳೂರಿನಲ್ಲಿ ಮೊದಲ ಮಂಗಳೂರು ಹೆಂಚು ಕಾರ್ಖಾನೆ ಪ್ರಾರಂಭವಾಯಿತು. ಇದಕ್ಕೆ ಸ್ವಲ್ಪ ಮುಂಚೆಯೇ ಪ್ಲೆಬಿತ್ ಎಂಬ ಆಂಗ್ಲರು ಮಂಗಳೂರು ಹೆಂಚನ್ನು ತಯಾರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದರು. ಮಂಗಳೂರಿನ ಹಲವು ಕಾರ್ಖಾನೆಗಳು ಹೆಂಚು ತಯಾರಿಕೆಯನ್ನು ತಯಾರಿಸಲಾರಂಭಿಸಿದ ಕಾಲದಿಂದ ಕರ್ನಾಟಕದ ಎಲ್ಲೆಡೆಯೂ ಇದು ಬಳಕೆಗೆ ಬಂತು. ಅನಂತರ ಬೆಂಗಳೂರು ಮೊದಲಾದ ಇತರೆಡೆಗಳಲ್ಲೂ ಇಂಥ ಕಾರ್ಖಾನೆಗಳು ಸ್ಥಾಪಿತವಾದವು.

20ನೆಯ ಶತಮಾನದಲ್ಲಿ ಕಬ್ಬಿಣ, ಸಿಮೆಂಟ್, ಮೊಸಾಯಿಕ್, ಟೈಲ್ಸ್, ಗ್ರಾನೈಟ್, ಮಾರ್ಬಲ್ ಮೊದಲಾದ ಹೊಸ ರಚನಾ ಸಾಮಗ್ರಿಗಳು ಬಳಕೆಗೆ ಬಂದುದರಿಂದ ಮನೆಗಳ ರಚನಾ ತಂತ್ರವೂ ಸ್ವರೂಪವೂ ಅಗಾಧವಾಗಿ ಬದಲಾವಣೆಯಾಗಿದೆ. ಐರೋಪ್ಯ ನಾಗರಿಕತೆಯ ಪ್ರಭಾವವೂ ಈ ಕಾಲದಲ್ಲಿ ಹೆಚ್ಚಾದುದರಿಂದ ಜನರ ಜೀವನ ವಿಧಾನವೂ ಬದಲಾಗುತ್ತ ಬಂದು ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಮನೆಗಳ ನಿರ್ಮಾಣ ಮಾಡುವುದು ಇಂದಿನ ಪ್ರವೃತ್ತಿ. ಮನೆಗಳನ್ನು ಕಟ್ಟುವುದೇ ಒಂದು ಉದ್ಯಮವಾಗಿ ವಿನ್ಯಾಸಕಾರರು, ಕಟ್ಟುವವರು ಇವರ ಒಂದು ತಾಂತ್ರಿಕವರ್ಗ ಬೆಳೆದಿದೆ. ಮನೆಗಳ ನವೀನತೆ ವೈವಿಧ್ಯಗಳ ಎಡೆಗೆ ಗಮನ ಹೆಚ್ಚಾಗಿದೆ. ಇದರ ಜೊತೆಯಲ್ಲೇ ದೊಡ್ಡ ಪಟ್ಟಣಗಳ ಬೆಳೆವಣಿಗೆ, ಜನಸಂಖ್ಯೆಯ ಹೆಚ್ಚಳ ಇತ್ಯಾದಿ ಕಾರಣಗಳಿಂದ ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಫ್ಲ್ಯಾಟ್ ರೀತಿಯ ಮನೆಗಳನ್ನು ರಚಿಸುವುದು, ದೊಡ್ಡ ಮನೆಗಳನ್ನು ವಿಂಗಡಿಸಿ ವಠಾರಗಳನ್ನು ಮಾಡುವುದು, ಹಿಮ್ಮನೆಗಳನ್ನು ಜೋಡಿಸುವುದು ಇವೂ ಹೆಚ್ಚಾಗುತ್ತಿವೆ. ಈ ಬದಲಾವಣೆಗಳು ದೊಡ್ಡ ಪಟ್ಟಣ ನಗರಗಳಲ್ಲಿ ಹೆಚ್ಚು. ಗ್ರಾಮಾಂತರ ಪ್ರದೇಶಗಳಲ್ಲಿ ಹಳೆಯ ಜನಪದ ಸಂಪ್ರದಾಯ ಇನ್ನೂ ಸಾಕಷ್ಟು ಉಳಿದಿದೆ. *

ಆಧುನಿಕ ಗೃಹಾಲಂಕರಣ ಸಂಪ್ರದಾಯದಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಈಗ ಗೃಹಾಲಂಕರಣ ವಿದ್ಯೆ (ಇಂಟೀರಿಯರ್ ಡೆಕೊರೇಷನ್) ಶಾಸ್ತ್ರರೂಪವಾಗಿ ಬೆಳೆದಿದೆ. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಡಿಪ್ಲೊಮಾ ಮತ್ತು ಪದವಿ ಶಿಕ್ಷಣಗಳ ಪಠ್ಯವಿಷಯವೂ ಆಗಿದೆ. ಮನೆಯನ್ನು ಶುಚಿಯಾಗಿಡುವುದು, ಪುಷ್ಪಗಳ ಜೋಡಣೆ, ಮನೆಯ ಅಲಂಕರಣ ಮುಂತಾದುವುಗಳನ್ನು ಗೃಹವಿಜ್ಞಾನ ಶಿಕ್ಷಣದಲ್ಲಿ ಕಲಿಸುತ್ತಾರೆ. ಇಂದಿನ ಜನ ಅನೇಕ ಮಹಾನಗರಗಳನ್ನು ಕಂಡಿರುತ್ತಾರೆ. ಅಲ್ಲಿನ ಗೃಹಾಲಂಕರಣ ವಿಧಾನಗಳಲ್ಲಿ ಅತ್ಯುತ್ತಮವಾದುದನ್ನು ಆಯ್ದುಕೊಂಡು ತಮ್ಮ ಗೃಹಗಳ ಅಲಕಂರಣಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.



ಮಂಗಳೂರಿನ ವೃತ್ತಾಕಾರದ ವಿಶಿಷ್ಟ ಆಧುನಿಕ ಮಹಡಿಮನೆ

ಸರಳತೆ ಹಾಗೂ ಶುಭ್ರತೆಗೆ ಈಗ ಆದ್ಯತೆ. ಶ್ರೀಮಂತರಾದವರು ಬೆಲೆಬಾಳುವ ಪೀಠೋಪಕರಣಗಳು ಮತ್ತು ನೂತನ ಅಲಂಕರಣ ವಿಧಾನಗಳಿಂದ ಗೃಹವನ್ನು ಅಲಂಕರಿಸುತ್ತಾರೆ. ಮಧ್ಯಮವರ್ಗದವರು, ಬಡವರು ತಮ್ಮ ಮನೆಗಳನ್ನು ತಮ್ಮದೇ ಆದ ರೀತಿಯಲ್ಲಿ ಸರಳವಾಗಿ ಅಲಂಕರಿಸುತ್ತಾರೆ. ಮಧ್ಯಮವರ್ಗದ ಮನೆಗಳಲ್ಲಿ ವರಾಂಡದಲ್ಲಿ ಕೆಲವಾರು ಕುರ್ಚಿಗಳನ್ನೂ ನಡುವೆ ಒಂದು ಚಿಕ್ಕ ಟೀಪಾಯಿ ಅಥವಾ ಮೇಜನ್ನು ಇಡುತ್ತಾರೆ. ಮೇಜಿನ ಮೇಲೆ ಕಸೂತಿ ಕೆಲಸ ಮಾಡಿದ ಅಥ' ವಾ ಬಣ್ಣಬಣ್ಣದ ಬಟ್ಟೆಯನ್ನು ಹಾಸುತ್ತಾರೆ. ಗೋಡೆಗೆ ಸ್ವಾಗತ ಬಯಸುವಂಥ ಚಿತ್ರಪಟವನ್ನು ತೂಗುಹಾಕುತ್ತಾರೆ. ಮನೆಯ ಪಡಸಾಲೆಯಲ್ಲಿ ಸುತ್ತಲೂ ನಾಲ್ಕು ಬೆತ್ತದ ಕುರ್ಚಿಗಳಲ್ಲಿ ಮೆತ್ತಗಿನ ದಿಂಬುಗಳನ್ನೂ ಇಟ್ಟು ನಡುವೆ ಒಂದು ಟೀಪಾಯಿಯನ್ನಿಡುತ್ತಾರೆ. ಗೋಡೆಯಲ್ಲಿ ಕೊರೆದು ಮಾಡಿದ

ಕಪಾಟಿನಲ್ಲಿ ಕೆಲವಾರು ಸುಂದರ ಗೊಂಬೆಗಳನ್ನು ಓರಣವಾಗಿಡುತ್ತಾರೆ. ಒಂದು ಮೂಲೆಯಲ್ಲಿ ರೇಡಿಯೊ ಸ್ಟ್ಯಾಂಡು, ಅದರ ಕೆಳಗಡೆ ಪುಸ್ತಕಗಳನ್ನಿಡುವ ಅಲಮಾರಿನಲ್ಲಿ ಒಪ್ಪವಾಗಿ ಪುಸ್ತಕಗಳನ್ನು ಜೋಡಿಸಿಡುತ್ತಾರೆ. ಅದರ ಮೇಲ್ಭಾಗದಲ್ಲಿ ಹಾಗೂ ಎರಡು ಗೋಡೆಗಳು ಸೇರುವೆಡೆಯಲ್ಲಿ ಗೊಂಬೆಗಳನ್ನಿಡುವ ಪೀಠವನ್ನಿರಿಸುತ್ತಾರೆ. ಅದರ ಮೇಲ್ಭಾಗದಲ್ಲೊಂದು ಹೂದಾನಿಯನ್ನಿರಿಸುತ್ತಾರೆ. ಅಷ್ಟೇ ಸುಂದರವಾದ ಪ್ರಕೃತಿಸೌಂದರ್ಯದ ಫೋಟೋ ಕ್ಯಾಲೆಂಡರ್‌ಗಳನ್ನೂ ತೂಗುಹಾಕುವುದುಂಟು. ಮತ್ತೆ ಕೆಲವರು ಮಧ್ಯದ ಗೋಡೆಯ ಹತ್ತಿರ ಮಂಚವೊಂದನ್ನು ಹಾಕಿ, ಅದರ ಮೇಲೆ ಮೆತ್ತಗಿನ ಹಾಸಿಗೆಯನ್ನು ಹಾಸುತ್ತಾರೆ. ಮಂಚದ ಒಂದು ತುದಿಯಲ್ಲಿ ಒಂದು ಕಪಾಟನ್ನು ಇನ್ನೊಂದು ಪಕ್ಕದಲ್ಲಿ ಮತ್ತೊಂದು ಕಪಾಟನ್ನಿಟ್ಟು, ಒಂದರಲ್ಲಿ ಕಲಾಪೂರ್ಣ ವಸ್ತುಗಳನ್ನೂ ಮತ್ತೊಂದರಲ್ಲಿ ಪುಸ್ತಕಗಳನ್ನೂ ಇಡುತ್ತಾರೆ. ದೇವರ ಮನೆ ಇದ್ದರೆ ಅದನ್ನು ಸುಂದರವಾಗಿ ಆಲಂಕರಿಸುತ್ತಾರೆ. ಇದರಲ್ಲಿ ಒಂದು ಜಗಲಿ, ಅದರ ಮೇಲೆ ಸುಂದರವಾದ ಮಂಟಪ, ಅದರಲ್ಲಿ ಆಯಾ ಜನರ ಆರಾಧ್ಯ ದೇವರು, ಮಂಟಪದ ಎರಡು ಬದಿಯಲ್ಲಿ ಸದಾ ಉರಿಯುತ್ತಿರುವ ನಂದಾದೀಪಗಳು, ಸುತ್ತ ರಂಗವಲ್ಲಿ ಈ ವ್ಯವಸ್ಥೆ ಸಾಮಾನ್ಯ. ಸುಂದರವಾದ ಬಣ್ಣ ಬಣ್ಣದ ಪುಷ್ಪಗಳಿಂದ ಹೂವಿನ ಹಾರಗಳಿಂದ ದೇವರನ್ನು ಶೃಂಗರಿಸುತ್ತಾರೆ. ಊಟದ ಮನೆಯನ್ನು ಈಗ ಹೆಚ್ಚು ಹೆಚ್ಚು ಅಲಂಕಾರಿಕವಾಗಿ ಇಡುತ್ತಾರೆ. ಮಧ್ಯದಲ್ಲಿ ಊಟದ ಮೇಜು ಕುರ್ಚಿಗಳನ್ನಿಟ್ಟು, ಅದರ ಮೇಲೆ ಅಲಂಕಾರದ ದೃಷ್ಟಿಯಿಂದ ಸುಂದರವಾದ ಬೊಂಬೆಯನ್ನಿಡುತ್ತಾರೆ. ಎರಡೂ ಗೋಡೆಗಳು ಸೇರುವ ಕಡೆಗಳಲ್ಲಿ ಒಂದು ನಿಲುವನ್ನಿಟ್ಟು ಅದರ ಮೇಲೂ ಗೊಂಬೆಗಳನ್ನಿಡುತ್ತಾರೆ. ಗೋಡೆಯಲ್ಲಿ ಸುಂದರವಾದ ಪ್ರಕೃತಿ ಸೌಂದರ್ಯವನ್ನೋ ಪುಷ್ಪಸೌಂದರ್ಯವನ್ನೋ ಬೀರುವ ಚಿತ್ರಪಟವನ್ನೂ ತೂಗುಹಾಕುತ್ತಾರೆ. ಮಲಗುವ ಕೋಣೆಗಳನ್ನು ಆಕರ್ಷಕವಾದ ರೀತಿಯಲ್ಲಿ ಅಲಂಕರಿಸುತ್ತಾರೆ. ಕಣ್ಣಿಗೆ ತಂಪನ್ನೀಯಬಲ್ಲ ತಿಳಿನೀಲಿ ಬಣ್ಣವನ್ನು ಗೋಡೆಗೆ ಬಳಿಯುತ್ತಾರೆ. ಸುಂದರವಾದ ಪರದೆಗಳನ್ನು ಇಳಿಬಿಡುತ್ತಾರೆ. ಗೋಡೆಗೆ ಸುಂದರವಾದ ಕೆತ್ತನೆ ಕೆಲಸದ ಕುಸುರಿಕೆಲಸದ ವಾಲ್ ಪ್ಲೇಟನ್ನು ತೂಗಿಸುತ್ತಾರೆ. ಉತ್ತಮವಾದ ಮರದ ಮಂಚದ ಮೇಲೆ ಮೆತ್ತನೆಯ ಹಾಸಿಗೆ, ನೆಲಕ್ಕೆ ರತ್ನಗಂಬಳಿ, ಬಾಗಿಲಿನಲ್ಲಿ ಕಾಲೊರಸು ಚಾಪೆ, ಮಂಚಕ್ಕೆ ಒಂದು ಸೊಳ್ಳೆಪರದೆ, ಮಕ್ಕಳ ತೊಟ್ಟಿಲಿದ್ದರೆ ಅದಕ್ಕೂ ಸೊಳ್ಳೆಪರದೆಯನ್ನೂ ತೂಗುಬಿಟ್ಟು ಅದರ ಮೇಲಿನ ತಟ್ಟೆಗಳಿಗೆ ಪಕ್ಷಿಗಳ ಬಟ್ಟೆಯ ಗೊಂಬೆಯನ್ನು ಗಿಲಿಗಿಲಿ ಶಬ್ದಮಾಡುವ ಆಟಿಕೆಗಳನ್ನು ತೂಗಿಸುತ್ತಾರೆ. ಕೆಲವೊಂದು ಭಾವಚಿತ್ರಗಳು, ಪಕ್ಕದಲ್ಲೊಂದು ಸ್ಟ್ಯಾಂಡು ಅದರ ಮೇಲೆ ಟಿ.ವಿ. ರೇಡಿಯೋ, ಮಂಚದ ತಲೆಯ ಭಾಗದಲ್ಲಿ ಸ್ಟೂಲಿನ ಮೇಲೆ ಗೋಡೆಬಣ್ಣದ ಟೇಬಲ್ ಲ್ಯಾಂಪ್, ಇನ್ನೊಂದು ಪಕ್ಕದಲ್ಲಿ ಕನ್ನಡಿಯುಳ್ಳ ಬೀರು, ಪ್ರಸಾಧನಸಾಮಗ್ರಿಗಳು, ಇತ್ಯಾದಿಯಾಗಿ ಸಜ್ಜುಗೊಳಿಸುವುದು ಸಾಮಾನ್ಯ.

ಮಲಗುವ ಕೋಣೆ

ಇಂದಿಗೂ ಹೆಚ್ಚಿನ ಮನೆಗಳಲ್ಲಿ ರಂಗವಲ್ಲಿ ಗೃಹಾಲಂಕಾರ ಸಾಧನಗಳಲ್ಲಿ ಬಹುಮುಖ್ಯ. ದೇವರಮನೆಯಲ್ಲಿ, ಮುಂಬಾಗಿಲ ಹೊಸ್ತಿಲಿನಲ್ಲಿ, ಮನೆಯ ಪ್ರವೇಶ ದ್ವಾರದಲ್ಲಿ ರಂಗವಲ್ಲಿ ಹಾಕುವುದಕ್ಕೆ ಧಾರ್ಮಿಕ ಹಿನ್ನೆಲೆಯಿದ್ದರೂ ಅದು ಮನೆಗೊಂದು ಅಲಂಕಾರವನ್ನೂ ಶೋಭೆಯನ್ನೂ ನೀಡುತ್ತದೆ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಎಲ್ಲ ಮನೆಗಳಲ್ಲೂ ಮುಂಜಾನೆ ಗುಡಿಸಿ ಸಾರಿಸಿ, ಅಕ್ಕಿಹಿಟ್ಟು ಸುಣ್ಣಕಲ್ಲಿನ ಪುಡಿ - ಇವುಗಳಿಂದ ರಂಗವಲ್ಲಿಯನ್ನು ಹಾಕಿ ಅಲಂಕರಿಸುತ್ತಾರೆ. ಹಬ್ಬಹರಿದಿನಗಳಲ್ಲಿ ಬಣ್ಣಬಣ್ಣದ ಪುಡಿಗಳಿಂದ ರಂಗವಲ್ಲಿಯನ್ನು ಹಾಕುತ್ತಾರೆ. ಮನೆಯಂಗಳ ಹಾಗೂ ದೇವರ ಕೋಣೆಯಲ್ಲಿ ನಿತ್ಯವೂ ರಂಗವಲ್ಲಿ ಹಾಕುವುದಾದರೆ, ಅತಿಥಿಗಳು ಆಗಮಿಸಿದಾಗ ಊಟದ ಮನೆಯನ್ನೂ ಪಡಸಾಲೆಯನ್ನೂ ನೂರಾರು ಬಗೆಯ ನಾನಾ ರಂಗಿನ ಪುಡಿಗಳ ರಂಗವಲ್ಲಿಯಿಂದ ಅಲಂಕರಿಸುವುದುಂಟು. ನಗರ ಪ್ರದೇಶಗಳಲ್ಲಿನ ಮನೆಗಳ ಮುಂಭಾಗ ಸಿಮೆಂಟಿನದಾಗಿರುವುದರಿಂದ ನೀರು ಹಾಕಿ ತೊಳೆದರೆ ಸಾಕಾಗುತ್ತದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮಣ್ಣಿನ ನೆಲವಾದುದರಿಂದ ಅದನ್ನು ಗುಡಿಸಿ, ಪ್ರತಿನಿತ್ಯವೂ ಸಗಣಿಯಿಂದ ಸಾರಿಸಿ ಬಿಳಿಯ ಬಣ್ಣದ ರಂಗವಲ್ಲಿಯನ್ನು ಹಾಕುತ್ತಾರೆ. ಕೆಂಪು ನೆಲ, ಹಸುರು ಸಾರಣೆ ಇವುಗಳ ಹಿನ್ನೆಲೆಯಲ್ಲಿ ಬಿಳಿಬಣ್ಣದ ರಂಗವಲ್ಲಿ ಬಹು ಸುಂದರವಾಗಿ ಕಾಣುತ್ತದೆ. ಅದರಲ್ಲೂ ಮನೆಯಂಗಳದಲ್ಲಿ ರಂಗವಲ್ಲಿ ಹಾಕಿ, ಅದರ ನಡುವೆ ಸ್ವಲ್ಪ ಸಗಣಿಯನ್ನಿಟ್ಟು, ಅದರ ಮೇಲೆ ಕುಂಬಳದ ಪುಷ್ಪಗಳನ್ನಿಟ್ಟರೆ ಅನಿಷ್ಟ ಪರಿಹಾರವಾಗುತ್ತದೆ ಎಂಬ ನಂಬಿಕೆಯಿಂದ ಕೆಲವರು ಹೀಗೆ ಅಲಂಕರಿಸುವುದುಂಟು. ಇದು ಮತ್ತಷ್ಟು ಸುಂದರವಾಗಿರುತ್ತದೆ. ಮತ್ತೆ ಕೆಲವರು ಆಯಾ ವಾರಗಳಿಗನುಗುಣವಾಗಿ ಸೋಮವಾರ ಶಿವಪೀಠ, ಮಂಗಳವಾರ ಕಾಲಪೀಠ, ಬುಧವಾರ ಸ್ವಸ್ತಿಕೆ ಹೀಗೆ ಹಾಕುತ್ತಾರೆ. ಇದು ವೈವಿಧ್ಯಮಯವಾಗಿರುತ್ತದೆ. ಪಂಚಮಿ, ನವರಾತ್ರಿ, ಸೀಗೆ ಹುಣ್ಣಿಮೆ, ದೀಪಾವಳಿ, ಯುಗಾದಿ ಮುಂತಾದ ವರ್ಷದ ಹಬ್ಬಗಳಲ್ಲಿಯಂತೂ ಮಹಿಳೆಯರು ಬಹು ಸುಂದರವಾದ ರಂಗವಲ್ಲಿಗಳನ್ನಿಟ್ಟು ಮನೆಯನ್ನು ಅಲಂಕರಿಸುತ್ತಾರೆ. ನಾಗಪಂಚಮಿಯಂದು ದುಂಡಗಿನ ಅಥವಾ ಚೌಕಾಕಾರದಲ್ಲಿ ಜೋಡುನಾಗಗಳ ರಂಗವಲ್ಲಿಯನ್ನೆಳೆದರೆ, ಸೀಗೆ ಹುಣ್ಣಿಮೆಯಂದು ಮನೆಯಲ್ಲಿರುವ ಬುಟ್ಟಿಗಳನ್ನು ಕೆಂಪುಮಣ್ಣಿನಿಂದ ಅಥವಾ ಸಗಣಿಯಿಂದ ಸಾರಿಸಿ, ಅದರ ಸುತ್ತಲೂ ಚುಕ್ಕಿಗಳನ್ನಿಟ್ಟು ಸುಣ್ಣದಿಂದ ರಂಗವಲ್ಲಿ ತೆಗೆಯುತ್ತಾರೆ. ದೀಪಾವಳಿಯಂದು ಮನೆಯ ಮುಂದೆ ರಂಗವಲ್ಲಿಗಳ ಪೈಪೋಟಿಯೇ ನಡೆಯುತ್ತದೆಯೇನೋ ಎಂಬಂತೆ ಬಣ್ಣ ಬಣ್ಣದ ರಂಗವಲ್ಲಿಗಳನ್ನು ಹಾಕುತ್ತಾರೆ. ಲಕ್ಷ್ಮೀ ಪೂಜೆಯಂದು ಲಕ್ಷ್ಮಿಗೆ ಪ್ರಿಯವಾದ ಕಮಲದ ರಂಗವನ್ನೂ ಸುಣ್ಣದಿಂದ ಕೋಟೆಯನ್ನೂ ಬಿಡಿಸುವುದುಂಟು. ಚೈತ್ರಮಾಸದ ಗೌರಿಯ ಮುಂದೆಯೂ ಹೀಗೆ ರಂಗವಲ್ಲಿ ಹಾಕುತ್ತಾರೆ. ಈಗೀಗ ನಗರದ ಮಹಿಳೆಯರು ಬಿಳೀಪೆಯಿಂಟಿನಿಂದ ಮನೆಯ ವರಾಂಡ, ಪಡಸಾಲೆ ಇವುಗಳ ಸುತ್ತಲೂ ಗೋಡೆಯ ಉದ್ದಕ್ಕೆ ಎಲೆಬಳ್ಳಿಗಳ ರಂಗವಲ್ಲಿಯನ್ನು ಹಾಕುವುದುಂಟು.

ಸ್ವಲ್ಪ ಅನುಕೂಲವಂತರು ಜಲಸಸ್ಯಗಳನ್ನೂ ಜಲಚರಗಳನ್ನೂ ಇಡುವುದಕ್ಕಾಗಿ ಮಾಡಿದ ಅಕ್ವೇರಿಯಂ ಎಂಬ ಮೀನು ತೊಟ್ಟಿ ಅಥವಾ ಕೊಳವನ್ನು ಮನೆಯ ವರಾಂಡದಲ್ಲಿರಿಸಿ ಅದು ಕಾಣುವಂತೆ ಬಣ್ಣಬಣ್ಣದ ದೀಪಗಳಿಂದ ಅಲಂಕರಿಸುತ್ತಾರೆ. ಸುಂದರವಾದ ಗಿಳಿ ಅಥ'ವಾ ಪಕ್ಷಿ ಪಂಜರವನ್ನು ವರಾಂಡದಲ್ಲಿ ತೂಗುಹಾಕುವುದೂ ವಾಡಿಕೆಯಾಗಿದೆ.

ಚಿತ್ರಪಟಗಳನ್ನೂ ಗೃಹಾಲಂಕರಣದ ಸಾಧನಗಳನ್ನಾಗಿ ಉಪಯೋಗಿಸುತ್ತಾರೆ. ಕೌಟುಂಬಿಕ ಚಿತ್ರಗಳನ್ನು ಪಡಸಾಲೆಯಲ್ಲೂ ಪ್ರಕೃತಿಸೌಂದರ್ಯದ ಚಿತ್ರಪಟಗಳನ್ನು ವರಾಂಡದಲ್ಲೂ ತೂಗುಹಾಕುತ್ತಾರೆ. ಮನೆಮಕ್ಕಳ ಫೋಟೋಗಳನ್ನು ಫ್ರೇಮಿನೊಳಗಿಟ್ಟು ಮೇಜಿನ ಮೇಲಾಗಲಿ, ಬೀರುವಿನ ಮೇಲಾಗಲಿ ಇಡುವುದುಂಟು. ಫಲಪುಷ್ಪಗಳ, ನೈಸರ್ಗಿಕ ಸೌಂದರ್ಯದ ವಾಲ್ ಪ್ಲೇಟ್‌ಗಳನ್ನು ತೂಗಿಸುತ್ತಾರೆ. ಹಾಗೆಯೇ ಬೆಲೆಬಾಳುವ ಪೀಠೋಪಕರಣಗಳನ್ನು ಆಧುನಿಕ ರೀತಿಯಲ್ಲಿ ಅಲಂಕರಿಸಿ, ಮನೆಯಲ್ಲಿರುವ ಕನ್ನಡಿ, ಚಿತ್ರಪಟಗಳು, ಹೂದಾನಿಗಳು, ಗೊಂಬೆಗಳು ಮೊದಲಾದುವುನ್ನು ವ್ಯವಸ್ಥಿತವಾಗಿರಿಸಿ ಮನೆಯನ್ನು ಅಲಂಕರಿಸುವುದುಂಟು.

ಅತ್ಯಾಧುನಿಕ ಪ್ರವೃತ್ತಿಯವರು ಕಿಟಕಿ ಬಾಗಿಲುಗಳಿಗೆ ಸುಂದರವಾದ ಪರದೆಗಳನ್ನು ಹಾಕುವುದರಲ್ಲಿಯೂ ತಮ್ಮ ಅಭಿರುಚಿಯನ್ನು ವ್ಯಕ್ತಪಡಿಸುತ್ತಾರೆ. ಪ್ರಶಾಂತ ವಾತಾವರಣದ ಅಪೇಕ್ಷೆಯುಳ್ಳವರೂ ತಿಳಿಬಣ್ಣಗಳ ಪರದೆಗಳನ್ನು ಉಪಯೋಗಿಸಿದರೆ, ಉತ್ಸಾಹಮಯವಾದ ವಾತಾವರಣವನ್ನು ಬಯಸುವವರು ದಟ್ಟವಾದ ಬಣ್ಣಗಳನ್ನು

ಉಪಯೋಗಿಸುವರು. ಮತ್ತೆ ಕೆಲವರು ಗೋಡೆಯ ಬಣ್ಣಗಳಿಗೆ ಹೊಂದಿಕೆಯಾಗಬಲ್ಲ ಪರದೆಗಳನ್ನು ಬಳಸುತ್ತಾರೆ. ಕೆಲವಟ್ಟಿಗೆ ದಟ್ಟ, ಕೆಲವಟ್ಟಿಗೆ ತಿಳಿ, ಕೆಲವಟ್ಟಿಗೆ ಪ್ರಕಾಶಹೀನ ಕೆಲವಟ್ಟಿಗೆ ಪ್ರಕಾಶಮಾನ ಎಂಬ ಉಕ್ತಿಗನುಗುಣವಾಗಿ ಗೋಡೆಯ ಬಣ್ಣಗಳಿಗೆ ಹೊಂದಿಕೆಯಾಗುವಂತೆ ಕಿಟಕಿ ಮೇಜುಗಳ ಹೊದಿಕೆ, ಬಾಗಿಲು ಕಿಟಕಿ ಪರದೆಗಳನ್ನು ಆರಿಸಿರುತ್ತಾರೆ. ಬಾಗಿಲುಗಳಿಗೆ ಇಳಿಬಿಟ್ಟ ಪರದೆಗಳನ್ನು ಎರಡು ಭಾಗಗಳಾಗಿ ಕತ್ತರಿಸಿ ಹೊಲಿದು ನಿರಿಗೆ ತೆಗೆದು, ಅರ್ಧಅರ್ಧ ಭಾಗವನ್ನು ಪ್ಲಾಸ್ಟಿಕ್ ಮಣಿಗಳಿಂದ ಮತ್ತು ರಿಬ್ಬನ್‌ಗಳಿಂದ ಕಟ್ಟುವುದೂ ಉಂಟು. ಸೋಫಾದ ಮೇಲೆ ಇರಿಸುವ ಒರಗುದಿಂಬಿಗೆ ಸುತ್ತಲೂ ನಿರಿಗೆ ಕಟ್ಟಿ ಹೊಲಿದ ಚೀಲವನ್ನು ಹಾಕಿ ನಡುವೆ ಸುಂದರವಾದ ಕಸೂತಿ ಕೆಲಸವನ್ನು ಮಾಡುತ್ತಾರೆ.

ಅಲಂಕೃತಗೋಡೆ

ಗೃಹಾಲಂಕಾರದಲ್ಲಿ ಹೂಗಳ ಪಾತ್ರ ಬಹಳ ಹಿರಿದು. ಅರಳಿದ ಹೂಗಳನ್ನು ಹಸುರೆಲೆಗಳನ್ನು ಹೂದಾನಿಗಳಲ್ಲಿಟ್ಟು ಅಲಂಕರಿಸಿ ಮೇಜಿನ ಮೇಲಿಡುವುದು ಹೆಚ್ಚಾಗಿ ಬಳಕೆಗೆ ಬರುತ್ತಿದೆ. ಹೂಗಳನ್ನು ಒಂದೆಡೆಯಲ್ಲಿ, ತರಕಾರಿಗಳನ್ನು ಒಂದೆಡೆಯಲ್ಲಿ ಜೋಡಿಸುವುದು, ಹೂದಾನಿಗಳಲ್ಲಿ ಅಚ್ಚುಕಟ್ಟಾಗಿ ಹೂಗಳನ್ನು ಜೋಡಿಸುವುದು ಒಂದು ಕಲೆಯೇ ಆಗಿದೆ. ಜಪಾನೀಯ ಹೂವಿನ ಅಲಂಕಾರದ ಪ್ರಭಾವ ಅಲ್ಲಲ್ಲಿ ಕಾಣುತ್ತದೆ. ಇಕೆಬಾನಾ ಕಲೆ ಪ್ರಚಾರಗೊಳ್ಳುತ್ತಿದೆ.

ಮನೆಯ ಸೊಬಗು ಹೆಚ್ಚಿಸಲು ಮನೆ ಮುಂದೆ ಸುಂದರವಾದ ಕೈ ತೋಟ ಮಾಡುವುದು, ಅಲಂಕಾರಿಕ ಸಸ್ಯಗಳು ಮತ್ತು ಹೂವಿನ ಗಿಡಗಳನ್ನು ಕುಂಡಗಳಲ್ಲಿ ಜೋಡಿಸುವುದು, ಅಲಂಕಾರಿಕ ಕುಂಡಗಳಲ್ಲಿ ಇಳಿಬೀಳುವ ಸಸ್ಯಗಳನ್ನು ಇಟ್ಟು ಮನೆಯ ಮುಂದೆ ಚಾವಣಿಗೆ ತೂಗುಹಾಕುವುದು ರೂಢಿಯಲ್ಲಿದೆ. (ಎಂ.ಜೆ.ಬಿ.)

**ಗೇರಸಪ್ಪೆ ಶಾಂತಪ್ಪಯ್ಯ :** ಹತ್ತೊಂಬತ್ತನೆಯ ಶತಮಾನದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಆಗಿಹೋದ ಪ್ರಸಿದ್ಧ ಯಕ್ಷಗಾನ ಕವಿ. ಉತ್ತರ ಕನ್ನಡ ಜಿಲ್ಲೆಯ ಗೇರಸಪ್ಪೆ ಈತನ ಜನ್ಮಸ್ಥಳ. ತನ್ನ ಬಾಲ್ಯವನ್ನು ಅಲ್ಲೇ ಕಳೆದ. ಅನಂತರ ಮಂಗಳೂರಿನಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಪಡೆದು ಕ್ರಮೇಣ ಅಲ್ಲೆ ಜಿಲ್ಲಾ ನ್ಯಾಯಾಧೀಶನಾಗಿ ನೇಮಕಗೊಂಡ. ಈತನ ಮನೆಯಮಾತು ಕೊಂಕಣಿ. ಮಂಗಳೂರು ತಾಲ್ಲೂಕಿನ ಬಂಟ್ವಾಳದಲ್ಲಿ ವೈವಾಹಿಕ ಸಂಬಂಧ ಬೆಳೆಸಿದ. ಹೆಂಡತಿ ಕಾವೇರಮ್ಮ. ಈತ ನಿವೃತ್ತಿ ಹೊಂದುವ ವರೆಗೂ ಮಂಗಳೂರಿನಲ್ಲಿಯೇ ವಾಸವಾಗಿದ್ದ. ಅನಂತರ ಬಂಟ್ವಾಳಕ್ಕೆ ಬಂದು ಅಲ್ಲಿ ತನ್ನ ಇಡೀ ಆಯುಷ್ಯವನ್ನು ಕಳೆದ. 1850-70ರ ಮಧ್ಯಕಾಲದಲ್ಲಿ ಸ್ವರ್ಗಸ್ಥನಾದನೆಂದೂ ಈತನಿಗೆ ಗಂಡುಸಂತತಿ ಇರಲಿಲ್ಲವೆಂದೂ ತಿಳಿದುಬರುತ್ತದೆ.

ಈತ ಕರ್ಣಪರ್ವ, ಪುತ್ರಕಾಮೇಷ್ಟಿ, ಸೀತಾ ಕಲ್ಯಾಣ, ಅತಿಕಾಯ, ಮೈರಾವಣ ಕಾಳಗ, ಸುರಥ ಸುಧನ್ವ ಕಾಳಗ, ರಾವಣದಿಗ್ವಿಜಯ, ಜರಾಸಂಧ ಕಾಳಗ, ಏಕಾದಶೀಪ್ರಸಂಗ ಮೊದಲಾದ ಅನೇಕ ಯಕ್ಷಗಾನ ಕೃತಿಗಳನ್ನು ರಚಿಸಿದ್ದಾನೆ. ಇವನ ಎಲ್ಲ ಕೃತಿಗಳಲ್ಲಿ ಕ್ಷೇಮಪುರೀಶ, ಶರಪುರಾಧಿಪ ಎಂಬ ಅಂಕಿತವಿದ್ದು ಗೇರಸಪ್ಪೆಯ ವೆಂಕಟರಮಣದೇವರನ್ನೂ ಮಂಗಳೂರಿನ ಪ್ರಸಿದ್ಧ ಶರವುಗಣಪತಿಯನ್ನೂ ಸ್ಮರಿಸಿದ್ದಾನೆ. ಇವನ ಕೃತಿಗಳಲ್ಲಿ ಹೆಚ್ಚಿನವು ಅಚ್ಚಾಗಿವೆ. ಇವು ಬಯಲಾಟಕ್ಕೆ ಹೆಚ್ಚು ಪ್ರಶಸ್ತವಾಗಿದ್ದು ಇಂದಿಗೂ ವಿಶೇಷ ಪ್ರಚಾರದಲ್ಲಿವೆ.

ಶಾಂತಪ್ಪಯ್ಯ ಕೃತಿರಚನೆಯಲ್ಲಿ ಮಾತ್ರವಲ್ಲದೆ ಯಕ್ಷಗಾನ ವೇಷಧಾರಿಗಳನ್ನು (ನಟರು) ತರಬೇತು ಮಾಡುವುದರಲ್ಲಿಯೂ ಕಿರೀಟ ಮೊದಲಾದ ವೇಷಭೂಷಣಗಳನ್ನು ತಯಾರಿಸುವುದರಲ್ಲಿಯೂ ಪರಿಶ್ರಮ ಉಳ್ಳವನಾಗಿದ್ದು ತನ್ನ ಇಡೀ ಜೀವಮಾನವನ್ನು ಯಕ್ಷಗಾನ ಸೇವೆಗೆ ಮುಡಿಪಾಗಿರಿಸಿ ಅಪಾರ ಕೀರ್ತಿಗೆ ಪಾತ್ರನಾಗಿದ್ದಾನೆ. (ಕೆ.ಕೆ.ಬಿ.)

**ಗೇರುಸೊಪ್ಪೆ :** ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನಲ್ಲಿರುವ ಇತಿಹಾಸ ಪ್ರಸಿದ್ಧ ಗ್ರಾಮ. ಹೊನ್ನಾವರದಿಂದ 26ಕಿಮೀ ಪೂರ್ವದಲ್ಲಿ ಗೇರುಸೊಪ್ಪೆ ಜಲಪಾತದಿಂದ 30ಕಿಮೀ ಪಶ್ಚಿಮದಲ್ಲಿ ಶರಾವತಿ ನದಿಯ ದಂಡೆಯ ಮೇಲಿದೆ. ಇದು 14-16ನೆಯ ಶತಮಾನಗಳಲ್ಲಿ ಸಾಳುವ ವಂಶದ ಅರಸರ ರಾಜಧಾನಿಯಾಗಿತ್ತು. ಕ್ಷೇಮಪುರ, ಭಲ್ಲಾತಕೀಪುರ ಮತ್ತು ನಗಿರೆ ಎಂಬ ಹೆಸರುಗಳಿಂದ ಪ್ರಸಿದ್ಧಿ ಪಡೆದಿತ್ತು. ಅಂದು ವೈಭವದ ಅತ್ಯುನ್ನತಿಯನ್ನು ಕಂಡಿದ್ದ ಗೇರುಸೊಪ್ಪೆ ಇಂದು ಚಿಕ್ಕ ಗ್ರಾಮ. ಆದರೆ ರಾಜಧಾನಿಯ ಹಲವು ಅವಶೇಷಗಳು ಗೇರುಸೊಪ್ಪೆಯಲ್ಲೂ ಇಲ್ಲಿಂದ ಸು.2ಕಿಮೀ ದೂರದಲ್ಲಿರುವ ನಗಿರೆ ಬಸ್ತಿಕೇರಿಯಲ್ಲೂ ಉಳಿದಿವೆ.



ಚತುರ್ಮುಖ ಬಸದಿ

ರಾಣಿ ಚೆನ್ನಭೈರಾದೇವಿಯ (1548-99) ಕಾಲದಲ್ಲಿ ಕಟ್ಟಲಾದ ಗೇರುಸೊಪ್ಪೆಯ ಚತುರ್ಮುಖ ಬಸದಿ ಇವುಗಳಲ್ಲಿ ಮುಖ್ಯವಾದುದು. ಚತುರ್ಮುಖ ಬಸದಿ ವಾಸ್ತುಶಿಲ್ಪದ ದೃಷ್ಟಿಯಿಂದ ಗಮನಾರ್ಹವಾದುದು. ಈ ಬಸದಿಯ ನಾಲ್ಕು ದಿಕ್ಕಿನಲ್ಲಿ ನಾಲ್ಕು ಬಾಗಿಲುಗಳು ಹಾಗೂ ನಾಲ್ಕು ಬೇರೆ ಬೇರೆ ತೀರ್ಥಂಕರರ ವಿಗ್ರಹಗಳು ಇವೆ. ಪಾರ್ಶ್ವನಾಥ ಬಸದಿಯಲ್ಲಿ ಪರ್ಯಂಕಾಸನದಲ್ಲಿರುವ ಪಾರ್ಶ್ವನಾಥ ತೀರ್ಥಂಕರರ ಸುಂದರ ಮೂರ್ತಿಯಿದೆ. ಮೂರ್ತಿಯ ಪ್ರಭಾವಳಿಯಲ್ಲಿ ತೀರ್ಥಂಕರ ಬಿಂಬಗಳನ್ನು ಪರ್ಯಂಕಾಸನದಲ್ಲಿರುವಂತೆ ಕೆತ್ತಲಾಗಿದೆ. ಅದರಲ್ಲೇ ಚಾಮರಧಾರಿಯರು ಸರ್ವಾಲಂಕಾರಭೂಷಿತೆಯರಾಗಿ ಕಾಣುತ್ತಾರೆ. ಜಿನನ ತಲೆಯ ಮೇಲೆ ಏಳು ಹೆಡೆಯ ಸರ್ಪವಿದೆ. ಅದರ ಮೇಲೆ ಮನೋಹರವಾದ ಮುಕ್ಕೊಡೆಯಿದೆ. ಈ ಬಸದಿಯಲ್ಲಿ ಪದ್ಮಾವತಿ ಮತ್ತು ಜ್ವಾಲಾಮಾಲಿನಿ ಯಕ್ಷಿಯರ ಮೂರ್ತಿಗಳಿವೆ. ಈ ಬಸದಿಯ ಶಿಲ್ಪಗಳ ಸೂಕ್ಷ್ಮಕುಸುರಿಕೆಲಸ ಶಿಲ್ಪಿಯ ಕಲಾಪ್ರೌಢಿಮೆಯನ್ನೂ ನಿರ್ಮಾಪಕರ ಸೌಂದರ್ಯ ಪ್ರಜ್ಞೆಯನ್ನೂ ವ್ಯಕ್ತಪಡಿಸುತ್ತವೆ.

ಗೇರುಸೊಪ್ಪೆಯಲ್ಲಿ ದೊರೆತಿರುವ ಶಾಸನಗಳಿಂದ ಅಲ್ಲಿನ ಬಸದಿಗಳ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬರುತ್ತವೆ. ಗೇರುಸೊಪ್ಪೆ ನಗರಗೇರಿ

ಬಳಿಯ ಜೈನ ಬಸದಿಯು 1421ರ ಶಾಸನದಿಂದ ಪಾರ್ಶ್ವನಾಥ' ದೇವರಸೇವೆಗೆ ಮತ್ತು ಬಸದಿಯ ಜೀರ್ಣೋದ್ಧಾರಕ್ಕೆ ಪದ್ಮಣ್ಣರಸ ಭೂಮಿಯನ್ನು ದಾನ ಮಾಡಿದ ವಿಚಾರ ತಿಳಿದುಬರುತ್ತದೆ. ಶ್ರೀದೇವೇಂದ್ರಸೂರಿಯ ಉಪದೇಶದಿಂದ ಓಜಣಶ್ರೇಷ್ಠಿಯ ಪುತ್ರ ಕಲ್ಲಪ್ಪಶ್ರೇಷ್ಠಿಯ ಮಗ ಅಜಣ ನೇಮಿಜಿನಬಿಂಬವನ್ನು ಮಾಡಿಸಿದ ಎಂಬ ವಿಚಾರ ನಗರಗೇರಿ ಬಸದಿಯ ಜಿನಬಿಂಬದ ಪಾದಪೀಠದಲ್ಲಿರುವ ಬರೆಹದಿಂದ ತಿಳಿದುಬರುವುದು. ವರ್ಧಮಾನ ಬಸದಿ ಪಕ್ಕದಲ್ಲಿರುವ 1378ರ ಒಂದು ಶಾಸನ ಹೊನ್ನಪ್ಪ ಶ್ರೇಷ್ಠಿ ದಾನಬಿಟ್ಟಿದ್ದನ್ನೂ ಅವನಿಗೆ ಸೋಮಣ್ಣ ಮತ್ತು ಕಾಮಣ್ಣ ಎಂಬ ದಂಡನಾಯಕರೊಡನೆ ಇದ್ದ ಬಂಧುತ್ವವನ್ನೂ ತಿಳಿಸುತ್ತದೆ. ಗೇರುಸೊಪ್ಪೆಯಲ್ಲಿ ಅನಂತತೀರ್ಥಂಕರರ ಚೈತ್ಯಾಲಯವೊಂದಿದ್ದ ವಿಷಯ 1392ರ ಒಂದು ಶಾಸನದಿಂದ ವ್ಯಕ್ತವಾಗುತ್ತದೆ. ಈ ಬಸದಿಯನ್ನು ಯೋಜಣಶ್ರೇಷ್ಠಿಯ ಪತ್ನಿ ರಾಮಕ್ಕ ಎಂಬುವಳು ಕಟ್ಟಿಸಿದ್ದಳು. ಯೋಜಣಶ್ರೇಷ್ಠಿ ತನ್ನ ತಂದೆ ಕಲ್ಲಪ್ಪ ಶ್ರೇಷ್ಠಿಯ ಪ್ರೇರಣೆಯಿಂದ ಕ್ಷೇಮಪುರದಲ್ಲಿ (ಗೇರುಸೊಪ್ಪೆ) ದ್ವಿತಲವಾಗಿ ಒಂದು ಚೈತ್ಯಾಲಯವನ್ನು ಕಟ್ಟಿಸಿ ಕೆಳಗಿನ ನೆಲೆಯಲ್ಲಿ ನೇಮಿಜಿನೇಶ್ವರನ ಪ್ರತಿಮೆಯನ್ನೂ ಮೇಲಿನ ನೆಲೆಯಲ್ಲಿ ಗೊಮ್ಮಟೇಶ್ವರ ಬಿಂಬವನ್ನೂ ಪ್ರತಿಷ್ಠಾಪಿಸಿದ. ಆ ಚೈತ್ಯಾಲಯ ಯೋಜಣಶ್ರೇಷ್ಠಿಯ ಕೀರ್ತಿಯ ಮೂರ್ತಿಯಂತೆ, ಪುಣ್ಯದ ಪುಂಜದಂತೆ ಇತ್ತು ಎಂದು ಒಂದು ಶಾಸನ ತಿಳಿಸುತ್ತದೆ.

ಚೆನ್ನಭೈರಾದೇವಿಯ ಆಡಳಿತದಲ್ಲಿ ಮೆಣಸಿನ ವ್ಯಾಪಾರದಿಂದ ಶ್ರೀಮಂತವಾಗಿದ್ದ ಗೇರುಸೊಪ್ಪೆಯ ಮೇಲೆ ಇಕ್ಕೇರಿಯ ಹಿರಿಯ ವೆಂಕಟಪ್ಪನಾಯಕನ ಕಣ್ಣು ಬಿದ್ದು ಆ ರಾಜ್ಯದ ಮೇಲೆ ಯುದ್ಧಹೂಡಿ ಚೆನ್ನಭೈರಾದೇವಿಯನ್ನು ಸೋಲಿಸಿ ಗೇರುಸೊಪ್ಪೆಯನ್ನು ಸಂಪೂರ್ಣವಾಗಿ ಧ್ವಂಸ ಮಾಡಿದ. (ಎಸ್.ಪಿ.)

**ಗೊಂದಲಿಗರು :** ಅಂಬಾಭವಾನಿಯ ಹೆಸರಿನಲ್ಲಿ ಗೊಂದಲ ಹಾಕುವುದನ್ನೇ ಪ್ರಧಾನವೃತ್ತಿಯನ್ನಾಗಿ ಮಾಡಿಕೊಂಡಿರುವ ಒಂದು ಸಮುದಾಯ. ಇವರು ಬಿಜಾಪುರ, ಬೆಳಗಾಂವಿ, ಧಾರವಾಡ, ಶಿವಮೊಗ್ಗ, ಗುಲ್ಬರ್ಗ, ಬೀದರ್, ಬಳ್ಳಾರಿ ಜಿಲ್ಲೆಗಳಲ್ಲಿ ಮತ್ತು ಮೈಸೂರು, ಮಂಡ್ಯ, ಜಿಲ್ಲೆಯ ಕೆಲವೆಡೆಗಳಲ್ಲಿ ಕಂಡುಬರುತ್ತಾರೆ. ಈ ಸಮುದಾಯವನ್ನು ಗೋಂಧಳಿ, ಗೊಂದಲಿ ಎಂಬ ಹೆಸರಿನಿಂದಲೂ ಗುರುತಿಸುವುದುಂಟು. ಮೂಲತಃ ಇವರು ಮಹಾರಾಷ್ಟ್ರಕ್ಕೆ ಸೇರಿದವರು. ಗೋಂಧಳಿ ಅಥವಾ ಗೊಂದಲಿ ಎಂಬ ಹೆಸರು ಇವರಿಗೆ ಯಾಕೆ ಬಂತು ಎಂಬ ಬಗ್ಗೆ ಖಚಿತವಾದ ಆಧಾರವಿಲ್ಲ. ಗೊಂದಲಿಗ ಎಂದರೆ ಪಾರ್ವತಿಯ ಹೆಸರಿನಲ್ಲಿ ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವ ಇತ್ಯಾದಿ ಅರ್ಥಗಳನ್ನು ಕೋಶಗಳು ಹೇಳುತ್ತವೆ. ಬಿಜಾಪುರದ ಹಿರಿಯ ಗೊಂದಲಿ ವಕ್ತೃಗಳು ಗೊಂದಲಿಗ ಎಂಬುದಕ್ಕೆ ಹೀಗೆ ಹೇಳುತ್ತಾರೆ: ಧಾಂದಲೆಯೆಬ್ಬಿಸು ಅಂದ್ರ ಏನು ಗೊಂದಲ ನಡದದಪ್ಪ ಅಂತಾರ, ಹಂಗs ನಮದೂ ಗೊಂದಲಾನೇ ಐತಿ. ಗೊಂದ್ಲ ಹಾಕೂ ಮುಂದ ಸಂಬಾಳ ಬಡಿಯೂದು ಚೌಡಿಕಿ ಬಾರಿಸೂದು ಪತ್ತೆ ಹಾಕೂದು ಜೊತೇಲೇ ದೇವಿಸ್ತುತಿಯಾಗಿ ಹಾಡೂದು ಇದೆಲ್ಲಾ ಗೊಂದ್ಲಾನೇ ಆಗ್ತೈತಿ ನೋಡ್ರಿ. ಅದಕ್ಕೆ ಗೊಂದಲ ಅಂಬು ಹೆಸರು ಬಂತ್ರಿ.

ಜಮದಗ್ನಿ ಮತ್ತು ಆತನ ಹೆಂಡತಿ ರೇಣುಕೆ ಈ ಸಮುದಾಯದ ಸ್ಥಾಪಕರೆಂದು ಪ್ರತೀತಿ. ಅಂಬಾಭವಾನಿ (ತುಳಜಾಭವಾನಿ) ಇವರ ಕುಲದೇವತೆ. ಮಹಾರಾಷ್ಟ್ರದ ತುಳಜಾಪುರ ಈ ದೇವತೆಯ ಮೂಲಸ್ಥಾನ.

**ಗೊಂದಲಿಗರಲ್ಲಿ ಎರಡು ಗೋತ್ರಗಳಿವೆ:** ಸ್ವಗೋತ್ರ ಮತ್ತು ಭಿನ್ನಗೋತ್ರ. ಸ್ವಗೋತ್ರದ ಗುಂಪಿನಲ್ಲಿ ಬ್ರಾಹ್ಮಣ, ಧನಗರ, ಮರಾಠ, ಕಂಬಾರ, ಕದಮ್‌ರಾಯ್, ರೇಣುಕಾರಾಯ್, ಮಾಲಿ, ಅಕರ್ಮಾಸೆ ಎಂಬ ಎಂಟು ವಿಭಾಗಗಳಿವೆ. ಭಿನ್ನಗೋತ್ರದ ಬುಡಕಟ್ಟಿನಲ್ಲಿ ಗಾಯಿಕವಾಡ, ಪವಾರ್ ಮುಂತಾದ ಹನ್ನೆರಡು ಬಗೆಯ ಉಪಗೋತ್ರಗಳಿವೆ. ಉಪಗೋತ್ರ ಅಥವಾ ಪಂಗಡ ಬೇರೆ ಬೇರೆ ಆಗಿದ್ದರೆ ಇವರ ನಡುವೆ ಕೊಡುಕೊಳ್ಳುವ ವ್ಯವಹಾರ ಇರುವುದಿಲ್ಲ. ಈಗ ಎದ್ದು ಕಾಣುವಂಥ'ವು ಮೂರು ಪಂಗಡಗಳು ಮಾತ್ರ: ಬುಡುಬುಡಿಕೆಯವರು, ಗೊಂಧಳಿಗರು, ಜೋಷಿಗರು.

ಗೊಂದಲಿಗರಲ್ಲಿ ಬಳಕೆಯಲ್ಲಿರುವ ಕೆಲವು ಸಂಪ್ರದಾಯಗಳು ಹೀಗಿವೆ: ಮಗು ಹುಟ್ಟಿದ ಐದು ದಿನಕ್ಕೆ ಐದ್ದೀಶಿ ಎಂಬ ಪದ್ಧತಿಯನ್ನು ಆಚರಿಸುತ್ತಾರೆ. ಹಣೆಬರೆಹ ಬರೆಯುವ ಸಟವೈ ಎಂಬ ದೇವತೆ ಮಗುವಿನ ಹಣೆಯಲ್ಲಿ ಒಳ್ಳೆಯದನ್ನು ಬರೆಯಲಿ ಎಂಬ ಉದ್ದೇಶದಿಂದ ಆ ದಿನ ಹೊಸ ಮೊರ ಮತ್ತು ಹೊಸ ಸಟವೈ ದೇವಿಯ ಮೂರ್ತಿಯನ್ನು ಕೊಂಡು ತಂದು ಪೂಜಿಸಿ ನಾಲ್ಕಾರು ಮಂದಿಗೆ ಊಟ ಹಾಕಿ ಓಣಿಯ ಜನಕ್ಕೆ ಬೆಲ್ಲ ಕೊಬ್ಬರಿ ಹಂಚುತ್ತಾರೆ. ಹನ್ನೆರಡನೆಯ ದಿನ ತೊಟ್ಟಿಲಿಗೆ ಹಾಕುವುದು, ಹೆಸರಿಡುವುದು, ಜೋಗುಳ ಹಾಡುವುದು ರೂಢಿಯಲ್ಲಿದೆ.

ಹೆಣ್ಣು ಮೈನೆರೆದಾಗ ಆಕೆಗೆ ಹಾಕುವ ಚಪ್ಪರವನ್ನು ಇವರು ಮಕರ ಎನ್ನುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣಿನ ಆರೈಕೆ ಸಾಮಾನ್ಯ. ಗೊಂದಲಿಗರಲ್ಲಿ ಮೊದಲಿಗೆ ತೊಟ್ಟಿಲು ವಿವಾಹ, ಬಾಲ್ಯ ವಿವಾಹ ಪದ್ಧತಿಗಳು ಜಾರಿಯಲ್ಲಿದ್ದು ಈಗ ವಧುವಿಗೆ ಪ್ರಾಪ್ತ ವಯಸ್ಸಾಗುವವರೆಗೆ ಕಾಯುವ ಪದ್ಧತಿ ಇದೆ. ಇವರಲ್ಲಿ ಸಾಮಾನ್ಯವಾಗಿ ಮೂರು ದಿನಗಳ ಮದುವೆ ಜಾರಿಯಲ್ಲಿದೆ. ಮದುವೆ ನಡೆಯುವುದು ವರನ ಮನೆಯಲ್ಲಿ. ಮುಹೂರ್ತದ ಕಾರ್ಯ ಸಂಜೆಯ ಹೊತ್ತು ನಡೆಯುತ್ತದೆ.

ಗೊಂದಲಿಗರ ಮೇಳ

ಮೊದಲ ದಿನ ಮೈಗೆ ಅರಿಶಿನ ಹಚ್ಚುವ ಮುಂಚೆ ಗಂಡಿನ ಹೊಸ ಶಲ್ಯದ ತುದಿಗೆ ತೆಂಗಿನಕಾಯಿಯನ್ನೂ ಹೆಣ್ಣಿನ ಸೆರಗಿನ ತುದಿಗೆ ಅಡಕೆಯನ್ನೂ ಕಟ್ಟುತ್ತಾರೆ. ಕಂಕಣ ಕಟ್ಟುವುದಕ್ಕೆ ಯಾವಾಗಲೂ ಕವಲೊಡೆದಿರುವ ಅರಿಶಿನದ ತುಂಡನ್ನು ಬಳಸುತ್ತಾರೆ. ಕವಲೊಡೆದಿರುವ ಸಣ್ಣತುಂಡು ಮಗು ಎಂಬ ನಂಬಿಕೆಯಿದೆ. ಎರಡನೆಯ ದಿನ ಮಧ್ಯಾಹ್ನ ಸೊಲಿಗೆ ನೀರಿನ ಸ್ನಾನ. ಈ ಸ್ನಾನವನ್ನು ಸಮಾಜ ಅಥವಾ ಪಂಚರು ಹೆಣ್ಣುಗಂಡುಗಳಿಗೆ ಬಳುವಳಿಯಾಗಿಯೂ ಮಾಡಿಸಬಹುದು. ಇದೇ ರಾತ್ರಿ ತಮ್ಮ ಕುಲದೇವತೆ ಅಂಬಾಭವಾನಿಗೆ ಗೊಂದಲ ಹಾಕುತ್ತಾರೆ (ಇದು ಆ ಮನೆಯಲ್ಲಿ ಹಿಂದಿನಿಂದ ನಡೆದು ಬಂದಿದ್ದರೆ ಮಾತ್ರ), ಮೂರನೆಯದಿನ ಮುಂಜಾನೆ ಕುಲದೇವತೆಗೆ ಬಲಿ ಕೊಡುವುದು, ತೊಟ್ಟಿಲು ತೂಗುವ ಶಾಸ್ತ್ರ, ಬಲಿಯ ಊಟ ಇವುಗಳೊಂದಿಗೆ ಮದುವೆ ಮುಗಿಯುತ್ತದೆ. ಗೊಂದಲಿಗರಲ್ಲಿ ಮದುವೆಯಾದವರು ಮಾತ್ರ ಹೆಣ ಹೊರುವ ಮತ್ತು ಸಂಸ್ಕಾರ ಮಾಡುವ ಹಕ್ಕು ಪಡೆದಿರುತ್ತಾರೆ. ಮದುವೆಯಾಗದೆ ಸತ್ತರೆ ಹೆಣವನ್ನು ಎಕ್ಕದ ಗಿಡದೊಂದಿಗೆ ಮದುವೆ ಮಾಡುತ್ತಾರೆ. ಹನ್ನೆರಡು ಅಥವಾ ಕೆಳಗಿನ ವಯಸ್ಸಿನಲ್ಲಿ ಮದುವೆ ಆಗದೆ ಸತ್ತರೆ ಅಂತಹವರನ್ನು ಸಾಮಾನ್ಯವಾಗಿ ಹೂಳುತ್ತಾರೆ. ಮದುವೆ ಆಗಿದ್ದು ಸತ್ತರೆ ಕಡಿಮೆ ವಯಸ್ಸಿನವರಾಗಿದ್ದರೂ ಸುಡುತ್ತಾರೆ. ಮಕ್ಕಳು ಸತ್ತರೆ ಮೊರ ಬಳಸದೆ ಒಡ್ಡಿದ ಕೈಗಳಿಂದಲೇ ಒಯ್ದು ಶ್ಮಶಾನವಲ್ಲದ, ಹುತ್ತವಿಲ್ಲದ ಕಡೆ ಹೂಳುತ್ತಾರೆ.

**ಗೊಂದಲಿಗರ ನ್ಯಾಯದ ರೀತಿನೀತಿಗಳು :** ನಡೆದ ಸಂಗತಿಯನ್ನು ಫಿರ್ಯಾದಿ ಓಣಿಯ ಜನಕ್ಕೆ ತಿಳಿಸುತ್ತಾನೆ. ಆಗ ಪಂಚರು ಕೂಡಿ ವಿಚಾರ ಮಾಡುತ್ತಾರೆ. ಕೋರ್ಟಿಗೆ ಹೋದ ಸಂದರ್ಭಗಳು ಬಹಳ ಕಡಿಮೆ. ಆರೋಪಿಯ ಮತ್ತು ಫಿರ್ಯಾದಿಯ ಹೇಳಿಕೆಗಳನ್ನು ಪಂಚರು ಬರೆಹದ ಮೂಲಕ ತೆಗೆದುಕೊಂಡು ಸಹಿ ಮಾಡಿಸಿಕೊಳ್ಳುತ್ತಾರೆ. ಸಹಿ ಹಾಕಿದ ಮೇಲೆ ಅವರು ಪಂಚರ ಅಭಿಪ್ರಾಯದಂತೆ ನಡೆದುಕೊಳ್ಳಲೇಬೇಕು. ಘಟನೆ ನಡೆದ ಸ್ಥಳಕ್ಕೆ ಪಂಚರು ಖುದ್ದು ಭೇಟಿ ನೀಡಿ ಅಕ್ಕಪಕ್ಕದವರಿಂದ

ನಡೆದದ್ದೇನೆಂದು ವಿಚಾರಿಸಿ, ಆರೋಪಿ ಮತ್ತು ಫಿರ್ಯಾದಿಗಳು ನೀಡಿರುವ ಹೇಳಿಕೆಗಳ ಸತ್ಯಾಸತ್ಯತೆಗಳನ್ನು ವಿಮರ್ಶಿಸಿ, ಯಾರಿಗೆ ಏನು ದಂಡ ಹಾಕಬೇಕು ಎಂದು ತೀರ್ಮಾನಿಸುತ್ತಾರೆ. ದಂಡನೆಗೆ ಒಳಗಾದವರು ತಮ್ಮ ಪಾಲಿನ ದಂಡವನ್ನು ಕೊಡಲೇಬೇಕಾಗುತ್ತದೆ. ಕೊಡದಿದ್ದರೆ ಅಂಥವರಿಗೆ ಅವರ ಸಮಾಜದಲ್ಲಿ ಯಾವ ಸ್ಥಾನವೂ ಇರುವುದಿಲ್ಲ.

ಗೊಂದಲಿಗರು ಅನೇಕ ಹಬ್ಬಗಳನ್ನು ಆಚರಿಸುತ್ತಾರೆ. ಮೊಹರಂ ಮತ್ತು ಹೋಳಿ ಹಬ್ಬಗಳಲ್ಲಿ ಇವರು ಕಟ್ಟುವ ವೇಷಗಳನ್ನು ಸೋಂಗು ತೆಗೆಯುವುದು ಎನ್ನುವರು. ಹಣಗಳಿಕೆ ಈ ವೇಷಗಳ ಪ್ರಧಾನ ಉದ್ದೇಶ. ದೀಪಾವಳಿಯಲ್ಲಿ ಲಕ್ಷ್ಮೀಪೂಜೆ ಮಾಡುತ್ತಾರೆ. ದಸರ ಸಮಯದಲ್ಲಿ ನಡೆಯುವ ಅಂಬಾಭವಾನಿಯ ಪೂಜೆ ಇವರ ದೊಡ್ಡ ಹಬ್ಬ. ಇದು ಹತ್ತು ದಿನ ನಡೆಯುತ್ತದೆ. ಕಡೆಯ ದಿನ ದಕ್ಷಿಣ ದಿಕ್ಕಿನಲ್ಲಿ ಊರಿನಿಂದ ಹೊರಕ್ಕೆ ಹೋಗಿ, ಬನ್ನಿಪೂಜೆ ಮಾಡಿ ಬನ್ನಿ ಹರಿಯುವುದು, ಬನ್ನಿಯ ಎಲೆಯನ್ನೋ ಹೂವನ್ನೋ ತಂದು ಪ್ರತಿಮನೆಗೂ ಬಂಗಾರ ತಗೊಳ್ಳಿ ಎಂದು ಹೇಳಿ ಕೊಡುವುದು ಮೊದಲಾದ ಕಾರ್ಯಗಳು ನಡೆಯುತ್ತವೆ. ಆಷಾಢದ ಕೊನೆಯಲ್ಲಿ ಅಥವಾ ಶ್ರಾವಣದ ಮೊದಲಲ್ಲಿ ನಡೆಯುವ ದುರ್ಗವ್ವನ ಹಬ್ಬ ಇವರಿಗೆ ವಿಶಿಷ್ಟವಾದದ್ದು. ಅಂದು ಈ ದೇವತೆಗೆ ಹೋತವನ್ನೋ ಉಣ್ಣೆಗುರಿಯನ್ನೋ ಬಲಿಗಾಗಿಯೇ ಮೀಸಲಾಗಿರುವ ದೊಡ್ಡ ಮಚ್ಚಿನಿಂದ ಒಂದೇ ಏಟಿಗೆ ಪ್ರಾಣಿಯ ನಡುದೇಹಕ್ಕೆ ಹೊಡೆದು ವಿಶಿಷ್ಟ ರೀತಿಯಲ್ಲಿ ಬಲಿ ಕೊಡುತ್ತಾರೆ. ಮೊದಲಿಗೆ ದುರ್ಗವ್ವನ ಸ್ಥಿರಗುಡಿಯ ಮುಂದೆ ಕೋಣವನ್ನು ಬಲಿ ಕೊಡುವ ಪದ್ಧತಿ ಇತ್ತು. ಈಗ ಕುರಿಯ ಬಲಿ ಮಾತ್ರ ನಡೆಯುತ್ತದೆ.

ಗೊಂದಲ ಹಾಕುವುದು ಸಾಮಾನ್ಯವಾಗಿ ಅಂಬಾಭವಾನಿಯ ಮುಂದೆ ನಿಂತು. ಇದಕ್ಕೆ ಮೂವರು ಸೇರುತ್ತಾರೆ. ಶಿವಮೊಗ್ಗ ಜಿಲ್ಲೆಯ ಗೊಂದಲಿಗರು ಗೊಂದಲ ಹಾಕಲು ಇಬ್ಬರು ಮಾತ್ರ ಉದ್ಯುಕ್ತರಾಗುವುದು ಮತ್ತು ಕುಳಿತೇ ಹಾಕುವುದು ರೂಢಿಯಲ್ಲಿದೆ. ಐವತ್ತು ಅರುವತ್ತು ಅಡಿ ಉದ್ದದ ಬಟ್ಟೆಯ ಮುಂಡಾಸು, ಕಾಲತನಕ ಇರುವ ಉದ್ದನೆಯ ಅಂಗಿ, ನಡುವಿಗೆ ಕವಡೆಪಟ್ಟಿ, ಕಾಲಿನಲ್ಲಿ ಗೆಜ್ಜೆ, ಎದೆಯ ಮೇಲೆ ಕತ್ತರಿಯಾಕಾರದ ಕವಡೆಪಟ್ಟಿಯ ನಡುವೆ ದೇವಿಯ ವಿಗ್ರಹ ಇವು ಗೊಂದಲ ಹಾಕುವ ಸಂದರ್ಭದಲ್ಲಿ ಬಳಸುತ್ತಿದ್ದ ವೇಷ ಭೂಷಣಗಳು. ಈಗ ಸಾಮಾನ್ಯವಾಗಿ ದೈನಂದಿನ ವೇಷದಲ್ಲೇ ಕೆಲಸ ನಡೆದು ಹೋಗುತ್ತದೆ. ಕೇವಲ ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಸಂಪ್ರದಾಯಸ್ಥ ವೇಷದಲ್ಲಿ ಗೊಂದಲ ಹಾಕುತ್ತಾರೆ.

ಗೊಂದಲದಲ್ಲಿ ಭಾಗವಹಿಸುವ ಮೂವರಲ್ಲೂ ಒಂದೊಂದು ವಾದ್ಯ ಇರುತ್ತದೆ. ಸಂಬಾಳ (ಜೋಡಿ ತಬಲ), ಚೌಡಿಕೆ ಹಾಗೂ ಪತ್ತ ಅಥವಾ ತಾಳ. ಪತ್ತ ಹಿಡಿಯುವವನೇ ಮುಖ್ಯ ಕಥೆಗಾರ. ಕೆಲವು ಸಲ ಪತ್ತ ಸಂಬಾಳಕ್ಕೆ ಸೇರಿಕೊಂಡಿರುತ್ತದೆ. ಆಗ ಮುಖ್ಯ ಕಥೆಗಾರನಿಗೆ ಕಥೆ ಹೇಳುವುದೊಂದೇ ಕೆಲಸ. ಗಣಪತಿ ಸ್ತೋತ್ರದಿಂದ ಗೊಂದಲ ಪ್ರಾರಂಭವಾಗುತ್ತದೆ. ದೇವೀಸ್ತೋತ್ರ ಅದನ್ನು ಅನುಸರಿಸುತ್ತದೆ. ಸ್ತೋತ್ರಗಳು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿರುತ್ತವೆ. ಸಂಬಾಳದ ಲಯಬದ್ಧವಾದ ಸದ್ದಿನೊಂದಿಗೆ ತಾಳಕ್ಕೆ ತಕ್ಕಂತೆ ಮೂವರು ವಿಶಿಷ್ಟ ರೀತಿಯಲ್ಲಿ ಮೈಮರೆತು ಕುಣಿಯುತ್ತಾರೆ. ಹಾಡಿನ ಚರಣದ ಕಡೆಯಲ್ಲಿ ಎಳೆಯುವ ದೀರ್ಘ ರಾಗಕ್ಕೆ ಮೂವರೂ ಶಕ್ತಿ ಮೀರಿದ ದನಿಯನ್ನು ಸೇರಿಸುವಾಗ ಚಲನೆ ಸ್ತಬ್ಧವಾಗುತ್ತದೆ. ಈ ಹೊತ್ತಿಗೆ ಅವರು ಯಾವುದೋ ಒಂದು ವಿಶಿಷ್ಟ ಭಂಗಿಯಲ್ಲಿ ನಿಂತಿರುತ್ತಾರೆ. ಆ ದನಿ ಮುಗಿದ ಅನಂತರ ಸಂಬಾಳದ ಎಚ್ಚರದೊಡನೆ ಕ್ರಮಬದ್ಧವಾಗಿ ಕುಣಿತ ಮತ್ತೆ ಪ್ರಾರಂಭವಾಗುತ್ತದೆ. ಸ್ತೋತ್ರಗಳು ಮುಗಿಯುತ್ತಿದ್ದಂತೆ ಚತುರ ಸಂಭಾಷಣೆಯ ಮೂಲಕ ಕಥೆ ಆರಂಭವಾಗಿ ಉದ್ದಕ್ಕೂ ನಾಟಕೀಯವಾಗಿಯೇ ಸಾಗುತ್ತದೆ. ಬೆಳಕು ಹರಿಸಲೇಬೇಕೆಂಬ ನಿಯಮವು ಇರುವುದರಿಂದ ಕಥೆಯ ಗಾತ್ರಕ್ಕೆ ತಕ್ಕಂತೆ ನಡುನಡುವೆ ಮನರಂಜನೆಗಾಗಿ ನೀತಿಯನ್ನು ಸಾರುವ ಲಾವಣಿಗಳನ್ನು ಹಾಡಲಾಗುತ್ತದೆ.

ಗೊಂದಲ ಹಾಕುವಾಗ ಹೇಳುವ ಕಥೆಗಳು, ಕಥೆಗಳಿಗೆ ಹೊಂದಿಕೊಂಡು ನಡು ನಡುವೆ ಬರುವ ಹಾಡುಗಳು, ಕೆಲವು ಲಾವಣಿಗಳು, ಮರಾಠಿಯಲ್ಲಿ ಮಾತ್ರ ಸಿಗುವ ಜೋಗುಳದ ಹಾಡುಗಳು, ಹೆಣ್ಣು ಮಕ್ಕಳು ಪಂಚಮಿಯಲ್ಲಿ ಹಾಡುವ ಹಾಡುಗಳು - ಇವನ್ನುಳಿದು ಇವರಲ್ಲಿ ಗಾದೆ, ಒಗಟು, ಶಿಶುಪ್ರಾಸ ಮುಂತಾದ ಯಾವುದೇ ಜನಪದ ಸಾಹಿತ್ಯ ದೊರೆಯುವುದಿಲ್ಲ.

ಗೊಂದಲಿಗರ ಕಥೆಗಳು ಸಾಮಾನ್ಯವಾಗಿ ಸಂಕೀರ್ಣ ಗುಣಗಳನ್ನೊಳಗೊಂಡಿದ್ದು, ಸಂಕೀರ್ಣ ಜನಪದ ಕಥೆಗಳ ವಿಭಾಗಕ್ಕೆ ಸೇರುವಂಥವು. ಬಿಜಾಪುರ ಜಿಲ್ಲೆಯಲ್ಲಿ ಸಂಗ್ರಹಿಸಲಾಗಿರುವ ಗೊಂದಲಿಗರ ಕಥೆಗಳು ಹಾಗೂ ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು ಎಂಬ ಎರಡು ಸಂಕಲನಗಳು ಕನ್ನಡದಲ್ಲಿ ಪ್ರಕಟವಾಗಿವೆ.

ಈಗ ಬಹುಪಾಲು ಗೊಂದಲಿಗರು ಅಲ್ಲಲ್ಲಿ ನೆಲೆ ನಿಂತಿದ್ದಾರೆ. ವ್ಯಾಪಾರ ಮತ್ತು ನೌಕರಿಗಳಲ್ಲಿ ಹೆಚ್ಚು ಜನ ತೊಡಗಿದ್ದಾರೆ. ಅಲ್ಲೊಬ್ಬರು ಇಲ್ಲೊಬ್ಬರು ಒಕ್ಕಲುತನ ಮಾಡುತ್ತಾರೆ. ಕೆಲವು ಮಂದಿ ಇನ್ನೂ ಭಿಕ್ಷಾಟನೆಯಲ್ಲಿ ಜೀವನ ಸಾಗಿಸುತ್ತಿದ್ದಾರೆ. (ಕೆ.ಆರ್.)

**ಗೊಂಬೆಗಳು :** ಆಟಿಕೆಗಳಲ್ಲಿ ಬಹು ಮುಖ್ಯವಾದ ಒಂದು ವಿಭಾಗ. ಗೊಂಬೆಗಳಲ್ಲಿ ಮನುಷ್ಯರ ಆಕೃತಿಗಳಂತೆ ಮೃಗ, ಪಕ್ಷಿ, ಗಿಡಮರಗಳ ಆಕೃತಿಗಳನ್ನೂ ಕಾಣಬಹುದು. ಜನಪದ ಸಾಹಿತ್ಯ ಮತ್ತು ವಸ್ತುಗಳ ಸಂಗ್ರಹ ಕಾರ್ಯ ನಡೆದಂತೆಲ್ಲ ಹಿಂದಿನ ಕಾಲದ ಆಟಿಕೆಗಳನ್ನು ಉತ್ಪನನ ಮಾಡಿ ವಸ್ತುಸಂಗ್ರಹಾಲಯಗಳಲ್ಲಿ ಕೂಡಿಡುತ್ತ ಬರಲಾಗಿದೆ.



ಯಕ್ಷಗಾನದ ಸೂತ್ರದ ಗೊಂಬೆಗಳು

ಗೊಂಬೆಗಳ ತಯಾರಿಕೆ ಭಾರತದ ಒಂದು ಪ್ರಾಚೀನ ಕೈಗಾರಿಕೆ ಎಂಬುದನ್ನು ಐತಿಹಾಸಿಕ ಸಂಶೋಧನೆಗಳು ತೋರಿಸಿಕೊಟ್ಟಿವೆ. ಇತಿಹಾಸ ಪೂರ್ವ ಯುಗಕ್ಕೆ ಸೇರಿದ ಹರಪ್ಪ, ಮೊಹೆಂಜೊದಾರೊಗಳಲ್ಲಿ ದೊರೆತಿರುವ ಆಟದ ಸಾಮಾನುಗಳಲ್ಲಿ ಗೊಂಬೆಗಳಿಗೆ ಒಂದು ವಿಶಿಷ್ಟ ಪ್ರಾಮುಖ್ಯವಿದೆ.

ಭಾರತದ ಸಂಸ್ಕೃತಿಯಲ್ಲಿ ಗೊಂಬೆಗಳಿಗೇ ಒಂದು ಪ್ರಮುಖ ಸ್ಥಾನವಿತ್ತು. ಪ್ರಾಚೀನ ಕಾಲದಲ್ಲಿಯೇ ಭಾರತೀಯರು ಒಂದು ಉನ್ನತ ಸಂಸ್ಕೃತಿಯನ್ನು ಬೆಳೆಸಿಕೊಂಡು ಕಲಾಪೂರ್ಣವಾದ ಜೀವನವನ್ನು ನಡೆಸಿದರು. ಆಧುನಿಕ ಕಾಲದಲ್ಲಿ ಊಹಿಸಲೂ ಆಗದಂಥ ಅದ್ಭುತ ಕಲೆಗಾರಿಕೆ ಆಗಿನ ಗೊಂಬೆಗಳಲ್ಲಿ ಕಾಣಬರುತ್ತದೆ.

ಕರ್ನಾಟಕದ ಜನಪದ ಕಲೆಗಳನ್ನು ತೆಗೆದುಕೊಂಡರೆ ಅಲ್ಲಿ ವಿಶಿಷ್ಟವಾದ ಗೊಂಬೆಗಳನ್ನು ಗಮನಿಸಬಹುದಾಗಿದೆ. ತೊಗಲು ಬೊಂಬೆಗಳು, ಸೂತ್ರದ ಗೊಂಬೆಗಳು, ಕೀಲುಗೊಂಬೆಗಳು - ಇವು ಮುಖ್ಯವಾದವು. ಕಿಳ್ಳೇಕ್ಯಾತರ ತೊಗಲ ಗೊಂಬೆಗಳ ಆಟ ಅತಿ ಪ್ರಾಚೀನ ಕಾಲದಿಂದ ಬೆಳೆದುಬಂದ ಕಲೆ. ಈ ಕಲೆ ಭಾರತದ ಒಳಗೂ ಹೊರಗೂ ಪ್ರಚಾರದಲ್ಲಿದೆ. ಇದು ಮಹಾರಾಷ್ಟ್ರದಲ್ಲಿ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ಅಲ್ಲಿಂದ ಇದು ಕರ್ನಾಟಕ, ಆಂಧ್ರದ ರಾಯಲಸೀಮೆ ಮತ್ತು ತಮಿಳುನಾಡುಗಳಿಗೆ ಪಸರಿಸಿತು.

ಈ ಗೊಂಬೆಗಳ ರಚನೆ ವಿಶಿಷ್ಟವಾದುದು. ಹುಲ್ಲೆಯ ಕರು ಇಲ್ಲವೆ ಎಳೆಯ ಆಡುಗಳ ಹದಮಾಡಿದ ಚರ್ಮದಿಂದ ಇವನ್ನು ಮಾಡುತ್ತಾರೆ. ಇವನ್ನು ಗೊಂಬೆರಾಮರು ಪೂಜಾವಸ್ತುಗಳೆಂದೇ ತಿಳಿದು ಪೂಜಿಸುತ್ತಾರೆ (ನೋಡಿ: ತೊಗಲು ಗೊಂಬೆ ಆಟ).

ಸೂತ್ರದ ಗೊಂಬೆ (ಪುತಲಿ ಗೊಂಬೆ) ಆಟವೂ ಬಹಳ ಹಿಂದಿನಿಂದಲೂ ಬೆಳೆದು ಬಂದ ಒಂದು ಅಪೂರ್ವ ಜನಪದ ಕಲೆ. ಈ

ಆಟ ತೊಗಲು ಗೊಂಬೆಯಾಟದಿಂದ ಕೆಲವು ರೀತಿಯಲ್ಲಿ ಬೇರೆಯಾಗಿದೆ. ಈ ಗೊಂಬೆಗಳು ಮರದಲ್ಲಿ ತಯಾರಾದವು (ನೋಡಿ: ಸೂತ್ರದ ಬೊಂಬೆಯಾಟ). ಪ್ರಪಂಚದ ಎಲ್ಲೆಡೆಯೂ ಸೂತ್ರದ ಬೊಂಬೆ ಆಟ ಇದ್ದಂತೆ ತೋರುತ್ತದೆ. ಗ್ರೀಕರು ಈ ಆಟಗಳಿಂದ ಮನರಂಜನೆ ಪಡೆಯುತ್ತಿದ್ದರು. ಚೀನ, ಇಂಗ್ಲೆಂಡ್‌ಗಳಲ್ಲೂ ಈ ಕಲೆ ಇತ್ತೆಂದು ಹೇಳಲಾಗಿದೆ. ಫ್ರಾನ್ಸ್‌ನಲ್ಲಿ ಈಗಲೂ ಈ ಆಟಗಳನ್ನು ನಡೆಸಲಾಗುತ್ತಿದೆ. ಅಮೆರಿಕ, ಲ್ಯಾಟಿನ್ ಅಮೆರಿಕ ಭಾಗಗಳಲ್ಲಿ ಇಟಲಿ ಜನ ಆಗಾಗ ಹೋಗಿ ಈ ಆಟ ಪ್ರದರ್ಶಿಸಿ ಬರುವುದುಂಟು. ಭಾರತದಲ್ಲಿ ಈ ಆಟಕ್ಕೆ ಹಿಂದಿದ್ದ ಪುರಸ್ಕಾರ ಈಗ ದೊರಕದ ಕಾರಣ ಈ ಕಲೆ ಕ್ಷೀಣ ದೆಸೆಯಲ್ಲಿದೆ.



ಚನ್ನಪಟ್ಟಣ್ಣದ ಗೊಂಬೆಗಳು

ಗೌರಿಗೊಂಬೆಗಳೂ ದಸರ ಗೊಂಬೆಗಳೂ ಭಾರತದಲ್ಲಿ ಈಗಲೂ ಅನೇಕ ನಗರಗಳ, ಪಟ್ಟಣಗಳ, ಗ್ರಾಮಗಳ ಮನೆಮನೆಗಳಲ್ಲಿ ಉಳಿದು ಬಂದಿವೆ. ಹಬ್ಬಗಳಲ್ಲಿ ಅವನ್ನು ಓರಣವಾಗಿ ಕೂರಿಸಿ ಪೂಜಿಸುವುದು ಮುಂದುವರಿದಿದೆ. ಈ ಗೊಂಬೆಗಳನ್ನು ಮರದ ಹೊಟ್ಟಿನಲ್ಲಿ ಇಲ್ಲವೆ ಜೇಡಿಮಣ್ಣಿನಿಂದ ಮಾಡಿರುತ್ತಾರೆ. ಚಂದನದ ಬೊಂಬೆಗಳೂ ಉಂಟು. ಈ ಗೊಂಬೆಗಳಿಗೆ ಬಟ್ಟೆ, ಆಭರಣಗಳನ್ನು ಜೋಡಿಸಿ ಅಲಂಕರಿಸಿ ಸುತ್ತಾರೆ. ದಸರೆಯ ಗೊಂಬೆ ಪ್ರದರ್ಶನ ಮನೆಯವರಿಗೊಂದು ಕಲಾ ಪ್ರದರ್ಶನಾವಕಾಶವನ್ನು ಒದಗಿಸುತ್ತದೆ. ಜೊತೆಗೆ ಗೊಂಬೆಗಳ ಎದುರು ಹೆಣ್ಣುಮಕ್ಕಳು ಕೋಲಾಟವಾಡುವ ಸಂಪ್ರದಾಯ ಹಿಂದಿನಿಂದ ನಡೆದು ಬಂದಿದೆ.

ಗ್ರಾಮಗಳಿಂದ ಗ್ರಾಮಗಳಿಗೆ ಸಾಗುವ ಮಾರಮ್ಮ, ಉಡುಗೋಲಜ್ಜಿಗಳ ಮರದ ವಿಗ್ರಹಗಳನ್ನು ಇಂದಿಗೂ ನೋಡಬಹುದಾಗಿದೆ. ಒಂದು ಊರಿನ ಗಡಿಯಿಂದ ಮತ್ತೊಂದು ಊರಿನ ಗಡಿಗೆ ಮಾರಮ್ಮನ ವಿಗ್ರಹವನ್ನು ಆಯಾ ಊರಿನ ಜನ ಸಾಗಿಸಿಕೊಂಡು ಹೋಗುತ್ತಾರೆ. ಹೀಗೆ ನೂರಾರು ಮೈಲಿಗಳ ಆಚೆ ಪ್ರಯಾಣ ಬೆಳೆಸಿ ಕೊನೆಗೆ ಸಮುದ್ರದಲ್ಲೊ ಕೆರೆಯಲ್ಲೊ ಅದನ್ನು ವಿಸರ್ಜನೆ ಮಾಡುತ್ತಾರೆ. ಊರಿಗೆ ಬರುವಂಥ ಪ್ಲೇಗು, ಕಾಲರ ಮುಂತಾದ ರೋಗ ರುಜಿನಗಳು ಸಾಮೂಹಿಕವಾಗಿ ಈ ದೇವತೆಯ ಮೂಲಕವಾಗಿ ಸಾಗಿ ಹೋಗಲಿ ಎಂಬರ್ಥದಲ್ಲಿ ಈ ದೈವವನ್ನು ರಚಿಸಿ, ಪೂಜಿಸಿ, ಸಾಗಿಸುವ ಜನಪದ ನಂಬಿಕೆ ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಬೆಳೆದು ಬಂದಿದೆ.

ಗ್ರಾಮಗಳ ದೇವಾಲಯಗಳಲ್ಲಿ ತಲೆಭೂತ ಕೈಭೂತ ಸೋಮ ಮುಂತಾದ ದೈವದ ಮೂರ್ತಿಗಳನ್ನು ಕಾಣಬಹುದಾಗಿದೆ. ಆಯಾ ಗ್ರಾಮಗಳಲ್ಲಿ ಇರುವ ಕುಶಲ ಕರ್ಮಿಗಳು ಇವನ್ನು ಬಹಳ ಕಲಾತ್ಮಕವಾಗಿ ರಚಿಸಿಕೊಡುತ್ತಾರೆ. ಸಿರಿಯಾಳ ಷಷ್ಠಿ, ಗೋಕುಲಾಷ್ಟಮಿ, ಗಣಪತಿ ಮಹೋತ್ಸವ ಮೊದಲಾದ ಹಬ್ಬಗಳಲ್ಲಿ ಮನೆಯವರೇ ಎರೆಯ ಮಣ್ಣಿನಿಂದ ಆಯಾ ವಿಗ್ರಹಗಳನ್ನು ಮಾಡುವ ಹವ್ಯಾಸ ಇನ್ನೂ ಅನೇಕ ಕಡೆ ಉಳಿದು ಬಂದಿದೆ. ರಥೋತ್ಸವ ಮತ್ತು ಜಾತ್ರೆಗಳ ಸಮಯದಲ್ಲಿ ಹಳ್ಳಿಯ ಕಸಬುದಾರರು ಬೊಂಬೆಗಳನ್ನು ಮಾಡಿ ಬಣ್ಣ ಕಟ್ಟಿ ಮಾರಾಟಕ್ಕೆ ಇಡುವುದನ್ನು ಇಲ್ಲಿ ನೆನೆಯಬಹುದು. ಬಹುಮಟ್ಟಿನ ಹಳ್ಳಿಯ ಮಕ್ಕಳಿಗೆ ಇಲ್ಲಿ ಸಿಗುವ ರಾಟೆ, ಕಿಸಗಾಲು ಗೊಂಬೆ, ಅಂಬೆಗಾಲು ಕೃಷ್ಣ, ಪೀಪಿ, ಕುದುರೆ, ಗಿಣಿ, ಗುಬ್ಬಿ, ರಾಜ, ರಾಣಿ - ಈ ವಸ್ತುಗಳೇ ಬಹು ಪ್ರಿಯವಾದ ಆಟದ ಸಾಮಾನುಗಳು.

ಈಚೆಗೆ ಬಿದಿರ ಬೊಂಬಿನಿಂದ, ಅರಗಿನಿಂದ, ಬಟ್ಟೆಗಳಿಂದ, ಕಪ್ಪೆಚಿಪ್ಪಿನಿಂದ ನಾನಾ ನಮೂನೆಯ ಗೊಂಬೆಗಳನ್ನು ರಚಿಸಲಾಗುತ್ತಿದೆ. ಭಾರತದ ಸರ್ಕಾರ ಈ ಗೊಂಬೆ ಕಲೆಯ ಉಳಿವಿಗೆ ಬಹಳ ಪ್ರೋತ್ಸಾಹ ನೀಡಿ ನೆರವಾಗುತ್ತಿದೆ.

ವಿಜ್ಞಾನ ಬೆಳೆದಂತೆಲ್ಲ ಕೈಕೆಲಸ ಹಿಂದಾಗಿ ಯಂತ್ರಗಳು ಪ್ರಾಮುಖ್ಯಕ್ಕೆ ಬರುತ್ತಿವೆಯಷ್ಟೆ. ಅದರ ಪರಿಣಾಮವಾಗಿ ಪ್ಲಾಸ್ಟಿಕ್, ರಬ್ಬರ್ ಮೊದಲಾದವನ್ನು ಬಳಸಿಕೊಂಡು ಯಂತ್ರದಿಂದ ತಯಾರಿಸಿದ ಬಹು ಮುದ್ದಾದ ಗೊಂಬೆಗಳು ಈಗ ಜನಪ್ರಿಯವಾಗುತ್ತಿವೆ. ಕರ್ನಾಟಕ ದಲ್ಲಿ ಚನ್ನಪಟ್ಟಣದ ಬೊಂಬೆಗಳು ಅತ್ಯಂತ ಪ್ರಸಿದ್ಧವಾಗಿವೆ. (ನೋಡಿ: ಚನ್ನಪಟ್ಟಣ). *

**ಗೊಗ್ಗಯ್ಯ :** ಉತ್ತರ ಕರ್ನಾಟಕದಲ್ಲಿ ಕಂಡುಬರುವ ಧಾರ್ಮಿಕ ವೃತ್ತಿಗಾಯಕರು. ಮೈಲಾರಲಿಂಗದೇವರ ಸೇವಕರು ಹಾಗೂ ಸಂನ್ಯಾಸಿಗಳು. ಬೆಳಗಾಂವಿ ಜಿಲ್ಲೆಯಲ್ಲಿ ಇವರನ್ನು ಒಗ್ಗಯ್ಯ (ವಗ್ಗಯ್ಯ) ಎಂದೂ ಧಾರವಾಡ ಜಿಲ್ಲೆಯಲ್ಲಿ ಗೊರವ, ಗೊರವಪ್ಪ, ಗೋರಪ್ಪ ಎಂದೂ ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಇವರನ್ನು ವಾಘ್ಯಾ - ಮುರಳಿ ಎಂದು ಕರೆಯುವರು. ಗೊಗ್ಗಯ್ಯ ಎಂಬ ಶಬ್ದ ಗುರು (ಗೊರವ) ಶಬ್ದದಿಂದ ಬಂದಿದ್ದು ಇದಕ್ಕೆ ಅರ್ಪಿಸಿಕೊಂಡವನು, ಜೀವದಾಸ ಎಂಬ ಅರ್ಥಗಳಿರುವಂತೆ ತಿಳಿಯುತ್ತದೆ.

ಕುರುಬ ಸಮುದಾಯದವರಲ್ಲಿ ಗೊಗ್ಗಯ್ಯಗಳು ಹೆಚ್ಚು. ಲಿಂಗಾಯತರು ಮತ್ತು ಕ್ಷತ್ರಿಯರಲ್ಲಿ ಗೊಗ್ಗಯ್ಯಗಳಿದ್ದರೂ ಇವರ ಸಂಖ್ಯೆ ಕಡಿಮೆ. ಪ್ರತಿಯೊಬ್ಬ ಗೊಗ್ಗಯ್ಯನೂ ದೀಕ್ಷೆ ಹೊಂದಿದವನಾಗಿರುತ್ತಾನೆ.

ಗೊಗ್ಗಯ್ಯಗಳ ಗುಂಪು

ಕೆಲವರು ಮಲ್ಲಾರಿಗೆ ಬೇಡಿಕೊಂಡು ಹೆತ್ತ ಹಿರಿಯ ಮಗನನ್ನು ಗೊಗ್ಗಯ್ಯನನ್ನಾಗಿ ಬಿಡುವುದುಂಟು. ಗೊಗ್ಗಯ್ಯಗಳಲ್ಲಿ ಸಂಸಾರಿಗಳೂ ಆಜನ್ಮಬ್ರಹ್ಮಚಾರಿಗಳೂ ಇದ್ದಾರೆ.

ಗೊಗ್ಗಯ್ಯಗಳಿಗೆ ವಿಶಿಷ್ಟವಾದ ವೇಷವಿದೆ. ಕರಿಯ ಕಂಬಳಿಯಿಂದ ಹೊಲೆದು ಮಾಡಿದ ಉದ್ದನೆಯ ತೋಳುಗಳುಳ್ಳ ನಿಲುವಂಗಿ ತೊಡುತ್ತಾರೆ. ಈ ನಿಲುವಂಗಿಯ ಎದೆ ಮತ್ತು ಬೆನ್ನ ಮೇಲೆ ಸೂರ್ಯಚಂದ್ರರ ಹಾಗೂ ತಾರೆಗಳ ಚಿತ್ರಗಳನ್ನು ಕಲಾತ್ಮಕವಾಗಿ ಬಿಡಿಸಿರುತ್ತಾರೆ. ಕೊರಳಲ್ಲಿ ತೂಗುಹಾಕಿಕೊಳ್ಳಲು ಸಹಾಯಕವಾಗುವಂತೆ ಹುಲಿಯ ಚರ್ಮದಿಂದ ಮಾಡಿದ ಭಂಡಾರದ ಚೀಲವಿರುತ್ತದೆ. ಕೆಲವರು ಕೊರಳಿಗೆ ಕವಡೆಯ ಸರವನ್ನು ತೂಗುಹಾಕಿಕೊಂಡಿರುವುದುಂಟು. ಜೊತೆಗೆ ಕಂಚಿನ ದೋಣಿಯನ್ನೂ (ಭಿಕ್ಷಾಪಾತ್ರೆ) ಬಗಲಿಗೆ ತೂಗುಹಾಕಿಕೊಂಡಿರುತ್ತಾರೆ (ಎಲ್ಲಿಯೇ ಹೋದರೂ ಇವರಿಗೆ ಈ ದೋಣಿಯಲ್ಲೆ ಊಟ ಆಗಬೇಕು). ಇವುಗಳ ಜೊತೆಗೆ ಧೋತರ, ಉದ್ದನೆಯ ಒಳಅಂಗಿ, ತಲೆಗೆ ರುಮಾಲು, ಅದರ ಮೇಲೆ ಉಣ್ಣೆಯ ಸಣ್ಣ ಪೇಟಾ ಇರುತ್ತವೆ. ಹಣೆಗೆ ಸದಾ ಭಂಡಾರ ಹಚ್ಚಿರುತ್ತಾರೆ. ಕೈಯಲ್ಲಿ ಗಂಟೆ, ತ್ರಿಶೂಲ, ದೀವಟಿಗೆ, ಸರ್ಪದ ಆಕಾರದ ಕಟ್ಟಿಗೆ (ಕೋಲು) ಹಿಡಿಯುವುದುಂಟು. ಭಿಕ್ಷಾಟನೆಯ ವೇಳೆಯಲ್ಲಿ ಇವರು ಕಾಲಲ್ಲಿ ಏನನ್ನೂ ಮೆಟ್ಟುವುದಿಲ್ಲ. ಈ ವೇಳೆಯಲ್ಲಿ ಭಿಕ್ಷಾಟನೆಯೊಂದಿಗೆ ಶಿವನ ಅವತಾರ ಹೇಳುವುದು, ಹಾಡು ಹಾಡುವುದು, ಹರತ್ ಮಲ್ಲಯ್ಯ ಪರುತ್ ಮಲ್ಲಯ್ಯ ಎಂದು ಕೂಗುವುದು ಮೈಲಾರ, ಮೈಲಾರಲಿಂಗ, ಮೈಲಾರದೇವರು, ಮಲ್ಲಾರಿ, ಮಾರ್ತಾಂಡ, ಭೈರವ, ಖಂಡೋಬಾ, ಮಲ್ಲಿಕಾರ್ಜುನ, ಮುಂತಾದ ಹೆಸರುಗಳಿಂದ ಸ್ತುತಿಸುವುದು - ಈ ಮುಂತಾದ ಕಾರ್ಯ ನಡೆಯುತ್ತದೆ.

ಮಲ್ಲಾಸುರನನ್ನು ಕೊಂದು ಶಿವ ಮಲ್ಲಾರಿಯಾದುದು ಗೊಗ್ಗಯ್ಯಗಳು ಹೇಳುವ ಮತ್ತು ಹಾಡುವ ಮುಖ್ಯ ಕಥೆ. ಹಾಡುವುದಲ್ಲದೆ ಇವರು ಮಲ್ಲಯ್ಯನ ನೃತ್ಯ ಎಂಬ ಒಂದು ಬಗೆಯ ನೃತ್ಯವನ್ನೂ ಮಾಡುತ್ತಾರೆ. ಇದು ಶಿವನ ತಾಂಡವನೃತ್ಯದಂತೆ ರೌದ್ರವಾಗಿರುತ್ತದೆ. ಕೆಲವು ಕಡೆ ಈ ನೃತ್ಯವನ್ನು ಒಗ್ಗಯ್ಯಗಳ ಕಾದಾಟ ಎಂದು ಕರೆಯುತ್ತಾರೆ. ಕಾದಾಟದಲ್ಲಿ ಏಳಕೋಟಿ ಏಳಕೋಟಿ ಎಂಬ ಧ್ವನಿಯನ್ನು ಮಾಡಿ ಗೊಗ್ಗಯ್ಯಗಳು ಹಾಡುವುದು ಕೂಗುವುದು ಉಂಟು. ನೃತ್ಯದ ಮಧ್ಯದಲ್ಲಿ ವೀರಾವೇಶದಿಂದ ಕಬ್ಬಿಣದ ಸರಪಳಿಯನ್ನು ಹರಿಯುತ್ತಾರೆ; ಮತ್ತೆ ಅದನ್ನು ಕೂಡಿಸುತ್ತಾರೆ. ಮದುವೆ ಹಾಗೂ ಇನ್ನಿತರ ಮಂಗಳಕಾರ್ಯಗಳಲ್ಲಿ ರಾತ್ರಿ ವೇಳೆ ಈ ನೃತ್ಯದ ಏರ್ಪಾಟಿರುತ್ತದೆ. ಇಂಥ ಪ್ರದರ್ಶನಗಳಿಂದ ಗೊಗ್ಗಯ್ಯಗಳಿಗೆ ಹೆಚ್ಚಿನ ಕಾಣಿಕೆ ದೊರೆಯುತ್ತದೆ.

ಮಲ್ಲಾರಿಯ ಕ್ಷೇತ್ರಕ್ಕೆ ಮೈಲಾರ ಕ್ಷೇತ್ರವೆಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಆನೆಗೊಂದಿ (ಕೊಪ್ಪಳ ಜಿಲ್ಲೆ), ಕಾರಿಮನಿ, ಮಂಗಸೂಳಿ (ಬೆಳಗಾಂವಿ ಜಿಲ್ಲೆ), ಕುಬಟೂರು (ಶಿವಮೊಗ್ಗ ಜಿಲ್ಲೆ), ದೇವರಗುಡ್ಡ (ಹಾವೇರಿ ಜಿಲ್ಲೆ), ಮೈಲಾರಲಿಂಗ (ದೇವೀಹೊಸೂರ), ಮೈಲಾರ (ಬಳ್ಳಾರಿ ಜಿಲ್ಲೆ), ಮೈಲಾಪುರ (ಬೀದರ್ ಜಿಲ್ಲೆ) ಮುಂತಾದ ಕಡೆಗಳಲ್ಲಿ ಇಂಥ ಕ್ಷೇತ್ರಗಳಿವೆ. ಪ್ರತಿ ಕ್ಷೇತ್ರದಲ್ಲೂ ಗೊಗ್ಗಯ್ಯಗಳಿದ್ದಾರೆ. ಇವರಿಗೆ ಆಯಾ ಕ್ಷೇತ್ರದಲ್ಲಿ ನಿಶ್ಚಿತವಾದ ಊರುಗಳನ್ನೂ ಮನೆತನಗಳನ್ನೂ ಗೊತ್ತುಮಾಡಿರುತ್ತಾರೆ. ಪ್ರತಿವರ್ಷ ಆಯಾ ಊರು ಮನೆಗಳಿಗೆ ಹೋಗಿ ಗೊಗ್ಗಯ್ಯಗಳು ಭಿಕ್ಷೆ ತರುತ್ತಾರೆ. (ಎನ್.ಎನ್.ಎಸ್.)

**ಗೊಮ್ಮಟೇಶ್ವರ :** ಆದಿತೀರ್ಥಂಕರ ವೃಷಭನಾಥನ (ಪುರದೇವ) ಕಿರಿಯ ಮಗ. ಭರತನ ತಮ್ಮ. ಬಾಹುಬಲಿ ಪರ್ಯಾಯನಾಮ. ಭುಜಬಲಿ, ಕುಕ್ಕುಟೇಶ್ವರ ಇತರ ಹೆಸರುಗಳು.

ಬಾಹುಬಲಿಯ ಬಗ್ಗೆ ಜೈನ ಪರಂಪರೆಯಲ್ಲಿ ಬರುವ ಕಥೆ ಈ ರೀತಿ ಇದೆ. ಆದಿತೀರ್ಥಂಕರ ಸಂಸಾರದ ಅಸಾರತೆಯನ್ನು ಕಂಡು ತಪಸ್ಸಿಗೆ ಹೊರಡುವ ಮುನ್ನ ಹಿರಿಯ ಮಗ ಭರತನಿಗೆ ರಾಜ್ಯಾಭಿಷೇಕಮಾಡಿ ಬಾಹುಬಲಿ ಮತ್ತು ಅವನ ತಮ್ಮಂದಿರಿಗೆ ಬೇರೆ ಬೇರೆ ರಾಜ್ಯಗಳನ್ನು ಕೊಟ್ಟ. ಬಾಹುಬಲಿಗೆ ಪೌದನಪುರದ ರಾಜ್ಯ ಪ್ರಾಪ್ತವಾಯಿತು. ಹೀಗಿರುವಲ್ಲಿ ಭರತ ತನ್ನ ಭಂಡಾರದಲ್ಲಿ ಉದಯಿಸಿದ ಚಕ್ರರತ್ನವನ್ನು ಮುಂದಿಟ್ಟುಕೊಂಡು ಸಮಸ್ತ ಭೂಮಂಡಲವನ್ನೂ ಗೆದ್ದು ಚಕ್ರವರ್ತಿಯಾಗಿ ಹಿಂದಿರುಗಿದಾಗ ಅವನ ತಮ್ಮಂದಿರೇ ಅವನಿಗೆ ಇನ್ನೂ ವಶವಾಗದುದನ್ನು ಕಂಡು ಅವರಿಗೆ ನಿರೂಪವನ್ನು ಕಳುಹಿಸಿದ. ಆದರೆ ಅವರೆಲ್ಲರೂ ಅವನಿಗೆ ವಶವಾಗದೆ ರಾಜ್ಯವನ್ನು ಬಿಟ್ಟು ತಪೋನಿರತರಾದರು. ಸ್ವಾಭಿಮಾನಿಯಾದ ಬಾಹುಬಲಿಯಾದರೋ ತಂದೆ ಕೊಟ್ಟ ರಾಜ್ಯದಲ್ಲಿ ತಾನಿರುವುದಾದ್ದರಿಂದ ಭರತ ಯುದ್ಧದಲ್ಲಿ ಸೋಲಿಸಿ ಬೇಕಾದರೆ ಆ ರಾಜ್ಯವನ್ನು ಪಡೆದುಕೊಳ್ಳಬಹುದೆಂದು ತಿಳಿಸಿದ. ಅಂತೆಯೇ ಇಬ್ಬರಿಗೂ ದ್ವಂದ್ವಯುದ್ಧ ನಡೆದು, ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧ ಈ ಮೂರರಲ್ಲಿಯೂ ಬಾಹುಬಲಿಯೇ ಗೆದ್ದ.

ಶ್ರವಣಬೆಳಗೊಳದ ಗೊಮ್ಮಟೇಶ್ವರ

ಇದರಿಂದ ಕುಪಿತನಾದ ಭರತ ನ್ಯಾಯಾನ್ಯಾಯವನ್ನು ವಿವೇಚಿಸದೆ ಬಾಹುಬಲಿಯ ಮೇಲೆ ಚಕ್ರರತ್ನವನ್ನು ಪ್ರಯೋಗಿಸಿದ. ಆದರೆ ಬಾಹುಬಲಿಗೆ ಇದರಿಂದ ಏನೂ ಆಗಲಿಲ್ಲ. ಕೊನೆಗೆ ಭರತ ಸೋತ. ಬಾಹುಬಲಿ ಗೆದ್ದರೂ ತನ್ನ ಅಣ್ಣನನ್ನು ಸೋಲಿಸಿ ರಾಜ್ಯವನ್ನು ಆಕ್ರಮಿಸಿಕೊಳ್ಳುವುದಕ್ಕಿಂತ ಸಂಸಾರವನ್ನು ತ್ಯಜಿಸುವುದು ಲೇಸೆಂದು ಬಗೆದು ತಾನು ಆಗತಾನೇ ಗೆದ್ದಿದ್ದ ಚಕ್ರಾಧಿಪತ್ಯವನ್ನೂ ತನ್ನ ರಾಜ್ಯವನ್ನೂ ಭರತನಿಗೊಪ್ಪಿಸಿ ಘೋರವಾದ ತಪಸ್ಸಿನಲ್ಲಿ ನಿರತನಾದ. ಹೀಗೆ ನಿಶ್ಚಲನಾಗಿ ಪ್ರತಿಮಾಯೋಗದಿಂದ ಕಠಿಣ ತಪೋನಿರತನಾಗಿ ನಿಂತ ಬಾಹುಬಲಿಯ ಸುತ್ತಲೂ ಹುತ್ತ ಬೆಳೆದು ಬಳ್ಳಿಗಳು ಇವನ ದೇಹವನ್ನು ಆವರಿಸಿದುವು. ಕುಕ್ಕುಟ ಸರ್ಪಗಳು ಹರಿದಾಡಲಾರಂಭಿಸಿದವು. ತಾನು ಕೊಟ್ಟ ಭೂಮಿಯಲ್ಲಿಯೇ ತಪಸ್ಸಿಗೆ ನಿಲ್ಲಬೇಕಾಯಿತಲ್ಲ ಎನ್ನುವ ಒಂದು ಅಭಿಮಾನ ಅವನಲ್ಲಿ ಬಾಧಿಸುತ್ತಿದ್ದುದರಿಂದ ಇಷ್ಟು ಘೋರ ತಪಸ್ಸಿನಲ್ಲಿದ್ದರೂ ಬಾಹುಬಲಿಗೆ ಕೇವಲಜ್ಞಾನ ಲಭಿಸಲಿಲ್ಲ. ಅನಂತರ ಭರತನೇ ಅವನ ಕಾಲಿಗೆರಗಿ ಆ ಮನಃ ಕಷಾಯವನ್ನು ಬಿಡುವಂತೆ ಬೇಡಿಕೊಂಡಾಗ ಕೇವಲಜ್ಞಾನ ಉಂಟಾಯಿತು. ಕೇವಲಿಯಾದ ಈತನ ಪ್ರತಿಮೆಯನ್ನು ಭರತ ಪೌದನಪುರದಲ್ಲಿ ಪ್ರತಿಷ್ಠಾಪಿಸಿದ.

ಬಾಹುಬಲಿಯ ಕಲ್ಪನೆ ಕರ್ನಾಟಕದಲ್ಲಿ ಬಹು ಜನಪ್ರಿಯವಾಗಿದೆ. ಅನೇಕ ಜೈನಕವಿಗಳು ಈ ಕಥೆಯನ್ನೂ ಬಾಹುಬಲಿಯದೆ ಹಿರಿಯ

ಗುಣಗಳನ್ನೂ ತಮ್ಮ ಕೃತಿಗಳಲ್ಲಿ ಅಳವಡಿಸಿದ್ದಾರೆ. ಇವನ ಅತಿಶಯವಾದ ಗುಣಗಳನ್ನು ಕವಿ ಬೊಪ್ಪಣ ಪಂಡಿತ ಹೀಗೆ ವರ್ಣಿಸಿದ್ದಾನೆ:

ಅನುಪಮರೂಪನೇ ಸ್ಮರನುದಗ್ರನೆ ನಿರ್ಜಿತಚಕ್ರಿ ಮತ್ತುದಾ
ರನೆ ನೆಲೆಗೆಲ್ದುಮಿತ್ತನಖಿಳೋರ್ವಿಯನತ್ಯಭಿಮಾನಿಯೇ ತಪಃ
ಸ್ಥನುಮೆರಡಂಘ್ರಿಯಿತ್ತೆಳೆಯೊಳಿರ್ದಪುದೆಂಬನನೂನಬೋಧನೇ
ವಿನಿಹತಕರ್ಮಬಂಧನನೆ ಬಾಹುಬಲೀಶನಿದೇನುದಾತ್ತನೋ

ಬಾಹುಬಲಿಗಿರುವ ಗೊಮ್ಮಟೇಶ್ವರ ಎಂಬ ಪರ್ಯಾಯ ನಾಮವೂ ಕರ್ನಾಟಕದ ಕಾಣಿಕೆಯೆಂದೇ ಕಾಣುತ್ತದೆ. ಗೊಮ್ಮಟ ಎಂದರೆ ಸುಂದರ ಎಂದು ಅರ್ಥ. ಸುಂದರಕಾಯನಾಗಿದ್ದ ಬಾಹುಬಲಿಗೆ ಮನ್ಮಥ ಎಂಬ ಹೆಸರೂ ಇತ್ತು. ಮನ್ಮಥ ಎಂಬ ಪದದ ತದ್ಭವವೇ ಗೊಮ್ಮಟ ಎಂದು ಒಂದು ಅಭಿಪ್ರಾಯ. ಶ್ರವಣಬೆಳಗೊಳದ ಮೂರ್ತಿಯ ನಿರ್ಮಾಣದ ಕಾಲಕ್ಕಿಂತ ಮುಂಚೆ ಬಾಹುಬಲಿಗೆ ಎಲ್ಲಿಯೂ ಗೊಮ್ಮಟನೆಂಬ ಹೆಸರು ಕಾಣಿಸದೆಂದೂ ಶ್ರವಣಬೆಳಗೊಳದ ಮೂರ್ತಿಯ ನಿರ್ಮಾಣಕ್ಕೆ ಕಾರಣನಾದ ಚಾಮುಂಡರಾಯನಿಗೆ ಗೊಮ್ಮಟನೆಂಬ ಹೆಸರಿದ್ದು ಆತ ಪ್ರತಿಷ್ಠಾಪಿಸಿದ ಬಾಹುಬಲಿ ಮೂರ್ತಿಗೆ ಗೊಮ್ಮಟೇಶ್ವರನೆಂಬ ಹೆಸರು ಅನಂತರ ಬಂದಿದೆ ಎಂಬುದು ಇನ್ನೊಂದು ಅಭಿಪ್ರಾಯ. ಅದು ಹೇಗಿದ್ದರೂ ಬಾಹುಬಲಿಯ ಮೂರ್ತಿಗಳು ಎಲ್ಲಿದ್ದರೂ ಅವಕ್ಕೆಲ್ಲ ಈಗ ಗೊಮ್ಮಟೇಶ್ವರ ಎಂಬ ಹೆಸರೇ ಸಿದ್ಧವಾಗಿದೆ.

ಗೊಮ್ಮಟೇಶ್ವರನ ಮೂರ್ತಿಗಳನ್ನು ಸ್ಥಾಪಿಸುವುದರಲ್ಲಿ ಕರ್ನಾಟಕ ಹೆಚ್ಚು ಉತ್ಸುಕತೆಯನ್ನು ತೋರಿದೆ. ಉತ್ತರ ಭಾರತ ಮತ್ತಿತರೆಡೆಗಳಲ್ಲಿ ಬಾಹುಬಲಿಯ ಮೂರ್ತಿ ಗವಿಗಳಲ್ಲೋ ಬಸದಿಗಳಲ್ಲೋ ಹಲವು ಶಿಲ್ಪಗಳ ಜೊತೆಯಲ್ಲಿ ಸಾಮಾನ್ಯ ರೀತಿಯಲ್ಲಿ ಅಲ್ಪಸಂಖ್ಯೆಯಲ್ಲಿ ಕಂಡುಬಂದರೆ ಕರ್ನಾಟಕದಲ್ಲಿ ಇದರ ನಿರೂಪಣೆ ಗಮನಾರ್ಹ ರೀತಿಯಲ್ಲಿ ಕಾಣುತ್ತದೆ. ಬೆಟ್ಟಗಳ ಮೇಲೆ ಎತ್ತರದ ಗೊಮ್ಮಟೇಶ್ವರ ವಿಗ್ರಹಗಳನ್ನು ಸ್ಥಾಪಿಸಿರುವುದಂತೂ ಕರ್ನಾಟಕದ ಒಂದು ವೈಶಿಷ್ಟ್ಯ.

ಬಾಹುಬಲಿ ಮೂರ್ತಿಯ ಪ್ರತಿಷ್ಠಾಪನೆಯ ಮೊದಲ ಉಲ್ಲೇಖ ಕದಂಬ ರವಿವರ್ಮನ ಗುಡ್ನಾಪುರ ಶಾಸನದಲ್ಲಿದೆ (ಸು.500). ಆ ಶಾಸನದಲ್ಲಿ ಗೊಮ್ಮಟೇಶ್ವರ ಎಂಬ ಹೆಸರಿಲ್ಲ. ಆದರೆ ಅದು ಮನ್ಮಥ'ದೇವಾಲಯದ ಸ್ಥಾಪನೆಯನ್ನು ತಿಳಿಸಿ ಮುಂದೆ ಅದನ್ನೇ ಕಾಮಜಿನಾಲಯ ಎಂದು ಕರೆಯಲಾಗಿರುವುದರಿಂದ ಅದು ಗೊಮ್ಮಟನ ದೇವಾಲಯವಿರಬೇಕೆಂಬ ಸೂಚನೆಯಿದೆ.

ಭಾರತದಲ್ಲಿ ಇದುವರೆಗೆ ಗುರುತಿಸಲಾಗಿರುವ ಗೊಮ್ಮಟ ವಿಗ್ರಹಗಳಲ್ಲಿ ಅತಿ ಪ್ರಾಚೀನವಾದ ವಿಗ್ರಹ ಕಂಡುಬಂದಿರುವುದು ಕರ್ನಾಟಕದಲ್ಲಿಯೇ. ಈ ವಿಗ್ರಹ ಬಾದಾಮಿಯಲ್ಲಿದೆ. ಅಲ್ಲಿನ ಜೈನ ಗುಹೆಯಲ್ಲಿ ಗುಹೆಯ ಪಡಸಾಲೆಯಲ್ಲಿ ಎಡಗಡೆ ಉಬ್ಬುಶಿಲ್ಪವಾಗಿ ಕೆತ್ತಲಾಗಿದೆ. ಇದು ಬಾದಾಮಿಯ ಚಳುಕ್ಯರ ಕಾಲದ ಶಿಲ್ಪ. ನಿರ್ಮಾಣದ ಕಾಲ ಸು.7ನೆಯ ಶತಮಾನದ ಆದಿಭಾಗ. ಸು.7.5' ಎತ್ತರವಿರುವ ಕಾಯೋತ್ಸರ್ಗ ಭಂಗಿಯಲ್ಲಿರುವ ವಿಗ್ರಹದ ಪಾದದ ಬಳಿಯಲ್ಲಿ ಹಾವುಗಳು ಹರಿದಾಡುತ್ತಿರುವ ಹುತ್ತವನ್ನು ಬಿಡಿಸಲಾಗಿದೆ. ಮಾಧವೀಲತೆಗಳು ಕೈಕಾಲುಗಳನ್ನು ಸುತ್ತಿಕೊಂಡಿವೆ. ತಲೆಗೂದಲು ಭುಜದ ವರೆಗೂ ಇಳಿದಂತಿರುವುದು ಈ ಶಿಲ್ಪದ ಗಮನಾರ್ಹ ಅಂಶ. ಕಾಲಾನುಕ್ರಮದಲ್ಲಿ ಮುಂದಿನದು ಐಹೊಳೆಯ ಮೇಣಬಸದಿಯಲ್ಲಿದೆ. ಇದರ ಕಾಲ ಸು.7ನೆಯ ಶತಮಾನದ ಮಧ್ಯಭಾಗ. ಇದೂ ಕಾಯೋತ್ಸರ್ಗ ಭಂಗಿಯಲ್ಲಿದ್ದು ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟಿದೆ. ಕಾಲುಗಳ ಬಳಿಯಲ್ಲಿ ಸರ್ಪಗಳಿವೆ. ಮೂರ್ತಿಯ ಅಕ್ಕಪಕ್ಕದಲ್ಲಿ ಸರ್ವಾಲಂಕಾರಭೂಷಿತ ಸ್ತ್ರೀಯರಿಬ್ಬರು ಬಳ್ಳಿಗಳನ್ನು ಹಿಡಿದುಕೊಂಡಿದ್ದಾರೆ. ಇವರನ್ನು ಬಾಹುಬಲಿಯ ಸೋದರಿಯರೆಂದು ಊಹಿಸಲಾಗಿದೆ.

ಸು.9ನೆಯ ಶತಮಾನದಲ್ಲಿ ಬಹುಶಃ ಅಮೋಘವರ್ಷ ನೃಪತುಂಗನ ಆಳಿಕೆಯಲ್ಲಿ ಕೊರೆಯಿಸಲಾದ ಎಲ್ಲೋರದ ಎಲ್ಲ ಜೈನಗುಹೆಗಳಲ್ಲೂ ಗೊಮ್ಮಟೇಶ್ವರನ ವಿಗ್ರಹಗಳು ಕಂಡುಬರುತ್ತವೆ. ಇಲ್ಲಿನ ವಿಶೇಷವೆಂದರೆ ಒಂದು ಪಕ್ಕದಲ್ಲಿ ಗೊಮ್ಮಟಮೂರ್ತಿ ಇದ್ದರೆ ಮತ್ತೊಂದು ಪಕ್ಕದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯಿರುವುದು. ಈ ಸಂಪ್ರದಾಯವನ್ನು ಬಾದಾಮಿಯ ಜೈನಗುಹೆಯಲ್ಲೇ ಕಾಣಬಹುದು. ಚಿಕ್ಕ ಕೈಲಾಸವೆಂದು ಪ್ರಸಿದ್ಧವಾಗಿರುವ 30ನೆಯ ಗುಹೆಯಲ್ಲಿ ಎರಡು ಗೊಮ್ಮಟ ವಿಗ್ರಹಗಳಿವೆ. 31ನೆಯ ಗುಹೆಯ ಪಡಸಾಲೆಯ ಬಲಭಾಗದ ಗೋಡೆಯಲ್ಲೊಂದು ಗೊಮ್ಮಟೇಶ್ವರ ಮೂರ್ತಿಯನ್ನು ಬಿಡಿಸಲಾಗಿದೆ.

ವೇಣೂರಿನ ಗೊಮ್ಮಟೇಶ್ವರ

ಇಲ್ಲಿ ಮೂರ್ತಿಯ ಬಲಗಡೆ ಆಕಾಶದಲ್ಲಿ ಗಂಧರ್ವನೊಬ್ಬ ಹಾರವನ್ನು ಹಿಡಿದಿದ್ದಾನೆ. ಎಡಗಡೆ ಆಕಾಶದಲ್ಲಿ ದಂಪತಿಗಳು ಮತ್ತು ಹಾರ ಹಿಡಿದಿರುವ ಗಂಧರ್ವರನ್ನು ಕೊರೆಯಲಾಗಿದೆ. ಮೂರ್ತಿಯ ಸಮೀಪದಲ್ಲಿ ಸ್ತ್ರೀಯರಿಬ್ಬರು ನಮಸ್ಕಾರ ಮುದ್ರೆಯಲ್ಲಿ ಕಾಣುತ್ತಾರೆ. ಇಂದ್ರಸಭೆಯೆಂದು ಪ್ರಖ್ಯಾತವಾಗಿರುವ 32ನೆಯ ಗುಹೆಯಲ್ಲಿ ಆರು ಗೊಮ್ಮಟಮೂರ್ತಿಗಳು ಇವೆ. ಎಲ್ಲೋರದಲ್ಲಿರುವ ಗೊಮ್ಮಟ ಮೂರ್ತಿಗಳಲ್ಲೆಲ್ಲಾ ಅತ್ಯಂತ ಸುಂದರವೂ ಗಮನಾರ್ಹವೂ ಆದ ಒಂದು ಮೂರ್ತಿ ಈ ಗುಹೆಯಲ್ಲಿದೆ. ಮೂರ್ತಿಯ ದೇಹ ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟಿದೆ. ಸುತ್ತಮುತ್ತ ಸಕಲಜೀವರಾಶಿಗಳು ಕಂಡುಬರುತ್ತವೆ. ಇವುಗಳಲ್ಲಿ ಜಿಂಕೆ ಸರ್ಪ ಇಲಿ ಚೇಳುಗಳೆ ಅಲ್ಲದೆ ನಾಯಿಯೊಂದನ್ನು ಸ್ಪಷ್ಟವಾಗಿ ಗುರುತಿಸಬಹುದು. ಬಲಭಾಗದಲ್ಲಿ ಪುರುಷನೊಬ್ಬನಿದ್ದಾನೆ. ಅಕ್ಕಪಕ್ಕದಲ್ಲಿ ಸ್ತ್ರೀಯರಿಬ್ಬರ ಪ್ರತಿಮೆಗಳನ್ನು ಕಾಣಬಹುದು. ಪುರುಷ ಪ್ರತಿಮೆ ಅಣ್ಣನಾದ ಭರತನೆಂದೂ ಸ್ತ್ರೀಯರ ಪ್ರತಿಮೆಗಳು ಸಹೋದರಿಯರಾದ ಬ್ರಾಹ್ಮೀ ಮತ್ತು ಸುಂದರಿಯರೆಂದೂ ಅರ್ಥೈಸಲಾಗಿದೆ. ಇದು ಮನಃಕಷಾಯವನ್ನು ಬಿಡು ಎಂದು ಬಾಹುಬಲಿಯನ್ನು ಪ್ರಾರ್ಥಿಸುವ ಸಂದರ್ಭವನ್ನು ಚೆನ್ನಾಗಿ ಹೋಲುತ್ತದೆ. 33ನೆಯ ಗುಹೆಯಲ್ಲಿ ಎರಡು, 34ನೆಯ ಗುಹೆಯಲ್ಲಿ ಒಂದು ಗೊಮ್ಮಟಮೂರ್ತಿಯಿದೆ. ಹೀಗೆ ಎಲ್ಲೋರದ ಗುಹೆಗಳಲ್ಲಿ ಸುಮಾರು ಹನ್ನೆರಡು ಗೊಮ್ಮಟಮೂರ್ತಿಗಳು ಕಂಡುಬರುತ್ತವೆ. ವಿಗ್ರಹಗಳನ್ನು

ಶಿಲಾಭಿತ್ತಿಯಲ್ಲಿ ಕೊರೆದಿರುವುದರಿಂದ ಅದೇ ಭಿತ್ತಿಯಲ್ಲಿ ಆಕಾಶದಲ್ಲಿ ಗಂಧರ್ವರು ಹಾರವನ್ನು ಹಿಡಿದಿರುವುದನ್ನು ತೋರಿಸಿರುವುದು, ಗುಂಗುರು ಗುಂಗುರಾದ ತಲೆಗೂದಲು ಕೆಲವು ವಿಗ್ರಹಗಳಲ್ಲಿ ಭುಜದವರೆಗೂ ಇನ್ನು ಕೆಲವು ಕಡೆ ಮುಂಭಾಗದಲ್ಲಿ ಭುಜದಿಂದ ಇಳಿದು ಕಂಕುಳ ಹತ್ತಿರದವರೆಗೂ ಇರುವಂತೆ ತೋರಿಸುವುದು, ಗೊಮ್ಮಟನ ಅಕ್ಕಪಕ್ಕದಲ್ಲಿ ಸ್ತ್ರೀಯರಿಬ್ಬರು ಮತ್ತು ಮುಂಭಾಗದಲ್ಲಿ ಪುರುಷ ಇರುವಂತೆ ಕೆತ್ತಿರುವುದು ಈ ಎಲ್ಲೋರಾದ ಗೊಮ್ಮಟ ವಿಗ್ರಹಗಳ ವೈಶಿಷ್ಟ್ಯಗಳು.

ಶ್ರವಣಬೆಳಗೊಳದ ಗೊಮ್ಮಟ ವಿಗ್ರಹ ಲೋಕಪ್ರಸಿದ್ಧವಾಗಿದೆ. ಇದು ವಿಶ್ವದ ಶಿಲ್ಪಕಲೆಗೆ ಕರ್ನಾಟಕದ ಅನುಪಮ ಕಾಣಿಕೆ. ಪ್ರಾಚೀನ ಶಿಲ್ಪಗಳಲ್ಲಿ ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಏಕಶಿಲಾ ಪೂರ್ಣಶಿಲ್ಪ. ಬೆಟ್ಟದ ತುದಿಯಲ್ಲಿ ಎದ್ದುನಿಂತಿದ್ದ ಕೋಡುಗಲ್ಲಿನಿಂದ ಈ ವಿಗ್ರಹವನ್ನು ಕೆತ್ತಲಾಗಿರುವುದು ಈ ವಿಗ್ರಹದ ವಿಶೇಷ. ಈ ವಿಗ್ರಹದ ಎತ್ತರದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿದ್ದುವು. ಈಚೆಗೆ ಅಳತೆ ಮಾಡಿರುವ ಪ್ರಕಾರ ಇದರ ಪ್ರಮಾಣದ ವಿವರಗಳು ಹೀಗಿವೆ: ಒಟ್ಟು ಮೂರ್ತಿಯ ಎತ್ತರ 58', ಕಿವಿಯ ಕೆಳಭಾಗದವರೆಗಿನ ಎತ್ತರ 51', ಕಿವಿಯ ಕೆಳಭಾಗದಿಂದ ನೆತ್ತಿಯವರೆಗಿನ ಎತ್ತರ ಸು.6'6", ಪಾದದ ಉದ್ದ 8'3", ಕಾಲ ಹೆಬ್ಬೆರಳಿನ ಉದ್ದ 2'9", ತೊಡೆಯ ಉದ್ದ 10', ಕಿಬ್ಬೊಟ್ಟೆಯ ಅಡ್ಡಳತೆ 10', ಸೊಂಟದ ಅಡ್ಡಳತೆ 30', ಭುಜಗಳ ನಡುವೆ ಇರುವ ವಿಸ್ತಾರ 23½', ಕುತ್ತಿಗೆಯ ಕೆಳಭಾಗದಿಂದ ಕಿವಿಯವರೆಗೆ 2'7", ತೋರುಬೆರಳಿನ ಉದ್ದ 3'9", ನಡುಬೆರಳಿನ ಉದ್ದ 5', ಅನಾಮಿಕದ ಉದ್ದ 4'8", ಕಿರುಬೆರಳಿನ ಉದ್ದ 3'2". ಕಾಯೋತ್ಸರ್ಗಭಂಗಿಯಲ್ಲಿ ನಿಂತಿರುವ ಈ ಗೊಮ್ಮಟನ ಪ್ರತಿಮೆ ಬೃಹತ್ತಾಗಿರುವಷ್ಟೇ ಸುಂದರವೂ ಆಗಿದೆ. ಕೆಳಗೆ ತಾವರೆಯ ದಳಗಳನ್ನು ಕೆತ್ತಿದ್ದು ತಾವರೆಹೂವಿನ ಪೀಠದ ಮೇಲೆ ಮೂರ್ತಿ ನಿಂತಂತೆ ಕಾಣುತ್ತದೆ. ಪಾದಗಳ ಬಳಿ ಹುತ್ತ ಬೆಳೆದಂತೆ ಕೆತ್ತಲಾಗಿದೆ. ಹುತ್ತದ ಬಾಯಿಗಳಲ್ಲಿ ಸರ್ಪಗಳು ಓಡಾಡುತ್ತಿವೆ. ಬಳ್ಳಿಗಳು ಕಾಲನ್ನು ಸುತ್ತಿಕೊಂಡು ಹಬ್ಬಿ ಕೈಗಳಲ್ಲಿ ಬೆಳೆದು ಭುಜಗಳಲ್ಲಿ ಕೊನೆಗೊಂಡಿವೆ. ತಲೆಯಲ್ಲಿನ ಕೂದಲುಗಳು ಗುಂಗುರುಗುಂಗುರಾಗಿವೆ. ಆದರೆ ಇದು ಭುಜದವರೆಗೆ ಇಳಿದಿಲ್ಲ. ಹುತ್ತ ಹಬ್ಬಿ ಹಾವುಗಳು ಹರಿದಾಡಿದರೂ ಬಳ್ಳಿಗಳು ಬೆಳೆದು ತಬ್ಬಿಕೊಂಡರೂ ಅವಿಚಲವಾದ ಮನಸ್ಸನ್ನೂ ತಪಸ್ಸಿನ ದೃಢತೆಯನ್ನೂ ಮೂರ್ತಿಯ ಮುಖಭಾವದಲ್ಲಿ ಮೂಡಿಸಲಾಗಿದೆ. ಅದರಲ್ಲಿಯೂ ಕಷ್ಟಕಾರ್ಪಣ್ಯಗಳಿಂದ ತುಂಬಿರುವ ಪ್ರಪಂಚದ ಕಡೆ ಮರುಕದಿಂದ ಕಿರುನಗೆ ಸೂಸುತ್ತಿರುವಂತೆ ತೋರುವ ಮುಖದ ಭಾವ ವರ್ಣನಾತೀತವಾದುದು. ತ್ಯಾಗವೈರಾಗ್ಯಗಳು ಹೊರಹೊಮ್ಮುತ್ತಿರುವ ಈ ಮೂರ್ತಿಯ ಗಾಂಭೀರ್ಯ ಆಕರ್ಷಣೀಯ, ಅನುಪಮ. ಈ ವಿಗ್ರಹದ ಔನ್ನತ್ಯ, ಸೌಂದರ್ಯ ಮತ್ತು ಅತಿಶಯಗಳನ್ನು ಕುರಿತು ಬೊಪ್ಪಣಕವಿ ಹೀಗೆ ಹೇಳಿದ್ದಾನೆ:

ಅತಿತುಂಗಾಕೃತಿಯಾದೊಡಾಗದದರೊಳ್ ಸೌಂದರ್ಯಮೌನ್ನತ್ಯಮುಂ
ನುತ ಸೌಂದರ್ಯಮುಮಾಗೆ ಮತಿತ್ತಶಯಂ ತಾನಾಗದೌನ್ನತ್ಯಮುಂ
ನುತ ಸೌಂದರ್ಯಮುಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ
ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರಜಿನಶ್ರೀರೂಪಮಾತ್ಮೋಪಮಂ

ಗಂಗ ರಾಚಮಲ್ಲನ ಮಂತ್ರಿಯಾದ ಚಾವುಂಡರಾಯ ಈ ಮೂರ್ತಿಯ ನಿರ್ಮಾಪಕ. ಈ ಬಾಹುಬಲಿ ಮೂರ್ತಿಯ ಪಕ್ಕದಲ್ಲಿರುವ 10ನೆಯ ಶತಮಾನದ ಮೂರು ಶಾಸನಗಳು ಚಾಮುಂಡರಾಯ ಮಾಡಿಸಿದ ಎಂದು ಸ್ಪಷ್ಟವಾಗಿ ತಿಳಿಸುತ್ತವೆ. 978ರಲ್ಲಿ ಚಾವುಂಡರಾಯನೇ ಬರೆದಿರುವ 'ಚಾವುಂಡರಾಯ ಪುರಾಣ'ದಲ್ಲಿ ತನ್ನ ಜೀವನ, ಸಾಹಸಕಾರ್ಯ, ಯುದ್ಧಕೌಶಲ ಇತ್ಯಾದಿ ಸ್ವಕೀಯ ವಿಚಾರಗಳನ್ನು ಹೇಳಿಕೊಂಡಿದ್ದರೂ ಅದರಲ್ಲಿ ಗೊಮ್ಮಟವಿಗ್ರಹ ನಿರ್ಮಾಣದ ಪ್ರಸ್ತಾಪವಿಲ್ಲದಿರುವುದರಿಂದ 978ಕ್ಕೆ ಮುಂಚೆ ಈ ವಿಗ್ರಹದ ನಿರ್ಮಾಣವಾಗಿಲ್ಲವೆಂದು ಹೇಳಬಹುದು. ಈಗಿರುವ ಆಧಾರಗಳ ಮೇಲೆ ಇದನ್ನು ಸು.983ರಲ್ಲಿ ಕೆತ್ತಿಸಿ ಮುಗಿಸಿರಬೇಕೆಂದು ತಿಳಿಯಲಾಗಿದೆ. ಚಾಮುಂಡರಾಯನ ತಾಯಿ ಕಾಳಲದೇವಿ



ಗೊಮ್ಮಟಗಿರಿಯ ಗೊಮ್ಮಟಮೂರ್ತಿ

ಪೌದನಪುರದ ಬಾಹುಬಲಿಯನ್ನು ನೋಡಲು ಅಪೇಕ್ಷಿಸಿದಳು. ದೂರದ ದುರ್ಗಮ ಪೌದನಪುರಕ್ಕೆ ಹೋಗುವುದು ಕಷ್ಟವಾಗಿದ್ದುದರಿಂದ ತನ್ನ ತಾಯಿಯ ಇಚ್ಛೆಯನ್ನು ಪೂರೈಸಲು ಚಾವುಂಡರಾಯ ಬೆಳ್ಗೊಳದಲ್ಲಿ ಇದನ್ನು ಮಾಡಿಸಿದನೆಂದು ಐತಿಹ್ಯವಿದೆ. ಪಂಚಬಾಣನೆಂಬ ಕವಿಯ ಪ್ರಕಾರ ಬಾಹುಬಲಿ ಶಿಲಾಮೂರ್ತಿಯಾಗಿ ಚಾವುಂಡರಾಯನಿಗೆ ಕಾಣಿಸಿದ. ಚಾವುಂಡರಾಯ 983ರಲ್ಲಿ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದ.

ಶ್ರವಣಬೆಳಗೊಳದ ಗೊಮ್ಮಟಮೂರ್ತಿ ಜನರ ಚಿತ್ತವನ್ನು ಆಕರ್ಷಿಸಿ ಮುಂದೆ ಇದೇ ರೀತಿಯ ಹಲವು ಕೃತಿಗಳು ನಿರ್ಮಾಣವಾಗುವುದಕ್ಕೆ ಸ್ಫೂರ್ತಿಯಾಯಿತು. ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಊರಿನ ಬಳಿಯಲ್ಲೇ ಇರುವ ಗೊಮ್ಮಟಮೂರ್ತಿ ಈ

ರೀತಿಯದು. ಈ ಮೂರ್ತಿಯ ಎತ್ತರ 1.4ಮೀ. ಭೈರವರಸನ ಮಗ ವೀರಪಾಂಡ್ಯ 1432ರಲ್ಲಿ ಇದನ್ನು ಮಾಡಿಸಿ ಪ್ರತಿಷ್ಠಾಪಿಸಿದ. ಇದರ ರಚನೆಯ ಕಥೆಯನ್ನು ಚದುರ ಚಂದ್ರಮನೆಂಬ ಕವಿ 'ಕಾರ್ಕಳದ ಗೊಮ್ಮಟೇಶ್ವರ ಚರಿತ್ರೆ' (1646) ಎಂಬ ಸಾಂಗತ್ಯಕೃತಿಯಲ್ಲಿ ಹೇಳಿದ್ದಾನೆ. ಶ್ರೀಗುರು ಲಲಿತಕೀರ್ತಿ ಭಟ್ಟಾರಕರ ಆಶೀರ್ವಾದದೊಡನೆ ವಜ್ರಶಿಲೆಯ ಅನ್ವೇಷಣೆಯಿಂದ ಹಿಡಿದು ಮೂರ್ತಿಯನ್ನು ಬೆಟ್ಟದ ಮೇಲಕ್ಕೆ ಸಾಗಿಸಿದ್ದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾನೆ. ಮೂರ್ತಿಯ ಸ್ಥೂಲರೂಪ ಸಿದ್ಧವಾದ ಮೇಲೆ ಅದನ್ನು ಕಬ್ಬಿಣದ ದಪ್ಪ ಕೀಲುಗಳಿರುವ ಇಪ್ಪತ್ತು ಗಾಲಿಗಳಿಂದ ಬಂಡಿಯೊಂದನ್ನು ಮಾಡಿಸಿ ಹತ್ತು ಸಾವಿರ ಸನ್ನೆಗಳಿಂದ ಮೂರ್ತಿಯನ್ನು ಬಂಡಿಗೆ ಸಾಗಿಸಿ ಸಾವಿರಾರು ಜನ ಸೇರಿ ಎಳೆದರು. ಅದು ಒಂದು ಮಾರು ಮಾತ್ರ ಸಾಗಿತಂತೆ. ಮಾರನೆಯ ದಿನ ಸಾವಿರ ರಾಟೆಗಳನ್ನು ಮಾಡಿಸಿ ದೇವನ ಬಂಡಿ ಬೆಟ್ಟವೇರುವಂತೆ ಮದ್ದಾನೆಗಳಿಂದ ನೂಕಿಸಿದಾಗ ಆ ದಿನ ಅದು ಏಳೆಂಟು ಮಾರು ಸರಿಯಿತಂತೆ. ಹೀಗೆ ಒಂದು ತಿಂಗಳ ಪರ್ಯಂತ ಸಾಗಿಸಿದಮೇಲೆ ಆ ಮೂರ್ತಿ ಬೆಟ್ಟದ ತುದಿಯನ್ನು ತಲುಪಿತು. ಅಲ್ಲಿ ಎಪ್ಪತ್ತೆರಡು ಕಂಬಗಳ ಸೊಗಸಾದ ಚಪ್ಪರದ ಮೇಲೆ ಮೂರ್ತಿಯನ್ನು ಮಲಗಿಸಿ ಸೂಕ್ಷ್ಮ ಕೆಲಸವನ್ನು ಮಾಡಲಾಯಿತು. ಇದಕ್ಕೆ ಒಂದು ವರ್ಷ ಹಿಡಿಯಿತು. ಅನಂತರ ಆ ವಿಗ್ರಹದ ಪ್ರತಿಷ್ಠಾಪನೆಯಾಯಿತು.



ಧರ್ಮಸ್ಥಳದ ಗೊಮ್ಮಟೇಶ್ವರ: ಶಿಲ್ಪಿ ರಂಜಾಳ ಗೋಪಾಲ ಶೆಣೈ

ದಕ್ಷಿಣ ಕನ್ನಡ ಜಿಲ್ಲೆಯ ವೇಣೂರಿನಲ್ಲಿ ಮತ್ತೊಂದು ಗೊಮ್ಮಟ ಮೂರ್ತಿ ಇದೆ. ಇದರ ಎತ್ತರ 35'. 1604ರಲ್ಲಿ ತಿಮ್ಮಣ್ಣ ಅಜಿಲ ಎಂಬುವನು ಚಾವುಂಡರಾಯನಂತೆ ತಾನೂ ತನ್ನ ರಾಜ್ಯದಲ್ಲಿ ಗೊಮ್ಮಟನನ್ನು ಕೆತ್ತಿಸಿ ಕೀರ್ತಿವಂತನಾಗಬೇಕೆಂದು ಇದನ್ನು ಮಾಡಿಸಿದ. ಇದೇ ಸಮಯದಲ್ಲಿ ಕಾರ್ಕಳದಲ್ಲಿ ರಾಜ್ಯಭಾರಮಾಡುತ್ತಿದ್ದ ಇಮ್ಮಡಿ ಭೈರವರಾಯ ಕಾರ್ಕಳದಲ್ಲಿರುವಂತೆ ಬೇರೆಲ್ಲೂ ಗೊಮ್ಮಟ ಮೂರ್ತಿಗಳು ಪ್ರತಿಷ್ಠಾಪನೆಯಾಗಬಾರದೆಂದೂ ವೇಣೂರಿನಲ್ಲಿ ಸಿದ್ಧವಾದ ಮೂರ್ತಿಯನ್ನು ಕಾರ್ಕಳಕ್ಕೆ ಒಪ್ಪಿಸಬೇಕೆಂದೂ ಇಲ್ಲದಿದ್ದರೆ ಯುದ್ಧವನ್ನು ಎದುರಿಸಬೇಕೆಂದೂ ತಿಳಿಸಿದ್ದರಿಂದ ತಿಮ್ಮಣ್ಣ ಅಜಿಲನು ಪ್ರತಿಮೆಯನ್ನು ಮರಳಿನಲ್ಲಿ ಹೂತು ಯುದ್ಧಮಾಡಿ ವಿಜಯಿಯಾಗಿ ಅನಂತರವೇ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿಸಿದನಂತೆ. ಮೈಸೂರು ಜಿಲ್ಲೆಯಲ್ಲಿ ಮೈಸೂರಿಗೆ 25ಕಿಮೀ ವಾಯವ್ಯದಲ್ಲಿ ಕಾವೇರಿಯ ದಕ್ಷಿಣಕ್ಕೆ ಶ್ರವಣಗುಡ್ಡ ಎಂದು ತಿಳಿಯಲಾಗುತ್ತಿದ್ದ ಗೊಮ್ಮಟಗಿರಿಕ್ಷೇತ್ರದಲ್ಲಿ 5.5ಮೀ. ಎತ್ತರದ ಗೊಮ್ಮಟಮೂರ್ತಿಯಿದೆ. ಇಲ್ಲಿ ಸು.30.48ಮೀ. ಎತ್ತರದ ಬಂಡೆಯೊಂದರ ಮೇಲೆ ಮೂರ್ತಿಯ ಸ್ಥಾಪನೆಯಾಗಿದೆ. ದೂರದಿಂದ ನೋಡಿದರೆ ಈ ಬೆಟ್ಟ ಒಂದು ದೊಡ್ಡ ರಥದಂತೆ ಕಾಣಿಸುತ್ತದೆ. ಈ ಬೆಟ್ಟದ ಮೇಲೆ ಗೊಮ್ಮಟಮೂರ್ತಿಯನ್ನು ಯಾರು ಯಾವಾಗ ಸ್ಥಾಪಿಸಿದರೆಂಬುದಕ್ಕೆ ಶಾಸನವಾಗಲೀ ದಾಖಲೆಯಾಗಲಿ ಇದುವರೆಗೆ ಸಿಕ್ಕಿಲ್ಲ. ಪೂರ್ವಾಭಿಮುಖವಾಗಿರುವ ಈ ಮೂರ್ತಿಯಲ್ಲಿ ಕೈಗಳು ಸರ್ಪಗಳು ಬಿಚ್ಚಿದ ಹೆಡೆಯ ಮೇಲೆ ಸೋಕಿದಂತಿರುವುದು ಬೇರಾವ ಗೊಮ್ಮಟಮೂರ್ತಿಗಳಲ್ಲೂ ಇಲ್ಲದಿರುವುದು ವೈಶಿಷ್ಟ್ಯವಾಗಿದೆ.

ಕೃಷ್ಣರಾಜಸಾಗರ ಜಲಾಶಯದ ಉತ್ತರಕ್ಕೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಮಾವಿನಕೆರೆ ಗ್ರಾಮದ ಹತ್ತಿರದ ಬಸ್ತಿಹಳ್ಳಿಯಲ್ಲಿ 18' ಎತ್ತರದ ಒಂದು ಗೊಮ್ಮಟಮೂರ್ತಿಯಿದೆ. ಈ ಮೂರ್ತಿಗೆ ಗೂಡಿನಂಥ' ಒಂದು ಗುಡಿಯನ್ನು ಕಟ್ಟಿದ್ದಾರೆ. ಇದರ ಸುತ್ತಮುತ್ತ ಗಂಗರ ಕಾಲಕ್ಕೆ ಸೇರುವ ಶಿಥಿಲವಾದ ಮೂರ್ತಿಗಳೂ ವಿಷ್ಣುವರ್ಧನನ ಕಾಲದ ಬಸದಿಯ ಅವಶೇಷವೂ ಕಂಡುಬರುತ್ತವೆ. ಈ ಗೊಮ್ಮಟಮೂರ್ತಿಯನ್ನು ವಿಷ್ಣುವರ್ಧನನ ಕಾಲದಲ್ಲಿ ಆತನ ದಂಡನಾಯಕ ಪುಣಿಸಮಯ್ಯ ಪ್ರತಿಷ್ಠಾಪಿಸಿದಂತೆ ತೋರುತ್ತದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬಸ್ತಿ ತಿಪ್ಪೂರಿನ ಬಳಿಯಿರುವ ದೊಡ್ಡ ಬೆಟ್ಟದ ಮೇಲೆ ಸು.10' ಎತ್ತರದ ಗೊಮ್ಮಟ ಪ್ರತಿಮೆಯೊಂದಿದೆ. ಇದು ಸಾಮಾನ್ಯ ರೀತಿಯ ಶಿಲ್ಪ. ಸ್ಥಾಪನೆಯ ಕಾಲ ತಿಳಿದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಒಂದು ಗೊಮ್ಮಟ ವಿಗ್ರಹವನ್ನು ಅಲ್ಲಿನ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಮಾಡಿಸಿ ಸ್ಥಾಪಿಸಿದ್ದಾರೆ. ಶಿಲ್ಪಿ ರಂಜಾಳ ಗೋಪಾಲ ಶೆಣೈ ಅವರು 1967ರಲ್ಲಿ ಇದರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ 1973ರಲ್ಲಿ ಮುಗಿಸಿದರು. ಶಿಲ್ಪರಚನೆಗೆ ಉಪಯೋಗಿಸಿರುವ ಈ ಶಿಲೆಯ ಒಟ್ಟು ಉದ್ದ 52'. ಇದರಲ್ಲಿ 6' ಭೂಮಿಗಿಳಿಯುವ ಬೇರು, 7' ವಿಗ್ರಹದ ಪೀಠ, ಮೂರ್ತಿ ಅಂಗುಷ್ಠದಿಂದ ನೆತ್ತಿಯವರೆಗೆ 39' ಎತ್ತರವಿದೆ. 170 ಟನ್ ತೂಕದ ಈ ಶಿಲಾಮೂರ್ತಿಯನ್ನು ಕಾರ್ಕಳದಲ್ಲಿ ಮಾಡಿಸಿ ಧರ್ಮಸ್ಥಳಕ್ಕೆ ಸಾಗಿಸಲಾಗಿದೆ. ಅಲ್ಲಿ ಬಾಹುಬಲಿ ವಿಹಾರದಲ್ಲಿ ಸ್ಥಾಪಿತವಾಗಿದೆ. ಧರ್ಮಸ್ಥಳದ ಈ ಗೊಮ್ಮಟಮೂರ್ತಿಯಲ್ಲಿ ಕೆಲವು ವಿಶೇಷಗಳು ಕಂಡುಬರುತ್ತವೆ. ಈ ಮೂರ್ತಿಯಲ್ಲಿ ತಲೆಗೂದಲು ಭುಜದವರೆಗೂ ಇಳಿಬಿದ್ದಿದೆ. ಎರಡು ಪಾದಗಳ ಮೇಲೆಯೂ ಹಾವಿನ ಮರಿಗಳು ಹತ್ತುತ್ತಿವೆ. ಮೂರ್ತಿಯ ಮೇಲೆ ಮಲ್ಲಿಗೆ ಬಳ್ಳಿಯು ಜೊತೆಯಲ್ಲಿ ಮಲ್ಲಿಗೆಯ ಹೂವನ್ನು ಬಿಡಿಸಲಾಗಿದೆ. ಮೂರ್ತಿಯ ಎಡಬಲಗಳಲ್ಲಿ ಕಾಲುಗಳ ಬಳಿಯಲ್ಲಿ ಸೇರುವ ಎರಡು ಪ್ರತ್ಯೇಕ ಶಿಲೆಗಳಲ್ಲಿ ಮಾವಿನಮರ, ಗಿಣಿ, ಮಂಗ, ಜೇನುಗೂಡು ಇತ್ಯಾದಿಗಳನ್ನು ಕೆತ್ತಲಾಗಿದೆ.

ಈ ಗೊಮ್ಮಟಮೂರ್ತಿಗಳು ಭಾರತೀಯ ಶಿಲ್ಪಕಲೆಗೆ ಕರ್ನಾಟಕದ ಮಹತ್ತ್ವಪೂರ್ಣ ಕೊಡುಗೆಯಾಗಿವೆ. (ಎಸ್.ಸಿ.;ಎಂ.ಎಚ್.)

**ಗೊರವರ ಕುಣಿತ :** ಗೊರವರೆಂಬ ಧಾರ್ಮಿಕ ವೃತ್ತಿಗಾಯಕರು ತಮ್ಮ ಆರಾಧ್ಯದೈವವಾದ ಮೈಲಾರಲಿಂಗನ ಮಹಿಮೆಯನ್ನು ಕುರಿತು ಇಡೀ ರಾತ್ರಿ ನಡೆಸುವ ಮೇಳ. ಆಗ ಹಾಡುವುದರ ಜೊತೆಯಲ್ಲಿ ಕುಣಿಯುವುದೂ ಉಂಟು. ಈ ಮೇಳವನ್ನು ಗೊರವರ ಮೇಳ ಎಂದು ಕರೆಯುತ್ತಾರೆ. ಮೇಳ ನಡೆಸಲು ಕನಿಷ್ಠಪಕ್ಷ ಮೂವರಿರುತ್ತಾರೆ. ಮುಖ್ಯ ಗಾಯಕ ಮಧ್ಯೆ ಕುಳಿತು ಮೈಲಾರಲಿಂಗನ ಮಹಿಮೆಯನ್ನು ಡಮರುಗ ಬಾರಿಸುತ್ತ ನಿರೂಪಿಸುತ್ತಾನೆ. ಉಳಿದವರು ಇವನ ಸುತ್ತ ನಿಂತು ಇವನಿಗೆ ಹಿಮ್ಮೇಳ ನೀಡುತ್ತಾರೆ. ಮೇಳ ನಡೆಯುವಾಗ ತಮ್ಮ ವಾದ್ಯಗಳನ್ನು (ಡಮರುಗ, ಪಿಳ್ಳಂಗೋವಿ) ಬಾರಿಸುತ್ತ ಕುಣಿಯುತ್ತಾರೆ.

**ಗೊರೂರು ರಾಮಸ್ವಾಮಿ ಅಯ್ಯಂಗಾರ್ :** 1904-91. ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ ವಿಸ್ತಾರಗಳನ್ನೂ ವೈವಿಧ್ಯ ವೈಶಿಷ್ಟ್ಯಗಳನ್ನೂ ತಂದುಕೊಟ್ಟ ಗಣ್ಯಲೇಖಕರಲ್ಲೊಬ್ಬರು; ಸುಪ್ರಸಿದ್ಧ ಪ್ರಬಂಧಕಾರರು, ಗಾಂಧೀವಾದಿ.

ಗೊರೂರು ಎಂಬ ಸಂಕ್ಷಿಪ್ತ ನಾಮದಿಂದಲೇ ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತರು. ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಗೊರೂರು ಗ್ರಾಮದಲ್ಲಿ 1904 ಜುಲೈ 4ರಂದು ಜನಿಸಿದರು. ಇವರ ತಂದೆ ಶ್ರೀನಿವಾಸ ಅಯ್ಯಂಗಾರ್. ತಾಯಿ ಲಕ್ಷ್ಮಮ್ಮ. ಹನ್ನೆರಡು ಮಕ್ಕಳ ದೊಡ್ಡ ಸಂಸಾರದಲ್ಲಿ ಗೊರೂರರವರು ತಮ್ಮ ತಂದೆತಾಯಿಗಳಿಗಾದ ಗಂಡುಮಕ್ಕಳಲ್ಲಿ ಎರಡನೆಯವರು. ಅಜ್ಜಿಯವರಿಗೆ ತಂದೆ ಹೇಳುತ್ತಿದ್ದ

ಮಹಾಭಾರತ ಪುರಾಣಗಳನ್ನು ಬಾಲ್ಯದಲ್ಲಿಯೇ ಕೇಳಿ ಅವುಗಳಿಂದ ಪ್ರಭಾವಿತರಾದರು. ತಮ್ಮ ಹಳ್ಳಿಯಲ್ಲಿಯೇ ಕನ್ನಡ ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಪ್ರೌಢ ವಿದ್ಯಾಭ್ಯಾಸ ಮಾಡಲು ಹಾಸನದ ಸರ್ಕಾರಿ ಹೈಸ್ಕೂಲನ್ನು ಸೇರಿದರು. ಹೈಸ್ಕೂಲಿನಲ್ಲಿ ಐದನೆಯ ಫಾರಂನಲ್ಲಿದ್ದಾಗ ಗಾಂಧೀಜಿಯವರ ಅಸಹಕಾರ ಚಳವಳಿಯಿಂದ ಆಕರ್ಷಿತರಾಗಿ, ಇಂಗ್ಲಿಷ್ ವಿದ್ಯೆಗೆ ಶರಣು ಹೊಡೆದು, ಗಾಂಧೀಜಿಯ ಆಶ್ರಮವನ್ನು ಸೇರಿ ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಯಾದರು. ಗಾಂಧೀಜಿಯವರ ನಿಕಟ ಸಂಪರ್ಕ ಪಡೆದು ದೇಶಸೇವೆ ಮಾಡಲು ತಕ್ಕ ಯೋಗ್ಯತೆಯನ್ನು ಗಳಿಸಿ, ಮದರಾಸಿನ ಲೋಕಮಿತ್ರ ಎಂಬ ಕನ್ನಡ ಪತ್ರಿಕೆಯ ಉಪಸಂಪಾದಕರಾಗಿ, ಆಂಧ್ರಪತ್ರಿಕೆ, ಭಾರತಿ ಪತ್ರಿಕೆಗಳಿಗೆ ಕನ್ನಡ ಸಮಾಚಾರ ಲೇಖಕರಾಗಿ ಕೆಲವು ಕಾಲ ಕೆಲಸ ಮಾಡಿ, ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿದರು. ಆ ಗುರುಕುಲ ಸಾಬರಮತಿ ಆಶ್ರಮದ ಮಾದರಿಯಲ್ಲಿ ನಡೆಯುತ್ತಿತ್ತು. ಹರಿಜನರನ್ನು ಮೇಲಕ್ಕೆತ್ತುವುದೇ ಅದರ ಮುಖ್ಯೋದ್ದೇಶವಾಗಿತ್ತು. ಈ ಕಾರ್ಯವನ್ನು ಇವರು ಇಲ್ಲಿ ಸಮರ್ಥವಾಗಿ ನಡೆಸಿದರು. ಅನಂತರ ಬೆಂಗಳೂರಿಗೆ ಬಂದು ಅಖಿಲಭಾರತ ಚರಕ ಸಂಘದ ಖಾದಿ ವಸ್ತ್ರಾಲಯವನ್ನು ನಡೆಸುವ ಹೊಣೆಯನ್ನು ಹೊತ್ತರು. ಈ ಶತಮಾನದ ಮೂರು ನಾಲ್ಕನೆಯ ದಶಕಗಳು ರಾಷ್ಟ್ರೀಯ ಚಳವಳಿಗೆ ಹೆಸರಾಗಿರುವಂತೆ, ಕನ್ನಡ ಸಾಹಿತ್ಯದ ನವೋದಯಕ್ಕೂ ಹೆಸರಾಗಿವೆ. ಬೆಂಗಳೂರಿನ ಆವರಣ ಇವರಿಗೆ ಅನೇಕ ಪ್ರಮುಖ ದೇಶಸೇವಕರನ್ನು ಪರಿಚಯ ಮಾಡಿಕೊಟ್ಟಂತೆ, ಸೀತಾತನಯ, ಜಿ.ಕೆ.ರಾಮಸ್ವಾಮಿಯೆಂಬ ಹೆಸರುಗಳಿಂದ ಬರೆಯುತ್ತಿದ್ದ ಇವರಿಗೆ ಆ ಕಾಲದ ಸುಪ್ರಸಿದ್ಧ ಸಾಹಿತಿಗಳ ಸಾನ್ನಿಧ್ಯವನ್ನೂ ಗ್ರಂಥರಚನೆಗೆ ಒಳ್ಳೆಯ ಪ್ರೋತ್ಸಾಹವನ್ನೂ ದೊರಕಿಸಿಕೊಟ್ಟಿತು. ಗೊರೂರವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟ ಹಳ್ಳಿಯ ಚಿತ್ರಗಳು (1930), ನಮ್ಮ ಊರಿನ ರಸಿಕರು (1932) ಈ ಕೃತಿಗಳು ಪ್ರಕಟವಾದದ್ದು ಈ ಕಾಲದಲ್ಲಿಯೇ. ಅಲ್ಲಿಂದ ಇವರ ವೈವಿಧ್ಯಮಯ ಸಾಹಿತ್ಯರಚನೆ ಅವ್ಯಾಹತವಾಗಿ ಸಾಗಿತು. 1933ರಲ್ಲಿ ಇವರು ತಮ್ಮ ಸ್ವಂತ ಗ್ರಾಮಕ್ಕೆ ಹಿಂದಿರುಗಿ, ಅಲ್ಲಿ ಮೈಸೂರು ಗ್ರಾಮ ಸೇವಾ ಸಂಘವನ್ನು ಸ್ಥಾಪಿಸಿ ಖಾದಿಪ್ರಚಾರ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು. 1942ರಲ್ಲಿ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ನಡೆದ 'ಚಲೇಜಾವ್' ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ, ಮೈಸೂರಿನಲ್ಲಿ ಪ್ರಜಾಸರ್ಕಾರ ಸ್ಥಾಪನೆಗಾಗಿ ನಡೆದ ಚಳವಳಿಯಲ್ಲೂ ಭಾಗವಹಿಸಿದರು. ಈ ಚಳವಳಿಯಲ್ಲಿ ಭಾಗವಹಿಸಿದ್ದ ಇವರ ಹಿರಿಯ ಮಗ 17 ವರ್ಷದ ರಾಮಚಂದ್ರ ತುಮಕೂರಿನಲ್ಲಿ ಪೊಲೀಸಿನವರ ಗುಂಡಿಗೆ ಬಲಿಯಾದ. ಮೈಸೂರಿನಲ್ಲಿ ಪ್ರಜಾಸರ್ಕಾರ ಸ್ಥಾಪಿತವಾದಮೇಲೆ ಗೊರೂರರು ಸುಮಾರು ಹನ್ನೆರಡು ವರ್ಷಕಾಲ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ಸದಸ್ಯರೂ ಆಗಿದ್ದರು. ತಮ್ಮ ಈ ಅಧಿಕಾರದ ಅವಧಿಯಲ್ಲಿ ಮೈಸೂರು ಸರ್ಕಾರ ಸಾಧಿಸಿದ ಕರ್ನಾಟಕ ಏಕೀಕರಣಕ್ಕೆ ಬೆಂಬಲವನ್ನು ನೀಡಿದರಲ್ಲದೆ, ಕನ್ನಡದ ಸರ್ವತೋಮುಖವಾದ ಬೆಳವಣಿಗೆಗೂ ಶ್ರಮಿಸಿದರು. ತಮ್ಮ ಹಳ್ಳಿಯಲ್ಲಿದ್ದುಕೊಂಡೇ ಬಹುಕಾಲ ಸಾಹಿತ್ಯರಚನೆಯಲ್ಲಿ ತೊಡಗಿದರು.

ಇವರು ಅರ್ಧಶತಮಾನದ ಕಾಲ ಕನ್ನಡ ಸಾಹಿತ್ಯ ಸೇವೆ ನಡೆಸಿದರು. ಹೊಸಗನ್ನಡ ಸಾಹಿತ್ಯದಲ್ಲಿ ನಿರ್ಮಲವಾದ, ತಿಳಿಯಾದ ಹಾಸ್ಯವನ್ನು ಹರಿಯಬಿಟ್ಟವರೆಂಬ ಕೀರ್ತಿಗೆ ಇವರು ಭಾಜನರಾಗಿದ್ದಾರೆ. ಹೆಚ್ಚು ಕಡಿಮೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಇವರು ಕೃತಿಗಳನ್ನು ರಚಿಸಿದ್ದಾರೆ. ಪುಸ್ತಕರೂಪದಲ್ಲಿ ಪ್ರಕಟವಾಗದ ಇವರ ಕವನಗಳು ಪತ್ರಿಕೆಗಳಲ್ಲಿ ಅಭಿನಂದನ ಗ್ರಂಥಗಳಲ್ಲಿ ಚದುರಿಹೋಗಿರುವ ಬಿಡಿಲೇಖನಗಳನ್ನು ಬಿಟ್ಟರೆ, ಇವರು ರಚಿಸಿದ ಕೃತಿಗಳ ಸಂಖ್ಯೆ 47. ಇವರ ಸಾಹಿತ್ಯವನ್ನು ಕಥೆ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ ಮೊದಲಾದ ಪ್ರಕಾರಗಳನ್ನೊಳಗೊಂಡ ಶುದ್ಧಸಾಹಿತ್ಯ, ಅನುವಾದಸಾಹಿತ್ಯ, ಗಾಂಧೀಸಾಹಿತ್ಯವೆಂದು ಮೂರು ವಿಧವಾಗಿ ವಿಂಗಡಿಸಬಹುದು. ಇವರ ಮೊದಲನೆಯ ಪುಸ್ತಕ 'ಭಾರತದ ಸ್ವಾತಂತ್ರ್ಯ' ಪ್ರಕಟವಾಗಿದ್ದು 1930ರಲ್ಲಿ. ಇನ್ನೊಂದು ಮುಖ್ಯಕೃತಿ ಜನಪದ ಜೀವನ ಮತ್ತು ದರ್ಶನ (1974). ಇವರು ರಚಿಸಿರುವ ಹೇಮಾವತಿ (1948) ಎಂಬ ಕಾದಂಬರಿ ಹರಿಜನೋದ್ಧಾರ ಸಮಸ್ಯೆಗೆ ಸಂಬಂಧಿಸಿದ್ದು. ಯಾವುದೋ ಕ್ಷಣದಲ್ಲಿ ಜಾರಿಬಿದ್ದ ಹೆಣ್ಣು, ಎಚ್ಚೆತ್ತು ಉದ್ಧಾರವಾದ ಕಥೆ ಊರ್ವಶಿ ಕಾದಂಬರಿಯಲ್ಲಿದೆ. ತಿಳಿಯಾದ ಹಾಸ್ಯಲೇಖಕರೆಂದು ಇವರಿಗೆ ಕೀರ್ತಿ ತಂದ ಹಳ್ಳಿಯ ಚಿತ್ರಗಳು ಮತ್ತು ನಮ್ಮ ಊರಿನ ರಸಿಕರು ಎಂಬ ಪ್ರಬಂಧ ಗ್ರಂಥಗಳು ವೈದಿಕ ಮತ್ತು ಜನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಸರಳ ನಿಃಸ್ಪೃಹ ಸಂತೃಪ್ತ ಗ್ರಾಮಜೀವನವನ್ನು ಚಿತ್ರಿಸುತ್ತವೆ. ಮೆರವಣಿಗೆ ಇವರ ಪ್ರಬಂಧಗಳೆಲ್ಲಲ್ಲ ಅತಿ ದೊಡ್ಡ ಗ್ರಂಥ. ಇದರಲ್ಲಿ ಹಾರುವರಿಂದ ಹಿಡಿದು ಹರಿಜನರವರೆಗಿನ ಎಲ್ಲ ರೀತಿಯ ಜನರನ್ನೂ ವಿವಿಧ ರೀತಿನೀತಿಯ ಅಧಿಕಾರಿ ವರ್ಗವನ್ನೂ ಅವರ ಗುಣದೋಷಗಳೊಡನೆ ಸಹಾನುಭೂತಿಯ ಕಣ್ಣಿನಿಂದ ನೋಡಿದ್ದಾರೆ. ಇವರ ಮಿಕ್ಕ ಪ್ರಬಂಧಗಳಲ್ಲಿ ಗರುಡಗಂಬದ ದಾಸಯ್ಯ (1965), ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು (1967), ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು (1972), ಕಥೆಗಳು ಮತ್ತು ವಿನೋದ ಚಿತ್ರಗಳು, ಬೈಲುಹಳ್ಳಿಯ ಸರ್ವೆ-ಈ ಗ್ರಂಥಗಳನ್ನು ಹೆಸರಿಸಬಹುದು. ಗೊರೂರರ ಪ್ರಬಂಧಗಳು ಯಾವಾಗ ಸಣ್ಣಕಥೆಗಳಾಗುತ್ತವೆಯೆಂದು ಹೇಳುವುದು ಕಷ್ಟ. ಇವರ ಪ್ರಬಂಧಗಳಲ್ಲಿ ಕಥೆ ಹುದುಗಿರುತ್ತದೆ. ಕಥೆ ಪ್ರಬಂಧದ ಆಕಾರವನ್ನೂ ತಾಳಬಹುದು. ಇವರ ಸಣ್ಣಕಥೆಗಳಲ್ಲಿ ವೈಯಾರಿ, ಶಿವರಾತ್ರಿ, ಕಮ್ಮಾರ, ವೀರಭದ್ರಾಚಾರಿ, ಉಸುಬು, ಕನ್ಯಾಕುಮಾರಿ ಮತ್ತು ಇತರ ಕತೆಗಳು, ಗೋಪುರದ ಬಾಗಿಲು, ಬೆಸ್ತರ ಕರಿಯ, ಬೂತಯ್ಯನ ಮಗ ಅಯ್ಯು ಮುಖ್ಯವಾದುವು. ತಮಿಳಿನಿಂದ ಕನ್ನಡಕ್ಕೆ ತಂದಿರುವ ಕೊನಷ್ಟು ಕಥೆಗಳಲ್ಲಿ ತಿಳಿಯಾದ ಹಾಸ್ಯ ಮಿನುಗುತ್ತದೆ. ಘನವಾದ ಭಾವನೆ ಮತ್ತು ವಸ್ತುಗಳನ್ನೊಳಗೊಂಡ ಕೆ.ಎಂ.ಮುನ್ಷಿಯವರ ಭಗವಾನ್ ಕೌಟಿಲ್ಯ, ರಾಮಚಂದ್ರ ಠಾಕೂರರ ರಾಜ ನರ್ತಕಿ, ವಿ.ಎಸ್.ಖಾಂಡೇಕರ ಅವರ ಕ್ರೌಂಚವಧೆ, ಟಾಲ್‌ಸ್ಟಾಯ್ ಅವರ ಕಾಸಕ್ಸ್ - ಈ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಗೊರೂರರ ಗಾಂಧೀ ಸಾಹಿತ್ಯದ ಅನುವಾದಗಳಲ್ಲಿ ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ, ಪೂರ್ಣಸ್ವದೇಶಿ, ಭಾಷಣಗಳು ಮತ್ತು ಹೇಳಿಕೆಗಳು -ಇವುಗಳನ್ನು ಮುಖ್ಯವಾಗಿ ಹೆಸರಿಸಬಹುದು. ಮಹಾತ್ಮ ಗಾಂಧೀಯವರ ದಕ್ಷಿಣಯಾತ್ರೆ, ಭಾರತ ಭಾಗ್ಯವಿಧಾತ -ಇವು ಗಾಂಧೀಜೀಯವರನ್ನು ಕುರಿತು ಇವರು ಬರೆದ ಸ್ವತಂತ್ರ ಕೃತಿಗಳು. ನಮ್ಮ ನಾಡಿನ ಹಲವು ಉದ್ಗ್ರಂಥಗಳನ್ನು ಕುರಿತ ವಿಮರ್ಶೆಗಳ ಸಂಗ್ರಹ, ಸಾಹಿತ್ಯ ರಶ್ಮಿ (1963) ಮತ್ತು ಸಾಹಿತ್ಯದ ಸ್ವರೂಪ, ಕಾಲಕಾಲಕ್ಕೆ ವೃದ್ಧಿಗೊಂಡು ನವೋದಯ ಕಾಲದ ಆರಂಭದಲ್ಲಿ ಹೊರಬಿದ್ದ ಹಳ್ಳಿಯ ಹಾಡುಗಳು(1938) ಸೊಗಸಾದ ಜನಪದ ಸಾಹಿತ್ಯದ ತ್ರಿಪದಿಗಳ ಸಂಗ್ರಹವಾದರೆ, ಹಳ್ಳಿಯ ಬಾಳು (1943) ಜನಪದ ಸಾಹಿತ್ಯದ ಮೇಲಿನ ಸೊಗಸಾದ ವ್ಯಾಖ್ಯಾನ.

ಆಗ್ನೇಯಕ್ಕೆ ಇರುವ ಕೋಟಿತೀರ್ಥ ಅತ್ಯಂತ ದೊಡ್ಡದು ಹಾಗೂ ಪ್ರಸಿದ್ಧವಾದದ್ದು. ಶಿವರಾತ್ರಿಯಂದು ದೇಶದ ನಾನಾ ಭಾಗಗಳಿಂದ ಬರುವ ಭಕ್ತರು ಈ ತೀರ್ಥದಲ್ಲಿ ಸ್ನಾನ ಮಾಡುತ್ತಾರೆ. ಈ ತೀರ್ಥದ ಆವರಣದೊಳಗೆ ಕಾಲಭೈರವೇಶ್ವರ, ಗರುಡ, ಅನಿರುದ್ಧ, ಅಗಸ್ತ್ಯೇಶ್ವರ, ವಸಿಷ್ಠೇಶ್ವರ ಮುಂತಾದ ಗುಡಿಗಳಿವೆ. ಅಲ್ಲದೆ ವೈಷ್ಣವ ಹಾಗೂ ಶಾಕ್ತಪಂಥೀಯ ದೇವತಾಮಂದಿರಗಳೂ ಇವೆ. ಇಂಡೋರಿನ ರಾಣಿ ಅಹಲ್ಯಾಬಾಯಿ ಹೋಳ್ಕರ್ ಕಟ್ಟಿಸಿದಳೆಂದು ಹೇಳಲಾದ ಅಹಲ್ಯಾಬಾಯಿ ಗುಡಿ ಮತ್ತು ಛತ್ರ ಗಮನಾರ್ಹ.ಇದರ ಛಾವಣಿಯಲ್ಲಿರುವ ನಾಗಬಂಧ ವೈಶಿಷ್ಟ್ಯಪೂರ್ಣ. ಸು.6-7ನೆಯ ಶತಮಾನದ್ದೆಂದು ನಂಬಲಾದ ಗಣಪತಿ ವಿಗ್ರಹ ಕರ್ನಾಟಕದ ಪ್ರಾಚೀನ ಗಣೇಶ ವಿಗ್ರಹಗಳಲ್ಲೊಂದಾಗಿದೆ.

ಭಾರತದ ಶೈವತೀರ್ಥಕ್ಷೇತ್ರಗಳಲ್ಲಿ ಒಂದಾದ ಗೋಕರ್ಣ ಪ್ರೇಕ್ಷಣೀಯ ಪ್ರವಾಸಿ ಕೇಂದ್ರವೂ ಹೌದು. ಪ್ರತಿವರ್ಷ ಫಾಲ್ಗುಣ ಶುದ್ಧ ಪಾಡ್ಯದಂದು ನಡೆಯುವ ರಥೋತ್ಸವ ಹಾಗೂ ಶಿವರಾತ್ರಿ ಜಾತ್ರೆ ಅತ್ಯಂತ ಪ್ರಸಿದ್ಧ.

ಕಾಲೇಜು, ಸಂಸ್ಕೃತ ಪಾಠಶಾಲೆ ಮುಂತಾದ ಶೈಕ್ಷಣಿಕ ಸಂಸ್ಥೆಗಳೂ ಇಲ್ಲಿವೆ. ಖ್ಯಾತ ವೇದ ವಿದ್ವಾಂಸರಾದ ಮಹರ್ಷಿ ದೇವರಾತ (ನೋಡಿ) ಈ ಊರಿನಲ್ಲಿದ್ದರು. ಈ ಊರಿಗೆ ಭೂಮಾರ್ಗ ಮತ್ತು ಜಲಮಾರ್ಗಗಳೆರಡರಿಂದಲೂ ಹೋಗಬಹುದಾಗಿದೆ. ಗೋಕರ್ಣಕ್ಕೆ 3ಕಿಮೀ ದೂರದ ತದಡಿ ಬಂದರಿಗೆ ಉಗಿಹಡಗಿನಿಂದ ಹೋಗಬಹುದು. ಅನಂತರ ದೋಣಿಯ ಮೂಲಕ ಪ್ರವಾಸ. ಕಾರವಾರ ತಲುಪಿ ಕರಾವಳಿ ಹಾದಿಯಲ್ಲೂ ಅಥವಾ ಹುಬ್ಬಳ್ಳಿಯಿಂದ ರಸ್ತೆ ಮಾರ್ಗವಾಗಿಯೂ ಗೋಕರ್ಣವನ್ನು ತಲುಪಬಹುದು. ಈ ಊರಿನ ಸಮೀಪದ ಓಂ ಬೀಚ್ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು. (ಎಚ್.ಆರ್.ಆರ್.ಬಿ.,ಎಸ್.ಕೆಜಿ.)

**ಗೋಕಾಕ :** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು. ಆ ತಾಲ್ಲೂಕು ಮತ್ತು ಹೋಬಳಿ ಕೇಂದ್ರ. ಈ ತಾಲ್ಲೂಕಿನ ಪೂರ್ವಕ್ಕೆ ಬಿಜಾಪುರ ಜಿಲ್ಲೆ, ಆಗ್ನೇಯದಲ್ಲಿ ರಾಮದುರ್ಗ, ದಕ್ಷಿಣದಲ್ಲಿ ಸವದತ್ತಿ, ನೈಋತ್ಯಕ್ಕೆ ಬೈಲಹೊಂಗಲ ಮತ್ತು ಬೆಳಗಾಂವಿ, ಪಶ್ಚಿಮಕ್ಕೆ ಹುಕ್ಕೇರಿ, ವಾಯವ್ಯಕ್ಕೆ ಚಿಕ್ಕೋಡಿ ಮತ್ತು ಉತ್ತರದಲ್ಲಿ ರಾಯಬಾಗ ತಾಲ್ಲೂಕುಗಳು ಇವೆ. ಗೋಕಾಕ ತಾಲ್ಲೂಕಿನಲ್ಲಿ ಅರಭಾವಿ, ಗೋಕಾಕ ಮತ್ತು ಕೌಜಲಗಿ ಹೋಬಳಿಗಳಿದ್ದು ಒಟ್ಟು 104 ಹಳ್ಳಿಗಳೂ 2 ಪಟ್ಟಣಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 1,539.7ಚ.ಕಿಮೀ. ಜನಸಂಖ್ಯೆ 5,25,865.

ತಾಲ್ಲೂಕಿನ ಪಶ್ಚಿಮ ಭಾಗ ಗುಡ್ಡಗಾಡು. ಉಳಿದ ಭಾಗ ಸಮತಟ್ಟಾಗಿದೆ. ಗೋಕಾಕ ಪಟ್ಟಣದ ಬಳಿ ಇರುವ ನಾರಾಯಣಗುಡ್ಡ ತಾಲ್ಲೂಕಿನ ಅತ್ಯಂತ ಎತ್ತರದ ಸ್ಥಳ. ಘಟಪ್ರಭಾ ಮತ್ತು ಮಾರ್ಕಂಡೇಯ ಈ ತಾಲ್ಲೂಕಿನಲ್ಲಿ ಹರಿಯುವ ನದಿಗಳು. ಘಟಪ್ರಭಾ ನದಿ ಈ ತಾಲ್ಲೂಕಿನ ಮಧ್ಯದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ಈ ನದಿಯ ಗೋಕಾಕ ಧಬಧಬೆ ಜಲಪಾತ ಪಟ್ಟಣದ ವಾಯುವ್ಯಕ್ಕೆ ಸು.12ಕಿಮೀ ದೂರದಲ್ಲಿದೆ. ಗೋಕಾಕದ ಬಳಿ ಇರುವ ಪಂಚಮಿಗುಡ್ಡದಲ್ಲಿ ಹಲವು ಬಗೆಯ ಶಿಲೆಗಳು ದೊರಕುತ್ತವೆ. ಗೋಕಾಕದ್ದು ಉಷ್ಣ ವಾಯುಗುಣ. ವಾರ್ಷಿಕ ಸರಾಸರಿ ಮಳೆ 589.08ಮಿಮೀ. ಭೂಮಿ ಕಪ್ಪು ಮತ್ತು ಕಪ್ಪು ಮಿಶ್ರಿತ ಕೆಂಪು ಮಣ್ಣಿನದು. ಹತ್ತಿ, ಜೋಳ ಇಲ್ಲಿಯ ಮುಖ್ಯ ಬೆಳೆಗಳು. ಬೇಳೆ ಕಾಳುಗಳೂ ಬೆಳೆಯುತ್ತವೆ. ಗೋಕಾಕ ಧಬಧಬೆಯ ಬಳಿ ಒಂದು ಜವಳಿ ಗಿರಣಿ ಮತ್ತು ಸಣ್ಣ ಗಾತ್ರದ ಒಂದು ವಿದ್ಯುದುತ್ಪಾದನ ಕೇಂದ್ರ ಇವೆ. ಇಲ್ಲಿ ನಿರ್ಮಿಸಲಾದ ಜಲಾಶಯದಿಂದ ಸುತ್ತಣ ಪ್ರದೇಶಕ್ಕೆ ನೀರಾವರಿ ಸೌಲಭ್ಯವೂ ಒದಗಿದೆ. ಧಬಧಬೆಯ ಹತ್ತಿರ ಒಂದು ತೂಗುಸೇತುವೆಯುಂಟು.

ಈ ತಾಲ್ಲೂಕಿನ ಪಶ್ಚಿಮದ ಎಲ್ಲೆಯುದ್ದಕ್ಕೂ ಬೆಳಗಾಂವಿ ಪುಣೆ ರೈಲುಮಾರ್ಗ ಹಾದುಹೋಗಿದೆ. ತಾಲ್ಲೂಕಿನಲ್ಲಿ ಉತ್ತಮ ರಸ್ತೆಗಳಿವೆ. ಈ ತಾಲ್ಲೂಕಿನ ಕೆಲವು ಮುಖ್ಯ ಸ್ಥಳಗಳಲ್ಲಿ ಅಂಕಲಗಿ ಗೋಕಾಕಕ್ಕೆ ನೈಋತ್ಯದಲ್ಲಿದೆ. ಇಲ್ಲಿಯ ಲಕ್ಷ್ಮಿಗುಡಿ ಮತ್ತು ವಿರಕ್ತಮಠ ಪ್ರಸಿದ್ಧವಾದವು. ಗೋಕಾಕ ಪಟ್ಟಣಕ್ಕೆ ಈಶಾನ್ಯದಲ್ಲಿ 11ಕಿಮೀ ದೂರದಲ್ಲಿರುವ ಕಲ್ಲೋಳಿಯಲ್ಲಿ (ನೋಡಿ) 1218ರ ಒಂದು ಜೈನಬಸದಿಯೂ ಒಂದು ಮಾರುತಿ ದೇವಾಲಯವೂ ಇವೆ. ಈ ತಾಲ್ಲೂಕಿನ ಕುಲಗೋಡದ ಬಲಭೀಮನ ದೇವಾಲಯ, ಕೌಜಲಗಿಯ ಹನುಮಂತ ದೇವರ ದೇವಾಲಯ ಪ್ರಸಿದ್ಧವಾದವು. ಭೈರನಹಳ್ಳಿಯ ರಾಮಮಂದಿರ, ರಾಮತೀರ್ಥ ಮತ್ತು ಇಲ್ಲಿ ನಡೆಯುವ ಶ್ರಾವಣಮಾಸದ ಜಾತ್ರೆ ಪ್ರಸಿದ್ಧ. ಯಾದವಾಡದ ಬಸವಣ್ಣನ ದೇವಾಲಯ, ಸುಣಧೋಳಿಯ ಜಡಿಯಪ್ಪನ ಮಂದಿರ ಹೆಸರಾದವು.

**ಪಟ್ಟಣ :** ಬೆಳಗಾಂವಿಗೆ ಈಶಾನ್ಯದಲ್ಲಿ 68ಕಿಮೀ ದೂರದಲ್ಲೂ ದಕ್ಷಿಣ ರೈಲ್ವೆ ಮಾರ್ಗದ ಗೋಕಾಕ ರೋಡ್ ನಿಲ್ದಾಣದಿಂದ 15ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 67,166. ಬಣ್ಣದ ಆಟಿಕೆಗಳಿಗೂ ಕರದಂಟು ಎಂಬ ಸಿಹಿ ಖಾದ್ಯಕ್ಕೂ ಈ ಊರು ಪ್ರಸಿದ್ಧ. ಗೋಕಾಕದ ಆಟಿಕೆ ಕೈಗಾರಿಕೆ 150 ವರ್ಷಗಳಷ್ಟು ಹಳೆಯದಾಗಿದ್ದು ಇಲ್ಲಿ ತಯಾರಾಗುವ ಆಟಿಕೆಗಳು ಹೊರದೇಶಗಳಿಗೂ ಮುಖ್ಯವಾಗಿ ಅಮೆರಿಕಕ್ಕೆ ನಿರ್ಯಾತವಾಗುತ್ತವೆ. ಆದರೆ ಈಗ ಈ ಕಸಬುದಾರರ ಸಂಖ್ಯೆ ಕಡಿಮೆಯಾಗಿದೆ. ಅವರಿಗೆ ಉತ್ತೇಜನ ನೀಡಲು ಒಂದು ಸಹಕಾರ ಸಂಘವುಂಟು. ಬಟ್ಟೆ ನೇಯುವ ಮತ್ತು ಅದಕ್ಕೆ ಬಣ್ಣ ಹಾಕುವ ಕಸಬುಗಳು ಉತ್ತಮ ಸ್ಥಿತಿಯಲ್ಲಿದ್ದು ಕ್ರಮೇಣ ನಶಿಸಿದ್ದುವು. ಸರ್ಕಾರ ಇವಕ್ಕೆ ಈಚೆಗೆ ಪ್ರೋತ್ಸಾಹ ನೀಡುತ್ತಿದೆ. (ಎನ್.ಸಿ.ವಿ.)

ಚಿದಂಬರೇಶ್ವರರ ಶಿಷ್ಯರಾದ ಬೋಕೆಮಹಾರಾಜರು ಗೋಕಾಕದವರು. ಗಳಗನಾಥರು ತಮ್ಮ ಮಹಾಭಾರತದ ಆದಿಪರ್ವವನ್ನು ಇಲ್ಲಿಯ ವೆಂಕಟೇಶ್ವರ ಗುಡಿಯಲ್ಲಿ ಕುಳಿತು ಬರೆದರು. ಆದಿಶಂಕರಾಚಾರ್ಯರ ದೊಡ್ಡ ಗುಡಿ ಇಲ್ಲಿದೆ. ಅಖಿಲಭಾರತ ಖ್ಯಾತಿಯ ಚಿತ್ರಗಾರರಾದ ಸಾಂಬಪ್ಪ ಚಿತ್ರಗಾರ, ಶಕರಂಪ್ಪ ಚಿತ್ರಗಾರ ಗೋಕಾಕದವರು. ಅವರು ತಯಾರಿಸಿದ ಗಣಪತಿಗಳು ಅನೇಕ ರಾಜ್ಯಗಳಲ್ಲಿ ಪ್ರಸಿದ್ಧಿ ಪಡೆದಿವೆ. ಇಲ್ಲಿ ಪುರಸಭಾಡಳಿತವಿದೆ.

ಗೋಕಾಕಕ್ಕೆ ಸಾಕಷ್ಟು ಪ್ರಾಚೀನ ಇತಿಹಾಸವುಂಟು. 1047ರ ಒಂದು ಶಾಸನದಲ್ಲಿ ಈ ಸ್ಥಳವನ್ನು ಗೋಕಾಗೆ ಎಂದು ಉಲ್ಲೇಖಿಸಿದೆ. ಇಲ್ಲಿರುವ ಬೆಟ್ಟದ ಮೇಲಿನ ಕೋಟೆಯನ್ನು ಬಿಜಾಪುರದ ಆದಿಲ್‌ಶಾಹೀ ಸುಲ್ತಾನನೊಬ್ಬ ಕಟ್ಟಿಸಿದ್ದೆಂದು ಪ್ರತೀತಿ. 1685ರಲ್ಲಿ ಈ ಊರು ಅಂದಿನ ಸ್ಥಳೀಯ ಸರ್ಕಾರದ ಕೇಂದ್ರವಾಗಿತ್ತು. 1717-54ರಲ್ಲಿ ಸವಣೂರು ನವಾಬರ ಅಧೀನಕ್ಕೆ ಒಳಪಟ್ಟಿತ್ತು. ಆಗ ಇಲ್ಲಿ ಹಲವು ಮಸೀದಿಗಳ ನಿರ್ಮಾಣವಾಯಿತು. ಅನಂತರ ಮತ್ತೆ ಮರಾಠ ವಂಶವೊಂದರ ವಶಕ್ಕೆ ಬಂದ ಈ ಪಟ್ಟಣ ಗೋವಿಂದರಾವ್ ಪಟವರ್ಧನರ ನಿಧನಾನಂತರ 1836ರಲ್ಲಿ ಇಂಗ್ಲಿಷರ ವಶವಾಯಿತು. *

**ಗೋಕಾಕ ಧಬಧಬೆ :** ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಘಟಪ್ರಭಾ ನದಿಯ ಒಂದು ಸುಂದರ ಜಲಪಾತ. ಗೋಕಾಕ ಪಟ್ಟಣದ

ಗೋಕಾಕ ಧಬಧಬೆಯ ಒಂದು ರಮ್ಯ ನೋಟ

ವಾಯುವ್ಯಕ್ಕೆ 12ಕಿಮೀ ದೂರದಲ್ಲಿದೆ. ಗೋಕಾಕ ರೋಡ್ ರೈಲ್ವೆ ನಿಲ್ದಾಣದಿಂದ 5ಕಿಮೀ ದೂರದಲ್ಲಿದೆ. ಜಲಪಾತ ಕುದುರೆಲಾಳದಾಕಾರವಿದ್ದು

ಪ್ರಕಾರ ವಿಭಿನ್ನತೆಯ ಗುರುತಿಸುವ ಪುರಾಣದರ್ಶನವಾಗಿದೆ (ಎಪಿಕ್ ವಿಷನ್). ವ್ಯಕ್ತಿವ್ಯಕ್ತಿಗಳ ಸ್ತೋತ್ರಾರ್ಹ ಗುಣಗಳನ್ನು ಅದು ಬಣ್ಣಿಸಿದರೂ ತನ್ನ ವಿಮರ್ಶಕ ಗುಣವನ್ನು ಬಿಡದೆ, ತನ್ನ ವ್ಯಕ್ತಿಗತ ಮನೋಧರ್ಮದ ಬೆಳೆವಣಿಗೆಯಲ್ಲಿ ಅವರನ್ನು ಪಾಲುಗಾರರನ್ನಾಗಿ ಮಾಡುತ್ತದೆ. ಊರ್ಣನಾಭದಲ್ಲಿ (1961) ಮತ್ತೆ ತಾಂತ್ರಿಕ ಪ್ರಯೋಗಶೀಲತೆ, ಇಂದಿಲ್ಲ ನಾಳೆ (1965) ಎಂಬ ಕೃತಿಯಲ್ಲಿ ಮತ್ತೆ ಚಂಪೂ ಪ್ರಯೋಗ, ತ್ರಿಶಂಕುವಿನ ಪ್ರಜ್ಞಾಪ್ರಭಾತ (1965) ಮತ್ತು ಪುಣ್ಯ ಭೂಮಿಗಳಲ್ಲಿ (1966) ಮತ್ತೆ ಬುದ್ಧಿಭಾವಗಳ ಎರಕ ಕಂಡುಬಂದಿವೆ. ಭಾವರಾಗ ಎಂಬ ಗ್ರಂಥ (1969) ಪಯಣವೆಂಬ ಸಂಗ್ರಹದ ಕೋಮಲ ಭಾವಪರತೆಯನ್ನು ಛಂದಸ್ಸಿನ ಶಾಸನಕ್ಕೆ ಸಮರ್ಥವಾಗಿ ಇಳಿಸಿದ ಕವಿಪ್ರತಿಭೆ ಇನ್ನೂ ಯಾವ ಹೊಸ ದಾರಿ ತುಳಿದೀತೆಂಬ ನೇಮುಕಗಳನ್ನು ಕಾಣಿಸುವುದಿಲ್ಲ. ಕೊನೆಯ ದಿನ (1970), ಭಾಗವತ ನಿಮಿಷಗಳು (1972), ಸಿಮ್ಫ಼ಾ ಸಿಂಫೋನಿ (1973) - ಇವು ಇವರ ಇತರ ಕವನ ಸಂಕಲನಗಳು. ಗೋಕಾಕರೇ ಹುಟ್ಟು ಹಾಕಿದ ನವ್ಯಕಾವ್ಯದಿಂದ ಪ್ರಬುದ್ಧಗೊಂಡ ಹೊಸ ಪೀಳಿಗೆಯ ವಿಮರ್ಶಕರ ಕಣ್ಣಿಗೆ ಅವರ ಚಿಂತನಪರ ಕಾವ್ಯವೊಂದೇ ಕಂಡದ್ದು ವಿಪರ್ಯಾಸಕ್ಕೆ ಕಾರಣವಾಗಿದೆ. ಇವರ ಇಜ್ಜೋಡು (1934) ಲೋಕಾನುಭವದಿಂದ ತುಂಬಿದ ಮಾರ್ಗದರ್ಶಿ ಕಾದಂಬರಿಗಳಲ್ಲೊಂದು. ಇದೇ ಕಾದಂಬರಿ ಅನಂತರ ಬೆಳೆದು ಸಮರಸವೇ ಜೀವನ (1967) ಎಂಬ ಮಹಾ ಕಾದಂಬರಿಯಾಯಿತು. 1,268 ಪುಟಗಳಷ್ಟು ದೊಡ್ಡದಾಗಿರುವ ಈ ಕಾದಂಬರಿ ತನ್ನ ವೈಶಾಲ್ಯಕ್ಕೆ ಕ್ಷೇತ್ರಬಾಹುಳ್ಯಕ್ಕೆ ಪಾತ್ರ ಬಾಹುಳ್ಯಕ್ಕೆ ಅಗತ್ಯವಾದ ಸಂವಿಧಾನ ಕೌಶಲವನ್ನೂ ಜೀವನಾನುಭವವನ್ನೂ ದರ್ಶನವನ್ನೂ ಪ್ರದರ್ಶಿಸುತ್ತದೆ.

ದ್ಯಾವಾಪೃಥಿವೀಯಲ್ಲಿ ಪರಸ್ಪರ ಪೂರಕವಾದ ನೀರದ ಮತ್ತು ಇಳಾಗೀತವೆಂಬ ಎರಡು ಭಾಗಗಳಿವೆ. ನೆಲದಲ್ಲಿ ನಿಂತು ಆಕಾಶವನ್ನು ಕಂಡ ಪರಿ ನೀರದದಲ್ಲಿ ಅಭಿವ್ಯಕ್ತವಾಗಿದ್ದರೆ ಆಕಾಶದಿಂದ ನೆಲದತ್ತ ಹಾಯಿಸಿದ ದೃಷ್ಟಿ ಇಳಾಗೀತದಲ್ಲಿ ಕಾಣುತ್ತದೆ. ನೀರದದಲ್ಲಿ ಮೋಡ ಕಾಮರೂಪಿಯಾಗಿ ಮರ್ತ್ಯಜೀವನಕ್ಕೊಡ್ಡಿದ ಬಹುಬಗೆಯ ಪ್ರತಿಮೆಯಾಗಿ ನಾನಾರ್ಥವ್ಯಂಜಕವಾಗಿ ಕಾಣಿಸಿಕೊಳ್ಳುತ್ತದೆಯಲ್ಲದೆ ಒಮ್ಮೊಮ್ಮೆ ಒಂದೊಂದು ತತ್ತ್ವವನ್ನು ಪ್ರಕಟಿಸುತ್ತದೆ. ಇಳಾಗೀತದಲ್ಲಿ ಕವಿ ಬೆಳಗಾಂವಿಯಿಂದ ದೆಹಲಿಯವರೆಗೆ ವಿಮಾನಯಾನ ಮಾಡಿದಾಗ ಕಂಡ ಭೌಗೋಳಿಕ ದೃಶ್ಯಗಳು ವಿವಿಧ ಪ್ರತಿಮೆಗಳಾಗಿ ಬರುತ್ತವೆ. ಒಟ್ಟು ಕೃತಿಯ ಉದ್ದಕ್ಕೂ ಕವಿಯ ಕಲ್ಪನಾ ವಿಲಾಸ, ಚಿಂತನಪರತೆ, ಪುರಾಣಪರಿಜ್ಞಾನ, ಆಧ್ಯಾತ್ಮಿಕ ಶ್ರದ್ಧೆ, ವೈಜ್ಞಾನಿಕ ದೃಷ್ಟಿ ವೇದ್ಯವಾಗುತ್ತವೆ.

ವಿಶ್ವಮಾನವನಾಗಿ, ಬ್ರಹ್ಮರ್ಷಿಯಾಗಿ, ವೇದ ದ್ರಷ್ಟಾರನಾಗಿ ಕ್ಷತ್ರಿಯದೊರೆಯಾಗಿ ಮಹಾಯೋಗಿಯಾಗಿ ಬದುಕಿ ಬಾಳಿದ ವಿಶ್ವಾಮಿತ್ರ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು, ಆರ್ಯದಸ್ಯು ಸಂಸ್ಕೃತಿಗಳ ಸಂಗಮ ಹಾಗೂ ಸಂಘರ್ಷಗಳನ್ನು ಭಾರತ ಸಿಂಧುರಶ್ಮಿ ಎಂಬ ಮಹಾಕಾವ್ಯದಲ್ಲಿ ಚಿತ್ರಿಸಿದ್ದಾರೆ. ಈ ಮಹಾಕಾವ್ಯ ಸರಳ ರಗಳೆಯ ಛಂದಸ್ಸಿನಲ್ಲಿ ರಚಿತವಾಗಿದೆ.

ಗೋಕಾಕರ ವಿಮರ್ಶಾಪ್ರಜ್ಞೆ ಕೇವಲ ಇಂಗ್ಲಿಷ್ ವಿಮರ್ಶೆಗೆ ಎಂದೂ ಮಾರು ಹೋಗಿಲ್ಲ. ಕನ್ನಡ ನೆಲದಿಂದ ಅದು ಪುನಃ ಪುನಃ ಶಕ್ತಿ ಪಡೆದಿದೆಯಲ್ಲದೆ ಮಾರ್ಗದರ್ಶಿಯೂ ಆಗಿದೆ. ಕನ್ನಡದಲ್ಲಿ ವಿಮರ್ಶೆಯ ಕೃತಿಗಳು ವಿರಳವಾಗಿದ್ದ ಸಂದರ್ಭದಲ್ಲಿ ಕವಿಕಾವ್ಯ ಮಹೋನ್ನತಿ (1956) ಎಂಬ ಇವರ ಕೃತಿ ಬಂತು. ರಸಕಾವ್ಯ ಪ್ರಗಲ್ಭಗೊಂಡಾಗ -ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು (1946) ಎಂಬ ಗ್ರಂಥ ಬಂತು. ನವ್ಯಕಾವ್ಯ ಬಲಿತು ತನ್ನನ್ನೇ ತಾನು ಅರಿಯಲು ಯತ್ನಿಸುತ್ತಿದ್ದಾಗ ನವ್ಯತೆ ಹಾಗೂ ಕಾವ್ಯ ಜೀವನ (1955) ಎಂಬ ಕೃತಿ ರಚಿತವಾಯಿತು. ವಿಶ್ವಮಾನವದೃಷ್ಟಿ (1971), ಸೌಂದರ್ಯ ಮೀಮಾಂಸೆ (1973), ಆಂಗ್ಲ ಸಾಹಿತ್ಯ ನೀಡಿದ ಸ್ಫೂರ್ತಿ (1973), ಅರ್ಪಣದೃಷ್ಟಿ (1973) ಮೊದಲಾದ ಕೃತಿಗಳಲ್ಲಿ ನಾವು ಗೋಕಾಕರ ವೈಚಾರಿಕ ನಿಲವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಹೀಗೆ ಸಾಮಯಿಕ ಪ್ರಜ್ಞೆ ಗೋಕಾಕರ ವಿಮರ್ಶೆಯ ಗುಣವಾಗಿದೆ. ಗೋಕಾಕರು ಜನನಾಯಕ (1939), ವಿಮರ್ಶಕ ವೈದ್ಯ (1947), ಯುಗಾಂತರ (1947), ಮುನಿದ ಮಾರಿ (1970) ನಾಟಕಗಳನ್ನು ರಚಿಸಿದ್ದಾರೆ. ಆದರೆ ಇವೆಲ್ಲ ಪ್ರಯೋಗಶೀಲ ನಾಟಕಗಳು. ಇವು ಹೆಚ್ಚಿನ ಯಶ ಪಡೆದುಕೊಳ್ಳಲಿಲ್ಲ.

ಗೋಕಾಕರು ಇಂಗ್ಲಿಷ್‌ನಲ್ಲೂ ಕೃತಿರಚನೆ ಮಾಡಿದ್ದಾರೆ. ದಿ ಸಾಂಗ್ ಆಫ್ ಲೈಫ್ (1947), ಇನ್ ಲೈಫ್ಸ್ ಟೆಂಪಲ್ (1965) - ಇವು ಇವರ ಕಾವ್ಯ ಸಂಕಲನಗಳು. ನರಹರಿ ಪ್ರಾಫೆಟ್ ಆಫ್ ನ್ಯೂ ಇಂಡಿಯಾ (1972) ಎಂಬುದು ಇವರ ಇಂಗ್ಲಿಷ್ ಕಾದಂಬರಿ. ಇವರು ಇಂಗ್ಲಿಷಿನಲ್ಲಿ ಕಾವ್ಯವಿಮರ್ಶೆ ಮಾಡುವಲ್ಲಿ, ಸ್ವತಂತ್ರ ಭಾರತದಲ್ಲಿ ಇಂಗ್ಲಿಷ್ ನಿರ್ವಹಿಸಬೇಕಾದ ಕಾರ್ಯವನ್ನು ನಿಟ್ಟುಗೊಳಿಸುವಲ್ಲಿ ದಿ ಪೊಯಿಟಿಕ್ ಅಪ್ರೋಚ್ ಟು ಲಾಂಗ್ವೇಜ್ (1952), ಇಂಗ್ಲಿಷ್ ಇನ್ ಇಂಡಿಯ, ಇಟ್ಸ್ ಪ್ರಸೆಂಟ್ ಅಂಡ್ ಫ್ಯೂಚರ್ (1962), ಇಂಡಿಯ ಅಂಡ್ ವರ್ಲ್ಡ್ ಕಲ್ಚರ್ (1972), ಎಸ್ಸೇಸ್ ಇನ್ ಇಂಡೊ ಆಂಗ್ಲಿಯನ್ ಲಿಟರೇಚರ್ (1973) ಎಂಬ ಗ್ರಂಥಗಳನ್ನು ರಚಿಸಿದ್ದಾರೆ. (ಎಸ್.ಎಂ.ಪಿ.)

ದಿ ಗೋಲ್ಡನ್ ಟ್ರೆಶರಿ ಆಫ್ ಇಂಡೋ ಆಂಗ್ಲಿಯನ್ ಪೊಯಿಟ್ರಿ ಎಂಬ ಒಂದು ಕಾವ್ಯ ಸಂಕಲನ ಇವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ (1970). ದ.ರಾ.ಬೇಂದ್ರೆ ಹಾಗೂ ಅರವಿಂದರನ್ನು ಕುರಿತು ಇಂಗ್ಲಿಷ್‌ನಲ್ಲಿ ಡಿ.ಆರ್.ಬೇಂದ್ರೆ, ಪೊಯೆಟ್ ಅಂಡ್ ಸೀರ್ (1973), ಶ್ರೀ ಅರವಿಂದೊ, ಸೀರ್ ಅಂಡ್ ಪೊಯೆಟ್ (1973) ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ತಮ್ಮ ಬದುಕಿನುದ್ದಕ್ಕೂ ಇಂಗ್ಲಿಷ್ ಭಾಷಾ ಸಾಹಿತ್ಯದ ನಿಕಟ ಸಂಬಂಧಿಗಳಾಗಿದ್ದರೂ ಗೋಕಾಕರ ಪ್ರತಿಭೆ ಮೊದಲಿಂದ ಕೊನೆಯವರೆಗೆ ಕನ್ನಡದತ್ತ ಒಲಿದಿತ್ತು. ಇವರು 1992 ಏಪ್ರಿಲ್ 28ರಂದು ನಿಧನರಾದರು.

ಗೋಕಾಕರು ಇಂಗ್ಲೆಂಡಿಗೆ ಮೂರು ಬಾರಿ ಹೋಗಿ ಬಂದುದಲ್ಲದೆ ಜಪಾನಿಗೂ (1957) ಅಮೆರಿಕ ಸಂಯುಕ್ತಸಂಸ್ಥಾನಗಳಿಗೂ (1958) ಬೆಲ್ಜಿಯಮ್ಮಿಗೂ (1959) ಪೂರ್ವ ಆಫ್ರಿಕಕ್ಕೂ (1961) ಭೇಟಿ ಕೊಟ್ಟಿದ್ದರು. ಕವಿಗಳೂ ವಿಮರ್ಶಕರೂ ಶಿಕ್ಷಣತಜ್ಞರೂ ಆದ ಇವರನ್ನು ಕನ್ನಡನಾಡು ಅನೇಕ ಬಗೆಯಲ್ಲಿ ಗೌರವಿಸಿದೆ. ರಾಯಚೂರು ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ (1934), ಮುಂಬಯಿ ಸಾಹಿತ್ಯ ಸಮ್ಮೇಳನ ಕವಿಗೋಷ್ಠಿಯ ಅಧ್ಯಕ್ಷತೆ (1950), ಬಳ್ಳಾರಿಯಲ್ಲಿ ನಡೆದ 40ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (1958), ಪಿ.ಇ.ಎನ್. ಅಧಿವೇಶನ (1957) ಮತ್ತು ಅಂತಾರಾಷ್ಟ್ರೀಯ ಕವಿಮೇಳಗಳ (1955) ಸದಸ್ಯತ್ವ, ದ್ಯಾವಾಪೃಥಿವೀ ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಹಾಗೂ ಪದ್ಮಶ್ರೀ ಪ್ರಶಸ್ತಿ (1961), ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ (1967), ಯೂನಿವರ್ಸಿಟಿ ಆಫ್ ಪೆಸಿಫಿಕ್ ವಿಶ್ವವಿದ್ಯಾಲಯದ (ಅಮೆರಿಕ) ಗೌರವ ಡಾಕ್ಟರೇಟ್ ಪದವಿ, ವಿನಾಯಕ ವಾಙ್ಮಯ ಪ್ರಶಸ್ತಿ ಗ್ರಂಥ ಸಮರ್ಪಣೆ (1969) ಇತ್ಯಾದಿ ಗೌರವಗಳು ಇವರಿಗೆ ಸಂದಿವೆ. ಇವರ ಭಾರತ ಸಿಂಧುರಶ್ಮಿ ಮಹಾಕಾವ್ಯಕ್ಕೆ 1990ರ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. *

**ಗೋಗಿ :** ಗುಲ್ಬರ್ಗ ಜಿಲ್ಲೆ ಶಾಹಪುರ ತಾಲ್ಲೂಕಿನಲ್ಲಿ ಕಸಬೆಯಿಂದ 11ಕಿಮೀ ಪಶ್ಚಿಮಕ್ಕೆ ಸಿಂದಗಿ ರಸ್ತೆಯಲ್ಲಿರುವ ದೊಡ್ಡ ಗ್ರಾಮ. ಆದಿಲ್‌ಶಾಹೀ ಅರಸರ ಕಾಲದ ಅನೇಕ ವಾಸ್ತುಕೃತಿಗಳಿಂದ ಪ್ರಸಿದ್ಧವಾಗಿದೆ. ಊರಿಗೆ ಸ್ವಲ್ಪ ದೂರದಲ್ಲಿ ಹೆದ್ದಾರಿಗೆ ಸಮೀಪವಾಗಿ ಇರುವ ಕಾಲಿ ಮಸೀದಿ ಸುಂದರವಾದ ಪ್ರಮುಖ ಕೃತಿ. ಇಬ್ರಾಹೀಂ ಆದಿಲ್‌ಷಾನ (1580-1627) ಮಗಳು ಸುಲ್ತಾನಾ ಫಾತಿಮಾ ಇದನ್ನು ಕಟ್ಟಿಸಿದಳೆಂಬ ಹೇಳಿಕೆಯಿದ್ದರೂ ಶೈಲಿಯನ್ನು ನೋಡಿದಲ್ಲಿ 15ನೆಯ ಶತಮಾನದ ಕಡೆಯ ಭಾಗದಲ್ಲಿ ಇದರ ನಿರ್ಮಾಣವಾಗಿರಬೇಕೆಂದು ತೋರುತ್ತದೆ. ಮಸೀದಿಯ ಮುಖಭಾಗದ ಕಮಾನುಗಳಲ್ಲಿ ಹಲವು ಕಾರ್ನೀಸುಗಳ ಅಲಂಕರಣವಿದೆ. ಪ್ರಾರ್ಥನಾಮಂದಿರದ ಒಳಚಾವಣಿ ಗೋಲಾಕೃತಿಯಲ್ಲಿದ್ದು ಅಕ್ಕಪಕ್ಕಗಳಲ್ಲಿ ಜಾಲಕಾಲಂಕರಣವಿದೆ. ಮುಂದಿನ ಗೋಡೆ ಎರಡು ಅಂತಸ್ತುಗಳಲ್ಲಿ ಮೇಲೆದ್ದು ಮೇಲಂತಸ್ತಿನಲ್ಲಿ ಮುಂದೊಂದು ಅಲಂಕೃತ ಅಡ್ಡಗೋಡೆ ಅದರ ಎರಡು ಕಡೆಯೂ ಕಿರುಗಂಬ ಮತ್ತು ಕಮಾನು. ಮೇಲೆ ಸಾಲಾಗಿ ಚಾಚುಪೀಠಗಳು, ಅವುಗಳನ್ನು ನೆಮ್ಮಿಕೊಂಡು ಇಳಿಜಾರು ಲೋವೆಗಳು ಇದ್ದು ಮೇಲಿನ ಪಾಗಾರಕ್ಕೆ ಕೆಳಗೆ ಒಂದು ಸಾಲು ಕಿರುಕಮಾನುಗಳ ಅಲಂಕರಣ, ಮೇಲೆ ಎಲೆಬಳ್ಳಿಗಳಾಕೃತಿಯಲ್ಲಿ ಬಿಡಿಸಿರುವ ತೆನೆಯ ಸಾಲು, ನಡುವೆ ಒಂದೊಂದು ಮಿನರೆಟ್ಟು ಇವೆ. ಮಿಹ್ರಾಬಿನ ಮೇಲೆ ಎತ್ತರವಾದ ಆದರೆ ಸಣ್ಣದಾದ ಒಂದು ಗೊಮ್ಮಟವೂ ಅದರ ಮೇಲೆ ಲೋಹ

ಕೊಡುವಿಕೆ ಸಸ್ಯ ಸಂರಕ್ಷಣೆಯು ಕ್ರಮಗಳೆಲ್ಲ ನೀರಾವರಿ ಗೋದಿಗೆ ಇರುವಂತೆಯೆ ಇವೆ. ಎಕರೆಗೆ 3-5 ಕ್ವಿಂಟಾಲು ಇಳುವರಿ ಪಡೆಯಬಹುದು.

ಗೋದಿಯ ಬೇಸಾಯಕ್ಕೆ ಹೆಚ್ಚು ಕಾಲ ತನಿ ಇರಬಹುದಾದಂಥ ಜೇಡಿ ಅಥವಾ ಎರೆಮಣ್ಣು ಉತ್ತಮ. ಆದ್ದರಿಂದಲೇ ಕರ್ನಾಟಕದ ಉತ್ತರದ ಜಿಲ್ಲೆಗಳಲ್ಲಿ ಇದರ ಬೇಸಾಯ ಹೆಚ್ಚು. ಈ ಪ್ರದೇಶದಲ್ಲಿ ಮಳೆಯ ವಾರ್ಷಿಕ ಮೊತ್ತ 508-1016ಮಿಮೀ. ಭೂಮಿಯಲ್ಲಿ ಪೊಟ್ಯಾಷ್ ಅಂಶ ಹೆಚ್ಚಾಗಿರುತ್ತದೆ. ಕೊಂಚಮಟ್ಟಿಗೆ ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ರೀತಿಯ ಮಣ್ಣು ಅಲ್ಲಲ್ಲಿ ಇದೆ. (ಕೆ.ಆರ್.ಜಿ.)

**ಗೋಪಾಲ ಅಯ್ಯಂಗಾರ್, ಎ.ಆರ್.:** 1909 - ಭಾರತದ ಪ್ರತಿಭಾನ್ವಿತ ಜೀವಶಾಸ್ತ್ರ ವಿಜ್ಞಾನಿ. ಆನೇಕಲ್ಲು ರಾಮಸ್ವಾಮಿ ಅಯ್ಯಂಗಾರ್ ಗೋಪಾಲ ಅಯ್ಯಂಗಾರ್ ಎಂಬುದು ಇವರ ಪೂರ್ಣ ಹೆಸರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಅಧ್ಯಾಪಕರಾಗಿದ್ದರು (1933-38). ಅನಂತರ ಅಮೆರಿಕದ ಟೊರಾಂಟೋ ವಿಶ್ವವಿದ್ಯಾಲಯದಲ್ಲಿ ವಿನ್ಸೆಂಟ್ ಮ್ಯಾಸೆ ಫೆಲೊ ಆಗಿಯೂ (1938-39) ಬೋಧನೆ ಮತ್ತು ಸಂಶೋಧನ ಫೆಲೊ ಆಗಿಯೂ (1939-41) ಇದ್ದು ಪಿಎಚ್.ಡಿ. ಪಡೆದು (1941), ಅದೇ ವಿಶ್ವವಿದ್ಯಾಲಯದಲ್ಲಿ ಹಿರಿಯ ಬೋಧಕ ಸಹ ಸಂಶೋಧಕರಾಗಿದ್ದರು (1941-45). ಮುಂದೆ ಸೆಯಿಂಟ್ ಲೂಯಿಯಲ್ಲಿ ಬರ್ನಾರ್ಡ್ ಚರ್ಮ ಮತ್ತು ಅರ್ಬುದ ರೋಗಗಳ ಆಸ್ಪತ್ರೆಯಲ್ಲಿ ಕೆಟರಿಂಗ್ ಸಂಶೋಧನ ಫೆಲೊ ಮತ್ತು ವಾಷಿಂಗ್‌ಟನ್ ವಿಶ್ವವಿದ್ಯಾನಿಲಯದ ಸಂಶೋಧಕ ಸಹೋದ್ಯೋಗಿಯಾಗಿ ಇದ್ದರು (1945-47). ಅನಂತರ ಮುಂಬಯಿಯ ಟಾಟಾ ಮೆಮೋರಿಯಲ್ ಆಸ್ಪತ್ರೆಯಲ್ಲಿ ಮುಖ್ಯ ಸಂಶೋಧನ ಜೀವಕೋಶ ತಜ್ಞರಾಗಿ ಸೇವೆ ಸಲ್ಲಿಸಿ (1947-48) ಅದೇ ಆಸ್ಪತ್ರೆಯಲ್ಲಿ ಪರಮಾಣುಶಕ್ತಿ ನಿಯೋಗ ಅಂಗದ ಜೀವಕೋಶ ವಿಭಾಗದ ಮುಖ್ಯಸ್ಥರಾಗಿದ್ದರು (1948-51). ಅನಂತರ ಲೇಡಿ ಟಾಟಾ ಸಂಸ್ಥೆಯ ಇಂಟರ್ ನ್ಯಾಷನಲ್ ಫೆಲೋ ಆಗಿ ಲಂಡನ್ನಿನ ಚೆಸ್ಟರ್ ಬಿಯಾಟಿ ಸಂಶೋಧನ ಸಂಸ್ಥೆ ಮತ್ತು ರಾಯಲ್ ಕ್ಯಾನ್ಸರ್ ಆಸ್ಪತ್ರೆ ಹಾಗೂ ಸ್ಲಾಕ್ ಹೋಮ್‌ನ ಜೀವಕೋಶ ಸಂಶೋಧನೆ ಮತ್ತು ತಳಿಶಾಸ್ತ್ರದ ಕಾಲೋಲಿರಿಸ್ಥ ಸಂಸ್ಥೆಯಲ್ಲಿ ಸ್ವಲ್ಪ ಕಾಲವಿದ್ದರು. ಅನಂತರ ಮುಂಬಯಿಯ ಪರಮಾಣುಶಕ್ತಿ ಇಲಾಖೆಯ ಜೀವಶಾಸ್ತ್ರ ವಿಭಾಗದ ಸಹನಿರ್ದೇಶಕ (1953-55), ಉಪ ಮುಖ್ಯ ವಿಜ್ಞಾನಾಧಿಕಾರಿ (1955-59), ಜೀವಶಾಸ್ತ್ರ ಮತ್ತು ವೈದ್ಯಕೀಯ ವಿಭಾಗಗಳ ಮುಖ್ಯ ವಿಜ್ಞಾನಾಧಿಕಾರಿ ಮತ್ತು ಮುಖ್ಯಸ್ಥ (1960-62) -ಈ ಹುದ್ದೆಗಳನ್ನು ನಿರ್ವಹಿಸಿ 1962-67ರಲ್ಲಿ ಟ್ರಾಂಬೆಯ ಪರಮಾಣುಶಕ್ತಿ ಸಂಸ್ಥೆಯಲ್ಲಿ ಜೀವಶಾಸ್ತ್ರ ವಿಭಾಗದ ನಿರ್ದೇಶಕರಾಗಿದ್ದರು. ಮುಂದೆ 1968-71ರಲ್ಲಿ ಭಾಭಾ ಪರಮಾಣು ಸಂಶೋಧನ ಕೇಂದ್ರದಲ್ಲಿ ಜೀವಶಾಸ್ತ್ರ ವೈದ್ಯಕೀಯ ವಿಭಾಗದ ನಿರ್ದೇಶಕರಾಗಿಯೂ ಅನಂತರ ಪರಮಾಣುಶಕ್ತಿ ಇಲಾಖೆಯ ಸಲಹೆಗಾರರಾಗಿಯೂ ಇದ್ದರು (1971-76). ಅನಂತರ ಪಶ್ಚಿಮ ಜರ್ಮನಿಯ ಹೊನ್ನೋವರ್ ವಿಶ್ವವಿದ್ಯಾಲಯದ ಬಯೋಫಿಸಿಕ್ಸ್ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದರು (1976).

ಜೀವಕೋಶ ಶಾಸ್ತ್ರದ ಮೂಲ ಮತ್ತು ಔಚಿತ್ಯಗಳ ವಿಚಾರವಾಗಿ, ಜೀವಕೋಶ ತಳಿಶಾಸ್ತ್ರ, ಜೀವಕೋಶ ರಸಾಯನಶಾಸ್ತ್ರ, ಅರ್ಬುದ ಸಂಶೋಧನೆ, ವಿಕಿರಣ ಜೀವಶಾಸ್ತ್ರ, ಮುಖ್ಯ ಫಸಲು ಸಸ್ಯಗಳ ಮೇಲೆ ವಿಕೃತಿ ಸಂಶೋಧನೆ ಮತ್ತು ಮನುಷ್ಯನ ಮೇಲೆ ವಿಕಿರಣ ಪ್ರಭಾವ ಇವುಗಳ ಸಂಬಂಧವಾಗಿ ಇವರು ಬರೆದಿರುವ ಲೇಖನಗಳು ಅಂತಾರಾಷ್ಟ್ರೀಯ ಖ್ಯಾತಿಗಳಿಸಿವೆ. ಈವರೆಗೆ ಸುಮಾರು 58ಕ್ಕೂ ಹೆಚ್ಚು ವಿದ್ವತ್ಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ವತ್ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ.

ಇವರು ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್, ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ಫೈಕೋಲಾಜಿಕಲ್ ಸೊಸೈಟಿಗಳ ಫೆಲೋ, ಅಮೆರಿಕನ್ ಅಸೋಸಿಯೇಷನ್ ಫಾರ್ ಸೆಲ್ ಬಯಾಲಜಿಯ ಸದಸ್ಯ, ಸೊಸೈಟಿ ಆಫ್ ನ್ಯೂಕ್ಲಿಯರ್ ಮೆಡಿಸಿನ್‌ನ ಗೌರವ ಪೋಷಕ, ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಪ್ಯೂರ್ ಮತ್ತು ಅಪ್ಲೈಡ್ ಬಯೊಫಿಸಿಕ್ಸ್ ಮಂಡಲಿಯ ಸದಸ್ಯರೂ ಆಗಿದ್ದರು. ಯುನೈಟೆಡ್ ನೇಷನ್ ಸೈಂಟಿಫಿಕ್ ಕಮಿಟಿ ಆನ್ ದಿ ಎಫೆಕ್ಟ್ ಆಫ್ ಅಟಾಮಿಕ್ ರೇಡಿಯೇಷನ್ಸ್‌ಗೆ 1956ರಿಂದ ಭಾರತದ ಪ್ರತಿನಿಧಿಯಾಗಿದ್ದರು.

ಇವರಿಗೆ ಟೊರಾಂಟೊ ವಿಶ್ವವಿದ್ಯಾಲಯದ ಎಲಿಜಬೆತ್ ಆನ್ ವಿಂಗರ್ ಕೋರ್ಬಿನ್ ಬಹುಮಾನ (1941), ಜೆ.ಎಚ್.ಭಾಭಾ ಬಹುಮಾನ(1948), ಪದ್ಮಶ್ರೀ (1967), 1968-71ರಲ್ಲಿ ಭಾಭಾ ಪರಮಾಣು ಸಂಶೋಧನ ಕೇಂದ್ರದಿಂದ ಪ್ರತಿಭಾನ್ವಿತ ಗೌರವ. 1970ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ, ಡಿ.ಎಸ್ಸಿ. ಟೊರಾಂಟೊ ವಿಶ್ವವಿದ್ಯಾನಿಲಯದ ಗೌರವ ಡಿ.ಎಸ್ಸಿ., (1972) ಇವು ಲಭಿಸಿವೆ. (ಎನ್.ವಿ.ಎ.)

**ಗೋಪಾಲಕೃಷ್ಣ ಅಡಿಗ, ಎಂ. :** 1918-92. ನವ್ಯಸಾಹಿತ್ಯದ ಶ್ರೇಷ್ಠ ಕವಿ ಹಾಗೂ ವಿಮರ್ಶಕರು. ಇಂದಿನ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ 1918 ಫೆಬ್ರವರಿ 18ರಂದು ಜನಿಸಿದರು. ಇವರು 1942ರಲ್ಲಿ ಮೈಸೂರಿನಲ್ಲಿ ಬಿ.ಎ. ಆನರ್ಸ್ ಮುಗಿಸಿ ಅದೇ ವರ್ಷ ಚಿತ್ರದುರ್ಗದ ಪ್ರೌಢಶಾಲೆಯೊಂದರಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿದ್ದ ಕಾಲಾವಧಿ ಕೇವಲ ಮೂರು ತಿಂಗಳು. ಅನಂತರ 1943ರಲ್ಲಿ ದಾವಣಗೆರೆ ಪ್ರೌಢಶಾಲೆಯಲ್ಲಿ ಮೂರು ತಿಂಗಳ ಕಾಲ ಕೆಲಸಮಾಡಿ ಅದೇ ವರ್ಷ ಬೆಂಗಳೂರಿನ ಮಲ್ಲೇಶ್ವರಂ ಪ್ರೌಢಶಾಲೆಯಲ್ಲಿ ಕೆಲಸಮಾಡಿ, ಕೆಲಸಕ್ಕೆ ರಾಜೀನಾಮೆ ನೀಡಿದರು. 1944ರಲ್ಲಿ ಬೆಂಗಳೂರು ಆಕಾರಾ ಕಚೇರಿಯ ಪಿಂಚಣಿ ಖಾತೆಯಲ್ಲಿ ನಾಲ್ಕು ತಿಂಗಳ ಕಾಲ ಗುಮಾಸ್ತರಾಗಿ ಕೆಲಸಮಾಡಿದರು. ಅನಂತರ ಗಾಂಧೀನಗರದ ಪ್ರೌಢ ಶಾಲೆಯಲ್ಲಿ ಸುಮಾರು



ಒಂದೂವರೆ ವರ್ಷಗಳ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿದರು. 1946ರಲ್ಲಿ ತುಮಕೂರಿನ ಆರ್.ಎನ್. ಪ್ರೌಢಶಾಲೆಯಲ್ಲಿ ಒಂದು ವರ್ಷ ಇದ್ದರು. 1947ರಲ್ಲಿ ಮದುವೆಯಾದರು. ಇದೇ ವರ್ಷ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಎಂ.ಎ. ವಿದ್ಯಾರ್ಥಿಯಾಗಿ ವ್ಯಾಸಂಗಕ್ಕೆ ತೊಡಗಿದರಾದರೂ ಅದನ್ನು ಮುಗಿಸಲಿಲ್ಲ. ಅನಂತರ 1948-52ರವರೆಗೆ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. 1952ರಲ್ಲಿ ಎಂ.ಎ. ಮುಗಿಸಿದರು. 1952-54ರವರೆಗೆ ಕುಮಟ ಕೆನರಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ದುಡಿದರು. ಅನಂತರ ಮೈಸೂರಿನ ಸೇಂಟ್ ಫಿಲೋಮಿನ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಕೆಲಸ ಮಾಡಿದ್ದರು (1954-64). 1964ರಲ್ಲಿ ಸಾಗರದ ಲಾಲ್‌ಬಹದ್ದೂರ್ ಕಾಲೇಜಿನ ಪ್ರಿನ್ಸಿಪಾಲರಾದರು. 1968ರಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿದರು. ಅನಂತರ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ಕೆಲವು ಕಾಲ ದುಡಿದರು. ನ್ಯಾಷನಲ್ ಬುಕ್ ಟ್ರಸ್ಟಿನ ನಿರ್ದೇಶಕರಾಗಿಯೂ ಇವರು ಸ್ವಲ್ಪಕಾಲ ಇದ್ದರು. 1971ರಲ್ಲಿ ಜನಸಂಘದ ಅಭ್ಯರ್ಥಿಯಾಗಿ ಲೋಕಸಭೆಗೆ ಸ್ಪರ್ಧಿಸಿ ಸೋತರು. 1974ರಲ್ಲಿ ಅಮೆರಿಕ ವಿಶ್ವವಿದ್ಯಾಲಯಗಳಿಗೆ ವಿಶೇಷ ಉಪನ್ಯಾಸ ಕೊಡಲು ಹೋಗಿಬಂದರು. ಕನ್ನಡ ವಿಮರ್ಶೆಗೆ ಹೊಸ ಆಯಾಮವನ್ನು ಜೋಡಿಸಿದ ಸಾಕ್ಷಿ ಎಂಬ ತ್ರೈಮಾಸ ಪತ್ರಿಕೆಯ ಸಂಪಾದಕರಾಗಿಯೂ ಕೆಲಸಮಾಡಿದರು. ಇವರು ಸಿಮ್ಲಾದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಲ್ಲಿ ರೀಸರ್ಚ್ ಫೆಲೋ ಆಗಿಯೂ ಕೆಲಸ ಮಾಡಿದರು (1975).

ಕಾದಂಬರಿಗಳನ್ನು ಬರೆದಿದ್ದಾರೆ. ಹುಲ್ಲಿನ ದಳಗಳು, ಸುವರ್ಣಕೀಟ, ಭೂಗರ್ಭಯಾತ್ರೆ, ರೈತರ ಹುಡುಗಿ, ಜನತೆಯ ಶತ್ರು, ದೆವ್ವದ ಸುವರ್ಣ ಕೀಟ, ಮುಕ್ತಾಫಲ, ಇತಿಹಾಸ ಚಕ್ರ ಇವು ಇವರ ಅನುವಾದ ಕೃತಿಗಳು. ಇದನ್ನು ಬಯಸಿರಲಿಲ್ಲ ಎಂಬುದು ಇವರ ಇನ್ನೊಂದು ಕವನ ಸಂಗ್ರಹ(1975). ಆಯ್ದ ಪ್ರಬಂಧಗಳು, ಕಾವ್ಯಜಗತ್ತು (1986) ಇವರ ಇತರ ಪ್ರಮುಖ ಕೃತಿಗಳು. ನೆನಪಿನಗಣಿಯಿಂದ ಎಂಬುದು ಇವರ ಆತ್ಮಕಥೆ. ಇವರಿಗೆ ಅನೇಕ ಗೌರವ ಮತ್ತು ಪ್ರಶಸ್ತಿಗಳು ಲಭ್ಯವಾಗಿವೆ. ವರ್ಧಮಾನ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1973-1974) ಕುಮಾರ್ ಆಶಾನ್ ಪ್ರಶಸ್ತಿ (1979), ಕಬೀರ್ ಸಮ್ಮಾನ ಪ್ರಶಸ್ತಿ (1985), ಲಭಿಸಿದೆ. ಧರ್ಮಸ್ಥಳದಲ್ಲಿ ಜರುಗಿದ 51ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು (1979). ಇವರು 1992 ನವೆಂಬರ್ 14ರಂದು ನಿಧನಹೊಂದಿದರು. ಇವರ ಸುವರ್ಣ ಪುತ್ಥಳಿ ಕೃತಿಗೆ ಮರಣೋತ್ತರವಾಗಿ ಪ್ರತಿಷ್ಠಿತ ಪಂಪ ಪ್ರಶಸ್ತಿ ನೀಡಲಾಗಿದೆ (1993). (ಎಸ್‌ಯು.ಎನ್.)

**ಗೋಪಾಲಕೃಷ್ಣರಾವ್, ಕೆ. :** 1906-67. ಸಂಪ್ರದಾಯದ ಕಥೆಗಾರರಲ್ಲಿ ಪ್ರಸಿದ್ಧರು. ಜನ್ಮಸ್ಥಳ ಬೆಂಗಳೂರು. ಬೆಂಗಳೂರು ನ್ಯಾಷನಲ್ ಹೈಸ್ಕೂಲು ಮತ್ತು ಸೆಂಟ್ರಲ್ ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಪದವೀಧರರಾದರು. ಅಠಾರಾ ಕಚೇರಿಯಲ್ಲಿ ಗುಮಾಸ್ತರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಅನಂತರ ಕೆ.ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಆಪ್ತಕಾರ್ಯದರ್ಶಿಗಳಾಗಿ ಕೆಲಸಮಾಡಿದರು. ಚಿಕ್ಕಂದಿನಲ್ಲಿಯೇ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡಿದ್ದ ಇವರು ಆರಂಭದಲ್ಲಿ ಇಂಗ್ಲಿಷ್‌ನಲ್ಲಿ ಕವನಗಳನ್ನು ಬರೆದರು. ಅನಂತರ



ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾಗಿ ಕನ್ನಡದಲ್ಲಿ ಬರೆಯಲಾರಂಭಿಸಿದರು. ಸಣ್ಣಕಥೆಗಳ ಜೊತೆಗೆ ನಾಟಕ, ಪ್ರಬಂಧ ಮತ್ತು ಅನುವಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವರ ಆರು ಕಥಾಸಂಗ್ರಹಗಳು ಪ್ರಕಟವಾಗಿವೆ. ಉಡುಗೊರೆ, ಬಂಗಾರದ ಡಾಬು, ನಟಿ, ಸೋತು ಗೆದ್ದವರು, ರಾಜಾಯಿ, ಆಯ್ದ ಹತ್ತು ಕಥೆಗಳು. ಕೆನ್ನಿಂಗ್‌ಟನ್ ಮತ್ತು ಹರಿದಾಸ ಸಾಹಿತ್ಯ ಎಂಬುವು ಇವರ ಎರಡು ಪ್ರಬಂಧ ಸಂಕಲನಗಳು. ಕುಮಾರಕೃಪ, ಗುರು ಗೀತೆ ಎಂಬುವು ಇವರ ಕವನಸಂಕಲನಗಳು. ಅಪರಾಧಿ, ಆಸೆ ನಿರಾಶೆ, ಕನ್ಯಾರ್ಥಿ, ಚಿರಸಮಸ್ಯೆ ಮತ್ತು ಪಾರ್ಕಿನ ಲಚುಮಿ ಇವು ಇವರ ಏಕಾಂಕ ನಾಟಕ ಸಂಗ್ರಹಗಳು. ಇಂಗ್ಲಿಷ್‌ನಲ್ಲಿ ಸಿಸ್ಟರ್ ಎಂಬ ಒಂದು ಏಕಾಂಕ ನಾಟಕವನ್ನು ಪ್ರಕಟಿಸಿದ್ದಾರೆ. ಇವರ ಹಲವು ಸಣ್ಣಕಥೆಗಳು ಇಂಗ್ಲಿಷ್‌ಗೆ ಭಾಷಾಂತರಗೊಂಡಿವೆ.

ಇವರ ಸಾರ್ವಜನಿಕ ಸೇವೆಯೂ ಗಣ್ಯವಾದುದು. ವಿದ್ಯಾರ್ಥಿಯಾಗಿದ್ದಾಗಲೇ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರು. ಬೆಂಗಳೂರಿನಲ್ಲಿ ಸಾಹಿತಿಗಳ ಸಂಘ ಎಂಬ ಒಂದು ಸಂಘವನ್ನು ಸ್ಥಾಪಿಸಿ, ಸಾಹಿತ್ಯಕ ಚರ್ಚೆಗಳಿಗೆ ವೇದಿಕೆಯನ್ನು ಒದಗಿಸಿದರಲ್ಲದೆ ಅದರ ಆಶ್ರಯದಲ್ಲಿ ಸಣ್ಣಕಥೆಗಾರರ ಮೂರು ಸಮ್ಮೇಳನಗಳನ್ನು ನಡೆಸಿದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಇವರು ಐದು ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿದ್ದರು (1956-61). ಜೀವನ ಮಾಸಪತ್ರಿಕೆಗೆ ಕೆಲವು ವರ್ಷಗಳ ಕಾಲ ಸಂಪಾದಕರಾಗಿದ್ದರು. ಇವರು 1967 ಅಕ್ಟೋಬರ್ 8ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. (ಟಿ.ಎಸ್.ಎಸ್.)

**ಗೋಪಾಲಗೌಡ, ಶಾಂತವೇರಿ :** 1923-72. ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆಗಳನ್ನು ಹುಟ್ಟುಹಾಕಿದ ಪ್ರಸಿದ್ಧ ಸಮಾಜವಾದಿ ಧುರೀಣ, ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಯುವ ನಾಯಕ

ಹಾಗೂ ಉಜ್ವಲ ವಾಗ್ಮಿ. ಇವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಆರಗ ಎಂಬ ಗ್ರಾಮದ ಬಡ ರೈತ ಕುಟುಂಬದಲ್ಲಿ ಹುಟ್ಟಿದರು. ಆ ಗ್ರಾಮದ ಶಾಂತವೇರಿ ಮನೆ ಎಂಬ ಸ್ಥಳದಲ್ಲಿ ಇವರ ಮನೆ ಇದ್ದುದರಿಂದ ಇವರ ಹೆಸರಿನೊಂದಿಗೆ ಶಾಂತವೇರಿ ಸೇರಿಕೊಂಡಿತು. ಬಹುಶಃ ಇವರ ಮನೆತನದ ಹಿರಿಯರು ಅಲ್ಲಿಂದ ಬಂದವರಿರಬೇಕು. ತಂದೆ ಕೊಲ್ಲೂರಯ್ಯಗೌಡರು ಅಂಚೆ ಇಲಾಖೆಯಲ್ಲಿ ಅಂಚೆ ಬಟವಾಡೆ ಮಾಡುವ ಪೇದೆಯಾಗಿದ್ದರು. ಬಡತನದ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಂಡು ಆರಗ, ತೀರ್ಥಹಳ್ಳಿ ಮತ್ತು ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ಮಾಡಿದರು. ಶಿವಮೊಗ್ಗದಲ್ಲಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿದ ಇವರು ವಿದ್ಯಾರ್ಥಿ ಕಾಂಗ್ರೆಸ್ಸಿನ ಮುಂಚೂಣಿಯಲ್ಲಿದ್ದರು. 1946ರಲ್ಲಿ ಶಿವಮೊಗ್ಗದಲ್ಲಿ ಸೇರಿದ್ದ ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನದ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೈಸೂರಿನ ಆಗಿನ ರಾಜಕೀಯ ಧುರೀಣರಲ್ಲಿ ಅನೇಕರು ಕರ್ನಾಟಕದ ಏಕೀಕರಣದ ಬಗ್ಗೆ ಅಡ್ಡ ಗೋಡೆಯ ಮೇಲಿನ ನಿಲುವು ತಾಳಿದಾಗ ಶಿವಮೊಗ್ಗದಲ್ಲಿ ಸಮಾವೇಶಗೊಂಡಿದ್ದ ವಿದ್ಯಾರ್ಥಿ ಸಮ್ಮೇಳನ ಕರ್ನಾಟಕದ ಏಕೀಕರಣವನ್ನು ಪ್ರತಿಪಾದಿಸಿತು. ಕನ್ನಡ ಮಾತನಾಡುವ ಜನರಿರುವ ಎಲ್ಲ ಪ್ರದೇಶಗಳನ್ನು ಒಳಗೊಂಡ ಕರ್ನಾಟಕ ರಾಜ್ಯ ರೂಪಿತವಾಗಬೇಕೆಂದೂ ಮೈಸೂರಿನ ಮಹಾರಾಜರ ಹುದ್ದೆ ರದ್ದಾಗಬೇಕೆಂದೂ ಆ ಸಮ್ಮೇಳನ ನಿರ್ಣಯ ಮಾಡಿತು. ಆಗಿನಿಂದಲೇ ಇವರು ಶಿವಮೊಗ್ಗದ ಇತರ ಯುವಕ ಮುಖಂಡರೊಡನೆ ಸೇರಿ ಕರ್ನಾಟಕದ ಏಕೀಕರಣಕ್ಕಾಗಿ ಸತತವಾಗಿ ಶ್ರಮಿಸಿದರು. ಶಿವಮೊಗ್ಗ ಜಿಲ್ಲೆಯ ಈ ಯುವಕ ತಂಡದವರೇ ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಸಂಘಟನೆಯಲ್ಲಿ (1948) ಪ್ರಮುಖ ಪಾತ್ರ ವಹಿಸಿದರು. ಶಾಂತವೇರಿ ಗೋಪಾಲಗೌಡರು ಈ ಗೆಳೆಯರ ಬಳಗಕ್ಕೆ ಮುಂದಾಳಾಗಿದ್ದರು.

ಸಮಾಜವಾದಿ ಪಕ್ಷ ಗೇಣಿದಾರರ ಹಿತರಕ್ಷಣೆಗಾಗಿ ಹೋರಾಟ ಮಾಡುವ ನಿರ್ಧಾರ ಕೈಗೊಂಡ ಮೇಲೆ ಶಿವಮೊಗ್ಗ ಜಿಲ್ಲೆಯ ಕಾಗೋಡಿನಲ್ಲಿ ನಡೆದ ಪ್ರಥಮ ಹೋರಾಟ (1951) ಬಹುದಿನಗಳ ಕಾಲ ಉಗ್ರವಾಗಿ ನಡೆಯಿತು. ಗೋಪಾಲಗೌಡರು ಸತ್ಯಾಗ್ರಹದ ನಾಯಕರುಗಳಲ್ಲೊಬ್ಬರಾಗಿದ್ದು ಗೇಣಿದಾರರ ಜ್ವಲಂತ ಸಮಸ್ಯೆ ಬಗ್ಗೆ ರಾಜ್ಯದ ಜನರ ಹಾಗೂ ಪ್ರಭುತ್ವದ ಗಮನವನ್ನು ಸೆಳೆದರು. ಸಮಾಜವಾದಿ ಧುರೀಣ ರಾಮಮನೋಹರ ಲೋಹಿಯಾ ಅವರು ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧಿಸಲ್ಪಟ್ಟಿದ್ದರು. ಇವರಿಗೆ ಲೋಹಿಯಾರವರ ನಿಕಟ ಪರಿಚಯವಾಯಿತು. ಲೋಹಿಯಾರವರ ವಿಚಾರ ದರ್ಶನವೂ ಇವರ ಮೇಲೆ ತುಂಬ ಪ್ರಭಾವ ಬೀರಿತು. ಇವರು ರಾಜ್ಯಮಟ್ಟದಲ್ಲಿ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದರು. ಅಖಿಲ ಭಾರತ ಸಮಾಜವಾದಿ ಪಕ್ಷದ ಲೋಹಿಯಾ ಪಂಗಡದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು. ಆ ಪಕ್ಷದ ಮುಖಪತ್ರಿಕೆ 'ಮ್ಯಾನ್‌ಕೈಂಡ್'ನ ಸಂಪಾದಕ ಮಂಡಳಿಯ ಸದಸ್ಯರೂ ಆಗಿದ್ದರು.

1952ರಲ್ಲಿ ನಡೆದ ಚುನಾವಣೆಯಲ್ಲಿ ಸಾಗರ - ಹೊಸನಗರ ಕ್ಷೇತ್ರದಿಂದ ಅಂದಿನ ಮೈಸೂರು ರಾಜ್ಯ ವಿಧಾನ ಸಭೆಗೆ ಚುನಾಯಿತರಾಗಿದ್ದರು. 1960ರಲ್ಲಿ ಗೋವ ವಿಮೋಚನ ಚಳವಳಿಯಲ್ಲಿ ಭಾಗವಹಿಸಿದರು. 1962 ಮತ್ತು 1967ರ ಚುನಾವಣೆಗಳಲ್ಲಿ ತೀರ್ಥಹಳ್ಳಿ

ಪದವಿಗಳಿಸಿದರು. ಮನಶ್ಶಾಸ್ತ್ರದಲ್ಲಿ ಹೆಚ್ಚು ಅಭಿರುಚಿಯುಂಟಾದ ಕಾರಣ ಅದೇ ವಿಶ್ವವಿದ್ಯಾಲಯದಲ್ಲಿ ಆ ವಿಷಯದ ಮೇಲೆ ತಮ್ಮ ವ್ಯಾಸಂಗವನ್ನು ಮುಂದುವರಿಸಿ ಅಲ್ಲಿನ ಮನಶ್ಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಸಿ.ಸ್ಪಿಯರ್‌ಮನ್ ಎಂಬುವರ ನಿರ್ದೇಶನದಲ್ಲಿ ಪಿಎಚ್.ಡಿ. ಪದವಿ ಪಡೆದರು.

ಭಾರತಕ್ಕೆ ಹಿಂತಿರುಗಿದ ಮೇಲೆ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮನಶ್ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ (1924) 20 ವರ್ಷ ಸೇವೆಸಲ್ಲಿಸಿ ಮುಂದೆ ಮೈಸೂರಿನ ಮಹಾರಾಜ ಕಾಲೇಜಿನ ಪ್ರಧಾನ ಆಡಳಿತಗಾರರಾದರು. ಇವರ ಆಸಕ್ತಿ ಮತ್ತು ಶ್ರದ್ಧೆಯ ಪರಿಣಾಮವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಯೋಗಿಕ ಮನಶ್ಶಾಸ್ತ್ರ ಶಾಖೆ ಸ್ಥಾಪಿತವಾಯಿತು. ತತ್ತ್ವಶಾಸ್ತ್ರದ ಒಂದು ಭಾಗವಾಗಿದ್ದ ಮನಶ್ಶಾಸ್ತ್ರಕ್ಕೆ ಒಂದು ಪ್ರತ್ಯೇಕ ಸ್ಥಾನಮಾನವನ್ನು ದೊರಕಿಸಿಕೊಡಲು ಮತ್ತು ಮನಶ್ಶಾಸ್ತ್ರಕ್ಕೆ ವೈಜ್ಞಾನಿಕ ವಿಧಾನಗಳನ್ನು ಅನ್ವಯಿಸಲು ಇವರು ಬಹಳ ಶ್ರಮಿಸಿದರು. ಇದಲ್ಲದೆ ಭಾರತದ ಪ್ರಾಚೀನ ಮನಶ್ಶಾಸ್ತ್ರದ ಮೂಲತತ್ತ್ವಗಳ ಸಿಂಧುತ್ವವನ್ನು ಆಧುನಿಕ ಪ್ರಯೋಗ ಪರೀಕ್ಷಾ ಪದ್ಧತಿಗಳಿಂದ ಸ್ಥಿರೀಕರಿಸಿ ಆ ವಿಭಾಗದಲ್ಲೂ ಸಂಶೋಧನೆ ನಡೆಸಿದರು. ಪ್ರಾಣಿಗಳ ವರ್ತನೆ, ಅಪರಾಧ ಸಂಶೋಧನೆ, ಅತೀಂದ್ರಿಯ ಪ್ರತ್ಯಕ್ಷ, ಕಲಿಕೆಯ ರೀತಿಗಳು, ಅವಳಿಜವಳಿ ಮಕ್ಕಳ ಬುದ್ಧಿಶಕ್ತಿ, ಉಪಲಬ್ಧ ಗುಣಾರ್ಜನೆ, ಬಾಲಾಪರಾಧ, ಅನೃತ ಶೋಧನೆ, ದರ್ಪಣ ಲೇಖನ, ಭಾವನಾ ರಚನೆ, ಕಾರ್ಯವಿಶ್ಲೇಷಣ, ಉತ್ಕಾಂಕ್ಷೆಯ ಮಟ್ಟ, ಕೈಚಳಕ, ಸಹಜ ಸಾಮರ್ಥ್ಯ ಪರೀಕ್ಷೆ, ಪ್ರತಿಕ್ರಿಯೆಯ ವೇಗ ಮೊದಲಾದ ವಿಷಯಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಹಲವಾರು ಸಂಶೋಧನೆಗಳಿಗೆ ಯುಕ್ತ ಸಲಹೆ ನೀಡಿದರು. ಅಲ್ಲದೆ ಇಂಥ ಸಂಶೋಧನೆಗೆ ಬೇಕಾಗಬಹುದಾದ ಅನೇಕ ಉಪಕರಣಗಳನ್ನೂ ತಾವೇ ಸಿದ್ಧಪಡಿಸಿಕೊಂಡರೆಂಬ ವಿಷಯ ಗಮನಾರ್ಹವಾದುದು. ಇವರ ಸಂಶೋಧನ ಬರೆಹಗಳು ಇಂಗ್ಲೆಂಡಿನ ಮುಖ್ಯ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಅಲ್ಲದೆ ಇವರು ಆಲ್ ಇಂಡಿಯ ಸೈನ್ಸ್ ಕಾಂಗ್ರೆಸ್ಸಿನ ಅನೇಕ ವಾರ್ಷಿಕ ಕೂಟಗಳಲ್ಲಿ ಭಾಗವಹಿಸಿ ಇವರು ತಮ್ಮ ಸಂಶೋಧನೆಗಳ ಬಗ್ಗೆ ವಿಚಾರಗಳನ್ನು ಮಂಡಿಸಿದರು.

ಮನಶ್ಶಾಸ್ತ್ರದಲ್ಲಿ ಹೇಗೋ ಹಾಗೆ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲೂ ಅಪಾರ ಆಸಕ್ತಿ ಹೊಂದಿದ್ದ ಇವರು ಮೈಸೂರಿನಲ್ಲಿ ಮೊದಲ ಬಾರಿಗೆ ಆದರ್ಶ ಶಿಶುವಿಹಾರವೊಂದು ಸ್ಥಾಪಿತವಾಗಲು ಸಹಕರಿಸಿದರು. 1952ರಲ್ಲಿ ಪ್ಯಾರಿಸ್ ನಗರದಲ್ಲಿ ನಡೆದ ವಿಶ್ವಸಮ್ಮೇಳನವೊಂದರಲ್ಲಿ ಭಾಗವಹಿಸಿ ತಾವು ನಡೆಸಿದ ಶಿಶು ಶಿಕ್ಷಣ ವಿಷಯದಲ್ಲಿನ ಪ್ರಯೋಗಪದ್ಧತಿಗಳನ್ನು ಕುರಿತು ಮಾತನಾಡಿ ಮೆಚ್ಚುಗೆ ಸಂಪಾದಿಸಿದರು.

ಭಾರತದಲ್ಲಿ ಮೊಟ್ಟಮೊದಲಿಗೆ ಬಾನುಲಿ ಕೇಂದ್ರವೊಂದನ್ನು ಸ್ವಂತ ಖರ್ಚಿನಿಂದ ಸ್ಥಾಪಿಸಿದ (1935) ಕೀರ್ತಿ ಗೋಪಾಲಸ್ವಾಮಿಯವರದು. ಈ ಸಂಸ್ಥೆಯಿಂದ ಮೈಸೂರು ನಗರದ ಕೀರ್ತಿ ಹೆಚ್ಚಿತು. ಇಂದು ಪ್ರಚಲಿತವಾಗಿರುವ ಆಕಾಶವಾಣಿ ಎಂಬ ಹೆಸರನ್ನು ಕೊಟ್ಟವರೂ ಇವರೇ. ನಾಡಿನಲ್ಲಿ ವಿದ್ಯೆ, ಸಂಸ್ಕೃತಿ, ಕಲೆ, ಜ್ಞಾನ, ಪ್ರಸಾರವಾಗಬೇಕೆಂಬ ಇವರ ಹಿರಿಯಾಸೆ ಆಕಾಶವಾಣಿಯಿಂದ ನೆರವೇರಿತು.

ಮೈಸೂರು ಮಹಾರಾಜ ಕಾಲೇಜಿನ ಮುಖ್ಯಸ್ಥ ಹುದ್ದೆಯಿಂದ ವಿಶ್ರಾಂತರಾದ ಮೇಲೆ (1952) ಮೈಸೂರು ಸರ್ಕಾರ ಇವರನ್ನು ಬೆಂಗಳೂರಿನ ಮಾನಸಿಕರೋಗ ಆಸ್ಪತ್ರೆಯಲ್ಲಿ 1938ರಲ್ಲಿ ಸ್ಥಾಪಿತವಾಗಿದ್ದ ಮನೋರೋಗಚಿಕಿತ್ಸಾಮನಶ್ಶಾಸ್ತ್ರ ಶಾಖೆಯೊಂದಿಗೆ ಒಂದು ಸಂಶೋಧನ ಶಾಖೆಯನ್ನೂ ಏರ್ಪಡಿಸಲು ಆಹ್ವಾನಿಸಿ ಆ ಶಾಖೆಯ ಮೊದಲ ನಿರ್ದೇಶಕರನ್ನಾಗಿ ನೇಮಿಸಿತು. ಈಗಿನ ನಿಮ್ಹಾನ್ಸ್ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್‌ಹೆಲ್ತ್ ಅಂಡ್ ನ್ಯೂರೊ ಸೈನ್ಸ್) ಎಂಬ ಸಂಸ್ಥೆಗೆ ಗೋಪಾಲಸ್ವಾಮಿಯವರು ಸ್ಥಾಪಿಸಿದ ಶಾಖೆ ಅಡಿಗಲ್ಲಾಯಿತು. ಮನಶ್ಶಾಸ್ತ್ರದ ವ್ಯಾಸಂಗ ವಿಶ್ಲೇಷಣೆಗಳು ಮಾನವನ ಮಾನಸಿಕ ಆರೋಗ್ಯಕ್ಕೆ, ಪ್ರಗತಿಗೆ ಸಾಧಕವಾಗಬೇಕು ಎಂಬ ಹಿರಿಯ ಉದ್ದೇಶವನ್ನು ಇವರು ತಮ್ಮ ಜೀವನದುದ್ದಕ್ಕೂ ಸಾಧಿಸಲು ಶ್ರಮಿಸಿದರು. ಈ ಸಾಧನೆ ಇವರಿಗೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿತು. (ಪಿ.ಕೆ.ವಿ.)

**ಗೋಪಾಲಸ್ವಾಮಿ ಬೆಟ್ಟ :** ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆಯಿಂದ 15ಕಿಮೀ ನೈಋತ್ಯಕ್ಕಿರುವ ಬೆಟ್ಟ. ಸುಂದರ ತಾಣ, ಐತಿಹಾಸಿಕ ಸ್ಥಳ. ಸಮುದ್ರಮಟ್ಟದಿಂದ 1446ಮೀ ಎತ್ತರವಿದೆ.

ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ

ಶಿಖರವನ್ನೇರಲು 5ಕಿಮೀ ಮಾರ್ಗ ಸವೆಸಬೇಕಾಗುತ್ತದೆ. ಬೆಟ್ಟದಲ್ಲಿ ಅನೇಕ ನೀರುಬುಗ್ಗೆಗಳಿದ್ದು ಜಲಾಂಶ ಅಧಿಕವಾಗಿದೆ. ಬೆಟ್ಟ ಸದಾ ಹಸಿರುಮಯವಾಗಿರುತ್ತದೆ. ವರ್ಷದ ಬಹುಕಾಲ ಮಂಜುಮೋಡಗಳಿಂದ ಮುಸುಕಿರುವುದರಿಂದ ಇದು ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂದೇ ಪ್ರಸಿದ್ಧವಾಗಿದೆ. ಹವಾಮಾನ ಚೆನ್ನಾಗಿರುವಾಗ ಮೈಸೂರು ಮತ್ತು ವೈನಾಡು ಪ್ರದೇಶಗಳ ಮನೋಹರ ದೃಶ್ಯವನ್ನು ಕಾಣಬಹುದು.

ಬೆಟ್ಟದ ಮೇಲುಭಾಗವನ್ನು ಸುತ್ತುವರಿದಿದ್ದ ಹಳೆಯ ಕೋಟೆ ಮತ್ತು ಕಂದಕದ ಅವಶೇಷಗಳನ್ನು ದೂರದಿಂದಲೇ ಗುರುತಿಸಬಹುದು. ಕೋಟೆಯ ಒಳಭಾಗದಲ್ಲಿ ಗೋಪಾಲಸ್ವಾಮಿ ದೇವಾಲಯವಿದೆ. ಇದು ಹೊಯ್ಸಳ 3ನೆಯ ಬಲ್ಲಾಳನ ಮಂತ್ರಿ ಮಾಧವ ದಣ್ಣಾಯಕನಿಂದ ನಿರ್ಮಾಣವಾದುದು (ಸು.1300). ಇಲ್ಲಿ ವರ್ಷಕ್ಕೊಮ್ಮೆ ರಥೋತ್ಸವ ನಡೆಯುತ್ತದೆ.

ಪುರಾಣಗಳಲ್ಲಿ ಈ ಬೆಟ್ಟವನ್ನು ಕಮಲಾದ್ರಿ, ದಕ್ಷಿಣ ಗೋವರ್ಧನಗಿರಿ ಎಂದು ಕರೆಯಲಾಗಿದೆ. ಈ ಪ್ರದೇಶಕ್ಕೆ ಬೆಟ್ಟದಕೋಟೆ, ಮೂಡಣ ಕೋಟೆ ಎಂಬ ಹೆಸರುಗಳೂ ಇದ್ದುವು. ಇಲ್ಲಿಯ ಕೋಟೆಯನ್ನು ಕಟ್ಟಿದವನು ಸೋಮಣ್ಣ ದಣಾಯಕನೆಂದು ಒಂದು ಹೇಳಿಕೆ. ಪ್ರಾಯಶಃ ಇದೂ ಮಾಧವ ದಣ್ಣಾಯಕನ ಕಾಲದ್ದು. 15-17ನೆಯ ಶತಮಾನಗಳಲ್ಲಿ ಇದು ಕೋಟೆಸೀಮೆ ಎಂಬ ಪಾಳೆಯಪಟ್ಟಿನ ಮುಖ್ಯ ಸ್ಥಳವಾಗಿತ್ತು. ಆ ಸೀಮೆಯ ಅರಸುಗಳ ಅನುಕ್ರಮ ಹೀಗಿದೆ: ಇಮ್ಮಡಿ ರಾಜ ಒಡೆಯ - ನಂಜರಾಜ ಒಡೆಯ (1489)- ದೇವರಾಜ ಒಡೆಯ(1503)- ಗೋವಣ್ಣ ಒಡೆಯ (1504)- ದೇವೊಡೆಯ (1512)- ಸಿಂಗಪ್ಪ ಒಡೆಯ - ಚೆನ್ನರಾಯ ಒಡೆಯ (1517) - ಕೋಟೆ ಒಡೆಯ (1513) - ಮಾಧವ ನಾಯಕ (1530-48) - ದೊಡ್ಡ ಮಲ್ಲರಾಯ ಒಡೆಯ (1559)- ಲಿಂಗರಾಜ ಒಡೆಯ (1650-54) - ನಂಜರಾಜ ಒಡೆಯ (1569). (ಆರ್.ಟಿ.ಎಸ್.)

**ಗೋರ್ಡನ್, ಜೇಮ್ಸ್ ಡೇವಿಡ್‌ಸನ್ :** 1835-89. ಮೈಸೂರು ಸಂಸ್ಥಾನದಲ್ಲಿದ್ದ ಬ್ರಿಟಿಷ್ ರೆಸಿಡೆಂಟ್ (1881-83). ತಂದೆ ಎವಿಲಿನ್ ಮೆಡೋಸ್. ಗೋರ್ಡನ್ 1852-54ರವರೆಗೆ ಹೈಲಿಬರಿಯಲ್ಲಿ ಶಿಕ್ಷಣ ಪಡೆದು 1854ರಲ್ಲಿ ಬಂಗಾಲದಲ್ಲಿ ಸಿವಿಲ್ ಸರ್ವೀಸ್‌ನಲ್ಲಿ ನೇಮಕಗೊಂಡ. 1866-73ರ ಅವಧಿಯಲ್ಲಿ ಗೌರ್ನರ್ ಜನರಲ್ ಲಾರ್ಡ್ ಲಾರೆನ್ಸ್‌ನ ಆಪ್ತಕಾರ್ಯದರ್ಶಿಯಾಗಿದ್ದ. 1873ರಲ್ಲಿ ಮೈಸೂರಿನ ಜುಡಿಷಿಯಲ್ ಕಮಿಷನರ್ ಆಗಿಯೂ 1878ರಲ್ಲಿ ಚೀಫ್ ಕಮಿಷನರ್ ಆಗಿಯೂ ನೇಮಕಗೊಂಡು 1881ರಲ್ಲಿ ರೆಸಿಡೆಂಟ್ ಆಗಿ ಬಡ್ತಿಪಡೆದ.

ಧ್ರುವ ಈ ಅವಕಾಶವನ್ನು ಉಪಯೋಗಿಸಿಕೊಂಡು ರಾಜ್ಯಾಡಳಿತದ ಸೂತ್ರವನ್ನು ಕಸಿದುಕೊಳ್ಳಲು ಹವಣಿಸಿದ. ಅಣ್ಣನನ್ನು ಧಿಕ್ಕರಿಸಿ ತನ್ನ ಹೆಸರಿನಲ್ಲಿಯೇ ಶಾಸನವನ್ನು ಹೊರಡಿಸಲು ಪ್ರಾರಂಭಿಸಿದ. ಇದನ್ನರಿತ ಗೋವಿಂದ ಧ್ರುವನನ್ನು ಅಧಿಕಾರ ಸ್ಥಾನದಿಂದ ತಳ್ಳಿ ತಾನೇ ಅಧಿಕಾರವನ್ನು ವಹಿಸಿಕೊಂಡ. ಧ್ರುವ ಅಣ್ಣನ ವಿರುದ್ಧ ದಂಗೆ ಎದ್ದ. ಗೋವಿಂದ ಕಂಚಿ, ಗಂಗವಾಡಿ, ವೆಂಗಿ, ಮಾಳವ ಮೊದಲಾದ ರಾಜರುಗಳ ನೆರವನ್ನು ಯಾಚಿಸಿ ಧ್ರುವನೊಡನೆ ಯುದ್ಧಕ್ಕೆ ಸಿದ್ಧನಾದ. ಆದರೆ ರಾಷ್ಟ್ರಕೂಟ ವೈರಿಗಳತ್ತ ಇವನು ನೆರವಿಗೆ ಕೈಚಾಚಿದ್ದರಿಂದ ಇವನ ಮಂತ್ರಿ ಸಾಮಂತರೂ ಧ್ರುವನ ಪಕ್ಷ ವಹಿಸಿದರು. ವೆಂಗಿಯ ವಿಷ್ಣುವರ್ಧನ ಧ್ರುವನ ಮಾವನಾದುದರಿಂದ ಗೋವಿಂದನ ನೆರವಿಗೆ ಬರಲಿಲ್ಲ. ಉಳಿದ ರಾಜರ ಸಹಾಯ ಬರುವುದಕ್ಕೆ ಮೊದಲೇ ಧ್ರುವ ಗೋವಿಂದನನ್ನು ಸೋಲಿಸಿ ರಾಜ್ಯಾಧಿಕಾರವನ್ನು ಕಿತ್ತುಕೊಂಡು ರಾಷ್ಟ್ರಕೂಟ ಸಾಮ್ರಾಜ್ಯದ ಅಧಿಪತಿಯಾದ. ಗೋವಿಂದ 780ರಲ್ಲಿ ಯುದ್ಧರಂಗದಲ್ಲೇ ಅಸುನೀಗಿರಬೇಕೆಂದು ತೋರುವುದು. (ಎಸ್.)

**ಗೋವಿಂದ III :** ರಾಷ್ಟ್ರಕೂಟ ವಂಶದ ಪ್ರಖ್ಯಾತ ರಾಜ (ಸು.793-814). ಧ್ರುವನ ಮೂರನೆಯ ಮಗ. ಪ್ರಭೂತವರ್ಷ, ಜಗತ್ತುಂಗ, ಜನವಲ್ಲಭ, ಕೀರ್ತಿನಾರಾಯಣ, ಜಗತ್‌ರುದ್ರ, ತ್ರಿಭುವನಧವಳ ಎಂಬ ಬಿರುದುಗಳನ್ನು ಹೊಂದಿದ್ದ. ತನ್ನ ತಂದೆ ಧ್ರುವನ ಇಚ್ಛೆಯಂತೆ ಅವನ ಅನಂತರ ರಾಷ್ಟ್ರಕೂಟ ಸಿಂಹಾಸನವನ್ನೇರಿದ. ಇವನು ರಾಜನಾದಮೇಲೆ ಇವನ ಅಣ್ಣ ರಣಾವಲೋಕ ಸ್ತಂಭ ಸ್ವಲ್ಪಕಾಲ ತೆಪ್ಪಗಿದ್ದರೂ ತಮ್ಮನ ಏಳಿಗೆಯನ್ನು ಸಹಿಸಲಿಲ್ಲ. ತನ್ನನ್ನು ಬಿಟ್ಟು ತಮ್ಮನಿಗೆ ತಂದೆ ಪಟ್ಟಗಟ್ಟಿದುದರಿಂದ ಮೊಳೆತ ಅಸೂಯೆ ಹೆಮ್ಮರವಾಗಿ ಬೆಳೆಯತೊಡಗಿತು. ತಮ್ಮನಿಂದ ಅಧಿಕಾರವನ್ನು ಕಸಿದುಕೊಳ್ಳಲು ಕಂಚಿಯವರೆಗಿನ ಹನ್ನೆರಡು ಮಂದಿ ಸಾಮಂತರನ್ನು ಒಂದುಗೂಡಿಸಿ ಗೋವಿಂದನ ವಿರೋಧವಾಗಿ ಒಂದು ಮಹತ್ತರ ಕೂಟವನ್ನು ರಚಿಸಿದ. ಅವರಲ್ಲಿ ಕಂಚಿಯ ದಂತಿಗ, ನೊಳಂಬವಾಡಿಯ ಚಾರುಪೊನ್ನೇರ ಮತ್ತು ಬನವಾಸಿಯ ಕತ್ತಿಯರ ಮುಖ್ಯರು. ಅಲ್ಲದೆ ಗೋವಿಂದನ ಕೆಲವರು ಮಂತ್ರಿಗಳೂ ಸ್ತಂಭನ ಪರವಾಗಿದ್ದರು. 788ರಲ್ಲಿ ಗಂಗರಾಜ ಶ್ರೀಪುರುಷ ಮರಣಹೊಂದಿದಾಗ ಅವನ ಅನಂತರ ಪಟ್ಟಕ್ಕೆ ಬರಬೇಕಾಗಿದ್ದ ಶಿವಮಾರ ರಾಷ್ಟ್ರಕೂಟ ಕಾರಾಗೃಹದಲ್ಲಿ ಬಂದಿಯಾಗಿದ್ದ. ಗೋವಿಂದ ರಣಾವಲೋಕನನ್ನು ಸದೆಬಡಿಯುವುದಕ್ಕೆ ಅನುಕೂಲವಾಗಲೆಂದು ಶಿವಮಾರನನ್ನು ಬಿಡುಗಡೆಮಾಡಿ ಅವನ ರಾಜ್ಯಕ್ಕೆ ಕಳುಹಿಸಿಕೊಟ್ಟ. ಆದರೆ ಶಿವಮಾರ ರಣಾವಲೋಕ ಸ್ತಂಭನ ಪಕ್ಷಕ್ಕೆ ಸೇರಿಕೊಂಡ. ಗೋವಿಂದ ಸ್ತಂಭನ ದಂಗೆಯನ್ನಡಗಿಸಲು ನಿರತನಾದ. ಸ್ತಂಭನಿಗೆ ಮಿತ್ರರಾಜರಿಂದ ಸಹಾಯ ಬರುವುದಕ್ಕೆ ಮೊದಲೇ ಅವನನ್ನು ಸೆರೆಹಿಡಿದ. ಆದರೆ ಅವನ ತಪ್ಪನ್ನು ಕ್ಷಮಿಸಿ ಪುನಃ ಗಂಗವಾಡಿಯ ಮಾಂಡಲಿಕನನ್ನಾಗಿ ನೇಮಿಸಿದ. ಶಿವಮಾರನನ್ನು ಪುನಃ ಕಾರಾಗೃಹಕ್ಕೆ ತಳ್ಳಿದ. ಅನಂತರ ಗೋವಿಂದ ಕಂಚಿಯ ದಂತಿಗನ ಮೇಲೆ ದಂಡೆತ್ತಿಹೋಗಿ ಅವನನ್ನು ಸೋಲಿಸಿದ; ನೊಳಂಬವಾಡಿಯ ಚಾರುಪೊನ್ನೇರ ಶರಣಾಗತನಾದ. 796ರ ಹೊತ್ತಿಗೆ ಗೋವಿಂದ ಇವೆಲ್ಲ ದಿಗ್ವಿಜಯಗಳನ್ನು ನಿರ್ವಹಿಸಿ ದಕ್ಷಿಣಾಪಥದ ಏಕೈಕ ಪ್ರಭುವಾದ.

ಇತ್ತ ತನ್ನ ಅಧಿಕಾರ ನಿರ್ಬಾಧಿತವಾದ ಮೇಲೆ ಗೋವಿಂದ ತನ್ನ ದೃಷ್ಟಿಯನ್ನು ಉತ್ತರ ಭಾರತಕ್ಕೆ ಹರಿಸಿದ (ಸು.798-800), ಗೋವಿಂದನ ತಂದೆ ಧ್ರುವ ಉತ್ತರ ಭಾರತದ ದಂಡಯಾತ್ರೆಯಿಂದ ಹಿಂತಿರುಗಿ ಬಂದಮೇಲೆ ಬಂಗಾಲದ ಧರ್ಮಪಾಲ ಕನೂಜನ್ನು ಗೆದ್ದುಕೊಂಡು ಚಕ್ರಾಯುಧನನ್ನು ಕನೂಜಿನ ರಾಜನನ್ನಾಗಿ ಮಾಡಿ ತಾನು ಉಚ್ಛ್ರಾಯಸ್ಥಿತಿಗೆ ಏರಿದ್ದ. ಆದರೆ ಸ್ವಲ್ಪಕಾಲದಲ್ಲಿಯೇ ಗೂರ್ಜರ ಪ್ರತೀಹಾರ ರಾಜ ಇಮ್ಮಡಿ ನಾಗಭಟ ಪುನಃ ಕನೂಜನ್ನು ಗೆದ್ದುಕೊಂಡು ಚಕ್ರಾಯುಧನನ್ನು ಓಡಿಸಿದನಲ್ಲದೆ, ಆತನ ಸಹಾಯಕ್ಕೆ ಬಂದ ಧರ್ಮಪಾಲನನ್ನೂ ಹಿಮ್ಮೆಟ್ಟಿಸಿದ್ದ. ಈ ಸಮಯದಲ್ಲಿ ಗೋವಿಂದ ಕನೂಜಿನ ಮೇಲೆ ದಂಡೆತ್ತಿಹೋದ. ನಾಗಭಟನಿಗೂ ಮತ್ತು ಗೋವಿಂದನಿಗೂ ಪ್ರಾಯಶಃ ಝೂನ್ಸಿ, ಗ್ವಾಲಿಯರ್ ಪ್ರಾಂತ್ಯಗಳ ನಡುವೆ ಯುದ್ಧವಾಯಿತು. ಚಕ್ರಾಯುಧ, ಧರ್ಮಪಾಲ ಇಬ್ಬರೂ ಗೋವಿಂದನಿಗೆ ಶರಣಾದರು. ಅನಂತರ ಗೋವಿಂದನ ಸೈನ್ಯ ಹಿಮಾಲಯದ ತಪ್ಪಲಿನವರೆಗೂ ದಂಡೆತ್ತಿ ಹೋಗಿ ನಾನಾ ರಾಜವಂಶಗಳ ರಾಜರನ್ನು ಸದೆಬಡಿದು, ಕರ್ನಾಟಕದ ಕೀರ್ತಿ ಪ್ರತಾಪಗಳನ್ನು ಹಿಮಾಲಯಪರ್ಯಂತ ಹರಡಿತು. ಗೋವಿಂದ ಕೈಗೊಂಡ ಉತ್ತರ ಭಾರತದ ದಂಡಯಾತ್ರೆ ಕೇವಲ ದಿಗ್ವಿಜಯ ರೂಪವಾಗಿತ್ತು. ಕೀರ್ತಿ ಮತ್ತು ಕೋಶವೃದ್ಧಿಯಾಯಿತೆ ವಿನಾ ರಾಜ್ಯವಿಸ್ತಾರವೇನೂ ಆದಂತೆ ತೋರುವುದಿಲ್ಲ. ಈ ಹಿಂದಿನಿಂದಲೂ ರಾಷ್ಟ್ರಕೂಟಾಧೀನದಲ್ಲಿದ್ದ ಮಾಳವ ಗುಜರಾತ್ ಪ್ರದೇಶಗಳನ್ನು ಭದ್ರಪಡಿಸಿಕೊಳ್ಳಲೋಸುಗ ಸಮರ್ಥ ಯೋಧನಾಗಿದ್ದ ತನ್ನ ತಮ್ಮ ಇಂದ್ರನಿಗೆ ಆ ಪ್ರಾಂತ್ಯಗಳ ಅಧಿಕಾರವನ್ನು ವಹಿಸಿದ. ಈ ದಂಡಯಾತ್ರೆಯಿಂದ ಹಿಂದಿರುಗುತ್ತಿದ್ದಾಗ ಮಾಳವದೇಶದ ಶ್ರೀಭವನ ಎಂಬಲ್ಲಿ ತಂಗಿದ್ದ. ಆಗ ಮಗ ಅಮೋಘವರ್ಷ (ನೃಪತುಂಗ) ಜನಿಸಿದ.

ಗೋವಿಂದ ದೀರ್ಘಕಾಲ ರಾಜಧಾನಿಯಿಂದ ಹೊರಗೆ ಇದ್ದ ಅವಕಾಶವನ್ನು ಉಪಯೋಗಿಸಿಕೊಂಡು ದಕ್ಷಿಣದ ಪಲ್ಲವ, ಪಾಂಡ್ಯ, ಕೇರಳ, ಗಂಗರಾಜರು ಗೋವಿಂದನ ಪ್ರಭುತ್ವವನ್ನು ಮುರಿಯಲು ಸಿದ್ಧತೆ ಮಾಡತೊಡಗಿ ರಾಷ್ಟ್ರಕೂಟರ ಕೆಲವು ಪ್ರಾಂತ್ಯಗಳನ್ನು ಆಕ್ರಮಿಸಿದರು. ಈ ವಾರ್ತೆಯನ್ನು ಕೇಳಿದೊಡನೆಯೇ ಈತ ತುಂಗಭದ್ರಾ ತಟಕ್ಕೆ ಧಾವಿಸಿ (ಸು.802) ಅಲ್ಲಿ ಬೀಡುಬಿಟ್ಟಿದ್ದ ದಕ್ಷಿಣ ರಾಜರ ಸೈನ್ಯಗಳನ್ನು ಪರಾಭವಗೊಳಿಸಿದ. ಅನೇಕ ಗಂಗಸೇನಾಧಿಕಾರಿಗಳನ್ನು ಮರುಕ ತೋರಿಸದೆ ಬಲಿ ತೆಗೆದುಕೊಂಡ. ಈ ವಿಜಯದ ಅನಂತರ ಪಲ್ಲವರ ರಾಜಧಾನಿಯಾದ ಕಂಚಿಯನ್ನು ಸೂರೆಮಾಡಿ ಸ್ವಾಧೀನಪಡಿಸಿಕೊಂಡ. ಅನಂತರ ಪಾಂಡ್ಯ, ಕೇರಳ ರಾಜರುಗಳನ್ನು ಸೋಲಿಸಿದ. ಗೋವಿಂದ ಕಂಚಿಯ ರಾಜ್ಯವನ್ನು ಜಯಿಸಿದನೆಂಬ ಸುದ್ದಿಯನ್ನು ಕೇಳಿದೊಡನೆಯೆ ಸಿಂಹಳದ ರಾಜ ತಾನಾಗಿಯೇ ವಿನಮ್ರನಾಗಿ ಬಂದು ಗೋವಿಂದನಿಗೆ ತನ್ನ ಹಾಗೂ ತನ್ನ ಅಮಾತ್ಯನ ಪ್ರತಿಮೆಗಳನ್ನು ಕಪ್ಪವಾಗಿ ಸಲ್ಲಿಸಿದ.

ನಾಲ್ವಡಿ ವಿಷ್ಣುವರ್ಧನ ಜೀವಿಸಿರುವವರೆಗೂ ಪೂರ್ವ ಚಾಳುಕ್ಯ ಮತ್ತು ರಾಷ್ಟ್ರಕೂಟರ ಸಂಬಂಧ ಸ್ನೇಹದಿಂದ ಕೂಡಿತ್ತು. ಅವನ ಅನಂತರ ಪಟ್ಟಕೆ ಬಂದ ಇಮ್ಮಡಿ ವಿಜಯಾದಿತ್ಯ ಸಾಮಂತನಾಗಿರಲು ಒಪ್ಪದೆ ಪ್ರತ್ಯಕ್ಷವಾಗಿ ಗೋವಿಂದನನ್ನು ವಿರೋಧಿಸತೊಡಗಿದ. ಈ ನಡುವೆ ವಿಜಯಾದಿತ್ಯನಿಗೂ ಅವನ ತಮ್ಮ ಭೀಮನಿಗೂ ಪಟ್ಟಕ್ಕಾಗಿ ಹೋರಾಟ ಪ್ರಾರಂಭವಾಯಿತು. ಭೀಮ ಗೋವಿಂದನ ಮೊರೆಹೊಕ್ಕ. ಗೋವಿಂದ ಸೇನಾಸಮೇತನಾಗಿ ವೆಂಗಿಗೆ ನಡೆದು ವಿಜಯಾದಿತ್ಯನನ್ನು ಸೋಲಿಸಿ ವೆಂಗಿ ರಾಜ್ಯವನ್ನು ಗಳಿಸಿಕೊಟ್ಟ.

ಸು.810ರಲ್ಲಿ ಗಂಗರಾಜ್ಯದ ಮಾಂಡಲಿಕನಾಗಿದ್ದ ರಣಾವಲೋಕಸ್ತಂಭ ಸತ್ತ. ಗೋವಿಂದ ತನ್ನ ತಮ್ಮ ಇಂದ್ರನ ಜ್ಯೇಷ್ಠಪುತ್ರನಾದ ದಂತಿವರ್ಮನನ್ನು ಗಂಗರಾಜ್ಯದ ಮಾಂಡಲಿಕನಾಗಿ ನೇಮಿಸಿದ. ಆದರೆ ದಂತಿವರ್ಮ ಅಕಾಲ ಮರಣಕ್ಕೆ ತುತ್ತಾದ್ದರಿಂದ ಕೊನೆಗೆ ಗೋವಿಂದ ಅದುವರೆಗೆ ಸೆರೆಯಲ್ಲಿದ್ದ ಶಿವಮಾರನನ್ನು ಬಿಡುಗಡೆಮಾಡಿ ಗಂಗರಾಜ್ಯವನ್ನು ಅವನಿಗೇ ಮರಳಿ ನೀಡಿದ.

ಭಾರತದ ಇತಿಹಾಸದ ಪುಟಗಳಲ್ಲಿ ಗಣ್ಯಸ್ಥಾನ ಪಡೆದಿರುವ ರಾಜರುಗಳಲ್ಲಿ ಗೋವಿಂದನೂ ಒಬ್ಬ. ಇವನ ರಾಜಕೀಯ ಪ್ರಭಾವ ಕನೂಜಿನಿಂದ ಕನ್ಯಾಕುಮಾರಿಯವರೆಗೂ ವ್ಯಾಪಿಸಿದ್ದಿತು. ಇವನ ಕೊನೆಗಾಲ ಶಾಂತಿ, ಸಮೃದ್ಧಿಯ ಕಾಲ. ಆ ದಿನಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಪ್ರಾಬಲ್ಯ, ಘನತೆ, ಗೌರವಗಳ ಉತ್ತುಂಗ ಶಿಖರವನ್ನು ಮುಟ್ಟಿತ್ತು.

ಸು.814ರಲ್ಲಿ ಇವನ ಅವಸಾನವಾಯಿತು. ಗಾಮುಂಡಬ್ಬೆ ಈತನ ಪತ್ನಿ. ಅಮೋಘವರ್ಷ ನೃಪತುಂಗ ಈತನ ಮಗ. (ಎಸ್.)

**ಗೋವಿಂದ IV:** ರಾಷ್ಟ್ರಕೂಟ ದೊರೆ (930-35). 3ನೆಯ ಇಂದ್ರನ ಕಿರಿಯ ಮಗ. ಪ್ರಭೂತವರ್ಷ, ಸುವರ್ಣವರ್ಷ, ನೃಪತುಂಗ, ನೃಪತಿತ್ರಿನೇತ್ರ, ಸಾಹಸಾಂಕ, ರಟ್ಟಕಂದರ್ಪ ಎಂಬುವು ಇವನ ಬಿರುದುಗಳು. ನಾಲ್ವಡಿ ಗೋವಿಂದ ಅಣ್ಣನಾದ ಇಮ್ಮಡಿ ಅಮೋಘವರ್ಷನನ್ನು ಪ್ರಾಯಶಃ

**ಗೋವಿಂದನಾರಾಯಣ್ :** 1917-. ಕರ್ನಾಟಕದ ಮಾಜಿ ರಾಜ್ಯಪಾಲರು (1977-83). ಉತ್ತರ ಪ್ರದೇಶದ ಮೈನ್‌ಪುರಿಯಲ್ಲಿ 1917ರಲ್ಲಿ ಹುಟ್ಟಿದರು. ತಂದೆ ರಾಮ್‌ನಾರಾಯಣ್, ತಾಯಿ ರಾಜ್‌ರಾಣಿ.

ಇವರು ಅಲಹಾಬಾದ್ ವಿಶ್ವವಿದ್ಯಾಲಯದಿಂದ ಬಿ.ಎಸ್‌ಸಿ. (ಆನರ್ಸ್) ಮತ್ತು ಎಂ.ಎಸ್‌ಸಿ. ಪದವಿ ಪಡೆದರು. ಅನಂತರ ಆಕ್ಸ್‌ಫರ್ಡಿನ ಬಲಿಯೋಲ್ ಕಾಲೇಜಿನಲ್ಲಿ ಅಧ್ಯಯನ ಮಾಡಿ ಭಾರತೀಯ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಐ.ಎ.ಎಸ್ ಅಧಿಕಾರಿಯಾಗಿ ಭಾರತ ಸರ್ಕಾರದ ಸೇವೆಗೆ ಸೇರಿದರು. ಅನೇಕ ವರ್ಷಗಳ ಕಾಲ ಉತ್ತರ ಪ್ರದೇಶದಲ್ಲಿ ಕೆಲಸಮಾಡಿದರು. ಭಾರತದ ಸ್ವಾತಂತ್ರ್ಯದ ಪ್ರಶ್ನೆ ತೀವ್ರವಾಗಿ ಚರ್ಚಿತವಾಗುತ್ತಿದ್ದಾಗ ಇವರು ಜಿಲ್ಲಾ ದಂಡಾಧಿಕಾರಿಯಾಗಿ ಸೇವೆ ಸಲ್ಲಿಸಿದರು (1945-47). ಸ್ವಾತಂತ್ರ್ಯಾನಂತರ ಉತ್ತರ ಪ್ರದೇಶ ಸರ್ಕಾರದಲ್ಲಿ ಗೃಹಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು (1948-51).

ನೇಪಾಲದೊಂದಿಗೆ ಸ್ವತಂತ್ರ ಭಾರತದ ಸಂಬಂಧ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಇವರ ಸೇವೆಯನ್ನು ಆ ದೇಶಕ್ಕೆ ಎರವಲಾಗಿ ನೀಡಲಾಗಿತ್ತು. ಮೂರು ವರ್ಷಗಳ ಕಾಲ ಇವರು ನೇಪಾಲದ ರಾಜರ ಸಲಹೆಗಾರ ಮತ್ತು ಕಾರ್ಯದರ್ಶಿಯಾಗಿದ್ದರು (1951-53). ಈ ಅವಧಿ ಪೂರೈಸಿದ ಬಳಿಕ ಉತ್ತರ ಪ್ರದೇಶಕ್ಕೆ ಹಿಂದಿರುಗಿ ಆ ರಾಜ್ಯದ ಮರಾಮತ್, ವಿದ್ಯುತ್ತು ಮತ್ತು ಸಮಾಚಾರ ಖಾತೆಗಳ ಕಾರ್ಯದರ್ಶಿಯಾಗಿ, ಸಮಾಚಾರ ಖಾತೆಯ ನಿರ್ದೇಶಕರಾಗಿ ಕೆಲಸ ಮಾಡಿದರು. ಅಭಿವೃದ್ಧಿ, ಯೋಜನೆ, ಅರ್ಥಶಾಸ್ತ್ರ, ಅಂಕಿಅಂಶ ಮುಂತಾದ ವಿಚಾರಗಳಲ್ಲೂ ಇವರಿಗೆ ಅಪಾರ ಅನುಭವವಿತ್ತು. ಇವರು ಅಭಿವೃದ್ಧಿ ಕಮಿಷನರ್ ಆಗಿಯೂ ನಾನಾ ಇಲಾಖೆಗಳಲ್ಲಿ ಕಾರ್ಯದರ್ಶಿಯಾಗಿಯೂ ಇದ್ದರಲ್ಲದೆ (1955-58) ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿಯಾಗಿ (1958-61) ಕೆಲಸ ಮಾಡಿದರು. ರಾಜ್ಯ ವ್ಯಾಪಾರ ಕಾರ್ಪೊರೇಷನ್ನಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಇವರು ಅದೇ ಸಂಸ್ಥೆಯ ರಾಷ್ಟ್ರಮಟ್ಟದ ಅಧ್ಯಕ್ಷರಾಗಿದ್ದರು. ಇವರು ಭಾರತದ ಖನಿಜ ಮತ್ತು ಲೋಹ ವ್ಯಾಪಾರ ಕಾರ್ಪೊರೇಷನ್ನಿನ ಅಧ್ಯಕ್ಷರಾಗಿದ್ದರು. (1963-66). ಕೇರಳದಲ್ಲಿ ರಾಷ್ಟ್ರಪತಿ ಆಡಳಿತ ಘೋಷಿತವಾಗಿದ್ದಾಗ ಅಲ್ಲಿಯ ರಾಜ್ಯಪಾಲರ ಸಲಹೆಗಾರರಾಗಿ ಕಾರ್ಯನಿರ್ವಹಿಸಿದರು (1965).

ರಾಜ್ಯ ಸರ್ಕಾರದ ಸೇವಾಕ್ಷೇತ್ರದಿಂದ ರಾಷ್ಟ್ರಮಟ್ಟದ ಸೇವೆಗೆ ಇವರು ನಿಯೋಜಿತರಾದರು. ಕೇಂದ್ರ ಸರ್ಕಾರದ ಕುಟುಂಬ ಯೋಜನಾ ಇಲಾಖೆಯ ಕಾರ್ಯದರ್ಶಿಯಾಗಿ (1966), ಆರೋಗ್ಯ ಮತ್ತು ಕುಟುಂಬಯೋಜನಾ ಸಚಿವಾಲಯದ ಕಾರ್ಯದರ್ಶಿಯಾಗಿ (1967-68) ಸೇವೆ ಸಲ್ಲಿಸಿದರು. ರಕ್ಷಣಾ ಉತ್ಪಾದನ ವಿಭಾಗದ ಕಾರ್ಯದರ್ಶಿಯಾಗಿದ್ದ (1968-70) ಇವರು ಗೃಹಸಚಿವಾಲಯದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು (1971-73). ಬಳಿಕ ರಕ್ಷಣಾ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ನೇಮಕಗೊಂಡು ಆ ಹುದ್ದೆಯಲ್ಲೇ ನಿವೃತ್ತರಾದರು.

ಸಾರ್ವಜನಿಕ ಜೀವನದಲ್ಲಿ ಅತ್ಯಂತ ಸಂಪನ್ನರೂ ಅಪಾರ ಅನುಭವಿಯೂ ಆಗಿದ್ದ ಇವರು ಆಡಳಿತದ ಎಲ್ಲ ತೊಡಕುಗಳನ್ನೂ ಸೂಕ್ಷ್ಮಗಳನ್ನೂ ಬಲ್ಲವರಾಗಿದ್ದರು. 1977ರಲ್ಲಿ ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡು ರಾಜ್ಯದ ಅಭಿವೃದ್ಧಿಯಲ್ಲಿ ಕೈಜೋಡಿಸಿದರು. ಚಂದ್ರಾ ಇವರ ಪತ್ನಿ.

(ಎಚ್.ಎಸ್.ಕೆ.)

**ಗೋವಿಂದ ಪೈ,ಎಂ. :** 1883-1963. ರಾಷ್ಟ್ರಕವಿ ಪ್ರಶಸ್ತಿಗೆ ಭಾಜನರಾಗಿದ್ದ ಪ್ರಸಿದ್ಧ ಕವಿಗಳು ಮತ್ತು ಸಂಶೋಧಕರು. 1883 ಮಾರ್ಚ್ 23ರಂದು ಮಂಗಳೂರಿನಲ್ಲಿ ಜನಿಸಿ ಕಡಲ ಕರೆಯ ಮಂಜೇಶ್ವರದಲ್ಲಿ ಬೆಳೆದರು. ಕನ್ನಡ ನಾಡುನುಡಿಗಳ ಏಳಿಗೆಗೆ, ಏಕೀಕರಣಕ್ಕೆ ಕೆಲಸ ಮಾಡಿದವರಲ್ಲಿ ಇವರು ಬಹಳ ಮುಖ್ಯರು. ಆಸ್ತಿ ಮನೆ ಎಲ್ಲ ಮಂಜೇಶ್ವರದಲ್ಲಿದ್ದುದರಿಂದ ಅಲ್ಲಿಯೇ ಇವರು ನೆಲೆನಿಂತರಾದರೂ ಇವರ ಹೆಸರಿನ ಮೊದಲಿಗೆ ಇರುವ ಎಂ. ಎಂಬುದು ಮಂಗಳೂರಿನ ಪ್ರತೀಕವೇ ಹೊರತು ಮಂಜೇಶ್ವರದ್ದಲ್ಲ. ಇವರು ಗೌಡ ಸಾರಸ್ವತ ಸಮಾಜದ ಮಂಗಳೂರಿನ ಬಾಬ ಪೈ ಮನೆತನಕ್ಕೆ ಸೇರಿದವರು.

ಇವರ ಆರಂಭದ ವ್ಯಾಸಂಗ ಮಂಗಳೂರಿನಲ್ಲಿ ನಡೆಯಿತು. ಪಂಜೆ ಮಂಗೇಶರಾಯರು ಇವರ ವಿದ್ಯಾಗುರುಗಳಲ್ಲೊಬ್ಬರು. ಮಂಗಳೂರಿನಲ್ಲಿ ನಡೆಯುತ್ತಿದ್ದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಚುರುಕು ಬುದ್ಧಿಯ ಮತ್ತು ಭಾವುಕ ಮನೋಧರ್ಮವುಳ್ಳ ಇವರ ಮೇಲೆ ವಿಶೇಷ ಪರಿಣಾಮ ಬೀರಿದುವು. ಜೊತೆಗೆ ಅಲ್ಲಿದ್ದ ಬಾಸೆಲ್ ಮಿಶನ್ ಪುಸ್ತಕ ಭಂಡಾರದಿಂದಲೂ ಪ್ರಭಾವಿತರಾದರು. ಇದರಿಂದಾಗಿ ಇವರು ಹೆಚ್ಚು ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸುವ ಮತ್ತು ಸತತವಾಗಿ ವ್ಯಾಸಂಗಮಾಡುವ ಅಭ್ಯಾಸವನ್ನು ರೂಢಿಸಿಕೊಂಡರು. ಮುಂದೆ ಇವರು ಪ್ರೌಢವಿದ್ಯಾಭ್ಯಾಸಕ್ಕೆಂದು ಮದರಾಸಿಗೆ ತೆರಳಿದರಾದರೂ ತಂದೆಯ ತೀವ್ರಕಾಯಿಲೆಯಿಂದಾಗಿ, ಅನಂತರ ಹಠಾತ್ತನೆ ಒದಗಿದ ಅವರ ಮರಣದಿಂದಾಗಿ ಬಿ.ಎ. ಪದವಿಯನ್ನು ಪಡೆಯಲಾಗಲಿಲ್ಲ.

ತಂದೆ ತೀರಿಕೊಂಡಮೇಲೆ ಇವರು ಸಂಸಾರದ ಹೊಣೆ ಹೊತ್ತು ಊರಿನಲ್ಲಿಯೇ ನಿಂತರು. ಆದರೆ ಇವರ ಸಾಂಸಾರಿಕ ಜೀವನ ಅಂಥ ಸುಖಮಯವೇನೂ ಆಗಲಿಲ್ಲ. ದಾಂಪತ್ಯ ಜೀವನದ ಹರೆಯದಲ್ಲಿಯೆ ಪತ್ನಿಯನ್ನು ಕಳೆದುಕೊಂಡರು. ಮತ್ತೆ ಮದುವೆಯಾಗಲಿಲ್ಲ. ಮಕ್ಕಳಿಲ್ಲವೆಂದೂ ವ್ಯಥೆಪಡಲಿಲ್ಲ. ತಮ್ಮ ಕುಟುಂಬದಲ್ಲಿಯೇ ಬೆಳೆಯುತ್ತಿದ್ದ ತಮ್ಮನ ಮಕ್ಕಳಲ್ಲಿಯೇ ಅಕ್ಕರೆಯನ್ನು ತೋರಿಸುತ್ತ ಅವರನ್ನು ಬೆಳೆಸಿದರು. ಕಿರಿಯ ಸೋದರ ಸುಬ್ಬರಾಯ ಪೈಗಳು ಅಣ್ಣನಿಗೆ ನೆರವಾಗುತ್ತ ಮನೆಗೆ ಬಂದ ಅತಿಥಿಗಳ ಸತ್ಕಾರಾದಿ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು.

ಇವರ ಮೊತ್ತಮೊದಲಿನ ಲೇಖನ 1900ರಲ್ಲಿ ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾಯಿತು. 1962ರಲ್ಲಿ ಪ್ರಕಟಗೊಂಡ ಮಂಜೇಶ್ವರ ದೇವಾಸ್ಥಾನದ ಮೇಲಿನ ಲೇಖನ ಇವರ ಕೊನೆಯ ಬರೆವಣಿಗೆಯಾಯಿತು. ಹೀಗೆ ಸುಮಾರು 62 ವರ್ಷಗಳವರೆಗೆ ಸತತವಾಗಿ ವಾಙ್ಮಯ ಸೇವೆಯಲ್ಲಿ ತೊಡಗಿದ್ದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಇವರು ಬರೆದದ್ದು ಗಾತ್ರದಲ್ಲಿ ಸ್ವಲ್ಪವೇ ಆದರೂ ಇವರ ಬರೆವಣಿಗೆ ಪ್ರೌಢವೂ ವಿದ್ವತ್ಪೂರ್ಣವೂ ಮೌಲಿಕವೂ ಆಗಿದೆ.

ಸಂಶೋಧನೆ, ಪ್ರಬಂಧ, ಕವಿತೆ ಮತ್ತು ನಾಟಕ ಈ ಮಾರ್ಗಗಳಲ್ಲಿ ಇವರ ಸಾಹಿತ್ಯ ವಾಹಿನಿ ಪ್ರವಹಿಸಿದೆ. ಸುವಾಸಿನಿ ಎಂಬ ಇವರ ಕವನ ಅದೇ ಹೆಸರಿನ ಪತ್ರಿಕೆಯಲ್ಲಿ ಪ್ರಕಟವಾಗಿ (1900) ಆ ಪತ್ರಿಕೆ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆಯಿತು. ಅನಂತರ ನವೀನ ಚಂದ್ರಸೇನರ ಬಂಗಾಲಿ ಕೃಷ್ಣಚರಿತೆಯ ಗದ್ಯಾನುವಾದ (1909), ಮತ್ತು ಸಿಗಾಲಸುತ್ತ ಎಂಬ ಬೌದ್ಧ ಸೂತ್ರಗಳ ಕನ್ನಡ ಅನುವಾದಗಳು (1911) ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದುವು. ಇವರ ಕವನ ಸೃಷ್ಟಿಯೂ ಧರ್ಮ ಮತ್ತು ಚರಿತ್ರೆಗೆ ಸಂಬಂಧಿಸಿದ ವ್ಯಾಸಂಗವೂ ಒಟ್ಟೊಟ್ಟಿಗೆ ಸಾಗಿದವು. ಇದೇ ಕಾಲಕ್ಕೆ (1911) ಪ್ರಾಸವನ್ನು ಇಟ್ಟು, ಬಿಟ್ಟು ಪದ್ಯಗಳನ್ನು ರಚಿಸುವ ಹಲವು ಪ್ರಯೋಗಗಳನ್ನು ಇವರು ಕೈಗೊಂಡರು. ಆ ಮುಂದೆ, ಮಂಜೇಶ್ವರಕ್ಕೆ ಬರುತ್ತಿದ್ದ ಬುದ್ಧಿಜೀವಿಗಳೊಡನೆ ಪ್ರಾಕ್ತನ ವಿಷಯಗಳನ್ನು ಚರ್ಚಿಸುವುದರಲ್ಲಾಗಲಿ, ಕವಿಚರಿತ್ರಕಾರರೇ ಮೊದಲಾದವರೊಡನೆ ಪತ್ರವ್ಯವಹಾರದಲ್ಲಾಗಲಿ ತೊಡಗಿದ್ದರಾದರೂ ಸಂಶೋಧನಾತ್ಮಕ ಬರೆವಣಿಗೆಗೆ ಇನ್ನೂ ತೊಡಗಿರಲಿಲ್ಲ. 1924ರ ಬೆಳಗಾಂವಿ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಇವರು ಒಬ್ಬ ಉದಯೋನ್ಮುಖ ಕವಿ ಎಂಬ ಹೆಸರನ್ನು ಮಾತ್ರ ಗಳಿಸಿದ್ದರು.

ಪೈಗಳ ಸಂಶೋಧನಾತ್ಮಕ ಬರೆವಣಿಗೆ ಪ್ರಾರಂಭವಾದದ್ದು 1924ರಲ್ಲಿ. ಮುಂದಣ ಒಂದೊಂದು ವರ್ಷಕ್ಕೆ ಸುಮಾರು ಏಳೆಂಟು ಸಂಶೋಧನ ವಿಷಯಗಳನ್ನು ಆರಿಸಿಕೊಂಡು ಬರೆಯುತ್ತ ಹೋದರು. ಭಾರತೀಯ ಇತಿಹಾಸಕಾರರಿಗೆ ಹೆಚ್ಚು ಹಿಡಿಸಬಹುದಾದ ಲೇಖನಗಳನ್ನು ಇಂಗ್ಲಿಷಿನಲ್ಲಿ ಬರೆದರು. ಅರಸು ಮನೆತನಗಳ ವಂಶಾವಳಿ, ಕವಿಕಾವ್ಯಗಳ ಕಾಲನಿರ್ಣಯ ಈ ಕೆಲಸದ ಮಧ್ಯೆ ಕವಿತಾರಚನೆ ಈ ಪರಿಪಾಠ 1945ರವರೆಗೆ ನಡೆಯಿತು. ಕವಿತೆ ಮತ್ತು ಸಂಶೋಧನೆ ಇವೆರಡರಲ್ಲಿ ನಿಶ್ಚಿತವಾದ ಯಾವ ಕ್ರಮವನ್ನೂ ತಾವು ಅನುಸರಿಸಿದವರಲ್ಲ ಎಂಬ ಮಾತನ್ನು ಪೈಯವರೇ ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ. ಗಿಳಿವಿಂಡು ಕವನಸಂಗ್ರಹ 1930ರಲ್ಲಿ ಪ್ರಕಟವಾಯಿತು. ಪೈ ಅವರು ನಾಟಕ ಕ್ಷೇತ್ರದಲ್ಲಿ ವ್ಯವಸಾಯ ಮಾಡಲು ಮನಸ್ಸನ್ನು ತೊಡಗಿಸಿದ್ದು 1927-47ರಲ್ಲಿ. ಹೀಗೆ 1927ರಿಂದ 1947ರ ವರೆಗಿನ 20 ವರ್ಷಗಳ ಅವಧಿ ಪೈಗಳ ಬರೆವಣಿಗೆಯ ಉಚ್ಛ್ರಾಯಕಾಲ ಎಂದು ಹೇಳಬಹುದು. ಅನಂತರವೂ ಬರೆವಣಿಗೆ ಮುಂದೆ ಸಾಗಿತಾದರೂ ಅದರ ಗತಿ ಮಂದವಾಯಿತು. 1953ರ ಹೊತ್ತಿಗೆ, ಎಂದರೆ ಪೈ ಅವರ 70ನೆಯ ವಯಸ್ಸಿನ ಸುಮಾರಿಗೆ ಲೇಖನ ವ್ಯವಸಾಯ ತೀರ ಕುಂಠಿತವಾಯಿತು.



ಪೈಗಳ ಸಂಶೋಧನ ಕ್ಷೇತ್ರ ಇತಿಹಾಸ, ಹಳಗನ್ನಡ ಕವಿಕಾವ್ಯ, ಹೊಸಗನ್ನಡ ಸಾಹಿತ್ಯ ಇವಕ್ಕೆ ಸಂಬಂಧಿಸಿದೆ. ಇತಿಹಾಸಕ್ಕೆ ಸಂಬಂಧಿಸಿದ ಲೇಖನಗಳಲ್ಲಿ ತಮ್ಮ ಪೂರ್ವಜರಾದ ಗೌಡ ಸಾರಸ್ವತರ ಮೂಲಕ್ಕೆ ಸಂಬಂಧಿಸಿದ ಸಂಶೋಧನೆ ಅತ್ಯಂತ ಮಹತ್ತ್ವಪೂರ್ಣವಾದುದು. ಹಲವು ಪುರಾಣಗಳನ್ನೂ ಶಾಸನಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಸಾರಸ್ವತರ ಉಲ್ಲೇಖ ಎಲ್ಲೆಲ್ಲಿ ಬಂದಿದೆ ಎಂಬುದನ್ನು ಗುರುತಿಸಿ ಫ್ಲ್ಯಾಷಸ್ ಫ್ರಮ್ ದಿ ಪಾಸ್ಟ್ ಎಂಬ ಲೇಖನವನ್ನು ಬರೆದರು. ಅದೇ ಮುಂದೆ ಮತ್ತಷ್ಟು ಘನೀಭೂತವಾಗಿ ನಮ್ಮ ಹಿರಿಯರನ್ನು ಕುರಿತು ಎಂಬ ಲೇಖನದಲ್ಲಿ ನಿರ್ಣಯಾತ್ಮಕ ರೂಪ ತಾಳಿತು. ಸಾರಸ್ವತರು ಮೂಲತಃ ಪಂಜಾಬ್‌ನ ಸರಸ್ವತೀ ನದಿತೀರದವರೆಂದು ಸಾಧಾರಣವಾಗಿ ಈ ಲೇಖನದಲ್ಲಿ ಹೇಳಿದುದಲ್ಲದೆ, ಕೊಂಕಣಿ ಭಾಷೆಯ ಮೂಲದ ಬಗ್ಗೆಯೂ ಆಳವಾದ ಸಂಶೋಧನೆಯನ್ನು ನಡೆಸಿ ಅದು ಮರಾಠಿ ಜನ್ಯವಲ್ಲ, ಮಾಗಧೀ ಪ್ರಾಕೃತದಿಂದ ಜನಿಸಿದ ಭಾಷೆ ಎಂಬುದನ್ನು ಇವರು ಸ್ಥಾಪಿಸಿದ್ದಾರೆ. ಅಷ್ಟೇ ಅಲ್ಲದೆ ಮರಾಠಿಯೂ ಈಚಿನ ಕಾಲದ್ದಾದ ಮಹಾರಾಷ್ಟ್ರ ಪ್ರಾಕೃತದಿಂದ ಹುಟ್ಟಿದ್ದಾದುದರಿಂದ ಕೊಂಕಣಿ ಭಾಷೆ ಮರಾಠಿಗಿಂತಲೂ ಪ್ರಾಚೀನ ಎಂದೂ ಮಂಜೇಶ್ವರದ ಅನಂತೇಶ್ವರ ದೇವಾಲಯವೂ ಮೂಲತಃ ಸಾರಸ್ವತರ ದೇವಸ್ಥಾನವೇ ಎಂದೂ ಇವರ ಅನಿಸಿಕೆ.

ಪೈಗಳ ಇನ್ನೊಂದು ಪ್ರಮುಖ ಸಂಶೋಧನೆ ತುಳುನಾಡಿನ ಇತಿಹಾಸವನ್ನು ಕುರಿತದ್ದು. 1927ರಲ್ಲಿ ಮೊದಲು ರೂಪುಗೊಂಡು ಕೊನೆಗೆ 1974ರಲ್ಲಿ ತುಳುನಾಡು ಪೂರ್ವಸ್ಮೃತಿ ಎಂಬ ಹೆಸರಿನಲ್ಲಿ ಪ್ರಚುರಗೊಂಡ ಲೇಖನದಲ್ಲಿ ಇವರ 20 ವರ್ಷಗಳ ಸತತ ಸಂಶೋಧನೆಯ ಸಾರವಿದೆ. ಇದರಲ್ಲಿ ತುಳುನಾಡ ಹೆಸರಿನ ಉತ್ಪತ್ತಿ, ಪ್ರಾಚೀನತೆಗಳನ್ನು ಕುರಿತು ವಿಚಾರ ಮಾಡುತ್ತ 2ನೆಯ ಶತಮಾನದಿಂದ 15ನೆಯ ಶತಮಾನದವರೆಗೆ ಆಳಿದ ಆಳುಪರೆಂಬ ರಾಜಮನೆತನದ ಇತಿಹಾಸವನ್ನು ಹೇಳಿರವುದಲ್ಲದೆ ಇವರಲ್ಲಿ ಪ್ರಮುಖವಾದ ಭೂತಾಳ ಪಾಂಡ್ಯ ಆಳುಪ ಮನೆತನದವನೇ ಎಂಬುದನ್ನು ನಿರ್ಧರಿಸಿದ್ದಾರೆ. ಅಲ್ಲಿನ ಧಾರ್ಮಿಕ ಇತಿಹಾಸವನ್ನು ವಿವರವಾಗಿ ತಿಳಿಸುತ್ತಾ ನಾಥಸಂಪ್ರದಾಯದ ಪ್ರಭಾವವನ್ನೂ ಅಲ್ಲಿನ ಶಿವಲಿಂಗಕ್ಕೆ ಮಂಜುನಾಥ ಎಂದು ಹೆಸರು ಬರಲು ಈ ಸಂಪ್ರದಾಯದ ಪ್ರಭಾವವೇ ಕಾರಣವೆಂಬುದನ್ನೂ ಹೇಳಿದ್ದಾರೆ. ತುಳುನಾಡಿನಲ್ಲಿ ಜನಿಸಿದ ಮಧ್ವಾಚಾರ್ಯ, ರತ್ನಾಕರವರ್ಣಿ, ಪಾರ್ತಿಸುಬ್ಬ, ಮುದ್ದಣ ಮೊದಲಾದ ವ್ಯಕ್ತಿಗಳ ವಿಷಯದಲ್ಲಿದ್ದ ಸಂದಿಗ್ಧತೆಗಳನ್ನು ಪರಿಹರಿಸಿದ್ದಾರೆ.

ಕರ್ನಾಟಕಕ್ಕೆ ಸಂಬಂಧಿಸಿದ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ನಡೆಸಿ ದಕ್ಷಿಣಕ್ಕೆ ಭದ್ರಬಾಹು ಮುನಿಯೊಂದಿಗೆ ಬಂದ ದೊರೆ ಚಂದ್ರಗುಪ್ತ ಮೌರ್ಯನಲ್ಲ; ಮಧ್ಯ ಭಾರತದ ಉಜ್ಜಯಿನಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಸಂಪ್ರತಿ ಚಂದ್ರಗುಪ್ತ ಎಂದು ನಿರ್ಣಯಿಸಿ ಆತ ಕರ್ನಾಟಕಕ್ಕೆ ಬಂದ ಕಾಲ ಕ್ರಿ.ಪೂ.300 ಅಲ್ಲ ಕ್ರಿ.ಪೂ.520 ಎಂದೂ ಇವರೇ ಪ್ರಪ್ರಥಮವಾಗಿ ಕರ್ನಾಟಕಕ್ಕೆ ಕಾಲಿರಿಸಿದ ಜೈನರು ಎಂದೂ ಇವರು ದಿಗಂಬರ ಶಾಖೆಯವರೆಂದೂ ಇವರು ನಿರ್ಣಯಿಸಿದ್ದಾರೆ. ಅನಂತರ ಟಾಲೆಮಿಯ ಪುಸ್ತಕದಲ್ಲಿ ಬಂದಿರುವ ಕರ್ನಾಟಕದ ಊರುಗಳನ್ನು ಗುರುತಿಸಿದ್ದಾರೆ. ಕೆಲವು ಪ್ರಾಚೀನ ಕರ್ನಾಟಕದ ರಾಜಮನೆತನಗಳ, ಮುಖ್ಯವಾಗಿ ಸಾತವಾಹನ, ಪುನ್ನಾಟ, ಗಂಗ ಮತ್ತು ಕದಂಬರ ಇತಿಹಾಸವನ್ನು ಅಧಿಕೃತವಾಗಿ ಸಂಶೋಧಿಸಿ ಬರೆದಿದ್ದಾರೆ.



ಗೋವಿಂದಪೈ ಅವರ ಕೈಬರೆಹದ ಒಂದು ಮಾದರಿ

ಕರ್ನಾಟಕವಷ್ಟೇ ಅಲ್ಲದೆ ಭಾರತೀಯ ಇತಿಹಾಸಕ್ಕೂ ಸಂಬಂಧಿಸಿದಂತೆ ಸಂಶೋಧನೆ ನಡೆಸಿ, ಸೆಲ್ಯೂಕಸನನ್ನು ಸೋಲಿಸಿದ ಚಂದ್ರಗುಪ್ತ ಬಸಿಲೆಸ್ ಎಂಬ ಬಿರುದನ್ನೂ ಪಡೆದಿದ್ದಿರಬೇಕೆಂದೂ ಅದನ್ನು ವಿಶಾಖದತ್ತ ತನ್ನ ಮುದ್ರಾರಾಕ್ಷಸ ನಾಟಕದಲ್ಲಿ ವೃಷ (ಶೂದ್ರ) ಎಂದು ತಪ್ಪಾಗಿ ಗ್ರಹಿಸಿ ಅದನ್ನು ಚಾಣಕ್ಯನ ಬಾಯಲ್ಲಿ ಹೇಳಿಸಿರುವನೆಂದೂ ಹೇಳಿದ್ದಾರೆ. ಅಲ್ಲದೆ ಭಾರತ, ಗ್ರೀಕ್ ಸಂಬಂಧವನ್ನು ಬೆಸ್ನಗರ ಎಂಬಲ್ಲಿಯ ಗರುಡಗಂಬದ ಮೇಲಿದ್ದ ಪ್ರಾಕೃತ ಭಾಷೆಯ ಶಾಸನದಿಂದ (ಕ್ರಿ.ಪೂ.105) ನಿರ್ಧರಿಸಿದ್ದಾರೆ. ಇದರ ಜೊತೆಗೆ ಹೊರಗಿನಿಂದ ಭಾರತಕ್ಕೆ ಕ್ರಿಸ್ತಶಕದ ಆರಂಭದಲ್ಲಿ ಬಂದು ಆಳಿದ ಮೋಬಸ್ ರಾಜನಿಂದ (ಕ್ರಿ.ಪೂ.105) ಆರಂಭವಾದ ಶಕರಾಜರ ಆಳಿಕೆಯ ಮತ್ತು ಅವರ ಯುದ್ಧಯಾತ್ರೆಗಳ ಕಾಲಗಳನ್ನು ನಿರ್ಧರಿಸಿದ್ದಾರೆ. ಶಕರಾಜನನ್ನು ಸೋಲಿಸಿ ಕ್ರಿ.ಶ.78ರಲ್ಲಿ ಸಾತವಾಹನ ಶಕಯುಗವನ್ನು ಸ್ಥಾಪಿಸಿದಂತೆ ಕ್ರಿ.ಶ.136-137 ಗುಪ್ತ ವಲ್ಲಭೀ ಯುಗಗಳು ಒಂದೇ ಎಂದು ಅಲ್ಬರೂನಿ ಹೇಳಿದ ಕಾಲ ತಪ್ಪೆಂದೂ ಕ್ರಿ.ಶ.272 ರಂದು ಆರಂಭವಾದ ಗುಪ್ತಯುಗ 366 ರಲ್ಲಿ ಲುಪ್ತವಾದ ಮೇಲೆಯೇ ವಲ್ಲಭೀಯುಗ ಆರಂಭವಾಯಿತೆಂದೂ ಹೊಸ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಪ್ರಾಚೀನ ಭಾರತದಲ್ಲಿ ರಾಜ್ಯವಾಳಿದ

ವಿಂಧ್ಯಪ್ರದೇಶದ ವಾಕಾಟಕರ (174-515) ಮತ್ತು ದಕ್ಷಿಣದ ಪಲ್ಲವರ (87-900) ಚರಿತ್ರೆಯನ್ನು ಬರೆದಿದ್ದಾರೆ. ಧಾರ್ಮಿಕ ವಿಷಯಗಳಲ್ಲಿನ ಸಂಶೋಧನೆಯಲ್ಲಿಯೂ ಇವರ ಶುದ್ಧ ಐತಿಹಾಸಿಕ ದೃಷ್ಟಿಯನ್ನು ಕಾಣಬಹುದು. ಆಯಾ ಮತಧರ್ಮಗಳ ಜಿಜ್ಞಾಸೆಗೆ ತೊಡಗದೆ ಜೈನ, ಬೌದ್ಧ, ವೀರಶೈವ ಇವುಗಳಿಗೆ ಸಂಬಂಧಿಸಿದಂತೆ ಕೆಲವು ಐತಿಹಾಸಿಕ ಅಂಶಗಳನ್ನೂ ವ್ಯಕ್ತಿಗಳ ಜೀವನ ಕಾಲಗಳನ್ನೂ ಕುರಿತು ಇವರು ಪ್ರೌಢವಾಗಿ ವಿಚಾರ ನಡೆಸಿದ್ದಾರೆ. ಗೊಮ್ಮಟೇಶ್ವರ, ಪಾರ್ಶ್ವನಾಥ ತೀರ್ಥಂಕರ, ತೀರ್ಥಂಕರರಲ್ಲಿ ಕೊನೆಯವನಾದ ಮಹಾವೀರ ಇವರ ವಿಷಯದಲ್ಲಿ ಸಂಶೋಧನೆ ನಡೆಸಿ ಆ ಬಗ್ಗೆ ಅತ್ಯಂತ ನಿರ್ದಿಷ್ಟವಾಗಿ ಕಾಲ, ತಿಥಿಗಳನ್ನು ಕೊಟ್ಟಿದ್ದಾರೆ. ಬೌದ್ಧಧರ್ಮದ ವಿಷಯದಲ್ಲಿ ಬುದ್ಧನ ಚರಿತ್ರೆ ಮತ್ತು ಅವನ ಬದುಕಿನ ಕೆಲವು ಪ್ರಮುಖ ಘಟನೆಗಳ ಕಾಲನಿರ್ಣಯ ಮಾಡಿದ್ದಾರೆ. ವೀರಶೈವ ಧರ್ಮದಲ್ಲಿ ಬಸವೇಶ್ವರನ ಉಲ್ಲೇಖವಿರುವ ಹತ್ತಾರು ಶಾಸನಗಳನ್ನೂ ವಿಶೇಷವಾಗಿ ಅರ್ಜುನವಾಡ ಶಿಲಾಶಾಸನವನ್ನೂ ಕೂಲಂಕಷವಾದ ವಿವೇಚನೆಗೆ ಒಳಪಡಿಸಿ ಬಸವೇಶ್ವರ ವಂಶಾವಳಿ ಹಾಗೂ ಅವರ ಜೀವನದ ಮಹತ್ತ್ವದ ಘಟನೆಗಳ ಕಾಲವನ್ನು ನಿರ್ಣಯಿಸಿದ್ದಾರೆ. ಜೊತೆಗೆ ದೇವರ ದಾಸಿಮಯ್ಯ ಹಾಗೂ ರೇವಣಸಿದ್ಧ, ಮರುಳಸಿದ್ಧ, ಏಕೋರಾಮಿತಂದೆ, ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕಾಲನಿರ್ಣಯ ಮಾಡಿದ್ದಾರೆ.

ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನೂ ಕುರಿತು ಹೇಳುತ್ತ ಹಲ್ಮಿಡಿ ಶಾಸನದ ಕಾಲವನ್ನು ಇವರು ಬಹಳ ಹಿಂದಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕನ್ನಡ ಸಾಹಿತ್ಯದ ಆರಂಭವನ್ನು ಕ್ರಿಸ್ತಶಕದ ಆರಂಭಕ್ಕೆ ಕೊಂಡೊಯ್ಯುತ್ತಾರೆ. ಕನ್ನಡದ ಪ್ರಾಚೀನತೆಯನ್ನು ಕುರಿತು ಹೇಳುವಾಗ ಗ್ರೀಕ್ ಪ್ರಹಸನದಲ್ಲಿರುವ ವಾಕ್ಯಗಳನ್ನು ಕನ್ನಡವೆಂದು ಗುರುತಿಸಿ ಚರ್ಚೆ ಮಾಡಿದ್ದಾರೆ. ಕನ್ನಡದಲ್ಲಿ ಪ್ರಮುಖರಾದ ಪಂಪ, ರನ್ನ, ನಾಗಚಂದ್ರ, ಕುಮಾರವ್ಯಾಸ, ಲಕ್ಷ್ಮೀಶ, ಶಿಶುಮಾಯಣ, ಸೋಮರಾಜ, ರತ್ನಾಕರವರ್ಣಿ, ಪಾರ್ತಿಸುಬ್ಬ, ಮುದ್ದಣ ಮೊದಲಾದ ಕವಿಗಳ ಜೀವನ, ಸ್ಥಳ, ಕಾಲಾದಿ ವಿಷಯಗಳನ್ನು ಚರ್ಚಿಸಿದ್ದಾರೆ. ಕರ್ಣ ಮುಂತಾದ ಪಾತ್ರಗಳ ರಸವಿಮರ್ಶೆ ಮಾಡಿದ್ದಾರೆ. ಷಟ್ಪದಿ ಛಂದಸ್ಸನ್ನು ಕುರಿತು ಬರೆದಿದ್ದಾರೆ. ಹೊಸಗನ್ನಡ ಸಾಹಿತ್ಯದ ಪ್ರಕಾರಗಳಾದ ಸಣ್ಣಕಥೆ, ಶಿಶುಸಾಹಿತ್ಯ, ಕಾದಂಬರಿ, ಪ್ರಬಂಧಗಳ ಆದಿಗ್ರಂಥಗಳ ಹೆಸರನ್ನೂ ಕಾಲವನ್ನೂ ತಿಳಿಸಿದ್ದಾರೆ. ಕಿಟ್ಟೆಲ್, ಎಂ.ಎನ್.ಕಾಮತ್, ಪಂಜೆ, ಎನ್.ಎಸ್.ಕಿಲ್ಲೆ, ಬಿ.ಎಂ.ಶ್ರೀಕಂಠಯ್ಯ, ಎಂ.ಆರ್.ಶ್ರೀ ಮೊದಲಾದವರ ವ್ಯಕ್ತಿಚಿತ್ರಗಳನ್ನು ಕೊಡುತ್ತ ಈ ವ್ಯಕ್ತಿಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಕಾಣಿಕೆಯೇನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕೊನೆಗೆ ತಮ್ಮ ಆತ್ಮಕಥನವನ್ನೂ ಗುರುತಿಸಿದ್ದಾರೆ. ಇಷ್ಟೇ ಅಲ್ಲದೆ ಅನೇಕ ಪುಸ್ತಕಗಳಿಗೆ ಮುನ್ನುಡಿಗಳನ್ನು ಬರೆದಿದ್ದಾರೆ. ಪುಸ್ತಕ ವಿಮರ್ಶೆಯನ್ನೂ ಮಾಡಿದ್ದಾರೆ.

ಇವರ ವಿದ್ವತ್ತು, ಬಹುಭಾಷಾಜ್ಞಾನ ಅಗಾಧವಾದುದು; ಕೌತುಕವನ್ನುಂಟುಮಾಡುವಂಥದ್ದು. ಕನ್ನಡ, ಕೊಂಕಣಿ, ತುಳು, ಇಂಗ್ಲಿಷ್, ಮರಾಠಿ, ಮಲೆಯಾಳಂ, ಸಂಸ್ಕೃತ, ಪ್ರಾಕೃತ, ಪಾಲಿ, ಅರ್ಧಮಾಗಧಿ, ಹಿಂದಿ, ಉರ್ದು, ತಮಿಳು, ತೆಲುಗು, ಒರಿಯ, ಬಂಗಾಲಿ, ಜಪಾನಿ, ಗ್ರೀಕ್, ಲ್ಯಾಟಿನ್, ಪರ್ಷಿಯನ್ ಮುಂತಾದ ಭಾಷೆಗಳಲ್ಲಿ ಪರಿಣತಿಯನ್ನು ಪಡೆದು ಆಯಾ ವಿಷಯಗಳನ್ನು ಆಯಾ ಭಾಷೆಗಳಲ್ಲಿಯೇ ಅಧ್ಯಯನಮಾಡಿ ಸಂಶೋಧನೆ ನಡೆಸಿದ್ದಾರೆ. ಇವರು ಮಂಡಿಸುವ ನಿರ್ಣಯಗಳನ್ನೆಲ್ಲ ಒಪ್ಪುವುದು ಕಷ್ಟವಾದರೂ ಇವರ ವಿವೇಚನಾಸಾಮರ್ಥ್ಯ, ಹರಿತವಾದ ತರ್ಕಸರಣಿ, ಇತಿಹಾಸಪ್ರಜ್ಞೆ, ವಸ್ತುನಿಷ್ಠೆ ಮುಂತಾದ ಗುಣಗಳನ್ನು ಇವರ ಸಂಶೋಧನೆಗಳಲ್ಲಿ ಧಾರಾಳವಾಗಿ ಕಾಣಬಹುದು. ಇವರ ಸೃಷ್ಟ್ಯಾತ್ಮಕ ಸಾಹಿತ್ಯವೂ ಅದ್ಭುತವಾಗಿದೆ. 1947ರ ಅನಂತರ ಇವರು ನಾಟಕ ರಚನೆಗೆ ಕೈಹಾಕಿ ಏಕಲವ್ಯನನ್ನು ಕುರಿತು ಹೆಬ್ಬೆರಳು ಎಂಬ ಪದ್ಯಾತ್ಮಕ ಏಕಾಂಕವನ್ನೂ 1942ರ ಚಳವಳಿಯನ್ನು ಆಧಾರವಾಗಿಟ್ಟುಕೊಂಡು ಚಿತ್ರಭಾನು ಎಂಬ ಗದ್ಯನಾಟಕವನ್ನೂ ಬರೆದಿದ್ದಾರೆ. ಇವುಗಳ ಜೊತೆಗೆ ಜಪಾನಿನ ಎಂಟು ನೋ ನಾಟಕಗಳನ್ನು ಕನ್ನಡಕ್ಕೆ ತಂದಿದ್ದಾರಲ್ಲದೆ ಈ ವಿಶಿಷ್ಟ ನಾಟಕ ಪ್ರಕಾರದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ತಾಯಿ ಎಂಬುದು ಇವರಿಂದ ರಚಿತವಾದ ಒಂದೇ ಒಂದು ಸಾಮಾಜಿಕ ಏಕಾಂಕ ನಾಟಕ. ಇವೆರಡು ಪ್ರಕಾರಗಳಿಗಿಂತ ಇವರ ಕಾವ್ಯಸೃಷ್ಟಿ ಉತ್ತಮವೆನ್ನಲಾಗಿದೆ. 1900ರಿಂದ ಕೊನೆಗಾಲದವರೆಗೆ ಇವರು ರಚಿಸಿದ ಸಣ್ಣದೊಡ್ಡ ಕವನಗಳ ಸಂಖ್ಯೆ 180. ಇವರ ಗಿಳಿವಿಂಡು ಕವನ ಸಂಕಲನದಲ್ಲಿ 45 ಭಾವಗೀತೆಗಳೂ ನಂದಾದೀಪದಲ್ಲಿ 37 ಕವನಗಳೂ ನಾಡಿನ ವಿವಿಧ ಪತ್ರಿಕೆಗಳಲ್ಲಿ 95 ಕವನಗಳೂ ಅಚ್ಚಾಗಿವೆ. ಇವರ ಕಾವ್ಯಸೃಷ್ಟಿಯಲ್ಲಿ ಯೇಸುವಿನ ಅಂತ್ಯವನ್ನು ಚಿತ್ರಿಸುವ ಗೊಲ್ಗೊಥಾ ಮತ್ತು ಬುದ್ಧನ ಕಡೆಯ ದಿನಗಳನ್ನು ಚಿತ್ರಿಸುವ ವೈಶಾಖಿ ಎಂಬ ಎರಡು ನೀಳ್ಗವನಗಳು ಮುಖ್ಯವಾದವು. ಭಕ್ತಿ, ಪ್ರೇಮಭಾವನೆ, ಜೀವನ ವಿವೇಕ, ಸ್ನೇಹಸೌಹಾರ್ದ, ಸ್ವಾತಂತ್ರ್ಯಪ್ರೇಮ -ಇವು ಇವರ ಕಾವ್ಯಸೃಷ್ಟಿಯ ಸ್ಫೂರ್ತಿಗಳಾಗಿವೆ. ಅಸಂದಿಗ್ಧವಾದ ಭಾಷೆ, ಅಚ್ಚಗನ್ನಡ ಪದಪ್ರಯೋಗ, ಹೊಸ ಪದಸೃಷ್ಟಿ, ಭಾಷೆಯಲ್ಲಿನ ಪ್ರಾದೇಶಿಕ ಬನಿ ಇವುಗಳಿಂದಾಗಿ ಇವರ ಸಾಹಿತ್ಯ ಗಮನಾರ್ಹವಾಗಿದೆ.

ಹಿಂದಿನ ಮದರಾಸು ಸರ್ಕಾರ ಇವರಿಗೆ ರಾಷ್ಟ್ರಕವಿ ಪ್ರಶಸ್ತಿಯನ್ನಿತ್ತು (1949) ಗೌರವಿಸಿತು. ಇವರು 1950ರಲ್ಲಿ ಮುಂಬಯಿಯಲ್ಲಿ ಸೇರಿದ 34ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು.

ಗೋವಿಂದ ಪೈಗಳು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯಾಚಾರ್ಯರುಗಳಲ್ಲಿ ಅಗ್ರಪಂಕ್ತಿಗೆ ಸೇರಿದವರು. ಪಾಂಡಿತ್ಯದಿಂದ, ಸಂಶೋಧನೆಯಿಂದ ನಯವಿನಯಗಳಿಂದ, ಸರಳತೆಯಿಂದ ಜನತೆಯ ಸ್ನೇಹ ಗೌರವಗಳನ್ನಿವರು ಸಂಪಾದಿಸಿದರು. ತನು ಕನ್ನಡ, ಮನ ಕನ್ನಡ, ನುಡಿ ಕನ್ನಡ ಎಂದು ಹಾಡಿದ ರಾಷ್ಟ್ರಕವಿಯಾದ ಇವರ ವ್ಯಕ್ತಿತ್ವ ಘನವಾದುದು. ಇವರು ಉತ್ಕಟ ಕನ್ನಡಾಭಿಮಾನಿಗಳು. ತಾವು ಬೆಳೆದು ಬಾಳಿದ ಮಂಜೇಶ್ವರದ ನೆಲ ಕನ್ನಡ ನಾಡಿಗೆ ಸೇರಲಿಲ್ಲವಲ್ಲ ಎಂಬ ಕೊರಗು ಇವರನ್ನು ಕೊನೆಯವರೆಗೂ ಬಾಧಿಸುತ್ತಿತ್ತು. ಇವರು 1963 ಸೆಪ್ಟೆಂಬರ್ 6ರಂದು ನಿಧನಹೊಂದಿದರು. ಇವರ ನೆನಪನ್ನು ಚಿರಸ್ಥಾಯಿಯನ್ನಾಗಿಸಲು ಉಡುಪಿಯ ಮಹಾತ್ಮಗಾಂಧಿ ಸ್ಮಾರಕ ಕಾಲೇಜಿನಲ್ಲಿ ಅದರ ಅಂಗ ಸಂಸ್ಥೆಯಾಗಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ (ನೋಡಿ) ಸ್ಥಾಪಿಸಲಾಗಿದೆ. ಈ ಸಂಸ್ಥೆ ಗೋವಿಂದ ಪೈ ಅವರ ಪ್ರಯೋಗ, ಗೋವಿಂದ ಪೈ ಸಂಶೋಧನೆ ಸಂಪುಟ ಮತ್ತು ಇಂಡಿಯಾನ ಎಂಬ ಇವರ ಆಂಗ್ಲ ಲೇಖನಗಳ ಸಂಗ್ರಹವನ್ನೂ ಪ್ರಕಟಿಸಿದೆ. (ಬಿ.ಎನ್.ಪಿ.)

**ಗೋವಿಂದ ವೈದ್ಯ :** ಸು.1648. ಬ್ರಾಹ್ಮಣಕವಿ. ಕಂಠೀರವನರಸ ರಾಜವಿಜಯ ಎಂಬ ಕಾವ್ಯದ ಕರ್ತೃ. ಈತ ಕಂಠೀರವ ನರಸರಾಜ ಒಡೆಯರ ಆಸ್ಥಾನಕವಿಯಾಗಿದ್ದ. ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ಪಾದಭಕ್ತನಾದ ಶ್ರೀನಿವಾಸಪಂಡಿತ ಈತನ ತಂದೆ. ವೇದಾಧ್ಯಯನಸಂಪನ್ನನಾದ ತಾನು ಪ್ರಕಾಂಡಪಂಡಿತನೆಂದು ಹೇಳಿಕೊಂಡಿದ್ದಾನೆ.

ಕಂಠೀರವನರಸರಾಜವಿಜಯ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 26 ಸಂಧಿಗಳೂ 2870 ಪದ್ಯಗಳೂ ಇವೆ. ಈ ಕೃತಿಯನ್ನು ತಾನು ದಳವಾಯಿ ನಂಜರಾಜೇಂದ್ರನ ಪ್ರೇರಣೆಯಿಂದ 1648ರಲ್ಲಿ ರಚಿಸಿದುದಾಗಿಯೂ ಭಾರತಿನಂಜ ಎಂಬುವನು ಆಸ್ಥಾನದಲ್ಲಿ ಈ ಕಾವ್ಯವನ್ನು ಓದಿದುದಾಗಿಯೂ ಗ್ರಂಥಾಂತ್ಯದಲ್ಲಿ ಹೇಳಿಕೊಂಡಿದ್ದಾನೆ. ಇದೊಂದು ಇತಿಹಾಸಕಾವ್ಯ. ಮೈಸೂರು ಅರಸರ ವಂಶದಲ್ಲಿ ಪ್ರಸಿದ್ಧ ಪುರುಷನೆನಿಸಿದ ರಣಧೀರ ಕಂಠೀರವ ನರಸರಾಜನ ಪ್ರಭುತ್ವ, ಪ್ರಜಾನುರಾಗ, ಧರ್ಮಾಚರಣೆ, ಪೌರುಷಾದಿ ಸದ್ಗುಣಗಳ ಬಣ್ಣನೆ ಇದರ ವಸ್ತು. ಅಂದಿನ ನರಸಿಂಹನೇ ಇಂದು ಕಲಿಯುಗದ ದನುಜರನ್ನು ಸಂಹರಿಸಲು ಮನುಜಾವತಾರಿಯಾಗಿ ನರಸರಾಜೇಂದ್ರನ ರೂಪದಲ್ಲಿ ಅವತರಿಸಿದ್ದಾನೆ ಎಂದು ಕವಿ ತನ್ನ ಒಡೆಯನ ಕೀರ್ತಿಯನ್ನು ಎತ್ತಿಹಿಡಿದಿದ್ದಾನೆ.

ಈತನ ಶೈಲಿ ಸರಳವೂ ಕವಿತಾಶಕ್ತಿ ಸಾಧಾರಣಮಟ್ಟದ್ದೂ ಆಗಿದೆ. ಕಾವ್ಯ ರಚನೆಯಲ್ಲಿ ಪ್ರತಿಭೆಗೆ ಮಿಗಿಲಾಗಿ ಪಾಂಡಿತ್ಯವನ್ನೂ ಸ್ವಾನುಭವಕ್ಕೆ ಬದಲಾಗಿ ಸಂಪ್ರದಾಯಶರಣತೆಯನ್ನೂ ಕಾಣಬಹುದು. ವೀರರಸಪ್ರಧಾನವಾದ ಈ ಕಾವ್ಯವನ್ನು ಶೃಂಗಾರಮಯವನ್ನಾಗಿಸಲು ಕವಿ ತುಂಬ ಶ್ರಮಿಸಿರುವಂತಿದೆ. ಕೆಲವು ಕಡೆ ಔಚಿತ್ಯ ಮೀರಿದ ಶೃಂಗಾರವರ್ಣನೆ ದಾಳಿ ನಡೆಸಿದೆ. ಮದನ ಮೋಹಿನಿ ಪ್ರಸಂಗ ಮತ್ತು ವೇಶ್ಯಾವಾಟಿಕಾ ವರ್ಣನೆ ಇವು ಮೇಲಿನ ಹೇಳಿಕೆಗೆ ನಿದರ್ಶನಗಳು. ಅಲ್ಲಲ್ಲಿ ಉರ್ದು ಪದಗಳನ್ನು ಧಾರಾಳವಾಗಿ ಬಳಸಿದ್ದಾನೆ. ಕಾವ್ಯದಲ್ಲಿ ಕವಿ ತನ್ನ ಕಾಲದ ಜನಜೀವನವನ್ನೂ ರಾಜಕೀಯವನ್ನೂ ವಿಸ್ತಾರವಾಗಿ ಹಿಡಿದಿಟ್ಟಿರುವುದರಿಂದ ಈತನಿಗಿದ್ದ

ಸಮಕಾಲೀನ ಹಾಗೂ ಇತಿಹಾಸಪ್ರಜ್ಞೆ ವೇದ್ಯವಾಗುತ್ತದೆ. ನಂಜುಂಡನ ಕಾವ್ಯದ ಪ್ರಭಾವ ಈತನ ಕಾವ್ಯದ ಮೇಲೆ ನಿಚ್ಚಳವಾಗಿ ಮೂಡಿರುವುದು ಕಂಡುಬರುತ್ತದೆ. ತನ್ನ ಕಾವ್ಯ ಸೊಕ್ಕುಜವ್ವನೆಯರ ತೆಕ್ಕೆಯ ಸವಿಯಂದದೆ ಸಕ್ಕರೆಚಿಲುಪಾಲಿನಂತೆ ಸವಿಯನ್ನು ನೀಡುತ್ತದೆ ಎಂದಿದ್ದರೂ ಕಾವ್ಯದೃಷ್ಟಿಗಿಂತ ಹೆಚ್ಚು ಐತಿಹಾಸಿಕ ಮಹತ್ತ್ವ ಈ ಗ್ರಂಥಕ್ಕಿದೆ ಎನ್ನಬಹುದು. (ಎಸ್.ಎಸ್.ಎಂ.)

**ಗೋವಿಂದಸ್ವಾಮಿ, ಬಿ.ಆರ್. :** 1917-66. ಪ್ರಸಿದ್ಧ ಪಿಟೀಲು ವಿದ್ವಾಂಸರು. 1971 ಏಪ್ರಿಲ್ 10ರಂದು ಚಿಕ್ಕಬಳ್ಳಾಪುರದಲ್ಲಿ ಜನಿಸಿದರು. ತಂದೆ ರಾಮಯ್ಯ, ತಾಯಿ ನಾಗಮ್ಮ. ಇವರ ತಂದೆಯವರು ಮೃದಂಗವಿದ್ವಾಂಸರೂ ಚಿಕ್ಕಪ್ಪ ಗಾಯಕರೂ ಪಿಟೀಲುವಾದಕರೂ ಆಗಿದ್ದರು. ಮೊದಲು ಚಿಕ್ಕಪ್ಪನವರ ಹತ್ತಿರ ವಿದ್ಯಾಭ್ಯಾಸ ಆರಂಭವಾಯಿತು. ಅವರೇ ಮೊದಲ ಗುರು. ಅನಂತರ ಮೃದಂಗವಿದ್ವಾನ್ ಎಚ್. ಪುಟ್ಟಾಚಾರಿಯವರ ಹತ್ತಿರ ವಿದ್ಯಾಭ್ಯಾಸ ಮುಂದುವರಿಸಿ ಸಂಗೀತಸಾಧನೆ ಮಾಡಿದರು.

ಇವರು ಬಿ.ಎಸ್.ರಾಜಅಯ್ಯಂಗಾರ್ ಮತ್ತು ಪುಟ್ಟಾಚಾರಿ ಯವರೊಂದಿಗೆ ಭಾರತದ ಪ್ರವಾಸದಲ್ಲಿ ಸಿಕಂದರಾಬಾದ್, ಪುಣೆ, ಮುಂಬಯಿ, ನಾಗಪುರ, ಮದರಾಸು, ದೆಹಲಿ ಮತ್ತು ವಾರಾಣಸಿ ಈ ಮುಂತಾದ ಕಡೆ ಕಚೇರಿ ಮಾಡಿ ಹೆಸರುಗಳಿಸಿದರು. ಬೆಂಗಳೂರಿನಲ್ಲಿ ಇವರು ಹೆಚ್ಚು ಜನಪ್ರಿಯರಾದರು. ಟೈಗರ್‌ವರದಾಚಾರ್, ಅರಿಯಕುಡಿ ರಾಮನುಜ ಅಯ್ಯಂಗಾರ್ ಮುಂತಾದ ಹಿರಿಯ ವಿದ್ವಾಂಸರಿಗೆ ಪಿಟೀಲು ನುಡಿಸಿ ಒಳ್ಳೆಯ ಹೆಸರುಗಳಿಸಿದರು. ಕಿರಿಯ ವಿದ್ವಾಂಸರೊಡನೆಯೂ ಪಿಟೀಲು ನುಡಿಸಿ ಅವರನ್ನು ಪ್ರೋತ್ಸಾಹಿಸುತ್ತಿದ್ದರು. ವಾರಾಣಸಿಯ ವಿಶ್ವೇಶ್ವರನ ಸನ್ನಿಧಿಯಲ್ಲಿ ದಕ್ಷಿಣೋತ್ತರ ಸಂಗೀತವಿದ್ವಾಂಸರ ಮಹಾಸಭೆಯ ಅಧ್ಯಕ್ಷರಾಗಿದ್ದ ಪಂಡಿತ ಮದನ ಮೋಹನ ಮಾಳವೀಯರು ಇವರ ಪಿಟೀಲು ವಾದನವನ್ನು ಮೆಚ್ಚಿ ಹೊಗಳಿದರು. ನಾಲ್ವಡಿ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ಪಿಟೀಲು ನುಡಿಸಿ ಅವರ ಮೆಚ್ಚುಗೆ ಪಡೆದರು. ಗದ್ವಾಲ ಸಂಸ್ಥಾನದ ರಾಜರ ಸಮ್ಮುಖದಲ್ಲಿ ಅನೇಕ ಸಾರಿ ಅವರ ಆಮಂತ್ರಣದ ಮೇಲೆ ಹೋಗಿ ಪಿಟೀಲು ನುಡಿಸಿದರು. ಜಯಚಾಮರಾಜ ಒಡೆಯರು ಇವರ ಪಾಂಡಿತ್ಯವನ್ನು ಮೆಚ್ಚಿ ಬಂಗಾರದ ಪದಕವನ್ನಿತ್ತು ಸನ್ಮಾನಿಸಿದ್ದರು.

ಗೋವಿಂದಸ್ವಾಮಿಯವರು ಪ್ರಣವನಾದ ಕಲಾವಿಚಕ್ಷಣ ಎಂಬುದಾಗಿ ಸಂಗೀತ ವಿದ್ವಾಂಸರಿಂದ ಕರೆಸಿಕೊಂಡರು. 1966 ಜನವರಿ 25ರಂದು ನಿಧನಹೊಂದಿದರು. ಇವರು 1962ರಲ್ಲಿ ಸುಧಾ ಸಂಗೀತ ಶಾಲೆಯನ್ನು ಸ್ಥಾಪಿಸಿದ್ದು ಅನಂತರ ಇವರ ಮಗ ನಡೆಸಿಕೊಂಡು ಬಂದರು. (ಬಿ.ಜಿ.ವಿ.)

**ಗೋವಿನ ಹಾಡು :** ಕನ್ನಡಿಗರಿಗೆ ಸುಪರಿಚಿತವಾದ ಜನಪದ ಕಥನ ಕವನ. ಮಕ್ಕಳಿಂದ ಮುದುಕರವರೆಗೆ ಸರ್ವರನ್ನೂ ತಣಿಸುವ ಕಾವ್ಯಗುಣವನ್ನುಳ್ಳ ಈ ಗೀತೆ ಕನ್ನಡ ಸಾಹಿತ್ಯದ ಒಂದು ಅಪೂರ್ವ ಕವಿತೆ. ಈ ಕಾವ್ಯದ ಸೊಬಗು ಅದರ ಸರಳತೆಯಲ್ಲಿದೆ. ಬಿಟ್ಟ ಬಾಣದಂತೆ ಕಥೆ ಆರಂಭವಾಗಿ ಕೇಳುವವರ, ಓದುವವರ ಹೃದಯವನ್ನು ಸೂರೆಗೊಳ್ಳುತ್ತದೆ.

ಧರಣಿಮಂಡಲ ಮಧ್ಯದೊಳಗೆ
ಮೆರೆವುದೈವತ್ತಾರು ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು

ಎಂದು ನೇರವಾಗಿ ಆರಂಭವಾಗಿ ನಮ್ಮನ್ನು ಕಥೆಯ ಆವರಣದೊಳಗೆ ತಂದು ನಿಲ್ಲಿಸುತ್ತದೆ.

ಅರುಣಾದ್ರಿಗಿರಿಯ ಮಧ್ಯೆ ಕಾಳಿಂಗನೆಂಬ ಗೊಲ್ಲ ಗೋವುಗಳನ್ನು ಸಾಕುತ್ತಿದ್ದ. ಅವನು ಎದ್ದು ಸ್ನಾನ ಮಾಡಿ ಹಣೆಗೆ ತಿಲಕವಿಟ್ಟು ಪ್ರೀತಿಯಿಂದ ಗೋವುಗಳನ್ನು ಗಂಗೆ, ಗೌರಿ, ತುಂಗಭದ್ರೆ, ಕಾಮಧೇನು ಎನ್ನುತ ಕರೆದು ಅವುಗಳ ಮೈದಡವಿ ಹಾಲು ಕರೆದು ಮತ್ತೆ ಸುತ್ತಲ ವನಕ್ಕೆ ಮೇಯಲು ಬಿಟ್ಟಿರುತ್ತಿದ್ದ. ಇವನ ಹಸುಗಳಲ್ಲಿ ಪುಣ್ಯಕೋಟಿ ಎಂಬುದು ಒಂದು. ಒಂದುದಿನ ಹಸುಗಳೆಲ್ಲ ದೊಡ್ಡಿಗೆ ಹಿಂದಿರುಗುತ್ತಿರುವಾಗ ಹಸಿದ ಅರ್ಭುತನೆಂಬ ವ್ಯಾಘ್ರ ಪುಣ್ಯಕೋಟಿಯನ್ನು ಅಡ್ಡಗಟ್ಟಿತು. ಸಾವಿಗೆ ಅಂಜದ ಪುಣ್ಯಕೋಟಿ ಒಂದು ಸಾರಿ ದೊಡ್ಡಿಗೆ ಹೋಗಿ ಅಲ್ಲಿರುವ ತನ್ನ ಕಂದನನ್ನು ಕಂಡು, ಮೊಲೆಯೂಣಿಸಿ ಹಿಂದಿರುಗುತ್ತೇನೆಂದು ಹುಲಿರಾಯನನ್ನು ಪ್ರಾರ್ಥಿಸಿತು. ಮೊದಮೊದಲು ಹುಲಿ ಪುಣ್ಯಕೋಟಿಯ ಮಾತನ್ನು ನಂಬದೆ, ಕೊನೆಗೆ ಒಪ್ಪಿ ಹಸುವನ್ನು ಬಿಟ್ಟುಕೊಟ್ಟಿತು. ಪುಣ್ಯಕೋಟಿ ದೊಡ್ಡಿಗೆ ಬಂದು ತನ್ನ ಕಂದನಿಗೆ ಮೊಲೆಕೊಟ್ಟು ನಡೆದ ವಿಷಯ ತಿಳಿಸಿ ಕೊಟ್ಟ ಭಾಷೆಗೆ ತಪ್ಪಲಾರೆನು, ಕೆಟ್ಟ ಯೋಚನೆ ಮಾಡಲಾರೆನು ನಿಷ್ಠೆಯಿಂದಲಿ ಪೋಪೆನಲ್ಲಿಗೆ ಕಟ್ಟಕಡೆಗಿರು ಖಂಡಿತ ಎಂದು ತನ್ನ ಕರುವಿಗೆ ಬುದ್ಧಿಮಾತು ಹೇಳಿ ಉಳಿದ ಹಸುಗಳಿಗೆ ತನ್ನ ಕಂದನನ್ನು ಕಾಪಾಡಿಕೊಳ್ಳಿರೆಂದು ಪ್ರಾರ್ಥಿಸಿ ಹುಲಿಯೆಡೆಗೆ ಬಂತು. ಹುಲಿರಾಯ ತನ್ನ ಗವಿಯ ಬಾಗಿಲಿಗೆ ಬಂದು ನಿಂತ ಪುಣ್ಯಕೋಟಿಯನ್ನು ಕಂಡು ಬೆರಗಾಯಿತು. ನನ್ನ ದೇಹದ ರಕ್ತ ಮಾಂಸವನ್ನು ತಿಂದು ಹಸಿವನ್ನು ಇಂಗಿಸಿಕೋ ಎಂದು ಪುಣ್ಯಕೋಟಿ ಹುಲಿರಾಯನಿಗೆ ಹೇಳಿದಾಗ, ಪುಣ್ಯಕೋಟಿಯ ಪ್ರಾಮಾಣಿಕತೆ ಮತ್ತು ಸ್ವಾರ್ಥತ್ಯಾಗಕ್ಕೆ ಹುಲಿರಾಯ ಮಣಿದು ನೀನು ನನ್ನ ಒಡಹುಟ್ಟಿದವಳಿದ್ದಂತೆ ನಿನ್ನ ಕೊಂದು ತಿಂದರೆ ಹರಿ ಮೆಚ್ಚುವುದಿಲ್ಲ. ಇದುವರೆಗೂ ನಾನು ಮಾಡಿರುವ ಪಾಪ ಸಾಕು, ನಿನ್ನಿಂದ ನನಗೆ ಜ್ಞಾನೋದಯವಾಯಿತೆಂದು ಹೇಳಿ ಪ್ರಾಣತ್ಯಾಗ ಮಾಡಿತು.

ಸತ್ಯ ಅಹಿಂಸೆಗಳ ಮುಂದೆ ಅಸತ್ಯ ಹಿಂಸೆ ನಾಶವಾಗಿ ಹೋಗುತ್ತವೆಂಬ ಬೋಧನೆ ಇರುವ ಗೋವಿನ ಹಾಡು ಎಲ್ಲರ ಮೆಚ್ಚುಗೆ ಪಡೆದಿದೆ. ಈ ಕವನದ ಸುಂದರ ವರ್ಣನೆಗಳು, ಹೃದಯದಲ್ಲಿ ತುಮುಲವನ್ನು ಹುಟ್ಟಿಸುವ ಮಾತುಗಳು, ಸನ್ನಿವೇಶಗಳು, ಕಥನದ ಓಜಸ್ಸು ಇವುಗಳಿಂದ ಇದು ಕನ್ನಡದ ಉತ್ತಮ ಕಥನ ಕವನಗಳಲ್ಲೊಂದಾಗಿದೆ.

ಇದರ ಕರ್ತೃ ಯಾರೋ ತಿಳಿಯದು. ಕವಿ ಮದ್ದೂರಿನವನೆಂದೂ ಅಲ್ಲಿನ ನರಸಿಂಹಭಕ್ತನೆಂದೂ ಕೃತಿ ಸು.1800ರ ಅನಂತರ ರಚಿತವಾಗಿರಬೇಕೆಂದೂ ಸಂಸ್ಕೃತ ಇತಿಹಾಸ ಸಮುಚ್ಚಯ ಎಂಬ ಗ್ರಂಥದ 30ನೆಯ ಅಧ್ಯಾಯದಲ್ಲಿ ಬರುವ ಬಕುಲೋಪಾಖ್ಯಾನ ಈ ಕಾವ್ಯಕ್ಕೆ ಮೂಲವಿರಬೇಕೆಂದೂ ವಿದ್ವಾಂಸರ ಮತ. ಡಿ.ಎಲ್.ನರಸಿಂಹಾ ಚಾರ್ಯರು ಇದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಅವರ ಪ್ರಕಾರ ಇದರಲ್ಲಿರುವ 137 ಪದ್ಯಗಳಲ್ಲಿ 114 ಮೂಲ ಕವಿಕೃತ; ಉಳಿದವು ಪ್ರಕ್ಷಿಪ್ತ. (ಪಿ.ವಿ.ಪಿ.)

**ಗೋಸಲ ಚನ್ನಬಸವೇಶ್ವರ :** 15ನೆಯ ಶತಮಾನದಲ್ಲಿ ಜೀವಿಸಿದ್ದ ಒಬ್ಬ ಶಿವಯೋಗಿ. ಈತ ಮಹಾತಪಸ್ವಿಯೆಂದೂ ಅನೇಕ ಪವಾಡಗಳನ್ನು ಮೆರೆದನೆಂದೂ ಸ್ಥಳಪುರಾಣದಿಂದ ತಿಳಿದುಬರುತ್ತದೆ. ಈತನ ಗುರು ಪರಂಪರೆ ವಿಖ್ಯಾತವಾದುದು. ಈತ ಕ್ಷೇತ್ರಜ್ಞ ಸುಮನೋವಾದ ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ವೀರಶೈವ ಷಟ್ಸ್ಥಲ ಸಿದ್ಧಾಂತವನ್ನು ವಿವಿಧ ಷಟ್ಪದಿಯಲ್ಲಿ ನಿರೂಪಿಸಲಾಗಿದೆ. ನಿರಂಜನ ವಂಶ ರತ್ನಾಕರದಲ್ಲಿ ಈತನ ವಿಷಯವನ್ನು ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಈತ ನಿರ್ವಯಲಾದ. ಈತನ ಗದ್ದಿಗೆಯ ಮೇಲೆ ದೇವಸ್ಥಾನವನ್ನು ಕಟ್ಟಿದ್ದಾರೆ. ಇದು ಗುಬ್ಬಿ ಚನ್ನಬಸವೇಶ್ವರ ಎಂಬ ಹೆಸರಿನ ಪ್ರಖ್ಯಾತ ದೇವಾಲಯವಾಗಿ ಸುತ್ತಮುತ್ತಲಿನ ಭಕ್ತರನ್ನು ಆಕರ್ಷಿಸಿದೆ. ಈತನ ಗುರು ಗೋಸಲ ಸಿದ್ದೇಶ್ವರ ಈತನ ಸಮಾಧಿ ತುಮಕೂರು ಜಿಲ್ಲೆಯ ಸಿದ್ಧರ ಬೆಟ್ಟದಲ್ಲಿದೆ. ಎಡೆಯೂರು ಸಿದ್ಧಲಿಂಗೇಶ್ವರರು ಗೋಸಲ ಚನ್ನಬಸವೇಶ್ವರನ ಶಿಷ್ಯ. ಈತನ ಸಮಾಧಿ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಎಡೆಯೂರಿನಲ್ಲಿದೆ. *

**ಗೋಳಗುಮ್ಮಟ :** ಬಿಜಾಪುರದಲ್ಲಿರುವ ವಿಶ್ವವಿಖ್ಯಾತ ಕಟ್ಟಡ. ಆದಿಲ್‌ಶಾಹೀ ವಂಶದ ಮಹಮ್ಮದ್ (1627-56) ತನಗಾಗಿ ಕಟ್ಟಿಸಿಕೊಂಡ ಸ್ಮಾರಕ.

ಇದೊಂದು ಸರಳ ವಿನ್ಯಾಸದ ದೈತ್ಯಾಕಾರದ ಕಟ್ಟಡ. ಇದರ ಹೊರ ಅಳತೆ 205' x 205', ಎತ್ತರ 198.6'. ಈ ಕಟ್ಟಡದಲ್ಲಿ ನಾಲ್ಕು ಗೋಡೆಗಳಿಂದ ಆವೃತವಾಗಿ, ಮೇಲು ಗುಮ್ಮಟದಿಂದ ಆಚ್ಛಾದಿತವಾಗಿರುವ ಒಂದು ದೊಡ್ಡ ಹಜಾರ ಮಾತ್ರ ಇದೆ. 135' 5" ಚೌಕವಾಗಿದ್ದು, 18,337.67 ಚದರ ಅಡಿ ಪ್ರದೇಶವನ್ನು ಆಕ್ರಮಿಸಿರುವ ಈ ಹಜಾರ ಕಂಬಗಳಿಲ್ಲದೆ ಆಚ್ಛಾದಿತವಾಗಿರುವ ಹಜಾರಗಳಲ್ಲಿ, ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಹಜಾರದ ಸುತ್ತಲಿನ ನಾಲ್ಕು ಗೋಡೆಗಳು ಮೊದಲು ಮೂರು ಮೂರು ಕಮಾನುಗಳನ್ನೊಳಗೊಂಡಿದ್ದುವು. ಅನಂತರದಲ್ಲಿ ಉತ್ತರದ

ಗೋಡೆಯ ಮಧ್ಯದೊಂದನ್ನು ಬಿಟ್ಟು ಉಳಿದ ಕಮಾನುಗಳನ್ನು ಗೋಡೆಗಳಿಂದ ಮುಚ್ಚಲಾಗಿದ್ದು, ದಕ್ಷಿಣದ ಮಧ್ಯ ಕಮಾನಿನಲ್ಲಿ ಮಾತ್ರ ಒಂದು ಪ್ರವೇಶದ್ವಾರಕ್ಕೆ ಅವಕಾಶ ಮಾಡಲಾಗಿದೆ. ಒಳಭಾಗದಲ್ಲಿ ಈ ಗೋಡೆಗಳಿಗೆ ಒತ್ತಿದಂತೆಯೇ ಮೇಲೆದ್ದು, ಅಡ್ಡಡ್ಡವಾಗಿ ಪರಸ್ಪರ ಛೇದಿಸುವ ಎಂಟು ಕಮಾನುಗಳನ್ನು ಅಳವಡಿಸಲಾಗಿದೆ. ನೆಲದಿಂದ ಸುಮಾರು 100' ಎತ್ತರದಲ್ಲಿ ಇವುಗಳ ತಲೆಬಿಂದುಗಳಿಂದ ಒಂದು ಅಷ್ಟಕೋನ ನಿರ್ಮಾಣವಾಗಿದೆ. ಇವುಗಳ ಮೇಲೆ ದುಂಡುಗುಮ್ಮಟವನ್ನು ಕೂರಿಸಲಾಗಿದೆ.

ನೆಲ ಚೌಕವಾಗಿದ್ದರೂ ಮೇಲೆ ದುಂಡುಗುಮ್ಮಟವನ್ನಿಡಲು ಪರಸ್ಪರ ಛೇದಿಸುವ ಕಮಾನುಗಳನ್ನು ಆಸರೆಯಾಗಿ ನಿರ್ಮಿಸಿರುವ ತಂತ್ರ ವಾಸ್ತು ರಚನಾ ರೀತಿಯಿಂದ ವಿಶಿಷ್ಟವಾದ್ದು. ಈ ಕಮಾನುಗಳ ಮೇಲೆ, ಗುಮ್ಮಟದ ಬುಡದಲ್ಲಿ, ಅದರ ದುಂಡು ಒಳಗೋಡೆಗೆ ಹೊಂದಿಕೊಂಡಂತೆ ವರ್ತುಲಾಕಾರವಾಗಿ ಹಬ್ಬಿರುವ 11' ಅಗಲದ ಒಂದು ಚಾಚು ಗ್ಯಾಲರಿ ಇದೆ. ಈ ಗ್ಯಾಲರಿ ನೆಲದಿಂದ 109' 6" ಮೇಲಿದೆ. ಈ ಮಟ್ಟದಿಂದ ಗುಮ್ಮಟದ ತಲೆ 68' 6" ಎತ್ತರದಲ್ಲಿದೆ. ಎಂದರೆ ಹಜಾರದ ಒಳಗೆ ನೆಲದಿಂದ ಗುಮ್ಮಟದ ನೆತ್ತಿಯವರೆಗಿನ ಎತ್ತರ 178'.



ಗುಮ್ಮಟದ ವ್ಯಾಸ 24' 5", ಏಷ್ಯ ಖಂಡದಲ್ಲೇ ಅತಿ ದೊಡ್ಡದಾದ ಗುಮ್ಮಟವಿದು. ಗೋಡೆಗಳ ರಚನೆಯಲ್ಲಿ ಸಾಮಾನ್ಯ ಕಲ್ಲುತುಂಡುಗಳನ್ನು ಗಾರೆಯೊಡನೆ ಹುದುಗಿಸಿ, ಒಳಹೊರ ಮೈಗಳಲ್ಲಿ ಹಲವೆಡೆ ತೆಳುಚಪ್ಪಡಿಗಳನ್ನು ಅಂಟಿಸಿ ಮೇಲೆ ಗಾರೆ ಬಳಿಯಲಾಗಿದೆ. ಮೇಲೆ ಹೋದಂತೆ ಸ್ವಲ್ಪಸ್ವಲ್ಪವಾಗಿ ಒಳಚಾಚುವ ಇಟ್ಟಿಗೆಯ ವರ್ತುಲಗಳನ್ನು ಒಂದರ ಮೇಲೊಂದರಂತೆ ಪೇರಿಸಿ ಗುಮ್ಮಟವನ್ನು ರಚಿಸಲಾಗಿದೆ. ಇಲ್ಲಿ ಉಪಯೋಗಿಸಿರುವ ಬಿಗಿ ಗಾರೆಯಿಂದಾಗಿ ಗುಮ್ಮಟ ಕಾಂಕ್ರೀಟಿನಲ್ಲಿ ಮಾಡಿದ ಬೋರಲಿಟ್ಟ ದೊಡ್ಡ ಬಟ್ಟಲಿನಂತೆ ಒಂದೇ ಘನವಾಗಿ ಭದ್ರವಾಗಿ ನಿಂತಿದೆ. ಗುಮ್ಮಟದ ಗೋಡೆಯ ದಪ್ಪ 10', ಅದರ ಹೊರವ್ಯಾಸ 144'.

ಕಟ್ಟಡದ ಹೊರಗಿನ ನಾಲ್ಕು ಮೂಲೆಗಳಿಗೆ ಸೇರಿದಂತಿರುವ ಷಟ್ಕೋಣಾಕೃತಿಯ ಗೋಪುರಗಳ ಒಳಗಿರುವ ಮೆಟ್ಟಿಲುಗಳಿಂದ ಚಾವಣಿಯ ಮೇಲೇರಿ, ಗುಮ್ಮಟದಲ್ಲಿ ಕೊರೆದಿರುವ ಎಂಟು ಸಣ್ಣ ದ್ವಾರಗಳ ಮೂಲಕ ಒಳಗಿನ ಚಾಚುಗ್ಯಾಲರಿಗೆ ಹೋಗಬಹುದು. ಇಲ್ಲಿ ವಿಶಾಲವಾದ ಆಚ್ಛಾದನ ಗುಮ್ಮಟದಿಂದ ಶಬ್ದತರಂಗಗಳು ಪ್ರತಿಧ್ವನಿಸಿ ವಿಶಿಷ್ಟ ಪರಿಣಾಮ ಉಂಟುಮಾಡುತ್ತವೆ. ಮಾತು, ಚಪ್ಪಾಳೆ ಅಥವಾ ಯಾವುದೇ ಶಬ್ದವನ್ನು ಇಲ್ಲಿ ಒಮ್ಮೆ ಹೊಮ್ಮಿಸಿದರೆ ಸುಮಾರು ಹತ್ತಕ್ಕೂ ಹೆಚ್ಚು ಸಲ ಅದು ಸ್ಪಷ್ಟವಾಗಿ ಪ್ರತಿಫಲಿಸುವುದಲ್ಲದೆ ಎಷ್ಟೇ ಸಣ್ಣ ಶಬ್ದವನ್ನು ಒಂದೆಡೆ ಉಂಟುಮಾಡಿದರೂ ಈ ಗ್ಯಾಲರಿಯ ಯಾವುದೇ ಭಾಗದಲ್ಲಿರುವವರಿಗೂ ಅದೇ ಶಬ್ದ ಸ್ಪಷ್ಟವಾಗಿ ಗೋಡೆಯಿಂದ ಹೊರಬೀಳುವಂತೆ ಕೇಳುತ್ತದೆ. ಈ ಆಶ್ಚರ್ಯಕರ ವೈಶಿಷ್ಟ್ಯದಿಂದಾಗಿ ಇದು ಪಿಸುಗುಟ್ಟುವ ಗ್ಯಾಲರಿ ಎಂದು ಪ್ರಸಿದ್ಧವಾಗಿದೆ. ಕಟ್ಟಡದ ಹೊರಮೈಯ ವಿನ್ಯಾಸ ಸುಂದರವಾಗಿ ರೂಪಿತವಾಗಿದೆ. ಕಮಾನುಗಳನ್ನೊಳಗೊಂಡ ಎತ್ತರದ ಗೋಡೆಗಳ ಮೇಲೆ ಚಾವಣಿಯ ಮಟ್ಟದಲ್ಲಿ ಚಾಚು ಕಪೋತವಿದೆ. ಅದರ ಅಡಿಯಲ್ಲಿ ತೂಗಾಡುವ ಬಾಳೆಮೋತೆ ಅಲಂಕರಣವಿರುವ ಗಂಧವಾರಣಗಳುಂಟು. ಎತ್ತರದಲ್ಲಿ ಕಟ್ಟಡದ ಸುತ್ತ ಹಬ್ಬಿರುವ ಈ ಅಲಂಕರಣ ಗೋಡೆಗಳ ಬರಿಮೈ ವೈಶಾಲ್ಯವನ್ನು ಖಂಡಿಸಿ ಅಲಂಕೃತ ಕಂಠಹಾರದಂತೆ ಸುಂದರವಾಗಿ ಜೋಡಣೆಗೊಂಡಿದೆ. ಅದರ ಮೇಲೆ ಸಣ್ಣ ಕಮಾನುಗಳ ಸಾಲೂ ಅದಕ್ಕೂ ಮೇಲೆ ಚೂಪು ಪಟ್ಟೆಗಂಬಗಳ ಸಾಲೂ ಇವೆ. ಕಟ್ಟಡದ ನಾಲ್ಕೂ ಮೂಲೆಗಳಿಗೆ ಹೊಂದಿಕೊಂಡಂತಿರುವ ಷಡ್ಭುಜ ಗೋಪುರಗಳನ್ನು ಏಳು ಅಂತಸ್ತುಗಳಲ್ಲಿ ಎತ್ತಲಾಗಿದೆ. ಒಂದೊಂದು ಮುಖದಲ್ಲೂ ಚೂಪು ತುದಿಯ ಕಮಾನಿನ ಕಿಟಕಿಗಳನ್ನಿಡಲಾಗಿದೆ. ಈ ಗೋಪುರದ ಮೇಲ್ಭಾಗದಲ್ಲಿ ಚಿಕ್ಕ ಗುಮ್ಮಟಗಳಿವೆ. ಇವು ಚಾವಣಿಯ ಮಟ್ಟಕ್ಕಿಂತಲೂ ಮೇಲಿವೆ. ವಿಶಾಲ ಚಾವಣಿಯ ಮೇಲೆ ಮಧ್ಯದಲ್ಲಿರುವ ಬೃಹತ್ ಗುಮ್ಮಟ ಅರೆಗೋಳಾಕಾರದ್ದು. ಇದರ ತಳ ಕೂಡ ಮೀನಾರುಗಳ ಮೇಲಿರುವ ಚಿಕ್ಕ ಗುಮ್ಮಟಗಳಂತೆ ಪದ್ಮದಳಗಳಿಂದ ಸುತ್ತುವರಿಯಲ್ಪಟ್ಟಿದೆ. ಅಲ್ಲದೆ ಗೋಡೆಗಳ ಮೇಲೆಲ್ಲ ಗಾರೆಯಲ್ಲಿ ಅನೇಕ ಬಗೆಯ ವಿನ್ಯಾಸಗಳ ಅಲಂಕಾರವಿದೆ. ಈ ವಾಸ್ತು ಮತ್ತು ಅಲಂಕರಣ ಪರಸ್ಪರ ಪೂರಕವಾಗಿ, ಗೋಳಗುಮ್ಮಟವನ್ನು ಮೋಹಕ ಕೃತಿಯನ್ನಾಗಿ ಮಾಡಿವೆ. ಈ ಕಟ್ಟಡವನ್ನು ಹತ್ತಿರದಿಂದ ನೋಡುವವರಿಗೆ, ಇದರ ದೈತ್ಯಾಕಾರದ ಎದುರು ತಮ್ಮ ವಾಮನತ್ವದ ಅನುಭವವಷ್ಟೇ ಆದರೂ ದೂರದಿಂದ ನೋಡಿದಲ್ಲಿ ಈ ಸೌಂದರ್ಯದ ಸ್ವರೂಪ ಸ್ಪಷ್ಟವಾಗುತ್ತದೆ.

ಗೋಳಗುಮ್ಮಟದ ಒಳಹಜಾರದ ಮಧ್ಯೆ ದೊಡ್ಡ ಚೌಕಕಟ್ಟೆಯ ಮೇಲೆ ಮುಹಮ್ಮದ್‌ನ ಮತ್ತು ಅವನ ಸಮೀಪ ಸಂಬಂಧಿಗಳ ಕೃತಕ

ಗೋರಿಗಳಿವೆ. ನಿಜವಾದ ಗೋರಿಗಳು ಇದರ ಕೆಳಗೆ ನೆಲಮಾಳಿಗೆಯಲ್ಲಿವೆ. ಮಹಮ್ಮದ್ ತನ್ನ ಆಳಿಕೆಯ ಉತ್ತರಾರ್ಧದಲ್ಲಿ ಈ ಕಟ್ಟಡವನ್ನು ಕಟ್ಟಲಾರಂಭಿಸಿ, ತನ್ನ ಕೊನೆಗಾಲದವರೆಗೂ ಮುಂದುವರಿಸಿದ. ಆದರೆ ಆ ಹೊತ್ತಿಗೂ ಕಟ್ಟಡದ ಗಾರೆಯ ಅಲಂಕರಣ ಮುಗಿದಿರಲಿಲ್ಲವಾಗಿ ಆ ಭಾಗಗಳು ಇಂದೂ ಅಪೂರ್ಣವಾಗಿಯೇ ಉಳಿದಿವೆ. ಮಹಮ್ಮದ್ ತನ್ನ ಗೋರಿಗಾಗಿ ಬಹಳ ಆಸ್ಥೆ ವಹಿಸಿದ್ದನೆಂದೂ ತನ್ನ ದೇಹವನ್ನು ಪವಿತ್ರ ಸ್ಥಳದಲ್ಲಿ ಹುಗಿಯಬೇಕೆಂಬ ಉದ್ದಿಶ್ಯದಿಂದ ಇರಾಕಿನಲ್ಲಿ ಹುಸೇನರ ಸಮಾಧಿ ಇರುವ ಕರ್ಬಲಾದಿಂದ ಮಣ್ಣನ್ನು ತರಿಸಿಕೊಂಡಿದ್ದನೆಂದೂ ತಿಳಿದುಬಂದಿದೆ. ತನ್ನ ಸಮಾಧಿಗಾಗಿ ಈ ದೊರೆ ತಳೆದಿದ್ದ ಅಸೀಮ ಆಸಕ್ತಿಯಿಂದಾಗಿ ಜಗತ್ತಿನ ಉತ್ತಮ ವಾಸ್ತುರಚನೆಯೊಂದು ಮೈತಳೆಯಿತು.

ವಿನ್ಯಾಸದಲ್ಲಿ ಗೋಳಗುಮ್ಮಟ ಬಹಳ ಸರಳವಾಗಿದ್ದರೂ ಇದರ ಬೃಹದಾಕಾರ, ವಿವಿಧ ಭಾಗಗಳ ಹಿತಪ್ರಮಾಣ, ಮಿತ ಅಲಂಕರಣ ಮತ್ತು ಚತುರ ರಚನಾತಂತ್ರ - ಇವುಗಳಿಂದಾಗಿ ಆದಿಲ್‍ಶಾಹೀ ವಾಸ್ತು ಶಿಲ್ಪಗಳ ಉಚ್ಚತಮ ಸಾಹಸದ ಸಾಧನೆಯೆಂದು ಇದು ಪರಿಗಣಿತವಾಗಿದೆ. ಭಾರತೀಯ ವಾಸ್ತುರಂಗದಲ್ಲಿ ಒಂದು ಅನುಪಮ ಕೃತಿಯಾಗಿ, ಲೋಕ ವಿಖ್ಯಾತವಾಗಿ ಕರ್ನಾಟಕದ ಹೆಮ್ಮೆಯ ಸಾಧನೆಗಳಲ್ಲಿ ಒಂದೆನಿಸಿದೆ. (ಎಸ್.ಎಸ್.)

**ಗೌರಿಬಿದನೂರು** : ಕೋಲಾರ ಜಿಲ್ಲೆಯ ವಾಯವ್ಯದಲ್ಲಿರುವ ಒಂದು ತಾಲ್ಲೂಕು; ಅದರ ಮುಖ್ಯ ಪಟ್ಟಣ. ಈ ತಾಲ್ಲೂಕನ್ನು ಪಶ್ಚಿಮದಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳು, ಉತ್ತರದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕು, ಪೂರ್ವದಲ್ಲಿ ಗುಡಿಬಂಡೆ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳು ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ಸುತ್ತುವರೆದಿವೆ. ಈ ತಾಲ್ಲೂಕಿನ ವಿಸ್ತೀರ್ಣ 874ಚ.ಕಿಮೀ. ಗೌರಿ ಬಿದನೂರು, ಹೊಸೂರು, ಮಂಚೇನಹಳ್ಳಿ, ನಗರಗೆರೆ, ದಾರಿನಾಯಕನಪಾಳ್ಯ, ತೊಂಡೆಬಾವಿ -ಇವು ಇಲ್ಲಿಯ ಹೋಬಳಿಗಳು. ತಾಲ್ಲೂಕಿನಲ್ಲಿ ಎರಡು ಪಟ್ಟಣಗಳು ಮತ್ತು 236 ಗ್ರಾಮಗಳಿವೆ. ಜನಸಂಖ್ಯೆ 2,71,068.

ತಾಲ್ಲೂಕಿನ ಆಗ್ನೇಯ ದಿಕ್ಕಿನಿಂದ ಉತ್ತರ ದಿಕ್ಕಿಗೆ ಉತ್ತರಪಿನಾಕಿನಿ ನದಿ ಹರಿಯುತ್ತದೆ. ತಾಲ್ಲೂಕಿನ ಹೆಚ್ಚಿನ ಭಾಗ ಈ ನದೀಕಣಿವೆ ಪ್ರದೇಶ. ಪೂರ್ವದ ನಂದಿದುರ್ಗ ಗಿರಿಶ್ರೇಣಿ, ಪಶ್ಚಿಮದ ಮಾಕಳಿದುರ್ಗದಿಂದ ಆರಂಭವಾಗುವ ಗಿರಿಪಂಕ್ತಿ ಇವುಗಳ ನಡುವೆ ತಾಲ್ಲೂಕು ಇದೆ. ಉತ್ತರಪಿನಾಕಿನಿಯ ಒಂದು ಉಪನದಿ ಕುಮುದ್ವತಿ. ಬೆಂಗಳೂರು ಜಿಲ್ಲೆಯ ಮಾಕಳಿದುರ್ಗದ ಪಶ್ಚಿಮದಲ್ಲಿ ಉಗಮಿಸಿ, ದಕ್ಷಿಣೋತ್ತರವಾಗಿ ಈ ತಾಲ್ಲೂಕಿನ ಮೂಲಕ ಹರಿದು, ಮಧುಗಿರಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ನದಿಗಳಲ್ಲದೆ ಮಾಕಳಿದುರ್ಗದ ಪೂರ್ವದಿಂದ ಎರಡು ಸಣ್ಣ ಹೊಳೆಗಳು ಈ ತಾಲ್ಲೂಕಿನಲ್ಲಿ ಹರಿಯುತ್ತವೆ. ಒಂದು ತೊಂಡೆಬಾವಿ ಹೋಬಳಿಯ ಮೂಲಕ ಹರಿದು ಮಧುಗಿರಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮತ್ತೊಂದು ತೊಂಡೆಬಾವಿ ಹೋಬಳಿಯ ಮೂಲಕವೇ ಹರಿದು ಬೊಮ್ಮಸಂದ್ರಕ್ಕೆ ಪೂರ್ವದಲ್ಲಿ ಉತ್ತರಪಿನಾಕಿನಿಯನ್ನು ಕೂಡುತ್ತದೆ. ಈ ತಾಲ್ಲೂಕಿನ ತೊಂಡೆಬಾವಿಯ ಬಳಿ ಫೆಲ್‍ಸ್ಪಾರ್ ಸಿಗುವುದಲ್ಲದೆ ಮಾವಿನ ಹಳ್ಳಿಯ ಬಳಿ ಪಚ್ಚೆ, ಕೆಂಪು ಇವುಗಳ ಜಾತಿಗೆ ಸೇರಿದ ಕುರಂಗದಕಲ್ಲು ನಿಕ್ಷೇಪಗಳಿರುವುದು ಕಂಡುಬಂದಿದೆ.

ಗೌರಿಬಿದನೂರು ಅಕ್ಕಪಕ್ಕದ ತಾಲ್ಲೂಕಗಳಿಗಿಂತ ತಗ್ಗಿನಲ್ಲಿದ್ದು ಇಲ್ಲಿಯ ಮಣ್ಣು ಸಡಿಲ ಮತ್ತು ಫಲವತ್ತಾಗಿದೆ. ವ್ಯವಸಾಯಕ್ಕೆ ಅನುಕೂಲವಾಗಿ ನಾಲೆಗಳೂ ಕೆರೆಗಳೂ ಬಾವಿಗಳೂ ಇದ್ದು ನೀರಾವರಿ ಸೌಕರ್ಯವಿದೆ. ವಾರ್ಷಿಕ ಸರಾಸರಿ ಮಳೆ 614.53ಮಿಮೀ. ಬತ್ತ, ಕಬ್ಬು, ಅರಿಶಿನ, ತೆಂಗು, ಅಡಕೆ ಮುಖ್ಯ ಬೆಳೆಗಳು. ಮೆಣಸಿನಕಾಯಿ, ಈರುಳ್ಳಿ ಮುಂತಾದವು ತೋಟದ ಬೆಳೆಗಳು ಮಾವು ಮುಂತಾದ ಹಣ್ಣುಗಳನ್ನೂ ಬೆಳೆಯುವರು. ಬೆಟ್ಟಪ್ರದೇಶದಲ್ಲಿ ಮರಸೇಬು ವಿಶೇಷ.

ವ್ಯವಸಾಯದ ಜೊತೆಗೆ ಪಶುಪಾಲನೆಯೂ ಬೆಳೆದುಕೊಂಡು ಬಂದಿದ್ದು ಅದರ ಅಭಿವೃದ್ಧಿ ರಕ್ಷಣೆಯ ಅಂಗವಾಗಿ ತಾಲ್ಲೂಕಿನ ಮಂಚೇನಹಳ್ಳಿ, ದಾರಿನಾಯಕನಪಾಳ್ಯ ಮತ್ತು ಗೌರಿಬಿದನೂರುಗಳಲ್ಲಿ ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ.

ಬೆಂಗಳೂರು-ಗುಂತಕಲ್ ರೈಲುಮಾರ್ಗ ತಾಲ್ಲೂಕಿನ ಮಧ್ಯ ಭಾಗದಲ್ಲಿ ದಕ್ಷಿಣೋತ್ತರವಾಗಿ ತೊಂಡೆಬಾವಿ, ಗೌರಿಬಿದನೂರು ಮತ್ತು ದೊಡ್ಡಕುರುಗೋಡು ಮೂಲಕ ಹಾದುಹೋಗುತ್ತದೆ. ಗೌರಿಬಿದನೂರು ಪಟ್ಟಣದಿಂದ ಗುಡಿಬಂಡೆ, ಚಿಕ್ಕಬಳ್ಳಾಪುರ, ಹಿಂದೂಪುರ ಮುಂತಾದ ಸ್ಥಳಗಳಿಗೂ ತೊಂಡೆಬಾವಿಯಿಂದ ಮಧುಗಿರಿಗೂ ರಸ್ತೆಗಳುಂಟು.

ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆ, ಸಿಮೆಂಟ್ ಕೊಳವೆಗಳ ತಯಾರಿಕೆ, ಮರಕೊಯ್ಯುವ ಕಾರ್ಖಾನೆಗಳ ಜೊತೆಗೆ ಕೈಮಗ್ಗದ ಬಟ್ಟೆ ತಯಾರಿಕೆಯೂ ಉಂಟು. ವ್ಯಾಪಾರ ವಾಣಿಜ್ಯಾಭಿವೃದ್ಧಿಗೆ ಸಹಕಾರಿಯಾಗಿ ತಾಲ್ಲೂಕುಗಳಲ್ಲಿ ಬ್ಯಾಂಕುಗಳಿವೆ.

ಈ ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ವರ್ಷಕ್ಕೊಮ್ಮೆ ಚೈತ್ರಶುದ್ಧ ಪೂರ್ಣಿಮೆಯಂದು ಪ್ರಾರಂಭವಾಗಿ ಒಂದು ವಾರ ಕಾಲ ನಡೆಯುವ ಅಶ್ವತ್ಥನಾರಾಯಣ ಸ್ವಾಮಿಯ ಜಾತ್ರೆ ಪ್ರಸಿದ್ಧ. ಆಗ ದನಗಳ ಜಾತ್ರೆಯೂ ಸೇರುತ್ತದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಚಳವಳಿಗಾರರು 1938 ಎಪ್ರಿಲ್ 25ರಂದು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಕಾಂಗ್ರೆಸ್ ಧ್ವಜವನ್ನು ಆರೋಹಣ ಮಾಡಿದಾಗ ಪೊಲೀಸರ ಗುಂಡಿಗೆ ತುತ್ತಾಗಿ ಹತ್ತುಮಂದಿ ಮಡಿದಿದ್ದು ವಿದುರಾಶ್ವತ್ಥಕ್ಕೆ (ನೋಡಿ) ಸಂಬಂಧಿಸಿದ ಮರೆಯಲಾಗದ ನೆನಪು. ಈ ತಾಲ್ಲೂಕಿನ ಇತರ ಮುಖ್ಯ ಗ್ರಾಮಗಳಾದ ಗುಮ್ಮನಾಯಕನ ಪಾಳ್ಯ ಈಗ ಹೋಬಳಿ ಕೇಂದ್ರವಾಗಿದ್ದು 1882ರ ವರೆಗೆ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಹಿಂದೆ ಅಲ್ಲೊಂದು ಪಾಳೆಯಪಟ್ಟು ಸಹ ಇತ್ತು (ನೋಡಿ: ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು). ಹೊಸೂರು ಗೌರಿಬಿದನೂರಿಗೆ ನೈಋತ್ಯದಲ್ಲಿ 10ಕಿಮೀ ದೂರದಲ್ಲಿದೆ. ಹೊಯ್ಸಳ ದೊರೆ ಮೂರನೆಯ ಬಲ್ಲಾಳ ಇದನ್ನು ವಶಪಡಿಸಿಕೊಂಡು ಹೊಸವೀಡು ಎಂದು ಹೆಸರಿಸಿದ್ದನೆಂದೂ ವಿಜಯನಗರ ರಾಜ್ಯದ ಗಡಿಯಲ್ಲಿದ್ದು ಅರಸರ ವಾಸಸ್ಥಾನವಾಗಿತ್ತೆಂದೂ ತಿಳಿದುಬರುತ್ತದೆ. ಮಂಚೇನಹಳ್ಳಿ ಗೌರಿಬಿದನೂರಿಗೆ ಪೂರ್ವದಲ್ಲಿ 14ಕಿಮೀ ದೂರದಲ್ಲಿ ಉತ್ತರ ಪಿನಾಕಿನಿ ನದಿಯ ಬಲದಂಡೆಯ ಮೇಲಿದೆ. ಇದು ಹೋಬಳಿಕೇಂದ್ರ, ಇಲ್ಲಿ ಪುರಸಭೆಯಿದೆ. ನಗರಗೆರೆ, ತೊಂಡೆಬಾವಿ ಈ ಹೋಬಳಿ ಕೇಂದ್ರಗಳು ತಾಲ್ಲೂಕಿನ ಇತರ ದೊಡ್ಡ ಸ್ಥಳಗಳು.

ಗೌರಿಬಿದನೂರು ಈ ತಾಲ್ಲೂಕಿನ ಮತ್ತು ಹೋಬಳಿಯ ಆಡಳಿತ ಕೇಂದ್ರ. ಕೋಲಾರಕ್ಕೆ ವಾಯುವ್ಯದಲ್ಲಿ 95ಕಿಮೀ ದೂರದಲ್ಲಿ ಬೆಂಗಳೂರಿನಿಂದ 75ಕಿಮೀ ದೂರದಲ್ಲಿ ಉತ್ತರ ಪಿನಾಕಿನಿ ನದಿಯ ಎಡದಂಡೆಯ ಮೇಲಿದೆ. ಬೆಂಗಳೂರು ಗುಂತಕಲ್ ರೈಲುಮಾರ್ಗದಲ್ಲಿ ಇದೊಂದು ನಿಲ್ದಾಣ. ದೊಡ್ಡಬಳ್ಳಾಪುರ ಹಿಂದೂಪುರ ರಸ್ತೆ ಇದರ ಮೂಲಕ ಸಾಗುತ್ತದೆ. ಜನಸಂಖ್ಯೆ 30,530.

ಹಿಂದೆ ವಿದುರನ ವಾಸಸ್ಥಳವಾಗಿದ್ದು ಇದಕ್ಕೆ ವಿದುರೂರು ಎಂಬ ಹೆಸರಿತ್ತೆಂದೂ ಹೇಳಲಾಗಿದೆ. ಹಿಂದೆ ಗೌರಿಬಿದನೂರು ಪಟ್ಟಣ ದಾರಿನಾಯ್ಕನಪಾಳ್ಯದ ಒಡೆಯನ ವಶದಲ್ಲಿತ್ತು. ಆತ ತನ್ನ ಮಗಳಾದ ಗೌರಿಗೆ ಇದನ್ನು ಬಳುವಳಿಯಾಗಿ ಕೊಟ್ಟ. ವಿದುರೂರು ಎಂಬ ಹೆಸರಿಗೆ ಆಕೆಯ ಹೆಸರೂ ಸೇರಿಕೊಂಡು ಇದು ಗೌರಿವಿದುರೂರು ಎನಿಸಿಕೊಂಡಿತು. ಅನಂತರ ಮುಸ್ಲಿಮರು ಇದನ್ನು ಗೋರಿ ಬಿದನೂರು ಎಂದು ಕರೆದರು. ಇದರ ಬಳಿಯಲ್ಲಿ ನಿರ್ಮಿಸಲಾಗಿದ್ದ ಗೋರಿಗಳಿಂದಾಗಿ ಇದಕ್ಕೆ ಈ ಹೆಸರು ಬಂತು. ಉತ್ತರಪಿನಾಕಿನಿ ನದಿಯ ಆಚೆಯ ದಡದಲ್ಲಿ, ಹಿರೇಬಿದನೂರಿನಲ್ಲಿ, ಬಿಜಾಪುರದ ಒಬ್ಬ ಶ್ರೀಮಂತನಾಗಿದ್ದ ಹುಸೇನ್ ಷಾ ಮರ್ಜಾನ ಮತ್ತು ಕುಟುಂಬದವರ ಗೋರಿಗಳಿವೆ. ಗೌರಿಬಿದನೂರಿನಲ್ಲಿ ಅದೇ ಕಾಲದ ಜಲಾಲ್ ಬಖಾರಿ ವಲಿಯ ದರ್ಗಾ ಇದೆ.

ಗೌರಿಬಿದನೂರಿನಲ್ಲಿ ನವಗ್ರಹ ಮತ್ತು ವೆಂಕಟರಮಣ ದೇವಾಲಯಗಳಿದ್ದು ವೆಂಕಟರಮಣ ದೇವಸ್ಥಾನದ ವಿಗ್ರಹ 4' ಎತ್ತರವಿದೆ. ರೈಲುಮಾರ್ಗ ನಿರ್ಮಾಣವಾದಂದಿನಿಂದ ಗೌರಿಬಿದನೂರು ಪ್ರವರ್ಧಮಾನವಾಗಿ ವ್ಯಾಪಾರ ವಾಣಿಜ್ಯ ಕೇಂದ್ರವಾಗಿದೆ. ಇಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಗೌರಿಬಿದನೂರಿನಲ್ಲಿ ಭಾಭಾ ಪರಮಾಣುಶಕ್ತಿ ಸಂಶೋಧನ ಸಂಸ್ಥೆಗೆ ಸೇರಿದ ಭೂಕಂಪನಮಾಪನ ಕೇಂದ್ರವಿದೆ. ಈ ಪಟ್ಟಣಕ್ಕೆ ಪುರಸಭಾಡಳಿತವಿದೆ.

*

**ಗೌರೀಶ ಕಾಯ್ಕಿಣಿ :** 1912-2002. ಕನ್ನಡದಲ್ಲಿ ವೈಚಾರಿಕ ಬರೆಹಗಳಿಗಾಗಿ ಹೆಸರಾದ ಲೇಖಕ. ಇವರು 1912 ಸೆಪ್ಟೆಂಬರ್ 12ರಂದು ಉತ್ತರ ಕನ್ನಡ ಜಿಲ್ಲೆ ಗೋಕರ್ಣದಲ್ಲಿ ಜನಿಸಿದರು. ತಂದೆ ವಿಠ್ಠಲರಾವ್



ವೆಂಕಟರಾವ್ ಕಾಯ್ಕಿಣಿ, ತಾಯಿ ಸೀತಾ ಬಾಯಿ. ಇವರಪ್ರಾಥಮಿಕ ವ್ಯಾಸಂಗ ಗೋಕರ್ಣದಲ್ಲಿ, ಮಾಧ್ಯಮಿಕ ಶಿಕ್ಷಣ ಕುಮಟೆಯ ಗಿಬ್ ಹೈಸ್ಕೂಲಿನಲ್ಲಿ ಆಯಿತು. ಮುಂದೆ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ ವರೆಗೆ ಓದಿದರು. ಅನಂತರ ಬಂಕಿಕೊಡ್ಲಿನ ಆನಂದಾಶ್ರಮ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇರಿಕೊಂಡು ಎಸ್.ಟಿ.ಸಿ. ಶಿಕ್ಷಕರ ತರಬೇತಿಯಲ್ಲಿ ಮುಂಬಯಿ ಪ್ರಾಂತ್ಯಕ್ಕೆ ಪ್ರಥಮರಾಗಿ ತೇರ್ಗಡೆ ಹೊಂದಿದರು (1945). ಅದೇ ಸಮಯ ಹಿಂದಿ ವಿಶಾರದ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಬಂಕಿಕೊಡ್ಲು ಆನಂದಾಶ್ರಮ ಗೋಕರ್ಣದ ಭದ್ರಕಾಳಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ದುಡಿದು (1937-76) ನಿವೃತ್ತರಾದರು. 1973ರಲ್ಲಿ ಇವರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ಬಂತು.

ಎಳೆವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಬೆಳೆದದ್ದು ತಾಯಿಯ ತವರು ಮನೆಯಲ್ಲಿ; ಮನೆಯ ಸಾಂಪ್ರದಾಯಿಕ ವಾತಾವರಣದಲ್ಲಿ, ತಾಯಿ ಮತ್ತು ದೊಡ್ಡಮ್ಮನವರ ಪ್ರೀತಿಯಲ್ಲಿ. ಮನೆಗೆ ಬರುತ್ತಿದ್ದ ಶಾಂಡಿಲ್ಯ ಮಹಾರಾಜರೆಂಬ ಋಷಿಗಳ ಮಾರ್ಗದರ್ಶನದಲ್ಲಿ ಕುಂಭೇಶ್ವರ ಮಾಸ್ತರ್, ಎನ್.ಎಸ್.ಕಾಮತರಂತಹ ಗುರುಗಳು ನೀಡಿದ ಪ್ರೋತ್ಸಾಹದಲ್ಲಿ ಬೆಳೆದರು. ಮನೆಯಲ್ಲಿ ಓದುತ್ತಿದ್ದ ಮರಾಠಿ ಧಾರ್ಮಿಕ ಗ್ರಂಥಗಳಿಂದಲೂ ಧಾರ್ಮಿಕ ವಿಧಿವಿಧಾನಗಳಿಂದಲೂ ಶಾಂಡಿಲ್ಯ ಮಹಾರಾಜರ ವಿದ್ವತ್‌ಪೂರ್ಣ ಪ್ರವಚನದಿಂದಲೂ ಗೌರೀಶರಲ್ಲಿ ಓದುವ ಅಭಿರುಚಿ ಬೆಳೆಯಿತು. ಇವರು ಮೊದಲು ಮರಾಠಿಯ ಭಕ್ತಿಗೀತೆಗಳನ್ನು ಆಧರಿಸಿ ತಮ್ಮದೇ ಆದ ಭಕ್ತಿಗೀತೆ, ರಾಷ್ಟ್ರೀಯ ಸ್ಫೂರ್ತಿಗೀತೆ, ಭಾವಗೀತೆಗಳನ್ನು ರಚಿಸತೊಡಗಿದರು. ಮರಾಠಿಯಲ್ಲಿ ಶಾಂಡಿಲ್ಯ ಪ್ರೇಮಸುಧಾ ಎಂಬ ಭಕ್ತಿಗೀತೆಗಳ ಸಂಗ್ರಹ ಪ್ರಕಟಿಸಿದ್ದರು. ಅನಂತರ 'ನಂದಿನಿ' ಪತ್ರಿಕೆಯಲ್ಲಿ ಸಂತ ಮೀರಾಬಾಯಿಯನ್ನು ಕುರಿತು ಒಂದು ಕಥೆ ಬರೆದರು. ಮುಂದೆ 'ನಂದಿನಿ'ಯಲ್ಲಿ ಅನೇಕ ಲೇಖನಗಳನ್ನು ಬರೆದರು.

ಮಿಂಚಿನ ಬಳ್ಳಿಯ ಬುರ್ಲಿ ಬಿಂದುಮಾಧವಾಚಾರ್ಯರ ಒತ್ತಾಸೆಯಿಂದ ಮನೋವಿಜ್ಞಾನದ ರೂಪರೇಖೆಗಳು ಎಂಬ ಗ್ರಂಥ ಬರೆದರು. ಇದು ಇವರ ಮೊದಲ ಕನ್ನಡ ಗ್ರಂಥ (1941). ಅಂದಿನ ದಿನಗಳಲ್ಲಿ ಕನ್ನಡ ನಾಟಕಗಳ ಅಗತ್ಯವನ್ನು ಮನಗಂಡು ಭೂಕೈಲಾಸ, ಆಶಾನಿರಾಶಾ, ಅಧಃಪಾತ, ಚಂದ್ರಗ್ರಹಣ, ತ್ರಿದಂಡಿ ಸನ್ಯಾಸ, ರಾಜ್ಯಾರೋಹಣ, ಸ್ವಯಂಸೇವಕ, ಮಾಡಿದ್ದೊಂದು ಆದದ್ದೊಂದು, ಚಿದಂಬರ ರಹಸ್ಯ, ಬೆಳ್ಳಿಯ ಬಟ್ಟಲು ಎಂಬ ನಾಟಕಗಳನ್ನು ಕನ್ನಡಕ್ಕೆ ತಂದರು. ಇವುಗಳಲ್ಲಿ ಬೆಳ್ಳಿಯ ಬಟ್ಟಲು ಇಂಗ್ಲಿಷಿನಿಂದಲೂ ಉಳಿದವು ಮರಾಠಿಯಿಂದಲೂ ಅನುವಾದಗೊಂಡಿವೆ. ಈ ನಾಟಕಗಳು ರಂಗಭೂಮಿಗೆ ಬಂದರೂ ಪುಸ್ತಕ ರೂಪದಲ್ಲಿ ಪ್ರಕಟವಾಗಲಿಲ್ಲ.

ಇವರು ಇಂಗ್ಲಿಷ್, ಸಂಸ್ಕೃತ, ಹಿಂದಿ, ಮರಾಠಿ, ಕನ್ನಡ, ಕೊಂಕಣಿ ಭಾಷೆಯ ಕೃತಿಗಳನ್ನೂ ಕಾರಂತ, ಬೇಂದ್ರೆ, ಶಂಬಾ, ಮಾಸ್ತಿ, ಶ್ರೀರಂಗ, ಗೋಕಾಕರ ಕನ್ನಡ ಕೃತಿಗಳನ್ನೂ ಓದಿ ಜ್ಞಾನಕ್ಷಿತಿಜವನ್ನು ವಿಸ್ತರಿಸಿಕೊಂಡರು. ಗಾಂಧಿವಾದ, ಮಾರ್ಕ್ಸ್‌ವಾದ, ಎಂ. ಎನ್. ರಾಯ್‌ವಾದ, ಲೋಹಿಯಾವಾದಗಳನ್ನೂ ಅರವಿಂದ ತತ್ವಗಳನ್ನೂ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ವಿಚಾರಗಳನ್ನೂ ಕುರಾನ್, ಬೈಬಲ್‌ಗಳನ್ನೂ ಪಾಶ್ಚಾತ್ಯ, ಪೌರಸ್ತ್ಯ ತತ್ವಾದರ್ಶನಗಳನ್ನೂ ಅಭ್ಯಸಿಸಿ ತಮ್ಮದೇ ಆದ ವೈಚಾರಿಕ ನಿಲುವನ್ನು ರೂಪಿಸಿಕೊಂಡರು.

'ಗಂಡು ಹೆಣ್ಣು' (ವಿಲ್ ಡ್ಯುರಾಂಟನ ಕೃತಿಯ ಆಧಾರ), ಮಾರ್ಕ್ಸ್‌ವಾದ, ವಿಚಾರವಾದ, ನಾಸ್ತಿಕನು ಮತ್ತು ದೇವರು, ಭಾರತೀಯ ಸಂಪ್ರದಾಯಗಳು ಮತ್ತು ಕುಟುಂಬ, ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ, ಪ್ರಜ್ಞಾನೇತ್ರದ ಬೆಳಕಿನಲ್ಲಿ, ಕಟಾಕ್ಷ, ಚೆನ್ನವೀರ ಕಣವಿಯವರ ಕಾವ್ಯದೃಷ್ಟಿ, ಕಂಪಿನಕರೆ (ಬೇಂದ್ರೆ ಕಾವ್ಯದೃಷ್ಟಿ), ವಾಲ್ಮೀಕಿ ತೂಕಡಿಸಿದಾಗ ಮೊದಲಾದ ವೈಚಾರಿಕ ವಿಮರ್ಶೆಯ ಗ್ರಂಥಗಳನ್ನು ಬರೆದರು. ಅನೇಕ ಜೀವನ ಚರಿತ್ರೆ, ವ್ಯಕ್ತಿಚಿತ್ರಗಳನ್ನು ರಚಿಸಿದರು.

ಇವರು ಅನುವಾದ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಲೆನಾಡಿಗರು (ಥಾಮಸ್ ಹಾರ್ಡಿ), ಮಣ್ಣಿನ ಮನುಷ್ಯ, ಬರ್ಲಿನ್ ಬಂತು ಗಂಗೆಯ ತಡಿಗೆ (ಬವಾದಖೇರ್) ಎಂಬ ಮೂರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇವುಗಳಲ್ಲಿ ಮೊದಲನೆಯದು ಇಂಗ್ಲಿಷ್ ಕೃತಿ, ಎರಡನೆಯದು ಒರಿಯಾ, ಕೊನೆಯದು ಮರಾಠಿ.

'ಒಲವಿನ ಒಗಟು' ಇವರ ಪ್ರಥಮ ಪ್ರಕಟಿತ ನಾಟಕ. ಇಂಗ್ಲಿಷ್, ಕನ್ನಡ, ಮರಾಠಿ, ಕೊಂಕಣಿ ಭಾಷೆಗಳಲ್ಲಿ ಇವರು 55ಕ್ಕೂ ಮಿಕ್ಕು ಗ್ರಂಥಗಳನ್ನು ಬರೆದಿದ್ದಾರೆ. ನ್ಯಾಶನಲ್ ಇಂಟಿಗ್ರೇಶನ್ ಇನ್ ಆ್ಯಕ್ಶನ್, ಸರ್.ಎಂ. ವಿಶ್ವೇಶ್ವರಯ್ಯ, ಶಾಮರಾವ್ ವಿಠ್ಠಲ ಕಾಯ್ಕಿಣಿ, ಕಾಸ್ಟ್ ಆ್ಯಂಡ್ ಕಾಸ್ಟಿಸಂ: ಇಟ್ಸ್ ಕಾಸ್ ಆ್ಯಂಡ್ ಕ್ಯೂರ್, ಇನ್‌ಫ್ಲ್ಯೂಯೆನ್ಸ್ ಆಫ್ ಕನ್ನಡ ಆನ್ ಕೊಂಕಣಿ - ಇವು ಇವರ ಇಂಗ್ಲಿಷ್ ಕೃತಿಗಳು (ಕೊನೆಯ ಎರಡು ಕೃತಿಗಳು ಪ್ರಕಟವಾಗಿಲ್ಲ.)

ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಇವರು ದಿ ಸರ್ವೆ ಆಫ್ ಹ್ಯೂಮನ್ ಡೆಸ್ಟಿನಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ ದಿ ಫ್ಯೂಚರ್ ಪೊಯಿಟ್ರಿ ಬೈ ಅರಬಿಂದೊ ಎಂಬ ಎರಡು ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಇವರು ಸುಮಾರು ನಲವತ್ತು ಗೌರವ ಗ್ರಂಥಗಳಿಗೆ, ಸ್ಮರಣ ಸಂಚಿಕೆಗಳಿಗೆ ನೂರಾರು ಲೇಖನಗಳನ್ನು ಬರೆದಿದ್ದಾರೆ. ಕನ್ನಡದ ಅಂಕಣ ಬರೆಹಗಾರರಲ್ಲಿ ಕಾಯ್ಕಿಣಿಯವರೂ ಒಬ್ಬರು. 'ಜನಸೇವಕ' ಪತ್ರಿಕೆಗಾಗಿ ಇವರು ಪ್ರತಿವಾರವೂ ಮೂರು ಅಂಕಣ ಬರೆಯುತ್ತಿದ್ದರು (1955-72). ವಾರದ ಉಪ್ಪಿನಕಾಯಿ ಎಂಬ ಅಂಕಣದಲ್ಲಿ ಅಡಿಗೆಭಟ್ಟ ಎಂಬ ಕಾವ್ಯನಾಮದಿಂದಲೂ ವಾರದ ವಿಶ್ವ ಎಂಬ ಅಂಕಣದಲ್ಲಿ ವೈಶ್ವಾನರ ಎಂಬ ಕಾವ್ಯನಾಮದಿಂದಲೂ ಸಾಹಿತ್ಯದರ್ಪಣ ಅಂಕಣವನ್ನು ಜಿ.ವಿ.ಕೆ. ಎಂಬ ಹೆಸರಿನಲ್ಲೂ ಬರೆಯುತ್ತಿದ್ದರು. ಬೆಳಕು (ಧಾರವಾಡ), ನಾಗರಿಕ (ಕಾರವಾರ) ಪತ್ರಿಕೆಗಳ ಪ್ರಧಾನ ಸಂಪಾದಕರಾಗಿದ್ದರು. ಜನಪ್ರಗತಿ, ಸಮನ್ವಯ (ಶಿರಸಿ), ಕರಾವಳಿ ಗ್ರಾಮ ವಿಕಾಸ, ಕಸ್ತೂರಿ, ಗ್ರಾಮ ಜೀವನ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿಯೂ ಇವರು ಅಂಕಣಗಳನ್ನು ಬರೆದಿದ್ದಾರೆ. ಇವರ ಅಪ್ರಕಟಿತ ಕೃತಿಗಳು ಹಾಗೂ ಲೇಖನಗಳ ರಾಶಿ ಅಪಾರವಾಗಿವೆ.

ಇವರು ಪ್ರೋಗ್ರೆಸ್ ಮೈಸೂರ್ ಸಂಪಾದಕ ಮಂಡಳಿ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದ ಸಲಹಾ ಸಮಿತಿ, ಆಕಾಶವಾಣಿ ಸಲಹಾ ಸಮಿತಿ ಇವುಗಳ ಸದಸ್ಯರೂ ಕನ್ನಡ ಜಿಲ್ಲಾ ಲೇಖಕ, ಪ್ರಕಾಶಕ, ಪತ್ರಕರ್ತರ ಸಂಘದ ಅಧ್ಯಕ್ಷರೂ ಆಗಿದ್ದರು. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಗೌರವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶಂಬಾ ವಿಚಾರ ವೇದಿಕೆಯ ಸಂಶೋಧನ ಪ್ರಶಸ್ತಿ, ಉಗ್ರಾಣ ಮಂಗೇಶರಾವ್ ಪ್ರಶಸ್ತಿಗಳು ದೊರಕಿವೆ.

ಇವರ ಪತ್ನಿ ಶಾಂತಾ. ಇವರ ಪುತ್ರ ಜಯಂತ ಕಾಯ್ಕಿಣಿಯವರು ಕನ್ನಡದ ಹೊಸಪೀಳಿಗೆಯ ಮಹತ್ವದ ಲೇಖಕರಾಗಿದ್ದಾರೆ. ಗೌರೀಶರು ಗೋಕರ್ಣದಲ್ಲಿ 2002 ನವೆಂಬರ್ 14ರಂದು ನಿಧನಹೊಂದಿದರು.

(ಎಸ್.ಎಂ.ಕೆ.)

**ಗ್ರಂಥಾಲಯಗಳು :** ಆಧುನಿಕ ಸಮಾಜ ಇಂದು ನಿರಂತರ ಉನ್ನತಿಗಾಗಿ ಜ್ಞಾನಸಂಪತ್ತನ್ನು ಅವಲಂಬಿಸಿರುವುದರಿಂದ ಗ್ರಂಥಾಲಯ, ಮಾಹಿತಿ ಕೇಂದ್ರ, ಪರಾಮರ್ಶನ ಕೇಂದ್ರ, ದತ್ತಾಂಶ ಕೇಂದ್ರ, ವಿದ್ಯುನ್ಮಾನ ಆಧಾರಿತ ಮಾಹಿತಿ ವಿನಿಮಯ ಜಾಲ ಇತ್ಯಾದಿಗಳ ಆವಶ್ಯಕತೆ ದಿನೇ ದಿನೇ ಹೆಚ್ಚುತ್ತಿದ್ದು, ಆಗಿಂದಾಗ್ಗೆ ಕಂಡುಬರುವ ಬದಲಾವಣೆಗಳಿಗೆ ಅನುಗುಣವಾಗಿ ಇವು ಸಹ ವೈಜ್ಞಾನಿಕವಾಗಿ ಪರಿವರ್ತನೆಗೊಳ್ಳುತ್ತಲಿವೆ. ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಗ್ರಂಥಾಲಯಗಳು ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಅನಿವಾರ್ಯ. ಮೂಲತಃ ಗ್ರಂಥಾಲಯದ ಕಾರ್ಯಗಳೆಂದರೆ ಜ್ಞಾನ ಸಂಗ್ರಹಣೆ, ಜ್ಞಾನ ವರ್ಗೀಕರಣ, ಜ್ಞಾನ ಪ್ರಸರಣೆ ಮತ್ತು ಜ್ಞಾನ ಸಂರಕ್ಷಣೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಗ್ರಂಥಭಂಡಾರಗಳನ್ನು ಬೆಳೆಸುವ ಕಾರ್ಯ ನಡೆಯುತ್ತ ಬಂದಿದೆ. ಈಗ ಈ ಕಾರ್ಯ ವಿಶೇಷವಾಗಿ ಸಾಗುತ್ತಿದೆ.

ಜ್ಞಾನ ಪ್ರಸಾರಕ್ಕೆ ಗ್ರಂಥಾಲಯಗಳು ಇಂದು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಹಲವಾರು ರೀತಿಯಲ್ಲಿ ಸೇವಾ ಸೌಲಭ್ಯಗಳನ್ನು ಕಲ್ಪಿಸುತ್ತಿವೆ. ಬಹು ಮುಖ್ಯವಾಗಿ ವಿದ್ಯುನ್ಮಾನ ಗ್ರಂಥ ಪತ್ರಿಕೆಗಳನ್ನು ಒಳಗೊಂಡ 'ಡಿಜಿಟಲ್ ಲೈಬ್ರರಿ' ಮತ್ತು ಆನ್‌ಲೈನ್ ಸಂಪರ್ಕ ಒದಗಿಸುವ ದತ್ತಾಂಶ/ಮಾಹಿತಿ ಕೇಂದ್ರಗಳು ಹೆಚ್ಚುತ್ತಲಿವೆ. ತಂತ್ರಜ್ಞಾನ ಬಳಸಿಕೊಳ್ಳುತ್ತಿರುವುದರಿಂದ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳು ಓದುಗರ ಅಗತ್ಯಕ್ಕೆ ತಕ್ಕಂತೆ ಮಾಹಿತಿಯನ್ನು ನಿಖರವಾಗಿ ಹಾಗೂ ತ್ವರಿತವಾಗಿ ನೀಡಲು ಸಾಧ್ಯವಾಗುತ್ತಿದೆ. ಈ ಸಂದರ್ಭದಲ್ಲಿ ದೇಶ ಮತ್ತು ಕಾಲದ ಅಡಚಣೆಗಳಿರುವುದಿಲ್ಲ. ಪ್ರಚಲಿತ ಜ್ಞಾನವನ್ನು ಎಲ್ಲೇ ಇರಲಿ, ಯಾವಾಗಲೇ ಇರಲಿ ಸರಾಗವಾಗಿ ಪಡೆದುಕೊಳ್ಳಬಹುದು.

ಜ್ಞಾನವನ್ನು ಅರಸಿ ಬರುವವರ ದೃಷ್ಟಿಯಿಂದ ಗ್ರಂಥಾಲಯಗಳನ್ನು ಸಾಂಪ್ರದಾಯಿಕವಾಗಿ ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

1 ಸಾರ್ವಜನಿಕ ಗ್ರಂಥಾಲಗಳು 2 ಶೈಕ್ಷಣಿಕ ಗ್ರಂಥಾಲಯಗಳು 3 ಸಂಶೋಧನಾತ್ಮಕ ಅಥವಾ ವಿಶಿಷ್ಟ ಗ್ರಂಥಾಲಯಗಳು ಮತ್ತು 4 ರಾಷ್ಟ್ರೀಯ ಗ್ರಂಥಾಲಯಗಳು.

ಗ್ರಂಥಾಲಯಗಳು ತನ್ನದೇ ಆದ ಜ್ಞಾನ ಸಂಗ್ರಹ ಹಾಗೂ ಆರ್ಥಿಕ ಸಂಪನ್ಮೂಲ ಆಧರಿಸಿ ಕಾರ್ಯನಿರ್ವಹಿಸುವ ಕಾಲ ದೂರವಾಗುತ್ತಿದೆ. ಈಗ "ಸಂಪನ್ಮೂಲ ವಿನಿಮಯ"ಕ್ಕಾಗಿ ವಿಶ್ವದಾದ್ಯಂತ ಮಾಹಿತಿ ವಿನಿಮಯ ಜಾಲಗಳು ಮತ್ತು "ಗ್ರಂಥಾಲಯಗಳ ಒಕ್ಕೂಟ" ನಿರ್ಮಾಣವಾಗಿವೆ. ಇಂತಹ ಸಂಪನ್ಮೂಲ ವಿನಿಮಯ ಕಾರ್ಯಕ್ರಮದಿಂದಾಗಿ ಇತರ ಗ್ರಂಥಾಲಯಗಳಲ್ಲಿ ಲಭ್ಯವಿರುವ ಜ್ಞಾನ ಸಂಗ್ರಹ ಹೆಚ್ಚು ಬಳಕೆಯಾಗುತ್ತದೆ ಮತ್ತು ಆರ್ಥಿಕ ಹಾಗೂ ಸಿಬ್ಬಂದಿ ಕೊರತೆ ತಕ್ಕಮಟ್ಟಿಗೆ ನೀಗುವುದು.

ಈ ಲೇಖನದಲ್ಲಿ ಕರ್ನಾಟಕದಲ್ಲಿ ಗ್ರಂಥಾಲಯಗಳು ಬೆಳೆದುಬಂದ ಇತಿಹಾಸ, ಗ್ರಂಥಾಲಯಗಳ ಒಕ್ಕೂಟ ಹಾಗೂ ಸಂಘ-ಸಂಸ್ಥೆಗಳನ್ನು ಕುರಿತು ಸ್ಥೂಲ ಪರಿಚಯ ಮಾಡಿಕೊಡಲಾಗಿದೆ.

**ಇತಿಹಾಸ :** ಪ್ರಾಚೀನ ಕಾಲದಲ್ಲಿ ಮಾನವ ತನ್ನ ಅನುಭವ ಹಾಗೂ ತಿಳುವಳಿಕೆಯನ್ನು ತಾಳೆಗರಿ, ಭೂರ್ಜ್ವಪತ್ರ, ಜೇಡಿಮಣ್ಣಿನ ಫಲಕ, ಚರ್ಮ, ಶಿಲೆ ಮತ್ತು ತಾಮ್ರ ಇತ್ಯಾದಿಗಳ ಮೇಲೆ ಬರೆದು ದಾಖಲಿಸುತ್ತಿದ್ದನು. ವೇದಗಳನ್ನು ಪ್ರಾರಂಭದಲ್ಲಿ ಮೌಖಿಕ ಪರಂಪೆಯಲ್ಲಿ ಹೇಳುವ ಪಾಠಕರಿದ್ದರು. ತರುವಾಯ ಅದು ಲಿಖಿತರೂಪಕ್ಕೆ ಬಂದಿತು. ಮಹಾಭಾರತ ಮತ್ತು ರಾಮಾಯಣಗಳ ಕಾಲಕ್ಕಾಗಲೇ ಲಿಖಿತ ರೂಪದಲ್ಲಿ ಮಾಹಿತಿಗಳು ದೊರೆಯುತ್ತಿದ್ದದ್ದು ಕಂಡುಬರುತ್ತದೆ. ಕ್ರಿ.ಪೂ. ಸಹಸ್ರಮಾನದಲ್ಲಿ ಗ್ರಂಥಗಳು ಕಾಣಿಸಿಕೊಂಡವೆಂದು ಹೇಳಬಹುದು. ಇಂತಹ ಪ್ರಾಚೀನ ಮಾಹಿತಿ ಆಕರಗಳನ್ನು ಕರ್ನಾಟಕದಲ್ಲಿ ಅಗ್ರಹಾರ, ಧಾರ್ಮಿಕ ಮಠ, ಆಶ್ರಮ, ಮಂದಿರ ಮುಂತಾದ ವಿದ್ಯಾಕೇಂದ್ರಗಳಲ್ಲಿ ಸಂಗ್ರಹಿಸಲಾಗುತ್ತಿತ್ತು, ಅವುಗಳ ಸಂಗ್ರಹಕ್ಕಾಗಿಯೇ ಗ್ರಂಥಭಂಡಾರಗಳಿರುತ್ತಿದ್ದುವು. 11-12ನೆಯ ಶತಮಾನದಲ್ಲಿ ನಾಗಾಯಿ ಎಂಬಲ್ಲಿ ಪ್ರಸಿದ್ಧ ವಿದ್ಯಾಕೇಂದ್ರವಿತ್ತೆಂದು ಅಲ್ಲಿ ದೊರೆತ ಶಾಸನದಿಂದ (1058) ತಿಳಿದುಬರುತ್ತದೆ. ನಾಗವಾಹ ಅಗ್ರಹಾರವನ್ನು ಮಾಧವ ಮಂತ್ರಿಗೆ ಚಾಳುಕ್ಯ ತ್ರೈಲೋಕ್ಯಮಲ್ಲದೇವ ದತ್ತಿಯಾಗಿ ಕೊಟ್ಟನೆಂದೂ ಮಾಧವ ಮಂತ್ರಿ ಅಲ್ಲಿ ಮೂರು ಮಹಾವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಅಲ್ಲಿನ ಗ್ರಂಥಾಲಯಕ್ಕೆ ಆರು ಮಂದಿ ಸರಸ್ವತಿ ಭಂಡಾರಿಗಳನ್ನು ನಿಯಮಿಸಿ ಪ್ರತಿ ಭಂಡಾರಿಗನಿಗೆ ಇಪ್ಪತ್ತು ಮಹತ್ತರ ಭೂಮಿಯನ್ನು ಉಂಬಳಿ ಬಿಟ್ಟಿದ್ದನೆಂದೂ ಆ ಶಾಸನ ತಿಳಿಸುತ್ತದೆ. ಅನೇಕ ಜೈನ ಬಸದಿಗಳು ಮತ್ತು ಪ್ರಮುಖವಾಗಿ ಮೂಡಬಿದರೆ, ಉಡುಪಿ, ಮೇಲುಕೋಟೆ, ಶೃಂಗೇರಿ, ಮೈಸೂರು, ಧಾರವಾಡ, ಹುಬ್ಬಳ್ಳಿ, ನಂಜನಗೂಡು ಮುಂತಾದ ಸ್ಥಳಗಳಲ್ಲಿನ ಮಠ ಮಂದಿರಗಳಲ್ಲಿ ಹಿಂದಿನಿಂದಲೂ ಸಂಗ್ರಹಿಸಿಕೊಂಡು ಬಂದ ಹಸ್ತಪ್ರತಿ ಸಂಗ್ರಹವನ್ನೂ ಈಗಲೂ ಕಾಣಬಹುದು. ಇಮ್ಮಡಿ ಬುಕ್ಕರಾಯ ಶೃಂಗೇರಿಯ ಗ್ರಂಥ'ಭಂಡಾರದ ಗ್ರಂಥ'ಪಾಲಕನಾಗಿದ್ದ ನರಸಿಂಹಭಾರತಿ ಒಡೆಯನೆಂಬುವವನನ್ನು ದಕ್ಷಿಣ ಕನ್ನಡ ಜಿಲ್ಲೆಯ ಪೆರಡೂರು ಎಂಬಲ್ಲಿ ಗ್ರಂಥಾಲಯದ ಪುನರ್ವ್ಯವಸ್ಥೆಗಾಗಿ ನಿಯಮಿಸಿದನೆಂದು ಒಂದು ಶಾಸನ ಹೇಳುತ್ತದೆ. 12ನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಪ್ರಾರಂಭಗೊಂಡ ವಚನಸಾಹಿತ್ಯದ ಹಸ್ತಪ್ರತಿಗಳನ್ನು ವಚನ ಭಂಡಾರದಲ್ಲಿ ಸಂಗ್ರಹಿಸಲಾಗುತ್ತಿತ್ತು. ಸಾರ್ವಜನಿಕರ ಉಪಯೋಗಕ್ಕಾಗಿ ಆ ವಚನ ಭಂಡಾರಗಳಲ್ಲಿ ವಾಚನ, ಶ್ರವಣ ಹಾಗೂ ವಿಚಾರ ಮಂಥ'ನ ಕಾರ್ಯಕ್ರಮಗಳು ಏರ್ಪಡುತ್ತಿದ್ದುವು. ಶಾಂತರಸ ಎಂಬುವವನು ಸ್ವತಃ ವಚನಕಾರನಾಗಿದ್ದನಲ್ಲದೆ ವಚನ ಭಂಡಾರಿಯೂ ಆಗಿದ್ದನೆಂದು ತಿಳಿದುಬರುತ್ತದೆ.

ಕರ್ನಾಟಕದ ಹಲವು ಮಹಮ್ಮದೀಯ ಅರಸರು ಹಾಗೂ ಆಸ್ಥಾನದ ಅಧಿಕಾರಿ ವರ್ಗ ಪರಾಮರ್ಶನಕ್ಕಾಗಿ ಅರಮನೆಗಳಲ್ಲಿ ಮತ್ತು ವಿದ್ಯಾಸಂಸ್ಥೆಗಳಲ್ಲಿ ಗ್ರಂಥಾಲಯವನ್ನು ತೆರೆದಿದ್ದರೆಂಬುದಕ್ಕೆ ಇತಿಹಾಸದಲ್ಲಿ ಸಾಕಷ್ಟು ಪುರಾವೆಗಳಿವೆ. 1472ರಲ್ಲಿ ಮಹ್ಮೂದ್ ಗಾವಾನ್ (ನೋಡಿ) ಬೀದರಿನಲ್ಲಿ ಕಟ್ಟಿಸಿದ ಮದರಸದ ಅವಶೇಷ ಈಗಲೂ ಕಾಣಸಿಗುತ್ತದೆ. ಈ ವಿದ್ಯಾಲಯದ ಸುಪ್ರಸಿದ್ಧ ವಿಜ್ಞಾನಿಗಳು ಹಾಗೂ ತತ್ತ್ವಜ್ಞಾನಿಗಳು ಎರಡು ಸಾವಿರ ಅತ್ಯುತ್ತಮ ಗ್ರಂಥಗಳನ್ನು ಸಂಗ್ರಹಿಸಿಟ್ಟಿದ್ದರು. ಬಿಜಾಪುರದ ಸುಲ್ತಾನ ಇಬ್ರಾಹೀಂ ಆದಿಲ್ ಷಾ ತನ್ನ ಅರಮನೆಯ ಪ್ರಾಂಗಣದಲ್ಲಿ ಪ್ರತ್ಯೇಕ ಗ್ರಂಥಾಲಯವನ್ನು ಹೊಂದಿದ್ದನೆಂದು ಅದರಲ್ಲಿ ಪಾರಸೀ ಮತ್ತು ಅರಬ್ಬೀ ಭಾಷೆಗಳ ಅಮೂಲ್ಯ ಗ್ರಂಥಗಳಿದ್ದವೆಂದೂ ತಿಳಿದುಬರುತ್ತದೆ. ಶ್ರೀರಂಗಪಟ್ಟಣದ ಟಿಪ್ಪುಸುಲ್ತಾನ್ ಕೂಡ ಸ್ವತಃ ಗ್ರಂಥ ಪ್ರೇಮಿಯೂ ವಿದ್ಯಾಭಿಮಾನಿಯೂ ಆಗಿದ್ದು ಉತ್ತಮ ಗ್ರಂಥಾಲಯವನ್ನು ಬೆಳೆಸಿದ್ದನೆಂದು ತಿಳಿದುಬರುತ್ತದೆ. ಆತನ ಸಂಗ್ರಹದಲ್ಲಿ 2000ಕ್ಕೂ ಮೀರಿ ಧಾರ್ಮಿಕ ಗ್ರಂಥಗಳಿದ್ದವು. ಸು.9000 ರೂಪಾಯಿ ಬೆಲೆಯುಳ್ಳ, ಔರಂಗಜೇಬನಿಗೆ ಸೇರಿದ ಕುರಾನ್ ಗ್ರಂಥ'ದ ಒಂದು ಪ್ರತಿ ಟಿಪ್ಪುವಿನ ಗ್ರಂಥಾಲಯದಲ್ಲಿತ್ತು. ಶ್ರೀರಂಗಪಟ್ಟಣದ ಪತನಾನಂತರ ಟಿಪ್ಪುವಿನ ಈ ಗ್ರಂಥ ಸಂಗ್ರಹ ಬ್ರಿಟಿಷರ ಕೈವಶವಾಯಿತು. ಇಂದಿಗೂ ಟಿಪ್ಪುವಿನ ಸಂಗ್ರಹದಲ್ಲಿದ್ದ ಅನೇಕ ಗ್ರಂಥಗಳು ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿವೆ.

ಅಕ್ಷರ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಈ ಗ್ರಂಥಭಂಡಾರಗಳು ವಿಶೇಷವಾಗಿ ವ್ಯಕ್ತಿ-ಸಂಸ್ಥೆಗಳ ಸ್ವಂತ ಸ್ವತ್ತಾಗಿದ್ದು ಅದನ್ನು ಸಾರ್ವಜನಿಕ ಗ್ರಂಥಾಲಯಗಳೆಂದು ಹೇಳಲಾಗುವುದಿಲ್ಲ.

ಹೆಚ್ಚಿನ ಗ್ರಂಥಾಲಯಗಳ ಅಭಿವೃದ್ಧಿ, ಉಳಿವು ವ್ಯಕ್ತಿ-ಸಂಸ್ಥೆಗಳ ಆಸಕ್ತಿಯ ಮೇಲಷ್ಟೇ ಅವಲಂಬಿತವಾಗಿದ್ದವು.

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಿಂದ ಸಾರ್ವತ್ರಿಕ ವಿದ್ಯಾಭ್ಯಾಸ ಚೆನ್ನಾಗಿ ಬೇರೂರುತ್ತಿದ್ದಂತೆ ಗ್ರಂಥಾಲಯಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಓದಲು ಅವಕಾಶ ಮಾಡಿಕೊಡುವ ಸಾರ್ವಜನಿಕ ಗ್ರಂಥಾಲಯ ಪದ್ಧತಿ ಬೆಳೆಯಿತು. ಕಿರಿಯರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸಲು ಶಾಲಾ ಗ್ರಂಥಾಲಯಗಳು ಅತ್ಯಂತ ಸಹಕಾರಿಯಾದುವು. ಹೀಗೆ ಬೆಳೆದ ಅಭಿರುಚಿಯನ್ನು ನಿರಂತರ ತಣಿಸಲು ಸಾರ್ವಜನಿಕ ಗ್ರಂಥಾಲಯಗಳು ಅವಶ್ಯವಾದವು. ಸಾರ್ವಜನಿಕರ ಪ್ರಯತ್ನ ಹಾಗೂ ಸರ್ಕಾರದ ಪ್ರೋತ್ಸಾಹದಿಂದ ಗ್ರಂಥಾಲಯಗಳು ಬಹು ಸಂಖ್ಯೆಯಲ್ಲಿ ಹುಟ್ಟಿಕೊಂಡವು.

ಜೆ.ಡಿ.ಇನ್‌ವೇರಾರಿಟಿ ಅವರು 1848ರಲ್ಲಿ ಬೆಳಗಾಂವಿಯಲ್ಲಿ ಪ್ರಾರಂಭಿಸಿದ ಗ್ರಂಥಾಲಯವೇ ಪ್ರಾಯಶಃ ಕರ್ನಾಟಕದ ಮೊಟ್ಟಮೊದಲ ಸಾರ್ವಜನಿಕ ಗ್ರಂಥಾಲಯ. 1870ರ ಸುಮಾರಿಗೆ ಇದೇ ಜಿಲ್ಲೆಯ ಚಿಕ್ಕೋಡಿ, ನಿಪ್ಪಾಣಿ, ಅಥಣಿ, ಖಾನಾಪುರ, ಗೋಕಾಕ, ಸವದತ್ತಿಗಳಲ್ಲೂ ಗ್ರಂಥಾಲಯಗಳು ಸಾರ್ವಜನಿಕರಿಗಾಗಿ ತೆರೆದಿದ್ದವು. ಬಿಜಾಪುರ ಜಿಲ್ಲೆಯ ಬಾಗಲಕೋಟೆ, ಬೀಳಗಿ, ಇಂಡಿ, ಬಿಜಾಪುರ ನಗರ ಮತ್ತು ಮುದ್ದೇಬಿಹಾಳ ಇವೇ ಮುಂತಾದೆಡೆ ಸಾರ್ವಜನಿಕರಿಂದಲೂ ಪುರಸಭೆಯ ಆರ್ಥಿಕ ನೆರವಿನಿಂದಲೂ ಗ್ರಂಥಾಲಯಗಳು ಪ್ರಾರಂಭಗೊಂಡವು. ಉತ್ತರ ಕನ್ನಡದ ಕುಮಟ, ಹಳಿಯಾಳ, ಕಾರವಾರ, ಶಿರಸಿಗಳಲ್ಲೂ ಸ್ಥಳೀಯ ಸಾರ್ವಜನಿಕ ಗ್ರಂಥಾಲಯಗಳು ಸ್ಥಾಪಿತವಾದವು.

ಧಾರವಾಡದಲ್ಲಿ 1854ರಲ್ಲಿ ಜನರೇ ಸೇರಿ ಚಂದಾ ಸಂಗ್ರಹಿಸಿ ಗ್ರಂಥಾಲಯವನ್ನು ಸ್ಥಾಪಿಸಿದರು. ಹತ್ತು ವರ್ಷಗಳ ಬಳಿಕ ಹುಬ್ಬಳ್ಳಿಯ ಜನರೂ ಇಂಥ ಗ್ರಂಥಾಲಯವೊಂದನ್ನು ಸ್ಥಾಪಿಸಿದರು. ಸಾರ್ವಜನಿಕರಿಂದ ವಸೂಲಾದ ಚಂದಾ ಹಣ ಮಾತ್ರವಲ್ಲದೆ ಪುರಸಭೆ ಕೂಡ ಸಹಾಯಧನ ನೀಡಲು ಮುಂದೆ ಬಂದಿತು. ಧಾರವಾಡ, ಹುಬ್ಬಳ್ಳಿ ನಗರಗಳ ಗ್ರಂಥಾಲಯಗಳು ಯಶಸ್ವಿಯಾದುದನ್ನು ನೋಡಿ 1873ರಲ್ಲಿ ರಾಣೆಬೆನ್ನೂರಿನ ಜನ ವಂತಿಗೆಯನ್ನು ಸಂಗ್ರಹಿಸಿ ಆ ಹಣದ ಮೇಲೆ ಶೇಖರವಾಗುವ ಬಡ್ಡಿಯ ಹಣವನ್ನವಲಂಬಿಸಿ ನಡೆಯುವಂತೆ ಗ್ರಂಥಾಲಯವನ್ನು ಪ್ರಾರಂಭಿಸಿದರು. ಹೀಗೆ ಪ್ರಾರಂಭವಾದ ಗ್ರಂಥಾಲಯ ಚಳವಳಿ ಕ್ರಮೇಣ ಮುಂಬಯಿ ಕರ್ನಾಟಕದ ಇತರ ಪ್ರದೇಶಗಳಿಗೂ ವ್ಯಾಪಿಸಿತು. 1876-1882ರವರೆಗೆ ಆರು ವರ್ಷಗಳ ಅವಧಿಯಲ್ಲಿ ಶಿರಹಟ್ಟಿ, ಗದಗ, ಹಾವೇರಿ, ನರಗುಂದ, ನವಲಗುಂದಗಳಲ್ಲೂ ಸಾರ್ವಜನಿಕರೇ ಸೇರಿ ಹಣ ಕೂಡಿಸಿ ಗ್ರಂಥಾಲಯಗಳನ್ನು ಸ್ಥಾಪಿಸಿದರು. ಕುಂದಗೋಳದಲ್ಲಿ ಜಿ.ಎಸ್. ಖೇರೆ ಮತ್ತಿತರರ ಉತ್ಸಾಹ, ಪರಿಶ್ರಮಗಳ ಫಲವಾಗಿ ಡೈಮಂಡ್ ಜ್ಯೂಬಿಲಿ ಗ್ರಂಥಾಲಯ ಪ್ರಾರಂಭಗೊಂಡಿತು.

ಮುಂಬಯಿ ಕರ್ನಾಟಕದಲ್ಲಿ ಗ್ರಂಥಾಲಯ ಚಳವಳಿ ವ್ಯಾಪಕವಾಗಿ ಬೆಳೆಯಿತು. 1890ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘ ಜನತೆಯಲ್ಲಿ ಓದುವ ಅಭಿರುಚಿ ಬೆಳೆಯಲು ಗ್ರಂಥಾಲಯ ಮತ್ತು ವಾಚನಾಲಯಗಳನ್ನು ತೆರೆಯುವುದು, ಸಂಘದ ಪ್ರಕಟಣೆಗಳನ್ನು ಉಚಿತವಾಗಿ ಗ್ರಂಥಾಲಯಗಳಿಗೆ ನೀಡುವುದೇ ಮೊದಲಾದ ಚಟುವಟಿಕೆಗಳಿಂದ ಗ್ರಂಥಾಲಯ ಚಳವಳಿಯಲ್ಲಿ ಪ್ರಮುಖಪಾತ್ರ ವಹಿಸಿತು. ಈ ಚಳವಳಿಗೆ 1914ರಲ್ಲಿ ಪ್ರಾರಂಭಗೊಂಡ ಕರ್ನಾಟಕ ಇತಿಹಾಸ ಸಂಶೋಧನ ಸಂಘದ ಕೊಡುಗೆಯೂ ಗಣನೀಯವಾಗಿದೆ.

1920ರಲ್ಲಿ ದಿವಾನ್ ವಿ.ಪಿ.ಮಾಧವರಾಯರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಸೇರಿದ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನ ಕರ್ನಾಟಕದಾದ್ಯಂತ ವ್ಯವಸ್ಥಿತ ರೀತಿಯಲ್ಲಿ ಗ್ರಂಥಭಂಡಾರಗಳನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ಕೈಗೊಂಡಿತ್ತು. ಆದರೆ ಗಾಂಧೀಜಿಯವರು ಕೈಗೊಂಡ ಅಸಹಕಾರ ಚಳವಳಿ ದೇಶದಾದ್ಯಂತ ವ್ಯಾಪಿಸಿದ ಹಿನ್ನೆಲೆಯಲ್ಲಿ ಸಮ್ಮೇಳನ ಕೈಗೊಂಡ ಈ ನಿರ್ಧಾರ ಕೈಗೂಡುವುದು ದುಸ್ತರವಾಯಿತು. 1924ರಲ್ಲಿ ಬೆಳಗಾಂವಿಯಲ್ಲಿ ಜರುಗಿದ ಅಖಿಲಭಾರತ ಕಾಂಗ್ರೆಸ್ ಸಮ್ಮೇಳನದ ಅಂಗವಾಗಿ ಅಖಿಲಭಾರತ ಗ್ರಂಥಾಲಯ ಸಮ್ಮೇಳನ ಸಿ.ಆರ್.ದಾಸ್ ಅವರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿತು. ಧಾರವಾಡದಲ್ಲಿ (1929, 1948, 1958), ಕುಂದಗೋಳದಲ್ಲಿ (1952) ಹಾಗೂ ಕುಮಟದಲ್ಲಿ(1953) ಅಖಿಲ ಕರ್ನಾಟಕ ಗ್ರಂಥಾಲಯ ಸಮ್ಮೇಳನಗಳು ನಡೆದವು. 1929ರ ಅಖಿಲ ಕರ್ನಾಟಕ ಗ್ರಂಥಾಲಯ ಸಮ್ಮೇಳನದ ಫಲಶ್ರುತಿಯೆಂಬಂತೆ ಕರ್ನಾಟಕ ಗ್ರಂಥಾಲಯ ಸಂಘದ ಉದಯವಾಯಿತು. ಕುಮಟ ಮೊದಲಾದೆಡೆ ಕನ್ನಡ ಪುಸ್ತಕ ಪ್ರದರ್ಶನಗಳನ್ನೇರ್ಪಡಿಸಿತು. 1939ರಲ್ಲಿ ಮುಂಬಯಿ ಸರ್ಕಾರವು ನಿರಕ್ಷರತಾ ನಿವಾರಣೆ ಕಾರ್ಯಕ್ರಮ ಹಮ್ಮಿಕೊಂಡಿತು. ಇದರಿಂದ ಗ್ರಂಥಗಳ ಮುದ್ರಣಕ್ಕೆ ಪ್ರೋತ್ಸಾಹ ದೊರೆಯಿತು. 1948ರಲ್ಲಿ ಕರ್ನಾಟಕ ಪ್ರಾದೇಶಿಕ ಗ್ರಂಥಾಲಯ ತೆರೆಯಲ್ಪಟ್ಟು ಅದರ ಜವಾಬ್ದಾರಿಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘ ಹೊತ್ತುಕೊಂಡಿತು. ಈ ಗ್ರಂಥಾಲಯದಲ್ಲಿ ಅತ್ಯಪೂರ್ವ ಗ್ರಂಥಸಂಗ್ರಹವಿತ್ತು. ಇದೊಂದು ಕಾಪಿರೈಟ್ ಗ್ರಂಥಾಲಯ (1967ರಲ್ಲಿ ಈ ಗ್ರಂಥಾಲಯದ 17,000 ಗ್ರಂಥಗಳು ಬೆಂಗಳೂರಿನ ಕೇಂದ್ರ ಗ್ರಂಥಾಲಯಕ್ಕೂ ಉಳಿದವು ಧಾರವಾಡ ನಗರ ಕೇಂದ್ರ ಗ್ರಂಥಾಲಯಕ್ಕೂ ವರ್ಗಾವಣೆಗೊಂಡವು).

ಹೈದರಾಬಾದ್ ಕರ್ನಾಟಕದಲ್ಲಿ ಪರ್ಷಿಯನ್ ಭಾಷೆಗೆ ಅಧಿಕೃತ ಸ್ಥಾನಮಾನವಿದ್ದುದರಿಂದ ಕನ್ನಡ ಹಿನ್ನಡೆ ಅನುಭವಿಸಿತು. 1955ರ ಹೈದರಾಬಾದ್ ಗ್ರಂಥಾಲಯ ಅಧಿನಿಯಮ ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿಗೆ ಇಂಬುಕೊಟ್ಟರೂ ಏಕೀಕರಣದವರೆಗೂ ಗ್ರಂಥಾಲಯಗಳು ಶಾಲಾ ಕಾಲೇಜುಗಳಿಗೆ ಸೀಮಿತವಾದವು. 1799ರಿಂದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳು ಮದರಾಸು ಪ್ರಾಂತ್ಯದ ಭಾಗವಾಗಿದ್ದುದರಿಂದ ಇಲ್ಲಿ ಪಾಶ್ಚಾತ್ಯ ಶಿಕ್ಷಣ ಕ್ರಮಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು. 1948ರಲ್ಲಿ ಜಾರಿಗೆ ಬಂದ ಮದರಾಸು ಗ್ರಂಥಾಲಯ ಅಧಿನಿಯಮ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಬೆಳೆಯಲು ಕಾರಣವಾಯಿತು.

ಮಂಗಳೂರಿನ ಅಲೋಸಿಯಸ್ ಕಾಲೇಜು, ಗವರ್ನಮೆಂಟ್ ಕಾಲೇಜು, ಉಡುಪಿಯ ಮಹಾತ್ಮಗಾಂಧೀ ಮೆಮೋರಿಯಲ್ ಕಾಲೇಜು - ಇವು ಬಹಳ ಕಾಲದಿಂದಲೂ ಕ್ರಮಬದ್ಧವಾಗಿ ಬೆಳೆದುಬಂದುದರಿಂದ ಉತ್ತಮ ಗ್ರಂಥಭಂಡಾರಗಳನ್ನು ಪಡೆದಿವೆ. ಉಡುಪಿಯ ಕರ್ನಾಟಕ ಸಂಘ, ಕಲಾವೃಂದಗಳು ಉತ್ತಮ ಗ್ರಂಥಗಳನ್ನೂ ಹೊಂದಿವೆ. ಕಲಾವೃಂದ ಸಾರ್ವಜನಿಕರಿಂದ ದೇಣಿಗೆಯನ್ನು ಸಂಗ್ರಹಿಸಿ ಸ್ವಂತ ಗ್ರಂಥಾಲಯವೊಂದನ್ನು ಮುಖ್ಯವಾಗಿ ಮಹಿಳೆಯರ ಮತ್ತು ಮಕ್ಕಳ ಬಿಡುವಿನವೇಳೆಯ ಸದುಪಯೋಗಕ್ಕಾಗಿ ತೆರೆದಿದೆ. ಮಹಾತ್ಮ ಗಾಂಧೀ ಕಾಲೇಜಿನ ಗ್ರಂಥಾಲಯ ವಿಶಾಲವಾದ ಕಟ್ಟಡವನ್ನು ಹೊಂದಿದ್ದು ಎಲ್ಲಾ ವಿಷಯ ಕುರಿತು ಸಾಕಷ್ಟು ಗ್ರಂಥಸಂಗ್ರಹವನ್ನು ಹೊಂದಿದೆ. ರಾಷ್ಟ್ರಕವಿ ದಿವಂಗತ ಗೋವಿಂದ ಪೈ ಅವರ 7000ಕ್ಕೂ ಮಿಕ್ಕಿದ ಗ್ರಂಥಗಳ ಸಂಗ್ರಹ ಈಗ ಈ ಕಾಲೇಜಿನಲ್ಲಿ ಸಂಶೋಧಕರಿಗಾಗಿ ಲಭ್ಯವಿದೆ. ಯಕ್ಷಗಾನ, ಕಲೆ ಹಾಗೂ ಸಾಹಿತ್ಯ ವಿಚಾರಗಳಲ್ಲಿ ಅಮೂಲ್ಯ ಗ್ರಂಥಗಳು ಈ ಕಾಲೇಜಿನ ಸಂಗ್ರಹದಲ್ಲಿವೆ. 1970ರಲ್ಲಿ ಉಡುಪಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಗ್ರಂಥಾಲಯ ಸಂಘ ಪ್ರಾರಂಭಗೊಂಡಂದಿನಿಂದ ಕು.ಶಿ.ಹರಿದಾಸಭಟ್ಟರ ಮುಂದಾಳುತನದಲ್ಲಿ ಆಗಾಗ್ಗೆ ವಿಚಾರಗೋಷ್ಠಿಗಳನ್ನೂ ಪುಸ್ತಕ ಮಾರಾಟ ಹಾಗೂ ಪ್ರದರ್ಶನಗಳನ್ನೂ ಏರ್ಪಡಿಸಿ ಗ್ರಂಥಾಲಯಗಳ ವೈವಿಧ್ಯಮಯ ಚಟುವಟಿಕೆಗಳ ಬಗೆಗೆ ಮಾಹಿತಿಯೊದಗಿಸಿ ಈ ಭಾಗದ ಜನರಲ್ಲಿ ಓದುವ ಹವ್ಯಾಸ ಮತ್ತು ಚಿಂತನಶಕ್ತಿ ಬೆಳೆಯುವಂತೆ ಮಾಡಿತು. ಮಂಗಳೂರಿನ ಕಾರ್ನಾಡು ಸದಾಶಿವರಾವ್ ಸ್ಮಾರಕ ಗ್ರಂಥಾಲಯವೂ (ಈಗ ಜಿಲ್ಲಾ ಕೇಂದ್ರ ಗ್ರಂಥಾಲಯ) ಸಾರ್ವಜನಿಕರಿಗೆ ಅತ್ಯುಪಯುಕ್ತವಾದ ಗ್ರಂಥಾಲಯವೆಂದು ಪರಿಗಣಿಸಲ್ಪಟ್ಟಿದೆ. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ ಕ್ಲಬ್ ಗ್ರಂಥಾಲಯಗಳ ಮತ್ತು ವಾಚನಾಲಯಗಳ ಸ್ಥಾಪನೆಗೆ ಶ್ರಮಿಸಿತು. ಅಲ್ಲಿ 1954ರಲ್ಲಿ ಮಹಾತ್ಮಗಾಂಧೀ ಸಾರ್ವಜನಿಕ ಗ್ರಂಥಾಲಯ ಪ್ರಾರಂಭವಾಯಿತು.

ಹಿಂದಿನ ಮೈಸೂರು ಸಂಸ್ಥಾನದ ಭಾಗದಲ್ಲಿ ಸಾರ್ವಜನಿಕ ಶೈಕ್ಷಣಿಕ ಚಟುವಟಿಕೆಗಳು ಚೆನ್ನಾಗಿ ಬೆಳೆದರೂ ಗ್ರಂಥಾಲಯಗಳ ಮಹತ್ವದ ಅರಿವನ್ನು ತಂದುಕೊಟ್ಟವರು ಸರ್ ಎಂ.ವಿಶ್ವೇಶ್ವರಯ್ಯನವರು. 1913ರಲ್ಲಿ ಅವರು ರಾಜ್ಯದಲ್ಲಿ ರಚನಾತ್ಮಕವಾಗಿ ಗ್ರಂಥಾಲಯ ಚಳವಳಿಯನ್ನು ಪ್ರಾರಂಭಿಸುವ ಶಿಕ್ಷಣ ಸಮಿತಿಯ ಶಿಫಾರಸುಗಳನ್ನು ಸರ್ಕಾರದ ಗಮನಕ್ಕೆ ತಂದರು. ಸಮಿತಿಯ ಕೆಲವು ಶಿಫಾರಸುಗಳು ಇಂತಿವೆ: 1. ರಾಜ್ಯದಾದ್ಯಂತ ವ್ಯವಸ್ಥಿತ

ಗ್ರಂಥಾಲಯ ಜಾಲವೊಂದನ್ನು ನಿರ್ಮಿಸುವುದು ಮತ್ತು ಗ್ರಂಥಾಲಯ ವ್ಯವಸ್ಥೆಯನ್ನು ಬಲಗೊಳಿಸಲು, ಪ್ರತ್ಯೇಕವಾದ ಸಾರ್ವಜನಿಕ ಗ್ರಂಥಾಲಯ ವಿಭಾಗವನ್ನು ತೆರೆಯುವುದು 2 ರಾಜ್ಯದ ರಾಜಧಾನಿಯಲ್ಲಿ ಕೇಂದ್ರ ಗ್ರಂಥಾಲಯ ನೆಲೆಗೊಂಡು ಅದರ ಆಶ್ರಯದಲ್ಲಿ ಜಿಲ್ಲೆ, ತಾಲ್ಲೂಕುಗಳಲ್ಲಿ ಶಾಖೆಗಳನ್ನು ವಿಸ್ತರಿಸುವುದು 3 ಆಗ ಅಸ್ತಿತ್ವದಲ್ಲಿದ್ದ ಸಾರ್ವಜನಿಕ ಗ್ರಂಥಾಲಯಗಳನ್ನು ಸ್ಥಳೀಯ ಗ್ರಂಥವಿತರಣಾ ಕೇಂದ್ರಗಳಾಗಿ ಮಾರ್ಪಡಿಸುವುದು. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಶಿಕ್ಷಣ ಸಮಿತಿಯ ಶಿಫಾರಸುಗಳು ಸರ್ಕಾರದಿಂದ ಅಂಗೀಕರಿಸಲ್ಪಟ್ಟವು. 1914ರಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಪ್ರಾರಂಭಗೊಂಡವು. ಅಂದಿನ ಮೈಸೂರು ಸಂಸ್ಥಾನದ ಯುವರಾಜರಾಗಿದ್ದ ನರಸಿಂಹರಾಜ ಒಡೆಯರಿಂದ ಮೈಸೂರು ನಗರದ ಸಾರ್ವಜನಿಕ ಗ್ರಂಥಾಲಯದ ಪ್ರಾರಂಭೋತ್ಸವ ಜರುಗಿತು (20-7-1914).ಜನರಿಗಾಗಿ ಉಚಿತ ವಾಚನಾಲಯ ಹಾಗೂ ಪುಸ್ತಕಗಳನ್ನು ಇಲ್ಲಿ ಒದಗಿಸಲಾಯಿತು. ಈ ಗ್ರಂಥಾಲಯಗಳು ವ್ಯವಸ್ಥಿತವಾಗಿ ನಡೆಯಲು ಸ್ಥಳೀಯ ಗ್ರಂಥಾಲಯ ಸಮಿತಿಗಳನ್ನು ನೇಮಿಸಿ ಪ್ರತಿವರ್ಷ ಧನಸಹಾಯವನ್ನೂ ನೀಡಿತು. ನಗರ ಮಿತಿಯಿಂದ ದೂರ ವಾಸಿಸುವವರಿಗಾಗಿ ಪುಸ್ತಕಗಳನ್ನು ಒದಗಿಸಲು ವಾಹನ ಸೌಕರ್ಯವನ್ನೇರ್ಪಡಿಸಬೇಕೆಂದು ಸಮಿತಿ ನಿರ್ಧಾರ ಮಾಡಿತು.

ಖ್ಯಾತಿವೆತ್ತ ವಿದ್ಯಾಸಂಸ್ಥೆಗಳಾದ ಮೈಸೂರಿನ ಮಹಾರಾಜ ಕಾಲೇಜು ಹಾಗೂ ಬೆಂಗಳೂರಿನ ಸೆಂಟ್ರಲ್ ಕಾಲೇಜು, 1916ರಲ್ಲಿ ಸ್ಥಾಪನೆಯಾದ ಮೈಸೂರು ವಿಶ್ವವಿದ್ಯಾನಿಲಯ, 1911ರಲ್ಲಿ ವೈಜ್ಞಾನಿಕ ವಿಷಯಗಳ ಶಿಕ್ಷಣಕ್ಕಾಗಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ಭಾರತೀಯ ವಿಜ್ಞಾನಸಂಸ್ಥೆ, ಇವುಗಳಲ್ಲಿ ಪ್ರತ್ಯೇಕ ಗ್ರಂಥಾಲಯಗಳು ಬೆಳೆದು ಉನ್ನತ ಶಿಕ್ಷಣದ ಸಾಧನೆಯಲ್ಲಿ ಗ್ರಂಥಗಳ ಆವಶ್ಯಕತೆಯನ್ನು ಪೂರೈಸುವ ಸಂಸ್ಥೆಗಳಾಗಿ ರೂಪುಗೊಂಡವು.

ಕರ್ನಾಟಕದ ಗ್ರಂಥಾಲಯ ಚಳವಳಿಯ ಇತಿಹಾಸದಲ್ಲಿ ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿಯ ಪಾತ್ರ ಹಿರಿದು. 1941ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ವಿದ್ಯಾರ್ಥಿಗಳ ಸಂಘದಿಂದ ಸ್ಥಾಪಿತವಾದ ವಯಸ್ಕರ ಅಕ್ಷರ ಪ್ರಚಾರ ಸಮಿತಿಯಿಂದ ಬೆಳೆದು ಮಹತ್ವಪೂರ್ಣ ಕೆಲಸಗಳನ್ನು ಮಾಡುತ್ತಿರುವ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತರು ಮತ್ತು ಅಲ್ಪಸ್ವಲ್ಪ ಓದುಬರೆಹ ಕಲಿತವರು ತಮ್ಮ ಜ್ಞಾನಾಸಕ್ತಿಯನ್ನು ಮುಂದುವರಿಸಲು ಸಾಧ್ಯವಾಗುವಂತೆ ಜಿಲ್ಲೆಗೊಂದು ಕೇಂದ್ರ ಗ್ರಂಥಾಲಯ ಮತ್ತು ಉಚಿತ ವಾಚನಾಲಯವನ್ನೂ ಸ್ಥಾಪಿಸಿತು. ಗ್ರಾಮ ಪ್ರದೇಶಗಳಲ್ಲಿ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿರುವ ವಯಸ್ಕರ ಶಿಕ್ಷಣ ಸಮಿತಿ ರಾಜ್ಯದ ಗ್ರಾಮ ಗ್ರಂಥಾಲಯಗಳ ಬೆಳವಣಿಗೆಗೆ ನಾಂದಿ ಹಾಕಿತು. 1941ರಲ್ಲಿ ಮಂಡ್ಯ ಜಿಲ್ಲೆಯ ಸಂತೆಬಾಚಹಳ್ಳಿಯಲ್ಲಿ ಮೊದಲ ಗ್ರಾಮ ಗ್ರಂಥಾಲಯ ಪ್ರಾರಂಭವಾಯಿತು. 1954ರ ಹೊತ್ತಿಗೆ ರಾಜ್ಯದಾದ್ಯಂತ 2156 ಗ್ರಾಮ ಗ್ರಂಥಾಲಯಗಳೂ 10 ಕೇಂದ್ರ ಗ್ರಂಥಾಲಯಗಳೂ ಕೆಲಸ ಮಾಡುತ್ತಿದ್ದುವು. 2002ರಲ್ಲಿನ ಅಂಕಿ ಅಂಶಗಳು ಹೀಗಿವೆ: 27 ಜಿಲ್ಲಾ ಕೇಂದ್ರ ಗ್ರಂಥಾಲಯಗಳು, 16 ನಗರ ಕೇಂದ್ರ ಗ್ರಂಥಾಲಯಗಳು, 2660 ಗ್ರಾಮೀಣ ಪಂಚಾಯಿತಿ ಗ್ರಂಥಾಲಯಗಳು ಮತ್ತು 154 ಪುಸ್ತಕ ವಿತರಣಾ ಕೇಂದ್ರಗಳು ಹಾಗೂ 11 ಸಂಚಾರಿ ಗ್ರಂಥಾಲಯಗಳು ಅಸ್ತಿತ್ವದಲ್ಲಿವೆ.

**ಗ್ರಂಥಾಲಯ ಅಧಿನಿಯಮ :** 1957ರಲ್ಲಿ ಕೇಂದ್ರ ಸರ್ಕಾರ ನೇಮಿಸಿದ ಸಮಿತಿ ರಾಷ್ಟ್ರಮಟ್ಟದಲ್ಲಿ ಗ್ರಂಥಾಲಯ ಚಳವಳಿ ಪ್ರತ್ಯೇಕವಾಗಿ ಬೆಳೆಯಲು ಒಂದು ಸಮಗ್ರ ಕಾಯಿದೆಯ ಅಗತ್ಯವಿದೆ ಎಂದು ಶಿಫಾರಸು ಮಾಡಿತು. ಇದರ ಅನ್ವಯ ವಿವಿಧ ರಾಜ್ಯಗಳು ತಮ್ಮದೇ ಆದ ಕಾಯಿದೆಗಳನ್ನು ರಚಿಸಿದವು. ಪ್ರಸಿದ್ಧ ಗ್ರಂಥಾಲಯ ತಜ್ಞರಾದ ರಂಗನಾಥನ್ ಅವರ ಸಲಹೆಗಳ ಮೇರೆಗೆ ರಚಿತವಾದ ಸಮಿತಿ ರಾಜ್ಯಕ್ಕೊಂದು ಸಾರ್ವಜನಿಕ ಗ್ರಂಥಾಲಯ ಅಧಿನಿಯಮದ ರೂಪರೇಷೆಯನ್ನು ತಯಾರಿಸಿತು. ಇದಕ್ಕೆ 1965ರಲ್ಲಿ ಸರ್ಕಾರದ ಮನ್ನಣೆಯೂ ದೊರೆತು 1966 ಏಪ್ರಿಲ್ ತಿಂಗಳ ಒಂದನೆಯ ತಾರೀಖಿನಿಂದ ಮೈಸೂರು (ಕರ್ನಾಟಕ) ರಾಜ್ಯದಲ್ಲಿ ಅನುಷ್ಠಾನಕ್ಕೆ ಬಂದಿತು. ರಾಜ್ಯದಲ್ಲಿನ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ವ್ಯಾಪಕವಾದ ಗ್ರಂಥಾಲಯ ಸೇವೆಯನ್ನು ಉಚಿತವಾಗಿ ಸರ್ವರಿಗೂ ಒದಗಿಸುವುದೇ ಈ ಅಧಿನಿಯಮದ ಪರಮಗುರಿ. ರಾಜಧಾನಿ ಬೆಂಗಳೂರಿನಲ್ಲಿ ಕೇಂದ್ರ ಗ್ರಂಥಾಲಯ, ಪ್ರತಿ ನಗರದಲ್ಲೂ ನಗರ ಕೇಂದ್ರ ಗ್ರಂಥಾಲಯ ಮತ್ತದರ ಶಾಖೆಗಳು, ಜಿಲ್ಲೆಗೊಂದರಂತೆ ಕೇಂದ್ರ ಗ್ರಂಥಾಲಯ ಹಾಗೂ ಅದರ ಶಾಖೆಗಳೂ ಸೇರಿ ಸಮಗ್ರ ಕರ್ನಾಟಕಕ್ಕೆ ಸಾರ್ವಜನಿಕ ಗ್ರಂಥಾಲಯಗಳ ಸಂಘಟಿತ ರಚನಾ ವ್ಯವಸ್ಥೆಗೆ ಅಧಿನಿಯಮದಲ್ಲಿ ಅವಕಾಶ ನೀಡಲಾಯಿತು. ಕರ್ನಾಟಕ ರಾಜ್ಯದ ಸಾರ್ವಜನಿಕ ಗ್ರಂಥಾಲಯದ ವ್ಯವಸ್ಥೆಯನ್ನು ಈ ಮುಂದಿನಂತೆ ರೂಪಿಸಲಾಯಿತು: ರಾಜ್ಯ ಕೇಂದ್ರ ಗ್ರಂಥಾಲಯ, ನಗರ ಕೇಂದ್ರ ಗ್ರಂಥಾಲಯ, ಜಿಲ್ಲಾ ಕೇಂದ್ರ ಗ್ರಂಥಾಲಯ, ತಾಲ್ಲೂಕು ಗ್ರಂಥಾಲಯ, ಗ್ರಾಮ ಗ್ರಂಥಾಲಯ. ಕೇಂದ್ರ ಗ್ರಂಥಾಲಯದ ನಿರ್ವಹಣಾ ವೆಚ್ಚವನ್ನು ಸರ್ಕಾರವೇ ಭರಿಸುವುದು. ಆಡಳಿತ ಸುಸೂತ್ರವಾಗುವಂತೆ ರಾಜ್ಯ ಗ್ರಂಥಾಲಯ ಪ್ರಾಧಿಕಾರವೊಂದನ್ನು ನಿಯಮಿಸಲಾಯಿತು. ನಗರ ಹಾಗೂ ಜಿಲ್ಲೆಗಳ ಕೇಂದ್ರ ಗ್ರಂಥಾಲಯ ಹಾಗೂ ಅವುಗಳ ಆಡಳಿತಕ್ಕಾಗಿಯೂ ಪ್ರತ್ಯೇಕ ಪ್ರಾಧಿಕಾರ ವರ್ಗಗಳಿದ್ದು ಪ್ರತ್ಯೇಕ ಆರ್ಥಿಕ ಸಂಪನ್ಮೂಲಗಳೂ ಒದಗುವಂತೆ ಮಾಡಲಾಗುತ್ತಿದೆ. ಗ್ರಂಥಾಲಯ ತೆರಿಗೆಯನ್ನು ಕಂದಾಯದ ಭಾಗವಾಗಿ ಸೇರಿಸಲಾಗಿದೆ.

ಮೈಸೂರು ಸಾರ್ವಜನಿಕ ಗ್ರಂಥಾಲಯ ಅಧಿನಿಯಮ ಜಾರಿಯಾದೊಡನೆ ಬೆಂಗಳೂರಿನ ಕೆ.ಶೇಷಾದ್ರಿ ಅಯ್ಯರ್ ಸ್ಮಾರಕ ಕಟ್ಟಡವನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಅದನ್ನು ರಾಜ್ಯ ಕೇಂದ್ರ ಗ್ರಂಥಾಲಯವಾಗಿ ಮಾರ್ಪಡಿಸಿತು. ಹೀಗೆ ಕ್ರಮೇಣ ಮೈಸೂರಿನ ಸರ್.ಎಂ. ವಿಶ್ವೇಶ್ವರಯ್ಯ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಕಟ್ಟಡದಲ್ಲಿದ್ದ ಸಾರ್ವಜನಿಕ ಗ್ರಂಥಾಲಯ, ಮಡಿಕೇರಿಯ ಮಹಾತ್ಮ ಗಾಂಧೀ ಸಾರ್ವಜನಿಕ ಗ್ರಂಥಾಲಯ ಮತ್ತು ಮಂಗಳೂರಿನ ಕಾರ್ನಾಡು ಸದಾಶಿವರಾವ್ ಸ್ಮಾರಕ ಗ್ರಂಥಾಲಯ ಇವುಗಳನ್ನು ತೆಗೆದುಕೊಂಡು ಅನುಕ್ರಮವಾಗಿ ನಗರ ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯಗಳೆಂದು ಸಾರಿತು. ಮಾತ್ರವಲ್ಲದೆ ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ತುಮಕೂರು, ಕೋಲಾರ (ಚಿಂತಾಮಣಿ), ಬಿಜಾಪುರ, ಗುಲ್ಬರ್ಗ, ಬೆಳಗಾಂವಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲೂ ಕ್ರಮೇಣ ಜಿಲ್ಲಾ ಗ್ರಂಥಾಲಯಗಳು ಆರಂಭಗೊಂಡು ಶಾಖೆಗಳು ಹಾಗೂ ಗ್ರಂಥ ವಿತರಣ ಕೇಂದ್ರಗಳನ್ನು ಅಲ್ಲಲ್ಲಿ ಸ್ಥಾಪಿಸಿ ಗ್ರಂಥಾಲಯ ಚಳವಳಿ ಸಮಗ್ರ ಕರ್ನಾಟಕಕ್ಕೆ ಹಬ್ಬುವಂತೆ ನೋಡಿಕೊಳ್ಳಲಾಗಿದೆ. ಈಗ ಮಂಡಲ ಗ್ರಂಥಾಲಯಗಳು, ಗ್ರಾಮ ಗ್ರಂಥಾಲಯಗಳು ವ್ಯಾಪಕವಾಗಿ ಅಸ್ತಿತ್ವಕ್ಕೆ ಬಂದಿವೆ.

ರೋಗಿಗಳಿಗೆ ಮತ್ತು ಕೈದಿಗಳಿಗೆ ಚಿತ್ತಶಾಂತಿ, ಸನ್ಮಾರ್ಗ ಪ್ರವೃತ್ತಿಯನ್ನುಂಟುಮಾಡಲು ಆಸ್ಪತ್ರೆಗಳಲ್ಲೂ ಜೈಲುಗಳಲ್ಲೂ ಗ್ರಂಥ ಭಂಡಾರಗಳನ್ನು ತೆರೆಯಲಾಗಿದೆ. ನಗರದಿಂದ ದೂರದಲ್ಲಿರುವ ಹಳ್ಳಿಗಳಿಗೆ ಪುಸ್ತಕಗಳನ್ನು ಕೊಂಡೊಯ್ದು ಓದುಗರಿಗೆ ಮುಟ್ಟಿಸಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸುವ ಸಲುವಾಗಿ ಮೈಸೂರಿನಲ್ಲಿ ಮೋಟಾರು ವಾಹನವನ್ನು ಬಳಸಿ ಸಂಚಾರಿ ಗ್ರಂಥಾಲಯವನ್ನು ಪ್ರಾರಂಭಿಸಲಾಗಿದೆ (1975).

ಭಾರತದಲ್ಲಿ ಗ್ರಂಥಾಲಯ ಬೆಳವಣಿಗೆಗೆ ಉತ್ತೇಜನ ನೀಡುವುದಕ್ಕೋಸ್ಕರವಾಗಿ ರಾಜಾರಾಮ್ ಮೋಹನರಾಯ್ ಗ್ರಂಥಾಲಯ ಪ್ರತಿಷ್ಠಾನ ಎಂಬ ಸ್ವಾಯತ್ತ ಸಂಸ್ಥೆಯನ್ನು 1972ರಲ್ಲಿ ಸ್ಥಾಪಿಸಲಾಯಿತು. ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಿ ಈ ಪ್ರತಿಷ್ಠಾನದ ಅಧ್ಯಕ್ಷರು. ಜಿಲ್ಲಾ ಗ್ರಂಥಾಲಯಗಳನ್ನು ಕೇಂದ್ರವಾಗಿರಿಸಿಕೊಂಡು ಗ್ರಂಥಾಲಯ ಜಾಲಗಳನ್ನು ನಿರ್ಮಿಸಿ ತನ್ಮೂಲಕ ಪ್ರತಿಯೊಬ್ಬರಿಗೂ ಗ್ರಂಥಾಲಯ ಸೌಲಭ್ಯ ದೊರಕಿಸಿಕೊಡುವುದು ಇದರ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ದೇಶದ ಎಲ್ಲ ಜಿಲ್ಲೆಗಳೂ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತವೆ. ರಾಜ್ಯ ಗ್ರಂಥಾಲಯ ಪ್ರಾಧಿಕಾರ ಈ ಪ್ರತಿಷ್ಠಾನದ ಸಂಪನ್ಮೂಲದಿಂದ ಗ್ರಂಥಗಳನ್ನು ಖರೀದಿಸಿ ವಿವಿಧ ಗ್ರಂಥಾಲಯಗಳಿಗೆ ವಿತರಿಸುವ ಯೋಜನೆ ಜಾರಿಯಲ್ಲಿದೆ. ಈ ಪ್ರತಿಷ್ಠಾನ ಕರ್ನಾಟಕ ರಾಜ್ಯದಲ್ಲಿ ಸು.5-10 ಸಾವಿರ ಜನಸಂಖ್ಯೆಯಿರುವ ಗ್ರಾಮಪ್ರದೇಶಗಳಲ್ಲಿ ಮಂಡಲ ಗ್ರಂಥಾಲಯ ಸ್ಥಾಪನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಆರ್ಥಿಕ ಸಹಾಯ ನೀಡಲು ಮುಂದೆ ಬಂದಿದೆ. ರಾಜ್ಯದ ನೂರಾರು ಗ್ರಂಥಾಲಯ ಘಟಕಗಳ ನಿರ್ವಹಣೆಗಾಗಿ ಪ್ರತಿಷ್ಠಾನ ತನ್ನ ನಿಧಿಯಿಂದಲೇ ಧನಸಹಾಯವನ್ನು ಮಾಡುತ್ತಿದೆ.

**ವಿಶಿಷ್ಟ ಗ್ರಂಥಾಲಯಗಳು :** ಜನಸಾಮಾನ್ಯರಲ್ಲಿ ಓದುವ ಪ್ರವೃತ್ತಿಯನ್ನು ಬೆಳೆಸಲು ಅವರಿಗೆ ಸಾಮಾನ್ಯ ಜ್ಞಾನವನ್ನು ನೀಡಲು ಸಾರ್ವಜನಿಕ ಗ್ರಂಥಾಲಯಗಳು ಇದ್ದಂತೆ ಶುದ್ಧ ವಿಜ್ಞಾನ, ತಾಂತ್ರಿಕ ವಿಜ್ಞಾನ, ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಜ್ಞಾನದ ನಾನಾ ವಿಭಾಗಗಳಲ್ಲಿ ವಿಶೇಷ ಜ್ಞಾನವನ್ನು ಪಡೆದವರಿಗೂ ಸಂಶೋಧನಾಸಕ್ತರಿಗೂ ಅವಶ್ಯವಾಗಿ ವಿಶಿಷ್ಟ ಗ್ರಂಥಾಲಯಗಳಿರಬೇಕು. ಕೈಗಾರಿಕಾ ಸಂಸ್ಥೆಗಳು, ಬೃಹತ್ ಸಂಶೋಧನ ಕೇಂದ್ರಗಳು, ಪ್ರಯೋಗಶಾಲೆಗಳು, ಸರ್ಕಾರದ ಕಾರ್ಯಾಂಗ ಹಾಗೂ ಶಾಸಕಾಂಗಗಳು, ಕೇಂದ್ರ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ವೈಜ್ಞಾನಿಕ ಸಂಸ್ಥೆಗಳು ಇವೇ ಮೊದಲಾದುವುಗಳ ಗ್ರಂಥಾಲಯಗಳು ವಿಶಿಷ್ಟ ಗ್ರಂಥಾಲಯಗಳೆಂದು ಕರೆಯಲ್ಪಡುತ್ತಿವೆ. ಮುಖ್ಯವಾಗಿ ಇವುಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. 1 ಕೈಗಾರಿಕಾ ಗ್ರಂಥಾಲಯಗಳು ಮತ್ತು 2 ಸಂಶೋಧನ ಗ್ರಂಥಾಲಯಗಳು.

ನಗರ ಕೇಂದ್ರಗ್ರಂಥಾಲಯ, ಮೈಸೂರು

ಬೆಂಗಳೂರಿನಲ್ಲಿ ಹಿಂದೂಸ್ಥಾನ್ ಏರೋನಾಟಿಕ್ಸ್, ಹಿಂದೂಸ್ಥಾನ ಮಷಿನ್ ಟೂಲ್ಸ್ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಈ ಮೂರು ಸಂಸ್ಥೆಗಳಲ್ಲಿ ವಿಶೇಷ ಗ್ರಂಥಾಲಯಗಳಿವೆ. 1965ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭಗೊಂಡ ಸೆಂಟ್ರಲ್ ಮಷಿನ್ ಟೂಲ್ಸ್ ಇನ್‌ಸ್ಟಿಟ್ಯೂಟಿನಲ್ಲಿ ಎಂಜಿನಿಯರಿಂಗ್ ಕೈಗಾರಿಕಾ ಸಂಸ್ಥೆಗಳಿಗೆ ಉತ್ಪಾದನ ತಂತ್ರ ಹಾಗೂ ಯಂತ್ರಸಾಧನಗಳ ಕುರಿತು ತಿಳಿವಳಿಕೆ ಕೊಡುವ ಪುಸ್ತಕಗಳು, ನಿಯತಕಾಲಿಕೆಗಳು, ವರದಿಗಳು, ಮಾನದಂಡಗಳು, ಹಕ್ಕುಸ್ವಾಮ್ಯಗಳು, ವಾಣಿಜ್ಯ ವಿಷಯಿಕ ವಿವರಪಟ್ಟಿಗಳು, ಇವುಗಳ ದೊಡ್ಡ ಸಂಗ್ರಹವಿರುವ ಗ್ರಂಥಾಲಯ ಇದೆ. ರಾಜ್ಯದ ಕೈಗಾರಿಕಾ ಸಂಸ್ಥೆಗಳಿಗೂ ಸಂಶೋಧಕರಿಗೂ ಯಂತ್ರೋಪಕರಣಗಳ ಕುರಿತು ಮಾಹಿತಿಯನ್ನೊದಗಿಸಲು ಈ ಸಂಸ್ಥೆ ಪ್ರಲೇಖನ ಸೇವೆಯನ್ನು ಒದಗಿಸುತ್ತದೆ. ತಾಂತ್ರಿಕ ವಿವರಣೆಯನ್ನು ಸ್ಥೂಲವಾಗಿ ನೀಡುವ ಪ್ರಕಟಣೆಗಳನ್ನು ತನ್ನ ಸ್ವಂತ ನಿಯತಕಾಲಿಕೆಗಳ ಮೂಲಕ ಪ್ರಕಟಿಸುತ್ತದೆ. ಸಾರಾಂಶ ಪ್ರಕಟಣೆ, ವಿಷಯಸೂಚಿಗಳನ್ನು ತಯಾರಿಸುವುದು ಇವೇ ಮೊದಲಾದ ಸೇವೆಗಳನ್ನೂ ಈ ಗ್ರಂಥಾಲಯ ಒದಗಿಸುತ್ತದೆ. ಮಷೀನ್ ಟೂಲ್ಸ್‌ಗಳನ್ನು ಕುರಿತು ರಷ್ಯನ್, ಜರ್ಮನ್, ಫ್ರೆಂಚ್ ಹಾಗೂ ಇತರ ವಿದೇಶಿ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ವರದಿಗಳನ್ನೂ ಇಂಗ್ಲಿಷ್ ಭಾಷೆಗೆ ಅನುವಾದಗೊಳಿಸುತ್ತದೆ. ಕೇಂದ್ರೀಯ ಆಹಾರ ಸಂಶೋಧನ ಸಂಸ್ಥೆ, ರಾಷ್ಟ್ರೀಯ ವಾಯುಯಾನ ವಿಜ್ಞಾನ ಸಂಸ್ಥೆ, ಮೈಸೂರು ಶಾಸಕಾಂಗದ ಗ್ರಂಥಾಲಯ, ಡಿಫೆನ್ಸ್ ಫುಡ್ ರೀಸರ್ಚ್ ಲ್ಯಾಬೋರೇಟರಿ ಗ್ರಂಥಾಲಯ, ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ -ಇವು ಪ್ರಮುಖವಾದ ಸಂಶೋಧನಾತ್ಮಕ ಗ್ರಂಥಾಲಯಗಳು.

ಪ್ರೌಢ ವ್ಯಾಸಂಗ ಹಾಗೂ ಸಂಶೋಧನ ಗ್ರಂಥಾಲಯಗಳ ಪೈಕಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಗ್ರಂಥಾಲಯವನ್ನು ಹೆಸರಿಸಬಹುದು. ಕೈಗಾರಿಕಾ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಮುನ್ನಡೆಯಲು ಸಹಕಾರಿಯಾಗುವಂತೆಯೂ ಉನ್ನತ ಮಟ್ಟದ ಸಂಶೋಧನೆಗಳನ್ನು ನಡೆಸಲು ಸಾಧ್ಯವಾಗುವಂತೆಯೂ ಈ ಸಂಸ್ಥೆ ಸ್ಥಾಪಿತವಾಯಿತು (1909). ಇದರೊಂದಿಗೆ ಸುಸಜ್ಜಿತ ಗ್ರಂಥಾಲಯವೂ ಬೆಳೆಯಿತು. ಈ ಸಂಸ್ಥೆಯು 1959ರಲ್ಲಿ ತನ್ನ ಸುವರ್ಣ ಮಹೋತ್ಸವ ಸ್ಮರಣಾರ್ಥವಾಗಿ ಯು.ಜಿ.ಸಿ. ನೆರವಿನೊಂದಿಗೆ ಗ್ರಂಥಾಲಯಕ್ಕಾಗಿ ಆಧುನಿಕವಾದ ಕಟ್ಟಡವನ್ನು ನಿರ್ಮಿಸಿತು. ಈ ಸಂಸ್ಥೆ ಲಕ್ಷಾಂತರ ಗ್ರಂಥಗಳ ಸಂಗ್ರಹ ಹೊಂದಿದ್ದು ಪ್ರತಿ ತಿಂಗಳೂ 1900 ಸಂಶೋಧನಾತ್ಮಕ ನಿಯತ ಕಾಲಿಕಗಳನ್ನು ತರಿಸುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಕಟವಾಗುವ ಎಲ್ಲ ತಾಂತ್ರಿಕ ವರದಿಗಳೂ ಮಾಸಿಕಗಳೂ ಪೇಟೆಂಟ್‌ಗಳೂ ಸಂಶೋಧನ ಪ್ರಬಂಧಗಳೂ ಮುಂತಾದ ಅತ್ಯುಪಯುಕ್ತ ಗ್ರಂಥಗಳನ್ನು ಈ ಸಂಸ್ಥೆಯಲ್ಲಿ ಸಂಗ್ರಹಿಸಲಾಗುತ್ತದೆ. ಅತ್ಯಾಧುನಿಕ ಸಲಕರಣೆಗಳು ಮತ್ತು ಗ್ರಂಥಸೂಚಿಗಳಿವೆ. ಗ್ರಂಥಸೂಚಿಯನ್ನು ಇಲ್ಲಿ ಸಿದ್ಧಪಡಿಸಲಾಗುತ್ತದೆ.

**ವಿಶ್ವವಿದ್ಯಾನಿಲಯ ಗ್ರಂಥಾಲಯ :** ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ 1918ರಲ್ಲಿ ಪ್ರಾಚ್ಯ ಮತ್ತು ಸಂಸ್ಕೃತ ಗ್ರಂಥಭಂಡಾರವಿದ್ದ ಕಟ್ಟಡದಲ್ಲೇ ಕೇವಲ 2311 ಪುಸ್ತಕ ಸಂಗ್ರಹದೊಡನೆ ಪ್ರಾರಂಭವಾಯಿತು. ಈಗ ವಿಶ್ವವಿದ್ಯಾನಿಲಯ ವ್ಯವಸ್ಥೆಯಲ್ಲಿ ಒಟ್ಟು 18 ಗ್ರಂಥಾಲಯಗಳಿವೆ: 3 ಸ್ನಾತಕೋತ್ತರ ಕೇಂದ್ರ ಗ್ರಂಥಾಲಯಗಳು, 5 ವಿಶ್ವವಿದ್ಯಾನಿಲಯದ ಕಾಲೇಜು ಗ್ರಂಥಾಲಯಗಳು, 5 ಸಂಶೋಧನ ವಿಭಾಗಗಳ ಗ್ರಂಥಾಲಯಗಳು ಮತ್ತು 5 ಸ್ನಾತಕೋತ್ತರ ವಿಭಾಗಗಳ ಗ್ರಂಥಾಲಯಗಳಿವೆ. ಹೀಗೆ ವಿಶ್ವವಿದ್ಯಾನಿಲಯದ ಅಂಗಸಂಸ್ಥೆಗಳ 18 ಗ್ರಂಥಾಲಯಗಳಲ್ಲಿನ ಒಟ್ಟು ಗ್ರಂಥ ಸಂಗ್ರಹ 9 ಲಕ್ಷಕ್ಕೂ ಮೀರಿದೆ. ಪ್ರಾಚ್ಯ ವಿದ್ಯಾ ಸಂಶೋಧನಾಲಯ ಸು.82,000 ಕೃತಿಗಳನ್ನು ಹೊಂದಿದ್ದು ತತ್ತ್ವಶಾಸ್ತ್ರ ಹಾಗೂ ಸಂಸ್ಕೃತ ವಿದ್ವಾಂಸರಿಗೆ ಅಪರೂಪದ ಹಸ್ತಪ್ರತಿಗಳು ಇಲ್ಲಿ ದೊರೆಯುತ್ತವೆ. ಸು.29,000 ಹಸ್ತಪ್ರತಿಗಳ ಸಂಪುಟಗಳು ಹಾಗೂ 33,000 ಗ್ರಂಥಸಂಗ್ರಹವನ್ನು ಈ ಸಂಸ್ಥೆ ಹೊಂದಿದ್ದು ಶೈಕ್ಷಣಿಕ ಮತ್ತು ಸಂಶೋಧನ ಚಟುವಟಿಕೆಗಳಿಗೆ ಮಾಹಿತಿ ನೀಡುತ್ತಲಿದೆ. ಮಾನಸಗಂಗೋತ್ರಿಯಲ್ಲಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಾಲಯ 30 ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಹೊಂದಿದೆ. ಇಲ್ಲಿನ ಕನ್ನಡ ಹಸ್ತಪ್ರತಿ ವಿಭಾಗದಲ್ಲಿ ಪ್ರಾಚೀನ ಓಲೆಗರಿಯ ಮತ್ತು ಕಾಗದದ ಕೈಬರೆಹದ ಹಸ್ತಪ್ರತಿಗಳು ಮೈಕ್ರೊಫಿಲಂಗಳು ಸೇರಿ ಒಟ್ಟು 10 ಸಾವಿರ ಪ್ರತಿಗಳ ಸಂಗ್ರಹವಿದೆ.

ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯ ಮಾನಸ ಗಂಗೋತ್ರಿಯ ವಿಶಾಲವಾದ ಮತ್ತು ಸುಂದರವಾದ ಪರಿಸರದಲ್ಲಿ ಸ್ಥಾಪಿತವಾಗಿದ್ದು ಇಲ್ಲಿನ ಸಂಗ್ರಹ ಈಗ 5.6ಲಕ್ಷ ಆಕರಗಳಿಗೂ ಮೀರಿದೆ. ಪ್ರಚಲಿತವಾಗಿ ಮಾಹಿತಿ ಸೇವೆಯನ್ನು ಆಧರಿಸಿ ಗ್ರಂಥಾಲಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. (1) ಸಾಂಪ್ರದಾಯಿಕ ಆಕರಗಳ ವಿಭಾಗ ಮತ್ತು (2) ಮಾಹಿತಿ ತಂತ್ರಜ್ಞಾನ ವಿಭಾಗ, ಸಾಂಪ್ರದಾಯಿಕ ಆಕರಗಳ ವಿಭಾಗ ಪ್ರಮುಖವಾಗಿ ನಿಯತಕಾಲಿಕೆ, ಪ್ರಲೇಖ ಮತ್ತು ಪರಾಮರ್ಶನ, ಗ್ರಂಥ ಎರವಲು, ಕನ್ನಡ ಗ್ರಂಥ ಸಂಗ್ರಹ, ಪುಸ್ತಕ ಪರಿಗ್ರಹಣೆ ಮತ್ತು ಇತರ ಭಾಷಾ ಸಂಗ್ರಹಗಳೆಂಬ ವಿಭಾಗಗಳಾಗಿವೆ. ತಾಂತ್ರಿಕ ವಿಭಾಗ ಅಂತರ್ಜಾಲ, ಸಿಡಿ ರಾಂ ದತ್ತಾಂಶಗಳು, ಪರಿವಿಡಿ ಸೇವೆ ಮತ್ತು ಮಲ್ಟಿಮೀಡಿಯಾ ಅಡಕ ತಟ್ಟೆಗಳ ಸಂಗ್ರಹ ಹೊಂದಿದೆ.

ವಿಶ್ವವಿದ್ಯಾನಿಲಯ ಗ್ರಂಥಾಲಯವು 22 ಅಂತರ್ಜಾಲ ಸೌಲಭ್ಯ ಕಲ್ಪಿಸಲ್ಪಟ್ಟ ಗಣಕ ಯಂತ್ರಗಳನ್ನು ಹೊಂದಿದ್ದು, ಎಲ್ಲಾ ಶೈಕ್ಷಣಿಕ ಸಿಬ್ಬಂದಿ, ಸಂಶೋಧನ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಾಫ್ಟ್ ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಅವರು ಒದಗಿಸಿರುವ 128 K ಸಾಮರ್ಥ್ಯದ ಅಂತರ್ಜಾಲ ಸಂಪರ್ಕ ಪಡೆದುಕೊಂಡಿದೆ. ಮಾಹಿತಿ ತಂತ್ರಜ್ಞಾನ ವಿಭಾಗವು ಇಷ್ಟೇ ಅಲ್ಲದೆ, ಆಧುನಿಕ ಫ್ಯಾಕ್ಸ್ ಡೇಟಾ ಪ್ರೊಜೆಕ್ಟರ್, ಇ ಮೇಲ್, ಲೇಸರ್, ಸ್ಕ್ಯಾನಿಂಗ್ ಮುಂತಾದ ಸೌಲಭ್ಯ ಸಹ ಹೊಂದಿದೆ.

ಗ್ರಂಥಾಲಯವು ಪ್ರಮುಖವಾಗಿ ಸಿಡಿ ರಾಂ ದತ್ತಾಂಶ ಕೋಶಿಯ ಸಂಗ್ರಹವನ್ನು 1993 ರಿಂದ ನಿರಂತರ ಅಭಿವೃದ್ಧಿಪಡಿಸುತ್ತ ಬಂದಿದ್ದು ಇಲ್ಲಿಯವರೆಗೆ ಸು.27 ವಿವಿಧ ವಿಷಯಗಳನ್ನು ಕುರಿತಾದ ಸಂಗ್ರಹವಿದೆ. ಅದರಲ್ಲೂ ಸಂಶೋಧನ ವಿದ್ಯಾರ್ಥಿಗಳು ತಮ್ಮ ಕ್ಷೇತ್ರದಲ್ಲಿ ಕಳೆದ 10 ಅಥವಾ 20 ವರ್ಷಗಳಿಂದ ಇಲ್ಲಿಯವರೆಗೆ ಏನೇನು, ಎಲ್ಲೆಲ್ಲಿ ಸಂಶೋಧನೆ ನಡೆದಿದೆ ಎಂಬುದಾಗಿ ವಿವರ ಹಾಗೂ ಸಾರಾಂಶವನ್ನು ಕೆಲವೇ ನಿಮಿಷಗಳಲ್ಲಿ ಪಡೆಯಬಹುದಾಗಿದೆ. ಹಿಂದೆ ಇದೇ ಕಾರ್ಯಕ್ಕೆ ಸಾರಾಂಶ ನಿಯತಕಾಲಿಕೆಗಳನ್ನು ತಿರುವುಹಾಕಿ ಮಾಹಿತಿ ಸಂಗ್ರಹಿಸಬೇಕಾಗಿದ್ದು ಸು.4 ತಿಂಗಳಿಂದ 6 ತಿಂಗಳವರೆಗೆ ಸಮಯ ಹಿಡಿಯುತ್ತಿತ್ತು.

ಗ್ರಂಥಾಲಯವು ಹಲವಾರು ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ನ ಸದಸ್ಯರ ಬೇಡಿಕೆಗೆ ಮತ್ತು ಸಾರ್ವಜನಿಕರ ಆವಶ್ಯಕತೆಗೆ ತಕ್ಕಂತೆ ಸ್ಪಂದಿಸುತ್ತಲಿದೆ. 1993 ರಿಂದ 2002ವರೆಗೆ 48 ಪುಸ್ತಕ ಪ್ರದರ್ಶನಗಳು, 18 ವಿಶೇಷ ಉಪನ್ಯಾಸಗಳು, 14 ಪ್ರಾಯೋಗಿಕ ಕಾರ್ಯಾಗಾರಗಳು, 7 ರಾಷ್ಟ್ರೀಯ ಪುಸ್ತಕವಾರ ಪ್ರಯುಕ್ತ ಚರ್ಚಾಸ್ಪರ್ಧೆ ಮತ್ತು ಪರಾಮರ್ಶನ ಆಕರಗಳ ಪ್ರದರ್ಶನಗಳನ್ನು ಏರ್ಪಡಿಸಿತ್ತು. ಈ ಎಲ್ಲಾ ಸೇವಾ ಸೌಲಭ್ಯಗಳನ್ನು ಸಾರ್ವಜನಿಕರಿಗೂ ಸಹ ವಿಸ್ತರಿಸಿರುವುದು ವಿಶೇಷ ಸಂಗತಿ. ಗ್ರಂಥಾಲಯದ ಪ್ರಲೇಖ ಮತ್ತು ಪರಾಮರ್ಶನ ವಿಭಾಗವು ಸಂದರ್ಭ ಆಕರಗಳು, ಮಹಾಪ್ರಬಂಧಗಳು, ಸರ್ಕಾರಿ ಪ್ರಕಟಣೆಗಳು, ಮೈಸೂರು ಸಂಸ್ಥಾನದ ಆಡಳಿತ ವರದಿಗಳು, ಮೈಸೂರು ಇತಿಹಾಸಕ್ಕೆ ಸಂಬಂಧಿಸಿದ ಅಪರೂಪ ಗ್ರಂಥಗಳು ಹೀಗೆ ಅತ್ಯಂತ ಉಪಯುಕ್ತ ಸಂಗ್ರಹವನ್ನು ಹೊಂದಿದೆ. 1990 ರಿಂದ ಅಂತರ ಗ್ರಂಥಾಲಯ ಚಟುವಟಿಕೆಗಳಿಗೆ ಉತ್ತೇಜನ ದೊರೆತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಲ್ಲದೆ ಕೆಲವಾರು ಪ್ರಕಟಣೆಗಳನ್ನು ಮತ್ತು ಸಂಕಲನಗಳನ್ನೂ ಹೊರತಂದಿದೆ.

ಮೈಸೂರು ವಿಶ್ವವಿದ್ಯಾನಿಲಯದ ಅನಂತರದಲ್ಲಿ ಧಾರವಾಡದಲ್ಲಿ ಸ್ಥಾಪಿಸಲಾದ ಕರ್ನಾಟಕ ವಿಶ್ವವಿದ್ಯಾಲಯ ಸಹ ಬೃಹತ್ ಗ್ರಂಥಾಲಯ ವ್ಯವಸ್ಥೆಯನ್ನು ಹೊಂದಿದೆ. ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ 1965ರಲ್ಲಿ ಪ್ರಾರಂಭಗೊಂಡು ಈಗ ಸಾಕಷ್ಟು ಬೆಳೆದಿದೆ. ಅನಂತರದಲ್ಲಿ ಮಂಗಳೂರು, ಗುಲ್ಬರ್ಗ, ಕುವೆಂಪು, ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳಲ್ಲಿಯೂ ಗ್ರಂಥಾಲಯಗಳು ರೂಪಿತಗೊಂಡಿವೆ. ಈ ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳು ಅಪಾರ ಸಂಖ್ಯೆಯ ಮುದ್ರಿತ ಮತ್ತು ಗಣಕೀಕೃತ ಮಾಹಿತಿ ದಾಖಲೆಗಳನ್ನು ಹೊಂದಿದೆ.

**ಗ್ರಂಥಾಲಯಗಳ ಒಕ್ಕೂಟ :** ಯಾವುದೇ ಗ್ರಂಥಾಲಯ ಬೃಹತ್ ಸಂಗ್ರಹ ಮತ್ತು ಉತ್ತಮ ಆರ್ಥಿಕ ವ್ಯವಸ್ಥೆಯನ್ನು ಹೊಂದಿದ್ದರೂ ಬಳಕೆದಾರರ ಪೂರ್ಣ ಬೇಡಿಕೆಯನ್ನು ಪೂರೈಸುವುದು ಕಷ್ಟ. ವಿವಿಧ ಆಯಾಮಗಳಲ್ಲಿ ಮಾಹಿತಿಯ ಉತ್ಪಾದನೆ, ಅದರ ನಿರ್ವಹಣೆ, ನಿಯಂತ್ರಣ ಮತ್ತು ವಿತರಣೆ ಇವುಗಳನ್ನು ಪರಸ್ಪರ ಸಹಕಾರದ ಮೂಲಕ, ಮಾಹಿತಿ ಸಂಪನ್ಮೂಲಗಳ ವಿನಿಮಯದಿಂದ ಈ ಸವಾಲನ್ನು ಎದುರಿಸಬಹುದಾಗಿದೆ. ಕೇವಲ ಮಾಹಿತಿ ಸಂಪನ್ಮೂಲಗಳ ವಿನಿಮಯವಲ್ಲದೇ ಎಲ್ಲಾ ಸದಸ್ಯಗ್ರಂಥಾಲಯಗಳಲ್ಲಿ ದೊರೆಯುವಂತಹ ಮೂಲಭೂತ ಸೌಕರ್ಯಗಳನ್ನು ಹಾಗೂ ಕೌಶಲ್ಯಯುತ ಮಾನವ ಸಂಪನ್ಮೂಲವನ್ನು ಕೂಡ ಪರಸ್ಪರ ವಿನಿಮಯ ಮಾಡಿಕೊಳ್ಳಬಹುದಾಗಿದೆ. ಇದರಿಂದ ವೈಯಕ್ತಿಕ ಗ್ರಂಥಾಲಯಗಳ ವೆಚ್ಚವನ್ನು ಕಡಿಮೆ ಮಾಡಬಹುದು. ಮತ್ತು ಗ್ರಂಥಗಳ ಬಳಕೆಯನ್ನು ಗರಿಷ್ಠಗೊಳಿಸಬಹುದು. ಕೆಳಗಿನ ಪ್ರಮುಖ ಕಾರಣಗಳಿಂದಾಗಿ ಇತ್ತೀಚೆಗೆ ಮಾಹಿತಿ ಸಂಪನ್ಮೂಲಗಳ ವಿನಿಮಯ ತುಂಬಾ ಆವಶ್ಯಕವಾಗಿದೆ.

* ಅಗಾಧ ಮಾಹಿತಿ ಪ್ರಕಟಣೆ
* ಸಾಕಷ್ಟು ಹಣಕಾಸಿನ ವ್ಯವಸ್ಥೆ ಇಲ್ಲದಿರುವುದು
* ವಿದೇಶಿ ವಿನಿಮಯದ ದರ ಮತ್ತು ಪ್ರಕಟಣೆಯ ವೆಚ್ಚ ರಂತರವಾಗಿ ಹೆಚ್ಚುತ್ತಿರುವುದು
* ಸಮಗ್ರ ಹಾಗೂ ಆಧಾರಬದ್ಧ ಮಾಹಿತಿ ಸಂಪನ್ಮೂಲಗಳಿಗಾಗಿ ಬಳಕೆದಾರರ ಬೇಡಿಕೆ ಹೆಚ್ಚುತ್ತಿರುವುದು
* ಉತ್ತಮ ಹಾಗೂ ಶೀಘ್ರ ಸಾಮರ್ಥ್ಯವುಳ್ಳ ಪರಿಣಾಮಕಾರಿ ತಂತ್ರಜ್ಞಾನದ ಅಭಿವೃದ್ಧಿ
* ಅಂತರ್ ವಿಷಯ ಮತ್ತು ಬಹು ವಿಷಯ ಕ್ಷೇತ್ರಗಳ ಉಗಮ

1990ರಲ್ಲಿ ಮೈಸೂರು ನಗರ ಗ್ರಂಥಾಲಯಗಳ ಒಕ್ಕೂಟವು (ಮೈಸೂರ್ ಸಿಟಿ ಲೈಬ್ರರಿಸ್ ಕನ್‌ಸೋರ್ಶಿಯಮ್) ಅಸ್ತಿತ್ವಕ್ಕೆ ಬಂದಿತು. ಮಾಹಿತಿ ಆಕರಗಳು ಮತ್ತು ಮೂಲಭೂತ ಸೌಲಭ್ಯಗಳ ವಿನಿಮಯದ ಉದ್ದೇಶಕ್ಕಾಗಿ ಕೆಲವು ಬುದ್ಧಿಜೀವಿಗಳು, ವಿಶ್ವವಿದ್ಯಾನಿಲಯದ ಕುಲಪತಿಗಳು, ಸಂಶೋಧನ ಸಂಸ್ಥೆಗಳ ನಿರ್ದೇಶಕರು ಮತ್ತು ಮೈಸೂರು ನಗರದ ಕೆಲವು ಗ್ರಂಥಪಾಲಕರು ಈ ಮೇಲಿನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಹಲವು ಬಾರಿ ಸಭೆ ಸೇರಿ ಈ ಒಕ್ಕೂಟವನ್ನು ರಚಿಸಿದರು. ಸಂಸ್ಕೃತದಲ್ಲಿ 'ಜ್ಞಾನಮೇವ ಪರಶಕ್ತಿ', ಒಕ್ಕೂಟದ ಸೂಕ್ತಿಯಾಗಿದೆ. ಮೈಸೂರು ನಗರದ ಗ್ರಂಥಾಲಯಗಳ ನಡುವೆ ಹೆಚ್ಚಿನ ಸಮನ್ವಯ ಸಾಧನೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸಂಶೋಧನೆ, ನಿಯತಕಾಲಿಕಗಳ ಪ್ರಕಟಣೆ, ತರಬೇತಿ ತರಗತಿಗಳನ್ನು ನಡೆಸುವುದು ಮೊದಲಾದ ಕ್ರಮಗಳ ಮೂಲಕ ಗ್ರಂಥಾಲಯ ಜಾಲದ ವಿಸ್ತರಣೆ ಹಾಗೂ ಪುನಶ್ಚೇತನ ಇದರ ಮುಖ್ಯ ಉದ್ದೇಶಗಳಾಗಿವೆ.

1985ರಿಂದ ನ್ಯಾಷನಲ್ ಇನ್‌ಫರ್‌ಮೇಷನ್ ಸಿಸ್ಟಮ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ (ಎನ್‌ಐಎಸ್‌ಎಸ್‌ಎಟಿ) ಭಾರತದ ವಿವಿಧ ಭಾಗಗಳಲ್ಲಿರುವ ಗ್ರಂಥಾಲಯಗಳಲ್ಲಿ ದೊರೆಯುವ ಸಂಪನ್ಮೂಲಗಳನ್ನು ವಿನಿಮಯ ಮಾಡಿಕೊಳ್ಳುವ ಸಲುವಾಗಿ ಭಾರತದಲ್ಲಿ ಗ್ರಂಥಾಲಯ ಜಾಲಗಳನ್ನು ರೂಪಿಸಲು ಮತ್ತು ಅಭಿವೃದ್ಧಿಪಡಿಸಲು ಪ್ರಯತ್ನವನ್ನು ಮಾಡುತ್ತಲಿದೆ. ಸಂಪನ್ಮೂಲಗಳನ್ನು ವಿನಿಮಯ ಮಾಡಿಕೊಳ್ಳಲು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ತುಂಬಾ ಆವಶ್ಯಕವಾಗಿದೆ. ಈ ದೃಷ್ಟಿಯನ್ನಿಟ್ಟುಕೊಂಡು ಅದರ ಬಳಕೆದಾರರಿಗೆ ಪರಿಣಾಮಕಾರಿಯಾಗಿ ಮಾಹಿತಿ ಸೌಲಭ್ಯಗಳನ್ನು ಒದಗಿಸಲು 1995ರಲ್ಲಿ 'ಮೈಸೂರು ಲೈಬ್ರರಿ ನೆಟ್‌ವರ್ಕ್' ಸ್ಥಾಪಿಸಲಾಯಿತು (ಮೈಲಿಬ್‌ನೆಟ್). ಹೇಳಬೇಕೆಂದರೆ ಮೈಸೂರು ಗ್ರಂಥಾಲಯ ಜಾಲದ ಚಟುವಟಿಕೆಗಳು ಮೈಸೂರು ನಗರ ಗ್ರಂಥಾಲಯ ಒಕ್ಕೂಟದ ಮೂಲ ಉದ್ದೇಶಗಳಿಗೆ ಸಹಾಯಕವಾಗಿದೆ. ಇದು ಮುಖ್ಯವಾಗಿ ತರಬೇತಿ ಕಾರ್ಯಕ್ರಮಗಳು, ಪ್ರಯೋಗ ಮತ್ತು ಮಂಡನೆಗೆ ಸಂಬಂಧಿಸಿದಂತೆ ಮಾಹಿತಿ ಮತ್ತು ತಂತ್ರಜ್ಞಾನವನ್ನು ಸಂಘಟಿಸುವುದಕ್ಕೆ ಸಂಬಂಧಪಟ್ಟದ್ದಾಗಿದೆ. ಎರಡನೆಯದಾಗಿ ಮೈಸೂರು ನಗರ ಗ್ರಂಥಾಲಯಗಳಲ್ಲಿ ದೊರೆಯುವ ವೈಜ್ಞಾನಿಕ ಮತ್ತು ತಂತ್ರಜ್ಞಾನ ಮಾಹಿತಿ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಹಲವಾರು ರಚನಾತ್ಮಕ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ.

"ಎಂಸಿಎಲ್‌ಸಿ ನ್ಯೂಸ್"ನ ಪ್ರಕಟಣೆಗೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡುವುದಕ್ಕಾಗಿ ಒಂದು ಸಂಪಾದಕೀಯ ಸಮಿತಿಯನ್ನು ರಚಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದ ಗ್ರಂಥಪಾಲಕರು ಈ ಸಮಿತಿಯ ಅಧ್ಯಕ್ಷರು. ಇವರಿಗೆ ಸಹಾಯ ಮಾಡಲು ಏಳು ಸದಸ್ಯರನ್ನೊಳಗೊಂಡ ಒಂದು ತಂಡವಿದೆ. ಎಂಸಿಎಲ್‌ಸಿ ನ್ಯೂಸ್ ಮುಖ್ಯವಾಗಿ ಸದಸ್ಯ ಸಂಸ್ಥೆಗಳ ಗ್ರಂಥಾಲಯಗಳ ಸೇವೆಗಳು, ಸಂಗ್ರಹಣೆ, ಕಾರ್ಯಗಳು ಮತ್ತು ಉದ್ದೇಶಗಳನ್ನು ಒಳಗೊಂಡಿರುತ್ತದೆ. ಅಲ್ಲದೆ ಮಾಹಿತಿ

ತಂತ್ರಜ್ಞಾನದ ಉಪಯೋಗ, ಸಾಫ್ಟ್‌ವೇರ್ ಕಾರ್ಯಕ್ರಮಗಳು ಮಾಹಿತಿಜಾಲ ವಿಳಾಸಗಳು, ಒಕ್ಕೂಟ ಹಿಂದೆ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳು, ಮುಂದೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳ ಸುದ್ದಿಯನ್ನೊಳಗೊಂಡಿರುತ್ತದೆ.

ಒಕ್ಕೂಟವು ನಿಯಕಾಲಿಕೆಗಳ ಪಟ್ಟಿ ಮತ್ತು ಸ್ಥಳೀಯ ತಜ್ಞರ ಮಾರ್ಗದರ್ಶಕಗಳ ಆವಶ್ಯಕತೆಯನ್ನು ಗುರುತಿಸಲು ಸೂಕ್ತವಾಗಿವೆ. ಇಂಥ ಆವಶ್ಯಕತೆಗಳನ್ನು ಪೂರೈಸಲು ಅದು ನಿರ್ದೇಶಕಗಳನ್ನು ಹೊರತಂದಿದೆ. ಹಲವಾರು ಸಂಸ್ಥೆಗಳು ಗುತ್ತಿಗೆಯ ಆಧಾರದ ಮೇಲೆ ಅಂತರ್ಜಾಲ ಸೌಲಭ್ಯವನ್ನು ಮತ್ತು ಸಿಡಿ ರಾಮ್ ವರ್ಕ್ ಸ್ಟೇಷನ್‌ಗಳನ್ನು ಸ್ಥಾಪಿಸಿಕೊಂಡಿವೆ. ಹೊಸ ಬದಲಾವಣೆ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಒಕ್ಕೂಟ ಕಾಲಕಾಲಕ್ಕೆ ಏರ್ಪಡಿಸುವ ವಿಚಾರ ಸಂಕಿರಣ, ಕಾರ್ಯಾಗಾರ, ವಿಶೇಷ ಉಪನ್ಯಾಸಗಳ ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತದೆ. ಹೆಚ್ಚಿನದಾಗಿ ಒಕ್ಕೂಟವು ಲೈಬ್ರರಿ ಆಟೋಮೇಷನ್ ಸಾಫ್ಟ್ ವೇರ್ ಪ್ಯಾಕೇಜ್ ಕುರಿತು ಏರ್ಪಡಿಸಿದ ಕಾರ್ಯಾಗಾರಗಳು ವೃತ್ತಿಪರರಿಗೆ ಬಹಳಷ್ಟುಮಟ್ಟಿಗೆ ಅನುಕೂಲವಾಗಿದೆ.

**ಗ್ರಂಥಾಲಯ ಸಂಘ :** ಗ್ರಂಥಾಲಯಗಳ ಉದ್ದೇಶ, ಕಾರ್ಯನಿರ್ವಹಣೆ ಮತ್ತು ಉಪಯುಕ್ತತೆಗಳು ಎಲ್ಲ ವರ್ಗದ ಜನರಿಗೂ ತಿಳಿಯುವಂತಾಗ ಬೇಕು. ನಗರ, ಪಟ್ಟಣಗಳಲ್ಲಿ ಮಾತ್ರವಲ್ಲದೆ, ಹಳ್ಳಿಯವರೆಗೂ ಅದರ ಶಾಖೆಗಳು ಹಬ್ಬಬೇಕು. ಗ್ರಂಥಾಲಯಗಳೊಳಗೆ ಪರಸ್ಪರ ಸಹಕಾರಭಾವ ಬೆಳೆಯಬೇಕು. ಗ್ರಂಥಪಾಲಕರೊಳಗೆ ಪರಸ್ಪರ ವೈಚಾರಿಕತೆ ಬೆಳೆದುಬರಬೇಕು. ಇವೆಲ್ಲ ಉದ್ದೇಶಗಳನ್ನಿರಿಸಿಕೊಂಡು 1962ರ ಆಗಸ್ಟ್ ತಿಂಗಳ 10ರಂದು ಬೆಂಗಳೂರಿನಲ್ಲಿ ಅನೇಕ ಗ್ರಂಥಪಾಲಕರು, ಗ್ರಂಥಾಲಯ ಪ್ರೇಮಿಗಳೂ ಒಂದೆಡೆ ಸಮಾವೇಶಗೊಂಡಾಗ ಮೈಸೂರು ಗ್ರಂಥಾಲಯದ ಸಂಘ ಸ್ಥಾಪನೆಯಾಯಿತು. ಅಂದು ಮೈಸೂರಿನ ಶಾಸನಸಭೆಯ ಅಧ್ಯಕ್ಷರಾಗಿದ್ದ ವೈಕುಂಠ ಬಾಳಿಗರನ್ನು ಮೈಸೂರು ಗ್ರಂಥಾಲಯ ಸಂಘದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಭಾರತದ ಗ್ರಂಥಾಲಯ ಚಳವಳಿಯ ಪಿತಾಮಹ ಎಸ್.ಆರ್.ರಂಗನಾಥನ್‌ರವರನ್ನು ಗ್ರಂಥಾಲಯ ವಿಜ್ಞಾನದಲ್ಲಿ ಅವರ ಮಹತ್ವಪೂರ್ಣ ಕೊಡುಗೆಗಳ ನೆನಪಿಗಾಗಿ ಪೋಷಕರನ್ನಾಗಿ ಆರಿಸಲಾಯಿತು. ರಾಜ್ಯದ ಹೆಸರು ಕರ್ನಾಟಕವೆಂದು ಪುನರ್ ನಾಮಕರಣಗೊಂಡಾಗ ಈ ಸಂಘವನ್ನು ಕರ್ನಾಟಕ ಗ್ರಂಥಾಲಯ ಸಂಘವೆಂದು ಹೆಸರಿಸಲಾಯಿತು. ಮೇಲೆ ತಿಳಿಸಿದ ಉದ್ದೇಶಗಳಲ್ಲದೆ ಈ ಸಂಘ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತು ನೀಡುವುದು, ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ಆಡಳಿತ ಹಾಗೂ ಸಂವರ್ಧನೆ ಸುಸೂತ್ರವಾಗುವಂತೆ ರಾಜ್ಯ ಶಾಸನಗಳನ್ನು ರಚಿಸುವಂತೆ ಪ್ರೇರೇಪಿಸುವುದು, ಗ್ರಂಥಾಲಯ ಸೇವೆ ಹಾಗೂ ಗ್ರಂಥಾಲಯ ವಿಜ್ಞಾನ ವಿಷಯದಲ್ಲಿ ಪುಸ್ತಕಗಳನ್ನೂ ನಿಯತಕಾಲಿಕೆಗಳನ್ನೂ ಸಂಗ್ರಹಿಸಿ ಉತ್ತಮವಾದೊಂದು ಗ್ರಂಥಾಲಯವನ್ನು ನಡೆಸುವುದು, ವಿವಿಧ ವಿಷಯಗಳ ಗ್ರಂಥಸೂಚಿ, ಪ್ರಲೇಖನ ಪಟ್ಟಿ ಮೊದಲಾದವುಗಳನ್ನು ಕಾಲಕಾಲಕ್ಕೆ ಪ್ರಕಟಿಸುವುದು - ಇವೇ ಮೊದಲಾದ ಅಪೇಕ್ಷಣೀಯ ಹಾಗೂ ಅತ್ಯಗತ್ಯವಾದ ಉದ್ದೇಶಗಳನ್ನಿರಿಸಿಕೊಂಡಿದೆ.

ಈ ಸಂಘದ ಚಟುವಟಿಕೆ ಕೆಲ ಸಮಯ ಸ್ಥಗಿತಗೊಂಡಿದ್ದರಿಂದ 1989ರಲ್ಲಿ ಕರ್ನಾಟಕ ಗ್ರಂಥಾಲಯ ಸಂಘವನ್ನು (ಕಲಾ) ಮತ್ತೆ ಹೊಸದಾಗಿ ಸ್ಥಾಪಿಸಲಾಯಿತು. ಇದರ ಪ್ರಧಾನ ಕಛೇರಿ ಬೆಂಗಳೂರಿನಲ್ಲಿದೆ. ಇದರ ಮೂಲ ಉದ್ದೇಶ ನವೀನ ಪ್ರವೃತ್ತಿಗಳನ್ನು ಗ್ರಂಥಪಾಲಕರ ಗಮನಕ್ಕೆ ತಂದು ತಿಳುವಳಿಕೆ ಮೂಡಿಸುವುದೇ ಆಗಿದೆ. ಇದಕ್ಕಾಗಿ ನಿರಂತರ ವಿಶೇಷ ಉಪನ್ಯಾಸಗಳು, ಕಾರ್ಯಾಗಾರಗಳು ಹಾಗೂ ವಿಚಾರಗೋಷ್ಠಿಗಳನ್ನು ನಡೆಸಲಾಗುತ್ತದೆ. ಕರ್ನಾಟಕದಲ್ಲಿರುವ ಎಲ್ಲಾ ಗ್ರಂಥಾಲಯ ಗ್ರಂಥಪಾಲಕರ ಸಂಘ ಸಂಸ್ಥೆಗಳು ಕರ್ನಾಟಕ ಗ್ರಂಥಾಲಯ ಸಂಘದ ವ್ಯಾಪ್ತಿಯಲ್ಲಿ ಕಾರ್ಯಚಟುವಟಿಕೆಗಳನ್ನು ನಡೆಸಬೇಕೆಂಬುದು ವಿವಿಧ ಚಿಂತಕರ ದೃಷ್ಟಿಕೋನ.

ಮೈಸೂರಿನಲ್ಲಿ ಮೈಸೂರು ಗ್ರಂಥಪಾಲಕರ ಹಾಗೂ ಮಾಹಿತಿ ವಿಜ್ಞಾನಿಗಳ ಸಂಘ (ಎಂವೈಎಲ್ಐಎಸ್ಎ) 2001ರಲ್ಲಿ ಸ್ಥಾಪನೆಗೊಂಡಿದೆ. ಈ ಸಂಘ ಅತ್ಯಂತ ಉತ್ಸಾಹದಿಂದಲೂ ಪರಿಣತಿಯಿಂದಲೂ ಕಾರ್ಯಕ್ರಮಗಳನ್ನು ರೂಪಿಸಿ ಮಾಹಿತಿ ತಂತ್ರಜ್ಞಾನ ಅಳವಡಿಕೆ ಮತ್ತು ಸಾಂಪ್ರದಾಯಿಕ ಗ್ರಂಥಾಲಯಗಳ ಅಭಿವೃದ್ಧಿಗೆ ಶ್ರಮಿಸುತ್ತಲಿದೆ. ಸಂಶೋಧಕರು, ಬೋಧಕ ವರ್ಗದವರು, ವಿದ್ಯಾರ್ಥಿಗಳು, ಗ್ರಂಥಪಾಲಕರು ಹಾಗೂ ಮಾಹಿತಿ ವಿಜ್ಞಾನಿಗಳು ಈ ಸಂಘದ ಸದಸ್ಯರಾಗಿದ್ದಾರೆ.

**ಗ್ರಂಥಾಲಯ ಶಿಕ್ಷಣ :** ಸರ್.ಎಂ.ವಿಶ್ವೇಶ್ವರಯ್ಯನವರ ಸಲಹೆಯಂತೆ 1920 ರಷ್ಟು ಹಿಂದೆಯೇ ಗ್ರಂಥಪಾಲಕರಿಗಾಗಿ ತರಬೇತು ನೀಡಲು ಶಾಲೆಯೊಂದನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಎಸ್.ಆರ್. ರಂಗನಾಥನ್ ಅವರ ಆದೇಶದಂತೆ 1962ರಲ್ಲಿ ಮೈಸೂರು ಸರ್ಕಾರ ಸರ್ಕಾರಿ ಗ್ರಂಥಾಲಯ ತರಬೇತಿ ಶಾಲೆಯನ್ನು ಪ್ರಾರಂಭಿಸಿತು. ಇಲ್ಲಿ ರಾಜ್ಯದ ಗ್ರಂಥಾಲಯ ಸಿಬ್ಬಂದಿಗಳಿಗೂ ರಾಜ್ಯದ ಪ್ರೌಢಶಾಲೆಗಳಿಂದ ಕಳುಹಿಸಲ್ಪಟ್ಟ ಅಧ್ಯಾಪಕರಿಗೂ ತರಬೇತಿ ನೀಡಲಾಗುತ್ತಿತ್ತು. ಉಪಾಧ್ಯಾಯರುಗಳಿಗೆ ಆರು ವಾರಗಳ, ಗ್ರಂಥಪಾಲಕರಿಗೆ ಹನ್ನೆರಡು ವಾರಗಳ ಅವಧಿಯ ಶಿಕ್ಷಣವನ್ನು ನೀಡಲಾಗುತ್ತಿತ್ತು. ಮಹಿಳೆಯರಿಗಾಗಿ ಪಿ.ಯು.ಸಿ. ಶಿಕ್ಷಣ ಕನಿಷ್ಠ ಅರ್ಹತೆಯಾಗಿದ್ದು ಎರಡು ವರ್ಷಾವಧಿಯ ಡಿಪ್ಲೊಮಾ ಶಿಕ್ಷಣವನ್ನು 1961ರಲ್ಲಿ ಬೆಂಗಳೂರಿನ ಮಹಿಳಾ ತಾಂತ್ರಿಕ ಶಿಕ್ಷಣ ಶಾಲೆಯಲ್ಲಿ ಪ್ರಾರಂಭಿಸಲಾಯಿತು. ಅನಂತರ ಮಂಗಳೂರಿನಲ್ಲೂ ಈ ಹಂತದ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಕನಿಷ್ಠ ಮೆಟ್ರಿಕ್ ಅಥವಾ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯುಳ್ಳವರಿಗಾಗಿ ಮೂರು ತಿಂಗಳ ಅವಧಿಯ ಗ್ರಂಥಾಲಯ ವಿಜ್ಞಾನದಲ್ಲಿ ಸರ್ಟಿಫಿಕೇಟ್ ಶಿಕ್ಷಣವನ್ನು ರಾಜ್ಯ ಸಾರ್ವಜನಿಕ ಗ್ರಂಥಾಲಯ ವಿಭಾಗ ನೀಡುತ್ತಲಿದೆ. ಇದಲ್ಲದೆ ವೃತ್ತಿ ಶಿಕ್ಷಣ ಇಲಾಖೆ ಅನೇಕ ಜಿಲ್ಲೆಗಳಲ್ಲಿ 2 ವರ್ಷ ಅವಧಿಯ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತಿದೆ. ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯ ವಿಜ್ಞಾನದಲ್ಲಿ 1962ರಿಂದ ಪದವಿ ಶಿಕ್ಷಣವನ್ನು ಮತ್ತು 1965ರಿಂದ ಸ್ನಾತಕೋತ್ತರ ಪದವಿ ಶಿಕ್ಷಣವನ್ನು ನೀಡತೊಡಗಿತು. 1965ರ ಸುಮಾರಿಗೆ ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ವಿಜ್ಞಾನದಲ್ಲಿ ಬಿ.ಲಿಬ್.ಎಸ್ಸಿ. ಮತ್ತು ಎಂ.ಲಿಬ್.ಎಸ್ಸಿ ಪದವಿ ಶಿಕ್ಷಣಗಳನ್ನು ಪ್ರಾರಂಭಿಸಿತು.

ಇತ್ತೀಚೆಗೆ ಜ್ಞಾನದ ಅಗಾಧ ಬೆಳವಣಿಗೆಯಿಂದಾಗಿ ಮತ್ತು ಮಾಹಿತಿ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಬಹುತೇಕ ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾಪಿಸಲಾಗಿರುವ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗಗಳು ಎರಡು ವರ್ಷಗಳ ಅವಧಿಯ ಎಂ.ಎಲ್.ಐ.ಎಸ್ಸಿ ಕೋರ್ಸ್ ನೀಡುತ್ತವೆ. ಈಗ ಮಾಸ್ಟರ್ ಪದವಿ ಮತ್ತು ಪಿಎಚ್.ಡಿ. ಕಾರ್ಯಕ್ರಮಗಳನ್ನು ನೀಡುತ್ತಲಿರುವ ವಿಶ್ವವಿದ್ಯಾನಿಲಯಗಳೆಂದರೆ ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ ಹಾಗೂ ಕುವೆಂಪು ವಿಶ್ವವಿದ್ಯಾಲಯ. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗಗಳು ಪ್ರಚಲಿತ ಬೆಳವಣಿಗೆಗೆ ಹಾಗೂ ಗ್ರಂಥಾಲಯ ಓದುಗರ ಬೇಡಿಕೆ ಈಡೇರಿಸುವ ಸಲುವಾಗಿ ಬಹುಮಟ್ಟಿಗೆ ತಮ್ಮ ಪಠ್ಯಕ್ರಮದಲ್ಲಿ ತಂತ್ರಜ್ಞಾನದ ಅಳವಡಿಕೆಯ ಅಂಶಗಳನ್ನು ಸೇರಿಸುವಲ್ಲಿ ಹೆಚ್ಚಿನ ಗಮನ ಹರಿಸಿವೆ.

ಗ್ರಂಥಾಲಯ ವಿಜ್ಞಾನದ ಪ್ರಮುಖ ಸ್ತರವಾದ ಪ್ರಲೇಖನಶಾಸ್ತ್ರದಲ್ಲಿ ವಿಶೇಷ ಶಿಕ್ಷಣವೀಯಲು ರಂಗನಾಥನ್‌ರವರ ಪ್ರಯತ್ನದ ಫಲವಾಗಿ 1962ರ ಜನವರಿಯಲ್ಲಿ ಭಾರತೀಯ ಸಾಂಖ್ಯಿಕೀಯ ಸಂಸ್ಥೆ ಬೆಂಗಳೂರಿನಲ್ಲಿ ಪ್ರಲೇಖ ಸಂಶೋಧನ ಮತ್ತು ತರಬೇತಿ ಕೇಂದ್ರವನ್ನು ಪ್ರಾರಂಭಿಸಿತು. ಈ ತರಬೇತಿಯ ಅವಧಿ ಇಪ್ಪತ್ತು ತಿಂಗಳದಾಗಿದ್ದು ಮೊದಲ 12 ತಿಂಗಳ ಶಿಕ್ಷಣಾವಧಿಯಲ್ಲಿ ವಿದ್ಯಾರ್ಥಿಗಳು ಪೂರ್ಣಕಾಲ ಕೇಂದ್ರದಲ್ಲೇ ಇರಬೇಕಾಗುತ್ತದೆ. ಮುಂದಿನ ಎಂಟು ತಿಂಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಯಾವುದಾದರೊಂದು ನಿರ್ದಿಷ್ಟ ವಿಷಯ ಕುರಿತು ವರದಿ ಅಥವಾ ಪ್ರೌಢಪ್ರಬಂಧವನ್ನು ಸಲ್ಲಿಸಬೇಕಾಗುತ್ತದೆ.

ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2004-05ರ ಶಿಕ್ಷಣ ವರ್ಷದಿಂದ ಗ್ರಂಥಾಲಯ ಮಾಹಿತಿ ವಿಜ್ಞಾನದಲ್ಲಿ ಪದವಿ ಶಿಕ್ಷಣ ನೀಡುವುದಕ್ಕೆ ಮುಂದಾಗಿದೆ. ಮೈಸೂರು ಹಾಗೂ ಮಂಗಳೂರಿನಲ್ಲಿ ಯು.ಜಿ.ಸಿ.ಯ ನೆರವಿನಿಂದ ವಿಶ್ವವಿದ್ಯಾನಿಲಯ ಪ್ರಾರಂಭಿಸಿರುವ ಅಭ್ಯಾಸ ಕೇಂದ್ರಗಳೂ ಉತ್ತಮ ರೀತಿಯಲ್ಲಿ ಕಾರ್ಯವೆಸಗುತ್ತಿದ್ದು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಗಳನ್ನೂ ಆಕರ ಗ್ರಂಥಗಳನ್ನೂ ಒದಗಿಸುತ್ತಿವೆ.

(ಸಿ.ಪಿ.ಆರ್.,ಎನ್.ಬಿ.ಪಿ.)

**ಗ್ರಾಮಗಳು :** ಕರ್ನಾಟಕದಲ್ಲಿ 2001ರ ಜನಗಣತಿ ಅಂಕಿಸಂಖ್ಯೆಗಳ ಪ್ರಕಾರ ಬೇಚಿರಾಕ್ ಗ್ರಾಮಗಳೂ ಸೇರಿ 29483 ಗ್ರಾಮಗಳಿವೆ. ರಾಜ್ಯದ ಜನಸಂಖ್ಯೆಯ ಶೇ.66 ಜನ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಭಾರತದ ಇತರ ರಾಜ್ಯಗಳಂತೆ ಕರ್ನಾಟಕವೂ ಗ್ರಾಮಗಳ ರಾಜ್ಯ. ಈ ಗ್ರಾಮಗಳು ದೇಶವ್ಯವಸ್ಥೆಯಲ್ಲಿ ಪ್ರಮುಖವಾದ ಸ್ಥಾನವನ್ನು ಹೊಂದಿರುವ ಕಾರಣದಿಂದ ಈ ಲೇಖನದಲ್ಲಿ ಚಾರಿತ್ರಿಕ, ಆರ್ಥಿಕ, ಸಾಮಾಜಿಕ ಹೀಗೆ ನಾನಾ ದೃಷ್ಟಿಕೋನಗಳಿಂದ ಅವುಗಳ ಸ್ಥೂಲ ಪರಿಚಯ ಮಾಡುವ ಪ್ರಯತ್ನ ಮಾಡಲಾಗಿದೆ.

ನಮ್ಮ ಗ್ರಾಮಗಳು ಪ್ರಾಚೀನ ಕಾಲದಿಂದಲೂ ಪರಂಪರಾಗತವಾಗಿ ಹಲವು ವ್ಯವಸ್ಥೆ ಕಟ್ಟುಪಾಡುಗಳಲ್ಲಿ ನಡೆದುಕೊಂಡುಬಂದುವಾಗಿವೆಯಾದರೂ ಇತ್ತೀಚಿನ ದಿನಗಳಲ್ಲಿ ಪ್ರಚಲಿತವಾಗಿರುವ ಪ್ರಜಾಪ್ರಭುತ್ವ ತತ್ವಗಳು, ದೇಶದ ಬದಲಾದ ರಾಜಕೀಯ ವ್ಯವಸ್ಥೆ, ಭೂಸುಧಾರಣೆ ಮತ್ತು ಸಾಮಾಜಿಕ ಸುಧಾರಣಾ ಕಾರ್ಯಕ್ರಮಗಳು ಮೊದಲಾದವುಗಳಿಂದ ಅವು ಅನೇಕ ರೀತಿಯಲ್ಲಿ ಬದಲಾವಣೆಯನ್ನು ಹೊಂದುತ್ತಿವೆ. ಈ ಪರಿವರ್ತನಾ ಘಟ್ಟದಲ್ಲಿ ಹಲವೆಡೆ ಹಳೆಯ ಸಂಪ್ರದಾಯ ಮತ್ತು ಸ್ಥಿತಿಗತಿಗಳು ಮುಂದುವರೆದಿರುವುದೂ ಮತ್ತೆ ಕೆಲವೆಡೆ ಹೊಸ ಪ್ರವೃತ್ತಿಗಳು ರೂಪಿತವಾಗುತ್ತಿರುವುದೂ ಕಂಡುಬರುತ್ತದೆ. ಸಹಜವಾಗಿ ಇವೆರಡೂ ಘಟ್ಟಗಳು ಇಲ್ಲಿ ಪ್ರಸ್ತಾಪಿತವಾಗಿವೆಯಾದರೂ ಹೊಸ ಪ್ರವೃತ್ತಿಗಳು ಮುನ್ನಡೆಯಲ್ಲಿವೆಯೆಂಬುದು ಗಮನಾರ್ಹ.

**ಇತಿಹಾಸ :** ಪ್ರಾಗೈತಿಹಾಸಿಕಯುಗದಲ್ಲಿ ಜನ ಇನ್ನೂ ಬೇಟೆಯಿಂದ ಜೀವನ ನಿರ್ವಹಿಸುತ್ತಿದ್ದಾಗ ಅವರು ಬೇಟೆಗಾಗಿ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಿದ್ದರಾಗಿ ವ್ಯವಸ್ಥಿತವಾದ ಗ್ರಾಮಗಳಿರುವ ಸಾಧ್ಯತೆ ಇರಲಿಲ್ಲ. ಅನಂತರ ಬಹುಕಾಲ ಒಂದೆಡೆ ನೆಲಸುವ ಗ್ರಾಮಗಳು ಎನ್ನಬಹುದಾದ ತಾಣಗಳು ಪ್ರಾರಂಭವಾದವು. ವ್ಯವಸಾಯ, ಪಶುಪಾಲನೆ ಈ ವೃತ್ತಿಗಳು ಬಳಕೆಗೆ ಬಂದ ನವಶಿಲಾಯುಗದ ಕಾಲದಲ್ಲಿ, ಅಂದರೆ ಸು. ಕ್ರಿ.ಪೂ. 2500ರ ಆಸುಪಾಸಿನಲ್ಲಿ ಕರ್ನಾಟಕದಲ್ಲಿ ಈ ಘಟ್ಟದ ಹಲವು ಗ್ರಾಮನೆಲೆಗಳು ಬಯಲುಸೀಮೆಯ ಭಾಗಗಗಳಲ್ಲಿ ವಿಶೇಷವಾಗಿ ಕಂಡುಬಂದಿವೆ. ರಾಯಚೂರು ಜಿಲ್ಲೆಯ ಪಿಕ್ಲಿಹಾಳು, ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ, ಸಂಗನಕಲ್ಲು, ಧಾರವಾಡ ಜಿಲ್ಲೆಯ ಹಳ್ಳೂರು, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಮೈಸೂರು ಜಿಲ್ಲೆಯ ತಿರುಮಕೂಡಲುನರಸೀಪುರ ಮತ್ತು ಹೆಮ್ಮಿಗೆ ಮೊದಲಾದೆಡೆಗಳಲ್ಲಿ ನಡೆದಿರುವ ಆ ನೆಲೆಗಳ ಉತ್ಖನನಗಳಿಂದ ಆಗಿನ ಗ್ರಾಮಗಳ ಸ್ವರೂಪದ ಬಗ್ಗೆ ಕೆಲವು ಮಾಹಿತಿಗಳು ದೊರಕಿವೆ (ಆಯಾ ಶೀರ್ಷಿಕೆಗಳು ಹಾಗೂ ಪ್ರಾಗಿತಿಹಾಸ ಲೇಖನಗಳನ್ನು ನೋಡಿ). ಕ್ರಿ.ಪೂ.1ನೆಯ ಸಹಸ್ರಮಾನದ ಹೊತ್ತಿಗೆ ಕರ್ನಾಟಕದಲ್ಲಿ ಕಬ್ಬಿಣದ ಬಳಕೆ ಪ್ರಾರಂಭವಾದ್ದರಿಂದ ಹಾಗೂ ಬಹುಶಃ ಜನಸಂಖ್ಯೆಯ ಹೆಚ್ಚಳವೂ ಆಗುತ್ತ ಬಂದುದರಿಂದ ಗ್ರಾಮಗಳ ಸಂಖ್ಯೆ ಹೆಚ್ಚಾದಂತೆ ಕಾಣುತ್ತದೆ. ಮಲೆನಾಡು ಮತ್ತು ಪಶ್ಚಿಮ ಕರಾವಳಿಯ ಪ್ರದೇಶಗಳಲ್ಲಿ ಗ್ರಾಮಗಳು ಹುಟ್ಟಿಕೊಂಡಿದ್ದು ಬಹುಶಃ ಈ ಕಾಲದಲ್ಲೇ. ಆಗ ಬಳಕೆಗೆ ಬಂದಿದ್ದ ಕಬ್ಬಿಣದ ಆಯುಧಗಳಿಂದ ಕಾಡನ್ನು ಕಡಿದು ನೆಲವನ್ನು ಹದಮಾಡಿಕೊಂಡು ಹೆಚ್ಚು ಭೂಮಿಯನ್ನು ಆಬಾದಿಗೆ ತರುವ ಕೆಲಸ ಸುಲಭವಾದದ್ದೂ ಇದಕ್ಕೆ ಕಾರಣ. ಈ ಕಾಲದ ಗ್ರಾಮನೆಲೆಗಳು ನೂರಾರು ಸಂಖ್ಯೆಯಲ್ಲಿ ಕರ್ನಾಟಕದ ಸುಮಾರು ಎಲ್ಲ ಪ್ರದೇಶಗಳಲ್ಲೂ ಬೆಳಕಿಗೆ ಬಂದಿವೆ. ತದಾರಭ್ಯ ಚಾರಿತ್ರಿಕ ಕಾಲದಲ್ಲಿ ಜನಜೀವನ ಸುಗಮವಾಗುತ್ತ ಬಂದು ಜನಸಂಖ್ಯೆಯ ಏರಿಕೆ ಗತಿ ತೀವ್ರವಾಗಿ ನಡೆಯುತ್ತಿದ್ದಿತಾಗಿ ಗ್ರಾಮಗಳು ವಿಸ್ತಾರಗೊಂಡುವಲ್ಲದೆ, ಅವುಗಳ ಸಂಖ್ಯೆಯೂ ದಿನೇ ದಿನೇ ವರ್ಧಿಸುತ್ತ ಬಂದುವು. ಚಾರಿತ್ರಿಕ ಕಾಲದಲ್ಲಿ ಹೊಸ ಹೊಸ ಗ್ರಾಮಗಳನ್ನು ನಿರ್ಮಾಣ ಮಾಡಿ, ಅಲ್ಲಿ ಕೆರೆಕಟ್ಟೆಗಳನ್ನು ಕಟ್ಟಿಸಿ ಜನರನ್ನು ವಸತಿ ಹೂಡಲು ರಾಜರೂ ಪ್ರೋತ್ಸಾಹಿಸುತ್ತಿದ್ದರು. ಈ ರೀತಿಯಲ್ಲಿ ಹೊಸತಾಗಿ ಸ್ಥಾಪಿತವಾದ ಅನೇಕ ಗ್ರಾಮಗಳ ಬಗ್ಗೆ ಶಾಸನಗಳಲ್ಲಿ, ಅದರಲ್ಲೂ ವಿಶೇಷವಾಗಿ ಹೊಯ್ಸಳ ರಾಜರ ಶಾಸನಗಳಲ್ಲಿ ಮಾಹಿತಿಗಳು ದೊರಕುತ್ತವೆ. ಇತ್ತೀಚಿನ ದಿನಗಳವರೆಗೂ ಹೊಸ ಗ್ರಾಮಗಳ ಸ್ಥಾಪನೆ ನಡೆದುಕೊಂಡು ಬಂದಿದೆ.

ಕರ್ನಾಟಕದಲ್ಲಿ ಗ್ರಾಮಗಳು ಬೆಳೆದು ಬಂದ ಇತಿಹಾಸವನ್ನು ರೂಪಿಸಲು ಅನೇಕ ರೀತಿಯ ಸಾಮಗ್ರಿಗಳು ದೊರಕುತ್ತವೆ. ಶಾಸನಗಳು, ಸ್ಥಳೀಯ ಐತಿಹ್ಯಗಳು ಒಂದು ರೀತಿಯ ದಾಖಲೆಗಳಾದರೆ, ಗ್ರಾಮದ ಹೆಸರುಗಳೇ ಬಹಳಷ್ಟು ವಿಷಯಗಳನ್ನು ನೀಡಬಲ್ಲುವು. ಉದಾಹರಣೆಗೆ ಮೂಲ ಕನ್ನಡ ಪದಗಳನ್ನೊಳಗೊಂಡ ಹೆಸರುಗಳು ಹಲವು ಕಾಲದಲ್ಲಿ ಪ್ರಚಲಿತವಾಗಿದ್ದರೆ, ಬೇರೆ ಬೇರೆ ಕಾಲದಲ್ಲಿ ಹುಟ್ಟಿಕೊಂಡ ಗ್ರಾಮಗಳಲ್ಲಿ ಆಯಾ ಕಾಲಗಳಲ್ಲಿ ಶಿಷ್ಟಭಾಷೆಗಳಾಗಿದ್ದ ಪ್ರಾಕೃತ, ಸಂಸ್ಕೃತ, ಉರ್ದು, ಇಂಗ್ಲಿಷ್ ಇತ್ಯಾದಿ ಮೂಲಗಳಿಂದ ಹುಟ್ಟಿದ ಹೆಸರುಗಳನ್ನು ಅಲ್ಲಲ್ಲಿ ಗುರುತಿಸಬಹುದು. ಅಲ್ಲದೆ ಈ ಹೆಸರುಗಳಲ್ಲಿನ ಮೂಲನಾಮವನ್ನುಳ್ಳ ಪೂರ್ವಭಾಗ, ವಸತಿಸೂಚಕ ಉತ್ತರಭಾಗ (ಹಳ್ಳಿ, ಕೊಪ್ಪ) ಇತ್ಯಾದಿಗಳ ವೈವಿಧ್ಯತೆಯಲ್ಲಿ ಗ್ರಾಮಗಳ ಭೌಗೋಳಿಕ ಪರಿಸರ, ಅವುಗಳ ಚಾರಿತ್ರಿಕ ಹಿನ್ನೆಲೆ, ಅನೇಕ ವೇಳೆ ಅವು ಹುಟ್ಟಿಕೊಂಡಿರಬಹುದಾದ ಕಾಲ ಇತ್ಯಾದಿಗಳನ್ನೆಲ್ಲಾ ಗುರುತಿಸಬಹುದು. ಆದರೆ ಈ ದಿಶೆಯಲ್ಲಿ ಕರ್ನಾಟಕದಲ್ಲಿ ನಡೆದಿರುವ ಕಾರ್ಯ ಅಲ್ಪ. ಕರ್ನಾಟಕದ ಗ್ರಾಮ ನಾಮಗಳಲ್ಲಿ ಹಳ್ಳಿ, ಪಲ್ಲಿ, ಗಾಂವ್, ಕೊಪ್ಪ(ಲು), ಪಾಳ್ಯ, ಹಟ್ಟಿ, ಹುಂಡಿ, ಬೀಡು, ನಾಡು, ಗೂಡು, ವಾಡಿ, ಪಾಡಿ, ಕೇರಿ, ಆವರ, ಊರು, ಪುರ, ಕೋಟೆ, ದುರ್ಗ, ಗಡ, ಪೇಟೆ, ಪಟ್ಟಣ, ಹೊಳಲು, ಅಬಾದ್, ಬಾಗ್, ಬುರ್ಗ, ಮಂಗಲ, ಸಂತೆ, ಕುಂದ, ಬೆಟ್ಟ, ಅದ್ರಿ, ಗುಡ್ಡ, ಕಲ್ಲು, ಘಾಟ್, ಕಣಿವೆ, ಕೆರೆ, ಸಮುದ್ರ (ಸಂದ್ರ), ಕೊಳ, ಕುಂಟೆ, ಕಟ್ಟೆ, ತೊರೆ, ಸಂಗಮ, ಅವೆ, ಆರು, ಕುಪ್ಪೆ, ಹಾಳು, ಜಾಲ, ಆಲ ಮೊದಲಾದ ಉತ್ತರನಾಮಗಳು ಸಾಮಾನ್ಯವಾಗಿ ಕಂಡುಬರುತ್ತವೆ. *

**ಸ್ವರೂಪ :** ಗ್ರಾಮಗಳಲ್ಲಿ ವಾಸಿಸುವ ಜನರ ಮುಖ್ಯ ಜೀವನಾಧಾರ ಕಸಬು ವ್ಯವಸಾಯವೇ ಆದುದರಿಂದ ಗ್ರಾಮಗಳ ರಚನೆ ಈ ಕಸಬಿಗೆ ಪೂರಕವಾಗಿರುತ್ತದೆ. ಸಾಮಾನ್ಯವಾಗಿ ಎತ್ತರವಾದ ಸಮತಟ್ಟಿನ ಪ್ರದೇಶಗಳಲ್ಲಿ ಗ್ರಾಮ ರಚನೆಗೊಳ್ಳುತ್ತದೆ. ಸುತ್ತಮುತ್ತ ಸಾಗುವಳಿಗೆ ಆವಶ್ಯಕವಾದ ಫಲವತ್ತಾದ ಭೂಮಿಯನ್ನು ಆಯ್ಕೆಮಾಡಿಕೊಳ್ಳಲಾಗುತ್ತದೆ. ಕರ್ನಾಟಕದ ಹೆಚ್ಚು ವ್ಯವಸಾಯ ಮಳೆಯನ್ನೇ ಅವಲಂಬಿಸಿದ್ದರೂ ನೀರಿನ ಸೌಕರ್ಯಕ್ಕಾಗಿ ಕೆರೆ, ಕುಂಟೆ, ಬಾವಿಗಳನ್ನು ರಚಿಸಿಕೊಳ್ಳುವುದುಂಟು. ಸಾಮಾನ್ಯವಾಗಿ ಒಂದೊಂದು ಗ್ರಾಮದಲ್ಲಿಯೂ ಒಂದೊಂದು ಕೆರೆ ಇರುತ್ತದೆ. ಬಾವಿಗಳನ್ನು ಆವಶ್ಯಕತೆಗೆ ಅನುಗುಣವಾಗಿ ರಚಿಸಿಕೊಳ್ಳಲಾಗುತ್ತದೆ. ಗ್ರಾಮಗಳಲ್ಲಿ ಮನೆಗಳ ಸಂಖ್ಯೆ ನಿರ್ದಿಷ್ಟವಾಗಿರುವುದಿಲ್ಲ. ಮಲೆನಾಡಿನ ಗ್ರಾಮಗಳಲ್ಲಿ ಒಂದು ಮನೆಯೋ ನಾಲ್ಕಾರು ಮನೆಗಳೋ ಒಂದು ಗ್ರಾಮವಾಗಬಹುದು. ಬಯಲುಸೀಮೆಯ ಗ್ರಾಮಗಳಲ್ಲಿ ಇಪ್ಪತ್ತು ಮೂವತ್ತರಿಂದ ಏಳುನೂರು ಎಂಟುನೂರರವರೆಗೆ ಮನೆಗಳಿರಬಹುದು. ತಾಂಡ ಎನ್ನುವುದು ಒಂದು ಹಳ್ಳಿಗೆ ಉಪಗ್ರಹದಂತೆ, ಅದರ ಭಾಗದಂತೆ ಅಂಟಿಕೊಂಡಿರುವ ಸಣ್ಣ ಬೀಡನ್ನು ಸೂಚಿಸುತ್ತದೆ. ಕೆಲವು ಕಡೆ ಇದನ್ನೇ ಹಟ್ಟಿ ಎಂದು ಕರೆಯುತ್ತಾರೆ. ಹಟ್ಟಿಗಳು ಪ್ರತ್ಯೇಕ ಸಣ್ಣ ಹಳ್ಳಿಗಳೂ ಆಗಿರುವುದುಂಟು. ತಾಂಡ ಅಥವಾ ಹಟ್ಟಿಗಳಲ್ಲಿ ಬಹಳ ಹಿಂದುಳಿದ ಜನ ವಾಸಿಸುತ್ತಾರೆ. ಹಳ್ಳಿ ಸಣ್ಣ ಊರನ್ನು ಸೂಚಿಸಿದರೆ ಗ್ರಾಮ ಹಳ್ಳಿಗಿಂತ ದೊಡ್ಡದಾಗಿರುವ ಊರನ್ನು ಸೂಚಿಸುತ್ತದೆ ಎಂದು ಹೇಳಬಹುದು. ದೊಡ್ಡ ಗ್ರಾಮ ಒಂದು ರೀತಿಯಲ್ಲಿ ಹಳ್ಳಿಗೂ ಪಟ್ಟಣಕ್ಕೂ ಮಧ್ಯಸ್ಥವಾಗಿರುವ ಊರು. ಗ್ರಾಮದಲ್ಲಿ 200ರಿಂದ 400ರವರೆಗೆ ಮನೆಗಳಿದ್ದರೆ ದೊಡ್ಡ ಗ್ರಾಮದಲ್ಲಿ 500ರಿಂದ 1000ದವರೆಗೆ ಮನೆಗಳಿರಬಹುದು. ಇದು ಬಹು ಸ್ಥೂಲವಾದ ಕ್ರಮ.

ದೂರಕ್ಕೆ ಗ್ರಾಮ ಮರಗಳ ಗುಂಪಿನಂತೆ ತೋರಿಬರುತ್ತದೆ. ಹತ್ತಿರ ಹೋಗುತ್ತಿದ್ದಂತೆ ಮೊದಲು ಹೊಲಗಳು, ಅನಂತರ ಗ್ರಾಮಸ್ಥರು ತಮ್ಮ ಧಾನ್ಯಗಳನ್ನು ಒಕ್ಕಿಕೊಳ್ಳುವ ಮತ್ತು ದನಗಳಿಗೆ ಮೇವು ಸಂಗ್ರಹಿಸಿಟ್ಟಿರುವ ಕಣ ಹಾಗೂ ಹುಲ್ಲು ಹಿತ್ತಿಲುಗಳು, ಅಲ್ಲೇ ಗೊಬ್ಬರದ ಗುಂಡಿಗಳು,

ತಿಪ್ಪೆಗಳು ಕಾಣಿಸಿಕೊಳ್ಳುತ್ತವೆ. ಊರಿಗೆ ಅನೇಕ ಪ್ರವೇಶ ದ್ವಾರಗಳಿದ್ದರೂ ಶಿಷ್ಟಾಚಾರದ (ಉದಾ: ಮದುವೆ) ಸಂದರ್ಭಗಳಲ್ಲಿ ಹೊರಗಿನ ಜನರ ಪ್ರವೇಶವಾಗುವುದು ಊರಬಾಗಿಲು ಅಥವಾ ಅಗಸೆಯ ಮೂಲಕವಾಗಿಯೇ. ಇದೇ ಊರಿನ ಅಧಿಕೃತ ಪ್ರವೇಶದ್ವಾರ ಮತ್ತು ಅದರ ಸೂಚಕವಾಗಿ ಆ ದ್ವಾರದ ಅಕ್ಕಪಕ್ಕದಲ್ಲಿ ಎರಡು ಕರು (ಕರಿ) ಗಲ್ಲುಗಳನ್ನು ನೆಟ್ಟಿರುತ್ತಾರೆ. ಒಳಗೆ ಬಂದರೆ ಅಲ್ಲೇ ಊರಿನ ಮುಖ್ಯ ದೇವಾಲಯ ಅದರ ಸಮೀಪದ ಬಯಲು, ಊರಿನಲ್ಲಿ ನಾಟಕ ಮುಂತಾದವು ನಡೆಯುವ ಜಾಗ. (ಎಂ.ಸಿ.)

ಸಾಮಾನ್ಯವಾಗಿ ಪ್ರತಿ ಗ್ರಾಮದಲ್ಲಿಯೂ ಊರೊಳಗೆ ಬಾವಿ, ಚಾವಡಿ, ಗ್ರಾಮದೇವತೆಯ ಗುಡಿ, ಇತರ ದೇವರುಗಳ ಗುಡಿ ಇರುತ್ತವೆ. ಊರಿಗೆ ತೀರಸಮೀಪದಲ್ಲಿ ಕೆರೆ ಇರುತ್ತದೆ. ಕೆಲವೊಮ್ಮೆ ಪಕ್ಕದಲ್ಲೇ ಮರದ ತೋಪು ಇರುತ್ತದೆ. ಗ್ರಾಮಗಳಲ್ಲಿಯ ಗೃಹರಚನೆಯಲ್ಲಿ ನಿರ್ದಿಷ್ಟ ನಿಯಮವಿರುವಂತೆ ಕಂಡುಬರುವುದಿಲ್ಲ. ಊರ ಜನ ಬೇಕಾದಂತೆ ಮನೆ ಕಟ್ಟಿಕೊಳ್ಳಬಹುದು. ಹಾಗಾಗಿ ಗ್ರಾಮಗಳಲ್ಲಿಯ ಗೃಹಗಳ ರಚನೆಯಿಂದ ಹಲವಾರು ಅನಾನುಕೂಲಗಳಾಗುತ್ತವೆ. ರಸ್ತೆಗಳ ನಿರ್ಮಾಣ ಕಷ್ಟವಾಗುತ್ತದೆ. ಮನೆ ಕಟ್ಟುವಿಕೆಯಲ್ಲಿ ಒಂದಕ್ಕೂ ಇನ್ನೊಂದಕ್ಕೂ ನಡುವೆ ಇರುವ ಅಂತರದ ಪ್ರದೇಶವನ್ನು ಓಣಿ ಅಥವಾ ಸೊಂಪಲು ಎನ್ನುವುದು ರೂಢಿ. ಗ್ರಾಮರಚನೆಯಲ್ಲಿ ಕಂಡುಬರುವ ಗಮನಾರ್ಹವಾದ ಇನ್ನೊಂದು ಅಂಶವೆಂದರೆ ಗ್ರಾಮ ವಿಭಜನಾಕ್ರಮ. ಗ್ರಾಮಗಳಲ್ಲಿ ಎಲ್ಲ ಜಾತಿಮತ ವರ್ಗ ಪಂಗಡಗಳ ಜನರೂ ಒಟ್ಟಿಗೇ ವಾಸಿಸಬೇಕಾಗಿರುವುದರಿಂದ ಅವರ ಸಾಮಾಜಿಕ ರೀತಿನೀತಿಗಳು ಭಿನ್ನವಾಗಿರುತ್ತವೆಯಾದುದರಿಂದ ಅವರು ಪ್ರತ್ಯೇಕ ಹಾಗೂ ಸ್ವತಂತ್ರ ಜೀವನ ಸಾಗಿಸಲು ಕೇರಿಗಳು ರೂಪುಗೊಂಡವು. ಈ ಕೇರಿಗಳು ಜಾತಿಯ ಆಧಾರದ ಮೇಲೆ ರಚನೆಯಾಗುತ್ತಿದ್ದುದೇ ಹೆಚ್ಚು. ಉದಾ: ಬ್ರಾಹ್ಮಣ ಕೇರಿ, ಕುಂಬಾರಕೇರಿ, ಒಕ್ಕಲಿಗಕೇರಿ, ಹರಿಜನಕೇರಿ ಇತ್ಯಾದಿ. ಹರಿಜನಕೇರಿ, ಸಾಮಾನ್ಯವಾಗಿ ಊರ ಹೊರಗೆ ಸುಮಾರು ದೂರದಲ್ಲಿರುತ್ತದೆ. ಆಯಾಯ ಕೇರಿಗಳ ಬೀದಿಯನ್ನು ಆಯಾಯ ಜಾತಿಗಳ ಹೆಸರಿನಿಂದಲೆ ಕರೆಯುವುದು ವಾಡಿಕೆ, ಬ್ರಾಹ್ಮಣರು ವಾಸಿಸುವ ಕೇರಿಯ ಬೀದಿಗೆ ಬ್ರಾಹ್ಮಣರ ಬೀದಿ, ಕುಂಬಾರದಕ್ಕೆ ಕುಂಬಾರ ಬೀದಿ ಇತ್ಯಾದಿ.

**ಆರ್ಥಿಕ ವ್ಯವಸ್ಥೆ :** ಗ್ರಾಮಗಳ ಆರ್ಥಿಕ ಜೀವನ ಹೆಚ್ಚಾಗಿ ವ್ಯವಸಾಯ ದಿಂದ ಬರುವ ಉತ್ಪನ್ನವನ್ನೇ ಅವಲಂಬಿಸಿದೆ. ಜೊತೆಗೆ ಕುರಿ ಕೋಳಿ ಹಂದಿ ಸಾಕಣೆ, ಪಶುಸಂಗೋಪನೆ ಮುಂತಾದ ಉಪಕಸಬು ಗಳಿಂದಲೂ ಗ್ರಾಮೀಣರು ಹಣ ಸಂಪಾದಿಸುವುದುಂಟು. ಜೀವನಾವಶ್ಯಕತೆಗಳು, ಜೀವನವಿಧಾನಗಳು ಗ್ರಾಮಗಳಲ್ಲಿ ಅಷ್ಟೊಂದು ಜಟಿಲವಲ್ಲ. ಪ್ರತಿಯೊಂದು ಗ್ರಾಮವೂ ಸ್ವಯಂಪರಿಪೂರ್ಣವಾಗಿ ತನ್ನ ಕಾಲಿನ ಮೇಲೆ ತಾನು ನಿಲ್ಲುತ್ತಿದ್ದಿತ್ತು. ಗ್ರಾಮದ ಉಪಯೋಗಕ್ಕೆ ಬೇಕಾದ ಕಚ್ಚಾಮಾಲು, ಅಲ್ಲಿಯೇ ಬೆಳೆದು, ಅವುಗಳನ್ನು ಜನತೆಗಾಗಿ ಸಿದ್ಧಪಡಿಸುವ ಕೆಲಸಗಾರರೂ ಉದ್ಯೋಗಗಳೂ ಅಲ್ಲಿಯೇ ಸೃಷ್ಟಿಯಾಗುತ್ತಿದ್ದವು. ರೈತ ಎಲ್ಲ ಬೆಳೆಗಳನ್ನೂ ಬೆಳೆಯುತ್ತಿದ್ದ. ಅವನು ಬೆಳೆದ ಹತ್ತಿಯನ್ನು ನೂಲುವವರು ನೂತು, ನೇಯ್ಗೆಯವರಿಗೆ ಕೊಡುತ್ತಿದ್ದರು. ಅವರು ಎಲ್ಲರಿಗೂ ವಸ್ತ್ರಗಳನ್ನು ಒದಗಿಸುತ್ತಿದ್ದರು. ರೈತ ಬೆಳೆದ ಎಣ್ಣೆ ಬೀಜಗಳನ್ನು ಗಾಣಿಗರು ಅರೆದು ಎಣ್ಣೆ ಒದಗಿಸುತ್ತಿದ್ದರು. ಕುಂಬಾರ ಮಣ್ಣಿನಿಂದ ಮಡಕೆಗಳನ್ನು ಮಾಡಿಕೊಡುತ್ತಿದ್ದ. ಮನೆಯ ಮಾಡಿಗೆ ಹೊದಿಸಲು ಹೆಂಚುಗಳನ್ನು ಸುಟ್ಟುಕೊಡುತ್ತಿದ್ದ. ಕುರುಬರು ಕುರಿ ಸಾಕಿ, ತುಪ್ಪಟದಿಂದ ಕಂಬಳಿ ನೇಯುವವರು ನೇಯುತ್ತಿದ್ದರು. ತೋಟಿ, ನೀರ್ಗಂಟಿಗಳು ಕೆರೆಯ ನೀರಿನ ಹಂಚಿಕೆ ಎಲ್ಲ ಭೂಮಿಗೂ ಸರಿಯಾಗಿ ಆಗುವಂತೆ ನೋಡಿಕೊಳ್ಳುತ್ತಿದ್ದರು. ಉಪಾಧ್ರು (ಉಪಾಧ್ಯಾಯರು) ಮಠದಲ್ಲಿ ಹುಡುಗರಿಗೆ ಪಾಠ ಹೇಳುತ್ತಿದ್ದರು. ಶ್ಯಾನುಭೋಗರು ಭೂಮಿಯ ಆಸ್ತಿಪಾಸ್ತಿಯ ಲೆಕ್ಕಪತ್ರ ಬರೆಯುತ್ತಿದ್ದರು. ಊರಿನ ರಕ್ಷಣೆಗಾಗಿ ಪೊಲೀಸ್ ಪಟೇಲರು (ಕಂದಾಚಾರ) ಇರುತ್ತಿದ್ದರು. ಅಟ್ಟವಣೆಯವರು, ಹಣಕಾಸಿನವರು ಆ ಬಾಬಿನ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಜೋಯಿಸ, ಅಗಸ, ಶಾನುಭೋಗ, ಪೂಜಾರಿ, ತಳವಾರ (ತಲಾರಿ, ಅಂದರೆ ಊರೊಟ್ಟಿನ ಕೆಲಸಗಾರ), ಕುಳವಾಡಿ (ಗ್ರಾಮಸೌಕರ) ಇವರೆಲ್ಲ ಸಮಾಜಕ್ಕೆ ತಮತಮಗೆ ನಿಯಮಿತವಾಗಿದ್ದ ಕೆಲಸಗಳನ್ನು ಮಾಡುತ್ತಿದ್ದರು. ಹೀಗೆ ಗ್ರಾಮದ ಆವಶ್ಯಕತೆಗಳೆಲ್ಲ ಗ್ರಾಮದಲ್ಲಿ ಗ್ರಾಮದವರಿಂದಲೇ ಪೂರೈಸಲ್ಪಟ್ಟು ಪ್ರತಿ ಗ್ರಾಮವೂ ತನ್ನ ಪಾಡಿಗೆ ತಾನು ಸಂಪೂರ್ಣ ಸ್ವಾವಲಂಬಿಯಾಗಿದ್ದಿತು.

ಇದಕ್ಕೆ ಸಹಕಾರಿಯಾಗಿದ್ದ ವ್ಯವಸ್ಥೆಗೆ ಬಾರಾಬಲೂತಿ ಕ್ರಮ ಎಂದು ಹೆಸರಿದ್ದಿತು. ಪಟೇಲ, ಕುಳವಾಡಿ, ತೋಟಿ, ತಳಾರಿ (ತಳವಾರ), ನೂಲುವವರು, ನೇಯುವವರು, ಕುರುಬರು, ಗೋವಳರು, ಅಗಸರು, ಬೆಸ್ತರು, ಕ್ಷೌರಿಕರು, ಬಡಗಿ, ಕಮ್ಮಾರ, ನೀರ್ಗಂಟಿ, ಅಟ್ಟವಣೆ, ಕಂದಾಚಾರ ಇವರೇ ಗ್ರಾಮಕ್ಕೆ ಆವಶ್ಯಕವಾದ ಜನ. ಸಾಧಾರಣವಾಗಿ ಸರಳಜೀವನ ಪದ್ಧತಿಯಿಂದ ಆ ಕಾಲಕ್ಕೆ ಗ್ರಾಮದ ಸೇವೆಗೆ ಇಷ್ಟು ಜನ ಸಾಕಾಗುತ್ತಿದ್ದರು. ಗ್ರಾಮರಕ್ಷಣೆ ಮುಂತಾದುವಕ್ಕೆ ಗೌಡರು, ಊರಿನ ಯಜಮಾನರು ಇರುತ್ತಿದ್ದರು. ಈ ಎಲ್ಲ ಕಸಬುದಾರರೂ ಆ ಕಾಲದಲ್ಲಿ ವಂಶಪಾರಂಪರ್ಯವಾಗಿ ಇರುತ್ತಿದ್ದರು. ಪಟೇಲರ ಮಗ ಪಟೇಲ, ಕುಳವಾಡಿಯ ಮಗ ಕುಳವಾಡಿ, ತೋಟಿಯ ಮಗ ತೋಟಿ, ನೀರ್ಗಂಟಿಯ ಮಗ ನೀರ್ಗಂಟಿ ಹೀಗೆ ವಂಶಪಾರಂಪರ್ಯವಾದ ವಿದ್ಯೆ ಎಂಬ ಮಾತು ಪ್ರಶಂಸೆಯ ಮಾತಾಗಿತ್ತು. ಆಯಾ ಕಸಬಿನ ನೈಪುಣ್ಯ ಅವನ ವಂಶದಲ್ಲಿ ಹರಿದು ಬರುತ್ತಿದ್ದಿತ್ತು ಅಥವಾ ಅದನ್ನು ಆತ ರೂಢಿಸಿಕೊಳ್ಳುತ್ತಿದ್ದ. ಈ ಕ್ರಮದಲ್ಲಿ ಸಣ್ಣ ಘಟಕವಾದ ಗ್ರಾಮದ ವ್ಯವಸ್ಥೆ ಬಹಳ ಅಚ್ಚುಕಟ್ಟಾಗಿ ನಡೆಯುತ್ತಿದ್ದಿತು. ಇಂಥ ಪದ್ಧತಿಯ ಗ್ರಾಮ ಆಡಳಿತವನ್ನು ಪಾಶ್ಚಾತ್ಯ ವಿದ್ವಾಂಸರನೇಕರು ಮೆಚ್ಚಿ, ಅವು ಪ್ರಾಚೀನ ಗ್ರೀಕರ ಗ್ರಾಮ ಘಟಕಕ್ಕೆ (ಗಿಲ್ಡ್) ಸಮಾನವಾಗಿ ಗ್ರಾಮದ ಬೆಳವಣಿಗೆ, ರಕ್ಷಣೆ, ಸೌಖ್ಯ ಎಲ್ಲದರ ಹೊಣೆಯನ್ನೂ ತುಂಬ ಸಮರ್ಪಕವಾಗಿ ನಿರ್ವಹಿಸಿದುವೆಂದೂ ಪಟ್ಟಣಗಳ ಶೋಷಣೆಗೆ ಗುರಿಯಾಗದ ಗ್ರಾಮ ಸ್ವರಾಜ್ಯ, ಸುವರ್ಣಯುಗ ಅದೆಂದೂ ಅಭಿಪ್ರಾಯಪಟ್ಟಿದ್ದಾರೆ.

ಈ ಪದ್ಧತಿ ನಮ್ಮ ನಾಡಿನ ಪರಿಸ್ಥಿತಿ ಮತ್ತು ಆವಶ್ಯಕತೆಗಳಿಂದ ಸ್ವಾಭಾವಿಕವಾಗಿ ಬೆಳೆದು ಬಂತು. ಗ್ರಾಮದ ಆವಶ್ಯಕತೆಗಳನ್ನರಿತು ಗ್ರಾಮೀಣರು ಗ್ರಾಮಗಳನ್ನು ಸ್ವಾವಲಂಬಿಯಾಗಿ ಮಾಡಿದರು. ಆವಶ್ಯಕತೆ ಹೆಚ್ಚಿದಂತೆ, ಕಚ್ಚಾಮಾಲು ದೊರೆತಂತೆ ಅವರು ಹೊಸ ಹೊಸ ಉದ್ಯೋಗಗಳನ್ನೂ ಸಹ ಕಲ್ಪಿಸಿಕೊಂಡರು.

ಬಾರಾಬಲೂತಿ ಪದ್ಧತಿಯಲ್ಲಿ ಒಂದು ಗ್ರಾಮಕ್ಕೆ, ಒಂದು ಉದ್ಯೋಗಕ್ಕೆ ಆ ಕಸಬಿನ ಒಬ್ಬನೇ ಇರಬೇಕೆಂಬ ನಿಯಮವಿರಲಿಲ್ಲ. ಜನತೆಯ ಆವಶ್ಯಕತೆಗೆ, ಜನಸಂಖ್ಯೆಗೆ ಅನುಗುಣವಾಗಿ ಕಸಬುದಾರರಿರುತ್ತಿದ್ದರು. ಇವರೆಲ್ಲರೂ ತಮ್ಮ ಕುಲಕ್ರಮಾಗತವಾದ ಕಸಬುಗಳೊಂದಿಗೆ ಬೇಸಾಯವನ್ನೂ ಮಾಡುತ್ತಿದ್ದರು. ತಮ್ಮ ಕುಲಕಸಬನ್ನು ಬಿಟ್ಟು ಬೇರೆ ಕಸಬಿಗೆ ಹೋಗಬಾರದು. ಎಂಬ ನಿಯಮವೇನು ಇರಲಿಲ್ಲ. ಹಾಗೆ ಹೋಗುತ್ತಿದ್ದವರೂ ಇರುತ್ತಿದ್ದರು. ಆದರೆ ಗ್ರಾಮಜೀವನ ಇಂದಿನಷ್ಟು ಸಂಕೀರ್ಣವೂ ಗೊಂದಲಮಯವೂ ಆಗಿರಲಿಲ್ಲವಾದುದರಿಂದ, ಸಿದ್ಧವಾಗಿದ್ದ ತನ್ನ ಮನೆತನದ ಉದ್ಯೋಗವನ್ನು ಆ ಮುಂದಿನ ವ್ಯಕ್ತಿ ಹಿಡಿದು ಸಾಗುತ್ತಿದ್ದ. ಹೀಗೆ ಈ ಎಲ್ಲ ಕಸಬುದಾರರೂ ಗ್ರಾಮದ ಆವಶ್ಯಕತೆಯಿಂದ ಹುಟ್ಟಿಕೊಂಡವರಾಗಿದ್ದರು. ಅವರೆಲ್ಲ ಒಂದೊಂದು ಜಾತಿಗಳಲ್ಲಿ, ಆದರೆ ಕಾಲಕ್ರಮದಲ್ಲಿ ಒಂದೊಂದು ಉದ್ಯೋಗದವರು ಒಂದೊಂದು ಜಾತಿ ಎಂದು ಪರಿಗಣಿತವಾದಂತೆ ತೋರುತ್ತದೆ. ಯಾವ ಉದ್ಯೋಗವನ್ನೂ ಯಾವನೂ ಮಾಡಲು ಆಕ್ಷೇಪಣೆ ಇದ್ದಂತೆ ತೋರುವುದಿಲ್ಲ. ಆದರೆ ಗ್ರಾಮ ಘಟಕಗಳು ಚಿಕ್ಕವಾಗಿದ್ದುದರಿಂದ, ಕಸಬುದಾರರು ಹೆಚ್ಚುತ್ತ ಹೋದಂತೆ ಗ್ರಾಮ ಘಟಕಗಳು ಸ್ವಾಭಾವಿಕವಾಗಿ ಬೆಳೆಯುತ್ತ ನಡೆದವು. ಆದುದರಿಂದ ಕಸಬುದಾರರು ತಮ್ಮ ಕಸಬನ್ನು ಬಿಟ್ಟು ಬೇರೆ ಕಸಬನ್ನು ಅವಲಂಬಿಸಬೇಕಾದ ಆವಶ್ಯಕತೆ ಜನಗಳಿಗೆ ಬರಲಿಲ್ಲ.

ಸಮಾಜದ ಎಲ್ಲ ಸೇವಕರನ್ನೂ ಸಾಕುವ, ರಕ್ಷಿಸುವ ಹೊಣೆ ಮುಖ್ಯವಾಗಿ ವ್ಯವಸಾಯಗಾರರಾದ ಗ್ರಾಮದ ಜನರದಾಗಿತ್ತು. ಆಗ ಹಣದ ಚಲಾವಣೆ ಅಷ್ಟಾಗಿ ಇರಲಿಲ್ಲ. ಹಣ ದೊರೆತರೂ ಗ್ರಾಮಸ್ಥರು ತಾವು ಬೆಳೆದ ಪದಾರ್ಥಗಳನ್ನೇ ಕಸಬುದಾರರಿಗೆ ಕೊಡುತ್ತಿದ್ದರು. ಆದ್ದರಿಂದ, ಅವರಿಗೆ ಹಣವನ್ನು ಹೊಂದಿಸಿಕೊಳ್ಳುವ ಕಷ್ಟ ಇರುತ್ತಿರಲಿಲ್ಲ. ಗ್ರಾಮದ ಪ್ರತಿ ರೈತನೂ ತನ್ನ ಮನೆಯಲ್ಲಿದ್ದ ಜನ, ತನಗೆ ಕಸಬುದಾರರಿಂದ ಆಗಬೇಕಾಗಿದ್ದ ಕೆಲಸ ಇವುಗಳ ಲೆಕ್ಕಾಚಾರವನ್ನಿಟ್ಟುಕೊಂಡು ವರ್ಷಕ್ಕೆ ಇಷ್ಟು ರಾಗಿ ಬತ್ತ ಎಂದು ಕಮ್ಮಾರ, ಕುಂಬಾರ, ತೋಟಿ, ತಳವಾರ, ನೀರ್ಗಂಟಿ, ಕುರುಬ, ನೇಕಾರ, ಉಪಾದ್ರಿ, ಜೋಯಿಸ, ಅಗಸ, ಕ್ಷೌರಿಕ, ಬಡಗಿ ಇವರಿಗೆ ಸುಗ್ಗಿಯ ಕಾಲದಲ್ಲಿ ಕಣದಲ್ಲಿಯೇ ಅಳೆದು ಕೊಟ್ಟುಬಿಡುತ್ತಿದ್ದ. ಇದಕ್ಕೆ ಮಿರಾಸೆ ಅಥವಾ ಮಾಮೂಲು ಹಡದೆ ಎಂದು ಹೆಸರು. ಈ ಮಾಮೂಲಿನ ದರ, ಸಾಮಾನ್ಯ ಮಾಮೂಲು ಯಾವುದು ಎಷ್ಟು, ವಿಶೇಷವಾದ ಕಾರ್ಯಗಳಿಗಾಗಿ ಎಷ್ಟು ಇವನ್ನೆಲ್ಲ ಗ್ರಾಮಸ್ಥರು ಎಲ್ಲ ಕಸಬುದಾರರೊಂದಿಗೂ ಸಮಾಲೋಚಿಸಿ, ಕಸಬುದಾರನ ಜೀವನದ ಆವಶ್ಯಕತೆಯನ್ನೂ ಗಮನಿಸಿ ನಿರ್ಣಯಿಸುತ್ತಿದ್ದರು. ಹೀಗೆ ವರ್ಷಕ್ಕೆ ಒಂದು ಸಲವೆಂದು ಆಯವನ್ನು (ಮಿರಾಸೆ) ಗೊತ್ತುಮಾಡುತ್ತಿದ್ದರು. (ಜಿ.ಆರ್.ಐ.)

ಈ ಪದ್ಧತಿ ಚಾಳುಕ್ಯ ಪೂರ್ವಕಾಲದಿಂದಲೂ ಪ್ರಚಲಿತವಿದೆ. ಆಯವನ್ನು ಧಾನ್ಯರೂಪದಲ್ಲಿ ಕೊಡಬೇಕಾಗಿತ್ತು. ಸಾಂಪ್ರದಾಯಿಕವಾಗಿ ಹನ್ನೆರಡು ಆಯಗಾರರನ್ನು (ಆಯ ಪಡೆಯುವ ಹಕ್ಕುಳ್ಳ ಊಳಿಗದವರು) ಉಲ್ಲೇಖಿಸಿದ್ದರೂ ಬೇರೆ ಬೇರೆ ಗ್ರಾಮಗಳಲ್ಲಿ ಈ ಸಂಖ್ಯೆ ಹೆಚ್ಚು ಕಡಿಮೆಯಿರಬಹುದು. ಆಯಗಾರರ ಸೇವೆಯನ್ನು ಪಡೆಯುವ ರೈತ ಕುಟುಂಬಗಳು ಆಯದ ಕುಲ. ಇವರು ಸಂಪ್ರದಾಯದಂತೆ ಆಯ ಕೊಡುತ್ತಿದ್ದರು. ಅರಸರು ಅಥವಾ ಪಾಳೆಯಗಾರರು ಆಯಗಾರರಿಗೆ ಊರಲ್ಲಿದ್ದು ಊಳಿಗವ ನಡೆಸಿದರೆ ಇನಾಂ ಭೂಮಿಯನ್ನು ಕೊಡುವ ಸಂಪ್ರದಾಯವೂ ಇತ್ತು. ಜಾತಿ ತಾರತಮ್ಯ ಹಾಗೂ ಊಳಿಗ ಉಪಯುಕ್ತತೆಯ ಮೇಲಿಂದ ಆಯದ ಪ್ರಮಾಣ ನಿರ್ಧಾರವಾಗುತ್ತಿತ್ತು. ಕೆಲವು ಮೇಲ್ಜಾತಿಯ ಆಯಕಾರರನ್ನು ಬಿಟ್ಟರೆ ಉಳಿದವರು ಹೊಲಕ್ಕೆ ಬಂದು ರಾಶಿಯಿಂದಲೆ ತಮ್ಮ ಪಾಲನ್ನು ಪಡೆಯಬೇಕು. ಜೀವನ ನಿರ್ವಹಣೆಗಾಗಿ ಇವರು ಬೇರೆ ಕೆಲಸವನ್ನೂ ಮಾಡಿ ಗಳಿಸಬಹುದು.ಆಯದ ಕುಲದವರ ಸ್ಥಿತಿಗತಿಗಳನ್ನು ಅನುಸರಿಸಿ ಆಗೀಗ ಆಯದ ಪ್ರಮಾಣ ಹೆಚ್ಚಾಗುತ್ತಿತ್ತು ಅಥವಾ ಮಾಫಿಯಾಗುತ್ತಿತ್ತು. ಏನಿದ್ದರೂ ಅದು ಗ್ರಾಮೀಣ ಸಮಾಜಕ್ಕೆ ಆರ್ಥಿಕ ಭದ್ರತೆಯನ್ನೂ ಸಾಂಪ್ರದಾಯಿಕ ಉದ್ಯೋಗವನ್ನೂ ಕೊಟ್ಟಿತಲ್ಲದೆ ಪರಸ್ಪರಾವಲಂಬನೆ, ಸಹಕಾರಗಳನ್ನು ಕಲಿಸಿತು. ಹಣದ ಬಳಕೆ, ಸ್ಪರ್ಧೆ, ಜಾತಿಪದ್ಧತಿಯಲ್ಲಾದ ಬದಲಾವಣೆಗಳಿಂದ ಆಯ ಪದ್ಧತಿ ಇಂದು ಹಿಂದೆ ಬೀಳುತ್ತಿದೆ. (ಎಚ್.ವಿ.ಎನ್.)

ಕಾಲಕ್ರಮದಲ್ಲಿ ಹಳ್ಳಿಗಳಲ್ಲೂ ಜೀವನ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತ ಬಂದಂತೆ ಹಳೆಯ ಕಟ್ಟುಪಾಡುಗಳು ಸಡಿಲವಾದುವು. ಬಾರಾಬಲೂತಿಯಂತೆ ಮಾಡುತ್ತಿದ್ದ ಕಸಬುಗಳನ್ನು ಈಗ ಯಾರು ಬೇಕಾದರೂ ಮಾಡಬಹುದು. ಹಳ್ಳಿಗಳಲ್ಲಿ ಕೆಲವು ಕಸಬುಗಳನ್ನು ಉದಾಹರಣೆಗೆ ಕುಂಬಾರ, ಅಗಸ, ಕ್ಷೌರಿಕ, ತೋಟಿ, ತಳವಾರ ಮುಂತಾದವುಗಳನ್ನು ಹಿಂದಿನಂತೆ ಇವರೇ ಇನ್ನೂ ಮಾಡುತ್ತಿದ್ದಾರೆ. ಕೆಲವೆಡೆಗಳಲ್ಲಿ ಬದಲಾವಣೆಗಳು ಕಾಣಿಸಿಕೊಂಡಿವೆ. ಆದರೆ ಈಗ ಹಿಂದಿದ್ದ ಮಾಮೂಲು ಮಿರಾಸೆ ವರ್ಷಕ್ಕೊಂದು ಸಲ ಧಾನ್ಯ ಕೊಡುವ ಪದ್ಧತಿ ಅನೇಕ ಕಡೆ ತಪ್ಪಿಹೋಗಿದೆ (ಪೂರ್ತಿ ಇಲ್ಲವೆನ್ನುವಂತೆ ಇಲ್ಲ. ಕೆಲವು ಮಲೆನಾಡ ಹಳ್ಳಿಗಳಲ್ಲಿ ಅದರ ಅವಶೇಷ ಇನ್ನೂ ಇದೆ). ಇತರ ಕಸಬುದಾರರಂತೆ ಇವರೂ ಕೆಲಸಕ್ಕೆ ಇಷ್ಟು ಕೂಲಿ ಎಂದು ತೆಗೆದುಕೊಂಡು ಕೆಲಸಮಾಡುತ್ತಾರೆ. ಒಂದು ಕ್ಷೌರದ ಅಂಗಡಿ, ಬಟ್ಟೆ ಮಡಿ ಮಾಡುವ ಅಂಗಡಿ ಎಂದು ಇಟ್ಟರೂ ಹೆಚ್ಚಾಗಿ ಹಿಂದಿನಿಂದ ಮಾಡುತ್ತ ಬಂದಿರುವವರೇ ಇಡುತ್ತಾರೆ. ಪ್ರಾಯಶಃ ಈ ಉದ್ಯೋಗಗಳಿಂದ ಸ್ಥಿರವಾದ ಹೆಚ್ಚು ಲಾಭ ಇಲ್ಲದುದರಿಂದ ವಂಶಪಾರಂಪರ್ಯವಾದ ಕೆಲಸಗಾರರ ಹೊರತು, ಬೇರೆಯವರು ಇವುಗಳಿಗಾಗಿ ಮುಂದೆ ಬರುತ್ತಿರಲಿಲ್ಲ.

ಆದರೆ ಇತ್ತೀಚೆಗಿನ ದಿನಗಳಲ್ಲಿ ಅನೇಕ ಸಾಮಾಜಿಕ ಬದಲಾವಣೆಗಳ ಪ್ರಭಾವ ಹಳ್ಳಿಗಳ ಜೀವನ ಕ್ರಮದಲ್ಲಿಯೂ ಬದಲಾವಣೆಗಳನ್ನೂ ಸಂಘರ್ಷ ಸಾಮಾಜಿಕ ಸ್ಥಿತಿಯನ್ನೂ ಹುಟ್ಟುಹಾಕಿದೆ.

ಯಾಂತ್ರೀಕರಣ, ಗ್ರಾಮಕೈಗಾರಿಕೆಗಳ ದೊಡ್ಡ ಶತ್ರು. ಉದಾಹರಣೆಗೆ ಎಳ್ಳನ್ನು ಬೆಳೆದ ರೈತ ಹಳ್ಳಿಯ ಗಾಣಿಗನಿಂದ ಗಾಣ ಆಡಿಸಿಕೊಳ್ಳುತ್ತಿದ್ದ. ಅವನ ಉಪಯೋಗಕ್ಕೆ ಎಣ್ಣೆಯೂ ದನಗಳಿಗೆ ಹಿಂಡಿಯೂ ಸಿಕ್ಕುತ್ತಿದ್ದಿತು. ಈಗ ಪಟ್ಟಣದ ಎಣ್ಣೆ ಕಾರ್ಖಾನೆ ಆ ಕಸಬನ್ನು ಸಂಪೂರ್ಣವಾಗಿ ನಾಶಮಾಡದಿದ್ದರೂ ಅದರ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿದೆ. ಇತರ ಕೈಗಾರಿಕೆಗಳ ಸ್ಥಿತಿಯೂ ಇದೇ ರೀತಿ ಇದೆ. (ಜಿ.ಆರ್.ಐ.)

**ಗ್ರಾಮಾಡಳಿತ :** ಕರ್ನಾಟಕದ ಗ್ರಾಮಗಳಲ್ಲಿ ಪ್ರಾಚೀನ ಕಾಲದಿಂದಲೂ ಬಹುಮಟ್ಟಿನ ಸ್ವಾಯತ್ತತೆ ಇತ್ತು. ಅಶೋಕ ಮತ್ತು ಸಾತವಾಹನರ ಕಾಲದ ಶಾಸನಗಳಲ್ಲಿ ಅಲ್ಲದಿದ್ದರೂ ಮುಂದಿನ 6ನೆಯ ಶತಮಾನದ ಗಂಗಶಾಸನಗಳಲ್ಲಿಯೂ ಅನಂತರ ಪಲ್ಲವ, ನೊಳಂಬ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಶಾಸನಗಳಲ್ಲೂ ಪ್ರಜಾಸತ್ತಾತ್ಮಕವಾದ ಗ್ರಾಮಾಡಳಿತ ಸುಸ್ಪಷ್ಟವಾಗಿ ಗೋಚರವಾಗುತ್ತದೆ. ಕೇಂದ್ರದಲ್ಲಿ ರಾಜನೇ ಪ್ರಭುವಾದರೂ ಗ್ರಾಮದ ಮಟ್ಟದಲ್ಲಿ ಊರು, ಒಕ್ಕಲು ಅಥವಾ ಮಹಾಜನರು ಊರಿನ ಗೌಡ ಅಥವಾ ಅಗ್ರಹಾರದ ಊರೊಡೆಯರ (ಪ್ರಭುಮನ್ನೆಯ) ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು. ಕೆಲವೊಮ್ಮೆ ಗ್ರಾಮದ ಸಮಸ್ತರೂ (ಪ್ರಜೆ, ಹಲವು ಹದಿನೆಂಟು ಜಾತಿಯವರು, ಹಿಟ್ಟಿನವರು) ಈ ಸಭೆಯಲ್ಲಿ ಇರುತ್ತಿದ್ದರು. ಗಾವುಂಡ ಅಥವಾ ಊರೊಡೆಯನಲ್ಲದೆ ರಾಜಪ್ರತಿನಿಧಿಯಾದ ಅಧಿಕಾರಿಯೂ ಅಲ್ಲಿ ಹಾಜರಿರುತ್ತಿದ್ದ. ಗ್ರಾಮಸಭೆಗಳು ದಾನ ಅಥವಾ ದತ್ತಿಗಳನ್ನು ಸ್ವೀಕರಿಸುತ್ತಿದ್ದವು. ಅವುಗಳ ಸದ್ವಿನಿಯೋಗಕ್ಕೆ ವ್ಯವಸ್ಥೆ ಮಾಡುತ್ತಿದ್ದವು. ಗೋಷ್ಠಿಗಳನ್ನು ಅಥವಾ ವಿಶ್ವಸ್ಥರನ್ನು ನೇಮಕ ಮಾಡುತ್ತಿದ್ದವು. ವಿವಾದಗಳನ್ನು ಇತ್ಯರ್ಥ ಮಾಡುತ್ತಿದ್ದವು. ಗ್ರಾಮದ ದೇವಸ್ಥಾನ, ಕೆರೆ, ಶಾಲೆ ಅತಿಥಿಗೃಹ, ಅರವಟ್ಟಿಗೆಗಳ ನಿರ್ಮಾಣ ಮತ್ತು ಮೇಲ್ವಿಚಾರಣೆಗಳು ಅವುಗಳ ವ್ಯಾಪ್ತಿಗೆ ಸೇರಿದ್ದವು. ಹಾಗೆಯೇ ಅನಾಥರಿಗೆ ಹಾಗೂ ಸಂಕಟಪೀಡಿತರಿಗೆ ನೆರವು ಕೊಡುವುದೂ ಅವುಗಳ ಕೆಲಸವಾಗಿತ್ತು.

ಗಾಮುಂಡ, ಗಾವುಂಡ, ಗೌಡ, ಪಟೇಲ, ಪಾಟೀಲನೆಂದು ಕರೆಯಲ್ಪಡುತ್ತಿದ್ದ ಅಧಿಕಾರಿ ಗ್ರಾಮಾಡಳಿತೆಯ ಸೂತ್ರಧಾರನಾಗಿರುತ್ತಿದ್ದ. ಇವನು ರಾಜನಿಂದ ಅಥವಾ ಅವನ ಅಧಿಕಾರಿಗಳಿಂದ ನಿಯುಕ್ತನಿರಬಹುದು ಅಥವಾ ಗ್ರಾಮಸ್ಥರಿಂದ ನೇಮಕಹೊಂದಿ ಪ್ರಭುತ್ವದ ಸಮ್ಮತಿ ಪಡೆದಿರಬಹುದೆಂದು ಶಾಸನಗಳು ತಿಳಿಸುತ್ತವೆ. ಈತ ಗ್ರಾಮಸ್ಥರ ಪ್ರತಿನಿಧಿ; ಹಾಗೇಯೇ ಸರ್ಕಾರದ ಪ್ರತಿನಿಧಿಯೂ ಹೌದು. ಕಂದಾಯ ವಸೂಲಿ ಮಾಡುವುದು, ಚಿಕ್ಕಪುಟ್ಟ ವಿವಾದಗಳನ್ನು ಬಗೆ ಹರಿಸುವುದೂ ಶಾಂತಿ ಸುವ್ಯವಸ್ಥೆಗಳನ್ನು ನೋಡಿಕೊಳ್ಳುವುದೂ ಇವನ ಹೊಣೆ. ಭೂಮಿ ಅಳೆಯುವುದು, ಕಂದಾಯದ ಲೆಕ್ಕಪತ್ರ ಇಡುವುದು ಹಾಗೂ ಭೂದಾಖಲೆಗಳನ್ನು ಇಡುವುದು — ಇವು ಸೇನಬೋವ, ಶ್ಯಾನುಭೋಗ, ಕರಣಿಕ, ಗಣಕ, ಮಧ್ಯಸ್ಥ, ಲೇಖಕ, ಕುಲಕರ್ಣಿ ಎಂದು ಕರೆಯುತ್ತಿದ್ದ ಇನ್ನೊಬ್ಬ ಅಧಿಕಾರಿಯ ಕೆಲಸ. ಇವರಿಬ್ಬರೂ ಸರ್ಕಾರದಿಂದ ಇನಾಂ ಭೂಮಿಗಳನ್ನು ಪಡೆಯುವುದಲ್ಲದೆ ಭೂಕಂದಾಯದ ಒಂದಂಶವನ್ನು ಪಡೆಯುತ್ತಿದ್ದರು. ಸ್ಥಳೀಯ ಪದ್ಧತಿಗಳಿಗೆ ಅನುಸರಿಸಿ ಕೆಲವೊಮ್ಮೆ ಸಂತೆಯ ತಲೆಪಟ್ಟಿಯಲ್ಲೂ ಜಮೀನು ವಿಕ್ರಯ ಅಥವಾ ವರ್ಗಾವಣೆಯ ಕಾಲದಲ್ಲೂ ಧಾನ್ಯಸಂಗ್ರಹ ಕಾಲದಲ್ಲೂ ಒಂದಿಷ್ಟು ಸಂಭಾವನೆ ಪಡೆಯುತ್ತಿದ್ದರು. ಇವರ

ಅಧಿಕಾರ ಪಿತ್ರಾರ್ಜಿತವಾಗಿ ಬರುತ್ತಿತ್ತು. ಈ ಅಧಿಕಾರವನ್ನು ಮಾರಲೂ ಇವರಿಗೆ ಪರವಾನಿಗೆ ಇರುತ್ತಿತ್ತು.

ಗ್ರಾಮಕ್ಕೆ ಪ್ರತ್ಯೇಕವಾದ ನ್ಯಾಯಾಡಳಿತ ವ್ಯವಸ್ಥೆ ಇರಲಿಲ್ಲವೆಂಬುದು ನಿಜವಾದರೂ ಮಹಾಜನರೂ ಗೌಡ ಅಥವಾ ಊರೊಡೆಯರೂ ಈ ಕೆಲಸ ನಿರ್ವಹಿಸುತ್ತಿದ್ದರು. ಯುಕ್ತ, ಅಯುಕ್ತ ಅಥವಾ ನಿಯುಕ್ತರೆಂಬ ರಾಜಪ್ರತಿನಿಧಿಗಳೂ ಕೆಲವೊಮ್ಮೆ ಸಹಾಯಕ್ಕೆ ಬರುತ್ತಿದ್ದರೆಂದು ಶಾಸನಗಳು ಹೇಳುತ್ತವೆ. ಹೆಚ್ಚಾಗಿ ಪಂಚನಿರ್ಣಯದ ಮೂಲಕ ತೀರ್ಪು ಕೊಡಲಾಗುತ್ತಿತ್ತು. ಒಮ್ಮೊಮ್ಮೆ ದಿವ್ಯಗಳನ್ನು ಏರ್ಪಡಿಸಿ ಯಾರು ತಪ್ಪಿತಸ್ಥರೆಂದು ನಿರ್ಣಯ ಕೊಡುತ್ತಿದ್ದರು. ಗಡಿ, ಆಸ್ತಿ, ವ್ಯವಹಾರಗಳಲ್ಲಿ ಸ್ಥಳೀಯ ಆಚಾರ ರೂಢಿಗಳಿಗೆ ಅನುಗುಣವಾಗಿ ನ್ಯಾಯ ನಿರ್ಣಯವಾಗುತ್ತಿತ್ತು.

ಗ್ರಾಮಾಡಳಿತದ ಕೆಳವುಟ್ಟದಲ್ಲಿ ತೋಟಿ, ತಳವಾರ, ಊಳಿಗ, ನೀರ್ಗಂಟಿ, ಓಲೆಕಾರ ಇತ್ಯಾದಿ ಹೆಸರಿನ ಸೇವಕರಿದ್ದರು. ಗಡಿಗಳನ್ನು ಕಾಯುವುದು ಹಾಗೂ ಶಾಂತಿಸುವ್ಯವಸ್ಥೆ ಕಾಪಾಡುವುದು ಇವರ ಕೆಲಸ. ಇದೇ ರೀತಿ ಇತರರಿಗೂ ನಿರ್ದಿಷ್ಟ ಕೆಲಸಗಳಿದ್ದುವು. ಗೌಡನ ಕೈಕೆಳಗಿದ್ದರೂ ಇವರು ಇಡೀ ಗ್ರಾಮದ ಸೇವಕರು. ಈ ಹುದ್ದೆಗಳೆಲ್ಲ ವಂಶಪಾರಂಪರ್ಯವಾಗಿ ಬರುತ್ತಿದ್ದುವು. ಇತ್ತೀಚೆಗೆ ಈ ವ್ಯವಸ್ಥೆ ಬದಲಾಗುತ್ತಿದೆ. (ಎಚ್.ವಿ.ಎಸ್.)

**ಸಾಮಾಜಿಕ ವ್ಯವಸ್ಥೆ :** ಕರ್ನಾಟಕದ ಎಲ್ಲ ಗ್ರಾಮಗಳಲ್ಲಿ ಎದ್ದುಕಾಣುವ ಅಂಶವೆಂದರೆ ಜಾತಿವ್ಯವಸ್ಥೆ ಮತ್ತು ಸಾಮಾಜಿಕ ತರತಮಗಳ ಅನುಕ್ರಮಣಿಕೆ. ಗ್ರಾಮದಲ್ಲಿ ಒಬ್ಬ ವ್ಯಕ್ತಿಯ ಸಾಮಾಜಿಕ ಪ್ರತಿಷ್ಠೆ, ಸ್ಥಾನಮಾನ ಆತ ಸೇರುವ ಜಾತಿಯಿಂದ ನಿರ್ಧಾರಿತವಾಗುತ್ತದೆ. ಆರ್ಥಿಕವಾಗಿ ಆತ ಹೆಚ್ಚು ಸ್ಥಿತಿವಂತನಾಗಿದ್ದರೆ ಆ ಸ್ಥಾನಮಾನ ಇನ್ನೂ ಹೆಚ್ಚು ಗೌರವಾರ್ಹವಾಗುತ್ತದೆ. ಆರ್ಥಿಕವಾಗಿ ಸ್ಥಿತಿವಂತನಾದ ವ್ಯಕ್ತಿ ಆತ ಯಾವುದೇ ಜಾತಿಯವನಾಗಿರಲಿ ಗ್ರಾಮದಲ್ಲಿ ಪ್ರಭಾವೀವ್ಯಕ್ತಿಯಾಗುತ್ತಾನೆ. ಆತನನ್ನು ಜನ ಹೆಚ್ಚು ಗೌರವದಿಂದ ಕಾಣುತ್ತಾರೆ. ಅಷ್ಟೇ ಅಲ್ಲ ಆತ ಊರಿನ ಆಗುಹೋಗುಗಳಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ. ಉದಾಹರಣೆಗೆ, ಎಲ್ಲ ಜಾತಿಗಳಿಗಿಂತ ಮೇಲಿರುವವನು ಬ್ರಾಹ್ಮಣ. ಅಲ್ಲಿಂದ ಕೆಳಗೆ ಬಂದರೆ ವೀರಶೈವ. ವೀರಶೈವರಲ್ಲೇ ಅನೇಕ ಉಪಶಾಖೆಗಳು ಸಾಮಾಜಿಕ ಅನುಕ್ರಮಣಿಕೆಯಲ್ಲಿರುತ್ತವೆ. ಉದಾಹರಣೆಗೆ, ಪೌರೋಹಿತ್ಯ ಕಾರ್ಯವನ್ನು ಮಾಡುವ ಜಂಗಮರದು ಉಪಶಾಖೆಗಳಲ್ಲಿ ಮೊದಲನೆಯದು. ಉಳಿದ ಭಕ್ತರಲ್ಲಿ ದೇವರ ಪೂಜೆ ಮಾಡುವ ಪೂಜಾರಿ ಅನಂತರ ಬರುತ್ತಾನೆ. ಬಣಜಿಗ, ಒಕ್ಕಲುತನದವ ಇವರಲ್ಲಿ ಯಾರು ಮೇಲು ಎಂಬ ಬಗ್ಗೆ ಎಲ್ಲಾ ಕಡೆಯಲ್ಲೂ ಏಕಾಭಿಪ್ರಾಯ ಇರುವುದಿಲ್ಲ. ಊರಿನಲ್ಲಿ ಯಾರು ಪ್ರಬಲರೋ ಅವರೇ ಶ್ರೇಷ್ಠರಾಗಬಹುದು. ನೇಯ್ಗೆಯವರು, ಕ್ಷೌರದವರು, ಕುಂಬಾರ (ಇವರೆಲ್ಲ ಲಿಂಗಾಯಿತರೇ) ಇವರು ಒಂದು ಕ್ರಮದಲ್ಲಿ ಬರುತ್ತಾರೆ. ಲಿಂಗಾಯಿತರನ್ನು ಬಿಟ್ಟರೆ ಊರಿನ ಅಕ್ಕಸಾಲಿ, ಬಡಗಿ, ಕಮ್ಮಾರ ಬರುತ್ತಾರೆ. ಇವರೆಲ್ಲ ಒಂದೇ ಜಾತಿಯವರಾದರೂ ತರತಮದಲ್ಲಿ ಆ ಅನುಕ್ರಮದಲ್ಲಿ ಬರುತ್ತಾರೆ. ಅಕ್ಕಸಾಲಿಗ ಚಿನ್ನದ ಕೆಲಸ ಮಾಡುವುದರಿಂದ ಅವನು ಉಳಿದವರಿಗಿಂತ ಶ್ರೇಷ್ಠನಾಗುತ್ತಾನೆ. ಬಡಗಿಗಿಂತ ಕುಮ್ಮಾರನದು ಕೈಮೈ ಕೊಳಕಾಗುವ ಕೆಲಸ. ಆದ್ದರಿಂದ ಕಮ್ಮಾರ ಬಡಗಿಗಿಂತ ಕೆಳಗೆ ಬರುತ್ತಾನೆ ಇತ್ಯಾದಿ. ಮುಸಲ್ಮಾನ, ಕುರುಬ, ಬೇಡ, ಹೊಲೆಯ ಇವರುಗಳು ಮಾಂಸಾಹಾರಿಗಳಾದುದರಿಂದ ಇನ್ನೂ ಕೆಳಗೆ ಬರುತ್ತಾರೆ. ಮಾಂಸಾಹಾರ ಮಾಡುವ ಜಾತಿಯಲ್ಲೇ ಯಾರಾದರೂ ಮಾಂಸ ಬಿಟ್ಟಿದ್ದರೆ ಆತ ತಾನು ಶ್ರೇಷ್ಠನೆಂದು ಹೇಳಿಕೊಳ್ಳುವುದೂ ಉಂಟು. ಒಂದು ಜಾತಿಗೂ ಇನ್ನೊಂದು ಜಾತಿಗೂ ಮದುವೆಯ ವ್ಯವಹಾರವಿರುವುದೇ ಇಲ್ಲ. ಹೆಣ್ಣು ಕೊಟ್ಟು ಹೆಣ್ಣು ತರುವಾಗ ತಮ್ಮ ಜಾತಿ, ಉಪಜಾತಿಯನ್ನೇ ನೋಡುತ್ತಾರೆ. ಆಕಸ್ಮಾತ್ ಬೇರೆ ಬೇರೆ ಉಪಜಾತಿಗಳಲ್ಲೆ ಮದುವೆ ನಡೆದರೆ ಅದೊಂದು ಸುದ್ದಿ ಆಗುತ್ತದೆ. ಜನ ಅದನ್ನು ಪ್ರಿಯವಾಗಿ ನೋಡುವುದಿಲ್ಲ. ಜಾತಿಜಾತಿಗಳ ಮಧ್ಯೆ ವಿವಾಹ ಗ್ರಾಮಗಳಲ್ಲಿ ನಡೆಯುವುದೇ ಇಲ್ಲ ಎನ್ನುವಷ್ಟರಮಟ್ಟಿಗೆ ಅಪರೂಪ. ವಿವಾಹನಿಯಮ ಅಷ್ಟೊಂದು ಕಟ್ಟುನಿಟ್ಟಾಗಿರುತ್ತದೆ. ಒಬ್ಬ ಲಿಂಗಾಯಿತ ಮತದ ನಿಯಮಕ್ಕೆ ವಿರುದ್ಧವಾಗಿ ಮಾಂಸಾಹಾರ, ಮದ್ಯಪಾನ ಮಾಡುತ್ತಿದ್ದಾನೆಂದು ತಿಳಿದೂ ಜನ ಅವನ ಮನೆಗೆ ಹೋಗಬಹುದು. ತಮ್ಮ ಮನೆಯ ಒಳಕ್ಕೂ ಬಿಟ್ಟುಕೊಳ್ಳಬಹುದು. ಅವನಿಗೆ ಬಹಳ ಹೆಚ್ಚೆಂದರೆ ಅವನ ಹೆಣ್ಣುಮಕ್ಕಳ ವಿವಾಹ ಸ್ವಲ್ಪ ಕಷ್ಟವಾಗಬಹುದು (ಅವನು ಶ್ರೀಮಂತನಾಗಿದ್ದರೆ ಅದೂ ಕಷ್ಟವಾಗಲಾರದು). ಆದರೆ ಬೇರೆ ಜಾತಿಯಲ್ಲಿ ಹೆಣ್ಣು ತಂದು ಕೊಳ್ಳುವುದನ್ನಾಗಲಿ ಕೊಡುವುದನ್ನಾಗಲಿ ಗ್ರಾಮದ ಜನ ಸಹಿಸರು. ಒಂದು ಪಕ್ಷ ಈ ರೀತಿಯ ವಿವಾಹ ನಿಯಮವನ್ನು ಗ್ರಾಮದ ಯಾವನೇ ವ್ಯಕ್ತಿ ಅತಿಕ್ರಮಿಸಿ ನಡೆದರೆ ಅವನಿಗೆ ಗ್ರಾಮದಲ್ಲಿ ಯಾವುದೇ ಗೌರವವಾಗಲೀ ಬೆಲೆಯಾಗಲಿ ದೊರೆಯುವುದಿಲ್ಲ. ಆತ ಒಂಟಿಯಾಗಿಯೇ ಉಳಿಯಬೇಕಾಗುತ್ತದೆ. ಇಂಥ ಭಯವಿರುವುದರಿಂದ ಗ್ರಾಮದಲ್ಲಿ ಈ ಜಾತಿ ವ್ಯವಸ್ಥೆ ಗಟ್ಟಿಯಾಗಿಯೇ ಉಳಿದುಬಿಡುತ್ತದೆ.

ಹೀಗೆ ಜಾತಿವ್ಯವಸ್ಥೆ ಗ್ರಾಮಗಳನ್ನು ಒಡೆದು ಹೋಳು ಮಾಡಿರುವಂತೆ ಕಂಡರೂ ಸೂಕ್ಷ್ಮವಾಗಿ ಗಮನಿಸಿದರೆ ನಿಜವಾದ ಚಿತ್ರ ಅಂಥ ಗಾಬರಿ ಹುಟ್ಟಿಸುವಂಥದೇನೂ ಆಗಿಲ್ಲ. ಬೇರೆ ಬೇರೆ ಜಾತಿಯ ಜನ ಸೌಹಾರ್ದದಿಂದ ನಡೆದುಕೊಳ್ಳುವುದು ಗ್ರಾಮಗಳಲ್ಲಿ ಸಾಮಾನ್ಯ ನಿಯಮ (ಅಪವಾದಗಳೆಂಬಂತೆ ಘರ್ಷಣೆಗಳೂ ಉಂಟು). ಕುರುಬ, ಬೇಡರ ದೇವರ ಉತ್ಸವಗಳಿಗೆ ಉಳಿದ ಮೇಲು ಜಾತಿಯ ಜನರೂ ಅಷ್ಟೇ ಉತ್ಸಾಹದಿಂದ ಬರುವುದುಂಟು. ಮುಸಲ್ಮಾನರ ಉತ್ಸವಗಳಲ್ಲಿ ಹಿಂದುಗಳೂ ಪಾಲುಗೊಳ್ಳುತ್ತಾರೆ. ಊರಿನಲ್ಲಿ ಯಾರದೋ ಮನೆಯಲ್ಲಿ ಮದುವೆ ಆದರೆ, ಸಾವು ಸಂಭವಿಸಿದರೆ ಅದು ಇಡೀ ಊರಿಗೆ ಸಂಬಂಧಿಸಿದ ಸಂಗತಿಯಾಗುತ್ತದೆ. ಬೇರೆ ಬೇರೆ ಜನರ ಸಹಕಾರ ಬಂದು ಕೂಡಿ ಕೆಲಸಗಳು ನಡೆದುಹೋಗುತ್ತವೆ.

ಗ್ರಾಮದ ಬಹುಮುಖ್ಯವಾದ ಭಾಗವೆಂದರೆ ಊರಿನ ದೇವಾಲಯ. ಗ್ರಾಮದಲ್ಲಿ ಕರಿಯಪ್ಪ, ಮಾರವ್ವ, ಮಾಸ್ತಮ್ಮ, ಹನುಮಂತ ಮುಂತಾದ ಸಣ್ಣ ದೇವರಿಗೆ ದೇವಾಲಯಗಳಿದ್ದರೂ ಎಲ್ಲಕ್ಕಿಂತ ಮುಖ್ಯವಾಗಿರುವ ಒಂದು ದೇವಾಲಯವಿರುತ್ತದೆ. ಆ ದೇವಾಲಯದ ಸುತ್ತ ಊರಿನ ಎಲ್ಲಾ ಚಟುವಟಿಕೆಗಳೂ ಹಬ್ಬಿಕೊಂಡಿರುತ್ತವೆ. ಆ ದೇವರು ಜನರ ಕಷ್ಟದ ಸಮಯದಲ್ಲಿ ಸುಖದ ದಿನಗಳಲ್ಲಿ ತಮ್ಮನ್ನು ನೋಡಿಕೊಳ್ಳುವವನು ಎಂದು ಜನ ನಂಬುತ್ತಾರೆ. ಮನೆಯಲ್ಲಿ ತೀವ್ರಕಾಯಿಲೆಯಾದರೆ, ದನಕ್ಕೆ ಜ್ವರ ಬಂದರೆ, ಮೇಯಲು ಹೋಗಿದ್ದ ದನ ಮನೆಗೆ ಬಾರದೆ ಇದ್ದರೆ, ಹೊಲದಲ್ಲಿ ಬಾವಿ ತೋಡಿಸಲು, ಮದುವೆ ನಿಶ್ಚಯ ಮಾಡಲು ದೇವರ ಅಪ್ಪಣೆ ಬೇಕು. ಊರಿನಲ್ಲಿ ಜಗಳವಾದರೆ ಪಂಚಾಯ್ತಿ ನಡೆಸುವುದು ದೇವಾಲಯದಲ್ಲಿ. ದೇವರ ರಥೋತ್ಸವ ಗ್ರಾಮೀಣರ ಬಾಳಿನಲ್ಲಿ ಬಹುಮುಖ್ಯ ಘಟನೆ. ಅಂದು ಗ್ರಾಮೀಣರು ನೂರಾರು ನೆಂಟರಿಷ್ಟರೊಂದಿಗೆ ಸೇರಿ ದೇವರ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಈ ಉತ್ಸವ ಅವರಿಗೆ ಮನರಂಜನೆಯನ್ನು ನೀಡುತ್ತದೆ.

ಹಬ್ಬಹರಿದಿನಗಳನ್ನು ಗ್ರಾಮಗಳ ಜನ ಸಂಭ್ರಮದಿಂದ ಆಚರಿಸುತ್ತಾರೆ. ವರ್ಷವಿಡೀ ದುಡಿದು ಬಳಲಿದ ಜನಕ್ಕೆ ಅಂದು ವಿಶ್ರಾಂತಿಯ ಜೊತೆಗೆ ಮನರಂಜನೆಯೂ ದೊರಕುತ್ತದೆ. ಯುಗಾದಿ, ದೀಪಾವಳಿ, ಗೌರಿ, ಸಂಕ್ರಾಂತಿ, ಶಿವರಾತ್ರಿ ಮುಂತಾದ ಪ್ರಮುಖ ಹಬ್ಬಗಳಲ್ಲಿ ಊರ ಜನ ಮಿಂದು ಮಡಿಯುಟ್ಟು ಊರಿನ ಗ್ರಾಮದೇವತೆಗಳ ಗುಡಿಗಳಿಗೆ ಪೂಜೆಪುನಸ್ಕಾರ ಮಾಡಿಸುತ್ತಾರೆ. ದೇವಸ್ಥಾನಗಳನ್ನು ದುರಸ್ತು ಮಾಡಿಸುವುದು, ಬಣ್ಣಹೊಡೆಸುವುದು ಮೊದಲಾದ ಕಾರ್ಯಗಳು ಜರುಗುತ್ತವೆ. ಹಬ್ಬದ ದಿನ ಗ್ರಾಮದ ಜನ ಪರ ಊರುಗಳಿಂದಲೂ ನೆಂಟರಿಷ್ಟರನ್ನು ಆಹ್ವಾನಿಸುವುದುಂಟು. ಬಂದವರಿಗೆ ಪ್ರೀತಿಯ ಆದರಾತಿಥ್ಯ ಸತ್ಕಾರಗಳು ನಡೆಯುತ್ತವೆ. ಯುಗಾದಿ ಹಬ್ಬದ ದಿನ ಸಂಜೆ ಎಲ್ಲರೂ ದೇವಾಲಯದ ಸುತ್ತ ನೆರೆದು ಚಂದ್ರದರ್ಶನ ಮಾಡುತ್ತಾರೆ. ಸಾಮಾನ್ಯವಾಗಿ ಒಂದೇ ಬಗೆಯಾಗಿರುವ ಗ್ರಾಮೀಣರ ಬಾಳಿನ ಬೇಸರವನ್ನು ಇಂಥ ಹಬ್ಬಗಳು ಹೋಗಲಾಡಿಸುತ್ತವೆ. ಅಂದು ಹೊಸ ಬಟ್ಟೆ ತೊಡುತ್ತಾರೆ. ಸಿಹಿ ಊಟ ಮಾಡುತ್ತಾರೆ. ವಿಶ್ರಾಂತಿಯನ್ನು ಅನುಭವಿಸುತ್ತಾರೆ. ಗ್ರಾಮಗಳಲ್ಲಿ ಹಬ್ಬದ ದಿನಗಳು ಉಳಿದ ದಿನಗಳಿಂದ ಪ್ರತ್ಯೇಕವಾಗಿ ಎದ್ದುನಿಲ್ಲುತ್ತವೆ.

ಮದುವೆ ಗ್ರಾಮಗಳ ಜನರನ್ನು ಒಟ್ಟಿಗೆ ಬೆಸೆಯುವ ಇನ್ನೊಂದು ಸಾಂಸ್ಕೃತಿಕ ಚಟುವಟಿಕೆಯಾಗಿದೆ. ನಾಲ್ಕೈದು ದಿನಗಳವರೆಗೆ, ಕೆಲವೊಮ್ಮೆ ಅದಕ್ಕೂ ಹೆಚ್ಚು ದಿನ ನಡೆಯುವ ಈ ಕಾರ್ಯ ಗ್ರಾಮೀಣರ ಬದುಕನ್ನು ಪರಸ್ಪರ ನಿಕಟಗೊಳಿಸುತ್ತದೆ; ಒಂದಾಗುವಂತೆ ಪ್ರೇರೇಪಿಸುತ್ತದೆ. ದೇವರ ಉತ್ಸವ, ಹಬ್ಬ ಇವುಗಳನ್ನು ತಮ್ಮ ಮನರಂಜನೆಗಾಗಿಯೂ ಬಳಸಿಕೊಳ್ಳುವಂತೆ ಮದುವೆಗಳನ್ನೂ ಬಳಸಿಕೊಳ್ಳುತ್ತಾರೆ. ಗ್ರಾಮಗಳಲ್ಲಿ ಮದುವೆ ಯಾರದೇ ಮನೆಯಲ್ಲಿ ಆಗಲಿ ಪ್ರತಿಯೊಂದು ಮನೆಯವರು ಅದಕ್ಕೆ ಸಹಕರಿಸುತ್ತಾರೆ. ಚಪ್ಪರ ಮುಂಗಟ್ಟು ಕಟ್ಟುವುದರಿಂದ ಹಿಡಿದು ಹೆಣ್ಣುಗಂಡುಗಳನ್ನು ಮನೆದುಂಬಿಸಿಕೊಳ್ಳುವವರೆಗೂ ಎಲ್ಲ ಹಂತಗಳಲ್ಲಿಯೂ ಸಹಕಾರ ಇದ್ದೇ ಇರುತ್ತದೆ. ಮದುವೆ ಯಾರ ಮನೆಯಲ್ಲಿ ನಡೆಯುತ್ತದೆಯೋ ಆ ವ್ಯಕ್ತಿ ಊರಿಗೆ ಊಟ ಹಾಕಿಸಬೇಕಾಗುತ್ತದೆ. ಸೌದೆ ನೀರುನಿಡಿ ಮೊದಲಾದವುಗಳ ವ್ಯವಸ್ಥೆಗೆ ಗ್ರಾಮದ ಜನ ನೆರವು ನೀಡುತ್ತಾರೆ. ಆ ಜಾತಿ ಈ ಜಾತಿಯವರೆನ್ನದೆ ಎಲ್ಲ ಜಾತಿಯ ಜನರೂ ಇಂಥ ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. ಹೀಗೆ ಪರಸ್ಪರ ಆತ್ಮೀಯ ಸಂಬಂಧ ಅವರಲ್ಲಿ ಏರ್ಪಡುತ್ತದೆ. ಇತ್ತೀಚಿನ ದಿನಗಳಲ್ಲಿ ಯಾವುದೇ ಅಬ್ಬರ, ಆಡಂಬರ, ಶಾಸ್ತ್ರಗಳಿಲ್ಲದ ಸರಳವಿವಾಹಗಳು ಜನಪದರಲ್ಲಿ ಅನುಷ್ಠಾನಕ್ಕೆ ಬರುತ್ತಿವೆ.

ಗ್ರಾಮಗಳ ಬಾಲಕ ಬಾಲಕಿಯರ ಮನರಂಜನೆಗಳಲ್ಲಿ ಮರಕೋತಿಯಾಟ, ಚಿಣ್ಣಿದಾಂಡು, ಚೆಂಡು, ಗೋಲಿ, ಗಜ್ಜುಗ, ಎಳ್ಳುಮಣೆ, ಕುಂಟೆ ಪಿಲ್ಲಿ, ಪಿಲ್ಲಿ, ಚೌಕಾಬಾರ, ಪಗಡೆ, ಕಣ್ಣುಮುಚ್ಚಾಲೆ, ಕುಸ್ತಿ— ಇವು ಮುಖ್ಯವಾದವು. ದೊಡ್ಡವರಿಗೆ ಕೋಲಾಟ, ಕುಸ್ತಿ, ತೆಂಗಿನಕಾಯಿ ಒಡೆಯುವಂಥ ಸಾಹಸಗಳು ಮುಖ್ಯವಾದುವು. ಬಾಲಕರು ಹಾಗೂ ದೊಡ್ಡವರು ಒಗಟುಗಳನ್ನು ಹೇಳುವುದರಲ್ಲಿ ಬಿಡಿಸುವುದರಲ್ಲಿ ಸಂತೋಷವನ್ನು ಅನುಭವಿಸಿರುತ್ತಾರೆ. ಹಿಂದೆ ರಾತ್ರಿಯೆಲ್ಲಾ ಬಯಲಾಟಗಳು ನಡೆಯುತ್ತಿದ್ದವು. ಈಗ ಅವು ಮಾಯವಾಗುತ್ತಿವೆ. ಆಗಾಗ್ಗೆ ಸಣ್ಣ ನಾಟಕ ಕಂಪನಿಗಳು ಬಂದು ಹೋಗುವುದುಂಟು. ಊರಿನ ಯುವಕರೇ ಸೇರಿ ನಾಟಕಗಳನ್ನು ಕಲಿತು ಆಡುವುದೂ ಉಂಟು. ಹೆಂಗಸರು ಬೀಸುವುದರ ಜೊತೆಜೊತೆಯಲ್ಲೇ ಹಾಡಿದರೆ ರೈತರು ಸುಗ್ಗಿಮಾಡುವ ಕೆಲಸದ ಶ್ರಮವನ್ನು ಹಾಡುಗಳ ಮೂಲಕ ಕಡಿಮೆ ಮಾಡಿಕೊಳ್ಳುತ್ತಾರೆ.

**ನಾಗರಿಕತೆಯ ಪ್ರಭಾವ :** ಐವತ್ತು ಅರವತ್ತು ವರ್ಷಗಳ ಹಿಂದೆ ನಿಜವಾಗಿದ್ದ ಮೇಲಿನ ವಿಷಯಗಳು ಈಗಲೂ ತಕ್ಕಮಟ್ಟಿಗೆ ನಿಜವಾಗಿದ್ದರೂ ಆಧುನಿಕ ನಾಗರಿಕತೆಯ ಪ್ರವೇಶವಾಗಿ ಗ್ರಾಮೀಣ ಜನರ ಜೀವನ ಕ್ರಮದಲ್ಲಿ ಅನೇಕ ಮಾರ್ಪಾಟುಗಳಾಗಿವೆ. ಹಿಂದೆ ಗ್ರಾಮಗಳಲ್ಲಿ ವ್ಯಕ್ತಿ ಗುಂಪಿನ ಭಾಗವಾಗಿ ಬದುಕುತ್ತಿದ್ದ. ಈ ದಿನ ಅವನು ತನ್ನ ವ್ಯಕ್ತಿತ್ವದ ಅರಿವನ್ನು ಪಡೆಯಲು ಯತ್ನಿಸುತ್ತಿದ್ದಾನೆ. ಊರೂರಿಗೆ ಬಸ್ಸುಗಳು ತಿರುಗುತ್ತಿದ್ದು ಅವು ಪಟ್ಟಣ ಮತ್ತು ಗ್ರಾಮಗಳನ್ನು ಹತ್ತಿರ ತಂದಿವೆ. ಬಸ್ಸು, ಲಾರಿ, ಟ್ರಾಕ್ಟರುಗಳು ರೈತರ ಸರಕನ್ನು ಸುಲಭವಾಗಿ ಪೇಟೆಗೆ ಕೊಂಡೊಯ್ಯುತ್ತವೆ. ಪಟ್ಟಣದ ಸಂಪರ್ಕದಿಂದ ಅವನು ಹೆಚ್ಚುಹೆಚ್ಚಾಗಿ ಹೊರಪ್ರಪಂಚದ ಬಗ್ಗೆ ಅರಿವನ್ನು ಪಡೆಯುತ್ತಿದ್ದಾನೆ. ವಿದ್ಯುಚ್ಛಕ್ತಿಯ ಜೊತೆಗೆ ರೇಡಿಯೋ ದೂರದರ್ಶನ ಬಂದಿದೆ. ಮನೆಯಲ್ಲಿ ಮದುವೆಯಾದರೆ ಧ್ವನಿವರ್ಧಕಗಳನ್ನು ತರಿಸುವುದುಂಟು. ಹಿಂದಿನ ಹಳ್ಳಿಯ ಹಾಡುಗಳ, ಬಯಲಾಟದ ಹಾಡುಗಳ ಜಾಗದಲ್ಲಿ ಇಂದು ಸಿನಿಮಾ ಹಾಡುಗಳು ಕೇಳಿಬರುತ್ತವೆ. ಸಿನಿಮಾ ಗ್ರಾಮೀಣರ ಮೇಲೆಯೂ ಸಾಕಷ್ಟು ಪ್ರಭಾವ ಬೀರಿವೆ. ವಿದ್ಯಾವಂತರ ಸಂಖ್ಯೆ ಕ್ರಮೇಣ ಬೆಳೆಯುತ್ತಿದೆ. ರೈತರಿಗೆ ತಮ್ಮ ಮಕ್ಕಳು ಓದಿ ಮುಂದಕ್ಕೆ ಬರಬೇಕೆಂಬ ಆಸೆ ಬಂದಿದೆ. ಗ್ರಾಮಗಳಲ್ಲಿ ಪ್ರೌಢಶಾಲೆಗಳಿವೆ. ದೊಡ್ಡದೊಡ್ಡ ಗ್ರಾಮಗಳಿಗೆ ಜೂನಿಯರ್ ಕಾಲೇಜುಗಳು ಬಂದಿವೆ. ಹೀಗಾಗಿ ರೇಡಿಯೋದಂತೆಯೇ ದೂರದರ್ಶನವೂ ಕೇಬಲ್ ಟಿ.ವಿ.ಜಾಲವೂ ವೃತ್ತಪತ್ರಿಕೆಗಳೂ ಮೂಲೆಮೂಲೆಯ ಹಳ್ಳಿಗಳನ್ನು ಸೇರಿವೆ. ಇವೆಲ್ಲ ಗ್ರಾಮಗಳ ಚಹರೆಯನ್ನೇ ಬದಲಾಯಿಸಿವೆ. ಗ್ರಾಮೀಣ ಜನರ ದೃಷ್ಟಿಯನ್ನೂ ಬದಲಾಯಿಸಿದೆ. ಹೆಚ್ಚಿದ ನೀರಾವರಿ, ಸುಧಾರಿಸಿದ ಬೇಸಾಯ ಕ್ರಮ, ಕೃತಕ ಗೊಬ್ಬರ ಮೊದಲಾದವುಗಳಿಂದ ಆಹಾರ ಉತ್ಪಾದನೆ ಹೆಚ್ಚಿದೆ. ಬೆಳೆದುದಕ್ಕೆ ಹೆಚ್ಚಿನ ಬೆಲೆಯೂ ರೈತರಿಗೆ ದೊರಕುತ್ತಿದೆ. ಇದರಿಂದ ಹಿಂದಿಗಿಂತ ಇಂದಿನ ರೈತರ ಕೈಲಿ ಹೆಚ್ಚು ಹಣ ಓಡಾಡುತ್ತಿದೆ. ಹಿಟ್ಟಿನ ಗಿರಣಿಗಳು ಬಂದು ಬೀಸುವ ಕಲ್ಲುಗಳು ತತ್ಸಂಬಂಧವಾದ ಹಾಡುಗಳು ಮರೆಯಾಗುತ್ತಿವೆ. ದೊಡ್ಡ ದೊಡ್ಡ ಗ್ರಾಮಗಳಲ್ಲಿ ಉನ್ನತ ಶಿಕ್ಷಣ ಪಡೆದ ವೈದ್ಯರಿರುವ ಆಸ್ಪತ್ರೆಗಳಿರುವುದರಿಂದ ಜನರಿಗೆ ಹಿಂದಿಗಿಂತ ಹೆಚ್ಚು ಸುಲಭವಾಗಿ ವೈದ್ಯಕೀಯ ಸಹಾಯ ದೊರಕುತ್ತಿದೆ. ಅಡುಗೆ ಅನಿಲ ಅಸಂಖ್ಯ ಮನೆಗಳ ಅಡುಗೆ ಮನೆಯಲ್ಲಿ ಉರಿಯುತ್ತಿದೆ. ಗೋಬರ್ ಗ್ಯಾಸ್ ಉತ್ಪಾದನೆಯೂ ಹಲವಾರು ಮನೆಗಳ ಇಂಧನ ಪೂರೈಕೆಯ ಪ್ರಧಾನ ಸಾಧನವಾಗಿದೆ. ಉತ್ತಮ ರಸ್ತೆ ವ್ಯವಸ್ಥೆ ಮತ್ತು ಸಾರಿಗೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ವಿಶ್ವಬ್ಯಾಂಕ್ ನೆರವು ಹೊಕ್ಕಿದ್ದು ಹೊಸ ರಸ್ತೆಗಳ ನಿರ್ಮಾಣಕಾರ್ಯ ಮತ್ತು ಅಗಲೀಕರಣ ಕಾರ್ಯಗಳು ಕಾರ್ಯಗತವಾಗುತ್ತಿವೆ.

ಹಿಂದೆ ಗ್ರಾಮದ ಸ್ಥಳೀಯ ವಿದ್ಯಮಾನ ಆಗುಹೋಗುಗಳು ಊರಿನ ಹಿರಿಯರ ಹಿಡಿತದಲ್ಲಿರುತ್ತಿದ್ದವು. ಈಗ ಚುನಾವಣೆಯ ಮೂಲಕ ಪ್ರತಿನಿಧಿಗಳು ಗ್ರಾಮಪಂಚಾಯಿತಿಗೆ ಆರಿಸಿ ಬರುತ್ತಾರೆ. ಸಾರ್ವತ್ರಿಕ ಚುನಾವಣೆಗಳ ಮೂಲಕ ದೇಶದ ರಾಜಕೀಯ ಪಕ್ಷಗಳು ಗ್ರಾಮೀಣರ ಜೀವನರಂಗವನ್ನು ಪ್ರವೇಶಿಸಿವೆ. ಜನರಲ್ಲಿ ರಾಜಕೀಯ ಅರಿವು ಮೂಡಿದೆ. ಗ್ರಾಮಪಂಚಾಯಿತಿಯಿಂದ ಹಿಡಿದು ಜಿಲ್ಲಾ ಪಂಚಾಯಿತಿವರೆಗೂ ಮೀಸಲಾತಿ ವ್ಯವಸ್ಥೆ ಬಂದಿರುವುದು (ನೋಡಿ: ಸ್ಥಳೀಯ ಸಂಸ್ಥೆಗಳು) ಸಮಾಜದ ವಿವಿಧ ಸ್ತರದ ಜನಸಮುದಾಯ ಆಡಳಿತ ಮತ್ತು ಅಧಿಕಾರದ ಚುಕ್ಕಾಣಿ ಹಿಡಿಯುವ ಸಂದರ್ಭ ಸೃಷ್ಟಿಯಾಗಿದೆ.

ಆಧುನೀಕರಣ ಗ್ರಾಮಗಳನ್ನು ಪ್ರವೇಶಿಸಿರುವುದು ಮೇಲ್ನೋಟಕ್ಕೆ ಕಾಣುವಂಥದು. ಆದರೂ ಅಲ್ಲಿ ಗುಪ್ತವಾಗಿ, ಗಟ್ಟಿಯಾಗಿ ಪ್ರಾಚೀನ ಪರಂಪರೆ ಕೆಳಗೆ ಕುಳಿತಿದೆ. ಪಟ್ಟಣದಷ್ಟು ಬೇಗ ಗ್ರಾಮ ತನ್ನ ಪ್ರಾಚೀನ ಪರಂಪರೆಯನ್ನು ಬಿಟ್ಟುಕೊಡಲಾರದು ಎನಿಸುತ್ತದೆ. ಗ್ರಾಮೀಣರ ದೃಷ್ಟಿ ಎಷ್ಟೇ ಲೌಕಿಕವಾಗಿದ್ದರೂ ಅದು ಸಂಪೂರ್ಣವಾಗಿ ತನ್ನ ಹಿಂದಿನ ಸ್ವರೂಪವನ್ನು ಕಳೆದುಕೊಂಡಿದೆಯೆಂದು ಹೇಳುವುದು ಕಷ್ಟ. ಹಳೆಯ ಹಾಗೂ ಹೊಸದರ ಸಾಮರಸ್ಯ ಸುಗಮವಾಗಿ ಸಾಗಿ ತನ್ನದೇ ಆದ ಒಂದು ಹೊಸ ನೀತಿ ಮತ್ತು ವ್ಯವಸ್ಥೆಯನ್ನು ಕಾಣುವ ಹಾದಿಯಲ್ಲಿ ನಮ್ಮ ಗ್ರಾಮಗಳು ಮುನ್ನಡೆಯುತ್ತಿವೆ. (ಎಂ.ಪಿ.)

**ಗ್ರಾಮದೇವತೆಗಳು :** ಗ್ರಾಮಕ್ಕೆ ಒಳಿತನ್ನುಂಟುಮಾಡುವ, ಜನಪದರಲ್ಲಿ ಭಯಭಕ್ತಿಗಳನ್ನು ಹುಟ್ಟಿಸುವ ಪ್ರತಿಯೊಂದು ಗ್ರಾಮಕ್ಕೂ ಒಂದು ಗ್ರಾಮದೇವತೆ ಇರುತ್ತದೆ. ಇದೇ ಗ್ರಾಮದ ಮುಖ್ಯ ದೈವ. ಈ ದೈವವನ್ನು ಪ್ರತಿಯೊಂದು ಗ್ರಾಮದವರು ತಮ್ಮ ಗ್ರಾಮಕ್ಕಾಗಿ ಸೃಷ್ಟಿಸಿ ಸ್ಥಾಪಿಸಿ ಪೂಜಿಸಲು ಪ್ರಾರಂಭ ಮಾಡಿದುದರಿಂದ ಇದಕ್ಕೆ ಗ್ರಾಮದೇವತೆಯೆಂದು ಹೆಸರಾಯಿತು. ಭಾರತದಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮಕ್ಕೂ ಒಂದು ಗ್ರಾಮದೇವತೆಯೂ ದೇವಸ್ಥಾನವೂ ಇವೆ. ಹಳ್ಳಿಗಳು ಅತಿ ಚಿಕ್ಕವೂ ಹತ್ತಿರದಲ್ಲಿರುವವೂ ಆದಾಗ, ಎರಡು ಮೂರು ಹಳ್ಳಿಗಳಿಗೆ ಮಧ್ಯಸ್ಥವಾಗಿ ಎಲ್ಲರಿಗೂ ಹತ್ತಿರವಾಗುವ ಸ್ಥಳದಲ್ಲಿ ಒಂದು ಗ್ರಾಮದೇವತೆಯ ದೇವಾಲಯ ಸ್ಥಾಪಿತವಾಗಿರುತ್ತದೆ. ನೂರಕ್ಕೆ ತೊಂಬತ್ತೊಂಬತ್ತು ದೇವಾಲಯಗಳು ಊರ ಹೊರಗಿರುತ್ತವೆ.

ಈ ದೇವಾಲಯಗಳು ಸ್ಥಾಪಿತವಾದ ಕಾಲ ಯಾವುದು ಎಂಬುದಕ್ಕೆ ಐತಿಹಾಸಿಕ ಆಧಾರಗಳು ದೊರೆತಿರುವುದು ಅತಿ ಸ್ವಲ್ಪ. ಆದರೆ ಜನಪದದಲ್ಲಿ ರೂಢಿಯಲ್ಲಿರುವ ಮತ್ತು ಕೆಲವು ಗ್ರಾಮದೇವತೆಗಳ ದೇವಾಲಯವನ್ನು ಕುರಿತ ಐತಿಹ್ಯಗಳಿಂದ ಸಂಗ್ರಹಿತವಾದ ಅಂಶಗಳು ಹೀಗಿವೆ: ಆದಿಮಾನವನಿಗೆ ತಾನು ಕಂಡ ಜಗತ್ತಿನ ಬಗ್ಗೆ ಒಂದು ಬಗೆಯ ವಿಸ್ಮಯವೂ ಭಯವೂ ಮೊದಲು ಉಂಟಾಗಿರಬೇಕು. ಕ್ರಮೇಣ ಅವನು ಅಂಥ ಸೃಷ್ಟಿವೈಚಿತ್ರ್ಯಕ್ಕೆ ಕಾರಣಕರ್ತನಾದ ದೈವ ಒಂದಿರಬೇಕು ಎಂಬ ಭಾವನೆಯನ್ನು ಬೆಳೆಸಿಕೊಂಡನೆಂದು ಕಾಣುತ್ತದೆ. ಗ್ರಾಮದೇವತೆ ಮತ್ತು ಇತರ ಉಪದೇವತೆಗಳ ಕಲ್ಪನೆಯ ಅನಂತರ ಮೂಡಿದ್ದು ದೇವರ ಕಲ್ಪನೆ; ಪ್ರಪಂಚಕ್ಕೆಲ್ಲ ಹೊಣೆಗಾರ; ಅವನಿಗೆ ಕೈತುಂಬ ಕೆಲಸವಾದ್ದರಿಂದ

ಆತ ಯಾವ ಕಡೆ ಅಂತ ನೋಡುತ್ತಾನೆ? ತಮ್ಮ ಕಡೆ ಗಮನಿಸುವುದಕ್ಕೆ ಅವನಿಗೆ ಹೊತ್ತು ಎಲ್ಲಿದೆ? ಆದ್ದರಿಂದ ತಾವು ದೇವರಿಗೂ ತಮಗೂ ನಡುವೆ ಒಬ್ಬ ಮಧ್ಯಸ್ಥನನ್ನು ಸಣ್ಣ ದೇವರನ್ನು ಏರ್ಪಡಿಸಿಕೊಂಡು ಅವನನ್ನು ತೃಪ್ತಿಪಡಿಸಿ, ಅವನ ಮೂಲಕ ಜಗತ್‌ಕರ್ತನನ್ನು ಒಲಿಸಿಕೊಳ್ಳುವುದು ಸುಲಭ ಎಂಬ ಭಾವನೆ ಬಲಿತಂತೆಲ್ಲ ಊರಿಗೊಂದು ಗ್ರಾಮದೇವತೆ ಸೃಷ್ಟಿಯಾಗಿರಬೇಕು. ಗ್ರಾಮಘಟಕಗಳು ಪ್ರಾರಂಭವಾದಂದಿನಿಂದಲೇ ಗ್ರಾಮದೇವತೆಯೂ ಅಸ್ತಿತ್ವಕ್ಕೆ ಬಂತು ಎಂದು ಹೇಳಬಹುದು. ಆದ್ದರಿಂದ ಗ್ರಾಮದೇವತೆಯ ಕಲ್ಪನೆ ಅತ್ಯಂತ ಪ್ರಾಚೀನ ಕಾಲಕ್ಕೆ ಅಂದರೆ ಆರ್ಯರು, ಅನಾರ್ಯರು, ಉಪನಿಷತ್ತು, ವೇದ, ಎಲ್ಲವುಗಳ ಹಿಂದಲ ಕಾಲಕ್ಕೆ ಸೇರಿದುದೆಂದು ಹೇಳಬಹುದು. ರಾಮಾಯಣ ಕಾಲಕ್ಕೂ ಹಿಂದಿನಿಂದಲೇ ಈ ದೇವತೆ ಇದ್ದಿರಬೇಕು. ಸೀತೆ ಗಂಗೆಯನ್ನು ದಾಟುವಾಗ ಗಂಗೆಯನ್ನು ಹೀಗೆ ಪ್ರಾರ್ಥಿಸುತ್ತಾಳೆ; 'ನಿನ್ನ ತೀರದಲ್ಲಿರುವ ದೇವತೆಗಳಿಗೆ ಅನೇಕ ನೈವೇದ್ಯಗಳನ್ನೂ ಮಾಡಿಸುವೆನು. ನಿನಗೆ ಸಂತೋಷವಾಗುವ ಮರ್ಯಾದೆಯಲ್ಲಿ ಸಾವಿರ ಸುರಾಘಟಗಳನ್ನೂ ಅನೇಕ ಮಾಂಸೋಪಹಾರಗಳನ್ನೂ ಬಲಿಯಾಗಿ ಕೊಡವೆನು'. ಸೀತೆ ಹೇಳಿರುವ ಈ ದೇವತೆಗಳು ಗಂಗಾತೀರದ ಗ್ರಾಮದೇವತೆಗಳೆಂದು ಊಹಿಸಲು ಅವಕಾಶವಿದೆ.

ಮಾವಿನಕೆರೆ ಚೌಡೇಶ್ವರಿ

ಹಳ್ಳಿಯ ರೈತರು ವಿವಾಹಗಳಲ್ಲಿ ಗ್ರಾಮದೇವತೆಗೆ ಮೊದಲ ವೀಳ್ಯ ಎತ್ತುತ್ತಾರೆ. ಈ ವೀಳ್ಯ ಎಂಬುದನ್ನು ಸಹ ಆರ್ಯರು ದ್ರಾವಿಡರಿಂದ ಅಂಗೀಕರಿಸಿದುದರಿಂದ, ಗ್ರಾಮದೇವತೆಯ ಮೂಲ ತುಂಬ ಪ್ರಾಚೀನ ಕಾಲಕ್ಕೆ ಹೋಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಅನಂತರದ ವರ್ಷಗಳಲ್ಲಿ ಎಷ್ಟರಮಟ್ಟಿಗೆ ಗ್ರಾಮದ ಅವಿಭಾಜ್ಯ ಅಂಗವಾಯಿತೆಂದರೆ, ಸರ್ಕಾರದವರು ಪ್ರತಿಯೊಂದು ಗ್ರಾಮಕ್ಕೂ ಗ್ರಾಮದೇವತೆಗೂ ಉಂಬಳಿ ಜಮೀನನ್ನು ಕಡ್ಡಾಯವಾಗಿ ಬಿಟ್ಟು ಅದನ್ನು ಗ್ರಾಮದ ಬಾರಾಬಲೂತಿ ಲೆಕ್ಕದಲ್ಲಿ ಸೇರಿಸಿದ್ದಾರೆ. ಹೀಗೆ ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದ ವರೆಗೆ ಗ್ರಾಮದೇವತೆ ಜನಪದ ಜೀವನದಲ್ಲಿ ಅವಿಭಾಜ್ಯವಾಗಿ ಸೇರಿಕೊಂಡು ಬಂದಿದೆ.

ಜನತೆಯ ದೃಷ್ಟಿಯಲ್ಲಿ ಗ್ರಾಮದೇವತೆಯ ಮಟ್ಟ ಅತಿ ಹೆಚ್ಚಿನದೂ ಅಲ್ಲ, ಅತಿ ಕಡಿಮೆಯದೂ ಅಲ್ಲ. ಅದರ ಕಾರ್ಯ, ಪ್ರಭಾವ, ದೃಷ್ಟಿ ಒಂದು ಗ್ರಾಮಕ್ಕೆ ಮಾತ್ರ ಸೀಮಿತವಾದದ್ದು. ಅಂದರೆ ಆ ಗ್ರಾಮದ ಹಿತರಕ್ಷಣೆಗಂತೂ ಗ್ರಾಮದೇವತೆಯೇ ಸಾರ್ವಭೌಮ. ಗ್ರಾಮದಲ್ಲಿ ಯಾರೊಬ್ಬರೂ ಅದರ ಪ್ರಭಾವದಿಂದ ಹೊರಗಿರಲು ಸಾಧ್ಯವೂ ಇಲ್ಲ, ಅವಕಾಶವೂ ಇಲ್ಲ. ಗ್ರಾಮಕ್ಕೆ ಯಾವ ಶುಭ ದೊರಕಬೇಕಾದರೂ ಅದನ್ನು ಉಂಟುಮಾಡುವುದು, ಯಾವ ಅಪಾಯ ಒದಗಿದರೂ ಅದನ್ನು ತಪ್ಪಿಸುವುದು ಗ್ರಾಮದೇವತೆಯ ಹೊಣೆಗಾರಿಕೆ. ರೈತರ ಮನೆಯಲ್ಲಿ ಯಾರಿಗೋ ರೋಗ ಬರುತ್ತದೆ, ಎಮ್ಮೆ ಉಚ್ಚುತ್ತದೆ, ಹಾಲು ಕೊಡುವುದಿಲ್ಲ, ಗೊಬ್ಬರ ಎಷ್ಟೇ ಹಾಕಿದರೂ ಹೊಲಗದ್ದೆಗಳಲ್ಲಿ ಪೈರು ನೆರೆಯ ಜಮೀನಿನಲ್ಲಿರುವಷ್ಟು ಫಲ ಭರಿತವಾಗುವುದಿಲ್ಲ, ಆಗ ರೈತ ಗ್ರಾಮದೇವತೆಗೆ ಒಂದು ಹರಕೆ ಹೊರುತ್ತಾನೆ. ಕಾರ್ಯ ದೊಡ್ಡದಾಗಿದ್ದರೆ ಅಂದರೆ ಮನೆಯ ಯಜಮಾನನಿಗೆ ಗುಣವಾಗದ ರೋಗ ಬಂದಿದ್ದರೆ, ಇಲ್ಲವೆ ದೊಡ್ಡ ಜಮೀನಿನ ವ್ಯಾಪಾರ ಕುದುರಬೇಕಾದರೆ, ಇಲ್ಲವೆ ಕೋರ್ಟು ವ್ಯಾಜ್ಯ ಗೆಲ್ಲಬೇಕಾದರೆ ಆತ ಗ್ರಾಮದೇವತೆಗೆ ತೋರಿಸುವ ಬಲಿಯ ಆಸೆ ಕೋಳಿಯಿಂದ ಕುರಿಯವರೆಗೆ ಹೋಗುತ್ತದೆ. ಹೀಗೆ ಪ್ರತಿಯೊಬ್ಬರೂ ತಮ್ಮ ಕಷ್ಟಗಳಿಗಾಗಿ ಗ್ರಾಮದೇವತೆಯನ್ನು ಮೊರೆಹೋಗಲೇಬೇಕು. ಗ್ರಾಮದೇವತೆ ಸರಿಯಾಗಿ ತನ್ನ ಕರ್ತವ್ಯವನ್ನು ಮಾಡಿ, ರೈತನಿಗೆ ಸಂತೃಪ್ತಿಯನ್ನುಂಟುಮಾಡದಿದ್ದರೆ ರೈತ ದೇವತೆಯನ್ನು ಸುಮ್ಮನೆ ಬಿಡುವುದಿಲ್ಲ. ಸಾಧಾರಣವಾಗಿ ಪ್ರತಿ ಗ್ರಾಮದವರೂ ತಮ್ಮ ಗ್ರಾಮದೇವತೆಗೆ ಹರಕೆ ಮಾಡಿಕೊಳ್ಳುವುದು ವಾಡಿಕೆ. ಆ ವಿಷಯದಲ್ಲಿ ಗ್ರಾಮದವರದು ಬಹುಮಟ್ಟಿಗೆ ಕಟ್ಟುನಿಟ್ಟು. ಗ್ರಾಮದೇವತೆ, ಒಂದು ಗ್ರಾಮಕ್ಕೆ ಸೇರಿದ್ದರಿಂದ, ಅದರ ಅನುಗ್ರಹ ಆ ಗ್ರಾಮದವರಿಗೇ ಮೀಸಲು. ಗ್ರಾಮದವರೂ ಅವಳನ್ನೇ ನಂಬಿ ಸಕಲಕ್ಕೂ ಅವಳನ್ನೇ ಯಾಚಿಸಿ ಪಡೆಯಬೇಕೆಂಬುದು ಸಾಮಾನ್ಯ ನಿಯಮ. ಆದರೆ ಹಳ್ಳಿಗಾಡಿನ ಮನುಷ್ಯ, ತುಂಬ ವ್ಯವಹಾರಸ್ಥನಾಗಿರುವುದರಿಂದ ಆತ ತನ್ನ ದೇವರನ್ನೂ ಪರೀಕ್ಷಿಸುತ್ತಾನೆ. ತನ್ನೂರ ಗ್ರಾಮದೇವತೆಗೆ ಮಾಡಿಕೊಂಡ ಹರಕೆ ಒಂದು ಸಲ ಎರಡು ಸಲ ವಿಫಲವಾದರೆ, ಆತ ದೇವತೆಯ ಮುಂದೆ ನಿಂತು, ಸಾರ್ವಜನಿಕ ಹೇಳಿಕೆಯನ್ನು ಕೊಡುವವನಂತೆ ಗಟ್ಟಿಯಾಗಿ, ನಾನು ನಿನಗೆ ಇಂಥಿಂಥ ಹರಕೆಗಳನ್ನು ಮಾಡಿಕೊಂಡೆ. ಯಾವುದೂ ಫಲಿಸಲಿಲ್ಲ. ಎಲ್ಲದರಲ್ಲಿಯೂ ನನಗೆ ಕೆಡುಕೇ ಉಂಟಾಯಿತು. ನನ್ನ ಹರಕೆಯನ್ನೆಲ್ಲ ನೀನು ತಿಂದು ನನ್ನ ಕೈಬಿಟ್ಟು ಬಿಟ್ಟೆ. ನಿನ್ನಲ್ಲಿ ಶಕ್ತಿಯೇ ಇಲ್ಲ. ನಾನು ಬೇರೆ ಅಮ್ಮನಿಗೆ ಹೋಗುತ್ತೇನೆ. ಹಟ್ಟಿ ಲಕ್ಕಮ್ಮನಿಗೆ ಹೋಗುತ್ತೇನೆ. ಹೊನ್ನಾಲಮ್ಮ, ಬಾಚಳ್ಳಿ ಅಮ್ಮ, ಕಿಕ್ಕೇರಿ ಅಮ್ಮ ಇವರಿಗೆ ಹೋಗುತ್ತೇನೆ. ನನ್ನ ಮೇಲೆ ತಪ್ಪಿಲ್ಲ. ನೀನೇ ಒದ್ದು ನೂಕಿದೆ ಎಂದು ಸಾರಿ ಹೇಳಿ, ಬೇರೆ ಊರಿನ, ಅವನ ದೃಷ್ಟಿಯಲ್ಲಿ ಪ್ರಬಲವೆಂದು ತೋರಿದ ಮತ್ತೊಂದು ದೇವತೆಗೆ ಹರಕೆ ಹೊರುತ್ತಾನೆ. ಕೆಲವು ವೇಳೆ ಮೂಗೂರು ತಿಬ್ಬಾದೇವಿ, ಉತ್ತನಹಳ್ಳಿ ಉರುಕಾಳಿ, ಗೊಂಡನಹಳ್ಳಿ ಗೊತ್ತುಕಾಳಿ, ಎಲ್ಲಕಿಂತ ಹೆಚ್ಚಾಗಿ ಏಳುನಾಲಗೆ ದುರ್ಗಿ ಇವರೆಡೆಗೆ ಧಾವಿಸುತ್ತಾನೆ. ಹೀಗೆ ಮಾಡುವುದು ಕೇವಲ ಅಪರೂಪವಾದ ಮತ್ತು ವಿಶೇಷವಾದ ಸಂದರ್ಭದಲ್ಲಿ ಮಾತ್ರ. ಸಾಮಾನ್ಯ ಕಾಲದಲ್ಲಿ ರೈತ ತನ್ನ ಊರ ದೇವರನ್ನು ಬಿಟ್ಟು ಇತರ ದೇವರಿಗೆ ಹರಕೆ ಹೊತ್ತರೆ ಊರಿನವರು ಸುಮ್ಮನಿರುವುದಿಲ್ಲ. ಹಾಗೆಯೇ ಬೇರೆ ಊರಿನವರೂ ತಮ್ಮೂರ ದೇವರಿಗೆ ಬಂದು ಹರಕೆ ಹೊತ್ತರೆ ಸಾಧಾರಣವಾಗಿ ಸುಮ್ಮನಿರುವುದಿಲ್ಲ. ಆದರೆ ಒಂದೂರಿನ ದೇವರಿಗಿಂತ ಮತ್ತೊಂದೂರಿನ ದೇವರು ಹೆಚ್ಚು ಪ್ರಬಲ, ಫಲದಾಯಕ ಎಂದು ತೋರಿದರೆ, ಪ್ರಾಪಂಚಿಕ ವಿಷಯದಲ್ಲಿ ತಿಳೀವಳಿಕಸ್ಥ ಜನರಾದ ರೈತರು ಆ ದೇವರಿಗೆ ಹೋಗುವವರನ್ನು ತಪ್ಪಿಸುವುದಿಲ್ಲ. ಈ ವಿಷಯದಲ್ಲಿ

ಹಳ್ಳಿಯ ನಿಯಮ ಹಿಂದಲ ಕಾಲದ ಗ್ರಾಮ ಘಟಕ ಪದ್ಧತಿಯಂತೆ. ಒಂದು ವಿಶೇಷ ಸಂದರ್ಭಕ್ಕಾಗಿ ರೈತ ಬೇರೆ ಊರಿನ ದೇವರಿಗೆ ಹರಕೆ ಹೊತ್ತರೂ ಅದು ಆ ಸಂದರ್ಭವಷ್ಟಕ್ಕೆ ಮಾತ್ರ. ಉಳಿದ ಅವನ ಎಲ್ಲ ಆಗುಹೋಗುಗಳಿಗೂ ಅವನು ತನ್ನ ಗ್ರಾಮದೇವತೆಯನ್ನು ಮಾತ್ರವೇ ಶರಣು ಹೋಗಬೇಕೆಂಬುದು ನಿಯಮ.

ಗ್ರಾಮದೇವತೆಯಷ್ಟೇ ಅದರ ಪೂಜಾರಿಯೂ ಅರ್ಷೇಯ. ಗ್ರಾಮದೇವತೆ ಪ್ರಾಣಿಬಲಿಯನ್ನು ಅಪೇಕ್ಷಿಸುವ ದೇವರಾದರೂ ಇದರ ಪೂಜಾರಿ ಸಾಧಾರಣವಾಗಿ ವೀರಶೈವ ತಮಡಿ (ಅರ್ಚಕ) ಆಗಿರುತ್ತಾನೆ. ಆ ತಮಡಿ ಸಿಕ್ಕದಿದ್ದಲ್ಲಿ ದೇವರಿಗೆ ಹರಕೆಯನ್ನಾಗಲಿ ಬಲಿಯನ್ನಾಗಲಿ ಒಪ್ಪಿಸಬೇಕಾದ ಭಕ್ತ, ಅಂಥ ತಮಡಿ ಬೇರೆ ಗ್ರಾಮದಲ್ಲಿದ್ದರೂ ಹೋಗಿ ಕರೆದುಕೊಂಡು ಬಂದು, ಅವನ ಹಸ್ತದಿಂದಲೇ ಪೂಜೆ ನೆರವೇರಿಸುತ್ತಾನೆ. ಪೂಜಾರಿಗೆ ಕೆಲಸವೂ ಹೆಚ್ಚಿಗೆ ಇಲ್ಲ. ಭಕ್ತ ಬಲಿಗೆ ತಂದಿರುವ ಕೋಳಿ, ಕುರಿ ಅಥವಾ ಆಡಿನ ಮೇಲೆ ಪೂಜೆ ಮಾಡಿದ ದೇವರ ತೀರ್ಥವನ್ನು ಪ್ರೋಕ್ಷಿಸುವುದಷ್ಟೇ ಅವನ ಕೆಲಸ. ಮುಂದಿನ ಕ್ಷಣದಲ್ಲಿಯೇ ಭಕ್ತರು ಪ್ರಾಣಿಯ ಕತ್ತನ್ನು ಕತ್ತರಿಸಿಹಾಕುತ್ತಾರೆ. ಮೊಸರನ್ನ ನೆನೆಯಕ್ಕಿ ನೆನೆಗಡಲೆ ಪನಿವಾರ ಮುಂತಾದ ತಳಿಗೆಗಳನ್ನು ಸುಮಂಗಲಿಯರು ತಂದು ಒಪ್ಪಿಸುವಾಗ ಪೂಜಾರಿ ಇಲ್ಲದಿದ್ದರೂ ನಡೆಯುತ್ತದೆ.

ಗ್ರಾಮದೇವತೆ ಒಂದು ವಿಗ್ರಹವೇ ಆಗಿರಬೇಕೆಂಬ ನಿಯಮವಿಲ್ಲ. ಅನೇಕ ವೇಳೆ ಅದೊಂದು ಬರಿಯ ಕಲ್ಲೂ ಆಗಿರಬಹುದು; ಇನ್ನೂ ಕೆಲವು ವೇಳೆ ನಾಲ್ಕಾರು ಗುಂಡುಕಲ್ಲುಗಳನ್ನು ಒಂದರ ಮೇಲೆ ಒಂದನ್ನು ಜೋಡಿಸುತ್ತಾರೆ. ಕಲ್ಲಿನ ಮೇಲೆ ಏನಾದರೂ ಮೂಗು ಬಾಯಿ ಕಣ್ಣುಗಳನ್ನು ಕೊರೆದಿದ್ದರೂ ಗೊತ್ತಾಗುವುದಿಲ್ಲ. ಕಲ್ಲೆಲ್ಲ ಪೂರ್ತ ಎಣ್ಣೆ ಅರಿಸಿನ ಕುಂಕುಮದಿಂದ ಮೆತ್ತಿ ಹೋಗಿರುತ್ತದೆ.

ಪ್ರಾಚೀನ ಆದಿಮಾನವ ಪೂಜಿಸಿದ ಶಕ್ತಿದೇವತೆಯೇ ಇಂದಿನ ಗ್ರಾಮದೇವತೆ ಎಂದು ಭಾವಿಸಬಹುದು. ಕರ್ನಾಟಕದ ಕೆಲವು ಊರುಗಳಲ್ಲಿ ಈ ದೇವತೆಯನ್ನು ಉಡಿಸಲಮ್ಮ ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಎಲ್ಲ ಗ್ರಾಮಗಳಲ್ಲೂ ಸಾಧಾರಣವಾಗಿ ಗ್ರಾಮದೇವತೆ ಇರುವುದು ಮಾಮೂಲು. ಆದರೂ ಗ್ರಾಮದೇವತೆಗಳು ಇಲ್ಲದ ಗ್ರಾಮಗಳೂ ಉಂಟು. ಮಾರಿಯಮ್ಮನೇ ಗ್ರಾಮದೇವತೆಯಾಗುತ್ತಾಳೆ. ಆಕೆ ಗ್ರಾಮದೇವತೆಗಿಂತ ಸ್ವಲ್ಪ ಹೆಚ್ಚಿನ ಮಟ್ಟದ ಶಕ್ತಿದೇವತೆಯೆ ಹೊರತು ಚಂಡಿ ಚಾಮುಂಡಿ ಕಾಳಿಕಾ ದುರ್ಗಿ ಮುಂತಾದ ದೇವತೆಗಳಿಗೂ ಮಾರಿಯಮ್ಮನಿಗೂ ಸಂಬಂಧವಿಲ್ಲ. ಹಿಂದೆ ಮಾರಿಹಬ್ಬದಲ್ಲಿ ಕೋಣವನ್ನು ಬಲಿಕೊಡುವ ಪದ್ಧತಿಯೂ ರೂಢಿಯಲ್ಲಿತ್ತೆಂದು ತಿಳಿದುಬರುತ್ತದೆ.

ಹಳ್ಳಿ ದೊಡ್ಡದಾಗಿದ್ದರೆ, ಗ್ರಾಮದೇವತೆಗೆ ವರ್ಷಕ್ಕೆ ಒಂದು ಬಾರಿ ಬಂಡಿಹಬ್ಬ ಅಥವಾ ರಥೋತ್ಸವ ನಡೆಯುತ್ತದೆ. ಈ ಹಬ್ಬವನ್ನು ಹಸಿರು ಬಂಡಿ ಎಂದೂ ಕರೆಯುತ್ತಾರೆ. ಹಸಿರು ಎಲೆ ಚಿಗುರುಗಳ ತೋರಣ, ತೆಂಗಿನ ಗರಿ, ಅಡಕೆ, ಹೊಂಬಾಳೆ ಇವುಗಳಿಂದ ಬಂಡಿಯನ್ನು ಅಲಂಕರಿಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಈ ಹಬ್ಬ ನಡೆಯುವುದು ಸಾಧಾರಣವಾಗಿ ಮಂಗಳವಾರ. ಹಬ್ಬವನ್ನು ಬಹಳ ವೈಭವದಿಂದ ಆಚರಿಸುತ್ತಾರೆ. ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲ ಮೊದಲೇ ತಮಟೆ ಹೊಡೆದು ಸಾರಿಸುತ್ತಾರೆಯಾದ್ದರಿಂದ ಬಾಳೆ ಕಂಬಗಳು ಲೆಕ್ಕವಿಲ್ಲದಷ್ಟು ಬಂದು ಬೀಳುತ್ತವೆ. ಗ್ರಾಮದೇವತೆಯ ವಿಗ್ರಹವನ್ನು ತಾತ್ಕಾಲಿಕವಾಗಿ ಮಣ್ಣಿನಲ್ಲಿ ಬಹು ಸುಂದರವಾಗಿ ನಿರ್ಮಿಸಿರುತ್ತಾರೆ. ಅಕ್ಕಿ, ತೆಂಗಿನಕಾಯಿ ರಾಶಿರಾಶಿ ಬಿದ್ದಿರಲಾಗಿ ಗ್ರಾಮದೇವತೆ 'ಒಕ್ಲೂನ ಹಾಸ್ಕೊಂಡು ಒಕ್ಲೂನ ಹೊದ್ದು, ಕಿವಿಯಲ್ಲಿ ಮುತ್ತಿಕ್ಕಿದ ಓಲೆ ತೊಟ್ಟು ಕಿಡಗಣ್ಣಿಯಾಗಿ' ಮೆರೆಯುತ್ತಾಳೆ. ಭಕ್ತರು ಬಾಗಿಲಿಗೆ ಛತ್ರಿ ಏರಿಸುತ್ತಾರೆ. ಏಳೂರು ಸಿಡಿಗಳು ಬರುತ್ತವೆ. ಹೆಡಗೇಲಿ ಹಣ್ಣು, ಗಡಿಗೇಲಿ ತುಪ್ಪ, ಇಡಗಾಯಿಗಳು, ಕುರಿಗಳ ಸಾಲು ಮಡಲಕ್ಕಿ ಎಲ್ಲ ಬರುತ್ತವೆ. ಕೆಲವರು ಊರುಗಳಲ್ಲಿ ಕೊಂಡವನ್ನು ಸಹ ಹಾಯುತ್ತಾರೆ. ಮೆರವಣಿಗೆಯಲ್ಲಿ ದೊಡ್ಡ ದೊಡ್ಡ ಪಂಜುಗಳು ಉರಿಯುತ್ತವೆ. ಭಕ್ತರು ಭಕ್ತಿಯಿಂದ ದೇವತೆಯ ಹಾಡನ್ನು ಹಾಡುತ್ತಾರೆ. ದೇವತೆಯ ಮಹಿಮೆಯನ್ನು ಬಣ್ಣಿಸಲೂ ಅಸದಳ, 'ಸಾಸಿವೆ ಕಾಳಷ್ಟು ರೇಷಿಮೆ ಉಟುಕೊಂಡು ಏಸೊಂದುಯ್ಯವಳೆ ನೆರಿಗೇಯ, ತಾಯವ್ವ ಕೋಟೆಗೆ ಬೀಸವ್ಳೆ ಕುಡಿಸೆರಗ' (ಅಮ್ಮ ಧರಿಸಿರುವುದು ಸಾಸಿವೆ ಕಾಳಿನಷ್ಟು ರೇಷಿಮೆ. ಆದರೆ ತನ್ನ ಮಹಿಮೆಯಿಂದ ಅದರಿಂದಲೇ ವಿಶಾಲವಾದ ನೆರಿಗೆಯನ್ನು ರಚಿಸಿಕೊಂಡು ಕೋಟೆವರೆಗೆ ನೆರಿಗೆಯನ್ನು ಬೀಸುತ್ತಾಳೆ). ಬಂಡಿಯ ಮೇಲೆ ಮೆರವಣಿಗೆ ಹೋಗುತ್ತಿರಬೇಕಾದರೆ, ಬಿಸಿಲಿನಲ್ಲಿ ಓಲೆ ಹೊಳೆಯುತ್ತದೆ. ಆಚೆ ಈಚೆ ದಾಸ ಮತ್ತು ಪುರುಷ (ಧಾರ್ಮಿಕ ಪೂಜಕರು) ಇರುತ್ತಾರೆ. ದಾಸ, ಹೆಗಲಮೇಲೆ ಕಿರುಗಂಟೆ ಕಟ್ಟಿದ ಒಂದು ಒನಕೆ, ಎಡಕಂಕುಳಲ್ಲಿ ಕಡಾಸು, ಬವನಾಸಿ, ಬಲಕಂಕುಳಲ್ಲಿ ತುತ್ತೂರಿ ಭಾಂಕಿ ಶಂಖ, ಎದೆಯ ಮೇಲೆ ಆನೆಯ ವಿಗ್ರಹ ಬಲಗೈಯಲ್ಲಿ ಜಾಗಟೆ ಹಿಡಿದಿರುತ್ತಾರೆ. ಪುರುಷ, ಭೈರವನ ಶಿಷ್ಯ. ಆತ ಕಬ್ಬಿಣದ ದೊಡ್ಡ ತ್ರಿಶೂಲ, ಬೆಳ್ಳಿಯ ಸಣ್ಣ ತ್ರಿಶೂಲಗಳನ್ನು ಸೇರಿಸಿದ ನವಿಲುಗರಿ ಕಂತೆಯನ್ನು ಹೆಗಲ ಮೇಲೆ ಇಟ್ಟುಕೊಂಡು ಕಂಕುಳಲ್ಲಿ ವಿಭೂತಿ ಚೀಲ, ಕೈಯಲ್ಲಿ ಜಂಕೆಯ ಕೊಂಬಿನ ವಾದ್ಯ, ತೀರ್ಥದ ಬಟ್ಟಲು ಇವನ್ನು ಹಿಡಿದಿರುತ್ತಾನೆ. ಸುಮಂಗಲಿಯರು ಐರಣಿ ಪಂಚಕಲಶ ಹೊತ್ತು ನಡೆಯುವರು. ಒಬ್ಬ ಆಚಾರಿ ಬಣ್ಣ ಹಾಕಿದ ಮರದ ಕುದುರೆಯ ಒಂದು ಕತ್ತನ್ನು ಕಂಕುಳಲ್ಲಿ ಹಿಡಿದುಕೊಂಡು ಕುಣಿಯುತ್ತಾನೆ. ಹಿಂದೆ ಒಂದು ಸಲ ಬಸವ, ಈಶ್ವರನ ಸನ್ನಿಧಿಗೆ ಹೋಗಿ ಹಿಂದಿರುಗದೆ ಇದ್ದುದರಿಂದ ಭೂಲೋಕದ ಆಚಾರಿಗಳು (ಬಡಗಿ) ಒಂದು ಕೀಲುಕುದುರೆ ಮಾಡಿ ಈಶ್ವರನ ಬಳಿಗೆ ಕೊಂಡುಹೋಗಿ ಅದರಿಂದಲೇ ಬೇಸಾಯ ಮಾಡುವುದಾಗಿ ಹೇಳಿದರಂತೆ. ಸೃಷ್ಟಿ ಒಮ್ಮುಖವಾಗಿರಲಿ ಎಂದು ಯೋಚಿಸಿ ಈಶ್ವರ ಬಸವನನ್ನು ಭೂಲೋಕಕ್ಕೆ ಕಳಿಸಿದನೆಂದು ಒಂದು ಜನಪದ ಕಥೆ ಇದೆ.

ಗ್ರಾಮದೇವತೆಗೆ ಅಪಾರ ಹರಕೆಗಳು ಬರುತ್ತವೆ. ಹರಕೆ ಹೊತ್ತವರೆಲ್ಲ ತಮ್ಮ ತಮ್ಮ ಮತಿಗನುಗುಣವಾಗಿ ಹರಕೆ ಒಪ್ಪಿಸುತ್ತಾರೆ. ಆಡು, ಕುರಿ, ಅಸಂಖ್ಯಾತ ಕೋಳಿಗಳು ಬಲಿಯಾಗುತ್ತವೆ. ಭಕ್ತರು ಮಾಳೆ, ಕಣ್ಕಪ್ಪು ಎಲ್ಲವನ್ನೂ ಅಮ್ಮನಿಗೆ ತಂದು ಒಪ್ಪಿಸುತ್ತಾರೆ. ತಾಯಂದಿರು ಮಗುವಿಗೆ ಹೆಸರಿಡು ಎಂದು ಬೇಡುತ್ತಾರೆ. ಕೋಲಾಟ, ದೊಣ್ಣೆವರಸೆ, ಪಟ್ಟಾವರಸೆ, ರಮಡೋಲು, ವಾದ್ಯ, ಬಾಣಬಿರುಸು — ಎಲ್ಲ ನಡೆಯುತ್ತವೆ. ಬಂಡಿಹಬ್ಬಕ್ಕೂ ಹಂದಿಮಾಂಸಕ್ಕೂ ಗಂಟು. ಸೋನೆಮಳೆ ಆಗ ತಾನೇ ಪ್ರಾರಂಭವಾಗುವುದರಿಂದ ಅದರ ಪ್ರಭಾವದಿಂದ ಹಂದಿಮಾಂಸಕ್ಕೆ ಒಂದು ಸೊಗಡೂ ರುಚಿಯೂ ಬರುತ್ತದೆಂದು ಜನಪದರ ನಂಬಿಕೆ. ಆದ್ದರಿಂದಲೇ ಬಂಡಿಹಬ್ಬದಂದು ಊರಿನ ಜನಸಂಖ್ಯೆಗನುಗುಣವಾಗಿ ಹಂದಿಮಾಂಸದ ಊಟವೇರ್ಪಡಿಸುತ್ತಾರೆ. ಅನಂತರ ತಮಟೆಗಳ ರಣವಾದ್ಯದ ಗತ್ತಿಗನುಗುಣವಾಗಿ ಕೈಯಲ್ಲಿ ಕೆಂಪು ವಸ್ತ್ರದ ಚೌಕಗಳನ್ನು ಹಿಡಿದುಕೊಂಡು ಆಯಾಸವಾಗುವವರೆಗೆ ವೀರಕುಣಿತವನ್ನು ಕುಣಿಯುತ್ತಾರೆ. ಕೊಂಬು ಕಹಳೆ ತುತ್ತೂರಿ ಭಾಂಕಿ ಕುಣಿಮಿಣಿ ತಾಳ ತಮಟೆ ಮೋರಿಗಳ ಕೋಲಾಹಲದೊಂದಿಗೆ ಕುಣಿತ ಕೊನೆಯಾಗುತ್ತದೆ.

ಎಲ್ಲ ಕಡೆಯೂ ಗ್ರಾಮದೇವತೆ ಪ್ರಾಣಿಬಲಿ ಪಡೆಯುವ ದೇವತೆಯಾಗಿರುವುದಿಲ್ಲ. ದೇವೀರಮ್ಮ ಸಪ್ತಮಾತೃಕೆಯರು ಮತ್ತಿತರ ದೇವತೆಗಳು ಫಲಪುಷ್ಪಗಳಿಗೆ ತೃಪ್ತಿಪಡುತ್ತವೆ. ಮಲೆನಾಡಿನ ಗ್ರಾಮದೇವತೆಗಳಿಗೆ ವಸಂತ ಕಾಲದಲ್ಲಿ ವಿಶೇಷವಾದ ಸುಗ್ಗಿಹಬ್ಬ ನಡೆಯುತ್ತದೆ. ಈ ದೇವತೆಗಳು ಫಲಪುಷ್ಪ, ದೂಪಾರತಿ ಮಾತ್ರ ಸ್ವೀಕರಿಸುವವು. ಕೆಲವೊಮ್ಮೆ ಕುಲದೇವತೆಯೂ ಗ್ರಾಮದೇವತೆಯಾಗಿ ಪರಿವರ್ತಿತವಾಗುವುದಿದೆ. ಭೈರವ ಅಥವಾ ಕಾಲಭೈರವ ಅನೇಕ ಕಡೆ ಗ್ರಾಮದೇವತೆ ಸ್ಥಾನ ಪಡೆದಿದ್ದಾನೆ. ಇವನಿಗೆ ಸ್ಥಳಪತಿರಾಯ ಎಂಬ ಹೆಸರೂ ಇದೆ. ಅದು ಆಡುಮಾತಿನಲ್ಲಿ ತಲಪಟ್‌ರಾಯ ಆಗಿದೆ. ಜೆಟ್ಟಿಗ ಎಂಬ ದೈವವೂ ಗ್ರಾಮದೇವತೆ ಆಗಿರುವುದುಂಟು.

ಹೀಗೆ ಮಾನವನ ಕಲ್ಪನೆಯ, ಆವಶ್ಯಕತೆಯ, ಅತ್ಯಂತ ಪ್ರಾಚೀನ ಶಕ್ತಿದೇವತೆಯಾದ ಗ್ರಾಮದೇವತೆ ಜನರ ಬಾಳಿಗೆ ಪೌರುಷ, ಸಾಹಸ, ಕಷ್ಟ ಸಹಿಷ್ಣುತೆ, ದುಷ್ಟ ನಿಗ್ರಹ, ಶಿಷ್ಟ ಪರಿಪಾಲನ ಶಕ್ತಿಗಳನ್ನು ನೀಡಿ ಜನತೆಯನ್ನು ರಕ್ಷಿಸಿಕೊಂಡು ಬರುತ್ತಿದೆ ಎಂಬುದು ಜನಪದರ ನಂಬಿಕೆ.

*

# ಘ

**ಘಟಪ್ರಭಾ [1] :** ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನಲ್ಲಿ ಗೋಕಾಕದ ವಾಯುವ್ಯಕ್ಕೆ 14ಕಿಮೀ ದೂರದಲ್ಲೂ ಬೆಳಗಾಂವಿಯಿಂದ 48ಕಿಮೀ ದೂರದಲ್ಲೂ ಇರುವ ಒಂದು ಸ್ಥಳ. ದಕ್ಷಿಣ ಮಧ್ಯ ರೈಲ್ವೆಯ ಮೇಲೆ ಬೆಳಗಾಂವಿ ಮತ್ತು ಮೀರಜ್‌ಗಳ ನಡುವಿನ ಒಂದು ನಿಲ್ದಾಣ.

ಮೊದಮೊದಲು ಇದು ಮಲ್ಲಾಪುರವೆಂಬ ಬೇಚಿರಾಕ್ ಹಳ್ಳಿ. ಇತ್ತೀಚೆಗೆ ಭರದಿಂದ ಬೆಳೆಯುತ್ತಿರುವ ನಗರ. ಕರ್ನಾಟಕ ಆರೋಗ್ಯಧಾಮ ಸ್ಥಾಪನೆಯಾದ ಅನಂತರ ಇಲ್ಲಿಯ ಆರೋಗ್ಯಕರ ಹವೆ, ನೀರಿನಲ್ಲಿರುವ ಉತ್ತಮ ಗುಣಾಂಶದಿಂದ ನಾಡಿನ ಶ್ರೀಮಂತರು ಈ ಆರೋಗ್ಯಧಾಮದ ಕಡೆಗೆ ಆಕರ್ಷಿತರಾದರು. ಘಟಪ್ರಭೆಯ ಎಡದಂಡೆಯ ಕಾಲುವೆಯ ಕೆಲಸ ತ್ವರಿತ ಗತಿಯಿಂದ ನಡೆದ ಅನಂತರ 1950ರ ಸುಮಾರಿಗೆ ಇದು ಘಟಪ್ರಭಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಕರ್ನಾಟಕ ಆರೋಗ್ಯಧಾಮ, ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ. ಪಿ.ಡಬ್ಲ್ಯೂ.ಡಿ ಕಾಲೋನಿ, ಮಲ್ಲಾಪುರ ಧೂಪದಾಳ ಸ್ಟೇಷನ್ ಮೊದಲಾದುವುಗಳನ್ನು ಸೇರಿಸಿ 1959ರಲ್ಲಿ ಪಟ್ಟಣ ಪಂಚಾಯತ್ ಸ್ಥಾಪಿಸಲಾಯಿತು.

ಕರ್ನಾಟಕ ಆರೋಗ್ಯಧಾಮ, ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ ಇವೆರಡು ಈ ನಗರದ ಮುಖ್ಯಸಂಸ್ಥೆಗಳು. ಕರ್ನಾಟಕ ಆರೋಗ್ಯಧಾಮ ಜಿ.ಆರ್. ಕೊಕಟನೂರರಿಂದ 1935 ಮೇ 5ರಂದು ಸ್ಥಾಪನೆಗೊಂಡು 127 ಎಕರೆ ವಿಶಾಲವಾದ ಆವರಣದಲ್ಲಿ ಬೆಳೆದಿದೆ. ಹಳ್ಳಿಗರಿಗೆ ಆರೋಗ್ಯದ ಬಗೆಗೆ ಉಪಯುಕ್ತ ಸೇವೆಸಲ್ಲಿಸುತ್ತಿದೆ. ರಾಷ್ಟ್ರೀಯ ಸೇವಾದಳದ ಸ್ಥಾಪಕರಾಗಿ ಕಾರ್ಯಮಾಡಿದ ಎನ್.ಎಸ್.ಹರ್ಡೀಕರರು (ನೋಡಿ) ಜೀವನಾಡಿಯಾಗಿ ಇದರ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದರು. ಅನಂತರ ಎಂ.ಕೆ.ವೈದ್ಯರು ಇದರ ಮುಖಂಡತ್ವವನ್ನು ವಹಿಸಿಕೊಂಡರು. ಸಾರ್ವಜನಿಕ ಆಸ್ಪತ್ರೆ, ಹೆರಿಗೆ ಆಸ್ಪತ್ರೆ, ದಾಯಿಗಳ ಶಿಕ್ಷಣ ಕೇಂದ್ರ, ಕ್ಷಯರೋಗ ಚಿಕಿತ್ಸಾಕೇಂದ್ರ -ಇವು ಈ ಸಂಸ್ಥೆಯ ಅಂಗಗಳಾಗಿವೆ. ಹಳ್ಳಿಗರಿಗೆ ಅತ್ಯಲ್ಪ ವೆಚ್ಚದಲ್ಲಿ ವೈದ್ಯಕೀಯ ಸೇವೆ ಸಲ್ಲಿಸುವುದೇ ಇದರ ಹೆಗ್ಗುರಿ. ಅತ್ಯಾಧುನಿಕ ಯಂತ್ರೋಪಕರಣಗಳಿವೆ. ಮಹಿಳಾಮಂಡಳವಿದೆ. ಉದ್ಯೋಗ ಕೇಂದ್ರವಿದೆ. ಇದೇ ಮಾದರಿಯ ಮೇಲೆ ಭಾರತದಲ್ಲಿಯೇ ಪ್ರಪ್ರಥಮವಾಗಿ ಸಹಕಾರಿ ತಳಹದಿಯ ಮೇಲೆ ರೂಪಗೊಂಡ ಇನ್ನೊಂದು ಹೆಮ್ಮೆಯ ಸಂಸ್ಥೆ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ, ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರು ಶ್ರೀ ಗುರುಸಿದ್ಧೇಶ್ವರ ರಾಜಯೋಗೀಂದ್ರ ಮಹಾಸ್ವಾಮಿಗಳಿಂದ 1951 ನವೆಂಬರ್ 13ರಂದು ಸ್ಥಾಪನೆಗೊಂಡು ಬೃಹದಾಕಾರವಾಗಿ ಬೆಳೆದುನಿಂತಿದೆ. ನಿಲ್ದಾಣದಿಂದ ಸಮೀಪದಲ್ಲಿಯೇ ಗುಡ್ಡದ ಓರೆಯಲ್ಲಿ ಆಧುನಿಕ ಪದ್ಧತಿಯಲ್ಲಿ ಕಟ್ಟಲಾಗಿರುವ ಆಕರ್ಷಕ ಸುಸಜ್ಜಿತ ಕಟ್ಟಡಗಳಿಂದ ಕೂಡಿದೆ. ಜಿಲ್ಲೆಯಲ್ಲಿಯೇ ಹೆಸರಾದ ಸುಸಜ್ಜಿತ ಪ್ರವಾಸಿಮಂದಿರ ಇದೆ.

ಈ ಸ್ಥಳದಲ್ಲಿ ಪ್ರತಿ ಮಂಗಳವಾರ ಸಂತೆಯಾಗುತ್ತದೆ. ಇದು ಗೋವಿನಜೋಳದ ವ್ಯಾಪಾರಕ್ಕೆ ಪ್ರಸಿದ್ಧಿ ಹೊಂದಿದೆ. ಜಿಲ್ಲೆಯಲ್ಲಿ ಘಟಪ್ರಭಾದ ಸಮೀಪದಲ್ಲಿ ಅರಭಾವಿ ಪುಣ್ಯಾರಣ್ಯವೆನಿಸಿದ ದುರದುಂಡೇಶ್ವರ ಮಠ, ಗೋಕಾಕ ಧಬಧಬೆ (ನೋಡಿ) ಮೊದಲಾದ ಪ್ರೇಕ್ಷಣೀಯ ಸ್ಥಳಗಳಿವೆ. ಜಿಲ್ಲಾ ಹಾಗೂ ತಾಲ್ಲೂಕು ಸ್ಥಳಗಳಿಂದ ಘಟಪ್ರಭಾಕ್ಕೆ ಹೋಗಿಬರಲು ಸಾರಿಗೆ ಸೌಕರ್ಯ ಸೌಲಭ್ಯಗಳು ಸಾಕಷ್ಟಿವೆ. (ಎಸ್.ಎಸ್.ಬಿ.)

**ಘಟಪ್ರಭಾ [2] :** ಬೆಳಗಾಂವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹರಿಯುವ ಕರ್ನಾಟಕದ ಮುಖ್ಯ ನದಿಗಳಲ್ಲಿ ಒಂದು. ಬೆಳಗಾಂವಿ ನಗರಕ್ಕೆ 40ಕಿಮೀ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿಯ ಅಂಚಿನಲ್ಲಿ ರಾಮಘಟ್ಟದಲ್ಲಿ ಉಗಮಿಸಿ, ಪೂರ್ವಾಭಿಮುಖವಾಗಿ ಹರಿದು, ಬಾಗಲಕೋಟೆ ಜಿಲ್ಲೆಯನ್ನು ಪ್ರವೇಶಿಸಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ಸರಹದ್ದಿನಲ್ಲಿ ನೀತಿಮನಿ ಬಳಿ ಕೃಷ್ಣೆಯನ್ನು ಕೂಡಿಕೊಳ್ಳುವ ಈ ನದಿಯ ಉದ್ದ 305ಕಿಮೀ. ಬೆಳಗಾಂವಿ ಜಿಲ್ಲೆಯಲ್ಲಿ ಹುಕ್ಕೇರಿ ಗೋಕಾಕ ತಾಲ್ಲೂಕುಗಳ ಮೂಲಕ 193ಕಿಮೀ ದೂರ ಹರಿದ ಮೇಲೆ ಮುಧೋಳ ನಗರಕ್ಕೆ ಪಶ್ಚಿಮದಲ್ಲಿ ಬಾಗಲಕೋಟೆ ಜಿಲ್ಲೆಯನ್ನು ಪ್ರವೇಶಿಸಿ ಮುಧೋಳ ಮತ್ತು ಬಾಗಲಕೋಟೆ ತಾಲ್ಲೂಕುಗಳ ಮೂಲಕ ಸು.112ಕಿಮೀ ದೂರ ಪ್ರವಹಿಸುತ್ತದೆ. ಬೆಳಗಾಂವಿ ಜಿಲ್ಲೆಯ ಕಾನೂರ, ಅಡಕೂರು, ದಡ್ಡಿ, ವಂಟಮುರಿ, ಘೋಡಗೇರಿ, ಕೊಣ್ಣೂರ, ಧೂಪದಾಳ, ಗೋಕಾಕ, ಹುಣಶ್ಯಾಳ, ಸುಣದೋಳಿ ಊರುಗಳೂ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಚಿಮ್ಮಲಗಿಗಳೂ ಈ ನದಿಯ ತೀರದಲ್ಲಿವೆ. ಗೋಕಾಕದ ಬಳಿಯ ಜಲಪಾತದ ಎತ್ತರ 52ಮೀ. ಅಲ್ಲೊಂದು ಕಟ್ಟೆ ಕಟ್ಟಿ ನದಿಯ ನೀರನ್ನು ಸಾಗುವಳಿಗೂ ವಿದ್ಯುತ್ತಿನ ಉತ್ಪಾದನೆಗೂ ಬಳಸಿಕೊಳ್ಳಲಾಗುತ್ತಿದೆ. ಗೋಕಾಕ ಗುಡ್ಡದ ಕಣಿವೆಯ ಪ್ರದೇಶದಲ್ಲಿ ಹರಿಯುವ ನದಿಯ ನೋಟ ಸುಂದರವಾದದ್ದು. ಪೂರ್ವದ ಶಿವಪುರ ಗ್ರಾಮ, ಪಶ್ಚಿಮದ ಸುಲ್ತಾನಪುರ ಗ್ರಾಮಗಳ ನಡುವೆ ಹರಿದು ನದಿ ಗೋಕಾಕ ಪ್ರವೇಶಿಸುತ್ತದೆ. ಗೋಕಾಕ ಜಲಪಾತದ ಕೆಳಗೆ 3ಕಿಮೀ ದೂರದಲ್ಲಿ ಗೋಕಾಕ ಪಟ್ಟಣಕ್ಕೆ ಅರ್ಧ ಕಿಮೀ ದೂರದಲ್ಲಿ ಈ ನದಿಗೆ ಮಾರ್ಕಂಡೇಯ ನದಿ ಬಂದು ಕೂಡಿಕೊಳ್ಳುತ್ತದೆ. ಬಾಗಲಕೋಟೆ ಜಿಲ್ಲೆಯ ಹೆರಕಲ್ ಬಳಿ ಈ ನದಿಯಿಂದಾದ ಕೊರಕಲು ನೋಡಲು ಅತಿ ರಮ್ಯ. ಘಟಪ್ರಭಾ ನದಿ ಕೃಷ್ಣೆಯನ್ನು ಸೇರುವೆಡೆಯಲ್ಲಿ ಅದರ ಮುಖ 91.44ಮೀ. ಅಗಲವಾಗಿದೆ.



ಹಿಡಕಲ್ ಅಣೆಕಟ್ಟು

ಹಿರಣ್ಯಕೇಶಿ, ತಾಮ್ರಪರ್ಣಿ ಇವು ಘಟಪ್ರಭಾ ನದಿಯ ಮುಖ್ಯ ಉಪನದಿಗಳು. ಘಟಪ್ರಭಾ ನದಿಗೆ ಸಮೃದ್ಧವಾದ ಜಲಸಂಪನ್ಮೂಲವಿದೆ. 1270-5080ಮಿ.ಮೀ. ಮಳೆ ಬೀಳುವ ಮಲೆನಾಡ ವಿಶಾಲ ಜಲಾನಯನ ಪ್ರದೇಶವಿದೆ. ಇದರಲ್ಲಿ ವಾರ್ಷಿಕವಾಗಿ ಹರಿಯುವ ನೀರಿನ ಸರಾಸರಿ ಪರಿಮಾಣ 12,100 ಕೋಟಿ ಘನ ಅಡಿಗಳು. ಆದರೆ ಮಳೆಗಾಲದ ತರುವಾಯ ನದಿ ಕೃಶವಾಗತೊಡಗಿ ಸಣ್ಣ ತೊರೆಯಂತಾಗಿ ಬೇಸಗೆಯಲ್ಲಿ ಬಹಳಮಟ್ಟಿಗೆ ಬತ್ತಿಯೇ ಹೋಗುತ್ತದೆ.

**ಘಟಪ್ರಭಾ ಯೋಜನೆ :** ಘಟ್ಟ ಪ್ರದೇಶದಲ್ಲಿ ಮಳೆ ನಿಯತವಾಗಿಯೂ ವಿಪುಲವಾಗಿಯೂ ಬೀಳುವುದಾದರೂ ಘಟಪ್ರಭಾ ನದಿಯ ಪೂರ್ವಭಾಗದ

ಬಯಲಿನಲ್ಲಿ ತೀರ ಕಡಿಮೆ ಮಳೆಯಾಗುತ್ತದೆ. ಬೆಳಗಾಂವಿ ಜಿಲ್ಲೆಯ ಪೂರ್ವ ಭಾಗವೂ ಬಾಗಲಕೋಟೆ ಬಿಜಾಪುರ ಜಿಲ್ಲೆಗಳೂ ಅನಾವೃಷ್ಟಿ ಪ್ರದೇಶಗಳಾಗಿದ್ದು ಪದೇ ಪದೇ ಕ್ಷಾಮ ಮತ್ತು ಅಭಾವ ಪರಿಸ್ಥಿತಿಗಳಿಗೆ ಒಳಗಾಗುವುದರಿಂದ ಅಲ್ಲಿ ಹರಿಯುವ ನದಿತೊರೆಗಳ ಜಲ ಸಂಪತ್ತನ್ನು ಉಪಯೋಗಿಸಿಕೊಂಡು ಭಾರಿ ಪ್ರಮಾಣದಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಜಲಾಭಾವವನ್ನು ಪರಿಹರಿಸಲು ಯೋಜಿಸಲಾಯಿತು.

ಗೋಕಾಕ ಜಲಪಾತದ ಔನ್ನತ್ಯದ ಅನುಕೂಲವನ್ನು ಪಡೆದುಕೊಂಡು ಘಟಪ್ರಭಾ ನದಿಯನ್ನು ನೀರಾವರಿಗೆ ಬಳಸಿಕೊಳ್ಳುವ ಒಂದು ಯೋಜನೆ 1852ರಷ್ಟು ಹಿಂದೆಯೇ ರೂಪುಗೊಂಡಿತು. ಜಲಪಾತದ ಮೇಲಕ್ಕೆ 3ಕಿಮೀ ದೂರದಲ್ಲಿ ಒಂದು ಗೊತ್ತಾದ ಸ್ಥಳದಿಂದ ನಾಲೆಯನ್ನು ತೆಗೆಯಲು ಯೋಜನೆಗಳನ್ನು ತಯಾರಿಸಲಾಯಿತು. 1877ರಲ್ಲಿ ಹಿಂದಿನ ಮುಂಬಯಿ ಸರ್ಕಾರ ಕ್ಷಾಮಪರಿಹಾರ ಕಾರ್ಯದ ಅಂಗವಾಗಿ ಜಲಪಾತಕ್ಕೆ ಮೇಲೆ 4ಕಿಮೀ ದೂರದಲ್ಲಿ ಧೂಪದಾಳದ ಬಳಿ ಘಟಪ್ರಭಾ ನದಿಗೆ ಅಡ್ಡಲಾಗಿ ಒಡ್ಡು ನಿರ್ಮಿಸಲು ಹಾಗೂ ಅಲ್ಲಿಂದ 24ಕಿಮೀ ಉದ್ದ ಗೋಕಾಕ ನಾಲೆಯನ್ನು ರಚಿಸುವ ಯೋಜನೆಯೊಂದಕ್ಕೆ ಒಪ್ಪಿಗೆ ನೀಡಿ ಆ ಕೆಲಸವನ್ನು 15 ಲಕ್ಷ ರೂಪಾಯಿ ವೆಚ್ಚದಲ್ಲಿ 1897ರ ಹೊತ್ತಿಗೆ ಪೂರ್ಣಗೊಳಿಸಲಾಯಿತು. ಈ ಯೋಜನೆಯ ಮುಂದುವರಿಕೆಯಾಗಿ ಜಲಾಶಯವೊಂದನ್ನು ನಿರ್ಮಿಸಿ ನದಿಯ ಎರಡು ದಂಡೆಗಳಿಂದಲೂ ನಾಲೆಗಳನ್ನು ತೆಗೆಯುವ ದಡ್ಡಿ ಕಟ್ಟೆಯೋಜನೆಯನ್ನು 1924ರಲ್ಲಿ ತಯಾರಿಸಲಾಯಿತಾದರೂ ಇದು ಹೆಚ್ಚು ಲಾಭಕರವಲ್ಲವೆಂಬ ಕಾರಣದಿಂದಾಗಿ ಈ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ.

1924ರಲ್ಲಿ ಆಗಿನ ಮುಂಬಯಿ ಸರ್ಕಾರ ಘಟಪ್ರಭಾ ಎಡದಂಡೆ ನಾಲೆಯ ಯೋಜನೆಯನ್ನು ಸಿದ್ಧಗೊಳಿಸಿತು. ಘಟಪ್ರಭಾ ಮತ್ತು ಕೃಷ್ಣಾನದಿಗಳ ನಡುವಣ ಭೂಮಿಯನ್ನು ನೀರಾವರಿಗೆ ಒಳಪಡಿಸುವ ನಾಲಾ ವ್ಯವಸ್ಥೆಯೊಂದನ್ನು ರಚಿಸಬೇಕೆಂಬುದು ಉದ್ದೇಶವಾಗಿತ್ತು. ನದಿಯ ಎಡದಂಡೆಯಲ್ಲಿ ರಚಿಸಲು ಉದ್ದೇಶಿಸಿದ್ದ ಈ ವ್ಯವಸ್ಥೆಯಲ್ಲಿ 118ಕಿಮೀ ಉದ್ದದ ಒಂದು ಮುಖ್ಯ ನಾಲೆಯನ್ನೂ 5 ಶಾಖಾನಾಲೆಗಳನ್ನೂ ನಿರ್ಮಿಸಬೇಕೆಂದು ಯೋಜಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಆಗ ಈ ಯೋಜನೆಯನ್ನು ಬಿಡಬೇಕಾಯಿತು. ಈ ಯೋಜನೆಯನ್ನು ಪರಿಷ್ಕರಿಸುವ ಕೆಲಸವನ್ನು 1947ರಲ್ಲಿ ಕೈಗೊಳ್ಳಲಾಯಿತು. ಇದಕ್ಕಾಗಿ ನಡೆಸಲಾದ ದೀರ್ಘ ಪರಿಶೀಲನೆಯ ಅನಂತರ ಘಟಪ್ರಭಾ ನದಿಗೆ ಅಡ್ಡಲಾಗಿ ಹಡಲ್ಗದ ಬಳಿಯಲ್ಲೂ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ಅಜ್ರಾ ಬಳಿಯಲ್ಲೂ ಎರಡು ಜಲಾಶಯಗಳನ್ನು ನಿರ್ಮಿಸುವ ಯೋಜನೆಗಳು ಸಿದ್ಧವಾದುವು.

1956ರಲ್ಲಿ ಆದ ರಾಜ್ಯ ಪುನರ್ವಿಂಗಡಣೆಯ ಪರಿಣಾಮವಾಗಿ ಜಲಾಶಯಗಳು ಮಹಾರಾಷ್ಟ್ರದಲ್ಲೂ ನಾಲೆಗಳು ಕರ್ನಾಟಕದಲ್ಲೂ ಬರುವಂತಾಯಿತು. ಆದ್ದರಿಂದ ಸ್ವಾಭಾವಿಕವಾಗಿಯೇ ಇದರ ಬಗ್ಗೆ ಎರಡೂ ರಾಜ್ಯಗಳ ನಡುವೆ ದೀರ್ಘ ಸಮಾಲೋಚನೆಗಳು ನಡೆದವು. ಜಲಾಶಯದಿಂದ ನೆರೆಯ ರಾಜ್ಯದ ಜಮೀನುಗಳು ಮುಳುಗಡೆಯಾಗುವುದನ್ನು ತಪ್ಪಿಸಲು ಹಡಲ್ಗದ ಕಟ್ಟೆಯ ನಿವೇಶನಕ್ಕೆ ಕೆಳಗಡೆಯಲ್ಲಿ ಜಲಾಶಯ ನಿರ್ಮಾಣಕ್ಕೆ ಅನುಕೂಲವಾದ ಮತ್ತೊಂದು ಸ್ಥಳವನ್ನು ಕಂಡುಹಿಡಿಯುವುದು ಅಪೇಕ್ಷಣೀಯವೆನಿಸಿ ಹಿಡಕಲ್ ಬಳಿಯಲ್ಲಿ ನದಿಗೆ ಅಡ್ಡಲಾಗಿ ಕಟ್ಟೆ ಕಟ್ಟಲು ನಿರ್ಧರಿಸಲಾಯಿತು. ಈ ಜಲಾಶಯದ ಉದ್ದ 4,575ಮೀ. ಮತ್ತು ಎತ್ತರ 55ಮೀ. ಜಲಾಶಯ ಪೂರ್ಣಗೊಂಡಿದೆ.

ಘಟಪ್ರಭಾ ಯೋಜನೆಯನ್ನು ಒಟ್ಟು ನಾಲ್ಕು ಹಂತಗಳಲ್ಲಿ ಈಡೇರಿಸಲು ಯೋಜಿಸಲಾಯಿತು. ಘಟಪ್ರಭಾ ಎಡದಂಡೆ ಕಾಲುವೆ 70ಕಿಮೀ ಉದ್ದವಿದ್ದು ಎರಡು ಶಾಖೆಗಳನ್ನು ಹೊಂದಿದೆ. ಇದರ ನೀರಾವರಿ ಸಾಮರ್ಥ್ಯ 86,860 ಹೆಕ್ಟೇರ್‌ಗಳು. ಎರಡನೆಯ ಹಂತದಲ್ಲಿ ಎಡದಂಡೆ ಕಾಲುವೆಯನ್ನು 71ರಿಂದ 114ಕಿಮೀ ಉದ್ದದವರೆಗೆ ವಿಸ್ತರಿಸಲಾಯಿತು. ಇದರ ನೀರಾವರಿ ಸಾಮರ್ಥ್ಯ 52,520 ಹೆಕ್ಟೇರ್‌ಗಳು. ಮೂರನೆಯ ಹಂತದ ಯೋಜನೆ ಘಟಪ್ರಭಾ ಬಲದಂಡೆ ನಿರ್ಮಾಣ. ಇದರ ಉದ್ದ 192ಕಿಮೀಗಳು. ಈ ಜಲಾಶಯದಿಂದ 114ಕಿಮೀ ಉದ್ದದ ಎಡದಂಡೆಯ ನಾಲೆ ನಿರ್ಮಿಸಿದ್ದು. ಈ ಜಲಾಶಯದಿಂದ ಬೆಳಗಾಂವಿ ಜಿಲ್ಲೆಯ ಚಿಕ್ಕೋಡಿ, ಹುಕ್ಕೇರಿ, ಅಥಣಿ, ರಾಯಬಾಗ, ಗೋಕಾಕ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕಗಳಲ್ಲೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ, ಮುಧೋಳ, ಬೀಳಗಿ, ಬಾಗಲಕೋಟೆ ಮತ್ತು ಹುನುಗುಂದ ತಾಲ್ಲೂಕುಗಳಲ್ಲೂ ಒಟ್ಟು 3.04 ಲಕ್ಷ ಹೆಕ್ಟೇರ್ ಭೂಮಿಗೆ ಪ್ರಯೋಜನವಾಗಿದೆ.

ಮೂರನೆಯ ಹಂತದ ಯೋಜನೆಗೆ 2000ದ ಹೊತ್ತಿಗೆ 425 ಕೋಟಿ ರೂಪಾಯಿಗಳನ್ನು ವ್ಯಯಿಸಲಾಗಿತ್ತು. ಈ ಯೋಜನೆಯು ಪೂರ್ಣಗೊಂಡಾಗ 1,78,064 ಹೆಕ್ಟೇರ್‌ಗಳಿಗೆ ನೀರಾವರಿ ಸೌಲಭ್ಯ ಒದಗುತ್ತದೆ. ನಾಲ್ಕನೆಯ ಹಂತದ ಯೋಜನೆಯಲ್ಲಿ ಎತ್ತರ ಮಟ್ಟದಲ್ಲಿ ಎಡದಂಡೆ ಕಾಲುವೆ ನಿರ್ಮಿಸುವುದು. ಇದರ ನೀರಾವರಿ ಸಾಮರ್ಥ್ಯ 60,000 ಹೆಕ್ಟೇರ್‌ಗಳು. ಈ ಪ್ರದೇಶದ ಬಹುಭಾಗದಲ್ಲಿ ಮುಂಗಾರು ಬೆಳೆಯ ಕೆಲವು ಕಡೆಗಳಲ್ಲಿ ಹಿಂಗಾರು ಫಸಲನ್ನೂ ಪಡೆಯಬಹುದು. ಈಗ 0.91-1.22ಮೀ. ಆಳದ ಕಪ್ಪುಮಣ್ಣು ಇರುವೆಡೆಗಳಲ್ಲಿ ಹತ್ತಿ ಬೆಳೆಯುತ್ತಾರೆ. ಈ ಪ್ರದೇಶದಲ್ಲಿ ಮಿಶ್ರತಳಿಯ ಮೆಕ್ಕೆಜೋಳ, ಸಜ್ಜೆ, ಜೋಳ, ಹತ್ತಿ, ದ್ವಿದಳ ಧಾನ್ಯಗಳು, ನೆಲಗಡಲೆ, ಸೂರ್ಯಕಾಂತಿ, ಗೋದಿ, ಕಬ್ಬು ಬೆಳೆಯಬಹುದಾಗಿದೆ. *

**ಘಟಿಕೋತ್ಸವ** : ವಿಶ್ವವಿದ್ಯಾನಿಲಯದ ಅಥವಾ ಇತರ ಅಂಗೀಕೃತ ಉನ್ನತ ಶಿಕ್ಷಣ ಸಂಸ್ಥೆಗಳ ಅಧ್ಯಯನ ಘಟಕವೊಂದರ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿದ ವಿದ್ಯಾರ್ಥಿಗಳಿಗೆ ಅಥವಾ ಯಾವುದಾದರೂ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಅಥವಾ ಪಾಂಡಿತ್ಯ ಸಾಧಿಸಿದ ಖ್ಯಾತ ವ್ಯಕ್ತಿಗಳಿಗೆ, ಪದವಿ ಅಥವಾ ಪ್ರಶಸ್ತಿಯನ್ನು ನೀಡಲು ಏರ್ಪಡಿಸುವ ಸಾಂಪ್ರದಾಯಿಕ ಸಮಾರಂಭ (ಕಾನ್ವೊಕೇಷನ್).

ಘಟಿಕೋತ್ಸವದ ಮೆರವಣಿಗೆ

ಭಾರತದ ಇತರೆಡೆಗಳಂತೆ ಕರ್ನಾಟಕದಲ್ಲೂ ಘಟಿಕೋತ್ಸವ ಇಂಗ್ಲಿಷ್ ಸಂಪ್ರದಾಯದಂತೆ ನಡೆಯುತ್ತದೆ. ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಸಾಮಾನ್ಯವಾಗಿ ಘಟಿಕೋತ್ಸವದಲ್ಲಿ ಏಕರೀತಿಯ ಕಾರ್ಯಕ್ರಮವನ್ನು ಅನುಸರಿಸಲಾಗುತ್ತಿದೆ. ಸಮಾರಂಭಕ್ಕೆ ಬರತಕ್ಕ ವಿದ್ಯಾರ್ಥಿಗಳು ಆಯಾ ಪದವಿಗೆ ಗೊತ್ತುಮಾಡಿರುವ ಬಣ್ಣದ ಮೇಲುಹೊದಿಕೆ (ಗೌನು), ಲಾಂಛನವಸ್ತ್ರ (ಹುಡ್)ಗಳನ್ನು ಧರಿಸಿಕೊಂಡು ಬರಬೇಕೆಂಬ ನಿಯಮವುಂಟು. ಸಮಾರಂಭಕ್ಕೆ ರಾಷ್ಟ್ರದ ವರಿಷ್ಟ ನಾಯಕರೊಬ್ಬರು ಆಹ್ವಾನಿತರಾಗಿ ಬಂದು ನೂತನ ಪದವೀಧರರನ್ನುದ್ದೇಶಿಸಿ ಭಾಷಣ ಮಾಡುವರು.

ಸಮಕಾಲೀನ ಸನ್ನಿವೇಶಕ್ಕೆ ತಕ್ಕಂತೆ ಘಟಿಕೋತ್ಸವ ಸಮಾರಂಭದಲ್ಲಿ ಹಲವು ಮಾರ್ಪಾಡುಗಳು ಜಾರಿಗೆ ಬರುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಪದವೀಧರರಿಗೆ ಏರ್ಪಡಿಸುವ ಘಟಿಕೋತ್ಸವದ ಜೊತೆಗೆ ಕಾಲೇಜುಗಳು ತಮ್ಮ ತಮ್ಮ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸಮಾರಂಭಗಳನ್ನು ಏರ್ಪಡಿಸಿ ಪದವಿಗಳನ್ನು ವಿತರಣೆ ಮಾಡುತ್ತಿರುವುವು.

ಗೈರುಹಾಜರಿಯಲ್ಲಿ ಪದವಿ ಸ್ವೀಕರಿಸಲು ಅವಕಾಶವಿತ್ತು. ವಿಶ್ವವಿದ್ಯಾನಿಲಯಗಳು ಅಂಚೆಯ ಮೂಲಕ ಪ್ರಶಸ್ತಿಪತ್ರ ಕಳಿಸಿ ಕೊಡುವ ವ್ಯವಸ್ಥೆಯನ್ನೂ ಮಾಡುತ್ತಿವೆ. ಈಚೆಗೆ ಪಾಶ್ಚಾತ್ಯ ಸಂಪ್ರದಾಯದ ಪೋಷಾಕಿಗೆ ಬದಲು ಭಾರತೀಯ ಸಂಪ್ರದಾಯದ ಉಡುಪನ್ನು

ಮಿರ್ಜಾ ಇಸ್ಮಾಯಿಲ್ ಮತ್ತು ಎಂ.ವಿಶ್ವೇಶ್ವರಯ್ಯನವರಿಗೆ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡುತ್ತಿರುವ ಸಂದರ್ಭ

ಧರಿಸಬಹುದಾದ ಅವಕಾಶ ಕಲ್ಪಿಸಲಾಗಿದೆ. ಬಿಳಿಯ ಉಡುಪನ್ನು ಅದರ ಮೇಲೆ ಆಯಾ ಪದವಿಯ ಗುರುತಿನ ಬಣ್ಣದ ಬಿಲ್ಲೆಗಳನ್ನೂ ಧರಿಸಬೇಕೆಂದು ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳು ನಿಯಮ ರೂಪಿಸಿವೆ. ಉಡುಪಿನ ನಿಯಮವನ್ನು ಪೂರ್ಣವಾಗಿ ತೆಗೆದುಹಾಕುವ ಪ್ರವೃತ್ತಿಯೂ ಕಂಡುಬರುತ್ತಿದೆ. ಕೆಲವು ವಿಶ್ವವಿದ್ಯಾನಿಲಯಗಳು ಪದವೀಧರರ ಬಾಹುಳ್ಯತೆಯನ್ನು ಗಮನಿಸಿ ಸ್ನಾತಕೋತ್ತರ ಪದವೀಧರರಿಗೆ ಮಾತ್ರ ಘಟಿಕೋತ್ಸವ ನಡೆಸುವ ಪದ್ಧತಿಯನ್ನು ರೂಢಿಗೆ ತರುತ್ತಿವೆ. (ಎನ್.ಎಸ್.ವಿ.)

**ಘಟ್ಟಿವಾಳಯ್ಯ :** ಹನ್ನೆರಡನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಹುಟ್ಟು ಹೆಸರು ಮುದ್ದಣ. ಈತ ಭಕ್ತನಾಗಿ ಮದ್ದಳೆ ಬಾರಿಸುತ್ತ ಶಿವಾನುಭವವನ್ನು ಸಾರುವ ನರ್ತನ ಕಾಯಕವನ್ನು ಕೈಕೊಂಡು ಕಡುತರ ಆಚರಣೆಗಳನ್ನು ಪಾಲಿಸುತ್ತಿದ್ದುದರಿಂದ ಘಟ್ಟಿವಾಳಯ್ಯ ಎಂಬ ಹೆಸರಾಯಿತು. ಇವನು ವಿವಾಹಿತ. ಹೆಂಡತಿ ಇವನೊಡನೆ ಬಾಳ್ವೆ ಮಾಡಲಿಲ್ಲ. ಗಂಡನ ಆಧ್ಯಾತ್ಮಿಕತೆ ಹಿಡಿಸದಾಯಿತು. ಸಂಪತ್ತು ಮತ್ತು ಸುಖಾನುಭಾವಕ್ಕೆ ಮನಸೋತ ಸತಿಯ ಈ ನಡತೆಯಿಂದ ಘಟ್ಟಿವಾಳಯ್ಯನ ಮನಸ್ಸು ಸಂಪೂರ್ಣವಾಗಿ ವೈರಾಗ್ಯದತ್ತ ತಿರುಗಿತು. ಹೊನ್ನು ಭೂಪಾಲರಿಗೆ, ಹೆಣ್ಣೊಲಿದಕಾಮುಕಗೆ, ಮಣ್ಣು ಬಲವಂತಗಲ್ಲದೆ ಬರಿಯ ಭ್ರಾಂತಿಯಲ್ಲಿ ಕಣ್ಣುಗೆಟ್ಟರೆ ಬರುವುದೇ? ಎನ್ನ ಧನ ಜ್ಞಾನವೆಂಬಾಗಮದ ವಚನ ನಿನ್ನರಿದುಕೋ ಎಂದು ತನಗೆ ತಾನು ಸಂತೈಸಿಕೊಂಡು ವೈರಾಗ್ಯಪರನಾದ. ತರುವಾಯ ಕಲ್ಯಾಣದತ್ತ ಪಯಣಮಾಡಿದ. ಅಲ್ಲಿ ಬಸವಣ್ಣನವರ ದಾಸೋಹದ ಆಸೆಗಾಗಿ ನೆರೆದಿದ್ದ ಕಪಟ ಜಂಗಮರನ್ನು ಕಂಡು ಮುಸುರೆ ಗಡಿಗೆಯ ನೊಣಗಳೆಂದು ನಿಷ್ಠುರವಾಗಿ ನುಡಿದು ಅವರ ಕೋಪಕ್ಕೆ ಪಾತ್ರನಾದ. ಅವರು ಇವನ ಇಷ್ಟಲಿಂಗವನ್ನು ಕಿತ್ತುಕೊಂಡರು. ಘಟ್ಟಿವಾಳಯ್ಯ ಒಂದು ಬೆಟ್ಟವನ್ನೆ ಇಷ್ಟಲಿಂಗವಾಗಿ ಧರಿಸಿ ಬಸವಣ್ಣನ ಮನೆಯ ಬಾಗಿಲಲ್ಲಿ ಕುಳಿತ. ಆಗ ಅದರಿಂದ ಮನೆಯ ಪ್ರವೇಶಕ್ಕೆ ಅಡಚಣೆಯುಂಟಾಗಲು ಜಂಗಮರು ಇಷ್ಟಲಿಂಗವನ್ನು ಹಿಂದಿರುಗಿಸಿದರು. ಬೆಟ್ಟ ಇಷ್ಟಲಿಂಗದಲ್ಲಿ ಲೀನವಾಯಿತು – ಇದು ಈತ ಮೆರೆದನೆನ್ನಲಾದ ಪವಾಡ. ಆಚಾರಕ್ಕಿಂತಲೂ ಸ್ವಾನುಭವ ದೊಡ್ಡದೆಂದು ಘಟ್ಟಿವಾಳಯ್ಯ ಜಂಗಮರಿಗೆ ಸಾರಿ ಹೇಳಿದ. ಇವನ ಸದಾಚಾರದ ಪ್ರಭಾವದಿಂದ ಕಪಟಾಚಾರಿಗಳೂ ಪ್ರಾಮಾಣಿಕ ಜಂಗಮರಾದರು. ನರ್ತನ ಕಾಯಕದಲ್ಲಿ ತೊಡಗಿರುವಾಗಲೇ ಒಂದು ದಿನ ಈತ ನಿಧನಹೊಂದಿದ.

ಅಂದಿನ ಶರಣರ ನಡುವೆ ಈತ ಗಮನಾರ್ಹವಾದ ಸ್ಥಾನವನ್ನು ಗಳಿಸಿಕೊಂಡಿದ್ದ. ಅಲ್ಲಮಪ್ರಭು ಇವನನ್ನು ಕುರಿತು 'ಅಂಗದ ಮೇಲಣ ಲಿಂಗಕ್ಕಿಂತ ಅಂಗದೊಳಗಣ ಲಿಂಗವು ಹಿಂಗದಂತಿರಬೇಕು ಘಟ್ಟಿವಾಳಯ್ಯನಂತೆ' ಎಂದೂ 'ಕೂಡಲ ಚನ್ನಸಂಗಾ ನಿನ್ನ ಶರಣ ಘಟ್ಟಿವಾಳಯ್ಯನಲ್ಲದೆ ನೆರೆ ಅರಿವವರಾರೋ' ಎಂದು ಚೆನ್ನಬಸವಣ್ಣನೂ ಲೆಕ್ಕವಿಲ್ಲದ 'ಆಸೆ ಮನದೊಳಗೆ ಹೊಕ್ಕು ತಿರುಗಾಡುತಿಹ ಚಿಕ್ಕಮಕ್ಕಳಿಗೆಲ್ಲಿಯದೋ ನಿರ್ವಾಣ ಘಟ್ಟಿವಾಳಂಗಲ್ಲದೆ' ಎಂದು ಮೋಳಿಗೆ ಮಾರಯ್ಯನೂ ಮೆಚ್ಚುಗೆಯ ನುಡಿಗಳನ್ನಾಡಿದ್ದಾನೆ. ಅದೃಶ್ಯಕವಿ ಇವನನ್ನು ದೃಢಶರಣಸೀಮಂತಮಣಿ ಎಂದು ಕೊಂಡಾಡಿದ್ದಾನೆ.

ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಎಂಬ ಅಂಕಿತದಿಂದ ಈತ ವಚನಗಳನ್ನು ರಚಿಸಿದ್ದಾನೆ. ಇವನ ವಚನಗಳಲ್ಲಿ ಸತ್ಯ ನಿಷ್ಠುರತೆ ಮತ್ತು ಸದಾಚಾರಗಳು ಎದ್ದು ಕಾಣುತ್ತವೆ. ಉದಾಹರಣೆಗಾಗಿ ಒಂದು ವಚನ:

> ಕಾಯ ಜೀವವನರಿದೆನೆಂಬುವರೆಲ್ಲರೂ ಹೋದರಲ್ಲಾ ಹೊಲಬುದಪ್ಪಿ
> ಹೊನ್ನು ಹೆಣ್ಣು ಮಣ್ಣಿಗೆ ಹೋರಿಯಾಡುವರೆಲ್ಲರು
> ಬಸವಣ್ಣನ ಬಾಗಿಲಲ್ಲಿ ಬಂಧಿತರಾಗಿ ನೊಂದವರಿಗೇಕೆ
> ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ

ಈತ ಒಂದು ಕಾಲಜ್ಞಾನವನ್ನೂ ಬರೆದಿದ್ದಾನೆ. ಇದರಲ್ಲಿ 7ಸಂಧಿಗಳೂ 393 ಪದಗಳೂ ಇವೆ. ಉದಾಹರಣೆಗೆ ಒಂದು ಪದ:

> ಅತ್ತೆಯ ಮಾತ ಸೊಸೆ ಕೇಳಳಮ್ಮ
> ಅತ್ತೆಯನೆ ಒತ್ತಿ ದುರ್ಭಾಷೆಯಮ್ಮ
> ಪತಿವ್ರತವು ಕೆಟ್ಟುಹೋದೀತಮ್ಮ
> ಇನ್ನು ಪತಿಯ ಮಾತನು ಸಡ್ಡೆಗೊಳ್ಳರಮ್ಮ (ಬಿ.ವಿ.ವಿ.ಬಿ.)

**ಘನಮಠದಾರ್ಯ ನಾಗಭೂಷಣ :** 1828-84. ಘನಮಠದ ಶಿವಯೋಗಿ ಎಂದೂ ಪ್ರಸಿದ್ಧನಾಗಿದ್ದ ಶಿವಶರಣ. ಈತ ಆಂಧ್ರಪ್ರದೇಶದ ಹೈದರಾಬಾದ್ ಜಿಲ್ಲೆಯ ದೋರ್ವಾಡ ಎಂಬ ಗ್ರಾಮದಲ್ಲಿ ಜನಿಸಿದ. ತಂದೆ ವೀರಯ್ಯ, ತಾಯಿ ವೀರಾಂಬೆ. ಈತನ ಹುಟ್ಟು ಹೆಸರು ನಾಗಭೂಷಣ. ತನ್ನ ಎಳೆಯ ವಯಸ್ಸಿನಲ್ಲೇ ದೀಕ್ಷೆ ಪಡೆದು ಹನ್ನೆರಡನೆಯ ವಯಸ್ಸಿನಲ್ಲಿ ಘನಮಠದ ಚರವರ್ಯ ಸದ್ಗುರುಗಳ ಕೃಪೆಗೆ ಪಾತ್ರನಾದ. ತೆಲುಗು ದೇಶದಿಂದ ಬಂದವನಾದುದರಿಂದ ಕನ್ನಡನಾಡನ್ನು ಪ್ರವೇಶಿಸಿದಾಗ ಈತ ಭಾಷಾಸಮಸ್ಯೆಯನ್ನು ಎದುರಿಸಬೇಕಾಯಿತು. ಬಸವಾದಿ ಪ್ರಮಥರ ವಚನಸಾಹಿತ್ಯದಲ್ಲಿ ಆಳವಾದ ಜ್ಞಾನವನ್ನು ಪಡೆಯಬೇಕೆಂಬ ಉತ್ಕಟ ಬಯಕೆ ಈತನನ್ನು ನಡುವಯಸ್ಸಿನಲ್ಲಿ ಕನ್ನಡ ಕಲಿಯಲು ಪ್ರೇರೇಪಿಸಿತು. ಯರಗೋಳಮಠದ ರೇವಣಸಿದ್ದಯ್ಯ ಎಂಬವರಲ್ಲಿ ವಿಧಿಪೂರ್ವಕವಾಗಿ ಕನ್ನಡ ಕಲಿತುದಲ್ಲದೆ ಕಾವ್ಯ ಪುರಾಣಗಳ ಸಾರವನ್ನೂ ವಚನಗಳ ತಿರುಳನ್ನೂ ಗ್ರಹಿಸಿದ. ಬಸವಣ್ಣನವರ ದಿವ್ಯ ಜೀವನ ಈತನ ಬಾಳನ್ನೆಲ್ಲ ಆವರಿಸಿತ್ತು. ಹಾಗಾಗಿ ಕಲ್ಯಾಣದ ಸುತ್ತಮುತ್ತಲಿನ ಪ್ರದೇಶಗಳಾದ ಗುಲ್ಬರ್ಗ, ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಸಂಚಾರಮಾಡಿದ. ಚಿತ್ತಾಲಿ, ಸಂಗಮೇಶ್ವರ, ತಾಳಿಕೋಟೆ, ಬಾಗೇವಾಡಿ, ಬಳ್ಳಾರಿ, ಸೊನ್ನಲಾಪುರ, ಕುಂಟೋಜಿ, ಹುನಗುಂದ, ಇಳಕಲ್ಲು ಮೊದಲಾದ ಊರುಗಳನ್ನು ಸಂಚರಿಸಿದನೆಂಬುದಕ್ಕೆ ಆಧಾರಗಳು ಸಿಗುತ್ತವೆ. ಹೋದಲ್ಲೆಲ್ಲ ಈತನ ಹೆಗಲ ಮೇಲೆ ಬಸವಣ್ಣನವರ ವಚನಗಳ ಒಂದು ಕಟ್ಟು ಸದಾ ಇರುತ್ತಿತ್ತಂತೆ. ಹೀಗೆ ಸು.35 ವರ್ಷಗಳ ಕಾಲ ದೇಶಸಂಚಾರಮಾಡಿ ಪುರಾಣ ಪ್ರವಚನದ ಮೂಲಕ ಜನರಲ್ಲಿ ಧಾರ್ಮಿಕ ಜಾಗೃತಿಯನ್ನುಂಟುಮಾಡಿದ. ಈತನಿಗೆ ಕಾವ್ಯರಚನೆಯ ಸಾಮರ್ಥ್ಯವಿತ್ತಾಗಿ ಅನೇಕ ಹಾಡುಗಳನ್ನು ಕಟ್ಟಿ ಹಾಡಿದುದಲ್ಲದೆ ಭಕ್ತಿಸುಧಾಸಾರ ಎಂಬ ಗ್ರಂಥವನ್ನು ರಚಿಸಿದನೆಂದು ತಿಳಿದುಬರುತ್ತದೆ.

ಶಿವಜ್ಞಾನ, ಶಿವಾನುಭವ, ತತ್ತ್ವಬೋಧನೆ ಈತನ ವ್ಯಕ್ತಿತ್ವದ ಒಂದು ಮುಖವಾದರೆ ರೈತರ ಕ್ಷೇಮಾಭ್ಯುದಯ ಇನ್ನೊಂದು ಮುಖವಾಗಿತ್ತು. ವ್ಯವಸಾಯದ ವಿವಿಧ ಸಮಸ್ಯೆಗಳ ಅರಿವು ಈತನಿಗೆ ಚೆನ್ನಾಗಿತ್ತು. ವಿಶೇಷವಾಗಿ ಬಾವಿ ತೋಡುವಾಗ ರೈತರು ಈತನ ಸಲಹೆಯನ್ನು ಪಡೆಯುತ್ತಿದ್ದರಂತೆ. ಈತ ವ್ಯವಸಾಯದಲ್ಲಿದ್ದ ತನ್ನ ಅಪಾರ ಜ್ಞಾನ ವ್ಯರ್ಥವಾಗಬಾರದೆಂದು ಭಾವಿಸಿ ತನ್ನ ಶಿಷ್ಯರಲ್ಲಿ ಒಬ್ಬನಾದ

ಸಿದ್ಧರಾಮಪ್ಪ ಕುನ್ನಾಳ ಎಂಬಾತನಿಂದ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥವನ್ನು ಬರೆಯಿಸಿದ. ಇದರಲ್ಲಿ ಹೊಲಗದ್ದೆತೋಟಗಳನ್ನು ಕುರಿತ ಬೋಧಪ್ರದ ನಿರೂಪಣೆಯಿದೆ.

ಶಿವಯೋಗಿ ತನ್ನ ಅಂತ್ಯಕಾಲದಲ್ಲಿ ಲಿಂಗಸುಗೂರು ತಾಲ್ಲೂಕಿನ ಸಂತೆಕೆಲ್ಲೂರು ಗ್ರಾಮದಲ್ಲಿ ತಂಗಿದ್ದಾಗ ಶಂಕರಪ್ಪಗೌಡ ಎಂಬಾತನ ಮನೆಯಲ್ಲಿ ಕರುಣಪ್ರಸಾದ ಸಮಯದಲ್ಲಿ ಈತನಿಗೂ ನೀರಡಗುಂಭದ ಚನ್ನಬಸವಸ್ವಾಮಿಗೂ ವಾದ ನಡೆಯಿತು. ಅನಂತರ 1884ರಲ್ಲಿ ಇಬ್ಬರೂ ಒಟ್ಟಾಗಿ ಲಿಂಗೈಕ್ಯರಾದರೆಂದು ತಿಳಿದುಬರುತ್ತದೆ. ಈತನ ಜೀವನದ ಕುರುಹಾಗಿ ಈಗ ಕುಂಟೋಜಿಯಲ್ಲಿ ಈತನ ಪಾದುಕೆಗಳೂ ಸಂತೆಕೆಲ್ಲೂರಿನಲ್ಲಿ ಈತನ ಗದ್ದುಗೆಯೂ ಉಳಿದಿವೆ. ಕೃಷಿಜ್ಞಾನ ಪ್ರದೀಪಿಕೆ ಫ.ಗು. ಹಳಕಟ್ಟಿಯವರಿಂದ ಸಂಪಾದಿತವಾಗಿ ಅಚ್ಚಾಗಿದೆ (1936.) (ಬಿ.ವಿ.ವಿ.ಬಿ.)

**ಘನಲಿಂಗದೇವ :** ಸು.1480. ವೀರಶೈವ ವಚನಕಾರ. ತೋಂಟದ ಸಿದ್ಧಲಿಂಗೇಶ್ವರನ ಶಿಷ್ಯ. ಈತ ಸುತ್ತೂರು ವೀರಸಿಂಹಾಸನಮಠದ ಗುರು ವರ್ಗಕ್ಕೆ ಸೇರಿದವನೆಂದೂ ಆ ಮಠದ ಹನ್ನೊಂದನೆಯ ಅಧಿಪತಿಯಾಗಿದ್ದನೆಂದೂ ತಿಳಿದುಬಂದಿದೆ. ತನ್ನ ಗುರುವಿನೊಡನೆ ಒಂದಾಗಿ, ಅವರು ಕೈಕೊಂಡ ಕಾರ್ಯವನ್ನು ಪರಿಪೂರ್ಣಗೊಳಿಸಲು ಯತ್ನಿಸಿದ. 'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತದಿಂದ ವಚನಗಳನನ್ನು ಬರೆದಿದ್ದಾನೆ. 63 ವಚನಗಳು ದೊರೆತಿವೆ. ಇವನ ಒಂದೊಂದು ವಚನದಲ್ಲೂ ಮಾತಿನ ಮೋಡಿ, ಜ್ಞಾನದ ಕಿಡಿ ವೀರಶೈವದ ಮತದ ಸಾರ ಇದೆ. ಕೆಲವು ವಚನಗಳು ಭಾವಗೀತೆಯ ಅನುಭವ ತೀವ್ರತೆಯಿಂದ ಕೂಡಿವೆ. ಇವುಗಳಲ್ಲಿ ವಿಡಂಬನೆಯ ಆತ್ಮಶೋಧನೆಯ ಗುಣಗಳು ಕಂಡುಬರುತ್ತವೆ. 'ಪುರಾತನರ ಗೀತವನೋದಿ ಪುರಾತನರ ಮಕ್ಕಳಾದ ಬಳಿಕ ಕಿರಾತರ ಮಕ್ಕಳಂತೆ ಮನಬಂದ ಪರಿಯಲ್ಲಿ ನಡೆಯಬಾರದು; ಕಪಿ ಕಳ್ಳ ಕುಡಿದು ಕಡಲ ದಾಂಟುವೆನೆಂದು ಲಂಘಿಸಿ, ನಡುನೀರಿನಲ್ಲಿ ಬಿದ್ದು, ಮೀನು ಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನಬಾಳು. ನಡೆಗೂ ನುಡಿಗೂ ತಾಳ ಮೇಳವಿಲ್ಲದಿದ್ದರೆ ಏತರ ಬಾಳು ? ಹುಲಿ ಆಕಳ ವೇಷ ತೊಟ್ಟಂತೆ; ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ, ಹಂದಿಯ ತಂದು ಅಂದಣವ ಸೇರಿಸಿದಂತೆ, ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ – ಈ ಮೊದಲಾದ ವಚನಗಳು ಅನುಭವಸಂಪತ್ತಿಯಿಂದ ಕೂಡಿದ್ದು ಸುಂದರವಾಗಿವೆ. ಇವನ ವಚನಗಳಲ್ಲಿ ಚುಚ್ಚೂಮೆಚ್ಚೂ ಇಚ್ಛೆಗೆ ಬಂದುದನ್ನು ಬಿಚ್ಚಿ ಹೇಳುವ ಹದ ಕಂಡು ಬರುತ್ತದೆ. ಅಂತೆಯೇ ಇವನ ಶೈಲಿ ವಜ್ರದಂತೆ ಕಠೋರವೂ ಪುಷ್ಪದಂತೆ ಮೃದುಮಧುರವೂ ಆಗಿದೆ. (ಎಂ.ಎಸ್.ಎಸ್.)

**ಘಾಟಿ ಸುಬ್ರಹ್ಮಣ್ಯ :** ಬೆಂಗಳೂರು ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳ. ದೊಡ್ಡಬಳ್ಳಾಪುರಕ್ಕೆ 12ಕಿಮೀ ದೂರದಲ್ಲಿದೆ. ಇದು ಘಟ್ಟಗಳ ಮಧ್ಯ ಇರುವುದರಿಂದ ಇದಕ್ಕೆ ಈ ಹೆಸರು ಬಂದಿದೆ.



ಘಾಟಿ ಸುಬ್ರಹ್ಮಣ್ಯ ದೇವಾಲಯ

ಇಲ್ಲಿಯ ದೇವರು ಸುಬ್ರಹ್ಮಣ್ಯೇಶ್ವರ. ಸಂತಾನವಿಲ್ಲದವರು ಘಾಟಿಸುಬ್ರಹ್ಮಣ್ಯಕ್ಕೆ ಬಂದು ನಾಗರಪ್ರತಿಷ್ಠೆ ಮಾಡುತ್ತಾರೆ. ಈಗ ಸುತ್ತಮುತ್ತಲಿನ ಪ್ರದೇಶದವರು ತಮ್ಮ ಚೌಲಸಂಸ್ಕಾರವನ್ನು ಇಲ್ಲಿ ನಡೆಸುತ್ತಾರೆ. ಈಗ ಉಪನಯನಗಳೂ ವಿವಾಹಗಳೂ ನಡೆಯುತ್ತಿವೆ. ನಾಗರಪಂಚಮಿ, ಸುಬ್ಬರಾಯನ ಷಷ್ಠಿಗಳಂದು ಇಲ್ಲಿ ವಿಶೇಷಪೂಜೆ ಮತ್ತು ಉತ್ಸವಗಳು ನಡೆಯುತ್ತವೆ. ಇದೇ ಸಮಯದಲ್ಲಿ ದನಗಳ ದೊಡ್ಡ ಜಾತ್ರೆ ನೆರೆಯುತ್ತದೆ. ಈ ಕ್ಷೇತ್ರಕ್ಕೆ ವಾಹನ ಸೌಕರ್ಯವಿದೆ. ಯಾತ್ರಿಕರು ಇಳಿದುಕೊಳ್ಳಲು ಛತ್ರಗಳಿವೆ. *

**ಘೋರ್ಪಡೆ, ಎಂ. ವೈ. :** 1931-. ಹೆಸರಾಂತ ವನ್ಯಜೀವಿ ಛಾಯಾಚಿತ್ರಗ್ರಾಹಕ, ಕೈಗಾರಿಕೋದ್ಯಮಿ, ಪ್ರಮುಖ ರಾಜಕಾರಣಿ. ಕರ್ನಾಟಕದ



ಮಾಜಿ ಸಚಿವ, ಸಂಡೂರು ಮ್ಯಾಂಗನೀಸ್ ಐರನ್ ಓರ್ಸ್ ಲಿ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು. ಅರ್ಥಶಾಸ್ತ್ರ, ಯೋಜನೆ, ಶಿಕ್ಷಣ, ಕೈಗಾರಿಕೆ, ವ್ಯವಸಾಯ ಮತ್ತು ಕೃಷಿ ವಿಷಯಗಳಲ್ಲಿ ಇವರು ವಿಶೇಷ ಆಸಕ್ತಿ ಹೊಂದಿದ್ದಾರೆ.

ಮುರಾರಿರಾವ್ ಯಶವಂತರಾವ್ ಘೋರ್ಪಡೆ ಇವರ ಪೂರ್ತಿ ಹೆಸರು. ಇವರು 1931 ಡಿಸೆಂಬರ್ 7ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರದು ಸಂಡೂರಿನ ರಾಜಮನೆತನ, ಇವರ ಹಿರಿಯರು ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದವರು. ಬಾಲ್ಯದ ಶಿಕ್ಷಣ ಸಂಡೂರಿನಲ್ಲಿ ಆಯಿತು. ಬೆಂಗಳೂರಿನ ಸೆಂಟ್‌ಜೋಸೆಫ್ ಕಾಲೇಜಿನಿಂದ ಪದವಿ (1950) ಗಳಿಸಿದ ಅನಂತರ ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ಎಕನಾಮಿಕ್ಸ್ ಟ್ರೈಪೋಸ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು (1952) ಕೃಷಿ ಮತ್ತು ಕೈಗಾರಿಕೋದ್ಯಮವನ್ನು ವೃತ್ತಿಯನ್ನಾಗಿಸಿಕೊಂಡರು.

1954ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದ ಇವರು ಗ್ರಾಮೀಣ ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿ ತೋರಿದರು. ಸಂಡೂರು ಪಟ್ಟಣ ಪಂಚಾಯಿತಿ ಮತ್ತು ಸಹಕಾರ ಸಂಘದ ಅಧ್ಯಕ್ಷರಾಗಿದ್ದರು (1958). 1959ರ ಉಪಚುನಾವಣೆಯಲ್ಲಿ ಮೊದಲಬಾರಿಗೆ ಸಂಡೂರು ಕ್ಷೇತ್ರದಿಂದ ಕರ್ನಾಟಕ ವಿಧಾನಸಭೆ ಪ್ರವೇಶಿಸಿದರು. ಅನಂತರ ಆರು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ವಿಧಾನ ಮಂಡಲದ ಅನೇಕ ಸಮಿತಿಗಳಲ್ಲಿ ಅಧ್ಯಕ್ಷರಾಗಿ, ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕದ ಅರ್ಥಸಚಿವರಾಗಿದ್ದ ಇವರು (1972-77) ಅಖಿಲ ಭಾರತ ಮಟ್ಟದ ಪಂಚಾಯತ್ ರಾಜ್ ಹಣಕಾಸು ಅಧ್ಯಯನ ಸಮಿತಿ (1963), ರಾಷ್ಟ್ರೀಯ ಯೋಜನ ಪರಿಷತ್ (1965) ಮತ್ತು ನ್ಯಾಷನಲ್ ಕ್ರೆಡಿಟ್ ಸಮಿತಿಗಳ ಸದಸ್ಯರಾಗಿದ್ದರು (1968).

1986ರಲ್ಲಿ ನಡೆದ ಉಪಚುನಾವಣೆಯಲ್ಲಿ ರಾಯಚೂರು ಕ್ಷೇತ್ರದಿಂದ ಆಯ್ಕೆಯಾಗಿ ಲೋಕಸಭೆಯನ್ನು ಪ್ರವೇಶಿಸಿದರು. 1990 ಮೇ -ಅಕ್ಟೋಬರ್‌ವರೆಗೆ ಹಾಗೂ ನವೆಂಬರ್ 1992ರಿಂದ ಮೇ 1994ರವರೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿದ್ದರು. ವಿಧಾನಸಭೆಗೆ ಪುನರ್ ಆಯ್ಕೆಯಾದ (1999) ಇವರು ಎಸ್.ಎಂ.ಕೃಷ್ಣ ಅವರ ನಾಯಕತ್ವದ ಮಂತ್ರಿಮಂಡಲದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು (2003).

ಛಾಯಾಗ್ರಹಣ ಇವರ ಪ್ರಮುಖ ಹವ್ಯಾಸಗಳಲ್ಲೊಂದು. ಛಾಯಾಗ್ರಹಣದಲ್ಲಿನ ಇವರ ಪ್ರತಿಭೆಗೆ ಸಂದ ಗೌರವಗಳು ಹಲವಾರು. ಫೆಲೋಷಿಪ್ ಆಫ್ ದಿ ರಾಯಲ್ ಫೋಟೋಗ್ರಾಫಿಕ್ ಸೊಸೈಟಿ ಆಫ್

ಗ್ರೇಟ್ ಬ್ರಿಟನ್ (ಎಫ್.ಆರ್.ಪಿ.ಎಸ್.), ಎಕ್ಸಲೆನ್ಸ್ ಫೆಡರೇಷನ್ ಇಂಟರ್‌ನ್ಯಾಷನಲ್ ಡೆ ಲ ಆರ್ಟ್ ಫೋಟೋಗ್ರಾಫಿಕ್ ಇ.ಎಫ್.ಐ.ಎ.ಪಿ. (1976) ಲಭಿಸಿವೆ. ಅಂತಾರಾಷ್ಟ್ರೀಯ ಮಟ್ಟದ ಅತ್ಯುನ್ನತ ಪ್ರಶಸ್ತಿ ಮಾಸ್ಟರ್ ಫೆಡರೇಷನ್ ಇಂಟರ್ ನ್ಯಾಷನಲ್ ಡೆ ಲ ಆರ್ಟ್ ಫೋಟೋಗ್ರಾಫಿಕ್ ವನ್ಯ ಜೀವಿ ಛಾಯಾಗ್ರಹಣಕ್ಕೆ ಪ್ರಪಂಚದಲ್ಲೇ ಮೊಟ್ಟಮೊದಲಿಗೆ ಇವರಿಗೆ ಸಂದ ಪ್ರಶಸ್ತಿ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985), ಛಾಯಾಗ್ರಹಣಕ್ಕಾಗಿ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1994) ಇವರಿಗೆ ದೊರಕಿದ ಇತರ ಪ್ರಶಸ್ತಿಗಳಾಗಿವೆ.

ಸನ್‌ಲೈಟ್ ಅಂಡ್ ಷಾಡೋಸ್ (1983), ಡೆವೆಲಪ್‌ಮೆಂಟ್‌ಎಥೋಸ್ ಅಂಡ್ ಎಕ್ಸ್‌ಪೀರಿಯನ್ಸ್ ದಿ ಗ್ರಾಂಡ್ ರೆಸಿಸ್ಟೆನ್ಸ್, ಪರಮಾಚಾರ್ಯ ಆಫ್ ಕಂಚಿ ಎ ಸ್ಪಿರಿಚ್ಯುಯಲ್ ಅಂಡ್ ಹ್ಯೂಮನ್ ರಿಲೇಶನ್‌ಶಿಪ್ ಎಂಬ ಕೃತಿಗಳನ್ನು ರಚಿಸಿದ್ದಾರಲ್ಲದೇ ಹಣಕಾಸು, ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಪ್ರಬುದ್ಧ ಲೇಖನಗಳನ್ನು ಬರೆದಿದ್ದಾರೆ. ಪರಮಾಚಾರ್ಯ ಆಫ್ ಕಂಚಿ ಎಂಬ ಪುಸ್ತಕ ತಮಿಳು ಮತ್ತು ಕನ್ನಡ ಭಾಷೆಗಳಿಗೆ ಅನುವಾದವಾಗಿದೆ. (ಎಸ್.ಎನ್.ಜಿ.)

# ಚ

**ಚಂಗಾಳ್ವ ವಂಶ :** ದಕ್ಷಿಣ ಕರ್ನಾಟಕದ ಈಗಿನ ಪಿರಿಯಾಪಟ್ಟಣ, ಹುಣಸೂರು, ಕೃಷ್ಣರಾಜನಗರ ತಾಲ್ಲೂಕುಗಳು ಹಾಗೂ ಕೊಡಗಿನ ಸೋಮವಾರಪೇಟೆ ತಾಲ್ಲೂಕಿನ ಭಾಗಗಳನ್ನು ಒಳಗೊಂಡಿದ್ದ ಚಂಗನಾಡನ್ನು ಆಳುತ್ತಿದ್ದ ಒಂದು ಚಿಕ್ಕ ರಾಜಮನೆತನ. ತಮ್ಮನ್ನು ಯಾದವರೆಂದೂ ಚಂದ್ರವಂಶಜರೆಂದೂ ಇವರು ಕರೆದುಕೊಂಡಿದ್ದಾರೆ. ಕೊಂಗಾಳ್ವರಂತೆ ಚಂಗಾಳ್ವರು ಕೂಡ ಚೋಳರಿಂದ ಪ್ರತಿಷ್ಠಾಪಿತರಾದ ಮಾಂಡಲಿಕರಿರಬೇಕೆಂದು ಊಹಿಸಲು ಅವಕಾಶವಿದೆ. ಚೋಳ ಪಂಚವ ಮಹಾರಾಯ ಹನಸೋಗೆಯಲ್ಲಿ ಚಂಗಾಳ್ವರನ್ನು ಸೋಲಿಸಿದನೆಂಬ ಹೇಳಿಕೆಯೂ ಇದೆ. ಈ ವಂಶದ ಮೊದಲ ಶಾಸನೋಲ್ಲೇಖಿತ ರಾಜನಾದ ನನ್ನಿ ಚಂಗಾಳ್ವ (ಸು.1034) ರಾಜೆಂದ್ರ ಚೋಳ ಎಂಬ ಹೆಸರನ್ನೂ ಹೊಂದಿದ್ದು ಇದು ಅವನ ಚೋಳ ಮಾಂಡಲಿಕತ್ವದ ಸೂಚಕವಾಗಿದೆ. ಜೈನನಾದ ನನ್ನಿ ಚಂಗಾಳ್ವ ಹನಸೋಗೆಯ ಬಸದಿಯನ್ನು ಜೀರ್ಣೋದ್ಧಾರಮಾಡಿದಂತೆ ತಿಳಿಯುತ್ತದೆ. ಹನ್ನೊಂದರಿಂದ ಹದಿಮೂರನೆಯ ಶತಕದವರೆಗೆ ಹೊಯ್ಸಳರೊಡನೆ ಸೆಣಸುತ್ತಲಿದ್ದ ಈ ವಂಶದ ರಾಜರು ಮುಂದೆ ಹೊಯ್ಸಳರ ಮಾಂಡಳಿಕರೂ ಆದರು. ಮಹಾದೇವ (1090), ಉದಯಾದಿತ್ಯ (1097), ಅನ್ನದಾನಿ (1106), ಮುಂತಾದ ದೊರೆಗಳು ಶಾಸನಗಳಲ್ಲಿ ಉಲ್ಲೇಖಿತರಾಗಿದ್ದು ಇವರಿಗೆ ಚೋಳವಂಶದ ರಾಜರ ಹೆಸರುಗಳೂ ಇವೆ. ಹೊಯ್ಸಳ ನರಸಿಂಹ 1145ರಲ್ಲಿ ಒಬ್ಬ ಚಂಗಾಳ್ವನನ್ನು ಕೊಂದು ಚಂಗನಾಡನ್ನು ವಶಪಡಿಸಿಕೊಂಡ. ಹನ್ನೆರಡನೆಯ ಶತಮಾನದ ಕೊನೆಗೆ ಇವರು ತಮ್ಮ ರಾಜಧಾನಿಯನ್ನು ಹುಣಸೂರು ಪ್ರದೇಶದಿಂದ ಕೊಡಗಿನ ಪಲ್ಪರೆಗೆ ಬದಲಾಯಿಸಿದರು. ಈ ಶತಮಾನದ ಕೊನೆಗಿದ್ದ ಮಹಾದೇವನೆಂಬ ಚಂಗಾಳ್ವ ಹೊಯ್ಸಳರಿಂದ ಕೊಲ್ಲಲ್ಪಟ್ಟರೂ ಪೆಮ್ಮವೀರನೆಂಬುವನು ಈ ಕಲಹವನ್ನು ಮುಂದುವರಿಸಿದ. ಆದರೆ ಮುಂದೆ ಆತ ಹೊಯ್ಸಳರಿಗೆ ತಲೆಬಾಗಬೇಕಾಯಿತು. ಹದಿಮೂರನೆಯ ಶತಮಾನದ ಮಧ್ಯದಲ್ಲಿ ಸೋಮದೇವ ಮತ್ತು ಬೊಪ್ಪದೇವ ಎಂಬಿಬ್ಬರು ಹೊಯ್ಸಳರ ಮಾಂಡಳಿಕರಾಗಿ ಜಂಟಿಯಾಗಿ ಆಳುತ್ತಿದ್ದರು. ಆಗ ಅವರು ಕೊಡಗಿನ ಸಿದ್ಧಾಪುರ ಬಳಿಯ ಶ್ರೀರಂಗಪಟ್ಟಣಕ್ಕೆ ರಾಜಧಾನಿಯನ್ನು ಬದಲಾಯಿಸಿದ್ದರು. ಮುಂದೆ ಮಲ್ಲಿದೇವ ಹಾಗೂ ಅವನ ಮಗ ಹರಿಹರದೇವ ಇವರ ಆಳಿಕೆಯ ವಿಚಾರ ಶಾಸನಗಳಲ್ಲಿ ಬಂದರೂ 1300ರ ಅನಂತರ ಎರಡು ಶತಮಾನಗಳ ಕಾಲದಲ್ಲಿ ಇವರ ಶಾಸನಗಳು ದೊರಕುವುದಿಲ್ಲ.

16ನೆಯ ಶತಮಾನದಲ್ಲಿ ಆಳುತ್ತಿದ್ದ ನಂಜರಾಜ (ಸು.1502-33) ತನ್ನ ಹಿಂದಣ ಪಿರಿಯಣ್ಣ ರಂಗ, ನಾಗ ಮುಂತಾದ ದೊರೆಗಳ ವಿಚಾರ ಹೇಳಿದ್ದಾನೆ. ಚಂಗಾಳ್ವರು ವೀರಶೈವರು. ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದ ಮಲ್ಲಿಕಾರ್ಜುನ ಇವರ ಆರಾಧ್ಯದೈವ. ನಂಜರಾಜ ಕೊಡಗಿನಲ್ಲಿ ನಂಜರಾಜ ಪಟ್ಟಣವನ್ನು ಸ್ಥಾಪಿಸಿ ಆಳಲಾರಂಭಿಸಿದ. ಇವನಿಂದ ಮುಂದಿನವರು ನಂಜರಾಜ ಪಟ್ಟಣದ ಅಧೀಶ್ವರರೆಂದು ಕರೆದುಕೊಂಡಿದ್ದಾರೆ. ನಂಜರಾಜನ ಮಗ ನಂಜುಂಡ ಇವನ ಅನಂತರ ಬಂದ ಶ್ರೀಕಂಠರಾಜ (1540) ಚಕ್ರವರ್ತಿ ಬಿರುದುಗಳನ್ನು ಧರಿಸಿದ್ದ. ಮುಂದೆ ವೀರರಾಜ ಒಡೆಯ (1559-80), ಪಿರಿಯ ರಾಜದೇವ ರುದ್ರಗಣ (1586-1607) ಇವರು ಶಾಸನೋಲ್ಲೇಖಿತ ದೊರೆಗಳಾಗಿದ್ದು, ಕೊನೆಯಾತ ಪಿರಿಯಾಪಟ್ಟಣವನ್ನು ಕಟ್ಟಿದ. ವಿಜಯನಗರಕ್ಕೆ ಮಾಂಡಳಿಕರಾಗಿದ್ದ ಇವರ ವಂಶದಲ್ಲಿ ನಂಜರಾಜಯ್ಯದೇವ (1612), ಕೃಷ್ಣಾರಾಜಯ್ಯದೇವ ಹಾಗೂ ವೀರರಾಜಯ್ಯ (1619-44) ಇವರುಗಳು ಆಳಿದರು. (ಎಸ್.ಕೆ.)

ವೀರರಾಜಯ್ಯನ ಕಾಲದಲ್ಲಿ ಮೈಸೂರಿನ ಕಂಠೀರವ ನರಸರಾಜ ಒಡೆಯರ್ ಪಿರಿಯಾಪಟ್ಟಣದ ಮೇಲೆ ಯುದ್ಧ ಹೂಡಿದ. ನಂಜುಂಡ ಮೊದಲಿಯಾರನೆಂಬ ಪಾಳೆಯಗಾರ ವೀರರಾಜಯ್ಯನ ಬೆಂಬಲಕ್ಕೆ ನಿಂತು ನರಸರಾಜನನ್ನು ವಿರೋಧಿಸಿದ. ಒಂದು ವರ್ಷ ಕಾಲ ಮೈಸೂರು ಸೇನೆ ಪಿರಿಯಾಪಟ್ಟಣದ ಕೋಟೆಯನ್ನು ಮುತ್ತಿತ್ತು. ಎರಡೂ ಕಡೆಯೂ ಭಾರಿ ಹೋರಾಟ ನಡೆಯಿತು. ಕೋಟೆ ನರಸರಾಜನ ಕೈಸೇರುವುದು ಖಚಿತವೆಂದು ಕಂಡಾಗ, ವೀರರಾಜ ತನ್ನ ಪತ್ನಿ ಪುತ್ರರನ್ನು ತಾನೇ ಕೊಂದು, ಮೈಸೂರಿನ ಸೈನ್ಯವನ್ನು ವೀರಾವೇಶದಿಂದ ಎದುರಿಸುತ್ತ ಮಡಿದ. ಪಿರಿಯಾಪಟ್ಟಣ 1644ರಲ್ಲಿ ಮೈಸೂರಿನ ಅರಸರ ವಶವಾಯಿತು. ಅಂತೆಯೆ, ಚಂಗಾಳ್ವ ವಂಶವೂ ಕೊನೆಗೊಂಡಿತು (ಈ ಕೊನೆಯ ಪಿರಿಯಾಪಟ್ಟಣದ ದುರಂತದ ಬಗ್ಗೆ ಕೆಲವು ಜನಪದ ಕಥನಗಳಿವೆ). ಅದರಲ್ಲಿ ಪಿರಿಯಾಪಟ್ಟಣದ ಕಾಳಗ ಅತ್ಯಂತ ಪ್ರಸಿದ್ಧವಾದುದು.

ಜಯನೃಪಕಾವ್ಯದ ಕರ್ತೃ ಮಂಗರಸ ತನ್ನ ತಂದೆ ಚಂಗಾಳ್ವರ ಮಂತ್ರಿಯಾಗಿದ್ದನೆಂದು ಹೇಳಿಕೊಂಡಿದ್ದಾನೆ. ಇದೇ ಸಚಿವಕುಲದ ನಂಜುಂಡನು ಕುಮಾರರಾಮ ಚರಿತೆಯ ಕರ್ತೃ. ರಾಮವಿಜಯ ಕಾವ್ಯವನ್ನು ಬರೆದ ಜೈನಕವಿ ದೇವಪ್ಪನು ನಂಜುಂಡರಾಜನ ಸಚಿವನಾಗಿದ್ದ. (ಕೆ.ಎಸ್.ಎಸ್.)

**ಚಂದಪುರ :** ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಒಂದು ಸಣ್ಣ ಹಳ್ಳಿ. ಇಲ್ಲಿ ಮುಗಲರ ಶೈಲಿಯ ಒಂದು ಮಸೀದಿಯಿದೆ. ಈ ಮಸೀದಿಯನ್ನು ಔರಂಗಜೇಬನ ಕಾಲದಲ್ಲಿ, ಹಿಜರಿ 1084ರಲ್ಲಿ (1673) ಖಾಜಾ ಉಸ್ಮಾನ ಎಂಬುವನು ಕಟ್ಟಿಸಿದನೆಂದು ಪರ್ಷಿಯನ್ ಭಾಷೆಯಲ್ಲಿ ಬರೆದ ಇಲ್ಲಿನ ಶಾಸನ ತಿಳಿಸುತ್ತದೆ. ಹಿಜರಿ 1082ರಲ್ಲಿ ಔರಂಗಜೇಬ್ ಬಿದರೆ ಮೊದಲಾದ ಸ್ಥಳಗಳನ್ನು ಗೆದ್ದುಕೊಂಡ. (ಎಸ್.ಜಿಎ.)

**ಚಂದಮಾಮ :** ಚೆನ್ನೈನಿಂದ ಪ್ರಕಟವಾಗುತ್ತಿರುವ ಮಕ್ಕಳ ಮಾಸ ಪತ್ರಿಕೆ. ಈ ಪತ್ರಿಕೆ ಹಲವು ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ಕನ್ನಡದಲ್ಲಿ 1948ರಲ್ಲಿ ಪ್ರಕಟಣೆ ಆರಂಭವಾಯಿತು.

ಮಕ್ಕಳಲ್ಲಿ ಓದುವ ಅಭ್ಯಾಸವನ್ನು ಬೆಳೆಸುವುದೂ ದೇಶದ ಭವ್ಯ ಪರಂಪರೆಯನ್ನೂ ಪ್ರಾಚೀನ ಸಂಸ್ಕೃತಿ ಮತ್ತು ನೈತಿಕ

ಮೌಲ್ಯಗಳನ್ನೂ ಕಥೆಗಳ ಮತ್ತು ಇತಿಹಾಸ ವೃತ್ತಾಂತದ ನಿರೂಪಣೆಯ ಮೂಲಕ ಪರಿಚಯ ಮಾಡಿಕೊಡುವುದೂ ಪತ್ರಿಕೆಯ ಉದ್ದೇಶಗಳು. ಆಕರ್ಷಕ ಬಣ್ಣಬಣ್ಣದ ಚಿತ್ರಗಳಿಂದೊಡಗೂಡಿದ ದೇಶವಿದೇಶಗಳ ಕಥೆಗಳು, ಇಂದ್ರಿಯಗ್ರಹಣ ಮತ್ತು ಕಲ್ಪನಾಶಕ್ತಿಯನ್ನು ಕುದುರಿಸುವ ಛಾಯಾಚಿತ್ರ ಶೀರ್ಷಿಕೆ ಸ್ಪರ್ಧೆ - ಇವು ಈ ಪತ್ರಿಕೆಯ ವೈಶಿಷ್ಟ್ಯಗಳು. ಪತ್ರಿಕೆಯ ಸ್ಥಾಪಕರು ಬಿ.ನಾಗಿರೆಡ್ಡಿ ಮತ್ತು ಚಕ್ರಪಾಣಿ. (ಪಿ.)

**ಚಂದಲ ದೇವಿ :** ಕರ್ನಾಟಕದಲ್ಲಿ ಆಳಿದ ರಾಣಿಯರಲ್ಲಿ ಈ ಹೆಸರಿನವರು ಹಲವರಿದ್ದಾರೆ. ಬಹುಶಃ ಚಂದ್ರಲೇಖಾ ಎಂಬ ಮೂಲ ಸಂಸ್ಕೃತ ರೂಪದ ಹೆಸರು. ಚಂದಲದೇವಿ, ಚಂದಲಕಬ್ಬೆ, ಚಂದ್ರಿಕಾದೇವಿ, ಚಂದಲೆ, ಚಂದವ್ವೆ, ಚಂಡಾಂಬಿಕಾ, ಚಂದ್ರಾಂಬಿಕೆ, ಚಂದಿಕಬ್ಬೆ ಇತ್ಯಾದಿ ರೂಪಗಳಲ್ಲಿ ಕಾಣಿಸಿಕೊಂಡಿದೆ. ಚಂದಲದೇವಿ ಮತ್ತು ಆ ಹೆಸರಿನ ರೂಪಾಂತರಗಳಿದ್ದವರಲ್ಲಿ ಕೆಲವರನ್ನು ಕುರಿತ ವಿವರಣೆಯನ್ನು ಇಲ್ಲಿ ಕೊಡಲಾಗಿದೆ.

ಕಲ್ಯಾಣದಲ್ಲಿ ಆಳಿದ ಚಾಳುಕ್ಯ ಸೋಮೇಶ್ವರನ ಪತ್ನಿ ಚಂದಲಕಬ್ಬೆ ಅಥವಾ ಚಂದ್ರಿಕಾದೇವಿ. ನಿಂಬರಗಿ ಶಾಸನದಲ್ಲಿ (1047-48) ಈಕೆಯನ್ನು ಆತನ ಪಿರಿಯರಸಿ ಎಂದು ಕರೆಯಲಾಗಿದೆ.

ಹೆಚ್ಚು ಖ್ಯಾತಿ ಹೊಂದಿದವಳು ಆರನೆಯ ವಿಕ್ರಮಾದಿತ್ಯನ ಪಟ್ಟಮಹಿಷಿ ಎನಿಸಿದ ಚಂದಲದೇವಿ ಅಥವಾ ಚಂದ್ರಲೇಕೆ. ಅನುಪಮ ಸುಂದರಿ ಎನಿಸಿದ್ದ ಈಕೆ ಶಿಲಾಹಾರ ಮನೆತನಕ್ಕೆ ಸೇರಿದವಳೆಂದೂ ಸ್ವಯಂವರ ಸಭೆಯಲ್ಲಿ ವಿಕ್ರಮಾದಿತ್ಯನನ್ನು ವರಿಸಿದಳೆಂದೂ ಬಿಲ್ಹಣ ತನ್ನ ವಿಕ್ರಮಾಂಕದೇವಚರಿತದಲ್ಲಿ ತಿಳಿಸಿದ್ದಾನೆ. ಈಕೆ ಅರಸನ ವಿಶೇಷವಾದ ಪ್ರೀತಿಗೆ ಪಾತ್ರಳಾಗಿದ್ದುದಲ್ಲದೆ ಆತನಿಗೆ ಆಡಳಿತದಲ್ಲಿ ಸಹಾಯಕಳಾಗಿಯೂ ಇದ್ದಳು. ರಾಜಧಾನಿಗೆ ಸಮೀಪದಲ್ಲಿದ್ದ ಅಳಂದೆ ಸಾಸಿರ ಎಂಬ ಪ್ರಾಂತ್ಯದ ಆಡಳಿತದ ಹೊಣೆ ಈಕೆಯದಾಗಿತ್ತು. ಈಕೆ ಅಳಂದೆ ಸಾಸಿರ ಪ್ರಮುಖವನೇಕಭತ್ತಗ್ರಾಮಂಗಳುಮಂ ಅರಸುಗೈಯುತ್ತಿದ್ದಳೆಂದು ಶಾಸನಗಳಲ್ಲಿ ಹೇಳಿದೆ. ಈಕೆಯನ್ನು ನೃತ್ಯವಿದ್ಯಾಧರಿ, ಸಕಳಕಳಾಧರಿ, ಅಭಿನವಸರಸ್ವತಿ ಎಂದೆಲ್ಲ ವರ್ಣಿಸಲಾಗಿದೆ. ಸೋಮಭೂಪ, ಜಯಕರ್ಣ, ಕುಮಾರತೈಲರು ಈಕೆಯ ಮಕ್ಕಳು. ಇವರಲ್ಲಿ ಸೋಮಭೂಪನೇ ಮುಂದೆ ಭೂಲೋಕಮಲ್ಲ ಸೋಮೇಶ್ವರನೆಂಬ ಹೆಸರಿನಿಂದ ಆಳಿದ. ಎರಡನೆಯ ಕಳಚುರಿ ಬಿಜ್ಜಳ ಈಕೆಯ ಮೊಮ್ಮಗನೆಂದು ವಳಸಂಗದ ಶಾಸನದಿಂದ ತಿಳಿದಿದೆ. ಆದ್ದರಿಂದ ಬಿಜ್ಜಳನ ತಾಯಿಯಾದ ನಾಗಲದೇವಿ ಚಂದಲದೇವಿಯ ಮಗಳೆಂದು ಊಹಿಸಲಾಗಿದೆ.

ಹೊಯ್ಸಳ ವಿಷ್ಣುವರ್ಧನನ ಪತ್ನಿಯರಲ್ಲಿ ಚಂದಲದೇವಿ ಎಂಬವಳೂ ಒಬ್ಬಳು. ಈಕೆ ಕೊಂಗಾಳ್ವ ಮನೆತನಕ್ಕೆ ಸೇರಿದವಳು ಎಂದು ಹೇಳಲಾಗಿದೆಯಾದರೂ ಇದು ಸಂದೇಹಾಸ್ಪದವಾಗಿದೆ.

ಕೂಂಡಿ ಪ್ರಾಂತ್ಯಾಧಿಕಾರಿಯಾಗಿ ಆಳಿದ ಸವದತ್ತಿಯ ರಟ್ಟ ಮನೆತನದ 1ನೆಯ ಲಕ್ಷ್ಮೀದೇವನ ಪತ್ನಿ ಹಾಗೂ 4ನೆಯ ಕಾರ್ತವೀರ್ಯನ ತಾಯಿಯ ಹೆಸರು ಸಹ ಚಂದಲದೇವಿ. ಯಾದವಕುಲಕ್ಕೆ ಸೇರಿದ ರಾಜ ಎಂಬುವನ ಪುತ್ರಿಯಾದ ಈಕೆಗೆ ಮಲ್ಲಿಕಾರ್ಜುನನೆಂಬ ಇನ್ನೊಬ್ಬ ಮಗ ಇದ್ದ. ಶಾಸನದಲ್ಲಿ ಈಕೆಯನ್ನು ಚಂದ್ರಿಕೆ, ಚಂದ್ರಿಕಾದೇವಿ ಎಂದೂ ಕರೆಯಲಾಗಿದೆ.

16ನೆಯ ಶತಮಾನದ ಮಧ್ಯಭಾಗದಲ್ಲಿ ಘಟ್ಟದ ಕೆಳಗಣ ಮತ್ತು ಘಟ್ಟದ ಮೇಲಣ ತುಳು ರಾಜ್ಯವನ್ನು ಆಳುತ್ತಿದ್ದ ಕಳಸ ಕಾರ್ಕಳದ ಒಡೆಯನಾಗಿದ್ದ ವೀರಪಾಂಡ್ಯಪ್ಪೊಡೆಯನ ತಾಯಿ ಚಂದಲದೇವಿ. ಈಕೆ ಕೆರವಸೆ ರಾಜ್ಯಕ್ಕೆ ಸೇರಿದ ರಾಜಕುಮಾರಿಯಾಗಿದ್ದಳು. (ಬಿ.ಆರ್.ಜಿ.)

**ಚಂದಾವರಕರ, ನಾರಾಯಣ ಗಣೇಶ :** 1855-1923. ಪ್ರಸಿದ್ಧ ನ್ಯಾಯವಾದಿ, ರಾಜಕಾರಣಿ, ಸಮಾಜಸುಧಾರಕ, ಶಿಕ್ಷಣತಜ್ಞ, ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯೂ ಇಂದೂರು ಸಂಸ್ಥಾನದಲ್ಲಿ ಸ್ವಲ್ಪ ಕಾಲ ಪ್ರಧಾನಮಂತ್ರಿಯೂ ಆಗಿದ್ದವರು. ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ 1855 ಡಿಸೆಂಬರ್ 2ರಂದು ಜನಿಸಿದರು. ಚಿಕ್ಕಂದಿನಲ್ಲಿ ಮುಂಬಯಿಗೆ ತೆರಳಿ ಅಲ್ಲಿ ತಮ್ಮ ಸೋದರಮಾವನ ಆಶ್ರಯದಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಎಲ್ಫಿನ್‌ಸ್ಟನ್ ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅಲ್ಲಿ ಪ್ರಾಧ್ಯಾಪಕರಾಗಿದ್ದ ಭಂಡಾರ್‌ಕರ್, ಪರಮಾನಂದ್, ರಾನಡೆ, ತೆಲಾಂಗ್ ಮತ್ತು ಫಿರೋಜ್ ಷಾ ಮೆಹತಾರಂಥ ಮಹೋಪಾಧ್ಯಾಯರ ಪ್ರಭಾವಕ್ಕೆ ಒಳಗಾದರು. ಬಿ.ಎ. ಪದವಿ ಪಡೆದರು (1876). ಅನಂತರ 1878ರಲ್ಲಿ ತೆಲಾಂಗರ ಸಲಹೆಯ ಮೇರೆಗೆ ಇಂದು ಪ್ರಕಾಶ ಎಂಬ ದ್ವಿಭಾಷಾ ವಾರ ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡು ಹತ್ತು ವರ್ಷಗಳಿಗೂ ಹೆಚ್ಚು ಕಾಲ ಕೆಲಸ ಮಾಡಿ ಆ ಪತ್ರಿಕೆಯ ಖ್ಯಾತಿಗೆ ಕಾರಣರಾದರು. ಪತ್ರಿಕೋದ್ಯಮದ ಜೊತೆಗೆ ಇವರು ನ್ಯಾಯಶಾಸ್ತ್ರದ ಅಧ್ಯಯನಮಾಡಿ ಪದವಿ ಪಡೆದು (1881) ವಕೀಲವೃತ್ತಿಯನ್ನಾರಂಭಿಸಿದರಲ್ಲದೆ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿದರು. 1885ರಲ್ಲಿ ಬ್ರಿಟನ್ನಿನ ಮಹಾಚುನಾವಣೆಗಳ ಸಮಯದಲ್ಲಿ

ಅಲ್ಲಿಯ ನಾಗರಿಕರಲ್ಲಿ ಭಾರತದ ಬಗ್ಗೆ ತಿಳಿವಳಿಕೆ ಮೂಡಿಸಲು ತೆರಳಿದ ಮೂವರು ಪ್ರತಿನಿಧಿಗಳ ನಿಯೋಗದಲ್ಲಿ ಇವರು ಒಬ್ಬರಾಗಿದ್ದು ಬ್ರಿಟನ್ನಿನಲ್ಲಿ ಮೂರು ತಿಂಗಳುಗಳ ಕಾಲ ಪ್ರವಾಸ ಮಾಡಿದರು. ಭಾರತಕ್ಕೆ ಹಿಂದಿರುಗಿದ ಮೇಲೆ ರಾನಡೆಯವರು ಸ್ಥಾಪಿಸಿದ ಭಾರತ ರಾಷ್ಟ್ರೀಯ ಸಾಮಾಜಿಕ ಸಮ್ಮೇಳನದ ಕಾರ್ಯದಲ್ಲಿ ಅವರಿಗೆ ನೆರವು ನೀಡುತ್ತಿದ್ದರಲ್ಲದೆ ರಾನಡೆಯವರು ನಿಧನರಾದ ಮೇಲೆ (1901) ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಎರಡು ದಶಕಗಳ ಕಾಲ ಸಮಾಜ ಸುಧಾರಣೆ, ಹಿಂದುಳಿದ ವರ್ಗಗಳ ಮತ್ತು ಕಾರ್ಮಿಕರ ಕ್ಷೇಮಾಭಿವೃದ್ಧಿ ಇವುಗಳಿಗಾಗಿ ಶ್ರಮಿಸಿದರು. ವಕೀಲ ವೃತ್ತಿಯಲ್ಲೂ ಶ್ರದ್ಧೆ, ನಿರಂತರ ಶ್ರಮ, ವಾಕ್ಪಟುತ್ವ ಇವುಗಳಿಂದಾಗಿ ಇವರು ಮುಂಬಯಿ ಉಚ್ಚನ್ಯಾಯಾಲಯದ ನ್ಯಾಯವಾದಿಗಳಲ್ಲಿ ಅಗ್ರಶ್ರೇಣಿಯನ್ನು ಪಡೆದರಲ್ಲದೆ ಆ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡರು (1901). 1912ರಲ್ಲಿ ಈ ಅಧಿಕಾರದಿಂದ ನಿವೃತ್ತರಾದ ಮೇಲೆ ಎರಡು ವರ್ಷಕಾಲ ಇಂದೂರು ಸಂಸ್ಥಾನದ ಪ್ರಧಾನಮಂತ್ರಿಯಾಗಿದ್ದು ದಕ್ಷವಾಗಿ ಆಡಳಿತ ನಿರ್ವಹಿಸಿದರು.

ಇವರು ಮುಂಬಯಿ ನಗರದ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಒಳ್ಳೆಯ ಮಾರ್ಗದರ್ಶಿಯಂತಿದ್ದರು. ಬೊಂಬಾಯಿ ಪ್ರೆಸಿಡೆನ್ಸಿ ಸಮಾಜ ಸುಧಾರಣಾ ಸಂಘ, ದಲಿತೋದ್ಧಾರ ಸಂಸ್ಥೆ, ಸಮಾಜ ಸೇವಾ ಲೀಗ್, ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆ, ಪ್ರಾರ್ಥನಾ ಸಮಾಜ ಮತ್ತು ವಿದ್ಯಾರ್ಥಿ ಸಹೋದರ ಸಮೂಹ ಮೊದಲಾದ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಇವರು ಮುಂಬಯಿ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿಯೂ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆಯ ಕಾಲದಿಂದಲೂ ಅದರಲ್ಲಿ ಆಸಕ್ತಿ ಹೊಂದಿದ್ದ ಇವರು ಲಾಹೋರಿನಲ್ಲಿ ಅದರ ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿದ್ದರು (1900). ಕಾಂಗ್ರೆಸ್ಸಿನಲ್ಲಿ ಎರಡು ಬಣಗಳೇರ್ಪಟ್ಟಾಗ ಸುರೇಂದ್ರನಾಥ ಬ್ಯಾನರ್ಜಿ ಮತ್ತು ಸಂಗಡಿಗರೊಡನೆ ಮಿತವಾದಿಗಳ ಸಮ್ಮೇಳನದ ನಾಯಕರಾಗಿದ್ದರು. ಇವರು ನೀಡುತ್ತಿದ್ದ ಸಲಹೆಗಳನ್ನು ಗಾಂಧೀಜಿಯವರೂ ಅನೇಕ ವೇಳೆ ಪುರಸ್ಕರಿಸುತ್ತಿದ್ದರು.

ಮಾಂಟೆಗೊ ಚೆಲ್ಮ್ಸ್‌ಫರ್ಡ್ ಸುಧಾರಣೆಗಳು 1921ರಲ್ಲಿ ಭಾರತದಾದ್ಯಂತ ಜಾರಿಗೆ ಬಂದಾಗ ಮುಂಬಯಿ ವಿಧಾನ ಪರಿಷತ್ತಿನ

ಪ್ರಥಮ ಖಾಸಗಿ ಅಧ್ಯಕ್ಷರಾಗಿ ನೇಮಿಸಲ್ಪಟ್ಟು ತಮ್ಮ ಕೊನೆಯ ದಿನಗಳವರೆಗೂ ಆ ಪೀಠವನ್ನಲಂಕರಿಸಿದ್ದರು. ರಾಷ್ಟ್ರೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿದ ಇವರು 1923 ಮೇ 14ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. *

**ಚಂದಿಮರಸ :** ಶಿವಶರಣ ಹಾಗೂ ವಚನಕಾರ. ಬಾಗೇವಾಡಿ ತಾಲ್ಲೂಕಿನ ಚಿಮ್ಮಲಿಗೆ ಈತನ ಜನ್ಮಸ್ಥಳ. ಇವನಿಗೆ ಸಿಮ್ಮಲಿಗೆ ಚೆನ್ನಯ್ಯ, ಚೆನ್ನರಾಮ, ಚಂದಯ್ಯ ಎಂಬ ಹೆಸರುಗಳೂ ಇವೆ. ಭೋಗಜೀವನವನ್ನುಳಿದು ಆಧ್ಯಾತ್ಮಿಕತೆಗೆ ತನ್ನನ್ನೇ ಅರ್ಪಿಸಿಕೊಂಡ ಇವನು ನಿಜಗುಣರಿಂದ ದೀಕ್ಷೆಯನ್ನು ಪಡೆದು ಧರ್ಮಪ್ರಸಾರಕಾರ್ಯವನ್ನು ಆರಂಭಿಸಿದನೆಂದು ತಿಳಿಯುತ್ತದೆ. ಸಿಮ್ಮಲಿಗೆ ಚೆನ್ನರಾಮಾ ಎಂಬುದು ಈತನ ವಚನಗಳ ಅಂಕಿತ. ಇದುವರೆಗೆ ಈತನ ಸುಮಾರು 18ಕ್ಕೂ ಹೆಚ್ಚು ವಚನಗಳು ದೊರೆತಿವೆ. ಈಚೆಗೆ ದೊರೆತ 15 ವಚನಗಳು ಸರ್ವಪುರಾತನರ ವಚನಗಳು ಎಂಬ ಸಂಕಲನ ಗ್ರಂಥದಲ್ಲಿ ಪ್ರಕಟವಾಗಿವೆ. ಘನಲಿಂಗದೇವ ತನ್ನ ವಚನವೊಂದರಲ್ಲಿ ನಿಜಗುಣ ಚಂದಿಮರಸರು ಕರಸ್ಥಲದ ನಾಗಿದೇವರೊಳಗಾದ ಎಲ್ಲ ವಿರಕ್ತರು ಅವಕ್ರಿಯೆಯಲ್ಲಿ ಆಚರಿಸಿ ಲಿಂಗೈಕ್ಯರಾದರು ಎಂದು ನುಡಿದ ಭವ ಹೇತುಗಳು ನೀವು ಕೇಳಿರೋ' ಎಂದು ಈತನ ಮಹಾತ್ಮ್ಯವನ್ನು ಹೊಗಳಿದ್ದಾನೆ. ಸಿದ್ಧನಂಜೇಶ ತನ್ನ ಗುರುರಾಜಚಾರಿತ್ರದಲ್ಲಿ (9-58) ಗಣಸಹಸ್ರವನ್ನು ಹೇಳುವಾಗ ಹೆಸರಿಸಿರುವ ಸಿಮ್ಮಲಿಗೆ ಚೆಂದಯ್ಯ ಈತನೆ. ಈತನ ವಚನಗಳನ್ನು ನೋಡಿದರೆ ಇವನು ಒಳ್ಳೆಯ ಅನುಭಾವಿಯೂ ವಚನಕಾರನೂ ಆಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಈತನ ಸಮಾಧಿ ಮತ್ತು ಇವನ ಹೆಸರಿನ ಗುಡಿ ಚಿಮ್ಮಲಿಗೆಯಲ್ಲಿವೆ. (ಟಿ.ಆರ್.ಎಂ.)

**ಚಂದ್ರಕವಿ :** ಸು.1430. ವಿಜಯನಗರದ ಅರಸ ಪ್ರೌಢದೇವರಾಯನ (1410-46) ಆಸ್ಥಾನದಲ್ಲಿದ್ದ ವೀರಶೈವ ಕವಿ. ಈತನಿಗೆ ಚಂದ್ರಶೇಖರ ಎಂಬ ಹೆಸರೂ ಇದೆ. ಈತ ಪಂಪಾ ವಿರೂಪಾಕ್ಷಾಸ್ಥಾನವರ್ಣನೆ, ಗುರುಮೂರ್ತಿಶಂಕರಶತಕ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಇವು ಗಾತ್ರದಲ್ಲಿ ಕಿರಿದಾದರೂ ಕವಿತಾಪ್ರೌಢಿಮೆಯಲ್ಲಿ ಹಿರಿದಾಗಿವೆ. ಈತ ಅಷ್ಟಭಾಷೆಗಳಲ್ಲಿ ಪ್ರವೀಣನಾಗಿದ್ದನೆಂದು ತಿಳಿದುಬರುತ್ತದೆ. ತನ್ನ ಗ್ರಂಥಗಳ ಆರಂಭದಲ್ಲಿ ಆಶ್ರಯದಾತನಾದ ಪ್ರೌಢದೇವರಾಯನನ್ನೂ ಮಹಾಪ್ರಧಾನನಾದ ಗುರುರಾಯನನ್ನೂ ಸ್ತುತಿಸಿದ್ದಾನೆ. ತನ್ನನ್ನು ವಚಸ್ಸುಧಾಸಾಗರ, ಕವೀಶ್ವರ, ಎಂದು ಸಂಬೋಧಿಸಿಕೊಂಡಿದ್ದಾನೆ.

ಪಂಪಾವಿರೂಪಾಕ್ಷಾಸ್ಥಾನವರ್ಣನೆ ಚಂಪೂಕಾವ್ಯ. ಹಂಪೆಯ ವಿರೂಪಾಕ್ಷನ ಆಸ್ಥಾನವನ್ನು ವರ್ಣಿಸುತ್ತದೆ. ಇದರಲ್ಲಿ 61 ಪದ್ಯಗಳೂ 34 ವಚನಗಳೂ ಇವೆ. ಕಾವ್ಯಾರಂಭದಲ್ಲಿ ಹಂಪೆಯ ವಿರೂಪಾಕ್ಷ, ಸಿದ್ಧಿವಿನಾಯಕ, ವಾಗ್ದೇವಿಯರ ಪ್ರಾರ್ಥನೆಯಾದ ಬಳಿಕ ಪ್ರೌಢದೇವರಾಯ ಮತ್ತು ಗುರುರಾಯರ ಸ್ತುತಿ ಇದೆ. ಕವಿ ಇದನ್ನು ಗುರುರಾಯನ ಆಣತಿಯಂತೆ ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಈ ಚಿಕ್ಕ ಕಾವ್ಯದ ವಸ್ತು ಈಶ್ವರನ ಆಸ್ಥಾನ ವರ್ಣನೆ. ಆದರೆ ಅಷ್ಟಾದಶವರ್ಣನೆಯಿದ್ದು ಉಪಮೆ ಉತ್ಪ್ರೇಕ್ಷೆ ರೂಪಕ ಅತಿಶಯೋಕ್ತಿ ಮೊದಲಾದ ಅಲಂಕಾರಗಳಿಂದ ಕೂಡಿ ಮನೋಹರವಾಗಿದೆ.

ಗುರುಮೂರ್ತಿಶಂಕರಶತಕ ವೃತ್ತಗಳಲ್ಲಿದೆ. ಸಚಿವೇಂದ್ರನಾದ ಗುರುರಾಯನ ಆಜ್ಞಾನುಸಾರ ಭಕ್ತಿ ವಿರಕ್ತಿ ಮುಕ್ತಿಗಳಿಗೆ ಬೀಜವಾಗುವಂತೆ ಇದನ್ನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಕಾವ್ಯಾರಂಭದಲ್ಲಿ ಶಿವಸ್ತುತಿ ಇದೆ. ಈ ಶತಕದ ಪ್ರತಿವೃತ್ತವೂ ಗುರುಮೂರ್ತಿಶಂಕರ ಎಂದು ಮುಗಿಯುತ್ತದೆ. *

**ಚಂದ್ರಕೀರ್ತಿ[1]:** ಸು.1400. ಜೈನಕವಿ. ಪರಮಾಗಮಸಾರ ಎಂಬ ಗ್ರಂಥದ ಕರ್ತೃ. ಈ ಕೃತಿ ಕಂದವೃತ್ತಗಳಲ್ಲಿ ರಚಿತವಾಗಿದ್ದು ಆತ್ಮಸ್ವರೂಪ, ವೈರಾಗ್ಯ ಮುಂತಾದ ವಿಷಯಗಳನ್ನೊಳಗೊಂಡಿದೆ. ಇದರಲ್ಲಿ 132 ಕಂದವೃತ್ತಗಳಿವೆ. ತನ್ನ ಗ್ರಂಥಕ್ಕೆ ಆ ಹೆಸರು ಬರಲು ಕಾರಣವನ್ನು ಕವಿ ಹೀಗೆ ವಿವರಿಸಿದ್ದಾರೆ - ಪರಮ ಜಿನೇಶ್ವರ ಮತದೊಳ್ | ಪರಿಕಿಸಿ ಸಾರಾಯಮಪ್ಪುವಂ ಕೊಂಡು ಕರಂ || ವಿರಚಿಸಿತಪ್ಪುದಱಿಂದಂ | ಪರಮಾಗಮಸಾರಮಾದುದೀ ಕೃತಿಯಂದಂ

ಮುನಿಪತಿ ದರ್ಶನಶುದ್ಧಂ
ವಿನುತಯಶಂ ಶೀಲರತ್ನನಚಳಿತಧೈರ್ಯಂ
ಮನಸಿಜಮದಕರಿಸಿಂಹಂ
ವಿನಯನಿಧಾನಂ ಸರಸ್ವತೀಮುಖತಿಲಕಂ

ಯಮನಿಯಮಧ್ಯಾನಯುತಂ
ಸಮಚಿತ್ತಂ ತತ್ತ್ವವೇದಿ ವೈರಾಗ್ಯಯುತಂ
ಶಮಿತ ಕಷಾಯಂ ನಿಸ್ಪೃಹ
ನಮಲಂ ಭವ್ಯಂ ಸರಸ್ವತೀಮುಖತಿಲಕಂ

ಎಂಬ ಎರಡು ಪದ್ಯಗಳಲ್ಲಿ ಕವಿ ತನ್ನ ಗುಣಾತಿಶಯಗಳನ್ನು ಹೇಳಿಕೊಂಡಿದ್ದಾನೆ. ಸರಸ್ವತೀಮುಖತಿಲಕಂ, ಕವಿಜನಮಿತ್ರ ಎಂಬುವು ಈತನ ಬಿರುದುಗಳಿದ್ದಿರಬಹುದು. *

**ಚಂದ್ರಕೀರ್ತಿ[2] :** ಬೌದ್ಧಮತದ ಮಹಾಯಾನ ಪಂಗಡಕ್ಕೆ ಸೇರಿದ ವಿದ್ವಾಂಸ. ಕ್ರಿ.ಶ. ಸು.7ನೆಯ ಶತಮಾನದ ಪೂರ್ವಾರ್ಧದಲ್ಲಿ ಇದ್ದವನೆಂದು ವಿದ್ವಾಂಸರ ಅಭಿಪ್ರಾಯ. ಪ್ರಸಿದ್ಧ ವಿದ್ವಾಂಸ ಸತೀಶಚಂದ್ರ ವಿದ್ಯಾಭೂಷಣರು ಈತನನ್ನು ಶ್ರೀಶಂಕರಾಚಾರ್ಯರ ಸಮಕಾಲೀನನೆಂದು ಭಾವಿಸುತ್ತಾರೆ.

ಈತನ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ಆದ್ದರಿಂದಲೇ ವಿದ್ವಾಂಸರಲ್ಲಿ ಈತನ ಬಗ್ಗೆ ಭಿನ್ನಾಭಿಪ್ರಾಯವಿದೆ. ಬೌದ್ಧ ವಿದ್ವಾಂಸ ಆರ್ಯದೇವ ಈತನೇ ಎಂದು ಈವರೆಗೂ ಭಾವಿಸಲಾಗಿತ್ತು. ಆದರೆ ಇತ್ತೀಚೆಗೆ ಇದನ್ನು ನಿರಾಕರಿಸಲಾಗಿದೆ. ಏಕೆಂದರೆ ಚಂದ್ರಕೀರ್ತಿಯೇ ಆರ್ಯದೇವನನ್ನೂ ಮತ್ತು ಆತನ ಗ್ರಂಥಗಳಾದ ಶತಕ-ಚತುಶತಕ, ಶತಕಶಾಸ್ತ್ರ ಮತ್ತು ಆರ್ಯಪದೀಯಗಳನ್ನು ತನ್ನ ಗ್ರಂಥವಾದ ಮಾಧ್ಯಮಿಕವೃತ್ತಿ ಎನ್ನುವ ಗ್ರಂಥದಲ್ಲಿ ಸ್ಮರಿಸಿದ್ದಾನೆ.

ಚಂದ್ರಕೀರ್ತಿ ಬರೆದ ಮತ್ತೊಂದು ಸ್ವತಂತ್ರ ಗ್ರಂಥವೆಂದರೆ ಮಾಧ್ಯಮಿಕಾವತಾರ. ಇದು ಮೂಲದಲ್ಲಿ ಸಂಸ್ಕೃತ ಗ್ರಂಥ. ಈಗ ಲಭ್ಯವಾಗಿರುವುದು ಟಿಬೆಟನ್ ಲಿಪಿಯಲ್ಲಿ. ಮಹಾಯಾನ ಬೌದ್ಧಮತದ ವಿಚಾರವಾಗಿ ಈ ಗ್ರಂಥ ಅಧಿಕಾರವಾಣಿಯಿಂದ ಹೇಳುವುದಲ್ಲದೆ ಆ ಮತದ ಅಧ್ಯಯನಕ್ಕೆ ಈ ಗ್ರಂಥ ಅತ್ಯುತ್ತಮ ಪ್ರಸ್ತಾವನೆಯಾಗಿದೆ ಎಂದು ವಿದ್ವಾಂಸರ ಅಭಿಪ್ರಾಯ. ಈತನ ಮತ್ತೊಂದು ಗ್ರಂಥ ನಾಗಾರ್ಜುನನ ಮಾಧ್ಯಮಿಕ ಸೂತ್ರಗಳ ಮೇಲಿನ ಪ್ರಪನ್ನಪದ ಎನ್ನುವ ಸಂಸ್ಕೃತ ಭಾಷ್ಯ. *

**ಚಂದ್ರಗಿರಿ :** ಶ್ರವಣಬೆಳಗೊಳದ ಎರಡು ಬೆಟ್ಟಗಳಲ್ಲಿ ಒಂದು. ಇದನ್ನು ಚಿಕ್ಕ ಬೆಟ್ಟವೆಂದೂ ಕರೆಯುತ್ತಾರೆ. ಮತ್ತೊಂದು ಬೆಟ್ಟ ಇಂದ್ರಗಿರಿ. ಚಂದ್ರಗಿರಿ ಶಿಖರದ ಎತ್ತರ ಸಮುದ್ರಮಟ್ಟದಿಂದ 3,052'. ಈ ಬೆಟ್ಟದ ಮೇಲೆ 13 ಬಸದಿಗಳಿವೆ. ಎಲ್ಲವೂ ದ್ರಾವಿಡ ಶೈಲಿಯಲ್ಲಿ ಕಟ್ಟಿದ್ದವು. ಇದರಲ್ಲಿ ಕೆಲವು 8 ನೆಯ ಶತಮಾನದಷ್ಟು ಪುರಾತನವಾದವು. ಶಾಂತಿನಾಥ ಬಸದಿ, ಪಾರ್ಶ್ವನಾಥ ಬಸದಿ, ಚಂದ್ರಗುಪ್ತ ಬಸದಿ, ಚಂದ್ರಪ್ರಭ ಬಸದಿ, ಚಾವುಂಡರಾಯ ಬಸದಿ - ಇವು ಇಲ್ಲಿರುವ ಬಸದಿಗಳಲ್ಲಿ ಕೆಲವು. ಕೂಗೆ ಬ್ರಹ್ಮದೇವರ ಕಂಬ, ಮಹಾನವಮಿ ಮಂಟಪ, ಭರತೇಶ್ವರ ವಿಗ್ರಹ, ಇರುವೆ ಬ್ರಹ್ಮದೇವರ ಗುಡಿ, ಕಂಚಿನ ದೊಣೆ, ಲಕ್ಕಿದೋಣೆ, ಭದ್ರಬಾಹು ಗುಹೆ, ಚಾವುಂಡರಾಯನ ಬಂಡೆ - ಇವೂ ಪ್ರೇಕ್ಷಣೀಯ.

ಉತ್ತರಭಾರತದಲ್ಲಿ ಕ್ಷಾಮ ಸಂಭವಿಸಿದಾಗ ಭದ್ರಬಾಹುಮುನಿಯ ನೇತೃತ್ವದಲ್ಲಿ ಜೈನಸಂಘ ದಕ್ಷಿಣಕ್ಕೆ ವಲಸೆ ಬಂದು ಶ್ರವಣಬೆಳಗೊಳದಲ್ಲಿ ಬೀಡುಬಿಟ್ಟ ವಿಷಯವನ್ನೊಳಗೊಂಡ ಪ್ರಸಿದ್ಧ ಶಾಸನ ಇರುವುದು ಚಂದ್ರಗಿರಿ ಬೆಟ್ಟದ ಮೇಲೆಯೇ, ಚಂದ್ರಗುಪ್ತ ಮೌರ್ಯ ತನ್ನ ಕೊನೆಗಾಲವನ್ನು

ಇಲ್ಲಿಯೇ ಕಳೆದನೆಂದು ನಂಬಲಾಗಿದೆ. ಈ ಬೆಟ್ಟದ ಬಂಡೆಗಳ ಮೇಲಣ ಶಾಸನಗಳು ಕನ್ನಡ ಲಿಪಿ, ಭಾಷೆ, ಸಾಹಿತ್ಯ ಕುರಿತ ವಿಚಾರಗಳ ಮೇಲೆ ವಿಶೇಷವಾದ ಬೆಳಕು ಬೀರುತ್ತವೆ. *

**ಚಂದ್ರಗಿರಿ ಅಂಬು** : 1919-99. ಯಕ್ಷಗಾನ ತೆಂಕುತಿಟ್ಟಿನ ಪ್ರಸಿದ್ಧ ನಟ. ಕೇರಳದ ಕಾಸರಗೋಡು ಸಮೀಪದ ಚಂದ್ರಗಿರಿಯಲ್ಲಿ ಮಲಯಾಳೀ ಗಾಣಿಗ ಮನೆತನದಲ್ಲಿ 1919ರಲ್ಲಿ ಜನಿಸಿದರು. ಇವರ ತಂದೆ ಜೋಯಿ ಮತ್ತು ತಾಯಿ ಕುಂಞಮ್ಮ. ಮೂರನೆಯ ತರಗತಿಯವರೆಗೆ ಸಾಂಪ್ರದಾಯಿಕ ಶಿಕ್ಷಣ ಗಳಿಸಿದರು. ಮುಲ್ಕಿ ಮೇಳದಲ್ಲಿದ್ದ ಆರಿಕ್ಕಾಡಿ ಅಯ್ಯಪ್ಪ ಎಂಬವರಿಂದ ಬಣ್ಣದ ವೇಷಗಾರಿಕೆಯ ಕೌಶಲಗಳನ್ನು ಕಲಿತರು. ಅನಂತರ ಕಲಾ ವ್ಯವಸಾಯದಲ್ಲಿ ಕಲಿತದ್ದೇ ಹೆಚ್ಚು. ರಾವಣ, ಮಹಿರಾವಣ, ಯಮ, ನರಕಾಸುರ, ತಾರಕಾಸುರ, ಮಹಿಷಾಸುರ, ಭೀಮ, ಘಟೋತ್ಕಚ, ಸಮಸಪ್ತಕರು, ಶೂರ್ಪನಖಿ, ಪೂತನಿ, ಅಜಮುಖಿ ಮೊದಲಾದ ಪ್ರಮುಖ ರಾಕ್ಷಸ ವೇಷಗಳಲ್ಲಿ ಮಿಂಚಿದರು. ಕಟೀಲಿನ ಶ್ರೀ ದುರ್ಗಾ ಪರಮೇಶ್ವರಿ ಮೇಳದಲ್ಲಿ ಹದಿನೆಂಟು ವರ್ಷಗಳ ಕಾಲ ದುಡಿದರು. ಮುಲ್ಕಿ, ಕೊರಕೋಡು, ಕುಂಡಾವು ಮೊದಲಾದ ಇನ್ನಿತರ ಹಲವು ಮೇಳಗಳಲ್ಲಿ ದುಡಿದು ನಿವೃತ್ತರಾದರು (1987). ಅನಂತರ ಶ್ರೀ ಧರ್ಮಸ್ಥಳ ಮೇಳದಲ್ಲಿ ಕಲಾವ್ಯವಸಾಯ ಮುಂದುವರಿಸಿದರು. ಕನ್ನಡ ಮತ್ತು ತುಳು ಎರಡೂ ಭಾಷೆಗಳ ಯಕ್ಷಗಾನ ಪ್ರಸಂಗಗಳಲ್ಲಿ ಪಾತ್ರನಿರ್ವಹಿಸಿದ ಕೀರ್ತಿ ಇವರದು. ಯಕ್ಷಗಾನ ಕಲಾವಿದರು ತಮ್ಮ ವೇಷಗಳಿಗೆ ತಾವೇ ಚುಟ್ಟಿ (ಮುಖವರ್ಣ) ಬರೆಯುವುದು ರೂಢಿ. ತಮ್ಮ ಕವಲು ಚುಟ್ಟಿ, ಪಂಚವರ್ಣದ ಚುಟ್ಟಿ, ಮಲ್ಲಿಗೆ ಚುಟ್ಟಿಗಳಿಂದ ಪ್ರಸಿದ್ಧರಾಗಿದ್ದ ಇವರು ವರ್ಣಮಯ ವೇಷಭೂಷಣ, ಮುಖವರ್ಣಿಕೆ, ಜೀವತುಂಬಿದ ಅಭಿನಯಗಳಿಂದಾಗಿ ಅಚ್ಚಳಿಯದ ಪ್ರಭಾವಬೀರಿದರು.

ಇವರಿಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕೇರಳ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಕಲಾಭೂಷಣ ಬಿರುದು, ಉಡುಪಿಯ ಯಕ್ಷಗಾನ ಕಲಾರಂಗದ ಡಾ.ಬಿ.ಬಿ.ಶೆಟ್ಟಿ ಪ್ರಶಸ್ತಿ ಇವು ಕೆಲವು ಮುಖ್ಯ ಪ್ರಶಸ್ತಿಗಳು. ಇವರು 1999 ನವೆಂಬರ್ 25ರಂದು ನಿಧನರಾದರು. (ಪಿ.ಇ.ವಿ.)

**ಚಂದ್ರಗುತ್ತಿ** : ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ. ಐತಿಹಾಸಿಕ ಮತ್ತು ಯಾತ್ರಾಸ್ಥಳ. ಸೊರಬದಿಂದ ಪಶ್ಚಿಮಕ್ಕೆ 16ಕಿಮೀ ದೂರದಲ್ಲಿ ವರದಾ ನದಿಯ ದಡದಲ್ಲಿದೆ.

ಈ ಊರನ್ನು ಹಿಂದೆ ಚಂದ್ರಗುಪ್ತಿ, ಚಂದ್ರಗುಪ್ತಪುರ, ಚಂದ್ರಗುತ್ತಿಪುರ ಎಂದು ಕರೆಯುತ್ತಿದ್ದರೆಂದು ಹಲವು ಶಾಸನಗಳಿಂದ ಗೊತ್ತಾಗುತ್ತದೆ. ಈ ಊರಿನ ಬಹು ಎತ್ತರದ ಗುಡ್ಡ ಚಂದ್ರನ ಹಾದಿಯಲ್ಲಿ ಅಡ್ಡಬಂದಿದ್ದರಿಂದಾಗಿ ಇದಕ್ಕೆ ಚಂದ್ರಗುತ್ತಿಯೆಂದು ಹೆಸರು ಬಂತೆಂದೂ ಜರಾಸಂಧ ಮತ್ತು ಕೃಷ್ಣ ಇಲ್ಲಿ ಯುದ್ಧ ಮಾಡುತ್ತಿದ್ದಾಗ ಕೃಷ್ಣ ಅಡಗಿ ಕುಳಿತುಬಿಟ್ಟನೆಂದೂ ಜರಾಸಂಧ ಅವನನ್ನು ಹುಡುಕಲಾರದೇ ಇಡೀ ಗುಡ್ಡವನ್ನೇ ಎತ್ತಿದ್ದನ್ನು ಕಂಡು ಚಂದ್ರ ನಕ್ಕನೆಂದೂ ಸ್ಥಳಪುರಾಣ. 864ಮೀ. ಎತ್ತರವಿರುವ ಈ ಬೆಟ್ಟದಲ್ಲಿ ಕಲ್ಲನ್ನು ತೆಗೆಯುವ ಉದ್ಯಮ ಅನೇಕ ವರ್ಷಗಳಿಂದ ನಡೆದು ಬಂದಿದೆ. ಇದು ಚಂದ್ರಗುತ್ತಿ ಕಲ್ಲು ಎಂದು ಪ್ರಸಿದ್ಧವಾಗಿದೆ.

ಚಂದ್ರಗುತ್ತಿ ಬನವಾಸಿ ಕದಂಬರ ಪ್ರಾಚೀನ ನಿವಾಸವಾಗಿತ್ತೆಂದೂ ಗುಡ್ಡದ ಬುಡದಲ್ಲಿರುವ ನಗರವನ್ನು ತ್ರಿನೇತ್ರ ಕದಂಬ ಸ್ಥಾಪಿಸಿದನೆಂದೂ ಪ್ರತೀತಿ. ಇದಕ್ಕೆ ಪ್ರಾಮುಖ್ಯ ಬಂದದ್ದು ಹಲವು ಶತಮಾನಗಳ ಅನಂತರ, ವಿಜಯನಗರದ ಅರಸರ ಕಾಲದಲ್ಲಿ. ವಿಜಯನಗರ ಸಾಮ್ರಾಜ್ಯದ 1ನೆಯ ಹರಿಹರನ ಕಾಲದಲ್ಲಿ (1336-56) ಮಾರಪ್ಪನೆಂಬುವನು ಪಶ್ಚಿಮ ಕೊಂಕಣದ ಮಲೆ ರಾಜ್ಯವನ್ನು ಆಳುತ್ತಿದ್ದಾಗ ಚಂದ್ರಗುತ್ತಿಪುರ ಆತನ ಆಡಳಿತ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಅನಂತರ ಇಮ್ಮಡಿ ಹರಿಹರನ ಕಾಲದಲ್ಲಿ (1377-1404) ಮಹಾ ಪ್ರಧಾನಿಯಾದ ಮಲ್ಲಪೊಡೆಯ ಗುತ್ತಿದುರ್ಗದ (ಚಂದ್ರಗುತ್ತಿ) ಪ್ರಾಂತ್ಯಾಧಿಕಾರಿಯಾಗಿದ್ದನೆಂದು ಕಂಡುಬರುತ್ತದೆ. 13-16ನೆಯ ಶತಮಾನಗಳಲ್ಲಿ ಪಶ್ಚಿಮ ಕರಾವಳಿಯಲ್ಲಿ ಪೋರ್ಚುಗೀಸರು ವಿಜಯನಗರದ ಅರಸರೊಡನೆ ವ್ಯಾಪಾರ ವ್ಯವಹಾರಗಳನ್ನು ಅಧಿಕಗೊಳಿಸಿದ ಕಾರಣ ಈ ಭಾಗದ ಅನೇಕ ನಗರಗಳು ಪೇಟೆಗಳೆನಿಸಿ, ವೇಂಠೆಗಳಾಗಿ, ಪ್ರಾಂತ್ಯಗಳಾಗಿ ಮಾರ್ಪಟ್ಟುವು. ಚಂದ್ರಗುತ್ತಿಯೂ ಇದೇ ಹೆಸರಿನ ವೇಂಠೆಯ ಆಡಳಿತ ಕೇಂದ್ರವಾಗಿತ್ತು. ಈ ಊರು ಸ್ವಲ್ಪ ಕಾಲ ಇಕ್ಕೇರಿ ನಾಯಕರ ವಶದಲ್ಲಿತ್ತು. 18ನೆಯ ಶತಮಾನದಲ್ಲಿ ಬಿಳಗಿಯ ಸೊಮಶೇಖರನಾಯಕ ಚಂದ್ರಗುತ್ತಿಯನ್ನು ಧ್ವಂಸ ಮಾಡಿದನೆಂದು ತಿಳಿದುಬರುತ್ತದೆ. ಅನಂತರ ಪರಶುರಾಮಭಾವು ಮತ್ತು ಧುಂಡಿಯಾ ಎಂಬ ಇಬ್ಬರು ಅಧಿಕಾರಿಗಳು ಕೆಲವು ತಿಂಗಳುಗಳ ಕಾಲ ಇಲ್ಲಿ ಆಡಳಿತ ನಡೆಸಿದರೆನ್ನಲು ಆಧಾರಗಳಿವೆ.

ರೇಣುಕಾಂಬ ದೇವಾಲಯ, ಪಿ.ಆರ್.ತಿಪ್ಪೇಸ್ವಾಮಿಯವರ ಜಲವರ್ಣ ಚಿತ್ರ

ಚಂದ್ರಗುತ್ತಿಯಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳುಂಟು. ಗುತ್ಯಮ್ಮ ಅಥ್‌ವಾ ಅಮ್ಮನವರು ಎಂದು ಕರೆಯಲಾಗುವ ರೇಣುಕಾಂಬೆಯ ದೇವಾಲಯ ಗುಡ್ಡದ ಬುಡದಲ್ಲಿದೆ. ಪರಶುರಾಮ ತನ್ನ ತಾಯಿಯಾದ ರೇಣುಕೆಯನ್ನು ಕಡಿಯಲು ಅಟ್ಟಿಸಿಕೊಂಡು ಬಂದಾಗ ನೈಸರ್ಗಿಕವಾದ ಈ

ಗುಹಾಲಯದಲ್ಲಿ ಆಕೆ ಅವಿತು ಕುಳಿತಿದ್ದಳೆಂದು ಜನಪದ ನಂಬಿಕೆ. ಈ ಗುಹಾಲಯದ ಮುಂಭಾಗದಲ್ಲಿ ಸುಕನಾಸಿಯೂ ಅದಕ್ಕೆ ಹೊಂದಿಕೊಂಡು ನವರಂಗವೂ ಇವೆ. ಇದು ಬಹುಶಃ ವಿಜಯನಗರ ಕಾಲದ ಕಟ್ಟಡ. ಇಲ್ಲಿ ಸರಸ್ವತಿಯದೆಂದು ಹೇಳಲಾದ ಒಂದು ವಿಗ್ರಹವಿದೆ. ಅದರ ಎರಡೂ ಕಡೆ ಎರಡು ರುಂಡಗಳನ್ನು ಕೆತ್ತಿರುವುದು ಗಮನಾರ್ಹ. ನವರಂಗದಲ್ಲಿ ಹಾಸಿದ ಚಪ್ಪಡಿಗಳ ಮೇಲೆ ಅನೇಕ ಭಕ್ತರು ಹೆಸರುಗಳನ್ನು ಬರೆಯಿಸಿದ್ದಾರೆ. ಅವುಗಳಲ್ಲಿ ಕೆಲವು ಹೆಸರುಗಳು ಪಾಳೆಯಗಾರರವು. ಈ ದೇವಾಲಯದ ಸಮೀಪದಲ್ಲಿ ಇರುವುದು ಮಾತಂಗಿ ದೇವಾಲಯ. ಇದರ ಸುತ್ತಮುತ್ತ ಮಾಸ್ತಿಕಲ್ಲುಗಳೂ ವೀರಗಲ್ಲುಗಳೂ ಇವೆ. ಇಲ್ಲಿರುವ ಸು. 75ಸೆಂಮೀ ಎತ್ತರದ ಪರಶುರಾಮ ವಿಗ್ರಹ ಮುಖ್ಯವಾದ್ದು. ಗುಡ್ಡವನ್ನೇರುತ್ತಿದ್ದಂತೆ ಕಾಣಬರುವುದು ತಾವರೆಕೆರೆ. ಅದರ ಪಕ್ಕದಲ್ಲಿ ವಿಜಯನಗರ ಕಾಲದ ಕೋಟೆಕೊತ್ತಲಗಳಿವೆ. ಅಲ್ಲಿಂದ ಸು.30ಮೀ. ಮೇಲೇರಿದಾಗ ಸಿಗುವ ಇನ್ನೊಂದು ಗುಹೆಯಲ್ಲಿ ದಂಡಿನ ದುರ್ಗಿ ಎಂಬ ಸುಂದರವಾದ ಮಹಿಷಮರ್ದಿನಿಯ ವಿಗ್ರಹವುಂಟು. ಈ ಗುಹೆಯ ಮುಂಭಾಗದಲ್ಲಿನ ಒಂದು ಕಗ್ಗಲ್ಲಿನ ಫಲಕದ ಮೇಲೆ ಇಬ್ಬರು ಭಕ್ತರು ದುರ್ಗಿಯ ಪಾದಕ್ಕೆ ತಮ್ಮ ಶಿರಗಳನ್ನು ಸಮರ್ಪಿಸುತ್ತಿರುವಂತೆ ಚಿತ್ರಿಸಲಾಗಿದೆ. ಅಲ್ಲಿಂದ ಮುಂದೆ ಸಾಗಿದರೆ ದೊಡ್ಡ ಫಿರಂಗಿ, ಕೋಟೆಯ ಬುರುಜುಗಳು, ಪಾಳುಬಿದ್ದ ಮಸೀದಿ ಮುಂತಾದ ಅನೇಕ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ.

ಸೌದೆಭವಾನಿ ತೀರ್ಥ, ಶಂಕರಲಿಂಗ ತೀರ್ಥ ಎಂಬ ಎರಡು ಬಾವಿಗಳ ಪಕ್ಕದಲ್ಲಿ ಕೆಲವು ಶಾಸನಗಳಿವೆ. ಗುಡ್ಡದ ತುದಿಯಲ್ಲಿ ಒಂದು ದೇವಾಲಯದ ತಳಪಾಯವಿದೆ. ಇದು ಚಂದ್ರಮೌಳೀಶ್ವರ ದೇವಾಲಯ. ಇದರಿಂದಾಗಿ ಈ ಊರಿಗೆ ಚಂದ್ರಗುತ್ತಿಯೆಂದು ಹೆಸರು ಬಂದಿರಬಹುದು. ಚಂದ್ರಗುತ್ತಿಯಲ್ಲಿ ಕಂಡುಬರುವ ಇತರ ದೇವಾಲಯಗಳಲ್ಲಿ ಶೂಲದ ಬೀರಪ್ಪನ ಗುಡಿ, ಭೈರವ ದೇವಾಲಯ ಮತ್ತು ಶಿವಾಲಯ ಮುಖ್ಯವಾದುವು. ಶೂಲದ ಬೀರಪ್ಪನ ಗುಡಿಯಲ್ಲಿ ಭಕ್ತರು ಒಪ್ಪಿಸಿದ ಸಾವಿರಾರು ತ್ರಿಶೂಲಗಳ ರಾಶಿಯಿದೆ.

ಹಿಂದೆ ಚಂದ್ರಗುತ್ತಿಯ ರೇಣುಕಾಂಬೆಯ ಜಾತ್ರೆಯಲ್ಲಿ ಕೋಣ ಬಲಿ ಇತ್ತು. ಬೆತ್ತಲೆಸೇವೆ, ಉರುಳುಸೇವೆಗಳು ನಡೆಯುತ್ತಿದ್ದವು. ಇತ್ತೀಚೆಗೆ ಬಲಿಯನ್ನು ಮತ್ತು ಬೆತ್ತಲೆಸೇವೆಯನ್ನು ನಿಷೇಧಿಸಲಾಗಿದೆ. (ಎಚ್.ಆರ್.ಆರ್.ಬಿ.)

**ಚಂದ್ರಭಟ್ಟ :** ಕನ್ನಡ ಸಾಹಿತ್ಯದಲ್ಲಿ ಚಂದ್ರಭಟ್ಟ ಎಂಬ ಹೆಸರು ಕೆಲವು ಕೃತಿಗಳಲ್ಲಿ ಮತ್ತು ಶಾಸನಗಳಲ್ಲಿ ಕಂಡುಬರುತ್ತವೆ. ಈಗ ಉಪಲಬ್ಧವಿರುವ ಪ್ರಮಾಣಗಳಿಂದ ಚಂದ್ರಭಟ್ಟ ಎಂಬ ಇಬ್ಬರು ಕವಿಗಳು ಇದ್ದುದು ತಿಳಿಯುತ್ತದೆಯೇ ಹೊರತು ಅವರು ಯಾವ ಗ್ರಂಥಗಳನ್ನು ಬರೆದಿದ್ದಾರೆಂಬುದು ಖಚಿತವಾಗಿ ತಿಳಿಯುವುದಿಲ್ಲ.

ಸು.1025ರಲ್ಲಿದ್ದ ದುರ್ಗಸಿಂಹ ಪೂರ್ವಕವಿಗಳನ್ನು ಹೇಳುವಾಗ ಕನ್ನಡ ಕವಿಗಳ ಸಾಲಿನಲ್ಲಿ ಒಬ್ಬ ಚಂದ್ರನನ್ನು (ಭಟ್ಟ) ಹೆಸರಿಸುತ್ತಾನೆ. 1049ರಲ್ಲಿದ್ದ ಶ್ರೀಧರಾಚಾರ್ಯ ತನ್ನ ಜಾತಕತಿಲಕದಲ್ಲಿ ಪೂರ್ವಕವಿಗಳನ್ನು ನೆನೆಯುವಾಗ ಅಂಬುಜಾರಿ (ಅಂಬುಜ + ಅರಿ = ಚಂದ್ರ) ಎಂಬ ಹೆಸರನ್ನು ಹೇಳುತ್ತಾನೆ. ದುರ್ಗಸಿಂಹ ಮತ್ತು ಶ್ರೀಧರಾಚಾರ್ಯರು ಹೇಳುವ ಚಂದ್ರನೇ ಚಂದ್ರಭಟ್ಟ ಎಂದು ಹೇಳಬಹುದಾದರೆ ಈತನ ಕಾಲ ಸು.1300 ಅಥವಾ ಅದಕ್ಕಿಂತ ಸ್ವಲ್ಪ ಹಿಂದೆ ಆಗಬಹುದು.

ಸು.1185ರಲ್ಲಿದ್ದ ರುದ್ರಭಟ್ಟ, ಸು.1260ರಲ್ಲಿದ್ದ ಕೇಶಿರಾಜ ಮತ್ತು ಸು.1300ರಲ್ಲಿದ್ದ ಅಟ್ಟಕವಿ ಇವರ ಕೃತಿಗಳಲ್ಲಿ ಚಂದ್ರಭಟ್ಟ ಎಂಬ ಹೆಸರು ಸ್ಪಷ್ಟವಾಗಿ ಕಾಣಿಸುತ್ತದೆ. ರುದ್ರಭಟ್ಟ ಪೂರ್ವಕವಿಗಳನ್ನು ಹೇಳುವಾಗ ಚಂದ್ರಭಟ್ಟನ ಜತಿ .... ಮತ್ಕೃತಿಯೊಳ್ಕೆ ಎನ್ನುತ್ತಾನೆ. ಚಂದ್ರಭಟ್ಟನ... ಸುಮಾರ್ಗಮಿದಜೊಳೆ ಲಕ್ಷ್ಯಂ ಎಂದು ಶಬ್ದಮಣಿದರ್ಪಣದಲ್ಲಿ ಕೇಶಿರಾಜ ಹೇಳಿದ್ದಾನೆ. ಅಟ್ಟಕವಿ ತನ್ನ ಅಟ್ಟಮತದಲ್ಲಿ ಚಂದಿರಭಟ್ಟರ ದಯೆಯಿಂ ಸಂದೆಯ ಮಣಮಿಲ್ಲದಂತು ಕಲ್ಪುದುಮಳೆಯಂ ಎಂದು ಹೇಳಿದ್ದಾನೆ. ಅಟ್ಟಕವಿಯ ಈ ಮಾತಿನ ಆಧಾರದಿಂದ, ಚಂದ್ರಭಟ್ಟ ಮಳೆಗೆ ಸಂಬಂಧಿಸಿದಂತೆ ಒಂದು ದೃಷ್ಟಿ ಶಾಸ್ತ್ರಗ್ರಂಥವನ್ನು ಬರೆದಿರಬಹುದು. ರುದ್ರಭಟ್ಟ ಮತ್ತು ಕೇಶಿರಾಜರು ಹೇಳುವ ಜತಿ ಮತ್ತು ಸುಮಾರ್ಗಗಳಿಂದ ಖ್ಯಾತನಾದ ಚಂದ್ರಭಟ್ಟ ಮತ್ತು ಅಟ್ಟಕವಿ ಹೇಳುವ ಚಂದ್ರಭಟ್ಟ ಒಬ್ಬನೇ ಇರಬಹುದು.

ಧಾರವಾಡ ಜಿಲ್ಲೆಯ ಹೊಟ್ಟೂರಿನ ರಾಜವಲ್ಲಭ ಬರೆದ ಶಾಸನವೊಂದನ್ನು ಚಂದ್ರಭಟ್ಟ ವಿಸ್ತರಿಸಿ ತಿದ್ದಿ ಬರೆದುದು ಆ ಶಾಸನದ ಅಂತ್ಯಪದ್ಯದಿಂದ ತಿಳಿಯುತ್ತದೆ. ಈ ಶಾಸನದಲ್ಲಿ ಚಂದ್ರಭಟ್ಟನಿಗೆ ವಾಕ್ಪತಿ ಎಂಬ ವಿಶೇಷಣವಿದೆ. ಶಾಸನದ ಕಾಲ 1067. ಮತ್ತೊಂದು ಶಾಸನ ಇದೇ ಧಾರವಾಡ ಜಿಲ್ಲೆಯ ಗದಗು ತಾಲ್ಲೂಕಿನ ಕೋಟವುಮಚಗಿ ಗ್ರಾಮಕ್ಕೆ ಸೇರಿದ್ದು, ಇದರ ಕಾಲ 1099. ಈ ಶಾಸನದ ಕೊನೆಯ ಭಾಗದಲ್ಲಿ ಅಪೂರ್ಣವಾಗಿರುವ ಒಂದು ಕಂದಪದ್ಯ ಚಂದ್ರಭಟ್ಟ ಕವಿ ವಿರಚಿಸಿದಂ ಎಂದು ಹೇಳುತ್ತದೆ.

ರುದ್ರಭಟ್ಟ, ಕೇಶಿರಾಜ ಮತ್ತು ಅಟ್ಟಕವಿಗಳು ಹೇಳಿರುವ ಚಂದ್ರಭಟ್ಟ ಹಾಗೂ ಶಾಸನಗಳಲ್ಲಿ ಕಂಡುಬರುವ ಚಂದ್ರಭಟ್ಟ ಒಬ್ಬನೇ ಆಗಿರುವ ಸಾಧ್ಯತೆಗಳೇ ಹೆಚ್ಚು. ಈ ಚಂದ್ರಭಟ್ಟ ಮತ್ತು ದುರ್ಗಸಿಂಹ, ಶ್ರೀಧರಾಚಾರ್ಯ ಇವರು ಹೇಳಿದ ಚಂದ್ರ (ಭಟ್ಟ) ಇವರಿಬ್ಬರೂ ಬೇರೆ ಬೇರೆ ಎಂದು ಹೇಳಬಹುದು. *

**ಚಂದ್ರಭಾಗಾದೇವಿ, ಯು.ಕೆ. :** 1921-97. ಕರ್ನಾಟಕದ ಸುಪ್ರಸಿದ್ಧ ಭರತನಾಟ್ಯ ಕಲಾವಿದೆ. 1921 ಆಗಸ್ಟ್ 11ರಂದು ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನಲ್ಲಿ ಜನಿಸಿದರು. ತಂದೆ ಪಡುಕೋಣೆ ರಮಾನಂದರಾಯರು ಹುಚ್ಚು ಬೆಳುದಿಂಗಳಿನ ಹೂಬಾಣಗಳು ಎಂಬ ಹಾಸ್ಯಕೃತಿಯಿಂದ ಪ್ರಸಿದ್ಧರಾದವರು. ತಾತ ಮೊಳಹಳ್ಳಿ ಶಿವರಾಯರು. ಅವರ ಮಗಳಾದ ಸೀತಾದೇವಿಯವರು ಚಂದ್ರಭಾಗಾದೇವಿಯವರ ತಾಯಿ. ಶಿಶುನಾಳ ಶರೀಫ್ ಪ್ರಶಸ್ತಿ ಪಡೆದಿರುವ ಜಯವಂತಿ ಹಿರೇಬೆಟ್ (ನೋಡಿ) ಚಂದ್ರಭಾಗಾದೇವಿಯವರ ತಂಗಿ.

ಚಂದ್ರಭಾಗಾದೇವಿಯವರು ಬಾಲ್ಯದಲ್ಲೇ ಶಿವರಾಮ ಕಾರಂತರಲ್ಲಿ ಫ್ರೀಸ್ಟೈಲ್ ನೃತ್ಯಾಭ್ಯಾಸ ಮಾಡಿದರು. ಇವರು ಇಂಟರ್ ಮೀಡಿಯಟನ್ನು ಪಾಲ್ಘಾಟಿನ ವಿಕ್ಟೋರಿಯ ಕಾಲೇಜ್‌ನಲ್ಲಿ ಓದಿ ಅನಂತರ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಬಿ.ಎಸ್ಸಿ. ತರಗತಿಗಳಿಗೆ ಸೇರಿದರು. ಅಲ್ಲಿ

ಯು.ಎಸ್.ಕೃಷ್ಣರಾಯರು ರಸಾಯನ ವಿಜ್ಞಾನದ ಅಧ್ಯಾಪಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಗುರು ಕೃಷ್ಣರಾಯರು ಮಾಡಿದ ಭರತನಾಟ್ಯವನ್ನು ಕಂಡು ಅವರಿಗೆ ಮಾರುಹೋಗಿ ಅವರನ್ನು ವರಿಸಿದರು (1941). ಇವರು ಜೋಡಿಯಾಗಿ ನೃತ್ಯ ಪ್ರದರ್ಶನ ನೀಡಲಾರಂಭಿಸಿದಾಗ ಕೃಷ್ಣರಾಯರ ಗುರು ಕೋಲಾರದ ಕೃಷ್ಣಪ್ಪನವರು ಚಂದ್ರಭಾಗಾದೇವಿಯವರಿಗೆ ಮೈಸೂರು ಶೈಲಿಯ ಭರತನಾಟ್ಯ ಪಾಠ ಹೇಳಿಕೊಟ್ಟರು. ಅನಂತರ ಪತಿ ಕೃಷ್ಣರಾಯರೇ ಗುರುವಾದರು. ಮುಂದೆ ಪಂದನಲ್ಲೂರು ಮೀನಾಕ್ಷಿ ಸುಂದರಂ ಅವರಿಂದ ಪಂದನಲ್ಲೂರು ಶೈಲಿಯ ಭರತನಾಟ್ಯ ಕಲಿತರು.

ಚಂದ್ರಭಾಗಾದೇವಿ ಹಾಗೂ ಯು.ಎಸ್. ಕೃಷ್ಣರಾವ್ (ನೋಡಿ) ದಂಪತಿಗಳು ನೃತ್ಯಕಲೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟವರು. ಚಂದ್ರಭಾಗಾದೇವಿಯವರು ಭಾರತೀಯ ವಿದ್ಯಾಭವನದ ನೃತ್ಯಶಾಲೆಯಲ್ಲಿ ನೃತ್ಯಪ್ರಾಧ್ಯಾಪಕರಾಗಿದ್ದರು. ನೃತ್ಯದ ಬಗ್ಗೆ ಅನೇಕ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ನೀಡಿ ಹಲವಾರು ಲೇಖನ ಹಾಗೂ ಪುಸ್ತಕಗಳನ್ನೂ

ಬರೆದಿದ್ದಾರೆ. ತಮ್ಮ ಮನೆಯಲ್ಲೇ ಒಂದು ನೃತ್ಯ ಪ್ರಸರಣ ಕೇಂದ್ರವನ್ನು ತೆರೆದು ಅದರ ವತಿಯಿಂದ ಅನೇಕ ನೃತ್ಯ ಪ್ರದರ್ಶನಗಳಿಗೆ ಅನುವು ಮಾಡಿಕೊಟ್ಟಿದ್ದಾರೆ.

ಇವರು ಭಾರತದಲ್ಲಿ ನೂರಾರು ನೃತ್ಯಕಾರ್ಯಕ್ರಮವನ್ನು ನೀಡಿದ್ದಾರೆ. ಲಂಡನ್ನಿನ ವಿಷ್ವ ಸಂಗೀತ ವಲಯ ಸಂಸ್ಥೆಯಲ್ಲಿ ನೃತ್ಯ ಕಾರ್ಯಕ್ರಮವನ್ನು ನೀಡಲು, ನೃತ್ಯವನ್ನು ಕಲಿಸಲು, ಉಪನ್ಯಾಸ ನೀಡಲು ಮತ್ತು ನೃತ್ಯ ಸಂಯೋಜಿಸಲು ಈ ದಂಪತಿಗಳನ್ನು ಆಗಿನ ಮೈಸೂರು ಸರ್ಕಾರ ಇಂಗ್ಲೆಂಡಿಗೆ ಕಳುಹಿಸಿತ್ತು. ಇದಲ್ಲದೆ ಇವರು ಐರ್ಲೆಂಡ್, ಪಶ್ಚಿಮ ಜರ್ಮನಿ, ಫ್ರಾನ್ಸ್, ಬೆಲ್ಜಿಯಂ, ಅಮೆರಿಕ, ಹಾಂಕಾಂಗ್, ಬ್ಯಾಂಕಾಕ್, ಸಿಂಗಪುರ, ಕೌಲಾಲಂಪುರ, ಕೊಲೊಂಬೊ ಮುಂತಾದ ಹಲವೆಡೆ ಪ್ರವಾಸಮಾಡಿ ಕಾರ್ಯಕ್ರಮ ನೀಡಿದ್ದಾರೆ. ಆ ದೇಶಗಳ ದೂರದರ್ಶನಗಳಲ್ಲಿ ಕೂಡ ನೃತ್ಯ ಪ್ರದರ್ಶನ, ಉಪನ್ಯಾಸ ನೀಡಿದ್ದಾರೆ. ಕೆನಡದ ಮಾಂಟ್ರಿಯಲ್‌ನಲ್ಲಿರುವ ಕಲಾಭಾರತಿ ಸಂಸ್ಥೆಯ ಆಹ್ವಾನದ ಮೇರೆಗೆ ಭಾರತೀಯ ಪರಂಪರೆಯ ನೃತ್ಯ ಹಾಗೂ ಅದರ ಬೆಳೆವಣಿಗೆಯ ಬಗ್ಗೆ ಉಪನ್ಯಾಸ ನೀಡಿ, ಅಲ್ಲಿಯ ವಿದ್ಯಾರ್ಥಿಗಳಿಗೆ ಚಂದ್ರಭಾಗಾದೇವಿಯವರು ನೃತ್ಯ ತರಬೇತಿ ನೀಡಿದ್ದಾರೆ.

ಈ ದಂಪತಿಗಳು ಕನ್ನಡದಲ್ಲಿ ಬರೆದ ಆಧುನಿಕ ಭಾರತದಲ್ಲಿ ನೃತ್ಯಕಲೆ ಎಂಬ ಪುಸ್ತಕವನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದೆ. ಇದನ್ನು ಲಾಸ್ಯರಂಜನ ಎಂಬ ಹೆಸರಿನಲ್ಲಿ ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಜೊತೆಗೆ ನೃತ್ಯರಂಗದಲ್ಲಿ ತಮ್ಮ ಪ್ರವಾಸಾನುಭವವನ್ನೂ ಕನ್ನಡದಲ್ಲಿ ಬರೆದಿದ್ದಾರೆ. ಶ್ರೀಕೃಷ್ಣಪ್ರೇಮ ಪುಷ್ಪಾಂಜಲಿ ಮತ್ತು ವಿಷ್ಣುದಿಗಂಬರ ಭಾತ್ಕಂಡೆಯವರನ್ನು ಕುರಿತು ಕಿರು ಪುಸ್ತಿಕೆಗಳನ್ನೂ ಬರೆದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ. ತರಗತಿಯ ಪಠ್ಯಪುಸ್ತಕವಾಗಿ ಕನ್ನಡದಲ್ಲಿ ನೃತ್ಯಕಲೆ ಎಂಬ ಪುಸ್ತಕವನ್ನು ಈ ದಂಪತಿಗಳು ರಚಿಸಿದ್ದಾರೆ. ಎ ಪನೋರಮ ಆಫ್ ಡ್ಯಾನ್ಸಸ್ ಎಂಬುದು ಇವರ ಇನ್ನೊಂದು ಕೃತಿ. ಇವರು ಅನೇಕ ಸಹಾಯಾರ್ಥ ನೃತ್ಯ ಪ್ರದರ್ಶನ ನೀಡಿದ್ದಾರೆ. ಇಂದ್ರಾಣಿ ರೆಹಮಾನ್, ಸೋನಾಲ್ ಮಾನ್‌ಸಿಂಗ್, ಸುಧಾರಾಣಿ ರಘುಪತಿ, ಪ್ರತಿಭಾಪ್ರಹ್ಲಾದ್, ರೇವತಿಸತ್ಯು ಮತ್ತು ಕಾಮದೇವ್ - ಇವರ ಶಿಷ್ಯರಲ್ಲಿ ಪ್ರಸಿದ್ಧರಾದವರು.

ಐವತ್ತೈದು ವರ್ಷಗಳಿಗೂ ಹೆಚ್ಚು ಕಾಲ ಈ ದಂಪತಿಗಳು ನೀಡಿದ ಪ್ರದರ್ಶನಗಳ ಸಂಖ್ಯೆ 1500 ಕ್ಕೂ ಅಧಿಕ. ರತಿ-ಮನ್ಮಥ, ರಾಧೆ-ಕೃಷ್ಣ, ಶಿವಲೀಲೆ – ಹೀಗೆ ಇವರ ನಾಟ್ಯ ಪಾತ್ರಗಳು ಹಲವು. ಗೆಜ್ಜೆಯ ಹೆಜ್ಜೆನುಡಿ ಎಂಬ ಕೃತಿ ಅನುಭವ ಕಥನ. ಇದಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರ ನೃತ್ಯ ಸೇವೆಗಾಗಿ ಸರ್ಕಾರ ಹಾಗೂ ಸಂಘ ಸಂಸ್ಥೆಗಳಿಂದ ಇವರಿಗೆ ಪ್ರಶಸ್ತಿ - ಗೌರವಗಳು ಸಂದಿವೆ. ಅವುಗಳಲ್ಲಿ ಮುಖ್ಯವಾದವು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ(1980), ರಾಜ್ಯೋತ್ಸವ ಪ್ರಶಸ್ತಿ (1985), ಭಾರತ ರಾಷ್ಟ್ರಪತಿಗಳಿಂದ ಕಲ್ಕತ್ತದಲ್ಲಿ ಪಡೆದ ರಾಷ್ಟ್ರೀಯ ಪ್ರಶಸ್ತಿ (1986), ಇವರ ನೃತ್ಯಕಲೆ ಕೃತಿಗೆ ಸಂಗೀತನೃತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ಕೆನಡದ ಮಾಂಟ್ರಿಯಲ್‌ನ ಕಲಾಭಾರತಿ ಸಂಸ್ಥೆ ಇವರನ್ನು ಸನ್ಮಾನಿಸಿದೆ. ಗಾಯನ ಸಮಾಜ, ಗಾನಕಲಾಪರಿಷತ್ತು, ಕರ್ನಾಟಕ ನೃತ್ಯಕಲಾಪರಿಷತ್ತು, ನೂಪುರ ದೂರದರ್ಶನ ಪ್ರಶಸ್ತಿ ಇವರಿಗೆ ಲಭಿಸಿವೆ. ಮದರಾಸಿನ ಕಲೈ ಮಗಳ್ ಸಭಾ, ಶ್ರೀ ಭರತಾಲಯ ಸಂಸ್ಥೆಗಳೂ ಸನ್ಮಾನಿಸಿವೆ. ಚಂದ್ರಭಾಗಾದೇವಿಯವರು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು (1995-97). ಇವರು 1997 ಏಪ್ರಿಲ್ 14ರಂದು ನಿಧನರಾದರು. (ಎಚ್.ಆರ್.ಎಲ್.)

**ಚಂದ್ರರಾಜ :** ಸು.1025. ಬ್ರಾಹ್ಮಣ ಕವಿ. ಮದನತಿಲಕ ಎಂಬ ಕಾಮಶಾಸ್ತ್ರ ಗ್ರಂಥದ ಕರ್ತೃ. ಚಾಳುಕ್ಯ ಚಕ್ರವರ್ತಿ 2ನೆಯ ಜಯಸಿಂಹನ (ಜಗದೇಕಮಲ್ಲ 1015-44) ಮಾಂಡಲಿಕನಾಗಿದ್ದ ರೆಂಚ ಅಥವಾ ರೇಚಿಗ ಈತನ ಆಶ್ರಯದಾತ. 2ನೆಯ ಚಾವುಂಡರಾಯ (ಸು.1025) ಮತ್ತು ದುರ್ಗಸಿಂಹ (ಸು.1031) ಈ ಕವಿಯ ಸಮಕಾಲೀನರು. ಚಂದ್ರರಾಜ ಪೂರ್ವಕವಿಗಳಲ್ಲಿ ಯಾರನ್ನೂ ಸ್ಮರಿಸಿಲ್ಲ. ವ್ಯಾಕರಣ, ಗಣಿತ, ಅರ್ಥಶಾಸ್ತ್ರ, ಕಾಮಶಾಸ್ತ್ರ, ಹಯಶಾಸ್ತ್ರ, ತರ್ಕಶಾಸ್ತ್ರ, ಅಲಂಕಾರ, ಕಾವ್ಯ, ನಾಟಕ, ನೃತ್ಯ, ಗೀತ, ಅದ್ವೈತ, ಗಾಂಧರ್ವ ವಿದ್ಯೆ, ಇಂದ್ರಜಾಲ, ವೈದ್ಯ, ವಾದ್ಯ, ಶಕುನ ಮುಂತಾದವುಗಳಲ್ಲಿ ತಾನು ಪರಿಣತನಾಗಿದ್ದಂತೆ ಹೇಳಿಕೊಂಡಿದ್ದಾನೆ. ಕವಿತಾಮಹಾರ್ಣವ, ಪ್ರತ್ಯಕ್ಷ ಕಂದರ್ಪ ಎಂಬುವು ಈತನ ನೆಚ್ಚಿನ ಬಿರುದುಗಳು.

ಮದನತಿಲಕ ಕನ್ನಡದಲ್ಲಿ ರಚಿತವಾದ ಮೊತ್ತಮೊದಲ ಕಾಮಶಾಸ್ತ್ರ ಗ್ರಂಥ. ವಿವಿಧ ಜಾತಿಯ ಸ್ತ್ರೀಪುರುಷರಿಗೆ ಸಂಬಂಧಿಸಿದ ಕಾಮತತ್ತ್ವಗಳ ನಿರೂಪಣೆಯೇ ಇಲ್ಲಿಯ ವಸ್ತು. ವಾತ್ಸ್ಯಾಯನ ಮೊದಲಾದವರು ಸಂಸ್ಕೃತ ಭಾಷೆಯಲ್ಲಿ ಬರೆದಿರುವ ಹಲವು ಕಾಮಶಾಸ್ತ್ರ ಗ್ರಂಥಗಳಿಂದ ಉಚಿತವಾದಷ್ಟು ಅಂಶಗಳನ್ನು ಸಂಗ್ರಹಿಸಿಯೂ ಸ್ವಕೀಯವಾಗಿ ಕೆಲವಂಶಗಳನ್ನು ಹೊಸದಾಗಿ ಸೇರಿಸಿಯೂ ಈ ಗ್ರಂಥ ರಚಿತವಾಗಿದೆ ಎಂದು ಹೇಳಬಹುದು. ಇದರಲ್ಲಿ 18 ಅಧಿಕರಣಗಳೂ ನಾನಾ ಛಂದಸ್ಸಿನ 500 ಪದ್ಯಗಳೂ ಇವೆಯೆಂದು ಕವಿಯ ಹೇಳಿಕೆ. ಆದರೆ ಈಗ ದೊರೆತು ಅಚ್ಚಾಗಿರುವ ಗ್ರಂಥದಲ್ಲಿ 11 ಅಧಿಕರಣಗಳಿವೆ. ಇದು ಗದ್ಯಪದ್ಯಗಳ ಸಮ್ಮಿಶ್ರ ಕೃತಿಯಾದರೂ ಪದ್ಯಗಳ ಸಂಖ್ಯೆಯೇ ಹೆಚ್ಚಾಗಿದೆ. ಇದರಲ್ಲಿ ಸು.50 ರಷ್ಟು ಪದ್ಯಜಾತಿಗಳನ್ನು ಬಳಸಿದೆ. ಸಂಸ್ಕೃತ ವರ್ಣವೃತ್ತಗಳಲ್ಲಿ ಸಮ, ಅರ್ಧಸಮ, ವಿಷಮ ಮತ್ತು ಮಾಲಾವೃತ್ತಗಳ ಪರಿಚಿತಾಪರಿಚಿತ ಪದಿಗಳನ್ನೂ ಶ್ಲೋಕವನ್ನೂ ಕನ್ನಡ ಪದ್ಯಜಾತಿಗಳಲ್ಲಿ ತ್ರಿಪದಿ, ಅಕ್ಕರ, ಚೌಪದಿ ಮುಂತಾದ ಮಟ್ಟುಗಳನ್ನೂ ಕಂದವನ್ನೂ ಬಳಸಲಾಗಿದೆ. ಯಾವುದಾದರೊಂದು ಪದ್ಯಮೂಲದಿಂದ ಬೇರೆ ಬೇರೆ ಬಗೆಯ ಛಂದಸ್ಸುಗಳ ಪದ್ಯಗಳನ್ನು ಹೊರಡಿಸಬಹುದೆಂದು ಅಲ್ಲಲ್ಲಿ ಸೂಚಿಸಿದೆ. ಈ ದೃಷ್ಟಿಯಿಂದ ಪೃಥ್ವಮಾಧಿಕಾರದ ವನಮಂಜರಿಯೆಂಬೊಂದು ಸಂಸ್ಕೃತ ವರ್ಣಸಮ ವೃತ್ತದಿಂದ 84 ವಿಧವಾದ ಪದ್ಯಗಳನ್ನು ಮಾಡಬಹುದೆಂದು ಹೇಳಿರುವುದು ಕುತೂಹಲಕರವಾಗಿದೆ. ಅಚ್ಚಕನ್ನಡದ ಮಟ್ಟುಗಳಲ್ಲಿ ಅನ್ಯತ್ರ ಪ್ರಾಯಶಃ ನಿದರ್ಶನಗಳು ದೊರೆಯದ ಎಡೆಯಕ್ಕರ ನಡುವಣಕ್ಕರಗಳಿಗೆ ಇಲ್ಲಿ ನಿದರ್ಶನಗಳು ದೊರೆಯುವುದೂ ಅಂಶಗಣಾತ್ಮಕ ಷಟ್ಪದಿ ಚೌಪದಿಗಳಿಗೆ ಮೊದಲ ಉದಾಹರಣೆಗಳು ಕಂಡುಬರುವುದೂ ಈ ಕೃತಿಯ ಮಹತ್ತ್ವವನ್ನು ಹೆಚ್ಚಿಸಿದೆ. ಚಿತ್ರಕವಿತ್ವದಲ್ಲಿ ಚಕ್ರ, ಮುರಜ, ಪಣವ, ಗೋಮೂತ್ರಿಕೆ ಮುಂತಾಗಿ ಸು.16 ಭೇದಗಳನ್ನು ಹೇಳಲಾಗಿದೆ. ಹಾಗೆಯೇ ಕಂದಪದ್ಯದಲ್ಲಿ ಆದಿಯಮಕದ ಕಂದ, ಕಿರ್ಗೊತ್ತಿನ ಕಂದ ಮುಂತಾಗಿ ಸು.11 ವಿಧಗಳನ್ನು ನಿರೂಪಿಸಲಾಗಿದೆ. ವಸ್ತುವಿನ ದೃಷ್ಟಿಯಿಂದ ಚಂದ್ರರಾಜನ ಮದನತಿಲಕ ಬಹು ಸಾಮಾನ್ಯವಾಗಿ ತೋರಿದರೂ ಚಿತ್ರಕವಿತ್ವ ಮತ್ತು ಅದಕ್ಕಿಂತ ಮಿಗಿಲಾಗಿ ವಿವಿಧ ಛಂದೋಪ್ರಯೋಗಗಳ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಉಪಯುಕ್ತ ಕೃತಿಗಳಲ್ಲಿ ಒಂದಾಗಿದೆ. ಇದರ ಕೆಲವು ಪದ್ಯಗಳು ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ಉದ್ಧೃತವಾಗಿವೆ. (ಟಿ.ವಿ.ವಿ.)

**ಚಂದ್ರವಳ್ಳಿ :** ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರದುರ್ಗದ ಪಶ್ಚಿಮಕ್ಕೆ ಬೆಟ್ಟದ ಬುಡದಲ್ಲಿ ಇರುವ ಪ್ರಾಕ್ತನ ನಿವೇಶನ. ಪ್ರಾಗೈತಿಹಾಸಿಕ ಕಾಲದಿಂದಲೂ ಇಲ್ಲಿ ಜನವಸತಿಯಿದ್ದು, ಇತಿಹಾಸ ಕಾಲದಲ್ಲಿ ವಿಜಯನಗರದ ಕಾಲದವರೆಗೂ ಇಲ್ಲಿ ಊರು ಬೆಳೆದು ಬಂದಿದ್ದಂತೆ ತೋರುತ್ತದೆ. ಹುಲೆಗುಂದಿ, ನೇರಲಗೊಂದಿ, ಬಾರಲಗೊಂದಿಗಳೆಂಬ ಬೆಟ್ಟದ ಕಣಿವೆ ಪ್ರದೇಶಗಳೂ ಅಂಕಲೆಮಠವಿರುವ ಗವಿಗಳೂ ಸುತ್ತ ಮುತ್ತಲ ಗುಡ್ಡಗಳೂ ಇಲ್ಲಿ ನಿರಂತರವಾಗಿ ಪ್ರವಹಿಸುತ್ತಿದ್ದ ಹಳ್ಳವೂ ಪ್ರಾಚೀನ ಕಾಲದಲ್ಲಿ ಜನವಸತಿಗೆ ಅನುಕೂಲವಾಗಿದ್ದುವು. ಆದ್ದರಿಂದಲೇ ಇಲ್ಲಿ ನವಶಿಲಾಯುಗದ ಜನರಿದ್ದ ಕುರುಹುಗಳೂ ಕಂಡುಬಂದಿವೆ.

ಈ ನಿವೇಶನ ಮೊದಲು ಬೆಳಕಿಗೆ ಬಂದದ್ದು ಸು.120 ವರ್ಷಗಳ ಹಿಂದೆ ನೀರಿನ ಕಾಲುವೆಯೊಂದನ್ನು ತೋಡುತ್ತಿದ್ದಾಗ ಅಲ್ಲಿ ದೊರೆತ ಸೀಸದ ನಾಣ್ಯಗಳಿಂದ. ಆರ್.ನರಸಿಂಹಾಚಾರ್ಯರು ಮೊದಲ ಬಾರಿಗೆ ಇಲ್ಲಿ ಕೆಲವು ಕುಳಿಗಳನ್ನು ತೋಡಿ ಇಲ್ಲಿ ದೊರೆತ ನಾಣ್ಯಗಳು, ಮಣ್ಣಿನ ಪಾತ್ರೆಗಳು, ಮಣಿಗಳು ಮೊದಲಾದವನ್ನು 1909ರಲ್ಲಿ ವರದಿಮಾಡಿ ಅದರ ಪ್ರಾಮುಖ್ಯತೆಯನ್ನು ಪ್ರಕಟಿಸಿದರು. 20 ವರ್ಷಗಳ ತರುವಾಯ ಎಂ.ಎಚ್.ಕೃಷ್ಣ ಅವರು ವಿಸ್ತಾರವಾದ ಭೂಶೋಧನೆಯನ್ನು ಕೈಗೊಂಡರು. 30ಕ್ಕೂ ಹೆಚ್ಚು ಕಡೆ ಉತ್ಖನನ ನಡೆಸಿದರು.

ಇದರಿಂದ ಇಲ್ಲಿ ಅನೇಕ ಕಟ್ಟಡಗಳ ಅವಶೇಷಗಳು, ನಾಣ್ಯಗಳು, ಆಭರಣಗಳು, ಮಣಿಗಳು, ರೇಖಾಚಿತ್ರ ಮತ್ತು ಇತರ ಅಲಂಕರಣಗಳಿಂದ ಕೂಡಿದ ಮೃಣ್ಪಾತ್ರೆಗಳ ತುಂಡುಗಳು, ಕಬ್ಬಿಣದ ಮತ್ತು ಇತರ ಮನೆ ಬಳಕೆಯ ವಸ್ತುಗಳು ಹೇರಳವಾಗಿ ಕಂಡುಬಂದುವು. ಗೌತಮೀಪುತ್ರ, ವಿಳಿವಾಯಕುರ, ಮಹಾರಠಿ ಸಡಕಣ ಕಲಲಯ, ಶ್ರೀಯಜ್ಞ ಸಾತಕರ್ಣಿ, ಮುಡಾನಂದ ಮೊದಲಾದ ಸಾತವಾಹನ ಅರಸರ, ಮಾಂಡಲಿಕರ ಸೀಸದ ಮತ್ತು ಮಿಶ್ರಲೋಹದ ಹಲವಾರು ನಾಣ್ಯಗಳ ಜೊತೆಗೆ ರೋಮ್ ಚಕ್ರವರ್ತಿಗಳಾದ ಅಗಸ್ಟಸ್ ಮತ್ತು ಟೈಬೀರಿಯಸರ ನಾಣ್ಯಗಳಿದ್ದುವು. ಇವಲ್ಲದೆ ಕೃಷ್ಣ ಅವರು ಎರಡು ಕಡೆ ಭೂಮಿಯೊಳಗೆ ಬೃಹತ್ ಶಿಲಾಸಮಾಧಿಯ ಕಲ್ಲಿನ ಶವಪೆಟ್ಟಿಗೆಯನ್ನೂ ಕಂಡರು. ಪುನಃ 1947ರಲ್ಲಿ ಮಾರ್ಟಿಮರ್ ವೀಲರ್ ಅವರ ನೇತೃತ್ವದಲ್ಲಿ ಭಾರತ ಸರ್ಕಾರದ ಮತ್ತು ಮೈಸೂರು ಸರ್ಕಾರದ ಪುರಾತತ್ತ್ವ ಇಲಾಖೆಗಳು ಇಲ್ಲಿ ಒಟ್ಟಾಗಿ ಹೆಚ್ಚು ವೈಜ್ಞಾನಿಕವಾದ ಉತ್ಖನನ ನಡೆಸಿದುವು.

ಈ ಎಲ್ಲ ಉತ್ಖನನಗಳ ಫಲವಾಗಿ ಇಲ್ಲಿ ಮುಖ್ಯವಾಗಿ ಎರಡು ಸಂಸ್ಕೃತಿಗಳ ಅವಶೇಷಗಳಿದ್ದುದು ಸ್ಪಷ್ಟವಾಯಿತು. ಒಂದು ಪ್ರಾಗೈತಿಹಾಸಿಕ ಯುಗದ ಬೃಹತ್ ಶಿಲಾಸಮಾಧಿಯ ಸಂಸ್ಕೃತಿ, ಇನ್ನೊಂದು ಇತಿಹಾಸದ ಆರಂಭಕಾಲದ ಸಂಸ್ಕೃತಿ. ಮೊದಲನೆಯದು ಅಷ್ಟು ವ್ಯಾಪಕವಾಗಿಲ್ಲದೆ ಅದರ ಕೊನೆಯ ಹಂತದ ಅವಶೇಷಗಳು ಮಾತ್ರ ಕೆಳಗಿನ ಪದರಗಳಲ್ಲಿ ಸ್ವಲ್ಪಮಟ್ಟಿಗೆ ಕಂಡುಬಂದುವು. ಎರಡನೆಯ ಸಂಸ್ಕೃತಿ ಹೆಚ್ಚು ವ್ಯಾಪಕವಾಗಿ, ಬಹುಮುಖವಾಗಿ ಬೆಳೆದು ಹರಡಿದ್ದುದು ಸ್ಪಷ್ಟವಾಗಿದೆ. ಈ ಸಂಸ್ಕೃತಿ



ಚಂದ್ರವಳ್ಳಿ ಉತ್ಖನನದಲ್ಲಿ ದೊರೆತ ಪ್ರಾಚ್ಯಾವಶೇಷಗಳು

ಕ್ರಿ.ಪೂ. ಸು.3ನೆಯ ಶತಮಾನದಲ್ಲಿ ಆರಂಭವಾಗಿ ಕ್ರಿ.ಶ.3ನೆಯ ಶತಮಾನದವರೆಗೂ ಬೆಳೆದುಬಂದಂತೆ ತೋರುತ್ತದೆ. ಇಲ್ಲಿ ದೊರೆತ ಸಾತವಾಹನ ಅರಸರ ಸೀಸದ, ಮಿಶ್ರಲೋಹದ ನಾಣ್ಯಗಳ ಜೊತೆಗೆ ರೋಮ್ ನಾಣ್ಯಗಳು, ರೂಲೆಟೆಡ್ ಮೃಣ್ಪಾತ್ರೆಗಳು ದೊರೆತಿರುವುದು ಇದರ ಕಾಲವನ್ನು ಗೊತ್ತುಪಡಿಸಲು ಸಹಕಾರಿಯಾಗಿದೆ. ಸುಟ್ಟ ಇಟ್ಟಿಗೆಗಳಿಂದ ದೊಡ್ಡ ಮನೆಗಳನ್ನು ಕಟ್ಟುತ್ತಿದ್ದುದ್ದು, ಕಪ್ಪು, ಕೆಂಪು ಬಣ್ಣದ ಮಡಕೆಗಳ ಮೇಲೆ ಬಿಳಿಯ ಬಣ್ಣದಿಂದ ರೇಖಾಚಿತ್ರಗಳನ್ನು ಬಿಡಿಸುವುದು ಮತ್ತು ಅವುಗಳ ಕಂಠಗಳ ಮೇಲೆ ಬಗೆಬಗೆಯ ಅಲಂಕರಣಗಳನ್ನು ಕೊರೆದಿರುವುದು, ಪ್ರಶಸ್ತ ಶಿಲೆಗಳಲ್ಲಿ, ದಂತ, ಶಂಖ ಮೊದಲಾದವುಗಳಲ್ಲಿ ಮಾಡಿದ ಮಣಿಗಳು ಮತ್ತು ಗಾಜಿನ ದಂತದ ಬಳೆಗಳು, ಸೀಸದ ನಾಣ್ಯಗಳು ಈ ಸಂಸ್ಕೃತಿಯ ಹೆಗ್ಗುರುತುಗಳಾಗಿವೆ.

ಕದಂಬ ಮಯೂರಶರ್ಮ ಇಲ್ಲಿ ಒಂದು ಕೆರೆಯನ್ನು ಕಟ್ಟಿಸಿದ್ದನೆಂಬುದು ಇಲ್ಲಿ ದೊರೆತ ಶಾಸನವೊಂದರಿಂದ ತಿಳಿಯುತ್ತದೆ. (ಎಂ.ಎಚ್.)

**ಚಂದ್ರಶೇಖರ ಅಯ್ಯರ್, ಕೆ.ಎಸ್. :** 1869-1964. ಹಿರಿಯ ತಲೆಮಾರಿನ ನ್ಯಾಯವಾದಿ. ಬೆಂಗಳೂರಿನ ಗಾಯನ ಸಮಾಜದ ಸ್ಥಾಪಕರು. 1869 ಆಗಸ್ಟ್ 2ರಂದು ಜನಿಸಿದರು. ತಂದೆ ಎ.ಶಂಕರಯ್ಯ ತ್ರಿಚೂರಿನಲ್ಲಿ

ಜಿಲ್ಲಾ ನ್ಯಾಯಾಧೀಶರಾಗಿದ್ದರು. ಚಂದ್ರಶೇಖರ ಅಯ್ಯರ್ ಮೆಟ್ರಿಕ್‌ನಲ್ಲಿ ಉತ್ತೀರ್ಣರಾದ ಬಳಿಕ (1884) ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಬಿ.ಎ. ಪದವಿ ಗಳಿಸಿದರು. ಆಗ ಇಂಗ್ಲಿಷ್ ಭಾಷೆಯಲ್ಲಿನ ಪ್ರೌಢಿಮೆಗೆ ಚಿನ್ನದ ಪದಕ ವನ್ನೂ ಸಂಸ್ಕೃತ ಭಾಷಾ ಪ್ರೌಢಿಮೆಗೆ ಬಹುಮಾನವನ್ನೂ ಗಳಿಸಿದರು. ಕಾನೂನು ಪದವಿ ಯನ್ನು 1892ರಲ್ಲಿ ಪೂರೈಸಿ ದರು. ಅನಂತರ ಮೈಸೂರ್ ಸಿವಿಲ್ ಸರ್ವೀಸ್ ಪರೀಕ್ಷೆ ಯನ್ನು ತೆಗೆದುಕೊಂಡು ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. ಅಸಿಸ್ಟೆಂಟ್ ಕಮಿಷನರ್ ಆಗಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರು. ಪಾರ್ವತಿ ಅಮ್ಮಾಳ್ ಎಂಬುವವರು ಇವರ ಪತ್ನಿ. ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ಕೆಲಸ ಕಲಿತರು. ಹಾಸನದಲ್ಲಿ ಕೆಲಕಾಲ ಮುನ್ಸೀಫರಾಗಿದ್ದು ಬಳಿಕ ಕಂದಾಯ ಇಲಾಖೆ ಸೇರಿದರು.

ಅಯ್ಯರ್ ಅವರ ಕಾರ್ಯದಕ್ಷತೆಯನ್ನು ಗಮನಿಸಿದ ಮೈಸೂರಿನ ಆಗಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಇವರನ್ನು ಸರ್ಕಾರಿ ಸಚಿವಾಲಯಕ್ಕೆ ಕರೆತಂದರು. ಅಲ್ಲಿ ಶಾಸನ ಸಭೆಯ ಕಾರ್ಯಕಲಾಪಗಳ ಬಗ್ಗೆ ಅಧ್ಯಯನ ನಡೆಸಲು ಇವರನ್ನು ನಿಯೋಜಿಸಲಾಯಿತು. ಕಾನೂನು ರೂಪಿಸುವಲ್ಲಿ ಇವರು ಪರಿಣತಿ ಪಡೆದರು. ಹೊಸದಾಗಿ ರಚಿತವಾದ ಡೆಪ್ಯೂಟಿ ಸೆಕ್ರೆಟರಿ ಹುದ್ದೆಗೆ ಇವರನ್ನು ನೇಮಿಸಲಾಯಿತು. ಅನಂತರ ಕಂದಾಯ ಮತ್ತು ಜನರಲ್ ಸೆಕ್ರೆಟರಿ ಹುದ್ದೆಗೆ ಬಡ್ತಿ ದೊರೆಯಿತು (1906). ಇವರಿಗೆ ನ್ಯಾಯಾಂಗದಲ್ಲಿ ವಿಶೇಷ ಒಲವು ಇದ್ದುದರಿಂದ ಬೆಂಗಳೂರಿನ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡರು. 1922ರಲ್ಲಿ ಮುಖ್ಯ ನ್ಯಾಯಾಧೀಶರಾಗಿ ಬಡ್ತಿ ಪಡೆದರು. ಇವರ ಸಾಧನೆಗಾಗಿ ಮೈಸೂರಿನ ಮಹಾರಾಜರು ರಾಜಧರ್ಮ ಪ್ರವೀಣ ಬಿರುದು ನೀಡಿದರು (1921). ಬ್ರಿಟಿಷ್ ಸರ್ಕಾರ ಇವರಿಗೆ ದಿವಾನ್ ಬಹದ್ದೂರ್ ಬಿರುದು ನೀಡಿತು (1923).

ಮುಖ್ಯ ನ್ಯಾಯಾಧೀಶರಾಗಿದ್ದರೂ ಭಾರತದ ಅಂದಿನ ರಾಜಕೀಯ ವಿದ್ಯಮಾನಗಳು ಇವರನ್ನು ಕೆರಳಿಸಿದ್ದುವು. ಇವರ ಮೇಲೆ ಅನಿಬೆಸೆಂಟ್‌ರ ದಟ್ಟ ಪ್ರಭಾವವಾಗಿತ್ತು. ಭಾರತಗೀತಂ ಎಂಬ ಸಂಸ್ಕೃತ ದೇಶಭಕ್ತಿ ಗೀತೆ ರಚಿಸಿದ್ದರು. ಈ ಗೀತೆಯನ್ನು ಮೊದಲಿಗೆ ಇಂಗ್ಲಿಷ್‌ನಲ್ಲಿ 'ಸಾಂಗ್ ಆಫ್ ಇಂಡಿಯಾ ದಿ ಮದರ್ ಲ್ಯಾಂಡ್' ಎಂದು ಬರೆದು ಅನಂತರ ಸಂಸ್ಕೃತಕ್ಕೆ ಭಾಷಾಂತರಿಸಿ ಪ್ರಕಟಿಸಿದರು. ಈ ಗೀತೆಯನ್ನು ಪಿಟೀಲು ವಾದಕರಾಗಿದ್ದ ಟಿ.ತಾಯಪ್ಪನವರ ಸಹಾಯದಿಂದ ಯುಕ್ತ ರಾಗಗಳೊಂದಿಗೆ ಸಂಗೀತಕ್ಕೆ ಅಳವಡಿಸಿದರು. ಭಾರತೀಯರ ಮನದಲ್ಲಿ ಧೈರ್ಯ ತುಂಬಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಅಣಿಗೊಳಿಸುವ ಪ್ರಯತ್ನ ಈ ಕವಿತೆಯಲ್ಲಿದೆ.

ಇವರು ನಿವೃತ್ತರಾದ ಬಳಿಕ ಸಮಾಜ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡರು. ರಾಜ್ಯ ಸ್ಕೌಟ್ ಚಳವಳಿಯ ಮುಂಚೂಣಿಯ ನಾಯಕರಾಗಿ ದುಡಿದರು. ಬೆಂಗಳೂರಿನ ಸಿಟಿ ಇನ್‌ಸ್ಟಿಟ್ಯೂಟ್ ಸ್ಥಾಪಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ನಾಮಕರಣ ಸದಸ್ಯರಾಗಿ ಸೇವೆ ಸಲ್ಲಿಸಿದರು. ಥಿಯಾಸಫಿಕಲ್ ಸೊಸೈಟಿಯ ಸದಸ್ಯರಾಗಿದ್ದರು. ಕರ್ನಾಟಕ ಸಂಗೀತದಲ್ಲಿ ವಿಶೇಷ ಒಲವಿದ್ದ ಇವರು ಬೆಂಗಳೂರಿನ ಗಾಯನ ಸಮಾಜದ ಸ್ಥಾಪಕರಲ್ಲೊಬ್ಬರು.

ಇವರನ್ನು ಸರ್ಕಾರ ವಿವಿಧ ತಜ್ಞರ ಸಮಿತಿಯ ಅಧ್ಯಕ್ಷರನ್ನಾಗಿಯೂ ನೇಮಿಸಿತ್ತು. ಹಿಂದು ಕಾನೂನಿನಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸುವ ಕುರಿತಾದ ಸಮಿತಿಗೆ ಇವರು ಅಧ್ಯಕ್ಷರಾಗಿದ್ದರು (1931). ಸಹಕಾರ ಚಳವಳಿ ಸಮಿತಿ, ಕಾರಾಗೃಹ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿಯೂ (1941) ಇವರು ಕೆಲಸ ಮಾಡಿದರು. ಇವರು 1964ರಲ್ಲಿ ನಿಧನರಾದರು. *

**ಚಂದ್ರಶೇಖರ, ಎಂ. ಎಸ್. :** 1924 -. ಹಿರಿಯ ಚಿತ್ರಕಲಾವಿದ. 1924 ಜೂನ್ 16ರಂದು ಮೈಸೂರಿನಲ್ಲಿ ಜನಿಸಿದರು. ಮೈಸೂರಿನ ಚಾಮರಾಜೇಂದ್ರ ಇನ್‌ಸ್ಟಿಟ್ಯೂಟ್‌ನಲ್ಲಿ ತಮ್ಮ ಕಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದರು (1941). ಇವರು ರಚಿಸಿದ ಅಜಂತಾ ಗುಹಾ



ಚಿತ್ರಗಳು ಇವರಿಗೆ ಪ್ರಖ್ಯಾತಿಯನ್ನು ತಂದುಕೊಟ್ಟಿವೆ. ದೇಶವಿದೇಶಗಳಲ್ಲಿಯೂ ಇವರು ಅನೇಕ ಕಲಾಪ್ರದರ್ಶನಗಳನ್ನು ಏರ್ಪಡಿಸಿ, ಕರ್ನಾಟಕದ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ. ಕೈರೋ, ವಾರ್ಸಾ, ಇಸ್ತಾನ್‌ಬುಲ್, ಅಮೆರಿಕ ಮೊದಲಾದೆಡೆಗಳಲ್ಲಿ ಇವರ ಕಲಾಕೃತಿಗಳ ಪ್ರದರ್ಶನ ನಡೆದಿದೆ. ಇವರ ಕಲಾಕೃತಿಗಳು ದೇಶ ವಿದೇಶದ ಕಲಾಭವನಗಳಲ್ಲಿ, ಸರ್ಕಾರದ ಮುಖ್ಯ ಸೌಧಗಳಲ್ಲಿ, ಕಚೇರಿಗಳಲ್ಲಿ ಮತ್ತು ಕಲಾಭಿಮಾನಿಗಳ ಮನೆಗಳಲ್ಲಿ ಸೇರ್ಪಡೆಗೊಂಡಿವೆ. ಇವರು ಅನೇಕ ಕಲಾ ಕಾರ್ಯಾಗಾರ, ಕಲಾ ಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಾಗಿ ಮತ್ತು ಉಪಾಧ್ಯಕ್ಷರಾಗಿ, ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟಿನ ಸಲಹೆಗಾರರಾಗಿ, ಕೇರಳದಲ್ಲಿಯ ತಿರುವನಂತಪುರದ ವಿಧಾನ ಮಂಡಲದಲ್ಲಿನ ಭಿತ್ತಿ ಚಿತ್ರಗಳ ಸಲಹೆಗಾರರಾಗಿ ದುಡಿದಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದವು: ಮೈಸೂರು ದಸರ ಕಲಾ ಪ್ರದರ್ಶನ (1948 ಮತ್ತು 1955), ಭೂಪಾಲ್ ಮಹಾರಾಜ್ ಬಹುಮಾನ, ಅಮೃತಸರ (1956), ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1982), ಐಫ್ಯಾಕ್ಸ್ ಪ್ರಶಸ್ತಿ (1952), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1995), ವೆಂಕಟಪ್ಪ ಪ್ರಶಸ್ತಿ (2000). ಅಜಂತಾ ಗುಹೆಗಳಲ್ಲಿ ಹಿರಿಯ ಕಲಾವಿದರಾಗಿ ಸೇವೆ ಸಲ್ಲಿಸಿದ ಇವರು ಈಗ ನಿವೃತ್ತರಾಗಿದ್ದಾರೆ. *

**ಚಂದ್ರಶೇಖರ ಕಂಬಾರ :** 1937-. ಪ್ರಸಿದ್ಧ ಕವಿ, ನಾಟಕಕಾರ, ಜಾನಪದ ತಜ್ಞ, ಚಲನಚಿತ್ರ ನಿರ್ದೇಶಕ, ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿ. ಇವರು 1937 ಜನವರಿ 2ರಂದು ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಘೋಡಗೇರಿಯಲ್ಲಿ ವಿಶ್ವಕರ್ಮವಂಶದ ಒಂದು ಸಾಮಾನ್ಯ ಬಡ ಕುಟುಂಬದಲ್ಲಿ ಹುಟ್ಟಿದರು. ಇವರ ವಿದ್ಯಾಭ್ಯಾಸ ನಡೆದದ್ದು ಗೋಕಾಕ, ಬೆಳಗಾಂವಿ ಮತ್ತು ಧಾರವಾಡಗಳಲ್ಲಿ. ಅಮೆರಿಕದ ಶಿಕಾಗೊ ವಿಶ್ವವಿದ್ಯಾಲಯದಲ್ಲಿ ದಿ ಆರಿಜಿನ್ ಅಂಡ್ ಡೆವಲಪ್‌ಮೆಂಟ್ ಆಫ್ ಕನ್ನಡ ಲಿಟರೇಚರ್ ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿ ಗಳಿಸಿದರು (1968-69). ಇದೇ ವಿಷಯದಲ್ಲಿ ಫುಲ್‌ಬ್ರೈಟ್ ವಿದ್ವಾಂಸರೆನಿಸಿಕೊಂಡರು. ಅನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು (1971-91). ಜರ್ಮನಿ, ಬರ್ಲಿನ್, ಮಾಸ್ಕೋ, ನ್ಯೂಯಾರ್ಕ್, ಶಿಕಾಗೊ ಮುಂತಾದೆಡೆ ಪ್ರವಾಸ ಮಾಡಿ ಭಾರತೀಯ ರಂಗಭೂಮಿ ಹಾಗೂ ಜಾನಪದದ ಬಗ್ಗೆ ವಿಶೇಷ ಉಪನ್ಯಾಸಗಳನ್ನು ನೀಡಿದರು.

ಕಂಬಾರರು ಕಾವ್ಯ, ನಾಟಕ, ಕಾದಂಬರಿ ಮತ್ತು ಜಾನಪದ ಕ್ಷೇತ್ರದಲ್ಲಿ ಹಲವಾರು ಕೃತಿಗಳನ್ನು ನೀಡುವುದರ ಮೂಲಕ ಆಧುನಿಕ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿದವರಾಗಿದ್ದಾರೆ. ಮುಗುಳು, ಹೇಳತೇನ ಕೇಳ, ತಕರಾರಿನವರು, ಸಾವಿರದ ನೆರಳು, ಬೆಳ್ಳಿಮೀನು, ಅಕ್ಕಕ್ಕು ಹಾಡುಗಳೇ ಮೊದಲಾದ ಕವನಸಂಕಲನಗಳನ್ನೂ ಚಾಳೇಶ ಮತ್ತು ನಾರ್ಸಿಸಸ್, ಬೆಂಬತ್ತಿದ ಕಣ್ಣು, ಹುಲಿಯ ನೆರಳು, ಬೆಪ್ಪತಕ್ಕಡಿ, ಬೋಳೆಶಂಕರ, ಪುಷ್ಪರಾಣಿ, ತುಕ್ರನಕನಸು, ಸಿರಿಸಂಪಿಗೆ, ಋಷ್ಯಶೃಂಗ,



ಚಾಳೇಶ, ಜೋಕುಮಾರಸ್ವಾಮಿ, ಕಿಟ್ಟಿಯಕಥೆ, ಜೈಸಿದ್ಧನಾಯಕ, ಆಲಿಬಾಬ, ಕಾಡುಕುದುರೆ, ನಾಯೀಕಥೆ, ಖರೋಖರ, ಮಹಾಮಾಯಿ (ಭಾರತಾಂಬೆ), ಹರಕೆಯ ಕುರಿ ಇತ್ಯಾದಿ ನಾಟಕಗಳನ್ನೂ ಕರಿಮಾಯಿ, ಸಿಂಗಾರವ್ವ ಮತ್ತು ಅರಮನೆ, ಜೀಕೆ ಮಾಸ್ತರ ಪ್ರಣಯ ಪ್ರಸಂಗ, ಅಣ್ಣತಂಗಿ ಎಂಬ ಕಾದಂಬರಿಗಳನ್ನೂ ಪ್ರಕಟಿಸಿದ್ದಾರೆ. ಬಣ್ಣೀಸಿ ಹಾಡವ್ವ ನನ ಬಳಗ, ಉತ್ತರ ಕರ್ನಾಟಕದ ಜಾನಪದ ರಂಗಭೂಮಿ ಬಯಲಾಟಗಳು, ಸಂಗ್ಯಾಬಾಳ್ಯಾ, ಲಕ್ಷಾಪತಿರಾಜನ ಕಥೆ, ಮಾತಾಡೊ ಲಿಂಗವೇ, ಬೇಡರಹುಡುಗ ಮತ್ತು ಗಿಳಿ, ಕಾಸಿಗೊಂದು ಸೇರು, ನಮ್ಮ ಜಾನಪದ - ಮೊದಲಾದ ಜಾನಪದ ಸಂಗ್ರಹ, ಸಂಪಾದನೆ ಸಂಶೋಧನಾತ್ಮಕ ಕೃತಿಗಳನ್ನು ಹೊರತರುವುದರ ಮೂಲಕ ಜಾನಪದದಲ್ಲಿ ಹುದುಗಿರುವ ಘನತೆಯನ್ನೂ ಅದರ ಶ್ರೇಷ್ಠತೆಯನ್ನೂ ಎತ್ತಿ ಹಿಡಿದಿದ್ದಾರೆ. ತಕರಾರಿನವರು, ಜೈಸಿದ್ಧನಾಯಕ, ಸಿಂಗಾರವ್ವ ಮತ್ತು ಅರಮನೆ, ಬೇಡರಹುಡುಗ ಮತ್ತು ಗಿಳಿ - ಈ ಪುಸ್ತಕಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳು ಸಂದಿವೆ. ಭಾರತದ ಶ್ರೇಷ್ಠ ನಾಟಕಗಳಿಗೆ ನೀಡಲಾಗುವ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿಯನ್ನು ಜೋಕುಮಾರಸ್ವಾಮಿ ಪಡೆದುಕೊಂಡಿದೆ. ಜೈಸಿದ್ಧನಾಯಕ, ನಾಟಕಕ್ಕೆ ವರ್ಧಮಾನ ಪ್ರಶಸ್ತಿ ದೊರೆತಿದೆ. ಸಿರಿಸಂಪಿಗೆ ಎಂಬ ನಾಟಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ (1991). ಇವರ ಅನೇಕ ನಾಟಕಗಳು ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳಿಗೂ ಅನುವಾದಗೊಂಡು ಪ್ರದರ್ಶಿಸಲ್ಪಟ್ಟಿವೆ. ಇವರ ಚಕೋರಿ ಎಂಬ ಆಧುನಿಕ ಮಹಾಕಾವ್ಯ ವಿಮರ್ಶಾವಲಯದಲ್ಲಿ ಹೆಚ್ಚು ಚರ್ಚೆಗೆ ಒಳಪಟ್ಟಿದೆ.

ಕಂಬಾರರ ಸಾವಿರದ ನೆರಳು ಕವನ ಸಂಕಲನಕ್ಕೆ ಕೇರಳದ ಕುಮಾರನ್ ಆಶನ್ ಪ್ರಶಸ್ತಿ (1982) ದೊರಕಿದೆ. 1975ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇವರ ಕನ್ನಡ ರಂಗಭೂಮಿಯ ಸಾಧನೆಗಳನ್ನು ಗುರುತಿಸಿ ತನ್ನ ವಜ್ರಮಹೋತ್ಸವ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿರುವ ಭಾರತೀಯ ಭಾಷೆಗಳಲ್ಲಿಯೇ ಮೊಟ್ಟಮೊದಲನೆಯದಾದ ಕನ್ನಡ ಜಾನಪದ ವಿಶ್ವಕೋಶವನ್ನು ಇವರು ಸಂಪಾದಿಸಿಕೊಟ್ಟರು. ಉತ್ತಮ ನಟರಾಗಿ, ಕಲಾವಿದರಾಗಿ, ಗಾಯಕರಾಗಿ ಹೆಸರಾದ ಕಂಬಾರರು ಹಲವಾರು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿಯೂ ಪದಾಧಿಕಾರಿಗಳಾಗಿಯೂ ಸೇವೆಸಲ್ಲಿಸಿದ್ದಾರೆ. 1992ರಲ್ಲಿ ಸ್ಥಾಪನೆಯಾದ ಹಂಪೆಯ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಮೊದಲ ಕುಲಪತಿಯಾದ ಕೀರ್ತಿ ಇವರದು (1992-98). ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿ (1980-83), ಮೈಸೂರಿನ ಕರ್ನಾಟಕ ನಾಟಕ ರಂಗಾಯಣದ ಸದಸ್ಯರಾಗಿ (1987-91), ಕೇಂದ್ರ ಸಾಹಿತ್ಯ ಅಕಾಡೆಮಿ

ಸದಸ್ಯರಾಗಿ (1988-91), ಕೇಂದ್ರ ಸಂಗೀತ ನಾಟಕ ಅಕಾಡೆಮಿ ಸದಸ್ಯರಾಗಿ ಇವರು ಸೇವೆಸಲ್ಲಿಸಿದ್ದಾರೆ. ಇವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದರು (1983-86). ಅಕಾಡೆಮಿಯ ರಂಗ ಚಳವಳಿಯನ್ನು ಗ್ರಾಮೀಣ ನೆಲೆಗೆ ಕೊಂಡೊಯ್ದರು ಹಾಗೂ ಬೆಳೆಸಿದರು. ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ (ಎನ್.ಎಸ್.ಡಿ.) ಸಂಸ್ಥೆಯ ಅಧ್ಯಕ್ಷರಾಗಿಯೂ ಕಂಬಾರರು ಸೇವೆಸಲ್ಲಿಸಿದ್ದಾರೆ. ಅಮೆರಿಕನ್ ಓರಿಯಂಟಲ್ ಸೆಂಟರ್ (ನ್ಯೂಯಾರ್ಕ್), ಇಂಟರ್ ನ್ಯಾಷನಲ್ ಥಿಯೇಟರ್ ಇನ್‌ಸ್ಟಿಟ್ಯೂಟ್ (ಬರ್ಲಿನ್), ಮಾಸ್ಕೋ (ಜೆ.ಜೇಡ್), ಜಪಾನಿನ ಅಕ್ವೆಕಾ (1992) ಮತ್ತು ಭಾರತದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಭಾರತೀಯ ಜಾನಪದ ಮತ್ತು ರಂಗಭೂಮಿಯನ್ನು ಕುರಿತಂತೆ ಇವರು ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ.

1979ರಲ್ಲಿ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜರುಗಿದ ಕವಿಗೋಷ್ಠಿಯ ಅಧ್ಯಕ್ಷತೆಯನ್ನೂ 1993ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಜರುಗಿದ ರಂಗಭೂಮಿ ಮತ್ತು ಸಾಹಿತ್ಯ ಕುರಿತಾದ ರಾಜ್ಯಮಟ್ಟದ ಸಮ್ಮೇಳನದ ಅಧ್ಯಕ್ಷತೆಯನ್ನೂ ಕಂಬಾರರು ವಹಿಸಿಕೊಂಡಿದ್ದರು. ನವದೆಹಲಿ, ಭೂಪಾಲ್‌ಗಳಲ್ಲಿ ನಡೆದ ವಿಶ್ವಕವಿ ಸಮ್ಮೇಳನದಲ್ಲಿಯೂ ಭಾಗವಹಿಸಿರುವ ಇವರು ದೆಹಲಿಯ ರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (1997). ಕಂಬಾರರಿಗೆ ದೊರಕಿರುವ ಪ್ರಶಸ್ತಿಗಳೂ ಗೌರವಗಳೂ ಹಲವಾರು. ಕೋಲ್ಕತ್ತದ ನಂಟಕಾರ್ ಸನ್ಮಾನ (1987), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1987), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1988), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1989), ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1983), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1993), ಪಂಪ ಪ್ರಶಸ್ತಿ, ಕಬೀರ್ ಸಮ್ಮಾನ್ (2002) ಮೊದಲಾದವನ್ನು ಇಲ್ಲಿ ಉಲ್ಲೇಖಿಸಬಹುದು.

ಚಲನಚಿತ್ರ ರಂಗದಲ್ಲಿಯೂ ಇವರ ಸಾಧನೆ ಅಪಾರವಾದುದು. 5 ಚಲನಚಿತ್ರಗಳನ್ನೂ 8 ಸಾಕ್ಷ್ಯ ಚಿತ್ರಗಳನ್ನೂ ಇವರು ಸಿದ್ಧಪಡಿಸಿದ್ದಾರೆ. ಹಲವಾರು ಚಿತ್ರಗಳಿಗೆ, ಸಾಕ್ಷ್ಯಚಿತ್ರಗಳಿಗೆ ಸಂಗೀತ ಸಂಯೋಜನೆಯನ್ನು ಮಾಡಿದ್ದಾರೆ. ಇವರ ಋಷ್ಯಶೃಂಗ, ಕಾಡುಕುದುರೆ, ಹರಕೆಯ ಕುರಿ ನಾಟಕಗಳು ಚಲನಚಿತ್ರಗಳಾಗಿ ಹೆಸರಾಗಿವೆ. 1978ರಲ್ಲಿ ಕಾಡುಕುದುರೆ ಚಲನಚಿತ್ರ ಭಾರತೀಯ ಪನೋರಮಾವನ್ನು ಪ್ರವೇಶಿಸಿತು. ಉತ್ತಮ ಹಿನ್ನೆಲೆ ಗಾಯನಕ್ಕಾಗಿಯೂ ಈ ಚಿತ್ರ ರಾಷ್ಟ್ರಪ್ರಶಸ್ತಿ ಪಡೆಯಿತು. ಜೀಕೆ ಮಾಸ್ತರರ ಪ್ರಣಯ ಪ್ರಸಂಗ ಟೆಲಿ ಚಿತ್ರವಾಗಿ ಪ್ರಶಸ್ತಿ ಪಡೆದಿದೆ. 1981ರಲ್ಲಿ 'ಸಂಗೀತ' ಚಿತ್ರಕ್ಕೆ ಅತ್ಯುತ್ತಮ ಚಲನಚಿತ್ರವೆಂದು ರಾಜ್ಯ ಪ್ರಶಸ್ತಿ ಬಂದಿದೆ. ಕರಿಮಾಯಿ, ಸಿಂಗಾರೆವ್ವ ಮತ್ತು ಅರಮನೆ - ಈ ಕಾದಂಬರಿಗಳು ಚಲನಚಿತ್ರಗಳಾಗಿವೆ. ಸಿಂಗಾರವ್ವ ಅತ್ಯುತ್ತಮ ಚಿತ್ರವೆಂದು ರಾಷ್ಟ್ರಪ್ರಶಸ್ತಿ ಪಡೆದಿದೆ (2003). (ಜಿ.ಆರ್.ಟಿ.)

**ಚಂದ್ರಶೇಖರ, ಬಿ.ಎಸ್. :** 1945-. ಭಾರತದ ಪ್ರಸಿದ್ಧ ಕ್ರಿಕೆಟ್ ಆಟಗಾರು; ಬೋಲರ್. ಭಗವತ್ ಸುಬ್ರಹ್ಮಣ್ಯ ಚಂದ್ರಶೇಖರ್ ಇವರ ಪೂರ್ಣ ಹೆಸರು.

ಬಾಲ್ಯದಲ್ಲಿ ಪೋಲಿಯೊ ರೋಗಕ್ಕೆ ಗುರಿಯಾಗಿದ್ದ ಚಂದ್ರಶೇಖರ್ ಮುಂದೆ ವಿಶ್ವದ ಅಸಾಧಾರಣ ಬೋಲರ್‌ಗಳಲ್ಲಿ ಒಬ್ಬರಾದರು. ಬಲಗೈನಿಂದ ಬೋಲ್ ಮಾಡುವ ಇವರು ಪರಿಣಾಮಕಾರಿ ಲೆಗ್‌ಸ್ಪಿನ್ ಬೋಲರ್ ಆಗಿದ್ದಾರೆ. ಮಧ್ಯೆ ಮಧ್ಯೆ ಗೂಗ್ಲಿ ಬೋಲ್‌ಗಳನ್ನು ಕೂಡ ಹಾಕುತ್ತಿದ್ದರು. 1971ರ ಇಂಗ್ಲೆಂಡ್ ಪ್ರವಾಸಾನಂತರ ಕರಾರುವಾಕ್ಕಾದ ಲೆಂಗ್ತ್ ಮತ್ತು ಗುರಿಯನ್ನು ಸಾಧಿಸಿಕೊಂಡಿದ್ದರು.

ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿದ್ದಾಗ ಕ್ರಿಕೆಟ್ ಆಡಲು ಪ್ರಾರಂಭಿಸಿದ ಇವರು ವೈ.ಎಸ್. ರಾಮಸ್ವಾಮಿ ಸ್ಮಾರಕ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಭಾಗವಹಿಸಿ, ಮೂರು ಪಂದ್ಯಗಳಲ್ಲಿ 17 ವಿಕೆಟ್ ಗಳಿಸುವ ಮೂಲಕ ಬೆಳಕಿಗೆ ಬಂದರು. 1963-64ರಲ್ಲಿ ಜ್ಯೂನಿಯರ್ ಕ್ರಿಕೆಟ್‌ನಿಂದ ಟೆಸ್ಟ್ ಹಂತಕ್ಕೆ ಏರಿದರು. ಇವರು ಬೆಂಗಳೂರು ವಿಶ್ವವಿದ್ಯಾಲಯದ ಕ್ರಿಕೆಟ್ ಟೀಮಿನ ನಾಯಕರೂ ಆಗಿದ್ದರು. ವಿಜ್ಞಾನದ ಪದವೀಧರರಾಗಿದ್ದ ಇವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿದ್ದರು.

1963 ನವೆಂಬರ್ 14ರಂದು ಬೆಂಗಳೂರಿನಲ್ಲಿ ನಡೆದ ರಣಜಿ ಟ್ರೋಫಿ ಪಂದ್ಯದಲ್ಲಿ ಕೇರಳದ ವಿರುದ್ಧ ಕರ್ನಾಟಕ ರಾಜ್ಯದ ಟೀಮಿನಲ್ಲಿ ಚಂದ್ರಶೇಖರ್ ಪ್ರಥಮ ಬಾರಿಗೆ ಸೇರಿಕೊಂಡರು. ಇವರು ಭಾಗಿಯಾದ ಪ್ರಥಮ ಟೆಸ್ಟ್ ಪಂದ್ಯ 1964 ಜನವರಿ 21ರಂದು ಮುಂಬಯಿಯಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಎರಡನೆಯ ಟೆಸ್ಟ್.

ಮುಂಬಯಿಯಲ್ಲಿ ವೆಸ್ಟ್ ಇಂಡಿಸ್ ವಿರುದ್ಧ ನಡೆದ (1966-67) ಪಂದ್ಯದಲ್ಲಿ 235 ರನ್ ಕೊಟ್ಟು 11 ವಿಕೆಟ್‌ಗಳನ್ನೂ ದೆಹಲಿಯಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ (1972-73) ಟೆಸ್ಟ್ ಪಂದ್ಯದಲ್ಲಿ 79 ರನ್ ಕೊಟ್ಟು 8 ವಿಕೆಟ್‌ಗಳನ್ನೂ ಪಡೆದಿರುವುದು ಇವರ ಅತ್ಯುತ್ತಮ ಬೋಲಿಂಗ್ ಸಾಧನೆಗಳು.

1971 ಆಗಸ್ಟ್ 24ರಂದು ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ನಾಲ್ಕು ವಿಕೆಟ್‌ಗಳ ಜಯ ತಂದುಕೊಟ್ಟ ಐತಿಹಾಸಿಕ ಓವಲ್ ಟೆಸ್ಟ್‌ನಲ್ಲಿ ಇವರು 114 ರನ್‌ಗಳಿಗೆ 8 ವಿಕೆಟ್ ತೆಗೆದುಕೊಂಡಿದ್ದರು (ಮೊದಲ ಇನ್ನಿಂಗ್ಸ್‌ನಲ್ಲಿ 76ಕ್ಕೆ 2, ಎರಡನೆಯ ಇನ್ನಿಂಗ್ಸ್‌ನಲ್ಲಿ 38ಕ್ಕೆ 6).

ಭಾರತದ ತಂಡ ಆಸ್ಟ್ರೇಲಿಯದಲ್ಲಿ ಪ್ರವಾಸ ಮಾಡುತ್ತಿದ್ದಾಗ (1967-68) ಪ್ರವಾಸದ ಮುಕ್ತಾಯದಲ್ಲಿ ಭಾರತಕ್ಕೆ ಹಿಂದಿರುಗಿದ ಚಂದ್ರಶೇಖರ್ ಮುಂದಿನ ಕೆಲವು ಪಂದ್ಯಗಳಲ್ಲಿ ಭಾಗವಹಿಸಲಿಲ್ಲ.

1973 ಫೆಬ್ರವರಿ 11ರಂದು ನಡೆದ ಪಂದ್ಯದ ಎರಡನೆಯ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡಿನ ಸ್ಕೋರು 37ರನ್ ಆಗಿದ್ದಾಗ 8ರನ್ ಮಾಡಿದ್ದ ಇಂಗ್ಲೇಂಡಿನ ವಿಕೆಟ್ ಕೀಪರ್ ಆಲನ್ ನಾಟ್ ಚಂದ್ರಶೇಖರ್ ಅವರ ಬೋಲಿಂಗಿಗೆ ಬಲಿಯಾದರು. ಈ ವಿಕೆಟ್ ಪತನ ಹೊಸ ವಿಕ್ರಮವನ್ನು ಸ್ಥಾಪಿಸಿತು. ಈ ವಿಕೆಟನ್ನು ಪಡೆಯುವುದರ ಮೂಲಕ ಚಂದ್ರಶೇಖರ್ 1972-73ರ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ 662 ರನ್ನುಗಳಿಗೆ 35 ವಿಕೆಟ್ಟು ಗಳನ್ನು ಗಳಿಸಿ ಹೊಸ ವಿಕ್ರಮವನ್ನು ಸ್ಥಾಪಿಸಿದಂತಾಯಿತು. 1951-52ರಲ್ಲಿ ವಿನೂ ಮಂಕಡ್ 571 ರನ್ನುಗಳಿಗೆ 34 ಇಂಗ್ಲೆಂಡ್ ವಿಕೆಟ್ಟು ಗಳನ್ನೂ ಸುಭಾಷ್ ಗುಪ್ತೆ 1955-56ರಲ್ಲಿ 669 ರನ್ನು ಗಳಿಗೆ 34 ನ್ಯೂಜೀಲೆಂಡ್ ವಿಕೆಟ್ಟುಗಳನ್ನೂ ಪಡೆದು ಸ್ಥಾಪಿಸಿದ್ದ ವಿಕ್ರಮಗಳು

ಇದರಿಂದ ಹಿಂದಾದವು. ಈ ಸರಣಿಯಲ್ಲಿ ಚಂದ್ರಶೇಖರ್ ಇನ್ನೂ ಒಂದು ವಿಕ್ರಮವನ್ನು ಸ್ಥಾಪಿಸಿ ಹಿಂದಿನ ವಿನೂ ಮಂಕಡ್ ಅವರ ವಿಕ್ರಮವನ್ನು ಮುರಿದರು. ವಿನೂ ಮಂಕಡ್ 11 ಟೆಸ್ಟ್ ಪಂದ್ಯಗಳಲ್ಲಿ 1,249 ರನ್‌ಗಳಿಗೆ 54 ಇಂಗ್ಲೆಂಡ್ ವಿಕೆಟ್‌ಗಳನ್ನು ಪಡೆದಿದ್ದರೆ ಚಂದ್ರಶೇಖರ್ 15 ಟೆಸ್ಟ್‌ಗಳಲ್ಲಿ 1,815 ರನ್‌ಗಳಿಗೆ ಇಂಗ್ಲೆಂಡಿನ 74 ವಿಕೆಟ್‌ಗಳನ್ನು ಪಡೆದಿದ್ದರು.

1974 ಜನವರಿ 14ರಂದು ಮದರಾಸಿನಲ್ಲಿ ನಡೆದ ಟೆಸ್ಟ್ ಪಂದ್ಯದ ಎರಡನೆಯ ಇನ್ನಿಂಗ್ಸ್‌ನಲ್ಲಿ ಅಮಿಸ್ ಅವರನ್ನು ಔಟ್ ಮಾಡಿದ ಚಂದ್ರಶೇಖರ್ ಅಧಿಕೃತ ಟೆಸ್ಟ್‌ಗಳಲ್ಲಿ ವಿಕೆಟ್‌ಗಳ ಶತಕವನ್ನು ಪೂರ್ಣಗೊಳಿಸಿದರು. ಇದು ಚಂದ್ರಶೇಖರ್ ಅವರ 22ನೆಯ ಅಧಿಕೃತ ಟೆಸ್ಟ್. ಇದರಿಂದ 1972-73ರ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ (ಇದು ಮೂರನೆಯ ಟೆಸ್ಟ್) 25 ವಿಕೆಟ್‌ಗಳ ಸಂಖ್ಯೆಯನ್ನು ಇವರು ದಾಟಿದರು.

ಆಸ್ಟ್ರೇಲಿಯದ ಸಿಡ್ನಿ ಮತ್ತು ಮೆಲ್ಬೋರ್ನ್‌ನಲ್ಲಿ ನಡೆದ (1977-78) ಟೆಸ್ಟ್ ಪಂದ್ಯಗಳಲ್ಲಿ ಭಾರತದ ಗೆಲುವಿಗೆ ಇವರ ಕಾಣಿಕೆಯೂ ಅಪಾರವಾಗಿತ್ತು. ಚಂದ್ರಶೇಖರ್ ಅವರು ಒಟ್ಟು 58 ಟೆಸ್ಟ್ ಪಂದ್ಯಗಳಲ್ಲಿ ಆಡಿ 10 ಪಂದ್ಯಗಳ ಗೆಲುವಿನ ರೂವಾರಿಯಾಗಿದ್ದರು. ಬರ್ಮಿಂಗ್ ಹ್ಯಾಮ್‌ನಲ್ಲಿ ನಡೆದ ಭಾರತ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯವೇ ಇವರ ಕೊನೆಯ ಪಂದ್ಯ (1979). ಕ್ರಿಕೆಟ್ ಜೀವನದ ನಿವೃತ್ತಿಯ ಅನಂತರ ಕಾರು ಅಪಘಾತವೊಂದರಲ್ಲಿ ತಮ್ಮ ಎರಡು ಕಾಲುಗಳ ಸ್ವಾಧೀನವನ್ನು ಕಳೆದುಕೊಂಡರು. ಇವರು ಸಂಗೀತ ಪ್ರಿಯರು. ಹಿಂದಿ ಗಾಯಕ ಮುಖೇಶ್ ಅವರ ಹಾಡುಗಳೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ.

ಆಕ್ಲೆಂಡ್‌ನಲ್ಲಿ ನಡೆದ ಭಾರತ ನ್ಯೂಜಿಲೆಂಡ್ ವಿರುದ್ಧದ ಒಂದು ದಿನದ ಅಂತಾರಾಷ್ಟ್ರೀಯ ಪದ್ಯದಲ್ಲಿ ಇವರು ಭಾಗವಹಿಸಿದ್ದರು (1975-76). (ಬಿ.ವಿ.ಎಂ.)

**ಚಂದ್ರಶೇಖರಶಾಸ್ತ್ರಿ, ವೈ. :** 1892-1997. ಕನ್ನಡ ಮತ್ತು ಸಂಸ್ಕೃತ ಪಂಡಿತರು. ಕರ್ನಾಟಕ ಏಕೀಕರಣವೇ ಕನ್ನಡಿಗರ ಜೀವಾಳ ಎಂಬ ಘೋಷಣೆ ಸೃಷ್ಟಿಸಿದವರು. ಅಭಿಮಾನಿಗಳ ದೃಷ್ಟಿಯಲ್ಲಿ 'ಏಕೀಕರಣದ ಶಾಸ್ತ್ರಿ' ಎಂದು ಕರೆಸಿಕೊಂಡವರು. ಗೋಕಾಕ ಚಳವಳಿಯಲ್ಲೂ ಇವರು ಪಾಲ್ಗೊಂಡಿದ್ದರು. ತೆಲುಗು ಮರಾಠಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪರಿಶ್ರಮವುಳ್ಳವರು. ಬಳ್ಳಾರಿ ಜಿಲ್ಲೆಯ ಹೊಳಲು ಗ್ರಾಮದ ಹಿರಿಯ ಮಠದಲ್ಲಿ ಹುಟ್ಟಿದರು. ತಂದೆ ಹೀರೆಮಠದ ಪಟದಯ್ಯ, ತಾಯಿ ಬಸಮ್ಮ. ಹಾವೇರಿ ಮತ್ತು ಗದಗಗಳಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿ, ಕಾಶಿ ಮತ್ತು ಕಲ್ಕತ್ತಗಳಲ್ಲಿ ಸಂಸ್ಕೃತವನ್ನು ವಿಶೇಷವಾಗಿ ಅಧ್ಯಯನ ಮಾಡಿ ವ್ಯಾಕರಣ ತೀರ್ಥ ಎಂಬ ಪದವಿ ಪಡೆದರು (1924). ಯಾದಗಿರಿಯ ಶಂಕರ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿ ಕೆಲಸಮಾಡಿದ ಶಾಸ್ತ್ರಿಗಳು (1924-31) ಅನಂತರ ಹುಬ್ಬಳ್ಳಿಯ ಶ್ರೀ ಜಗದ್ಗುರು ಗಂಗಾಧರ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು (1931-38). ಹುಬ್ಬಳ್ಳಿಯ ಮೂರುಸಾವಿರ ಮಠದ ಗಂಗಾಧರ ಗ್ರಂಥಮಾಲೆಯ ಮುಖ್ಯ ಚಾಲಕರಾಗಿದ್ದ ಇವರು ಅನೇಕ ಗ್ರಂಥಗಳನ್ನು ಪರಿಶೋಧಿಸಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ.



ಇವರ ಲೇಖನ ವ್ಯವಸಾಯ 1919ರಲ್ಲಿ ಆರಂಭವಾಯಿತು. ಸಾಹಿತ್ಯ, ಸಂಸ್ಕೃತಿ, ಧರ್ಮ ಮುಂತಾದ ಹಲವು ವಿಷಯಗಳ ಮೇಲೆ ಇವರು ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ವೀರಶೈವ ಸಾಹಿತ್ಯವನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿರುವ ಇವರು ಬಸವತತ್ತ್ವ ರತ್ನಾಕರ ಎಂಬ ಗ್ರಂಥವನ್ನು ರಚಿಸಿದ್ದಾರೆ. 28 ಅಧ್ಯಾಯಗಳುಳ್ಳ ಈ ಬೃಹದ್ಗ್ರಂಥ 1961ರಲ್ಲಿ ಪ್ರಕಟವಾಯಿತು. ಬಸವಣ್ಣನವರನ್ನು ಕುರಿತು ಅನೇಕ ವಿಚಾರಗಳನ್ನು ಈ ಗ್ರಂಥದಲ್ಲಿ ಸಂಗ್ರಹಿಸಿದ್ದಾರಲ್ಲದೆ, ಹಿಂದು ಧರ್ಮಕ್ಕೂ ವೀರಶೈವ ಧರ್ಮಕ್ಕೂ ಇರುವ ಸೈದ್ಧಾಂತಿಕ ಸಮಸ್ಯೆಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ. ಚಾಣಕ್ಯ ನೀತಿ ದರ್ಪಣ, ರೇಣುಕವಿಜಯ, ಮೃತ್ಯುಂಜಯ ಶಿವಯೋಗಿಗಳ ಚರಿತ್ರೆ —ಇವು ಶಾಸ್ತ್ರಿಗಳ ಇತರ ಗ್ರಂಥಗಳು.

ಶಾಸ್ತ್ರಿಗಳ ಬಹುಮುಖ ಸೇವೆಯನ್ನು ಮನ್ನಿಸಿ ರಾಷ್ಟ್ರದ ವಿವಿಧ ಸಂಘ ಸಂಸ್ಥೆಗಳು ಇವರಿಗೆ ವಿದ್ಯಾಲಂಕಾರ, ವಿದ್ಯಾವಾರಿಧಿ ಮುಂತಾದ ಬಿರುದುಗಳನ್ನಿತ್ತು ಸನ್ಮಾನಿಸಿವೆ. ಧಾರವಾಡದಲ್ಲಿ 1940ರಲ್ಲಿ ನಡೆದ 25ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಲಾಯಿತು. ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ 1966ರಲ್ಲಿ ಇವರನ್ನು ಸನ್ಮಾನಿಸಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುಚ್ಚ ಗೌರವ ಸದಸ್ಯತ್ವ ಸಂದಿತು. ಚಿದಾನಂದಮೂರ್ತಿ ಪ್ರಶಸ್ತಿಯನ್ನು ಇವರು ಪಡೆದರು (1996). ಹಂಪಿ ಕನ್ನಡ ವಿಶ್ವವಿದ್ಯಾಲಯ ಇವರಿಗೆ ಮರಣೋತ್ತರ ನಾಡೋಜ ಪದವಿ ನೀಡಿ ಗೌರವಿಸಿದೆ (1997). ಶಾಸ್ತ್ರಿಯವರ ಬದುಕು ಬರೆಹ ಕುರಿತಂತೆ 'ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿ' ಎಂಬ ಪುಸ್ತಕ ಪ್ರಕಟವಾಗಿದೆ (1999). ಇವರು 1997 ಅಕ್ಟೋಬರ್ 24ರಂದು ನಿಧನಹೊಂದಿದರು. (ಬಿ.ಪಿ.)

**ಚಂದ್ರಶೇಖರ, ಸಿ. ಆರ್. :** 1948-. ಹೆಸರಾಂತ ಮನೋವೈದ್ಯ, ಸಂಶೋಧಕ ಹಾಗೂ ಲೇಖಕ. 1948 ಡಿಸೆಂಬರ್ 12ರಂದು ಬೆಂಗಳೂರು ಜಿಲ್ಲೆ ಚನ್ನಪಟ್ಟಣದಲ್ಲಿ ಜನಿಸಿದರು. ತಂದೆ ರಾಜಣ್ಣಾಚಾರ್, ತಾಯಿ ಸರೋಜಮ್ಮ. ತಂದೆ ಮುದ್ರಣಾಲಯದ ಮಾಲೀಕರು. ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಚನ್ನಪಟ್ಟಣದ ಸರ್ಕಾರಿ ಶಾಲೆಯಲ್ಲಿ ಪಡೆದರು. 10ನೆಯ ತರಗತಿಯಲ್ಲಿ ತಾಲ್ಲೂಕಿಗೆ ಪ್ರಥಮ ಸ್ಥಾನ ಗಳಿಸಿದರು. ಚಿಕ್ಕಂದಿನಿಂದಲೇ ಇವರಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಅತ್ಯಂತ ಆಸಕ್ತಿಯಿತ್ತು. ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು, ಕಥೆ ಕಾದಂಬರಿಗಳನ್ನು ಓದುವುದು, ಕವನಗಳ ರಚನೆ ಇವರ ಹವ್ಯಾಸಗಳಾಗಿದ್ದವು. 1967ರಲ್ಲಿ ಕಾಲೇಜ್ ಮ್ಯಾಗಝೀನ್‌ನಲ್ಲಿ ಇವರ ಪ್ರಥಮ ಲೇಖನ ಪ್ರಕಟವಾಯಿತು.

ಇವರು ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಓದಿ ಎಂ.ಬಿ.ಬಿ.ಎಸ್. ಪದವಿಯನ್ನು ಎಂಟನೆಯ ಸ್ಥಾನದೊಂದಿಗೆ ಪಡೆದರು (1973). ಇವರ ಪ್ರಥಮ ಆರೋಗ್ಯ ಲೇಖನ ಪ್ರಜಾಮತ ವಾರ ಪತ್ರಿಕೆಯಲ್ಲಿ ಪ್ರಕಟವಾಯಿತು. ಹೆಸರಾಂತ ವೈದ್ಯ ಹಾಗೂ ಲೇಖಕ ಡಿ.ಎಸ್. ಶಿವಪ್ಪನವರ ಪ್ರೋತ್ಸಾಹ ಹಾಗೂ ಮಾರ್ಗದರ್ಶನದಿಂದ ಇವರು ಸಾಹಿತ್ಯಾಸಕ್ತಿ ಬೆಳೆಸಿಕೊಂಡರು. ಬೆಂಗಳೂರಿನ ಮಾನಸಿಕ (ನಿಮ್ಹಾನ್ಸ್) ಆಸ್ಪತ್ರೆಯಲ್ಲಿ ಆನರರಿ ಸೀನಿಯರ್ ರೆಸಿಡೆಂಟ್ ವೈದ್ಯರಾಗಿ ನೇಮಕಗೊಂಡರು (1974). ಅನಂತರ ಇಲ್ಲಿಯೇ ಡಿ.ಪಿ.ಎಂ. ಪದವಿಗೆ ತರಬೇತಿ ಪಡೆದರು (1975). ಅನಂತರ ಐ.ಸಿ.ಎಂ.ಆರ್.ನಲ್ಲಿ ಸಂಶೋಧನ ಸಹಾಯಕರಾಗಿ ನೇಮಕವಾದರು (1977). ನಿಮ್ಹಾನ್ಸ್‌ನ ಮನೋವೈದ್ಯಕೀಯ ವಿಭಾಗದಲ್ಲಿ ಎಂ.ಡಿ. ಪದವಿ ಪಡೆದರು (1979). ಅನಂತರ ಅಲ್ಲಿಯೇ ಮನೋವೈದ್ಯಕೀಯ ವಿಭಾಗದಲ್ಲಿ ವೈದ್ಯಾಧಿಕಾರಿ, ಉಪನ್ಯಾಸಕ, ಸಹಾಯಕ ಪ್ರಾಧ್ಯಾಪಕ ಮುಂತಾಗಿ ನಾನಾ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. 1994ರಿಂದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉದ್ಯೋಗದ ಜೊತೆಗೆ ಇವರು ಅನೇಕ ಸಮುದಾಯ ಪರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಹೀಗಿವೆ: ಸಮುದಾಯ ಮಾನಸಿಕ ಆರೋಗ್ಯ ಘಟಕಗಳಲ್ಲಿ ರೋಗಿಗಳ ಆರೈಕೆ, ಸರ್ವೇಕ್ಷಣೆ, ಸಂಶೋಧನೆ ಮತ್ತು ಶಿಕ್ಷಣ; ವೈದ್ಯಾಧಿಕಾರಿಗಳಿಗೆ ತರಬೇತಿ, ಉಪನ್ಯಾಸ, ಪ್ರಾತ್ಯಕ್ಷಿಕೆ. ಇದಲ್ಲದೇ ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಉಪಾಧ್ಯಾಯರು ಮತ್ತು ಗ್ರಾಮೀಣ ಮುಖಂಡರಿಗೂ ತರಬೇತಿ ನೀಡಿದ್ದಾರೆ. 1982ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಆರೋಗ್ಯ ಕಾರ್ಯಕ್ರಮ ರೂಪಿಸಲು ಭಾರತದ ಹಲವು ರಾಜ್ಯಗಳಲ್ಲಿ ಅನೇಕ ತರಬೇತಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.



ಅವಿರತವಾಗಿ ನಿಮ್ಹಾನ್ಸ್ ಮನೋವೈದ್ಯ ವಿಭಾಗದಲ್ಲಿ ವಯಸ್ಕರ ವಿಭಾಗದಲ್ಲಿ 1990ರಿಂದ ಮಾನಸಿಕ ಆರೋಗ್ಯ ಕಾರ್ಯಕ್ರಮಗಳ ನಿರ್ವಹಣೆಯ ಬಗ್ಗೆ ತಜ್ಞ ವೈದ್ಯಾಧಿಕಾರಿಯಾಗಿ, ಆಡಳಿತಾಧಿಕಾರಿಯಾಗಿ

ಕಾರ್ಯಕ್ರಮ ನಿರ್ವಾಹಕರಿಗೆ ತರಬೇತಿ ನೀಡಿದ್ದಾರೆ. ಇದಲ್ಲದೆ ಕಾಲೇಜು ಶಿಕ್ಷಕರಿಗೆ ಆಪ್ತ ಸಲಹೆ ಸಮಾಧಾನ ನೀಡುವ ಕಾರ್ಯಕ್ರಮವನ್ನೂ ನಿರ್ವಹಿಸಿದ್ದಾರೆ.

ಇವರು ಕೈಗೊಂಡಿರುವ ಸಂಶೋಧನ ವಿಷಯಗಳು ಹಲವು. ಅವುಗಳಲ್ಲಿ ಮುಖ್ಯವಾದವು: ಶೃಂಗೇರಿ ಸಮೀಪ ತ್ಯಾವಣ ಶಾಲೆಯಲ್ಲಿ ಮಕ್ಕಳ ಮೇಲೆ ಭೂತಗಣಗಳು ಬಂದು ಕಾಡಿಸುತ್ತವೆ ಎಂಬ ಸಮಸ್ಯೆಯ ಮನೋವೈಜ್ಞಾನಿಕ ಅಧ್ಯಯನ; ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ ನಡೆಯುತ್ತಿದೆ ಎನ್ನಲಾದ ಬಾನಾಮತಿ ಪ್ರಕರಣಗಳ ಅಧ್ಯಯನ; ಪಾಂಡಿಚೇರಿಯ ಬಳಿ ಗ್ರಾಮವೊಂದರಲ್ಲಿ ಶಾಲಾ ಮಕ್ಕಳ ಮೇಲೆ ಕೋಪಗೊಂಡ ಗ್ರಾಮದೇವತೆಯ ಮೂಲಕ ದೆವ್ವ ಬರುತ್ತದೆ ಎಂಬ ಪ್ರಕರಣದ ಸತ್ಯಾಸತ್ಯತೆಯ ಅಧ್ಯಯನ (1984).

ಹಲವಾರು ಮಾನಸಿಕ ಸಮಸ್ಯೆಗಳ ಅಧ್ಯಯನಗಳನ್ನೂ ಸರ್ವೇಕ್ಷಣೆಗಳನ್ನೂ ನಡೆಸಿರುವ ಇವರು ವಿಶ್ವ ಆರೋಗ್ಯ ಸಂಸ್ಥೆಯ ಅಂತಾರಾಷ್ಟ್ರೀಯ ಕಾರ್ಯಕ್ರಮದಲ್ಲೂ ಪಾಲ್ಗೊಂಡಿದ್ದಾರೆ. ಶಾರೀರಿಕ ನೋವು ಮುಂತಾದ ತೊಂದರೆಗಳು ಇರುವ ಸೊಮಟೋ ಫಾರಂ ಡಿಸಾರ್ಡರ್ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯ ಅಂತಾರಾಷ್ಟ್ರೀಯ ಅಧ್ಯಯನದಲ್ಲಿ ಭಾಗವಹಿಸಿದ್ದರು. ಬೆಂಗಳೂರಿನಲ್ಲಿ ಇಂತಹ 300 ರೋಗಿಗಳ ವಿವರವಾದ ಅಧ್ಯಯನವನ್ನು ನಡೆಸಿದ್ದಾರೆ.

ಇವರು ವೈದ್ಯಕೀಯ ಮನೋವಿಜ್ಞಾನದ ಲೇಖಕರಾಗಿಯೂ ಪ್ರಸಿದ್ಧರಾಗಿದ್ದಾರೆ. ಕನ್ನಡದಲ್ಲಿ 120ಕ್ಕೂ ಹೆಚ್ಚು ಮನೋವೈಜ್ಞಾನಿಕ ಪುಸ್ತಕಗಳನ್ನೂ ಆಂಗ್ಲಭಾಷೆಯಲ್ಲಿ 20 ಪುಸ್ತಕಗಳನ್ನೂ ರಚಿಸಿದ್ದಾರೆ. ಐದು ಮನೋವೈಜ್ಞಾನಿಕ ಕಾದಂಬರಿಗಳನ್ನೂ ನಾಲ್ಕು ನಾಟಕಗಳನ್ನೂ ಬರೆದಿದ್ದಾರೆ. ಇವರ ಪುಸ್ತಕಗಳು ತೆಲುಗು ಮತ್ತು ಗುಜರಾತಿ ಭಾಷೆಗೆ ಭಾಷಾಂತರಗೊಂಡಿವೆ. ಇವರು ಬರೆದಿರುವ ಪುಸ್ತಕಗಳು ಸಾಮಾನ್ಯ ಆರೋಗ್ಯ, ಲೈಂಗಿಕ ವಿಜ್ಞಾನ, ಏಡ್ಸ್ ವೈಚಾರಿಕತೆ ಮುಂತಾಗಿ ಅನೇಕ ಉಪಯುಕ್ತ ವಿಷಯಗಳನ್ನೊಳಗೊಂಡಿವೆ. ಇವರು ದೇಶೀಯ ಹಾಗೂ ಅಂತಾರಾಷ್ಟ್ರೀಯ ವೈಜ್ಞಾನಿಕ ನಿಯತಕಾಲಿಕೆಗಳು ಹಾಗೂ ಪತ್ರಿಕೆಗಳಲ್ಲಿ ಬರೆದಿರುವ ಲೇಖನಗಳ ಸಂಖ್ಯೆ 700ಕ್ಕೂ ಹೆಚ್ಚು. ಹಲವು ದೇಶಗಳಲ್ಲಿ ನಡೆದ ಅನೇಕ ಅಂತಾರಾಷ್ಟ್ರೀಯ ವಿಚಾರಗೋಷ್ಠಿ ಮತ್ತು ಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

ಇವರ ಸಾಧನೆ, ಸಾಮಾಜಿಕ ಸೇವೆ ಮತ್ತು ಸಾಹಿತ್ಯಕ ರಚನೆಗಳಿಗೆ ಅನೇಕ ಪ್ರಶಸ್ತಿ ಬಹುಮಾನಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದುವು: ಕನ್ನಡ ವಾರಪತ್ರಿಕೆ ಸುಧಾ ಏರ್ಪಡಿಸಿದ್ದ ಕಾದಂಬರಿ ಸ್ಪರ್ಧೆಯಲ್ಲಿ ಮನೆ-ಮನಸ್ಸು ಕೃತಿಗೆ ವಿಶೇಷ ಬಹುಮಾನ (1982), ಬುದ್ಧಿಮಾಂದ್ಯತೆ ಪುಸ್ತಕಕ್ಕೆ ಭಾರತೀಯ ಮನೋವೈದ್ಯ ಸಂಘದ (ಕರ್ನಾಟಕ ಶಾಖೆ) ಎಸ್.ಎಸ್. ಜಯರಾಂ ಪ್ರಶಸ್ತಿ (1983), ಬಾನಾಮತಿ ಪುಸ್ತಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಎಚ್.ನರಸಿಂಹಯ್ಯನವರ ದತ್ತಿ ಬಹುಮಾನ (1983) – ಇವುಗಳನ್ನು ಹೆಸರಿಸಬಹುದು. ದಾವಣಗೆರೆಯಲ್ಲಿ ಕನ್ನಡ ವೈದ್ಯ ಸಾಹಿತ್ಯ ಪರಿಷತ್ತಿನ 4ನೆಯ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಲಾಯಿತು (1998). (ಎಸ್‌ಯು.ಎಂ.)

**ಚಂದ್ರಸಾಗರವರ್ಣಿ :** ಸು.1810; ಜೈನಕವಿ. ತುಮಕೂರು ಜಿಲ್ಲೆ ತೋವಿನಕೆರೆ ಈತನ ಜನ್ಮಸ್ಥಳ. ಅಜ್ಜ ಚಂದ್ರನಾಥ, ತಂದೆ ಚಂದಣ್ಣ, ತಾಯಿ ಪೊಂಬೂಜಿಯಮ್ಮ. ಈತನಿಗೆ ಚಂದ್ರನಾಥ, ಗುಟ್ಟಬ್ರಹ್ಮ, ಪದ್ಮಮ್ಮಣ್ಣ ಎಂಬ ಮೂವರು ಸಹೋದರರು ಇದ್ದಂತೆ ತಿಳಿದುಬರುತ್ತದೆ. ಲಕ್ಷ್ಮೀಸೇನ ಈತನ ಗುರು. ಕವಿಯ ಪೂರ್ವಾಶ್ರಮದ ಹೆಸರು ಬ್ರಹ್ಮ, ಬ್ರಹ್ಮಣಾಂಕ ಎಂದಿತ್ತು. ಜೈನದೀಕ್ಷೆ ಪಡೆದ ಮೇಲೆ ಚಂದ್ರಸಾಗರವರ್ಣಿಯಾದ. ಕದಂಬ ಪುರಾಣ, ಚಂದನೆಯ ಕಥೆ, ಜಿನಭಕ್ತಿಸಾರ, ಜಿನಮುನಿ, ಪರಶುರಾಮ ಭಾರತ, ಪುರಾಣ ಸ್ತೋತ್ರ, ಬೆಟ್ಟವರ್ಧನ ಚರಿತ್ರೆ, ಬ್ರಹ್ಮಶತಕೋಶ, ಭವ್ಯಾಮೃತ, ಮುಲ್ಲಾಶಾಸ್ತ್ರ, ಜಿನರಾಮಾಯಣ, ರುದ್ರಯಕ್ಷಗಾನ, ವಾಸುದೇವ ಪಾರಿಜಾತ, ಶಬ್ದಾರ್ಥ ಮಂಜರಿ, ಸ್ಮರಕೊರವಂಜಿ, ಹಿಮಶೀತಳನ ಕಥೆ, ಬಿಜ್ಜಳರಾಯ ಪುರಾಣ- ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಸ್ಮರ ಕೊರವಂಜಿ, ಬ್ರಹ್ಮಶತಕೋಶ, ರುದ್ರಯಕ್ಷಗಾನ ಎಂಬ ಕೃತಿಗಳು ಉಪಲಬ್ಧವಿಲ್ಲ. ಪರಶುರಾಮ ಭಾರತವನ್ನು 1810ರಲ್ಲೂ ಜಿನಮುನಿಯನ್ನು 1814ರಲ್ಲೂ ಬರೆದಂತೆ ಕವಿ ಹೇಳಿಕೊಂಡಿದ್ದಾನೆ.

ಪುರಾಣಸ್ತೋತ್ರ ಹಾಗೂ ಜಿನಮುನಿ ವಾರ್ಧಕ ಷಟ್ಪದಿಯಲ್ಲಿವೆ. ಜಿನಮುನಿಯಲ್ಲಿ 50 ಸಂಧಿಗಳೂ 2551 ಪದ್ಯಗಳೂ ಇವೆ. ಪಂಚಮಿಯ ಉಪವಾಸ ಮಹಿಮೆಯಿಂದ ನಾಗದತ್ತ ಸ್ವರ್ಗದಲ್ಲಿ ನಾಗಕುಮಾರನಾಗಿ ಜನ್ಮಹೊಂದಿ ಸಕಲ ವೈಭೋಗಗಳನ್ನು ಅನುಭವಿಸಿ ಅಪವರ್ಗ ಸುಖವನ್ನು ಪಡೆದುದು ಇದರ ವಸ್ತು. ಮುಲ್ಲಾಶಾಸ್ತ್ರ ಭಾಮಿನೀಷಟ್ಪದಿಯಲ್ಲಿದೆ. ಇದರಲ್ಲಿ 8 ಆಶ್ವಾಸಗಳೂ 400 ಪದ್ಯಗಳೂ ಇವೆ. ಈ ಗ್ರಂಥವನ್ನು ತೋವಿನಕೆರೆಯ ಬಸದಿಯಲ್ಲಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಇಂದ್ರನು ಗೌತಮನೆಂಬ ಬ್ರಾಹ್ಮಣನಿಗೆ ಗಣಧರ ಪದವಿಯನ್ನು ಕೊಡಲು, ಕುಪಿತನಾದ ಪಾರ್ಶ್ವನಾಥ ಮುಲ್ಲಾಶಾಸ್ತ್ರವನ್ನು ಪ್ರಚಾರಮಾಡಿದುದು ಇದರ ವಸ್ತು. ಈ ಕೃತಿ ಮಹಮ್ಮದೀಯ ಧರ್ಮದ ಬಗ್ಗೆ ವಿವರಗಳನ್ನು ತನ್ನದೇ ಆದ ರೀತಿಯಲ್ಲಿ ಕೊಟ್ಟು ವಸ್ತುವಿನ ದೃಷ್ಟಿಯಿಂದ ವಿಶಿಷ್ಟವಾಗಿ ನಿಲ್ಲುತ್ತದೆ. ಕದಂಬ ಪುರಾಣದಲ್ಲಿ ಭಾಮಿನೀಷಟ್ಪದಿಯ 199 ಪದ್ಯಗಳಿವೆ. ಕೆಲವು ಸಾಂಗತ್ಯಗಳೂ ಇವೆ. ಹಿಮಶೀತಳನ ಕಥೆ ಸಾಂಗತ್ಯದಲ್ಲಿದ್ದು, ಇದರಲ್ಲಿ 87 ಪದ್ಯಗಳಿವೆ. ಈ ಕಾವ್ಯಕ್ಕೆ ಅಕಳಂಕ ಚರಿತೆ ಎಂಬ ಹೆಸರೂ ಇದೆ. ಅಕಳಂಕನೆಂಬ ಗುರು ಬೌದ್ಧರನ್ನು ಹಿಮಶೀತಳನ ಸಭೆಯಲ್ಲಿ ವಾದದಲ್ಲಿ ಸೋಲಿಸಿ ಸಿಂಹಳ ದ್ವೀಪಕ್ಕೆ ಕಳಿಸಿದುದು ಇಲ್ಲಿಯ ವಸ್ತು. ಪರಶುರಾಮ ಭಾರತ 24 ಅಧ್ಯಾಯ, 1369 ಪದ್ಯಗಳನ್ನು ಒಳಗೊಂಡಿದ್ದು ಭಾಮಿನೀಷಟ್ಪದಿಯಲ್ಲಿದೆ. ಜೈನ ಗ್ರಂಥಕ್ಕನುಸಾರವಾಗಿ ರಾಮಾಯಣವನ್ನು ಹೇಳುವ ಜಿನರಾಮಾಯಣ 86 ಆಶ್ವಾಸ ಹಾಗೂ 5021 ಭಾಮಿನೀಷಟ್ಪದಿಗಳನ್ನುಳ್ಳ ಕಾವ್ಯ. ಚಂದನೆಯ ಕಥೆ ಒಂದು ಯಕ್ಷಗಾನ. ಈತನ ಕೃತಿಗಳನ್ನು ಓದಿದಾಗ ಈತ ಪ್ರತಿಭಾವಂತನೆಂದೂ ಸಮಕಾಲೀನ ಪ್ರಜ್ಞೆಯುಳ್ಳವನೆಂದೂ ತಿಳಿಯುತ್ತದೆ. ಭಾಷೆಯ ದೃಷ್ಟಿಯಿಂದ ವಿಶಿಷ್ಟವಾದ ವಸ್ತು, ವೈವಿಧ್ಯವುಳ್ಳ ಕೃತಿಗಳನ್ನು ಈತ ನೀಡಿದ್ದಾನೆ. (ಜಿ.ಜಿ.ಎಂ.)

**ಚಂದ್ರಾದಿತ್ಯ :** ಬಾದಾಮಿ ಚಳುಕ್ಯ ವಂಶದ ರಾಜಕುಮಾರ. ಇಮ್ಮಡಿ ಪುಲಕೇಶಿಯ (610-42) ಹಿರಿಯ ಮಗ. ಈತ ಮಹಾರಾಜ ಮತ್ತು ಪೃಥ್ವೀವಲ್ಲಭ ಎಂಬ ಬಿರುದುಗಳನ್ನು ಧರಿಸಿದ್ದ. ಈತನೂ ಇವನ ಅರಸಿ ವಿಜಯ ಭಟ್ಟಾರಿಕಾ ರತ್ನಗಿರಿ ಜಿಲ್ಲೆಯ ಸಾವಂತವಾಡಿಯಲ್ಲಿ ಇದ್ದುಕೊಂಡು, ಕೊಂಕಣ ಭಾಗದ ವಿಷಯವನ್ನು ಏಳನೆಯ ಶತಮಾನದ ನಡುವಿನಲ್ಲಿ, ಚಳುಕ್ಯ ಸಾಮಂತರಾಗಿ ಆಳುತ್ತಿದ್ದರು. ವಿಜಯ ಭಟ್ಟಾರಿಕಾ (ವಿಜ್ಜಿಕೆ) ಪ್ರಸಿದ್ಧ ಸಂಸ್ಕೃತ ಕವಯಿತ್ರಿಯೂ ಆಗಿದ್ದಳು. ಚಂದ್ರಾದಿತ್ಯನಿಗೆ ಆದಿತ್ಯವರ್ಮ, ವಿಕ್ರಮಾದಿತ್ಯ ಮತ್ತು ಧರಾಶ್ರಯ ಜಯಸಿಂಹ ಎಂಬ ತಮ್ಮಂದಿರು ಇದ್ದರು. ಅಂಬೇರಾ ಎನ್ನುವವಳು ತಂಗಿ. ಇಮ್ಮಡಿ ಪುಲಕೇಶಿಯ ಅನಂತರ ಚಂದ್ರಾದಿತ್ಯ ಪಟ್ಟಕ್ಕೆ ಬರದೆ, ಇವನ ತಮ್ಮ ವಿಕ್ರಮಾದಿತ್ಯ ಪಟ್ಟಕೆ ಬಂದಂತೆ ತೋರುವುದರಿಂದ, ಚಂದ್ರಾದಿತ್ಯ ಎಷ್ಟು ಕಾಲ ಬದುಕಿದ್ದನೆಂದು ತಿಳಿಯದು. (ಪಿ.ಕೆ.ಎನ್.)

**ಚಂದ್ರೇಗೌಡ, ಡಿ.ಬಿ. :** 1936-. ವಿಧಾನ ಸಭೆಯ ಮಾಜಿ ಸಭಾಪತಿ, ಕರ್ನಾಟಕ ರಾಜ್ಯದ ಮಾಜಿ ಸಚಿವ, ವಿರೋಧ ಪಕ್ಷದ ನಾಯಕ, ಲೋಕಸಭಾ ಸದಸ್ಯರೂ ಆಗಿದ್ದವರು.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿ ಗ್ರಾಮದಲ್ಲಿ 1936 ಆಗಸ್ಟ್ 26ರಂದು ಜನಿಸಿದರು. ತಂದೆ ಡಿ.ಎ. ಬೈರೇಗೌಡ, ತಾಯಿ ಪುಟ್ಟಮ್ಮ. ಬಿ.ಎಸ್‌ಸಿ. ಪದವಿ, ಕಾನೂನು ಪದವಿ ಪಡೆದ ಅನಂತರ ವಕೀಲ ವೃತ್ತಿಯನ್ನು ಕೈಗೊಂಡರು. ಸ್ವಾತಂತ್ರ್ಯ ಹೋರಾಟದಿಂದ ಪ್ರಭಾವಿತರಾದ ಚಂದ್ರೇಗೌಡರು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ತಳೆದು ಸಾರ್ವಜನಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ದೆಸೆಯಿಂದಲೂ ತಮ್ಮನ್ನು ತೊಡಗಿಸಿಕೊಂಡಿದ್ದರು.

ಗೌಡರು ಪ್ರಜಾ ಸಮಾಜವಾದಿ ಪಕ್ಷದ ಮೂಲಕ ರಾಜಕೀಯ ರಂಗ ಪ್ರವೇಶಿಸಿದರು. ಅನಂತರ ಆಡಳಿತ ಕಾಂಗ್ರೆಸ್ ಪಕ್ಷಕ್ಕೆ ಸೇರಿ

1971ರಲ್ಲಿ ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭಾ ಸದಸ್ಯರಾದರು. 1973ರಲ್ಲಿ ರಾಜ್ಯ ಯುವ ಕಾಂಗ್ರೆಸ್‍ನ ಅಧ್ಯಕ್ಷರಾದರು. 1977ರ ಲೋಕಸಭಾ ಚುನಾವಣೆಯಲ್ಲಿ ಅದೇ ಕ್ಷೇತ್ರದಿಂದ ಮರು ಆಯ್ಕೆಗೊಂಡರು. 1978ರಲ್ಲಿ ಪಕ್ಷದ ಆದೇಶದಂತೆ ಶ್ರೀಮತಿ ಇಂದಿರಾ ಗಾಂಧಿಯವರಿಗಾಗಿ ತಮ್ಮ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಅದೇ ವರ್ಷ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾದರು. ಅನಂತರ ಡಿ.ದೇವರಾಜ ಅರಸು ಸಂಪುಟದಲ್ಲಿ ಸಣ್ಣ ನೀರಾವರಿ ಸಚಿವರಾದರು (1979). ಡಿ.ದೇವರಾಜ ಅರಸು ಅವರು ಕಾಂಗ್ರೆಸ್‍ನಿಂದ ದೂರವಾಗಿ ಕರ್ನಾಟಕ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿದಾಗ ಚಂದ್ರೇಗೌಡರು ಆ ಪಕ್ಷಕ್ಕೆ ಸೇರಿದರು. ತರುವಾಯ ಮೇಲ್ಮನೆಯ ವಿರೋಧ ಪಕ್ಷದ ನಾಯಕರಾದರು.

1980ರ ದಶಕದ ಪ್ರಾರಂಭದಲ್ಲಿ ನಡೆದ ರೈತ ಹೋರಾಟದಲ್ಲೂ ನರಗುಂದದಿಂದ ಬೆಂಗಳೂರಿಗೆ ನಡೆದ ರೈತ ಜಾಥಾದಲ್ಲೂ ಇವರು ಸಕ್ರಿಯವಾಗಿ ಭಾಗವಹಿಸಿದರು. 1983ರ ವಿಧಾನಸಭಾ ಚುನಾವಣೆಯಲ್ಲಿ ಜನತಾರಂಗ ಒಕ್ಕೂಟದ ಮೂಲಕ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾದರು. ರಾಮಕೃಷ್ಣಹೆಗಡೆಯವರ ಸರ್ಕಾರದಲ್ಲಿ ವಿಧಾನಸಭಾಪತಿಯಾದರು. ಈ ವಿಧಾನ ಸಭೆಯಲ್ಲಿ ಆಳುವ ಪಕ್ಷ ಸ್ವಶಕ್ತಿಯಿಂದ ಸಮಗ್ರ ಬಹುಮತ ಹೊಂದಿರದಿದ್ದುದರಿಂದ ಸಭೆಯ ಕಲಾಪ ನಿರ್ವಹಣೆ ಒಂದು ಸವಾಲಿನ ಕೆಲಸವೇ ಆಗಿತ್ತು. ಎರಡು ವರ್ಷಗಳ ಕಾಲ ಸಭೆಯನ್ನು ಯಶಸ್ವಿಯಾಗಿ ನಿರ್ವಹಿಸಿ ದಕ್ಷ ಸಭಾಪತಿಗಳಲ್ಲಿ ಒಬ್ಬರೆನಿಸಿದರು.

1985ರಲ್ಲಿ ವಿಧಾನಸಭೆಗೆ ನಡೆದ ಮಧ್ಯಕಾಲೀನ ಚುನಾವಣೆಯಲ್ಲಿ ಇವರು ಸೋಲನ್ನನುಭವಿಸಿದರು. ಆದರೆ ಇವರ ಪಕ್ಷ ಅಧಿಕಾರಕ್ಕೆ ಬಂದಿದ್ದರಿಂದ ಇವರು ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರಾದರು. ಅನಂತರ ರಾಜ್ಯಸಭಾ ಸದಸ್ಯರಾದರು. 1989ರ ಚುನಾವಣೆಯಲ್ಲಿ ಮತ್ತೆ ತೀರ್ಥಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನ ಸಭೆಗೆ ಚುನಾಯಿತರಾದರು. ಆಗ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂತು. ಇವರು ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದರು. ರಾಜ್ಯ ಜನತಾದಳದ ಕಾರ್ಯಭಾರಿ ಅಧ್ಯಕ್ಷರೂ ಆಗಿದ್ದರು. ಮುಂದೆ ಜನತಾದಳವನ್ನು ತೊರೆದು ಕಾಂಗ್ರೆಸ್ ಪಕ್ಷ ಸೇರಿದರು.

1999ರ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರು. ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು. ಇವರಿಗೆ ಉತ್ತಮ ವಾಗ್ಮಿ ಮತ್ತು ಬುದ್ಧಿಜೀವಿ ರಾಜಕಾರಣಿ ಎಂಬ ಹೆಸರಿದೆ. (ಡಿ.ಎಸ್.ಜೆ.)

**ಚಂದ್ರೋಬ್ಬಲಬ್ಬೆ :** ಗಂಗವಂಶದ ದೊರೆ ನೀತಿಮಾರ್ಗ ಎರೆಗಂಗನ (843-70) ಮಗ ಬೂತುಗನ ರಾಣಿ ; ರಾಷ್ಟ್ರಕೂಟ ದೊರೆ ಅಮೋಘವರ್ಷನ ಮಗಳು.ನೀತಿಮಾರ್ಗ ಎರೆಗಂಗನಿಗೆ ಹಿಂದೆ ಗಂಗರಾಜ್ಯವನ್ನು ರಾಚಮಲ್ಲ ಆಳುತ್ತಿದ್ದಾಗ ರಾಷ್ಟ್ರಕೂಟರ ಸೇನಾನಿ ಬಂಕೇಶ ಗಂಗ ರಾಜ್ಯದ ಒಂದು ಭಾಗವನ್ನು ಆಕ್ರಮಿಸಿದ್ದ. ಈ ಭಾಗವನ್ನು ಪುನಃ ವಶಪಡಿಸಿಕೊಳ್ಳುವುದರಲ್ಲಿ ರಾಚಮಲ್ಲ ಜಯಪ್ರದನಾಗಲಿಲ್ಲ. ನೀತಿಮಾರ್ಗ ಎರೆಗಂಗ ರಾಜಾರಾಮುಡು ಎಂಬ ಸ್ಥಳದಲ್ಲಿ ಬಂಕೇಶನೊಡನೆ ನಡೆಸಿದ ಕದನ ನಿರ್ಣಾಯಕವಾಗಲಿಲ್ಲ. ಗಂಗರನ್ನು ಅಡಗಿಸಲು ಸಾಧ್ಯವಿಲ್ಲವೆಂಬುದನ್ನು ಅರಿತ ರಾಷ್ಟ್ರಕೂಟ ದೊರೆ ಅಮೋಘವರ್ಷ ಚಂದ್ರೋಬ್ಬಲಬ್ಬೆಯನ್ನು ಗಂಗರಾಜಕುಮಾರ ಬೂತುಗನಿಗೆ ವಿವಾಹ ಮಾಡಿಕೊಟ್ಟು ಗಂಗರೊಂದಿಗೆ ಸಂಬಂಧ ಬೆಳೆಸಿದ. ಚಂದ್ರೋಬ್ಬಲಬ್ಬೆ ಅತ್ಯಂತ ಸುಂದರಿಯೂ ಗುಣವತಿಯೂ ಆಗಿದ್ದಳೆಂದೂ ನಾಟ್ಯಕಲೆಯಲ್ಲಿ ವಿಶೇಷ ಪರಿಶ್ರಮ ಪಡೆದಿದ್ದಳೆಂದೂ ಶಾಸನಗಳು ತಿಳಿಸುತ್ತವೆ.ಗಂಗರಾಜ ಎರೆಗಂಗ (886-920) ಚಂದ್ರೋಬ್ಬಲಬ್ಬೆಯ ಮಗ. *

**ಚಕ್ರನದಿ :** ಉಡುಪಿ ಜಿಲ್ಲೆಯ ಒಂದು ನದಿ. ಪಶ್ಚಿಮ ಘಟ್ಟಗಳಿಗೆ ಸೇರಿದ ಕುಟಚಾದ್ರಿ ಕೊಡಚಾದ್ರಿ ಶಿಖರದ ಸಮೀಪದಲ್ಲಿ ಇದರ ಉಗಮ. ಕೊಲ್ಲೂರು ಅಥವಾ ಸೌಪರ್ಣಿಕಾ ನದಿಯೂ ಈ ಸ್ಥಳದಲ್ಲಿಯೇ ಉಗಮಿಸುವುದು. ಚಕ್ರನದಿಯ ಮೂಲದ ಬುಗ್ಗೆಯಲ್ಲಿ ನೀರು ಚಕ್ರಾಕಾರವಾಗಿ ಸುತ್ತುತ್ತಿರುವುದರಿಂದ ನದಿಗೆ ಈ ಹೆಸರು ಬಂತೆಂದು ಪ್ರತೀತಿ. ಒಮ್ಮೆ ಈ ಮಾರ್ಗವಾಗಿ ಸೀತಾರಾಮಲಕ್ಷ್ಮಣರು ಬರುತ್ತಿದ್ದಾಗ ಸೀತೆಗೆ ಬಾಯಾರಿಕೆಯಾದ್ದರಿಂದ ರಾಮ ತನ್ನ ಕೋದಂಡದ ಒಂದು ತುದಿಯನ್ನು ನೆಲದ ಮೇಲೆ ಒತ್ತಿ ನೀರು ಚಿಮ್ಮುವಂತೆ ಮಾಡಿದನೆಂದು ಐತಿಹ್ಯ.

ಪಶ್ಚಿಮ ಘಟ್ಟದಲ್ಲಿ ಹುಟ್ಟುವ ಈ ನದಿ ಕುಂದಾಪುರ ತಾಲ್ಲೂಕಿನ ಭಾಗದಲ್ಲಿ ಸು.45ಕಿಮೀ ದೂರ ಪಶ್ಚಿಮಾಭಿಮುಖವಾಗಿ ಹರಿದು ಗಂಗೊಳ್ಳಿಯ ಉತ್ತರ ಭಾಗದಲ್ಲಿ ಕೊಲ್ಲೂರು ನದಿಯನ್ನು ಸೇರುತ್ತದೆ. ನದಿ ಮಾರ್ಗ ಏರುತಗ್ಗುಗಳಿಂದ ಕೂಡಿದ್ದು ಮಳೆಗಾಲದಲ್ಲಿ ನೀರಿನ ರಭಸ ಹೆಚ್ಚಾಗಿರುತ್ತದೆ. ನದಿಯ ಇಕ್ಕಡೆಗಳಲ್ಲೂ ಫಲವತ್ತಾದ ಬಯಲುಗಳಿವೆ. ಹಳ್ಳಿಹೊಳೆ, ಉಪ್ಪಾರು ಮತ್ತು ಬಾಚ್ಯ ಮೊದಲಾದ ಊರುಗಳಿಗೆ ಈ ನದಿ ನೀರುಣಿಸುತ್ತದೆ. ನದಿಗೆ ಹದಿನೈದು ಕಡೆ ಸಣ್ಣ ಕಟ್ಟೆಗಳನ್ನು ಕಟ್ಟಿ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ. (ಟಿ.ಪಿ.ಎಸ್.ಆರ್.)

**ಚಚಡಿ :** ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಒಂದು ಊರು. ಬೈಲಹೊಂಗಲದಿಂದ 18ಕಿಮೀ ದೂರದಲ್ಲಿದೆ. ಮೊದಲು ಇದು ಪರಸಗಡ ತಾಲ್ಲೂಕಿಗೆ ಸೇರಿದ್ದ ಸ್ಥಳವಾಗಿತ್ತು. ಈ ಊರಿನ ಪ್ರಾಚೀನತೆಯನ್ನು ಹೇಳುವ ಹಲವಾರು ದಾಖಲೆಗಳು ಲಭ್ಯವಾಗಿವೆ. 1202ರ ರಟ್ಟ ಅರಸ ಕಾರ್ತವೀರ್ಯನ ಕಾಲದ ಶಾಸನ ತಿಳಿಸುವಂತೆ ಈ ಊರ ಹೆಸರು 'ಚಚ್ಚಕಿ'. ಇದೊಂದು ಮಹಾ ಅಗ್ರಹಾರವಾಗಿತ್ತು. ಇಲ್ಲಿ ಚಾಳುಕ್ಯೋತ್ತರ ವಾಸ್ತುಶೈಲಿಯಲ್ಲಿ ನಿರ್ಮಾಣವಾದ ವಿಶಾಲವಾದ ಸಂಗಮೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ನವರಂಗ, ನಂದಿಮಂಟಪಗಳಿವೆ. ನವರಂಗದ ಮರದ ಬಾಗಿಲಿನಿಂದ ನಂದಿಮಂಟಪಕ್ಕೆ ಹೋಗಲು ದಾರಿ ಇದೆ. ನವರಂಗದಲ್ಲಿ ಒಂದು ಶಾಸನವಿದೆ. ಮೊಗಸಾಲೆಯ ಹೊರಭಾಗದಲ್ಲಿ ವಿಷ್ಣು, ದುರ್ಗಾ, ಶಿವ ಮುಂತಾದ ದೇವತೆಗಳ ಚಿತ್ರಗಳನ್ನು ಕೆತ್ತಲಾಗಿದೆ. ಹಿಂಬದಿಯ ಗೋಡೆಯ ಮೇಲೆ ಸುಂದರ ಕೆತ್ತನೆಗಳಿವೆ. ಗುಡಿಯ ಹಿಂಭಾಗದಲ್ಲಿ ಭಗ್ನಗೊಂಡ ಎರಡು ವೀರಗಲ್ಲುಗಳಿವೆ. ರಟ್ಟ ಕಾರ್ತವೀರ್ಯನು ವೇಣುಗ್ರಾಮವನ್ನು ಆಳುತ್ತಿದ್ದಾಗ ಊರೊಡೆಯ ಮಾಮರಸ ಮತ್ತು ಅಗ್ರಹಾರದ ಮಹಾಜನರು ದೇವಾಲಯಕ್ಕಾಗಿ ನಿವೇಶನವನ್ನು ದಾನ ನೀಡಿದ ವಿಷಯ 1202ರ ಶಾಸನದಿಂದ ತಿಳಿದುಬರುತ್ತವೆ. ಸಂಗಮೇಶ್ವರ ದೇವರ ಜಾತ್ರೆ ಕೊನೆಯ ಶ್ರಾವಣ ಸೋಮವಾರದಂದು ಜರುಗುತ್ತದೆ. ಸಂಗಮೇಶ್ವರ ಗುಡಿಯ ಎದುರು ಶಿವಲಿಂಗವುಳ್ಳ ಗುಡಿ ಇದೆ. ಅದಕ್ಕೆ ರಾಮಲಿಂಗವೆಂದು ಕರೆಯುತ್ತಾರೆ. ಇದರ ಪಕ್ಕದಲ್ಲಿಯೇ ಕೋಟೆಯಿಂದ ಆವೃತವಾದ ದೇಸಾಯಿ ಅವರ ವಾಡೆ ಇದೆ. ಒಳಗಡೆ ನಾರಾಯಣಸ್ವಾಮಿ ದೇವಸ್ಥಾನವಿದೆ. ಇದಕ್ಕೆ ತ್ರಿಕೂಟಾಚಲವೆಂದೂ ಕರೆಯುವುದುಂಟು. ಗರ್ಭಗೃಹದ ನಡುವೆ ಶಿವಲಿಂಗವಿದೆ. ಎಡಕ್ಕೆ ಬಲಕ್ಕೆ ಶಿವ, ವಿಷ್ಣು, ಷಣ್ಮುಖರ ಮೂರ್ತಿಗಳಿವೆ. ವಿಶಾಲವಾದ ನವರಂಗದ ಎದುರು ಭಾಗಶಃ ಹೂತುಹೋಗಿರುವ ಒಂದು ಶಾಸನವಿದೆ. ಮಹಾಮಂಡಳೇಶ್ವರ ಕನ್ನಕೈರರಸ ಮತ್ತು ಕೊಂಗಜರಸರು ಕೋಟೆಯೊಳಗಿನ ಭೋಗೀಶ್ವರ ದೇವರಿಗಾಗಿ ನಗರಪ್ರಮುಖನಿಗೆ ಕೆಲವು ಕಾಣಿಕೆಗಳನ್ನು ಕೊಟ್ಟರೆಂದು ತಿಳಿದುಬರುತ್ತದೆ.

ಕೋಟೆಯ ನಾರಾಯಣಸ್ವಾಮಿ ಮೂರ್ತಿಯ ಮೇಲ್ಭಾವಣಿಗೆ ಸೇರಿದಂತೆ ಒಂದು ಶಾಸನವಿದೆ. ಮುದ್ದಯ್ಯನೆಂಬುವವನಿಂದ ಗುಡಿ ನವೀಕರಣವಾದ ವಿಷಯ ಅದರಲ್ಲಿದೆ. ದ್ಯಾಮವ್ವ, ಯಲ್ಲಮ್ಮ, ಬಸವಣ್ಣ ಇಲ್ಲಿನ ಇತರ ಗುಡಿಗಳು. ಬಸದಿ, ಮಸೀದಿ, ದರ್ಗಾಗಳೂ

ಇಲ್ಲಿವೆ. ಅಡಿವಪ್ಪಸ್ವಾಮಿಯ ಮಠ ಇಲ್ಲಿದೆ. ಮಠದ ಹತ್ತಿರ ಲಕ್ಷ್ಮಮ್ಮ ಮತ್ತು ಬನಶಂಕರಿಯ ಚಿಕ್ಕ ಗುಡಿಗಳಿವೆ. ದ್ಯಾಮವ್ವನ ಗುಡಿಯಲ್ಲಿ ಒಂದು ಮೀಟರ್ ಎತ್ತರದ ಚಾಳುಕ್ಯ ಭೈರವನ ಮೂರ್ತಿ ಇದೆ. ಬಕ್ರೀದ್ ಸಮಯದಲ್ಲಿ ದಿಲಾರ್ ಪೀರ್ ದರ್ಗಾದ 'ಉರಸು' ಜರುಗುವುದು. ಕೋಟೆಯೊಂದಿಗೆ ದುಸ್ಥಿತಿಯಲ್ಲಿರುವ ಚಚಡಿ ದೇಸಾಯಿಗಳ ವಾಡೆ ಹಾಗೂ ಅರಮನೆಗಳು ಇವೆ. ಈ ಸ್ಥಳ ಪ್ರಾಚೀನ ವೈಭವಕ್ಕೆ ಈಗಲೂ ಸಾಕ್ಷಿಯಾಗಿದೆ. (ಆರ್.ಎಂ.)

**ಚಟಚಟನಹಳ್ಳಿ :** ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿ ಹಳೇಬೀಡಿನಿಂದ ಈಶಾನ್ಯಕ್ಕೆ ಸು.4ಕಿಮೀ ದೂರದಲ್ಲಿರುವ ಗ್ರಾಮ. ಇಲ್ಲಿರುವ ಚಟ್ಟೇಶ್ವರ ದೇವಾಲಯ ಹೊಯ್ಸಳ ಕಾಲದ ರಚನೆ. ಹೊಯ್ಸಳ ಅರಸ ಇಮ್ಮಡಿ ಬಲ್ಲಾಳನ ಕೈಕೆಳಗೆ ಅಧಿಕಾರಿಯಾಗಿದ್ದ ಚಟ್ಟದಂಡನಾಯಕ ಸು.1200ರಲ್ಲಿ ಇದನ್ನು ಕಟ್ಟಿಸಿದ. ಇದಕ್ಕೆ ದತ್ತಿ ನೀಡಿದ ವಿಷಯವನ್ನು ತಿಳಿಸುವ ಶಾಸನಗಳು ದೇವಾಲಯದ ಆವರಣದಲ್ಲಿವೆ.

ದಕ್ಷಿಣಾಭಿಮುಖವಾಗಿರುವ ಈ ದೇವಾಲಯ ತ್ರಿಕೂಟಾಚಲ, ಚೌಕಾಕಾರದ ತಳವಿನ್ಯಾಸವುಳ್ಳ ಮೂರು ಗರ್ಭಗೃಹಗಳಿಂದ ಕೂಡಿದೆ. ಅಧಿಷ್ಠಾನದ ಮೇಲೆ ಐದು ದಿಂಡುಗಳಿದ್ದು, ಅವು ಕೆತ್ತನೆಗಳೇನೂ ಇಲ್ಲದೆ ಸರಳವಾಗಿವೆ. ಗೋಡೆಗಳ ಮೇಲೂ ಕೆತ್ತನೆ ಇಲ್ಲ. ಮೂಲೆಗಳಲ್ಲಿ ಚಿಕ್ಕದಾದ ಚೌಕನೆಯ ಅರೆಗಂಬಗಳಿವೆ. ಲೋವೆಕಲ್ಲುಗಳು ಸಹ ಸರಳವಾಗಿವೆ. ಇಲ್ಲಿಯ ಮೂರು ಗೋಪುರಗಳಲ್ಲಿ ಉತ್ತರದ್ದು ಬಿದ್ದು ಹೋಗಿದ್ದು, ಉಳಿದೆರಡು ಶಿಲ್ಪವಿಲ್ಲದ ಅನಲಂಕೃತ ಕಿರುಗೋಪುರಗಳ ಮೂರು ಅಂತಸ್ತನ್ನು ಹೊಂದಿವೆ. ಪಶ್ಚಿಮದ ಗೋಪುರದ ಕೆಲವು ಪಟ್ಟಿಕೆಗಳ ಮೇಲೆ ಯಕ್ಷರು, ತಾಂಡವೇಶ್ವರ ಮುಂತಾದ ಶಿಲ್ಪಗಳಿವೆ. ಮುಖಮಂಟಪದ ಎರಡೂ ಕಡೆ ಕಲ್ಲಿನ ಜಗತಿ ಇದ್ದು ಕೆತ್ತನೆ ಇಲ್ಲದ ಕಟಾಂಜನದಿಂದ ಕೂಡಿದೆ.

ಕಚ್ಚುಕಚ್ಚಾದ ಅರೆಗಂಬಗಳು, ಶೈವ ದ್ವಾರಪಾಲಕರು ಮತ್ತು ಗಜಲಕ್ಷ್ಮಿ ಇರುವ ನವರಂಗ ದ್ವಾರ ಸರಳವಾಗಿವೆ. ನವರಂಗದ ಭುವನೇಶ್ವರಿಯಲ್ಲಿ ಪದ್ಮ ಹಾಗೂ ಅಷ್ಟಕೋನದ ನಕ್ಷತ್ರಾಕೃತಿಯ ಸುಂದರ ಶ್ರೀಚಕ್ರವನ್ನು ಕೆತ್ತಿದೆ. ಮಧ್ಯದ ನಾಲ್ಕು ಕಂಬಗಳು ದಪ್ಪಗಿದ್ದು ಘಂಟಾಕೃತಿಯದ್ದಾಗಿವೆ. ಹೆಚ್ಚಿನ ಕೆತ್ತನೆ ಇಲ್ಲ. ಇಲ್ಲಿ ಮೂಷಕ ಹಾಗೂ ಸಿಂಹಪೀಠಗಳ ಮೇಲೆ ಗಣೇಶ ಹಾಗೂ ಮಹಿಷಾಸುರಮರ್ದಿನಿಯ ವಿಗ್ರಹಗಳು, ಇದ್ದುವು. ಈಗ ಬೇರೆಲ್ಲಿಂದಲೋ ತಂದಿಟ್ಟಿರುವ ವೀರಭದ್ರ ಮತ್ತು ಭೈರವ ಮೂರ್ತಿಗಳು ಆ ಸ್ಥಾನಗಳಲ್ಲಿವೆ. ಚಿಕ್ಕ ನಂದಿಯೊಂದೂ ಇದೆ. ನವರಂಗದ ಗೂಡುಗಳೆಲ್ಲ ಈಗ ಖಾಲಿಯಾಗಿವೆ.



ಚಟ್ಟೇಶ್ವರ ದೇವಾಲಯ

ಚಟ್ಟೇಶ್ವರ ಲಿಂಗವಿರುವ ಮುಖ್ಯ ಗರ್ಭಗೃಹ ನವರಂಗದ ಎಡಭಾಗಕ್ಕಿದೆ. ಇದಕ್ಕೆ ಮಾತ್ರ ದ್ವಾರವಿರುವ ಸುಕನಾಸಿ ಇದೆ. ಸುಕನಾಸಿಯ ಮುಂದೆ ಚೌಕನೆಯ ಜಾಲಂಧ್ರ ಮತ್ತು ದ್ವಾರಪಾಲ ಹಾಗೂ ಬಾಗಿಲ ಮೇಲೆ ಗಜಲಕ್ಷ್ಮಿಮೂರ್ತಿ ಇವೆ. ಗರ್ಭಗೃಹದ ದ್ವಾರದ ಮೇಲೂ ದ್ವಾರಪಾಲ, ಗಜಲಕ್ಷ್ಮಿ ಮೂರ್ತಿಗಳಿವೆ. ಉತ್ತರದ ಗರ್ಭಗೃಹ ನವರಂಗ ದ್ವಾರಕ್ಕೆ ಮುಖ ಮಾಡಿಕೊಂಡಿದೆ. ಇದು ತೆರೆದ ಸುಕನಾಸಿಯನ್ನು ಹೊಂದಿದೆ. ಗರ್ಭಗೃಹದಲ್ಲಿ ಗರುಡಪೀಠದ ಮೇಲೆ ನಿಂತಿರುವ ಆರು ಅಡಿ ಎತ್ತರದ ಭಗ್ನ ವಿಷ್ಣು ವಿಗ್ರಹ ಇದೆ. ಈ ಮೂರ್ತಿ ದೇವಿ ಮತ್ತು ಚಾಮರಧಾರಿಣಿ ಸಹಿತವಾಗಿದೆ. ತೋರಣದಲ್ಲಿ ದಶಾವತಾರವನ್ನು ಕೆತ್ತಿದೆ. ಪೂರ್ವ ಗರ್ಭಗೃಹಕ್ಕೂ ತೆರೆದ ಸುಕನಾಸಿ ಇದೆ. ಗರ್ಭಗೃಹದ್ವಾರ ಸರಳವಾಗಿದೆ. ಒಳಗೆ ಸೊಗಸಾದ ಸೂರ್ಯ ವಿಗ್ರಹವಿದೆ. ಇದರ ಪ್ರಭಾವಳಿಯಲ್ಲಿ ದ್ವಾದಶಾದಿತ್ಯರನ್ನು ಬಿಡಿಸಿದೆ. ಪೀಠದ ಮೇಲೆ ಸಪ್ತಾಶ್ವಗಳನ್ನು ಬಿಡಿಸಿದೆ. ಇದು ಕರ್ನಾಟಕದ ಅಪರೂಪದ ಸೂರ್ಯಮೂರ್ತಿಗಳಲ್ಲೊಂದು.

ಚಟ್ಟೇಶ್ವರ ದೇವಾಲಯದ ನೈಋತ್ಯಕ್ಕೆ ಮುಖಮಂಟಪ, ನವರಂಗದ್ವಾರ ಹಾಗೂ ಭಾಗಶಃ ಗೋಡೆಗಳುಳ್ಳ ವಿಷ್ಣು ದೇವಾಲಯವೊಂದಿದೆ. 1200ಕ್ಕೆ ಸೇರುವ ಶಾಸನವೊಂದು ಇದರ ಮುಂಭಾಗದಲ್ಲಿದೆ. ಗೋಡೆಗಳ ಮೇಲೆ ಕೆಲವು ವೈಷ್ಣವ ಮೂರ್ತಿಗಳು ಉಳಿದುಕೊಂಡಿವೆ. (ಎಚ್.ಎಂ.ಎನ್.ಆರ್.)

**ಚತುರ್ಮುಖ ಬೊಮ್ಮರಸ :** ಸು.1500. ವೀರಶೈವ ಕವಿ. ರೇವಣ ಸಿದ್ಧೇಶ್ವರಪುರಾಣ ಎಂಬ ಕಾವ್ಯದ ಕರ್ತೃ. ವರಾಯಣ ಈತನ ತಂದೆ. ರೇವಣ ಸಿದ್ಧೇಶ್ವರನ ವಂಶದಲ್ಲಿ ಹುಟ್ಟಿದ ಒಬ್ಬ ಬಾಲಸಿದ್ಧೇಶ್ವರನನ್ನು ಕಾವ್ಯದಲ್ಲಿ ವಿಶೇಷವಾಗಿ ಸ್ತುತಿಸಿರುವುದರಿಂದ ಆತನೇ ಕವಿಯ ಗುರುವಾಗಿದ್ದಿರಬೇಕೆಂದು ತೋರುತ್ತದೆ. ಅವನ ಆಜ್ಞಾನುಸಾರವಾಗಿ ಕವಿ ತಾನು ಕಾವ್ಯವನ್ನು ಬರೆದಂತೆ ಹೇಳಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಹರೀಶ್ವರ, ಮಗ್ಗೆಯ ಮಾಯಿದೇವ, ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ-ಇವರನ್ನು ಸ್ಮರಿಸಿದ್ದಾನೆ. ಶೈವಾಗಮಜ್ಞ, ಕವಿಸಭಾಮಾಣಿಕ್ಯದೀಪ ಈತನ ಬಿರುದುಗಳು.

ರೇವಣಸಿದ್ಧೇಶ್ವರಪುರಾಣ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 13 ಸಂಧಿಗಳೂ 565 ಪದ್ಯಗಳೂ ಇವೆ. ರೇವಣಸಿದ್ಧೇಶ್ವರನ ಚರಿತೆ ಕಾವ್ಯದ ವಸ್ತು. ಶ್ರೀಶನನು ಕಾಂಚಿಯೊಳು ನುಡಿಸಿ ಚೋಳಂಗೆ ಕನ್ಯಾಸಮೂಹದ ಬಂಧನವ ಬಿಡಿಸಿ ಬಿಜ್ಜಳಮಹೀಶನಿಂ ಪೂಜೆಗೊಂಡಾದಿಶೈವಾಚಾರ್ಯನಾಗಿ ಲಂಕಾಪುರದೊಳು ಈಶ ಕೋಟಿತ್ರಯದ ಹದಿಟೆಗೊಯ್ದೊಲವಿಂ ವಿಭೀಷಣನ ಪಾಲಿಸಿದ ಎಂಬುದು ಇಲ್ಲಿನ ಕಥಾಸಾರ. ಈ ಕಾವ್ಯ ಶಾಂತ ಮಲ್ಲೇಶ್ವರನ ಅಂಕಿತದಲ್ಲಿ ರಚಿತವಾಗಿದೆ. ಅಲ್ಲದೆ ಈ ಗ್ರಂಥಕ್ಕೂ ಬೊಮ್ಮರಸನ ಸೌಂದರ ಪುರಾಣಕ್ಕೂ ಆದಿಭಾಗದಲ್ಲಿ ಬಹುಮಟ್ಟಿಗೆ ಹೋಲಿಕೆ ಕಂಡುಬರುತ್ತದೆ. ಈ ಹೋಲಿಕೆಯಿಂದ ಇವರಿಬ್ಬರು ಹತ್ತಿರದ ಬಂಧುಗಳಾಗಿರಬೇಕೆಂದು ಊಹಿಸಲು ಅವಕಾಶವಿದೆ. ಹರಿಹರನ ರಗಳೆ ಮತ್ತು ಈಶಾನ್ಯಗುರು ಸಂಸ್ಕೃತದಲ್ಲಿ ರಚಿಸಿದ ರೇವಣಸಿದ್ಧ ಚರಿತೆ - ಇವು ಇವನ ಕಾವ್ಯಕ್ಕೆ ಆಕರಗಳಾಗಿರಬಹುದು. *

**ಚತುರ್ವೇದಿ, ಟಿ.ಎನ್. :** 1928-. ಕರ್ನಾಟಕದ ರಾಜ್ಯಪಾಲರು (2004). ಉತ್ತರ ಪ್ರದೇಶದ ಕನೂಜ್‌ನಲ್ಲಿ 1928 ಜನವರಿ 18ರಂದು ಜನಿಸಿದರು. ಕನೂಜ್, ಕಾನ್‌ಪುರಗಳಲ್ಲಿ ಪ್ರಾರಂಭಿಕ ಶಿಕ್ಷಣ ಮುಗಿಸಿದರು. ಅನಂತರ ಅಲಹಾಬಾದ್‌ಗೆ ತೆರಳಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಮತ್ತು ಎಲ್.ಎಲ್.ಬಿ. ಪದವಿಗಳನ್ನು ಪೂರೈಸಿದರು. ಹಿಂದಿ ಸಾಹಿತ್ಯದಲ್ಲಿ ವಿಶಾರದ ಗಳಿಸಿದರು. ಶೈಕ್ಷಣಿಕ ಅರ್ಹತೆ ಪಡೆದ ಬಳಿಕ ಭಾರತ ಆಡಳಿತ ಸೇವೆ (ಐ.ಎ.ಎಸ್.) ಸೇರಿದರು (1950). ರಾಜಸ್ಥಾನ ರಾಜ್ಯ ಸೇವೆಗೆ ನಿಯುಕ್ತರಾದರು. ರಾಜಸ್ಥಾನದಲ್ಲಿದ್ದಾಗ ಇವರು ಕಲೆಕ್ಟರ್, ಜಿಲ್ಲಾ ಮ್ಯಾಜಿಸ್ಟ್ರೇಟ್, ವಿವಿಧ ಇಲಾಖೆಗಳ ಕಾರ್ಯದರ್ಶಿ, ಮುಖ್ಯಮಂತ್ರಿಯವರ ಕಾರ್ಯದರ್ಶಿ, ರಾಜ್ಯ ಕೈಗಾರಿಕೆ ಮತ್ತು ಆಡಳಿತ ಮಂಡಳಿಯ ಅಧ್ಯಕ್ಷ - ಹೀಗೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಭಾರತ ಸರ್ಕಾರಕ್ಕೆ ಎರವಲು ಸೇವೆಯಲ್ಲಿ ಇವರು ಜಂಟಿ ಕಾರ್ಯದರ್ಶಿ; ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ ಮುಖ್ಯ ಕಾರ್ಯದರ್ಶಿ, (ದೆಹಲಿ ಆಡಳಿತ), ಇಂಡಿಯನ್ ಇನ್ವೆಸ್ಟ್‌ಮೆಂಟ್ ಸೆಂಟರಿನ ಕಾರ್ಯ ನಿರ್ವಾಹಕ ನಿರ್ದೇಶಕ ಹಾಗೂ ಚಂಡೀಘಡದ ಮುಖ್ಯ ಆಯುಕ್ತರಾಗಿ ಕಾರ್ಯನಿರ್ವಹಿಸಿದರು. ಇಂಡಿಯನ್ ಇನ್‌ಸ್ಟಿಟ್ಯೂಟ್

ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ನಿನ ನಿರ್ದೇಶಕರಾಗಿಯೂ ಇವರು ಕೆಲಸ ನಿರ್ವಹಿಸಿದ್ದಾರೆ.

ಭಾರತ ಸರ್ಕಾರದಲ್ಲೂ ಇವರು ಹಲವು ಹುದ್ದೆಗಳಲ್ಲಿ ಸೇವೆಸಲ್ಲಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು: ಶಿಕ್ಷಣ (ಈಗ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ), ಗೃಹ, ನ್ಯಾಯಾಂಗ ಮತ್ತು ಕಾನೂನು, ಸಂಸ್ಕೃತಿ ಮತ್ತು ಕ್ರೀಡಾ ಇಲಾಖೆಗಳ ಕಾರ್ಯದರ್ಶಿಗಳ ಹುದ್ದೆ. ಇವರು ತಮ್ಮ ಐ.ಎ.ಎಸ್. ಹುದ್ದೆಗೆ 1984ರಲ್ಲಿ ರಾಜೀನಾಮೆ ನೀಡಿದರು. ಬಳಿಕ ಭಾರತದ ಆಡಿಟರ್ ಜನರಲ್ ಆಗಿ 6 ವರ್ಷ ಸೇವೆಸಲ್ಲಿಸಿದರು. ಸರ್ಕಾರಿ ಸೇವೆಯಲ್ಲಿದ್ದಾಗ ಇವರು ಹಲವು ಆಯೋಗಗಳು, ಸಮಿತಿಗಳು, ಕಾರ್ಯಪಡೆ (ಟಾಸ್ಕ್‌ಫೋರ್ಸ್)ಗಳಲ್ಲಿಯೂ ದುಡಿದರು. ಹೀಗೆ ಸದಸ್ಯರಾಗಿದ್ದಾಗ ಇವರು ಸಾಮಾಜಿಕ ಕಲ್ಯಾಣ, ಆಡಳಿತದ ಅಭಿವೃದ್ಧಿ, ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಮೂಲ್ಯ ಸಲಹೆ ನೀಡಿದರು.



ಸಾರ್ವಜನಿಕ ಸೇವೆಯನ್ನೇ ವೃತ್ತಿಯಾಗಿಸಿಕೊಂಡ ಇವರು ರಾಜ್ಯಸಭೆಗೆ ಚುನಾಯಿತರಾದರು (1992). ಅಲ್ಲಿಂದ ಮುಂದೆ ಹಣಕಾಸು, ಸಾರ್ವಜನಿಕ ಲೆಕ್ಕಪತ್ರ (1994-95), ವಿದೇಶಾಂಗ ಕಲಾಪ (1995), ರಾಜಭಾಷಾ (1996-97) ಮೊದಲಾದ ಸಮಿತಿಗಳ ಸದಸ್ಯರಾಗಿ ಕಾರ್ಯನಿರ್ವಹಿಸಿದರು. 1998ರಲ್ಲಿ ರಾಜ್ಯಸಭೆಗೆ ಪುನರಾಯ್ಕೆಗೊಂಡರು. ಅನಂತರದಲ್ಲಿ ರಕ್ಷಣಾ ಸಚಿವಾಲಯದ ಸಲಹಾ ಸಮಿತಿ (1998), ರಕ್ಷಣಾ ಸ್ಥಾಯಿ ಸಮಿತಿ (2000), ಯುನೆಸ್ಕೋದ ಕಾರ್ಯನಿರ್ವಾಹಕ ಮಂಡಲಿ (2001), ಸಂಸತ್‌ಭವನ ಸಂಕೀರ್ಣದ ರಕ್ಷಣಾ ಜಂಟಿಸಮಿತಿ (2001), ಭಾರತೀಯ ಸಮಾಜ ವಿಜ್ಞಾನ ಸಂಶೋಧನ ಪರಿಷತ್ತು ಮೊದಲಾದ ವಿವಿಧ ಸಮಿತಿಗಳಲ್ಲಿ ಸದಸ್ಯರಾಗಿ ದುಡಿದ ಅಪಾರ ಅನುಭವ ಇವರದು. ಪೇಟೆಂಟ್ಸ್ ಮಸೂದೆಯ ಜಂಟಿ ಸಮಿತಿ (1999), ಹಿಂದಿ ಭವನ್ (2001), ಸಾರ್ವಜನಿಕ ಗ್ರಂಥಾಲಯ (ದೆಹಲಿ, 2002) ಮತ್ತಿತರೆಡೆ ಅಧ್ಯಕ್ಷರಾಗಿಯೂ ಇವರು ಕಾರ್ಯನಿರ್ವಹಿಸಿದ್ದಾರೆ.

ಸಾರ್ವಜನಿಕ ಸೇವೆಯ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ ಇವರು ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡರು (2002 ಆಗಸ್ಟ್ 21). ಬರೆಹಗಾರರೂ ಆಗಿರುವ ಇವರು ಟ್ರಾನ್ಸ್‌ಫರ್ ಆಫ್ ಟೆಕ್ನಾಲಾಜಿ ಅಮಾಂಗ್ ಡೆವಲಪಿಂಗ್ ಕಂಟ್ರೀಸ್, ಕಂಪಾರೆಟೀವ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಪತ್ರಿಕೆಯ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ (1970-98). *

**ಚದುರಂಗ** : 1916-98. ಚದುರಂಗ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕನ್ನಡ ಸಾಹಿತಿ, ಸಣ್ಣಕಥೆಗಾರ, ಕಾದಂಬರಿಕಾರ, ನಾಟಕಕಾರ. ಇವರ ನಿಜನಾಮ ಎಂ.ಎಸ್. ಸುಬ್ರಹ್ಮಣ್ಯರಾಜೇ ಅರಸ್. ಇವರು ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಕಲ್ಲಹಳ್ಳಿಯಲ್ಲಿ 1916 ಜನವರಿ 1ರಂದು ಜನಿಸಿದರು. ಜಯನೃಪಕಾವ್ಯ, ಸೂಪಶಾಸ್ತ್ರ - ಮುಂತಾದ ಕೃತಿಗಳನ್ನು ರಚಿಸಿದ ಮಂಗರಸ ಕವಿ ಚದುರಂಗರ ವಂಶದ ಪೂರ್ವಿಕರಲ್ಲಿ ಒಬ್ಬನೆಂದು ಹೇಳಲಾಗುತ್ತದೆ. ಇವರ ಹಿರಿಯ ಅಣ್ಣನವರಿಗೆ ಮೈಸೂರು ರಾಜಮನೆತನದ ಸಂಬಂಧವಿದ್ದದ್ದರಿಂದ ಇವರಿಗೆ ಸಹಜವಾಗಿಯೇ ಅರಮನೆಯ ಸಂಪರ್ಕ ಒದಗಿತ್ತು. ಮೈಸೂರಿನ ರಾಯಲ್‌ಶಾಲೆ, ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜು, ಮೈಸೂರು ಮಹಾರಾಜ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದ ಇವರು ಕಾನೂನು ಮತ್ತು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಪುಣೆಗೆ ಹೋದರು. ಆದರೆ ಶಿಕ್ಷಣವನ್ನು ಪೂರ್ಣಗೊಳಿಸಲಿಲ್ಲ.

ಸ್ವಾತಂತ್ರ್ಯ ಚಳವಳಿ, ಗಾಂಧೀವಾದ, ಮಾರ್ಕ್ಸ್‌ವಾದ, ಎಂ.ಎನ್. ರಾಯ್ ವಿಚಾರಧಾರೆ, ಡೋಂಗಿ ಬಾಬಾಗಳ ವಿರುದ್ಧದ ಚಳವಳಿಗಳು ಮುಂತಾದ ಸಂಘಟನೆಗಳೂ ತತ್ವಗಳೂ ಇವರ ಮೇಲೆ ತುಂಬ ಪ್ರಭಾವ ಬೀರಿದವು. ಇವರು ಖಾದಿ ಪ್ರೇಮಿಯಾಗಿ ಅರಮನೆಯ ಪರಿಸರದ ಅಸಮಾಧಾನಕ್ಕೂ ಕಾರಣರಾದರು. ಸಂಪ್ರದಾಯಕ್ಕೆ ವಿರುದ್ಧವಾಗಿ ರೀತಿಯಲ್ಲಿ ತಾವು ಮೆಚ್ಚಿದವರನ್ನು ವಿವಾಹವಾದರು. ಮೈಸೂರನ್ನು ಬಿಟ್ಟು ಸ್ವಂತಸ್ಥಳ ಕಲ್ಲಹಳ್ಳಿಯನ್ನು ಸೇರಿ (1952) ಕೃಷಿಕ ಜೀವನವನ್ನು ಆರಂಭಿಸಿದರು.

ಬಾಲ್ಯದ ದಿನಗಳಲ್ಲಿ ಅರಮನೆಯ ಮಹಿಳಾ ಕಾರ್ಯಕರ್ತೆಯರು ಹೇಳುತ್ತಿದ್ದ ಕಥೆಗಳನ್ನು ಆಲಿಸುತ್ತಿದ್ದ ಇವರಿಗೆ ಕಥೆಗಾರಿಕೆ ಸಹಜವಾಗಿಯೇ ಸಿದ್ಧಿಸಿತು. ಇವರ ತಾಯಿಯವರೂ ಇವರಿಗೆ ಎಷ್ಟೋ ಕಥೆಗಳನ್ನು ಹೇಳುತ್ತಿದ್ದರು. ಚದುರಂಗರು ಮೊದಮೊದಲು ಕವಿತೆಗಳನ್ನು ಬರೆದರು. ಕಾಲೇಜು ಪತ್ರಿಕೆಗಳಲ್ಲಿ ಇವರ ಕವಿತೆಗಳು ಬೆಳಕು ಕಂಡವು. ನವೋದಯದ ಪ್ರಸಿದ್ಧ ಬರೆಹಗಾರರಾದ ಮಾಸ್ತಿವೆಂಕಟೇಶ ಅಯ್ಯಂಗಾರ್ ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪ್ರಭಾವದಿಂದಾಗಿ ಇವರ ಮನಸ್ಸು ಗದ್ಯದತ್ತ ತಿರುಗಿತು. ಗ್ರಾಮೀಣ ಪರಿಸರದ ಬದುಕಿನ ಬಗ್ಗೆ ವಿಶೇಷ ಒಲವು ಉಂಟಾಯಿತು. ಮುಖ್ಯವಾಗಿ ಟಾಲ್‌ಸ್ಟಾಯ್, ಮ್ಯಾಕ್ಸಿಂಗಾರ್ಕಿ, ದಾಸ್ತೋವಸ್ಕಿ, ಬಾಲ್ಜಾಕ್, ಆಲ್ಬರ್ಟ್ ಕಾಮೂ ಮೊದಲಾದ ಬರೆಹಗಾರರೂ ಪ್ರಭಾವ ಬೀರಿದರು.

ಬೆಂಗಳೂರಿನ 'ಛಾಯಾ' ಪತ್ರಿಕೆಯಲ್ಲಿ ಕಥೆಗಳನ್ನು ಪ್ರಕಟಿಸುವುದರ ಮೂಲಕ ಚದುರಂಗರು ಕನ್ನಡಿಗರ ಗಮನ ಸೆಳೆದರು. ಸ್ವಪ್ನಸುಂದರಿ ಕಥಾಸಂಕಲನ 1948ರಲ್ಲಿ ಪ್ರಕಟವಾಯಿತು. ಶವದಮನೆ (1950), ಇಣುಕುನೋಟ (1950), ಬಂಗಾರದ ಗೆಜ್ಜೆ (1951), ಮೀನಿನ ಹೆಜ್ಜೆ (1958), ಕ್ಯಾಟೆ (1992), ಮೃಗಯಾ (1998), ಬಣ್ಣದ ಬೊಂಬೆ - ಇವು ಇವರ ಇತರ ಕಥಾ ಸಂಕಲನಗಳು. ನವೋದಯದಿಂದ ಹಿಡಿದು ದಲಿತ ಬಂಡಾಯದವರೆಗಿನ ಸಾಹಿತ್ಯದ ಎಲ್ಲ ಪಂಥಗಳನ್ನೂ ಚಳವಳಿಗಳನ್ನೂ ಚದುರಂಗರು ಕಂಡಿದ್ದರಾದರೂ ಇವರು ಯಾವೊಂದು ನಿರ್ದಿಷ್ಟ ಪಂಥಕ್ಕೆ ಕಟ್ಟುಬೀಳಲಿಲ್ಲ. ಆ ಎಲ್ಲ ಪ್ರಭಾವಗಳನ್ನೂ ಜೀರ್ಣಿಸಿಕೊಂಡರು. "ಶವದ ಮನೆ' ಇವರ ಅತ್ಯಂತ ಜನಪ್ರಿಯ ಕಥೆಗಳಲ್ಲಿ ಒಂದು. ಆಸ್ಪತ್ರೆಗಳು ಬಡವರ ಪಾಲಿಗೆ ಶವದ ಮನೆಗಳಾಗಿಬಿಟ್ಟಿರುವುದರಿಂದ ಬದುಕುವುದಕ್ಕಿಂತ ಸಾಯುವುದೇ ಮೇಲು ಎಂಬ ನಿರ್ಧಾರಕ್ಕೆ ಬರುವಂತೆ ಪರಿಸ್ಥಿತಿ ಉಂಟಾಗುತ್ತದೆ. ಹಾಸ್ಯದ ಹೊನಲಿನಲ್ಲಿ ತೀವ್ರ ವಿಡಂಬನೆ ಇಲ್ಲಿ ಸಾಧ್ಯವಾಗಿದೆ. 'ನಾಲ್ಕು ಮೊಳಭೂಮಿ' ಕಥೆಯೂ ಕಥೆಯೊಳಗೊಂದು ಕಥೆಯ ತಂತ್ರದಿಂದ ಆಕರ್ಷಕವಾಗಿದೆ.



ಕಾದಂಬರಿ ಕ್ಷೇತ್ರದಲ್ಲೂ ಇವರ ಸಾಧನೆ ಗಣನೀಯವಾದುದು. ಸರ್ವಮಂಗಳ (1950), ಉಯ್ಯಾಲೆ (1960), ವೈಶಾಖ (1981), ಹೆಜ್ಜಾಲ (1998) - ಈ ಕಾದಂಬರಿಗಳು ಇವರಿಗೆ ಕೀರ್ತಿಯನ್ನು ತಂದುಕೊಟ್ಟವು. ಮಾನವೀಯ ಸಂಬಂಧದ ವಸ್ತುವಿನಿಂದಾಗಿ ಪ್ರಾದೇಶಿಕ ಹಿನ್ನೆಲೆಯನ್ನೊಳಗೊಂಡ 'ಸರ್ವಮಂಗಳ' ಹೊಸಅಲೆಯ ಕಾದಂಬರಿ ಎನಿಸಿ ಅದ್ಭುತ ಪ್ರಚಾರ ಪಡೆದುಕೊಂಡಿತು. ಇದರಲ್ಲಿನ ನಾಯಕಿ ಸರ್ವಮಂಗಳ

ತನ್ನ ಇಚ್ಛೆಗೆ ವಿರುದ್ಧವಾಗಿ ವಿವಾಹವಾದ ಮುಗ್ಧ ಗಂಡನ ಅಭಿವೃದ್ಧಿಯನ್ನೂ ಬಯಸುತ್ತಾಳೆ. ಅದೇ ರೀತಿಯಲ್ಲಿ ತಾನು ಪ್ರೀತಿಸಿದ ನಟರಾಜನನ್ನು ವಿವಾಹವಾದ ದುರ್ಗಿಯ ಶ್ರೇಯಸ್ಸನ್ನೂ ಬಯಸುವುದರಿಂದ ಅವಳ ಪಾತ್ರ ಉದಾತ್ತವಾಗಿ ಕಾಣಿಸುತ್ತದೆ. ಜೊತೆಗೆ ಅವಳ ಸ್ವಭಾವ ಉಳಿದೆಲ್ಲ ಪಾತ್ರಗಳ ಮೇಲೂ ಬೆಳಕುಚೆಲ್ಲುತ್ತದೆ. ಕೇಂದ್ರ ಪಾತ್ರವಾದ ಸರ್ವಮಂಗಳೆಯ ಉದಾತ್ತ ವ್ಯಕ್ತಿತ್ವವನ್ನು ಎತ್ತಿಹಿಡಿಯುವ ಈ ಕಾದಂಬರಿಯಲ್ಲಿ ಸ್ವಾತಂತ್ರ್ಯ ಚಳವಳಿ ಮತ್ತಿತರ ಹೋರಾಟಗಳ ನಿರೂಪಣೆಯೂ ಇದೆ. ಅಂತಿಮವಾಗಿ ಸರ್ವಮಂಗಳೆ ಮತ್ತು ನಟರಾಜನ ಬದುಕಿನ ದುರಂತವನ್ನು ನಿರೂಪಿಸುವುದೇ ಕಾದಂಬರಿಯ ಮುಖ್ಯ ಉದ್ದೇಶ ಎನ್ನಬಹುದು.

ರವೀಂದ್ರನಾಥ್ ಠಾಕೂರರ 'ಚಾರುಲತಾ' ಕಾದಂಬರಿಯನ್ನು ಹೋಲುವ 'ಉಯ್ಯಾಲೆ' ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಗಂಡು ಹೆಣ್ಣುಗಳ ಸೂಕ್ಷ್ಮ ಚಿತ್ರಣವಾಗಿರುವ ಉಯ್ಯಾಲೆ ಎಂಬ ಶೀರ್ಷಿಕೆ ಮಾನಸಿಕ ತುಯ್ದಾಟದ ಸಂಕೇತವಾಗಿದೆ. 'ವೈಶಾಖ' ಹೆಚ್ಚು ವಿಮರ್ಶೆಗೆ ಗುರಿಯಾದ ಕಾದಂಬರಿ. ಹೊಲೆಯರ ಲಕ್ಕ ಮತ್ತು ವೈದಿಕರ ರುಕ್ಮಿಣಿ - ಇವರ ಮೂಲಕ ಸಾಗುವ ಕಾದಂಬರಿಯ ಕಥೆ ವಿಶಿಷ್ಟ ತಂತ್ರದಿಂದ ಕೂಡಿದುದಾಗಿದೆ. ವಸ್ತುವನ್ನು ನಿರ್ವಹಿಸುವಲ್ಲಿ, ನಿರೂಪಿಸುವಲ್ಲಿ ವಿಶಿಷ್ಟವೆನಿಸುವ ಈ ಕಾದಂಬರಿ ಭಾಷಾದೃಷ್ಟಿಯಿಂದಲೂ ಗಣನೀಯವಾದುದು.

'ಹೆಜ್ಜಾಲ' ಕಾದಂಬರಿಯಲ್ಲಿ ತಂದೆಯಿಲ್ಲದ ಕಾಲೂರನ ಹುಟ್ಟಿನ ಅನ್ವೇಷಣೆ ನಡೆಯುತ್ತಿದೆಯೋ ಎಂಬಂತೆ ಕಥೆಯ ಘಟನಾವಳಿಗಳು ಹರಡಿಕೊಂಡಿವೆ. ಈ ಅನ್ವೇಷಣೆ ಲೇಖಕರ ಜೀವಪರ ದೃಷ್ಟಿಯ ಸಂಕೇತವಾಗಿದೆ. ಇದು ಚದುರಂಗರ ಕೊನೆಯ ಕಾದಂಬರಿ. ಇದರಲ್ಲಿ ಇವರ ಅನುಭವಗಳು ಪರಿಪಕ್ವಗೊಂಡ ಸ್ಥಿತಿಯನ್ನು ಕಾಣಲು ಸಾಧ್ಯವಿದೆ. ಮಾದೇವಮ್ಮ, ಪುಟ್ಟೀರಿ ಮೊದಲಾದ ಪಾತ್ರಗಳ ಮೂಲಕ ವ್ಯವಸ್ಥೆಯ ಕ್ರೌರ್ಯ ಮತ್ತು ಅಹಂಕಾರವನ್ನು ಪ್ರಶ್ನಿಸುವ ಕಲಾತ್ಮಕತೆಯ ಸೃಜನಶೀಲತೆ ಕಾದಂಬರಿಯ ಆಂತರ್ಯದಲ್ಲಿದೆ. ಮಾಯಮ್ಮ, ಅಜ್ಜಮ್ಮ, ಕಾಲೂರ ಯಾವ ಪಾತ್ರವೂ ಕಾಲ್ಪನಿಕ ಎನಿಸುವುದಿಲ್ಲ. ಅಜ್ಜಮ್ಮನ ಮರಣ, ನಾಯಿಯ ಬಗೆಗೆ ಕಾಲೂರ ತೋರುವ ಪ್ರೀತಿ, ಹಾವಿನಿಂದ ಕಚ್ಚಿಸಿಕೊಂಡ ಮಾದೇವಮ್ಮನನ್ನು ನಾಟಿಔಷಧಿಯಿಂದ ಗುಣಪಡಿಸುವುದು - ಅಖಂಡ ಜೀವನ ಪ್ರೀತಿಯ ಅಭಿವ್ಯಕ್ತಿ ಮೂಡಿಸುವಂಥವು. ಗ್ರಾಮ ಜೀವನದ ಇಂಥ ದಟ್ಟ ಅನುಭವಗಳು ಕಲೆಯಾಗಿ ಅರಳಿರುವುದರಿಂದ ಕಾದಂಬರಿಗೆ ವಿಶಿಷ್ಟಸ್ಥಾನ ಸಂದಿದೆ.

ಕುಮಾರರಾಮ (1966), ಇಲಿಬೋನು (1972), ಬಿಂಬ (1990) - ಈ ನಾಟಕಗಳನ್ನು ಬರೆಯುವುದರ ಮೂಲಕ ಚದುರಂಗರು ನಾಟಕಕಾರರೆನಿಸಿದರು. ಇಲಿಬೋನು ಒಂದು ಅಸಂಗತ ನಾಟಕ. ಚದುರಂಗರು ಉತ್ತರ ರಾಮಾಯಣದ ವಸ್ತುವನ್ನು ಪ್ರತ್ಯೇಕ ನೆಲೆಯಲ್ಲಿ ಸೃಜಿಸುವ ಕೆಲಸವನ್ನು 'ಬಿಂಬ' ನಾಟಕದಲ್ಲಿ ಮಾಡಿದ್ದಾರೆ. 1951ರಲ್ಲಿ ಪ್ರಕಟವಾದ 'ನನ್ನ ರಸಿಕ' ಚದುರಂಗರ ಗದ್ಯಗೀತೆಯಾದರೆ, ಅಲೆಗಳು (1981) ಹನಿಗವನಗಳ ಸಂಗ್ರಹವಾಗಿದೆ. ಚದುರಂಗರಿಗೆ ಚಲನಚಿತ್ರ ಕ್ಷೇತ್ರದಲ್ಲಿಯೂ ಪ್ರವೇಶವಿತ್ತು. ಪುಣೆಯಲ್ಲಿ ಸಿನಿಮಾ ತಂತ್ರದ ಬಗ್ಗೆ ಅಧ್ಯಯನ ಮಾಡಿದ್ದರು. 1948ರಲ್ಲಿ ಸಿದ್ಧವಾದ 'ಭಕ್ತಕುಂಬಾರ' ಚಿತ್ರಕ್ಕೆ ಕಥಾಲೇಖಕರಾಗಿದ್ದರು. ವಿದೇಶಿ ಚಿತ್ರ ಸಂಸ್ಥೆ ಎಂ.ಜಿ.ಎಂ. ತಯಾರಿಸಿದ ಇಂಗ್ಲಿಷಿನ 'ಮಾಯಾ' ಚಿತ್ರದ ಸಹನಿರ್ದೇಶಕರಾಗಿದ್ದರು. ಇವರೇ ನಿರ್ಮಿಸಿದ 'ಸರ್ವಮಂಗಳಾ' ಚಿತ್ರಕ್ಕೆ ರಾಜ್ಯ ಚಲನಚಿತ್ರ ಪ್ರಶಸ್ತಿ ದೊರಕಿತ್ತು (1967-68). 'ಉಯ್ಯಾಲೆ' ಚಿತ್ರಕ್ಕಾಗಿ ಇವರಿಗೆ ಉತ್ತಮ ಚಿತ್ರಕಥಾಲೇಖಕ ಪ್ರಶಸ್ತಿಯೂ ದೊರಕಿತು.

ಸಾಹಿತ್ಯಕ ಸಾಧನೆಗಾಗಿ ಇವರಿಗೆ ದೊರಕಿದ ಪ್ರಶಸ್ತಿಗಳು ಹಲವಾರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1978 ಮತ್ತು 1994), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1982, ವೈಶಾಖ ಕಾದಂಬರಿಗೆ), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ -ಇವು ಮುಖ್ಯವಾದುವು. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ (1993). ಇವರು 63ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (1994). ಇವರು 1998 ಅಕ್ಟೋಬರ್ 19ರಂದು ನಿಧನಹೊಂದಿದರು. (ಜಿ.ಆರ್.ಟಿ.)

**ಚನ್ನಕೇಶವ ಅಯ್ಯಂಗಾರ್, ಎಚ್. :** 1889-1959. ಕನ್ನಡ ಅರುಣೋದಯ ಕಾಲದ ವಿದ್ವಾಂಸರು. ಮಾಸ್ಟರ್ ಆಫ್ ಓರಿಯಂಟಲ್ ಲರ್ನಿಂಗ್ (ಎಂ.ಓ.ಎಲ್.) ಪದವಿ ಪಡೆದ ಪ್ರಥಮ ಕನ್ನಡಿಗರು. ಚಿಕ್ಕಮಗಳೂರು ಜಿಲ್ಲೆಯ ಹಿರೇಮಗಳೂರು ಗ್ರಾಮದಲ್ಲಿ ಹುಟ್ಟಿದರು. ಮೈಸೂರು ಅಧ್ಯಾಪಕರ ಶಿಕ್ಷಣ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದು ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಮದರಾಸು ವಿಶ್ವವಿದ್ಯಾಲಯದ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಕನ್ನಡ ವಿಭಾಗದ ಪ್ರಧಾನ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಮುಂಬಯಿ, ಮದರಾಸು ವಿಶ್ವವಿದ್ಯಾಲಯಗಳ ಸೆನೆಟ್ ಸದಸ್ಯರೂ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರೂ ಆಗಿ ಕೆಲಸಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ವಿಭಾಗದ ಕಾರ್ಯದರ್ಶಿಯಾಗಿಯೂ ಪರಿಷತ್ ಪತ್ರಿಕೆ, ಕನ್ನಡನುಡಿ, ವಿಕಟ ಪ್ರತಾಪ ಮತ್ತು ಅರ್ಥಸಾಧಕ ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಬಿ.ಎಂ.ಶ್ರೀಕಂಠಯ್ಯ, ಆರ್.ನರಸಿಂಹಾಚಾರ್, ಎಂ.ಎ. ರಾಮಾನುಜ ಅಯ್ಯಂಗಾರ್ - ಇವರೆಲ್ಲ ಇವರ ಸಹೋದ್ಯೋಗಿಗಳು ಮತ್ತು ಸಮಕಾಲೀನರು. ಇವರು ನಂದಳಿಕೆ ಲಕ್ಷ್ಮೀನಾರಾಯಣಯ್ಯನ (ಮುದ್ದಣ) ಜೊತೆ ಪತ್ರ ವ್ಯವಹಾರ ಇಟ್ಟುಕೊಂಡಿದ್ದರು. ಆತನ ಅದ್ಭುತ ರಾಮಾಯಣದ ಮೂಲಪ್ರತಿಯ ನಕಲು ಪ್ರತಿ ಇವರಲ್ಲಿತ್ತು.

ಇವರಿಗಿಂತ ಹಿಂದೆ ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಧಾನ ಅಧ್ಯಾಪಕರಾಗಿದ್ದ ಆಲೆಮನೆ ವೆಂಕಟರಾಯರು ಮತ್ತು ಸಹೋದ್ಯೋಗಿ ಎಚ್.ಶೇಷಅಯ್ಯಂಗಾರರು ಸಂಪಾದಿಸಿದ್ದ ಶಬ್ದಮಣಿದರ್ಪಣದ ಕೊನೆಯ ಅನುಬಂಧಗಳನ್ನು ಇವರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಶಬ್ದಮಣಿದರ್ಪಣದ ಅವತರಣಿಕೆಯನ್ನು ಪರಿಶೀಲಿಸಿ, ಪರಿಷ್ಕರಿಸಿ ಅದರ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ. ಕನ್ನಡ ಸಾಹಿತ್ಯ ಕುರಿತಾದ ಇವರ ಲೇಖನಗಳು ಆನಲ್ಸ್ ಆಫ್ ಓರಿಯಂಟಲ್ ರಿಸರ್ಚ್ ಪತ್ರಿಕೆಯಲ್ಲಿ ಪ್ರಕಟವಾಗಿವೆ. (ಎ.ಎಸ್.ಕೆ.)

**ಚನ್ನಗಿರಿ :** ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಕೇಂದ್ರ. ಪಶ್ಚಿಮದಲ್ಲಿ ಹೊನ್ನಾಳಿ ತಾಲ್ಲೂಕು ಮತ್ತು ಶಿವಮೊಗ್ಗ ಜಿಲ್ಲೆ, ಉತ್ತರಕ್ಕೆ ದಾವಣಗೆರೆ ತಾಲ್ಲೂಕು, ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಯೂ ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು - ಇವು ಈ ತಾಲ್ಲೂಕಿನ ಮೇರೆಗಳು. ಈ ತಾಲ್ಲೂಕಿನಲ್ಲಿ ಬಸವಾಪಟ್ಟಣ, ಚನ್ನಗಿರಿ, ಸಂತೆಬೆನ್ನೂರು ಮತ್ತು ಉಬ್ರಾಣಿ ಹೋಬಳಿಗಳು, 245 ಹಳ್ಳಿಗಳು ಇವೆ. ವಿಸ್ತೀರ್ಣ 1212 ಚ.ಕಿಮೀ. ಜನಸಂಖ್ಯೆ 2,92,362.

ತಾಲ್ಲೂಕಿನ ದಕ್ಷಿಣ ಹಾಗೂ ಪಶ್ಚಿಮಭಾಗದಲ್ಲಿ ಬೆಟ್ಟಗಳ ಸಾಲುಗಳಿವೆ. ಇವುಗಳಿಂದ ಹರಿದು ಬರುವ ತೊರೆಗಳು 64ಕಿಮೀ ಸುತ್ತಳತೆಯುಳ್ಳ ಶಾಂತಿ ಸಾಗರವನ್ನು (ಸೂಳೆಕೆರೆ) ಸೇರುತ್ತವೆ. ಇಲ್ಲಿಂದ ಹರಿದು ಹರಿಹರದ ಬಳಿಯಲ್ಲಿ ತುಂಗಭದ್ರಾ ನದಿಯನ್ನು ಸೇರುವ ಹೊಳೆಗೆ ಹರಿದ್ರಾ ಎಂದು ಹೆಸರು. ಈ ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಮಾತ್ರ

ಸ್ವಲ್ಪ ಅರಣ್ಯವಿದೆ. ಉಳಿದ ಪ್ರದೇಶದಲ್ಲಿ ಮೈದಾನ ಮತ್ತು ವಿಸ್ತಾರವಾದ ಹುಲ್ಲುಗಾವಲುಗಳಿವೆ. ಈ ತಾಲ್ಲೂಕಿನ ಉತ್ತರದಲ್ಲಿ ತೋಟಗಳೂ ಕಬ್ಬಿನ ಗದ್ದೆಗಳೂ ಹೆಚ್ಚು. ಶಾಂತಿಸಾಗರದ ಸುತ್ತಮುತ್ತಲ ಪ್ರದೇಶಗಳನ್ನು ವ್ಯವಸಾಯಕ್ಕಾಗಿ ಉತ್ತಮಗೊಳಿಸಲಾಗಿದೆ. ಹತ್ತಿರದಲ್ಲಿರುವ ಭದ್ರಾ ಜಲಾಶಯಕ್ಕೂ ಶಾಂತಿಸಾಗರಕ್ಕೂ ಸಂಬಂಧವೇರ್ಪಡಿಸಿರುವುದರಿಂದ ನೀರಾವರಿ ಸೌಲಭ್ಯ ಹೆಚ್ಚು ಲಭ್ಯವಾಗಿ ವ್ಯವಸಾಯ ವಾಣಿಜ್ಯಗಳಲ್ಲಿ ಈ ತಾಲ್ಲೂಕು ಅಭಿವೃದ್ಧಿ ಹೊಂದಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 749ಮಿಮೀ. ಸೂಳೆಕೆರೆಯ ಉತ್ತರ ಮತ್ತು ವಾಯವ್ಯ ಭಾಗದಲ್ಲಿ ಫಲವತ್ತಾದ ಕರಿಮಣ್ಣಿನ ಭೂಮಿ ಇದ್ದು ಹತ್ತಿ, ಜೋಳ, ರಾಗಿಯನ್ನು ಬೆಳೆಯುವರು. ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಕಲ್ಲುಮಿಶ್ರಿತ ಕೆಂಪುಮಣ್ಣಿನ ಭೂಮಿ ಇದೆ. ತಾಲ್ಲೂಕಿನ ಉಳಿದ ಭಾಗದಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನ ಭೂಮಿ ಇದ್ದು ರಾಗಿ, ಜೋಳ, ಹತ್ತಿ, ತೊಗರಿ, ಹುರುಳಿಯನ್ನು ಬೆಳೆಯುತ್ತಾರೆ. ತಾಲ್ಲೂಕಿನಲ್ಲಿ ಉತ್ತಮ ಮರಗಳು ದೊರೆಯುವುದರಿಂದ ಮರಗೆಲಸ ಇಲ್ಲಿನ ಮುಖ್ಯ ಉದ್ಯಮಗಳಲ್ಲೊಂದು. ಕಂಬಳಿ ಮತ್ತು ಹತ್ತಿನೇಯ್ಗೆ, ಮಡಕೆ ಕುಡಿಕೆಗಳ ತಯಾರಿಕೆ ಮತ್ತು ಗಾಜಿನ ಬಳೆಗಳ ಕೈಗಾರಿಕೆಗಳಿವೆ.

ಈ ತಾಲ್ಲೂಕಿನ ಬಸವಾಪಟ್ಟಣ (ನೋಡಿ) ಹಿಂದೆ ಒಂದು ಪಾಳೆಯಪಟ್ಟಾಗಿತ್ತು. ದೇವರಹಳ್ಳಿಯ (ನೋಡಿ) ಹತ್ತಿರವಿರುವ ಉಡುಮರಡಿ ಬೆಟ್ಟದ ಮೇಲಿರುವ ರಂಗನಾಥ' ದೇವಾಲಯ ಪ್ರಸಿದ್ಧವಾದದ್ದು. ಸಂತೆಬೆನ್ನೂರಿನಲ್ಲಿ (ನೋಡಿ) ಪ್ರತಿವಾರವೂ ನಡೆಯುವ ಸಂತೆ ದೊಡ್ಡದು. ಈ ತಾಲ್ಲೂಕಿನ ಹೋದಿಗೆರೆಯಲ್ಲಿ (ನೋಡಿ) ಶಿವಾಜಿಯ ತಂದೆ ಶಹಾಜಿಯ ಸಮಾಧಿಯಿದೆ.

ಚನ್ನಗಿರಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಶಿವಮೊಗ್ಗದ ಈಶಾನ್ಯಕ್ಕೆ 52ಕಿಮೀ ದೂರದಲ್ಲಿ ಭದ್ರಾವತಿ-ಚಿತ್ರದುರ್ಗ ಹೆದ್ದಾರಿಯಲ್ಲಿದೆ. ಜನಸಂಖ್ಯೆ 18,517. ಇದೊಂದು ಉತ್ತಮ ವ್ಯಾಪಾರ ಕೇಂದ್ರವಾಗಿದೆ. ಚನ್ನಗಿರಿಯಿಂದ ಭದ್ರಾವತಿ, ಹೊಳಲ್ಕೆರೆಗಳಿಗೂ ಶಿವನಿ, ಹೊಳೆಹೊನ್ನೂರು, ನಲ್ಲೂರು, ಬಸವಾಪಟ್ಟಣ, ಕುಕನೂರು, ಸಂತೆಬೆನ್ನೂರು, ತ್ಯಾವಣಗಿ, ಬಾಡಗಳ ಕಡೆಗೂ ರಸ್ತೆ ಸಂಪರ್ಕವಿದೆ. ಭದ್ರಾವತಿ-ಚಿತ್ರದುರ್ಗ ರಸ್ತೆ ಈ ಪಟ್ಟಣದ ಮೂಲಕ ಸಾಗುತ್ತದೆ. ರಾಣಿ ಚೆನ್ನಮ್ಮಾಜಿ ಇಲ್ಲೊಂದು ಕೋಟೆಯನ್ನು ಕಟ್ಟಿಸಿ ಈ ಪಟ್ಟಣಕ್ಕೆ ತನ್ನ ಹೆಸರನ್ನಿಟ್ಟು ತನ್ನ ತಂಗಿಗೆ ಜಹಗೀರಿಯಾಗಿ ಕೊಟ್ಟಳು. ನಗರದ ನೈಋತ್ಯ ಮೂಲೆಯಲ್ಲಿ ಇರುವ ಸಣ್ಣಬೆಟ್ಟದ ಮೇಲೆ ಕೋಟೆಯಿದೆ.

ಇಲ್ಲಿಯ ಕಲ್ಲೇಶ್ವರ ದೇವಾಲಯ ಹೊಯ್ಸಳ ಶೈಲಿಯ ಹಳೆಯ ಕಟ್ಟಡವೆಂದು ಕಾಣುತ್ತದೆ. ಇದರ ಎರಡು ಗರ್ಭಗೃಹಗಳ ಪೈಕಿ ಒಂದು ದಕ್ಷಿಣಾಭಿಮುಖವಾಗಿದೆ. ಇದರಲ್ಲಿ 5' ಎತ್ತರದ ಕೇಶವ ವಿಗ್ರಹವಿದೆ. ಇನ್ನೊಂದು ಪೂರ್ವಾಭಿಮುಖವಾಗಿದೆ. ಇಲ್ಲಿ ಲಿಂಗವಿದೆ.

ಬೆಟ್ಟದ ತುದಿಯಲ್ಲಿರುವ ದೇವಸ್ಥಾನ ಬೇಟೆ ರಂಗನಾಥ'ಸ್ವಾಮಿಯದು. ಈ ಸ್ಥಳದಿಂದ ಕಾಣುವ ಸುತ್ತಲಿನ ದೃಶ್ಯ ನಯನಮನೋಹರವಾದುದು. ಉತ್ತರದ ಕಡೆಗೆ 19ಕಿಮೀ ದೂರದಲ್ಲಿರುವ ಸೂಳೆಕೆರೆ ರಮ್ಯವಾಗಿ ಕಾಣಿಸುತ್ತದೆ. ಬೇಟೆ ರಂಗನಾಥ' ಸ್ವಾಮಿಯ ದೇವಾಲಯದ ಮೂಲವಿಗ್ರಹದ ಎತ್ತರ 3'. ಶಂಕ, ಚಕ್ರ, ಬಿಲ್ಲು ಬಾಣಗಳಿಂದ ಅಲಂಕೃತವಾಗಿರುವ ಈ ಮೂರ್ತಿ ಬೇಟೆಗಾರನ ಉಡುಪು ತೊಡಪುಗಳಿಂದ ಕೂಡಿದೆ.

ಕಲ್ಲುಮಠ ಎನ್ನುವ ಒಂದು ವೀರಶೈವ ಮಠವೂ ಇಲ್ಲುಂಟು. ಇಲ್ಲಿಯ ದೊಡ್ಡ ಮಸೀದಿಯಲ್ಲಿ ಮೊಹಬ್ಬತ್-ಷಾ-ಮಸ್ತಾನ್ ಖಾದ್ರಿ ಎನ್ನುವವರ ಗೋರಿಯುಂಟು. ಇದು 1636ರಲ್ಲಿ ನಿರ್ಮಿತವಾದುದು. ಟಿಪ್ಪು, ದಿವಾನ್ ಪೂರ್ಣಯ್ಯ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು ಈ ಮಸೀದಿಗೆ ಸನ್ನದುಗಳನ್ನು ನೀಡಿದ್ದರೆಂದು ತಿಳಿದುಬರುತ್ತದೆ. *

**ಚನ್ನಪಟ್ಟಣ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೈಋತ್ಯ ಭಾಗದಲ್ಲಿರುವ ತಾಲ್ಲೂಕು ಹಾಗೂ ಅದರ ಮುಖ್ಯ ಸ್ಥಳ. 1873ರಲ್ಲಿ ಚನ್ನಪಟ್ಟಣ ಕ್ಲೋಸ್‌ಪೇಟೆಯ (ಈಗಿನ ರಾಮನಗರ) ಉಪ-ತಾಲ್ಲೂಕು ಎನಿಸಿತ್ತು; 1892ರಲ್ಲಿ ಕ್ಲೋಸ್‌ಪೇಟೆಯೇ ಚನ್ನಪಟ್ಟಣದ ಉಪತಾಲ್ಲೂಕಾಗಿ ಪರಿಗಣಿಸಲ್ಪಟ್ಟಿತು. ಈಗ ಎರಡೂ ಬೇರೆ ಬೇರೆಯಾಗಿವೆ. ತುಮಕೂರು ಜಿಲ್ಲೆಯ ಕುಣಿಗಲು, ಬೆಂಗಳೂರು ಜಿಲ್ಲೆಯ ರಾಮನಗರ ಹಾಗೂ ಕನಕಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳು ಈ ತಾಲ್ಲೂಕನ್ನು ಸುತ್ತುವರಿದಿವೆ. ಕಸಬ, ವಿರೂಪಾಕ್ಷಪುರ, ಮಳೂರು ಹೋಬಳಿಗಳು, 145 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 542.5 ಚ.ಕಿಮೀ. ಜನಸಂಖ್ಯೆ 2,52,563.

ಈ ಪ್ರದೇಶದ ಮೇಲ್ಮೈ ಲಕ್ಷಣಗಳನ್ನು ಗಮನದಲ್ಲಿಟ್ಟು ಈ ತಾಲ್ಲೂಕನ್ನು ಎರಡು ಭಾಗವಾಗಿ ವಿಂಗಡಿಸಬಹುದು: (1) ಉತ್ತರ ಮತ್ತು ವಾಯವ್ಯ ಭಾಗಗಳಲ್ಲಿ ಹಲವು ಬೆಟ್ಟಗಳ ಸಾಲಿದ್ದು, ಹೆಚ್ಚಾಗಿ ಬೆಂಗಾಡು ಹಾಗೂ ಕುರುಚಲು ಕಾಡುಗಳು ಕಂಡುಬರುವುವು. ಕೆರೆಗಳು ಮೊದಲಾದ ನೀರಾವರಿ ಸಾಧನಗಳಾವುವೂ ಸಾಮಾನ್ಯವಾಗಿ ಕಂಡುಬರುವುದಿಲ್ಲ. (2) ದಕ್ಷಿಣ ಮತ್ತು ನೈಋತ್ಯ ಭಾಗಗಳು ಮೈದಾನ ಪ್ರದೇಶವಾಗಿದ್ದು, ಜನಭರಿತ ಗ್ರಾಮಗಳು ಹಾಗೂ ಹಲವು ಮುಖ್ಯ ಕೆರೆಗಳಿಂದ ಕೂಡಿವೆ.

ಬಣ್ಣದ ಸಾಮಾನು ತಯಾರಿಕೆ

ಕಣ್ವ (ನೋಡಿ) ಈ ತಾಲ್ಲೂಕಿನ ಮುಖ್ಯ ನದಿ. ರಾಮನಗರ ತಾಲ್ಲೂಕಿನಿಂದ ಬರುವ ಈ ನದಿ ಗದ್ದೆ ತೋಟಗಳಿಂದ ಕೂಡಿರುವ ವಿಶಾಲ ಹಾಗೂ ಫಲವತ್ತಾದ ಕಣಿವೆಯ ಮೂಲಕ ಹರಿದು ಹೋಗುತ್ತದೆ. ಅಬ್ಬೂರಿನ ಹತ್ತಿರ ಇದಕ್ಕೆ ಒಂದು ಕಟ್ಟೆಯನ್ನು ಕಟ್ಟಿದ್ದು, ಇದರಿಂದಾಗಿ ನೀರಾವರಿ ಸೌಕರ್ಯ ಒದಗಿದೆ. ಹಲವು ಕೆರೆಗಳೂ ಇವೆ.

ಈ ಪ್ರದೇಶದ ಭೂಮಿ ಅಷ್ಟು ಸಮವಿಲ್ಲದ್ದರಿಂದ, ಇಲ್ಲಿನ ಮಣ್ಣು ಸಾಕಷ್ಟು ವೈವಿಧ್ಯಮಯವಾಗಿದೆ. ನೀರಿನ ಅನುಕೂಲ ಹೆಚ್ಚಿರುವಲ್ಲಿ ಬತ್ತ, ಕಬ್ಬು, ತೆಂಗು, ಬಾಳೆ, ಮಾವು, ಅಡಕೆ ಮತ್ತು ವೀಳ್ಯದೆಲೆಗಳನ್ನು ಬಹಳವಾಗಿ ಬೆಳೆಯುವರು. ಕಣ್ವನದಿಯ ಕೆಳದಂಡೆಗಳ ಮೇಲೆ, ನೀರಿನ ಆಸರೆ ಹೆಚ್ಚಾಗಿದ್ದು ಇಲ್ಲಿನ ಮಣ್ಣೂ ಪ್ರಶಸ್ತವಾದ್ದರಿಂದ ಹಲವಾರು ತೆಂಗಿನ ತೋಟಗಳು ಸುಂದರವಾಗಿ ಹಬ್ಬಿವೆ. ಖುಷ್ಕಿ ಜಮೀನಿನಲ್ಲಿ ರಾಗಿ, ಜೋಳ ಮುಂತಾದವನ್ನು ಬೆಳೆಯುವರು.

ರೇಷ್ಮೆಸಾಕಣೆ, ಅದರ ನೂಲು ತೆಗೆಯುವುದೂ ಇಲ್ಲಿನ ಜನರ ಒಂದು ಮುಖ್ಯವಾದ ಕಸಬು. ಇಲ್ಲಿನ ಹವೆ ಈ ವ್ಯವಸಾಯಕ್ಕೆ ಬಹಳ ಅನುಕೂಲಕರವಾಗಿದೆ. ಇಲ್ಲಿ ಉಪ್ಪುನೇರಳೆ ಬೆಳೆ ಹೆಚ್ಚು. ತಾಲ್ಲೂಕಿನ ಹಲವೆಡೆಗಳಲ್ಲಿ ಹತ್ತಿಬಟ್ಟೆ ನೇಯ್ಗೆಯಿದೆ.

ಚನ್ನಪಟ್ಟಣದ ಉತ್ತರಕ್ಕೆ 8ಕಿಮೀ ದೂರದಲ್ಲಿ ಕಣ್ವ ನದಿಯ ದಡದಲ್ಲಿರುವ ಅಬ್ಬೂರು ಪ್ರಸಿದ್ಧ ಮಾಧ್ವಮತ ಕೇಂದ್ರಗಳಲ್ಲೊಂದು. ಬ್ರಹ್ಮಣ್ಯತೀರ್ಥರ ಬೃಂದಾವನವಿರುವುದು ಇಲ್ಲೇ. ಇವರ ಗುರುಗಳಾದ ಪುರುಷೋತ್ತಮ ತೀರ್ಥರು ಇದರ ಬಳಿಯಲ್ಲಿ ಸಶರೀರವಾಗಿ ಗುಹಾಪ್ರವೇಶ ಮಾಡಿದರೆಂಬ ಹೇಳಿಕೆಯುಂಟು. ವ್ಯಾಸರಾಯರೂ ಇಲ್ಲೇ ನೆಲಸಿದ್ದರೆಂದೂ ಶ್ರೀಪಾದರಾಯರು ತಮ್ಮ ಬಾಲ್ಯವನ್ನು ಇಲ್ಲೇ ಕಳೆದರೆಂದೂ ಪ್ರತೀತಿ. ಅಪ್ರಮೇಯ ದೇವಾಲಯುವಿರುವ ದೊಡ್ಡಮಳೂರು ಐತಿಹಾಸಿಕ ಸ್ಥಳ.

ಸಮೀಪದ ಚಿಕ್ಕಮಳೂರಿನಲ್ಲಿ ಚೋಳರ ಕಾಲದ ಕೆಲವು ದೇವಾಲಯಗಳಿವೆ. ಚನ್ನಪಟ್ಟಣಕ್ಕೆ 9ಕಿಮೀ ದೂರದಲ್ಲಿರುವ ಮಾನಕುಂದ (ಪ್ರಾಚೀನ ಮಾಕುಂದ) ಗಂಗವಂಶದ ಭೂವಿಕ್ರಮ ಮತ್ತು ಶಿವಮಾರರ ರಾಜಧಾನಿಯಾಗಿತ್ತು. ಜಗದೇವರಾಯನ ತಮ್ಮ ಯುವರಾಜ ಅಂಕುಶರಾಯ ಇಲ್ಲಿ ಸ್ವಲ್ಪಕಾಲ ಇದ್ದನಂತೆ. ಚನ್ನಪಟ್ಟಣದ ದಕ್ಷಿಣಕ್ಕೆ 8ಕಿಮೀ ದೂರದಲ್ಲಿರುವ ಹೊಂಗನೂರು, ಗಂಗರ ಕಾಲದಲ್ಲಿ ಚಿಕ್ಕಗಂಗವಾಡಿಯ ಮುಖ್ಯಪಟ್ಟಣವೆನಿಸಿತ್ತು. ಅನಂತರ ಹೊಯ್ಸಳ ರಾಜ್ಯಪಾಲನ ವಾಸ ಸ್ಥಾನವೆನಿಸಿತ್ತು. ಚನ್ನಪಟ್ಟಣದಿಂದ 6ಕಿಮೀ ದೂರದಲ್ಲಿ ಸಣ್ಣ ನದಿಯ ಎಡದಂಡೆಯಲ್ಲಿರುವ ಕೂಡಲೂರು ಚೋಳರ ಆಳಿಕೆಯಲ್ಲಿ ರಾಜರಾಜ ಚತುರ್ವೇದಿಮಂಗಲಂ ಎಂದು ಪ್ರಸಿದ್ಧವಾಗಿತ್ತು. ಇಲ್ಲಿ ಚೋಳರ ಕಾಲದ ಅವಶೇಷಗಳಿವೆ. ಆ ಕಾಲದ ಕೆಲವು ಸುಂದರ ಕಂಚಿನ ವಿಗ್ರಹಗಳು ದೊರಕಿವೆ. ಈ ಗ್ರಾಮವನ್ನು ಹೈದರ್ ಅಲಿ ಫಕೀರನೊಬ್ಬನಿಗೆ ಇನಾಂ ಕೊಟ್ಟಂತೆ ತಿಳಿದುಬರುತ್ತದೆ. ಕಣ್ವ ಜಲಾಶಯ ಒಂದು ಪ್ರೇಕ್ಷಣೀಯ ಸ್ಥಳ. ನಾಗವಾರ, ಮೈಲನಾಯಕನಹಳ್ಳಿ, ಮಂಗಳವಾರಪೇಟೆ, ಅಕ್ಕೂರು, ಇಗ್ಗಲೂರು, ಸೋಗಲ, ಚಕ್ಕೆರೆ ಮತ್ತು ಬೇವೂರು ಈ ತಾಲ್ಲೂಕಿನ ಇತರ ಕೆಲವು ಮುಖ್ಯ ಗ್ರಾಮಗಳು.

ಬಣ್ಣದ ಆಟಿಕೆಗಳು

ಚನ್ನಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರಿನ ನೈಋತ್ಯದಲ್ಲಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ 60ಕಿಮೀ ದೂರದಲ್ಲಿದೆ. ಬೆಂಗಳೂರು-ಮೈಸೂರು ರೈಲುಮಾರ್ಗ ಈ ಊರನ್ನು ಹಾದುಹೋಗುತ್ತದೆ. ಚನ್ನಪಟ್ಟಣದಿಂದ ಆಗ್ನೇಯದಲ್ಲಿ ಸಾತನೂರಿಗೆ ಒಂದು ರಸ್ತೆಯಿದ್ದು, ಅದರ ಮತ್ತೊಂದು ಕವಲುರಸ್ತೆ ಹಲಗೂರಿಗೆ ಹೋಗುತ್ತದೆ. ಜನಸಂಖ್ಯೆ 63,561.

ಚನ್ನಪಟ್ಟಣ ಒಂದು ವ್ಯಾಪಾರ ಕೇಂದ್ರ. ಪಟ್ಟಣದ ದಟ್ಟವಾದ ಜನವಸತಿ ಇರುವುದು ಶುಕ್ರವಾರಪೇಟೆಯಲ್ಲಿ. ಇದು ಕೋಟೆ ಪ್ರದೇಶದ ಈಶಾನ್ಯದಲ್ಲಿದೆ. ಮೃದುವಾದ ಆಲೆಮರದ ಬಣ್ಣದ ಸಾಮಾನುಗಳು ತಯಾರಾಗುವುದು ಇಲ್ಲೇ; ಇವು ಇಂದಿಗೂ ಚನ್ನಪಟ್ಟಣದ ಬೊಂಬೆಗಳು ಎಂದು ವಿಶ್ವವಿಖ್ಯಾತವಾಗಿದ್ದು ಹೊರದೇಶಗಳಿಗೆ ರಫ್ತಾಗುತ್ತವೆ. ವೀಣೆಯ ತಂತಿಗಳೂ ಗಾಜಿನ ಬಳೆಗಳೂ ಹಿಂದೆ ಇಲ್ಲಿ ತಯಾರಾಗುತ್ತಿದ್ದುವು. ಈಗ ಆ ಕೈಗಾರಿಕೆಗಳು ಕ್ಷೀಣಿಸಿವೆ.

ಚನ್ನಪಟ್ಟಣದಲ್ಲಿ ಕೋಟೆಯ ಆಂಜನೇಯಸ್ವಾಮಿ ಮತ್ತು ವರದರಾಜಸ್ವಾಮಿ ಪೇಟೆಯ ನೀಲಕಂಠೇಶ್ವರಸ್ವಾಮಿ ಈ ದೇವಾಲಯಗಳೇ ಅಲ್ಲದೆ ಮಸೀದಿಗಳೂ ಚರ್ಚುಗಳೂ ಇವೆ. ಚನ್ನಪಟ್ಟಣದಲ್ಲಿ ಕರ್ನಾಟಕ ರಾಜ್ಯ ಪೋಲಿಸ್ ತರಬೇತು ಶಾಲೆ, ತಾಂತ್ರಿಕ ಶಿಕ್ಷಣಶಾಲೆ ಮತ್ತು ಗ್ರಾಮೀಣ ಕರಕುಶಲಗಳ ತರಬೇತು ಕೇಂದ್ರ ಇವೆ. ಸ್ಪನ್ ರೇಷ್ಮೆ ಕಾರ್ಖಾನೆ ಇಲ್ಲಿನ ದೊಡ್ಡ ಕೈಗಾರಿಕೆ.

ಕನ್ನಡ ಬಾಲಬೋಧೆ ಮೊದಲ್ಗೊಂಡು ಅನೇಕ ಕನ್ನಡ ಕೃತಿಗಳನ್ನು ರಚಿಸಿದ ಚ.ವಾಸುದೇವಯ್ಯನವರೂ (ನೋಡಿ) ಕಥೆ, ನಾಟಕ ವಿಮರ್ಶೆ ಮುಂತಾದ ನಾನಾ ಸಾಹಿತ್ಯ ಪ್ರಕಾರಗಳಲ್ಲಿ ಕೃತಿರಚನೆ ಮಾಡಿ ಆಧುನಿಕ ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿದ ಸಿ.ಕೆ.ವೆಂಕಟರಾಮಯ್ಯನವರೂ (ನೋಡಿ) ಚನ್ನಪಟ್ಟಣದವರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಸಾಹಿತಿ ದೇ.ಜವರೇಗೌಡರು (ನೋಡಿ) ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಗ್ರಾಮದವರು.

ಸುಂದರ ತಾಣವಾದ ಈ ಊರು ವ್ಯಾಸತೀರ್ಥರ ಕಾಲದಲ್ಲಿ ಚಂದಪಟ್ಟಣವೆಂದು ಹೆಸರಾಯಿತೆಂದೂ ಅನಂತರ ಇದು ಚನ್ನಪಟ್ಟಣ ಎಂದಾಯಿತೆಂದೂ ಹೇಳಲಾಗಿದೆ. ಕೃತಯುಗದಲ್ಲಿ ವಿಜಯಪಾಲರೂ ತ್ರೇತಾಯುಗದಲ್ಲಿ ಕಣ್ವಮಹರ್ಷಿಗಳೂ ದ್ವಾಪರದಲ್ಲಿ ಲಂಬಕರ್ಣರೂ ಕಲಿಯುಗದಲ್ಲಿ ವಿಜ್ಞಾನೇಶ್ವರರೂ ಇದ್ದರೆಂಬುದು ಜನಪದ ನಂಬಿಕೆ.

3ನೆಯ ಪೆನುಗೊಂಡದ ಯುದ್ಧದಲ್ಲಿ ಅಸಾಧಾರಣ ಶೌರ್ಯ ಪ್ರದರ್ಶಿಸಿದ ಜಗದೇವರಾಯನ ಸೇವೆಯನ್ನು ಮೆಚ್ಚಿ ವಿಜಯನಗರದ ಶ್ರೀರಂಗರಾಯ ಇವನಿಗೆ ಘನಗಿರಿರಕ್ಷಕ ಎಂಬ ಬಿರುದನ್ನೂ ಚನ್ನಪಟ್ಟಣದ ಸೀಮೆಯನ್ನೂ ಕೊಟ್ಟನಂತೆ. ಅಲ್ಲದೆ ತನ್ನ ಮಗಳನ್ನೂ ಕೊಟ್ಟು ವಿವಾಹ ಮಾಡಿದನಂತೆ. ಜಗದೇವರಾಯ ಚನ್ನಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಸು.1580ರಲ್ಲಿ ಇಲ್ಲಿನ ಕೋಟೆಯನ್ನು ಕಟ್ಟಿಸಿದ. ಆತನ ಮರಣಾನಂತರ, ಅವನ ಮಗ ಕುಮಾರ ಜಗದೇವರಾಯ ಆಳಿದ (ನೋಡಿ: ಚನ್ನಪಟ್ಟಣದ ಪಾಳೆಯಗಾರರು). 1630ರಲ್ಲಿ ಮೈಸೂರಿನ ಚಾಮರಾಜ ಒಡೆಯರು ಬಹುಕಾಲ ಮುತ್ತಿಗೆ ಹಾಕಿ ಈ ಕೋಟೆಯನ್ನು ವಶಪಡಿಸಿಕೊಂಡರು. 1759ರಲ್ಲಿ ಗೋಪಾಲ ಹರಿಯ ಮುಖಂಡತ್ವದಲ್ಲಿದ್ದ ಮರಾಠಾ ಸೇನೆ ಅದರ ಸುಮಾರು ಅರ್ಧ ಭಾಗವನ್ನು ನಾಶಮಾಡಿತು. ಹೈದರ್‌ಅಲಿ ಈ ಮುತ್ತಿಗೆಯನ್ನು ನಿವಾರಿಸಿದ. ದಿವಾನ್ ಪೂರ್ಣಯ್ಯ ಇಲ್ಲಿನ ಕೋಟೆಯನ್ನು ಮತ್ತೆ ದುರಸ್ತುಗೊಳಿಸಿದ. ಆದರೆ 19ನೆಯ ಶತಮಾನದಲ್ಲಿ ಇದು ನಿರುಪಯುಕ್ತವಾಗಿ ಶಿಥಿಲವಾಯಿತು. (ಎಸ್.ಜ.)

ಇಲ್ಲಿನ ಇತಿಹಾಸ ಕಾಲಕ್ಕೆ ಸಂಬಂಧಿಸಿದ ಸ್ಮಾರಕಗಳಲ್ಲಿ ಕೋಟೆಯಲ್ಲಿರುವ ವರದರಾಜ ದೇವಾಲಯ ಪ್ರಾಚೀನವಾದುದು. ಸು.15ನೆಯ ಶತಮಾನದಲ್ಲಿ ರಚಿತವಾದ ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಪಾತಾಳಾಂಕಣಗಳಿವೆ. ಸುತ್ತಲ ಪ್ರಾಕಾರ ಶಿಥಿಲವಾಗಿದೆ. ಪೇಟೆ ಭಾಗದಲ್ಲಿರುವ ಲಕ್ಷ್ಮೀನಾರಾಯಣ ಮತ್ತು ನೀಲಕಂಠೇಶ್ವರ ದೇವಾಲಯಗಳೂ ಸುಮಾರು ಇದೇ ಕಾಲದವು. ನೀಲಕಂಠೇಶ್ವರ ದೇವಾಲಯ ಗರ್ಭಗೃಹ, ಸುಕನಾಸಿ, ದೊಡ್ಡ ನವರಂಗ ಇತ್ಯಾದಿಗಳನ್ನೂ ಸುತ್ತು ಪ್ರಾಕಾರ ಮತ್ತು ಪಾತಾಳಾಂಕಣವನ್ನೂ ಒಳಗೊಂಡಿರುವ ದೊಡ್ಡಕಟ್ಟಡ. ಆದರೆ ಪಾತಾಳಾಂಕಣ ಮತ್ತು ಪ್ರಾಕಾರ ಸು.18ನೆಯ ಶತಮಾನದ ಸೇರ್ಪಡೆಗಳಂತೆ ತೋರುತ್ತವೆ. ಇಲ್ಲಿನ ತಿಮ್ಮಪ್ಪರಾಜ ಅರಸರ ಅರಮನೆ 19ನೆಯ ಶತಮಾನದ ಆದಿಭಾಗದಲ್ಲಿ ಚನ್ನಪಟ್ಟಣದಲ್ಲಿ ಫೌಜುದಾರರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಮೈದುನ ತಿಮ್ಮಪ್ಪರಾಜರು ಕಟ್ಟಿಸಿದ್ದು. ದೊಡ್ಡ ಹಜಾರಗಳು, ಉತ್ತಮ ಮರದ ದ್ವಾರ ಬಂಧ ಇತ್ಯಾದಿ ಕೆತ್ತನೆಗಳು, ನೀರಿನ ಕಾರಂಜಿಗಳು, ಸುಂದರ ವರ್ಣಚಿತ್ರಗಳು – ಇವುಗಳಿಂದ ಅಲಂಕೃತವಾಗಿದ್ದ ಈಗ ಕಟ್ಟಡ ಬಹಳ ಶಿಥಿಲಗೊಂಡಿದೆ.

ಚನ್ನಪಟ್ಟಣದ ಉತ್ತರಕ್ಕೆ ಬೆಂಗಳೂರು ರಸ್ತೆಯ ಪಕ್ಕದಲ್ಲಿ ಗೋರಿಗಳಿವೆ. ಅದರಲ್ಲಿ ಒಂದು ಹೈದರ್ ಅಲಿಯ ಧರ್ಮಗುರುವಾಗಿದ್ದ ಅಕ್ಕಲ್ ಷಾ ಖಾದ್ರಿಯದು. ಇವನ ಮತ್ತು ಇವನ ಸಮೀಪ ಬಂಧುಗಳ ಗೋರಿಗಳು ಸು.20 ಅಡಿ ಚೌಕದ ದೊಡ್ಡ ಕೋಣೆಯಲ್ಲಿವೆ. ಎತ್ತರದ

ಜಗತಿಯ ಮೇಲೆ ಮಧ್ಯದಲ್ಲಿ ಈ ಕೋಣೆ ಇದ್ದು ಅದರ ಸುತ್ತಲೂ ತೆರೆದ ವರಾಂಡ ಇದೆ. ಈ ವರಾಂಡದ ಪಶ್ಚಿಮದೆಡೆ ಇರುವ ಕಂಬಗಳು ದೇವಾಲಯದ ಕಂಬಗಳಂತೆ ಕಾಣುತ್ತವೆ. ಕೋಣೆಯ ಸುತ್ತ ಇರುವ ಗೋಡೆಗಳು ದಪ್ಪವಾಗಿದ್ದು ಮೂಲೆಗಳಲ್ಲಿ ಚಿಕ್ಕ ಕೋಣೆಗಳನ್ನು ಮಾಡಲಾಗಿದೆ. ಕೋಣೆಯ ಚಾವಣಿಯ ಮೇಲೆ ಮುಗಲ್ ಶೈಲಿಯ ಗುಜ್ಜುಗುಮ್ಮಟವಿದ್ದು ಅದರ ತುದಿಯಲ್ಲಿ ಕಳಸವಿದೆ. ಈ ಕಟ್ಟಡದ ಸುತ್ತಲೂ ಇತರ ಅನೇಕ ಸಣ್ಣ ಗೋರಿಗಳಿವೆ. ಅಲ್ಲದೆ ಪಶ್ಚಿಮಕ್ಕೆ ಒಂದು ಚಿಕ್ಕ ಮಸೀದಿ ಇದೆ.



ಸೈಯದ್ ಇಬ್ರಾಹೀಂ ದರ್ಗಾ

ಇನ್ನೊಂದು ಗೋರಿ ಟಿಪ್ಪುಸುಲ್ತಾನನ ಕಾಲದಲ್ಲಿ ಬೆಂಗಳೂರಿನ ಫೌಜುದಾರನಾಗಿದ್ದ ಸೈಯದ್ ಇಬ್ರಾಹೀಮನದು (ಈತ ಟಿಪ್ಪುವಿನ ಬಂಧನಕ್ಕೆ ಒಳಗಾಗಿದ್ದ ಇಂಗ್ಲಿಷರ ಬಗ್ಗೆ ಅನುಕಂಪ ತೋರಿಸಿದವನೆಂದು ಖ್ಯಾತನಾಗಿದ್ದಾನೆ). ಇದರಲ್ಲಿಯೂ ಎತ್ತರದ ಜಗತಿ, ಮೇಲೆ ಮಧ್ಯದಲ್ಲಿ ಒಂದು ಚಿಕ್ಕ ಗೋರಿ ಕೋಣೆ ಮತ್ತು ಅದರ ಸುತ್ತಲೂ ಹೊರ ಅಂಚಿನ ಕಂಬಗಳ ಮೇಲೆ ಎತ್ತಿದ ತೆರೆದ ವರಾಂಡ ಇವೆ. ಕೋಣೆಯ ಮೇಲೆ ಕಳಸ ತುದಿಯುಳ್ಳ ಗುಮ್ಮಟ ಇದೆ.

ಈ ದರ್ಗಾಗಳ ಸಮೀಪದಲ್ಲಿ ರಸ್ತೆಯಂಚಿನಲ್ಲಿ ಉಮ್ಮರ್‌ಖಾನ್ ಎಂಬುವನ ಗೋರಿ ಇದೆ. ಇದರಲ್ಲಿ ಒಂದು ನೆಲಮಾಳಿಗೆ ಇರುವುದೆಂದೂ ಅದರಲ್ಲಿ ಉಮ್ಮರ್ ಖಾನ್‌ನ ಶವಪೆಟ್ಟಿಗೆ ಇರುವ ಒಂದು ತೊಟ್ಟಿಲನ್ನು ತೂಗುಹಾಕಲಾಗಿದೆ ಎಂದೂ ಪ್ರತೀತಿ. *

**ಚನ್ನಪಟ್ಟಣದ ಪಾಳೆಯಗಾರರು :** 16-17ನೆಯ ಶತಮಾನಗಳಲ್ಲಿ ಪೆನುಗೊಂಡೆಯ ವಿಜಯನಗರದ ಸಂತತಿಯವರ ಸಾಮಂತರಾಗಿ ಚನ್ನಪಟ್ಟಣದಿಂದ ಆಳಿದ ಪಾಳೆಯಗಾರರು. ಮೂಲತಃ ಇವರು ಬಾರಾಮಹಲ್ ಪ್ರದೇಶಕ್ಕೆ ಸೇರಿದವರು. ತೆಲುಗು ಬಣಜಿಗ ಕುಲದವರು. ಈ ವಂಶದ ಮೂಲಪುರುಷ ರಾಣೋಜಿರಾಯ. ಆದರೆ ಈ ವಂಶದ ಯಶಸ್ಸು ಹಾಗೂ ಪ್ರಭಾವವನ್ನು ಹೆಚ್ಚಿಸಲು ಕಾರಣನಾದವನು ಒಂದನೆಯ ಜಗದೇವರಾಯ.

ಒಂದನೆಯ ಜಗದೇವರಾಯ ಪೆನುಗೊಂಡೆಯಲ್ಲಿ ಆಳುತ್ತಿದ್ದ ಅರವೀಡು ಮನೆತನದ ತಿಮ್ಮರಾಜನ ಮಾವ. 1577ರಲ್ಲಿ ಬಿಜಾಪುರ ಮತ್ತು ಅಹಮದ್ ನಗರದ ಸುಲ್ತಾನರು ಪೆನುಗೊಂಡೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರಲು ತಿಮ್ಮರಾಜ ತನ್ನ ರಾಜಧಾನಿಯನ್ನು ಚಂದ್ರಗಿರಿಗೆ ವರ್ಗಾಯಿಸಿದ್ದ. ಇದರಿಂದಾಗಿ ಆಕ್ರಮಣವನ್ನು ಎದುರಿಸುವ ಜವಾಬ್ದಾರಿ ಜಗದೇವರಾಯನ ಪಾಲಿಗೆ ಬಂತು. ಹುಟ್ಟು ಸಾಹಸಿಯೂ ವೀರ ಯೋಧನೂ ಆದ ಜಗದೇವರಾಯ, ಬಿಜಾಪುರದ ಸೇನೆಯನ್ನು ಹಿಮ್ಮೆಟ್ಟಿಸಿ ಪೆನುಗೊಂಡೆಯನ್ನು ವಿಪತ್ತಿನಿಂದ ಪಾರುಮಾಡಿದ. ಇದರಿಂದ ಸಂತೋಷಗೊಂಡ ತಿಮ್ಮರಾಜ ಒಂಬತ್ತು ಲಕ್ಷ ಪಗೋಡಗಳ ವರಮಾನವುಳ್ಳ ದೊಡ್ಡ ಜಿಲ್ಲೆಯೊಂದನ್ನು ಜಗದೇವರಾಯನಿಗೆ ಕೊಟ್ಟ. ಈ ಪ್ರದೇಶ ಬಾರಾಮಹಲಿನಿಂದ ಪಶ್ಚಿಮಘಟ್ಟಗಳವರೆಗೆ ವ್ಯಾಪಿಸಿದ್ದು ಮುಳಬಾಗಲು, ಪಿರಿಯಾಪಟ್ಟಣ, ಕಾನಕಾನಹಳ್ಳಿ ಮತ್ತು ಬೂದಿಹಾಳು - ಇವು ಸೇರಿದ್ದುವು. ಹೊಸದಾಗಿ ಪಡೆದ ಈ ದೊಡ್ಡ ರಾಜ್ಯದ ವ್ಯವಸ್ಥೆಗೆ ಅನುಕೂಲವಾಗಲು ಈ ಪ್ರದೇಶದ ಕೇಂದ್ರದಲ್ಲಿದ್ದ ಚನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಕೋಟೆಯನ್ನು ಕಟ್ಟಿಸಿದ. ಅಂದಿನಿಂದ ಈ ಮನೆತನದ ಪಾಳೆಯಗಾರರಿಗೆ ಚನ್ನಪಟ್ಟಣದ ಪಾಳೆಯಗಾರರು ಎಂಬ ಹೆಸರಾಯಿತು.

ಜಗದೇವರಾಯ ಹದಿನೈದು ವರ್ಷಗಳ ತನ್ನ ಆಳಿಕೆಯ ಅವಧಿಯಲ್ಲಿ ಚನ್ನಪಟ್ಟಣ ರಾಜ್ಯಕ್ಕೆ ಒಂದು ರೂಪವನ್ನು ತಂದುಕೊಟ್ಟ. ಕೆಲವು ಗ್ರಾಂಥಿಕ ಮೂಲಗಳಲ್ಲಿ ಈ ವಂಶದವರ ಅನುಕ್ರಮವನ್ನು ಹೀಗೆ ಸೂಚಿಸಲಾಗಿದೆ: ರಾಣೋಜಿರಾಯ, ಇಮ್ಮಡಿ ಜಗದೇವರಾಯ (ಆಳಿಕೆ 15ವರ್ಷ), ಮುಮ್ಮಡಿ ಜಗದೇವರಾಯ (8 ವರ್ಷ), ಕುಮಾರ ಜಗದೇವರಾಯ (7 ವರ್ಷ) ಮತ್ತು ಅಂಕುಶರಾಯ (16 ವರ್ಷ). 1623ಕ್ಕೆ ಸೇರಿದ ಒಂದು ಶಾಸನದಲ್ಲಿ ಚನ್ನಪಟ್ಟಣದ ಪಾಳೆಯಗಾರರ ಅನುಕ್ರಮ ಈ ರೀತಿ ಇದೆ: ರಾಣ ಪೆದಜಗದೇವರಾಯ, ಅವನ ಮಗ ಜಗದೇವರಾಯ, ಅವನ ಮಗ ಇಮ್ಮಡಿ ಕುಮಾರ ಜಗದೇವರಾಯ (1623). 1630ರಲ್ಲಿ ಮೈಸೂರಿನ ಚಾಮರಾಜ ಒಡೆಯರು ಚನ್ನಪಟ್ಟಣವನ್ನು ವಶಪಡಿಸಿಕೊಂಡರು. ಇದರೊಂದಿಗೆ ಈ ರಾಜ್ಯದ ಇತರ ಭಾಗಗಳಾಗಿದ್ದ ಕಾನಕಾನಹಳ್ಳಿ, ಪಿರಿಯಾಪಟ್ಟಣಗಳೂ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾದ್ದಲ್ಲದೆ ಚನ್ನಪಟ್ಟಣದ ಪಾಳೆಯಗಾರರ ಆಳಿಕೆಯೂ ಕೊನೆಗೊಂಡಿತು. (ಎಚ್.ವಿ.ಎಸ್.)

**ಚನ್ನಬಸವಾಂಕ :** ಸು.1550. ವೀರಶೈವ ಕವಿ. ಮಹಾದೇವಿಯಕ್ಕನ ಪುರಾಣ ಎಂಬ ಕಾವ್ಯದ ಕರ್ತೃ. ಬಸವಾಂಕ-ಗಂಗಾಂಬೆಯರ ಮೊಮ್ಮಗ. ರುದ್ರಕವಿ ನಾಗಭೂಷಣಾಚಾರ್ಯನ ಮಗ. ವ್ಯಾಘ್ರಜಿನಾಂಬರದ ಕಥೆಯ ಚಿದಾನಂದಯತಿಪ ಶ್ರೀ ಗುರುಬಸವರಾಜನ ಶಿಷ್ಯ. ಪೂರ್ವಕವಿಗಳಲ್ಲಿ ಹರಿಹರ, ರಾಘವಾಂಕ, ಶೃಂಗಿರಾಜ, ಕೆರೆಯ ಪದ್ಮರಸ, ಕೇಶಿರಾಜ, ಭೀಮರಸ, ಕರಸ್ಥಲದ ನಾಗಿದೇವ - ಇವರನ್ನು ಸ್ತುತಿಸಿದ್ದಾನೆ.

ಮಹಾದೇವಿಯಕ್ಕನಪುರಾಣ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 33 ಸ್ಥಲಗಳೂ 1,607 ಪದ್ಯಗಳೂ ಇವೆ. ತಾನು ಈ ಗ್ರಂಥವನ್ನು ಬರೆಯಲು, ಗುರುಬಸವರಾಜರ ಪ್ರೇರಣೆಯೇ ಕಾರಣವೆಂದು ಕವಿ ಹೇಳಿಕೊಂಡಿದ್ದಾನೆ. (ಎನ್.ಆರ್.)

ಶಿವನಿಚ್ಛೆಯಂತೆ ಪಾರ್ವತಿಯ ಸಾತ್ವಿಕ ಕಳೆಯಾದ ಮಹಾದೇವಿ ನಿರ್ಮಲ-ಸುಮತಿಯರಿಗೆ ಮಗಳಾಗಿ ಹುಟ್ಟಿ ಬೆಳೆದು, ಮದುವೆ ನಿಂದು, ಕೌಶಿಕನನ್ನು ತೊರೆದು ಕಲ್ಯಾಣಕ್ಕೆ ಬಂದು ಆತ್ಮಕಲ್ಯಾಣವನ್ನು ಸಾಧಿಸಿ ಕದಳಿಯಲ್ಲಿ ಕರ್ಪೂರವಾಗಿ ಬೆಳಗಿದ ಮಹಾದೇವಿಯ ಚರಿತ್ರೆ ಇದರಲ್ಲಿ ನಿರೂಪಿತವಾಗಿದೆ. ಕಾವ್ಯದ ಬೇರೆ ಬೇರೆ ಪ್ರಸಂಗಗಳಲ್ಲಿ ಭಿನ್ನ ಭಿನ್ನ ರೀತಿಯ ಅಭಿವ್ಯಕ್ತಿಗಾಗಿ ಕವಿ ಆರು ವಿಧವಾದ ಷಟ್ಪದಿಗಳನ್ನು ಬಳಸಿರುವುದಲ್ಲದೆ ಸಾಂಗತ್ಯ ಹಾಗೂ ಸಂಸ್ಕೃತ ಶ್ಲೋಕಗಳನ್ನೂ ಬಳಸಿದ್ದಾನೆ. ಇತರ ವೀರಶೈವ ಪುರಾಣಗಳಲ್ಲಿ ವರ್ಣಿಸಿರುವಂತೆ ಇಲ್ಲಿ ಶಿವನ ಪಂಚವಿಂಶತಿ ಲೀಲೆಗಳು, ಭುವನಕೋಶ ಮೊದಲಾದ ವರ್ಣನೆಗಳಿಗೆ ಕೈ ಹಾಕಿಲ್ಲ. ಮಹಾದೇವಿಯ ಕಥೆಗೆ ಪೋಷಕವಾಗಬಹುದಾದ, ಶಿವನ ಪಾರಮ್ಯವನ್ನು ಮೆರೆವ ಕೆಲವು ಕಥೆಗಳನ್ನು ಮಾತ್ರ ಹವಣರಿತು ಬಳಸಿದ್ದಾನೆ. ಗೀಜನ ಜೋಡಿಯ ಕಥೆ, ಧ್ರುವ-ಮಾರ್ಕಂಡೇಯರ ಕಥೆಗಳಲ್ಲಿ ಬರುವ ಕರುಣರಸ ಅತ್ಯಂತ  ಹೃದಯ ಸ್ಪರ್ಶಿಯಾಗಿದೆ. ಮಹಾದೇವಿಯ ಕಥೆಯನ್ನೇ ಹೋಲುವ ಮಲುಹಣ ಮಂಗಳಾಂಗಿಯರ ಮಗಳಾದ ಚಂದ್ರಿನಿಯ ಕಥೆ ಔಚಿತ್ಯದಿಂದ ಕೂಡಿದೆ; ಅರ್ಥಪೂರ್ಣವಾಗಿದೆ.

ಹರಿಹರ ರಗಳೆಯಲ್ಲಿ ಹೇಳಿದ ಕಥೆಯನ್ನೇ ವಿಸ್ತರಿಸಿ ಹೇಳುವೆನೆಂದು ಚನ್ನಬಸವಾಂಕ ಹೇಳಿಕೊಂಡರೂ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅಲ್ಲಿಯಂತೆ ಇಲ್ಲಿ ಮಹಾದೇವಿಯ ಜನನಕ್ಕಾಗಿ ಶಾಪದ ಕಹಿ ಪ್ರಸಂಗವೇ ಬರುವುದಿಲ್ಲ. ಪಾರ್ವತಿಯ ತಾಮಸ ಕಳೆಯಾದ

ಮಾಯೆಯಿಂದ ನಿರ್ಮಾಯನಾದ ಅಲ್ಲಮನನ್ನು ಸೋಲಿಸಲು ಆಗದೆ ಆಕೆಯ ಸಾತ್ವಿಕ ಕಳೆಯಾದ ಮಹಾದೇವಿ ಭೂಲೋಕದಲ್ಲಿ ಜನಿಸುತ್ತಾಳೆ. ಮಹಾದೇವಿಯ ಜನನ, ಬಾಲ್ಯ, ಯೌವನಾವಸ್ಥೆಗಳನ್ನು ಕಥೆಯ ಉದ್ದೇಶಕ್ಕೆ ಭಂಗ ತಾರದ ರೀತಿಯಲ್ಲಿ ಭಕ್ತಿ ಜ್ಞಾನ ವೈರಾಗ್ಯಕ್ಕನುಗುಣವಾಗಿ ಚಿತ್ರಿಸಿ ಮಹಾದೇವಿಯ ಜೀವನೋದ್ದೇಶದಲ್ಲಿ ಎಲ್ಲಿಯೂ ಕೃತಕತೆಯಾಗಲೀ ಅಸಮಂಜಸತೆಯಾಗಲೀ ಕಾಣದಂತೆ ಚಿತ್ರಿಸಿದ್ದಾನೆ. ಮದುವೆಯ ಪ್ರಸಂಗದಲ್ಲಿ ಅತಿರಂಜನೆಗೆ ಕೈಹಾಕದೆ, ಆಕೆ ಪಡೆದಿದ್ದ ಸಿದ್ಧಿಯ ನಿಲುವಿಗೆ ಧಕ್ಕೆ ತಾರದೆ ಆ ಪ್ರಸಂಗವನ್ನು ಅತ್ಯಂತ ಎಚ್ಚರಿಕೆಯಿಂದ ಚಿತ್ರಿಸಿದ್ದಾನೆ. ಮಹಾದೇವಿಯ ಅಷ್ಟವಿಧ ಪೂಜೆ, ಜಂಗಮ ದಾಸೋಹ, ಶರಣಗೋಷ್ಠಿಗಳ ವರ್ಣನೆಯನ್ನು ಹದವರಿತು ಮಾಡಿದ್ದಾನೆ. ಮೋಹಕ್ಕಿಂತ ತ್ಯಾಗಕ್ಕೆ, ರಾಗಕ್ಕಿಂತ ವಿರಾಗಕ್ಕೆ, ಅಹಂಕಾರಕ್ಕಿಂತ ವಿನಯಕ್ಕೆ, ತಾಮಸಕ್ಕಿಂತ ಸಾತ್ವಿಕತೆಗೆ ಗೆಲುವಾಗುತ್ತದೆ, ಪರಮಾತ್ಮನ ಸಾಮೀಪ್ಯ ದೊರೆಯುತ್ತದೆ ಎಂಬುದನ್ನು ತಿಳಿಸುವುದು ಕಾವ್ಯದ ಉದ್ದೇಶವಿರುವಂತೆ ಕಾಣುತ್ತದೆ. ಮಾಯೆಗೆ ಅಲ್ಲಮ ಹೇಗೆ ಅಸಾಧ್ಯನಾದನೋ ಹಾಗೆಯೇ ಮಹಾದೇವಿ ಇಲ್ಲಿ ಕೌಶಿಕನಿಗೆ ಅಸಾಧ್ಯಳಾಗಿ ಭಕ್ತಿ ಜ್ಞಾನ ವೈರಾಗ್ಯವಲ್ಲರಿಯನ್ನು ಪರಿಕಲಿಸಿ ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನೆಂಬ ಮಾತನ್ನು ಸಾರ್ಥಕಪಡಿಸಿ ನಿಜಪದವಿಯನ್ನು ಪಡೆಯುತ್ತಾಳೆ.

ಕಾವ್ಯಶೈಲಿ ಚೆನ್ನಾಗಿದೆ. ಷಟ್ಪದಿಗೆ ಉಚಿತವಾದ ನಡುಗನ್ನಡವನ್ನೂ ಉರ್ದು, ಪಾರಸೀಭಾಷೆಯ ಶಬ್ದಗಳನ್ನೂ ಗ್ರಾಮ್ಯ ಶಬ್ದಗಳನ್ನೂ ಕವಿ ಸಮರ್ಥ ರೀತಿಯಲ್ಲಿ ಬಳಸಿದ್ದಾನೆ. ವಚನಗಳನ್ನಂತೂ ಇದ್ದ ಹಾಗೆಯೇ ಧಾರಾಳವಾಗಿಯೇ ಉಪಯೋಗಿಸಿಕೊಂಡಿದ್ದಾನೆ. ನಾಟಕೀಯತೆಯಿಂದ ಕೂಡಿದ ಸಂಭಾಷಣಾ ಶೈಲಿ ಈ ಕಾವ್ಯದ ಅತ್ಯಂತ ಆಕರ್ಷಕವಾದ ಗುಣ; ಮಹಾಕವಿ ರಾಘವಾಂಕನ ಹರಿಶ್ಚಂದ್ರಕಾವ್ಯದ ಶೈಲಿಯನ್ನು ಮತ್ತೊಮ್ಮೆ ಇಲ್ಲಿ ಕಾಣಬಹುದು. ಮಹಾದೇವಿಯಕ್ಕನ ಜೀವನದ ಬಗ್ಗೆ ಹರಿಹರನ ರಗಳೆಯನ್ನು ಬಿಟ್ಟರೆ ಸಿಗುವ ಸಮಗ್ರವಾದ ಗ್ರಂಥ ಸದ್ಯಕ್ಕೆ ಇದೊಂದೇ. (ಬಿ.ಎನ್.ಸಿ.)

**ಚನ್ನಮ್ಮ, ಸರ್ವಶೀಲೆ :** ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿ ಮಾಗಡಿ ತಾಲ್ಲೂಕು ಕಲ್ಲೆಯದ (ನೋಡಿ: ಕಲ್ಯ) ಬೆಟ್ಟದಲ್ಲಿ ವಾಸವಾಗಿದ್ದಳು ಎನ್ನಲಾದ ಒಬ್ಬ ಶಿವಶರಣೆ. ವೀರಶೈವಧರ್ಮದಲ್ಲಿ ಉಕ್ತವಾಗಿರುವ 63 ಶೀಲಗಳನ್ನು ಚಾಚೂ ತಪ್ಪದಂತೆ ಈಕೆ ಆಚರಿಸಿದುದರಿಂದ ಸರ್ವಶೀಲೆಯಾದಳು. ಕವಿ ಪಾಲ್ಕುರಿಕೆ ಸೋಮನಾಥ ಆಂಧ್ರದಿಂದ ಇಲ್ಲಿಗೆ ಬಂದು ಈಕೆಯ ಆಶೀರ್ವಾದಕ್ಕೆ ಪಾತ್ರನಾಗಿ ಈಕೆಯಿಂದ ಅನುಭವಬೋಧೆ ಪಡೆದು ಕಲ್ಲೆಯದಲ್ಲೇ ಐಕ್ಯನಾದನೆಂದು ಪಾಲ್ಕುರಿಕೆ ಸೋಮೇಶ್ವರಪುರಾಣದಿಂದ ತಿಳಿದುಬರುತ್ತದೆ. ಈಕೆಯ ಸಮಾಧಿ ಮಾಗಡಿ ತಾಲ್ಲೂಕಿನ ಗುಡೇಮಾರನಹಳ್ಳಿ ಹತ್ತಿರ ಎರಡು ಹಳ್ಳಗಳು ಕೂಡುವ ಸಂಗಮಸ್ಥಳದಲ್ಲಿದೆ. ಇದನ್ನು ಚನ್ನಮ್ಮನ ಮಂಟಪ ಎಂದು ಕರೆಯುತ್ತಾರೆ. *

**ಚನ್ನಯ್ಯ ಎಸ್. :** 1902-71. ಸ್ವಾತಂತ್ರ್ಯ ಹೋರಾಟಗಾರ, ಸಮಾಜ ಸೇವಕ, ಸಾಹುಕಾರ ಚನ್ನಯ್ಯ ಎಂದೇ ಪ್ರಸಿದ್ಧರಾಗಿದ್ದವರು. ಇವರು ಒಕ್ಕಲು ಮನೆತನದಲ್ಲಿ ಮೈಸೂರಿನಲ್ಲಿ 1902 ಏಪ್ರಿಲ್ 26ರಂದು ಜನಿಸಿದರು. ತಂದೆ ಮಳಿಗೆ ಸಿದ್ದಣ್ಣನವರು ವೃತ್ತಿಯಲ್ಲಿ ವ್ಯಾಪಾರಗಾರರಾಗಿದ್ದರು. ಚನ್ನಯ್ಯನವರು ಶಾಲೆಯಲ್ಲಿ ಕಲಿತಿದ್ದು ಕಡಿಮೆ. ವ್ಯಾಪಾರದ ಜತೆಗೆ ಸಾಮಾಜಿಕ ಚಟುವಟಿಕೆಗಳಲ್ಲೂ ಆಸಕ್ತಿವಹಿಸಿದ್ದರು. 1938ರಲ್ಲಿ ಮಂಡ್ಯ ಜಿಲ್ಲೆ ಮದ್ದೂರು ಬಳಿಯ ಶಿವಪುರದಲ್ಲಿ ನಡೆದ ಮೈಸೂರು ಪ್ರಾಂತೀಯ ಕಾಂಗ್ರೆಸ್‌ನ ಪ್ರಥಮ ಸಭೆಯ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಆ ಮೂಲಕ ಇವರು ಸಕ್ರಿಯ ರಾಜಕೀಯಕ್ಕೆ ಮೊದಲ ಬಾರಿಗೆ ಪ್ರವೇಶಿಸಿದರು. ಅಲ್ಲಿಂದ ಮೊದಲುಗೊಂಡು ಅನೇಕ ಸ್ವಾತಂತ್ರ್ಯ ಚಳವಳಿಗಳಲ್ಲಿ ಇವರು ಭಾಗವಹಿಸಿದರು. ಮೈಸೂರು ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟಲು ಅಪಾರವಾಗಿ ಶ್ರಮಿಸಿದರು. 1947ರಲ್ಲಿ ನಡೆದ ಅರಮನೆ ಸತ್ಯಾಗ್ರಹದಲ್ಲೂ ಇವರು ಭಾಗವಹಿಸಿದ್ದರು. ಆಗರ್ಭ ಶ್ರೀಮಂತರಾಗಿದ್ದರೂ ಸರ್ಕಾರದ ಕಡೆ ಮುಖಮಾಡದೆ ಜನತೆಯ ಸಂಘಟನಾ ಕಾರ್ಯದಲ್ಲೇ ತಲ್ಲೀನರಾದರು.

ಆಗಿನ ಮೈಸೂರು ಸಂಸ್ಥಾನದ ಪ್ರಥಮ ಮಂತ್ರಿಮಂಡಲದ ರಚನೆಯಲ್ಲಿ ಇವರು ಮುಖ್ಯ ಪಾತ್ರ ವಹಿಸಿದ್ದರು. ಪಕ್ಷ ಮತ್ತು ಸರ್ಕಾರದಲ್ಲಿ ಇವರು ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಇವರು ಮೈಸೂರು-ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಬಿ.ಡಿ.ಜತ್ತಿ ಅವರು ನೇಮಿಸಿದ್ದ ಮೈಸೂರು ಮಹಾರಾಷ್ಟ್ರ ಗಡಿ ಸಮಿತಿ ಸದಸ್ಯರಾಗಿದ್ದರು. ಆರು ವರ್ಷಗಳ ಕಾಲ ರಾಜ್ಯ ವಿಧಾನಪರಿಷತ್ ಸದಸ್ಯರಾಗಿದ್ದರು (1960-66). 1966ರಲ್ಲಿ ಇವರು ಕಾಂಗ್ರೆಸ್ಸನ್ನು ಬಿಟ್ಟು ಜನತಾಪಕ್ಷವನ್ನು ಕಟ್ಟಿ ಅದರ ಸ್ಥಾಪಕ ಅಧ್ಯಕ್ಷರಾದರು. ಕಾಂಗ್ರೆಸ್ ಇಬ್ಭಾಗವಾದ ಮೇಲೆ ಇವರು ಆಡಳಿತ ಕಾಂಗ್ರೆಸ್ಸಿಗೆ ಸೇರಿದರು.

ಚನ್ನಯ್ಯನವರದು ಬಹುಮುಖ ಪ್ರತಿಭೆ. ತಾವು ವಾಸಿಸುತ್ತಿದ್ದ ಮೈಸೂರು ನಗರದ ಚಟುವಟಿಕೆಗಳೊಂದಿಗೆ ಇವರದು ನಿಕಟ ಸಂಬಂಧವಿತ್ತು. ಈ ನಗರದ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೂ ತಮ್ಮ ಅಮೂಲ್ಯ ಸೇವೆಸಲ್ಲಿಸಿದ್ದಾರೆ. ಒಕ್ಕಲಿಗರ ವಿದ್ಯಾರ್ಥಿ ನಿಲಯ ಮತ್ತು ವಿ.ವಿ.ಮೊಹಲ್ಲಾದಲ್ಲಿರುವ ಕೆ.ಎಚ್.ರಾಮಯ್ಯ ನವರ ವಿದ್ಯಾರ್ಥಿನಿಲಯ ಸ್ಥಾಪನೆಗಾಗಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕಟ್ಟಡಗಳನ್ನು ದಾನ ಮಾಡಿದರು. ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಎಂಬ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿದ್ದರು. ಗರಡಿಯಾಳಾಗಿದ್ದ ಇವರು ಒಂದು ಗರಡಿ ಸಂಘವನ್ನೂ ಕಟ್ಟಿದ್ದರು. ಇಂದು ಅದು ಚನ್ನಯ್ಯ ಗರಡಿ ಸಂಘ ಎಂದೇ ಹೆಸರಾಗಿದೆ.

ಹಳೆಯ ಮೈಸೂರು ರಾಜಕೀಯದಲ್ಲಿ ಸುಮಾರು ಎರಡು ದಶಕಗಳಕಾಲ ಸಕ್ರಿಯ ಪಾತ್ರವಹಿಸಿದ್ದ ಚನ್ನಯ್ಯನವರು 1971 ನವೆಂಬರ್ 20ರಂದು ಮೈಸೂರಿನಲ್ಲಿ ನಿಧನರಾದರು. (ಡಿ.ಎಸ್.ಜೆ.)

**ಚನ್ನರಾಯನದುರ್ಗ :** ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಒಂದು ಗಿರಿದುರ್ಗ. ಕೊರಟಗೆರೆ ಹಾಗೂ ಮಧುಗಿರಿ ಮಾರ್ಗದಲ್ಲಿ ಸಮುದ್ರಮಟ್ಟದಿಂದ 3734 ಅಡಿ ಎತ್ತರದಲ್ಲಿದೆ. ಬೆಟ್ಟದ ಮೇಲಿರುವ ಕೋಟೆಯನ್ನು ಮಧುಗಿರಿ ಪಾಳೆಯಗಾರ ಚನ್ನಪ್ಪಗೌಡ ಕಟ್ಟಿಸಿದ. ಇದನ್ನು ಸು.17ನೆಯ ಶತಮಾನದ ಮಧ್ಯದಲ್ಲಿ ಕಟ್ಟಲಾಯಿತು. ಇದು ಪರ್ವತಾಗ್ರದಲ್ಲಿದ್ದು ಚಿಕ್ಕಬೆಟ್ಟದಲ್ಲಿ ಚೆನ್ನಿಗರಾಯ ಹಾಗೂ ಈಶ್ವರ ದೇವಾಲಯಗಳಿವೆ. ಅರ್ಧಚಂದ್ರಾಕೃತಿಯ ಒಂದು ಸುಂದರ ದೊಣೆ ಇದೆ. ಇಲ್ಲಿ ಅನೇಕ ಹಗೇವುಗಳು ಮತ್ತು ಮದ್ದುಗುಂಡಿನ ಕೊಠಾರಗಳಿವೆ. ಕೆಳಗಿನ ಶೃಂಗದಿಂದ ಮೇಲಿನ ಶೃಂಗಕ್ಕೆ ಹೋಗುವ ದಾರಿಯಲ್ಲಿ ಹಲವು ಬಾಗಿಲುಗಳಿವೆ. ಇಲ್ಲಿನ ಕೋಟೆಯ ಗೋಡೆಯನ್ನು ಕೆಳಸ್ತರದಲ್ಲಿ ಕಲ್ಲಿನಿಂದಲೂ ಮತ್ತು ಅದರ ಮೇಲಿನ ಗೋಡೆಯನ್ನು ಇಟ್ಟಿಗೆಗಳಿಂದಲೂ ಕಟ್ಟಲಾಗಿದೆ. ಏರಿಳಿಯುವ ಮಾರ್ಗ ತುಂಬ ಕಡಿದಾಗಿದೆ. ಸುವರ್ಣಮುಖೀ ನದಿ ಈ ದುರ್ಗದಲ್ಲಿ ಉಗಮಿಸುತ್ತದೆ. ಉತ್ತರ ಪಿನಾಕಿನಿ ಅಥವಾ ಪೆನ್ನಾರ್ ನದಿಗೆ ಸೇರುವ ಅದರ ಶಾಖಾ ನದಿ ಜಯಮಂಗಲಿಗೆ ಸೇರುತ್ತದೆ.

ಮೈಸೂರು-ಮರಾಠ ಯುದ್ಧಗಳಿಗಿಂತ ಮುಂಚೆ ಈ ದುರ್ಗ ಮಧುಗಿರಿ ಪಾಳೆಯಗಾರರ ಅಧೀನದಲ್ಲಿತ್ತು. ಮರಾಠರು ಇದನ್ನು ಆಕ್ರಮಿಸಿ ವಶಪಡಿಸಿಕೊಂಡರು. ಆಗ ಪಾಳೆಯಗಾರನಾಗಿದ್ದ ರಾಮಗೌಡ ಮಧುಗಿರಿಗೆ ಓಡಿಹೋಗಿ ಅಲ್ಲಿ ಆಶ್ರಯಪಡೆದ. ಮೈಸೂರು ರಾಜರ ಸೇನಾನಾಯಕ

ಕೊಮರಯ್ಯ ಎಂಬಾತ ಇದನ್ನು ಮರಾಠರಿಂದ ಕಿತ್ತುಕೊಂಡ ಮತ್ತು ಆಗ ದೊಡ್ಡರಸು ಎಂಬ ಅಧಿಕಾರಿಯನ್ನು ಅಧಿಪತಿಯಾಗಿ ನೇಮಿಸಲಾಯಿತು. ಆ ಸಮಯದಲ್ಲಿ ದುರ್ಗದ ಹೆಸರನ್ನು ಪ್ರಸನ್ನಗಿರಿ ಎಂದು ಬದಲಾಯಿಸಲಾಯಿತು. ಅನಂತರ ಹೈದರ್ ಅಲಿ ಇದನ್ನು ಗೆದ್ದುಕೊಂಡ. ಆರು ವರ್ಷಗಳ ಅನಂತರದಲ್ಲಿ ಮರಾಠರು ಅವನಿಂದ ಪುನಃ ಈ ದುರ್ಗವನ್ನು ಕಿತ್ತುಕೊಂಡರು. ಅನಂತರ ಮತ್ತೆ ಇದನ್ನು ಟಿಪ್ಪು ಸುಲ್ತಾನ್ ಗೆದ್ದುಕೊಂಡ.

ಗಿರಿಯ ಪದತಲದಲ್ಲಿ ಒಂದು ಗುಹಾದೇವಾಲಯವಿದ್ದು ಇದರಲ್ಲೊಂದು ಮಠವಿದೆ. ಇದನ್ನು ಮುರಾರಿಮಠ ಎಂದು ಕರೆಯುತ್ತಾರೆ. ಇಲ್ಲಿ ಎರಡು ಪಾದುಕೆಗಳಿದ್ದು ಅವನ್ನು ಜನ ಪೂಜಿಸುತ್ತಾರೆ. ಮುರಾರಿ ಸ್ವಾಮಿಯ ಅನುಯಾಯಿಗಳ ಎರಡು ಸಮಾಧಿಗಳೂ ಇಲ್ಲಿವೆ. ಅವುಗಳಲ್ಲಿ ಒಂದು, ಈ ಮಠದಲ್ಲಿ ಅನ್ನಸಂತರ್ಪಣೆ ಮಾಡುತ್ತಿದ್ದ ಸ್ವಾಮಿಗಳಿಂದ ಅನ್ನಪೂರ್ಣಾದೇವಿ ಎಂದು ಕರೆಯಲ್ಪಡುತ್ತಿದ್ದ ಸ್ತ್ರೀಯದ್ದಾಗಿದೆ. (ಎಸ್.ಜಿ.ಎ.)

**ಚನ್ನರಾಯಪಟ್ಟಣ :** ಹಾಸನ ಜಿಲ್ಲೆಯ ಪೂರ್ವಭಾಗದಲ್ಲಿರುವ ತಾಲ್ಲೂಕು, ಅದರ ಮುಖ್ಯ ಸ್ಥಳ. ನೈಋತ್ಯದಲ್ಲಿ ಹೊಳೆನರಸೀಪುರ, ಪಶ್ಚಿಮದಲ್ಲಿ ಹಾಸನ, ವಾಯವ್ಯದಲ್ಲಿ ಅರಸೀಕೆರೆ ತಾಲ್ಲೂಕುಗಳು, ಪೂರ್ವ ಮತ್ತು ದಕ್ಷಿಣದಲ್ಲಿ ತುಮಕೂರು ಮತ್ತು ಮೈಸೂರು ಜಿಲ್ಲೆಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,043.4ಚ.ಕಿಮೀ. ಗ್ರಾಮಗಳ ಸಂಖ್ಯೆ 387; ಹೋಬಳಿಗಳು 6 - ಕಸಬ, ದಂಡಿಗನಹಳ್ಳಿ, ಬಾಗೂರು, ನುಗ್ಗೇಹಳ್ಳಿ, ಹಿರೀಸಾವೆ ಮತ್ತು ಶ್ರವಣಬೆಳಗೊಳ. ಜನಸಂಖ್ಯೆ 2,78,112.



ಚನ್ನರಾಯಪಟ್ಟಣದ ಗದ್ದೆ ರಾಮೇಶ್ವರ ಗುಡಿಯಲ್ಲಿರುವ ಎರಡು ತಲೆಯ ಬಸವ

ತಾಲ್ಲೂಕಿನ ಉತ್ತರದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಬೆಟ್ಟ ಶ್ರೇಣಿಯೊಂದಿದೆ. ಅದರಿಂದ ಕೆಲವು ತೊರೆಗಳು ಉತ್ತರಕ್ಕೂ ಪೂರ್ವಕ್ಕೂ ಹರಿದು ಶಿಂಷಾನದಿಯನ್ನು ಸೇರುತ್ತವೆ. ತಾಲ್ಲೂಕಿನ ಪಶ್ಚಿಮ ಎಲ್ಲೆಯ ಬಳಿ ತಗ್ಗಿನ ಬೆಟ್ಟವೊಂದಿದೆ. ಶ್ರವಣಬೆಳಗೊಳದಲ್ಲಿ ತಕ್ಕಮಟ್ಟಿನ ಎತ್ತರದ ಬೆಟ್ಟಗಳು ಒಂಟೊಂಟಿಯಾಗಿ ನಿಂತಿವೆ. ಅವುಗಳ ಪೈಕಿ ಇಂದ್ರಗಿರಿ ದೊಡ್ಡದು (ಎತ್ತರ 1,020ಮೀ) ಗೊಮ್ಮಟವಿಗ್ರಹವಿರುವುದು ಇದರ ಮೇಲೆ. ಮಿಕ್ಕಂತೆ ಈ ತಾಲ್ಲೂಕು ಅಷ್ಟೇನೂ ಎತ್ತರವಾಗಿಲ್ಲ.



ಚಂದ್ರಮೌಳೇಶ್ವರ ದೇವಾಲಯ

ಅಲೆಯಂತೆ ನೆಲ ಏರಿಳಿತದಿಂದ ಕೂಡಿದೆ. ತಾಲ್ಲೂಕಿನ ಮೂಲ ಅರೆ ಕಣಶಿಲೆಯದು. ಬೆಟ್ಟಗಳೂ ಕಣಶಿಲೆಯವೆ. ಈ ಕಲ್ಲು ವಾಸ್ತುರಚನೆಗಳಿಗೆ ಉತ್ತಮವಾದುದು. ನುಗ್ಗೇಹಳ್ಳಿಯ ಬಳಿ ಬಳಪದ ಕಲ್ಲಿನ ಹರಹುಗಳಿವೆ. ಈ ಭಾಗದಲ್ಲಿ ಕ್ರೋಮೈಟ್ ಸಹ ದೊರಕುತ್ತದೆ. ಈ ತಾಲ್ಲೂಕಿನ ಅಗ್ರಹಾರ ಮತ್ತು ಬಸವಾಪುರ ಗ್ರಾಮಗಳ ಬಳಿ ಕೊರಂಡಂ ನಿಕ್ಷೇಪಗಳಿವೆ. ಮಲವನ ಘಟ್ಟದ ಬಳಿ ವರ್ಮಿಕ್ಯುಲೇಟ್ ಎಂಬ ಅಭ್ರಕದ ಅದಿರು ಇದೆ.

ತಾಲ್ಲೂಕು ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಮಣ್ಣು ಸಾಮಾನ್ಯವಾಗಿ ಫಲವತ್ತಾಗಿದ್ದು ತರಿ ಖುಷ್ಕಿ ಬೆಳೆಗಳಿಗೆ ಅನುಕೂಲವಾಗಿದೆ. ಪಶ್ಚಿಮದ ಎಲ್ಲೆಯ ಬಳಿ ಮಣ್ಣು ಆಳವಾಗಿಲ್ಲ. ಅಲ್ಲದೆ ಕಲ್ಲುಮಿಶ್ರಿತ. ಉಳಿದೆಡೆ ಮರಳಿನಿಂದ ಕೂಡಿದ ತೆಳುಗೆಂಪು ಮಣ್ಣು ಸಾಮಾನ್ಯ. ನುಗ್ಗೇಹಳ್ಳಿ ಬಳಿ ಕಪ್ಪುಮಣ್ಣು ಇದೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ ಸು.684ಮಿಮೀ. ದೊಡ್ಡ ನದಿಗಳಾವುವೂ ಇಲ್ಲ. ಹೇಮಾವತಿ ಕಡೆ ಹರಿಯುವ ಕೆಲವು ಹಳ್ಳಗಳಿಗೆ ಅಡ್ಡಕಟ್ಟಿ ಕೆರೆಗಳು ನಿರ್ಮಾಣವಾಗಿವೆ. ಹೊಳೆನರಸೀಪುರದ ಬಳಿ ಹೇಮಾವತಿಗೆ ಕಟ್ಟಿರುವ ಶ್ರೀ ರಾಮದೇವರ ಅಣೆಕಟ್ಟಿನ ಉತ್ತರ ನಾಲೆಯಿಂದ ಈ ತಾಲ್ಲೂಕಿನ ದಕ್ಷಿಣ ಭಾಗಕ್ಕೆ ಸ್ವಲ್ಪ ನೀರಾವರಿ ಸೌಲಭ್ಯ ದೊರಕಿದೆ. ಒಟ್ಟು ಕೆರೆಗಳು 239, ದೊಡ್ಡವು 49. ಈ ತಾಲ್ಲೂಕಿನ ಅನಾದಿಕೆರೆ ಹಾಸನ ಜಿಲ್ಲೆಯ ಎರಡು ದೊಡ್ಡ ಕೆರೆಗಳಲ್ಲೊಂದು. ತಾಲ್ಲೂಕಿನ ಮುಖ್ಯ ಬೆಳೆಗಳು ರಾಗಿ, ಬತ್ತ ಮತ್ತು ಜೋಳ. ಇತರ ಬೆಳೆಗಳು ಮೆಣಸಿನಕಾಯಿ, ಹರಳು, ಎಳ್ಳು, ಹತ್ತಿ, ತೆಂಗು, ಅಡಕೆ, ಆಲೂಗೆಡ್ಡೆ.

ಪ್ರಸಿದ್ಧ ಜೈನಕೇಂದ್ರ ಶ್ರವಣಬೆಳಗೊಳ (ನೋಡಿ) ಇರುವುದು ಈ ತಾಲ್ಲೂಕಿನಲ್ಲಿ. ಅಗ್ರಹಾರ ಬೆಳಗುಲಿ (ನೋಡಿ), ದಿಂಡಗೂರು (ನೋಡಿ), ನುಗ್ಗೇಹಳ್ಳಿ (ನೋಡಿ) – ಈ ಸ್ಥಳಗಳಲ್ಲಿ ಹೊಯ್ಸಳ ಕಾಲದ ದೇವಾಲಯಗಳಿವೆ. ಬೆಂಗಳೂರು-ಮಂಗಳೂರು ರಸ್ತೆಯಿಂದ ಅನತಿ ದೂರದಲ್ಲಿ ಶ್ರವಣಬೆಳಗೊಳದಿಂದ 5ಕಿಮೀ ದೂರದಲ್ಲಿರುವ ಹಳೆ ಬೆಳಗೊಳದಲ್ಲಿ ಸು.1094ರಲ್ಲಿ ಕಟ್ಟಿದ ಒಂದು ಜೈನ ಬಸದಿ, ಕೇಶವ ಮತ್ತು ಶಿವದೇವಾಲಯಗಳಿವೆ. ಚನ್ನರಾಯಪಟ್ಟಣದಿಂದ 26ಕಿಮೀ ದೂರದಲ್ಲಿರುವ ಹೆಬ್ಬಾಳಿನಲ್ಲಿನ ಸಿಂಗೇಶ್ವರ ದೇವಾಲಯ 1200ರಲ್ಲಿ ರಚಿತವಾದುದು. ಕಾಂತರಾಜಪುರ-ಜಿನನಾಥಪುರ ರಸ್ತೆಯಲ್ಲಿ ಚನ್ನರಾಯಪಟ್ಟಣಕ್ಕೆ 13ಕಿಮೀ ದೂರದಲ್ಲಿರುವ ಜಿನನಾಥಪುರದಲ್ಲಿ ವಿಷ್ಣುವರ್ಧನ 1117ರಲ್ಲಿ ಸ್ಥಾಪಿಸಿದ ಜೈನ ಬಸದಿ ಇದೆ. ಚನ್ನರಾಯಪಟ್ಟಣಕ್ಕೆ 19ಕಿಮೀ ದೂರದಲ್ಲಿರುವ ಕುಂದೂರಿನಲ್ಲಿ ಚಾಮುಂಡೇಶ್ವರಿ, ರಂಗನಾಥ, ಸುಬ್ರಹ್ಮಣ್ಯ ದೇವಾಲಯಗಳಿವೆ. ಇಲ್ಲಿ ಒಂದು ಒಕ್ಕಲಿಗರ ಮಠವೂ ಉಂಟು. ಚನ್ನರಾಯಪಟ್ಟಣ, ಶ್ರವಣಬೆಳಗೊಳ, ನುಗ್ಗೇಹಳ್ಳಿ ಜಾತ್ರೆಗಳು ಪ್ರಸಿದ್ಧವಾಗಿವೆ.

ಬೂಕನ ಬೆಟ್ಟದ ರಂಗಸ್ವಾಮಿ, ನವಲೆಯ ನಾಗೇಶ್ವರಸ್ವಾಮಿ, ಕತ್ರಿಘಟ್ಟದ ಅಮ್ಮನವರು, ತೆಜ್ಜೆಗೆರೆಯ ತೆಜ್ಜೆಗೆರೆ ಅಮ್ಮ, ಜಂಬೂರಿನ ಭಿಕ್ಕೇಶ್ವರ, ಬಾಗೂರಿನ ಸಂತೆಕಾಳಮ್ಮ - ಈ ದೇವರ ಜಾತ್ರೆಗಳೂ ತಾಲ್ಲೂಕಿನಲ್ಲಿ ನಡೆಯುತ್ತವೆ.

ಚನ್ನರಾಯಪಟ್ಟಣ ತಾಲ್ಲೂಕಿನ ಕೇಂದ್ರ. ಬೆಂಗಳೂರು-ಹಾಸನ ರಸ್ತೆಯಲ್ಲಿ ಹಾಸನದಿಂದ 39ಕಿಮೀ. ಪೂರ್ವ-ಆಗ್ನೇಯಕ್ಕಿದೆ. ಇಲ್ಲಿನ ಪುರಸಭೆ ರಚಿತವಾದ್ದು 1918ರಲ್ಲಿ. ಜನಸಂಖ್ಯೆ 33,240. ಮೈಸೂರಿನಿಂದ ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗಗಳಿಗೆ ಮತ್ತು ಬೆಂಗಳೂರಿನಿಂದ ಹಾಸನ, ಮಂಗಳೂರುಗಳಿಗೆ ಹೋಗುವ ಬಸ್ಸುಗಳು ಚನ್ನರಾಯಪಟ್ಟಣದ ಮೂಲಕ ಹಾದು ಹೋಗುತ್ತವೆ. ಇದು ಮೊದಲು ಕೊಳತೂರು ಎಂಬ ಹೆಸರಿನ ಅಗ್ರಹಾರವಾಗಿತ್ತು. ಮಾಚಲದೇವಿ ಮತ್ತು ಶಾಂತಲದೇವಿ ಎಂಬ ಇಬ್ಬರು ಇದರ ಈಶಾನ್ಯದಲ್ಲಿರುವ ವಿಶಾಲ ಕೆರೆಯನ್ನು ಕಟ್ಟಿಸಿದರೆಂದು ಪ್ರತೀತಿ. ಸು.1600ರಲ್ಲಿ ಹೊಳೆನರಸೀಪುರದ ಲಕ್ಷ್ಮಪ್ಪ ನಾಯಕ ತನ್ನ ಮಗ ಚನ್ನರಾಯನಿಗೆ ಈ ಊರನ್ನು ಜಹಗೀರಾಗಿ ಕೊಟ್ಟ. ಈ ಊರು 1633ರಲ್ಲಿ ಮೈಸೂರಿನ ಚಾಮರಾಜ ಒಡೆಯರಿಗೆ ಸೇರಿತು. ಇಲ್ಲಿನ ಕೋಟೆಯನ್ನು ದೊಡ್ಡ ಬಸವಯ್ಯನೆಂಬ ನಾಯಕ ಕಟ್ಟಿದ. ಇದು ಹೈದರ್ ಅಲಿಯ ಕಾಲದಲ್ಲಿ ಪುನರ್ನಿರ್ಮಾಣವಾಯಿತು. ಈ ಊರಿನಲ್ಲಿ ಚನ್ನರಾಯಸ್ವಾಮಿ ದೇವಾಲಯವಿದೆ. ಇಲ್ಲಿ ಏಪ್ರಿಲ್‌ನಲ್ಲಿ ವಾರ್ಷಿಕ ಜಾತ್ರೆ ಜರಗುತ್ತದೆ. ಇಲ್ಲಿನ ಸಾತೇಶ್ವರ ಮತ್ತು ಗದ್ದೆ ರಾಮೇಶ್ವರ ದೇವಾಲಯಗಳು ಮೂಲತಃ ಹೊಯ್ಸಳ ಕಾಲದವು. (ಎಚ್.ಜಿ.)

**ಚನ್ನವೀರ ಕಣವಿ :** 1928–. ಪ್ರಸಿದ್ಧ ಕವಿ, ವಿಮರ್ಶಕ. 1928 ಜೂನ್ 28ರಂದು ಧಾರವಾಡ ಜಿಲ್ಲೆ ಹೊಂಬಳ ಗ್ರಾಮದಲ್ಲಿ ಜನಿಸಿದರು. ತಂದೆ ಸಕ್ರಪ್ಪ, ತಾಯಿ ಪಾರ್ವತವ್ವ. ಗದಗ, ಧಾರವಾಡಗಳಲ್ಲಿ ವಿದ್ಯಾಭ್ಯಾಸ ನಡೆಸಿದರು. 1950ರಲ್ಲಿ ಬಿ.ಎ., 1952ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪೂರೈಸಿದರು. 1952ರಲ್ಲಿ ಆ ವಿಶ್ವವಿದ್ಯಾಲಯದ ಪ್ರಸಾರಾಂಗದ ಕಾರ್ಯದರ್ಶಿಯಾಗಿ ಅನಂತರ ಅದರ ನಿರ್ದೇಶಕರಾಗಿ (1958) ಸೇವೆ ಸಲ್ಲಿಸಿ ನಿವೃತ್ತರಾದರು.

ಇವರು ಕಾವ್ಯ, ವಿಮರ್ಶೆ ಈ ಎರಡೂ ಕ್ಷೇತ್ರಗಳಲ್ಲೂ ವ್ಯವಸಾಯ ಮಾಡಿದವರಾದರೂ ಇವರ ಒಲವು ಕಾವ್ಯದ ಕಡೆಗೇ. ಹಾಗೆಂದು ವಿಮರ್ಶೆಯನ್ನು ಕಡೆಗಣಿಸಿದವರಲ್ಲ. ಇವರ ಕಾವ್ಯದ ಹಿನ್ನೆಲೆಯಲ್ಲಿ ವಿಮರ್ಶನ ಪ್ರಜ್ಞೆ ಇದ್ದರೂ ಅದು ಹಾಲಿನಲ್ಲಿ ಬೆರೆತ ಸಕ್ಕರೆಯಂತೆ ಸುಪ್ತವಾಗಿದ್ದು ತನ್ನ ಪ್ರಭಾವವನ್ನು ಬೀರುತ್ತದೆ. ಪ್ರಜ್ಞೆ - ಪ್ರತಿಭೆಗಳ ಹದವಾದ ಕೂಡುವಿಕೆಯ ಫಲ ಇವರ ಕವಿತೆ ಎನ್ನಬಹುದು.

ಕಾವ್ಯಾಕ್ಷಿ ಇವರ ಪ್ರಥಮ ಕವನ ಸಂಕಲನ (1949). ಇದಕ್ಕೂ ಮೊದಲು ನಾಲ್ಕೈದು ವರ್ಷಗಳಿಂದ ಕವನ ರಚನೆಯಲ್ಲಿ ಗಂಭೀರವಾಗಿ ತೊಡಗಿದ್ದರು. ಅನಂತರ ಕಾವ್ಯ ವ್ಯವಸಾಯ ಸಮೃದ್ಧಿಯಾಗುತ್ತಾ ಹೋಯಿತು. ಅನೇಕ ಕವನ ಸಂಕಲನಗಳನ್ನು ಪ್ರಕಟಿಸಿದರು. ಕಾವ್ಯ ಮಾರ್ಗದಲ್ಲಿ ಇವರ ಗಂಭೀರ ನಡಿಗೆ, ಅತಿಯಾದ ಏರಿಳಿತಗಳಾಗಲಿ, ವಿವಿಧ ಕಾವ್ಯ ಮಾರ್ಗಗಳ ಹೊಯ್ದಾಟಗಳಾಗಲಿ ಅವುಗಳ ತೀವ್ರ ಪ್ರಭಾವವಾಗಲಿ ಎಲ್ಲೂ ಎದ್ದು ಕಾಣುವಂತಿರಲಿಲ್ಲ. ಅತಿರೇಕ ಎನಿಸುವಂತಿರಲಿಲ್ಲ. ಇವರು ಕಾವ್ಯರಚನೆಯಾರಂಭಿಸಿದಾಗ ಕನ್ನಡದಲ್ಲಿ ನವೋದಯ ಕಾವ್ಯ ಪರಾಕಾಷ್ಠೆಯ ಸ್ಥಿತಿ ಪಡೆದಿತ್ತು. ಅನಂತರ ಕೆಲವೇ ವರ್ಷಗಳಲ್ಲಿ ನವ್ಯಕಾವ್ಯದ ಉರುಬು ಆರಂಭವಾಯಿತು. ಇವರು ಆ ಹಂತದಲ್ಲಿ ನವ್ಯತೆಯ ಕಡೆಗೆ ವಾಲಿದಂತೆ ಕಂಡರೂ ಬಹು ಎಚ್ಚರದಿಂದ ಕಾವ್ಯ ರಚನೆಯಲ್ಲಿ ತೊಡಗಿದರು. ಇವರು ಮುಖ್ಯವಾಗಿ ಭಾವನಾಪ್ರಧಾನ ಕವಿ ಎಂಬುದು ಕುರ್ತುಕೋಟಿಯವರ ಅಭಿಪ್ರಾಯ.

ಇವರ ದೀಪಧಾರಿ (1956) ಕವನ ಸಂಕಲನದಲ್ಲಿ ಕೆಲವು ನವ್ಯಕಾವ್ಯ ಮಾರ್ಗದ ಹಲವು ಅಂಶಗಳನ್ನು ಓದುಗರು ಕಾಣಬಹುದಾದರೂ ಆ ಮಾರ್ಗದಲ್ಲಿ ನಡೆದ ಯಶಸ್ವಿ ಪ್ರಯೋಗಗಳೆಂದು ತಾವು ಇದನ್ನು ಕರೆಯುತ್ತಿಲ್ಲವೆಂದು ಆಧುನಿಕ ಭಾವಗೀತೆ ಹಾಗೂ ನವ್ಯಮಾರ್ಗಗಳ ನಡುವೆ ನಿರ್ಮಾಣಗೊಂಡಿರುವ ಕಂದರಕ್ಕೆ ಇದು ಸೇತುವೆಯಾದೀತೆಂಬ ನಮ್ರ ಭಾವನೆ ತಮಗಿದೆಯೆಂದೂ ಕಣವಿಯವರು ಆ ಸಂಕಲನದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಇವೆರಡೂ ಮಾರ್ಗಗಳ ನಡುವೆ ಇದೊಂದು ಸೇತುವೆಯಾದೀತೆಂಬ ಮಾತನ್ನು ವಿಮರ್ಶಕರು ಗಮನಿಸಿ ಇವರನ್ನು 'ಸಮನ್ವಯ ಕವಿ' ಎಂದು ವರ್ಣಿಸತೊಡಗಿದರು. ನವೋದಯವಾಗಲಿ,



ನವ್ಯವಾಗಲಿ ಮೂಲತಃ ಅದು ಕಾವ್ಯವಾಗಿರಬೇಕಾದ್ದು ಮುಖ್ಯ ಎಂಬುದು ಕಣವಿಯವರನಂಬಿಕೆ. ವಿವಿಧ ಕಾವ್ಯ ಪ್ರಕಾರಗಳಿಗೆ ಸಾಮಾನ್ಯವಾದ ಹಲವು ಅಂಶ ಗಳಿರುತ್ತವೆ. ಒಂದೊಂದು ಪ್ರಕಾರದಲ್ಲಿ ಕೆಲಕೆಲವು ಅಂಶ ಗಳಿಗೆ ಒತ್ತು ಬೀಳುತ್ತದೆ. ಇದೊಂದು ಸಹಜ ಪ್ರತಿಕ್ರಿಯೆ ಎನ್ನಬಹುದಾಗಿದೆ. ನಾನು ಯಾವ ಪಂಥ'ದ ಕವಿಯೋ, ನನಗೆ ತಿಳಿದಿಲ್ಲ. ಆ ಕುರಿತು ಚರ್ಚೆ ಮಾಡುವವರು ಮಾಡಿಕೊಳ್ಳಲಿ. ಒಟ್ಟಿನಲ್ಲಿ ನಾನು ಕವಿ ಎಂಬು ದಷ್ಟೇ ಮುಖ್ಯವಾದದ್ದು, ಅಷ್ಟು ಸಾಕು ಎಂಬ ಅಭಿಪ್ರಾಯವನ್ನು ಕಣವಿಯವರು ವ್ಯಕ್ತಪಡಿಸಿದ್ದುಂಟು. "ಪ್ರಕೃತಿಲೀಲೆ, ಪ್ರಣಯ, ದಾಂಪತ್ಯ, ವಾತ್ಸಲ್ಯ ಈ ಮೊದಲಾದ ರಮ್ಯ ಪರಂಪರೆಯ ವಿಷಯಗಳೊಡನೆ ನವ್ಯ ವಿಷಯಗಳೂ ಕಣವಿಯವರ ಕೃತಿಗಳಲ್ಲಿ ಸೇರಿರುತ್ತದೆ. ಒಂದೊಂದಕ್ಕೂ ತಾಕಲಾಟವಿಲ್ಲ. ಸಮಾನ ಭೂಮಿಕೆ ಅವನ್ನು ಸುತ್ತ ಹೊಂದಿಸುತ್ತದೆ" ಎಂಬುದು ಮುಗಳಿಯವರ ಅಭಿಪ್ರಾಯ.

ಕಣವಿಯವರ ಕಾವ್ಯ ಸಂಕಲನಗಳು ಇವು : ಕಾವ್ಯಾಕ್ಷಿ (1949), ಭಾವಜೀವಿ (1950), ಆಕಾಶಬುಟ್ಟಿ (1953), ಮಧುಚಂದ್ರ (1954), ದೀಪಧಾರಿ (1956), ಮಣ್ಣಿನಮೆರವಣಿಗೆ (1960), ನೆಲಮುಗಿಲು (1965), ನಗರದಲ್ಲಿನೆರಳು (1974), ಜೀವಧ್ವನಿ (1980), ಕಾರ್ತಿಕಮೋಡ (1986), ಜೀನಿಯಾ (1989), ಶಿಶಿರದಲ್ಲಿ ಬಂದ ಸ್ನೇಹಿತ (1994), ಹಕ್ಕಿಪುಚ್ಚ (1985). ಚಿರಂತನದಾಹ (1975) ಇವರ ಆಯ್ದ ಕವನಗಳ ಸಂಕಲನ. ಸಮಗ್ರಕಾವ್ಯ 1996ರಲ್ಲಿ ಪ್ರಕಟವಾಯಿತು. ಹಕ್ಕಿಪುಚ್ಚ ಎಂಬುದು ಮಕ್ಕಳ ಕವಿತೆಗಳ ಸಂಗ್ರಹ.

ಇವರು ಸಾನೆಟ್ ಅಥವಾ ಸುನೀತಕ್ಕೆ ಒಂದು ರೂಪವನ್ನು ನೀಡಿದ್ದಾರೆ. ವ್ಯಕ್ತಿ ಚಿತ್ರಗಳ ರಚನೆಗೆ ಈ ಪ್ರಕಾರವನ್ನು ಮುಖ್ಯವಾಗಿ ಬಳಸಿಕೊಂಡಿದ್ದಾರೆ.

ಬೆಳಕಿಗಾಗಿ ತುಡಿಯುವುದು, ಬೆಳಕಿನತ್ತ ಸಾಗುವುದು ಇವರ ಕಾವ್ಯದ ನಿತ್ಯ ಹಂಬಲ ಎಂದು ಹೇಳಬಹುದು. ಅದು ಒಂದು ರೀತಿಯಲ್ಲಿ ಇವರ ಕಾವ್ಯ ನಿರ್ಮಾಣ ಪ್ರಕ್ರಿಯೆಯ ಉದ್ದಕ್ಕೂ ಧಾರೆಯಂತೆ ಹರಿದು ಬಂದಿದೆ. ಇವರ ಆಯ್ದ ಕವನಗಳ ಸಂಕಲನದ ಚಿರಂತನದಾಹವೂ ಇದನ್ನೇ ಸಂಕೇತಿಸುತ್ತದೆ. ಇವರ ದಾಹ ಜ್ಞಾನದ ಬೆಳಕಿಗಾಗಿ. ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ. ಎನಿತು ಮಾನವನೆದೆಯು ಆಳ ಅಗಲ ಎಂಬುದಾಗಿ ಇವರ ಕವಿಹೃದಯ ಹಂಬಲಿಸುತ್ತದೆ. ಇವರ ಮೊದಲನೆಯ ಕಾವ್ಯ ಸಂಕಲನವಾದ ಕಾವ್ಯಾಕ್ಷಿಯ ಮೊದಲನೆಯ ಕವಿತೆ ಇದನ್ನೇ ಕುರಿತದ್ದು. ನೀನು ಪೇಳ್ದ ಕವಿತೆಯ ತಂತ್ರ ಸವಿಯ ಹಾಡಲೊರೆದ ಮಂತ್ರ, ಬಾಳ ಹಣತೆಯಲ್ಲಿ ತಾಯೆ ಬೆಳಕು ಚಿಮ್ಮಿತು ಎನ್ನತ್ತಾರೆ ಕವಿ. ಯುಗಯುಗಾಂತ್ಯದವರೆಗೆ ಜಗವ ಬೆಳಗಿಸಬಲ್ಲ ಎಲೆ ಚಿರಂತನ ಬೆಳಕೆ ನೀನೆ ಬೇಕು ಎಂಬುದು ಇನ್ನೊಂದು ಕವನದಲ್ಲಿಯ ಪ್ರಾರ್ಥನೆ.

ಕಣವಿಯವರ ಕಾವ್ಯಕರ್ಮದ ವಿಕಾಸದ ಹಾದಿಯ ಹಲವು ಘಟ್ಟಗಳನ್ನು ಇವರ ಕವನಗಳಲ್ಲಿ ಗುರುತಿಸುವುದು ಸಾಧ್ಯ. ಇವರ ಪ್ರಾರಂಭದ ಕವಿತೆಗಳಲ್ಲಿ ಕುವೆಂಪು, ಬೇಂದ್ರೆ, ಪುತಿನ, ಮಧುರಚೆನ್ನ ಮೊದಲಾದವರ ಕಾವ್ಯ ಪ್ರಭಾವವನ್ನು ಕಾಣಬಹುದು. ಭಾವಜೀವಿ ಎಂಬ ಕವನ ಇವರ ಆತ್ಮಕಥನ. ಅದರ ಮೇಲೆ ಮಧುರಚೆನ್ನರ 'ನನ್ನ ನಲ್ಲ'

ಕವಿತೆಯ ಪ್ರಭಾವವಿದೆ ಎಂದು ವಿಮರ್ಶಕರು ಗುರುತಿಸಿದ್ದಾರೆ. ಪ್ರಕೃತಿ ಗೀತೆಗಳ ರಚನೆಯೂ ಬೇಂದ್ರೆ,ಕುವೆಂಪು ರಚನೆಗಳಿಂದ ಪ್ರಭಾವಿತವಾಗಿರುವುದು ಕಂಡುಬರುತ್ತದೆ.

ಕಣವಿಯವರು ಕ್ರಮೇಣ ಅನುಕರಣೆಯ ಹಾದಿ ಬಿಟ್ಟು ಸ್ವತಂತ್ರ ಮನೋಧರ್ಮದ ಗರಿಕೂಡಿಸಿಕೊಂಡು ಕಾವ್ಯಾಕಾಶದಲ್ಲಿ ಉಡ್ಡಯನ ಮಾಡಿದ್ದರ ಲಕ್ಷಣಗಳು ಅನಂತರದ ಕವನಗಳಲ್ಲಿ ಕಾಣಬರುತ್ತದೆ. ಕಣವಿಯವರು ಬದುಕನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಕಾಣತೊಡಗುತ್ತಾರೆ. ಸ್ವೋಪಜ್ಞತೆಯನ್ನು ಮೆರೆಯುತ್ತಾರೆ. ಸಮಾಜದ ದೋಷಗಳ ಮೇಲೆ ಬೆಳಕು ಚೆಲ್ಲುತ್ತಾರೆ, ಅದನ್ನು ಟೀಕಿಸುತ್ತಾರೆ. ವ್ಯಂಗ್ಯದ ಬಾರುಕೋಲುಗಳನ್ನು ಬೀಸುತ್ತಾರೆ. ಪ್ರಗತಿಶೀಲ ಚಳವಳಿಯ ಮತ್ತು ಆ ಮನೋಧರ್ಮದ ಲೇಖಕರ ಪ್ರಭಾವಕ್ಕೆ ಇವರು ಒಳಗಾಗದಂತೆ ಕಾಣುತ್ತಾರೆ. ಒಮ್ಮೊಮ್ಮೆ ಕಾವ್ಯ ಗುಣ ಹಿಂದಕ್ಕೆ ಸರಿಯಿತೋ, ಕವಿತೆ ವಾಚ್ಯವಾಗುತ್ತಿದೆಯೋ ಎನಿಸಿದರೂ ಅದೊಂದು ದೋಷವೆಂದು ಗುರುತಿಸಲಾಗದಷ್ಟು ತೆಳ್ಳಗಿರುತ್ತದೆ. ಒಂದು ರೀತಿಯಲ್ಲಿ ರಮ್ಯಕಾವ್ಯ ಪ್ರಭಾವದಿಂದ ಬಿಡುಗಡೆ ಹೊಂದದ ಇದೊಂದು ಸಾಧನವಾಗಿ ಪರಿಣಮಿಸಿದ್ದಿರಬಹುದು. ಆದರೆ ದೂರ ಹೋಗಬಹುದಾದ ಅಪಾಯಕ್ಕೆ ಇವರು ಸಿಲುಕದೆ ವಿಕಾಸದ ಹಾದಿಯಲ್ಲಿ ಮುನ್ನಡೆಯುತ್ತಾರೆ.

ಆ ವೇಳೆಗೆ ನವ್ಯಕಾವ್ಯದ ಯುಗದ ಉದಯವಾಗುತಿತ್ತು. ಅಡಿಗರ ಏರುದನಿ, ಪರಿಸರಕ್ಕೆ ಅವರ ತೀವ್ರ ಪ್ರತಿಕ್ರಿಯೆ, ಸಮಾಜ ಮುಖಿಯಾಗುವುದಕ್ಕಿಂತ ವ್ಯಕ್ತಿಗತವಾಗಿ ಚಿಂತನೆಯ ಹರಿವು, ಭಾಷೆ, ಲಯ ಮುಂತಾದವನ್ನೂ ಹೊಸದುಗೊಳಿಸಿಕೊಳ್ಳುವ ಕಾಳಜಿ, ಅವಕ್ಕೆ ಹೊಸದಾಗಿ ಶಕ್ತಿ ಪೂರಣ ಮಾಡುವ ಪ್ರಯತ್ನ, ಪ್ರತಿಮೆ ಸಂಕೇತಗಳನ್ನು ಅಂದಿನ ಸಂದರ್ಭದ ಅನುಭವಗಳ ಹಂದರದ ಮೇಲೆ ಹೆಣೆಯುವ ಪ್ರಯತ್ನ, ಆಗಾಗ್ಗೆ ಕಾಮದ ಅತಿರೇಕ, ಒಂಟಿತನದ ಅಳಲು ಅಸಹನೆ ಇವೇ ಪ್ರಧಾನವಾಗಿ ಕಂಡುಬಂದ ನವ್ಯಮಾರ್ಗದೊಂದಿಗೆ ಕಣವಿಯವರಾಗಲೀ, ಅವರಂಥ ಅವರ ಸಮಕಾಲೀನ ಕವಿಗಳಾಗಲಿ ನೇರವಾಗಿ ಹೋರಾಟದ ಕಣಕ್ಕೆ ಇಳಿಯಲಿಲ್ಲವಾದರೂ ಅದರಲ್ಲಿಯ ಕೆಲವು ಲಕ್ಷಣಗಳನ್ನು ಗುರುತಿಸಿ ಅವನ್ನು ತಮ್ಮ ಕಾವ್ಯದಲ್ಲಿ ಬೆಸುಗೆ ಮಾಡಿಕೊಳ್ಳುವುದರ ಜೊತೆಗೆ ಇದೊಂದು ಬಗೆಯ ಸಮನ್ವಯ ಪ್ರಯತ್ನವೋ, ನವೋದಯ ನವ್ಯಮಾರ್ಗಗಳ ಸೇತುಬಂಧವೋ ಎನಿಸುವ ಮಟ್ಟಿಗೆ ಇವರು ಕಾವ್ಯ ರಚನೆ ಮಾಡಿದರು. ಪ್ರಾರಂಭದಲ್ಲಿ ಇವರು ನವೋದಯ ಕಲಿಕಾ ಮಾರ್ಗಕ್ಕೆ ಸಂಪೂರ್ಣವಾಗಿ ತೆತ್ತುಕೊಂಡು, ಆಗ ಗಟ್ಟಿಯಾಗಿ ನಿರ್ಮಿಸಿಕೊಂಡ ಮನೋಧರ್ಮದ ಬಲದಿಂದಾಗಿ ಪ್ರಗತಿದೃಷ್ಟಿಗೂ ಸಂಪೂರ್ಣವಾಗಿ ಮಾರುಹೋಗದೆ, ನವ್ಯಮಾರ್ಗವನ್ನು ತಮ್ಮ ಸ್ವಭಾವಕ್ಕೆ ತಕ್ಕಂತೆ ಹೊಂದಿಸಿಕೊಂಡು, ಅರಗಿಸಿಕೊಂಡು, ಒಂದು ರೀತಿಯಲ್ಲಿ ನವೋದಯ ಕಾವ್ಯದ ಪಾತ್ರವನ್ನು ವಿಸ್ತರಿಸಲು ನಡೆಸಿದ ಯತ್ನ ಇವರ ಕವಿತೆಗಳಲ್ಲಿ ನಮಗೆ ಕಾಣುತ್ತದೆ.

ಚೆನ್ನವೀರ ಕಣವಿ ಸಾರ್ಥಕ ಕವಿ. ಕವಿತಾ ರಚನೆಯೇ ಅಲ್ಲದೆ ವಿಮರ್ಶೆಯ ಹಾದಿಯಲ್ಲೂ ಇವರು ನಡೆದು ಬಂದಿದ್ದಾರೆ. ಸಾಹಿತ್ಯ ಚಿಂತನ, ಕಾವ್ಯಾನುಸಂಧಾನ, ಸಮಾಹಿತ, ಸಮತೋಲನ, ಮಧುರಚೆನ್ನ, ಶುಭನುಡಿಯೆ ಹಕ್ಕಿ ಮುಂತಾದ ಕೃತಿಗಳಲ್ಲಿ ಕವಿ ಕೃತಿ ದರ್ಶನ, ವಿವೇಚನ, ನೆನಪಿನ ಚಿತ್ರಗಳು ಮತ್ತು ವಚನಗಳ ಹಾಗೂ ಜನಪದ ಗೀತೆಗಳ ವಿಶ್ಲೇಷಣೆಗಳೂ ಇವೆ. ಇವರ ಇತರ ಕೃತಿಗಳಿವು : ನವಿಲೂರ ಮನೆಯಿಂದ, ನವ್ಯಧ್ವನಿ, ನೈವೇದ್ಯ, ನಮ್ಮೆಲ್ಲರ ನೆಹರು, ಜೀವನಸಿದ್ಧಿ, ಸಿದ್ಧಿವಿನಾಯಕ. 'ಬಾಬಾ ಫರೀದ್' ಎಂಬುದು ಅನುವಾದ.ಇವರಿಗೆ ಹಲವಾರು ಪ್ರಶಸ್ತಿಗಳು ಬಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(1981), ಜೀವನದ ಒಟ್ಟಾರೆ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1985), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1989), ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಸಂಸ್ಕೃತಿ ವಿಭಾಗದ ಎಮೆರಿಟಸ್ ಫೆಲೋಶಿಪ್ (1996 - 98), ಪಂಪ ಪ್ರಶಸ್ತಿ (1999) ಇವು ಕೆಲವು. ಇವರು 1996ರಲ್ಲಿ ಹಾಸನದಲ್ಲಿ ನಡೆದ 65ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ ಕೆಲವು ಕವನಗಳು ಧ್ವನಿಸುರುಳಿಯಲ್ಲಿ ಬಂದಿವೆ.

ಇವರ ಪತ್ನಿ ಶಾಂತಾದೇವಿ. ಇವರಿಗೆ ಐವರು ಮಕ್ಕಳು – ನಾಲ್ವರು ಗಂಡು, ಒಂದು ಹೆಣ್ಣು. ಕಣವಿಯವರ ಧಾರವಾಡದ ನಿವಾಸದ ಹೆಸರು 'ಚೆಂಬೆಳಕು', ಅಲ್ಲಿಯ ಕಲ್ಯಾಣನಗರದಲ್ಲಿ. ಇವರ ಸಮಗ್ರ ಕಾವ್ಯದ ಹೆಸರು 'ಹೊಂಬೆಳಕು'. ಕಣವಿಯವರು ಈಗ ಧಾರವಾಡದಲ್ಲಿ ನೆಲೆಸಿದ್ದಾರೆ. (ಎಚ್.ಎಸ್.ಕೆ.)

**ಚಲನಚಿತ್ರೋದ್ಯಮ :** ಭಾರತದಲ್ಲಿ ಚಲನಚಿತ್ರ ಒಂದು ಉದ್ಯಮವಾಗಿ ಬೆಳೆಯಲಾರಂಭಿಸಿದ್ದು 1920ರ ಅನಂತರ. ಮುಂದೆ ಹತ್ತು ವರ್ಷಗಳಲ್ಲಿಯೇ ಈ ಉದ್ಯಮ ಕರ್ನಾಟಕಕ್ಕೆ ಬಂತು. ಕನ್ನಡ ಚಲನ ಚಿತ್ರರಂಗಕ್ಕೆ ಸು.80 ವರ್ಷಗಳ ಕಾಲ ಸುದೀರ್ಘ ಇತಿಹಾಸವಿದೆ. ಚಲನಚಿತ್ರ ಉದ್ಯಮ ವಾಕ್ಚಿತ್ರಗಳ ಯುಗಕ್ಕೆ ಕಾಲಿಡುವುದಕ್ಕೆ ಮುಂಚೆ ಮೂಕಚಿತ್ರಗಳ ಯುಗವೊಂದು ಆಗಿಹೋಯಿತು. ಕನ್ನಡ ನೆಲದಲ್ಲಿ ಪ್ರಥಮವಾಗಿ 1929ರಲ್ಲಿ ಮೋಹನ್ ರಾಂ ಭವನಾನಿ ಎಂಬ ಮುಂಬಯಿ ನಿರ್ಮಾಪಕರೊಬ್ಬರು ಮೃಚ್ಛಕಟಿಕ ಎಂಬ ಮೂಕಚಿತ್ರವನ್ನು ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಿಸಿದರು. ಈ ಚಿತ್ರದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಟಿ.ಪಿ.ಕೈಲಾಸಂ. ಏಣಾಕ್ಷಿ ರಾಮರಾವ್, ಬಿ.ಎಸ್.ರಾಮರಾವ್, ಡಿ.ಕೆ.ಭಾರದ್ವಾಜ್, ಹರೀಂದ್ರ ಭಾರದ್ವಾಜ್ ಮೊದಲಾದವರು ಪಾತ್ರವಹಿಸಿದ್ದರು. 1929ರಲ್ಲಿಯೇ ಕರ್ನಾಟಕ ಪಿಕ್ಚರ್ಸ್ ಕಾರ್ಪೊರೇಷನ್ ಎಂಬ ಚಿತ್ರಸಂಸ್ಥೆಯ ಮೂಲಕ ಕೆಲವು ಮೂಕಚಿತ್ರಗಳು ಹೊರಬಿದ್ದುವು. ಗುಬ್ಬಿ ವೀರಣ್ಣ, ದೇವುಡು ನರಸಿಂಹಶಾಸ್ತ್ರಿ, ಶ್ರೀನಿವಾಸ ಮೂರ್ತಿ, ಬೆಲ್ಜಿಯಂನ ಆಲ್‍ಗುಡ್ ಮೊದಲಾದವರು ಈ ಸಂಸ್ಥೆಯ ವ್ಯವಸ್ಥಾಪಕರು. ಇದೇ ಕಾಲದಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಸೂರ್ಯ ಫಿಲಂ ಕಂಪನಿ ಸು.45 ಮೂಕಚಿತ್ರಗಳನ್ನು ನಿರ್ಮಿಸಿತು. ಇದರಲ್ಲಿ ಬಹುತೇಕ ಸ್ಟಂಟ್ ಚಿತ್ರಗಳು. ಇಂಥ ಚಿತ್ರಗಳು ಎಲ್ಲಿ ತಯಾರಾದರೂ ಅವುಗಳಿಗೆ ಭಾಷೆಯ ಸೀಮಾರೇಖೆ ಇಲ್ಲದುದರಿಂದ ಭಾರತದಾದ್ಯಂತ ಬಿಡುಗಡೆಯಾಗುತ್ತಿದ್ದುವು. ಬೆಂಗಳೂರಿನಲ್ಲಿ ಈ ಚಟುವಟಿಕೆಗಳಿಗೆ ಪೂರಕವಾಗಿ 1931ರಲ್ಲಿ ಒಂದು ಸಣ್ಣ ಸ್ಟುಡಿಯೊ ತಲೆಯೆತ್ತಿತು. ಆದರೆ ಚಿತ್ರೀಕರಣಕ್ಕೆ ಅಗತ್ಯ ಸಾಮಗ್ರಿ ಸಲಕರಣೆಗಳು ದೂರದ ಮುಂಬಯಿ ಮದರಾಸುಗಳಿಂದಲೇ ಬರಬೇಕಾಗಿತ್ತು. ವೈ.ವಿ.ರಾವ್ ಅವರು ನಿರ್ದೇಶಿಸಿದ ಹರಿಮಾಯಾ ಎಂಬ ಮೂಕಚಿತ್ರ ಇಲ್ಲಿ ತಯಾರಾಯಿತು. ಇದರಲ್ಲಿ ರಾವ್ ಅವರೇ ಕೃಷ್ಣನ ಪಾತ್ರ ವಹಿಸಿದ್ದರು. ಇದೇ ಸ್ಟುಡಿಯೋದಲ್ಲಿ ಆಲ್‍ಗುಡ್ ಅವರ ನಿರ್ದೇಶನದಲ್ಲಿ ಹಿಸ್ ಲವ್ ಅಫೇರ್ಸ್ ಎಂಬ ಸಾಮಾಜಿಕ ಮೂಕಚಿತ್ರ 25,000ರೂ. ವೆಚ್ಚದಲ್ಲಿ ನಿರ್ಮಾಣವಾಯಿತು. ಈ ಚಿತ್ರದಲ್ಲಿ ಗುಬ್ಬಿ ವೀರಣ್ಣ, ಎಂ.ವಿ.ಸುಬ್ಬಯ್ಯ ನಾಯ್ಡು, ಜಯಮ್ಮ, ಬಿ.ಸುಂದರಮ್ಮ, ಎಚ್.ಎಲ್.ಎನ್.ಸಿಂಹ ಮೊದಲಾದವರಿದ್ದರು. ಕರ್ನಾಟಕದಲ್ಲಿ ಆ ಕಾಲಕ್ಕೆ 175 ಮೂಕ ಚಿತ್ರಗಳು ತಯಾರಾಗಿರ ಬಹುದೆಂಬುದು ಒಂದು ಅಂದಾಜು.



ಸಂಸಾರ ನೌಕಾ ಚಿತ್ರದ ಒಂದು ದೃಶ್ಯ

ಮೂಕಚಿತ್ರಗಳು ಉನ್ನತ ದಶೆಯಲ್ಲಿರುವಾಗಲೇ ಭಾರತಕ್ಕೆ ವಾಕ್ಚಿತ್ರ ಕಾಲಿಟ್ಟು 1931ರಲ್ಲಿ ಭಾರತದ ಮೊದಲ ವಾಕ್ಚಿತ್ರ (ಆಲಂಆರ)

ಬಿಡುಗಡೆಯಾದ ಮೂರು ವರ್ಷದಲ್ಲಿಯೇ ಕನ್ನಡದಲ್ಲಿಯೂ ವಾಕ್ಚಿತ್ರ ಯುಗ ಆರಂಭವಾಯಿತು. 1934ರಲ್ಲಿ ಸತಿ ಸುಲೋಚನ, ಭಕ್ತಧ್ರುವ ಎಂಬ ಚಿತ್ರಗಳು ಬಿಡುಗಡೆಯಾದವು. ಸೌತ್ ಇಂಡಿಯನ್ ಮೂವಿಟೋನ್ ಎಂಬ ಸಂಸ್ಥೆ ಕೊಲ್ಹಾಪುರದಲ್ಲಿ ಎರಡೂವರೆ ತಿಂಗಳಲ್ಲಿ ನಿರ್ಮಿಸಿದ ಚಿತ್ರ ಸತಿ ಸುಲೋಚನ, ಜಯವಾಣಿ ಫಿಲಂಸ್ ಅವರು ಮುಂಬಯಿ ಅಜಂತ ಸ್ಟುಡಿಯೋದಲ್ಲಿ ಚಿತ್ರಿಸಿದ ಚಿತ್ರ ಭಕ್ತಧ್ರುವ.

ಹರಿದು ಹಂಚಿಹೋಗಿದ್ದ ಕನ್ನಡನಾಡಿನಲ್ಲಿ ಕನ್ನಡ ಚಿತ್ರಗಳ ಚಿತ್ರೀಕರಣಕ್ಕೆ ಸಾಕಷ್ಟು ಅನುಕೂಲತೆಗಳಿಲ್ಲದೆ ಕನ್ನಡ ಚಿತ್ರರಂಗ ಅನ್ಯಭಾಷಾ ಕೇಂದ್ರಗಳಲ್ಲಿ ಉಸಿರು ಪಡೆಯಬೇಕಾದ ಪರಿಸ್ಥಿತಿಯಿದ್ದು ಕನ್ನಡ ಚಿತ್ರೋದ್ಯಮ ಭದ್ರವಾಗಿ ತಳವೂರುವುದು ಅಸಾಧ್ಯವಾಗಿತ್ತು. ಹೀಗಾಗಿ 1934ರಿಂದ 1947ರವರೆಗೆ ಕೇವಲ 16 ಕನ್ನಡ ಚಿತ್ರಗಳು ತಯಾರಾದವು.

ವೈ.ವಿ.ರಾವ್, ಶ್ರೀಕೃಷ್ಣನ ಪಾತ್ರದಲ್ಲಿ

ಅಲ್ಲಿಂದ ಸು.1960ರವರಗೆ ಕರ್ನಾಟಕದಲ್ಲಿ ತಯಾರಾಗುತ್ತಿದ್ದ ಚಿತ್ರಗಳ ಸಂಖ್ಯೆ ವರ್ಷಕ್ಕೆ ಏಳು ಅಥವಾ ಎಂಟು. ಹೀಗೆ ಅಲ್ಪಸಂಖ್ಯೆಯಲ್ಲಿ ಕನ್ನಡ ಚಿತ್ರಗಳು ತಯಾರಾಗಲು ಅನೇಕ ಕಾರಣಗಳಿದ್ದುವು. ಆ ಕಾಲಕ್ಕೆ ಕನ್ನಡ ನಾಡಿನಲ್ಲಿ ಕನ್ನಡ ಪ್ರೇಕ್ಷಕಸಮೂಹ ಬಲು ಕಡಿಮೆಯಿತ್ತು; ಹಳೆಯ ಮೈಸೂರು ರಾಜ್ಯದ ಕೆಲವು ನಗರ, ಪಟ್ಟಣಗಳ ಮಧ್ಯಮವರ್ಗದ ಜನ ಮಾತ್ರ ಕನ್ನಡ ಚಿತ್ರಗಳನ್ನು ನೋಡುತ್ತಿದ್ದರು. ಕೆಳವರ್ಗದ ನಗರವಾಸಿ ಜನ ಹಾಗೂ ಗ್ರಾಮಾಂತರ ಪ್ರದೇಶಗಳ ಮಂದಿಗೆ ಕೇವಲ ತಮಿಳು ಮತ್ತು ತೆಲುಗು ಚಿತ್ರಗಳೇ ಹೆಚ್ಚು ಪ್ರಿಯವಾಗಿದ್ದುವು. ಅನ್ಯಭಾಷಾ ನಿರ್ಮಾಪಕರೊಂದಿಗಿನ ಪೈಪೋಟಿಯ ನಡುವಿನ ಬದುಕು, ಅನ್ಯ ನಾಡಿನಲ್ಲಿ ಕನ್ನಡ ಚಿತ್ರಗಳ ತಯಾರಿಕೆಯ ತೊಂದರೆ, ಕಡಿಮೆ ಬಂಡವಾಳ, ಮಿತ ಮಾರುಕಟ್ಟೆ ಇವುಗಳ ಜೊತೆಗೆ ತಮ್ಮ ಭಾಷೆಯ ಬಗ್ಗೆ ಅಭಿಮಾನವಿರಲಿ ಸಹಾನುಭೂತಿಯೂ ಇಲ್ಲದ ಪ್ರೇಕ್ಷಕವೃಂದ – ಈ ಕಾರಣಗಳಿಂದಾಗಿ ಕನ್ನಡಚಿತ್ರೋದ್ಯಮ ಕುಂಟುತ್ತ ತೆವಳುತ್ತ ಸಾಗಿತ್ತು. ಇಂಥ ಸಮಯದಲ್ಲಿ ಕನ್ನಡ ಚಿತ್ರೋದ್ಯಮದ ಪ್ರಮುಖ ಶಿಲ್ಪಿಗಳೂ ಆರಂಭ ನೇತಾರರೂ ಆದ ಗುಬ್ಬಿವೀರಣ್ಣ, ಆರ್.ನಾಗೇಂದ್ರರಾವ್, ಬಿ.ಆರ್.ಪಂತುಲು, ಹೊನ್ನಪ್ಪ ಭಾಗವತರ್, ಡಿ.ಕೆಂಪರಾಜ ಅರಸು, ಎಚ್.ಎಲ್.ಎನ್.ಸಿಂಹ, ಬಿ.ಎಸ್.ರಂಗಾ ಮೊದಲಾದವರು ಮದರಾಸಿನಲ್ಲಿಯೇ ನಿಂತು ಕನ್ನಡ ಚಿತ್ರರಂಗವನ್ನು ಪೋಷಿಸಿದರು. ದಕ್ಷಿಣ ಭಾರತ ಚಿತ್ರೋದ್ಯಮದ ಹೆಸರಾಂತ ಎ.ವಿ.ಮೇಯಪ್ಪ ಚೆಟ್ಟಿಯಾರ್ ಅವರಂಥವರೂ ಕನ್ನಡ ಚಿತ್ರನಿರ್ಮಾಪಕರಿಗೆ ಸಹಾಯ ಹಸ್ತ ನೀಡುತ್ತಿದ್ದರು. ಹಾಗಾಗಿ 50ರ ದಶಕದಲ್ಲಿ ಸು. 75 ಚಿತ್ರಗಳು ಬಿಡುಗಡೆಯಾದವು. ಜಗನ್ಮೋಹಿನಿ, ಜಾತಕ ಫಲ, ಬೇಡರ ಕಣ್ಣಪ್ಪ, ರಾಜಾ ವಿಕ್ರಮ, ಜಲದುರ್ಗ, ಸ್ಕೂಲ್ ಮಾಸ್ಟರ್ ಮೊದಲಾದ ಚಿತ್ರಗಳು ಜನರನ್ನು ಆಕರ್ಷಿಸಿ ಕನ್ನಡ ಚಿತ್ರರಂಗ ಚಿಗುರೊಡೆಯಲು ಕಾರಣವಾದವು. ಆದರೂ ಕರ್ನಾಟಕ ಚಿತ್ರೋದ್ಯಮ ಆರ್ಥಿಕ ಮುಗ್ಗಟ್ಟಿನಿದ ಪಾರಾಗಿರಲಿಲ್ಲ.

ಕನ್ನಡ ಚಿತ್ರರಂಗದ ಪರಿಸ್ಥಿತಿ 60ರ ದಶಕದಲ್ಲಿ ಬದಲಾಗತೊಡಗಿತು. 1956ರಲ್ಲಿ ವಿಶಾಲ ಕರ್ನಾಟಕವಾಗಿ ಕನ್ನಡಕ್ಕೆ ಒಂದು ಭದ್ರನೆಲೆ ದೊರೆತಿದ್ದರೂ ಕನ್ನಡ ಚಿತ್ರೋದ್ಯಮ ಇತರ ಭಾಷೆಗಳ ಮುಷ್ಟಿಯಲ್ಲಿಯೇ ಸಿಲುಕಿತ್ತು. ಇದನ್ನು ಉಗ್ರವಾಗಿ ಪ್ರತಿಭಟಿಸಿದ ಕನ್ನಡ ಚಳವಳಿ (ನೋಡಿ) 60ರ ದಶಕದ ಆರಂಭದಲ್ಲಿ ಕನ್ನಡ ಚಿತ್ರರಂಗಕ್ಕೆ ವರಪ್ರಸಾದವಾಯಿತು. ಖ್ಯಾತ ಕಾದಂಬರಿಕಾರರಾದ ಅ.ನ.ಕೃ. ಹಾಗೂ ಎಂ.ರಾಮಮೂರ್ತಿ ಮೊದಲಾದವರ ನೇತೃತ್ವದಲ್ಲಿ ಈ ಚಳವಳಿ ನಡೆಯಿತು. ಸಹಾಯಾರ್ಥರೂಪದಲ್ಲಿ ಸರ್ಕಾರ ಕನ್ನಡ ಚಿತ್ರಗಳಿಗೆ ಸಹಾಯ ಮಾಡಬೇಕೆಂಬ ಒತ್ತಾಯ, ಸಿನಿಮಾ ಮಂದಿರಗಳಲ್ಲಿ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ – ಈ ಬೇಡಿಕೆಗಳನ್ನು ಇಟ್ಟುದುದಲ್ಲದೆ ಈ ಆಂದೋಲನ ಬೇರೆ ಭಾಷೆಯ ಚಿತ್ರಗಳ ಡಬ್ಬಿಂಗ್‌ಗನ್ನು ಪ್ರಬಲವಾಗಿ ವಿರೋಧಿಸಿತು. ಕನ್ನಡ ಚಿತ್ರೋದ್ಯಮಿಗಳು ಇದನ್ನು ಹಾರ್ದಿಕವಾಗಿ ಸ್ವಾಗತಿಸಿದರು. ತಮ್ಮ ಸೃಜನಶೀಲತೆಯನ್ನು ಯಾವ ಮುಖವಾಗಿ ಹರಿಸಬೇಕೆಂಬುದರ ಬಗ್ಗೆ, ಕನ್ನಡ ಚಿತ್ರಗಳ ವಾಸ್ತವ ಪ್ರೇಕ್ಷಕರಾರು, ಅವರ ಅಭಿರುಚಿಯೇನು ಎಂಬುದರ ಬಗ್ಗೆ ಅರಿವು ಮೂಡಿ ಕನ್ನಡ ಚಿತ್ರೋದ್ಯಮದ ಹೊಸ ಅಸ್ತಿತ್ವಕ್ಕೆ ನಾಂದಿಯಾಯಿತು.

ಪ್ರಾದೇಶಿಕ ಚಿತ್ರೋದ್ಯಮಕ್ಕೆ ಉತ್ತೇಜನ ಕೊಡುವ ದೃಷ್ಟಿಯಿಂದ ಕೇಂದ್ರ ಸರ್ಕಾರ 1954ರಿಂದ ಪ್ರಾದೇಶಿಕ ಪ್ರಶಸ್ತಿಗಳನ್ನು ರಾಷ್ಟ್ರಮಟ್ಟದಲ್ಲಿ ನೀಡತೊಡಗಿತು. ಅಲ್ಲದೆ ಚಿತ್ರನಿರ್ಮಾಣಕ್ಕೆ ಸಾಲ ನೀಡುವ ಉದ್ದೇಶದಿಂದ 1960ರಲ್ಲಿ ಕರ್ನಾಟಕ ಫಿಲಂ ಫೈನಾನ್ಸ್ ಕಾರ್ಪೋರೇಷನ್ ಸ್ಥಾಪಿತವಾಯಿತು. ಕನ್ನಡ ಚಿತ್ರೋದ್ಯಮಕ್ಕೆ ಕಾಯಕಲ್ಪ ಚಿಕಿತ್ಸೆ ನಡೆದದ್ದು ಕರ್ನಾಟಕ ಸರ್ಕಾರ 1966ರರಿಂದ ಸಹಾಯಧನ ಯೋಜನೆಯನ್ನು ಜಾರಿಗೆ ತಂದಂದಿನಿಂದ. ಬಹುಶಃ ಭಾರತದಲ್ಲಿ ಇಂಥ' ಯೋಜನೆಯನ್ನು ಕಾರ್ಯಗತಗೊಳಿಸಿದ ಎರಡನೆಯ ರಾಜ್ಯವೆಂದರೆ ಕರ್ನಾಟಕ. ಕನ್ನಡ ನಾಡಿನಲ್ಲಿಯೇ ಸಂಪೂರ್ಣವಾಗಿ ಚಿತ್ರೀಕರಣಗೊಂಡ ಯಾವುದೇ ಚಿತ್ರಕ್ಕೆ ಯಾವುದೇ ಷರತ್ತಿಲ್ಲದೆ 50,000ರೂ. ಸಹಾಯಧನ ನೀಡತೊಡಗಿತು. ಇದು ಕನ್ನಡ ಚಿತ್ರನಿರ್ಮಾಪಕರನ್ನು ಮಾತ್ರವಲ್ಲದೆ ಇತರ ಭಾಷಾ ಚಿತ್ರ ನಿರ್ಮಾಪಕರನ್ನೂ ಆಕರ್ಷಿಸಿತು. 1980ರಿಂದ ರಾಜ್ಯದಲ್ಲೇ ನಿರ್ಮಾಣವಾದ ಕನ್ನಡ ಚಿತ್ರಗಳಿಗೆ 50% ತೆರಿಗೆ ವಿನಾಯಿತಿ ನೀಡಿದೆ. ಅಲ್ಲದೆ ಸಹಾಯಧನದ ಮೊತ್ತವನ್ನು ಕೂಡ ಹೆಚ್ಚಿಸಲಾಯಿತು. 1996ರ ಅನಂತರ ನೂತನ ಚಲನ ಚಿತ್ರ ನಿಯಮ ಜಾರಿಗೊಳಿಸಲಾಯಿತು. ಸರ್ಕಾರದಿಂದ ರಚಿಸಲಾಗುವ ಗುಣಾತ್ಮಕ ಆಯ್ಕೆ ಸಲಹಾ ಸಮಿತಿ ಆಯ್ಕೆ ಮಾಡುವ ಎರಡು ಪ್ರಾದೇಶಿಕ ಭಾಷಾ ಚಿತ್ರಗಳು ಸೇರಿದಂತೆ ಒಟ್ಟು 20 ಚಲನ ಚಿತ್ರಗಳಿಗೆ ತಲಾ ಒಂದು ಲಕ್ಷ ರೂಪಾಯಿ ಸಹಾಯ ಧನ ನೀಡಲಾಗುತ್ತಿದೆ. 1996ರಿಂದ 2002ರವರೆಗೆ ಒಟ್ಟು 120 ಚಿತ್ರಗಳಿಗೆ 12 ಕೋಟಿ ಸಹಾಯ ಧನವನ್ನು ಸರ್ಕಾರ ವಿತರಿಸಿದೆ. ಈ ಸೌಲಭ್ಯ ರಾಜ್ಯದಲ್ಲಿಯೇ ತಯಾರಾದ ಕನ್ನಡ, ತುಳು, ಕೊಂಕಣಿ, ಮತ್ತು ಕೊಡವ ಭಾಷೆಯ ಚಿತ್ರಗಳಿಗೆ ಮಾತ್ರ ಅನ್ವಯಿಸುತ್ತದೆ. ಜೊತೆಗೆ ಚಿತ್ರ ನಿರ್ಮಾಪಕರಿಗೆ ಎಲ್ಲ ಬಗೆಯ ಉತ್ತೇಜನಗಳನ್ನೂ ನೀಡುತ್ತಿದೆ; ಹೊರಾಂಗಣ ಚಿತ್ರೀಕರಣಕ್ಕೆ ಅನುಮತಿ ನೀಡುವ ಕ್ರಮವನ್ನು ಅತ್ಯಂತ ಸುಗಮಗೊಳಿಸಿದೆ; ಚಲನಚಿತ್ರ ಅಭಿವೃದ್ಧಿ ಕಾರ್ಪೋರೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಚಿತ್ರೋದ್ಯಮಕ್ಕೆ ಪ್ರತ್ಯೇಕ ಸಹಾಯ ನೀಡುತ್ತಿದೆ. ಪ್ರಸ್ತುತ ಸಹಾಯಧನದ ಮೊತ್ತವನ್ನು ಹದಿನೈದು ಲಕ್ಷದವರೆಗೂ ಹೆಚ್ಚಿಸಲಾಗಿದೆ.

ಈ ಸಂಸ್ಥೆಯ ಆಶ್ರಯದಲ್ಲಿ ಸಂಚಾರಿ ಚಿತ್ರೀಕರಣ ಉಪಕರಣ ಘಟಕವೊಂದಿದ್ದು ನಿರ್ಮಾಪಕರು ದೈನಿಕ ಬಾಡಿಗೆಯ ಪ್ರಕಾರ ಅದರ

ಉಪಯೋಗ ಪಡೆಯಬಹುದು. ಉತ್ತಮ ಚಿತ್ರಗಳ ನಿರ್ಮಾಣಕ್ಕೆ ಉತ್ತೇಜನ ಕೊಡುವ ಉದ್ದೇಶದಿಂದ ವರ್ಷದ ಶ್ರೇಷ್ಠ ಚಿತ್ರಪ್ರಶಸ್ತಿ ನೀಡಿಕೆಯನ್ನೂ ರಾಜ್ಯ ಸರ್ಕಾರ ಆರಂಭಿಸಿತು (1966-67). 1976ರ ಜೂನ್ ಅಂತ್ಯದ ವೇಳೆಗೆ 32 ಕನ್ನಡ ಚಿತ್ರಗಳಿಗೆ ಇಂಥ ಪ್ರಶಸ್ತಿ ಸಂದಿದೆ. ಉತ್ತಮ ಚಿತ್ರಗಳಿಗೆ ಪ್ರಶಸ್ತಿ ನೀಡುವಾಗ ಕಲಾವಿದರಿಗೆ ಹಾಗೂ ತಾಂತ್ರಿಕರಿಗೆ ಅತ್ಯುತ್ತಮ ನಟ, ಅತ್ಯುತ್ತಮ ಪೋಷಕ ನಟ, ಅತ್ಯುತ್ತಮ ಪೋಷಕ ನಟಿ, ಅತ್ಯುತ್ತಮ ಕಥಾಲೇಖನ, ಅತ್ಯುತ್ತಮ ಚಿತ್ರನಾಟಕ ಕರ್ತೃ, ಅತ್ಯುತ್ತಮ ಸಂಭಾಷಣಾ ಕರ್ತೃ, ಅತ್ಯುತ್ತಮ ಸಂಗೀತ ನಿರ್ದೇಶಕ, ಅತ್ಯುತ್ತಮ ಛಾಯಾಗ್ರಾಹಕ, ಅತ್ಯುತ್ತಮ ಧ್ವನಿಗ್ರಾಹಕ, ಅತ್ಯುತ್ತಮ ಸಂಕಲನಕಾರ ಮೊದಲಾದ ಪ್ರಶಸ್ತಿ ನೀಡಿ ಪುರಸ್ಕರಿಸುವ ಪ್ರವೃತ್ತಿಯಿಂದಾಗಿ ಚಲನಚಿತ್ರಗಳ ಸರ್ವತೋಮುಖ ಗುಣಾಭಿವೃದ್ಧಿಗೆ ಪ್ರೇರಕವಾಗಿದೆ. ಉತ್ತಮ ಚಿತ್ರಗಳಿಗೆ ನೆರವು ಅಗತ್ಯವಾಗಿರುವುದರಿಂದ ಕನ್ನಡ ಚಿತ್ರಗಳಿಗೆ ಮನರಂಜನ ತೆರಿಗೆಯನ್ನು ಮನ್ನಾ ಮಾಡುವ ಮೂಲಕ ಸರ್ಕಾರ ಕನ್ನಡ ಚಿತ್ರಗಳನ್ನು ಪ್ರೋತ್ಸಾಹಿಸುತ್ತಿದೆ. ಹಾಗಾಗಿ ಈಗ ರಾಜ್ಯದಲ್ಲಿ ಕನ್ನಡ, ಕೊಡವ, ಕೊಂಕಣಿ, ತುಳು, ಹಿಂದಿ, ಇಂಗ್ಲಿಷ್, ತೆಲುಗು, ತಮಿಳು, ಮಲೆಯಾಳಂ ಭಾಷೆಗಳಲ್ಲಿನ ಸು.200 ಚಿತ್ರಗಳು ತಯಾರಾಗುತ್ತಿವೆ. ಚಿತ್ರೋದ್ಯಮದ ಬೆಳವಣಿಗೆ ಹಾಗೂ ಪ್ರಸಾರಕ್ಕೆ ಬೆನ್ನೆಲುಬಾಗಿ ನಿಂತ ಕರ್ನಾಟಕ ಸರ್ಕಾರ ರಾಜ್ಯದ ವಿವಿಧೆಡೆಗಳಲ್ಲಿ ಮಿನಿ ಚಿತ್ರಮಂದಿರಗಳನ್ನು ನಿರ್ಮಿಸಲು ಯೋಜನೆಯೊಂದನ್ನು ಕೈಗೊಂಡಿತ್ತು. ಚಿತ್ರರಂಗಕ್ಕೆ ಸಂಬಂಧಿಸಿದ ಸರ್ಕಾರಿ ವಿಭಾಗವನ್ನು ಪ್ರತ್ಯೇಕ ಇಲಾಖೆಯ ಅಂತಸ್ತಿಗೆ ಏರಿಸಲಾಗಿದೆ. ಬೆಂಗಳೂರಿನ ಜಯಚಾಮರಾಜೇಂದ್ರ ಸರ್ಕಾರಿ ಪಾಲಿಟೆಕ್ನಿಕ್ ಶಾಲೆಯಲ್ಲಿ ಸಿನಿಮಟೋಗ್ರಫಿ ಶಿಕ್ಷಣವನ್ನು ಒದಗಿಸಲಾಗುತ್ತಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಸಂಘವೂ ಉದ್ಯಮದ ಸಂಘಟನೆಗೆ, ಅಭಿವೃದ್ಧಿಗೆ ಅಪಾರ ಶ್ರಮಪಡುತ್ತ ಬಂದಿದೆ.

70ನೆಯ ದಶಕದಲ್ಲಿ ಕನ್ನಡ ಚಿತ್ರರಂಗ ಕರ್ನಾಟಕದ ಒಂದು ಉದ್ಯಮ ಎನಿಸಿಕೊಳ್ಳುವ ಅರ್ಹತೆ ಪಡೆದುಕೊಂಡಿತು. ಇಲ್ಲಿಯವರೆಗೆ ಕನ್ನಡದಲ್ಲಿ ಬಿಡುಗಡೆಯಾಗಿರುವ ಸು.500 ಚಿತ್ರಗಳಲ್ಲಿ ಕೇವಲ ನೂರು ಚಿತ್ರಗಳು ಮಾತ್ರ 60ರ ಹಿಂದಿನ ಇಪ್ಪತ್ತಾರು ವರ್ಷಗಳ ಸಾಧನೆ. ಉಳಿದವೆಲ್ಲ ಇತ್ತೀಚೆಗೆ ಒಂದೂವರೆ ದಶಕದಲ್ಲಿ ನಿರ್ಮಿತವಾದವು. ಈ ಹೋಲಿಕೆಯನ್ನು ಗಮನಿಸಿದರೆ ಚಿತ್ರನಿರ್ಮಾಣ ಈಗ ಐದು ಪಟ್ಟು ಹೆಚ್ಚಾಗಿದೆ. ಕನ್ನಡ ಚಿತ್ರಗಳು ಸಂಖ್ಯೆಯ ದೃಷ್ಟಿಯಲ್ಲಿ ಮಾತ್ರವಲ್ಲದೆ ಗುಣಮಟ್ಟದಲ್ಲಿಯೂ ಹೆಚ್ಚಳ ಪಡೆದಿವೆ ಎನ್ನುವುದಕ್ಕೆ ರಾಷ್ಟ್ರಮಟ್ಟದ ಪ್ರಶಸ್ತಿಗಳು ಬರುತ್ತಿರುವುದೇ ಸಾಕ್ಷಿಯಾಗಿದೆ.

ಸದಾರಮೆ ಚಿತ್ರದಲ್ಲಿ ನರಸಿಂಹರಾಜು ಮತ್ತು ಗುಬ್ಬಿವೀರಣ್ಣ

ಚಿತ್ರೋದ್ಯಮದ ವಾಣಿಜ್ಯ ವ್ಯವಹಾರಗಳು ಉತ್ಪಾದನೆ, ಹಂಚಿಕೆ ಮತ್ತು ಪ್ರದರ್ಶನ ಎಂಬ ಮೂರು ಹಂತಗಳಲ್ಲಿ ನಡೆಯುತ್ತದೆ. ಈ ಉದ್ಯಮದ ಏಳು ಬೀಳುಗಳಲ್ಲಿ ಈ ಮೂರೂ ಮಜಲಿನ ಪಾತ್ರವೂ ಪ್ರಮುಖವಾದದ್ದು. ನಿರ್ಮಾಪಕ ವಲಯ ಮಂಡಳಿ, ಹಂಚಿಕೆದಾರರ ವಲಯ ಮಂಡಳಿ, ಪ್ರದರ್ಶನಕಾರ ವಲಯ ಮಂಡಳಿಗಳಿದ್ದು ಉದ್ಯಮದ ಕಾರ್ಯಭಾರಗಳು ಸುಸಂಘಟಿತವಾಗಿ ನಡೆಯುವ ಪ್ರಯತ್ನವಿದೆ. ಉಳಿದ ಎರಡು ವಲಯಗಳು ವ್ಯಾವಹಾರಿಕ ಅನುಕೂಲಕ್ಕಾಗಿ ಮಾತ್ರವಾದರೆ, ಉತ್ಪಾದನಾ ವಲಯ ನಿಜವಾದ ಸೃಜನಶೀಲತೆಯ ಕ್ಷೇತ್ರವಾಗಿ ಉದ್ಯಮದ ಭದ್ರವಾದ ಅಸ್ತಿಭಾರವಾಗಿದೆ. ಬಹುಕಾಲದವರೆಗೆ ಕನ್ನಡ ಚಿತ್ರಗಳ ತಯಾರಿಕೆ ಮದರಾಸು ಕೇಂದ್ರದಲ್ಲಿಯೇ ನಡೆಯುತ್ತಿತ್ತು. ಸ್ಟುಡಿಯೋ ಸೌಲಭ್ಯಗಳು ಕರ್ನಾಟಕದಲ್ಲಿ ಸಾಕಷ್ಟಿರಲಿಲ್ಲ. ಸರ್ಕಾರದ ಪ್ರೋತ್ಸಾಹದಿಂದಾಗಿ ನಿರ್ಮಾಪಕರು ತಮ್ಮ ಕೇಂದ್ರವನ್ನು ಬೆಂಗಳೂರು, ಮೈಸೂರಿಗೆ ಬದಲಾಯಿಸತೊಡಗಿದಾಗ ಪರಿಸ್ಥಿತಿ ಕೂಡ ಬದಲಾಗತೊಡಗಿತು. ಒಳಾಂಗಣ ಚಿತ್ರೀಕರಣಕ್ಕೆ ಅತ್ಯಾವಶ್ಯಕವಾದ ಸ್ಟುಡಿಯೋಗಳು ಈಗ ಕರ್ನಾಟಕದಲ್ಲಿವೆ.

ಪ್ರೀಮಿಯರ್ ಸ್ಟುಡಿಯೋ, ಮೈಸೂರು

ಮೈಸೂರು ಸೌಂಡ್ ಸ್ಟುಡಿಯೋಸ್ ಬೆಂಗಳೂರಿನಲ್ಲಿ ಸು.75,000ರೂ. ಬಂಡವಾಳದೊಂದಿಗೆ 1936ರಲ್ಲಿ ಸ್ಥಾಪಿತವಾಯಿತು. ಈ ಸ್ಟುಡಿಯೋದ ಮಾಲಿಕರು ಬಸ್ ಮಾಲಿಕರಾದ ತಿಮ್ಮಯ್ಯ. ಕನ್ನಡ ನಾಡಿನಲ್ಲಿಯೇ ತಯಾರಾದ ಮೊಟ್ಟಮೊದಲ ವಾಕ್ಚಿತ್ರ ರಾಜಸೂಯಯಾಗ ಇಲ್ಲಿ ಸಿದ್ಧವಾಯಿತು. ಎರಡು ತಮಿಳು ಚಿತ್ರಗಳನ್ನು ತಯಾರಿಸಿದ ಮೇಲೆ ಈ ಸ್ಟುಡಿಯೋ ಇದ್ದಕ್ಕಿದ್ದಂತೆ ಮುಚ್ಚಿಹೋಯಿತು. ಆಮೇಲೆ ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋ ಅಸ್ತಿತ್ವಕ್ಕೆ ಬಂತು. 20ಕ್ಕೂ ಹೆಚ್ಚು ಕನ್ನಡ ಚಿತ್ರಗಳ ನಿರ್ಮಾಣಕ್ಕೆ ಕಾರಣವಾದ ಈ ಸ್ಟುಡಿಯೋ ಮೈಸೂರು ಕನ್ನಡ ಚಿತ್ರೋದ್ಯಮದ ಪ್ರಮುಖ ಕೇಂದ್ರವಾಗಿ ಬೆಳೆಯಲು ಅಂಕುರಾರ್ಪಣೆ ಮಾಡಿತು. ಈ ಸ್ಟುಡಿಯೋದೊಂದಿಗೇ ಜನ್ಮತಳೆದ ಮಹಾತ್ಮಾಚಿತ್ರಸಂಸ್ಥೆಯ ಕೃಷ್ಣಲೀಲೆ ಈ ಸ್ಟುಡಿಯೋದಲ್ಲಿ ನಿರ್ಮಿತವಾದ ಮೊದಲ ಚಿತ್ರ. ನವಜ್ಯೋತಿ ಸ್ಟುಡಿಯೋ ಮುಚ್ಚಿಹೋದ ಮೇಲೆ ಪ್ರೀಮಿಯರ್ ಸ್ಟುಡಿಯೋ ಸ್ಥಾಪಿತವಾಯಿತು (1954). ಈ ಸ್ಟುಡಿಯೋ ಕನ್ನಡ ಚಿತ್ರ ತಯಾರಿಕೆಗೆ ಆದಷ್ಟು ಕೊಡುಗೆ ನೀಡಿ ಈಗ ಸ್ಥಗಿತಗೊಂಡಿದೆ. ಬೆಂಗಳೂರಿನಲ್ಲಿ 1969ರಲ್ಲಿ ಅಸ್ತಿತ್ವಕ್ಕೆ ಬಂದ ಕಂಠೀರವ ಸ್ಟುಡಿಯೋ (ಎರಡು ಫ್ಲೋರ್‌ಗಳು) ಚಾಮುಂಡೇಶ್ವರಿ ಸ್ಟುಡಿಯೋ (ಎರಡು ಫ್ಲೋರ್‌ಗಳು), ಅಭಿಮಾನ್ ಸ್ಟುಡಿಯೋ (ಒಂದು ಫ್ಲೋರ್), ಸುಜಾತ ಸ್ಟುಡಿಯೋ (ಒಂದು ಫ್ಲೋರ್) - ಇವು ಕನ್ನಡ ಚಿತ್ರ ತಯಾರಿಕೆಯ ಪ್ರಮುಖ ಕೇಂದ್ರಗಳು. ಕನ್ನಡ ನಾಡಿನ ಸ್ಟುಡಿಯೋಗಳಲ್ಲಿ ಸುಸಜ್ಜಿತ ಮೇಕಪ್ ರೂಂಗಳು, ಜೊತೆಗೆ ರೆಕಾರ್ಡಿಂಗ್, ರೀ ರೆಕಾರ್ಡಿಂಗ್, ಹಾಗೂ ಡಬ್ಬಿಂಗ್ ಸೌಲಭ್ಯಗಳಿವೆ. ಆಧುನಿಕ ಚಿತ್ರಸಂಸ್ಕರಣಾಗಾರವಿದೆ. ಮೂವಿಯೋಲ ಸಹಿತವಾದ ಸಂಕಲನ ಕೊಠಡಿಗಳಿವೆ. ಹವಾನಿಯಂತ್ರಿತ ಫಿಲಂ ಶೇಖರಣ ಸೌಲಭ್ಯಗಳಿವೆ. ಅಲ್ಲದೆ ಸರ್ಕಾರದ ಚಲನಚಿತ್ರಾಭಿವೃದ್ಧಿ ಕಾರ್ಪೋರೇಷನ್‌ನಲ್ಲಿ ಅತ್ಯುತ್ತಮ ಕ್ಯಾಮರಾಗಳೂ ಅತ್ಯುತ್ತಮ ಮೂವಿಯೋಲ, ಅತ್ಯುತ್ತಮ ದೀಪೋಪಕರಣ ಹಾಗೂ ಹೊರಾಂಗಣ ಸಂಚಾರೀ ಚಿತ್ರೀಕರಣ ಘಟಕ ಇವೆ. ಪಾಲಿಟೆಕ್ನಿಕ್ ಶಾಲೆಯಲ್ಲಿ ಅತ್ಯಂತ ಆಧುನಿಕ 12 ಚಾನೆಲ್ ಮಿಕ್ಸರ್ ಯಂತ್ರವಿದ್ದು ಧ್ವನಿಮುದ್ರಣ ಹಾಗೂ ಹಿನ್ನೆಲೆ ಸಂಗೀತ ಮುದ್ರಣಕ್ಕೆ ಅನುಕೂಲವಿದೆ. ಹೊರಾಂಗಣ ಚಿತ್ರೀಕರಣಕ್ಕೆ ಕನ್ನಡ ನಾಡಿನಲ್ಲಿ ಅತ್ಯಂತ ರಮ್ಯ ಹಾಗೂ ಸುಂದರ ತಾಣಗಳಿವೆ. ಜಲಪಾತಗಳು, ಸಹ್ಯಾದ್ರಿಯ ಕಾಡು, ಮಂಗಳೂರು, ಕಾರವಾರದುದ್ದಕ್ಕೆ ಇರುವ ಕರಾವಳಿ ಪ್ರದೇಶ, ಮೈಸೂರು ಅರಮನೆ, ಬೃಂದಾವನ, ಜೊತೆಗೆ

ಅನೇಕ ಐತಿಹಾಸಿಕ ಸಾಂಸ್ಕೃತಿಕ ಸ್ಥಳಗಳು ಚಿತ್ರೀಕರಣಕ್ಕೆ ಒಳ್ಳೆಯ ಹಿನ್ನೆಲೆಯನ್ನೊದಗಿಸುತ್ತವೆ. ಮೊದಲಿಗೆ ಚಿತ್ರೀಕರಣ ಕರ್ನಾಟಕದಲ್ಲಿಯೇ ಆದರೂ ಸಂಸ್ಕರಣ (ಪ್ರಾಸೆಸಿಂಗ್) ಮತ್ತು ಧ್ವನಿಮುದ್ರಣಕ್ಕೆ (ರೀರೆಕಾರ್ಡಿಂಗ್) ಮದರಾಸಿಗೆ ಹೋಗಬೇಕಿತ್ತು. 1975ರಲ್ಲಿ ಕಂಠೀರವ ಸ್ಟುಡಿಯೊದಲ್ಲಿ ಕರ್ನಾಟಕ ಸಿನಿ ಲ್ಯಾಬೋರೇಟರೀಸ್ ಸಂಸ್ಥೆಯವರ ಚಲನಚಿತ್ರ ಸಂಸ್ಕರಣಾಗಾರ ತನ್ನ ಕೆಲಸವನ್ನು ಆರಂಭಿಸಿತು. ಎಲ್.ವಿ.ಪ್ರಸಾದ್ ಬೆಂಗಳೂರಿನಲ್ಲಿ ವರ್ಣಚಿತ್ರಸಂಸ್ಕರಣಕ್ಕಾಗಿ ಪ್ರಯೋಗಾಲಯ ಸ್ಥಾಪಿಸಿದರು. ನಾಗ್ ಸಹೋದರರು ಸಂಕೇತ್ ರೆಕಾರ್ಡಿಂಗ್ ಸ್ಟುಡಿಯೋ ಪ್ರಾರಂಭಿಸಿದರು. ಮದರಾಸಿನಲ್ಲಿರುವ ಫಿಲಂ ಸೆಂಟರ್ ಸಂಸ್ಥೆ ಹಾಗೂ ಜೆಮಿನಿ ಕಲರ್ ಲ್ಯಾಬೊರೇಟರಿಗಳಲ್ಲಿ ಕನ್ನಡ ವರ್ಣಚಿತ್ರಗಳ ಸಂಸ್ಕರಣ ಹಿಂದೆ ನಡೆಯುತ್ತಿತ್ತು. ವರ್ಣಚಿತ್ರಗಳು ಭಾರತದಲ್ಲಿ ಅತ್ಯಂತ ಬೇಡಿಕೆಯಿರುವ ಈಸ್ಟ್‌ಮನ್ ಬಣ್ಣದಲ್ಲಿ ತಯಾರಾಗುತ್ತವೆ. ಅದೃಷ್ಟವೊ ಅದೃಷ್ಟ ಎಂಬ ಕನ್ನಡ ಚಿತ್ರ ಆರ್ವೋ ಬಣ್ಣದಲ್ಲಿ ತಯಾರಾಗಿತ್ತು. ಕನ್ನಡದಲ್ಲಿ ಇಲ್ಲಿಯವರೆಗೆ ತಯಾರಾಗಿರುವ ಚಿತ್ರಗಳೆಲ್ಲವೂ 35ಎಂ.ಎಂ.ನಲ್ಲಿ ತಯಾರಾದವು. ಕೆಲವು ಸಾಕ್ಷ್ಯಚಿತ್ರಗಳು ಮಾತ್ರ 16ಎಂಎಂ.ನಲ್ಲಿ ತಯಾರಾಗಿವೆ. ಸೊಸೆ ತಂದ ಸೌಭಾಗ್ಯ ಕನ್ನಡದ ಪ್ರಪ್ರಥಮ ಸಿನಿಮಾಸ್ಕೋಪ್ ಚಿತ್ರ. ಚಲನಚಿತ್ರಗಳನ್ನು ತಯಾರಿಕೆಯ ದೃಷ್ಟಿಯಿಂದ ಸಾಮಾನ್ಯ ಚಿತ್ರಗಳು, ಅದ್ದೂರಿ ತಾರಾಗಣದ ಚಿತ್ರಗಳು ಹಾಗೂ ಅಲ್ಪವೆಚ್ಚದ ಕಲಾತ್ಮಕ ಚಿತ್ರಗಳು ಎಂದು ವಿಭಾಗಿಸಲಾಗುತ್ತದೆ.

ಉತ್ಪಾದನೆ ಹಾಗೂ ಪ್ರದರ್ಶನ ವಲಯಗಳ ನಡುವಣ ಕೊಂಡಿಯಾದ ಹಂಚಿಕೆದಾರರನ್ನು ಚಿತ್ರೋದ್ಯಮದ ಬಂಡವಾಳಗಾರರೆಂದೇ ಹೇಳಬಹುದು. ಕೇವಲ ಕನ್ನಡ ಚಿತ್ರಗಳನ್ನೇ ವಿತರಣೆ ಮಾಡುವ ಹಂಚಿಕೆದಾರರು ಸಾಮಾನ್ಯವಾಗಿ ಇಲ್ಲವಾದರೂ ಕನ್ನಡ ಚಿತ್ರಗಳಿಗೆ ಆದ್ಯತೆ ಕೊಡುವವರಿದ್ದಾರೆ. ವಿಜಯ ಪಿಕ್ಚರ್ಸ್ ಸರ್ಕ್ಯೂಟ್, ನವಯುಗ ಚಿತ್ರಸಂಸ್ಥೆ, ಕೆ.ಸಿ.ಎನ್. ಮೂವೀಸ್, ಶಾರದಾಮೂವೀಸ್, ಈಶ್ವರೀ ಪಿಕ್ಚರ್ಸ್ ಹಾಗೂ ಮೆಹತಾ ಪಿಕ್ಚರ್ಸ್ ಕನ್ನಡ ಚಿತ್ರಗಳಲ್ಲಿ ಆಸಕ್ತಿ ತೋರಿದ್ದಾರೆ. ಹಂಚಿಕೆದಾರರು ಕನ್ನಡ ಚಿತ್ರಗಳಿಗೆ ಭಾಗಶಃ ಬಂಡವಾಳ ಒದಗಿಸಿ, ಚಿತ್ರಗಳ ಹಂಚಿಕೆ ಹಿಡಿದು ಸೇಕಡಾವಾರು ವ್ಯವಸ್ಥೆಯಲ್ಲಿ ವ್ಯವಹಾರ ನಡೆಸುತ್ತಾರೆ. ಸಾಮಾನ್ಯವಾಗಿ ಕನ್ನಡ ಚಿತ್ರಗಳ ಆದ್ಯ ಹಂಚಿಕೆದಾರರೆಲ್ಲ ಬೆಂಗಳೂರಿನಲ್ಲಿ ಕೇಂದ್ರೀಕರಿಸಿದ್ದಾರೆ. ಮೈಸೂರು, ಶಿವಮೊಗ್ಗ, ಚಿತ್ರದುರ್ಗ, ಧಾರವಾಡ, ಗದಗ ಮೊದಲಾದೆಡೆಗಳಲ್ಲಿ ಎರಡನೆಯ ದರ್ಜೆಯ ವಿತರಣ ಕೇಂದ್ರಗಳಿವೆ.

ಕಂಠೀರವ ಸ್ಟುಡಿಯೋ, ಬೆಂಗಳೂರು

ವಿಶಾಲ ಕರ್ನಾಟಕದ ಉದ್ದಗಲಕ್ಕೆ ಹರಡಿಕೊಂಡಿರುವ ಚಿತ್ರ ಪ್ರದರ್ಶನ ಕೇಂದ್ರಗಳು ಚಿತ್ರೋದ್ಯಮದೊಂದಿಗೆ ಸಾರ್ವಜನಿಕ ಸಂಪರ್ಕ ಕಲ್ಪಿಸುತ್ತವೆ. ಇವುಗಳಲ್ಲಿ ಶಾಶ್ವತ ಹಾಗೂ ಸಂಚಾರಿ ಚಿತ್ರಮಂದಿರಗಳಿವೆ. ಬೆಂಗಳೂರು ನಗರ ಒಂದರಲ್ಲಿಯೇ ಸು.85 ಚಿತ್ರಮಂದಿಗಳಿದ್ದವು. ಇವುಗಳಲ್ಲಿ ಹಲವು ಅತ್ಯಾಧುನಿಕ ರೀತಿಯಲ್ಲಿ ಸಜ್ಜುಗೊಂಡವು. ಕನ್ನಡ ನಾಡಿನ ಚಿತ್ರಮಂದಿರಗಳ ವೈಶಿಷ್ಟ್ಯ ಎಂದರೆ ಬಹುಭಾಷಾ ಚಿತ್ರಗಳ ಪ್ರದರ್ಶನದ ಪರಿಪಾಠ. ಬೆಂಗಳೂರಿನಲ್ಲಿ ಆರಕ್ಕೂ ಹೆಚ್ಚು ಭಾಷಾ ಚಿತ್ರಗಳು ಪ್ರದರ್ಶನಗೊಳ್ಳುತ್ತವೆ. ಕರ್ನಾಟಕದ ರಾಜಧಾನಿಯಲ್ಲಿ ಇಂಗ್ಲಿಷ್, ಹಿಂದಿ, ತಮಿಳು, ತೆಲಗು ಚಿತ್ರಗಳನ್ನು ಖಾಯಂ ಆಗಿ ಪ್ರದರ್ಶಿಸುವ ಚಿತ್ರಮಂದಿರಗಳಿದ್ದರೂ ಕನ್ನಡಕ್ಕೆ ಖಾಯಂ ಚಿತ್ರಮಂದಿರವಿಲ್ಲ. ಹಿಂದೆ ಭಾರತ ಚಿತ್ರಮಂದಿರವೊಂದು ಮಾತ್ರ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಧೋರಣೆ ಇಟ್ಟುಕೊಂಡಿತ್ತು. ಎಲ್ಲ ವಲಯದ ಸದಸ್ಯರೂ ಸೇರಿ ಸರ್ವಾನುಮತದಿಂದ ಬೆಂಗಳೂರಿನ ಎ ವರ್ಗದ ಆಧುನಿಕ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ಸೇಕಡವಾರು ಆದಾಯ ವ್ಯವಸ್ಥೆಯಲ್ಲಿ ಪ್ರದರ್ಶಿಸಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಯಿತು. ಈ ವ್ಯವಸ್ಥೆ ತೃಪ್ತಿಕರವಾಗಿಲ್ಲದ ಕಾರಣ 1975 ಡಿಸೆಂಬರ್ 1ರಿಂದ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನದ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯಂತೆ ರಾಜ್ಯದ ಎಲ್ಲ ಚಿತ್ರಮಂದಿರಗಳೂ ವರ್ಷದಲ್ಲಿ ಕೊನೆಯ ಪಕ್ಷ 12ವಾರ ಕಾಲ ಅಥವಾ ಮೂರು ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ಇದನ್ನು ಕ್ರಮಬದ್ಧವಾಗಿ ನಿರ್ವಹಿಸಲು ಕರ್ನಾಟಕ ಚಲನಚಿತ್ರ ವಾಣಿಜ್ಯ ಸಂಘದ ಜಾಗೃತ ಸಮಿತಿ ಹಾಗೂ ಸ್ವಯಂ ನಿಯಂತ್ರಣಾ ಸಮಿತಿಗಳು ರಚನೆಗೊಂಡಿದ್ದವು.

ಚಿತ್ರಗಳ ನಿರ್ಮಾಣ ವೆಚ್ಚ ಮತ್ತು ಅವುಗಳ ಜನಾಕರ್ಷಕ ಗುಣಕ್ಕೆ ಅನುಗುಣವಾಗಿ ಬಿಡುಗಡೆಯಾಗುವಾಗ ಹಾಕಿಸುವ ಚಿತ್ರ ಪ್ರತಿಗಳ ಸಂಖ್ಯೆ ಇರುತ್ತದೆ. ಪ್ರಾಯೋಗಿಕ ಚಿತ್ರಗಳ ಪ್ರತಿಗಳು ಕಡಿಮೆ. ಚಿತ್ರಗಳು ಪ್ರಥಮದಲ್ಲಿ ಎ ಕೇಂದ್ರ ಹಾಗೂ ಪ್ರಮುಖ ಬಿ ಕೇಂದ್ರಗಳಲ್ಲಿ ಬಿಡುಗಡೆಯಾಗುತ್ತವೆ.

ಇದುವರೆಗೆ ಕನ್ನಡ ಚಿತ್ರಗಳಿಗೆ ಕೇವಲ ಕರ್ನಾಟಕ ರಾಜ್ಯವೊಂದೇ ಮಾರುಕಟ್ಟೆಯಾಗಿತ್ತು. 1976ರ ಸೆಪ್ಟಂಬರಿನಲ್ಲಿ ಕರ್ನಾಟಕದ ಹೊರರಾಜ್ಯದ ಪ್ರಮುಖ ನಗರದಲ್ಲಿ ಮೊದಲ ಬಾರಿಗೆ ಕನ್ನಡ ಚಲನಚಿತ್ರಗಳ ಪ್ರದರ್ಶನದ ಉದ್ಘಾಟನೆಯಾಯಿತು. ಮದರಾಸಿನ ಪ್ರತಿಷ್ಠಿತ ಸಿನಿಮಾಮಂದಿರದಲ್ಲಿ ನಿಯಮಿತವಾಗಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಏರ್ಪಾಟು ಮಾಡಲಾಯಿತು. ಇದೀಗ ವಿವಿಧ ಟಿ.ವಿ.ಚಾನೆಲ್‌ಗಳಲ್ಲಿ ಕನ್ನಡ ಚಿತ್ರಗಳು ಪ್ರಸಾರಗೊಳ್ಳುತ್ತಿವೆ. ಕನ್ನಡ ಚಿತ್ರಗಳಿಗೆ ಇಂಗ್ಲಿಷ್ ಅಡಿಟಿಪ್ಪಣಿಗಳೊಂದಿಗೆ, 16 ಎಂ.ಎಂ.ಗೆ ಪರಿವರ್ತಿಸಿ ದೇಶದಾದ್ಯಂತ ಇರುವ ಫಿಲಂ ಕ್ಲಬ್‌ಗಳಿಗೆ ಒದಗಿಸುವ ಏರ್ಪಾಡೂ ಇದೆ. ಚಿತ್ರಗಳ ಗುಣಮಟ್ಟ ಹೆಚ್ಚಿದಂತೆ ಕನ್ನಡ ಚಿತ್ರಮಾರುಕಟ್ಟೆಯೂ ಕುದುರತೊಡಗಿದೆ.

ಕನ್ನಡ ಚಿತ್ರೋದ್ಯಮದ ಪೂರಕ ಉದ್ಯಮವಾಗಿ ಇಂದು ಕನ್ನಡ ಚಿತ್ರ ಸಂಗೀತದ ಧ್ವನಿಮುದ್ರಿಕೆಗಳ ಉದ್ಯಮವೂ ಒಳ್ಳೆಯ ಬೆಳವಣಿಗೆಯನ್ನು ಕಂಡಿದೆ. ಆರ್ಥಿಕ ಮುಗ್ಗಟ್ಟಿನಿಂದ ಮೊದಮೊದಲು ಕನ್ನಡ ನಿರ್ಮಾಪಕರು ಚಿತ್ರಸಂಗೀತಕ್ಕೆ ಹೆಚ್ಚು ಹಣ ವ್ಯಯ ಮಾಡಲು ಇಷ್ಟಪಡುತ್ತಿರಲಿಲ್ಲ. ಅಂದಿನ ಕಾಲದ ಇತರ ಭಾಷಾಚಿತ್ರಗಳ ಜನಪ್ರಿಯ ರಾಗಗಳನ್ನು ಕನ್ನಡಕ್ಕೆ ಅಳವಡಿಸುವ ಕಾರ್ಯನಡೆಯುತ್ತಿತ್ತು. ಮೊದಮೊದಲು ಸಂಗೀತ ನಿರ್ದೇಶಕನ ಸ್ವಂತಿಕೆಗೆ ಅವಕಾಶವೇ ಇರಲಿಲ್ಲ. ಈ ಮಿತಿಗಳೊಳಗೂ ಕನ್ನಡ ಚಿತ್ರಸಂಗೀತಕ್ಕೆ ಮೆರುಗು ಕೊಡಲು ಶ್ರಮಿಸಿ ಸಫಲರಾದವರೆಂದರೆ ಸಂಗೀತ ನಿರ್ದೇಶಕರಾದ ಜಿ.ಕೆ.ವೆಂಕಟೇಶ್, ಟಿ.ಜಿ.ಲಿಂಗಪ್ಪ, ರಾಜನ್-ನಾಗೇಂದ್ರ, ಎಂ.ರಂಗರಾವ್ ಹಾಗೂ ವಿಜಯಭಾಸ್ಕರ್ ಮೊದಲಾದವರು. ಬೆಳ್ಳಿಮೋಡ, ಶರಪಂಜರ, ಗೆಜ್ಜೆಪೂಜೆ, ಬಂಗಾರದಮನುಷ್ಯ, ಎರಡುಕನಸು ಮೊದಲಾದ ಚಿತ್ರಗಳ ಜನಪ್ರಿಯ ಹಾಡುಗಳಿಂದಾಗಿ ಧ್ವನಿಮುದ್ರಿಕೆಗಳ ಮಾರಾಟ ಅಧಿಕಗೊಳ್ಳುತ್ತ ಹೋಗಿ, ಕನ್ನಡ ಚಿತ್ರಸಂಗೀತ ಮಾರುಕಟ್ಟೆಗೆ ಹೊಸ ಹುರುಪು ಮೂಡಿ ಕನ್ನಡ ಸಂಗೀತ ನಿರ್ದೇಶಕರೂ ಹೊಸ ಹೊಸ ಪ್ರಯೋಗಗಳತ್ತ ಗಮನ ಕೊಡುವುದು ಸಾಧ್ಯವಾಯಿತು. ವಾಣಿಜ್ಯೋದ್ದೇಶಿತ ಚಿತ್ರಗಳಲ್ಲಿ ಈಗ ಸಂಗೀತಕ್ಕಾಗಿ ಅಪಾರ ಹಣ ವ್ಯಯಮಾಡಲಾಗುತ್ತಿದೆ. ಕೆಲವು ಚಿತ್ರಗಳಲ್ಲಿ ಸಂಗೀತಕ್ಕಾಗಿಯೇ ಅನೇಕ ಲಕ್ಷಗಳು ವೆಚ್ಚವಾಗಿರುವುದುಂಟು. ಹಾಡುಗಳು ಇಲ್ಲದ ಪ್ರಾಯೋಗಿಕ ಚಿತ್ರಗಳಲ್ಲಿಯೂ ಹಿನ್ನೆಲೆ ಸಂಗೀತ ಪ್ರಮುಖವಾಗಿರುವುದುಂಟು. ಸಂಸ್ಕಾರ, ಕಾಡು, ಅಬಚೂರಿನ ಪೋಸ್ಟಾಫೀಸು, ಚೋಮನ ದುಡಿ, ಪಲ್ಲವಿ, ಕನ್ನೇಶ್ವರರಾಮ, ಘಟಶ್ರಾದ್ಧ, ಚಿತೆಗೂ ಚಿಂತೆ, ತಬರನ ಕತೆ, ಕಾನೂರು ಹೆಗ್ಗಡತಿ, ದ್ವೀಪ ಮುಂತಾದ ಚಿತ್ರಗಳಲ್ಲಿ ಹಿನ್ನೆಲೆ ಸಂಗೀತವೂ ಪರಿಣಾಮ ದೃಷ್ಟಿಯಿಂದ ಪ್ರಮುಖವಾದುದು. ಹಾಡುಗಳೇ ಇಲ್ಲದ ಚಿತ್ರವಾದ ಸಂಕಲ್ಪದ ಉತ್ತಮ

ಸಂಗೀತಕ್ಕೆ ರಾಜ್ಯಪ್ರಶಸ್ತಿ ಬಂದಿರುವುದು ಗಮನಾರ್ಹ. ಈಗ ಕನ್ನಡ ಚಿತ್ರಗೀತೆಗಳು ಅಪಾರ ಜನಪ್ರಿಯತೆ ಗಳಿಸುತ್ತಿವೆ. ಕೆಲವು ವರ್ಷಗಳ ಹಿಂದೆ ಒಂದು ಗೀತೆಯ ಸಾವಿರ ಧ್ವನಿಮುದ್ರಿಕೆಗಳು ಮಾರಾಟವಾಗುತ್ತಿದ್ದರೆ ಈಗ ಈ ಸಂಖ್ಯೆ ಲಕ್ಷದ ಗಡಿಯನ್ನೂ ದಾಟಿರುವುದುಂಟು. ಎಚ್.ಎಂ.ವಿ. ಧ್ವನಿಮುದ್ರಿಕಾ ಸಂಸ್ಥೆ ಈ ದಿಕ್ಕಿನಲ್ಲಿ ಗಮನಾರ್ಹ ಸೇವೆ ಸಲ್ಲಿಸಿದೆ.

ಹಿಸ್ ಲವ್ ಅಫೇರ್ಸ್ ಎಂಬ ಮೂಕಿ ಚಿತ್ರದಲ್ಲಿ ಸುಬ್ಬಯ್ಯನಾಯ್ಡು, ಬಿ.ಜಯಮ್ಮ

ಚಲನಚಿತ್ರ ಮಾಧ್ಯಮಕ್ಕೆ ಪ್ರಚಾರ ಅತ್ಯಂತ ಆವಶ್ಯಕವಾದುದು. ಭಿತ್ತಿ ಪತ್ರಗಳು, ಕರಪತ್ರಗಳ ಮೂಲಕ ಹಾಗೂ ಪತ್ರಿಕೆ ಮತ್ತು ರೇಡಿಯೋ, ದೂರದರ್ಶನ ಜಾಹೀರಾತು ಮೊದಲಾದ ಮಾಧ್ಯಮಗಳನ್ನು ಬಳಸಿಕೊಳ್ಳಲು ಅನುಕೂಲ ಕಲ್ಪಿಸುವ ಪ್ರತ್ಯೇಕ ಸಂಸ್ಥೆಗಳಿವೆ. ಬೆಂಗಳೂರು ನಗರದಲ್ಲಿ ಇಂಥ ಅನೇಕ ಜಾಹೀರಾತು ಸಂಸ್ಥೆಗಳಿವೆ. ಅಲ್ಲದೆ ನೂರಾರು ಮಂದಿ ಪ್ರಚಾರ ಸಲಹೆಗಾರರೂ ಪ್ರಚಾರ ಏಜಂಟರೂ ಇದ್ದಾರೆ.

ಕರ್ನಾಟಕದ ಅನೇಕ ಕಡೆಗಳಲ್ಲಿ ಚಲನಚಿತ್ರಪ್ರೇಮಿಗಳು ಸಂಘಗಳನ್ನು ಸ್ಥಾಪಿಸಿಕೊಂಡಿರುವುದುಂಟು. ಜನಪ್ರಿಯ ನಟರ ಹೆಸರಿನಲ್ಲಿ ಅಭಿಮಾನಿ ಸಂಘಗಳೂ ಇವೆ. 1971 ನವಂಬರ್‌ನಲ್ಲಿ ದೆಹಲಿಯಲ್ಲಿಯೂ ಕನ್ನಡ ಫಿಲಂ ಸೊಸೈಟಿ ಸ್ಥಾಪಿತವಾಗಿ ಅನೇಕ ಚಿತ್ರೋತ್ಸವಗಳನ್ನು ನಡೆಸಿದೆ. ಖ್ಯಾತ ಕನ್ನಡ ಕಲಾವಿದರನ್ನು ಕರೆದು ಗೌರವಿಸಿದೆ. ಅಲ್ಲದೆ ಅಂತಾರಾಷ್ಟ್ರೀಯ ಮಟ್ಟದ ಒಳ್ಳೆಯ ಚಲನಚಿತ್ರಗಳನ್ನು ತರಿಸಿ ಪ್ರದರ್ಶಿಸುವ ಸಂಘಗಳೂ ಇವೆ. ಚಿತ್ರ ವೀಕ್ಷಣಾ ಪ್ರಜ್ಞೆಯನ್ನು ಸದಭಿರುಚಿಯನ್ನು ಬೆಳೆಸುವುದು ಇವುಗಳ ಧ್ಯೇಯ. ಬೆಂಗಳೂರಿನಲ್ಲಿಯ ಮಯೂರ ಫಿಲಂ ಸೊಸೈಟಿ, ಕಾವೇರಿ ಫಿಲಂ ಸೊಸೈಟಿ, ಸುಚಿತ್ರ ಫಿಲಂ ಸೊಸೈಟಿ, ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗ ಹಾಗೂ ಮೈಸೂರು ಸಿ.ಎಫ್.ಟಿ.ಆರ್.ಐ.ನ ಮೈಸೂರು ಫಿಲಂ ಸೊಸೈಟಿ ಪ್ರಮುಖವಾದವು.

ಕನ್ನಡ ಚಿತ್ರೋದ್ಯಮಕ್ಕೆ ಪ್ರೋತ್ಸಾಹದಾಯಕವಾಗಿರುವ ಕನ್ನಡ ಪತ್ರಿಕೋದ್ಯಮದ ಪಾತ್ರವೂ ಮುಖ್ಯವಾದುದು. ಪ್ರತಿಯೊಂದು ದೈನಿಕ ಹಾಗೂ ವಾರಪತ್ರಿಕೆಗಳಲ್ಲಿಯೂ ಚಿತ್ರೋದ್ಯಮಕ್ಕೆ ಸಾಕಷ್ಟು ಅವಕಾಶವನ್ನು ಮಾಡಿಕೊಡಲಾಗುತ್ತಿದೆ. ಸಾಪ್ತಾಹಿಕ ಪುರವಣಿಗಳಲ್ಲಿ ವಿಶೇಷ ಅಂಕಣಗಳೇ ಇರುತ್ತವೆ. ಅಲ್ಲದೆ ಚಿತ್ರೋದ್ಯಮಕ್ಕೆ ಮೀಸಲಾದ ಸ್ವತಂತ್ರ ಪತ್ರಿಕೆಗಳೂ ಇವೆ. ಇವುಗಳಲ್ಲಿ ಚೆನ್ನೈನಿಂದ ಪ್ರಕಟವಾಗುವ ಚಂದಮಾಮ ಪಬ್ಲಿಕೇಷನ್ಸ್ ಅವರ ವಿಜಯ ಚಿತ್ರ ಹಾಗೂ ಹಿಂದೆ ಸಂಯುಕ್ತಕರ್ನಾಟಕ ಸಮೂಹದಿಂದ ಚಿತ್ರದೀಪ ಪ್ರಕಟವಾಗುತ್ತಿತ್ತು. ಮಣಿಪಾಲದ ಉದಯವಾಣಿ ಪತ್ರಿಕಾ ಸಮೂಹದಿಂದ ರೂಪತಾರಾ ಎಂಬ ಮಾಸಿಕ ಪ್ರಕಟವಾಗುತ್ತಿದೆ. ಮೇನಕಾ, ರೂಪಶಿಲ್ಪಿ ಮೊದಲಾದ ವಾರಪತ್ರಿಕೆಗಳೂ ನಟರಾಜ, ರಜತಪರದೆ ಮುಂತಾದ ಪಕ್ಷಪತ್ರಿಕೆಗಳೂ ಹಲವಾರಿವೆ. ಕನ್ನಡದ ಪ್ರಮುಖ ದಿನಪತ್ರಿಕೆಗಳು ಪ್ರತಿಶುಕ್ರವಾರ ಚಲನಚಿತ್ರ ಕುರಿತ ವಿಶೇಷ ಪುರವಣಿ ಪ್ರಕಟಿಸುತ್ತಿವೆ. ಕರ್ನಾಟಕ ಪತ್ರಕರ್ತರ ಪರಿಷತ್ತು ಪ್ರತಿವರ್ಷ ಸಿನಿಮಾ ಡೈರೆಕ್ಟರಿ ತರುವುದು, ಚಿತ್ರರಂಗದ ಬಗ್ಗೆ ವಿಚಾರ ಸಂಕಿರಣಗಳನ್ನು ಸಂಘಟಿಸುವುದು, ಚಿತ್ರೋತ್ಸವಗಳನ್ನು ನಡೆಸುವುದು ಮೊದಲಾದ ಕಾರ್ಯಗಳ ಮೂಲಕ ಕ್ರಿಯಾಶೀಲವಾಗಿದೆ.

ಚಿತ್ರಕಲಾವಿದರನ್ನು ತರಬೇತಿಗೊಳಿಸುವ ಸಂಸ್ಥೆಯೂ ಬೆಂಗಳೂರಿನಲ್ಲಿದೆ. 1973 ಜುಲೈ 16ರಂದು ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್ ಆರಂಭವಾಯಿತು. ಇದರ ಮೊದಲ ಪ್ರಿನ್ಸಿಪಾಲರಾಗಿದ್ದವರು ಕನ್ನಡ ಚಿತ್ರರಂಗದ ಭೀಷ್ಮಾಚಾರ್ಯರೆನಿಸಿದ ಆರ್. ನಾಗೇಂದ್ರರಾಯರು. ಬಿ.ವಿ. ಕಾರಂತ, ಕು.ರಾ.ಸೀ., ರಾಜನ್ ನಾಗೇಂದ್ರ ಮೊದಲಾದವರು ಅಧ್ಯಾಪಕ ವರ್ಗದಲ್ಲಿದ್ದರು. ಈ ತರಬೇತು ಸಂಸ್ಥೆಯಲ್ಲಿ ಅಭಿನಯ, ವ್ಯಾಯಾಮ, ಭಾಷೋಚ್ಚಾರಣೆ, ನಟನೆ, ವರ್ಣಾಲಂಕಾರ, ನಿರ್ಮಾಣ, ನಿರ್ವಹಣ, ಸಂಕಲನ, ಚಿತ್ರಕಥಾಲೇಖನ, ಸಂಭಾಷಣಾ ಲೇಖನ ಮತ್ತು ನಿರ್ದೇಶನ ವಿಭಾಗಗಳಿವೆ. ಇಲ್ಲಿ ತರಬೇತಿ ಪಡೆದ ಕಲಾವಿದರು ಅನೇಕರು ಈಗಾಗಲೇ ಕನ್ನಡ ಚಿತ್ರರಂಗದಲ್ಲಿ ದುಡಿಯುತ್ತಿದ್ದಾರೆ. ಅಲ್ಲದೆ ಪುಣೆ ಹಾಗೂ ಚೆನ್ನೈನ ಫಿಲಂ ಇನ್‌ಸ್ಟಿಟ್ಯೂಟ್‌ಗಳಲ್ಲಿ ತರಬೇತಿ ಹೊಂದಿದ ಅನೇಕ ಕಲಾವಿದರು ಕನ್ನಡ ಚಿತ್ರರಂಗಕ್ಕೆ ಬಂದಿದ್ದಾರೆ.

ಮೊದಲ ವಾಕ್‌ಚಿತ್ರ 'ಸತಿ ಸುಲೋಚನ'ದಲ್ಲಿ ಎಂ.ವಿ. ಸುಬ್ಬಯ್ಯನಾಯ್ಡು

ಕರ್ನಾಟಕದಲ್ಲಿ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಇನ್ನೊಂದು ಬಗೆಯ ವೈಯಕ್ತಿಕ ಚಟುವಟಿಕೆಯೂ ನಡೆಯುತ್ತಿದೆ. ಬೆಂಗಳೂರಿನಲ್ಲಿನ ಕೆಲವು ಹವ್ಯಾಸೀ ಪಂಗಡಗಳು ಕಿರುಚಿತ್ರಗಳನ್ನು ನಿರ್ಮಿಸುತ್ತಿದ್ದಾರೆ.

ವಿದೇಶಗಳಲ್ಲಿ ಲಿಟ್ಲ್‌ಸಿನಿಮಾ, ಅಂಡರ್ ಗ್ರೌಂಡ್ ಸಿನಿಮಾ ಹಾಗೂ ಪರ್ಸನಲ್ ಸಿನಿಮಾ ಎಂಬ ಹೆಸರುಗಳಿಂದ ಜನಪ್ರಿಯವಾಗಿರುವ ಈ ಕಿರುಚಿತ್ರಗಳ ತಯಾರಿಕೆ ಭಾರತಕ್ಕೆ ಬಂದದ್ದು ತೀರಾ ಇತ್ತೀಚೆಗೆ. 16ಎಂ.ಎಂ. ಅಥವಾ 8ಎಂ.ಎಂ.ಗಳಲ್ಲಿ ತಯಾರಾಗುವ ಈ ಚಿತ್ರಗಳ ಪ್ರದರ್ಶನ ಅವಧಿ ಸೆಕೆಂಡುಗಳಿಂದ ಹಿಡಿದು ಆರು ಗಂಟೆಗಳು. ಬೆಂಗಳೂರಿನಲ್ಲಿ ಅನೇಕ ಹವ್ಯಾಸಿ ಚಿತ್ರ ನಿರ್ಮಾಣ ತಂಡಗಳಿವೆ. ಅಸೀಮ, ಸೃಷ್ಟಿ, ಸ್ಪಜನ, ಸುಚಿತ್ರ ಫಿಲಮ್ ಸೊಸೈಟಿ ಮೊದಲಾದವುಗಳನ್ನು ಇಲ್ಲಿ ಹೆಸರಿಸಬಹುದು. ವೈಯುಕ್ತಿಕ ಅನುಭವದ ಅನಿಸಿಕೆಯ, ಸಂವೇದನೆಯ ಪ್ರತೀಕವಾಗಿ ಚಲನಚಿತ್ರವನ್ನು ಸೃಜಿಸುವುದಲ್ಲದೆ, ಪ್ರೇಕ್ಷಕರಲ್ಲಿ ಚಲನಚಿತ್ರ ರಸಗ್ರಹಣ ಶಕ್ತಿಯನ್ನು ವೃದ್ಧಿಪಡಿಸುವುದು ಈ ಕಿರುಚಿತ್ರ ತಯಾರಿಕೆಯ ಉದ್ದೇಶ. ಬೆಂಗಳೂರಿನ ತಂಡಗಳು ಈಗಾಗಲೇ ಐ ಲುಕ್ ಸಿರೀಸ್, ಸ್ಲಿಪ್, ಕಿಕ್, ಡ್ರೀಂ, ಇನ್‌ವೆಂಟರಿ, ಫ್ಲೊಂಟ್, ಸುಳಿ, ಪ್ಯಾರಸೈಟ್ ಮೊದಲಾದ ಕಿರುಚಿತ್ರಗಳನ್ನು ತಯಾರಿಸಿವೆ. ಕಿರುಚಿತ್ರ ತಯಾರಿಕೆಯಲ್ಲಿನ ಮೊದಲ ಸಮಸ್ಯೆ ಎಂದರೆ ಪ್ರದರ್ಶನಾವಕಾಶ. ಖಾಸಗಿ ಮಟ್ಟದಲ್ಲಿ ಪ್ರಚಲಿತವಾಗಿರುವ ಇವುಗಳಿಗೆ ಸಾರ್ವಜನಿಕ ಚಿತ್ರಮಂದಿರಗಳಲ್ಲಿ ಅವಕಾಶ ವಿರುವುದಿಲ್ಲ.

**ವಾಕ್ಚಿತ್ರಗಳು :** ವಾಕ್ಚಿತ್ರ ತೆರೆಗೆ ಬಂದ ಸ್ವಲ್ಪಕಾಲದಲ್ಲಿಯೇ ಮೂಕಚಿತ್ರಗಳ ಬೇಡಿಕೆ ಇಳಿದು ವಾಕ್ಚಿತ್ರಗಳು ಅಪಾರ ಜನಪ್ರಿಯತೆ ಗಳಿಸತೊಡಗಿದವು. ಕನ್ನಡದ ಮೊದಲ ವಾಕ್ಚಿತ್ರ ಯಾವುದು ಎನ್ನುವುದರ ಬಗ್ಗೆ ಸಿನಿಮಾ ಇತಿಹಾಸಕಾರರಲ್ಲಿ ವಿವಾದವಿದೆ. ಮೊಟ್ಟಮೊದಲು 1934ರಲ್ಲಿ ಸತಿಸುಲೋಚನ ಬಿಡುಗಡೆಯಾಯಿತು. ಆದರೆ ಏಪ್ರಿಲ್ 1934ರಲ್ಲಿ ಬಿಡುಗಡೆಯಾದ ಭಕ್ತಧ್ರುವ ಎಲ್ಲಕ್ಕಿಂತ ಮೊದಲೇ ತಯಾರಿಕೆ ಆರಂಭವಾದ್ದರಿಂದ ಅದೇ ಕನ್ನಡದ ಮೊದಲ ವಾಕ್ಚಿತ್ರ ಎನ್ನುವವರೂ ಇದ್ದಾರೆ. ಎ.ವಿ.ವರದಾಚಾರ್ಯರ ನೆನಪಿನ ಮಂದಿರಕ್ಕೆ ಹಣ ಗಳಿಕೆಗೆಂದು ತಯಾರಿಸಿದ ಭಕ್ತಧ್ರುವದಲ್ಲಿ ವರದಾಚಾರ್ಯರ ಮೊಮ್ಮಗನೇ ಧ್ರುವನ ಪಾತ್ರವಹಿಸಿದ್ದರು. ಈ ಚಿತ್ರದಲ್ಲಿ ದೇವುಡು ಕೂಡ ಪಾತ್ರ ವಹಿಸಿದ್ದರು. ಹನ್ನೆರಡು ರೀಲುಗಳ ಈ ಚಿತ್ರ ಪ್ರೇಕ್ಷಕರನ್ನು ಚಕಿತಗೊಳಿಸಿತು. ಧ್ರುವನ ತಪಸ್ಸಿನ ಕಾಲದಲ್ಲಿ ಸಿಂಹದ ಗರ್ಜನೆ ಕೇಳಿಬಂದಾಗ ಚಿತ್ರಮಂದಿರದಲ್ಲಿದ್ದ ಮಹಿಳೆಯರನೇಕರು ಮೂರ್ಛೆಗೊಂಡು, ಕೆಲವರು ಹೊರಗಡೆ ಓಡಿಹೋದರಂತೆ. ಕೊಲ್ಹಾಪುರದಲ್ಲಿ ತಯಾರಾದ ಸತಿಸುಲೋಚನದ ನಿರ್ದೇಶಕರು ವೈ.ವಿ.ರಾವ್, ಆರ್.ನಾಗೇಂದ್ರರಾವ್ ಈ ಚಿತ್ರದ ಸಂಗೀತ ನಿರ್ದೇಶಕರು. ಈ ಚಿತ್ರದಲ್ಲಿ ಎಂ.ವಿ.ಸುಬ್ಬಯ್ಯ ನಾಯ್ಡು, ಆರ್.ನಾಗೇಂದ್ರರಾವ್, ವೈ.ವಿ.ರಾವ್ ಮೊದಲಾದವರು ನಟಿಸಿದ್ದರು. ಇದರಲ್ಲಿನ ಯುದ್ಧದ ಸನ್ನಿವೇಶಗಳನ್ನು ಆಗಿನ ಕಾಲದಲ್ಲಿಯೇ ಎರಡು ಸಾವಿರ ಜನರನ್ನು ಸೇರಿಸಿ ಮೂರು ಕ್ಯಾಮರಗಳನ್ನು ಬಳಸಿ ಚಿತ್ರೀಕರಿಸಲಾಗಿತ್ತು. 1935ರಲ್ಲಿ ಗುಬ್ಬಿ ವೀರಣ್ಣನವರು (ನೋಡಿ) ರಂಗಭೂಮಿಯಲ್ಲಿ ಜನಪ್ರಿಯವಾಗಿದ್ದ ಸದಾರಮೆಯನ್ನು ಕೊಯಮತ್ತೂರಿನಲ್ಲಿ ಚಿತ್ರೀಕರಿಸಿದರು. ಬೆಂಗಳೂರಿನ ಮೈಸೂರು ಸೌಂಡ್ ಸ್ಟುಡಿಯೋಸ್‌ನಲ್ಲಿ ತಯಾರಾದ ರಾಜಸೂಯಯಾಗ (1936) ಕನ್ನಡ ನಾಡಿನಲ್ಲಿಯೇ ಸಂಪೂರ್ಣವಾಗಿ ಸಿದ್ಧವಾದ ಮೊದಲ ವಾಕ್ಚಿತ್ರ. ಅದೇ ಕಾಲದಲ್ಲಿ ಸಿ.ಬಿ.ಮಲ್ಲಪ್ಪ ಕಂಪನಿಯವರು ಪುರಂದರದಾಸ ಎಂಬ ಜನಪ್ರಿಯ ನಾಟಕವನ್ನು ಚಿತ್ರೀಕರಿಸಿದರು (1936).




ಕನ್ನಡ ಚಿತ್ರರಂಗದ ಆರಂಭದಲ್ಲಿ ಪುರಾಣ ಕಥೆಗಳಿಗೆ, ಭಕ್ತಿ ಕಥೆಗಳಿಗೆ ಪ್ರಾಧಾನ್ಯವಿತ್ತು. ಅಲ್ಲದೆ ಅಂದಿನ ಕಾಲದ ವೃತ್ತಿ ರಂಗಭೂಮಿಯಲ್ಲಿ ಸಾಮಾನ್ಯವಾಗಿ ಪ್ರದರ್ಶನಗೊಳ್ಳುತ್ತಿದ್ದ ನಾಟಕಗಳೂ ಹೆಚ್ಚಾಗಿ ಪುರಾಣಕಥೆಗಳನ್ನೇ ಆಧರಿಸಿದ್ದವು. ರಂಗಪ್ರವೀಣರೇ ಚಿತ್ರರಂಗವನ್ನು ಮೊದಲು ಪ್ರವೇಶಿಸಿದುದರಿಂದ ಚಲನಚಿತ್ರಗಳ ಮೇಲೆ ರಂಗಭೂಮಿಯ ಮಹತ್ತರ ಪ್ರಭಾವವಿತ್ತು. ಅಷ್ಟೇ ಅಲ್ಲದೆ ಮೂಕಚಿತ್ರ ತೆರಳಿ ವಾಕ್ಚಿತ್ರ ಬಂದೊಡನೆ ಧ್ವನಿಗೆ ಮಹತ್ತ್ವ ಬಂದಿತು. ಒಳ್ಳೆಯ ಶಾರೀರವಿರುವ, ಮಾತು ಚೆನ್ನಾಗಿ ಆಡುವ, ಹಾಡಲು ಬರುವ ನಟರಿಗೆ ಬೇಡಿಕೆಯಿತ್ತು. ಹಾಗಾಗಿ ರಂಗನಟರಿಗೆ ಆದ್ಯತೆ ದೊರೆಯಿತು. ಗುಬ್ಬಿ ವೀರಣ್ಣ ಎಂ.ವಿ.ಸುಬ್ಬಯ್ಯನಾಯ್ಡು, ಎಚ್.ಎಲ್.ಎನ್.ಸಿಂಹ, ಬಿ.ಜಯಮ್ಮ ಮೊದಲಾದವರಿಂದ ಆರಂಭವಾದ ಈ ಪರಂಪರೆ ಬಹಳ ಕಾಲದವರೆಗೆ ಮುಂದುವರಿಯಿತು.

ಪುರಾಣ ಕಥೆಗಳಿಗೇ ಪ್ರಾಮುಖ್ಯ ಇದ್ದ ಈ ಕಾಲದಲ್ಲಿ ಇಡೀ ದಕ್ಷಿಣ ಭಾರತಕ್ಕೇ ಪ್ರಥಮವಾಗಿ ಸಾಮಾಜಿಕ ಚಿತ್ರವೊಂದನ್ನು ತಯಾರಿಸಿದ ಕೀರ್ತಿ ಕನ್ನಡಿಗರದು. ಆ ಚಿತ್ರ ಸಂಸಾರನೌಕ (1936). ಅಪಾರ ಯಶಸ್ಸು ಗಳಿಸಿದ ಆ ಚಿತ್ರದಲ್ಲಿ ಬಿ.ಆರ್. ಪಂತುಲು, ಎಂ. ವಿ. ರಾಜಮ್ಮ, ಡಿಕ್ಕಿ ಮಾಧವರಾವ್ ಮೊದಲಾದವರು ಪಾತ್ರವಹಿಸಿದ್ದರು.

ಎರಡನೆಯ ಮಹಾಯುದ್ಧದ ಕಾರಣವಾಗಿ ಸ್ವಲ್ಪಕಾಲ ಕನ್ನಡ ಚಿತ್ರರಂಗದ ಚಟುವಟಿಕೆ ಸ್ತಬ್ಧವಾಗಿತ್ತು. 1941ರಲ್ಲಿ ಗುಬ್ಬಿ ವೀರಣ್ಣನವರು ಹೊನ್ನಪ್ಪ ಭಾಗವತರ್ ಮತ್ತು ಜಯಮ್ಮ ಪಾತ್ರವಹಿಸಿದ ಸುಭದ್ರ ಎಂಬ ಚಿತ್ರವನ್ನು ತಯಾರಿಸಿದರು. ಅದೇ ವರ್ಷ ತೆರೆಗೆ ಬಂದ ವಸಂತಸೇನೆ ಕನ್ನಡ ಚಿತ್ರರಂಗದಲ್ಲೊಂದು ಮೈಲಿಗಲ್ಲು. ಆರ್. ನಾಗೇಂದ್ರರಾವ್ ಮತ್ತು ಎಂ.ವಿ. ಸುಬ್ಬಯ್ಯನಾಯ್ಡು ಅವರು ಎ.ವಿ.ಎಂ. ಸಂಸ್ಥೆಯ ಸಹಾಯದಿಂದ ನಿರ್ಮಿಸಿದ ಈ ಚಿತ್ರದಲ್ಲಿ ಉನ್ನತಮಟ್ಟದ ಅಭಿನಯಕಲೆ ಅಭಿವ್ಯಕ್ತವಾಗಿರುವುದರ ಜೊತೆಗೆ ತಾಂತ್ರಿಕ ಮಟ್ಟವೂ ಉತ್ತಮವಾಗಿತ್ತು. 1943ರಲ್ಲಿ ಅ.ನ.ಕೃ. ಅವರ ಕಾದಂಬರಿಯನ್ನು ಆಧರಿಸಿದ ಜೀವನನಾಟಕ ಎಂಬ ಚಿತ್ರ ತೆರೆಗೆ ಬಂತು.ಇದೇ ವರ್ಷ ರಾಧಾರಮಣ ಎಂಬ ಚಿತ್ರವನ್ನು ನಿರ್ಮಿಸಿದ ಎಂ.ವಿ. ರಾಜಮ್ಮ (ನೋಡಿ) ಕನ್ನಡದ ಮೊಟ್ಟಮೊದಲ ನಿರ್ಮಾಪಕಿಯಾದರು. 1947ರ ವೇಳೆಗೆ ಅನೇಕ ಕಾರಣಗಳಿಂದ ಚಿತ್ರನಿರ್ಮಾಣ ಮತ್ತೆ ಕಷ್ಟಕ್ಕೆ ಸಿಲುಕಿತ್ತು.

ವಸಂತಸೇನೆ ಚಿತ್ರದಲ್ಲಿ ಲಕ್ಷ್ಮೀಬಾಯಿ

ಈ ವೇಳೆಗೆ ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೊ ಆರಂಭವಾಗಿ ಮಹಾತ್ಮಚಿತ್ರ ಸಂಸ್ಥೆಯ ಶಂಕರ್‌ಸಿಂಗ್ ಮತ್ತು ಬಿ.ವಿಠಲಾಚಾರ್ಯರು ಕೃಷ್ಣಲೀಲೆಯನ್ನು ತೆರೆಗೆ ತಂದರು. ಬಿ. ವಿಠಲಾಚಾರ್ಯ ಅವರದು ಕನ್ನಡ ಚಲನಚಿತ್ರರಂಗದ ಬೆಳೆವಣಿಗೆಯ ಹಾದಿಯಲ್ಲಿ ಮಹತ್ವದ ಸಾಧನೆ. ಹಾಸನ ಜಿಲ್ಲೆ ಅರಸೀಕೆರೆಯಲ್ಲಿ ವಾಸವಾಗಿದ್ದ ಪದ್ಮನಾಭಾಚಾರ್ಯ ಹಾಗೂ ಸೀತಮ್ಮ ಅವರ ಪುತ್ರರಾದ ವಿಠಲಾಚಾರ್ಯರು ಹೋಟೆಲ್ ಉದ್ಯಮದಲ್ಲಿದ್ದವರು. ಆ ಉದ್ಯಮದಲ್ಲಿ ಹಣ ಸಂಪಾದಿಸಿ ಅರಸೀಕೆರೆಗೆ ಹಿಂತಿರುಗಿದರು. ಡಿ.ಶಂಕರ್‌ಸಿಂಗ್ ಜತೆ ಸೇರಿ ಟೂರಿಂಗ್ ಟಾಕೀಸ್ ಆರಂಭಿಸಿದರು.

ಕೃಷ್ಣಲೀಲಾ ಚಿತ್ರ ತಯಾರಿಕೆಯ ಸಮಯದಲ್ಲಿ ಮೈಸೂರಿಗೆ ಬಂದ ವಿಠಲಾಚಾರ್ಯ ಅವರು ಮಹಾತ್ಮ ಪಿಕ್ಚರ್ಸ್ ಸಂಸ್ಥಾಪಕರಲ್ಲಿ ಒಬ್ಬರಾದರು. ಮಹಾತ್ಮ ಪಿಕ್ಚರ್ಸ್‌ನವರು 1952ರಲ್ಲಿ ತಯಾರಿಸಿದ ಸಂಸ್ಥೆಯ ಐದನೆಯ ಚಿತ್ರ ಶ್ರೀನಿವಾಸ ಕಲ್ಯಾಣದ ನಿರ್ದೇಶಕರುಗಳಲ್ಲಿ ಒಬ್ಬರಾದರು. ಅದೇ ಸಂಸ್ಥೆಯ ಎಂಟನೆಯ ತಯಾರಿಕೆ ಸೌಭಾಗ್ಯಲಕ್ಷ್ಮಿ (1953) ಚಿತ್ರಕ್ಕೆ ಪೂರ್ಣಪ್ರಮಾಣದ ನಿರ್ದೇಶಕರಾದರು. ಅನಂತರ ಮಹಾತ್ಮ ಪಿಕ್ಚರ್ಸ್ ಸಂಸ್ಥೆಯಿಂದ ಬೇರ್ಪಟ್ಟು ತಮ್ಮದೇ ಆದ ವಿಠಲ್ ಪ್ರೊಡಕ್ಷನ್ಸ್ ಸಂಸ್ಥೆ ಆರಂಭಿಸಿದರು. ಈ ಲಾಂಛನದಲ್ಲಿ ತಯಾರಾದ ಮೊದಲ ಚಿತ್ರವೇ ಕನ್ಯಾದಾನ (1954). ಹೆಣ್ಣಿಗೆ ಗುಣ ಮುಖ್ಯ ಬಣ್ಣವಲ್ಲ ಎಂಬ ತತ್ತ್ವದ ಆಧಾರದ ಮೇಲೆ ತಯಾರಿಸಿದ ಈ ಸಾಮಾಜಿಕ ಚಿತ್ರದ ಮೂಲಕ ಭಾರೀ ಜನಪ್ರಿಯತೆಗಳಿಸಿದ್ದು ಕಲಾವಿದ ದಳ್ವಾಳಿ ಸೀತಾರಾಮಯ್ಯನ ಪಾತ್ರವಹಿಸಿದ್ದ ಬಾಲಕೃಷ್ಣ ಹಾಗೂ ಕಪ್ಪುಹುಡುಗಿ ಪದ್ಮಳ ಪಾತ್ರವಹಿಸಿದ್ದ ಹರಿಣಿ. 1953ರಲ್ಲಿ ಬಿ. ವಿಠಲಾಚಾರ್ಯ ನಿರ್ದೇಶಿಸಿದ ಸೌಭಾಗ್ಯಲಕ್ಷ್ಮಿ ಚಿತ್ರದ ಮೂಲಕ ರಾಜನ್-ನಾಗೇಂದ್ರ, ಪೂರ್ಣಪ್ರಮಾಣದ ಸಂಗೀತ ನಿರ್ದೇಶಕರಾದರು. ಕನ್ಯಾದಾನ ಚಿತ್ರದ ಹಾಡುಗಳನ್ನು ಬರೆದಿರುವ ಹುಣಸೂರು ಕೃಷ್ಣಮೂರ್ತಿ ಆ ಚಿತ್ರದಲ್ಲಿ ಹಾಡೊಂದನ್ನು ಹಾಡಿ ಹಿನ್ನೆಲೆಗಾಯಕರೂ ಆದರು.

ವಿಠಲ್ ಪ್ರೊಡಕ್ಷನ್ಸ್ ಲಾಂಛನದಲ್ಲಿಯೇ ರಾಜಲಕ್ಷ್ಮೀ ಎಂಬ ಚಿತ್ರ ತೆರೆಕಂಡಿತು (1954). ಮಾಯಾ, ತಂತ್ರ, ಮಂತ್ರಗಳ ಕಥೆಯನ್ನು ಒಳಗೊಂಡ ಈ ಚಿತ್ರದ ನಾಯಕ ಸಂಪತ್, ರೇವತಿ ಕಲ್ಯಾಣ್ ಕುಮಾರ್ ನಾಯಕಿ. ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ಈ ಚಿತ್ರ ತಯಾರಾಯಿತು. ಈ ಚಿತ್ರದಲ್ಲೇ ರೇವತಿಯ ಪರಿಚಯ ಚಿತ್ರರಂಗಕ್ಕೆ ಆಯಿತು. ವಿಠಲಾಚಾರ್ಯರು 1956ರಲ್ಲಿ ಮುತ್ತೈದೆ ಭಾಗ್ಯ ಚಿತ್ರ ನಿರ್ದೇಶಿಸಿದರು. ಮೈನಾವತಿಯನ್ನು ನಾಯಕಿಯಾಗಿ ತೆರೆಗೆ ಪರಿಚಯಿಸಿದ ಚಿತ್ರವಿದು. 1956ರಲ್ಲಿ ಮನೆ ತುಂಬಿದ ಹೆಣ್ಣು ನಿರ್ಮಿಸಿದರು. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ ಎಂಬ ಗಾದೆಯನ್ನು ಆಧಾರವಾಗಿಟ್ಟುಕೊಂಡು ಬರೆಯಲಾಗಿದ್ದ ಚಿತ್ರಕಥೆ, ಸಂಭಾಷಣೆ ಇಂದಿರಾತನಯ (ವಿ.ಆರ್.ಶ್ಯಾಮ್) ಅವರದು. ಚಿತ್ರದ ಗೀತೆಗಳನ್ನು ಸೋರಟ್ ಅಶ್ವತ್ಥ್ ಬರೆದಿದ್ದರು.

ಮನೆತುಂಬಿದ ಹೆಣ್ಣು ಚಿತ್ರದ ಬಳಿಕ ವಿಠಲಾಚಾರ್ಯರು ಮನೆಗೆ ಬಂದ ಮಹಾಲಕ್ಷ್ಮಿಯನ್ನು ಗೋವಿಂದಯ್ಯನವರ ಜತೆ ಜಂಟಿಯಾಗಿ ನಿರ್ದೇಶಿಸಿದರು (1959). ಮತ್ತೆ ತೆಲುಗು ಚಿತ್ರರಂಗಕ್ಕೆ ತೆರಳಿದ ಅವರು ಅಲ್ಲಿಯೂ ಜನಪ್ರಿಯ ಯಶಸ್ವಿ ಚಿತ್ರ ನಿರ್ಮಾಪಕರೆನಿಸಿದರು. ಅನಂತರ ರಾಜಲಕ್ಷ್ಮಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ವೀರಕೇಸರಿ ಚಿತ್ರ ನಿರ್ದೇಶಿದರು (1963). ಈ ಚಿತ್ರ ಭಾಗಶಃ ವರ್ಣದಲ್ಲಿದೆ. ಇದೇ ಅವರ ಕೊನೆಯ ಕನ್ನಡ ಚಿತ್ರ. 1949ರಲ್ಲಿ ಭಾರತಿ ಎಂಬ ಸಾಮಾಜಿಕ ಚಿತ್ರ ನಿರ್ಮಿತವಾಯಿತು. 1951ರಲ್ಲಿ ತೆರೆಗೆ ಬಂದ ಜಗನ್ಮೋಹಿನಿ ಶತದಿನ ಕಂಡ ಮೊದಲ ಕನ್ನಡ ಚಿತ್ರ. ಹರಿಣಿಯವರ ತಂದೆ ಪಣಿಯಾಡಿ ದಕ್ಷಿಣ ಕನ್ನಡ ಜಿಲ್ಲೆಯ ಉದ್ಯಮಿ. ಉದ್ಯಮದಲ್ಲಿ ನಷ್ಟ ಅನುಭವಿಸಿ ಉಡುಪಿ ಬಿಟ್ಟು ಮಧುರೆಗೆ ಹೋಗಿ ನೆಲಸಿದಾಗ ಹರಿಣಿ ಐದು ವರ್ಷದ ಬಾಲೆ. ಮಧುರೆಯಲ್ಲಿ ರಾಯಲ್ ಟಾಕೀಸ್ ಸಂಸ್ಥೆಯ ಮಾಲೀಕರಾದ ಹರಿದಾಸ್ ಚಿತ್ರ ತೆಗೆಯುತ್ತಿದ್ದಾಗ, ನಿರ್ದೇಶಕ ಸುಂದರ್‌ರಾವ್ ನಾಡಕರ್ಣಿ ಹರಿಣಿಗೆ ಆ ಚಿತ್ರದಲ್ಲಿ ಬಾಲಕನ ಪಾತ್ರ ನೀಡಿದರು. ಹೀಗೆ ಚಿತ್ರರಂಗಕ್ಕೆ ಕಾಲಿಟ್ಟ ಹರಿಣಿ 1946-49ರ ಅವಧಿಯಲ್ಲಿ ಮೂರು ತಮಿಳು ಚಿತ್ರಗಳಲ್ಲೂ ಅಭಿನಯಿಸಿದರು.

1949ರಲ್ಲಿ ಮಧುರೆಯಿಂದ ಮದರಾಸಿಗೆ ನಿವಾಸ ವರ್ಗಾವಣೆ ಆಯಿತು. ಆ ಸಮಯದಲ್ಲೇ ಶಂಕರ್‌ಸಿಂಗ್ ಜಗನ್ಮೋಹಿನಿ ಚಿತ್ರಕ್ಕಾಗಿ ನವತಾರೆಯೊಬ್ಬಳ ಶೋಧದಲ್ಲಿದ್ದರು. ಹರಿಣಿ ಈ ಪಾತ್ರಕ್ಕೆ ಆಯ್ಕೆಯಾದರು. ಜಗನ್ಮೋಹಿನಿಯ ಭಾರೀ ಯಶಸ್ಸು ಹರಿಣಿಯನ್ನು ಅಂದಿನ ಜನಪ್ರಿಯ ನಟಿಯನ್ನಾಗಿಸಿತು. ಜಗನ್ಮೋಹಿನಿಯ ಹಿಂದೆಯೇ ಶ್ರೀನಿವಾಸ ಕಲ್ಯಾಣ, ದಲ್ಲಾಳಿ, ಸೌಭಾಗ್ಯ ಲಕ್ಷ್ಮೀಗಳಲ್ಲಿ ಪಾತ್ರ ದೊರೆಯಿತು. ಕನ್ಯಾದಾನದಲ್ಲಿ ಬಿನ್ನಾಣಗಿತ್ತಿಯ ಪಾತ್ರ. ಮುಂದೆ ರತ್ನಮಂಜರಿ, ಕರುಣೆಯೇ ಕುಟುಂಬದ ಕಣ್ಣು ಚಿತ್ರಗಳಲ್ಲಿ ಅಭಿನಯ ಪಕ್ವತೆಯ ಕಡೆಗೆ, ನಂದಾದೀಪ, ನಾಂದಿಗಳಲ್ಲಿ ಮುಗ್ಧೆ, ಹಿಂದಿ ಚಿತ್ರ ರತ್ನದೀಪದಲ್ಲೂ ಹಾಸ್ಯ ಪಾತ್ರದಲ್ಲಿ ಹರಿಣಿ ಅಭಿನಯಿಸಿದ್ದಾರೆ. 1968ರಲ್ಲಿ ಅಭಿನಯ ವೃತ್ತಿಗೆ ಹರಿಣಿ ವಿದಾಯ ಹೇಳಿದರು.

1955ರಿಂದಲೂ ಚಿತ್ರರಂಗದ ಜತೆ ನಂಟು ಇಟ್ಟುಕೊಂಡಿರುವ ದೊರೆ-ಭಗವಾನ್ ಜೋಡಿ ಹಲವಾರು ಮಹತ್ವದ ಚಿತ್ರಗಳನ್ನು ನೀಡಿದೆ. ರಾಜಕುಮಾರ್ ಅಭಿನಯದ ಬಾಂಡ್ ಪಾತ್ರಗಳ ಚಿತ್ರ ಸರಣಿ ಅಲ್ಲದೆ, ಕಾದಂಬರಿಗಳನ್ನು ಚಿತ್ರಕ್ಕೆ ಅಳವಡಿಸಿರುವ ಖ್ಯಾತಿಯೂ ಇವರದಾಗಿದೆ. ಕಸ್ತೂರಿ ನಿವಾಸ (1971), ಎರಡು ಕನಸು (1974), ಗಿರಿಕನ್ಯೆ (1977), ಚಂದನದ ಗೊಂಬೆ (1979), ಬಯಲು ದಾರಿ (1976), ವಸಂತಗೀತ (1980), ಗಾಳಿಮಾತು (1981), ಮುನಿಯನ ಮಾದರಿ (1981), ಹೊಸಬೆಳಕು (1982), ಬೆಂಕಿಯ ಬಲೆ (1983), ಸಮಯದ ಗೊಂಬೆ (1984), ಯಾರಿವನು (1984), ನೀನು ನಕ್ಕರೆ ಹಾಲು ಸಕ್ಕರೆ (1991), ಜೀವನ ಚೈತ್ರ (1992) ಚಿತ್ರಗಳು ನಿರ್ದೇಶಕದ್ವಯರ ಒಳ್ಳೆಯ ಕಾಣಿಕೆಗಳಾಗಿವೆ. 1966ರಲ್ಲಿ ಜೇಡರ ಬಲೆ ಚಿತ್ರದ ಮೂಲಕ ಛಾಯಾಗ್ರಾಹಕ ಬಿ.ದೊರೈರಾಜ್ ಮತ್ತು ಕೆ.ಎಸ್.ಭಗವಾನ್ ಒಟ್ಟುಗೂಡಿ ದೊರೆ-ಭಗವಾನ್ ಹೆಸರಿನಲ್ಲಿ ಚಿತ್ರ ನಿರ್ದೇಶನಕ್ಕೆ ತೊಡಗಿದರು. ಈ ಜೋಡಿ 1993ರಲ್ಲಿ ಬೇರ್ಪಟ್ಟಿತು.

ಜಗನ್ಮೋಹಿನಿ ಚಿತ್ರದಲ್ಲಿ ಹರಿಣಿ

1954 ಕನ್ನಡ ಚಲನಚಿತ್ರ ಇತಿಹಾಸದಲ್ಲಿ ಮಹತ್ವದ ವರ್ಷವಾಗಿದೆ. ವರನಟ ರಾಜಕುಮಾರರನ್ನು (ನೋಡಿ) ಚಿತ್ರರಂಗಕ್ಕೆ ತಂದ ಬೇಡರ ಕಣ್ಣಪ್ಪ ಎಂಬ ಚಿತ್ರ ಇದೇ ವರ್ಷ ಬಿಡುಗಡೆಯಾಯಿತು. ಅಲ್ಲದೆ ಕನ್ನಡ ತೆರೆಯ ಮೇಲೆ ದೀರ್ಘಕಾಲ ಉಳಿದು ಬಂದ ಜಿ.ವಿ.ಅಯ್ಯರ್ (ನೋಡಿ), ಟಿ.ಎಸ್.ಬಾಲಕೃಷ್ಣ (ನೋಡಿ), ನರಸಿಂಹರಾಜು (ನೋಡಿ) ಅವರೂ ಈ ಚಿತ್ರದ ಮೂಲಕವೇ ಬೆಳಕಿಗೆ ಬಂದರು. ಅದೇ ವರ್ಷವೇ ಚಲನಚಿತ್ರಗಳಿಗೆ ಕೇಂದ್ರ ಸರ್ಕಾರ ಪ್ರಶಸ್ತಿ ನೀಡಲೂ ಆರಂಭಿಸಿತು. ಪ್ರಾದೇಶಿಕ ಮಟ್ಟದಲ್ಲಿ ರಾಷ್ಟ್ರಪ್ರಶಸ್ತಿ ಪಡೆದ ಮೊದಲ ಚಿತ್ರವೂ ಇದೇ ಆಯಿತು. ಈ ಚಿತ್ರ ತಮಿಳಿಗೆ ಡಬ್ ಆದುದಲ್ಲದೆ ತೆಲುಗಿನಲ್ಲೂ ಪುನರ್ನಿರ್ಮಾಣವಾಯಿತು. ಬಿ.ಆರ್.ಪಂತುಲು (ನೋಡಿ) ಅವರ ಮೊದಲ ತೇದಿ ಎಂಬ ಸಾಮಾಜಿಕ ಚಿತ್ರ ಕನ್ನಡದ ಹೊಸಬಗೆಯ ಪ್ರಯೋಗ ಎಂದು ಹೆಸರುಪಡೆಯಿತು. ಆರ್. ನಾಗೇಂದ್ರರಾಯರ ಪ್ರೇಮದ ಪುತ್ರಿ (1957) ರಾಷ್ಟ್ರಪತಿ ಬೆಳ್ಳಿಪದಕ ಗಳಿಸಿತಲ್ಲದೆ ಇತರ ಭಾಷೆಗಳಲ್ಲೂ ಅವತರಣಿಕೆಯನ್ನು ಕಂಡಿತು. ಬಿ.ಆರ್.ಪಂತುಲು ಅವರು 1958ರಲ್ಲಿ ನಿರ್ಮಿಸಿದ ಸ್ಕೂಲ್ ಮಾಸ್ಟರ್ 25 ವಾರಗಳ ಕಾಲ ನಡೆದು ಅಖಿಲ ಭಾರತ ಮಟ್ಟದಲ್ಲಿ ಆ ವರ್ಷದ ತೃತೀಯ ಶ್ರೇಷ್ಠ ಚಿತ್ರ ಎಂಬ ಮನ್ನಣೆ ಗಳಿಸಿತು. ಇತರ ಭಾಷೆಗಳಲ್ಲಿಯೂ ಈ ಚಿತ್ರ ಪುನರ್ನಿರ್ಮಾಣಗೊಂಡಿತು. ಹೊನ್ನಪ್ಪ ಭಾಗವತರ್, ರಾಜಕುಮಾರ್, ಲೀಲಾವತಿ ಮೊದಲಾದವರು ನಟಿಸಿದ ಜಗಜ್ಯೋತಿ ಬಸವೇಶ್ವರ 1959ರಲ್ಲಿ ತೆರೆ ಕಂಡಿತು. ಅನಂತರ ಕಚ್ಚಾಫಿಲಂ ಮುಗ್ಗಟ್ಟಿನಿಂದ ಚಿತ್ರೀಕರಣ ಕಷ್ಟವಾಗತೊಡಗಿತು. ಆರ್ಥಿಕ ಮುಗ್ಗಟ್ಟು, ಬಂಡವಾಳಗಾರರು ಕನ್ನಡ ಚಿತ್ರಗಳನ್ನು ತೆಗೆಯಲು ಮುಂದು ಬಾರದಿರುವುದು ಇವನ್ನು ಕಂಡು ಜಿ.ವಿ. ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಮತ್ತು

ರಾಜಕುಮಾರ್ ಮುಂತಾದವರು ಸೇರಿ ಕನ್ನಡ ಚಲನಚಿತ್ರ ಕಲಾವಿದರ ಸಂಘ ಎಂಬ ಸಹಕಾರಿ ಒಕ್ಕೂಟವನ್ನು ಮಾಡಿಕೊಂಡು ಕನ್ನಡದ ಮೊದಲ ಐತಿಹಾಸಿಕ ಚಿತ್ರವಾದ ರಣಧೀರ ಕಂಠೀರವವನ್ನು ತಯಾರಿಸಿದರು (1960). ಇಂದಿಗೂ ಇದು ಕನ್ನಡ ತೆರೆಯ ಹೆಮ್ಮೆಯ ಚಿತ್ರವಾಗಿದೆ.

ಬೇಡರ ಕಣ್ಣಪ್ಪ ಚಿತ್ರದ ಒಂದು ದೃಶ್ಯ

ಕನ್ನಡ ಚಿತ್ರಗಳಿಗೆ ಮಾರಕಪ್ರಾಯವಾಗಿದ್ದ ಒಂದು ಪ್ರವೃತ್ತಿ ಎಂದರೆ ಡಬ್ಬಿಂಗ್ ಚಿತ್ರಗಳು. ಯಾವುದೋ ಭಾಷೆಯಲ್ಲಿ ಜನಪ್ರಿಯವಾದ ಚಿತ್ರಗಳು ಕನ್ನಡದ ಕಂಠದಾನ ಪಡೆದು ವಿಜೃಂಭಿಸುತ್ತಿದ್ದುವು. ಕನ್ನಡಕ್ಕೆ ಮೊದಲು ಡಬ್ ಆದ ಚಿತ್ರ ನೀಲಾ ಪ್ರೊಡಕ್ಷನ್ಸ್ ಅವರ ಅಧಿಕಾರಿ. ಇತರ ಭಾಷೆಯ ಅದ್ದೂರಿ ಚಿತ್ರಗಳು ಹೀಗೆ ಕನ್ನಡಕ್ಕೆ ಡಬ್ ಆಗಿ ಬಂದಾಗ, ಕನ್ನಡ ಚಿತ್ರಗಳು ಕಳಾಶೂನ್ಯವಾಗಿಬಿಡುತ್ತಿದ್ದುವು. ಮಾಯಾ ಬಜಾರ್ ಹಾಗೂ ಲವಕುಶದಂಥ ಡಬ್ ಚಿತ್ರಗಳು ಕನ್ನಡನಾಡಿನಾದ್ಯಂತ ಅಪಾರ ಜನಪ್ರಿಯತೆಯನ್ನೂ ಹಣವನ್ನೂ ಗಳಿಸಿದುವು. ಡಬ್ಬಿಂಗ್ ಚಿತ್ರಗಳ ದಾಳಿಯನ್ನು ತಡೆಯುವ ಕನ್ನಡ ಚಳವಳಿ ಯಶಸ್ಸು ಕಂಡಮೇಲೆ ಕನ್ನಡ ಚಿತ್ರೋದ್ಯಮ ಚೇತರಿಸಿಕೊಳ್ಳಲಾರಂಭಿಸಿತಾದರೂ ಅನತಿಕಾಲದಲ್ಲಿಯೇ ಯಶಸ್ವಿ ಹಿಂದಿ, ತಮಿಳು, ತೆಲುಗು ಚಿತ್ರಗಳ ಕನ್ನಡ ಅವತರಣಿಕೆಯ ಪರಿಹರಿಸಲಾಗದ ಇನ್ನೊಂದು ಪ್ರವೃತ್ತಿ ಮೊಳೆತು ಕನ್ನಡ ಚಿತ್ರರಂಗ ಆ ಸುಳಿಗೆ ಸಿಲುಕಿತು. ಜೇನುಗೂಡು (ಬಾಬಿ), ಒಂದೇ ಬಳ್ಳಿಯ ಹೂಗಳು (ಭಾಯಿ ಬೆಹನ್), ವಾತ್ಸಲ್ಯ (ಪಾಸಮಲರ್), ಮಲ್ಲಿಮದುವೆ (ವೇಲೈಕ್ಕಾರಿ), ಮುರಿದ ಮನೆ (ಬಾಗಪಿರಿವನೈ), ಮನೆ ಅಳಿಯ (ಇಲ್ಲರಿಕಂ) ಮೊದಲಾದವು ಇಂಥ ಚಿತ್ರಗಳು. ಈ ಪರಂಪರೆ ಇಂದಿನ ವರೆಗೂ ಮುಂದುವರಿದಿದೆ.

ತಾರಾಪದ್ಧತಿಯ ಉಗಮ, ಚಿತ್ರ ನಿರ್ಮಾಣದಲ್ಲಿ ಸೌಕರ್ಯಗಳು ಬರಲಾರಂಭಿಸಿದ್ದು, ಹಿನ್ನೆಲೆಗಾಯನ, ಹಲವಾರು ಸಂಗೀತ ನಿರ್ದೇಶಕರ ಆಗಮನ ಮೊದಲಾದ ಬೆಳವಣಿಗೆಗಳೆಲ್ಲ ನಾಟಕಕಂಪನಿಗಳ ಮೂಲಕ ತೆರೆಗೆ ಬಂದ ಎಂ.ವಿ. ಸುಬ್ಬಯ್ಯನಾಯಿಡು, ಕೆಂಪರಾಜ ಅರಸು ಅವರಂತಹ ನಟರನ್ನು ಹಿನ್ನೆಲೆಗೆ ಸರಿಸಿತು. 1950ರಿಂದ 1969ರ ಕಾಲಾವಧಿಯಲ್ಲಿ ವಾಕ್ಚಿತ್ರದ ಆರಂಭದ ದಿನಗಳಿಂದ ಬಂದವರು ಕೂಡ ಪ್ರಬಲ ಸ್ಪರ್ಧೆ ಎದುರಿಸುವಂತಾಯಿತು. ಅಂದಿನ ದಿನಗಳಲ್ಲೇ ಅದ್ದೂರಿ ಸಿನಿಮಾ ನಿರ್ಮಿಸುವವರೆಂಬ ಹೆಸರುಗಳಿಸಿದ್ದ ಡಿ.ಕೆಂಪರಾಜ ಅರಸು ಈ ಅವಧಿಯಲ್ಲಿ ನಟಿಸಿದ್ದು ಕೇವಲ ಮೂರು ಚಿತ್ರಗಳಲ್ಲಿ ಮಾತ್ರ. ಕೆಂಪ ರಾಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ತಾವೇ ನಿರ್ಮಿಸುತ್ತಿದ್ದ ಚಿತ್ರಗಳಲ್ಲಿ ಬಹು ತಾರಾಗಣವಿರುತಿತ್ತು. ಅವರು ತಯಾರಿಸಿದ ರಾಜಾ ವಿಕ್ರಮ (1954) ಶನಿಮಹಾ ರಾಜನ ಕಥೆ. ಹೆಚ್ಚು ಹಣ ಹಾಕಿ ಕನ್ನಡದಲ್ಲಿ ಚಿತ್ರ ಮಾಡುವ ಪರಂಪರೆಯನ್ನು ಆರಂಭಿಸಿದವರಲ್ಲಿ ಕೆಂಪರಾಜ ಅರಸು (ನೋಡಿ) ಮೊದಲಿಗರು. ಈಗ ರವಿಚಂದ್ರನ್ ಆ ಪರಂಪರೆ ಮುಂದು ವರೆಸಿದ್ದಾರೆ. ರಾಜಾವಿಕ್ರಮ ಗಳಿಕೆಯಲ್ಲೂ ವಿಕ್ರಮ ಸಾಧಿಸಿತು. 1942ರಲ್ಲಿ ಗುಬ್ಬಿ ಫಿಲಂ ಕಂಪನಿ ತಯಾರಿಕೆ

ಜೀವನನಾಟಕ ಚಿತ್ರದ ಮೂಲಕ ಬೆಳ್ಳಿತೆರೆಗೆ ಪರಿಚಿತರಾದ ಡಿ. ಕೆಂಪರಾಜ್, ಅನಂತರ ಕೃಷ್ಣಲೀಲಾ (1947), ಭಕ್ತ ರಾಮದಾಸ (1948), ಚಿತ್ರಗಳಲ್ಲಿ ಅಭಿನಯಿಸಿದರು. 1954ರಲ್ಲಿ ರಾಜಾವಿಕ್ರಮ ಯಶಸ್ವಿಯಾದ ಅನಂತರ ಅದೇ ವರ್ಷ ಕೆಂಪರಾಜ್ ಸ್ವತಃ ಜಲದುರ್ಗ ನಿರ್ಮಿಸಿದರು. ಫ್ರೆಂಚ್ ಕತೆ ಕೌಂಟ್ ಆಫ್ ಮಾಂಟಿ ಕ್ರಿಸ್ಟೋ ಆಧಾರಿತ ಕತೆಯ ಚಿತ್ರದಲ್ಲಿ ಕೆಂಪರಾಜ್ ನಾಯಕ. ಆದರೆ ಈ ಚಿತ್ರ ಗಲ್ಲಾಪೆಟ್ಟಿಗೆ ಗಳಿಕೆಯಲ್ಲಿ ಸೋಲನ್ನಪ್ಪಿತು. ಅನಂತರ 1957ರವರೆಗೆ ಕೆಂಪರಾಜ್ ಅವರಿಗೆ ಅವಕಾಶಗಳು ಸಿಗಲಿಲ್ಲ. ಆಗ ತಮ್ಮ ಸ್ವಂತ ಲಾಂಛನದಲ್ಲಿ ನಳದಮಯಂತಿ ನಿರ್ಮಿಸಿದರು (1957). ಭಾನುಮತಿ ಈ ಚಿತ್ರದ ನಾಯಕಿ. ಚಿತ್ರದ ಹಾಡುಗಳನ್ನೂ ಅವರೇ ಬರೆದರು. ಅನಂತರ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಕೆಂಪರಾಜ ಅರಸು ಸೇವೆ ಸಲ್ಲಿಸಿದ್ದರು (1978). ಇವರು 1982 ಮೇ 18ರಂದು ನಿಧನಹೊಂದಿದರು.

ಸ್ಕೂಲ್ ಮಾಸ್ಟರ್ ಚಿತ್ರದಲ್ಲಿ ಬಿ.ಆರ್.ಪಂತುಲು

ಸಾಹಿತ್ಯ ಕ್ಷೇತ್ರಕ್ಕೂ ಚಿತ್ರರಂಗಕ್ಕೂ ಭದ್ರವಾದ ನಂಟು. ಕೃಷ್ಣಮೂರ್ತಿ ಪುರಾಣಿಕರ ಧರ್ಮದೇವತೆ ಕಾದಂಬರಿ ಆಧರಿತ ಕರುಣೆಯೇ ಕುಟುಂಬದ ಕಣ್ಣು ಈ ಬಗೆಯಲ್ಲಿ ಮೊದಲ ಚಿತ್ರ. ಸ್ವಲ್ಪ ಕಾಲದಲ್ಲಿಯೇ ಇದೇ ಲೇಖಕರ ಕುಲವಧು ಕಾದಂಬರಿ ತೆರೆಕಂಡಿತು. ಕಾದಂಬರಿಕಾರ ತ.ರಾ.ಸು. ಅವರ ಚಂದವಳ್ಳಿಯ ತೋಟ, ಚಕ್ರತೀರ್ಥ,

ನಾಗರಹಾವು ಕಾದಂಬರಿಗಳು ಚಿತ್ರಗೊಂಡು ಹಣಗಳಿಕೆ ಹಾಗೂ ಗುಣದೃಷ್ಟಿಯಿಂದ ಅಪಾರ ಯಶಸ್ಸು ಗಳಿಸಿದ್ದವು. ಅ.ನ.ಕೃ. ಅವರ ಸಂಧ್ಯಾರಾಗ ಕಾದಂಬರಿ ಕೂಡ ಬೆಳ್ಳಿತೆರೆಯನ್ನು ಕಂಡು ಅಪಾರ ಜನಮನ್ನಣೆ ಗಳಿಸಿತು. ಕಾದಂಬರಿಗಳನ್ನು ಚಿತ್ರೀಕರಿಸುವುದರಲ್ಲಿ ಮೇಲುಪಂಕ್ತಿ ಹಾಕಿಕೊಟ್ಟವರು ನಿರ್ದೇಶಕ ಪುಟ್ಟಣ ಕಣಗಾಲ್ (ನೋಡಿ). ತ್ರಿವೇಣಿಯ ಕಾದಂಬರಿಗಳು ತೆರೆಯ ಮೇಲೆ ಗಳಿಸಿದ ಜನಪ್ರಿಯತೆ ಅಪ್ರತಿಮವಾದುದು. ಬೆಳ್ಳಿಮೋಡ, ಹಣ್ಣೆಲೆ ಚಿಗುರಿದಾಗ, ಶರಪಂಜರ, ಕಂಕಣ ಮೊದಲಾದವು ಅತ್ಯಂತ ಯಶಸ್ಸು ಕಂಡವು. ಅಲ್ಲದೆ ಅವರ ಕಾದಂಬರಿಯನ್ನು ಆಧರಿಸಿ ತೆಗೆದ ಪ್ರತಿಯೊಂದು ಚಿತ್ರವೂ ರಾಷ್ಟ್ರಮಟ್ಟದಲ್ಲಾಗಲೀ ರಾಜ್ಯಮಟ್ಟದಲ್ಲಾಗಲೀ ಪ್ರಶಸ್ತಿ ಪಡೆದಿರುವುದು ಕುತೂಹಲ ಪೂರ್ಣವಾಗಿದೆ. ಹಾಗೆಯೇ ಲೇಖಕಿಯರಾದ ವಾಣಿ (ಎರಡು ಕನಸು), ಎಂ.ಕೆ.ಇಂದಿರಾ (ಗೆಜ್ಜೆ ಪೂಜೆ), ಆರ‍್ಯಾಂಬ ಪಟ್ಟಾಭಿ (ಕಪ್ಪುಬಿಳುಪು) ಮಂಗಳಾ ಸತ್ಯನ್ (ಭಾಗ್ಯಜ್ಯೋತಿ), ದೇವಕಿ ಮೂರ್ತಿ (ಉಪಾಸನೆ) ಮೊದಲಾದವರ ಕೃತಿಗಳೂ ಚಿತ್ರಗಳಾಗಿವೆ. ಕನ್ನಡದಲ್ಲಿ ತೆರೆಕಂಡ ಹೊಸ ಬಗೆಯ ಚಿತ್ರಗಳಲ್ಲಿ ಸೇ.90 ಪಾಲು ಚಿತ್ರಗಳು ಕಾದಂಬರಿಗಳನ್ನು ಆಧರಿಸಿರುವುದು ಗಮನಾರ್ಹವಾಗಿದೆ. ಕನ್ನಡ ಚಲನಚಿತ್ರಗಳ ಗುಣಮಟ್ಟ ಏರಲು ಚಿತ್ರರಂಗಕ್ಕೆ ಸಾಹಿತ್ಯದ ಸಂಬಂಧ ಬಹಳ ಮಟ್ಟಿಗೆ ಕಾರಣವಾಗಿದೆ. ಕನ್ನಡ ಚಲನಚಿತ್ರಗಳಲ್ಲಿ ಕಂಡುಬಂದ ಇನ್ನೊಂದು ಪ್ರಮುಖ ಬೆಳವಣಿಗೆಯ ಅಂಶವೆಂದರೆ ಸಾಮಾಜಿಕ ಚಿತ್ರಗಳು ಹೆಚ್ಚಾಗಿ ತೆರೆ ಕಾಣತೊಡಗಿದ್ದು. ಕಾದಂಬರಿಗಳನ್ನು ಚಿತ್ರೀಕರಿಸುವ ಪ್ರವೃತ್ತಿಯೇ ಸಾಮಾಜಿಕ ಚಿತ್ರಗಳನ್ನು ಜನಪ್ರಿಯಗೊಳಿಸಿ ಅವುಗಳ ಸಂಖ್ಯೆ ಹೆಚ್ಚಾಗಲು ಪ್ರೇರಕವಾಯಿತು.

ಗೆಜ್ಜೆಪೂಜೆ ಚಿತ್ರದಲ್ಲಿ ಕಲ್ಪನಾ

ಕನ್ನಡ ಚಲನಚಿತ್ರಗಳು ಬಣ್ಣದ ಯುಗಕ್ಕೆ ಕಾಲಿಟ್ಟದ್ದು 1954ರಷ್ಟು ಹಿಂದೆಯೇ. ಸ್ತ್ರೀರತ್ನ ಎಂಬ ಚಿತ್ರದಲ್ಲಿ ಎರಡು ರೀಲುಗಳನ್ನು ವರ್ಣದಲ್ಲಿ ಚಿತ್ರಿಸಲಾಗಿತ್ತು. ಹಾಗೆಯೇ ವೀರಕೇಸರಿ ಎಂಬ ಚಿತ್ರ ಕೂಡ ಭಾಗಶಃ ವರ್ಣದಲ್ಲಿ ತಯಾರಾಗಿತ್ತು. ಆದರೆ ಪೂರ್ಣ ಪ್ರಮಾಣದ ಮೊದಲ ವರ್ಣಚಿತ್ರ ಎಂದರೆ ವಿಕ್ರಂ ಪ್ರೊಡಕ್ಷನ್ಸ್ ಅವರ ಅಮರಶಿಲ್ಪಿ ಜಕಣಾಚಾರಿ (1964). ಇದೇ ಚಿತ್ರಸಂಸ್ಥೆಯವರ ಮಿಸ್ಟರ್ ರಾಜಕುಮಾರ್, ಭಲೇ ಬಸವ ಚಿತ್ರಗಳೂ ವರ್ಣದಲ್ಲಿ ತಯಾರಾದವು. ಅನಂತರ ವರ್ಣಚಿತ್ರಗಳು ಬರತೊಡಗಿದವು. ಈಗ ಚಿತ್ರಗಳು ವರ್ಣದಲ್ಲಿಯೇ ತಯಾರಾಗುತ್ತಿವೆ.

ಕನ್ನಡ ಚಿತ್ರರಂಗದ ಸ್ವರೂಪದಲ್ಲಿ ಮತ್ತೊಂದು ಪರಿವರ್ತನೆ ನಿಧಾನವಾಗಿ ನಡೆಯಿತು. ಚಲನಚಿತ್ರ ಬೆಳವಣಿಗೆಯ ಆರಂಭ ಹಂತಗಳಲ್ಲಿ ಚಿತ್ರ ತಯಾರಿಕಾ ಸಂಸ್ಥೆಗೆ ಪ್ರಾಧಾನ್ಯವಿದ್ದು ಬಿಡುಗಡೆಯಾಗುವ ಚಿತ್ರಗಳ ಯಶಾಪಯಶಗಳಲ್ಲಿ ಸಂಸ್ಥೆಗೆ ಬಾಧ್ಯತೆ ಇತ್ತು. ಗುಬ್ಬಿ ಕರ್ನಾಟಕ, ಎ.ವಿ.ಎಂ., ಪದ್ಮಿನೀ ಚಿತ್ರ ಸಂಸ್ಥೆ, ಮಹಾತ್ಮ ಚಿತ್ರ ಸಂಸ್ಥೆ ಮೊದಲಾದವು ಕನ್ನಡ ಚಿತ್ರ ತಯಾರಿಕೆಯಲ್ಲಿ ಹೆಸರಾಂತ ಸಂಸ್ಥೆಗಳಾಗಿದ್ದುವು (ದಕ್ಷಿಣ ಭಾರತದ ಪ್ರಾಚೀನವೂ ಪ್ರಮುಖವೂ ಆದ ಮಾಡರ್ನ್ ಥಿಯೇಟರ್ಸ್ ಸಂಸ್ಥೆ ಸಹ ದೇವಕನ್ನಿಕಾ ಮತ್ತು ಮಂಗಳಗೌರಿ ಎಂಬ ಕನ್ನಡ ಚಿತ್ರಗಳನ್ನು ತಯಾರಿಸಿತ್ತು. ಹಾಗೆಯೇ ಜುಪಿಟರ್ ಚಿತ್ರಸಂಸ್ಥೆ ವಾಲ್ಮೀಕಿಯನ್ನು ತೆರೆಗೆ ತಂದಿತ್ತು). ಆದರೆ ಮೆಲ್ಲಮೆಲ್ಲಗೆ ನಾಯಕ ನಟರ ಪ್ರಾಬಲ್ಯ ಬೆಳೆದಂತೆ ಸಂಸ್ಥೆಗಳ ಹೆಸರು ಹಿಂದಾಗತೊಡಗಿತು. ಚಿತ್ರದ ನಾಯಕ ನಟರು ವೈಯಕ್ತಿಕ ವರ್ಚಸ್ಸು ಆಕರ್ಷಣೆಗಳನ್ನು ಬೆಳೆಸಿಕೊಳ್ಳತೊಡಗಿದಂತೆ ತಾರಾ ಪದ್ಧತಿ (ಸ್ಟಾರ್ ಸಿಸ್ಟಂ) ಕನ್ನಡ ಚಿತ್ರರಂಗಕ್ಕೆ ಬಂತು. ಅನೇಕ ಬಿಡಿ ನಿರ್ಮಾಪಕರು ಹುಟ್ಟಿಕೊಂಡು ನಾಯಕ ನಟನ ಹೆಸರಿನ ಬಲದಿಂದ ಚಿತ್ರ ತೆಗೆದು ಹಣ ಗಳಿಸತೊಡಗಿದರು. ಭಾರತೀಯ ಚಿತ್ರರಂಗದಲ್ಲಿ ವ್ಯಾಪಕವಾಗಿ ಆಗಲೇ ಹಬ್ಬಿದ್ದ ತಾರಾಪದ್ಧತಿಗೆ ಕನ್ನಡ ಚಿತ್ರರಂಗವೂ ಅಪವಾದವಾಗಲಿಲ್ಲ. ಹಾಗಾಗಿ 60ರ ದಶಕದಲ್ಲಿ ಕನ್ನಡ ಚಿತ್ರರಂಗದಲ್ಲಿ ರಾಜಕುಮಾರ್, ಕಲ್ಯಾಣಕುಮಾರ್, ಉದಯ ಕುಮಾರ್ ಈ ಮೂವರೂ ಕನ್ನಡ ಚಿತ್ರದಿಗಂತದ ತಾರೆಗಳಂತೆ ಬೆಳಗತೊಡಗಿದರು.

ಬೇಡರ ಕಣ್ಣಪ್ಪ (1954) ಮೂಲಕ ತೆರೆಯೇರಿ ಮೊದಮೊದಲು ಪೌರಾಣಿಕ ಚಿತ್ರಗಳಲ್ಲಿ ಭಕ್ತಿಪೂರ್ಣ ಪಾತ್ರಗಳಲ್ಲಿಯೇ ಕಾಣಿಸಿಕೊಳ್ಳುತ್ತಿದ್ದ ರಾಜಕುಮಾರ್ (ನೋಡಿ) ಅನಂತರ ಸಾಮಾಜಿಕ ಚಿತ್ರಗಳಲ್ಲಿಯೂ ತಮ್ಮ ಅಭಿನಯಕುಶಲತೆಯಿಂದ ಹೆಸರು ಮಾಡಿದರು. ತದನಂತರ ಬಾಂಡ್ ಚಿತ್ರಗಳಲ್ಲಿಯೂ ಧೀರೋದಾತ್ತ ಸಾಹಸಪೂರ್ಣ ಚಿತ್ರಗಳಲ್ಲಿಯೂ ಅಭಿನಯಿಸಿ ತಮ್ಮ ಅಭಿನಯಕೌಶಲವನ್ನು ಅಸಾಮಾನ್ಯವೆಂಬಂತೆ ಮೆರೆದರು. ರಾಜಕುಮಾರ ಅವರ ಚಿತ್ರಗಳು ಹೆಚ್ಚು ಹೆಚ್ಚು ಜನಪ್ರಿಯವಾಗತೊಡಗಿದಂತೆ ಅವರಿಗೆ ಬೇಡಿಕೆ ಹೆಚ್ಚುತ್ತ ಹೋಯಿತು. ಶಬ್ದವೇಧಿ (1999) ಚಿತ್ರದ ವರೆಗೆ 206 ಚಿತ್ರಗಳಲ್ಲಿ ರಾಜಕುಮಾರ್ ನಟಿಸಿದ್ದಾರೆ. ಇಲ್ಲಿಯವರೆಗೆ ತೆಗೆಯಲಾಗಿರುವ ಬಹುತೇಕ ಕನ್ನಡ ಐತಿಹಾಸಿಕ ಚಿತ್ರಗಳಲ್ಲಿಯೂ (ರಣಧೀರ ಕಂಠೀರವ, ಕಿತ್ತೂರ ಚೆನ್ನಮ್ಮ, ಇಮ್ಮಡಿ ಪುಲಿಕೇಶಿ, ಶ್ರೀಕೃಷ್ಣದೇವರಾಯ, ಮಯೂರ) ರಾಜಕುಮಾರ್ ನಾಯಕರಾಗಿದ್ದಾರೆ. ಅದ್ದೂರಿಯ ಚಿತ್ರಗಳಲ್ಲಿ, ಅತಿವೆಚ್ಚದ ಚಿತ್ರಗಳಲ್ಲಿ ರಾಜಕುಮಾರ್ ಅನಿವಾರ್ಯವಾದರು. ವರನಟ, ನಟಸಾರ್ವಭೌಮ, ರಸಿಕರ ರಾಜ, ಕನ್ನಡ ಕಂಠೀರವ ಮೊದಲಾದ ಬಿರುದುಗಳನ್ನು ಪಡೆದಿರುವ ಈ ನಟನಿಗೆ 1976ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದೆ. ಇದಲ್ಲದೆ ಇವರು ಪದ್ಮಭೂಷಣ (1983), ಕರ್ನಾಟಕ ರತ್ನ (1993), ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ(1996)ಗಳನ್ನೂ ಗಳಿಸಿದ್ದಾರೆ. ಬಂಗಾರದ ಹೂವು, ಕುಲಗೌರವ, ಭಕ್ತ ಕುಂಬಾರ ಚಿತ್ರಗಳಲ್ಲಿ ಅಭಿನಯಕ್ಕಾಗಿ ಮೂರು ಬಾರಿ ರಾಜ್ಯಪ್ರಶಸ್ತಿಗಳು ಬಂದಿವೆ. ಗಂಧದ ಗುಡಿ ಹಾಗೂ ಮಯೂರದಲ್ಲಿನ ಅಭಿನಯಕ್ಕಾಗಿ ಎರಡು ಬಾರಿ ಫಿಲಂಫೇರ್ ಪ್ರಶಸ್ತಿಗಳೂ ಬಂದಿವೆ.

ಅಮರಶಿಲ್ಪಿ ಜಕಣಾಚಾರಿ ಚಿತ್ರದಲ್ಲಿ ಕಲ್ಯಾಣ್‌ಕುಮಾರ್, ಬಿ.ಸರೋಜಾದೇವಿ

1954ರಲ್ಲಿಯೇ ನಟಶೇಖರದ ಮೂಲಕ ನಾಯಕ ಪಟ್ಟಕ್ಕೆ ಬಂದ ಕಲ್ಯಾಣ ಕುಮಾರ್ (ನೋಡಿ) ಸಂವೇದನೆಯ ಪಾತ್ರಗಳನ್ನು ಚೊಕ್ಕವಾಗಿ ನಿರ್ವಹಿಸಬಲ್ಲವರೆಂದು ಖ್ಯಾತರಾಗಿದ್ದರು. ಅಮರಶಿಲ್ಪಿ ಜಕಣಾಚಾರಿ ಎಂಬ ಮೊದಲ ವರ್ಣಚಿತ್ರದಲ್ಲಿ ಜಕಣಾಚಾರಿಯ ಪಾತ್ರನಿರ್ವಹಿಸಿದರು.

ದೈವಲೀಲೆಯಲ್ಲಿ ದ್ವಿಪಾತ್ರಗಳನ್ನು ವಹಿಸಿರುವ ಇವರು ಸ್ವತಃ ನಿರ್ಮಾಪಕ ನಿರ್ದೇಶಕರೂ ಆಗಿ ಕೆಲವು ಚಿತ್ರಗಳನ್ನು ತಂದರು. 1971ರಲ್ಲಿ ಪಾಪಪುಣ್ಯದಲ್ಲಿ ತೆರೆಯ ಮೇಲೆ ಕಾಣಿಸಿಕೊಂಡ ಅನಂತರ ಕೆಲವು ಕಾಲ ಇವರು ಚಿತ್ರ ರಂಗದಿಂದ ದೂರವಾಗಿದ್ದರು. 1984ರ ಅನಂತರ ಪುನಃ ಚಿತ್ರರಂಗಕ್ಕೆ ಬಂದರು. ಕಥಾಸಂಗಮ, ಕಾಲೇಜುರಂಗ, ಬೆಳ್ಳಿಮೋಡ ಎಂದೂ ನಿನ್ನವನೆ ಇವರು ನಟಿಸಿದ ಕೆಲವು ಚಿತ್ರಗಳು. ಇವರು ಕಿರುತೆರೆಯ ಧಾರಾವಾಹಿಗಳಲ್ಲೂ ನಟಿಸಿದ್ದರು.

ರಂಗನಾಯಕಿ ಚಿತ್ರದಲ್ಲಿ ರಾಮಕೃಷ್ಣ, ಆರತಿ

ಗುಬ್ಬಿಕಂಪನಿಯಲ್ಲಿ ಕಲಾವಿದರಾಗಿದ್ದ ಉದಯ ಕುಮಾರ್ (ನೋಡಿ) ಭಾಗ್ಯೋದಯ (1956) ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ರತ್ನಗಿರಿ ರಹಸ್ಯ, ಭಲೆ ಬಸವ ಮುಂತಾದವುಗಳಲ್ಲಿ ನಾಯಕ ಪಾತ್ರ ವಹಿಸಿದ್ದರು. ಇವರು ಪೋಷಕ ಪಾತ್ರದಲ್ಲಿಯೇ ಅದರಲ್ಲೂ ಹೆಚ್ಚಾಗಿ ಖಳನಾಯಕನ ಪಾತ್ರದಲ್ಲಿ ಜನಪ್ರಿಯತೆಗಳಿಸಿದ್ದಾರೆ. ಶ್ರೀರಾಮಾಂಜನೇಯ ಯುದ್ಧದಲ್ಲಿನ ಆಂಜನೇಯನ ಪಾತ್ರ, ಚಂದವಳ್ಳಿಯ ತೋಟದಲ್ಲಿನ ಶಿವನಂಜೇಗೌಡನ ದುರಂತ ಪಾತ್ರ ಇವರ ಅಭಿನಯ ಜೀವನದಲ್ಲಿ ಮೈಲಿಗಲ್ಲುಗಳು. ಸೇಡಿಗೆ ಸೇಡು (1970) ಇವರ ನೂರನೆಯ ಚಿತ್ರ. ನೂರೈವತ್ತು ಚಿತ್ರಗಳಲ್ಲಿ ಅಭಿನಯಿಸಿರುವ ಇವರು ಇದೇ ಮಹಾಸುದಿನ ಚಿತ್ರವನ್ನು ಸ್ವತಃ ತಯಾರಿಸಿದರು. ತಮ್ಮ ಕಡೆ ದಿನಗಳಲ್ಲಿ ಉದಯ ಕಲಾನಿಕೇತನ ಆರಂಭಿಸಿ ಆಸಕ್ತರಿಗೆ ಅಭಿನಯದಲ್ಲಿ ತರಬೇತಿ ನೀಡುತ್ತಿದ್ದರು. ಚಿತ್ರರಂಗದಲ್ಲಿ ವಿಭಿನ್ನ ಪಾತ್ರದಲ್ಲಿ ಮೆರೆದ ಇವರು 1985ರಲ್ಲಿ ನಿಧನರಾದರು.

ಪುರುಷಪ್ರಾಧಾನ್ಯ ಭಾರತೀಯ ಚಿತ್ರರಂಗದ ಸಾಮಾನ್ಯ ಲಕ್ಷಣ. ಕನ್ನಡ ಚಿತ್ರರಂಗ ಇದಕ್ಕೆ ಹೊರತಾಗಿಲ್ಲ. ನಾಯಕ ನಟ ನೆಲೆನಿಲ್ಲುವಷ್ಟು ದೀರ್ಘಕಾಲ ನಟಿಯರು ನಿಲ್ಲಲಾರರು. ನಾಯಕಿ ನಟಿಯರಾಗಿದ್ದ ಪಂಢರಿಬಾಯಿ, ಎಂ.ವಿ.ರಾಜಮ್ಮ, ಸಂಧ್ಯಾ, ಬಿ.ಸರೋಜಾದೇವಿ, ಲೀಲಾವತಿ ಮೊದಲಾದವರು ಕ್ಷಿಪ್ರಕಾಲದಲ್ಲಿಯೇ ಪೋಷಕ ಪಾತ್ರಧಾರಿಗಳಾಗಬೇಕಾಯಿತು. ಕನ್ನಡ ಚಲನಚಿತ್ರಗಳಲ್ಲಿ ನಟಿಯರ ಸ್ಥಾನದಿಂದ ತಾರಾಪಟ್ಟಕ್ಕೇರಿದವರೆಂದರೆ ಜಯಂತಿ (ನೋಡಿ) ಮತ್ತು ಭಾರತಿ (ನೋಡಿ) ಇಬ್ಬರೇ. ಚೆಲುವು, ಪ್ರತಿಭೆಗಳೆರಡರ ಮಿಳಿತವಾದ ಈ ನಟಿಯರು ರಾಜಕುಮಾರ್ ಜೊತೆ ಅಭಿನಯಿಸಿರುವ ಚಿತ್ರಗಳೇ ಹೆಚ್ಚು ಹಾಗೂ ಜನಪ್ರಿಯವಾದವು. ಜೇನುಗೂಡು ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿ ಚಂದವಳ್ಳಿಯ ತೋಟ (1965) ಮೂಲಕ ಖ್ಯಾತಿಗಳಿಸಿದ ಜಯಂತಿ ಅರವತ್ತಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಮಿಸ್ ಲೀಲಾವತಿ, ಚಕ್ರತೀರ್ಥ, ಎಡಕಲ್ಲುಗುಡ್ಡದ ಮೇಲೆ. ಇವು ಈಕೆಯ ಶ್ರೇಷ್ಠ ಚಿತ್ರಗಳಲ್ಲಿ ಕೆಲವು. 1966ರಲ್ಲಿ ಬಿಡುಗಡೆಯಾದ ಲವ್ ಇನ್ ಬೆಂಗಳೂರು ಚಿತ್ರದಲ್ಲಿ ಕಲ್ಯಾಣಕುಮಾರ್ ಜೊತೆ ಮೊದಲ ಬಾರಿ ನಾಯಕಿಯಾದ ಭಾರತಿ ಒಂದು ದಶಕಕ್ಕೂ ಹೆಚ್ಚು ಕಾಲ ಚಿತ್ರರಂಗದಲ್ಲುಳಿದು ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿರುವ ಬಹುಭಾಷಾ ತಾರೆ. ಸಂಧ್ಯಾರಾಗ ಹಾಗೂ ಶ್ರೀಕೃಷ್ಣದೇವರಾಯ ಚಿತ್ರಗಳಲ್ಲಿನ ಅಭಿನಯಕ್ಕೆ ಪ್ರಶಸ್ತಿಗಳನ್ನು ಪಡೆದಿದ್ದಾರೆ. ರಾಜಕುಮಾರ್ - ಭಾರತಿ ಅತ್ಯಂತ ಜನಪ್ರಿಯ ತಾರಾ ಜೋಡಿಯಾಗಿದ್ದು ಇವರು ಅಭಿನಯಿಸಿರುವ ಬಂಗಾರದ ಮನುಷ್ಯ ವರ್ಣಚಿತ್ರ ಎರಡು ವರ್ಷಗಳ ಕಾಲ ಪ್ರದರ್ಶನಗೊಂಡಿತು. ರಾಜಕುಮಾರ್, ಮಂಜುಳಾ ಜೋಡಿಯ ಸಂಪತ್ತಿಗೆ ಸವಾಲ್ ಮತ್ತು ಮಯೂರ ಚಿತ್ರಗಳೂ ಜನಪ್ರಿಯತೆ ಗಳಿಸಿದ್ದುವು.

60ರ ದಶಕದ ಉತ್ತರಾರ್ಧದಲ್ಲಿ ಹಿಂದಿ ಚಿತ್ರಗಳಲ್ಲಿ ಧಾರಾಳವಾಗಿದ್ದ ಅತಿ ನಗ್ನತೆ, ಕ್ರೌರ್ಯ, ಹಿಂಸಾಚಾರ ಮೊದಲಾದ ಮಾದಕ ಸೌಂದರ್ಯಗಳಿಂದ ಕನ್ನಡ ಚಿತ್ರಗಳು ಸಪ್ಪೆ ಎನಿಸತೊಡಗಿದವು. ಹಿಂದಿ ಚಿತ್ರಗಳನ್ನು ಅನುಕರಿಸಿ ಕನ್ನಡದಲ್ಲಿಯೂ ಆ ಬಗೆಯ ಚಿತ್ರಗಳು ಮೈದಳೆಯತೊಡಗಿದವು. ಸಮೂಹರಂಜನೆಯ ಚಿತ್ರಗಳ ಪ್ರವಾಹವೇ ನುಗ್ಗಿಬಂತು. ದೊರೆ-ಭಗವಾನ್ ನಿರ್ಮಾಪಕ ನಿರ್ದೇಶಕದ್ವಯರು ಜೇಡರ ಬಲೆಯ ಮೂಲಕ ಕನ್ನಡ ಚಿತ್ರರಂಗಕ್ಕೆ ಬಾಂಡ್ ಶೈಲಿಯನ್ನು ಪ್ರವೇಶಗೊಳಿಸಿದರು. ಈ ಬಗೆಯಲ್ಲಿ ಹಲವು ಚಿತ್ರಗಳ ಬೆನ್ನ ಹಿಂದೆಯೇ ಕೌತುಕಪೂರ್ಣ, ರೋಮಾಂಚಕಾರಿ ಕಥೆಗಳನ್ನು ಚಿತ್ರೀಕರಿಸುವ ಪ್ರವೃತ್ತಿ ಬೆಳೆಯಿತು. ಇದು ಈಗಲೂ ಮುಂದುವರಿದಿದೆ. ಈ ಬಗೆಯ ಚಿತ್ರ ಕಥೆಗಳನ್ನು ಬರೆಯುವಲ್ಲಿ ಹಿಂದಿಚಿತ್ರ ರಂಗದಲ್ಲಿ ದೊಡ್ಡ ಹೆಸರಾದ ಸಲೀಂ ಜಾವೇದರು ರಚಿಸಿರುವ ಕಥೆಗಳನ್ನು ಆಧರಿಸಿದ ಪ್ರೇಮದ ಕಾಣಿಕೆ ಹಾಗೂ ರಾಜಾ ನನ್ನ ರಾಜಾ ಚಿತ್ರಗಳು 1976ರಲ್ಲಿ ತೆರೆಕಂಡವು.

ಕಥಾಸಂಗಮ ಚಿತ್ರದ ಒಂದು ದೃಶ್ಯ - ಕಲ್ಯಾಣ್‌ಕುಮಾರ್, ಬಿ. ಸರೋಜಾದೇವಿ

ಈ ಮಧ್ಯೆ ಚಲನಚಿತ್ರಗಳಲ್ಲಿ ತಮ್ಮ ಅಸ್ತಿತ್ವವನ್ನು ಸಾಧಿಸಿ, ಚಿತ್ರಗಳ ಬೆಳೆವಣಿಗೆಗೆ ಹೊಸ ತಿರುವು ಕೊಡಲು ಯತ್ನಿಸುವ ನಿರ್ದೇಶಕರ ಪೀಳಿಗೆ ಕಾಣಿಸಿಕೊಳ್ಳತೊಡಗಿತು. ಈ ವೇಳೆಗಾಗಲೇ ಬಿ.ಆರ್.ಪಂತುಲು, ಬಿ.ಎಸ್.ರಂಗಾ, ಜಿ.ವಿ.ಅಯ್ಯರ್, ವೈ.ಆರ್.ಸ್ವಾಮಿ, ಹುಣಸೂರು ಕೃಷ್ಣಮೂರ್ತಿ, ಎಚ್.ಎಲ್.ಎನ್.ಸಿಂಹ ಮೊದಲಾದ ಪ್ರಬುದ್ಧ ನಿರ್ದೇಶಕರು ಪ್ರೌಢಚಿತ್ರಗಳನ್ನು ನಿರ್ಮಿಸುತ್ತಿದ್ದರೂ ಪರಂಪರೆಯಿಂದ ಜೋರಾಗಿ ನಿಂತು ನಿರ್ದೇಶನ ಪ್ರತಿಭೆಗಳನ್ನು ಮಿಂಚಿಸಿದ ಪೀಳಿಗೆ ಬಂದದ್ದು 60ರ ದಶಕದಲ್ಲಿಯೇ. ವಾದಿರಾಜ್-ಜವಹರ್ ಅವರ ತಯಾರಿಕೆಯಾದ ಕಿವುಡ-ಮೂಗರ ಹೃದಯಸ್ಪರ್ಶಿ ಸಮಸ್ಯೆಯನ್ನು ಎತ್ತಿಕೊಂಡ ನಾಂದಿ ಚಿತ್ರ (1964) ಎನ್.ಲಕ್ಷ್ಮೀನಾರಾಯಣರ ಪ್ರತಿಭಾಪೂರ್ಣ ನಿರ್ದೇಶನದಿಂದಾಗಿ ಅಪಾರ ಮನ್ನಣೆ ಪಡೆಯಿತು. ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿಯೂ ಹೆಸರುಮಾಡಿತು. ಇದೇ ನಿರ್ದೇಶಕರ ಉಯ್ಯಾಲೆ (1969), ಮುಕ್ತಿ (1970) ಹಾಗೂ ಹೊಸ ಬಗೆಯ ಅಬಚೂರಿನ ಪೋಸ್ಟಾಫೀಸು (1973), ಮುಯ್ಯಿ (1979), ಬೆಟ್ಟದಹೂವು (1985) ಚಿತ್ರಗಳೂ ಇವರ ಪ್ರತಿಭೆಗೆ ಸಾಕ್ಷಿಯಾಗಿವೆ. ನಂದಾದೀಪ (1962),

ಮಿಸ್ ಲೀಲಾವತಿ (1965) ಚಿತ್ರಗಳನ್ನು ಕೊಟ್ಟ. ಎಂ.ಆರ್.ವಿಠಲ್; ತೂಗುದೀಪದ (1965) ಮೂಲಕ ಕಾಣಿಸಿಕೊಂಡು ಗಾಂಧಿನಗರದಂಥ

ನಾಂದಿ ಚಿತ್ರದ ಒಂದು ದೃಶ್ಯದಲ್ಲಿ ರಾಜಕುಮಾರ್

ಚೊಕ್ಕವಾದ ಚಿತ್ರವನ್ನು ಕೊಟ್ಟ ಕೆ.ಎಸ್.ಎಲ್.ಸ್ವಾಮಿ (ರವಿ), ಈ ನಿರ್ದೇಶಕರು ಭರವಸೆ ಮೂಡಿಸುವವರಾಗಿದ್ದರು. ಲಗ್ನಪತ್ರಿಕೆ (1967), ಆರು ಮೂರು ಒಂಬತ್ತು (1970), ಮಂಕುದಿಣ್ಣೆ (1968), ಅರಿಶಿನ ಕುಂಕುಮ, ಲಕ್ಷ್ಮೀಸರಸ್ವತಿ (1970), ಶ್ರೀಕೃಷ್ಣ ರುಕ್ಮಿಣಿ (1971), ಕುಳ್ಳ ಏಜೆಂಟ್ 000 (1972), ಮಿಥಿಲೆಯ ಸೀತೆಯರು (1988), ಹರಕೆಯ ಕುರಿ (1992), ಮುಖ್ಯ ಚಿತ್ರಗಳು. 1966ರಲ್ಲಿ ಕನ್ನಡ ಚಲನಚಿತ್ರರಂಗ ಕಂಡ ಇನ್ನೊಬ್ಬ ಪ್ರೌಢ ಪ್ರತಿಭಾವಂತ ನಿರ್ದೇಶಕ ಎಂದರೆ ರೊಸೆಲಿನಿಯಂಥ ವಿಖ್ಯಾತ ನಿರ್ದೇಶಕನ ಬಳಿ ಕೆಲಸ ಮಾಡಿದ ಎಂ.ವಿ.ಕೃಷ್ಣಸ್ವಾಮಿ. ಇವರು ಎ.ಎನ್.ಮೂರ್ತಿರಾಯರ ಆಷಾಢಭೂತಿ ನಾಟಕ ಆಧರಿಸಿದ ಸುಬ್ಬಾಶಾಸ್ತ್ರಿ ಎಂಬ ಹೊಸ ರೂಪದ ಚಿತ್ರವನ್ನು ತಯಾರಿಸಿದರು. ಕನ್ನಡ ಚಿತ್ರರಂಗಕ್ಕೆ ಹೊಸ ತಿರುವು ಕೊಡಬಹುದಾಗಿದ್ದ ಈ ಚಿತ್ರ ಅಷ್ಟು ಯಶಸ್ಸು ಗಳಿಸಲಿಲ್ಲ. ಅಲ್ಲದೆ ಕೃಷ್ಣಸ್ವಾಮಿಯವರೂ ಕಾರಣಾಂತರಗಳಿಂದ

ಕಿತ್ತೂರು ಚೆನ್ನಮ್ಮ ಚಿತ್ರದಲ್ಲಿ ಬಿ.ಸರೋಜಾದೇವಿ

ಚಲನಚಿತ್ರರಂಗದಿಂದ ದೂರವಾದರು. ಕನ್ನಡದಲ್ಲಿ ನಿರ್ದೇಶಕನಿಗೆ ಪ್ರಾಧಾನ್ಯ ಬರುವಂತೆ ಮಾಡಿದ ಕೀರ್ತಿ ಎಸ್.ಆರ್.ಪುಟ್ಟಣ್ಣ ಕಣಗಾಲರದು. ಖ್ಯಾತ ನಿರ್ಮಾಪಕ ನಿರ್ದೇಶಕ ಪಂತುಲು ಅವರ ಜೊತೆ ಬಹುಕಾಲ ಕೆಲಸಮಾಡಿದ ಇವರು 1967ರಲ್ಲಿ ಬೆಳ್ಳಿಮೋಡ ಎಂಬ ಮೊದಲ ಚಿತ್ರದ ಮೂಲಕವೇ ಹೆಸರು ಗಳಿಸಿದರು. 1985ರವರೆಗೆ 23 ಚಿತ್ರಗಳನ್ನು ನಿರ್ದೇಶಿಸಿದರು. ಶುಭಮಂಗಳ, ಉಪಾಸನೆ, ರಂಗನಾಯಕಿ, ಗೆಜ್ಜೆಪೂಜೆ, ಶರಪಂಜರ, ನಾಗರಹಾವು, ಎಡಕಲ್ಲುಗುಡ್ಡದ ಮೇಲೆ, ಬಿಳಿ ಹೆಂಡ್ತಿ, ಕಾಲೇಜುರಂಗ, ಮಸಣದ ಹೂವು - ಹೀಗೆ ಚಿತ್ರದಿಂದ ಚಿತ್ರಕ್ಕೆ ಪರಿಷ್ಕಾರ ಹೊಂದುತ್ತ ಹೋದರು. ಪುಟ್ಟಣ್ಣ ಚಿತ್ರಿಸಿದ ಮೂರು ಕಥೆಗಳನ್ನು ಆಧರಿಸಿದ ಕಥಾಸಂಗಮ ಅವರ ಪ್ರತಿಭಾಕೌಶಲಕ್ಕೆ ಹಿಡಿದ ಕನ್ನಡಿ. ಕಾದಂಬರಿಗಳ ಚಿತ್ರೀಕರಣಕ್ಕೆ ಆದ್ಯತೆ ಕೊಟ್ಟು ಆ ಪರಂಪರೆ ತೀವ್ರವಾಗಿ ಬೆಳೆಯುವಂತೆ ಮಾಡಿದುದಲ್ಲದೆ, ಚಲನಚಿತ್ರಗಳಲ್ಲಿ ಹೆಣ್ಣಿನ ಪಾತ್ರವನ್ನು ಔನ್ನತ್ಯಗೊಳಿಸಿ ಆಕೆಯ ಸುತ್ತ ಕಥಾಹಂದರ ಹರಡಿಕೊಳ್ಳುವಂತೆ ಮಾಡಿದ ಖ್ಯಾತಿಯೂ ಪುಟ್ಟಣ್ಣ ಅವರದೇ. ಅನೇಕ ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿಗಳನ್ನು ಗಳಿಸಿದ ಇವರನ್ನು ದಕ್ಷಿಣ ಭಾರತೀಯ ಚಿತ್ರನಿರ್ದೇಶಕರ ಸಂಘದವರು 1974ರಲ್ಲಿ ಅತ್ಯುತ್ತಮ ನಿರ್ದೇಶಕ ಎಂದು ಗೌರವಿಸಿದ್ದಾರೆ. ನಾಲ್ಕು ಭಾಷೆಗಳಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿರುವ ಪುಟ್ಟಣ್ಣ ವಾಣಿಜ್ಯೋದ್ದೇಶಿತ ಚಿತ್ರಗಳಲ್ಲಿಯೂ ಕಲಾತ್ಮಕತೆಯನ್ನು ಸಾಧಿಸಬಹುದು ಎನ್ನುವುದಕ್ಕೆ ಸಾಕ್ಷಿಯಾಗಿದ್ದಾರೆ. ಕನ್ನಡದ ಅನೇಕ ಪ್ರಮುಖ ನಟನಟಿಯರು ಚಿತ್ರರಂಗದಲ್ಲಿ ಭದ್ರವಾಗಿ ನೆಲೆಯಾಗುವಂತೆ ಮಾಡಿದ ಯಶಸ್ಸು ಪುಟ್ಟಣ್ಣನವರದ್ದೇ. ಅವರು ನಾಗರಹಾವು ಮೂಲಕ ವಿಷ್ಣುವರ್ಧನ ಅವರನ್ನು ತೆರೆಗೆ ಪರಿಚಯಿಸಿದರು. ಶುಭಮಂಗಳದ ಮೂಲಕ ಶ್ರೀನಾಥ್ ಅವರನ್ನು ಪ್ರಕಾಶಕ್ಕೆ ತಂದರು. ಖ್ಯಾತ ನಟ ಕಲ್ಯಾಣಕುಮಾರ್ ಸಹ ಮತ್ತೆ ಬೆಳಕಿಗೆ ಬಂದದ್ದು ಇವರ ಕಥಾಸಂಗಮದಿಂದಲೇ. ಪುಟ್ಟಣ್ಣನವರ ನಾಯಕ ನಟಿಯರಾದ ಕಲ್ಪನಾ (ನೋಡಿ) ಹಾಗೂ ಆರತಿ (ನೋಡಿ) ಹೆಚ್ಚು ಹೆಸರು ಗಳಿಸಿದ್ದಾರೆ. ಪಂತುಲು ಅವರ ಸಾಕುಮಗಳು ಮೂಲಕ ತೆರೆಗೆ ಬಂದ ಕಲ್ಪನಾ ಬೆಳ್ಳಿಮೋಡ, ಗೆಜ್ಜೆ ಪೂಜೆ, ಶರಪಂಜರಗಳಲ್ಲಿ ಅತ್ಯಂತ ಸಂವೇದನಾಪೂರ್ಣ ಅಭಿನಯವನ್ನು ನೀಡಿ ಅನೇಕ ರಾಜ್ಯ ಪ್ರಶಸ್ತಿಗಳನ್ನೂ ಫಿಲಂ ಫೇರ್ ಪ್ರಶಸ್ತಿಗಳನ್ನೂ ಪಡೆದರು. ಗೆಜ್ಜೆಪೂಜೆಯ ಮೂಲಕ ಚಿತ್ರರಂಗ ಪ್ರವೇಶಿಸಿದ ಆರತಿ ನಾಗರಹಾವು ಹಾಗೂ ಎಡಕಲ್ಲುಗುಡ್ಡದ ಮೇಲೆ

[illegible]

ಹಾಗೂ ರಂಗನಾಯಕಿ ಚಿತ್ರಗಳಲ್ಲಿ ತಮ್ಮ ಅಭಿನಯದ ಮೂಲಕ ಕನ್ನಡ ತೆರೆಯಲ್ಲಿ ಸ್ಥಾನ ಗಳಿಸಿದರು. ಉಪಾಸನೆ, ಶುಭಮಂಗಳ, ಬಿಳಿಹೆಂಡ್ತಿ, ಕಥಾಸಂಗಮಗಳಲ್ಲಿಯೂ ಉತ್ತಮ ಅಭಿನಯ ನೀಡಿರುವ ಈಕೆ ಅನೇಕ ಪ್ರಶಸ್ತಿ ಗಳಿಸಿದ್ದಾರೆ. ರಾಜಕುಮಾರ್ - ಆರತಿ ಜೋಡಿಯ ಚಿತ್ರಗಳು ಕೆಲವು ಅಪಾರ ಯಶಸ್ಸು ಗಳಿಸಿವೆ. ಪುಟ್ಟಣ್ಣನವರು ಬಿಳಿಹೆಂಡ್ತಿ ಚಿತ್ರದಲ್ಲಿ ಮಾರ್ಗರೆಟ್ ಥಾಂಸನ್ ಎಂಬ ವಿದೇಶಿ ಕನ್ಯೆಯಿಂದಲೇ ಪಾತ್ರಮಾಡಿಸಿ ಕನ್ನಡದಲ್ಲಿ ಹೊಸ ಪ್ರಯೋಗ ಮಾಡಿದರು. ಮಸಣದ ಹೂವು ಇವರು ನಿರ್ದೇಶಿಸಿದ ಕೊನೆಯ ಚಿತ್ರ. ಚಿತ್ರಪೂರ್ಣಗೊಳಿಸುವ ಮುನ್ನವೇ ನಿಧನರಾದರು. ಪುಟ್ಟಣ್ಣನವರ ಹೆಸರಿನಲ್ಲಿ ಕನ್ನಡದ ಪ್ರತಿಭಾವಂತ ನಿರ್ದೇಶಕರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ನೀಡುವ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ (1986).

ಜಿ.ವಿ.ಅಯ್ಯರ್ (ನೋಡಿ) ಹಲವು ಅಪೂರ್ವ ಕೊಡುಗೆಗಳನ್ನು ನೀಡಿರುವುದರಿಂದ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಇವರು ನಟಿಸಿದ ಮೊದಲ ಚಿತ್ರ ರಾಧಾರಮಣ (1943). 10ನೆಯ ವಯಸ್ಸಿನಲ್ಲಿ ಗುಬ್ಬಿ ಕಂಪನಿ ಸೇರಿದ ಇವರು ಬೇಡರ ಕಣ್ಣಪ್ಪ ಚಿತ್ರದ ಮೂಲಕ ಜನಪ್ರಿಯತೆ ಗಳಿಸಿದರು. ವಿಕ್ರಂ ಪ್ರೊಡಕ್ಷನ್ಸ್‌ರವರ ದಶಾವತಾರ ನಿರ್ದೇಶಿಸಿದರು (1960). ಇವರು ನಿರ್ದೇಶಿಸಿದ ಹಂಸಗೀತೆ ಯಶಸ್ವೀ ಚಿತ್ರ. ಇದಲ್ಲದೆ ಸಂಸ್ಕೃತದಲ್ಲಿ ಆದಿಶಂಕರಾಚಾರ್ಯ ಚಲನಚಿತ್ರ,

ನಿರ್ದೇಶಿಸಿದರು. ಈ ಚಿತ್ರ ಸ್ವರ್ಣಕಮಲ ಪ್ರಶಸ್ತಿ ಗಳಿಸಿತು. ಮಧ್ವಾಚಾರ್ಯ, ಭಗವದ್ಗೀತೆ, ಸ್ವಾಮಿ ವಿವೇಕಾನಂದ ಚಿತ್ರಗಳನ್ನೂ ಇವರು ನಿರ್ದೇಶಿಸಿದ್ದಾರೆ. 2003 ಡಿಸೆಂಬರ್ 21ರಂದು ಇವರು ಮುಂಬಯಿಯಲ್ಲಿ ನಿಧನರಾದರು.

ಮೇಯರ್ ಮುತ್ತಣ್ಣ (1969) ಚಿತ್ರದ ಮೂಲಕ ಪೂರ್ಣ ನಿರ್ದೇಶಕರಾದ ಸಿದ್ಧಲಿಂಗಯ್ಯನವರು (ನೋಡಿ) ರಾಜಕುಮಾರ್ - ಭಾರತಿ ಜೋಡಿಯ ಅನೇಕ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿ ಉದ್ಯಮದಲ್ಲಿ ಹೆಸರಾದರು (ಬಾಳು ಬೆಳಗಿತು, ನಮ್ಮ ಸಂಸಾರ, ದೂರದಬೆಟ್ಟ). ಇವರು ನಿರ್ದೇಶಿಸಿರುವ, ಟಿ.ಕೆ.ರಾಮರಾವ್ ಅವರ ಕಾದಂಬರಿ ಆಧಾರಿತ ವರ್ಣಚಿತ್ರ ಬಂಗಾರದ ಮನುಷ್ಯ (1972) ಸತತವಾಗಿ 104 ವಾರಗಳ ಕಾಲ ಓಡಿ ಅಪೂರ್ವ ದಾಖಲೆ ನಿರ್ಮಿಸಿತು. ಕನ್ನಡದ ಹೆಸರಾಂತ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರರ ಕಥೆಯನ್ನು ಆಧರಿಸಿ ಇವರು ಚಿತ್ರಿಸಿದ ಬೂತಯ್ಯನ ಮಗ ಅಯ್ಯು (1974) ತನ್ನ ಕಲಾತ್ಮಕ ದೃಷ್ಟಿಯಿಂದ ಇವರನ್ನು ಶ್ರೇಷ್ಠ ನಿರ್ದೇಶಕರನ್ನಾಗಿಸಿತು. 1977ರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರ ಹೇಮಾವತಿ ಕಾದಂಬರಿಯನ್ನು ತೆರೆಗೆ ತಂದರು. ಇವರು ನಿರ್ದೇಶಿಸಿದ ಪ್ರಮುಖ ಚಿತ್ರಗಳು ಭೂಲೋಕದಲ್ಲಿ ಯಮರಾಜ (1979), ನಾರದ ವಿಜಯ (1980), ಬಿಳಿಗಿರಿಯ ಬನದಲ್ಲಿ (1980), ಪ್ರೇಮಪರ್ವ (1983), ಸಂಭವಾಮಿ ಯುಗೇ ಯುಗೇ (1988), ಬಾರೇ ನನ್ನ ಮುದ್ದಿನ ರಾಣಿ (1990), ಬಾ ನನ್ನ ಪ್ರೀತಿಸು (1992), ಭೂತಾಯಿ ಮಕ್ಕಳು (1994). ಅಯ್ಯುವಿನ ಪಾತ್ರವನ್ನು ಜೀವಂತವಾಗಿ ನಿರ್ವಹಿಸುವುದರ ಮೂಲಕ ಚಿತ್ರರಂಗ ಪ್ರವೇಶಿಸಿದ ಲೋಕೇಶ್ ಕನ್ನಡದ ಅತ್ಯುತ್ತಮ ರಂಗನಟರಲ್ಲೊಬ್ಬರಾಗಿದ್ದ ಸುಬ್ಬಯ್ಯ ನಾಯ್ಡು ಅವರ ಮಗ. ಬೂತಯ್ಯನ ಮಗ ಅಯ್ಯು ಚಿತ್ರ ಹಿಂದಿ ಹಾಗೂ ತಮಿಳು ಅವತರಣಿಕೆಗಳಲ್ಲಿ ಅಯ್ಯುವಿನ ಪಾತ್ರವನ್ನು ಲೋಕೇಶ್ ನಿರ್ವಹಿಸಿದ್ದಾರೆ. ದೇವರ ಕಣ್ಣು ಹಾಗೂ ಪುನರ್ದತ್ತ ಎಂಬ ಮತ್ತೆರಡು ಚಿತ್ರಗಳಲ್ಲಿ ಇವರು ಅಭಿನಯಿಸಿದ್ದಾರೆ.

ಬೂತಯ್ಯನ ಮಗ ಅಯ್ಯು ಚಿತ್ರದ ಒಂದು ದೃಶ್ಯದಲ್ಲಿ ಲೋಕೇಶ್

ಕೇವಲ ವಾಣಿಜ್ಯ ದೃಷ್ಟಿಯಿಂದ ತಯಾರಾಗುತ್ತಿರುವ ಚಿತ್ರಗಳಿಗೂ 70ರ ದಶಕದಲ್ಲಿ ಆರಂಭವಾದ ಕಲಾತ್ಮಕ ಪ್ರಾಯೋಗಿಕ ಚಿತ್ರಗಳಿಗೂ ಪುಟ್ಟಣ್ಣ ಹಾಗೂ ಸಿದ್ಧಲಿಂಗಯ್ಯ ಅವರ ಚಿತ್ರಗಳು ನಡುವಣ ಬಂಧಸೇತುವೆಗಳಾದವು. ನಾಗರಹೊಳೆ ಚಿತ್ರದ (1977) ಮೂಲಕ ಪ್ರಖ್ಯಾತಿಗೆ ಬಂದ ಎಸ್.ವಿ.ರಾಜೇಂದ್ರಸಿಂಗ್ ಬಾಬು ಕನ್ನಡದ ಮತ್ತೊಬ್ಬ ಗಮನಾರ್ಹ ನಿರ್ದೇಶಕ. ಮೊದಲು ನಿರ್ದೇಶಿಸಿದ ಚಿತ್ರ ನಾಗಕನ್ಯೆ (1975). ನಾಗರಹೊಳೆ, ಮಕ್ಕಳ ಸಾಹಸವನ್ನೊಳಗೊಂಡ ಚಿತ್ರವಾಗಿದ್ದು ಭಾರೀ ಯಶಸ್ಸು ಪಡೆಯಿತು. 1978ರಲ್ಲಿ ಕಿಲಾಡಿ ಜೋಡಿ ಚಿತ್ರನಿರ್ದೇಶಿಸಿದ ರಾಜೇಂದ್ರಸಿಂಗ್ ಬಾಬು, ತಾಂತ್ರಿಕವಾಗಿ ಶ್ರೀಮಂತ ಚಿತ್ರಗಳನ್ನು ತೆಗೆಯುವುದರಲ್ಲಿ ನಿಸ್ಸೀಮರೆನಿಸಿದರು. 1980ರಲ್ಲಿ 'ಅಂತ' ಚಿತ್ರದ ಮೂಲಕ ಕನ್ನಡ ಚಿತ್ರಗಳ ದಿಕ್ಕನ್ನೇ ಬದಲಿಸಿದರು. ಎಚ್.ಕೆ.ಅನಂತರಾವ್ ಅವರ ಕಾದಂಬರಿ ಆಧರಿಸಿದ ಈ ಚಿತ್ರದಲ್ಲಿ ಅಂಬರೀಷ್, ಲಕ್ಷ್ಮಿ, ಜಯಮಾಲಾ, ಸುಂದರಕೃಷ್ಣಅರಸು, ವಜ್ರಮುನಿ ಮೊದಲಾದವರು ಅಭಿನಯಿಸಿದ್ದಾರೆ. ಸೆನ್ಸಾರ್ ಸುಳಿಗೆ ಸಿಲುಕಿ ನಿಷೇಧಗೊಂಡಿದ್ದ ಚಿತ್ರ ಅನಂತರ, ಬಿಡುಗಡೆಯಾಗಿ ಜನರ ಕುತೂಹಲ ಕೆರಳಿಸಿತು. ನಾಯಕ ಅಂಬರೀಷ್ ಅವರ ಚಿತ್ರ ಜೀವನದಲ್ಲಿ ಈ ಚಿತ್ರ ತಿರುವು ನೀಡಿತು. ನಾಗರಹಾವು, ಚಿತ್ರದ ಖಳನ ಪಾತ್ರದಿಂದ ಚಿತ್ರರಂಗ ಪ್ರವೇಶಿಸಿದ ಅಂಬರೀಷ್ (ನೋಡಿ) ಬಹಳ ಕಾಲ ಖಳ ನಟರಾಗಿದ್ದರು. ಅಂತ ಚಿತ್ರದಲ್ಲಿ ಅವರ ಸಬ್ ಇನ್ಸ್‌ಪೆಕ್ಟರ್ ಸುಶೀಲ್‌ಕುಮಾರ್ ಹಾಗೂ ಕನ್ವರ್ ಲಾಲ್ ಎಂಬ ರೌಡಿಯ ಪಾತ್ರ ಜನಪ್ರಿಯವಾಯಿತು. ಕನ್ನಡದ ಯಶಸ್ವಿ ನಾಯಕರಲ್ಲೊಬ್ಬರಾದರು. ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್ (1989) ಚಿತ್ರದ ಮೂಲಕ ಅಂಬರೀಷ್ ಶತಚಿತ್ರ ನಟರೂ ಆಗಿದ್ದಾರೆ. ಇದೇ ರೀತಿ ಖಳನಾಯಕ ಪಾತ್ರದಿಂದ ಚಿತ್ರರಂಗ ಪ್ರವೇಶಿಸಿದ ಪ್ರಭಾಕರ್ ಕೂಡ ನಾಯಕನಟರಾಗಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಕಾಡಿನ ರಹಸ್ಯ ಚಿತ್ರದ ಮೂಲಕ ಅವರು ಚಿತ್ರರಂಗ ಪ್ರವೇಶಿಸಿದರು.

ಅಂತ ಬಿಡುಗಡೆಯಾಗಿ ಜನಪ್ರಿಯತೆ ಪಡೆದ ಅನಂತರ ಆ ಚಿತ್ರದ ಚೌಕಟ್ಟನ್ನೇ ಕಮರ್ಷಿಯಲ್ ಸಿನಿಮಾಗಳು ಅಳವಡಿಸಿಕೊಂಡವು. ಹಿಂದಿ ಹಾಗೂ ಇತರ ಭಾಷೆಗಳಲ್ಲೂ ಈ ಚಿತ್ರ ತಯಾರಾಯಿತು. ಇಂದಿಗೂ ಕಮರ್ಷಿಯಲ್ ಚಿತ್ರಗಳಲ್ಲಿ ಅಂತದ ನೆರಳು ಕಂಡುಬರುತ್ತದೆ.

ರಾಜೇಂದ್ರ ಸಿಂಗ್ ಬಾಬು ಅವರು ಸಿಂಹದ ಮರಿ ಸೈನ್ಯ ಎಂಬ ಮಕ್ಕಳ ಚಿತ್ರ ನಿರ್ದೇಶಿಸಿದರು. ಅರ್ಜುನ್ ಸರ್ಜಾ ಈ ಚಿತ್ರದಲ್ಲಿ ಬಾಲನಟರಾಗಿ ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. ರೋಹಿಣಿ ಪಿಕ್ಚರ್ಸ್ ಲಾಂಛನದಲ್ಲಿ ಅವರು ನಿರ್ದೇಶಿಸಿದ ಬಂಧನ ಕನ್ನಡ ಚಿತ್ರರಂಗದಲ್ಲಿ ಮತ್ತೆ ಯಶಸ್ಸಿನ ಅಲೆ ಎಬ್ಬಿಸಿತು. 1990ರಲ್ಲಿ ರಾಜೇಂದ್ರಸಿಂಗ್ ಬಾಬು ಮುತ್ತಿನ ಹಾರ ನಿರ್ದೇಶಿಸಿದರು. ಯುದ್ಧನಿಷೇಧ, ಶಾಂತಿ ಪ್ರತಿಪಾದನೆಯ ತತ್ತ್ವವನ್ನು ವೆಂ.ಮು. ಜೋಷಿ ಅವರ ಕತೆ ಆಧರಿಸಿ ರಾಜೇಂದ್ರಸಿಂಗ್ ಬಾಬು ನಿರೂಪಿಸಿದ್ದಾರೆ. ಮಹಾತ್ಮಪಿಕ್ಚರ್ಸ್ ಲಾಂಛನದಲ್ಲಿ ಬಣ್ಣದ ಗೆಜ್ಜೆ ತಯಾರಿಸಿದರು (1990). ತ್ರಿವೇಣಿಯವರ ಕಾದಂಬರಿ ಆಧರಿಸಿ ಹೂವು ಹಣ್ಣು ನಿರ್ದೇಶಿಸಿದರು. ಭೂಮಿತಾಯಿ ಚೊಚ್ಚಲ ಮಕ್ಕಳು, ಮುಂಜಾನೆಯ ಮಂಜು ಚಿತ್ರಗಳ ಮೂಲಕ ಸದಭಿರುಚಿಯ ಚಿತ್ರಗಳ ನಿರ್ದೇಶಕರಾಗಿರುವ ರಾಜೇಂದ್ರ ಸಿಂಗ್ ಬಾಬು ಕನ್ನಡ ಚಿತ್ರರಂಗದಲ್ಲಿ ಹಾಸ್ಯದ ಟ್ರೆಂಡ್ ಸೃಷ್ಟಿಸಿದ್ದು ಕೂಡ ದಾಖಲೆ. ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪುರಸ್ಕೃತರೂ ಆಗಿರುವ ಇವರು ಕುರಿಗಳು ಸಾರ್ ಕುರಿಗಳು ಹಾಗೂ ಕೋತಿಗಳು ಸಾರ್ ಕೋತಿಗಳು, ಕತ್ತೆಗಳು ಸಾರ್ ಕತ್ತೆಗಳು ಎಂಬ ಹಾಸ್ಯ ಪ್ರಧಾನ ಚಿತ್ರಗಳನ್ನು ನಿರ್ದೇಶಿಸಿ ಕನ್ನಡ ಚಿತ್ರರಂಗದಲ್ಲಿ ಹೊಸ ಹಾದಿ ಹಿಡಿದರು.

ಮೇಯರ್ ಮುತ್ತಣ್ಣ ನಿರ್ಮಿಸುವುದರ ಮೂಲಕ (1969) ನಿರ್ಮಾಪಕರಾದ ಹಾಸ್ಯನಟ ದ್ವಾರಕೀಶ್ ಅನಂತರದ ದಿನಗಳಲ್ಲಿ ನಿರ್ದೇಶನಕ್ಕೂ ಇಳಿದರು. ಇವರು 1972ರಲ್ಲಿ ದ್ವಾರಕಾ ಫಿಲಂ ಲಾಂಛನದಲ್ಲಿ ಕುಳ್ಳ ಏಜಂಟ್ 000 ಎಂಬ ಹಾಸ್ಯ ಪ್ರಧಾನ ಚಿತ್ರ ತಯಾರಿಸಿದರು. ಮೊದಲಬಾರಿಗೆ ಹಿಂದಿ ಚಿತ್ರರಂಗದ ಹಿನ್ನೆಲೆಗಾಯಕ ಕಿಶೋರ್ ಕುಮಾರ್ ಈ ಚಿತ್ರದಲ್ಲಿ ಹಾಡಿದರು. ಕೌಬಾಯ್ ಕುಳ್ಳ, ಸಿಂಗಾಪೂರ್‌ನಲ್ಲಿ ರಾಜಾಕುಳ್ಳ ಎಂಬ ಚಿತ್ರ ತಯಾರಿಸಿದರು. ಮೊದಲಬಾರಿಗೆ ಸಿಂಗಾಪೂರ್‌ನಲ್ಲಿ ಚಿತ್ರೀಕರಣ (1973) ನಡೆಸಿದ್ದು ಈ ಚಿತ್ರದ ವಿಶೇಷ ಅವರು ಗುರುಶಿಷ್ಯರು ಎಂಬ ಹಾಸ್ಯ ಪ್ರಧಾನ ಜಾನಪದ ಚಿತ್ರವನ್ನೂ ನಿರ್ಮಿಸಿದರು (1981). 1985ರಲ್ಲಿ ನೀ ಬರೆದ ಕಾದಂಬರಿ ಚಿತ್ರ ನಿರ್ದೇಶಿಸುವ ಮೂಲಕ ನಿರ್ದೇಶಕರೂ ಆದರು. ಅನಂತರ ನೀ ತಂದ ಕಾಣಿಕೆ, ಆಫ್ರಿಕಾದಲ್ಲಿ ಶೀಲಾ ತಯಾರಿಸಿದರು. 1993ರಲ್ಲಿ ರಾಯರು ಬಂದರು ಮಾವನ ಮನೆಗೆ, ಕಿಲಾಡಿಗಳು ನಿರ್ದೇಶಿಸಿದರು (1994). ಹೊಸ ಸಾಹಸಗಳನ್ನು ಮಾಡುವುದರಲ್ಲಿ ದ್ವಾರಕೀಶ್ ಪ್ರಖ್ಯಾತರು. ಅವರ ಪುತ್ರ ಗಿರಿಗಾಗಿ ಮಜ್ನು ಚಿತ್ರವನ್ನು ನಿರ್ದೇಶಿಸಿದರು (2001). ಅಪಾರ ಯಶಸ್ಸು ಗಳಿಸಿದ ಆಪ್ತಮಿತ್ರ ಇವರ ಇತ್ತೀಚಿನ ಚಿತ್ರ (2004).

ಎಪ್ಪತ್ತರ ದಶಕದ ಆರಂಭದೊಂದಿಗೇ ಕನ್ನಡ ಚಿತ್ರ ರಂಗದಲ್ಲಿ ಹೊಸ ಬೆಳಕು ಮೂಡತೊಡಗಿತು. ಕನ್ನಡ ಚಲನಚಿತ್ರಗಳು ರಾಷ್ಟ್ರಮಟ್ಟಕ್ಕೇರುವುದಲ್ಲದೆ ಜಗಜ್ಜಾಹೀರಾಗತೊಡಗಿದುದೂ ಈ

ದಶಕದಲ್ಲಿಯೇ. ಸಮಕಾಲೀನ ಸಮಸ್ಯೆಗಳನ್ನು, ಸಮಾಜಕ್ಕೆ ಹತ್ತಿರದ ವಸ್ತುಗಳನ್ನು ಆರಿಸಿಕೊಂಡು ಆತ್ಮೀಯವಾಗಿ ಚಿತ್ರೀಕರಿಸಲು ಪ್ರಯತ್ನಿಸುವ ನೆಲದ ಸೊಗಡನ್ನುಳ್ಳ ಚಿತ್ರಗಳು ಬಂದವು. ಆಂಧ್ರಕವಿಯಾಗಿದ್ದು,



ಸಂಸ್ಕಾರ ಚಿತ್ರದಲ್ಲಿ ಪಿ.ಲಂಕೇಶ್, ಗಿರೀಶ ಕಾರ್ನಾಡ್

ರಂಗಪರಿಶ್ರಮವಿರುವ ಪಟ್ಟಾಭಿರಾಮರೆಡ್ಡಿ ಅವರು ಕನ್ನಡ ಲೇಖಕ ಯು.ಆರ್.ಅನಂತಮೂರ್ತಿಯವರ ಕಾದಂಬರಿ ಸಂಸ್ಕಾರವನ್ನು ತೆರೆಗೆ ತಂದರು (1970). ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಚಿತ್ರವೆಂದು ಸುವರ್ಣಪದಕ ಪಡೆದ ಈ ಚಿತ್ರದಲ್ಲಿ ಖ್ಯಾತ ನಾಟಕಕಾರ ಗಿರೀಶ ಕಾರ್ನಾಡ ಹಾಗೂ ಪಟ್ಟಾಭಿಯವರ ಪತ್ನಿ ಸ್ನೇಹಲತಾ ರೆಡ್ಡಿ ಅವರು ಮುಖ್ಯ ಪಾತ್ರಗಳಲ್ಲಿದ್ದರು. ಖ್ಯಾತ ಆಸ್ಟ್ರೇಲಿಯನ್ ಛಾಯಾಗ್ರಾಹಕ ಟಾಂಕೋವನ್ ಈ ಚಿತ್ರವನ್ನು ಕ್ಯಾಮರದಲ್ಲಿ ಸೆರೆಹಿಡಿದಿದ್ದರು. ಈ ಚಿತ್ರದ ಹೊಸತನವನ್ನು ಜನ ಮೆಚ್ಚಿದ್ದರು. ಇಂಥ ಚಿತ್ರಗಳನ್ನು ನೋಡುವ ಪ್ರೇಕ್ಷಕವೃಂದ ಕನ್ನಡದಲ್ಲಿ ಸಿದ್ಧವಾಯಿತು. ಅಲ್ಲದೆ ಈ ಬಗೆಯ ಚಿತ್ರಗಳನ್ನು ಮಾಡಲು ಅನುಕೂಲವಾಗುವಂತೆ ಸರ್ಕಾರದ ಸಹಾಯಧನ (ಸಬ್ಸಿಡಿ) ಯೋಜನೆಯೂ ಇದ್ದಿತು. ಧರ್ಮದ ಟೊಳ್ಳು ಆವರಣವನ್ನು ಧಿಕ್ಕರಿಸಿ ವ್ಯಕ್ತಿಯ ವಿಕಾಸವನ್ನು ಚಿತ್ರಿಸಿದ ಸಂಸ್ಕಾರದ ಬೆನ್ನಹಿಂದೆಯೇ ಮನೆತನದ ಒಣಪ್ರತಿಷ್ಠೆಯನ್ನು ಪ್ರಶ್ನಾರ್ಹವಾಗಿಸಿದ ವಂಶವೃಕ್ಷ ಬಂತು. ಎಸ್.ಎಲ್.ಭೈರಪ್ಪನವರ ಕಾದಂಬರಿಯಾಧಾರಿತ ಈ ಚಿತ್ರವನ್ನು ನಿರ್ದೇಶಿಸಿದ ಗಿರೀಶ ಕಾರ್ನಾಡ ಹಾಗೂ ಬಿ.ವಿ.ಕಾರಂತರು ನಿರ್ದೇಶನಕ್ಕೆ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದರು. ಮುಂಬಯಿ ನಿರ್ದೇಶನ ಸಂಘದವರು ನಿರ್ದೇಶನಕ್ಕಾಗಿ ನೀಡುವ ಫಾಲ್ಕೆ ಪ್ರಶಸ್ತಿಯೂ ಈ ಚಿತ್ರಕ್ಕೆ ಬಂತು. ಈ ಚಿತ್ರದ ಮುಖ್ಯ ಪಾತ್ರದಲ್ಲಿ ವೆಂಕಟರಾವ್ ತಲಗೇರಿ ಹಾಗೂ ಕಾತ್ಯಾಯಿನಿ ಪಾತ್ರದಲ್ಲಿ ಎಲ್.ವಿ. ಶಾರದಾ ಅತ್ಯಂತ ಮನೋಜ್ಞ ಅಭಿನಯ ನೀಡಿದರು. ಶ್ರೀಕೃಷ್ಣ ಆಲನಹಳ್ಳಿಯವರ ಕಾದಂಬರಿ ಆಧಾರಿತ, ಗ್ರಾಮಾಂತರ ಜೀವನದಲ್ಲಿ ಅಡಗಿರುವ ಸುಪ್ತ ಜ್ವಾಲಾಮುಖಿಯ ಪದರಗಳನ್ನು ಬಿಡಿಸಿದ ಕಾಡು ಚಿತ್ರ ಗಿರೀಶ ಕಾರ್ನಾಡರ ನಿರ್ದೇಶನದಲ್ಲಿ ತೆರೆಗೆ ಬಂತು. ಅಪಾರ ಜನಪ್ರಿಯತೆ ಗಳಿಸಿದುದಲ್ಲದೆ ಈ ಚಿತ್ರ ರಾಷ್ಟ್ರಮಟ್ಟದಲ್ಲಿ ಮೂರು ಪ್ರಶಸ್ತಿಗಳನ್ನು ಗೆದ್ದುಕೊಂಡಿತು. ಇದರ ನಾಯಕಿ ನಂದಿನಿ (ನೋಡಿ) ಪ್ರಥಮ ಬಾರಿಗೆ ಊರ್ವಶಿ ಪ್ರಶಸ್ತಿ ಪಡೆದ ಕನ್ನಡ ನಟಿಯಾದಳು. ಶ್ರೇಷ್ಠ ಬಾಲನಟನಾಗಿ ಜಿ.ಎಸ್.ನಟರಾಜ್ ಪ್ರಶಸ್ತಿ ಪಡೆದ. ಅಲ್ಲದೆ ಕಾಡು ಚಿತ್ರ ದ್ವಿತೀಯ ಶ್ರೇಷ್ಠ ರಾಷ್ಟ್ರೀಯ ಚಿತ್ರ ಎಂದು ಪರಿಗಣಿತವಾಯಿತು. ಪಿ.ವಿ.ನಂಜರಾಜೇಅರಸು ನಿರ್ದೇಶಿಸಿದ, ಮೂಢನಂಬಿಕೆಗಳನ್ನು ವಿಮರ್ಶೆಗೊಳಪಡಿಸಿದ ಸಂಕಲ್ಪ ಹಾಗೂ ಮಧ್ಯಮ ವರ್ಗದ ಸುಶಿಕ್ಷಿತ ಯುವತಿಯರ ಸಮಸ್ಯೆಗಳನ್ನು ವಿಶ್ಲೇಷಿಸುವ ಎಂ.ಎಸ್.ಪ್ರಸಾದರ ಕಂಕಣ ಈ ಹೊಸ ಪರಂಪರೆಯ ಚಿತ್ರಗಳು. ಎನ್.ಲಕ್ಷ್ಮೀನಾರಾಯಣರ ಅಬಚೂರಿನ ಪೋಸ್ಟಾಫೀಸು ಹಾಗೂ ಪುಟ್ಟಣ್ಣ ಕಣಗಾಲರ ಕಥಾಸಂಗಮ ಈ ದಿಕ್ಕಿನಲ್ಲಿ ನಡೆದ ಸಾಧನೆಗಳೇ. 1975ರಲ್ಲಿ ತೆರೆಕಂಡ ಚೋಮನದುಡಿ ಹಾಗೂ ಹಂಸಗೀತೆಗಳು ಕ್ರಾಂತಿಕಾರಕವಾದವು. ಶಿವರಾಮ ಕಾರಂತರ ಕಾದಂಬರಿಯಾಧಾರಿತ ಚೋಮನ ದುಡಿ ಜೀತಪದ್ಧತಿಯನ್ನು ಸೂಕ್ಷ್ಮವಾಗಿ ಹಿಂಜಿದ ಅತ್ಯಂತ ಮಾನವೀಯ ಮೌಲ್ಯಗಳಿರುವ ಚಿತ್ರ. ಜನಾದರಣೆಯನ್ನು ಅಪಾರವಾಗಿ ಗಳಿಸಿದ ರಾಷ್ಟ್ರದ ಸರ್ವಶ್ರೇಷ್ಠ ಚಿತ್ರವೂ ಆಯಿತು. ಚೋಮನಾಗಿ ಕಾಣಿಸಿಕೊಂಡ ಎಂ.ವಿ.ವಾಸುದೇವರಾವ್ (ನೋಡಿ) ತಮ್ಮ ಮೊದಲ ಚಿತ್ರದಲ್ಲಿಯೇ ರಾಷ್ಟ್ರದ ಅತ್ಯುತ್ತಮ ನಟನೆಂದು ಪ್ರಶಸ್ತಿ ಗಳಿಸಿ, ಕನ್ನಡಕ್ಕೆ ಮೊದಲಿಗರಾದರು. ಬೆಳ್ಳಿಯ ಪಾತ್ರದಲ್ಲಿ ಪದ್ಮಾ ಕುಮುಟಾ ಗಮನ ಸೆಳೆದರು. ಬಿ.ವಿ.ಕಾರಂತರ ಉತ್ಕೃಷ್ಟ ನಿರ್ದೇಶನದ ಈ ಚಿತ್ರ ಅಂತಾರಾಷ್ಟ್ರೀಯ ಮನ್ನಣೆಯನ್ನೂ ಗಳಿಸಿತು. ಕಾರ್ಲೋವಾರಿ ಚಿತ್ರೋತ್ಸವದಲ್ಲಿ ಚಲನಚಿತ್ರ ವಿಮರ್ಶಕರ ಸಿಡಾಲ್ಕ್ ಪ್ರಶಸ್ತಿ ಚೋಮನ ದುಡಿಗೆ ಬಂದುದಲ್ಲದೆ, ಬಿ.ವಿ.ಕಾರಂತರನ್ನು ಭಾರತದ ಇನ್ನೊಬ್ಬ ಸತ್ಯಜಿತ್ ರಾಯ್ ಎಂದು ಪ್ರಶಂಸಿಸಲಾಯಿತು. ಕನ್ನಡ ಚಿತ್ರರಂಗದಲ್ಲಿ ನಟನಾಗಿ, ನಿರ್ದೇಶಕನಾಗಿ, ನಿರ್ಮಾಪಕನಾಗಿ, ಹಲವು ದಶಕಗಳಿಂದ ದುಡಿದ ಜಿ.ವಿ.ಅಯ್ಯರ್ ಅವರ ಹಂಸಗೀತೆ, ಕಾದಂಬರಿಕಾರ ತ.ರಾ.ಸು. ಅವರ ಅದೇ ಹೆಸರಿನ ಕಾದಂಬರಿಯನ್ನಾಧರಿಸಿದೆ. ಇಡೀ ಚಿತ್ರದಲ್ಲಿ ಕೇವಲ ಹದಿನೈದು ನಿಮಿಷಗಳು ಸಂಭಾಷಣೆಯುಳ್ಳ ಈ ಸಂಗೀತ ರೂಪಕ, ಉತ್ತಮ ಛಾಯಾಗ್ರಹಣ ಅರ್ಥಪೂರ್ಣ ನಿರ್ದೇಶನದಿಂದ ಒಳ್ಳೆಯ ಚಿತ್ರವಾಗಿದೆ. ಸಂಕಲ್ಪದಲ್ಲಿ ಕಾಣಿಸಿಕೊಂಡ ಅನಂತನಾಗ್ (ನೋಡಿ) ಈ ಚಿತ್ರದಲ್ಲಿ ಭೈರವಿ ವೆಂಕಟಸುಬ್ಬಯ್ಯನಾಗಿ ಅಪ್ರತಿಮ ಅಭಿನಯ ನೀಡಿದ್ದಾರೆ. ಈ ವರ್ಣಚಿತ್ರಕ್ಕೆ ಸಂಗೀತ ನಿರ್ದೇಶನ ನೀಡಿ, ಹಿನ್ನೆಲೆ ಗಾಯನ ಕೊಟ್ಟಿರುವ ಬಾಲಮುರಳಿ ಕೃಷ್ಣ ಅವರನ್ನು ವರ್ಷದ ಅತ್ಯುತ್ತಮ ಹಾಡುಗಾರರೆಂದು ರಾಷ್ಟ್ರಮಟ್ಟದಲ್ಲಿ ಗೌರವಿಸಲಾಗಿದೆ. ಕರ್ನಾಟಕ ಸಂಗೀತದ ವಿಖ್ಯಾತ ಸಂಗೀತಗಾರರಾದ ಇವರು ಸಂಧ್ಯಾರಾಗ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದರು. 1976ರಲ್ಲಿ ಬಿಡುಗಡೆ ಕಂಡಿರುವ ಪಲ್ಲವಿ ನವ್ಯ ಸಾಹಿತಿ ಪಿ.ಲಂಕೇಶರ (ನೋಡಿ) ಸೃಷ್ಟಿ. ನಗರಜೀವನದ ಯುವಕ ಯುವತಿಯರ ಸಮಸ್ಯೆಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನ ಇಲ್ಲಿ ಎದ್ದು ಕಾಣುತ್ತದೆ. ಸಂಸ್ಕಾರದಲ್ಲಿ ಪಾತ್ರ ನಾರಾಯಣಪ್ಪನ ಪಾತ್ರದಲ್ಲಿ ಲಂಕೇಶ್ ಅಭಿನಯಿಸಿದ್ದರು. ಲಂಕೇಶ್ ಅವರೊಳಗಿದ್ದ ನಾಟಕಕಾರ, ಕವಿ ಪಲ್ಲವಿಯಲ್ಲಿ ವಿಜೃಂಭಿಸಿದ್ದರಿಂದ ಅದರಲ್ಲಿ ಹೊಸ ದೃಷ್ಟಿಕೋನವನ್ನು ನೋಡಬಹುದಾಗಿತ್ತು. ಈ ಚಿತ್ರಕ್ಕಾಗಿ ಪಿ.ಲಂಕೇಶ್ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ಪಡೆದರು (1976).

ವಂಶವೃಕ್ಷ ಚಿತ್ರದಲ್ಲಿ ಚಂದ್ರಶೇಖರ್, ಎಲ್.ವಿ.ಶಾರದಾ

ಪಿ.ಲಂಕೇಶರ ಎರಡನೆಯ ಚಿತ್ರ ಅನುರೂಪ (1977). ಖಂಡವಿದಕೋ ಮಾಂಸವಿದಕೋ (1979), ಎಲ್ಲಿಂದಲೋ ಬಂದವರು (1989) ಚಿತ್ರಗಳನ್ನು ಆನಂತರದ ವರ್ಷಗಳಲ್ಲಿ ಅವರು ನಿರ್ದೇಶಿಸಿದರು. ಅವರ ಪುತ್ರಿ ಕವಿತಾ ಲಂಕೇಶ್ (ನೋಡಿ) ಕೂಡ ದೇವೀರಿ (2000) ಚಿತ್ರದ ಮೂಲಕ ನಿರ್ದೇಶಕಿ ಆಗಿದ್ದಾರೆ. ಪ್ರೀತಿ, ಪ್ರೇಮ, ಪ್ರಣಯ ಅವರು ನಿರ್ದೇಶಿಸಿದ ಇನ್ನೊಂದು ಚಿತ್ರ.

ಲಂಕೇಶ್ ಪುತ್ರ ಪಿ.ಎಲ್.ಇಂದ್ರಜಿತ್ ಕೂಡ ಚಲನಚಿತ್ರ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದ್ದಾರೆ. ತುಂಟಾಟ (2002), ಲಂಕೇಶ್ ಪತ್ರಿಕೆ (2003) ಹಾಗೂ ಮೊನಾಲಿಸಾ (2004) ಇವರು ನಿರ್ದೇಶಿಸಿದ ಚಿತ್ರಗಳು.

ಕಾಡು ಚಿತ್ರದಲ್ಲಿ ಬಾಲ ನಟರು

1977ರಲ್ಲಿ ಘಟಶ್ರಾದ್ಧ ಚಿತ್ರ ನಿರ್ದೇಶಿಸುವುದರೊಂದಿಗೆ ಚಿತ್ರರಂಗ ಪ್ರವೇಶಿಸಿದ ಗಿರೀಶ್ ಕಾಸರವಳ್ಳಿ (ನೋಡಿ) ಹೊಸ ಅಲೆಯ ಚಿತ್ರ ನಿರ್ಮಾಣಕ್ಕೆ ಹೊಸತೊಂದು ಆಯಾಮವನ್ನೇ ನೀಡಿದರು. ಪುಣೆಯ ಫಿಲಂ ಇನ್‌ಸ್ಟಿಟ್ಯೂಟಿನಿಂದ ತರಬೇತಿ ಪಡೆದು ಬಂದ ಗಿರೀಶ್ ಕಾಸರವಳ್ಳಿ ಬಿ.ವಿ.ಕಾರಂತರ ಜೊತೆ ಸಹಾಯಕ ನಿರ್ದೇಶಕರಾಗಿ ಚೋಮನದುಡಿ, ಸಿ.ಆರ್. ಸಿಂಹರ ಜೊತೆ ಕಾಕನ ಕೋಟೆ ಚಿತ್ರದಲ್ಲಿ ಸಹಾಯಕ ನಿರ್ದೇಶಕ ರಾಗಿದ್ದು ಅನುಭವ ಗಳಿಸಿದರು. ಅನಂತರ ಯು.ಆರ್.ಅನಂತ ಮೂರ್ತಿ ಅವರ ಕಥೆಯಾಧಾರಿತ ಘಟಶ್ರಾದ್ಧ ಚಿತ್ರವನ್ನು ಸ್ವತಂತ್ರವಾಗಿ ನಿರ್ದೇಶಿಸಿದರು.

ಇಂದಿಗೂ ಅರ್ಥವಂತಿಕೆಯ ಚಿತ್ರ ನಿರ್ಮಾಣದೊಂದಿಗೆ ಗಿರೀಶ್ ಕಾಸರವಳ್ಳಿ ಸೃಜನಶೀಲರಾಗಿಯೇ ಉಳಿದಿದ್ದಾರೆ. ಘಟಶ್ರಾದ್ಧ ರಾಷ್ಟ್ರಪ್ರಶಸ್ತಿ ಸ್ವರ್ಣ ಕಮಲ ಗಳಿಸಿತು. ಆನಂತರದ ದಿನಗಳಲ್ಲಿ ಆಕ್ರಮಣ (1980), ಮೂರು ದಾರಿಗಳು (1981), ತಬರನ ಕಥೆ (1987), ಬಣ್ಣದ ವೇಷ (1988), ಮನೆ (1990), ಕ್ರೌರ್ಯ, ತಾಯಿಸಾಹೇಬ, ದ್ವೀಪ ಚಿತ್ರಗಳನ್ನು ನಿರ್ದೇಶಿಸಿ ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ತಬರನ ಕಥೆ, ಬಣ್ಣದ ವೇಷ ಚಿತ್ರಗಳೂ ರಾಷ್ಟ್ರಪ್ರಶಸ್ತಿ ಪಡೆದಿವೆ. ಆಕ್ರಮಣ, ಮೂರು ದಾರಿಗಳು ರಾಜ್ಯ ಪ್ರಶಸ್ತಿ ಗಳಿಸಿವೆ.

ಘಟಶ್ರಾದ್ಧ ಚಿತ್ರದ ಒಂದು ದೃಶ್ಯ

ತಬರನ ಕಥೆ, ಬಣ್ಣದ ವೇಷ, ತಾಯಿ ಸಾಹೇಬ ಹಾಗೂ ದ್ವೀಪ ಚಿತ್ರಗಳು ಗಿರೀಶ್ ಕಾಸರವಳ್ಳಿ ಅವರಿಗೆ ಸ್ವರ್ಣಕಮಲ ಪ್ರಶಸ್ತಿ ತಂದುಕೊಟ್ಟಿವೆ. ಹೊಸ ಅಲೆ ಚಿತ್ರಗಳ ಪರಂಪರೆಗೆ ಇಂದಿಗೂ ಬದ್ಧವಾಗಿರುವ ಗಿರೀಶ್ ಕಾಸರವಳ್ಳಿ, ಕಲಾತ್ಮಕ ಅಂಶಗಳಿಗೆ ಹೆಚ್ಚು ಒತ್ತು ನೀಡಿದವರು. ರಂ.ಶಾ. ಅವರ ಕಾದಂಬರಿಯನ್ನಾಧರಿಸಿ ಗಿರೀಶ್ ಕಾಸರವಳ್ಳಿ ನಿರ್ದೇಶಿಸಿದ ತಾಯಿ ಸಾಹೇಬ (1996) ವಿಭಿನ್ನ ಕಥಾವಸ್ತುವೊಂದನ್ನು ನಿರ್ವಹಿಸಿದ ರೀತಿಯಿಂದಾಗಿ ಗಮನ ಸೆಳೆಯುತ್ತದೆ. ನಟಿ ಜಯಮಾಲ (ನೋಡಿ) ಅವರಿಗೆ ರಾಷ್ಟ್ರೀಯ ಪ್ರಶಸ್ತಿ ತಂದುಕೊಟ್ಟ ಚಿತ್ರವಿದು. ನಾ.ಡಿಸೋಜರ ಕಾದಂಬರಿನ್ನಾಧರಿಸಿ ನಿರ್ಮಿತವಾದ ದ್ವೀಪ (2002) ಗಿರೀಶ್‌ರ ಪ್ರತಿಭೆಯ ಪ್ರಬುದ್ಧತೆಯ ಸಂಕೇತವಾಗಿ ಕಾಣಿಸಿಕೊಂಡಿದೆ. ಮಳೆ, ವಸ್ತುವಿನ ಗಾಢತೆ ಎಲ್ಲವೂ ಈ ಚಿತ್ರದಲ್ಲಿ ಮಡುಗಟ್ಟಿರುವುದು ವಿಶೇಷ.

ವಿ.ಆರ್.ಕೆ.ಪ್ರಸಾದ್, ಋಷ್ಯಶೃಂಗ (1977), ಬಿಡುಗಡೆಯಾಗಿ ಸಂಗೀತ ಹಾಗೂ ಛಾಯಾಗ್ರಹಣಕ್ಕಾಗಿ ಎರಡು ರಾಷ್ಟ್ರೀಯ ಪ್ರಶಸ್ತಿಗಳಿಸಿತು. ಸುರೇಶ್ ಹೆಬ್ಳೀಕರ್, ಸುಂದರ್‌ಶ್ರೀ, ವಸಂತಲಕ್ಷ್ಮೀ ಮೊದಲಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಅನಂತರ ಅವರು ಪ್ರೇಮ ಕಾಮ ನಿರ್ದೇಶಿಸಿದರು. ಅದೇ ವರ್ಷ ಸಿ.ಆರ್.ಸಿಂಹ ಅವರು ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರ ಕಾಕನ ಕೋಟೆಯನ್ನು ನಿರ್ದೇಶಿಸಿದರು. ಬಿ.ವಿ.ಕಾರಂತ ಮತ್ತು ಗಿರೀಶ ಕಾರ್ನಾಡ ಒಟ್ಟಾಗಿ ಎಸ್.ಎಲ್.ಭೈರಪ್ಪ ಅವರ ತಬ್ಬಲಿಯು ನೀನಾದೆ ಮಗನೆ ಚಿತ್ರ ನಿರ್ದೇಶಿಸಿದರು. ಮತ್ತೊಬ್ಬ ಗಮನ ಸೆಳೆವ ಚಿಂತನಶೀಲ ನಿರ್ದೇಶಕ ಎಂ.ಎಸ್.ಸತ್ಯು ಅನಂತಮೂರ್ತಿಯವರ ಕಾದಂಬರಿ ಆಧರಿಸಿ ಬರ ನಿರ್ದೇಶಿಸಿದರು.

1978ರಲ್ಲಿ ಹೊಸ ಅಲೆಯಲ್ಲಿ ಕಾಣಿಸಿಕೊಂಡ ಮತ್ತೊಬ್ಬ ನಿರ್ದೇಶಕ ಬರಗೂರು ರಾಮಚಂದ್ರಪ್ಪ (ನೋಡಿ). ಮೈತ್ರಿ ಆರ್ಟ್ಸ್ ಮೂಲಕ ತಮ್ಮದೇ ಆದ ಒಂದು ಊರಿನ ಕತೆ ನಿರ್ದೇಶಿಸಿದರು. ಪಂಚಾಯ್ತಿಯಲ್ಲಿ ಸ್ಥಾನ ಗಿಟ್ಟಿಸಲು ಆ ಊರಿನ ವಿವಿಧ ಜಾತಿಗಳಿಗೆ ಸೇರಿದವರು ಮಾಡುವ ಪ್ರಯತ್ನ ಗಳು, ಅಲ್ಲಿನ ಮುಖಂಡರ ಚಾಣಾಕ್ಷತನ, ಭದ್ರತೆಗಾಗಿ ಸೆಣಸುವ ವ್ಯವಸ್ಥೆಯ ಕ್ರೌರ್ಯ ಹಾಗೂ ಶೋಷಣೆಯ ವಿವಿಧ ಮುಖಗಳತ್ತ ಹೆಣೆದ ಕಥೆ'ಯಿದು. 1978ರ ಸಾಲಿನ ಶ್ರೇಷ್ಠಕಥೆ' ಹಾಗೂ ಸಂಭಾಷಣೆ ರಚನೆಗಾಗಿ ಬರಗೂರು ರಾಮಚಂದ್ರಪ್ಪ ಪ್ರಶಸ್ತಿ ಪಡೆದರು. ಅನಂತರ ಇವರು ತಯಾರಿಸಿದ ಬೆಂಕಿ ಚಿತ್ರ 1983-84ರ ಸಾಲಿನಲ್ಲಿ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗಳಿಸಿತು. ಸೂರ್ಯ

ಇವರು ನಿರ್ದೇಶಿಸಿದ ಇನ್ನೊಂದು ಚಿತ್ರ. ಮೂರೂ ಚಿತ್ರಗಳು ಪ್ರಶಸ್ತಿ ಪಡೆದಿದ್ದು ಬರಗೂರರು ಚಿಂತನೆ ಹಾಗೂ ವೈಚಾರಿಕ ಚಿತ್ರಗಳನ್ನು ನೀಡುವ ನಿರ್ದೇಶಕರೆನಿಸಿದ್ದಾರೆ. ಇತ್ತೀಚಿನ ಚಿತ್ರ ಕರಡೀಪುರ (1997). ವಾಣಿಜ್ಯಾತ್ಮಕ ಚಿತ್ರಗಳ ಸಾಲಿನಲ್ಲಿ ಬರಗೂರು ಅವರು ನಿರ್ದೇಶಿಸಿದ ಹಗಲು ವೇಷ (2000) ಗಮನಾರ್ಹ ಚಿತ್ರ. ಗುಡ್ಡಗಾಡು ಜನಾಂಗವೊಂದರ ಕಥೆ ಕಮರ್ಷಿಯಲ್ ತೆರೆಗೆ ಮೊದಲಬಾರಿಗೆ ಪ್ರವೇಶಿಸಿದ್ದು ಹೀಗೆ. ಕ್ಷಾಮ ಬರಗೂರರ ಮತ್ತೊಂದು ಚಿತ್ರ. ಎಂ.ಎಸ್.ಸತ್ಯು ಅವರ ವಿಡಂಬನಾತ್ಮಕ ಚಿತ್ರ ಚಿತೆಗೂ ಚಿಂತೆ ಪಿ.ಎ.ಶ್ರೀನಿವಾಸ್ ಸ್ಪಂದನ ಚಿತ್ರವನ್ನು ನಿರ್ದೇಶಿಸಿದರು. ಗಿರೀಶ ಕಾರ್ನಾಡ ಐತಿಹಾಸಿಕ ಹಿನ್ನೆಲೆಯ ಕಥೆಯುಳ್ಳ ಒಂದಾನೊಂದು ಕಾಲದಲ್ಲಿ ನಿರ್ದೇಶಿಸಿದರು. ಅನಂತರ ಕುವೆಂಪು ಅವರ ಕಾದಂಬರಿಯಾಧಾರಿತ ಕಾನೂರು ಹೆಗ್ಗಡತಿಯನ್ನು (2000) ನಿರ್ದೇಶಿಸಿದರು. ಂ.ಎಸ್.ಸತ್ಯು ತಮ್ಮದೇ ಆದ ಶೈಲಿಯ ಮೂಲಕ ಹೆಸರಾಗಿದ್ದಾರೆ. ಅವರು ನಿರ್ದೇಶಿಸಿದ ಬರ, ಕನ್ನೇಶ್ವರರಾಮ, ಚಿತೆಗೂ ಚಿಂತೆ, ಹಾಗೂ ಗಳಿಗೆ ಚಿತ್ರಗಳು ವಿಭಿನ್ನವಾಗಿವೆ. ಟಿ.ಎಸ್.ರಂಗಾ ಗೀಜಗನ ಗೂಡು ಚಿತ್ರದಿಂದ (1978) ಭರವಸೆ ಹುಟ್ಟಿಸಿದರು. ಅನಂತರ

ಸಾವಿತ್ರಿ (1980) ನಿರ್ದೇಶಿಸಿದರು. ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ಪ್ರೇಮಾ ಕಾರಂತ್ (ನೋಡಿ), ಎಂ.ಕೆ.ಇಂದಿರಾ ಅವರ ಫಣಿಯಮ್ಮ ಕಾದಂಬರಿಯನ್ನು ಚಿತ್ರೀಕರಿಸಿದರು (1983). ಹೊಸ ಅಲೆಯ ಬೆಳವಣಿಗೆಯಲ್ಲಿ ಚಲನಚಿತ್ರ ನಿರ್ದೇಶನಕ್ಕೆ ಬಂದ ಮೊದಲ ಮಹಿಳೆ ಪ್ರೇಮಾ ಕಾರಂತ್. 1981ರಲ್ಲಿ ಗ್ರಹಣ ಚಿತ್ರದ ಮೂಲಕ ಹೊಸ ಅಲೆಯಿಂದ ಪ್ರಭಾವಗೊಂಡು ಬಂದ ಟಿ.ಎಸ್.ನಾಗಾಭರಣ (ನೋಡಿ) ಭರವಸೆಯ ನಿರ್ದೇಶಕರೂ ಹೌದು. ಅನಂತರ ಹೊಸ ಅಲೆ ಚಿತ್ರಗಳಿಂದಲೇ ಚಿತ್ರ ನಿರ್ದೇಶನ ಮಾಡದಿದ್ದರೂ ನಾಗಾಭರಣರು ಮೈಸೂರು ಮಲ್ಲಿಗೆ, ಬ್ಯಾಂಕರ್ ಮಾರ್ಗಯ್ಯ, ಚಿನ್ನಾರಿ ಮುತ್ತ ಚಿತ್ರಗಳ ಮೂಲಕ ಪರ್ಯಾಯ ಚಿತ್ರ ಪರಂಪರೆಗೆ ಕಾರಣರಾದರು. 1979ರಲ್ಲಿ ತಮ್ಮದೇ ಕಥೆ ಆಧರಿಸಿ ಕಾಡು ಕುದುರೆ ಚಿತ್ರ ನಿರ್ಮಿಸಿ ನಿರ್ದೇಶಕರಾಗಿ ಪ್ರವೇಶಿಸಿದ ನಾಟಕಕಾರ ಚಂದ್ರಶೇಖರ ಕಂಬಾರ (ನೋಡಿ) ಅವರದೇ ಆದ ಶೈಲಿಯ ಮೂಲಕ ಗಮನ ಸೆಳೆದರು. ಈ ಚಿತ್ರದ ಗಾಯನಕ್ಕಾಗಿ ಶಿವಮೊಗ್ಗ ಸುಬ್ಬಣ್ಣ ಅವರು ಶ್ರೇಷ್ಠ ಗಾಯಕನಾಗಿ ರಾಷ್ಟ್ರ ಪ್ರಶಸ್ತಿ ಪಡೆದರು. ಚಂದ್ರಶೇಖರ ಕಂಬಾರರು ಸಂಗೀತಾ ಕಿರು ಚಿತ್ರವನ್ನೂ ನಿರ್ದೇಶಿಸಿದರು (1981).

ಕುಬಿ ಮತ್ತು ಇಯಾಲ ಮೂಲಕ ಸದಾನಂದ ಸುವರ್ಣ, ಅವಸ್ಥೆ ಮೂಲಕ ಕೃಷ್ಣ ಮಾಸಡಿ, ಕೆಂಡದ ಮಳೆ ಮೂಲಕ ಬಿ.ಎಸ್. ಗೌರೀಶಂಕರ್ ಇವರುಗಳೆಲ್ಲಾ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದಾರೆ. ಕವಿತಾ ಲಂಕೇಶ್ (ದೇವೀರಿ), ಪಿ.ಶೇಷಾದ್ರಿ (ಮುನ್ನುಡಿ, ಅತಿಥಿ), ನಾಗಾಭರಣ (ನೀಲಾ, ಸಿಂಗಾರವ್ವ) ಮೊದಲಾದವರೆಲ್ಲಾ ತಮ್ಮ ಚಿತ್ರಗಳನ್ನು ಹೊಸ ಅಲೆ ಎಂದು ಹೇಳಿಕೊಳ್ಳುವುದಿಲ್ಲ. ಈ ಬಗೆಯ ಚಿತ್ರಗಳನ್ನು ಈಗ ಪರ್ಯಾಯ ಚಿತ್ರಗಳು ಎಂದು ಕರೆಯಲಾಗುತ್ತದೆ. ಆದರೂ ಹೊಸ ಅಲೆ ಎಂಬುದು ಕರ್ನಾಟಕದಲ್ಲಿ ಒಂದು ನಿರಂತರ ಪ್ರಕ್ರಿಯೆಯಾಗಿ ಇನ್ನೂ ಬೆಳೆಯಲಿಲ್ಲ. ವಾಣಿಜ್ಯ ಚಿತ್ರಗಳಿಗಿಂತ ತೀರಾ ಭಿನ್ನವಾದ ವಸ್ತು, ಭಿನ್ನ ನಿರೂಪಣೆ ಇರುವ ಇಂತಹ ಚಿತ್ರಗಳಿಗೆ ಪ್ರತ್ಯೇಕ ಪ್ರೇಕ್ಷಕವರ್ಗ ನಿರ್ಮಿಸುವುದು ಸಾಧ್ಯವಾಗದೆ ಹೋಗಿದೆ.

ಫಣಿಯಮ್ಮ ಚಿತ್ರದ ಒಂದು ದೃಶ್ಯ

ನಿರ್ಮಾಪಕ ನಿರ್ದೇಶಕ ಕ್ಷೀರಸಾಗರ ಅವರು ಕನಕಾಂಬರ (ಯಶವಂತ ಚಿತ್ತಾಲರ ಆಬೋಲಿನ ಕಥೆ ಆಧಾರಿತ) ವರ್ಣಚಿತ್ರವನ್ನು ಎಂಟೂವರೆ ದಿನಗಳಲ್ಲಿ ಸಂಪೂರ್ಣ ಹೊರಾಂಗಣ ಚಿತ್ರೀಕರಣದಲ್ಲಿಯೇ ಮುಗಿಸಿ ದಾಖಲೆ ಸ್ಥಾಪಿಸಿದ್ದಾರೆ. ದಿನೇಶ್ ಬಾಬು ತಡೆರಹಿತವಾಗಿ ನಲವತ್ತು ಗಂಟೆಗಳ ಕಾಲ ಚಿತ್ರೀಕರಿಸಿ ದಾಖಲೆ ಮಾಡಿದ್ದಾರೆ.

1982ರಲ್ಲಿ ಸಾಹಸ ಸಿಂಹ ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ರೀತಿಯ ದಾಖಲೆ ಸೃಷ್ಟಿಸಿದ ಸಿನಿಮಾ. ಅದುವರೆಗೆ ಏಕತಾನತೆಯ ಅಭಿನಯದಲ್ಲಿದ್ದ ವಿಷ್ಣುವರ್ಧನ್ ತಾರಾ ಇಮೇಜಿಗೆ ಹೊಸ ತಿರುವು ನೀಡಿದ ಚಿತ್ರವೂ ಇದಾಯಿತು. ಜೋಸೈಮನ್ ನಿರ್ದೇಶನದ ಈ ಚಿತ್ರ ಹೊಸ ಬಗೆಯ ಸಾಹಸ ಸಂಯೋಜನೆಯಿಂದಾಗಿ ಯುವಜನರನ್ನು ಆಕರ್ಷಿಸಿ ಮುಂದೆ ಅದೇ ರೀತಿಯ ಚಿತ್ರಗಳ ಪರಂಪರೆಗೆ ಕಾರಣವಾಯಿತು. ಈ ಚಿತ್ರದ ಹೆಸರಿನ ಮಾದರಿಯಲ್ಲೇ ಹಲವಾರು ಚಿತ್ರಗಳು ಬರುವಂತಾಯಿತು.



ಒಂದಾನೊಂದು ಕಾಲದಲ್ಲಿ ಚಿತ್ರದ ಒಂದು ದೃಶ್ಯದಲ್ಲಿ ಶಂಕರನಾಗ್

ಮಂದಾಕಿನಿ ಚಿತ್ರ ಪ್ರೈವೇಟ್ ಲಿ ನವರು ಮೂಕ ಚಿತ್ರಣದ ಪುಷ್ಪಕ ವಿಮಾನ ತಯಾರಿಸಿದರು (1987). ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶಿಸಿದ ಈ ಚಿತ್ರದಲ್ಲಿ ಕಮಲಹಾಸನ್, ಅಮಲಾ, ಲೋಕನಾಥ್, ಟೀನೂ ಆನಂದ್, ಪ್ರತಾಪ್ ಪೋತನ್, ರಮ್ಯ, ಪಿ.ಎಲ್.ನಾರಾಯಣ್ ಮೊದಲಾದವರು ಅಭಿನಯಿಸಿದ್ದರು. ನಟರು ಬಹುತೇಕ ತಮಿಳು, ಹಿಂದಿ ಭಾಷೆಯವರು. ನಿರ್ದೇಶಕರು ತಮಿಳು ಚಿತ್ರರಂಗದಿಂದ ಬಂದವರು. ನಿರ್ಮಾಪಕರು ಮಾತ್ರ ಕನ್ನಡಿಗರು. 1933ರಲ್ಲಿ ಮುಗಿದು ಹೋಗಿದ್ದ ಮೂಕಿ ಯುಗವನ್ನು ಈ ಚಿತ್ರ ನೆನಪಿಸಿತು.

ಕನ್ನಡ ಚಲನಚಿತ್ರಗಳಿಗೆ ಗೌರವ ತಂದ ಈ ಚಿತ್ರಗಳು ಕನ್ನಡ ವಾಣಿಜ್ಯ ದೃಷ್ಟಿಯ ಚಿತ್ರಗಳ ಮೇಲೂ ಪ್ರಭಾವ ಬೀರಿವೆ. ಈ ಚಿತ್ರಗಳ ವಿಶೇಷತೆ ಎಂದರೆ ತಾರಾಮೌಲ್ಯ ಇಲ್ಲದಿರುವುವಿಕೆ, ಪಾತ್ರಕ್ಕೆ ತಕ್ಕ ಕಲಾವಿದರನ್ನು ಆರಿಸುವ ಪ್ರವೃತ್ತಿ, ಹಾಡಿಲ್ಲದ ಚಿತ್ರಗಳ ತಯಾರಿಕೆ, ಅದ್ದೂರಿಯಿಲ್ಲದ ಸೆಟ್‌ಗಳು, ಸಾಮಾನ್ಯ ಉಡುಗೆತೊಡುಗೆ ಹಾಗೂ ಮೇಕಪ್, ಅತಿ ಕಡಿಮೆ ಬಂಡವಾಳ, ಸ್ಟುಡಿಯೋ ಪ್ರವೇಶಿಸದೆ ಕಥೆಗೆ ಅನುಗುಣವಾದ ಸ್ಥಳಗಳಲ್ಲಿಯೇ ಚಿತ್ರೀಕರಣ ಮಾಡುವ ಪ್ರಯತ್ನಗಳು ನಡೆದಿವೆ. ಈ ಚಿತ್ರಗಳು ಕನ್ನಡ ಚಿತ್ರರಂಗದ ಮೇಲೆ ಮಾಡಿರುವ ಪ್ರಭಾವ ಅಪಾರವಾದುದು. ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಕನ್ನಡಕ್ಕೆ ತಂದು ಕೊಟ್ಟ ಚಿತ್ರಗಳೆಲ್ಲ ಈ ವಲಯಕ್ಕೆ ಸೇರಿದವು ಎನ್ನುವುದು ಪ್ರಮುಖ ಅಂಶ.

ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆ ಸುದ್ದಿಚಿತ್ರಗಳನ್ನೂ ಸಾಕ್ಷ್ಯಚಿತ್ರಗಳನ್ನೂ ನಿರ್ಮಿಸುತ್ತಿದೆ. ಕರ್ನಾಟಕದ ಹಿರಿಯ ಕಲಾವಿದರು, ಸಾಹಿತಿಗಳು ಮತ್ತು ಪ್ರಖ್ಯಾತ ವ್ಯಕ್ತಿಗಳನ್ನು ಕುರಿತ ಸಾಕ್ಷ್ಯಚಿತ್ರಗಳನ್ನು ತಯಾರಿಸುವ ದೊಡ್ಡ ಯೋಜನೆ ಇದೆ. ಈಗಾಗಲೆ ಡಿ.ವಿ.ಗುಂಡಪ್ಪ, ಕುವೆಂಪು, ದ.ರಾ.ಬೇಂದ್ರೆ, ಗುಬ್ಬಿ ವೀರಣ್ಣ, ಡಾ.ಮೋದಿ ಮೊದಲಾದವರ ಬಗ್ಗೆ ಸಾಕ್ಷ್ಯಚಿತ್ರಗಳು ತಯಾರಾಗಿವೆ. ಈ ಸಾಕ್ಷ್ಯಚಿತ್ರಗಳ ನಿರ್ಮಾಪಕರೆಂದರೆ ಚದುರಂಗ, ಗಿರೀಶ ಕಾರ್ನಾಡ, ಎಂ.ವಿ.ಕೃಷ್ಣಸ್ವಾಮಿ, ಎಂ.ಎಸ್.ಸತ್ಯು ಮೊದಲಾದವರು. ಬೆಂಗಳೂರಿನ ಖಾಸಗಿ ಸ್ಟುಡಿಯೋಗಳಲ್ಲಿ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಶಾಲೆಯಲ್ಲಿ ಸಾಕ್ಷ್ಯಚಿತ್ರ ಹಾಗೂ ವಾರ್ತಾಚಿತ್ರಗಳ ತಯಾರಿಕೆಗೆ ಅನುಕೂಲ ಸಾಧನ ಸೌಲಭ್ಯಗಳಿವೆ. ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಚಾರ ಸಚಿವಾಲಯಕ್ಕೆ ಸೇರಿದ ಫಿಲಂ ಡಿವಿಷನ್ ಕೂಡ ಸುದ್ದಿ ಚಿತ್ರಗಳನ್ನು, ಸಾಕ್ಷ್ಯಚಿತ್ರಗಳನ್ನು ನಿರ್ಮಿಸುತ್ತಿದೆ. ಕನ್ನಡ ವ್ಯಾಖ್ಯಾನಸಹಿತ

ಅವು ಕರ್ನಾಟಕದಲ್ಲಿ ಬಿಡುಗಡೆಯಾಗುತ್ತಿವೆ. ಪ್ರತಿಯೊಂದು ಚಿತ್ರ ಮಂದಿರವೂ ಪ್ರತಿಯೊಂದು ಪ್ರದರ್ಶನದಲ್ಲಿಯೂ ಇಂಥ ಚಿತ್ರಗಳನ್ನು ಪ್ರದರ್ಶಿಸಬೇಕೆಂಬ ಕಡ್ಡಾಯ ಕಾನೂನಿದೆ. ಫಿಲಂ ಡಿವಿಷನ್ ತನ್ನ ಸ್ವಂತ ಉತ್ಪಾದನ ಹಾಗೂ ವಿತರಣ ಕೇಂದ್ರಗಳನ್ನು ಮುಂಬಯಿ ಹಾಗೂ ರಾಜ್ಯದ ಇತರ ಪ್ರಾದೇಶಿಕ ವಿಭಾಗಗಳಲ್ಲಿ ಇಟ್ಟುಕೊಂಡಿದೆ.

ಭಾರತೀಯ ಚಲನಚಿತ್ರಗಳಲ್ಲಿ ಎದ್ದುಕಾಣುವ ಜಗತ್ತಿನ ಇತರ ಯಾವ ಚಿತ್ರ ಕ್ಷೇತ್ರದಲ್ಲೂ ಇರದ ಅಪೂರ್ವ ವೈಶಿಷ್ಟ್ಯವೆಂದರೆ ಚಿತ್ರಗೀತೆಗಳು. ಇವು ಚಲನಚಿತ್ರಗಳ ಅನಿವಾರ್ಯ ಅಂಶವೇ ಆಗಿದ್ದರೂ ಅವುಗಳಿಂದ ಹೊರತಾಗಿ ಪ್ರತ್ಯೇಕವಾಗಿ ಮನರಂಜನೆ ಕೊಡುವಂಥವು. ಕನ್ನಡ ಚಿತ್ರಗೀತೆಗಳು ಅಪಾರ ಜನಪ್ರಿಯತೆ ಗಳಿಸಿವೆ. ಕಣಗಾಲ್ ಪ್ರಭಾಕರಶಾಸ್ತ್ರಿ, ಕು.ರಾ.ಸೀತಾರಾಮ ಶಾಸ್ತ್ರಿ, ಸೋರಟ್ ಅಶ್ವತ್, ಹುಣಸೂರು ಕೃಷ್ಣಮೂರ್ತಿ, ಚಿ.ಉದಯಶಂಕರ್, ವಿಜಯನಾರಸಿಂಹ ಹಾಗೂ ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ, ಹಂಸಲೇಖ, ಮೊದಲಾದವರು ಪ್ರಮುಖ ಚಿತ್ರಸಾಹಿತಿಗಳು. ಅ.ನ.ಕೃ., ತ.ರಾ.ಸು., ಗಿರೀಶ ಕಾರ್ನಾಡ, ಯು.ಆರ್.ಅನಂತಮೂರ್ತಿ, ಶಿವರಾಮ ಕಾರಂತ, ಚದುರಂಗ, ನವರತ್ನರಾಂ, ಬೀಚಿ, ಬರಗೂರು ರಾಮಚಂದ್ರಪ್ಪ ಮೊದಲಾದ ಖ್ಯಾತಸಾಹಿತಿಗಳೂ ಚಿತ್ರಸಾಹಿತ್ಯ ರಚಿಸಿದ್ದಾರೆ. ಕನ್ನಡ ಕವಿಗಳಾದ ಕುವೆಂಪು, ದ.ರಾ.ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಲಕ್ಷ್ಮೀನಾರಾಯಣ ಭಟ್ಟ, ನಿಸಾರ್ ಅಹಮದ್, ಬಿ.ಆರ್.ಲಕ್ಷ್ಮಣರಾವ್ ಮೊದಲಾದವರ ಕವನಗಳನ್ನು ಚಿತ್ರಗೀತೆಗಳನ್ನಾಗಿ ಸಿರುವುದೂ ಉಂಟು. ಕನ್ನಡದ ಹೆಸರಾಂತ ಹಿನ್ನೆಲೆ ಗಾಯಕರೆಂದರೆ ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಸ್.ಜಾನಕಿ, ಪಿ.ಲೀಲ, ವಾಣಿ ಜಯರಾಂ, ಬಿ.ಕೆ.ಸುಮಿತ್ರ, ಕಸ್ತೂರಿ ಶಂಕರ್, ಬೆಂಗಳೂರು ಲತಾ, ಮಂಜುಳ ಗುರುರಾಜ್ ಮೊದಲಾದವರು. ನಟ ರಾಜಕುಮಾರ್ ಗಾಯಕನಾಗಿಯೂ ಅಪಾರ ಜನಪ್ರಿಯತೆ ಗಳಿಸಿದ್ದಾರೆ. ಮಹಿಷಾಸುರ ಮರ್ದಿನಿಯಲ್ಲಿಯೇ ಸ್ವತಃ ಹಾಡಿರುವ ರಾಜಕುಮಾರ್ ಸಂಪತ್ತಿಗೆ ಸವಾಲ್ ಚಿತ್ರದಲ್ಲಿನ ಹಾಡಿನ ಮೂಲಕ ಗಾಯಕರಾಗಿ ಪ್ರಸಿದ್ಧಿಗೆ ಬಂದರು. ನಿರ್ದೇಶಕ ರವಿಯವರೂ ಹಾಡಿದ್ದಾರೆ. ಪ್ರಸಿದ್ಧ ಸಂಗೀತ ವಿದ್ವಾಂಸರಾದ ಬಾಲಮುರಳಿ ಕೃಷ್ಣ, ಸುಬ್ಬುಲಕ್ಷ್ಮೀ, ಸೀರ್ಕಾಳಿ ಗೋವಿಂದರಾಜನ್, ಭೀಮಸೇನ ಜೋಶಿ ಮೊದಲಾದವರು ಕನ್ನಡ ಚಿತ್ರಗಳಿಗೆ ಕಂಠವಿತ್ತಿದ್ದಾರೆ. ಅಲ್ಲದೆ ಹಿಂದಿಯ ಖ್ಯಾತ ಗಾಯಕಿಯಾದ ಲತಾ ಮಂಗೇಶ್ಕರ್, ಗಾಯಕರಾದ ಮನ್ನಾಡೆ, ಕಿಶೋರ್ ಕುಮಾರ್ ಹಾಗೂ ಮಹಮದ್ ರಫಿ ಕೂಡ ಕನ್ನಡ ಚಿತ್ರಗಳಲ್ಲಿ ಹಾಡಿರುವುದುಂಟು.

ತೆರೆಯ ಮರೆಯಲ್ಲಿದ್ದು ಚಿತ್ರಗಳ ಮಹತ್ತಿಗೆ ಕಾರಣವಾಗುವ ತಾಂತ್ರಿಕ ವರ್ಗದವರಲ್ಲಿ ಛಾಯಾಗ್ರಾಹಕರು ಪ್ರಮುಖರಾದವರು. ರಾಜಾರಾಂ, ಶ್ರೀಕಾಂತ್, ಆರ್.ಎನ್. ಕೃಷ್ಣಪ್ರಸಾದ್, ಚಿಟ್ಟಿಬಾಬು ಮೊದಲಾದ ಹೆಸರಾಂತ ಛಾಯಾಗ್ರಾಹಕರಲ್ಲದೆ, ಟಾಂಕೋವನ್ (ಸಂಸ್ಕಾರ), ಎಂ.ಎಸ್.ಷರೀಫ್ (ವಂಶವೃಕ್ಷ), ಗೋವಿಂದ ನಿಹಲಾನಿ (ಕಾಡು), ನಿಮಾಯ್ ಘೋಷ್ (ಹಂಸಗೀತೆ), ಹಾಗೂ ಎಸ್.ರಾಮಚಂದ್ರ (ಚೋಮನ ದುಡಿ, ಪಲ್ಲವಿ, ಕಂಕಣ), ಬಿ.ಎಸ್.ಹರಿದಾಸ್ (ಕಥಾಸಂಗಮ), ಮೊದಲಾದ ನವ್ಯ ಛಾಯಾಗ್ರಾಹಕರೂ ಕನ್ನಡದ ಚಿತ್ರಗಳ ಸೊಗಸಿಗೆ ಕಾರಣವಾಗಿದ್ದಾರೆ.

ಕನ್ನಡ ಚಲನಚಿತ್ರರಂಗ 70ರ ದಶಕದ ಅನಂತರ ಅಗಾಧ ಮುನ್ನಡೆಯನ್ನು ಸಾಧಿಸಿದೆ. ಪ್ರಾರಂಭದ ದಿನಗಳಲ್ಲಿ ಇತರ ಭಾಷಾಚಿತ್ರಗಳೊಡನೆ ಸಮಸ್ಕಂಧವಾಗಿ ನಿಲ್ಲಲೂ ಕಷ್ಟಪಡುತ್ತಿದ್ದರೆ 60ರ ದಶಕದಲ್ಲಿ ಕರ್ನಾಟಕದಲ್ಲಿ ವಿಶೇಷವಾಗಿ ಜನಪ್ರಿಯತೆಯನ್ನೂ ಸ್ವಂತಿಕೆಯನ್ನೂ ಸಾಧಿಸಿಕೊಂಡು ಇತ್ತೀಚೆಗೆ ಕರ್ನಾಟಕದಲ್ಲಷ್ಟೇ ಅಲ್ಲದೆ ಹೊರದೇಶಗಳಲ್ಲೂ ಮನ್ನಣೆ ಗಳಿಸಲಾರಂಭಿಸಿದೆ. ಅದರಲ್ಲೂ ಇತ್ತೀಚಿನ ಕೆಲವು ಚಿತ್ರಗಳು ಬರ್ಲಿನ್, ವೆನಿಸ್, ತಾಷ್ಕೆಂಟ್, ಕಾರ್ಲೋವಾರಿ ಮೊದಲಾದೆಡೆಗಳಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವಗಳಿಗೂ ಪ್ರವೇಶಿಸಿದವು. 1975ರ ದೆಹಲಿಯ 5ನೆಯ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಕಾಡುಚಿತ್ರಕ್ಕೆ ಅಂತಾರಾಷ್ಟ್ರೀಯ ವಿಮರ್ಶಕ ಪ್ರಶಸ್ತಿ ಲಭಿಸಿತು. ಅಲ್ಲದೆ ಸಂಸ್ಕಾರ, ಕಾಡು ಮತ್ತು ಹಂಸಗೀತೆಗಳು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಮಾರಾಟವಾದವು. ಕನ್ನಡ ಚಿತ್ರರಂಗದ ರಾಜಕುಮಾರ್ ಅವರಿಗೆ ಪದ್ಮಭೂಷಣ, ಬಿ.ಸರೋಜಾದೇವಿ ಮತ್ತು ಆರ್.ನಾಗೇಂದ್ರರಾವ್ ಇವರೀರ್ವರಿಗೆ ಪದ್ಮಶ್ರೀ ಪ್ರಶಸ್ತಿ ಬಂದು ರಾಷ್ಟ್ರ ಮಟ್ಟದ ಗೌರವ ಸಂದಿದೆ.

ಕನ್ನಡದಲ್ಲಿ ಬೆಳಗಿದ ಪ್ರತಿಭೆ ಹಲವು ಇತರ ಭಾಷಾಚಿತ್ರಗಳಲ್ಲಿಯೂ ಹರಿದ ಪ್ರಸಂಗಗಳು ಅನೇಕ. ಬಿ.ಸರೋಜಾದೇವಿ, ಜಯಂತಿ, ಭಾರತಿ, ಚಂದ್ರಕಲಾ ಮೊದಲಾದ ನಟಿಯರೂ ಕಲ್ಯಾಣಕುಮಾರ್, ಉದಯ ಕುಮಾರ್, ವಿಷ್ಣುವರ್ಧನ್, ಅನಂತನಾಗ್, ಅರ್ಜುನ್‌ಸರ್ಜಾ, ಸುನೀಲ್ ಶೆಟ್ಟಿ, ಲೀನಾ ಚಂದಾವರ್ಕರ್, ಲೋಕೇಶ್, ಪ್ರಕಾಶರೈ, ರಜನೀಕಾಂತ ಮೊದಲಾದ ನಟರೂ ಇತರ ಭಾಷಾ ಚಿತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಹಾಗೆಯೇ ತಮಿಳಿನ ನಟ ಶಿವಾಜಿ ಗಣೇಶನ್ (ಮಕ್ಕಳ ರಾಜ್ಯ, ಸ್ಕೂಲ್ ಮಾಸ್ಟರ್), ಹಿಂದಿಯ ಪೃಥ್ವಿರಾಜ ಕಪೂರ್ (ಸಾಕ್ಷಾತ್ಕಾರ), ಅಮರೀಶಪುರಿ (ಕಾಡು), ಮಲೆಯಾಳಂನ ಲಕ್ಷ್ಮಿ (ನಾ ನಿನ್ನ ಮರೆಯಲಾರೆ), ಮೊದಲಾದವರೂ ಮೂಲತಃ ಕನ್ನಡಿಗರಾದ ಶಿಲ್ಪಾಶೆಟ್ಟಿ, ವಿಶ್ವಸುಂದರಿ ಐಶ್ವರ್ಯ ರೈ ಹಲವು ಹಿಂದಿ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕಮಲ ಹಾಸನ್, ಕೂಡ ಕನ್ನಡದಲ್ಲಿ ನಟಿಸಿದ್ದಾರೆ.

ಕನ್ನೇಶ್ವರರಾಮ ಚಿತ್ರದಲ್ಲಿ ಅನಂತನಾಗ್, ಶಬಾನಾ ಅಜ್ಮಿ

ಹಲವು ಕನ್ನಡ ಚಲನಚಿತ್ರಗಳು ಕೇಂದ್ರ ಸರ್ಕಾರ ನೀಡುವ ಅಖಿಲ ಭಾರತ ಮಟ್ಟದ ಪ್ರಶಸ್ತಿಗಳನ್ನೂ ಪ್ರಾದೇಶಿಕ ಪ್ರಶಸ್ತಿಗಳನ್ನೂ ಗಳಿಸಿವೆ. ಕರ್ನಾಟಕ ರಾಜ್ಯ ಸರ್ಕಾರದಿಂದಲೂ ಹಲವು ಚಿತ್ರಗಳು ಉತ್ತಮ ಚಿತ್ರ ಪ್ರಶಸ್ತಿ ಪಡೆದಿವೆ.

**ಇತ್ತೀಚಿನ ಬೆಳವಣಿಗೆ :** 21ನೆಯ ಶತಮಾನದ ಆರಂಭದಲ್ಲಿ ಚಿತ್ರರಂಗವನ್ನು ತಂತ್ರಜ್ಞಾನ ಆಳುತ್ತಿದೆ. ಅತಿ ವೇಗವಾಗಿ ಬೆಳೆಯುತ್ತಿರುವ ಶಿಕ್ಷಣ ಪ್ರಪಂಚ ಚಿತ್ರರಂಗವನ್ನೂ ಆವರಿಸಿರುವುದು. ಸಿನಿಮಾ, ಸಂಗೀತ, ಸಿನಿಮಾದ ಒಟ್ಟಾರೆ ಓಟ, ಶಬ್ದ ಎಲ್ಲದರಿಂದ ಅನುಭವಕ್ಕೆ ಬರುತ್ತಿದೆ. ಪ್ರಪಂಚ ಸಿನಿಮಾವೇ ಈ ಪವಾಡ ಸದೃಶ ವೈಭವದ ಮೋಡಿಗೆ ಒಳಗಾಗಿರುವುದರಿಂದ ತೆರೆಯ ಮೇಲಿನ ನೆಳಲು ಬೆಳಕಿನಾಟದಲ್ಲಿ ಮತ್ತಷ್ಟು ಕ್ರಾಂತಿಯುತ್ತ ಹೊಸ ಶತಮಾನ ತನ್ನನ್ನು ತಾನು ಒಡ್ಡಿಕೊಳ್ಳುತ್ತಿದೆ. ಪ್ರಪಂಚ ಸಿನಿಮಾ ಹಾದಿಯಲ್ಲಿ ಭಾರತೀಯ ಚಿತ್ರರಂಗದ ನಡೆಯಲ್ಲಿ, ಕನ್ನಡ ಚಿತ್ರರಂಗದ ಆಗು ಹೋಗುಗಳಲ್ಲಿ 1990ರಿಂದ ಸತತವಾಗಿ ಬದಲಾವಣೆಯ ಗಾಳಿ ಬೀಸಿದೆ. ಹತ್ತೇ ವರ್ಷಗಳಲ್ಲಿ ಜಾಗತಿಕ ವಲಯದಲ್ಲಿ ನಡೆದ ಕ್ಷಿಪ್ರ ಪ್ರಗತಿ, ಕನ್ನಡ ಚಿತ್ರರಂಗದ ಮೇಲೂ ಪರಿಣಾಮ ಬೀರಿದೆ. ಆರಂಭ ಹಂತದಿಂದ ಹೆಜ್ಜೆ ಹೆಜ್ಜೆಗೂ ಸವಾಲುಗಳನ್ನು ಎದುರಿಸುತ್ತಲೇ ಬಂದ ಕನ್ನಡ ಚಿತ್ರರಂಗ, 21ನೆಯ ಶತಮಾನದಿಂದ ಆರಂಭದಲ್ಲೇ ಕನ್ನಡ ಚಾನಲ್‌ಗಳು ಒಡ್ಡುತ್ತಿರುವ ಸ್ಪರ್ಧಾತ್ಮಕ ಸವಾಲನ್ನು ಎದುರಿಸಿ ನಿಲ್ಲಬೇಕಾದ, ಸವಾಲನ್ನು ಅರಗಿಸಿಕೊಳ್ಳಬೇಕಾದ ಸ್ಥಿತಿಯನ್ನು ಎದುರಿಸುತ್ತಿದೆ. ಪಕ್ಕದ ರಾಜ್ಯಗಳಾದ ತಮಿಳುನಾಡು, ಕೇರಳ ಹಾಗೂ

ಆಂಧ್ರಪ್ರದೇಶಗಳಲ್ಲಿರುವಂತಹ ವಿಶಾಲ ಮಾರುಕಟ್ಟೆಯನ್ನು ಹೊಂದಿರದ ಕನ್ನಡ ಚಿತ್ರರಂಗಕ್ಕೆ ಆರಂಭದ ದಿನಗಳಿಂದಲೂ ಇದೇ ಪ್ರಶ್ನೆ. ಕನ್ನಡ ಪ್ರದರ್ಶನ ವ್ಯವಸ್ಥೆ ಸೂಕ್ತವಾಗಿ ಬೆಳೆದೇ ಇಲ್ಲ. ಆದರೆ ತಮಿಳು, ತೆಲುಗು, ಚಿತ್ರಗಳು ಆಯಾ ರಾಜ್ಯಗಳಲ್ಲಿ ಬಿಡುಗಡೆಯಾಗುವ ದಿನದಂದೇ ಕರ್ನಾಟಕದಲ್ಲಿ ಬಿಡುಗಡೆಯಾಗುತ್ತಿವೆ. ಕನ್ನಡ ಚಿತ್ರಗಳಿಗೆ ಇದೊಂದು ಪೈಪೋಟಿ ತಪ್ಪಿದ್ದೇ ಇಲ್ಲ. ಕನ್ನಡ ಚಿತ್ರಗಳು ಈ ರೀತಿಯ ಪೈಪೋಟಿಯನ್ನೆದುರಿಸಿದರೆ, ಚಿತ್ರಮಂದಿರಗಳ ಸಮಸ್ಯೆಯೂ ಅದರೊಂದಿಗೆ ಕಂಡುಬರುತ್ತದೆ. ಅರವತ್ತರ ದಶಕದಿಂದಲೂ ಬೆಳೆದು ಬರುತ್ತಿರುವ ಈ ಸಮಸ್ಯೆಗಳಿಗೆ ಇದುವರೆಗೆ ಪರಿಹಾರ ದೊರಕಿಲ್ಲ.

ಕಾನೂರು ಹೆಗ್ಗಡಿತಿ ಚಿತ್ರದಲ್ಲಿ ಗಿರೀಶ ಕಾರ್ನಾಡ ಮತ್ತು ತಾರಾ

ಇದೆಲ್ಲದರ ನಡುವೆಯೂ ಕನ್ನಡ ಚಿತ್ರರಂಗದಲ್ಲಿ ಶ್ರೀಘ್ರಗತಿಯ ಬೆಳವಣಿಗೆಗಳಾಗುತ್ತಿಲ್ಲ. 1985ರಲ್ಲಿ ಕನ್ನಡ ಚಿತ್ರರಂಗಕ್ಕೆ ನುಗ್ಗಿದ ಹೊಸ ರಕ್ತದ ಮಹಾಪೂರ ಚಿತ್ರರಂಗದಲ್ಲಿ ನವಚೇತನವನ್ನು ತಂದಿತು. 2002ರ ವೇಳೆಗೆ ಅದು ಹಳತಾಗಿ ಮತ್ತೊಂದು ಪೀಳಿಗೆ ಹೊಸ ಬಗೆಯ ಚಿತ್ರಗಳ ಮೂಲಕ ಬದಲಾವಣೆಯ ಗಾಳಿಯನ್ನು ತರುತ್ತಿದೆ. ಆರಂಭದ ಹಂತದಲ್ಲಿ ಸುಬ್ಬಯ್ಯನಾಯ್ಡು, ಕೆಂಪರಾಜ್, ಇಂದುಶೇಖರ್, ಹೊನ್ನಪ್ಪ ಭಾಗವತರ್, ನಾಯಕನಟರುಗಳಾಗಿದ್ದ ಕಾಲ. 1954ರ ಅನಂತರ ರಾಜ್‌ಕುಮಾರ್, ಉದಯಕುಮಾರ್, ಕಲ್ಯಾಣ್ ಕುಮಾರ್ ಅವರುಗಳ ಕಾಲ. ಅನಂತರದ ಕೆಲ ದಿನಗಳಲ್ಲಿ ರಾಜೇಶ್, ಗಂಗಾಧರ್, ರಮೇಶ್ ಕಾಣಿಸಿಕೊಂಡರು. ಕಾಲಕ್ರಮೇಣ ಆ ಸ್ಥಾನವನ್ನು ವಿಷ್ಣುವರ್ಧನ್, ಶ್ರೀನಾಥ್, ಲೋಕೇಶ್, ಅನಂತನಾಗ್, ಅಂಬರೀಶ್, ಶಂಕರ್‌ನಾಗ್, ಪ್ರಭಾಕರ್ ವಹಿಸಿಕೊಂಡರು. ರಾಮಕೃಷ್ಣ, ಜೈಜಗದೀಶ್, ಮಾನು, ಅಶೋಕ್ ಮೊದಲಾದವರೂ ಕೆಲಕಾಲ ನಾಯಕರಾಗಿದ್ದರು. ಈ ಎಲ್ಲವನ್ನೂ ಹಿಂದಕ್ಕೆ ಹಾಕಿ ಹೊಸ ಪೀಳಿಗೆಯ ನಟರಾಗಿ ಈ ಅವಧಿಯಲ್ಲಿ ನುಗ್ಗಿದ ರವಿಚಂದ್ರನ್, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ರಮೇಶ್, ಶ್ರೀಧರ್, ಕುಮಾರ್‌ಬಂಗಾರಪ್ಪ, ವಿನೋದ್‌ರಾಜ್, ಅಭಿಜಿತ್, ಸಾಯಿಕುಮಾರ್, ಚರಣ್‌ರಾಜ್ ಇವರೆಲ್ಲಾ ಹಲವು ವರ್ಷಗಳ ಕಾಲ ಚಿತ್ರರಂಗದಲ್ಲಿ ತಮ್ಮ ಪ್ರತಿಭೆಯನ್ನು ಮೆರೆದರು.

ಆದರೆ ಇದ್ದಕ್ಕಿದ್ದಂತೆ ಚಿತ್ರರಂಗದಲ್ಲಿ ತಾರಾವರ್ಚಸ್ಸು ಮುಗಿಯಿತು. ಹೊಸ ಮುಖಗಳ ಅವ್ಯಾಹತ ಪ್ರವೇಶ ಕನ್ನಡ ಚಿತ್ರರಂಗದಲ್ಲಾದದ್ದು ಒಂದು ಹೊಸ ಬೆಳವಣಿಗೆಯೇ ಆಗಿದೆ. 1981ರಲ್ಲಿಯೇ ಪ್ರೇಮಲೋಕದಲ್ಲಿ ರವಿಚಂದ್ರನ್ ಅವರು ಸೃಷ್ಟಿಸಿದ ಪ್ರೇಮಕಥೆಗಳ ಟ್ರೆಂಡ್ ಮತ್ತೆ 2001ರಲ್ಲಿ ಪುನರಾವರ್ತನೆಯಾಗುತ್ತಿದೆ. ನಾಗತಿಹಳ್ಳಿ ಚಂದ್ರಶೇಖರ್ ಅವರು ಎಲ್ಲ ಹೊಸ ಮುಖಗಳನ್ನಿಟ್ಟುಕೊಂಡು ನಿರ್ದೇಶಿಸಿದ ನನ್ನ ಪ್ರೀತಿಯ ಹುಡುಗಿ ಈ ರೀತಿಯ ದಾರಿಗೆ ಹೊಸ ನಿರ್ದೇಶಕರನ್ನು ತಳ್ಳಿತು. ಈ ಮಾರ್ಗ ಸೂಚಿಯನ್ನು ಹಿಡಿದುಕೊಂಡು ಪ್ರೇಮಕಥೆಗಳ ಪೂರವೇ ಚಿತ್ರರಂಗದಲ್ಲಿ ಹರಿದು ಬಂತು. ಹೊಸ ಮುಖಗಳೂ ಕೂಡ ಹಾಗೆಯೇ ತೇಲಿಬಂದುವು. ನಿನಗಾಗಿ, ಅಪ್ಪು (2002) ಚಿತ್ರಗಳು ಕನ್ನಡದ ಹೊಸ ಟ್ರೆಂಡ್ ಆದವು. ನಿನಗಾಗಿ ಮೂಲಕ ವಿಜಯ್ ರಾಘವೇಂದ್ರ, ಅಪ್ಪು ಮೂಲಕ ಪುನೀತ್ ರಾಜ್‌ಕುಮಾರ್ (ನೋಡಿ) ನವನಟರಾಗಿ ಬೆಳ್ಳಿತೆರೆಗೆ ಪ್ರವೇಶಿಸಿದರು. ರಾಧಿಕಾ, ರಕ್ಷಿತಾ ನವನಟಿಯರಾಗಿ ಹೊರಬಂದರು. ಸ್ಪರ್ಶ ಚಿತ್ರದ ಮೂಲಕ ಚಿತ್ರರಂಗಕ್ಕೆ ಮರು ಪ್ರವೇಶ ಪಡೆದುಕೊಂಡ ಸುದೀಪ್ ಹುಚ್ಚ, ವಾಲಿ, ಚಂದು ಹಾಗೂ ಧಮ್ ಚಿತ್ರಗಳ ಮೂಲಕ ಹೊಸ ಆ್ಯಕ್ಷನ್ ಹೀರೋ ಇಮೇಜು ಪಡೆದರು. ಮೆಜೆಸ್ಟಿಕ್ ಚಿತ್ರದ ನಾಯಕನಾಗಿದ್ದ ದರ್ಶನ್ ಮತ್ತೊಬ್ಬ ಆ್ಯಕ್ಷನ್ ಹೀರೋ ಆಗಿ ಧ್ರುವ (2002) ಚಿತ್ರದಲ್ಲಿ ತಮ್ಮ ಪ್ರತಿಭೆ ಸಾಬೀತು ಮಾಡಿದರು. ಭೂತಯ್ಯನ ಮಕ್ಕಳು ಚಿತ್ರದ ಮೂಲಕ ಸೌರವ್, 'ಚಿತ್ರ' ಚಿತ್ರದ ಮೂಲಕ ನಾಗೇಂದ್ರ ಪ್ರಸಾದ್, ರೇಖಾ ಹಾಗೂ ಚಿಟ್ಟೆಯ ಮೂಲಕ ಅನಿರುದ್ಧ, ಛಾಯಾಸಿಂಗ್, ದಿಲ್ ಮೂಲಕ ವಿನೋದ್ ಪ್ರಭಾಕರ್, ನಿನಗೋಸ್ಕರ ಮೂಲಕ ನವೀನ್ ಮಯೂರ್, ನವ ಚಿತ್ರದ ಮೂಲಕ ತಾರಕೇಶ್ ಪಟೇಲ್, ನೀಲಾ ಮೂಲಕ ಹೊರಬಂದ ಶಿವಧ್ವಜ್, ಸಿ.ಪಿ.ಯೋಗೀಶ್ವರ್, ಮೋಹನ್, ಕೋಮಲ್, ಸುನಿಲ್, ಚೈತ್ರಾ ಮೊದಲಾದ ಹೊಸ ಮುಖಗಳೆಲ್ಲಾ ಚಿತ್ರರಂಗದಲ್ಲಿ ಮಿನುಗುತ್ತಿದ್ದಾರೆ. ಅಲ್ಲದೆ ನಿರ್ದೇಶಕರಾಗಿರುವ ಎಸ್.ನಾರಾಯಣ್, ಮಹೇಂದರ್, ಶಿವಮಣಿ, ಓಂ ಪ್ರಕಾಶ್ ರಾವ್ ನಟರಾಗಿಯೂ ಕಾಣಿಸಿಕೊಳ್ಳಲಾರಂಭಿಸಿದ್ದಾರೆ. ನಿರ್ಮಾಪಕರಾಗಿರುವ ರಾಕ್‌ಲೈನ್ ವೆಂಕಟೇಶ್, (ಡಕೋಟಾ ಎಕ್ಸ್‌ಪ್ರೆಸ್), ಸಾ.ರಾ.ಗೋವಿಂದು (ದಡ್ರು ಸಾರ್ ದಡ್ರು) ಕೂಡ ನಾಯಕ ನಟರಾದ ಬೆಳವಣಿಗೆ 2002ರಲ್ಲಿ ನಡೆದಿದೆ.

ಹೊಸಬರ ನಡುವೆ ಹಳಬರೂ ನವೀನ ಪ್ರಯೋಗಗಳಿಗೆ ತಮ್ಮನ್ನು ಒಪ್ಪಿಕೊಳ್ಳುತ್ತಿರುವುದು ಗಮನಾರ್ಹ. ಈ ಹಂತದಲ್ಲಿ ನಿರ್ದೇಶಕರಾಗಿ, ನಿರ್ಮಾಪಕರಾಗಿ, ನಟರಾಗಿ ಮೂಡಿಬಂದ ಉಪೇಂದ್ರ ಹಲವಾರು ಪ್ರಯೋಗಗಳನ್ನು ಮಾಡಿದರು. ಎ, ಉಪೇಂದ್ರ ಹಾಗೂ ರಕ್ತ ಕಣ್ಣೀರು ಚಿತ್ರಗಳು ಭಾರೀ ಯಶಸ್ಸುಗಳಿಸಿದ್ದೇ ಅಲ್ಲದೆ ಚರ್ಚೆಗೂ ಆಹ್ವಾನ ನೀಡಿದವು. ಎಚ್.ಟು.ಓ.($H_2O$), ಸೂಪರ್ ಸ್ಟಾರ್, ನಾಗರಹಾವು ಹಾಗೂ ನಾನು ನಾನೇ, ಕುಟುಂಬ (2003), ಓಂಕಾರ, ಗೋಕರ್ಣ, ಗೌರಮ್ಮ, ನ್ಯೂಸ್ ಚಿತ್ರಗಳು ಉಪೇಂದ್ರ ನಾಯಕರಾಗಿರುವ ಇತರ ಚಿತ್ರಗಳು. ಉಪೇಂದ್ರರ ಚಿತ್ರಗಳ ಮೂಲಕ ಬೆಳಕಿಗೆ ಬಂದ ಗುರುಕಿರಣ್ ಈಗ ಜನಪ್ರಿಯ ಸಂಗೀತ ನಿರ್ದೇಶಕರಾಗಿದ್ದಾರೆ.

ವಿಷ್ಣುವರ್ಧನ ಅಭಿನಯದ ಯಜಮಾನ ಹೊಸ ಪೀಳಿಗೆಯ ಕಲಾವಿದರ ಚಿತ್ರಗಳ ನಡುವೆಯೂ ಇದುವರೆಗಿನ ಎಲ್ಲ ದಾಖಲೆಗಳನ್ನೂ ಮೀರಿ ಗಳಿಕೆಯಲ್ಲಿ ಮುನ್ನುಗ್ಗಿತು. ಅಲ್ಲದೆ ಹೊಸರೀತಿಯ ಕೌಟಂಬಿಕ ಚಿತ್ರಗಳ ಟ್ರೆಂಡನ್ನು ಸೃಷ್ಟಿಸಿತು.

ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದಲ್ಲಿ ತಯಾರಾದ ಆನಂದ್ (1986) ಮೂಲಕ ಜನಪ್ರಿಯ ನಟ ರಾಜಕುಮಾರ್ ಅವರ ಪುತ್ರ

## ರಾಜ್ಯ ಪ್ರಶಸ್ತಿ ಪಡೆದ ಚಿತ್ರಗಳು

| ವರ್ಷ | ಪ್ರಶಸ್ತಿ ಪಡೆದ ಚಿತ್ರಗಳ ಸಂಖ್ಯೆ | ಚಿತ್ರದ ಹೆಸರು | | | | |
|---|---|---|---|---|---|---|
| | | ಪ್ರಥಮ | ದ್ವಿತೀಯ | ತೃತೀಯ | ಚತುರ್ಥ | ತೀರ್ಪುಗಾರರ ವಿಶೇಷ ಪ್ರಶಸ್ತಿ |
| 1966-67 | 2 | — | ನಕ್ಕರೆ ಅದೇ ಸ್ವರ್ಗ | ಸಂಧ್ಯಾರಾಗ | | |
| 1967-68 | 3 | — | ಬೆಳ್ಳಿ ಮೋಡ | 1. ಸರ್ವಮಂಗಳಾ<br>2. ಬಂಗಾರದ ಹೂವು | | |
| 1968-69 | 3 | ಹಣ್ಣೆಲೆ ಚಿಗುರಿದಾಗ | ನಮ್ಮ ಮಕ್ಕಳು | ಮಣ್ಣಿನ ಮಗ | | |
| 1969-70 | 4 | ಗೆಜ್ಜೆ ಪೂಜೆ | 1. ಉಯ್ಯಾಲೆ<br>2. ಮುಕ್ತಿ | ಎರಡು ಮುಖ | | |
| 1970-71 | 3 | ಶರಪಂಜರ | ಸಂಸ್ಕಾರ | ಕುಲಗೌರವ | | |
| 1971-72 | 4 | ವಂಶವೃಕ್ಷ | ಬಂಗಾರದ ಮನುಷ್ಯ<br>2. ಯಾವ ಜನ್ಮದ ಮೈತ್ರಿ | ಸಿಪಾಯಿರಾಮು | | |
| 1972-73 | 4 | ಸಂಕಲ್ಪ | ನಾಗರಹಾವು | ಬಿಸತ್ತಿ ಬಾಬು ( ತುಳು) | ಹೃದಯಸಂಗಮ | |
| 1973-74 | 5 | ಬೂತಯ್ಯನ ಮಗ ಅಯ್ಯು | 1. ಕಾಡು<br>2. ಮಾಡಿ ಮಡಿದವರು | ಅಬಚೂರಿನ ಪೋಸ್ಟಾಫೀಸು | ಕೋಟಿ ಚೆನ್ನಯ್ಯ ( ತುಳು) | |
| 1974-75 | 4 | ಉಪಾಸನೆ | ಕಂಕಣ | ಭಕ್ತ ಕುಂಬಾರ | ಜಾಗೃತಿ | |
| 1975-76 | 4 | ಚೋಮನ ದುಡಿ | ಹಂಸಗೀತೆ | ಪ್ರೇಮದ ಕಾಣಿಕೆ | ಕಥಾಸಂಗಮ | |
| 1976-77 | 4 | ಪಲ್ಲವಿ | ಋಷ್ಯಶೃಂಗ | ಕಾಕನಕೋಟೆ | ಋತುಗಾನ | |
| 1977-78 | 3 | ಘಟಶ್ರಾದ್ಧ | ಸ್ಪಂದನ | ಅನುರೂಪ | | |
| 1978-79 | 4 | ಗ್ರಹಣ | ಸಾವಿತ್ರಿ | ಪರಸಂಗದ ಗೆಂಡೆ ತಿಮ್ಮ | | ಚಿತೆಗೂ ಚಿಂತೆ |
| 1979-80 | 4 | ಅರಿವು | ಮಿಂಚಿನ ಓಟ | ಚಂದನದ ಗೊಂಬೆ | | ದಂಗೆಯೆದ್ದ ಮಕ್ಕಳು |
| 1980-81 | 4 | ರಂಗನಾಯಕಿ | ಮೂರು ದಾರಿಗಳು | ಸಂಗೀತ | | ಕಿತಾಪತಿ |
| 1981-82 | 4 | ಬರ | ಮುನಿಯನ ಮಾದರಿ | ಬಾಡದ ಹೂವು | | ಭಾಗ್ಯವಂತೆ (ತುಳು) |
| 1982-83 | 4 | ಹಾಲುಜೇನು | ಫಣಿಯಮ್ಮ | ಅನ್ವೇಷಣೆ | | ಶೃಂಗಾರಮಾಸ |
| 1983-84 | 2 | -- | ಬೆಂಕಿ | ನೋಡಿಸ್ವಾಮಿ ನಾವು<br>ಇರೋದು ಹೀಗೆ | | |
| 1984-85 | 4 | ಆಕ್ಸಿಡೆಂಟ್ | ಬೆಟ್ಟದ ಹೂವು | ಮರಳಿಗೂಡಿಗೆ | | ಬೆರಳ್ಗೆ ಕೊರಳ್ |
| 1985-86 | 3 | ಹೊಸನೀರು | ಧ್ರುವತಾರೆ | ಅಭಿಮಾನ | | |
| 1986-87 | 3 | ತಬರನ ಕಥೆ | ಸೂರ್ಯ | ಮಧ್ವಾಚಾರ್ಯ | | |
| 1987-88 | 3 | ಆಸ್ಫೋಟ | ಅವಸ್ಥೆ | ಕಾಡಿನ ಬೆಂಕಿ | | |
| 1988-89 | 3 | ಯಾರು ಹೊಣೆ | ಬೆಳ್ಳಿ ಬೆಳಕು | ಸಂಕ್ರಾಂತಿ | | |
| 1989-90 | 3 | ಕುಬಿ ಮತ್ತು ಇಯಾಲ | ಸಂತ ಶಿಶನಾಳ ಷರೀಫ | ಪ್ರಥಮ ಉಷಾ ಕಿರಣ | | |
| 1990-91 | 3 | ಮುತ್ತಿನ ಹಾರ | ಕ್ರಮ | ಭುಜಂಗಯ್ಯನ<br>ದಶಾವತಾರಗಳು | | |
| 1991-92 | 3 | ವೀರಪ್ಪನ್ | ಮೈಸೂರು ಮಲ್ಲಿಗೆ | ಪತಿತ ಪಾವನಿ | | |
| 1992-93 | 4 | ಜೀವನ ಚೈತ್ರ | ಆತಂಕ | ಹರಕೆಯ ಕುರಿ | | ಬಂಗಾರ್ ಪಟ್ಲೆರ್ ( ತುಳು) |
| 1993-94 | 4 | ನಿಷ್ಕರ್ಷ | ಆಕಸ್ಮಿಕ | ಶ್ | | ಹೂವು ಹಣ್ಣು |
| 1994-95 | 4 | ಗಂಗವ್ವ ಗಂಗಾಮಾಯಿ | ಅರಗಿಣಿ | ಯಾರಿಗೂ ಹೇಳ್ಬೇಡಿ | | ಕೊಟ್ರೇಶಿ ಕನಸು |
| 1995-96 | 3 | ಪಂಚಾಕ್ಷರಿ ಗವಾಯಿ | ಕ್ರೌರ್ಯ | ಬೆಳದಿಂಗಳ ಬಾಲೆ | | |
| 1996-97 | 7 | ಅಮೆರಿಕಾ ಅಮೆರಿಕಾ | ನಾಗಮಂಡಲ | ನಾಗರಿಕ | | ವ್ಯೂಹ (ಅತ್ಯುತ್ತಮ ಮಕ್ಕಳ ಚಿತ್ರ)<br>ಕರಡೀಪುರ<br>ಜನುಮದ ಜೋಡಿ, ಬೊಗ್ಸಾಣಿ<br>(ಕೊಂಕಣಿ) |
| 1997-98 | 6 | ತಾಯಿ ಸಾಹೇಬ | ಲಾಲಿ | ನೋಡುಬಾ ನಮ್ಮೂರು | | 1. ಭೂಮಿ ಗೀತ<br>2. ಮಾರಿ ಬಲೆ (ತುಳು)<br>3. ಬಾಳ್ ಪೊಲಂದತ್ (ಕೊಡವ) |
| 1998-99 | 3 | ಚೈತ್ರದ ಚಿಗುರು | ಹೂಮಳೆ | ದೋಣಿಸಾಗಲಿ | | |
| 1999-2000 | 3 | ದೇವೀರಿ | ಕಾನೂರು ಹೆಗ್ಗಡತಿ | ಚಂದ್ರಮುಖಿ ಪ್ರಾಣಸಖಿ | | |
| 2000-01 | 5 | ಮುಸ್ಸಂಜೆ | ಶಾಪ | ಕುರಿಗಳು ಸಾರ್ ಕುರಿಗಳು | | 1. ಮುನ್ನುಡಿ<br>2. ತುಡರ್ (ತುಳು) |
| 2001-02 | 5 | ದ್ವೀಪ | ಏಕಾಂಗಿ | ನೀಲಾ | | 1. ಗಂಧದ ಗೊಂಬೆ (ವಿ.ಸಾ.ಪ.ಬೀ.)<br>2. ಪುಟ್ಟಿ (ಮಕ್ಕಳ ಚಿತ್ರ) |
| 2002-03 | 5 | ಅರ್ಥ | ಕ್ಷಾಮ | ಲಾಲಿಹಾಡು | | 1. ಸೈನಿಕ<br>2. ಕಲರವ (ಅತ್ಯತ್ತಮ ಮಕ್ಕಳ ಚಿತ್ರ) |
| 2003-04 | 3 | ಚಿಗುರಿದ ಕನಸು | ಶಾಂತಿ | ಚಂದ್ರಚಕೋರಿ | | ಪ್ರವಾಹ |

## ಅಖಿಲ ಭಾರತ ಮಟ್ಟದಲ್ಲಿ ರಾಷ್ಟ್ರಪ್ರಶಸ್ತಿ ಪಡೆದ ಚಿತ್ರಗಳು

| ವರ್ಷ | ಚಿತ್ರದ ಹೆಸರು | ಪ್ರಶಸ್ತಿ | ವರ್ಷ | ಚಿತ್ರದ ಹೆಸರು | ಪ್ರಶಸ್ತಿ |
|---|---|---|---|---|---|
| 1955 | ಬೇಡರ ಕಣ್ಣಪ್ಪ | ಅರ್ಹತಾಪತ್ರ | 1975 | ಕಂಕಣ | ಪ್ರಾದೇಶಿಕ ಚಿತ್ರ ಹಾಗೂ ರಜತ |
| 1956 | ಮಹಾಕವಿ ಕಾಳಿದಾಸ | ಅರ್ಹತಾಪತ್ರ | | | ಕಮಲ ಪ್ರಶಸ್ತಿ |
| 1957 | ಭಕ್ತವಿಜಯ | ಅರ್ಹತಾಪತ್ರ | 1976 | 1. ಚೋಮನ ದುಡಿ | ಸ್ವರ್ಣ ಕಮಲ ಅತ್ಯುತ್ತಮ ಕಥಾ |
| 1958 | ಪ್ರೇಮದ ಪುತ್ರಿ | ಅರ್ಹತಾಪತ್ರ | | | ಚಿತ್ರಕ್ಕಾಗಿ, ರಜತ ಕಮಲ ಪ್ರಶಸ್ತಿ |
| 1959 | ಸ್ಕೂಲ್ ಮಾಸ್ಟರ್ | ಅರ್ಹತಾಪತ್ರ | | | ಅತ್ಯುತ್ತಮ ನಟರಿಗೆ - |
| | | ರಾಷ್ಟ್ರಪತಿಗಳ ರಜತ ಪದಕ | | | ಎಂ.ವಿ.ವಾಸುದೇವರಾವ್ |
| 1960 | ಜಗಜ್ಯೋತಿ ಬಸವೇಶ್ವರ | ಅರ್ಹತಾಪತ್ರ | | | ರಜತ ಕಮಲ ಪ್ರಶಸ್ತಿ ಅತ್ಯುತ್ತಮ |
| 1961 | ಭಕ್ತಕನಕದಾಸ | ಅರ್ಹತಾಪತ್ರ | | | ಕರ್ಥೆಗಾಗಿ - ಕೆ.ಶಿವರಾಮ ಕಾರಂತ |
| 1962 | ಕಿತ್ತೂರು ಚೆನ್ನಮ್ಮ | ಅರ್ಹತಾಪತ್ರ | | 2. ಹಂಸಗೀತೆ | ರಜತ ಕಮಲ ಪ್ರಶಸ್ತಿ, ಅತ್ಯುತ್ತಮ |
| 1963 | ನಂದಾದೀಪ | ಅರ್ಹತಾಪತ್ರ | | | ಪ್ರಾದೇಶಿಕ ಪ್ರಶಸ್ತಿ ರಜತ ಕಮಲ, |
| 1964 | 1. ಸಂತ ತುಕಾರಾಂ | ರಾಷ್ಟ್ರಪತಿಗಳ ರಜತ ಪದಕ | | | ಅತ್ಯುತ್ತಮ ಹಿನ್ನೆಲೆ ಗಾಯನಕ್ಕಾಗಿ |
| | 2. ಮಂಗಳ ಮುಹೂರ್ತ | ಅರ್ಹತಾಪತ್ರ | | | ಎಂ. ಬಾಲಮುರಳಿಕೃಷ್ಣ ಅವರಿಗೆ |
| 1965 | 1. ಚಂದವಳ್ಳಿಯ ತೋಟ | ರಾಷ್ಟ್ರಪತಿಗಳ ರಜತ ಪದಕ | 1977 | 1. ಪಲ್ಲವಿ | ಅಖಿಲ ಭಾರತ ಪ್ರಶಸ್ತಿ, ರಜತ |
| | 2. ನವ ಜೀವನ | ಅರ್ಹತಾಪತ್ರ | | | ಕಮಲ - ಅತ್ಯುತ್ತಮ ನಿರ್ದೇಶನಕ್ಕಾಗಿ |
| | 3. ಮನೆ ಅಳಿಯ | ಅರ್ಹತಾಪತ್ರ | | | ರಜತ ಕಮಲ ಪ್ರಶಸ್ತಿ ಅತ್ಯುತ್ತಮ |
| 1966 | 1. ಸತ್ಯ ಹರಿಶ್ಚಂದ್ರ | ರಾಷ್ಟ್ರಪತಿಗಳ ರಜತ ಪದಕ | | | ಪ್ರಾದೇಶಿಕ ಚಿತ್ರಕ್ಕಾಗಿ |
| | 2. ಮಿಸ್ ಲೀಲಾವತಿ | ಅರ್ಹತಾಪತ್ರ | | 1. ಋಷ್ಯಶೃಂಗ | ತಾಂತ್ರಿಕ ಪ್ರಶಸ್ತಿ, ರಜತ ಕಮಲ |
| | 3. ಮದುವೆ ಮಾಡಿ ನೋಡು | ಅರ್ಹತಾಪತ್ರ | | | ಪ್ರಶಸ್ತಿ - ಅತ್ಯುತ್ತಮ |
| 1967 | ಸಂಧ್ಯಾರಾಗ | ರಾಷ್ಟ್ರಪತಿಗಳ ರಜತ ಪದಕ | | | ಛಾಯಾಗ್ರಹಣಕ್ಕಾಗಿ (ವರ್ಣ) |
| 1968 | ಬಂಗಾರದ ಹೂವು | ರಾಷ್ಟ್ರಪತಿಗಳ ರಜತ ಪದಕ | | | ಎಸ್.ರಾಮಚಂದ್ರ ಅವರಿಗೆ ; ರಜತ |
| 1969 | ಮಣ್ಣಿನ ಮಗ | ತಾಂತ್ರಿಕ ಪ್ರಶಸ್ತಿ ಹಾಗೂ ನಗದು | | | ಕಮಲ ಪ್ರಶಸ್ತಿ - ಅತ್ಯುತ್ತಮ ಸಂಗೀತ |
| | | ಬಹುಮಾನ | | | ನಿರ್ದೇಶನಕ್ಕಾಗಿ -ಬಿ.ವಿ.ಕಾರಂತ ಅವರಿಗೆ |
| 1970 | ಗೆಜ್ಜೆ ಪೂಜೆ | ಅಖಿಲ ಭಾರತ ಪ್ರಶಸ್ತಿ ಉತ್ತಮ | 1978 | 1. ಘಟಶ್ರಾದ್ಧ | ಅತ್ಯುತ್ತಮ ಕಥಾ ಚಿತ್ರಕ್ಕಾಗಿ ಅಖಿಲ |
| | | ಚಿತ್ರ / ನಾಟಕ ಕರ್ತೃವಿಗೆ | | | ಭಾರತ ಪ್ರಶಸ್ತಿ,ಸ್ವರ್ಣ ಕಮಲ ಪ್ರಶಸ್ತಿ |
| | | ಎಸ್.ಆರ್.ಪುಟ್ಟಣ್ಣ ಕಣಗಾಲ್ | | | ರಜತ ಕಮಲ - ಅತ್ಯುತ್ತಮ |
| | | ಪ್ರಾದೇಶಿಕ ಪ್ರಶಸ್ತಿ ಹಾಗೂ | | | ಬಾಲನಟ - ಅಜಿತ್‌ಕುಮಾರ್ |
| | | ನಗದು ಬಹುಮಾನ | | | ಸಂಗೀತ ನಿರ್ದೇಶನಕ್ಕಾಗಿ ರಜತ ಕಮಲ |
| 1971 | 1. ಸಂಸ್ಕಾರ | ರಾಷ್ಟ್ರಪತಿಗಳ ಸ್ವರ್ಣ ಪದಕ | | | ಪ್ರಶಸ್ತಿ ಬಿ.ವಿ.ಕಾರಂತ್ ಅವರಿಗೆ |
| | | ಅತ್ಯುತ್ತಮ ಕಥಾ ಚಿತ್ರಕ್ಕಾಗಿ | | 2. ತಬ್ಬಲಿಯು ನೀನಾದೆ | ಪ್ರಾದೇಶಿಕ ಪ್ರಶಸ್ತಿ ಹಾಗೂ ರಜತ |
| | 2. ನಗುವ ಹೂವು | ಅತ್ಯುತ್ತಮ ಪ್ರಾದೇಶಿಕ ಚಿತ್ರ | | ಮಗನೆ | ಕಮಲ ಪ್ರಶಸ್ತಿ |
| | | ಮತ್ತು ನಗದು ಬಹುಮಾನ | 1979 | 1. ಗ್ರಹಣ | 1. ರಾಷ್ಟ್ರೀಯ ಏಕತೆಗಾಗಿ, ರಜತ |
| 1972 | ವಂಶವೃಕ್ಷ | 1. ಅಖಿಲ ಭಾರತ ಪ್ರಶಸ್ತಿ | | | ಕಮಲ ಹಾಗೂ ನಗದು ಬಹುಮಾನ |
| | | ಅತ್ಯುತ್ತಮ ನಿರ್ದೇಶನಕ್ಕಾಗಿ | | | (ಅತ್ಯುತ್ತಮ ಕಥಾ ಚಿತ್ರ) |
| | | 2. ಪ್ರಾದೇಶಿಕ ಪ್ರಶಸ್ತಿ ಮತ್ತು | | | 2. ಅತ್ಯುತ್ತಮ ಚಿತ್ರನಾಟಕಕ್ಕಾಗಿ: |
| | | ನಗದು ಬಹುಮಾನ | | | ಟಿ.ಎಸ್.ರಂಗಾ ಮತ್ತು ನಾಗಾಭರಣ |
| 1973 | ಶರಪಂಜರ | ಪ್ರಾದೇಶಿಕ ಪ್ರಶಸ್ತಿ ಹಾಗೂ | | 2. ಒಂದಾನೊಂದು ಕಾಲದಲ್ಲಿ | ರಜತ ಕಮಲ ಹಾಗೂ ನಗದು |
| | | ನಗದು ಬಹುಮಾನ | | | ಬಹುಮಾನ |
| 1974 | 1. ಕಾಡು | 1. ಅಖಿಲ ಭಾರತ ಪ್ರಶಸ್ತಿ | | 3. ಕಾಡು ಕುದುರೆ | ಅತ್ಯುತ್ತಮ ಹಿನ್ನೆಲೆ ಗಾಯನಕ್ಕಾಗಿ: |
| | | ದ್ವಿತೀಯ ಅತ್ಯುತ್ತಮ | | | ಶಿವಮೊಗ್ಗ ಸುಬ್ಬಣ್ಣ |
| | | ಕಥಾ ಚಿತ್ರ | 1980 | 1. ದಂಗೆಯೆದ್ದ ಮಕ್ಕಳು | ಅತ್ಯುತ್ತಮ ಮಕ್ಕಳ ಚಿತ್ರಕ್ಕಾಗಿ ಸ್ವರ್ಣ |
| | | 2. ಅತ್ಯುತ್ತಮ ನಟಿ ಪ್ರಶಸ್ತಿ | | | ಕಮಲ ಪ್ರಶಸ್ತಿ ಹಾಗೂ ನಗದು |
| | | ಶ್ರೀಮತಿ ನಂದಿನಿ ಅವರಿಗೆ | | | ಬಹುಮಾನ |
| | | 3. ಅಖಿಲ ಭಾರತ ಪ್ರಶಸ್ತಿ | | | ನಿರ್ದೇಶಕರಿಗೆ ನಗದು ಬಹುಮಾನ, |
| | | ಅತ್ಯುತ್ತಮ ಬಾಲ ನಟ ಪ್ರಶಸ್ತಿ | | 2. ಅರಿವು | ರಜತ ಕಮಲ ಪ್ರಶಸ್ತಿ |
| | | ಮಾಸ್ಟರ್ ಜಿ.ಎಸ್.ನಟರಾಜ್ | 1982 | 1. ಮೂರು ದಾರಿಗಳು | ಅತ್ಯುತ್ತಮ ಕಪ್ಪು ಬಿಳುಪು |
| | | ಅವರಿಗೆ | | | ಛಾಯಾಗ್ರಹಣಕ್ಕಾಗಿ |
| 1974 | 2. ಅಬಚೂರಿನ ಪೋಸ್ಟಾಫೀಸು | ಪ್ರಾದೇಶಿಕ ಚಿತ್ರ ಹಾಗೂ | | | ಶ್ರೀಪತಿ ಆರ್. ಭಟ್ ಅವರಿಗೆ |
| | | ನಗದು ಬಹುಮಾನ | | | ಪ್ರಶಸ್ತಿ |
| | | | | 2. ಬರ | ರಜತ ಕಮಲ ಹಾಗೂ ನಗದು |
| | | | | | ಬಹುಮಾನ |

| ವರ್ಷ | ಚಿತ್ರದ ಹೆಸರು | ಪ್ರಶಸ್ತಿ |
|---|---|---|
| 1983 | ಫಣಿಯಮ್ಮ | ಅತ್ಯುತ್ತಮ ಕನ್ನಡ ಚಿತ್ರಕ್ಕಾಗಿ ರಜತ ಕಮಲ ಹಾಗೂ ನಗದು ಬಹುಮಾನ |
| 1984 | 1. ಆದಿ ಶಂಕರಾಚಾರ್ಯ | 1.ಅತ್ಯುತ್ತಮ ಕಥಾ ಚಿತ್ರಕ್ಕಾಗಿ ಸ್ವರ್ಣ ಕಮಲ ಪ್ರಶಸ್ತಿ ಹಾಗೂ ನಗದು ಬಹುಮಾನ<br>2. ಅತ್ಯುತ್ತಮ ಚಿತ್ರನಾಟಕ ರಚನೆಗಾಗಿ ಜಿ.ವಿ.ಅಯ್ಯರ್ ಅವರಿಗೆ ಪ್ರಶಸ್ತಿ<br>3. ಅತ್ಯುತ್ತಮ ಛಾಯಾಗ್ರಹಣಕ್ಕಾಗಿ (ಕಪ್ಪು ಬಿಳುಪು) ಮಧು ಅಂಬಟ್ ಅವರಿಗೆ ಪ್ರಶಸ್ತಿ |
| | 1. ಬ್ಯಾಂಕರ್ ಮಾರ್ಗಯ್ಯ | ರಜತ ಕಮಲ ಪ್ರಶಸ್ತಿ ಹಾಗೂ ನಗದು ಬಹುಮಾನ |
| 1985 | 1. ಆಕ್ಸಿಡೆಂಟ್ | ಮಾದಕ ದ್ರವ್ಯ ನಿಷೇಧ ಕುರಿತಂತೆ ಅತ್ಯುತ್ತಮ ಚಿತ್ರಕ್ಕಾಗಿ ರಜತ ಕಮಲ ಹಾಗೂ ನಗದು ಬಹುಮಾನ |
| | 2. ಬಂಧನ | ರಜತ ಕಮಲ ಹಾಗೂ ನಗದು ಬಹುಮಾನ |
| 1986 | ಬೆಟ್ಟದ ಹೂವು | 1. ರಜತ ಕಮಲ ಹಾಗೂ ನಗದು ಬಹುಮಾನ<br>2. ಅತ್ಯುತ್ತಮ ಬಾಲ ನಟನೆಗೆ ರಜತ ಕಮಲ ಹಾಗೂ ನಗದು ಬಹುಮಾನ ಮಾಸ್ಟರ್ ಪುನೀತ್ ಅವರಿಗೆ |
| 1987 | 1. ತರಬನ ಕಥೆ | 1. ಅಖಿಲ ಭಾರತ ಪ್ರಶಸ್ತಿ ಅತ್ಯುತ್ತಮ ಕಥಾ ಚಿತ್ರಕ್ಕಾಗಿ ಸ್ವರ್ಣ ಕಮಲ ಹಾಗೂ ನಗದು ಬಹುಮಾನ<br>2. ಅಖಿಲ ಭಾರತ ಪ್ರಶಸ್ತಿ ಅತ್ಯುತ್ತಮ ನಟನೆಗಾಗಿ, ರಜತ ಕಮಲ ಹಾಗೂ ನಗದು ಬಹುಮಾನ, ಚಾರುಹಾಸನ್ ಅವರಿಗೆ |
| | 2. ಮಧ್ವಾಚಾರ್ಯ | 1. ಅಖಿಲ ಭಾರತ ಪ್ರಶಸ್ತಿ ಅತ್ಯುತ್ತಮ ಕಲಾ ನಿರ್ದೇಶನಕ್ಕಾಗಿ, ರಜತ ಕಮಲ ಹಾಗೂ ನಗದು ಬಹುಮಾನ ಪಿ. ಕೃಷ್ಣಮೂರ್ತಿ ಅವರಿಗೆ<br>2. ಅಖಿಲ ಭಾರತ ಪ್ರಶಸ್ತಿ ಅತ್ಯುತ್ತಮ ಸಂಗೀತ ನಿರ್ದೇಶನಕ್ಕಾಗಿ, ರಜತ ಕಮಲ ಪ್ರಶಸ್ತಿ ಹಾಗೂ ನಗದು ಬಹುಮಾನ ಎಂ. ಬಾಲಮುರಳಿ ಕೃಷ್ಣ ಅವರಿಗೆ |
| 1988 | 1. ಪುಷ್ಪಕ ವಿಮಾನ | ಅಖಿಲ ಭಾರತ ಪ್ರಶಸ್ತಿ ಅತ್ಯುತ್ತಮ ಚಿತ್ರಕ್ಕಾಗಿ ಜನಪ್ರಿಯ ಹಾಗೂ ಸಂಪೂರ್ಣ ಮನರಂಜನೆಗಾಗಿ ಸ್ವರ್ಣ ಕಮಲ ಹಾಗೂ ನಗದು ಬಹುಮಾನ |
| | 2. ಕಾಡಿನ ಬೆಂಕಿ | ರಜತ ಕಮಲ ಹಾಗೂ ನಗದು ಬಹುಮಾನ |
| 1989 | ಬಣ್ಣದ ವೇಷ | ರಜತ ಕಮಲ ಹಾಗೂ ನಗದು ಬಹುಮಾನ |
| 1990 | 1. ಸಂತ ಶಿಶುನಾಳ ಷರೀಫ | ಅಖಿಲ ಭಾರತ ಪ್ರಶಸ್ತಿ ಹಾಗೂ ನರ್ಗೀಸ್‌ದತ್ ಪ್ರಶಸ್ತಿ ರಾಷ್ಟ್ರೀಯ ಸೌಹಾರ್ದತೆಗಾಗಿ ಅತ್ಯುತ್ತಮ ಚಿತ್ರವೆಂದು ಹಾಗೂ ರಜತ ಕಮಲ ಹಾಗೂ ನಗದು ಬಹುಮಾನ |
| | 2. ಜಂಬೂ ಸವಾರಿ | ಅಖಿಲ ಭಾರತ ಪ್ರಶಸ್ತಿ ಅತ್ಯುತ್ತಮ ಮಕ್ಕಳ ಚಿತ್ರಕ್ಕಾಗಿ ಸ್ವರ್ಣ ಕಮಲ ಹಾಗೂ ನಗದು ಬಹುಮಾನ |
| | 3. ಮನೆ | ರಜತ ಕಮಲ ಹಾಗೂ ನಗದು ಬಹುಮಾನ |
| 1991 | 1. ಮೈಸೂರು ಮಲ್ಲಿಗೆ | ರಜತ ಕಮಲ ಪ್ರಶಸ್ತಿ ಅತ್ಯುತ್ತಮ ಗೀತ ರಚನೆಗಾಗಿ ಕೆ.ಎಸ್.ನರಸಿಂಹಸ್ವಾಮಿ ಅತ್ಯುತ್ತಮ ಪ್ರಾದೇಶಿಕ ಚಿತ್ರಕ್ಕಾಗಿ ರಜತ ಕಮಲ ಪ್ರಶಸ್ತಿ |
| 1992 | 1. ಭಗವದ್ಗೀತೆ | ಸ್ವರ್ಣ ಕಮಲ ಪ್ರಶಸ್ತಿ ನಿರ್ದೇಶನಕ್ಕಾಗಿ |
| | 2. ಜೀವನ ಚೈತ್ರ | ಅತ್ಯುತ್ತಮ ಹಿನ್ನೆಲೆ ಗಾಯನಕ್ಕಾಗಿ ರಾಜ್‌ಕುಮಾರ್ ಅವರಿಗೆ |
| | 3. ಹರಕೆಯ ಕುರಿ | ಅತ್ಯತ್ತಮ ಪ್ರಾದೇಶಿಕ ಚಿತ್ರಕ್ಕಾಗಿ ರಜತ ಕಮಲ ಪ್ರಶಸ್ತಿ ನಿರ್ಮಾಪಕರಿಗೆ ಹಾಗೂ ನಿರ್ದೇಶಕರಿಗೆ ನಗದು ಬಹುಮಾನ |
| 1993 | 1. ದೇವರ ಕಾಡು | ಅತ್ಯುತ್ತಮ ಪರಿಸರ ಚಿತ್ರಕ್ಕಾಗಿ ರಜತ ಕಮಲ ಹಾಗೂ ನಗದು ಬಹುಮಾನ ನಿರ್ಮಾಪಕರಿಗೆ ಹಾಗೂ ನಿರ್ದೇಶಕರಿಗೆ |
| | 2. ಚಿನ್ನಾರಿ ಮುತ್ತ | ಅತ್ಯುತ್ತಮ ಮಕ್ಕಳ ಚಿತ್ರ ರಜತ ಕಮಲ ಪ್ರಶಸ್ತಿ ಹಾಗೂ ನಗದು ಬಹುಮಾನ ನಿರ್ಮಾಪಕರಿಗೆ ಹಾಗೂ ನಿರ್ದೇಶಕರಿಗೆ |
| | 3. ಮಂದಾರ ಪೂ (ಕೊಡವ ) | ರಜತ ಕಮಲ ಪ್ರಶಸ್ತಿ ಹಾಗೂ ನಗದು ಬಹುಮಾನ ನಿರ್ಮಾಪಕರಿಗೆ ಹಾಗೂ ನಿರ್ದೇಶಕರಿಗೆ |
| | 4. ಬಂಗಾರ್ ಪಟ್ಲೇರ್ (ತುಳು ) | ರಜತ ಕಮಲ ಪ್ರಶಸ್ತಿ ಹಾಗೂ ನಗದು ಬಹುಮಾನ ನಿರ್ಮಾಪಕರಿಗೆ ಹಾಗೂ ನಿರ್ದೇಶಕರಿಗೆ |

ಕೃಪೆ: ವಾರ್ತಾ ಇಲಾಖೆ, ಚಲನಚಿತ್ರವಿಭಾಗ, ಕರ್ನಾಟಕ ಸರ್ಕಾರ, ಬೆಗಳೂರು

### ರಾಷ್ಟ್ರ ಪ್ರಶಸ್ತಿ ಪಡೆದ ಇತರ ಕನ್ನಡ ಚಿತ್ರಗಳು

| | | |
|---|---|---|
| 1. | ಕೊಟ್ರೇಶಿ ಕನಸು<br>ನಿರ್ದೇಶನ: ನಾಗತಿಹಳ್ಳಿ ಚಂದ್ರಶೇಖರ್ | 1. ಉತ್ತಮ ಕನ್ನಡಚಿತ್ರ<br>2. ಉತ್ತಮ ಬಾಲ ಕಲಾವಿದ ಮಾ. ವಿಜಯ ರಾಘವೇಂದ್ರ |
| 2. | ಕ್ರೌರ್ಯ<br>ನಿರ್ದೇಶನ: ಗಿರೀಶ್ ಕಾಸರವಳ್ಳಿ | 1. ಉತ್ತಮ ಕನ್ನಡಚಿತ್ರ<br>2. ಉತ್ತಮ ಬಾಲ ಕಲಾವಿದ ಮಾ. ವಿಶ್ವಾಸ್ |
| 3. | ಸಂಗೀತ ಸಾಗರ ಗಾನಯೋಗಿ ಪಂಚಾಕ್ಷರಿ ಗವಾಯಿ<br>ನಿರ್ದೇಶನ: ಚಿಂದೋಡಿ ಬಂಗಾರೇಶ್ | 1. ಉತ್ತಮ ಹಿನ್ನೆಲೆ ಗಾಯಕರು ಎಸ್.ಪಿ.ಬಾಲಸುಬ್ರಮಣ್ಯಂ<br>2. ಉತ್ತಮ ಸಂಗೀತ ನಿರ್ದೇಶಕರು ಹಂಸಲೇಖ |
| 4. | ಅಮೇರಿಕಾ-ಅಮೇರಿಕಾ<br>ನಿರ್ದೇಶನ: ನಾಗತಿಹಳ್ಳಿ ಚಂದ್ರಶೇಖರ್ | ಉತ್ತಮ ಕನ್ನಡಚಿತ್ರ |
| 5. | ತಾಯಿ ಸಾಹೇಬ | 1. ಸ್ವರ್ಣಕಮಲ ಪ್ರಶಸ್ತಿ<br>2. ನಟನೆಗಾಗಿ ವಿಶೇಷ ಜ್ಯೂರಿ ಪ್ರಶಸ್ತಿ, ಜಯಮಾಲ<br>3. ಉತ್ತಮ ಕಲಾ ನಿರ್ದೇಶನ-ರಮೇಶ್ ದೇಸಾಯಿ<br>4. ಉತ್ತಮ ಉಡುಪು ವಿನ್ಯಾಸ ವೈಶಾಲಿ ಕಾಸರವಳ್ಳಿ |
| 6. | ಭೂಮಿಗೀತ<br>ನಿರ್ದೇಶನ: ಕೇಸರಿ ಹರವು | ಉತ್ತಮ ಪರಿಸರ ಚಿತ್ರ |
| 7. | ಮುಂಗಾರಿನ ಮಿಂಚು<br>ನಿರ್ದೇಶನ: ರಾಜೇಂದ್ರಸಿಂಗ್ ಬಾಬು | ಉತ್ತಮ ಕನ್ನಡ ಚಿತ್ರ |
| 8. | ಹೂ ಮಳೆ<br>ನಿರ್ದೇಶನ: ನಾಗತಿಹಳ್ಳಿ ಚಂದ್ರಶೇಖರ್ | ಉತ್ತಮ ಪ್ರಾದೇಶಿಕ ಭಾಷಾ ಚಿತ್ರ |
| 9. | ಕಾನೂರು ಹೆಗ್ಗಡತಿ<br>ನಿರ್ದೇಶನ: ಗಿರೀಶ್ ಕಾರ್ನಾಡ್ | ಉತ್ತಮ ಪ್ರಾದೇಶಿಕ ಭಾಷಾ ಚಿತ್ರ |
| 10. | ಮತದಾನ<br>ನಿರ್ದೇಶನ: ಟಿ.ಎನ್.ಸೀತಾರಾಂ | ಉತ್ತಮ ಪ್ರಾದೇಶಿಕ ಭಾಷಾ ಚಿತ್ರ |
| 11. | ಮುನ್ನುಡಿ<br>ನಿರ್ದೇಶನ: ಪಿ.ಶೇಷಾದ್ರಿ | ಸಾಮಾಜಿಕ ಕಳಕಳಿಯ ಚಿತ್ರ |
| 12. | ದ್ವೀಪ<br>ನಿರ್ದೇಶನ: ಗಿರೀಶ್ ಕಾಸರವಳ್ಳಿ | ಸ್ವರ್ಣ ಕಮಲ ಪ್ರಶಸ್ತಿ |
| 13. | ಅತಿಥಿ<br>ನಿರ್ದೇಶನ: ಪಿ.ಶೇಷಾದ್ರಿ | ಉತ್ತಮ ಪ್ರಾದೇಶಿಕ ಭಾಷಾ ಚಿತ್ರ |
| 14. | ಸಿಂಗಾರವ್ವ<br>ನಿರ್ದೇಶನ: ಟಿ.ಎಸ್.ನಾಗಾಭರಣ | ಉತ್ತಮ ಪ್ರಾದೇಶಿಕ ಭಾಷಾ ಚಿತ್ರ |
| 15. | ಬೇರು<br>ನಿರ್ದೇಶನ: ಪಿ.ಶೇಷಾದ್ರಿ | ಉತ್ತಮ ಪ್ರಾದೇಶಿಕ ಚಿತ್ರ |
| 15. | ಹಸೀನಾ<br>ನಿರ್ದೇಶನ: ಗಿರೀಶ್ ಕಾಸರವಳ್ಳಿ | ಸಾಮಾಜಿಕ ಕಳಕಳಿಯುಳ್ಳ ಚಿತ್ರ |

ಈ ಚಿತ್ರ ಯಶಸ್ವಿಯಾಯಿತು. ಶಿವರಾಜಕುಮಾರ್ ಅಭಿನಯದ ಎರಡನೆಯ ಚಿತ್ರ ವಿಜಯ ಸಾಸನೂರ್ ಅವರ ಕಾದಂಬರಿ ಆಧರಿಸಿದ ರಥಸಪ್ತಮಿ (1986) ಕೂಡ ಯಶಸ್ವಿಯಾಗಿ ಪ್ರದರ್ಶನ ಕಂಡಿತು. ಅವರ ಮೂರನೆಯ ಚಿತ್ರ ವೀರಭದ್ರಪ್ಪ ಅವರ ಬೇಟೆ ಕಾದಂಬರಿ ಆಧರಿಸಿದ ಮನ ಮೆಚ್ಚಿದ ಹುಡುಗಿ ಕೂಡ ರಜತ ಮಹೋತ್ಸವ ಕಂಡಿತು. ಈ ಎರಡು ಚಿತ್ರಗಳನ್ನು ಎಂ.ಎಸ್.ರಾಜಶೇಖರ್ ನಿರ್ದೇಶಿಸಿದ್ದಾರೆ. ಮೊದಲ ಮೂರು ಚಿತ್ರಗಳೂ ರಜತ ಮಹೋತ್ಸವ ಆಚರಿಸಿ, ಶಿವರಾಜಕುಮಾರ್ ಅವರನ್ನು ಯಶಸ್ವಿ ನಾಯಕ ನಟನನ್ನಾಗಿಸಿದವು.

ಶಿವರಾಜಕುಮಾರ್ ಅವರನ್ನಿಟ್ಟುಕೊಂಡು ಕೆಲವು ಹೊಸ ಪ್ರಯೋಗಗಳನ್ನು ಮಾಡುವ ಯತ್ನವನ್ನು ಕೆಲವು ನಿರ್ದೇಶಕರು ಮಾಡಿದರು. ರಾಜಕುಮಾರ್ ಅಭಿನಯಿಸಿದ ಚಿತ್ರಗಳನ್ನು ಮತ್ತೆ ಅವರ ಪುತ್ರ ಶಿವರಾಜಕುಮಾರ್ ಅಭಿನಯದಲ್ಲಿ ಪುನರ್ ನಿರ್ಮಾಣ ಮಾಡುವುದು ಒಂದು ಯತ್ನ. ಮತ್ತೊಂದು ಪ್ರಯೋಗವೆಂದರೆ ಜನಪ್ರಿಯವಾದ ರಾಜಕುಮಾರ್ ಅಭಿನಯದ ಚಿತ್ರವೊಂದರ ಎರಡನೆಯ ಭಾಗ ನಿರ್ಮಿಸುವುದು. ಶಿವರಾಜಕುಮಾರ್ ಅಭಿನಯದ ಶಿವ ಮೆಚ್ಚಿದ ಕಣ್ಣಪ್ಪ (1988) ಇಂತಹ ಒಂದು ಪ್ರಯತ್ನದ ಫಲ. ಆದರೆ ಈ ಎರಡೂ ಪ್ರಯೋಗಗಳು ಉತ್ತಮ ಫಲ ಕೊಡಲಿಲ್ಲ.

ರಾಜಕುಮಾರ್ ಅವರ ಮೊದಲ ಚಿತ್ರ ಬೇಡರ ಕಣ್ಣಪ್ಪ (1954), 44 ವರ್ಷಗಳ ಹಿಂದೆ ರಾಜಕುಮಾರ್ ಅವರು ವಹಿಸಿದ್ದ ಅದೇ ಪಾತ್ರವನ್ನು 1988ರಲ್ಲಿ ಅವರ ಪುತ್ರ ಶಿವರಾಜಕುಮಾರ್ ನಿರ್ವಹಿಸಿದ್ದರು. ಈ ಚಿತ್ರದಲ್ಲಿ ರಾಜಕುಮಾರ್ ಕೂಡ ಈಶ್ವರನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 1995ರಲ್ಲಿ ಮತ್ತೊಂದು ಬಗೆಯ ಪ್ರಯೋಗವಾಗಿ 1973ರಲ್ಲಿ ಅಪಾರ ಜನಪ್ರಿಯತೆ ಗಳಿಸಿದ್ದ ಗಂಧದ ಗುಡಿಯ ಮುಂದುವರೆದ ಭಾಗವನ್ನಾಗಿ ಗಂಧದ ಗುಡಿ ಭಾಗ 2 ಚಿತ್ರ ನಿರ್ಮಿಸಲಾಯಿತು. ಶಿವರಾಜಕುಮಾರ್ ಅವರು ಈ ಹಿಂದೆ ತಂದೆ ರಾಜಕುಮಾರ್ ವಹಿಸಿದ್ದ ಪಾತ್ರವನ್ನೆ ವಹಿಸಿದ್ದರು. ಈ ಚಿತ್ರದಲ್ಲೂ ರಾಜಕುಮಾರ್ ಗೌರವನಟರಾಗಿ ಕಾಣಿಸಿಕೊಂಡರು. ಓಂ ಚಿತ್ರ ಶಿವರಾಜಕುಮಾರ್‌ಗೆ ಹೊಸ ಇಮೇಜ್ ಸೃಷ್ಟಿಸಿತು. ಕನ್ನಡ ಚಿತ್ರರಂಗದಲ್ಲಿ ಒಂದು ಟ್ರೆಂಡನ್ನೂ ಸೃಷ್ಟಿ ಮಾಡಿತು. ನಮ್ಮೂರ ಮಂದಾರ ಹೂವೇ ಯಶಸ್ಸಿನ ಅನಂತರ ಬಂದ ನಾಗಾಭರಣ ನಿರ್ದೇಶನದ ಜನುಮದ ಜೋಡಿ ಶಿವರಾಜ್‌ಕುಮಾರ್ ಅವರನ್ನು ಮತ್ತಷ್ಟು ಜನಪ್ರಿಯಗೊಳಿಸಿದ, ಅದ್ಭುತ ಯಶಸ್ಸು ಪಡೆದ ಮತ್ತೊಂದು ದಾಖಲೆ ಚಿತ್ರ. ಅವರು ಚಿಗುರಿದ ಕನಸು ಚಿತ್ರದ ಪಾತ್ರಕ್ಕಾಗಿ 2003-04ನೆಯ ಸಾಲಿನ ರಾಜ್ಯ ಸರ್ಕಾರದ ಅತ್ಯುತ್ತಮ ನಟ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಸಂಗೀತ ನಿರ್ದೇಶಕ ಮನೋಹರ ಹಾಗೂ ಸಂಭಾಷಣೆಕಾರ ಬರಗೂರು ರಾಮಚಂದ್ರಪ್ಪನವರಿಗೂ ಈ ಚಿತ್ರ ಖ್ಯಾತಿ ತಂದುಕೊಟ್ಟಿತು.

ರಾಜಕುಮಾರರ ಮತ್ತೊಬ್ಬ ಪುತ್ರ ರಾಘವೇಂದ್ರ ರಾಜ್‌ಕುಮಾರ್ ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ ಚಿರಂಜೀವಿ ಸುಧಾಕರ್ (1988) ಚಿತ್ರದ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು. ನಂಜುಂಡಿ ಕಲ್ಯಾಣ (1989) ಅವರಿಗೆ ಭಾರೀ ಹೆಸರು ತಂದು ಕೊಟ್ಟಿತು. ಈ ಚಿತ್ರದ ಮೂಲಕ ನಾಯಕಿಯಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಮಾಲಾಶ್ರೀ, ಐದು ವರ್ಷಗಳ ಕಾಲ ಸೂಪರ್ ಸ್ಟಾರ್ ಆಗಿ ಮೆರೆದರು. ಕನ್ನಡದ ಇನ್ನಾವ ನಟಿಯೂ ಗಳಿಸದಿದ್ದ ಜನಪ್ರಿಯತೆ ಮಾಲಾಶ್ರೀ ಪಾಲಿನದಾಯಿತು ಎಂಬುದು ಗಮನಾರ್ಹ. ಗಜಪತಿ ಗರ್ವಭಂಗ (1989), ಅನುಕೂಲಕ್ಕೊಬ್ಬ ಗಂಡ (1990), ಅನುರಾಗದ ಅಲೆಗಳು (1990), ನಾವಿಬ್ಬರು ನಮಗಿಬ್ಬರು (1993), ಸಾಗರ ದೀಪ (1994), ಸೂತ್ರದಾರ (1996), ರಾಘವೇಂದ್ರ ರಾಜಕುಮಾರ್ ಅಭಿನಯದ ಇತರ ಚಿತ್ರಗಳು.ಬಾಲನಟನಾಗಿ ರಾಷ್ಟ್ರಪ್ರಶಸ್ತಿ ಗಳಿಸಿದ್ದ ಪುನೀತ್ ಈಗ ನಾಯಕ ನಟರಾಗಿ ಅಭಿನಯಿಸುತ್ತಿದ್ದಾರೆ.

ದ್ವೀಪ ಚಿತ್ರದಲ್ಲಿ ಅವಿನಾಶ್ ಮತ್ತು ಸೌಂದರ್ಯ

ರವಿಚಂದ್ರನ್‌ರ ಹೆಸರು ಹಲವಾರು ಕಾರಣಗಳಿಂದ ಉಲ್ಲೇಖಾರ್ಹ, ರವಿಚಂದ್ರನ್ ನಟರಷ್ಟೇ ಅಲ್ಲ ನಿರ್ದೇಶಕರೂ ಕೂಡ. ಕನ್ನಡ ಚಿತ್ರಗಳಿಗೆ ತಾಂತ್ರಿಕ ಶ್ರೀಮಂತಿಕೆ ತುಂಬಿದ ಕೀರ್ತಿ ಅವರದು. ಹೊಸತನ ಅವರ ಚಿತ್ರಗಳ ವೈಶಿಷ್ಟ್ಯ. ಖದೀಮ ಕಳ್ಳರು ಇವರ ಮೊದಲ ಚಿತ್ರ. ಈಶ್ವರಿ ಪಿಕ್ಚರ್ಸ್ ಲಾಂಛನದಲ್ಲಿ ಹೊರಬಂದ ಚಕ್ರವ್ಯೂಹ (1983) ಚಿತ್ರದಲ್ಲಿ ರವಿಚಂದ್ರನ್‌ಗೆ ಮತ್ತೊಂದು ಚಿಕ್ಕಪಾತ್ರ. ಅನಂತರದ ದಿನಗಳಲ್ಲಿ ನಾಯಕ ನಟನಾಗುತ್ತ ಹೆಜ್ಜೆ ಹಾಕಲು ಇದು ನಾಂದಿಯಾಯಿತು. ಮರುವರ್ಷವೇ

ನಾನೇ ರಾಜದ ನಾಯಕ. ಅನಂತರ ಅದನ್ನು ಹಿಂಬಾಲಿಸಿ ಪ್ರೇಮಿಗಳ ಸವಾಲ್. 1995ರಲ್ಲಿ ಈಶ್ವರಿ ಲಾಂಛನದಲ್ಲಿ ಹಾಸ್ಯ ಪ್ರಧಾನ ಚಿತ್ರ ಸಾವಿರ ಸುಳ್ಳು ರವಿಚಂದ್ರನ್‌ರತ್ತ ದೃಷ್ಟಿ ಹಾಯಿಸಲು ಸಹಾಯಕವಾಯಿತು. ಮತ್ತೆ ಅದೇ ವರ್ಷ ಎನ್.ವೀರಸ್ವಾಮಿ ಈಶ್ವರಿ ಪಿಕ್ಚರ್ಸ್ ಲಾಂಛನದಲ್ಲಿ ತಯಾರಿಸಿದ ನಾನೂ ನನ್ನ ಹೆಂಡ್ತಿ ರವಿಚಂದ್ರನ್‌ರ ದಿಕ್ಕನ್ನೇ ಬದಲಾಯಿಸಿತು. ಡಿ.ರಾಜೇಂದ್ರ ಬಾಬು ನಿರ್ದೇಶನದ ಈ ಚಿತ್ರ ರವಿಚಂದ್ರನ್‌ರನ್ನಷ್ಟೇ ಅಲ್ಲ ಹಾಸ್ಯ ನಟ ಎನ್.ಎಸ್.ರಾವ್, ಚಿತ್ರ ಸಾಹಿತಿ, ಸಂಗೀತ ನಿರ್ದೇಶಕ ಹಂಸಲೇಖ (ಪಿ.ಜಿ.ಗಂಗರಾಜ್) ಅವರೂ ಚಿತ್ರರಂಗದಲ್ಲಿ ಮಿನುಗಲು ಕಾರಣವಾಯಿತು.

ಈಶ್ವರಿ ಪಿಕ್ಚರ್ಸ್ ಲಾಂಛನದಲ್ಲಿ ರವಿಚಂದ್ರನ್ ತಾವೇ ಅಭಿನಯಿಸಿದ ನಿರ್ದೇಶಿಸಿದ ಪ್ರೇಮಲೋಕ ಚಿತ್ರರಂಗದಲ್ಲಿ ಇತಿಹಾಸ ನಿರ್ಮಿಸಿತು. ರವಿಚಂದ್ರನ್ ಜತೆ ಹಿಂದಿ ಚಿತ್ರ ನಟಿ ಜೂಹಿ ಚಾವ್ಲಾ ಅಭಿನಯಿಸಿದ್ದಾರೆ. ಚಿತ್ರ ಪ್ರಚಂಡ ಯಶಸ್ಸುಗಳಿಸಿ ರವಿಚಂದ್ರನ್ ಅವರಿಗೆ ಜನಪ್ರಿಯ ನಾಯಕ ಎಂಬ ಪಟ್ಟಕಟ್ಟಿತು. ಈ ಚಿತ್ರದ ಮೂಲಕ ಹಂಸಲೇಖ ಸಂಗೀತ ನಿರ್ದೇಶಕರಾಗಿ ಖ್ಯಾತಿಗೆ ಬಂದರು. ಅನಂತರ ರವಿಚಂದ್ರನ್ ನಿರ್ದೇಶಿಸಿದ ರಣಧೀರ (1988) ಕೂಡ ಯಶಸ್ವಿ ಚಿತ್ರ. ಅನಂತರದ ದಿನಗಳು ರವಿಚಂದ್ರನ್ ಅವರ ಹರ್ಷದ ದಿನಗಳಾದವು. ಅಂಜದ ಗಂಡು (1988), ಯುದ್ಧಕಾಂಡ, ಯುಗಪುರುಷ, ಕಿಂದರಜೋಗಿ (1989), ಬಣ್ಣದ ಗೆಜ್ಜೆ, ಅಭಿಮನ್ಯು (1990), ರಾಮಾಚಾರಿ, ಶಾಂತಿ ಕ್ರಾಂತಿ, ಹಳ್ಳಿಮೇಷ್ಟ್ರು, ಗೋಪಿಕೃಷ್ಣ, ಶ್ರೀರಾಮಚಂದ್ರ (1992), ಗಡಿಬಿಡಿಗಂಡ, ಅಣ್ಣಯ್ಯ, ಮನೆದೇವ್ರು (1993), ಸಿಪಾಯಿ, ಚೆಲುವೆ ಒಂದು ಹೇಳ್ತಿನಿ, ಪ್ರೀತ್ಸೋದ್ ತಪ್ಪಾ, ಏಕಾಂಗಿ, ಮಲ್ಲ ಮೊದಲಾದವು ಇವರ ಅಭಿನಯದ ಮುಖ್ಯ ಚಿತ್ರಗಳು.

ಹಂಸಲೇಖ ಅವರ ಚಿತ್ರರಂಗ ಪ್ರವೇಶ ಈ ಕಾಲಾವಧಿಯ ಮಹತ್ವದ ಘಟನೆ (1987). ಪ್ರೇಮಲೋಕದಿಂದ ಸಂಗೀತ ನಿರ್ದೇಶನ ಆರಂಭಿಸಿದ ಇವರು ಒಂಬತ್ತೇ ವರ್ಷಗಳಲ್ಲಿ ನೂರು ಚಿತ್ರಗಳ ಸಂಗೀತ ನಿರ್ದೇಶಕರಾದರು. ಗಾನಯೋಗಿ ಪಂಚಾಕ್ಷರಿ ಚಿತ್ರಕ್ಕಾಗಿ ಫಿಲಂಫೇರ್ ಪ್ರಶಸ್ತಿ ಸಂದದ್ದು ಇವರ ಪ್ರತಿಭೆಗೆ ಸಾಕ್ಷಿ. ಇವರ ಸಾಹಿತ್ಯ ಹಾಗೂ ಸಹಜವಾಗಿ ಜನಸಾಮಾನ್ಯರಲ್ಲಿ ಹೊರಡುವ ಉದ್ಗಾರ, ಆಶ್ಚರ್ಯ, ಮಾತುಗಳು ಎಲ್ಲದಕ್ಕೂ ಸಂಗೀತದ ಸ್ಪರ್ಶ ನೀಡಿದ್ದು ಹಂಸಲೇಖರ ವೈಶಿಷ್ಟ್ಯ. ಇವರ ಪ್ರತಿಭೆ ಬೆಳಕಿಗೆ ಬಂದದ್ದು. ನಾನೂ ನನ್ನ ಹೆಂಡ್ತಿ ಚಿತ್ರಕ್ಕಾಗಿ ಇವರು ಬರೆದ ಯಾರೇ ನೀನು ಚೆಲುವೆ ನಿನ್ನಷ್ಟಕ್ಕೆ ನೀನೇ ಏಕೆ ನಗುವೆ ಎಂಬ ಹಾಡಿನಿಂದಾಗಿ. ಅನಂತರ ಇವರು ರವಿಚಂದ್ರನ್ ಅವರ ಚಿತ್ರ ನಿರ್ಮಾಣದ ಬಹುತೇಕ ಚಿತ್ರಗಳ ಸಂಗೀತ ನಿರ್ದೇಶಕರಾದರು. ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಹಂಸಲೇಖ ಎಂಬ ಕ್ಯಾಸೆಟ್ ಕಂಪನಿಯನ್ನೂ ಆರಂಭಿಸಿದ್ದಾರೆ. ಇವರ ಪುತ್ರ ಅಲಂಕಾರ್ ಕೂಡ ತಪೋರಿ ಚಿತ್ರ ಮೂಲಕ ನಾಯಕ ನಟರಾದರು. ಹಂಸಲೇಖ 350ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ.

ಚಿರಂಜೀವಿ ಸುಧಾಕರ್ (1988) ಚಿತ್ರದ ಮೂಲಕ ಖಳನಾಯಕನಾಗಿ ಚಿತ್ರರಂಗ ಪ್ರವೇಶಿಸಿದ ಶಶಿಕುಮಾರ್ ಕಾಲಕ್ರಮೇಣ ನಾಯಕನಟನಾಗಿ ಪರಿವರ್ತನೆಗೊಂಡರು. ಮಾಲಾಶ್ರೀ, ಶಶಿಕುಮಾರ್ ಜೋಡಿಯ ಚಿತ್ರಗಳು ಜನಪ್ರಿಯಗೊಂಡು ಆ ಎಲ್ಲ ಚಿತ್ರಗಳೂ ಯಶಸ್ವಿಯಾದವು. ಪೋಲೀಸನ ಹೆಂಡ್ತಿ (1990) ಶಶಿಕುಮಾರ್‌ಗೆ ಪೂರ್ಣ ಪ್ರಮಾಣದ ನಾಯಕ ಸ್ಥಾನ ಕಲ್ಪಿಸಿತು. ಚಿತ್ರದುರ್ಗ ಕ್ಷೇತ್ರದಿಂದ ಇವರು ಸಂಸತ್ ಸದಸ್ಯರೂ ಆಗಿದ್ದರು. ಆರಂಭದಲ್ಲಿ ಖಳನಟನಾಗಿದ್ದು ಅನಂತರ ನಾಯಕನಾಗಿ ಪರಿವರ್ತನೆ ಆಗುವ ನಾಯಕರು ಕನ್ನಡದಲ್ಲಿ ಹೆಚ್ಚಾಗಿಯೇ ಇದ್ದಾರೆ. ಆಗಂತುಕ ಚಿತ್ರದ ಮೂಲಕ ಖಳನಾಯಕನಾಗಿ ಪ್ರವೇಶಿಸಿದ ದೇವರಾಜ್ (1987) ಅನಂತರದ ದಿನಗಳಲ್ಲಿ ನಾಯಕ ಸ್ಥಾನಕ್ಕೇರಿದರು. ಅಂಬರೀಷ್, ಪ್ರಭಾಕರ್ ಅವರುಗಳೂ ಕೂಡ ಇದೇ ಹಂತದಿಂದ ನಾಯಕರಾದವರು. ದೇವರಾಜ್ ಉತ್ಕರ್ಷದಲ್ಲಿ ಉತ್ತಮ ಅಭಿನಯ ನೀಡಿದರು. ವೀರಪ್ಪನ್ ಚಿತ್ರದ ಅಭಿನಯಕ್ಕಾಗಿ ರಾಜ್ಯದ ಶ್ರೇಷ್ಠ ನಟ ಪ್ರಶಸ್ತಿ ಪಡೆದರು (1990). ಇದೇ ರೀತಿ ಜಗ್ಗೇಶ್ ಕೂಡ ಖಳನಾಯಕನಾಗಿ ಸಣ್ಣಪುಟ್ಟ ಪಾತ್ರ, ಹಾಸ್ಯ ನಟನಾಗಿ ಕೆಲ ಚಿತ್ರಗಳಲ್ಲಿ ಅಭಿನಯಿಸಿ ಅನಂತರ ನಾಯಕ ನಟರಾದರು. ಜಗ್ಗೇಶ್ ಸಂಭಾಷಣೆ ಹೇಳುವ ಶೈಲಿಯಿಂದಾಗಿ ಜನಪ್ರಿಯರಾಗಿದ್ದಾರೆ. ಭಂಡ ನನ್ನ ಗಂಡ, ತರ್ಲೆ ನನ್ ಮಗ, ಪೋಲೀಸ್ ಫೈಲ್, ಸೂಪರ್ ನನ್ ಮಗ, ಸರ್ವರ್ ಸೋಮಣ್ಣ, ಸೋಮ, ಪಟ್ಟಣಕ್ಕೆ ಬಂದ ಪುಟ್ಟ ಚಿತ್ರಗಳಲ್ಲಿ ಜಗ್ಗೇಶ್ ನಾಯಕರಾಗಿದ್ದಾರೆ. ಮೇಕಪ್ (2002) ಚಿತ್ರದ ಮೂಲಕ ಜಗ್ಗೇಶ್ ವೃತ್ತಿ ಜೀವನದಲ್ಲಿ ಬದಲಾವಣೆ ಆಗಿದೆ. ಈ ನಡುವೆ ಕಾಶೀನಾಥ್ ಕೂಡ ನಾಯಕನಾಗಿ ಕೆಲಕಾಲ ಮಿಂಚಿದರು. 1976ರಲ್ಲಿಯೇ ಅಪರೂಪದ ಅತಿಥಿಗಳು ಚಿತ್ರ ನಿರ್ಮಿಸಿದ್ದ ಕಾಶೀನಾಥ್ 1987ರಲ್ಲಿ ಅನುಭವ ಚಿತ್ರದ ಮೂಲಕ ಜನಪ್ರಿಯರಾದರು. ಈ ಚಿತ್ರದ ಯಶಸ್ಸು ಇವರಿಗೆ ನಾಯಕ ಪಟ್ಟ ಕಲ್ಪಿಸಿತು. ಇವರು ಅಭಿನಯಿಸಿದ ಅವಳೆ ನನ್ನ ಹೆಂಡ್ತಿ (1988) ರಜತೋತ್ಸವ ಕಂಡಿತು. ಇವರ ಸ್ವಂತ ತಯಾರಿಕೆ ಅನಂತನ ಅವಾಂತರ (1989) ಜನಪ್ರಿಯವಾದ ಅನಂತರ ಅದೇ ಜಾಡು ಹಿಡಿದ ಚಿತ್ರಗಳು ಹಲವಾರು ಬಂದವು. ಪೋಲೀಸ್ ಸ್ಟೋರಿ ಚಿತ್ರದ ಮೂಲಕ ಇದ್ದಕ್ಕಿದ್ದಂತೆ ನಾಯಕನಟನಾಗಿ ಬೆಳೆದ ಸಾಯಿಕುಮಾರ್ ಅದೇ ತರಹದ ಹಲವಾರು ಚಿತ್ರಗಳಲ್ಲಿ ನಾಯಕರಾದರು. ಪುಟ್ಟಣ್ಣ ಕಣಗಾಲ್ ಅಮೃತ ಘಳಿಗೆಯ ಮೂಲಕ ತೆರೆಗೆ ಪರಿಚಯಿಸಿದ ಶ್ರೀಧರ್ ಮೌನಗೀತೆ (1986), ಆಸ್ಫೋಟ (1988), ಬಿಸಿಲು ಬೆಳದಿಂಗಳು (1989), ಸಂತ ಶಿಶುನಾಳ ಶರೀಫ (1990) ಮೊದಲಾದ ಚಿತ್ರಗಳಲ್ಲಿ ಗಮನ ಸೆಳೆದರು. ಗೆಜ್ಜೆನಾದ (1993) ಮೂಲಕ ರಾಮ್‌ಕುಮಾರ್, ಶ್ (1993) ಮೂಲಕ ಕುಮಾರ್ ಗೋವಿಂದ್, ಸುಂದರ ಸ್ವಪ್ನಗಳು (1996), ಪಂಚಮವೇದದ (1990), ಮೂಲಕ ರಮೇಶ್, ಡ್ಯಾನ್ಸ್ ರಾಜಾ ಡ್ಯಾನ್ಸ್ (1989) ಮೂಲಕ ವಿನೋದರಾಜ್, ಚೈತ್ರದ ಪ್ರೇಮಾಂಜಲಿ (1992) ಮೂಲಕ ರಘುವೀರ್, ರಂಜಿತಾ (1993) ಮೂಲಕ ಅಭಿಜಿತ್ ನಾಯಕ ನಟರಾಗಿದ್ದಾರೆ.

ಸಿಂಗಾರವ್ವ ಚಿತ್ರದಲ್ಲಿ ಪ್ರೇಮಾ ಮತ್ತು ಅವಿನಾಶ್

ವಿಜಯೋತ್ಸವ (1987) ಚಿತ್ರದ ಮೂಲಕ ಬೆಳ್ಳಿ ತೆರೆಗೆ ಬಂದ ಕುಮಾರ್ ಬಂಗಾರಪ್ಪ (ವಸಂತಕುಮಾರ್) ಶರವೇಗದ ಸರದಾರ (1989), ಅಶ್ವಮೇಧ, ಅಂಗೈಯಲ್ಲಿ ಅಪ್ಸರೆ (1993), ಕ್ಷೀರ ಸಾಗರ (1992) ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ರಮೇಶ್ ಎಲ್ಲಾ ಬಗೆಯ ಪಾತ್ರಗಳಲ್ಲೂ ಹೊಂದಿ ಕೊಳ್ಳುವವರು. ನಮ್ಮೂರ ಮಂದಾರ ಹೂವೇ, ಹೃದಯ ಹೃದಯ, ಪತ್ಯರ್ಥ, ಅಮೆರಿಕಾ-ಅಮೇರಿಕಾ, ಅಮೃತವರ್ಷಿಣಿ ಮೊದಲಾದ ಚಿತ್ರಗಳಲ್ಲಿ ಗಮನ ಸೆಳೆಯುವ ಅಭಿನಯ ನೀಡಿದ್ದಾರೆ. ಸುದೀಪ್ ಮತ್ತು ದರ್ಶನ್ 21ನೆಯ ಶತಮಾನದ ಪ್ರಾಂರಭದಲ್ಲಿ ಭರವಸೆ ಮೂಡಿಸಿದ ನಟರಾಗಿ ಹೊರಹೊಮ್ಮಿದ್ದಾರೆ.

ಹೊಸ ಪೀಳಿಗೆಯ ನಾಯಕಿಯರಲ್ಲಿ ಮಾಲಾಶ್ರೀ ಸಾಧನೆಯೊಂದು ದಾಖಲೆ. ನಂಜುಂಡಿ ಕಲ್ಯಾಣದಲ್ಲಿ ಗುಂಡಿನ ಹಾಡು ಇವರನ್ನು ಉನ್ನತ ಸ್ಥಾನಕ್ಕೆ ಏರಿಸಿತಲ್ಲದೇ ಮಾಲಾಶ್ರೀ ಸ್ಟೈಲ್ ಆರಂಭವಾಯಿತು. ಪೋಲೀಸನ ಹೆಂಡ್ತಿ, ರಾಣಿಮಹಾರಾಣಿ, ರೆಡಿಮೇಡ್‌ಗಂಡ, ಮಾಲಾಶ್ರೀಮಾಮಾಶ್ರೀ, ಬೆಳ್ಳಿಕಾಲುಂಗರ, ಹೃದಯಹಾಡಿತು ಮೊದಲಾದ ಚಿತ್ರಗಳ ಯಶಸ್ಸು ಮಾಲಾಶ್ರೀಯ ಮೋಡಿಯಿಂದಲೇ. ಇದೇ ಸಮಯದಲ್ಲಿ ನಾಯಕಿಯರಾಗಿದ್ದ ಸುಧಾರಾಣಿ, ಶೃತಿ, ಭವ್ಯ ಅವರುಗಳು ಮಾಲಾಶ್ರೀ ನೀಡಿದ ತೀವ್ರ ಪೈಪೋಟಿಯ ನಡುವೆಯೂ ಕದಲದೆ ನಿಂತರಾದರೂ ಮಾಲಾಶ್ರೀಯಷ್ಟು ಯಶಸ್ವಿಯಾಗಲಿಲ್ಲ. ಮೈಸೂರು ಮಲ್ಲಿಗೆಯಂತಹ ಚಿತ್ರಗಳಲ್ಲಿ ಸುಧಾರಾಣಿ ಉತ್ತಮ ಅಭಿನಯ ನೀಡಿದರು. ರಂಜಿತಾ (1993) ದಲ್ಲಿ ಶೃತಿ ಪ್ರಬುದ್ಧ ಅಭಿನಯ ನೀಡಿದರು. ತಾರಾ, ವಿನಯಾಪ್ರಸಾದ್, ಚಂದ್ರಿಕಾ, ಕಾವ್ಯ, ವನಿತಾವಾಸು, ಶಿವರಂಜಿನಿ, ಅಭಿನಯ, ಪ್ರೇಮಾ, ದುರ್ಗಾಶೆಟ್ಟಿ, ರಕ್ಷಿತಾ, ಅನು ಪ್ರಭಾಕರ್, ರಮ್ಯಾ, ಪ್ರಿಯಾಂಕ, ರಾಧಿಕಾ ಮೊದಲಾದವರು ಅಭಿನಯ ಕ್ಷೇತ್ರದಲ್ಲಿ ಹೆಸರು ಮಾಡುತ್ತಿದ್ದಾರೆ. ಹಸೀನಾ ಚಿತ್ರದಲ್ಲಿನ ಅಭಿನಯಕ್ಕಾಗಿ ತಾರಾ ಶ್ರೇಷ್ಠನಟಿ ಪ್ರಶಸ್ತಿಗಳಿಸಿದ್ದಾರೆ (2005). ಬಹು ಭಾಷೆಗಳಲ್ಲಿ ನಟಿಸುವ ನಟಿಯರ ಸಂಖ್ಯೆ ಹೆಚ್ಚುತ್ತಿದೆ. ಇತ್ತೀಚೆಗೆ ಕಣ್ಮರೆಯಾದ ಸೌಂದರ್ಯ ಬಹು ಭಾಷಾ ತಾರೆಯಾಗಿ ಹೆಸರು ಮಾಡಿದ್ದರು. ಅವರು ನಟಿಸಿದ 'ಆಪ್ತಮಿತ್ರ' ಕನ್ನಡದಲ್ಲಿ 2004ರ ಹಿಟ್

ಚಿತ್ರವೆನಿಸಿತು. ಪ್ರಣತಿ, ಮುಮ್ತಾಜ್, ಸೊನಾಲಿ ಜೋಷಿ, ಮೀರಾ, ರಮ್ಯಕೃಷ್ಣ, ಜಾಸ್ಮಿನ್, ರಿಚಾ ಪಲ್ಲೋಟ್, ಸದಾ, ಪ್ರಣತಿ, ಪ್ರೀತಿ ಜಿಂಗಾನಿಯಾ, ಸೊನಾಲಿ, ಸಂಗೀತಾ, ನಿಖಿತಾ, ಹೃಷಿತಾ ಪ್ರಿಯದರ್ಶಿನಿ, ಮನೀಷಾ, ಸ್ಫೂರ್ತಿ ಮೊದಲಾದ ನವನಟಿಯರು; ಮುರಳಿ, ಸುನೀಲ್, ಮಯೂರ್, ಆದಿತ್ಯ, ಧ್ಯಾನ್, ಪ್ರವೀಣ್ ಮೊದಲಾದ ನವನಟರೂ ಚಿತ್ರರಂಗ ಪ್ರವೇಶಿಸಿದ್ದಾರೆ. ಪೋಷಕ ಪಾತ್ರಗಳಲ್ಲಿ ಉಮಾಶ್ರೀ, ಗಿರಿಜಾ ಲೋಕೇಶ್, ಅಂಜಲಿ, ಕಾಮಿನಿಧರನ್ ಹೆಸರಾಗಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಹೇಗೆ ಹೊಸ ನಟರುಗಳ ಅವ್ಯಾಹತ ಪ್ರವೇಶವಾಗುತ್ತಿದೆಯೋ ಅದೇ ರೀತಿ ನಿರ್ದೇಶಕರ ಪ್ರವೇಶವೂ ಆಗುತ್ತಿದೆ. ಹಳೆಯ ನಿರ್ದೇಶಕರು ಹೊಸ ಪ್ರಯೋಗಗಳಿಗೆ ಮೈ ಒಡ್ಡಿಕೊಳ್ಳುತ್ತಿದ್ದಾರೆ. ಎಸ್.ವಿ.ರಾಜೇಂದ್ರಸಿಂಗ್ ಬಾಬು, ಸುನಿಲ್‌ಕುಮಾರ್ ದೇಸಾಯಿ, ರಾಜೇಂದ್ರಬಾಬು, ಜೋಸ್ಸೈಮನ್, ಟಿ.ಎಸ್.ನಾಗಾಭರಣ, ನಾಗತೀಹಳ್ಳಿಚಂದ್ರಶೇಖರ್, ಬರಗೂರು ರಾಮಚಂದ್ರಪ್ಪ ಗಮನಾರ್ಹವಾಗಿ ಹೊಸತನ್ನು ಸಾಧಿಸಿದ್ದಾರೆ. ಶಿವಮಣಿ, ಎಸ್.ನಾರಾಯಣ್, ಎಸ್.ಮಹೇಂದರ್, ಕೋಡ್ಲುರಾಮಕೃಷ್ಣ, ಓಂ ಪ್ರಕಾಶ್ ರಾವ್, ಬಿ.ರಾಮಮೂರ್ತಿ, ಸೀತಾರಾಮ ಕಾರಂತ್, ಟಿ.ಎನ್.ಸೀತಾರಾಮ್, ಎನ್.ಎಸ್.ಶಂಕರ್, ನಾಗಣ್ಣ ಮೊದಲಾದವರೆಲ್ಲ ಹೊಸತನಕ್ಕಾಗಿ ದುಡಿಯುತ್ತಿದ್ದಾರೆ.

ತಾಯಿಸಾಹೇಬ ಚಿತ್ರದಲ್ಲಿ ಜಯಮಾಲ

ಕನ್ನಡಿಗರಾದ ಸಂಕಲನಕಾರ ಸುರೇಶ ಅರಸ್ ಬಾಂಬೆ ಚಿತ್ರಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದದ್ದನ್ನು ಮತ್ತು ಅನಿಲ್‌ಮಲ್ನಾಡ್ ತೆಲುಗು ಚಿತ್ರಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದದ್ದನ್ನು ಈ ಪ್ರಶಸ್ತಿ ಪಡೆದ ಕನ್ನಡಿಗ ಸಂಕಲನಕಾರರು ಎಂಬ ಕಾರಣಕ್ಕೆ ಉಲ್ಲೇಖಿಸಬಹುದು. (ಜಿ.ಎಂಯು.)

**ಪ್ರಶಸ್ತಿಗಳು :** ಕನ್ನಡ ಚಿತ್ರರಂಗಕ್ಕೆ ಅಪೂರ್ವಸೇವೆ ಸಲ್ಲಿಸಿರುವ ನಟ ರಾಜ್‌ಕುಮಾರ್ ಮತ್ತು ನಿರ್ದೇಶಕ ಕಣಗಾಲ್ ಪುಟ್ಟಣ್ಣ ಅವರ ಹೆಸರಿನಲ್ಲಿ ಒಂದು ಲಕ್ಷರೂಪಾಯಿಗಳ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ನೀಡುತ್ತಾ ಬಂದಿದೆ. 1992-93ನೆಯ ವರ್ಷದಿಂದ ರಂಗಭೂಮಿಯ ಪ್ರಸಿದ್ಧ ನಟರಾದ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ಗುಬ್ಬಿವೀರಣ್ಣ ಪ್ರಶಸ್ತಿ ಆರಂಭಿಸಲಾಯಿತು. ಪ್ರಥಮ ವರ್ಷ ಈ ಪ್ರಶಸ್ತಿ ರಾಜ್‌ಕುಮಾರ್‌ರವರಿಗೆ ಸಂದಿತು. ಅನಂತರ ಈ ಪ್ರಶಸ್ತಿಗೆ ಡಾ.ರಾಜ್‌ಕುಮಾರ್ ಪ್ರಶಸ್ತಿ ಎಂದು ಮರುನಾಮಕರಣ ಮಾಡಲಾಯಿತು. ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ಈಗ ವೃತ್ತಿ ರಂಗಭೂಮಿಗೆ ಗಣನೀಯ ಸೇವೆಸಲ್ಲಿಸಿದ ಕಲಾವಿದರಿಗೆ ನೀಡಲಾಗುತ್ತಿದೆ. ಇಲ್ಲಿಯವರೆಗೆ ಡಾ.ರಾಜ್‌ಕುಮಾರ್ ಪ್ರಶಸ್ತಿಯನ್ನು ಕೆ.ಎಸ್.ಅಶ್ವಥ್ (1993-94), ಪಂಡರೀಬಾಯಿ (1994-95), ಆರ್.ಲಕ್ಷ್ಮಣ್ (1995-96), ಎಂ.ಎನ್.ಬಸವರಾಜಯ್ಯ (1996-97), ಎಂ.ವಿ.ರಾಜಮ್ಮ (1997-98), ವಾದಿರಾಜ್ (1998-99), ಎಂ.ಲೀಲಾವತಿ (1999-2000), ವಿಜಯಭಾಸ್ಕರ್ (2000-01), ಪ್ರತಿಮಾದೇವಿ ಶಂಕರ್‌ಸಿಂಗ್ (2001-02), ಕೆ.ಸಿ.ಎನ್.ಗೌಡ (2003-04) ಪಡೆದಿದ್ದಾರೆ.

ಕಣಗಾಲ್ ಪುಟ್ಟಣ್ಣ ಪ್ರಶಸ್ತಿಯನ್ನು 1986-87ರಿಂದ ನೀಡಲಾಗುತ್ತಿದೆ. ಪ್ರಥಮ ವರ್ಷ ಹುಣಸೂರು ಕೃಷ್ಣಮೂರ್ತಿ ಈ ಪ್ರಶಸ್ತಿ ಪಡೆದರು. ಅನಂತರ ಜಿ.ವಿ.ಅಯ್ಯರ್ (1987-88), ಬಿ.ಎಸ್.ರಂಗ (1988-89), ಟಿ.ಎನ್.ಬಾಲಕೃಷ್ಣ (1989-90), ವೈ.ಆರ್.ಸ್ವಾಮಿ (1990-91), ಎಂ.ಆರ್.ವಿಠ್ಠಲ್ (1991-92), ಗೀತಪ್ರಿಯ (1992-93), ಸಿದ್ಧಲಿಂಗಯ್ಯ (1993-94), ಕೆ.ಎಸ್.ಎಲ್.ಸ್ವಾಮಿ (1994-95), ದೊರೆ-ಭಗವಾನ್ (1995-96), ಎಸ್.ವಿ.ರಾಜೇಂದ್ರಸಿಂಗ್ ಬಾಬು (1996-97), ಗಿರೀಶ್‌ಕಾಸರವಳ್ಳಿ (1997-98), ಟಿ.ಎಸ್.ನಾಗಾಭರಣ (1998-99), ವಿ.ಸೋಮಶೇಖರ್ (1999-2000), ಕೆ.ವಿ.ಜಯರಾಂ (2000-01), ಎಂ.ಎಸ್.ರಾಜಶೇಖರ್ (2001-02), ವಿಜಯಾ ರೆಡ್ಡಿ (2003-04) ಪಡೆದಿದ್ದಾರೆ.

**ಜೀವಿತಾವಧಿ ಕೊಡುಗೆ ಗೌರವ ಪ್ರಶಸ್ತಿ :** ಕನ್ನಡ ಚಲನಚಿತ್ರ ರಂಗಕ್ಕೆ ಜೀವಮಾನದ ವಿಶಿಷ್ಟ ಕೊಡುಗೆ ಸಲ್ಲಿಸಿದವರಿಗಾಗಿ ಐವತ್ತು ಸಾವಿರ ರೂಪಾಯಿಗಳ ನಗದು ಬಹುಮಾನ ನೀಡಲಾಗುತ್ತಿದೆ.

**ತುಳು ಚಲನಚಿತ್ರಗಳು :** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಚಲಿತ ಭಾಷೆಯಾದ ತುಳುವಿನಲ್ಲಿ ಚಲನಚಿತ್ರಗಳ ತಯಾರಿಕೆ ಆರಂಭವಾದದ್ದು ಎಪ್ಪತ್ತರ ದಶಕದಲ್ಲಿ. ಕೆಲವು ಕನ್ನಡ ಚಿತ್ರಗಳನ್ನು ನಿರ್ಮಿಸಿದ್ದ ರಾಜನ್ ಹಾಗೂ ವೃತ್ತಿಯಲ್ಲಿ ದರ್ಜಿಯಾಗಿದ್ದು ಅಭಿನಯ ಕಲೆಯಲ್ಲಿ ಆಸಕ್ತಿ ಇದ್ದ ಕೆ.ಎನ್.ಟೇಲರ್ ಎಂಬುವರಿಬ್ಬರೂ ಪ್ರತ್ಯೇಕವಾಗಿ ತುಳು ಚಿತ್ರಗಳ ನಿರ್ಮಾಣಕ್ಕೆ ಏಕಕಾಲದಲ್ಲಿ ತೊಡಗಿದ್ದರು. ರಾಜನ್ ಅವರ ಎನ್ನತಂಗಡಿ ಎಂಬ ಚಿತ್ರ ಮೊದಲು ಬಿಡುಗಡೆಯಾಯಿತು. ಈ ಚಿತ್ರದಲ್ಲಿ ನಿರ್ದೇಶಕ ರಾಜನ್ ಅವರೇ ನಾಯಕರಾಗಿದ್ದರು. ಮಲ್ಪೆಯ ಮಧ್ವರಾಜರ ನೆರವಿನಿಂದ ಕೆ.ಎನ್.ಟೇಲರ್ ನಿರ್ಮಿಸಿದ ದಾರೆದ ಬುಡದಿ ಟೇಲರರ ಹಾಸ್ಯ, ಆಕರ್ಷಕ ಹೊರಾಂಗಣ ಚಿತ್ರಗಳಿಂದ ಸಾಕಷ್ಟು ಯಶಸ್ವಿಯಾಯಿತು. ನುರಿತ ನಿರ್ದೇಶಕರಾದ ಆರೂರ್ ಪಟ್ಟಾಭಿ ಇದನ್ನು ನಿರ್ದೇಶಿಸಿದ್ದರು. ಅನಂತರ ಎನ್ನತಂಗಡಿಯಲ್ಲಿ ಅಭಿನಯಿಸಿದ್ದ ತುಳುನಟ ಆನಂದಟೇಲರ್ ಸ್ವಂತ ಚಿತ್ರವನ್ನು ತಯಾರಿಸಿದರು. ಆರೂರ್‌ಪಟ್ಟಾಭಿ ನಿರ್ದೇಶಿಸಿದ ಸೂರ್ಯನಾರಾಯಣ ಚಡಗರ ಕಾದಂಬರಿ ಆಧಾರಿತ ಪಗೆತ ಪುಗೆ ಚಿತ್ರದಲ್ಲಿ ಆನಂದ ಟೇಲರ್ ದ್ವಿಪಾತ್ರ ವಹಿಸಿದ್ದರು. ಇವರೇ ನಿರ್ಮಿಸಿದ ಇನ್ನೊಂದು ಚಿತ್ರ ಕಾಸೆದಾಯ್ ಕಂಡನಿ. ಪ.ಗೋಪಾಲಕೃಷ್ಣ ಎಂಬುವವರು ತಯಾರಿಸಿದ ಸರ್ಪಸಂಕಲೆ ಒಳ್ಳೆಯ ಪ್ರಚಾರವನ್ನು ಪಡೆದುಕೊಂಡರೂ ಬಿಡುಗಡೆ ಕಾಣಲಿಲ್ಲ. ಮಲೆಯಾಳಂ ನಿರ್ದೇಶಕರು ನಿರ್ದೇಶಿಸಿದ ಉಡಲ್ದ ತುಡರ್ ಕೂಡ ಯಶಸ್ಸು ಕಾಣಲಿಲ್ಲ. ತುಳು ಚಿತ್ರಗಳಲ್ಲಿ ಅಪಾರ ಯಶಸ್ಸು ಪಡೆದ ಚಿತ್ರಗಳೆಂದರೆ ಎಂ.ವೈ.ಕೋಲಾ ನಿರ್ಮಿಸಿದ ಬಿಸತ್ತಿ ಬಾಬು ಹಾಗೂ ಕೆ.ಎಂ.ಸುವರ್ಣ ಅವರ ಕೋಟಿಚೆನ್ನಯ್ಯ. ಆರೂರ್ ಪಟ್ಟಾಭಿ ನಿರ್ದೇಶಿಸಿದ ಬಿಸತ್ತಿಬಾಬು ಚಿತ್ರಕ್ಕೆ 72-73ನೆಯ ಸಾಲಿನ ರಾಜ್ಯ ಪ್ರಶಸ್ತಿಯೂ ಬಂದಿದೆ. ಜನಪ್ರಿಯ ಜನಪದ ಕಥೆಯಾಗಿರುವ ಕೋಟಿ ಚೆನ್ನಯ್ಯ ನಿರ್ಮಾಣಕ್ಕೆ ಆಗಿನ ಕಾಲಕ್ಕೆ ಸು.3 ಲಕ್ಷ ರೂಪಾಯಿಗಳ ವೆಚ್ಚವಾಗಿ ತುಳು ಚಿತ್ರಗಳಲ್ಲಿಯೇ ಅತ್ಯಂತ ವೆಚ್ಚದ ನಿರ್ಮಾಣ ಇದಾಗಿತ್ತು. ಶತದಿನೋತ್ಸವವನ್ನು ಆಚರಿಸಿದ ಈ ಮೊದಲ ತುಳು ಚಿತ್ರವನ್ನು ನಿರ್ದೇಶಿಸಿದವರು ಕಾದಂಬರಿಕಾರ ವಿಶುಕುಮಾರ್. ಈ ಚಿತ್ರಕ್ಕೆ 73-74ನೆಯ ಸಾಲಿನ ರಾಜ್ಯ ಪ್ರಶಸ್ತಿ ಬಂದಿದೆ. ಅನಂತರ ಬಂದ ಟೇಲರ್ ಅವರ ಸ್ವಂತ ನಿರ್ದೇಶನದ ಯಾನ್ ಸನ್ಯಾಸಿ ಆಪೆ ಹಾಗೂ ದಂಡಕೇರಿಯವರ ಬಯ್ಯ ಮಲ್ಲಿಗೆ ಅಂಥ ಯಶಸ್ಸನ್ನೇನೂ ಕಾಣಲಿಲ್ಲ. ಕೆ.ಎನ್.ಟೇಲರ್ ಅವರ ನಿರ್ದೇಶನದಲ್ಲಿ ಇನ್ನೊಂದು ಜನಪದ ಕಥೆ ತುಳುನಾಡ ಸಿರಿ ತೆರೆಕಂಡಿದೆ. ಮಂಗಳೂರು, ಉಡುಪಿ ಮತ್ತು ಪುತ್ತೂರು ಈ ಮೂರು ತಾಲ್ಲೂಕುಗಳಲ್ಲಷ್ಟೇ ನಿಜವಾದ ಮಾರುಕಟ್ಟೆ ಇರುವ ತುಳು ಚಿತ್ರಗಳ ತಯಾರಿಕೆ ಅಷ್ಟು ಲಾಭದಾಯಕವಾಗಿಲ್ಲವಾದ್ದರಿಂದ ಸರ್ಕಾರದಿಂದ ಸಹಾಯಧನ ದೊರೆಯುವಂತಿದ್ದರೂ ತುಳು ಚಿತ್ರಗಳ ನಿರ್ಮಾಣ ಅಷ್ಟು ಭರದಿಂದ ಸಾಗುತ್ತಿಲ್ಲ. (ಎಸ್.ಎಸ್.ಎಂಯು.)

**ಚಳ್ಳಕೆರೆ :** ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು, ಅದರ ಮುಖ್ಯ ಸ್ಥಳ. ಈ ತಾಲ್ಲೂಕಿನ ಪೂರ್ವದಲ್ಲಿ ಆಂಧ್ರ ಪ್ರದೇಶ ಮತ್ತು ಪಾವಗಡ ತಾಲ್ಲೂಕು, ದಕ್ಷಿಣದಲ್ಲಿ ಹಿರಿಯೂರು ತಾಲ್ಲೂಕು, ಪಶ್ಚಿಮದಲ್ಲಿ ಜಗಳೂರು ಮತ್ತು ಚಿತ್ರದುರ್ಗ ತಾಲ್ಲೂಕು, ಉತ್ತರದಲ್ಲಿ ಬಳ್ಳಾರಿ ಜಿಲ್ಲೆ ಮತ್ತು ಮೊಳಕಾಲ್ಮೂರು ತಾಲ್ಲೂಕು ಇವೆ. 1882ರವರೆಗೆ ಇದಕ್ಕೆ ದೊಡ್ಡೇರಿ ತಾಲ್ಲೂಕು ಎಂಬ ಹೆಸರಿತ್ತು. 1825ರಿಂದ 1866ರವರೆಗೆ ಮೊಳಕಾಲ್ಮೂರು ತಾಲ್ಲೂಕಿನ ಪ್ರದೇಶ ಇದಕ್ಕೆ ಸೇರಿತ್ತು. ಈಗ ತಾಲ್ಲೂಕಿನಲ್ಲಿ ಚಳ್ಳಕೆರೆ, ನಾಯಕನಹಟ್ಟಿ, ಪರಶುರಾಮಪುರ ಮತ್ತು ತಳಕು ಎಂಬ ನಾಲ್ಕು ಹೋಬಳಿಗಳೂ 190 ಹಳ್ಳಿಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 2,059.8ಚ.ಕಿಮೀ. ಜನಸಂಖ್ಯೆ 3,24,822.

ಈ ತಾಲ್ಲೂಕಿನಲ್ಲಿ ಚದರಿದಂತೆ ಕೆಲವು ಕಣಶಿಲೆಯ ಬೆಟ್ಟಗಳಿವೆ. ಉಳಿದ ಭಾಗ ಹಲವು ತೊರೆಗಳಿಂದ ಒಡೆದ ಸ್ವಲ್ಪ ಏರುತಗ್ಗಿನ ಮೈದಾನ ಪ್ರದೇಶವಾಗಿದೆ. ಹೆಚ್ಚು ಭಾಗ ಕಲ್ಲುಮಿಶ್ರಿತ ಕೆಂಪು ಭೂಮಿ. ನೀರಾವರಿಗೆ ಒಳಪಟ್ಟಿರುವ ಭೂಮಿ ವಿನಾ ಉಳಿದ ನೆಲ ಅಷ್ಟೇನೂ ಫಲವತ್ತಾಗಿಲ್ಲ. ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಉತ್ತಮವಾದ ಕಪ್ಪು ಮಣ್ಣಿನ ಪ್ರದೇಶವಿದೆ. ಅನೇಕ ಕಡೆಗಳಲ್ಲಿ ಮಣ್ಣು ಲವಣಯುಕ್ತವಾದ್ದು. ಚಳ್ಳಕೆರೆ ಪಟ್ಟಣದ ಪೂರ್ವಕ್ಕೆ, ಉಲ್ಲವರ್ತಿ ಕಾವಲ್‌ನಲ್ಲಿ ಮಣ್ಣಿನ ಮೇಲ್ಭಾಗದಲ್ಲಿ ಉರುಳೆಯಾಕಾರದ ಹರಳುಗಳ ರೂಪದಲ್ಲಿ ಪಾಟಲವರ್ಣದ ಕುರುಂದ ಶಿಲೆ ದೊರೆಯುತ್ತದೆ.

ಈ ತಾಲ್ಲೂಕಿನ ವಿಸ್ತೃತವಾದ ಅಮೃತಮಹಲ್ ಕಾವಲುಗಳು ಪ್ರಸಿದ್ಧವಾಗಿವೆ. ಸಣ್ಣ ತೊರೆಗಳ ದಡಗಳಲ್ಲಿ ಕೆರೆಯಂಗಳ ಮತ್ತಿತರ ತಗ್ಗು ಪ್ರದೇಶಗಳಲ್ಲಿ ಖರ್ಜೂರದ ಗಿಡಗಳುಂಟು.

ವೇದಾವತಿ ನದಿ ಅತ್ಯಂತ ದಕ್ಷಿಣದ ಅಂಚಿನಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ, ದಕ್ಷಿಣೋತ್ತರವಾಗಿ ಹರಿದು, ಈಶಾನ್ಯ ದಿಕ್ಕಿಗೆ ತಿರುಗಿ ಘಟಪರ್ತಿ ಎಂಬಲ್ಲಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ನಾಯಕನಹಟ್ಟಿ ಹೊಳೆ ಮತ್ತು ಗರಣಿ ಇದರ ಉಪನದಿಗಳು. ಈ ನದಿಯ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ. ನಂದಿಹಳ್ಳಿಯಲ್ಲಿ ನಿರ್ಮಾಣವಾಗುವ ಅಣೆಕಟ್ಟಿನಿಂದ ಈ ತಾಲ್ಲೂಕಿಗೆ ಹೇರಳವಾದ ನೀರು ಒದಗುವ ಭರವಸೆಯುಂಟು. ಪಾವಗಡ ತಾಲ್ಲೂಕಿನಲ್ಲಿ ಹುಟ್ಟಿ, ಈ ತಾಲ್ಲೂಕಿನ ಕಡೆಗೆ ಹರಿಯುವ ಮತ್ತೊಂದು ಪುಟ್ಟ ಉಪನದಿ ಈ ತಾಲ್ಲೂಕಿನ ಆಗ್ನೇಯ ಭಾಗಕ್ಕೆ ನೀರನ್ನು ಒದಗಿಸುತ್ತದೆ. ವಾಯುವ್ಯ ಮೂಲೆಯ ಪ್ರದೇಶ ಹಗರಿ ನದಿಯ ಕಣಿವೆಗೆ ಸೇರಿದ್ದು ಈ ನದಿಯೇ ತಾಲ್ಲೂಕಿನ ವಾಯುವ್ಯದ ಎಲ್ಲೆ.

ಇದು ಚಿತ್ರದುರ್ಗ ಜಿಲ್ಲೆಯ ಅತ್ಯಂತ ಕಡಿಮೆ ಮಳೆ ಬೀಳುವ ತಾಲ್ಲೂಕು. ಸರಾಸರಿ ವಾರ್ಷಿಕ ಮಳೆ 404.54ಮಿಮೀ. ಈ ತಾಲ್ಲೂಕಿನ ಕೆರೆಗಳ ಪೈಕಿ ಪರಶುರಾಮಪುರದ ಕೆರೆ ಅತ್ಯಂತ ದೊಡ್ಡದು. ನಾರಾಯಣಪುರ ಅಣೆಕಟ್ಟಿನಿಂದ ಒಂದು ಪೋಷಕ ಕಾಲುವೆಯನ್ನು ಇದಕ್ಕೆ ಸೇರಿಸಲಾಗಿದೆ. ಈ ತಾಲ್ಲೂಕಿನ ಅತ್ಯಂತ ಹಳೆಯ ಕೆರೆಯಾದ ನಾಯಕನಹಟ್ಟಿ ಹಿರೆಕೆರೆ ಸು.300 ವರ್ಷಗಳ ಹಿಂದೆ ತಿಪ್ಪೇರುದ್ರಸ್ವಾಮಿಯಿಂದ ನಿರ್ಮಿತವಾದ್ದು. ರಾಮಸಾಗರ ಕೆರೆ, ಮಣ್ಣಿಕೋಟೆ, ಕೋಡಿಹಳ್ಳಿ ಕೆರೆ, ಮೀರಸಾಬಿಹಳ್ಳಿ ರಾಣಿಕೆರೆ - ಇವು ತಾಲ್ಲೂಕಿನ ಇತರ ಕೆರೆಗಳು. ವೇದಾವತಿ ನದಿಯ ನೀರನ್ನು ಎರಡೂ ದಡಗಳಲ್ಲಿ ಮೇಲೆತ್ತಿ ವ್ಯವಸಾಯಕ್ಕೆ ಉಪಯೋಗಿಸಲಾಗುತ್ತಿದೆ. ಇತ್ತೀಚೆಗೆ ನಾರಾಯಣಪುರದಲ್ಲಿ ನಿರ್ಮಾಣವಾದ ಅಣೆಕಟ್ಟಿನ ಸಹಾಯದಿಂದ ಈ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಒದಗಿದೆ.

ಈ ತಾಲ್ಲೂಕಿನಲ್ಲಿ ಖುಷ್ಕಿ ಬೆಳೆಗಳೇ ಮುಖ್ಯ. ಸಾವೆ, ಸಜ್ಜೆ, ರಾಗಿ, ನವಣೆ, ತೊಗರಿ, ಕಡಲೆ, ತಂಬಾಕು, ನೆಲಗಡಲೆ ಮುತ್ತಿತರ ಎಣ್ಣೆಯ ಬೀಜಗಳು ಮುಖ್ಯ ಬೆಳೆಗಳು. ಇವುಗಳಲ್ಲಿ ಕೆಲವನ್ನು ನೀರಾವರಿ ಅನುಕೂಲವಿರುವೆಡೆಗಳಲ್ಲೂ ಬೆಳೆಯಲಾಗುತ್ತಿದೆ. ಕಪ್ಪುಮಣ್ಣು ಇರುವ ಪ್ರದೇಶಗಳಲ್ಲಿ ಹತ್ತಿ ಬೆಳೆಯುತ್ತಾರೆ. ನೀರಿನ ಅನುಕೂಲವಿರುವೆಡೆಗಳಲ್ಲಿ ಬತ್ತ ಬೆಳೆಯುತ್ತಾರೆ. ಕೆರೆಗಳ ಬಳಿಯಲ್ಲಿ ಕೆಲವೆಡೆ ತೆಂಗು ಮತ್ತು ವೀಳೆಯದೆಲೆ ತೋಟಗಳಿವೆ. ನಾಲಾ ಅನುಕೂಲದಿಂದಲೂ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಉಲ್ಲವರ್ತಿ ಕಾವಲಿನಲ್ಲಿ ದನಕರುಗಳನ್ನು ಸಾಕುವ ಕ್ಷೇತ್ರಗಳುಂಟು.

ಬೆಂಗಳೂರು-ಬಳ್ಳಾರಿ ಮಾರ್ಗ ಈ ತಾಲ್ಲೂಕಿನ ಮೂಲಕ ಹಾಯ್ದು ಹೋಗುತ್ತದೆ. ಚಿತ್ರದುರ್ಗದಿಂದ ಬರುವ ರಸ್ತೆಯೊಂದು ಇದನ್ನು ಚಳ್ಳಕೆರೆಯಲ್ಲಿ ಸಂಧಿಸುತ್ತದೆ. ಚಳ್ಳಕೆರೆಯಿಂದ ಪಾವಗಡ ಮತ್ತು ಜಗಳೂರುಗಳಿಗೆ ರಸ್ತೆಗಳುಂಟು. ಈ ತಾಲ್ಲೂಕಿನಲ್ಲಿ ರೈಲು ಮಾರ್ಗವಿಲ್ಲ. ಬಹಳ ಹತ್ತಿರದ ರೈಲು ನಿಲ್ದಾಣವೆಂದರೆ ಚಿತ್ರದುರ್ಗ.

ನಿಡುಗಲ್ ಮನೆತನದವರಿಂದ ಸ್ಥಾಪಿತವಾದ ದೊಡ್ಡೇರಿ, ಚಳ್ಳಕೆರೆಗೆ ಪೂರ್ವದಲ್ಲಿ ಸು.6ಕಿಮೀ ದೂರದಲ್ಲಿದೆ. ಈ ಊರು ಮುಂದೆ ಶಿರಾ ನವಾಬರ ಮತ್ತು ಹೈದರ್ ಅಲಿಯ ಕಾಲದಲ್ಲಿ ಒಂದು ಮುಖ್ಯ ಸ್ಥಳವಾಗಿತ್ತಲ್ಲದೆ 1882ರ ವರೆಗೆ ತಾಲ್ಲೂಕಿನ ಕೇಂದ್ರವೂ ಆಗಿತ್ತು. ಹಿಂದೆ ಇದು ಕಾಗದದ ಕೈಗಾರಿಕೆಗೆ ಹೆಸರಾಗಿತ್ತು. ಇಲ್ಲಿಯ ಕಾಗದದ ಹಾಳೆಗಳ ಪ್ರಮಾಣ ವಿಶಿಷ್ಟವಾಗಿದ್ದು ಅದನ್ನು ದೊಡ್ಡೇರಿ ಗಜ ಎಂದೇ ಕರೆಯಲಾಗುತ್ತಿತ್ತು. ನಾಯಕನಹಟ್ಟಿ ಈ ತಾಲ್ಲೂಕಿನ ಇನ್ನೊಂದು ಮುಖ್ಯ ಸ್ಥಳ. ನಾಯಕನಹಟ್ಟಿಯ ಕಲ್ಲೇದೇವಪುರ, ಗೌರಸಮುದ್ರದ ಜಾತ್ರೆಗಳು ಪ್ರಸಿದ್ಧವಾದವು.

ಚಳ್ಳಕೆರೆ ಈ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರು-ಬಳ್ಳಾರಿ ರಸ್ತೆಯಲ್ಲಿ ಚಿತ್ರದುರ್ಗದಿಂದ ಈಶಾನ್ಯಕ್ಕೆ 29ಕಿಮೀ ದೂರದಲ್ಲಿದೆ. ಜನಸಂಖ್ಯೆ 49,065. ಪ್ರತಿ ಭಾನುವಾರ ಇಲ್ಲಿ ನಡೆಯುವ ಸಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಂತ ದೊಡ್ಡದು ಹಾಗೂ ಪ್ರಸಿದ್ಧವಾದ್ದು. ನೆಲಗಡಲೆ, ಹತ್ತಿ, ಬತ್ತ ಇವು ಇಲ್ಲಿ ವ್ಯಾಪಾರವಾಗುವ ಸರಕುಗಳು. ಚಳ್ಳಕೆರೆ ಪಟ್ಟಣದಲ್ಲಿ ಒಂದು ನಿಯಂತ್ರಿತ ಮಾರುಕಟ್ಟೆಯೂ ಉಂಟು. ಈ ಪಟ್ಟಣದ ದೇವತೆ ಚಳ್ಳಕೆರೆ ಅಮ್ಮ. ಇಲ್ಲಿಯ ಪುರ ಪ್ರೌಢಶಾಲೆ ಇಡೀ ಜಿಲ್ಲೆಯಲ್ಲೇ ಹಳೆಯದು. ಇಲ್ಲಿ ಅನೇಕ ಎಣ್ಣೆ ಗಿರಣಿಗಳುಂಟು. ಚಳ್ಳಕೆರೆ ಪಟ್ಟಣದಲ್ಲೂ ತಾಲ್ಲೂಕಿನ ಅನೇಕ ಕಡೆಗಳಲ್ಲೂ ಅನೇಕ ಹತ್ತಿ ಕೈಮಗ್ಗಗಳುಂಟು. ಚಳ್ಳಕೆರೆ ವ್ಯಾಪಾರ ಕೇಂದ್ರವಾಗಿ ವಿಸ್ತಾರಗೊಳ್ಳುತ್ತಿದೆ. ಇಡೀ ಜಿಲ್ಲೆಗೆ ಇಲ್ಲಿಂದ ಉತ್ತಮ ಮಾರ್ಗ ಸಂಪರ್ಕವುಂಟು. ಇಲ್ಲಿ ಪುರಸಭಾಡಳಿತವಿದೆ. (ಎ.ಕೆ.)

**ಚಾಂದಬೀಬಿ :** ಖ್ಯಾತ ವೀರಾಗ್ರಣಿ. ಬಿಜಾಪುರದ ಸುಲ್ತಾನ ಅಲಿ ಆದಿಲ್ ಷಾನ (1558-80) ಪತ್ನಿ. ಅಹಮದ್‌ನಗರದ ಸುಲ್ತಾನ ಹುಸೈನ್ ನಿಜಾಮ್ ಷಾನ ಪುತ್ರಿ. ಅಲಿ ಆದಿಲ್ ಷಾ ತೀರಿಕೊಂಡಾಗ,

ರಾಣಿ ಚಾಂದಬೀಬಿ ತನ್ನ ಗಂಡನ ತಮ್ಮನ ಮಗನಾದ ಇಬ್ರಾಹೀಮನಿಗೆ ಪಟ್ಟಕಟ್ಟಿ ತಾನೇ ಆಡಳಿತಸೂತ್ರ ವಹಿಸಿದಳು. ಈಕೆಯ ಆಳಿಕೆ ಜನಪ್ರಿಯವಾಯಿತು. ಆದರೆ ಅಂದಿನ ಸ್ಥಿತಿಯಲ್ಲಿ ರಾಜ್ಯದ ವಜೀರರು ಪ್ರಬಲರಾಗಿದ್ದರು. ಕಮಾಲ್ ಖಾನ್ ಎಂಬ ವಜೀರ ರಾಜ್ಯಾಡಳಿತವನ್ನು ತನ್ನ ಕೈಗೇ ತೆಗೆದುಕೊಳ್ಳುವ ಪ್ರಯತ್ನ ನಡೆಸಿದ್ದ. ಚಾಂದಬೀಬಿ ಕಿನ್ವರ್ ಖಾನ್ ಎಂಬುವನನ್ನು ನಿಯೋಜಿಸಿ ಕಮಾಲ್ ಖಾನನನ್ನು ಕೊಲೆ ಮಾಡಿಸಿದಳು. ಕಿನ್ವರ್ ಖಾನನಾದರೋ ಅಧಿಕಾರದಾಹಿಯಾಗಿ ಚಾಂದಬೀಬಿಯನ್ನೇ ಸಾತಾರಾದ ಸೆರೆಗಟ್ಟಿದ. ಆದರೆ ರಾಜ್ಯದಲ್ಲಿದ್ದ ಅಬಿಸೀನಿಯದ ಸೈನಿಕರು ಚಾಂದಬೀಬಿಯನ್ನು ಸೆರೆಯಿಂದ ಬಿಡಿಸಿದರು. ಕಿನ್ವರ್ ಖಾನ್ ಓಡಿಹೋದ. ಕೆಲಕಾಲಾನಂತರ ಚಾಂದಬೀಬಿ ಬಿಜಾಪುರವನ್ನು ಬಿಟ್ಟು ತನ್ನ ತೌರಾದ ಅಹಮದ್‌ನಗರಕ್ಕೆ ತೆರಳಿದಳು. ಅಲ್ಲಿ ಆಗ ಈಕೆಯ ಸೋದರನಾದ ಬುರ್ಹಾನ್ ಷಾ ಅಹಮದ್ ನಗರದ ಸುಲ್ತಾನನಾಗಿದ್ದ. ಆತ ತನ್ನ ಮಗ ಇಬ್ರಾಹಿಂನನ್ನು ತನ್ನ ಉತ್ತರಾಧಿಕಾರಿಯೆಂದು ನೇಮಿಸಿದಾಗ, ಆ ಆಯ್ಕೆಯನ್ನು ಅವನ ಸೇನಾನಾಯಕ ವಿರೋಧಿಸಿದ. ಪರಿಣಾಮವಾಗಿ ಅವರ ನಡುವೆ ತೀವ್ರ ಹೋರಾಟಗಳುಂಟಾದುವು.

ಬುರ್ಹಾನನ ಮರಣಾನಂತರ ಇಬ್ರಾಹೀಮ್ ತನ್ನ ಅತ್ತೆಯಾದ ಚಾಂದಬೀಬಿಯ ಸಹಾಯದಿಂದ ಅಧಿಕಾರ ರೂಢನಾದರೂ ಬಿಜಾಪುರದ ಆದಿಲ್‌ಷಾನೊಡನೆ ನಡೆದ ಒಂದು ಕದನದಲ್ಲಿ ಮಡಿದ (1595). ಈತನ ಮಗ ಬಹಾದೂರನನ್ನು ರಾಜ್ಯದ ವಾರಸುದಾರನೆಂದು ಚಾಂದಬೀಬಿ ಘೋಷಿಸಿ ಆತನಿಗೆ ಬೆಂಬಲವಾಗಿ ನಿಂತಳು. ಆದರೆ ಅಹಮದ್ ಎಂಬಾತ ಇದನ್ನು ತಿರಸ್ಕರಿಸಿ ಯುದ್ಧಕ್ಕೆ ಅಣಿಯಾದ. ಅಹಮದ್‌ನಗರದ ಈ ಆಂತರಿಕ ಕಲಹಗಳ ಉಪಯೋಗ ಪಡೆದು ಮುಗಲ್ ರಾಜಕುಮಾರ ಮುರಾದ ಅಹಮದ್‌ನಗರದ ಮೇಲೆ ಏರಿ ಹೋದ. ಆಗ ಚಾಂದಬೀಬಿ ಸ್ವತಃ ರಣರಂಗಕ್ಕೆ ಇಳಿದಳು. ಕಲಿತನದಿಂದ ಕಾದಾಡಿ ಮುಗಲ್ ಸೈನ್ಯದ ಒತ್ತಡವನ್ನು ಹಿಮ್ಮೆಟ್ಟಿಸಿದ್ದಳು. ಕೋಟೆಯನ್ನು ಭೇದಿಸಲು ಶತ್ರುಗಳು ಹೂಡಿದ ತಂತ್ರಗಳನ್ನು ನಾಶಗೊಳಿಸಿದಳಲ್ಲದೆ, ತನ್ನ ನಂಬುಗೆಯ ಸೇನಾಪತಿಗಳಾದ ಷಾ ಅಲಿ ಮತ್ತು ಅಭಂಗ್ ಖಾನರ ನೆರವಿನಿಂದ

ಮುಗಲರ ಸೈನ್ಯದ ಮೇಲೆ ಆಕ್ರಮಣ ಮಾಡಿದಳು. ಈ ವೇಳೆಗೆ ಬಿಜಾಪುರದ ಸೈನ್ಯವೂ ಈಕೆಯ ಸಹಾಯಕ್ಕೆ ಧಾವಿಸಿತು.ಇನ್ನು ಕದನ ಹೂಡಿ ಫಲವಿಲ್ಲವೆಂದು ಬಗೆದ ಮುರಾದ ಒಪ್ಪಂದಕ್ಕೆ ಹಾತೊರೆದ. ಚಾಂದಬೀಬಿಯೂ ಇದಕ್ಕೆ ಸಿದ್ಧಳಾಗಿದ್ದುದರಿಂದ ತಾತ್ಕಾಲಿಕವಾಗಿ ಇಬ್ಬರ ನಡುವಣ ಹೋರಾಟಗಳು ಕೊನೆಗೊಂಡುವು. ಆದರೆ ಬೀರಾರ್ ಕೋಟೆಯನ್ನು ಈಕೆ ಮುಗಲರಿಗೆ ಒಪ್ಪಿಸಬೇಕಾಯಿತು.

ಶತ್ರುವಿನ ಮುತ್ತಿಗೆಯ ಕಾಲದಲ್ಲಿ ಅಹಮದ್‌ನಗರದ ರಾಜಮನೆತನದವರ ಅಂತಃಕಲಹಗಳು ಸ್ವಲ್ಪಕಾಲ ನಿಂತಿದ್ದುವಾದರೂ ಈ ಕದನ ನಿಲುಗಡೆ ಒಪ್ಪಂದವೇರ್ಪಟ್ಟ ಕೂಡಲೇ ಹಳೆಯ ವೈಮನಸ್ಯಗಳು ಪುನಃ ತಲೆ ಎತ್ತಿದುವು. ಮುಗಲರ ಕಾಟದಿಂದ ದೂರವಿರಲು ಈಕೆ ರಾಜಧಾನಿಯನ್ನು ಜುನ್ನರ್‌ಗೆ ಸ್ಥಳಾಂತರಿಸಬಯಸಿದಳು. ಆದರೆ ಅಹಮದ್‌ನಗರವನ್ನು ಈಕೆ ಮುಗಲರಿಗೆ ಹಸ್ತಾಂತರಿಸುತ್ತಿದ್ದಾಳೆಂದು ಈಕೆಯ ವಿರೋಧಿಗಳು ಅಪಪ್ರಚಾರ ಆರಂಭಿಸಿ, ಪ್ರಜೆಗಳು ಇವಳಲ್ಲಿರಿಸಿದ್ದ ನಂಬುಗೆ ಸಡಿಲಗೊಳ್ಳುವಂತೆ ಮಾಡಿದರು. ನೆಹಂಗ್ ಖಾನ್ ಎಂಬ ಈಕೆಯ ವಿರೋಧಿ ನಾಯಕ ಈಕೆ ಮುಗಲರೊಡನೆ ಏರ್ಪಡಿಸಿಕೊಂಡಿದ್ದ ಒಪ್ಪಂದವನ್ನು ಉಲ್ಲಂಘಿಸಿ, ಇವಳ ಅನುಜ್ಞೆಯನ್ನು ಬದಿಗೆ ಸರಿಸಿ ಬೀರಾರಿಗೆ ಮುತ್ತಿಗೆ ಹಾಕಿದ. ಆದರೆ ಮುಗಲರ ಸೈನ್ಯ ಇವನನ್ನು ಸೋಲಿಸಿ ಹಿಮ್ಮೆಟ್ಟಿಸಿತು.

ಇಷ್ಟಾದರೂ ಚಾಂದಬೀಬಿಯ ವಿರೋಧಿಗಳು ಇವಳನ್ನು ದ್ವೇಷಿಸುತ್ತಲೇ ಇದ್ದರು. ರಾಜ್ಯದ ಹಿತಕ್ಕೆ ಮುಗಲರೊಡನೆ ಸ್ನೇಹ ಆವಶ್ಯಕವೆಂಬ ಇವಳ ಅಭಿಪ್ರಾಯವನ್ನು ಈಕೆಯ ವಿರೋಧಿಗಳು ಅಲ್ಲಗಳೆದರು. 1600ರಲ್ಲಿ ಅಕ್ಬರನ ಸೈನ್ಯ ಅಹಮದ್‌ನಗರವನ್ನು ಮುತ್ತಿದಾಗ, ಈಕೆ ಒಪ್ಪಂದ ಮಾಡಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದಳು. ಇದಕ್ಕೆ ಇವಳ ಪ್ರತಿಪಕ್ಷದವರ ವಿರೋಧವಿತ್ತು. ಕೋಟೆಯನ್ನು ಶತ್ರುಗಳಿಂದ ಕಾಪಾಡಲು ಇವಳು ಎಲ್ಲ ಜಾಗರೂಕತೆಯನ್ನೂ ವಹಿಸಿ ಹೋರಾಡುತ್ತಿದ್ದಾಗ, ಈಕೆಯ ಪಕ್ಷದವನೇ ಆದ ಜಿಲ್ಲಾ ಖಾನನೂ ಅವನ ಅನುಯಾಯಿಗಳೂ ಇವಳನ್ನು ಮೋಸದಿಂದ ಕೊಂದರು. ಇದರ ಫಲವಾಗಿ ಅಹಮದ್‌ನಗರ ಮುಗಲರ ಕೈಸೇರಿತು.

ಅಲಿ ಆದಿಲ್‌ಷಾ ಇವಳ ಹೆಸರಿನಲ್ಲಿ ಕಟ್ಟಿಸಿದ ಬಿಜಾಪುರದ ಚಾಂದ್ ಬಾವಡಿ, ಇವಳೇ ಕಟ್ಟಿಸಿದ ಗುಲ್ಬರ್ಗದ ಹೀರಾಪುರ ಮಸೀದಿ ಚಾಂದಬೀಬಿಯ ನೆನಪಿನಲ್ಲಿ ಕರ್ನಾಟಕದಲ್ಲಿ ಉಳಿದಿವೆ. (ಬಿ.ಆರ್.ಜಿ.)

**ಚಾಟುವಿಠಲನಾಥ** : ಸು.1519. ಕನ್ನಡ ಭಾಗವತದ ಹನ್ನೊಂದು ಹನ್ನೆರಡನೆಯ ಸ್ಕಂಧಗಳನ್ನು ರಚಿಸಿದ ಕವಿ. ಚಾರುವಿಠಲನೆಂದೂ ಕೆಲವು ಪ್ರತಿಗಳಲ್ಲಿ ಹೇಳಿದೆ. ಏಕಾದಶಸ್ಕಂಧದ ಮೂವತ್ತಾರು ಸಂಧಿಗಳ ಸಾವಿರದ ಐನೂರ ನಲವತ್ತೆರಡು ಪದ್ಯಗಳನ್ನೂ ಹನ್ನೆರಡನೆಯ ಸ್ಕಂಧದ ಎರಡು ಸಂಧಿಗಳ ಒಟ್ಟು ಎಂಬತ್ತೆಂಟು ಪದ್ಯಗಳನ್ನೂ ರಚಿಸಿದನೆಂದು ಕವಿ ಆಯಾ ಸ್ಕಂಧದ ಕಡೆಯಲ್ಲಿ ಹೇಳಿಕೊಂಡಿದ್ದಾನೆ. ಅಲ್ಲದೆ ಗ್ರಂಥದ ಕೊನೆಯ ಪದ್ಯದಲ್ಲಿ ಭಾಗವತವನ್ನು 'ಕನ್ನಡಿಸಿದನು ಸತ್ಕವಿ ಚಾಟುವಿಠಲನಾಥನರ್ತಿಯಲಿ' ಎಂದು ಹೇಳಿಕೊಂಡಿದ್ದಾನೆ. ಇದರಿಂದ ಭಾಗವತದ ಹನ್ನೆರಡು ಸ್ಕಂಧಗಳನ್ನೂ ಚಾಟುವಿಠಲನೆಂಬ ಹೆಸರಿನ ಕವಿಯೇ ಬರೆದನೆಂದು ಭಾವಿಸಬಹುದಾಗಿದೆ. ಆದರೆ ಚಾಟುವಿಠಲನಾಥನೆಂಬ ಹೆಸರು ಕನ್ನಡ ಭಾಗವತದ ಇನ್ನಾವ ಸ್ಕಂಧದಲ್ಲಿಯೂ ಬಂದಿಲ್ಲ. 'ಇದು ಸದಾನಂದಾಖ್ಯ ಯೋಗಿಯ ತೊದಲುನುಡಿ' 'ಗೋಪಿನಾಥನು ಮಂಗಳವನೀವನು ಸದಾನಂದಾಖ್ಯ ಮುನಿವರಗೆ,' 'ಯೋಗೀಂದ್ರನಖಿಳೋದಿತ ಸದಾನಂದ ಮುದ ದೊಳಭಿವರ್ಣಿಸಿದಂ', ಎಂಬ ವಾಕ್ಯಗಳು ಕನ್ನಡ ಭಾಗವತದ ಬೇರೆ ಬೇರೆ ಭಾಗಗಳಲ್ಲಿ ಬಂದಿವೆ. ಇದರಿಂದ ಕನ್ನಡ ಭಾಗವತಕಾರನ ಹೆಸರು ಸದಾನಂದನೆಂದಿರಬಹುದೆಂಬ ಸಂಶಯ ಬರುತ್ತದೆ. ಯೋಗಿ, ಯೋಗೀಂದ್ರ ಎಂದು ಹೇಳಿಕೊಳ್ಳುವುದರಿಂದ ಈತ ಯತಿಯಾಗಿದ್ದಿರಬಹುದು. ಈತನ ಗುರು ಅಚ್ಯುತಾರಣ್ಯನೆಂಬ ಯತಿ. ಆತನ ಸ್ತೋತ್ರ ಭಾಗವತದ ಎಲ್ಲ ಸ್ಕಂಧಗಳಲ್ಲಿಯೂ ಬಂದಿದೆ. ಕನ್ನಡ ಭಾಗವತದ ಪ್ರತಿ ಸಂಧಿಯ ಕೊನೆಯಲ್ಲಿಯೂ ನಿತ್ಯಾತ್ಮನೆಂಬ ಅಂಕಿತವಿದೆ. ನಿತ್ಯಾತ್ಮ ಶಬ್ದದೊಡನೆ ಬೇರೆ ಬೇರೆ ದೇವರ ಹೆಸರುಗಳನ್ನು ಸೇರಿಸಿ ಕವಿ ಬರೆದಿರುವುದರಿಂದ ಕವಿಯ ಅಂಕಿತ ನಿತ್ಯಾತ್ಮನೆಂದೇ ತೋರುತ್ತದೆ. ಸದಾನಂದನಿಗೆ ನಿತ್ಯಾತ್ಮನೆಂದು ಅಂಕಿತವಿದ್ದು ಭಾಗವತ ರಚನೆ ಪೂರೈಸುವ ವೇಳೆಗೆ ಚಾಟುವಿಠಲನೆಂಬ ಹೆಸರು ಬಂದಿರಬಹುದೆ? ಅಥವಾ ಸದಾನಂದ ಕವಿ ಬರೆಯದೆ ಬಿಟ್ಟಿದ್ದ ಭಾಗವತದ ಕಡೆಯ ಎರಡು ಸ್ಕಂಧಗಳನ್ನು ಅವನ ಶಿಷ್ಯನೋ ಭಕ್ತನೋ ಆದ ಚಾಟುವಿಠಲನೆಂಬ ಕವಿ ಬರೆದಿರಬಹುದೆ? ಇದು ಹೀಗೆಯೇ ಸರಿಯೆಂದು ನಿರ್ಧರಿಸಲು ಈಗ ಸಾಧ್ಯವಿಲ್ಲ. ಚಾಟುವಿಠಲನ ಹೆಸರಿರುವ ಕೊನೆಯ ಎರಡು ಸ್ಕಂಧಗಳಲ್ಲಿಯೂ ಸದಾನಂದ ಯೋಗಿಯ ಸ್ಮರಣೆಯಿದೆ. ಗೋಪಿನಾಥ ಮಂಗಳವನೀವನು ಸದಾನಂದಮುನಿವರಗೆ ಎಂಬ ಮಾತು ಬಂದಿರುವುದರಿಂದ ಚಾಟುವಿಠಲ, ಸದಾನಂದಮುನಿ ಇಬ್ಬರೂ ಬೇರೆ ಬೇರೆ ವ್ಯಕ್ತಿಗಳಿರಬಹುದೆಂಬ ಭಾವನೆ ಬರುತ್ತದೆ.

ಸದಮಳಾಚ್ಯುತ ಕೃಷ್ಣರಾಯನ ಹೃದಯವೆನಿಸುವ ಭಾಗವತಶಾಸ್ತ್ರ - ಎಂಬ ಮಾತುಗಳು ಹನ್ನೆರಡನೆಯ ಸ್ಕಂಧದ ಕೊನೆಯ ಪದ್ಯದಲ್ಲಿ ಬಂದಿರುವುದರಿಂದ ಚಾಟುವಿಠಲನಾಥ ವಿಜಯನಗರದ ಅರಸನಾದ ಕೃಷ್ಣದೇವರಾಯನ ಕಾಲದಲ್ಲಿ ಇದ್ದಿರಬಹುದೆಂದು ತೋರುತ್ತದೆ. ಆದರೆ ಅತ್ಯಂತ ಪ್ರಾಚೀನವೆನಿಸಿದ ತಾಳೆ ಪ್ರತಿಯಲ್ಲಿ ಅದು ಶಾಲಿವಾಹನಶಕ 1441ರಲ್ಲಿ ಅಂದರೆ 1519ರಲ್ಲಿ ಪ್ರತಿ ಮಾಡಲ್ಪಟ್ಟಿತೆಂದು ಹೇಳಿದೆ. ನಕಲು ಮಾಡಿದುದೇ 1519ನೆಯ ವರ್ಷವಾದರೆ ಮೂಲ ಗ್ರಂಥ ಇನ್ನೂ ಮುಂಚೆಯೇ ಹುಟ್ಟಿರಬೇಕು. ಆ ಪ್ರತಿಯಲ್ಲಿ ಮೊದಲಿನ ಒಂಬತ್ತು ಸ್ಕಂಧಗಳು ಮಾತ್ರ ಇವೆ. ಆದ್ದರಿಂದ ಅವು ಅಷ್ಟಾದರೂ ಕೃಷ್ಣದೇವರಾಯನ ಕಾಲಕ್ಕಿಂತ ಮುಂಚೆಯೇ ರಚಿತವಾಗಿರಬೇಕು.

ಕನ್ನಡ ಭಾಗವತಕಾರ ಬೇರಾವ ಕವಿಯ ಸ್ಮರಣೆಯನ್ನೂ ಮಾಡಿಲ್ಲ. ಆದರೆ ಈತ ಕುಮಾರವ್ಯಾಸನ ಪ್ರಭಾವಕ್ಕೆ ಒಳಗಾಗಿರುವುದು ಕಾವ್ಯದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಬೇರೆ ಕನ್ನಡ ಕವಿಗಳೂ ಈತನ ಹೆಸರನ್ನು ಸ್ಮರಿಸಿದಂತೆ ತೋರುವುದಿಲ್ಲ. ಹನ್ನೆರಡು ಸಾವಿರ ಷಟ್ಪದಿಗಳನ್ನುಳ್ಳ ಈ ಬೃಹದ್ಗ್ರಂಥವನ್ನು ರಚಿಸಿದ ಕವಿಯನ್ನು ಬೇರಾರೂ ಹೆಸರಿಸದಿರುವುದು ಕುತೂಹಲಕರವಾಗಿದೆ. ಈ ಕವಿಗೆ ಹರಿಗುಣ ಸ್ತುತಿ, ಹರಿಪಾದಭಕ್ತರ ಚಾರಿತ್ರ ಕಥನ, ಭಕ್ತಿಮಾರ್ಗ ನಿರೂಪಣೆ -ಇವು ಮುಖ್ಯವಾದ ಗುರಿಗಳು. ಅಖಿಲಭವರೋಗಹರವೆನಿಸಿದ ಭಾಗವತದರ್ಥವನ್ನು ಬಲ್ಲಂದದಲಿ ಹೇಳುವುದಾಗಿ ಪ್ರತಿಜ್ಞೆ ಮಾಡಿ ಕವಿ ಲಲಿತವಾದ ಕನ್ನಡದಲ್ಲಿ ಕಾವ್ಯ ರಚಿಸಿದ್ದಾನೆ.

ಮೊದಲಿನ ಎರಡು ಸ್ಕಂಧಗಳು ಪೀಠಿಕಾರೂಪದಲ್ಲಿದ್ದು ವ್ಯಾಸರು ಉಪದೇಶಿಸಿದ ಭಾಗವತವನ್ನು ಶುಕಮಹರ್ಷಿ ಪರೀಕ್ಷಿತನಿಗೆ ಉಪದೇಶಿಸಲು ಅಲ್ಲಿಯೇ ಇದ್ದು ಕೇಳಿದ ಸೂತಪುರಾಣಿಕ ಯಾಗಕಾರ್ಯಮಗ್ನರಾಗಿದ್ದ ಋಷಿಗಳಿಗೆ ನೈಮಿಷಾರಣ್ಯದಲ್ಲಿ ವಿಸ್ತರಿಸಿ ಹೇಳಿದನಂತೆ ಎಂಬ ಭಾಗವತದ ಉತ್ಪತ್ತಿ ಕಥೆಯನ್ನು ಹೇಳುತ್ತದೆ. ಮೂರನೆಯ ಸ್ಕಂಧದಲ್ಲಿ ಭಾಗವತ ಪ್ರಾರಂಭವಾಗಿ ಕಲ್ಪಾವಸಾನ ಕಥೆಯಿಂದ ತೊಡಗಿ ಹಿರಣ್ಯಕಶಿಪು ಹಿರಣ್ಯಾಕ್ಷರ ಚರಿತ್ರೆ, ಕಪಿಲ ದೇವಭೂತಿಯರ ಕಥೆ, ದಕ್ಷಯಜ್ಞ ವೃತ್ತಾಂತ, ಗಿರಿಜಾ ಕಲ್ಯಾಣ, ಧ್ರುವ ಪೃಥು ಪುರಂಜನರ ಕಥೆಗಳು, ಪ್ರಿಯವ್ರತರಾಯ, ಜಡಭರತರ ಕಥೆಗಳು ಕೊನೆಗೊಳ್ಳುವಲ್ಲಿಗೆ ಐದನೆಯ ಸ್ಕಂಧ ಮುಗಿಯುತ್ತದೆ. ಆರು ಏಳನೆಯ ಸ್ಕಂಧಗಳು ಅಜಾಮಿಳ, ವೃತಾಸುರ, ಪ್ರಹ್ಲಾದ ಮತ್ತು ತ್ರಿಪುರಾಸುರರ ಕಥೆಗಳನ್ನು ಹೇಳುತ್ತವೆ. ಎಂಟನೆಯ ಸ್ಕಂಧದಲ್ಲಿ ಮನುಮುನಿಗಳ ವರ್ಣನೆ, ಗಜೇಂದ್ರೋಪಾಖ್ಯಾನ, ಸಮುದ್ರಮಥನ ವೃತ್ತಾಂತ, ಮೋಹಿನಿಯ ಅವತಾರ, ವಾಮನ ಮತ್ಸ್ಯಾವತಾರಗಳ ಕಥೆ ಬಂದಿವೆ. ಒಂಬತ್ತನೆಯ ಸ್ಕಂಧ ಇಕ್ಷ್ವಾಕುವಂಶದ ಕಥೆ, ಪರಶುರಾಮ ವೃತ್ತಾಂತ, ಶ್ರೀ ರಾಮಚರಿತ್ರೆ ಮುಂತಾದುವುಗಳನ್ನು ಹೇಳುತ್ತದೆ. ಆ ಸ್ಕಂಧದ ಕಡೆಯಲ್ಲಿ ಆರಂಭವಾಗುವ ಯಾದವವಂಶದ ವರ್ಣನೆ ದಶಮ ಸ್ಕಂಧದಲ್ಲಿ ಮುಂದುವರಿದು ಯಾದವ ಶಿರೋಮಣಿಯಾದ ಶ್ರೀಕೃಷ್ಣನ ದೀರ್ಘವೂ ಸ್ವಾರಸ್ಯವೂ ಜನಪ್ರಿಯವೂ ಆದ ಸ್ಕಂಧ ಭಾಗವತವೆಂದೊಡನೆ ಜನರಿಗೆ ಶ್ರೀಕೃಷ್ಣಚರಿತಾಮೃತವೇ ನೆನಪಿಗೆ ಬರುತ್ತದೆ. ಹನ್ನೊಂದನೆಯ ಸ್ಕಂಧದಲ್ಲಿ ಶ್ರೀಕೃಷ್ಣ ವೈಕುಂಠಕ್ಕೆ ಹಿಂದಿರುಗಿದ ವೃತ್ತಾಂತವಿದೆ. ಕೊನೆಯ ಹನ್ನೆರಡನೆಯ ಸ್ಕಂಧ ಉಳಿದೆಲ್ಲ ಸ್ಕಂಧಗಳಿಗಿಂತ ತೀರ ಚಿಕ್ಕದು. ಇದರಲ್ಲಿ ಭವಿಷ್ಯನ್ನರಪಾಲರ ಚರಿತ್ರೆ ಸಂಕ್ಷೇಪವಾಗಿ ನಿರೂಪಿತವಾಗಿದೆ. ಶುಕಮಹರ್ಷಿಗಳಿಂದಲೇ ನೇರವಾಗಿ ಭಾಗವತವನ್ನು ಕೇಳಿದ ಪರೀಕ್ಷಿತ ಮಹಾರಾಜ ಸದ್ಗತಿ ಹೊಂದಿದ ಕಥೆ ಈ ಸ್ಕಂಧದಲ್ಲಿದೆ.

ಕನ್ನಡ ಭಾಗವತಕಾರ ಮೂಲ ಸಂಸ್ಕೃತ ಭಾಗವತವನ್ನು ಕ್ರಮವಾಗಿ ಅನುವಾದ ಮಾಡಿದ್ದಾನೆ. ಆದರೂ ಇದು ಸ್ವತಂತ್ರ ಕಾವ್ಯದಂತೆ ಏಕಧಾರೆಯಾಗಿ ಎಲ್ಲಿಯೂ ಕುಂಟದೆ ನಡೆದಿದೆ. ಕವಿಯು ವರ್ಣನೆಗೆ ಪ್ರಾಧಾನ್ಯವಿತ್ತು ಕಥೆಯನ್ನು ಕುಗ್ಗಿಸುವ, ಮರೆಯುವ ಸಾಹಸಕ್ಕೆ ಎಲ್ಲಿಯೂ ಕೈಹಾಕಿಲ್ಲ. ಮಾತಿನ ಧೋರಣೆಯಲ್ಲಿ ತಾನಾಗಿ ಬಂದಿರುವ ಉಕ್ತಿ

ಚಮತ್ಕಾರಗಳನ್ನು ಕವಿ ತಡೆದಿಲ್ಲವೇ ಹೊರತು ಉದ್ದೇಶಪೂರ್ವಕವಾಗಿ ಅಲಂಕಾರ ಪ್ರಯೋಗಕ್ಕೆ ಆಸೆಪಟ್ಟಿಲ್ಲ. ಪಾಂಡಿತ್ಯ ಪ್ರದರ್ಶನ ಕವಿಯ ಆಶಯವಲ್ಲ. ಹರಿಕೀರ್ತನೆಯೇ ಪರಮ ಧ್ಯೇಯವಾಗಿದ್ದು ಅದನ್ನು ಕವಿ ಸಾಧಿಸಿ ಕೃತಕೃತ್ಯನಾಗಿದ್ದಾನೆ. (ಕೆ.ವಿಇ.)

**ಚಾಪೆ ಹೆಣಿಗೆ :** ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಗುಡಿ ಕೈಗಾರಿಕೆಗಳಲ್ಲಿ ಒಂದು. ಎಲ್ಲ ದೇಶದ ಆದಿವಾಸಿಗಳೂ ಈ ಗುಡಿಗಾರಿಕೆಯನ್ನು ಅವಲಂಬಿಸಿದ್ದರು. ಈಗಲೂ ನೀಗ್ರೋಗಳು, ರೆಡ್ ಇಂಡಿಯನರು, ಭಾರತದಲ್ಲಿನ ಆದಿವಾಸಿಗಳು ಇದರಿಂದಲೇ ತಮ್ಮ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಅತಿ ಹಳೆಯ ಉದ್ಯಮವಾದರೂ ಇದು ಇಂದು ನಶಿಸಿಲ್ಲ. ಬಡವರಿಗೆ ಅಗತ್ಯದ ವಸ್ತುವಾಗಿ, ಶ್ರೀಮಂತರಿಗೆ ಭೋಗದ ವಸ್ತುವಾಗಿ ಚಾಪೆ ಮುಂದುವರಿಯುತ್ತಲೇ ಇದೆ.

ಚಾಪೆ ಹೆಣಿಗೆ

ಈ ಕೈಗಾರಿಕೆ ಕರ್ನಾಟಕ, ತಮಿಳುನಾಡು, ಕೇರಳ, ಅಸ್ಸಾಂ ಮತ್ತು ಬಂಗಾಲ ಮುಂತಾದ ರಾಜ್ಯಗಳಲ್ಲಿ ಊರ್ಜಿತಾವಸ್ಥೆಯಲ್ಲಿದೆ. ಕರ್ನಾಟಕದ ಕಡಕೊಳ, ಸೋಮೇಶ್ವರಪುರ, ಚಿಕ್ಕಜೋಗಿಹಳ್ಳಿ ಹಾಗೂ ಇನ್ನಿತರ ಕಡೆಗಳಲ್ಲಿ ಚಾಪೆಗಳನ್ನು ವಿಶೇಷವಾಗಿ ತಯಾರಿಸುತ್ತಾರೆ.

ಚಾಪೆಗಳನ್ನು ಬಿದಿರು, ಕಡ್ಡಿಹುಲ್ಲು, ಈಚಲುಗರಿ, ತೆಂಗಿನಗರಿ ಮತ್ತು ಓಲೆಗರಿಗಳಿಂದ ನೇಯುವರು. ಹಾಸುವ ಚಾಪೆ, ಪಂಕ್ತಿ ಚಾಪೆ, ಮೇಜುಗಳ ಮೇಲೆ ಹಾಸುವ ಚಾಪೆ, ಬಾಗಿಲಿಗೆ ಹಾಕುವ ಚಾಪೆಯ ಪರದೆಗಳು ಇತ್ಯಾದಿಯಾಗಿ ಚಾಪೆಯಲ್ಲಿ ಬಹು ನಮೂನೆಗಳಿವೆ. ಚಾಪೆಯಿಂದ ಹಣದ ಚೀಲ, ಹ್ಯಾಟುಗಳು, ಕೈಚೀಲ ಮುಂತಾದ ನಯ ನಾಜೂಕಿನ ಬಣ್ಣಬಣ್ಣಗಳಿಂದ ಅಲಂಕೃತವಾದ ದೈನಿಕ ಉಪಯೋಗದ ವಸ್ತುಗಳನ್ನೂ ತಯಾರಿಸುತ್ತಾರೆ. ಸಾಧಾರಣ ತರದ ಈಚಲ ಚಾಪೆಯನ್ನು ಅನೇಕ ವಸ್ತುಗಳು ಕಟ್ಟಲು ಹೇರಳವಾಗಿ ಉಪಯೋಗಿಸುವರು. ನಿಜಕ್ಕೂ ಚಾಪೆ ಜಮಖಾನೆಗಿಂತ ಉತ್ತಮ. ಬೆಲೆ ಕಡಿಮೆ. ಬೇಗ ಮಾಸುವುದಿಲ್ಲ. ಹೊಲಿಯುವುದು ಸುಲಭ. ಶೀತವನ್ನು ಹೀರದು.

ವಿವಿಧ ಮಾದರಿ ಚಾಪೆಗಳು

ಈ ಕೈಗಾರಿಕೆಗೆ ಬೇಕಾಗುವ ಉಪಕರಣಗಳೆಂದರೆ ಮಗ್ಗ, ಬಿದಿರು ಸಲಾಕೆಗಳು, ಹುಲ್ಲು ಇತ್ಯಾದಿ ಕಚ್ಚಾ ಸಾಮಗ್ರಿಗಳು. ಚಾಪೆಯ ಅಂದ ಅದರ ಮೂಲವಸ್ತು ವಿಶಿಷ್ಟವಾದ ನೇಯ್ಗೆ ಮತ್ತು ಬಣ್ಣಗಳ ಸಂಕಲನಗಳಲ್ಲಿದೆ. ಬೇಕಾದ ಚಿತ್ರಗಳನ್ನು ನೇಯ್ಗೆ ಮತ್ತು ಬಣ್ಣಗಳಿಂದ ಚಾಪೆಯ ಮೇಲೆ ಮೂಡಿಸಬಹುದು.

ಚಾಪೆಗೆ ಬೇಕಾದ ಕಚ್ಚಾ ಸಾಮಗ್ರಿಗಳು ಕಡಿಮೆ ಕ್ರಯದಲ್ಲಿ ಬೇಕಾದಷ್ಟು ಸಿಗುವುದರಿಂದ ಮತ್ತು ಮನೆ ಜನರೆಲ್ಲ ಕೆಲಸಮಾಡುವುದರಿಂದ ಇದನ್ನೇ ನಂಬಿದವರ ಜೀವನ ನಡೆಯುತ್ತಿದೆ. ಇದು ಇತರ ಸಣ್ಣ ಕೈಗಾರಿಕೆಗಳಂತೆ ವಂಶಪಾರಂಪರ್ಯವಾಗಿ ನಡೆದು ಬಂದಿರುವಂಥದು. ಆದರೆ ಚಾಪೆಗೆ ಸುವ್ಯವಸ್ಥಿತವಾದ ಮಾರುಕಟ್ಟೆಯ ಅಭಾವವಿರುವುದರಿಂದ ಲಾಭದ ದೊಡ್ಡ ಅಂಶ ಮಧ್ಯವರ್ತಿ ವ್ಯಾಪಾರಿಗಳ ಕೈವಶವಾಗಿ ಗೃಹ ಕೈಗಾರಿಕೆಯಲ್ಲಿ ತೊಡಗಿದವರಿಗೆ ಸಮರ್ಪಕವಾದ ಮತ್ತು ಪರಿಪೂರ್ಣವಾದ ಪ್ರತಿಫಲ ದೊರೆಯುತ್ತಿಲ್ಲ.

ಈ ಕೈಗಾರಿಕೆಯನ್ನು ಅವಲಂಬಿಸಿದ ಜನ ತಮ್ಮದೇ ಆದ ಸಹಕಾರ ಸಂಘಗಳನ್ನು ಸ್ಥಾಪಿಸಿ ಆ ಸಂಘಗಳ ಮೂಲಕ ತಮಗೆ ಆವಶ್ಯಕವಾದ ಕಚ್ಚಾ ಸಾಮಗ್ರಿಗಳನ್ನು ಕೊಳ್ಳುವುದು ಮತ್ತು ತಾವು ಹೆಣೆದ ಚಾಪೆಗಳನ್ನು ಮಾರುವುದರ ಮೂಲಕ ಯುಕ್ತ ಲಾಭ ಪಡೆಯಬಹುದು.

ಜಪಾನ್ ಮೊದಲಾದ ದೇಶಗಳಲ್ಲಿ ಬಹು ಅಂದವಾಗಿ ಚಾಪೆ ಹೆಣೆದು ಅದರ ಮೇಲೆ ಕಲಾತ್ಮಕವಾದ ಚಿತ್ರಗಳನ್ನು ಅಚ್ಚು ಒತ್ತುತ್ತಾರೆ. ಇಂಥ ಚಾಪೆಗಳಿಗೆ ಪ್ರಪಂಚಾದ್ಯಂತ ಬೇಡಿಕೆ ಇದೆ. ಕೇರಳದಲ್ಲಿ ಇದೇ ಮಟ್ಟದ ಸುಂದರ ಚಾಪೆಗಳನ್ನು ತಯಾರಿಸುತ್ತಿದ್ದಾರೆ. ಚಾಪೆ ಹೆಣಿಗೆ ಮೊದಲಾದ ಕೈಗಾರಿಕೆಗಳಿಗೆ ಸರ್ಕಾರ ಉದಾರ ಸಹಾಯ, ಪ್ರೋತ್ಸಾಹ ನೀಡುತ್ತಿವೆಯಾದರೂ ಇತ್ತೀಚೆಗೆ ಪ್ಲಾಸ್ಟಿಕ್ ಹೆಣಿಗೆಯ ಚಾಪೆಗಳ ಬಳಕೆ ಹೆಚ್ಚುತ್ತಿದೆ. ಉಳಿದ ಚಾಪೆಗಳ ಬೇಡಿಕೆ ದಿನೇ ದಿನೇ ಕ್ಷೀಣಿಸುತ್ತಿದೆ. *

**ಚಾಮರಸ :** ಸು.1430. ವೀರಶೈವ ಕವಿ. ಪ್ರಭುಲಿಂಗಲೀಲೆ ಎಂಬ ಕಾವ್ಯದ ಕರ್ತೃ. ಇವನ ಗ್ರಂಥದಲ್ಲಿ ಸ್ವವಿಷಯಗಳಿಲ್ಲ. ಇವನು ಪ್ರಭುಲಿಂಗಲೀಲೆಯನ್ನು ಬರೆದನೆಂಬ ವಿಷಯ ಅದೃಶ್ಯಕವಿ (ಸು.1580) ಮತ್ತು ಸಿದ್ಧನಂಜೇಶ (ಸು,1650) ಈ ಕವಿಗಳಿಂದ ತಿಳಿದುಬರುತ್ತದೆ. ಚಾಮರಸ ಪ್ರಭುಲಿಂಗಲೀಲೆಯನ್ನು ಬರೆದುದರ ಬಗ್ಗೆ ಶಾಂತಲಿಂಗದೇಶಿಕನ (ಸು.1672) ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಒಂದು ದಂತಕಥೆಯಿದೆ. ಪ್ರೌಢದೇವರಾಯನ ಕಾಲದಲ್ಲಿ (1424-46) ಇದ್ದ ನೂರೊಂದು ವಿರಕ್ತರಲ್ಲಿ ಇವನ ಹೆಸರು ಕಂಡುಬರುತ್ತದೆ ಎಂಬ ಹೇಳಿಕೆಯೂ ಇದೆ. ಜಕ್ಕಣಾರ್ಯ (ಸು.1430), ಕುಮಾರವ್ಯಾಸ (1400) - ಇವರು ಚಾಮರಸನ ಸಮಕಾಲೀನರಿರಬಹುದೆಂದೂ ತಿಳಿದುಬರುತ್ತದೆ.

ಪ್ರಭುಲಿಂಗಲೀಲೆ ಭಾಮಿನೀಷಟ್ಪದಿಯಲ್ಲಿದೆ. ಇದರಲ್ಲಿ 25 ಗತಿ, 1111 ಪದ್ಯ ಇವೆ. 12ನೆಯ ಶತಮಾನದಲ್ಲಿದ್ದ ಅಲ್ಲಮಪ್ರಭುವಿನ ಜೀವನ, ಸಾಧನೆ, ಸಿದ್ಧಿಗಳ ಚಿತ್ರಣ ಕಾವ್ಯದ ವಸ್ತು. ಅಲ್ಲಮಪ್ರಭುವಿನ ಚರಿತ್ರೆ ಮೊಟ್ಟಮೊದಲು ಕಾವ್ಯವಾಗಿ ನಿರೂಪಿತವಾಗಿರುವುದು ಹರಿಹರನ ಪ್ರಭುದೇವರ ರಗಳೆಯಲ್ಲಿ. ಅದೇ ವಸ್ತುವನ್ನು ತೆಗೆದುಕೊಂಡು ಚಾಮರಸ ಕಾವ್ಯ ರಚಿಸಿದ್ದರೂ ಹರಿಹರನ ರಗಳೆಗೂ ಇವನ ಕಾವ್ಯಕ್ಕೂ ಹಲವಾರು ವ್ಯತ್ಯಾಸಗಳು ಕಥಾನಕ ಹಾಗೂ ನಿರೂಪಣಾಕ್ರಮದಲ್ಲಿ ಕಂಡುಬರುತ್ತವೆ. ಚಾಮರಸ ತನ್ನ ಕಥೆ 'ಸತ್ತವರ ಕಥೆಯಲ್ಲ ಜನನದ ಕುತ್ತದಲ್ಲಿ ಬಲುಕುದಿದು ಕರ್ಮದ ಕತ್ತರಿಗೆ ಸಿಕ್ಕುವರ ಸೀಮೆಯ ಮಾತು ತಾನಲ್ಲ; ಹೊತ್ತು ಹೋಗದೆ ಪುಂಡರಾಲಿಪ ಮತ್ತಮತಿಗಳ ಗೋಷ್ಠಿಯಲ್ಲಿದು' ಎಂದೂ 'ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯ' ಎಂದೂ ತಾನು ಉತ್ತಮರಿಗಾಗಿ ಕಾವ್ಯ ರಚಿಸುತ್ತಿರುವುದಾಗಿಯೂ ಹೇಳಿಕೊಂಡಿದ್ದಾನೆ. ಕಾವ್ಯದಲ್ಲಿ ಕಲ್ಪನಾ ಸಂಪತ್ತು ಶಬ್ದಶಕ್ತಿ ಸಹಜವಿಲಾಸ ಕಂಡುಬರುತ್ತದೆ. ಸನ್ನಿವೇಶ ರಚನೆ, ಪಾತ್ರಚಿತ್ರಣದಲ್ಲಿ ಒಮ್ಮೊಮ್ಮೆ ಮಹಾಕವಿಯಲ್ಲಿರ ಬಹುದಾದ ಪ್ರತಿಭೆ ಮಿನುಗುತ್ತದೆ. ಶೈಲಿ ಸರಳವಾದರೂ ಶಿಥಿಲವಾಗಿಲ್ಲ. ಕಾವ್ಯಧರ್ಮ ಹಾಗೂ ಧರ್ಮ ಎರಡೂ ಕಾವ್ಯದಲ್ಲಿ ಸಮರಸವಾಗಿ ಹೊಂದಿವೆ. ವರ್ಣನೆಗಳು ಮನೋಹರವಾಗಿವೆ. ಅಷ್ಟಾದಶವರ್ಣನೆಗಳ ಸಂಪ್ರದಾಯ ಜಾಲಕ್ಕೆ ಕವಿ ಸಿಕ್ಕಿಲ್ಲ. ಉಚಿತವರಿತು ವರ್ಣನೆಗಳನ್ನು ತಂದಿದ್ದಾನೆ. ಭಾಮಿನೀ ಷಟ್ಪದಿಯ ನಿರರ್ಗಳವಾದ ಬಳಸುವಿಕೆಯಲ್ಲಿಯೂ ರೂಪಕ ಸಂಪತ್ತಿಯಲ್ಲಿಯೂ ಕೆಲವೊಮ್ಮೆ ಕುಮಾರವ್ಯಾಸನಿಗೆ ಸರಿಮಿಗಿಲೆನಿಸುತ್ತಾನೆ. ಇವನ ಕಾವ್ಯ ಶ್ರೇಷ್ಠಚರಿತ್ರ ಕಾವ್ಯವೆಂಬ ಪ್ರಶಂಸೆಗೆ ಭಾಜನವಾಗಿದೆ. ಮಹಾತ್ಮರ ಜೀವನ ಚರಿತ್ರೆಯನ್ನು ಕಾವ್ಯರೂಪದಲ್ಲಿ ಹೇಗೆ ಬರೆಯಬೇಕೆಂಬುದಕ್ಕೆ ಪ್ರಭುಲಿಂಗಲೀಲೆ ಉತ್ತಮ

ನಿದರ್ಶನವೆನ್ನಬಹುದು. ಈ ಕಾವ್ಯ ತೆಲುಗು, ತಮಿಳು, ಮರಾಠಿ, ಸಂಸ್ಕೃತ ಭಾಷೆಗಳಿಗೆ ಅನುವಾದವಾಗಿದೆ. (ಎಚ್.ಎ.ಕೆ.)

**ಚಾಮರಾಜ ಒಡೆಯರ್ I :** ಮೈಸೂರಿನ ಒಡೆಯರ ಸಂತತಿಯ ರಾಜ (ಸು.1423-59). ಈತನಿಗೆ ಸಂಬಂಧಿಸಿದ ನಿಖರವಾದ ಸಮಕಾಲೀನ ಮಾಹಿತಿ ದೊರೆಯುವುದಿಲ್ಲ. ಮೈಸೂರು ನಗರದ ಪೂರ್ವೋತ್ತರ ಮತ್ತು ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ ಎಂಬ ಕೃತಿಗಳ ಪ್ರಕಾರ ಈತ ಈ ಮನೆತನದ ಸ್ಥಾಪಕನಾದ ಯದುರಾಯನ ಹಿರಿಯಮಗ.

ಇವನನ್ನು ಹಿರಿಯ ಬೆಟ್ಟದ ಚಾಮರಾಜ ಎಂದೂ ಕರೆಯಲಾಗಿದೆ. ಬೆಟ್ಟದ ಕೋಟೆಯ ಗೋಪಾಜಮ್ಮ ಈತನ ಹೆಂಡತಿ. ಇವನ ತಮ್ಮನಾದ ಚಾಮರಾಜ ಕೆಂಚಲಗೂಡಿನ ಶಾಖೆಯನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಬೆಟ್ಟದ ಚಾಮರಾಜನ ಮರಣಾನಂತರ ಅವನ ಪುತ್ರನಾದ ಒಂದನೆಯ ತಿಮ್ಮರಾಜ ಉತ್ತರಾಧಿಕಾರಿಯಾದ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ II :** ಮೈಸೂರು ಸಂಸ್ಥಾನವನ್ನು ಆಳಿದ ಒಡೆಯರ ಸಂತತಿಯ ನಾಲ್ಕನೆಯ ರಾಜ (ಸು.1478-1513). ಒಂದನೆಯ ತಿಮ್ಮ ರಾಜ ಒಡೆಯರ್ ಮತ್ತು ಕಳಲೆಯ ಕಾಂತಾಜಮ್ಮ ಇವರ ಮಗ. ಇವನಿಗೆ ಹಿರಿಯ ಚಾಮರಸ ಒಡೆಯರ್ ಹಾಗೂ ಆರು ಬೆರಳು ಚಾಮ ರಾಜ ಎಂಬ ಹೆಸರುಗಳೂ ವಾಡಿಕೆಯಲ್ಲಿದ್ದವು. ಬಿಳಿಕೆರೆ ಪದ್ಮಾಜಮ್ಮ ಈತನ ಹೆಂಡತಿ. ಹಿರಿಯ ಬೆಟ್ಟದ ಚಾಮರಾಜ ಈತನ ಪುತ್ರ ಮತ್ತು ಉತ್ತರಾಧಿಕಾರಿ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ III :** ಮೈಸೂರು ವಂಶದ ಅರಸು (ಸು.1513-1553); ಎರಡನೆಯ ಚಾಮರಾಜ (ಆರು ಬೆರಳಿನ ಹಿರಿಯ ಚಾಮರಾಜ) ಮತ್ತು ಅವನ ಮಹಿಷಿ ಬಿಳಿಕೆರೆ ಪದ್ಮಾಜಮ್ಮ ಇವರ ಮಗ. 1492 ಸೆಪ್ಟೆಂಬರ್ 29ರಂದು ಜನಿಸಿದ. ಇವನನ್ನು ದೊಡ್ಡ ಚಾಮರಾಜ ಒಡೆಯರ್, ಬೆಟ್ಟದ ಚಾಮೇಂದ್ರ (ಚಾಮರಾಜ) ಎಂಬುದಾಗಿಯೂ ಹೆಸರಿಸಲಾಗಿದೆ. ಅಲ್ಲದೆ ತಿಮ್ಮರಾಜ ಒಡೆಯರ್ ಎಂಬ ಹೆಸರಿನಿಂದಲೂ ಹಲವು ದಾಖಲೆಗಳಲ್ಲಿ ಉಲ್ಲೇಖಿಸಲಾಗಿದೆ. ಬಾಲ್ಯದಲ್ಲಿ ತಿಮ್ಮರಾಜ ಎಂಬ ಹೆಸರಿದ್ದು ಅನಂತರ ತನ್ನ ಮುತ್ತಾತನ ಜ್ಞಾಪಕಾರ್ಥವಾಗಿ ಬೆಟ್ಟದ ಚಾಮರಾಜ ಎಂಬ ಹೆಸರನ್ನು ಹೊಂದಿದನೆಂದು ಊಹಿಸಲಾಗಿದೆ.

ಈತ 1513ರಲ್ಲಿ ಅಧಿಕಾರಕ್ಕೆ ಬಂದ. ಈತನ ಸಾಧನೆಗಳ ಮಾಹಿತಿ ದೊರೆಯದಿದ್ದಾಗ್ಯೂ ಇವನು ರಣಪರಾಕ್ರಮಿಯೆಂದೂ ವೈರಿಗಳನ್ನು ಸದೆಬಡಿಯುವುದರಲ್ಲಿ ಧೀರನೆಂದೂ ವರ್ಣಿತನಾಗಿದ್ದಾನೆ. ಇವನಿಗೆ ಬಿರುದೆಂತೆಂಬರಗಂಡ ಎಂಬ ಬಿರುದಿದ್ದಿತು. ಈ ಬಿರುದಿಗೆ ಸಂಬಂಧಿಸಿದಂತೆ ಒಂದು ದಂತಕಥೆಯೂ ಉಪಲಬ್ಧವಾಗಿದೆ. ಅದರ ಪ್ರಕಾರ ಒಂದು ಸಾರಿ ನಂಜನಗೂಡಿನ ಜಾತ್ರೆಯ ಕಾಲದಲ್ಲಿ ನೆರೆದಿದ್ದ ಸುತ್ತುಮುತ್ತಿನ ಪಾಳೆಯಗಾರರು ತಮ್ಮ ಪ್ರವರಗಳನ್ನೂ ಬಿರುದುಗಳನ್ನು ಹೇಳಿಕೊಂಡರಂತೆ. ಮೂರನೆಯ ಬೆಟ್ಟದ ಚಾಮರಾಜನ ಆಪ್ತಯೋಧನಾದ ಕಳಲೆಯ ನಂಜಸೆಟ್ಟಿ ಎಂಬುವನು ಆ ಸ್ಥಳದಲ್ಲಿದ್ದು, ಬಿರುದೆಂತೆಂಬರಗಂಡ ಎಂಬ ಬಿರುದಿಗೆ ತನ್ನ ಧಣಿಯೊಬ್ಬನೇ ಅರ್ಹನೆಂದು ಪ್ರತಿಪಾದಿಸಿದನಂತೆ. ಅನಂತರ ನಡೆದ ಗುಂಪುಜಗಳದಲ್ಲಿ ನಂಜಸೆಟ್ಟಿ ವಿಜೇತನಾದನಂತೆ. ಅಂದಿನಿಂದ ಈ ಮನೆತನದ ಅರಸರಿಗೆ ಮೇಲ್ಕಂಡ ಬಿರುದು ಅತಿ ಮೆಚ್ಚಿನದಾಯಿತಂತೆ.

ಇವನ ಕಾಲದಿಂದ ಮೈಸೂರು ಪಟ್ಟಣ ಪ್ರಸಿದ್ಧಿಗೆ ಬಂತು. ಅದುವರೆಗೂ ಅಲ್ಲಿ ಅಭದ್ರವಾದ ಕೋಟೆ, ಹಳೆಯ ಸೋಮೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳು ಮಾತ್ರ ಇದ್ದು ದರಗೇರಿ ಮತ್ತು ತಮ್ಮಟಗೇರಿ ಎಂಬ ಎರಡು ಪ್ರಮುಖ ಕೇರಿಗಳಿಂದ ಕೂಡಿತ್ತು. ಮೈಸೂರು ಮತ್ತು ಸುತ್ತಮುತ್ತಿನ ಹಲವು ಹಳ್ಳಿಗಳು ಇವನ ಆಳಿಕೆಗೊಳಪಟ್ಟಿದ್ದುವು.

ಅಲಗಾಜಮ್ಮ (ಗೋಪರಸಮ್ಮ) ಮೂರನೆಯ ಚಾಮರಾಜನ ಪತ್ನಿ. ಚಾಮರಾಜನಿಗೆ ತಿಮ್ಮರಾಜ, ಕೃಷ್ಣರಾಜ ಮತ್ತು ಚಾಮರಾಜ ಎಂಬ ಮೂವರು ಪುತ್ರರೂ ದೊಡ್ಡದೇವೀರಮ್ಮ, ಚಿಕ್ಕದೇವಿರಮ್ಮ ಮತ್ತು ನಂಜಮ್ಮ ಎಂಬ ಮೂವರು ಪುತ್ರಿಯರೂ ಇದ್ದರು. ಬೆಟ್ಟದ ಚಾಮರಾಜ ಚಾಮುಂಡಿಬೆಟ್ಟದ ಮೇಲೆ ಹಿರೀಕೆರೆ ಎಂಬ ಕೊಳವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಅಲ್ಲದೆ ತಿಪ್ಪೂರು ಎಂಬ ಗ್ರಾಮವನ್ನು ಕೊಂಡು ಅದನ್ನು ಮೇಲುಕೋಟೆಯ ಚೆಲುವರಾಯ ಸ್ವಾಮಿಗೆ ದಾನವಾಗಿ ನೀಡಿದ. ಈತ 1553 ಫೆಬ್ರುವರಿ 7ರಂದು ನಿಧನಹೊಂದಿದ. ಅನಂತರ ಇವನ ಹಿರಿಯ ಮಗನಾದ ಎರಡನೆಯ ತಿಮ್ಮರಾಜ ಉತ್ತರಾಧಿಕಾರಿಯಾದ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ IV :** (ಬೋಳ ಚಾಮರಾಜ) ಮೈಸೂರು ಸಂಸ್ಥಾನದ ದೊರೆ (1572-76). ಹಿರಿಯ ಬೆಟ್ಟದ ಚಾಮರಾಜನ ಎರಡನೆಯ ಮಗ. ತನ್ನ ಹಿರಿಯ ಸೋದರನಾದ ತಿಮ್ಮರಾಜನ ಉತ್ತರಾಧಿಕಾರಿ. ಮೈಸೂರು ಚಾಮರಸ ಒಡೆಯರ್, ಚಾಮರಾಜ, ಚಾಮನೃಪ, ಚಾಮರಾಜೇಂದ್ರ ಎಂಬುದಾಗಿಯೂ ಈತ ಗ್ರಂಥಗಳು ಮತ್ತು ಶಾಸನಗಳಲ್ಲಿ ಉಲ್ಲೇಖಿತನಾಗಿದ್ದಾನೆ. ಚಾಮರಾಜ 1507 ಜುಲೈ 25ರಂದು ಜನಿಸಿದ. ಪ್ರಚಲಿತವಿರುವ ಐತಿಹ್ಯದ ಪ್ರಕಾರ ಬಾಲ್ಯದಲ್ಲಿ ಚಾಮುಂಡಿ ಬೆಟ್ಟವನ್ನು ಸಂದರ್ಶಿಸಿದ ಒಂದು ಸಮಯದಲ್ಲಿ ಸಿಡಿಲಿನ ಹೊಡೆತದಿಂದ ಸ್ವಲ್ಪದರಲ್ಲಿ ಪಾರಾದನೆಂದೂ ಅದರಿಂದ ಇವನ ತಲೆಗೂದಲು ಸುಟ್ಟುಹೋಗಿ ತಲೆ ಬೋಳಾದುದರಿಂದ ಬೋಳ ಚಾಮರಾಜ ಎಂದು ಹೆಸರಾಯಿತೆಂದೂ ತಿಳಿದುಬರುತ್ತದೆ. ನಾಲ್ಕನೆಯ ಚಾಮರಾಜನ ಅನಂತರ ಆಳಿದ ಒಡೆಯರು ಹಾಕಿಸಿದ ಶಾಸನಗಳಿಂದ ಈತ ಬಿಲ್ಲುಬಾಣ ಹಾಗೂ ಶಸ್ತ್ರಾಸ್ತ್ರಪ್ರಯೋಗಗಳಲ್ಲಿ ನುರಿತ ಯೋಧನಾಗಿದ್ದುದಲ್ಲದೆ ಉದಾರ ರಾಜನಾಗಿದ್ದನೆಂದು ತಿಳಿದುಬರುತ್ತದೆ.

ವಿಜಯನಗರದ ರಾಜಪ್ರತಿನಿಧಿ ಶ್ರೀರಂಗಪಟ್ಟಣದಲ್ಲಿಲ್ಲದ ಸಮಯವನ್ನು ಉಪಯೋಗಿಸಿಕೊಂಡು ನಾಲ್ಕನೆಯ ಚಾಮರಾಜ ತನ್ನ

ಅಧಿಕಾರವನ್ನು ಬಲಪಡಿಸಿಕೊಂಡು ರಾಜ್ಯವಿಸ್ತರಣೆಯಲ್ಲಿ ತೊಡಗಿದ. ವರ್ಷಂಪ್ರತಿ ಸಲ್ಲಿಸುತ್ತಿದ್ದ ಕಪ್ಪವನ್ನು ನಿಲ್ಲಿಸಿದ ಹಾಗೂ ತನ್ನ ರಾಜ್ಯದಲ್ಲಿ

ಕಾಡುಮೃಗಗಳ ಹಾವಳಿಯು ಹೆಚ್ಚಿದೆ, ಆದರಿಂದ ಬೆಳೆಗಳು ಮತ್ತು ಜನರನ್ನು ರಕ್ಷಿಸಬೇಕು ಎಂಬ ನೆಪವೊಡ್ಡಿ ರಾಜ್ಯದ ಗಡಿಯ ಆಯಕಟ್ಟಿನ ಪ್ರದೇಶದಲ್ಲಿ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಿದ. ಕಾರುಗಹಳ್ಳಿ, ಕನ್ನಂಬಾಡಿ, ತಲಕಾಡು ಮತ್ತು ಅಮ್ಮಚವಾಡಿ ಪಾಳೆಯಗಾರರನ್ನು ಸದೆಬಡಿಯುವ ಹವಣಿಕೆಯನ್ನು ನಡೆಸಿದ. ಈ ಉದ್ಧಟತನವನ್ನು ಸಹಿಸದೆ ಶ್ರೀರಂಗಪಟ್ಟಣದಲ್ಲಿ ವಿಜಯನಗರದ ರಾಜಪ್ರತಿನಿಧಿಯಾಗಿದ್ದ ಮೂರನೆಯ ರಾಮರಾಜಯ್ಯ ಚಾಮರಾಜನನ್ನು ಹತ್ತಿಕ್ಕಲು ಮೈಸೂರಿಗೆ ಮುತ್ತಿಗೆ ಹಾಕಿದ. ಮುತ್ತಿಗೆ ಮೂರು ತಿಂಗಳ ಕಾಲ ಮುಂದುವರಿಯಿತು. ಆದರೆ ಚಾಮರಾಜ ಚತುರತೆಯಿಂದ ಮುತ್ತಿಗೆಕಾರರಿಗೆ ಆಹಾರ ವಸ್ತುಗಳ ಅಭಾವವನ್ನುಂಟುಮಾಡಿ ಅವರನ್ನು ಹಿಮ್ಮೆಟ್ಟಿಸಿದ. ಪರಾಜಿತನಾದ ವಿಜಯನಗರದ ರಾಜಪ್ರತಿನಿಧಿ ಕಾಲ್ವೆ - ಕೊತ್ತಾಗಾಲ ಗ್ರಾಮವನ್ನು ಕೊಟ್ಟು ಇವನೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತು (1573-74). ಈ ಘಟನೆಯಿಂದ ಬೋಳ ಚಾಮರಾಜನ ಪ್ರತಿಷ್ಠೆ ಹೆಚ್ಚಿತು. ಮೈಸೂರು ದೊರೆಗಳ ವಂಶಾಭ್ಯುದಯದ ಪ್ರಕಾರ ಚಾಮರಾಜ 33 ಗ್ರಾಮಗಳ ಒಡೆಯನಾಗಿದ್ದನೆಂದೂ ಇವನಲ್ಲಿ 300 ಮಂದಿ ಸೈನಿಕರಿದ್ದರೆಂದೂ ತಿಳಿಯುತ್ತದೆ.

ಬೋಳ ಚಾಮರಾಜನಿಗೆ ಬಿಳಿಕೆರೆಯ ಕೆಂಪಮ್ಮ ಮತ್ತು (ಹೆಗ್ಗಡದೇವನ) ಕೋಟೆಯ ದೇವಾಜಮ್ಮ ಎಂಬ ಇಬ್ಬರು ಪತ್ನಿಯರಿದ್ದರು. ಹಿರಿಯಳಾದ ಕೆಂಪಮ್ಮನಿಗೆ ರಾಜ ಒಡೆಯರ್ ಮತ್ತು ಬೆಟ್ಟದ ಚಾಮರಾಜ, ಕಿರಿಯವಳಾದ ದೇವಾಜಮ್ಮನಿಗೆ ದೇವರಾಜ ಮತ್ತು ಚನ್ನರಾಜ ಎಂಬ ಗಂಡುಮಕ್ಕಳಿದ್ದರು. ಬೋಳ ಚಾಮರಾಜ ತನ್ನ ರಾಜಧಾನಿಯಲ್ಲಿ ಈಗಿನ ಅರಮನೆಯ ಮುಂದೆ ಇದ್ದ ಬೋಳಕೆರೆಯನ್ನು ಬತ್ತಿಸಿ ಅಲ್ಲಿ ಮುಳುಗಿತ್ತೆನ್ನಲಾದ ಲಿಂಗವನ್ನು ತಂದು, ಈಗ ಮೈಸೂರು ಅರಮನೆಯ ಒಳಗಿರುವ ತ್ರಿನೇಶ್ವರ ದೇವಾಲಯವನ್ನು ಕಟ್ಟಿಸಿದ.

ನಾಲ್ಕನೆಯ ಚಾಮರಾಜ 1576 ನವೆಂಬರ್ 9ರಂದು ನಿಧನಹೊಂದಿದ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ V :** ಮೈಸೂರು ಸಂಸ್ಥಾನದ ಸಾಹಸಿ ದೊರೆ (ಸು.1617-37). ಒಡೆಯರ ಸಂತತಿಯಲ್ಲಿ ಪ್ರಸಿದ್ಧರಾಜ; ರಾಜ ಒಡೆಯರ ಮೊಮ್ಮಗ ಹಾಗೂ ನರಸರಾಜ ಮತ್ತು ಹೊನ್ನಾಜಮ್ಮ ಇವರ ಮಗ. 1603 ಏಪ್ರಿಲ್ 21ರಂದು ಜನಿಸಿದ. ರಾಜ ಒಡೆಯರ ಮರಣಾನಂತರ ಪಟ್ಟಕ್ಕೆ ಬಂದ. ಆಗ ಇವನು ಇನ್ನೂ ಹದಿನೈದು ವರ್ಷಗಳ ಬಾಲಕನಾದ್ದರಿಂದ, ಹದಿನೆಂಟು ವರ್ಷದವನಾಗುವವರೆಗೂ ದಳವಾಯಿ ಬೆಟ್ಟದ ಅರಸು (ಚಾಮಪ್ಪ) ಆಡಳಿತವನ್ನು ಮುಂದುವರಿಸಿದ. ನಾಗಮಂಗಲ ಮತ್ತು ದಣಾಯಕನ ಕೋಟೆ ಮೇಲೆ ನಡೆದ ಮುತ್ತಿಗೆಗಳು ಹಾಗೂ ದಳವಾಯಿ ತನ್ನ ಅಧಿಕಾರವನ್ನು ಭದ್ರಪಡಿಸಿಕೊಳ್ಳಲೆತ್ನಿಸಿ ವಿಫಲವಾದುದು - ಇವು ಚಾಮರಾಜನ ಆಡಳಿತದ ಪ್ರಾರಂಭದ ಕಾಲದ ಮುಖ್ಯ ಘಟನೆಗಳು. ಚನ್ನಪಟ್ಟಣದ ಜಗದೇವರಾಯನ ವಶದಲ್ಲಿದ್ದ ನಾಗಮಂಗಲ ಪ್ರದೇಶವನ್ನು ಆಕ್ರಮಿಸಲು ದಳವಾಯಿ ಬೆಟ್ಟದ ಅರಸು 1618ರಲ್ಲಿ ಪ್ರಯತ್ನಿಸಿ ವಿಫಲನಾದ. ಆದರೆ ಜಗದೇವರಾಯನ ಅಧೀನದಲ್ಲಿದ್ದ ಮದ್ದೂರು ಮತ್ತು ಕೆರೆಗೋಡುಗಳನ್ನು ವಶಪಡಿಸಿಕೊಂಡ (1619-20). ದಣಾಯಕನಕೋಟೆಯ ಮೇಲೆ ಯಶಸ್ವಿಯಾಗಿ ದಾಳಿಮಾಡಿ ಅಲ್ಲಿನ ಪಾಳೆಯಗಾರ ವಾರ್ಷಿಕವಾಗಿ 12,000 ವರಹ ಕಪ್ಪ ಕೊಡುವಂತೆ ಒಪ್ಪಂದವಾಯಿತು (1619). 1620ರಲ್ಲಿ ದಳವಾಯಿ ತನ್ನ ಅಧಿಕಾರವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದ್ದುದರಿಂದ ಆ ವೇಳೆಗೆ ಪ್ರಾಪ್ತವಯಸ್ಕನಾದ ಚಾಮರಾಜ ಅಧಿಕಾರವನ್ನು ಸ್ವತಃ ನಡೆಸಲು ಪ್ರಾರಂಭಿಸಿದುದರಿಂದಲೂ ರಾಜನಿಗೂ ದಳವಾಯಿಗೂ ವೈಮನಸ್ಯವುಂಟಾಯಿತು. ದಳವಾಯಿಯ ಸಂಬಂಧಿಗಳು ಚಾಮರಾಜನ ಹತ್ಯೆಯ ಸಂಚು ನಡೆಸಿದರು. ಇದನ್ನು ಅರಿತ ರಾಜ ದಳವಾಯಿಯ ಸಂಬಂಧಿಗಳನ್ನು ಮರಣ ದಂಡನೆಗೆ ಗುರಿಪಡಿಸಿದ. ದಳವಾಯಿಯನ್ನು ಹಿಡಿದು ಅವನ ಕಣ್ಣು ಕೀಳಿಸಿ ಸೆರೆಮನೆಯಲ್ಲಿಟ್ಟ. 1621ರಲ್ಲಿ ಲಿಂಗಣ್ಣ ಎಂಬುವನನ್ನು ದಳವಾಯಿಯನ್ನಾಗಿ ನೇಮಿಸಿಕೊಂಡು ಸ್ವತಃ ಆಳಲು ಪ್ರಾರಂಭಿಸಿದ.

ಅನಂತರ ಚಾಮರಾಜ ತನ್ನ ತಾತನ ಮೇಲ್ಪಂಕ್ತಿಯನ್ನನುಸರಿಸಿ ರಾಜ್ಯ ವಿಸ್ತರಣೆಯಲ್ಲಿ ತೊಡಗಿದ. ಸೋಮರಾಜಯ್ಯನನ್ನು ಸೋಲಿಸಿ ತಲಕಾಡನ್ನು ಆಕ್ರಮಿಸಿಕೊಂಡ (ಅಕ್ಟೋಬರ್ 1621), ಜಗದೇವರಾಯನ ಸೈನ್ಯವನ್ನು ಹಿಮ್ಮೆಟ್ಟಿಸಿ ಮಳವಳ್ಳಿಯನ್ನೂ (ಮೇ 1623) ಬಾಲೋಜಿ ನಾಯಕನನ್ನು ಸೋಲಿಸಿ ಅರಿಕುಠಾರವನ್ನೂ (ಈಗಿನ ಚಾಮರಾಜನಗರ, ಡಿಸೆಂಬರ್ 1623), ಹಿಂದೆ ಹದಿನಾಡಿನ ನಂಜರಾಜನಿಗೆ ಸೇರಿದ್ದ ಸತ್ಯಾಗಾಲವನ್ನೂ (ಮೇ 1625) ಚನ್ನರಾಜ ಒಡೆಯರ್ ಎಂಬುವನನ್ನು ಸೋಲಿಸಿ ಹೆಗ್ಗಡದೇವನಕೋಟೆಯನ್ನೂ (ಜುಲೈ 1625) ತನ್ನ ರಾಜ್ಯಕ್ಕೆ ಸೇರಿಸಿಕೊಂಡ. 1626ರಲ್ಲಿ ನಡೆದ ಚನ್ನಪಟ್ಟಣದ ಮುತ್ತಿಗೆಯಲ್ಲಿ ದಳವಾಯಿ ಲಿಂಗಣ್ಣ ಮೃತನಾದ್ದರಿಂದ ಬಸವಲಿಂಗಣ್ಣ ಎಂಬುವನನ್ನು ದಳವಾಯಿಯಾಗಿ ನೇಮಿಸಿಕೊಂಡ. ಆತ ದಕ್ಷಿಣದತ್ತ ನುಗ್ಗಿ ಹೊಂಗನೂರು ಮತ್ತು ಅಮ್ಮಚವಾಡಿಗಳನ್ನು ಗೆದ್ದ (ಮಾರ್ಚ್ 1626). ಅನಂತರ ಪಿರಿಯಾಪಟ್ಟಣದ ಮೇಲೆ ದಾಳಿಮಾಡಿ ಅಲ್ಲಿನ ನಾಯಕನಿಂದ ಕಪ್ಪಕಾಣಿಕೆಯನ್ನು ವಸೂಲಿ ಮಾಡಿ ಹಾಡ್ಯ, ಹನಸೋಗೆ ಮತ್ತು ಸಾಲಿಗ್ರಾಮ ಪ್ರದೇಶಗಳನ್ನು ವಶಪಡಿಸಿಕೊಂಡ (ಜುಲೈ 1626). ಅದೇ ತಿಂಗಳಲ್ಲಿ ಪ್ರಭುದೇವ ಮತ್ತು ಲಿಂಗರಾಜಯ್ಯ ಇವರಿಂದ ತಗಡೂರು, ಕೊತ್ತಾಗಾಲ, ಡಿಸೆಂಬರ್‌ನಲ್ಲಿ ಚನ್ನರಾಜಯ್ಯನಿಂದ ಚೌಡಲೆ - ಇವನ್ನು ಕಿತ್ತುಕೊಳ್ಳಲಾಯಿತು. 1627ರ ಹೊತ್ತಿಗೆ ಮೈಸೂರಿನ ಆಗ್ನೇಯದಲ್ಲಿ ಘಟ್ಟದ ಕೆಳಗೆ ಆಳುತ್ತಿದ್ದ ಘಟ್ಟ ಮುದಲಿಯಾರನಿಂದ ಕಪ್ಪ ವಸೂಲಿ ಮಾಡಲಾಯಿತು.

1630ರಲ್ಲಿ ದಳವಾಯಿ ಬಸವಲಿಂಗಣ್ಣ ತೀರಿಕೊಂಡಾಗ ಅವನ ಸ್ಥಾನದಲ್ಲಿ ಬೆಟ್ಟದ ಅರಸನ ತಮ್ಮನಾದ ವಿಕ್ರಮರಾಯನನ್ನು ದಳವಾಯಿಯಾಗಿ ನೇಮಿಸಿದ. ಅನಂತರ ಮೈಸೂರು ಮತ್ತು ಇಕ್ಕೇರಿ ಸಂಸ್ಥಾನಗಳ ಮಧ್ಯೆ ಘರ್ಷಣೆ ನಡೆಯಿತು. ಚನ್ನಪಟ್ಟಣದ ಜಗದೇವರಾಯ ಚಾಮರಾಜನನ್ನು ಎದುರಿಸುವ ಸನ್ನಾಹ ನಡೆಸಿದಾಗ, ಚಾಮರಾಜ ಸ್ವತಃ ಸೈನ್ಯದ ನೇತೃತ್ವವನ್ನು ವಹಿಸಿ ಜಗದೇವರಾಯನನ್ನು ಸೋಲಿಸಿ ಚನ್ನಪಟ್ಟಣವನ್ನು ಆಕ್ರಮಿಸಿಕೊಂಡ. ಅನಂತರ ನಾಗಮಂಗಲ ಮತ್ತು ಬೆಳ್ಳೂರನ್ನೂ ವಶಪಡಿಸಿಕೊಂಡ. ಚಿಕ್ಕನಾಯಕನಹಳ್ಳಿ ಪಾಳೆಯಗಾರ ಚಾಮರಾಜನೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಂಡ. 1634ರಲ್ಲಿ ಚಾಮರಾಜ ಚನ್ನರಾಯಪಟ್ಟಣವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡು ರಾಜ್ಯವನ್ನು ವಿಸ್ತರಿಸಿದ.

ಈತನ ಆಳಿಕೆಯ ಕೊನೆಯಲ್ಲಿ ಮೈಸೂರು ಸಂಸ್ಥಾನ ಮಳವಳ್ಳಿ, ಚನ್ನಪಟ್ಟಣ, ನಾಗಮಂಗಲ, ಚನ್ನರಾಯಪಟ್ಟಣ, ಪಿರಿಯಾಪಟ್ಟಣ ಮತ್ತು ದಣಾಯಕನ ಕೋಟೆ ಪ್ರದೇಶಗಳನ್ನೊಳಗೊಂಡಿತ್ತು. ಅಲ್ಲದೆ ಸುತ್ತಲಿನ ಅನೇಕ ಪಾಳೆಯಗಾರರು ಚಾಮರಾಜನ ಸ್ನೇಹವನ್ನು ಬಯಸುವಂತಾಯಿತು. ಅನೇಕರು ಕಪ್ಪವನ್ನೊಪ್ಪಿಸುತ್ತಿದ್ದರು. ಅಂದಿನ ವಿಜಯನಗರ ಸಾಮಂತರಲ್ಲಿ ಚಾಮರಾಜ ಪ್ರಭಾವೀ ಸ್ಥಾನವನ್ನು ಗಳಿಸಿದ್ದ.

ಚಾಮರಾಜ ಬಿರುದೆಂತೆಂಬರ ಗಂಡ, ಶ್ರೀಮದ್ ರಾಜಾಧಿರಾಜ ಪರಮೇಶ್ವರ, ಕಠಾರಿಯ ಸಾಳ್ವ, ವೈರಿಗಜಗಂಡಭೇರುಂಡ, ಅಪ್ರತಿಮವೀರ ಮೊದಲಾದ ಬಿರುದುಗಳನ್ನು ಧರಿಸಿದ್ದ. ಯಳಂದೂರಿನ ಮುದ್ದಾಜಮ್ಮ, ಬಿಳುಗಲಿಯ ದೇವೀರಮ್ಮ, ಮೂಗೂರಿನ ಸಿದ್ದಾಜಮ್ಮ, ಮೂಡಣಕೋಟೆಯ ಚನ್ನಾಜಮ್ಮ ಮತ್ತು ಸಿಂಧುವಳ್ಳಿಯ ದೊಡ್ಡಾಜಮ್ಮ ಇವರು ಚಾಮರಾಜನ ಪತ್ನಿಯರು. ಮುದ್ದಾಜಮ್ಮ ಮೇಲುಕೋಟೆಯ ಕೊಳದ ಸ್ನಾನಘಟ್ಟವನ್ನು ಕಟ್ಟಿಸಿದ್ದಳು. ಚಾಮರಾಜ 1637 ಮೇ 2ರಂದು ನಿಧನನಾದ. ಆಗ ಈತನ ಪತ್ನಿಯರು ಸತಿಯಾದಂತೆ ತೋರುತ್ತದೆ.

ಚಾಮರಾಜ ಪರಾಕ್ರಮಿಯಾಗಿದ್ದಂತೆ ಧರ್ಮಾಭಿಮಾನಿಯೂ ಆಗಿದ್ದ. ಇವನು ಮೈಸೂರಿನ ಲಕ್ಷ್ಮೀಕಾಂತ, ಚಾಮುಂಡೇಶ್ವರಿ ಮತ್ತು ಮಹಾಬಲೇಶ್ವರ ದೇವಾಲಯಗಳಿಗೆ ಉದಾರದತ್ತಿ ನೀಡಿದನಲ್ಲದೆ 1631ರಲ್ಲಿ ಶ್ರವಣಬೆಳಗೊಳವನ್ನು ಸಂದರ್ಶಿಸಿ ಅಲ್ಲಿಂದ ಕಾರಣಾಂತರಗಳಿಂದ ಸ್ಥಳಾಂತರ ಹೊಂದಿದ್ದ ಜೈನ ಗುರು ಚಾರುಕೀರ್ತಿಪಂಡಿತ ಯೋಗೀಂದ್ರರನ್ನು ತನ್ನ ಆಸ್ಥಾನಕ್ಕೆ ಕರೆಸಿ ಗೌರವಿಸಿ ಅವರು ಶ್ರವಣಬೆಳಗೊಳಕ್ಕೆ ಹಿಂದಿರುಗಲು ವ್ಯವಸ್ಥೆಮಾಡಿದ. ಅಲ್ಲದೆ ಶ್ರವಣಬೆಳಗೊಳ ಕ್ಷೇತ್ರದಲ್ಲಿ ಪೂಜಾಕೈಂಕರ್ಯಗಳು ಯಥೋಚಿತವಾಗಿ ಮುಂದುವರಿಯಲು ದಾನ ದತ್ತಿಗಳನ್ನು ನೀಡಿದ.

ಈತನ ಆಳಿಕೆಯ ಅವಧಿಯಲ್ಲಿ ಸಾಹಿತ್ಯಕ್ಕೂ ವಿಶೇಷ ಪ್ರೋತ್ಸಾಹ ದೊರಕಿತು. ಇವನ ಆಶ್ರಯದಲ್ಲಿದ್ದ ರಾಮಚಂದ್ರನೆಂಬ ವಿದ್ವಾಂಸ ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಇದರಲ್ಲಿ 18 ಅಧ್ಯಾಯಗಳಿದ್ದು ವಿಷಯ ಸರಳ ಭಾಷೆಯಲ್ಲಿ ನಿರೂಪಣೆಗೊಂಡಿದೆ. ಪದ್ಮಣ ಪಂಡಿತನೆಂಬ ಜೈನಕವಿ ರಾಜನ ಆಣತಿಯಂತೆ ಹಯಸಾರ ಸಮುಚ್ಚಯ ಎಂಬ ಗ್ರಂಥವನ್ನು (ಕಂದದಲ್ಲಿ) ರಚಿಸಿದ್ದಾನೆ. ಇದಕ್ಕೆ ಚಾಮರಾಜೀಯ ಎಂಬ ಹೆಸರೂ ಇದ್ದು 20 ಅಧ್ಯಾಯಗಳನ್ನೂ 8,000 ಪದ್ಯಗಳನ್ನೂ ಒಳಗೊಂಡಿದೆ. ಚಾಮರಾಜನ ಪ್ರೋತ್ಸಾಹದಿಂದ ಕನ್ನಡ ಭಾಷೆಯಲ್ಲಿ ಅನೇಕ ಕೃತಿಗಳು ರಚಿತವಾದುದಲ್ಲದೆ ಈ ದಿಸೆಯಲ್ಲಿ ಹೆಚ್ಚಿನ ಪುರೋಭಿವೃದ್ಧಿಯಾಗಲು ನಾಂದಿಯಾಯಿತು.

ಚಾಮರಾಜ ಸ್ವತಃ ಕವಿಯೂ ಆಗಿದ್ದ. ಈತ ವಾಲ್ಮೀಕಿ ರಾಮಾಯಣ ಟೀಕೆ, ಬ್ರಹ್ಮೋತ್ತರಖಂಡ ಟೀಕೆ ಎಂಬ ಗ್ರಂಥಗಳನ್ನು ರಚಿಸಿದನೆಂದು ತಿಳಿದುಬರುತ್ತದೆ. ವಾಲ್ಮೀಕಿ ರಾಮಾಯಣ ಟೀಕೆಗೆ ಚಾಮರಾಜೋಕ್ತಿವಿಲಾಸ ಎಂಬ ಹೆಸರೂ ಇದೆ. ಇದು ಮೂಲ ರಾಮಾಯಣವನ್ನನುಸರಿಸಿ ಕನ್ನಡದಲ್ಲಿ ರಚಿತವಾದ ಪ್ರಥಮ ಗದ್ಯಕೃತಿ. ಗ್ರಂಥದ ಪ್ರಾರಂಭದಲ್ಲಿರುವ ಶ್ಲೋಕವೊಂದರಿಂದ ವಿರೂಪಾಕ್ಷನೆಂಬ ವಿದ್ವಾಂಸನಿಂದ ಇದನ್ನು ಬರೆಯಿಸಿದಂತೆ ತೋರುತ್ತದೆ. ಬ್ರಹ್ಮೋತ್ತರಖಂಡ ಟೀಕೆ ಸ್ಕಾಂದ ಪುರಾಣದಲ್ಲಿಯ ಬ್ರಹ್ಮೋತ್ತರ ಖಂಡಕ್ಕೆ ಗದ್ಯರೂಪದ ಕನ್ನಡ ವ್ಯಾಖ್ಯಾನ, 22 ಅಧ್ಯಾಯಗಳನ್ನೊಳಗೊಂಡಿದೆ. ಇದಕ್ಕೆ ಮಣಿಪ್ರಕಾಶ ಎಂಬ ಹೆಸರೂ ಇದೆ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ VI :** ಮೈಸೂರು ಸಂಸ್ಥಾನದ ದೊರೆ (1732-34). ಒಂದನೆಯ ಕೃಷ್ಣರಾಜನ ದತ್ತುಪುತ್ರ ಮತ್ತು ಉತ್ತರಾಧಿಕಾರಿ. ಒಂದನೆಯ ಕೃಷ್ಣರಾಜನಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವನ ಅವಸಾನ ಕಾಲದಲ್ಲಿ ಅಂಕನಹಳ್ಳಿಯ ದೇವರಾಜ ಅರಸನ ಪುತ್ರನಾದ ಚಾಮರಾಜನನ್ನು ದತ್ತು ಸ್ವೀಕರಿಸಿ ಪಟ್ಟಗಟ್ಟಲು ತನ್ನ ರಾಣಿ ದೇವಾಜಮ್ಮನಿಗೆ ಆಣತಿ ನೀಡಿದ. ದೇವಾಜಮ್ಮ ತನ್ನ ಪತಿಯ ಇಚ್ಛೆಯನ್ನು ಆ ವೇಳೆಗೆ ಆಸ್ಥಾನದಲ್ಲಿ ಪ್ರಾಬಲ್ಯಕ್ಕೆ ಬಂದಿದ್ದ ಸರ್ವಾಧಿಕಾರಿ ನಂಜರಾಜಯ್ಯ, ದಳವಾಯಿ ದೇವರಾಜಯ್ಯ ಮತ್ತು ಕರಾಚೂರಿ ನಂಜರಾಜಯ್ಯ, ಇವರಿಗೆ ವಿವರಿಸಿದಳು. ಕೂಡಲೇ ಇವರು ಚಾಮರಾಜನನ್ನು ಶ್ರೀರಂಗಪಟ್ಟಣಕ್ಕೆ ಬರಮಾಡಿಕೊಂಡು ಹಿಂದಿನ ರಾಜನ ಇಚ್ಛೆಯನ್ನು ವಿವರಿಸಿ ಅವನ ಪಟ್ಟಾಭಿಷೇಕವನ್ನು 1732 ಮಾರ್ಚ್ 19ರಂದು ನೆರವೇರಿಸಿದರು. ಆ ವೇಳೆಗೆ ಚಾಮರಾಜನಿಗೆ 28 ವರ್ಷ ವಯಸ್ಸು ಆಗಿತ್ತು.

ಚಾಮರಾಜ ಒಡೆಯರ್ ಅಧಿಕಾರ ವಹಿಸಿದ ಅನಂತರ ಹಲವು ತಿಂಗಳ ಕಾಲ ದಳವಾಯಿಗಳ ಪ್ರಾಬಲ್ಯ ಸಹಿಸಿಕೊಂಡಿದ್ದ. ಆ ವೇಳೆಗೆ ಆಡಳಿತವೆಲ್ಲವೂ ಕಳಲೆ ಕುಟುಂಬದವರಾದ ದಳವಾಯಿ ದೇವರಾಜಯ್ಯ ಮತ್ತು ಕರಾಚೂರಿ ನಂಜರಾಜಯ್ಯ ಇವರ ಕರಗತವಾಗಿತ್ತು. ರಾಜ್ಯದ ಆಡಳಿತ ಮತ್ತು ಹಣಕಾಸಿನ ವ್ಯವಹಾರದ ಜೊತೆಗೆ ಅರಮನೆಯ ಆಡಳಿತ ಹಾಗೂ

ರಾಜನಿಗೆ ಸೇರಿದ ಜಮೀನುಗಳ ಉತ್ಪತ್ತಿ ಮೊದಲಾದ ಎಲ್ಲ ವಿಷಯಗಳ ಮೇಲ್ವಿಚಾರಣೆಯನ್ನೂ ದಳವಾಯಿಗಳೇ ನಿರ್ವಹಿಸುತ್ತಿದ್ದರು. ದಳವಾಯಿಗಳ ಸರ್ವಾಧಿಕಾರವನ್ನು ಕೊನೆಗಾಣಿಸಿ ಈ ದುಸ್ಥಿತಿಯಿಂದ ಪಾರಾಗಲು ಚಾಮರಾಜ 1732ರ ಡಿಸೆಂಬರ್ ಮಾಹೆಯಲ್ಲಿ ನಿರ್ಧರಿಸಿದ. ರಾಜನ ನಿರ್ಧಾರವನ್ನು ಸಂಚಿನಿಂದ ತಿಳಿದ ದಳವಾಯಿ ದೇವರಾಜಯ್ಯ ದೇವಾಜಮ್ಮನಿಗೆ ದೂರು ಹೇಳುವುದರ ಮೂಲಕ ಅವಳ ಮನಸ್ಸನ್ನು ಗೆದ್ದು ತನಗೆ ಇಚ್ಛೆ ಬಂದಂತೆ ಅಧಿಕಾರ ಚಲಾಯಿಸುವಂತೆ ಅವಳಿಂದ ವಾಗ್ದಾನ ಪಡೆದ. ಈ ಸಂಗತಿಯನ್ನು ತಿಳಿದ ಚಾಮರಾಜ 1732ರ ಜನವರಿಯಲ್ಲಿ ದೇವರಾಜಯ್ಯನನ್ನೂ ಸರ್ವಾಧಿಕಾರಿ ನಂಜರಾಜಯ್ಯನನ್ನೂ ಅಧಿಕಾರದಿಂದ ಕಿತ್ತುಹಾಕಿ ತನ್ನ ಆಪ್ತರನ್ನು ಅವರ ಸ್ಥಳದಲ್ಲಿ ನೇಮಿಸಿದ.

ಅನಂತರ ಚಾಮರಾಜ ಸ್ವತಂತ್ರವಾಗಿ ಆಡಳಿತ ನಡೆಸಿದ. ಸಮಕಾಲೀನ ಕೃತಿಯಾದ ಶೃಂಗಾರರಾಜತಿಲಕ ಬಾಣ ಮತ್ತು ಇತರ ಆಕರಗಳಿಂದ ತಿಳಿದುಬರುವಂತೆ ಚಾಮರಾಜ ಒಡೆಯರ್ ದಕ್ಷತೆಯಿಂದ ಆಡಳಿತದ ಪ್ರತಿ ಅಂಶವನ್ನು ಎಚ್ಚರಿಕೆಯಿಂದ ಪರಿಶೀಲಿಸುತ್ತಿದ್ದ. ತನ್ನ ಹಿಂದಿನ ಅರಸರಂತೆ ದೇವಾಲಯಗಳಿಗೂ ವಿದ್ವಾಂಸರಿಗೂ ದಾನ ಧರ್ಮಗಳನ್ನು ನೀಡಿದ. ಶ್ರೀರಂಗಪಟ್ಟಣ ಶ್ರೀಮಂತ ವರ್ತಕರಿಂದ ಕೂಡಿ ವ್ಯಾಪಾರ, ಧರ್ಮ ಮತ್ತು ವಿದ್ವತ್ತಿನ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಚಾಮರಾಜ ನೇಮಿಸಿಕೊಂಡಿದ್ದ ಅಧಿಕಾರಿಗಳು ನಿಸ್ಪೃಹತೆಯಿಂದ ಕಾರ್ಯನಿರ್ವಹಿಸುತ್ತಿದ್ದರು.

ಆದರೆ ಚಾಮರಾಜ ಬಹುಕಾಲ ರಾಜನಾಗಿ ಮುಂದುವರಿಯುವ ಅದೃಷ್ಟ ಪಡೆದಿರಲಿಲ್ಲ. ಪದಚ್ಯುತರಾದ ದಳವಾಯಿಗಳು ಚಾಮರಾಜನ ಆಳಿಕೆಯನ್ನು ಕೊನೆಗಾಣಿಸಲು ಸಮಯ ಕಾಯುತ್ತಿದ್ದರು. ಈ ಮಧ್ಯೆ ಚಾಮರಾಜ ಹಲವು ಆರ್ಥಿಕ ಸುಧಾರಣೆಗಳನ್ನು ಕೈಗೊಂಡ. ಇವನ ಸಾಕುತಾಯಿಯಾದ ರಾಣಿ ದೇವಾಜಮ್ಮ ಇತಿಮಿತಿಯಿಲ್ಲದ ಧರ್ಮಗಳನ್ನು ನೆರವೇರಿಸುತ್ತಿದ್ದು ಹೆಚ್ಚು ಸಂಖ್ಯೆಯಲ್ಲಿ ಸೇವಕ ವರ್ಗದವರನ್ನು ನೇಮಿಸಿಕೊಂಡಿದ್ದಳು. ಚಾಮರಾಜ ತರಲಿದ್ದ ಆರ್ಥಿಕ ಸುಧಾರಣೆಯಿಂದ ತಮಗೆ ತೊಂದರೆಯಾಗುವುದೆಂದು ಗ್ರಹಿಸಿದ ಹಲವರು ರಾಣಿಗೆ ಚಾಡಿ ಹೇಳತೊಡಗಿದರು. ಈ ಸಮಯವನ್ನು ಕಾಯುತ್ತಿದ್ದ ಕಳಲೆ ಸಹೋದರರು ವಿಶೇಷ ಹಣದಾಸೆಯನ್ನು ತೋರಿಸಿ ಸೈನ್ಯದಲ್ಲಿ ಒಡಕುಂಟುಮಾಡಿ ರಾಜರಮೇಲೆ ತಿರುಗಿಬೀಳುವಂತೆ ಮಾಡಿ ತಾವೇ ಅದರ ಮುಖಂಡತ್ವವನ್ನು ವಹಿಸಿ ರಾತ್ರಿ ವೇಳೆಯಲ್ಲಿ ದಂಗೆಯನ್ನು ನಡೆಸಿದರು. ಕುಹಕವನ್ನರಿಯದ ಚಾಮರಾಜ ದಳವಾಯಿ ದೇವರಾಜಯ್ಯನೊಡನೆ ಸೌಹಾರ್ದ ಒಪ್ಪಂದಕ್ಕೆ ಮುಂದಾದ. ಆದರೆ ಸಮಯಸಾಧಕನಾದ ದಳವಾಯಿ ಅರಮನೆಯ ಬಾಗಿಲನ್ನು ಆನೆಯಿಂದ ಒಡೆಸಿ ಚಾಮರಾಜನಿಂದ ರಾಜತ್ವದ ಚಿಹ್ನೆಗಳನ್ನು ಕಸಿದುಕೊಂಡು ಸಿಂಹಾಸನದ ಮೇಲಿಟ್ಟು ಅವನನ್ನು 1734 ಜೂನ್ 10 ರಂದು ಅಧಿಕಾರ ಚ್ಯುತನನ್ನಾಗಿ ಮಾಡಿದ. ಅವನ ಅಧಿಕಾರಿಗಳನ್ನೆಲ್ಲ ಸೆರೆಮನೆಗೆ ಕಳುಹಿಸಲಾಯಿತು. ಅನಂತರ ಚಾಮರಾಜನನ್ನು ಅವನ ಮೂವರು ಪತ್ನಿಯರ ಸಮೇತವಾಗಿ ಕಬ್ಬಾಳದುರ್ಗದ ಸೆರೆಮನೆಯಲ್ಲಿಡಲಾಯಿತು. ಚಾಮರಾಜ ಸೆರೆಯಾದ ಸ್ವಲ್ಪ ಕಾಲದಲ್ಲೇ ಅನಾರೋಗ್ಯಕ್ಕೆ ತುತ್ತಾಗಿ ಮರಣಹೊಂದಿದ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ (ಬೆಟ್ಟದ) VII :** ಮೈಸೂರು ರಾಜ್ಯದ ದೊರೆ (1770-76). ಇಮ್ಮಡಿ ಕೃಷ್ಣರಾಜನ ಕಿರಿಯ ಮಗ. ಅಣ್ಣ ನಂಜರಾಜ ಮೃತನಾದ ಅನಂತರ 11 ವರ್ಷದ ಬಾಲಕನಾದ ಈತನಿಗೆ ಹೈದರ್ ಪಟ್ಟ ಕಟ್ಟಿದ. ಹಲವು ಸಮಕಾಲೀನ ಶಾಸನಗಳು ಮತ್ತು ಅಧಿಕೃತ ದಾಖಲೆಗಳಲ್ಲಿ ಬೆಟ್ಟದ ಚಾಮರಾಜ ರಾಜನೆಂದೂ ಹೈದರ್ ಸರ್ವಾಧಿಕಾರಿಯೆಂದೂ ಉಲ್ಲೇಖಿಸಲಾಗಿದೆಯಾದರೂ ರಾಜತ್ವ ಕೇವಲ ತೋರಿಕೆಗೆ ಮಾತ್ರವಾಗಿತ್ತು. ಅಧಿಕಾರವೆಲ್ಲ ಹೈದರನ ವಶದಲ್ಲಿತ್ತು. ಬೆಟ್ಟದ ಚಾಮರಾಜ ತನ್ನ ಹದಿನೇಳನೆಯ ವಯಸ್ಸಿನಲ್ಲಿ (1776) ಅಕಾಲ ಮೃತ್ಯುಗೀಡಾದ. ಇವನ ಮರಣ ವಿಷಪ್ರಾಶನದಿಂದ ಸಂಭವಿಸಿತೆಂದೂ ಅದಕ್ಕೆ ಹೈದರನೇ ಕಾರಣನೆಂದೂ ಊಹೆ ಇದೆ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ VIII :** ಖಾಸಾ ಚಾಮರಾಜನೆಂದೂ ಹೆಸರಿರುವ ಈತ ಮೈಸೂರು ಸಂಸ್ಥಾನದ ನಾಮ ಮಾತ್ರ ದೊರೆ (1776-96). ಏಳನೆಯ ಚಾಮರಾಜ ಒಡೆಯರ್ ಮಕ್ಕಳಿಲ್ಲದೆ ಮರಣ ಹೊಂದಿದುದರಿಂದ ಹೈದರ್ ಅಲಿ ಕಾರುಗಹಳ್ಳಿಯ ಕುಟುಂಬದ ಬಾಲಕನಾದ ಚಾಮರಾಜನನ್ನು ಗತಿಸಿದ ರಾಜನ ಉತ್ತರಾಧಿಕಾರಿಯಾಗಿ ಆರಿಸಿದ. ಹಿಂದಿನ ರಾಜನ ಮರಣಾನಂತರ ಉತ್ತರಾಧಿಕಾರಿಯನ್ನು ಆರಿಸಲು ಹೈದರ್ ರಾಜಕುಟುಂಬಕ್ಕೆ ಸಂಬಂಧಿಸಿದ ಅನೇಕ ಬಾಲಕರನ್ನು ಕರೆಸಿ ಅರಮನೆಯಲ್ಲಿ ಹಣ್ಣು ಹಂಪಲುಗಳನ್ನೂ ಇತರ ಅನೇಕ ಪದಾರ್ಥಗಳನ್ನೂ ಇಟ್ಟು ಆರಿಸಿಕೊಳ್ಳುವಂತೆ ಅವರಿಗೆ ಸೂಚಿಸಿದ. ಬೇರೆ ಬೇರೆ ಹುಡುಗರು ತಿಂಡಿ ತಿನಿಸುಗಳನ್ನು ಆರಿಸಿಕೊಳ್ಳುತ್ತಿದ್ದಾಗ ಬಾಲಕ ಚಾಮರಾಜ ಒಂದು ಕತ್ತಿ ಹಾಗೂ ನಿಂಬೆಹಣ್ಣು ಆರಿಸಿಕೊಂಡ. ಇದನ್ನು ಮೆಚ್ಚಿದ ಹೈದರ್ ಚಾಮರಾಜನನ್ನು ಉತ್ತರಾಧಿಕಾರಿಯೆಂದು ನಾಮಕರಣ ಮಾಡಿದ ಎಂಬ ಕಥೆ ಪ್ರಚಲಿತವಾಗಿದೆ. ಚಾಮರಾಜ ನೆಪಮಾತ್ರಕ್ಕೆ ರಾಜನಾಗಿದ್ದ. ಹೈದರ್ ಸರ್ವಾಧಿಕಾರಿಯಾಗಿದ್ದ. ಹೈದರ್‌ನ ಪ್ರಾಬಲ್ಯವನ್ನು ಕೊನೆಗಾಣಿಸಿ ರಾಜಮನೆತನದ ಅಧಿಕಾರವನ್ನು ಪುನಃ ಸ್ಥಾಪಿಸಲು ನಡೆದ ಯತ್ನಗಳು ಫಲಕಾರಿಯಾಗಲಿಲ್ಲ. ಚಾಮರಾಜ 1796ರಲ್ಲಿ ಸಿಡುಬುರೋಗಕ್ಕೆ ತುತ್ತಾಗಿ ಮರಣಹೊಂದಿದ. ಅನಂತರ ಸರ್ವಾಧಿಕಾರಿಯಾಗಿದ್ದ ಟಿಪ್ಪುಸುಲ್ತಾನ ಉತ್ತರಾಧಿಕಾರಿಯ ಆವಶ್ಯಕತೆಯಿಲ್ಲವೆಂದು ಘೋಷಿಸಿ ರಾಜಮನೆತನದವರನ್ನು ಸಾಮಾನ್ಯ ಗೃಹವೊಂದರಲ್ಲಿ ಬಂಧನದಲ್ಲಿಟ್ಟ. ಉತ್ತರಾಧಿಕಾರಿಯಾಗಬೇಕಾಗಿದ್ದ ಈತನ ಪುತ್ರ ಮೂರನೆಯ ಕೃಷ್ಣರಾಜ ಆಗ ಇನ್ನೂ ಕೇವಲ ಎರಡು ವರ್ಷದ ಬಾಲಕನಾಗಿದ್ದ. (ಜಿ.ಆರ್.ಆರ್.)

**ಚಾಮರಾಜ ಒಡೆಯರ್ IX :** ಮೈಸೂರು ಸಂಸ್ಥಾನದ ದೊರೆ (1881-94). ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತುಪುತ್ರ. ಜನನ 1863. ಬ್ರಿಟಿಷ್ ಸರ್ಕಾರ ಮೈಸೂರು ರಾಜವಂಶದವರಿಗೆ ಆಡಳಿತ ವಹಿಸಬೇಕೆಂದು ತೀರ್ಮಾನಿಸಿದ್ದರಿಂದ, ಇವರು ಪ್ರಾಪ್ತ ವಯಸ್ಕರಾಗುತ್ತಿದ್ದ ಹಾಗೆಯೇ 50 ವರ್ಷಗಳ ರೆಸಿಡೆಂಟರ ಆಡಳಿತ ಕೊನೆಗೊಂಡಿತು. 1881 ಮಾರ್ಚ್ 25ರಂದು ಪಟ್ಟಕ್ಕೆ ಬಂದರು.

ಇವರ ಕಾಲದಲ್ಲಿ ಗೋರ್ಡನ್ ರೆಸಿಡೆಂಟನಾಗಿ ನೇಮಕ ಹೊಂದಿದ. ಸಿ. ರಂಗಾಚಾರ್ಲು ದಿವಾನರಾಗಿ ನಿಯುಕ್ತರಾದರು. ಆಡಳಿತ ಕಾರ್ಯಕಲಾಪಗಳಲ್ಲಿ ನೆರವಾಗಲು ಇವರಿಗೆ ಒಂದು ಪುಟ್ಟ ಸಲಹಾ ಮಂಡಲಿಯೂ ರಚಿತವಾಯಿತು. ರೆಸಿಡೆಂಟರ ಕಾಲದಲ್ಲಿ ರಾಜ್ಯಾಂಗದ ಕೆಲವು ಸಂಪ್ರದಾಯಗಳು ಮೈಸೂರಿನಲ್ಲಿ ಆಚರಣೆಗೆ ಬಂದಿದ್ದವು. ರಂಗಾಚಾರ್ಲು ಅವರು ಈ ಸಂಪ್ರದಾಯವನ್ನು ಮುಂದುವರಿಸಿ ಮೈಸೂರಿನಲ್ಲಿ ಪ್ರಜಾ ಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಈ ಸಭೆಗೆ ಸಂಸ್ಥಾನದ ನಾನಾ ಭಾಗಗಳಿಂದ ಸರ್ಕಾರವೇ ಆರಿಸಿದ ನೂರ ನಲವತ್ತನಾಲ್ಕು ಜನ ಸದಸ್ಯರಿದ್ದರು. ಈ ಸಭೆಯು ಅಧಿವೇಶನ ಮೈಸೂರು ನಗರದಲ್ಲಿ ನಡೆಯುತ್ತಿತ್ತು. ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸಿದ್ದು, ಭಾರತದಲ್ಲೇ ಮೊದಲ ಬಾರಿಗೆ ಪ್ರಜಾ ಪ್ರಭುತ್ವ ಸ್ಥಾಪನೆಗೆ ತಳಹದಿ ಹಾಕಿದಂತಾಯಿತು. ರಂಗಾಚಾರ್ಲು 1883ರಲ್ಲಿ ನಿಧನಹೊಂದಿದ ಅನಂತರ ಕೆ. ಶೇಷಾದ್ರಿ ಅಯ್ಯರ್ ದಿವಾನರಾಗಿ ಬಂದರು. ಅವರ ಆಡಳಿತದ ಕಾಲದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಗತಿ ಕಂಡುಬಂತು. ಅವರು ಅಧಿಕಾರಕ್ಕೆ ಬರುವುದಕ್ಕೆ ಮುನ್ನ 58 ಮೈಲಿ ವರೆಗೆ ಬಂದಿದ್ದ ರೈಲು ಮಾರ್ಗ ಅವರು ಅಧಿಕಾರಕ್ಕೆ ಬಂದು ಎರಡು ವರ್ಷಗಳೊಳಗೆ 315 ಮೈಲಿಗಳಿಗೆ ವಿಸ್ತೃತವಾಯಿತು. ಸುಮಾರು ಒಂದೂವರೆ ಸಾವಿರ ಚದರ ಮೈಲಿಗಿಂತಲೂ ಹೆಚ್ಚಿನ ವಿಸ್ತೀರ್ಣಕ್ಕೆ ನೀರಾವರಿ ವ್ಯವಸ್ಥೆ ನಡೆಯಿತು. ಇದರಿಂದ ರಾಜ್ಯದ ಆದಾಯ ಹೆಚ್ಚಿತು. ಚಿನ್ನದ ಗಣಿ ಕೆಲಸ ಪ್ರಾರಂಭವಾದುದು ಶೇಷಾದ್ರಿ ಅಯ್ಯರ್ ಅವರ ದಿವಾನಗಿರಿ ಕಾಲದಲ್ಲಿ. ಶಿಕ್ಷಣ, ಗ್ರಾಮನೈರ್ಮಲ್ಯ, ಆರೋಗ್ಯ, ಅರಣ್ಯ ಸಂಪತ್ತು ಮುಂತಾದ ಎಲ್ಲ ರಂಗಗಳಲ್ಲೂ ಅಸಾಧಾರಣ ಪ್ರಗತಿಯುಂಟಾಯಿತು. ಆಡಳಿತದಲ್ಲಿ ಸೂಕ್ತ ಶಿಕ್ಷಣ ಕೊಡುವುದಕ್ಕಾಗಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ ಪ್ರಾರಂಭವಾದುದು ಇದೇ ಕಾಲದಲ್ಲಿ. ಸಮಗ್ರ ಭಾರತದಲ್ಲಿ ಅರಸರಿಗೂ ಪ್ರಜೆಗಳಿಗೂ ಇಂಥ ಮಧುರಬಾಂಧವ್ಯ ಬೆಳೆದಿರುವುದು, ಇಂಥ ಸರ್ಕಾರ ಏರ್ಪಟ್ಟಿರುವುದು, ಪ್ರಜಾಕ್ಷೇಮವೇ ಸರ್ಕಾರದ ಪರಮಾದರ್ಶ ಎಂಬ ಘನತತ್ತ್ವ ಯಶಸ್ವಿಯಾಗಿ ಕಾರ್ಯಗತವಾಗಿರುವುದು ಮೈಸೂರಿನಲ್ಲಿ ಮಾತ್ರ ಎಂದು ಅಂದಿನ ವೈಸ್‌ರಾಯ್ ಲಾರ್ಡ್ ಲ್ಯಾನ್ಸ್‌ಡೌನ್ ಕೊಂಡಾಡಿದ್ದಾನೆ.

ಚಾಮರಾಜ ಒಡೆಯರು 1894ರ ನವೆಂಬರ್ ತಿಂಗಳ ಕೊನೆಯ ಭಾಗದಲ್ಲಿ ಕಲ್ಕತ್ತೆಗೆ ಹೋಗಿದ್ದರು. ಹೊರಡುವಾಗಲೇ ಇವರ ಆರೋಗ್ಯ ಸರಿಯಾಗಿರಲಿಲ್ಲ. ಕೊನೆಗೆ ಇವರ ಕಾಯಿಲೆ ಡಿಫ್ತೀರಿಯ ಎಂದು ತಿಳಿದುಬಂತು. ಸಮರ್ಥ ಚಿಕಿತ್ಸೆಯೇನೋ ನಡೆಯಿತು. ಆದರೆ ಫಲಕಾರಿಯಾಗಲಿಲ್ಲ. 1894 ನವೆಂಬರ್ 28ರಂದು ನಿಧನಹೊಂದಿದರು.

ಚಾಮರಾಜ ಒಡೆಯರು ಸರಳ ಜೀವಿಯಾದ ಧೀರೋದಾತ್ತ ವ್ಯಕ್ತಿಯಾಗಿದ್ದರು.ಇವರಿಗೆ ಹಿಂದು ಸಂಪ್ರದಾಯದಲ್ಲಿ ಅಪಾರ ಭಕ್ತಿ ಶ್ರದ್ಧೆಗಳಿದ್ದುವು. ಇವರು ಪಾಶ್ಚಾತ್ಯ ಸಂಗೀತ, ಪಾಶ್ಚಾತ್ಯ ಕಲಾಕೃತಿಗಳಲ್ಲೂ ಪರಿಣತರಾಗಿದ್ದರು. ಇವರು ವೈಯಕ್ತಿಕ ಸಭ್ಯತೆ, ಸುಸಂಸ್ಕೃತಿ, ಸದಭಿರುಚಿಗಳಿಗೂ ದಕ್ಷ ರಾಜಕಾರ್ಯಕ್ಕೂ ಖ್ಯಾತರಾಗಿದ್ದರು. (ಎಂ.ಕೆ.ಜಿ.)

**ಚಾಮರಾಜನಗರ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಅವುಗಳ ಆಡಳಿತ ಕೇಂದ್ರ. 1997ರಲ್ಲಿ ಕರ್ನಾಟಕ ರಾಜ್ಯದ ಕೆಲವು ಜಿಲ್ಲೆಗಳನ್ನು ಮರುವಿಂಗಡಣೆ ಮಾಡಿದಾಗ ಮೈಸೂರು ಜಿಲ್ಲೆಯಿಂದ ನಾಲ್ಕು ತಾಲ್ಲೂಕುಗಳನ್ನು ಬೇರ್ಪಡಿಸಿ ಚಾಮರಾಜನಗರ ಜಿಲ್ಲೆಯನ್ನು ರಚಿಸಲಾಯಿತು. ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲ ಮತ್ತು ಯಳಂದೂರು—ಇವು ಈ ಜಿಲ್ಲೆಗೆ ಸೇರಿರುವ ತಾಲ್ಲೂಕುಗಳು. ರಾಜ್ಯದ ದಕ್ಷಿಣದ ತುತ್ತತುದಿಯಲ್ಲಿರುವ ಈ ಜಿಲ್ಲೆಯ ಉತ್ತರದಲ್ಲಿ ಮೈಸೂರು, ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳೂ ಪೂರ್ವ ಮತ್ತು ದಕ್ಷಿಣದಲ್ಲಿ ತಮಿಳುನಾಡು ರಾಜ್ಯ, ಪಶ್ಚಿಮಕ್ಕೆ ಕೇರಳ ರಾಜ್ಯಗಳೂ ಇವೆ. ಜಿಲ್ಲೆಯ ವಿಸ್ತೀರ್ಣ 5,685ಚ.ಕಿಮೀ. ಜನಸಂಖ್ಯೆ 9,64,775.

**ಭೂಲಕ್ಷಣ :** ದಕ್ಷಿಣ ಭಾರತ ಪ್ರಸ್ಥಭೂಮಿಯ ದಕ್ಷಿಣದ ತುದಿಯಲ್ಲಿರುವ ಜಿಲ್ಲೆ ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಕೂಡುವೆಡೆಯಲ್ಲಿದೆ. ನೀಲಗಿರಿ ಬೆಟ್ಟಗಳ ಕವಲುಗಳು ಇದರೊಳಕ್ಕೆ ಚಾಚಿವೆ. ಈ ಪ್ರದೇಶ ಸಮುದ್ರಮಟ್ಟಕ್ಕಿಂತ ಸರಾಸರಿ 800ಮೀ ಎತ್ತರದಲ್ಲಿದೆ. ಜಿಲ್ಲೆಯ ಮೂರು ಕಡೆ ಹಬ್ಬಿರುವ ಬೆಟ್ಟಗಳಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಬೆಟ್ಟ (976 ಮೀ), ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನಬೆಟ್ಟ (1,279ಮೀ), ಗುಂಡ್ಲುಪೇಟೆ ತಾಲ್ಲೂಕಿನ ಗೋಪಾಲಸ್ವಾಮಿಬೆಟ್ಟ (1,468ಮೀ) ಇವು ಈ ಜಿಲ್ಲೆಯ ಹೆಗ್ಗುರುತುಗಳಾಗಿವೆ. ಇವಲ್ಲದೆ ಪುಣಜೂರು (1252.7ಮೀ), ಮತ್‌ಪೋಡ್ (1515.5ಮೀ), ಹೊನ್ನನೆತ್ತಿಕಲ್ (1773.2ಮೀ), ಕತ್ತರಿ (1816ಮೀ), ಹೊನಬೆಗ್ರ (1646ಮೀ) ಬೆಟ್ಟಗಳಿವೆ.

ಮಹದೇಶ್ವರಬೆಟ್ಟ ಸಾಲಿನಲ್ಲಿ ಆನೆಮಲೆ, ಕಾಡುಮಲೆ, ಜೇನುಮಲೆ ಮೊದಲಾದ 77 ದಟ್ಟಡವಿಗಳಿವೆ. ಬಿಳಿಗಿರಿರಂಗನ ಬೆಟ್ಟದ ಸಾಲು ಬಂಡೀಪುರದವರೆಗೂ ನಿಬಿಡವಾಗಿ ಹಬ್ಬಿದೆ. ಇವು ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ದೊಡ್ಡ ಅಭೇದ್ಯ ಗೋಡೆಗಳಂತೆ ನಿಂತಿವೆ. ಕೇರಳದ ಗಡಿ ಪ್ರದೇಶ ಗುಂಡ್ಲುಪೇಟೆ ತಾಲ್ಲೂಕಿನ ಹಿಮವದ್ ಗೋಪಾಲಸ್ವಾಮಿಬೆಟ್ಟದ ಹತ್ತಿರ ಬರುತ್ತದೆ. ಈ ಇಡೀ ಅರಣ್ಯ ರಾಶಿಯ ನಡುವೆ ಅತ್ಯಂತ ಪ್ರಸಿದ್ಧವಾದ ಧಾರ್ಮಿಕ ಕ್ಷೇತ್ರಗಳಿರುವುದೊಂದು ವಿಶೇಷ. ಪಶ್ಚಿಮ ಘಟ್ಟಗಳ ಶ್ರೇಣಿಗೆ ಹೋಲಿಸಿದರೆ ಈ ಪ್ರದೇಶದಲ್ಲಿ ಬೀಳುವ ಮಳೆ ಕಡಿಮೆಯೇ. ಆದರೆ ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳ ಅಂಚಿನ ನೆಲಗಳನ್ನು ವಿಸ್ತಾರವಾದ ಅರಣ್ಯ ಆವರಿಸಿದೆ.

ಜಿಲ್ಲೆಯ ಉತ್ತರ ಮತ್ತು ಪೂರ್ವದಲ್ಲಿ ಬಯಲು ಪ್ರದೇಶವಿದೆ. ಕಪಿಲಾ ನದಿಯ ದಂಡೆಯ ಮೇಲೆ ವಿಸ್ತರಿಸಿರುವ ಈ ಭಾಗ ಹೆಚ್ಚಾಗಿ ಕೆಂಪುಮಣ್ಣಿನಿಂದ ಕೂಡಿದ್ದು, ಅಲ್ಲಲ್ಲಿ ಹೆಚ್ಚು ಎತ್ತರವಲ್ಲದ ಗುಡ್ಡಗಳು ಕಂಡುಬರುತ್ತವೆ.

**ಭೂವಿಜ್ಞಾನ :** ಈ ಜಿಲ್ಲೆ ದಕ್ಷಿಣ ಪ್ರಸ್ಥಭೂಮಿಯ ಅಂಚಿನಲ್ಲಿದ್ದರೂ ಪ್ರಸ್ಥಭೂಮಿ ಶಿಲಾ ರಚನೆಗಿಂತ ಸ್ವಲ್ಪ ಭಿನ್ನವಾಗಿದೆ. ಈ ಭಾಗದಲ್ಲಿ ಧಾರವಾಡ ಶಿಲಾ ರಚನೆ ಕಾಣದಿರುವುದೊಂದು ವಿಶೇಷ. ಇದರ ಬದಲು ಚಾರ್ನೊಕೈಟ್ ಶಿಲೆಗಳು ಕಂಡುಬರುತ್ತವೆ. ಅಲ್ಲಲ್ಲಿ ಹಾರ್ನ್‌ಬ್ಲೆಂಡ್, ಪೈರಾಕ್ಸೆನೈಟ್ ಮಾಸ್ನೈಟ್ ಶಿಲೆಗಳ ಹೊಡೆಸಾಲುಗಳು ಹಬ್ಬಿವೆ. ತೆರಕಣಾಂಬಿಯಲ್ಲಿ ಮಣಿಶಿಲೆ ಇದೆ. ಅಲ್ಲಲ್ಲಿ ಬಂಡೆ ಶ್ರೇಣಿಗಳಲ್ಲಿ ಕಯನೈಟ್ ಮತ್ತು ಸಿಲಿಮನೈಟ್ ಖನಿಜಗಳಿವೆ. ಖನಿಜ ಸಂಪತ್ತಿನಲ್ಲಿ ಈ ಜಿಲ್ಲೆ ಸಂಪದ್ಭರಿತವಾಗಿದೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ತಾಮ್ರದ ನಿಕ್ಷೇಪವುಂಟು. ಗುಂಡ್ಲುಪೇಟೆ ಸುತ್ತಮುತ್ತ ಕುರಂಗದ ಕಲ್ಲಿದೆ. ಕೊಳ್ಳೇಗಾಲದ ವಾಣಿಜ್ಯ ಪ್ರಮಾಣದಲ್ಲಲ್ಲದಿದ್ದರೂ ಅಲ್ಪ ಪ್ರಮಾಣದಲ್ಲಿ ಚಿನ್ನದ ಅದಿರು ಕಂಡುಬರುತ್ತದೆ. ಕೆಲವೆಡೆ ಕಬ್ಬಿಣದ ಅಂಶ ಗಣನೀಯವಾಗಿರುವ ಶಿಲೆಗಳುಂಟು. ಈ ಪ್ರದೇಶದಲ್ಲೇ ಮೆಗ್ನೀಷಿಯಂ ಲೋಹ ನಿಕ್ಷೇಪವೂ ಇದೆ. ಸುಣ್ಣಕಲ್ಲು ನಿಕ್ಷೇಪ ಮತ್ತು ಸಿಲಿಮನೈಟ್ ಖನಿಜಗಳು ಕೆಲವೆಡೆ ಉಂಟು. ಬಿಳಿಗಿರಿರಂಗನ ಬೆಟ್ಟ ಪ್ರದೇಶದಲ್ಲಿ ರೇಷ್ಮೆಯಂತೆ ಹೊಳಪಾದ ಊದಾಬಣ್ಣದ ಚಂದ್ರಶಿಲೆ ಇದೆ. ಕಟ್ಟಡಗಳ ಅಲಂಕಾರಕ್ಕಾಗಿ ಬಳಸಲು ಯೋಗ್ಯವಾದ ನಾನಾ ಬಗೆಯ ಗ್ರ್ಯಾನೈಟ್ ಶಿಲೆಗಳು ಜಿಲ್ಲೆಯಲ್ಲಿವೆ. ಕಲ್ಲು ತೆಗೆಯುವುದು ಇಲ್ಲಿನ ಒಂದು ಪ್ರಮುಖ ಉದ್ಯಮ. ಅವುಗಳಲ್ಲಿ ಕೆಂಪು, ಹಸುರು ಮತ್ತು ಗುಲಾಬಿ ಬಣ್ಣದ ಈ ಶಿಲೆಗಳು ಜಪಾನ್ ಮೊದಲಾದ ದೇಶಗಳಿಗೆ ರಫ್ತಾಗುತ್ತವೆ. ಕೆಲವು ಗ್ರ್ಯಾನೈಟ್ ಶಿಲೆಗಳಿಂದ ಜಪಮಣಿ, ಗುಂಡಿಗಳು, ಆಭರಣ ಹರಳುಗಳು, ಮಸಿಕುಡಿಕೆ, ಪಾತ್ರೆಗಳನ್ನು ತಯಾರಿಸುತ್ತಾರೆ.

**ನದಿಗಳು :** ಚಾಮರಾಜನಗರ ಜಿಲ್ಲೆಯಲ್ಲಿ ದೊಡ್ಡ ನದಿಗಳು ಹರಿಯುವುದಿಲ್ಲ. ಆದರೆ ಕಾವೇರಿಯ ಉಪನದಿಯಾದ ಕಪಿಲಾ ಅಥವಾ ಕಬಿನಿ ಈ ಜಿಲ್ಲೆಯ ಉತ್ತರ ಮತ್ತು ಪೂರ್ವ ಭಾಗದ ಸರಹದ್ದಿನಲ್ಲೇ ಹರಿಯುತ್ತದೆ. ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ಬಳಿ ಇದು ಕಾವೇರಿಯನ್ನು ಸೇರುತ್ತದೆ. ಮುಂದೆ ಕಾವೇರಿ ನದಿ ಸ್ವಲ್ಪ ದೂರ ಬೆಂಗಳೂರು ಮತ್ತು ಚಾಮರಾಜನಗರ ಜಿಲ್ಲೆಗಳ ಹಾಗೂ ತಮಿಳುನಾಡು ರಾಜ್ಯದ ಗಡಿಯಾಗಿ ಪರಿಣಮಿಸಿದೆ. ಕಪಿಲಾ ಮತ್ತು ಕಾವೇರಿ ನದಿಗಳನ್ನು ಸೇರುವ ಹಲವಾರು ಉಪನದಿಗಳು ಮತ್ತು ತೊರೆಗಳು ಈ ಜಿಲ್ಲೆಯ ಬೆಟ್ಟಗುಡ್ಡಗಳಲ್ಲಿ ಹುಟ್ಟಿ ಹರಿಯುತ್ತವೆ. ಗೋಪಾಲಸ್ವಾಮಿ ಬೆಟ್ಟದಲ್ಲಿ ಹುಟ್ಟುವ ಮಾವಿನಹಳ್ಳ ಮೈಸೂರು ಜಿಲ್ಲೆಯನ್ನು ಪ್ರವೇಶಿಸಿ ನುಗುಹೊಳೆಯನ್ನು ಸೇರುತ್ತದೆ. ಗುಂಡ್ಲುಹೊಳೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹುಟ್ಟಿ ನಂಜನಗೂಡು ಬಳಿ ಕಪಿಲಾ ನದಿಯನ್ನು ಕೂಡಿಕೊಳ್ಳುತ್ತದೆ.

ತಮಿಳುನಾಡಿನಿಂದ ಹರಿದುಬರುವ ಸುವರ್ಣಾವತಿ (ಹೊನ್ನುಹೊಳೆ), ಬಿಳಿಗಿರಿರಂಗನ ಬೆಟ್ಟದಿಂದ ಬರುವ ಗುಂಡಾಲ್ ಹೊಳೆ, ಹನೂರು ಸಮೀಪದ ಉಡುತೊರೆ ಹಳ್ಳ -ಇವು ಉತ್ತರಾಭಿಮುಖವಾಗಿ ಹರಿದರೆ ಮೋಯರ್ ಹಾಗೂ ಪಾಲಾರ್ ಈ ಜಿಲ್ಲೆ ಸರಹದ್ದಿನಲ್ಲಿ ಹರಿದು ಕಾವೇರಿಯನ್ನು ಸೇರುತ್ತವೆ. ಸುವರ್ಣಾವತಿ ಗಜಹಗಟ್ಟಿ ಕಣಿವೆಯ ಬಳಿ ದಿಂಬಂ ಎಂಬಲ್ಲಿ ಹುಟ್ಟಿ ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಹರಿದು ತಲಕಾಡಿನ ಸಮೀಪ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಚಿಕ್ಕಹೊಳೆ ಇದರ ಉಪನದಿ. ಮಹದೇಶ್ವರ ಬೆಟ್ಟದ ಗುಳಿಯಾತನೂರು ಹಳ್ಳ, ಯೇಲಕ್ಕಿಯಾತು ಹಳ್ಳ, ಮೆದುಗನಾಲು ಹಳ್ಳ, ಬಿಳಿಗಿರಿರಂಗನ ಬೆಟ್ಟದ ಉಲಿಕೊಪ್ಪ ಹಳ್ಳ, ತಟ್ಟನ ಹಳ್ಳ - ಇವು ಇತರ ತೊರೆಗಳು. ಚಾಮರಾಜನಗರ ಜಿಲ್ಲೆಯಲ್ಲಿ ವಿಸ್ತಾರವಾದ ಅರಣ್ಯ ಪ್ರದೇಶವೂ ಹೊಳೆತೊರೆಗಳು ಇದ್ದರೂ ಇಲ್ಲಿ ಮಳೆಯ ಪ್ರಮಾಣ ಅಷ್ಟೇನೂ ಇಲ್ಲವಾದ್ದರಿಂದ, ಹೆಚ್ಚಿನ ಜಲಸಂಪತ್ತಿಲ್ಲ. ಒಳ್ಳೆಯ ಮಳೆಯಾದಾಗ ಪರಿಸ್ಥಿತಿ ಸುಧಾರಿಸುತ್ತದೆ. ನೀರಾವರಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಲಾಗುತ್ತಿದೆ.

ಅರಣ್ಯ ಸಂಪತ್ತಿಗೆ ಸಂಬಂಧಿಸಿದಂತೆ ಈ ಜಿಲ್ಲೆ ಕರ್ನಾಟಕದ ಐದು ಮುಖ್ಯ ಜಿಲ್ಲೆಗಳಲ್ಲೊಂದು. ಜಿಲ್ಲೆಯ ಸು.1/3 ಭಾಗವನ್ನು ಅರಣ್ಯ ಆವರಿಸಿದೆ. ಚಾಮರಾಜನಗರವನ್ನು ಬಿಟ್ಟು ಉಳಿದೆಲ್ಲ ತಾಲ್ಲೂಕುಗಳಲ್ಲಿ ಕಾಡುಗಳಿವೆ. ಮಲೆನಾಡಿನ ಅರಣ್ಯಗಳಂತೆ ಇವು ದಟ್ಟವಾಗಿರದಿದ್ದರೂ ಇಲ್ಲಿ ಉತ್ತಮ ಜಾತಿಯ ಮರಗಳಿವೆ. ತೇಗ, ಬೀಟೆ, ಗಂಧ, ನಂದಿ, ಹೊನ್ನೆ, ಮತ್ತಿ ಮತ್ತು ಕರಿ ಮರಗಳು ಸಾಕಷ್ಟು ಕಂಡುಬರುತ್ತವೆ. ಬಿದಿರು, ಅರಗು, ಮರಗೋಂದು, ನೆಲ್ಲಿ, ಹುಣಿಸೆ, ಮಾವು ಸೀಗೆ -ಇವು ಇಲ್ಲಿಯ ಉಪೋತ್ಪನ್ನಗಳು. ಜಿಲ್ಲೆಯ ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣ 2,75,610 ಹೆಕ್ಟೇರ್ (1998-99). ಅಷ್ಟೇನೂ ಎತ್ತರವಲ್ಲದ ಕಾಡುಗಳು ಮತ್ತು ಪೊದೆಗಳಲ್ಲಿ, ಹುಲ್ಲುಗಾವಲುಗಳಲ್ಲಿ ಹುಲಿ, ಚಿರತೆ, ಕರಡಿ, ಆನೆ, ಜಿಂಕೆ, ಸಾರಂಗ, ಕಾಡುಕೋಣ ಮುಂತಾದ ಪ್ರಮುಖ ವನ್ಯಜೀವಿಗಳನ್ನು ಕಾಣಬಹುದು. ಮೊಲ, ನರಿ, ಕಾಡುಬೆಕ್ಕು, ಅಳಿಲು ಮುಂತಾದವೂ ಉಂಟು. ನವಿಲು ಇಲ್ಲಿನ ಕಾಡುಗಳಿಗೆ ಶೋಭೆ ತಂದಿರುವ ಪಕ್ಷಿ. ಬಂಡೀಪುರ (ನೋಡಿ) ಅಭಯಾರಣ್ಯ ಕಾಡು ಪ್ರಾಣಿಗಳ ಸಂರಕ್ಷಣಾ ತಾಣ. ಕಾಡುಗಳ್ಳರ ಹಾವಳಿಯಿಂದಾಗಿ ವೃಕ್ಷ ಸಂಕುಲ ಹಾಗೂ ಪ್ರಾಣಿಸಂಕುಲಗಳೆರಡಕ್ಕೂ ಹಾನಿಯಾಗುತ್ತಿದೆ.

**ವ್ಯವಸಾಯ :** ಚಾಮರಾಜನಗರ ಒಂದು ಹಿಂದುಳಿದ ಜಿಲ್ಲೆ. ವ್ಯವಸಾಯ ಇಲ್ಲಿನ ಮುಖ್ಯ ಕಸಬು. ಬತ್ತ, ರಾಗಿ, ಜೋಳ, ಕಬ್ಬು, ಹಿಪ್ಪುನೇರಳೆ, ನೆಲಗಡಲೆ, ಹರಳು, ಹತ್ತಿ, ಬಾಳೆ, ತೆಂಗು, ಅಡಕೆ - ಇವು ಮುಖ್ಯ ಬೆಳೆಗಳು. ವ್ಯವಸಾಯಕ್ಕೆ ನೀರಾವರಿ ಮುಖ್ಯ ಆಧಾರ. ಜಿಲ್ಲೆಯ ಸರಾಸರಿ ಮಳೆ 751ಮಿಮೀ. ಜಿಲ್ಲೆಯಲ್ಲಿ ಭಾರಿ ಜಲಾಶಯಗಳಿಲ್ಲ. ಹಲವಾರು ಮಧ್ಯಮ ಮತ್ತು ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳು ಜಾರಿಗೆ ಬಂದಿವೆ. ಚಿಕ್ಕಹೊಳೆ, ಉಡುತೊರೆ ಹಳ್ಳ, ಸುವರ್ಣಾವತಿ, ಗುಂಡಾಲ್ ಹೊಳೆಗಳಿಗೆ ಅಲ್ಲಲ್ಲಿ ಜಲಾಶಯಗಳನ್ನು


ಚಾಮರಾಜನಗರ ಜಿಲ್ಲೆ
ಚಾಮರಾಜನಗರ
ಕೊಳ್ಳೇಗಾಲ
ಗುಂಡ್ಲುಪೇಟೆ
ಯಳಂದೂರು
ಕಾವೇರಿ ನದಿ
0 10 20
ಕಿಲೋಮೀಟರುಗಳು

ನಿರ್ಮಿಸಿ ನೀರಾವರಿಗೆ ಸೌಲಭ್ಯ ವಿಸ್ತರಿಸಲಾಗುತ್ತಿದೆ. ಕಬಿನಿ ಮತ್ತು ನುಗು ಜಲಾಶಯಗಳಿಂದ ಕೆಲವು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಬರುತ್ತಿದೆ. ಕೊಳವೆ ಬಾವಿಗಳ ಮೂಲಕ ಅಂತರ್‌ಜಲವನ್ನು ಬಳಸಿಕೊಳ್ಳುವ ಪ್ರಯತ್ನ ನಡೆದಿದೆ.

ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾದ ನೆಲದಲ್ಲಿ 5,69,901 ಹೆಕ್ಟೇರ್ ಜಮೀನು ಬೇಸಾಯಕ್ಕೆ ಒದಗಿ ಬಂದಿದೆ (1998-99). ಕಾಲುವೆಯಿಂದ 11,192 ಹೆಕ್ಟೇರ್, ಕೆರೆಗಳಿಂದ 5,591, ಹೆಕ್ಟೇರ್ ಬಾವಿಗಳಿಂದ 18,799 ಹೆಕ್ಟೇರ್ ಜಮೀನು ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿ ಸಾಕಷ್ಟು ಮಳೆಯನ್ನು ಆಧರಿಸಿದ ಭೂಮಿಯಲ್ಲಿ ರಾಗಿ, ಜೋಳ, ಕಡಲೆ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಹತ್ತಿ ಒಂದು ಪ್ರಮುಖ ವಾಣಿಜ್ಯ ಬೆಳೆ. ರೇಷ್ಮೆ ಸಾಕಣೆಗೆ ಜಿಲ್ಲೆ ಪ್ರಸಿದ್ಧವಾಗಿದೆ.

ಜಿಲ್ಲೆಯಲ್ಲಿ ಆಧುನಿಕ ಮೀನುಗಾರಿಕೆ ಜನಪ್ರಿಯವಾಗಿದೆ. ಕೆರೆಗಳು ಮತ್ತು ಜಲಾಶಯಗಳಲ್ಲಿ ಮೀನುಮರಿಗಳನ್ನು ಬೆಳೆಸಿ ಮೀನು ಉತ್ಪಾದಿಸಲಾಗುತ್ತದೆ. ವಾರ್ಷಿಕ ಉತ್ಪನ್ನ 1508 ಟನ್. ಬೇಡಿಕೆಗೆ ಅನುಗುಣವಾಗಿ ಹೈನುಗಾರಿಕೆ ಬೆಳೆಯುತ್ತಿದೆ. ಹೆಚ್ಚು ಹೆಚ್ಚಾಗಿ ಜಾನುವಾರನ್ನು ಸಾಕಲಾಗುತ್ತಿದೆ. ಪಶುಸಂಗೋಪನೆಗಾಗಿ 11 ಕೃತಕಗರ್ಭಧಾರಣೆ ಕೇಂದ್ರಗಳಿವೆ. 4 ಸಂಚಾರಿ ಪಶು ಚಿಕಿತ್ಸಾಲಯಗಳು ಜಿಲ್ಲೆಯಲ್ಲಿ ಕಾರ್ಯನಿರತವಾಗಿವೆ. ಪಟ್ಟಣಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಅನೇಕ ಕೋಳಿ ಫಾರಂಗಳು ಅಸ್ತಿತ್ವಕ್ಕೆ ಬಂದಿವೆ. ಅಧಿಕ ಮಾಂಸೋತ್ಪನ್ನ ಸಾಧಕಗಳಾದ ಮಿಶ್ರತಳಿ ಕೋಳಿಗಳ ಸಾಕುವಿಕೆ ಅಭಿವೃದ್ಧಿ ಸಾಧಿಸುತ್ತಿದೆ.

**ಕೈಗಾರಿಕೆ :** ಚಾಮರಾಜನಗರ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದಿದೆ. ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡ ಈ ಜಿಲ್ಲೆಯಲ್ಲಿ ಬೆಳವಣಿಗೆಗೆ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ರೇಷ್ಮೆ ಉದ್ಯಮ, ಹತ್ತಿಗಿರಣಿ ಮತ್ತು ಸಕ್ಕರೆ ಕಾರ್ಖಾನೆಗಳು ಇಲ್ಲಿನ ಮುಖ್ಯ ಉದ್ಯಮಗಳು. ಚಾಮರಾಜನಗರ ಮತ್ತು ಕೊಳ್ಳೇಗಾಲದಲ್ಲಿ ಕೇಂದ್ರೀಯ ರೇಷ್ಮೆ ಸಂಶೋಧನ ಮಂಡಳಿಯ ಪ್ರಾದೇಶಿಕ ಸಂಶೋಧನ ಕೇಂದ್ರಗಳು ಮತ್ತು ತರಬೇತಿ ಸಂಸ್ಥೆಗಳಿವೆ. ರೇಷ್ಮೆ ಬೀಜದ ಕೋಠಿಯೊಂದು ಚಾಮರಾಜನಗರದಲ್ಲಿದೆ. ಇಲ್ಲಿ ಮತ್ತು ಕೊಳ್ಳೇಗಾಲದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳೂ ಕೊಳ್ಳೇಗಾಲದಲ್ಲಿ ಸರ್ಕಾರಿ ರೇಷ್ಮೆ ನೂಲು ಸುತ್ತುವ ಕಾರ್ಖಾನೆಯೂ ಇವೆ. ಮಾಂಬಳ್ಳಿಯಲ್ಲಿ ರೇಷ್ಮೆ ಸುತ್ತುವ ಮತ್ತು ನೇಯುವ ಕೇಂದ್ರವೂ ಸಂತೆಮರಳ್ಳಿಯಲ್ಲಿ ಸರ್ಕಾರಿ ರೇಷ್ಮೆ ನೂಲು ಸುತ್ತುವ ಘಟಕವೂ ಉಂಟು. ಅನೇಕ ಕಡೆಗಳಲ್ಲಿ ರೇಷ್ಮೆ ಸಾಕುವವರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಹಿಪ್ಪುನೇರಳೆ ಬೆಳೆಯುವುದು ಮತ್ತು ರೇಷ್ಮೆ ಹುಳು ಸಾಕಣೆ ಒಂದು ಪ್ರಮುಖ ಉಪ ಉದ್ಯಮ.

ಜಿಲ್ಲೆಯಲ್ಲಿ ಹತ್ತಿ ಬೆಳೆಯುವ ಪ್ರದೇಶ 12738 ಹೆಕ್ಟೇರ್. ಹಲವೆಡೆಗಳಲ್ಲಿ ಹತ್ತಿಯ ಮತ್ತು ಸ್ಪನ್ ಹತ್ತಿಯ ಕೈಮಗ್ಗಗಳಿವೆ. ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಚಾಮರಾಜನಗರದಲ್ಲಿ ಜವಳಿ ಉದ್ಯಮ ಬೆಳೆದಿದೆ. ಚಾಮರಾಜನಗರ ಮತ್ತು ಅದರ ಬಳಿಯ ಅಂಕಣಸೆಟ್ಟಿಪುರದಲ್ಲಿ ಜವಳಿ ಗಿರಣಿಗಳಿವೆ.

ಕೊಳ್ಳೇಗಾಲದಲ್ಲಿ ಮಹದೇಶ್ವರ ಸಕ್ಕರೆ ಕಾರ್ಖಾನೆಯಿದೆ. ಜಿಲ್ಲೆಯ ಕೆಲವೆಡೆ ಬೆಲ್ಲ ಮತ್ತು ಖಂಡಸಾರಿ ತಯಾರಾಗುತ್ತವೆ. ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲದಲ್ಲಿ ಕಾಗದ ತಯಾರಿಸುವ ಘಟಕವಿದೆ. ಜಿಲ್ಲೆಯಲ್ಲಿ ಮರಕೊಯ್ಯುವ ಉದ್ಯಮಗಳಲ್ಲಿ ಪೀಠೋಪಕರಣ ತಯಾರಿಕಾ ಘಟಕಗಳೂ ಬೀಡಿ ಕಟ್ಟುವ ಕೇಂದ್ರಗಳೂ ಎಂಜಿನಿಯರಿಂಗ್ ಕಾರ್ಯಾಗಾರಗಳೂ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರಗಳೂ ಎಣ್ಣೆ ತೆಗೆಯುವ ಕೇಂದ್ರಗಳೂ ಚರ್ಮ ಹದಗಾರಿಕೆ, ಸುಣ್ಣ ತಯಾರಿಕೆ, ಕಬ್ಬಿಣ ಮತ್ತು ಗ್ರಿಲ್ ಕೆಲಸ, ಮಣ್ಣಿನಿಂದ ಕುಂಡ, ಗಾಡಿ ತಯಾರಿಕೆ ಮುಂತಾದ ಉದ್ಯಮಗಳೂ ಅಲ್ಲಲ್ಲಿ ಉಂಟು. ಒಟ್ಟು 19 ಕಾರ್ಖಾನೆಗಳು, 1 ಕೈಗಾರಿಕಾ ಎಸ್ಟೇಟ್, 24 ಕೈಗಾರಿಕಾ ಷೆಡ್ಡುಗಳು ಜಿಲ್ಲೆಯಲ್ಲಿವೆ. ಒಟ್ಟು 3,482 ಜನರಿಗೆ ಉದ್ಯೋಗ ಒದಗಿಸಿವೆ (2001). ಕೊಳ್ಳೇಗಾಲದಲ್ಲಿ 1962-63ರಲ್ಲಿ ಸರ್ಕಾರಿ ಯಾಂತ್ರಿಕ ಕಾರ್ಯಾಗಾರವನ್ನು ಸ್ಥಾಪಿಸಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನ ಅಂಕಳ್ಳಿಯಲ್ಲಿ ಚರ್ಮಗೆಲಸ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. (1987). ಅದೇ ತಾಲ್ಲೂಕಿನ ಕೋಡಿಹಳ್ಳಿಯಲ್ಲಿ ಚಾಪೆ ನೇಯುವ ತರಬೇತಿ ಕೇಂದ್ರವೂ ಚಾಮರಾಜನಗರದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯೂ ಉದ್ಯೋಗಾರ್ಥಿಗಳಿಗೆ ತರಬೇತಿ ನೀಡುತ್ತವೆ. ಗ್ರಾನೈಟ್, ಸುಣ್ಣಕಲ್ಲು ಗಣಿಗಾರಿಕೆ ಇಲ್ಲಿನ ಇನ್ನೆರಡು ಉದ್ಯಮಗಳು.

ಶಿಕ್ಷಣ ಕ್ಷೇತ್ರದಲ್ಲಿ ಈ ಜಿಲ್ಲೆ ಗಮನಾರ್ಹವಾಗಿ ಮುಂದುವರಿಯುತ್ತಿದೆ. ಜೆ.ಎಸ್.ಎಸ್. ವಿದ್ಯಾಸಂಸ್ಥೆ ಸ್ಥಾಪಿಸಿರುವ ಅನೇಕ ಶಾಲಾ ಕಾಲೇಜುಗಳು ಚಾಮರಾಜನಗರದಲ್ಲಿವೆ. ಜಿಲ್ಲೆಯಲ್ಲಿ 119 ಪ್ರೌಢಶಾಲೆಗಳೂ 32 ಕಿರಿಯ ಕಾಲೇಜುಗಳೂ ಇವೆ (2000-01). ಕೊಳ್ಳೇಗಾಲದಲ್ಲಿರುವ ಸರ್ಕಾರಿ ಕಾಲೇಜು ಅತ್ಯಂತ ಹಳೆಯದು. ಇತ್ತೀಚೆಗೆ ಚಾಮರಾಜನಗರದ ಜೆ.ಎಸ್.ಎಸ್. ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಶಿಕ್ಷಣ ಸೌಲಭ್ಯ (ಎಂ.ಎ.) ಕಲ್ಪಿಸಲಾಗಿದೆ (2002).

**ಸಾರಿಗೆ ಸಂಪರ್ಕ :** ರಾಜ್ಯದ ಗಡಿಭಾಗದಲ್ಲಿರುವ ಈ ಜಿಲ್ಲೆಯಲ್ಲಿ ನೆರೆರಾಜ್ಯಗಳೊಂದಿಗೆ ಸಂಪರ್ಕ ಸಾಧಿಸುವ ಪ್ರಮುಖ ರಸ್ತೆ ಮಾರ್ಗಗಳು ಹಾದುಹೋಗುತ್ತವೆ. 1998-99ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ 160 ಕಿಮೀ ರಾಷ್ಟ್ರೀಯ ಹೆದ್ದಾರಿ, 106ಕಿಮೀ ರಾಜ್ಯ ಹೆದ್ದಾರಿ, 658ಕಿಮೀ ಜಿಲ್ಲಾ ರಸ್ತೆ ಮತ್ತು 209ಕಿಮೀ ಇತರ ರಸ್ತೆಗಳಿವೆ. ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಸೇರಿದ ರಸ್ತೆಗಳ ಉದ್ದ 337ಕಿಮೀ, ಅರಣ್ಯ ಇಲಾಖೆಗೆ ಸೇರಿದ ರಸ್ತೆಗಳು 449ಕಿಮೀ ಪುರಸಭೆಗಳ ರಸ್ತೆಗಳು 951ಕಿಮೀ ಪಂಚಾಯತಿ ರಸ್ತೆಗಳು 72ಕಿಮೀ ಮೈಸೂರು-ಊಟಿ ರಸ್ತೆ, ಬೆಂಗಳೂರು-ಕೊಯಮತ್ತೂರು, ಮೈಸೂರು-ಸುಲ್ತಾನ್‌ಬತೇರಿ, ಗುಂಡ್ಲುಪೇಟೆ-ಗೂಡಲೂರು-ಊಟಿ, ಕೊಳ್ಳೇಗಾಲ-ಸತ್ಯಮಂಗಲ ಘಾಟಿ, ಕೊಳ್ಳೇಗಾಲ-ಮಹದೇಶ್ವರ ಬೆಟ್ಟ-ಭವಾನಿ ರಸ್ತೆಗಳು ಈ ಜಿಲ್ಲೆಯಲ್ಲಿ ಹಾದು ಹೋಗುವ ಅಂತಾರಾಜ್ಯ ಮಾರ್ಗಗಳು. ಮೈಸೂರು-ಚಾಮರಾಜನಗರ-ಪುಣಜೂರು ಘಾಟಿ, ಹನೂರು-ರಾಮಪುರ, ಗುಂಡ್ಲುಪೇಟೆ-ಚಾಮರಾಜನಗರ ತಿರುಮಕೂಡಲು ನರಸೀಪುರ ರಸ್ತೆಗಳು ಮುಖ್ಯ ಜಿಲ್ಲಾ ರಸ್ತೆ ಮಾರ್ಗಗಳು.

ಮೈಸೂರು-ಚಾಮರಾಜನಗರ ರೈಲುಮಾರ್ಗ ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲೇ ನಿರ್ಮಾಣವಾಯಿತು. ಚಾಮರಾಜನಗರ-ಸತ್ಯಮಂಗಲಂ ರೈಲುಮಾರ್ಗ ನಿರ್ಮಾಣ ಬಹಳ ದೀರ್ಘಕಾಲದಿಂದ ನೆನೆಗುದಿಯಲ್ಲಿದೆ.

**ಇತಿಹಾಸ ಮತ್ತು ಸಂಸ್ಕೃತಿ :** ಚಾಮರಾಜನಗರ ಜಿಲ್ಲೆ ದಟ್ಟವಾದ ಅರಣ್ಯದ ಪರಿಧಿಯಲ್ಲಿದ್ದು ಇಲ್ಲಿ ಪ್ರಾಚೀನ ಕಾಲದಿಂದಲೇ ಸಂಸ್ಕೃತಿ ಮತ್ತು ನಾಗರಿಕತೆ ಬೆಳೆದುಬಂದಿವೆ. ಇಲ್ಲಿನ ಬಹುಸಂಖ್ಯೆಯ ಚಿಕ್ಕಪುಟ್ಟ ನದಿಗಳು ಹಾಗೂ ಸರಹದ್ದಿನ ಕಪಿಲಾ, ಕಾವೇರಿ ನದಿ - ಇವು ವ್ಯವಸಾಯ ಸಮುದಾಯಗಳು ಇಲ್ಲಿ ನೆಲಸಲು ಅನುಕೂಲಕರವಾದ ನೀರಿನ ಆಸರೆಯನ್ನು ಒದಗಿಸಿದವು. ಸುತ್ತಲ ಅರಣ್ಯಗಳು ಆದಿವಾಸಿಗಳ ಮತ್ತು ಪರಿಶಿಷ್ಟಪಂಗಡಗಳ ಜನರ ನೆಲೆಸುವಿಕೆಗೆ ಭದ್ರತೆಯನ್ನು ತಂದುಕೊಟ್ಟಿದ್ದುವು. ಅತ್ಯಂತ ಪ್ರಾಚೀನ ನೆಲೆಗಳ ಗುರುತುಗಳು ಹಲವೆಡೆ ಕಂಡುಬಂದಿವೆ. ಕೊಳ್ಳೇಗಾಲ ತಾಲ್ಲೂಕಿನ ಲೊಕ್ಕನಹಳ್ಳಿ, ಹನೂರು, ಬೆಳ್ತೂರು, ಚಿಕ್ಕಯಲಾಪುರ, ಕನ್ನಿಕೆರೆ, ತೆಲ್ಲೂರ್, ಯಳಂದೂರು ತಾಲ್ಲೂಕಿನ ಯರಗಂಬಳಿ, ಗುಂಬಳ್ಳಿ, ಶಿವಕಳ್ಳಿ, ದೇವರಹಳ್ಳಿ, ಯರಿಯೂರು, ಗಾಣಿಗನೂರು, ಮಲ್ಲಾರಪಾಳ್ಯ, ಚಾಮರಾಜನಗರ ತಾಲ್ಲೂಕಿನ ಆಲೂರು, ಬೆಟ್ಟಹಳ್ಳಿ, ಚಂದಕವಾಡಿ, ಹೊಂಗನೂರು ಮತ್ತು ನಲ್ಲೂರು, ಹೊಸಹಳ್ಳಿ, ಬೂದಿತಿಟ್ಟು, ಗುಂಡ್ಲುಪೇಟೆ ತಾಲ್ಲೂಕಿನ ಕಳಲೆ, ಪಂಜನಹಳ್ಳಿ, ವೀರನಪುರ, ಹೊಸಹಳ್ಳಿ, ಗುಂಡ್ಲುಪೇಟೆ ಮೊದಲಾದ ಕಡೆಗಳಲ್ಲಿ ಇತಿಹಾಸ ಪೂರ್ವದ ನೆಲೆಗಳ ಶಿಲಾ ಅವಶೇಷಗಳು ದೊರೆತಿವೆ. ಇಲ್ಲೆಲ್ಲ ಶಿಲಾಯುಗದ ಮತ್ತು ಬೃಹತ್ ಶಿಲಾಯುಗದ ಜನರ ಆಯುಧಗಳೂ ಸಮಾಧಿಗಳೂ ಕಂಡುಬಂದಿವೆ.

ಕರ್ನಾಟಕದ ಅತ್ಯಂತ ಪುರಾತನವೆನಿಸಿದ ಪುನ್ನಾಟ ರಾಜ್ಯಕ್ಕೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಕಿತ್ತೂರು (ಕೀರ್ತಿಪುರ) ರಾಜಧಾನಿಯಾಗಿತ್ತು. ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಸ್ಥಾಪಿತವಾಗಿ 6ನೆಯ ಶತಮಾನದವರೆಗೆ ಉಳಿದುಬಂದಿತ್ತು. ಪ್ರಾಚೀನ ದಾಖಲೆಗಳಲ್ಲಿ ಬರುವ 'ಪುಂಟ್' ಎಂಬುದು ಪುನ್ನಾಟವಿರಬಹುದೆಂದು (ನೋಡಿ: ಪುನ್ನಾಟ) ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮಗಧ ರಾಜ್ಯದಿಂದ ದಕ್ಷಿಣಕ್ಕೆ ವಲಸೆ ಬಂದ ಜೈನ ಸಂಘವೊಂದು ಭದ್ರಬಾಹುವಿನ ಸೂಚನೆಯಂತೆ ಪುನ್ನಾಟ

ದೇಶಕ್ಕೆ ಹೋಯಿತು ಎಂಬ ಪ್ರಸ್ತಾಪ ಹರಿಷೇಣನ ಬೃಹತ್ಕಥಾಕೋಶದಲ್ಲಿ ಬರುತ್ತದೆ. 2ನೆಯ ಶತಮಾನದ ಗ್ರೀಕ್ ಭೂಗೋಳಕಾರ ಟಾಲೆಮಿಯ ಪ್ರಕಾರ ಪೌನ್ನಟ ಎಂಬ ಪ್ರದೇಶ ಪಚ್ಚೆಕಲ್ಲುಗಳಿಗೆ ಪ್ರಸಿದ್ಧವಾಗಿತ್ತು. ಹೆಗ್ಗಡದೇವನ ಕೋಟೆ, ಗುಂಡ್ಲುಪೇಟೆ ವಲಯವು ಪಚ್ಚೆ, ಹರಳು ಮತ್ತು ಪದ್ಮರಾಗಗಳಿಗೆ ಪ್ರಸಿದ್ಧವಾಗಿತ್ತು. ಪೊನ್ನಿನವಾಡು ಎಂಬುದು ಪುನ್ನಾಡು, ಪುನ್ನಾಟು, ಪುನ್ನಾಟ ಆಗಿರಬಹುದೆನ್ನಲಾಗಿದೆ. ಪುನ್ನಾಟದ ಅರಸರು ಕದಂಬ ಮತ್ತು ಗಂಗ ಮನೆತನಗಳೊಂದಿಗೆ ವಿವಾಹ ಸಂಬಂಧ ಹೊಂದಿದ್ದ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಗಂಗ ದುರ್ವಿನೀತ ಪುನ್ನಾಟ ರಾಜಮನೆತನದ ವಧುವಿನ ಮಗನಾಗಿದ್ದ, ತಾಯಿಯ ಮನೆತನದಲ್ಲಿ ಗಂಡು ಮಕ್ಕಳಿಲ್ಲದ್ದರಿಂದ ಪುನ್ನಾಟ ರಾಜ್ಯವನ್ನು ಗಂಗರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು (6ನೆಯ ಶತಮಾನ). ಈ ರಾಜಮನೆತನದವರ ಬಗ್ಗೆ ದೊರೆಯುವ ಕೆಲವೇ ಶಾಸನಗಳು ಯಳಂದೂರು, ನಂಜನಗೂಡು, ಹೆಗ್ಗಡದೇವನಕೋಟೆಗಳ ಬಳಿ ದೊರೆತಿವೆ. ಇವರು ಗಂಗರು ಮತ್ತು ಕದಂಬರಿಗಿಂತ ಹಿಂದೆಯೇ ಕರ್ನಾಟಕದಲ್ಲಿ ರಾಜ್ಯ ಸ್ಥಾಪಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಗಂಗ ರಾಜ್ಯದ ವಿಸ್ತರಣೆಯಿಂದ ಇವರ ಅಸ್ತಿತ್ವಕ್ಕೆ ಚ್ಯುತಿಯುಂಟಾಯಿತೆಂದು ತೋರುತ್ತದೆ. ಈ ರಾಜವಂಶದ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬಂದಿಲ್ಲ. ಆದರೆ ಗಂಗ-ಕದಂಬ ಪೂರ್ವ ಕಾಲದಲ್ಲಿ ಪುನ್ನಾಟ ರಾಜ್ಯ ಕಾವೇರಿ ಪ್ರದೇಶದ ಬಹುಭಾಗದಲ್ಲಿ ವ್ಯಾಪಿಸಿದ್ದಿರಬಹುದು.

ಪದ್ಮಾವತಿ, ಹರವೆ

ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳತೊಡಗಿದ ತಲಕಾಡಿನ ಗಂಗರು ಅಥವಾ ಪಶ್ಚಿಮ ಗಂಗರು 4ನೆಯ ಶತಮಾನದಿಂದ 11ನೆಯ ಶತಮಾನದ ಪ್ರಾರಂಭದವರೆಗೂ ಆಳಿ ಕರ್ನಾಟಕದ ರಾಜಮನೆತನಗಳಲ್ಲೇ ಅತ್ಯಂತ ದೀರ್ಘಕಾಲ ಆಳಿದವರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ವಂಶದ ದುರ್ವಿನೀತನ (ಸು.529-79) ಕಾಲದಿಂದ ಹಿಡಿದು, ಪುನ್ನಾಟ ರಾಜ್ಯ ಗಂಗರಾಜ್ಯದಲ್ಲಿ ಅಂತರ್ಗತವಾದ ಮೇಲೆ ಅವರ ಆಳಿಕೆಯ ಕೊನೆಯವರೆಗೂ ಈ ಜಿಲ್ಲೆ ಗಂಗರ ಅಧೀನದಲ್ಲಿದ್ದಿತು. ಈ ವಂಶದ ದುರ್ವಿನೀತ, ಭೂವಿಕ್ರಮ, ಶ್ರೀಪುರುಷ, ಎರಡನೆಯ ಬೂತುಗ, ಎರಡನೆಯ ಮಾರಸಿಂಹ -ಇವರು ದಕ್ಷ ಪ್ರಭುಗಳಾಗಿದ್ದರು. ಈಗಿನ ತಮಿಳನಾಡಿನ ಭಾಗವಾಗಿರುವ ಕೊಯಮುತ್ತೂರು ಮತ್ತು ಸೇಲಂ ಪ್ರದೇಶ ಹಲವು ಶತಮಾನಗಳ ಕಾಲ ಗಂಗರಾಜ್ಯದ ಒಂದು ಪ್ರಾಂತವಾಗಿತ್ತು. ಅದನ್ನು ಕೊಂಗುದೇಶವೆಂದು ಕರೆಯಲಾಗುತ್ತಿತ್ತು. ಇದರಿಂದಾಗಿ ಕನ್ನಡ ಸಂಸ್ಕೃತಿ ಅತ್ತ ಹರಡಿ, ಈಗಿನ ಮೈಸೂರು ಚಾಮರಾಜನಗರ ಜಿಲ್ಲೆಗಳ ಪ್ರದೇಶ ತಮಿಳು ಪ್ರಭಾವದಿಂದ ಮುಕ್ತವಾಗಲು ಸಾಧ್ಯವಾಯಿತು. ಗಂಗರ ಸಮಕಾಲೀನರಾದ ಕದಂಬರು, ಬಾದಾಮಿ ಚಳುಕ್ಯರು ಮತ್ತು ರಾಷ್ಟ್ರಕೂಟರ ಕಾಲದಲ್ಲೂ ಗಂಗರೇ ಈ ಪ್ರದೇಶದ ಮುಖ್ಯ ಅಧಿಪತಿಗಳಾಗಿದ್ದರು.

ಮಲೆಮಹದೇಶ್ವರ ದೇವಸ್ಥಾನ

ತಲಕಾಡಿನ ಗಂಗರ ರಾಜ್ಯದ ಹೃದಯಭಾಗವಾಗಿದ್ದ ಈ ಜಿಲ್ಲೆಯಲ್ಲಿ ಅವರ ದೇವಾಲಯಗಳು ಶಾಸನಗಳು ಹೇರಳವಾಗಿವೆ. ಆ ಕಾಲದಲ್ಲಿ ಕಲ್ಲಿಗಿಂತ ಇಟ್ಟಿಗೆಯಲ್ಲೇ ಹೆಚ್ಚಾಗಿ ದೇವಾಲಯ ಕಟ್ಟುತ್ತಿದ್ದುದರಿಂದ ಅವುಗಳಲ್ಲಿ ಹೆಚ್ಚಿನವು ನಷ್ಟವಾಗಿವೆ, ಇಲ್ಲವೇ ಮಾರ್ಪಟ್ಟಿವೆ. ಅವರ ಕಟ್ಟಡಗಳಲ್ಲಿ ಪ್ರಾಚೀನವೂ ಶ್ರೇಷ್ಠವೂ ಆದದ್ದು ಚಾಮರಾಜನಗರ ತಾಲ್ಲೂಕಿನ ನರಸಮಂಗಲದ ರಾಮೇಶ್ವರ ದೇವಾಲಯ. ಇದರ ತಳಹದಿ ಕಗ್ಗಲ್ಲಿನದು. ಮೇಲಿನ ಕಟ್ಟಡ ಇಟ್ಟಿಗೆಯದು. ಗಂಗರ ಕಾಲದ ಹತ್ತಾರು ಸಣ್ಣ ನಿರ್ಮಾಣಗಳೂ ಶಿಲ್ಪಗಳೂ ಇನ್ನೂ ಉಳಿದು ಬಂದಿವೆ.

ಗಂಗರ ಕಾಲದಲ್ಲಿ ರಾಜಕೀಯವಾಗಿ ಅಖಂಡವಾಗಿದ್ದ ಈ ಜಿಲ್ಲೆ 10ನೆಯ ಶತಮಾನದ ಅನಂತರ ರಾಜಕೀಯ ಏರುಪೇರುಗಳಿಗೆ ಒಳಗಾಯಿತು. 11ನೆಯ ಶತಮಾನದ ಪ್ರಾರಂಭದಲ್ಲಿ ಗಂಗರ ಆಳಿಕೆಯನ್ನು ಚೋಳರ ರಾಜರಾಜನು ಕೊನೆಗಾಣಿಸಿ ಈ ಪ್ರದೇಶವನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡ. ಚೋಳರ ಒಂದು ಶತಮಾನದ ಆಳಿಕೆಯಲ್ಲಿ ಇಲ್ಲಿನ ಆಡಳಿತ, ಕಲೆ ಮತ್ತು ವಾಸ್ತು ವಿನ್ಯಾಸದಲ್ಲಿ ಅನೇಕ ಬದಲಾವಣೆಗಳಾದವು. ಈ ಪ್ರದೇಶವೂ ಸೇರಿದಂತೆ ತಮ್ಮ ಅಧೀನದಲ್ಲಿದ್ದ ಪ್ರಾಂತದಲ್ಲಿ ಚೋಳರು ನಾಡುಗಳನ್ನು ರಚಿಸಿದರು. ಈ ಕಾಲಕ್ಕೆ ಸೇರಿದ ಕೆಲವು ಶಾಸನಗಳು ದೊರೆತಿವೆ. ಈ ಕಾಲದಲ್ಲಿ ಅಗ್ರಹಾರಗಳನ್ನೂ ದೇವಾಲಯಗಳನ್ನೂ ನಿರ್ಮಿಸಿದ ಬಗ್ಗೆ ಶಾಸನಗಳಲ್ಲಿ ಆಧಾರಗಳಿವೆ. ಮುಂದೆ ಹೊಯ್ಸಳರು ಪ್ರವರ್ಧಮಾನಕ್ಕೆ ಬಂದರು. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ (1116) ಚೋಳರು ನಿರ್ಣಾಯಕವಾಗಿ ಸೋತರು. ತಲಕಾಡು ಹೊಯ್ಸಳರ ವಶವಾಯಿತು. ಈ ಯುದ್ಧದ ವಿಜಯದಲ್ಲಿ ದಂಡನಾಯಕ ಗಂಗರಾಜ ಪ್ರಮುಖ ಪಾತ್ರ ವಹಿಸಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ.

ಮುಂದೆ ಎರಡೂವರೆ ಶತಮಾನಗಳ ಕಾಲದ ಹೊಯ್ಸಳರ ಆಳಿಕೆಯಲ್ಲಿ ಈ ಜಿಲ್ಲೆ ಹೆಚ್ಚಿನ ಅಭ್ಯುದಯವನ್ನು ಕಂಡಿತು. ತಮಿಳುನಾಡಿನ ಅನೇಕ ಪ್ರದೇಶಗಳನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಂಡಿದ್ದ ಹೊಯ್ಸಳರ ರಾಜ್ಯದಲ್ಲಿ ಇದು ಆಯಕಟ್ಟಿನ ಮಹತ್ವ ಪಡೆದಿತ್ತು. ಅವರ ಕಾಲದಲ್ಲಿ ಇಲ್ಲಿ ಹಲವಾರು ದೇವಾಲಯಗಳು, ಕೆರೆಕಟ್ಟೆಗಳು, ಕಾಲುವೆಗಳು, ನಿರ್ಮಾಣವಾದವು. ಚಾಮರಾಜನಗರದಲ್ಲಿ ವಿಷ್ಣುವರ್ಧನನ ಮಹಾದಂಡನಾಯಕ ಪುಣಿಸಮಯ್ಯ ಪಾರ್ಶ್ವನಾಥ'ಸ್ವಾಮಿ ಬಸದಿಯನ್ನು ಕಟ್ಟಿಸಿ ಅದಕ್ಕೆ ದಾನದತ್ತಿಗಳನ್ನು ನೀಡಿದನೆಂದು 1116ರ ಶಾಸನ ತಿಳಿಸುತ್ತದೆ. ಈತ ಗಂಗವಾಡಿ ಪ್ರಾಂತದಲ್ಲಿ ಹಲವಾರು ಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿದ. ಪುಣಜನೂರಿಗೆ ಆ ಹೆಸರು ಬರಲು ಅವನು ಕಾರಣನಾಗಿರಬೇಕು. ಎರಡನೆಯ ಬಲ್ಲಾಳ ಯಳಂದೂರು ತಾಲ್ಲೂಕಿನ

ಯೆರಿಯೂರು ಎಂಬಲ್ಲಿ ವಲ್ಲಾಳೇಶ್ವರ ದೇವಾಲಯವನ್ನು ಕಟ್ಟಿಸಿದ. ಗುಂಡ್ಲುಪೇಟೆಯ ಬಿಟ್ಟ ದೇವಾಲಯ ನಿರ್ಮಾಣವಾದುದ್ದು ಇವನ ಕಾಲದಲ್ಲೇ. ಮೂರನೆಯ ವೀರಬಲ್ಲಾಳನ ಕಾಲದಲ್ಲಿ ಮಾಧವ ದಂಡನಾಯಕ ಗುಂಡ್ಲುಪೇಟೆ ತಾಲ್ಲೂಕಿನ ಗೋವರ್ಧನಗಿರಿಯ ಗೋಪಿನಾಥ ದೇವಸ್ಥಾನದಲ್ಲಿ ಒಂದು ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದ.

ನರ್ತಿಸುತ್ತಿರುವ ನವಿಲು, ಬಂಡಿಪುರ

ಹೊಯ್ಸಳ ಅರಸರ ಮಾಂಡಲಿಕರಾಗಿದ್ದವರದೊಂದು ಮನೆತನ, ಈ ಜಿಲ್ಲೆಯ ಹದಿನಾಲ್ಕುನಾಡು ಅಥವಾ ಕುಡುಗುನಾಡನ್ನು ಮುಕ್ಕಾಲು ಶತಮಾನ ಕಾಲ ಆಳಿತು. ಇದರ ಮೂಲಪುರುಷ ಹೊಯ್ಸಳ ಮೂರನೆಯ ನರಸಿಂಹನ ಸೇನಾನಿ ಪೆರುಮಾಳೆ ದಂಡನಾಯಕ. ಇವನು ನೀಲಗಿರಿ ಮತ್ತು ಕೊಂಗುನಾಡುಗಳ ಮೇಲೂ ತನ್ನ ಸ್ವಾಮ್ಯ ಸಾಧಿಸಿಕೊಂಡಿದ್ದ. ತೆರಕಣಾಂಬಿ ಇವನ ರಾಜಧಾನಿಯಾಗಿತ್ತು. ಗೋಪಾಲಸ್ವಾಮಿ ಬೆಟ್ಟದ ಗೋವರ್ಧನಗಿರಿ ಗೋಪಿನಾಥ ದೇವಾಲಯವನ್ನು 1315ರಲ್ಲಿ ಪೆರುಮಾಳೆಯ ಮಗ ಕಟ್ಟಿಸಿದ. ಹೊಯ್ಸಳರ ಪತನಾನಂತರ ಈ ಅರಸು ಮನೆತನ ಕೊನೆಗೊಂಡಿತು. ವಿಜಯನಗರದ ಸಾಮಂತರಾಗಿದ್ದ ಉಮ್ಮತ್ತೂರಿನ ಪಾಳೆಯಗಾರರು ಇದರ ಸ್ವಾಮ್ಯ ಪಡೆದರು.

ಹೊಯ್ಸಳರ ಅನಂತರ ಇಲ್ಲಿ ವಿಜಯನಗರದ ಅರಸರು ಪ್ರಬಲರಾದರು. 1350ರ ದಶಕದಿಂದ ಇಲ್ಲಿ ವಿಜಯನಗರದ ಶಾಸನಗಳು ಕಾಣಿಸಿಕೊಳ್ಳುತ್ತವೆ. ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆಯ ಬಳಿ ದೊರೆತಿರುವ 1354ರ ಶಾಸನ ಇವುಗಳಲ್ಲಿ ಪ್ರಮುಖವಾದದ್ದು. ವಿಜಯನಗರದ ರಾಜ ಬುಕ್ಕಣ್ಣಒಡೆಯನ ಮಗ ಕಂಪಣ್ಣಒಡೆಯ ಹಾಕಿಸಿದ ಶಾಸನ ಇದು. ಕಂಪಣ್ಣನ ಮಗ ಕುಮಾರ ನಂಜಣ್ಣ ಗುಂಡ್ಲುಪೇಟೆಯ ರಾಮನಾಥ ದೇವಾಲಯಕ್ಕೆ ತನ್ನ ತಂದೆ ಕಂಪಣನ ಸ್ಮರಣಾರ್ಥ ದತ್ತಿಬಿಟ್ಟ ವಿಚಾರ ಶಾಸನಗಳಿಂದ ತಿಳಿದುಬರುತ್ತದೆ. 1380ರವರೆಗೂ ನಂಜಣ್ಣ ಇಲ್ಲಿಯ ಮಾಂಡಲಿಕನಾಗಿದ್ದ. 15ನೆಯ ಶತಮಾನದ ಮಧ್ಯಭಾಗದವರೆಗೂ ವಿಜಯನಗರದ ಅರಸರಿಗೆ ಸೇರಿದ ಹತ್ತಾರು ಶಾಸನಗಳು ಈ ಭಾಗದಲ್ಲಿ ಕಂಡುಬರುತ್ತವೆ. ಇಲ್ಲಿ ಹರಿಹರ, ಒಂದನೆಯ ದೇವರಾಯ, ಎರಡನೆಯ ದೇವರಾಯ, ಮಲ್ಲಿಕಾರ್ಜುನ ಮೊದಲಾದವರ ಶಾಸನಗಳಿವೆ. ವಿಜಯನಗರದ ಸಾಮಂತರಾಗಿದ್ದ ಉಮ್ಮತ್ತೂರು ಪಾಳೆಯಗಾರರು ಮುಂದೆ ಇಲ್ಲಿ ಆಳಿಕೆ ನಡೆಸಿದರು.

1467-82ರ ಕಾಲಕ್ಕೆ ಸಂಬಂಧಿಸಿದ ಇಲ್ಲಿಯ ನಾಯಕರ ಶಾಸನಗಳಲ್ಲಿ ವೀರ ಹನುಮಪ್ಪ ಮತ್ತು ಆತನ ಮಗ ಇಮ್ಮಡಿರಾಯ ಅಥವಾ ಸೋಮಯ್ಯ ಎಂಬ ಹೆಸರುಗಳು ಕಂಡುಬರುತ್ತವೆ. ಅವರು ನಂಜನಗೂಡಿನ ನಂಜುಂಡೇಶ್ವರನಿಗೆ ದಾನ ಮಾಡಿದ ವಿಷಯ ಮುಳ್ಳೂರು ಶಾಸನದಲ್ಲಿದೆ. ಸೋಮಯ್ಯನ ಮಗ ದೇವರಾಯ ಒಡೆಯನೂ ತೆರಕಣಾಂಬಿಯಿಂದ ಕುಡುಗು ನಾಡನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಕುಡುಗು ನಾಡು ಸುಮಾರಾಗಿ ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ. ಅವನು ಹರವೆಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದ. ಈ ಮನೆತನದ ಇಮ್ಮಡಿ ಚಿಕ್ಕರಾಜನೆಂಬವನು ಹದಿನಾಡನ್ನು ಆಳುತ್ತಿದ್ದ. ಆತ ಸಾಲೂರು ವೀರಶೈವ ಮಠಕ್ಕೆ ದತ್ತಿನೀಡಿದ.

ಉಮ್ಮತೂರಿನ ನಾಯಕರ ವಂಶಾವಳಿ ಮತ್ತು ಅವರ ಚಟುವಟಿಕೆಗಳ ಬಗ್ಗೆ ಖಚಿತವಾದ ಸಮಗ್ರವಾದ ವಿವರಗಳು ತಿಳಿದುಬರುವುದಿಲ್ಲ. ಅವರು ಉಮ್ಮತ್ತೂರಿನಲ್ಲಿ ರಂಗನಾಥ ಮತ್ತು ಭುಜಂಗೇಶ್ವರ ದೇವಸ್ಥಾನಗಳನ್ನು ಕಟ್ಟಿಸಿದರು. ಪೂರ್ವಘಟ್ಟದ ಕೆಳಗೆ ಕೊಯಮತ್ತೂರಿನವರೆಗೂ ಇವರು ಆಧಿಪತ್ಯ ಹೊಂದಿದ್ದಿರಬಹುದೆಂದು ನಂಬಲಾಗಿದೆ. ಕಳಲೆ ಒಡೆಯರಿಗೂ ಇವರಿಗೂ ತೀವ್ರವಾದ ಹಗೆತನವಿದ್ದಿತು. ಕ್ರಮೇಣ ಪ್ರಬಲವಾದ ಈ ನಾಯಕರು ಕೃಷ್ಣದೇವರಾಯನ ಕಾಲದಲ್ಲಿ ಬಂಡೇಳುವ ಪ್ರವೃತ್ತಿ ತೋರಿಸಿದರು. ಆಗ (1512ರಲ್ಲಿ) ಕೃಷ್ಣದೇವರಾಯನೇ ದಂಡನಾಯಕತ್ವ ವಹಿಸಿ ಸೈನ್ಯವನ್ನು ಮುನ್ನಡೆಸಿ ಉಮ್ಮತ್ತೂರಿನ ಪಾಳೆಯಗಾರರನ್ನು ಸೋಲಿಸಿ ಅವರನ್ನು ಅಧಿಕಾರದಿಂದ ಇಳಿಸಿದ. ಈ ಪ್ರಾಂತ್ಯದ ಮೇಲೆ ಆಡಳಿತ ನಡೆಸುವ ಸಲುವಾಗಿ ಸಾಳುವ ಗೋವಿಂದರಾಜನನ್ನು ಮಾಂಡಲಿಕನಾಗಿ ನೇಮಿಸಿದ. ಗುಂಡ್ಲುಪೇಟೆಯ 29ನೆಯ ಶಾಸನ ಉಮ್ಮತ್ತೂರಿನಿಂದ ಆಳುತ್ತಿದ್ದ ವಿಜಯನಗರದ ಒಡೆಯರು ದೇವಾಲಯಕ್ಕೆ ದಾನ ನೀಡಿದ ವಿಷಯ ತಿಳಿಸುತ್ತದೆ. ವಿಜಯನಗರದ ರಾಮರಾಯನ ಸೇವಕ, ಊಳಿಗದ ಬಸವಪ್ಪ ಒಡೆಯ ಇಲ್ಲಿ ಆಳುತ್ತಿದ್ದುದನ್ನು ಗುಂಡ್ಲುಪೇಟೆ ತಾಲ್ಲೂಕಿನ 216ನೆಯ ಶಾಸನ (1562) ದೃಢಪಡಿಸುತ್ತದೆ. ಪಡಗೆರೆಯಲ್ಲಿ ದೊರೆತಿರುವ ಯಳಂದೂರಿನ 182ನೆಯ ಶಾಸನ 1582ರಲ್ಲಿ ಹಾಕಿಸಿದ್ದಾಗಿದ್ದು, ಅದು ವಿಜಯನಗರದ ಪರಮಾಧಿಕಾರ ಈ ಭಾಗದಲ್ಲಿ ಮುಂದುವರಿದ್ದಿದ್ದುದಕ್ಕೆ ಸಾಕ್ಷಿಯಾಗಿದೆ. ಹದಿನಾಡ ಅರಸರು ವಿಜಯನಗರದ ಪರಮಾಧಿಕಾರವನ್ನು ಒಪ್ಪಿಕೊಂಡು 17ನೆಯ ಶತಮಾನದ ಪ್ರಾರಂಭದವರೆಗೂ ಈ ಜಿಲ್ಲೆಯ ಕೆಲವು ಭಾಗಗಳನ್ನು ಆಳುತ್ತಿದ್ದರು. ಅವರ ಮನೆತನದ ಸಿಂಗಪದೇವನೆಂಬವನು ಯಳಂದೂರಿನ ಗೌರೀಶ್ವರ ದೇವಾಲಯವನ್ನು ಕಟ್ಟಿಸಿದ.

ಚಾಮರಾಜೇಶ್ವರ ದೇವಸ್ಥಾನ, ಚಾಮರಾಜನಗರ

1565ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ಸೈನ್ಯ ಶಾಹಿ ಸುಲ್ತಾನರ ಸಂಯುಕ್ತ ಸೈನ್ಯದೆದುರು ಸೋತಾಗ ಆ ಸಾಮ್ರಾಜ್ಯ ದುರ್ಬಲವಾಗತೊಡಗಿತು. ಮುಂದೆ ಹಂತ ಹಂತವಾಗಿ ಸ್ಥಳೀಯ ಸಾಮಂತರು, ತುಂಡರಸರು ತಮ್ಮ ಶಕ್ತಿ ಸಂಪನ್ಮೂಲಗಳನ್ನು ಬೆಳೆಸಿಕೊಂಡು ಸ್ವತಂತ್ರರಾಗಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಯಶಸ್ವಿಯಾದವರಲ್ಲಿ ಮೈಸೂರು ಅರಸರು (ನೋಡಿ: ಮೈಸೂರು ಒಡೆಯರು) ಸೇರಿದ್ದಾರೆ. 15ನೆಯ ಶತಮಾನದಲ್ಲಿ 33 ಗ್ರಾಮಗಳ ಒಡೆತನದಿಂದ ರಾಜ್ಯವಾಳಲಾರಂಭಿಸಿದ ಇವರು ಚಾಮರಾಜನಗರ ಜಿಲ್ಲೆಯ ನೆರೆಯ ಹದಿನಾಡಿನ ಮೇಲೆ ನಿಯಂತ್ರಣ ಹೊಂದಿದ್ದರು. ಈ ಮನೆತನದವರು ಮೈಸೂರಿಗೆ ತಮ್ಮ ನೆಲೆಯನ್ನು ವರ್ಗಾಯಿಸಿಕೊಂಡರು. ರಾಜ ಒಡೆಯರು (1578-1617) ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಪ್ರತಿನಿಧಿ ತಿರುಮಲರಾಯನನ್ನು ಪದಚ್ಯುತಗೊಳಿಸಿ ತಾನೇ ವಿಜಯನಗರದ ಪ್ರತಿನಿಧಿ ಎಂದು ಘೋಷಿಸಿಕೊಂಡ. ಆತ ಮುಂದೆ ಶೀಘ್ರವಾಗಿ ರಾಜ್ಯ ವಿಸ್ತರಣೆ ಮಾಡಿ ತಲಕಾಡು, ಚಾಮರಾಜನಗರ ಮತ್ತು ಉಮ್ಮತ್ತೂರು ಸೇರಿದಂತೆ ಈಗಿನ ಮಂಡ್ಯ, ಹಾಸನ ಮತ್ತು ಬೆಂಗಳೂರು ಜಿಲ್ಲೆಯ ಅನೇಕ ಭಾಗಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡ. ಶ್ರೀರಂಗಪಟ್ಟಣ ಇವನ ರಾಜಧಾನಿಯಾಯಿತು. ಆದರೆ ಇವನು ಮೈಸೂರು ಒಡೆಯನೆಂದೇ ಪರಿಚಿತನಾದ. ಚಾಮರಾಜನಗರ ಜಿಲ್ಲೆ ಒಡೆಯರ ರಾಜ್ಯದ ಖಾಯಂ ಭಾಗವಾಯಿತು. ಈಗಿನ ಚಾಮರಾಜನಗರದಲ್ಲಿ ಮಹಾಪ್ರಭು ಎಂಬ ಸ್ಥಾನಿಕ ಅಧಿಕಾರ ನಿರ್ವಹಿಸುತ್ತಿದ್ದ.

ಮೈಸೂರು ಒಡೆಯರು ತಮಿಳುನಾಡಿನತ್ತಲೂ ರಾಜ್ಯ ವಿಸ್ತರಿಸಿದರು. ಚಾಮರಾಜನಗರ, ಜಿಲ್ಲೆಯ ಆಯಕಟ್ಟಿನ ಪ್ರದೇಶವಾಗಿದ್ದುದರಿಂದ ಅದನ್ನು ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬಂದರು. ಟಿಪ್ಪುಸುಲ್ತಾನ ಬ್ರಿಟಿಷರಿಗೆ ಸಂಪೂರ್ಣವಾಗಿ ಸೋತು ಹತನಾದ ಮೇಲೆ (1799) ಮೈಸೂರು ರಾಜ್ಯದ ವಿಭಜನೆಯಾದಾಗ ಈ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಮದರಾಸು ಪ್ರಾಂತಕ್ಕೆ ಸೇರಿತು. ಒಡೆಯರ ರಾಜಮನೆತನ ಮೈಸೂರಿನಲ್ಲಿ ನೆಲೆಸಿತು. ಚಾಮರಾಜನಗರ ಪಟ್ಟಣಕ್ಕೆ ಅರಿಕುಠಾರವೆಂಬ ಹೆಸರಿತ್ತು. ಅಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ತಂದೆ ಎಂಟನೆಯ ಚಾಮರಾಜ ಒಡೆಯರು ಜನಿಸಿದ್ದರು. ಅವರ ನೆನಪಿಗಾಗಿ ಕೃಷ್ಣರಾಜ ಒಡೆಯರು 1818ರಲ್ಲಿ ಅರಿಕುಠಾರಕ್ಕೆ ಚಾಮರಾಜನಗರ ಎಂದು ನಾಮಕರಣ ಮಾಡಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಇಲ್ಲಿ ಚಾಮರಾಜೇಶ್ವರ ದೇವಾಲಯವನ್ನು ನಿರ್ಮಿಸಿ ಅದನ್ನು ವಿಸ್ತರಿಸಿದರು. ಈ ಜಿಲ್ಲೆಯಲ್ಲಿ ಹಲವೆಡೆ ಮೈಸೂರು ಒಡೆಯರು ಮತ್ತು ಅವರ ರಾಣಿವಾಸದವರು ಕಟ್ಟಿಸಿದ ದೇವಾಲಯಗಳೂ ಪ್ರತಿಷ್ಠಾಪಿಸಿದ ವಿಗ್ರಹಗಳೂ ಕಟ್ಟಿಸಿದ ಛತ್ರಗಳೂ ಅಗ್ರಹಾರಗಳೂ ಇವೆ.

ಈಗಿನ ಚಾಮರಾಜನಗರ ಜಿಲ್ಲೆ ಪ್ರದೇಶ ಮೈಸೂರು ಸಂಸ್ಥಾನದಲ್ಲೇ ಅತ್ಯಂತ ದೊಡ್ಡದೆನಿಸಿದ್ದ ಮೈಸೂರು ಜಿಲ್ಲೆಯ ಭಾಗವಾಗಿತ್ತು. ಮೈಸೂರು ಜಿಲ್ಲೆಯಿಂದ ಮಂಡ್ಯ ಜಿಲ್ಲೆ 1939ರಲ್ಲಿ ಪ್ರತ್ಯೇಕವಾಯಿತು.

ಮೈಸೂರು ಸಂಸ್ಥಾನದ ಕಾಲದಲ್ಲಿ ಈ ಜಿಲ್ಲೆ ಹೆಚ್ಚಿನ ಅಭಿವೃದ್ಧಿ ಸಾಧಿಸಲಾಗಲಿಲ್ಲ. ಆದರೆ ಇಲ್ಲಿನ ಪ್ರವಾಸಿ ಮತ್ತು ಯಾತ್ರಾ ಸ್ಥಳಗಳು ಪ್ರಸಿದ್ಧವಾಗಿದ್ದುವು. 1926ರಲ್ಲಿ ಮೈಸೂರಿನಿಂದ ಚಾಮರಾಜನಗರದವರೆಗೆ ರೈಲುಮಾರ್ಗ ನಿರ್ಮಾಣವಾಯಿತು. ಇದು ಈ ಭಾಗದ ಸಾರಿಗೆ ಅಭಿವೃದ್ಧಿಗೆ ದೊಡ್ಡ ಕೊಡುಗೆಯಾಯಿತು.

ಸ್ವಾತಂತ್ರ್ಯ ಚಳವಳಿಯಲ್ಲಿ ಈ ಭಾಗದ ಜನರೂ ಭಾಗವಹಿಸಿದ್ದರು. 1928ರಲ್ಲಿ ಸಂಸ್ಥಾನದ ಪ್ರಥಮ ಕಾಂಗ್ರೆಸ್ ಅಧಿವೇಶನ ಮೈಸೂರು ನಗರದಲ್ಲಿ ಜರುಗಿತು. ಅದು ಈ ಭಾಗದ ಜನರಿಗೆ ಕಾಂಗ್ರೆಸ್ ಬಗ್ಗೆ ಒಲವು ಬೆಳೆಯಲು ಪ್ರೇರಕವಾಯಿತು. ಗಾಂಧೀಜಿಯವರು ತಮ್ಮ ಪ್ರವಾಸ ಕಾಲದಲ್ಲಿ ಈ ಜಿಲ್ಲೆಯ ಸರಹದ್ದಿನ ತಗಡೂರು, ಬದನವಾಳು ಮತ್ತು ನಂಜನಗೂಡುಗಳಿಗೆ ಭೇಟಿ ನೀಡಿದ್ದರು. ಸ್ವಾತಂತ್ರ್ಯಾನಂತರ ಭಾಷಾನುಗುಣ ಪ್ರಾಂತ್ಯ ರಚನೆಯಾದಾಗ (1956) ಕೊಳ್ಳೇಗಾಲ ತಾಲ್ಲೂಕು ಮೈಸೂರು ಜಿಲ್ಲೆಗೆ ಸೇರಿತು.

ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸಿ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲದೆ ಇನ್ನೂ ಹಲವಾರು ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವದ ಸ್ಥಳಗಳಿವೆ. ಇಲ್ಲಿನ ಎಲ್ಲ ತಾಲ್ಲೂಕು ಕೇಂದ್ರಗಳೂ ಐತಿಹಾಸಿಕ ಮಹತ್ತ್ವ ಪಡೆದಿವೆ. ಇವಲ್ಲದೆ ಅಗರಂ, ಅಮಚವಾಡಿ, ಗಾಣಿಗನೂರು, ಹರದನಹಳ್ಳಿ, ಹೊಳೆ ಆಲೂರು, ಹೊಂಗನೂರು, ಕಂದಗಾಲ, ಕೆಸ್ತೂರು, ಕೋಟೆಕೆರೆ, ಕುದೇರು, ಕುಂತೂರು, ಮದ್ದೂರುಗಳು ವಿವಿಧ ಕಾರಣಗಳಿಗಾಗಿ ಮಹತ್ತ್ವ ಪಡೆದಿವೆ.

ಈ ಜಿಲ್ಲೆಯಲ್ಲಿ ಇತರೆಡೆಗಳಂತೆ ಎಲ್ಲ ಧರ್ಮದವರೂ ಇದ್ದಾರೆ. ಕೊಂತಿ ಪೂಜೆ, ಚೌಡೇಶ್ವರಿ ಜಾತ್ರೆ, ಬಸವನ ಓಕಳಿ, ಅತ್ತಿಗುಳಿ ಹಬ್ಬದಂತಹ ಜನಪದ ಹಬ್ಬಗಳೂ ಜಾತ್ರೆಗಳೂ ನಡೆಯುತ್ತವೆ. ಜನರು ಮಲೆಯ ಮಹದೇಶ್ವರ, ನಂಜನಗೂಡು, ತಿರುಮಕೂಡಲು ನರಸೀಪುರ, ಮೈಸೂರಿನ ಚಾಮುಂಡಿಬೆಟ್ಟಗಳಿಗೆ ಹೆಚ್ಚಾಗಿ ಯಾತ್ರೆ ಹೋಗಿಬರುತ್ತಾರೆ. ಮಲೆಯೂರು ಜೈನ ಯಾತ್ರಾಸ್ಥಳವಾಗಿದೆ.

*

**ತಾಲ್ಲೂಕು :** ಈ ತಾಲ್ಲೂಕು ಪಶ್ಚಿಮ ಮತ್ತು ಉತ್ತರಕ್ಕೆ ಇದೇ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ ನಂಜನಗೂಡು ಹಾಗೂ ತಿರುಮಕೂಡಲು ನರಸೀಪುರ ತಾಲ್ಲೂಕುಗಳನ್ನು, ಪೂರ್ವಕ್ಕೆ ಇದೇ ಜಿಲ್ಲೆಯ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳನ್ನು, ದಕ್ಷಿಣಕ್ಕೆ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯನ್ನು ಮೇರೆಗಳಾಗಿ ಹೊಂದಿದೆ. ಚಾಮರಾಜನಗರ, ಹರದನಹಳ್ಳಿ, ಹರವೆ, ಸಂತೇಮರಳ್ಳಿ, ಚಂದಕವಾಡಿ ಹೋಬಳಿಗಳಿಂದಲೂ ಒಟ್ಟು 189 ಗ್ರಾಮಗಳಿಂದಲೂ ಕೂಡಿರುವ ಈ ತಾಲ್ಲೂಕಿನ ವಿಸ್ತೀರ್ಣ 1235.9ಚ.ಕಿಮೀ. ಜನಸಂಖ್ಯೆ 3,36,893.

ಪೂರ್ವ ಮತ್ತು ದಕ್ಷಿಣ ಎಲ್ಲೆಯಲ್ಲಿ ಬಿಳಿಗಿರಿರಂಗ ಶ್ರೇಣಿಯ ಬೆಟ್ಟಪ್ರದೇಶವಿದೆ. ಈ ಪ್ರದೇಶದಲ್ಲಿ ಸುಮಾರು ದಟ್ಟವಾದ ಪರ್ಣಪಾತಿ ವೃಕ್ಷಗಳಿರುವ ಕಾಡಿದೆ. ಆ ಭಾಗವನ್ನು ಬಿಟ್ಟರೆ ತಾಲ್ಲೂಕು ಬಹುತೇಕ ಮೈದಾನ.

ಇಲ್ಲಿಯ ಮುಖ್ಯ ನದಿ ಹೊನ್ನುಹೊಳೆ ಅಥವಾ ಸುವರ್ಣಾವತಿ. ಇದು ದಕ್ಷಿಣ ಗಡಿಯ ಆಚೆ ನೀಲಗಿರಿ ಬೆಟ್ಟಸಾಲಿನಲ್ಲಿ ದಿಂಬಂ ಎಂಬಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿದು ರಾಮಸಮುದ್ರ ಮತ್ತು ಆಲೂರುಗಳನ್ನು ದಾಟಿ ಯಳಂದೂರಿನತ್ತ ಸಾಗುತ್ತದೆ. ಚಿಕ್ಕ ಹೊಳೆ ಇದರ ಉಪನದಿ.

ಬಿಳಿಗಿರಿರಂಗನಬೆಟ್ಟದ ರಂಗನಾಥ ದೇವರ ರಥೋತ್ಸವ

ಬಿಳಿಗಿರಿರಂಗನ ಬೆಟ್ಟದ ಪ್ರದೇಶ ಚಾರ್ನೋಕೈಟ್ ಶಿಲೆಗಳದು. ತಾಲ್ಲೂಕಿನ ಇತರ ಭಾಗದಲ್ಲಿ ಕಣಶಿಲೆಯೇ ತಳಶಿಲೆ. ತಾಲ್ಲೂಕಿನಲ್ಲಿ ಚಂದ್ರಶಿಲೆ ಮತ್ತು ಅಲಂಕಾರಕ್ಕಾಗಿ ಬಳಸುವ ಗ್ರಾನೈಟ್ ಶಿಲೆಗಳ ಸಂಪತ್ತಿದೆ. ತಾಲ್ಲೂಕಿನಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನಿಂದ ಹಿಡಿದು ನುರುಜು ಮಿಶ್ರಿತ ಮಣ್ಣಿನ ಭೂಮಿ ಇದ್ದು ಸಾಮಾನ್ಯವಾಗಿ ಫಲವತ್ತಾಗಿದೆ. ಸುವರ್ಣಾವತಿಯ ಬಳಿ ಚೌಳು ಮಣ್ಣು ವಿಶೇಷವಾಗಿದೆ. ತಾಲ್ಲೂಕಿನ ಪಶ್ಚಿಮದ ಭಾಗದ ನೆಲ ಹೆಚ್ಚು ಸಾರವತ್ತಾದ್ದಲ್ಲ. ಪೂರ್ವಕ್ಕೆ ಸಾಗಿದಂತೆ ಮಣ್ಣಿನ ಗುಣ ಅಧಿಕ. ಹೊನ್ನುಹೊಳೆ ಕಣಿವೆಯ ಮಣ್ಣು ತುಂಬ ಉತ್ತಮ. ಸುವರ್ಣಾವತಿಗೆ ಅಟ್ಟುಗುಳಿಪುರದ ಬಳಿ ಕಟ್ಟೆ ಕಟ್ಟಲಾಗಿದೆ. 26ಮೀ. ಎತ್ತರವಿರುವ ಈ ಕಟ್ಟೆಯ ಉದ್ದ ಸು.1158ಮೀ. ಇದರ ಬಲನಾಲೆಯ ಉದ್ದ 23ಕಿಮೀ ಎಡನಾಲೆ 6.5ಕಿಮೀ. 1971 ರಿಂದ ನೀರಾವರಿಗೆ ಬಳಸಿಕೊಳ್ಳಲಾಗುತ್ತಿರುವ ಇದರ ಒಟ್ಟು ಅಚ್ಚುಕಟ್ಟು 1,000 ಎಕರೆ. ಕೊಯಮತ್ತೂರು ಜಿಲ್ಲೆಯಲ್ಲಿ ಹುಟ್ಟಿ ಚಾಮರಾಜನಗರ ತಾಲ್ಲೂಕಿನಲ್ಲಿ ಸುವರ್ಣಾವತಿಯನ್ನು ಸೇರುವ ಚಿಕ್ಕಹೊಳೆಗೆ ಈ ತಾಲ್ಲೂಕಿನಲ್ಲಿ, ಸುವರ್ಣಾವತಿ ಕಟ್ಟೆಯಿಂದ ಕೆಳಕ್ಕೆ 8ಕಿಮೀ ದೂರದಲ್ಲಿ, ಒಂದು ಮಧ್ಯಮ ವರ್ಗದ ಕಟ್ಟೆ ಕಟ್ಟಲಾಗಿದೆ. ಇವಲ್ಲದೆ ತಾಲ್ಲೂಕಿನಲ್ಲಿ ನೀರಾವರಿಗೆ ಅನುಕೂಲವಾದ ಹಲವು ಕೆರೆಗಳುಂಟು. ತಾಲ್ಲೂಕಿನ ಕೊಳವೆ ಬಾವಿಗಳು ಒಣಪ್ರದೇಶದಲ್ಲಿ ಮುಖ್ಯ ನೀರಾವರಿ ಮೂಲಗಳಾಗಿವೆ. ವಾರ್ಷಿಕ ಸರಾಸರಿ ಮಳೆ 667.59ಮಿಮೀ.

ಜೋಳ ಈ ತಾಲ್ಲೂಕಿನ ಮುಖ್ಯ ಬೆಳೆ. ರಾಗಿ, ಹುರುಳಿ ಮತ್ತು ಇತರ ಹಲವು ಖುಷ್ಕಿ ಬೆಳೆಗಳನ್ನೂ ಬೆಳೆಯುತ್ತಾರೆ. ಹತ್ತಿಯನ್ನೂ ಬೆಳೆಯುವುದುಂಟು. ಕೆಲವೆಡೆ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ.

ನೀರಾವರಿ ಸೌಲಭ್ಯ ಇರುವಲ್ಲಿ ಬತ್ತ, ಕಬ್ಬು ಬೆಳೆಯುತ್ತವೆ. ಹಿಪ್ಪುನೇರಳೆ ವ್ಯವಸಾಯವೂ ವಿಶೇಷವಾಗಿ ನಡೆಯುತ್ತದೆ. ರೇಷ್ಮೆಹುಳು ಸಾಕುವುದು, ಎಳೆ ತೆಗೆಯುವುದು ತಾಲ್ಲೂಕಿನ ಒಂದು ಮುಖ್ಯ ಕಸಬು. ಹೊನ್ನುಹೊಳೆಯ ದಂಡೆಯ ಮೇಲೆ ಒಳ್ಳೆಯ ಅಡಕೆ, ತೆಂಗು ತೋಟಗಳಿವೆ. ಬಿಳಿಗಿರಿರಂಗನ ಬೆಟ್ಟ ಶ್ರೇಣಿಯಲ್ಲಿ ಕಾಫಿತೋಟಗಳೂ ಉಂಟು.

ತಾಲ್ಲೂಕಿನಲ್ಲಿ ಅಂಚೆ, ತಂತಿ, ವಿದ್ಯುಚ್ಛಕ್ತಿ ಸೌಲಭ್ಯಗಳ ಜೊತೆಗೆ ಶಾಲಾ ಕಾಲೇಜುಗಳೂ ವೈದ್ಯಾಲಯಗಳೂ ಇವೆ. ಸುತ್ತಲ ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ, ನಂಜನಗೂಡುಗಳಿಗೆ ರಸ್ತೆ ಮಾರ್ಗ ಸಂಪರ್ಕವಿದೆ. ಮೈಸೂರು ಚಾಮರಾಜನಗರ ರೈಲ್ವೆ ಮಾರ್ಗವಿದ್ದು ಮುಂದೆ ಇದನ್ನು ವಿಸ್ತರಿಸುವ ಯೋಜನೆ ಇದೆ. ಅಮಚವಾಡಿ, ಬಾಗಳಿ, ಬದನಗುಪ್ಪೆ, ಚಂದಕವಾಡಿ, ಗಣಗನೂರು, ಹೊಂಗನೂರು, ಹರದನಹಳ್ಳಿ, ಹರವೆ, ಜ್ಯೋತಿಗೌಡನಪುರ, ಕಾಗಲವಾಡಿ, ಕೊತ್ತಲವಾಡಿ, ಕಡಲೂರು, ಕುದೇರು, ಮಂಗಲ, ನಾಗವಳ್ಳಿ, ರಾಮಸಮುದ್ರ, ಸರಗೂರು, ಸಂತೇಮರಳ್ಳಿ, ತಮ್ಮಡಹಳ್ಳಿ, ಉಮ್ಮತ್ತೂರು ಈ ತಾಲ್ಲೂಕಿನ ದೊಡ್ಡ ಗ್ರಾಮಗಳು. ಸಂತೇಮರಳ್ಳಿಯ ಸಂತೆ ಪ್ರಸಿದ್ಧವಾದುದು. ಕುದೇರು ಮತ್ತು ಮರಳ್ಳಿಗಳಲ್ಲಿ ರೇಷ್ಮೆ ವ್ಯವಸಾಯ ಉತ್ತಮವಾಗಿದೆ. ಚಾಮರಾಜ ನಗರಕ್ಕೆ 10ಕಿಮೀ ದೂರದಲ್ಲಿರುವ ಹಳೇ ಆಲೂರಿನಲ್ಲಿ ಪುರಾತನವಾದ ಅರ್ಕೇಶ್ವರ ಗುಡಿಯುಂಟು. ಹರದನಹಳ್ಳಿ (ನೋಡಿ) ಐತಿಹಾಸಿಕ ಸ್ಥಳ. ತೋಂಟದ ಸಿದ್ಧಲಿಂಗರ ಗುರುವಾದ ಗೋಸಲ ಚೆನ್ನಬಸವರು ಇದ್ದ ಗ್ರಾಮವಿದು. ನರಸಮಂಗಲದಲ್ಲಿ ಜೀರ್ಣವಾದ ರಾಮೇಶ್ವರ ಗುಡಿಯೊಂದಿದೆ. ಚಾಮರಾಜ ನಗರಕ್ಕೆ 3ಕಿಮೀ ದೂರದಲ್ಲಿರುವ ರಾಮಸಮುದ್ರದಲ್ಲಿ ಪುರಾತನ ಮಣಿಪುರದ್ದೆಂದು ಹೇಳಲಾದ ಅವಶೇಷಗಳಿವೆ. ಮಲೆಯೂರು ಬೆಟ್ಟದಲ್ಲಿ ಕೆಲವು ಪ್ರಾಚೀನ ಜೈನ ಅವಶೇಷಗಳಿವೆ. ಚಾಮರಾಜನಗರಕ್ಕೆ 16ಕಿಮೀ ದೂರದಲ್ಲಿ ನಂಜನಗೂಡು ಯಳಂದೂರು ರಸ್ತೆಯಲ್ಲಿರುವ ಉಮ್ಮತ್ತೂರು (ನೋಡಿ) ಗ್ರಾಮ ಪಾಳೆಯಪಟ್ಟಿನ ಕೇಂದ್ರವಾಗಿತ್ತು.

**ಪಟ್ಟಣ :** ಜಿಲ್ಲಾ ಕೇಂದ್ರವಾದ ಚಾಮರಾಜನಗರ ಈ ತಾಲ್ಲೂಕಿನ ಮುಖ್ಯ ಪಟ್ಟಣ. ಮೈಸೂರು ನಗರದ ಆಗ್ನೇಯಕ್ಕೆ 61ಕಿಮೀ ದೂರದಲ್ಲೂ ನಂಜನಗೂಡಿನಿಂದ 35ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 60,810.

ಮೈಸೂರು ಚಾಮರಾಜನಗರ ರೈಲು ಮಾರ್ಗದ ಕೊನೆಯ ನಿಲ್ದಾಣವಿದು. ನಂಜನಗೂಡಿನಿಂದ ಕೊಯಮತ್ತೂರಿನ ಕಡೆಗೆ ಚಾಮರಾಜನಗರದ ಮೂಲಕ ಸಾಗುವ ಒಂದು ಹೆದ್ದಾರಿಯಿದೆ. ಗುಂಡ್ಲುಪೇಟೆ ತಿರುಮಕೂಡಲು ನರಸೀಪುರ ರಸ್ತೆ ಈ ಊರಿನ ಮೂಲಕ ಸಾಗುತ್ತದೆ. ಇದೊಂದು ಮುಖ್ಯ ವ್ಯಾಪಾರಸ್ಥಳ. ಇಲ್ಲಿ ಪುರಸಭಾಡಳಿತವಿದೆ. ರೇಷ್ಮೆ ಕೈಗಾರಿಕಾ ಕೇಂದ್ರ, ಶಾಲಾ ಕಾಲೇಜುಗಳೂ ಆಸ್ಪತ್ರೆಗಳೂ ಇವೆ.

ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿದ (1826) ಇಲ್ಲಿನ ಚಾಮರಾಜೇಶ್ವರ ದೇವಸ್ಥಾನ ದೊಡ್ಡ ಪ್ರಾಕಾರ, ಎತ್ತರವಾದ ಮಹಾದ್ವಾರ ಗೋಪುರ ಮತ್ತು ಸುತ್ತಲೂ ಕೈಸಾಲೆ ಇರುವ ದೊಡ್ಡ ದೇವಾಲಯ. ಒಳಗೆ ಮೂರು ಗುಡಿಗಳಿವೆ. ಮಧ್ಯದ ಗುಡಿಯಲ್ಲಿ ಶಿವಲಿಂಗವಿದೆ. ಇದು ಚಾಮರಾಜೇಶ್ವರ. ಎಡಗಡೆ ಗುಡಿಯಲ್ಲಿ ಕೆಂಪನಂಜಾಂಬಾ ವಿಗ್ರಹವೂ ಬಲಗಡೆಯದರಲ್ಲಿ ಚಾಮುಂಡಿ ವಿಗ್ರಹವೂ ಇವೆ. ನವರಂಗದ ಎಡಬಲಗಳಲ್ಲಿ ಆರು ಲಿಂಗಗಳೂ ನವರಂಗದ್ವಾರದ ಒಳಪಕ್ಕಗಳಲ್ಲಿ ಸೂರ್ಯಚಂದ್ರರ ವಿಗ್ರಹಗಳೂ ಉಂಟು. ಪ್ರಾಕಾರದೊಳಗೆ ಸುತ್ತಲೂ ಹಲವು ಲಿಂಗಗಳೂ ಅರವತ್ತು ಮೂರು ಪುರಾತನರ ವಿಗ್ರಹಗಳೂ ಇವೆ. ಶಿವನ ಕೆಲವು ಲೀಲಾಮೂರ್ತಿಗಳು ಸುಂದರವಾಗಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ, ಅವರ ನಾಲ್ವರು ರಾಣಿಯರ ವಿಗ್ರಹಗಳೂ ಇವೆ. ಈ ಊರಿನ ವೀರಭದ್ರ ಗುಡಿಯೂ ಗಮನಾರ್ಹ. ದೇಗುಲದಲ್ಲಿ ವೀರಭದ್ರ ಮೂರ್ತಿಯ ಮತ್ತು ಭದ್ರಕಾಳಿಯ ವಿಗ್ರಹಗಳು ಮುಖ್ಯವಾದವು. ಪಾರ್ಶ್ವನಾಥ ದೇವಸ್ಥಾನದ ಕೆಲವು ಮೂರ್ತಿಗಳು ತೆರಕಣಾಂಬಿ ಮತ್ತು ಹರಳಕೋಟೆಯಿಂದ ತಂದವೆನ್ನಲಾಗಿದೆ. ಚಾಮರಾಜ ಒಡೆಯರು ಹುಟ್ಟಿದ ಸ್ಥಳದಲ್ಲಿ ಕಟ್ಟಲಾದ ಜನನ ಮಂಟಪ ಸುಂದರವಾಗಿದೆ. ಅದರ ಗೋಡೆಯ ಮೇಲಣ ಚಿತ್ರಗಳು ಆಕರ್ಷಕವಾಗಿವೆ. ಇಲ್ಲಿರುವ ದೊಡ್ಡ ಅರಸಿನಕೊಳ ಕಂಠೀರವ ನರಸರಾಜ ಒಡೆಯರ್ ಕಟ್ಟಿಸಿದ್ದು. *

**ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ :** ಕರ್ನಾಟಕದ ಪ್ರಸಿದ್ಧ ವೃತ್ತಿ ತರಬೇತಿ ಶಾಲೆ; ಹೆಸರಾದ ಕಲಾಕೇಂದ್ರ. ಕಾವಾ ಎಂದೂ ಪ್ರಸಿದ್ಧ. ಅನೇಕ ಮೇಧಾವಿ ಕುಶಲಕೈಗಾರಿಕಾ ಪಟುಗಳನ್ನು ಕಲಾವಿದರನ್ನು ಮತ್ತು ಶಿಲ್ಪಿಗಳನ್ನು ರೂಪಿಸಿರುವ ಈ ಶಾಲೆ ಭಾರತದಲ್ಲಿಯೂ ಹೆಸರಾಗಿದೆ. ಇಲ್ಲಿನ ಕಲಾವಸ್ತುಗಳೂ ಕಲಾಕೃತಿಗಳೂ ವಿಶ್ವಾದ್ಯಂತ ಪ್ರಸರಿಸಿವೆ. ದೇಶವಿದೇಶಗಳಿಂದ ಗಣ್ಯ ಅತಿಥಿಗಳು ಬಂದಾಗ ಸರ್ಕಾರ ಈ ಕಲಾಶಾಲೆಯಿಂದ ಅಪೂರ್ವ ಕಲಾಕೃತಿಗಳನ್ನು ಪಡೆದು ಅವರಿಗೆ ಅರ್ಪಿಸುವ ಪರಿಪಾಠ ಇದೆ.

ಈ ಸಂಸ್ಥೆ 1906ರಲ್ಲಿ ಮೈಸೂರು ನಗರದಲ್ಲಿ ಸ್ಥಾಪಿತವಾಯಿತು. ಸಯ್ಯಾಜಿರಾವ್ ರಸ್ತೆಯಲ್ಲಿ ಈಗಿರುವ ಭವ್ಯಕಟ್ಟಡದ ಸ್ಥಳ ಹಿಂದೆ ವಿಶ್ವಕರ್ಮ ಜನಾಂಗದ ಬೀದಿಯಾಗಿತ್ತೆಂದು ತಿಳಿದುಬರುತ್ತದೆ. ಅನಂತರ ಅವರಿಗೆ ಬೇರೆ ಕಡೆಯಲ್ಲಿ ನಿವೇಶನವನ್ನು ನೀಡಿ ಈ ಕಟ್ಟಡಕ್ಕೆ ಉಚಿತ ಸ್ಥಳವನ್ನು ಪಡೆದುಕೊಳ್ಳಲಾಯಿತು. ಈ ನೂತನ ಕಟ್ಟಡಕ್ಕೆ ಬರುವ ಮೊದಲು ವೃತ್ತಿಶಿಕ್ಷಣ ಶಾಲೆ ನಜರಬಾದಿನ ಪುಟ್ಟ ಕಟ್ಟಡವೊಂದರಲ್ಲಿತ್ತು. ಅಲ್ಲಿ ಚಿತ್ರಕಲೆ, ಮರದ ಕೆತ್ತನೆ, ಗಂಧದ ಕೆತ್ತನೆ, ನೇಯ್ಗೆ, ಬೆತ್ತದ ಕೈಗಾರಿಕೆ, ಪುಸ್ತಕಕ್ಕೆ ರಟ್ಟು ಕಟ್ಟುವಿಕೆ ಮುಂತಾದ ಕರಕುಶಲ ಕಲಾಶಿಕ್ಷಣ ನೀಡಲಾಗುತ್ತಿತ್ತು. ಒಮ್ಮೆ ಈ ಪುಟ್ಟ ಕಲಾ ಶಾಲೆಗೆ ಭೇಟಿ ಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರ ಸಲಹೆಯಂತೆ ಈಗಿನ ಸ್ಥಳಕ್ಕೆ ಆ ಶಾಲೆಯನ್ನು ವರ್ಗಾಯಿಸಲಾಯಿತು.

ವೃತ್ತಿ ಶಿಕ್ಷಣದ ಪ್ರಗತಿಗೆ ಸರ್ ಎಂ.ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಸಲಹಾ ಸಮಿತಿಯನ್ನು 1910ರಲ್ಲಿ ನೇಮಿಸಿತು. ಸಮಿತಿಯ ಸಲಹೆಗಳ ಮೇರೆಗೆ ಮೈಸೂರು ನಗರದ ಇಟ್ಟಿಗೆಗೂಡಿನಲ್ಲಿದ್ದ ಎಂಜಿನಿಯರಿಂಗ್ ಶಾಲೆ ಮತ್ತು ನಜರಬಾದಿನಲ್ಲಿದ್ದ ಕೈಗಾರಿಕಾ ಶಾಲೆ - ಇವೆರಡನ್ನು ಸಮಾವೇಶಗೊಳಿಸಿ ಶ್ರೀಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯಾಗಿ ಪರಿವರ್ತನೆ ಮಾಡಲಾಯಿತು (1913). ಆರಂಭದಲ್ಲಿದ್ದ ಶಾಲೆಗಳಲ್ಲಿ ಎಂಜಿನಿಯರಿಂಗ್, ಕೈಗಾರಿಕೆ ಮತ್ತ ವಾಣಿಜ್ಯ ಶಾಲೆಗಳು ಮುಖ್ಯವಾದವು. ಅನಂತರ ಸಂಸ್ಥೆಯ ಆಡಳಿತವನ್ನು ವಿದ್ಯಾ ಇಲಾಖೆಯಿಂದ ಕೈಗಾರಿಕಾ ಇಲಾಖೆಗೆ 1920-21ರಲ್ಲಿ ವರ್ಗಾಯಿಸಲಾಯಿತಲ್ಲದೆ, ಶಿಕ್ಷಣ ಪದ್ಧತಿಯಲ್ಲಿಯೂ ಸುಧಾರಣೆಗಳನ್ನು ಮಾಡಲಾಯಿತು. ಚಿತ್ರಕಲೆ, ಮಾದರಿಗಳ ತಯಾರಿಕೆ, ಮರಗೆಲಸ, ಮರದ ಕೆತ್ತನೆ, ಲೋಹಗೆಲಸ, ಕೆತ್ತನೆ ತರಗತಿಗಳನ್ನು ತೆರೆಯಲಾಯಿತು. ಈ ಶಿಕ್ಷಣ ಐದು ವರ್ಷಗಳ ಅವಧಿಯಲ್ಲಿ ಮುಗಿಯುವಂತೆಯೂ ಪಠ್ಯಕ್ರಮವನ್ನು ರೂಪಿಸಲಾಯಿತು. ಕ್ರಮೇಣ ಎನ್‌ಗ್ರೇವಿಂಗ್, ಪ್ಲೇಟಿಂಗ್, ಗಂಧ, ದಂತದ ಕೆತ್ತನೆ ಮತ್ತು ಶಿಲ್ಪ ಮುಂತಾದ ಶಾಖೆಗಳನ್ನು ತೆರೆಯಲಾಯಿತು.

ಶಿಕ್ಷಣ ಪಡೆದ ಅಭ್ಯರ್ಥಿಗಳಲ್ಲಿ ಕೆಲವರನ್ನು ಆರಿಸಿಕೊಂಡು, ಅವರಿಗೆ ನಿಯಮಿತ ವೇತನ ಕೊಟ್ಟು ಕೆಲಸ ಮಾಡಿಸಿಕೊಳ್ಳುವ ಅವಕಾಶವೂ ಇಲ್ಲಿದೆ. ಇವರಿಂದ ರಚಿತವಾದ ಕೃತಿಗಳನ್ನು ಮಾರಾಟ ಮಾಡಲು ಶಾಖೆಯಲ್ಲಿಯೇ ಒಂದು ಪ್ರದರ್ಶನ ಕೇಂದ್ರವನ್ನು ಆರಂಭಿಸಲಾಗಿದೆ. ಶಾಲೆಯ ಹೊರಗೆ ಉಳಿದು ಕಲಾವಿದರು ರೂಪಿಸಿ ತಂದ ಕೃತಿಗಳನ್ನೂ ಆ ಮಾರಾಟದ ಪ್ರದರ್ಶನಾಲಯದಲ್ಲಿರಿಸುವ ಅವಕಾಶವೂ ಇದೆ. ಸರ್ಕಾರ ಇಂಥ ಕಸಬುದಾರರಿಗೆ ರಿಯಾಯಿತಿ ದರದಲ್ಲಿ ಗಂಧದ ಮರ, ದಂತ ಮುಂತಾದ ಸಾಮಗ್ರಿಗಳನ್ನು ಒದಗಿಸಿ ಪ್ರೋತ್ಸಾಹಿಸುತ್ತಿದೆ. ಈ ನೂತನ ಯೋಜನೆಯಿಂದಾಗಿ ಕರಕುಶಲಿಗರ ಸಂಖ್ಯೆ ಬೆಳೆಯುತ್ತಿದೆ.

ಶಾಲೆಯ ಅಭಿವೃದ್ಧಿಗಾಗಿ ಈತನಕ ದುಡಿದ ಮುಖ್ಯಾಧಿಕಾರಿಗಳ ಸೇವೆ ಸ್ಮರಣೀಯ. ಒಬ್ಬೊಬ್ಬರ ಕಾಲದಲ್ಲೂ ಒಂದೊಂದು ರೀತಿಯಲ್ಲಿ ಶಾಲೆ ಅಭಿವೃದ್ಧಿಹೊಂದುತ್ತ ಬಂದಿದೆ. ಇಲ್ಲಿಯವರೆಗೆ ಹದಿಮೂರು ಜನ ಸೂಪರಿಂಟೆಂಡೆಂಟರುಗಳು ಆಗಿಹೋಗಿದ್ದಾರೆ. ಮೊಟ್ಟಮೊದಲ ಅಧಿಕಾರಿ ಸುಬ್ಬಸ್ವಾಮಿ ಅಯ್ಯರ್. ಇವರ ಅನಂತರ 1917ರಲ್ಲಿ ಜೆರಾಲ್ಡ್ ಆಲ್ಬರ್ಟನ್ ಅವರು ಲಂಡನ್ನಿನಿಂದ ಬಂದು ಶಾಲೆಯ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಇವರಿಗೆ ಸಹಾಯಕರಾಗಿ ಬಂಗಾಲದ ಕಲಾವಿದ ಎಸ್.ಕೆ.ದೇವಾಲ್ ಅವರು ಕಲಾವಿಭಾಗವನ್ನು ನೋಡಿಕೊಳ್ಳುತ್ತಿದ್ದರು. ಆರ್.ಟಿ.ರಾಮಕೃಷ್ಣ, ಆರ್.ವೇಣುಗೋಪಾಲ್ ನಾಯುಡು, ಡಿ.ಕೃಷ್ಣಯ್ಯ, ಬಾಲಸುಬ್ರಹ್ಮಣ್ಯಂ, ಕೆ.ಕೇಶವಯ್ಯ, ಎಸ್.ಜಿ.ಟಂಕಸಾಲಿ ಮುಂತಾದವರು ಆ ಸಮಯದಲ್ಲಿ ಶಾಲೆಯ ಕಲಾಧ್ಯಾಪಕರಾಗಿದ್ದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಎಸ್.ರಾಮಸ್ವಾಮಿ ಅಯ್ಯಂಗಾರ್, ಎನ್.ಜಿ.ಪಾವಂಜೆ, ಎಂ.ವೀರಪ್ಪ ಮೊದಲಾದವರೂ ಶಾಲೆಯ ಕೀರ್ತಿಗೆ ಶ್ರಮಿಸಿದ್ದಾರೆ. ಶಿಲ್ಪಿ ತಿನ್ನಾಚಾರ್ಯ, ಮತ್ತು ಇವರ ಸಹೋದರರು, ಖ್ಯಾತ ದಂತಶಿಲ್ಪಿ ಎಚ್.ವೆಂಕಪ್ಪ, ಎಸ್.ನಂಜುಂಡಸ್ವಾಮಿ, ವೈ.ಸುಬ್ರಹ್ಮಣ್ಯರಾಜು, ಬಸವಯ್ಯ,

ಸೂಫಿ ಮುಂತಾದ ಪ್ರತಿಭಾವಂತ ಕಲಾಕೋವಿದರ ಕರಕುಶಲತೆಗೆ ಹೆಚ್ಚಿನ ಪ್ರೋತ್ಸಾಹ ಸಂಸ್ಥೆಯಿಂದ ದೊರೆಯಿತು.

ಮರಗೆಲಸದಲ್ಲೂ ಈ ಶಾಲೆ ಹೆಸರಾಗಿದೆ. ಇದಕ್ಕೆ ಕಾರಣ ಜರ್ಮನಿಯ ಯು.ಜಿ.ಎಕ್ನರ್‌ರಂಥ ನಿಪುಣರ ಸೇವೆಯನ್ನು ಶಾಲೆ ಉಪಯೋಗಿಸಿಕೊಂಡಿದ್ದು. ಆಶೀರ್ವಾದಂ ಮೊದಲಾದವರು ಆ ವಿಭಾಗದಲ್ಲಿ ಮತ್ತೂ ಪ್ರಗತಿಯನ್ನು ತಂದುಕೊಟ್ಟರು.

ಶಾಲೆಯ ಎಲ್ಲ ವಿಭಾಗಗಳ ವಿದ್ಯಾರ್ಥಿಗಳಿಗೂ ಚಿತ್ರಕಲೆಯ ವಿಷಯವನ್ನು ತಿಳಿಯುವ ಅವಕಾಶ ಇದೆ. ವಿದ್ಯಾರ್ಥಿಗಳು ಆಗಾಗ ಮೃಗಾಲಯಕ್ಕೂ ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆಗೂ ಹೋಗಿ ಬರುವ ಅವಕಾಶವನ್ನು ಮಾಡಿಕೊಡಲಾಗಿದೆ.

ಈಗ್ಗೆ ಈ ಸಂಸ್ಥೆಯಿಂದ ಸುಮಾರು ಮೂವತ್ತೈದು ಸಾವಿರ ಮಂದಿ ಶಿಕ್ಷಣ ಪಡೆದಿದ್ದಾರೆ. ಪ್ರತಿಭಾವಂತ ಹಳೆಯ ವಿದ್ಯಾರ್ಥಿಗಳಲ್ಲಿ ಕೆ.ವೆಂಕಟಪ್ಪ, ಕೆ.ಕೆ.ಹೆಬ್ಬಾರ್, ಎಸ್.ನಂಜುಂಡಸ್ವಾಮಿ, ಎಸ್.ಎ.ಸ್ವಾಮಿ, ಎಂ.ವೀರಪ್ಪ, ವೈ.ನಾಗರಾಜು, ವೈ.ಸುಬ್ರಹ್ಮಣ್ಯರಾಜು, ಎಸ್.ಆರ್.ಅಯ್ಯಂಗಾರ್, ಮೀರ್‌ಶೌಕತ್‌ಅಲಿ, ಸೂಫಿ, ಬಿ.ಎಚ್.ರಾಮ ಚಂದ್ರ, ಎಸ್.ಹನುಮಯ್ಯ, ರುಮಾಲೆ, ಶುದ್ಧೋದನ, ಚಂದ್ರಶೇಖರ, ಸೋಮಸುಂದರ, ಕುಕ್ಕೆ, ಎಂ.ಟಿ.ವಿ.ಆಚಾರ್ಯ, ಪಿ.ಆರ್.ತಿಪ್ಪೇಸ್ವಾಮಿ, ಕಾಳಪ್ಪ, ಶೆಣೈ, ಮರಿಸ್ವಾಮಿ, ಗೋವಿಂದಪ್ಪ, ಕೆ.ಎಲ್.ವೆಂಕಟೇಶ್ ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

1970ರಲ್ಲಿ ಶಾಲೆ ತನ್ನ ಅರವತ್ತು ವರ್ಷದ ವಜ್ರ ಮಹೋತ್ಸವವನ್ನು ಆಚರಿಸಿತು. ಇದರ ನೆನಪಿಗಾಗಿ ಆರು ಲಕ್ಷ ರೂ.ಗಳ ಅಂದಾಜಿನಲ್ಲಿ ಚಿತ್ರಕಲಾ ವಿಭಾಗದ ಒಂದು ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಶಾಲೆಯ ಆವರಣದಲ್ಲಿ ಆಗಿನ ರಾಜ್ಯಪಾಲರು ನೆರವೇರಿಸಿದರು (1970). ತರುವಾಯ ಈ ಸಂಸ್ಥೆಯ ಚಿತ್ರಕಲಾ ವಿಭಾಗವು ಬೇರ್ಪಡೆಗೊಂಡು 'ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ' ಎಂಬ ಹೆಸರಿನಲ್ಲಿ ಪ್ರತ್ಯೇಕ ಅಸ್ತಿತ್ವಹೊಂದಿ ನಡೆದುಕೊಂಡು ಬರುತ್ತಿದೆ. ಅದು 'ಕಾವ' ಎಂಬ ಹೆಸರಿನಿಂದಲೂ ಪರಿಚಿತವಾಗಿದೆ.

ತಾಂತ್ರಿಕ ಸಂಸ್ಥೆಯು ಕರಕುಶಲ ಕಸಬನ್ನು ಆಧುನಿಕಗೊಳಿಸುವುದು ಹಾಗೂ ಗ್ರಾಮಾಂತರ ಕುಶಲಕರ್ಮಿಗಳಿಗೆ ಆಧುನಿಕ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ನೀಡಿ, ತರಬೇತಿ ನೀಡಿ ಅವರ ಕಸಬನ್ನು ಆರ್ಥಿಕವಾಗಿ ಸಬಲವಾಗುವಂತೆ ಮಾಡುವುದನ್ನು ಮುಖ್ಯ ಚಟುವಟಿಕೆಯಾಗಿ ಹೊಂದಿದೆ. ಇಲ್ಲಿ ತರಬೇತಿ ಪಡೆದ ಅನೇಕ ಪ್ರತಿಭಾವಂತರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅನೇಕರು ಸ್ವಂತ ಉದ್ಯಮಗಳನ್ನೂ ನಡೆಸುತ್ತಿದ್ದಾರೆ.

ಸಂಸ್ಥೆಯು ಹಿಂದೆ 12 ವಿವಿಧ ಕಸಬುಗಳಲ್ಲಿ ತರಬೇತಿ ನೀಡುತ್ತಿತ್ತು. ಈಗ ಮರಗೆಲಸ, ಯಂತ್ರಾಗಾರ, ಲೋಹದ ಶಿಲ್ಪ ಕಲೆ, ಚಿತ್ತದ ಕೆಲಸ, ಮಾಡಲಿಂಗ್‌ಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಈ ಸಂಸ್ಥೆಯ ಆಧುನೀಕರಣಕ್ಕೆ ಸರ್ಕಾರದಿಂದ ಯೋಜನೆ ಮಂಜೂರಾಗಿದೆ. ಅದರಂತೆ ಕರಕುಶಲಕಲೆ, ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ತರಬೇತಿ, ಅಪ್ಲೈಡ್ ಡಿಸೈನ್ ಕ್ರಾಫ್ಟ್, ಶಿಲ್ಪ ಕಲೆ, ಆಭರಣಗಳು ಮುಂತಾದ ವಿಷಯಗಳನ್ನು ಹೊಸದಾಗಿ ಸೇರಿಸುವ ಉದ್ದೇಶ ಹೊಂದಲಾಗಿದೆ. ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣವಾಗಿದೆ. ಈಗ ಸಂಸ್ಥೆಯನ್ನು ಕೈಗಾರಿಕಾ ಇಲಾಖೆಯ ಅಧೀನದಲ್ಲಿ ಉಪನಿರ್ದೇಶಕ ಅಧಿಕಾರಿ ನೋಡಿಕೊಳ್ಳುತ್ತಿದ್ದಾರೆ. *

**ಚಾಮಲದೇವಿ :** ಕಲ್ಯಾಣ ಚಾಳುಕ್ಯ 1ನೆಯ ಸೋಮೇಶ್ವರನ (1044-68) ಪತ್ನಿಯರಲ್ಲೊಬ್ಬಳು. ಬರ್ಮನ ಮಗಳು. ಈಕೆಯ ಹೆಸರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬಲ್ಲಟ್ಟಿಗೆ ಗ್ರಾಮದ ಶಾಸನದಿಂದ ತಿಳಿದಿದೆ. ಈಕೆ ಕೃಷ್ಣಾ ತುಂಗಭದ್ರಾ ಸಂಗಮಕ್ಷೇತ್ರದಲ್ಲಿ ಪವಿತ್ರಸ್ನಾನಮಾಡಿ, ಪಟಿಮಲೆ ಎಂಬ ನೆಲೆವೀಡಿನಲ್ಲಿದ್ದಾಗ ಭಾಸ್ಕರಶೆಟ್ಟಿ ಎಂಬಾತ ಭೂದಾನಮಾಡಿದನೆಂಬುದಷ್ಟೇ ಈ ಶಾಸನದ ಉಲ್ಲೇಖ.

ಹಾನಗಲ್ಲಿನಲ್ಲಿ ಸಾಮಂತನಾಗಿದ್ದ ಕದಂಬಕುಲದ ಇಮ್ಮಡಿ ತೈಲಪನ (ಸು.1099-1129) ಪತ್ನಿಯ ಹೆಸರೂ ಚಾಮಲದೇವಿ. *

**ಚಾಮುಂಡಿ :** ಶಿವನ ಅರ್ಧಾಂಗಿಯಾದ ಪಾರ್ವತಿಯ ಅವತಾರಗಳಲ್ಲಿ ಒಂದು. ಭಾರತೀಯ ಶಿಲ್ಪಪುರಾಣಗಳಲ್ಲಿ ಹಾಗೂ ಕನ್ನಡ ಜನಪದ ಪುರಾಣ ಕಾವ್ಯಗಳಲ್ಲಿ ಚಾಮುಂಡಿಯ ಕಥೆಗಳು ಕಂಡುಬರುತ್ತವೆ. ಇವಳಿಗೆ ಆದಿಶಕ್ತಿ, ಸರ್ವಶಕ್ತಿ, ಮಾಹೇಶ್ವರಿ, ಕಾಳಿ, ಕಾತ್ಯಾಯನಿ, ಚಂಡಿ, ಅಂಬಾ, ಈಶ್ವರಿ, ಭಗವತಿ, ದುರ್ಗಿ, ಮಹಾದೇವಿ ಮುಂತಾದ ಹೆಸರುಗಳಲ್ಲಿ ಪೂಜೆ ಸಲ್ಲುತ್ತದೆ. ಈ ಎಲ್ಲ ರೂಪಗಳಲ್ಲಿ ಮಹಿಷಾಸುರಮರ್ದಿನಿಯ ರೂಪವನ್ನು ಭಾರತದಲ್ಲಿ ಬಹಳಷ್ಟು ಹಿಂದಿನಿಂದಲೂ ಆರಾಧಿಸಿಕೊಂಡು ಬರಲಾಗಿದೆ. ಆಶ್ವಯುಜ ಶುಕ್ಲಪಕ್ಷದ ನವರಾತ್ರಿಯ ಕಾಲದಲ್ಲಿ ಭಾರತಾದ್ಯಂತ ದುರ್ಗಾರಾಧನೆ ಅತ್ಯಂತ ವೈಭವದಿಂದ ನಡೆಯುತ್ತದೆ. ಮೈಸೂರಿನಲ್ಲಿ ಈ ದಿನಗಳನ್ನು ದಸರ ಎಂದು ಕರೆಯುತ್ತಾರೆ. ದಸರೆಯ ಹತ್ತನೆಯ ದಿನವಾದ ವಿಜಯದಶಮಿ, ಸಾಂಕೇತಿಕವಾಗಿ ಮಹಿಷನೆಂಬ ರಕ್ಕಸನನ್ನು ದುರ್ಗಿ ಸಂಹರಿಸಿದ ದಿನ. ಈ ದುರ್ಗಾರಾಧನೆ ಅರಿಷಡ್ವರ್ಗಗಳನ್ನು ಗೆದ್ದ ಆತ್ಮನನ್ನು ಸಾಂಕೇತಿಕವಾಗಿ ಸೂಚಿಸುತ್ತದೆ. ಏಕೆಂದರೆ ಅಸುರರು ಅರಿಷಡ್ವರ್ಗಗಳನ್ನು ಪ್ರತಿನಿಧಿಸುತ್ತಾರೆ.

ಚಾಮುಂಡೇಶ್ವರಿ ಉತ್ಸವಮೂರ್ತಿ

ಚಾಮುಂಡಿಗೆ ಸಂಬಂಧಿಸಿದ ಸಂಗತಿಗಳನ್ನು ಮಾರ್ಕಂಡೇಯಪುರಾಣ, ಕಾಲಿಕಾಪುರಾಣ, ಶ್ರೀದೇವಿಭಾಗವತ, ಸ್ಕಾಂದಪುರಾಣ, ವರಾಹಪುರಾಣ, ವಿಷ್ಣುಧರ್ಮೋತ್ತರಪುರಾಣ, ಸನತ್ಕುಮಾರ ಶಿಲ್ಪರತ್ನ, ಚತುರ್ವರ್ಗಚಿಂತಾಮಣಿ, ಹಾಗೂ ಅಭಿಲಷಿತಾರ್ಥಚಿಂತಾಮಣಿ ಮುಂತಾದ ಕೃತಿಗಳು ಅಲ್ಪಸ್ವಲ್ಪ ವ್ಯತ್ಯಾಸಗಳಿಂದ ನಿರೂಪಿಸುತ್ತವೆ. ಆದರೆ ಇವುಗಳೆಲ್ಲದರ ಮೂಲ ಆಶಯ ಒಂದೇ ಆಗಿದೆ. ದೇವತೆಗಳಿಗೆ ಅಪಜಯವನ್ನುಂಟುಮಾಡಿ ಇಂದ್ರಪದವಿಯನ್ನೇರಿ, ಶಿಷ್ಟರಿಗೆಲ್ಲ ಕಂಟಕಪ್ರಾಯನಾಗಿದ್ದ ಮಹಿಷಾಸುರನ ಸಂಹಾರಕ್ಕಾಗಿ ದೇವಾಧಿದೇವತೆಗಳ ಸರ್ವಶಕ್ತಿ ತೇಜಃಪುಂಜವಾಗಿ ಹೊರಟು ಸರ್ವಮಂಗಳೆಯಾದ ದೇವಿಯಾಗಿ ಆವಿರ್ಭವಿಸುತ್ತಾಳೆ. ದೇವತೆಗಳ ರಕ್ಷಣಾರ್ಥವಾಗಿ ದೇವಿ ಶಿವಭಕ್ತನಾದ ಮಹಿಷನನ್ನು ವಧಿಸುತ್ತಾಳೆ. ಇದಲ್ಲದೆ ಚಂಡ ಮುಂಡರನ್ನು ವಧಿಸಿ ಚಾಮುಂಡಿಯಾದಳೆಂಬ ಕಥೆಯೂ ಕಂಡುಬರುತ್ತದೆ. ಶಿಲ್ಪಪುರಾಣಗಳ ಪ್ರಕಾರ ಚಾಮುಂಡಿಯ ಅವತಾರದ ಉದ್ದೇಶವೆಂದರೆ ರಾಕ್ಷಸ ಸಂಹಾರ, ದೇವತೆಗಳ ರಕ್ಷಣೆ. ಈ ಪ್ರಧಾನ ಉದ್ದೇಶಕ್ಕೆ ಹೊರತಾದ ಯಾವ ಸಂಗತಿಗಳನ್ನೂ ನಾವು ಇಲ್ಲಿ

ನಿರೀಕ್ಷಿಸುವಂತಿಲ್ಲ. ಆದರೆ ಕನ್ನಡ ಜನಪದ ಪುರಾಣಕಾವ್ಯಗಳಲ್ಲಿ ಚಾಮುಂಡಿಯ ಜೀವನ ವೃತ್ತಾಂತ ಅತ್ಯಂತ ಕುತೂಹಲಕಾರಿಯೂ ವರ್ಣರಂಜಿತವೂ ಆಗಿ ಬೆಳೆದಿದೆ.

ಜನಪದ ಕಥೆಯ ಪ್ರಕಾರ ಉಜ್ಜಯಿನಿ ದೇಶದ ಬಿಜ್ಜಳರಾಯನಿಗೆ ಏಳು ಜನ ಹೆಣ್ಣುಮಕ್ಕಳಿರುತ್ತಾರೆ. ಅವರಲ್ಲಿ ಪಿರಿಯಾಪಟ್ಟಣದ ಉರಿಮಸಣಿ ಹಿರಿಯವಳು, ಚಾಮುಂಡಿ ಕಿರಿಯವಳು. ಇವರು ಏಳು ಜನವೂ ಕಾರಣಾಂತರದಿಂದ ಪರಸ್ಪರ ಜಗಳವಾಡಿಕೊಂಡು ಉತ್ತರದಿಂದ ಹೊರಟು ದಕ್ಷಿಣದ ಬೇರೆ ಬೇರೆ ಸ್ಥಳಗಳಲ್ಲಿ ನೆಲೆಗೊಂಡರು. ಕಿರಿಯವಳಾದ ಚಾಮುಂಡಿ ತಾನು ನೆಲೆಗೊಳ್ಳಲು ತಕ್ಕ ಸ್ಥಳಕ್ಕಾಗಿ ಶೋಧನೆ ಮಾಡುತ್ತ ಬರುತ್ತಿರುವಾಗ ಸಂಪದ್ಭರಿತ ಭೂಮಿ ಮಹಿಷಮಂಡಲ ಅವಳ ಕಣ್ಣಿಗೆ ಬಿತ್ತು. ಇದೇ ತನ್ನ ನೆಲೆಗೆ ಯೋಗ್ಯವಾದ ಸ್ಥಳವೆಂದು ನಿರ್ಧರಿಸಿ ಬಂದಾಗ ಈ ಮಂಡಲವನ್ನಾಳುತ್ತಿದ್ದ ಮಹಿಷನೆಂಬ ರಾಕ್ಷಸ ಅವಳನ್ನು ಇದಿರಿಸಲು ಬಂದ. ಬ್ರಹ್ಮನ ವರಬಲದಿಂದ ಕೊಬ್ಬಿದ್ದ ಅವನನ್ನು ಚಾಮುಂಡಿ ಇದಿರಿಸಲು ನಿಂತಾಗ ಅವಳ ಬೆವರಿನಿಂದ ಉತ್ತನಹಳ್ಳಿ ಮಾರಮ್ಮ ಹುಟ್ಟಿದಳು. ಈಕೆಯ ಸಹಾಯದಿಂದ ಚಾಮುಂಡಿ ಮಹಿಷನನ್ನು ಸಂಹರಿಸಿ ಮಹಿಷಮಂಡಲವನ್ನು ಸ್ವಾಧೀನಪಡಿಸಿಕೊಂಡು ಬೆಟ್ಟದ ಮೇಲೆ ನೆಲೆಗೊಂಡಳು. ಮಹಿಷ ಆಳುತ್ತಿದ್ದ ಮಹಿಷಮಂಡಲವೇ ಮಹಿಷಪುರಿಯಾಗಿ ಮಹಿಶೂರಾಗಿ ಈಗ ಮೈಸೂರಾಗಿದೆ. ಮೈಸೂರು ನಗರದೇವತೆಯೇ ಚಾಮುಂಡಿ.

ಜನಪದ ಸಾಹಿತ್ಯದಲ್ಲಿ ಚಾಮುಂಡಿಯನ್ನು ಚಾಮರಾಯರ ಮಗಳು ಎಂದೂ ಕರೆಯಲಾಗಿದೆ. ಮಲೆಯಮಾದೇಶ್ವರ ಜನಪದ ಮಹಾಕಾವ್ಯದಲ್ಲಿ ಶ್ರವಣ ದೊರೆಯ ಸಂಹಾರಕ್ಕಾಗಿ ಈಶ್ವರ ಭೂಮಿಗೆ ಬಂದಾಗ ಪಾರ್ವತಿಯೂ ಅವನೊಡನೆ ಕೈಲಾಸದಿಂದ ಬರುತ್ತಾಳೆ. ಮೈಸೂರಿಗೆ ಬಂದಾಗ ಮಹಿಷನನ್ನು ವಿಕಾರರೂಪದಿಂದ ಮರ್ದಿಸುತ್ತಾಳೆ. ಆಗ ಮಾದೇಶ್ವರ ಅವಳ ಉಗ್ರರೂಪವನ್ನು ನೋಡಲಾರದೆ ಅವಳನ್ನು ಬಿಟ್ಟು ಮುಂದಕ್ಕೆ ಹೊರಡುತ್ತಾನೆ. ಬೆಂಬಿಡದೆ ಬಂದ ಪಾರ್ವತಿಯನ್ನು ತಡೆದು, ತನ್ನ ಅಂಶ ನಂಜುಂಡನಾಗಿ ನಂಜನಗೂಡಿನಲ್ಲಿ ಹುಟ್ಟಿರುವುದಾಗಿಯೂ ಆ ಭೋಗನಂಜುಂಡನನ್ನು ಆಕೆ ಸೇರಬೇಕೆಂದೂ ಹೇಳಿ ಅವಳನ್ನು ಹಿಂದಕ್ಕೆ ಕಳಿಸುತ್ತಾನೆ. ಹಿಂತಿರುಗಿ ಬಂದ ಮೇಲಿನ ನಂಜುಂಡ ಚಾಮುಂಡಿಯರ ಪ್ರಣಯ ಪ್ರಸಂಗದ ರಸವತ್ತಾದ ಕಥೆಯನ್ನು ದೇವರಗುಡ್ಡರು, ನೀಲಗಾರರು, ತಂಬೂರಿಯವರು ಹೆಳವರು ಹಾಗೂ ಹೆಂಗಸರು ಹಾಡುತ್ತಾರೆ. ಇವರ ಸಾಹಿತ್ಯದ ಆಧಾರದಿಂದ ಚಾಮುಂಡಿಯ ಐತಿಹಾಸಿಕತೆಯನ್ನು ಸುಲಭವಾಗಿ ರೂಪಿಸಬಹುದಾಗಿದೆ.

ಅಲಿಖಿತ ಇತಿಹಾಸದ ಕಡೆಗೆ ಗಮನ ಹರಿಸಿದರೆ ಏಳುಮಲೆಯ ಮಾದೇಶ್ವರನಿಗೂ ನಂಜನಗೂಡಿನ ನಂಜುಂಡೇಶ್ವರನಿಗೂ ಚಾಮುಂಡಿಗೂ ಒಂದಲ್ಲ ಒಂದು ವಿಧದಲ್ಲಿ ಸಂಬಂಧವಿರುವಂತೆ ಕಂಡುಬರುತ್ತದೆ. ಅಲ್ಲದೆ ಇವರೆಲ್ಲರೂ ಸಮಕಾಲೀನರೆಂದು ಸ್ಪಷ್ಟವಾಗುತ್ತದೆ. ಚಾಮುಂಡಿ ಮಲೆಯ ಮಾದೇಶ್ವರನ ತಂಗಿಯೆಂದು ತಿಳಿಯುವುದರಿಂದಲೂ ಮಾದೇಶ್ವರ ಮಾದಿಗರವನೆಂದು ತಿಳಿಯುವುದರಿಂದಲೂ ಚಾಮುಂಡಿಯನ್ನು ನಂಜುಂಡನ ಪತ್ನಿಯರಾದ ದೇವೀರಮ್ಮ ಹಾಗೂ ಸೋಮಾಜಮ್ಮರು ಕೋಳಿ ಕುರಿ ತಿನ್ನುವ ಮುಂಡೆಯೆಂದು ಬಯ್ಯುವುದರಿಂದಲೂ ಚಾಮುಂಡಿ ಮಾದಿಗ ಕುಲದವಳು ಎಂಬುದು ಸ್ಪಷ್ಟವಾಗುತ್ತದೆ. ಲಿಂಗಾಯತರವನಾದ ನಂಜುಂಡ ಕುಂತೂರು ಮಠದಲ್ಲಿ ಮಾದೇಶ್ವರನ ಸಹಪಾಠಿ. ಮಾದೇಶ್ವರ ಶ್ರವಣ ದೊರೆಯನ್ನು ಸಂಹರಿಸಿ ಹದಿನಾಡನ್ನು ನಂಜುಂಡನಿಗೆ ಕೊಡುತ್ತಾನೆ. ನಂಜುಂಡ ಮಾದೇಶ್ವರನ ತಂಗಿಯಾದ ಚಾಮುಂಡಿಯೊಡನೆ ಗುಪ್ತಪ್ರಣಯವನ್ನು ಇಟ್ಟುಕೊಂಡಿದ್ದರಿಂದ ಇವರಿಬ್ಬರ ಮುಖದರ್ಶನವೇ ನನಗೆ ಬೇಡವೆಂದು ಮಾದೇಶ್ವರ ಕಂಪಣ ರಾಜ್ಯದ ಮೂಡ್ಲುಮಲೆಯಲ್ಲಿ 'ಏಕಾಂಗಿವಸ್ತು'ವಾಗಿ ನೆಲೆಗೊಳ್ಳುತ್ತಾನೆ. ಈ ಮೂವರೂ ಜನಪದ ಸಾಹಿತ್ಯದ ಪ್ರಕಾರ ಸಮಕಾಲೀನರಾಗಿದ್ದ ವಿಷಯ ಸತ್ಯವಾದುದಾದರೆ 16ನೆಯ ಶತಮಾನದ ಮಾದೇಶ್ವರನ ಕಾಲವೇ ನಂಜುಂಡ, ಚಾಮುಂಡಿಯರ ಕಾಲವೂ ಆಗುತ್ತದೆ.

ಐತಿಹಾಸಿಕ ದೃಷ್ಟಿಯಿಂದ ಅವಲೋಕಿಸಿದಾಗ ಚಾಮುಂಡಿ ಮೈಸೂರು ಅರಸರ ಪರವಾಗಿ ಬಹಳಷ್ಟು ಯುದ್ಧಗಳಲ್ಲಿ ಪಾಲ್ಗೊಂಡ ವೀರವನಿತೆಯಾಗಿದ್ದಿರಬಹುದು. ಪಿರಿಯಾಪಟ್ಟಣದ ಲಾವಣಿ, ಮಾಗಡಿ ಕೆಂಪೇಗೌಡನ ಲಾವಣಿಗಳಲ್ಲಿ ಈಕೆ ಮೈಸೂರರಸರ ಪರವಾಗಿ ನಂಜುಂಡನೊಡನೆ ಹೋಗಿ ಯುದ್ಧಮಾಡುವ ಸಂದರ್ಭಗಳ ವರ್ಣನೆ ಕಂಡುಬರುತ್ತದೆ. ಇವರಿಬ್ಬರ ಶಕ್ತಿಸಾಮರ್ಥ್ಯಗಳಿಗೆ ಕೃತಜ್ಞತೆಯ ರೂಪದಲ್ಲಿ ಮೈಸೂರು ಅರಸರು ತೋರಿಸಿದ ಭಕ್ತಿ ಇವರನ್ನು ದೇವರನ್ನಾಗಿಸಿದೆ. ಐತಿಹಾಸಿಕ ವ್ಯಕ್ತಿಗಳು ಹೀಗೆ ಭಕ್ತಿಗೌರವಗಳ ಪವಿತ್ರಾವರಣದಿಂದ ಪುರಾಣವ್ಯಕ್ತಿಗಳಾಗುವ ಸಂದರ್ಭಗಳು ನಮ್ಮಲ್ಲಿ ವಿರಳವೇನಲ್ಲ. *

**ಚಾಮುಂಡಿ ಬೆಟ್ಟ :** ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಅದರ ಆಗ್ನೇಯಕ್ಕೆ ಪೂರ್ವಪಶ್ಚಿಮವಾಗಿ ಹಬ್ಬಿ ನಿಂತಿರುವ ಬೆಟ್ಟ. ಸಮುದ್ರಮಟ್ಟದಿಂದ 1063ಮೀ. ಎತ್ತರವಾಗಿದೆ. ಬೆಟ್ಟದ ಮೇಲೆ ಚಾಮುಂಡೇಶ್ವರಿಯ ದೇವಾಲಯವಿರುವುದರಿಂದ ಈ ಬೆಟ್ಟಕ್ಕೆ ಆ ದೇವತೆಯ ಹೆಸರೇ ಬಂದಿದೆ. ಸುತ್ತಲೂ ಬಯಲಿದ್ದು, ಒಂಟಿಯಾಗಿ ನಿಂತಿರುವ ಕಡಿದಾದ ಈ ಬೆಟ್ಟ ಬಹು ದೂರದವರೆಗೂ ಗೋಚರಿಸುವುದಲ್ಲದೆ, ಬೆಟ್ಟದ ಮೇಲೆ ನಿಂತು ನೋಡಿದಾಗ ಮೈಸೂರಿನ ಹರವು ಮತ್ತು ಸುತ್ತಲಿನ ಪ್ರಕೃತಿ ಸೌಂದರ್ಯ ರಮ್ಯವಾಗಿ ಕಾಣಿಸುತ್ತದೆ. ಮೈಸೂರಿಗೆ ಬರುವ ಪ್ರವಾಸಿಗಳ ಮುಖ್ಯ ಆಕರ್ಷಣೆಗಳಲ್ಲಿ ಇದೂ ಒಂದು. ಬೆಟ್ಟದ ಮೇಲ್ಭಾಗವನ್ನು ಹತ್ತನೆಯ ಶತಮಾನದ ಹೊತ್ತಿಗಾಗಲೇ ಪುಣ್ಯ ಕ್ಷೇತ್ರವೆಂದು ಪರಿಗಣಿಸಲಾಗಿತ್ತು. ಇಲ್ಲಿರುವ ಆ ಕಾಲದ ಶಾಸನಗಳಲ್ಲಿ ಇದನ್ನು ಮಬ್ಬಲದ ತೀರ್ಥ ಅಥವಾ ಮಬ್ಬಳದ ತೀರ್ಥ ಎಂದು ಕರೆದಿದೆ. ಇಲ್ಲಿ ಹಲವರು ಸಿದ್ಧಿಪಡೆದರೆಂದು ಶಾಸನಗಳು ತಿಳಿಸುತ್ತವೆ. ಈಗ ಇಲ್ಲಿರುವ ಮಹಾಬಲೇಶ್ವರ ದೇವಸ್ಥಾನ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕಿಂತ ಮುಂಚೆಯೇ ನಿರ್ಮಿತವಾಗಿತ್ತು. ವಿಷ್ಣುವರ್ಧನನ ಕಾಲದಲ್ಲಿ 1128ರಲ್ಲಿ ಈ ಮಬ್ಬಳದ ತೀರ್ಥಕ್ಕೆ ದತ್ತಿಬಿಟ್ಟಿದ್ದ ಬಗ್ಗೆ ಶಾಸನವಿದೆ. ಆದರೆ ಅದರ ಮುಂದಿನ ಮಂಟಪವನ್ನು 17ನೆಯ ಶತಮಾನದಲ್ಲಿ ಕಟ್ಟಿಸಿದುದಾಗಿ ಅದರ ಕಂಬಗಳ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ. ಮೈಸೂರರಸರು ಬೆಟ್ಟದ ಮೇಲಿದ್ದ ಮಹಿಷಾಸುರಮರ್ದಿನಿಯನ್ನು ಚಾಮುಂಡೇಶ್ವರಿ ಎಂಬ ಹೆಸರಿನಿಂದ ತಮ್ಮ ಮನೆದೇವರಾಗಿ ಸ್ವೀಕರಿಸಿದ ಮೇಲೆ ಮಬ್ಬಳ ತೀರ್ಥಕ್ಕೆ ಚಾಮುಂಡಿ ಬೆಟ್ಟ ಎಂಬ ಹೆಸರು ಬಂದಿರಬೇಕು. ಅನಂತರ ಅಲ್ಲಿದ್ದ ದೇವಿಯ ಆಲಯಕ್ಕೆ ಪ್ರಾಮುಖ್ಯ ಹೆಚ್ಚಿ ದೇವಾಲಯ ವಿಸ್ತಾರವಾಗುತ್ತ ಹೋಯಿತು. ದೊಡ್ಡ ದೇವರಾಜ ಒಡೆಯರು ಬೆಟ್ಟಕ್ಕೆ ಸಾವಿರ ಮೆಟ್ಟಲುಗಳನ್ನು ಕಟ್ಟಿಸಿದರಲ್ಲದೆ, ಬೆಟ್ಟದ ಮೇಲೆ 700ನೆಯ ಮೆಟ್ಟಲಿನ ಹತ್ತಿರ ಅಲ್ಲಿಯೇ ಇದ್ದ ಬಂಡೆಗಲ್ಲೊಂದರಿಂದ ಬೃಹದಾಕಾರದ ನಂದಿಯನ್ನು ಕಡೆಸಿ ಪ್ರತಿಷ್ಠೆಮಾಡಿದರು. ತಲೆ ಎತ್ತಿ ಮಲಗಿರುವ ಈ ನಂದಿಯ ಮೂರ್ತಿ 16' ಎತ್ತರವಾಗಿದೆ; ದಷ್ಟಪುಷ್ಟವಾಗಿರುವಂತೆ ಕಂಡರಿಸಲ್ಪಟ್ಟಿದೆ. ಗಂಟೆಸರ, ಗೆಜ್ಜೆಸರ, ಗವುಸುಗಳಿಂದ ಅಲಂಕೃತವಾಗಿದ್ದು ಸಹಜ ಮುಖಲಕ್ಷಣಗಳಿಂದ ಕೂಡಿರುವ ಈ ನಂದಿ ತನ್ನ ಬೃಹದ್ಗಾತ್ರದಿಂದ ಅತ್ಯಂತ ಆಕರ್ಷಣೀಯವಾಗಿದೆ.



ಅರಮನೆಯ ಚಾವಣಿಯ ಮೇಲಿನಿಂದ ಕಾಣುವ ಚಾಮುಂಡಿ ಬೆಟ್ಟದ ಒಂದು ರಮ್ಯ ನೋಟ

ಚಾಮುಂಡೇಶ್ವರಿ ದೇವಾಲಯ ದ್ರಾವಿಡ ಶೈಲಿಯಲ್ಲಿ ಕಟ್ಟಿರುವ, ತಕ್ಕಮಟ್ಟಿಗೆ ದೊಡ್ಡದಾದ ದೇವಾಲಯ. ಮೂಲ ದೇವಾಲಯದ ನಿರ್ಮಾಣ ಕಾಲವನ್ನು ತಿಳಿಯಲು ಈಗ ಆಧಾರಗಳಿಲ್ಲ. ಮೈಸೂರು ಒಡೆಯರ ಕಾಲದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಇದನ್ನು ನವೀಕರಿಸಿ ಇದರ ಮಹಾದ್ವಾರಕ್ಕೆ ಒಂದು ಸುಂದರವಾದ ಗೋಪುರವನ್ನು ಕಟ್ಟಿಸಿದರು. ನಂಜನಗೂಡು, ಚಾಮರಾಜನಗರ,

ಮೈಸೂರುಗಳಲ್ಲಿ ಇವರು ಕಟ್ಟಿಸಿದ ಗೋಪುರಗಳಂತೆಯೇ ಇಟ್ಟಿಗೆ ಗಾರೆಯಲ್ಲಿ ಕಟ್ಟಿರುವ ಈ ಗೋಪುರವೂ ಮೇಲೆ ಹೋಗುತ್ತ ಕಿರಿದಾಗುವ ಏಳು ಅಂತಸ್ತುಗಳಿಂದ ಕೂಡಿದೆ. ಹೊರಮೈಯಲ್ಲಿ ಒಂದೊಂದು ಅಂತಸ್ತಿನಲ್ಲೂ ಕಿರುಗೋಪುರಗಳು ತುಂಬಿದ್ದು, ನಡುವಿನ ದ್ವಾರಗಳ ಇಕ್ಕೆಲಗಳಲ್ಲೂ ದ್ವಾರಪಾಲಕರೂ ಗೋಪುರದ ಎರಡೂ ಪಕ್ಕಗಳಲ್ಲಿ ಕುಳಿತಿರುವ ಮೂರ್ತಿಗಳೂ ತುದಿಯಲ್ಲಿ 7 ಕಳಶಗಳುಳ್ಳ ಶಿಖರವೂ ಇವೆ. ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ಅವರ ಪತ್ನಿಯರಾದ ದೇವಾಜಮ್ಮಣ್ಣಿ, ಚೆಲುವಾಜಮ್ಮಣ್ಣಿ ಮತ್ತು ಲಿಂಗಾಜಮ್ಮಣ್ಣಿಯವರ ಭಕ್ತವಿಗ್ರಹಗಳನ್ನು ಈ ದೇವಾಲಯದಲ್ಲಿಯೂ ನಿಲ್ಲಿಸಿದ್ದಾರೆ. ಈ ಮೂರ್ತಿಗಳ ಪೀಠದ ಮೇಲೆ ಅವರ ಹೆಸರುಗಳಿವೆ. ಇವು ಒಡೆಯರ ಕಾಲದ ಮೂರ್ತಿ ಶಿಲ್ಪಕ್ಕೆ ಮಾದರಿಯಾಗಿವೆ. ಸುಕನಾಸಿ ಮತ್ತು ನವರಂಗಗಳಿಗೆ ಹಾಕಿಸಿರುವ ಹಿತ್ತಾಳೆ ತಗಡು ಸಿಂಹವಾಹನವೇ ಮೊದಲಾದ ಹಲವು ವಾಹನಗಳು, ದೇವಿಯ ಸ್ತೋತ್ರಗಳನ್ನೊಳಗೊಂಡ ನಕ್ಷತ್ರಮಾಲಿಕೆ ಮತ್ತು ಇತರ ಆಭರಣಗಳು ಮುಂತಾದವು ದೇವಾಲಯಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ರಾಜಮನೆತನದ ಇತರರು ಮಾಡಿಸಿರುವ ಸೇವೆಗಳು.

ಆಶ್ವಯುಜ ಶುದ್ಧ ಹುಣ್ಣಿಮೆಯಂದು ನಡೆಯುವ ಚಾಮುಂಡೇಶ್ವರಿ ರಥೋತ್ಸವವೂ ಅದಾದ ಎರಡು ದಿವಸಗಳಿಗೆ ದೇವಾಲಯಕ್ಕೆ ಹತ್ತಿರದಲ್ಲಿರುವ ದೇವಿಕೊಳದಲ್ಲಿ ರಾತ್ರಿ ನಡೆಯುವ ತೆಪ್ಪೋತ್ಸವವೂ ಪ್ರಖ್ಯಾತವಾಗಿವೆ. ಈ ಸಮಯದಲ್ಲಿ ಸಹಸ್ರಾರು ಭಕ್ತರೂ ಪ್ರವಾಸಿಗಳೂ ಇಲ್ಲಿಗೆ ಬರುತ್ತಾರೆ.

ಬೆಟ್ಟದ ತುತ್ತತುದಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಕಟ್ಟಿಸಿದ ಒಂದು ಸುಂದರ ಅರಮನೆಯುಂಟು. ಪ್ರವಾಸಿಗಳಿಗೆ ಮತ್ತೊಂದು ಆಕರ್ಷಣೆ ಎಂದರೆ ದೇವಾಲಯಕ್ಕೆ ಹೋಗುವ ದಾರಿಯಲ್ಲಿರುವ 12' ಎತ್ತರದ ಮಹಿಷಾಸುರ ವಿಗ್ರಹ. ದೇವಸ್ಥಾನದ ಹತ್ತಿರದಲ್ಲಿ ಸಣ್ಣ ಊರೊಂದು ಬೆಳೆದಿದೆ.

ಚಾಮುಂಡಿ ಬೆಟ್ಟದಲ್ಲಿರುವ ಬೃಹತ್ ನಂದಿ

ಬೆಟ್ಟದ ಪೂರ್ವ ತುದಿಯಲ್ಲಿ, ಅದಕ್ಕೆ ಸೇರಿದಂತೆಯೇ ಲಲಿತಾದ್ರಿ ಎಂಬ ತಗ್ಗಾದ ಮೊರಡಿಯಿದೆ. ಪ್ರಶಾಂತ ವಾತಾವರಣದಿಂದ ಕೂಡಿರುವ ಈ ಎಡೆಯಲ್ಲಿ ಸುತ್ತಲೂ ಗಿಡಮರಗಳಿಂದಾವೃತವಾದ ಒಂದು ವಿಶ್ರಾಂತಿಗೃಹವಿದೆ. ಅದೀಗ ಹೋಟೆಲ್ ಆಗಿದೆ. ಲಲಿತಾದ್ರಿಯ ಮೂಲಕವೇ ಬೆಟ್ಟದ ಮೇಲಕ್ಕೆ ವಾಹನಸಂಚಾರವರ್ಮಾಗಳು ಹಾದುಹೋಗುತ್ತವೆ. ಹಿಂದಿನ ರಾಜರು ಕುದುರೆಯ ಮೇಲೆ ಬೆಟ್ಟವೇರುತ್ತಿದ್ದ ಸವಾರಿ ದಾರಿಯೊಂದು ಮೆಟ್ಟಲುಗಳ ಸಮೀಪದಲ್ಲಿದೆ. *

**ಚಾರ್ಮಾಡಿ :** ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಒಂದು ಗ್ರಾಮ. ಬೆಳ್ತಂಗಡಿಯ ಪೂರ್ವಕ್ಕೆ 19ಕಿಮೀ ದೂರದಲ್ಲಿ ಮಂಗಳೂರು-ಕಡೂರು ಹೆದ್ದಾರಿಯ ಮೇಲಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವದ ಗಡಿ ಭಾಗದಲ್ಲಿದ್ದು ಚಾರ್ಮಾಡಿಘಾಟ್ ರಸ್ತೆ ಇಲ್ಲಿಂದ ಪ್ರಾರಂಭವಾಗಿ 11ಕಿಮೀ ದೂರದವರೆಗೆ ಇದೆ. ಈ ರಸ್ತೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿಗೆ ಸಂಬಂಧ ಕಲ್ಪಿಸಿದೆ. ಚಾರುಮಡಿ ಅಂದರೆ ಸುಂದರವಾದ ಮಡಿಕೆಗಳನ್ನುಳ್ಳ ಘಟ್ಟಗಳ ಸಾಲು. ಇದೇ ಕಾರಣ ಈ ಸ್ಥಳಕ್ಕೆ ಚಾರ್ಮಾಡಿ ಎಂದು ಹೆಸರಾಗಿದೆ.

ಚಾರ್ಮಾಡಿಯ ಸುತ್ತುಮುತ್ತಲೂ ದಟ್ಟವಾದ ಅರಣ್ಯ ಪ್ರದೇಶವಿದ್ದು ಇಲ್ಲಿಂದ ಮರಗಳನ್ನು ಕಡಿದು ಲಾರಿಗಳಲ್ಲಿ ಮಂಗಳೂರಿಗೆ ಸಾಗಿಸುವರು. ಚಿಕ್ಕಮಗಳೂರಿನ ಕಡೆಯಿಂದ ಬರುವ ಕಾಫಿ ಮತ್ತು

ಚಾರ್ಮಾಡಿ ಘಾಟ್ ರಸ್ತೆಯ ಒಂದು ದೃಶ್ಯ

ಅದಿರನ್ನು ತುಂಬಿದ ಲಾರಿಗಳು ಇಲ್ಲಿಯ ಚೆಕ್‌ಪೋಸ್ಟ್‌ನ ಬಳಿ ತಂಗಿ, ಮಂಗಳೂರ ಕಡೆ ಮುಂದುವರಿಯುವುವು. ಇದನ್ನು ಕಾಫಿಘಾಟ್ ಎಂದೂ ಕರೆಯುವರು. ಈ ಘಾಟ್ ರಸ್ತೆ 1884ರಲ್ಲಿ ಪ್ರಾರಂಭವಾದಂದಿ ನಿಂದ ಚಾರ್ಮಾಡಿಗೆ ಅಧಿಕ ಪ್ರಾಮುಖ್ಯ ಬಂದಿದೆ. (ಟಿ.ಪಿ.ಎಸ್.ಆರ್.)

**ಚಾವುಂಡರಾಯ I :** ಪಶ್ಚಿಮ ಗಂಗರಾಜ 2ನೆಯ ಮಾರಸಿಂಹ (963-74) ಮತ್ತು 4ನೆಯ ರಾಚಮಲ್ಲ (974-99) ಇವರ ಸೇವೆಯಲ್ಲಿ ಯೋಧಾಗ್ರಣಿಯೂ ಮಂತ್ರಿಯೂ ಆಗಿದ್ದವ. ಈತ ಚಾವುಂಡರಾಯ ಪುರಾಣವೆಂದು ಪ್ರಸಿದ್ಧವಾಗಿರುವ ಕನ್ನಡ ಮಹಾಪುರಾಣವನ್ನು ರಚಿಸಿದ್ದಾನೆ.

ಜೈನಮತೀಯನಾದ ಈತನ ತಾಯಿತಂದೆಗಳು ಯಾರೆಂದು ತಿಳಿದುಬಂದಿಲ್ಲ. ಪಂಚಬಾಣನೆಂಬ ಕನ್ನಡ ಕವಿ ತನ್ನ ಭುಜಬಲಿ ಚರಿತೆಯಲ್ಲಿ (ಸು.1614) ಚಾವುಂಡರಾಯನ ತಾಯಿ ಕಾಳಲದೇವಿಯೆಂದೂ ಪತ್ನಿ ಅಜಿತಾದೇವಿಯೆಂದೂ ಹೇಳಿದ್ದಾನೆ. ಇದಕ್ಕೆ ಆಧಾರವೇನೋ ತಿಳಿಯದು. ಆದರೆ ಶ್ರವಣಬೆಳಗೊಳದಲ್ಲಿ ಜಿನಗೃಹವೊಂದನ್ನು ಮಾಡಿಸಿದ ಜಿನದೇವಣ ಚಾವುಂಡರಾಯನ ಮಗನೆಂಬುದಕ್ಕೆ ಶಾಸನಾಧಾರವಿದೆ. ಆರ್ಯಸೇನ ಅಥವಾ ಆರ್ಯನಂದಿಯ ಶಿಷ್ಯನಾದ ಅಜಿತಸೇನಾಚಾರ್ಯ ಈತನ ಗುರು. ಗೊಮ್ಮಟಸಾರದ ಕರ್ತೃ ನೇಮಿಚಂದ್ರಸಿದ್ಧಾಂತಚಕ್ರವರ್ತಿ ಇವನ ಇನ್ನೊಬ್ಬ ಗುರು.

ಚಾವುಂಡರಾಯನಿಗೆ, ನೇಮಿತೀರ್ಥಂಕರನ ಯಕ್ಷಿಯ ಹೆಸರಾದ ಚಾಮುಂಡಿ ಎಂಬುದರಿಂದ ಆ ಹೆಸರು ಬಂದಿರಬಹುದು. ಹೀಗೆಯೆ ಈತನಿಗೆ ಗೊಮ್ಮಟ, ಗೊಮ್ಮಟರಾಯ ಎಂಬ ಹೆಸರುಗಳು ನೇಮಿತೀರ್ಥಂಕರನ ಯಕ್ಷಿ ಕೂಷ್ಮಾಂಡಿ(ನಿ)ಯನ್ನು ಯಾವುದೋ ವಿಶೇಷ ಸಂದರ್ಭದಲ್ಲಿ ಹರಸಿಕೊಂಡದ್ದಕ್ಕಾಗಿಯೋ ಆಕೆಯ ವಿಶೇಷ ಪ್ರಸಾದಕ್ಕೆ ಪಾತ್ರನಾದದ್ದಕ್ಕಾಗಿಯೋ ಆ ಯಕ್ಷಿಯ ಪ್ರಾಕೃತ ರೂಪದ ಹೆಸರು ಗುಮ್ಮಡಿಯ ಮೂಲಕವಾಗಿ ಬಂದಿರಬೇಕು ಎಂದು ಊಹೆ. ದೊಡ್ಡಯ್ಯ, ಅನಂತಕವಿ, ದೇವಚಂದ್ರ ಇವರ ಕೃತಿಗಳಲ್ಲಿ ದೊರೆಯುವ ಚಾವುಂಡರಾಯ ಪರವಾದ ವೃತ್ತಾಂತದಲ್ಲಿ ಈತ ಈ ಕೂಷ್ಮಾಂಡಿ ಯಕ್ಷಿಯ ವಿಶೇಷ ಕೃಪೆಗೆ ಪಾತ್ರನಾಗಿಯೇ ಬಾಹುಬಲಿ ಮೂರ್ತಿಯನ್ನು ನಿಲ್ಲಿಸಿದನೆಂದು ಹೇಳಿರುವುದು ಕಂಡುಬರುತ್ತದೆ. ಚಾವುಂಡರಾಯ ಆ ಯಕ್ಷಿಯ ಆರಾಧಕನಾಗಿದ್ದಿರಬೇಕೆಂದೂ ಬಾಹುಬಲಿ ನಿರ್ಮಾಣ ಮೊದಲಾದ ಕಾರ್ಯಗಳಲ್ಲಿ ಆಕೆಯಿಂದ ಪ್ರೇರಣೆ ಪಡೆದನೆಂಬ ವಾರ್ತೆ ಜನಜನಿತವಾಗಿತ್ತೆಂದೂ ತೋರುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯ. ನೇಮಿಚಂದ್ರಯತಿ ಚಾವುಂಡರಾಯನ ಪ್ರತಿಬೋಧನಾರ್ಥವಾಗಿ ಬರೆದು, ಈತನ ನಾಮಾಂತರವಾದ ಗೊಮ್ಮಟ ಎಂಬುದರಿಂದಾಗಿಯೇ ಗೊಮ್ಮಟ ಸಾರ ಎಂದು ತನ್ನ ಗ್ರಂಥಕ್ಕೆ ಹೆಸರು ಕೊಟ್ಟನೆಂದು ಕೆಲವರು ಅಭಿಪ್ರಾಯ

ಪಡುತ್ತಾರೆ. ಚಾವುಂಡರಾಯನಿಗೆ ರಾಯ, ಅಣ್ಣ ಎಂಬ ಬಿರುದುಗಳಿದ್ದು ರಾಯ ಎಂಬುದು ಶ್ರವಣಬೆಳಗೊಳದಲ್ಲಿ ಗೊಮ್ಮಟಮೂರ್ತಿಯನ್ನು ಪ್ರತಿಷ್ಠಿಸಿದ್ದು ಮುಂತಾದ ಮಹಾಕಾರ್ಯಗಳಿಗೆ ಮೆಚ್ಚಿ ರಾಚಮಲ್ಲ ಈತನಿಗೆ ಕೊಟ್ಟ ಬಿರುದು ಎಂದು ತಿಳಿಯುತ್ತದೆ.

ಚಾವುಂಡರಾಯ ಇಮ್ಮಡಿ ಮಾರಸಿಂಹನ ಸಹಪಾಠಿಯೂ ಆತನ ವಿಶ್ವಾಸಪಾತ್ರನಾದ ಯೋಧನೂ ಆಗಿದ್ದು, ಅವನ ಅನೇಕ ವಿಜಯಗಳಲ್ಲಿ ಪ್ರಾಯಃ ಸೇನಾನಿಯಾಗಿ ಹೋರಾಡಿದಂತೆ ತೋರುತ್ತದೆ. ನಾಲ್ವಡಿ ರಾಚಮಲ್ಲನಲ್ಲಿ ಈತ ಮಂತ್ರಿಯಾಗಿದ್ದುದು ನಿಶ್ಚಯ (ಸ್ಥಿರ ಜಿನಶಾಸನೋದ್ಧರಣರಾದಿಯೊಳಾರನೆ ರಾಚಮಲ್ಲಭೂವರ ವರಮಂತ್ರಿ ರಾಯನೆ...) ರಕ್ಕಸಗಂಗನ ಆಳಿಕೆಯ ಅವಧಿಯಲ್ಲಿಯೂ ಈತ ಇದ್ದಿರಬಹುದಾದರೂ ರಾಜ್ಯಾರಂಭದ ಕೆಲವು ವರ್ಷಗಳವರೆಗೆ ಮಾತ್ರ ಆತನ ಸೇವೆಯಲ್ಲಿದ್ದು ಪ್ರಾಯಃ 990ರ ವೇಳೆಗೆ ತೀರಿಕೊಂಡಿರಬೇಕು ಎಂಬುದಾಗಿ ಊಹಿಸಲಾಗಿದೆ. ರಕ್ಕಸಗಂಗನ ಕಾಲದವನಾದ ಕವಿ 1ನೆಯ ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಚಾವುಂಡರಾಯ ತನ್ನ ಪೋಷಕನೆಂಬುದಾಗಿಯೂ ಅಜಿತಸೇನಾಚಾರ್ಯ ಆಚಾರ್ಯನೆಂಬುದಾಗಿಯೂ ಹೇಳಿಕೊಂಡಿರುವುದು ಹೀಗೆ ತಿಳಿಯಲು ಅವಕಾಶ ಮಾಡಿಕೊಡುತ್ತದೆ.

ಚಾವುಂಡರಾಯ ಇಮ್ಮಡಿ ಮಾರಸಿಂಹನ ವಿಜಯೋದ್ಯಮಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಗಳಿಸಿದ್ದು, ಚಾವುಂಡರಾಯ ಪುರಾಣದ ಆದ್ಯಂತ ಭಾಗಗಳ ಉಲ್ಲೇಖಗಳಿಂದಲೂ ಶ್ರವಣಬೆಳಗೊಳದ ಸು.983ರ ಒಂದು ಶಾಸನದಿಂದಲೂ ತಿಳಿದುಬರುತ್ತದೆ. ಗಂಗರಾಜ್ಯದ ವ್ಯವಸ್ಥೆ, ವಿಸ್ತರಣೆ, ಆಕ್ರಮಣಕಾರರ ವಿಧ್ವಂಸನ, ಅನ್ಯಕ್ರಾಂತ ದೇಶಭಾಗಗಳ ಸ್ವಾಧೀನತೆ ಇವುಗಳ ಸಾಧನೆಗೆ ಈತ ಪ್ರಮುಖ ಸಹಾಯಕನಾದನೆಂದು ಆ ವಿವರಣೆಗಳಿಂದ ತಿಳಿಯುತ್ತದೆ. ಛಲದಿಂದ ರಾಜಾಯ್ತನನ್ನು ಬಗಿದಿಕ್ಕಿದ ಭುಜಬಲ, ರಾಚನನ್ನು ಕೊಂದಂಥ ವೀರ, ತಾನಿದ್ದ ನೆಲೆಯಿಂದ ಗೋವಿಂದರಸನನ್ನು ಅಟ್ಟಿ ಓಡಿಸಿದ ಪರಾಕ್ರಮ, ಮಂಡಲ ರಾಜ್ಯಾಸಕ್ತನಾದ ಅಧಿಕನಾದ ರಾಚಯನನ್ನು ಕೊಂದ ಶೌರ್ಯ - ಇವನ್ನು ಅನೇಕರಿಗೆ ಅದ್ಭುತವೆನಿಸುವಂತೆ ವೀರಮಾರ್ತಾಂಡನು ಮಾಡಿ ತೋರಿಸಿದ ಎಂದು ಚಾವುಂಡರಾಯಪುರಾಣದ ಆದಿಭಾಗದಲ್ಲಿ ಹೇಳಿಕೊಂಡಿದ್ದಾನೆ. ಆಲಂಕಾರಿಕವಾಗಿ ಚಾವುಂಡರಾಯನ ಶೌರ್ಯವನ್ನು ಕೀರ್ತಿಸುವ ಭಾಗವೂ ಇಲ್ಲಿ ಬಂದಿದೆ. ಈ ಗ್ರಂಥದ ಅಂತ್ಯಭಾಗದಲ್ಲಿ, ಸಾಮಾನ್ಯ ರೀತಿಯಲ್ಲಿ ಈತನ ಗುಣಾತಿಶಯವನ್ನು ಕೀರ್ತಿಸಿರುವುದರ ಜತೆಗೆ, ಚಾರಿತ್ರಿಕ ವಿವರಗಳನ್ನೊಳಗೊಂಡ ಗದ್ಯಭಾಗದಲ್ಲಿ ಹೀಗೆ ಹೇಳಿದೆ: ಖೇಡಗ ಕಾಳಗದಲ್ಲಿ ವಜ್ಜಳದೇವನನ್ನು ಗೆದ್ದ ಸಾಹಸದಿಂದಾಗಿ ಸಮರ ಧುರಂಧರ ಎಂದೂ ಗೋನೂರಬಯಲಲ್ಲಿ ಎದುರಿಸಿ ನಿಂತು ನೊಳಂಬರೊಡನೆ ಹೋರಾಡಿ ಜಗದೇಕವೀರ ಮಾರಸಿಂಹನ ಮುಂದೆ ತನ್ನ ಶಕ್ತಿಯನ್ನು ಪ್ರದರ್ಶಿಸಿದ್ದರಿಂದ ವೀರಮಾರ್ತಾಂಡ ಎಂದೂ ಉಚ್ಚಂಗಿಯ ಕೋಟೆಯಲ್ಲಿ ರಾಜಾಯ್ತನೊಡನೆ ಒಬ್ಬನೇ ಕಾಳಗ ಕೊಟ್ಟದ್ದರಿಂದ ರಣರಂಗಸಿಂಗ ಎಂದೂ ಬಾಗೆಯೂರ ಕೋಟೆಯಲ್ಲಿ ತ್ರಿಭುವನವೀರನನ್ನು ಕೊಂದು ಗೋವಿಂದರನನ್ನು ಒಳಗೆ ಹೋಗುವಂತೆ ಮಾಡಿದ್ದರಿಂದ ವೈರಿಕುಲ ಕಾಲದಂಡ ಎಂದೂ ನೃಪಕಾಮನಕೋಟೆಯಲ್ಲಿ ರಾಜ, ಬಾಸ, ಸಿವರ, ಹೊಯ್ಸಳ ಕೂಣಾಂಕ ಮೊದಲಾದ ಕಲಿಗಳನ್ನು ಏಕಾಂಗ ಸಾಹಸದಿಂದ ಎದುರಿಸಿ ಹೋರಿದ್ದರಿಂದ ಭುಜವಿಕ್ರಮ ಎಂದೂ ತನ್ನ ತಮ್ಮನಾದ ನಾಗವರ್ಮನನ್ನು ಕೊಂದ ಹಗೆಗೆ ಚಲದಂಕಗಂಗ ಗಂಗರ ಭಟ ಎನಿಸಿದ ಮುದುರಾಚಯನನ್ನು ಕೊಂದದ್ದರಿಂದ ಸಮರ ಪರಶುರಾಮ ಎಂದೂ ಜಟ್ಟಿಗರನ್ನು ಅಟ್ಟಿದ ದಂಡಿನಲ್ಲಿಯೇ ಸಂಪೂರ್ಣವಾಗಿ ನಿವಾರಿಸಿದ್ದರಿಂದ ಪ್ರತಿಪಕ್ಷ ರಾಕ್ಷಸ ಎಂದೂ ವೀರಭಟಕೋಟಿಯನ್ನು ನಿಶ್ಶೇಷವಾಗಿ ಕೊಂದದ್ದರಿಂದ ಭಟಮಾರಿಯೆಂದೂ ನಿಶ್ಶಂಕಾದಿ ಗುಣಗಳನ್ನು ಕಾಪಾಡಿಕೊಳ್ಳುವುದರಲ್ಲಿಯೇ ಆಸಕ್ತನಾಗಿದ್ದುದರಿಂದ ಗುಣಮ ಕಾಮ ಎಮೂ ಸತ್ಯತ್ಯಾಗಾದಿಸಮನ್ವಿತನಾದುದರಿಂದ ಸಮ್ಯಕ್ತ್ವ ರತ್ನಾಕರ ಎಂದೂ ಪರಾಂಗನೆ ಪರದ್ರವ್ಯಗಳಿಗೆ ವಿಮುಖನಾದುದರಿಂದ ಶೌಚಾಭರಣ ಎಂದೂ ಪರಿಹಾಸಕ್ಕಾದರೂ ಸುಳ್ಳಾಡುವವನಲ್ಲವಾದ್ದರಿಂದ ಸತ್ಯಯುಧಿಷ್ಠಿರ ಎಂದೂ ಅತಿಪ್ರಚಂಡರಾದ ವೀರ ಮಾಂಡಲಿಕರಲ್ಲಿ ತಲೆವಣಿಯಾದ್ದರಿಂದ ಸುಭಟ ಚೂಡಾಮಣಿ ಎಂದೂ ಹೇಳುವ ಈ ಅಂಕಮಾಲೆಗಳು ದಿಗ್ಗಜಗಳ ಪುಟಾಪುಟಗಳಲ್ಲಿಯೂ ಸಕಲ ಕುಲಾಚಲಕೂಟಗಳಲ್ಲಿಯೂ ನೆಲಸಿದುವು.

ಶ್ರವಣಬೆಳಗೊಳದ ಶಾಸನದಲ್ಲಿಯೂ ಮೇಲಿನ ಸಾಹಸಗಳಲ್ಲಿ ಒಂದೆರಡು ಉಲ್ಲೇಖವಾಗಿವೆ. ಇಲ್ಲಿ ಈತನ ಪೌರುಷದ ಆಲಂಕಾರಿಕ ವರ್ಣನೆಯೇ ಹೆಚ್ಚು. ಈತ ಹೋರಾಡಿದ ವ್ಯಕ್ತಿಗಳ ಹಾಗೂ ಸ್ಥಳಗಳ ವಿಚಾರ ವಿಶದವಾಗಿ ಇತಿಹಾಸದಿಂದ ತಿಳಿದುಬಂದಿಲ್ಲ. ವಜ್ಜಳದೇವನೆಂಬುವನು ಮುಮ್ಮಡಿ ಕೃಷ್ಣನ ಮಾಂಡಲಿಕನಾಗಿ ಪುಲಿನಾಡನ್ನು ಆಳುತ್ತಿದ್ದು ಬಳಿಕ ಪರಮಾರರ ಪಕ್ಷಕ್ಕೆ ಸೇರಿಕೊಂಡವನಿರಬಹುದು. ಇಲ್ಲಿನ ನೊಳಂಬ ಬಹುಶಃ 2ನೆಯ ಪೊಳಲ್ಚೋರನೋ ವೀರಮಹೇಂದ್ರನೋ ಆಗಿರಬೇಕು, ಚಾಳುಕ್ಯ ವಂಶದ ರಾಜಾದಿತ್ಯ ಇಲ್ಲಿನ ರಾಜಾಯ್ತ ಇರಬಹುದು ಮುಂತಾಗಿ ಊಹಿಸಲಾಗಿದೆ.

ಈತನ ಧರ್ಮಶ್ರದ್ಧೆಯ ಸಾಕ್ಷ್ಯಗಳನ್ನು ಶ್ರವಣಬೆಳಗೊಳದಲ್ಲಿ ಇಂದೂ ನಾವು ಕಾಣಬಹುದಾಗಿದೆ. ಇಲ್ಲಿಯ ಇಂದ್ರಗಿರಿಯ ಬೆಟ್ಟದ ಮೇಲೆ ಪ್ರತಿಷ್ಠಿಸಿರುವ ಮಹೋನ್ನತ ಗೊಮ್ಮಟವಿಗ್ರಹ ಈತನ ಕೀರ್ತಿಗೆತ್ತಿದ ಕಳಸವಾಗಿದೆ. ಈ ವಿಗ್ರಹದ ಉಭಯ ಪಾರ್ಶ್ವಗಳಲ್ಲಿಯೂ ಹುತ್ತದ ಮೇಲೆ ಕನ್ನಡ, ತಮಿಳು ಮತ್ತು ಮರಾಠಿ ಭಾಷೆಗಳಲ್ಲಿ, ಚಾವುಂಡರಾಯ ಆ ಮೂರ್ತಿಯನ್ನು ಮಾಡಿಸಿದ್ದಾಗಿ ತಿಳಿಸುವ ಶಿಲಾಲೇಖಗಳಿವೆ. ಬೊಪ್ಪಣಪಂಡಿತನ ಗೊಮ್ಮಟಸ್ತುತಿ ಶಾಸನದಲ್ಲಿಯೂ ನೇಮಿಚಂದ್ರ ಯತಿಯ ಗೊಮ್ಮಟಸಾರದಲ್ಲಿಯೂ ಈ ಸಂಗತಿಯನ್ನು ಘೋಷಿಸಿದೆ. ಪೌದನಪುರದಲ್ಲಿ ಭರತಚಕ್ರವರ್ತಿನಿರ್ಮಿತವಾದ ಬಾಹುಬಲಿಮೂರ್ತಿಯನ್ನು ನೋಡಬೇಕೆಂದು ಚಾವುಂಡರಾಯನಿಗೆ ಅಭಿಲಾಷೆಯುಂಟಾಗಿ ಅಲ್ಲಿಗೆ ಹೊರಡಲು ಸಿದ್ಧನಾದಾಗ ತಿಳಿದವರು ಅದು ಈತನ ಶಕ್ತಿಗೆ ಮೀರಿದ್ದೆಂದು ಹೇಳಿದರು. ಆಗ ಅದೇ ರೀತಿಯ ಮೂರ್ತಿಯನ್ನು ತಾನೂ ಮಾಡಿಸಬೇಕೆಂದು ನಿಶ್ಚಯಿಸಿ ಶ್ರವಣಬೆಳಗೊಳದ ಬೆಟ್ಟದ ಮೇಲೆ ಈ ಗೊಮ್ಮಟಮೂರ್ತಿಯನ್ನು ಯತ್ನ ಪೂರ್ವಕವಾಗಿ ಮಾಡಿಸಿದ. ಇದು ಬೊಪ್ಪಣಪಂಡಿತನ ವಿವರಣೆಯ ಸಾರ. ಇದೇ ವಿಷಯ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ದೊಡ್ಡಯ್ಯನ ಭುಜಬಲಿಶತಕ (ಸು.1550), ಪಂಚಬಾಣನ ಭುಜಬಲಿಚರಿತೆ (ಸು.1614) ಮೊದಲಾದವುಗಳಲ್ಲಿಯೂ ಬಂದಿದೆ. ಚಾವುಂಡರಾಯ ಬಾಹುಬಲಿ ವಿಗ್ರಹವನ್ನು ಪ್ರತಿಷ್ಠಿಸಿ ಅಭಿಷೇಕ ಮಾಡಿದ್ದನ್ನೂ ಅದರ ಪೂಜಾವ್ಯವಸ್ಥೆಗಾಗಿ ಹಲವಾರು ಗ್ರಾಮಗಳನ್ನು ದತ್ತಿ ಬಿಟ್ಟಿದ್ದನ್ನೂ ದೊಡ್ಡಬೆಟ್ಟದ ಕೆಳಗೆ ಗ್ರಾಮವೊಂದನ್ನು ಕಟ್ಟಿಸಿಕೊಟ್ಟದ್ದನ್ನೂ ಇಂಥ ಧರ್ಮಕಾರ್ಯವನ್ನು ನಡೆಸಿದ್ದಕ್ಕೆ ಸುಪ್ರೀತನಾದ ರಾಜಮಲ್ಲ ದೊರೆಯು ಚಾವುಂಡರಾಯನಿಗೆ ರಾಯನೆಂಬ ಬಿರುದು ಕೊಟ್ಟಿದ್ದನ್ನೂ ಭುಜಬಲಿ ಚರಿತೆಯಲ್ಲಿ ಹೇಳಿದೆ. ಗೊಮ್ಮಟಸಾರದ (ಸು.960) ಕರ್ಮಕಾಂಡದ ಕೆಲವು ಗಾಥೆಗಳು ಈತನ ಗುಣಾತಿಶಯದ ಸಂಕೀರ್ತನೆಯನ್ನು ಒಳಗೊಂಡಿವೆ. ಇದರ 968ನೆಯ ಗಾಥೆ, ನೇಮಿಚಂದ್ರನಿಂದ ಗೊಮ್ಮಟಸಾರವನ್ನು ಬರೆಸಿದ್ದು, ಚಾವುಂಡರಾಯ ಬಸದಿಯಲ್ಲಿ ನೇಮಿನಾಥ ಜಿನಬಿಂಬವನ್ನು ಪ್ರತಿಷ್ಠಿಸಿದ್ದು ಹಾಗೂ ಭವ್ಯವಾದ ಗೊಮ್ಮಟೇಶ್ವರ ವಿಗ್ರಹವನ್ನು ಸ್ಥಾಪಿಸಿದ್ದು ಇವನ್ನು ಸೂಚಿಸುತ್ತದೆಂದು ವಿದ್ವಾಂಸರು ಭಾವಿಸಿದ್ದಾರೆ. 969ನೆಯ ಗಾಥೆಯಲ್ಲಿಯೂ ಗೊಮ್ಮಟಮೂರ್ತಿ ನಿರ್ಮಾಣದ ಪ್ರಸ್ತಾಪವಿದೆ. 970-71ನೆಯ ಗಾಥೆಗಳಲ್ಲಿ ಆತನಿಂದಾದ ಈಷತ್ಪ್ರಾಗ್ಭಾರ ಜಿನಭವನದ ಹಾಗೂ ಸ್ತಂಭದ ಉಲ್ಲೇಖವಿದೆ. ಇವು ಚಾವುಂಡರಾಯ ಬಸದಿ ಮತ್ತು ತ್ಯಾಗದ ಬ್ರಹ್ಮದೇವರ ಕಂಬ ಇವನ್ನು ಕುರಿತಿವೆಯೆಂದು ಅಭಿಪ್ರಾಯಪಡಲಾಗಿದೆ. ಅಖಂಡ ಬಾಗಿಲು ಮತ್ತು ಗುಳ್ಳಕಾಯಜ್ಜಿ ಪ್ರತಿಮೆ ಇವೂ ಚಾವುಂಡರಾಯಕೃತವೆಂದು ಪ್ರತೀತಿಯಿದೆ.

ಹೀಗೆ ಯುದ್ಧವೀರನೂ ಧರ್ಮವೀರನೂ ಆಗಿದ್ದ ಚಾವುಂಡರಾಯ ಕವಿಯೂ ಕವಿಜನಪೋಷಕನೂ ಆಗಿ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸ್ಮರಣೀಯನಾಗಿದ್ದಾನೆ. ರನ್ನ ಮೊದಲು ಅಜಿತಸೇನಾಚಾರ್ಯರಲ್ಲಿ ಚಾವುಂಡರಾಯನೊಡಗೂಡಿ ವಿದ್ಯಾಭ್ಯಾಸ ಮಾಡಿ, ಅನಂತರ ಸ್ವಲ್ಪಕಾಲ ಈತನ ಆಶ್ರಯದಲ್ಲಿದ್ದಿರಬಹುದು ಎಂದು ತೋರುತ್ತದೆ. ಚಾವುಂಡರಾಯನ ಶೌರ್ಯ ಔದಾರ್ಯಗಳನ್ನು ಅಜಿತಪುರಾಣದಲ್ಲಿಯೂ ಗದಾಯುದ್ಧದಲ್ಲಿಯೂ ಸ್ಪಷ್ಟವಾಗಿ ಕೀರ್ತಿಸಿದೆ. ಶ್ರವಣಬೆಳಗೊಳದ ಹೆಬ್ಬಂಡೆಯ ಮೇಲೆ ಈ ಇಬ್ಬರ ಹೆಸರುಗಳನ್ನೂ ಒಂದೆಡೆಗೆ ಒಟ್ಟಿಗೆ ಕೆತ್ತಿರುವುದು, ರನ್ನ 989ರಲ್ಲಿ ಹುಟ್ಟಿದ್ದ ತನ್ನ ಮಗನಿಗೆ ಚಾವುಂಡರಾಯನ 'ರಾಯ' ಎಂಬ ಹೆಸರನ್ನಿಟ್ಟುದು ಇವರ ಮಧುರ ಮೈತ್ರಿಯ ದ್ಯೋತಕವಾಗಿದೆ. ರನ್ನನ ಅನುಪಲಬ್ಧಕೃತಿಗಳಾದ ಚಕ್ರೇಶ್ವರಚರಿತ, ಪರಶುರಾಮಚರಿತಗಳಲ್ಲಿ ಯಾವುದಾದರೂ ಚಾವುಂಡರಾಯಪರವಾದುದಾಗಿರಬೇಕು ಎಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. 1ನೆಯ ನಾಗವರ್ಮನೂ ಛಂದೋಂಬುಧಿಯಲ್ಲಿ ಚಾವುಂಡರಾಯನ ಆಶ್ರಯವನ್ನು ಹೇಳಿಕೊಂಡಿದ್ದಾನೆ. ನೇಮಿಚಂದ್ರಯತಿ ಚಾವುಂಡರಾಯನ ಪ್ರೇರಣೆಯಿಂದ ಆತನ ಪ್ರತಿಬೋಧನಾರ್ಥವಾಗಿಯೇ ಗೊಮ್ಮಟಸಾರ, ತ್ರಿಲೋಕಸಾರ ಎಂಬ ಗ್ರಂಥಗಳನ್ನು ಬರೆದುದಾಗಿ ಆ ಗ್ರಂಥಗಳ ಟೀಕಾಕರ್ತರು ಹೇಳಿದ್ದಾರೆ. (ಟಿ.ವಿ.ವಿ.)

ಚಾವುಂಡರಾಯ ತ್ರಿಷಷ್ಟಿಲಕ್ಷಣಮಹಾಪುರಾಣ ಎಂಬ ಗ್ರಂಥವನ್ನು ಬರೆದಿದ್ದಾನೆ (978). ಇದಕ್ಕೆ ಚಾವುಂಡರಾಯಪುರಾಣ ಎಂಬ ಹೆಸರೂ ರೂಢಿಯಲ್ಲಿದೆ. ಇದಲ್ಲದೆ ಚಾರಿತ್ರಸಾರ ಎಂಬ ಸಂಸ್ಕೃತ ಗ್ರಂಥವೂ ಗೊಮ್ಮಟಸಾರದ ವೀರಮತ್ತಂಡೀ (ವೀರಮಾರ್ತಂಡೀ) ಎಂಬ ದೇಶೀವೃತ್ತಿಯೂ (ಪ್ರಾಯಶಃ ಕನ್ನಡ ವೃತ್ತಿ) ಈತನ ರಚನೆಗಳೆಂದು ತಿಳಿಯಲಾಗಿದೆ. ವೀರಮತ್ತಂಡೀ ದೊರೆತಿಲ್ಲ. ಚಾರಿತ್ರಸಾರ ದೊರೆತಿದ್ದು ಇದು ಗೃಹಸ್ಥರ ಮತ್ತು ಯತಿಗಳ ಚಾರಿತ್ರವನ್ನು ಸಂಗ್ರಹವಾಗಿ ವಿವರಿಸುವ ಗ್ರಂಥವಾಗಿದೆ. ತ್ರಿಷಷ್ಟಿಲಕ್ಷಣಮಹಾಪುರಾಣ 24 ತೀರ್ಥಂಕರರೇ ಮೊದಲಾದ 63 ಶಲಾಕಾಪುರುಷರ ಚರಿತ್ರೆ ನಿರೂಪಿತವಾಗಿರುವ ಜೈನರ ಪವಿತ್ರ ಧರ್ಮಗ್ರಂಥ. ಕನ್ನಡದ ಉಪಲಬ್ಧ ಪ್ರಾಚೀನ ಗದ್ಯಗ್ರಂಥಗಳಲ್ಲಿ ಎರಡನೆಯದು. ಜಿನಸೇನಾಚಾರ್ಯರು ಮತ್ತು ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ಬರೆದ ಮಹಾಪುರಾಣ ಈ ಗ್ರಂಥಕ್ಕೆ ಆಕರ. ಕೆಲಮಟ್ಟಿಗೆ ಪಂಪನ ಆದಿಪುರಾಣದ ಪ್ರಭಾವವೂ ಇದರ ಮೇಲೆ ಆಗಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಗ್ರಂಥ ವಿಶೇಷತಃ ಗದ್ಯರೂಪದಲ್ಲಿದೆ. ಆದಿ ಅಂತ್ಯಗಳಲ್ಲಿಯೇ ಅಲ್ಲದೆ ಅಲ್ಲಲ್ಲಿ ಒಂದೆರಡು ಪದ್ಯಗಳೂ ದೊರೆಯುತ್ತವೆ. ಗ್ರಂಥದ ನಡುವೆ ಅಲ್ಲಲ್ಲಿ ಬರುವ ಪ್ರಾಕೃತ ಹಾಗೂ ಸಂಸ್ಕೃತ ರಚನೆಗಳು ಈತನ ವಿದ್ವತ್ತು ಹಾಗೂ ಬಹುಭಾಷಾವಿದತ್ವಕ್ಕೆ ಸಾಕ್ಷಿಯಾಗಿವೆ. ಇದರಲ್ಲಿ ಅಂತರ್ಗತವಾಗಿರುವ ರಾಮಾಯಣದ ಕಥೆ ಜೈನ ರಾಮಾಯಣಗಳ ಪರಂಪರೆಯಲ್ಲಿ ಗುಣಭದ್ರರ ಸಂಪ್ರದಾಯಕ್ಕೆ ಸೇರಿದ್ದು ಆ ಪರಂಪರೆಯ ಕೆಲವು ಲಕ್ಷಣಗಳನ್ನು ತಿಳಿದುಕೊಳ್ಳುವಲ್ಲಿ ಉಪಯುಕ್ತವಾಗಿದೆ. ಮೂಲದ ಮಹಾಪುರಾಣದಲ್ಲಿರುವ ಕಾವ್ಯ ಸತ್ವ ಇಲ್ಲಿ ಬಂದಿಲ್ಲ. ಜೈನತತ್ವನಿರೂಪಣೆ ಸರಳವಾಗಿ ಸಂಕ್ಷೇಪವಾಗಿ, ತತ್ವವಿಚಾರಗಳು ಬಂದಾಗ ಕೆಲವೊಮ್ಮೆ ವಿವರವಾಗಿ ಬಂದಿವೆ. ವರ್ಣನೆಗಳಿಗಿಂತ ಕಥೆ ಹೇಳುವಲ್ಲಿ ಇವನ ಗದ್ಯಕ್ಕೆ ಅಲ್ಲಲ್ಲಿ ಕಾಂತಿ ಬಂದಿದೆ. ಇದರ ಗದ್ಯ ಭಾಷಾಶಾಸ್ತ್ರ ದೃಷ್ಟಿಯಿಂದ ಪರಿಶೀಲನೆಗೆ ಯೋಗ್ಯವಾಗಿದೆ. ಕಥೆ, ಭಾಷೆ, ಶೈಲಿ ಮತ್ತು ಜೀವನದರ್ಶನ ಈ ದೃಷ್ಟಿಗಳಿಂದ ಇದು ತೀರ ಸಾಮಾನ್ಯವಾದ ಕೃತಿಯಾಗಿ ಕಂಡುಬಂದರೂ ಕನ್ನಡದ ಪ್ರಾಚೀನ ಗದ್ಯ ಗ್ರಂಥಗಳಲ್ಲಿ ಒಂದು ಎಂಬ ದೃಷ್ಟಿಯಿಂದ ಗಮನಾರ್ಹವಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಕವಿಯಾಗಿ, ಕವಿಪೋಷಕನಾಗಿ, ಲೋಕೋತ್ತರವಾದ ಮಹಾಶಿಲ್ಪಕ್ಕೆ ಕಾರಣನಾದ ಮಹಾನುಭಾವನಾಗಿ, ಶೌರ್ಯ, ಶುಚಿತ್ವಗಳಿಗೆ ಹೆಸರಾದ ಮಹಾವ್ಯಕ್ತಿಯಾಗಿ ಮೆರೆದ ಚಾವುಂಡರಾಯನ ಹೆಸರು ಇಂದಿಗೂ ಶಾಶ್ವತವಾಗಿ ಉಳಿದುಬಂದಿದೆ. (ಜಿ.ಎಸ್.ಎಸ್.ಐ.,ಟಿ.ವಿ.ವಿ.,ಕೆ.ಎನ್.ಎಸ್.)

**ಚಾವುಂಡರಾಯ II :** ಸು.1025. ಬ್ರಾಹ್ಮಣ ಕವಿ. ಲೋಕೋಪಕಾರ ಎಂಬ ಶಾಸ್ತ್ರಗ್ರಂಥದ ಕರ್ತೃ. ಈತ ಚಾಳುಕ್ಯ ಚಕ್ರವರ್ತಿ ಜಯಸಿಂಹನಲ್ಲಿ (1015-44) ಸರ್ವಾಧಿಕಾರಿಯಾಗಿದ್ದನೆಂದೂ ಆತನಿಂದ 'ಮಹಾಬಳಿಯ ಗ್ರಾಹಕತನ' ಪಡೆದನೆಂದೂ ಈತನ ಗ್ರಂಥದಿಂದ ತಿಳಿದುಬರುತ್ತದೆ. ಈತನ ಮುತ್ತಜ್ಜ ಶಂಕರಭಟ್ಟ, ಅಜ್ಜ ಪಂಗೊಂಡ ಭಟ್ಟ, ತಂದೆ ಭಟ್ಟಪಾರ್ಯ, ತಾಯಿ ಮಲ್ಲಿಕಬ್ಬೆ, ಅಚಳಿತವಚನ, ಧರ್ಮಧರ್ಮಾತ್ಮಜ, ದಾನವಿನೋದ, ಸರಸ್ವತೀಮುಖತಿಳಕ ಜಯಬಂಧುನಂದನ, ಬುಧಕಲ್ಪವೃಕ್ಷ, ಕಾವ್ಯವಿಳಾಸ ಮೊದಲಾದವು ಈತನಿಗಿದ್ದ ಬಿರುದುಗಳು.

ಲೋಕೋಪಕಾರ 12 ಆಶ್ವಾಸಗಳುಳ್ಳ ಪದ್ಯಗ್ರಂಥ. ಇದಕ್ಕೆ ಜನೋಪಕಾರ ಎಂಬ ಹೆಸರೂ ಇದೆ. ಇದು ಕನ್ನಡದಲ್ಲಿ ದೊರಕುವ ಮೊಟ್ಟಮೊದಲ ಶಾಸ್ತ್ರಗ್ರಂಥವೂ ಹೌದು. ಇದರಲ್ಲಿ ಪಂಚಾಂಗಫಲ, ಜ್ಯೋತಿಷ, ವಾಸ್ತು, ಉತ್ಪಾತಶಾಂತಿ, ಉದಕಾರ್ಗಳ, ವೃಕ್ಷಾಯುರ್ವೇದ, ಗಂಧಯುಕ್ತಿ, ಸೂಪ, ವೈದ್ಯ (ಗೋವೈದ್ಯ, ಅಶ್ವವೈದ್ಯ, ಗಜವೈದ್ಯ, ವಿಷವೈದ್ಯ), ಸರ್ವಲಕ್ಷಣ ಪರಿಜ್ಞಾನ, ಶಕುನ ಮುಂತಾದ ವಿಷಯಗಳ ವಿಸ್ತಾರವಾದ ನಿರೂಪಣೆಯಿದೆ. ವೈದ್ಯಭಾಗ ಆಯಾ ವಿಷಯಗಳಿಗೆ ಸಂಬಂಧಪಟ್ಟ ಬಹು ಸಂಬಂಧ ಚಿಕಿತ್ಸೆಗಳನ್ನು ನಿರೂಪಿಸುತ್ತದೆ. ಒಂದು ರೀತಿಯಲ್ಲಿ ಈ ಗ್ರಂಥವನ್ನು ಆ ಕಾಲದ ಸಾಮಾನ್ಯ ಗೃಹವಿಶ್ವಕೋಶವೆಂದು ಹೇಳಬಹುದು. ಅನಂತರ ಬಂದ ಶ್ರೀಧರಾಚಾರ್ಯ, ಕೀರ್ತಿವರ್ಮ ಮುಂತಾದ ಶಾಸ್ತ್ರಗ್ರಂಥಕಾರರಿಗೆ ಈತನ ಗ್ರಂಥವೇ ಪ್ರೇರಕವಾಗಿರುವಂತೆ ತೋರುತ್ತದೆ. (ಜಿ.ವಿ.ಎಸ್.ಎನ್.ಎಆರ್.)

**ಚಾಳುಕ್ಯ ವಂಶ** : ಕರ್ನಾಟಕದಲ್ಲಿ ಆಳಿದ ಒಂದು ಪ್ರಖ್ಯಾತ ರಾಜಮನೆತನ. ಈ ಮನೆತನದ ಅರಸರು ಸತ್ವಯುತ ಸಾಮ್ರಾಜ್ಯವನ್ನು ಕಟ್ಟಿ, ನಾಲ್ಕು ಶತಮಾನಗಳಿಗೂ ಹೆಚ್ಚು ಕಾಲ ನಾಡಿನ ಇತಿಹಾಸವನ್ನು ರೂಪಿಸಿ ಅಜೇಯವಾದ ಕರ್ನಾಟಕಬಲವಾಗಿ ಕೀರ್ತಿ ಪಡೆದರು. ಕರ್ನಾಟಕದ ಸಾಹಿತ್ಯ ಕಲೆಗಳಿಗೆ ಅಮಿತವಾದ ಪ್ರೋತ್ಸಾಹ ನೀಡಿದರು. ಇವರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ವಿಶಿಷ್ಟವಾದ ವಾಸ್ತು ಹಾಗೂ ಶಿಲ್ಪಕಲೆ ರೂಪುಗೊಂಡಿತು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ ಈ ಅರಸರ ಮನೆತನ ಭಾರತದಲ್ಲೇ ಪ್ರಬಲ ಅರಸು ಮನೆತನಗಳಲ್ಲೊಂದೆಂದು ಪರಿಗಣಿತವಾಗಿದೆ. ಕನ್ನಡಿಗರಾದ ಇವರು ತಮ್ಮ ಪ್ರಭಾವವನ್ನು ಕರ್ನಾಟಕದ ಹೊರಗೂ ವಿಸ್ತರಿಸಿದರು. ಭಾರತದಾದ್ಯಂತವಲ್ಲದೆ ಆಗ್ನೇಯ ಏಷ್ಯವೇ ಮುಂತಾದ ಇತರ ಕಡೆಗಳಿಗೂ ಕನ್ನಡ ನಾಡಿನ ಸಂಸ್ಕೃತಿ ಹರಡುವಂತೆ ಮಾಡಿದರು. ಈ ಮನೆತನದ ನಾನಾ ಶಾಖೆಗಳಲ್ಲಿ ಬಾದಾಮಿ, ಕಲ್ಯಾಣ, ವೆಂಗಿ, ವೇಮುಲವಾಡ ಪ್ರಸಿದ್ಧವಾದವು. ಈ ಶಾಖೆಗಳ ಅರಸರಲ್ಲದೆ ಇನ್ನೂ ನಾನಾ ಶಾಖೆಗಳವರು ಕರ್ನಾಟಕದ ಹೊರಗೂ ಆಳಿದರು.

ಈ ವಂಶದ ಹೆಸರು ಬಾದಾಮಿಯ ಶಾಖೆಗೆ ಸಂಬಂಧಿಸಿದಂತೆ ಚಳುಕ್ಯ ಎಂದೂ ಕಲ್ಯಾಣದ ಶಾಖೆಗೆ ಸಂಬಂಧಿಸಿದಂತೆ ಚಾಳುಕ್ಯ ಎಂದೂ ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡುಬರುತ್ತದೆ. ಅಲ್ಲದೆ ಚಳ್ಕಿ, ಚಳುಕಿ, ಚಳುಕ್ಯ, ಚಾಲುಕ್ಯ, ಚಾಲುಕ್ಯ ಎಂಬ ರೂಪಗಳೂ ಪ್ರಚಾರದಲ್ಲಿವೆ. ಇವೆಲ್ಲದರ ಮೂಲಪದದ ಅರ್ಥವೇನು ಎಂಬುದು ಸ್ಪಷ್ಟವಾಗಿಲ್ಲ. ಇದೊಂದು ವ್ಯಕ್ತಿನಾಮವಾಗಿರಬಹುದು ಅಥವಾ ದ್ರಾವಿಡರ ಒಂದು ಪಂಗಡದ, ಜನಾಂಗದ ಹೆಸರಾಗಿರಬಹುದು. 3ನೆಯ ಶತಮಾನಕ್ಕೆ ಸೇರಿದ ನಾಗಾರ್ಜುನಕೊಂಡದಲ್ಲಿ ದೊರೆತ ಶಾಸನವೊಂದರಲ್ಲಿ ಖಂದಚಲಿಕಿ ರೆಮ್ಮಣಕನೆಂಬ ಹೆಸರು ಕಂಡುಬಂದಿದೆ. ಇವನಿಗೂ ಚಲುಕ್ಯರಿಗೂ ಯಾವ ಸಂಬಂಧವನ್ನೂ ಕಲ್ಪಿಸಲಾಗದಾದರೂ ಚಲುಕ್ಯ ಎಂಬ ಹೆಸರಿನ ಪ್ರಾಚೀನ ರೂಪವಿದು ಎಂಬ ಒಂದು ಊಹೆ ಇದೆ. ಹನ್ನೊಂದನೆಯ ಶತಮಾನದಲ್ಲಿ ಮತ್ತು ಅನಂತರ ಹುಟ್ಟಿದ ಶಾಸನಗಳು ಈ ಹೆಸರಿನ ವ್ಯುತ್ಪತ್ತಿಯನ್ನು ಕುರಿತು ಹಲವಾರು ಕಥೆಗಳನ್ನು ಹೆಣೆದಿವೆ. ಚುಲುಕ ಎಂಬ ಸಂಸ್ಕೃತ ಪದದಿಂದ ಚಲುಕ್ಯ ಬಂತೆಂಬುದು ಒಂದು ಹೇಳಿಕೆ. ಚುಲುಕ ಎಂದರೆ ಎರಡು ಅಂಗೈಗಳನ್ನು ಕೂಡಿಸಿದರೆ ಉಂಟಾಗುವ ಬೊಗಸೆ. ಬಿಲ್ಹಣ, ತನ್ನ ವಿಕ್ರಮಾಂಕ ದೇವಚರಿತದಲ್ಲಿ ಈ ಕುರಿತು ಒಂದು ಕಥೆ ಹೇಳಿದ್ದಾನೆ. ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಸಂರಕ್ಷಿಸಲು ನಾಡಿಗೆ ಒಬ್ಬ ಮಹಾಪುರುಷನ ಆವಶ್ಯಕತೆ ಇದೆ ಎಂಬ ಕಾರಣದಿಂದ, ಅಂಥ ಒಬ್ಬ ಪುರುಷನನ್ನು ಸೃಷ್ಟಿಸಬೇಕೆಂದು ಬ್ರಹ್ಮನನ್ನು ಇಂದ್ರ ಪ್ರಾರ್ಥಿಸಿದ. ಇದಕ್ಕೆ ಒಪ್ಪಿದ ಬ್ರಹ್ಮ ಸಂಧ್ಯಾಕಾಲದಲ್ಲಿ ಅರ್ಘ್ಯ ಬಿಡುವಾಗ ತನ್ನ ಚುಲುಕದಲ್ಲಿದ್ದ ನೀರನ್ನು ದೃಷ್ಟಿಸಿದ. ಆಗ ಬೊಗಸೆಯಿಂದ ವೀರನೊಬ್ಬ ಉದಯಿಸಿದ, ಚುಲುಕದಿಂದ ಬಂದವನಾದ್ದರಿಂದ ಇವನೇ ಚಲುಕ್ಯ ಚಾಲುಕ್ಯ ಚಾಳುಕ್ಯ ಎನಿಸಿಕೊಂಡ.

ಈ ಕಾಲದ ಶಾಸನಗಳಲ್ಲಿ ಇವರನ್ನು ಕುರಿತ ಇನ್ನೊಂದು ಹೇಳಿಕೆ ಇದೆ. ಇವರು ಅಯೋಧ್ಯೆಯಿಂದ ದಕ್ಷಿಣಕ್ಕೆ ಬಂದವರು. ಈ ವಂಶದ ಹದಿನಾರು ಅರಸರು ದಕ್ಷಿಣಾಪಥದಲ್ಲಿ ಆಳಿದ ಮೇಲೆ ಸ್ವಲ್ಪ ಕಾಲ ಇವರು ಸತ್ವಹೀನರಾಗಿದ್ದರು. ಈ ವಂಶದ ಜಯಸಿಂಹ ಪುನಃ ಬಲಸಂವರ್ಧನೆ ಮಾಡಿಕೊಂಡು ರಾಷ್ಟ್ರಕೂಟ ಮನೆತನದ ಕೃಷ್ಣನ ಮಗನಾದ ಇಂದ್ರನನ್ನು ಸೋಲಿಸಿ ಚಾಳುಕ್ಯ ರಾಜ್ಯ ಸ್ಥಾಪನೆಗೆ ಕಾರಣನಾದ ಎಂದು ಹೇಳಲಾಗಿದೆ. ಆದರೆ ಇವರು ಸೋಲಿಸಿದ ರಾಷ್ಟ್ರಕೂಟರು ಯಾರೆಂಬುದು ತಿಳಿಯದು. ಅಂಥವರಾರೂ ಕರ್ನಾಟಕದಲ್ಲಿ ಆ ಕಾಲದಲ್ಲಿ ಇದ್ದಂತಿಲ್ಲ. ಜಯಸಿಂಹನಿಗೆ ಹಿಂದೆ, ಚಾಲುಕ್ಯರು ಸತ್ವಹೀನರಾಗಿದ್ದ ಕಾಲಕ್ಕೂ ಮೊದಲು 16 ಜನ ದಕ್ಷಿಣಾಪಥದಲ್ಲಿ ಆಳಿದರೆಂಬ ಮಾತನ್ನು ನಂಬುವುದಾದರೆ ದಕ್ಷಿಣಾಪಥದಲ್ಲಿ ಇವರ ಆಳಿಕೆ ಸು.130ರ ವೇಳೆಗೇ ಆರಂಭವಾಯಿತೆನ್ನಬೇಕು. ಆದ್ದರಿಂದ ಈ ಹೇಳಿಕೆಯನ್ನು ನಂಬಲಾಗುವುದಿಲ್ಲ.

ಚಾಳುಕ್ಯರ ಮೂಲನಾಮ ಚಲುಕಿ, ಚಲ್ಕಿ, ಸಲುಕಿ ಅಥವಾ ಸಲ್ಕಿ ಎಂಬ ಕನ್ನಡ ಪದ ಎಂದು ಊಹಿಸುವುದು ಹೆಚ್ಚು ಸಮಂಜಸ. ಇದು ಹಾರೆಯಂಥ ಒಂದು ಕೃಷಿ ಉಪಕರಣದ ಹೆಸರು. ಈ ಮನೆತನದ ಮೂಲಪುರುಷ ಇದನ್ನು ತನ್ನ ಅಂಕಿತನಾಮವಾಗಿ ಸ್ವೀಕರಿಸಿರಬೇಕು. ಕೃಷಿ ಉಪಕರಣದ ಹೆಸರಿನ ಜೊತೆಗೆ ಅಪ್ಪ ಎಂಬ ಗೌರವ ಪದ ಜೋಡಿಸಿ ಹೆಸರಿಟ್ಟುಕೊಳ್ಳುವ ರೂಢಿ ಕರ್ನಾಟಕದಲ್ಲಿ ಈಗಲೂ ಇದೆ (ಉದಾ: ಸಲ್ಕೆಪ್ಪ, ಗುದ್ಲೆಪ್ಪ), ಚಾಳುಕ್ಯರು ಮೂಲತಃ ಬಾದಾಮಿಯ ಕೆಲಬಲದಲ್ಲಿ ವಾಸಿಸುವ ಒಕ್ಕಲಿಗರ ಬಣಕ್ಕೆ ಸೇರಿದವರಿರಬೇಕು. ಬರಬರುತ್ತ ಪ್ರಬಲವಾಗಿ ವಿಶಾಲ ಪ್ರದೇಶಗಳನ್ನು ಆಳಲು ಪ್ರಾರಂಭಿಸಿದಾಗ ಇವರ ಮನೆತನಕ್ಕೆ ಪೌರಾಣಿಕತೆಯನ್ನೂ ಪಾವಿತ್ರ್ಯವನ್ನೂ ಕೊಡುವುದಕ್ಕಾಗಿ ದಂತಕಥೆ ಹುಟ್ಟಿಕೊಂಡಿರಬೇಕು.

ಬಾದಾಮಿಯ ಚಳುಕ್ಯರ ಸಮಕಾಲೀನ ಶಾಸನಗಳಲ್ಲಿ ಮೇಲೆ ಹೇಳಿದ ಕಥೆಗಳಾವುವೂ ಕಾಣಬರುವುದಿಲ್ಲ. ಆದರೆ ಇವರು ಮೂಲತಃ ಕನ್ನಡಿಗರೇ ಎಂಬ ವಿಷಯ ಅವುಗಳಿಂದ ತಿಳಿದುಬರುತ್ತದೆ. ಕದಂಬರಂತೆ ಇವರೂ ಹಾರೀತಿ ಪುತ್ರರು, ಮಾನವ್ಯಸ ಗೋತ್ರರು. ವರಾಹ ಇವರ ಲಾಂಛನ. ಈ ಅರಸರ ಪುಲಕೇಶಿ, ಬಿಟ್ಟರಸ ಮುಂತಾದ ಹೆಸರುಗಳನ್ನೂ ನೋಡುತ್ತ ಗೆಲ್ವೋಂ, ಪ್ರಿಯಗಳ್ಳ ಇತ್ಯಾದಿ ಬಿರುದುಗಳನ್ನೂ ಇವರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಿಗೆ ಕೊಟ್ಟ ಪ್ರೋತ್ಸಾಹವನ್ನೂ ಆ ಭಾಷೆ ಹಾಗೂ ಲಿಪಿಗಳಲ್ಲಿ ಇವರು ಕೆತ್ತಿಸಿದ ಶಾಸನಗಳನ್ನೂ ಗಮನಿಸಿದರೆ ಇವರಿಗೆ ಆ ಭಾಷೆಯ ಮೇಲೆ ಲಿಪಿಯ ಮೇಲೆ ಇದ್ದ ಒಲವು ಅರ್ಥವಾಗುತ್ತದೆ. ಈ ಕಾಲದಿಂದ ಕನ್ನಡ ಶಾಸನಸಾಹಿತ್ಯ ಹೆಚ್ಚು ಪ್ರೌಢವಾಗುತ್ತದೆ. ಕನ್ನಡದಲ್ಲಿ ಶಾಸನಗಳನ್ನು ಬರೆಸುವ ರೂಢಿ ಪ್ರಬಲವಾಗುತ್ತದೆ. ಇವರ ಅನಂತರ ಆಳಿದ ರಾಷ್ಟ್ರಕೂಟರು ಇವರ ಸೇನೆಯನ್ನು ಕರ್ಣಾಟಕಬಲ ಎಂದು ಕರೆದಿರುವುದನ್ನು ಇಲ್ಲಿ ಗಮನಿಸಬಹುದು. 8ನೆಯ ಶತಮಾನದಲ್ಲಿ ಪಾಂಡ್ಯರು ಕರ್ನಾಟಕದ ಈ ಅರಸರೊಂದಿಗೆ ಸಂಬಂಧ ಬೆಳೆಸಿದ್ದರು. ಪಾಂಡ್ಯ ವಂಶದ ನೆಡುಂಜಡೈಯನ ಅಜ್ಜನಾದ ಶಡೈಯನನ್ನು ಶಾಸನದಲ್ಲಿ ಮಧುರ ಕರುಣಾಟಕನ್ ಎಂದು ವರ್ಣಿಸಿರುವುದು ಪಾಂಡ್ಯರು ಕರ್ನಾಟಕದವರೊಡನೆ - ಚಳುಕ್ಯರೊಡನೆ ಹೊಂದಿದ್ದ ಮಧುರವಾದ ಸಂಬಂಧದ ದ್ಯೋತಕವಾಗಿದೆ. ವಿಷ್ಣುವರ್ಧನರಾಜ ಎಂಬ ಹೆಸರಿನ ಕನ್ನಡ ರೂಪವಾದ ಬಿಟ್ಟರಸ ಎಂಬುದನ್ನು ಒಂದು ತಾಮ್ರ ಶಾಸನದ ಮೊಹರಿನ ಮೇಲೆ ಕೆತ್ತಲಾಗಿದೆ. ಈ ವಂಶದ ಬುದ್ಧವರಸನ ಬಿರುದು ಮದನಂಗಾಶ್ರಯ ಎಂದಿತ್ತು ಎಂಬ ವಿಷಯ ಇನ್ನೊಂದು ಶಾಸನದಿಂದ ತಿಳಿದಿದೆ. ಇದು ಸುಸ್ಪಷ್ಟವಾಗಿ ಕನ್ನಡದ ಬಿರುದು. ಈ ಎಲ್ಲ ಮಾಹಿತಿಗಳಿಂದ ಚಾಳುಕ್ಯರು ಮೂಲತಃ ಕನ್ನಡಿಗರೇ ಎಂಬುದೂ ಇವರು ಉತ್ತರದ ಅಯೋಧ್ಯೆಯಿಂದ ಬಂದವರೆಂಬುದು ಅನಂತರ ಹೆಣೆಯಲಾದ ಕಥೆಯೆಂಬುದೂ ಸ್ಪಷ್ಟ. (ಬಿ.ಆರ್.ಜಿ.)

## ಬಾದಾಮಿಯ ಚಳುಕ್ಯರು

**ರಾಜಕೀಯ ಇತಿಹಾಸ :** ಆರನೆಯ ಶತಮಾನದಲ್ಲಿ ವಾತಾಪಿ ಅಥವಾ ಬಾದಾಮಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಇವರು ಸುಮಾರು ಎರಡು ಶತಮಾನಗಳ ಕಾಲ ರಾಜ್ಯವಾಳಿದರು. ಭಾರತದ ನಾನಾ ಪ್ರಾಂತ್ಯಗಳಲ್ಲಿ ಆಳಿದ ಚಾಳುಕ್ಯ ವಂಶಗಳಲ್ಲಿ ಬಾದಾಮಿ ಶಾಖೆಯೇ ಪ್ರಾಚೀನತಮವಾದುದು. ಬಾದಾಮಿಯ ಚಳುಕ್ಯರನ್ನು ಹಾರೀತಿಪುತ್ರರು, ಮಾನವ್ಯಸ ಗೋತ್ರಕ್ಕೆ ಸೇರಿದವರು, ಸಪ್ತಮಾತೃಕೆಯರಿಂದ ಪೋಷಿತರು ಹಾಗೂ ಕಾರ್ತಿಕೇಯನ ಆರಾಧಕರು, ನಾರಾಯಣ ಅನುಗ್ರಹಿಸಿದ ವರಾಹಲಾಂಛನರು ಎಂದು ಇವರ ಶಾಸನಗಳು ವರ್ಣಿಸುತ್ತವೆ.

ಸಾಹಿತ್ಯ ಹಾಗೂ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಮೊದಲ ಚಳುಕ್ಯ ದೊರೆ ಜಯಸಿಂಹ, ಈತ ಕದಂಬರ ಅಧೀನದಲ್ಲಿ ಒಬ್ಬ ಅಧಿಕಾರಿಯೋ, ಮಾಂಡಲಿಕನೋ ಆಗಿದ್ದನೆಂದು ತೋರುತ್ತದೆ. ಮಾನ್ಯಪುರ ಶಾಖೆಯ ರಾಷ್ಟ್ರಕೂಟ ಅರಸ ಅಭಿಮನ್ಯುವಿನ ಮಾಂಡಲಿಕ ಜಯಸಿಂಹನೆಂಬುವನ ಹೆಸರು ಶಾಸನೋಕ್ತವಾಗಿದೆ. ಇವನೇ ಚಳುಕ್ಯ ಜಯಸಿಂಹನಾಗಿದ್ದಿರಬಹುದೆಂದು ಊಹಿಸಲೂ ಅವಕಾಶವಿದೆ. ಆದರೆ ಖಚಿತವಾದ ಆಧಾರಗಳಿಲ್ಲ. ಜಯಸಿಂಹ 500ರಿಂದ 520ರವರೆಗೆ ರಾಜ್ಯವಾಳಿರಬಹುದು. ಇವನ ಮಗ ರಣರಾಗ (ಸು.520-40). ಇವನ ಬಗ್ಗೆ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ.

ರಣರಾಗನ ಮಗ ಒಂದನೆಯ ಪುಲಕೇಶಿ (540-66). ಈತ ಇತಿಹಾಸದ ದೃಷ್ಟಿಯಿಂದ ಚಳುಕ್ಯ ಸಾಮ್ರಾಜ್ಯದ ಸ್ಥಾಪಕ, ಕದಂಬರನ್ನು ಅಧಿಕಾರದಿಂದ ಪದಚ್ಯುತಗೊಳಿಸಿ ಸ್ವತಂತ್ರ ರಾಜ್ಯವೊಂದರ ನಿರ್ಮಾಣಕ್ಕೆ ಅಡಿಪಾಯ ಹಾಕಿದ. ಬಾದಾಮಿಯನ್ನು ಚಳುಕ್ಯ ರಾಜ್ಯದ ರಾಜಧಾನಿಯಾಗಿ ಸ್ಥಾಪಿಸಿದ. ಅನಂತರ ಒಂದನೆಯ ಕೀರ್ತಿವರ್ಮ (566-96) ಚಳುಕ್ಯ ರಾಜ್ಯವನ್ನು ಸುಭದ್ರಗೊಳಿಸಿದ. ನಳ, ಮೌರ್ಯ ಹಾಗೂ ಕದಂಬರಿಗೆ ಕಾಳರಾತ್ರಿ ಸ್ವರೂಪನಾಗಿದ್ದು, ಸೇಂದ್ರಕರನ್ನೂ ತನ್ನ ಅಧೀನರನ್ನಾಗಿ ಮಾಡಿಕೊಂಡು ರಾಜ್ಯವನ್ನು ವಿಸ್ತರಿಸಿದ.

ಕೀರ್ತಿವರ್ಮನ ಮರಣಾನಂತರ ಅವನ ಮಗನಾದ ಇಮ್ಮಡಿ ಪುಲಕೇಶಿ ರಾಜ್ಯವಾಳಲು ಪ್ರಾಪ್ತವಯಸ್ಕನಾಗಿರಲಿಲ್ಲವಾಗಿ ಕೀರ್ತಿವರ್ಮನ ತಮ್ಮ ಮಂಗಲೀಶ (596-619) ರಾಜ್ಯಸೂತ್ರಗಳನ್ನು ವಹಿಸಿಕೊಂಡ. ಸು.602ರಲ್ಲಿ ಕಳಚುರಿ ಬುದ್ಧರಾಜ, ಕೊಂಕಣದ ರೇವತೀ ದ್ವೀಪದ ಸ್ವಾಮಿರಾಜ ಇವರನ್ನು ಸೋಲಿಸಿ ಚಳುಕ್ಯ ರಾಜ್ಯವನ್ನು ಮತ್ತಷ್ಟು ವಿಸ್ತರಿಸಿದ. ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದಿಂದ, ಈತನ ಸೈನ್ಯ ಪೂರ್ವ ಪಶ್ಚಿಮ ಸಮುದ್ರಪರ್ಯಂತ ಕಾರ್ಯನಿರತವಾಗಿತ್ತೆಂಬ ಸೂಚನೆ ಇರುವುದರಿಂದ ಬಹುಶಃ ಒಂದು ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿದ್ದ ರಾಜ್ಯವನ್ನು ವಿಸ್ತಾರವಾದ ಸಾಮ್ರಾಜ್ಯವಾಗಿ ಬೆಳೆಸಿದ ಕೀರ್ತಿ ಈತನದಾಗಿರಬೇಕು. ಆದರೆ ಸಿಂಹಾಸನದ ಹಕ್ಕುದಾರನಾದ ಕೀರ್ತಿವರ್ಮನ ಮಗ ಇಮ್ಮಡಿ ಪುಲಕೇಶಿ ವಯಸ್ಕನಾದಾಗಲೂ ಅವನಿಗೆ ರಾಜ್ಯವನ್ನು ಕೊಡಲು ಇಷ್ಟಪಡದೆ ರಾಜ್ಯ ತನ್ನ ವಂಶದಲ್ಲೇ ಮುಂದುವರಿಯಬೇಕೆಂಬ ಆಸಕ್ತಿಯನ್ನು ಹೊಂದಿದ್ದನಾಗಿ ಇವರಿಬ್ಬರಲ್ಲಿ ವಿರಸ ಮೂಡಿ ಕೊನೆಗೆ ನಡೆದ ಘರ್ಷಣೆಯಲ್ಲಿ ಮಂಗಲೀಶ ಸತ್ತ (ಸು.610).



ಮೇಗುಟಿ ದೇವಾಲಯ - ಐಹೊಳೆ

ಇಮ್ಮಡಿ ಪುಲಕೇಶಿ (610-42) ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ ಪ್ರಾಚೀನ ಭಾರತೀಯ ಇತಿಹಾಸದಲ್ಲೇ ಕಂಡುಬರುವ ಅಪ್ರತಿಮ ಸಾರ್ವಭೌಮರಲ್ಲೊಬ್ಬ. ಸಾಮ್ರಾಜ್ಯ ನಿರ್ಮಾತೃವಿನಲ್ಲಿರಬೇಕಾದ ರಾಜಕೀಯ ನೈಪುಣ್ಯ, ಮಹತ್ವಾಕಾಂಕ್ಷೆ, ದಕ್ಷತೆ ಹಾಗೂ ದೂರದೃಷ್ಟಿ ಇವನಲ್ಲಿದ್ದುವು. ಅಧಿಕಾರಕ್ಕೆ ಬಂದ ಹೊಸದರಲ್ಲೇ ಉಂಟಾಗಿದ್ದ ರಾಜಕೀಯ ಅಸ್ತವ್ಯಸ್ತತೆಯ ಲಾಭವನ್ನು ಹೊಂದಲಪೇಕ್ಷಿಸಿದ ಅಪ್ಪಾಯಿಕ ಮತ್ತು ಗೋವಿಂದ ಎಂಬುವರನ್ನೂ ನಿಗ್ರಹಿಸುವುದು ಮೊದಲಾದ ಕಾರ್ಯಗಳಿಂದ ಮೊದಲು ತನ್ನ ರಾಜ್ಯವನ್ನು ಸುಭದ್ರವಾಗಿಸಿ, ಅನಂತರ ದಿಗ್ವಿಜಯವನ್ನು ಕೈಕೊಂಡ. ಐಹೊಳೆಯಲ್ಲಿರುವ ಇವನ ಶಾಸನದಲ್ಲಿನ ವಿವರಗಳ ಪ್ರಕಾರ ಮೊದಲು ಕದಂಬ ರಾಜಧಾನಿ ಬನವಾಸಿಯನ್ನು ಆಕ್ರಮಿಸಿದ. ಇವನ ಸಾಮರ್ಥ್ಯವನ್ನು ಮನಗಂಡ ದಕ್ಷಿಣ ಕನ್ನಡ ಜಿಲ್ಲೆಯ ಆಳುಪರು ಹಾಗೂ ತಲಕಾಡಿನ ಗಂಗರು ಇವನಿಗೆ ಬೆಂಬಲ ನೀಡಿ ಸಾರ್ವಭೌಮತ್ವವನ್ನು ಒಪ್ಪಿಕೊಂಡರು.

ಅನಂತರ ಕೊಂಕಣದತ್ತ ಮುಂದುವರಿದು ಮೌರ್ಯರನ್ನು ನೌಕಾಯುದ್ಧದಲ್ಲಿ ಸದೆಬಡಿದ. ಮುಂದೆ ಉತ್ತರಾಭಿಮುಖವಾಗಿ ಹೊರಟು ಲಾಟ, ಮಾಳವ ಮತ್ತು ಗೂರ್ಜರರನ್ನು ಸೋಲಿಸಿ ಮಾಹೀ ನದಿಯವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಪುಲಕೇಶಿಯ ಈ ದಿಗ್ವಿಜಯ ಹರ್ಷನನ್ನು ಎಚ್ಚರಿಸಿರಬೇಕು. ಇದರಿಂದ ಉತ್ತರ ಮತ್ತು ದಕ್ಷಿಣ ಭಾರತಗಳ ಶ್ರೇಷ್ಠ ಸಾರ್ವಭೌಮರಿಬ್ಬರಿಗೂ ನರ್ಮದಾ ತೀರದಲ್ಲಿ ಯುದ್ಧವಾಯಿತು. ಪುಲಕೇಶಿ ಜಯಿಸಲಸಾಧ್ಯವಾದ ಶತ್ರು ಎಂಬುದನ್ನು ಹರ್ಷ ಮನಗಾಣಬೇಕಾಯಿತು. ಅವನ ಗಜಸೈನ್ಯಕ್ಕೆ ಅಪಾರ ನಷ್ಟವುಂಟಾಯಿತು. ಈ ವಿಜಯದ ನೆನಪಾಗಿ ಪುಲಕೇಶಿ ಪರಮೇಶ್ವರನೆಂಬ ಬಿರುದನ್ನು ಧರಿಸಿದ (ಸು.612). ಈ ವಿಷಯಗಳಿಂದ ಪುಲಕೇಶಿ ತೊಂಬತ್ತೊಂಬತ್ತು ಸಹಸ್ರ ಗ್ರಾಮಗಳಿಂದ ಕೂಡಿದ ಮಹಾರಾಷ್ಟ್ರ ತ್ರಯಗಳ ಪ್ರಭುವಾದ. ಅನಂತರ ಪುಲಕೇಶಿ ದಕ್ಷಿಣಾಪಥದ ಪೂರ್ವದೇಶಗಳನ್ನು ಜಯಿಸಲು ಹೊರಟ. ಕೋಸಲ ಮತ್ತು ಕಳಿಂಗದ ಅರಸರು ಪುಲಕೇಶಿಯ ಸೈನ್ಯಾಗಮನದಿಂದಲೇ ಭೀತರಾಗಿ ಇವನಿಗೆ ಶರಣಾಗತರಾದರು. ಮುಂದೆ ಸಾಗಿದ ಪುಲಕೇಶಿ ಪಿಷ್ಟಪುರವನ್ನು (ಗುಂಟೂರು ಜಿಲ್ಲೆಯ ಪಿಠಾಪುರಂ) ವಶಮಾಡಿಕೊಂಡ. ಅನಂತರ ಕುನಾಲ (ಎಲ್ಲೂರಿನ ಬಳಿಯ ಕೊಲ್ಲೇರು) ಪ್ರದೇಶವನ್ನು ಜಯಿಸಿದ.

ಮತ್ತೆ ದಕ್ಷಿಣದತ್ತ ಮುಂದುವರಿದು ಪಲ್ಲವ ಒಂದನೆಯ ಮಹೇಂದ್ರವರ್ಮನ ರಾಜ್ಯವನ್ನು ಆಕ್ರಮಿಸಿದ. ಪಲ್ಲವ ರಾಜಧಾನಿ ಕಂಚಿಗೆ

ಸಮೀಪದಲ್ಲಿರುವ ಪುಲ್ಲಲೂರಿನಲ್ಲಿ ನಡೆದ ಈ ಯುದ್ಧದಲ್ಲಿ ಪಲ್ಲವ ಅರಸ ಸೋತ. ಪಲ್ಲವ ರಾಜ್ಯದ ಉತ್ತರ ಭಾಗಗಳು ಪುಲಕೇಶಿಯ ವಶವಾದವು. ಹಲವು ಶತಮಾನಗಳವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖವಾಗಿ ಕಂಡುಬರುವ ಕನ್ನಡ ನಾಡಿನ ಹಾಗೂ ತಮಿಳು ನಾಡಿನ ಅರಸರ ವೈಷಮ್ಯಕ್ಕೆ ಈ ಘಟನೆಯೇ ನಾಂದಿಯಾಯಿತೆಂದರೆ ತಪ್ಪಾಗಲಾರದು. ಪಲ್ಲವರನ್ನು ಸೋಲಿಸಲು ಕಾತುರರಾಗಿದ್ದ ಚೋಳ, ಪಾಂಡ್ಯ ಹಾಗೂ ಕೇರಳದ ಅರಸರು ಚಳುಕ್ಯರ ಸ್ನೇಹವನ್ನು ಸಂಪಾದಿಸಿಕೊಂಡರು.

ಬಾದಾಮಿಯ ಕೋಟೆ

ಹೀಗೆ ಎಲ್ಲೆಡೆಗಳಲ್ಲಿಯೂ ವಿಜಯಗಳನ್ನು ಸಂಪಾದಿಸಿದ ಪುಲಕೇಶಿ ವಾತಾಪಿಗೆ ಹಿಂದಿರುಗಿದ. ಲೋಹನೇರ ಶಾಸನ ಇವನನ್ನು ಪೂರ್ವಾಪರಸಮುದ್ರಾಧಿಪತಿ ಎಂದು ವರ್ಣಿಸಿರುವುದರಿಂದ ಇವನ ಸಾಮ್ರಾಜ್ಯ ಪೂರ್ವಸಮುದ್ರದಿಂದ ಪಶ್ಚಿಮ ಸಮುದ್ರದವರೆಗೆ ಹಬ್ಬಿತ್ತೆಂದು ಹೇಳಬಹುದು. ಪುಲಕೇಶಿ ತಾನು ಗೆದ್ದ ಪ್ರದೇಶಗಳಲ್ಲಿ ರಾಜ್ಯಭಾರ ನಡೆಸಲು ಅನುಕೂಲವಾಗುವಂತೆ ಏರ್ಪಾಡುಗಳನ್ನು ಮಾಡಿದ. ನಾಸಿಕ ಪ್ರದೇಶದಲ್ಲಿ ಧರಾಶ್ರಯ ಜಯಸಿಂಹನೆಂಬ ಸೋದರನನ್ನು ಮತ್ತು ವೆಂಗಿ ದೇಶದಲ್ಲಿ ಇನ್ನೊಬ್ಬ ಸೋದರನಾದ ಕುಬ್ಜ ವಿಷ್ಣುವರ್ಧನನನ್ನು ರಾಜ್ಯಪಾಲರಾಗಿ ನಿಯಮಿಸಿದ.

ಪುಲಕೇಶಿ ಒಬ್ಬ ಉತ್ತಮ ಯೋಧ, ಶ್ರೇಷ್ಠ ದಿಗ್ವಿಜಯಿ, ದಕ್ಷ ಆಡಳಿತಗಾರ. ಆದರೆ ಇವನಿಗೆ ಒದಗಿಬಂದ ಅಂತ್ಯ ಮಾತ್ರ ದುರದೃಷ್ಟಕರವಾದುದು. ಪಲ್ಲವ ಮಹೇಂದ್ರವರ್ಮನ ಮಗ ಒಂದನೆಯ ನರಸಿಂಹ ಪುಲಕೇಶಿಯಿಂದ ತನ್ನ ತಂದೆಗೆ ಒದಗಿದ್ದ ಸೋಲಿನ ಅವಮಾನದ ಸೇಡನ್ನು ತೀರಿಸಿಕೊಳ್ಳಲು ನಿರ್ಧರಿಸಿ, ಅಪಾರ ಸೈನ್ಯ ಸಹಿತನಾಗಿ ವಾತಾಪಿಯತ್ತ ಮುನ್ನುಗ್ಗಿ ವಾತಾಪಿಯನ್ನು ಸುಟ್ಟು ತನ್ನ ವಶ ಮಾಡಿಕೊಂಡ; ವಾತಾಪಿಕೊಂಡ ಎಂಬ ಬಿರುದನ್ನು ಧರಿಸಿದ. ಈ ಘಟನೆ ಸು.642ರಲ್ಲಿ ನಡೆಯಿತೆಂದು ತೋರುತ್ತದೆ. ಪುಲಕೇಶಿ ಪ್ರಾಯಶಃ ಈ ಯುದ್ಧದಲ್ಲಿ ಮಡಿದಿರಬೇಕು.

ಪುಲಕೇಶಿಯ ಮರಣಾನಂತರ ಸುಮಾರು ಹದಿಮೂರು ವರ್ಷಗಳ ವರೆಗಿನ ಕಾಲ ಚಳುಕ್ಯ ಇತಿಹಾಸದಲ್ಲಿ ಕತ್ತಲೆಯ ಕಾಲ. ಸು.655ರಲ್ಲಿ ಪಲ್ಲವರ ವಶವಾಗಿದ್ದ ಚಳುಕ್ಯ ಸಾಮ್ರಾಜ್ಯವನ್ನು ಸ್ವಸಾಮರ್ಥ್ಯದಿಂದ ಸ್ವತಂತ್ರಗೊಳಿಸಿ ಒಂದನೆಯ ವಿಕ್ರಮಾದಿತ್ಯ ಪಟ್ಟಕ್ಕೆ ಬಂದ. ಚಳುಕ್ಯ ಸಾಮ್ರಾಜ್ಯ ದುರ್ದೆಶೆಯಲ್ಲಿದ್ದಾಗ ಹಲವಾರು ಸಾಮಂತರು ಸ್ವತಂತ್ರರಾಗತೊಡಗಿದರು. ಅವರನ್ನೆಲ್ಲ ನಿಗ್ರಹಿಸಿ ಪುನಃ ಸಾರ್ವಭೌಮತ್ವವನ್ನು ಸ್ಥಾಪಿಸಿದ ವಿಕ್ರಮಾದಿತ್ಯನು ಪರಮೇಶ್ವರ ಎಂಬ ಬಿರುದನ್ನು ಪಡೆದನೆಂದು ಹೇಳಲಾಗಿದೆ. ಆದರೆ ಇವನ ವಿಜಯಗಳ ವಿವರಗಳು ಮಾತ್ರ ಲಭ್ಯವಾಗಿಲ್ಲ. ದತ್ತಮಂಡಲ ಹಾಗೂ ನೆಲ್ಲೂರು ಪ್ರದೇಶ ಮುಂತಾದ ಇತರ ಪ್ರಾಂತ್ಯಗಳನ್ನು ವಿಕ್ರಮಾದಿತ್ಯ ಜಯಿಸಿದ. ಪುಲಕೇಶಿಯ ಕಾಲದಲ್ಲಿ ಪೂರ್ವ ಚಳುಕ್ಯ ಶಾಖೆ ಆರಂಭವಾದಂತೆ, ಇವನ ಕಾಲದಲ್ಲಿ ಗುಜರಾತಿನ ಶಾಖೆ ಆರಂಭವಾಯಿತು. ಇವನು ಪಲ್ಲವರನ್ನು ಜಯಿಸಿದ ಸಂಗತಿಯನ್ನು ಧರಾಶ್ರಯನ ನವಸಾರಿ ಶಾಸನವೇ ತಿಳಿಸುತ್ತದೆ. 670-71ರಲ್ಲಿ ವಿಕ್ರಮಾದಿತ್ಯ ಕಂಚಿಯ ಸಮೀಪದ ಮಲ್ಲಿಯೂರಿನಲ್ಲಿ ಸೈನ್ಯದೊಂದಿಗೆ ಬೀಡುಬಿಟ್ಟಿದ್ದ. 674ರಲ್ಲಿ ಕಾವೇರಿ ನದಿಯ ದಕ್ಷಿಣ ತೀರದ ಚೋಳಿಕ ವಿಷಯದ ಉರಗಪುರದಲ್ಲಿ ಇದ್ದ. 674ರ ಹೊತ್ತಿಗೆ ಪೆರುವಳನಲ್ಲೂರು ಎಂಬಲ್ಲಿ ಚಳುಕ್ಯರು ಮತ್ತು ಪಲ್ಲವರಿಗೆ ಯುದ್ಧ ನಡೆದಂತೆ ತೋರುತ್ತದೆ. ಈ ಬಗ್ಗೆ ವಿವರಗಳು ತಿಳಿದುಬಂದಿಲ್ಲ. ಒಟ್ಟಿನಲ್ಲಿ ವಿಕ್ರಮಾದಿತ್ಯ ತನ್ನ ಆಳಿಕೆಯ ಅಂತ್ಯದ ಹೊತ್ತಿಗೆ ತನ್ನ ರಾಜ್ಯವನ್ನು ಭದ್ರಪಡಿಸಿಕೊಂಡಿದ್ದನಲ್ಲದೆ ರಾಜ್ಯದ ಶತ್ರುಗಳ ನಿಗ್ರಹದಲ್ಲಿ ಒಂದೇ ಸಮನೆ ಶ್ರಮಿಸಿ ಸಫಲನಾಗಿದ್ದ. ವಿಕ್ರಮಾದಿತ್ಯನ ವಿಜಯಗಳಲ್ಲಿ ಅವನ ಮಗ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯ ಗಮನೀಯವಾದ ಪಾತ್ರ ವಹಿಸಿದ್ದರು.

681ರಲ್ಲಿ ಒಂದನೆಯ ವಿಕ್ರಮಾದಿತ್ಯನ ಆಳಿಕೆ ಕೊನೆಗೊಂಡು, ಅನಂತರ ಯುವರಾಜನಾಗಿದ್ದ ವಿನಯಾದಿತ್ಯ ರಾಜ್ಯವನ್ನು ವಹಿಸಿಕೊಂಡ. ಇವನ ಕಾಲದಲ್ಲಿ ಸುಖಶಾಂತಿಗಳು ನೆಲೆಸಿದ್ದವು. ಕ್ರಮೇಣ ಪಾರಸಿಕ ಮತ್ತು ಸಿಂಹಳದ ಅರಸರನ್ನು ಈತ ಜಯಿಸಿದನೆಂದು ಶಾಸನಗಳು ತಿಳಿಸುತ್ತವೆ. ಆಳುಪರು ಹಾಗೂ ಸೇಂದ್ರಕರು ಇವನಿಗೆ ವಿಧೇಯರಾಗಿ ಸಾಮಂತರಾಗಿದ್ದರು. ಉತ್ತರ ಭಾರತದ ರಾಜನೊಬ್ಬನನ್ನು ಬಹುಶಃ ಕನೌಜಿನ ಯಶೋವರ್ಮ ಅಥವಾ ವಜ್ರಟನನ್ನು ಸೋಲಿಸಿ ಗಂಗಾ, ಯಮುನಾ ಹಾಗೂ ಪಾಳಿಧ್ವಜದ ಚಿಹ್ನೆಯನ್ನು ಇವನು ವಶಮಾಡಿಕೊಂಡನೆಂದು ಕೆಲವು ಶಾಸನಗಳಲ್ಲಿ ಹೇಳಿದೆ.

ಮುಂದೆ ವಿನಯಾದಿತ್ಯನ ಮಗ ವಿಜಯಾದಿತ್ಯ (696-733) ರಾಜನಾದ. ಇವನ ಆಳಿಕೆ ದೀರ್ಘವೂ ಶಾಂತಿಯುತವೂ ಆಗಿತ್ತು. ಇವನ ಕಾಲದಲ್ಲಿಯೂ ಪಲ್ಲವರ ಮೇಲೆ ಯುದ್ಧ ನಡೆಯಿತು. ಉಳ್ಚಾಲ ಶಾಸನದ ಪ್ರಕಾರ ಯುವರಾಜ ಎರಡನೆಯ ವಿಕ್ರಮಾದಿತ್ಯನ ನಾಯಕತ್ವದಲ್ಲಿ ಚಳುಕ್ಯ ಸೈನ್ಯ ಕಾಂಚೀಪುರಕ್ಕೆ ದಾಳಿ ಇಟ್ಟು ಎರಡನೆಯ ಪರಮೇಶ್ವರವರ್ಮನನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ಪಡೆಯಿತು.

ಅನಂತರ ಪಟ್ಟಕ್ಕೆ ಬಂದವನು ಇವನ ಮಗನಾದ ಎರಡನೆಯ ವಿಕ್ರಮಾದಿತ್ಯ (733-45). ರಾಜ್ಯ ವಹಿಸಿಕೊಂಡ ಅನತಿ ಕಾಲದಲ್ಲೇ ಇವನು ಅರಬ್ಬರ ಆಕ್ರಮಣವನ್ನು ಎದುರಿಸಬೇಕಾಯಿತು. ತಾಜಿಕರು ಅಥವಾ ಅರಬ್ಬರು ಸೈಂಧವ, ಕಚ್ಛೇಲ, ಸೌರಾಷ್ಟ್ರ, ಮೌರ್ಯ ಮುಂತಾದವರನ್ನು ನಿರ್ನಾಮಗೊಳಿಸಿ ದಕ್ಷಿಣಾಪಥ'ವನ್ನು ಪ್ರವೇಶಿಸಲಪೇಕ್ಷಿಸಿ ನವಸಾರಿಕಾ ಪ್ರಾಂತ್ಯವನ್ನು ವಶಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ಪ್ರಯತ್ನ ಸಫಲವಾಗಲಿಲ್ಲ. ಆ ಪ್ರಾಂತ್ಯದ ಅಧಿಕಾರಿಯಾಗಿದ್ದ ಚಾಳುಕ್ಯ ಶಾಖೆಯ ಅವನಿಜನಾಶ್ರಯ ಪುಲಕೇಶಿ ಅರಬ್ಬರನ್ನು ಹಿಮ್ಮೆಟ್ಟಿಸಿದ. ಇದರಿಂದ ಸಂತೋಷಗೊಂಡ ವಿಕ್ರಮಾದಿತ್ಯ ಅವನಿಗೆ ಅನೇಕ ಬಿರುದುಗಳನ್ನು ನೀಡಿದನೆಂದು ತಿಳಿದುಬರುತ್ತದೆ. ವಿಕ್ರಮಾದಿತ್ಯ ತನ್ನ ಕುಲವೈರಿಗಳಾದ ಪಲ್ಲವರೊಡನೆ ನಡೆಸಿದ ಯುದ್ಧ ಈ ಕಾಲದ ಇನ್ನೊಂದು ಪ್ರಮುಖ ಘಟನೆ. ಇವನು ಮೂರು ಬಾರಿ ಕಂಚಿಯನ್ನು ಜಯಿಸಿದನೆಂದು ಇವನ ಪತ್ನಿ ಲೋಕಮಹಾದೇವಿಯ ಪಟ್ಟದಕಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಇವನು ಒಂದು ಯುದ್ಧದಲ್ಲಿ ಕಟುಮುಖವಾದಿತ್ರ, ಸಮುದ್ರಘೋಷ ಹಾಗೂ ಖಟ್ವಾಂಗಧ್ವಜಗಳನ್ನು ಪಲ್ಲವರರಸನಿಂದ ಕಿತ್ತುಕೊಂಡ. ಪಲ್ಲವರಸನ ಗಜಸೈನ್ಯವೂ ಅಪಾರ ಧನಸಂಪತ್ತೂ ಇವನ ವಶವಾಯಿತು. ಈ ಕಾಲದಲ್ಲಿ ಪಲ್ಲವ ಸಿಂಹಾಸನದಲ್ಲಿದ್ದವನು ಎರಡನೆಯ ನಂದಿವರ್ಮ ಪಲ್ಲವಮಲ್ಲ. ಯುದ್ಧ ಎಲ್ಲಿ ನಡೆಯಿತೆಂಬುದು ತಿಳಿಯದು. ವಿಕ್ರಮಾದಿತ್ಯ ಕಂಚಿಯನ್ನು ಪ್ರವೇಶಿಸಿ ಪಲ್ಲವರು ನಿರ್ಮಿಸಿದ್ದ ದೇವಾಲಯಗಳಿಗೆ ಅಪಾರ ಸಂಪತ್ತನ್ನು ದಾನವಾಗಿ ನೀಡಿ ತನ್ನ ಔದಾರ್ಯವನ್ನೂ ದೈವಭಕ್ತಿಯನ್ನೂ ಪ್ರದರ್ಶಿಸಿದ. ಪಲ್ಲವ ನರಸಿಂಹವರ್ಮ ಬಾದಾಮಿಯಲ್ಲಿ ಕೆತ್ತಿಸಿದ ತಮಿಳು ಶಾಸನಕ್ಕೆ

ಪ್ರತಿಯಾಗಿ ಕಂಚಿಯ ರಾಜಸಿಂಹೇಶ್ವರ ದೇವಾಲಯದ ಸ್ತಂಭವೊಂದರ ಮೇಲೆ ಕನ್ನಡ ಶಾಸನವನ್ನು ಕೆತ್ತಿಸಿದ. ಕಂಚಿಯುಂಗೊಂಡ ಎಂಬ ಬಿರುದನ್ನೂ ಧರಿಸಿದ.

ವಿಕ್ರಮಾದಿತ್ಯನ ಅನಂತರ ಅವನ ಮಗ ಇಮ್ಮಡಿ ಕೀರ್ತಿವರ್ಮ (745-57) ಆಳಿದ. ಇವನು ತನ್ನ ತಂದೆಯ ಜೀವಿತ ಕಾಲದಲ್ಲಿಯೇ ಯುವರಾಜನಾಗಿದ್ದು ಕಂಚಿಯನ್ನು ಆಕ್ರಮಿಸಿದ ವೀರ. ಇವನ ಆಳಿಕೆಯೂ ಶಾಂತಿಯುತವಾಗಿತ್ತು. ಆದರೆ ಚಳುಕ್ಯ ಬಲ ಕುಗ್ಗುತ್ತಿತ್ತು. ರಾಷ್ಟ್ರಕೂಟ ದಂತಿದುರ್ಗ 754ರ ಹೊತ್ತಿಗೆ ತನ್ನನ್ನು ಮಹಾರಾಜಾಧಿರಾಜನೆಂದೂ ಪಲ್ಲವರನ್ನು ನಿರ್ನಾಮಗೊಳಿಸಿದ ವೀರನೆಂದೂ ಕರೆದುಕೊಳ್ಳುವ ಮಟ್ಟಕ್ಕೆ ಬಂದಿದ್ದ. ಕೀರ್ತಿವರ್ಮನಿಗೆ ದಂತಿದುರ್ಗನ ಪ್ರಾಬಲ್ಯವನ್ನು ತಡೆಗಟ್ಟುವುದು ಸಾಧ್ಯವಾಗಲಿಲ್ಲ. 757ರವರೆಗೂ ಕೀರ್ತಿವರ್ಮ ಅರಸನಾಗಿ ಮುಂದುವರೆದರೂ ಕೊನೆಗೆ ಆ ವರ್ಷ ರಾಷ್ಟ್ರಕೂಟ ಕೃಷ್ಣನಿಂದ ಸೋಲಿಸಲ್ಪಟ್ಟ. ಕೀರ್ತಿವರ್ಮನ ಅಂತ್ಯದೊಂದಿಗೆ ಬಾದಾಮಿಯ ಚಳುಕ್ಯರ ಆಳಿಕೆ ಮುಕ್ತಾಯ ಹೊಂದಿತು. ಇವರ ಸ್ಥಾನವನ್ನು ರಾಷ್ಟ್ರಕೂಟರು ಆಕ್ರಮಿಸಿದರು. (ಎ.ವಿ.ಎನ್.)

ಶಾಸನಗಳ ಆಧಾರದಿಂದ ಬಾದಾಮಿಯ ಚಳುಕ್ಯರ ವಂಶಾವಳಿಯನ್ನು ಈ ರೀತಿ ನಿರೂಪಿಸಬಹುದು:

ಜಯಸಿಂಹ (ಸು.500-20)
|
ರಣರಾಗ (ಸು.520-40)
|
ಪುಲಕೇಶಿ (ಸು.540-66)

ಪೂಗವರ್ಮ — ಕೀರ್ತಿವರ್ಮ I (566-96) — ಮಂಗಲೀಶ(596-610)

ಪುಲಕೇಶಿ II (610-42) — ಕುಬ್ಜವಿಷ್ಣುವರ್ಧನ — ಧರಾಶ್ರಯ ಜಯಸಿಂಹ — ಬುದ್ಧವರಸ

ಆದಿತ್ಯವರ್ಮ — ಚಂದ್ರಾದಿತ್ಯ — ರಣರಾಗ — ವಿಕ್ರಮಾದಿತ್ಯ I (655-81) — ಜಯಸಿಂಹ

ಅಭಿನವಾದಿತ್ಯ

ವಿನಯಾದಿತ್ಯ(681-96)
|
ವಿಜಯಾದಿತ್ಯ(696-733)
|
ವಿಕ್ರಮಾದಿತ್ಯ(733-45)
|
ಕೀರ್ತಿವರ್ಮII(745-57)

**ಆಡಳಿತ ವ್ಯವಸ್ಥೆ :** ರಾಜಪ್ರಭುತ್ವ ಈ ಕಾಲದಲ್ಲಿ ಆಚರಣೆಯಲ್ಲಿದ್ದ ರಾಜ್ಯ ಪದ್ಧತಿ. ರಾಜ್ಯದ ಆಡಳಿತದಲ್ಲಿ ರಾಜ ಸ್ವತಃ ಪಾಲುಗೊಂಡು ಪ್ರಮುಖ ಪಾತ್ರ ವಹಿಸುತ್ತಿದ್ದ. ರಾಜ್ಯ ಆನುವಂಶಿಕವಾಗಿ ತಂದೆಯಿಂದ ಹಿರಿಯ ಮಗನಿಗೆ ಬರುತ್ತಿತ್ತು. ಉತ್ತರಾಧಿಕಾರಿ ಅಪ್ರಾಪ್ತ ವಯಸ್ಕನಾಗಿದ್ದಾಗ ರಾಜ್ಯದ ಹೊಣೆ ಅರಸನ ತಮ್ಮನ ಮೇಲೆ ಬೀಳುತ್ತಿತ್ತು. ಮಂಗಲೀಶ ಇಮ್ಮಡಿ ಪುಲಕೇಶಿಯ ಪರವಾಗಿ ಆಳಿದುದನ್ನು ಇಲ್ಲಿ ಗಮನಿಸಬೇಕು. ಅಂತೆಯೇ ಉತ್ತರಾಧಿಕಾರಿ ಅಶಕ್ತನಾಗಿದ್ದಾಗ ರಾಜ್ಯವು ಮಕ್ಕಳಲ್ಲಿ ಸಮರ್ಥನಾದವನ ವಶವಾಗುತ್ತಿತ್ತು. ಇಮ್ಮಡಿ ಪುಲಕೇಶಿಯ ಅನಂತರ ಕುಸಿದಿದ್ದ ರಾಜ್ಯವನ್ನು ಮೇಲೆತ್ತಿ ಪುನಃ ಶಕ್ತಿಯುತವನ್ನಾಗಿ ಮಾಡಲು ಸಮರ್ಥನಾದ ವಿಕ್ರಮಾದಿತ್ಯನು ಪುಲಕೇಶಿಯ ಉತ್ತರಾಧಿಕಾರಿಯಾದುದು ಸಹಜವೆಂದೇ ಎನಿಸಿತು. ಸತ್ಯಾಶ್ರಯ, ಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಪರಮಭಟ್ಟಾರಕ -ಇವು ಈ ಅರಸರು ಸಾಮಾನ್ಯವಾಗಿ ಧರಿಸಿದ್ದ ಬಿರುದುಗಳು. ಧಾರ್ಮಿಕ ಪ್ರವೃತ್ತಿಯನ್ನನುಸರಿಸಿ ಪರಮಮಾಹೇಶ್ವರ, ಪರಮಭಾಗವತ ಎಂಬ ಬಿರುದುಗಳನ್ನೂ ಇವರು ಧರಿಸಿದ್ದರು.

ರಾಜ್ಯವನ್ನು ಹಲವಾರು ವಿಷಯಗಳಾಗಿ ವಿಂಗಡಿಸಲಾಗಿತ್ತೆಂದು ತೋರುತ್ತದೆ. ವಿಷಯ ಎಂಬುದು ಈಗಿನ ಜಿಲ್ಲೆ ಅಥವಾ ಅದಕ್ಕೂ ಹಿರಿದಾದ ಆಡಳಿತ ಪ್ರದೇಶ. ಬಾಣರಾಜ ವಿಷಯ, ಚೋಳಿಕ ವಿಷಯ, ಬೆಳ್ವಲ ವಿಷಯ, ಪಳಯಟ್ಟಾಣ ವಿಷಯ, ನಳವಾಡಿ ವಿಷಯ, ಪೆಡೆಕಲ್ಲು ವಿಷಯ ಇತ್ಯಾದಿಗಳ ಉಲ್ಲೇಖ ಶಾಸನಗಳಲ್ಲಿ ಬಂದಿವೆ. ಬಾಣರಾಜ ವಿಷಯ, ಚೋಳಿಕ ವಿಷಯ, ನಳವಾಡಿ ವಿಷಯಗಳು ಬಾಣ, ಚೋಳ, ನಳ ಮುಂತಾದ ಸಾಮಂತರ ಸ್ವಾಧೀನದಲ್ಲಿದ್ದ ವಿಷಯಗಳಾಗಿದ್ದು, ಅನಂತರ ಸಾಮ್ರಾಜ್ಯಕ್ಕೆ ಸೇರಿಹೋದ ಪ್ರದೇಶಗಳಾಗಿದ್ದಂತೆ ತೋರುತ್ತದೆ. ಈ ಎಲ್ಲ ವಿಷಯಗಳಿಗೂ ಅಧಿಪತಿಗಳಿದ್ದು ಅವರನ್ನು ವಿಷಯಾಧಿಪತಿ, ವಿಷಯಾಧಿಕರಣ, ಮಂಡಲಾಧಿಪತಿ ಎಂದು ಕರೆಯಲಾಗಿತ್ತು. ಈ ದೃಷ್ಟಿಯಲ್ಲಿ ವಿಷಯ ಮತ್ತು ಮಂಡಲ ಸಮಾನಾರ್ಥಕ ಪದಗಳು.

ಕೇಂದ್ರಾಧಿಕಾರಿಗಳು ಮತ್ತು ಅವರ ಕಾರ್ಯಕ್ಷೇತ್ರಗಳ ವಿವರಗಳು ನಮಗೆ ಹೆಚ್ಚಾಗಿ ತಿಳಿದುಬಂದಿಲ್ಲ. ತಾಮ್ರ ಶಾಸನಗಳಲ್ಲಿ ಅರಸ ತಾನು ಮಾಡಿದ ದಾನಕ್ಕೆ ಸಂಬಂಧಿಸಿದ ಆಜ್ಞೆಯನ್ನು ವಿಷಯಪತಿ, ಸಾಮಂತ, ಗ್ರಾಮಭೋಗಿಕ, ಮಹತ್ತರ ಮುಂತಾದ ಅಧಿಕಾರಿಗಳು ತಿಳಿಯತಕ್ಕದ್ದು ಎಂದು ಹೇಳುವುದರಿಂದ ಇವು ಅಧಿಕಾರಿಗಳ ಹೆಸರುಗಳೆಂಬುದು ತಿಳಿಯುತ್ತದೆ. ಮಹಾಸಂಧಿವಿಗ್ರಹಿ, ಮಹಾಕ್ಷಪಟಲಾಧಿಕೃತ ಮುಂತಾದವರು ಇತರ ಅಧಿಕಾರಿಗಳು. ಇವರು ಅರಸರ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ರಾಜನ ಆಜ್ಞೆಗಳನ್ನೂ ನೀಡಿದ ದಾನಗಳನ್ನೂ ಬರೆಹರೂಪಕ್ಕೆ ಇಳಿಸಿ, ಕಾರ್ಯಗತ ಮಾಡುವ ಹೊಣೆಗಾರಿಕೆ ಇವರದಾಗಿತ್ತು. ಪುಣ್ಯವಲ್ಲಭರೆಂಬ ಕುಲಕ್ಕೆ ಸೇರಿದ ಇಂಥ ನಾಲ್ಕರು ಅಧಿಕಾರಿಗಳ ಹೆಸರುಗಳು ಶ್ರೀರಾಮ, ಅನಿರವದ್ಯ, ಅನಿವಾರಿತ, ಧನಂಜಯ ಶಾಸನಗಳಿಂದ ತಿಳಿದುಬಂದಿದೆ. ಶಾಸನಗಳನ್ನು ಬರೆಯಲು ಸಹ ಅಧಿಕಾರಿಗಳಿದ್ದರು. ಮಹೇಂದ್ರ ಪಲ್ಲವಾಚಾರಿ, ಸಿಂಗುಟ್ಟೆ, ಈಶಾನ ಮುಂತಾದವರು ಇಂಥ' ಲೇಖಕರು. ಕೇಂದ್ರ ಆಡಳಿತ ಕಾರ್ಯಾಗಾರವೊಂದಿದ್ದು ಅಲ್ಲಿ ವ್ಯವಸ್ಥಿತ ರೀತಿಯಲ್ಲಿ ದಾಖಲೆಗಳನ್ನು ಇಡಲಾಗಿದ್ದಿತೆಂದು ಊಹಿಸಬಹುದಾಗಿದೆ. ಹಿಂದೆ ಮಾಡಲಾದ ಶಾಸನಗಳನ್ನು ಉಲ್ಲೇಖಿಸಿ ಅದಕ್ಕೆ ಮತ್ತಷ್ಟನ್ನು ಸೇರಿಸಿಯೋ ಅಥವಾ ಲುಪ್ತವಾಗಿದ್ದಲ್ಲಿ ಅವುಗಳನ್ನು ಪುನರುಜ್ಜೀವನಗೊಳಿಸಿಯೋ ನೀಡಲಾದ ದಾನಶಾಸನಗಳಿವೆ.

ಆಡಳಿತದ ಘಟಕಗಳಲ್ಲಿ ಅತಿ ಸಣ್ಣದು ಗ್ರಾಮ. ಇದರ ಮುಖ್ಯಸ್ಥ ಗಾಮುಂಡ. ಕರಣ (ಗ್ರಾಮಭೋಗಿಕ) ಎಂಬುವನು ಇನ್ನೊಬ್ಬ ಗ್ರಾಮಾಧಿಕಾರಿ. ಈತ ಲೆಕ್ಕಪತ್ರಗಳ ವಹಿವಾಟನ್ನು ನಡೆಸುತ್ತಿದ್ದ. ಅರಸನಿಗೂ ಇತರ ಹಿರಿಯ ಆಡಳಿತಾಧಿಕಾರಿಗಳಿಗೂ ಇವರು ಆಡಳಿತದಲ್ಲಿ ಪ್ರಮುಖವಾದ ಕೊಂಡಿಗಳೂ ಆಗಿದ್ದರು. ಅಗ್ರಹಾರ ಗ್ರಾಮಗಳಲ್ಲಿ ಗ್ರಾಮದ ಹಿರಿಯರೆಲ್ಲ ಕೂಡಿದ ಮಹಾಜನ ಎಂಬ ಒಂದು ಸಮುದಾಯ ಇರುತ್ತಿತ್ತು. ಸಾಂಘಿಕ ಜೀವನಕ್ಕೆ ಸಂಬಂಧಿಸಿದಂತೆ ಕಟ್ಟುಪಾಡುಗಳನ್ನು ರೂಪಿಸುವ, ಗ್ರಾಮಸ್ಥರ ಯೋಗಕ್ಷೇಮವನ್ನು ವಹಿಸುವ, ಸಾಮಾಜಿಕ ವ್ಯವಸ್ಥೆ ಕಾಪಾಡುವ ಕರ್ತವ್ಯ ಮಹಾಜನರದು. ಅನೇಕ ಸಂದರ್ಭಗಳಲ್ಲಿ ಇವರ ಅಪ್ಪಣೆಯನ್ನು ಪಡೆದೆ ಅರಸರೂ ದಾನಧರ್ಮಾದಿ ಕಾರ್ಯಗಳನ್ನು ಮಾಡಬೇಕಿತ್ತು.

**ಆರ್ಥಿಕ-ಸಾಮಾಜಿಕ ಸ್ಥಿತಿ :** ವ್ಯವಸಾಯ ಜನರ ಮುಖ್ಯ ಕಸುಬಾಗಿತ್ತು. ಭೂಮಿಯನ್ನೂ ಅದರ ಉತ್ಪತ್ತಿಗೆ ಅನುಗುಣವಾಗಿ ಅವು ಪಡೆದಿದ್ದ ನೀರಿನ ಆಸರೆಗನುಗುಣವಾಗಿ ವಿಂಗಡಿಸಲಾಗಿತ್ತು. ಬತ್ತ, ಕಬ್ಬು, ನವಣೆ, ಸಾಮೆ, ಗೋದಿ ಅಂದಿನ ಮುಖ್ಯ ಬೆಳೆಗಳು. ದೇಶದಲ್ಲಿ ಬೇಸಾಯಗಾರರು ಹೇರಳವಾಗಿದ್ದು ದೇಶ ದವಸಧಾನ್ಯಗಳಿಂದ ಸಮೃದ್ಧವಾಗಿತ್ತು. ಅರಸರು ಅನೇಕ ತಟಾಕಗಳನ್ನು ರಾಜ್ಯದಲ್ಲಿ ಕಟ್ಟಿಸಿ ಬೇಸಾಯಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ನೇಕಾರಿಕೆ ಕಸಬುಗಳಲ್ಲಿ ಮುಖ್ಯವಾದುದಾಗಿತ್ತು. ಈ ಪ್ರದೇಶ ಹತ್ತಿ ಬೆಳೆಗೆ ಅನುಕೂಲವಾದ ವಾತಾವರಣವನ್ನು ಪಡೆದಿದ್ದುದರಿಂದ ಹತ್ತಿ ಇಲ್ಲಿ ವಿಶೇಷವಾಗಿ ಬೆಳೆಯುತ್ತಿದ್ದು ಹತ್ತಿಯ ಬಟ್ಟೆಗಳನ್ನು ಇಲ್ಲಿ ನೇಯುತ್ತಿದ್ದಿರಬೇಕು. ಅಲ್ಲದೆ ರೇಷ್ಮೆ ಬಟ್ಟೆಗಳನ್ನು ತಯಾರಿಸಲಾಗುತ್ತಿತ್ತು. ಪಟ್ಟಗಾಜಿರ ಉಲ್ಲೇಖ ಶಾಸನಗಳಲ್ಲಿ ಬಂದಿದೆ. ವ್ಯಾಪಾರ ಈ ಕಾಲದಲ್ಲಿ ಚೆನ್ನಾಗಿ ವ್ಯವಸ್ಥಿತವಾಗಿತ್ತು. ಆಂತರಿಕ ವ್ಯಾಪಾರವಲ್ಲದೆ ಪರದೇಶಗಳೊಡನೆ, ಪ್ರಮುಖವಾಗಿ ಪರ್ಷಿಯ ದೇಶದೊಡನೆ ಕರ್ನಾಟಕ ವಾಣಿಜ್ಯ ಸಂಬಂಧಗಳನ್ನು ಹೊಂದಿತ್ತೆನಿಸುತ್ತದೆ. ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಘಗಳಿದ್ದವು. ಅಯ್ಯಾವೊಳೆಐನೂರ್ವ್ವರದು ಒಂದು ಪ್ರಮುಖ ವಣಿಕ ಸಂಘ. ಇದಕ್ಕೆ ಸ್ವತಂತ್ರವಾದ ಸ್ಥಾನಮಾನವಿದ್ದಂತೆ ತೋರುತ್ತದೆ. ನಗರ ಎಂಬ ವರ್ತಕರ ಶ್ರೇಣಿ ಸಹ ಇತ್ತು. ಅಲ್ಲದೆ ಕಂಚುಗಾರರು, ತೆಲ್ಲಿಗರು ಇತ್ಯಾದಿ ಇತರ ವೃತ್ತಿಗಳಿಗೆ ಸಂಬಂಧಿಸಿದವರು ತಮ್ಮದೇ ಆದ ಶ್ರೇಣಿಗಳನ್ನು ರೂಪಿಸಿಕೊಳ್ಳುತ್ತಿದ್ದರು.

ಸಮಾಜದಲ್ಲಿ ವರ್ಣಾಶ್ರಮ ಪದ್ಧತಿ ಇತ್ತು. ಬ್ರಾಹ್ಮಣರು ವಿದ್ಯಾವಿನಯಸಂಪನ್ನರಾಗಿದ್ದು ಅಧ್ಯಯನ ಅಧ್ಯಾಪನಗಳಲ್ಲಿ ನಿರತರಾಗಿದ್ದರು. ಅರಸರಿಂದ ಗೌರವಿಸಲ್ಪಟ್ಟು ಅವರಿಗೆ ರಾಜನೀತಿಯಲ್ಲೂ ಸಲಹೆಗಳನ್ನು ನೀಡುತ್ತಿದ್ದರು. ಇಮ್ಮಡಿ ಪುಲಕೇಶಿಗೆ ನಾಗವರ್ಧನಾಚಾರ್ಯನೆಂಬಾತ, ಇಮ್ಮಡಿ ವಿಕ್ರಮಾದಿತ್ಯನಿಗೆ ಸುದರ್ಶನಾಚಾರ್ಯನೆಂಬಾತ ಗುರುವಾಗಿದ್ದರು. ಇಮ್ಮಡಿ ಕೀರ್ತಿವರ್ಮನ ಆಡಳಿತದಲ್ಲಿ ವ್ಯಾಘ್ರಸ್ವಾಮಿ ಎಂಬ ವೇದವೇದಾಂಗಪಾರಂಗತನೂ ನೀತಿಶಾಸ್ತ್ರ ವಿಶಾರದನೂ ಆದ ಬ್ರಾಹ್ಮಣನೋರ್ವ ಮಹೋಪಕಾರಕನಾಗಿದ್ದ.

ಅರಸನಿಗೆ ಬಾಲ್ಯದಿಂದಲೂ ಶಸ್ತ್ರಾಸ್ತ್ರಗಳಲ್ಲಿ , ರಾಜನೀತಿಯಲ್ಲಿ ಉಚಿತವಾದ ಉತ್ತಮವಾದ ತರಬೇತಿಯನ್ನು ನೀಡಲಾಗುತ್ತಿತ್ತು. ಮಂಗಲೀಶ ಕೋಟೆ ಕೊತ್ತಳಗಳ ರಚನೆಯಲ್ಲಿ ಪರಿಣತನೆಂದು ಮಹಾಕೂಟದ ಶಾಸನ ಅವನನ್ನು ಹೊಗಳಿದೆ. ತನ್ನ ಮಗನಾದ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯರಿಗೆ ವಿಕ್ರಮಾದಿತ್ಯ ಸೂಕ್ತ ತರಬೇತಿ ನೀಡಿದ್ದನೆಂಬುದು ತಿಳಿದಿದೆ. ವಾತಾಪಿಯು ಚತುರ್ದಶವಿದ್ಯೋಪಲಸಿತರಾದ ಅನೇಕ ಸಹಸ್ರ ದ್ವಿಜರಿಂದ ಶೋಭಿಸುತ್ತಿತ್ತೆಂಬ ಶಾಸನದ ಹೇಳಿಕೆಯನ್ನು ಗಮನಿಸಿದರೆ ಅಂದು ಅಂಥ ವಿದ್ಯೆಗಳನ್ನು ಕಲಿಸುವ ವಿದ್ಯಾಸಂಸ್ಥೆಗಳಿದ್ದುವೆಂಬುದು ಸ್ಪಷ್ಟವಾಗುತ್ತದೆ.

ಸಮಾಜದಲ್ಲಿ ಸ್ತ್ರೀಯರಿಗೆ ಗಣ್ಯವಾದ ಸ್ಥಾನವಿತ್ತು. ಅವರು ಆಡಳಿತದಲ್ಲಿಯೂ ಪಾಲುಗೊಳ್ಳುತ್ತಿದ್ದರು. ಚಂದ್ರಾದಿತ್ಯನ ರಾಣಿ ವಿಜಯ ಭಟ್ಟಾರಿಕಾ ತನ್ನ ಹೆಸರಿನಲ್ಲಿ ಎರಡು ದತ್ತಿಗಳನ್ನು ನೀಡಿದಳು. ವಿನಯಾದಿತ್ಯನ ಪತ್ನಿ ವಿನಯವತಿ ರಾಜಧಾನಿಯಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಮೂರ್ತಿಗಳನ್ನು ಸ್ಥಾಪಿಸಿದಳು. ಲೋಕತಿನಿಮ್ಮಡಿ ಎಂಬಾಕೆ ಕುರ್ತಕೋಟಿ ಗ್ರಾಮವನ್ನು ಆಳುತ್ತಿದ್ದಳು. ವಿನಯಾದಿತ್ಯನ ಮಗಳಾದ ಕುಂಕುಮ ಮಹಾದೇವಿ ತನ್ನ ಸೋದರ ವಿಜಯಾದಿತ್ಯನೊಡನೆ ಕುಹುಂಡಿನಗರವೆಂಬ ಸ್ಕನ್ಧಾವಾರದಲ್ಲಿದ್ದಳು. ಸ್ತ್ರೀಯರಿಗೆ ವಿದ್ಯಾಭ್ಯಾಸದ ಸೌಲಭ್ಯಗಳು, ಅವಕಾಶಗಳು ಇದ್ದವು. ಸ್ತ್ರೀಯರು ಉತ್ತಮ ಗೃಹಿಣಿಯರು ಮಾತ್ರವಲ್ಲದೆ ಅಧಿಕಾರಿಗಳೂ ಕಲಾಜೀವಿಗಳೂ ಆಗಿದ್ದರು. ವಿಜಯಾದಿತ್ಯನ ಪ್ರಾಣವಲ್ಲಭೆ ಎನಿಸಿಕೊಂಡ ವಿನಾಪೋಟಿ ಎಂಬ ಸೂಳೆ ಮಕುಟೇಶ್ವರ ದೇವರಿಗೆ ರತ್ನ ಹಾಗೂ ಬೆಳ್ಳಿಯ ಪೀಠಗಳನ್ನು ದಾನಮಾಡಿದಳೆಂದು ತಿಳಿದಿದೆ. ಈಕೆ ಕೂಚಿಪೋಟಿಯ ಮಗಳು. ಬಾಲಬ್ಬೆ ಮುಂತಾದ ಇತರ ವಾರಾಂಗನೆಯರ ಹೆಸರುಗಳೂ ಈ ಕಾಲದ ಶಾಸನಗಳಲ್ಲಿ ಲಭಿಸಿವೆ. ಈ ಕಾಲದಲ್ಲಿ ದೇವದಾಸಿ ಪದ್ಧತಿ ಅಸ್ತಿತ್ವದಲ್ಲಿತ್ತು.

**ಲಲಿತ ಕಲೆ ಸಾಹಿತ್ಯ :** ಈ ಕಾಲದಲ್ಲಿ ಶಿಲ್ಪಕಲೆ, ಗಾಂಧರ್ವಕಲೆ ಮುಂತಾದ ಲಲಿತ ಕಲೆಗಳನ್ನು ಬೋಧಿಸುವ ಸಂಸ್ಥೆಗಳು ಇದ್ದಿರಬಹುದಾಗಿದೆ. ಐಹೊಳೆ, ಬಾದಾಮಿ, ಪಟ್ಟದಕಲ್ಲು ಹಾಗೂ ಮಹಾಕೂಟಗಳಲ್ಲಿ ಚಾಳುಕ್ಯ-ವಾಸ್ತು ಶಿಲ್ಪ ಶೈಲಿಯು ಆರಂಭವಾಯಿತು. ಐಹೊಳೆ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಒಂದು ತರಬೇತಿ ಕೇಂದ್ರದಂತಿತ್ತು. ಅನಿವಾರಿತಾಚಾರಿ ಗುಣ್ಡನೆಂಬ ಶಿಲ್ಪಿಗೆ ಪೃಥ್ವಿಯ ಬಿನ್ನಾಣಿಗಳು ತ್ರಿಭುವನಾಚಾರಿ ಎಂಬ ಬಿರುದನ್ನಿತ್ತಿದ್ದರು. ಸರ್ವಸಿದ್ಧಿ ಆಚಾರ್ಯ ಎಂಬವ ಪಟ್ಟದಕಲ್ಲಿನ ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯಗಳನ್ನು ಕಟ್ಟಿದ ಸೂತ್ರಧಾರಿ. ಅನೇಕ ರೂಪವಾಸ್ತು ಪಿತಾಮಹನೆಂದೂ ವಾಸ್ತು ಪ್ರಾಸಾದಯಾನಾಸನಶಯನ ಮಣಿಮಕುಟರತ್ನಚೂಡಾಮಣಿಯೆಂದೂ ಶಾಸನ ಇವನನ್ನು ವರ್ಣಿಸಿರುವುದನ್ನು ಗಮನಿಸಿದರೆ ಈತ ಹಲವಾರು ನಗರಗಳನ್ನು ಯೋಜಿಸಿದನೆಂದೂ ಅರಮನೆಗಳು ಸಿಂಹಾಸನಾದಿ ಪೀಠೋಪಕರಣಗಳನ್ನು ರೂಪಿಸಿದನೆಂದೂ ಊಹಿಸಬಹುದು. ಈತನ ಚಟ್ಟ ರೇವಡಿವಜ್ಜರ್. ಈತನನ್ನು ತೆಂಕಣ ದಿಶೆಯ ಸೂತ್ರಧಾರಿ ಎಂದು ವರ್ಣಿಸಲಾಗಿದೆ. ಶಿವವದ್ದನ ಮಾನ, ಆತನ ಮಗ ಶಿವ, ಮೊಮ್ಮಗ ಶುಭದೇವ ಈ ಮೂವರು ಈ ಕಾಲದ ಖ್ಯಾತ ಶಿಲ್ಪಿಗಳು. ಬಲದೇವ, ಆರ್ಯ, ಪುಲ್ಲಪ್ಪನ್ ನಿರ್ಮಾಣದೇವನ್, ಆರ್ಯಮಿಞ್ಚಿ ಉಪಾಧ್ಯಾಯ, ಏರಂಡರ ಗಣಚ, ದೋಣಸಾಮಿ, ಅಯ್ಯಸಾಮಿ, ಕಲ್ಕುಟ್ಟಿ, ಕೊಟ್ಟಮಞ್ಚಿ ಎಂಬ ಹಲವಾರು ಶಿಲ್ಪಿಗಳ ಹೆಸರು ಸಮಕಾಲೀನ ಶಾಸನಗಳಿಂದ ತಿಳಿದಿದೆ. ಇನ್ನೊಬ್ಬ ಶಿಲ್ಪಿ ನರಸೊಬ್ಬನಿಗೆ ಜಂಬೂದ್ವೀಪದಲ್ಲಿಯೇ ಸರಿಸಮಾನರು ಯಾರೂ ಇರಲಿಲ್ಲವೆಂಬುದು ಒಂದು ಶಾಸನದ ಉದ್ಗಾರ. ಗಂಧರ್ವದ ಪ್ರಸ್ತಾಪ ಇನ್ನೊಂದು ಶಾಸನದಲ್ಲಿದೆ. ಅಚಲನೆಂಬ ನಟನ ಗರ್ಜನೆಯನ್ನು ಕೇಳಿದೊಡನೆ ಉಳಿದೆಲ್ಲ ನಟರು ತಮ್ಮ ಅಹಂಕಾರವನ್ನು ಅಡಗಿಸಿಕೊಳ್ಳುತ್ತಿದ್ದರು ಎಂದು ಪಟ್ಟದಕಲ್ಲಿನ ಶಾಸನದಲ್ಲಿ ಹೇಳಿದೆ.

ಈ ಕಾಲದಲ್ಲಿ ಅರಸರ ಪೋಷಣೆಗೆ ಒಳಪಟ್ಟು ಸಂಸ್ಕೃತ ಸಾಹಿತ್ಯ ಕೃತಿಗಳು ರಚಿತವಾದವು. ಸಂಸ್ಕೃತ ಭಾಷೆಯಲ್ಲಿನ ಶಾಸನಗಳು ಸಹ ಅಂದಿನ ಸಾಹಿತ್ಯಕ್ಕೆ ಕೈಗನ್ನಡಿಗಳಾಗಿವೆ. ಮಂಗಲೀಶನ ಮಹಾಕೂಟಸ್ತಂಭ ಶಾಸನದಲ್ಲಿ ಕಾಳಿದಾಸನ ರಘುವಂಶ ಹಾಗೂ ರಾಮಾಯಣ ಮತ್ತು ಅರ್ಥಶಾಸ್ತ್ರಗಳಿಂದ ಅನೇಕ ಪದಗಳನ್ನೂ ಪದಪುಂಜಗಳನ್ನೂ ಎತ್ತಿಕೊಂಡಿರುವುದು ಕಂಡುಬರುತ್ತದೆ. ಶಾಸನದಲ್ಲಿನ ಗದ್ಯ ಬಾಣನ ಶೈಲಿಯನ್ನು ನೆನಪಿಗೆ ತರುತ್ತದೆ. ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದ ಕರ್ತೃ ರವಿಕೀರ್ತಿ ತಾನು ಕಾಳಿದಾಸ ಭಾರವಿಗಳಷ್ಟೇ ಖ್ಯಾತನೆಂದು ಹೇಳಿಕೊಂಡಿರುವುದು ಉತ್ಪ್ರೇಕ್ಷೆಯೆನಿಸಿದರೂ ಅವರ ಶೈಲಿಯ ಪ್ರಭಾವ ಶಾಸನದಲ್ಲಿ ಕಾಣುತ್ತದೆ. ಚಂದ್ರಾದಿತ್ಯನ ಪತ್ನಿ ವಿಜಯ ಭಟ್ಟಾರಿಕೆಯು ವಿಜ್ಜಿಕಾ ಎಂಬ ಕವಯಿತ್ರಿಯಾಗಿದ್ದಳೆಂದು ಊಹಿಸಲಾಗಿದೆ. ಆದರೆ ಈ ಕಾಲದ ಕನ್ನಡ ಸಾಹಿತ್ಯ ಕೃತಿಗಳು ಯಾವುವೂ ದೊರೆತಿಲ್ಲ. ವಿಮಲ, ಉದಯ (ವಿಮಲೋದಯ), ನಾಗಾರ್ಜುನ, ಜಯಬಂಧು, ದುರ್ವಿನೀತರೆಂಬ ಗದ್ಯಕವಿಗಳು, ಶ್ರೀವಿಜಯ, ಕವೀಶ್ವರ ಪರಮ ಶ್ರೀವಿಜಯ ಅಥವಾ ಶ್ರೀವಿಜಯ ಕವೀಶ್ವರ ಪಂಡಿತ, ಚಂದ್ರ ಮತ್ತು ಲೋಕಪಾಲ ಎಂಬ ಪದ್ಯಕವಿಗಳನ್ನು ಕವಿರಾಜಮಾರ್ಗಕಾರ ತನಗೂ ಹಿಂದಿನವರೆಂದು ಹೆಸರಿಸಿದ್ದಾನೆ. ಇವರ ಯಾವ ಕೃತಿಗಳೂ ಲಭಿಸಿಲ್ಲ. ಆದರೆ ಸಮಕಾಲೀನ ಶಾಸನ ಸಾಹಿತ್ಯವನ್ನು ಗಮನಿಸಿದಾಗ ಈ ವೇಳೆಗೆ ಕನ್ನಡ ಭಾಷೆಯಲ್ಲಿ ವಿಸ್ತಾರವಾದ ಸಾಹಿತ್ಯ ಗ್ರಂಥಗಳೂ ಇದ್ದಿರಬಹುದೆನಿಸುತ್ತದೆ. ಇಂಥ ಹಲವಾರು ಶಾಸನಗಳು ಬಾದಾಮಿ, ಐಹೊಳೆ ಮುಂತಾದೆಡೆಗಳಲ್ಲಿ ದೊರೆತಿವೆ. ಕಪ್ಪೆ ಅರಭಟ್ಟನ ಶಾಸನದಲ್ಲಿ ಕನ್ನಡ ಛಂದಸ್ಸಿನಲ್ಲಿ ಪ್ರಾಚೀನವಾದ ತ್ರಿಪದಿಯ ವೃತ್ತಗಳ ಉಪಯೋಗ ಕಂಡುಬಂದಿದೆ. ಚತ್ತಾಣ, ಬೆದಂಡೆ, ಗದ್ಯ ಕಥೆಗಳಂಥ ಕಾವ್ಯಪ್ರಕಾರಗಳು, ಪದ, ಮೆಲ್ವಾಡು, ಪಾಡು ಮುಂತಾದ ಸಾಹಿತ್ಯ ರೂಪಕಗಳು, ಪಗರಣವೆಂಬ ದೃಶ್ಯವಿಧಾನಗಳು ಈ ಕಾಲದ ಸಾಹಿತ್ಯದ ಪ್ರಮುಖ ವೈಶಿಷ್ಟ್ಯಗಳಾಗಿ ಬೆಳೆದಿದ್ದಿರಬಹುದು. (ಬಿ.ಆರ್.ಜಿ.)

**ವಾಸ್ತುಶಿಲ್ಪ :** ಬಾದಾಮಿಯ ಚಳುಕ್ಯರ ಕಾಲದ ಮುಖ್ಯ ವಾಸ್ತು ಕೃತಿಗಳೆಲ್ಲ ಅವರ ರಾಜಧಾನಿಯಾಗಿದ್ದ ಬಾದಾಮಿ, ಅದರ ಪರಿಸರದಲ್ಲೇ ಇರುವ ಮಹಾಕೂಟ, ನಾಗರಾಳ, ಬಾದಾಮಿಗೆ 24ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಬಲದಂಡೆಯಲ್ಲಿರುವ ಪಟ್ಟದಕಲ್ಲು, ಅದೇ ನದಿಯ ಎಡದಂಡೆಯಲ್ಲಿರುವ ಐಹೊಳೆ - ಈ ಸ್ಥಳಗಳಲ್ಲಿ ಇವೆ. ಐಹೊಳೆಯಲ್ಲಿರುವ ಒಂದು ಕೋಟೆಯ ಅವಶೇಷವನ್ನು ಬಿಟ್ಟರೆ ಮಿಕ್ಕವೆಲ್ಲ ದೇವಾಲಯಗಳು. ಬಾದಾಮಿಯಲ್ಲಿ ಸು.20, ನಾಗರಾಳಿನಲ್ಲಿ ಒಂದು, ಮಹಾಕೂಟದಲ್ಲಿ ಸು.10, ಪಟ್ಟದಕಲ್ಲಿನಲ್ಲಿ ಸು.12 ಮತ್ತು ಐಹೊಳೆಯಲ್ಲಿ ಸು.100ಕ್ಕೂ ಹೆಚ್ಚು ದೇವಾಲಯಗಳಿವೆ. ಅಲ್ಲದೆ ಆಂಧ್ರಪ್ರದೇಶದ ಮಹಬೂಬ್‌ನಗರ ಜಿಲ್ಲೆಯ ಅಲಂಪುರದಲ್ಲಿ ಒಂಬತ್ತು, ಕರ್ನೂಲು ಜಿಲ್ಲೆಯ ಸತ್ಯವೋಲು ಮತ್ತು ಮಹಾನಂದಿಗಳಲ್ಲಿ ಒಂದೊಂದು ದೇವಾಲಯಗಳು ಇವೆ. ಇವುಗಳಲ್ಲಿ ಹೆಚ್ಚಿನವು ಹಿಂದು ದೇವಾಲಯಗಳು. ಐದಾರು ಜೈನದೇಗುಲಗಳು, ಒಂದು ಅಥವಾ ಎರಡು ವಾಸ್ತು ಕೃತಿಗಳು ಬೌದ್ಧ ಎಂದು ಊಹಿಸಲು ಅವಕಾಶವಿದೆ.

ಬಾದಾಮಿಯ ಚಳುಕ್ಯರ ಕಾಲದ ಏಕೈಕ ಕ್ಷಾತ್ರವಾಸ್ತುವಿನ ಉದಾಹರಣೆಯಾಗಿರುವ ಐಹೊಳೆಯ ಕೋಟೆಗೋಡೆ ಸು.7 ಅಥವಾ 8ನೆಯ ಶತಮಾನದ್ದಿದ್ದಂತೆ ತೋರುತ್ತದೆ. ಆ ಕೋಟೆಯ ತಳವಿನ್ಯಾಸ ಸುಮಾರು ವೃತ್ತಾಕಾರವಾಗಿತ್ತೆಂದೂ ಅದರ ನಾಲ್ಕು ಕಡೆಯ ಮಹಾದ್ವಾರಗಳಲ್ಲೂ ಅಲ್ಲಲ್ಲಿ ಚೌಕಾಕಾರದ ಅಟ್ಟಾಲಕಗಳೂ ಇದ್ದುವೆಂದೂ ಅದು ಸುತ್ತಲೂ ಕಂದಕದಿಂದ ಪರಿವೃತವಾಗಿತ್ತೆಂದೂ ಅದರ ಈಗಿನ ಉಳಿಕೆಗಳಿಂದ ಊಹಿಸಬಹುದಾಗಿದೆ. ಯಾವ ಬಂಧಕ ಸಾಮಗ್ರಿಗಳನ್ನೂ ಉಪಯೋಗಿಸದೆ ದೊಡ್ಡ ಸೈಜುಕಲ್ಲುಗಳನ್ನು ಒಂದರ ಮೇಲೊಂದು ಪೇರಿಸಿ ಗೋಡೆಗಳನ್ನು ರಚಿಸಲಾಗಿದೆ.

ಈ ಕಾಲದ ಧಾರ್ಮಿಕ ವಾಸ್ತುಕೃತಿಗಳನ್ನು ಗುಹೆಗಳು ಮತ್ತು ಕಟ್ಟಡಗಳು ಎಂದು ವಿಂಗಡಿಸಬಹುದು. ಬಾದಾಮಿಯಲ್ಲಿ ಮೇಣಬಸ್ತಿಗಳು ಎಂದು ಕರೆಯಲಾಗುವ ನಾಲ್ಕು ಗುಹಾ ದೇವಾಲಯಗಳು, ಐಹೊಳೆಯಲ್ಲಿಯ ರಾವಳಫಡಿಗುಹೆ ಮತ್ತು ಇನ್ನೆರಡು ಗುಹೆಗಳು ಮೊದಲನೆಯ ರೀತಿಯವು. ಮರಳುಗಲ್ಲು ಗುಡ್ಡಗಳ ಕಡಿದಾದ ಮುಖದೊಳಕ್ಕೆ ಕೊರೆದಿರುವ ಈ ಗುಹೆಗಳಲ್ಲೆಲ್ಲ ಸಾಮಾನ್ಯವಾಗಿ ಒಂದು ಅಥವಾ ಹೆಚ್ಚು ಕಂಬಸಾಲುಗಳಿರುವ ಆಯಾಕಾರದ ಒಂದು ದೊಡ್ಡ ಹಜಾರ ಮತ್ತು ಅದರ ಹಿಂದೆ ಒಂದು

ಸಣ್ಣಗರ್ಭಗೃಹ ಮಾತ್ರ ಇರುತ್ತವೆ. ಹೊರಮೈಯನ್ನು ನಾಜೂಕಾಗಿ ಕೊರೆದಿರುವ ದಪ್ಪ ಕಂಬಗಳು, ಶಿಲ್ಪಾಲಂಕೃತ ಗೋಡೆಗಳು ಮತ್ತು ಚಾವಣಿಗಳು ಈ ಗುಹೆಗಳ ಆಕರ್ಷಕ ಭಾಗಗಳು. ಈ ಗುಹಾದೇವಾಲಯಗಳೆಲ್ಲ ಅವುಗಳ ವಾಸ್ತು ವಿನ್ಯಾಸಕ್ಕಿಂತ, ಅಲ್ಲಿ ಕಂಡುಬರುವ ದೇವದೇವತೆಗಳ ಬೃಹತ್ ಅತಿ ಉಬ್ಬುಶಿಲ್ಪಗಳು ಮತ್ತು ಅಲಂಕರಣದ ನಿಮ್ನ ಉಬ್ಬುಶಿಲ್ಪಗಳಿಗೆ ಪ್ರಸಿದ್ಧವಾಗಿವೆ. ಐಹೊಳೆಯ ಗುಹಾ ದೇವಾಲಯಗಳು ಚಿಕ್ಕವು. ಇವುಗಳಲ್ಲಿ ರಾವಳಫಡಿ ಗುಹೆ ಶೈವಧರ್ಮೀಯವಾದರೆ ಇನ್ನೆರಡು ಜೈನಗುಹೆಗಳು. ಬಾದಾಮಿಯ ಗುಹಾದೇವಾಲಯಗಳಲ್ಲಿ ನಾಲ್ಕನೆಯದು ಜೈನ, ಉಳಿದವುಗಳಲ್ಲಿ ಮೊದಲನೆಯದನ್ನು ಶೈವ ಗುಹೆಯೆಂದೂ 2 ಮತ್ತು 3ನೆಯವನ್ನು ವೈಷ್ಣವ ಗುಹೆಗಳೆಂದೂ ಅಲ್ಲಿಯ ಮುಖ್ಯ ಶಿಲ್ಪಗಳ ಆಧಾರದ ಮೇಲೆ ಕರೆಯುವುದುಂಟು. ಒಬ್ಬ ವಾಸ್ತು ಚರಿತ್ರಕಾರರ ಪ್ರಕಾರ ದಕ್ಷಿಣ ಭಾರತದ ಒಂದು ಜೈನ ಗುಹಾವಾಸ್ತು ಶಿಲ್ಪ ಸರಣಿಯಲ್ಲಿ ಬಾದಾಮಿಯ ಚಳುಕ್ಯರ ಕಾಲದ ಗುಹೆಗಳೇ ಅತ್ಯಂತ ಪ್ರಾಚೀನವಾದವು. ಇವುಗಳಲ್ಲೂ ಐಹೊಳೆಯ ಗುಹೆಗಳು ಮೊದಲವೆಂದೂ ಬಾದಾಮಿಯವು ಅನಂತರದವೆಂದೂ ಊಹೆ. ಬಾದಾಮಿಯ ಮೂರನೆಯ ಗುಹೆಯಲ್ಲಿ ಚಳುಕ್ಯ ಮಂಗಲೀಶನ ಒಂದು ಶಾಸನವಿದೆ. ಗುಹೆಯ ಕಾಲ ಶಕ 500 (578) ಎಂದು ಅದು ಸ್ಪಷ್ಟವಾಗಿ ತಿಳಿಸುತ್ತದೆ.

ಕಾರ್ತಿಕೇಯ ಶಿಲ್ಪ, ಹುಚ್ಚಮಲ್ಲಿ ಗುಡಿ, ಐಹೊಳೆ

ಚಳುಕ್ಯರ ಕಾಲದ ವಾಸ್ತುಕೃತಿಗಳೆಲ್ಲ ಬಿಜಾಪುರ ಜಿಲ್ಲೆಯಲ್ಲಿ ದೊರಕುವ ನಸುಗೆಂಪು ಅಥವಾ ತಿಳಿಹಳದಿ ಬಣ್ಣದ ಮರಳುಗಲ್ಲಿನಲ್ಲಿ ಕಟ್ಟಲಾದವು. ಹೆಚ್ಚು ಮಟ್ಟಿಗೆ ದೊಡ್ಡ ಚಪ್ಪಡಿಯಂಥ ಕಲ್ಲುಗಳನ್ನು ಯಾವ ಬಂಧಕ ಸಾಮಗ್ರಿಯನ್ನೂ ಉಪಯೋಗಿಸದೆ ಒಂದರ ಮೇಲೊಂದರಂತೆ ಪೇರಿಸಿ ಗೋಡೆಗಳನ್ನು ಎತ್ತುವುದು, ಅದೇ ರೀತಿಯ ಒಂದೊಂದೇ ದಪ್ಪ ಕಲ್ಲುಗಳನ್ನು ಕಂಬಗಳು ಮತ್ತು ತೊಲೆಗಳಾಗಿ ಉಪಯೋಗಿಸುವುದು, ದೊಡ್ಡ ಚಪ್ಪಡಿಗಳನ್ನು ಚಾವಣಿಗಾಗಿ ಕವುಚುವುದು - ಇದು ಈ ಕಾಲದ ವಾಸ್ತುಕೃತಿಗಳಲ್ಲಿ ಕಂಡುಬರುವ ತಂತ್ರ. ಚಳುಕ್ಯ ಪೂರ್ವಕಾಲದ ದಕ್ಷಿಣ ಭಾರತದಲ್ಲಿ ಶಿಲಾಕಟ್ಟಡಗಳ, ಅದರಲ್ಲೂ ಶಿಲಾ ದೇವಾಲಯಗಳ ರಚನೆ ಅಷ್ಟೇನೂ ಪ್ರಚಲಿತವಾಗಿರಲಿಲ್ಲ. ಅಂದಿನ ವಾಸ್ತು ರಚನೆಗಳಲ್ಲಿ ಗುಹಾ ರೀತಿಯನ್ನು ಬಿಟ್ಟರೆ, ಮರ ಅಥವಾ ಇಟ್ಟಿಗೆಯ ಕಟ್ಟಡಗಳಷ್ಟೇ ರೂಢಿಯಲ್ಲಿದ್ದವು. ಆದ್ದರಿಂದಲೆ ಭದ್ರತೆಯ ದೃಷ್ಟಿಯಿಂದ ಅಗತ್ಯವಾದ್ದಕ್ಕಿಂತ ಹೆಚ್ಚು ದಪ್ಪನೆಯ ಕಲ್ಲುಗಳ ಉಪಯೋಗ, ಸಾಮಗ್ರಿ ಮತ್ತು ಶಕ್ತಿಯ ಅಪವ್ಯಯ, ಚಳುಕ್ಯ ಶಿಲಾಕಟ್ಟಡಗಳಲ್ಲಿ ಕಂಡುಬರುತ್ತದೆಂದೂ ಇವು ಕಲೆಯ ಶೈಶವಾವಸ್ಥೆಯ ಸಾಮಾನ್ಯ ಕುರುಹೆಂದೂ ವಾಸ್ತುತಂತ್ರಜ್ಞರ ಅಭಿಪ್ರಾಯ. ಶಿಲಾಕಟ್ಟಡಗಳ ರಚನೆಯಲ್ಲಿ ಪೂರ್ವಸಂಪ್ರದಾಯದ ಹಿನ್ನೆಲೆಯಿಲ್ಲದಿದ್ದರೂ ಈ ದಿಶೆಯಲ್ಲಿ ನೂತನವಾಗಿ ಪ್ರಯೋಗಗಳನ್ನು ಮಾಡಿ ಮುಂದೆ ಅನೇಕ ಶತಮಾನಗಳ ಕಾಲ ಮುಂದುವರಿಯುವಂಥ ದೇವಾಲಯ ಸ್ವರೂಪವನ್ನು ರೂಪಿಸಿದ್ದು ಚಳುಕ್ಯರ ಕಾಲದ ಸಾಧನೆ. ಈ ದೃಷ್ಟಿಯಿಂದ ಸು.6ನೆಯ ಶತಮಾನದಿಂದ 8ನೆಯ ಶತಮಾನದವರೆಗೆ ಬೆಳೆದ ಪ್ರಯೋಗಾತ್ಮಕ ಚಳುಕ್ಯ ವಾಸ್ತುಶೈಲಿ ಭಾರತೀಯ ವಾಸ್ತುಚರಿತ್ರೆಯಲ್ಲಿ ಪ್ರಮುಖ ಸ್ಥಾನಗಳಿಸಿದೆ. ಈ ಕಾಲದ ವಾಸ್ತು ಕೃತಿಗಳನ್ನು ಅಭ್ಯಸಿಸಿರುವ ವಾಸ್ತು ಚರಿತ್ರಕಾರರು ಬಾದಾಮಿಯ ಚಳುಕ್ಯ ವಾಸ್ತುಸಂಪ್ರದಾಯವನ್ನು ಪ್ರಯೋಗಾತ್ಮಕ ವಾಸ್ತು ಸಂಪ್ರದಾಯವೆಂದೂ ಬಿಜಾಪುರ ಜಿಲ್ಲೆಯನ್ನೂ ಅದರಲ್ಲೂ ಐಹೊಳೆಯನ್ನು ಶಿಲಾದೇವಾಲಯ ಸಂಪ್ರದಾಯದ ತೊಟ್ಟಿಲು ಎಂದೂ ಕರೆದಿದ್ದಾರೆ.

ಬಾದಾಮಿಯ ಚಳುಕ್ಯ ಕಾಲದ ಮೊದಲ ದೇವಾಲಯಗಳ ರಚನೆಯಲ್ಲಿ ದೇವಾಲಯಗಳಿಗೆ ವಿಶಿಷ್ಟವಾದ ಪರಿಚಿತ ವಿನ್ಯಾಸ ಕಂಡುಬರುವುದಿಲ್ಲ. ದೂರದಿಂದ ನೋಡಿದರೆ ಅವನ್ನು ದೇವಾಲಯಗಳೆಂದು ಗುರುತಿಸುವುದೂ ಕಷ್ಟ. ಐಹೊಳೆಯ ಮಧ್ಯದಲ್ಲಿರುವ ಕೊಂತಿಗುಡಿ ಎಂದು ಕರೆಯುವ ಮೂರು ದೇವಾಲಯಗಳ ಗುಂಪು ಈ ಘಟ್ಟಕ್ಕೆ ಸೇರಿದವು. ಇವುಗಳಲ್ಲಿ ನವರಂಗದ ಹಿಂಭಾಗಕ್ಕೆ ಸರಿದ ಗರ್ಭಗೃಹ, ಸುಕನಾಸಿ, ಪ್ರದಕ್ಷಿಣಾಪಥ, ಸಭಾಮಂಟಪ, ಮುಖಮಂಟಪ ಮುಂತಾದ ಯಾವ ದೇವಾಲಯ ವೈಶಿಷ್ಟ್ಯಗಳೂ ಇಲ್ಲ. ತಳವಿನ್ಯಾಸದಲ್ಲಿ ಇವೆಲ್ಲ ಆಯಾಕಾರದ ಒಂದು ದೊಡ್ಡ ಹಜಾರ ಮಾತ್ರ. ಹಿಂಭಾಗದ ಗೋಡೆಗೆ ಸೇರಿದಂತೆ, ಹಜಾರದಲ್ಲಿ ಸ್ವಲ್ಪ ಭಾಗವನ್ನು ಆಕ್ರಮಿಸುವಂತೆ ಒಂದು ಆಯಾಕಾರದ ಗರ್ಭಗುಡಿಯನ್ನು ಅನಂತರ ಅಳವಡಿಸಲಾಗಿದೆ. ಕೊಂತಿಗುಡಿ ಗುಂಪಿನ ಮೊದಲನೆಯ ದೇವಾಲಯದ ಹಜಾರದಲ್ಲಿ ಗರ್ಭಗುಡಿಯ ಮುಂದೆ ಎರಡು ಕಂಬಗಳು ಇವೆ. ಎರಡನೆಯದರಲ್ಲಿ ಎಂಟು ಕಂಬಗಳನ್ನು ಅಡ್ಡಡ್ಡಲಾಗಿ ಎರಡು ಸಾಲುಗಳಾಗಿ ನಿಲ್ಲಿಸಲಾಗಿದೆ. ಆದರೆ ಮೂರನೆಯ ದೇವಾಲಯ ಪರಿಷ್ಕೃತ; ಇಲ್ಲಿ ಹಜಾರವನ್ನೇ ಮಧ್ಯದ ಒಂದು ಗೋಡೆಯಿಂದ ಎರಡು ಭಾಗ ಮಾಡಿ ಒಳಮಂಟಪ ಮತ್ತು ಮುಖಮಂಟಪದಂತೆ ಉಪಯೋಗಿಸಿಕೊಳ್ಳಲಾಗಿದೆ. ಅಲ್ಲದೆ, ಈ ದೇವಾಲಯದಲ್ಲಿ ಶಿಖರವನ್ನೂ ಅಳವಡಿಸುವ ಪ್ರಯತ್ನ ನಡೆದಿದೆ. ಕಂಬ ಮತ್ತು ಕಟ್ಟಡಗಳ ಕುಬ್ಜಾಕಾರ ಇವೆಲ್ಲ ಕೊಂತಿಗುಡಿ ದೇವಾಲಯಗಳ ಪ್ರಾಚೀನತೆಯನ್ನು ಸಾರುತ್ತವೆ.

ಈ ಪ್ರಯೋಗಾತ್ಮಕ ಘಟ್ಟಕ್ಕೇ ಸೇರಿದ ಇನ್ನೊಂದು ಕಟ್ಟಡ ಐಹೊಳೆಯ ಲಾಡಖಾನ್ ಗುಡಿ. ಪರ್ಸಿ ಬ್ರೌನ್ ಎಂಬ ವಿದ್ವಾಂಸ ಇದು ಐಹೊಳೆಯ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನವಾದ್ದೆಂದು (450) ಅಭಿಪ್ರಾಯಪಟ್ಟಿದ್ದರೂ ಇದು ಅಲ್ಲಿಯ ಇತರ ಕೆಲವು ದೇವಾಲಯಗಳಿಗಿಂತ ಸ್ವಲ್ಪ ಅನಂತರದ್ದೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ತಳವಿನ್ಯಾಸದಲ್ಲಿ ಇದು ಒಂದು ಚೌಕಾಕಾರದ ದೊಡ್ಡ ಹಜಾರ. ಆದರೆ ಒಳಭಾಗದಲ್ಲಿ ಹೊರ ಗೋಡೆಗಳಿಗೆ ಸಮಾನಾಂತರವಾಗಿರುವ ನಾಲ್ಕು ಕಂಬಗಳ ಎರಡು ಚೌಕಗಳಿದ್ದು, ಈ ಹಜಾರ ಏಕಕೇಂದ್ರದ ಮೂರು ಚೌಕಗಳ ಮಂಟಪದ ರೂಪ ತಾಳಿದೆ. ಹಿಂಭಾಗದ ಗೋಡೆಗೆ ಸೇರಿದಂತೆ ಚಿಕ್ಕ ಆಯಾಕಾರದ ಗರ್ಭಗುಡಿಯೂ ಮುಂಭಾಗದಲ್ಲಿ ಚೌಕ ಹಜಾರದಿಂದ ಮುಂದೆ ಸರಿದಿರುವ ಮುಖಮಂಟಪವೂ ಇವೆ. ಗರ್ಭಗುಡಿಯಲ್ಲಿ ಲಿಂಗವೂ ನಡುಚೌಕದಲ್ಲಿ ನಂದಿಯ ವಿಗ್ರಹವೂ ಇರುವುದರಿಂದ ಇದು ಶಿವದೇವಾಲಯವೆಂದು ತೋರುತ್ತದೆ. ಹೊರಗೋಡೆ ಇರುವಲ್ಲಿ ಮೊದಲು ಕಂಬಗಳಷ್ಟೇ ಇದ್ದು ಸುತ್ತಲೂ ತೆರೆದ ಮಂಟಪದಂತೆ ಕಟ್ಟಡವಿತ್ತೆಂದೂ ಅನಂತರ ಚಪ್ಪಡಿಗಳಿಂದಲೂ ದೊಡ್ಡ ಜಾಲಂಧ್ರಗಳಿಂದಲೂ ಹೊರಗೋಡೆಯನ್ನು ರಚಿಸಿರಬೇಕೆಂದೂ ಸ್ಪಷ್ಟವಾಗುತ್ತದೆ. ದೊಡ್ಡ ಚಪ್ಪಡಿಗಳನ್ನು ಇಳಿಜಾರಾಗಿರುವಂತೆ ಒಂದರ ಪಕ್ಕದಲ್ಲೊಂದರಂತೆ ಜೋಡಿಸಿ ಚಾವಣಿಯನ್ನು ರಚಿಸಲಾಗಿದೆ. ಹಾಸು ಹೆಂಚುಗಳ ಮೇಲಿನ ಹೊದಿಕೆ ಹೆಂಚುಗಳ ರೀತಿಯಲ್ಲಿ ಆ ಚಪ್ಪಡಿಗಳ ಮಧ್ಯದ ಸಂದುಗಳ ಮೇಲೆ ಕಿರಿ ಅಗಲದ ಉದ್ದ ಚಪ್ಪಡಿಗಳನ್ನು ಇಟ್ಟು ಸಂದುಗಳನ್ನು ಮುಚ್ಚಲಾಗಿದೆ. ಈ ರೀತಿಯ ಚಾವಣಿಯ ರಚನೆ ಪ್ರಾಯಶಃ ಈ ದೇವಾಲಯದಲ್ಲಿ ಮೊದಲಾಗಿ ಕಂಡುಬಂದಿದೆ. ಕರ್ನಾಟಕದಲ್ಲಿ ಮುಂದೆ ಅನೇಕ ಶತಮಾನಗಳ ಕಾಲ ಈ ವಿಧಾನ ಬಳಕೆಯಲ್ಲಿತ್ತು. ಮಾಳಿಗೆಯ ಮೇಲೆ, ಹಜಾರದ ನಡುಚೌಕದ ನೇರಕ್ಕೆ ಸರಿಯಾಗಿ, ಇನ್ನೊಂದು ಆಯ ತಳವಿನ್ಯಾಸದ ಚಿಕ್ಕ ಗರ್ಭಗೃಹವಿದೆ. ಇದರಲ್ಲಿ ಹೊರಗೋಡೆಗಳ ಮೇಲೆ ಅರೆಗಂಬಗಳು ಮತ್ತು ಕೆಲವು ಶಿಲ್ಪಾಲಂಕರಣಗಳು ಇವೆ. ಈ ಎರಡನೆಯ ಅಂತಸ್ತು ಮುಂದೆ

ಶಿಖರಗಳ ಬೆಳವಣಿಗೆಗೆ ಪೂರ್ವ ಸೂಚಿಯಾಗಿದ್ದಿರಬಹುದೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಇಲ್ಲಿಯ ಮುಖಮಂಟಪದ ಕಂಬಗಳಲ್ಲಿ ಅನೇಕ ಮಿಥುನ ಶಿಲ್ಪಗಳನ್ನು ಅಳವಡಿಸಲಾಗಿದೆ. ಅಲಂಕೃತ ಮುಖಮಂಟಪ, ಇಳಿಚಾವಣಿ, ಎರಡನೆಯ ಅಂತಸ್ತು ಮುಂತಾದ ಹೊಸ ಅಂಗಗಳನ್ನು ಲಾಡಖಾನ್ ಗುಡಿ ಹೊಂದಿರುವುದರಿಂದ ಇದನ್ನು ಕೊಂತಿಗುಡಿಗಿಂತ ಅನಂತರದ ಘಟ್ಟದ್ದೆಂದು ಪರಿಗಣಿಸಬಹುದಾಗಿದೆ.

ಐಹೊಳೆಯ ದುರ್ಗ ಗುಡಿ ಅಸಾಮಾನ್ಯ ರೀತಿಯ ವೈಶಿಷ್ಟ್ಯಪೂರ್ಣ ಕಟ್ಟಡ. ಇದು ದೇವಾಲಯಗಳ ವಿನ್ಯಾಸ ಇನ್ನೂ ರೂಪುಗೊಳ್ಳದಿದ್ದಾಗ, ಬೌದ್ಧರ ಚೈತ್ಯಾಲಯದ ಮಾದರಿಯನ್ನು ಅನುಸರಿಸಿ ನಿರ್ಮಿಸಲಾಗಿರುವ ಒಂದು ಕಟ್ಟಡವೆಂದೂ 600ಕ್ಕೂ ಹಿಂದಿನದಿರಬಹುದೆಂದೂ ಒಬ್ಬ ವಿದ್ವಾಂಸರು ಊಹಿಸಿದ್ದಾರೆ. ಈ ದೇವಾಲಯದ್ದು ಗಜಪೃಷ್ಠಾಕೃತಿಯ ತಳವಿನ್ಯಾಸ; ಮುಂಭಾಗ ಆಯಾಕಾರವಾಗಿದ್ದು ಅದೇ ನೇರದಲ್ಲೇ ಪಕ್ಕದ ಗೋಡೆಗಳು ಅರ್ಧವೃತ್ತಾಕಾರದಲ್ಲಿ ಸೇರುತ್ತವೆ. ಈ ವಿನ್ಯಾಸ ಹೊರಮೈಗಷ್ಟೇ ಮೀಸಲಾಗಿಲ್ಲ. ನಡುವಣ ಗರ್ಭಗೃಹ, ಅದರ ಮುಂದಿನ ಮಂಟಪ, ಗರ್ಭ ಗೃಹದ ಸುತ್ತಲಿನ ಪ್ರದಕ್ಷಿಣಾಪಥ'ವನ್ನು ಒಳಗೊಳ್ಳುವಂತಿರುವ ಎರಡನೆಯ ಕೋಶ, ಇವೆಲ್ಲವನ್ನೂ ಸಮಾನಾಂತರದಲ್ಲಿ ಸುತ್ತುವರಿದಂತೆ ಹೊರಸುತ್ತು ಗೋಡೆ - ಇವು ಹೀಗೆ ಇವೆ. ಈ ಎಲ್ಲ ಭಾಗಗಳೂ ಅದೇ ಗಜಪೃಷ್ಠ ವಿನ್ಯಾಸದ ಎತ್ತರದ ಅಧಿಷ್ಠಾನದ ಮೇಲೆ ನಿಂತಿವೆ. ಹೊರಸುತ್ತಿನಲ್ಲಿ ಗೋಡೆಯ ಬದಲು ಕಂಬಗಳಷ್ಟೇ ಇದ್ದರೂ ಒಳಸುತ್ತುಗಳು ಭದ್ರ ಗೋಡೆಯವಾಗಿವೆ. ಇವುಗಳಲ್ಲಿ ಅಲ್ಲಲ್ಲಿ ಜಾಲಂಧ್ರಗಳಿವೆ. ಎರಡನೆಯ ಸುತ್ತಿನ ಹೊರಮೈಯಲ್ಲಿ ದೇವಕೋಷ್ಠಗಳುಂಟು. ದೇವಾಲಯದ ಮುಂಭಾಗದಲ್ಲಿ ಎರಡು ಪಕ್ಕಗಳಲ್ಲಿ ಪಾವಟಿಗೆಗಳಿವೆ. ದ್ವಾರದ ಮುಂದಿನ ಅರ್ಧ ಮಂಟಪಕ್ಕೆ ಒಯ್ಯುವಂತೆ ಇವನ್ನು ರಚಿಸಲಾಗಿದೆ. ಮೂರು ಸುತ್ತುಗಳಿಗೂ ಬೇರೆ ಬೇರೆಯಾಗಿ ಬೇರೆ ಬೇರೆ ಮಟ್ಟಗಳಲ್ಲಿ ಚಾವಣಿಗಳಿವೆ. ಮಧ್ಯದ ಚಾವಣಿ ಮಟ್ಟಸವಾದ್ದು. ಇತರ ಎರಡು ಇಳಿಜಾರಾಗಿವೆ. ಗರ್ಭಗೃಹದ ನೇರದಲ್ಲಿ ಚಾವಣಿಯ ಮೇಲುಗಡೆ ಒಂದು ಶಿಖರವುಂಟು. ಆಕೃತಿಯಲ್ಲಿ ಸರಳವಾಗಿರುವ ದೇವಾಲಯದ ಗಾತ್ರಕ್ಕೆ ಸಣ್ಣದೆನಿಸುವ ಈ ಶಿಖರ ದೇವಾಲಯ ರಚನೆಯ ಕಾಲಕ್ಕಿಂತ ಸ್ವಲ್ಪ ಅನಂತರದ್ದಿರಬಹುದೆಂದೂ ಆದರೂ ನಾಗರ ಸಂಪ್ರದಾಯದ ಶಿಖರಗಳ ಉಗಮಾವಸ್ಥೆಗೆ ಸೇರಿದ್ದೆಂದೂ ಊಹಿಸಲಾಗಿದೆ.

ಚಳುಕ್ಯ ವಾಸ್ತುಶೈಲಿಯ ವಿಕಸನ ಹಂತಗಳಲ್ಲಿ ಮುಂದಿನ ಗಮನಾರ್ಹ ದೇವಾಲಯ ಐಹೊಳೆಯ ಹುಚ್ಚಮಲ್ಲಿ ಗುಡಿ. ಇದು ಆಯಾಕಾರದ ತಳ ವಿನ್ಯಾಸದ ಕಟ್ಟಡ. ಆದರೆ ಇದರಲ್ಲಿ ದೇವಾಲಯದ ವಿವಿಧಾಂಗಗಳು ಹೆಚ್ಚು ಕಡಿಮೆ ರೂಪುಗೊಂಡಿವೆ. ಒಳಗೆ ಗರ್ಭಗೃಹ, ಅರಬರೆ ಅಂತರಾಳ, ಮಧ್ಯ ಮಂಟಪ ಮತ್ತು ಮುಂದೆ ಮುಖಮಂಟಪ, ಅಲ್ಲದೆ ಗರ್ಭಗುಡಿಯ ಮೇಲೆ ನಾಗರ ಶೈಲಿಯ ಶಿಖರ ಇವೆ. ಶಿಖರರಹಿತವಾದ, ಆದರೆ ಎರಡನೆಯ ಅಂತಸ್ತುಳ್ಳ, ಸುಮಾರು ಇದೇ ವಿನ್ಯಾಸದ ಇನ್ನೊಂದು ದೇವಾಲಯವೆಂದರೆ ಶಾಸನಪ್ರಸಿದ್ಧವಾದ ಮೇಗುಟಿ, ಇದು 634ರಲ್ಲಿ ಇಮ್ಮಡಿ ಪುಲಕೇಶಿಯ ಕಾಲದಲ್ಲಿ ಕಟ್ಟಿದ್ದು.

ಕೊಂತಿಗುಡಿ, ಲಾಡಖಾನ್ ಮೊದಲಾದ ಘಟ್ಟಗಳಲ್ಲಿ ಬೆಳೆಯುತ್ತಿದ್ದ ಹಿಂದು ಜೈನ ದೇವಾಲಯಗಳು ಪ್ರಾಯಶಃ 6ನೆಯ ಶತಮಾನದ ಕೊನೆಯ ಅಥವಾ 7ನೆಯ ಶತಮಾನದ ಮೊದಲ ಭಾಗಕ್ಕೆ ಹಿಂದು ಪೂಜಾ ಮತ್ತು ಇತರ ಧಾರ್ಮಿಕ ಆಚಾರಗಳಿಗೆ ಅನುಕೂಲವಾದಂಥ ವಾಸ್ತು ರೂಪವನ್ನು ತಳೆಯಲಾರಂಭಿಸಿದವು. ಈ ಬೆಳವಣಿಗೆಯಲ್ಲಿ ಚಳುಕ್ಯ ನೆಲದಲ್ಲೇ ಎರಡು ಕವಲುಗಳನ್ನು ಕಾಣಬಹುದು: ಒಂದು ದ್ರಾವಿಡ, ಮತ್ತೊಂದು ನಾಗರ. ಚಳುಕ್ಯ ವಾಸ್ತುಚರಿತ್ರೆಯಲ್ಲಿ ನಾಗರ ರೀತಿಯ ಮೊದಲ ಘಟ್ಟಗಳು ಹಿಂದೆ ವಿವರಿಸಿರುವ ದುರ್ಗ ಮತ್ತು ಹುಚ್ಚಮಲ್ಲಿ ಗುಡಿಗಳಲ್ಲಿವೆಯಾದರೆ, ದ್ರಾವಿಡ ರೀತಿಯ ಮೊದಲ ಘಟ್ಟದ ಕೃತಿಗಳು ಐಹೊಳೆಯ ಒಂದೆರಡು ಚಿಕ್ಕ ಗುಡಿಗಳಲ್ಲೂ ಮಹಾಕೂಟ ಮತ್ತು ಬಾದಾಮಿಯ ಹಲವು ದೇವಾಲಯಗಳಲ್ಲೂ ಕಾಣುತ್ತವೆ. ಮಹಾಕೂಟದ ಮಹಾಕೂಟೇಶ್ವರ ದೇವಾಲಯ ಪ್ರಾಯಶಃ ಸು.600ರದು. ಇದು ದ್ರಾವಿಡ ಸಂಪ್ರದಾಯದ ಕಟ್ಟಡ. ಬಾದಾಮಿಯ ಬೆಟ್ಟದಲ್ಲಿರುವ ಮಾಲೆಗಿತ್ತಿ ಶಿವಾಲಯದಲ್ಲಿ ದ್ರಾವಿಡ ಸಂಪ್ರದಾಯದ ವಿಶಿಷ್ಟಾಂಶಗಳೆಲ್ಲ ರೂಪುಗೊಂಡಿವೆ. ಚೌಕಾಕಾರದ ಗರ್ಭಗೃಹ, ಮಧ್ಯಮಂಟಪ ಮತ್ತು ಮುಖಮಂಟಪಗಳುಳ್ಳ ಈ ಗುಡಿಯ ರಚನೆಯಲ್ಲಿ ದಪ್ಪ ಕಂಬಗಳು, ಗೋಡೆಗಳು ಮುಂತಾದವುಗಳ ಉಪಯೋಗವಿಲ್ಲದ ಹೊರ ಅಲಂಕರಣದಲ್ಲಿ ಇರುವ ಸೀಮಿತ ವಾಸ್ತುಶಿಲ್ಪ ರೂಪಗಳು. ಅವುಗಳ ನಿರೂಪಣೆಯಲ್ಲಿ ಕಂಡುಬರುವ ಹೊಸತನದ ಹುರುಪು ಇವು ಇದೊಂದು ಆರಂಭದ ಘಟ್ಟದ ಕೃತಿಯೆಂದು ಸಾರುತ್ತವೆ. ಆದರೆ ಗರ್ಭಗುಡಿಯ ಮೇಲಿನ ಶಿಖರ ಮೆಟ್ಟಿಲು ಮೆಟ್ಟಿಲಾಗಿ ಮೇಲೆದ್ದಿದ್ದು ದ್ರಾವಿಡ ಸಂಪ್ರದಾಯದ ಎಲ್ಲ ಅಂಶಗಳೂ ಇದರಲ್ಲಿ ರೂಪುಗೊಂಡಿವೆ.

ಹಾರುತ್ತಿರುವ ಗಂಧರ್ವ ದಂಪತಿಗಳು, ಬಾದಾಮಿಯ 1ನೆಯ ಗುಹೆಯ ಚಾವಣಿಯ ಶಿಲ್ಪ

ಪಟ್ಟದಕಲ್ಲಿನ ದೇವಾಲಯಗಳು ಬಾದಾಮಿಯ ಚಳುಕ್ಯರ ಆಳಿಕೆಯ ಕೊನೆಯ ಘಟ್ಟದವು. ಇಲ್ಲಿರುವ ವಿರೂಪಾಕ್ಷ ದೇವಾಲಯ ಆ ಕಾಲದ ದೇವಾಲಯಗಳಲ್ಲಿ ಅತಿ ದೊಡ್ಡದು. ಇಮ್ಮಡಿ ವಿಕ್ರಮಾದಿತ್ಯನ ಪಟ್ಟದರಸಿ ಲೋಕ ಮಹಾದೇವಿ ಇದನ್ನು ಕಟ್ಟಿಸಿದಳೆಂದು (ಸು.740) ಅಲ್ಲಿ ದೊರಕಿರುವ ಒಂದು ಶಾಸನದಿಂದ ತಿಳಿಯುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ದೊಡ್ಡ ಸಂಭಾಮಂಟಪ, ಇದಕ್ಕೆ ಮೂರು ಕಡೆಗಳಿಂದ ಪ್ರವೇಶ ದ್ವಾರಗಳು, ಇವುಗಳ ಮುಂದೆ ಅರ್ಧ ಮಂಟಪಗಳು ಇವೆ. ಈ ಮುಖ್ಯ ಘಟಕದಿಂದ ಸ್ವಲ್ಪ ಬಿಟ್ಟಂತೆ ಮುಂಭಾಗದಲ್ಲಿ ಒಂದು ಪ್ರತ್ಯೇಕ ನಂದಿ ಮಂಟಪ, ಇವೆಲ್ಲವನ್ನೂ ಒಳಗೊಳ್ಳುವಂತೆ ಬೃಹತ್ ಪ್ರಾಕಾರ, ಪ್ರಾಕಾರಕ್ಕೆ ಸೇರಿದಂತೆ ಉಪದೇವತೆಗಳಿಗೆ ಸಣ್ಣ ಗುಡಿಗಳು ಇವೆ. ವಿರುವಿನ್ಯಾಸದಲ್ಲಿ ಎತ್ತರದ ಅಧಿಷ್ಠಾನ, ದೇವಕೋಷ್ಠಗಳು, ಜಾಲಂಧ್ರಗಳು ಮತ್ತು ಶಿಲ್ಪಗಳಿಂದಲಂಕೃತವಾದ ಭಿತ್ತಿ, ಮೇಲೆ ಕಪೋತ ಕೂಟ ಶಾಲೆಗಳಿಂದ ಅಲಂಕೃತವಾದ ಹಾರ, ಗರ್ಭಗುಡಿಯ ಮೇಲೆ ಈ ಹಿಂದಿನ ಅಂಶಗಳನ್ನು ಅದೇ ಕ್ರಮದಲ್ಲಿ ಘಟ್ಟಘಟ್ಟಕ್ಕೆ ಚಿಕ್ಕದಾಗುವಂತೆ ಪುನರಾವರ್ತಿಸಿದ್ದು ಸ್ತೂಪಿಯಿಂದ ಅಲಂಕೃತವಾದ ದ್ರಾವಿಡ ಶೈಲಿಯ ತ್ರಿತಳ ಶಿಖರ ಇದೆ. ಹೊರ ಪ್ರಾಕಾರದ ಪ್ರವೇಶದ್ವಾರದ ಮೇಲೆ ಒಂದು ಕುಬ್ಜಾಕಾರದ ಶಾಲಾ ಶಿಖರವೂ ಉಂಟು. ಇದು ಮುಂದೆ ದೇವಾಲಯದ ವೈಶಿಷ್ಟ್ಯವಾದ ಮಹಾದ್ವಾರ ಗೋಪುರದ ಬೆಳವಣಿಗೆಯ ಮೊಳಕೆಯೆನ್ನುವಂತಿದೆ. ವಿರೂಪಾಕ್ಷ ದೇವಾಲಯದ ವಾಸ್ತು ಅನೇಕ ಭಿನ್ನ ಶೈಲಿಗಳ ಸಂಗಮವಾಯಿತು. ಅಲ್ಲದೆ ಈ ಪ್ರದೇಶದ ಆಶಯಗಳಿಗೆ ಅನುಗುಣವಾಗಿ ಬೆಳೆಸಿದ ಸ್ಥಳೀಯ ಶೈಲಿಯೂ ಇಲ್ಲಿ ಕಂಡುಬಂದಿದೆ. ಒಟ್ಟಿನ ಶಿಲ್ಪರಾಶಿಯಲ್ಲಿ ಅನೇಕ ಉಪಪ್ರಭೇದಗಳನ್ನು ಗುರುತಿಸಬಹುದು. ಶಿಲ್ಪಿಗಳ ವ್ಯಕ್ತಿಗತ ಪ್ರತಿಭೆಯ ಮಟ್ಟದ ಅಂತರಗಳೂ ಈ ವೈವಿಧ್ಯಕ್ಕೆ ಸಹಾಯಕವಾಗಿವೆ.

ಲಾಡಖಾನ್, ಕೊಂತಿಗುಡಿ, ಹುಚ್ಚಮಲ್ಲಿ ಗುಡಿಗಳಲ್ಲಿರುವ ಶಿಲ್ಪಗಳು ಪ್ರಾಯಶಃ ಆ ಕಾಲದ ಮೊದಲ ಘಟ್ಟದ ಶಿಲ್ಪಗಳನ್ನು ಸೂಚಿಸುತ್ತವೆ. ಹುಚ್ಚಮಲ್ಲಿ ಗುಡಿಯ ಮಂಟಪದ ಚಾವಣಿಯ ಮೇಲೆ ಕೆತ್ತಿರುವ ಕಾರ್ತಿಕೇಯ ವಿಗ್ರಹ ಆ ಕಾಲದ ದೇವಶಿಲ್ಪಗಳಲ್ಲಿ ಅತ್ಯುತ್ತಮ

ವಾದವುಗಳಲ್ಲೊಂದು. ಇತರ ಸಮಕಾಲೀನ ಶಿಲ್ಪಗಳಂತೆ ಇಲ್ಲೂ ದೇವಮೂರ್ತಿಯ ನಿರೂಪಣೆ ಬಹು ಸರಳ. ಅತಿ ಕಡಿಮೆ ಅಲಂಕರಣ, ಸುಮಾರು ದೀರ್ಘವೃತ್ತಾಕಾರದ ಹಸನ್ಮುಖ, ನೀಳವಾದ ತೆಳು ಶರೀರ – ಇವುಗಳಿಂದಾಗಿ ನಿರೂಪಣೆಯಲ್ಲಿ ದೇಹಶಕ್ತಿಗಿಂತ ದೈವೀಶಕ್ತಿ ಮತ್ತು ಕಳೆ ಎದ್ದುಕಾಣುತ್ತವೆ. ಗುಪ್ತರ ಶೈಲಿಯ ಪ್ರಭಾವವನ್ನು ಇಲ್ಲಿ ಗುರುತಿಸಬಹುದು. ಇದೇ ಸರಳತೆ, ಕಿರುನಗೆ, ಸಹಜ ಅಂಗಾಂಗ ಪ್ರಮಾಣ ಇವು ದೇವನ ವಾಹನವಾದ ನವಿಲಿನಲ್ಲೂ ಕಂಡುಬರುತ್ತವೆ. ಸಮತೋಲನವನ್ನು ಸಾಧಿಸಲು ಮಾಡಿರುವ ಗಂಧರ್ವ ಶಿಲ್ಪಗಳ ಜೋಡಣೆ ಈ ಕೃತಿಗೆ ಶೋಭೆಯನ್ನಿತ್ತಿದೆ. ಅಲ್ಲದೆ ಇವನ್ನೂ ದೇವನ ಗಾತ್ರಕ್ಕೇ ಮಾಡಿದೆ; ಮುಂದೆ ಶಿಲ್ಪದಲ್ಲಿ ಬೆಳೆದ ತಂತ್ರ ಇನ್ನೂ ಸ್ಥಿರೀಕೃತವಾಗಿಲ್ಲದಿದ್ದ ಕಾಲವನ್ನು ಇದು ಸೂಚಿಸುತ್ತದೆ. ನವಿಲಿನ ಮೇಲೆ ಆಕಾಶದಲ್ಲಿ ಅನಾಯಾಸವಾಗಿ ಹಾರುತ್ತಿರುವ ದೇವಗಂಧರ್ವಾದಿಗಳು, ಕೆಳಗೆ ಮೃತನಾಗಿ ನಿಶ್ಚಲನಾಗಿ ಬಿದ್ದಿರುವ ರಾಕ್ಷಸ – ಇವುಗಳ ಪರಸ್ಪರ ವಿರುದ್ಧ ಭಾವಗಳನ್ನು ಪರಿಣಾಮಕಾರಿಯಾಗಿ ಒಂದೆಡೆಯೇ ಮೂಡಿಸಿರುವುದು ಶಿಲ್ಪಿಯ ಜಾಣ್ಮೆಯನ್ನು ತೋರಿಸುತ್ತದೆ. ರಾಕ್ಷಸತ್ವದ ಅವಸಾನ, ದೇವತ್ವದ ಸುಲಭ ಜಯ- ಇವನ್ನು ಇದಕ್ಕಿಂತ ಚೆನ್ನಾಗಿ ಶಿಲ್ಪಿಸುವುದು ಸಾಧ್ಯವಿಲ್ಲವೆಂಬಷ್ಟುಮಟ್ಟಿಗೆ ಇದು ಯಶಸ್ವಿಯಾಗಿದೆ. ಚಳುಕ್ಯ ಶಿಲ್ಪಗಳಲ್ಲಿ ಇದೊಂದು ಅನುಪಮ ಕೃತಿ.

ಈ ಶಿಲ್ಪದಲ್ಲಿ ಕಂಡುಬರುವ ಸರಳತೆ ಮತ್ತು ಸಹಜತೆಗಳನ್ನು ಕೊಂತಿಗುಡಿಯಲ್ಲಿರುವ ಕೆಲವು ಮಿಥುನ ಶಿಲ್ಪಗಳಲ್ಲೂ ಕಾಣಬಹುದು. ಕಾಮಕೇಳಿನಿರತರಾದ ದಂಪತಿಗಳ ಒಂದು ಶಿಲ್ಪದಲ್ಲಿ ಕಾಮಪೂರಿತನಾದ, ಆದರೂ ಹೆಣ್ಣಿಗೆ ಧೈರ್ಯ ನೀಡುವಂತಿರುವ ಪ್ರೌಢ, ನಾಚಿಕೆಯಿಂದ ಬೆದರಿದಂತೆ ಮುದರಿಕೊಂಡಿದ್ದರೂ ಹೃದಯದೊಳಗಿನ ಸಂತಸವನ್ನು ಮುಖದಲ್ಲಿ ವ್ಯಕ್ತಪಡಿಸುತ್ತಿರುವ ಪ್ರೌಢೆ - ಇವರು ಮನೋಜ್ಞವಾಗಿ ಶಿಲ್ಪಿತವಾಗಿದ್ದಾರೆ.

ಬಾದಾಮಿಯ ಗುಹೆಯ ಮತ್ತು ಸ್ವಲ್ಪಮಟ್ಟಿಗೆ ದುರ್ಗ ದೇವಾಲಯದ ಶಿಲ್ಪಗಳು ಹಾರುತ್ತಿರುವ ಗಂಧರ್ವನೇ ಮುಂತಾದ ಗುಪ್ತರ ಶೈಲಿಯ ಸರಳ ಶಿಲ್ಪಗಳನ್ನು ಒಳಗೊಂಡಿವೆ. ಆದರೆ ಅಲ್ಲಿಯ ದೇವಮೂರ್ತಿಗಳಲ್ಲಿ ಹೆಚ್ಚಿನ ದೇಹಪುಷ್ಟಿ, ಶಕ್ತಿ, ನಿರೂಪಣೆಯಲ್ಲಿ ಸ್ನಿಗ್ಧತೆ ಮತ್ತು ಸಂಪ್ರದಾಯಬದ್ಧತೆ ಕಂಡುಬರುತ್ತವೆ. ಪ್ರಾಯಶಃ ಈ ಕಾಲದಲ್ಲಿ ರೂಪುಗೊಳ್ಳುತ್ತಿದ್ದ ಚಳುಕ್ಯರದೇ ಆದ ಸ್ಥಳೀಯ ಶೈಲಿಯ ಬೆಳವಣಿಗೆಯ ಮೊದಲ ಹಂತಗಳನ್ನು ಇವು ಸೂಚಿಸುತ್ತವೆ. ಉದಾಹರಣೆಗೆ ಬಾದಾಮಿಯ ಒಂದನೆಯ ಗುಹೆಯಲ್ಲಿರುವ ನಟರಾಜನನ್ನು ಗಮನಿಸಬಹುದು. ಲಲಿತ ಭಂಗಿಯಲ್ಲಿರುವ ದೇವ ಷೋಡಶಬಾಹುವಾಗಿದ್ದಾನೆ. ಆದರೆ ಬಾಹುಗಳ ನಿರೂಪಣೆಯಲ್ಲಿ ಸಾಮರಸ್ಯವಿಲ್ಲ. ಮುಂದಿನ ಎರಡು ಕೈಗಳನ್ನಷ್ಟೇ ಉಳಿಸಿಕೊಂಡು ದೃಷ್ಟಿಸಿದರೆ ಇದೊಂದು ಅಪೂರ್ವ ಸೌಂದರ್ಯದ ಶಿಲ್ಪ. ಆದರೆ ಇಲ್ಲಿ ಸೌಂದರ್ಯಕ್ಕಿಂತ ಶಾಸ್ತ್ರಕ್ಕೆ ಹೆಚ್ಚು ಗಮನವಿತ್ತಿರುವುದು ಕಂಡುಬರುತ್ತದೆ. ಪೌರಾಣಿಕ ಹಿಂದು ಧರ್ಮ ದಕ್ಷಿಣ ಭಾರತದಲ್ಲಿ ಪ್ರಾಯಶಃ ಮೊಟ್ಟಮೊದಲಿಗೆ ಪ್ರಭಾವ ಗಳಿಸುತ್ತಿದ್ದ ಈ ಕಾಲದಲ್ಲಿ ದೇವರನ್ನು ಅವನ ಸಕಲ ಶಕ್ತಿ, ಸಾಮರ್ಥ್ಯ ಮತ್ತು ಔನ್ನತ್ಯದ ಭಾವಗಳೊಡನೆ ರೂಪಿಸುವ ಪ್ರಯತ್ನ ಇಲ್ಲಿ ನಡೆದಿದೆಯೆಂದು ಊಹಿಸಬಹುದು. ಅಲ್ಲದೆ ಮುಖ್ಯ ದೇವರನ್ನು ದೊಡ್ಡದಾಗಿ, ಆದರೆ ಪಕ್ಕದಲ್ಲಿರುವ ಗಣಪತಿ ಮತ್ತು ವಾದ್ಯಗಾರನನ್ನು ಬಹಳ ಚಿಕ್ಕದಾಗಿ ನಿರೂಪಿಸುವುದಕ್ಕೂ ದೇವಸಾರ್ವಭೌಮತ್ವ ಪ್ರದರ್ಶನದ ಉದ್ದೇಶವೇ ಕಾರಣವಿರಬಹುದು. ಬಾದಾಮಿಯ ಮೂರನೆಯ ಗುಹೆಯಲ್ಲಿರುವ ತ್ರಿವಿಕ್ರಮ ವಿಗ್ರಹದ ಶಿಲ್ಪದಲ್ಲೂ ಇದೇ ತಂತ್ರ ಅನುಸರಿಸಲಾಗಿದೆ. ನೆಲದಿಂದ ಮಾಡಿನವರೆಗೆ ನಿಂತ ಬೃಹನ್ಮೂರ್ತಿಯ ದಪ್ಪ ಕೈಕಾಲು, ವಿಶಾಲ ಎದೆ, ಆಯುಧಗಳನ್ನು ಭದ್ರವಾಗಿ ಹಿಡಿದಿರುವ ಭಂಗಿ, ಕಾಲನ್ನು ಆಗಸದತ್ತ ಎತ್ತಿ ನಿಲ್ಲಿಸಿರುವ ರೀತಿ ಇವುಗಳಲ್ಲಿ ದೇವನ ಅಸಾಧಾರಣ ಬಲ ಎದ್ದುಕಾಣುತ್ತದೆ. ತ್ರಿವಿಕ್ರಮನ ಎದುರಿಗೆ ಉಳಿದ ಎಲ್ಲರೂ ವಾಮನರು ಎಂಬ ಭಾವನೆಯನ್ನು ಪಕ್ಕದಲ್ಲಿ ಇವನ ಸೇವೆಯಲ್ಲಿ ನಿರತರಾಗಿರುವ ಬಲಿ ಮತ್ತು ಸಹಚರರ ತೆಳು ಕುಬ್ಜ ಮೂರ್ತಿಗಳು ಸೂಚಿಸುವಂತಿವೆ. ಒಂದೊಂದು ಶಿಲ್ಪವೂ ನಾಟಕದ ಸ್ತಬ್ಧ ದೃಶ್ಯದಂತೆ ತೋರುತ್ತದೆ. ಈ ಶಿಲ್ಪ ಶೈಲಿ ಬಾದಾಮಿಯ ಚಳುಕ್ಯ ಕಾಲದಲ್ಲೇ ಅಲ್ಲದೆ ಮುಂದೆ ರಾಷ್ಟ್ರಕೂಟರ ಕಾಲದಲ್ಲೂ ಮುಂದುವರಿಯಿತು.

ಆದರೂ ಈ ಧಾರ್ಮಿಕ ಚೌಕಟ್ಟಿನ ಮಿತಿಯಲ್ಲೇ ಹಲವೆಡೆ ವ್ಯಕ್ತಿಯ ಶಕ್ತಿ ಮತ್ತು ಭಾವನೆಗಳ ನಿರೂಪಣೆಯಲ್ಲಿ, ಶಿಲ್ಪವಿನ್ಯಾಸದಲ್ಲಿ, ಶಿಲ್ಪಿಗಳು ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿಸಿದ್ದಾರೆ. ಈ ದೃಷ್ಟಿಯಿಂದ ಐಹೊಳೆಯ ರಾವಳಫಡಿ ಗುಹೆಯಲ್ಲಿರುವ ಶಿಲ್ಪಗಳು ಅಮೋಘವಾದವು. ಅಲ್ಲಿಯ ನಟರಾಜ ವಿಗ್ರಹಕ್ಕೆ ಹತ್ತು ಕೈಗಳಿರುವುದಾದರೂ ಹಿಂದಿನ ಕೈಗಳು ಹಿನ್ನೆಲೆಯ ಪರದೆಯ ಮೇಲಿನ ಹಾರಗಳೋ ಎಂದು ಕಾಣುವಂತೆ ಮಾಡಿ, ದೇವರನ್ನು ಅಷ್ಟೇ ಪ್ರಧಾನವಾಗಿ ತೋರಿಸಿರುವ ಜಾಣ್ಮೆ, ವಿಗ್ರಹದ ಅಂಗಾಂಗಗಳ ಸಹಜ ಪ್ರಮಾಣ, ನೃತ್ಯ ಭಂಗಿಗೆ ಸಹಜವಾದ ಮೈಬಾಗುಗಳು, ಮುಖದಲ್ಲಿ ಎದ್ದು ಕಾಣುವ ಭಾವತನ್ಮಯತೆ ಇವೆಲ್ಲವೂ ಮೂರ್ತಿಯ ಕಳೆಯನ್ನು ಹೆಚ್ಚಿಸಿವೆ. ಈ ವಿಗ್ರಹದ ಅಕ್ಕಪಕ್ಕದಲ್ಲಿರುವ ಅಷ್ಟಮಾತೃಕೆಯರ ಮೂರ್ತಿಗಳು ಮುಖ್ಯಮೂರ್ತಿಗೂ ಒಂದು ಕೈ ಮಿಗಿಲಾಗಿವೆ. ಇವುಗಳಲ್ಲಿರುವ ಬಳುಕು, ಕೋಮಲತೆ, ಲಾಸ್ಯ ಮತ್ತು ಆಕರ್ಷಣೆ ಅದ್ಭುತವಾದವು.

**ಚಿತ್ರಕಲೆ :** ಈ ಕಾಲದ ಚಿತ್ರಕಲೆಯ ಅವಶೇಷಗಳು ಬಾದಾಮಿಯ 3ನೆಯ ಗುಹೆಯಲ್ಲಿ ಕಂಡುಬಂದಿವೆ. 578ರಲ್ಲಿ ನಿರ್ಮಿತವಾದ ಈ ಗುಹೆ ಪ್ರಾಯಶಃ ಪೂರ್ಣವಾಗಿ ಚಿತ್ರಾಲಂಕೃತವಾಗಿದ್ದಿರಬೇಕೆಂದು ಅನೇಕ ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಬಹುದು. ಈಗ ಉಳಿದಿರುವುವು ಕಪೋತದ ಒಳಭಾಗದಲ್ಲಿರುವ ಕೆಲವು ತುಣುಕುಗಳು ಮಾತ್ರ. ಈ ಭಿತ್ತಿಚಿತ್ರಗಳು ಅಜಂತದ ಚಿತ್ರ ಸಂಪ್ರದಾಯವನ್ನು ಹೋಲುತ್ತವೆ. ಆದರೂ ಅಜಂತದ ಚಿತ್ರಗಳ ಗುಣಮಟ್ಟ ಇವುಗಳಲ್ಲಿಲ್ಲ ಎಂಬುದು ಕಲಾಭಿಜ್ಞರ ಅಭಿಪ್ರಾಯ. ಇವುಗಳ ಬಣ್ಣಗಳು ಬಹಳವಾಗಿ ಮಾಸಿ ಹೋಗಿರುವುದರಿಂದ ಇವು ಸ್ಪಷ್ಟವಾಗಿಲ್ಲ. ರಾಜರಾಣಿಯರು ಆಸ್ಥಾನದಲ್ಲಿ ತಮ್ಮ ಪರಿವಾರ ಮತ್ತು ಭೃತ್ಯವರ್ಗದೊಡನೆ ನೃತ್ಯವೀಕ್ಷಣೆ ಮಾಡುತ್ತಿರುವುದು, ಇಂದ್ರನ ಆಸ್ಥಾನ, ಆಕಾಶದಲ್ಲಿ ಸಂಚರಿಸುತ್ತಿರುವ ವಿದ್ಯಾಧರ ದಂಪತಿಗಳು ಮುಂತಾದ ಚಿತ್ರಗಳಿದ್ದಂತಿವೆ. ರಚನೆಯಲ್ಲಿ ಅಥವಾ ಅವು ಉಳಿದಿರುವ ಸ್ಥಿತಿಯಲ್ಲಿ ಈ ಚಿತ್ರಗಳು ಬಹು ಉತ್ತಮವಾಗಿ ಕಾಣದಿದ್ದರೂ ಭಾರತದಲ್ಲಿ ಕಂಡುಬಂದಿರುವ ಹಿಂದು ದೇವಾಲಯದ ಭಿತ್ತಿ ಚಿತ್ರ ಸರಣಿಯಲ್ಲಿ ಇವೇ ಪ್ರಾಚೀನವಾದವೆಂಬ ಕಾರಣದಿಂದ ಇವಕ್ಕೆ ಪ್ರಾಮುಖ್ಯವಿದೆ. (ಎಸ್.ಎನ್.)

**ಶಾಸನಗಳು :** ಬಾದಾಮಿಯ ಚಳುಕ್ಯರ ಶಾಸನಗಳಲ್ಲಿ ಹೆಚ್ಚಿನವು ತಾಮ್ರ ಶಾಸನಗಳು. ಇವುಗಳ ಭಾಷೆ ಸಂಸ್ಕೃತ, ಲಿಪಿ ಕನ್ನಡ. ಅಲಂಪುರದಲ್ಲಿ ದೊರೆತ ಸಿದ್ಧಮಾತೃಕಾ ಲಿಪಿಯ ಶಾಸನ ಮತ್ತು ವಿನಯಾದಿತ್ಯನ ನಾಗರೀ ಲಿಪಿಯ ಶಾಸನ -ಇಂಥ' ಒಂದೆರಡನ್ನು ಹೊರತುಪಡಿಸಿ ಶಿಲಾ ಶಾಸನಗಳೆಲ್ಲವೂ ಕನ್ನಡ ಲಿಪಿಯಲ್ಲಿದ್ದು ಹೆಚ್ಚಿನವು ಕನ್ನಡ ಭಾಷೆಯಲ್ಲಿವೆ.

ಸಾಮಾನ್ಯವಾಗಿ ತಾಮ್ರ ಶಾಸನಗಳಲ್ಲಿ ಮಂಗಳವಾಕ್ಯ, ರಾಜಪ್ರಶಸ್ತಿ, ದಾನಕ್ಕೆ ಸಂಬಂಧಿಸಿದ ವಿವರಗಳು ಹಾಗೂ ಕೊನೆಯಲ್ಲಿ ಶಾಪರೂಪದ ಶ್ಲೋಕಗಳು ಇರುತ್ತವೆ. ವರಾಹಾವತಾರದ ವಿಷ್ಣುವನ್ನು ಸ್ತುತಿಸುವ ಜಯತ್ಯಾವಿಷ್ಕೃತಂ ವಿಷ್ಣೋಃ ವಾರಾಹಂ ಕ್ಷೋಭಿತಾರ್ಣವಂ ಎಂದು ಆರಂಭವಾಗುವ ಶ್ಲೋಕ ಮೊದಲಲ್ಲಿದ್ದು ಅನಂತರ ಚಳುಕ್ಯರು ಮಾನವ್ಯಸ ಗೋತ್ರದವರು ಹಾರೀತಿಪುತ್ರರು ಸಪ್ತಮಾತೃಗಳಿಂದಲೂ ಕಾರ್ತಿಕೇಯನಿಂದಲೂ ರಕ್ಷಿಸಲ್ಪಟ್ಟು ಕಲ್ಯಾಣವಂತರಾಗಿ ಭಗವನ್ನಾರಾಯಣನ ಪ್ರಸಾದದಿಂದ ವರಾಹಲಾಂಛನವನ್ನು ಪಡೆದು ಅನೇಕ ರಾಜರನ್ನು ಗೆದ್ದವರು ಎಂದು ಹೇಳಲಾಗಿರುತ್ತದೆ. ಶಿಲಾ ಶಾಸನಗಳಲ್ಲಿ ಇಂಥ ಪ್ರಶಸ್ತಿಗಳು ಕಾಣಿಸುವುದಿಲ್ಲ. ವಿಷಯವನ್ನು ಚುಟುಕಾಗಿ ಹೇಳುವ ಸಣ್ಣ ಶಾಸನಗಳಿವು. ಇವುಗಳಲ್ಲಿ ನೇರವಾಗಿ ರಾಜನ ಆಳಿಕೆಯ ಪ್ರಸ್ತಾಪವಿದ್ದು ಅರಸನ ಹೆಸರನ್ನು ಉಲ್ಲೇಖಿಸಿದ ಅನಂತರ ಸತ್ಯಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಎಂಬ ಬಿರುದುಗಳಿರುತ್ತವೆ.

ಇವರ ಶಾಸನಗಳಲ್ಲಿ ಕಾಲನಿರ್ದೇಶನವಿರುವುದು ಒಂದು ವೈಶಿಷ್ಟ್ಯ. ಒಂದನೆಯ ಪುಲಕೇಶಿ ಮತ್ತು ಕೀರ್ತಿವರ್ಮರ ಬಾದಾಮಿಯ ಶಾಸನಗಳು, ಮಂಗಲೀಶನ ಮಹಾಕೂಟದ ಶಾಸನ, ಇಮ್ಮಡಿ ಪುಲಕೇಶಿಯ ಐಹೊಳೆಯ ಶಾಸನ ಮುಂತಾದ ಶಿಲಾಶಾಸನಗಳಲ್ಲಿ ಕಾಲಕ್ಕೆ ಸಂಬಂಧಿಸಿದ ಶಕವರ್ಷ ಹಾಗೂ ಇತರ ವಿವರಗಳಿವೆ. ಆದರೆ ಶಿಲಾಶಾಸನಗಳಿಗಿಂತ ಹೆಚ್ಚಾಗಿ ತಾಮ್ರ ಶಾಸನಗಳಲ್ಲಿ ಈ ವಿವರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಅದರಲ್ಲಿಯೂ ವಿನಯಾದಿತ್ಯನ ಹಾಗೂ ಅನಂತರ ಆಳಿದ ಅರಸರ ತಾಮ್ರ ಶಾಸನಗಳಲ್ಲಿಇವು ಸಾಮಾನ್ಯವಾಗಿವೆ. ಮೊದಲ ಅರಸರ ತಾಮ್ರ ಶಾಸನಗಳಲ್ಲಿ, ಶಕವರ್ಷದ ಪ್ರಸ್ತಾಪ ಕೆಲವು ಶಾಸನಗಳಲ್ಲಿ ಮಾತ್ರ ಇವೆ. ರಾಜನ ಆಳಿಕೆಯ ವರ್ಷಗಳನ್ನು ಈ ಶಾಸನಗಳು ಸಾಮಾನ್ಯವಾಗಿ ಸೂಚಿಸಿವೆ. ಸಂವತ್ಸರದ ಹೆಸರುಗಳು ಅಪರೂಪವಾಗಿ ಉಲ್ಲೇಖಿಸಲ್ಪಟ್ಟಿವೆ.

ತಿಂಗಳು, ಪಕ್ಷ, ತಿಥಿಗಳ ವಿವರಗಳಿದ್ದರೂ ವಾರ ದಿನದ ಪ್ರಸ್ತಾಪ ಮಾತ್ರ ಇರುವುದಿಲ್ಲ. ಕನ್ನಡ ಭಾಷೆಯ ದಾನ ಶಾಸನಗಳಲ್ಲಿ ಇದ್ದತ್ತಿಯಾನಮಿದೋನ್ಸಾರಣಾಸಿಯೊಳ್ ಸಾಸಿರ್ವ್ವಪಾರ್ವ್ವರುಮಾನ್ ಸಾಸಿರ ಕವಿಲೆಯುಮಾನ್ಕೊನ್ದಲೋಕಕ್ಕೆ ಸನ್ದೋನಕ್ಕು ಮುಂತಾದ ಅದೇ ಭಾಷೆಯ



ಒಂದನೆಯ ಪುಲಕೇಶಿಯ ಶಾಸನ, ಬಾದಾಮಿ

ಶಾಪ ವಾಕ್ಯಗಳು ಕಾಣಸಿಗುತ್ತವೆ. ದಾನಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಈ ಶಾಸನಗಳಲ್ಲಿ ಕಾಣಲಾಗದು. ಶಾಸನ ಬರೆದ ಆಚಾರಿಯ ಹೆಸರುಗಳನ್ನು ಕೆಲವು ಸಂದರ್ಭಗಳಲ್ಲಿ ಕೊಟ್ಟಿದೆ. (ಬಿ.ಆರ್.ಜಿ.)

**ನಾಣ್ಯಗಳು :** ಬಾದಾಮಿ ಚಳುಕ್ಯರ ಲಾಂಛನ ವರಾಹವಾಗಿದ್ದಿತ್ತು. ಆದುದರಿಂದ ವರಾಹದ ಚಿತ್ರವನ್ನುಳ್ಳ ಮತ್ತು ಬರೆಹವಿಲ್ಲದಿರುವ ಚಿನ್ನದ ನಾಣ್ಯಗಳು ಬಾದಾಮಿ ಚಳುಕ್ಯರ ನಾಣ್ಯಗಳೆಂದು ವಿದ್ವಾಂಸರು ಭಾವಿಸಿದ್ದಾರೆ. ಸು.50-60 ಗ್ರೇನ್ ತೂಕದ ಚಿನ್ನದ ನಾಣ್ಯಗಳ ಮೇಲೆ ಬಾದಾಮಿ ಚಳುಕ್ಯರ ವರಾಹ ಚಿತ್ರವನ್ನು ಮುದ್ರಿಸಲಾಗಿದೆ. ಕಾಲಕ್ರಮದಲ್ಲಿ ವರಾಹ ಚಿಹ್ನೆ ಇಲ್ಲದಿದ್ದರೂ ಈ ತೂಕದ ನಾಣ್ಯಗಳಿಗೆ ವರಹ ಎಂದು ಹೆಸರಾಯಿತು. ನಾಣ್ಯಗಳಿಗೆ ವರಹ ಎಂಬ ಹೆಸರು ಬರಲು ಬಾದಾಮಿ ಚಳುಕ್ಯರ ವರಾಹ ಚಿಹ್ನೆಯೇ ಕಾರಣವೆಂದು ಎಲ್ಲ ವಿದ್ವಾಂಸರೂ ಒಪ್ಪಿದ್ದಾರೆ.

ಬಾದಾಮಿ ಚಳುಕ್ಯರ ನಾಣ್ಯಗಳು ಅಚ್ಚಿನಿಂದ ಮಾಡಿದವುಗಳು. ಇವರ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಈವರೆಗೆ ಬೆಳಕಿಗೆ ಬಂದಿವೆ. ಒಂದನೆಯ ವಿಕ್ರಮಾದಿತ್ಯನ ಚಿನ್ನದ ನಾಣ್ಯಗಳು 117 ಗ್ರೇನ್ ತೂಕ ಉಳ್ಳದ್ದಾಗಿವೆ. ವೃತ್ತಾಕಾರದ ಈ ನಾಣ್ಯಗಳ ವ್ಯಾಸ 0.76 ಅಂಗುಲ. ಇವುಗಳ ಮುಮ್ಮುಖದಲ್ಲಿ ಬಲಭಾಗಕ್ಕಿರುವ ವರಾಹವಿದೆ. ಇದರ ಮೇಲೆ ಸೂರ್ಯ ಮತ್ತು ಚಂದ್ರ, ಮುಂಭಾಗದಲ್ಲಿ ದೀಪಸ್ತಂಭ ಇವೆ. ವರಾಹದ ಕೆಳಭಾಗದಲ್ಲಿ ಶ್ರೀವಿಕ್ರಮ ಎಂಬ ಕನ್ನಡ ಲಿಪಿಯ ಬರೆಹವಿದೆ. ಈ ನಾಣ್ಯದ ಹಿಮ್ಮುಖದಲ್ಲಿ ನಿಂತಿರುವ ಮನುಷ್ಯನ ಚಿತ್ರವೂ ಸಣ್ಣ ವರಾಹವೂ ಎಡಭಾಗದಲ್ಲಿ ವಿಕ್ರಮ ಎಂಬ ಬರೆಹವೂ ಇವೆ. ಇದೇ ರಾಜನ ಚಿನ್ನ (30%) ಮತ್ತು ಬೆಳ್ಳಿ (70%) ಮಿಶ್ರಲೋಹದ ನಾಣ್ಯವೂ ದೊರಕಿದೆ. ಇದರ ತೂಕ 153 ಗ್ರೇನ್, ಇದು ಚಿನ್ನದ ನಾಣ್ಯದ ಮಾದರಿಯಲ್ಲೇ ಇದ್ದರೂ ಕೆಲ ಬದಲಾವಣೆಗಳನ್ನು ತೋರಿಸುತ್ತದೆ. ಮುಮ್ಮುಖದಲ್ಲಿ ಶ್ರೀವಿಕ್ರಮರಾಜ ಎಂಬ ಬರೆವಣಿಗೆಯಿದೆ. ಹಿಮ್ಮುಖದಲ್ಲಿ ಶ್ರೀವಿಕ್ರಮ ಮಹಾರಾಜ ಎಂಬ ಕನ್ನಡ ಲಿಪಿಯ ಬರೆಹವೂ ನವಿಲುಗರಿಯನ್ನು ಧರಿಸಿರುವ ಮನುಷ್ಯನ ಚಿತ್ರವೂ ಇವೆ. ಈ ಎರಡು ನಾಣ್ಯಗಳು ಖಚಿತವಾಗಿ ಬಾದಾಮಿ ಚಳುಕ್ಯರಿಗೆ ಸೇರಿದವು. 50-60 ಗ್ರೇನ್ ತೂಕಕ್ಕಿಂಥ ಭಿನ್ನವಾಗಿರುವ ಈ ನಾಣ್ಯಗಳ ತೂಕ ಗಮನಾರ್ಹವಾದುದು. ಈ ತೂಕ ಗುಪ್ತರ ಚಿನ್ನದ ನಾಣ್ಯಗಳಿಗೆ ಸಮೀಪವಾಗಿದೆ.

ಎಂ.ಎಚ್.ಕೃಷ್ಣ ಅವರು ಚಿನ್ನದ ನಾಣ್ಯವೊಂದನ್ನು ಒಂದನೆಯ ಪುಲಕೇಶಿಯದೆಂದು ಭಾವಿಸುತ್ತಾರೆ. ಇದರ ತೂಕ 57.2 ಗ್ರೇನ್ ಮತ್ತು ವ್ಯಾಸ 0.55". ಇದರ ಮುಮ್ಮುಖದಲ್ಲಿ ಅಲಂಕೃತ ವರಾಹವಿದೆ. ಅದರ ಮೇಲೆ ಸೂರ್ಯ ಮತ್ತು ಚಂದ್ರ, ಹಿಮ್ಮುಖದಲ್ಲಿ ಅಷ್ಟದಳ ಪದ್ಮವಿದೆ. ಈ ಪದ್ಮ ಕದಂಬರ ಚಿಹ್ನೆಯೆಂದು ಭಾವಿಸಿ ಕದಂಬರನ್ನು ಸೋಲಿಸಿದುದರ ನೆನಪಾಗಿ ಈ ನಾಣ್ಯಗಳನ್ನು ಪುಲಕೇಶಿ ಅಚ್ಚು ಮಾಡಿಸಿರಬೇಕೆಂದು ಕೃಷ್ಣ ಅವರು ಭಾವಿಸುತ್ತಾರೆ. ಆದರೆ ಇದರಲ್ಲಿ ಖಚಿತತೆಯಿಲ್ಲ. ಎಲಿಯಟ್ ಅವರು 66 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಬಾದಾಮಿ ಚಳುಕ್ಯರ ನಾಣ್ಯಗಳೆಂದು ಭಾವಿಸುತ್ತಾರೆ. ಒಂದು ನಾಣ್ಯದ ಮುಮ್ಮುಖದಲ್ಲಿ ಅಲಂಕೃತವಾದ ವರಾಹವಿದೆ. ಹಿಮ್ಮುಖದಲ್ಲಿ ಎಂಟು ದಳದ ಪದ್ಮದ ಚಿತ್ರವಿದೆ. ಮತ್ತೊಂದು ನಾಣ್ಯದಲ್ಲಿ ಅಲಂಕಾರವಿಲ್ಲದಿರುವ ವರಾಹ, ಹಿಮ್ಮುಖದಲ್ಲಿ ಪುಷ್ಪದ ನಮೂನೆಗಳಿವೆ. ಇವುಗಳಲ್ಲಿ ಬರೆವಣಿಗೆ ಇಲ್ಲದೆ ಇರುವುದರಿಂದ ಇವು ಯಾವ ರಾಜರ ನಾಣ್ಯಗಳು ಎಂಬುದು ತಿಳಿದಿಲ್ಲ. ಆದರೆ ವರಾಹ ಚಿತ್ರವಿರುವುದರಿಂದ ಇವು ಬಾದಾಮಿ ಚಳುಕ್ಯರ ನಾಣ್ಯಗಳೆಂದು ಊಹಿಸಬಹುದು. ಶ್ರೀರಣವಿಕ್ರಮ ಹಾಗೂ ಶ್ರೀಪೃಥಿವೀ ಎಂಬ ಬರೆಹವಿರುವ ನಾಣ್ಯಗಳನ್ನು ಒಂದನೆಯ ಪುಲಕೇಶಿಗೆ ಅನ್ವಯಿಸಲಾಗಿದೆ. ಹಾಗೆಯೇ ಶ್ರೀಕೃತರಾಜ ಎಂಬ ಬರೆಹವಿರುವ ನಾಣ್ಯವನ್ನು ಒಂದನೆಯ ಕೀರ್ತಿವರ್ಮನದೆಂದು ಭಾವಿಸಲಾಗಿದೆ. ಇಮ್ಮಡಿ ಪುಲಕೇಶಿಯ ತಾಮ್ರದ ನಾಣ್ಯಗಳು ಈಚೆಗೆ ಎಲಿಫೆಂಟ ದ್ವೀಪದಲ್ಲಿ ದೊರೆತಿದ್ದು, ಅವುಗಳ ಮುಮ್ಮುಖದಲ್ಲಿ ಶ್ರೀ ಸತ್ಯಾಶ್ರಯ ಎಂಬ ಬರೆಹ ಹಾಗೂ ಹಿಮ್ಮುಖದಲ್ಲಿ ವೃಷಭ ಚಿತ್ರಗಳಿವೆ. ಶ್ರೀ ವಿಕ್ರಮ ಎಂಬ ಬರೆಹವಿರುವ ಚಿನ್ನದ ನಾಣ್ಯ ಮೊದಲನೆಯ ವಿಕ್ರಮಾದಿತ್ಯನದೆಂದು ಪರಿಗಣಿಸಲಾಗಿದೆ. (ಎ.ವಿ.ಎನ್.)

## ಕಲ್ಯಾಣದ ಚಾಳುಕ್ಯರು

**ರಾಜಕೀಯ ಇತಿಹಾಸ :** ರಾಷ್ಟ್ರಕೂಟರ ಅನಂತರ ಉತ್ತರ ಕರ್ನಾಟಕದ ಭಾಗವನ್ನಲ್ಲದೆ ಸುತ್ತಲ ದಕ್ಷಿಣ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಪ್ರದೇಶಗಳ ಬಹುಭಾಗಗಳಲ್ಲಿ ಕಲ್ಯಾಣದ ಚಾಳುಕ್ಯರು ಆಳಿಕೆ ನಡೆಸಿದರು. ಈ ವಂಶದವರ ಆಳಿಕೆ ಪ್ರಾರಂಭವಾದದ್ದು 973ರಲ್ಲಿ. ಆ ವರ್ಷ ರಾಷ್ಟ್ರಕೂಟ ಖೊಟ್ಟಿಗನನ್ನು ಸೋಲಿಸಿ ಚಾಳುಕ್ಯವಂಶದ ಇಮ್ಮಡಿ ತೈಲಪ ಸಿಂಹಾಸನವನ್ನು ಆಕ್ರಮಿಸಿಕೊಂಡ. ಅಲ್ಲಿಂದ ಸುಮಾರು ಎರಡು ಶತಮಾನಗಳವರೆಗೆ ಚಾಳುಕ್ಯರ ಆಳಿಕೆ ಅವ್ಯಾಹತವಾಗಿ ಸಾಗಿ ಅನಂತರ ಇಳಿಮುಖವಾಗಿ 12ನೆಯ ಶತಮಾನದ ಅಂತ್ಯದ ಹೊತ್ತಿಗೆ ಮರೆಯಾಯಿತು.

ಬಾದಾಮಿಯ ಚಳುಕ್ಯರ ಆಳ್ವಿಕೆಯನ್ನು ಕೊನೆಗೊಳಿಸಿ ಪ್ರಭುತ್ವವನ್ನು ಸಾಧಿಸಿಕೊಂಡಿದ್ದ ರಾಷ್ಟ್ರಕೂಟವಂಶದವರು ಸುಮಾರು ಎರಡು ಶತಮಾನಗಳವರೆಗೂ ರಾಜ್ಯ ನಿರ್ವಹಿಸಿದರೂ ಚಾಳುಕ್ಯವಂಶದ ಅರಸರು ಅಲ್ಲಲ್ಲಿ ಚಿಕ್ಕಪುಟ್ಟ ಪ್ರದೇಶಗಳಲ್ಲಿ ಉಳಿದುಕೊಂಡು ಬಂದು ತಮ್ಮ ಪುರಾತನ ವೈಭವದ ನೆನಪನ್ನು ಉಳಿಸಿಕೊಂಡಿದ್ದರೆಂದು ತೋರುತ್ತದೆ. ಈ ನಡುವೆ ಏಳು ತಲೆಮಾರುಗಳ ಜನ ತೆರೆಯ ಮರೆಯಲ್ಲಿ ಬಾಳಿದರೆಂದೂ ಖೊಟ್ಟಿಗನನ್ನು ಇಮ್ಮಡಿ ತೈಲಪ ಸೋಲಿಸಿ ಮಾನ್ಯಖೇಟವನ್ನು ಆಕ್ರಮಿಸಿದಂದಿನಿಂದ ಚಾಳುಕ್ಯರು ಪುನಃ ಪ್ರಕಾಶಕ್ಕೆ ಬಂದರೆಂದೂ ಕಲ್ಯಾಣದ ಚಾಳುಕ್ಯರ ಶಾಸನಗಳು ಹೇಳುತ್ತವೆ. ಗದಾಯುದ್ಧ ಕರ್ತೃ ರನ್ನ ಸಹ ಇರಿವಬೆಡಂಗ ಸತ್ಯಾಶ್ರಯನ ವಂಶಾವಳಿಯನ್ನು ನಿರೂಪಿಸುವಾಗ ಬಾದಾಮಿಯ ಚಳುಕ್ಯರಿಗೂ ತೈಲಪನಿಗೂ ನಡುವಣ ಆ ವಂಶಜರ ಹೆಸರುಗಳನ್ನು ಉಲ್ಲೇಖಿಸಿದ್ದಾನೆ.

ಈ ನಡುಗಾಲದಲ್ಲಿ ತೆರೆಯ ಮರೆಯಲ್ಲಿದ್ದ ಚಾಳುಕ್ಯ ಅರಸರ ವಂಶಾವಳಿ ಹೀಗಿತ್ತೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ.

ವಿಜಯಾದಿತ್ಯ

| | |
|---|---|
| ವಿಕ್ರಮಾದಿತ್ಯ II | ಭೀಮಪರಾಕ್ರಮ |
| ಕೀರ್ತಿವರ್ಮ V | ಕೀರ್ತಿವರ್ಮ III |
| | ತೈಲಪ I |
| | ವಿಕ್ರಮಾದಿತ್ಯ III |
| | ಭೀಮ II |
| | ಅಯ್ಯಣ |
| | ವಿಕ್ರಮಾದಿತ್ಯ IV |
| | ತೈಲಪ II |

ಆದರೆ ರನ್ನನ ಗದಾಯುದ್ಧ ಕಾವ್ಯದಲ್ಲಿ ಕೊಟ್ಟಿರುವ ವಂಶಾವಳಿ ಇದಕ್ಕಿಂತ ಸ್ವಲ್ಪಮಟ್ಟಿಗೆ ಭಿನ್ನವಾದದ್ದು. ಶಾಸನಗಳಲ್ಲಿ 1ನೆಯ ತೈಲಪನ ಮಗ ಮುಮ್ಮಡಿ ವಿಕ್ರಮಾದಿತ್ಯನೆಂದು ಹೇಳಿದ್ದರೆ, ಕವಿ ಈ ವಿಕ್ರಮಾದಿತ್ಯನನ್ನೂ ಭೀಮನ ಮಗನೆಂದು ಹೇಳಿ ಭೀಮನನ್ನು 1ನೆಯ ತೈಲಪನ ಮಗನೆಂದಿದ್ದಾನೆ. ಪಟ್ಟದಕಲ್ಲಿನಲ್ಲಿ ದೊರೆತ ಶಾಸನವೊಂದರಲ್ಲಿ ಒಬ್ಬ ತೈಲಪನ ಪ್ರಸ್ತಾಪವಿದೆ. ಶ್ರೀ ಪೆರ್ಗ್ಗಡೆ ಮಹಾರಾಜ ತೈಲ ಮಹಾಧಿರಾಜ ಎಂದಿರುವ ಈ ಶಾಸನದಲ್ಲಿನ ತೈಲ ಒಬ್ಬ ಅಧಿಕಾರಿ (ಶ್ರೀ ಪೆರ್ಗ್ಗಡೆ) ಆಗಿದ್ದನೆಂದೂ ಮಹಾರಾಜ, ಮಹಾಧಿರಾಜ ಎಂಬವು ಆತನ ಬಿರುದುಗಳೆಂದೂ ಹೇಳಲಾಗಿದೆ. ಲಿಪಿಶಾಸ್ತ್ರ ದೃಷ್ಟಿಯಿಂದ, ಈ ತೈಲಪ ಚಾಳುಕ್ಯ ಮನೆತನದ ಮುಮ್ಮಡಿ ಕೀರ್ತಿವರ್ಮನ ಮಗನಾದ 1ನೆಯ ತೈಲಪನೆಂದು ಊಹಿಸಲಾಗಿದೆ. ಎರಡನೆಯ ಭೀಮನನ್ನು ಮುಕುಂದಿಯ ಕೊಂದ ಭೀಮ ಎಂದು ಕವಿ ಕರೆದಿದ್ದಾನೆ. ಆದರೆ ಈ ಮುಕುಂದಿ ಯಾರು ಎಂಬುದು ತಿಳಿಯದು. ಕೃಷ್ಣನ ಮಗಳನ್ನು ಇಮ್ಮಡಿ ತೈಲಪನ ಅಜ್ಜನಾದ ಅಯ್ಯಣ ಮದುವೆಯಾದನೆಂದು ಹೇಳಿದೆ. ಈ ಕೃಷ್ಣ ಯಾರೆಂಬುದನ್ನು ಗುರುತಿಸುವಲ್ಲಿ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯವಿಲ್ಲ.

ಅಯ್ಯಣನ ಮಗ ನಾಲ್ವಡಿ ವಿಕ್ರಮಾದಿತ್ಯ. ಕಳಚುರಿ ಮನೆತನದ ಲಕ್ಷ್ಮಣರಾಜನ ಮಗಳಾದ ಬೊಂಥಾದೇವಿಯನ್ನು ಈತ ಮದುವೆಯಾಗಿದ್ದ. ಚಾಳುಕ್ಯರು ಕ್ರಮೇಣ ಪ್ರಬಲರಾಗುತ್ತಿದ್ದರೆಂಬುದನ್ನು ಇದು ಸೂಚಿಸುತ್ತದೆ. ಈ ವೇಳೆಗೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ದಿಗ್ವಿಜಯಿಯಾಗಿ, ತನ್ನ ಸಂಬಂಧಿಗಳಾದ ಕಳಚುರಿಗಳನ್ನು ನಿರ್ಲಕ್ಷಿಸುವ ಮನೋಭಾವ ಬೆಳೆಸಿಕೊಂಡಿದ್ದ. ಬಹುಶಃ ಈ ಕಾರಣದಿಂದಲೇ ಚಾಳುಕ್ಯ ವಿಕ್ರಮಾದಿತ್ಯನೊಡನೆ ಕಳಚುರಿಗಳು ಬಾಂಧವ್ಯ ಏರ್ಪಡಿಸಿಕೊಂಡಿರಬಹುದು.

ರಾಷ್ಟ್ರಕೂಟರನ್ನೂ ಇಮ್ಮಡಿ ತೈಲಪ ಹೊರದೂಡುವ ಮುನ್ನ ಅವರ ಸಾಮಂತರಲ್ಲಿ ಒಬ್ಬನಾಗಿದ್ದ. 957ರ ಕಾರ್ಜೋಳ ಶಾಸನದಲ್ಲಿ ಕನ್ನರದೇವನ (ಮುಮ್ಮಡಿ ಕೃಷ್ಣ) ಪಾದಪದ್ಮೋಪಜೀವಿ ಎಂದು ತೈಲಪನನ್ನು ವರ್ಣಿಸಲಾಗಿದೆ. ಆದರೆ ಎಂಟು ವರ್ಷಗಳ ಅನಂತರ 965ರ ಶಾಸನದಲ್ಲಿ ಸತ್ಯಾಶ್ರಯ ಕುಲತಿಲಕ, ಚಾಳುಕ್ಯರಾಮ, ಆಹವಮಲ್ಲ ಇತ್ಯಾದಿ ಬಿರುದಾಂಕಿತನಾದ ಮಹಾಸಾಮಂತರ ತೈಲಪರಸ ತರ್ದ್ದವಾಡಿಸಾಸಿರದ ಪ್ರಾಂತ್ಯವನ್ನು ಆಳುತ್ತಿದ್ದನೆಂದು ಹೇಳಿದೆ. ಇದರಲ್ಲಿ ಈತನನ್ನು ಮಹಾಸಾಮಂತನೆಂದು ಕರೆಯಲಾಗಿದೆ. ಇವನು ಪದವಿಯಲ್ಲಿ ಮೇಲೇರಿದ್ದುದನ್ನು ಇದು ಸೂಚಿಸುತ್ತದೆ. ಇದಾದ ಇನ್ನೆಂಟು ವರ್ಷಗಳೊಳಗಾಗಿ ಈತ ರಾಷ್ಟ್ರಕೂಟರನ್ನು ಮಳಖೇಡದಿಂದ ಹೊರದೂಡಿ ಚಾಳುಕ್ಯ ರಾಜ್ಯವನ್ನು ಪುನಃ ಪ್ರತಿಷ್ಠಾಪಿಸಿದ. ಮುಮ್ಮಡಿ ಕೃಷ್ಣನ ಅನಂತರ ಅಶಕ್ತ ಅರಸರು ಅಧಿಕಾರಕ್ಕೆ ಬಂದುದನ್ನೂ ಪರಮಾರ ಸೀಯಕ ಹರ್ಷ ಮಾನ್ಯಖೇಟವನ್ನು ಮುತ್ತಿ ರಾಜಧಾನಿಯನ್ನು ಹಾಳು ಕೆಡವಿದ ಸಂದರ್ಭವನ್ನೂ ತನ್ನ ರಾಜ್ಯ ಸ್ಥಾಪನೆಗೆ ಈತ ಉಪಯೋಗಿಸಿಕೊಂಡ. ಕೃಷ್ಣನ ವಿರೋಧಿಗಳಾಗಿದ್ದವರು ಆಗ ತೈಲಪನ ಸಹಾಯಕ್ಕೆ ಬಂದಂತೆ ತೋರುತ್ತದೆ. ಶ್ರೀಮುಖ ಸಂವತ್ಸರದಲ್ಲಿ (974) ರಾಷ್ಟ್ರಕೂಟ ಕಕ್ಕನನ್ನು ತೈಲಪ ಸೋಲಿಸಿ ಚಾಳುಕ್ಯ ರಾಜ್ಯ ಸ್ಥಾಪಿಸಿ ಅನಂತರ 24 ವರ್ಷಗಳ ಕಾಲ ಆಳಿದನೆಂದು ಗದಗದ 6ನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಹೇಳಿದೆ. ಕಲ್ಯಾಣದ ಚಾಳುಕ್ಯರು ಅಧಿಕಾರಕ್ಕೆ ಬರುವ ಮೊದಲು ವಾರಂಗಲ್ ಬಳಿಯ ಹನ್ಮಕೊಂಡದಲ್ಲಿ ಇದ್ದರು ಎಂಬುದಕ್ಕೆ ಇಮ್ಮಡಿ ಭೀಮನ ಕಾಜಿಪೇಟ್ ದರ್ಗಾ ಶಾಸನ ಆಧಾರವಾಗಿದೆ ಎಂಬ ಅಭಿಪ್ರಾಯವಿದೆ. ಇದರಿಂದ ರಾಷ್ಟ್ರಕೂಟರ ಅಧೀನದಲ್ಲಿ ಅವರು ಕೃಷ್ಣಾನದಿ ಬಯಲಿನ ವಿವಿಧೆಡೆ ಆಳಿದರೆಂದು ಹೇಳಬಹುದು. ಅವರಿಗೆ ಏತಗಿರಿ, ಪೊಟ್ಟಲಕೆರೆ, ಕೊಳ್ಳಿಪಾಕೆ, ಪೈಠಣ, ಕಲ್ಯಾಣ, ಜಯನ್ತಿಪುರ, ಸೆಲೆಹಳ್ಳಿ ಇತ್ಯಾದಿ ರಾಜಧಾನಿಗಳು ಮತ್ತು ನೆಲೆವೀಡುಗಳು ಇದ್ದವೆಂದು ತಿಳಿದುಬಂದಿದೆ.

ಕಕ್ಕನನ್ನು ಸೋಲಿಸಿದ ತೈಲಪ ಮಾನ್ಯಖೇಟವನ್ನು ಆಕ್ರಮಿಸಿದ. ಆದರೆ ರಾಷ್ಟ್ರಕೂಟರ ವಿಧೇಯ ಸಾಮಂತನಾಗಿದ್ದ ಗಂಗ ಮಾರಸಿಂಹ ಮತ್ತು ಅವನ ಮರಣಾನಂತರ ಅವನ ಉತ್ತರಾಧಿಕಾರಿಗಳಾಗಿ ಅಧಿಕಾರಕ್ಕೆ ಬಂದ ಗೋವಿಂದ, ಪಾಂಚಾಲದೇವ ಇವರು ತೈಲಪನನ್ನು ಎದುರಿಸಿದರೂ 977ರ ವೇಳೆಗೆ ಗಂಗ ಮನೆತನದ ಈ ಮಾಂಡಲಿಕರನ್ನು ಸೋಲಿಸಿದ ತೈಲಪ ತನ್ನ ಸಿಂಹಾಸನವನ್ನು ಭದ್ರಪಡಿಸಿಕೊಂಡ. ಈ ಹೊತ್ತಿಗೆ ರಾಷ್ಟ್ರಕೂಟರ ಅವನತಿಯೊಂದಿಗೆ ರಾಜ್ಯ ಸ್ಥಾಪನೆಮಾಡಿಕೊಂಡಿದ್ದ ಚೋಳ ವಂಶದವರು ರಾಜ್ಯ ವಿಸ್ತರಣಾಕಾಂಕ್ಷಿಗಳಾಗಿದ್ದರು. ಆ ವಂಶದ ರಾಜರಾಜ ಗಂಗವಾಡಿ ನೊಳಂಬವಾಡಿಗಳನ್ನು ವಶಪಡಿಸಿಕೊಳ್ಳಲು ಉದ್ಯುಕ್ತನಾದಾಗ ತೈಲಪ ದಕ್ಷಿಣದ ಕಡೆಗೆ ನುಗ್ಗಿ ಚೋಳ ಅರಸನನ್ನು ಸೋಲಿಸಿದ (1992). ಪರಮಾರ ವಂಶದ ಸೀಯಕ ಹರ್ಷನ ಉತ್ತರಾಧಿಕಾರಿ ಮುಂಜ ಚಾಳುಕ್ಯ ತೈಲಪನನ್ನು 16 ಬಾರಿ ಸೋಲಿಸಿದನೆಂದು ಮೇರುತುಂಗ ತನ್ನ ಪ್ರಬಂಧ ಚಿಂತಾಮಣಿಯಲ್ಲಿ ಹೇಳಿದ್ದಾನೆ. ಆದರೆ ಕೊನೆಯಲ್ಲಿ ಮುಂಜ ತೈಲಪನಿಗೆ ಸೋತು ಸೆರೆಸಿಕ್ಕು, ಬಹುಶಃ ಸೆರೆಮನೆಯಲ್ಲಿ ತೀರಿಕೊಂಡ. ಯುವರಾಜನಾದ ಸತ್ಯಾಶ್ರಯ ಈ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ. ಇವನ ಕಾಲದಲ್ಲಿ ಚಾಳುಕ್ಯ ರಾಜ್ಯ ಸುಮಾರು ವಿಂಧ್ಯ ಪರ್ವತದವರೆಗೂ ಹಬ್ಬಿತ್ತು.

ತೈಲಪನ ಮರಣಾನಂತರ ಪಟ್ಟಕ್ಕೆ ಬಂದ ಇವನ ಮಗ ಇರಿವ ಬೆಡಂಗ ಸತ್ಯಾಶ್ರಯ (997-1008) ಚೋಳ ರಾಜರಾಜ, ಅನಂತರ ರಾಜೇಂದ್ರ ಇವರೊಡನೆ ಕದನಗಳನ್ನು ಮುಂದುವರಿಸಿದ. ಚೋಳ ಸಾಮರ್ಥ್ಯದ ಪರಿಣಾಮವಾಗಿ ಗಂಗವಾಡಿ ಮತ್ತು ನೊಳಂಬವಾಡಿ ಪ್ರದೇಶಗಳು ಅವರ ವಶವಾದವು. ಆದರೆ ಚಾಳುಕ್ಯರ ಬಲ ಕುಂದಲಿಲ್ಲ. ಇತ್ತ ಕೊಂಕಣದ ಮಾಂಡಲಿಕ ಶಿಲಾಹಾರ ಅಪರಾಜಿತನನ್ನು ಸತ್ಯಾಶ್ರಯ ಸೋಲಿಸಿದ. ಗುಜರಾತಿನ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸಿ ಅಲ್ಲಿದ್ದ ಚಾಳುಕ್ಯಶಾಖೆಯ ಆಳಿಕೆಯ ಮುಂದುವರಿಕೆಗೆ ಕಾರಣನಾದ.

ಸತ್ಯಾಶ್ರಯನೊಂದಿಗೆ ಅವನ ತಮ್ಮ ದಶವರ್ಮನೂ ಆಳುತ್ತಿದ್ದುದಕ್ಕೆ ಯಲಬುರ್ಗಿ ತಾಲ್ಲೂಕಿನ ಕಲ್ಲೂರಿನ ಶಾಸನದಲ್ಲಿ ಉಲ್ಲೇಖವಿದೆ ಎಂದು ಹೇಳಲಾಗಿದೆ. ಸತ್ಯಾಶ್ರಯನಿಗೆ ಗಂಡುಮಕ್ಕಳಿಲ್ಲದ್ದರಿಂದ ಅವನ ತಮ್ಮ ದಶವರ್ಮನ ಮಗನಾದ 5ನೆಯ ವಿಕ್ರಮಾದಿತ್ಯ (1008-15) ಪಟ್ಟಕ್ಕೆ ಬಂದ. ಇವನು ಅಷ್ಟೇನೂ ಪ್ರಭಾವಶಾಲಿಯಾಗಿರಲಿಲ್ಲವಾದ್ದರಿಂದ, ದಕ್ಷಿಣದ ಚೋಳರೂ ಉತ್ತರದ ಪರಮಾರ ಅರಸ ಭೋಜನೂ ಇವನ ರಾಜ್ಯವನ್ನು ಮುತ್ತಿದರು. ರಾಜ್ಯವನ್ನು ಶತ್ರುಗಳಿಂದ ಕಾಪಾಡಿಕೊಳ್ಳುವುದಕ್ಕಾಗಿ ಇವನು ಬಹಳ ಶ್ರಮಿಸಬೇಕಾಯಿತು.

ವಿಕ್ರಮಾದಿತ್ಯನ ಅನಂತರ 1015ರ ಸುಮಾರಿನಲ್ಲಿ ಇವನ ಸೋದರ ಅಯ್ಯಣ ಕೆಲವು ತಿಂಗಳುಗಳ ಕಾಲ ರಾಜ್ಯವಾಳಿ ಅನಂತರ ರಾಜ್ಯವನ್ನು ತೊರೆದಂತೆ ತೋರುತ್ತದೆ. ವಂಶಾವಳಿಗಳಲ್ಲಿ ಇವನ ಉಲ್ಲೇಖವಿಲ್ಲ.

ಅಯ್ಯಣನ ಬಳಿಕ ಇವನ ತಮ್ಮ ಒಂದನೆಯ ಜಗದೇಕಮಲ್ಲ (ಜಯಸಿಂಹ II, 1015-44) ಪಟ್ಟಕ್ಕೆ ಬಂದ. ಇವನು ರಾಜ್ಯವಾಳ ತೊಡಗಿದಂದಿನಿಂದ ರಾಜ್ಯಕ್ಕೆ ಸೂಕ್ತವಾದ ರಾಜಧಾನಿಯೊಂದನ್ನು ಆರಿಸುವ ಕೆಲಸ ಆರಂಭವಾಯಿತೆನ್ನಬೇಕು. ಈತ ಪಟ್ಟಕ್ಕೆ ಬಂದ ತರುಣದಲ್ಲೇ ಚಾಳುಕ್ಯ ಚೋಳರ ನಡುವಣ ಕದನಗಳಲ್ಲಿ ರಾಜಧಾನಿ ಮಾನ್ಯಖೇಟ ಶತ್ರುಗಳ ವಶಕ್ಕೆ ಸಿಕ್ಕು ಅವರು ಅದನ್ನು ನಾಶಗೊಳಿಸಿದ್ದರು. ಅನಂತರ ಏತಗಿರಿ ಈಗಿನ ಯಾದಗಿರಿ, ಹೊ(ಪೊ)ಟ್ಟಳಕೆರೆ (ಈಗಿನ ಆಂಧ್ರಪ್ರದೇಶದ ಪಟನ್‌ಚೆರು ಅಥವಾ ಪೊಟ್ಲಚೆರುವು) ಮತ್ತು ಕೊಳ್ಳಿಪಾಕ್ಕೆ ಹೈದರಾಬಾದಿಗೆ 72ಕಿಮೀ ಅಂತರದಲ್ಲಿರುವ ಈಗಿನ ಕೊಲನುಪಾಕ -ಇವು ಕ್ರಮವಾಗಿ ಜಯಸಿಂಹನ ನೆಲೆಗಳಾಗಿದ್ದುವು. ಕಲ್ಯಾಣವನ್ನು ರಾಜಧಾನಿಯಾಗಿ ಆರಿಸಿ ಅದನ್ನು ಅಭಿವೃದ್ಧಿಗೊಳಿಸಿದವನು ಜಯಸಿಂಹನ ಮಗನಾದ ಒಂದನೆಯ ಸೋಮೇಶ್ವರ.

ಜಯಸಿಂಹ ಅಧಿಕಾರಕ್ಕೆ ಬಂದಾಗ ರಾಜ್ಯದ ಎಲ್ಲ ಮೇರೆಗಳಲ್ಲೂ ಶತ್ರುಗಳು ಯುದ್ಧ ಸನ್ನದ್ಧರಾಗಿದ್ದರು. ಪರಮಾರ ಭೋಜ, ಕಳಚುರಿ ಗಾಂಗೇಯ ದೇವ ಹಾಗೂ ದಕ್ಷಿಣದ ರಾಜೇಂದ್ರ ಚೋಳ ಇವರು ಕಲೆತು ಕರ್ನಾಟಕದ ಮೇಲೆ ಎರಗಿದರು. ಭೋಜ ಕೊಂಕಣವನ್ನು ಆಕ್ರಮಿಸಿದ. ರಾಜೇಂದ್ರ ಚೋಳ ಚಾಳುಕ್ಯ ರಾಜಧಾನಿಯನ್ನು ಮುತ್ತಿ ಸುಟ್ಟ, ಆದರೆ ಕೂಡಲೇ ಚೇತರಿಸಿಕೊಂಡ ಜಯಸಿಂಹ ಭೋಜನನ್ನು ಸೋಲಿಸಿ ಹಿಂದಕ್ಕೆ ಅಟ್ಟಿದ. ಕೊಂಕಣವನ್ನು ಪುನಃ ಆಕ್ರಮಿಸಿ ಸಪ್ತಕೊಂಕಣಾಧೀಶ್ವರರ ಸಂಪತ್ತನ್ನು ಸೂರೆಗೊಂಡ. ಸೇವುಣರ 3ನೆಯ ಭಿಲ್ಲಮನನ್ನು ಸೋಲಿಸಿದ ಬಳಿಕ ಆತನಿಗೆ ತನ್ನ ಮಗಳಾದ ಅವ್ವಲ್ಲದೇವಿಯನ್ನು ವಿವಾಹ ಮಾಡಿ ಕೊಟ್ಟು ಅವನ ವಿಧೇಯತೆಯನ್ನು ಗಳಿಸಿದ. ರಾಜ್ಯಕ್ಕೊದಗಿದ್ದ ವಿಪತ್ತನ್ನು ಅಧಿಕಾರಕ್ಕೆ ಬಂದ ಕೂಡಲೇ ಹೀಗೆ ಪರಿಹರಿಸಿಕೊಂಡ ಜಯಸಿಂಹನಿಗೆ, ಉತ್ತರದ ಅರಸರಿಂದ ಅನಂತರ ಹೆಚ್ಚಿನ ತೊಂದರೆ ಉಂಟಾಗಲಿಲ್ಲ. ಆದರೆ ದಕ್ಷಿಣದಲ್ಲಿ ರಾಜೇಂದ್ರ ಚೋಳ ಮಾತ್ರ ತನ್ನ ಆಕ್ರಮಣ ಮನೋಭಾವವನ್ನು ಬಿಡಲಿಲ್ಲ. ವೆಂಗಿಯ ರಾಜಕೀಯ ಇದಕ್ಕೆ ಒಳ್ಳೆಯ ಕಾರಣವನ್ನು ಒದಗಿಸಿ ಚಾಳುಕ್ಯ-ಚೋಳ ಯುದ್ಧಗಳು ಇವನ ಕಾಲದಲ್ಲಿ

ನಡೆಯುತ್ತಲೇ ಇದ್ದುವು. ಈ ಕದನಗಳಲ್ಲಿ ಜಯಸಿಂಹನಿಗೆ ಆತನ ಅಧಿಕಾರಿಗಳೂ ಸೇನಾನಿಗಳೂ ಆದ ಕುಂದಮರಸ ಮತ್ತು ವಾವಣರಸ ಬಹಳ ಸಹಾಯ ನೀಡಿದರು. ತನ್ನ ಆಳಿಕೆಯ ಉದ್ದಕ್ಕೂ ಯುದ್ಧನಿರತನಾಗಿದ್ದ ಜಯಸಿಂಹ ಸು.1044ರಲ್ಲಿ ಮೃತನಾದ.

ಜಯಸಿಂಹನ ಬಳಿಕ ಇವನ ಹಿರಿಯ ಮಗ ಒಂದನೆಯ ಸೋಮೇಶ್ವರ ಪಟ್ಟಕ್ಕೆ ಬಂದ. ಜಯಸಿಂಹನ ಕಾಲದಲ್ಲಿದ್ದ ರಾಜಕೀಯ ಪರಿಸ್ಥಿತಿ ಇವನ ಕಾಲದಲ್ಲೂ ಮುಂದುವರಿಯಿತು. ಈತ ಆಳಿದ 25 ವರ್ಷಗಳ ಕಾಲವೂ ದಕ್ಷಿಣ ಭಾರತ ಒಂದು ವಿಶಾಲವಾದ ರಣರಂಗವಾಗಿ ಪರಿವರ್ತಿತವಾಯಿತೆನ್ನಬಹುದು. ಕರ್ನಾಟಕದ ಹಾಗೂ ತಮಿಳುನಾಡಿನ ಎರಡು ಪ್ರಮುಖ ಅರಸುಮನೆತನಗಳ ನಡುವೆ ಈ ವರ್ಷಗಳಲ್ಲಿ ಹಿರಿಮೆಗಾಗಿ ತೀವ್ರವಾದ ಪೈಪೋಟಿಯುಂಟಾಯಿತು.

ಚೋಳ ರಾಜಾಧಿರಾಜ ಮತ್ತು ಸೋಮೇಶ್ವರ ಇವರ ನಡುವೆ ವಿಶೇಷವಾಗಿ ವೆಂಗಿ ಪ್ರದೇಶದ ಆಕ್ರಮಣಕ್ಕಾಗಿ ಐದು ಬಾರಿ ಘರ್ಷಣೆ ಉಂಟಾದುವು. ಸು.1044ರಲ್ಲಿ ದನ್ನಾಡದಲ್ಲಿ (ಆಂಧ್ರಪ್ರದೇಶದ ಧಾನ್ಯಕಟಕ ಅಥವಾ ಅಮರಾವತಿ) ಪುನಃ ಪುಣ್ಣಾರು ಎಂಬಲ್ಲಿ, ಅನಂತರ 1054ರಲ್ಲಿ ಕೊಪ್ಪಂನಲ್ಲಿ (ರಾಯಚೂರು ಜಿಲ್ಲೆಯ ಕೊಪ್ಪಳ) ಯುದ್ಧಗಳಾದುವು. ಹೆಚ್ಚಿನ ಯುದ್ಧಗಳು ಅನಿರ್ಣಾಯಕವಾಗಿದ್ದಂತೆ ತೋರುತ್ತದೆ. ಚಾಳುಕ್ಯ ಶಾಸನಗಳು ಮತ್ತು ಚೋಳ ಶಾಸನಗಳು ಅವರವರ ಬಲ ಮೇಲುಗೈಯಾಗಿತ್ತೆಂದು ವರ್ಣಿಸುವುದು ಸಾಮಾನ್ಯ. ಆದರೆ ಈ ಯುದ್ಧಗಳಲ್ಲಿ ಚಾಳುಕ್ಯ ಯುವರಾಜ ಜಯಸಿಂಹ ಮತ್ತು ಚೋಳ ರಾಜಾಧಿರಾಜ ಸತ್ತರೆಂಬ ಅಂಶಗಳು ಸ್ಪಷ್ಟ. ಚೋಳ ರಾಜಾಧಿರಾಜನ ಅನಂತರ ಬಂದ ಇಮ್ಮಡಿ ರಾಜೇಂದ್ರ ಹೋರಾಟಗಳನ್ನು ಮುಂದುವರಿಸಿ ಕೊಲ್ಲಾಪುರದವರೆಗೂ ಶತ್ರುಸೇನೆಯನ್ನು ಓಡಿಸಿದ. ಈತ ಅಲ್ಲಿ ಜಯಸ್ತಂಭವೊಂದನ್ನು ನೆಡಿಸಿದನೆಂದು ಹಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಇದು ಸಂದೇಹಾಸ್ಪದ, ಮುನ್ನುಗ್ಗುತ್ತಿದ್ದ ರಾಜೇಂದ್ರನನ್ನು ಸೋಮೇಶ್ವರ ತಡೆದು ಅವನನ್ನು ಹಿಂದಕ್ಕೆ ಓಡಿಸಿದ್ದಾಗ, ಅವನು ಕುಮ್ಮಟದ ಕೋಟೆಯನ್ನು ಮುತ್ತಿದನೆಂದೂ ಆದರೆ ಅಲ್ಲಿ ಅಧಿಕಾರದಲ್ಲಿದ್ದ ಹೊಯ್ಸಳ ವಿನಯಾದಿತ್ಯನ ನೆರವಿಗೆ ಸೋಮೇಶ್ವರ ಧಾವಿಸಿ ಕುಮ್ಮಟದ ಕೋಟೆಯಂ ನಿಷ್ಕಂಟಕಂ ಮಾಡಿದನೆಂದೂ ಈಚೆಗೆ ದೊರೆತ ಬನ್ನಿಗೊಳದ ಶಾಸನ ಹೇಳುತ್ತದೆ. ಇನ್ನೊಮ್ಮೆ 1059ರಲ್ಲಿ ರಾಜೇಂದ್ರನನ್ನು ಸೋಮೇಶ್ವರ ತುಂಗಭದ್ರಾ ನದಿಯ ತೀರದಲ್ಲಿ ಎದುರಿಸಿ ಸೋಲಿಸಿದ. ಹೀಗೆ ಎರಡೂ ಬಣಗಳ ನಡುವೆ ಹೋರಾಟಗಳು ನಡೆಯುತ್ತಲೇ ಇದ್ದರೂ ಯಾರಿಗೂ ಖಚಿತವಾದ, ಅಂತಿಮವಾದ ಯಶಸ್ಸು ದೊರೆಕಲಿಲ್ಲ. ಮುಂದೆ ಒಂದು ಸಂದರ್ಭದಲ್ಲಿ ಸೋಮೇಶ್ವರ ವೆಂಗಿಮಂಡಲದಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ಸನ್ನು ಸಂಪಾದಿಸಿದ (ಸು.1061). ಇದರ ಪರಿಣಾಮವಾಗಿ ಚೋಳ ವೀರರಾಜೇಂದ್ರ ಪುನಃ ಸೋಮೇಶ್ವರನನ್ನು ಕೂಡಲಸಂಗಮವೆಂಬ ಸ್ಥಳದಲ್ಲಿ ಎದುರಿಸಿದ. ವೆಂಗಿಯ ಆಂತರಿಕ ರಾಜಕೀಯದಲ್ಲಿ ನಡೆದ ಕೆಲವು ಹೊಂದಾಣಿಕೆಗಳು ಮುಂದೆ ಸ್ವಲ್ಪಮಟ್ಟಿಗೆ ಯುದ್ಧಗಳನ್ನು ತಡೆದುವು. ಸೋಮೇಶ್ವರನ ಆಳಿಕೆಯ ಅಂತಿಮ ವರ್ಷಗಳಲ್ಲಿ ನಡೆದ ಈ ಘಟನೆಗಳ ವಿವರಗಳು ಸ್ಪಷ್ಟವಾಗಿಲ್ಲ. ಆದರೆ ಅದುವರೆಗೂ ವಿಜಯಾದಿತ್ಯನ ಹಕ್ಕನ್ನು ನಿರಾಕರಿಸಿದ್ದ ಚೋಳರೂ ಆ ಘಟ್ಟದಲ್ಲಿ ವಿಜಯಾದಿತ್ಯನ ಆಳಿಕೆಯನ್ನು ಮಾನ್ಯಮಾಡಿದರು. ಇದರ ಫಲವಾಗಿ ವಿಜಯಾದಿತ್ಯನ ಮತ್ತು ವೀರರಾಜೇಂದ್ರನ ನಡುವಣ ಬಾಂಧವ್ಯದಲ್ಲಿ ಸ್ಪಷ್ಟವಾದ ಬದಲಾವಣೆಯುಂಟಾಯಿತು.

ಸೋಮೇಶ್ವರ ತನ್ನ ಆಳಿಕೆಯ ಕಾಲದ ಬಹುಭಾಗವನ್ನು ಚೋಳರೊಡನೆ ಕದನಗಳಲ್ಲಿ ಕಳೆದರೂ 1051ರಲ್ಲಿ ಪರಮಾರ ವಂಶದ ಭೋಜನ ಮೇಲೆ ನಡೆದು ಧಾರಾನಗರವನ್ನು ಸುಟ್ಟು ಮಾಂಡವದ ಕೋಟೆಯನ್ನು ವಶಪಡಿಸಿಕೊಂಡ. ಇನ್ನೊಂದು ಬಾರಿ ಭೋಜ ಇವನ ಮೇಲೇರಿ ಬಂದಾಗ ಸೋಮೇಶ್ವರ ಅವನನ್ನು ಚಾಳುಕ್ಯ ಮನೆತನದ ಭೀಮ ಮತ್ತು ಕಳಚುರಿ ಕರ್ಣರೊಡಗೂಡಿ ಕದನದಲ್ಲಿ ಎದುರಿಸಿದ. ಈ ಕದನದಲ್ಲಿ ಭೋಜ ಹತನಾದಂತೆ ತೋರುತ್ತದೆ.

ಒಂದು ಸಂದರ್ಭದಲ್ಲಿ ರಾಜ್ಯದೊಳಗೆ ದಂಗೆಯ ಸನ್ನಾಹ ನಡೆಸಿದ್ದ ಶಿಲಾಹಾರ ಮನೆತನದ ಕೊಂಕಣದ ಮುಮ್ಮಣಿ ಮತ್ತು ಕರಹಾಡದ ಮಾರಸಿಂಹರನ್ನೂ ಸೇವುಣರ 3ನೆಯ ಭಿಲ್ಲಮನನ್ನೂ ಸೋಲಿಸಿದ. 1068ರಲ್ಲಿ ಸೋಮೇಶ್ವರ ಮಡಿದ. ಆಗ ಸಿಂಹಾಸನವೇರಿದವನು ಆತನ ಹಿರಿಯ ಮಗ ಇಮ್ಮಡಿ ಸೋಮೇಶ್ವರ (1068-1076). ಇವನು ಪಟ್ಟಕ್ಕೆ ಬರುತ್ತಿದ್ದಂತೆಯೇ ಇವನ ಮೇಲೆ ದಾಳಿಮಾಡಿದ ಚೋಳ ವೀರರಾಜೇಂದ್ರನನ್ನು ಸೋಲಿಸಿದ. ಆದರೆ ಅನಂತರ ಉತ್ತರದಲ್ಲಿ ಪರಮಾರ ಉದಯಾದಿತ್ಯನಿಂದ ಪರಾಜಿತನಾದ. ಇಮ್ಮಡಿ ಸೋಮೇಶ್ವರ ದಕ್ಷನಾದ ಅರಸನಾಗಿರಲಿಲ್ಲ. ತನ್ನ ಆಳಿಕೆಯ ಕೊನೆಯ ದಿನಗಳಲ್ಲಿ ಚಾಳುಕ್ಯ ವೈರಿಗಳಾಗಿದ್ದ ಚೋಳರೊಡನೆ ಸ್ನೇಹ ಬೆಳೆಸಿದ್ದು ಚಾಳುಕ್ಯರ ಆಸಕ್ತಿಯ ಕ್ಷೇತ್ರವಾಗಿದ್ದ ವೆಂಗಿದೇಶ ಚೋಳರ ವಶವಾಗಲು ಅವಕಾಶ ಮಾಡಿಕೊಟ್ಟದ್ದು ಮೊದಲಾದ ಘಟನೆಗಳು ನಡೆದವು. ಅಲ್ಲದೆ ಒಂದನೆಯ ಸೋಮೇಶ್ವರನ ಕಾಲದಿಂದಲೂ ಪ್ರಭಾವಿಯಾಗಿದ್ದ ಇವನ ತಮ್ಮ 6ನೆಯ ವಿಕ್ರಮಾದಿತ್ಯನನ್ನು ಇವನು ಸಂಶಯದೃಷ್ಟಿಯಿಂದ ನೋಡುತ್ತಿದ್ದುದರಿಂದ ಇವರಲ್ಲಿ ವಿರಸಮೂಡಿತ್ತು.

ಈ ಪರಿಸ್ಥಿತಿಯಲ್ಲಿ ವಿಕ್ರಮಾದಿತ್ಯ, ಅಣ್ಣನನ್ನು ಸಿಂಹಾಸನದಿಂದ ಹೊರದೂಡಲು ನಿಶ್ಚಯಿಸಿದ. ಇವನ ತಮ್ಮ 3ನೆಯ ಜಯಸಿಂಹ.

**ಕಲ್ಯಾಣದ ಚಾಳುಕ್ಯರ ವಂಶಾವಳಿ**



ಗೋವೆಯ ಕದಂಬ ಜಯಕೇಶಿ, ಹಾನಗಲ್ಲಿನ ಕದಂಬ ಕೀರ್ತಿವರ್ಮ ಮುಂತಾದವರ ಬೆಂಬಲದಿಂದ ಸೋಮೇಶ್ವರನ ಮೇಲೆ ಜಯಗಳಿಸಿ ತಾನೇ ರಾಜನಾಗಿ ಐವತ್ತು ವರ್ಷಗಳಿಗೂ ಹೆಚ್ಚುಕಾಲ (1076-1127) ಆಳಿಕೆ ನಡೆಸಿದ. ಯುವರಾಜ ಪದವಿಯಲ್ಲಿದ್ದಾಗ ಮಿತಿಮೀರಿದ ಚಟುವಟಿಕೆಗಳಿಂದ ಕೂಡಿದ್ದು, ಸದಾ ಯುದ್ಧಸನ್ನದ್ಧನಾಗಿ, ಕದನಗಳಲ್ಲಿ ಪಾಲುಗೊಂಡಿದ್ದ ಈತ ಪಟ್ಟಕ್ಕೆ ಬಂದ ಬಳಿಕ ಹೆಚ್ಚು ಶಾಂತಿಯುತ ಜೀವನ ನಡೆಸಿದ. ಈ ಕಾಲದಲ್ಲಿ ಒಂದು ಕಡೆ ಕುಲೋತ್ತುಂಗನೂ ಮತ್ತೊಂದು ಕಡೆ ವಿಕ್ರಮಾದಿತ್ಯನೂ ಸಮಾನ ಶೂರರಾಗಿದ್ದರು. ತಮ್ಮ ತಮ್ಮ ಶಕ್ತಿಸಾಮರ್ಥ್ಯಗಳನ್ನೂ ಕುಂದುಕೊರತೆಗಳನ್ನೂ ಪರಸ್ಪರ ಅರಿತಿದ್ದ ಈ ಅರಸರು ರಾಜಕೀಯ ಹೋರಾಟಗಳನ್ನು ಕೊನೆಗಾಣಿಸಿ, ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುವುದು ಹೆಚ್ಚು ಶ್ರೇಯಸ್ಕರವೆಂದು ಭಾವಿಸಿದಂತೆ ತೋರುತ್ತದೆ. ಆಗ ರಾಜ್ಯದಲ್ಲಿ ಶಾಂತಿ ಸುಭಿಕ್ಷೆ ನೆಲಸಿತ್ತು. ನಾಡು ಸರ್ವತೋಮುಖ ಅಭಿವೃದ್ಧಿಯನ್ನು ಕಂಡಿತು.

ಆದರೂ ವಿಕ್ರಮಾದಿತ್ಯನ ಆಡಳಿತ ಕಾಲದಲ್ಲೂ ಆಗಿಂದಾಗ್ಗೆ ಕೆಲವು ಘಟನೆಗಳು ಸಂಭವಿಸಿದುವು. ಇವನ ವಿರುದ್ಧ ಇವನ ಸೋದರನಾದ 3ನೆಯ ಜಯಸಿಂಹ ದಂಗೆ ಎದ್ದ. ಆದರೆ 1082ರ ಹೊತ್ತಿಗೆ ನಿಗ್ರಹಿಸಲ್ಪಟ್ಟ. ಕರಹಾಡದ ಶಿಲಾಹಾರ ಭೋಜ ಬಹುಶಃ ಸುಮಾರು ಒಂದು ದಶಕಕ್ಕೂ ಹೆಚ್ಚುಕಾಲ (1089-1100) ವಿಕ್ರಮಾದಿತ್ಯನ ವಿರುದ್ಧ ಬಂಡುಹೂಡಿದ್ದು ಕೊನೆಗೆ ಸೋತ. ಅಂತೆಯೇ ಆಳುಪರ, ಪೈವೆಯ ನಾಗವರ್ಮನ ಹಾಗೂ ಗೊಗ್ಗಿಯ ಬಂಡಾಯವನ್ನೂ ಅರಸ ಮುರಿದ. ರಾಜ್ಯದ ಉತ್ತರದಲ್ಲಿ ಪರಮಾರರ ವಿರುದ್ಧ ದಂಡೆತ್ತಿ ಉದಯಾದಿತ್ಯನನ್ನು ಸೋಲಿಸಿ (1088) ಆ ವಂಶದ ಜಗದ್ದೇವನಿಗೆ ಆಶ್ರಯ ನೀಡಿದ. ಈ ದಂಡಯಾತ್ರೆಗಳ ಪರಿಣಾಮವಾಗಿ ಚಾಳುಕ್ಯ ರಾಜ್ಯ ನರ್ಮದಾ ನದಿಯವರೆಗೂ ವಿಸ್ತರಿಸಿತು. ಗೂರ್ಜರ ಸಿಂಧುರಾಜನನ್ನೂ ರತ್ನಪುರದ ಕಳಚುರಿ ಜಾಜಲ್ಲದೇವನನ್ನೂ ತ್ರಿಪುರಿಯ ಯಶಃಕರ್ಣನನ್ನೂ ಒಮ್ಮೆ ಸೋಲಿಸಿದ. ಆಂಧ್ರದಲ್ಲಿ ವೆಂಗಿಮಂಡಲದ ಭಾಗಗಳೂ ಸು.1118ರ ಹೊತ್ತಿಗೆ ಪೂರ್ಣವಾಗಿ ವಿಕ್ರಮಾದಿತ್ಯನ ವಶವಾದವು.

ವಿಕ್ರಮಾದಿತ್ಯನ ಆಳಿಕೆಯ ಕೊನೆಯ ಭಾಗದಲ್ಲಿ ಹೊಯ್ಸಳರಿಂದ ಅನಿರೀಕ್ಷಿತವಾದ ವಿರೋಧ ಎದುರಾಯಿತು. ಹೊಯ್ಸಳ ಒಂದನೆಯ ಬಲ್ಲಾಳ ಮತ್ತು ಅವನ ತಮ್ಮ ವಿಷ್ಣುವರ್ಧನ ಇವರು ಚಾಳುಕ್ಯ ಸಾಮಂತರಾದ ಹಾನಗಲ್ಲಿನ ಕದಂಬರನ್ನೂ ಉಚ್ಚಂಗಿಯ ಪಾಂಡ್ಯರನ್ನೂ ಆಗಿಂದಾಗ್ಗೆ ಕೆಣಕಿ ಅವರ ಅಸ್ತಿತ್ವಕ್ಕೆ ಕುಂದುಂಟುಮಾಡಲಾರಂಭಿಸಿದರು. ಮೊದಮೊದಲು ವಿಕ್ರಮಾದಿತ್ಯ ಇದನ್ನು ತೃಣೀಕರಿಸಿದನಾದರೂ ಅವರ ಕಿರುಕುಳ ಹೆಚ್ಚಿದಾಗ ಧಾರಾನಗರದಿಂದ ತನ್ನೊಡನೆ ಬಂದಿದ್ದ ಪರಮಾರ ಜಗದೇವನ ನೇತೃತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳಿಸಿದ. ಆದರೆ ಆತ ಹೊಯ್ಸಳರಿಂದ ಸೋತ (ಸು.1090). ಪುನಃ 1117-18ರಲ್ಲಿ, ಕಣ್ಣೇಗಾಲದಲ್ಲಿ ನಡೆದ ಕದನದಲ್ಲಿ ಹೊಯ್ಸಳ ಸೇನಾನಿ ಗಂಗರಾಜ ಚಾಳುಕ್ಯ ಸೇನೆಯನ್ನು ಸೋಲಿಸಿದ. ಈ ಸೋಲಿನಿಂದ ವಿಕ್ರಮಾದಿತ್ಯ ಕ್ರುದ್ಧನಾಗಿ ಪ್ರಚಂಡ ಸೈನ್ಯದೊಂದಿಗೆ ನುಗ್ಗಿ, ಹೊಯ್ಸಳರನ್ನು ಹಲಸೂರು ಮತ್ತು ಹೊಸವೀಡು ಕದನಗಳಲ್ಲಿ ಸೋಲಿಸಿದ. ವಿಷ್ಣುವರ್ಧನನ ಸೊಕ್ಕು ಇದರಿಂದ ಮುರಿದಂತಾಗಿ ಅವನು ಇನ್ನೂ ಸ್ವಲ್ಪ ಕಾಲ ಮಾಂಡಲಿಕನಾಗಿಯೇ ಮುಂದುವರಿಯುವುದರಲ್ಲಿ ತೃಪ್ತಿಪಟ್ಟುಕೊಳ್ಳಬೇಕಾಯಿತು. ದಿಕ್ಕು ದಿಕ್ಕುಗಳಲ್ಲೂ ಶತ್ರುಗಳನ್ನು ಸಂಹರಿಸಿ ಸಾಮಂತರನ್ನು ಆಜ್ಞಾಧಾರಕರನ್ನಾಗಿ ಮಾಡಿ ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ, ಪ್ರಜಾರಂಜಕನಾಗಿ, ಕಲಾಪೋಷಕನಾಗಿ, ಕವಿಗಳಿಗೂ ವಿದ್ವಾಂಸರಿಗೂ ಆಶ್ರಯದಾತನಾಗಿ, ಶಿಸ್ತಿನಿಂದ ಸೌಹಾರ್ದದಿಂದ ರಾಜ್ಯಭಾರಮಾಡಿದ ವಿಕ್ರಮಾದಿತ್ಯ 1127ರಲ್ಲಿ ನಿಧನಹೊಂದಿದ.

ಅನಂತರ ಪಟ್ಟಾಭಿಷಿಕ್ತನಾದವನು ಮುಮ್ಮಡಿ ಸೋಮೇಶ್ವರ (1127-39). ಚಾಳುಕ್ಯ ಇತಿಹಾಸದಲ್ಲಿ ಇವನ ಕಾಲ ಶಾಂತಿ ನೆಲಸಿದ್ದ ಕಾಲ. ಒಂದು ದೃಷ್ಟಿಯಿಂದ ಚಾಳುಕ್ಯಬಲ ಇಳಿಮುಖಗೊಳ್ಳಲು ಆರಂಭವಾದುದೂ ಇವನ ಕಾಲದಲ್ಲೇ ಎಂದು ಹೇಳಬಹುದು. ಇವನ ಆಳಿಕೆಯ ಪ್ರಾರಂಭದಲ್ಲಿಯೇ ವೆಂಗಿಯ ಬಹುಭಾಗ ಚಾಳುಕ್ಯರ ಕೈಬಿಟ್ಟಿತು. ದಕ್ಷಿಣದಲ್ಲಿ ಹೊಯ್ಸಳರು ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿದ್ದರು. ಆದರೂ ಈ ಹಿಂದೆ ಹೊಯ್ಸಳಾಧೀನವಾಗಿದ್ದ ಬನವಾಸೆ ಮತ್ತು ಉಚ್ಚಂಗಿ ಪ್ರಾಂತ್ಯಗಳನ್ನು ಸೋಮೇಶ್ವರ ಪುನಃ ಸಾಧಿಸಿಕೊಂಡಂತೆ ತೋರುತ್ತದೆ (ಸು. 1136). ಇದೊಂದೇ ಸೋಮೇಶ್ವರನ ಗಮನಾರ್ಹ ರಾಜಕೀಯ ಸಾಧನೆ.

ಮುಂದಿನ ರಾಜ ಮುಮ್ಮಡಿ ಸೋಮೇಶ್ವರನ ಮಗ ಪೆರ್ಮ ಜಗದೇಕಮಲ್ಲ (1139-49). ಅಶಕ್ತ ದೊರೆಯಾದ ಇವನ ಕಾಲದಲ್ಲಿ ಚಾಳುಕ್ಯ ಸಾಮ್ರಾಜ್ಯ ಸಂಕುಚಿತಗೊಳ್ಳಲಾರಂಭಿಸಿತು. ಆಂಧ್ರಪ್ರದೇಶದ ಕರಾವಳಿ ಭಾಗ ಸ್ವಲ್ಪ ಸ್ವಲ್ಪವಾಗಿ ಇವನ ಹತೋಟಿಯಿಂದ ಜಾರಿತು. ಹೊಯ್ಸಳ ವಿಷ್ಣುವರ್ಧನ ಮತ್ತೆ ದಂಗೆ ಎದ್ದು ಕದಂಬರನ್ನು ಸೋಲಿಸಿದ. ಹಾನಗಲ್ಲು ಬಂಕಾಪುರಗಳು ಅವನ ವಶವಾದುದಲ್ಲದೆ ಬನವಾಸಿ ಪ್ರಾಂತ್ಯದ ಆಧಿಪತ್ಯ ಕೆಲಕಾಲ ಅವನದಾಯಿತು. ಆದರೆ 1143ರ ಸುಮಾರಿನಲ್ಲಿ ಈ ಭಾಗದಲ್ಲಿ ಚಾಳುಕ್ಯ ಬಲ ಸ್ವಲ್ಪ ಚೇತರಿಸಿಕೊಂಡು ಹೊಯ್ಸಳರನ್ನು ಆಕ್ರಮಿತ ಪ್ರದೇಶಗಳಿಂದ ಹೊರಗಟ್ಟಿದ್ದರೂ ಚಾಳುಕ್ಯ ಸಾಮ್ರಾಜ್ಯಕ್ಕೆ ಹೊಯ್ಸಳರು ಪೆಟ್ಟುಕೊಡುವ ಶಕ್ತಿ ಗಳಿಸಿದ್ದರೆಂಬುದೇ ತತ್ಕಾಲದ ಸ್ಥಿತಿಯ ಸೂಚಕವಾಗಿದೆ. ಅತ್ತ ಕಳಚುರಿ ಮನೆತನದ ಬಿಜ್ಜಳ ಸಹ ಈ ವೇಳೆಗೆ ಪ್ರಬಲನಾಗಿ ಚಾಳುಕ್ಯ ರಾಜ್ಯವನ್ನು ಕಬಳಿಸಲು ಸನ್ನದ್ಧನಾಗುತ್ತಿದ್ದ.

ಇಂಥ ಪರಿಸ್ಥಿತಿಯಲ್ಲಿ ಜಗದೇಕಮಲ್ಲ ಮೃತನಾದಾಗ ಅವನ ಸೋದರ ಮುಮ್ಮಡಿ ತೈಲಪ (1149-62) ರಾಜ್ಯವಾಳತೊಡಗಿದ. ಅಶಕ್ತ ದೊರೆಯಾಗಿದ್ದ ಇವನ ಕಾಲದಲ್ಲಿ ಕಳಚುರಿ ಬಿಜ್ಜಳ ದಂಗೆ ಎದ್ದ, 1153ರ ವೇಳೆಗೆ ತಾನೇ ಚಕ್ರವರ್ತಿ ಎಂದು ಸಾರಿಕೊಂಡ. ರಾಜ್ಯದ ಅನೇಕ ಭಾಗಗಳ ಮೇಲೆ ಚಾಳುಕ್ಯರ ಅಂಕೆ ತಪ್ಪಿತು. ಶಿಲಾಹಾರರೂ ಕಾಕತೀಯರೂ ಹೊಯ್ಸಳರೂ ಈ ಪರಿಸ್ಥಿತಿಯ ಲಾಭ ಪಡೆದು ಸ್ವತಂತ್ರವಾಗಿ ಆಳತೊಡಗಿದರು. ತೈಲಪನ ವಿರುದ್ಧ ಕಾಕತೀಯ ರುದ್ರ ಕದನ ಹೂಡಿ ಜಯಗಳಿಸಿದ. ಈ ತೈಲಪನ ಕೊನೆಗಾಲದಲ್ಲಿ ಆಗ ರಾಜಧಾನಿಯನ್ನು ಅಣ್ಣಿಗೇರಿಗೆ ಮತ್ತೆ ಅಲ್ಲಿಂದ ಬನವಾಸಿಗೆ ವರ್ಗಾಯಿಸಿಕೊಂಡ. ಆಗ ಬನವಾಸಿ ಹಾಗೂ ಸುತ್ತಲಿನ ಪ್ರದೇಶಗಳು ಮಾತ್ರ ಇವನ ಅಧೀನದಲ್ಲಿ ಇದ್ದುವು.

ಸಾಯುವ ಮುನ್ನ ತೈಲಪ ತನ್ನ ಮಗ ತ್ರಿಭುವನಮಲ್ಲ 4ನೆಯ ಸೋಮೇಶ್ವರನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ್ದನಾದರೂ ಇನ್ನಿಬ್ಬರು ರಾಜಕುಮಾರರಾದ 3ನೆಯ ಜಗದೇಕಮಲ್ಲ ಮತ್ತು 2ನೆಯ ಭೂಲೋಕಮಲ್ಲರು ಕಲ್ಯಾಣವನ್ನೇ ಬಿಟ್ಟು ಹೊರಗೆ ಹೋಗಬೇಕಾಯಿತು. ಅನಂತಪುರ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಅಧಿಕಾರದಲ್ಲಿದ್ದ ನಿಡುಗಲ್ಲಿನ ಚೋಳರು, ಉಚ್ಚಂಗಿಯ ಪಾಂಡ್ಯರು, ಸಾಂತರರು ಇವರಿಗೆ ಆಶ್ರಯವಿತ್ತರು. ಗೋವೆಯ ಕದಂಬರೂ ಇವರಿಗೆ ಬೆಂಬಲ ನೀಡಿದಂತೆ ತೋರುತ್ತದೆ. ಆದರೆ ಚಾಳುಕ್ಯ ರಾಜ್ಯ ಪೂರ್ಣವಾಗಿ ಕಳಚುರಿಗಳ ವಶವಾಯಿತು. 20 ವರ್ಷಗಳ ಅನಂತರ ಸು.1182ರಲ್ಲಿ ಸೋಮೇಶ್ವರ ತನ್ನ ನಂಬುಗೆಯ ದಂಡನಾಯಕರ ನೆರವಿನಿಂದ ರಾಜ್ಯವನ್ನು ಹಿಂದಕ್ಕೆ ಪಡೆದ. ಆದರೆ ಅವನ ಪ್ರಯತ್ನ ಪೂರ್ಣವಾಗಿ ಸಾರ್ಥಕವಾಗಲಿಲ್ಲ. ಒಂದು ಕಡೆ ಹೊಯ್ಸಳರೂ ಇನ್ನೊಂದು ಕಡೆ ಸೇವುಣರೂ ಮತ್ತೊಂದು ಕಡೆ ಕಾಕತೀಯರೂ ಪ್ರಬಲಿಸಿ ಅವರ ನಡುವಣ ಜಗಳದಲ್ಲಿ ಚಾಳುಕ್ಯ ರಾಜ್ಯ ಸು.1189ರ ಹೊತ್ತಿಗೆ ಕರಗಿಹೋಯಿತು.

**ಆಡಳಿತ ವ್ಯವಸ್ಥೆ :** ಕಲ್ಯಾಣದ ಚಾಳುಕ್ಯರ ರಾಜ್ಯವು ವಿಸ್ತಾರದಲ್ಲಿ ಹಿಂದಿನ ರಾಜ್ಯಗಳಿಗಿಂತ ಹೆಚ್ಚಾಗಿತ್ತು. ಅತ್ಯುತ್ತಮ ಸ್ಥಿತಿಯಲ್ಲಿ ರಾಜ್ಯ ದಕ್ಷಿಣದ ಕಾವೇರಿಯಿಂದ ನರ್ಮದೆಯವರೆಗೂ ಹಬ್ಬಿತ್ತು. ಮಹಾರಾಷ್ಟ್ರದ ದಕ್ಷಿಣದ ಜಿಲ್ಲೆಗಳು, ಆಂಧ್ರಪ್ರದೇಶದ ಪಶ್ಚಿಮದ ಅನಂತಪುರ, ಕಡಪ, ಕರ್ನೂಲು ಮುಂತಾದ ಜಿಲ್ಲೆಗಳು ಇವರ ರಾಜ್ಯದ ಭಾಗವಾಗಿ ಇದ್ದುವು. ಸಹಜವಾಗಿಯೇ ಆಡಳಿತದಲ್ಲಿ ಹೆಚ್ಚು ಸಮಸ್ಯೆಗಳು ಉದ್ಭವಿಸಿದುವು. ಅಧಿಕಾರವರ್ಗ ಹೆಚ್ಚಾಯಿತು. ಅರಸನ ಜವಾಬ್ದಾರಿ ಗುರುತರವಾಯಿತು.

ಅರಸನ ಸಹಾಯಕ್ಕೆ ಮಂತ್ರಿಮಂಡಲವೊಂದಿತ್ತು. ಒಬ್ಬ ಮನೆವೆರ್ಗ್ಗಡೆ, ಇಬ್ಬರು ತಂತ್ರಪಾಲರು, ಒಬ್ಬ ತಂತ್ರದ ಸೇನಬೋವ,

ಒಬ್ಬ ಪ್ರಧಾನ ಮತ್ತು ಒಬ್ಬ ಹಡಪದ ಇವರು ಒಂದನೆಯ ಸೋಮೇಶ್ವರನ ಮಂತ್ರಿಮಂಡಲದಲ್ಲಿದ್ದರೆಂದೂ ಪ್ರಧಾನರು ಮತ್ತು ಇತರ ಅಧಿಕಾರಿಗಳೊಡಗೂಡಿ ಖಿಲವಾಗಿದ್ದ ನೀತಿ ನಿಯಮಾವಳಿಗಳನ್ನು ರೂಪಿಸಿದರೆಂದೂ ಸೂಡಿಯ ಶಾಸನವೊಂದರಲ್ಲಿ ಹೇಳಿದೆ. ತಂತ್ರದ ಸೇನಬೋವ ಬಹುಶಃ ಆ ಮಂತ್ರಿಮಂಡಲದ ಕಾರ್ಯದರ್ಶಿಯಾಗಿದ್ದಿರ ಬಹುದು. ತಂತ್ರಪಾಳರಧಿಷ್ಠಾಯಕ ಎಂಬ ಅಧಿಕಾರಿ ಸಹ ಮಂತ್ರಿಮಂಡಲದ ಒಬ್ಬ ಸದಸ್ಯನಾಗಿದ್ದಂತೆ ತೋರುತ್ತದೆ. ಮಹಾಪ್ರಧಾನ ಎಂಬ ಹೆಸರು ಶಾಸನಗಳಲ್ಲಿ ದೊರಕಿದರೂ ಈತ ಮಂತ್ರಿಮಂಡಲದ ಮುಖ್ಯಸ್ಥನಾಗಿದ್ದಂತೆ ತೋರುವುದಿಲ್ಲ. ಒಂದೇ ಕಾಲದಲ್ಲಿ ಹಲವಾರು ಅಧಿಕಾರಿಗಳು ಈ ಬಿರುದನ್ನು ಹೊಂದಿದ್ದ ವಿಷಯ ತಿಳಿದಿದೆ. ಈ ಅಧಿಕಾರಿಗಳ ಕಾರ್ಯಕ್ಷೇತ್ರ ಯಾವುದಾಗಿತ್ತು, ಆಡಳಿತದ ಯಾವ ಶಾಖೆಗೆ ಅವರು ಮುಖ್ಯರಾಗಿದ್ದರು ಎಂದು ಹೇಳಲೂ ಸಹ ಸಾಧ್ಯವಿಲ್ಲ. ಅಂತಃಪುರ ವೆರ್ಗ್ಗಡೆ ಎಂಬಾತ ಬಹುಶಃ ರಾಜನ ಅರಮನೆಗೆ ಸಂಬಂಧಿಸಿದ ವ್ಯವಹಾರಗಳನ್ನು ಗಮನಿಸುತ್ತಿದ್ದ ಮನೆಯ ಹೆಗ್ಗಡೆ, ಕಡಿತವೆರ್ಗ್ಗಡೆ ಲೆಕ್ಕ ಪತ್ರಗಳ ಅಧಿಕಾರಿ. ಭಂಡಾರಿ, ಹೆಸರೆ ಸೂಚಿಸುವಂತೆ ಬೊಕ್ಕಸದ ಅಧಿಕಾರಿ. ವಡ್ಡರಾವುಳದ ಅಧಿಕಾರಿ ಆ ಹೆಸರಿನ ಸುಂಕವನ್ನು ವಸೂಲು ಮಾಡುವ ಜವಾಬ್ದಾರಿ ಹೊಂದಿದ್ದನೆನ್ನಬಹುದು. ಸೇನಾಧಿಪತಿ, ದಂಡನಾಯಕ, ಸಂಧಿವಿಗ್ರಹಿ, ಹೆರಿಲಾಳ ಕನ್ನಡ ಸಂಧಿವಿಗ್ರಹಿ, ಅಧ್ಯಕ್ಷ, ಸರ್ವಾಧ್ಯಕ್ಷ, ಅಂತಃಪುರಾಧ್ಯಕ್ಷ, ಬಾಹತ್ತರ ನಿಯೋಗಾಧಿಪತಿ, ಪಟ್ಟಸಾಹಣಿ, ಪಟ್ಟಸಾಹಣಾಧಿಷ್ಠಾಯಕ, ಅಚ್ಚುಪನ್ನಾಯದಧಿಷ್ಠಾಯಕ, ಪಸಾಯಿತ, ಶ್ರೀಕರಣ, ಬಾಣಸವೆರ್ಗ್ಗಡೆ, ಚೂಳಾಯ್ತ, ಪಡಿಹಾರ -ಇವು ಇನ್ನೂ ಕೆಲವು ಅಧಿಕಾರವರ್ಗಗಳು. ಹಲವಾರು ಸಂದರ್ಭಗಳಲ್ಲಿ ಒಬ್ಬನೇ ಹಲವಾರು ಅಧಿಕಾರಗಳನ್ನು ಪಡೆದಿರಬಹುದಾಗಿತ್ತು.

ಆಡಳಿತ ಸೌಕರ್ಯಕ್ಕಾಗಿ ರಾಜ್ಯವನ್ನು ಆ ಮೊದಲಿದ್ದಂತೆಯೇ ಬೇರೆ ಬೇರೆ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಆದರೆ ಈ ಪ್ರಾಂತ್ಯಗಳು ಈಗ ಇನ್ನೂ ಹೆಚ್ಚಿದುವಲ್ಲದೆ ಒಂದೊಂದು ಪ್ರಾಂತ್ಯದಲ್ಲೂ ಸಣ್ಣ ಘಟಕಗಳಿದ್ದುವು. ಬನವಾಸಿ 12000, ನೊಳಂಬವಾಡಿ 32000, ಗಂಗವಾಡಿ 96000, ಸಿಂದವಾಡಿ 1000, ಹಲಸಿಗೆ 12000, ಕೊಲ್ಲಿಪಾಕೆ 5000, ಕೊಂಕಣ 900, ಪಾನುಂಗಲ್ಲು 500, ಬೆಳ್ವೊಲ 300, ಪುರಿಗೆರೆ 400, ಸಬ್ಬಿ 30, ಹೈವೆ 50 ಇತ್ಯಾದಿ ಘಟಕಗಳು ಇದ್ದವು. ರಾಜನ ಕೈಕೆಳಗಿನ ಅಧಿಕಾರಿಗಳು ಕೇಂದ್ರಾಡಳಿತದ ಹೊಣೆಗಾರಿಕೆಯ ಜೊತೆಗೆ ಈ ಪ್ರಾಂತ್ಯಗಳ ಆಡಳಿತಕ್ಕೆ ನೇರವಾಗಿ ಜವಾಬ್ದಾರರಾಗಿರುತ್ತಿದ್ದರು. ಕೆಲವು ಪ್ರಾಂತ್ಯಗಳಲ್ಲಿ ಆನುವಂಶಿಕವಾಗಿ ಆಳುತ್ತಿದ್ದ ಸಾಮಂತರೇ ಅಧಿಕಾರದಲ್ಲಿ ಮುಂದುವರೆಯುತ್ತಿದ್ದರು. ಆದರೂ ಬಹುಶಃ ಅವರ ಮೇಲಿನ ಉಸ್ತುವಾರಿಗಾಗಿ ಅರಸ ಅಧಿಕಾರಿಗಳನ್ನು ತನ್ನ ಪ್ರತಿನಿಧಿಗಳಾಗಿ ಅಂಥ ಪ್ರಾಂತ್ಯಗಳಿಗೆ ನೇಮಿಸುತ್ತಿದ್ದ. ಅಧಿಕಾರಿಗಳನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ವರ್ಗಾಯಿಸುತ್ತಲೂ ಇದ್ದ. ಯುವರಾಜ ಹಾಗೂ ಅರಸನ ಇತರ ಸಂಬಂಧಿಕರು ಸಹ ಹೀಗೆ ಪ್ರಾಂತ್ಯಾಧಿಕಾರಿಗಳಾಗಿ ನಿಯಮಿತ ಹೊಂದುತ್ತಿದ್ದರು.

ಗ್ರಾಮವು ಆಡಳಿತದ ಅತಿ ಸಣ್ಣ ಘಟಕ. ಇದರ ಆಡಳಿತದ ಸಂಪೂರ್ಣ ಹೊಣೆಗಾರಿಕೆ ಅಲ್ಲಿನ ಮಹಾಜನರದು, ಪ್ರಜೆ ಗೌಡುಗಳದು ಆಗಿತ್ತು. ದೇವಾಲಯಗಳು, ಕೆರೆಗಳು, ಕಾಲುವೆಗಳು ಮುಂತಾದುವುಗಳನ್ನು ಕಟ್ಟಿಸುವ ಜೀರ್ಣೋದ್ಧಾರ ಮಾಡುವ ಮತ್ತು ರಕ್ಷಿಸುವ ಕೆಲಸಗಳು, ವಿದ್ಯಾಸಂಸ್ಥೆ, ಅನ್ನಸತ್ರ ಮುಂತಾದುವುಗಳನ್ನು ನೋಡಿಕೊಳ್ಳುವ ಕೆಲಸಗಳೂ ಗ್ರಾಮೀಣ ಆಡಳಿತ ಕಕ್ಷೆಯೊಳಗೆ ಬರುತ್ತಿದ್ದುವು. ಅಗ್ರಹಾರ ಗ್ರಾಮಗಳ ನಿವಾಸಿಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸಂಸ್ಥೆ ಮಹಾಜನರದು. ಗ್ರಾಮದ ವಿಸ್ತೀರ್ಣ, ಜನಸಂಖ್ಯೆಗಳನ್ನು ಆಧರಿಸಿ ಮಹಾಜನರ ಸಂಖ್ಯೆ ಸಹ ನಿರ್ಧಾರವಾಗುತ್ತಿತ್ತು. ಮಹಾಜನರೆಲ್ಲ ಬ್ರಾಹ್ಮಣರೇ ಆಗಿದ್ದರೆಂಬ ವಾದವಿದೆಯಾದರೂ ಅನ್ಯವೃತ್ತಿಕಾರರಿಗೂ ಗ್ರಾಮದ ಆಡಳಿತದಲ್ಲಿ ಪ್ರಾತಿನಿಧ್ಯವಿದ್ದಿತು ಎಂಬುದು ತಿಳಿದಿದೆ. ತಂಬುಲಿಗ, ತೆಲ್ಲಿಗ, ಮುಮ್ಮುರಿದಂಡ ಮುಂತಾದವರ ವೃತ್ತಿಸಂಘಗಳು (ಶ್ರೇಣಿ) ಇದ್ದುವು. ವರ್ತಕರು ನಕರಗಳೆಂದೊ ಸೆಟ್ಟಿಗಳೆಂದೋ ಕರೆಯಲ್ಪಡುತ್ತಿದ್ದರು. ಗಾವುಂಡ ಗ್ರಾಮದ ಪ್ರಮುಖ ಅಧಿಕಾರಿ, ಈತ ಆನುವಂಶಿಕವಾಗಿ ಈ ಅಧಿಕಾರವನ್ನು ಪಡೆದಿದ್ದ. ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಗಾವುಂಡನೇ ಇದ್ದರೂ ಒಮ್ಮೊಮ್ಮೆ ಹೆಚ್ಚಿನ ಸಂಖ್ಯೆಯಲ್ಲೂ ಇದ್ದರೆನ್ನಲು ಆಧಾರಗಳಿವೆ. ಗಾವುಂಡನಿಗೆ ನೆರವಾಗಿ ಒಬ್ಬ ಲೆಕ್ಕಿಗ (ಕರಣ) ಅಥವಾ ಸೇನಬೋವ ಇರುತ್ತಿದ್ದ. ಹಲವು ಗ್ರಾಮಗಳು ಕೂಡಿದ ನಾಡಿಗೆ ನಾಳ್ಗಾವುಂಡನೆಂಬಾತ ಅಧಿಕಾರಿ.

ಈ ಅಧಿಕಾರಿಗಳಿಗೆಲ್ಲ ನಿಶ್ಚಿತ ತಲುಬನ್ನು ನೀಡುವ ವ್ಯವಸ್ಥೆ ಇರಲಿಲ್ಲ. ಅದಕ್ಕೆ ಬದಲು ಅವರಿಗೆ ಭೂಮಿಯ ವೃತ್ತಿಗಳನ್ನು ನೀಡಲಾಗುತ್ತಿತ್ತು. ಹಿರಿಯ ಅಧಿಕಾರಿಗಳಿಗೆ ಒಂದೊಂದು ಗ್ರಾಮವನ್ನೇ ಅದರ ಆದಾಯವನ್ನು ಅವರು ಸ್ವಂತಕ್ಕೆ ಬಳಸಲೆಂದು ಕೊಡಲಾಗುತ್ತಿತ್ತು. ರಾಣಿಯರು, ರಾಜಕುಮಾರರು, ಅರಸನ ಇತರ ಸಂಬಂಧಿಕರು ಸಹ ಇಂಥ ವೃತ್ತಿಗಳನ್ನು ಪಡೆದಿದ್ದರು. ಬೀಳವೃತ್ತಿ, ಬೀಳಾನುವೃತ್ತಿ, ಪತ್ತುಲವೃತ್ತಿ, ಕುಮಾರವೃತ್ತಿ, ಅಣುಗಜೀವಿತ ಮುಂತಾಗಿ ಶಾಸನಗಳಲ್ಲಿ ಕಾಣಬರುವ ಪದಗಳು ಇಂಥ ವೃತ್ತಿಗಳನ್ನು ಸೂಚಿಸುತ್ತವೆ.

**ಆರ್ಥಿಕ-ಸಾಮಾಜಿಕ ಸ್ಥಿತಿ :** ರಾಜ್ಯ ಆರ್ಥಿಕವಾಗಿ ಬಹಳ ಅಭಿವೃದ್ಧಿ ಹೊಂದಿದ್ದಿತು. ಪ್ರಜೆಗಳು ತೆರಬೇಕಾಗಿದ್ದ ತೆರಿಗೆಗಳು ಬಹುವಿಧವಾಗಿದ್ದುವು. ಪನ್ನಾಯ, ದಸವಂದ, ಕುಳಿಯ ಸುಂಕ, ದವಸಾಯದ ಸುಂಕ, ಭತ್ತಾಯ, ಸದ್ದಾಯ, ಅರುವಣ, ನೀರುಣಿಸುಂಕ, ತಿಪ್ಪೆಸುಂಕ, ಮನ್ನೆವಣ, ತಳಾಱ ಗೂಲಿ ಇತ್ಯಾದಿಗಳು ತೆರಿಗೆಗಳು. ಇವುಗಳು ಬಹುಪಾಲು ವ್ಯವಸಾಯಕ್ಕೆ ಸಂಬಂಧಪಟ್ಟವುಗಳು. ಪ್ರತಿಯೊಂದು ತೆರಿಗೆಯ ಲಕ್ಷಣವಾಗಲಿ ಅರ್ಥವಾಗಲಿ ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗಿಲ್ಲ. ರಾಜ್ಯದ ಆದಾಯದ ಹೆಚ್ಚಿನ ಪಾಲು ಭೂಕಂದಾಯದಿಂದ ಬರುತ್ತಿತ್ತು. ವಾಣಿಜ್ಯ ಮತ್ತು ವೃತ್ತಿಗಳಿಗೆ ಸಂಬಂಧಿಸಿದಂಥ' ಪೆರ್ಜುಂಕ, ಸಂತೆವಣ, ಮನೆವಣ, (ಮನೆದೆಱೆ), ಕಿಱುದೆಱೆ, ಹೊಸತಿಲುವಣ, ಸೂಳವಾಣಪಣ, ಕನ್ನಡಿವಣ, ವಡ್ಡರಾವುಳ, ಡೊಂಬದೆಱೆ, ಘಾಣದೆಱೆ, ನಾವಿದವಾರಿ, ಬಿಲ್ಕೊಡೆ ಮುಂತಾದ ತೆರಿಗೆಗಳೂ ಇದ್ದುವು. ಸಾಮಾಜಿಕ ತೆರಿಗೆಗಳೆನ್ನಬಹುದಾದ ಮದುವೆಯ ಸುಂಕ, ದಂಡಾಯ ಎಂಬುವುಗಳೂ ಗಮನಾರ್ಹ. ಮನೆಗಳಲ್ಲಿ ನಡೆಯುವ ಹಬ್ಬ, ಮದುವೆ ಮುಂತಾದವುಗಳಿಗೂ ತೆರಿಗೆ ತೆರಬೇಕಾಗಿತ್ತು ಎಂಬುದು ಇದರಿಂದ ತಿಳಿಯುತ್ತದೆ. ದಂಡಾಯ ಶಿಕ್ಷೆಗೊಳಪಟ್ಟ ಸಮಾಜ ಘಾತುಕರಿಂದ ಗ್ರಾಮೀಣ ಸಂಸ್ಥೆಗಳೋ, ಕೇಂದ್ರಾಧಿಕಾರಿಗಳೋ ವಸೂಲು ಮಾಡುತ್ತಿದ್ದ ಮೊತ್ತ ಸರ್ಕಾರದ ಒಂದು ಆಯವಾಗಿತ್ತು. ಅತಿಕ್ರಮ ಪ್ರವೇಶಕ್ಕೆ 12 ಗದ್ಯಾಣ, ಆಡಿದ ಮಾತನ್ನು ಪೂರ್ಣವಾಗಿ ನಡೆಸದವರಿಗೆ 12 ಪಣ, ಮುರಿದಲ್ಲಿ 12 ಗದ್ಯಾಣ ದಂಡವೆಂದು ಒಂದು ಶಾಸನದಲ್ಲಿ ಹೇಳಿದೆ. ಆಜ್ಞೆಯನ್ನುಲ್ಲಂಘಿಸಿದರೆ 52 ದ್ರಮ್ಮ, ದುರಾಕ್ರಮಣಕ್ಕೆ 12 ದ್ರಮ್ಮ, ಕತ್ತಿಯನ್ನೆಳೆದರೆ 1000 ದ್ರಮ್ಮ, ಇರಿದರೆ 97 ದ್ರಮ್ಮ ದಂಡ ತೆರಬೇಕೆಂದು ಮತ್ತೊಂದು ಶಾಸನದಲ್ಲಿ ಹೇಳಿದೆ. ಇವುಗಳಿಂದ ಅಂದಿನ ಆಡಳಿತವರ್ಗ ಸಮಾಜದಲ್ಲಿ ಶಾಂತಿ ನೆಲಸಲು ಎಂಥ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿತ್ತೆಂದು ಗೊತ್ತಾಗುತ್ತದೆ.

ದ್ರಮ್ಮ, ಗದ್ಯಾಣ, ಪಣ, ಪೊನ್, ಸುವರ್ಣ, ಸಾಹಣಿಕಾಟಿ, ಸಲಿಕೆ, ಗುಲಿಕೆ, ಕಾಗಿಣೆ, ಮಾಡ, ವೀಸ, ಅಡ್ಡ, ಪ್ರತಾಪ, ಧರಣ ಮುಂತಾದ ನಾಣ್ಯಗಳು ಚಲಾವಣೆಯಲ್ಲಿದ್ದುವು. ಗದ್ಯಾಣದಲ್ಲಿಯೇ ಬಹುಶಃ ಅದರ ತೂಕ ಇತ್ಯಾದಿಗಳಿಗನುಸಾರವಾಗಿ ದುಸರ ಗದ್ಯಾಣ, ಕಟಕ ಗದ್ಯಾಣ, ಪೆರ್ಗ್ಗಡೆ ಗದ್ಯಾಣ ಮುಂತಾದ ಬೇರೆ ಬೇರೆ ನಾಣ್ಯಗಳಿದ್ದುವು. ಈ ನಾಣ್ಯಗಳನ್ನು ಅಚ್ಚುಹಾಕಿಸಲು ಕಮ್ಮಟಗಳಿದ್ದುವು. ಲಕ್ಕುಂಡಿಯಲ್ಲಿ ಬೆಳ್ಳಿನಾಣ್ಯಗಳನ್ನು ಎರಕಹೊಯ್ಯುತ್ತಿದ್ದ ಬೆಳ್ಳಿಗಮ್ಮಟವಿತ್ತು. ಕುಡತಿನಿಯಲ್ಲಿ ಕಾರ್ತಿಕೇಯದೇವರ ನವಿಲಚ್ಚಿನ ಪೊನ್ನನ್ನು ಎರಕ ಹೊಯ್ಯುತ್ತಿದ್ದರು. ಆಣಿಕಾಱ ಎಂಬ ಅಧಿಕಾರಿ ಇಂಥ ಕಮ್ಮಟದ ಅಧಿಕಾರಿಯಾಗಿದ್ದ.

ಜನರು ಅನೇಕ ರೀತಿಯ ಕರಭಾರವನ್ನು ಹೊರಬೇಕಾದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಅತ್ಯುತ್ತಮವಾಗಿತ್ತೆನ್ನಬಹುದು. ಅರಸರೂ ಅಧಿಕಾರಿಗಳೂ ವ್ಯವಸಾಯೋತ್ಪನ್ನ ಹೆಚ್ಚಲು ಬೇಕಾದ ನೀರಾವರಿ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದರು. ಕಾಡುಗಳನ್ನು ಕಡಿದು ಹೆಚ್ಚಿನ ಭೂಮಿಯನ್ನು ವ್ಯವಸಾಯಕ್ಕೆ ಅಣಿಗೊಳಿಸಲಾಗುತ್ತಿತ್ತು. ಕೆರೆಗಳನ್ನು ಕಟ್ಟಿಸಿ, ಕಾಲುವೆಗಳನ್ನು ತೋಡಿಸುತ್ತಿದ್ದರು. ಇಂಥ ಕೆಲಸವನ್ನು ಅಧಿಕಾರಿಗಳು

ಕರ್ತವ್ಯವೆಂದೋ ವೈಯುಕ್ತಿಕವಾಗಿ ಪುಣ್ಯಪ್ರದ ಕಾರ್ಯವೆಂದೋ ಪರಿಗಣಿಸಿದ್ದರು. ಇದರಿಂದ ಭೂಮಿ ಹೆಚ್ಚು ಫಲವತ್ತಾಗಿ ಉತ್ಪನ್ನ ಹೆಚ್ಚಿತ್ತು.

ಭೂಮಿ ಸಾಮಾನ್ಯವಾಗಿ ವ್ಯಕ್ತಿಗಳ ಒಡೆತನಕ್ಕೆ ಸೇರಿರಲಿಲ್ಲ. ಈ ಕಾಲದ ಶಾಸನಗಳನ್ನು ವಿಶ್ಲೇಷಿಸಿದರೆ ಗ್ರಾಮಕ್ಕೆ ಸೇರಿದ ಭೂಮಿ ಗ್ರಾಮಸ್ಥರಿಗೆಲ್ಲ ಒಟ್ಟಾಗಿ ಸೇರಿದ್ದು ಅವಿಭಕ್ತಸ್ವಾಮ್ಯವಾಗಿತ್ತು. ಅಧಿಕಾರಿಗಳಿಗೆ ತಲುಬಿಗೆ ಬದಲಾಗಿ ಕೊಡಲಾದ ಭೂಮಿಯ ವೃತ್ತಿ, ಬ್ರಾಹ್ಮಣರಿಗೆ ದಾನವಾಗಿ ನೀಡಲಾದ ವೃತ್ತಿಗಳು, ನೆತ್ತರುಗೊಡಗೆ ಮುಂತಾದ ವೃತ್ತಿಗಳು ಮಾತ್ರ ವೈಯಕ್ತಿಕ ಸ್ವಾಮ್ಯಕ್ಕೆ ಸೇರಿದ ಆಸ್ತಿಗಳೆಂದು ಭಾವಿಸಬಹುದು. ಅವರಿಗೆ ಸಹ ಈ ಭೂಮಿಯನ್ನು ಪರಭಾರೆ ಮಾಡುವ ಹಕ್ಕು ಇದ್ದಂತೆ ತೋರುವುದಿಲ್ಲ. ಇವು ಹೊರತುಪಡಿಸಿ ಉಳಿದೆಲ್ಲ ಭೂಮಿಯ ಯಜಮಾನಿಕೆ ಗ್ರಾಮದ ಮಹಾಜನರಿಗೆ ಸೇರಿತ್ತು. ಮಹಾಜನ ಸಂಸ್ಥೆಗಳೇ ದಾನಗಳನ್ನು ನೀಡುತ್ತಿದ್ದುವು; ಕರಗಳನ್ನೂ ವಸೂಲು ಮಾಡುತ್ತಿದ್ದುವು. ಭೂಮಿಯ ವೈಯಕ್ತಿಕ ವ್ಯವಹಾರಗಳು ಅಪರೂಪ, ಆದರೆ ವೈಯಕ್ತಿಕ ವೃತ್ತಿಗಳನ್ನು ಪಡೆದ ಅಧಿಕಾರಿಗಳು ಹಾಗೂ ಇತರರು ಅದರಿಂದ ಬಂದ ಉತ್ಪನ್ನವನ್ನು ರೂಢಿಸಿಕೊಂಡು ಶ್ರೀಮಂತರಾಗಿದ್ದರು. ಕೆರೆಗಳನ್ನೂ ದೇವಾಲಯಗಳನ್ನೂ ಕಟ್ಟಿಸುವ, ಕಾಲುವೆ ತೋಡಿಸುವ, ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವ ಆರ್ಥಿಕ ಶಕ್ತಿ ಅವರಲ್ಲಿತ್ತು. ಎಂತಲೆ ಈ ಕಾಲದಲ್ಲಿ ಅರಸರಿಗಿಂತ ಹೆಚ್ಚಾಗಿ ಶ್ರೀಮಂತ ವರ್ಗದವರು ಈ ಕಾಲಮಾನದಲ್ಲಿ ಇಂಥ ಕಾರ್ಯಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

ಹೀಗೆ ಸಮಾಜದಲ್ಲಿ ಶ್ರೀಮಂತವರ್ಗವೊಂದು ಬೆಳೆಯಿತು. ಆರ್ಥಿಕಾಭಿವೃದ್ಧಿಯಾದರೂ ಅದು ಸಾಮಾನ್ಯವಾಗಿ ಎಲ್ಲರಲ್ಲಿಯೂ ವಿತರಣೆಯಾಗಿರಲಿಲ್ಲವೆಂಬುದೂ ತಿಳಿದುಬರುತ್ತದೆ. ಆದರೆ ದಲಿತವರ್ಗದ ಪರಿಸ್ಥಿತಿ ಅನುಕೂಲಕರವಾಗಿಯೇ ಇದ್ದಿತಾದುದರಿಂದ ಸಮಾಜದಲ್ಲಿ 12ನೆಯ ಶತಮಾನದ ಮಧ್ಯದವರೆಗೂ ಶಾಂತಿ ನೆಲಸಿತ್ತು. ಅನಂತರ ತಲೆಎತ್ತಿದ್ದ ವೀರಶೈವ ಕ್ರಾಂತಿ ಒಂದು ವಿಧದಲ್ಲಿ ಆರ್ಥಿಕ ಅಸಮಾನತೆಯ ವಿರುದ್ಧ ಎದ್ದ ಕ್ರಾಂತಿಯೂ ಹೌದು. ಅಲ್ಲದೆ ಈ ಶ್ರೀಮಂತ ವರ್ಗದಲ್ಲಿ ಬಹುಭಾಗ ಬ್ರಾಹ್ಮಣಧರ್ಮಕ್ಕೆ ಸೇರಿದವರಾಗಿದ್ದರು. ಅರಸರ ಆಡಳಿತಾಧಿಕಾರಿಗಳಲ್ಲಿ ಬಹುಪಾಲು ಬ್ರಾಹ್ಮಣರಾಗಿದ್ದರು. ಇದರಿಂದ ಇತರ ಧರ್ಮಾನುಯಾಯಿಗಳಿಗಿಂತಲೂ ಬ್ರಾಹ್ಮಣರಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿತ್ತೆನ್ನಬಹುದು. ವರ್ಣ ಮತ್ತು ಜಾತಿ ವ್ಯವಸ್ಥೆಗಳು ಈಗ ಖಚಿತ ರೂಪವನ್ನು ತಾಳಿದ್ದುದಲ್ಲದೆ ಕಟ್ಟುನಿಟ್ಟಾದ ಜಾತಿನಿಯಮಗಳು ಆಚರಣೆಗೆ ಬಂದಿದ್ದುವು. ಆದರೆ ಬ್ರಾಹ್ಮಣರನೇಕರು ಕ್ಷತ್ರಿಯರಂತೆ ಯುದ್ಧಕರ್ಮಿಗಳಾಗಿದ್ದು ದಂಡನಾಯಕ, ಸೇನಾಪತಿ ಮುಂತಾದ ಪದವಿಗಳನ್ನು ಪಡೆದಿದ್ದರು. ಇದು ಎಷ್ಟರಮಟ್ಟಿಗೆ ಮಾನ್ಯವಾಗಿತ್ತು ಎಂಬುದು ಸಂದೇಹಾಸ್ಪದ. ಈ ಪ್ರವೃತ್ತಿ ವ್ಯಾಪಕವಾಗಿದ್ದಂತೆ ತೋರದು. ಜನಸಾಮಾನ್ಯರು ಅರಸನಿಂದ ನಿರೀಕ್ಷಿಸುತ್ತಿದ್ದುದು ದುಷ್ಟಶಿಕ್ಷಣ ಮತ್ತು ಶಿಷ್ಟರಕ್ಷಣ. ಅವರಿಗೆ ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ ಇದ್ದಂತೆ ಕಂಡುಬಾರದು.

ದೇವಾಲಯ ಈಗ ಕಿರಿದಾದ ಸಾಮಾಜಿಕ ಸಂಸ್ಥೆಯೂ ಆಗಿತ್ತು. ಅಲ್ಲದೆ ಅದೊಂದು ವಿದ್ಯಾಕೇಂದ್ರವಾಗಿತ್ತು. ದೇವಸ್ಥಾನಕ್ಕೆ ಸೇರಿದಂತೆ ಒಂದು ಮಠ ಮತ್ತು ಅನ್ನಸತ್ರ ಇರುತ್ತಿತ್ತು. ಮಠದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೆ ಸತ್ರದಲ್ಲಿ ಊಟೋಪಚಾರದ ವ್ಯವಸ್ಥೆ ಇತ್ತು. ತಪೋವನ, ಘಟಿಕಾಸ್ಥಾನಗಳು ಶಿಕ್ಷಣ ಕೇಂದ್ರಗಳಾಗಿದ್ದುವು. ಧಾರವಾಡ ಜಿಲ್ಲೆಯ ಕಾಡಿಯೂರು, ಬಳ್ಳಾರಿಯ ಮೊಡಿಗೆರೆ, ಗುಲ್ಬರ್ಗದ ನಾಗಾಯಿ, ಬಿಜಾಪುರದ ಕಡಲೆವಾಡ - ಇವು ಇಂಥ ಘಟಿಕಾಸ್ಥಾನಗಳು. ಇಲ್ಲಿ ಘಟಿಕಾಪ್ರಹಾರಿಗಳು (ಕಾಪಿನ ಘಟಿಯಾರಿ), ಖ್ಯಾತ ವಿದ್ವಾಂಸರು ಇರುತ್ತಿದ್ದರು. ಎಲ್ಲ ಚಟುವಟಿಕೆಗಳು ವೇಳಾಪಟ್ಟಿಯಂತೆ ಕ್ರಮವಾಗಿ ನಡೆಯುವಂತೆ ನೋಡಿಕೊಳ್ಳುವ ಹೊಣೆ ಇವರದಾಗಿತ್ತು. ಪರೀಕ್ಷೆಯಲ್ಲಿ ತೇರ್ಗಡೆಯಾದವರು ಘಟಿಕಾಸಾಹಣಿಗಳೆನಿಸಿಕೊಳ್ಳುತ್ತಿದ್ದರು. ಅಗ್ರಹಾರಗಳು ವಿದ್ಯಾಸಂಪನ್ನ ಬ್ರಾಹ್ಮಣರ ವಾಸಸ್ಥಳಗಳು. ವೇದಾಧ್ಯಾಯಿಗಳೂ ಷಟ್ಕರ್ಮನಿರತರೂ ಆದ ಬ್ರಾಹ್ಮಣರನ್ನು ಬೇರೆ ಬೇರೆ ಕಡೆಗಳಿಂದ ಬರಮಾಡಿಕೊಂಡು ಇಂಥ ಅಗ್ರಹಾರಗಳಲ್ಲಿ ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿ ಅವರಿಂದ ವಿದ್ಯಾಪ್ರಸಾರ ಮಾಡಿಸುವುದು ಅಗ್ರಹಾರಗಳನ್ನು ಸ್ಥಾಪಿಸುವುದರ ಮುಖ್ಯ ಉದ್ದೇಶವಾಗಿತ್ತು. ಈ ಕಾಲದಲ್ಲಿ ಕರ್ನಾಟಕದಲ್ಲಿ ಅಗ್ರಹಾರಗಳು ಹೆಚ್ಚಿನ ಸಂಖ್ಯೆಯಲ್ಲಿದ್ದುವು.

**ಲಲಿತಕಲೆ, ಸಾಹಿತ್ಯ :** ಕಲೆಗಳಿಗೆ ಹೆಚ್ಚಿನ ರಾಜಾಶ್ರಯ, ಜನಾಶ್ರಯ ದೊರಕಿತು. ದೇವಾಲಯಗಳು ನೃತ್ಯ ಸಂಗೀತ ಮುಂತಾದ ಕಲೆಗಳಿಗೆ ಆಶ್ರಯ ನೀಡಿದ್ದುವು. ಶಾಸನಗಳಲ್ಲಿ ಇವುಗಳಿಗೆ ಸಂಬಂಧಿಸಿದ ಉಲ್ಲೇಖಗಳಿವೆ. ಅರಸನಾದ ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರನ ಅಭಿಲಷಿತಾರ್ಥಚಿಂತಾಮಣಿಯಲ್ಲಿ (ಮಾನಸೋಲ್ಲಾಸ) ಸಂಗೀತಶಾಸ್ತ್ರವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಆತನ ಮಗ ಇಮ್ಮಡಿ ಜಗದೇಕಮಲ್ಲ ಸಂಗೀತಚೂಡಾಮಣಿಯ ಕರ್ತೃ. ಚಾಳುಕ್ಯ ರಾಣಿಯರಲ್ಲಿ ಹಲವರು ನೃತ್ಯ, ಸಂಗೀತಗಳಲ್ಲಿ ಪರಿಣಿತರಾಗಿದ್ದರು. ನೃತ್ಯವಿದ್ಯಾಧರಿ, ಸಂಗೀತ ವಿದ್ಯಾಧರಿ ಗಳೆನಿಸಿಕೊಂಡಿದ್ದರು. ಚಿತ್ರಕಲೆಗೂ ಪ್ರೋತ್ಸಾಹ ನೀಡಲಾಗಿತ್ತೆನ್ನ ಬಹುದಾದರೂ ಅದಕ್ಕೆ ಗುರುತುಗಳು ಉಳಿದಿಲ್ಲ.

ಸಾಹಿತ್ಯಕ್ಕೆ ಉದಾರವಾದ ರಾಜಾಶ್ರಯ ದೊರೆತ ಕಾರಣ ಸಂಸ್ಕೃತ ಹಾಗೂ ಕನ್ನಡಗಳಲ್ಲಿ ಅನೇಕ ಸಾಹಿತ್ಯ ಕೃತಿಗಳು ಬೆಳಕು ಕಂಡವು. ಇಮ್ಮಡಿ ಜಯಸಿಂಹನ ಆಸ್ಥಾನದಲ್ಲಿದ್ದ ವಾದಿರಾಜ ಎಂಬ ಜೈನಕವಿ ಸಂಸ್ಕೃತದಲ್ಲಿ ಪಾರ್ಶ್ವನಾಥ ಚರಿತ, ಪ್ರಮಾಣ ನಿರ್ಣಯ, ಯಶೋಧರ ಚರಿತ ಇತ್ಯಾದಿ ಗ್ರಂಥಗಳನ್ನು ರಚಿಸಿದ. ದಯಪಾಲನು ರೂಪಸಿದ್ಧಿ ಎಂಬ ವ್ಯಾಕರಣ ಗ್ರಂಥದ ಕರ್ತೃ. ಬಿಲ್ಹಣನ ವಿಕ್ರಮಾಂಕದೇವಚರಿತ ಪ್ರಸಿದ್ಧವಾದ ಐತಿಹಾಸಿಕ ಕಾವ್ಯ. ಈ ಕವಿ ಕಾಶ್ಮೀರವಾಸಿ. ದೇಶಪರ್ಯಟನೆ ಮಾಡುತ್ತ ಕರ್ನಾಟಕಕ್ಕೆ ಬಂದು ಇಲ್ಲಿ ರಾಜಾಶ್ರಯ ಪಡೆದು ವಿದ್ಯಾಪತಿ ಎನಿಸಿಕೊಂಡ. ಚಾರುಪಂಚಾಶಿಕವೆಂದು ಹೆಸರಾಂತ ಬಿಲ್ಹಣ ಕಾವ್ಯ ಈತನ ಇನ್ನೊಂದು ಕೃತಿ. ಯಾಜ್ಞವಲ್ಕ್ಯಸ್ಮೃತಿಗೆ ವ್ಯಾಖ್ಯಾನ ರೂಪದಲ್ಲಿ ರಚಿಸಿದ ಗ್ರಂಥ ಮಿತಾಕ್ಷರಾ. ಇದರ ಕರ್ತೃ ವಿಜ್ಞಾನೇಶ್ವರ. ಕಾನೂನು ನೀತಿ ಹಾಗೂ ಧರ್ಮಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥವಿದು. ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥಚಿಂತಾಮಣಿಯ ಕರ್ತೃ. ಜಗದಾಚಾರ್ಯ ಪುಸ್ತಕವೆನಿಸಿದ ಇದು ಒಂದು ವಿಶ್ವಕೋಶದಂತಿದೆ. ಈತನದೇ ಇನ್ನೊಂದು ಕೃತಿಯ ಹೆಸರು ವಿಕ್ರಮಾಂಕಾಭ್ಯುದಯ. ವಿಕ್ರಮಾಂಕದೇವಚರಿತವನ್ನೇ ಇದು ಹೋಲುತ್ತದೆಯಾದರೂ ಎರಡರಲ್ಲಿಯೂ ವಿವರಗಳಲ್ಲಿ ವ್ಯತ್ಯಾಸಗಳಿವೆ.

ಕರ್ನಾಟಕ ಕಾದಂಬರಿ ಹಾಗೂ ಛಂದೋಂಬುಧಿಗಳನ್ನು ರಚಿಸಿದ 1ನೆಯ ನಾಗವರ್ಮ ಈ ಕಾಲದವನು. ಅಜಿತತೀರ್ಥಂಕರಪುರಾಣತಿಲಕ ಮತ್ತು ಸಾಹಸಭೀಮವಿಜಯಗಳ ಕರ್ತೃವಾದ ಖ್ಯಾತಿವೆತ್ತ ರನ್ನ ಸಹ ಇದೇ ಕಾಲದವನು. ದುರ್ಗಸಿಂಹನಿಂದ ಹೊಗಳಲ್ಪಟ್ಟ ಮಾಳವೀಮಾಧವದ ಕನ್ನಮಯ್ಯ, ಮನಸಿಜ, ಚಂದ್ರಭಟ್ಟ, ಗಜಾಂಕುಶ ಹಾಗೂ ಎರಡನೆಯ ನಾಗವರ್ಮ ಹೆಸರಿಸಿದ ವತ್ಸರಾಜ ಚರಿತೆಯನ್ನು ಬರೆದ ನಾಗವರ್ಮ, ಸುಲೋಚನಾಚರಿತದ ನಾಗದೇವ, ಶಂಖವರ್ಮ, ಹರಿಪಾಲ ಮತ್ತು ಕೇಶಿರಾಜ ಉಲ್ಲೇಖಿಸಿರುವ ಹಂಸರಾಜ ಬಹುಶಃ ಈ ಕಾಲದ ಕವಿಗಳು. ಲೋಕೋಪಕಾರದ ಕರ್ತೃ ಎರಡನೆಯ ಚಾವುಂಡರಾಯ, ಕರ್ನಾಟಕ ಪಂಚತಂತ್ರದ ದುರ್ಗಸಿಂಹ, ಕಾವ್ಯಾವಲೋಕನ ಮುಂತಾದ ಶಾಸ್ತ್ರಗ್ರಂಥಗಳ ಮತ್ತು ವರ್ಧಮಾನಪುರಾಣದ ಕರ್ತೃ ಎರಡನೆಯ ನಾಗವರ್ಮ, ಜಾತಕತಿಲಕದ ಶ್ರೀಧರಾಚಾರ್ಯ, ದಿವಾಕರನಂದಿ, ಸುಕುಮಾರಚರಿತದ ಶಾಂತಿನಾಥ, ಗೋವೈದ್ಯದ ಕೀರ್ತಿವರ್ಮ, ಚಂದ್ರಚೂಡಾಮಣಿ ಶತಕದ ನಾಗವರ್ಮಾಚಾರ್ಯ, ಮಲ್ಲಿನಾಥಪುರಾಣ ಮತ್ತು ರಾಮಚಂದ್ರ ಚರಿತಪುರಾಣಗಳನ್ನು ರಚಿಸಿದ ನಾಗಚಂದ್ರ, ಧರ್ಮಾಮೃತದ ನಯಸೇನ, ಮೇಘಚಂದ್ರ, ಉದಯಾದಿತ್ಯ ಹಾಗೂ ಕನ್ನಡ ಸಾಹಿತ್ಯದ ಮೊದಲ ಕವಯಿತ್ರಿಯಾದ ಕಂತಿ ಮೊದಲಾದ ಕವಿಗಳಿಂದ ಈ ಕಾಲದಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. (ಬಿ.ಆರ್.ಜ.)

**ವಾಸ್ತು ಶಿಲ್ಪ :** ಕಲ್ಯಾಣದ ಚಾಳುಕ್ಯ ಅರಸರ ಆಳಿಕೆಗೆ ಒಳಪಟ್ಟಿದ್ದ ಈಗಿನ ಉತ್ತರ ಕರ್ನಾಟಕ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಶಿವಮೊಗ್ಗ-ಚಿತ್ರದುರ್ಗ ಜಿಲ್ಲೆಗಳ (ಹಾಗೂ ಮಹಾರಾಷ್ಟ್ರದ ದಕ್ಷಿಣ

ಜಿಲ್ಲೆಗಳು ಮತ್ತು ಆಂಧ್ರ ಪ್ರದೇಶದ ಪಶ್ಚಿಮ ಜಿಲ್ಲೆಗಳ) ಪ್ರದೇಶದಲ್ಲಿ ಒಂದು ವಿಶಿಷ್ಟ ವಾಸ್ತುಶಿಲ್ಪ ಸಂಪ್ರದಾಯ ಬೆಳೆಯಿತು. ಆ ಕಾಲದ ಹಲವು ದೇವಾಲಯಗಳು ಮೇಲಿನ ಪ್ರದೇಶದ ಅನೇಕ ಎಡೆಗಳಲ್ಲಿ ಕಂಡುಬರುತ್ತವೆ. ಆದರೆ ಕ್ಷಾತ್ರ ಅಥವಾ ಲೌಕಿಕ ವಾಸ್ತುಕೃತಿಗಳು ಯಾವುವೂ ಉಳಿದುಬಂದಿಲ್ಲ.

ಕಲ್ಯಾಣ ಚಾಳುಕ್ಯ ವಾಸ್ತು ರೀತಿ ಮೂಲತಃ ಇದೇ ಪ್ರದೇಶದಲ್ಲಿದ್ದ ಬಾದಾಮಿಯ ಚಳುಕ್ಯ ವಾಸ್ತು ಸಂಪ್ರದಾಯದಿಂದಲೇ ವಿಕಾಸ ಹೊಂದಿತಾದರೂ ಇದು ಸಂಪೂರ್ಣವಾಗಿ ಬೆಳೆಯುವ ವೇಳೆಗೆ ಅನೇಕ ಬದಲಾವಣೆಗಳಿಗೆ ಒಳಗಾಗಿ ತನ್ನತನವನ್ನು ಸಾಧಿಸಿಕೊಂಡಿದೆ. ಮೊದಲನೆಯದಾಗಿ, ಈ ಕಾಲದಲ್ಲಿ ಗುಹಾವಾಸ್ತು ರೀತಿಯನ್ನು ಪೂರ್ಣವಾಗಿ ಕೈಬಿಟ್ಟು ಕಟ್ಟಡಗಳ ರಚನೆಯನ್ನು ಉಳಿಸಿಕೊಳ್ಳಲಾಯಿತು. ಎರಡನೆಯದಾಗಿ, ಕಟ್ಟಡಗಳಿಗೆ ಬಾದಾಮಿಯ ಚಳುಕ್ಯರ ಕಾಲದಲ್ಲಿ ಉಪಯೋಗಿಸಲಾಗುತ್ತಿದ್ದ ಮರಳುಗಲ್ಲಿನ ಬದಲು, ಕರಿಕಲ್ಲು ಕ್ಲೋರೈಟಿಕ್ ಷಿಸ್ಟ್ ಬಳಕೆಗೆ ಬಂತು. ಈ ಹೊಸ ರಚನಾ ಸಾಮಗ್ರಿಯಲ್ಲಿ ದೊಡ್ಡ ಕಂಬ ಅಥವಾ ತೊಲೆಗಳಿಗೆ ಬೇಕಾದ ಗಾತ್ರದ ಕಲ್ಲನ್ನು ಪಡೆಯುವುದು ಕಷ್ಟವಾದ್ದರಿಂದಲೂ ಅವುಗಳ ಭಾರ ತಾಳಿಕೆಯ ಶಕ್ತಿ ಕಡಿಮೆಯಾದ್ದರಿಂದಲೂ ಆ ಕಾಲದ ದೇವಾಲಯಗಳ ಎತ್ತರವೂ ವಿಸ್ತಾರವೂ ಕಡಿಮೆ. ಅನೇಕ ಕಂಬಗಳನ್ನು ಅಳವಡಿಸಿ ಸ್ವಲ್ಪ ಹೆಚ್ಚು ವಿಸ್ತಾರದ ಕಟ್ಟಡಗಳನ್ನು ಕಟ್ಟುವ ಸಂಪ್ರದಾಯ ಬೆಳೆಯಿತು. ಈ ಕಲ್ಲು ಬಹಳ ಮೃದುವಾದ್ದರಿಂದ ಉಜ್ಜಿದಾಗ ಹೆಚ್ಚು ಹೊಳಪು ಪಡೆಯುವುದಲ್ಲದೆ, ಇದನ್ನು ಸುಲಭವಾಗಿ ಕೊರೆಯಲೂ ಅನುಕೂಲ. ಈ ಗುಣವನ್ನು ಚಾಳುಕ್ಯ ಸ್ಥಪತಿ ಶಿಲ್ಪಿಗಳು ಉಪಯೋಗಿಸಿಕೊಂಡು ತಮ್ಮ ಕೃತಿಗಳನ್ನು ಹೆಚ್ಚಿನ ಅಲಂಕರಣದಿಂದ ತುಂಬಿದ್ದಾರೆ. ಈ ಅಂಶಗಳೆಲ್ಲ ಈ ಶೈಲಿಯ ವೈಶಿಷ್ಟ್ಯಗಳೇ ಆದುವು. ರಚನಾತಂತ್ರದಲ್ಲಿ ಯಾವ ಬಂಧಕ ಸಾಮಗ್ರಿಯನ್ನೂ ಉಪಯೋಗಿಸದೆ ಸೈಜುಕಲ್ಲು ಅಥವಾ ಚಪ್ಪಡಿಗಳನ್ನು ಒಂದರಮೇಲೊಂದರಂತೆ ಜೋಡಿಸಿ ಕಟ್ಟಡಗಳನ್ನು ಎತ್ತುವ ರೀತಿ ಇಲ್ಲೂ ಕಂಡುಬರುತ್ತದೆ.



ಮಹಾದೇವ ದೇವಾಲಯ, ಇಟ್ಟಗಿ

ಚಾಳುಕ್ಯ ವಾಸ್ತುಶೈಲಿಯಲ್ಲಿ ಸಮಕೋಣಗಳ ಉಪಯೋಗ ವಿಶೇಷವಾಗಿ ಕಂಡುಬರುತ್ತದೆ. ನಕ್ಷತ್ರಾಕಾರದ ತಳವಿನ್ಯಾಸವಿರುವ ಡಂಬಳದ ದೊಡ್ಡ ಬಸಪ್ಪ ದೇವಾಲಯವೊಂದನ್ನು ಬಿಟ್ಟರೆ ಮಿಕ್ಕವುಗಳೆಲ್ಲ ಆಯತಾಸ್ರಗಳು, ಕೇವಲ ಒಂದು ಆಯ ಅಥವಾ ಅನೇಕ ಆಯಗಳ ಜೋಡಣೆ ತಳವಿನ್ಯಾಸದ ಮೂಲ ಸೂತ್ರವಾಗಿತ್ತು. ಗೋಡೆಗಳು ಸಾಮಾನ್ಯವಾಗಿ ನೇರವಾಗಿದ್ದರೂ ಈ ನೇರವನ್ನು ಭಗ್ನದಂತಗಳಂತೆ ಅಲಂಕಾರಿಕವಾಗಿ ಚಿಕ್ಕ ಚಿಕ್ಕ ಹಿನ್‍ಸರಿತ ಮುನ್ ಸರಿತಗಳಿಂದ ಒಡೆಯುವುದು ಈ ಶೈಲಿಯ ಒಂದು ಸಾಮಾನ್ಯ ಅಂಶ. ಆದರೆ ಈ ಸರಿತಗಳೂ ಅಡ್ಡವಿನ್ಯಾಸದಲ್ಲಿ ಆಯಾಕಾರದವೇ ಆಗಿರುತ್ತವೆ. ಈ ಕಾಲದ ದೇವಾಲಯಗಳಲ್ಲಿ ಗರ್ಭಗೃಹ, ಅಂತರಾಳ, ಅದರ ಮುಂದೆ ಅನೇಕ ಕಂಬಗಳಿಂದ ಕೂಡಿದ ಭಿತ್ತಿರಹಿತ ತೆರೆದ ಮಂಟಪ ಇರುತ್ತವೆ. ಈ ಮಂಟಪದ ಹೊರ ಅಂಚಿನಲ್ಲಿ ಸುತ್ತಲೂ ಕಕ್ಷಾಸನಗಳು, ಎಂದರೆ ಒರಗುಬೆನ್ನುಳ್ಳ ಬೆಂಚುಗಳು ಇರುತ್ತವೆ. ಹಲವು ಬಾರಿ ಅಂತರಾಳ ಮತ್ತು ತೆರೆದ ಮಂಟಪಗಳ ಮಧ್ಯೆ ಸುತ್ತಲೂ ಮುಚ್ಚಿದ ನವರಂಗ ಮಂಟಪವಿರುವುದೂ ಉಂಟು. ಈ ದೇವಾಲಯಗಳಲ್ಲಿ ಒಂದಕ್ಕಿಂತ ಹೆಚ್ಚು ದ್ವಾರಗಳಿರುವುದೂ ಪಕ್ಕಗಳಿಂದಲೇ ಮುಖ್ಯ ದ್ವಾರಗಳಿರುವುದೂ ವಿರಳವೇನಲ್ಲ. ದಕ್ಷಿಣ, ಪಶ್ಚಿಮ ಅಥವಾ ಉತ್ತರಕ್ಕೆ ಮುಖ ಮಾಡಿರುವ ಕಟ್ಟಡಗಳು ಕೆಲವು ಮಾತ್ರ. ಉಳಿದ ದೇವಾಲಯಗಳು ಪೂರ್ವಾಭಿಮುಖವಾಗಿವೆ. ಮುಖ್ಯ ನಾಲ್ಕು ದಿಕ್ಕುಗಳನ್ನು ಬಿಟ್ಟು ಬೇರೆ ದಿಕ್ಕುಗಳಿಗೆ ಅಭಿಮುಖವಾದ ದೇಗುಲಗಳು ಇಲ್ಲವೆ ಇಲ್ಲ. ಕಟ್ಟಡಗಳ ಹೊರಮೈಯನ್ನು ಅಧಿಷ್ಠಾನ, ಭಿತ್ತಿ, ಕಪೋತ, ಹಾರಗಳಾಗಿ ವಿಂಗಡಿಸಲಾಗಿರುತ್ತದೆ. ಭಿತ್ತಿಯಲ್ಲಿ ಅನೇಕ ಅರೆಗಂಬಗಳಿರುತ್ತವೆ. ಒಂದು ಜೊತೆ ಅರೆಗಂಬಗಳ ಅಥವಾ ಒಂದೇ ಅರೆಗಂಬದ ಮೇಲೆ ಶಿಖರಾಕೃತಿಯನ್ನು ಕಡೆಯುವುದು ಈ ಶೈಲಿಯ ವೈಶಿಷ್ಟ್ಯ. ಕಪೋತಗಳು ಮಟ್ಟಚಪ್ಪಡಿಯನ್ನು ಓರೆಯಾಗಿ ಸಿಕ್ಕಿಸಿದಂತೆಯೂ ಆಕಾರದಲ್ಲಿ ದ್ವಿಭಂಗವುಳ್ಳವಾಗಿಯೋ ಇದ್ದು ಅವುಗಳ ಕೆಳಗೆ ಪಟ್ಟಿಗಳ ಅಲಂಕರಣವಿರುತ್ತವೆ. ಒಳಭಾಗದಲ್ಲಿ ಬಹು ನಾಜೂಕಾಗಿ ಕೆತ್ತಿದ ದ್ವಾರಬಂಧಗಳು, ಅಲಂಕಾರಿಕ ಜಾಲಂಧ್ರಗಳು, ತಿರುಗಣೆಯಲ್ಲಿ ಮಾಡಿದ ಹೊಳಪು ಕಂಬಗಳು ಸಾಮಾನ್ಯ. ಈ ದೇವಾಲಯಗಳ ಶಿಖರ ವಿಶಿಷ್ಟ ರೀತಿಯದು. ಇದರಲ್ಲಿ ದ್ರಾವಿಡಸಂಪ್ರದಾಯದ ವೈಶಿಷ್ಟ್ಯವಾದ ಸಮಾನಾಂತರ ಏರುಗೆರೆಗಳ ಮಾಟವನ್ನೂ ಹಿತವಾಗಿ ಮೇಳೈಸಿದ ಒಂದು ರೀತಿಯ ಸಂಕರ ರೂಪು ಕಂಡುಬರುತ್ತದೆ. ಈ ಬೆರಕೆಯಿಂದ ಈ ರೀತಿಯನ್ನು ವೇಸರ ಎಂದು ವಿದ್ವಾಂಸರು ಕರೆದಿದ್ದಾರೆ. ದ್ರಾವಿಡ ಶಿಖರ ಸಂಪ್ರದಾಯದಂತೆ, ಒಂದೇ ಮಾದರಿಯ ತಳಗಳನ್ನು ಮೇಲೆ ಹೋದಂತೆಲ್ಲ ಚಿಕ್ಕದಾಗಿ ರೂಪಿಸುವ ತಂತ್ರ ಇಲ್ಲಿದ್ದರೂ ಒಂದೊಂದು ಏರು ಘಟ್ಟವನ್ನು ಅತಿ ಚಿಕ್ಕದಾಗಿ ಮಾಡಿ, ಕೆಳತಳದಲ್ಲಿರುವ ಪ್ರತಿ ಅಂಗವನ್ನೂ ಮೇಲಿನ ತಳಗಳಲ್ಲೂ ಅದೇ ನೇರದಲ್ಲೇ ಬರುವಂತೆ ಮಾಡಿ ತುದಿಯಲ್ಲಿ ಸಣ್ಣ ಸ್ತೂಪಿಯನ್ನಿಟ್ಟು ಈ ಸುಂದರ ರೂಪವನ್ನು ಸಾಧಿಸಲಾಗುತ್ತಿತ್ತು. ಇದರಿಂದಾಗಿ ಈ ಶಿಖರಗಳು ಕುಬ್ಜಾಕಾರವಾಗಿರುತ್ತವೆ; ದೇವಾಲಯಗಳೂ ಕುಳ್ಳಾಗಿರುತ್ತವೆ.

ಗದಗದ ಬಳಿ ಇರುವ ಕುಕ್ಕನೂರು (ನೋಡಿ) ಗ್ರಾಮದ ನವಲಿಂಗ ಮತ್ತು ಕಲ್ಲೇಶ್ವರ ದೇವಾಲಯಗಳಲ್ಲಿ ಈ ವಾಸ್ತು ಶೈಲಿಯ ಪ್ರಾರಂಭಿಕ ಘಟ್ಟವನ್ನು ನೋಡಬಹುದು. ಇವೆರಡೂ ಹಿಂದಿನ ದೇವಾಲಯಗಳಂತೆ ಮರಳುಗಲ್ಲಿನಲ್ಲಿ ಕಟ್ಟಿದವು. ನವಲಿಂಗ ದೇವಾಲಯದಲ್ಲಿ ಪಟ್ಟದಕಲ್ಲಿನ ಗುಡಿಗಳ ಹೋಲಿಕೆಯಿದ್ದರೂ ಮೇಗಣ ಸ್ತೂಪಿಯ ರೂಪಿನಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಕಂಡುಬರುತ್ತದೆ. ಗರ್ಭಗೃಹ, ಅಂತರಾಳ, ನಾಲ್ಕು ಕಂಬಗಳ ನವರಂಗ ಮಂಟಪ ಮತ್ತು ಮುಂದೆ ನಂದಿ ಮಂಟಪ ಇರುವ ಕಲ್ಲೇಶ್ವರ ದೇವಾಲಯ ವಿವಿಧಾಂಗಗಳ ಪ್ರಮಾಣದಲ್ಲಿ ಬಹು ಸಮತೋಲನವಾಗಿರುವ ಸುಂದರ ಕಟ್ಟಡ. ಹೊರಮೈ ಸರಳವಾಗಿದ್ದರೂ ಅಲ್ಲಲ್ಲಿ ಅರೆಗಂಬಗಳಿಂದ ನಾಜೂಕಾಗಿ ಅಲಂಕೃತವಾಗಿದೆ. ಶಿಖರದ ಏರುಘಟ್ಟಗಳಲ್ಲಿಯ ಕುಬ್ಜತೆ ಈ ದೇವಾಲಯದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ.

ಎರಡನೆಯ ಘಟ್ಟದ್ದೆನ್ನಬಹುದಾದ, ಕರಿಕಲ್ಲಿನಲ್ಲಿ ಕಟ್ಟಿದ, ಲಕ್ಕುಂಡಿಯ ಜೈನ ದೇವಾಲಯ ಹೊರಮೈ ನೋಟಕ್ಕೆ ಕಲ್ಲೇಶ್ವರ ಗುಡಿಯಂತೆಯೇ ಇದ್ದರೂ ಕಲ್ಯಾಣ ಚಾಳುಕ್ಯ ಶೈಲಿಯ ವೈಶಿಷ್ಟ್ಯಗಳಾದ ಒಂಟಿ ಅರೆಗಂಬಗಳ ಮೇಲೆ ನಿಂತಿರುವ ಶಿಖರ, ಅರೆಗಂಬಗಳ ಜೋಡಿಗಳಿಂದ ಮೇಲೆದ್ದಿರುವ ಸುರುಳಿಗಳು, ಬಳಕುವ ಕಮಾನಿನಂಥ ಅಲಂಕರಣ -ಇವನ್ನೆಲ್ಲ ಇಲ್ಲಿ ಮೊಟ್ಟಮೊದಲ ಸಲ ಬಳಸಲಾಗಿದೆ.

ಮೂರನೆಯ ಘಟ್ಟದ ಮೊದಲ ಹಂತದ ಮಾದರಿ ಹಾವೇರಿ ಜಿಲ್ಲೆಯ ಚೌಡದಾನಪುರದ ಮುಕ್ತೇಶ್ವರ ದೇವಾಲಯದಲ್ಲಿದೆ. ಇದುವರೆಗಿನ ದೇವಾಲಯಗಳ ಕಪೋತ ಬರಿಯ ದಪ್ಪ ಪಟ್ಟಿಕೆಯಷ್ಟೇ ಆಗಿದ್ದಿತಾದರೆ, ಇಲ್ಲಿ ಕೆಳಭಿತ್ತಿಗೆ ರಕ್ಷಣೆಯನ್ನು ಒದಗಿಸಿ, ಕಟ್ಟಡದ ಸೌಂದರ್ಯವೃದ್ಧಿಗೆ ಅನುವಾಗುವಂತೆ ಮುಂಚಾಚಿದ ಓರೆ ಕಪೋತಗಳನ್ನು ಅಳವಡಿಸಲಾಗಿದೆ. ಕ್ರಮೇಣ S ಆಕಾರದ ದ್ವಿವಕ್ರರೂಪವೂ ಸಾಧಿತವಾಯಿತು. ಈ

ಘಟ್ಟವನ್ನು ಹಾವೇರಿ ಜಿಲ್ಲೆಯಲ್ಲಿರುವ ಹಾವೇರಿಯ ಸಿದ್ಧೇಶ್ವರ, ಹರಳಹಳ್ಳಿಯ ಸೋಮೇಶ್ವರ ಮತ್ತು ನೀರಲ್ಗಿಯ ಸಿದ್ಧರಾಮೇಶ್ವರ ದೇವಾಲಯಗಳಲ್ಲಿ ಕಾಣಬಹುದು.

ಗದಗದ ತ್ರಿಕೂಟೇಶ್ವರ ದೇವಾಲಯದ ಸರಸ್ವತಿ

12ನೆಯ ಶತಮಾನದ ಹೊತ್ತಿಗೆ ಕಲ್ಯಾಣ ಚಾಳುಕ್ಯ ವಾಸ್ತುರೀತಿ ತನ್ನ ಪೂರ್ಣವೈಶಿಷ್ಟ್ಯಗಳೊಡನೆ ಮೈದೋರಿತು. ಲಕ್ಕುಂಡಿಯ ಕಾಶಿವಿಶ್ವೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ ಮತ್ತು ಇಟ್ಟಗಿಯ ಮಹಾದೇವ ದೇವಾಲಯಗಳು ಈ ಬೆಳೆದ ಘಟ್ಟದ ಉತ್ತಮ ಉದಾಹರಣೆಗಳು. ಲಕ್ಕುಂಡಿಯ (ನೋಡಿ) ಕಾಶಿ ವಿಶ್ವೇಶ್ವರ ದೇವಾಲಯ ದ್ವಿಕೂಟಾಚಲ ಎರಡು ಗರ್ಭಗೃಹಗಳನ್ನುಳ್ಳದ್ದು. ಇಲ್ಲಿಯ ಶಿಖರ ಬಹುವಾಗಿ ಅಲಂಕೃತವಾಗಿದೆಯಲ್ಲದೆ, ಒಳಗಿನ ದ್ವಾರಬಂಧಗಳು ಚಿಕ್ಕಚಿಕ್ಕ ಶಿಲ್ಪಗಳಿಂದ ಶೋಭಿಸುತ್ತವೆ. ಕೆಲವು ದ್ವಾರಶಾಖೆಗಳಲ್ಲಿ ಸೂಕ್ಷ್ಮ ಆಯುಧಗಳಿಂದ ಕೊರೆದು ವಿನ್ಯಾಸಗಳನ್ನು ಹೊರಗೆತ್ತಿರುವ ಕೌಶಲ ಅನುಪಮವಾದ್ದು. ಈ ಶಿಲಾ ಶಿಲ್ಪ, ಚಿನ್ನ-ಬೆಳ್ಳಿಯ ಕುಸುರಿಯ ಕೆಲಸವನ್ನು ಜ್ಞಾಪಕಕ್ಕೆ ತರುತ್ತದೆ. ಕುರುವತ್ತಿಯ (ನೋಡಿ) ಮಲ್ಲಿಕಾರ್ಜುನ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗಮಂಟಪ ಮತ್ತು ಮುಖಮಂಟಪಗಳಿವೆ. ಒಳಗಿನ ಕಂಬಗಳು ನಯವಾಗಿ ಹೊಳಪು ಮಾಡಿದವುಗಳಾಗಿರುವುವಲ್ಲದೆ ಅವುಗಳ ಮೇಲೆ ಸುಂದರವಾದ ಮದನಿಕೆ ವಿಗ್ರಹಗಳನ್ನು ಇಡಲಾಗಿದೆ. 1112ರಲ್ಲಿ 6ನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವ ಕಟ್ಟಿಸಿದ ಇಟ್ಟಗಿಯ (ನೋಡಿ) ಮಹಾದೇವ ದೇವಾಲಯ ಚಾಳುಕ್ಯ ಸಂಪ್ರದಾಯದ ಅತ್ಯುತ್ತಮ ವಾಸ್ತು ಕೃತಿ. ಇದರಲ್ಲಿ ಗರ್ಭಗೃಹ, ಅಂತರಾಳ, ಎರಡು ಪಕ್ಕಗಳಲ್ಲಿ ಬಾಗಿಲುಗಳಿರುವ ನವರಂಗ, ಮುಂದೆ ತೆರೆದ ಮಂಟಪ ಇವೆ. 68 ಕಂಬಗಳಿದ್ದ ಈ ಮುಂದಿನ ಮಂಟಪ ಈಗ ಭಾಗಶಃ ಮುರಿದಿರುವುದಾದರೂ ಒಟ್ಟು ದೇವಾಲಯದ ಮೊದಲ ಭವ್ಯತೆಯನ್ನು ಕಲ್ಪಿಸಿಕೊಳ್ಳುವುದು ಕಷ್ಟವೇನೂ ಇಲ್ಲ. ವಿವಿಧ ಭಾಗಗಳ ಸಮತೋಲ ಪ್ರಮಾಣ, ಚತುರ ಅಲಂಕರಣ, ಸುಂದರ ಹೊಳಪು ಕಂಬಗಳು, ಕುಸುರಿ ಕೆಲಸದ ದ್ವಾರಬಂಧಗಳು, ಕುಳ್ಳಾದರೂ ಕೌಶಲ ಪೂರಿತ ಕೆಲಸವಿರುವ ಶಿಖರ ಇತ್ಯಾದಿ ಚಾಳುಕ್ಯ ಸಂಪ್ರದಾಯದ ವಿಶಿಷ್ಟಾಂಗಗಳೊಡನೆ ಕೂಡಿರುವ ಈ ದೇವಾಲಯವನ್ನು ಅಲ್ಲಿಯ ಶಾಸನವೊಂದು ದೇವಾಲಯ ಚಕ್ರವರ್ತಿ ಎಂದು ವರ್ಣಿಸುತ್ತದೆ. ಈ ಘಟ್ಟದ ನೂರಾರು ದೇವಾಲಯಗಳು ಚಾಳುಕ್ಯ ಸಾಮ್ರಾಜ್ಯದ ಅನೇಕ ಸ್ಥಳಗಳಲ್ಲಿದ್ದುವೆಂದು ಶಾಸನಗಳಿಂದ ತಿಳಿದು ಬಂದಿದ್ದರೂ ಇವುಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿಲ್ಲ. ಬಿಜಾಪುರ ಜಿಲ್ಲೆಯ ಅರಸೀಬೀದಿಯಲ್ಲಿರುವ ಗುಡಿ, ಬಾದಾಮಿಯ ಬಳಿಯ ಬೇಲೂರಿನಲ್ಲಿರುವ ದೇವಾಲಯ, ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿರುವ ತ್ರಿಪುರಾಂತಕ ದೇವಾಲಯ - ಇವು ಇತರ ಒಳ್ಳೆಯ ಕೃತಿಗಳು.

ಕಲ್ಯಾಣದ ಚಾಳುಕ್ಯರ ಆಳಿಕೆ ಕೊನೆಗೊಂಡರೂ ಅವರ ವಾಸ್ತುಶೈಲಿ ಮುಂದೆ ಬಂದ ಹೊಯ್ಸಳ, ಯಾದವ ಮತ್ತು ಕಾಕತೀಯ ಶೈಲಿಗಳಿಗೆ ಮೂಲ ಮಾದರಿಯನ್ನು ಒದಗಿಸಿತು. ವಿಶಾಲ ಜಗತಿ, ನಕ್ಷತ್ರಾಕಾರದ ತಳವಿನ್ಯಾಸ, ಹೊರಭಿತ್ತಿಯ ಮೇಲೆ ದೇವಶಿಲ್ಪಗಳ ಕೆತ್ತನೆ ಮುಂತಾದ ವಿಶಿಷ್ಟಾಂಗಗಳುಳ್ಳ ಹೊಯ್ಸಳ ವಾಸ್ತು ಶೈಲಿಯ ಬೆಳೆವಣಿಗೆಯತ್ತ ಹರಿಯುತ್ತಿದ್ದ ಚಾಳುಕ್ಯಕಾಲೀನ ವಾಸ್ತುಕೃತಿಗಳನ್ನು ಅನೇಕ ಕಡೆ ಗುರುತಿಸಬಹುದು. ಜಗತಿಯ ಅಳವಡಿಕೆಗೆ ಅಳಂದ ತಾಲ್ಲೂಕಿನ ನಿಂಬರ್ಗದ ಈಶ್ವರ ಗುಡಿ, ನಕ್ಷತ್ರ ತಳವಿನ್ಯಾಸಕ್ಕೆ ಡಂಬಳದ ದೊಡ್ಡ ಬಸಪ್ಪ ದೇವಾಲಯ, ಶಿಲ್ಪಾವೃತ ಭಿತ್ತಿಗಳಿಗೆ ಕಲ್ಯಾಣದ ಬಳಿಯ ಜಲಸಂಗ್ವಿಯ ದೇಗುಲ ಮತ್ತು ಗದಗಿನ ಸೋಮೇಶ್ವರ ದೇವಾಲಯ -ಇವು ಕೆಲವು ಉದಾಹರಣೆಗಳು.

ಕಲ್ಯಾಣ ಚಾಳುಕ್ಯರ ಕಾಲದವಾಗಿ ಈಗ ಉಳಿದಿರುವ ಶಿಲ್ಪಗಳಲ್ಲಿ ತತ್ಕಾಲೀನ ದೇವಾಲಯಗಳಿಗೆ ಸಂಬಂಧಿಸಿದ ಧಾರ್ಮಿಕ ಶಿಲಾಶಿಲ್ಪಗಳು (ಒಂದು ಕಂಚಿನ ಶಿಲ್ಪ ಈ ಕಾಲದ್ದೆಂದು ಒಬ್ಬ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ವಿವಾದಾಸ್ಪದ ವಿಷಯ). ಇವುಗಳಲ್ಲಿ ಹೆಚ್ಚಿನವು ದೇವಾಲಯಗಳ ಮೂಲದೇವರ ಅಥವಾ ಉಪದೇವರ ವಿಗ್ರಹಗಳು. ವಾಸ್ತುಕೃತಿಗಳಿಗೆ ಪೋಷಕವಾಗಿ ಶಿಲ್ಪವನ್ನು ಉಪಯೋಗಿಸುವ ವಿಧಾನ ಈ ಶೈಲಿಯಲ್ಲೂ ಇದೆಯಾದರೂ ಈ ಬಗೆಯಲ್ಲಿ ವಾಸ್ತುರೂಪಾತ್ಮಕ, ಜ್ಯಾಮಿತೀಯ ಅಥವಾ ಬಳ್ಳಿಯ ತರಹದ ಅಲಂಕರಣ ಶಿಲ್ಪಗಳು ವಿಶೇಷ. ಸ್ತ್ರೀಮೂರ್ತಿಗಳ ಅಥವಾ ಪ್ರಾಣಿಗಳ ಶಿಲ್ಪಗಳು ಅಲ್ಲಿ



ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯದ ದಕ್ಷಿಣದ್ವಾರ

ವಿರಳವಾಗಿ ಕಂಡುಬರುತ್ತವೆ. ವಾಸ್ತು ಅಲಂಕರಣದಲ್ಲಿ ಉಬ್ಬುಶಿಲ್ಪ ಸಾಮಾನ್ಯ. ಇತರ ದೇವಮೂರ್ತಿಗಳೇ ಮುಂತಾದ ಬಿಡಿ ಶಿಲ್ಪಗಳ

ರಚನೆಯಲ್ಲಿ ಎರಡು ತಂತ್ರಗಳು ಪ್ರಚಲಿತವಾಗಿದ್ದುವು. ಬೆಂಗಡೆಯಲ್ಲಿ ವಿಶಾಲವಾದ ಫಲಕವನ್ನು ಬಿಟ್ಟು ಮೂರ್ತಿಯನ್ನು ಉಬ್ಬುಶಿಲ್ಪವಾಗಿ ರೂಪಿಸುವುದು ಒಂದು: ಹಿಂಭಾಗದಲ್ಲಿ ಪ್ರಭಾವಳಿಯನ್ನು ಕೆತ್ತಿ, ಮೂರ್ತಿಗಳು ಪೂರ್ಣಶಿಲ್ಪಗಳಾದರೂ ಅವು ಅತ್ಯುಬ್ಬುಶಿಲೆಗಳೆಂದು ಭಾಸವಾಗುವಂತೆ ಮಾಡುವುದು ಎರಡನೆಯದು. ದೇವಮೂರ್ತಿಗಳನ್ನು ಗರ್ಭಗುಡಿಯಲ್ಲೊ ಕೋಷ್ಠಗಳಲ್ಲೊ ಇಟ್ಟರೆ ನೋಡುಗನ ಕಣ್ಣಿಗೆ ಶಿಲ್ಪಗಳ ಮುಂಭಾಗವಷ್ಟೇ ಕಾಣುವಂತಿರುವುದರಿಂದ ಶಿಲ್ಪಿಗಳು ಈ ತಂತ್ರವನ್ನು ಅಳವಡಿಸಿಕೊಂಡಿರಬಹುದು.

ಆ ಕಾಲದ ದೇವಶಿಲ್ಪಗಳಲ್ಲಿ ವಿಷಯ ವ್ಯತ್ಯಾಸದ ವಿನಾ ನಿರೂಪಣೆಯ ಇತರ ಅಂಶಗಳಲ್ಲಿ ಸ್ನಿಗ್ಧತೆ ಮತ್ತು ಏಕರೂಪತೆ ಕಂಡುಬರುತ್ತದೆ. ಈ ಮೂರ್ತಿಗಳು ತೆಳು ಸುಂದರ ಮೈಮಾಟವುಳ್ಳವು. ಮುಖದಲ್ಲಿ ಮುಗ್ಧತೆಯೊಂದನ್ನು ಬಿಟ್ಟರೆ ಬೇರೆ ಯಾವ ಭಾವಾಭಿವ್ಯಕ್ತಿಯಾಗಲಿ, ಭಂಗಿ ನಿಲುವುಗಳಲ್ಲಿ ವೈವಿಧ್ಯವಾಗಲಿ ಇರುವುದಿಲ್ಲ. ಆಯುಧ ಇತ್ಯಾದಿಗಳನ್ನು ಹಿಡಿದಿರುವುದನ್ನು ತೋರಿಸುವ ರೀತಿ ಕಲಾತ್ಮಕವಾಗಿ ಕಂಡರೂ ನಾಟಕೀಯವಾಗಿ ಅಸಹಜ ಮುದ್ರೆಗಳಲ್ಲಿರುತ್ತವೆ. ಕಲ್ಯಾಣದ ಚಾಳುಕ್ಯರ ಕಾಲದ ಹೊತ್ತಿಗೆ ಆಗಮಶಾಸ್ತ್ರ ಮತ್ತು ಶಿಲ್ಪಸಂಪ್ರದಾಯಗಳು ಸಿದ್ಧ ಮತ್ತು ಪವಿತ್ರ ಸ್ಥಿತಿ ಪಡೆದಿದ್ದು, ಅವುಗಳ ಚೌಕಟ್ಟಿನಲ್ಲೇ ಮೂರ್ತಿಗಳನ್ನು ನಿರ್ಮಿಸಬೇಕಾಗಿ ಬಂದು, ಆ ಮಾರ್ಗದರ್ಶಕ ಶಾಸ್ತ್ರಗಳೇ ಕಲಾಭಿವ್ಯಕ್ತಿಗೆ ಸಂಕೋಲೆಯನ್ನು ಒಡ್ಡಿದವೆಂದು ಕಾಣುತ್ತದೆ. ಆದರೂ ದೇವಮೂರ್ತಿಗಳ ನಿರೂಪಣೆಯಲ್ಲಿ ಕಲಾಭಿವ್ಯಕ್ತಿಗೆ ಒದಗಿದ ಮಿತಿಯನ್ನು ಶಿಲ್ಪಿಗಳು ಅವುಗಳ ಅಲಂಕರಣದಲ್ಲಿ ನಿವಾರಿಸಿಕೊಂಡಿದ್ದಾರೆ. ಬಾದಾಮಿಯ ಚಳುಕ್ಯ ಸಂಪ್ರದಾಯದಂತೆಯೇ ಈ ದೇವಶಿಲ್ಪಗಳಲ್ಲೂ ಹೆಚ್ಚಿನ ವಸ್ತ್ರಾಭರಣಗಳಿರುವುದಿಲ್ಲ. ಆದರೆ ಇರುವಷ್ಟನ್ನು ಬಹು ಸೂಕ್ಷ್ಮವಾಗಿ, ಸುಂದರವಾಗಿ, ಬಂಗಾರದ ಮೇಲಿನ ಕುಸುರಿ ಕೆಲಸದಂತೆ ಕೆತ್ತುವುದರಲ್ಲಿ ಇವರು ವಿಶೇಷ ಪ್ರತಿಭೆಯನ್ನು ತೋರಿಸಿದ್ದಾರೆ. ಬಳುಕುವ ಬಾಗುವ ಲತಾಪಟ್ಟಿಕೆಗಳು, ಎರಡು ಪಕ್ಕಗಳಿಂದಲೂ ಮೇಲೆದ್ದು ಮೂರ್ತಿಯ ತಲೆಯ ನೇರಕ್ಕೆ ಕೀರ್ತಿಮುಖದಲ್ಲಿ ಸೇರಿ ಪ್ರಭಾವಳಿಗಳಾಗಿ ಪರಿಣಮಿಸಿದೆ. ಇವು ತತ್ಕಾಲೀನ ಶಿಲ್ಪಗಳ ಸುಂದರ ಹಾಗೂ ವಿಶಿಷ್ಟ ಕಲ್ಪನೆಗಳು. ಈ ಪ್ರಭಾವಳಿಗಳು ದೇವಮೂರ್ತಿಯ ಸುತ್ತಲೂ ಆಲಂಕಾರಿಕ ಚೌಕಟ್ಟನ್ನು ಒದಗಿಸಿ ಭಕ್ತನ ದೃಷ್ಟಿಮೂರ್ತಿಯ ಮುಖದ ಮೇಲೆ ಕೇಂದ್ರೀಕರಿಸುವಂತೆ ಮಾಡುತ್ತವೆ. ಕಲ್ಪನಾವೈವಿಧ್ಯ ಹಲವು ಸ್ತರಗಳ ಮತ್ತು ಹಲವು ತೆರನಾದ ಭಾವಾಭಿವ್ಯಕ್ತಿ ಮುಂತಾದ ಉಚ್ಚ ಕಲಾ ಅಂಶಗಳು ಈ ಶಿಲ್ಪಕೃತಿಗಳಲ್ಲಿ ಇಲ್ಲದಿದ್ದರೂ ಮೇಲೆ ಹೇಳಿದ ದೃಷ್ಟಿಯಿಂದ ಸಾರ್ಥಕವಾಗಿವೆ.

ಗುಲ್ಬರ್ಗ ಜಿಲ್ಲೆಯ ಹಿರೇಮಣ್ಣೂರಿನಲ್ಲಿರುವ ಕೇಶವ ವಿಗ್ರಹ ಕಲ್ಯಾಣದ ಚಾಳುಕ್ಯರ ಕಾಲದ ದೇವಮೂರ್ತಿಗಳ ಸ್ವರೂಪದ ಪರಿಚಯವನ್ನು ಚೆನ್ನಾಗಿ ಒದಗಿಸುತ್ತದೆ. ಇಲ್ಲಿ ಸಮಭಂಗಿಯಲ್ಲಿ ನಿಂತಿರುವ ಕೇಶವ, ಸುಂದರಕಾಯನಾದ ಯುವಕನಂತೆ ರೂಪಿತವಾಗಿದ್ದಾನೆ. ಅಂಗಾಂಗಗಳಲ್ಲಿ ಸಹಜ ಪ್ರಮಾಣವುಂಟು, ಆದರೆ ಭಾವರಹಿತ. ದೇವಮೂರ್ತಿಯಷ್ಟನ್ನೇ ತೆಗೆದುಕೊಂಡರೆ ಅಲಂಕರಣ ಅಲ್ಪ; ಕಿರೀಟ, ಹಾರ, ಕೈಕಡಗ, ಕಟಿಬಂಧಗಳಷ್ಟೇ. ಯೌವನದ ಹೊಳಪು ಮೈ ಪ್ರದರ್ಶಿತವಾಗಿವೆ. ಶಂಖಚಕ್ರಗದಾಪದ್ಮಗಳನ್ನು ಹಿಡಿದಿರುವ ರೀತಿ ಸುಂದರ; ಆದರೆ ಅಸಹಜ, ಪ್ರಭಾವಳಿಯ ಕೆತ್ತನೆ ಕೌಶಲಪೂರಿತವಾದ್ದು. ಶಾಸ್ತ್ರದ ಪರಿಮಿತಿಯೊಳಗೆ ಕೆಲಸ ಮಾಡಿರುವ ಶಿಲ್ಪಿ ತನ್ನ ಮೃದು ಕರಿಗಲ್ಲು ಮಾಧ್ಯಮವನ್ನು ಮೈಹೊಳಪು ಮತ್ತು ಆಭರಣಾದಿಗಳ ಕುಸುರಿ ಕೆಲಸಕ್ಕೆ ಚೆನ್ನಾಗಿಯೇ ಬಳಸಿಕೊಂಡಿದ್ದಾನೆನ್ನಬಹುದು. ಇದರಲ್ಲಿ ಕೆಲವು ಒಳ್ಳೆಯ ಲಕ್ಷಣಗಳಿದ್ದರೂ ಈ ಕೃತಿ ಹಿಂದಿನ ಕಾಲದ ಪ್ರತಿಭಾವಂತ ಶಿಲ್ಪಿಗಳ ಕೃತಿಗಳ ಔನ್ನತ್ಯವನ್ನು ಮುಟ್ಟಲಾರದೆನಿಸುತ್ತದೆ. ಆದರೂ ಒಂದು ದೃಷ್ಟಿಯಲ್ಲಿ ಇದೊಂದು ಸಫಲ ಕೃತಿ. ವಿಶಾಲ ಬರಿಗೋಡೆಯ ಹಿನ್ನೆಲೆಯಲ್ಲಿ ಗರ್ಭಗೃಹದ ಅರೆಬೆಳಕಿನಲ್ಲಿ ವಿಗ್ರಹವನ್ನಿಟ್ಟಾಗ,ಮೂರ್ತಿಯ ಸುತ್ತಲಿನ ಅಲಂಕರಣ, ಹೊಳಪಿನ ದೇವಕಾಯ, ಮುಖ್ಯವಾಗಿ ಅದರ ಸುಂದರಮುಖ -ಇವೆಲ್ಲ ಪ್ರತಿಫಲಿಸಿ ಭಕ್ತನ ಗಮನ ಸೆಳೆಯುತ್ತವೆ. ಭಕ್ತನೂ ದೇವನ ಪ್ರಭೆಯ ವಲಯದಲ್ಲಿ ಸೇರುತ್ತಾನೆ. ಭಕ್ತಿ ಭಾವ ಸ್ಫುರಿಸುತ್ತದೆ. ಇದನ್ನು ಕಡೆದ ಶಿಲ್ಪಿ ಸಂಪ್ರದಾಯದ ಪರಿಮಿತಿಯಲ್ಲೂ ತನ್ನ ವೈಯಕ್ತಿಕ ಪ್ರತಿಭೆ ಕೌಶಲಗಳನ್ನೆರೆದು ಇದನ್ನೊಂದು ಕಲಾತ್ಮಕ ಕೃತಿಯನ್ನಾಗಿ ಮಾಡಿದ್ದಾನೆ. ಆದರೆ ಕುರುವತ್ತಿಯ ಬ್ರಹ್ಮನ ವಿಗ್ರಹ ಈ ಪ್ರತಿಭೆ ಕೌಶಲಗಳ ಅಭಾವಕ್ಕೆ ಒಂದು ನಿದರ್ಶನ. ಇಲ್ಲಿ ಸಮಭಂಗಿಯಲ್ಲಿ ನಿಂತಿರುವ ಬ್ರಹ್ಮ ಮೂರ್ತಿಯಲ್ಲೂ ಮಣ್ಣೂರು ಶಿಲ್ಪದ ಎಲ್ಲ ಅಂಶಗಳೂ ಇರುವುವಾದರೂ ಇದು ಅದರಷ್ಟು ನಾಜೂಕಾಗಿಲ್ಲ.



ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯದಲ್ಲಿರುವ ಜಾಲಂಧ್ರ

ಶಿಲ್ಪಿಯ ಪ್ರತಿಭೆ ಶಾಸ್ತ್ರದ ಹಿಡಿತಕ್ಕೆ ಒಳಪಡದಿದ್ದಾಗ ಎಂಥ ಸಾಧನೆಗಳಿಗೆ ಅವಕಾಶ ಒದಗಿತೆಂಬುದನ್ನು ಕುರುವತ್ತಿಯ ಮದನಿಕೆ ವಿಗ್ರಹಗಳಲ್ಲಿ ನೋಡಬಹುದು. ಇವುಗಳಲ್ಲಿ ಒಂದು ವಿಗ್ರಹ ನರ್ತಿಸುತ್ತಿರುವ ಕಿಶೋರಿಯದು. ನವಯುವತಿಯ ಸೌಂದರ್ಯ, ದೇಹಲಾಲಿತ್ಯ, ಮುಗ್ಧತೆ, ಚಾಂಚಲ್ಯ -ಈ ಎಲ್ಲವನ್ನೂ ಶಿಲ್ಪಿ ಇಲ್ಲಿ ಸೆರೆಹಿಡಿದಿದ್ದಾನೆ. ಹಿನ್ನೆಲೆಯಲ್ಲಿರುವ ಲತೆಯ ಬಳುಕು ಇವಳ ಬಳುಕುವ ದೇಹದೊಂದಿಗೆ ಸಮರಸವಾಗಿದೆ. ಲತೆಯನ್ನೂ ಕಿಶೋರಿಯನ್ನೂ ಜೊತೆಗೂಡಿಸಿರುವ ಚಾತುರ್ಯ ಪ್ರಶಂಸಾರ್ಹವಾದದ್ದು. ಸೂಕ್ಷ್ಮಸಹೃದಯಿಗಳು ಈ ಶಿಲ್ಪೋಪಮೆಯಿಂದ ತರಂಗತರಂಗವಾಗಿ ಏಳುವ ರಸಾನುಭವವನ್ನು ಪಡೆಯಬಲ್ಲರು. ಜಲಸಂಗ್ವಿಯ ದೇಗುಲದ ಹೊರಭಿತ್ತಿಯ ಮೇಲೆ ಕೆತ್ತಿರುವ, ಲೇಖನ ಪಟವನ್ನು ಎತ್ತಿಹಿಡಿದು ಏನನ್ನೋ ಬರೆಯುವಂತಿರುವ ಒಂದು ಸ್ತ್ರೀ ಶಿಲ್ಪ ಆ ಕಾಲದ ಉತ್ತಮ ಕೃತಿಗಳಿಗೆ ಇನ್ನೊಂದು ಉದಾಹರಣೆ. ಇಲ್ಲಿ ನಿರೂಪಿತವಾಗಿರುವವಳು ಪ್ರೌಢೆ. ಈಕೆ ಯೌವನದ ಎರಡನೆಯ ಘಟ್ಟದಲ್ಲಿರುವಳೆಂಬುದು ಇವಳ ಅಂಗಸೌಷ್ಠವ, ಬಲಿತಮುಖ ಇವುಗಳಿಂದ ವ್ಯಕ್ತವಾಗುತ್ತದೆ. ಇಲ್ಲಿ ಚಿತ್ರಿತವಾಗಿರುವುದು ಕಿಶೋರಿಯ ಚಂಚಲಮನೋಭಾವವಲ್ಲ. ಸುಪೋಷಿತ ಗೃಹಿಣಿಯ ಸಫಲ ಜೀವನದ ಆನಂದ, ಹೆಮ್ಮೆ. ತನ್ನ ಇನಿಯನ ಬಗೆಗಷ್ಟೇ ಈಕೆಯ ಅಭಿಮಾನ, ಇವೆಲ್ಲ ಭಾವಗಳನ್ನೂ ಇವಳ ಸ್ಥಿರಭಂಗಿಯಲ್ಲಿ, ಕಾರ್ಯಮಗ್ನತೆಯಲ್ಲಿ ಶಿಲ್ಪಿ ಹೊಮ್ಮಿಸಿದ್ದಾನೆ. ಇವಳು ಬರೆಯುತ್ತಿರುವುದು ತನ್ನ ಪ್ರಿಯಕರನಾದ ಸಾಮ್ರಾಟನ ಪ್ರಶಸ್ತಿಯನ್ನು.

ಅಲಂಕರಣಕ್ಕಾಗಿ ಲತಾವಿನ್ಯಾಸವನ್ನು ಚಾಳುಕ್ಯ ಶಿಲ್ಪಿಗಳು ಬಹುವಾಗಿ ಉಪಯೋಗಿಸಿದ್ದಾರೆ. ಅಂಥ ಸುಂದರ ಕೃತಿಯೊಂದು ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯದಲ್ಲಿದೆ. ಇದು ಅಂತರಾಳದೊಳಕ್ಕೆ ಬೆಳಕನ್ನು ಚೆಲ್ಲಲು ಮಾಡಿರುವ ಜಾಲಂಧ್ರ. ಇದರಲ್ಲಿ ಒಂದೊಂದು ಲತಾವರ್ತುಲದ ಮಧ್ಯೆ ಒಬ್ಬೊಬ್ಬ ನೃತ್ಯಗಾರರನ್ನು ಒಂದೊಂದು ಭಂಗಿಯಲ್ಲಿ ರೂಪಿಸಿರುವ ರೀತಿ ಮೋಹಕವಾದ್ದು. ಹೊರಗೆ ಹೆಚ್ಚು ಬೆಳಕಿದ್ದಾಗ ಜಾಲಂಧ್ರದ ಕೆತ್ತನೆಗಳ ಮೇಲೆ ಸಂಭವಿಸುವ ನೆಳಲು ಬೆಳಕಾಟ, ಹಿಂದಿನ ಗೋಡೆಯ ಮೇಲೆ ಬೀಳುವ ಜಾಲಂಧ್ರದ ನೆರಳಿನ ಚೆಲುವು ರಮ್ಯವಾದವು.

ಕಲ್ಯಾಣ ಚಾಳುಕ್ಯರ ಕಾಲದ ಶಿಲ್ಪಗಳಲ್ಲಿ ಹಲವು ಉತ್ತಮಕೃತಿಗಳೇನೋ ಇವೆ. ಆದರೆ ಆ ಕಾಲದ ಶಿಲ್ಪಕೃತಿಗಳನ್ನು ಒಟ್ಟಾಗಿ ವಿಮರ್ಶಿಸಿದರೆ, ಅವುಗಳಲ್ಲಿ ಎದ್ದು ಕಾಣುವುದು ಶಿಲ್ಪಿಯ ಸೃಜನಾತ್ಮಕ ಪ್ರತಿಭೆಯಲ್ಲ; ಕೇವಲ ಕರಕೌಶಲ್ಯ, ಇದು ಕಲೆಯ ಇಳಿಮುಖದ ಕಾಲವನ್ನು ಸೂಚಿಸುತ್ತದೆ. (ಎಸ್.ಎನ್.)

**ಶಾಸನಗಳು :** ಕಲ್ಯಾಣದ ಚಾಳುಕ್ಯರ ಶಾಸನಗಳು ಇದುವರೆಗೆ ಮೊದಲು ಆಳಿದ ಅರಸುಮನೆತನಗಳವರ ಶಾಸನಗಳಿಗಿಂತ ಸಂಖ್ಯೆಯ ದೃಷ್ಟಿಯಿಂದ ಹೆಚ್ಚು. ಇವುಗಳಲ್ಲಿ ಶಿಲಾಶಾಸನಗಳದೇ ಮೇಲುಗೈ. ತಾಮ್ರಶಾಸನಗಳು ಬಹಳ ಕಡಿಮೆ. ಬಹುತೇಕ ಎಲ್ಲ ಶಿಲಾಶಾಸನಗಳ ಲಿಪಿ ಕನ್ನಡ. ನಾಗರೀ ಲಿಪಿಯ ಶಾಸನಗಳು ವಿರಳ, ಆ ಲಿಪಿಯನ್ನು ತಾಮ್ರಶಾಸನಗಳಲ್ಲಿ ಮಾತ್ರ ಬಳಸಲಾಗಿದೆ. ಈ ಕಾಲದ ಅಕ್ಷರಗಳು ಹೆಚ್ಚು ವರ್ತುಲಾಕಾರವಾಗಿದ್ದು ಅವುಗಳನ್ನು ಸುಂದರವಾಗಿ ಕೊರೆಯಲಾಗಿದೆ. ಗಾತ್ರದಲ್ಲಿ ಅವು ಕಿರಿದು. ಶಿಲಾಶಾಸನಗಳನ್ನು ಕೊರೆಯುವ ಮೊದಲು ಕಲ್ಲನ್ನು ನಯಗೊಳಿಸಲಾಗುತ್ತಿತ್ತು. ಇವರ ಆಳಿಕೆಯ ಆರಂಭಕಾಲದ ಶಾಸನಗಳು ಸರಳವಾದ ಕಿರುಶಾಸನಗಳು. ಆದರೆ ಮೊದಲನೆಯ ಸೋಮೇಶ್ವರ ಮತ್ತು ಅವನ ಅನಂತರ ಆಳಿದ ಅರಸರ ಶಾಸನಗಳು ಹೆಚ್ಚು ವಿಸ್ತಾರವಾಗಿವೆ. ಅನೇಕ ಶಾಸನಗಳ ಭಾಷೆ ಕನ್ನಡವಾದರೂ ಅದು ಬಹುಮಟ್ಟಿಗೆ ಸಂಸ್ಕೃತದಿಂದ ಪ್ರಭಾವಿತವಾದುದು. ದಾನ ಶಾಸನಗಳೇ ಹೆಚ್ಚಿನವಾದರೂ ರಣರಂಗದಲ್ಲಿ ಮಡಿದ ವೀರರ, ಆತ್ಮಬಲಿಗೈದ ಯೋಧರ, ಸತಿಗಳ, ಸಲ್ಲೇಖನ ವಿಧಿಗಳಿಂದ ಬಾಳನ್ನು ತ್ಯಜಿಸಿದ ಜೈನ ಆಚಾರ್ಯರ ಸ್ಮಾರಕ ಶಾಸನಗಳೂ ಬಹು ಸಂಖ್ಯೆಯಲ್ಲಿವೆ. ಹಲವು ಶಾಸನಗಳು ಸಾಹಿತ್ಯ ಮೌಲ್ಯಗಳನ್ನೊಳಗೊಂಡಿವೆ.

ತ್ರೈಲೋಕ್ಯಮಲ್ಲ ವಿಜಯಾದಿತ್ಯನ ಬನ್ನಿಗೊಳ ಶಾಸನ

ಪ್ರಾರ್ಥನಾಶ್ಲೋಕಗಳಿಂದ ಆರಂಭವಾಗುವ ಈ ಶಾಸನಗಳು ರಾಜಶಾಸನಗಳಾಗಿದ್ದಲ್ಲಿ ಅರಸನ ಪ್ರಶಸ್ತಿ, ಆತನ ಸಾಹಸಗಳ ವರ್ಣನೆ ಹಾಗೂ ಹಲವಾರು ಸಂದರ್ಭಗಳಲ್ಲಿ ಅವನ ವಂಶಾವಳಿಗಳನ್ನು ಒಳಗೊಂಡಿರುತ್ತವೆ. ಅನಂತರ ಆತನ ಸಾಮಂತರಿಗೆ ಅಥವಾ ಪ್ರಾಂತ್ಯಾಧಿಕಾರಿಗಳಿಗೆ ಸಂಬಂಧಿಸಿದ ವಿವರಗಳು, ಅವರ ವರ್ಣನೆಗಳು ಇದ್ದು ಆ ಬಳಿಕ ತೇದಿಯ ಉಲ್ಲೇಖ ಬಂದು ಕೊನೆಗೆ ದಾನದ ವಿವರಗಳು ಕೊಡಲ್ಪಟ್ಟಿರುತ್ತವೆ. ಅರಸನನ್ನು ಸಮಸ್ತ ಭುವನಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯಕುಳತಿಳಕ ಚಾಳುಕ್ಯಾಭರಣ ಎಂಬ ಬಿರುದುಗಳಿಂದ ಸೂಚಿಸಿದ ಅನಂತರ ಅರಸನ ಹೆಸರನ್ನು ಹೇಳುತ್ತದೆ. ಈ ಅರಸರ ವೈಯಕ್ತಿಕವೆನ್ನಬಹುದಾದ ಆಹವಮಲ್ಲ, ಜಗದೇಕಮಲ್ಲ, ತ್ರೈಲೋಕ್ಯಮಲ್ಲ, ಭುವನೈಕಮಲ್ಲ, ತ್ರಿಭುವನಮಲ್ಲ, ಭೂಲೋಕಮಲ್ಲ ಮುಂತಾದ ಬಿರುದುಗಳು ಹೆಸರಿನ ಜೊತೆಗೆ ಸೇರಿಸಲ್ಪಟ್ಟಿರುತ್ತವೆ.

ತೇದಿಗಳಲ್ಲಿ ಹೆಚ್ಚಿನ ವಿವರಗಳು ಲಭಿಸುತ್ತವೆ. ಶಕವರ್ಷವನ್ನು ಸಾಮಾನ್ಯವಾಗಿ ಅಂಕಿಗಳಲ್ಲಿ ಸೂಚಿಸಿ ಅನಂತರ ಸಂವತ್ಸರದ ಹೆಸರು, ತಿಂಗಳು, ಪಕ್ಷ, ತಿಥಿ ಮತ್ತು ವಾರ, ದಿನಗಳನ್ನು ಕೊಡುತ್ತವೆ. ಆರನೆಯ ವಿಕ್ರಮಾದಿತ್ಯ ತನ್ನ ಹೆಸರಿನಲ್ಲಿ ಚಾಳುಕ್ಯವಿಕ್ರಮ ಶಕೆಯನ್ನು ಆರಂಭಿಸಿದಾಗಿನಿಂದ ಈ ನೂತನ ಶಕೆಯ ಉಲ್ಲೇಖ ಸಹ ಶಾಸನಗಳಲ್ಲಿ ಕಾಣಿಸಿಕೊಳ್ಳತೊಡಗುತ್ತದೆ. ಮೊದಲಿನ ಶಾಲಿವಾಹನ ಶಕೆಯನ್ನು ಸಾಮಾನ್ಯವಾಗಿ ಕೊಡುವುದಿಲ್ಲ. ಅನಂತರದ ಮುಮ್ಮಡಿ ಸೋಮೇಶ್ವರ, ಪೆರ್ಮಾಡಿ, ಮುಮ್ಮಡಿ ತೈಲ ಮತ್ತು ನಾಲ್ವಡಿ ಸೋಮೇಶ್ವರರು ತಮ್ಮ ತಮ್ಮ ಆಳಿಕೆಯ ವರ್ಷಗಳನ್ನು ಶಾಸನಗಳಲ್ಲಿ ಪ್ರಸ್ತಾಪಿಸುವ ಪದ್ಧತಿಯನ್ನು ಪ್ರಾರಂಭಿಸಿದರು. ಭೂಲೋಕಮಲ್ಲ ವರ್ಷ, ಜಗದೇಕಮಲ್ಲ ವರ್ಷ, ತ್ರೈಲೋಕ್ಯಮಲ್ಲದೇವ ವರ್ಷ ಮತ್ತು ತ್ರಿಭುವನಮಲ್ಲಸೋಮೇಶ್ವರದೇವ ವರ್ಷ ಎಂಬ ಈ ವರ್ಷಗಳನ್ನು ನೀಡುವಾಗ ಇವು ಅವರ ಆಳಿಕೆಯ ವರ್ಷಗಳೆಂದು ಪರಿಗಣಿಸಬೇಕು. ಚಾಳುಕ್ಯ ವಿಕ್ರಮ ಶಕೆ ಬಳಕೆಯಲ್ಲಿದ್ದುದು ಕೇವಲ ಒಂದು ಶತಮಾನದಷ್ಟು ಕಾಲ. ಐವತ್ತನೆಯ ವರ್ಷದ ಬಳಿಕ ಇದರ ಉಪಯೋಗ ಕಡಿಮೆಯಾಗುತ್ತ ಹೋಗಿದೆ.

ಈ ಕಾಲದ ಶಾಸನಗಳಲ್ಲಿ ದಾನ ನೀಡಿದವರ ಹಾಗೂ ಪಡೆದವರ ವರ್ಣನೆಗಳೂ ಭೌಗೋಳಿಕ ಪ್ರದೇಶಗಳ, ಗ್ರಾಮಗಳ, ಮಹಾಜನರ ವರ್ಣನೆಗಳೂ ಹೆಚ್ಚು ವಿವರಗಳೊಂದಿಗೆ ಕಾಣಿಸಿಕೊಳ್ಳುತ್ತವೆ.

ಮೊದಲಿನ ಗದ್ಯಶಾಸನಗಳಿಗೆ ಬದಲು ಗದ್ಯ ಪದ್ಯಮಿಶ್ರಿತ ಚಂಪೂ ಶೈಲಿಯ ಹಾಗೂ ಕಾವ್ಯಗುಣಗಳನ್ನು ಪಡೆದ ಶಾಸನಗಳು ಸಂಖ್ಯೆಯಲ್ಲಿ ಹೆಚ್ಚು. ಶಾಸನಗಳು ವಿಷಯ ನಿರೂಪಣೆಯ ವಸ್ತುನಿಷ್ಠ ಮಾಧ್ಯಮಗಳಾಗಿ ಉಳಿಯದೆ ಹೆಚ್ಚು ಕಲಾತ್ಮಕವಾಗಿ ಕಾವ್ಯಗಳಾಗಿವೆ. ರಚನೆಯಲ್ಲಿ ಸುಮಾರು ಒಂದೇ ಕಟ್ಟುಪಾಡಿಗೆ ಒಳಪಟ್ಟ ಈ ಶಾಸನಗಳಲ್ಲಿ ಕೆಲವು ಪ್ರತಿಭಾವಂತ ಕವಿಗಳ ಕೃತಿಗಳಾಗಿವೆ. ಅನ್ಯತ್ರ ತಿಳಿದುಬಾರದ ಅನೇಕ ಶಾಸನಕವಿಗಳು ಈ ಶಾಸನಗಳ ಮೂಲಕ ಬೆಳಕಿಗೆ ಬಂದಿದ್ದಾರೆ. ಕಮಳಾದಿತ್ಯ, ಕಂದರ್ಪ, ಕಪ್ಪಣಭಟ್ಟ, ನಾಗವಯ್ಯ, ನಾಗವಾರ, ಜಿನವರ್ಮ ಪಂಡಿತ, ಕವಿರಾಜವಲ್ಲಭ, ಗೋವಿಂದ, ಮಲ್ಲಿನಾಥ, ಬಸವಣಯ್ಯ, ರಾಜವಲ್ಲಭ, ಕನ್ನಪಯ್ಯ, ರುದ್ರಭಟ್ಟ, ಹರಿಯಣ್ಣ, ವೈಜನಾಥ, ನಾಗದೇವ, ಕರ್ಪರಸ, ಸಂಧಿವಿಗ್ರಹಿ ದಾಮರಾಜ, ಮಾಳಪಯ್ಯ, ಮಾಧವಭಟ್ಟ, ನಾಗಾರ್ಜುನ ಪಂಡಿತ, ಮಲ್ಲ, ಚಂದ್ರಭಟ್ಟ, ಶ್ರೀಕಂಠಸೂರಿ, ಮಲ್ಲಿಕಾರ್ಜುನ ಭಟ್ಟ, ಆಚರಾಜ, ಮಲ್ಲಿದೇವ, ಲಕ್ಷ್ಮಣ, ನಾರಣದೇವ, ಚಟ್ಟಿಪಾರ್ಯ, ಶಾಂತಿನಾಥ, ಮದ್ದಿಮಯ್ಯ, ಭಾಸ್ಕರ, ಮಾಕಣ ಪಂಡಿತ, ಸಾಂತ ಮಹಂತ, ಬಲದೇವ, ಸೋಮೇಶ್ವರಭಟ್ಟ, ರೇಚಣಭಟ್ಟ, ಸರ್ವಜ್ಞ ಪಟ್ಟವರ್ಧನ, ಸೂರಿಲಿಯ ಮುಖ್ಯ ಪಂಡಿತ, ಕಲಿದೇವ ಪಂಡಿತ, ಉದಯಕಲ್ಪ ಮುಂತಾದ ಅನೇಕ ಶಾಸನ ಕವಿಗಳು ಈ ಕಾಲದವರು.

**ನಾಣ್ಯಗಳು :** ಕಲ್ಯಾಣ ಚಾಳುಕ್ಯರ ಕಾಲಕ್ಕೆ ಭಿನ್ನ ಮೌಲ್ಯಗಳನ್ನುಳ್ಳ ವೈವಿಧ್ಯಮಯ ನಾಣ್ಯಗಳು ಚಲಾವಣೆಯಲ್ಲಿದ್ದುವು. ದ್ರಮ್ಮ, ಗದ್ಯಾಣ, ಪೊನ್, ಪಣ, ಸುವರ್ಣ, ಸಾಹಣಿಕಾಟಿ, ಸಲಿಕೆ, ಗುಳಿಕೆ, ಕಾಹಿಣ, ಮಾಡ, ವೀಸ, ಅಡ್ಡ, ಪ್ರತಾಪ, ಧರಣ ಮುಂತಾದ ನಾಣ್ಯಗಳ ಹೆಸರುಗಳು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ದುಸರ ಗದ್ಯಾಣ, ಕಟಕ ಗದ್ಯಾಣ, ಪೆರ್ಗಡೆ ಗದ್ಯಾಣ ಇವುಗಳ ಮೌಲ್ಯಗಳು ಹೆಚ್ಚಿನವಾಗಿದ್ದಿರಬಹುದು. ಲಕ್ಕುಂಡಿಯಲ್ಲೂ ಸೂಡಿಯಲ್ಲೂ ಬೆಳ್ಳಿ ಗಮ್ಮಟವಿತ್ತು (ಬೆಳ್ಳಿಯ ನಾಣ್ಯಗಳ ಕಮ್ಮಟ). (ಬಿ.ಆರ್.ಜಿ.)

ಗದ್ಯಾಣವೆಂಬುದು ಚಿನ್ನದ ನಾಣ್ಯ. ಗದ್ಯಾಣಗಳಲ್ಲಿ ವಿವಿಧ ರೀತಿಗಳಿದ್ದುವು. ಟಂಕಶಾಲೆಯ ಹೆಸರನ್ನು ಗದ್ಯಾಣದ ಜೊತೆ ಸೇರಿಸುವುದು ಈ ಕಾಲದಲ್ಲಿ ಪ್ರಾರಂಭವಾಯಿತು. ಲೊಕ್ಕಿ ಅಥವಾ ಲೊಕ್ಕಿಗುಂಡಿ ಗದ್ಯಾಣವೆಂಬುದು ಲೊಕ್ಕಿಗುಂಡಿಯಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಾದ ಗದ್ಯಾಣ. ಕಟಕ ಗದ್ಯಾಣ, ಕಟಕ ಪ್ರಿಯ ಗದ್ಯಾಣ, ವರ್ತಕ ಲೊಕ್ಕಿ ಗದ್ಯಾಣ ಮುಂತಾದವುಗಳು ಚಾಳುಕ್ಯರ ಶಾಸನಗಳಲ್ಲಿ ಕಾಣಬರುತ್ತವೆ. ಇದೇ ರೀತಿಯಲ್ಲಿ ನವಿಲಚ್ಚಿನ ಪೊನ್, ಲೊಕ್ಕಿ ಪೊನ್ ಮುಂತಾದ ನಾಣ್ಯಗಳೂ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಇವುಗಳ ಖಚಿತ ಸ್ವರೂಪವೇನೆಂಬುದು ತಿಳಿದಿಲ್ಲ. ಸೂಡಿ ಎಂಬಲ್ಲಿ ಒಂದು ಟಂಕಸಾಲೆ ಇತ್ತು. ಕಮ್ಮಟ, ಕಮ್ಮಟದ ಆಣೆ, ಅಚ್ಚು, ಅಚ್ಚಿನ ಮೊಳೆ, ಉಂಡಿಗೆ ಮುಂತಾದ ಪದಗಳು ಶಾಸನಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. ಇದರಿಂದ ನಾಣ್ಯಗಳನ್ನು ಅಚ್ಚು ಮಾಡುವ ಕಾರ್ಯ ವ್ಯವಸ್ಥಿತವಾಗಿ ಸಾಗುತ್ತಿತ್ತು ಎಂದು ತಿಳಿದುಬರುತ್ತದೆ. ಕಲ್ಯಾಣದ ಚಾಳುಕ್ಯರ ನಾಣ್ಯಗಳು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿವೆ. ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಕೋಡೂರು ಎಂಬಲ್ಲಿ ದೊರಕಿರುವ ಚಾಳುಕ್ಯರ ನಾಣ್ಯರಾಶಿಯೊಂದು ಬಹು ಶ್ರೀಮಂತವಾದುದು. ಇದರಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚು ನಾಣ್ಯಗಳು ಮಡಕೆಯಲ್ಲಿ ದೊರಕಿದವು. ಇದರ ಆಧಾರದ ಮೇಲೆ ಚಾಳುಕ್ಯರ ನಾಣ್ಯಗಳ ವಿಷಯಗಳಲ್ಲಿ ವಿಶೇಷ ಮಾಹಿತಿ ದೊರಕಿವೆ.

ಈ ಕಾಲದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಮಾತ್ರ ಬೆಳಕಿಗೆ ಬಂದಿವೆ. ಇವು ಮೊಳೆಯಿಂದ ಒತ್ತಿದ ಚಿಹ್ನೆಗಳುಳ್ಳ 'ಪಂಚ್' ನಾಣ್ಯಗಳು. ದುಂಡನೆಯ ಆಕಾರದ ಈ ನಾಣ್ಯಗಳಿಗೆ ಮುಮ್ಮುಖದಲ್ಲಿ ಮಾತ್ರ ಬರೆಹವುಂಟು. ಹಿಮ್ಮುಖ ಖಾಲಿಯಾಗಿ ಇರುತ್ತದೆ. ಸಾಮಾನ್ಯವಾಗಿ ಈ ನಾಣ್ಯಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರ, ರಾಜನ ಹೆಸರು, ಸೂರ್ಯ, ಚಂದ್ರ, ಆನೆ, ಸಿಂಹ ಮುಂತಾದವು ಮುದ್ರಿತವಾಗಿರುತ್ತವೆ. ತೆಳುವಾದ ನಾಣ್ಯದ ಮೇಲೆ ಈ ರೀತಿ ಅನೇಕ ಪಂಚ್‌ಗಳು ಮಾಡಲ್ಪಟ್ಟಿರುವುದರಿಂದ ಇವುಗಳು ಬಟ್ಟಲಾಕಾರದಲ್ಲಿರುತ್ತವೆ.

ತ್ರೈಲೋಕ್ಯಮಲ್ಲ ಒಂದನೆಯ ಸೋಮೇಶ್ವರನ ಚಿನ್ನದ ನಾಣ್ಯಗಳು ಸುಮಾರು ಒಂದಂಗುಲ ವ್ಯಾಸದವು. ಇವುಗಳ ತೂಕ 58 ಗ್ರೇನ್‌ಗಳು. ಇವುಗಳಲ್ಲಿ ಒಂಬತ್ತು ಪಂಚ್ ಮುದ್ರಿತ ಚಿಹ್ನೆಗಳಿವೆ; ಐದು ಸಿಂಹ, ಎರಡು ಶ್ರೀ ಎಂಬ ಕನ್ನಡ ಅಕ್ಷರ, ಮಿಕ್ಕೆರಡು ತ್ರೇಲೋ ಮತ್ತು ಮಲ್ಲ ಎಂಬ ಕನ್ನಡ ಬರೆಹ. ಇಮ್ಮಡಿ ಸೋಮೇಶ್ವರ ಭುವನೈಕಮಲ್ಲನ ನಾಣ್ಯಗಳಲ್ಲಿಯೂ ಒಂಬತ್ತು ಪಂಚ್‌ಗಳಿವೆ. ಅವುಗಳಲ್ಲಿ ಐದು ಸಿಂಹ, ಎರಡು ಶ್ರೀ ಎಂಬ ಅಕ್ಷರ, ಮಧ್ಯದಲ್ಲಿ ಕಮಲದ ಹೂವು, ಅದರ ಮೇಲೆ ಭುವನೈಕ ಎಂಬ ಬರೆಹ ಕಾಣುತ್ತದೆ. ಎರಡನೆಯ ಜಯಸಿಂಹನ ಚಿನ್ನದ ನಾಣ್ಯಗಳು ಸುಮಾರು 58 ಗ್ರೇನ್ ತೂಗುತ್ತವೆ. ಇವುಗಳ ವ್ಯಾಸ 0.6" ರಿಂದ 0.8". ಒಂದು ನಮೂನೆಯ ನಾಣ್ಯದಲ್ಲಿ ಒಂಬತ್ತು ಪಂಚ್‌ಗಳಿವೆ. ಇದರಲ್ಲಿ ಐದು ಸಿಂಹ, ಎರಡು ಶ್ರೀ ಅಕ್ಷರ, ಜಯ ಮತ್ತು ದೇವ ಎಂಬ ಕನ್ನಡ ಬರೆಹಗಳಿವೆ. ಇದೇ ರೀತಿಯ ಕೆಲವು ನಾಣ್ಯಗಳಲ್ಲಿ ಸಿಂಹಗಳಿವೆ ಬದಲಾಗಿ ಹಂದಿ ಅಥವಾ ಆನೆ ಇರುವುದೂ ಉಂಟು. 2ನೆಯ ಜಗದೇಕಮಲ್ಲನ ಚಿನ್ನದ ನಾಣ್ಯಗಳು ಅನೇಕ ನಮೂನೆಗಳಲ್ಲಿ ದೊರಕಿವೆ. ಕೋಡೂರು ನಾಣ್ಯರಾಶಿಯಲ್ಲಿ 67 ರಿಂದ 69 ಗ್ರೇನ್ ತೂಕದ ನಾಣ್ಯಗಳಿವೆ. ಇವುಗಳ ಮೇಲೆ ಜಗ, ಜಗದೇ ಅಥವಾ ಜಗದೇಕಮಲ್ಲ ಎಂಬ ಕನ್ನಡ ಲಿಪಿಯ ಬರೆಹಗಳು ಪಂಚ್ ಮಾಡಲ್ಪಟ್ಟಿವೆ. ನಾಣ್ಯದ ಮಧ್ಯಭಾಗದಲ್ಲಿ ದೇವಾಲಯದ ಗೋಪುರದ ಚಿತ್ರವಿದೆ. ಇದರ ಎರಡು ಕಡೆಗಳಲ್ಲಿಯೂ ಶ್ರೀ ಎಂಬ ಅಕ್ಷರವಿದೆ. ಕೆಲವು ನಾಣ್ಯಗಳಲ್ಲಿ ಸ್ವಸ್ತಿಕ, ಚೌರಿ, ಶಂಖಗಳೂ ಕಾಣಬರುತ್ತವೆ.

ಕೋಡೂರು ನಾಣ್ಯರಾಶಿಯಲ್ಲಿ ಕಾಣಬರುವ ನಾಣ್ಯವೊಂದು ಅಯ್ಯಣನಿಗೆ ಸೇರಿದ್ದಿರಬಹುದೆಂದೂ ಊಹೆ. ಇದರಲ್ಲಿ ಯಣ ಎಂಬ ಕನ್ನಡ ಬರೆಹವಿದೆ. ಮತ್ತೊಂದು ನಾಣ್ಯದಲ್ಲಿ ದಶವರ್ಮ ಎಂಬ ಬರೆಹವಿದೆ. ಈ ನಾಣ್ಯ ಚಾಳುಕ್ಯ ರಾಜಕುಮಾರ ದಶವರ್ಮನದ್ದಿರಬೇಕೆಂದು ಹೇಳಬಹುದು. ಆರನೆಯ ವಿಕ್ರಮಾದಿತ್ಯನ ರಾಣಿ ಲಕ್ಷ್ಮಾದೇವಿಯದೆಂದು ಹೇಳಲಾದ ಕೆಲವು ನಾಣ್ಯಗಳು ದೊರಕಿವೆ. ಇವು ಚಾಳುಕ್ಯ ನಾಣ್ಯಗಳಂತೆಯೇ ಇವೆ. ಮಧ್ಯದಲ್ಲಿ ಕಮಲದ ಹೂವು. ಎರಡು ಪಕ್ಕಗಳಲ್ಲಿ ಶ್ರೀ ಎಂಬ ಅಕ್ಷರ, ಕನ್ನಡ ಲಿಪಿಯಲ್ಲಿ ಶ್ರೀ ಲಷುಮಾ ಎಂಬ ಬರೆಹ ಮತ್ತು ಶಂಖ ಈ ನಾಣ್ಯಗಳಲ್ಲಿ ಕಾಣಬರುತ್ತವೆ. ಭುಜಬಲ ಎಂಬ ಬರೆಹವಿರುವ ಕೆಲವು ನಾಣ್ಯಗಳು ಕಲ್ಯಾಣದ ಚಾಳುಕ್ಯರದೆಂದು ಕೆಲವರ ಅಭಿಪ್ರಾಯ.

ರಾಯಗಜಕೇಸರಿ ಮತ್ತು ದಾಯಗಜಕೇಸರಿ ಎಂಬ ಕನ್ನಡ ಬರೆಹವುಳ್ಳ ನಾಣ್ಯಗಳು ವಿಶೇಷವಾಗಿ ಆಂಧ್ರಪ್ರದೇಶದಲ್ಲಿ ದೊರಕಿವೆ. ಇವು ಚಾಳುಕ್ಯರ ಸಾಮಂತರ ನಾಣ್ಯಗಳು ಎಂದು ಭಾವಿಸಲಾಗಿದೆ. ರಾಮದುರ್ಗದಲ್ಲಿ ದೊರಕಿದ ಬರಮಭೂಪಾಲನ ನಾಣ್ಯಗಳಲ್ಲಿ ಶ್ರೀ ನಿಗಲಂಕಮಲ್ಲ ದಂಡಿನಗೋಪ ಎಂಬ ಬರೆಹವಿದೆ. ಇವನು ಚಾಳುಕ್ಯ ಸಾಮಂತ. ಸಾತಾರಾ ಜಿಲ್ಲೆಯ ವಲ್ಲೆ ಎಂಬಲ್ಲಿ ದೊರಕಿರುವ ನಾಣ್ಯಗಳಲ್ಲಿ ಕನ್ನಡ ಬರೆಹವಿರುವುದರಿಂದ - ಇವು ಚಾಳುಕ್ಯರ ಸಾಮಂತರವೆಂದು ಭಾವಿಸಲಾಗಿದೆ. (ಎ.ವಿ.ಎನ್.)

### ಇತರ ಚಾಳುಕ್ಯ ಶಾಖೆಗಳು

ಬಾದಾಮಿಯ ಚಳುಕ್ಯರ ಆಳಿಕೆ ಕೊನೆಗೊಂಡು, ಕರ್ನಾಟಕದಲ್ಲಿ ರಾಷ್ಟ್ರಕೂಟರ ಆಳಿಕೆ ಆರಂಭವಾದಾಗ ಚಾಳುಕ್ಯರು ಸ್ವಲ್ಪ ಕಾಲ ತೆರೆಯ ಮರೆಯಲ್ಲಿದ್ದರು. ಆಗ ಈ ಮನೆತನದ ಹಲವಾರು ಶಾಖೆಗಳು, ಬೇರೆ ಬೇರೆ ಕಡೆ ಸಣ್ಣ ಪುಟ್ಟ ಅಧಿಕಾರಗಳನ್ನು ಹೊಂದಿದ್ದು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವು. ವೆಂಗಿಯ ಚಾಳುಕ್ಯ, ವೇಮುಲವಾಡ ಚಾಳುಕ್ಯ, ಗುಜರಾತಿನ ಚಾಳುಕ್ಯ ಈ ವಂಶಗಳು ಸಹ ಈ ಮನೆತನಕ್ಕೆ ನೇರವಾಗಿ ಸಂಬಂಧಿಸಿದವು. ಕರ್ನಾಟಕದ ಹೊರಗೆ ಆಳಿದ ಚಾಳುಕ್ಯವಂಶದ ಶಾಖೆಗಳು ಅಲ್ಲದೆ ಕರ್ನಾಟಕದಲ್ಲಿದ್ದ ಕೆಲವು ಚಾಳುಕ್ಯ ಶಾಖೆಗಳು, ವ್ಯಕ್ತಿಗಳು ಶಾಸನಗಳ ಮೂಲಕ ಬೆಳಕಿಗೆ ಬಂದಿದ್ದಾರೆ.

ಚಾಳುಕ್ಯ ವಂಶಕ್ಕೆ ಸೇರಿದ ಪರಹಿತರಾಜನೆಂಬಾತ ಬೆಳಗಾಂವಿ ಜಿಲ್ಲೆಯ ಕೋಟೂರು ಗ್ರಾಮದ ಶಾಸನವೊಂದರಲ್ಲಿ ಕಾಣಿಸಿಕೊಂಡಿದ್ದಾನೆ. ಶಾಸನದ ಕಾಲ ಸು.9ನೆಯ ಶತಮಾನ. ರಾಷ್ಟ್ರಕೂಟ ಪ್ರಭೂತವರ್ಷನ 812ರ ತಾಮ್ರಶಾಸನದಲ್ಲಿ ಚಾಳುಕ್ಯಾನ್ವಯಕ್ಕೆ ಸೇರಿದ ವಿಮಲಾದಿತ್ಯನೆಂಬಾತ ಹೆಸರಿಸಲ್ಪಟ್ಟಿದ್ದಾನೆ. ಈತನ ತಂದೆ ರಾಜನ್ ಎಂದು ಬಿರುದಾಂಕಿತನಾದ ಯಶೋವರ್ಮ; ತಾತ ಬಲವರ್ಮ ನರೇಂದ್ರ. ಗಂಗಮಂಡಲದ ಅಧಿರಾಜನೆನಿಸಿದ ಚಾಕಿರಾಜ ಈತನ ಸೋದರಮಾವ. ಈತ ಕುಣುಂಗಿಲ ದೇಶವನ್ನು ಆಳುತ್ತಿದ್ದ.

ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ 951ರ ಹಿರೇಕೋಗಿಲೂರಿನ ತಾಮ್ರಶಾಸನದಲ್ಲಿ ಅರಸನ ಮಾಂಡಲಿಕನಾಗಿ ಕದಂಬಳಿಗೆ 1000 ಪ್ರಾಂತ್ಯವನ್ನು ಆಳುತ್ತಿದ್ದ ಚಾಳುಕ್ಯ ಕುಲದ ರಾಜಾದಿತ್ಯನ ವಂಶಾವಳಿಯನ್ನು ಕೊಟ್ಟಿದೆ. ಅದು ಹೀಗಿದೆ.

ಚಳುಕಿ
|
(ಆತನ ವಂಶದಲ್ಲಿ)
|
ಅವನಿಯಮ್ಮ
|
ಉತ್ತವಗುಳ್ಳ
|
ನಿಜಗಲಿ I — ಚಂದ್ರಾದಿತ್ಯ — ವ್ಯಾಳಕಂಚಿಗ
|
ಚಂದ್ರಾದಿತ್ಯ
|
ಇರುಗಮ್ಮ
|
ರಾಜಾದಿತ್ಯ I
|
ನಿಜಗಲಿ II
|
ಕಚ್ಚೆಗರಾಜ
|
ರಾಜಾದಿತ್ಯ II

ಮೊದಲನೆಯ ರಾಜಾದಿತ್ಯನು ಕಾಕಲವರ್ಷನ ಮಗಳನ್ನು ಮದುವೆಯಾದನೆಂದಿದೆ. ಈತ ಮೇಡೂರಿನಲ್ಲಿ ದೊರೆತ ಮುಮ್ಮಡಿ ಗೋವಿಂದನ ಶಾಸನದಲ್ಲಿ ಉಕ್ತನಾದ ಪರಮೇಶ್ವರನಿಯೋಗಿ ನನ್ನಿಚಳುಕಿ ಎನಿಸಿಕೊಂಡ ರಾಜಾದಿತ್ಯನಾಗಿರಬಹುದು. ಹಿರೇಕೋಗಿಲೂರಿನ ಶಾಸನದಲ್ಲಿ ಇಮ್ಮಡಿ ರಾಜಾದಿತ್ಯನನ್ನು ನನ್ನಿಕೆ ಎಂದು ವರ್ಣಿಸಲಾಗಿದೆ. ಈ ಶಾಸನದಲ್ಲಿ ಚಾಳುಕ್ಯರ ಮೂಲವನ್ನು ಕುರಿತು ಒಂದು ಪೌರಾಣಿಕ ಕಥೆ ಹೇಳಿದೆ. ದ್ರೋಣನ ಮಗನಾದ ಅಶ್ವತ್ಥಾಮ ಸಂಧ್ಯಾಸಮಯದಲ್ಲಿ ಮಂತ್ರಪೂತವಾದ ಗಂಗಾಜಲವನ್ನು ಬೊಗಸೆಯಿಂದ ಚೆಲ್ಲಿದಾಗ ಚಳುಕಿ ಎಂಬ ವೀರ ಹುಟ್ಟಿದನೆಂದೂ ಅವನು ಶತ್ರುಗಳನ್ನು ಹೊಡೆದೋಡಿಸಬಲ್ಲವನಾದ ಕಾರಣ (ಚಾಳಯತಿ) ಅವನಿಗೆ ಆ ಹೆಸರು ಬಂತೆಂದೂ ಹೇಳಿದೆ. ಈ ತಾಮ್ರ ಶಾಸನದ ಮುದ್ರೆಯಲ್ಲಿ ವರಾಹದ ಚಿತ್ರವಿದೆ.

ಮೈಸೂರು ಜಿಲ್ಲೆಯ ವರುಣ ಗ್ರಾಮದಲ್ಲಿ ದೊರೆತ ಶಾಸನವೊಂದರಲ್ಲಿ ಮಹಾಸಾಮಂತ ನರಸಿಂಹನನ್ನು ಚಾಳುಕ್ಯ ವಂಶಲಲಾಮನೆಂದು ಕರೆದಿದೆ. ಈತನ ಪತ್ನಿ ಗಾವಿಲಬ್ಬರಸಿ. ಇದೇ ಗ್ರಾಮದ ಇನ್ನೂ ಕೆಲವು ಶಾಸನಗಳಲ್ಲಿ ಚಾಳುಕ್ಯಾನ್ವಯಕ್ಕೆ ಸೇರಿದ ಗೊಗ್ಗಿ ಎಂಬಾತನ ಉಲ್ಲೇಖವಿದೆ.

ಚಿತ್ರದುರ್ಗ ಜಿಲ್ಲೆಯ ಬೇವಿನಹಳ್ಳಿಯ ಶಾಸನದಲ್ಲಿ ಚಾಳುಕ್ಯ ಸರ್ವಜ್ಞನೆಂದು ಕರೆಯಲಾದ ಪಂದಿಗನ ವಂಶಾವಳಿ ಈ ರೀತಿ ಇದೆ:

ವಿಕ್ರಮಾದಿತ್ಯ ನೃಪ
- ಪಿಳ್ಳಿಮಯ್ಯ
  - ಕೀರ್ತಿಯುತ
  - ಕಲಿ ಕೊಂಕಣದೇವ
    - ರೇವಣ
      - ರಾಜಭೂಭುಜ
        - ಚಿಕ್ಕಿಯಣ್ಣ
          - ಗೊಗ್ಗಿ
            - ಶೂದ್ರಕಾಂಕ
              - ಪಂದಿಗ (ಪತ್ನಿ: ಜಕ್ಕಿ ಸುಂದರಿ)

ಇದೇ ಜಿಲ್ಲೆಯ ಇನ್ನೂ 3-4 ಶಾಸನಗಳಲ್ಲಿ ಪಂದಿಗನ ಹೆಸರು ಕಾಣಸಿಗುತ್ತದೆ. (ಬಿ.ಆರ್.ಜಿ.)

**ಚಿಂಚಲಿ :** ಬೆಳಗಾಂವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಒಂದು ಗ್ರಾಮ ಮತ್ತು ಯಾತ್ರಾಸ್ಥಳ. ರಾಯಭಾಗ ಪಟ್ಟಣದಿಂದ 10ಕಿಮೀ ದೂರದಲ್ಲಿ ಕೃಷ್ಣಾನದಿಯ ದಡದಲ್ಲಿದೆ. ಜನಸಂಖ್ಯೆ 15,000. ಮಹಾರಾಷ್ಟ್ರದ ಗಡಿಯ ಅಂಚಿನಲ್ಲಿರುವ ಈ ಊರನ್ನು ಕೊಲ್ಲಾಪುರ ಸಂಸ್ಥಾನಿಕರಿಂದ ದೇಸಾಯಿ ಮನೆತನಕ್ಕೆ ಇನಾಮು ಗ್ರಾಮವಾಗಿ ನೀಡಲಾಗಿತ್ತು. ಮಾಯಕ್ಕದೇವಿ ಈ ಗ್ರಾಮದ ಪ್ರಸಿದ್ಧ ದೇವತೆ. ಈ ಕಾರಣದಿಂದಾಗಿ ಈ ಊರಿಗೆ ಮಾಯಕ್ಕನ ಚಿಂಚಲಿ ಎಂಬ ಹೆಸರೂ ಇದೆ. ಈ ದೇವತೆಗೆ ಮಹಾರಾಷ್ಟ್ರ ಹಾಗೂ ಕರ್ನಾಟಕದ ಭಕ್ತರು ನಡೆದುಕೊಳ್ಳುತ್ತಾರೆ. ಚಿಕ್ಕಗುಡಿಯಾಗಿದ್ದ ಮಾಯಕ್ಕನ ದೇವಾಲಯವನ್ನು ಈಗ ನವೀಕರಿಸಲಾಗಿದೆ. ಬಿಳಿಯ ಕಲ್ಲಿನಲ್ಲಿ ನಿರ್ಮಿಸಲಾದ ದೊಡ್ಡ ಶಿಖರ ಆಕರ್ಷಕವಾಗಿದೆ. ದೇವಾಲಯದ ವಾಸ್ತುವಿನ್ಯಾಸ ಚಾಳುಕ್ಯ ಶೈಲಿಯಲ್ಲಿದೆ. ಮುಖಮಂಟಪವನ್ನು ಮರದಿಂದ ನಿರ್ಮಿಸಲಾಗಿದ್ದು ಕೆತ್ತನೆಯ ಕೆಲಸ ಆಕರ್ಷಕವಾಗಿದೆ. ಪೂರ್ವಾಭಿಮುಖದ ಮಹಾದ್ವಾರ 50 ಅಡಿ ಎತ್ತರವಿದೆ. ಗರ್ಭಗುಡಿಯಲ್ಲಿ ಪಶ್ಚಿಮಕ್ಕೆ ಮುಖ ಮಾಡಿದ, ಕರಿಕಲ್ಲಿನಲ್ಲಿ ನಿರ್ಮಿಸಿದ ಸು.3ಅಡಿ ಎತ್ತರದ ಆಕರ್ಷಕ ಮಾಯಕ್ಕನ ಮೂರ್ತಿ ಇದೆ. ದೀಪಾವಳಿ, ಕಾರಹುಣ್ಣಿಮೆ, ನೂಲಹುಣ್ಣಿಮೆಗಳಲ್ಲಿ ದೇವಿಯ ಜಾತ್ರೆ ಜರುಗಿದರೂ ಮಾಘ ಹುಣ್ಣಿಮೆಯಲ್ಲಿ ಜರಗುವ ಜಾತ್ರೆ ದೊಡ್ಡದು. ಹಿಂದೆ ಈ ಜಾತ್ರೆಗೆ ಸು.35,000 ದಷ್ಟು ಭಕ್ತಾದಿಗಳು ಸೇರುತ್ತಿದ್ದರೆಂದು ತಿಳಿದುಬರುತ್ತದೆ. ಈ ಜಾತ್ರೆ ಮತ್ತು ಉತ್ಸವ ಏಳು ದಿವಸಗಳ ಕಾಲ ನಡೆಯುತ್ತದೆ. ಜಾನುವಾರು ಜಾತ್ರೆಯೂ ಈ ಸಂದರ್ಭದಲ್ಲಿ ಸೇರುತ್ತದೆ.

ಊರಲ್ಲಿ ಒಂದು ಕಲ್ಯಾಣಿ ಇದೆ. ಇದರ ಸುತ್ತ ಮಹಾದೇವ, ದತ್ತಾತ್ರೇಯ, ವೆಂಕೋಬನ ಸಣ್ಣ ಗುಡಿಗಳಿವೆ. ಇತ್ತೀಚೆಗೆ ಊರ ಮಧ್ಯದಲ್ಲಿ ಮಹಾವೀರ ಬಸದಿಯೊಂದನ್ನು ನಿರ್ಮಿಸಲಾಗಿದೆ. (ಆರ್.ಎಂ.)

**ಚಿಂಚೋಳಿ :** ಗುಲ್ಬರ್ಗ ಜಿಲ್ಲೆಯ ಈಶಾನ್ಯ ತುದಿಯಲ್ಲಿರುವ ಒಂದು ತಾಲ್ಲೂಕು; ಆ ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕು ಯಾದಗಿರಿ ಉಪವಿಭಾಗಕ್ಕೆ ಸೇರಿದೆ. ಹಿಂದೆ ಈ ತಾಲ್ಲೂಕು ಪೂರ್ಣವಾಗಿ ಆಲಂ ಅಲಿ ಖೈರೋಜ್ ಎಂಬ ನವಾಬನ ಜಾಗೀರಿಯಾಗಿತ್ತು. ಉತ್ತರದಲ್ಲಿ ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕು ಮತ್ತು ಆಂಧ್ರ ಪ್ರದೇಶ, ದಕ್ಷಿಣದಲ್ಲಿ ಸೇಡಂ ತಾಲ್ಲೂಕು, ಪಶ್ಚಿಮದಲ್ಲಿ ಚಿತ್ತಾಪುರ ಮತ್ತು ಗುಲ್ಬರ್ಗ ತಾಲ್ಲೂಕುಗಳು, ಪೂರ್ವದಲ್ಲಿ ಆಂಧ್ರ ಪ್ರದೇಶ ಈ ತಾಲ್ಲೂಕನ್ನು ಸುತ್ತುವರೆದಿವೆ. ಯಾದಗಿರಿಯ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ ಐನಾಪುರ, ಕೂಡ್ಲಿ, ಚಿಂಚೋಳಿ ಮತ್ತು ಸುಳೇಪೇಟೆ ಎಂಬ ನಾಲ್ಕು ಕಂದಾಯದ ವಲಯಗಳಿದ್ದು 145 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1556.3ಚ.ಕಿಮೀ. ಜನಸಂಖ್ಯೆ 2,23,477.

ಸಮುದ್ರಮಟ್ಟದಿಂದ ಸಾಮಾನ್ಯವಾಗಿ 304.8ಮೀ.-609.6ಮೀ. ಎತ್ತರದಲ್ಲಿರುವ ಈ ತಾಲ್ಲೂಕಿನ ಭಾಗ ಸ್ಥೂಲವಾಗಿ ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಚಿಂಚೋಳಿ ತಾಲ್ಲೂಕಿನ ತಳಶಿಲೆ ಹೆಚ್ಚು ಮಟ್ಟಿಗೆ ಟ್ರಾಪ್, ಪಶ್ಚಿಮ ಭಾಗದಲ್ಲಿ ಈ ಟ್ರಾಪ್‌ನ ಬೆಟ್ಟಗಳ ಮೇಲೆ ಜಂಬುಕಲ್ಲಿರುವುದೂ ಉಂಟು. ಇದರಲ್ಲಿ ಲಿಮೋನೈಟ್, ಹೆಮಟೈಟ್‌ಗಳು ಇದ್ದು ಇವು ಹಿಂದೆ ಸ್ಥಳೀಯವಾಗಿ ಕಬ್ಬಿಣದ ಅದಿರಾಗಿ ಉಪಯೋಗವಾಗುತ್ತಿತ್ತು. ಚಿಂಚೋಳಿ ಊರಿನ ಸುತ್ತಮುತ್ತಲಲ್ಲಿ ಟ್ರಾಪ್ ಪದರಗಳ ನಡುವೆ ಚರ್ಟ್‌ಕಲ್ಲಿನ ಹರಹುಗಳೂ ಅದರ ಮೇಲೆ ಎರೆಮಣ್ಣು ಕಂಡುಬರುತ್ತವೆ. ಮಣ್ಣು ಅಷ್ಟೇನೂ ಫಲವತ್ತಾದ್ದಲ್ಲ. ಜಂಬು ಮತ್ತು ಕಪ್ಪು ಮಣ್ಣು ಹೆಚ್ಚಾಗಿಯೂ ಅಲ್ಲಲ್ಲಿ ಚೌಳು ಮತ್ತು ಸುಣ್ಣಕಲ್ಲಿನ ಪ್ರದೇಶಗಳೂ ಇವೆ. ಮಳೆ ಕಡಿಮೆ, ವರ್ಷಕ್ಕೆ ಸರಾಸರಿ 783.58ಮಿಮೀ. ಈ ತಾಲ್ಲೂಕಿನ ಮುಖ್ಯ ನದಿ ಮುಲ್ಲಾಮಾರಿ. ಈ ತಾಲ್ಲೂಕಿನಲ್ಲಿ ಒಟ್ಟು 88ಕಿಮೀ ದೂರ ಹರಿಯುವ ಈ ನದಿ ವಾಯುವ್ಯದಲ್ಲಿ ತಾಲ್ಲೂಕನ್ನು ಪ್ರವೇಶಿಸಿ, ಚಿಂಚೋಳಿ ಪಟ್ಟಣದವರೆಗೂ ಪೂರ್ವಾಭಿ ಮುಖವಾಗಿ ಹರಿದು ಅನಂತರ ದಕ್ಷಿಣಕ್ಕೆ ತಿರುಗಿ ಮುಂದುವರೆದು ಕಾಗಿಣಾ ನದಿಯನ್ನು ಸೇರುತ್ತದೆ.

ಈ ತಾಲ್ಲೂಕಿನ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ 70,087 ಎಕರೆ ಅರಣ್ಯ ಪ್ರದೇಶವಿದೆ. ಇಡೀ ಗುಲ್ಬರ್ಗ ಜಿಲ್ಲೆಯ ಅರಣ್ಯದಲ್ಲಿ ಸುಮಾರು ಅರ್ಧಭಾಗ ಇಲ್ಲಿದೆ. ಇಲ್ಲಿಯದು ಮುಖ್ಯವಾಗಿ ಪರ್ಣಪಾತಿ ಅರಣ್ಯ, ತೇಗ, ಬೀಟೆ, ಕರಿ ಮತ್ತಿ, ಹುರಗಲು ಮುಖ್ಯ ಮರಗಳು. ಬೀಡಿ ಎಲೆ, ಗಣಜಲು ಹುಲ್ಲು, ಜೇನು ಹೇರಳವಾಗಿ ದೊರಕುತ್ತವೆ. ಲಂಗೂರ್ ಕೋತಿ, ಜಿಂಕೆ, ನರಿಗಳಲ್ಲದೆ ಚಿರತೆಗಳೂ ಕರಡಿಗಳೂ ಇವೆ. ಹಿಂದೆ ಹುಲಿಗಳಿದ್ದುವು. ಈಗ ಅವು ಇಲ್ಲವೇ ಇಲ್ಲವೆನ್ನಬಹುದು. ತೋಳ, ಕಿರುಬ, ಕಾಡುನಾಯಿಗಳೂ ಉಂಟು.

ತಾಲ್ಲೂಕಿನಲ್ಲಿ ಜೋಳ, ಬಾಜ್ರಾ, ಗೋದಿ, ಸೇಂಗ, ದ್ವಿದಳಧಾನ್ಯಗಳು, ಸಜ್ಜೆ, ನವಣೆ ಇವುಗಳ ಜೊತೆಗೆ ಬತ್ತ, ಮೆಣಸಿನಕಾಯಿ, ಈರುಳ್ಳಿ, ಕುಸುಬೆ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ಮುಲ್ಲಾಮಾರಿ ನದಿಗೆ ಕಾರಕಮುಖಿ ಹಳ್ಳಿಯ ಹತ್ತಿರ ಅಣೆಕಟ್ಟು ಕಟ್ಟಿ ವ್ಯವಸಾಯಕ್ಕೆ ನೀರೊದಗಿಸಿಕೊಳ್ಳಲಾಗುತ್ತಿದೆ. ಚಂದ್ರಂಪಳ್ಳಿ ಜಲಾಶಯ ಈ ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯ ಒದಗಿಸಿದೆ.

ಚಿಂಚೋಳಿ ತಾಲ್ಲೂಕಿನ ಮುಖ್ಯ ಪ್ರದೇಶಗಳಲ್ಲಿ ದೇಗಲಮಡಿ ಒಂದು. ಇಲ್ಲಿ ವೀಳೆಯದೆಲೆಯನ್ನು ಹೇರಳವಾಗಿ ಬೆಳೆದು ಬೀದರ್, ಗುಲ್ಬರ್ಗ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ಕಳುಹಿಸುತ್ತಾರೆ. ಇಲ್ಲಿ

ಪುರಾತನ ಜೈನ ದೇವಾಲಯಗಳಿವೆ. ಕೇಶವಾರದಲ್ಲಿ ಉಣ್ಣೆಯ ಕಂಬಳಿಗಳು ತಯಾರಾಗುತ್ತವೆ. ನಿಡಗುಂದಿಯ ಮಣ್ಣಿನ ಮಡಕೆ ಕುಡಿಕೆಗಳು ಗುಲ್ಬರ್ಗಕ್ಕೆ ನಿರ್ಯಾತವಾಗುತ್ತವೆ. ಚಿಮ್ಮನ ಚೋಡದಲ್ಲಿ ಹೊಗೆಸೊಪ್ಪು ಹೆಚ್ಚು ಬೆಳೆಯುವುದರಿಂದ ಬೀಡಿ ಕಟ್ಟುವ ಉದ್ಯಮಕ್ಕೆ ಹೆಸರಾಗಿದೆ. ಈ ತಾಲ್ಲೂಕಿನ ಸುಲೇಪೇಟೆ ಒಂದು ದೊಡ್ಡ ಗ್ರಾಮ, ಕಂಬಳಿಗಳ ಮಾರುಕಟ್ಟೆ, ಬೀಡಿ ಕಟ್ಟುವ ಕೈಗಾರಿಕೆಗೂ ಪ್ರಸಿದ್ಧವಾಗಿದೆ. ತೊರವಿಯಲ್ಲಿ ಚೌಳು ಮಣ್ಣನ್ನು (ಫುಲ್ಲರ್ಸ್ ಅರ್ತ್) ಸಂಸ್ಕರಿಸುವ ಕಾರ್ಖಾನೆಯಿದೆ. (ಬಿ.)

ಚಿಂಚೋಳಿ ಈ ತಾಲ್ಲೂಕಿನ ಮುಖ್ಯ ಪಟ್ಟಣ ಮತ್ತು ಆಡಳಿತ ಕೇಂದ್ರ. ಇದು ಮುಲ್ಲಾಮಾರಿ ನದಿಯ ದಡದಲ್ಲಿದೆ. ಜನಸಂಖ್ಯೆ 17,158. ಗಿರಿಕಾನನ ಕಣಿವೆಗಳಿಂದ ಸುತ್ತುವರಿಯಲ್ಪಟ್ಟ ಚಿಂಚೋಳಿಯದು ರಮ್ಯವಾದ ಸನ್ನಿವೇಶ. ಚಿಂಚೋಳಿ ಪುರಸಭೆಯ ಆಡಳಿತಕ್ಕೊಳಪಟ್ಟಿದೆ.

ರಾಜ್ಯದ ಇತರ ಭಾಗಗಳಿಂದ ಚಿಂಚೋಳಿ ತಲುಪಬೇಕಾದರೆ ತಾಂಡೂರು ನಿಲ್ದಾಣಕ್ಕೆ ರೈಲಿನಲ್ಲಿ ಹೋಗಿ ಅಲ್ಲಿಂದ ಬಸ್ ಮೂಲಕ 30ಕಿಮೀ ಪ್ರಯಾಣ ಮಾಡಬೇಕಾಗುತ್ತಿತ್ತು. ಸೇಡಂ ತಾಲ್ಲೂಕಿನಿಂದ ನೇರವಾದ ರಸ್ತೆ ಸಿದ್ಧವಾಗಿರುವುದರಿಂದ ಈಗ ನೇರವಾಗಿ ಪ್ರಯಾಣಿಸಬಹುದಾಗಿದೆ.

ಚಿಂಚೋಳಿ ಪಟ್ಟಣದಲ್ಲಿ ಪ್ರಸಿದ್ಧವಾದ ದರ್ಗಾ ಒಂದುಂಟು. ರಾಜನ ಅರಮನೆ ಇನ್ನೊಂದು ಪ್ರೇಕ್ಷಣೀಯ ಕಟ್ಟಡ. ಇಲ್ಲಿನ ರಾಯಿಮಾನ್‌ಗಡ ದೇವಸ್ಥಾನಕ್ಕೆ ಅನೇಕ ಭಕ್ತರು ಬರುತ್ತಾರೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ (ನೋಡಿ) ಚಿಂಚೋಳಿಯವರು. *

**ಚಿಂತಲಪಲ್ಲಿ, ವೆಂಕಟರಾವ್ :** 1875-1969. ಪ್ರಸಿದ್ಧ ಸಂಗೀತಗಾರರು. ವಿಜಯನಗರ ಸಂಸ್ಥಾನದ ಆಸ್ಥಾನ ವಿದ್ವಾಂಸರ ಪರಂಪರೆಗೆ ಸೇರಿದವರು.

ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಚಿಂತಲಪಲ್ಲಿ (ಹುಣಸನಹಳ್ಳಿ) ಯಲ್ಲಿ 1875ರಲ್ಲಿ ಜನಿಸಿದರು. ಚಿಕ್ಕಪ್ಪ ಭಾಸ್ಕರ ರಾಯರು ಇವರ ಆರಂಭದ ಗುರುಗಳು. ಅನಂತರ ವೆಂಕಟ ನರಸಪ್ಪನವರೂ ಆಗಿನ ಮಹಾ ವಿದ್ವಾಂಸರಾಗಿದ್ದ ಕರೂರು ರಾಮ ಸ್ವಾಮಪ್ಪ, ಹನುಮಂತಾ ಚಾರ್ ನೇಕಾರಪಟ್ಟಿ ಶೇಷಯ್ಯ ಮತ್ತು ಹಾನಗಲ್ ಚಿದಂಬರಯ್ಯನ ವರಿಂದ ಸಂಗೀತದಲ್ಲಿ ಇವರು ಪ್ರೌಢ ಶಿಕ್ಷಣ ಪಡೆದರು.

ಇವರು ಕರ್ನಾಟಕ ಸಂಗೀತದ ಸತ್ಸಂಪ್ರದಾಯವನ್ನು ಕಳೆದ ಏಳು ದಶಕಗಳಿಂದಲೂ ಎತ್ತಿಹಿಡಿದು ಜನರಿಗೆ ಸಂಗೀತಸುಧೆಯನ್ನು ಉಣಿಸಿದ್ದಾರೆ. 4ನೆಯ ಮನೆಯ ಶ್ರುತಿಯಲ್ಲಿ ಲೀಲಾಜಾಲವಾಗಿ ಹಾಡುತ್ತಿದ್ದರು. ಸ್ವರಪ್ರಸ್ತಾರದಲ್ಲಿ ಅಸದೃಶ ಪಾಂಡಿತ್ಯ, ರಾಗಪೋಷಣೆಯಲ್ಲಿ ಅಪಾರ ಮನೋಧರ್ಮ ಮತ್ತು ದೇವರ ನಾಮಗಳ ಗಾಯನದಲ್ಲಿ ಒಂದು ಮನೋಜ್ಞವಾದ ಶೈಲಿ ಇವುಗಳು ಇವರ ಹಾಡುವಿಕೆಯಲ್ಲಿ ಕಂಡುಬರುತ್ತಿದ್ದ ವೈಶಿಷ್ಟ್ಯಗಳು. ಶಾರೀರಸಂಪತ್ತು, ಮಹತ್ತರ ಸಾಧನೆ ಮತ್ತು ದೈವಭಕ್ತಿ ಚಿಂತಲಪಲ್ಲಿಯವರ ಸಂಗೀತಕ್ಕೆ ಮೆರುಗು ಕೊಟ್ಟಿದ್ದವು.

ಮೈಸೂರಿನ ಶ್ರೀಮನ್ಮಹಾರಾಜರ ಆಸ್ಥಾನ ವಿದ್ವಾಂಸರಾಗಿ ಸಂಗೀತರತ್ನ ಎಂಬ ಬಿರುದನ್ನು ಪಡೆದರು. ರಾಯಲಸೀಮೆ ಮತ್ತು ಆಂಧ್ರ ಪ್ರದೇಶಗಳಲ್ಲಿ ಕಛೇರಿಗಳನ್ನು ಮಾಡಿ ಹೆಸರುಗಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸಂಗೀತವಿದ್ಯಾನಿಧಿ ಎಂಬ ಬಿರುದನ್ನು ಸಂಪಾದಿಸಿದರು. 1958ರಲ್ಲಿ ನಡೆದ ಪ್ರಥಮ ಸಂಗೀತ ಸಮ್ಮೇಳನದ ಅಧ್ಯಕ್ಷತೆಯನ್ನೂ ಗಾನಕಲಾಸಿಂಧು ಎಂಬ ಪ್ರಶಸ್ತಿಯನ್ನೂ ಪಡೆದರು. 1960ರಲ್ಲಿ ಆಂಧ್ರ ಪ್ರದೇಶದ ಸಂಗೀತ ನಾಟಕ ಅಕಾಡೆಮಿಯ ಫೆಲೋಷಿಪ್ ಮತ್ತು 1960-61ರ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಗಳಿಸಿದರು. ಇದಲ್ಲದೆ ಕರ್ನಾಟಕ ರಾಜ್ಯ ಸಂಗೀತ ನಾಟಕ ಅಕಾಡೆಮಿ ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಸಹ ಇವರನ್ನು ಪುರಸ್ಕರಿಸಿವೆ. ಇವರು 1969 ಜೂನ್ 6ರಂದು ನಿಧನಹೊಂದಿದರು. (ಎಂ.ಎ.ಎನ್.)

**ಚಿಂತಾಮಣಿ :** ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಸೇರಿದ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಬಾಗೇಪಲ್ಲಿ ತಾಲ್ಲೂಕು ಮತ್ತು ಆಂಧ್ರ ಪ್ರದೇಶ, ಪಶ್ಚಿಮದಲ್ಲಿ ಶಿಡ್ಲಘಟ್ಟ ತಾಲ್ಲೂಕು, ದಕ್ಷಿಣದಲ್ಲಿ ಕೋಲಾರ ತಾಲ್ಲೂಕು ಮತ್ತು ಪೂರ್ವದಲ್ಲಿ ಶ್ರೀನಿವಾಸಪುರ ತಾಲ್ಲೂಕು ಸುತ್ತುವರೆದಿವೆ. ಈ ತಾಲ್ಲೂಕಿನಲ್ಲಿ ಚಿಂತಾಮಣಿ, ಅಂಬಾಜಿದುರ್ಗ, ಕೈವಾರ, ಮುರುಗಮಲೆ, ಮುಂಗಾನಹಳ್ಳಿ ಮತ್ತು ಚಿಲಕಲನೇರ್ಪು ಹೋಬಳಿಗಳಿದ್ದು 403 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 894.0ಚ.ಕಿಮೀ. ಜನಸಂಖ್ಯೆ 2,71,246.

ತಾಲ್ಲೂಕಿನಲ್ಲಿ ಎರಡು ಸ್ಪಷ್ಟ ಭೌಗೋಳಿಕ ವಿಭಾಗಗಳಿವೆ. ಚಿಂತಾಮಣಿ ಬಾಗೇಪಲ್ಲಿ ರಸ್ತೆಯ ಉತ್ತರಭಾಗ ಕಲ್ಲುಸೀಮೆ, ಸಣ್ಣಪುಟ್ಟ ಬೆಟ್ಟಗಳು ಮತ್ತು ಕಲ್ಲುಮಿಶ್ರಿತ ಭೂಮಿಯಿದ್ದು ಉತ್ತರಕ್ಕೆ ಇಳಿಜಾರಾಗಿದೆ. ದಕ್ಷಿಣ ಭಾಗ ಕೆಂಪು ಮಣ್ಣಿನ ಬಯಲುಸೀಮೆ, ಅಲ್ಲಲ್ಲಿ ಸಣ್ಣ ಪುಟ್ಟ ಕಣಶಿಲೆಯ ಬೆಟ್ಟಗಳೂ ವಿಶಾಲವಾದ ಕೆಂಪು ಜಂಬುಮಣ್ಣಿನ ಬಯಲೂ ಇದ್ದು ಸುಮಾರು ನೈಋತ್ಯದೆಡೆಗೆ ಇಳಿಜಾರಾಗಿದೆ. ಮುರುಗಮಲೆ, ಅಂಬಾಜಿದುರ್ಗ (ಎತ್ತರ 1341ಮೀ.) ಮತ್ತು ರಹಮಾನ್‌ಘರ್ (1304ಮೀ.) ಮುಖ್ಯವಾದ ಬೆಟ್ಟಗಳು. ತಾಲ್ಲೂಕಿನ ವಾಯುವ್ಯದಲ್ಲಿ ಕೆಲವೇ ಕಿಮೀ ದೂರ ಪಾಪಘ್ನಿ ನದಿ ಹರಿದು ಆಂಧ್ರ ಪ್ರದೇಶವನ್ನು ಪ್ರವೇಶಿಸುತ್ತದೆ. ತಾಲ್ಲೂಕಿನ ವಾಯುಗುಣ ಹಿತಕರವಾದ್ದು. ವಾರ್ಷಿಕ ಸರಾಸರಿ ಮಳೆ 716.55ಮಿಮೀ.

ಉತ್ತರ ಕಲ್ಲುಸೀಮೆಗಿಂತಲೂ ದಕ್ಷಿಣದ ಕೆಂಪುಮಣ್ಣು ಭೂಮಿ ಹೆಚ್ಚು ವ್ಯವಸಾಯ ಯೋಗ್ಯವಾಗಿದ್ದರೂ ಉತ್ತರ ಭಾಗದಲ್ಲಿ ಅನೇಕ ಕಟ್ಟೆಗಳನ್ನು ಕಟ್ಟಿ ನೀರನ್ನು ಸಂಗ್ರಹಿಸುವ ಸೌಕರ್ಯ ಇದ್ದು ತಾಲ್ಲೂಕಿನ ಎಲ್ಲೆಡೆಯೂ ಬೇಸಾಯ ಸಾಗುತ್ತಿದೆ. ರಾಗಿ, ಬತ್ತ, ಕಬ್ಬು, ನೆಲಗಡಲೆ, ಮೆಣಸಿನಕಾಯಿ, ಈರುಳ್ಳಿ, ಆಲೂಗೆಡ್ಡೆ, ದ್ವಿದಳ ಧಾನ್ಯಗಳು ಇಲ್ಲಿಯ ಬೆಳೆಗಳು. ಮಾವಿನಹಣ್ಣು, ದ್ರಾಕ್ಷಿ ಮತ್ತು ದಾಳಿಂಬೆ ಇವನ್ನೂ ಬೆಳೆಯುತ್ತಾರೆ.

ಚಿಂತಾಮಣಿಯಲ್ಲಿ ದೊರಕುವ ಬಿಳಿಯ ಜೇಡಿಮಣ್ಣು ಪಿಂಗಾಣಿ ಉಪಕರಣಗಳ ತಯಾರಿಕೆಗೆ ಉಪಯುಕ್ತವಾದ್ದು. ತಾಲ್ಲೂಕಿನಲ್ಲಿ ರೇಷ್ಮೆ, ಸುಗಂಧ ದ್ರವ್ಯ, ಅಗರಬತ್ತಿ ತಯಾರಾಗುತ್ತವೆ. ಇವು ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಿಗೆ ರವಾನೆಯಾಗುತ್ತವೆ. ಚಿಂತಾಮಣಿ, ಕತ್ತರಿಗುಪ್ಪ, ವೆಂಕಟಗಿರಿ ಕೋಟೆ, ತಿಮ್ಮಸಂದ್ರಗಳಲ್ಲಿ ಕೈಮಗ್ಗದ ಉದ್ಯಮವಿದೆ. ವೆಂಕಟಗಿರಿ ಕೋಟೆಯಲ್ಲಿ ಕಂಬಳಿ ತಯಾರಿಕೆ ಇದೆ. ಮರ ಕುಯ್ಯುವ ಉದ್ಯಮವೂ ಉಂಟು.

ಪ್ರಸಿದ್ಧ ಕ್ಷೇತ್ರವೆನಿಸಿಕೊಂಡಿರುವ ಕೈವಾರ (ನೋಡಿ) ಈ ತಾಲ್ಲೂಕಿಗೆ ಸೇರಿದೆ. ಅಂಬಾಜಿದುರ್ಗ ಈ ಪ್ರದೇಶದ ಎತ್ತರವಾದ ಬೆಟ್ಟ. ಸುತ್ತಣ ವಿಶಾಲ ಪ್ರದೇಶದ ಸುಂದರ ದೃಶ್ಯವನ್ನು ಇಲ್ಲಿಂದ ಕಾಣಬಹುದು. ಬೆಟ್ಟದ ಮೇಲೆ ಕೋಟೆ, ಒಂದು ಶಿವದೇವಾಲಯವಲ್ಲದೆ ಎಣ್ಣೆ ಕಣಜ, ಖಜಾನೆ ಮೊದಲಾದ ಅವಶೇಷಗಳು ಉಳಿದಿವೆ. ಕೋಟೆ ಟಿಪ್ಪುಸುಲ್ತಾನನ ಕಾಲದಲ್ಲಿ ರಚಿತವಾದ್ದು, 1791ರಲ್ಲಿ ಬ್ರಿಟಿಷರ ವಶವಾಯಿತು. 1873ರವರೆಗೆ ಇದೇ ಸುತ್ತಲ ಪ್ರದೇಶದ ತಾಲ್ಲೂಕಿನ ಮುಖ್ಯ ಸ್ಥಳವಾಗಿತ್ತು. ಈಗ ಹೋಬಳಿ ಕೇಂದ್ರ. ರಹಮಾನ್‌ಘರ್(ನೋಡಿ) ಈ ಪ್ರದೇಶದ ಇನ್ನೊಂದು ಐತಿಹಾಸಿಕ (ಕೋಟೆ ಇರುವ) ಸ್ಥಳ. ಕೋನಕುಂಟ್ಲು ಎಂಬ ಸ್ಥಳದಲ್ಲಿ ವೆಂಕಟರಮಣಸ್ವಾಮಿ ದೇವಾಲಯವಿದ್ದು ಆಷಾಢ ಶುದ್ಧ ಪೂರ್ಣಿಮೆಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಈ ತಾಲ್ಲೂಕಿನ ಸಿಂಗ್ರಪಳ್ಳಿಯಲ್ಲಿ ಫಾಲ್ಗುಣ ಶುದ್ಧ ಏಕಾದಶಿಯಂದು ನಡೆಯುವ ಲಕ್ಷ್ಮೀನರಸಿಂಹಸ್ವಾಮಿ ಜಾತ್ರೆಯೂ ಅಲಂಬಗಿರಿ ಗ್ರಾಮದಲ್ಲಿ ಚೈತ್ರಶುದ್ಧ ಪೂರ್ಣಿಮೆಯಂದು ನಡೆಯುವ ವೆಂಕಟರಮಣಸ್ವಾಮಿ ಜಾತ್ರೆಯೂ

ಬುರುಡಗುಂಟೆ ಗ್ರಾಮದಲ್ಲಿ ಚೈತ್ರ ಬಹುಳ ತ್ರಯೋದಶಿಯಂದು ನಡೆಯುವ ಗಂಗಮ್ಮದೇವರ ಜಾತ್ರೆಯೂ ಪ್ರಸಿದ್ಧವಾದವು. ಜಾತ್ರೆಗಳ ಕಾಲದಲ್ಲಿ ದನಗಳ ಪ್ರದರ್ಶನ ನಡೆದು ಅವುಗಳ ವ್ಯಾಪಾರ ನಡೆಯುವುದು.

ತಾಲ್ಲೂಕಿನ ಆಡಳಿತ ಕೇಂದ್ರವಾದ ಚಿಂತಾಮಣಿ ಕೋಲಾರಕ್ಕೆ ವಾಯುವ್ಯದಲ್ಲಿ 32ಕಿಮೀ ದೂರದಲ್ಲಿದೆ. ಬೆಂಗಳೂರು-ಬಂಗಾರಪೇಟೆ ರೈಲು ಮಾರ್ಗ ಇದರ ಮುಖಾಂತರ ಹಾದುಹೋಗುತ್ತದೆ. ಜನಸಂಖ್ಯೆ 65,456.

ಚಿಂತಾಮಣಿ ಪೌರಸಭಾ ಪಟ್ಟಣ. ನಗರಕ್ಕೆ ಕನ್ನಂಪಲ್ಲಿ ಕೆರೆ ಮತ್ತು ಕೊಳವೆ ಬಾವಿಗಳಿಂದ ನೀರು ಸರಬರಾಜಾಗುತ್ತದೆ. ಒಂದು ವೃತ್ತಿ ಶಿಕ್ಷಣ ಶಾಲೆ, ಪಾಲಿಟೆಕ್ನಿಕ್ ಮತ್ತು ಪ್ರಥಮ ದರ್ಜೆ ಕಾಲೇಜೂ ಆಸ್ಪತ್ರೆಗಳೂ ಇವೆ. ಕೋಲಾರ ಜಿಲ್ಲೆಯ ಜಿಲ್ಲಾ ಗ್ರಂಥಾಲಯ ಈ ಊರಿನಲ್ಲಿದೆ. ಅಗರಬತ್ತಿ ತಯಾರಿಕೆ, ಚಿನ್ನ ಬೆಳ್ಳಿ ಕೆಲಸಗಳಿಗೆ ಚಿಂತಾಮಣಿ ಪ್ರಸಿದ್ಧವಾಗಿದೆ. ಮರಕೊಯ್ಯುವ ಕಾರ್ಖಾನೆಗಳಿವೆ. ಇದೊಂದು ವ್ಯಾಪಾರಕೇಂದ್ರ. ಕೋಲಾರ ಜಿಲ್ಲೆಯ ಪ್ರಥಮ ನಿಯಂತ್ರಿತ ಮಾರುಕಟ್ಟೆ ಆರಂಭವಾದ್ದು ಚಿಂತಾಮಣಿಯಲ್ಲೇ. ಇದರ ಮೂಲಕ ಬೆಲ್ಲ, ಹುಣಿಸೆ, ಮೆಣಸಿನಕಾಯಿಯ ವ್ಯಾಪಾರ ಹೇರಳವಾಗಿ ಜರುಗುತ್ತದೆ. ಚಿಂತಾಮಣಿಯಿಂದ ತಾಲ್ಲೂಕಿನ ಮತ್ತು ಹೊರಗಿನ ಮುಖ್ಯ ಸ್ಥಳಗಳಿಗೆ ರಸ್ತೆಗಳಿವೆ.

ಚಿಂತಾಮಣಿರಾವ್ ಎಂಬ ಮರಾಠ ನಾಯಕ ಈ ಪಟ್ಟಣವನ್ನು ಸ್ಥಾಪಿಸಿದನೆಂದೂ ಆದ್ದರಿಂದ ಇದಕ್ಕೆ ಆತನ ಹೆಸರು ಬಂದಿದೆಯೆಂದೂ ಹೇಳಲಾಗಿದೆ. ಚಿಂತಾಮಣಿಗೆ ಸೇರಿದಂತೆಯೇ ಉತ್ತರ ಭಾಗದಲ್ಲಿ ಇರುವ ನೆಕ್ಕುಂದಿಯಲ್ಲಿ ಗಂಗರ ಕಾಲದ ವೀರಗಲ್ಲುಗಳು, ಶಾಸನಗಳು ಮತ್ತು ಇತರ ಅವಶೇಷಗಳಿವೆ. (ಎಂ.ಎನ್.ಕೆ.)

**ಚಿಂದೋಡಿ ಲೀಲಾ :** ಕನ್ನಡ ವೃತ್ತಿರಂಗಭೂಮಿ ಮತ್ತು ಚಲನಚಿತ್ರರಂಗದ ಪ್ರಸಿದ್ಧ ನಟಿ. ಉತ್ತರ ಕರ್ನಾಟಕದ ಗಡಿನಾಡಿನಲ್ಲಿ ಕನ್ನಡ ಭಾಷೆ ಹಾಗೂ ನಾಟಕಗಳ ಕಹಳೆ ಮೊಳಗಿಸಿದ ಸಮರ್ಥ ಸಂಘಟಕಿ. ಅಣ್ಣಿಗೇರಿಯ ಸುಸಂಸ್ಕೃತ ಮನೆತನದಲ್ಲಿ ಜನಿಸಿದರು. ತಂದೆ ಚಿಂದೋಡಿ ವೀರಪ್ಪನವರು ರಂಗಭೂಮಿಯ ಹೆಸರಾಂತ ಕಲಾವಿದರಾಗಿದ್ದರು. ಇವರ ಅಣ್ಣ ವೀರಪ್ಪನವರೂ ರಂಗಕಲಾವಿದರೇ. ಚಿಂದೋಡಿ ಲೀಲಾರ ಮೊದಲ ಹೆಸರು ವೀರಮ್ಮ. ತಮ್ಮ ಐದನೆಯ ವಯಸ್ಸಿಗೇ ಮುಖಕ್ಕೆ ಬಣ್ಣ ಹಚ್ಚಿಕೊಂಡು, ಶಾಲೆಗೆ ಶರಣು ಹೊಡೆದು ರಂಗಭೂಮಿಯತ್ತ ಆಕರ್ಷಿತರಾದರು. ಚಿಂದೋಡಿ ವೀರಪ್ಪನವರ ಎಂಟು ಮಕ್ಕಳಲ್ಲಿ ಚಿಂದೋಡಿ ಲೀಲಾ ಕೊನೆಯವರು. ಇವರು ನಾಟಕ ಕಂಪನಿ ಸೇರಿದುದಕ್ಕೆ ಇವರ ನೆಂಟರಿಷ್ಟರು ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ತಂದೆ ಮಗಳಿಬ್ಬರೂ ಇದರಿಂದ ಅಧೀರರಾಗಲಿಲ್ಲ. ಆರಂಭದಲ್ಲಿ ಸಿದ್ಧರಾಮೇಶ್ವರ, ಸುಮಂಗಲಿ, ಸಂಪೂರ್ಣ ರಾಮಾಯಣ ನಾಟಕಗಳಲ್ಲಿ ಬಾಲನಟಿಯಾಗಿ ನಟಿಸಿದರು. 14ನೆಯ ವಯಸ್ಸಿನಲ್ಲಿ ನಾಯಕಿಯಾಗಿ ಶಾಕುಂತಲಾ, ಚಿತ್ರಾಂಗದಾ, ಗುಣಸಾಗರಿ ನಾಟಕಗಳಲ್ಲಿ ಅಭಿನಯಿಸಿದರು. ಈ ನಾಟಕಗಳಲ್ಲಿ ಇವರ ಅಣ್ಣ ವೀರಪ್ಪನೇ ನಾಯಕ. ತಮ್ಮ ಸಹೋದರನ ಕೆ.ಬಿ.ಆರ್ ಡ್ರಾಮಾ ಕಂಪನಿಯಿಂದ ಹೊರಬಂದ ಬಳಿಕ (1972), ಸಾಕಷ್ಟು ಸಂಕಷ್ಟಗಳನ್ನು ಅನುಭವಿಸಿ ಸ್ವಂತ ನಾಟಕ ಕಂಪನಿಯನ್ನು 1975ರಲ್ಲಿ ಸ್ಥಾಪಿಸಿದರು.

1960ರ ದಶಕ ಇವರ ರಂಗಭೂಮಿ ಜೀವನದಲ್ಲಿ ಸಂತಸವನ್ನುಂಟುಮಾಡಿದ ಪರ್ವಕಾಲ. 'ಹಳ್ಳಿ ಹುಡುಗಿ' ಮೇರು ನಾಟಕವಾಗಿ ಹೊರಹೊಮ್ಮಿತು; ಇವರಿಗೆ ಅಪಾರ ಖ್ಯಾತಿ ತಂದುಕೊಟ್ಟಿತು. ಸಾವಿರಾರು ಪ್ರದರ್ಶನಗಳನ್ನು ಕಂಡ ಹೆಗ್ಗಳಿಕೆ ಈ ನಾಟಕದ್ದು. ಹಾಗೆಯೇ ಗುಣಸಾಗರಿಯಲ್ಲಿ ಇವರ ಅಭಿನಯದ ನಾಯಕಿಯ ಪಾತ್ರ ಪ್ರೇಕ್ಷಕರನ್ನು ಆಕರ್ಷಿಸಿತು. ಬದಲಾದ ಕಾಲಕ್ಕನುಗುಣವಾಗಿ ಬ್ರಹ್ಮಚಾರಿಯಮಗ, ಪತಾಶಿ ಪಾಶ, ಸಿಡಿದೆದ್ದ ಬಡವ ಎಂಬ ಸಾಮಾಜಿಕ ನಾಟಕಗಳು ರಂಗವನ್ನೇರಿದವು. ಹೀಗೆ ಮೂರು ದಶಕಗಳು ಸಾಗಿಬಂದ ನಾಟಕಗಳಲ್ಲಿ ಪಾತ್ರವಹಿಸಿದ ಇವರ ಅಭಿನಯ ಪಕ್ವವಾಗುತ್ತ ಬಂತು. ಒಂದೇ ನಾಟಕದಲ್ಲಿ ತಾಯಿ ಮತ್ತು ಮಗಳ ಎರಡು ವಿಭಿನ್ನ ಸ್ವಭಾವದ ಪಾತ್ರಗಳಲ್ಲಿ ನಟಿಸುವುದರ ಮೂಲಕವೂ ಅಭಿನಯದ ಎರಡು ಸಾಧ್ಯತೆಗಳನ್ನು ಕೂಡ ಇವರು ಪ್ರದರ್ಶಿಸಿದ್ದಾರೆ.

80ರ ದಶಕದಲ್ಲಿ ಬೆಳಗಾಂವಿಯ ಶಿವಾನಂದ ಥಿಯೇಟರಿನಲ್ಲಿ ಇವರ ಹಲವು ನಾಟಕಗಳು ನಿರಂತರವಾಗಿ ನಡೆದು ಯಶಸ್ವಿಯಾದುವು. ಇದು ಕೆಲವು ಕನ್ನಡ ಭಾಷಾ ವಿರೋಧಿಗಳ ಕಣ್ಣು ಕೆಂಪಗಾಗಲು ಕಾರಣವಾಯಿತು. ನಾಟಕ ಪ್ರದರ್ಶನಗಳಿಗೆ ಅಡ್ಡಿಯನ್ನುಂಟುಮಾಡತೊಡಗಿದರು. ಈ ಸಂದರ್ಭದಲ್ಲಿ ಇವರು ಎದೆಗುಂದದೆ ಪರಿಸ್ಥಿತಿಯನ್ನು ದಿಟ್ಟತನದಿಂದ ಎದುರಿಸಿದರು. ಆಗ ಅದೇ ಊರಿನ ಖಾಲಿ ಜಾಗವೊಂದರಲ್ಲಿ ರಂಗಮಂದಿರವನ್ನು ನಿರ್ಮಿಸಿದರು. ಮರಾಠಿಗರ ನಿರಂತರ ಕಿರುಕುಳಕ್ಕೀಡಾದ ಇವರು ಕಡೆಗೆ ಶ್ರೇಷ್ಠ ನ್ಯಾಯಾಲಯದ ಮೊರೆಹೊಕ್ಕು ಯಶಸ್ವಿಯಾದರು. ಗಡಿಪ್ರದೇಶವಾದ ಬೆಳಗಾಂವಿಯಲ್ಲಿ ಸು.10 ವರ್ಷಗಳು ಮರಾಠಿಗರ ಉಪಟಳದ ನಡುವೆಯೂ ಕನ್ನಡ ನಾಟಕಗಳನ್ನು ಪ್ರದರ್ಶಿಸಿದ ದಿಟ್ಟತನ ಇವರದು. ಶಿವಾಜಿ ಕುರಿತಂತೆ ನಾಟಕವೊಂದನ್ನು ಸಿದ್ಧಪಡಿಸಿ ರಂಗದ ಮೇಲೆ ತಂದರು. ಮರಾಠಿ ಪ್ರೇಕ್ಷಕರು ಈ ನಾಟಕ ನೋಡಿ ದಂಗಾದರು. ಇವರ ಶ್ರೇಷ್ಠ ಅಭಿನಯ ಹಾಗೂ ನೃತ್ಯಗಳು ಮರಾಠಿಗರನ್ನೂ ಮೋಡಿಮಾಡಿದವು. ಪ್ರಬುದ್ಧ ಕಲಾವಿದೆಯಾಗಿ ಜಾತಿ, ಭಾಷಾ ಭೇದಗಳನ್ನು ಮೆಟ್ಟಿನಿಂತರು. ಜೊತೆಗೆ ಬೆಳಗಾಂವಿ ಮಹಾನಗರ ಪಾಲಿಕೆ ಚುನಾವಣೆಗೆ ಸ್ಪರ್ಧಿಸಿ ಜಯಗಳಿಸಿದರು. ಇವರು ನಿರ್ಮಿಸಿದ ಥಿಯೇಟರ್ ಚಿಂದೋಡಿ ಲೀಲಾ ರಂಗಮಂದಿರ ಎಂದೇ ಪ್ರಸಿದ್ಧಿಯಾಗಿದೆ.

'ಪೋಲೀಸನ ಮಗಳು' ಕೆ.ಬಿ.ಆರ್ ಡ್ರಾಮಾ ಕಂಪನಿಯ ಮತ್ತೊಂದು ಪ್ರಸಿದ್ಧ ನಾಟಕ. ಇದು ನೂರಾರು ಪ್ರದರ್ಶನಗಳನ್ನು ಕಂಡು ದಾಖಲೆ ನಿರ್ಮಿಸಿದೆ. ಅಷ್ಟೇ ಪ್ರಸಿದ್ಧವಾದ ಇನ್ನೊಂದು ನಾಟಕ 'ದೇಸಾಯರ ದರ್ಬಾರ್'. 'ಮದುವೆಯಾದರೂ ಮಡದಿಯಲ್ಲ' ಎಂಬ ನಾಟಕ 1200 ಪ್ರದರ್ಶನಗಳನ್ನು ಕಂಡಿದೆ. ಏಣಗಿ ಬಾಳಪ್ಪನವರ ಕಂಪನಿ, ಗುಬ್ಬಿ ಕಂಪನಿ, ಗುಡಗೇರಿ ಕಂಪನಿಗಳಲ್ಲೂ ಕೆಲ ಕಾಲ ಇವರು ಅಭಿನಯಿಸಿದ್ದಾರೆ. ಇವರು ಚಲನಚಿತ್ರ ಕ್ಷೇತ್ರದಲ್ಲಿಯೂ ಹೆಸರು ಮಾಡಿದ್ದಾರೆ. 33 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಬಿ.ಆರ್.ಪಂತುಲು ಅವರ ಕಿತ್ತೂರು ಚೆನ್ನಮ್ಮ ಇವರ ಅಭಿನಯದ ಮೊದಲ ಚಿತ್ರ. ಗಾಳಿಗೋಪುರ, ನವಜೀವನ, ಶ್ರೀ ಕೃಷ್ಣದೇವರಾಯ, ಶರಪಂಜರ, ಮುಕ್ತಿ, ತುಂಬಿದ ಕೊಡ – ಈ ಮೊದಲಾದ ಚಿತ್ರಗಳಲ್ಲಿ ಸ್ಮರಣೀಯ ಅಭಿನಯ ನೀಡಿದ್ದಾರೆ. 'ಗಾನಯೋಗಿ ಪಂಚಾಕ್ಷರಿ ಗವಾಯಿ' ಚಲನಚಿತ್ರದ ನಿರ್ಮಾಪಕಿಯಾಗಿ ರಾಜ್ಯ ಪ್ರಶಸ್ತಿ ಗಳಿಸಿದ ಹೆಗ್ಗಳಿಕೆ ಇವರದು.

ಇವರಿಗೆ ಅನೇಕ ಗೌರವ, ಬಿರುದು, ಪ್ರಶಸ್ತಿಗಳು ದೊರೆತಿವೆ. ತ್ರಿಭುವನ ಕನ್ನಡತಿ, ಅಭಿನವ ಕಿತ್ತೂರು ಚೆನ್ನಮ್ಮ ಎಂಬ ಬಿರುದುಗಳನ್ನು ನೀಡಲಾಗಿದೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1996), ಪದ್ಮಶ್ರೀ ಪ್ರಶಸ್ತಿ ಲಭಿಸಿವೆ. ವೃತ್ತಿ ರಂಗಭೂಮಿಗೆ ಗಣನೀಯ ಸೇವೆಸಲ್ಲಿಸಿದುದಕ್ಕಾಗಿ ಇವರಿಗೆ ಗುಬ್ಬಿವೀರಣ್ಣ ಪ್ರಶಸ್ತಿಯನ್ನು ನೀಡಲಾಗಿದೆ (2002). ಇವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದರು (1991-95). ಮೊದಲಬಾರಿಗೆ ರಂಗ ಕಲಾವಿದೆಯೊಬ್ಬರನ್ನು ಸರ್ಕಾರ ಇಂಥ ಹುದ್ದೆಗೆ ನಿಯಮಿಸಿದ್ದು ಇಲ್ಲಿ ಉಲ್ಲೇಖನೀಯ. 25 ವರ್ಷಕ್ಕೂ ಹೆಚ್ಚು ಕಾಲದಿಂದ ಅಸ್ತಿತ್ವದಲ್ಲಿದ್ದ ನಾಟಕ ಕಂಪನಿಗಳಿಗೆ ಆರ್ಥಿಕ ನೆರವು ನೀಡಲು ವ್ಯವಸ್ಥೆ ಮಾಡಿದ್ದು ಇವರ ಕಾಲಾವಧಿಯ ಮಹತ್ವದ ಸಾಧನೆ ಎನ್ನಬಹುದು. (ಎಚ್.ಕೆ.ಆರ್‌ಎ.)

**ಚಿಕಣಿ ಚಿತ್ರಕಲೆ :** ದಂತ, ಮರ, ಚರ್ಮ ಪತ್ರಗಳ ಮೇಲೆ ಸಣ್ಣ ಸಣ್ಣ ಆಕಾರದಲ್ಲಿ ಸ್ನಿಗ್ಧಮನೋಹರವಾಗಿ ರಚಿಸಿದ ಸೂಕ್ಷ್ಮ ಪ್ರತಿರೂಪಗಳು (ಮಿನಿಯೇಚರ್ ಪೇಂಟಿಂಗ್ಸ್). ಲಲಿತಕಲೆಯ ಮಾಧ್ಯಮಗಳಲ್ಲಿ ಒಂದೆನಿಸಿದ

ಮಹಿಷಾಸುರಮರ್ದಿನಿ: ವಿಜಯ ಹಾಗರಗುಂಡಗಿ ಅವರ ಕೃತಿ

ಈ ಕಲೆ ಕರಕುಶಲಕಲೆಯ ಒಂದು ಅಂಗವಾಗಿದೆ. ಮಹಮ್ಮದೀಯರು ಭಾರತಕ್ಕೆ ಬಂದಾಗ ಈ ಕಲೆ ಅವರೊಡನೆ ಬಂತೆಂದು ಪ್ರತೀತಿ. ಅನಂತರ ಭಾರತದಾದ್ಯಂತ ಈ ಕಲೆ ಹಿಂದು ಮುಸ್ಲಿಂರ ಬದುಕಿನ ಸಾಮರಸ್ಯ ಹಾಗೂ ಬಾಂಧವ್ಯದ ಸಂಕೇತವಾಗಿ ರೂಪು ತಾಳಿತು. ಗುಜರಾತ್, ರಾಜಸ್ಥಾನ, ತಮಿಳುನಾಡು, ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲೆಲ್ಲ ಅಲ್ಲಿನ ರಾಜರ ಸಾಂಸ್ಕೃತಿಕ ಆಡಳಿತ ವೈಖರಿಯ ರೂಪಗಳನ್ನು ಈ ಕಲೆಯ ಮಾಧ್ಯಮಗಳಲ್ಲಿ ಬಳಸಿಕೊಳ್ಳಲಾಯಿತು. ಕರ್ನಾಟಕದಲ್ಲಿ ವಿಜಯನಗರ ಅರಸರ ಕಾಲದಲ್ಲಿ (1540) ಈ ಕಲೆ ರೂಪು ಪಡೆಯಿತು. ಇಲ್ಲಿನ ಕಲಾವಿದರು ದಖನೀ ಸುಲ್ತಾನರ ಚಿಕಣಿ ಚಿತ್ರಶೈಲಿಗಳಲ್ಲೆ ಚಿತ್ರ ರಚಿಸುತ್ತಿದ್ದರು. ಇವರು ಚಿತ್ರ ರಚಿಸುವುದನ್ನೆ ವೃತ್ತಿಯಾಗಿ ಮೈಗೂಡಿಸಿಕೊಂಡರು.

ವಿಜಯನಗರ ಅರಸರ ಕಾಲದಲ್ಲಿ ರಥಗಳು, ಬಾಗಿಲುಗಳ ಮೇಲೆ ಚಿಕಣಿ ಚಿತ್ರಕಲೆ ಅಲಂಕಾರದ ಸ್ಥಾನ ಪಡೆದುಕೊಂಡಿತು. ಇಲ್ಲಿನ ಕಲೆಗಳು ರಾಮಾಯಣ, ಮಹಾಭಾರತ, ಪುರಾಣಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಶೈಲಿಯ ರಚನೆಗಳನ್ನು ಅನುಸರಿಸುತ್ತ ಬಂದಿವೆ. ಇದರ ಜೊತೆಯಲ್ಲೆ ಸಮಕಾಲೀನರ ಅಭಿರುಚಿಗೆ ತಕ್ಕಂತೆ ಕೆತ್ತನೆಕೆಲಸ, ನವಗ್ರಹದೇವತೆಗಳು, ಆಲಂಕಾರಿಕ ಬೊಂಬೆಗಳು ಹಾಗೂ ಗ್ರಾಮದೇವತೆಯ ಮೂರ್ತಿಗಳಿಗೆ ಬಣ್ಣ ಹಚ್ಚುವುದು, ಮಾರುಕಟ್ಟೆಯಲ್ಲಿ ಬೇಡಿಕೆಯಿರುವ ವಿವಿಧ ರೀತಿಯ ಗೃಹಾಲಂಕರಣದ ಫಲಪುಷ್ಪಗಳು, ಕುಳಿತುಕೊಳ್ಳಲು ಉಪಯೋಗಿಸುವ ಕಲಾತ್ಮಕ ಮರದ ಮಣೆಗಳು -ಹೀಗೆ ಸಿದ್ಧಪಡಿಸಿದ ಎಲ್ಲ ವಸ್ತುಗಳಿಗೂ ಚಿತ್ರಕಾರರು ಗತಕಾಲದ ಮೆರಗು ನೀಡುತ್ತ ಬಂದಿದ್ದಾರೆ. ಕಲಾವಿದರು ಪ್ರಕೃತಿಯಲ್ಲಿ ದೊರಕುವ ಸುಣ್ಣದಕಲ್ಲು, ಸಿದ್ದೆಮಣ್ಣು, ಕೆಂಪುಮಣ್ಣು, ದೀಪದಕಾಡಿಗೆ, ಅರಿಶಿಣದ ಕೊನೆಗಳಿಂದ ಕೆಂಪು, ಹಳದಿ, ಹಸುರು, ನೀಲಿ, ಕಂದು, ಕಪ್ಪು ಬಣ್ಣಗಳನ್ನು ಸಿದ್ಧಪಡಿಸಿಕೊಂಡು, ಈ ಎಲ್ಲ ಬಣ್ಣಗಳ ಜೊತೆಗೆ ತವರದಲೋಹದಿಂದ ಸಿದ್ಧಪಡಿಸಿಕೊಂಡ ಬಣ್ಣವನ್ನು ಮಿಶ್ರಣಮಾಡಿ ಚಿಕಣಿ ಚಿತ್ರಗಳಿಗೆ ಲೇಪನ ಮಾಡುವುದಿದೆ. ಹೀಗೆ ಲೇಪನ ಮಾಡುವುದರಿಂದ ಚಿಕಣಿಕಲೆ ಶೋಭೆ ಗೊಳ್ಳುತ್ತದೆ. ರಾಯಚೂರು ಜಿಲ್ಲೆ ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮ ಈ ಕಲೆಯ ಜೀವಂತಿಕೆಯನ್ನು ಇಂದಿಗೂ ಉಳಿಸಿಕೊಂಡಿದೆ. (ಪಿ.ಜಿಬಿ.)

**ಚಿಕುಪಾಧ್ಯಾಯ :** ಸು.17ನೆಯ ಶತಮಾನ. ವಿಷ್ಣುಪುರಾಣ ಎಂಬ ಗ್ರಂಥದ ಕರ್ತೃ. ಈತನ ತಂದೆ ತೆರಕಣಾಂಬಿಯ ರಂಗಾರ್ಯ ಪಂಡಿತ, ತಾಯಿ ನಾಚಾರಮ್ಮ. ಈತ ಮೈಸೂರು ದೊರೆ ಚಿಕ್ಕದೇವರಾಜ ಒಡೆಯರ (1673-1704) ಆಸ್ಥಾನದಲ್ಲಿ ಕವಿಯೂ ಮಂತ್ರಿಯೂ ಆಗಿದ್ದನೆಂದು ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಈತ ಚಿಕ್ಕದೇವರಾಯನಿಗೆ ಉಪಾಧ್ಯಾಯನೂ ಆಗಿದ್ದನಂತೆ. ಆದುದರಿಂದ ಈತನಿಗೆ ಚಿಕುಪಾಧ್ಯಾಯ ಎಂಬ ಹೆಸರು ಬಂತೆಂದು ಪ್ರತೀತಿ. ಇವನ ಮೊದಲ ಹೆಸರು ಲಕ್ಷ್ಮೀಪತಿ. ಸಾಹಿತ್ಯ ಪ್ರಪಂಚದಲ್ಲಿ ಚಿಕುಪಾಧ್ಯಾಯನೆಂದೇ ಪ್ರಸಿದ್ಧಿ. ಈತನ ಕೃತಿಗಳ ಒಟ್ಟು ಸಂಖ್ಯೆ ಎಷ್ಟೆಂದು ತಿಳಿಯದು. ಇದುವರೆಗೆ 28 ಕೃತಿಗಳು ಮಾತ್ರ ದೊರಕಿವೆ. ಪೂರ್ವಕವಿಗಳಲ್ಲಿ ರುದ್ರಭಟ್ಟನನ್ನು ಮಾತ್ರ ಸ್ಮರಿಸಿದ್ದಾನೆ. ತಿರುಮಲಾರ್ಯ, ಸಿಂಗರಾರ್ಯ, ಸಂಚಿಯ ಹೊನ್ನಮ್ಮ, ತಿಮ್ಮಕವಿ, ಚಿದಾನಂದ ಕವಿ, ಮಲ್ಲರಸ ಮೊದಲಾದವರು ಈತನ ಸಮಕಾಲೀನರು. ಅರಸನ ಪ್ರೇರಣೆ, ಪ್ರೋತ್ಸಾಹದಿಂದ ತಾನು ಕೃತಿ ರಚನೆಗೆ ತೊಡಗಿದಂತೆ ಕವಿ ಹೇಳಿಕೊಂಡಿದ್ದಾನೆ. ಚಂಪೂ, ಸಾಂಗತ್ಯ ಮತ್ತು ಗದ್ಯ - ಈ ಮೂರೂ ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದಾನೆ.

ಯಾದವಗಿರಿ ಮಾಹಾತ್ಮ್ಯ, ಕಮಲಾಚಲ ಮಾಹಾತ್ಮ್ಯ, ಪಶ್ಚಿಮರಂಗ ಮಾಹಾತ್ಮ್ಯ, ವೆಂಕಟಗಿರಿ ಮಾಹಾತ್ಮ್ಯ, ಹಸ್ತಗಿರಿ ಮಾಹಾತ್ಮ್ಯ, ಶ್ರೀರಂಗಮಾಹಾತ್ಮ್ಯ, ಯದುಗಿರಿ ಮಾಹಾತ್ಮ್ಯ, ಇವು ತೀರ್ಥಕ್ಷೇತ್ರಗಳ ಹಿರಿಮೆಯನ್ನೂ ಅವಕ್ಕೆ ಸಂಬಂಧಿಸಿದ ಪುರಾತನ ಕಥೆಗಳನ್ನೂ ಹೇಳುವ ಗ್ರಂಥಗಳು. ಕಮಲಾಚಲ ಮಾಹಾತ್ಮ್ಯ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಹಾತ್ಮೆಯನ್ನು ವಿವರಿಸುವ ಚಂಪೂ ಗ್ರಂಥ. ಇದರಲ್ಲಿ ಸು.3750 ಪದ್ಯಗಳಿವೆ. ಕಂಚಿಯ ಮಹತ್ತನ್ನು ಪ್ರಶಂಸಿಸುವ ಹಸ್ತಗಿರಿ ಮಹಾತ್ಮ್ಯ ಚಂಪೂವಿನಲ್ಲೇ ಇದ್ದು 1200 ಪದ್ಯಗಳನ್ನೊಳಗೊಂಡಿದೆ. ಯಾದವಗಿರಿ ಮಾಹಾತ್ಮ್ಯ (1200 ಪದ್ಯಗಳು), ಪಶ್ಚಿಮರಂಗ ಮಾಹಾತ್ಮ್ಯ (320 ಪದ್ಯಗಳು) -ಇವು ಸಾಂಗತ್ಯದಲ್ಲಿ ರಚಿತವಾಗಿವೆ. ಉಳಿದ ಮೂರು ಗ್ರಂಥಗಳು ಗದ್ಯದಲ್ಲಿವೆ.

ಸಾತ್ವಿಕ ಬ್ರಹ್ಮವಿದ್ಯಾವಿಲಾಸ ಎಂಬ ಗ್ರಂಥ ವಿಶಿಷ್ಟಾದ್ವೈತ ತತ್ವಗಳನ್ನು ಪ್ರತಿಪಾದಿಸುವ ಕೃತಿ. ಇದು ಇದೇ ಹೆಸರಿನ ಸಂಸ್ಕೃತ ಕೃತಿಯ ಭಾಷಾಂತರ. ಇದರಲ್ಲಿ 3 ಆಶ್ವಾಸಗಳಿವೆ. ಈ ಗ್ರಂಥ ಗುರುಶಿಷ್ಯ ಪ್ರಶ್ನೋತ್ತರ ರೂಪದಲ್ಲಿದ್ದು ಚಂಪೂವಿನಲ್ಲಿ ರಚಿತವಾಗಿದೆ.

ರುಕ್ಮಾಂಗದ ಚರಿತೆ (2286 ಪದ್ಯಗಳು) ಏಕಾದಶಿ ವ್ರತಮಹಿಮೆಯನ್ನೊಳಗೊಂಡ ಗ್ರಂಥ. ಚಂಪೂವಿನಲ್ಲಿದೆ. ದಿವ್ಯಸೂರಿ ಚರಿತೆ ಆಳ್ವಾರರುಗಳ ಕಥೆಯನ್ನು ಹೇಳುತ್ತದೆ. ತಮಿಳಿನಲ್ಲಿರುವ ಕಥೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಶೇಷಧರ್ಮ, ಹರಿವಂಶದ ಅಶ್ವಮೇಧಿಕ ಪರ್ವದಲ್ಲಿ ಬರುವ ಕಥೆಯನ್ನು ಆಧರಿಸಿ 25 ಅಧ್ಯಾಯಗಳಲ್ಲಿ ಗದ್ಯದಲ್ಲಿ ಬರೆದ ಕೃತಿ. ಮಹಾವಿಷ್ಣುವಿನ ಸ್ತೋತ್ರ ಮತ್ತು ವರ್ಣನೆಗಳು ಈತನ ಇತರ ಕೆಲವು ಕೃತಿಗಳ ವಸ್ತು. ಕೃಷ್ಣನ ರೂಪವನ್ನು ಕಂಡು ಮೆಚ್ಚಿ ಮೋಹಿಸಿದ ಸ್ತ್ರೀಯರ ಸರಸ ಸಲ್ಲಾಪಗಳ ನಿರೂಪಣೆಯೇ ಶೃಂಗಾರಶತಕ ಸಾಂಗತ್ಯ. ಇದಲ್ಲದೆ ಈತ ಚಿತ್ರಕವಿತೆಗೂ ಕೈಹಾಕಿದ್ದಾನೆ. ಅಕ್ಷರಮಾಲಿಕಾ ಸಾಂಗತ್ಯ ಎಂಬ ಒಂದು ಶತಕದಲ್ಲಿ 'ಕ' ಕಾರದಿಂದ ಹಿಡಿದು 'ಕ್ಷ' ಕಾರದ ವರೆಗೆ ಅಕ್ಷರಾನುಕ್ರಮದಲ್ಲಿ ಕಾಗುಣಿತಾನುಸಾರವಾಗಿಯೂ ಕಲ್ಪಿಸಿ ಹೇಳಿದ ರಂಗನಾಥಸ್ವಾಮಿಯ ಸ್ತೋತ್ರ ಇದೆ. ಚಿತ್ರಶತಕ ಸಾಂಗತ್ಯ ಎಂಬ ಗ್ರಂಥದಲ್ಲಿ ಕನ್ನಡನಾಡು ನುಡಿಗಳ ವಿಷಯವಾಗಿ ಹೇಳಿರುವ ಪದ್ಯಗಳು ಬಹಳ ಸ್ವಾರಸ್ಯವಾಗಿವೆ. (ಕೆ.ವಿಇ.)

ಈತನ ವಿಷ್ಣುಪುರಾಣ ಸಂಸ್ಕೃತ ಗ್ರಂಥದ ಅನುವಾದ. ಚಂಪೂ, ಗದ್ಯ ಎರಡರಲ್ಲೂ ರಚಿತವಾಗಿವೆ. ಸಂಸ್ಕೃತದಲ್ಲಿರುವಂತೆ ಎರಡೂ ಕೃತಿಗಳಲ್ಲೂ ಆರು ಅಂಶಗಳಿವೆ. ಒಂದನೆಯ ಅಂಶದಲ್ಲಿ ಜಗತ್ಸೃಷ್ಟಿ, ಸಮುದ್ರಮಥನ, ದಕ್ಷನ ಕಥೆ, ಧ್ರುವಚರಿತೆ, ಪೃಥುವಿನ ಕಥೆ, ಪ್ರಚೇತಸಾಖ್ಯಾನ, ಪ್ರಹ್ಲಾದನ ಕಥೆ, ದೈತ್ಯ ದಾನವೋತ್ಪತ್ತಿ, ಕಶ್ಯಪಸಂತತಿ ಮತ್ತು ಪರಮಾತ್ಮನ ಮಾಹಾತ್ಮ್ಯ ಹೇಳಿದೆ. ಎರಡನೆಯ ಅಂಶದಲ್ಲಿ ಪ್ರಿಯವ್ರತಾಖ್ಯಾನ, ದ್ವೀಪ ವರ್ಷ ನಿರೂಪಣೆ, ಪಾತಾಳ ನರಕಾಖ್ಯಾನ,

ಸಪ್ತಸ್ವರ್ಗ, ಸೂರ್ಯಾದಿಗ್ರಹಗಳ ವಿಚಾರ, ಭರತಚರಿತೆ, ಮುಕ್ತಿ ಮಾರ್ಗ ನಿದರ್ಶನ, ನಿದಾಘ-ಋತುಸಂವಾದ -ಈ ವಿಷಯಗಳು ಸಂಕಲಿತವಾಗಿವೆ. ಮೂರನೆಯ ಅಂಶದಲ್ಲಿ ಮನ್ವಂತರಗಳು, ವೇದವ್ಯಾಸರ ಅವತಾರ, ನರಕೋದ್ಧಾರಕ ಕರ್ಮ, ಸಗರ-ಔರ್ವ ಸಂವಾದದ ಮೂಲಕ ಧರ್ಮನಿರೂಪಣೆ, ವರ್ಣಾಶ್ರಮ ನಿಬಂಧನೆ ಮತ್ತು ಸದಾಚಾರ ಈ ವಿಷಯಗಳು ಸಂಗ್ರಹೀತವಾಗಿವೆ. ನಾಲ್ಕನೆಯ ಅಂಶದಲ್ಲಿ ಸೂರ್ಯಚಂದ್ರವಂಶಗಳಲ್ಲಿ ಉತ್ಪನ್ನವಾದ ನಾನಾ ರಾಜರ ಕಥೆಗಳ ವಿವರಣೆಯಿದೆ. ಐದನೆಯ ಅಂಶದಲ್ಲಿ ಕೃಷ್ಣಾವತಾರದ ಕಥೆ ವರ್ಣಿತವಾಗಿದೆ. ಆರನೆಯ ಅಂಶದಲ್ಲಿ ಕಲಿಯುಗಧರ್ಮ, ನಾಲ್ಕು ವಿಧ ಪ್ರಳಯ, ಬ್ರಹ್ಮಜ್ಞಾನ ನಿರೂಪಣೆ ಈ ವಿಷಯಗಳು ನಿರೂಪಿತವಾಗಿದೆ. ಚಂಪೂ ಕೃತಿಯಲ್ಲಿ ಸಂಸ್ಕೃತ ಪದಗಳ ಬಳಕೆ ಅಧಿಕವಾಗಿರುವುದರಿಂದ ಬಂಧ ಪ್ರೌಢವಾಗಿದೆ. ಈ ಗ್ರಂಥದಲ್ಲಿ 32 ಆಶ್ವಾಸಗಳೂ 6244 ಪದ್ಯಗಳೂ ಇವೆ. ಇದನ್ನು 1691ರಲ್ಲಿ ಬರೆದು ಮುಗಿಸಿದಂತೆ ಕವಿ ಹೇಳಿಕೊಂಡಿದ್ದಾನೆ. (ಎಸ್.ಎನ್.ಕೆ.)

ಚಿಕುಪಾಧ್ಯಾಯ ಸಂಸ್ಕೃತದಲ್ಲಿ ಪಂಡಿತನಾಗಿದ್ದು ಹಲವು ಪುರಾಣಗಳನ್ನು ಆಳವಾಗಿ ಅಭ್ಯಾಸ ಮಾಡಿದಂತೆ ತೋರುತ್ತದೆ. ಪುರಾಣಗಳಿಂದ ಸಂಗ್ರಹಿಸಿದ ಕಥೆಗಳೇ ಈತನ ಅನೇಕ ಕ್ಷೇತ್ರಗಳ ಮಾಹಾತ್ಮ್ಯ ವರ್ಣನೆಗೆ ಸಹಾಯಕವಾಗಿವೆ. ಕಾಮಂದಕ ನೀತಿ, ತಿರುವಾಯ್ಮೊಳಿ ಎಂಬ ಗ್ರಂಥಗಳಿಗೆ ಈತ ಕನ್ನಡದಲ್ಲಿ ಟೀಕೆಯನ್ನು ಬರೆದಿದ್ದಾನೆ. ಈ ಟೀಕೆಗಳು ಕನ್ನಡ ಗದ್ಯದ ಬೆಳೆವಣಿಗೆಯಲ್ಲಿ ಒಂದು ಮುಖ್ಯ ಘಟ್ಟವೆಂದು ಹೇಳಬಹುದು. ಸಂಸ್ಕೃತ ಶುಕಸಪ್ತತಿಯನ್ನು ಕನ್ನಡಕ್ಕೆ ಗದ್ಯರೂಪದಲ್ಲಿ ಅನುವಾದ ಮಾಡಿದ್ದಾನೆ. ಆ ಕಾಲದ ಕನ್ನಡ ಗದ್ಯಶೈಲಿಯ ಸ್ವರೂಪವನ್ನು ತಿಳಿಯಲು ಇವುಗಳಿಂದ ಬಹಳ ಸಹಾಯಕವಾಗುತ್ತದೆ. ಕನ್ನಡ ಗದ್ಯದ ಬೆಳೆವಣಿಗೆಯಲ್ಲಿ ಚಿಕುಪಾಧ್ಯಾಯನಿಗೆ ಗಣ್ಯ ಸ್ಥಾನವಿದೆ. (ಕೆ.ವಿಉ.)

**ಚಿಕ್ಕ ಕಡತೂರು :** ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಒಂದು ಗ್ರಾಮ. ಈ ಗ್ರಾಮದ ನೈಋತ್ಯಕ್ಕೆ ಕೊಂಚ ದೂರದಲ್ಲಿ ಸಿದ್ಧಪ್ಪದೇವರ ದೇವಾಲಯವಿದೆ. ಅದರ ಪಕ್ಕದಲ್ಲಿ ವೀರಪುರುಷರ ಸ್ಮರಣಾರ್ಥವಾಗಿ ನಿರ್ಮಿಸಿದ ಅನೇಕ ವೀರಗುಡಿಗಳಿವೆ. ಇವು ಮೂರು ಚಪ್ಪಡಿಗಳನ್ನು ಆಯ ವಿನ್ಯಾಸದಲ್ಲಿರುವಂತೆ ಹೂತು ಮೇಲೊಂದು ಚಪ್ಪಡಿಯನ್ನು ಹಾಸಿ ನಿರ್ಮಿಸಿದವು. ಮೂರು-ನಾಲ್ಕು ವರ್ಷಗಳಿಗೊಮ್ಮೆ ಇಂಥ ಗುಡಿಗಳನ್ನು ಹೊಸದಾಗಿ ಸೇರಿಸುತ್ತಿದ್ದರೆಂದು ಪ್ರತೀತಿ. ಸಿದ್ದಪ್ಪ ದೇವಸ್ಥಾನದ ಮೊಗಸಾಲೆಯಲ್ಲಿ ಸು.60 ಅಡಿ ಉದ್ದ ಮತ್ತು 3/4 ಅಡಿ ವ್ಯಾಸದ ಒಂದು ಮರದ ತೊಲೆಯಿದೆ. ಸಿಡಿ ಹಬ್ಬದ ಕಾಲದಲ್ಲಿ ಭಕ್ತರು ಮೈಗೆ ಕೊಕ್ಕೆಗಳನ್ನು ಚುಚ್ಚಿಕೊಂಡು ತೂಗಾಡಲು ಈ ತೊಲೆಯನ್ನು ಉಪಯೋಗಿಸುತ್ತಿದ್ದರು. ಇಲ್ಲಿ ಕಂಬಗಳ ಮೇಲೆ ನಿಂತಿರುವ ಒಂದು ಚಿಕ್ಕ ಮಂಟಪವಿದೆ. ಇದರ ಗೋಪುರದ ನಾಲ್ಕು ಕಡೆಗಳಲ್ಲಿ ಅಂದವಾದ ಶಿಲ್ಪಾಲಂಕಾರವಿದೆ.

ಈ ಊರು ಹದಿನಾರನೆಯ ಶತಮಾನದಲ್ಲಿ ಹೊಸಕೋಟೆಯ ನಾಯಕ ತಿಮ್ಮೇಗೌಡನಿಗೆ ಸೇರಿತ್ತು. ಮುಂದೆ ಬಿಜಾಪುರದ ಸ್ವಾಧೀನವಾಗಿದ್ದು, ಹೈದರ್ ಅಲಿಯ ಕಾಲದಲ್ಲಿ ಮೈಸೂರಿಗೆ ಸೇರಿತು. (ಎ.ಎಂ.)

**ಚಿಕ್ಕಜಾಲ :** ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕಿನಲ್ಲಿ ಬೆಂಗಳೂರಿನಿಂದ ಸು.24ಕಿಮೀ ಉತ್ತರಕ್ಕಿರುವ ಪ್ರಾಗೈತಿಹಾಸಿಕ ನೆಲೆ ಮತ್ತು ಇತಿಹಾಸಪ್ರಸಿದ್ಧ ಗ್ರಾಮ. ಊರಿನ ಪೂರ್ವಕ್ಕೆ ಒಂದೂವರೆ ಕಿಮೀ ದೂರದವರೆಗೆ ಹರಡಿಕೊಂಡಿರುವ ಕಬ್ಬಿಣ ಯುಗದ ಬೃಹತ್ ಶಿಲಾಸಮಾಧಿ ಸಂಸ್ಕೃತಿಗೆ ಸೇರಿದ ವಿಸ್ತಾರವಾದ ಶ್ಮಶಾನವಿದೆ. ಈ ಪ್ರಾಕ್ತನ ನೆಲೆಯನ್ನು ಆಂಗ್ಲ ಸೈನ್ಯಾಧಿಕಾರಿ ಬಿ.ಆರ್.ಬ್ರಾನ್‌ಫಿಲ್ 1881ರಲ್ಲಿ ಕಂಡುಹಿಡಿದ. ಈ ಶ್ಮಶಾನದಲ್ಲಿರುವ ಸಮಾಧಿಗಳಲ್ಲಿ ಕಲ್ಲುಚಪ್ಪಡಿಗಳನ್ನು ಪೆಟ್ಟಿಗೆ ಆಕಾರದಲ್ಲಿ ಜೋಡಿಸಿ ನಿರ್ಮಿಸಿದ ಶಿಲಾತೊಟ್ಟಿಗಳಿದ್ದು ಅವನ್ನು ಮುಚ್ಚಲು ಉಪಯೋಗಿಸಿರುವ ಚಪ್ಪಡಿಗಳು 15' ಉದ್ದಗಲವುಳ್ಳವಾಗಿವೆ. ಒಂದೆರಡು ಶಿಲಾ ತೊಟ್ಟಿಗಳಲ್ಲಿ ಪೂರ್ವದ ಚಪ್ಪಡಿಗಳಲ್ಲಿ ಗುಂಡಾದ ರಂಧ್ರವಿದೆ. ಸಮಾಧಿಗಳೊಳಗೆ ಮೃತರ ದೇಹಾವಶೇಷಗಳು, ಮಡಕೆ, ಕುಡಿಕೆಗಳು, ಕಬ್ಬಿಣದ ಆಯುಧೋಪಕರಣಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವನ್ನು ಹೊರತೆಗೆದು ಈಗ ಚೆನ್ನೈ ನಗರ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಈ ಊರಿನಲ್ಲಿ ಹೊಯ್ಸಳರ ಕಾಲದಲ್ಲಿ ಕಟ್ಟಿದ ಒಂದು



ಕಲ್ಯಾಣಿ, ಚಿಕ್ಕಜಾಲ

ಚೆನ್ನಕೇಶವ ದೇವಾಲಯವಿದೆ. ಇದು ಸು.1275ರ ರಚನೆ. ಮುಮ್ಮಡಿ ವೀರಬಲ್ಲಾಳ ಮತ್ತು ವಿಜಯನಗರ ಅರಸರ ಕಾಲದ ಏಳು ಶಾಸನಗಳು ಇಲ್ಲಿದ್ದು, ಅವು ದೇವಾಲಯಗಳಿಗೆ ಗ್ರಾಮಭೂಮಿಗಳನ್ನು ದತ್ತಿ ಕೊಟ್ಟ ವಿಷಯವನ್ನು ತಿಳಿಸುತ್ತವೆ. ಊರಿನಲ್ಲಿ ಸುಂದರವಾದ ಒಂದು ಹಳೆಯ ಕಲ್ಯಾಣಿ ಇದೆ. (ಬಿ.ಕೆ.ಜಿ.)

**ಚಿಕ್ಕಜೋಗಿಹಳ್ಳಿ :** ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಒಂದು ಗ್ರಾಮ. ಕೂಡ್ಲಿಗಿಯ ದಕ್ಷಿಣಕ್ಕೆ 26ಕಿಮೀ ದೂರದಲ್ಲಿ ಬಳ್ಳಾರಿ ಜಗಳೂರು ಮಾರ್ಗದಲ್ಲಿ ಬಳ್ಳಾರಿ ನಗರದ ನೈಋತ್ಯಕ್ಕೆ 104ಕಿಮೀ ದೂರದಲ್ಲಿದೆ.

ಇಲ್ಲಿನ ನಾಗರಿಕರು ಶ್ರಮದಾನದಿಂದ ತಮ್ಮ ಹಳ್ಳಿಯನ್ನು ಅಭಿವೃದ್ಧಿಪಡಿಸಿಕೊಂಡಿರುವುದರಿಂದ ಚಿಕ್ಕಜೋಗಿಹಳ್ಳಿ ಮಾದರಿ ಗ್ರಾಮವೆಂದು ಪ್ರಶಸ್ತಿ ಗಳಿಸಿದೆ. ಇಲ್ಲಿ ಬಾವಿಗಳನ್ನು ತೋಡಿ ಗ್ರಾಮಕ್ಕೆ ನೀರು ಸರಬರಾಜನ್ನು ಏರ್ಪಡಿಸಿಕೊಂಡಿದ್ದಾರೆ. ಚಿತ್ರದುರ್ಗ-ಬಳ್ಳಾರಿ ಹೆದ್ದಾರಿಗೆ ಸೇರುವ 30ಕಿಮೀ ದೂರದ ರಸ್ತೆಯನ್ನು ಮಾಡಿದ್ದಾರೆ. ಚಾಪೆ ಮತ್ತು ನಾರಿನ ಉತ್ಪಾದನಾ ಕೈಗಾರಿಕೆಗಳ ಸಂಘವಿದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆ ಇವೆ. ಇಲ್ಲಿ ಒಂದು ತೋಟಗಾರಿಕೆ ತರಬೇತಿ ಕೇಂದ್ರವಿದೆ. *

**ಚಿಕ್ಕತಿರುಪತಿ :** ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿ ಮಾಲೂರಿಗೆ ನೈಋತ್ಯದಲ್ಲಿ ಸರ್ಜಾಪುರ ರಸ್ತೆಯಲ್ಲಿರುವ ಒಂದು ಗ್ರಾಮ, ಯಾತ್ರಾಸ್ಥಳ. ಇಲ್ಲಿರುವ ಶ್ರೀನಿವಾಸದೇವರ ಭವ್ಯ ಗುಡಿ ಪ್ರಸಿದ್ಧ. ದೇವಾಲಯ ದೊಡ್ಡದಾಗಿದ್ದು ವಿಶಾಲವಾದ ಅಂಗಣ ಮತ್ತು ಪ್ರಾಕಾರ ಗಳನ್ನೊಳಗೊಂಡಿದೆ. ಶ್ರೀನಿವಾಸ ಎಂದು ಕರೆಯುವ ಇಲ್ಲಿರುವ ವರದರಾಜ ಮೂರ್ತಿಯನ್ನು ಸುಂದರವಾಗಿ ಕೆತ್ತಲಾಗಿದೆ. ದೇವಾಲಯದ ನವರಂಗದಲ್ಲಿ ರಾಮಾನುಜಾಚಾರ್ಯ ಮತ್ತು ವೇದಾಂತ ದೇಶಿಕರ ವಿಗ್ರಹಗಳಿವೆ. ಸ್ಥಳಪುರಾಣದ ಪ್ರಕಾರ ಯಜ್ಞೇಶ್ವರನಿಂದ ಸ್ಥಾಪಿತವಾದ ಈ ದೇವಾಲಯವನ್ನು ಜನಮೇಜಯನ ಕಾಲದಲ್ಲಿ ಪುನರ್ನಿರ್ಮಾಣ ಮಾಡಲಾಯಿತು.

ಚಿಕ್ಕತಿರುಪತಿ ಕರ್ನಾಟಕದಲ್ಲಿ ಹೆಸರುವಾಸಿಯಾಗಿದ್ದ ಧಾರ್ಮಿಕ ಕ್ಷೇತ್ರ. ಇದು ದೊಡ್ಡ ತಿರುಪತಿಯಷ್ಟೇ ಪವಿತ್ರವೆಂದು ಜನರ ನಂಬಿಕೆ. ಇಲ್ಲಿ ಪ್ರತಿವರ್ಷ ಚೈತ್ರಮಾಸದಲ್ಲಿ 7 ದಿನಗಳು ದೊಡ್ಡ ಪ್ರಮಾಣದಲ್ಲಿ ಪ್ರಸನ್ನವೆಂಕಟರಮಣಸ್ವಾಮಿ ಜಾತ್ರೆ ನಡೆಯುವುದು. ಆಗ ದನಗಳ ಜಾತ್ರೆಯೂ ನಡೆಯುವುದು. ಇಲ್ಲಿ ಯಾತ್ರಿಕರಿಗಾಗಿ ಅನೇಕ ಮಂಟಪಗಳನ್ನೂ ಛತ್ರಗಳನ್ನೂ ನಿರ್ಮಿಸಲಾಗಿದೆ. ಇಲ್ಲಿ ಪ್ರತಿ ಬುಧವಾರ ಸಂತೆ ಸೇರುತ್ತದೆ. (ಆರ್.ಪಿ.)

**ಚಿಕ್ಕದೇವರಾಜ ಒಡೆಯರ್ :** ಮೈಸೂರು ರಾಜವಂಶದ ಪ್ರಖ್ಯಾತ ದೊರೆ (1673-1704). ದೊರೆಯಾಗಿದ್ದ ದೇವರಾಜ ಒಡೆಯನ (1659-73) ಹಿರಿಯಣ್ಣ ದೊಡ್ಡದೇವರಾಜ ಒಡೆಯನ ಮಗ. 1645ರಲ್ಲಿ ಜನಿಸಿದ. ಈತನ ತಂದೆ ಇವನನ್ನು ಹಂಗಳವೆಂಬ ಗ್ರಾಮಕ್ಕೆ ಕಳಿಸಿ

ಅಂಕೆಯಲ್ಲಿರಿಸಿ, ವಿದ್ಯಾಬುದ್ಧಿಗಳನ್ನು ಕಲಿಸಿದ. ಅನಂತರ ದೇವರಾಜ ಒಡೆಯನ ಆಳಿಕೆಯ ಕಾಲದಲ್ಲಿ ಯುವರಾಜನಾಗಿ ಶ್ರೀರಂಗಪಟ್ಟಣದಲ್ಲಿದ್ದು ರಾಜ್ಯಕಾರ್ಯದಲ್ಲಿ ತರಬೇತಿಪಡೆದು ದೇವರಾಜ ಅಪುತ್ರಕನಾಗಿ ಮರಣ ಹೊಂದಿದ ಅನಂತರ ಪಟ್ಟಕ್ಕೆ ಬಂದು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ.

ಈತ ಮೊದಲು ಶ್ರೀರಂಗಪಟ್ಟಣದಲ್ಲಿ ಫಿರಂಗಿಗಳನ್ನಿರಿಸಿ ಅದರ ಭದ್ರತೆಯನ್ನು ಹೆಚ್ಚಿಸಿದ. ಅನಂತರ ಹನ್ನೆರಡು ಸಾವಿರ ಕುದುರೆ ಮತ್ತು ಒಂದು ಲಕ್ಷ ಕಾಲ್ಬಲದ ಸೈನವನ್ನು ಕಟ್ಟಿ ದಿಗ್ವಿಜಯವನ್ನು ಕೈಕೊಂಡು ಅನೇಕ ಪ್ರದೇಶಗಳನ್ನು ಗೆದ್ದ. 1676ರಲ್ಲಿ ನರಸಪ್ಪ ಒಡೆಯನಿಂದ ಚಿಕ್ಕದೇವರಾಯನ ದುರ್ಗ, ಚಿಕ್ಕಪ್ಪಗೌಡನಿಂದ ದೊಡ್ಡ ದೇವಗಗನಗಿರಿ, ಜಹಾಂಗೀರ್ ಖಾನನಿಂದ ಹೊನ್ನವಳ್ಳಿ, ಹುಸೇನ್ ಖಾನ್‌ನಿಂದ ಬೊಮ್ಮಸಮುದ್ರ ಮತ್ತು ಭುಜಂಗಯ್ಯನಿಂದ ತೊಡನಾಡುಗಳನ್ನು ಗೆದ್ದ. 1678ರಲ್ಲಿ ಘಟ್ಟಿ ಮೊದಲಿಯಾರಿಂದ ಅಂದೂರು ಮತ್ತು ಚಿಕ್ಕಪ್ಪಗೌಡನಿಂದ ಮಿಡಗೇಶಿ, ಮಧುಗಿರಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ಗೆದ್ದು ತನ್ನ ರಾಜ್ಯವನ್ನು ಬಿಜಾಪುರ ರಾಜ್ಯದ ಗಡಿವರೆಗೆ ವಿಸ್ತರಿಸಿದ್ದ. 1687ರಲ್ಲಿ ಖಾಸಿಂಖಾನನಿಂದ ತುಮಕೂರನ್ನೂ ಹಿಂದೆ ತನ್ನ ತಂದೆ ಗೆದ್ದಿದ್ದ ಚಿಕ್ಕನಾಯಕನಹಳ್ಳಿಯನ್ನೂ ಮರಾಠಾ ವೆಂಕೋಜಿರಾಯ ವಶಪಡಿಸಿಕೊಂಡಿದ್ದರಿಂದ ಅದನ್ನೂ ಪುನಃ ಗೆದ್ದುದೇ ಅಲ್ಲದೆ ಆ ಮರಾಠನಿಂದ ಕಂದಿಕೆರೆ, ತ್ಯಾಮಗೊಂಡ್ಲು, ಮನುಗೊಂಡೆ ದುರ್ಗ, ವಾಮಲೂರು, ಧರ್ಮಪುರಿ ಮತ್ತು ಪರಮತಿಗಳನ್ನೂ ವಶಪಡಿಸಿಕೊಂಡ. 1688ರಲ್ಲಿ ಶಂಖಗಿರಿಯ ಚಿಕ್ಕಯ್ಯನಿಂದ ಆವನಿ, ಪೇರೂರು, ಅರಶರವಾಣಿ, ಹೊಸಕೋಟೆ ಮತ್ತು ಶಂಖಗಿರಿಗಳನ್ನೂ ಶಾಲ್ಯದವರಿಂದ ಮನ್ನಾರಗುಡಿಯನ್ನೂ ಗೆದ್ದ. ಮರಾಠಾ ಘೋರಜಿಯಿಂದ ಅನಂತಗಿರಿಯನ್ನೂ ಗೆದ್ದ. ಕೊಯಮುತ್ತೂರಿನ ಗುರಿಕಾರನಾದ ಲಿಂಗರಾಜಯ್ಯನಿಂದ ಕಾವೇರಿಪಟ್ಟಣವನ್ನೂ ಕುಂತೂರು ದುರ್ಗವನ್ನೂ ಬಾಗಡಿ ಪಾಳೆಯಗಾರನಿಂದ ಬಾಗಡಿಯನ್ನೂ ತನ್ನ ರಾಜ್ಯಕ್ಕೆ ಸೇರಿಸಿದ. 1690ರಲ್ಲಿ ಇಕ್ಕೇರಿ ಅರಸನಿಂದ ಹಾರ್‍ನಹಳ್ಳಿ, ಬಾಣಾವರ, ಕಡೂರು, ಸಕ್ಕರೆಪಟ್ಟಣ, ಬೇಲೂರು, ವಸ್ತಾರೆ ಮತ್ತು ಹಾಸನಗಳನ್ನು ಗೆದ್ದು ತನ್ನ ರಾಜ್ಯವನ್ನು ಬಾಬಾಬುಡನ್‌ಗಿರಿಯವರೆಗೆ ವಿಸ್ತರಿಸಿದ. ಐಗೂರು ಕೃಷ್ಣಪ್ಪನಾಯಕನಿಂದ ಐಗೂರು, ಚಿಕ್ಕಮಗಳೂರು, ಮಹಾರಾಜನದುರ್ಗ, ಅರಕಲಗೂಡು, ಸಕಲೇಶಪುರ ಮತ್ತು ಕೊಡ್ಲಿಪೇಟೆಗಳನ್ನೂ ಚಿಕ್ಕಪ್ಪನಾಯಕನಿಂದ 1697ರಲ್ಲಿ ಶಾಲ್ಯ, ಶಾದಮಂಗಲ, ನಾಮಕಲ್ಲು, ತಮ್ಮಂಬಟ್ಟಿಗಳನ್ನೂ ಪಡೆದ. 1675ರ ಈತನ ಒಂದು ಶಾಸನ ಈ ರಾಜ ಮಧುರೆಯ ಚೊಕ್ಕನಾಥ ನಾಯಕನನ್ನು ಸೋಲಿಸಿ ತ್ರಿಪುರ ಮತ್ತು ಅನಂತಪುರಿಗಳನ್ನು ಸಾಧಿಸಿಕೊಂಡನೆಂದು ಹೇಳುತ್ತದೆ.

1687ರಲ್ಲಿ ಬೆಂಗಳೂರು ಕೋಟೆಯನ್ನು ಮರಾಠರಿಂದ 3 ಲಕ್ಷ ರೂಪಾಯಿಗಳಿಗೆ ಕೊಂಡ. ಆದರೆ ಅಷ್ಟರಲ್ಲಿ ಪೆನುಗೊಂಡೆಯ ಖಾಸಿಂಖಾನ ಆ ಕೋಟೆಯನ್ನು ವಶಪಡಿಸಿಕೊಂಡನಾದರೂ ಚಿಕ್ಕದೇವರಾಜ ಆ ಖಾನನನ್ನು ಓಡಿಸಿ ಬೆಂಗಳೂರನ್ನು ಪುನಃ ಗೆದ್ದುಗೊಂಡು ಅಲ್ಲಿ ತನ್ನ ಅಧಿಕಾರಿಗಳನ್ನು ನೇಮಿಸಿದ್ದೇ ಅಲ್ಲದೆ ಅಲ್ಲಿ 12,000 ಮಗ್ಗದ ಜನರನ್ನು ತಂದಿರಿಸಿ ಅವರ ಜವಳಿ ಅರಮನೆಗೆ ಹಾಗೂ ಎಲ್ಲ ಸೀಮೆಗಳಿಗೂ ಹೋಗುವಂತೆ ಏರ್ಪಾಟು ಮಾಡಿದ್ದರಿಂದ ಬೆಂಗಳೂರು ವಾಣಿಜ್ಯ ಕೇಂದ್ರವಾಗಿ ಬೆಳೆಯಿತು.

ಮಾಗಡಿಗೆ ಮುತ್ತಿಗೆ ಹಾಕಿ ಅಲ್ಲಿಯ ಕೆಂಪೇಗೌಡನಿಂದ ಕಪ್ಪವನ್ನು ಸ್ವೀಕರಿಸಿದ. ಮಧುರೆ, ತಿರುಚಿನಾಪಳ್ಳಿ ಮತ್ತಿತರ ಪಾಳೆಯಗಾರರಿಂದ ಬರಬೇಕಾದ ಕಪ್ಪ 10-12 ವರ್ಷಗಳಿಂದ ಬಾರದೆ ನಿಂತುಹೋಗಿದ್ದುದರಿಂದ ಈತ ತನ್ನ ಸೇನಾನಿ ಕುಮಾರಯ್ಯನನ್ನು ಸೈನ್ಯದೊಂದಿಗೆ ಆ ಪ್ರಾಂತ್ಯಗಳಿಗೆ ಕಳಿಸಿದ. ಐಗೂರು ಕೃಷ್ಣಪ್ಪ ನಾಯಕನಿಗೆ, ಅವನ ಬೇಡಿಕೆಯ ಮೇರೆಗೆ ಐಗೂರು ಸಕಲೇಶಪುರಗಳನ್ನು ಕೊಟ್ಟು ಇಕ್ಕೇರಿಯ ಅರಸನಿಗೆ ವಸ್ತಾರೆಯನ್ನು ಕೊಟ್ಟು ಕಪ್ಪವನ್ನು ನಿಗದಿ ಮಾಡಿದ. ಈತ ಕೊಡಗು ಮತ್ತು ಮಲೆಯಾಳ ಪ್ರಾಂತ್ಯಗಳಿಂದಲೂ ಆನೆ, ಕುದುರೆ, ಧನ ಧಾನ್ಯಾದಿಗಳನ್ನೂ ಕಪ್ಪವನ್ನೂ ಪಡೆದುದಾಗಿ ಹೇಳಿಕೆಗಳಿವೆ. 1686ರ ಒಂದು ಶಾಸನದಲ್ಲಿ ಈತ ನಾಸಿಕದ (ಪಂಚವಟಿ) ಮರಾಠರನ್ನು ಸೋಲಿಸಿ ದಾದಾಜಿಯನ್ನು ಯುದ್ಧದಲ್ಲಿ ಕೊಂದನೆಂದೂ ಶಿವಾಜಿಯ ಮಗನಾದ ಶಂಭೂಜಿ, ಶಿವಾಜಿಯ ತಮ್ಮನಾದ ಏಕೋಜಿ (ವೆಂಕೋಜಿ) ಮತ್ತು ಇಕ್ಕೇರಿಯ ಬಸವನನ್ನೂ ಹೆದರಿಸಿದನೆಂದೂ ಹೇಳುತ್ತದೆ.

ಚಿಕ್ಕದೇವರಾಜ ಖಾಸಿಂಖಾನನ ಮೂಲಕ ಔರಂಗಜೇಬನ ಸಖ್ಯವನ್ನು ಬೆಳೆಸಿದ. ಔರಂಗಜೇಬ ಚಿಕ್ಕದೇವರಾಜನಿಗೆ ರಾಜಾ ಜಗದೇವ್ ಎಂಬ ಬಿರುದನ್ನೂ ಒಂದು ಮೊಹರನ್ನೂ ಅನೇಕ ಕಾಣಿಕೆಗಳನ್ನೂ ನೀಡಿ ದಂತದ ಸಿಂಹಾಸನದ ಮೇಲೆ ಕೂರಲು ಅನುಮತಿಯನ್ನು ಕೊಟ್ಟ.

ಚಿಕ್ಕದೇವರಾಜ ಒಡೆಯನ ರಾಜ್ಯ ದಕ್ಷಿಣದಲ್ಲಿ ಪಳನಿ ಮತ್ತು ಅಣ್ಣಾಮಲೈಗಳಿಂದ ಉತ್ತರದಲ್ಲಿ ಮಿಡಗೇಶಿಯವರೆಗೂ ಪೂರ್ವದಲ್ಲಿ ಬಾರಾಮಹಲ್‌ನಿಂದ ಪಶ್ಚಿಮದಲ್ಲಿ ಕೊಡಗು ಮತ್ತು ಬಲಂಗಳವರೆಗೂ ವ್ಯಾಪಿಸಿತ್ತು.

ಚಿಕ್ಕದೇವರಾಜ 32 ವರ್ಷಕಾಲ ವಿಜೃಂಭಣೆಯಿಂದ ಆಳಿ 1704ರಲ್ಲಿ ಮೃತನಾದ.

ಚಿಕ್ಕದೇವರಾಜ ಯುದ್ಧದಲ್ಲಷ್ಟೇ ಅಲ್ಲದೆ ಆಡಳಿತದಲ್ಲೂ ಗಟ್ಟಿಗನಾಗಿದ್ದ. ಇವನ ಕಾಲದ ಹೊತ್ತಿಗೆ ದೊಡ್ಡದಾಗಿ ಬೆಳೆದಿದ್ದ ತನ್ನ ರಾಜ್ಯದ ಸುಗಮ ಆಡಳಿತ ನಿರ್ವಹಣೆಗೆ ಹೊಸ ವ್ಯವಸ್ಥೆಗಳನ್ನು ಜಾರಿಗೆ ತಂದ. ಮಂತ್ರಾಲೋಚನಾಸಭೆಯನ್ನು ರೂಪಿಸಿದ. ಔರಂಗಜೇಬನ ಸರ್ಕಾರದಲ್ಲಿ 18 ಇಲಾಖೆಗಳಿರುವುದಾಗಿ ತಿಳಿದು ತಾನೂ 18 ಕಚೇರಿಗಳನ್ನು ತೆರೆದ. 8 ರಿಂದ 16 ಗ್ರಾಮಗಳನ್ನು ಸೇರಿಸಿ ಹೋಬಳಿಗಳನ್ನಾಗಿ ಮಾಡಿ ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿ ಅವರ ವೇತನವನ್ನು ನಿಗದಿ ಮಾಡಿದ. ಕೋಟೆಕೊತ್ತಲಗಳಿಗೂ ಅಧಿಕಾರಿಗಳನ್ನು ನೇಮಿಸಿ ವೇತನಗಳನ್ನು ನಿಗದಿ ಪಡಿಸಿದ. ರಾಜ್ಯದಲ್ಲೆಲ್ಲ ಅಂಚೆಪದ್ಧತಿಯನ್ನು ಜಾರಿಗೆ ತಂದ. ಈ ಇಲಾಖೆ ಗೂಢಚರ್ಯೆಯ ಕೆಲಸವನ್ನು ಕೂಡ ನಿರ್ವಹಿಸುತ್ತಿತ್ತು. ರಾಜ್ಯದಲ್ಲಿ ಕಂದಾಯ, ತೆರಿಗೆ ಇತ್ಯಾದಿ ಆದಾಯ ಮೂಲಗಳನ್ನು ಕ್ರಮಪಡಿಸಿ ರಾಜ್ಯದ ಬೊಕ್ಕಸವನ್ನು ಹೆಚ್ಚಿಸಿ ಅತ್ಯಂತ ಸ್ಥಿತಿವಂತ ರಾಜನಾಗಿ ನವಕೋಟಿನಾರಾಯಣನೆಂಬ ಬಿರುದನ್ನು ಪಡೆದ. ಅಳತೆ ಮತ್ತು ತೂಕಗಳನ್ನು ವ್ಯವಸ್ಥಿತಗೊಳಿಸಿ ಅವುಗಳ ಮೇಲೆ ರಾಜಮುದ್ರೆಯನ್ನು ಹಾಕಿಸಿ, ಹಾಗೆ ಮುದ್ರೆಯುಳ್ಳ ಅಳತೆಗಳನ್ನೇ ಬಳಸಬೇಕೆಂದು ವಿಧಿಸಿದ. ಅಧಿಕಾರಿಗಳಿಗೆ ಕೂಡ ರಾಜಮುದ್ರೆಯನ್ನೊದಗಿಸಿದ. ಲಂಚ, ಅಕ್ರಮ ಮುಂತಾದುವನ್ನು ನಿರೋಧಿಸಿದ. ಶ್ರೀರಂಗಪಟ್ಟಣದ ಪಶ್ಚಿಮದಲ್ಲಿ ಕಾವೇರಿ ನದಿಗೆ ಕಟ್ಟೆಯನ್ನು ಕಟ್ಟಿ ಎರಡು ಕಾಲುವೆಗಳ ನಿರ್ಮಾಣ ಮೊದಲಾದ ಕಾರ್ಯಗಳಿಂದ ರಾಜ್ಯದ ಆರ್ಥಿಕ ಉತ್ಪನ್ನ ಹೆಚ್ಚುವಂತೆ ಮಾಡಿದ.

ಈತನ ರಾಜಧಾನಿ ಶ್ರೀರಂಗಪಟ್ಟಣ ದಕ್ಷಿಣ ಭಾರತದ ಮುಖ್ಯ ರಾಜಕೀಯ ಕೇಂದ್ರವಾಗಿ, ಸಂಪದ್ಭರಿತ ಪಟ್ಟಣವಾಗಿ ಬೆಳೆದುದಲ್ಲದೆ ಪ್ರಸಿದ್ಧ ವಿದ್ಯಾಕೇಂದ್ರವೂ ಆಗಿದ್ದಿತು. ಈತನ ಧರ್ಮಶ್ರದ್ಧೆಯೂ ಪ್ರಸಿದ್ಧವಾಗಿದೆ. ಅನೇಕ ಅಗ್ರಹಾರಗಳನ್ನೂ ಸತ್ರಗಳನ್ನೂ ತಟಾಕಗಳನ್ನೂ ನಿರ್ಮಿಸಿದ. ಸ್ವತಃ ವೈಷ್ಣವನಾದರೂ ಇತರ ಮತಗಳಿಗೂ ಉತ್ತೇಜನವಿತ್ತ. ಶ್ರೀಮುಷ್ಣದಲ್ಲಿದ್ದ ಶ್ವೇತವರಾಹ ಸ್ವಾಮಿಯ ವಿಗ್ರಹವನ್ನು ಶ್ರೀರಂಗಪಟ್ಟಣಕ್ಕೆ ತಂದು ಅಲ್ಲಿ ಒಂದು ಗುಡಿಯನ್ನು ಕಟ್ಟಿಸಿ ಅದರಲ್ಲಿ ಪ್ರತಿಷ್ಠಾಪಿಸಿದ (ಈ ವಿಗ್ರಹವನ್ನು ಅನಂತರ ಪೂರ್ಣಯ್ಯ ಮೈಸೂರಿಗೆ ಸಾಗಿಸಿದ). 1673ರಲ್ಲಿ ಗುಂಡಲು ಗ್ರಾಮದಲ್ಲಿ ಒಂದು ಗುಡಿಯನ್ನು ಕಟ್ಟಿಸಿದ. ಬೆಂಗಳೂರಿನ ಕೋಟೆ ವೆಂಕಟರಮಣ ದೇವಾಲಯ ಸಹ ಈತನ ಕಾಲದ ಕೃತಿ. (ಎಂ.ಪಿ.;ಬಿ.ಎಂ.)

ಚಿಕ್ಕದೇವರಾಜ ಸ್ವತಃ ಕವಿಯೂ ಕವಿಪೋಷಕನೂ ಆಗಿದ್ದ. ಗೀತಗೋಪಾಲ, ಚಿಕದೇವರಾಜ ಬಿನ್ನಪ, ಭಾಗವತ, ಭಾರತ ಮತ್ತು ಶೇಷಧರ್ಮ ಎಂಬ ಕೃತಿಗಳು ಈತನ ಹೆಸರಿನಲ್ಲಿ ಪ್ರಸಿದ್ಧವಾಗಿವೆ. ಕಡೆಯ

ಮೂರು ಗ್ರಂಥಗಳು ಆಯಾ ಹೆಸರಿನ ಸಂಸ್ಕೃತ ಮೂಲಗ್ರಂಥಗಳಿಗೆ ಅರಸನು ತನ್ನ ಆಸ್ಥಾನದಲ್ಲಿನ ವಿದ್ವಾಂಸರಿಂದ ಬರೆಯಿಸಿದ ಕನ್ನಡ ಟೀಕೆಗಳು. ಭಾರತ, ಶಾಂತಿಪರ್ವದಿಂದ ಕೊನೆಯವರೆಗೆ ಮಾತ್ರ ಅನುವಾದವಾಗಿದೆ. ಈತನ ಹೆಸರಿನಲ್ಲಿರುವ ಭಾಗವತಕ್ಕೆ ಚಿಕದೇವರಾಜ ಸೂಕ್ತಿವಿಲಾಸಂ ಎಂಬ ಹೆಸರೂ ಇದೆ. ಗ್ರಂಥ' ಸಂಪೂರ್ಣವಾಗಿ ಗದ್ಯದಲ್ಲಿದೆ. ಒಂದೊಂದು ಅಧ್ಯಾಯದ ಮೊದಲಲ್ಲಿ ಒಂದು ಸಂಸ್ಕೃತ ಶ್ಲೋಕವನ್ನು ಕೊಟ್ಟು ಭಾಗವತದ ಒಂದು ಅಧ್ಯಾಯದ ಕಥೆಯನ್ನು ಟೀಕೆಯ ರೂಪದಲ್ಲಿ ಬರೆದಿದೆ. ಶೇಷಧರ್ಮ ಗದ್ಯದಲ್ಲಿದೆ.

ಚಿಕ್ಕದೇವರಾಜನ ಕೃತಿಗಳಲ್ಲಿ ಗೀತಗೋಪಾಲ ಮತ್ತು ಚಿಕದೇವರಾಜ ಬಿನ್ನಪಂ ಮುಖ್ಯವಾದುವು. ಗೀತಗೋಪಾಲ ಜಯದೇವಕವಿಯ ಪ್ರಸಿದ್ಧ ಗೀತಗೋವಿಂದ ಎಂಬ ಸಂಸ್ಕೃತ ಹಾಡುಗಬ್ಬದ ಮಾದರಿಯನ್ನು ಅನುಸರಿಸಿ ಕನ್ನಡದಲ್ಲಿ ಬರೆದ ಕೃಷ್ಣಸ್ತೋತ್ರಾತ್ಮಕವಾದ ಹಾಡುಗಳ ಸಂಕಲನ. ಇದರಲ್ಲಿ ಪೂರ್ವಭಾಗ, ಉತ್ತರಭಾಗ ಎಂಬ ಎರಡು ಭಾಗಗಳಿವೆ. ಪ್ರತಿಭಾಗದಲ್ಲಿ 7 ಖಂಡಗಳೂ ಪ್ರತಿಖಂಡದಲ್ಲಿ 7 ಪದ ಅಥವಾ ಹಾಡುಗಳೂ ಇವೆ. ಪ್ರತಿ ಖಂಡಕ್ಕೂ ಕವಿ ಸಪ್ತಪದಿ ಎಂಬ ಹೆಸರನ್ನು ಕೊಟ್ಟಿದ್ದಾನೆ. ಒಂದೊಂದು



ಬೆಂಗಳೂರಿನ ಕೋಟೆ ವೆಂಕಟರಮಣಸ್ವಾಮಿ ದೇವಾಲಯ, ಚಿಕ್ಕದೇವರಾಜ ಒಡೆಯರ ಕಾಲದ ನಿರ್ಮಾಣ

ಸಪ್ತಪದಿಯಲ್ಲೂ ಹೇಳಿರುವ ವಿಷಯದ ಸಾರಾಂಶ ಆಯಾ ಸಪ್ತಪದಿಯ ಆದಿಯಲ್ಲಿ ವಚನರೂಪದಲ್ಲಿ ಕೊಟ್ಟಿದೆ. ಇದರಲ್ಲಿ ಸಂಗೀತಕ್ಕೆ ಬಹಳ ಸುಲಭವಾಗಿ ಅಳವಡುವ ಭಾವಪೂರ್ಣವಾದ ಸುಂದರಗೀತೆಗಳಿವೆ. ಈ ಕೃತಿಯನ್ನು ರಚಿಸಿದ ಚಿಕ್ಕದೇವರಾಜ ಕವಿತೆ ಕಟ್ಟುವುದರಲ್ಲಷ್ಟೆ ಅಲ್ಲದೆ ಸಂಗೀತಕಲೆಯಲ್ಲಿಯೂ ಪರಿಣತನಾಗಿದ್ದನೆಂಬ ವಿಷಯ ಇದರಿಂದ ಸ್ಪಷ್ಟವಾಗುತ್ತದೆ. ಈ ಗ್ರಂಥ'ದ ಕೆಲವು ಕೀರ್ತನೆಗಳಲ್ಲಿ ತಿರುಮಲಾರ್ಯನಿಗೊಲಿದ ರಾಜಗೋಪಾಲ ಎಂಬ ಅಂಕಿತವಿರುವುದರಿಂದ ಇವುಗಳನ್ನು ಅರಸನ ಅತ್ಯಂತ ಪ್ರೀತಿಪಾತ್ರನಾದ ತಿರುಮಲಾರ್ಯ ಕವಿಯೇ ಬರೆದಿರಬಹುದೆಂದೂ ಊಹಿಸಲಾಗಿದೆ.

ಚಿಕದೇವರಾಜ ಬಿನ್ನಪ ವಿಶಿಷ್ಟಾದ್ವೈತಮತದ ಸಾರವನ್ನು ನಿರೂಪಿಸ ಹೊರಟ, ಮೇಲುಕೋಟೆಯ ನಾರಾಯಣಸ್ವಾಮಿಯಲ್ಲಿ ಕವಿ ಅರಿಕೆ ಮಾಡಿಕೊಂಡ 30 ಬಿನ್ನಪಗಳ ಗದ್ಯಗ್ರಂಥ. ಗ್ರಂಥದ ಮೊದಲಿಗೆ ಯದುಗಿರಿ ನಾರಾಯಣನ ಸ್ತುತಿ, ಅನಂತರ ಗದ್ಯಪದ್ಯರೂಪದಲ್ಲಿ ಕವಿಯ ಪರಾಕ್ರಮಾದಿಗಳು ವರ್ಣಿತವಾಗಿವೆ. ಪ್ರತಿಯೊಂದು ಬಿನ್ನಪದ ಆರಂಭದಲ್ಲಿಯೂ ಒಂದೊಂದು ಕಂದಪದ್ಯವಿದೆ. ಉಳಿದ ಭಾಗವೆಲ್ಲ ಗದ್ಯರೂಪದಲ್ಲಿದೆ. ಗದ್ಯಶೈಲಿ ಹಳಗನ್ನಡವಾಗಿದ್ದು ಪ್ರೌಢವಾಗಿದೆ. ಅಕ್ಕರವನರಿಯದೊಕ್ಕಲಿಗರಿಗೆ, ಪೆಣ್ಗಳಿಗೆ ಸಕ್ಕದದಿಂದ ತತ್ತ್ವಜ್ಞಾನವಾಗುವುದು ಕಷ್ಟ ಎಂದು ಎಲ್ಲರೂ ತಿಳಿಯುವಂತೆ ಕನ್ನಡದ ಮೆಲ್ನುಡಿಗಳಲ್ಲಿ ಅಖಿಲ ತತ್ತ್ವಾರ್ಥಗಳ ಸಂಗತಿಗೊಳಿಸಿ ಬಿನ್ನಪರೂಪವಾಗಿ ಹೇಳುತ್ತಿರುವೆನೆಂದು ಕವಿ ಹೇಳಿಕೊಂಡಿದ್ದಾನೆ. ಕನ್ನಡ ಗದ್ಯಸಾಹಿತ್ಯದ ಬೆಳೆವಣಿಗೆಯಲ್ಲಿ ಬಿನ್ನಪಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. (ಕೆ.ವಿಇ.;ಸಿ.ಕೆ.ಎನ್.)

**ಚಿಕ್ಕನಾಯಕನಹಳ್ಳಿ :** ತುಮಕೂರು ಜಿಲ್ಲೆ ತಿಪಟೂರು ಉಪ ವಿಭಾಗಕ್ಕೆ ಸೇರಿದ ಒಂದು ತಾಲ್ಲೂಕು ಹಾಗೂ ಅದರ ಮುಖ್ಯ ಸ್ಥಳ. ಉತ್ತರಕ್ಕೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳು, ಪೂರ್ವಕ್ಕೆ ಶಿರಾ ಮತ್ತು ಗುಬ್ಬಿ ತಾಲ್ಲೂಕುಗಳು, ದಕ್ಷಿಣಕ್ಕೆ ತಿಪಟೂರು ತಾಲ್ಲೂಕು ಮತ್ತು ಪಶ್ಚಿಮದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು ಈ ತಾಲ್ಲೂಕನ್ನು ಸುತ್ತುವರೆದಿದೆ. ಶೆಟ್ಟಿಕೆರೆ, ಚಿಕ್ಕನಾಯಕನಹಳ್ಳಿ, ಕಂದಿಕೆರೆ, ಹಂದನಕೆರೆ ಮತ್ತು ಹುಳಿಯಾರು ಈ ತಾಲ್ಲೂಕಿನ ಹೋಬಳಿಗಳು. ಒಟ್ಟು 234 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1114.2ಚ.ಕಿಮೀ. ಜನಸಂಖ್ಯೆ 2,09,339.

ತಾಲ್ಲೂಕಿನ ಪೂರ್ವದಲ್ಲಿ ದಕ್ಷಿಣೋತ್ತರವಾಗಿ ಸಮಾನಾಂತರದಲ್ಲಿ ಸಾಗಿರುವ ತಗ್ಗಿನ ಕಣಶಿಲೆಯ ಬೆಟ್ಟಗಳ ಮೂರು ಸಾಲುಗಳಿವೆ. ಈ ಪ್ರದೇಶ ವೇದಾವತಿ ನದಿಗೆ ನೀರೊದಗಿಸುವಂತಿದೆ. ಶೆಟ್ಟಿಕೆರೆಯ ದಕ್ಷಿಣದಿಂದ ಉತ್ತರಕ್ಕೆ ಹುಳಿಯಾರಿನ ಕಡೆಗೆ ಹರಿಯುವ ಒಂದು ತೊರೆ ಮತ್ತು ಯಳನಾಡಿನಿಂದ ಬೂದಿಹಾಳಿನ ವಾಯುವ್ಯದ ಕಡೆಗೆ ಹರಿಯುವ ಮತ್ತೊಂದು ತೊರೆ ಈ ತಾಲ್ಲೂಕಿನಲ್ಲಿ ಹರಿದು ವೇದಾವತಿಯನ್ನು ಸೇರುತ್ತವೆ. ತಾಲ್ಲೂಕಿನ ಪ್ರದೇಶದ ತಳಶಿಲೆ ಶಿಸ್ಟ್ ಜಾತಿಯದಾಗಿದ್ದು, ಹೆಚ್ಚು ಪ್ರದೇಶ ಮರಳುಮಿಶ್ರಿತ ಕೆಂಪುಮಣ್ಣಿನದು, ಸ್ವಲ್ಪವೇ ಏರು ತಗ್ಗುಗಳಿಂದ ಕೂಡಿದೆ. ಜಾಣೆಹಾರು ಬೆಟ್ಟಗಳಲ್ಲಿ ಮ್ಯಾಂಗನೀಸಿನ ಮತ್ತು ಕೆಂಪು ಹಾಗೂ ಬಿಳಿ ಮತ್ತು ಕಾವಿಮಣ್ಣಿನ ನಿಕ್ಷೇಪಗಳುಂಟು. ಬೆಳ್ಳಾರದ ಬಳಿ ಚಿನ್ನ ದೊರಕುತ್ತದೆ. ಇತ್ತೀಚಿನವರೆಗೂ ಇಲ್ಲಿ ಚಿನ್ನದ ಗಣಿಗಳು ಉಪಯೋಗದಲ್ಲಿದ್ದುವು. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಸುಣ್ಣಕಲ್ಲಿನ ಹರಹುಗಳಿವೆ.

ಈ ತಾಲ್ಲೂಕಿನಲ್ಲಿ ಮಳೆ ಸಾಮಾನ್ಯವೆನ್ನಬಹುದು. ವಾರ್ಷಿಕ ಸರಾಸರಿ 814.81ಮಿಮೀ. ಹೆಚ್ಚು ವ್ಯವಸಾಯ ಕೆರೆ ನೀರನ್ನು ಅವಲಂಬಿಸಿದೆ. ಸುವರ್ಣಮುಖಿ ನದಿಗೆ ಅಡ್ಡಲಾಗಿ 1892ರಲ್ಲಿ ರಚಿತವಾದ ಬೋರನಕಣಿವೆ ಜಲಾಶಯ ಈ ತಾಲ್ಲೂಕಿನ ದೊಡ್ಡ ಕೆರೆ; ಬೆಟ್ಟಗಳ ನಡುವಣ ಕಣಿವೆಯ ನೆಲ ಫಲವತ್ತಾದ್ದು. ಇಲ್ಲಿ ತೆಂಗು ಮತ್ತು ಅಡಕೆ ತೋಟಗಳಿವೆ. ರಾಗಿ, ಹುರುಳಿ, ಜೋಳ, ತೊಗರಿ ಮುಖ್ಯ ಬೆಳೆಗಳು. ಇಡೀ ಜಿಲ್ಲೆಯಲ್ಲಿ ತೆಂಗಿನ ಉತ್ಪತ್ತಿಯಲ್ಲಿ ತಿಪಟೂರನ್ನು ಬಿಟ್ಟರೆ ಚಿಕ್ಕನಾಯಕನಹಳ್ಳಿ ಎರಡನೆಯದು.

ಈ ತಾಲ್ಲೂಕಿನಲ್ಲಿ ರೈಲುಮಾರ್ಗವಿಲ್ಲದಿದ್ದರೂ ಇತರ ವಾಹನಗಳ ಉತ್ತಮ ಮಾರ್ಗಗಳಿದ್ದು ವ್ಯಾಪಾರಾಭಿವೃದ್ಧಿಗೆ ಅನುಕೂಲವಾಗಿದೆ. ಉಣ್ಣೆ ನೂಲುವವರ ಪರಸ್ಪರ ಸಹಾಯಕ ಸಂಘಗಳು ಈ ತಾಲ್ಲೂಕಿನ ಯಳನಾಡು ಮತ್ತು ಚಿಕ್ಕನಾಯಕನಹಳ್ಳಿಗಳಲ್ಲಿವೆ. ರೇಷ್ಮೆ ನೇಯುವ, ಕೈಮಗ್ಗದ ಮತ್ತು ಕುಂಬಾರಿಕೆ ಉದ್ಯಮಗಳಿದ್ದು ಕುಶಲ ಕೈಗಾರಿಕಾ ಸಂಘವೂ ಇದೆ. ಈ ತಾಲ್ಲೂಕಿನಲ್ಲಿ ಖಾದಿ ಗ್ರಾಮೋದ್ಯೋಗಕ್ಕೆ ಸಂಬಂಧಿಸಿದ ಕೈಗಾರಿಕಾ ಸಂಘಗಳೂ ಇವೆ.

ಈ ತಾಲ್ಲೂಕಿನ ದಬ್ಬೆಘಟ್ಟದಲ್ಲಿ 13ನೆಯ ಶತಮಾನದ ಮಹಾಲಿಂಗೇಶ್ವರ ದೇವಾಲಯವಿದೆ. ಅಲ್ಲಿಯ ಮೂರು ಗರ್ಭಗುಡಿಗಳಲ್ಲಿ ಹೊಯ್ಸಳೇಶ್ವರ, ಬ್ರಹ್ಮೇಶ್ವರ ಮತ್ತು ಮಾದೇಶ್ವರ ಲಿಂಗಗಳುಂಟು. ದೊಡ್ಡ ಬಿದರೆಯಲ್ಲಿ ಈಶ್ವರ ದೇವಾಲಯವಿದೆ. ಅಲ್ಲಿಯ ಪಾತಾಳಲಿಂಗೇಶ್ವರ ಗುಡಿಯಲ್ಲಿ 100 ಲಿಂಗಗಳಿವೆ. ಯಳನಾಡು ದ್ರಾವಿಡ ಶೈಲಿಯ ಸಿದ್ಧರಾಮೇಶ್ವರ ದೇವಾಲಯದಿಂದ ಪ್ರಸಿದ್ಧ. ವೀರಶೈವ ಗುರು ಸಿದ್ಧರಾಮ ಇಲ್ಲಿ ತಪಸ್ಸು ಮಾಡಿದ್ದನಂತೆ. ದೇವಾಲಯದ ಪೂಜಾಮೂರ್ತಿ ಲಿಂಗಾಕೃತಿಯ ಹುತ್ತ. ಹೊನ್ನೆಬಾಗಿ ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಬೆಟ್ಟದ ಮೇಲೆ ರಂಗನಾಥಸ್ವಾಮಿ ಗುಡಿಯಿದೆ. ಹುಳಿಯಾರು (ನೋಡಿ) ಇನ್ನೊಂದು ಐತಿಹಾಸಿಕ ಸ್ಥಳ. ಕಂದಿಕೆರೆ ಗ್ರಾಮದಲ್ಲಿ ಒಂದು ಪುರಾತನ ಪಾಳುಬಿದ್ದಿರುವ ಕೋಟೆಯಿದೆ. ಇಲ್ಲಿ ಗೋಪಾಲಕೃಷ್ಣ ದೇವಾಲಯ ಮತ್ತು ಒಂದು ಬಸ್ತಿ ಇವೆ. ಕುಪ್ಪೂರಿನಲ್ಲಿ ಮರುಳಸಿದ್ಧೇಶ್ವರರ ಗದ್ದುಗೆ ಇದೆ.

ಶೆಟ್ಟಿಕೆರೆಯಲ್ಲಿ (ನೋಡಿ) ಯೋಗಮಾಧವ ಮತ್ತು ರಂಗನಾಥಸ್ವಾಮಿ ದೇವಾಲಯಗಳಿವೆ. ಒಡೇರಹಳ್ಳಿಯ ಶಾಂತಮಲ್ಲಪ್ಪ ಮತ್ತು ಹೆಂಜೇರಪ್ಪ (ಭೈರವ) ದೇವಾಲಯಗಳು ಮತ್ತು ಪಂಕಜನಹಳ್ಳಿಯ ಮಲ್ಲಿಕಾರ್ಜುನ ದೇವಾಲಯ ಪ್ರಸಿದ್ಧವಾದವು.

ಈ ತಾಲ್ಲೂಕಿನ ದಾಸುಡಿಯಲ್ಲಿ ಚೈತ್ರ ಶುದ್ಧ ಸಪ್ತಮಿಯಲ್ಲಿ ನಡೆಯುವ ಆಂಜನೇಯಸ್ವಾಮಿ ಜಾತ್ರೆ, ಮುದ್ದೇನಹಳ್ಳಿಯಲ್ಲಿ ಜ್ಯೇಷ್ಠ ಬಹುಳ ಪಂಚಮಿಯಲ್ಲಿ ನಡೆಯುವ ಬಾಗಲ ಬಸವೇಶ್ವರ ಜಾತ್ರೆ, ಕರೆಹಳ್ಳಿಯಲ್ಲಿ ಫಾಲ್ಗುಣ ಶುದ್ಧ ದಶಮಿಯಲ್ಲಿ ನಡೆಯುವ ರಂಗಸ್ವಾಮಿ ಜಾತ್ರೆ, ಚಿಕ್ಕನಾಯಕನಹಳ್ಳಿಯಲ್ಲಿ ಫಾಲ್ಗುಣ ಶುದ್ಧ ದಶಮಿಯಂದು ನಡೆಯುವ ಪ್ರಸನ್ನೇಶ್ವರ ಸ್ವಾಮಿ ಜಾತ್ರೆ ಮತ್ತು ಮತಿಘಟ್ಟದಲ್ಲಿ ಚೈತ್ರ ಶುದ್ಧ ದ್ವಾದಶಿಯಂದು ನಡೆಯುವ ಪಾರ್ವತಮ್ಮ ಜಾತ್ರೆಗಳು ಪ್ರಸಿದ್ಧವಾದವು.

ಚಿಕ್ಕನಾಯಕನಹಳ್ಳಿ ಈ ತಾಲ್ಲೂಕು ಮತ್ತು ಹೋಬಳಿಯ ಮುಖ್ಯ ಪಟ್ಟಣ ಹಾಗೂ ಆಡಳಿತ ಕೇಂದ್ರ. ತುಮಕೂರಿನ ಪಶ್ಚಿಮ- ವಾಯುವ್ಯ ದಿಕ್ಕಿನಲ್ಲಿ ತುರುವೇಕೆರೆ-ಹುಳಿಯಾರು ಮಾರ್ಗ ಮಧ್ಯದಲ್ಲಿ ಬೆಂಗಳೂರು ಶಿವಮೊಗ್ಗ ರಸ್ತೆಗೆ ಸು.13ಕಿಮೀ ದೂರದಲ್ಲಿದೆ. ಜನಸಂಖ್ಯೆ 22360. ಹಾಗಲವಾಡಿ ಮನೆತನದ ನಾಯಕರುಗಳಲ್ಲಿ ಪ್ರಸಿದ್ಧನೆನಿಸಿದ್ದ ಸಾಲಿ ನಾಯಕನ ಸೋದರ ಚಿಕ್ಕನಾಯಕನ ಹೆಸರಿನಿಂದ ಈ ಊರಿಗೆ ಈ ಹೆಸರು ಬಂದಿದೆ. ಪರಶುರಾಮ ಭಾವುವಿನ ಮುಖಂಡತ್ವದಲ್ಲಿದ್ದ ಮರಾಠರ ಸೇನೆ ಶ್ರೀರಂಗಪಟ್ಟಣದಲ್ಲಿದ್ದ ಲಾರ್ಡ್ ಕಾರ್ನ್‌ವಾಲಿಸನ ಸೈನ್ಯವನ್ನು ಸೇರಲು ಹೋಗುತ್ತಿದ್ದಾಗ ಮಾರ್ಗದಲ್ಲಿ ಸಿಕ್ಕಿದ ಚಿಕ್ಕನಾಯಕನಹಳ್ಳಿಯನ್ನು ಲೂಟಿ ಮಾಡಿ, ಕೋಟೆಯನ್ನು ಹಾಳುಗೆಡವಿದಂತೆ ತಿಳಿದುಬರುತ್ತವೆ.

ಹಂದನಕೆರೆ, ಐತಿಹಾಸಿಕ ಅವಶೇಷಗಳು

ಚಿಕ್ಕನಾಯಕನಹಳ್ಳಿ ತೆಂಗು ಮತ್ತು ಅಡಕೆ ತೋಟಗಳಿಂದ ಸುತ್ತುವರಿದಿದೆ. ತೆಂಗು, ಅಡಕೆ, ಬಿಳಿ ಹಾಗೂ ಬಣ್ಣದ ಹತ್ತಿ ಬಟ್ಟೆಗಳು, ಕಂಬಳಿಗಳು ಇಲ್ಲಿನ ಉತ್ಪನ್ನಗಳಾಗಿವೆ.

ಇಲ್ಲಿರುವ ದ್ರಾವಿಡ ಶೈಲಿಯ ವೆಂಕಟರಮಣಸ್ವಾಮಿ ದೇವಾಲಯ ದೊಡ್ಡದು ಹಾಗೂ ಸುಂದರವಾದುದು. ರಾಮೇಶ್ವರ ದೇವಾಲಯವೂ ಇದೇ ಶೈಲಿಯಲ್ಲಿ ನಿರ್ಮಿತವಾಗಿದೆ. ಇದನ್ನು ಹಾಗಲವಾಡಿಯ ನಾಯಕರುಗಳಲ್ಲೊಬ್ಬ ನಿರ್ಮಿಸಿದನೆಂದು ಪ್ರತೀತಿ. ಇದಲ್ಲದೆ ಇಲ್ಲಿ ಹುಳಿಯಾರು ಆಂಜನೇಯ, ಬ್ರಹ್ಮಪುರಿ ಆಂಜನೇಯ ದೇವಾಲಯಗಳಿವೆ.

ಈ ಊರಿನ ಗ್ರಾಮದೇವತೆ ಹಿರಿಮಾವರದಾ ಎಲ್ಲಮ್ಮ ಅಥವಾ ರೇಣುಕಾ ದೇವಿ. ಈ ಪ್ರತಿಮೆ ಮರದಿಂದ ಮಾಡಿದ್ದು ಕಲ್ಲಿನಿಂದ ಕಡೆಯಲಾದ ಮುಖವನ್ನು ಜೋಡಿಸಿರುವುದು ವಿಶೇಷ. ಉತ್ಸವ ಮೂರ್ತಿಯಾಗಿ ರೇಣುಕಾದೇವಿಯ ಮಗ ಪರಶುರಾಮನ ವಿಗ್ರಹವಿದೆ. ರೇಣುಕಾಪತಿ ಜಮದಗ್ನಿ ಕುಳಿತಿರುವ ಕಲ್ಲಿನ ವಿಗ್ರಹ ಒಂದು ಅಡಿ ಎತ್ತರವಿದ್ದು ಎಲ್ಲಮ್ಮನ ವಿಗ್ರಹದ ಬಲಗಡೆಯಲ್ಲಿದೆ. ತಾತಯ್ಯನ ಗೋರಿ ಎಂಬ ಒಬ್ಬ ಮುಸ್ಲಿಂ ಸಂತರ ಸಮಾಧಿ ಸಹ ಈ ಊರಿನಲ್ಲಿ ಇದೆ. ಇದಕ್ಕೆ ಅನೇಕ ಹಿಂದು ಭಕ್ತರೂ ಇದ್ದು ವರ್ಷಕ್ಕೊಮ್ಮೆ ಇಲ್ಲಿ ಉರುಸ್ ನಡೆಯುತ್ತದೆ. ಈ ಪಟ್ಟಣ ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ. (ಎಸ್.ಜಿ.)

**ಚಿಕ್ಕಬಳ್ಳಾಪುರ** : ಕೋಲಾರ ಜಿಲ್ಲೆಯ ಒಂದು ತಾಲ್ಲೂಕು, ಇದೇ ಹೆಸರಿನ ಉಪವಿಭಾಗದ ಮತ್ತು ತಾಲ್ಲೂಕಿನ ಮುಖ್ಯ ಸ್ಥಳ. ಪೂರ್ವದಲ್ಲಿ ಶಿಡ್ಲಘಟ್ಟ, ಪಶ್ಚಿಮದಲ್ಲಿ ಗೌರಿಬಿದನೂರು, ಉತ್ತರದಲ್ಲಿ ಗುಡಿಬಂಡೆ ತಾಲ್ಲೂಕುಗಳೂ ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯೂ ಇದರ ಮೇರೆಗಳು. ಮಂಡಿಕಲ್ಲು, ನಂದಿ ಮತ್ತು ಚಿಕ್ಕಬಳ್ಳಾಪುರ ಎಂಬ ಮೂರು ಹೋಬಳಿಗಳೂ 251 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 646.4 ಚ.ಕಿಮೀ. ಜನಸಂಖ್ಯೆ 1,84,226.

ಚಿಕ್ಕಬಳ್ಳಾಪುರ ತಾಲ್ಲೂಕು ದೊಡ್ಡ ಬೆಟ್ಟಗಳ ಪ್ರದೇಶ. ನಂದಿದುರ್ಗ ಶ್ರೇಣಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಉತ್ತರ-ದಕ್ಷಿಣವಾಗಿ ಹಬ್ಬಿದೆ. ಇದರಲ್ಲಿ ನಂದಿದುರ್ಗ (1,479ಮೀ), ದಿಬ್ಬಗಿರಿ, ಬ್ರಹ್ಮಗಿರಿ (1,419ಮೀ), ಚನ್ನಕೇಶವ ಬೆಟ್ಟ (1,451ಮೀ), ಕಳವರದುರ್ಗ (ಸ್ಕಂದಗಿರಿ, 1,417ಮೀ), ಹರಿಹರೇಶ್ವರ ಬೆಟ್ಟ (1,256ಮೀ) ಮುಂತಾದ ಎತ್ತರದ ಬೆಟ್ಟಗಳಿವೆ. ಈ ಶ್ರೇಣಿಯಲ್ಲದೆ ಇತರ ಬೆಟ್ಟಗಳೂ ಉಂಟು. ಶ್ರೇಣಿಯ ಭಾಗವನ್ನು ಬಿಟ್ಟು ಇತರ ಬೆಟ್ಟಗಳ ನಡುವಿನ ಕಣಿವೆ ಪ್ರದೇಶ ಸುಮಾರು ಮಟ್ಟಸವಾಗಿದೆ. ಬೆಟ್ಟಗಳೂ ಒಳಗೊಂಡಂತೆ ಹೆಚ್ಚಿನ ಭಾಗ ಕಣಶಿಲೆಯ ಪ್ರದೇಶ. ಬೋಳುಗುಂಡುಗಳ ಬೆಟ್ಟಗಳು ತಾಲ್ಲೂಕಿನಲ್ಲಿ ಕಂಡುಬರುವ ಸಾಮಾನ್ಯ ದೃಶ್ಯ. ತಾಲ್ಲೂಕಿನ ಖನಿಜಸಂಪತ್ತು ಹೆಚ್ಚಿಲ್ಲ. ಚಿಕ್ಕಬಳ್ಳಾಪುರ ಊರಿನ ಬಳಿ ನುರುಜು ಸುಣ್ಣಕಲ್ಲು ದೊರಕುತ್ತದೆ. ತಾಲ್ಲೂಕಿನಲ್ಲಿ ಮಣ್ಣಿನ ಗುಣ ಅಲ್ಲಲ್ಲಿಗೆ ಎರೆಮಣ್ಣು, ಕಪ್ಪು ಮಣ್ಣು, ಮರಳುಮಿಶ್ರಿತ ನುರುಜು ಭೂಮಿ -ಹೀಗೆ ಬಹಳ ವ್ಯತ್ಯಾಸವಾಗುತ್ತದೆ. ನಂದಿಬೆಟ್ಟಶ್ರೇಣಿ ಅರ್ಕಾವತಿ, ಉತ್ತರ ಪಿನಾಕಿನಿ ಮೊದಲಾದ ನದಿಗಳ ಉಗಮಸ್ಥಾನ. ಇಲ್ಲಿ ಉಪಯುಕ್ತವಾಗಿರುವ ನದಿಗಳಲ್ಲಿ ಪಾಪಘ್ನಿ (ನೋಡಿ) ಮುಖ್ಯವಾದುದು. ಇದು ನಂದಿಯ ಈಶಾನ್ಯಕ್ಕಿರುವ ಗುಂಡಲಗುರ್ಕಿ ಬೆಟ್ಟದ ಬಳಿ ಹುಟ್ಟಿ ಬಾಗೇಪಲ್ಲಿ ತಾಲ್ಲೂಕಿನತ್ತ ಹರಿಯುತ್ತದೆ. ಉತ್ತರ ಪಿನಾಕಿನಿಯೂ ಉಪಯೋಗವಾಗುತ್ತಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 871ಮಿಮೀ. ಈ ತಾಲ್ಲೂಕಿನಲ್ಲಿ 34,684 ಎಕರೆ ಅರಣ್ಯ ಪ್ರದೇಶವಿದೆ. ಶ್ರೀಗಂಧ, ಬೇವು, ಹುಣಿಸೆ, ಹೊಂಗೆ, ಕರಿಜಾಲಿ, ಕಗ್ಗಲಿ, ಚುಜ್ಜಲು ಮುಂತಾದ ಮರಗಳು ಈ ಅರಣ್ಯದ ಮುಖ್ಯ ಸಸ್ಯವರ್ಗ.

ರಾಗಿ, ಬತ್ತ, ಕಬ್ಬು, ಮತ್ತು ದ್ವಿದಳ ಧಾನ್ಯಗಳು ತಾಲ್ಲೂಕಿನ ಮುಖ್ಯ ಬೆಳೆಗಳು. ಪಂಪುಗಳ ಮೂಲಕ ದೊಡ್ಡ ಬಾವಿಗಳಿಂದ ನೀರನ್ನೆತ್ತಿ ವ್ಯವಸಾಯ ಮಾಡುವುದು ಸಾಮಾನ್ಯ. ಆಲೂಗೆಡ್ಡೆ, ಈರುಳ್ಳಿ, ಹಿಪ್ಪನೇರಳೆ, ಮೆಣಸಿನಕಾಯಿ, ತರಕಾರಿ ಮತ್ತು ಹಣ್ಣುಗಳನ್ನೂ ಬೆಳೆಯುತ್ತಾರೆ. ಮಾವು, ಹುಣಿಸೆ, ಹೊಂಗೆ ಮತ್ತು ಸರ್ವೆ ಮರಗಳ ತೋಪುಗಳುಂಟು. ವ್ಯವಸಾಯದ ಜೊತೆಗೆ ಪಶುಪಾಲನೆ ಮತ್ತು ಕುರಿ ಸಾಕುವುದು ಜನರ ಉದ್ಯೋಗಗಳು.

ನಂದಿದುರ್ಗ (ನೋಡಿ) ಈ ತಾಲ್ಲೂಕಿನ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳ. ಇತರ ಬೆಟ್ಟಗಳೂ ಸುಂದರ ತಾಣಗಳಾಗಿವೆ. ಅಗಲಗುರ್ಕಿ ಗ್ರಾಮದಲ್ಲಿ ಪಾಳೆಯಗಾರರ ಕಾಲದ ವೀರಭದ್ರ ದೇವಾಲಯವಿದೆ. ಈ ಊರಿನ ಕೆರೆಯ ದಕ್ಷಿಣ ತೂಬು ಮಂಟಪದ ರೀತಿಯಲ್ಲಿ ಕಟ್ಟಿರುವ ಸುಂದರ ಕೃತಿ. ಅಜ್ಜಾವರ ಮತ್ತು ಅಣಕನೂರಿನಲ್ಲಿ ಒಂದೊಂದು ರಂಗನಾಥ ದೇವಾಲಯ ಇವೆ. ಕಂದವರ ಗ್ರಾಮದಲ್ಲಿ ಒಂದು ದೊಡ್ಡ ಕೊಳ ಮತ್ತು ಜ್ವರಹರೇಶ್ವರ ದೇವಾಲಯ ಇವೆ. ದೇವಾಲಯದ ಬಳಿ ಇರುವ 40' ಎತ್ತರದ ಗರುಡಗಂಬ ಬಹುಸುಂದರ ಕೃತಿ. ಮಂಚನಬೆಲೆ ಗ್ರಾಮದಲ್ಲಿ ಸು.140 ವರ್ಷಗಳ ಹಿಂದಿನ ಆಂಜನೇಯ ದೇವಾಲಯವಿದೆ.

ಮುದ್ದೇನಹಳ್ಳಿ ಭಾರತರತ್ನ ವಿಶ್ವೇಶ್ವರಯ್ಯನವರ ಜನ್ಮಸ್ಥಳ. ಅವರ ನೆನಪಿಗೆ ಇಲ್ಲಿ ಒಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಪತ್ರೇನಹಳ್ಳಿಯ ಗೋಪಾಲಕೃಷ್ಣ ದೇವಾಲಯ ದ್ರಾವಿಡ ಶೈಲಿಗೆ ಒಂದು ಉತ್ತಮ ನಿದರ್ಶನವಾಗಿದೆ. ರಂಗಸ್ಥಳ ಗ್ರಾಮದಲ್ಲಿ ದ್ರಾವಿಡ ಶೈಲಿಯ ರಂಗನಾಥ ದೇವಾಲಯವಿದೆ. ಈ ತಾಲ್ಲೂಕಿನಲ್ಲಿ ನಡೆಯುವ ಜಾತ್ರೆಗಳಲ್ಲಿ ನಂದಿಯ ಭೋಗನಂದೀಶ್ವರಸ್ವಾಮಿ ಜಾತ್ರೆ, ಚಿತ್ರಾವತಿಯ ಸುಬ್ರಹ್ಮಣ್ಯಸ್ವಾಮಿ ಜಾತ್ರೆ ಪ್ರಸಿದ್ಧವಾದುವು. ಜಾತ್ರೆ ದಿನಗಳಲ್ಲಿ ದನಗಳ ವ್ಯಾಪಾರವೂ ನಡೆಯುತ್ತದೆ. *



ಚಿತ್ರಾವತಿ ಕೊಳ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಈ ತಾಲ್ಲೂಕಿನ ಮುಖ್ಯ ಪಟ್ಟಣ ಮತ್ತು ತಾಲ್ಲೂಕಿನ ಹಾಗೂ ಉಪ ವಿಭಾಗದ ಆಡಳಿತ ಕೇಂದ್ರ. ಕೋಲಾರಕ್ಕೆ 60ಕಿಮೀ ದೂರದಲ್ಲಿ ವಾಯವ್ಯ ದಿಕ್ಕಿನಲ್ಲಿದೆ. ಜನಸಂಖ್ಯೆ 54,938. ಇಲ್ಲಿ ಪುರಸಭೆ ಇದೆ. ಈ ಪಟ್ಟಣ ರೇಷ್ಮೆ ಉದ್ಯಮಕ್ಕೆ, ಕಲ್ಲು ಸಕ್ಕರೆ ತಯಾರಿಕೆಗೆ ಪ್ರಸಿದ್ಧ. ಸಣ್ಣ ಕೈಗಾರಿಕೆಗಳ ಬೆಳವಣಿಗೆಗಾಗಿ ಇಲ್ಲಿ ಕೈಗಾರಿಕಾ ಕ್ಷೇತ್ರವೊಂದು ಸ್ಥಾಪಿತವಾಗಿದೆ. ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೂ ಜಿಲ್ಲೆಯ ಪ್ರಮುಖ ಸ್ಥಳಗಳಿಗೂ ರಸ್ತೆಗಳುಂಟು. ಬೆಂಗಳೂರು, ಚಿಂತಾಮಣಿ, ಕೋಲಾರಗಳಿಗೆ ರೈಲ್ವೆ ಸಂಪರ್ಕವಿದೆ. ಇದೊಂದು ವ್ಯಾಪಾರ ಕೇಂದ್ರ. ಚಿಕ್ಕಬಳ್ಳಾಪುರ ಹಿಂದೆ ಒಂದು ಪಾಳೆಯಗಾರರ ಸಂತತಿಯ ಆಡಳಿತದಲ್ಲಿತ್ತು. ಈ ಊರಿನ ದೇವಾಲಯಗಳಲ್ಲಿ ಚನ್ನಕೇಶವ ದೇವಾಲಯ ಅತ್ಯಂತ ಹಳೆಯದು. ವೀರಭದ್ರ ದೇವಾಲಯ ಇತ್ತೀಚಿನದು. ಇಲ್ಲಿ ಉತ್ತಮ ಸುದ್ದೆ ವಿಗ್ರಹಗಳಿವೆ. ಪಟ್ಟಣಕ್ಕೆ 4ಕಿಮೀ ದೂರದಲ್ಲಿ ಚಿತ್ರಾವತಿ ಎಂಬ ಕೊಳವಿದೆ. ಇದೊಂದು ತೀರ್ಥ. ಇದರ ಸುತ್ತಲ ಹಂತಗಳನ್ನು ದಿವಾನ್ ಪೂರ್ಣಯ್ಯನವರು ಕಟ್ಟಿಸಿದರೆಂದು ಹೇಳಲಾಗಿದೆ. ಈ ಕೊಳಕ್ಕೆ ಹಲಸಮ್ಮನ ಬಾವಿ ಎಂದೂ ಹೆಸರುಂಟು. ಹಲಸಮ್ಮ ಪಾಳೆಯಗಾರನೊಬ್ಬನ ಕುಮಾರಿ. ಇದರ ಹತ್ತಿರ ಮಲ್ಲಿಕಾರ್ಜುನ ಚಿನ್ನಪ್ಪನ ಗದ್ದುಗೆಯಿದೆ. (ಎಂ.ಎಸ್.ಕೆ.)

**ಚಿಕ್ಕಬಳ್ಳಾಪುರದ ಪಾಳೆಯಗಾರರು :** 1479-1791ರ ಅವಧಿಯಲ್ಲಿ ಚಿಕ್ಕಬಳ್ಳಾಪುರ ಮತ್ತು ಸುತ್ತಲ ಪ್ರದೇಶಗಳನ್ನು ಆಳುತ್ತಿದ್ದ ಆವತಿ ವಂಶಕ್ಕೆ ಸೇರಿದ ಪಾಳೆಯಗಾರರು. ಆವತಿಗೆ ವಲಸೆ ಬಂದು ನೆಲೆಸಿದ್ದ ಗೌಡರ ಗುಂಪಿನ ಯಜಮಾನ ಮಲ್ಲಬೈರೇಗೌಡನ ಕಿರಿಯ ಮಗ ಬೈರೇಗೌಡ ಒಮ್ಮೆ ಈಗಿನ ಚಿಕ್ಕಬಳ್ಳಾಪುರ (ಹಿಂದಿನ) ಕೋಡಿಮಂಚನಹಳ್ಳಿ ಪ್ರದೇಶದಲ್ಲಿ ಬೇಟೆಯಾಡುತ್ತಿದ್ದಾಗ ಮೊಲವೊಂದು ಇವನ ನಾಯಿಗಳ ಮೇಲೆ ಎದುರುಬಿತ್ತು. ಇದನ್ನು ಕಂಡ ಬೈರೇಗೌಡ ಈ ಸ್ಥಳ 'ಗಂಡುಭೂಮಿ' ಎಂದು ತೀರ್ಮಾನಿಸಿ ಅಲ್ಲಿಯ ಪಟೇಲರುಗಳಿಗೆ ಕೋಟೆ ಕಟ್ಟಲು ಸಲಹೆಯಿತ್ತ. ಬೈರೇಗೌಡನ ಮಗ ಮರಿಗೌಡ ವಿಜಯನಗರದ ಅರಸರಿಂದ ಅನುಮತಿಯನ್ನು ತಂದಮೇಲೆ ಕೋಟೆ ನಿರ್ಮಾಣವಾಗಿ (1479) ಚಿಕ್ಕಬಳ್ಳಾಪುರವೆಂದು ಪ್ರಸಿದ್ಧವಾಗಿ ಪಾಳೆಯಪಟ್ಟು ಸ್ಥಾಪನೆಯಾಯಿತು ಎಂದು ಸ್ಥಳಪುರಾಣ.

ಮರಿಗೌಡ ಈ ಪಾಳೆಯಪಟ್ಟಿನ ಮೊದಲನೆಯ ಪ್ರಭು. ಈತ 24 ವರ್ಷಗಳ ಕಾಲ ರಾಜ್ಯವಾಳಿದಮೇಲೆ ಇವನ ಮಗ ರಂಗಪ್ಪಗೌಡ 42 ವರ್ಷ, ಅನಂತರ ಇವನ ಸೋದರಳಿಯ ಡೋಗಿ ಬೈರೇಗೌಡ 30 ವರ್ಷ, ಅನಂತರ ಇವನ ಮಗ ದೊಡ್ಡ ಬೈರೇಗೌಡ 46 ವರ್ಷ ರಾಜ್ಯವಾಳಿದರು. ದೊಡ್ಡ ಬೈರೇಗೌಡನಿಗೆ ಮಕ್ಕಳಿಲ್ಲದ ಕಾರಣ, ಇವನ ಪತ್ನಿ ವೆಂಕಟಮ್ಮ ಅಧಿಕಾರಿಗಳ ಸಹಾಯದಿಂದ ಸು.15 ವರ್ಷಗಳ ಕಾಲ ಆಡಳಿತವನ್ನು ಮುಂದುವರಿಸಿ ತನ್ನ ಅವಸಾನಸಮಯದಲ್ಲಿ ತಾನು ಬೆಳೆಸಿದ ಜೋಗಿ ಬೈರೇಗೌಡನ ಮೊಮ್ಮಗ ಮರಿಗೌಡನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ದತ್ತು ತೆಗೆದುಕೊಂಡಳೆಂದೂ ಒಂದು ಹೇಳಿಕೆ ಇದೆ. 45 ವರ್ಷದ ಆಳ್ವಿಕೆಯ ಅನಂತರ ಇವನ ಅಣ್ಣ ಅಣ್ಣೇಗೌಡನ ಪಿತೂರಿಯಿಂದ ಈತ ರಾಜ್ಯಚ್ಯುತನಾಗಿ ಸಾದಲಿ ಮತ್ತು ಇಳಕಲು ದುರ್ಗಗಳ ಜಹಗೀರಿಯನ್ನು ಮಾತ್ರ ಅನುಭವಿಸಬೇಕಾಯಿತು. ತನ್ನ 18 ವರ್ಷಗಳ ಆಳಿಕೆಯಲ್ಲಿ ಶಿಡ್ಲಘಟ್ಟವನ್ನು ಒಂದು ಲಕ್ಷ ವರಹಕ್ಕೆ ಕೊಂಡು, 20 ಲಕ್ಷ ವರಹ ಧನವನ್ನು ಶೇಖರಿಸಿದ. ಅನಂತರ ಅಧಿಕಾರಕ್ಕೆ ಬಂದ ಇವನ ಮಗ ಹಾವಳಿ ಬೈರೇಗೌಡ ತನ್ನ ದುರ್ವರ್ತನೆಯಿಂದ ಕೇವಲ 4 ತಿಂಗಳಲ್ಲೇ ಪದಚ್ಯುತಿಗೊಂಡ. ಅನಂತರ ರಾಜ್ಯವನ್ನು ವಹಿಸಿಕೊಂಡ ಇವನ ಸಹೋದರ ಬೈಚೇಗೌಡನ ಕಾಲದಲ್ಲಿ ದಳವಾಯಿ ಕಂಠೀರವನ ನೇತೃತ್ವದಲ್ಲಿ ಮೈಸೂರು ಒಡೆಯರ ಸೇನೆ ಚಿಕ್ಕಬಳ್ಳಾಪುರಕ್ಕೆ ಮುತ್ತಿಗೆಹಾಕಿತು. ಬೈಚೇಗೌಡ ಮರಾಠರ ನೆರವನ್ನು ಪಡೆದು, ಕೋಟೆಯ ಪತನವನ್ನು ತಪ್ಪಿಸಿ ಕೋತಿಕೊಂಡದ ಬಳಿ ನಡೆದ ಭೀಕರಯುದ್ಧದಲ್ಲಿ ದಳವಾಯಿ ಕಂಠೀರವನ ಶಿರಚ್ಛೇದ ಮಾಡಿದ. ಬೈಚೇಗೌಡ ಬುರ್ದಗುಂಟವನ್ನೂ ಕೊಂಡು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇವನ ತರುವಾಯ ಪಟ್ಟಕ್ಕೆ ಬಂದ ದೊಡ್ಡ ಬೈರೇಗೌಡ ತಾನು ಆಳಿದ 2 ವರ್ಷಗಳಲ್ಲಿ ಮೈಸೂರು ಸೇನೆಯದಾಳಿಯ ಸಮಯದಲ್ಲಿ ಕೈಬಿಟ್ಟುಹೋಗಿದ್ದ ಪ್ರದೇಶಗಳನ್ನು ಪುನಃ ಸ್ವಾಧೀನಪಡಿಸಿಕೊಂಡ. ತರುವಾಯ ಇವನ ಸಹೋದರ ವೆಂಕಟನಾರಾಯಣಗೌಡ ಸು.35 ವರ್ಷ ರಾಜ್ಯವಾಳಿದ. ಅನಂತರ ಇವನ ಮಗ ಬೈಚೇಗೌಡ ಕೇವಲ 9 ತಿಂಗಳಲ್ಲೇ ಪದಚ್ಯುತನಾಗಲು ಈತನ ಚಿಕ್ಕಪ್ಪ ಚಿಕ್ಕಪ್ಪಗೌಡ ಅಧಿಕಾರ ವಹಿಸಿಕೊಂಡ. ಚಿಕ್ಕಪ್ಪಗೌಡನ ಕಾಲದಲ್ಲಿ ಹೈದರ್ ಚಿಕ್ಕಬಳ್ಳಾಪುರಕ್ಕೆ ಮುತ್ತಿಗೆ ಹಾಕಿ ಮದ್ದುಗುಂಡಿನಿಂದ ಕೋಟೆಯನ್ನು ನೆಲಸಮ ಮಾಡಲು ಪ್ರಯತ್ನಿಸಿದ. ಆದರೆ ಸ್ಫೋಟಕ ವಸ್ತುಗಳನ್ನು ನಿಷ್ಫಲಗೊಳಿಸುವ ವಿದ್ಯೆಯಲ್ಲಿ ಪರಿಣತನಾದ ಚಿಕ್ಕಪ್ಪಗೌಡನ ಕೌಶಲದಿಂದ ಹೈದರನ ಆಶಯ ಮೂರು ತಿಂಗಳಾದರೂ ಫಲಿಸಲಿಲ್ಲ. ಕೊನೆಗೆ ಇಬ್ಬರೂ ಸಂಧಿ ಮಾಡಿಕೊಂಡರು. ಒಪ್ಪಂದದ ಪ್ರಕಾರ, ಮೈಸೂರು ಸೇನೆ ವಾಪಸಾಗತಕ್ಕದ್ದೆಂದೂ ಚಿಕ್ಕಪ್ಪಗೌಡ 5 ಲಕ್ಷ ವರಹಗಳನ್ನು ಪರಿಹಾರವಾಗಿ ಕೊಡತಕ್ಕದ್ದೆಂದೂ ಹಿಂದೆ ಮೈಸೂರಿನ ಕಂಠೀರವನ ಶಿರಚ್ಛೇದನ ಮಾಡಿದ್ದಕ್ಕೆ ಪ್ರತಿಯಾಗಿ ಸುವರ್ಣ ಶಿರಸ್ಸನ್ನು ಕೊಡಬೇಕೆಂದೂ ನಿಶ್ಚಯವಾಯಿತು. ಪರಿಹಾರದ್ರವ್ಯದ ಒಂದು ಭಾಗ ಸ್ಥಳದಲ್ಲಿಯೇ ಸಂದಾಯವಾಯಿತು. ಉಳಿದ ಹಣವನ್ನು ವಸೂಲುಮಾಡಲು ಒಬ್ಬ ಅಧಿಕಾರಿಯನ್ನು ಅಲ್ಲಿಯೇ ಬಿಟ್ಟು ಹೈದರ್ ದೇವನಹಳ್ಳಿಗೆ ತೆರಳಿದ. ಅದೇ ಸಮಯದಲ್ಲಿ ಕಾದುಕೊಂಡಿದ್ದ ಚಿಕ್ಕಪ್ಪಗೌಡ ಗುತ್ತಿಯ ಮರಾಠ ನಾಯಕ ಮುರಾರಿರಾವ್‌ನಿಂದ ಸೈನ್ಯಸಹಾಯವನ್ನು ಪಡೆದು ಕೋಟೆಯ ರಕ್ಷಣೆಗಾಗಿ ಬಿಟ್ಟು, ತಾನು ನಂದಿದುರ್ಗದಲ್ಲಿ ಆಶ್ರಯಪಡೆದ. ಇದರಿಂದ ಕುಪಿತನಾದ ಹೈದರ್ ಚಿಕ್ಕಬಳ್ಳಾಪುರವಷ್ಟೇ ಅಲ್ಲದೆ ಸುತ್ತಲ ಹಲವು ದುರ್ಗಗಳನ್ನು ವಶಪಡಿಸಿಕೊಂಡು, ಚಿಕ್ಕಪ್ಪಗೌಡನನ್ನು ಹಿಡಿದು ಬೆಂಗಳೂರಿನಲ್ಲಿ ಸೆರೆಹಾಕಿದ. ಚಿಕ್ಕಪ್ಪಗೌಡ ಅಪುತ್ರಕನಾಗಿ ಅಲ್ಲಿಯೇ ಸತ್ತ. ಅನಂತರ ಚಿಕ್ಕಬಳ್ಳಾಪುರದ ಎಲ್ಲಾ ಕೈದಿಗಳನ್ನೂ ಹೈದರ್ ಕೊಯಮುತ್ತೂರಿಗೆ ಸಾಗಿಸಿದ.

ಮೂರನೆಯ ಮೈಸೂರು ಯುದ್ಧದ ಕಾಲದಲ್ಲಿ ಟಿಪ್ಪು ನಂದಿದುರ್ಗವನ್ನು ರಕ್ಷಿಸಲು ಚಿಕ್ಕಬಳ್ಳಾಪುರವನ್ನು ತೆರವು ಮಾಡಿದ್ದ. ಆಗ ಕಾರ್ನ್‌ವಾಲಿಸ್ ಈ ವಂಶದ ನಾರಾಯಣಗೌಡನನ್ನು ಪುನಃ ಚಿಕ್ಕಬಳ್ಳಾಪುರದ ಪಾಳೆಯಗಾರನಾಗಿ ನೇಮಿಸಿದ. ಟಿಪ್ಪುವಿನ ದಾಳಿಯನ್ನು ಎದುರಿಸಲು ಇಂಗ್ಲಿಷರು ಸೈನ್ಯ ನೆರವನ್ನು ಕೊಡಲು ಮುಂದೆ ಬಂದರೂ ನಾರಾಯಣಗೌಡ ಅದನ್ನು ತಿರಸ್ಕರಿಸಿ ಸ್ವಂತ ಬಲದ ಮೇಲೆ ನಿಲ್ಲಲು ಪ್ರಯತ್ನಿಸಿದ. ಈ ಸಂದರ್ಭವನ್ನು ಗಮನಿಸಿದ ಟಿಪ್ಪು ಚಿಕ್ಕಬಳ್ಳಾಪುರದ ಕೋಟೆಗೆ ಮುತ್ತಿಗೆಹಾಕಿ ನೆಲಸಮ ಮಾಡಿದ. 1791ರಲ್ಲಿ ಇಂಗ್ಲಿಷರು

ನಂದಿದುರ್ಗ ಮತ್ತು ಸುತ್ತಲ ಪ್ರದೇಶವನ್ನು ವಶಪಡಿಸಿಕೊಂಡಾಗ ಚಿಕ್ಕಬಳ್ಳಾಪುರವನ್ನು ಪುನಃ ನಾರಾಯಣಗೌಡನಿಗೆ ಹಿಂತಿರುಗಿಸಿದರು. ಆದರೆ ಇಂಗ್ಲಿಷರು ಟಿಪ್ಪುವಿನೊಂದಿಗೆ ಒಪ್ಪಂದ ಮಾಡಿಕೊಂಡಾಗ (1792) ನಾರಾಯಣಗೌಡನ ಅಧಿಕಾರ ಕೊನೆಗೊಂಡು ಚಿಕ್ಕಬಳ್ಳಾಪುರದ ಪ್ರಭುಗಳ ಚರಿತ್ರೆಯೂ ಅಂತ್ಯವಾಯಿತು. (ಕೆ.ಟಿ.ಆರ್.)

**ಚಿಕ್ಕಮಗಳೂರು :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ಆ ಜಿಲ್ಲೆಯ ಒಂದು ತಾಲ್ಲೂಕು; ಜಿಲ್ಲೆ ಮತ್ತು ತಾಲ್ಲೂಕುಗಳ ಆಡಳಿತ ಕೇಂದ್ರ.

**ಜಿಲ್ಲೆ :** ಉತ್ತರಕ್ಕೆ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳು ಪೂರ್ವಕ್ಕೆ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳು, ದಕ್ಷಿಣಕ್ಕೆ ಹಾಸನ ಜಿಲ್ಲೆ, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು – ಇವು ಈ ಜಿಲ್ಲೆಯ ಮೇರೆಗಳು. ಕಡೂರು, ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ, ಶೃಂಗೇರಿ ಮತ್ತು ತರೀಕೆರೆ – ಇವು ಈ ಜಿಲ್ಲೆಯ ಏಳು ತಾಲ್ಲೂಕುಗಳು. ಜಿಲ್ಲೆಯಲ್ಲಿ ಒಟ್ಟು 32 ಹೋಬಳಿಗಳೂ 1113 ಗ್ರಾಮಗಳೂ 226 ಗ್ರಾಮ ಪಂಚಾಯಿತಿಗಳೂ 10 ಪಟ್ಟಣಗಳೂ ಇವೆ. ಪೂರ್ವ-ಪಶ್ಚಿಮವಾಗಿ ಈ ಜಿಲ್ಲೆಯ ಗರಿಷ್ಠ ಉದ್ದ 138ಕಿಮೀ. ಉತ್ತರ-ದಕ್ಷಿಣವಾಗಿ ಗರಿಷ್ಠ ಅಗಲ 88ಕಿಮೀ. ಜಿಲ್ಲೆಯ ವಿಸ್ತೀರ್ಣ 7,199ಚ.ಕಿಮೀ. ಜನಸಂಖ್ಯೆ 10,08,057.

ಮಲೆನಾಡು ಮತ್ತು ಮೈದಾನ ಪ್ರದೇಶದಿಂದ ಕೂಡಿರುವ ಈ ಜಿಲ್ಲೆ ಪರ್ವತಮಯ. ಇದರ ಪಶ್ಚಿಮದಂಚಿನಲ್ಲಿ ಪಶ್ಚಿಮಘಟ್ಟಗಳು ಹಬ್ಬಿವೆ. ಇವುಗಳ ಕೆಲವು ಶಿಖರಗಳು ಹಿಮಾಲಯಕ್ಕೂ ನೀಲಗಿರಿಗೂ ನಡುವಿನ ಪ್ರದೇಶದಲ್ಲೇ ಅತ್ಯುನ್ನತವಾದಂಥವು. ಈ ಪರ್ವತಶ್ರೇಣಿಯಿಂದ ಒಳಚಾಚಿ ಮೂಡಿಗೆರೆ, ಕೊಪ್ಪ, ನರಸಿಂಹರಾಜಪುರ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಹಬ್ಬಿರುವ ಬೆಟ್ಟಗಳ, ಶಿಖರಗಳ ಪೈಕಿ ಮುಳ್ಳಯ್ಯನಗಿರಿಯ ಎತ್ತರ ಸಮುದ್ರಮಟ್ಟದಿಂದ 1925ಮೀ. ಇದರ ಸಮೀಪದಲ್ಲೇ ಇರುವ ಬಾಬಾಬುಡನ್ ಗಿರಿ ಮತ್ತು ಕಲ್ಲತ್ತಗಿರಿಗಳು ಸಮುದ್ರಮಟ್ಟದಿಂದ ಅನುಕ್ರಮವಾಗಿ 1894ಮೀ ಮತ್ತು 1876ಮೀ ಎತ್ತರವಾಗಿವೆ. ಪಶ್ಚಿಮ ಘಟ್ಟದ ಕುದುರೆಮುಖ ಶಿಖರ 1894ಮೀ. ಎತ್ತರವಾಗಿದೆ. ಕುದುರೆಮುಖದಂತೆ ತೋರುವ ಈ ಶಿಖರ ಕಡಲ ನಾವಿಕರಿಗೆ ಭೂಮಿಯ ಹೆಗ್ಗುರುತಾಗಿತ್ತು. ಇದೇ ಶ್ರೇಣಿಯಲ್ಲಿ ಬಲ್ಲಾಳರಾಯನ ದುರ್ಗ (1505ಮೀ), ಗಂಗಾಮೂಲ (1454ಮೀ), ಒಡ್ಡಿನಗುಡ್ಡ (1526ಮೀ), ಮೈತ್ರಿಗುಡ್ಡ (1661ಮೀ), ಲಕ್ಕೆಪರ್ವತ (1421ಮೀ), ಶಕುನಗಿರಿ (1418ಮೀ), ಕಂಚಿಕಲ್ ದುರ್ಗ (1220ಮೀ) ಮೊದಲಾದ ಶಿಖರಗಳಿವೆ. ಜಿಲ್ಲೆಯ ದಕ್ಷಿಣದಲ್ಲಿ ಎಪ್ಪತ್ತು ಮಂದಿ ಗುಡ್ಡ, ಸಿಸಲುಕುಡಿ ಇವು ಎತ್ತರವಾದ ಶಿಖರಗಳು.

ಕಡೂರು, ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳ ಕೆಲವು ಭಾಗಗಳನ್ನು ಬಿಟ್ಟರೆ ಜಿಲ್ಲೆಯ ಉಳಿದೆಲ್ಲ ಮಲೆನಾಡಿನ ಭಾಗ. ಈ ಪ್ರದೇಶ ಬೆಟ್ಟಗುಡ್ಡಗಳಿಂದಲೂ ದಟ್ಟವಾದ ಕಾಡುಗಳಿಂದಲೂ ಕೂಡಿವೆ. ಅಲ್ಲಲ್ಲಿ ಕಿರಿದಾದ ಬಯಲುಗಳಿವೆ. ಇನ್ನು ಕೆಲವು ಕಡೆ ಬರಡು ಕುರುಚಲು ಕಾಡುಗಳಿವೆ. ಬೆಟ್ಟ ಗುಡ್ಡಗಳಲ್ಲಿ ಎತ್ತರಕ್ಕೆ ಹೋದಂತೆ, ಸು.1400ಮೀ ಮೇಲೆ, ಕಾಡು ಕಡಿಮೆಯಾಗಿ ಕುರುಚಲು ಅಥವಾ ಹುಲ್ಲಿನಿಂದ ಕೂಡಿದ ಬೋಳು ಪ್ರದೇಶಗಳಿವೆ. ಜಿಲ್ಲೆಯ ಪೂರ್ವಭಾಗಕ್ಕೆ ಹೋದಂತೆಲ್ಲ ಬಯಲಿನ ಲಕ್ಷಣಗಳು ಕಂಡುಬರುತ್ತವೆ. ಬಾಬಾಬುಡನ್ ಗಿರಿಯ ತಪ್ಪಲಿನಿಂದ ಪೂರ್ವಕ್ಕೆ ಥಟ್ಟನೆ ಭೂಮಿಯ ಮಟ್ಟ ಇಳಿಯುತ್ತದೆ. ಮಲೆನಾಡಿನ ಸರಹದ್ದಿನಲ್ಲಿರುವ ಚಿಕ್ಕಮಗಳೂರಿನ ಎತ್ತರ 1061ಮೀ. ಆದರೆ ಬಯಲು ಸೀಮೆಯಲ್ಲಿರುವ ಕಡೂರು 788ಮೀ, ತರೀಕೆರೆ 681ಮೀ ಎತ್ತರದಲ್ಲಿವೆ.

ಕರ್ನಾಟಕದಲ್ಲಿ ಹರಿಯುವ ಅನೇಕ ನದಿಗಳು ಹುಟ್ಟುವುದು ಈ ಜಿಲ್ಲೆಯಲ್ಲೆ. ಇಲ್ಲಿಯ ಜಲಸಂಪತ್ತನ್ನು ಇಲ್ಲಿಯ ಪರ್ವತಪ್ರದೇಶಗಳು ಇಬ್ಭಾಗವಾಗಿ ಒಡೆಯುತ್ತವೆ. ಆಗ್ನೇಯದಂಚಿನಲ್ಲಿ ಬಲ್ಲಾಳರಾಯನದುರ್ಗದಿಂದ ಹಿಡಿದು ಚಿಕ್ಕಮಗಳೂರು ಪಟ್ಟಣದ ಸಮೀಪವಿರುವ ಬಾಬಾಬುಡನ್ ಗಿರಿಯ ವರೆಗೂ ಹಬ್ಬಿರುವ ಪರ್ವತಶ್ರೇಣಿ ಕರ್ನಾಟಕದ ಉತ್ತರ ಮತ್ತು ದಕ್ಷಿಣದ ನದಿಗಳನ್ನು ಪ್ರತ್ಯೇಕಿಸುತ್ತದೆ. ವರಾಹ ಪರ್ವತದ ಗಂಗಾಮೂಲದಲ್ಲಿ ಹುಟ್ಟುವ ತುಂಗಾ ಮತ್ತು ಭದ್ರಾ ನದಿಗಳು ಉತ್ತರ ದಿಕ್ಕಿಗೆ ಹರಿದರೆ, ದಕ್ಷಿಣ ಭಾಗದಲ್ಲಿ ಮೆಲ್ಪಂಗಾಡಿಯ ಜಾವಳಿಯ ಬಳಿ ಹುಟ್ಟುವ ಹೇಮಾವತಿ ನದಿ ಮೂಡಿಗೆರೆ ತಾಲ್ಲೂಕಿನಲ್ಲಿ ದಕ್ಷಿಣ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತುಂಗಾ ಮತ್ತು ಭದ್ರಾ ನದಿಗಳು ಒಂದೇ ಪ್ರದೇಶದಲ್ಲಿ ಹುಟ್ಟಿದ್ದರೂ ಕೊಪ್ಪ ತಾಲ್ಲೂಕಿನಲ್ಲಿ ಇರುವ ಬೆಟ್ಟಗಳ ಸಾಲು ಅವನ್ನು ಪ್ರತ್ಯೇಕಿಸುತ್ತವೆ. ತುಂಗಾ ನದಿ ಶೃಂಗೇರಿಯವರೆಗೂ ಈಶಾನ್ಯ ದಿಕ್ಕಿಗೆ ಹರಿದು ಅನಂತರ ವಾಯವ್ಯ ದಿಕ್ಕಿಗೆ ತಿರುಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಭದ್ರಾ ನದಿ ಸ್ವಲ್ಪ ದೂರ ಪೂರ್ವದ ಕಡೆ ಹರಿದು ಕಳಸ, ಬಾಳೆಹೊನ್ನೂರು ಮತ್ತು ಖಾಂಡ್ಯಗಳನ್ನು ದಾಟಿ ಹೆಬ್ಬೆಯ ಬಳಿ ಜಾಗರ ಕಣಿವೆಯಿಂದ ಬರುವ ಸೋಮವಾಹಿನಿಯನ್ನು ಕೂಡಿಕೊಂಡು ಲಕ್ಕವಳ್ಳಿಯ ಮೂಲಕ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ.

ವಿದ್ಯಾಶಂಕರ ದೇವಾಲಯ, ಶೃಂಗೇರಿ

ದಕ್ಷಿಣದ ಕಡೆಗೆ ಹರಿಯುವ ಹೇಮಾವತಿ ನದಿಗೆ ಸ್ವಲ್ಪ ದೂರದಲ್ಲೇ ಸೋಮಾವತಿ ಹೊಳೆ ಸೇರುತ್ತದೆ. ಮುಂದೆ ಇದೇ ನದಿಗೆ ದೊಡ್ಡಹಳ್ಳ, ಕಪಿಲ ಮೊದಲಾದ ತೊರೆಗಳು ಸೇರುತ್ತವೆ. ನದಿ ಆಗ್ನೇಯ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮುಳ್ಳಯ್ಯನಗಿರಿಯ ಬಳಿ ಹುಟ್ಟುವ ಯುಗಚಿ ನದಿ ಚಿಕ್ಕಮಗಳೂರನ್ನು ದಾಟಿ ಹಾಸನ ಜಿಲ್ಲೆಯನ್ನು ಪ್ರವೇಶಿಸಿ ಗೊರೂರು ಬಳಿ ಹೇಮಾವತಿಯನ್ನು ಸೇರುತ್ತದೆ.

ಮುಳ್ಳಯ್ಯನಗಿರಿ ಶ್ರೇಣಿಯಲ್ಲಿ ಗೌರಿಹಳ್ಳ ಮತ್ತು ಆವತಿಹಳ್ಳ ಎಂಬ ಎರಡು ತೊರೆಗಳು ಹುಟ್ಟುತ್ತವೆ. ಸಕ್ಕರೆಪಟ್ಟಣಕ್ಕೆ ಪಶ್ಚಿಮದಲ್ಲಿ 6ಕಿಮೀ ದೂರದಲ್ಲಿ ಗೌರಿಹಳ್ಳದಿಂದ ಆಗಿರುವ ಅಯ್ಯನಕೆರೆ ಇದೆ. ಅಲ್ಲಿಂದ ಹೊರಬೀಳುವ ನೀರೇ ಹೊಳೆಯಾಗಿ ವೇದಾನದಿ ಎಂದು ಹೆಸರಾಗಿದೆ. ಆವತಿ ಹಳ್ಳದಿಂದಾದದ್ದು ಮದಗ ಕೆರೆ. ಇದರಿಂದ ಹೊರಬಿದ್ದ ನೀರು ಕಡೂರಿನ ಬಳಿ ವೇದಾನದಿಯನ್ನು ಸೇರಿ ಅಲ್ಲಿಂದ ಮುಂದೆ ನದಿ ವೇದಾವತಿ ಎಂಬ ಹೆಸರಿನಿಂದ ಹರಿಯುತ್ತದೆ. (ಡಿ.ಎಸ್.ಜೆ.,ಎಂ.ಆರ್.ಆರ್.)

ಜಿಲ್ಲೆಯ ಸುಮಾರು ಅರ್ಧಭಾಗ ಧಾರವಾಡ ಭಿನ್ನಸ್ತರ ಶಿಲೆಗಳಿಂದ ಕೂಡಿದೆ. ಬಾಬಾಬುಡನ್ ಗಿರಿ, ಗಂಗಾಮೂಲ, ಮೈತ್ರಿಪರ್ವತ ಹಾಗೂ ಕುದುರೆಮುಖ ಪ್ರದೇಶಗಳಲ್ಲಿ ಈ ಬಗೆಯ ಶಿಲೆಗಳಿವೆ. ಬಾಬಾಬುಡನ್ ಗಿರಿ ಪ್ರದೇಶದ ಕಬ್ಬಿಣದ ಅದುರುಗಳಿರುವುದು ಈ ಶಿಲೆಗಳಲ್ಲಿ. ಕಬ್ಬಿಣದ ಅದುರು ಪದರಗಳು ಒತ್ತಾದ ಏಣುಗಳಾಗಿಯೇ ಪರಿಣಮಿಸಿ ಪರ್ವತಶಿಖರಗಳಾಗಿವೆ. ಈ ಪ್ರದೇಶದಲ್ಲಿರುವ ಕಲ್ಲತ್ತಗಿರಿ ಮತ್ತು ಕೆಮ್ಮಣ್ಣುಗುಂಡಿಯಲ್ಲಿ ಅದುರನ್ನು ತೆಗೆಯುವ ಕೆಲಸ ನಡೆಯುತ್ತಿದೆ. ಇದನ್ನು ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಸಾಗಿಸಲಾಗುತ್ತಿದೆ. ಜಿಲ್ಲೆಯ ಪಶ್ಚಿಮಭಾಗದಲ್ಲಿ ಮೂಡಿಗೆರೆ ಮತ್ತು ಶೃಂಗೇರಿ ತಾಲ್ಲೂಕುಗಳಲ್ಲಿ ವಿಶೇಷವಾಗಿ ಕಪ್ಪು ಹಾರ್ನ್‌ಬ್ಲೆಂಡ್ ಭಿನ್ನಸ್ತರ ಶಿಲೆಗಳುಂಟು. ಮೂಡಿಗೆರೆ ತಾಲ್ಲೂಕಿನಲ್ಲಿರುವ ಕುದುರೆಮುಖದಲ್ಲಿ ಕಬ್ಬಿಣದ ಅದುರು ತೆಗೆಯುವ ಬೃಹತ್ ಯೋಜನೆ ಅಸ್ತಿತ್ವದಲ್ಲಿದೆ.

ಭಿನ್ನ ಸ್ತರ ಶಿಲೆಗಳಿಲ್ಲದೆಡೆಗಳಲ್ಲಿ ವಿವಿಧ ಬಗೆಯ ಗ್ರ್ಯಾನೈಟ್‌ಗಳೂ ನೈಸ್ ಶಿಲೆಗಳೂ ಉಂಟು. ಗ್ರ್ಯಾನೈಟ್ ಶಿಲೆ ಕಡೂರು ಮತ್ತು ಬೀರೂರುಗಳ ಬಳಿ ಹೇರಳವಾಗಿ ದೊರೆಯುತ್ತದೆ. ಮೂಡಿಗೆರೆ ಬಳಿಯ ಕುದುರೆಗುಂಡಿ ಮತ್ತು ಬಾಳೆಗದ್ದೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಈ ಕಲ್ಲುಗಳನ್ನು ಕಟ್ಟಡ, ಸೇತುವೆ ಮೊದಲಾದವುಗಳಿಗಾಗಿ ತೆಗೆಯುತ್ತಾರೆ. ಬೆಳವಾಡಿಯಲ್ಲೂ ಗ್ರ್ಯಾನೈಟ್ ಕಲ್ಲು ದೊರೆಯುತ್ತದೆ. ಶೃಂಗೇರಿಗೆ 6ಕಿಮೀ ದೂರದಲ್ಲಿ ಕಾಗೆಬಂಗಾರದ ನಿಕ್ಷೇಪಗಳುಂಟು. ತರೀಕೆರೆಯ ಕೆಲವು ಭಾಗಗಳಲ್ಲಿ ಕುರಂದ ಶಿಲೆಯಿದೆ. ಮ್ಯಾಂಗನೀಸನ್ನು ತೆಗೆಯುವ ಪ್ರಯತ್ನವೂ ನಡೆದಿದೆ.

ಬಾಬಾಬುಡನ್‌ಗಿರಿ ಮತ್ತು ಮುಳ್ಳಯ್ಯನ ಗಿರಿಯ ಉತ್ತರ ಮತ್ತು ಪೂರ್ವಕ್ಕಿರುವ ಬಯಲುಗಳದು ಕಪ್ಪುಮಣ್ಣು. ಚಿಕ್ಕಮಗಳೂರು ಮತ್ತು ತರೀಕೆರೆ ತಾಲ್ಲೂಕುಗಳ ಬಯಲು ಪ್ರದೇಶಗಳಿಂದ ಕಡೂರಿನವರೆಗೂ ಇದು ವ್ಯಾಪಿಸಿದೆ. ಇವು ಫಲವತ್ತಾದ ಪ್ರದೇಶಗಳು. ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ಬೆಟ್ಟ ಪ್ರದೇಶದಲ್ಲಿರುವುದೂ ಹೆಚ್ಚಾಗಿ ಕಪ್ಪುಮಣ್ಣೆ. ಇದು ಕಾಫಿ ಬೆಳೆಗೆ ಅನುಕೂಲಕರ, ತರೀಕೆರೆ ತಾಲ್ಲೂಕಿನ ಪಶ್ಚಿಮಭಾಗದ್ದು ಮರಳು ಮತ್ತು ಸುಣ್ಣಕಲ್ಲು ಮಿಶ್ರಿತ ನೆಲ. ಮೂಡಿಗೆರೆ ತಾಲ್ಲೂಕಿನ ಬಹುಭಾಗ ಕೆಂಪುಮಣ್ಣಿನಿಂದ ಕೂಡಿದ್ದು. ಹೇಮಾವತಿ ನದಿ ಉದ್ದಕ್ಕೂ ಹೊತ್ತು ತಂದ ಹುಯಿಗಲು ಅಥವಾ ಸಣ್ಣ ಮರಳುಮಣ್ಣು ಅಕ್ಕಪಕ್ಕದ ಬಯಲಿನಲ್ಲಿ ಹರಡಿದೆ. ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿ ಅಧಿಕ ಮಳೆಯಿಂದಾಗಿ ಗಟ್ಟಿಮಣ್ಣು ಮತ್ತು ಕೆಮ್ಮಣ್ಣು ಕಂಡುಬರುತ್ತವೆ. ಇಲ್ಲಿಯ ನದೀಬಯಲುಗಳು ಫಲವತ್ತಾದವು. ಅಡಕೆ ಬೆಳೆಗೆ ಅನುಕೂಲಕರವಾದ ಮಣ್ಣು ಈ ಪ್ರದೇಶದ್ದು.

ಚಿಕ್ಕಮಗಳೂರು ಜಿಲ್ಲೆಯ ವಾಯುಗುಣ ಹಿತಕರವಾದ್ದು. ಇದರ ಪಶ್ಚಿಮ ಭಾಗ ಹೆಚ್ಚು ತಂಪು. ಚಳಿಗಾಲದಲ್ಲಿ ಚಳಿ ಹೆಚ್ಚು. ಗರಿಷ್ಠ ಉಷ್ಣತೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ. ಜೂನ್‌ನಿಂದ ಸೆಪ್ಟಂಬರ್ ತಿಂಗಳವರೆಗೆ ಅಧಿಕ ಮಳೆ. ಜುಲೈ ತಿಂಗಳೊಂದರಲ್ಲಿ ವರ್ಷದ ಒಟ್ಟು ಮಳೆಯ ಸುಮಾರು 1/3ರಷ್ಟು ಬೀಳುತ್ತದೆ. ಜಿಲ್ಲೆಯ ಪೂರ್ವ ಭಾಗದಲ್ಲಿ ಮಳೆ ಕಡಿಮೆ; ಕಡೂರು ತಾಲ್ಲೂಕಿನಲ್ಲಿ ಕನಿಷ್ಠ. ಕೊಪ್ಪ, ಮೂಡಿಗೆರೆ, ಶೃಂಗೇರಿಗಳಲ್ಲಿ 2500ಮಿಮೀ ಗಿಂತ ಹೆಚ್ಚು ಮಳೆಯಾಗುತ್ತದೆ. ಜಿಲ್ಲೆಯಲ್ಲಿ ಅತಿ ಹೆಚ್ಚಿನ ಮಳೆಯಾಗುವ ಸ್ಥಳ ಮೂಡಿಗೆರೆ ತಾಲ್ಲೂಕಿನ ಬೈರಾಪುರ. ಅಲ್ಲಿ 8369ಮಿಮೀ ಮಳೆಯಾದ ದಾಖಲೆ ಇದೆ. ಇತರೆಡೆಗಳಲ್ಲಿ 2000ದಲ್ಲಿನ ಸರಾಸರಿ ಮಳೆ ಈ ರೀತಿ ಇದೆ. ಶೃಂಗೇರಿ 3571ಮಿಮೀ, ಕೊಪ್ಪ 2835ಮಿಮೀ, ಮೂಡಿಗೆರೆ 2435ಮಿಮೀ, ನರಸಿಂಹರಾಜಪುರ 1500ಮಿಮೀ, ಚಿಕ್ಕಮಗಳೂರು 1029ಮಿಮೀ, ತರೀಕೆರೆ 874ಮಿಮೀ, ಕಡೂರು 623ಮಿಮೀ.



ಈ ಜಿಲ್ಲೆಯ ಅರಣ್ಯ ಸಂಪತ್ತು ಉತ್ಕೃಷ್ಟವಾದದ್ದು. ಅರಣ್ಯ ಪ್ರದೇಶದ ವಿಸ್ತೀರ್ಣ 2,00,485 ಹೆಕ್ಟೇರ್, ಪಶ್ಚಿಮಘಟ್ಟಗಳ ಉದ್ದಕ್ಕೂ ಹಬ್ಬಿರುವ ಈ ಕಾಡುಗಳಲ್ಲಿ ಉತ್ತಮ ಜಾತಿಯ ಮರಗಳುಂಟು. ಅವುಗಳಲ್ಲಿ ತೇಗ, ಶ್ರೀಗಂಧ, ಮತ್ತಿ, ನಂದಿ, ಹಲಸು, ದಬ್ಬೆ, ಹೆಬ್ಬಲಸು, ನೇರಳೆ, ಸಾಗುವಾನಿ, ಕೋಗಿಲೆ ಮುಂತಾದ ಮರಮುಟ್ಟುಗಳಿಗೆ ಉಪಯುಕ್ತವಾದ ಮರಗಳಿವೆ. ಬಾಬಾಬುಡನ್ ಗಿರಿ ಗಿಡಮೂಲಿಕೆ ಸಸ್ಯಗಳಿಗೆ ಹೆಸರುವಾಸಿಯಾದ್ದು. ಹೊರಗಡೆಯಿಂದ ಇಲ್ಲಿಗೆ ನಾಟಿ ವೈದ್ಯರು ಬಂದು ಗಿಡಮೂಲಿಕೆಗಳನ್ನು ಸಂಗ್ರಹಿಸಿಕೊಂಡು ಹೋಗುತ್ತಾರೆ. ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ವಿಪುಲವಾದ ಬಿದಿರು ಕಾಡುಗಳುಂಟು. ಕಾಗದ ತಯಾರಿಸಲು ಬೊಂಬುಗಳನ್ನು ಇಲ್ಲಿಂದ ಸಾಗಿಸಲಾಗುತ್ತದೆ. ಜಿಲ್ಲೆಯ ಕಾಡುಗಳಲ್ಲಿ ಬೆಳೆಯುವ ಅಂಟುವಾಳ, ಸೀಗೆಕಾಯಿ, ಕಾಡುಮೆಣಸು ಮೊದಲಾದವು ವಾಣಿಜ್ಯ ಫಸಲುಗಳು. ಜಿಲ್ಲೆಯ ಪೂರ್ವಭಾಗದಲ್ಲಿ ಕಾಡು ಕಡಿಮೆ. ಈಚಲು ಮರಗಳು ಸಾಕಷ್ಟು ಬೆಳೆಯುತ್ತವೆ. ಜಿಲ್ಲೆಯಲ್ಲಿರುವ ಮುಖ್ಯ ಮೀಸಲು ಕಾಡುಗಳೆಂದರೆ ಮುತ್ತೋಡಿ, ಗಂಗಗಿರಿ, ಹೆಬ್ಬಗಿರಿ, ಸಿಂದಗೆರೆ, ಉದುಗೆರೆ, ದಕ್ಷಿಣಭದ್ರ, ತಳಾವರ, ಬಾಳೂರು, ತುಂಗಭದ್ರ, ಲಕ್ಕವಳ್ಳಿ, ನರಸಿಂಹ ಪರ್ವತ, ತೇಗೂರ್ ಗುಡ್ಡ, ಹೊಸಹಳ್ಳಿ, ಕಿತ್ತಲೆಖಾನ್, ಆರಂಬಳ್ಳಿ ಮತ್ತು ಕುಸ್‌ಗಲ್. ಅರಣ್ಯ ಪ್ರದೇಶದ ಅನೇಕ ಕಡೆ ಅರಣ್ಯ ಭೂಮಿಯನ್ನು ಪ್ಲಾಂಟೇಷನ್ ಸಾಗುವಳಿಗಾಗಿ ಒತ್ತುವರಿ ಮಾಡಿರುವದು ಕಂಡು ಬರುತ್ತದೆ. ಬಹುಕಾಲದಿಂದ ಸಾವಿರಾರು ಒಕ್ಕಲುಗಳು ಅರಣ್ಯದಲ್ಲಿ ನೆಲಸಿರುವ ಸಮಸ್ಯೆಯಿದೆ. ಇವೆಲ್ಲ ಅರಣ್ಯ ಪ್ರದೇಶದ ಕ್ಷೀಣಿಸುವಿಕೆಯನ್ನು ಹೆಚ್ಚಿಸಿವೆ. ಎಮ್ಮೆದೊಡ್ಡಿ ಕಾವಲು, ಚುರ್ಚೆ ಗುಡ್ಡ ಮೊದಲಾದ ಮೀಸಲು ಜಮೀನುಗಳಿವೆ. ಜಿಲ್ಲೆಯ ಕಾಡುಗಳಲ್ಲಿ ಹಲಸು, ನೇರಳೆ, ಈಚಲು, ಚೊಟ್ಟೆ, ಸೀಬೆ, ಬಕ್ಕಲ, ಹಾಲಿ ಹಣ್ಣುಗಳ ಮರಗಳಿವೆ. ಮಲೆನಾಡಿನ ಕಾಡಿನಲ್ಲಿ ಬೆಳೆಯುವ ಬಗನಿ ಮರದಿಂದ ಸೇಂದಿಯನ್ನು ತೆಗೆಯುತ್ತಾರೆ.

ಈ ಜಿಲ್ಲೆ ಪ್ರಾಣಿಸಂಪದ್ಭರಿತವಾದ್ದು. ಇಲ್ಲಿಯ ಕಾಡುಗಳಲ್ಲಿ ಆನೆ, ಹುಲಿ, ಕಾಡು ಕೋಣ, ತೋಳ, ಚಿರತೆ, ಹಂದಿ, ಕಡವೆ, ಸಾರಂಗ, ಜಿಂಕೆ, ಮುಸಿಯ, ಕೆಂಜಳಿಲು, ಕರಡಿ, ಮುಳ್ಳುಹಂದಿ, ಕಾಡುಕುರಿ, ಉಡ, ಪುಣುಗ, ಬರ್ಕ, ಮೊಲ, ನರಿ ಮೊದಲಾದ ಮೃಗಗಳೂ ಬಾವಲಿ, ರಣಹದ್ದು, ಕಾಡುಕೋಳಿ, ನವಿಲು, ಕೋಗಿಲೆ, ಗವುಜುಗ, ಗಿಡುಗ, ಕಾಜಾಣ, ಬೆಳ್ಳಕ್ಕಿ, ಕೆಂಭೂತ -ಪಕ್ಷಿಗಳೂ ಬಾತುಜಾತಿಗೆ ಸೇರಿದ ಚರ್ಲೆ, ಕುಂಡಿಮುಳುಗ ಮೊದಲಾದ ನೀರುಹಕ್ಕಿಗಳೂ ಹೆಬ್ಬಾವು, ಮಂಡಲ, ಕಟುಗ, ಕಾಳಿಂಗಸರ್ಪ, ನಾಗರ, ಕೇರೆ ಮುಂತಾದ ಹಾವುಗಳೂ ಕೆರೆಗಳಲ್ಲಿ ಕುರಡಿ, ಮುರುಗೊಡವ, ಬಾಳೆ, ಅವಲು, ಕುಚ್ಚು, ಕೊರೆಮಳಲಿ, ಅರ್ಜು ಮುಂತಾದ ಮೀನುಗಳೂ ಮೊಸಳೆಗಳೂ ಇವೆ. ಇತ್ತೀಚೆಗೆ ಮರಕ್ಕಾಗಿ ಮತ್ತು ಸಾಗುವಳಿಗಾಗಿ ಕಾಡುಗಳು ನಾಶವಾಗುತ್ತಿರುವುದರಿಂದಲೂ ಶಿಕಾರಿಗಳಿಂದಲೂ ವನ್ಯಮೃಗಗಳು ನಶಿಸುತ್ತಿವೆ. ಜಿಲ್ಲೆಯ ಸಾಕುಪ್ರಾಣಿಗಳಲ್ಲಿ ಮುಖ್ಯವಾದವು ದನ, ಎಮ್ಮೆ, ಕುರಿ. ಮಲೆನಾಡಿನ ಹಸುಗಳು ಗಾತ್ರದಲ್ಲಿ ಚಿಕ್ಕವು. ಕಡಿಮೆ ಹಾಲು ಕರೆಯುತ್ತವೆ. ಬಿಳಿಯ ದೊಡ್ಡರಾಸುಗಳಿಗೆ ಮಲೆನಾಡಿನ ವಾಯುಗುಣ ಅಷ್ಟಾಗಿ ಒಗ್ಗುವುದಿಲ್ಲ. ಕೋಣಗಳನ್ನು ಬೇಸಾಯಕ್ಕೆ ಬಳಸುತ್ತಾರೆ.

ಜಿಲ್ಲೆಯ ಮುಖ್ಯ ಕಸಬು ಕೃಷಿ ಮತ್ತು ಪ್ಲಾಂಟೇಷನ್. ಕಾಫಿ ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಈ ಜಿಲ್ಲೆಯಲ್ಲಿ ಕಾಫಿ ಬೆಳೆಯಬಹುದಾದ ಪ್ರದೇಶದ ವಿಸ್ತೀರ್ಣ 2,590ಚ.ಕಿಮೀ. ಇದು ಕರ್ನಾಟಕದಲ್ಲಿ ಹೆಚ್ಚು ಕಾಫಿ ಉತ್ಪಾದಿಸುವ ಒಂದು ಜಿಲ್ಲೆ. ಕಾಫಿಯನ್ನು ದಕ್ಷಿಣ ಭಾರತಕ್ಕೆ ಮೊಟ್ಟಮೊದಲ ಬಾರಿಗೆ ಬಾಬಾಬುಡನ್ ಎಂಬವನು ಆಫ್ರಿಕದಿಂದ ತಂದು ಈ ಜಿಲ್ಲೆಯಲ್ಲಿರುವ ಬಾಬಾಬುಡನ್ ಗಿರಿಯಲ್ಲಿ ನೆಟ್ಟನೆಂದೂ ಅದರಿಂದ ಈ ಗಿರಿಗೆ ಅವನ ಹೆಸರೇ ಬಂತೆಂದೂ ಪ್ರತೀತಿ. 1820ರ ತರುವಾಯ ಕಾಫಿ ಬೆಳೆ ಯುರೋಪಿಯನ್ ಬೆಳೆಗಾರರಿಂದ ಹೆಚ್ಚು ಪ್ರಚಾರಕ್ಕೆ ಬಂತು. ಸ್ಥಳೀಯ ಬೆಳೆಗಾರರೂ ಇದರಲ್ಲಿ ಆಸಕ್ತಿ ವಹಿಸಿದುದರಿಂದ ಇದು ಹೆಚ್ಚು ವ್ಯಾಪಕವಾಯಿತು. ಕಾಫಿ ಬೆಳೆಯ ಸಂಶೋಧನೆಗಾಗಿ ಬಾಳೆಹೊನ್ನೂರಿನಲ್ಲಿ ಒಂದು ಸಂಶೋಧನೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಅತ್ಯಧಿಕ ಮಳೆ ಬೀಳುವ ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ಕೆಲವು ಎತ್ತರದ ಪ್ರದೇಶಗಳಲ್ಲಿ ಅರ‍್ಯಾಬಿಕ ಕಾಫಿ ಉತ್ತಮವಾಗಿ ಬೆಳೆಯುತ್ತದೆ. ಉಳಿದಲ್ಲಿ ರೊಬಸ್ಟ ಕಾಫಿ ಚೆನ್ನಾಗಿ ಬೆಳೆಯುತ್ತದೆ. ಕಾವೇರಿ ಎಂಬ ತಳಿ 1990ರ ದಶಕದಲ್ಲಿ ಹೆಚ್ಚು ಪ್ರಚಾರ ಪಡೆದು ಸಾಗುವಳಿಗೆ ಬಂದಿತು. ಆದರೆ ಅದು ಅಷ್ಟು ಫಲಪ್ರದವಾಗಿಲ್ಲ. ಈಗ ಇನ್ನೂ ಅನೇಕ ಹೊಸ ತಳಿಗಳನ್ನು ಸೃಷ್ಟಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೆಳೆಯುವ ಒಟ್ಟು ಕಾಫಿ ಉತ್ಪನ್ನ 77,700 ಮೆಟ್ರಿಕ್‌ಟನ್ ಕಾಫಿ ಬೆಳೆಯುವ ಪ್ರದೇಶ 80,818 ಹೆಕ್ಟೇರ್ (2000).

ಹೆಬ್ಬೆ ಜಲಪಾತ, ಕೆಮ್ಮಣ್ಣುಗುಂಡಿ ಸಮೀಪ

ಏಲಕ್ಕಿ ಇನ್ನೊಂದು ಮುಖ್ಯ ವಾಣಿಜ್ಯ ಬೆಳೆ. ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಮೂಡಿಗೆರೆಯ ಬಳಿ ಒಂದು ಪ್ರಾದೇಶಿಕ ಏಲಕ್ಕಿ ಸಂಶೋಧನಾಲಯವನ್ನು ಸ್ಥಾಪಿಸಲಾಗಿದೆ. ಕಳೆದ ದಶಕದಲ್ಲಿ ಮಳೆ ಕಡಿಮೆಯಾದುದರಿಂದ ಈ ಬೆಳೆಗೆ ಭಾರಿ ಪೆಟ್ಟು ಬಿದ್ದಿದೆ. ಈಗ ಏಲಕ್ಕಿ ಬೆಳೆಯುವ ಸ್ಥಳಗಳಲ್ಲಿ ಹೆಚ್ಚಾಗಿ ಕಾಫಿ ಬೆಳೆಯುವ ಪ್ರಯತ್ನ ನಡೆಯುತ್ತಿದೆ. ಎಲೆ ಮಡ್ಲು ಹಾಗೂ ಕಳಸಕ್ಕೆ ಸಮೀಪದಲ್ಲಿ ಕೆಲವು ಚಹ ತೋಟಗಳಿವೆ.

ಈ ಜಿಲ್ಲೆಯಲ್ಲಿ ಅಡಕೆಯೂ ಹೆಚ್ಚಾಗಿ ಬೆಳೆಯುತ್ತದೆ. ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಮತ್ತು ಕಳಸದ ಸುತ್ತಮುತ್ತ ಬಯಲು ಸೀಮೆಯಲ್ಲಿ ಕೆಲವೆಡೆ ಅಡಕೆ ತೋಟಗಳಿವೆ. ಮೆಣಸು ಮತ್ತು ಶುಂಠಿಗಳನ್ನು ತೋಟಗಳಲ್ಲಿ ಗದ್ದೆಗಳಲ್ಲಿ ಉಪ ಬೆಳೆಗಳಾಗಿ ಬೆಳೆಯುವುದುಂಟು. ಕೆಲವೆಡೆ ರಬ್ಬರ್ ತೋಟಗಳಿವೆ. ಇತ್ತೀಚೆಗೆ ವೆನಿಲಾ ಬೆಳೆಯಲು ಒಲವು ಕಂಡುಬಂದಿದೆ.

ಬತ್ತ ಇಲ್ಲಿನ ಮುಖ್ಯ ಆಹಾರ ಬೆಳೆ. ಒಟ್ಟು 53200 ಹೆಕ್ಟೇರುಗಳಲ್ಲಿ ಬತ್ತ ಬೆಳೆಯಲಾಗುತ್ತದೆ. ಚಿಕ್ಕಮಗಳೂರಿನ ಸುತ್ತಣ ಬಯಲಿಗೆ ಹೊಂಜೇವಣಿಗೆ ಸೀಮೆ ಅಥವಾ ಚಿನ್ನ ಹರಿಯುವ ಬಯಲು

ಎಂದು ಹೆಸರು ಬಂದಿದೆ. ಇದಕ್ಕೆ ಇಲ್ಲಿಯ ಫಲವತ್ತಾದ ಬತ್ತದ ಬಯಲೇ ಕಾರಣ. ಕಪ್ಪುಮಣ್ಣಿನಿಂದ ಕೂಡಿದ ಪೂರ್ವ ಭಾಗದಲ್ಲಿ ಅದರಲ್ಲೂ ಬಯಲು ನಾಡಿನ ಭಾಗದಲ್ಲಿ ಬತ್ತದ ಇಳುವರಿ ಹೆಚ್ಚು. ಇದನ್ನು ಬೆಳೆಯುವ ಪ್ರದೇಶವೂ ಹೆಚ್ಚು. ಮಲೆನಾಡಿನ ಪ್ರದೇಶಗಳಲ್ಲಿ ಬತ್ತದ ಬಯಲುಗಳು ಕಡಿಮೆ. ಮೂಡಿಗೆರೆ ತಾಲ್ಲೂಕಿನ ಬಹುಭಾಗ ಬತ್ತದ ಬೆಳೆಗೆ ಅನುಕೂಲವಾಗಿಲ್ಲ. ಇದಕ್ಕೆ ಜಿಲ್ಲೆಯ ಅಧಿಕ ಮಳೆಯೂ ಅತಿಯಾದ ತೇವದಿಂದ ಕೂಡಿದ ಕೆಮ್ಮಣ್ಣು ಭೂಮಿಯೂ ಕಾರಣ. ಕಬ್ಬನ್ನು ಕೆಲವೆಡೆ ಬೆಳೆಯಲಾಗುತ್ತಿದೆ. ಕಡೂರು ತಾಲ್ಲೂಕಿನಲ್ಲಿರುವ ಅಯ್ಯನಕೆರೆ ಮತ್ತು ಮದಗಕೆರೆಗಳು ಸಾವಿರಾರು ಎಕರೆ ಪ್ರದೇಶಗಳಿಗೆ ನೀರನ್ನು ಒದಗಿಸುತ್ತವೆ. ಜಿಲ್ಲೆಯ ಒಟ್ಟು ನೀರಾವರಿ ಕ್ಷೇತ್ರ 30,365 ಹೆಕ್ಟೇರ್‌ಗಳು. ತರೀಕೆರೆ ತಾಲ್ಲೂಕಿನಲ್ಲಿ ಭದ್ರಾನದಿಗೆ ಅಡ್ಡಲಾಗಿ ಲಕ್ಕವಳ್ಳಿ ಅಣೆಕಟ್ಟನ್ನು ಕಟ್ಟಲಾಗಿದೆ. ಇದರ ಹೆಚ್ಚಿನ ಸೌಲಭ್ಯ ಶಿವಮೊಗ್ಗ ಜಿಲ್ಲೆಗೆ ದೊರೆಯುತ್ತದೆ. ಇದೇ ತಾಲ್ಲೂಕಿನಲ್ಲಿ ಜಂಬದಹಳ್ಳ ಯೋಜನೆಯನ್ನು 50 ಲಕ್ಷ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

ರಾಗಿ ಇನ್ನೊಂದು ಪ್ರಮುಖ ಬೆಳೆಯಾಗಿದ್ದು ಇದನ್ನು 55,819 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತದೆ. ತೆಂಗು 30,161; ದ್ವಿದಳ ಧಾನ್ಯಗಳು 26,699; ಏಕದಳ ಧಾನ್ಯಗಳು 1,19,027 ಹೆಕ್ಟೇರ್‌ಗಳಲ್ಲಿ ಬೆಳೆಯುತ್ತದೆ (1999-2000). ಕಡಲೆ, ತೊಗರಿ, ಕಬ್ಬು, ಹತ್ತಿ, ಬೆಳೆಗಳನ್ನು ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಾರೆ. ತರೀಕೆರೆ ವೀಳೆಯದೆಲೆಗೆ ಪ್ರಸಿದ್ಧ.

ಜಿಲ್ಲೆಯ ಪಶ್ಚಿಮದಂಚಿನಲ್ಲಿರುವ ಕುದುರೆಮುಖದ ಬಳಿ ಅಧಿಕ ಪ್ರಮಾಣದಲ್ಲಿ ಕಬ್ಬಿಣದ ಅದುರನ್ನು ತೆಗೆಯುವ ಬೃಹತ್ ಯೋಜನೆ ಇದ್ದು ಕೆಮ್ಮಣ್ಣುಗುಂಡಿಯಲ್ಲಿ ಕಬ್ಬಿಣದ ಅದುರು ತೆಗೆಯುವ ಉದ್ಯಮವಿದ್ದು ನೂರಾರು ಜನರಿಗೆ ಉದ್ಯೋಗ ಒದಗಿದೆ. ಚಿಕ್ಕಮಗಳೂರಿನಲ್ಲಿ ಕಾಫಿ ಹದಮಾಡುವ ಅನೇಕ ಕಾರ್ಖಾನೆಗಳಿವೆ. ಇಲ್ಲಿಂದ ಕಬ್ಬಿಣದ ಅದುರನ್ನು ಮಂಗಳೂರು ಬಂದರಿಗೆ ಸಾಗಿಸಿ ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ. ಗಣಿಗಾರಿಕೆಯಿಂದ ಉಂಟಾಗುವ ಪರಿಸರ ಹಾನಿಯ ಬಗ್ಗೆ ಸಾಮಾಜಿಕ ಚಳವಳಿ ನಡೆದಿದ್ದು ಗಣಿಗಾರಿಕೆ ಸದ್ಯ ಮುಂದುವರಿದಿದೆ. ಚಿಕ್ಕಮಗಳೂರು ಪಟ್ಟಣದಲ್ಲಿ ಮೊದಲ ಬಾರಿಗೆ 1917ರಲ್ಲಿ ಅಕ್ಕಿ ಗಿರಣಿಯನ್ನೂ 1920ರಲ್ಲಿ ಕಾಫಿ ಹದಮಾಡುವ ಕಾರ್ಖಾನೆಯನ್ನೂ ಸ್ಥಾಪಿಸಲಾಯಿತು. ಈಗ ಜಿಲ್ಲೆಯ ಹಲವಾರು ಕಡೆ ಅಕ್ಕಿ ಗಿರಣಿಗಳಿವೆ. ಕಾಫಿ ತೋಟಗಳಿಗೆ ಅಗತ್ಯವಿರುವ ಉಪಕರಣಗಳನ್ನು ತಯಾರಿಸುವ ಕಾರ್ಯಾಗಾರಗಳು ಚಿಕ್ಕಮಗಳೂರಿನಲ್ಲಿವೆ. 1911ರಲ್ಲಿ ಸ್ಥಾಪಿಸಿದ ಒಂದು ಹೆಂಚಿನ ಕಾರ್ಖಾನೆ ಶೃಂಗೇರಿಯಲ್ಲಿತ್ತು. ಚಿಕ್ಕಮಗಳೂರು,

ಜಿಲ್ಲಾಧಿಕಾರಿ ಕಚೇರಿ, ಚಿಕ್ಕಮಗಳೂರು

ತರೀಕೆರೆ, ಮೂಡಿಗೆರೆ ಮತ್ತಿತರೆಡೆಗಳಲ್ಲಿ ಮರ ಕೊಯ್ಯುವ ಕಾರ್ಖಾನೆಗಳೂ ಅಜ್ಜಂಪುರ, ಶಿವನಿ, ಬೀರೂರುಗಳಲ್ಲಿ ನೂಲಿನ ಮತ್ತು ಕಂಬಳಿ ತಯಾರಿಸುವ ಮಗ್ಗಗಳೂ ಉಂಟು. ಜಿಲ್ಲೆಯಲ್ಲಿ ಕೈಮಗ್ಗಗಳೂ ಕಡೂರು ತಾಲ್ಲೂಕಿನ ಬಿದರೆಯಲ್ಲಿ ಕಚ್ಚಾ ಗಾಜಿನ ಬಳೆಗಳನ್ನು ತಯಾರಿಸುವ ಕಾರ್ಖಾನೆಯೂ ಮೂಡಿಗೆರೆ ತಾಲ್ಲೂಕಿನ ಕೆಳಗೂರಿನಲ್ಲಿ ಚಹ ಪರಿಷ್ಕರಣ ಕಾರ್ಖಾನೆಯೂ ಇವೆ. ಇಲ್ಲಿಯ ಮಲೆನಾಡು ಭಾಗದಲ್ಲಿ ಜೇನು ಸಾಕುವ ಉದ್ಯಮ ಬೆಳೆದಿದೆ. ಮಡಕೆ ಮಾಡುವುದು, ಬಿದಿರಿನ ವಸ್ತುಗಳನ್ನು ತಯಾರಿಸುವುದು, ಗಾಡಿ ಕೂಡಿಸುವುದು ಮೊದಲಾದ ಕೈಗಾರಿಕೆಗಳೂ ಇವೆ. ಜಿಲ್ಲೆಯಲ್ಲಿ ಒಟ್ಟು 269 ಕಾರ್ಖಾನೆಗಳಿದ್ದು 1171ಉದ್ಯೋಗಿಗಳಿದ್ದಾರೆ. ಇತರ ಕೈಗಾರಿಕೆಯಲ್ಲಿ ಜಿಲ್ಲೆಯ ಸ್ಥಾನ ಗೌಣ. ಜಿಲ್ಲೆಯಲ್ಲಿ ಎರಡು ವೃತ್ತಿ ತರಬೇತು ಶಾಲೆಗಳುಂಟು.

ಬೆಂಗಳೂರು-ಪುಣೆ ರೈಲುಮಾರ್ಗ ಕಡೂರಿನ ಮೂಲಕ ಹಾದುಹೋಗುತ್ತದೆ. ಇದಕ್ಕೆ ಕವಲಾಗಿ ಬೀರೂರಿನಿಂದ ತರೀಕೆರೆಯ ಮೂಲಕ ಶಿವಮೊಗ್ಗಕ್ಕೆ ಒಂದು ರೈಲುಮಾರ್ಗವಿದೆ. ಜಿಲ್ಲೆಯಲ್ಲಿ ರೈಲುಮಾರ್ಗದ ಒಟ್ಟು ಉದ್ದ 97ಕಿಮೀ. ಕಡೂರು-ಚಿಕ್ಕಮಗಳೂರು ರೈಲು ಮಾರ್ಗ ಪ್ರಗತಿಯಲ್ಲಿದೆ. ಕಡೂರು-ಮಂಗಳೂರು ಹೆದ್ದಾರಿ ಚಿಕ್ಕಮಗಳೂರಿನ ಮೂಲಕ ಹಾದುಹೋಗುತ್ತದೆ. ಬೆಂಗಳೂರು - ಹೊನ್ನಾವರ ಹೆದ್ದಾರಿ ಕಡೂರಿನ ಮೂಲಕ ಸಾಗುತ್ತದೆ. ಚಿಕ್ಕಮಗಳೂರಿನಿಂದ ಬೆಂಗಳೂರು, ಮೈಸೂರು, ಹಾಸನ, ಶಿವಮೊಗ್ಗ, ಮಡಿಕೇರಿ, ಬೆಳಗಾಂವಿ, ಚಿತ್ರದುರ್ಗ, ಹರಿಹರ, ಉಡುಪಿ, ಮಂಗಳೂರು ಮೊದಲಾದ ಕಡೆಗಳಿಗೆ ಬಸ್ಸು ಮಾರ್ಗಗಳಿವೆ. ಚಿಕ್ಕಮಗಳೂರು - ಆಲ್ದೂರು - ಬಾಳೆಹೊನ್ನೂರು - ಉರುವಿನಖಾನ್ - ಕೊಟ್ಟಿಗೆಹಾರ ಹೆದ್ದಾರಿ, ಚಿಕ್ಕಮಗಳೂರು - ಜೈಪುರ - ಶೃಂಗೇರಿ - ಮಾರ್ಗ, ಚಿಕ್ಕಮಗಳೂರು - ಮಲ್ಲಂದೂರು - ನರಸಿಂಹರಾಜಪುರ - ಮಾರ್ಗ, ಚಿಕ್ಕಮಗಳೂರು - ಬಾಬಾಬುಡನ್‌ಗಿರಿ ರಸ್ತೆ, ಮಲ್ಲಂದೂರು - ಮತ್ತೋಡಿ - ಕೊಳಗಾವೆ ಗಿರಿ ರಸ್ತೆ, ಮೂಡಿಗೆರೆ - ಸಕಲೇಶಪುರ ರಸ್ತೆ, ಕೊಟ್ಟಿಗೆಹಾರ - ಕಳಸ ರಸ್ತೆ, ಕೊಟ್ಟಿಗೆಹಾರ - ಬಾಳೆಹೊನ್ನೂರು ರಸ್ತೆ, ಮೂಡಿಗೆರೆ - ದಾರದಹಳ್ಳಿ - ದೇವವೃಂದ ರಸ್ತೆ, ಮೂಡಿಗೆರೆ - ಗೆಂಡೆಹಳ್ಳಿ - ಬೇಲೂರು ರಸ್ತೆ, ಬಾಳೆಹೊನ್ನೂರು ಕೊಪ್ಪ - ಆಗುಂಬೆ ರಸ್ತೆ, ತರೀಕೆರೆ - ಲಕ್ಕವಳ್ಳಿ - ನರಸಿಂಹರಾಜಪುರ ರಸ್ತೆ ಇವು ಮಲೆನಾಡು ಭಾಗದ ಮುಖ್ಯ ರಸ್ತೆಗಳು. ಕಡೂರು - ಬೀರೂರು - ಅಜ್ಜಂಪುರ ರಸ್ತೆ, ಚಿಕ್ಕಮಗಳೂರು - ಮಾಗಡಿ - ಜಾವಗಲ್ಲು ರಸ್ತೆ, ತರೀಕೆರೆ - ಶಾಂತವೇರಿ - ಬೀರೂರು - ಕಡೂರು ರಸ್ತೆ; ತರೀಕೆರೆ - ಹೊಸದುರ್ಗ ರಸ್ತೆ - ಇವು ಬಯಲು ಸೀಮೆಯ ಮುಖ್ಯ ರಸ್ತೆಗಳು. ಜಿಲ್ಲೆಯಲ್ಲಿ 34 ದೊಡ್ಡ ಸೇತುವೆಗಳಿವೆ. ಮಲೆನಾಡಿನಲ್ಲಿ ರಸ್ತೆ ನಿರ್ಮಾಣದ ವೆಚ್ಚ ಹೆಚ್ಚು. ಆದ್ದರಿಂದ ಇನ್ನೂ ಅನೇಕ ಊರುಗಳಿಗೆ ರಸ್ತೆ ಸಂಪರ್ಕ ಸರಿಯಾಗಿಲ್ಲ. ಹಲವು ರಸ್ತೆಗಳು ಮಳೆಗಾಲದಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಸರ್ಕಾರ ಈಗ ಈ ರಸ್ತೆಗಳ ವಿಸ್ತರಣೆ ಮತ್ತು ಅಭಿವೃದ್ಧಿಗೆ ಹೆಚ್ಚು ಗಮನ ನೀಡಿದೆ. ಒಟ್ಟು ರಸ್ತೆಗಳ ಉದ್ದ 7,547ಕಿಮೀ; ಪಕ್ಕಾರಸ್ತೆಗಳು 4,781ಕಿಮೀ (2000).

ಈ ಜಿಲ್ಲೆಯ ಸಾಕ್ಷರತೆ 64.27% (ಪುರುಷರಲ್ಲಿ 71.30% ಸ್ತ್ರೀಯರಲ್ಲಿ 57.13%). 53 ಪ್ರೌಢಶಾಲೆಗಳೂ 46 ಪದವಿಪೂರ್ವ ಕಾಲೇಜುಗಳೂ 14 ಪ್ರಥಮ ದರ್ಜೆ ಕಾಲೇಜುಗಳೂ ಇವೆ. ಒಂದು ಎಂಜಿನಿಯರಿಂಗ್ ಕಾಲೇಜಿದೆ. ಮೂಡಿಗೆರೆಯಲ್ಲಿ ತೋಟಗಾರಿಕಾ ಕಾಲೇಜಿದೆ. 3 ಪಾಲಿಟೆಕ್ನಿಕ್‌ಗಳಿವೆ (2000-01) ಮೂಡಿಗೆರೆ ಮತ್ತು ಶೃಂಗೇರಿಗಳಲ್ಲಿ ನರ್ಸಿಂಗ್ ಶಾಲೆಗಳು ಆರಂಭವಾಗಿವೆ.

ವ್ಯವಸಾಯ ಈ ಜಿಲ್ಲೆಯ ಜನರ ಪ್ರಧಾನ ಕಸಬಾದ್ದರಿಂದ ಗ್ರಾಮಜೀವನದ ಲಕ್ಷಣಗಳನ್ನು ಎಲ್ಲೆಲ್ಲೂ ಕಾಣಬಹುದು. ಬೆಳೆ ಕುಯ್ಲಿಗೆ ಬರುವಾಗ ಡಿಸೆಂಬರ್ ತಿಂಗಳಲ್ಲಿ ಹೊಸ ಅಕ್ಕಿ ಹಬ್ಬವನ್ನು ಮಾಡುತ್ತಾರೆ. ಆಗ ಹೊಸ ಬೆಳೆಯಿಂದ ಮಾಡಿದ ಅನ್ನವನ್ನು ದೇವರಿಗೆ ಮೀಸಲು ಅರ್ಪಿಸುತ್ತಾರೆ. ಗದ್ದೆ ಕುಯಿಲು, ಒಕ್ಕಣೆ ಮುಗಿದ ಮೇಲೆ ಕಣದ ಹಬ್ಬ ಆಚರಿಸುತ್ತಾರೆ. ಈ ಪದ್ಧತಿಯನ್ನೇ ಕಾಫಿ ಫಸಲಿಗೂ ಅನ್ವಯಿಸಲಾಗುತ್ತದೆ. ಸಾಮಾನ್ಯವಾಗಿ ಏಪ್ರಿಲ್, ಮೇ ತಿಂಗಳುಗಳಲ್ಲಿ ಸುಗ್ಗಿಹಬ್ಬವನ್ನು ಆಚರಿಸುತ್ತಾರೆ. ದೇವವೃಂದದಲ್ಲಿ ಉಗಾದಿಯಂದು ನಡೆಯುವ ರಾಮೇಶ್ವರ ಜಾತ್ರೆ ಈ ನಾಡಿನ ಹಬ್ಬ. ಫಲ್ಗುಣಿ ಸುಗ್ಗಿ ಹಬ್ಬ ಮುಕ್ಕುಂದ ನಾಡಿನ ಪ್ರಮುಖ ಉತ್ಸವ. ಒಂದೇ ಊರು ಪ್ರತ್ಯೇಕವಾಗಿ ಹಬ್ಬ ನಡೆಸುವುದೂ ಉಂಟು. ದಾರದಹಳ್ಳಿಯ ಸುಗ್ಗಿಹಬ್ಬ ಇಂಥದು. ಈ ಜಿಲ್ಲೆಯ ಕೊಪ್ಪ ಶೃಂಗೇರಿ ಭಾಗಗಳಲ್ಲಿ ಅಂಟಿಗೆ ಪಂಟಿಗೆ ಸಂಪ್ರದಾಯವಿದೆ. ಕಾರ್ತಿಕದಲ್ಲಿ ಕೋಲಾಟ ನಡೆಯುವುದು. ವೀರಗಾಸೆ ಕುಣಿತ, ಕರಡೆಮಜಲು,

ಕರಪಾಲಮೇಳ, ಕೀಲುಕುದುರೆ ನರ್ತನ ಮುಂತಾದವು ಇಲ್ಲಿಯ ಮುಖ್ಯ ಜನಪದ ಆಕರ್ಷಣೆಗಳು. ಬಯಲುಸೀಮೆಯಲ್ಲಿ ಅನೇಕ ಕಡೆ ದೇವರ ದರ್ಶನಗಳು ಬರುತ್ತವೆ. ಮೂಡಿಗೆರೆ ತಾಲ್ಲೂಕು ಕೆಸವೊಳಲಿನ ಮಹಾರುದ್ರ ದೇವರು ದರ್ಶನ ಬರುತ್ತಿದ್ದು ನೂರಾರು ಭಕ್ತರನ್ನು ಆಕರ್ಷಿಸಿದೆ.



ಬಾಬಾಬುಡನ್‌ಗಿರಿಯಲ್ಲಿರುವ ಹೊನ್ನಮ್ಮನ ಹಳ್ಳ

ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಮುಖ್ಯವಾದವು: ನಿರ್ವಾಣಸ್ವಾಮಿ ಜಾತ್ರೆ (ಮುಳ್ಳಯ್ಯನಗಿರಿ), ಸೀತಾಳ ಮಲ್ಲಿಕಾರ್ಜುನಸ್ವಾಮಿ ತೇರು (ಚಿಕ್ಕಮಗಳೂರು ತಾಲ್ಲೂಕು), ಲಕ್ಷ್ಮೀರಂಗನಾಥಸ್ವಾಮಿ ತೇರು (ಸಕ್ಕರೆ ಪಟ್ಟಣ), ಕಾಲಭೈರವ ತೇರು (ಬೀರುವದೇವರು), ಕಳಸೇಶ್ವರಸ್ವಾಮಿ ಜಾತ್ರೆ (ಕಳಸ), ಚಂದ್ರಮೌಳೇಶ್ವರ ಮತ್ತು ಶಾರದಾಂಬ ನವರಾತ್ರಿ ಮಹೋತ್ಸವ (ಶೃಂಗೇರಿ) ಮತ್ತು ಮಲ್ಲಿಕಾರ್ಜುನಸ್ವಾಮಿ ತೇರು (ಪುರ). ಶ್ರೀ ರಾಮೇಶ್ವರ ತೇರು (ದೇವವೃಂದ) ಬೆಳವಾಡಿ, ಬೀರೂರು, ಕಲ್ಮರಡಿ ಮಠ ಬುಕ್ಕಾಂಬುಧಿ, ಪಟ್ಟಣಗೆರೆ, ಆಸಂದಿ, ಹಿರೇಮಗಳೂರು, ದತ್ತಾತ್ರೇಯ ಪೀಠ, ಅಮೃತಾಪುರ, ಅಂಗಡಿ, ದೇವನೂರು ಮೊದಲಾದೆಡೆ ಜಾತ್ರೆ, ಉತ್ಸವಗಳು ನಡೆಯುತ್ತವೆ. ಸಿಂಹನಗದ್ದೆ ಜೈನರಿಗೆ ಪವಿತ್ರ ಸ್ಥಳ.

ಅನೇಕ ಸ್ಥಳಗಳು ಪುರಾಣೇತಿಹಾಸಪ್ರಸಿದ್ಧವಾದವು. ಮುಳ್ಳಯ್ಯನಗಿರಿ - ಬಾಬಾಬುಡನ್ ಗಿರಿ ಶ್ರೇಣಿಯೇ ರಾಮಾಯಣ ಕಾಲದ ಚಂದ್ರದ್ರೋಣ ಪರ್ವತವೆಂದು ಹೇಳಲಾಗಿದೆ. ಮೂಡಿಗೆರೆ ತಾಲ್ಲೂಕಿನಲ್ಲಿರುವ ಹೇರಿಕೆಗೆ ಸಮೀಪದಲ್ಲಿರುವ ಪಾಂಡವರ ಗುಡ್ಡದಲ್ಲಿ ಹಿಂದೆ ಪಾಂಡವರು ವನವಾಸಕಾಲದಲ್ಲಿ ಇದ್ದರೆಂಬುದು ಸ್ಥಳಪುರಾಣ. ಅಲ್ಲಿರುವ ಕಲ್ಲಿನ ಉಪಕರಣಗಳನ್ನು ಅವರು ಬಳಸುತ್ತಿದ್ದರು ಎಂದು ನಂಬಲಾಗಿದೆ. ತುಂಗಾನದಿಯ ಅಂಬುತೀರ್ಥ ಎಂಬಲ್ಲಿರುವ ಭೀಮನಕಲ್ಲನ್ನು ಮಧ್ವಾಚಾರ್ಯರು ಒಂದೇ ಕೈಯಲ್ಲಿ ಎತ್ತಿ ಇಟ್ಟರೆಂದು ಮೂಡಿಗೆರೆಯ 89ನೆಯ ಶಾಸನ ತಿಳಿಸುತ್ತದೆ. ಮೂಡಿಗೆರೆ ತಾಲ್ಲೂಕಿನ ಬಲ್ಲಾಳರಾಯನ ದುರ್ಗದಲ್ಲಿ ಹೊಯ್ಸಳರ ಕಾಲದಲ್ಲಿ ಕಟ್ಟಿದ ಕೋಟೆಯುಂಟು. ಶೃಂಗೇರಿ ನಿಸರ್ಗದ ಮಡಿಲಲ್ಲಿರುವ ಸುಂದರ ಕ್ಷೇತ್ರ. ಬಾಳೆಹೊನ್ನೂರಿನಲ್ಲಿ ಶ್ರೀರಂಭಾಪುರಿ ಜಗದ್ಗುರುಗಳ ಮಠವಿದೆ. ಕಳಸ ಯಾತ್ರಾಸ್ಥಳ. ಇದು ಭೈರವರಸರ ರಾಜಧಾನಿಯೂ ಆಗಿತ್ತು. ಇದರ ಸಮೀಪದಲ್ಲಿ ಇರುವ ಹೊರನಾಡು ದೇಗುಲ ಪ್ರಸಿದ್ಧವಾದ್ದು. ಬಾಳೆಹೊನ್ನೂರಿಗೆ ಸಮೀಪದಲ್ಲಿ ಭದ್ರಾನದಿಯ ದಡದಲ್ಲಿರುವ ಖಾಂಡ್ಯ ಮಾರ್ಕಂಡೇಯನ ಜನ್ಮಸ್ಥಳವೆಂದು ಹೇಳಲಾಗಿದೆ. ಕಡೂರು - ಚಿಕ್ಕಮಗಳೂರು ರಸ್ತೆಯಲ್ಲಿರುವ ಸಕ್ಕರೆಪಟ್ಟಣ ಒಂದು ಪ್ರಮುಖ ಸ್ಥಳ. ಕಡೂರು ಪಟ್ಟಣದ ಬಳಿ ಇರುವ ಹೇಮಗಿರಿ ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ವರ್ಷಕ್ಕೊಮ್ಮೆ ದನದ ಜಾತ್ರೆ ನಡೆಯುತ್ತದೆ. ಆ ತಾಲ್ಲೂಕಿನಲ್ಲಿರುವ ಆಸಂದಿ ಗ್ರಾಮ ಇತಿಹಾಸ ಪ್ರಸಿದ್ಧವಾದ್ದು. ಕೊಪ್ಪ ತಾಲ್ಲೂಕಿನ ಜಂಬಿಟ್ಟಿಗೆ ಗ್ರಾಮದಲ್ಲಿ 1733ರಲ್ಲಿ ಕಟ್ಟಿಸಿದ ಒಂದು ದೇವಾಲಯ ಶಿಲ್ಪಕಲೆಗೆ ಪ್ರಸಿದ್ಧವಾದ್ದು. ತರೀಕೆರೆಯ ಬಳಿ ಅಮೃತಾಪುರದ ಅಮೃತೇಶ್ವರ ದೇವಾಲಯ ಹೊಯ್ಸಳರ ಕಾಲದಲ್ಲಿ ರಚಿತವಾದ್ದು. ಚಿಕ್ಕಮಗಳೂರು ತಾಲ್ಲೂಕಿನ ವಸ್ತಾರೆಯಲ್ಲಿ ಪದ್ಮಾವತಿಯ ದೇವಾಲಯವಿದೆ. ಅಲ್ಲಿರುವ ಸಪ್ತ ಮಾತೃಕೆಯರ ಮತ್ತು ರಾಜಮಂತ್ರಿ ಸಮಾಲೋಚನೆಯ ಕೆತ್ತನೆಗಳು ಆಕರ್ಷಕವಾದವು. ಮೂಡಿಗೆರೆ ತಾಲ್ಲೂಕಿನ ಘಟ್ಟಶ್ರೇಣಿಯಲ್ಲಿರುವ ಮರಗುಂದದ ಬೆಟ್ಟದ ಭೈರವೇಶ್ವರ, ಭೈರಾಪುರದ ನಾಣ್ಯದ ಭೈರವೇಶ್ವರ, ದೇವರಮನೆಯ ಕಾಲಭೈರವೇಶ್ವರ ದೇವಾಲಯಗಳು ಅತ್ಯಂತ ಪ್ರಾಚೀನ ದ್ರಾವಿಡ ವಾಸ್ತು ರಚನೆಗೆ ಮಾದರಿಗಳಾಗಿವೆ.

ಈ ಜಿಲ್ಲೆಯ ಕೆಲವು ಪ್ರದೇಶ 4-6ನೆಯ ಶತಮಾನಗಳಲ್ಲಿ ಆದ್ಯ ಕದಂಬರ ಆಳಿಕೆಗೆ ಒಳಪಟ್ಟಿತ್ತು. 7-8-9ನೆಯ ಶತಮಾನಗಳಲ್ಲಿ ಜಿಲ್ಲೆಯ ಪಶ್ಚಿಮದ ಕೆಲವು ಭಾಗಗಳು ದಕ್ಷಿಣ ಕನ್ನಡ ಜಿಲ್ಲೆಯಿಂದ ಆಳಿದ ಆಳುಪರಿಗೆ ಸೇರಿದ್ದುವು. ಶಿವಮೊಗ್ಗ ಜಿಲ್ಲೆಗೆ ಸೇರಿದ ಹುಂಚದ ಸಾಂತರರ ರಾಜ್ಯ ಇಲ್ಲಿಯವರೆಗೂ ಹಬ್ಬಿತ್ತು. ಜಿಲ್ಲೆಯ ಹೆಚ್ಚಿನ ಭಾಗ ಗಂಗರ ಅಧೀನದಲ್ಲಿತ್ತು.

ಹೊಯ್ಸಳರ ಮೂಲಪುರುಷನಿಗೆ ಜನ್ಮ ನೀಡಿದ ಹೆಗ್ಗಳಿಕೆ ಈ ಜಿಲ್ಲೆಗೆ ಸೇರುತ್ತದೆ. ಆ ಸ್ಥಳ ಇದ್ದುದು ಮೂಡಿಗೆರೆಗೆ 13ಕಿಮೀ ದೂರದಲ್ಲಿರುವ ಸೊಸವೂರು ಅಥವಾ ಈಗಿನ ಅಂಗಡಿ ಗ್ರಾಮದಲ್ಲಿ. 11-14ನೆಯ ಶತಮಾನಗಳಲ್ಲಿ ಜಿಲ್ಲೆ ಹೊಯ್ಸಳರ ಆಳಿಕೆಯಲ್ಲಿತ್ತು. ಶೃಂಗೇರಿಯ ವಿದ್ಯಾರಣ್ಯರು ವಿಜಯನಗರದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರೆಂದು ಹೇಳಲಾಗಿದೆ. ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಜಿಲ್ಲೆಯ ಪಶ್ಚಿಮ ಭಾಗ ಕಾರ್ಕಳದ ರಾಜರಿಗೂ ದಕ್ಷಿಣ ಭಾಗ ಮಂಜರಾಬಾದ್ ಪ್ರದೇಶದ ಪಾಳೆಯಗಾರರಿಗೂ ಸೇರಿದ್ದುವು. ಇವರೆಲ್ಲ ವಿಜಯನಗರದ ಸಾಮಂತರಾಗಿದ್ದರು. ಹದಿನೇಳನೆಯ ಶತಮಾನದ ಮಧ್ಯಭಾಗದಲ್ಲಿ ಈ ಜಿಲ್ಲೆಯ ಬಹುಭಾಗವನ್ನು ಶಿವಪ್ಪನಾಯಕ ವಶಪಡಿಸಿಕೊಂಡ. ವಿಜಯನಗರದ ಪ್ರತಿನಿಧಿಯಾಗಿದ್ದ ಶ್ರೀರಂಗರಾಯ ಸ್ವಲ್ಪಕಾಲ ಅವನ ಆಶ್ರಯದಲ್ಲಿದ್ದು ಸಕ್ಕರೆಪಟ್ಟಣ, ಬೇಲೂರು ಮತ್ತು ನೆರೆಯ ಪ್ರದೇಶಗಳನ್ನಾಳುತ್ತಿದ್ದ. 1690-94ರಲ್ಲಿ ಮೈಸೂರಿನ ರಾಜರು ಈ ಜಿಲ್ಲೆಯ ದಕ್ಷಿಣ ಭಾಗವನ್ನು ಆಕ್ರಮಿಸಿಕೊಂಡರು. ಅದೇ ವರ್ಷ ಮೈಸೂರು ಮತ್ತು ಇಕ್ಕೇರಿಗಳ ನಡುವೆ ಒಪ್ಪಂದವಾಗಿ, ಮೈಸೂರಿನ ಅರಸರು ಗೆದ್ದಿದ್ದ ಪ್ರದೇಶಗಳಲ್ಲಿ ಐಗೂರು ಮತ್ತು ವಸ್ತಾರೆ ಪಾಳೆಯಪಟ್ಟುಗಳನ್ನು ಬಿಟ್ಟುಕೊಟ್ಟರು. ಈ ಮಧ್ಯದಲ್ಲಿ ಕೆಲವು ಕಾಲ ತರೀಕೆರೆ ಪಾಳೆಯಗಾರರು ಆ ಪಟ್ಟಣದ ಸುತ್ತಲ ಪ್ರದೇಶಗಳನ್ನು ಆಳುತ್ತಿದ್ದರು. 1763ರಲ್ಲಿ ಹೈದರ್ ಇಕ್ಕೇರಿಯನ್ನು ಆಕ್ರಮಿಸಿಕೊಂಡು ಅದರ ಅಧೀನದಲ್ಲಿದ್ದ ವಿವಿಧ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡ. ಇಡೀ ಜಿಲ್ಲೆ ಮೈಸೂರಿನ ಆಳಿಕೆಗೆ ಒಳಪಟ್ಟಿತು. ಟಿಪ್ಪುವಿನ ಪತನಾನಂತರ ಮತ್ತೆ ಈ ಪ್ರದೇಶ ಮೈಸೂರಿನ ಅರಸರಿಗೆ ಒಳಪಟ್ಟಿತ್ತು. 1830ರಲ್ಲಿ ತರೀಕೆರೆಯ ರಂಗಪ್ಪನಾಯಕ ಬಂಡೆದ್ದು ಕಾಳದುರ್ಗ ಮತ್ತು ಕಾಮನದುರ್ಗಗಳನ್ನು ಹಿಡಿದುಕೊಂಡ. ಮೈಸೂರಿನ ಸೇನೆ ಮರುವರ್ಷ ಮತ್ತೆ ಇವನ್ನು ವಶಪಡಿಸಿಕೊಂಡಿತು. ಮೈಸೂರಿನ ಆಡಳಿತವು ಕಮಿಷನರಿಗೆ ವರ್ಗವಾದಾಗ (1831) ಈ ಭಾಗವನ್ನು ನಗರ ವಿಭಾಗಕ್ಕೆ ಸೇರಿಸಲಾಯಿತು. 1863ರಲ್ಲಿ ಇದನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು. ಕಡೂರು ಜಿಲ್ಲೆಯೆಂದು ಕರೆಯಲ್ಪಡುತ್ತಿದ್ದ ಇದಕ್ಕೆ ಆಗ ಕಡೂರೇ ಆಡಳಿತ ಕೇಂದ್ರ. 1865ರಲ್ಲಿ ಚಿಕ್ಕಮಗಳೂರು ಈ ಜಿಲ್ಲೆಯ ಆಡಳಿತ ಕೇಂದ್ರವಾಯಿತು. 1882ರಲ್ಲಿ ಅರಸೀಕೆರೆ, ಬೇಲೂರು, ಹಾಸನ ಮತ್ತು ಮಂಜರಾಬಾದ್ ತಾಲ್ಲೂಕುಗಳನ್ನೊಳಗೊಂಡ ಹಾಸನ ವಿಭಾಗ ಈ ಜಿಲ್ಲೆಗೆ ಸೇರಿತ್ತು. 1886ರಲ್ಲಿ ಪ್ರತ್ಯೇಕವಾದ ಹಾಸನ ಜಿಲ್ಲೆಯನ್ನು ರಚಿಸಲಾಯಿತು. ತರುವಾಯ ಇಲ್ಲಿಯ ಸ್ವಲ್ಪ ಭಾಗವನ್ನು ಚಿತ್ರದುರ್ಗ ಜಿಲ್ಲೆಗೆ ಸೇರಿಸಿ ಇಂದಿನ ರೂಪದಲ್ಲಿ ಜಿಲ್ಲೆಯನ್ನು ಉಳಿಸಿಕೊಳ್ಳಲಾಯಿತು.

(ಡಿ.ಎಸ್.ಜೆ.,ಎಚ್.ಪಿ.ಕೆ.)

ಚಿಕ್ಕಮಗಳೂರು ಜಿಲ್ಲೆ ಪ್ಲಾಂಟೇಷನ್ ಸಾಗುವಳಿಯಿಂದಾಗಿ ಹೊಸ ಆರ್ಥಿಕ ಸ್ವರೂಪವನ್ನು ಪಡೆದುಕೊಳ್ಳತೊಡಗಿತು. ಅನೇಕ ಐರೋಪ್ಯ ಕಾಫಿ ಬೆಳೆಗಾರರು ಜಿಲ್ಲೆಯಲ್ಲಿ ಬಂದು ನೆಲಸಿ ಕಾಫಿ ತೋಟಗಳನ್ನು ರೂಢಿಸಿದರು. ದೇಶೀಯರು ಸಹ ಕಾಫಿ ತೋಟಗಳನ್ನು ರೂಢಿಸತೊಡಗಿದರು. 1881ರಲ್ಲಿ ರಚಿತವಾದ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ಲಾಂಟೇಷನ್

ಮಾಲೀಕ ವರ್ಗಕ್ಕೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲಾಯಿತು. ಕೃಷಿ ಕಾರ್ಮಿಕ ವರ್ಗ ಬೆಳೆಯಿತು. ಹೊರರಾಜ್ಯಗಳಿಂದಲೂ ಕೃಷಿ ಕಾರ್ಮಿಕರು ಬಂದು ಇಲ್ಲಿ ನೆಲಸಿದರು. ಕಾಫಿ ಬೆಳೆಯ ಏಳುಬೀಳಿನೊಂದಿಗೆ ಅವರು ಇಲ್ಲಿಯೇ ಸ್ಥಿರವಾಗಿ ನೆಲಸಿದರು. 1914 ರಿಂದ ಜಾರಿಗೆ ಬಂದ ಮಲೆನಾಡು ಅಭಿವೃದ್ಧಿ ಯೋಜನೆಗೆ ಆಗಿನ ದಿವಾನರಾಗಿದ್ದ ಎಂ.ವಿಶ್ವೇಶ್ವರಯ್ಯನವರ ಆಸಕ್ತಿಯೇ ಬಹುಮುಖ್ಯ ಕಾರಣವಾಯಿತು. ಅದರಿಂದ ಮಲೇರಿಯಾ ರೋಗ ಹರಡುವುದನ್ನು ತಡೆಗಟ್ಟಲು, ಬಾಣಂತಿಯರ ಶುಶ್ರೂಷೆಗೆ ಆದ್ಯತೆ ನೀಡಲು, ರಸ್ತೆ, ಬಾವಿಗಳನ್ನು ಮಾಡಿಸಲು ಅನುಕೂಲವಾಯಿತು.

ಈ ಜಿಲ್ಲೆಯ ಸಾಹಿತ್ಯ ಪರಂಪರೆ ದೊಡ್ಡದು. ಜನ್ನ, ರುದ್ರಭಟ್ಟ, ಲಕ್ಷ್ಮೀಶ ಇವರನ್ನು ಈ ಜಿಲ್ಲೆಯ ಮೂಲದವರೆಂದು ಗುರುತಿಸಲಾಗಿದೆ. ಶೃಂಗೇರಿ, ಕಳಸ, ಬಾಳೆಹೊನ್ನೂರು, ದೇವನೂರು ಇವು ಹಿಂದಿನಿಂದಲೂ ಸಾಹಿತ್ಯ ಸಂಬಂಧವಾದ ಚಟುವಟಿಕೆಗಳನ್ನು ಹೊಂದಿದ್ದವು. ಅನೇಕ ಶರಣ ಸಾಹಿತಿಗಳ ಕೃತಿಗಳಲ್ಲಿ ಈ ಜಿಲ್ಲೆಯ ವಿವರಗಳು ದಾಖಲಾಗಿವೆ. ಯಳ್ಳಂಬಳಸೆ ವೈ. ಸುಬ್ಬರಾವ್‌ರವರು ಶ್ರೇಷ್ಠ ಅದ್ವೈತ ವಿದ್ವಾಂಸರಾಗಿ 'ಬ್ರಹ್ಮಸೂತ್ರ' ಸಹಿತ ಹಲವಾರು ವಿದ್ವತ್ ಕೃತಿಗಳನ್ನು ರಚಿಸಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದವರು. ಇವರು ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳೆಂದು (1880-1975) ಉತ್ತರಾಶ್ರಮದಲ್ಲಿ ಪ್ರಸಿದ್ಧರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದರು. ಆಧುನಿಕ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಎ.ಆರ್.ಕೃಷ್ಣಶಾಸ್ತ್ರಿ (ನೋಡಿ)ಯವರ ಹಿರಿಯರು ಚಿಕ್ಕಮಗಳೂರು ತಾಲ್ಲೂಕಿನ ಅಂಬಳೆಯವರು. ಮಹಾಕವಿ ಕುವೆಂಪು ಅವರು ಹುಟ್ಟಿದ್ದು ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆಯಲ್ಲಿ. ಈಗ ಅಲ್ಲಿ ಕುವೆಂಪು ಗೌರವಾರ್ಥ ಸಂದೇಶ ಮಂಟಪವನ್ನು ನಿರ್ಮಿಸಲಾಗಿದೆ. ಕುವೆಂಪು ಅವರ ಹಿರಿಯ ಪುತ್ರರೂ ಪಂಪ ಪ್ರಶಸ್ತಿ ವಿಜೇತರೂ ಆದ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು (ನೋಡಿ) ಮೂಡಿಗೆರೆ ಬಳಿ ನೆಲೆಸಿದ್ದಾರೆ. 'ಬುದ್ಧ ಚರಿತ ಮಹಾಮಧು' ಎಂಬ ಮಹಾಕಾವ್ಯ ರಚಿಸಿದ ಕಾಶಿ ವಿಶ್ವನಾಥಶೆಟ್ಟರು ಪ್ರಾಧ್ಯಾಪಕರಾಗಿ ನಿವೃತ್ತರಾಗಿ ಚಿಕ್ಕಮಗಳೂರಿನಲ್ಲಿ ನೆಲೆಸಿದ್ದರು. ಬಾಗಮನೆ ಕುಟುಂಬದಲ್ಲಿ ಹುಟ್ಟಿದ ಲಕ್ಷ್ಮೀದೇವಿ ಕಡಿದಾಳ್ ಮಂಜಪ್ಪನವರು ತಮ್ಮ ಕಾದಂಬರಿಗಳು ಹಾಗೂ ಇತರ ಕೃತಿಗಳ ಜೊತೆಗೆ 'ಶ್ರೀ ವಿವೇಕಾನಂದ ವಿಜಯ ಮಹಾಕಾವ್ಯ' ಎಂಬ ಬೃಹತ್ ಕೃತಿಯನ್ನು (ಒಂದು ಸಾವಿರ ಪುಟಗಳು) ರಚಿಸಿದ್ದಾರೆ. ಮಣೂರ, ಗೌ.ಮ.ಉಮಾಪತಿಶಾಸ್ತ್ರಿ, ದಾಶರಥಿ ದೀಕ್ಷಿತ್, ತ.ಪು.ವೆಂಕಟರಾಂ, ಯಳ್ಳಂಬಳಸೆ ಸುಬ್ಬಹ್ಮಣ್ಯ ಶರ್ಮ, ತಿಮ್ಮರಸಯ್ಯ, ಮಾಕೋನಹಳ್ಳಿ ದೊಡ್ಡಪ್ಪಗೌಡ, ಕಾರೇಹಳ್ಳಿ ಮರುಳಸಿದ್ಧಪ್ಪ, ಸವ್ಯಸಾಚಿ, ವೇಣುಗೋಪಾಲರಾವ್, ಕೆ.ಎಸ್.ಮಲ್ಲೇಗೌಡ ಇವರೆಲ್ಲ ಸಾರಸ್ವತ ಲೋಕಕ್ಕೆ ಕಾಣಿಕೆ ಸಲ್ಲಿಸಿದ ಹಿರಿಯರು. ಜಿಲ್ಲೆಗೆ ಒಂದಲ್ಲ ಒಂದು ರೀತಿ ಸಂಬಂಧಿಸಿದ ಹಿರಿಕಿರಿಯ ಸಾಹಿತಿಗಳು, ಸಂಶೋಧಕರು ಸಾರಸ್ವತ ಲೋಕದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹವರಲ್ಲಿ ಸುಮತೀಂದ್ರನಾಡಿಗ, ಅಜ್ಜಂಪುರ ಜಿ.ಸೂರಿ, ಎಂ.ಪಿ.ಮಂಜಪ್ಪಶೆಟ್ಟಿ, ಡಿ.ಎಸ್.ಜಯಪ್ಪಗೌಡ, ಎ.ಎನ್.ಸ್ವಾಮಿ, ಚಂದ್ರಯ್ಯನಾಯ್ಡು, ಕೆ.ಓಂಕಾರಪ್ಪ, ಕನ್ನಡದಲ್ಲಿ ಅರ್ಚನೆಗೆ ಹೆಸರಾದ ಹಿರೇಮಗಳೂರು ಕಣ್ಣನ್, ಎಂ.ಆರ್. ನಾಗಭೂಷಣ, ಶೃಂಗೇರಿ ಸುಬ್ಬರಾಯಾಚಾರ್, ಸು.ಅಮೃತಾಪುರ, ಹಳೇಕೋಟೆ ರಮೇಶ್, ಬಿ.ಪುಟ್ಟಯ್ಯ ಶ್ರೀನಿವಾಸಮೂರ್ತಿ, ಸೌಕೂರು ಸುಬ್ಬಹ್ಮಣ್ಯ ಅಡಿಗ, ಘನಿ ಅಕ್ಮಲ್, ಅಕ್ಮಲ್ ಆಲ್ದೂರಿ, ಗೌ.ರು.ಓಂಕಾರಯ್ಯ, ತರೀಕೆರೆ ರಹಮತ್, ಬೆಳವಾಡಿ ಮಂಜುನಾಥ, ಕೆ.ಎಂ.ರೇವಣ್ಣ, ಯಲಗೊಡಿಗೆ ಮಂಜಯ್ಯ, ಬಾಣೂರು ಚನ್ನಪ್ಪ, ಹು.ಲಕ್ಷ್ಮೀನರಸಿಂಹಶಾಸ್ತ್ರಿ, ಕರಗುಂದ ರಾಮಣ್ಣ, ಟಿ.ಎಂ.ಬಾಲಗಣಪತಿ ಮೊದಲಾದವರು ಇದ್ದಾರೆ. ಮಹಿಳೆಯರಲ್ಲಿ ವಿಶೇಷವಾಗಿ ಬಿ.ಟಿ.ಲಲಿತಾನಾಯಕ್, ಲಲಿತಾಂಬ ವೃಷಭೇಂದ್ರ ಸ್ವಾಮಿ, ಕೆದಂಬಾಡಿ ಎಂ.ದೇವಕಿ, ಸೀತಮ್ಮ ನಂಜೇಗೌಡ, ಮಾಲತಿ ರಾಮದಾಸ್, ಟಿ.ಕೆ.ಶಕುಂತಳ, ಸುಕನ್ಯ ಕಳಸ ಇವರು ಗಮನಾರ್ಹರು.

ಈ ಜಿಲ್ಲೆಯ ಜನಪದ ಕಲೆ, ಸಾಹಿತ್ಯ ಕ್ಷೇತ್ರದಲ್ಲಿನ ಪ್ರಮುಖ ಹೆಸರು ಗೊ.ರು.ಚನ್ನಬಸಪ್ಪನವರದು. ಇವರು 1967ರಲ್ಲಿ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನವನ್ನು ತರೀಕೆರೆಯಲ್ಲಿ ಸಂಘಟಿಸುವಲ್ಲಿ ಶ್ರಮಿಸಿದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಜನಪದ ಸಂಗೀತ ಕೋಗಿಲೆ ಕೆ.ಆರ್.ಲಿಂಗಪ್ಪನವರು (ನೋಡಿ) ತರೀಕೆರೆಯವರು. 1921ರಲ್ಲಿ ಕೆ.ಸಿ.ಪುಟ್ಟಣ್ಣಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ 7ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತ್ತು. 1981ರಲ್ಲಿ 53ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪು.ತಿ.ನರಸಿಂಹಾಚಾರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲಾಮಟ್ಟದ ಹತ್ತಾರು ಸಾಹಿತ್ಯ ಸಮ್ಮೇಳನಗಳು ಜರುಗಿವೆ.

ಅನ್ನಪೂರ್ಣೇಶ್ವರಿ ದೇವಾಲಯ, ಹೊರನಾಡು

ಜಿಲ್ಲೆಯಲ್ಲಿ ಪತ್ರಿಕೋದ್ಯಮ 1932ರಿಂದ ಪ್ರಾರಂಭವಾಯಿತು. ಪಿ.ಚಿದಂಬರ್, ಪಂಡಿತ್, ಕೆ.ಎನ್.ಪ್ರಭುದೇವ್, ಎಂ.ಕೆ.ಗೋಪಾಲಸಿಂಗ್, ಎಂ.ವಿ.ಗುರುಬಸಪ್ಪ ಆದ್ಯರಲ್ಲಿ ಸೇರಿದ್ದಾರೆ. ಕೃ.ನ.ಮೂರ್ತಿ, ಜನಮಿತ್ರ ಪತ್ರಿಕೆಯನ್ನು 1962ರಲ್ಲಿ ಪ್ರಾರಂಭಿಸಿ ಪತ್ರಿಕೋದ್ಯಮಕ್ಕೆ ಹೊಸ ಚಾಲನೆ ನೀಡಿದರು. ಇದರೊಂದಿಗೆ ಹೊಸ ದಿಗಂತ, ಮಲೆನಾಡು ಸಂಗತಿ, ಗಿರಿವಾರ್ತಾ, ಶಿರೋರತ್ನ, ಯುವಲೋಕ, ಜಿಲ್ಲಾ ಲೇಖನ ಇವು ಪ್ರಮುಖ ಪತ್ರಿಕೆಗಳು. ಎಂ.ಎನ್.ಕೃಷ್ಣಮೂರ್ತಿ, ಜಿ.ವಿ.ಚೂಡನಾಥ ಐಯ್ಯರ್, ಎಸ್.ಗಿರಿಜಾಶಂಕರ್, ಎಚ್.ಎಸ್.ಸೂರ್ಯನಾರಾಯಣ ಕಡೂರು, ಸಮುದ್ರವಳ್ಳಿ ಸುಬ್ಬರಾವ್, ಎಸ್.ಎನ್.ಶ್ರೀಕಂಠ, ಹೆಚ್.ಎನ್.ಪುಟ್ಟಸ್ವಾಮಿ, ಜಿ.ವಿ.ರಮೇಶ್, ಕಮಲಾಶ್ರೀಕಂಠ, ದಿನೇಶ್ ಪಟವರ್ಧನ, ಕಂ.ಕ.ಮೂರ್ತಿ, ಗಿರೀಶ್ ಮಾವಿನಕಾಡು, ಎ.ಎಚ್.ರಾಮಸ್ವಾಮಿ, ಎಂ.ಸಿ.ಶಿವಾನಂದಸ್ವಾಮಿ, ಸಿ.ಬಿ.ಸತೀಶ್, ಹೆಚ್.ಎಸ್.ಸುಂದರೇಶ್, ಜಿ.ಹಿರೇನಲ್ಲೂರು ಶಿವು ಮೊದಲಾದವರು ಜಿಲ್ಲಾ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಣನೀಯವಾಗಿ ದುಡಿದವರಾಗಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಹಲವಾರು ಮುಖಂಡರು, ಅಸಂಖ್ಯಾತ ಕಾರ್ಯಕರ್ತರು ಭಾಗವಹಿಸಿದ್ದರು. ಅವರಲ್ಲಿ ಹೊಸಕೊಪ್ಪ ಕೃಷ್ಣರಾವ್, ಎಂ.ಹುಚ್ಚೇಗೌಡ, ತರೀಕೆರೆ ಟಿ.ಸಿ.ಶಾಂತಪ್ಪ, ಎಸ್.ಅಣ್ಣಪ್ಪಶೆಟ್ಟಿ, ಯಳ್ಳಂಬಳಸೆ ಚಂದ್ರಶೇಖರ್, ಮಾಕೋನಹಳ್ಳಿ ದೊಡ್ಡಪ್ಪಗೌಡ, ಡಿ.ಎಸ್.ಕೃಷ್ಣಪ್ಪಗೌಡ, ಕೆ.ಆರ್.ನಾರಾಯಣಶೆಟ್ಟಿ, ಜಿ.ಟಿ.ಸತ್ಯನಾರಾಯಣ ಶೆಟ್ಟಿ, ಮಾರ್ಗದ ಮಲ್ಲಪ್ಪ, ಬಿ.ಕೆ.ಲೋಕಪ್ಪಗೌಡ, ಸಿ.ವಿ.ಧ್ರುವರಾವ್, ವಾಸುದೇವರಾವ್, ಜಿ.ಪುಟ್ಟಸ್ವಾಮಿ, ಹಂಜಿ ಶಿವಣ್ಣ, ಬಿ.ಎಲ್.ಸುಬ್ಬಮ್ಮ, ಪಾರ್ವತಮ್ಮ ಹುಚ್ಚೇಗೌಡ, ಮುದಿಯಪ್ಪ, ಕೆ.ಎನ್.ವೀರಪ್ಪಗೌಡ, ಡಿ.ಎಚ್. ರುದ್ರಪ್ಪ, ಕೆ.ಎಂ.ತಮ್ಮಯ್ಯ, ಬಾಗಮನೆ ದೇವೆಗೌಡ, ಹಾಲೂರು ಗಿಡ್ಡಪ್ಪ ಮೊದಲಾದವರನ್ನು ಹೆಸರಿಸಬಹುದು.

ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕಡಿದಾಳು ಮಂಜಪ್ಪನವರು ಈ ಜಿಲ್ಲೆಯ ಶೃಂಗೇರಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಇನ್ನೂ ಹಲವಾರು ಜನ ಶಾಸಕರು ಮಂತ್ರಿಗಳಾಗಿ ಮತ್ತಿತರ ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿಯವರು 1978ರಲ್ಲಿ ಲೋಕಸಭೆಗೆ ಈ ಜಿಲ್ಲೆಯಿಂದ ಸ್ಪರ್ಧಿಸಿ ವಿಜೇತರಾಗಿದ್ದರು. ಇಂದಿರಾಗಾಂಧಿ ಅವರಿಗೆ ಲೋಕಸಭಾ ಸ್ಥಾನ ತೆರವು ಮಾಡಿದ್ದ ಡಿ.ಬಿ.ಚಂದ್ರೇಗೌಡರು (ನೋಡಿ) 1983-85ರಲ್ಲಿ ವಿಧಾನಸಭಾ ಅಧ್ಯಕ್ಷರಾಗಿದ್ದರು. ಬಿ.ಎಲ್.ಶಂಕರ್

(ನೋಡಿ) ಅವರು (2002-04) ವಿಧಾನ ಪರಿಷತ್ತಿನ ಸಭಾಪತಿಯಾಗಿದ್ದರು. ಡಿ.ಕೆ.ತಾರಾದೇವಿಯವರು ಕೇಂದ್ರದಲ್ಲಿ ಸಚಿವೆಯಾಗಿದರು.

**ತಾಲ್ಲೂಕು** : ಉತ್ತರದಲ್ಲಿ ಕಡೂರು, ತರೀಕೆರೆ ತಾಲ್ಲೂಕುಗಳು, ಪಶ್ಚಿಮದಲ್ಲಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ದಕ್ಷಿಣದಲ್ಲಿ ಮೂಡಿಗೆರೆ ತಾಲ್ಲೂಕು, ಪೂರ್ವಕ್ಕೆ ಹಾಸನ ಜಿಲ್ಲೆ - ಈ ತಾಲ್ಲೂಕಿನ ಮೇರೆಗಳು. ತಾಲ್ಲೂಕಿನಲ್ಲಿ ಅಂಬಳೆ, ಚಿಕ್ಕಮಗಳೂರು, ಲಕ್ಯ, ವಸ್ತಾರೆ, ಆವತಿ, ಜಾಗರ, ಆಲ್ದೂರು ಮತ್ತು ಖಾಂಡ್ಯ ಹೋಬಳಿಗಳೂ 231 ಗ್ರಾಮಗಳೂ ಇವೆ. ತಾಲ್ಲೂಕಿನ ಜನಸಂಖ್ಯೆ 2,94,445. ಪಶ್ಚಿಮ ಘಟ್ಟಶ್ರೇಣಿಯಿಂದ ಒಳಚಾಚಿರುವ ಬೆಟ್ಟದ ಸಾಲು ಈ ತಾಲ್ಲೂಕಿನವರೆಗೂ ಹಬ್ಬಿದೆ. ಈ ಬೆಟ್ಟದ ಸಾಲಿನಲ್ಲಿಯೇ ಬರುವ ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್‌ಗಿರಿ ಇವು ಕರ್ನಾಟಕದ ಅತ್ಯಂತ ಎತ್ತರದ ಶಿಖರಗಳಲ್ಲಿ ಎರಡು. ತಾಲ್ಲೂಕಿನಲ್ಲಿ 93,973 ಎಕರೆ ಅರಣ್ಯ ಪ್ರದೇಶವಿದೆ. ಈ ಕಾಡುಗಳಲ್ಲಿ ಹೊನ್ನೆ, ಬೀಟೆ, ಮತ್ತಿ, ನಂದಿ, ಹಲಸು, ದಬ್ಬೆ, ಸಾಗುವಾನಿ ಮೊದಲಾದ ಮರಗಳಿವೆ. ತಾಲ್ಲೂಕಿನಲ್ಲಿರುವ ಮುತ್ತೋಡಿ ಮೀಸಲು ಕಾಡು ಸಾವಿರಾರು ಎಕರೆ ಪ್ರದೇಶವನ್ನು ಆವರಿಸಿದೆ. ಇದಲ್ಲದೆ ಬಸವನ ಕೋಟೆ, ಸಾರುಗೋಡ್, ಮತ್ತಾವರ, ಗಂಧದ ಕಾಡು, ಗಂಗಗಿರಿ, ಹೆಬ್ಬಗಿರಿ ಮೊದಲಾದ ಕಾಡುಗಳಿವೆ. ಚುರ್ಚೆಗುಡ್ಡ, ಕಾಮನಹಳ್ಳಿಗಳಲ್ಲಿ ಮೀಸಲು ಜಮೀನು ಇದೆ. ತಾಲ್ಲೂಕಿನಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ 803.08 ಮಿಮೀ ಇದ್ದು ಇಲ್ಲಿಯ ಮಲೆನಾಡು ಪ್ರದೇಶಗಳ ಬೆಟ್ಟಗಳ ಇಳಿಜಾರು ಕಾಫಿ ಬೆಳೆಗೆ ಪ್ರಶಸ್ತವಾಗಿದೆ. ಚಿಕ್ಕಮಗಳೂರು ಪಟ್ಟಣದ ಸುತ್ತಮುತ್ತಲ ಮತ್ತು ಪೂರ್ವ ಭಾಗಕ್ಕಿರುವ ಬಯಲು ಪ್ರದೇಶಗಳು ಬತ್ತ ಮತ್ತು ಕಬ್ಬುಗಳನ್ನು ಬೆಳೆಯಲು ಫಲವತ್ತಾಗಿವೆ. ಈ ತಾಲ್ಲೂಕಿನಲ್ಲಿ ಕಬ್ಬಿಣದ ಅದುರಿನ ನಿಕ್ಷೇಪವೂ ಹೇರಳವಾಗಿದೆ.

ಬಾಬಾಬುಡನ್‌ಗಿರಿಯಲ್ಲಿರುವ ದತ್ತಾತ್ರೇಯ ಪೀಠದ ಆವರಣ

ಮುಳ್ಳಯ್ಯನಗಿರಿ ಬುಡದಲ್ಲಿ ಸೀತಾಳಪ್ಪನ ಕಣಿವೆಯಲ್ಲಿ ಯಗಚಿ ಹೊಳೆ ಹುಟ್ಟುತ್ತದೆ. ಇದು ಚಿಕ್ಕಮಗಳೂರಿನ ಮೂಲಕ ಬೇಲೂರು ಕಡೆ ಹರಿದು ಹಾಸನ ಜಿಲ್ಲೆ ಸೇರುತ್ತದೆ. ಇದೇ ತಾಲ್ಲೂಕಿನ ಆಣೂರು ಬಳಿ ಹುಟ್ಟುವ ಬೆರಂಜಿ ಹಳ್ಳ ಇದನ್ನು ಕೂಡಿಕೊಳ್ಳುತ್ತದೆ. ಗೌರಿಹಳ್ಳ ಮತ್ತು ಆವತಿ ಎಂಬ ಹೊಳೆಗಳು ಮುಳ್ಳಯ್ಯನಗಿರಿ ಶ್ರೇಣಿಯಲ್ಲಿ ಹುಟ್ಟುತ್ತವೆ. ಇವು ಕಡೂರಿನ ಬಳಿ ಒಂದುಗೂಡಿ ವೇದಾವತಿ ಎಂಬ ಹೆಸರಿನಿಂದ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಜಾಗರ ಕಣಿವೆಯಲ್ಲಿ ಹುಟ್ಟುವ ಸೋಮವಾಹಿನಿ ಎಂಬ ಹೊಳೆ ಪಶ್ಚಿಮಕ್ಕೆ ಹರಿದು ಭದ್ರಾನದಿಯನ್ನು ಸೇರುತ್ತದೆ.

ಮಲೆನಾಡು ಭಾಗದಲ್ಲಿ ಕಾಫಿ ಮತ್ತು ಕಿತ್ತಲೆ, ಮೆಣಸು ಮುಖ್ಯ ಬೆಳೆಗಳು. ಆಲ್ದೂರು ಮತ್ತು ಮಲ್ಲಂದೂರಿನ ಸುತ್ತಮುತ್ತಲ ಪ್ರದೇಶಗಳು ಕಿತ್ತಲೆಹಣ್ಣಿನ ಬೆಳೆಗೆ ಹೆಸರುವಾಸಿಯಾಗಿದ್ದವು. ಮಲೆನಾಡು ಭಾಗದಲ್ಲಿ ಬತ್ತ, ಅಡಕೆಗಳನ್ನೂ ಬೆಳೆಯುತ್ತಾರೆ. ಆದರೆ ಈ ಬೆಳೆಗಳು ಅಷ್ಟು ಅಧಿಕ ಇಳುವರಿ ನೀಡುವುದಿಲ್ಲ. ಬಯಲು ಪ್ರದೇಶದಲ್ಲಿ ಬತ್ತ, ಕಬ್ಬು, ರಾಗಿ, ಆಲೂಗೆಡ್ಡೆ, ಹುರುಳಿ, ಗೆಣಸು, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಸಾಸಿವೆ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

ತಾಲ್ಲೂಕಿನ ಕಾಫಿ ತೋಟಗಳ ಉದ್ಯಮ ಬೆಳೆದು ಹೊರಗಿನಿಂದ ಬಂದ ಸಾವಿರಾರು ಕಾರ್ಮಿಕರಿಗೆ ಉದ್ಯೋಗ ಲಭಿಸಿದೆ. ಇಲ್ಲಿ ಅನೇಕ ಕಾರ್ಮಿಕ ಸಂಘಗಳು ಇವೆ. ಮಲ್ಲಂದೂರು, ಹಿರೇಮಗಳೂರು, ಕೈಮರ, ಕಳಸಾಪುರ, ಕೃಷ್ಣರಾಜಪೇಟೆ, ವಸ್ತಾರೆ, ಆಲ್ದೂರು, ಇಂದಾವರ, ಜೋಳದಾಳು, ಶಿರವಾಸೆ ಮೊದಲಾದ ಸ್ಥಳಗಳು ಬೆಳವಣಿಗೆ ಹೊಂದಿವೆ. ಇವುಗಳಲ್ಲಿ ಬಹುತೇಕ ಸ್ಥಳಗಳಲ್ಲಿ ಮಾಧ್ಯಮಿಕ ಶಾಲೆಗಳೂ ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಇವೆ. ಹಲವು ಸ್ಥಳಗಳಲ್ಲಿ ಪಶುವೈದ್ಯಶಾಲೆಗಳು ಮತ್ತು ಪ್ರೌಢಶಾಲೆಗಳುಂಟು. ತಾಲ್ಲೂಕಿನ ಕೆಲವು ಸ್ಥಳಗಳಲ್ಲಿ ವಾರದ ಸಂತೆಗಳು ನಡೆಯುತ್ತವೆ.

ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್ ಗಿರಿ ಪ್ರೇಕ್ಷಣೀಯ ಸ್ಥಳಗಳು. ಮೂಡಿಗೆರೆ ರಸ್ತೆಯಲ್ಲಿರುವ ವಸ್ತಾರೆ 1875ರವರೆಗೂ ಇದೇ ಹೆಸರಿನ ತಾಲ್ಲೂಕಿಗೆ ಕೇಂದ್ರವಾಗಿತ್ತು. ಈ ಹೆಸರು ವಸು ಧಾರಾ ಅಂದರೆ ದಾನವಾಗಿ ಕೊಟ್ಟ ಭೂಮಿ ಎಂಬ ಅರ್ಥದಲ್ಲಿ ಬಂದು ರೂಪಾಂತರ ಹೊಂದಿ ವಸ್ತಾರೆ ಆಗಿದೆ ಎಂದು ತಿಳಿದುಬರುತ್ತದೆ. ಹುಂಚದ ರಾಜರಲ್ಲೊಬ್ಬ ಇದನ್ನು ಸ್ಥಾಪಿಸಿದ. ಇದು ಹಿಂದೆ ಸಿಸುಕಲಿ ಮತ್ತು ಕಾರ್ಕಳ ದೊರೆಗಳ ಅಧೀನದಲ್ಲಿತ್ತು. ಮಲೆನಾಡಿನಲ್ಲಿ ಮೊಟ್ಟಮೊದಲು ಕಾಫಿ ಬೆಳೆಯಲು ಪ್ರಯತ್ನಿಸಿದ ಸ್ಥಳಗಳಲ್ಲಿ ಇದೂ ಒಂದು ಎಂದು ಹೇಳಲಾಗಿದೆ.

ಮತ್ತಾವರದಲ್ಲಿರುವ ಪಾರ್ಶ್ವನಾಥ ಬಸದಿ ಬಹು ಪುರಾತನವಾದ್ದು. ಮರಳೆಯಲ್ಲಿ ಹೊಯ್ಸಳ ಶೈಲಿಯ ಎರಡು ದೇವಾಲಯಗಳುಂಟು. ಚಿಕ್ಕಮಗಳೂರು ಪಟ್ಟಣಕ್ಕೆ 2ಕಿಮೀ ದೂರವಿರುವ ಹಿರೇಮಗಳೂರು ಐತಿಹಾಸಿಕ ಸ್ಥಳ. ಕಳಸಾಪುರದಲ್ಲಿರುವ ಚೆಲುವನಾರಾಯಣ ದೇವಾಲಯ ಆಕರ್ಷಕ. ಬೆಳವಾಡಿಯ ವೀರನಾರಾಯಣ ದೇವಾಲಯ ಪ್ರಸಿದ್ಧ ಹೊಯ್ಸಳ ದೇವಾಲಯಗಳಲ್ಲೊಂದು. ಪಾದಪೀಠವೂ ಸೇರಿದಂತೆ ಅಲ್ಲಿಯ ವಿಗ್ರಹದ ಎತ್ತರ 7'. ಅಲ್ಲಿರುವ ಇನ್ನೊಂದು ದೇವಾಲಯ ಮಲ್ಲಿಕಾರ್ಜುನನದು. ಇದರ ತುದಿಯಲ್ಲಿ ಹೊಯ್ಸಳರ ಲಾಂಛನವಿದೆ. ಈ ಎರಡೂ ದೇವಾಲಯಗಳ ನವರಂಗಗಳಲ್ಲೂ ಅನೇಕ ದೇವದೇವತೆಗಳ ವಿಗ್ರಹಗಳನ್ನು ಕೆತ್ತಲಾಗಿದೆ. ಕೋಟೆ ಊರು ವಸ್ತಾರೆ ಹೋಬಳಿಯಲ್ಲಿದೆ. ಇಲ್ಲಿ ಹಲವು ಪ್ರಾಚೀನ ಶಾಸನಗಳುಂಟು.

**ಪಟ್ಟಣ** : ಚಿಕ್ಕಮಗಳೂರು ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಆಡಳಿತ ಕೇಂದ್ರ. ಇದು ಮುಳ್ಳಯ್ಯನಗಿರಿಯ ದಕ್ಷಿಣಕ್ಕಿದೆ. ಜನಸಂಖ್ಯೆ 1,01,022. 40ಕಿಮೀ ದೂರದ ಕಡೂರೇ ಇಲ್ಲಿಗೆ ಅತ್ಯಂತ ಸಮೀಪದ ರೈಲ್ವೆ ನಿಲ್ದಾಣ.

ಇಲ್ಲಿ ಜಿಲ್ಲಾಮಟ್ಟದ ಕಚೇರಿಗಳೂ ಸೆಷನ್ಸ್ ಕೋರ್ಟೂ ಇವೆ. ಕಾಫಿ ಹದ ಮಾಡುವ ಕಾರ್ಖಾನೆಗಳಿವೆ. ಕೆಲವು ಎಂಜಿನಿಯರಿಂಗ್ ಕಾರ್ಯಾಗಾರಗಳು ಇದ್ದು ಇವು ಕಾಫಿ ತೋಟಗಳಿಗೆ ಬೇಕಾದ ಉಪಕರಣಗಳನ್ನು, ವಸ್ತುಗಳನ್ನು ತಯಾರಿಸುತ್ತವೆ. ಮರ ಕೊಯ್ಯುವುದು, ಬೆತ್ತ ಹೆಣೆಯುವುದು, ಕಬ್ಬಿಣದ ಉಪಕರಣಗಳ ರಿಪೇರಿ, ಗಾಡಿ ಕೂಡಿಸುವುದು, ಚರ್ಮದ ಕೆಲಸ -ಇವು ಕೆಲವು ಉಪಕಸಬುಗಳು. ಇಲ್ಲಿಯ ಪುರಸಭೆಯನ್ನು 1870ರಲ್ಲೇ ಸ್ಥಾಪಿಸಲಾಯಿತು.

ಪಟ್ಟಣಕ್ಕೆ ಸೇರಿಕೊಂಡಂತಿರುವ ರತ್ನಗಿರಿ ಒಂದು ಎತ್ತರದ ದಿಬ್ಬ; ಸಂಜೆಯ ವಿಹಾರ ಸ್ಥಳ. ಇಲ್ಲಿಯ ಗಂಧದ ಕೋಟೆ ಎಂಬ ಸ್ಥಳದಲ್ಲಿ ರಾಮೇಶ್ವರ ದೇವಾಲಯವೂ ಅನೇಕ ನಾಗರ ವಿಗ್ರಹಗಳೂ ಇವೆ. ಕನ್ನಿಕಾಪರಮೇಶ್ವರಿ ದೇವಾಲಯವನ್ನು ಆಧುನಿಕವಾಗಿ ಭವ್ಯವಾಗಿ ಕಟ್ಟಲಾಗಿದೆ. ಇಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜು, ಒಂದು ಪಾಲಿಟೆಕ್ನಿಕ್, ಎರಡು ಪ್ರಥಮ ದರ್ಜೆ ಕಾಲೇಜುಗಳು ಇವೆ. ಆಧುನಿಕವಾಗಿ ನಿರ್ಮಿತವಾಗಿರುವ ಶ್ಮಶಾನ(ಮುಕ್ತಿಧಾಮ)ವಿದೆ.

ಚಿಕ್ಕಮಗಳೂರಿಗೆ ಈ ಹೆಸರು ಬರಲು ಕಾರಣವಾದ ಒಂದು ಐತಿಹ್ಯವಿದೆ. ಮಹಾಭಾರತ ಕಥೆಯಲ್ಲಿ ಬರುವ ಹಾಗೂ ಸಕ್ಕರೆ ಪಟ್ಟಣದಲ್ಲಿದ್ದನೆನ್ನಲಾದ ರುಕ್ಮಾಂಗದ ಚಿಕ್ಕಮಗಳೂರನ್ನೂ ಇದರ



ಆನೆ ವಿಗ್ರಹ, ಚಿಕ್ಕಮಗಳೂರು

ಸಮೀಪದಲ್ಲಿ ಇರುವ ಹಿರೇಮಗಳೂರನ್ನೂ ತನ್ನ ಕಿರಿಯ ಮತ್ತು ಹಿರಿಯ ಹೆಣ್ಣುಮಕ್ಕಳಿಗೆ ಬಳುವಳಿಯಾಗಿ ನೀಡಿದ. ಆ ಊರುಗಳಿಗೆ ಅನುಕ್ರಮವಾಗಿ ಚಿಕ್ಕ ಮಗಳ ಊರು ಮತ್ತು ಹಿರಿಯ ಮಗಳ ಊರು ಎಂದು ಹೆಸರುಗಳು ಬಂದುವು ಎಂದು ಪ್ರತೀತಿ. ಆದರೆ 9ನೆಯ ಶತಮಾನದಲ್ಲಿ ಗಂಗರು ನಿರ್ಮಿಸಿದರೆನ್ನಲಾದ ಕೋಟೆ ಇದ್ದ ಸ್ಥಳದಲ್ಲಿ ದೊರೆತಿರುವ ಶಾಸನದಲ್ಲಿ ಇದನ್ನು ಕಿರಿಯ ಮುಗುಳಿ ಎಂದು ಕರೆಯಲಾಗಿದೆ. ಮುಗುಳಿ ಎಂದರೆ ಒಂದು ಬಗೆಯ ಹೂ ಬಿಡುವ ಗಿಡ ಎಂಬ ಅರ್ಥವಿದೆ. ಒಂದು ಕಾಲಕ್ಕೆ ಇದು ಜೈನ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಚಿಕ್ಕಮಗಳೂರಿನ 1ನೆಯ ಶಾಸನದಲ್ಲಿ (1257) ಇದು ದೇವಳಿಗೆ ನಾಡಲ್ಲಿದ್ದಿತೆಂದೂ ಹೇಳಲಾಗಿದೆ. ಈ ಸ್ಥಳ ಹಿಂದೆಯೂ ಚಿಕ್ಕ ಪ್ರಾಂತ್ಯ ವಿಭಾಗದ ಮುಖ್ಯ ಕೇಂದ್ರವಾಗಿದ್ದಿರಬಹುದು. (ಡಿ.ಎಸ್.ಜೆ.)

**ಚಿಕ್ಕಮಳೂರು :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿಗೆ ಸೇರಿದ ಗ್ರಾಮ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಕಣ್ವ ನದಿಯ ಎಡದಂಡೆಯ ಮೇಲೆ ಚನ್ನಪಟ್ಟಣದಿಂದ ಸು.3ಕಿಮೀ ದೂರದಲ್ಲಿದೆ.

ಇದೊಂದು ಐತಿಹಾಸಿಕ ಸ್ಥಳ. ಹಿಂದೆ ಅಗ್ರಹಾರವಾಗಿತ್ತು. ಇಲ್ಲಿ ಅರ್ಕೇಶ್ವರ, ಗೋಪಾಲಕೃಷ್ಣ ಹಾಗೂ ಕಲ್ಲೇಶ್ವರ ದೇವಾಲಯಗಳಿವೆ. ಈ ದೇವಾಲಯಗಳಲ್ಲಿ ದೊರೆಯುವ ಹೇರಳ ತಮಿಳು ಶಾಸನಗಳಿಂದ ತಮಿಳುನಾಡಿನ ಭಕ್ತರು ಮಾಡಿಸಿದ ಸೇವಾ ವಿವರಗಳು ತಿಳಿದುಬರುತ್ತವೆ.

ಅರ್ಕೇಶ್ವರ ದೇವಾಲಯ ವಿಜಯನಗರ ಕಾಲದ್ದು. ಗರ್ಭಗೃಹ, ಸುಕನಾಸಿ, ನಾಲ್ಕು ಅಷ್ಟಕೋನದ ಸರಳ ಸ್ತಂಭಗಳಿಂದ ಕೂಡಿದ ನವರಂಗ, ಪೂರ್ವದಲ್ಲಿ ನಾಲ್ಕು ಸ್ತಂಭಗಳಿಂದ ಕೂಡಿದ ದೊಡ್ಡ ಮುಖಮಂಟಪ ಮತ್ತು ದಕ್ಷಿಣದಲ್ಲಿ ಎರಡು ಸ್ತಂಭಗಳಿಂದ ಕೂಡಿದ ಚಿಕ್ಕ ಮುಖಮಂಟಪ - ಇವುಗಳಿಂದ ಕೂಡಿದ ಚಿಕ್ಕ ಸರಳ ರಚನೆ. ಗರ್ಭಗೃಹದ ಹೊರಗೋಡೆಗಳ ಮೇಲೆ ಚೋಳ ಶೈಲಿಯ ಅನುಕರಣೆಗಳೆಂದು ತೋರುವ ಅರೆಗಂಬ ಮತ್ತು ಗೂಡುಗಳಿವೆ. ಉತ್ತರದಿಂದ ದಕ್ಷಿಣದತ್ತ ಸಾಗುವ ಸುಕನಾಸಿ ಮೂರು ಅಂಕಣದ್ದಾಗಿದೆ. ಚಿಕ್ಕ ಸುಕನಾಸಿಯೊಂದು ಮಧ್ಯದತ್ತ ಸಾಗುತ್ತದೆ. ಇಲ್ಲಿರುವ ಲಿಂಗ ಹುಟ್ಟು ಶಿಲೆಯೆಂದೇ ತೋರುತ್ತದೆ. ನವರಂಗದ ಉತ್ತರಕ್ಕಿರುವ ಚಿಕ್ಕ ಕೊಠಡಿಯಲ್ಲಿ ಇಟ್ಟಿಗೆಯ ಗೂಡೊಂದಿದೆ. ಇದರಲ್ಲಿ ಬಹುಶಃ ದೇವಿಯ ವಿಗ್ರಹವನ್ನಿಡಲಾಗಿತ್ತು. ಈಗ ನವರಂಗದಲ್ಲಿ ವೀಣಾಪಾಣಿ ವೀರಭದ್ರ, ಸಪ್ತಮಾತೃಕೆಯರು, ಷಣ್ಮುಖಿ, ವರದರಾಜ ಹಾಗೂ ಸೂರ್ಯವಿಗ್ರಹಗಳಿವೆ. ಇವೆಲ್ಲ ಒರಟಾದ ಶಿಲ್ಪಗಳು.

ಗೋಪಾಲಕೃಷ್ಣ ದೇವಾಲಯ ಚಿಕ್ಕ ಗರ್ಭಗೃಹ, ಎರಡು ಸುಕನಾಸಿಗಳು, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಮುಖಮಂಟಪ ಮೂರು ಅಂಕಣದ್ದಾಗಿದ್ದು ಇನ್ನೊಂದು ಅಂಕಣ ಮಧ್ಯದಿಂದ ಚಾಚಿದೆ. ಮುಖಮಂಟಪದ ಸ್ತಂಭ ಹಾಗೂ ನವರಂಗ ದ್ವಾರಗಳು 14ನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು. ಸ್ತಂಭಗಳು ಹದಿನಾರು ಮುಖದ ಅರೆಗೋಳವಿ ಆಕಾರದ ಅನುಕರಣೆಗಳಾಗಿವೆ. ಇವುಗಳ ಮೇಲ್ಭಾಗದ ಚೌಕನೆಯ ಭಾಗಗಳಲ್ಲಿ ನರಸಿಂಹ, ಜನಾರ್ದನ, ವೇಣುಗೋಪಾಲ, ಜಿಂಕೆಗೆ ಆಹಾರ ನೀಡುತ್ತಿರುವ ಸ್ತ್ರೀ ಮುಂತಾದ ಶಿಲ್ಪಗಳುಳ್ಳ ಉಬ್ಬುಚಿತ್ರಗಳಿವೆ. ಬೋದಿಗೆಗಳ ಮೇಲೆ ಕೆಳಮುಖವಾಗಿ ಚಾಚಿ ಇಳಿಬಿದ್ದಿರುವ ಮೊಗ್ಗನ್ನು ಬಿಡಿಸಿದೆ. ದ್ವಾರಪಾಲಕ ಮೂರ್ತಿಗಳು ಕಗ್ಗಲ್ಲಿನಲ್ಲಿ ಕೆತ್ತಿದ ಒರಟು ಶಿಲ್ಪಗಳಾಗಿವೆ. ಈ ದೇವಾಲಯದ ನಾಲ್ಕಡಿ ಎತ್ತರದ ವೇಣುಗೋಪಾಲ ಮೂರ್ತಿ ಶಿಲ್ಪದೃಷ್ಟಿಯಿಂದ ಗಮನಿಸಬಹುದಾದ ವಿಗ್ರಹ. ಹೊಯ್ಸಳ ಶೈಲಿಯನ್ನು ಅನುಕರಿಸಿರುವಂತೆ ತೋರುವ ಈ ಮೂರ್ತಿಯನ್ನು ಹಾಲುಣಿಸುತ್ತಿರುವ ಹಸುವಿನ ಮೇಲೆ ಒರಗಿಕೊಂಡಿರುವಂತೆ ಕೆತ್ತಿದೆ. ಗರ್ಭಗೃಹದ ಹೊರಗೋಡೆಯ ಮೇಲಿರುವ ಅರೆಗಂಬ ಹಾಗೂ ಗೂಡುಗಳು ಚೋಳರ ಕೆಲಸವನ್ನು ಹೋಲುತ್ತವೆ. ವಿಜಯನಗರ ಕಾಲದ ಕೊನೆಯ ಭಾಗದಲ್ಲಿ ದೇವಾಲಯದ ಶಿಖರವನ್ನು ನಿರ್ಮಿಸಿದಂತೆ ತೋರುತ್ತದೆ. ಮಹಾದ್ವಾರಕ್ಕೆ ಗೋಪುರವಿಲ್ಲ, ಇದೂ ವಿಜಯನಗರ ಕಾಲದ್ದು.

ಕಲ್ಲೇಶ್ವರ ದೇವಾಲಯ ಚಿಕ್ಕದು. ಇದು ಚೋಳರ ಕಾಲದ ನಿರ್ಮಾಣ. ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಹೊರಗೋಡೆಯ ಅರೆಗಂಬ ಹಾಗೂ ಗೂಡುಗಳು ನವರಂಗದ ಸ್ತಂಭಗಳು ಚೋಳ ರೀತಿಯವು. ಸ್ತಂಭಗಳು ಅರೆಗೋಳವಿಯಾಕಾರದ ಷೋಡಶ ಮುಖಗಳಿಂದ ಕೂಡಿವೆ. ಮೇಲ್ಭಾಗದಲ್ಲಿ ಶಿಲ್ಪಗಳಿವೆ. ನವರಂಗ ಹಾಗೂ ಸುಕನಾಸಿ ದ್ವಾರಗಳ ಮೇಲೆ ರುದ್ರಾಕ್ಷಿ ಮಣಿಗಳನ್ನು ಕೆತ್ತಿದೆ. ಗರ್ಭಗುಡಿಯಲ್ಲಿರುವ ಲಿಂಗ ಚಿಕ್ಕದು. ಇದನ್ನು ಬೇರೆಡೆಯಿಂದ ತಂದಿಟ್ಟಿರುವಂತೆ ತೋರುತ್ತದೆ. (ಎಚ್.ಎಂ.ಎನ್.ಆರ್.)

**ಚಿಕ್ಕಮಲ್ಲಿಕಾರ್ಜುನ :** ಸು.15ನೆಯ ಶತಮಾನ. ವೀರಶೈವ ಕವಿ. ಧರ್ಮಸಂಪಾದನೆ ಎಂಬ ಗ್ರಂಥದ ಕರ್ತೃ. ಗೋರಕೋಡಪುರ ಕವಿಯ ಜನ್ಮಸ್ಥಳವೆಂದು ತೋರುತ್ತದೆ. ಈತನ ತಂದೆ ಗೋರಕೋಡಪುರದ ಉಜ್ಜಣಾರಾಧ್ಯ. ಉಜ್ಜಯನೀಶ ಅಥವಾ ಉಜ್ಜಯನಿ ದೇಶಿಕೇಂದ್ರ ಈತನ ಗುರು. ಕಾಗಿನೆಲೆಯ ಚಿಕ್ಕವೀರೇಶ ಈತನ ಇನ್ನೊಬ್ಬ ಗುರು. ಪೂರ್ವಕವಿಗಳಲ್ಲಿ ಪಾಲ್ಕುರಿಕೆ ಸೋಮನಾಥ', ಭೀಮಕವಿ, ಪುರದ ಮಲ್ಲಯ್ಯ, ಗುರುಬಸವ ಇವರನ್ನು ಸ್ಮರಿಸಿದ್ದಾನೆ.

ಧರ್ಮಸಂಪಾದನೆ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ ಐದು ಸಂಧಿಗಳಿವೆ. ಮೊದಲ ನಾಲ್ಕು ಸಂಧಿಗಳು ಪರಿವರ್ಧಿನಿಯಲ್ಲೂ ಕೊನೆಯದು ಭಾಮಿನಿಯಲ್ಲೂ ಇವೆ. ಕಾವ್ಯದಲ್ಲಿ ಒಟ್ಟು 598 ಪದ್ಯಗಳಿವೆ. ತಾನು ಈ ಕಾವ್ಯವನ್ನು ಗುರು ಕಾಗಿನೆಲೆಯ ಚಿಕ್ಕವೀರೇಶನ ಆದೇಶದಂತೆ ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಇದರಲ್ಲಿ ಶಿವಪದಕ್ಕೆ ಕಾರಣವಾದ ಭಿಕ್ಷೆಯ ಮಹಿಮೆ ವರ್ಣಿತವಾಗಿದೆ. ಅಮರಾವತಿ ಪಟ್ಟಣದ ಧನಿಕ ಇಂದೀವರ ರಾತ್ರಿ ಭಿಕ್ಷೆ ಬೇಡಲು ಬಂದ ಜಂಗಮನೊಬ್ಬನಿಗೆ ಭಿಕ್ಷೆ ನೀಡದೆ ಆತ ರಾತ್ರಿಯೆಲ್ಲ ಹಸಿವಿನಿಂದ ನರಳುವಂತೆ ಮಾಡಿದ ಅಪರಾಧಕ್ಕಾಗಿ ಶಿವನ ಶಾಪ ಹೊಂದಿ ಬ್ರಹ್ಮರಾಕ್ಷಸನಾಗಿ ಭೂಮಿಯಲ್ಲಿ ಹುಟ್ಟಿ, ಶಾಪವಿಮೋಚನೆ ಪಡೆದದ್ದು ಇದರ ಕಾವ್ಯವಸ್ತು. ಈ ಕಥೆಗೆ ಹಲವು ಉಪಕಥೆಗಳು ಸೇರಿಕೊಂಡು ಕಾವ್ಯ ಹಿಗ್ಗಿದೆ. ವೀರಶೈವ ಧರ್ಮಬೋಧನೆ, ಇಲ್ಲಿಯ ಮುಖ್ಯ ಗುರಿ. ಆದರೂ ಪರಮತವಿಡಂಬನೆ ಕಂಡುಬರುವುದಿಲ್ಲ. ಕಾವ್ಯದಲ್ಲಿ ವರ್ಣನಾಂಶ ಕಡಿಮೆ. ಕವಿ ತಾನು ವ್ಯಾಕರಣ, ಅಲಂಕಾರ, ಛಂದಸ್ಸು - ಇವುಗಳನ್ನು ಅರಿಯದವನೆಂದು ನಮ್ರನಾಗಿ ಹೇಳಿಕೊಂಡಿದ್ದಾನೆ. ಜನಸಾಮಾನ್ಯರಿಗೆ ಧರ್ಮಬೋಧನೆ ಅರ್ಥವಾಗಬೇಕು, ಜನ ಬದುಕಬೇಕು,

ನೀತಿವಶರಾಗಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಸಾಂಪ್ರದಾಯಿಕ ವಿಧಾನದಲ್ಲಿ ಈ ಗ್ರಂಥ ರಚಿತವಾಗಿದ್ದರೂ ಕೆಲವು ಕಾವ್ಯಾಂಶಗಳನ್ನೂ ಹೊಂದಿದೆ ಎಂಬ ದೃಷ್ಟಿಯಿಂದ ಮುಖ್ಯವಾಗಿದೆ. *

**ಚಿಕ್ಕಮಾಗಡಿ :** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಕಸಬೆಯ ಉತ್ತರಕ್ಕೆ 37ಕಿಮೀ ದೂರದಲ್ಲಿದೆ. ಒಂದು ಕಾಲದಲ್ಲಿ ಈ ಊರು ಜೈನಧರ್ಮದ ಪ್ರಮುಖ ಕೇಂದ್ರವಾಗಿತ್ತು. ಇಲ್ಲಿ ಜೈನಬಸದಿ ಹಾಗೂ ಭಗ್ನವಾದ ಅನೇಕ ಜೈನ ವಿಗ್ರಹಗಳು ಇವೆ. ಜೈನಬಸದಿ ಈಗ ಬಸವೇಶ್ವರ ಗುಡಿಯಾಗಿದೆ. ದೇವಾಲಯದ ಮುಂದೆ 13.5' ಎತ್ತರ 4.5' ಅಗಲದ 1182ರ ಶಾಸನವೊಂದಿದೆ. ಇಲ್ಲಿನ ಕಲ್ಲೇಶ್ವರ ದೇವಾಲಯ ತ್ರಿಕೂಟವರ್ಗಕ್ಕೆ ಸೇರಿದ್ದು, ಎರಡರಲ್ಲಿ ಈಶ್ವರಲಿಂಗ ಇನ್ನೊಂದರಲ್ಲಿ ವಿಷ್ಣುವಿನ ವಿಗ್ರಹ ಇವೆ. ಅಮ್ಮನ ಗುಡಿಯ ಮುಂಭಾಗದಲ್ಲಿ ಎರಡು ಮಾಸ್ತಿಕಲ್ಲುಗಳಿವೆ. *

**ಚಿಕ್ಕಯ್ಯ :** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ನಿಜಲಿಂಗ ಚಿಕ್ಕಯ್ಯನೆಂದು ಪ್ರಸಿದ್ಧನಾಗಿದ್ದಾನೆ. ಬಸವೇಶ್ವರನ ಸಮಕಾಲೀನನೆಂದು ತೋರುತ್ತದೆ. ಈತ ಉಳಿಯುಮೇಶ್ವರ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಫ.ಗು.ಹಳಕಟ್ಟಿಯವರು ಚಿಕ್ಕಯ್ಯನ 15 ವಚನಗಳು ದೊರಕಿವೆಯೆಂದು ಹೇಳುತ್ತಾರೆ. ಕವಿಚರಿತಕಾರರು ಈತನ ಮೂರು ವಚನಗಳು ಉಪಲಬ್ಧವೆಂದೂ ಅದರಲ್ಲಿ ಒಂದು ವಾರ್ಧಕ ಷಟ್ಪದಿಯೆಂದೂ ಅಭಿಪ್ರಾಯಪಟ್ಟಿದ್ದಾರೆ. ಸಿದ್ಧನಂಜೇಶನ ಹೇಳಿಕೆಯಂತೆ ರಾಘವಾಂಕನೇ ಷಟ್ಪದಿ ರಚನೆಯ ಮೊದಲಿಗನೆಂಬ ಮಾತು ಆಗ ಸುಳ್ಳಾಗುತ್ತದೆ. ಸದ್ಯಕ್ಕೆ ಷಟ್ಪದಿ ರಚನೆ ರಾಘವಾಂಕನಿಗಿಂತ ಹಿಂದೆ ಇದ್ದರೂ ಷಟ್ಪದಿಯಲ್ಲಿ ಗ್ರಂಥರಚನೆಯಾದುದು ರಾಘವಾಂಕನಿಂದ ಎಂಬ ಮಾತನ್ನು ಒಪ್ಪಬಹುದಾಗಿದೆ.

ಈತನ ಕಥೆ ಹೀಗಿದೆ: ಕಾಶ್ಮೀರ ದೇಶದ ಮಾಂಡವ್ಯಪುರದ ತನ್ನ ಅರಮನೆಯಿಂದ ಮೂರು ಸಾವಿರ ಚಿರಮೂರ್ತಿಗಳನ್ನು ಬಸವಣ್ಣ ಗುಪ್ತವಾಗಿ ಒಯ್ದನೆಂಬ ಕಾರಣದಿಂದ ಬಸವಣ್ಣನನ್ನು ರಹಸ್ಯವಾಗಿ ಕೊಂದು ಬರುವಂತೆ ಇಬ್ಬರು ಭಟರನ್ನು ರಾಣಿ ಮಹಾದೇವಿ ಕಳುಹಿಸಿದಳು. ಕಪಟಜಂಗಮ ವೇಷದಿಂದಿದ್ದ ಆ ಭಟರು ಬಸವಣ್ಣನ ಕೃಪೆಗೆ ಪಾತ್ರರಾಗಿ ನಿಜಜಂಗಮರಾದರು. ಅವರಿಗೆ ಕ್ರಮವಾಗಿ ಚೋರಚಿಕ್ಕಯ್ಯ, ನಿಜಲಿಂಗಚಿಕ್ಕಯ್ಯ ಎಂದು ಹೆಸರಾಯಿತು. ನಿಜಲಿಂಗ ಚಿಕ್ಕಯ್ಯ ಓಲೆಗರಿಯನ್ನು ಮಾರುವ ಕಾಯಕ ನಡೆಸಿ ಗುರುಲಿಂಗ ಜಂಗಮ ಸೇವೆ ಮಾಡುತ್ತಿದ್ದ. ಒಮ್ಮೆ ಈತನನ್ನು ಗಂಗಯ್ಯನೆಂಬ ತಳವಾರ ಶಿವಪೂಜೆಗೆಂದು ಆಹ್ವಾನಿಸಿ, ರಾಜಕಾರ್ಯಕ್ಕಾಗಿ ಹೊರಗೆ ಹೋಗಿರಲು ಆತನ ಹೆಂಡತಿ ಚೆನ್ನಾಜಿ ಆ ಜಂಗಮನನ್ನು ಮೋಹಿಸಿ ರತಿಸುಖಕ್ಕೆ ಕರೆದಳು. ಆತ ಒಪ್ಪದಿರಲು ಆತನ ಗಂಟಿನಲ್ಲಿ ತನ್ನ ಆಭರಣಗಳನ್ನಿಟ್ಟು ತನ್ನನ್ನು ಆತ ಕೆಡಿಸಬಂದನೆಂದೂ ಕಳ್ಳತನ ಮಾಡಿರುವನೆಂದೂ ಗಂಡನಿಗೆ ಚಾಡಿಹೇಳಿದಳು. ತನ್ನ ಮಾತನ್ನು ಗಂಡ ಒಪ್ಪದಿರಲು ದೂರನ್ನು ದೊರೆಯ ತನಕ ಒಯ್ದಳು. ಚಿಕ್ಕಯ್ಯನ ಗಂಟಿನಲ್ಲಿ ಆಕೆಯ ಆಭರಣಗಳಿದ್ದುದನ್ನು ಕಂಡ ದೊರೆ ಆತನ ತಲೆ ಕತ್ತರಿಸಲು ಆಜ್ಞಾಪಿಸಿದ. ಆದರೆ ಕತ್ತರಿಸಿದ ಚಿಕ್ಕಯ್ಯನ ತಲೆ ಆಕಾಶಕ್ಕೆ ನೆಗೆದು ಪಂಚಾಕ್ಷರಿಯನ್ನು ಜಪಿಸುತ್ತಿರಲು ಬಸವಣ್ಣ ಬಂದು ಆತನನ್ನು ಮತ್ತೆ ಬದುಕಿಸಿದ ಎಂಬುದಾಗಿ ಶಿವಶರಣರ ಪುರಾಣಗಳಿಂದ ತಿಳಿದುಬರುತ್ತದೆ.

ವಾರ್ಧಕ ಷಟ್ಪದಿಯಲ್ಲಿರುವ ಈತನ ಒಂದು ಪದ್ಯ:

ಭವಪಾಶಬಂಧದಿಂ ಬಿಗಿದು ಕವಿಲೆಯ ಹುಲಿಯ
ಗವಿಯೊಳಗೆ ಕಟ್ಟಿದಂತಾದೆ ಸಂಸಾರವೆಂ
ಬವಿಚಾರಸರ್ಪ ಸರ್ವಗ್ರಾಸಗೊಂಡುದಿದನೊಮ್ಮೆ ಪರಿಹರಿಸಿ ನಿಮ್ಮ
ಅವಿರಳ ಶ್ರೀಪಾದದೊಳು ಮಗ್ನನಾಗಿ ಮ
ತ್ತವಿಕಲ್ಪ ಸಮಸುಖಾನಂದದೊಳಗೊಂದಿಹನೊ
ಭವರಹಿತ ಪರಮೇಶ ಪಾಲಿಸೈ ಸದ್ಗುರುವೆ ಉಳಿಯುಮೇಶ್ವರಲಿಂಗವೇ *

**ಚಿಕ್ಕರಾಮರಾಯ :** 1891-1945. ಪ್ರಸಿದ್ಧ ಸಂಗೀತ ವಿದ್ವಾಂಸರು. ಅರಸೀಕೆರೆ ಸಮೀಪದ ಕುರುಡಿ ಗ್ರಾಮದಲ್ಲಿ ಜನಿಸಿದರು. ತಂದೆ ಸುಬ್ಬರಾಯ.

ಚಿಕ್ಕರಾಮರಾಯರು ಓದಿದ್ದು ಇಂಟರ್‌ಮಿಡಿಯೆಟ್‌ವರೆಗೆ ಮಾತ್ರ. ಬಾಲ್ಯದಿಂದಲೂ ಇವರಿಗೆ ಸಂಗೀತ ಮತ್ತು ನಾಟಕ ಕಲೆಯಲ್ಲಿ ಹೆಚ್ಚಿನ ಅಭಿರುಚಿ ಇದ್ದು ಶಾಕುಂತಲಾ ನಾಟಕ ಕಂಪೆನಿ ಸೇರಿ ಬಾಲಕನ ಪಾತ್ರಗಳನ್ನು ಅಭಿನಯಿಸುತ್ತ, ತಮಗೆ ದೈವ ದತ್ತವಾಗಿ ಬಂದಿದ್ದ ಶಾರೀರ ಸಂಪತ್ತಿನಿಂದ ಪ್ರೇಕ್ಷಕರನ್ನು ಸಂಗೀತದಿಂದ ತಣಿಸಿ, ನಟನೆಯಿಂದ ಮುಗ್ಧಗೊಳಿಸುತ್ತಿದ್ದರು. ಇವರ ಪ್ರತಿಭೆ ನಾಲ್ವಡಿ ಕೃಷ್ಣರಾಜ ಒಡೆಯರ ಗಮನಕ್ಕೆ ಬಂದು ತಮ್ಮ ಆಸ್ಥಾನದಲ್ಲಿ ನೇಮಿಸಿ ಕೊಂಡು ಇವರಿಗೆ ಐದು ರೂಪಾಯಿ ಸಂಬಳವನ್ನು ಗೊತ್ತುಮಾಡಿದರಂತೆ.

ಚಿಕ್ಕರಾಮರಾಯರ ಸಂಗೀತಾಭ್ಯಾಸ ಪ್ರಾರಂಭದಲ್ಲಿ ಕರಿಗಿರಿರಾಯರಲ್ಲಿಯೂ ಅನಂತರ ವೈಣಿಕ ಶಿಖಾಮಣಿ ಸುಬ್ಬಣ್ಣನವರಲ್ಲಿಯೂ ನಡೆಯಿತು. ಸುಬ್ಬಣ್ಣನವರ ಆಶ್ರಯದಲ್ಲಿ ರಾಯರಿಗೆ ಸ್ವರ ಕಲ್ಪನೆ, ರಾಗಾಲಾಪನೆ ಮತ್ತು ತಾಳ ಪ್ರಸ್ತಾರ ಕ್ರಮಗಳು ಕರತಲಾಮಲಕವಾಗಿ, ಅನೇಕ ಬಾರಿ ಇವರ ಶಾರೀರ ಮಾಧುರ್ಯ, ಲಯಜ್ಞಾನ, ಸ್ವರವಿನ್ಯಾಸಗಳಿಂದ ಸುಬ್ಬಣ್ಣನವರೇ ಮಂತ್ರಮುಗ್ಧರಾಗಿ ತಮ್ಮ ಶಿಷ್ಯನ ಪ್ರತಿಭೆಯನ್ನು ಕಂಡು ಆನಂದಿಸಿ, ಆಶೀರ್ವದಿಸಿ ಸಂಪೂರ್ಣವಾಗಿ ವಿದ್ಯಾದಾನ ಮಾಡಿದರಂತೆ. ಇವರು ತಮ್ಮ ಪ್ರಾಪ್ತ ವಯಸ್ಸಿನಲ್ಲಿ ದಕ್ಷಿಣ ದೇಶದಲ್ಲೆಲ್ಲ ಪ್ರವಾಸ ಮಾಡಿ ತಾಳಬ್ರಹ್ಮ ಎಂಬ ಕೀರ್ತಿ ಪಡೆದು ಮೈಸೂರಿನ ಕೀರ್ತಿಯನ್ನು ಹೆಚ್ಚಿಸಿದರು. ಮೈಸೂರಿಗೆ ಬರುತ್ತಿದ್ದ ಅನೇಕ ವಿದ್ವಾಂಸರಿಗೆ ಇವರಲ್ಲಿ ಅಪಾರ ಗೌರವಾದರಗಳು ಇತ್ತೆಂದು ತಿಳಿದುಬರುತ್ತದೆ. ಚಿಕ್ಕರಾಮರಾಯರು ಸ್ವತಃ ಅನೇಕ ಕೀರ್ತನೆಗಳು, ತಿಲ್ಲಾನಗಳು, ವರ್ಣಗಳು ಮತ್ತು ಸ್ವರಜತಿಗಳನ್ನು ರಚಿಸಿ, ಸಂಗೀತದ ಜೊತೆಗೆ ಸಾಹಿತ್ಯದ ಸೇವೆಯನ್ನೂ ಮಾಡಿದ್ದಾರೆ. ಇವರಿಗೆ ಅಂದಿನ ಮಹಾರಾಜರು ಸಂಗೀತರತ್ನ ಎಂಬ ಬಿರುದನ್ನಿತ್ತು ಗೌರವಿಸಿದರು. ಚಿಕ್ಕರಾಮರಾಯರಲ್ಲಿ ವಿದ್ಯಾಭ್ಯಾಸ ಮಾಡಿದವರಲ್ಲಿ ನಾಗೇಂದ್ರರಾವ್, ಸೋಮಸುಂದರಂ, ಬೆಂಗಳೂರು ನಾಗರತ್ನಮ್ಮ, ಫಿಡಲ್ ರಾಮರಾವ್ ಮತ್ತು ಅರಕೆರೆ ನಾರಾಯಣರಾವ್ ಮೊದಲಾದವರ ಹೆಸರನ್ನು ಉಲ್ಲೇಖಿಸಬಹುದು. ಇವರು 1945ರ ಜನವರಿ ತಿಂಗಳಿನಲ್ಲಿ ನಿಧನರಾದರು. (ಎ.ಎನ್;ವಿ.ಆರ್.)

**ಚಿಕ್ಕವೀರಪ್ಪ :** ಕೊಡಗಿನ ರಾಜ (1736-66). ದೊಡ್ಡವೀರಪ್ಪನ ಮೊಮ್ಮಗ ಮತ್ತು ಉತ್ತರಾಧಿಕಾರಿ. ಇವನ ತಂದೆ ಅಪ್ಪಾಜಿರಾಜ. ತನ್ನ ಪತ್ನಿಯ ಆತ್ಮಹತ್ಯೆಗೆ ಕಾರಣನಾಗಿದ್ದರಿಂದ ಅವನನ್ನು ದೊಡ್ಡವೀರಪ್ಪ ಸೆರೆಮನೆಯಲ್ಲಿರಿಸಿದ್ದ. ತಂದೆಯ ಜೊತೆ ಮಗ ಚಿಕ್ಕವೀರಪ್ಪನೂ ಬಂಧನದಲ್ಲಿದ್ದ. ಅಪ್ಪಾಜಿರಾಜ ಕಾರಾಗೃಹದಲ್ಲಿರುವಾಗಲೇ ಮೃತನಾದ. ಅವನ ಮರಣಾನಂತರ ಮಗ ಚಿಕ್ಕವೀರಪ್ಪ ಬಿಡುಗಡೆ ಹೊಂದಿದ. ದೊಡ್ಡವೀರಪ್ಪನ ಮರಣಾನಂತರ ಚಿಕ್ಕವೀರಪ್ಪ ಕೊಡಗಿನ ಸಿಂಹಾಸನವನ್ನಲಂಕರಿಸಿದ.

ಚಿಕ್ಕಂದಿನ ದಿನಗಳನ್ನು ಸೆರೆಮನೆಯಲ್ಲಿ ಕಳೆದುದರಿಂದ ದೈಹಿಕವಾಗಿ ರೋಗಿಷ್ಠನೂ ಮಾನಸಿಕವಾಗಿ ದುರ್ಬಲನೂ ಆಗಿದ್ದ ಈತನ ಆಳಿಕೆಯೂ ದುರ್ಬಲವಾಗಿತ್ತು. ಚಿಕ್ಕವೀರಪ್ಪನ ಆಳಿಕೆಯ ಕಾಲದಿಂದ ಕೊಡಗಿನ ಮೇಲೆ ಮಹಮ್ಮದೀಯರ ಆಕ್ರಮಣಗಳು ಪ್ರಾರಂಭವಾದವು. ಚಿಕ್ಕವೀರಪ್ಪನ ಆಳಿಕೆಯ ಸಮಯಕ್ಕೆ ಹೈದರ್ ಬಲಿಷ್ಠನಾಗಿ ವಿಸ್ತಾರವಾಗಿ ಸಾಮ್ರಾಜ್ಯ ಸ್ಥಾಪನೆಗಾಗಿ ಸುತ್ತಮುತ್ತಲ ಪ್ರದೇಶಗಳ ಮೇಲೆ ಆಕ್ರಮಣ ಪ್ರಾರಂಭಿಸಿದ. 1763ರಲ್ಲಿ ಬಿದನೂರನ್ನು ವಶಪಡಿಸಿಕೊಂಡ ಮೇಲೆ ಅದರ ಆಶ್ರಿತರಾಗಿದ್ದ

ಕೊಡಗಿನ ಮೇಲೂ ತನ್ನ ಅಧಿಕಾರವಿದೆಯೆಂದು ಹೈದರ್ ಹೇಳತೊಡಗಿದ. ಹಿಂದೆ ಮೈಸೂರಿನ ಚಿಕ್ಕದೇವರಾಜ ಒಡೆಯ ಮತ್ತು ಕೊಡಗಿನ ದೊಡ್ಡ ವೀರಪ್ಪನಿಗೆ ಆಗಿದ್ದ ಸಂಧಿಯ ಪ್ರಕಾರ ದೊಡ್ಡವೀರಪ್ಪ ಕೊಡಬೇಕಾಗಿದ್ದ ಆದಾಯದ ಪಾಲಿಗೆ ಬದಲಾಗಿ ಏಳು ಸಾವಿರ ಸೀಮೆಯ ಬೆಮ್ಮತ್ತೆ, ಪುಲ್ಲಿಪಟ್ಟಣ ಮತ್ತು ಹೊಸೂರು ಗ್ರಾಮಗಳನ್ನು ತನಗೆ ಬಿಟ್ಟುಕೊಡಬೇಕೆಂದು ಚಿಕ್ಕವೀರಪ್ಪನಿಗೆ ಹೈದರ್ ಹೇಳಿಕಳುಹಿಸಿದ. ಹೈದರ್ ಪ್ರಬಲನೂ ಬಲಿಷ್ಠನೂ ಆಗಿದ್ದರಿಂದ ಚಿಕ್ಕವೀರಪ್ಪ ಈ ಮೂರು ಗ್ರಾಮಗಳನ್ನು ಬಿಟ್ಟುಕೊಟ್ಟ. ಆದರೆ ಹೈದರ್ ಇಷ್ಟಕ್ಕೆ ತೃಪ್ತನಾಗದೆ 1765ರಲ್ಲಿ ಫಜಲ್ ಪುಲ್ ಖಾನನೆಂಬುವನ ನಾಯಕತ್ವದಲ್ಲಿ ಕೊಡಗಿನ ಮೇಲೆ ದಾಳಿಮಾಡಲು ಒಂದು ಸೈನ್ಯವನ್ನು ಕಳುಹಿಸಿದ. ಆದರೆ ಹೈದರ್‌ನ ಸೈನ್ಯ ಸೋಲನ್ನನುಭವಿಸಿತು. ಉಪಾಯಗಾರನಾದ ಹೈದರ್ ಕೊಡಗನ್ನು ಸುಲಭವಾಗಿ ಜಯಿಸಲು ಸಾಧ್ಯವಿಲ್ಲವೆಂಬುದು ತಿಳಿದು, ತಮಗೆ ಜಗಳ ಬೇಡವೆಂದೂ ಕೊಡಗಿನ ಗಡಿಯಲ್ಲಿರುವ ಉಚ್ಚಂಗಿ ಮೊದಲಾದ ಕೆಲವು ಊರುಗಳನ್ನು ಬಿಟ್ಟುಕೊಡುವುದಾಗಿಯೂ ಅದರ ಕ್ರಯ 3 ಲಕ್ಷ ರೂಪಾಯಿ ಕೊಡಬೇಕಾಗಿಯೂ ಕೇಳಿದ. ಇದಕ್ಕೆ ಒಪ್ಪಿಕೊಂಡ ಚಿಕ್ಕವೀರಪ್ಪ ಕಾಲು ಭಾಗ ಹಣವನ್ನು ಕೊಟ್ಟು ಉಳಿದ ಬಾಕಿಗೆ ತನ್ನ ದಳವಾಯಿಯ ತಮ್ಮನಾದ ಬರಮಣ್ಣನನ್ನು ಒತ್ತೆಯಾಳಾಗಿ ಕಳುಹಿಸಿಕೊಟ್ಟ. ಈ ನಡುವೆ ಚಿಕ್ಕವೀರಪ್ಪ ಪುತ್ರ ಸಂತಾನವಿಲ್ಲದೆ 1766ರಲ್ಲಿ ನಿಧನಹೊಂದಿದ.

ಚಿಕ್ಕವೀರಪ್ಪ ಒಡೆಯ ವೀರಶೈವ ಪಂಥದವನಾಗಿದ್ದರೂ ವೈದಿಕ ಧರ್ಮದಲ್ಲೂ ಭಕ್ತಿಯುಳ್ಳವನಾಗಿದ್ದ. 1756ರಲ್ಲಿ ಇವನು ಶೃಂಗೇರಿ ಜಗದ್ಗುರುಗಳಿಗೆ ತನ್ನ ರಾಜ್ಯದ ಒಂದು ಗ್ರಾಮವನ್ನು ದಾನವಾಗಿ ಕೊಟ್ಟ ದಾನಶಾಸನ ಪತ್ರ ಶೃಂಗೇರಿ ಮಠದಲ್ಲಿದೆ. (ಎಸ್.)

**ಚಿಕ್ಕ ಸಂಕಣ್ಣನಾಯಕ :** ಕೆಳದಿ ವಂಶದ ಅರಸ (ಸು.1567-82) ಸದಾಶಿವನಾಯಕನ (ದೊಡ್ಡ ಸಂಕಣ್ಣನಾಯಕ) ಮಗ ಮತ್ತು ಉತ್ತರಾಧಿಕಾರಿ (ಈತ ಸದಾಶಿವನಾಯಕನ ಎರಡನೆಯ ಮಗ ಮತ್ತು ದೊಡ್ಡಸಂಕಣ್ಣನಾಯಕನ ತಮ್ಮ ಹಾಗೂ ಉತ್ತರಾಧಿಕಾರಿ ಎಂಬ ಅಭಿಪ್ರಾಯ ಸಹ ಇದೆ). ಈತನೂ ರಾಮರಾಜಯ್ಯನೂ ಕೆಲವು ಕಾಲ ಜೊತೆಯಾಗಿ ರಾಜ್ಯಭಾರ ಮಾಡಿದಂತೆ ತೋರುತ್ತದೆ. ಕೆಳದಿ ನೃಪವಿಜಯ, ಶಿವತತ್ತ್ವರತ್ನಾಕರ ಮೊದಲಾದ ಗ್ರಂಥಗಳು ಈತ ಬಿಜಾಪುರದ ಸಲಾಬತ್‌ಖಾನ್, ಗೇರುಸೊಪ್ಪೆಯ ಭೈರಾದೇವಿ ಮತ್ತು ಸೋದೆಯ ಅರಸಪ್ಪನಾಯಕ – ಇವರ ಮೇಲೆ ಯುದ್ಧ ಹೂಡಿ ಯಶಸ್ವಿಯಾದನೆಂದು ತಿಳಿಸುತ್ತವೆ. *

**ಚಿಕ್ಕೋಡಿ :** ಬೆಳಗಾಂವಿ ಜಿಲ್ಲೆ ವಾಯವ್ಯ ಭಾಗದ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯಸ್ಥಳ. ತಾಲ್ಲೂಕನ್ನು ಪಶ್ಚಿಮ, ವಾಯವ್ಯ ಮತ್ತು ಉತ್ತರದಲ್ಲಿ ಮಹಾರಾಷ್ಟ್ರ ರಾಜ್ಯ, ಈಶಾನ್ಯದಲ್ಲಿ ಅಥಣಿ ತಾಲ್ಲೂಕಿನ ಸ್ವಲ್ಪ ಭಾಗ, ಪೂರ್ವದಲ್ಲಿ ರಾಯಬಾಗ ತಾಲ್ಲೂಕು, ಆಗ್ನೇಯದಲ್ಲಿ ಗೋಕಾಕ ತಾಲ್ಲೂಕಿನ ಸ್ವಲ್ಪ ಭಾಗ, ದಕ್ಷಿಣ ಮತ್ತು ನೈಋತ್ಯದಲ್ಲಿ ಹುಕ್ಕೇರಿ ತಾಲ್ಲೂಕು ಇವು ಸುತ್ತುವರೆದಿವೆ. ತಾಲ್ಲೂಕಿನಲ್ಲಿ ನಿಪ್ಪಾಣಿ, ಚಿಕ್ಕೋಡಿ ನಗರ, ಮನೋಳಿ ಮತ್ತು ಸದಲಗ ಹೋಬಳಿಗಳಿದ್ದು 100 ಗ್ರಾಮಗಳಿವೆ. ವಿಸ್ತೀರ್ಣ 1,269.5ಚ.ಕಿಮೀ. ಜನಸಂಖ್ಯೆ 5,61,671.

ಚಿಕ್ಕೋಡಿ ತಾಲ್ಲೂಕಿನ ಪಶ್ಚಿಮ ಭಾಗವನ್ನು ಮಲೆನಾಡಿನ ಸೆರಗೆಂದು ಕರೆಯುವುದುಂಟು. ಈ ತಾಲ್ಲೂಕಿನ ಬಹುಭಾಗ ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಅದರಲ್ಲೂ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಗುಡ್ಡಗಾಡು ಪ್ರದೇಶ ಹೆಚ್ಚು. ತಾಲ್ಲೂಕಿನ ನೈಋತ್ಯ ಅಂಚಿನಲ್ಲಿರುವ ಶೆಂದೂರು (ರಾಸೂಬಾಯಿ) ಬೆಟ್ಟ ಅತಿ ಎತ್ತರದ್ದು(917ಮೀ). ಚಿಕ್ಕೋಡಿ ಪಟ್ಟಣದ ನೆರೆಯಲ್ಲಿರುವ ನಾಗರಾಳ (771ಮೀ) ಜೋಗಿಗುಡ್ಡ, ನಿರ್ವಾಣಪ್ಪನ ಗುಡ್ಡಗಳೂ ಪ್ರಸಿದ್ಧವಾಗಿವೆ. ವೇದಗಂಗಾ ಮತ್ತು ದೂಧಗಂಗಾ ತಾಲ್ಲೂಕಿನ ಮುಖ್ಯ ನದಿಗಳು. ಪಂಚಗಂಗಾ ನದಿ ಕೇವಲ 2ಕಿಮೀ ದೂರ ತಾಲ್ಲೂಕಿನ ಉತ್ತರದಂಚಿನಲ್ಲಿ ಗಡಿಯಾಗಿ ಹರಿಯುತ್ತದೆ. ಕೃಷ್ಣಾನದಿ ತಾಲ್ಲೂಕಿನ ಈಶಾನ್ಯದ ಅಂಚಿನಲ್ಲಿ ಸು.8ಕಿಮೀ ದೂರ ಹರಿಯುತ್ತದೆ. ಕೊಲ್ಹಾಪುರ ಜಿಲ್ಲೆಯಿಂದ ಹರಿದು ಬರುವ ದೂಧಗಂಗಾ ತಾಲ್ಲೂಕಿನ ವಾಯವ್ಯ ಭಾಗದ ಗಡಿಯಲ್ಲಿ ಹರಿದು ಅನಂತರ ಉತ್ತರ ಭಾಗದಲ್ಲಿ ಸ್ವಲ್ಪ ದೂರ ತಾಲ್ಲೂಕಿನ ಒಳಗೂ ಮತ್ತೆ ಉತ್ತರದ ಗಡಿಯಾಗಿಯೂ ಸಾಗಿ ಕೃಷ್ಣಾ ನದಿಯನ್ನು ಕೂಡುತ್ತದೆ. ವೇದಗಂಗಾ ಪಶ್ಚಿಮದಂಚಿನ ಘಟ್ಟಗಳಲ್ಲಿ ಹುಟ್ಟಿ ಮೊದಲು ಪೂರ್ವಕ್ಕೆ ಹರಿದು ತಾಲ್ಲೂಕಿನ ಮಧ್ಯಕ್ಕೆ ಬಂದು ಉತ್ತರಕ್ಕೆ ತಿರುಗಿ ದೂಧ ಗಂಗಾ ನದಿಯನ್ನು ಸೇರುತ್ತದೆ.

ತಾಲ್ಲೂಕಿನ ಭೂಭಾಗವೆಲ್ಲ ಮೂಲ ಟ್ರಾಪ್ ಕಲ್ಲಿನ ಪ್ರದೇಶ. ಅನೇಕ ಬೆಟ್ಟಗಳು ಜಂಬಿಟ್ಟಿಗೆ ಕಲ್ಲಿನವು. ಆದರೆ ವೇದಗಂಗಾ, ದೂಧಗಂಗಾ ಮತ್ತು ಕೃಷ್ಣಾನದಿಯ ಹರಿವಿನ ಪ್ರದೇಶದಲ್ಲಿ ಕರಿ ಎರೆಮಣ್ಣಿದೆ. ಈ ಪ್ರದೇಶದಲ್ಲಿ ಹಬ್ಬಿರುವ ಗುಡ್ಡಗಳ ಓರೆಯಲ್ಲಿ ಚಿನ್ನದ ಅದುರು ದೊರೆಯುತ್ತದೆ. ಆದರೆ ಅದುರಿನಲ್ಲಿ ಚಿನ್ನದ ಪರಿಮಾಣ ಕಡಿಮೆ. ಈ ಭಾಗದಲ್ಲಿ ಹರಿಯುವ ಕೃಷ್ಣಾನದಿಯ ಪ್ರವಾಹದ ಗೋಮೇದಿಕದ ಹರಳುಗಳು ದೊರೆಯುತ್ತವೆ. ಸರವು ಎಂಬಲ್ಲಿ ಅಭ್ರಕದ ನಿಕ್ಷೇಪಗಳಿವೆ.

ತಾಲ್ಲೂಕಿನ ಹವೆ ಸಾಮಾನ್ಯವಾಗಿ ಹಿತಕರ. ಪಶ್ಚಿಮದ ಬೆಟ್ಟಗಳಲ್ಲಿ ಹೆಚ್ಚು ಮಳೆ, ಪೂರ್ವಕ್ಕೆ ಸರಿದಂತೆಲ್ಲ ಮಳೆ ಕಡಿಮೆಯಾಗುತ್ತದೆ. ಚಿಕ್ಕೋಡಿಯ ವಾರ್ಷಿಕ ಸರಾಸರಿ ಮಳೆ ಸು.630ಮಿಮೀ. ಹೊಳೆಗಳ ದಂಡೆಯ ಮೇಲಿನ ಭೂಮಿ ಮತ್ತು ತಾಲ್ಲೂಕಿನ ಉತ್ತರಭಾಗದ ನೆಲ ಹೆಚ್ಚು ಫಲವತ್ತಾಗಿದೆ. ತಾಲ್ಲೂಕಿನ ಪಶ್ಚಿಮದಲ್ಲಿ ಕೆಂಪುಮಣ್ಣಿದೆ, ಉಳಿದದ್ದೆಲ್ಲ ಕಪ್ಪು ಭೂಮಿ, ಉಸುಬು ಕೂಡಿದ ಕೆಂಪುನೆಲ ಕಪ್ಪುನೆಲದಷ್ಟು ಫಲವತ್ತಾಗಿಲ್ಲ. ಹಳ್ಳ, ಕೆರೆ, ಬಾವಿಗಳ ನೀರನ್ನು ತೋಟಗಾರಿಕೆಗೆ ಉಪಯೋಗಿಸುತ್ತಾರೆ.

ತಾಲ್ಲೂಕಿನಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುವುದರಿಂದ ಬೆಲ್ಲ ಹಾಗೂ ಸಕ್ಕರೆ ಮಾಡುವ ಉದ್ಯಮಗಳು ಸಾಕಷ್ಟು ಪ್ರಗತಿ ಸಾಧಿಸಿವೆ. ತಾಮ್ರ ಹಾಗೂ ಹಿತ್ತಾಳೆಯ ಸಾಮಾನುಗಳ ಕೈಗಾರಿಕೆಯೂ ಉಂಟು. ಸೀರೆ, ಕುಪ್ಪಸ, ರುಮಾಲು, ಹಚ್ಚಡ ಮೊದಲಾದವುಗಳನ್ನು ನೇಯುವ ಉದ್ಯಮ ಬೆಳೆಸಲು ಅವಕಾಶಗಳಿವೆ. ಬಂಗಾರದ ಆಭರಣಗಳಲ್ಲಿ ರತ್ನಗಳನ್ನು ಕೂಡಿಸುವ ಉದ್ಯಮ ಜನಪ್ರಿಯವಾಗಿದೆ. ಹತ್ತಿ, ಬೆಲ್ಲ, ತಂಬಾಕು, ಮೆಣಸಿನಕಾಯಿ ಇವು ನಿಪ್ಪಾಣಿಯಿಂದ ಕೊಂಕಣ, ಕಲಾದಗಿ, ಪುಣೆ ಮೊದಲಾದ ಕಡೆಗಳಿಗೆ ನಿರ್ಯಾತವಾಗುತ್ತವೆ. ಏಲಕ್ಕಿ, ಮೆಣಸುಗಳು ಕೊಂಕಣದಿಂದ ಆಯಾತವಾಗುವ ವಸ್ತುಗಳಲ್ಲಿ ಪ್ರಮುಖವಾದವು.

ಹುಬ್ಬಳ್ಳಿ-ಪುಣೆ ರೈಲುಮಾರ್ಗ ತಾಲ್ಲೂಕಿನ ಪೂರ್ವದ ಅಂಚಿನಲ್ಲಿ ಸ್ವಲ್ಪ ದೂರ ಸಾಗುತ್ತವೆ. ಚಿಕ್ಕೋಡಿ ರೋಡ್ ರೈಲು ನಿಲ್ದಾಣ ಮತ್ತು ರಾಯಬಾಗ ರೈಲುನಿಲ್ದಾಣ ಈ ತಾಲ್ಲೂಕಿನ ಸಮೀಪ ಇವೆ. ಬೆಂಗಳೂರು-ಬೆಳಗಾಂವಿ-ಕೊಲ್ಹಾಪುರ ಮುಂಬಯಿ ರಾಷ್ಟ್ರೀಯ ಹೆದ್ದಾರಿ ತಾಲ್ಲೂಕಿನ ಪಶ್ಚಿಮದಲ್ಲಿ ನಿಪ್ಪಾಣಿಯ ಮೂಲಕ ಸಾಗುತ್ತದೆ. ಮುಧೋಳ-ಚಿಕ್ಕೋಡಿ ನಿಪ್ಪಾಣಿ-ರಾಧಾ ನಗರ ಹೆದ್ದಾರಿ ತಾಲ್ಲೂಕಿನ ಮಧ್ಯದಲ್ಲಿ ಅಡ್ಡವಾಗಿ ಸಾಗುತ್ತದೆ. ಚಿಕ್ಕೋಡಿಯಿಂದ ಹುಕ್ಕೇರಿ, ಕಾಗವಾಡ, ಕುರಂದವಾಡಗಳಿಗೂ ರಸ್ತೆಗಳಿವೆ. ಈ ತಾಲ್ಲೂಕಿನ ಕೆಲವು ಮುಖ್ಯ ಸ್ಥಳಗಳಿಗೆ ಚಿಕ್ಕೋಡಿಯಿಂದ 18ಕಿಮೀ ವಾಯವ್ಯಕ್ಕೆ ದೂಧಗಂಗಾ ನದಿ ಬಳಿ ಇರುವ ಭೋಜ ಗ್ರಾಮ ಐತಿಹಾಸಿಕ ಸ್ಥಳ. ಇಲ್ಲಿ ಸವದತ್ತಿಯ ರಟ್ಟರ ಒಂದು ಶಾಸನವಿದೆ. ಕಬ್ಬೂರು ಚಿಕ್ಕೋಡಿಯಿಂದ 19ಕಿಮೀ ಆಗ್ನೇಯದಲ್ಲಿ ಮುಧೋಳ ರಸ್ತೆಯಲ್ಲಿರುವ ಗ್ರಾಮ. ಇಲ್ಲಿ ಒಂದು ಪ್ರಾಚೀನ ಈಶ್ವರ ದೇವಾಲಯವೂ ಮುಗಲರ ಕಾಲದವೆನ್ನಲಾದ ಕೆಲವು ಗುಮ್ಮಟಗಳೂ ಇವೆ. ಚಿಕ್ಕೋಡಿಯಿಂದ 8ಕಿಮೀ ದಕ್ಷಿಣದಲ್ಲಿ ಹುಕ್ಕೇರಿ ರಸ್ತೆಯಲ್ಲಿರುವ ಕರೋಸಿಯಲ್ಲಿ ಘಂಟೆ ಬಸವಣ್ಣ ದೇವಾಲಯವಿದೆ. ಇಲ್ಲಿ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಚಿಕ್ಕೋಡಿಯ ಪಶ್ಚಿಮಕ್ಕೆ 24ಕಿಮೀ ದೂರದಲ್ಲಿರುವ ನಿಪ್ಪಾಣಿ (ನೋಡಿ) ದೊಡ್ಡ ವ್ಯಾಪಾರ ಕೇಂದ್ರ.

ಬೆಳಗಾಂವಿ-ಕೊಲ್ಹಾಪುರ ಹೆದ್ದಾರಿಯಲ್ಲಿ, ಚಿಕ್ಕೋಡಿಯ ವಾಯವ್ಯಕ್ಕೆ 35ಕಿಮೀ ಅಂತರದಲ್ಲಿ ದೂಧಗಂಗಾ ದಡದಲ್ಲಿರುವ ಕೊಂಗನೊಳ್ಳಿ ವ್ಯಾಪಾರ ಸ್ಥಳ. ಇಲ್ಲಿ ಪ್ರತಿ ಗುರುವಾರ ಸಂತೆ ನೆರೆದು ಅಕ್ಕಿ, ಸಕ್ಕರೆ, ಉಪ್ಪು, ಬಟ್ಟೆ, ಕಂಬಳಿಗಳ ವ್ಯಾಪಾರ ಸಾಗುತ್ತದೆ. 1877ಕ್ಕೆ ಮೊದಲು ಇಲ್ಲಿ ಕಾಗದವನ್ನು ಮಾಡುವ ಕಾರ್ಖಾನೆಗಳಿದ್ದುವು. ಇಲ್ಲಿ ಒಂದು ಹಾಳು ಕಿಲ್ಲೆ ಇದೆ. ಚಿಕ್ಕೋಡಿಯಿಂದ 16ಕಿಮೀ ಉತ್ತರಕ್ಕೆ ವೇದಗಂಗಾ ದಡದಲ್ಲಿರುವ ಸದಲಗ ದೊಡ್ಡ ಗ್ರಾಮ. ಕಲ್ಲುಸಕ್ಕರೆ ಮತ್ತು ನೇಯ್ಗೆ ಉದ್ಯಮಗಳಲ್ಲಿ ಪ್ರಸಿದ್ಧ. ನಿಪ್ಪಾಣಿಯಿಂದ ಸು.8ಕಿಮೀ ನೈಋತ್ಯಕ್ಕಿರುವ ರಾಸೂಬಾಯಿ ಬೆಟ್ಟದ ಮೇಲೆ ರಾಸೂಬಾಯಿ ದೇವಾಲಯವಿದೆ. ಚಿಕ್ಕೋಡಿಯಿಂದ ನೈಋತ್ಯಕ್ಕೆ 24ಕಿಮೀ ದೂರದಲ್ಲಿ ವಲ್ಲಭಗಡ (ಹರ್ಗಾಪುರ) ಬೆಟ್ಟವಿದೆ. ಇದರ ಮೇಲೆ ಸು.275' x 200' ವಿಸ್ತಾರದ ಸುಮಾರು ವೃತ್ತಾಕಾರದ ಕೋಟೆ ಇದೆ. ಈ ಕೋಟೆ ಕೆಲವು ಕಾಲ ಶಿವಾಜಿಯ ವಶದಲ್ಲಿತ್ತು. ಕುರ್ಲಿ, ಅಕೋಲ, ಲಾಟ, ಪತಂಕುಡಿ ಇತರ ಮುಖ್ಯ ಗ್ರಾಮಗಳು.

ಚಿಕ್ಕೋಡಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಬೆಳಗಾಂವಿಯಿಂದ ಉತ್ತರಕ್ಕೆ 72ಕಿಮೀ ದೂರದಲ್ಲಿದೆ. ಜನಸಂಖ್ಯೆ 32,820. ಪಟ್ಟಣ ಗುಡ್ಡಸಾಲುಗಳ ಮಧ್ಯದಲ್ಲಿದೆ.

ಕರಾವಳಿಯ ಹಿನ್ನಾಡಿನಲ್ಲಿರುವ ಕಾರಣ ವ್ಯಾಪಾರ ಸಾಗಾಣಿಕೆಯ ಕೇಂದ್ರವೆನಿಸಿದೆ. ಬತ್ತ, ಬೆಲ್ಲ, ತಂಬಾಕು, ಕಿರಾಣಿ ವ್ಯಾಪಾರ ವಿಪುಲ. ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳ ಕಾರ್ಖಾನೆಗಳಿವೆ. ಆಭರಣಗಳ ತಯಾರಿಕೆ, ನೇಯ್ಗೆ ಸಹ ಇವೆ. ಗುರುವಾರ ಸಂತೆ ಸೇರುತ್ತದೆ. ಊರಿನ ಪೂರ್ವಕ್ಕೆ 16ಕಿಮೀ ದೂರದಲ್ಲಿ ಚಿಕ್ಕೋಡಿ ರೋಡ್ ರೈಲ್ವೆ ನಿಲ್ದಾಣವಿದೆ; ಪಶ್ಚಿಮಕ್ಕೆ ಸು.24ಕಿಮೀ ದೂರದಲ್ಲಿ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಇದೆ. ಚಿಕ್ಕೋಡಿಯಿಂದ ಅಥಣಿ, ಮಿರಜ, ರಾಯಬಾಗ, ನಿಪ್ಪಾಣಿ, ಸಂಕೇಶ್ವರ, ಗೋಕಾಕ, ಮುಧೋಳ ಮುಂತಾದ ದೊಡ್ಡ ಪಟ್ಟಣಗಳಿಗೆ ಮಾರ್ಗಗಳೂ ಬಸ್ಸಿನ ಸೌಕರ್ಯವೂ ಇವೆ. ವ್ಯಾಪಾರೋದ್ಯಮಗಳ ಬೆಳವಣಿಗೆಯಿಂದಾಗಿ ಈ ಪಟ್ಟಣ ಇನ್ನೂ ಹೆಚ್ಚು ಅಭಿವೃದ್ಧಿ ಹೊಂದಲು ಸಾಧ್ಯವಿದೆ.

ಈ ಪಟ್ಟಣದ ಸುತ್ತಲೂ ಮಣ್ಣಿನ ಕೋಟೆಯ ಗೋಡೆಗಳಿವೆ. ಈ ಸ್ಥಳ ಮೊದಲು ಕೊಲ್ಹಾಪುರ ಸಂಸ್ಥಾನಕ್ಕೆ ಸೇರಿತ್ತು. 1680ರಲ್ಲಿ ಈ ಊರು ಸಾಕಷ್ಟು ಪ್ರಸಿದ್ಧಿ ಪಡೆದಿತ್ತೆಂದೂ ಅಕ್ಕಿ, ಬೇಳೆ, ಮೆಣಸಿನಕಾಯಿ, ತಂಬಾಕು, ಕಿರಾಣಿ ಸಾಮಾನುಗಳ ವ್ಯಾಪಾರ ವಿಶೇಷವಾಗಿ ನಡೆಯುತ್ತಿತ್ತೆಂದೂ ಬಟ್ಟೆಗಳೂ ಕಂಬಳಿಗಳೂ ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳೂ ಸಿದ್ಧವಾಗುತ್ತಿದ್ದುವೆಂದೂ ಒಬ್ಬ ಪ್ರವಾಸಿ ಬರೆದಿಟ್ಟ ದಾಖಲೆಗಳಿವೆ. 1720ರಲ್ಲಿ ಕ್ಯಾಪ್ಟನ್ ಮೂರ್ ಎಂಬವನು ಈ ಊರನ್ನು ಬಹಳ ಅಭಿಮಾನದಿಂದ ಹೊಗಳಿದ್ದಾನೆ. ಇಲ್ಲಿ ಗುರುವಾರ ಸಂತೆಯೊಂದು ಇದ್ದು ಒಂದು ಮುಖ್ಯ ವ್ಯಾಪಾರಕೇಂದ್ರವೆಂದೂ ಇಲ್ಲಿಯ ನೇಯ್ಗೆಯ ಕೆಲಸ ಗಮನಾರ್ಹವೆಂದೂ ಜನರು ಗೌರವಾಭಿಮಾನಿಗಳೆಂದೂ ಬಣ್ಣಿಸಿ, ಈ ಊರಿನ ಸುತ್ತೆಲ್ಲ ಕಣ್ಣಿಗೆ ಅಂದವಾಗಿ ನಾಲಗೆಗೆ ರುಚಿಯಾಗಿರುವ ದ್ರಾಕ್ಷಿಯ ತೋಟಗಳು ಸಾಕಷ್ಟಿವೆಯೆಂದೂ ಅವು ಬಹಳ ಪ್ರಸಿದ್ಧವಾದವೆಂದೂ ಆತ ಹೇಳಿದ್ದಾನೆ. (ಡಿ.ಕೆ.;ಎಸ್.ಜಿ.ಕೆ.)

**ಚಿಗಟೇರಿ** : ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಸಬೆಯಿಂದ 13ಕಿಮೀ ಪೂರ್ವಕ್ಕಿರುವ ಒಂದು ಗ್ರಾಮ. ಈ ಗ್ರಾಮ ಹಿಂದೆ ಚಿನ್ನ ತೊಳೆಯುವ ಕೆಲಸಕ್ಕೆ ಪ್ರಸಿದ್ಧವಾಗಿತ್ತು. ಇಲ್ಲಿರುವ ಜಾಜಿಕಲ್ ಗುಡ್ಡ ಎಂಬ ಚಿಕ್ಕ ಬೆಟ್ಟದ ದಕ್ಷಿಣ ಮತ್ತು ಆಗ್ನೇಯದ ಪಾರ್ಶ್ವಗಳಲ್ಲಿ ಇರುವ ಚಿನ್ನದಿಂದ ಕೂಡಿದ ಬೆಣಚು ಕಲ್ಲುಗಳೇ ಇಲ್ಲಿ ದೊರೆಯುವ ಚಿನ್ನಕ್ಕೆ ಮೂಲವೆಂದು ತಿಳಿಯುತ್ತದೆ. ಅದರಂತೆ ಚಿನ್ನದಿಂದ ಕೂಡಿದ ಚೆಂಗುಳು ಎಂಬಲ್ಲಿನ ಚಿಗಟೇರಿ ಮೇಲಣ ನಾಲಾ, ಚಿಗಟೇರಿ ಹಳ್ಳಿಯ ಪಶ್ಚಿಮದಲ್ಲಿ ವಾಯವ್ಯಕ್ಕೆ ಇರುವ ಒಂದು ಚಿಕ್ಕತೊರೆ, ಬೋವಿಹಳ್ಳಿನಾಲಾ ಎಂದು ಕರೆಯುವ ಒಂದು ತೊರೆ ಮತ್ತು ಜಾಜಿಕಲ್ ಗುಡ್ಡದ ಈಶಾನ್ಯದ ಇಳಿಜಾರಿನಲ್ಲಿ ಹರಿಯುವ ಕೊಂಗನಹೊಸೂರು ನಾಲೆ ಇವುಗಳಲ್ಲಿ ಜರುಗು ಚಿನ್ನಕ್ಕಾಗಿ ಶೋಧಿಸುವುದುಂಟು. ಇವುಗಳಲ್ಲಿ ಕೊಂಗನಹೊಸೂರು ನಾಲೆ ಹೆಚ್ಚು ಫಲದಾಯಕ, ಉಳಿದವು ಉತ್ತಮವೆಂಬುದು ಬ್ರೂಸ್‌ಫುಟ್ ಎಂಬ ಭೂವಿಜ್ಞಾನಿಯ ಅಭಿಪ್ರಾಯ. *

**ಚಿಟ್ ಮೇಳ** : ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ, ಹೆಚ್ಚಾಗಿ ಹಾಸನ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಒಂದು ಜನಪದ ವಾದ್ಯಮೇಳ. ಸಾಹಿತ್ಯ, ಸಂಗೀತ, ನೃತ್ಯ ಎಲ್ಲವೂ ಇರುವ ಯಕ್ಷಗಾನ ಬಯಲಾಟದಂಥ ದೊಡ್ಡ ಮೇಳದ ಸಂಗೀತ ಭಾಗವನ್ನು ವಾದ್ಯ ಹಾಗೂ ನೃತ್ಯಗಳಲ್ಲಿ ಮಾತ್ರ ಅನುಸರಿಸುವ ಚಿಕ್ಕಮೇಳ ಅಥವಾ ಚಿಟ್‌ಮೇಳ ಉತ್ತರ ಕರ್ನಾಟಕದ ಕರಡೆಮಜಲು ಮೇಳವನ್ನು ಹೋಲುತ್ತದೆ. ಕರಡೆಮಜಲಿಗಿಂತ ಇದು ಕಿರಿದು ಎಂಬ ಅರ್ಥದಲ್ಲಿ ಇಲ್ಲಿ ಚಿಟ್ ಶಬ್ದದ ಬಳಕೆಯಾಗಿದೆ.

ಆದರೆ ಅದಕ್ಕಿಂತ ಇದು ಚಿಕ್ಕದು ಎಂದು ಸಾಧಿಸಲು ಆಧಾರ ಸಾಲದು. ಏಕೆಂದರೆ ಕರಡೆಮಜಲಿಗೆ ಸಂವಾದಿಯಾಗಿ ಅಷ್ಟೇ ಮಂದಿ ಭಾಗವಹಿಸುವ ಮೇಳವಿದು. ಇದರಲ್ಲಿ ಯಕ್ಷಗಾನ ಗೀತೆಗಳನ್ನು ವಿಶೇಷವಾಗಿ ನುಡಿಸಲಾಗುತ್ತದೆ. ಕರಡೆ ವಾದ್ಯವನ್ನು ಸೊಂಟಕ್ಕೆ ಕಟ್ಟಿಕೊಂಡು ಇಬ್ಬರು ಅದನ್ನು ಬಡಿಯುತ್ತ ಹಾಡಿನ ಗತಿಗೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ನರ್ತಿಸುತ್ತಾರೆ. ಅವರ ನಡುವೆ ಒಬ್ಬ ಸಮೇಳವನ್ನೂ ಮತ್ತೊಬ್ಬ ಬಲ್ಲರಿಯನ್ನೂ ಬಡಿಯುತ್ತ ನರ್ತಿಸುತ್ತಾನೆ. ಶ್ರುತಿ ಮತ್ತು ನಾಗಸ್ವರ ವಾದ್ಯಗಳನ್ನು ಊದುವವರು ಬಯಲಾಟದ ಭಾಗವತರಂತೆ ಹಿಂಬದಿಯಲ್ಲಿ ನಿಂತು ನೃತ್ಯಕ್ಕೆ ಬೇಕಾದ ಗೀತೆಯನ್ನು ಒದಗಿಸುತ್ತಾರೆ.

ನಿಲುವಂಗಿ, ವೀರಗಾಸೆ, ನಡುಪಟ್ಟಿ ಹಾಗೂ ಬಿಳಿಯ ರುಮಾಲು ಚಿಟ್ ಮೇಳದ ಕಲಾವಿದರ ಸಾಮಾನ್ಯ ಉಡುಪು. ನಾಗಸ್ವರ ಊದುವವನೇ ಇಲ್ಲಿ ಸೂತ್ರಧಾರ. ಯಕ್ಷಗಾನದ ಎಲ್ಲ ಮಟ್ಟುಗಳನ್ನೂ ಈತ ನಾಗಸ್ವರದಲ್ಲಿ ತರುತ್ತಾನೆ. ಜನಪದ ಗೀತೆಗಳ ಮೂಲದ ಮಟ್ಟುಗಳನ್ನು ಹಿಡಿದು ವಾದ್ಯವನ್ನು ನುಡಿಸುವುದೂ ಉಂಟು. ಉಳಿದವರು ಇವನ ನಾದಕ್ಕನುಸಾರವಾಗಿ ನರ್ತಿಸುತ್ತಾರೆ. ಕರಡೆ, ಸಮೇಳಗಳನ್ನು ನಡುವಿಗೆ ಕಟ್ಟಿಕೊಂಡು ಅವನ್ನು ಕಿವಿಬಿರಿಯುವಂತೆ ಬಡಿಯುತ್ತ ಕುಣಿಯುವ ಚಳಕ ಆಶ್ಚರ್ಯಕರವಾದುದು. ಕುಣಿತದವರಲ್ಲಿ ಕುರುಬ ಜನಾಂಗದವರು ಹೆಚ್ಚಾಗಿ ಕಂಡುಬರುತ್ತಾರೆ. ಚಿಟ್‌ಮೇಳ ಸಾಮಾನ್ಯವಾಗಿ ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ನಡೆಯುತ್ತದೆ. ಗ್ರಾಮದೇವತೆಯ ಹಬ್ಬದಲ್ಲಿ ರಾತ್ರಿಯಿಡೀ ಜನರ ಆಸಕ್ತಿಯನ್ನು ಹಿಡಿದಿಡುವ ಆಕರ್ಷಣೆ ಈ ಮೇಳಕ್ಕಿದೆ. ಹಾಸನ ಜಿಲ್ಲೆಯ ಹಾರನಹಳ್ಳಿಯ ಮೇಳ ತುಂಬ ಜನಪ್ರಿಯವಾದದ್ದು. ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು ಮತ್ತಿಹಳ್ಳಿಯಲ್ಲೂ ಮೇಳದ ಒಂದು ತಂಡವಿದೆ. ಕರಡೆ ಮಜಲಿಗಿಂತಲೂ ವೇಷಕಟ್ಟಿ ಕುಣಿಯುವ ಬಯಲಾಟಕ್ಕಿಂತಲೂ ಚಿಟ್‌ಮೇಳ ಅತ್ಯಂತ ಆಕರ್ಷಕ. ಜನಪದ ವಾದ್ಯ ಸಂಗೀತದ ಹಿರಿಮೆಯನ್ನು ಸಾರುವ ವಿಶಿಷ್ಟ ಕಲೆ ಇದರಲ್ಲಿ ಉಳಿದುಬಂದಿದೆ. (ಜಿ.ಎಸ್‌ಪಿ.)

**ಚಿಟ್ಟಾಣಿ ರಾಮಚಂದ್ರ ಹೆಗಡೆ** : 1935-. ಪಡುವಲಪಾಯ ಯಕ್ಷಗಾನ ಬಡಗುತಿಟ್ಟಿನ ಪ್ರಸಿದ್ಧ ಕಲಾವಿದ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಚಿಟ್ಟಾಣಿಯಲ್ಲಿ 1935 ಸೆಪ್ಟೆಂಬರ್ 18ರಂದು ಜನಿಸಿದರು. ತಾಯಿ ಗಣಪಿ, ಜನಪದ ಹಾಡುಗಾರ್ತಿ. ತಂದೆ ಸುಬ್ರಾಯ ಹೆಗಡೆ, ಯಕ್ಷಗಾನ ಪ್ರೇಮಿ. ಇವರಿಬ್ಬರ ಕಲಾ ಅಂಶಗಳು ಇವರಲ್ಲಿ ರಕ್ತಗತವಾಗಿ ಬಂದವು. ಮಗ ನನ್ನು ವಿದ್ಯಾವಂತನನ್ನಾಗಿ ಮಾಡ ಬೇಕೆಂಬುದು ತಂದೆಯ ಬಯಕೆ. ಆದರೆ ಎರಡನೆಯ ತರಗತಿಗೆ ಬರುವಷ್ಟರಲ್ಲಿಯೇ ಶಾಲಾ ವಿದ್ಯಾಭ್ಯಾಸ ಕೊನೆ ಗೊಂಡಿತು. ಇವರಲ್ಲಿದ್ದ ಯಕ್ಷಗಾನದ ಬಗೆಗಿನ ಪ್ರೀತಿ - ಶ್ರದ್ಧೆಗಳನ್ನು ಗಮನಿಸಿದ ಸಂತೆ ಗುಳಿ ರಾಮಕೃಷ್ಣ ಭಟ್ಟರು ತರಬೇತಿ ನೀಡಲು ಆರಂಭಿ ಸಿದರು. ತರುವಾಯದ ದಿನ ಗಳಲ್ಲಿ ಇವರು ಚಿಟ್ಟಾಣಿಯವರು ಎಂದೇ ಯಕ್ಷಗಾನ ಲೋಕದಲ್ಲಿ ಖ್ಯಾತರಾದರು. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಅಗ್ನಿ ಪಾತ್ರದೊಂದಿಗೆ ಯಕ್ಷಗಾನರಂಗಕ್ಕೆ ಪದಾರ್ಪಣೆ ಮಾಡಿದ ಚಿಟ್ಟಾಣಿಯವರು ಭಸ್ಮಾಸುರ, ಕೀಚಕ, ಸುಧನ್ವ, ಕಾರ್ತವೀರ್ಯ, ದುರ್ಯೋಧನ ಪಾತ್ರಗಳಿಗೆ ಯಕ್ಷಗಾನ ರಂಗದಲ್ಲಿ ಹೊಸ ಆಯಾಮ ನೀಡಿದರು. ಮೂಡ್ಕಣಿ ನಾರಾಯಣ ಹೆಗಡೆ, ಕೆರೆಮನೆ ಶಿವರಾಮ ಹೆಗಡೆಯವರ ಶಿಷ್ಯತ್ವ ಹಾಗೂ ಪ್ರಭಾವದಲ್ಲಿ ಬೆಳೆದ ಇವರು ಅಭಿನಯ, ನೃತ್ಯ, ಧ್ವನಿ, ಏರಿಳಿತಗಳಲ್ಲಿ ಮೂಡಿಸಿದ ಛಾಪು ಅನನ್ಯವಾದುದು. ವೈವಿಧ್ಯಮಯ ಭಾವಾಭಿವ್ಯಕ್ತಿಗೆ ಕಣ್ಣು ಸಮರ್ಥವಾದ ಮಾಧ್ಯಮವಾಗಬಲ್ಲದು ಎಂಬುದನ್ನು ಇವರು ತೋರಿಸಿದ್ದಾರೆ.



ಶೃಂಗಾರರಸ ಪ್ರಧಾನವಾದ ಕೀಚಕ, ಭಸ್ಮಾಸುರ ಪಾತ್ರಗಳು ಇವರಿಗೆ ಇನ್ನಿಲ್ಲದ ಕೀರ್ತಿಯನ್ನು ತಂದುಕೊಟ್ಟವು. ಜನಮನದಲ್ಲಿ ರೂಢಿಗತವಾದ ಪಾತ್ರ ಪರಿಕಲ್ಪನೆಗಳಿಗೆ ಇವರು ಜೀವ ತುಂಬಿದರು. ಭಾಗವತರು ಪದ್ಯವನ್ನು ಹೇಳುವಾಗ ಅವರೊಂದಿಗೇ ದನಿಗೂಡಿಸಿ ಹಾಡುವ ಕ್ರಮವನ್ನೂ ಇವರು ರೂಢಿಸಿದರು. ಆರಂಭಿಕ ಘಟ್ಟದಲ್ಲಿ ಈ ಕ್ರಮವನ್ನು ಅಧಿಕ ಪ್ರಸಂಗವೆಂದೂ ಪಾತ್ರಕ್ಕೆ ಶೋಭೆ ನೀಡದೆಂದೂ ಟೀಕಿಸಲಾಯಿತು. ಆದರೆ ಪ್ರೇಕ್ಷಕವರ್ಗ ಈ ವಿಧಾನವನ್ನು ಮೆಚ್ಚಿಕೊಂಡಿತು. ಇತ್ತೀಚಿನ ವರ್ಷಗಳಲ್ಲಿ ಬಹುಪಾಲು ಕಲಾವಿದರು ಈ ಮಾದರಿಯನ್ನು ಅನುಸರಿಸುತ್ತಿದ್ದಾರೆ.

ಇವರ ಪಾತ್ರಾಭಿನಯದಲ್ಲಿ ಕಂಡುಬರುವುದು ಆಕರ್ಷಕ ಹೆಜ್ಜೆಗಾರಿಕೆ, ಲವಲವಿಕೆ, ಲಯಬದ್ಧ ಅಂಗಚಲನೆ ಹಾಗೂ ದಣಿವರಿಯದ ನರ್ತನ. ಕೀಚಕ ಪಾತ್ರದ 'ಇವಳಾವ ಲೋಕದ ಸತಿಯೋ?' ಎಂದು ಸೈರಂಧ್ರಿಯನ್ನು ನೋಡಿ ಇವರು ಅಭಿನಯಿಸುವ ಪರಿ, ಕಾರ್ತವೀರ್ಯಾರ್ಜುನದ 'ನೀಲ ಗಗನದೊಳು ಮೇಘಗಳು' ಎಂಬ ಪದ್ಯದ ಅಭಿನಯ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದೆ.

ಇವರು ಕಲಾವಿದರಾಗಿ ಮೂಡ್ಕಣಿ ಮೇಳ, ಮೂರೂರು ಮೇಳ, ಗುಂಡಬಾಳ ಮೇಳ, ಇಡಗುಂಜಿ ಮೇಳ, ಅಮೃತೇಶ್ವರಿ ಯಕ್ಷಗಾನ ಮಂಡಳಿ, ಬಚ್ಚಗಾರು ಮೇಳ, ಮಾರಿಕಾಂಬಾ ಯಕ್ಷಗಾನ ಮಂಡಳಿಗಳಲ್ಲಿ ಸೇವೆಸಲ್ಲಿಸಿದ್ದಾರೆ. ಕಲಾವಿದರಾಗಿ ಮಾತ್ರವಲ್ಲದೆ ಸ್ವತಃ ತಂಡಕಟ್ಟಿ ನಿರ್ವಹಿಸಿದ ಮಹಾಗಣಪತಿ ಯಕ್ಷಗಾನ ಮಂಡಳಿ (ಬಚ್ಚಗಾರು) ಇವರಿಗೆ ಖ್ಯಾತಿಯನ್ನು ತಂದುಕೊಟ್ಟಿತು. ಮೂಡ್ಕಣಿ ನಾರಾಯಣ ಹೆಗಡೆಯವರೊಂದಿಗೆ ಪಟ್ಟಾಭಿಷೇಕ ಪ್ರಸಂಗದ ಲಕ್ಷ್ಮಣ ಪಾತ್ರ, ಕೆರೆಮನೆ ಶಿವರಾಮ ಹೆಗಡೆಯವರೊಂದಿಗೆ ಭಸ್ಮಾಸುರ, ಕೀಚಕ, ಸುಧನ್ವರ ಪಾತ್ರ, ಕೆರೆಮನೆ ಗಜಾನನ ಹೆಗಡೆ ಅವರೊಂದಿಗೆ ಬಬ್ರುವಾಹನ, ಕೀಚಕ ಪಾತ್ರ ನಿರ್ವಹಣೆಗಳು ಯಕ್ಷಗಾನ ಪ್ರಿಯರಲ್ಲಿ ಮನೆಮಾತಾಗಿ ಉಳಿದಿವೆ. ಇವರ ಅಭಿನಯದಲ್ಲಿ ನೃತ್ಯ, ಅಂಗವಿನ್ಯಾಸ, ಹೆಜ್ಜೆಗಾರಿಕೆಗಳು ವಿಜೃಂಭಿಸುವಂತೆ ಮಾತುಗಾರಿಕೆ ಇರುವುದಿಲ್ಲವೆಂಬ ಟೀಕೆಯೂ ಇದೆ.

ಇವರು ಭಾರತದಾದ್ಯಂತ ಪ್ರದರ್ಶನಗಳನ್ನು ನೀಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ. ಕಲಾರಸಿಕರ ಕಣ್ಮಣಿ, ಅಭಿಜಾತ ಕಲಾವಿದ, ಸಾಟಿ ಇಲ್ಲದ ನರ್ತಕ, ಕಲಾತಪಸ್ವಿ– ಇವು ಕೆಲವು ಬಿರುದುಗಳು. ಇವರಿಗೆ 60 ವರ್ಷ ತುಂಬಿದ ಸಂದರ್ಭದಲ್ಲಿ ಕಲಾಭಿಮಾನಿಗಳು ಇವರಿಗೆ ರಸರಾಜ ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಿ ಗೌರವಿಸಿದ್ದಾರೆ (1996). ಕರ್ನಾಟಕ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ (1991), ಜಾನಪದ ಶ್ರೀ ಪ್ರಶಸ್ತಿ (2003) ನೀಡಿ ಗೌರವಿಸಿದೆ. 'ನಿಮ್ಮ ಚಿಟ್ಟಾಣಿ' ಎನ್ನುವುದು ಇವರ ಆತ್ಮಕಥೆ (2004).

1959ರಲ್ಲಿ ಸುಶೀಲಾ ಅವರನ್ನು ಇವರು ವಿವಾಹವಾದರು. ಇವರಿಗೆ ನಾಲ್ವರು ಮಕ್ಕಳು. ಇವರು ಸದ್ಯದಲ್ಲಿ ಹೊನ್ನಾವರದ ಗುಡ್ಡೇಕೇರಿಯಲ್ಲಿ ವಾಸವಾಗಿದ್ದಾರೆ. ಇವರ ಮಕ್ಕಳಾದ ಸುಬ್ರಹ್ಮಣ್ಯ ಚಿಟ್ಟಾಣಿ ಮತ್ತು ನರಸಿಂಹ ಚಿಟ್ಟಾಣಿಯವರು ಬಡಗುತಿಟ್ಟಿನ ಹೆಸರಾಂತ ಯುವ ಕಲಾವಿದರಾಗಿದ್ದಾರೆ. (ಎಸ್.ಬಿ.ಎಚ್.ಎ.)

**ಚಿಣ್ಣಪ್ಪ, ಕೆ.ಎಂ.** : ಪ್ರಸಿದ್ಧ ಅರಣ್ಯ ಸಂರಕ್ಷಣಾಧಿಕಾರಿ. ಹುಲಿ ಸಂರಕ್ಷಣೆಗಾಗಿ ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದವರು. ಇವರು ಅರಣ್ಯಾಧಿಕಾರಿಯಾಗಿ ವೃತ್ತಿ ಜೀವನ ಆರಂಭಿಸಿದರು (1965). ಅನಂತರ ವನ್ಯಜೀವಿ ವಿಭಾಗಕ್ಕೆ ಸೇರಿದರು (1967). ಕಾಡ್ಗಿಚ್ಚು ಮತ್ತು ಕಳ್ಳಬೇಟೆಗಳ ವಿರುದ್ಧ ಹೋರಾಡಲು ಯೋಜನೆಗಳನ್ನು ರೂಪಿಸಿ ವನ್ಯ ಜೀವಿಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ನಾಗರಹೊಳೆ ರಾಷ್ಟ್ರೀಯ ಉದ್ಯಾನವನವೆಂದು ಘೋಷಿತ ವಾದ ಬಳಿಕ (1974) ಇವರು ವಲಯ ಅರಣ್ಯಾಧಿಕಾರಿಯಾಗಿ ನೇಮಕಗೊಂಡರು.ಈ ಉದ್ಯಾನ ವನದ ಭಾಗವಾಗಿದ್ದ ಸುಂಕದಕಟ್ಟೆ ವಲಯವನ್ನು ಬೆಂಕಿ, ಬೇಟೆ, ಕಳ್ಳಸಾಗಣೆಗಳಿಂದ ಮುಕ್ತ ಗೊಳಿಸಿದರು. ಗೂಢಚಾರ ಜಾಲ ಬಲಪಡಿಸಿದ್ದು ಇವರ ಕಾಲದ ಸಾಧನೆ. ಸುಪ್ರಸಿದ್ಧ ಸಂಶೋಧಕ ಉಲ್ಲಾಸ ಕಾರಂತರೊಂದಿಗೆ ಸಂಶೋಧನ ಕಾರ್ಯದಲ್ಲೂ ನಿರತರಾದರು (1985). ಇವರ ಪರಿಶ್ರಮ ದಿಂದಾಗಿ ನಾಗರಹೊಳೆಯಲ್ಲಿ ವನ್ಯಜೀವಿಗಳ ಸಂಖ್ಯೆ ವೃದ್ಧಿಸಿತು ಮತ್ತು ಅದೊಂದು ಉತ್ತಮ ರಾಷ್ಟ್ರೀಯ ಉದ್ಯಾನವನವೆಂದು ಪರಿಗಣಿಸಲ್ಪಟ್ಟಿತು.



ಚಿಣ್ಣಪ್ಪನವರ ಸೇವೆಗಾಗಿ ಹಲವು ಪ್ರಶಸ್ತಿ ಗೌರವಗಳು ಬಂದಿವೆ. ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಚಿನ್ನದ ಪದಕ (1985), ಅಮೆರಿಕದ ನ್ಯೂಯಾರ್ಕ್ ವೈಲ್ಡ್ ಲೈಫ್ ಸೊಸೈಟಿಯ ಪ್ರತಿಷ್ಠಿತ ಸಂರಕ್ಷಣಾ ಪ್ರಶಸ್ತಿ (1988), ರಣತಂಬೂರ್ ಹುಲಿ ಪ್ರತಿಷ್ಠಾನದ ಟೈಗರ್ ಲಿಂಕ್ ಪ್ರಶಸ್ತಿ (1995) ಇವು ಮುಖ್ಯವಾದವು. ಎಸ್ಸೋ ತೈಲ ಸಂಸ್ಥೆ ಪ್ರತಿವರ್ಷ ಹುಲಿ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡ ವ್ಯಕ್ತಿಗೆ ನೀಡುವ ಪ್ರತಿಷ್ಠಿತ ಎಸ್ಸೋ ಹುಲಿ ಸಂರಕ್ಷಣಾ ಅಂತಾರಾಷ್ಟ್ರೀಯ ಪ್ರಶಸ್ತಿಯೂ ಇವರಿಗೆ ಲಭಿಸಿದೆ

(2000). ಹುಲಿ ಸಂರಕ್ಷಣೆಗಾಗಿ ಶ್ರಮಿಸುವ ಉದ್ದೇಶದಿಂದ ಸರ್ಕಾರಿ ಸೇವೆಯನ್ನು ತ್ಯಜಿಸಿದ (1992) ಇವರು ಅನಂತರ ವೈಲ್ಡ್ ಲೈಫ್ ಫಸ್ಟ್ ಎಂಬ ಸಂಸ್ಥೆಯ ಅಧ್ಯಕ್ಷರಾದರು. ಈ ಸಂಸ್ಥೆ ಅರಣ್ಯ ಸಿಬ್ಬಂದಿಗೆ ತರಬೇತಿ ನೀಡುತ್ತಿದೆ. ನ್ಯೂಯಾರ್ಕ್ ವೈಲ್ಡ್ ಲೈಫ್ ಕನ್ಸರ್ವೇಶನ್ ಸೊಸೈಟಿಯ ಸಹಕಾರದಿಂದ ಕರ್ನಾಟಕದ ಹುಲಿ ಸಂರಕ್ಷಣಾ ಯೋಜನೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ನ್ಯೂಯಾರ್ಕ್ ವೈಲ್ಡ್ ಲೈಫ್ ಕನ್ಸರ್ವೇಶನ್ ಸೊಸೈಟಿ ಮತ್ತು ಇಂಗ್ಲೆಂಡಿನ ಗ್ಲೋಬಲ್ ಟೈಗರ್ ಪೆಟ್ರೋಲ್‌ಗಳ ಸಹಾಯದಿಂದ ಇವರು ನಾಗರಹೊಳೆ ವನ್ಯಜೀವಿಗಳ ಸಂರಕ್ಷಣಾ ಯೋಜನೆಯನ್ನು ಕೈಗೊಂಡಿದ್ದಾರೆ. ಈ ಸಂಸ್ಥೆ ವನ್ಯಜೀವಿಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ತರಬೇತಿ ನೀಡುತ್ತಿದೆ. ವನ್ಯಜೀವಿಗಳನ್ನು ಜನರು ರಕ್ಷಿಸಿ, ಪ್ರೀತಿಸುವಂತೆ ಮಾಡುವ ಮನಃ ಪರಿವರ್ತನೆಯ ಕಾರ್ಯಕದಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. *

**ಚಿತ್ತಾಪುರ** : ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು; ಅದರ ಮುಖ್ಯ ಸ್ಥಳ. ತಾಲ್ಲೂಕನ್ನು ಗುಲ್ಬರ್ಗ, ಚಿಂಚೋಳಿ, ಸೇಡಂ, ಯಾದಗಿರಿ, ಜೇವರಗಿ ಮತ್ತು ಶಾಹಪುರ ತಾಲ್ಲೂಕುಗಳು ಸುತ್ತುವರಿದಿವೆ. ವಿಸ್ತೀರ್ಣ 1764.3ಚ.ಕಿಮೀ. ಶಾಹಬಾದ, ಗುಂಡಗುರ್ತಿ, ನಾಲವಾರ, ಕಾಳಗಿ ಮತ್ತು ಚಿತ್ತಾಪುರ ಇದರ ಹೋಬಳಿಗಳು. ಒಟ್ಟು 122 ಹಳ್ಳಿಗಳಿವೆ. ಜನಸಂಖ್ಯೆ 3,66,524.

ತಾಲ್ಲೂಕು ಸಮುದ್ರ ಮಟ್ಟದಿಂದ ಸರಾಸರಿ 448ಮೀ ಎತ್ತರವಿದ್ದು ಹೆಚ್ಚು ಭಾಗ ಕಪ್ಪು ಮಣ್ಣಿನಿಂದ ಕೂಡಿದೆ. ನಾಲವಾರದ ಸುತ್ತಲೂ ಕೆಂಪು ಮಿಶ್ರಿತ ಉಸುಬಿನ ಭೂಮಿಯಿದೆ. ಈ ತಾಲ್ಲೂಕಿನ ಉತ್ತರ ಭಾಗದಲ್ಲಿ ವಾಯವ್ಯದಿಂದ ಆಗ್ನೇಯಕ್ಕೆ ಬೆಣ್ಣೆತೊರೆ ನದಿ ಹರಿದು ಸೇಡಂ ತಾಲ್ಲೂಕಿನ ಮಳಖೇಡದ ಹತ್ತಿರ ಕಾಗಿಣಾ ನದಿಯನ್ನು ಸೇರುತ್ತದೆ. ಕಾಗಿಣಾ ನದಿ ಈ ತಾಲ್ಲೂಕಿನ ಮಧ್ಯದಲ್ಲಿ ಈಶಾನ್ಯದಿಂದ ನೈಋತ್ಯಕ್ಕೆ ಹರಿದು ಹುನಗುಂಟ ಹಳ್ಳಿಯ ಹತ್ತಿರ ಭೀಮಾನದಿಯನ್ನು ಸೇರುತ್ತದೆ. ಭೀಮಾನದಿ ಚಿತ್ತಾಪುರ ತಾಲ್ಲೂಕಿನ ಗಡಿಯಲ್ಲಿ ನೈಋತ್ಯದಿಂದ ದಕ್ಷಿಣಕ್ಕೆ ಹರಿದು ಜೇವರಗಿ ಮತ್ತು ಶಾಹಪುರ ತಾಲ್ಲೂಕುಗಳನ್ನು ಬೇರ್ಪಡಿಸಿದೆ. ಈ ನದಿಗಳಿಂದಲೂ ಕುಂಬಾರವಾಡಿಕೆರೆ, ಆಲಹಳ್ಳಿಕೆರೆ, ಮುಗಳ ನಾಗಾವಿಯ ಬಸವೇಶ್ವರ ಕೆರೆಗಳಿಂದಲೂ ಚಿಕ್ಕ ನೀರಾವರಿ ಯೋಜನೆಯ ಅಡಿಯಲ್ಲಿ ತೋಡಿಸಿದ ಬಾವಿಗಳಿಂದಲೂ ಈ ತಾಲ್ಲೂಕಿನ ವ್ಯವಸಾಯಕ್ಕೆ ನೀರೊದಗುತ್ತಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 808.46ಮಿಮೀ. ಜೂನ್‌ನಿಂದ-ಅಕ್ಟೋಬರ್‌ವರೆಗೆ ಮಳೆಗಾಲ. ಜೋಳ, ಬತ್ತ, ನೆಲಗಡಲೆ, ತೊಗರಿ, ಕಡಲೆ, ಗೋದಿ, ಮೆಣಸಿನಕಾಯಿ ಮತ್ತು ಕಾಯಿಪಲ್ಲೆಗಳನ್ನು ಬೆಳೆಯುತ್ತಾರೆ. (ಬಿ.)

ತಾಲ್ಲೂಕಿನ ಮುಖ್ಯ ಕಸಬು ಒಕ್ಕಲತನ. ನೇಯುವುದು ಒಂದು ಮುಖ್ಯ ಉದ್ಯಮವಾಗಿದೆ. ಶಾಹಬಾದಿನಲ್ಲಿ ಕಲ್ಲಿನ ಗಣಿಗಳಲ್ಲಿ ಹಾಸುಕಲ್ಲುಗಳನ್ನು ತೆಗೆಯುತ್ತಾರೆ. ಆ ಕಲ್ಲುಗಳಿಗೆ ನಯ ಮಾಡಿ ಹೊಳಪು ಕೊಡುವುದುಂಟು. ಈ ಕಲ್ಲಿನ ಕೆಲಸ ಮಾಡುವ ಒಡ್ಡರನ್ನೂ ಲಂಬಾಣಿಗಳನ್ನೂ ಈ ಪ್ರದೇಶದಲ್ಲಿ ಹೆಚ್ಚಾಗಿ ಕಾಣಬಹುದು. ಶಾಹಬಾದ್ ಮತ್ತು ವಾಡಿಗಳಲ್ಲಿ ಸಿಮೆಂಟ್ ಕಾರ್ಖಾನೆಗಳಿವೆ. ಶಾಹಬಾದಿನಲ್ಲಿ ಒಂದು ಎಂಜಿನಿಯರಿಂಗ್ ಕಾರ್ಖಾನೆ ಸಹ ಇದೆ. ಚಿತ್ತಾಪುರ ಪಟ್ಟಣದಲ್ಲೂ ವಿವಿಧ ಕಲ್ಲಿನ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವ ಸಣ್ಣ ಉದ್ಯಮಗಳಿವೆ. ಸಿಮೆಂಟಿನಿಂದ ಒಲೆ, ಕಿಟಕಿ, ವೃಂದಾವನ ಮುಂತಾದವುಗಳನ್ನು ತಯಾರು ಮಾಡುವ ಕೈಗಾರಿಕೆ ಬೆಳೆದಿದೆ. ಈ ತಾಲ್ಲೂಕಿನ ಶಿರೂರಿನಲ್ಲಿ ದನದ ಜಾತ್ರೆ ನಡೆಯುತ್ತದೆ.

ಶಾಹಬಾದ (ನೋಡಿ) ಈ ತಾಲ್ಲೂಕಿನ ಪ್ರಮುಖ ಕೈಗಾರಿಕಾ ಪಟ್ಟಣ. ವಾಡಿ ಮುಖ್ಯ ರೈಲ್ವೆ ಜಂಕ್ಷನ್. ಕಾಳಗಿ, ನಾಗಾವಿ, ಕನಕನಹಳ್ಳಿ, ಸನ್ನತಿ – ಇವು ಐತಿಹಾಸಿಕ ಸ್ಥಳಗಳು. ಚಿತ್ತಾಪುರದ ಹತ್ತಿರದಲ್ಲಿರುವ ಯರಗೋಳದಲ್ಲಿ ಟೀಕಾಚಾರ್ಯರು ಇದ್ದು ನ್ಯಾಯಸುಧಾವನ್ನು ರಚಿಸಿದರೆಂದು ಪ್ರತೀತಿ ಇದೆ. ಶಾಹಬಾದಿನಿಂದ 2ಕಿಮೀ ದೂರದಲ್ಲಿರುವ ಭಂಕೂರು ಹಿಂದೆ ಭೂಮಕುರು ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಇಲ್ಲಿ ಜೈನ ಮತ್ತು ಹಿಂದು ಶಿಲ್ಪಾವಶೇಷಗಳು ದೊರಕಿವೆ. ಬಲವಡಿಗಿಯಲ್ಲಿ ಎಲ್ಲಮ್ಮ, ಕೊಂಚೂರಿನಲ್ಲಿ ಪ್ರಾಣದೇವರು, ದಂಡಗುಂಡದಲ್ಲಿ ಬಸವೇಶ್ವರ, ರೇವಾಯಿಯಲ್ಲಿ ರೇವಣಸಿದ್ದೇಶ್ವರ, ಹೆಬ್ಬಾಳದಲ್ಲಿ ಅಣುವೀರಭದ್ರೇಶ್ವರ, ಸನ್ನತಿಯಲ್ಲಿ ಚಂದ್ರಲಾಪರಮೇಶ್ವರಿ, ಸೂಗೂರಿನಲ್ಲಿ ವೆಂಕಟೇಶ - ಈ ದೇವರ ಜಾತ್ರೆಗಳು ಪ್ರತಿವರ್ಷ ನಡೆಯುತ್ತವೆ.

ಚಿತ್ತಾಪುರ ತಾಲ್ಲೂಕಿನ ಮುಖ್ಯ ಸ್ಥಳ. ವಾಡಿ ಮತ್ತು ಹೈದರಾಬಾದ್ ರೈಲುಮಾರ್ಗದಲ್ಲಿದೆ. ಆಗ್ನೇಯಕ್ಕೆ ರಾಯಚೂರು ರೈಲು ಮಾರ್ಗಕ್ಕೂ ಪಶ್ಚಿಮಕ್ಕೆ ಮುಂಬಯಿ ರೈಲುಮಾರ್ಗಕ್ಕೂ ಕೂಡಿದೆ. ಜನಸಂಖ್ಯೆ 1,27,758. ಇಲ್ಲಿ ಶಾಹಬಾದ ಕಲ್ಲಿನ ಗಣಿಗಳಿದ್ದು ಕಲ್ಲುಚಪ್ಪಡಿಗಳ ತಯಾರಿಕೆಯುಂಟು. ಮುಸಲ್ಮಾನರ ಪವಿತ್ರ ಸ್ಥಳವಾದ ಚಿತಾ ಷಾ ವಲಿ ದರ್ಗಾ ಈ ಊರಿಗೆ ಸಮೀಪದಲ್ಲಿದೆ. ಪ್ರತಿವರ್ಷ ಚಿತಾ ಷಾ ವಲಿಯ ಜಾತ್ರೆ ನಡೆದು ಸು.10,000 ಮಂದಿ ಯಾತ್ರಿಗಳು ಇಲ್ಲಿ ಸೇರುತ್ತಾರೆ. ಚಿತ್ತಾಪುರದಲ್ಲಿ ಪೌರಸಭೆ ಆಡಳಿತವಿದೆ. ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ಪಟ್ಟಣಕ್ಕೆ ರೈಲುಮಾರ್ಗವಲ್ಲದೆ ಉತ್ತಮ ರಸ್ತೆಗಳಿದ್ದು ಜಿಲ್ಲೆಯ ಎಲ್ಲೆಡೆಗೆ ಸಂಪರ್ಕವಿದೆ. *

**ಚಿತ್ರಕಲೆ** : ಪ್ರಾಗಿತಿಹಾಸ ಕಾಲದಿಂದಲೇ ಆರಂಭವಾಗುವ ಕರ್ನಾಟಕದ ಚಿತ್ರಕಲೆಯ ಇತಿಹಾಸವನ್ನು ಈಗ ಉಳಿದುಬಂದಿರುವ ಕೃತಿಗಳ ಆಧಾರದ ಮೇಲೆ ಪ್ರಾಗೈತಿಹಾಸಿಕ, ಅಭಿಜಾತ, ಮಧ್ಯಕಾಲೀನ ಮತ್ತು ಇಸ್ಲಾಮೀ ಶೈಲಿಗಳನ್ನು ಒಳಗೊಳ್ಳುವಂತೆ ಪ್ರಾಚೀನ ಕಾಲದ ಒಂದು ಘಟ್ಟ. ಪಾಶ್ಚಾತ್ಯ ಪ್ರಭಾವದಿಂದ ರೂಪುಗೊಂಡ ಆಧುನಿಕಕಾಲದ ಒಂದು ಘಟ್ಟ – ಹೀಗೆ ಎರಡು ಮುಖ್ಯ ಘಟ್ಟಗಳಾಗಿ ವಿಂಗಡಿಸಬಹುದು. ಈ ಘಟ್ಟಗಳು ಹಾಗೂ ಚಿತ್ರಕಲೆಗೆ ಸಂಬಂಧಿಸಿದಂತೆ ಶಿಕ್ಷಣ, ಪ್ರೋತ್ಸಾಹ ಈ ವಿಷಯಗಳನ್ನು ಪ್ರಸಕ್ತ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

**ಪ್ರಾಚೀನ** : ಈಗ ಉಳಿದು ಬಂದಿರುವ ಮಟ್ಟಿಗೆ ಕರ್ನಾಟಕದ ಉತ್ತರಭಾಗದ ಹಲವು ಕಡೆ ದೊರೆತಿರುವ ಗವಿಚಿತ್ರಗಳು ಅತ್ಯಂತ ಪ್ರಾಚೀನವೆಂದು ಹೇಳಬಹುದು. ಇವು ಬಹುಶಃ ನೂತನ ಶಿಲಾಯುಗದ ಕಾಲಕ್ಕೆ (ಕ್ರಿ.ಪೂ.ಸು.2500-1000) ಸೇರಿದುವೆಂದು ಭಾವಿಸಲಾಗಿದೆ. ನಿಂತಲ್ಲಿ ನಿಲ್ಲದೆ ಅಲೆಮಾರಿಗಳಾಗಿ ತಿರುಗುತ್ತಿದ್ದ ಹಳೆಯ ಶಿಲಾಯುಗದ ಜನ ಕಾಲಕ್ರಮೇಣ ಗುಡ್ಡಗಳ ಆಸರೆಯಲ್ಲಿ ಗವಿಗಳಲ್ಲೋ ಚಾಚುಬಂಡೆಗಳ ಕೆಳಗೋ ವಾಸಿಸಲಾರಂಭಿಸಿ ಗುಡಿಸಲು ಕಟ್ಟಿಕೊಂಡು ಮಡಕೆಗಳನ್ನು ಮಾಡಿಕೊಳ್ಳಲಾರಂಭಿಸಿದಾಗ, ಜೀವನ ವಿಧಾನವನ್ನು ಸುಧಾರಿಸಿಕೊಂಡು ಒಂದು ಕಡೆ ನೆಲೆ ನಿಲ್ಲಲಾರಂಭಿಸಿದಾಗ, ಕಲೆಯ ಕಡೆ ಗಮನ ಹರಿದಿರಬಹುದು. ಬಂಡೆಗಲ್ಲುಗಳ ಮೇಲೆ ಮುಖ್ಯವಾಗಿ ಚಾಚು ಬಂಡೆಗಳ ಆಸರೆಯ ಕೆಳಗೆ ಕೆಮ್ಮಣ್ಣಿನಲ್ಲಿ (ಅಪರೂಪವಾಗಿ ಬಿಳಿಬಣ್ಣದಿಂದ) ರೇಖಾಕಾರದಲ್ಲಿ ಗೂಳಿ, ಜಿಂಕೆ, ಮಾನವರ ಚಿತ್ರಗಳನ್ನು ಬಿಡಿಸಿದ ಚಿತ್ರಗಳು ಬಳ್ಳಾರಿ, ಬಿಜಾಪುರ, ರಾಯಚೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ಹೇರಳವಾಗಿ ಕಂಡುಬಂದಿವೆ. ಮಾನವರ, ಪ್ರಾಣಿಗಳ ಆಕಾರಗಳನ್ನು ಮಾತ್ರ, ಹಲವು ವೇಳೆ ಸಾಂಕೇತಿಕವಾಗಿ, ಬಣ್ಣದ ಗೀರಿನಲ್ಲಿ ತೋರಿಸಿ ಕಣ್ಣು ಮೂಗುಗಳಾವುದನ್ನೂ ಬಿಡಿಸದೆ ಒಳಗೆಲ್ಲ ಚಪ್ಪಟೆಯಾಗಿ ಬಣ್ಣ ತುಂಬಿಸುವುದೇ ಇವುಗಳಲ್ಲಿನ ಪದ್ಧತಿ. ಆದರೂ ಕೇವಲ ಗೆರೆಗಳಿಂದಲೇ ಮಾನವರ, ಪ್ರಾಣಿಗಳ ಸಹಜವಾದ ಆಕೃತಿಗಳನ್ನು ರೂಪಿಸುವ ಕಲೆ ಈ ಕಾಲದ ಜನರಿಗೆ ಸಿದ್ಧಿಸಿದಂತೆ ತೋರುತ್ತದೆ. ತೆಕ್ಕಲಕೋಟೆ, ಸಂಗನಕಲ್ಲು,

ಗೊಂಬಿಗುಡ್ಡ, ತಾವರಗೇರಿ, ವಾಲಿದಿಬ್ಬ, ಸಿಡಿಲುಗುಂಡಿ ಮುಂತಾದ ಕಡೆಗಳಲ್ಲೆಲ್ಲ ಈಗಲೂ ಉಳಿದುಬಂದಿರುವ ಚಿತ್ರಗಳು ಆದಿಮಾನವನ ಕಲಾಸಕ್ತಿಯ ಸ್ವರೂಪವನ್ನು ವಿಶದಪಡಿಸುತ್ತವೆ. ಇವುಗಳಲ್ಲಿ ಹೆಚ್ಚಾಗಿ ಕೈಕೈಹಿಡಿದು ಸಾಲುಸಾಲಾಗಿ ನಿಂತ ಮಾನವಾಕೃತಿಗಳು ನೃತ್ಯ ಅಥವಾ ಬೇಟೆಯನ್ನು ಸೂಚಿಸುತ್ತವೆ. ಗೂಳಿ, ಹಸು, ಜಿಂಕೆ ಮೊದಲಾದ ಪ್ರಾಣಿಗಳ ಆಕೃತಿಗಳೂ ಉಂಟು. ಇವನ್ನು ಬಂಡೆಗಳ ಮೇಲೆ ತಮಗೆ ತೋಚಿದಾಗ ತೋಚಿದಂತೆ ಚಿತ್ರಿಸಿದ್ದು ಈ ಬಂಡೆಗಳು ಚಿತ್ರಗಳಿಂದ ತುಂಬಿ ಹೋಗಿರುವುದುಂಟು. ಆದರೆ ಅದರಲ್ಲಿ ಒಂದು ಕ್ರಮವಿರುವುದಿಲ್ಲ.



ಸುರಪುರ ಚಿತ್ರಕಲೆ

ಈ ಸರಳವಾದ ಚಿತ್ರಕಲೆ ನೂತನ ಶಿಲಾಯುಗದಿಂದ ಮುಂದುವರೆದು ಬೃಹತ್‌ಶಿಲಾಯುಗದ ಕಾಲದಲ್ಲಿಯೂ ಬೆಳೆದುಬಂದಿದೆ. ಬೃಹತ್ ಶಿಲಾಸಮಾಧಿಗಳ ಸಮೀಪದಲ್ಲಿಯೇ ಇರುವ ಚಾಚುಬಂಡೆಗಳ ಮೇಲಿನ ಚಿತ್ರಗಳಲ್ಲಿ ಕುದುರೆಸವಾರಿ ಮಾಡುತ್ತಿರುವ ಬೇಟೆಗಾರರು ಈಟಿ, ಕತ್ತಿ, ಬಿಲ್ಲುಬಾಣಗಳನ್ನು ಹಿಡಿದಿರುವುದನ್ನು ನೋಡಬಹುದು. ಕೈಕೈಹಿಡಿದು ಬೇಟೆಗಳನ್ನಡ್ಡಗಟ್ಟುವುದು, ಕುದುರೆಯ ಮೇಲೆ ಹುಲಿಬೇಟೆಯಾಡುವುದು ಮುಂತಾದ ಚಿತ್ರಗಳು ಹಿರೇಬೆನಕಲ್ಲಿನ ಚಾಚುಬಂಡೆಗಳಲ್ಲಿ ತುಂಬಿವೆ. ಬಲಿಚಕ್ರ ಎಂಬಲ್ಲಿಯೂ ಕುದುರೆಸವಾರನ ಚಿತ್ರವಿದೆ. ಇಲ್ಲೆಲ್ಲ ರೇಖೆಗಳ ನವಿರಿನಿಂದ ಸರಳತೆಯಿಂದ ಚಿತ್ರದ ಅಭಿವ್ಯಕ್ತಿ ಸ್ಪಷ್ಟಗೊಂಡಿದೆ. ತಮ್ಮ ಪರಿಮಿತಿಯಲ್ಲಿಯೇ ಈ ಚಿತ್ರಗಳು ಸತ್ತ್ವಯುಕ್ತವಾಗಿವೆ. ಬೇಸರ ಕಳೆಯಲೋ ತಾವು ಕಂಡ, ಮನದಲ್ಲಿ ನೆಲೆಗೊಂಡ ಘಟನೆಗಳನ್ನು ಮೂಡಿಸಲೋ ಮಾಂತ್ರಿಕ ಉದ್ದೇಶದಿಂದಲೋ ಇಂಥ ಚಿತ್ರಗಳನ್ನು ಅವರು ಬರೆದಿರಬಹುದು.

ಆ ಕಾಲದ ಜನತೆಗೆ ಚಿತ್ರಕಲೆಯಲ್ಲಿ ಆಸಕ್ತಿ ಇತ್ತು ಎನ್ನುವುದು ಆಗ ತಯಾರಾದ ಮಣ್ಣಿನ ಪಾತ್ರೆಗಳಿಂದ ಸ್ಪಷ್ಟವಾಗುತ್ತದೆ. ತಾಮ್ರಶಿಲಾಯುಗದ ಕೆಲವು ಮಾಸಲು ಕೆಂಪುವರ್ಣದ ಪಾತ್ರೆಗಳ ಮೇಲ್ಭಾಗದಲ್ಲಿ ಕಪ್ಪು ಅಥವಾ ನೇರಳೆ ವರ್ಣದ ಚಿತ್ರಗಳಿರುತ್ತವೆ. ದಪ್ಪ ರೇಖೆಗಳಿಂದ ಹಲವು ಬಗೆಯ ವಿನ್ಯಾಸಗಳನ್ನು ಮೂಡಿಸುವುದು ಇಲ್ಲಿಯ ಪದ್ಧತಿ. ಆ ಕಾಲದ ಇಂಥ ಚಿತ್ರಿತ ಮಡಕೆಗಳು ಹೆಚ್ಚಾಗಿ ಸಿಗುವುದು ಕರ್ನಾಟಕದ ಉತ್ತರ ಭಾಗದಲ್ಲಿಯೇ. ಬೃಹತ್ ಶಿಲಾಯುಗದ ಜನ ತಮ್ಮ ಮಡಕೆಗಳ ಮೇಲೆ ಚಿತ್ರ ರಚಿಸದಿದ್ದರೂ ಬಣ್ಣಕ್ಕೆ ಮಾರುಹೋಗಿದ್ದರು. ಅತ್ಯಂತ ಹೊಳಪಿನ ಕಪ್ಪು ಮತ್ತು ಕೆಂಪು ಮಡಕೆಗಳನ್ನವರು ತಯಾರಿಸಿದ್ದಾರೆ. ಆದರೆ ಚರಿತ್ರೆಯ ಆರಂಭಕಾಲಕ್ಕೆ ಬಂದರೆ ಇಂಥ ಹೊಳಪಿನ ಮಡಕೆಗಳ ಮೇಲೆ ಬಿಳಿಯ ಬಣ್ಣದಿಂದ ರೇಖಾಕೃತಿಗಳನ್ನು ಅಡ್ಡಾದಿಡ್ಡಿಯಾಗಿ ಅಲೆಅಲೆಯಾಗಿ, ದಪ್ಪ ಸಣ್ಣ ಚುಕ್ಕೆಗಳಾಗಿ ಹೂವಿನಂತೆ ಹತ್ತು ಹಲವು ಬಗೆಯಾಗಿ ಚಿತ್ರಿಸಿ ಕೆಂಪಿನ ಲೇಪನ ಕೊಟ್ಟಿರುವುದು ಹೆಚ್ಚು. ಇಂಥ ಚಿತ್ರಿತ ಮಡಕೆಗಳು ಬ್ರಹ್ಮಗಿರಿ, ಚಂದ್ರವಳ್ಳಿ, ಹೆಮ್ಮಿಗೆ, ಹೆರಕಲ್ಲು, ವಡಗಾಂವ ಮಾಧವಪುರ, ಮಸ್ಕಿ, ಬೆಂಗಳೂರು ಮುಂತಾದ ಹತ್ತಾರು ನಿವೇಶನಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಇವುಗಳಲ್ಲಿ ಕಂಡುಬರುವ ಸಮಾನಾಂತರ ರೇಖೆಗಳೂ ಗವಿಗೋಡೆಗಳ ಮೇಲಿನ ಕೆಮ್ಮಣ್ಣಿನ ಬಣ್ಣದ ಚಿತ್ರಗಳೂ ಬಹುಶಃ ಜನಪದ ಸಂಪ್ರದಾಯದಲ್ಲಿ ಉಳಿದು ಬೆಳೆದು ಬಂದು ಜನ ತಮ್ಮ ಮನೆಗಳ ಗೋಡೆಗಳ ಮೇಲೆ ಕೆಮ್ಮಣ್ಣಿನ ಕಾರಣೆ ಮಾಡುವುದು, ಚಿತ್ರಗಳನ್ನು ಮೂಡಿಸುವುದು ಮತ್ತು ರಂಗವಲ್ಲಿಗಳನ್ನು ಹಾಕುವುದು ಇವುಗಳಲ್ಲಿ ಕಾಣಿಸಿಕೊಂಡಿರುವಂತೆ ತೋರುತ್ತದೆ. ಚಿತ್ರಕಲೆ ಕರ್ನಾಟಕದಲ್ಲಿ ಮುಂದೆ ಹೇಗೆ ಬೆಳವಣಿಗೆ ಹೊಂದಿತು ಎಂಬುದನ್ನು ಸೂಚಿಸುವ ಚಿತ್ರಗಳು ಸು.6ನೆಯ ಶತಮಾನದ ವರೆಗೂ ಕಂಡುಬರುವುದಿಲ್ಲ. ಆದರೂ ಚಿತ್ರಕಲೆಯನ್ನು ಅತ್ಯಂತ ಪ್ರೌಢಾವಸ್ಥೆಗೆ ತಂದಿದ್ದುದು ಅಜಂತದ ಗುಹೆಗಳಲ್ಲಿ ಕಂಡುಬರುತ್ತದೆ. ಕ್ರಿ.ಪೂ.2ನೆಯ ಶತಮಾನದಿಂದಲೇ ಆರಂಭವಾಗಿ ಏಳು ಶತಮಾನಗಳ ಕಾಲ ಒಂದೇ ಸಮನೆ ಬೆಳೆದು ಬಂದ ಇಲ್ಲಿನ ಭಿತ್ತಿಚಿತ್ರಗಳಲ್ಲಿ ಕರ್ನಾಟಕದ ಚಿತ್ರಗಾರರ ಪಾತ್ರವೆಷ್ಟೆಂಬುದು ತಿಳಿಯದು. ಆದರೂ ಬಾದಾಮಿಯ ಚಳುಕ್ಯರ ಕಾಲದಲ್ಲಿ ಅವರು ಕೊಟ್ಟ ಪ್ರೋತ್ಸಾಹದಿಂದ ಕೆಲವು ಭಿತ್ತಿಚಿತ್ರಗಳಾದರೂ ನಿರ್ಮಾಣವಾಗಿರಬೇಕು. ಒಂದನೆಯ ಗುಹೆಯಲ್ಲಿ ಗೋಡೆಯ ಮೇಲೆ ಇರುವ ರಾಜನೊಬ್ಬನ ಒಡ್ಡೋಲಗದ ಚಿತ್ರ ಇಮ್ಮಡಿ ಪುಲಕೇಶಿಯದೆಂದು ಭಾವಿಸಲಾಗಿದೆ. ಆದರೂ ಕರ್ನಾಟಕದಲ್ಲಿ ಇಂಥ ಚಿತ್ರಗಳು 6ನೆಯ ಶತಮಾನದವರೆಗೆ ಕಂಡುಬಂದಿಲ್ಲ. ಬಾದಾಮಿಯಲ್ಲಿ ಮೂರನೆಯ ಮುಂದಿನ ಗುಹೆಯ ಒಳಭಾಗದಲ್ಲಿ ಮಾತ್ರ ಕೆಲವು ಭಿತ್ತಿ ಚಿತ್ರಗಳ ಕುರುಹು ಉಳಿದು ಬಂದಿದೆ. 6ನೆಯ ಶತಮಾನದ ಕಡೆಯ ಭಾಗಕ್ಕೆ ಸೇರಿದ ಈ ಚಿತ್ರಗಳು ಅಜಂತದ ಭಿತ್ತಿಚಿತ್ರಗಳ ಪದ್ಧತಿಗೆ ಸೇರಿದವು. ಆದರೆ ಅಜಂತದ ಪರಿಣತಿ-ಹಿರಿಮೆ ಇವುಗಳಲ್ಲಿ ಇಲ್ಲವೆನ್ನಬಹುದು. ಇಲ್ಲಿನ ಚಿತ್ರಗಳು ಬಹುಮಟ್ಟಿಗೆ ನಶಿಸಿಹೋಗಿದ್ದರೂ ಉಳಿದಷ್ಟೇ ಚಿತ್ರಗಳು ಅಂದಿನ ಸತ್ತ್ವಯುತ ಶೈಲಿಯನ್ನು ಮನವರಿಕೆ ಮಾಡಿಕೊಡುತ್ತವೆ. ರೇಖೆಗಳನ್ನೆಳೆದಿರುವಲ್ಲಿ, ಭಾವಗಳನ್ನು ಪರಿಣಾಮಕಾರಿಯಾಗಿ ಹೊಮ್ಮಿಸುವಲ್ಲಿ ಅಜಂತ ಸಂಪ್ರದಾಯದ ಕೈವಾಡ ಸ್ಪಷ್ಟವಿದೆ. ರಾಜನೊಬ್ಬನ ಒಡ್ಡೋಲಗ, ಅವನ ಬಳಿಯೇ ಕುಳಿತ ಅರಸಿ, ಒಂದು ಕಡೆ ನರ್ತಕಿಯರು, ವಾದ್ಯಕಾರರು, ಸುತ್ತಲೂ ಪರಿವಾರದವರು, ದೂರದಲ್ಲಿ ಆಸ್ಥಾನಿಕರು ಇರುವ ಒಂದು ಚಿತ್ರ ಇದೆ. ಅಲ್ಲಲ್ಲಿ ಮುಕ್ಕಾಗಿದ್ದರೂ ಅದರ ಸಂಯೋಜನೆ ಆಕರ್ಷಕವಾದ್ದಾಗಿದೆ. ಇನ್ನೊಂದು ಚಿತ್ರವೂ ಇಂಥದೇ ಒಂದು ಒಡ್ಡೋಲಗದ ಚಿತ್ರ. ಇಲ್ಲಿ ಸುಖಾಸೀನರಾಗಿ ಕುಳಿತ ರಾಜರಾಣಿಯರು ಕೀರ್ತಿವರ್ಮ ಮತ್ತು ಅವನ ರಾಣಿಯರದೆಂದು ಊಹಿಸಿದ್ದಾರೆ. ರಾಣಿಯ ಮುಖಭಾವ, ಕುಳಿತ ಭಂಗಿ, ಪರಿವಾರದವರ ಗಂಭೀರ ಮುಖಮುದ್ರೆ, ನರ್ತಕರ ಮೋಹಕ ಭಂಗಿಗಳು ಉಳಿದಿರುವಷ್ಟರಲ್ಲಿಯೇ ಅವು ನುರಿತ ಚಿತ್ರಕಾರನ ಕೃತಿ ಎಂಬುದನ್ನು ಸಿದ್ಧಮಾಡಿಕೊಡುತ್ತವೆ. ಇವುಗಳಲ್ಲದೆ ಆಕಾಶದಲ್ಲಿ ತೇಲುತ್ತಿರುವ ಗಂಧರ್ವಮಿಥುನಗಳೂ ಇಲ್ಲಿ ಉಂಟು. ಬಾದಾಮಿಯ ಚಿತ್ರಗಳು ಪೂರ್ಣವಾಗಿ ಉಳಿದು ಬಂದಿದ್ದಲ್ಲಿ ಆರನೆಯ ಶತಮಾನದ ಭಿತ್ತಿಚಿತ್ರಗಳ ಹೆಮ್ಮೆಯ ಮಾದರಿ ಎನ್ನಿಸಿಕೊಳ್ಳುತ್ತಿದ್ದುವು.

ಕರ್ನಾಟಕದ ಚಿತ್ರಕಲೆಯ ಪರಂಪರೆಯಲ್ಲಿ ಇದೊಂದು ನಡುಗಡ್ಡೆ. ಮತ್ತೆ ಕೆಲವು ಶತಮಾನಗಳ ಕಾಲ ಚಿತ್ರಕಲೆಯ ಸ್ವರೂಪವನ್ನರಿಯಲು ಉದಾಹರಣೆಗಳಿಲ್ಲ. ಚಿತ್ರಕಲೆ ಇರಲಿಲ್ಲವೆಂದಲ್ಲ. ಸಾಹಿತ್ಯದಲ್ಲಿ, ಶಾಸನಗಳಲ್ಲಿ ಚಿತ್ರಗಳ, ಚಿತ್ರಕಾರರ ವರ್ಣನೆಗಳಿವೆ. ಗಂಗರ ತಾಮ್ರಶಾಸನವೊಂದನ್ನು ಕಂಡರಿಸಿದ ವಿಶ್ವಕರ್ಮ ತಾನು ಚಿತ್ರಕಲಾಭಿಜ್ಞೆಯನಾಗಿದ್ದುದಾಗಿ ಹೆಮ್ಮೆಯಿಂದ

ಹೇಳಿಕೊಂಡಿದ್ದಾನೆ. ಹೊಯ್ಸಳ ರೂವಾರಿಯೊಬ್ಬ ಚಿತ್ರಕರ್ಮ ಪತ್ರಕರ್ಮ ದಾರುಕರ್ಮ ಶಿಲಾಕರ್ಮ ಮೊದಲಾದ ಹಲವು ಕಲೆಗಳಲ್ಲಿ ನಿಷ್ಣಾತನೆಂದು ಕರೆದುಕೊಂಡಿದ್ದಾನೆ. ದೇವಾಲಯದಲ್ಲಿಟ್ಟಿದ್ದ ಶ್ರೀಮತಿಯ ಚಿತ್ರವನ್ನು ವಜ್ರಜಂಘ ನೋಡಿ ಹಲುಬುವ ಸನ್ನಿವೇಶವನ್ನು ಪಂಪ ವರ್ಣಿಸಿದ್ದಾನೆ. ಆದರೆ ಆ ಕಾಲದ ದೇವಾಲಯಗಳ ಮತ್ತು ಬಸದಿಗಳ ಗೋಡೆಗಳ ಮೇಲೆ ವರ್ಣಚಿತ್ರಗಳನ್ನು ರಚಿಸುವುದು ಬಹು ಅಪರೂಪವಾಗಿರಬೇಕು.

ಮೈಸೂರಿನ ಸಾಂಪ್ರದಾಯಿಕ ಚಿತ್ರಕಲೆ

ಮರದ, ಮಣ್ಣಿನ ಅಥವಾ ಇಟ್ಟಿಗೆಯ ಕಟ್ಟಡಗಳನ್ನು ಕಟ್ಟಿ ಆ ಕಟ್ಟಡಗಳ ಹಿಂಭಾಗದ ಗೋಡೆಗೆ ಸೇರಿದಂತೆ ಅರೆಯುಬ್ಬಿನಲ್ಲಿ ಮೃಣ್ಮೂರ್ತಿಗಳನ್ನು ಬಿಡಿಸಿ ಬಣ್ಣಹಾಕುವ ಪದ್ಧತಿ ಹಲವು ಕಡೆ, ಮುಖ್ಯವಾಗಿ ಮಲೆನಾಡು ಕರಾವಳಿ ಪ್ರದೇಶಗಳಲ್ಲಿ ಉಳಿದು ಬಂದಿವೆ. ಈ ಪದ್ಧತಿ ಬಹು ಹಿಂದಿನ ಕಾಲದಿಂದಲೇ ಅನೂಚಾನವಾಗಿ ನಡೆದುಬಂದಿರಬೇಕು. ಇದೇ ರೀತಿ ಭೂತಪೂಜೆಯ ಅಂಗವಾಗಿ ಹಲವು ಬಗೆಯ ಪ್ರಾಣಿಗಳ ಮತ್ತು ಮಾನವರ ಮೂರ್ತಿಗಳನ್ನು ಮರದಿಂದ ನಿರ್ಮಿಸಿ ಅವಕ್ಕೆ ಕಟುವರ್ಣಗಳನ್ನು ಹಾಕಿಟ್ಟು ಪೂಜಿಸುವ ಪದ್ಧತಿಯೂ ನಡೆದು ಬಂದಿದೆ. ಇಲ್ಲೆಲ್ಲ ಬಣ್ಣಕ್ಕೆ ಪ್ರಾಶಸ್ತ್ಯ. ಉದ್ಯಾವರ, ಪೊಳಲಿ, ಮೂಡಬಿದರೆ, ಬಾರಕೂರು, ಅನಂತಪುರ ಮುಂತಾದ ಕಡೆಗಳಲ್ಲಿ ಇರುವ ಬೃಹದಾಕಾರದ ಮೃಣ್ಮೂರ್ತಿಗಳೂ ಮೆಕ್ಕೆಕಟ್ಟೆ ಮತ್ತು ಇತರೆಡೆಗಳಲ್ಲಿರುವ ಚಿತ್ರವಿಚಿತ್ರವಾದ ದಾರುಮೂರ್ತಿಗಳೂ ಈಗ ಇರುವಂತೆ ಎಷ್ಟು ಹಿಂದಿನವೆಂದು ಹೇಳಲಾಗದಿದ್ದರೂ ಬಹು ಹಿಂದಿನ ಕಾಲದಲ್ಲಿಯೇ ಈ ಮೂರ್ತಿಗಳನ್ನು ಸ್ಥಾಪಿಸಿದ್ದು ಕಾಲಕಾಲಕ್ಕೆ ಅವನ್ನು ನವೀಕರಿಸುತ್ತಿದ್ದರೆಂದು ಹೇಳಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಪೊಳಲಿಯ ಭಟ್ಟಾರಕಿಯ ಹೆಸರು ಹತ್ತನೆಯ ಶತಮಾನದ ಶಾಸನದಲ್ಲಿಯೇ ಇದೆ. ಇಲ್ಲಿಯ ಮೃಣ್ಮೂರ್ತಿಗಳು ಸುಂದರವಾದ ವರ್ಣಗಳಿಂದ ಅಲಂಕೃತವಾಗಿವೆ. ಆದರೆ ಇವುಗಳ ಮೂಲವರ್ಣಗಳು ಉಳಿದು ಬಂದಿಲ್ಲವಾಗಿ ಹಿಂದೆ ಅವು ಹೇಗಿದ್ದುವೆಂದು ಹೇಳಲು ಬಾರದು. 6-7ನೆಯ ಶತಮಾನಗಳ ಅನಂತರ ಶಿಲಾದೇವಾಲಯಗಳಲ್ಲಿ ಮೂರ್ತಿಶಿಲ್ಪಕ್ಕೆ ಪ್ರಾಧಾನ್ಯ ಬಂದುದರಿಂದ ಶಿಲ್ಪದಲ್ಲಿಯೇ ಎಲ್ಲ ಅಲಂಕರಣಗಳನ್ನೂ ಪೂರೈಸಲಾರಂಭಿಸಿದುದರಿಂದ ಬಹುಶಃ ವರ್ಣಚಿತ್ರಗಳಿಗೆ ಅವಕಾಶ ಕಡಿಮೆಯಾಗಿರಬೇಕು. ಅದರ ಬದಲು ಇಟ್ಟಿಗೆ, ಮರಗಳಿಂದ ಕಟ್ಟುತ್ತಿದ್ದ ಅರಮನೆ ಗುರುಮನೆಗಳಲ್ಲಿ ಇಂಥ ಚಿತ್ರಗಳನ್ನು ರಚಿಸುತ್ತಿದ್ದಿರಬೇಕು. ಆ ಕಾಲದ ಇಂಥ ಕಟ್ಟಡಗಳು ಈಗ ಉಳಿದು ಬಂದಿಲ್ಲ. ಹೊಯ್ಸಳರ ಕಾಲದ ಒಂದೆರಡು ದೇವಾಲಯಗಳಲ್ಲಿ ಒಳಚಾವಣಿಯಲ್ಲಿ ರೇಖಾ ಚಿತ್ರಗಳು ಉಳಿದುಬಂದಿವೆ. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿತವಾಗಿರಬಹುದಾದ ಶ್ರವಣಬೆಳಗೊಳದ ಶಾಂತಿನಾಥ ಬಸದಿಯ ಗೋಡೆಗಳು ಮತ್ತು ಚಾವಣಿಗಳು ಚಿತ್ರಗಳಿಂದ ಅಲಂಕೃತವಾಗಿದ್ದುವು. ಈಗ ಅಲ್ಲಲ್ಲೆ ಅದರ ಕುರುಹುಗಳು ಮಾತ್ರ ಇವೆ. ಅವುಗಳಲ್ಲಿ ನಿಂತಿರುವ ಜಿನಮೂರ್ತಿಗಳು, ನರ್ತಕಿಯರು ಮುಂತಾದವರ ಚಿತ್ರಗಳು ಪರಿಶೀಲನಾರ್ಹವಾಗಿವೆ. ಬಹುಶಃ ಹನ್ನೆರಡನೆಯ ಶತಮಾನಕ್ಕೆ ಸೇರಿದ ಮೂರು ಓಲೆಗರಿ ಹಸ್ತಪ್ರತಿಗಳು ಮೂಡಬಿದರೆಯ ಜೈನಗ್ರಂಥಾಲಯದಲ್ಲಿದ್ದು ಅವುಗಳ ಮೇಲೆ ವರ್ಣಚಿತ್ರಗಳಿರುವುದೊಂದು ವಿಶೇಷ. ಧವಲಾ, ಜಯಧವಲಾ ಮತ್ತು ಮಹಾಧವಲಾ ಎಂಬ ಹೆಸರಿನ ಈ ಮೂರು ಗ್ರಂಥಗಳೂ ಮಸಿಯಲ್ಲಿ ಬರೆದುವಾಗಿದ್ದು ಪ್ರತಿ ಪುಟದ ಎರಡು ಕಡೆಯೂ ಚಿತ್ತಾರದ ಅಂಚುಗಳ ನಡುವೆ ಕಿರುಚಿತ್ರಗಳಿವೆ. ತೀರ್ಥಂಕರರು, ಯಕ್ಷಯಕ್ಷಿಯರು, ಮುನಿಗಳು, ಇತರ ಮೂರ್ತಿಗಳನ್ನು ರೇಖೆಗಳಿಂದ ಚಿತ್ರಿಸಿ ಬಣ್ಣ ತುಂಬಿದ್ದಾರೆ. ಅಲ್ಲಲ್ಲಿ ವರ್ತುಲಗಳ ನಡುವೆ ಹೂಗಳನ್ನು ಬಿಡಿಸಿ ಬಣ್ಣ ತುಂಬಿಸಿರುವುದುಂಟು. ಗಿಡಮರಗಳು, ನವಿಲು ಹಂಸಗಳು, ಅವುಗಳ ಸುರುಳಿಸುರುಳಿಯಾಗಿ ಬಿಚ್ಚಿರುವ ತೋಕೆಗಳು, 12ನೆಯ ಶತಮಾನದ ವರ್ಣಚಿತ್ರ ರೀತಿಯ ಮಾದರಿಯಾಗಿವೆ. ನೇಮಿನಾಥಪುರಾಣದ ಹಸ್ತಪ್ರತಿಯೊಂದರಲ್ಲಿಯೂ ಇಂಥ ಚಿತ್ರಗಳನ್ನು ಕಾಣಬಹುದು.

ವಿಜಯನಗರ ಕಾಲಕ್ಕೆ ಬಂದಮೇಲೆ ಭಿತ್ತಿಚಿತ್ರಗಳು ಕಾಣಿಸತೊಡಗುತ್ತವೆ. ಇವರ ಕಾಲದಲ್ಲಿ ದೇವಾಲಯಗಳು ಕಗ್ಗಲ್ಲಿನಲ್ಲಿ ನಿರ್ಮಿತವಾಗಿ ಚಾವಣಿಗಳು ಸರಳವಾಗಿರುತ್ತಿದ್ದುದರಿಂದ ಅಲ್ಲಲ್ಲಿ ಅವುಗಳನ್ನು ಚಿತ್ರಗಳಿಂದ ತುಂಬುವ ಪ್ರಯತ್ನ ನಡೆದಂತೆ ತೋರುತ್ತದೆ. ಹಂಪೆಯ ವಿರೂಪಾಕ್ಷ ದೇವಾಲಯದ ಮುಂದೆ ಕೃಷ್ಣದೇವರಾಯ ಕಟ್ಟಿಸಿದ ರಂಗಮಂಟಪದ ಒಳಚಾವಣಿ ಮತ್ತು ಸುತ್ತಣ ತೊಲೆಗಳ ಮೇಲೆ ಹಲವಾರು ಚಿತ್ರಗಳನ್ನು ರಚಿಸಲಾಗಿದೆ. ಮುಖ್ಯವಾಗಿ ಗಿರಿಜಾಕಲ್ಯಾಣ ಮುಂತಾದ ಶಿವಲೀಲೆಗಳೂ ತ್ರಿಪುರಾಸುರಸಂಹಾರ, ವಿಷ್ಣುವಿನ ದಶಾವತಾರ, ಅರ್ಜುನನ ಮತ್ಸ್ಯಭೇದ ಮುಂತಾದುವೂ ಅಡ್ಡತೊಲೆಯೊಂದರ ಮೇಲೆ ಸನ್ಯಾಸಿಯೊಬ್ಬರ ಮೆರವಣಿಗೆಯೂ ಇವೆ. ಈ ಸನ್ಯಾಸಿಯು ವಿದ್ಯಾರಣ್ಯರೆಂದು ಕೆಲವರು ಭಾವಿಸಿದರೆ ಕೃಷ್ಣರಾಯನ ಗುರುವಾಗಿದ್ದ ವ್ಯಾಸರಾಯರೆಂದೂ ಕುಹೂಯೋಗದಲ್ಲಿ ವ್ಯಾಸರಾಯರು ಸಿಂಹಾಸನದ ಮೇಲೆ ಕುಳಿತಿದ್ದು ರಾಜನಿಗೆ ಬಂದ ಕುತ್ತನ್ನು ಪರಿಹರಿಸಿದುದನ್ನು ಸೂಚಿಸುತ್ತದೆಂದು ಮತ್ತೆ ಕೆಲವರು ತಿಳಿದಿದ್ದಾರೆ. ಪಾದದಿಂದ ಸೊಂಟದವರೆಗೂ ಹಿಂದಕ್ಕೆ ಬಾಗಿದಂತಿದ್ದು ಅಲ್ಲಿಂದ ಮೇಲಿನ ಭಾಗ ಸ್ವಲ್ಪ ಮುಂಚಾಚಿದಂತಿರುತ್ತದೆ. ಈ ಚಿತ್ರಗಳನ್ನು ಅನಂತರದ ಕಾಲದಲ್ಲಿ ತಿದ್ದಿ ಪುನಃ ಬಣ್ಣಕೊಟ್ಟಿರುವುದರಿಂದ ಅದರ ಮೂಲ ಸೊಗಸಿಗೆ ಊನ ಬಂದಿದೆ. ಇದೇ ಕಾಲದ ಚಿತ್ರಗಳು ಆನೆಗೊಂದಿಯಲ್ಲಿ ಮಂಟಪವೊಂದರ ಚಾವಣಿಯಲ್ಲೂ ಕಂಡುಬಂದರೂ ಬಹುಮಟ್ಟಿಗೆ ಅವು ಶಿಥಿಲವಾಗಿವೆ. ಇವುಗಳಿಗೆ ಮಾದರಿಯಾಗಿರುವುದು ಕರ್ನಾಟಕದ ಆಚೆ ಇರುವ

ಲೇಪಾಕ್ಷಿಯಲ್ಲಿನ ಸೊಗಸಾದ ವರ್ಣಚಿತ್ರಗಳು. ವಿಜಯನಗರದ ಅಧೀನದಲ್ಲಿದ್ದ ಹಲವು ಪಾಳೆಯಗಾರರೂ ತಮ್ಮತಮ್ಮ ರಾಜ್ಯಗಳಲ್ಲಿ ಇಂಥ ಭಿತ್ತಿಚಿತ್ರಗಳನ್ನು ಬೆಳೆಸಿಕೊಂಡು ಬಂದರು. ಚಾಮರಾಜನಗರ ತಾಲ್ಲೂಕು ಹರದನಹಳ್ಳಿಯ ದಿವ್ಯಲಿಂಗೇಶ್ವರಸ್ವಾಮಿಯ ದೇವಾಲಯದ ಹಿಂಭಾಗದಲ್ಲಿರುವ ಕೈಸಾಲೆಯ ಚಾವಣಿಯಲ್ಲಿರುವುದೂ ಇದೇ ವಿಜಯನಗರ ಶೈಲಿಯನ್ನನುಕರಿಸಿದ ಚಿತ್ರಗಳೇ. ಲೇಪಾಕ್ಷಿಯ ಚಿತ್ರಗಳಂತಿರುವ ಇಲ್ಲಿನ ಚಿತ್ರಗಳಲ್ಲಿ ಚಲನೆಯಿದೆ, ಸತ್ವವಿದೆ. ಗಜಾಸುರನನ್ನು ಸೀಳಿ ತಾಂಡವವಾಡುತ್ತಿರುವ ಶಿವನ ಚಿತ್ರ ಚೈತನ್ಯಪೂರ್ಣವಾಗಿದೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯ, ಮಾಗಡಿಯ ಸೋಮೇಶ್ವರ ದೇವಾಲಯ ಮೊದಲಾದವುಗಳಲ್ಲಿ ವಿಜಯನಗರದ ಕಡೆಯ ಕಾಲಕ್ಕೆ ಸೇರಬಹುದಾದ ಭಿತ್ತಿಚಿತ್ರಗಳಿವೆ. ಹೆಚ್ಚಾಗಿ ಇವು ಶಿವಲೀಲೆಗಳನ್ನು, ಅದರಲ್ಲಿಯೂ ಗಿರಿಜಾ ಕಲ್ಯಾಣವನ್ನು, ವಿಸ್ತಾರವಾಗಿ ಪ್ರತಿಪಾದಿಸುತ್ತವೆ. ಇವಲ್ಲದೆ ವಸ್ತಾರೆಯಲ್ಲಿನ ಪದ್ಮಾವತಿ ಗುಡಿಯಲ್ಲಿ ಜೈನಸಂಪ್ರದಾಯದ ಚಿತ್ರಗಳುಂಟು. ಈ ಚಿತ್ರಗಳೆಲ್ಲ ಪರಂಪರಾಗತವಾಗಿ ಬಂದ ದೇಶೀಯ ಶೈಲಿಯಲ್ಲಿವೆ; ಕಲ್ಲಿನ ಮೇಲೆ ತೆಳುವಾಗಿ ಮೆತ್ತಿರುವ ನಯವಾದ ಗಾರೆಯ ಮೇಲೆ ರಚಿತವಾಗಿವೆ. ಚಿತ್ರದ ಆಧಾರದಲ್ಲಿ ಸೂಕ್ಷ್ಮಕಣಗಳಿಂದ ಕೂಡಿದ ಮೂರು ಪೊರೆಗಳು ಇರುತ್ತವೆ. ಚಿತ್ರಕ್ಕೂ ಒಳಗಿನ ಬಿಳಿಯ ಲೇಪನಕ್ಕೂ ನಡುವೆ ಮೊದಲ ಪೊರೆ ಬರುತ್ತದೆ. ಎರಡನೆಯ ಪೊರೆ ಆ ಬಿಳಿಯ ಲೇಪನ ಮತ್ತು ಗಾರೆ ಮಿಶ್ರಣದ ನಡುವೆ ಇದೆ. ಈ ಎರಡು ಲೇಪನಗಳ ಹಿಂದೆ ಸಮವಾದ ಸುಣ್ಣದ ಲೇಪನವನ್ನು ಕೊಡಲಾಗಿರುತ್ತದೆ. ಹೀಗೆ ಉತ್ತಮ ರೀತಿಯಲ್ಲಿ ಭಿತ್ತಿಯನ್ನು ಸಿದ್ಧಮಾಡಿ ಚಿತ್ರದ ರಚನೆಯನ್ನು ಮಾಡುತ್ತಾರೆ. ಚಿತ್ರಣದಲ್ಲಿ ವರ್ಣಗಳ ವೈಖರಿ, ಕುಂಚಗಳ ಸೂಕ್ಷ್ಮತೆ ಗಮನಾರ್ಹವಾದುದು. ಮೂಲ ವರ್ಣಗಳಾದ ಬಿಳುಪು, ಹಳದಿ, ಕೆಂಪು, ಕಪ್ಪು, ನೀಲಿ ಮತ್ತು ಇವುಗಳ ಪರಸ್ಪರ ಮಿಶ್ರಣದಿಂದ ನಾನಾ ವರ್ಣಗಳನ್ನು ಕಲಾವಿದರು ಪಡೆದುಕೊಂಡಿದ್ದಾರೆ. ಚಿತ್ರಗಳ ವಸ್ತು ಸಾಮಾನ್ಯವಾಗಿ ಧಾರ್ಮಿಕ, ವ್ಯಕ್ತಿಗಳ ಚಿತ್ರಣದಲ್ಲಿ ವಿಶೇಷತಃ ಪಾರ್ಶ್ವನೋಟವನ್ನಷ್ಟೇ ಮೂಡಿಸುವುದು ಈ ಕಾಲದ ಶೈಲಿಯ ವೈಶಿಷ್ಟ್ಯ.

ಇದೇ ಕಾಲದಲ್ಲಿ ಉತ್ತರದಲ್ಲಿ ಮುಸ್ಲಿಂ ಶೈಲಿಯ ಚಿತ್ರಗಳು ಬಳಕೆಗೆ ಬಂದುವು. ಬಹಮನೀ ಮತ್ತು ಬಿಜಾಪುರದರಸರು ಇದಕ್ಕೆ ಪ್ರೋತ್ಸಾಹ ಕೊಟ್ಟರು. ಇವರ ಕಾಲದಲ್ಲಿ ಕಾಗದದ ಮೇಲೆ ಕಿರುಚಿತ್ರಗಳನ್ನು ಚಿತ್ರಿಸುವುದು, ಹಸ್ತಪ್ರತಿಗಳಲ್ಲಿ ವರ್ಣಚಿತ್ರಗಳನ್ನು ರಚಿಸುವುದು ಹೇರಳವಾಗಿ ನಡೆದಿರಬೇಕು. ಈಗ ಕರ್ನಾಟಕದಲ್ಲಿ ಉಳಿದುಬಂದಿರುವುದು ಬಹು ಸ್ವಲ್ಪ, ಇವರ ಕಾಲದ ಭಿತ್ತಿಚಿತ್ರಗಳು ಕೆಲವು ಉಳಿದುಬಂದಿವೆ. ಕಮ್ಮಟಗಿಯ ಸ್ನಾನಗೃಹವೊಂದರ ಗೋಡೆ ಚಾವಣಿಗಳಲ್ಲಿ ಅಲಂಕರಣ ಚಿತ್ರಗಳೂ ವ್ಯಕ್ತಿಚಿತ್ರಗಳೂ ಇದ್ದುವು. ಇವು ಈಗ ಬಹುಮಟ್ಟಿಗೆ ಅಳಿಸಿಹೋಗಿವೆ. ಬಿಜಾಪುರದ ಆಸಾರ್ ಮಹಲ್‌ನ ಗೋಡೆಗಳ ಮೇಲೂ ಇಂಥ ಚಿತ್ರಗಳು ಇವೆ. ಇವು ಹೆಚ್ಚಾಗಿ ಹೂಬಳ್ಳಿಗಳ ಕುಂಡಗಳ ಅಲಂಕರಣ ಚಿತ್ರಗಳೇ. ಬೀದರ್‌ನ ಕಟ್ಟಡಗಳಲ್ಲಿ ವರ್ಣಸಂಯೋಜನೆಯುಳ್ಳ ಗಾಜಿನ ಮೆರಗಿನ ಬಿಲ್ಲೆಗಳನ್ನು ಜೋಡಿಸಿ ಚಿತ್ರಗಳನ್ನು ರಚಿಸಿದ್ದಾರೆ. ಒಂದೆಡೆ ಹುಲಿಯ ಚಿತ್ರವೂ ಉಂಟು. ಬಿಜಾಪುರದ ವಸ್ತುಸಂಗ್ರಹಶಾಲೆಯಲ್ಲಿ, ಖಾಸಗಿಯಾಗಿ ಕೆಲವರ ಬಳಿ ಇರುವ ಆ ಕಾಲದ ಕಿರುಚಿತ್ರಗಳು, ಚಿತ್ರಿತ ಹಸ್ತಪ್ರತಿಗಳು ದಖನೀ ಸಂಪ್ರದಾಯಕ್ಕೆ ಸೇರಿದವು. ರಾಗರಾಗಿಣಿಯರ ಚಿತ್ರಗಳು, ಗ್ರಂಥಗಳಲ್ಲಿ ಬರುವ ವಸ್ತುವನ್ನು ಅಲ್ಲಲ್ಲಿ ಚಿತ್ರಿಸುವುದು, ರಾಮಾಯಣ, ಭಾರತಗಳಿಂದ ಆಯ್ದ ವಸ್ತುವನ್ನು ಚಿತ್ರಿಸುವುದು ಇಲ್ಲಿ ಕಂಡುಬರುತ್ತದೆ. ಸುಲ್ತಾನರ, ರಾಣಿಯರ ವ್ಯಕ್ತಿಚಿತ್ರಣಗಳೂ ಉಂಟು.

ವಿಜಯನಗರದ ಅನಂತರ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟವರು ಮೈಸೂರರಸರು. ಇವರ ಕಾಲದಲ್ಲಿ ಅನೇಕ ದೇವಾಲಯಗಳು ಮತ್ತು ಕಟ್ಟಡಗಳಲ್ಲಿ ಭಿತ್ತಿಚಿತ್ರಗಳ ರಚನೆಯಾಗಿದೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ನಿರ್ಮಿತವಾದ ಶ್ರವಣಬೆಳಗೊಳದ ಕಲ್ಯಾಣಿಯ ಮಂಟಪದಲ್ಲಿ ಆ ಕಾಲದ ಚಿತ್ರಗಳಿದ್ದುವು. ಕುರುಹುಗಳು ಮಾತ್ರ ಈಗ ಉಳಿದುಬಂದಿವೆ. ಎಡೆಯೂರಿನ ತೋಂಟದ ಸಿದ್ಧಲಿಂಗೇಶ್ವರ ದೇವಸ್ಥಾನದ ಮುಖಮಂಟಪದಲ್ಲಿ ಪಂಚವಿಂಶತಿ ಲೀಲಾಮೂರ್ತಿಗಳೂ ಸಿದ್ಧಲಿಂಗ ಯತಿಯ ಜೀವಿತಕ್ಕೆ ಸಂಬಂಧಿಸಿದ ಚಿತ್ರಗಳೂ ಇವೆ. ಗುಬ್ಬಿಯ ಮೈಲಪ್ಪನ ಗುಡಿಯ ಮುಖಮಂಟಪದಲ್ಲಿಯೂ ಶಿವನ ಪಂಚವಿಂಶತಿ ಲೀಲಾ ಮೂರ್ತಿಗಳುಂಟು. ಬೆಳಕವಾಡಿಯ ಮಂಟೇಸ್ವಾಮಿ ಮಠದ ಹಜಾರವೂ ರಾಮಾಯಣ ಮತ್ತು ಶಿವಲೀಲೆಗಳ ಚಿತ್ರಗಳನ್ನು ಹೊಂದಿದೆ.



ಗೋವರ್ಧನ ಗಿರಿಧಾರಿ: ಮೈಸೂರಿನ ಸಂಪ್ರದಾಯಿಕ ಚಿತ್ರಕಲೆ

ಟಿಪ್ಪುವಿನ ಕಾಲದಲ್ಲಿ ಕಟ್ಟಿದ ಶ್ರೀರಂಗಪಟ್ಟಣದ ದರಿಯಾದೌಲತ್‌ನಲ್ಲಿ ಕಂಬಗಳು, ಗೋಡೆಗಳು, ಚಾವಣಿಗಳೆಲ್ಲ ಒಳಗೂ ಹೊರಗೂ ಬಗೆಬಗೆಯ ವರ್ಣಚಿತ್ರಗಳಿಂದ ರಂಜಿತವಾಗಿವೆ. ಅನೇಕ ರಾಜರ, ಅಧಿಕಾರಿಗಳ, ರಾಣಿವಾಸದ ವ್ಯಕ್ತಿಚಿತ್ರಗಳು ಒಂದು ಗೋಡೆಯನ್ನಾವರಿಸಿದ್ದರೆ ಮತ್ತೊಂದು ಗೋಡೆಯ ಮೇಲೆ ಹೈದರ್ ಮತ್ತು ಟಿಪ್ಪುಗಳು ಪಾಲಿ ಎಂಬ ಊರಿನಲ್ಲಿ ನಡೆಸಿದ ಯುದ್ಧವನ್ನು ವಿವರವಾಗಿ ಚಿತ್ರಿಸಿದೆ. ಕಟ್ಟಡದ ಒಳಭಾಗದಲ್ಲಿ ಕಂಬಗಳ ಮೇಲೆಲ್ಲ ಗಿಡಗಳು, ಬಳ್ಳಿಗಳು, ಕುಂಡಗಳು ಮುಂತಾದ ಅಲಂಕರಣ ಚಿತ್ರಗಳಿದ್ದು ಇದಕ್ಕಾಗಿ ಕಟುವರ್ಣಗಳನ್ನು ಮಾತ್ರವಲ್ಲದೆ ಚಿನ್ನದ ರೇಕುಗಳನ್ನೂ ಬಳಸಿದೆ. ಕಟ್ಟಡದ ಭಾಗಗಳನ್ನೆಲ್ಲಾ ತುಂಬುವಂತೆ ಇಷ್ಟು ವಿಸ್ತಾರವಾಗಿ ಚಿತ್ರಿಸಿರುವುದು ಕರ್ನಾಟಕದಲ್ಲಿ ಬೇರೆ ಇಲ್ಲ. ಟಿಪ್ಪುವಿನ ಬೆಂಗಳೂರಿನ ಅರಮನೆಯಲ್ಲಿಯೂ ಚಿತ್ರಗಳಿದ್ದ ಕುರುಹುಗಳಿವೆ. ಬಹುಶಃ ಇದೇಕಾಲಕ್ಕೆ ಸೇರಿದುದು ಸೀಬಿಯ ನರಸಿಂಹಸ್ವಾಮಿ ದೇವಾಲಯದ ಮುಖಮಂಟಪ ಮತ್ತು ಮಹಾದ್ವಾರಗಳ ಅಂಕಣದಲ್ಲಿರುವ ವರ್ಣಚಿತ್ರಗಳು. ವಿಷ್ಣುವಿನ ದಶಾವತಾರಗಳು, ಶಿವಲೀಲೆಗಳು, ರಾಮಾಯಣ – ಭಾರತದ ಆಯ್ದ ಘಟನೆಗಳು, ವಿಶ್ವರೂಪ ಮುಂತಾದುವನ್ನು ಮುಖಮಂಟಪದಲ್ಲೂ ನರಸಿಂಹ ಚಂಚುಲಕ್ಷ್ಮಿಯರ ಕಥೆ, ಗೋವರ್ಧನೋದ್ಧರಣಗಳು ಮಹಾದ್ವಾರದಲ್ಲೂ ಇದ್ದು ಇವುಗಳೊಂದಿಗೆ ಟಿಪ್ಪು, ಅವನ ಕಾಲದಲ್ಲಿದ್ದ ಮುಸ್ಲಿಂ ಮತ್ತು ಹಿಂದು ಗಣ್ಯವ್ಯಕ್ತಿ ಚಿತ್ರಣಗಳನ್ನೂ ಸೈನ್ಯಗಳನ್ನೂ ಒಂದೆಡೆ ತೋರಿಸಿದ್ದಾರೆ.

ಕರ್ನಾಟಕದ ಇತರ ಕಡೆಗಳಲ್ಲಿ ಶ್ರೀಮಂತರ ರಾಜವಾಡೆಗಳಲ್ಲಿ ಚಿತ್ರಗಳನ್ನು ಬರೆಸುತ್ತಿದ್ದುದ್ದು ಹಲವು ಕಡೆ ಕಂಡುಬಂದಿದೆ. ನಿಪ್ಪಾಣಿಯ

ರಾಜವಾಡೆ, ಅಥಣಿಯ ವೀರಶೈವ ಮಠ ಮತ್ತು ನಿಪ್ಪಾಣಿ ಕರವಾಡೆ, ನರಗುಂದದ ಅರಮನೆ ಮತ್ತು ಕೋಟೆಯೊಳಗಿನ ವೆಂಕಟೇಶ್ವರ ದೇವಾಲಯ, ಕೊಡಗಿನಲ್ಲಿರುವ ಕೊಡಗಿನ ರಾಜರ ಅರಮನೆ, ಇವುಗಳಲ್ಲಿ ಹಲವು ಬಗೆಯ ಚಿತ್ರಗಳು ಶಿಥಿಲಾವಸ್ಥೆಯಲ್ಲಿ ಬೇರೆ ಬೇರೆ ಹಂತಗಳಲ್ಲಿ ಇನ್ನೂ ಉಳಿದುಬಂದಿವೆ.

ಡಿ.ಜಿ.ಬಡಿಗೇರ ಅವರ ಒಂದು ಕಲಾಕೃತಿ

ಮುಮ್ಮಡಿ ಕೃಷ್ಣರಾಜ ಒಡೆಯರು ಚಿತ್ರಕಾರರಿಗೆ ಬಹುಮಟ್ಟಿನ ಉತ್ತೇಜನವಿತ್ತರು. ಟಿಪ್ಪುವಿನ ಕಾಲದ ಚಿತ್ರಣರೀತಿ ಇವರ ಕಾಲದಲ್ಲಿ ಮುಂದುವರಿಯಿತು. ಮೈಸೂರಿನ ವೆಂಕಟರಮಣಸ್ವಾಮಿ ದೇವಾಲಯದಲ್ಲಿಯೂ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿಯೂ ಚಿತ್ರಮಂಟಪಗಳಿದ್ದು ವೆಂಕಟರಣಸ್ವಾಮಿ ದೇವಾಲಯದಲ್ಲಿ ಪೌರಾಣಿಕ ಚಿತ್ರಗಳು, ಪ್ರಕೃತಿ ಚಿತ್ರಗಳೂ ಕೃಷ್ಣರಾಜ ಒಡೆಯರು ಅವರ ಹಿಂದಿನ ಕೆಲವು ರಾಜರುಗಳು, ಪೂರ್ಣಯ್ಯ, ಸುಬ್ಬರಾಯದಾಸ ಮೊದಲಾದವರ ವ್ಯಕ್ತಿಚಿತ್ರಣಗಳೂ ಮಲ್ಲಿಕಾರ್ಜುನ ದೇವಾಲಯದಲ್ಲಿ ಶಿವಲೀಲೆಗಳ, ಋಷಿಗಳ ದೇವತೆಗಳ ಚಿತ್ರಗಳೂ ತುಂಬಿವೆ. ಇದೇ ಕಾಲದ ಶ್ರವಣಬೆಳಗೊಳದ ಜೈನಮಠದಲ್ಲಿ ಜಿನರ, ಜೈನಚಕ್ರವರ್ತಿಗಳ ಜೀವನವನ್ನು ತೋರಿಸುವ ಭಿತ್ತಿಚಿತ್ರಗಳು ತುಂಬಿವೆ. ಪಂಚಪರಮೇಷ್ಠಿಗಳು, ಯಕ್ಷಯಕ್ಷಿಯರು, ಚೌವೀಸ ತೀರ್ಥಂಕರರು, ಪಾರ್ಶ್ವನಾಥನ ಸಮವಸರಣ, ಭರತ ಚಕ್ರವರ್ತಿಯ ಜೀವನಚಿತ್ರ ಮೊದಲಾದುವುಗಳ ಜೊತೆಗೆ ಕಾಡಿನ ಪ್ರಕೃತಿಚಿತ್ರ, ಮುಮ್ಮಡಿ ಕೃಷ್ಣರಾಜ ಒಡೆಯರ ವ್ಯಕ್ತಿಚಿತ್ರ ಮೊದಲಾದವನ್ನು ನೋಡಬಹುದು. (ಎಂ.ಎಚ್.)

ಮೈಸೂರು ಪ್ರಭುಗಳ ಕಲಾಪ್ರೇಮದಿಂದಾಗಿ ಉಳಿದಿರುವ ಕನ್ನಡದ ಅಪೂರ್ವ ಕಲಾಕೃತಿಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರೇ ರಚಿಸಿದ್ದೆನ್ನಲಾದ ಶ್ರೀತತ್ತ್ವನಿಧಿ ಎಂಬ ಬೃಹತ್ ಗ್ರಂಥವೂ ಒಂದು. ಇದರಲ್ಲಿ ಸಾವಿರಾರು ವರ್ಣರಂಜಿತ ಚಿತ್ರಗಳಿವೆ. ಇಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ, ಕೌತುಕನಿಧಿ ಎಂಬ ಒಂಬತ್ತು ದಳಗಳಿವೆ. ಶಕ್ತಿನಿಧಿಯಲ್ಲಿ ಶ್ರೀ ಚಾಮುಂಡೇಶ್ವರಿಯ ಸುವರ್ಣರಂಜಿತ ಚಿತ್ರ ಸೊಗಸಾಗಿದೆ. ವಿಷ್ಣುನಿಧಿಯಲ್ಲಿ ನೃಸಿಂಹ, ಶೇಷಶಾಯಿ, ತಾರಕರಾಮ, ಪಟ್ಟಾಭಿರಾಮ ದಶಾವತಾರ ಮೊದಲಾದ ವೈಷ್ಣವ ಚಿತ್ರಗಳು, ಶಿವನಿಧಿಯಲ್ಲಿ ಕೈಲಾಸಮೂರ್ತಿ, ಪಂಚವಿಂಶತಿ ಶಿವಲೀಲೆಗಳು, ತಾಂಡವಮೂರ್ತಿಗಳು, ಗಣೇಶಕುಮಾರ, ವೀರಭದ್ರ ಮೊದಲಾದ ಶೈವಚಿತ್ರಗಳು, ಬ್ರಹ್ಮನಿಧಿಯಲ್ಲಿ ಬ್ರಹ್ಮಲೋಕ, ಚತುರ್ಮುಖ ಬ್ರಹ್ಮ, ಸರಸ್ವತಿ, ಸಪ್ತಋಷಿಗಳು, ಅಷ್ಟನದಿಗಳು, ಚತುರ್ದಶ ಲೋಕಗಳು, ಇಂದ್ರರು, ಅಷ್ಟವಸುಗಳು ವೇದಸ್ವರೂಪ ದೇವಾಯುಧೋಪಕರಣಗಳು, ಬತ್ತೀಸ ರಾಗಲಕ್ಷಣಗಳು ಮೊದಲಾದ ಚಿತ್ರಗಳು - ಹೀಗೆ ಆಯಾ ದಳಗಳಿಗೆ ಸಂಬಂಧಿಸಿದಂತೆ ಒಟ್ಟು 1888 ವರ್ಣರಂಜಿತ ಚಿತ್ರಗಳೂ 458 ರೇಖಾಚಿತ್ರಗಳೂ ಇವೆ. ಇಲ್ಲಿನ ಚಿತ್ರಗಳಲ್ಲಿನ ಹಿನ್ನೆಲೆಯಲ್ಲಿ ಬಳಸಿರುವ ಹಾಳತ, ತೆಳುವರ್ಣ, ದಪ್ಪವರ್ಣಗಳ ಬಳಕೆ, ರೇಖಾವಿನ್ಯಾಸ ಮೆಚ್ಚುವಂಥದು (ಇಂಥ ಅಪೂರ್ವ ಚಿತ್ರಗಳ ನಿಧಿ ಗ್ರಂಥಗಳು ಎರಡಿವೆ. ಒಂದು ಅರಮನೆಯಲ್ಲಿ ಮತ್ತೊಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ).

1861ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಜಗನ್ಮೋಹನ ಅರಮನೆಯನ್ನು ಕಟ್ಟಿಸಲು ಮೊದಲು ಮಾಡಿದರು. 1875ರ ವೇಳೆಗೆ ಅದು ಚಿತ್ರಶಾಲೆಯಾಗಿ ಪರಿವರ್ತನೆಗೊಂಡಿತು. ಈ ಕಲಾಸಂಗ್ರಹಾಲಯದಲ್ಲಿ ಕೆಲವು ಭಿತ್ತಿಚಿತ್ರಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ವಂಶವೃಕ್ಷ, ಮೈಸೂರು ಅರಸರ ವಂಶಾವಳಿಯನ್ನು ತೋರುವ ಸಂತಾನಾಂಬುಜ, ರಾಜರು ಆರು ಆನೆಗಳನ್ನು ಕಟ್ಟಿರುವ ರಥ'ದಲ್ಲಿ ಜಂಬೂಸವಾರಿ ಹೊರಟಿರುವ ಚಿತ್ರ ಸೊಗಸಾಗಿದೆ. ಇಷ್ಟೇ ಅಲ್ಲದೆ ಕೊತ್ತಗಾಲ ಕಿತ್ತೂರುಗಳಲ್ಲಿ ಮುಮ್ಮಡಿಯವರು ಮೆರೆದ ಹುಲಿ ಶಿಕಾರಿ, ಕೆಂಪುನಂಜಯ್ಯನೆಂಬವ ಪಟ್ಟದಾನೆಯನ್ನು ಚಾಮರಾಜನಗರದ ಕಾಡಿನಿಂದ ಹಿಡಿದು ತಂದುದು-ಈ ದೃಶ್ಯಗಳಿವೆ. ಅಲ್ಲದೆ ಪ್ರಸನ್ನಪಾರ್ವತಿ, ದುರದುಂಡಿ ಸರ್ವಮಂಗಳ, ಜಗದಾಂಬ, ಪುಟ್ಟಚಾಮುಂಡಿ, ವರಚಾಮುಂಡಿ, ಚೆಲುವೆ ಚಾಮುಂಡಿಯರೆಂಬ ಪಟ್ಟದ ಹಸುಗಳು, ವಿಜಯ ಎಂಬ ಪಟ್ಟದ ಕುದುರೆ ಸರ್ವಚಿತ್ರರಂಜಿನಿ, ಸರ್ವಾಂಗಸುಂದರ ಎಂಬ ಮೋಹಕ ಕನ್ಯೆಯರು ಚಿತ್ರಿತವಾಗಿದ್ದಾರೆ. ಮತ್ತೊಂದು ಭಿತ್ತಿಯಲ್ಲಿ ಮುಮ್ಮಡಿಯವರ ಸಮಕಾಲೀನ ನವಾಬರ ಭಕ್ತಿಗಳ ಪರಿವಾರದವರ ರೂಪಚಿತ್ರಗಳನ್ನು ಚಿತ್ರಿಸಲಾಗಿದೆ. ಮುಮ್ಮಡಿಯವರ ವಸಂತೋತ್ಸವದ ನೋಟ, ಚದುರಂಗದಾಟ ಮುಂತಾದವನ್ನು ಬಹು ಸೊಗಸಾಗಿ ಬಿಡಿಸಲಾಗಿದೆ. ಈ ಕಾಲದಲ್ಲಿ ವೀರಣ್ಣ, ಮಲ್ಲಪ್ಪ, ಬಸಣ್ಣ ಮುಂತಾದ ಕಲಾವಿದರಿದ್ದರು.

ಚಾಮರಾಜ ಒಡೆಯರ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿಯೂ ಪ್ರಾಚೀನ ಸಂಪ್ರದಾಯದ ವರ್ಣಚಿತ್ರಕಲೆಗೆ ಸಾಕಷ್ಟು ಪ್ರೋತ್ಸಾಹ ದೊರೆತಿದೆ. ಈ ಅರಸರ ಕಾಲದಲ್ಲಿ ಬೆಳೆದ ಮೈಸೂರು ದೇಶೀಯ ಶೈಲಿಯ ಅನೇಕ ಅಪೂರ್ವ ಚಿತ್ರಪಟಗಳು ಮನೆಮನೆಗಳಲ್ಲೂ ರಾಮಮಂದಿರಗಳಲ್ಲೂ ಅರಮನೆ ಗುರುಮನೆಗಳಲ್ಲೂ ದೊರೆಯುತ್ತವೆ. ಈ ಕಲಾಸಂಪ್ರದಾಯವನ್ನು ಇನ್ನೂ ಉಳಿಸಿಕೊಂಡು ಬಂದಿರುವ ಕಲಾವಿದರು ಎಲ್ಲೋ ಅಪರೂಪವಾಗಿ ದೊರೆಯುತ್ತಾರೆ. ಕಾಗದದ ಮೇಲೆ ಬಟ್ಟೆಯ ಮೇಲೆ ಇಲ್ಲವೆ ಗಾಜಿನ ಮೇಲೆ ಜಲವರ್ಣ ಅಥವಾ ತೈಲವರ್ಣಗಳಲ್ಲಿ ರಾಜಮಹಾರಾಜರ ರೂಪಚಿತ್ರಗಳನ್ನೂ ದೇವದೇವತೆಗಳ ಹಾಗೂ ಅನೇಕ ಪೌರಾಣಿಕ ಸನ್ನಿವೇಶಗಳ ಸಂಯೋಜನಾ ಚಿತ್ರಗಳನ್ನೂ ರಚಿಸುವುದು ಈ ಸಂಪ್ರದಾಯದಲ್ಲಿ ವಿಶೇಷ. ಸುವರ್ಣ ಲೇಪನದ ಹಾಗೂ ದೇಶೀಯ ಮೂಲವರ್ಣಗಳ ಉಪಯೋಗ ಕಾಣುತ್ತದೆ. ಮೊದಲು ಸೀಸದ ಕಡ್ಡಿಯಲ್ಲಿ ಆಕೃತಿಯನ್ನು ರೂಪಿಸಿಕೊಂಡು ಅನಂತರ ವರ್ಣಗಳನ್ನು ಹಾಕಿ, ಅಲಂಕಾರ ವೈಖರಿ ತರುವೆಡೆಗಳಲ್ಲೆಲ್ಲ ಬಿಳಿಯ ಸೀಸದಲ್ಲಿ ರೇಖೆಗಳನ್ನು ಎಳೆದು ಅದರ ಮೇಲೆ ವಜ್ರದ ಅಂಟನ್ನು ಸವರಿ, ಅದರ ಮೇಲೆ ಚಿನ್ನದ ರೇಖೆಯನ್ನು ಲೇಪಿಸುವುದು. ಬೂಟ ಕುಸುರಿನ ಕೆಲಸ ಮಾಡುವಾಗ ವಿವಿಧ ವರ್ಣಗಳನ್ನು ಬಳಸಿ ಆಯಾ ಭಾಗಗಳಿಗೆ ಸರ್ವರೇಖುವಿನ ಲೇಪನ

ಮಾಡುವುದು ಇಲ್ಲಿನ ತಂತ್ರ. ಕೃತಿಗಳು ಪೂಜಾಚಿತ್ರಗಳಾದುದರಿಂದ ಚಿತ್ರಕಾರರ ಹೆಸರು ಇವುಗಳಲ್ಲಿ ಕಂಡುಬರುವುದಿಲ್ಲ. ಸುಂದರಯ್ಯ, ಕೊಂಡಪ್ಪ, ಎಲ್ಲಪ್ಪ, ದುರ್ಗದ ವೆಂಕಟಪ್ಪ, ನರಸಿಂಹಯ್ಯ ಮುಂತಾದವರು ಈ ಶೈಲಿಯನ್ನು ಉಳಿಸಿಕೊಂಡು ಬಂದವರಲ್ಲಿ ಕೆಲವರು.

ಕಾಶ್ಮೀರ ಕಣಿವೆಯ ರಮ್ಯ ದೃಶ್ಯ: ಅಮೀನ ಸಾಹೇಬ ಕಮಡೋಳಿಯವರ ಕಲೆ

**ಆಧುನಿಕ:** ಭಾರತ ಪಾಶ್ಚಾತ್ಯರ ಆಳಿಕೆಗೆ ಒಳಗಾದ ಮೇಲೆ ಭಾರತೀಯ ಪದ್ಧತಿಯ ಚಿತ್ರಕಲೆಗೆ ಅಪಾರ ಪೆಟ್ಟು ಬಿತ್ತು. ಪಾಶ್ಚಾತ್ಯ ಸಂಪ್ರದಾಯದ ಕಲಾಶಾಲೆಗಳು ಮುಂಬಯಿ, ಕಲ್ಕತ್ತ, ಮದರಾಸು, ಮೈಸೂರು ಮುಂತಾದ ಕಡೆ ತಲೆ ಎತ್ತಿಕೊಂಡವು. ಭಾರತೀಯ ಹಾಗೂ ಪಾಶ್ಚಾತ್ಯ ಮಿಶ್ರ ಕಲಾ ಸಂಪ್ರದಾಯದ ಚಿತ್ರಕಾರರೂ ಬೆಳೆದುಬಂದರು. ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಕಲಾಶಾಲೆ ಸಾವಿರಾರು ಚಿತ್ರಕಾರರನ್ನು ಬೆಳಕಿಗೆ ತಂದಿತು. ಇವರಲ್ಲಿ ಕನ್ನಡಿಗರೂ ಬಹುಮಂದಿ ಇದ್ದಾರೆ. ಪಾಶ್ಚಾತ್ಯ ಚಿತ್ರಕಲೆಯ ಪ್ರಭಾವ ಕರ್ನಾಟಕದಲ್ಲೂ ಕಾಣಿಸಿಕೊಳ್ಳಲಾರಂಭಿಸಿತು. 19-20ನೆಯ ಶತಮಾನಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಚಿತ್ರಕಲಾರಂಗದಲ್ಲಿ ಬೆಳೆದ ಅನೇಕ ಸಂಪ್ರದಾಯಗಳನ್ನು ಅನುಕರಿಸುವ, ಅವೇ ತಂತ್ರಗಳನ್ನು ಉಪಯೋಗಿಸಿ ದೇಶೀ ವಸ್ತುಗಳನ್ನು ಪ್ರತಿಪಾದಿಸುವ ಪಂಥಗಳೂ ಕರ್ನಾಟಕದಲ್ಲಿ ಕಾಣಿಸಿಕೊಂಡುವು. ಕರ್ನಾಟಕದ ಚಿತ್ರಕಲಾ ಇತಿಹಾಸದಲ್ಲಿ ಈ ಆಧುನಿಕ ಯುಗ ಸಂಕೀರ್ಣತೆಯ ಕಾಲ. ಪಾಶ್ಚಾತ್ಯರಲ್ಲಿ ಬೆಳೆದ ವೈವಿಧ್ಯಮಯದ ಚಿತ್ರರಚನಾತಂತ್ರಗಳು ತತ್ಸಂಬಂಧದ ಅನೇಕ ರೀತಿಯ ಹಿನ್ನೆಲೆಯ ವಸ್ತುಗಳು ಮತ್ತು ಕೃತಕ ವರ್ಣಗಳು — ಇವನ್ನು ಬಳಸುವುದು ಈ ಕಾಲದಲ್ಲಿ ಕಂಡುಬಂದ ಮುಖ್ಯ ಬದಲಾವಣೆ. ಪ್ರಾಚೀನ ಚಿತ್ರಕಲೆ ಹೆಚ್ಚಾಗಿ ಧಾರ್ಮಿಕವಸ್ತುಗಳನ್ನು ಅಭಿವ್ಯಕ್ತಿಗೊಳಿಸುತ್ತಿದ್ದರೆ, ಈ ಕಾಲದಲ್ಲಿ ಅನೇಕ ಲೌಕಿಕ ಸನ್ನಿವೇಶಗಳನ್ನೂ ಭಾವನೆಗಳನ್ನೂ ರೂಪಿಸುವುದು ಮತ್ತೊಂದು ಪ್ರಮುಖ ವ್ಯತ್ಯಾಸ. ಈ ಅನುಕರಣಗಳ ಜೊತೆಗೆ ಬಂಗಾಲದಲ್ಲಿ ಅವನೀಂದ್ರನಾಥ ಠಾಕೂರ್ ಮೊದಲಾದವರಿಂದ ವರ್ಧಿತವಾದ ದೇಶೀ ಪ್ರತಿಕ್ರಿಯೆಯ ಧಾಟಿಯೂ ಕರ್ನಾಟಕದಲ್ಲಿ ಕಾಣಿಸಿಕೊಂಡಿತು.

ಈ ವಿವಿಧ ಧಾಟಿಗಳಲ್ಲಿ ಚಿತ್ರರಚನೆ ಮಾಡಿರುವ ಮತ್ತು ಮಾಡುತ್ತಿರುವ ಕಲಾವಿದರು ಕರ್ನಾಟಕದ ಕಲಾ ಸಂಪತ್ತನ್ನು ಸುಪುಷ್ಟಗೊಳಿಸಿದ್ದಾರೆ. ಕೆ.ವೆಂಕಟಪ್ಪನವರು ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದಲ್ಲೇ ಅಗ್ರಗಣ್ಯ ಸ್ಥಾನ ಪಡೆದವರು. ಮೈಸೂರಿನ ಎಸ್.ನಂಜುಂಡಸ್ವಾಮಿ ಕಲೆಯ ಎಲ್ಲ ಪ್ರಕಾರಗಳಲ್ಲೂ ಉತ್ತಮ ಕೌಶಲವನ್ನು ಮೆರೆದ ಸುಪ್ರಸಿದ್ಧರು. ಎಂ.ವೀರಪ್ಪ, ಎಸ್.ಆರ್.ಸ್ವಾಮಿ ಮತ್ತು ಎಚ್.ಎಸ್.ಇನಾಮತಿ, ಇವರು ಭಾರತೀಯ ಸಂಪ್ರದಾಯದ ಸಂಯೋಜನ ಚಿತ್ರ ರಚನೆಯಲ್ಲಿ ಹೆಸರು ಗಳಿಸಿದವರು. ಗುಲ್ಬರ್ಗದ ಶಂಕರರಾವ್ ಆಳಂದಕರ್ ಭಾವನಾತ್ಮಕ ಚಿತ್ರರಚನೆಗೆ ಖ್ಯಾತಿ ಪಡೆದವರು. ಸುಪ್ರಸಿದ್ಧ ಕಲಾವಿದರಾದ ಎಸ್.ಎಂ.ಪಂಡಿತ್ ಅವರು ಆಳಂದಕರ್ ಶಿಷ್ಯರಲ್ಲಿ ಪ್ರಮುಖರು. ರೂಪ ಚಿತ್ರ ರಚನೆಯಲ್ಲಿ ವಿ.ಆರ್.ರಾವ್ ಹೆಸರು ಬಹುಕಾಲ ನಿಲ್ಲುವಂಥದು. ದಕ್ಷಿಣ ಕನ್ನಡ ಜಿಲ್ಲೆಯವರಾದ ಇವರು ಲಂಡನ್ನಿನಲ್ಲಿ 12 ವರ್ಷಗಳ ಕಾಲ ನೆಲಸಿ ಚಿತ್ರಕಲೆಯಲ್ಲಿ ಹೆಚ್ಚಿನ ಸೇವೆ ಸಲ್ಲಿಸಿ ಕನ್ನಡ ನಾಡಿಗೆ ಕೀರ್ತಿ ತಂದವರು. ಮೃಗಪಕ್ಷಿಗಳ ಬೆಡಗುಬಿನ್ನಾಣಗಳನ್ನು ತೋರಬಲ್ಲವರಾಗಿದ್ದರು. ವರ್ಣಶಿಲ್ಪಿ ಮೈಸೂರಿನ ಜನಾಬ್ ಸೂಫಿ. ಇವರು ಸಂಯೋಜನ ಚಿತ್ರರಚನೆಯಲ್ಲೂ ಹೆಸರುಗಳಿಸಿದ ಕಲಾವಿದರು. ಅಮೀನ ಸಹೇಬ ಕಮಡೋಳಿ ಜಲವರ್ಣ ಚಿತ್ರಗಳನ್ನು ರಚಿಸಿದರು. ಡಿ.ಜಿ.ಬಳಿಗೇರ ತೈಲವರ್ಣದ ರಮ್ಯ ಚಿತ್ರಗಳನ್ನು ರಚಿಸಿದರು. ಭಾರತೀಯ ಹಾಗೂ ಪಾಶ್ಚಾತ್ಯ ಕಲಾಪದ್ಧತಿಯನ್ನು ಅಳವಡಿಸಿಕೊಂಡು ವೈ.ಎಸ್.ರಾಜು ಅವರು ಚಾರಿತ್ರಿಕ ಚಿತ್ರರಚನೆಯಲ್ಲಿ ತಮ್ಮದೇ ಆದ ವೈಖರಿ ತೋರುತ್ತಾರೆ. ಅಂತೆಯೇ ಸಂಯೋಜನೆ ಹಾಗೂ ಭಾವಚಿತ್ರ ರಚನೆಯಲ್ಲಿ ಎಸ್.ಎಸ್.ಕುಕ್ಕೆ ಮತ್ತು ಆರ್.ಸೀತಾರಾಮ್ ಅವರದು ಖ್ಯಾತಿ ಪಡೆದ ಹೆಸರು.

ರಾಗಮಾಲಿಕಾ ಚಿತ್ರಗಳನ್ನು ರಚಿಸಿದ ಎಂ.ವಿ.ಮಿಣಜಿಗಿ ಅವರನ್ನು ಮರೆಯುವಂತಿಲ್ಲ. ಎಂ.ಎ.ಚೆಟ್ಟಿಯವರ ಚಿತ್ರಗಳ ಜಲವರ್ಣತಂತ್ರ ಮೆಚ್ಚುವಂತಹುದು. ಚಿತ್ರಕಲೆಯನ್ನು ಮರದ ಹುದುಗು (ಇನ್‌ಲೇ) ಕಲೆಗೆ ಅಳವಡಿಸಿ ಖ್ಯಾತರಾದವರಲ್ಲಿ ಮೈಸೂರಿನ ಮೀರ್ ಶೌಕತ್ ಅಲಿ ಮೊದಲಿಗರು. ಚಂದಮಾಮ ಖ್ಯಾತಿಯ ಕಲಾವಿದ ಎಂ.ಟಿ.ವಿ.ಆಚಾರ್ಯರು ಪೌರಾಣಿಕ ಚಿತ್ರರಚನೆಯಲ್ಲಿ ಅಗ್ರಗಣ್ಯರಾಗಿದ್ದಾರೆ. ಕಟ್ಟುಕಟ್ಟಳೆಗೆ ಶರಣಾಗದ ಧೀಮಂತ ಕಲಾವಿದ ಆರ್.ಎಸ್.ನಾಯ್ಡು ತಮ್ಮ ಅಪೂರ್ವ ವ್ಯಂಗ್ಯ ಚಿತ್ರಗಳಿಂದಾಗಿ, ತಮ್ಮ ವಿಶಿಷ್ಟ ರೇಖಾವಿನ್ಯಾಸದಿಂದಾಗಿ ಮೆರೆದು ವಿಖ್ಯಾತ ಕಲಾವಿದರು. ಆರ್.ಕೆ.ಲಕ್ಷ್ಮಣ್ ಮತ್ತೋರ್ವ ವಿಶಿಷ್ಟ ರೇಖಾಚಿತ್ರಕಾರರಾಗಿ ಭಾರತದಲ್ಲಿ ಪ್ರಖ್ಯಾತರಾಗಿದ್ದಾರೆ. ಕೊರವಂಜಿ ಮಾಸಪತ್ರಿಕೆಯ ಮೂಲಕ ಬೆಳಕು ಕಂಡ ಇವರು ಟೈಂಸ್ ಆಫ್ ಇಂಡಿಯಾ ಪತ್ರಿಕೆಯ ಕಲಾವಿದರಾಗಿದ್ದಾರೆ. ಮೈಸೂರು ಪ್ರಿಂಟರ್ಸ್ ಲಿಮಿಟೆಡ್ ವೃತ್ತಪತ್ರಿಕಾ ಬಳಗದ ಮೂರ್ತಿ, ರಮೇಶ್ ಮುಂತಾದವರು ರೇಖಾಚಿತ್ರ ರಚನೆಯಲ್ಲಿ ಒಳ್ಳೆಯ ಕೌಶಲವನ್ನು ಮೆರೆದಿದ್ದಾರೆ. ಗೋಪಾಲ್ ಮತ್ತು ಹುಬ್ಳೀಕರ್, ಚಂದ್ರನಾಥ್, ಗುಜ್ಜಾರ್ ಮೊದಲಾದವರು ಪತ್ರಿಕೆಯ ಪ್ರಮುಖ ಕಲಾವಿದರಾಗಿದ್ದಾರೆ. ಬೆಂಗಳೂರಿನ ರಂಗನಾಥ್, ಮಂಗಳೂರಿನ ನವಭಾರತ ಪತ್ರಿಕೆಯ ಎನ್.ಸಿ.ರಘು, ವಿನೋದ, ಕೊರವಂಜಿ, ಸುಧಾ, ಮಯೂರ ಮುಂತಾದವುಗಳ ಮೂಲಕ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿದ ಎಸ್.ಕೆ.ನಾಡಿಗ್ ಮುಂತಾದವರು ರೇಖಾಚಿತ್ರ ರಚನೆಯಿಂದ ಚಿರಪರಿಚಿತರಾಗಿದ್ದಾರೆ.

ಬಳ್ಳಾರಿಯ ಕೊಂಡಾಚಾರಿ ಅವರು ಉತ್ತಮ ರೇಖಾಚಿತ್ರ ರಚನಾ ಚತುರರು. ಇವರಲ್ಲದೆ ಮುಂಬಯಿಯಲ್ಲಿರುವ ರಾಘವೇಂದ್ರ, ಬೆಂಗಳೂರಿನ ಪುರುಷೋತ್ತಮ, ಅನಂತಯ್ಯ, ಆರಗಂ ಕೃಷ್ಣಮೂರ್ತಿ, ಶೇವಾಗೂರ್, ಬಿ.ಪಿ.ಬಾಯಿರಿ, ಹುಬ್ಬಳ್ಳಿಯ ಟಿ.ಕೆ.ರಾವ್, ಕೆ.ಬಿ.ಕುಲಕರ್ಣಿ ಮುಂತಾದವರು ರೇಖಾಚಿತ್ರ ರಚನೆಯಲ್ಲಿ ಒಳ್ಳೆಯ ಪ್ರೌಢಿಮೆಯನ್ನು ಗಳಿಸಿದ್ದಾರೆ.

ಎಸ್.ಎನ್.ಸ್ವಾಮಿಯವರು ತೈಲವರ್ಣದ ಭಾವಚಿತ್ರಕಾರರೆಂದು ಖ್ಯಾತಿ ಪಡೆದಿದ್ದಾರೆ. ಇವರ ಪೆನ್‌ಸಿಲ್‌ನ ರೇಖಾಚಿತ್ರ ಕಲೆಗಾರಿಕೆ ಸಹ ಎಂಥವರನ್ನೂ ಮಾರುಹೋಗಿಸುವಂಥದು. ಖ್ಯಾತಿವೆತ್ತ ಎಸ್.ಜಿ.ಟಂಕಸಾಲೆ ಹಿರಿಯ ಕಲಾವಿದ ಯಲವಟ್ಟಿಯವರೂ ಜಲವರ್ಣ ನಿಸರ್ಗಚಿತ್ರಕಾರರು, ಗ್ರಾಮೀಣ ದೃಶ್ಯದಲ್ಲಿ ತಮ್ಮದೇ ಆದ ವರ್ಣಸಂಯೋಜನೆ ಇವರ ಕಲಾಕೌಶಲ. ಎಂ.ವಿ.ಮಿಣಜಗಿ, ವೈ.ನಾಗರಾಜು, ಬಿ.ಎಚ್.ರಾಮಚಂದ್ರ, ಎಸ್.ಆರ್.ಅಯ್ಯಂಗಾರ್ಯ, ಎನ್.ಎಸ್.ಸುಬ್ಬುಕೃಷ್ಣ, ಎಂ.ಎಚ್.ರಾಮು ಮೊದಲಾದವರು ರೂಪಚಿತ್ರ ರಚನೆಯಲ್ಲಿ ನುರಿತ ಕಲಾವಿದರಾಗಿದ್ದಾರೆ. ಎನ್.ಹನುಮಯ್ಯನವರು ಸುಪ್ರಸಿದ್ಧ ನಿಸರ್ಗಚಿತ್ರಕಾರರಾದ ಎಸ್.ಜಿ.ಟಂಕಸಾಲೆ ಯವರ ಶಿಷ್ಯರು. ಗ್ರಾಮೀಣ ಜೀವನದ ರಮ್ಯದೃಶ್ಯಗಳು ಇವರ ವಸ್ತು. ವಿಶಿಷ್ಟ ಶೈಲಿ ಇವರದು. ಇವರ ಸಾಲಿನಲ್ಲಿ ರುಮಾಲೆ ಚೆನ್ನಬಸವಯ್ಯ, ಎಂ.ಜೆ.ಶುದ್ಧೋದನ, ಎಂ.ಎಸ್.ಚಂದ್ರಶೇಖರ್, ಸೋಮಸುಂದರ, ಪಿ.ಆರ್.ತಿಪ್ಪೇಸ್ವಾಮಿ, ಮರಿಸ್ವಾಮಿ ಮೊದಲಾದವರು ಪ್ರಕೃತಿಚಿತ್ರಕಾರರಲ್ಲಿ ಹೆಸರು ಪಡೆದವರಾಗಿದ್ದಾರೆ. ಸಮಗ್ರ ಭಾರತದ ನಾನಾ ಕಡೆಗಳಲ್ಲಿ ಪ್ರವಾಸ ಮಾಡಿ ಭಾರತದ ಸಾಂಸ್ಕೃತಿಕ ಪರಂಪರೆಯ ಭವ್ಯ ಸಂಕೇತಗಳಾದ ಗುಡಿಗೋಪುರಗಳ ವೈಭವವನ್ನು ಚಿತ್ರಿಸುವುದರಲ್ಲಿ ಪಿ.ಆರ್.ತಿಪ್ಪೇಸ್ವಾಮಿ ಯವರು ನಿಷ್ಣಾತರಾಗಿದ್ದರು.

ಕೆ.ಕೆ.ಹೆಬ್ಬಾರರು ಕ್ರಮಬದ್ಧವಾದ ಸಂಪ್ರದಾಯ ಕಲೆಯಲ್ಲಿ ಅಭ್ಯಾಸ ಮಾಡಿದವರಾದರೂ ಕ್ರಮೇಣ ತಮ್ಮ ಕಲೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆಯುತ್ತ ಬಂದಿದ್ದು ಹೊಸ ಸಂಪ್ರದಾಯದ ಪ್ರಮುಖರಲ್ಲಿ ಒಬ್ಬರೆಂದು ಖ್ಯಾತಿ ಗಳಿಸಿದ್ದಾರೆ. ಭಾರತೀಯ ವಸ್ತುನಿಷ್ಠೆ ಇವರ ಕೃತಿಗಳಲ್ಲಿ ಎದ್ದುತೋರುತ್ತದೆ. ಈ ನವ್ಯ ಸಂಪ್ರದಾಯದಲ್ಲಿ ಕಾರವಾರದ ಲಕ್ಷ್ಮಣ ಪೈ, ಬೆಂಗಳೂರಿನ ಪಿ.ಸುಬ್ಬರಾವ್. ಆರ್.ಎಂ.ಹಡಪದ, ಜಿ.ಎಸ್.ಶೆಣ್ಯೆ, ಎಸ್.ಜಿ.ವಾಸುದೇವ ಅಲ್ಪಂಜೋ ಮೊದಲಾದವರನ್ನು ಹೆಸರಿಸಬಹುದು.

ಶಾಸ್ತ್ರೀಯ ಸಂಪ್ರದಾಯದ ದೇವರುಗಳ ಚಿತ್ರರಚನೆಯಲ್ಲಿ ಅಮೋಘ ಸಿದ್ಧಿಯನ್ನು ಪಡೆದವರು ಮೈಸೂರಿನ ಸಿದ್ಧಲಿಂಗಸ್ವಾಮಿಗಳು. ಇವರ ಪರಂಪರೆಯಲ್ಲಿ ಮೈಸೂರಿನ ನಾಗೇಂದ್ರ ಸ್ಥಪತಿ ಮತ್ತು ಮಹಾದೇವಸ್ವಾಮಿ ಖ್ಯಾತರಾಗಿದ್ದಾರೆ.



ಎಚ್.ಎಸ್.ಇನಾಮತಿ ಅವರ ಕಲೆ

ಜಿ.ಎಸ್.ದಂಡಾವತಿಮಠ, ಡಿ.ವಿ.ಹಾಲಭಾವಿ, ಡಿ.ಜಿ.ಶೆಣ್ಯೆ, ಡಿ.ಜಿ.ಬಡಿಗೇರ, ಎಂ.ಎ.ಚೆಟ್ಟಿ, ಬಿ.ಜಿ.ಗೌಡ, ಟಿ.ಪಿ.ಅಕ್ಕಿ, ರಾಮನರಸಯ್ಯ, ರಘೋತ್ತಮ ಪುಟ್ಟಿ, ಗೂಳಣ್ಣನವರ್, ಎಂ.ಈ.ಗುರು, ಎಸ್.ಕಾಳಪ್ಪ, ಬೆಂಗಳೂರಿನ ಎಂ.ಎಸ್.ನಂಜುಂಡರಾವ್, ಎಂ.ಬಿ.ಬಸವರಾಜಂ, ವಿಷ್ಣುದಾಸ್, ರಾಮದಾಸ್, ಸುಂಕದ, ಮನೋಳಿ, ಯೂಸೂಫ್, ಆರಕಲ್, ಆರ್.ಜಿ.ರಾಯ್ಕರ, ವೈ.ಸುಬ್ರಹ್ಮಣ್ಯರಾಜು, ಸಿ.ಚಂದ್ರಶೇಖರ, ಎನ್.ಸಿ.ದೇಸಾಯಿ, ರಾಮದಾಸ ಅಡ್ಯಂತಾಯ ಎಸ್.ಧನಲಕ್ಷ್ಮೀ, ಕಳುಲಾಕ್ಷಿ.ಎಂ.ಜೆ. ಮೊದಲಾದವರು ಕಲೆಯ ವಿವಿಧ ಪ್ರಕಾರಗಳಲ್ಲಿ ದುಡಿದು ಹೆಸರಾಗಿದ್ದಾರೆ.

ಕೆ.ವೆಂಕಟಪ್ಪ ಅವರ ಪ್ರಕೃತಿ ಚಿತ್ರ

ಕಲಾವಿದೆಯರಲ್ಲಿ ಪಿ.ಆರ್.ಕಮಲಮ್ಮ, ಸುಭಾಷಿಣಿದೇವಿ, ರಾಜಲಕ್ಷ್ಮೀ, ಎಂ.ಜೆ.ಕಮಲಾಕ್ಷಿ, ಎನ್.ಪುಷ್ಪಮಾಲ ಎಸ್.ಧನಲಕ್ಷ್ಮಿ, ಎಂ.ಜೆ.ಕಮಲಾಕ್ಷಿ ಮೊದಲಾದವರನ್ನು ಹೆಸರಿಸಬಹುದು.

**ವಿಮರ್ಶೆ :** ಚಿತ್ರರಚನೆ ಒಂದು ಕಡೆ ನಿರಂತರವಾಗಿ ಸಾಗುತ್ತಿದ್ದರೆ ಮತ್ತೊಂದು ಕಡೆ ಅದನ್ನು ತೂಗಿ ನೋಡಿ ಬೆಲೆ ಕಟ್ಟುವ ಕಲಾವಿಮರ್ಶೆ ಹೆಚ್ಚಾಗಿ ಬೆಳೆದಿಲ್ಲ. ಆದರೂ ಭಾರತದಲ್ಲಿ ಹೆಸರಾದ ಕಲಾವಿಮರ್ಶಕ ಜಿ. ವೆಂಕಟಾಚಲಂ ಅವರು ಕನ್ನಡಿಗರು ಪಾಂಡವಪುರದವರು. ಬಹುಪಾಲು ಇಂಗ್ಲಿಷ್‌ನಲ್ಲೇ ಬರೆದ ಇವರ ಕಲಾವಿಮರ್ಶೆಗಳು ಅತ್ಯುಚ್ಚಮಟ್ಟದ ಸಮತೂಕವಾದ ವಿಮರ್ಶೆಗಳಾಗಿವೆ. ಶಿವರಾಮ ಕಾರಂತರು ಕಲಾವಿದ ಹೆಬ್ಬಾರರ ಬಗ್ಗೆ ಬರೆದಿರುವ ಪುಟ್ಟ ಕೃತಿ ಅವರ ಜೀವಂತ ಕಲಾಪ್ರಜ್ಞೆಗೆ ಸಾಕ್ಷಿ. ಅ.ನ.ಕೃ. ಅವರು ಚಿತ್ರಕಲಾ ವಿಮರ್ಶೆಯಲ್ಲಿ ಹೆಸರಾಗಿದ್ದವರು. ಪಾಶ್ಚಾತ್ಯ ಸಿದ್ಧಾಂತಗಳ ಪರಿಚಯ ಮಾಡಿಕೊಂಡಿದ್ದರು. ಅವರ ಕಲಾವಿಮರ್ಶಾದೃಷ್ಟಿ ಅತ್ಯಂತ ತೀಕ್ಷ್ಣವಾದುದು. ರಾಜಾ ರವಿವರ್ಮ ಪುಸ್ತಕ ಇದಕ್ಕೆ ಒಳ್ಳೆಯ ಉದಾಹರಣೆ. ನಾ ಕಂಡ ಕಲಾವಿದರು ಕೃತಿಗಳಲ್ಲಿ ಸಹ ಕೆಲವು ಚಿತ್ರಕಾರರ ಕೃತಿ ಪರಿಚಯವನ್ನು ಸಮರ್ಪಕವಾಗಿ ಮಾಡಿದ್ದಾರೆ. ಎಸ್.ಕೆ.ರಾಮಚಂದ್ರರಾವ್ ಮತ್ತು ಬಿ.ವಿ.ಕೆ.ಶಾಸ್ತ್ರಿ ಅವರೂ ಚಿತ್ರಕಲಾವಿಮರ್ಶೆಯಲ್ಲಿ ಸಾಕಷ್ಟು ಪರಿಣತಿಯನ್ನು ಪಡೆದುಕೊಂಡಿದ್ದಾರೆ. ಪಿ.ಆರ್.ತಿಪ್ಪೇಸ್ವಾಮಿಯವರು ಕಲಾವಿಮರ್ಶೆಯಲ್ಲೂ ಹೆಸರು ಪಡೆದವರು. ಇವರ ಭಾರತೀಯ ಚಿತ್ರಕಲೆ, ಕಲೋಪಾಸಕರು, ಕರ್ನಾಟಕದ ಚಿತ್ರಕಲೆ ಮುಂತಾದ ಕೃತಿಗಳು ಪ್ರಕಟವಾಗಿವೆ.

**ಶಿಕ್ಷಣ ಮತ್ತು ಪ್ರೋತ್ಸಾಹ :** ಕನ್ನಡ ನಾಡಿನ ಕಲಾಪ್ರೋತ್ಸಾಹದ ಸಲುವಾಗಿ ಮೈಸೂರಿನಲ್ಲಿ 1913ರಲ್ಲಿ ಚಾಮರಾಜ ಒಡೆಯರ ನೆನಪಿನಲ್ಲಿ

ಶ್ರೀ ಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆಯನ್ನು ತೆರೆಯಲಾಯಿತು. ಈ ಶಾಲೆಯ ಕಟ್ಟಡದ ಶಂಕುಸ್ಥಾಪನೆ ಜಾರ್ಜ್ ಚಕ್ರವರ್ತಿಗಳಿಂದ ನೆರವೇರಿತು.



ಕೆ.ಕೆ.ಹೆಬ್ಬಾರ ಅವರ ಕಲೆ

ಇದುವರೆಗೆ ಚಿತ್ರಕಲೆ ಕೆಲವು ಮನೆತನಗಳಿಗಷ್ಟೇ ಸೀಮಿತವಾಗಿರುತ್ತಿತ್ತಾದರೆ ಈ ಕಾಲದಿಂದ ಕಲೆಯು ವಿದ್ಯಾಭ್ಯಾಸ ಆಸಕ್ತರಿಗೆಲ್ಲರಿಗೂ ತೆರೆಯುವಂತಾಯಿತು. ಈ ಶಾಲೆ ಅನೇಕ ಪ್ರಖ್ಯಾತ ಚಿತ್ರಗಾರರಿಗೆ ಮೂಲ ಸ್ಥಾನವಾಯಿತು. ಕೆ.ವೆಂಕಟಪ್ಪ, ಕೆ.ಕೇಶವಯ್ಯ, ಎಸ್. ನಂಜುಂಡಸ್ವಾಮಿ, ಎಸ್.ಎನ್.ಸ್ವಾಮಿ, ಸುಬ್ಬುಕೃಷ್ಣ, ಕೆ.ಕೆ.ಹೆಬ್ಬಾರ್ – ಹೀಗೆ ಅನೇಕಾನೇಕ ವರ್ಣಶಿಲ್ಪಿಗಳನ್ನು ನೆನೆದಾಗಲೆಲ್ಲ ಈ ಕಲಾಶಾಲೆಯನ್ನು ಮರೆಯಲಾಗದು.

ಕರ್ನಾಟಕ ಸರ್ಕಾರ ಹಿಂದಿನಿಂದ ನಡೆಸುತ್ತಿರುವ ಮೈಸೂರಿನ ಚಾಮರಾಜೇಂದ್ರ ವೃತ್ತಿಶಿಕ್ಷಣ ಕಲಾಶಾಲೆಯೇ ಅಲ್ಲದೆ 1964ರಲ್ಲಿ ದಾವಣಗೆರೆಯಲ್ಲಿ ಚಿತ್ರಕಲಾ ಶಾಲೆಯನ್ನು ಸ್ಥಾಪಿಸಿದೆ. ಇವುಗಳನ್ನು ಬಿಟ್ಟರೆ ಖಾಸಗಿಯಾಗಿ ನಡೆಸಿಕೊಂಡು ಬಂದ ಚಿತ್ರಕಲಾ ಶಾಲೆಗಳೇ ಹೆಚ್ಚು. ಅವುಗಳಲ್ಲಿ ಮುಖ್ಯವಾಗಿ ಬೆಂಗಳೂರಿನ ಎ.ಎನ್.ಸುಬ್ಬರಾಯರ ಕಲಾ ಮಂದಿರ (ಸ್ಥಾಪನೆ 1919), ಧಾರವಾಡದ ಹಾಲಭಾವಿಯವರ ಸ್ಕೂಲ್ ಆಫ್ ಆರ್ಟ್ಸ್ (1935), ಗದಗಿನ ಟಿ.ಪಿ.ಅಕ್ಕಿ ಅವರ ವಿಜಯ ಆರ್ಟ್ಸ್ ಇನ್‌ಸ್ಟಿಟ್ಯೂಟ್ (1941), ಹುಬ್ಬಳ್ಳಿಯ ಶ್ರೀ ವಿಜಯಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಮೈಸೂರಿನ ಕಲಾನಿಕೇತನ, ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಚಿತ್ರಕಲಾ ವಿದ್ಯಾಲಯ, ಕೆನ್ ಸ್ಕೂಲ್ ಆಫ್ ಆರ್ಟ್ಸ್ ಮತ್ತು ಆಚಾರ್ಯ ಚಿತ್ರಕಲಾ ಭವನ, ಧಾರವಾಡದ ಕಲಾಕೇಂದ್ರ ಮತ್ತು ಸ್ಕೂಲ್ ಆಫ್ ಆರ್ಟ್ಸ್, ಗುಲ್ಬರ್ಗದ ಐಡಿಯಲ್ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಟ್ ಮತ್ತು ಬೆಳಗಾಂವಿಯ ಉಮರ ಖಯ್ಯಾಮ್ ಸ್ಕೂಲ್ ಆಫ್ ಆರ್ಟ್ಸ್, ಚಿತ್ರಮಂದಿರ ಸ್ಕೂಲ್ ಆಫ್ ಆರ್ಟ್ಸ್ ಮತ್ತು ಬೆನೆನ್ ಸ್ಮಿತ್ ಡಿ.ಟಿ.ಸಿ. ಕಲಾಶಿಕ್ಷಕರ ತರಬೇತಿ ಶಾಲೆ, ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿಯಲ್ಲಿರುವ ಚಿತ್ರಕಲಾಮಂದಿರ ಮೊದಲಾದವು ಚಿತ್ರಕಲೆಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿವೆ. ಇಂದು ನೂರಾರು ಅಭ್ಯರ್ಥಿಗಳು ಉಚ್ಚಕಲೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಈ ಶಾಲೆಗಳಲ್ಲಿ ಚಿತ್ರಕಲೆಯನ್ನು ಅಭ್ಯಾಸ ಮಾಡಿದವರಿಗೆ ಅವರವರ ಪರೀಕ್ಷೆಗಳಿಗನುಸಾರವಾಗಿ ವಿದ್ಯಾ ಇಲಾಖೆ ಕಲಾ ಪರೀಕ್ಷಾ ಮಂಡಳಿಯನ್ನು ನೇಮಿಸಿದೆ. ಅದು ಡ್ರಾಯಿಂಗ್, ಪೆಯಿಂಟಿಂಗ್, ನಾಲ್ಕು ರೀತಿ ಮಾಡಲಿಂಗ್, ಮೂರು ರೀತಿ ಆರ್ಟ್ಸ್ ಟೀಚಿಂಗ್ ಮತ್ತು ಡ್ರಾಯಿಂಗ್ ಗ್ರೇಡ್ ಇವುಗಳಲ್ಲಿ ಪರೀಕ್ಷೆಗಳನ್ನು ನಡೆಸಿ ಜಿ.ಡಿ., ಡಿ.ಟಿ.ಸಿ., ಡಿ.ಎಂ., ಎ.ಎಂ. -ಈ ರೀತಿಯ ಬೇರೆ ಬೇರೆ ಪದವಿಗಳನ್ನು ನೀಡುತ್ತದೆ. ರಾಜ್ಯದಲ್ಲಿ ಹೈಯರ್ ಆರ್ಟ್ಸ್ ಮತ್ತು ಡ್ರಾಯಿಂಗ್ ಗ್ರೇಡ್ ಪರೀಕ್ಷಾ ಕೇಂದ್ರಗಳು ಇವೆ. ಪ್ರತಿ ವರ್ಷ ಸಾವಿರಾರು ಕಲಾಭ್ಯಾಸಿಗಳು ಡ್ರಾಯಿಂಗ್ ಗ್ರೇಡ್ ಪರೀಕ್ಷೆ ಮತ್ತು ಹೈಯರ್ ಆರ್ಟ್ಸ್ ಪರೀಕ್ಷೆಗೆ ಕೂರುತ್ತಿದ್ದಾರೆ.

ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಚಿತ್ರಕಲೆಯ ಬಗ್ಗೆ ಅಗತ್ಯವಾದ ಆಸಕ್ತಿ ಬೆಳೆಸಲು ರಾಜ್ಯದ ಪ್ರತಿಯೊಂದು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಣ ಕ್ರಮದಲ್ಲಿ ಚಿತ್ರಕಲೆಯ ವಿಷಯ ಅಳವಡಿಸಲಾಗಿದೆ. ಆದರೆ ಸದ್ಯದಲ್ಲಿ ಈಗಿನ 2000 ಪ್ರೌಢಶಾಲೆಗಳಲ್ಲಿ ಕೇವಲ 500 ಪ್ರೌಢಶಾಲೆಗಳಲ್ಲಿ ಮಾತ್ರ ಕಲಾಶಿಕ್ಷಕರಿದ್ದಾರೆ. ಈಗ ರಾಜ್ಯದಲ್ಲಿ ಒಂಬತ್ತು ತರಬೇತಿ ಕಲಾಶಾಲೆಗಳಿವೆ.

ಚಿತ್ರಕಲೆಯ ಪ್ರೋತ್ಸಾಹದ ಗುರಿಯನ್ನು ಇಟ್ಟುಕೊಂಡ ಅನೇಕ ಸಂಘಸಂಸ್ಥೆಗಳು ಕರ್ನಾಟಕದಲ್ಲಿ ಇವೆ. 1962ರಲ್ಲಿ ರಾಜ್ಯದ ಲಲಿತಕಲಾ ಅಕಾಡೆಮಿ ಸ್ಥಾಪಿತವಾಯಿತು. ಕಲಾವಿದರ ಹಾಗೂ ಕಲೆಯ ಪ್ರಗತಿಗಾಗಿ ರೂಪುಗೊಂಡ ಈ ಸಂಸ್ಥೆ ಕಲಾಪ್ರದರ್ಶನಗಳನ್ನು ನಡೆಸುವ ಮತ್ತು ಕಲಾಕೃತಿಗಳನ್ನು ಕೊಳ್ಳುವ ಕಾರ್ಯ ನಡೆಸುತ್ತಿದೆ. ಕಲಾಪ್ರದರ್ಶನಗಳನ್ನು ರಾಜ್ಯದ ಒಳಭಾಗದಲ್ಲಿ ನಡೆಸುವ ಕಲಾವಿದರಿಗೆ 500ರೂ.ಗಳ ಸಹಾಯಧನವನ್ನೂ ರಾಜ್ಯದ ಹೊರಗೆ ನಡೆಸುವವರಿಗೆ ಒಂದು ಸಾವಿರ ರೂಪಾಯಿಗಳ ಸಹಾಯಧನವನ್ನೂ ನೀಡುತ್ತ ಬಂದಿದೆ. ಕಲೆಗೆ ಸಂಬಂಧಿಸಿದ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಅನೇಕ ಕಲಾವಿದರಿಗೆ ಪ್ರಶಸ್ತಿಗಳನ್ನು ನೀಡಿದೆ. ಅಲ್ಲದೆ ಮಾಸಾಶನವನ್ನು ನೀಡುತ್ತ ಬಂದಿದೆ. ಭಿತ್ತಿಚಿತ್ರಗಳನ್ನು ನಕಲು ಮಾಡಿಸುವ ಕಾರ್ಯ ನಡೆಸಿದೆ. 1976ರಲ್ಲಿ ಕಲಾವಿದರ ಶಿಬಿರವೊಂದನ್ನು ಕೆ.ಕೆ.ಹೆಬ್ಬಾರರ ನೇತೃತ್ವದಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆಸಿತು.

ಕುಪ್ಪಳಿಯ ಕವಿಶೈಲ: ಪಿ.ಆರ್.ತಿಪ್ಪೆಸ್ವಾಮಿ ಅವರ ಕೃತಿ

ಕರ್ನಾಟಕ ಸರ್ಕಾರ ಕೆ.ವೆಂಕಟಪ್ಪನವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಚಿತ್ರಕಲಾಗಾರವನ್ನು ತೆರೆದಿದೆ. ಇಲ್ಲಿನ ಪ್ರದರ್ಶನಾಲಯದಲ್ಲಿ ಆಗಾಗ ಕಲಾಪ್ರದರ್ಶನಗಳನ್ನು ನಡೆಸಲು ಅವಕಾಶ ಮಾಡಿಕೊಡಲಾಗಿದೆ. ವೆಂಕಟಪ್ಪನವರ ಹೆಸರಿನಲ್ಲಿ ಚಿತ್ರಕಲೆಗೆ ಮಹತ್ತರ ಸೇವೆಸಲ್ಲಿಸಿದವರಿಗಾಗಿ ಕರ್ನಾಟಕದ ಕಲಾವಿದರಿಗೆ ಕರ್ನಾಟಕ ಸರ್ಕಾರ ಒಂದು ಲಕ್ಷರೂಪಾಯಿ ಮೌಲ್ಯದ ಪ್ರಶಸ್ತಿ ನೀಡಿ ಗೌರವಿಸುತ್ತಿದೆ (1994). ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಸಂಶೋಧನೆ ಮತ್ತು ವಸ್ತುಸಂಗ್ರಹಾಲಯ ಇಲಾಖೆ ತನ್ನ ವಸ್ತುಸಂಗ್ರಹಾಲಯಗಳಿಗೆ ಕಲಾಕೃತಿಗಳನ್ನು ಕೊಂಡು ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿದೆ. ಈಚೆಗೆ ಈ ಇಲಾಖೆ ರಾಜ್ಯ ಮಟ್ಟದ ಕಲಾವಿದರ ಪ್ರದರ್ಶನವನ್ನು ನಡೆಸಿ ಅನೇಕ ಕೃತಿಗಳಿಗೆ ಬಹುಮಾನ ನೀಡುವ ಕ್ರಮವನ್ನೂ ಕೈಗೊಂಡಿದೆ.

ಮೈಸೂರಿನಲ್ಲಿ 1960ರಲ್ಲಿ ಸ್ಥಾಪಿತವಾಗಿದ್ದ ಚಿತ್ರಶಿಲ್ಪ ಅಕಾಡೆಮಿ ಪಿ.ಆರ್.ತಿಪ್ಪೇಸ್ವಾಮಿಯವರ ನೇತೃತ್ವದಲ್ಲಿ ಅತ್ಯುತ್ತಮ ಕಾರ್ಯಗಳನ್ನು ಎಸಗಿತು. ಅನೇಕ ಕಲಾವಿದರ ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ನಡೆಸಿ, ಮೈಸೂರಿನಲ್ಲಿ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಿ ಕಲಾಪ್ರಸಾರವನ್ನು ಕೈಗೊಂಡಿತು. ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ಪ್ರದೇಶ ಚಿತ್ರಕಲಾ ಪರಿಷತ್ ಮತ್ತು ಕರ್ನಾಟಕ ಚಿತ್ರಕಲಾವಿದರ ಮಹಾ ಪರಿಷತ್ ಎಂಬ ಎರಡು ಸಂಸ್ಥೆಗಳು ಕಲಾವಿದರ ಏಳಿಗೆಗಾಗಿ ಶ್ರಮಿಸುತ್ತಿವೆ. ಕರ್ನಾಟಕ ಚಿತ್ರಕಲಾ ಪರಿಷತ್ (ನೋಡಿ) ರಾಜ್ಯ ಮಟ್ಟದ ಕಲಾವಿದರ ಸಮ್ಮೇಳನಗಳನ್ನು ನಡೆಸಿ ಕಲಾವಿದರ ಸಂಘಟನೆಗೂ ಶ್ರಮಿಸಿದೆ. ಆಗಾಗ ವಿಧಾನ ಸೌಧದಲ್ಲೂ ದೆಹಲಿಯಲ್ಲೂ ಕಲಾಪ್ರದರ್ಶನಗಳನ್ನು ನಡೆಸಿ ಕರ್ನಾಟಕದ ಚಿತ್ರಕಲೆಗೆ ಖ್ಯಾತಿಯನ್ನು ತಂದುಕೊಟ್ಟಿದೆ. ಮೈಸೂರಿನ ಚಿತ್ರಕಲಾ ಸಂಘ ಕಲಾವಿದರ ಅನೇಕ ಪ್ರದರ್ಶನಗಳನ್ನು ದಸರ ವಸ್ತುಪ್ರದರ್ಶನದ ಹಳೆಯ ಕಟ್ಟಡದಲ್ಲಿ ನಡೆಸಿ ತನ್ನ ಉತ್ತಮ ಸೇವೆಯನ್ನು ಮಾಡಿದೆ.

ಎಸ್.ನಂಜುಂಡಸ್ವಾಮಿ ಅವರ ಕಲೆ

ಮೈಸೂರಿನ ದಸರ ವಸ್ತುಪ್ರದರ್ಶನದ ಚಿತ್ರಕಲಾ ಪ್ರದರ್ಶನ ಇಡೀ ಭಾರತದ ಚಿತ್ರಕಲಾವಿದರ ಕುತೂಹಲವನ್ನು ಸೆಳೆದಿದೆ. ಭಾರತದ ಹೆಸರಾಂತ ಕಲಾವಿದರ ಜೊತೆಯಲ್ಲಿ ಕರ್ನಾಟಕದ ಕಲಾವಿದರೂ ಸ್ಪರ್ಧಿಸಿ ಪುರಸ್ಕಾರಗಳನ್ನು ಪಡೆಯುವ ಅವಕಾಶವನ್ನು ಒದಗಿಸಿದೆ. ಮೈಸೂರಿನ ಶ್ರೀಜಯಚಾಮರಾಜೇಂದ್ರ ಚಿತ್ರಶಾಲೆ, ಮೈಸೂರಿನ ಅರಮನೆ, ಬೆಂಗಳೂರಿನಲ್ಲಿ ವೆಂಕಟಾಚಲಂ ಅವರು ತಮ್ಮ ಮಿತ್ರ ಫ್ರೆಡ್‌ಹಾರ್ವೆ ಅವರ ಹೆಸರಿನಲ್ಲಿ ಸ್ಥಾಪಿಸಿದ ಆರ್ಟ್ ಗ್ಯಾಲರಿ- ಇಲ್ಲಿ ಕರ್ನಾಟಕ ಕಲಾವಿದರ ಅತ್ಯುತ್ತಮ ಕಲಕೃತಿಗಳು ಪ್ರದರ್ಶಿತವಾಗಿವೆ. ಈಚೆಗೆ ಬೆಂಗಳೂರು ನಗರದಲ್ಲೂ ಕಲಾವಿದರ ವಿವಿಧ ಶೈಲಿಗಳ ಕೃತಿಗಳ ಪ್ರದರ್ಶನಗಳು ಆಗಾಗ ಜರುಗುತ್ತಿದ್ದು ಜನರ ಆಸಕ್ತಿಯನ್ನು ಕೆರಳಿಸುತ್ತಿವೆ. (ಪಿ.ಆರ್.ಟಿ.)

**ಚಿತ್ರಗುಪ್ತ** : ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಕನ್ನಡ ಪತ್ರಿಕೆ. ಮೊದಲು ದಿನಪತ್ರಿಕೆಯಾಗಿ 1928ರ ಡಿಸೆಂಬರ್ ಅಂತ್ಯದಲ್ಲಿ ಪ್ರಾರಂಭವಾಯಿತು. ಎಚ್.ಕೆ. ವೀರಣ್ಣಗೌಡರು ಈ ಪತ್ರಿಕೆಯನ್ನು ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯಲ್ಲಿದ್ದ ತಮ್ಮ ಗ್ರಾಮಸೇವಾ ಪ್ರೆಸ್‌ನಲ್ಲಿ ಸಂಪಾದಿಸಿ ಮುದ್ರಿಸಿ ಪ್ರಕಾಶಪಡಿಸುತ್ತಿದ್ದರು. ಕೇವಲ 3 ವರ್ಷಗಳ ಕಾಲ ಮಾತ್ರ ನಡೆದರೂ ತನ್ನ ಧ್ಯೇಯಕ್ಕನುಸಾರವಾಗಿ ದೇಶಸೇವೆ ಸಲ್ಲಿಸಿ ಕೀರ್ತಿ ಗಳಿಸಿತ್ತು. ಸರ್ಕಾರದ ಆಡಳಿತದಲ್ಲಿದ್ದ ಲೋಪದೋಷಗಳನ್ನು ಕಟುವಾಗಿ ಟೀಕಿಸುತ್ತಿದ್ದುದರಿಂದ ಈ ಪತ್ರಿಕೆ ಆಗಿನ ಸರ್ಕಾರದ ಕ್ರೂರ ದೃಷ್ಟಿಗೆ ಪಕ್ಕಾಗಿತ್ತು.

ಬೆಂಗಳೂರಿನಲ್ಲಿ 1929ರಲ್ಲಿ ನಡೆದ ಗಣಪತಿ ಗಲಭೆಯ ಸಂಬಂಧ ವಿಚಾರಣೆ ನಡೆಸಲು ಎಂ.ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸರ್ಕಾರದವರು ಒಂದು ವಿಚಾರಣಾ ಸಮಿತಿಯನ್ನು ರಚಿಸಿದ್ದರು. ಆ ಸಮಿತಿಯ ವರದಿಯನ್ನು ಬಹಿರಂಗಪಡಿಸಬೇಕೆಂದು ನ್ಯಾಯಾವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಎಷ್ಟೇ ಒತ್ತಾಯಪಡಿಸಿದರೂ ಸರ್ಕಾರ ವರದಿಯನ್ನು ಪ್ರಕಟಿಸಲಿಲ್ಲ. ಸರ್ಕಾರದ ಬೀಗಮುದ್ರೆಯಲ್ಲಿದ್ದ ಆ ವರದಿಯ ಪ್ರತಿಯೊಂದನ್ನು ವೀರಣ್ಣಗೌಡರು ಹೇಗೋ ಪಡೆದುಕೊಂಡು ಚಿತ್ರಗುಪ್ತ ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟಿಸುತ್ತ ಬಂದರು. ಆಮೇಲೆ ಸರ್ಕಾರ ವರದಿಯನ್ನು ಪುಸ್ತಕರೂಪದಲ್ಲಿ ಪ್ರಕಟಿಸಿತು. ಅದೇ ರೀತಿ 1928-29ನೆಯ ಸಾಲಿನಲ್ಲಿ ಬೆಂಗಳೂರು ಜಿಲ್ಲಾ ಬೋರ್ಡ್‌ನವರು ಕಬ್ಬನ್ ಪಾರ್ಕ್‌ನಲ್ಲಿ ನಡೆಸಿದ ವಸ್ತುಪ್ರದರ್ಶನದಲ್ಲಿ ಆಡಳಿತಗಾರರು ಲಕ್ಷಾಂತರ ರೂಪಾಯಿ ದುಂದುವೆಚ್ಚ ಮಾಡಿದುದನ್ನು ಸರ್ಕಾರದ ತನಿಖೆ ಶಾಖೆಯವರು ಸರ್ಕಾರಕ್ಕೆ ಕೊಟ್ಟಿದ್ದ ವರದಿಯನ್ನೂ ದಿವಾನರು ಪ್ರಕಟಿಸಲು ಅವಕಾಶ ಕೊಡಲಿಲ್ಲ. ಆ ವರದಿಯೂ ಚಿತ್ರಗುಪ್ತ ಪತ್ರಿಕೆಯಲ್ಲಿ ಪ್ರಕಟವಾಯಿತು. ದಾವಣಗೆರೆಯಲ್ಲಿ ನಡೆದ ಹಿಂದು ಮುಸ್ಲಿಂ ಗಲಭೆಯ ನಿಜಾಂಶಗಳನ್ನು ವಿವರವಾಗಿ ಪ್ರಕಟಿಸಬಾರದೆಂದು ಸರ್ಕಾರದವರು ಪ್ರಯತ್ನಿಸಿದರು. ಆದರೆ ಚಿತ್ರಗುಪ್ತ ಪತ್ರಿಕೆಯಲ್ಲಿ ಆ ವಿವರಗಳ ನಿಜಾಂಶಗಳು ಪ್ರಕಟವಾದುವು. ಈ ಎಲ್ಲ ಕಾರ್ಯಗಳಿಂದ ಪತ್ರಿಕೆಯ ಬಗ್ಗೆ ಸರ್ಕಾರದ ಕಿರುಕುಳ ಸಹಿಸಲಾರದಷ್ಟಾಯಿತು. ಜೊತೆಗೆ ಪತ್ರಿಕೆ ನಾನಾವಿಧವಾದ ಆರ್ಥಿಕ ಮುಗ್ಗಟ್ಟಿಗೆ ಒಳಗಾಯಿತು. ರಾಷ್ಟ್ರೀಯ ಕನ್ನಡ ದಿನಪತ್ರಿಕೆಯೆಂದು ಖ್ಯಾತಿಪಡೆದಿದ್ದ ಚಿತ್ರಗುಪ್ತ ದಿನಪತ್ರಿಕೆಯೂ ಅದೇ ಹೆಸರಿನಲ್ಲಿ ಕೆಲಕಾಲದಿಂದ ಹೊರಬರುತ್ತಿದ್ದ ವಾರ ಪತ್ರಿಕೆಯೂ 1931ರ ಅಂತ್ಯದ ಹೊತ್ತಿಗೆ ಅನಿವಾರ್ಯವಾಗಿ ಪ್ರಕಟನೆ ನಿಲ್ಲಿಸಬೇಕಾಯಿತು.

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದು ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪಿತವಾದಮೇಲೆ ಕೆಲವು ಮಂದಿ ಸ್ನೇಹಿತರು ಖಾಸಗಿ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡು ಪುನಃ ಚಿತ್ರಗುಪ್ತ ಪತ್ರಿಕೆಯನ್ನು ಹೊರಡಿಸಲು ವೀರಣ್ಣಗೌಡರನ್ನು ಪ್ರೋತ್ಸಾಹಿಸಿದರು. ಅದೂ ಕೇವಲ ಒಂದು ವರ್ಷಕಾಲ ನಡೆದು ಹಣದ ಮುಗ್ಗಟ್ಟಿನಿಂದ ನಿಂತಿತು. ಅನಂತರ ಪತ್ರಿಕೆಯ ಉಪಸಂಪಾದಕರಾಗಿದ್ದ ಎಂ.ಎಸ್.ಭಾರದ್ವಾಜರ ಸಂಪಾದಕತನದಲ್ಲಿ ವಾರಪತ್ರಿಕೆ ಕೆಲವು ತಿಂಗಳು ಮಾತ್ರ ನಡೆಯಿತು. (ಎಚ್.ಕೆ.ವಿ.)

**ಚಿತ್ರದುರ್ಗ** : ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ. 1997ರಲ್ಲಿ ಜಿಲ್ಲಾ ಪುನರ್ವಿಂಗಡನೆ ಯಾದಾಗ ಈ ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲ್ಲೂಕುಗಳು ದಾವಣಗೆರೆ ಜಿಲ್ಲೆಗೆ ಸೇರಿದವು. ಬಳ್ಳಾರಿ ಜಿಲ್ಲೆ, ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ, ತುಮಕೂರು ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ದಾವಣಗೆರೆ ಜಿಲ್ಲೆ -ಇವು ಚಿತ್ರದುರ್ಗ ಜಿಲ್ಲೆಯನ್ನೂ ಸುತ್ತುವರಿದಿದೆ. ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಮೊಳಕಾಲ್ಮೂರು, ಹೊಸದುರ್ಗ, ಹೊಳಲ್ಕೆರೆ ಈ ಜಿಲ್ಲೆಯ ತಾಲ್ಲೂಕುಗಳು, ಜಿಲ್ಲೆಯ

ವಿಸ್ತೀರ್ಣ 8,388ಚ.ಕಿಮೀ. 22 ಹೋಬಳಿಗಳು, 932 ಜನವಸತಿ, ಇರುವ ಗ್ರಾಮಗಳು ಇವೆ. ಜನಸಂಖ್ಯೆ 15,10,227.

ಜಿಲ್ಲೆಯ ಹೆಚ್ಚು ಭಾಗ ತಗ್ಗಾದ ಕಣಶಿಲೆಯ ಬೋಳು ಬೆಟ್ಟಗಳಿಂದಲೂ ಮಧ್ಯೆಮಧ್ಯೆ ಇರುವ ಸ್ವಲ್ಪ ಮಟ್ಟಸವಾದ ಕಣಿವೆಗಳಿಂದಲೂ ಕೂಡಿದೆ. ಮುಖ್ಯವಾದ ಬೆಟ್ಟಸಾಲುಗಳು ದಕ್ಷಿಣ ಆಗ್ನೇಯದಿಂದ ಉತ್ತರ ವಾಯವ್ಯದ ಕಡೆಗೆ ಸಮಾಂತರದಲ್ಲಿ ಸಾಗುತ್ತವೆ. ಪೂರ್ವ ಸಾಲು ಹಿರಿಯೂರಿನ ಪಶ್ಚಿಮದಿಂದ ಚಿತ್ರದುರ್ಗದ (984ಮೀ) ಪರ್ಯಂತ ಹಬ್ಬಿ, ಮುಂದೆ ಸ್ವಲ್ಪ ದೂರ ಬಿಟ್ಟು ವಾಯುವ್ಯದಲ್ಲಿ ಕಣಕುಪ್ಪ ಬೆಟ್ಟದಲ್ಲಿ (839ಮೀ) ಮುಂದುವರಿದು ಜಿಲ್ಲೆಯ ಎಲ್ಲೆಯವರೆಗೂ ಸಾಗುತ್ತದೆ. ಚಿತ್ರದುರ್ಗದ ದಕ್ಷಿಣಕ್ಕಿರುವ ಜೋಗಿ ಮರಡಿ (1,159ಮೀ), ಏಚಲದುರ್ಗ (1,160ಮೀ) ಮತ್ತು ಬೀರನಕಲ್ಲುದುರ್ಗ (1,177ಮೀ) ಈ ಸಾಲಿನ ಉನ್ನತ ಶಿಖರಗಳು. ಪಶ್ಚಿಮ ಶ್ರೇಣಿ ಹೊಸದುರ್ಗದಲ್ಲಿ (983ಮೀ) ಆರಂಭವಾಗಿ, ಮಾಯಕೊಂಡದ ಮೂಲಕ ಅಣಜಿ ಕಡೆಗೆ ಹಬ್ಬಿದೆ. ಹೊಸದುರ್ಗ ತಾಲ್ಲೂಕಿನಲ್ಲಿರುವ ಹಾಲರಾಮೇಶ್ವರಗುಡ್ಡ (1,181ಮೀ) ಈ ಶ್ರೇಣಿಯ ಹಾಗೂ ಜಿಲ್ಲೆಯ ಅತಿ ಎತ್ತರದ ಬೆಟ್ಟ. ಶ್ರೇಣಿಗಳ ಹೆಚ್ಚಿನ ಭಾಗ ಹಿರಿಯೂರು, ಚಿತ್ರದುರ್ಗ, ಹೊಸದುರ್ಗ ತಾಲ್ಲೂಕುಗಳಲ್ಲಿವೆ. ಮೊಳಕಾಲ್ಮೂರುವಿನ ಬಳಿ ಕೆಲವು ಬೆಟ್ಟಗಳುಂಟು. ಇವುಗಳಲ್ಲಿ ಮುಖ್ಯವಾದವು ನುಂಕೆಭೈರವ (921ಮೀ,) ಜಟಿಂಗರಾಮೇಶ್ವರ (1,057ಮೀ) ಮತ್ತು ಶಾಂತಿಗುಡ್ಡ (791ಮೀ). ಈ ಪ್ರದೇಶ ವಿಶಿಷ್ಟ ಸೌಂದರ್ಯದಿಂದ ಕೂಡಿದ್ದೆಂದು ಬ್ರೂಸ್‍ಫೂಟ್ ಬರೆದಿದ್ದಾನೆ. ಬೆಟ್ಟಗಳ ಶ್ರೇಣಿಗಳನ್ನು ಬಿಟ್ಟರೆ ಜಿಲ್ಲೆಯ ಉಳಿದ ಭಾಗ ಮಟ್ಟಸವಾದ ಮೈದಾನ. ಅಂಥ ವೈವಿಧ್ಯವೇನೂ ಇಲ್ಲ. ಇಡೀ ಜಿಲ್ಲೆ ಸಮುದ್ರಮಟ್ಟದಿಂದ ಸಾಮಾನ್ಯವಾಗಿ 600ಮೀ ಎತ್ತರದಲ್ಲಿದೆ. ಸಾಮಾನ್ಯವಾಗಿ ಉತ್ತರ ಮತ್ತು ಈಶಾನ್ಯಕ್ಕೆ ಇಳಿಜಾರಾಗಿದೆ.



ವಾಣಿವಿಲಾಸ ಸಾಗರ, ಹಿರಿಯೂರು

ಬಾಬಾಬುಡನ್‍ಗಿರಿ ಶ್ರೇಣಿಯಿಂದ ಹರಿದು ಬರುವ ವೇದಾವತಿ ಜಿಲ್ಲೆಯ ಮುಖ್ಯ ನದಿ. ಜಿಲ್ಲೆಯ ದಕ್ಷಿಣ ಮತ್ತು ಪೂರ್ವಭಾಗದ ಎಲ್ಲೆಗೆ ಸುಮಾರು ಸಮಾಂತರವಾಗಿ ಸಾಗುವ ಈ ನದಿ ನೈರುತ್ಯದಲ್ಲಿ ಹೊಸದುರ್ಗ ತಾಲ್ಲೂಕನ್ನು ಪ್ರವೇಶಿಸಿ ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕುಗಳ ಮೂಲಕ 207ಕಿಮೀ ದೂರ ಹರಿಯುತ್ತದೆ. ಜನಗನಹಳ್ಳ (ಚಿಕ್ಕಹಗರಿ) ಎಂಬುದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕುಗಳಲ್ಲಿ ಹರಿದು ವೇದಾವತಿಯನ್ನು ಸೇರುತ್ತದೆ. ಸ್ವರ್ಣಮುಖಿ ನದಿ ತುಮಕೂರು ಜಿಲ್ಲೆಯಲ್ಲಿ ಹುಟ್ಟಿ ಹಿರಿಯೂರು ತಾಲ್ಲೂಕಿನ ಇಕ್ಕನೂರು ಬಳಿ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಿ 11ಕಿಮೀ ದೂರ ಹರಿದು ವೇದಾವತಿಯನ್ನು ಸೇರುತ್ತದೆ. ಹೊಳಲ್ಕೆರೆಯ ಪಶ್ಚಿಮ ಭಾಗದ ಬೆಟ್ಟಗಳಲ್ಲಿ ಹುಟ್ಟಿ, ಚಿತ್ರದುರ್ಗ ಜಿಲ್ಲೆಯಲ್ಲಿ 72ಕಿಮೀ ದೂರ ಹರಿದು, ತುಂಗಭದ್ರಾ ನದಿಯನ್ನು ಸೇರುವ ತರೆ ಸ್ಯಾಗಲಹಳ್ಳ, ಈ ಜಿಲ್ಲೆಯಲ್ಲಿ ಹರಿಯುವ ಗರಣಿ ಮತ್ತು ನಾಯಕನಹಟ್ಟಿ ತೊರೆಗಳು ಹಿರಿಯೂರಿಗೆ 11ಕಿಮೀ ದೂರದಲ್ಲಿ ವೇದಾವತಿಯನ್ನು ಸೇರುತ್ತದೆ. ಜಿಲ್ಲೆಯಲ್ಲಿ ಮಳೆ ಕಡಿಮೆ. ಬೇಸಗೆಯ ತಾಪ ಹೆಚ್ಚು. ಚಳಿಗಾಲ ಹಿತಕರ. ಚಳಿಗಾಲದ ಸರಾಸರಿ ಉಷ್ಣತೆ $27.9^0$ಸೆಂ. ಬೇಸಗೆಯಲ್ಲಿ $36.2^0$ಸೆಂ. ನಿಂದ $41^0$ಸೆಂ. ಈ ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ 655ಮಿಮೀ.

ಜಿಲ್ಲೆಯಲ್ಲಿ ಕಣಶಿಲೆ ಹೆಚ್ಚುಮಟ್ಟಿಗೆ ಹರಡಿದೆ. ಶಿಸ್ಟ್ ಕಲ್ಲು, ಕ್ವಾರ್ಟ್‍ಜೈಟ್, ಸಮೂಹ ಶಿಲೆಗಳು (ಗಾಂಗ್ಲಾಮರೆಟ್ಸ್), ಸುಣ್ಣಕಲ್ಲು ಮತ್ತು ಕಬ್ಬಿಣಯುಕ್ತ ಶಿಲಾಪದರಗಳು ಇವೆ. ಅಲ್ಲಲ್ಲಿ ಡಾಲರೈಟ್ ನುಗ್ಗುಶಿಲೆಗಳೂ ಉಂಟು. ಹೊಸದುರ್ಗ ತಾಲ್ಲೂಕಿನ ಬೂದಿಹಾಳು, ಗಂಜಿಗೆರೆ, ಹಿರಿಯೂರು ತಾಲ್ಲೂಕಿನ ಗೋಗುಡ್ಡ ಇವುಗಳ ಬಳಿ ಕಲ್ನಾರು ದೊರೆಯುತ್ತದೆ. ಹೊಳಲ್ಕೆರೆ ತಾಲ್ಲೂಕಿನ ಶಿವಗಂಗೆ ಬೆಟ್ಟಗಳಲ್ಲಿ, ಬಾಕ್ಸೈಟ್ ಅದುರು ಇದೆ. ಚಿತ್ರದುರ್ಗ ತಾಲ್ಲೂಕಿನ ಚಿಕ್ಕಣ್ಣನಹಳ್ಳಿ ಬಳಿ ಆಂಟಿಮೊನಿಯ ಸ್ವಲ್ಪ ಪ್ರಮಾಣದ ನಿಕ್ಷೇಪವಿದೆ. ಚಳ್ಳಕೆರೆಯ ಬಳಿಯಲ್ಲಿ ಕೊರಂಡಂ, ಕಾಳನಗವೆ ಬೆಟ್ಟಗಳಲ್ಲಿ ಕ್ರೋಮೈಟ್ ದೊರಕುತ್ತದೆ. ಹಿರಿಯೂರು ತಾಲ್ಲೂಕಿನ ಗವನಹಳ್ಳಿಯಲ್ಲಿ ಕ್ಯಾಲ್ಸೈಟ್, ಹೊಳಲ್ಕೆರೆ ತಾಲ್ಲೂಕಿನಲ್ಲಿ ಕ್ಯಾನೈಟ್, ಹೊಳಲ್ಕೆರೆ ತಾಲ್ಲೂಕಿನ ಕುಡಿನೀರುಕಟ್ಟೆ ಬಳಿ ವರ್ಮಿಕುಲೇಟ್ ದೊರಕುತ್ತವೆ. ಚಿತ್ರದುರ್ಗ ತಾಲ್ಲೂಕಿನ ಇಂಗಳದಾಳು (ನೋಡಿ) ಬಳಿ ಉತ್ತಮವಾದ ತಾಮ್ರದ ಅದುರು ಇದೆ. ಇಂಗಳದಾಳಿನಲ್ಲಿ ತಾಮ್ರದ ಅದುರನ್ನು ತೆಗೆಯಲಾಗುತ್ತಿದೆ. ಇಲ್ಲಿ ಪೈರೈಟ್ ನಿಕ್ಷೇಪಗಳು ಸಹ ಇವೆ. ಪೈರೈಟ್‍ಗಳು ಚಿತ್ರದುರ್ಗ ತಾಲ್ಲೂಕಿನ ಕುರುಬರ ಮರಡಿಕೆರೆ, ಕಲ್ಲೆಹಡಲು, ಯರೆಹಳ್ಳಿಗಳ ಬಳಿ ಸಹ ಇವೆ. ಜಿಲ್ಲೆಯ ಹಲವೆಡೆಗಳಲ್ಲಿ ಚಿನ್ನದ ನಿಕ್ಷೆಪಗಳಿದ್ದು ಚಿತ್ರದುರ್ಗ ತಾಲ್ಲೂಕಿನ ಕೋಟೆಮರಡಿ ಮತ್ತು ಗೋಣೂರು, ಹೊಸದುರ್ಗ ತಾಲ್ಲೂಕಿನ ಬೂದಿಮರಡಿ, ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿ, ಅಣ್ಣೆಸಿದ್ರಿ, ದಿಂಡಿವಾರ - ಈ ಸ್ಥಳಗಳಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನವನ್ನು ತೆಗೆಯುತ್ತಿದ್ದ ಬಗ್ಗೆ ಸೂಚನೆಗಳಿವೆ. ಹಿರಿಯೂರು ತಾಲ್ಲೂಕಿನಲ್ಲಿ ಉತ್ತಮವಾದ ಕಬ್ಬಿಣದ ಅದಿರಿದೆ. ಹೊಸದುರ್ಗ, ಹೊಳಲ್ಕೆರೆ ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲೂ ಸ್ವಲ್ಪಮಟ್ಟಿಗೆ ಕಬ್ಬಿಣದ ಅದುರಿನ ಹರಹುಗಳಿವೆ. ಸ್ಫಟಿಕ ಜಾತಿಯ ಸುಣ್ಣಕಲ್ಲಿನ ಪದರಗಳು ಜಿಲ್ಲೆಯ ಅನೇಕ ಕಡೆಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಹಿರಿಯೂರಿನ ವಾಯವ್ಯಕ್ಕಿರುವ ಜವಗೊಂಡನಹಳ್ಳಿ, ಹೊಸದುರ್ಗ ತಾಲ್ಲೂಕಿನ ಮಾರಿಕಣಿವೆ ಮತ್ತು ಮಡದಕೆರೆ, ಕಂಚಿಪುರ ಭಾಗಗಳು, ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆ, ದೇವರಪುರ, ದಾವಣಗೆರೆ ತಾಲ್ಲೂಕಿನ ದೇವರ ಬೆಳ್ಳಿಕೆರೆ ಇಲ್ಲಿನ ಹರಹುಗಳು ಮುಖ್ಯವಾದುವು. ಚಿತ್ರದುರ್ಗ ತಾಲ್ಲೂಕಿನ ಕುರುಬರ ಮರಡಿಕೆರೆ, ಗೋಣೂರು, ಗುಡ್ಡದ ರಂಗವನಹಳ್ಳಿ ಮತ್ತು ಹಿರಿಯೂರು ತಾಲ್ಲೂಕಿನ ನಿಶಾನಿಗುಡ್ಡ – ಇವುಗಳ ಬಳಿ ಸ್ವಲ್ಪ ಪ್ರಮಾಣದಲ್ಲಿ ಸೀಸದ ಅದುರು ಇದೆ. ಹೊಸದುರ್ಗ, ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಅದುರು ವ್ಯಾಪಕವಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಲೋಕದೊಳಲಿನ ಬಳಿ ಬಳಪದಕಲ್ಲು, ಹಿರಿಯೂರಿನಲ್ಲಿ ಹಾಸಗಲ್ಲು ಮತ್ತು ಚಿತ್ರದುರ್ಗ ತಾಲ್ಲೂಕಿನಲ್ಲಿ ನುರುಜು ಸುಣ್ಣಕಲ್ಲು ದೊರಕುತ್ತವೆ. ಚಿತ್ರದುರ್ಗ ಮತ್ತು ಹೊಸದುರ್ಗ ತಾಲ್ಲೂಕಿನ ಹಲವೆಡೆಗಳಲ್ಲಿ ಉತ್ತಮವಾದ ವಿವಿಧ ಬಣ್ಣದ ಸುದ್ದೆ ಮಣ್ಣುಗಳುಂಟು.

ಜಿಲ್ಲೆಯಲ್ಲಿ ಕುರುಚಲು ಕಾಡುಗಳೇ ಹೆಚ್ಚು. ಮಳೆ ಹೆಚ್ಚಾಗಿಲ್ಲದ ಭಾಗಗಳಲ್ಲಿ ಹುಣಿಸೆ, ಮಾವು, ಹಿಪ್ಪೆ ಮರಗಳು, ಜಾಲಿ ಜಾತಿಯ ಗಿಡಗಳು ಮತ್ತು ಸೀತಾಫಲ ಬೆಳೆಯುತ್ತವೆ. ತಂಪು ತಿಂಗಳುಗಳಲ್ಲಿ ಚಳ್ಳಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳ ಅಮೃತಮಹಲ್ ಹುಲ್ಲುಗಾವಲುಗಳು ಅಚ್ಚಹಸಿರಾಗಿರುತ್ತವೆ. ಹೊಸದುರ್ಗದ ಬಳಿಯ ವೇದಾವತಿ ಕಣಿವೆ ಸಸ್ಯಸಂಪದ್ಯುಕ್ತವಾದ್ದು. ಜೋಗಿಮಟ್ಟಿ ಬೆಟ್ಟಗಳ ಬಳಿ ಬಿದಿರುಮೆಳೆಗಳು ಉಂಟು. ಚೌಬೀನೆಗೆ ಯೋಗ್ಯವಾದ ಕಮ್ಮರ, ಸೋಮೆ (ಸ್ವಾಮಿ ಮರ ಮತ್ತು ಕೆಂಪು ಖೈರ ಮರಗಳು ಅಲ್ಲಿ ಬೆಳೆಯುತ್ತವೆ. ದಿಂಡಿಗ, ಬೇವು, ಕಕ್ಕೆ, ಚುಜ್ಜಲು, ತಂಗಡಿ) ಇತರ ಬಗೆಯ ಮರಗಳು, ಬೆಟ್ಟಗುಡ್ಡಗಳಲ್ಲಿ ಚಿರತೆ, ಕತ್ತೆಕಿರುಬ, ಕರಡಿ, ಕಾಡುಹಂದಿಗಳಿವೆ. ಹುಲಿಗಳೂ ಉಂಟು. ಜಿಂಕೆಗಳು ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಹೆಚ್ಚು. ನಾಗರಹಾವು, ಮಂಡಲದಹಾವುಗಳು ಇವೆ. ಮಂಡರಗಪ್ಪೆ ಮತ್ತು ಇತರ ಬಗೆಯ ಚೇಳುಗಳುಂಟು. ತುಂಗಭದ್ರಾ ನದಿಯಲ್ಲಿ ಮೊಸಳೆಗಳಿವೆ. ಕಾಡುಕಾಗೆ, ಮೈನ, ಮರಕುಟಿಗ, ಕಾಡುಪಾರಿವಾಳ, ಕಾಡುಕೋಳಿ, ಕವುಜಗ, ನೀರುಕೋಳಿ, ಕೋಗಿಲೆ, ಬಾನಾಡಿ ಇವು ಜಿಲ್ಲೆಯಲ್ಲಿರುವ ಪಕ್ಷಿಗಳಲ್ಲಿ ಮುಖ್ಯವಾದವು. ಮತ್ತೋಡು ಬಳಿ ಕೊಕ್ಕರೆಗಳುಂಟು.


ಚಿತ್ರದುರ್ಗ ಜಿಲ್ಲೆ
0 10 20
ಕಿಲೋಮೀಟರುಗಳು
ಚಿತ್ರದುರ್ಗ ಜಿಲ್ಲೆ
ರಾಮಪುರ
ಬ್ರಹ್ಮಗಿರಿ
ಸಿದ್ದಾಪುರ
ಜಟಿಂಗರಾಮೇಶ್ವರ
ಮೊಳಕಾಲ್ಮೂರು
ಬೊಮ್ಮಗೊಂಡನ ಕೆರೆ
ಹಿರೇಕೆರೆಹಳ್ಳಿ
ನಾಯಕನಹಟ್ಟಿ
ತಳಕು
ತಿಪ್ಪಾರೆಡ್ಡಿಹಳ್ಳಿ
ಭರಮಸಾಗರ
ಮುದ್ದಾಪುರ
ತುರುವನೂರು
ಚಳ್ಳಕೆರೆ
ಸಿರಿಗೆರೆ
ಚಿತ್ರದುರ್ಗ
ದೊಡ್ಡೇರಿ
ಪರಶುರಾಮಪುರ
ಭರಮನಾಯಕನ ದುರ್ಗ
ಚಂದ್ರವಳ್ಳಿ
ಇಂಗಳದಾಳು
ಚಿಕ್ಕಜಾಜೂರು
ಐಮಂಗಲ
ಹರ್ತಿಕೋಟೆ
ವೇದಾವತಿ
ಧರ್ಮಪುರ
ಹೊಳಲ್ಕೆರೆ
ಹಿರಿಯೂರು
ತಾಳ್ಯ
ಭರಮಗಿರಿ
ರಾಮಗಿರಿ
ಮಾಡದಕೆರೆ
ಸುವರ್ಣಮುಖಿ
ವಾಣೀವಿಲಾಸಸಾಗರ
ಹೊಸದುರ್ಗ
ನೀರಗುಡ್ಡ
ಜವಗೊಂಡನಹಳ್ಳಿ
ಮತ್ತೋಡು
ಶ್ರೀರಾಂಪುರ

ಕೆರೆ ಬಾವಿಗಳು ಜಿಲ್ಲೆಯ ನೀರಾವರಿ ಮೂಲಗಳು. ಹೊಸದುರ್ಗ ತಾಲ್ಲೂಕಿನ ಮಾರಿಕಣಿವೆಯಲ್ಲಿ ವೇದಾವತಿ ನದಿಗೆ ಕಟ್ಟಲಾಗಿರುವ ವಾಣಿವಿಲಾಸ ಸಾಗರ ಜಲಾಶಯದಿಂದ ಹಿರಿಯೂರು ತಾಲ್ಲೂಕಿನ ಕೆಲವು ಭಾಗ ಸಾಗುವಳಿಯಾಗುತ್ತದೆ. ಹಿರಿಯೂರು ತಾಲ್ಲೂಕಿನ ಕರಿಯಾಲದ ಬಳಿ ಸ್ವರ್ಣಮುಖಿ ನದಿಗೆ ಅಣೆ ಕಟ್ಟಲಾಗಿದೆ. ಚಳ್ಳಕೆರೆ ತಾಲ್ಲೂಕಿನ ಭಾಗದಲ್ಲಿ ವೇದಾವತಿಯಿಂದ ನೀರನ್ನು ಎತ್ತಿ ಅಥವಾ ಪ್ರವಾಹವನ್ನು ತಿರುಗಿಸಿ ವ್ಯವಸಾಯಕ್ಕೆ ನೀರು ಬಳಸುವುದು ಸಾಮಾನ್ಯ. ಜನಗನಹಳ್ಳಕ್ಕೆ ಅಡ್ಡಲಾಗಿ ಭಟ್ಟರಹಳ್ಳಿ, ಮಲ್ಲಳ್ಳಿ ಮತ್ತು ದೇವಸಮುದ್ರ ಕೆರೆಗಳನ್ನು ಕಟ್ಟಲಾಗಿದೆ. ಚಿತ್ರದುರ್ಗ ತಾಲ್ಲೂಕಿನ ಭೀಮಸಮುದ್ರ, ಚಳ್ಳಕೆರೆ ತಾಲ್ಲೂಕಿನ ಧರ್ಮಾಪುರಕೆರೆ, ಹೊಳಲ್ಕೆರೆ ತಾಲ್ಲೂಕಿನ ಮುತ್ತುಗದೂರು ಕೆರೆ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಕೆಲವು. ಜೋಳ ಮತ್ತು ರಾಗಿ ತಾಲ್ಲೂಕಿನ ಮುಖ್ಯಬೆಳೆಗಳು. ಹತ್ತಿ, ಬತ್ತ, ಕಬ್ಬು ತಲ್ಲೂಕಿನ ಇತರ ಬೆಳೆಗಳು. ಕಡಲೆಕಾಯಿ, ಎಣ್ಣೆಬೀಜಗಳು-ಹೊಗೆಸೊಪ್ಪು,—ಇತರ ಬೆಳೆಗಳು. ತೊಗರಿ, ನವಣೆ, ಸಾಸುವೆ, ಬಾಳೆ, ಅಡಕೆ, ತೆಂಗು, ಈರುಳ್ಳಿ, ಮೆಣಸಿನಕಾಯಿ, ಹಣ್ಣು, ತರಕಾರಿಗಳು ಇವನ್ನು ಸ್ವಲ್ಪಮಟ್ಟಿಗೆ ಬೆಳೆಯಲಾಗುತ್ತದೆ.

ಬೃಹದೇಶ್ವರ ಸ್ಥಂಭ: ಚಿತ್ರದುರ್ಗ

ಕೋಳಿಸಾಕಣೆ ಉದ್ಯಮ ಜಿಲ್ಲೆಯಲ್ಲಿ ಸಾಕಷ್ಟಿದೆ. ಜಿಲ್ಲೆಯ ಮತ್ಸ್ಯೋದ್ಯಮ ಹೆಚ್ಚಾಗಿ ವಾಣಿವಿಲಾಸ ಸಾಗರವನ್ನು ಅವಲಂಬಿಸಿದೆ. ಜೊತೆಗೆ ನದಿಗಳೂ ನೂರಾರು ದೊಡ್ಡ ಕೆರೆಗಳೂ ಸಾಮಾನ್ಯ ಕೆರೆಗಳೂ ಮತ್ಸ್ಯೋದ್ಯಮಕ್ಕೆ ಸಹಕಾರಿಯಾಗಿವೆ. ಚಿತ್ರದುರ್ಗ ಮತ್ತು ವಾಣಿವಿಲಾಸಪುರದಲ್ಲಿ ಇದಕ್ಕೆ ಸಂಬಂಧಿಸಿದ ಸರ್ಕಾರಿ ಕಚೇರಿಗಳಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಮುಖ್ಯ ಊರುಗಳಿಗೆ ಉತ್ತಮ ರಸ್ತೆ ಸಂಪರ್ಕವಿದೆ. ಅವುಗಳಲ್ಲಿ ರಾಷ್ಟ್ರೀಯ ಹೆದ್ದಾರಿ 4, ಬೆಂಗಳೂರು-ಬಳ್ಳಾರಿ, ರಾಜ್ಯ ಹೆದ್ದಾರಿ; ಬೆಂಗಳೂರು – ಪುಣೆ, ಬ್ರಾಡ್‌ಗೇಜ್ ರೈಲುಮಾರ್ಗ ಚಿತ್ರದುರ್ಗ ಜಿಲ್ಲೆಯ ಮೂಲಕ ಹಾದು ಹೋಗುತ್ತದೆ. ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ 34ಕಿಮೀ ದೂರದ ರೈಲುಮಾರ್ಗವುಂಟು.

ಗಣಿಗಾರಿಕೆ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆಯುತ್ತಿದೆ. ಹೊಸದುರ್ಗ, ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಗಣಿಗಳಿವೆ. ಜಿಲ್ಲೆಯಲ್ಲಿ ಕಬ್ಬಿಣದ ಮತ್ತು ತಾಮ್ರದ ಗಣಿಗಳಿವೆ. ಚಿತ್ರದುರ್ಗ ತಾಲ್ಲೂಕಿನ ಇಂಗಳದಾಳು, ಕೊಲಾಹಾಳು, ಕಲ್ಲೆಹಡಲು ಈ ಸ್ಥಳಗಳಲ್ಲಿ ಗಂಧಕ ತೆಗೆಯಲಾಗುತ್ತಿದೆ. ಇಂಗಳದಾಳಿನಲ್ಲಿ ತಾಮ್ರದ ಅದುರನ್ನು ತೆಗೆದು ಸಂಸ್ಕರಿಸಲಾಗುತ್ತಿದೆ. ಯಂತ್ರಪುರದ ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಕಡೆತದ ಯಂತ್ರಗಳೇ ಮೊದಲಾದ ಯಂತ್ರೋಪಕರಣಗಳು ತಯಾರಾಗುತ್ತವೆ. ಚಳ್ಳಕೆರೆ, ಚಿತ್ರದುರ್ಗಗಳಲ್ಲಿ ಎಣ್ಣೆ ಗಿರಣಿಗಳಿವೆ. ಹಿರಿಯೂರಿನಲ್ಲಿ ಸಕ್ಕರೆ ಕಾರ್ಖಾನೆ ಇದೆ. ಈ ಜಿಲ್ಲೆಯ ಕೈಮಗ್ಗದ ಹತ್ತಿ, ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳು ಪ್ರಸಿದ್ಧ. ಕಂಬಳಿ ನೇಯ್ಗೆ ಇದೆ. ಕೃಷಿ ಮತ್ತು ಕೈಗಾರಿಕೋದ್ಯಮಿಗಳಿಗೆ ಬ್ಯಾಂಕುಗಳ ಆರ್ಥಿಕ ನೆರವು ದೊರೆಯುತ್ತಿದೆ. ನಿಯಂತ್ರಿತ ಮಾರುಕಟ್ಟೆಗಳಿವೆ.

ವಿದ್ಯಾಭ್ಯಾಸಕ್ಕೆ ಅನುಕೂಲವಿದ್ದು ಸರ್ಕಾರಿ ಮತ್ತು ಖಾಸಗಿ ಶಾಲಾಕಾಲೇಜುಗಳು ಈ ಜಿಲ್ಲೆಯಲ್ಲಿವೆ. ಎಂಜನಿಯರಿಂಗ್ ಕಾಲೇಜು, ಉಪಾಧ್ಯಾಯ ತರಬೇತಿ, ಕೈಗಾರಿಕಾ ಮತ್ತು ತಾಂತ್ರಿಕ ತರಬೇತಿ ಶಾಲೆಗಳೂ ಹಾಗೂ ಇತರ ಕಾಲೇಜುಗಳೂ ಈ ಜಿಲ್ಲೆಯಲ್ಲಿವೆ.

**ಪ್ರೇಕ್ಷಣೀಯ ಸ್ಥಳಗಳು :** ಚಂದ್ರವಳ್ಳಿ ಪ್ರಾಕ್ತನ ನಿವೇಶನ. ಭಾರತ ಸರ್ಕಾರದ ಪುರಾತತ್ತ್ವ ಇಲಾಖೆ ಇಲ್ಲಿ ಉತ್ಖನನ ನಡೆಸಿದೆ. ರಾಜ್ಯದಲ್ಲಿ ಐತಿಹಾಸಿಕ ಮಹತ್ವವುಳ್ಳ ಚಿನ್ನದ ನಾಣ್ಯ, ಆಭರಣಗಳು, ಬಣ್ಣದ ಮಣ್ಣಿನ ಪಾತ್ರೆಗಳು ದೊರಕಿವೆ. ಜೋಗಿಬೆಟ್ಟ ಗಿರಿಧಾಮ, ಪಂಡರಹಳ್ಳಿ ಬೆಟ್ಟದಲ್ಲಿ ರಂಗನಾಥಸ್ವಾಮಿ ದೇವಾಲಯವಿದೆ. ಸಿರಿಗೆರೆಯಲ್ಲಿ, ಬೃಹನ್ಮಠ ಸಂಸ್ಥಾನವಿದೆ. ನೀರ್ತಡಿಯಲ್ಲಿರುವ ರಂಗನಾಥಸ್ವಾಮಿ ದೇವಾಲಯ ಪ್ರಸಿದ್ಧವಾದುದು. ನಾಯಕನಹಟ್ಟಿ (ನೋಡಿ) ಧಾರ್ಮಿಕ ಕ್ಷೇತ್ರ. ರಾಮದುರ್ಗದಲ್ಲಿ ಗುಹಾಂತರ ದೇವಾಲಯವಿದೆ ಅಲ್ಲಿ ಪುರಾತನ ಭೈರವೇಶ್ವರ ದೇವಾಲಯವಿದೆ. ಬ್ರಹ್ಮಗಿರಿ (ನೋಡಿ) ಒಂದು ಪುರಾತನ ನೆಲೆ.

ಚಿತ್ರದುರ್ಗ ಜಿಲ್ಲೆಯಲ್ಲಿ ನವಶಿಲಾಯುಗದಿಂದಲೂ ಜನವಸತಿ ಇತ್ತೆಂಬುದು ಈ ಜಿಲ್ಲೆಯ ಬ್ರಹ್ಮಗಿರಿಯಲ್ಲಿ ನಡೆದಿರುವ ಉತ್ಖನನಗಳಿಂದ ತಿಳಿದುಬಂದಿದೆ. ಬ್ರಹ್ಮಗಿರಿ, ಚಿಕ್ಕಮಧುರೆ, ತುರುವನೂರು ಮೊದಲಾದೆಡೆಗಳಲ್ಲಿ ಬೃಹತ್ ಶಿಲಾ ಸಮಾಧಿಗಳಿದ್ದು ಕಬ್ಬಿಣ ಯುಗದ ಸಂಸ್ಕೃತಿ ಇಲ್ಲಿ ಹರಡಿತ್ತೆಂಬುದು ಸ್ಪಷ್ಟಪಟ್ಟಿದೆ. ಈ ಜಿಲ್ಲೆ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತೆಂಬುದು ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರಗಳಲ್ಲಿ ದೊರೆತಿರುವ ಅಶೋಕನ ಶಾಸನಗಳಿಂದ ವ್ಯಕ್ತವಾಗುತ್ತದೆ. ಮೌರ್ಯರ ಅನಂತರ ಸಾತವಾಹನರು ಇಲ್ಲಿ ಆಳಿದರು. ಅವರ ಶಾಸನಗಳು ದೊರೆಯದಿದ್ದರೂ ಚಂದ್ರವಳ್ಳಿಯಲ್ಲಿ ಯಜ್ಞಶ್ರೀ ಸಾತಕರ್ಣಿಯ,ಚುಟು, ಕುರವಂಶಗಳವರ ಅನೇಕ ಸೀಸದ ನಾಣ್ಯಗಳು ದೊರೆತಿವೆ. 1-12ನೆಯ ಶತಮಾನಗಳಲ್ಲಿ ಈ ಪ್ರದೇಶ ರೋಮನ್ ಚಕ್ರಾಧಿಪತ್ಯದೊಡನೆ ವ್ಯಾಪಾರಸಂಬಂಧ ಹೊಂದಿತ್ತು. ಚಂದ್ರವಳ್ಳಿಯಲ್ಲಿ ಆಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳ ನಾಣ್ಯಗಳೂ ಮೆಡಿಟರೆನಿಯನ್ ಪ್ರದೇಶದಲ್ಲಿ ತಯಾರಾದ ರೂಲೆಟೆಡ್ ಮೃಣ್ಪಾತ್ರೆಗಳೂ ದೊರೆತಿವೆ. ಮುಂದೆ ಈ ಜಿಲ್ಲೆ ಬನವಾಸಿ ಕದಂಬರಿಗೆ ಸೇರಿತು. ಕದಂಬ ಮಯೂರಶರ್ಮ ಗೆದ್ದ ರಾಜ್ಯಗಳನ್ನು ಅವನ ಚಂದ್ರವಳ್ಳಿ ಶಾಸನ ತಿಳಿಸುತ್ತದೆ. ಅಲ್ಲಿ ಅವನು ಒಂದು ಕೆರೆಯನ್ನು ಕಟ್ಟಿಸಿದ್ದನೆಂದೂ ಶಾಸನದಿಂದ ಗೊತ್ತಾಗುತ್ತದೆ. ಚಿತ್ರದುರ್ಗ ಜಿಲ್ಲೆಯ ಪಶ್ಚಿಮ ಮತ್ತು ಉತ್ತರದ ಬಹುಭಾಗ ಕದಂಬಳಿಗೆ 1000ದಲ್ಲಿ ಸೇರಿತ್ತು. ಅನಂತರ ಬಾದಾಮಿಯ ಚಳುಕ್ಯರಿಗೂ ರಾಷ್ಟ್ರಕೂಟರಿಗೂ ಅಧೀನವಾಯಿತು. ಇದೇ ಕಾಲದಲ್ಲಿ ಈ ಜಿಲ್ಲೆಯ ಬಹು ಭಾಗವನ್ನು ಆಳಲಾರಂಭಿಸಿದ ಮುಖ್ಯವಾದ

ರಾಜಮನೆತನ ನೊಳಂಬ ಪಲ್ಲವರದು. ಇವರ ರಾಜಧಾನಿ ಹೆಂಜೇರು. ಮೊದಲು ನೊಳಂಬಳಿಗೆ 1000ವಾಗಿದ್ದ ಇವರ ರಾಜ್ಯ ಮುಂದೆ ನೊಳಂಬವಾಡಿ 32000 ರಾಜ್ಯವಾಯಿತು. ಸ್ವಲ್ಪಕಾಲ ಸ್ವತಂತ್ರವಾಗಿಯೂ ಮತ್ತೆ ಸ್ವಲ್ಪಕಾಲ ಗಂಗರ ಅಥವಾ ರಾಷ್ಟ್ರಕೂಟರ ಅಧೀನವಾಗಿಯೂ ನೊಳಂಬರು ಆಳಿದರು. ಈ ಜಿಲ್ಲೆಯ ತೀರ ದಕ್ಷಿಣಭಾಗದಲ್ಲಿ ನಿರ್ಗುಂದ 300 ಪ್ರಾಂತ್ಯವಿತ್ತು. ಇದೂ ನೊಳಂಬರ ಅಧೀನದಲ್ಲಿತ್ತು. ಚಳ್ಳಕೆರೆ ತಾಲ್ಲೂಕಿನ ಹಿರೆಮಧುರೆ, ಚಿಕ್ಕಮಧುರೆಗಳು ಇವರ ಕಾಲದ ಮುಖ್ಯ ಊರುಗಳಾಗಿದ್ದುವು.

ಹತ್ತನೆಯ ಶತಮಾನದಲ್ಲಿ ಪುನಃ ಪ್ರಬಲರಾದ ಚಾಳುಕ್ಯರಿಗೆ ಈ ಭಾಗ ಸೇರಿತ್ತು. ನೊಳಂಬವಾಡಿ 32000ವನ್ನು ಸ್ವಲ್ಪಕಾಲ ಚಾಳುಕ್ಯ ಯುವರಾಜ ಜಯಸಿಂಹ ನೊಳಂಬ ಪಲ್ಲವ ಆಳಿದ. ನಿರ್ಗುಂದ 300ನ್ನು ಗೋವಿಂದ, ಚೆಟ್ಟಿ, ವಿಷ್ಣು ಮೊದಲಾದ ಸಾಮಂತರಾಜರು ಮೊದಲು ಚಾಳುಕ್ಯರಿಗೂ ಅನಂತರ ಹೊಯ್ಸಳರಿಗೂ ಅಧೀನರಾಗಿ ಹುಳಿಯಾರಿನಿಂದ ಆಳಿದರು. ಹನ್ನೊಂದನೆಯ ಶತಮಾನದಿಂದ ನೊಳಂಬವಾಡಿಯನ್ನು ಉಚ್ಚಂಗಿ ಪಾಂಡ್ಯರು ಚಾಳುಕ್ಯರ ಅಧೀನರಾಗಿ ಆಳಲಾರಂಭಿಸಿದರು. ಇವರಲ್ಲಿ ತ್ರಿಭುವನಮಲ್ಲ ಪಾಂಡ್ಯದೇವ, ವಿಜಯ ಪಾಂಡ್ಯದೇವ, ವೀರಪಾಂಡ್ಯದೇವ ಇವರು ಮುಖ್ಯರು. ಪಾಂಡ್ಯರು ಆಳುತ್ತಿದ್ದ ಜಿಲ್ಲೆಯ ಈ ಭಾಗಕ್ಕೆ ಪಾಂಡ್ಯ ರಾಜ್ಯ ಅಥವಾ ಪಾಂಡ್ಯ ಮಂಡಲವೆಂಬ ಹೆಸರಿತ್ತು. ಸು.1220ರ ವರೆಗೂ ಆಳಿದ ಪಾಂಡ್ಯರನ್ನು ಹೊಯ್ಸಳ ಇಮ್ಮಡಿ ವೀರಬಲ್ಲಾಳ ಸೋಲಿಸಿ ಪಾಂಡ್ಯನಾಡನ್ನು ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡ. ನೊಳಂಬವಾಡಿ, ನಿರ್ಗುಂದ 300 ಇವು ಹೊಯ್ಸಳ ರಾಜ್ಯದ ಪ್ರಾಂತ್ಯಗಳಾದುವು.

ಈ ಜಿಲ್ಲೆಯ ಪೂರ್ವಭಾಗವನ್ನು ಚೋಳಮನೆತನದ ಅರಸರು ಮಹಾಮಂಡಲೇಶ್ವರರಾಗಿ 12ನೆಯ ಶತಮಾನದಲ್ಲಿ ನಿಡುಗಲ್ಲಿನಿಂದ ಆಳಿದರು. ಇವರಲ್ಲಿ ಇರುಂಗೋಳ ಚೋಳ ಮಹಾರಾಜ, ಮಲ್ಲಿದೇವ ಚೋಳ ಮಹಾರಾಜ, ಗೋವಿಂದರಾಯ, ಇರುಂಗೋಳದೇವ ಇವರನ್ನು ಹೆಸರಿಸಬಹುದು.



ಸಂಪಗೆ ಸಿದ್ದೇಶ್ವರ: ಚಿತ್ರದುರ್ಗ

ದೇವಗಿರಿಯ ಯಾದವರೂ ಈ ಜಿಲ್ಲೆಯ ವಾಯವ್ಯ ಭಾಗವನ್ನು ಸ್ವಲ್ಪಕಾಲ ತಮ್ಮ ಅಧೀನಕ್ಕೆ ಒಳಪಡಿಸಿಕೊಂಡಿದ್ದರು. ಆದರೆ 1287ರಲ್ಲಿ ಹೊಯ್ಸಳರು ಈ ಭಾಗವನ್ನೆಲ್ಲ ಆಕ್ರಮಿಸಿಕೊಂಡರು. ಇವರ ಕಾಲದಲ್ಲಿ ಬೆಮ್ಮತ್ತನಕಲ್ಲು (ಈಗಿನ ಚಿತ್ರದುರ್ಗ ಪಟ್ಟಣ) ಈ ಪ್ರಾಂತ್ಯದ ಮುಖ್ಯ ಪಟ್ಟಣವಾಯಿತು. ಹೊಯ್ಸಳರ ಕಾಲಾನಂತರ ಈ ಜಿಲ್ಲೆ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದಾಗಲೂ ಬೆಮ್ಮತ್ತನಕಲ್ಲು ಇಲ್ಲಿಯ ಮುಖ್ಯ ಪಟ್ಟಣವಾಗಿ ಮುಂದುವರಿಯಿತು. ಮುಂದೆ 15-16ನೆಯ ಶತಮಾನಗಳಲ್ಲಿ ಹಲವು ಪಾಳೆಯಗಾರರು ಈ ಜಿಲ್ಲೆಯಲ್ಲಿ ಅಲ್ಲಲ್ಲಿ ಆಳಲಾರಂಭಿಸಿದರು. ಅವರಲ್ಲಿ ಮುಖ್ಯರಾದವರು ಚಿತ್ರದುರ್ಗ ಮತ್ತು ನಿಡುಗಲ್ಲು ದುರ್ಗದ ಪಾಳೆಯಗಾರರು. ಕಾಮಗೇಟಿ ವಂಶಕ್ಕೆ ಸೇರಿದ ಚಿತ್ರದುರ್ಗದ ಪಾಳೆಯಗಾರರು ಆರಂಭದಲ್ಲಿ ವಿಜಯನಗರಕ್ಕೆ ಅಧೀನರಾಗಿದ್ದು 1564ರಲ್ಲಿ ವಿಜಯನಗರದ ಪತನಾನಂತರ ಸ್ವತಂತ್ರರಾಗಿ ಆಧಿಪತ್ಯ ನಡೆಸಿದರು. ಇವರಲ್ಲಿ ಮದಕರಿ ನಾಯಕ, ಕಸ್ತೂರಿ ರಂಗಪ್ಪ ನಾಯಕ, ಕುಮಾರ ಭರಮಪ್ಪ ನಾಯಕ ಮೊದಲಾದವರು ಪ್ರಬಲರು. ಆದರೆ ಒಂದು ಕಡೆ ಮರಾಠರೊಂದಿಗೂ ಇನ್ನೊಂದು ಕಡೆ ಹೈದರನೊಂದಿಗೂ ಇವರು ಹೋರಾಡಬೇಕಾಯಿತು. ಕಟ್ಟಕಡೆಗೆ 1779ರಲ್ಲಿ ಹೈದರನಿಗೆ ಸೋತು ಈ ವಂಶ ಕೊನೆಗೊಂಡಿತು. ಕೋಟೆಯನ್ನು ಹೈದರ್ ಮತ್ತು ಟಿಪ್ಪು ಬಲಪಡಿಸಿ, ಅಲ್ಲಿ ಬಲವಾದ ಸೈನ್ಯವನ್ನಿಟ್ಟಿದ್ದರು.



ಗೋಪಾಲಸ್ವಾಮಿ ಹೊಂಡ: ಚಿತ್ರದುರ್ಗ ಕೋಟೆ

ಅನಂತರ ಈ ಪ್ರದೇಶ ಮೈಸೂರರಸರಿಗೆ ಸೇರಿ ಚಿತ್ರಕಲ್ ಫೌಜುದಾರಿಯಾಗಿ ಮುಂದುವರಿಯಿತು. ಮೈಸೂರು ಸಂಸ್ಥಾನ ಬ್ರಿಟಿಷ್ ಕಮಿಷನರ್ ಆಡಳಿತಕ್ಕೆ ಒಳಪಟ್ಟಿದ್ದಾಗ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಸೇರಿ ಚಿತ್ರದುರ್ಗ ವಿಭಾಗವಾಗಿ ತುಮಕೂರು ಇದರ ಮುಖ್ಯ ಕೇಂದ್ರವಾಯಿತು. 1863ರಲ್ಲಿ ಆ ವಿಭಾಗವನ್ನು ರದ್ದುಮಾಡಿ ಚಿತ್ರದುರ್ಗ ಜಿಲ್ಲೆಯನ್ನು ನಗರ ವಿಭಾಗಕ್ಕೆ ಸೇರಿಸಿ, ಜಿಲ್ಲೆಯನ್ನು ನಂದಿದುರ್ಗ ವಿಭಾಗಕ್ಕೆ ಸೇರಿಸಲಾಯಿತು. 1879ರಲ್ಲಿ ಈ ವ್ಯವಸ್ಥೆ ರದ್ದಾಯಿತು. 1882ರಲ್ಲಿ ಚಿತ್ರದುರ್ಗವನ್ನೇ ತುಮಕೂರು ಜಿಲ್ಲೆಗೆ ಸೇರಿಸಿ ಅದನ್ನೊಂದು ಉಪವಿಭಾಗವನ್ನಾಗಿ ಮಾಡಲಾಯಿತು. 1886ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಮತ್ತೆ ಸ್ಥಾಪಿಸಿ ಪಾವಗಡ ತಾಲ್ಲೂಕನ್ನು ತುಮಕೂರು ಜಿಲ್ಲೆಗೆ ಸೇರಿಸಲಾಯಿತು. 1956ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಚಿತ್ರದುರ್ಗ ಜಿಲ್ಲೆ ಬೆಂಗಳೂರು ವಿಭಾಗದ ಅಂಗವಾಯಿತು.

ಚಿತ್ರದುರ್ಗ ಜಿಲ್ಲೆಯಲ್ಲಿ ಹಲವು ಪ್ರಾಚೀನ ಸ್ಮಾರಕಗಳಿವೆ. ಬೃಹತ್ ಶಿಲಾಸಮಾಧಿಗಳನ್ನು ಬಿಟ್ಟರೆ ಬ್ರಹ್ಮಗಿರಿಯ ಗುಡ್ಡದ ಇಳಿಜಾರಿನಲ್ಲಿ ಸು.3ನೆಯ ಶತಮಾನದ ಚೈತ್ಯಾಕಾರದ ಇಟ್ಟಿಗೆಯ ಕಟ್ಟಡದ ಅವಶೇಷ ಇವುಗಳಲ್ಲಿ ಮುಖ್ಯವಾದ್ದು. ಇದು ಬ್ರಹ್ಮಗಿರಿಯ ಅಶೋಕನ ಶಾಸನದ ಬಳಿಯೇ ದೊರೆತಿದೆ. ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ಬಂಡೆಗಳ ಮೇಲೆ ಆಳವಾಗಿಯೂ ದಪ್ಪನಾಗಿಯೂ ಕೊರೆದಿರುವ ಅಶೋಕನ ಮೂರು ಶಾಸನಗಳು ಬ್ರಾಹ್ಮೀಲಿಪಿಯಲ್ಲಿವೆ. ಇವು ಈ ಜಿಲ್ಲೆಯ ಅತ್ಯಂತ ಪ್ರಾಚೀನವೂ ಪ್ರಮುಖವೂ ಆದ ಶಾಸನಗಳು. ಈ ಭಾಗದಲ್ಲಿ ಇಸಿಲ ಎಂಬ ಪಟ್ಟಣವಿದ್ದುದು ಈ ಶಾಸನಗಳಿಂದ ವ್ಯಕ್ತವಾಗುತ್ತದೆ. ಸಾತವಾಹನರ ಕಾಲದ ನಾಗರಿಕತೆಯ ಹಲವು ರೀತಿಯ ಅವಶೇಷಗಳು ಚಂದ್ರವಳ್ಳಿಯಲ್ಲಿ ದೊರಕಿವೆ. ಬಹುಶಃ ಇದೇ ಕಾಲದಲ್ಲೇ ಬಂಡೆಗಳ ಮೇಲೆ ರೇಖೆಯಲ್ಲಿ ಬಿಡಿಸಲಾದ ಹುಲಿ, ಜಿಂಕೆ, ಕಾಡುಕೋಣಗಳ ಆಕೃತಿಗಳನ್ನು ಚಂದ್ರವಳ್ಳಿಯ ಬಳಿಯಲ್ಲೂ ಚಿತ್ರದುರ್ಗದ ಬೆಟ್ಟದ ಮೇಲೂ ನೋಡಬಹುದು.

ಅಂಕಲಿಮಠದ ಪರದೇಶಪ್ಪನ ಗವಿ, ಧವಳಪ್ಪನ ಗುಡ್ಡದ ಮೇಲಿನ ಗುಹಾದೇವಾಲಯ, ಚಿತ್ರದುರ್ಗದ ಬೆಟ್ಟದ ಮೇಲಿರುವ ಹಿಡಿಂಬೇಶ್ವರ, ಸಿದ್ದೇಶ್ವರ, ಫಲ್ಗುಣೇಶ್ವರ ಮತ್ತು ಏಕನಾಥೇಶ್ವರ ದೇವಾಲಯಗಳ ಗರ್ಭಗೃಹಗಳು ಗವಿಗಳಲ್ಲಿವೆ. ಇವುಗಳಲ್ಲಿ ಕೆಲವಾದರೂ 8-9ನೆಯ ಶತಮಾನಕ್ಕೆ ಸೇರಿದವು. ಇವು ಈ ಜಿಲ್ಲೆಯ ಪ್ರಾಚೀನ ದೇವಾಲಯಗಳು.



ಚಿತ್ರದುರ್ಗ ಕೋಟೆಯ ಒಂದು ದೃಶ್ಯ

ಮದರಿಕಲ್ಲು ಎಂಬ ಹೆಸರಿನಿಂದ ನೊಳಂಬ ಪಲ್ಲವರ ಪ್ರಾಂತ್ಯವೊಂದರ ರಾಜಧಾನಿಯಾಗಿದ್ದ ಚಿಕ್ಕಮಧುರೆಯಲ್ಲಿ ನೊಳಂಬ ಪಲ್ಲವಾಧಿರಾಜನ ರಾಣಿ ಮತ್ತು ಪಲ್ಲವಮಲ್ಲನ ತಾಯಿ ಗವಗಣಬ್ಬೆ 790ರಲ್ಲಿ ಗವಗಣೇಶ್ವರವೆಂಬ ಶಿವಾಲಯವನ್ನು ಕಟ್ಟಿಸಿದಳು. ಈಗ ಶಿಥಿಲಾವಸ್ಥೆಯಲ್ಲಿರುವ ಸರಳವಾದ ಈ ದೇವಾಲಯದಲ್ಲಿ ಚೌಕನಾದ ಕಂಬಗಳು ತೆಳುವಾಗಿ ಉಬ್ಬಿಸಿ ಬಿಡಿಸಿದ ಸಪ್ತಮಾತೃಕೆ, ಸೂರ್ಯ ಮೊದಲಾದ ಚಿಕ್ಕಚಿಕ್ಕ ಮೂರ್ತಿಗಳೂ ಇವೆ. ಚಿಕ್ಕಮಧುರೆ ಮತ್ತು ಹಿರೇಮಧುರೆಗಳಲ್ಲಿ ನೊಳಂಬರ ಕಾಲದ ಹಲವು ವೀರಗಲ್ಲುಗಳಿವೆ. ಕತ್ತಿಗುರಾಣಿಗಳನ್ನು ಹಿಡಿದು ನಿಂತ ಭವ್ಯಾಕೃತಿಗಳನ್ನು ಅವುಗಳಲ್ಲಿ ಕಂಡರಿಸಿದೆ. ಪ್ರಭಾಕರದಾಸ ಮೊದಲಾದ ಕೆಲವು ವೀರರ ಹೆಸರುಗಳು ಮಾತ್ರ ಈ ವೀರಗಲ್ಲುಗಳಲ್ಲಿ ಇರುವುದುಂಟು. ತಮಟಕಲ್ಲಿನಲ್ಲಿ ಎರಡು ಕಲ್ಲುಗಳ ಮೇಲೆ ದಪ್ಪ ಅಕ್ಷರಗಳಲ್ಲಿ ಸುಂದರವಾಗಿ ಕಡೆದಿರುವ 8ನೆಯ ಶತಮಾನದ ಶಾಸನವೊಂದಿದೆ. ಇದು ಮಾಸಿಕ್ಕಾ ಪುರಾಧಿನಾಥನಾಗಿದ್ದ ಗುಣಮಧುರನೆಂಬ ವೀರನನ್ನು ಮನೋಜ್ಞವಾಗಿ ವರ್ಣಿಸುತ್ತದೆ. ಚಿತ್ರದುರ್ಗದ ಬಳಿ ಗೋವನೂರು ಎಂಬಲ್ಲಿ ದೊರೆತ, ಈಗ ಚಿತ್ರದುರ್ಗದ ವಸ್ತು ಸಂಗ್ರಹಾಲಯದಲ್ಲಿಟ್ಟಿರುವ, ಸಪ್ತಮಾತೃಕೆಯರ ಮೂರ್ತಿಗಳು ಗವಗಣೇಶ್ವರ ದೇವಾಲಯದ ಶಿಲ್ಪದ ಮಾದರಿಯಲ್ಲಿವೆ. ಇವು ನೊಳಂಬರ ಶಿಲ್ಪಕ್ಕೆ ಮಾದರಿಗಳಾಗಿವೆ.

ರಾಷ್ಟ್ರಕೂಟರ ಕಾಲದಲ್ಲಿ ಸು.10ನೆಯ ಶತಮಾನದಲ್ಲಿ ಕಟ್ಟಿದ್ದಿರಬಹುದಾದ ನಂದಗುಡಿಯ ಈಶ್ವರ ದೇವಾಲಯ ಈ ಜಿಲ್ಲೆಯಲ್ಲಿರುವ ಕೆಲವೇ ಪ್ರಾಚೀನ ದೇವಾಲಯಗಳಲ್ಲಿ ಪ್ರಮುಖವಾದ್ದು. ಹೊರಭಾಗ ಹೆಚ್ಚು ಬದಲಾವಣೆ ಹೊಂದಿ ತೀರ ಸಾಮಾನ್ಯವಾದುದಾಗಿ ಕಂಡರೂ ಅಲ್ಲಿರುವ ಬೃಹದಾಕಾರದ ನಂದಿ, ವಿಶಾಲವಾದ ಮಧ್ಯದ ಅಂಕಣವನ್ನು ಹೊಂದಿರುವ ನವರಂಗದ ಕಂಬಗಳು, ವೈವಿಧ್ಯಮಯವಾಗಿ ಕಂಡರಿಸಿರುವ ಸುಕನಾಸಿಯ ಬಾಗಿಲುವಾಡ, ಅದರ ಇಕ್ಕೆಲಗಳಲ್ಲಿ ಉನ್ನತವಾಗಿ ನಿಂತಿರುವ ದ್ವಾರಪಾಲಕರು - ಇವೆಲ್ಲವೂ ಆಕರ್ಷಕವಾಗಿವೆ. ಜಟಿಂಗರಾಮೇಶ್ವರ ಬೆಟ್ಟದ ಮೇಲೆ 10ನೆಯ ಶತಮಾನದ ಶಾಸನವೊಂದಿದೆ. ಅದು ಜಟಾಯುವನ್ನು ರಾವಣ ವಧಿಸಿದ ತಾಣವೆಂದೂ ಶ್ರೀರಾಮ ಜಟಾಯುವಿಗೆ ಸಂಸ್ಕಾರ ಮಾಡಿ ಇಟ್ಟಿಗೆಯಲ್ಲಿ ಜಟಿಂಗರಾಮೇಶ್ವರ ದೇವಾಲಯವನ್ನು ಕಟ್ಟಿಸಿದ್ದನೆಂದೂ ಆ ದೇವಾಲಯವನ್ನು ಕಲ್ಲಿನಿಂದ ಪುನರ್ನಿರ್ಮಾಣ ಮಾಡಿದುದಾಗಿಯೂ ಆ ಶಾಸನ ತಿಳಿಸುತ್ತದೆ. ಅಶೋಕನ ಶಾಸನದ ಬಳಿಯೇ ಇರುವ ಈ ದೇವಾಲಯ ಬಹಶಃ ಇಟ್ಟಿಗೆಯಿಂದ ಕಟ್ಟಿದ ಚೈತ್ಯಾಲಯವಾಗಿತ್ತು. 10ನೆಯ ಶತಮಾನದ ಹೊತ್ತಿಗಾಗಲೇ ಮೇಲಿನ ಪ್ರತೀತಿ ಹರಡಿದ್ದಿರಬೇಕು.

ಹರಿಹರದ ಹರಿಹರೇಶ್ವರ ಅಥವಾ ಶಂಕರನಾರಾಯಣ ದೇವಾಲಯ 11ನೆಯ ಶತಮಾನದ ಹೊತ್ತಿಗೆ ಆಗಲೇ ಪ್ರಸಿದ್ಧವಾಗಿತ್ತು. ಆದರೆ ಮೂಲ ಮೂರ್ತಿಯೊಂದನ್ನು ಬಿಟ್ಟು ಆಗಿನ ದೇವಾಲಯ ಉಳಿದುಬಂದಿಲ್ಲ. ಈಗ ಇರುವ ದೇವಾಲಯವನ್ನು ಹೊಯ್ಸಳ ಮಂತ್ರಿ ಪೋಲಾಳ್ವ ದಂಡನಾಥ 1224ರಲ್ಲಿ ಕಟ್ಟಿಸಿದ. ಈ ದೇವರಿಗೆ ಉಚ್ಚಂಗಿ ಪಾಂಡ್ಯರು, ಕಳಚುರಿ ಬಿಜ್ಜಳ, ಯಾದವರು, ಹೊಯ್ಸಳರು ಮತ್ತು ವಿಜಯನಗರದ ಅರಸರು ದತ್ತಿ ಬಿಟ್ಟಿದ್ದಾರೆ. ಶಾಸನಗಳಲ್ಲಿ ವರ್ಣಿತವಾಗಿರುವ ಈ ಹೊಯ್ಸಳ ದೇವಾಲಯ ಪೂರ್ಣವಾಗಿ ಉಳಿದುಬಂದಿಲ್ಲವಾದರೂ ಇದು ಈ ಜಿಲ್ಲೆಯಲ್ಲೇ ಅತ್ಯಂತ ಸುಂದರವಾದ ದೇವಾಲಯ. ಇದರ ಸುತ್ತಲೂ ಅನೇಕ ಶಾಸನಗಳಿವೆ. ಅವುಗಳಲ್ಲಿ ಒಂದು 16'ಗಳಿಗೂ ಹೆಚ್ಚು ಎತ್ತರವಾಗಿದೆ.

ಚಾಳುಕ್ಯರ ಕಾಲದಲ್ಲೂ ಹೊಯ್ಸಳರ ಕಾಲದಲ್ಲೂ ಈ ಜಿಲ್ಲೆಯಲ್ಲಿ ಹಲವಾರು ದೇವಾಲಯಗಳು ನಿರ್ಮಿತವಾದುವು. ಹಾನೆಯದ ಅಕ್ಕತಂಗಿಯರ ಗುಡಿ, ಕೂಡಗನೂರಿನ ವಿಷ್ಣು ದೇವಾಲಯ (1113), ಸೋಮೇಶ್ವರ ದೇವಾಲಯ (1101), ಕಬ್ಬೂರಿನ ಅವಿಮುಕ್ತೇಶ್ವರ ದೇವಾಲಯ (1114), ಮಳಲಕೆರೆಯ ಲಿಂಗ, ಜನಾರ್ದನ ಮತ್ತು ನಾರಾಯಣರನ್ನೊಳಗೊಂಡ ತ್ರಿಕೂಟಾಚಲ (1071), ಕಂದಗಲ್ಲಿನ ಕಲ್ಲೇಶ್ವರ, ಲೋಕಿಕೆರೆಯ ಕೇತೇಶ್ವರ ಮತ್ತು ಕೋಡಿ ಕಲ್ಲೇಶ್ವರ ಮತ್ತು ಆನೆಕೊಂಡದ ಈಶ್ವರ ದೇವಾಲಯಗಳನ್ನು ಹೆಸರಿಸಬಹುದು. ಆದರೆ ಈ ದೇವಾಲಯಗಳಲ್ಲಿ ಬಹುಭಾಗ ಹಾಳಾಗಿವೆ. ಇವುಗಳಲ್ಲಿ ಹಲವನ್ನು ರಕ್ಷಿಸುವುದಕ್ಕಾಗಿ ಮಣ್ಣಿನ ದಿಬ್ಬದಿಂದ ಮುಚ್ಚಿಹಾಕಿದೆ. ಹೊರನೋಟಕ್ಕೆ ಬರಿಯ ಮಣ್ಣಿನ ಗುಡ್ಡೆಗಳಾಗಿ ಕಂಡರೂ ಬಾಗಿಲುಗಳ ಮೂಲಕ ಅವುಗಳ ಒಳಹೊಕ್ಕಾಗ ಚಾಳುಕ್ಯ ಶಿಲ್ಪದ ಸುಂದರ ಪರಿಚಯ ಆಗುತ್ತದೆ. ಅವುಗಳಲ್ಲೆಲ್ಲ ಆನೆಕೊಂಡದ ಈಶ್ವರ ದೇವಾಲಯದ ನವರಂಗದ ಕಂಬಗಳು ವೈವಿಧ್ಯಮಯವಾಗಿಯೂ ಸುಂದರವಾಗಿಯೂ ಇವೆ. ಕಂಡರಣೆಯಲ್ಲಿ ಇವು ಬೇಲೂರಿನ ಕಂಬಗಳನ್ನು ನೆನಪಿಗೆ ತರುತ್ತವೆ. ಹರಿಹರಕ್ಕೆ 12ಕಿಮೀ ದೂರದಲ್ಲಿರುವ ನಂದಿತಾವರೆಯಲ್ಲಿ ಹೊಯ್ಸಳ ಅಧಿಕಾರಿ ಮಾಣಿಕಣ್ಣ 1220ರಲ್ಲಿ ಕಟ್ಟಿಸಿದ ಸುಂದರವಾದ ಅಮೃತಲಿಂಗ ಮಾಣಿಕೇಶ್ವರ ದೇವಾಲಯವಿದೆ. ಇದರ ಹೊರಗೂ ಒಳಗೂ ಗೋಡೆಯ ಮೇಲೆ 2' ಎತ್ತರದ ಮೂರ್ತಿಗಳ ಸಾಲಿದೆ.

ಚಿತ್ರದುರ್ಗದ ಕೋಟೆಯ ಒಳ್ಳಗೆ ಮದ್ದಿನ ಮನೆ

ಚಿತ್ರದುರ್ಗದ ಪಾಳೆಯಗಾರರು ಕಟ್ಟಿಸಿದ ಹಲವು ದೇವಾಲಯಗಳೂ ಇತರ ಕಟ್ಟಡಗಳೂ ಚಿತ್ರದುರ್ಗದ ಬೆಟ್ಟದ ಮೇಲೂ ಇತರ ಕಡೆಗಳಲ್ಲೂ ಉಳಿದುಬಂದಿವೆ. ನೀರ್ತಡಿಯಲ್ಲಿ ಇವರು ಪುನರ್ನಿರ್ಮಾಣ ಮಾಡಿದ

ರಂಗನಾಥ ದೇವಾಲಯದ ಹೊರಗೋಡೆಯ ಮೇಲಿನ ಮೂರ್ತಿಶಿಲ್ಪಗಳು ವಿಜಯನಗರ ಶಿಲ್ಪದ ಅನುಕರಣೆ. ಇದರ ಉನ್ನತವಾದ ಗರ್ಭಗುಡಿಯ ಶಿಲಾಗೋಪುರ ವಿಶಿಷ್ಟವಾದ್ದು. ನಾಯಕನಹಟ್ಟಿಯ ದಕ್ಷಿಣಕ್ಕೆ ತಗ್ಗಾದ ಕಲ್ಲುಮೊರಡಿಯೊಂದರ ಇಳಿಜಾರಿನಲ್ಲಿ ಬಂಡೆಯನ್ನು ಕತ್ತರಿಸಿ ಕೊರೆದು, ನಾಲ್ಕು ಕಂಬಗಳ ಆಧಾರದ ಮೇಲೆ ನಿಂತ ಹಜಾರದಂಥ ಗವಿಯೊಂದನ್ನು ನಿರ್ಮಿಸಿ ಕಂಬಗಳ, ಚಾವಣಿಯ ಮತ್ತು ಅಡ್ಡತೊಲೆಗಳ ಮೇಲೆಲ್ಲ ನವುರಾದ ಶಿಲ್ಪವನ್ನು ಬಿಡಿಸಲಾಗಿದೆ. ಇದು ನಾಯಕರ ವಾಸ್ತುಶಿಲ್ಪದ ಒಂದು ಅಪೂರ್ವ ಮಾದರಿ. ಹಾಗೆಯೇ ಅವರು ಚಿತ್ರದುರ್ಗದ ಬೆಟ್ಟದ ಮೇಲೆ ಕಟ್ಟಿಸಿದ್ದ ಹಲವು ಸುತ್ತುಗಳ ಅಭೇದ್ಯ ಕೋಟೆಯನ್ನು ಹೈದರ್ ಮತ್ತು ಟಿಪ್ಪು ಮತ್ತಷ್ಟು ಭದ್ರಪಡಿಸಿದರು. ಅದು ಈಗಲೂ ಅಚ್ಚಳಿಯದೆ ಉಳಿದುಬಂದಿದೆ.



ಉಯ್ಯಾಲೆ ಕಂಬ: ಚಿತ್ರದುರ್ಗ ಕೋಟೆ

**ತಾಲ್ಲೂಕು :** ತಾಲ್ಲೂಕನ್ನು ಜಗಳೂರು, ಚಳ್ಳಕೆರೆ ಮತ್ತು ಹಿರಿಯೂರು, ಹೊಳಲ್ಕೆರೆ, ದಾವಣಗೆರೆ ತಾಲ್ಲೂಕುಗಳು ಸುತ್ತುವರಿದಿವೆ. ಹಿರೇಗುಂಟನೂರು, ಚಿತ್ರದುರ್ಗ, ಭರಮಸಾಗರ ಮತ್ತು ತುರುವನೂರು ಈ ನಾಲ್ಕು ಹೋಬಳಿಗಳಿವೆ. 163 ಹಳ್ಳಿಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,375.3ಚ.ಕಿಮೀ. ಜನಸಂಖ್ಯೆ 3,76,027. ಈ ತಾಲ್ಲೂಕಿನಲ್ಲಿ ಜೋಗಿಮಟ್ಟಿ ಕಾಡಿಗೆ ಸೇರಿದ ಜೋಗಿಮಟ್ಟಿ, ಧವಳಪ್ಪನ ಗುಡ್ಡ, ಬೈರಂಕಲ್ ಗುಡ್ಡ, ಏಚಲ ಗುಡ್ಡ ಮತ್ತು ಓಬಳದೇವರ ಗುಡ್ಡಗಳಿವೆ. ಗರಣಿನದಿ ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಹುಟ್ಟಿ ವೇದಾವತಿ ನದಿಗೆ ಸಮಾಂತರ ಹರಿದು ಹಿರಿಯೂರಿಗೆ 11ಕಿಮೀ ದೂರದಲ್ಲಿ ವೇದಾವತಿ ನದಿಯನ್ನು ಕೂಡಿಕೊಳ್ಳುವುದು. ತಾಲ್ಲೂಕಿನ ಹಲವೆಡೆಗಳಲ್ಲಿ ತಾಮ್ರ ಮೊದಲಾದ ಖನಿಜಗಳು ಸಿಕ್ಕುತ್ತವೆ. ಈ ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 655ಮಿಮೀ. ರಾಗಿ, ಸ್ವಲ್ಪ ಬತ್ತ, ತೊಗರಿ, ಹತ್ತಿ, ನೆಲಗಡಲೆ ಮುಂತಾದವನ್ನು ಬೆಳೆಯುತ್ತಾರೆ.

ಗಾಳಿ ಮಂಟಪ: ಚಿತ್ರದುರ್ಗ ಕೋಟೆ

ಮುಖ್ಯಸ್ಥಳವಾದ ಚಿತ್ರದುರ್ಗವನ್ನು ಬಿಟ್ಟರೆ ತುರುವನೂರು ತಾಲ್ಲೂಕಿನ ದೊಡ್ಡ ಊರು. ಇಂಗಳದಾಳು (ನೋಡಿ) ಗಣಿಗಾರಿಕೆಗೆ ಹೆಸರಾದುದು. ಚಂದ್ರವಳ್ಳಿ ಪ್ರಸಿದ್ಧ ಐತಿಹಾಸಿಕ ನೆಲೆ. ಚಿತ್ರದುರ್ಗ-ದಾವಣಗೆರೆ ರಸ್ತೆಯಲ್ಲಿರುವ ಎಮ್ಮೆಹಟ್ಟಿಯಿಂದ 3ಕಿಮೀ ದೂರದಲ್ಲಿರುವ ಹಂಪನೂರಿನ ಬಳಿಯ ಗುಡ್ಡದ ಮೇಲೆ ರಂಗನಾಥ ದೇವಾಲಯ ಮತ್ತು ಹನುಮಂತ ದೇವಾಲಯ ಇವೆ. ಇವು ನಾಯಕರ ಕಾಲದ ವಾಸ್ತು ಕೃತಿಗಳು. ಸಿರಿಗೆರೆಯಲ್ಲಿ ಪ್ರಸಿದ್ಧವಾದ ವೀರಶೈವ ಮಠವಿದೆ.

**ಪಟ್ಟಣ:** ಜಿಲ್ಲೆಯ ಮತ್ತು ತಾಲ್ಲೂಕಿನ ಆಡಳಿತಕೇಂದ್ರ. ಚಿತ್ರದುರ್ಗ, ಚಿಕ್ಕಜಾಜೂರು-ಚಿತ್ರದುರ್ಗ ರೈಲುಮಾರ್ಗದಲ್ಲಿ ಚಿಕ್ಕ ಜಾಜೂರಿನಿಂದ 34ಕಿಮೀ. ಈಶಾನ್ಯದಲ್ಲಿ, ಬೆಂಗಳೂರಿನಿಂದ 204ಕಿಮೀ ವಾಯುವ್ಯಕ್ಕೆ ಬೆಂಗಳೂರು-ಧಾರವಾಡ ಹೆದ್ದಾರಿಯಲ್ಲಿದೆ. ಜನಸಂಖ್ಯೆ 1,25,060.

ಬಂಡೆಗಲ್ಲುಗಳಿಂದ ಆವೃತವಾದ ಎತ್ತರವಾದ ಬೆಟ್ಟದ ಬುಡದಲ್ಲಿ ಉತ್ತರದಿಕ್ಕಿನ ಕಡೆ ಊರು ಹರಡಿಕೊಂಡಿದೆ. ಚಿತ್ರದುರ್ಗದ ಹಳೆಯ ಊರು ಬೆಟ್ಟದ ವಾಯವ್ಯ ಬುಡದಲ್ಲಿ ಕೋಟೆಯೊಳಗೆ ಇದೆ. ಅಲ್ಲಿಂದ ಮತ್ತಷ್ಟು ಮುಂದೆ ಹೊಸ ಬಡಾವಣೆಗಳು ಬೆಳೆದಿವೆ. ಜಿಲ್ಲೆಯ ಮುಖ್ಯ ಕಚೇರಿಗಳು, ಜಿಲ್ಲಾ ಆಸ್ಪತ್ರೆ, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗ ಕಚೇರಿ ಮತ್ತು ಅನೇಕ ವಿದ್ಯಾಸಂಸ್ಥೆಗಳು ಈ ನಗರದಲ್ಲಿವೆ. ಹತ್ತಿ ಒಕ್ಕುವ ಕಾರ್ಖಾನೆಗಳು ಇಲ್ಲಿವೆ. ಕೈಮಗ್ಗ, ಎಣ್ಣೆ ತೆಗೆಯುವುದು, ಇತರ ಕೈಗಾರಿಕೆಗಳಿಂದಾಗಿ ಚಿತ್ರದುರ್ಗ ವಾಣಿಜ್ಯ ಕೇಂದ್ರವಾಗಿ ಬೆಳೆದಿದೆ.

ಊರಿನ ವಾಯುವ್ಯದೆಡೆಯಲ್ಲಿರುವ ಮುರುಗಿಮಠ ಬಹು ಪ್ರಸಿದ್ಧವಾದುದು. ಕಟ್ಟಡ ಎರಡು ಅಂತಸ್ತಿನದು. ಮುಂದೆ ಆನೆಬಾಗಿಲು ಎಂಬ ಹೆಬ್ಬಾಗಿಲಿದೆ. ಈ ಮಠದ ಸ್ಥಾಪಕರಾದ ಇಮ್ಮಡಿ ಮುರುಗಿಸ್ವಾಮಿಗಳ ಗದ್ದುಗೆ ಇದೆ. ಅನೇಕ ವೀರಶೈವ ಅನುಯಾಯಿಗಳಿರುವ ಮಠ ಬಹುಜನರನ್ನು ಆಕರ್ಷಿಸುತ್ತದೆ. ಊರಿನ ಪಶ್ಚಿಮದಲ್ಲಿ ಚಂದ್ರವಳ್ಳಿ ನೆಲೆಯ ಬಳಿ ಅಂಕ್ಲಿಮಠವೆನ್ನುವ ಇನ್ನೊಂದು ಮಠವಿದೆ. ಬಹುಶಃ ಇಲ್ಲಿರುವ ಕೆಲವು ಕಟ್ಟಡಗಳು ಸು.500-600 ವರ್ಷಗಳಷ್ಟು ಹಳೆಯವು. *

ಸುತ್ತಲೂ ಹಬ್ಬಿರುವ ಬೆಟ್ಟಸಾಲು, ಅಲ್ಲಲ್ಲಿ ಮೇಲೆದ್ದಿರುವ ಶಿಖರಗಳು ಚಿತ್ರದುರ್ಗದ ರಕ್ಷಣಾಸಾಮರ್ಥ್ಯವನ್ನು ಹೆಚ್ಚಿಸಿದ್ದುವು. ಆದ್ದರಿಂದಲೇ ಇಲ್ಲಿ ಚರಿತ್ರ ಪೂರ್ವಕಾಲದಿಂದಲೂ ಜನ ವಾಸಿಸುತ್ತಿದ್ದುದು ಗೋಚರವಾಗಿದೆ. ಬೆಟ್ಟದ ಪಶ್ಚಿಮ ದಿಕ್ಕಿನ ಬುಡಕ್ಕೆ ಹೊಂದಿ ಕೊಂಡಂತಿರುವ ಚಂದ್ರವಳ್ಳಿ ಎಂಬಲ್ಲಿ ನವಶಿಲಾಯುಗದ ಕಾಲದಿಂದಲೂ

ಜನರಿದ್ದುದು ಅಲ್ಲಿ ನಡೆಸಿದ ಭೂಶೋಧನೆಗಳಿಂದ ವ್ಯಕ್ತವಾಗಿದೆ. ಸಾತವಾಹನರ ಕಾಲದಲ್ಲಿ ಚುಟುವಂಶಕ್ಕೆ ಸೇರಿದ ರಾಜರು ಇಲ್ಲಿ ಆಳುತ್ತಿದ್ದುದು ಭೂಶೋಧನೆಯಲ್ಲಿ ದೊರೆತ ಅವರ ಸೀಸದ ನಾಣ್ಯಗಳಿಂದಲೂ ಮಡಕೆಯ ಚೂರುಗಳು, ಕಟ್ಟಡಗಳ ಅವಶೇಷಗಳಿಂದಲೂ ತಿಳಿದುಬಂದಿದೆ. ಕದಂಬರ ಮೊದಲ ರಾಜನಾದ ಮಯೂರಶರ್ಮ ಇಲ್ಲಿ ತಟಾಕವನ್ನು ನಿರ್ಮಿಸಿದ್ದ. ಚಾಳುಕ್ಯರ ಕಾಲದಲ್ಲಿ ಇದಕ್ಕೆ ಸೂಳ್ಗಲ್ಲು ಎಂದೂ ಹೊಯ್ಸಳರ ಕಾಲದಲ್ಲಿ ಬೆಮ್ಮತ್ತನಕಲ್ಲು, ಬ್ರಹ್ಮಗಿರಿಪುರಿ, ಪೆರುಮಾಳೆಪುರ ಎಂಬ ಹೆಸರುಗಳೂ ಇದ್ದುವು. ಇದಲ್ಲದೆ ಪೌರಾಣಿಕವಾಗಿ ಹಿಡಿಂಬ ಇಲ್ಲಿ ವಾಸಮಾಡುತ್ತಿದ್ದನೆಂದು ಇದಕ್ಕೆ ಹಿಡಿಂಬ ಪಟ್ಟಣವೆಂದೂ ಮತ್ತು ಚಿನ್ಮೂಲಾದ್ರಿಯೆಂದೂ ಕರೆದಿದೆ. ವಿಜಯನಗರದ ಅರಸರ ಮತ್ತು ಪಾಳೆಯಗಾರರ ಕಾಲದಲ್ಲಿ ಚಿತ್ರದುರ್ಗ ಅಥವಾ ಚಿತ್ರಕಲ್‌ದುರ್ಗ ಮತ್ತು ಚಿನ್ನನಕಲ್‌ದುರ್ಗ ಎಂಬ ಹೆಸರುಗಳು ರೂಢಿಯಾಗಿ ಬಂದಿದ್ದುವು. ಹೈದರ್ ಇದನ್ನು ಆಕ್ರಮಿಸಿಕೊಂಡ ಮೇಲೆ ಇದಕ್ಕೆ ಫರೂಕ್‌ಯಾಬ್-ಹಿಸ್ಸಾರ್ ಎಂಬ ಹೆಸರನ್ನು ಕೊಟ್ಟಿದ್ದ.

ಹಳೆಯ ಮುರುಗಿ ಮಠ: ಚಿತ್ರದುರ್ಗ ಕೋಟೆ

ಚಿತ್ರದುರ್ಗದ ಪ್ರಧಾನ ಆಕರ್ಷಣೆ ಎಂದರೆ ಇಲ್ಲಿನ ಕೋಟೆ ಮತ್ತು ಪ್ರಾಚೀನ ದೇವಾಲಯಗಳು. ಕೋಟೆ ಏಳು ಸುತ್ತಿನದು. ಬೆಟ್ಟದ ಮೇಲೆ ನಾಲ್ಕು ಸುತ್ತು ಮತ್ತು ಕೆಳಗೆ ಮೂರು ಸುತ್ತು ಕೋಟೆಗೋಡೆಗಳಿವೆ. ಹೊರಸುತ್ತಿನ ಗೋಡೆಗೆ ಪೂರ್ವದಲ್ಲಿ ರಂಗಯ್ಯನ ಬಾಗಿಲು (ಸಿರಾ ದರ್ವಾಜಾ), ಉತ್ತರದಲ್ಲಿ ಸಂತೆ ಅಥವಾ ಸಿದ್ದಯ್ಯನ ಬಾಗಿಲು (ಫತೇ ದರ್ವಾಜಾ), ಪಶ್ಚಿಮದಲ್ಲಿ ಸೀನೀರು ಹೊಂಡದ ಬಾಗಿಲು ಅಥವಾ ಉಚ್ಚಂಗಿ ಬಾಗಿಲು ಮತ್ತು ದಕ್ಷಿಣದಲ್ಲಿ ಲಾಲ್‌ಕೋಟೆ ಬಾಗಿಲು - ಹೀಗೆ ನಾಲ್ಕು ಬಾಗಿಲುಗಳಿವೆ. ಕೆಳದುರ್ಗದ ನೈಋತ್ಯದಲ್ಲಿ ಛತ್ರಿಬಂಡೆ ಇದೆ. ಇದು ಹಿಂದು ಹಾಗೂ ಮುಸಲ್ಮಾನರಿಗೆ ಪವಿತ್ರ ಸ್ಥಳ. ಊರಿನ ದಕ್ಷಿಣಕ್ಕಿರುವ ಇನ್ನೊಂದು ಗುಡ್ಡದ ಮೇಲೆ ಬೇಡರ ಕುಲದೇವರಾದ ಓಬಳಾದೇವಿಯಗುಡಿ ಇದೆ.

ಚಿತ್ರದುರ್ಗದ ಕೋಟೆ ಬಹಳ ಭದ್ರವಾಗಿ ರಚಿತವಾಗಿರುವ ಕಟ್ಟಡ. ಮೇಲು ಕೋಟೆಯಲ್ಲಿ ಅನೇಕ ದೊಡ್ಡ ಕಲ್ಲುಗೋಡೆಗಳು, ಫಿರಂಗಿಗಳು ಮತ್ತು ಇತರ ಅವಶೇಷಗಳಲ್ಲದೆ 14 ದೇವಾಲಯಗಳಿವೆ. ಪೂರ್ವದ ಕಡೆಯಿಂದ ಕೋಟೆ ಏರಿಹೋಗುವಲ್ಲಿ ಐದು ಬಾಗಿಲುಗಳನ್ನು ಹಾದುಹೋಗಬೇಕು. ಇದರಲ್ಲಿ ಮೊದಲನೆಯ ಬಾಗಿಲು ಬಹುಶಃ ವಿಜಯನಗರ ಕಾಲದ ರಚನೆಯಾಗಿದ್ದು ಅದರ ಮೇಲೆ ಗಂಡಭೇರುಂಡ, ಬಸವಣ್ಣ, ಗಣೇಶ ಇತ್ಯಾದಿ ಶಿಲ್ಪಗಳಿವೆ. ಎರಡನೆಯ ಮತ್ತು ಮೂರನೆಯ ಬಾಗಿಲುಗಳು ಸಾಮಾನ್ಯ ರೀತಿಯವು. 4ನೆಯದು ಬಹು ಮಜಬೂತಾದ ಕಟ್ಟಡ. 5ನೆಯ ಬಾಗಿಲನ್ನು ಹಾದುಹೋಗುತ್ತಿದ್ದಂತೆಯೇ ಮುಖ್ಯವಾದ ಕಟ್ಟಡಗಳು ಮತ್ತು ದೇವಾಲಯಗಳು ಸಿಗುತ್ತವೆ. ಚಿತ್ರದುರ್ಗದ ಕೋಟೆಯ ಗೋಡೆಗಳು ಹೆಚ್ಚುಮಟ್ಟಿಗೆ ದಪ್ಪಕಲ್ಲುಗಳಿಂದ ರಚಿತವಾದುವು. ಸಾಮಾನ್ಯವಾಗಿ 15ರಿಂದ 40 ಅಡಿಗಳ ಎತ್ತರ ಇವೆ. ಅಲ್ಲಲ್ಲಿ ಒಳಮುಖದಲ್ಲಿ ಇಟ್ಟಿಗೆ ಗೋಡೆಗಳನ್ನು ಕಟ್ಟಿ 6 – 8 ಅಡಿಗಳಷ್ಟು ಎತ್ತರಿಸಲಾಗಿದೆ. ಕೋಟೆಯ ಹೊರಮೈಗೆ ಸೇರಿದಂತೆ ಹಲವಾರು ದುಂಡು, ಚೌಕ, ಷಟ್ಕೋನ, ಅಷ್ಟಕೋನ ವಿನ್ಯಾಸದ ಅಟ್ಟಾಲಕಗಳನ್ನು ರಚಿಸಲಾಗಿದೆ. ಹೊರಗಿನ ಮೂರು ಸುತ್ತು ಗೋಡೆಗಳ ಸುತ್ತ ಕಂದಕಗಳಿವೆ. ಹಿಂದೆ ಇವುಗಳಲ್ಲಿ ನೀರು ತುಂಬಿದ್ದು ಅನೇಕ ರೀತಿಯ ಸಸ್ಯಗಳು ಮತ್ತು ಮೊಸಳೆಗಳನ್ನು ಬೆಳಸಿ ದಾಟಲು ಅಸಾಧ್ಯವಾಗುವಂತೆ ಮಾಡಲಾಗಿತ್ತು. ಒಟ್ಟು ಕೋಟೆಯಲ್ಲಿ 19 ಹೆಬ್ಬಾಗಿಲುಗಳೂ 35 ದಿಡ್ಡಿಬಾಗಿಲುಗಳೂ 35 ಗುಪ್ತಮಾರ್ಗಗಳೂ ನಾಲ್ಕು ಗುರುತಿಸಲಾಗದ ಬಾಗಿಲುಗಳೂ ಇದ್ದುವಂತೆ. ಇವುಗಳಲ್ಲಿ ಹಲವು ಈಗ ಉಳಿದಿಲ್ಲ. ಕೋಟೆಗೆ ದಪ್ಪ ಮರದ ಬಾಗಿಲುಗಳಿದ್ದುವು. ದಪ್ಪ ಕಬ್ಬಿಣದ ತಗಡಿನ ಹೊದಿಕೆಯಿಂದಲೂ ಹೊರಭಾಗದಲ್ಲಿ ಚೂಪು ಮೊಳೆಗಳಿಂದಲೂ ಅವನ್ನು ಭದ್ರಪಡಿಸಲಾಗಿತ್ತು. ಬೆಟ್ಟದ ಮೇಲೆ ಪಾಳೆಯಗಾರರ ಕಾಲದ ಮಣ್ಣಿಕೋಟೆ ಮತ್ತು ಅರಮನೆಯ ನಿವೇಶನ ಇವೆ. ಈಗಿರುವ ಭದ್ರಕೋಟೆಯ ಹೆಚ್ಚು ಭಾಗವನ್ನು ನಿರ್ಮಿಸಿದವರು ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನ್; ಕೋಟೆಯಲ್ಲಿ ಇವರು ಕಟ್ಟಿಸಿದ ಕಣಜಗಳು ಮತ್ತು ಎಣ್ಣೆ ತುಪ್ಪವನ್ನು ಸಂಗ್ರಹಿಸುತ್ತಿದ್ದ ಎಣ್ಣೆಕೊಳ, ತುಪ್ಪದಕೊಳ ಮುಂತಾದವು ಇವೆ. ಒಳಕೋಟೆಯಲ್ಲಿರುವ ಮಹಲ್ ಒಂದು ಮುಖ್ಯ ಕಟ್ಟಡ. ಈಗ ಇದರ ಮಧ್ಯದ ಹಜಾರದ ಚಾವಣಿ ಬಿದ್ದುಹೋಗಿದ್ದು ಮರದ ಕಂಬಗಳು ಮಾತ್ರ ನಿಂತಿವೆ. ಇದರ ಎರಡನೆಯ ಅಂತಸ್ತಿನಲ್ಲಿ ಕೆಲವು ಸಾಮಾನ್ಯ ರೀತಿಯ ಕೋಣೆಗಳಿವೆ. ಮಹಲಿನ ಸಮೀಪದಲ್ಲಿ 10.5' ಅಡಿ ಉದ್ದ 4.5' ಅಡಿ ಅಗಲ ಮತ್ತ 4.5' ಅಡಿ ಆಳದ ದೊಡ್ಡ ಶಿಲಾತೊಟ್ಟಿ ಇದೆ. ಟಿಪ್ಪು ಸುಲ್ತಾನನ ಕಾಲದಲ್ಲಿ ಇದು ಆನೆಗಳ ಉಪಯೋಗಕ್ಕಾಗಿ ಇತ್ತಂತೆ. ಮದ್ದನ್ನು ಅರೆಯಲು ಉಪಯೋಗಿಸುತ್ತಿದ್ದ ಒಂದು ದೊಡ್ಡ ಬೀಸುವ ಕಲ್ಲು ಸಹ ಇಲ್ಲಿದೆ.

ಬೆಟ್ಟದ ಮೇಲೆ ಸಂಪಗೆ ಸಿದ್ದೇಶ್ವರ, ಹಿಡಿಂಬೇಶ್ವರ, ಏಕನಾಥೇಶ್ವರಿ, ಫಲ್ಗುಣೇಶ್ವರ, ಗೋಪಾಲಕೃಷ್ಣ, ಸುಬ್ಬರಾಯ ಮತ್ತು ಬಸವ ದೇವಾಲಯಗಳಿವೆ.

ಹಿಡಿಂಬೇಶ್ವರ, ಸಿದ್ದೇಶ್ವರ, ಫಲ್ಗುಣೇಶ್ವರ, ಏಕನಾಥೇಶ್ವರಿ ಈ ದೇವಾಲಯಗಳು ಪ್ರಾಚೀನವಾದ ಕಟ್ಟಡಗಳು. ಚಾಚುಬಂಡೆಗಳ ಬುಡದಲ್ಲಿ ಉಂಟಾಗಿರುವ ಸ್ವಾಭಾವಿಕ ಗವಿಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಶಿವದೇವಾಲಯಗಳು.



ಚಿತ್ರದುರ್ಗ ಕೋಟೆಯ ಗೋಡೆಯ ಮೇಲೆ ಶಿಲ್ಪಿತವಾಗಿರುವ ಏಳುಹೆಡೆಯ ಸರ್ಪ ಮತ್ತು ಬಸವ

ಇವುಗಳ ಮೇಲಿನ ಬಂಡೆಗಳ ಮೇಲೆ ಚಾಳುಕ್ಯರೀತಿಯಲ್ಲಿ ಕಟ್ಟಿದ ಕಲ್ಲಿನ ಶಿಖರಗಳಿವೆ. ಹೊಯ್ಸಳರ ಕಾಲದಲ್ಲಿ ಇವುಗಳ ಮುಂದೆ ನವರಂಗಗಳೂ ಮುಖಮಂಟಪಗಳೂ ಅವುಗಳ ಇಕ್ಕೆಲಗಳಲ್ಲಿಯೂ ಜಗತಿಗಳೂ ನಿರ್ಮಿತವಾದುವು. ಇವುಗಳ ಕಂಬಗಳು ಗುಂಡಾಗಿಯೋ ಅಷ್ಟ ಮುಖವುಳ್ಳವಾಗಿಯೋ ಇವೆ. ಹೊಯ್ಸಳರ ಕಾಲದಲ್ಲಿ ನಿರ್ಮಿತವಾಗಿದ್ದರೂ ಇವೆಲ್ಲವೂ ಕಗ್ಗಲ್ಲಿನ ಕಟ್ಟಡಗಳೇ. ಪೆರುಮಾಳೆ ದಂಡ ನಾಯಕನ

ಕಾಲದಲ್ಲಿ ಈ ಮಂಟಪಗಳು ನಿರ್ಮಾಣವಾದಂತೆ ತೋರುತ್ತವೆ. ಬಸವೇಶ್ವರ ದೇವಾಲಯು ಬಳಪದ ಕಲ್ಲಿನಲ್ಲಿ ನಿರ್ಮಿತವಾದ ಕಟ್ಟಡ. ವಿಜಯನಗರದ ಕಾಲದಲ್ಲಿ ಸಿದ್ಧೇಶ್ವರ, ಹಿಡಿಂಬೇಶ್ವರ ದೇವಾಲಯಗಳ ಮುಂದಿನ ಮೂರಂತಸ್ತಿನ ಗೋಪುರದ್ವಾರಗಳು ಮತ್ತು ಉಯ್ಯಾಲೆ ಕಂಬಗಳು ನಿರ್ಮಿತವಾದುವು. ಒಂದನೆಯ ದೇವರಾಯನ ಮಗ ಮಲ್ಲಣ್ಣ ಒಡೆಯ ಈ ಮಹಾದ್ವಾರಗಳನ್ನು ಕಟ್ಟಿಸಿದಂತೆ ತೋರುತ್ತದೆ. ಈ ಎರಡು ಮಹಾದ್ವಾರಗಳೂ ತೇರಿನಂತೆ ವಿಶಿಷ್ಟ ರೀತಿಯಲ್ಲಿ ನಿರ್ಮಿತವಾಗಿದ್ದು ಅವುಗಳನ್ನು ಹಿಡಿಂಬರಥ, ಭೀಮರಥಗಳೆಂದು ಜನ ತೋರಿಸುತ್ತಾರೆ. ಏಕನಾಥೇಶ್ವರಿ ದೇವಾಲಯದ ಮುಂದೆ ನಿಂತಿರುವ ನಲವತ್ತು ಅಡಿಗೂ ಹೆಚ್ಚು ಎತ್ತರದ ಕಲ್ಲಿನ ಕಂಬ, ಉಯ್ಯಾಲೆ ಕಂಬಗಳು ನಾಯಕರ ಕಾಲದ ರಚನೆಗಳು.

ವಿಶ್ವಯೋಗಮಂದಿರ: ಮಲ್ಲಾಡಿಹಳ್ಳಿ

ಕೆಳ ಕೋಟೆಯಲ್ಲಿ ಇರುವ ಮುಖ್ಯ ಕಟ್ಟಡವೆಂದರೆ ಉಚ್ಚಂಗಿಯಮ್ಮನ (ಉತ್ಸವಾಂಬ) ದೇವಾಲಯ. ಬೆಟ್ಟದ ಬುಡದಲ್ಲಿ ಎತ್ತರದ ಸ್ಥಾನದಲ್ಲಿ ಕೆಳಗಿನ ಪಟ್ಟಣವನ್ನು ನೋಡುತ್ತಿರುವಂತೆ ಕಟ್ಟಲಾಗಿದೆ. ಇದೂ ನಾಯಕರ ಕಾಲದ ರಚನೆ. ಇದು ಎರಡು ಅಂತಸ್ತಿನ ಬೃಹತ್ ಕಟ್ಟಡ. ಚಿತ್ರದುರ್ಗದ ಮುಖ್ಯ ದೇವಾಲಯ. ಇದರ ಮುಂದೆ ಎತ್ತರವಾದ ಒಂದು ದೀಪದ ಕಂಬ ಮತ್ತು ಒಂದು ಉಯ್ಯಾಲೆ ಕಂಬ ಇವೆ. ದೇವಾಲಯದ ಮುಂದೆ ಪೂರ್ವದ ರಂಗಯ್ಯನ ಬಾಗಿಲವರೆಗೂ ಹಬ್ಬಿರುವ ರಥ'ದ ಬೀದಿ (ದೊಡ್ಡ ಪೇಟೆ) ಇದೆ.

ಹಿಂದಿನ ಪಾಳೆಯಗಾರರು ನೀರು ಸಂಗ್ರಹಣೆಗಾಗಿ ಮಾಡಿದ ವ್ಯವಸ್ಥೆ ವೈಶಿಷ್ಟ್ಯಪೂರ್ಣವಾದುದು. ದುರ್ಗದ ಸುತ್ತ ಮತ್ತು ಮೇಲೆ ಅನೇಕ ಕೆರೆ, ಹೊಂಡಗಳಿವೆ. ದುರ್ಗದ ದಕ್ಷಿಣಕ್ಕಿರುವ ಜೋಗಿಮಟ್ಟಿ ಬೆಟ್ಟಗಳಿಂದ ಹರಿದು ಬರುವ ನೀರನ್ನು ಮೊದಲು ದೊಡ್ಡಣ್ಣನ ಕೆರೆಯಲ್ಲಿ ಸಂಗ್ರಹಿಸಲಾಗುತ್ತಿತ್ತು. ಅಲ್ಲಿಂದ ಕೋಡಿಬಿದ್ದ ನೀರು ಮುಂದೆ ತಿಮ್ಮಣ್ಣನಾಯಕನ ಕೆರೆ, ಸಣ್ಣಕೆರೆಗಳಿಗೆ ಹರಿದು ಅಲ್ಲಿಂದ ದಬದಬೆ ಮತ್ತು ವಡ್ಡು ಹೊಂಡಗಳಿಗೆ ಹರಿಯುವ ವ್ಯವಸ್ಥೆ ಇದೆ. ಮೇಲುದುರ್ಗದಲ್ಲಿ ಬೀಳುವ ಮಳೆಯ ನೀರು ಸ್ವಲ್ಪವೂ ವ್ಯರ್ಥವಾಗದಂತೆ ಒಂದರ ಕೆಳಗೆ ಒಂದರಂತಿರುವ ಗೋಪಾಲಕೃಷ್ಣ ಹೊಂಡ, ಅಕ್ಕತಂಗಿಯರ ಹೊಂಡ, ಸೀನೀರು ಹೊಂಡ ಮತ್ತು ಸಂತೆಹೊಂಡಗಳನ್ನು ತುಂಬುತ್ತದೆ.

ಟಿಪ್ಪು ಸುಲ್ತಾನನ ಪತನದ ಅನಂತರ ಈ ಕೋಟೆಯಲ್ಲಿ ಕೆಲದಿನ ಬ್ರಿಟಿಷ್ ಠಾಣ್ಯವಿತ್ತು. ಈಗ ಇಲ್ಲಿನ ಕೋಟೆ ಮತ್ತು ಇತರ ಮುಖ್ಯ ಕಟ್ಟಡಗಳು ಪುರಾತತ್ವ ಇಲಾಖೆಯಿಂದ ರಕ್ಷಿತವಾಗಿವೆ. ರಂಗಯ್ಯನ ಬಾಗಿಲಿನಲ್ಲಿ ಒಂದು ಸರ್ಕಾರಿ ವಸ್ತು ಸಂಗ್ರಹಾಲಯವಿದ್ದು ಅಲ್ಲಿ ಅನೇಕ ಪ್ರಾಚೀನ ವಸ್ತುಗಳು ಮತ್ತು ದಾಖಲೆಗಳನ್ನು ಸಂಗ್ರಹಿಸಿಡಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಈ ಜಿಲ್ಲೆಯ ಕೊಡುಗೆ ಉಲ್ಲೇಖನೀಯ. ಪ್ರಸಿದ್ಧ ಸಾಹಿತಿಗಳಾದ ಟಿ.ಎಸ್.ವೆಂಕಣ್ಣಯ್ಯ (ನೋಡಿ) ತ.ಸು.ಶಾಮರಾಯ (ನೋಡಿ), ತ.ರಾ.ಸುಬ್ಬರಾವ್ (ನೋಡಿ), ಬಿ.ಎಲ್.ವೇಣು ಮೊದಲಾದವರು ಈ ಜಿಲ್ಲೆಯವರು. ಇದಲ್ಲದೆ ಸುಪ್ರಸಿದ್ಧ ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ (ನೋಡಿ) ಯವರು ಈ ಜಿಲ್ಲೆಯ ಹರ್ತಿಕೋಟೆಯವರು. ಮೀರಾಸಾಬಿ ಹಳ್ಳಿ ಶಿವಣ್ಣ, ಮೈಲಹಳ್ಳಿ ರೇವಣ್ಣ ಮೊದಲಾದವರು ಜಾನಪದಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಲಕ್ಷ್ಮಣ ತೆಲಗಾವಿಯವರು ಸಂಶೋಧಕರು. ಸಿರಿಯಜ್ಜಿ ಜನಪದ ಹಾಡುಗಾರ್ತಿ. ಶಾಂತಮ್ಮ ಜನಪದ ಕಥೆ ಹೇಳುವವರಲ್ಲಿ ನೈಪುಣ್ಯ ಸಾಧಿಸಿದ್ದಾರೆ. (ಎಂ.ಎಚ್.)

**ಚಿತ್ರದುರ್ಗದ ಪಾಳೆಯಗಾರರು :** 16ರಿಂದ 18ನೆಯ ಶತಮಾನದ ಅವಧಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಬಹುಭಾಗ ಮತ್ತು ಸುತ್ತಲಿನ ಕೆಲವು ಭಾಗಗಳನ್ನು ಆಳಿದ ಪಾಳೆಯಗಾರರು. ಇವರು ಬೇಡಕುಲದ ವಾಲ್ಮೀಕಿ ಗೋತ್ರದ ಕಾಮಗೇಟಿ ವಂಶದವರೆಂದೂ ಮಹಾನಾಯಕಾಚಾರ್ಯ ಎಂಬ ಬಿರುದನ್ನು ಹೊಂದಿದ್ದರೆಂದೂ ಶಾಸನಗಳಿಂದ ತಿಳಿಯುತ್ತದೆ. ಕಾಮಗೇಟಿ ಕಸ್ತೂರಿ ಎಂಬ ಪೂರ್ವನಾಮ ಮತ್ತು ಮದಕರಿನಾಯಕ ಎಂಬ ಹೆಸರು ಈ ವಂಶದ ಹಲವರಿಗಿತ್ತು.

ಇವರ ಮೂಲದ ಬಗ್ಗೆ ಹಲವು ಕಥೆಗಳಿವೆ. ಒಂದು ಐತಿಹ್ಯದ ಪ್ರಕಾರ ಸು.1475ರಲ್ಲಿ ತಿರುಪತಿಯ ಸಮೀಪದ ಜಡಿಕಲ್ ದುರ್ಗದಿಂದ ಮೂರು ಬೇಡ ಕುಟುಂಬಗಳು ವಲಸೆ ಬಂದು ಭರಮಸಾಗರದ ಬಳಿಯಲ್ಲಿನ ನೀರ್ತಡಿಯಲ್ಲಿ ನೆಲೆಸಿದವು. ಆ ಕುಟುಂಬಗಳಲ್ಲೊಂದರ ಯಜಮಾನನ ಮಗ ಹಿರೇಹನುಮಪ್ಪ ನಾಯಕ ಮತ್ತು ಮೊಮ್ಮಗ ತಿಮ್ಮಣ್ಣನಾಯಕ ಇವರು ಕಾಲಾಂತರದಲ್ಲಿ ದಾವಣಗೆರೆ ತಾಲ್ಲೂಕಿನ ಮತ್ತಿಯನ್ನು ಸೇರಿದರು. ವಿಜಯನಗರದ ಅರಸರು ಶೂರನಾದ ಮತ್ತಿಯ ತಿಮ್ಮಣ್ಣನಾಯಕನನ್ನು ಹೊಳಲ್ಕೆರೆಗೂ ಅನಂತರ ಹಿರಿಯೂರು ಮತ್ತು ಚಿತ್ರದುರ್ಗಗಳಿಗೂ ನಾಯಕನನ್ನಾಗಿ ನೇಮಿಸಿದರು. ಚಿತ್ರದುರ್ಗದ ಕೋಟೆ ಇವನ ಕಾಲದ ರಚನೆ. ತಿಮ್ಮಣ್ಣನಾಯಕ ಕಲ್ಬುರ್ಗಿಯ ತುರುಷ್ಕರ ವಿರುದ್ಧ ಹೋರಾಡಿ ವಿಜಯನಗರದ ಅರಸರಿಂದ ಬಹುಮಾನಗಳನ್ನು ಪಡೆದ. ಆದರೆ ಅನಂತರ ತನ್ನ ಅವಿಧೇಯತೆಯಿಂದಾಗಿ ವಿಜಯನಗರದಲ್ಲಿ ಬಂದಿಯಾಗಿ ಅಲ್ಲಿಯೇ ಸತ್ತ ಎಂಬ ಇನ್ನೊಂದು ಕಥೆಯಿದೆ. 1568ರಲ್ಲಿ ವಿಜಯನಗರದ ತಿರುಮಲ (ರಾಮರಾಯನ ತಮ್ಮ) ಹೊಳಲ್ಕೆರೆ ಸೀಮೆಯನ್ನು ಮದಕರಿನಾಯಕನಿಗೆ ಅಮರಮಾಗಣೆಯಾಗಿ ಕೊಟ್ಟನೆಂದು ಶಾಸನಗಳು ತಿಳಿಸುತ್ತವೆ. ಮದಕರಿನಾಯಕ ಈ ವಂಶದ ಪಾಳೆಯಗಾರರ ಸಾಮಾನ್ಯ ಹೆಸರಾದ್ದರಿಂದ, ಇವನೇ ಕಥೆಗಳ ತಿಮ್ಮಣ್ಣನಾಯಕನಿರಬಹುದು. ತಿಮ್ಮಣ್ಣನಾಯಕನ (ಸು.1568-88) ತರುವಾಯ ಅವನ ಮಗ ಓಬಣ್ಣನಾಯಕ (ಸು.1588-1602) ಪಾಳೆಯಗಾರನಾದ. ಇವನ ಕಾಲದಲ್ಲಿ ಚಿತ್ರದುರ್ಗದ ಕೋಟೆಯೊಳಗೆ ಪಟ್ಟಣ ಬೆಳೆಯಿತು. ಇವನ ಮಗ ಕಸ್ತೂರಿ ರಂಗಪ್ಪನಾಯಕ (ಸು.1602-52) ಬಸವಾಪಟ್ಟಣದ ಪಾಳೆಯಗಾರರೊಡನೆ ಹೊಡೆದಾಡಿ, ಮಾಯಕೊಂಡ, ಸಂತೇಬೆನ್ನೂರು, ಹೊಳಲ್ಕೆರೆ, ಅಣಜಿ ಮುಂತಾದ ಸ್ಥಳಗಳನ್ನು ಚಿತ್ರದುರ್ಗದ ಪಾಳೆಯಪಟ್ಟಿಗೆ ಸೇರಿಸಿದ.

ಇವನ ಮಗ ಎರಡನೆಯ ಮದಕರಿನಾಯಕ (ಸು.1652-74) ಧೀರ, ಸಾಹಸಿ. ಈತ ರಾಜ್ಯದ ಪೂರ್ವಕ್ಕಿದ್ದ ಅನೇಕ ಪ್ರದೇಶಗಳನ್ನು ಗೆದ್ದು ರಾಜ್ಯವನ್ನು ನಾಲ್ಕು ಪ್ರಾಂತ್ಯಗಳಾಗಿ ಮಾಡಿ ಅಲ್ಲಿ ಪ್ರತ್ಯೇಕ ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿದ. ಅನಂತರ ಅಧಿಕಾರಕ್ಕೆ ಬಂದ ಇವನ ದತ್ತುಪುತ್ರ ಓಬಣ್ಣನಾಯಕ (1674-75) ವಿಷಯಲಂಪಟನೂ ಕ್ರೂರಿಯೂ ಆದ್ದರಿಂದ ಇವನ ದಳವಾಯಿಗಳೇ ಇವನನ್ನು ಕೊಂದು ಇವನ ಮಗ ಶೂರಕಾಂತ ನಾಯಕನಿಗೆ ಅಧಿಕಾರ ವಹಿಸಿದರು. ಈತನೂ ಸೈನಿಕರೊಡನೆ ಸೌಹಾರ್ದದಿಂದಿರದೆ ಕ್ಷುಲ್ಲಕ ಕಾರಣಕ್ಕಾಗಿ ಹತನಾದ. ಈ ದಾರುಣ ಪರಿಸ್ಥಿತಿಯಲ್ಲಿ ದಳವಾಯಿಗಳು ಹರಪನಹಳ್ಳಿಯಲ್ಲಿ ಇದ್ದ ಮದಕರಿನಾಯಕನ ತಮ್ಮ ಚಿಕ್ಕಣ್ಣನಾಯಕನನ್ನು ಕರೆತಂದು ಪಾಳೆಯಗಾರನನ್ನಾಗಿ ಮಾಡಿದರು.

ವೀರನೂ ಚತುರನೂ ಆದ ಚಿಕ್ಕಣ್ಣನಾಯಕ (ಸು.1676-86) ರಾಜ್ಯವನ್ನು ದಕ್ಷತೆಯಿಂದ ಆಳಿದ. ಹರಿಹರದ ದೇವಾಲಯದ ಸಂಪತ್ತನ್ನು ಸೂರೆ ಮಾಡಲು ಮುಸ್ಲಿಮರು ದೊಡ್ಡ ದಂಡನ್ನು ತರಲು ಚಿಕ್ಕಣ್ಣನಾಯಕ ಅವರನ್ನು ಸದೆಬಡಿದು ನಗರವನ್ನು ರಕ್ಷಿಸಿದ. ಚಿಕ್ಕಣ್ಣನಾಯಕನ ಮರಣಾನಂತರ ಇವರ ಅಣ್ಣ ಲಿಂಗಣ್ಣನಾಯಕ ಪಾಳೆಯಗಾರನಾಗಿ ಮುಮ್ಮಡಿ ಮದಕರಿ (ಸು.1686-88) ಎಂದು ಹೆಸರು ತಳೆದ. ದಳವಾಯಿಗಳ ಪ್ರಾಬಲ್ಯ ಹೆಚ್ಚಾಗಿದ್ದು ಆ ಕಾಲದಲ್ಲಿ ಮುದ್ದಣ್ಣನ ನಾಯಕತ್ವದ ಒಂದು

ಗುಂಪು ಲಿಂಗಣ್ಣನಾಯಕನನ್ನು ಕೊಂದು ಅವನ ಸ್ಥಾನದಲ್ಲಿ ದುರ್ಬಲನೆನಿಸಿದ ದೊಣ್ಣೆರಂಗಪ್ಪ ನಾಯಕನನ್ನು ಕೂಡಿಸಿತು (ಸು.1688-89). ಮುದ್ದಣ್ಣ ಸರ್ವಾಧಿಕಾರಿಯಾಗಿ ಆಡಳಿತ ನಡೆಸತೊಡಗಿದ. ಕ್ರಮೇಣ ಭರಮಪ್ಪನೆಂಬ ಮತ್ತೊಬ್ಬ ದಳವಾಯಿ ಬಲಿಷ್ಠನಾಗಿ ಮುದ್ದಣ್ಣ ಮತ್ತು ಅವನ ಸಹೋದರರನ್ನು ಕೊಲ್ಲಿಸಿ ದೊಣ್ಣೆರಂಗಪ್ಪನಾಯಕನನ್ನು ಸೆರೆಮನೆಯಲ್ಲಿಟ್ಟು ಅವನ ಹೆಸರಿನಲ್ಲಿ ತಾನೇ ರಾಜ್ಯವಾಳಲಾರಂಭಿಸಿದ. ರಂಗಪ್ಪನಾಯಕ ತೀರಿಕೊಂಡ ಮೇಲೆ, ದಳವಾಯಿ ಭರಮಪ್ಪ ಸ್ವ-ಅಧಿಕಾರಕ್ಕೆ ಆಸೆಪಡದೆ ಬಿಳಿಚೋಡಿನಲ್ಲಿದ್ದ ಭರಮಪ್ಪನಾಯಕನೇ ನಿಜವಾದ ಹಕ್ಕುದಾರನೆಂದು ತೀರ್ಮಾನಿಸಿ ಅವನನ್ನು 1689ರಲ್ಲಿ ಚಿತ್ರದುರ್ಗದ ಪಾಳೆಯಗಾರನನ್ನಾಗಿ ಮಾಡಿದ. ಈತ ಅಧಿಕಾರವನ್ನು ಕೈಗೆ ತೆಗೆದುಕೊಳ್ಳುತ್ತಿದ್ದಂತೆಯೇ ರಾಜ್ಯಕ್ಕೆ ಒದಗಿದ ಅನೇಕ ವಿಪತ್ತುಗಳನ್ನು ಚಾತುರ್ಯದಿಂದ ಎದುರಿಸಿ, ತನ್ನ ಮೂವತ್ತೊಂರು ವರ್ಷಗಳ ಆಳಿಕೆಯಲ್ಲಿ (1689-1721) ಅನೇಕ ದೇವಾಲಯ, ಅರಮನೆ, ಕೋಟೆ, ಕೆರೆಕೊಳಗಳನ್ನು ಕಟ್ಟಿಸಿ, ಪಾಳೆಯಪಟ್ಟನ್ನು ಪ್ರಶಂಸಾರ್ಹವಾಗಿ ಬೆಳೆಸಿದ. ಅನಂತರ ಪಟ್ಟಕ್ಕೆ ಬಂದ ಇವನ ಮಗ ಹಿರೇ ಮದಕರಿನಾಯಕನೂ (ಸು.1721-48) ಸಮರ್ಥ.



ಚಿತ್ರದುರ್ಗದ ಕುಮಾರ ಮದಕರಿನಾಯಕನ ಪೊಂಬೊಳಲ ಶಾಸನ

ಹರಪನಹಳ್ಳಿ, ಸವಣೂರು, ಬಿದನೂರು ನಾಯಕರೊಡನೆಯೂ ಮರಾಠರ ಮೇಲೂ ಯುದ್ಧಮಾಡಿ ಮೊಳಕಾಲ್ಮೂರಿನವರೆಗೂ ರಾಜ್ಯವನ್ನು ವಿಸ್ತರಿಸಿದ. ಆದರೆ ಇತರ ನಾಯಕರ ಬೆಂಬಲ ಪಡೆದ ಬಿದನೂರಿನ ಸೈನ್ಯಕ್ಕೂ ಚಿತ್ರದುರ್ಗದ ಸೈನ್ಯಕ್ಕೂ ಮಾಯಕೊಂಡದಲ್ಲಿ ನಡೆದ ಭೀಕರ ಕದನದಲ್ಲಿ (1747-48) ಚಿತ್ರದುರ್ಗದವರು ಸೋತರು. ತದನಂತರ ಮದಕರಿ ನಾಯಕನಿಗೂ ಹರಪನಹಳ್ಳಿಯ ನಾಯಕನಾದ ಸೋಮಶೇಖರ ನಾಯಕನಿಗೂ ನಡೆದ ದ್ವಂದ್ವಯುದ್ಧದಲ್ಲಿ ಮದಕರಿನಾಯಕ ಮೃತನಾದ. ಬಳಿಕ ಗದ್ದುಗೆಯನ್ನೇರಿದ ಇವನ ಮಗ ಕಸ್ತೂರಿ ರಂಗಪ್ಪನಾಯಕ (1748-54) ಮರಾಠ ಸರದಾರನಾದ ಗುತ್ತಿಯ ಮುರಾರಿರಾಯನ ನೆರವಿನಿಂದ ಮಾಯಕೊಂಡವನ್ನು ಸ್ವಾಧೀನಪಡಿಸಿಕೊಂಡ. ಅಪುತ್ರಕನಾದ ರಂಗಪ್ಪನಾಯಕನ ಮರಣಾನಂತರ ಭರಮಪ್ಪನಾಯಕನ ಮಗ ಕಿರಿಯ ಮದಕರಿನಾಯಕ (1754-79) ದೊರೆಯಾದ. ಅಸದಳ ಪರಾಕ್ರಮಿಯಾದ ಇವನ ಕಾಲದಲ್ಲಿ ಚಿತ್ರದುರ್ಗ ಸರ್ವತೋಮುಖವಾಗಿ ವಿಸ್ತರಣೆ ಹೊಂದಿ ಬಲಿಷ್ಠ ರಾಜ್ಯವಾಯಿತು. ಪರಸ್ಪರ ಶತ್ರುಗಳಾದ ಮರಾಠರೂ ಹೈದರ್ ಅಲಿಯೂ ಇವನ ಸಹಾಯವನ್ನು ಅಪೇಕ್ಷಿಸಿದರು. ಮದಕರಿನಾಯಕ ಮೊದಲು ಹೈದರ್‌ಗೆ ನೆರವು ನೀಡಿ ಬಿದನೂರು, ಬಂಕಾಪುರ, ನಿಡುಗಲ್ಲು ಮತ್ತು ಮರಾಠರ ಮೇಲೆ ಕೈಗೊಂಡ ಅವನ ದಂಡಯಾತ್ರೆಗಳ ಯಶಸ್ಸಿಗೆ ಕಾರಣನಾದ. ಅದರಲ್ಲೂ ಒಂದು ವರ್ಷಕಾಲ ಸತತ ಪ್ರಯತ್ನ ಪಟ್ಟರೂ ಹೈದರನಿಗೆ ಸ್ವಾಧೀನವಾಗದ ನಿಡುಗಲ್ಲು ಮದಕರಿಯ ಮೂಲಕ ಸುಲಭವಾಗಿ ದೊರೆಯಿತು. ಆದರೆ ಹೈದರನಿಗೆ ನಾಯಕನ ಬಗ್ಗೆ ಕೃತಜ್ಞತೆಯ ಬದಲು ಅಂತರಂಗದಲ್ಲಿ ದ್ವೇಷಾಸೂಯೆಗಳೇ ಇದ್ದುವು. ಸಿರಿ, ಕೀರ್ತಿಯಿಂದ ಮೆರೆಯುತ್ತಿದ್ದ ಚಿತ್ರದುರ್ಗವನ್ನು ಸ್ವಾಧೀನಪಡಿಸಿಕೊಳ್ಳುವ ಹಂಚಿಕೆ ಅವನಿಗೆ ಇದ್ದಂತೆ ತೋರುತ್ತದೆ. ಇದನ್ನು ಶಂಕಿಸಿದ ಅಥವಾ ತತ್ಕಾಲದ ರಾಜಕೀಯ ಬಲಾಬಲಗಳನ್ನು ನೋಡಿ ಹೈದರನ ಪತನ ಖಚಿತವೆಂದು ಭ್ರಮಿಸಿದ ಮದಕರಿ, 1777ರಲ್ಲಿ ಹೈದರಾಬಾದಿನ ನಿಜಾಮ ಮತ್ತು ಮರಾಠರು ಹೈದರನ ಮೇಲೆ ಬೀಳಲು ಸನ್ನಾಹ ಮಾಡಿಕೊಂಡಾಗ ಮರಾಠರ ಸ್ನೇಹ ಬೆಳೆಸಿದ. ಹಿಂದಿನ ಕರಾರಿನಂತೆ ಹೈದರನಿಗೆ ಸೈನ್ಯಸಹಾಯವನ್ನು ಕಳುಹಿಸದೆ ಸುಮ್ಮನಿದ್ದ. ಇದರಿಂದ ಕುಪಿತನಾದ ಹೈದರ್ ತನಗೊದಗಿದ ಅಪಾಯವನ್ನು ನಿವಾರಿಸಿಕೊಂಡ ಮೇಲೆ ಚಿತ್ರದುರ್ಗವನ್ನು ಮುತ್ತಿದ. ಮೊದಲ ಬಾರಿಯ ಮುತ್ತಿಗೆಯಲ್ಲಿ ಹೈದರನಿಗೆ ಜಯ ದೊರೆಯುವ ಸೂಚನೆ ಕಂಡುಬರದಿರಲು ನಾಯಕನೊಡನೆ ಒಪ್ಪಂದ ಮಾಡಿಕೊಂಡು ಹಿಂದಿರುಗಿದ. ಆದರೆ ಒಪ್ಪಂದದ ಪ್ರಕಾರ ನಾಯಕ ಯುದ್ಧದಿಂದಾದ ನಷ್ಟಕ್ಕೆ ಪರಿಹಾರದ್ರವ್ಯವನ್ನು ಸಲ್ಲಿಸದೆಹೋಗಲು ಹೈದರ್ ಅಪಾರ ಸೇನೆಯೊಡನೆ ಚಿತ್ರದುರ್ಗವನ್ನು ಎರಡನೆಯ ಬಾರಿ ಮುತ್ತಿದ. ಈ ಬಾರಿ ನಾಯಕನ ಕಡೆಯ ಅಧಿಕಾರಿಗಳೆಸಗಿದ ದ್ರೋಹ ಹಾಗೂ ಹೈದರನ ತಂತ್ರದಿಂದಾಗಿ ಚಿತ್ರದುರ್ಗದ ಪತನ ಸಮೀಪಿಸಿದರೂ ನಾಯಕ ಅಳುಕದೆ ಕಡೆತನಕ ವೀರಾವೇಶದಿಂದ ಹೋರಾಡಿದ. ಈ ಸಂಬಂಧವಾಗಿ ರಚನೆಗೊಂಡಿರುವ ಒನಕೆ ಓಬವ್ವನ ಕಥೆ ಅತ್ಯಂತ ಪ್ರಸಿದ್ಧವಾದುದು. ಆದರೆ ಚಿತ್ರದುರ್ಗ ಹೈದರನ ಕೈವಶವಾಗಿ; ನಾಯಕ ಹೈದರನ ಬಂದಿಯಾದ (ಮಾರ್ಚ್ 1779). ಇದರೊಂದಿಗೆ ಚಿತ್ರದುರ್ಗ ಪಾಳೆಯಗಾರರ ಆಳಿಕೆ ಮುಗಿಯಿತು. ಕೊನೆಗೆ ಮದಕರಿನಾಯಕ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಸಾವನ್ನಪ್ಪಿದ. (ಪಿ.ಕೆ.ವೈ.ಡಿ.)

**ಚಿತ್ರಾಪುರ :** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನಲ್ಲಿ ಮಂಗಳೂರಿನಿಂದ 24ಕಿಮೀ ಉತ್ತರಕ್ಕೆ ಕುಲೈ ಗ್ರಾಮಕ್ಕೆ ಸೇರಿದಂತೆ ಪಣಂಬೂರಿನ ಹತ್ತಿರ ಸಮುದ್ರ ತೀರದಲ್ಲಿರುವ ಒಂದು ಹಳ್ಳಿ. ಪ್ರಾಚೀನ ಶಾಸನಗಳಲ್ಲಿ ಇದನ್ನು ಚಿತ್ರಾಪ್ಪ ಎಂದು ಉಲ್ಲೇಖಿಸಲಾಗಿದೆ. ಇಲ್ಲಿ ಮಾಧ್ವಸಂಪ್ರದಾಯಕ್ಕೆ ಸೇರಿದ ಚಿತ್ರಾಪುರ ಮಠವಿದೆ. 14-15ನೆಯ ಶತಮಾನದ ಶಾಸನಗಳಲ್ಲಿ ಈ ಮಠದ ಉಲ್ಲೇಖವಿದೆ. ಈ ಮಠದ ಅಧೀನದಲ್ಲಿ ಒಂದು ದುರ್ಗಾ ದೇವಾಲಯವಿದೆ. ಇದು ಮೂಲತಃ 11ನೆಯ ಶತಮಾನದ ರಚನೆ. ಇಲ್ಲಿಯ ದೇವತೆ ಲಿಂಗಾಕಾರದಲ್ಲಿದೆ. ದೇವರನ್ನು ಪುಳುಪಿನ ದೇವತೆಯೆಂದು 13 ಮತ್ತು 14ನೆಯ ಶತಮಾನದ ಶಾಸನಗಳಲ್ಲಿ ಹೇಳಿದೆ. ಚೌಕಾಕಾರವಾದ ದೇವಾಲಯ ಪಶ್ಚಿಮಾಭಿಮುಖವಾಗಿ ಅರಬ್ಬೀ ಸಮುದ್ರಕ್ಕೆ ಎದುರಾಗಿದೆ. (ಟಿ.ಪಿ.ಎಸ್.ಆರ್.)

**ಚಿತ್ರಾಲಂಕೃತ ಹಸ್ತಪ್ರತಿಗಳು :** ವಿವಿಧ ರೀತಿಯ ಚಿತ್ರಗಳಿಂದ ಅಲಂಕೃತವಾದ ಹಸ್ತಪ್ರತಿಗಳಿಗೆ ಈ ಹೆಸರಿದೆ (ಇಲ್ಯೂಮಿನೇಟೆಡ್ ಮ್ಯಾನ್ಯುಸ್ಕ್ರಿಪ್ಟ್). ಅಕ್ಷರಗಳನ್ನೇ ಸಾಲಂಕೃತವಾಗಿ ಮಾಡುವುದು, ಪುಟಪುಟಕ್ಕೂ ಸುಂದರ ಚೌಕಟ್ಟನ್ನು ಕಟ್ಟುವುದು, ಮುಖಪುಟವನ್ನು ಮೇಲು

ಹೊದಿಕೆಯ ರಟ್ಟನ್ನು ವರ್ಣಚಿತ್ರಗಳಿಂದ ಅಲಂಕರಿಸುವುದು, ವಿಷಯಕ್ಕೆ ಸಂಬಂಧಿಸಿದಂತೆ ಗ್ರಂಥದ ಒಳಗಡೆ ರೇಖಾಚಿತ್ರಗಳನ್ನು ಒದಗಿಸುವುದು- ಹೀಗೆ ಹಸ್ತಪ್ರತಿ ಚಿತ್ರಾಲಂಕರಣಕಲೆ ಅನೇಕ ಬಗೆಯಲ್ಲಿ ಪ್ರಕಾಶಗೊಂಡು ಲಿಪಿಕಾರರ ಕಲಾಕೌಶಲಕ್ಕೆ ನಿದರ್ಶನವಾಗಿದೆ.



ಶಿವ ಮತ್ತು ಉಮೆ

ಚಿತ್ರಾಲಂಕೃತ ಹಸ್ತಪ್ರತಿಗಳು ಯಾವುದೇ ದೇಶಕ್ಕೆ, ವಿಷಯಕ್ಕೆ ಸೀಮಿತವಾಗಿಲ್ಲ. ದೊರೆಯುವ ಚಿತ್ರಗಳು ಮಾತ್ರ ಆಯಾ ದೇಶದ, ಆಯಾ ಕಲೆಯ ವೈಶಿಷ್ಟ್ಯವನ್ನು ಪಡೆದಿರುತ್ತವೆ. ಇದುವರೆಗೆ ತಿಳಿದುಬಂದಿರುವಂತೆ ಯುರೋಪಿನಲ್ಲಿ ಬಿಜಾಂಟೀಯನ್ ಮತ್ತು ರೋಮನ್ ಕಲೆಗಳೇ ಪುರಾತನವಾದುವು. ದೊರೆಯುವ ಚಿತ್ರಾಲಂಕೃತ ಹಸ್ತಪ್ರತಿಗಳಲ್ಲಿ ಪುರಾತನವಾದುವೆಂದರೆ ಈಜಿಪ್ಟಿನ ಪಪೈರಸ್ ಸುರುಳಿಗಳು. ಇವುಗಳ ಕಾಲ ಕ್ರಿ.ಪೂ.7000. ದಿ ಬುಕ್ ಆಫ್ ದಿ ಡೆಡ್ ಎಂಬ ಗ್ರಂಥದ ಬೇರೆ ಬೇರೆ ಪ್ರತಿಗಳು ಹಲವು ಸಮಾಧಿಗಳಲ್ಲಿ ಕಂಡುಬಂದಿವೆ. ಇವುಗಳೆಲ್ಲವೂ ಪಪೈರಸ್ ಸುರುಳಿಗಳೇ. ಇವುಗಳಲ್ಲಿ ರೇಖಾಚಿತ್ರಗಳನ್ನೂ ಜಲವರ್ಣ ಚಿತ್ರಗಳನ್ನೂ ಕಾಣಬಹುದಾಗಿದೆ. ಇದೇ ಮಾದರಿಯ ಒಂದು ಹಸ್ತಪ್ರತಿ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ. ಗ್ರೀಸಿನಲ್ಲಿ 4ನೆಯ ಶತಮಾನಕ್ಕೆ ಪೂರ್ವದ ಇಂಥ ಯಾವ ಪ್ರತಿಗಳೂ ದೊರೆಯದಿದ್ದರೂ ಸು.400ರ ರೋಮನ್‌ಪ್ರತಿ ಹೋಮರನ ಇಲಿಯಡ್ ಕಾವ್ಯ ಅಮ್ರೊಸಿಯಾನ ಗ್ರಂಥಾಲಯದಲ್ಲಿದೆ. ಇದರಲ್ಲಿ 58 ಉಜ್ವಲಾಲಂಕೃತ ಚಿತ್ರಗಳಿವೆ. ಇನ್ನೊಂದು ಇದೇ ಕಾಲದ ರೋಮನ್ ಪ್ರತಿಯೆಂದರೆ ವರ್ಜಿಲ್ ಆಫ್ ದಿ ವ್ಯಾಟಿಕನ್.

ಇದೇ ರೀತಿ ಭಾರತದಲ್ಲಿ ಓಲೆ ಮತ್ತು ಕಾಗದದ ಮೇಲೆ ಬರೆದ ಚಿತ್ರಾಲಂಕೃತ ಹಸ್ತಪ್ರತಿಗಳು ದೊರೆಯುತ್ತವೆ. ಈಗ ತಿಳಿದು ಬಂದಿರುವಂತೆ ಓಲೆಯ ಅತ್ಯಂತ ಹಳೆಯ ಚಿತ್ರಾಲಂಕೃತ ಪ್ರತಿಯೆಂದರೆ, 1962ರಲ್ಲಿ ನ್ಯೂ ಯಾರ್ಕ್ ನಗರದಲ್ಲಿ ಪ್ರದರ್ಶಿತವಾದ ಸಂಸ್ಕೃತ ಗ್ರಂಥ. ಇದು ಬೌದ್ಧರ ಪ್ರಾರ್ಥನಾಗೀತೆಗಳನ್ನೊಳಗೊಂಡಿದೆ. ಇದರಲ್ಲಿರುವ ಚಿತ್ರಗಳು ಅಜಂತ ಕಲೆಯನು ಅನುಸರಿಸಿವೆಯೆಂದು ಹೇಳಲಾಗಿದೆ. ಈಗ ದೊರೆಯುವ ಮತ್ತೊಂದು ಪ್ರತಿಯೆಂದರೆ ಧವಳ ಮಹಾಗ್ರಂಥ. ಇದರ ಕಾಲ ಸು.11ನೆಯ ಶತಮಾನ. ಇದು ಅರ್ಧಮಾಗಧಿ ಭಾಷೆಯಲ್ಲಿ ಕನ್ನಡ ಶಾಸನ ಲಿಪಿಯಲ್ಲಿ ಬರೆದುದಾಗಿದೆ. ಜೈನತತ್ತ್ವ ನಿರೂಪಣೆಯನ್ನು ಹೊಂದಿರುವ ಈ ಹಸ್ತಪ್ರತಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ ಜೈನಮಂದಿರದಲ್ಲಿ, ಸಿದ್ಧಾಂತದರ್ಶನಕ್ಕೆಂದು ಮೀಸಲಾಗಿದೆ. ಇದರಲ್ಲಿ ಅತ್ಯುತ್ತಮವಾದ ವರ್ಣರಂಜಿತ ಚಿತ್ರಗಳಿವೆ. ಇಲ್ಲಿಯೇ ಇರುವ ಮತ್ತೊಂದು ರೇಖಾಚಿತ್ರಗಳನ್ನೊಳಗೊಂಡ ಹಸ್ತಪ್ರತಿಯೆಂದರೆ ನೇಮಿಚಂದ್ರನ ನೇಮಿನಾಥಪುರಾಣ. ಇಂಥ ಹಲವಾರು ಓಲೆಗ್ರಂಥಗಳಲ್ಲಿ ಚಿತ್ರಗಳನ್ನು ಕಂಡರಸಲಾಗಿದ್ದಾರೆ. ಹಲವು ಹಸ್ತಪ್ರತಿಗಳು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಪ್ರಾಚ್ಯ ವಿದ್ಯಾಸಂಶೋಧನಾಲಯದಲ್ಲಿವೆ.

14ನೆಯ ಶತಮಾನದ ಕೊನೆಯಲ್ಲಿ ಕಾಗದ ಬಳಕೆಗೆ ಬಂದು ಅದು ಓಲೆ ಮತ್ತು ಭೂರ್ಜಪತ್ರಗಳ ಸ್ಥಾನವನ್ನು ಆಕ್ರಮಿಸಿತು. ಕಾಗದ ಬಳಕೆಗೆ ಬಂದಮೇಲೆ ತಯಾರಾದ ಹಸ್ತಪ್ರತಿಗಳಲ್ಲಿ 1550ರಲ್ಲಿ ಬರೆದ, ಜೈನ ನಿಯಮಾವಳಿಗಳನ್ನೊಳಗೊಂಡ ಚಿತ್ರಾಲಂಕೃತ ಹಸ್ತಪ್ರತಿಯೆಂದರೆ ಕಲ್ಪಸೂತ್ರ. ಇದರಲ್ಲಿನ ಚಿತ್ರಗಳು ಪಶ್ಚಿಮ ದೇಶದ ರೇಖಾವಿನ್ಯಾಸಗಳನ್ನೊಳಗೊಂಡ ಭಾರತ ಚಿತ್ರಗಳು.

16ನೆಯ ಶತಮಾನದಲ್ಲಿ ಬಹುತೇಕ ಹಸ್ತಪ್ರತಿಗಳು ಚಿತ್ರಗಳಿಂದ ಅಲಂಕೃತವಾದುವಾಗಿವೆ. ಮೊಗಲ್ ಚಕ್ರವರ್ತಿ ಅಕ್ಬರ್ ಭಾರತದ ಎಲ್ಲ ಭಾಗಗಳಿಂದ ಚಿತ್ರಕಾರರನ್ನು ಕರೆಸಿದ. ಇವರಿಂದ ಹಲವಾರು ಹಸ್ತಪ್ರತಿಗಳು ಉತ್ತಮ ಚಿತ್ರಗಳಿಂದ ಅಲಂಕೃತವಾದುವು. ಈ ಎಲ್ಲ ಚಿತ್ರಗಳಲ್ಲಿ ಮೊಗಲರ ಕಲಾವಂತಿಕೆಯನ್ನು ಕಾಣಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ 36 ಚಿತ್ರಗಳನ್ನೊಳಗೊಂಡ, 1595ರಲ್ಲಿ ಅಕ್ಬರನಿಗಾಗಿ ರಚಿತವಾದ ಅಬ್ದುಲ್ ರಹೀಮ್ ಗ್ರಂಥವನ್ನು ನೋಡಬಹುದು. ಇದು ಬಾಬರನ ಜೀವನ ಘಟನೆಗಳನ್ನೊಳಗೊಂಡ ಪಾರಸಿ ಹಸ್ತಪ್ರತಿ. 16ನೆಯ ಶತಮಾನದ ಮತ್ತೊಂದು ಚಿತ್ರಾಲಂಕೃತ ಹಸ್ತಪ್ರತಿಯೆಂದರೆ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸಸ್-ಇದರಲ್ಲಿ ಮರಗಿಡಗಳು, ಕಲ್ಲುಗಳು ಮತ್ತು ಪ್ರಾಣಿಗಳ ಚಿತ್ರಗಳು ಅತ್ಯಂತ ಸುಂದರವಾಗಿ ಚಿತ್ರಿತವಾಗಿವೆ. 1567ರಲ್ಲಿ ಪ್ರಸಿದ್ಧ ಕನ್ನಡ ಲಿಪಿಕಾರ ಪಾಯಣ್ಣನಿಂದ ಕಂಡರಿಸಲಾದ ಎರಡನೆಯ ನಾಗವರ್ಮನ ವರ್ಧಮಾನ ಪುರಾಣದ ಕಾಗದದ ಪ್ರತಿಯಲ್ಲಿ ಕೆಲವು ವರ್ಣರಂಜಿತ ಚಿತ್ರಗಳನ್ನು ಕಾಣಬಹುದು.

ನೇಮಿಪುರಾಣದ ಒಂದು ಹಸ್ತಪ್ರತಿ

ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ (ಸು.1850) ಇಂಥ ಹಸ್ತಪ್ರತಿಗಳು ಮೈಸೂರು ನಗರದಲ್ಲಿ ರಚಿತವಾಗಿವೆ. ಇವುಗಳಲ್ಲಿ ಶ್ರೀತತ್ತ್ವನಿಧಿ ಬಹು ಪ್ರಸಿದ್ಧವಾದುದು. ಇದರಲ್ಲಿ ಸು.40,000 ವರ್ಣಚಿತ್ರಗಳೂ ಹಲವಾರು ರೇಖಾಚಿತ್ರಗಳೂ ಇವೆ. ಇಲ್ಲಿ ಕೊಟ್ಟಿರುವ ನವವಿಧಿಗಳ ನಿರೂಪಣೆಗೆ ಅನುಗುಣವಾಗಿ ಚಿತ್ರಗಳನ್ನು ಅಳವಡಿಸಲಾಗಿದೆ.

ಹಾಗೆಯೇ ಚದುರಂಗಚಕ್ರವನ್ನೂ ನೋಡಬಹುದು. ಇದೂ ವರ್ಣಚಿತ್ರಗಳಿಂದ ಕೂಡಿದೆ. ಇದರಲ್ಲಿ ವಿವಿಧ ರೀತಿಯ ಆಟಗಳಿವೆ. ಹಾಗೆಯೇ ಅಶ್ವವೈದ್ಯ ಗ್ರಂಥವೂ ಚಿತ್ರಸಹಿತವಾಗಿದೆ.



ಗೌತಮನ ಆಶೀರ್ವಾದ: ಚಿತ್ರಾಲಂಕೃತ ಹಸ್ತಪ್ರತಿಯ ಒಂದು ಮಾದರಿ

ವೀರಶೈವಾಮೃತ ಪುರಾಣ ಓಲೆಗ್ರಂಥ'ದಲ್ಲಿ ಹಲವಾರು ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಭೀಮಕವಿಯ ಬಸವಪುರಾಣದ ಕಾಗದದ ಹಸ್ತಪ್ರತಿಯೊಂದರಲ್ಲಿ ಪ್ರತಿ ಪುಟವನ್ನೂ ವಿವಿಧ ರೀತಿಯ ಬಣ್ಣದ ಚೌಕಟ್ಟುಗಳಿಂದ ಅಲಂಕರಿಸಲಾಗಿದೆ. ಇಲ್ಲಿ ಕಂಡುಬರುವ ವಿನ್ಯಾಸಗಳು ತುಂಬ ಆಕರ್ಷಕವಾಗಿವೆ. ಈ ಚೌಕಟ್ಟುಗಳೇ ಅಲ್ಲದೆ ಈ ಹಸ್ತಪ್ರತಿಯ ರಕ್ಷಣೆಗಾಗಿ ಉಪಯೋಗಿಸಿರುವ ಹೊರಗಣ ಎರಡು ಹಲಗೆಗಳ ಮೇಲೆ ಮೂಡಿಸಿರುವ ವರ್ಣರಂಜಿತ ಚಿತ್ರಗಳೂ ಬಹಳ ಸೊಗಸಾಗಿವೆ.



ಹಸ್ತಪ್ರತಿ ಚಿತ್ರಗಳು

ಹೀಗೆ ಚಿತ್ರಗಳನ್ನು ಬಿಡಿಸಿರುವುದಲ್ಲದೆ, ಅಕ್ಷರಗಳನ್ನು ಬರೆಯುವಾಗಲೂ ಹಲವಾರು ಚಿತ್ರವಿಚಿತ್ರ ರೀತಿಯಿಂದ ಬರೆದ ಲಿಪಿಕಾರರು ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಿರುವುದನ್ನು ಕಾಣಬಹುದು. ಇದಕ್ಕೆ ಧವಳ ಗ್ರಂಥದಲ್ಲಿ ಹಾಕಿರುವ 4ನೆಯ ಪತ್ರಸಂಖ್ಯೆಯನ್ನು ನೋಡಬಹುದು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ರಾಜನೀತಿ ಪದ್ಯಗಳಿರುವ ಪತ್ರಗಳಲ್ಲಿ ಬರೆದಿರುವ ವಿವಿಧ ರೀತಿಯ ಸಾಲು ಜೋಡಿಗಳನ್ನು ನೋಡಬಹುದು. ವಿವಿಧ ದಿಕ್ಕುಗಳಿಂದ ಓದಬಹುದಾದ ಈ ಬರೆಹ ಚಮತ್ಕಾರಯುಕ್ತವಾಗಿದೆ.

ಹಾಗೆಯೇ ಸೂಕ್ಷ್ಮ ಲಿಪಿಗಳಿಗೆ ಪ್ರಸಿದ್ಧವಾಗಿರುವ ಮೈಸೂರಿನ ಪ್ರಾಚ್ಯ ವಿದ್ಯಾಸಂಶೋಧನಾಲಯದಲ್ಲಿರುವ ದೇವೀಸ್ತೋತ್ರ ಮತ್ತು ಸುಂದರ ಕಾಂಡ ಓಲೆಗ್ರಂಥಗಳನ್ನು ನೋಡಬಹುದು. ದೇವೀಸ್ತೋತ್ರ ಹಸ್ತಪ್ರತಿಯ 2½" ಉದ್ದದಲ್ಲಿ 25 ಅಕ್ಷರಗಳನ್ನೂ 2½" ಅಗಲದಲ್ಲಿ 23 ಪಂಕ್ತಿಗಳನ್ನೂ ಕಾಣಬಹುದಾಗಿದೆ. ಇದು ಸಂಸ್ಕೃತ ಗ್ರಂಥವಾಗಿದ್ದು ತೆಲುಗು ಲಿಪಿಯಲ್ಲಿದೆ. ಸುಂದರಕಾಂಡ ಗ್ರಂಥಾಕ್ಷರದಲ್ಲಿದೆ. 3¾" x 1½" ಬರವಣಿಗೆಯ ಅಳತೆಯ ಭಾಗದಲ್ಲಿ 47 ಅಕ್ಷರಗಳೂ 21-25 ಪಂಕ್ತಿಗಳೂ ಇವೆ. ಇವುಗಳ ಜೊತೆಗೆ ಇದೇ ಮಾದರಿಯಲ್ಲಿ ಬರೆದಿರುವ, ಹೆಸರು ತಿಳಿಯದ ಯಾವುದೋ ಗ್ರಂಥದ ಒಂದು ಪತ್ರ ಮಾತ್ರ ದೊರೆತಿದೆ. ಅದರ ಅಳತೆ 18" x 1¼" ಅದರ ಪ್ರತಿ ಪಕ್ಕದಲ್ಲಿ 22 ಪಂಕ್ತಿಗಳೂ ಪ್ರತಿ ಪಂಕ್ತಿಯಲ್ಲಿಯೂ 420 ಅಕ್ಷರಗಳೂ ಇವೆ ಎಂದಾಗ ಆಶ್ಚರ್ಯವಾಗುತ್ತದೆ. 15ನೆಯ ಶತಮಾನದಲ್ಲಿ ಅಚ್ಚಿನ ಸಾಧನ ಬಂದು, ಅದರ ಮೂಲಕ ಚಿತ್ರಗಳನ್ನು ಹಾಕುವುದು ರೂಢಿಗೆ ಬಂದಮೇಲೆ ಹಸ್ತಪ್ರತಿಗಳ ಚಿತ್ರಗೆಲಸ ಕಡಿಮೆಯಾಗುತ್ತ ಬಂತು. *

**ಚಿತ್ರಾವತಿ :** ಕೋಲಾರ ಜಿಲ್ಲೆಯ ಒಂದು ಸಣ್ಣ ನದಿ. ಉತ್ತರ ಪಿನಾಕಿನಿಯ ಉಪನದಿ. ನಂದಿ ಬೆಟ್ಟದ ಉತ್ತರಕ್ಕೆ 14ಕಿಮೀ ದೂರದಲ್ಲಿರುವ ಕಲಗನಪಾಳ್ಯ ಬೆಟ್ಟದ ಬಳಿ ಹುಟ್ಟಿ, ಈಶಾನ್ಯಾಭಿಮುಖವಾಗಿ ವರಲಕೊಂಡ ಬೆಟ್ಟದ ಪಕ್ಕದಲ್ಲಿ ಸಾಗಿ ಬಾಗೇಪಲ್ಲಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಹರಿದು ಅನಂತರ ಆಂಧ್ರಪ್ರದೇಶವನ್ನು ಪ್ರವೇಶಿಸುತ್ತದೆ. ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕಿನಲ್ಲಿ ಹರಿದು ಮುಂದೆ ಕಡಪ ಜಿಲ್ಲೆಯ ಗುಂಡಲೂರಿನ ಬಳಿ ಉತ್ತರ ಪಿನಾಕಿನಿಯಲ್ಲಿ ಸೇರುವುದು. ಈ ನದಿ ಕರ್ನಾಟಕ ಭಾಗದಲ್ಲಿ ಸು.50ಕಿಮೀ ದೂರ ಹರಿಯುತ್ತದೆ. ನದಿಯ ಪಾತ್ರದ ಉದ್ದಕ್ಕೂ ಸು.539ಚ.ಕಿಮೀ ಪ್ರದೇಶ ಈ ನದಿಯಿಂದ ನೀರಾವರಿ ಸೌಕರ್ಯ ಪಡೆದಿದೆ. ಚಿತ್ರಾವತಿ ನದಿಯ ಉಪಯೋಗ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಹೆಚ್ಚು. ನದಿಯ ಎರಡು ದಂಡೆಗಳ ಮೇಲೂ ಉದ್ದಕ್ಕೂ ಅನೇಕ ಪಂಪ್‌ಹೌಸ್‌ಗಳು ನಿರ್ಮಿತವಾಗಿದ್ದು ಅವುಗಳ ಸಹಾಯದಿಂದ ನದಿ ನೀರನ್ನು ಜಮೀನುಗಳಿಗೆ ಒದಗಿಸಿ ವ್ಯವಸಾಯ ಮಾಡುವರು. ಕೆಲವು ಕಡೆ ಚಿತ್ರಾವತಿ ನದಿಗೆ ಅಡ್ಡಗಟ್ಟೆಯನ್ನು ಕಟ್ಟಿ ಕಾಲುವೆಗಳ ಮೂಲಕ ಕೆರೆಗಳಿಗೆ ನೀರು ಬರುವಂತೆ ಮಾಡಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬಾಗೇಪಲ್ಲಿ ತಾಲ್ಲೂಕಿನ ರಾಮಸಮುದ್ರ ಮತ್ತು ರೆಡ್ಡಿಹಳ್ಳಿಯ ಕೆರೆಗಳು. ತಿರುಮಣಿ, ಬಾಗೇಪಲ್ಲಿ ಮತ್ತು ಸೋಮೇನ ಹಳ್ಳಿ ಈ ನದಿಯ ದಡದಲ್ಲಿರುವ ಮುಖ್ಯ ಗ್ರಾಮಗಳು. (ಆರ್.ಸಿ.)

**ಚಿದಂಬರಯ್ಯ, ಹೊಸಕೆರೆ :** 1870-1938. ಧರ್ಮಪ್ರಚಾರಕರು, ಧಾರ್ಮಿಕ ಗ್ರಂಥ'ಕರ್ತೃಗಳು. ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ಜನಿಸಿದರು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಇವರು ಅನಂತರ ಸ್ವಂತ ಪರಿಶ್ರಮದಿಂದ ಕನ್ನಡ, ಇಂಗ್ಲಿಷ್ ಮತ್ತು ಮರಾಠಿ ಭಾಷೆಯಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ದಾವಣಗೆರೆ ಮುಂತಾದ ಸ್ಥಳಗಳಲ್ಲಿ ಮಾಧ್ಯಮಿಕ ಶಾಲಾ ಅಧ್ಯಾಪಕರೂ ಮುಖ್ಯೋಪಾಧ್ಯಾಯರೂ ಆಗಿ ಕೆಲಸಮಾಡಿದರು. ಅಧ್ಯಾತ್ಮಿಕ ಪ್ರವೃತ್ತಿಯುವರಾಗಿದ್ದ ಇವರು ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ಸಲ್ಲಿಸಿ ಸಾಧುಗಳಾದ ಗೋಂದಾವಲಿ ಮಹಾರಾಜರು ಮತ್ತು ಕುರ್ತಕೋಟಿ ಮಹಾಭಾಗವತರಲ್ಲಿ ಸೇವಾನಿರತರಾದರು. ಭಾರತೀಯ ತರುಣರನ್ನು ಪರಧರ್ಮ ಪರಭಾಷಾವ್ಯಾಮೋಹದಿಂದ ಮುಕ್ತರನ್ನಾಗಿಸಿ ಸ್ವಧರ್ಮ ಸ್ವಭಾಷಾ ಪ್ರೇಮಿಗಳನ್ನಾಗಿಸಲು ಧಾರವಾಡದಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಶಿಕ್ಷಣ ಸಮಿತಿಯಲ್ಲಿ ಶಿಕ್ಷಕರಾಗಿ ನೇಮಕಗೊಂಡು ವಿದ್ಯಾರ್ಥಿಗಳಿಗೆ ಧರ್ಮಬೋಧೆ ಮಾಡತೊಡಗಿದರು. ಆಗ್ಗೆ ಧಾರ್ಮಿಕ ಪ್ರೌಢಗ್ರಂಥಗಳ ವ್ಯಾಸಂಗ ನಡೆಸಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವುದು ಕಠಿಣ ಕಾರ್ಯವಾಗಿದ್ದ ಸಮಯದಲ್ಲಿ ಧರ್ಮಕ್ಕೆ ಸಂಬಂಧಿಸಿದಂತೆ ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದರು. ಇವರ ಗ್ರಂಥಗಳಲ್ಲಿ ಕೆಲವು ಭಾಷಾಂತರಗಳು, ಕೆಲವು ಟೀಕೆಗಳು ಮತ್ತೆ ಕೆಲವು ಸ್ವತಂತ್ರ ಕೃತಿಗಳು. ಗೀತೆ, ವೇದ,

ಉಪನಿಷತ್ತು ಮತ್ತು ಪುರಾಣಗಳ ಧರ್ಮಸೂತ್ರಗಳನ್ನು ಸರಳವಾಗಿ ಹಲವಾರು ಉಪಕಥೆಗಳೊಂದಿಗೆ, ಕನ್ನಡದ ಪ್ರಾಚೀನ ಕವಿಗಳ, ಕಾವ್ಯಗಳ ಉದಾಹರಣೆಗಳೊಂದಿಗೆ ಕನ್ನಡಕ್ಕೆ ತಂದರು. ಗ್ರಂಥರಚನೆ, ಪ್ರಕಾಶನಗಳ ಜೊತೆಗೆ ಪರಮಾರ್ಥ ಮತ್ತು ಭಕ್ತಬಂಧು ಎಂಬ ಎರಡು ಮಾಸಪತ್ರಿಕೆಗಳನ್ನು ಇವರು ನಡೆಸುತ್ತಿದ್ದರು. ಬೆಂಗಳೂರಿನಲ್ಲಿ ಕೀರ್ತನಕಾರರ ಸಮ್ಮೇಳನ ನಡೆಸಿ, ಕೀರ್ತನಕಲೆಯನ್ನು ಶಾಸ್ತ್ರೀಯಗೊಳಿಸಲು ಪ್ರಯತ್ನಿಸಿದ ಇವರು ಮಾದರಿಗಾಗಿ ಹಲವು ಕೀರ್ತನ ಗ್ರಂಥಗಳನ್ನೂ ರಚಿಸಿದರು.

ಚಿದಂಬರಯ್ಯನವರು ಗದ್ಯ, ಪದ್ಯ, ನಾಟಕ, ಟೀಕೆ ಮುಂತಾದುವುಗಳಲ್ಲೆಲ್ಲ ಕೈಯಾಡಿಸಿದ್ದಾರೆ. ಉಪಾಧ್ಯಾಯ ವೃತ್ತಿಯ ತಮ್ಮ ಅನುಭವಗಳನ್ನು ಆ ಕ್ಷೇತ್ರದ ಕುಂದುಕೊರತೆಗಳನ್ನು ಆಧರಿಸಿ ಮನಃಶಿಕ್ಷಣ, ಬೋಧನ ಸ್ವಭಾವ, ಬೋಧನ ಕ್ರಮ, ಉಪಾಧ್ಯಾಯರ ಯೋಗ್ಯತೆಗಳು, ಗಣಿತಾಬ್ಜಭಾಸ್ಕರ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಕುರ್ತಕೋಟಿ ಮಹಾಭಾಗವತರ ಉಪನ್ಯಾಸಗಳನ್ನೆಲ್ಲ ಸಂಗ್ರಹಿಸಿ ಭಗವದ್ಗೀತಾ ಸಾರವೆಂಬ ಗ್ರಂಥವನ್ನೂ ಮರಾಠಿಯ ಮನಾಚೇ ಶ್ಲೋಕವೆಂಬ ಗ್ರಂಥವನ್ನೂ ಆಧರಿಸಿ ಮನಸ್ಸಿಗುಪದೇಶವೆಂಬ ಕನ್ನಡ ಗ್ರಂಥವನ್ನೂ ಪ್ರಕಟಿಸಿದ್ದಾರೆ.

ನೀತಿಗಳ ನೆಲಗಟ್ಟು, ಗುಣನಿರೂಪಣೆ, ಭರತನ ಬಂಧುಪ್ರೇಮ ಮುಂತಾದ ನೀತಿಗ್ರಂಥಗಳನ್ನೂ ಸುಧರ್ಮಪ್ರಭಾವ, ಕಲಿಸಂಕರಣ, ಕೃಷ್ಣಮಹೇಶ್ವರಿ, ನವೀನಕಲ್ಪ, ಚೂಡಾಲೆ ಮುಂತಾದ ನಾಟಕಗಳನ್ನೂ ವಿದ್ಯಾರಣ್ಯ ಕಾವ್ಯ, ಪರಮಾತ್ಮಸ್ತುತಿ, ಗುರುಸ್ತುತಿ ಮುಂತಾದ ಸ್ತೋತ್ರಗ್ರಂಥಗಳನ್ನೂ ಅನೇಕ ಕೀರ್ತನೆಗಳನ್ನೂ ಸಂಗೀತಕ್ಕೆ ಅಳವಡಿಸಿ ಭಕ್ತಿಗೀತಾವಳಿ ಗ್ರಂಥವನ್ನೂ ಹರಿಕಥೆ ನಡೆಸುವವರಿಗೆ ಮಾರ್ಗ ದರ್ಶನವಾಗುವಂತೆ ಕೀರ್ತನ ಕಂಠಾಭರಣ ಮುಂತಾದ ಕೀರ್ತನ ಗ್ರಂಥಗಳನ್ನೂ ಇವರು ರಚಿಸಿದ್ದಾರೆ. ಅನುಭವಾಮೃತಕ್ಕೆ ಸಂದರ್ಶನೀ ಎಂಬ ಕನ್ನಡ ಟೀಕೆಯನ್ನು ರಚಿಸಿದ್ದಾರೆ.

ಆರ್ಯಧರ್ಮಪ್ರದೀಪ ಇವರ ಶ್ರೇಷ್ಠ ಗ್ರಂಥಗಳಲ್ಲೊಂದು. ಸು.550 ಪುಟಗಳ ಈ ಗ್ರಂಥ 1924ರಲ್ಲಿ ಮೊದಲು ಮುದ್ರಣಗೊಂಡು, ಅನಂತರ ಮೂರುಬಾರಿ ಪುನರ್ಮುದ್ರಣಗೊಂಡಿದೆ. ಇದರಲ್ಲಿ ಪರಿಶಿಷ್ಟವಾಗಿ ವೈದಿಕ ಧರ್ಮದ ಪರಮ ಗ್ರಂಥಗಳಾದ ವೇದಗಳು, ವೇದಾಂಗಗಳು, ಮೀಮಾಂಸೆ, ನ್ಯಾಯಶಾಸ್ತ್ರ, ಧರ್ಮಶಾಸ್ತ್ರ ಮತ್ತು ಪುರಾಣಗಳ ಹಾಗೂ ಕೆಲವು ಮುಖ್ಯ ಮತಭೇದಗಳಾದ ಬೌದ್ಧ, ಜೈನ, ಅದ್ವೈತ, ವಿಶಿಷ್ಟಾದ್ವೈತ, ವೀರಶೈವ, ದ್ವೈತ, ಸಿಖ್‌ಮತಗಳ ಬಗ್ಗೆಯೂ ಆರ್ಯಸಮಾಜ, ಯಹೂದೀ, ಪಾರಸೀ, ಇಸ್ಲಾಮ್ ಮತ್ತು ಕ್ರೈಸ್ತ ಮತಗಳ ಬಗ್ಗೆಯೂ ಸ್ಥೂಲ ವಿವರಣೆ ನೀಡಿದ್ದಾರೆ.

ಇವರ ಮತ್ತೊಂದು ಜನಪ್ರಿಯ ಗ್ರಂಥ ಗೀತಾರ್ಥಚಂದ್ರಿಕೆ (1929). ಗೀತೆಯ ಬಗ್ಗೆ ಹಲವು ಕನ್ನಡ ವ್ಯಾಖ್ಯಾನ ಗ್ರಂಥಗಳಿದ್ದರೂ ನೂತನ ಮಾದರಿಯಲ್ಲಿ ರಚಿತವಾದ ಈ ಗ್ರಂಥ ತುಂಬ ಜನಪ್ರಿಯವಾಗಿದೆ. ಗೀತೆಯ ಒಂದೊಂದು ಶಬ್ದಕ್ಕೂ ಸೂಕ್ತ ಅರ್ಥ ನೀಡಿ, ವಿವರಣೆ, ಉದಾಹರಣೆಗಳಿಂದ ಗೀತೆಯನ್ನು ಸುಲಭಗ್ರಾಹ್ಯವಾಗಿ ಮಾಡಿದ್ದಾರೆ. ಇವರ ಗ್ರಂಥಗಳಲ್ಲಿ ಕೀರ್ತನಕಂಠಾಭರಣ-ರಾಮಾಯಣ ತುಂಬ ಪ್ರಸಿದ್ಧ ಗ್ರಂಥ (1928). ಇಂದಿಗೂ ಅದು ಕೀರ್ತನಕಾರರಿಗೆ ಕೈದೀಪವಾಗಿದೆ. ಇವರ ಗ್ರಂಥಗಳಲ್ಲಿರುವ ವೈಶಿಷ್ಟ್ಯವೆಂದರೆ ಸಂಸ್ಕೃತ ಕಾವ್ಯಭಾಗಗಳ ಜೊತೆಗೆ ಕನ್ನಡ ಪ್ರಾಚೀನ ಸಾಹಿತ್ಯ ಹಾಗೂ ಕವಿಗಳ ಪದ್ಯಗಳನ್ನು ಧಾರಾಳವಾಗಿ ಉಪಯೋಗಿಸಿಕೊಂಡಿರುವುದು. ಹಲವು ಕನ್ನಡ ಕವಿಗಳ, ವಚನಕಾರರ ಪದ್ಯಗಳಿಗೆ ಸಂಗೀತ ಸ್ವರ ಸಂಯೋಜನೆಯನ್ನೂ ಮಾಡಿದ್ದಾರೆ. ತಾವೇ ಸ್ವತಃ ಕೆಲವು ಗೀತೆಗಳನ್ನು ರಚಿಸಿದ್ದಾರೆ. ಮರಾಠಿಯಿಂದ ಸಾಕಿ, ದಿಂಡಿ ಛಂದಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಚಿದಂಬರಯ್ಯನವರು ತಮ್ಮ ಜೀವನದ ಕೊನೆಯ ದಿನಗಳನ್ನು ತಿರುಮಕೂಡಲು ನರಸೀಪುರದ ನದೀತೀರದ ಪ್ರಶಾಂತ ವಾತಾವರಣದಲ್ಲಿ ಕಳೆದು 1938 ಏಪ್ರಿಲ್ 17ರಂದು ನಿಧನಹೊಂದಿದರು. *

**ಚಿದಾನಂದಕವಿ :** ಸು.1680 ಜೈನಕವಿ. ಮುನಿವಂಶಾಭ್ಯುದಯ ಎಂಬ ಗ್ರಂಥದ ಕರ್ತೃ. ಮೈಸೂರು ದೊರೆ ಚಿಕ್ಕದೇವರಾಜನನ್ನೂ (1673-1704) ಆತನ ವಂಶಾವಳಿಯನ್ನೂ ತನ್ನ ಗ್ರಂಥದಲ್ಲಿ ಸ್ತುತಿಸಿದ್ದಾನೆ.

ಮುನಿವಂಶಾಭ್ಯುದಯ ಸಾಂಗತ್ಯದಲ್ಲಿದೆ. ದೊರೆತ ಅಸಮಗ್ರ ಪ್ರತಿಯಲ್ಲಿ 5 ಸಂಧಿಗಳಿವೆ. ಈ ಗ್ರಂಥದಲ್ಲಿ ಜೈನಮುನಿಗಳ, ಮುಖ್ಯವಾಗಿ ಮೂಲಸಂಘದ ದೇಶೀಯ ಗಣದ ಕೊಂಡಕುಂದಾನ್ವಯದ ಮುನಿಗಳ ಪರಂಪರೆ ಹೇಳಿದೆ. ಶ್ರುತಕೇವಲಿಯಾದ ಭದ್ರಬಾಹು ಶ್ರವಣಬೆಳಗೊಳಕ್ಕೆ ಬಂದು ಚಿಕ್ಕಬೆಟ್ಟದಲ್ಲಿ ಇದ್ದಂತೆಯೂ ಚಂದ್ರಗುಪ್ತ ಅರ್ಹದ್ಬಲಾಚಾರ್ಯ ಕಾಲದಲ್ಲಿ ಬೆಳಗೊಳಕ್ಕೆ ಬಂದು ದೀಕ್ಷೆಪಡೆದಂತೆಯೂ ಇದರಲ್ಲಿ ಹೇಳಿದೆ. ಕಾವ್ಯಶೈಲಿ ಸಾಂಗತ್ಯದ ಲಾಲಿತ್ಯದಿಂದ ಕೂಡಿದೆ. ಆತ್ಮನನ್ನು ಕುರಿತ ಒಂದು ಪದ್ಯ:

> ಸತ್ಕರ್ಮಗಳ ಮಾಡಿ ಸುಖಿಯಹನಂತೊಮ್ಮೆ
> ದುಷ್ಕರ್ಮಗಳ ಮಾಡಿ ದುಃಖಿ
> ಸತ್ಕರ್ಮ ದುಷ್ಕರ್ಮವೆರಡ ತಪದಿ ಸು
> ಟ್ಟಿಕ್ಕಲೊಮ್ಮೆಗೆ ಮುಕ್ತನಾತ್ಮ

ಕನ್ನಡದಲ್ಲಿ ಚಿದಾನಂದ ಎಂಬ ಹೆಸರಿನ ಇನ್ನೂ ಮೂವರು ಕವಿಗಳಿದ್ದಾರೆ: 1. ಹೊನ್ನಾವರ ತಾಲ್ಲೂಕು ಬೈಲೂರಿನ ಚಿದಾನಂದ (ಸು. 1675) ಹಾಡುಗಳನ್ನು ಬರೆದಿದ್ದಾನೆ. ಇವಕ್ಕೆ ಚಿದಾನಂದ ಕೊರಡೆ ಎಂಬ ಹೆಸರಿದೆ. 2. ಚಿದಾನಂದ (ಸು.1750) ಈತ ಚಿದಖಂಡಾನುಭವಸಾರ, ಹರಭಕ್ತಿರಸಾಯನ ಎಂಬ ಕೃತಿಗಳನ್ನು ಬರೆದಿದ್ದಾನೆ. 3. ಚಿದಾನಂದಕವಿ (ಸು.1234) ಶಾಸನ ಕವಿಯಾದ ಈತ ಮಂಡ್ಯದ 122ನೆಯ ಶಾಸನವನ್ನು ಬರೆದಂತೆ ತಿಳಿದುಬರುತ್ತದೆ. ಈತನ ಸ್ವತಂತ್ರ ಕೃತಿಗಳು ಉಪಲಬ್ಧವಿಲ್ಲ. (ಎಂ.ಆರ್.,ಎಚ್.ಪಿ.ಎನ್.)

**ಚಿದಾನಂದಮೂರ್ತಿ, ಎಂ. :** 1931-. ಪ್ರಸಿದ್ಧ ಸಂಶೋಧಕ ಲೇಖಕ. ಈಗ ದಾವಣಗೆರೆ ಜಿಲ್ಲೆಯಲ್ಲಿರುವ ಚನ್ನಗಿರಿತಾಲ್ಲೂಕಿನ ಹಿರೇಕೋಗಲೂರಿನಲ್ಲಿ 1931 ಮೇ 10ರಂದು ಜನಿಸಿದರು. ತಂದೆ ಕೊಟ್ಟೂರಯ್ಯ, ತಾಯಿ ಪಾರ್ವತಮ್ಮ. ಇವರ ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸಗಳು ಕೋಗಲೂರು, ಸಂತೆಬೆನ್ನೂರುಗಳಲ್ಲೂ ಇಂಟರ್ ಶಿಕ್ಷಣ ದಾವಣಗೆರೆಯಲ್ಲೂ ಬಿ.ಎ.(ಆನರ್ಸ್), ಕನ್ನಡ ಎಂ.ಎ. ಮತ್ತು ಪಿಎಚ್.ಡಿ. ಅಧ್ಯಯನಗಳು ಮೈಸೂರಿನಲ್ಲೂ ನಡೆದುವು. ಇಂಟರ್‌ನಲ್ಲಿ ಹತ್ತನೆಯ ರ‍್ಯಾಂಕನ್ನೂ ಬಿ.ಎ.(ಆನರ್ಸ್) ಮತ್ತು ಎಂ.ಎ. ಪದವಿಗಳಲ್ಲಿ ಮೊದಲನೆಯ ರ‍್ಯಾಂಕನ್ನೂ ಗಳಿಸಿದ ಇವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.

ಆರಂಭದ ಕೆಲವು ವರ್ಷ ಪದವಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು 1957ರಲ್ಲಿ ಮೈಸೂರಿನ

ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು. ಮಾನಸಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ 1960ರಲ್ಲಿ ಅಧ್ಯಾಪಕರಾಗಿ, 1968ರಲ್ಲಿ ರೀಡರ್ ಆದರು. ಬಳಿಕ ಬೆಂಗಳೂರು ವಿಶ್ವವಿದ್ಯಾಲಯದ ಸೇವೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ 1990ರ ಅಕ್ಟೋಬರ್ 10ರಂದು ಸ್ವಯಂ ನಿವೃತ್ತಿ ಪಡೆದರು. 1967-68ರಲ್ಲಿ ಶಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಂದರ್ಶಕ ಅಧ್ಯಾಪಕರಾಗಿಯೂ 1979ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡದ ಕಾರಣಕ್ಕೆ ಕರ್ನಾಟಕದ ವಿವಿಧ ಪ್ರಾಂತ್ಯಗಳನ್ನೂ ಅಧ್ಯಯನದ ಸಲುವಾಗಿ ದೇಶ ವಿದೇಶಗಳನ್ನೂ ಸುತ್ತಿದ್ದಾರೆ. ಬರ್ಕ್ಲಿಯಲ್ಲಿ ನಡೆದ ಅಮೆರಿಕನ್ ಓರಿಯಂಟಲ್ ಸೊಸೈಟಿಯ ವಾರ್ಷಿಕಾಧಿವೇಶನ, ಫಿಲಡೆಲ್ಫಿಯದಲ್ಲಿ ನಡೆದ ಏಷಿಯನ್ ಸೆಮಿನಾರ್, ಸ್ಟಾನ್‌ಫೋರ್ಡ್ ವಿಶ್ವ ವಿದ್ಯಾನಿಲಯದ ಐತಿಹಾಸಿಕ ಭಾಷಾವಿಜ್ಞಾನ - ಈ ಮೊದಲಾದ ಸಮ್ಮೇಳನಗಳಲ್ಲಿ ಇವರು ಪ್ರಬಂಧ ಮಂಡಿಸಿದ್ದಾರೆ.

ಚಿದಾನಂದಮೂರ್ತಿಯವರು ಮೂವತ್ತಕ್ಕೂ ಹೆಚ್ಚು ಪುಸ್ತಕಗಳನ್ನೂ ನಾನೂರಕ್ಕೂ ಹೆಚ್ಚು ಸಂಪ್ರಬಂಧಗಳನ್ನೂ ಪ್ರಕಟಿಸಿದ್ದಾರೆ. ಭಾಷೆ-ವ್ಯಾಕರಣ-ಸ್ಥಳನಾಮ, ಛಂದಸ್ಸು-ಗ್ರಂಥಸಂಪಾದನೆ- ಸಾಹಿತ್ಯಚರಿತ್ರೆ-ಜಾನಪದ-ಶಾಸನ-ಕರ್ನಾಟಕ-ಇತಿಹಾಸ - ಸಂಸ್ಕೃತಿ -ಹೀಗೆ ಇವರದು ಹಲವು ಕ್ಷೇತ್ರಗಳ, ಬಹುಮುಖ ಸಂಶೋಧನೆ. ಇವರ ಸಂಶೋಧನೆಯಲ್ಲಿ ವ್ಯಾಪಕವಾದ ವ್ಯಾಸಂಗ, ಆಳವಾದ ಅಧ್ಯಯನ, ಅಪಾರವಾದ ಪರಿಶ್ರಮ, ಮಿಂಚಿನ ಪ್ರತಿಭೆ ಮಿಳಿತವಾಗಿವೆ. ಇವರ ಸಂಶೋಧನ ಲೇಖನಗಳು ಹೊಸಸಂಗತಿಗಳ ಹೊಳಪಿನಿಂದ ಕಂಗೊಳಿಸುತ್ತವೆ. ಸಂಸ್ಕೃತಿಶೋಧಕರಾಗಿ ಇವರು ಕನ್ನಡ ಸಂಶೋಧನ ಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸಿ ಅದಕ್ಕೆ ಹಲವು ಆಯಾಮಗಳನ್ನು ಜೋಡಿಸಿದ್ದಾರೆ.

ಭಾಷಾವಿಜ್ಞಾನದ ಮೂಲತತ್ವಗಳು (1965) ಎಂಬ ಕೃತಿ ಭಾಷಾವಿಜ್ಞಾನ ಹಾಗೂ ಕನ್ನಡ ಭಾಷೆ, ವ್ಯಾಕರಣ, ಸ್ಥಳನಾಮಗಳನ್ನು ಕುರಿತದ್ದು. 'ವಾಗರ್ಥ' (1981) ಕನ್ನಡದಲ್ಲಿ ಪ್ರತಿಧ್ವನಿಪದ, ಗೋದಾವರಿ ತೀರದ ಕನ್ನಡ, ಕರ್ನಾಟಕದ ಸ್ಥಳನಾಮ - ವ್ಯಕ್ತಿನಾಮ, ವ್ಯಾವಹಾರಿಕ ಶಿಷ್ಟಕನ್ನಡದ ವಿಭಕ್ತಿ ವ್ಯವಸ್ಥೆ ಮುಂತಾದ 25 ಬರೆಹಗಳಿಂದ ಕೂಡಿದ ಇನ್ನೊಂದು ಕೃತಿ. ಛಂದಸ್ಸಿಗೆ ಸಂಬಂಧಿಸಿದ ಕೃತಿ 'ಛಂದೋತರಂಗ' (1984). ಇದರಲ್ಲಿ ಬೆದಂಡೆ, ಒನಕೆವಾಡು, ಲಯಗ್ರಾಹಿ ಲಯೋತ್ತರ, ಅಂಶಷಟ್ಪದಿ ಮುಂತಾದ ವಿಚಾರಗಳನ್ನು ಕುರಿತಂತೆ 25 ಲೇಖನಗಳಿವೆ. ಹೊಸ ಪರಿಭಾಷೆಯ ಸೃಷ್ಟಿ, ಒಳನೋಟಗಳನ್ನು ನಾವು ಇಲ್ಲಿ ಕಾಣುತ್ತೇವೆ.

'ಕನ್ನಡ ಭಾಷಾ ಸಾಹಿತ್ಯಗಳ ಸೃಷ್ಟಿಕ ವಿದ್ಯಾರ್ಥಿ' ಎಂಬುದು ಚಿದಾನಂದಮೂರ್ತಿಯವರನ್ನು ಕುರಿತ ತೀ.ನಂ.ಶ್ರೀಕಂಠಯ್ಯನವರ ಪ್ರಶಂಸೆ. ಅದರ ಸಮರ್ಥನೆ ಎಂಬಂತೆ ಇವರು ಕವಿರಾಜಮಾರ್ಗಕಾರನಿಂದ ಮುದ್ದಣನವರೆಗೆ ವಿಪುಲವಾಗಿ ಕೆಲಸ ಮಾಡಿದ್ದಾರೆ. ಸಂಶೋಧನತರಂಗ (1,2), ಹೊಸತು ಹೊಸತು (1993) ಎಂಬ ಕೃತಿಗಳು ಈ ದೃಷ್ಟಿಯಿಂದ ಮುಖ್ಯವಾದುವು. ವೀರಶೈವ ಸಾಹಿತ್ಯದ ಬಗ್ಗೆಯೂ ಇವರು ಅಪಾರವಾದ ಕೆಲಸ ಮಾಡಿದ್ದು ಶೂನ್ಯ ಸಂಪಾದನೆಯನ್ನು ಕುರಿತು, ವಚನ ಸಾಹಿತ್ಯ (1964), ಲಿಂಗಾಯತ ಅಧ್ಯಯನಗಳು (1986), ವಚನಶೋಧ (1994) ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ವಚನ ಸಾಹಿತ್ಯದ ಉಗಮ, ಅಜಗಣ್ಣನ ವಚನಗಳ ಅಭಿಜ್ಞೆ, ಅನಿಮಿಷನ ಗುಹೆ, ಹರಿಹರನ ವಾಸಸ್ಥಾನ, ಚಾಮರಸನ ಆಶ್ರಮ, ಪಾಲ್ಕುರಿಕೆ ಸೋಮನಾಥನ ಸಮಾಧಿಗಳನ್ನು ಇವರು ಗುರುತಿಸಿದ್ದಾರೆ. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ (1985) ಎಂಬ ಇವರ ಪುಸ್ತಕ ಮಧ್ಯಕಾಲೀನ ಕರ್ನಾಟಕದ ಸಾಂಸ್ಕೃತಿಕ ವಿವೇಚನೆ. ದಲಿತದನಿಯನ್ನು, ದಲಿತ ಜೀವನವನ್ನು ದಲಿತವರ್ಗದ ಹೋರಾಟವನ್ನು ಚಿತ್ರವತ್ತಾಗಿ ಆಧಾರಸಹಿತವಾಗಿ ಈ ಕೃತಿ ತಿಳಿಸುತ್ತದೆ. ಕರ್ನಾಟಕದ ದಲಿತ ಹೋರಾಟದ ಪುನರ್‌ರಚನೆಗೆ ಇದೊಂದು ಆಕರ ಗ್ರಂಥ. ಇವರು ಕುಕ್ಕನೂರು ಶಾಸನದ ಮೇಲೆ ತೋರಿಸಿರುವ ಆದಿಪುರಾಣದ ಪ್ರಭಾವ, ಸುಕುಮಾರ ಚರಿತೆಯ ರಚನಾಕಾಲ, ಹಂಪಿಯು ವ್ಯಾಟಿಕನ್ ನಗರ ಮಾದರಿಯದು ಎಂಬುವು ತುಂಬ ಅಮೂಲ್ಯವಾದ ಶೋಧಗಳು.

ಚಿದಾನಂದಮೂರ್ತಿಯವರಿಗೆ ತುಂಬ ಹೆಸರು ತಂದುಕೊಟ್ಟದ್ದು ಇವರ ಶಾಸನದ ಸಂಬಂಧವಾದ ಸಂಶೋಧನೆ. ಶಾಸನಗಳಲ್ಲಿ ಹುದುಗಿದ್ದ ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸಿದ್ದು ಇವರ ಸಂಶೋಧನೆಯ ವೈಶಿಷ್ಟ್ಯ. ಸು.450ರಿಂದ ಸು.1150ರ ವರೆಗಿನ ಶಾಸನಗಳನ್ನು ಅವಲಂಬಿಸಿ ಇವರು ರಚಿಸಿದ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಇವರ ಪಿಎಚ್.ಡಿ. ಪ್ರಬಂಧ. ಸಂಸ್ಕೃತಿ ಸಂಶೋಧನ ಕ್ಷೇತ್ರದ ದೀಪಸ್ತಂಭ. ಅಪಾರ ಪರಿಶ್ರಮ, ವಿಶಾಲ ಅಧ್ಯಯನ, ತರ್ಕಬದ್ಧ ವಿಶ್ಲೇಷಣೆಗಳಿಂದ ಕೂಡಿರುವ ಈ ಕೃತಿಯಲ್ಲಿ ಮೊದಲ ಬಾರಿಗೆ ನೂರಾರು ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ. ವೇಳೆವಾಟಿ, ಲೆಂಕವಾಟಿ, ಸಹಗಮನ, ಸಮಾಧಿಮರಣ, ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ, ತುರುಗೋಳ್, ಪೆಣ್‌ಪುಯ್ಯಲ್, ಊರಳಿವು, ಕಾಳಾಮುಖ, ಕಾಪಾಲಿಕಾ, ಕಾಳ, ಲಾಕುಳಶೈವ ಮುಂತಾದ ನೂರಾರು ವಿಷಯಗಳನ್ನು ಕುರಿತಂತೆ ಇದೊಂದು ಸಾಂಸ್ಕೃತಿಕ ವಿಶ್ವಕೋಶವಾಗಿದೆ. ಪೂರ್ಣಸೂರ್ಯಗ್ರಹಣ (1982) ಎಂಬ ಕೃತಿ ಸಮಾಜೋ— ಸಾಂಸ್ಕೃತಿಕ ಅಧ್ಯಯನದ ಹೊತ್ತಗೆ. ಗ್ರಾಮೀಣ (1977), ಪಗರಣ ಮತ್ತು ಇತರ ಸಂಪ್ರಬಂಧಗಳು ಎಂಬ ಸಂಕಲನಗಳ ಬರೆಹಗಳು ಜಾನಪದ ಅಧ್ಯಯನಕ್ಕೆ ಹೊಸ ಉಪಕ್ರಮ ನೀಡಿದ ಪುಸ್ತಕಗಳು. ಶೂಲದಹಬ್ಬ, ನಾಗಬೆತ್ತ, ಕುಪ್ಪಕುಳಿ, ಪಗರಣ, ಕರಪಲ್ಲವ, ದಂತಕತೆ, ಬೈಗುಳ, ಹಳ್ಳಿ, ಜೋಕುಮಾರ, ಮೈಲಾರ ಮಾಳಚಿಯರನ್ನು ಕುರಿತ ಇದೊಂದು ವಿಶಿಷ್ಟ ಜಾನಪದ ಲೋಕ.

ಕನ್ನಡ-ಕನ್ನಡಿಗ-ಕರ್ನಾಟಕಗಳ ಉಳಿವಿಗಾಗಿ ಚಿದಾನಂದಮೂರ್ತಿಯವರು ಮಾಡುತ್ತ ಬಂದ ಕನ್ನಡ ಹೋರಾಟ ಒಂದು ಚರಿತ್ರೆಯಾಗಿದೆ. ಗೋಕಾಕ್ ಚಳವಳಿ ಸಂದರ್ಭದಲ್ಲಿ ಸಾಹಿತಿಗಳ ಕಲಾವಿದರ ಬಳಗವನ್ನು ಅಸ್ತಿತ್ವಕ್ಕೆ ತಂದರು; ಮತ್ತೆ 'ಕನ್ನಡ ಶಕ್ತಿ ಕೇಂದ್ರ' ಸ್ಥಾಪಿಸಿ ಅದರ ಕಾರ್ಯಾಧ್ಯಕ್ಷರಾದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಗೆ ಪ್ರೇರಕರಾದವರಲ್ಲಿ ಇವರೂ ಒಬ್ಬರು. ಜನಸಾಮಾನ್ಯರಲ್ಲಿ ಕನ್ನಡಪ್ರಜ್ಞೆಯನ್ನು ಜಾಗೃತಗೊಳಿಸಲು ಇವರು ಪ್ರಕಟಿಸಿರುವ ಕನ್ನಡ ಸಂಸ್ಕೃತಿ, ನಮ್ಮ ಹೆಮ್ಮೆ (1987), ಕನ್ನಡ-ಕನ್ನಡಿಗ-ಕರ್ನಾಟಕ ಎಂಬ ಕೃತಿಗಳು ತುಂಬ ಉಪಯುಕ್ತವೂ ಪರಿಣಾಮಕಾರಿಯೂ ಆಗಿವೆ. ತಾವು ನಿರೀಕ್ಷಿಸಿದ ಪ್ರಮಾಣದಲ್ಲಿ ಕನ್ನಡ ಜಾಗೃತಿ ಆಗದಿದ್ದುದರಿಂದ ವ್ಯಥೆಗೊಂಡು ಇವರು ಜಲಪ್ರವೇಶ ಮಾಡಿಯೂ ಉಳಿದುಕೊಂಡರು.

ಇವರಿಗೆ ಅನೇಕ ಪ್ರಶಸ್ತಿ, ಬಹುಮಾನ, ಪುರಸ್ಕಾರಗಳು ಪ್ರಾಪ್ತವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ದೇವರಾಜ ಬಹದ್ದೂರ್ ಬಹುಮಾನ, ಮೈಸೂರು ವಿಶ್ವವಿದ್ಯಾನಿಲಯ ತೀ.ನಂ.ಶ್ರೀ. ಸ್ಮಾರಕ ಬಹುಮಾನ, ಹೊಸತು ಹೊಸತು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1997) ಲಭ್ಯವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಗೌರವ ಪ್ರಶಸ್ತಿ (1978), ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (1984), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985), ಭೂಸನೂರಮಠ ಸ್ಮಾರಕ ಗೌರವ ಪ್ರಶಸ್ತಿ (1992), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ (1993), ಬಸವಸೇವಾಸಮಿತಿಯ ಸಾಹಿತ್ಯಶ್ರೀ ಪ್ರಶಸ್ತಿ, ಅನಕೃ ಪ್ರತಿಷ್ಠಾನ ಪ್ರಶಸ್ತಿ (1999), ಸೇಡಿಯಾಪು ಕೃಷ್ಣಭಟ್ಟ ಪ್ರಶಸ್ತಿ (2000) ಪ್ರಾಪ್ತವಾಗಿವೆ. ಇವರಿಗೆ 2002ರಲ್ಲಿ ಪಂಪ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಇವರಿಗೆ ನಾಡೋಜ ಗೌರವ ನೀಡಿದೆ (2004). ಇವರ ಶಿಷ್ಯರು, ಮಿತ್ರರು, ಅಭಿಮಾನಿಗಳು ಇವರಿಗೆ ಸಂಶೋಧನ ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಿದ್ದಾರೆ. ಇವರ ಹೆಸರಿನಲ್ಲಿ ಚಿದಾನಂದ ಪ್ರಶಸ್ತಿ ಎಂಬುದನ್ನು ಸ್ಥಾಪಿಸಲಾಗಿದ್ದು ಕನ್ನಡ ಸಂಶೋಧನ ಕ್ಷೇತ್ರಕ್ಕೆ ಕೆಲಸ ಮಾಡಿದ ವಿದ್ವಾಂಸರಿಗೆ ಇದನ್ನು ನೀಡಲಾಗುತ್ತಿದೆ. (ಎಸ್.ಎಸ್.ಟಿ.)

**ಚಿದಾನಂದಾವಧೂತ :** ಸು.1750. ಬ್ರಾಹ್ಮಣಕವಿ. ಅದ್ವೈತ ವೇದಾಂತವನ್ನು ನಿರೂಪಿಸುವ ಜ್ಞಾನಸಿಂಧು ಎಂಬ ಕೃತಿಯ ಕರ್ತೃ. ತುಂಗಭದ್ರಾ ತಟದ ಅಯೋಧ್ಯಾಪುರದ ಚಿದಾನಂದ ಈತನ ಗುರು. ಪಂಚೀಕರಣ, ತತ್ತ್ವಚಿಂತಾಮಣಿ, ನವಚಕ್ರಕುಲರೇಖಾಲಕ್ಷಣ, ದೇವೀಮಹಾತ್ಮ್ಯೆ, ಬಗಳಾಂಬಸ್ತೋತ್ರ, ಚಿದಾನಂದ ವಚನ ಮತ್ತು ಕಾಮವಿಡಂಬನೆ - ಇವು ಈತನ ಇತರ ಕೃತಿಗಳು. ವೇದ ಉಪನಿಷತ್ತುಗಳ ಜ್ಞಾನವನ್ನು ಉಪಯೋಗಿಸಿಕೊಂಡು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಈತನ ಜ್ಞಾನಸಿಂಧು ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಈ ಆಧ್ಯಾತ್ಮ ಬೋಧನೆಯನ್ನು ಷಣ್ಮುಖನಿಗೆ ಶಿವ ವಿವರಿಸಿದಂತೆ ವರ್ಣಿಸಲಾಗಿದೆ.

ಇದರಲ್ಲಿ ಅಧಿಕಾರಲಕ್ಷಣ, ವೈರಾಗ್ಯನಿರ್ಣಯ, ಗುರುಕಟಾಕ್ಷ, ತತ್ತ್ವನಿರ್ಣಯ, ಜೀವೇಶ್ವರೈಕ್ಯ, ಜೀವಪರಮಾತ್ಮೈಕ್ಯ, ನಿಶ್ಚಯಜ್ಞಾನ, ನಿಜಬೋಧ, ನಿರಾಲಂಬ, ಸಾಧನಚತುಷ್ಟಯ, ಸಪ್ತಭೂಮಿಕಾ, ಶ್ರವಣಮನನನಿಧಿಧ್ಯಾಸನ, ಹಠಯೋಗ, ಲಯಯೋಗ, ಭಕ್ತಿಯೋಗ ಮುಂತಾದ 49 ಅಧ್ಯಾಯಗಳೂ 3621 ಪದ್ಯಗಳೂ ಇವೆ. ಈ ಕೃತಿ ಮಹಲಿಂಗರಂಗನ ಅನುಭವಾಮೃತವನ್ನು ವಸ್ತು ಹಾಗೂ ನಿರೂಪಣೆಗಳೆರಡಲ್ಲೂ ಬಹುಮಟ್ಟಿಗೆ ಹೋಲುತ್ತದೆ. ಜ್ಞಾನ ಸಿಂಧುವಿಗೆ ಹಲವು ವಚನ ಟೀಕುಗಳೂ ಇವೆ. (ಜಿ.ಎಸ್.ಪಿ.ಎಂ.)

ಪಂಚೀಕರಣ 15 ವಚನಗಳ ಗದ್ಯಕೃತಿ. ಚಿದಾನಂದ ಸದ್ಗುರು ಎಂಬ ಅಂಕಿತದಿಂದ ಪ್ರತಿವಚನವೂ ಮುಕ್ತಾಯವಾಗುತ್ತದೆ. ಧ್ಯಾನಪರತತ್ತ್ವ, ವಿಶ್ವವಿರಾಟ್ಪುರುಷ ವಿವರ, ಜೀವೇಶ್ವರೈಕ್ಯ ವಿಚಾರ, ಪ್ರಣವನಾದಬಿಂದು ಸ್ವರೂಪ ಮತ್ತಿತರ ವಿವರಗಳು ತತ್ತ್ವಚಿಂತಾಮಣಿಯಲ್ಲಿವೆ. ವೇದಾಂತ ವಿಷಯವನ್ನು ತಿಳಿಸುವ ನವಚಕ್ರಕುಲರೇಖಾಲಕ್ಷಣದಲ್ಲಿ ಶಿವಪಾರ್ವತಿಯರ ಸಂವಾದ ಶ್ಲೋಕ ರೂಪದಲ್ಲಿದ್ದು, ಅದರ ಟೀಕೆ ಗದ್ಯದಲ್ಲಿದೆ. ದೇವೀಮಹಾತ್ಮ್ಯ ಅದೇ ಹೆಸರಿನ ಸಂಸ್ಕೃತ ಕೃತಿಯ ಭಾಷಾಂತರವಾಗಿದ್ದು 18 ಸಂಧಿ, 796 ಪದ್ಯಗಳನ್ನೊಳಗೊಂಡು ಭಾಮಿನೀ ಷಟ್ಪದಿಯಲ್ಲಿದೆ. ಬಗಳಾಂಬ ಸ್ತೋತ್ರದಲ್ಲಿ 101 ಪದ್ಯಗಳಿವೆ. ಹತ್ತು ಮಹಾವಿದ್ಯಾಧಿ ದೇವತೆಗಳಲ್ಲಿ ಒಬ್ಬಳಾದ ಬಗಳಾಂಬ ದೇವತೆಯ ಸ್ತುತಿಯೇ ಇದರ ವಸ್ತು. ಕೃತಿ ಛಂದೋವತಂಸ ಛಂದಸ್ಸಿನಲ್ಲಿದೆ. ಪ್ರತಿ ಪದ್ಯದ ಕೊನೆಯಲ್ಲಿ ಚಿದಾನಂದ ಎಂಬ ಅಂಕಿತವಿದೆ. ಚಿದಾನಂದ ವಚನದಲ್ಲಿ ರಾಗತಾಳಗಳಿಂದ ಕೂಡಿದ ಹಲವು ಹಾಡುಗಳಿವೆ. ಕಾಮವಿಡಂಬನಕ್ಕೆ ಹೋಳಿ ಪದಗಳು ಎಂಬ ಹೆಸರಿದ್ದು 110 ಪದ್ಯಗಳನ್ನೊಳಗೊಂಡಿದೆ. ನೀತಿ, ತತ್ತ್ವ ನಿರೂಪಣೆಯೇ ಇಲ್ಲಿನ ವಸ್ತು. *

**ಚಿನ್ನ ಬೆಳ್ಳಿ ಕೆತ್ತನೆ :** ಚಿನ್ನ ಮತ್ತು ಬೆಳ್ಳಿ ಬಹಳ ಹಿಂದಿನಿಂದಲೂ ಮಾನವನಿಗೆ ಅಪೂರ್ವ ಲೋಹಗಳಾಗಿವೆ. ಈ ಲೋಹಗಳನ್ನು ಆಭರಣಗಳಾಗಿ ಧರಿಸುತ್ತ ಬಂದಿದ್ದಾನೆ, ಹಣವಾಗಿ ಬಳಸಿದ್ದಾನೆ. ಇಂದಿಗೂ ಅವು ಅವನ ಶ್ರೀಮಂತಿಕೆಯ ಮಾಪನಗಳಾಗಿವೆ. ಚಿನ್ನ, ಬೆಳ್ಳಿಯ ಗೋಲವಾದ ಮತ್ತು ಸ್ತಂಭಾಕಾರದ ಚಿಕ್ಕ ಮಣಿಗಳು ಸಿಂಧೂ ಸಂಸ್ಕೃತಿಯ ಉತ್ಖನನದಲ್ಲಿ ದೊರಕಿವೆ. ಚಿನ್ನದ ಮಣಿಗಳ ಮೇಲಿನ ಚಿಕ್ಕ ಚಿಕ್ಕ ಮುಚ್ಚಳಗಳು ರಚನಾಕೌಶಲದಲ್ಲಿ ಆಶ್ಚರ್ಯ ಕಾರಕವಾಗಿವೆ. ವೇದಗಳಲ್ಲಿ ಮತ್ತು ಪ್ರಾಚೀನ ಕಾವ್ಯ ಪುರಾಣಗಳಲ್ಲಿ ಬಂಗಾರ ಮತ್ತು ಬೆಳ್ಳಿಯಿಂದ ತಯಾರಿಸಿದ ನಾನಾ ಆಭರಣಗಳ ಹೆಸರುಗಳು ದೊರಕುತ್ತವೆ. ಕರ್ಣ ಶೋಭನ, ಕುಂಭ, ಖಾಡಿ, ರುಕ, ಸ್ರಜ ರಸನ, ನಿನಭಗಳೆಂಬ ಆಭರಣಗಳು ಕ್ರಮವಾಗಿ, ಕಿವಿ, ತಲೆ, ಪಾದ, ಕೈ, ಕೊರಳು, ಟೊಂಕ ಇವುಗಳಿಗೆ ಧರಿಸುವಂಥವು ಆಗಿದ್ದವು. ಮಹಾಕಾವ್ಯಗಳ ಕಾಲದಲ್ಲಿ ಆಭರಣಗಳಲ್ಲಿನ ಕೌಶಲ ಪರಾಕಾಷ್ಠೆ ಹೊಂದಿತ್ತು. ಬೇಲೂರು, ಸೋಮನಾಥಪುರ ಮೊದಲಾದೆಡೆ ಶಿಲ್ಪಗಳಲ್ಲಿ ಕಂಡುಬರುವ ಆಭರಣಗಳ ನಕ್ಷೆಗಳು ಆಧುನಿಕವೂ ವೈವಿಧ್ಯಪೂರ್ಣವೂ ಆಗಿವೆ. ಮುಕುಟ, ನೆತ್ತಿಮಣಿ, ನತ್ತು, ಚಿತ್ರಾಣ, ಬುಗುಡಿ, ಬುಲಾಕು, ಕಂಠೀಸರ, ಕಂಕಣ, ವಂಕಿ, ಜೂರಿಕ ಇತ್ಯಾದಿ ಆಭರಣಗಳು ಕಾಲಕ್ಕನುಸಾರವಾಗಿ ಬೇರೆ ಬೇರೆ ಹೆಸರುಗಳಿಂದ ಆಕಾರ, ಅಳತೆಗಳಿಂದ ರೂಢಿಯಲ್ಲಿವೆ.

ಚಿನ್ನ, ಬೆಳ್ಳಿಯ ಕೆಲಸ ಮಾಡುವವರು ಬಹುತೇಕ ಪರಂಪರೆಯನ್ನೇ ಅನುಸರಿಸುತ್ತಾರೆ. ಅವರ ಉದ್ಯೋಗ ಪರಂಪರಾಗತವಾಗಿರುತ್ತದೆ. ಅವರು ದೇವರಪೂಜೆ, ಧರ್ಮಕಾರ್ಯಗಳಿಗೆ ಬೇಕಾದ ಸಲಕರಣೆ, ಆಭರಣಗಳನ್ನು ಶಾಸ್ತ್ರಬದ್ಧವಾಗಿ ಮಾಡುತ್ತಾರೆ. ಆದರೆ ಸ್ತ್ರೀಪುರುಷರು ಧರಿಸುವ ಆಭರಣಗಳನ್ನು ಆಯಾ ಕಾಲದ ರುಚಿ, ಬೇಡಿಕೆಗಳನ್ನು ಅನುಸರಿಸಿ ತಯಾರಿಸುತ್ತಾರೆ. ಚಿನ್ನ ಬೆಳ್ಳಿಯ ಉದ್ಯೋಗವನ್ನು ವಿಶಿಷ್ಟ ಜಾತಿಯವರು ಮಾಡುತ್ತಿದ್ದು, ಅವರನ್ನು ವಿಶ್ವ ಕರ್ಮರು, ವಿಶ್ವಬ್ರಾಹ್ಮಣರು, ದೈವಬ್ರಾಹ್ಮಣರು, ಪಾಂಚಾಲಿಯರು, ಪತ್ತಾರರು, ಸೋನಾರರು, ಅಕ್ಕಸಾಲಿಗರು, ಚಿನಿವಾರರು, ಅರ್ಕಚಾರಿಗಳು, ಆಚಾರಿಗಳು, ಪಂಚಾನನರು ಸುವರ್ಣಕಾರರು ಎಂದೂ ಕರೆಯುತ್ತಾರೆ. ಆಧುನಿಕ ನಾಗರಿಕತೆಯಲ್ಲಿ ಜನರು ಸೂಕ್ಷ್ಮತರ ಮತ್ತು ವೈವಿಧ್ಯ ಮಯವಾದ ಆಭರಣಗಳನ್ನು ಹೆಚ್ಚು ಹೆಚ್ಚಾಗಿ ಇಚ್ಛಿಸುತ್ತಾರಾಗಿ ಚಿನಿವಾರರು, ಪರಂಪರಾಗತವಾಗಿ ಬಂದ ಆಭರಣ ತಯಾರಿಕೆಯ ಜ್ಞಾನ ಸಾಕಾಗದ್ದರಿಂದ ವಿಶೇಷ ತರಬೇತಿ ಪಡೆಯುತ್ತಿದ್ದಾರೆ. ಇದುವರೆಗೆ ತಂದೆ, ಮಕ್ಕಳು, ಹೆಚ್ಚೆಂದರೆ ಹತ್ತಿರದ ಸಂಬಂಧಿಗಳು ಒಟ್ಟಾಗಿ ಈ ಕೆಲಸ ಮಾಡುತ್ತಿದ್ದರು. ಹೊರಗಿನ ನೌಕರರನ್ನು ನಿಯಮಿಸಿಕೊಳ್ಳುವ ರೂಢಿ ಈಚೀಚೆಗೆ ಬರುತ್ತಿದೆ.

ಒಂದು ಚಿಕ್ಕ ಸ್ಥಳದಲ್ಲಿ ಅಕ್ಕಸಾಲಿಗನ ಕೆಲಸ ನಡೆದಿರುತ್ತದೆ. ಅದು ಬಹುತೇಕ ಮನೆಯ ಹೊರಭಾಗ, ಅವನ ಸುತ್ತುಮುತ್ತು ಆಭರಣಗಳನ್ನು ತಯಾರಿಸಲು ಬೇಕಾದ ಸಲಕರಣೆಗಳನ್ನು ಇಟ್ಟು ಕೊಂಡಿರುತ್ತಾನೆ. ಐರಣಿ, ಸುತ್ತಿಗೆ, ಚಿಮುಟಿಗೆ, ಊದುಗೊಳವೆ. ಅಗ್ನಿ ಕುಂಡ, ಕುದ್ದಾಲಿ, ಕೆತ್ತನೆಯ ಚಾಣಗಳು, ಬೈರಿಗೆ, ಕರಗಸ, ತರತರದ ಅಚ್ಚುಗಳು, ಪಂಕ, ಅರಗಳು, ಕಂಪಾಸು, ತ್ರಾಸು, ತೂಕ-ಅಳತೆಗಳು, ಗುಂಜಿಗಳು - ಇವು ಅವನ ಕೆಲವು ಹತಾರಗಳು, ಚಿಮಣಿ, ಇಕ್ಕುಳ, ತಂತಿ, ಪಿಟ್ಯಾಡಾಯ್ ಯಂತ್ರಗಳು - ಇವು ನಯಗೊಳಿಸುವ ಸಾಧನಗಳು. ಅಲ್ಲದೆ, ಬಂಗಾರವನ್ನು ಶುದ್ಧಗೊಳಿಸಲು ನೈಟ್ರಿಕ್ ಮತ್ತು ಸಲ್ಫ್ಯೂರಿಕ್ ಆಸಿಡ್ಡುಗಳು, ಆಭರಣದ ವಿವಿಧ ಮಾದರಿಯ ಚಿತ್ರಗಳುಳ್ಳ ಪುಸ್ತಕಗಳು ಅವನ ಬಳಿ ಇರುತ್ತವೆ.

ಚಿನ್ನ-ಬೆಳ್ಳಿಯ ಕೈಗಾರಿಕೆ ಕೇವಲ ಕೈಕಸಬಲ್ಲ. ಅದು ಕಲೆ, ಉಪಯುಕ್ತ ಕಲೆ. ಕಲೆ ಮತ್ತು ಕೈಕಸಬುಗಳ ಕೌಶಲದಲ್ಲಿ ಈ ದಂಧೆ ಲಾಭದಾಯಕವೂ ಆಗಿದೆ. ಆರ್ಥಿಕವಾಗಿ ಈ ವೃತ್ತಿ ಮಧ್ಯಮ ವರ್ಗಕ್ಕೆ ಸೇರುತ್ತದೆ. ಗ್ರಾಹಕರ, ಅಕ್ಕಸಾಲಿಗರ ಮಧ್ಯದಲ್ಲಿ ದಲಾಲಿ ಮಾಡುವ ಸರಾಫರು ಮಾತ್ರ ಶ್ರೀಮಂತ ವರ್ಗಕ್ಕೆ ಸೇರುತ್ತಾರೆ. ಈ ದಂಧೆಗೆ ಪ್ರಾಮಾಣಿಕತೆ, ಕುಶಲತೆ ಅಷ್ಟೇ ಮಹತ್ವದ್ದಾಗಿವೆ. *

**ಚುಂಚನಕಟ್ಟೆ :** ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಒಂದು ಯಾತ್ರಾಸ್ಥಳ. ಕೃಷ್ಣರಾಜನಗರಕ್ಕೆ 15ಕಿಮೀ ಪಶ್ಚಿಮದಲ್ಲಿ ಕಾವೇರಿ

ಕೋದಂಡರಾಮ ದೇವಾಲಯ

ನದಿಯ ಬಲದಡದಲ್ಲಿದೆ. ಇದು ಹೋಬಳಿ ಕೇಂದ್ರ. ಈ ಗ್ರಾಮ ಕುಪ್ಪೆ ಗ್ರಾಮಪಂಚಾಯಿತಿಗೆ ಒಳಪಟ್ಟಿದೆ. ಇಲ್ಲಿಂದ ಸಾಲಿಗ್ರಾಮ, ಮಿರ್ಲೆ, ಪಿರಿಯಾಪಟ್ಟಣ ಮುಂತಾದ ಸುತ್ತಲ ಊರುಗಳಿಗೆ ಉತ್ತಮ ಮಾರ್ಗ ಸಂಪರ್ಕಗಳಿವೆ. ಶ್ರೀರಾಮಭಕ್ತನಾದ ಚುಂಚ ಎಂಬ ಋಷಿ ಇಲ್ಲಿದ್ದನೆಂದೂ ಈ ಸ್ಥಳಕ್ಕೆ ಅವನ ಹೆಸರೇ ಬಂದಿದೆಯೆಂದೂ ಶ್ರೀರಾಮ ಅರಣ್ಯವಾಸದಲ್ಲಿದ್ದಾಗ ಸೀತಾಲಕ್ಷ್ಮಣಸಮೇತನಾಗಿ ಇಲ್ಲಿಗೆ ಬಂದಿದ್ದನೆಂದೂ ಸ್ಥಳಪುರಾಣ. ಚುಂಚನಕಟ್ಟೆ ಬಳಿ ಕಾವೇರಿ ನದಿ 80' ಎತ್ತರದಿಂದ ಹಂತಹಂತವಾಗಿ ದುಮುಕುತ್ತದೆ. ಪ್ರವಾಹದ ಕಾಲದಲ್ಲಿ ಈ ಜಲಪಾತ ನೋಡಲು ರಮ್ಯ. ಜಲಪಾತದ ಬಳಿಯಿಂದ ಹಿನ್ನೆಲೆಗೆ ಸ್ವಲ್ಪ ಅಂತರದಲ್ಲಿ



ಚುಂಚನಕಟ್ಟೆ ಜಲಪಾತ

ಕಾವೇರಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲಾಗಿದೆ. ಈ ಸೇತುವೆಗೆ ಉತ್ತರದಲ್ಲಿ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ನಿರ್ಮಿತವಾದ ಸು.333ಮೀ. ಉದ್ದದ ರಾಮಸಮುದ್ರ ಅಣೆಕಟ್ಟು ಇದೆ. ಇಲ್ಲಿಂದ ಸು.30ಮೀ. ದೂರದಲ್ಲಿ ಇನ್ನೊಂದು ಅಣೆಕಟ್ಟು ಇದೆ.

ಜಲಪಾತದ ಬಳಿಯಲ್ಲೇ ನದಿಯ ಬಲದಂಡೆಯ ಮೇಲೆ ಕೋದಂಡರಾಮ ದೇವಾಲಯವಿದೆ. ಈ ದೇವಾಲಯದ ಪ್ರಾಕಾರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿದರು. ದೇವಾಲಯದ ಪ್ರಾಕಾರದ ಒಳಗೆ 1932ರಲ್ಲಿ ಕಟ್ಟಲಾದ ಕಲ್ಯಾಣ ಮಂಟಪದಲ್ಲಿ ವರ್ಣರಂಜಿತ ದಶಾವತಾರ ಚಿತ್ರಗಳಿವೆ. ದೇವಾಲಯದ ಪ್ರವೇಶದ್ವಾರದ ಎಡ ಬಲ ಗೋಡೆಗಳಲ್ಲಿ ನಾಗಬಂಧದ ಶಿಲಾಫಲಕಗಳಿವೆ. ದೇವಾಲಯದ ಸುತ್ತಲೂ ಅನೇಕ ಪುಟ್ಟ ಮಂಟಪಗಳಿವೆ. ದೇವಾಲಯದ ಎದುರು ಒಂದು ಸುಂದರವಾದ ಕಲ್ಯಾಣಮಂದಿರ ಉಂಟು. ಪ್ರತಿವರ್ಷ ಜನವರಿ ತಿಂಗಳಲ್ಲಿ ಚುಂಚನಕಟ್ಟೆ ಜಾತ್ರೆ ಎಂದು ಪ್ರಸಿದ್ಧವಾಗಿರುವ ರಾಮದೇವರ ರಥೋತ್ಸವ ನಡೆಯುತ್ತದೆ. ದನಗಳ ಪರಿಷೆಯೂ ಆಗ ಸೇರುತ್ತದೆ. ಹಳ್ಳಿಕಾರು ಜಾತಿಯ ಹೋರಿಗಳಿಗೆ ಈ ಜಾತ್ರೆ ಪ್ರಸಿದ್ಧ. ಈ ಜಾತ್ರೆಗೆ ಸುಮಾರು ಎರಡು ಲಕ್ಷ ಜನ ಬರುವುದುಂಟು. ಚುಂಚನಕಟ್ಟೆಯ ಬಳಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ನೀಡುವ ಒಂದು ಅನಾಥಾಶ್ರಮವಿದೆ. ಶ್ರೀ ಆದಿಚುಂಚನಗಿರಿ ಮಠದ ಕಲ್ಯಾಣಮಂಟಪವಿದೆ. *

**ಚುಟುವಂಶ :** ಸು.2-3ನೆಯ ಶತಮಾನಗಳಲ್ಲಿ ಕರ್ನಾಟಕದಲ್ಲಿ ಆಳಿದ ಮಾಂಡಲಿಕ ರಾಜವಂಶ. ಬಹುಶಃ ಇವರು ಸಾತವಾಹನರ ಸಾಮಂತರಾಗಿದ್ದರು ಮಾತ್ರವಲ್ಲದೆ ಅವರೊಡನೆ ರಕ್ತಸಂಬಂಧವನ್ನೂ ಹೊಂದಿದ್ದರು. ಇವರು ಮುಖ್ಯವಾಗಿ ಕುಂತಲದ ಕೆಲವು ಭಾಗಗಳನ್ನು ಆಳಿದಂತೆ ತೋರುತ್ತದೆ. ಇವರ ರಾಜಧಾನಿ ಬನವಾಸಿ. ಇವರ ಎರಡು ಶಾಸನಗಳು ದೊರೆತಿವೆ. ಬನವಾಸಿಯಲ್ಲಿ ದೊರಕಿರುವ ಒಂದು ಶಾಸನ ಆ ಕಾಲದ ಬ್ರಾಹ್ಮೀ ಲಿಪಿಯಲ್ಲಿದೆ. ಕರಿಯ ನಾಗರಕಲ್ಲಿನ ಸುತ್ತ ಕೆತ್ತಲ್ಪಟ್ಟಿದೆ. ಶಾಸನದ ಭಾಷೆ ಪ್ರಾಕೃತ. ಇದರಲ್ಲಿ ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿಯ ಮಗಳಾದ ಶಿವಸ್ಕಂದ ನಾಗಶ್ರೀ ಮತ್ತು ಆಕೆಯ ಮಗ ಯುವರಾಜ (ಹೆಸರು ಹೇಳಿಲ್ಲ) ಇವರ ಪ್ರಸ್ತಾಪವಿದೆ. ನಾಗಶ್ರೀ ಬನವಾಸಿಯಲ್ಲಿ ನಾಗರಕಲ್ಲೊಂದನ್ನು ನಿಲ್ಲಿಸಿ ಕೆರೆಯನ್ನೂ ವಿಹಾರವನ್ನೂ ಕಟ್ಟಿಸಿದಳೆಂದು ಶಾಸನ ತಿಳಿಸುತ್ತದೆ. ಈ ಶಾಸನ ಚುಟುಕುಲಾನಂದ ಸಾತಕರ್ಣಿಯ ಆಳ್ವಿಕೆಯ ಹನ್ನೆರಡನೆಯ ವರ್ಷದಲ್ಲಿ ಬರೆಸಿದುದು. ಈ ಶಾಸನದ ಅನಂತರದ್ದೆಂದು ಹೇಳಲಾದ ಮಳವಳ್ಳಿ ಶಾಸನ ಸಹ ಲಾಟವಿ ಎಂಬ ಗ್ರಾಮವನ್ನು ಬ್ರಹ್ಮ ದಾನವಾಗಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಹೇಳಲಾದ ಸಾತಕರ್ಣಿ ನಾಗಶ್ರೀಯ ಮಗನೆಂದು ಊಹಿಸಲಾಗಿದೆ.

ಈ ಎರಡು ಶಾಸನಗಳು ಮತ್ತು ದೊರಕಿರುವ ಸೀಸದ ನಾಣ್ಯಗಳಿಂದ ಚುಟುವಂಶದ ಈ ರಾಜರ ಇತಿಹಾಸವನ್ನು ರಚಿಸಬಹುದು. ಇವರನ್ನು ಆನಂದವಂಶದವರೆಂದೂ ಕೆಲವರು ಕರೆಯುತ್ತಾರೆ. ಇವರು ಹಾರಿತೀಪುತ್ರರು ಮತ್ತು ಮಾನವ್ಯಗೋತ್ರದವರು. ಸಾತಕರ್ಣಿ ಎಂಬ ಹೆಸರು ಇವರಿಗೆ ಇರುವುದರಿಂದ, ಸಾತವಾಹನರ ಬಂಧುಗಳಾಗಿದ್ದಿರಬೇಕೆಂದು ಊಹಿಸಲಾಗಿದೆ. ಈ ಎರಡು ಶಾಸನಗಳ ಆಧಾರದ ಮೇಲೆ ಈ ವಂಶದಲ್ಲಿ ಮೊದಲು ಆಳಿದವನು ಬನವಾಸಿ ಶಾಸನದ ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿ I. ಅನಂತರ ಶಿವಸ್ಕಂಧ ನಾಗಶ್ರೀ. ಅನಂತರ ಅವಳ ಮಗ ಚುಟುಕುಲಾನಂದ ಸಾತಕರ್ಣಿ II. ಶಿವಸ್ಕಂದನಾಗಶ್ರೀ ಎಂಬ ಹೆಸರಿನಲ್ಲಿರುವ ಶಿವಸ್ಕಂದ ಎಂಬುದು ನಮ್ಮ ಗಮನವನ್ನು ಪಲ್ಲವರ ಕಡೆಗೆ ಸೆಳೆಯುತ್ತದೆ. ಆದರೆ ಖಚಿತವಾದ ಮಾಹಿತಿ ದೊರಕಿಲ್ಲದಿರುವುದರಿಂದ ಏನನ್ನೂ ಹೇಳಲಾಗುವುದಿಲ್ಲ.

ಚುಟುಕುಲಾನಂದ ಮತ್ತು ಮುಡಾನಂದ ಎಂಬ ಬರೆಹಗಳುಳ್ಳ ಸೀಸದ ನಾಣ್ಯಗಳು ಈ ವಂಶದವರಿಗೇ ಸೇರಿದವು ಎಂಬುದು ವಿದ್ವಾಂಸರ ಮತ. ಆದರೆ ರ್‍ಯಾಪ್ಸನ್ ಅವರು ಶಾಸನದ ಚುಟುಕುಲಾನಂದ ಸಾತಕರ್ಣಿ

ಮತ್ತು ನಾಣ್ಯಗಳ ಚುಟುಕುಲಾನಂದ ಭಿನ್ನ ವ್ಯಕ್ತಿಗಳೆಂದು ಪರಿಗಣಿಸುತ್ತಾರೆ. ನಾಣ್ಯಗಳ ಬರೆವಣಿಗೆ ಶಾಸನದ ಬರೆವಣಿಗೆಗಿಂತ ಪ್ರಾಚೀನವಾದುದರಿಂದ, ನಾಣ್ಯಗಳಲ್ಲಿನ ಚುಟುಕುಲಾನಂದ ಶಾಸನಗಳ ಚುಟುಕುಲಾಂದ ಸಾತಕರ್ಣಿಯ ಪೂರ್ವಜನಿರಬೇಕೆಂದು ಅವರು ಊಹಿಸಿದ್ದಾರೆ. ಆದರೆ ನಾಣ್ಯಗಳಲ್ಲಿರುವ ಮುಡಾನಂದ ಯಾರು ಮತ್ತು ಅವನು ಯಾರ ಅನಂತರ ರಾಜ್ಯವಾಳಿದ ಎನ್ನುವ ವಿಷಯಗಳು ಸರಿಯಾಗಿ ತಿಳಿದಿಲ್ಲ. ಬನವಾಸಿ ಮತ್ತು ಮಳವಳ್ಳಿ ಶಾಸನಗಳ ಲಿಪಿಯ ಆಧಾರದ ಮೇಲೆ ಈ ರಾಜರು ಮೂರನೆಯ ಶತಮಾನದ ಮಧ್ಯಭಾಗದವರೆಗೂ ಆಳುತ್ತಿದ್ದರೆಂದು ಹೇಳಬಹುದು. ಅಂದರೆ ಕದಂಬ ಮಯೂರಶರ್ಮ ಈ ಸಣ್ಣಪುಟ್ಟ ರಾಜರುಗಳನ್ನು ಸೋಲಿಸಿ ಕದಂಬರಾಜ್ಯವನ್ನು ಸ್ಥಾಪಿಸಿರಬಹುದು. ತಾಳಗುಂದದ ಪ್ರಣವೇಶ್ವರ ದೇವಾಲಯ ಮತ್ತು ಬನವಾಸಿಯ ನಾಗಶಿಲ್ಪ ಚುಟುವಂಶದ ವಾಸ್ತು ಮತ್ತು ಶಿಲ್ಪದ ಮಾದರಿಗಳಾಗಿವೆ.

**ನಾಣ್ಯಗಳು :** ಮೊತ್ತಮೊದಲಿಗೆ ಮೆರ್ವಿನ್ ಸ್ಮಿತ್ ಎಂಬಾತ ಚಿತ್ರದುರ್ಗದಲ್ಲಿ ಈ ದೊರೆಗಳ ನಾಣ್ಯಗಳನ್ನು ಪತ್ತೆಹಚ್ಚಿದ್ದ. ಜನರಲ್ ಪಿಯರ್ಸ್ ಇದೇ ರೀತಿಯ ನಾಣ್ಯಗಳನ್ನು ಕಾರವಾರದಲ್ಲಿ ಪತ್ತೆಮಾಡಿದ.



ಶಿವಾಲನಂದನ ನಾಣ್ಯಗಳು

ಚಂದ್ರವಳ್ಳಿಯ ಉತ್ಖನನದಲ್ಲಿ 1947ರಲ್ಲಿಯೂ ಅನಂತರ ಬನವಾಸಿಯಲ್ಲಿಯೂ ಈ ನಾಣ್ಯಗಳು ದೊರಕಿದವು. ಚುಟುವಂಶದ ನಾಣ್ಯಗಳು ಸೀಸದಿಂದ ಮಾಡಿದವು. ಸಾಮಾನ್ಯವಾಗಿ ಅವುಗಳ ವ್ಯಾಸ ಒಂದರಿಂದ ಒಂದೂಕಾಲು ಅಂಗುಲ. ತೂಕ ಸುಮಾರು ಇನ್ನೂರು ಹತ್ತರಿಂದ ಇನ್ನೂರೈವತ್ತು ಗ್ರೇನ್‌ಗಳು. ಈ ನಾಣ್ಯಗಳ ಮುಂಭಾಗದಲ್ಲಿ ಬೆಟ್ಟವೂ ರಾಜನ ಹೆಸರೂ ಇರುತ್ತವೆ. ಹಿಂಭಾಗದಲ್ಲಿ ಕಟಕಟೆಯೊಳಗಿರುವ ವೃಕ್ಷ ಮತ್ತು ಕೆಲವು ಚಿಹ್ನೆಗಳು ಕಾಣುತ್ತವೆ. ಮುಂಭಾಗದಲ್ಲಿ ರಞೋ ಚುಟುಕುಲಾನಂದಸ ಇಲ್ಲವೆ ರಞೋ ಮುಡಾನಂದ ಎಂಬ ಬರೆಹ



ಚುಟುಕುಲಾನಂದನ ನಾಣ್ಯಗಳು

ಬ್ರಾಹ್ಮೀಲಿಪಿಯಲ್ಲಿರುತ್ತದೆ. ಇವರ ಮುಖ್ಯವಾದ ನಾಣ್ಯಗಳನ್ನು ಈ ರೀತಿ ವರ್ಣಿಸಬಹುದು: ಮುಂಭಾಗ- ಏಳು ಸಣ್ಣ ವೃತ್ತಗಳಿಂದ ಕೂಡಿದ ಬೆಟ್ಟ, ಅದರ ಕೆಳಗೆ ಡೊಂಕಾದ ಮೂರು ಗೆರೆಗಳು; ನಾಣ್ಯದ ತುದಿಯಲ್ಲಿ ರಞೋ ಚುಟುಕುಲಾನಂದಸ ಎಂಬ ಬ್ರಾಹ್ಮೀಲಿಪಿಯ ಬರೆಹ. ಹಿಂಭಾಗ- ಕಟಕಟೆಯೊಳಗಿನ ವೃಕ್ಷ; ಸ್ವಸ್ತಿಕ ಚಿಹ್ನೆಯ ಮೇಲೆ ನಂದಿಪಾದ, ತ್ರಿಕೋನಾಕೃತಿಯ ಲಾಂಛನದ ಮೇಲೆ ಯ ಎಂಬ ಅಕ್ಷರ. ಮತ್ತೊಂದು ನಮೂನೆಯ ನಾಣ್ಯದಲ್ಲಿ ಹಿಂಭಾಗದಲ್ಲಿ ತ್ರಿರತ್ನ ಚಿಹ್ನೆ ಕಾಣಬರುತ್ತದೆ. ಮುಂಭಾಗದಲ್ಲಿ ಬದಲಾವಣೆಯಿಲ್ಲ.

ಚಂದ್ರವಳ್ಳಿಯ ಉತ್ಖನನದಲ್ಲಿ ಬರೆಹವಿಲ್ಲದ ಕೆಲವು ಸಣ್ಣ ಸೀಸದ ನಾಣ್ಯಗಳು ದೊರಕಿದವು. ಸುಮಾರು ಅರ್ಧ ಅಂಗುಲ ವ್ಯಾಸ ಮತ್ತು ಐವತ್ತು ಗ್ರೇನ್ ತೂಕದ ಈ ನಾಣ್ಯಗಳ ಹಿಂಭಾಗವು ಈ ಮೇಲೆ ಹೇಳಿದ ನಾಣ್ಯಗಳಲ್ಲಿರುವಂತೆ ಸಣ್ಣ ವೃತ್ತಗಳಿಂದ ಕೂಡಿದ ಬೆಟ್ಟ ಕಾಣಬರುತ್ತದೆ. ಹಿಂಭಾಗದಲ್ಲಿ ಸ್ವಸ್ತಿಕವೇ ಮೊದಲಾದ ಚಿಹ್ನೆಗಳಿರುತ್ತವೆ. ಆದುದರಿಂದ ಇವುಗಳೂ ಚುಟುವಂಶದವರ ಸಣ್ಣ ನಾಣ್ಯಗಳಿರಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. (ಎ.ವಿ.ಎನ್.)

**ಚೆಂಗಲರಾಯರೆಡ್ಡಿ, ಕ್ಯಾಸಂಬಳ್ಳಿ :** 1902-76. ಮೈಸೂರು ರಾಜ್ಯದ ಪ್ರಥಮ ಕಾಂಗ್ರೆಸ್ ಮುಖ್ಯಮಂತ್ರಿ (1947-52). ಭಾರತ ಒಕ್ಕೂಟದ ಮಂತ್ರಿಯೂ ಮಧ್ಯಪ್ರದೇಶದ ರಾಜ್ಯಪಾಲರೂ (1965-71) ಆಗಿದ್ದರು. ಕೋಲಾರ ಜಿಲ್ಲೆ ಕ್ಯಾಸಂಬಳ್ಳಿಯಲ್ಲಿ 1902 ಮೇ 4ರಂದು ಜನಿಸಿದರು. ತಂದೆ ಬಿ.ವೆಂಕಟರೆಡ್ಡಿ. ಚಿಕ್ಕಂದಿನಿಂದ ಪರೀಕ್ಷೆಗಳಲ್ಲಿ ಉನ್ನತ ವರ್ಗಗಳಲ್ಲಿ ತೇರ್ಗಡೆಯಾಗುತ್ತಿದ್ದ ರೆಡ್ಡಿಯವರು ಮದರಾಸಿನ ಪಚ್ಚಯಪ್ಪ ಕಾಲೇಜಿನಲ್ಲಿ ಓದಿ ಬಿ.ಎ. ಪದವಿಯನ್ನು ಪಾರಿತೋಷಕದೊಂದಿಗೆ ಪಡೆದರು. ಅನಂತರ ಅಲ್ಲಿಯೇ ಕಾನೂನು ವ್ಯಾಸಂಗ ಮಾಡಿ ಉನ್ನತ ಶ್ರೇಣಿಯಲ್ಲಿ ಪದವಿ ಗಳಿಸಿದರು.

ಅನಂತರ ವಕೀಲವೃತ್ತಿಯನ್ನು ಆರಂಭಿಸಿದರಲ್ಲದೆ ಸಾರ್ವಜನಿಕ ಜೀವನವನ್ನೂ ಪ್ರವೇಶಿಸಿದರು. ಕೋಲಾರ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ (1934-40) ಮೈಸೂರು ಸಂಸ್ಥಾನದ ಪ್ರಜಾಪಕ್ಷದ ಅಧ್ಯಕ್ಷರೂ ಆಗಿದ್ದರು (1935-37). ತರುವಾಯ ರಾಜ್ಯಶಾಸನ ಸಭೆಗೆ ಚುನಾಯಿತರಾದರು. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ಬಿರುಸಾದಾಗ ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಬೇಡಿಕೆಯನ್ನು ಮೈಸೂರು ಕಾಂಗ್ರೆಸ್ ಮಂಡಿಸಿತು. ರೆಡ್ಡಿಯವರು ಆ ಪಕ್ಷದ ಮುಂಚೂಣಿಯ ನಾಯಕರಾದರು. ರಾಜ್ಯಾದ್ಯಂತ ಜನತೆಯಲ್ಲಿ ಹೊಸ ಚೇತನ ತುಂಬಿ, ಹೋರಾಟಕ್ಕೆ ತೀವ್ರಗತಿ ಬರುವಂತೆ ಮಾಡುವಲ್ಲಿ ಇವರು ವಹಿಸಿದ ಪಾತ್ರ ಮುಖ್ಯವಾದುದು. 1937-38ರಲ್ಲಿ ಇವರು ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷ

ರಾಗಿದ್ದರು. ಸೆರೆಮನೆವಾಸ ಅನುಭವಿಸಿದರು. ಮಹಾತ್ಮ ಗಾಂಧಿಯವರ ಸೇವಾಗ್ರಾಮ ಆಶ್ರಮದಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಸ್ವಲ್ಪಕಾಲ ಇರುವ ಅವಕಾಶ ಇವರಿಗೆ ಲಭಿಸಿತ್ತು. ಅಖಿಲಭಾರತ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತಿನ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿ ಇವರು ಚುನಾಯಿತರಾಗಿದ್ದರು (1944-45). 1946-47ರಲ್ಲಿ ಇವರು ಮತ್ತೆ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೋರಾಟ ಉಗ್ರರೂಪ ತಾಳಿತು. 1947, ಸೆಪ್ಟೆಂಬರ್ 19ರಂದು ರೆಡ್ಡಿಯವರ ನಾಯಕತ್ವದಲ್ಲಿ ಸತ್ಯಾಗ್ರಹ ಆರಂಭವಾಯಿತು. ಕೊನೆಗೆ ಸಂಸ್ಥಾನ ಸರ್ಕಾರ ಮಣಿದು, ಪ್ರಜೆಗಳ ಬೇಡಿಕೆಗಳನ್ನು ಈಡೇರಿಸಬೇಕಾಯಿತು. ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ರೆಡ್ಡಿಯವರಿಗೂ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೂ ರಾಜಕೀಯ ಒಪ್ಪಂದವಾಗಿ ಮೈಸೂರಿನಲ್ಲಿ ಪ್ರಜಾಪ್ರತಿನಿಧಿಗಳ ಮಂತ್ರಿಮಂಡಲ ರಚನೆಯಾಯಿತು. ಇವರು ಮೈಸೂರಿನ ಪ್ರಥಮ ಮುಖ್ಯಮಂತ್ರಿಯಾಗಿ, ಸಚಿವ ಸಂಪುಟ ರಚಿಸಿ 1952ರ ವರೆಗೂ ಅಧಿಕಾರದಲ್ಲಿದ್ದರು. ಮುಂದೆ ಇವರು ರಾಜ್ಯಸಭೆಯ (1952-57) ಮತ್ತು

ಲೋಕಸಭೆಯ (1957-64) ಸದಸ್ಯರಾಗಿದ್ದರು. ಕೇಂದ್ರ ಸರ್ಕಾರದ ಕೈಗಾರಿಕಾ ಉತ್ಪಾದನ ಸಚಿವರಾಗಿ (1952-57), ಅನಂತರ ಗೃಹನಿರ್ಮಾಣ ಮತ್ತು ಸರಬರಾಯಿ ಸಚಿವರಾಗಿ (1957-61), ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾಗಿ (1961-63) ಕೆಲಸ ಮಾಡಿದರು. ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿದರು (1963-64). ಅವಧಿಯಲ್ಲಿ ಮಧ್ಯಪ್ರದೇಶದ ರಾಜ್ಯಪಾಲರಾಗಿದ್ದರು (1965-71).

ಅರ್ಥಶಾಸ್ತ್ರದಲ್ಲಿ ನಿಪುಣರೂ ಅನುಭವಿಗಳೂ ಆದವರೆಂದು ಹೆಸರಾಗಿದ್ದ ರೆಡ್ಡಿಯವರು ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್ (ಅರ್ಥಶಾಸ್ತ್ರ ಶಾಲೆಯ) ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದರು. ಕನ್ನಡ ಪ್ರತಿಕೋದ್ಯಮದಲ್ಲೂ ಇವರು ಕೆಲಸ ಮಾಡಿದ್ದಾರೆ. ಇವರು ಸ್ವಲ್ಪ ಕಾಲ ಜನವಾಣಿ ಕನ್ನಡ ದಿನಪತ್ರಿಕೆಯ ಸಂಪಾದಕರಾಗಿದ್ದರು.

ಇವರು ತಮ್ಮ 75ನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ನಿಧನರಾದರು. (ಜಿ.ವಿ.ಎಸ್.)

**ಚೆಟ್ಟಳ್ಳಿ :** ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ. ಮಡಿಕೇರಿ-ಸಿದ್ದಾಪುರ-ವಿರಾಜಪೇಟೆ ಮಾರ್ಗದಲ್ಲಿ ಮಡಿಕೇರಿಗೆ ಆಗ್ನೇಯಕ್ಕೆ ಸು.16ಕಿಮೀ ದೂರದಲ್ಲಿದೆ. ಚೆಟ್ಟಳ್ಳಿ-ಶುಂಠಿಕೊಪ್ಪ ಮಾರ್ಗದಲ್ಲಿ ಚೆಟ್ಟಳ್ಳಿಯಿಂದ ಎರಡೂವರೆ ಕಿಮೀ ದೂರದಲ್ಲಿ ರಾಜ್ಯ ಸರ್ಕಾರಕ್ಕೆ ಸೇರಿದ ಮತ್ತು ಭಾರತ ಕೃಷಿ ಸಂಶೋಧನ ಮಂಡಳಿಯ ನೆರವನ್ನು ಪಡೆದಿರುವ ಕಿತ್ತಳೆಹಣ್ಣಿನ ಸಂಶೋಧನ ಕೇಂದ್ರವಿದೆ. ಇಲ್ಲಿಯ ಕಿತ್ತಳೆ ಮತ್ತು ಇತರ ಹಣ್ಣುಹಂಪಲುಗಳ ಹಾಗೂ ಏಲಕ್ಕಿ, ಲವಂಗ ಮತ್ತು ಜಾಯಿಕಾಯಿ ಮೊದಲಾದ ಸಂಬಾರ ಸಸ್ಯಗಳ ಸಂಶೋಧನೋದ್ಯಾನ ಅತ್ಯಂತ ಚಿತ್ತಾಕರ್ಷಕವಾಗಿದ್ದು ಆಸಕ್ತ ರೈತರಿಗೆ ಬೋಧಪ್ರದ ಕೃಷಿ ಕೇಂದ್ರವೂ ಆಗಿದೆ. ಹೊಸಹೊಸ ಜಾತಿಯ ಜಂಬೀರ ಫಲಗಳ ವಿಕಸನ ದೃಷ್ಟಿಯಿಂದಲೂ ಲವಂಗ ಮತ್ತು ಜಾಯಿಕಾಯಿಗಳನ್ನು ಮಲೆನಾಡಿನ ತೋಟಗಳಲ್ಲಿ ಬೆಳೆಸುವ ಬಗೆಗೂ ಇಲ್ಲಿ ಅನೇಕ ಪ್ರಯೋಗಗಳನ್ನು ಕೈಗೊಳ್ಳಲಾಗುತ್ತಿದೆ. ಈ ಸಂಶೋಧನ ಫಲಸಸ್ಯೋದ್ಯಾನವನ್ನು ರಾಜ್ಯಕ್ಕೇ ಒಂದು ಮಾದರಿಯೆನಿಸುವ ಉತ್ತಮ ತೋಟಗಾರಿಕೆಯ ಪ್ರಾತ್ಯಕ್ಷಿಕತೆಯ ಕೇಂದ್ರವನ್ನಾಗಿ ಮಾರ್ಪಡಿಸಿ ವಿಸ್ತರಿಸುವ ಯೋಜನೆ ಇದೆ. ಈ ಸಂಶೋಧನ ಕೇಂದ್ರದ ಸಮೀಪದಲ್ಲೇ ಭಾರತೀಯ ಕಾಫಿ ಬೋರ್ಡಿನ ಕಾಫಿ ಉಪ ಸಂಶೋಧನ ಕೇಂದ್ರವಿದೆ. (ಎಂ.ವಿ.)

**ಚೆಟ್ಟಿ ಮುರಿಗೆಪ್ಪಣ್ಣ :** 1907-. ನೈಜ ಚಿತ್ರಕಲೆಯ ಕಲಾವಿದ. ಇವರದು ಶರಣಪರಂಪರೆಯ ಮನೆತನ. ಕಲಾಕಾರರಾದ ಅಡಿವೆಪ್ಪ ದಂಪತಿಗಳಿಗೆ ಮಗನಾಗಿ 1907 ಮಾರ್ಚ್ 9ರಂದು ಬೆಳಗಾಂವಿ ಜಿಲ್ಲೆ ಅಥಣಿಯಲ್ಲಿ ಜನಿಸಿದರು. ಪ್ರಾಥಮಿಕ, ಮಾಧ್ಯಮಿಕ ಶಾಲೆಯಲ್ಲಿ ಚಿತ್ರಕಲಾ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸುತ್ತಿದ್ದರು. ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಸಂಸ್ಥೆಯಲ್ಲಿ ಚಿತ್ರಕಲಾ ಶಿಕ್ಷಣ ಪಡೆದ ಅನಂತರ ಕಲಾರಾಧನೆಗೆ ತೊಡಗಿದರು. ಡಿಪ್ಲೊಮಾ ಪರೀಕ್ಷೆಯಲ್ಲಿ ಇವರು ರಚಿಸಿದ ತೈಲಮಾಧ್ಯಮದ ಕೃಷ್ಣಾರ್ಜುನ ಯುದ್ಧದ ಸನ್ನಿವೇಶದ ಚಿತ್ರಕ್ಕೆ ಪ್ರಥಮ ಬಹುಮಾನ ಹಾಗೂ ಸ್ವರ್ಣ ಪದಕ ದೊರಕಿತು (1924). ಅನಂತರ ಫೆಲೊಷಿಪ್‌ಗೆ ಆಯ್ಕೆಗೊಂಡರು (1931-34).

ಹತ್ತುಸಾವಿರಕ್ಕೂ ಹೆಚ್ಚು ಭಾವಚಿತ್ರ, ರೇಖಾಚಿತ್ರ, ಸಂಯೋಜನ ಚಿತ್ರ ಮತ್ತು ನಿಸರ್ಗಚಿತ್ರಗಳನ್ನು ರಚಿಸಿರುವ ಚೆಟ್ಟಿಯವರು ಗದುಗಿನ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಸಿರಿವಂತಗೊಳಿಸಿದವರಲ್ಲಿ ಮೊದಲಿಗರು. ಅಭಿವ್ಯಕ್ತಿಗಿಂತ ಶರಣ ಪರಂಪರೆಯ ಕಥಾವಸ್ತುವಿಗೆ ಪ್ರಾಮುಖ್ಯತೆ ನೀಡಿ ಕಲ್ಪನೆಗೆ ಹೊಸರೂಪ ಕೊಡುವಲ್ಲಿ ಸಿದ್ಧಹಸ್ತರು. ನಾಡಿನ ಅನೇಕ ಶಿವಶರಣರು ಇವರ ಕುಂಚದಲ್ಲಿ ಅರಳಿದ್ದಾರೆ. ಭಾವಚಿತ್ರಗಳಲ್ಲಿ ರಾಜಮಹಾರಾಜರ ಪೇಟಗಳಲ್ಲಿ ಮತ್ತು ಆಭರಣಗಳಲ್ಲಿ ಬಂಗಾರದ ಹೊಳಪನ್ನು ನೈಜವಾಗಿ ಬಣ್ಣದ ಬಳಕೆಯಿಂದ ಚಿತ್ರಿಸುವುದು ಇವರಿಗೆ ಬಂದ ದೈವದತ್ತ ಕೊಡುಗೆ.

ಉದಯಪುರದಲ್ಲಿ ಅರಮನೆಯ ಆವರಣದಲ್ಲಿದ್ದ ಜಲಮಂದಿರದ ನಿಸರ್ಗಚಿತ್ರ ಬಿಡಿಸಿದಾಗ ಅದನ್ನು ಮೆಚ್ಚಿದ ಮಹಾರಾಜರು ಚಿತ್ರವನ್ನು ಅರಮನೆಗಾಗಿ ಸಂಗ್ರಹಿಸಿ ಪುರಸ್ಕಾರ ನೀಡಿ ಗೌರವಿಸಿದರು. ಕಲಾಶಾಲೆಯ ಸುಂದರ ತೋಟದಲ್ಲಿದ್ದ ಗಿಡವೊಂದರ ಬೊಡ್ಡೆಯನ್ನು ಮೋಹಕವಾಗಿ ಚಿತ್ರಿಸಿದ್ದನ್ನು ಕಂಡು ಗುರುಗಳಾದ ಸೊಲೊಮನ್ ಅವರು ಅದನ್ನು ಶಾಲೆಯ ಗ್ಯಾಲರಿಗಾಗಿ ಸಂಗ್ರಹಿಸಿ ಅದರ ಪ್ರತಿಕೃತಿಯನ್ನು ಇಂಗ್ಲೆಂಡಿಗೆ ಕಳುಹಿಸಿದರು. ಅದು ಅಲ್ಲಿಯೂ ಮೆಚ್ಚುಗೆ ಗಳಿಸಿತು. ಮಠಮಂದಿರಗಳಲ್ಲಿ ಕಂಡುಬರುವ ಹಲವು ಕೃತಿಗಳಲ್ಲಿ ಸಿದ್ಧಲಿಂಗೇಶ್ವರಸ್ವಾಮಿಯ ಮೂಲಚಿತ್ರವನ್ನು ಪ್ರಥಮವಾಗಿ ಚಿತ್ರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಚಾಂದ ಸಂಸ್ಥಾನದ ಮಹಾರಾಜರು ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಇವರು ರಚಿಸಿದ ವಿಶ್ವರೂಪದರ್ಶನ ತೈಲಚಿತ್ರಕ್ಕೆ ಮಹಾರಾಜರ ಚಿನ್ನದ ಪದಕ ದೊರಕಿತು. ಹುಬ್ಬಳ್ಳಿಯ ಜಗದ್ಗುರು ಮೂರುಸಾವಿರ ಮಠದ ಗ್ರಂಥಮಾಲೆಯ ವೀರಶೈವ ಭಾರತಿ ಪುಸ್ತಕ ಸಂಪದಕ್ಕೆ ಶರಣರ ಅಸಂಖ್ಯಾತ ಚಿತ್ರಗಳನ್ನು ರಚಿಸಿರುವ ಚೆಟ್ಟಿಯವರ ಅನೇಕ ಉತ್ತಮ ಕೃತಿಗಳು ದೇಶದ ವಿವಿಧ ಮಠ ಮಂದಿರಗಳಲ್ಲಿ ಅಲಂಕೃತಗೊಂಡಿವೆ.

ಇವರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರಕಿವೆ. ವೆಂಕಟಪ್ಪ ಪ್ರಶಸ್ತಿ (1996), ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ, ರಾಜ್ಯ ಪ್ರಶಸ್ತಿ (1998) ಹಾಗೂ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳು ಉಲ್ಲೇಖನೀಯ. ಕಲೆಯನ್ನು ಜೀವನದಲ್ಲಿ ಹಾಸುಹೊಕ್ಕಾಗಿಸಿಕೊಂಡ ಚೆಟ್ಟಿಯವರು ಸರಳರು ಹಾಗೂ ಉದಾರಿಗಳೂ ಆಗಿದ್ದರು. ಗದುಗಿನಲ್ಲಿರುವ ತಮ್ಮ ಸ್ವಂತ ನಿವಾಸ ಆರ್ಟ್ ಗ್ಯಾಲರಿಯಾಗಬೇಕೆಂಬುದು ಇವರ ಆಕಾಂಕ್ಷೆಯಾಗಿದೆ. (ಎಸ್‌ಯು.ಎಂ.)

**ಚೆನ್ನಕೇಶವಯ್ಯ, ಎನ್. :** 1895-. ಕರ್ನಾಟಕ ಸಂಗೀತ ವಿದ್ವಾಂಸರು. ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ನಾಟಹಳ್ಳಿಯಲ್ಲಿ ಜನಿಸಿದರು. ತಂದೆ ಕೇಶವಯ್ಯ, ತಾಯಿ ಲಕ್ಷ್ಮೀದೇವಮ್ಮ. ಹೇಮಾವತಿ

ನದೀ ತೀರದ ಪ್ರಶಾಂತ ವಾತಾವರಣದಲ್ಲಿ ವಾಸ ಮಾಡುತ್ತಿದ್ದ ಕೇಶವಯ್ಯನವರು ಸಂಗೀತದಲ್ಲಿ ತಕ್ಕಮಟ್ಟಿನ ಸಾಧನೆ ನಡೆಸಿದ್ದರು. ದೇವರ ನಾಮಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದ ಇವರು ಭಾರತವಾಚನದಲ್ಲೂ ವಿಶೇಷವಾದ ಆಸಕ್ತಿ ಬೆಳೆಸಿಕೊಂಡಿದ್ದರು. ತಮ್ಮ ಸಂಗೀತಪ್ರೇಮದಿಂದ ಸುತ್ತಣ ಜನರ ಪ್ರೀತಿ ವಿಶ್ವಾಸಗಳಿಸಿದ್ದ ಕೇಶವಯ್ಯನವರು ಸಂಗೀತದ ಸಣ್ಣಪ್ಪನವರೆಂದು ಪ್ರಸಿದ್ಧರಾಗಿದ್ದರು. ತಾಯಿ ಲಕ್ಷ್ಮೀದೇವಮ್ಮನವರೂ ಸಂಗೀತಪ್ರಿಯೆ. ತಾಯಿ ತುಂಬಿದ ಭಕ್ತಿಭಾವದಿಂದ ದೇವರನಾಮಗಳನ್ನು ಹಾಡುತ್ತಿದ್ದರು. ತಂದೆ ತಾಯಿಗಳ ಸಂಗೀತದ ಒಲುಮೆ ಚಿಕ್ಕಂದಿನಲ್ಲಿಯೇ ಇವರ ಮೇಲೆ ಪ್ರಭಾವ ಬೀರಿತು.

ಇವರು ಲೋಯರ್ ಸೆಕೆಂಡರಿ (1909) ಪರೀಕ್ಷೆಯನ್ನು ಮುಗಿಸಿ ಮೈಸೂರಿನಲ್ಲಿ ವ್ಯಾಸಂಗ ಮುಂದುವರಿಸಿ ಅಪ್ಪರ್ ಸೆಕೆಂಡರಿ (1912), ಉಪಾಧ್ಯಾಯ ತರಬೇತಿ (1914), ಡ್ರಾಯಿಂಗ್ ಡಿಪ್ಲೊಮಾ, ವ್ಯವಸಾಯ ಮತ್ತು ಪಶುವೈದ್ಯ ತರಬೇತಿ ಪರೀಕ್ಷೆಗಳಲ್ಲೂ ಜಯಶೀಲರಾದರು. ಸಂಗೀತವೇ ಇವರ ಬಾಳಿನ ಸಕಲವಾಗಿತ್ತಾದರೂ ಜೀವನಕ್ಕೆ ಬೇರೆ ವೃತ್ತಿಯನ್ನವಲಂಬಿಸಿ ಸಂಗೀತ ಸಾಧನೆಯನ್ನು ಸ್ವಂತ ಸುಖಕ್ಕಾಗಿ ಮುಂದುವರಿಸಬೇಕೆಂಬುದು ಇವರ ಅಭಿಲಾಷೆಯಾಗಿತ್ತು. ಇದಕ್ಕಾಗಿ ಇವರು ಮೈಸೂರಿನಲ್ಲಿ ವೈಣಿಕ ವಿದ್ವಾನ್ ಶಿವರಾಮಯ್ಯನವರಲ್ಲಿ ನಾಲ್ಕು ವರ್ಷಗಳ ಕಾಲ ಸಂಗೀತಾಭ್ಯಾಸ ಮಾಡಿದರು. ಶಿವರಾಮಯ್ಯನವರ

ತಂದೆಯವರಾದ ಪದ್ಮನಾಭಯ್ಯನವರು ಮೈಸೂರು ವಾಸುದೇವಾಚಾರ್ಯರ ಗುರುಗಳಾಗಿದ್ದುದರಿಂದ ಇವರ ಸಂಗೀತಕ್ಕೂ ವಾಸುದೇವಚಾರ್ಯರದಕ್ಕೂ ಇರುವ ಸಾಮ್ಯವನ್ನು ಗುರುತಿಸಬಹುದು. ಪ್ರತಿಯೊಂದು ಗಮಕವೂ ಸರಿಯಾದ ಪ್ರಮಾಣದಲ್ಲಿರುವಂತೆ ಶ್ರುತಿಪೂರ್ಣವಾದ ಭಾವಭರಿತವಾದ ಪ್ರಶಾಂತ ಮನಸ್ಕವಾದ ಹಾಡುಗಾರಿಕೆಗೆ ಇವರು ಪ್ರಸಿದ್ಧರಾಗಿದ್ದರು.

ಶಿವರಾಮಯ್ಯನವರ ಮನೆಯಲ್ಲಿ ಪ್ರತಿ ಏಕಾದಶಿಯಂದು ನಡೆಯುತ್ತಿದ್ದ ಭಜನೆಯಲ್ಲಿ ವಾಸುದೇವಾಚಾರ್ಯರೂ ಭಾಗವಹಿಸುತ್ತಿದ್ದರು. ಚೆನ್ನಕೇಶವಯ್ಯನವರು ಅವರ ಹಾಡುಗಾರಿಕೆಯಿಂದ ಪ್ರಭಾವಿತರಾದರಲ್ಲದೆ. ಅವರಲ್ಲೂ ಅಭ್ಯಾಸ ಮಾಡಿದರು. ಶಿವರಾಮಯ್ಯನವರಿಂದ ಸಂಗೀತದ ಲಕ್ಷ್ಯ ಹಾಗೂ ಲಕ್ಷಣದ ಖಚಿತ ನಿರ್ಣಯಜ್ಞಾನ ಪಡೆದಿದ್ದ ಚೆನ್ನಕೇಶವಯ್ಯನವರು ವಾಸುದೇವಾಚಾರ್ಯರ ನಿಕಟ ಸಹವರ್ತಿಯಾಗಿ ಹಲವು ವರ್ಷಗಳ ಕಾಲ ಸಾಧನೆ ಮಾಡಿದರಲ್ಲದೆ, ಆಚಾರ್ಯರ ಕೃತಿಗಳನ್ನು ಸ್ವರಸಹಿತ ಬರೆದು ಅವುಗಳ ಸಂಕಲನದ ಪ್ರಕಟನೆಯಲ್ಲಿ ನೆರವಾದರು. ವಾಸುದೇವಾಚಾರ್ಯರು ತಮ್ಮ ಹೊಸ ಕೃತಿಗಳನ್ನು ಚೆನ್ನಕೇಶವಯ್ಯನವರಿಗೆ ಹೇಳಿ ಅವರಿಂದ ಬರೆಯಿಸುತ್ತಿದ್ದರು. ಚೆನ್ನಕೇಶವಯ್ಯನವರು ಈ ಕೆಲಸವನ್ನು ಮುಂದುವರಿಸಿ ಅನೇಕ ಅಪೂರ್ವ ಕೃತಿಗಳನ್ನು ಸಂಗ್ರಹಿಸಿದರು.

ಚೆನ್ನಕೇಶವಯ್ಯವನವರು ಮೈಸೂರಿನಲ್ಲಿ ಶಾರದಾವಿಲಾಸ ಶಾಲೆಯಲ್ಲಿ ಉಪಾಧ್ಯಾಯರಾದರು. ಉದ್ಯೋಗದ ವೇಳೆ ಬಿಟ್ಟು ಇವರ ದಿನದ ಉಳಿದ ಕಾಲವೆಲ್ಲ ಸಂಗೀತಕ್ಕೆ ಮೀಸಲಾಯಿತು. ದೇಶದ ಅನೇಕ ಕಡೆಗಳಲ್ಲಿ ಇವರ ಕಚೇರಿಗಳು ಏರ್ಪಡುತ್ತಿದ್ದವು. ತಮ್ಮ ಬಿಡುವಿನ ವೇಳೆಯಲ್ಲಿ ಇವರು ಅನೇಕ ಶಿಷ್ಯರಿಗೆ ಪಾಠ ಹೇಳಿಕೊಟ್ಟರು. ಅವರಲ್ಲಿ ಅನೇಕರು ಸುಪ್ರಸಿದ್ಧ ಸಂಗೀತಗಾರರಾಗಿದ್ದಾರೆ.

ಚೆನ್ನಕೇಶವಯ್ಯನವರು 1944ರಲ್ಲಿ ಮೈಸೂರಿನ ಆಸ್ಥಾನ ವಿದ್ವಾಂಸರಾದರು. ಜಯಚಾಮರಾಜರು ರಚಿಸಿದ ತೊಂಬತ್ತಾರು ಕೀರ್ತನೆಗಳನ್ನು ಇವರು ಮಹಾರಾಜರ ಸಮ್ಮುಖದಲ್ಲಿ ಹಾಡಿದರಲ್ಲದೆ ಅವನ್ನು ಚಿಟ್ಟೆಸ್ವರ ಸಹಿತ ಬರೆದಿಟ್ಟರು. ಮೈಸೂರಿನಲ್ಲಿ ಸೇರಿದ್ದ ಸಂಗೀತ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು (1963). ಆ ಸಮಯದಲ್ಲಿ ಇವರಿಗೆ ಗಾನಕಲಾಸಿಂಧು ಎಂಬ ಪ್ರಶಸ್ತಿ ದೊರಕಿತು. ಸಂಗೀತ ಕಲಾರತ್ನ, ಸಂಗೀತ ವಿದ್ಯಾನಿಧಿ ಇವರಿಗೆ ದೊರೆತಿದ್ದ ಇತರ ಬಿರುದುಗಳು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಪ್ರಾಪ್ತವಾದ್ದು 1972ರಲ್ಲಿ.

ಹಾಡುಗಾರಿಕೆಯ ಜೊತೆಗೆ ಸಂಶೋಧನ ಪ್ರವೃತ್ತಿಯೂ ಚೆನ್ನಕೇಶವಯ್ಯನವರಲ್ಲಿ ಬೆಳೆದುಬಂದಿದೆ. ವಾಸುದೇವಾಚಾರ್ಯ ಹಾಗೂ ಜಯಚಾಮರಾಜ ಒಡೆಯರ ಕೃತಿಗಳಲ್ಲದೆ ಇವರು ಮೈಸೂರು ಸದಾಶಿವರಾಯರು, ಚಿಂತಲಪಲ್ಲಿ ವೆಂಕಟರಾಯರ ತಾತಂದಿರಾದ ಗವಿರಂಗದಾಸರು ಮೊದಲಾದ ಅನೇಕ ವಾಗ್ಗೇಯಕಾರರ ಕೃತಿಗಳನ್ನು ಸ್ವರಪಡಿಸಿ ಬರೆದಿಟ್ಟಿದ್ದಾರೆ. ಹರಿದಾಸಕೀರ್ತನಸುಧಾಸಾಗರ ಎಂಬುದು ಚೆನ್ನಕೇಶವಯ್ಯನವರ ಮಹತ್ತರ ಕೃತಿ. ಇದಲ್ಲದೆ ಇವರು ಇನ್ನೂ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಕೆಲವನ್ನು ಪ್ರಕಟಿಸಿದ್ದಾರೆ. ವೀಣೆ ಸುಬ್ಬಣ್ಣನವರ ಜೀವನ ಸಾಧನೆಗಳನ್ನು ಕುರಿತ ಪುಸ್ತಕ ರಚಿಸಿದ್ದಾರೆ. ಆಲಾಪನಾ ಪದ್ಧತಿ, ತಾನ ಮತ್ತು ಪಲ್ಲವಿ ಎಂಬುದು ಇವರ ಇನ್ನೊಂದು ಕೃತಿ. (ಎಚ್.ಎಸ್.ಕೆ.)

**ಚೆನ್ನಪ್ಪ :** ಸು.1750. ವೀರಶೈವ ಕವಿ. ಶಿವಶರಣ ಲೀಲಾಮೃತ ಎಂಬ ಕೃತಿಯ ಕರ್ತೃ. ಹಂಪೆಗೆ ದಕ್ಷಿಣದಲ್ಲಿರುವ ನಿಡುಗಲ್ಲು ಈತನ ಸ್ಥಳ. ಗುರು ಪಂಚವಣ್ಣಿಗೆ ಚೆನ್ನಮಲ್ಲಿಕಾರ್ಜುನ.

ಶಿವಶರಣ ಲೀಲಾಮೃತ ಹನ್ನೊಂದು ಸಂಧಿಗಳಿರುವ ಯಕ್ಷಗಾನದ ಧಾಟಿಯಲ್ಲಿರುವ ಗ್ರಂಥ. ಬಸವಣ್ಣನವರ ಮತ್ತು ಅವರ ಕಾಲದಲ್ಲಿನ ಶಿವಶರಣರ ಚರಿತಗಳನ್ನು ಇದರಲ್ಲಿ ಹೇಳಿದೆ. ಗ್ರಂಥಾರಂಭದಲ್ಲಿ ಹರಿಹರ, ರಾಘವಾಂಕ, ಭೀಮಕವಿ, ಚಾಮರಸ, ಗುಬ್ಬಿಯ ಮಲ್ಲಣಾರ್ಯ ಮೊದಲಾದ ಪೂರ್ವಕವಿಗಳನ್ನು ಸ್ಮರಿಸಲಾಗಿದೆ. ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ (ಸು.1825) ರಚಿತವಾದ ಸಿರಿಯಾಳ ಚರಿತ್ರೆ ಎಂಬ ಯಕ್ಷಗಾನಕ್ಕೆ ಈ ಕೃತಿಯೇ ಆಧಾರವೆಂಬ ವಿಷಯ ಆ ಗ್ರಂಥದಿಂದ ತಿಳಿದುಬರುತ್ತದೆ. (ಜಿ.ಎಸ್.ಎಸ್.)

**ಚೆನ್ನಬಸವಣ್ಣ :** ಹನ್ನೆರಡನೆಯ ಶತಮಾನದಲ್ಲಿದ್ದ ಒಬ್ಬ ಶಿವಶರಣ ಹಾಗೂ ಸುಪ್ರಸಿದ್ಧ ವಚನಕಾರ. ಬಸವಾದಿ ಪ್ರಮಥರು ನಡೆಸಿದ ಬಹುಮುಖ ಕ್ರಾಂತಿಯ ಕರ್ಣಧಾರತ್ವವನ್ನು ವಹಿಸಿದ ಮಹಾನುಭಾವಿ. ಷಟ್ಸ್ಥಲ ಚಕ್ರವರ್ತಿ, ಸ್ವಯಂಭುಜ್ಞಾನಿ, ಅವಿರಳಜ್ಞಾನಿ, ಬೌದ್ಧಿಕ ಸಾಮ್ರಾಜ್ಯದ ನಿರಂಕುಶ ಚಕ್ರವರ್ತಿ ಮೊದಲಾದ ಪ್ರಶಂಸೆಗೆ ಪಾತ್ರನಾದ ದಾರ್ಶನಿಕ. ಸಮಕಾಲೀನ ವಚನಕಾರರು, ಅನಂತರ ಬಂದ ಅನೇಕ ಕವಿಗಳು ತಮ್ಮ ಕೃತಿಗಳಲ್ಲಿ ಈತನ ತೇಜಃಪೂರ್ಣವಾದ ವ್ಯಕ್ತಿತ್ವ ಹಾಗೂ ಮಹಾನ್ ಸಾಧನೆಗಳನ್ನು ಕುರಿತು ವರ್ಣಿಸಿದ್ದಾರೆ. ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಮಡಿವಾಳ ಮಾಚಿದೇವ, ತೋಂಟದ ಸಿದ್ಧಲಿಂಗೇಶ ಮೊದಲಾದ ಶರಣಶ್ರೇಷ್ಠರು ಈತನ ಮಹಿಮೆಯನ್ನು ಕೊಂಡಾಡಿದ್ದಾರೆ. ಹಡಪದ ಅಪ್ಪಣ್ಣ, ನುಲಿಯ ಚಂದಯ್ಯ, ಅಮುಗಿದೇವಯ್ಯ ಮೊದಲಾದ ವಚನಕಾರರಂತೂ ಈತನ ಹೆಸರನ್ನೇ ಅಂಕಿತವಾಗಿಟ್ಟುಕೊಂಡು ವಚನಗಳನ್ನು ರಚಿಸಿದ್ದಾರೆ. ಹರಿಹರ, ಪಾಲ್ಕುರಿಕೆ ಸೋಮನಾಥ, ಚಾಮರಸ, ವಿರೂಪಾಕ್ಷಪಂಡಿತ, ಲಕ್ಕಣ್ಣದಂಡೇಶ, ವಿರಕ್ತ ತೋಂಟದಾರ್ಯ, ಭೀಮಕವಿ, ಷಡಕ್ಷರದೇವ ಮೊದಲಾದ ಕವಿಗಳು ಇವನನ್ನು ತಮ್ಮ ಕಾವ್ಯಗಳಲ್ಲಿ ಸ್ಮರಿಸಿದ್ದಾರೆ. ಶೂನ್ಯಸಂಪಾದನೆಯಲ್ಲಿ ಚೆನ್ನಬಸವ ಸಂಪಾದನೆ ಎಂಬ ಪ್ರಕರಣವಿದೆ. ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಈತನ ಬಗ್ಗೆ ಕಾವ್ಯಗಳು ರಚಿತವಾಗಿವೆ. ಅಲ್ಲಮಪ್ರಭುವಿನ ಅನಂತರ ಈತ ಶೂನ್ಯಸಿಂಹಾಸನದ ಎರಡನೆಯ ಅಧ್ಯಕ್ಷನೂ ಬಸವಣ್ಣನವರ ಅನಂತರ ಬಿಜ್ಜಳನ ಮಂತ್ರಿಯೂ ಆಗಿದ್ದಂತೆ ತಿಳಿಯುತ್ತದೆ. ಈತ ಚಿಕ್ಕದಣ್ಣಾಯಕ ಎಂದೂ ಜನಪ್ರಿಯನಾಗಿದ್ದ.

ಈತನ ಜನನದ ಬಗ್ಗೆ ಅನೇಕ ದಂತಕಥೆಗಳು ಹುಟ್ಟಿಕೊಂಡಿವೆ. ಅವತಾರ ಪುರುಷನೆಂದೂ ಅಯೋನಿಜನೆಂದೂ ಷಣ್ಮುಖನ ಅವತಾರವೆಂದೂ ಈತನನ್ನು ಅನೇಕ ವೀರಶೈವ ಕವಿಗಳು ಬಣ್ಣಿಸಿದ್ದಾರೆ. ಚಾಮರಸ, ವಿರೂಪಾಕ್ಷಪಂಡಿತ, ಅದೃಶ್ಯ ಕವಿ, ಲಕ್ಕಣ್ಣದಂಡೇಶ ಮೊದಲಾದ ಕವಿಗಳು ತಮ್ಮ ಕಾವ್ಯದಲ್ಲಿ ಇವನ ಜನನ ಅಲೌಕಿಕವಾದುದೆಂದೂ ಅಭೂತಪೂರ್ವವಾದುದೆಂದೂ ನಿರೂಪಿಸಿದ್ದಾರೆ. ಆದರೆ ಸಿಂಗಿರಾಜ ಪುರಾಣದಿಂದ ಈತನ ತಂದೆ ಕಾಯಕಯೋಗಿ ಶಿವಸ್ವಾಮಿಯೆಂದೂ ತಾಯಿ ಮಹಾ ಶಿವಭಕ್ತೆಯಾದ ಬಸವಣ್ಣನವರ ಸಹೋದರಿ ಅಕ್ಕನಾಗಮ್ಮನೆಂದೂ ತಿಳಿದುಬರುತ್ತದೆ. ಬಸವಣ್ಣನವರು ಚೆನ್ನಬಸವಣ್ಣನಿಗೆ ಸೋದರಮಾವ ಆಗಿದ್ದರಷ್ಟೇ ಅಲ್ಲದೆ ಗುರುವೂ ಆಗಿದ್ದರು.

ಚೆನ್ನಬಸವಣ್ಣ ಚಿಕ್ಕವಯಸ್ಸಿನಲ್ಲಿಯೇ ಅಪಾರ ಜ್ಞಾನ ಮತ್ತು ಅನುಭವಗಳನ್ನು ಪಡೆದ. ಈತ ಧಾರ್ಮಿಕ ಜ್ಞಾನದಲ್ಲಿ ಬಲ್ಲಿದನಾದಂತೆ ಲೋಕವ್ಯವಹಾರದಲ್ಲಿಯೂ ಚತುರನಾಗಿದ್ದ. ಅನುಭವಮಂಟಪದಲ್ಲಿ ಈತ ನಿರ್ವಹಿಸಿದ ಪಾತ್ರ ಬಲು ದೊಡ್ಡದು. ತನ್ನ ಪ್ರಭಾವಪೂರ್ಣ ವ್ಯಕ್ತಿತ್ವದಿಂದ, ಅಪಾರ ಆಧ್ಯಾತ್ಮಜ್ಞಾನ ಸಂಪತ್ತಿನಿಂದ, ಅಸೀಮ ಸ್ಥಿರಚಿತ್ತದಿಂದ ಎಂಥ ವಿಷಮಸನ್ನಿವೇಶದಲ್ಲೂ ಯುಕ್ತಪರಿಹಾರ ನೀಡುತ್ತಿದ್ದ. ಕುಶಾಗ್ರಮತಿಯಾದ ಈತ ತತ್ತ್ವಪರಾಮರ್ಶೆಯಲ್ಲಿ ಮಿಗಿಲೆನಿಸಿಕೊಂಡು ಬಿಕ್ಕಟ್ಟಿನ ಧಾರ್ಮಿಕ ಸಮಸ್ಯೆಗಳನ್ನು ಹಗುರವಾಗಿ ಬಿಡಿಸುತ್ತಿದ್ದ. ಜೀವನದ ನಾನಾ ರಂಗಗಳಲ್ಲಿ ಅದ್ಭುತ ಕ್ರಾಂತಿಯುಂಟಾದ ಆ ಸಂದರ್ಭದಲ್ಲಿ ಸರ್ವಾಂಗಸುಂದರ ಸಮಾಜ ನಿರ್ಮಾಣಗೊಳ್ಳಲು ಈತ ಜನತೆಯನ್ನು ಸತ್ಪಾತ್ರದಲ್ಲಿ ನಡೆಸಿದ. ವ್ಯಕ್ತಿಯ ಉದ್ಧಾರಕ್ಕಿಂತ ಸಮಷ್ಟಿಯ ಸಮಾಜದ ಉದ್ಧಾರದ ಕಡೆಗೆ ಹೆಚ್ಚು ಲಕ್ಷ್ಯಕೊಟ್ಟು ಜನರಲ್ಲಿದ್ದ ಅಜ್ಞಾನ, ಅಂಧಶ್ರದ್ಧೆ, ಅನಾಚಾರಗಳನ್ನು ತೊಲಗಿಸಿ, ಸದಾಚಾರ ಸತ್ಕ್ರಿಯೆ, ದೈವೀಭಕ್ತಿ ಮೂಡುವಂತೆ ಮಾಡಿದ. ವೀರಶೈವಧರ್ಮದ ಅಂತಃಸತ್ತ್ವದಂತಿರುವ ಷಟ್ಸ್ಥಲ ಸಿದ್ಧಾಂತಕ್ಕೆ ಸರಿಯಾದ ತಳಹದಿ ಹಾಕಿ ಅದನ್ನು ಪ್ರಮಾಣಪುರಸ್ಸರವಾಗಿ ಪ್ರತಿಪಾದಿಸಿದ. ಮಾನವನ ಅಂತರಂಗಶುದ್ಧಿಗೆ ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ ಮತ್ತು ಸರ್ವಾಚಾರಗಳೆಂಬ ಸಪ್ತಾಚಾರಗಳನ್ನು ಬೋಧಿಸಿದ.

ಬಸವಣ್ಣ ಕಲ್ಯಾಣವನ್ನು ಬಿಟ್ಟು ಕಪ್ಪಡಿಕ್ಷೇತ್ರದ ಕೂಡಲಸಂಗಮದಲ್ಲಿ ಐಕ್ಯವಾದ ಅನಂತರ ಈತ ರಾಜಧಾನಿಯಲ್ಲಿ ನಿಂತು ಶಿವಶರಣರ ಧರ್ಮವನ್ನು ಕಾಪಾಡಿ ಕ್ರಾಂತಿಯ ಕ್ಷೋಭೆಯನ್ನು ಹತೋಟಿಗೆ

ತಂದು ತನ್ನ ರಾಜಕೀಯ ಮತ್ತು ಆಧ್ಯಾತ್ಮ ಜೀವನ ಎರಡನ್ನೂ ಮುಂದುವರಿಸಿದ. ಬಸವಣ್ಣ ಐಕ್ಯವಾದ ಮೂರು ತಿಂಗಳಿಗೆ (1168) ಈತ ಉಳುವಿಯ ಮಹಾಮನೆಯಲ್ಲಿ ಐಕ್ಯನಾದ. ಇವನ ಸಮಾಧಿ ಉಳುವಿಯಲ್ಲಿದೆ. ಪ್ರತಿವರ್ಷ ಮಾಘಮಾಸದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ.

ಚೆನ್ನಬಸವಣ್ಣ ಒಳ್ಳೆಯ ವಚನಕಾರ. ಕೂಡಲ ಚನ್ನಸಂಗಮದೇವ ಎಂಬುದು ಇವನ ವಚನಗಳ ಅಂಕಿತ. ಉಪಲಬ್ಧವಾಗಿರುವ ಈತನ ಷಟ್ಸ್ಥಲವಚನಗಳ ಸಂಖ್ಯೆ 1500ಕ್ಕೂ ಮಿಕ್ಕಿವೆ. ಧರ್ಮದ ನಿಗೂಢ ತತ್ತ್ವಗಳು, ಅಂತೆಯೇ ಜೀವನದ ಮೌಲ್ಯಗಳು ಮೃದುಮಧುರ ಶೈಲಿಯಲ್ಲಿ ಮೂಡಿವೆ. ಸುಂದರ ಸಾದೃಶ್ಯಗಳಿಂದ ಆಯಾ ಸನ್ನಿವೇಶದ ಪೂರ್ಣ ಚಿತ್ರ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಬಲ್ಮೆ ಇವನಿಗಿದೆ. ಆತ್ಮಾನಂದದ ಸ್ಥಿತಿಯನ್ನು ಸುವ್ಯಕ್ತಗೊಳಿಸಬಲ್ಲ ಸಮರ್ಥ ಸಾಹಿತಿಯಾಗಿ ಈತ ಶೋಭಿಸುತ್ತಾನೆ.

ಈತ ಬಿಡಿವಚನಗಳನ್ನು ಬರೆದು ತೃಪ್ತನಾಗದೆ ತತ್ತ್ವಶಾಸ್ತ್ರಕ್ಕೆ ಶಾಶ್ವತ ರೂಪುಕೊಡಲು ಕೆಲವು ಕೃತಿಗಳನ್ನು ರಚಿಸಿದ್ದಾನೆ. ಇವು ಜಿಜ್ಞಾಸುಗಳಿಗೆ ಕೈದೀವಿಗೆಯಂತಿವೆ. ಕರಣಹಸುಗೆ ಎಂಬ ಗದ್ಯ ಕೃತಿಯಲ್ಲಿ ದೇಹರಚನೆ, ಇಂದ್ರಿಯಗಳ ಕಾರ್ಯ, ಸಪ್ತವ್ಯಸನ, ಪ್ರಣವದ ಮೂಲ ಮೊದಲಾದ ವೀರಶೈವ ತತ್ತ್ವಗಳ ವಿವರಣೆ ಇದೆ. ಮಿಶ್ರಾರ್ಪಣ ಎಂಬುದು ಗದ್ಯ ಕೃತಿ. ಇದರಲ್ಲಿ ಕಾಯಾರ್ಪಣ, ಕರ್ಣಾರ್ಪಣ, ಭಾವಾರ್ಪಣ ಮತ್ತು ಪರಿಪೂರ್ಣಾರ್ಪಣಗಳ ಸ್ವರೂಪ, ಸುಬುದ್ಧಿ, ನಿರಹಂಕಾರ, ಸೌಮನಸ್ಯ, ಸುಜ್ಞಾನ, ಸದ್ಭಾವನಾ ನೆಲೆ ಮೊದಲಾದುವನ್ನು ಕುರಿತು ವಿವೇಚಿಸಲಾಗಿದೆ. ಪದಮಂತ್ರ ಗೋಪ್ಯದಲ್ಲಿ ಸಿದ್ಧರಾಮನಿಗೆ ಹೇಳಿದ ಶಿವಯೋಗಮಾರ್ಗದ ಲಕ್ಷಣಗಳು ಪದಗಳಲ್ಲಿ ನಿರೂಪಿತವಾಗಿವೆ. ಮಂತ್ರಗೋಪ್ಯದಲ್ಲಿ 27 ಹಾಡುಗಳಿವೆ. ಇದರಲ್ಲಿ ವೀರಶೈವ ಧರ್ಮಸೂಕ್ಷ್ಮಗಳು ಹಾಗೂ ಶಿವಯೋಗ ಸ್ವರೂಪ ವಿವರಿಸಲಾಗಿದೆ. ಕಾಲಜ್ಞಾನವಚನಗಳು ಭವಿಷ್ಯದ ವಿಷಯಗಳನ್ನು ತಿಳಿಸುವ ವಚನಗಳು. ರುದ್ರಭಾರತಸೃಷ್ಟಿ ಎಂಬ ಗದ್ಯಕೃತಿಯಲ್ಲಿ ಸಂಸ್ಕೃತ ಶ್ಲೋಕಗಳ ಉದಾಹರಣೆಗಳೊಂದಿಗೆ ಸೃಷ್ಟಿಕ್ರಮ, ಯುಗ ಮೊದಲಾದವುಗಳ ನಿರೂಪಣೆಯಿದೆ. ಷಟ್ಚಕ್ರದಲ್ಲಿ ಸೃಷ್ಟಿಯ ಉತ್ಪತ್ತಿ ಸ್ಥಿತಿ ಲಯಗಳೂ ಶರೀರ ರಚನೆ, ಜೀವ-ದೇಹಗಳ ಚೇಷ್ಟೆ, ಯೋಗ ಲಕ್ಷಣಗಳ ವಿವರಣೆಗಳೂ ಇವೆ. ತೊಂಬತ್ತಾರು ಸಕೀಲಂಗಳು, ಅನುಭವಮಂಟಪದ ಅಧ್ಯಕ್ಷ ಪೀಠದಿಂದ ಹೇಳಿದ 96 ವಚನಗಳಾಗಿವೆ. ಈತನ ಕೃತಿಗಳಲ್ಲಿ ಕಾವ್ಯಾಂಶ ಕಡಿಮೆಯಿದ್ದರೂ ಇವನ ಆಳವಾದ ಆಲೋಚನೆ, ಉನ್ನತವಾದ ಪ್ರತಿಭೆಯನ್ನು ಅವು ವ್ಯಕ್ತಪಡಿಸುತ್ತವೆ. (ಟಿ.ಆರ್.ಎಂ.)

**ಚೆನ್ನಬಸವನಾಯಕ :** ಕೆಳದಿಯ ರಾಜ (1754-57). ಇಮ್ಮಡಿ ಬಸವಪ್ಪನಾಯಕ ಮತ್ತು ಅವನ ರಾಣಿ ವೀರಮ್ಮಾಜಿಗೆ ಸಂತತಿಯಿರಲಿಲ್ಲವಾದ್ದರಿಂದ ಈತನನ್ನು ದತ್ತು ಸ್ವೀಕರಿಸಲಾಗಿತ್ತು. ಇಮ್ಮಡಿ ಬಸವಪ್ಪನಾಯಕನ ಮರಣಾನಂತರ ಪಟ್ಟಕ್ಕೆ ಬಂದ. ಇವನ ಕಾಲದಲ್ಲಿ ಕೆಳದಿ ಮತ್ತು ಮಧುಗಿರಿ ಪಾಳೆಯಗಾರರಿಗೆ ಯುದ್ಧಗಳು ನಡೆದವು. ಮಿಗಿಲಾಗಿ ಮರಾಠರು ಕೆಳದಿಯನ್ನು ಮುತ್ತಿದ್ದರು. ಇವನು ಮರಾಠರೊಡನೆ ಸಂಧಾನ ನಡೆಸಿ ಅವರಿಗೆ ಹಣ ನೀಡಿ ರಾಜ್ಯವನ್ನು ಆಕ್ರಮಣದಿಂದ ಪಾರುಮಾಡಿದ. ಚೆನ್ನಬಸವನಾಯಕನಿಗೆ ತಾಯಿ ವೀರಮ್ಮಾಜಿಯ ನಡತೆ ಸರಿಬೀಳದೆ ಅವರಲ್ಲಿ ವಿರಸವೇರ್ಪಟ್ಟಿತ್ತು. ಅವರಿಬ್ಬರ ಮಧ್ಯೆ ಅನೇಕ ಘರ್ಷಣೆಗಳೂ ಆದುವು. ಕೊನೆಗೆ ಇನ್ನೂ ಅವಿವಾಹಿತನೂ ಯುವಕನೂ ಆದ ಚೆನ್ನಬಸವನಾಯಕ 1757ರಲ್ಲಿ ಇದ್ದಕ್ಕಿದ್ದಂತೆ ಮರಣಹೊಂದಿದ. ವೀರಮ್ಮಾಜಿ ಇವನನ್ನು ಕೊಲೆ ಮಾಡಿಸಿದಳೆಂಬ ಊಹೆ ಇದೆ. ಚೆನ್ನಬಸವನಾಯಕ ಕೇವಲ ಮೂರು ವರ್ಷ ಮಾತ್ರ ರಾಜ್ಯಭಾರ ಮಾಡಿದರೂ ಇವನು ಜನಪ್ರಿಯನಾಗಿದ್ದ. ಇವನನ್ನು ಕುರಿತ ಕೆಲವು ಕನ್ನಡ ಜನಪದ ಗೀತೆಗಳು ಪ್ರಚಾರದಲ್ಲಿವೆ. (ಜಿ.ಆರ್.ಆರ್.)

**ಚೆನ್ನಮಲ್ಲಿಕಾರ್ಜುನ :** ಸು.1560. ವೀರಶೈವಕವಿ. ಶಿವಮಹಿಮಾ ಶತಕ ಮತ್ತು ಗುರುಸ್ತೋತ್ರದ ಟೀಕು ಎಂಬ ಕೃತಿಗಳನ್ನು ರಚಿಸಿದ್ದಾನೆ. ಈತನಿಗೆ ಚೆನ್ನಮಲ್ಲಿಕಾರ್ಜುನದೇವ ಎಂಬ ಹೆಸರು ಇದ್ದಂತೆ ತಿಳಿದುಬರುತ್ತದೆ. ಶಾಂತಲಿಂಗ ಈತನ ಗುರು. ಕವಿ ತನ್ನನ್ನು ಸ್ವಯಶೋಜಿತ, ವಿದ್ವತ್ಕವಿ ಎಂದೂ ವಿಶ್ಲೇಷಿಸಿಕೊಂಡಿದ್ದಾನೆ.

ಶಿವಮಹಿಮಾಶತಕ ಶಿವಪಾರಮ್ಯವನ್ನು ಸಾರುವ ಗ್ರಂಥ. ಇದಕ್ಕೆ ಚೆನ್ನಮಲ್ಲೇಶ್ವರಶತಕ ಎಂಬ ಹೆಸರೂ ಇದೆ. ಇದರಲ್ಲಿ 113 ವೃತ್ತಗಳೂ 2 ಕಂದಗಳೂ ಇವೆ. ಪ್ರತಿವೃತ್ತವೂ ಶ್ರೀ ಚೆನ್ನಮಲ್ಲೇಶ್ವರ ಎಂಬ ಅಂಕಿತದಿಂದ ಮುಕ್ತಾಯವಾಗುತ್ತದೆ.

ಗುರುಸ್ತೋತ್ರದ ಟೀಕು ಎಂಬುದು ಶೀಲವಂತಯ್ಯನಿಂದ (ಸು.1160) ರಚಿತವಾದ ಗುರುಸ್ತೋತ್ರಕ್ಕೆ ಈತ ಬರೆದ ಕನ್ನಡ ಟೀಕು. ಇದಕ್ಕೆ ಆತ್ಮಲಿಂಗಪ್ರಣವ ಸಂಯೋಗಸ್ಥಲದ ತ್ರಿವಿಧಿ ಎಂಬ ಹೆಸರೂ ಇದೆ. ಗುರುಸ್ತೋತ್ರದ ಟೀಕನ್ನು ತನ್ನ ಗುರು ಶಾಂತಲಿಂಗನ ಅಡಿದಾವರೆಗಳಿಗೆ ಭಕ್ತಿಪೂರ್ವಕವಾಗಿ ಸಮರ್ಪಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ. (ಜ.)

**ಚೆನ್ನಮ್ಮಾಜಿ :** ಕೆಳದಿ ಸಂಸ್ಥಾನವನ್ನು ಆಳಿದ ರಾಣಿ (1671-97). ಒಂದನೆಯ ಸೋಮಶೇಖರನಾಯಕನ (1663-71) ಪತ್ನಿ. ಸೋಮಶೇಖರ ನಾಯಕ ದುಶ್ಚಟಗಳಿಗೆ ಬಲಿಯಾಗಿ ಮರಣಹೊಂದಿದಾಗ ಸರಿಯಾದ ಉತ್ತರಾಧಿಕಾರಿ ಇರಲಿಲ್ಲವಾಗಿ ರಾಜಧಾನಿಯಲ್ಲಿ ಸಿಂಹಾಸನವನ್ನು ಆಕ್ರಮಿಸುವ ಸಂಚೊಂದು ನಡೆದು ಶಿವಪ್ಪನಾಯಕ ಎಂಬುವನೊಬ್ಬನನ್ನು ರಾಜನೆಂದು ಸಾರಲಾಯಿತು. ಅದೇ ಸಮಯದಲ್ಲಿ ಬಿಜಾಪುರದ ಸುಲ್ತಾನ ಇನ್ನೂ ಹಲವು ಪಾಳೆಯಗಾರರೊಡನೆ ಕೆಳದಿ ರಾಜ್ಯದ ಮೇಲೆ ದಂಡೆತ್ತಿ ಬಂದ. ಈ ಸಂದರ್ಭದಲ್ಲಿ ಚೆನ್ನಮ್ಮಾಜಿ ರಾಜ್ಯವನ್ನು ಶತ್ರುಗಳಿಂದ ರಕ್ಷಿಸಲು ನಿರ್ಧರಿಸಿ ರಾಜಧಾನಿಯಿಂದ 1871ರಲ್ಲಿ ತಪ್ಪಿಸಿಕೊಂಡು ಹೋಗಿ ಭುವನಗಿರಿಯನ್ನು ತಲುಪಿ ಅಲ್ಲಿ ತನ್ನ ಆಪ್ತರಾದ ತಿಮ್ಮಣ್ಣನಾಯಕ ಮತ್ತು ಸಬ್ಬನೀಸ ಕೃಷ್ಣಪ್ಪಯ್ಯ ಎಂಬುವರ ಸಹಾಯದಿಂದ ಶಿವಪ್ಪನಾಯಕನನ್ನು ಕೊಲ್ಲಿಸಿದಳು. ಅನಂತರ ರಾಜಧಾನಿಗೆ ಬಂದು ಅಧಿಕಾರವನ್ನು ವಹಿಸಿಕೊಂಡು ಪಿತೂರಿಗಾರರನ್ನು ಅಡಗಿಸಿದಳು. ಕೆಳದಿ ರಾಜ್ಯದ ಆಕ್ರಮಣದಲ್ಲಿ ತೊಡಗಿದ್ದ ಬಿಜಾಪುರದ ಸುಲ್ತಾನನ ಮತ್ತು ಬಿಳಿಗಿ, ಸೋದೆ ಮೊದಲಾದ ಪಾಳೆಯಗಾರರ ಸೈನ್ಯವನ್ನು ಸೋಲಿಸಿದಳು. ಪರಾಕ್ರಮದಿಂದ ಹೋರಾಡಿ ಹೊರಗಿನ ಶತ್ರುಗಳ ಭೀತಿಯಿಂದ ರಾಜ್ಯವನ್ನು ರಕ್ಷಿಸಿದುದಲ್ಲದೆ ರಾಜ್ಯದಲ್ಲಿ ಮೂಡಿದ್ದ ಅನಾಯಕತೆಯನ್ನು ಹೋಗಲಾಡಿಸಿದಳು.

1690ರ ವೇಳೆಗೆ ಈಕೆಯ ಕ್ಷಾತ್ರಸತ್ವವನ್ನು ಪರೀಕ್ಷೆಗೆ ಹಚ್ಚುವ ಘಟನೆಯೊದಗಿತು. ಔರಂಗಜೇಬನ ಸೈನ್ಯದಿಂದ ಪರಾಜಿತನಾದ ಶಿವಾಜಿಯ ಎರಡನೆಯ ಮಗ ರಾಜಾರಾಮ ಆಶ್ರಯವನ್ನು ಹುಡುಕುತ್ತ ದಕ್ಷಿಣದತ್ತ ಧಾವಿಸಿ ಬಂದು ಚೆನ್ನಮ್ಮಾಜಿಯ ರಕ್ಷಣೆ ಕೋರಿದ. ಶತ್ರುವಿನ ಮತ್ತು ತನ್ನ ಬಲಾಬಲದ ಮಿತಿಯ ಅರಿವಿದ್ದರೂ ಚೆನ್ನಮ್ಮಾಜಿ ರಾಜಾರಾಮನಿಗೆ ರಕ್ಷಣೆ ನೀಡಿದಳು. ಇದರಿಂದ ಕುಪಿತಗೊಂಡ ಔರಂಗಜೇಬ ಕೆಳದಿ ರಾಜ್ಯವನ್ನು ಮುತ್ತಲು ಸೈನ್ಯ ಕಳುಹಿಸಿದ. ಮುಗಲ ಸೈನ್ಯಕ್ಕೂ ಬಿದನೂರಿನ ಪಡೆಗಳಿಗೂ ತೀವ್ರವಾದ ಯುದ್ಧ ನಡೆದು ಔರಂಗಜೇಬನ ಸೈನ್ಯ ಸೋತು ಹಿಂದಿರುಗಿತು. ಔರಂಗಜೇಬನಂಥ ಮಹಾಪರಾಕ್ರಮಿಯ ಸೈನ್ಯವನ್ನು ಸೋಲಿಸಿದ ಚೆನ್ನಮ್ಮನ ಕೀರ್ತಿ ವಿಶೇಷವಾಗಿ ಹರಡಿತು. ಈ ಸಂಗತಿಯನ್ನು ಕುರಿತಾದ ಕನ್ನಡ ಜನಪದ ಗೀತೆಗಳು ಇಂದಿಗೂ ಜನಜನಿತವಾಗಿವೆ.

ಅನಂತರ ಚೆನ್ನಮ್ಮಾಜಿ ಬಸವಾಪಟ್ಟಣವನ್ನೂ ಹುಲಿಕೆರೆ ಕೋಟೆಯನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಂಡಳು. ಹುಲಿಕೆರೆಗೆ ಚೆನ್ನಗಿರಿ ಎಂದು ಹೆಸರಿಟ್ಟಳು. ಮೈಸೂರಿನ ಅರಸರಿಗೂ ಬಿದನೂರು ರಾಜ್ಯಕ್ಕೂ ವೈಮನಸ್ಯವಿದ್ದದ್ದರಿಂದ 1695ರ ವೇಳೆಗೆ ಯುದ್ಧಗಳು ಪ್ರಾರಂಭವಾದವು. ಪ್ರಾರಂಭದಲ್ಲಿ ಬಿದನೂರಿನ ಸೈನ್ಯ ಪರಾಕ್ರಮದಿಂದ ಹೋರಾಡಿತು. ಆದರೆ ಅರಕಲಗೂಡಿನ ಬಳಿ ನಡೆದ ಕದನದಲ್ಲಾದ ಸೋಲಿನಿಂದ ಕೆಳದಿ ಸಂಸ್ಥಾನದ ಕೆಲವು ಭಾಗ ಕೈಬಿಟ್ಟಿತು.

ಚೆನ್ನಮ್ಮಾಜಿಗೆ ಮಕ್ಕಳಿರಲಿಲ್ಲವಾದ್ದರಿಂದ ಬಾಲಕನೊಬ್ಬನನ್ನು ದತ್ತು ಸ್ವೀಕರಿಸಿ ಬಸವಭೂಪಾಲ ಎಂದು ನಾಮಕರಣ ಮಾಡಿದಳು. ತನ್ನ ಪತಿಯ ಹೆಸರಿನಲ್ಲಿ ಅನೇಕ ಅಗ್ರಹಾರಗಳನ್ನು ನಿರ್ಮಿಸಿದಳು. ಬ್ರಾಹ್ಮಣರಿಗೂ

ಜಂಗಮರಿಗೂ ದಾನದತ್ತಿಗಳನ್ನು ನೀಡಿದಳು. ಕೆಳದಿಯ ವೀರಭದ್ರ ದೇವಾಲಯದ ಮುಂಭಾಗದಲ್ಲಿ ಧ್ವಜಸ್ತಂಭವನ್ನು ಸ್ಥಾಪಿಸಿದಳು. ಉದಾರ ಮತಿಯ ನೀತಿಯನ್ನನುಸರಿಸಿದ ಚೆನ್ನಮ್ಮಾಜಿ ತನ್ನ ರಾಜ್ಯದ ತೀರಪ್ರದೇಶದ ಪಟ್ಟಣಗಳಲ್ಲಿ ಚರ್ಚುಗಳನ್ನು ನಿರ್ಮಿಸಿಕೊಳ್ಳಲು ಪೋರ್ಚುಗೀಸರಿಗೆ ಅನುಮತಿ ನೀಡಿದಳು. ಈಕೆ ಮೂಕಾಂಬಿಕಾ ದೇವಾಲಯಕ್ಕೆ ಭೂಮಿದಾನ ಮಾಡಿದ್ದಲ್ಲದೆ ತನ್ನ ಹೆಸರಿನಲ್ಲಿ ಚೆನ್ನಾಂಬಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿದಳು. ಇವಳ ದತ್ತುಪುತ್ರನಾದ ಬಸವಪ್ಪನಿಗೆ ಆಡಳಿತದಲ್ಲಿ ತರಬೇತಿ ನೀಡಿ ಸು.1696-97ರಲ್ಲಿ ಅವನಿಗೆ ಪಟ್ಟ ಕಟ್ಟಿ ತಾನು ಅಧಿಕಾರದಿಂದ ನಿವೃತ್ತಳಾದಳು. ಇವಳು 1698ರಲ್ಲಿ ಮರಣಹೊಂದಿದಂತೆ ತಿಳಿದುಬರುತ್ತದೆ. (ಜಿ.ಆರ್.ಆರ್.)

**ಚೆಲುವಾಂಬೆ :** ಸು.1725. ಕನ್ನಡ ಕವಯಿತ್ರಿ. ಮೈಸೂರು ದೊರೆ ದೊಡ್ಡ ಕೃಷ್ಣರಾಜ ಒಡೆಯರ (1713-32) ಪಟ್ಟಮಹಿಷಿ. ದಳವಾಯಿ ದೊಡ್ಡೇಂದ್ರನ ಮಗ ಕಳಲೆ ಕಾಂತನೃಪನ ಮಗಳು. ಈಕೆ ವರನಂದೀಕಲ್ಯಾಣ, ವೆಂಕಟಾಚಲಮಾಹಾತ್ಮ್ಯ ಲಾಲಿಪದ, ಅಲಮೇಲುಮಂಗೈ ಲಾಲಿಪದ, ತುಲಾಕಾವೇರೀಮಾಹಾತ್ಮ್ಯ ಟೀಕೆ ಎಂಬ ಕೃತಿಗಳನ್ನು ರಚಿಸಿದ್ದಾಳೆ. ಈಕೆ ಕೃಷ್ಣಕರ್ಣಾಮೃತದ ಟೀಕೆಯನ್ನೂ ಬರೆದಿರುವುದಾಗಿ ತಿಳಿದುಬರುತ್ತದೆ.

ವರನಂದೀಕಲ್ಯಾಣ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 7 ಸಂಧಿಗಳೂ 881 ಪದ್ಯಗಳೂ ಇವೆ. ತನ್ನ ಪತಿಯು ಯದುಗಿರಿಯರೆಯನ ಚಾರಿತ್ರ್ಯವನ್ನು ನೆರೆ ಸೊಬಗಿನೊಳುಸುರು ಎಂದು ನೇಮಿಸಲು ಅದನ್ನು ಶಿರದೊಳಾಂತು ಈ ಕಾವ್ಯವನ್ನು ರಚಿಸಿದೆನೆಂದೂ ಕೃತಿಗೆ ಕರ್ತನು ಚೆಲುವರಾಯ ಸನ್ಮತಿಯಿತ್ತವನು ಶ್ರೀನಿವಾಸ ಎಂದೂ ಹೇಳಿಕೊಂಡಿದ್ದಾಳೆ. ಉನ್ನತಿ ಪಡೆದ ಅಚ್ಚಗನ್ನಡದ ಇನಿವಾತನ್ನು ಚೆನ್ನತೆಗೊಳಿಸಿ ವರ್ಣಕದಲ್ಲಿ ಕಾವ್ಯವನ್ನು ಹೇಳುವುದಾಗಿಯೂ ಕಾವ್ಯಾರಂಭದಲ್ಲಿ ಹೇಳಿಕೊಂಡಿದ್ದಾಳೆ. ದಿಲ್ಲಿಯ ಬಾದಶಹನ ಮಗಳಾದ ವರನಂದಿಗೂ ಮೇಲುಕೋಟೆ ಚೆಲುವರಾಯಸ್ವಾಮಿಗೂ ನಡೆದ ವಿವಾಹ ಈ ಕಾವ್ಯದ ವಸ್ತು. ಸತ್ಯಭಾಮೆಯೇ ವರನಂದಿಯಾಗಿ ಹುಟ್ಟಿದಂತೆ ಕಾವ್ಯದಲ್ಲಿ ಹೇಳಿದೆ. ವಿವಾಹ ಸಂದರ್ಭದ ವರ್ಣನೆಗಳು ಮನೋಹರವಾಗಿವೆ. ಶೈಲಿ ಸರಳವೂ ಲಲಿತವೂ ಹೃದಯಂಗಮವೂ ಆಗಿದೆ.

ವೆಂಕಟಾಚಲಮಾಹಾತ್ಮ್ಯ ಲಾಲಿಪದದಲ್ಲಿ ವೆಂಕಟಾಚಲಪತಿಯ ಕಥೆಯನ್ನು ನಿರೂಪಿಸುವ 203 ಲಾಲಿಪದಗಳಿವೆ. ಅಲಮೇಲುಮಂಗೈ ಲಾಲಿಪದದಲ್ಲಿ ವೆಂಕಟಾಚಲಪತಿಯ ಪತ್ನಿ ಅಲಮೇಲುಮಂಗೈ ಎಂಬ ಲಕ್ಷ್ಮಿಯ ಸ್ತುತಿರೂಪವಾದ 35 ಲಾಲಿಪದಗಳಿವೆ. ತುಲಾಕಾವೇರಿ ಮಾಹಾತ್ಮ್ಯ ಟೀಕೆ ಅಗ್ನಿಪುರಾಣೋಕ್ತವಾದ ತುಲಾಕಾವೇರಿಮಾಹಾತ್ಮ್ಯಕ್ಕೆ ಗದ್ಯರೂಪದಲ್ಲಿ ಬರೆದ ಕನ್ನಡ ಟೀಕೆ. ಇದಕ್ಕೆ ಚೆಲುವಾಂಬಿಕಾವಾಣಿವಿಲಾಸವೆಂಬ ಹೆಸರೂ ಇದೆ. ಇದರಲ್ಲಿ 30 ಅಧ್ಯಾಯಗಳಿವೆ. ಗ್ರಂಥಾಂತ್ಯದಲ್ಲಿರುವ ಒಂದು ಶ್ಲೋಕದಿಂದ ಚೆಲುವಾಂಬಿಕೆಯ ಅಂಕಿತದಲ್ಲಿ ಪೌದ್ಗಲ್ಯಗೋತ್ರದ ವೆಂಕಟಾರ್ಯನ ಮಗ ಶ್ರೀನಿವಾಸ ಈ ಟೀಕೆಯನ್ನು ಬರೆದಂತೆ ತೋರುತ್ತದೆ. ಈಕೆಯ ಕೃತಿಗಳಲ್ಲಿ ಸ್ತ್ರೀಯರಿಗೆ ಅನುಭವವೇದ್ಯವಾದ ಅಪ್ಯಾಯಮಾನವಾದ ಅಂಶಗಳು ಅಧಿಕವಾಗಿ ಅಡಕವಾಗಿವೆ. ದೊಡ್ಡ ಪಂಡಿತೆಯಂತೆ ಕಾವ್ಯರಚನೆಯ ಪ್ರಯತ್ನದಲ್ಲಿ ತೊಡಗದೆ ಸ್ತ್ರೀತ್ವವನ್ನು ಮೆರೆದಿರುವುದೇ ಚೆಲುವಾಂಬೆಯ ವೈಶಿಷ್ಟ್ಯ. (ಕೆ.ಎಸ್.ಕೆ.)

**ಚೆಲ್ಲಕೇತನ :** 9-10ನೆಯ ಶತಮಾನಗಳಲ್ಲಿ ಬನವಾಸಿ ಮಂಡಲದ ಅಧಿಕಾರಿಗಳಾಗಿದ್ದ ಒಂದು ಪ್ರಮುಖ ಮನೆತನ. ಎಱಕೋರಿ ಎಂಬುವನು ಇದರ ಮೊದಲಿಗ. ಕೊಳನೂರಾಧೀಶ್ವರನೆನಿಸಿದ ಧೋರ ಈತನ ಮಗ. ಧೋರನ ಮಗ ಬಂಕೆಯ. ಈತನ ತಾಯಿ ವಿಜಯಾಂಕಾ. ಬಂಕೆಯನನ್ನು ಶಾಸನಗಳಲ್ಲಿ ಬಂಕೇಶ, ಬಂಕೆಯರಸ ಎಂದೂ ಕರೆಯಲಾಗಿದೆ (ನೋಡಿ: ಬಂಕೇಶ). ಈತ ರಾಷ್ಟ್ರಕೂಟ 1ನೆಯ ಅಮೋಘವರ್ಷನ ಮಾಂಡಲಿಕನಾಗಿ ಬನವಾಸಿ ನಾಡನ್ನು ಆಳುತ್ತಿದ್ದ. ಕುಂದಟ್ಟೆ ಮತ್ತು ಲೋಕಾದಿತ್ಯ (ಲೋಕಟೆ) ಇವನ ಮಕ್ಕಳು. ಹಿರಿಯ ಮಗ ನಿಡುಗಂದಗೆ 12 ಎಂಬ ಸಣ್ಣ ಭಾಗದ ಅಧಿಕಾರಿಯಾಗಿದ್ದ. ಲೋಕಾದಿತ್ಯ ಸು.895 ರಿಂದ ಒಂದು ದಶಕಕ್ಕೂ ಹೆಚ್ಚು ಕಾಲ ಬನವಾಸಿ ಪ್ರಾಂತ್ಯಾಧಿಕಾರಿಯಾಗಿದ್ದ. ಇವನ ಮಗ ಕಲಿವಿಟ್ಟ. ಇವನ ಅಧೀನದಲ್ಲಿ ಪುನ್ನವಂತಿ (ಹೊನ್ನತಿ) 12ರ ಅಧಿಕಾರಿಯಾಗಿದ್ದ. 916ರ ಹಾಗೂ 928ರ ಶಾಸನಗಳಲ್ಲಿ ಬಂಕೆಯನೆಂಬಾತ ಬನವಾಸಿ ಪ್ರಾಂತ್ಯಾಧಿಕಾರಿಯಾಗಿದ್ದನೆಂದು ಹೇಳಿದೆ. ಈತ ಲೋಕಟೆಯ ಮಗನಾಗಿರಬೇಕು. 914ರ ಶಾಸನವೊಂದರಲ್ಲಿ ಧೋರನೆಂಬಾತ ಈ ಪ್ರಾಂತ್ಯವನ್ನು ಆಳುತ್ತಿದ್ದನೆಂದು ಹೇಳಿದೆ. ಆದ್ದರಿಂದ ಈತ ಇಮ್ಮಡಿ ಬಂಕೆಯನ ಸೋದರನಾಗಿರಬಹುದು. ಕಲಿವಿಟ್ಟವೆಂಬವನು ಲೋಕಟೆಯ ಮಗನೆಂದು ಹೇಳಿರುವ ಕಾರಣದಿಂದಲೂ ಆತನ ಶಾಸನಗಳು ಧೋರನ ಶಾಸನಕ್ಕೂ ಮೊದಲಿನವಾದ್ದರಿಂದಲೂ ಕಲಿವಿಟ್ಟನಿಗೆ ಧೋರ ಕಿರಿಯ ಸೋದರನೆಂದು ಊಹಿಸಬಹುದು. ಕಲಿವಿಟ್ಟ 929ರಲ್ಲಿ ಬೆಳ್ವೊಲ 200 ಪ್ರಾಂತ್ಯವನ್ನು ಆಳುತ್ತಿದ್ದ. ಅದೇ ಹೆಸರಿನ ಒಬ್ಬಾತ ಬನವಾಸಿಯನ್ನು 945-46ರಲ್ಲಿ ಆಳುತ್ತಿದ್ದನೆಂದೂ ಶಾಸನಗಳಿಂದ ತಿಳಿದಿದೆ. 928ರವರೆಗೆ ಬಂಕೆಯ ಬನವಾಸಿ ನಾಡಧಿಕಾರಿಯಾಗಿದ್ದ ಕಾರಣ, ಅವನ ಅನಂತರ ಅವನ ಮಗನಾದ ಕಲಿವಿಟ್ಟ ಮೊದಲು ಬೆಳ್ವೊಲ ಹಾಗೂ ಅನಂತರ ಬನವಾಸಿ ಪ್ರಾಂತ್ಯಗಳ ಅಧಿಕಾರಿಯಾಗಿದ್ದನೆಂದು ಊಹಿಸಬೇಕಾಗಿದೆ. ಈ ವಿವರಗಳನ್ನು ಒಟ್ಟುಗೂಡಿಸಿ ಚೆಲ್ಲಕೇತನ ಮನೆತನದ ವಂಶಾವಳಿಯನ್ನು ಹೀಗೆ ರೂಪಿಸಬಹುದು:




(ಬಿ.ಆರ್.ಜಿ.)

**ಚೇರಮಾಂಕ :** ಸು.1526. ವೀರಶೈವ ಕವಿ. ಚೇರಮಕಾವ್ಯದ ಕರ್ತೃ. ಈತನ ಅಜ್ಜ ನಾಗಲಿಂಗಸೆಟ್ಟಿ, ತಂದೆ ಗಂಗಪ್ಪಸೆಟ್ಟಿ, ಗುರುಚೆನ್ನವೀರೇಶ. ಚೇರಮಕಾವ್ಯವನ್ನು ಗುಬ್ಬಿಯ ಮಲ್ಲಣಾರ್ಯನ ಕೃಪೆಯಿಂದ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಪಾಲ್ಕುರಿಕೆಸೋಮನಾಥ, ಕೆರೆಯ ಪದ್ಮರಸ, ಕುಮಾರ ಪದ್ಮರಸ, ಹರೀಶ್ವರ – ಇವರನ್ನು ಸ್ಮರಿಸಿದ್ದಾನೆ. ಕವಿ ತನ್ನನ್ನು ನವರಸಭಾವಲಕ್ಷಣಾಲಂಕಾರನಿಪುಣ ಎಂದು ವಿಶ್ಲೇಷಿಸಿಕೊಂಡಿದ್ದಾನೆ.

ಚೇರಮಕಾವ್ಯ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 11 ಸಂಧಿಗಳೂ 555 ಪದ್ಯಗಳೂ ಇವೆ. ಶಿವಭಕ್ತ ಚೇರಮನ ಕಥೆ ಕಾವ್ಯದ ವಸ್ತು. ತಾನು ಈ ಕಾವ್ಯವನ್ನು 1526ರಲ್ಲಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಚೇರಮನನ್ನು ಕುರಿತಂತೆ ಹರಿಹರ ಒಂದು ರಗಳೆಯನ್ನೂ ವಿರುಪರಾಜ ಸು.1519ರಲ್ಲಿ ರಚಿಸಿದ ತನ್ನ ತ್ರಿಭುವನತಿಲಕದಲ್ಲಿ ಕೆಲವು ವಿಷಯಗಳನ್ನೂ ಬರೆದಿರುವಂತೆ ತಿಳಿದುಬರುತ್ತದೆ. ಇದೊಂದು ಭಕ್ತಿರಸಪ್ರಧಾನವಾದ ಕಾವ್ಯ. ಕವಿ ಅತಿಯಾಗಿ ಸಂಸ್ಕೃತವನ್ನು ಬಳಸದೆ ಕನ್ನಡದಲ್ಲಿಯೇ ಸಮಗ್ರ ಕಾವ್ಯವನ್ನು ರಚಿಸಲು ಪ್ರಯತ್ನಿಸಿದ್ದಾನೆ. ಶೈಲಿ ಪ್ರೌಢವಾಗಿಯೂ ಗಂಭೀರವಾಗಿಯೂ ಇದೆ. ಕಾವ್ಯದಲ್ಲಿ ಬರುವ ವರ್ಣನೆಗಳು ಹಿತಮಿತವಾಗಿವೆ. ತನ್ನ ಕಾವ್ಯದಲ್ಲಿ ಬಿಟ್ಟಕಣ್ಣವರೂರ ಸುಧೆಯ ಸವಿ, ಮನವಲರ್ದುನಟ್ಟು ಕೂಡುವ ಲತಾಂಗಿಯ ಸೋಂಕು ಇರುವುದಾಗಿಯೂ ಪಂಚೇಂದ್ರಿಯಂ ನಲಿವವೋಲ್ ತಾನು ಕಾವ್ಯವನ್ನು ಹೇಳಿರುವುದಾಗಿಯೂ ಪ್ರಶಂಸೆ ಮಾಡಿಕೊಂಡಿದ್ದಾನೆ. ಈತನದು ಮಧ್ಯಮ ದರ್ಜೆಯ ಲಕ್ಷಣಯುಕ್ತ ಷಟ್ಪದೀಕಾವ್ಯ ಎಂದು ಹೇಳಬಹುದು. (ಎನ್.ಬಿ.)

**ಚೊಕ್ಕಮ್ಮ, ಎನ್. :** 1922-. ಕರ್ನಾಟಕ ಸಂಗೀತ ವಿದುಷಿ. 1922 ಸೆಪ್ಟೆಂಬರ್ 18ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ನರಸಿಂಹ ಅಯ್ಯಂಗಾರ್, ತಾಯಿ ರುಕ್ಕಮ್ಮ. ಚೊಕ್ಕಮ್ಮನವರು ಅಕ್ಕ ಹಾಗೂ ಭಾವನವರ ಮನೆಯಲ್ಲಿ ಮೈಸೂರಿನಲ್ಲಿ ಬೆಳೆದರು. ಎಸ್.ಎಸ್.ಎಲ್.ಸಿ. ಓದಿದರು. ಅಕ್ಕ ಪದ್ಮಮ್ಮ ಹಾಗೂ ಭಾವ ಬಿ.ಎಸ್.ಅಯ್ಯಂಗಾರ್ ಅವರಿಗೆ ಸಂಗೀತದ ಬಗ್ಗೆ ಅಪಾರ ಒಲವಿತ್ತಲ್ಲದೆ ಅದರ ಪರಿಚಯವೂ ಇತ್ತು. ಗಂಧದೆಣ್ಣೆ ಕಾರ್ಖಾನೆಯಲ್ಲಿ ಮಹಾ ವ್ಯವಸ್ಥಾಪಕರಾಗಿದ್ದ ಭಾವನವರು ಹಾಗೂ ಅಕ್ಕನ ಆಸೆ, ಪ್ರೋತ್ಸಾಹ, ಉತ್ತೇಜನದಿಂದಾಗಿ ಇವರಿಗೆ ಸಂಗೀತಾಭ್ಯಾಸ ಆರಂಭವಾಯಿತು. ಅಕ್ಕನೇ ಇವರಿಗೆ ಆರಂಭದ ಗುರುವಾಗಿದ್ದರು. ಅವರು ಹಾರ್ಮೋನಿಯಂ ನುಡಿಸಿಕೊಂಡು ತಂಗಿಗೆ ಸಂಪ್ರದಾಯದ ಹಾಡುಗಳು ಹಾಗೂ ಪೂಜೆಯ ಹಾಡುಗಳನ್ನು ಕಲಿಸಿದರು. ಅನಂತರ ವಿರೂಪಾಕ್ಷ ಶಾಸ್ತ್ರಿಯವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದ ಪ್ರಾರಂಭ ಪಾಠವಾಯಿತು. ಅನಂತರ ಕೆಲವು ತಿಂಗಳ ಕಾಲ ಇವರು ಸ್ವರ ಮೂರ್ತಿಯವರಿಂದ ವೀಣೆಯ ಪಾಠ ಕಲಿತರು. ಅನಂತರ ವೀಣೆ ಸುಬ್ಬಣ್ಣನವರ ಶಿಷ್ಯರಾದ ವೀಣೆ ದೇವಪ್ಪನವರಿಂದಲೂ ಟಿ.ಪುಟ್ಟಸ್ವಾಮಯ್ಯ, ತಿಟ್ಟೆ ಕೃಷ್ಣಅಯ್ಯಂಗಾರ್, ಕಲಾನಿಧಿ ಕೆ.ವಾಸುದೇವಾ ಚಾರ್ಯರಿಂದಲೂ ಇವರಿಗೆ ಪ್ರೌಢ ಪಾಠವಾಯಿತು. ಜೊತೆಗೆ ಡಿ.ಶೇಷಪ್ಪನವರ ಮಾರ್ಗದರ್ಶನವೂ ದೊರೆಯಿತು. ವೀಣೆಯನ್ನು ನುಡಿಸಿಕೊಂಡು ಹಾಡುವುದು ಚೊಕ್ಕಮ್ಮನವರ ಸಂಗೀತದ ವಿಶೇಷತೆಯಾಗಿತ್ತು.

ಚೊಕ್ಕಮ್ಮನವರು ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. 1938ರಲ್ಲಿ ಎಂ.ವಿ. ಗೋಪಾಲಸ್ವಾಮಿ ಅವರ ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಇವರ ಸಂಗೀತ ಪ್ರಸಾರವಾಯಿತು. ದೇಶದ ಅನೇಕ ರಾಮಮಂದಿರಗಳು ಮತ್ತು ಸಭಾ ಸಮಾರಂಭಗಳಲ್ಲಿ ಇವರು ಹಾಡಿದ್ದಾರೆ. ಮೈಸೂರು ಅರಮನೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇಡೀ ದಕ್ಷಿಣ ಭಾರತದಲ್ಲಿ ಇವರು ಅನೇಕ ಕಛೇರಿಗಳಲ್ಲಿ ಹಾಡಿದ್ದಾರೆ. ದೇಶದ ಇತರ ರೇಡಿಯೋ ಕೇಂದ್ರಗಳೂ ಇವರ ಸಂಗೀತವನ್ನು ಪ್ರಸಾರ ಮಾಡಿವೆ. ಇವರು ಹಿರಿಯ ವಿದ್ವಾಂಸರ ಪ್ರಶಂಸೆಯನ್ನೂ ಗಳಿಸಿದರು. ಇವರು ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣ ನೀಡಿದ್ದಾರೆ. ಅನೇಕ ದೇವರನಾಮ ಹಾಗೂ ಪಲ್ಲವಿಗಳಿಗೆ ಸ್ವರ, ತಾಳಗಳನ್ನು ಸಂಯೋಜಿಸಿದ್ದಾರೆ. ಇವರಿಗೆ ಸಂಸ್ಕೃತ, ಹಿಂದಿ, ತಮಿಳು ಭಾಷೆಗಳ ಪರಿಚಯವಿದೆ.

ಇವರ ಸಂಗೀತವನ್ನು ಮೆಚ್ಚಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಮಲ್ಲಾಡಿಹಳ್ಳಿ ಸ್ವಾಮಿಯವರಿಂದ ಸ್ವರಕಿನ್ನರಿ, ಅಖಿಲ ಸಾಧು ಸಮ್ಮೇಳನದಿಂದ ವೀಣಾವಾದನ ಚತುರೆ, ಸ್ವರಲಿಪಿ ಪ್ರತಿಷ್ಠಾನದಿಂದ ಸ್ವರಭೂಷಿಣಿ ಬಿರುದುಗಳು ಇವರಿಗೆ ದೊರೆತಿವೆ. ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ (1975). ಸಂಗೀತ ನೃತ್ಯ ಅಕಾಡೆಮಿ, ಗಾಯನ ಸಮಾಜ, ಗಾನಕಲಾಪರಿಷತ್ತು, ರೋಟರಿ ಕ್ಲಬ್ ಮೊದಲಾದ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಇವರು 1996ರಲ್ಲಿ ಗಾನಕಲಾಪರಿಷತ್ತಿನ ಸಂಗೀತ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. 1998ರ ದಸರ ಸಂದರ್ಭದಲ್ಲಿ ಇವರಿಗೆ ಕರ್ನಾಟಕ ರಾಜ್ಯದ ಸಂಗೀತ ವಿದ್ವಾನ್ ಪ್ರಶಸ್ತಿ ದೊರಕಿತು. (ಎಚ್.ಆರ್.ಎಲ್.)

**ಚೋಳರ ಆಳಿಕೆ :** ಕರ್ನಾಟಕದ ದಕ್ಷಿಣದ ಕೆಲವು ಜಿಲ್ಲೆಗಳ ಮೇಲೆ 11-12ನೆಯ ಶತಮಾನಗಳಲ್ಲಿ ಚೋಳರ ಪ್ರಭುತ್ವ ಇತ್ತು. ಇದು ಆರಂಭವಾದುದು ಹನ್ನೊಂದನೆಯ ಶತಮಾನದ ಆರಂಭದಲ್ಲಿ, ಪ್ರಸಿದ್ಧನಾದ ಚೋಳ ಅರಸ ರಾಜರಾಜನ ಕಾಲದಿಂದ. ಆದರೆ ಅದಕ್ಕೂ ಮೊದಲೇ ಕರ್ನಾಟಕದೊಡನೆ ಚೋಳರ ಸಂಪರ್ಕ ಗಂಗರ ಕಾಲದಲ್ಲಿ ಆರಂಭವಾಗಿತ್ತು. ಗಂಗ ಇಮ್ಮಡಿ ಶಿವಮಾರನ ಮಗ ಪೃಥ್ವೀಪತಿ ತಂದೆಯ ಮರಣದ ಕಾಲಕ್ಕೆ ಇನ್ನೂ ಅಪ್ರಾಪ್ತ ವಯಸ್ಕನಾಗಿದ್ದ ಕಾರಣ ಸಿಂಹಾಸನ ಈತನ ಚಿಕ್ಕಪ್ಪ ವಿಜಯಾದಿತ್ಯನ ಪಾಲಿಗೆ ಬಂತು. ಆತ ಅದನ್ನು ತನ್ನ ಮಗ ರಾಚಮಲ್ಲನಿಗೆ ವಹಿಸಿದ. ಇದರಿಂದ ರಾಜ್ಯ ಪೃಥ್ವೀಪತಿಯ ಕೈತಪ್ಪಿತು. ಕಳೆದುಹೋದ ರಾಜ್ಯವನ್ನು ಪಡೆಯಲೆಂದು ಆತ ಚೋಳ ಒಂದನೆಯ ಆದಿತ್ಯನ (871-907) ನೆರವನ್ನು ಪಡೆದ. ತೊಂಡೈಮಂಡಲದಲ್ಲಿ ಆಳುತ್ತಿದ್ದ ಪಲ್ಲವ ಅಪರಾಜಿತನನ್ನು ಆದಿತ್ಯ ಸೋಲಿಸಿದಾಗ ಪೃಥ್ವೀಪತಿ ಚೋಳ ಅರಸನಿಗೆ ನೆರವು ನೀಡಿದ. ಈ ಗಂಗ ಅರಸ ಚೋಳರ ಸಾಮಂತಿಕೆಯನ್ನು ಒಪ್ಪಿದಂತೆ ತೋರುತ್ತದೆ. ಆದಿತ್ಯನ ಮಗ ಪರಾಂತಕ ಪೃಥ್ವೀಪತಿಯ ಮೊಮ್ಮಗ ಇಮ್ಮಡಿ ಪೃಥ್ವೀಪತಿಗೆ ನೆರವಾಗಿ ಬಾಣರನ್ನು ಸೋಲಿಸಿ ಅವರ ಆಳಿಕೆಯ ಪ್ರದೇಶವನ್ನೂ ಸೆಂಬಿಯನ್ ಮಹಾಬಲಿ ಬಾಣರಸ ಎಂಬ ಬಿರುದನ್ನೂ ಗಂಗನಿಗಿತ್ತ. ಪರಾಂತಕನ ಅನಂತರ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಚೋಳ ರಾಜ್ಯದಲ್ಲಿ ನಡೆಸಿದ ದಾಳಿಗಳ ಪರಿಣಾಮವಾಗಿ ಅವರ ಪ್ರಾಬಲ್ಯ ಸ್ವಲ್ಪಕಾಲ ಕುಗ್ಗಿತು.



ಅಗರದ ನರಸಿಂಹ ದೇವಾಲಯ

985ರಲ್ಲಿ ಪಟ್ಟಕ್ಕೆ ಬಂದ ರಾಜರಾಜ ಚೋಳ ಸು.1004ರ ವೇಳೆಗೆ ಕುಡುಮಲೈ ನಾಡಿನ ಮೇಲೆ ದಂಡೆತ್ತಿ ಉದಗೈಕೋಟೆಯನ್ನು ಆಕ್ರಮಿಸಿದ. ಈ ಕುಡುಮಲೈನಾಡು ಈಗಿನ ಕೊಡಗು ಜಿಲ್ಲೆಯ ಪ್ರದೇಶವೆಂದು ಗುರುತಿಸಲಾಗಿದೆ. ಈ ದಂಡಯಾತ್ರೆಯಲ್ಲಿ ಯುವರಾಜ ರಾಜೇಂದ್ರ ಪ್ರಮುಖ ಪಾತ್ರ ವಹಿಸಿದ್ದ. ಈತ ಕೊಡಗಿನ ಮಾಲಂಬಿಯ ಸುತ್ತಲಿನ ಏಳು ಸಾವಿರ ಸೀಮೆಗೆ ಕೊಂಗಾಳ್ವರನ್ನು ಅಧಿಪರನ್ನಾಗಿ ನೇಮಿಸಿದ. ಇದರ ಪರಿಣಾಮವಾಗಿ ಕೊಂಗಾಳ್ವರು ಚೋಳ ಅರಸರ ಹೆಸರುಗಳನ್ನು ಸ್ವೀಕರಿಸಿದರು. ಈ ದಂಡಯಾತ್ರೆಯ ಮುಂದಿನ ಹೆಜ್ಜೆ ತಡಿಗೈ (ದಡಿಗೈ) ಪಾಡಿಯ ಮೇಲೆ. ಇದು ಮಂಡ್ಯ ಜಿಲ್ಲೆಯ ನಾಗಮಂಗಲ, ಮಂಡ್ಯ, ಮಳವಳ್ಳಿ ಶ್ರೀರಂಗಪಟ್ಟಣ, ಕೃಷ್ಣರಾಜ ಪೇಟೆ ತಾಲ್ಲೂಕುಗಳನ್ನು ಒಳಗೊಂಡ ಪ್ರಾಂತ್ಯವಾಗಿತ್ತು. ಈ ವೇಳೆಗೆ ಗಂಗರ ಪ್ರಾಬಲ್ಯ ಸಹ ಕುಗ್ಗಿ ಗಂಗವಾಡಿ ಸಹ ಸುಲಭವಾಗಿ ಚೋಳರ ವಶವಾಯಿತು. ರಾಜರಾಜ ಇದಕ್ಕೆ ಮುಡಿಗೊಂಡಚೋಳ ಮಂಡಲವೆಂಬ ಹೆಸರಿತ್ತ. ತೆಲ್ಲಕುಲದ ಅಪ್ರಮೇಯನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿದ. ನೊಳಂಬರು ಮೊದಲು ಗಂಗರ ಅಧೀನರಾಗಿದ್ದು ಕೊನೆಕೊನೆಗೆ ಅವರ ವೈರವನ್ನು ಕಟ್ಟಿಕೊಂಡರು. ದಡಿಗಪಾಡಿಯನ್ನು ಕಸಿದುಕೊಂಡ ಬಳಿಕ

ಅವರೂ ಚೋಳರ ಸಾಮಂತಿಕೆಯನ್ನು ಒಪ್ಪಿದರು. ತಲಕಾಡನ್ನು ಸಹ ವಶಪಡಿಸಿಕೊಂಡ ರಾಜರಾಜ ಅನಂತರ ನೊಳಂಬವಾಡಿಯನ್ನು ಆಕ್ರಮಿಸಿದ. ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಪ್ರದೇಶಗಳನ್ನೂ ಒಳಗೊಂಡ ಪ್ರಾಂತ್ಯವಾದ ನೊಳಂಬವಾಡಿ ನಿಗರಿಲಿ ಚೋಳಮಂಡಲದ ಒಂದು ಭಾಗವಾಯಿತು. ಕೋಲಾರ ಜಿಲ್ಲೆಯ ಪೂರ್ವಪ್ರದೇಶ ನಿಗರಿಲಿ ಚೋಳ ಮಂಡಲದಲ್ಲಿನ ಕುವಳಾಲನಾಡು ಎನಿಸಿಕೊಂಡಿತು. ಚಿಂತಾಮಣಿ ತಾಲ್ಲೂಕು ಕೈವಾರನಾಡಿಗೂ ಚಿಕ್ಕಬಳ್ಳಾಪುರ ತಾಲ್ಲೂಕು ಕಳವರ ನಾಡಿಗೂ ಸೇರಿದವು.

ರಟ್ಟಪಾಡಿ ನಾಡನ್ನು ಸಹ ರಾಜರಾಜ ಗೆದ್ದುಕೊಂಡನೆಂದು ಚೋಳರ ಶಾಸನಗಳು ಹೇಳಿದ್ದರೂ ಅದು ಉತ್ಪ್ರೇಕ್ಷೆಯಾಗಿದ್ದಂತೆ ತೋರುತ್ತದೆ. ಇರಿವಬೆಡಂಗ ಸತ್ಯಾಶ್ರಯನ ನೇತೃತ್ವದಲ್ಲಿ ಚಾಳುಕ್ಯ ಸೈನ್ಯ ರಾಜರಾಜನನ್ನು ಸೋಲಿಸಲು ಯತ್ನಿಸಿತಾದರೂ ಹೆಚ್ಚಿನ ಯಶಸ್ಸು ಲಭಿಸಲಿಲ್ಲ. ತುಂಗಭದ್ರಾನದಿ ಎರಡೂ ರಾಜ್ಯಗಳ ನಡುವಣ ಮೇರೆಯಾಯಿತು.



ಹಳೇಆಲೂರಿನ ಅರ್ಕೇಶ್ವರ ದೇವಾಲಯದ ಮುಂಭಾಗ

ರಾಜರಾಜನ ಮಗ ಮೊದಲನೆಯ ರಾಜೇಂದ್ರ 1012ರಲ್ಲಿ ಪಟ್ಟಾಭಿಷಿಕ್ತನಾದ. ಈತ ತನ್ನ ಆಳಿಕೆಯ ಮೂರನೆಯ ವರ್ಷದೊಳಗಾಗಿ ಕರ್ನಾಟಕದ ಅರಸನಾದ ಚಾಳುಕ್ಯ ಐದನೆಯ ವಿಕ್ರಮಾದಿತ್ಯನನ್ನು ಕದನದಲ್ಲಿ ಎದುರಿಸಿದನೆಂಬುದು ಈತನ ತಿರುಮಣ್ಣಿವಳವ ಎಂಬ ಪ್ರಶಸ್ತಿಯಿಂದ ತಿಳಿಯುತ್ತದೆ. ಎಡದೊರೆ ನಾಡು (ಕೃಷ್ಣಾ-ತುಂಗಭದ್ರಾಗಳ ನಡುವಣ ಈಗಿನ ರಾಯಚೂರು ಜಿಲ್ಲೆಯನ್ನೊಳಗೊಂಡ ಪ್ರದೇಶ) ಮತ್ತು ಬನವಾಸಿಗಳನ್ನು ಈತ ಗೆದ್ದುಕೊಂಡನೆಂದು ಅದರಲ್ಲಿ ಹೇಳಿದೆ. ಅದೂ ಉತ್ಪ್ರೇಕ್ಷೆಯೇ. ವಿಕ್ರಮಾದಿತ್ಯನ ಅನಂತರ ಆಳತೊಡಗಿದ ಜಯಸಿಂಹನೊಡನೆಯೂ ರಾಜೇಂದ್ರ ಕಾಡಬೇಕಾಯಿತು. ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಕದನ ನಡೆಯಿತು. ತಮ್ಮ ಅರಸನಿಗೆ ಹೆದರಿ ಜಯಸಿಂಹ ಓಡಿಹೋದ; ರಟ್ಟಪಾಡಿ ಏಳೂವರೆ ಲಕ್ಷ ಪ್ರದೇಶ ರಾಜೇಂದ್ರನ ವಶವಾಯಿತು ಎಂದು ಎಂದಿನಂತೆ ಚೋಳರ ಶಾಸನಗಳು ಹೇಳಿಕೊಳ್ಳುತ್ತವೆಯಾದರೂ ವಾಸ್ತವಿಕವಾಗಿ ಸಮಾನಬಲದ ಇಬ್ಬರಲ್ಲಿ ಯಾರಿಗೂ ಯಶಸ್ಸು ದೊರೆಯಲಿಲ್ಲ.

ಅನಂತರ ಆಳಿದ ಚೋಳ ಅರಸರು ತುಂಗಭದ್ರೆಯ ಉತ್ತರಭಾಗದ ಪ್ರದೇಶವನ್ನು ಆಕ್ರಮಿಸುವ ತಮ್ಮ ಯತ್ನಗಳನ್ನು ಮುಂದುವರಿಸಿದರೂ ಅವರು ಸಫಲರಾಗಲಿಲ್ಲ. ತಮ್ಮ ಅಧೀನಕ್ಕೆ ಬಂದ ತುಂಗಭದ್ರೆಯ ಕೆಳಗಿನ ನೊಳಂಬವಾಡಿಯ ಹಾಗೂ ಗಂಗವಾಡಿಯ ಕೆಲವು ಭಾಗಗಳನ್ನು ಸಹ ಕಳೆದುಕೊಂಡರು. ನೊಳಂಬರು ಸಂಧಿ ಸಾಧಿಸಿ ಚಾಳುಕ್ಯರ ಸಾಮಂತರಾದರು.

ದಕ್ಷಿಣ ಕರ್ನಾಟಕದ ತುಮಕೂರು, ಬೆಂಗಳೂರು, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳು ಚೋಳರ ವಶದಲ್ಲಿ ಉಳಿದವಾದರೂ 11ನೆಯ ಶತಮಾನದಲ್ಲಿ ತಲೆ ಎತ್ತಿದ ಹೊಯ್ಸಳರು ಚೋಳರನ್ನು ಹೊರದೂಡಲು ನಿರ್ಧರಿಸಿದರು. ಸು.1116ರ ವೇಳೆಗೆ ಚೋಳ ಕುಲೋತ್ತುಂಗನ ಕಾಲದಲ್ಲಿ ಹೊಯ್ಸಳ ವಿಷ್ಣುವರ್ಧನ ತಲಕಾಡನ್ನು ವಶಪಡಿಸಿಕೊಂಡು ತಲಕಾಡುಗೊಣ್ಡ ಎಂಬ ಬಿರುದನ್ನು ಧರಿಸಿದ. ವಿಷ್ಣುವರ್ಧನನ ದಂಡನಾಯಕ ಗಂಗರಾಜ ಈ ಸಾಧನೆಯಲ್ಲಿ ಮುಖ್ಯ ಪಾತ್ರವಹಿಸಿದ್ದ. ಆಗ ಚೋಳರ ಪ್ರತಿನಿಧಿಯಾಗಿ ಈ ಪ್ರದೇಶವನ್ನು ಆಳುತ್ತಿದ್ದ ಅಡಿಗೈಮಾನ್ ವಂಶಸ್ಥನಾದ ಆದಿಯಮನನ್ನೂ ದಾಮೋದರ ಮತ್ತು ನರಸಿಂಹವರ್ಮರೆಂಬ ಇನ್ನಿಬ್ಬರನ್ನೂ ಸೋಲಿಸಿ ಗಂಗರಾಜ ಗಂಗವಾಡಿಯನ್ನು ಚೋಳರಿಂದ ಕಸಿದುಕೊಂಡ. ಕುಲೋತ್ತುಂಗ ಚೋಳನಿಂದ ಹೀಗೆ ಗಂಗವಾಡಿಯನ್ನು ಕಳೆದುಕೊಂಡರೂ ಕೋಲಾರ ಜಿಲ್ಲೆಯ ಕೆಲವು ಭಾಗಗಳು ಅವನ ಅಧೀನದಲ್ಲಿದ್ದುವು.

ಕುಲೋತ್ತುಂಗನ ಅನಂತರ ಆಳಿದ ವಿಕ್ರಮಚೋಳನನ್ನು ಕೋಲಾರ ಪ್ರದೇಶದಿಂದ ಹೊರದೂಡಲು ವಿಷ್ಣುವರ್ಧನ ಯತ್ನಿಸಿದನಾದರೂ 1130ರ ವರೆಗೂ ಚೋಳರು ಆ ಪ್ರಾಂತ್ಯವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೆಂಬುದು ಶಾಸನಗಳಿಂದ ತಿಳಿದಿದೆ. ಅನಂತರ ಆ ಪ್ರಾಂತ್ಯ ವಿಷ್ಣುವರ್ಧನನ ವಶವಾದರೂ ಚೋಳರು ಪುನಃ ಅದನ್ನು ಪಡೆದರು. ರಾಜರಾಜ ಚೋಳನ ಸು.1153-54ನೆಯ ವರ್ಷದ ಶಾಸನದಿಂದ ಆಗ ಅಲ್ಲಿ ಚೋಳರ ಪ್ರಭುತ್ವವಿತ್ತೆಂಬುದು ಸ್ಪಷ್ಟವಾಗುತ್ತದೆ. ಅನಂತರ ಚೋಳರ ಬಲವೇ ಕುಗ್ಗಿತು. ಪರಂಪರೆಯಿಂದ ಬಂದ ರಾಜ್ಯವನ್ನೇ ಕಾಪಾಡಿಕೊಳ್ಳಲು ಅವರು ಹೆಣಗಿದರು. ಅದಕ್ಕೆ ಅವರು ಹೊಯ್ಸಳರ ನೆರವನ್ನು ಸಹ ಕೋರಿದರು. ಮುಮ್ಮಡಿ ಕುಲೋತ್ತುಂಗ ಬಲ್ಲಾಳನ ಮಗಳು ಸೋಮಲೆಯನ್ನು ಮದುವೆಯಾದ. ಆಕೆಗೆ ಮಕ್ಕಳಿರಲಿಲ್ಲವಾದ ಕಾರಣ ಸೋದರ ನರಸಿಂಹನಿಗೆ ಕಾಳಲೆಯಲ್ಲಿ ಜನಿಸಿದ ಸೋಮೇಶ್ವರನನ್ನು ಬೆಳೆಸಿದಳು. ಈ ರಾಜಕೀಯ ಬೆಳೆವಣಿಗೆಗಳ ಫಲವಾಗಿ ಚೋಳರು 1200ರ ವೇಳೆಗೆ ಕರ್ನಾಟಕದಿಂದ ಕಾಲ್ತೆಗೆದರು. (ಬಿ.ಆರ್.ಜಿ.;ಪಿ.ವಿ.ಆರ್.)

**ಆಡಳಿತ ವ್ಯವಸ್ಥೆ :** ಕರ್ನಾಟಕದಲ್ಲಿ ದೊರೆತಿರುವ ಚೋಳರ ಶಾಸನಗಳು ಅಂದಿನ ಆಡಳಿತ ವ್ಯವಸ್ಥೆಯನ್ನರಿಯಲು ಆಧಾರವಾಗಿವೆ. ಚೋಳ ರಾಜ್ಯದಲ್ಲಿದ್ದ ಆಡಳಿತವ್ಯವಸ್ಥೆಯನ್ನೇ ಹೊಸದಾಗಿ ಗೆದ್ದ ಕರ್ನಾಟಕದ ಭಾಗಗಳಲ್ಲಿ ಜಾರಿಗೆ ತಂದರೆಂಬುದು ಇವುಗಳ ಅಧ್ಯಯನದಿಂದ ತಿಳಿದುಬರುತ್ತದೆ.

ಚೋಳರ ಕಾಲದಲ್ಲಿ ಆಡಳಿತವ್ಯವಸ್ಥೆ ಹೆಚ್ಚು ಕೇಂದ್ರೀಕೃತ ವಾದುದೂ ಬಿಗಿಯಾದುದೂ ಆಗಿತ್ತು. ಆಡಳಿತದ ಅನುಕೂಲಕ್ಕಾಗಿ ತಮ್ಮ ರಾಜ್ಯವನ್ನು ಅವರು ಹಲವು ವಿಭಾಗಗಳಾಗಿ ವಿಂಗಡಿಸಿದ್ದರು. ಈ ಪ್ರದೇಶಗಳಿಗೆ ಹಾಗೂ ವಿಭಾಗಗಳಿಗೆ ತಮ್ಮವೇ ಆದ ಹೆಸರುಗಳಿದ್ದವು. ಈ ಪದ್ಧತಿ ಗೆದ್ದು ಸೇರಿಸಿಕೊಂಡ ಭಾಗಗಳಲ್ಲಿ ಮುಂದುವರಿಯಿತು. ಹಲವು ಗ್ರಾಮಗಳು ಸೇರಿ ಕೂಟ್ರ ಇಲ್ಲವೆ ನಾಡು, ಕೆಲವೊಮ್ಮೆ ತನಿಯೂರ್ (ದೊಡ್ಡ ಗ್ರಾಮ), ಹಲವು ಕೂಟ್ರಗಳು ಸೇರಿ ವಳನಾಡು, ವಳನಾಡುಗಳ ಸಮೂಹವಾದ ಮಂಡಲ - ಈ ವಿಭಾಗಗಳಿದ್ದವು. ಮಂಡಲಗಳೇ ಅತಿ ದೊಡ್ಡದಾದ ವಿಭಾಗಗಳು. ಚೋಳರ ಕಾಲದಲ್ಲಿ ಇಂಥ ಸುಮಾರು ಎಂಟು ಅಥವಾ ಒಂಬತ್ತು ಮಂಡಲಗಳಿದ್ದವೆಂದು ತಿಳಿದುಬರುತ್ತದೆ. ಈ ವಿಭಾಗವ್ಯವಸ್ಥೆಗನುಗುಣವಾಗಿ ಕರ್ನಾಟಕದ ಗಂಗಪಾಡಿ ಹಾಗೂ ನೊಳಂಬವಾಡಿಯ ಕೆಲವು ಭಾಗಗಳು ನಿಗರಿಲಿಶೋಳಮಂಡಲ, ಮುಡಿಗೊಂಡಶೋಳಮಂಡಲ, ಜಯಂಗೊಂಡ ಶೋಳಮಂಡಲ ಮತ್ತು ವಿಕ್ಕಿರಮಶೋಳಮಂಡಲಗಳಲ್ಲಿ ಸೇರಿಹೋದುವು. ಆಗಾಗ್ಗೆ ನಾಡು ವಳನಾಡುಗಳನ್ನು ಪುನರ್ವಿಂಗಡಿಸುತ್ತಿದ್ದುದು ಸಾಮಾನ್ಯವಾಗಿದ್ದುದರಿಂದ ಈ ಕಾಲದ ನಾಡು ವಳನಾಡುಗಳನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟ. ಆದರೂ ಕರ್ನಾಟಕಕ್ಕೆ ಸಂಬಂಧಿಸಿದಂತೆ ಚೋಳರ ಶಾಸನಗಳಲ್ಲಿ ರಾಜೇಂದ್ರ ಶೋಳವಳನಾಡು, ಗಂಗೈಕೊಂಡಶೋಳವಳನಾಡು, ವೀರರಾಜೇಂದ್ರ ವಳನಾಡು, ಉಯ್ಯಕೊಂಡಾರ ವಳನಾಡು, ಕ್ಷತ್ರಿಯಶಿಖಾಮಣಿ ವಳನಾಡು, ಶೋವಿ ವಳನಾಡು, ನಿತ್ತವಿನೋದ ವಳನಾಡು, ಅರುಮುಳಿದೇವ ವಳನಾಡು ಇತ್ಯಾದಿಗಳು ಕಂಡುಬರುತ್ತವೆ. ಹಾಗೆಯೇ ಕುವಲಾಲನಾಡು, ಕುಕ್ಕನೂರುನಾಡು, ಅವನಿಯ ನಾಡು, ಕಿಟಿಲೈನಾಡು, ಮಣ್ಣೈನಾಡು, ತೊಂಡೈನಾಡು, ಇರುಮಾಡಿನಾಡು, ಸೆಂಬೂರ ನಾಡು, ಮದಲ್‌ನಾಡು, ಕೈವಾರನಾಡು, ಇಳನಗರನಾಡು, ಕಳವರನಾಡು, ಪದಿನಾಡು, ವೆಳ್ಳಪ್ಪನಾಡು, ಕುಡುಮಲೈನಾಡು, ಪೆರಿಯನಾಡು ಅಥವಾ ಇಡೈನಾಡು, ವಡಕರೈನಾಡು ಮುಂತಾದ ನಾಡುಗಳನ್ನೂ ಶಾಸನಗಳು ಉಲ್ಲೇಖಿಸಿವೆ.

ಈ ಕಾಲದಲ್ಲಿ ಅನೇಕ ಊರುಗಳು ಹೊಸ ಹೆಸರುಗಳನ್ನು ಪಡೆದವು. ಗಂಗ ರಾಜಧಾನಿ ತಲಕಾಡು ರಾಜರಾಜನ ಹೆಸರನ್ನು ಪಡೆದು ರಾಜರಾಜಪುರವಾಯಿತು. ಚನ್ನಪಟ್ಟಣದ ಸಮೀಪವಿರುವ ಮಣಲೂರು ಅಥವಾ ಮಳೂರು ರಾಜರಾಜನ ಬಿರುದೊಂದರ ಮೇಲೆ ನಿಕರಿಲಿಚೋಳಪುರವಾಯಿತು. ಹಾಗೆಯೇ ಮಾಲಿಂಗಿ ಜನನಾಥಪುರವಾಯಿತು. ಕುಣಿಗಲಿಗೆ ರಾಜೇಂದ್ರಪುರವೆಂಬ ಹೆಸರು ಬಂತು. ಕೆಲವು ಗ್ರಾಮಗಳು ಚತುರ್ವೇದಿಮಂಗಲ ಎಂಬ ಹೆಸರಿನೊಡನೆ ಅಗ್ರಹಾರಗಳಾಗಿ ಪರಿವರ್ತಿತವಾದುವು. ಮದ್ದೂರು ಶೋವಿಮಹಾದೇವಿ ಚತುರ್ವೇದಿಮಂಗಲ, ಪುಂಗನೂರು (ಹೊಂಗನೂರು) ತ್ರೈಲೋಕ್ಯ ಮಾದೇವಿ ಚತುರ್ವೇದಿ ಮಂಗಲ, ಪೆರಿಯಮಬಿವೂರು ರಾಜೇಂದ್ರ ಸಿಂಹ ಚತುರ್ವೇದಿಮಂಗಲ, ಉತ್ತನೂರು ರಾಜೇಂದ್ರ ಚೋಳ ಚತುರ್ವೇದಿ ಮಂಗಲ, ಕೂಡಲೂರು ರಾಜರಾಜ ಚತುರ್ವೇದಿಮಂಗಲ ಹಾಗೂ ವೆಳ್ಳಿಯೂರು ಜನನಾಥ ಚತುರ್ವೇದಿಮಂಗಲಗಳಾಗಿ ಪರಿವರ್ತಿತವಾದುವು. ಇನ್ನೂ ಹಲವಾರು ಚತುರ್ವೇದಿಮಂಗಲಗಳನ್ನು ಚೋಳ ಶಾಸನಗಳು ಹೆಸರಿಸಿವೆ.

ಚೋಳರ ಆಡಳಿತ ವ್ಯವಸ್ಥೆಯ ಹಲವು ಬಗೆಯ ಅಧಿಕಾರಿಗಳನ್ನು ಶಾಸನಗಳು ಉಲ್ಲೇಖಿಸಿವೆ. ಎಲ್ಲ ಅಧಿಕಾರಿಗಳಿಗೆ ಕರುಮಿಗಳಂ ಹಾಗೂ ಪಣಿಮಕ್ಕಳ್ ಎಂಬ ಸರ್ವಸಾಮಾನ್ಯ ಹೆಸರಿತ್ತು. ವಿಡೈಯಿಲ್ ಅಧಿಕಾರಿ, ಉಡನ್‌ಕೊಟ್ಟನ್, ನಾಡುವಿರುಕ್ಕಮ್, ಕಣ್‌ಕಾಣಿ, ವರಿಗಪೊತ್ತಗವ್, ಮೂಗವೆಟ್ಟಿ, ಮೂವೇಂದು ವೇಳಾರ್, ಮಹಾಮಾತ್ರ ಮುಂತಾದ ಅಧಿಕಾರಿಗಳು ಉಲ್ಲೇಖಿತರಾಗಿದ್ದಾರೆ.

ಆಡಳಿತ ವ್ಯವಸ್ಥೆಯ ಅತಿ ದೊಡ್ಡ ವಿಭಾಗವಾದ ಮಂಡಲಗಳಲ್ಲಿ ಅರಸ ಆರಿಸಿದ ಪ್ರತಿನಿಧಿಗಳು ಆಡಳಿತ ನಡೆಸುತ್ತಿದ್ದರು. ಆದಿಯಮ, ನರಸಿಂಹವರ್ಮ, ದಾಮನಂದಿ, ಇಳವಂಜಿರಾಯ, ಬ್ರಹ್ಮಾದಿರಾಯ ಮತ್ತಿತರರು ಕರ್ನಾಟಕದ ಚೋಳ ಪ್ರದೇಶಗಳಲ್ಲಿ ರಾಜ್ಯವಾಳಿದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಗಂಗವಾಡಿಯ ರಾಜಧಾನಿಯಾಗಿ ತಲಕಾಡು ಅಥವಾ ರಾಜರಾಜಪುರ ಮುಂದುವರಿಯಿತು. ಚನ್ನಪಟ್ಟಣ ತಾಲ್ಲೂಕಿನ ಪುಂಗನೂರು ಚಿಕ್ಕಗಂಗವಾಡಿಯ ರಾಜಧಾನಿಯಾಯಿತು.

ಗ್ರಾಮಗಳ ಆಡಳಿತ ಮುಖ್ಯವಾಗಿ ಆಯಾ ಗ್ರಾಮಗಳ ಸಭೆಗೆ ಸೇರಿದುದಾಗಿತ್ತು. ಸಭೆ, ಮಹಾಸಭೆ, ಊರ್, ಕುರಿ, ಪೆರುಂಗುರಿ ಎಂಬುದಾಗಿ ಕರೆಯುತ್ತಿದ್ದ ಈ ಸಂಸ್ಥೆ ತನ್ನ ಪರಿಮಿತಿಯೊಳಗಿನ ಪ್ರದೇಶದ ಆಡಳಿತವನ್ನು ನಿರ್ವಹಿಸುತ್ತಿತ್ತು. ಗ್ರಾಮಸಭೆಯಲ್ಲಿ ಬೇರೆಬೇರೆ ಕೆಲಸಗಳನ್ನು ನಿರ್ವಹಿಸಲು ಇದ್ದ ಸಮಿತಿಗಳಿಗೆ ವಾರಿಯಂ ಎಂಬ ಹೆಸರಿತ್ತು. ವಿಟ್ಟಿ, ವೇದಿಲೈ, ವಾಲಕ್ಕಾಣಂ, ಕೋಲ್‌ನಿರೈಕೂಲಿ, ಕಾಲಳಮಕೂಲಿ, ಪದಿಕಾವಲ್, ಮಾಡೈ, ಕೋರ್ ಮುಂತಾದ ಹಲವು ತೆರಿಗೆಗಳಿದ್ದವು.

ಸುಮಾರು ನೂರು ವರ್ಷಗಳ ಕಾಲ ಚೋಳರ ಆಳಿಕೆಗೆ ಒಳಪಟ್ಟಿದ್ದ ಕರ್ನಾಟಕದ ಭಾಗದಲ್ಲಿ ತಮ್ಮ ಆಡಳಿತದ ವಿವಿಧಾಂಗಗಳ ಮೂಲಕ ತಮಿಳುನಾಡಿನ ಸಂಸ್ಕೃತಿಯನ್ನು ಹಬ್ಬಿಸಿದರು. ಈ ಪ್ರದೇಶಗಳಲ್ಲಿ ತಮಿಳು ಆಡಳಿತಭಾಷೆಯಾಗಿ ನೆಲೆಗೊಂಡಿತು. ಗ್ರಾಮಾಡಳಿತದ ದೇವಾಲಯ ಆಡಳಿತದ ವ್ಯವಸ್ಥೆಯ ಬಗ್ಗೆ ಇದ್ದ ಹತೋಟಿಯನ್ನು ವಿವರವಾಗಿ ಶಾಸನಗಳು ಪರಿಚಯಿಸುತ್ತವೆ. ಚೋಳರ ಆಡಳಿತದ ಪ್ರಭಾವ ಎಷ್ಟರ ಮಟ್ಟಿಗೆ ಉಂಟಾಯಿತೆಂದರೆ ಗಂಗವಾಡಿಯಿಂದ ಚೋಳರನ್ನೋಡಿಸಿದ ಹೊಯ್ಸಳರೂ ಇಲ್ಲಿ ತಮಿಳು ಶಾಸನಗಳನ್ನೇ ಹಾಕಿಸಬೇಕಾಯಿತು. ಅಲ್ಲದೆ ಚೋಳರನ್ನು ಅನುಕರಿಸಿ ಇವರು ತಮ್ಮ ಹೆಸರುಗಳಲ್ಲಿ ಚತುರ್ವೇದಿಮಂಗಲಗಳನ್ನು ಸ್ಥಾಪಿಸಿದರು. ಇವರ ಶಾಸನಗಳಲ್ಲೂ ಮುಡಿಗೊಂಡ ಶೋಳಮಂಡಲ, ಗಂಗೈಕೊಂಡ ಶೋಳವಳನಾಡು ಇತ್ಯಾದಿ ಹೆಸರುಗಳೇ ಕೆಲವು ಕಾಲ ಮುಂದುವರಿದುವು. (ಎಚ್.ಎಂ.ಎನ್.ಆರ್.)

**ವಾಸ್ತುಶಿಲ್ಪ:** ಚೋಳರು ಕರ್ನಾಟಕದ ಭಾಗವನ್ನು ಆಕ್ರಮಿಸಿಕೊಂಡ ಕಾಲದಲ್ಲಿ ದೇವಾಲಯಗಳ ನಿರ್ಮಾಣದಲ್ಲಿ ಒಂದು ಉತ್ಕ್ರಾಂತಿಯೇ ನಡೆದಿತ್ತು. ತಂಜಾವೂರಿನ ಬೃಹದೀಶ್ವರ ದೇವಾಲಯದ ನಿರ್ಮಾಣ ಆರಂಭವಾಗಿತ್ತು. ಅನೇಕ ಕಡೆಗಳಲ್ಲಿ ಹೊಸ ದೇವಾಲಯಗಳನ್ನು ನಿರ್ಮಿಸುವ ಪರಿಪಾಠ ಹೆಚ್ಚಿತ್ತು. ಚೋಳ ಸಮ್ರಾಟರನ್ನನುಕರಿಸಿ ಇವರ ಅಧಿಕಾರಿಗಳೂ ಸಾಮಂತರೂ ತಾವು ಆಳುತ್ತಿದ್ದ ಪ್ರಾಂತ್ಯಗಳಲ್ಲಿ ಹಲವಾರು ದೇವಾಲಯಗಳನ್ನು ನಿರ್ಮಿಸಿ ಅವುಗಳ ಪೂಜಾದಿಗಳಿಗೆ ಹೇರಳವಾಗಿ ದಾನದತ್ತಿಗಳನ್ನು ಕೊಟ್ಟರು. ಕರ್ನಾಟಕದಲ್ಲಿ ಚೋಳರು ಆಕ್ರಮಿಸಿಕೊಂಡ ಪ್ರಾಂತ ಈ ದಿಸೆಯಲ್ಲಿ ಹೊಸ ಹುರುಪನ್ನು ಕಂಡಿತು. ಹೊಸ ಉತ್ಸಾಹ ಮೂಡಿತು. ಈ ಪ್ರಾಂತ್ಯದಲ್ಲಿ ಸುಮಾರು ಒಂದು ಶತಮಾನಕ್ಕಿಂತ ಸ್ವಲ್ಪ ಹೆಚ್ಚು ಕಾಲದಲ್ಲಿ ಇಲ್ಲಿ ಇವರು ಕಟ್ಟಿಸಿದ ದೇವಾಲಯಗಳು ನೂರಾರು ಚೋಳ ರಾಜ್ಯದಲ್ಲಿ ನಿರ್ಮಿಸಿದಂತೆ ಬೃಹದ್ದೇವಾಲಯಗಳನ್ನು ಇವರು ಇಲ್ಲಿ ನಿರ್ಮಿಸದಿದ್ದರೂ ಇವರು ಕಟ್ಟಿಸಿದ ಮಧ್ಯಮ ಮತ್ತು ಸಣ್ಣ ದೇವಾಲಯಗಳನ್ನು ಊರೂರುಗಳಲ್ಲಿಯೂ ಕಾಣಬಹುದು. ಇದರೊಂದಿಗೆ, ಮೊದಲೇ ಇದ್ದ ಇಟ್ಟಿಗೆಯ ದೇವಾಲಯಗಳಿಗೆ ಬದಲಾಗಿ ಕಲ್ಲಿನ ಗುಡಿಗಳನ್ನು ಇವರು ಕಟ್ಟಿರುವುದುಂಟು; ಕಲ್ಲಿನ ದೇವಾಲಯಗಳನ್ನು ವಿಸ್ತರಿಸಿರುವುದೂ ಉಂಟು.

ಇವರು ದ್ರಾವಿಡ ಶೈಲಿಯ ಕಟ್ಟಡಗಳಿಗೆ ಉಪಯೋಗಿಸಿರುವುದು ಗಟ್ಟಿಯಾದ ಕಣಶಿಲೆ (ಗ್ರಾನೈಟ್), ದಪ್ಪ ದಿಮ್ಮಿಗಳನ್ನು ಅತಿ ನಾಜೂಕಾಗಿ ಜೋಡಿಸಿ ಕಟ್ಟಿರುವ ಗೋಡೆಗಳ ಹೊರಮೈಯನ್ನು ನಯಗೊಳಿಸಿರುವುದಲ್ಲದೆ ಅವುಗಳ ಮೇಲಿನ ಶಿಲ್ಪವನ್ನು ಸ್ಪಷ್ಟವಾಗಿ ಖಚಿತವಾಗಿ ಬಿಡಿಸಿ ಅವು ಎದ್ದುಕಾಣುವಂತೆ ಕಂಡರಿಸುವುದು ಇವರ ಶೈಲಿಯ ವೈಶಿಷ್ಟ್ಯ. ಇವರ ದೇವಾಲಯಗಳು ಸಾಮಾನ್ಯವಾಗಿ ಹೆಚ್ಚು ಅಲಂಕರಣವಿಲ್ಲದ ಸರಳ ಕಟ್ಟಡಗಳು. ಈ ದೇವಾಲಯಗಳಲ್ಲಿ ಚೌಕನೆಯ ಗರ್ಭಗೃಹ, ಅಂತರಾಳ, ಮಹಾಮಂಟಪ ಮತ್ತು ಮುಖಭದ್ರ, ಹೊರಗೋಡೆಗಳಲ್ಲಿ ಅಲ್ಲಲ್ಲಿ ಅರೆಗಂಬಗಳು, ನಡುವೆ ಆಳವಿಲ್ಲದ ಗೂಡುಗಳು, ಒಮ್ಮೊಮ್ಮೆ ಈ ಗೂಡುಗಳಲ್ಲಿ ಮೂರ್ತಿಗಳು, ಗುಂಡಾಗಿ ಬಾಗಿರುವ ಲೋವೆಗಳು, ಈ ಲೋವೆಗಳ ಕೆಳಗೆ ಅಪರೂಪವಾಗಿ ಹಂಸ ಅಥವಾ ಯಾಳಿಗಳ ಸಾಲುಗಳು, ಒಂದು ಅಥವಾ ಮೂರು ಅಂತಸ್ತುಗಳ ಮೇಲೇರುವ ಗೋಪುರಗಳು ಇವು ಸಾಮಾನ್ಯವಾಗಿ ಕಂಡುಬರುತ್ತವೆ. ಅನೇಕ ಸ್ಥಳಗಳಲ್ಲಿ ಈಗ ಉಳಿದು ಬಂದಿರುವ ಚೋಳ ದೇವಾಲಯಗಳಲ್ಲಿ ಹಲವು ಶಿಥಿಲಾವಸ್ಥೆಯ ಬೇರೆ ಬೇರೆ ಹಂತಗಳಲ್ಲಿವೆ. ಕೆಲವು ಮುಖ್ಯವಾದ ದೇವಾಲಯಗಳ ವಾಸ್ತು ಶಿಲ್ಪಗಳ ವೈವಿಧ್ಯವನ್ನು ಇಲ್ಲಿ ಗಮನಿಸಬಹುದು.

ಯಳಂದೂರು ತಾಲ್ಲೂಕಿನ ಅಗರ (ನೋಡಿ) ಗಂಗರ ಕಾಲದಲ್ಲಿಯೇ ಇದ್ದು ಚೋಳರ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಒಂದು ಅಗ್ರಹಾರ. ಇಲ್ಲಿ ಹಲವಾರು ದೇವಾಲಯಗಳಿವೆ. ಇವುಗಳಲ್ಲಿ ಮುಖ್ಯವಾದುದು ಮತ್ತು ಸುಂದರವಾದುದು ದುರ್ಗಿಯ ದೇವಾಲಯ. ಬಹುಶಃ ರಾಜರಾಜನ ಕಾಲದಲ್ಲಿ ನಿರ್ಮಿತವಾದ ಈ ದೇವಾಲಯದ ತಳಹದಿಯ ದಿಂಡುಕಲ್ಲುಗಳ ಮೇಲೆ ಕೊಡಿರುವ ಸಿಂಹಗಳ ಸಾಲುಗಳನ್ನು ನೋಡಬಹುದು. ಇದರ ಹೊರಗೋಡೆಗಳ ಮೇಲೆ ಅರೆಗಂಬಗಳು, ಆಳವಲ್ಲದ ಅರೆಮಂಟಪಗಳು, ಯಾಳಿ ಅಥವಾ ನೀರ್ಗುದುರೆಗಳ ಸಾಲು, ಕಿರಿದಾಗಿ ಗುಂಡಾಗಿ ಬಾಗಿರುವ ಲೋವೆ, ಮೇಲೆ ಅಷ್ಟಮುಖದ ಗೋಪುರಕ್ಕೆ ಲಾಳದಾಕೃತಿಯ ಕಮಾನುಗಳು, ನವರಂಗದಲ್ಲಿ ತೆಳುವಾದ ಗುಂಡುಕಂಬಗಳು ಇವೆ. ಗರ್ಭಗೃಹದಲ್ಲಿ ಪ್ರಸನ್ನ ಗಂಭೀರ ಮುಖಮುದ್ರೆಯಿಂದ ಸಮಭಂಗದಲ್ಲಿ ನಿಂತಿರುವ ಅಭಯ ಚಕ್ರ ಶಂಖ ಕಟಿಹಸ್ತಗಳನ್ನುಳ್ಳ ಚತುರ್ಭುಜ ದುರ್ಗಾ ದೇವಿಯ ಮೂರ್ತಿ ಸುಂದರವಾದ ಚೋಳ ಶೈಲಿಗೆ ಮಾದರಿ. ಇಲ್ಲಿನ ನರಸಿಂಹಸ್ವಾಮಿ ದೇವಾಲಯದ ಬಹುಭಾಗ ಪುನರ್ನಿರ್ಮಾಣಗೊಂಡಿವೆ. ಆದರೆ ಗರ್ಭಗೃಹ ಸುಕನಾಸಿಗಳು ಮೂಲರೂಪದಲ್ಲಿ ಉಳಿದು ಬಂದಿವೆ. ಗರ್ಭಗೃಹ ಅಪರೂಪವಾಗಿ ವೃತ್ತಾಕಾರದ ತಳವಿನ್ಯಾಸವನ್ನು ಹೊಂದಿದೆ. ಇಲ್ಲಿನ ನರಸಿಂಹ ವಿಗ್ರಹ ಮೂರ್ತಿಶಿಲ್ಪ ರೀತಿಗೆ ಒಂದು ಅಪರೂಪವಾದ ಉದಾಹರಣೆ. ನರಸಿಂಹಸ್ವಾಮಿ ದೇವಾಲಯದ ಸಮೀಪದಲ್ಲಿಯೇ ವರದರಾಜ ದೇವಾಲಯವಿದೆ. ಈಗ ಅದರ ಗರ್ಭಗೃಹ ಸುಕನಾಸಿಗಳ ವಿನಾ ಉಳಿದ ಭಾಗಗಳು ನಾಮಾವಶೇಷವಾಗಿವೆ. ಗರ್ಭಗೃಹದಲ್ಲಿರುವ, ತೆಳುವಾದ ನೀಳವಾಗಿ ನಿಂತಿರುವ ವಿಷ್ಣುವಿನ ಮೂರ್ತಿ ಆಕರ್ಷಕವಾಗಿದೆ. ಈ ಊರಿನ ಮತ್ತೊಂದು ಚೋಳ ದೇವಾಲಯ ರಾಮೇಶ್ವರ. ಆದರೆ ಅದು ಈಗ ಪೂರ್ತಿಯಾಗಿ ಪುನರ್ನಿರ್ಮಾಣಗೊಂಡಿದೆ.

ಅಗರದ ಸಮೀಪದಲ್ಲಿರುವ ಮದ್ದೂರು ರಾಜೇಂದ್ರಚೋಳನ ರಾಣಿ ಪಂಚವನ್ ಮಾದೇವಿಯ ಹೆಸರಿನಲ್ಲಿ ನಿರ್ಮಿತವಾದ ಪಂಚವನಮಾದೇವಿ

ಚತುರ್ವೇದಿಮಂಗಲವೆಂಬ ಅಗ್ರಹಾರ. ಇದೇ ಕಾಲದಲ್ಲಿ ಕಟ್ಟಿಸಿದ ದೇಶೇಶ್ವರ ದೇವಾಲಯ ಸರಳವಾದುದು. ಹೊಯ್ಸಳ ವಿಜಯನಗರ ಅರಸರ ಕಾಲದಲ್ಲಿ ಅದನ್ನು ವಿಸ್ತರಿಸಲಾಯಿತು. ಚಾಮರಾಜನಗರ ತಾಲ್ಲೂಕಿನ ಹಳೆ ಆಲೂರು ಚೋಳರ ಕಾಲದ ಮತ್ತೊಂದು ಮುಖ್ಯವಾದ ಅಗ್ರಹಾರ. ಆದರೆ ಹಳೆಯ ಊರು ಈಗ ನಾಶವಾಗಿದೆ. ಅಲ್ಲಿನ ಚೋಳರ ಕಾಲದ ದೇವಾಲಯಗಳು ಅತ್ಯಂತ ಶಿಥಿಲಾವಸ್ಥೆಯಲ್ಲಿವೆ. ಇವುಗಳಲ್ಲಿ ಪ್ರಮುಖವಾದವು ದೇಶೇಶ್ವರ ಮತ್ತು ಅರ್ಕೇಶ್ವರ ದೇವಾಲಯಗಳು. ತಗ್ಗಾದ ದೇಶೇಶ್ವರ ಗುಡಿಯ ಬಳಿಯಲ್ಲಿರುವ ಸಪ್ತಮಾತೃಕಾ ವಿಗ್ರಹಗಳು ಕಲ್ಲಿನ ಹಲಗೆಯ ಮೇಲೆ ತೆಳುವಾಗಿ ಬಿಡ್ಡಿಸಿದ್ದರೂ ಸತ್ವಯುತವಾಗಿವೆ. ಅರ್ಕೇಶ್ವರ ದೇವಾಲಯದ ಹೊರಗೋಡೆಗಳನ್ನು ಹೊಸದಾಗಿ ನಿರ್ಮಿಸಲಾಗಿದೆ. ಆದರೆ ಅದರ ನವರಂಗದ ಕಂಬಗಳು ಒಳಚಾವಣಿಯಲ್ಲಿನ ನಟರಾಜ ಮತ್ತು ಅಷ್ಟದಿಕ್ಪಾಲಕರ ಮೂರ್ತಿಗಳು, ಬಾಗಿಲುವಾಡ, ಎರಡು ಕಡೆಯಲ್ಲಿಯೂ ಗೋಡೆಗೆ ಸೇರಿಸಿರುವ ವಾದ್ಯಮೇಳದವರ ಶಿಲ್ಪಫಲಕಗಳು, ನಂದಿಮಂಟಪ - ಇವು ಚೋಳಶಿಲ್ಪದ ಮಾದರಿಯನ್ನು ಎತ್ತಿ ಹಿಡಿಯುತ್ತವೆ. ಅದರಲ್ಲಿಯೂ ನವರಂಗದ ಮೂರು ಕಂಬಗಳು ಮತ್ತು ನಂದಿ ಮಂಟಪದ ನಾಲ್ಕು ಕಂಬಗಳ ಮೇಲೆ ತೆಳುವಾಗಿ ಬಿಡಿಸಿರುವ ಶಿಲ್ಪಗಳು ರಾಜೇಂದ್ರ ಚೋಳನ ದಂಡೆಯಾತ್ರೆಯನ್ನು ಸೂಚಿಸುತ್ತವೆಯೆನ್ನಲಾಗಿದೆ. ಇವು ಕರ್ನಾಟಕದಲ್ಲಿನ ಚೋಳರ ಕಾಲದ ಶಿಲ್ಪಕೃತಿಗಳಲ್ಲಿಯೇ ಅಪರೂಪದವೆನಿಸಿವೆ.

ಚೋಳರು ಆಳುತ್ತಿದ್ದ ತಲಕಾಡಿನಲ್ಲಿ ಇವರ ಕಾಲದ ದೇವಾಲಯಗಳು ಇದ್ದಿರಬೇಕು. ಆದರೆ ಹಳೆಯ ಊರು ಮರಳಿನಲ್ಲಿ ಮುಚ್ಚಿಹೋಗಿದ್ದು ಇತ್ತೀಚೆಗೆ ನಡೆದ ಉತ್ಖನನದಿಂದ ಕೆಲವೊಂದು ದೇವಾಲಯಗಳು ಪತ್ತೆಯಾಗಿವೆ. ಅವುಗಳ ಕಾಲನಿರ್ಣಯ ಆಗಬೇಕು. ಈಗ ಅಲ್ಲಿರುವ ವೈದ್ಯನಾಥೇಶ್ವರ ದೇವಾಲಯ ಬಹುಶಃ ಚೋಳರ ಕಾಲದಲ್ಲಿಯೇ ಕಟ್ಟಿದ ದೇವಾಲಯವಾಗಿದ್ದು, ಅದು ಶಿಥಿಲವಾದ ಮೇಲೆ ವಿಜಯನಗರದ ಅರಸರು ಅಲ್ಲಿ ಹೊಸ ದೇವಾಲಯವೊಂದನ್ನು ಕಟ್ಟಿರಬೇಕು. ತಲಕಾಡಿಗೆ ಎದುರಾಗಿ, ಕಾವೇರಿಯ ಬಲದಂಡೆಯ ಮೇಲಿನ ತಡಿಮಾಲಿಂಗಿಯಲ್ಲಿ ಚೋಳ ರಾಜರಾಜನ ಕಾಲದಲ್ಲಿ ನಿರ್ಮಿತವಾದ ಜನಾರ್ದನ ದೇವಾಲಯವಿದೆ. ಅದರಲ್ಲಿನ ಶಾಸನಗಳಲ್ಲಿ ದೇವಾಲಯವನ್ನು ಇರವಿಕುಲಮಾಣಿಕ್ಕವಿಣ್ಣಗರಾಳ್ವಾರ್ ದೇವಾಲಯವೆಂದು ಕರೆಯಲಾಗಿದೆ. ಒಂದೇ ಅಂತಸ್ತಿನ ಚೌಕ ಗೋಪುರವುಳ್ಳ ಗರ್ಭಗೃಹ, ತಗ್ಗಾದ ಸುಕನಾಸಿ ಮತ್ತು ನವರಂಗಗಳನ್ನುಳ್ಳ ಈ ದೇವಾಲಯ ಚೋಳರ ಆರಂಭಕಾಲದ ಶೈಲಿಗೊಂದು ಉತ್ತಮ ಉದಾಹರಣೆ. ಬಹುಶಃ ಗಂಗರ ಕಾಲದಲ್ಲಿ ನಿರ್ಮಿತವಾದ, ಪುಟ್ಟಪುಟ್ಟ ಗರ್ಭಗೃಹ ಸುಕನಾಸಿ ನವರಂಗಗಳನ್ನು ಹೊಂದಿದ್ದ ಬನ್ನೂರಿನ ಹನುಮಂತೇಶ್ವರ ದೇವಾಲಯಕ್ಕೆ ಚೋಳರ ಕಾಲದಲ್ಲಿ ಮುಂದೆ ದೊಡ್ಡದಾಗಿ ಮತ್ತೊಂದು ನವರಂಗವನ್ನು ಕಟ್ಟಲಾಯಿತು. ರಾಜರಾಜನ ಕಾಲದಲ್ಲಿ ಈ ದೇವಾಲಯಕ್ಕೆ ದತ್ತಿಬಿಟ್ಟ ವಿಷಯವನ್ನು ಅದರ ಹೊರಗೋಡೆಯ ದಿಂಡಿನ ಮೇಲಿರುವ ಶಾಸನ ತಿಳಿಸುತ್ತದೆ.

ಮಂಡ್ಯ ಜಿಲ್ಲೆಯ ಮಾರೇಹಳ್ಳಿಯ ನರಸಿಂಹಸ್ವಾಮಿ, ದೇಶೇಶ್ವರ ದೇವಾಲಯಗಳು, ಮದ್ದೂರಿನ ವರದರಾಜ ಮತ್ತು ನರಸಿಂಹಸ್ವಾಮಿ ದೇವಾಲಯಗಳು, ಮಳವಳ್ಳಿಯ ಶಾರ್ಙ್ಗಪಾಣಿ ದೇವಾಲಯ ಇವೂ ಮೂಲತಃ ಚೋಳರ ಕಾಲದಲ್ಲಿಯೇ ನಿರ್ಮಿತವಾದ ದೇವಾಲಯಗಳು. ಮದ್ದೂರಿನ ನರಸಿಂಹಸ್ವಾಮಿ ದೇವಾಲಯದಲ್ಲಿರುವ ನರಸಿಂಹನ ಭವ್ಯವಾದ ಮೂರ್ತಿ ಆಕರ್ಷಕವಾಗಿದೆ. ಚನ್ನಪಟ್ಟಣ ತಾಲ್ಲೂಕಿನ ಮಳೂರು, ಹೊಂಗನೂರು ಮೊದಲಾದ ಕಡೆ ಚೋಳರ ಕಾಲದ ಹಲವಾರು ದೇವಾಲಯಗಳಿವೆ. ಅವುಗಳಲ್ಲಿ ಹಲವು ಹಾಳಾಗಿವೆ. ಮಳೂರಿನ ಅಪ್ರಮೇಯ ಸ್ವಾಮಿ ದೇವಾಲಯ ಬಹುಶಃ ರಾಜರಾಜನ ದಂಡನಾಯಕ ಅಪ್ರಮೇಯನ ಹೆಸರಿನಲ್ಲಿ ಕಟ್ಟಿದುದಾಗಿರಬೇಕು. ಆದರೆ ಅದರ ಈಗಿರುವ ಬಹುಭಾಗ ಅನಂತರ ಪುನರ್ನಿರ್ಮಾಣಗೊಂಡಿತು. ಕೂಡಲೂರಿನಲ್ಲಿ ಈಗ ರಾಮೇಶ್ವರ ದೇವಾಲಯವೊಂದು ಮಾತ್ರ ಉಳಿದಿದೆ. ಅಲ್ಲಿದ್ದ ಮಂಗಲೇಶ್ವರ ದೇವಾಲಯ ನೆಲಸಮವಾಗಿದೆ. ಅದರ ಶಾಸನಗಳೂ ಶಿಲ್ಪಗಳೂ ಅಲ್ಲಲ್ಲಿ ಚದರಿ ಬಿದ್ದಿವೆ. ಅಲ್ಲಿಯೇ ಭೂಮಿಯಲ್ಲಿ ದೊರೆತ, ಆ ದೇವಾಲಯಕ್ಕೆ ಸೇರಿದ್ದ, ಕೆಲವು ಲೋಹಮೂರ್ತಿಗಳಲ್ಲಿ ನಟರಾಜ ಮತ್ತು ಸೋಮಸ್ಕಂದರ ಮೂರ್ತಿಗಳು ಸುಂದರವಾಗಿವೆ. ಮಳೂರು ಪಟ್ಟಣದ ನಾರಾಯಣಸ್ವಾಮಿ ದೇವಾಲಯ ಚಿಕ್ಕದಾದರೂ ಸುಂದರವಾದ್ದು. ಒಂದೇ ಅಂತಸ್ತಿನ ಗೋಪುರವುಳ್ಳ ಇದರ ಗರ್ಭಗೃಹ ತಡಿಮಾಲಿಂಗಿಯ ಜನಾರ್ದನ ದೇವಾಲಯದ ಮಾದರಿಯಲ್ಲಿದೆ.

ಕರ್ನಾಟಕದಲ್ಲಿರುವ ಚೋಳ ದೇವಾಲಯಗಳಲ್ಲಿಯೇ ಒಂದು ಉತ್ತಮವಾದ ನಿರ್ಮಾಣವೆಂದರೆ ಬೆಂಗಳೂರಿನ ಬಳಿಯ ಬೇಗೂರಿನಲ್ಲಿರುವ ಚೋಳೇಶ್ವರ ಗುಡಿ. ಗಂಗರ ಸಾಮಂತ ನಾಗತ್ತರ ಇಲ್ಲಿ ಕಟ್ಟಿಸಿದ್ದ ನಾಗೇಶ್ವರ ದೇವಾಲಯದ ಪ್ರತಿಕೃತಿ. ನಂದಿಯಲ್ಲಿರುವ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳನ್ನು ನೆನಪಿಗೆ ತರುವ ಈ ಜೋಡಿ ದೇವಾಲಯಗಳು ಗಂಗ ಮತ್ತು ಚೋಳರ ಕಾಲದಲ್ಲಿ ಪಲ್ಲವ ಶೈಲಿ ಹೇಗೆ ಪ್ರಚಲಿತವಿತ್ತು ಎಂಬುದನ್ನು ಸೂಚಿಸುತ್ತವೆ. ಪುಟ್ಟದಾದ ಗರ್ಭಗೃಹ, ಅಂತರಾಳ, ಗುಂಡು ಕಂಬಗಳಿರುವ ನವರಂಗ, ಮೂರು ಅಂತಸ್ತಿನ ಶಿಲಾಗೋಡೆಗಳ ಮೇಲೆ ಬಿಡಿಸಿರುವ ಅರೆಗಂಬಗಳು, ಆಳವಿಲ್ಲದ ಗೂಡುಗಳು, ಲೋವೆಯ ಕೆಳಗಿನ ಹಂಸಸಾಲು, ಗೋಪುರದ ಒಂದೊಂದು ಅಂತಸ್ತಿನಲ್ಲಿಯೂ ಇರುವ ಪಂಜರ, ಗಜಪೃಷ್ಠಾಕೃತಿಗಳು, ನಡುನಡುವೆ ದಕ್ಷಿಣಾಮೂರ್ತಿ ಮೊದಲಾದ ಅತ್ಯಂತ ಸುಂದರವಾದ ಮೂರ್ತಿಗಳು, ಬಳ್ಳಿ, ಸುರುಳಿ ಮುಂತಾದ ಅಲಂಕರಣಗಳಿಂದ ಕೂಡಿದ ಸುಂದರವಾದ ಬಾಗಿಲುವಾಡ, ಸ್ವಾಭಾವಿಕವಾಗಿ ಕಾಣಿಸುವ ನಂದಿಗಳಿಂದ ಕೂಡಿದ ಈ ದೇವಾಲಯದ ಸೌಂದರ್ಯ ಗಮನಿಸಬೇಕಾದುದು. ದೇವಾಲಯದ ಅಕ್ಕಪಕ್ಕಗಳಲ್ಲಿ ಒಂದೇ ಆವರಣದಲ್ಲಿ ನಿರ್ಮಿತವಾಗಿರುವ ಇನ್ನು ಕೆಲವು ಪುಟ್ಟ ದೇವಾಲಯಗಳೂ ಚೋಳರ ಕಾಲಕ್ಕೇ ಸೇರಿದವು.

ಬೆಂಗಳೂರು ಜಿಲ್ಲೆಯಲ್ಲಿರುವ ಮತ್ತೊಂದು ಪ್ರಸಿದ್ಧ ದೇವಾಲಯ ಬಿನ್ನಮಂಗಲದ ಮುಕ್ತಿನಾಥೇಶ್ವರ. ಇದರ ಹೊರಗೋಡೆಯ ಮೇಲೆ ಅಲ್ಲಲ್ಲಿ ದಪ್ಪನಾದ ಅರೆಗಂಬಗಳು, ನಡುವೆ ದೊಡ್ಡದಾದ, ಆದರೆ ಆಳವಿಲ್ಲದ ಗೂಡುಗಳು, ಗೂಡುಗಳಲ್ಲಿಯೂ ಗೋಡೆಯ ಮೇಲೂ ಇರುವ ಕಾಳಿಂಗಮರ್ದನ, ಸದಾಶಿವ, ದಕ್ಷಿಣಾಮೂರ್ತಿ, ತಾಂಡವೇಶ್ವರ, ಬ್ರಹ್ಮ, ಚಾಮುಂಡಿ ಮೊದಲಾದ ಅಷ್ಟು ನಯವಾಗಿ ಕಂಡರಿಸದಿದ್ದರೂ ಆಕರ್ಷಕವಾಗಿರುವ ಮೂರ್ತಿಗಳಿವೆ. ಗರ್ಭಗೃಹದ ಮೇಲೆ ಇಟ್ಟಿಗೆಯಿಂದ ಕಟ್ಟಿದ ಗೋಪುರವಿದೆ. ನವರಂಗದ ಕಂಬಗಳು ಚೌಕಾಕೃತಿಯಲ್ಲಿವೆ. ಇವು ಹಲವು ಬಗೆಯ ಕಂಡರಣೆಗಳಿಂದ ತುಂಬಿ ವಿಶಿಷ್ಟವೆನಿಸಿವೆ.

ಕೋಲಾರ ಜಿಲ್ಲೆಯಂತೂ ಹಲವಾರು ಚೋಳ ದೇವಾಲಯಗಳಿಗೆ ಪ್ರಸಿದ್ಧವಾಗಿದೆ. ರಾಜೇಂದ್ರ ಚೋಳನ ಕಾಲದಲ್ಲಿ ಕೋಲಾರದಲ್ಲಿ ಕಟ್ಟಿಸಿದ ಪ್ರಸಿದ್ಧ ದೇವಾಲಯ ಪಿಡಾರಿಯಾರ್ ಅಥವಾ ಕೋಲಾರಮ್ಮನದು. ಮೊದಲು ಅಲ್ಲಿದ್ದ ಇಟ್ಟಿಗೆಯ ದೇವಾಲಯಕ್ಕೆ ಬದಲಾಗಿ ಕಲ್ಲಿನ ಈ ಸುಂದರ ದೇವಾಲಯವನ್ನು ಕಟ್ಟಿದುದಾಗಿ ಅಲ್ಲಿನ ಒಂದು ಶಾಸನದಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಈಗ ಉಳಿದುಬಂದಿರುವ ಚೋಳ ದೇವಾಲಯಗಳಲ್ಲಿಯೇ ದೊಡ್ಡದೂ ಸುಂದರವಾದುದೂ ಆದ ಈ ದೇವಾಲಯದ ಹೊರ ಗೋಡೆಗಳಲ್ಲಿ ತಮಿಳು ಶಾಸನಗಳು ತುಂಬಿವೆ. ಈ ದೇವಾಲಯಗಳಲ್ಲಿರುವ ಮಹಿಷಾಸುರಮರ್ದಿನಿಯ ಮೂರ್ತಿ ಅತ್ಯಂತ ಸತ್ವಯುತವಾದದ್ದು. ಇದೇ ಮೂರ್ತಿಯನ್ನು ಹೋಲುವ ಲೋಹಬಿಂಬವೊಂದು ಇತ್ತೀಚೆಗೆ ತಲಕಾಡಿನ ಬಳಿ ಮರಳಿನಲ್ಲಿ ದೊರೆತಿದೆ. ಅದು ಚೋಳರ ಕಾಲದ ಲೋಹಶಿಲ್ಪದ ಒಂದು ಆಕರ್ಷಕ ಮಾದರಿಯಾಗಿದೆ. ಈ ಲೋಹಮೂರ್ತಿಗೆ ಚಿನ್ನದ ಲೇಪನ ಇದ್ದ ಗುರುತುಗಳಿರುವುದೊಂದು ವಿಶೇಷ.

ನಂದಿಯಲ್ಲಿರುವ, ಗಂಗರ ಕಾಲಕ್ಕೆ ಸೇರಿದ, ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳ ಮುಂದಿರುವ ನಂದಿಮಂಟಪಗಳು ರಾಜೇಂದ್ರಚೋಳನ ಕಾಲದಲ್ಲಿ ನಿರ್ಮಿತವಾಗಿದ್ದಿರಬೇಕೆಂಬುದನ್ನು ಅವುಗಳ ಮೇಲಿರುವ ರಾಜೇಂದ್ರನ ಶಾಸನದಿಂದ ಊಹಿಸಬಹುದು. ಬೇತಮಂಗಲದ ವಿಜಯೇಂದ್ರಸ್ವಾಮಿ ದೇವಾಲಯವೂ ಹೀಗೆಯೇ ಮೊದಲು ಗಂಗರ ಕಾಲದಲ್ಲಿ ಇಟ್ಟಿಗೆಯಿಂದ ನಿರ್ಮಿತವಾದುದಾಗಿದ್ದು, ಚೋಳರ ಕಾಲದಲ್ಲಿ ಇದರ ಮುಂದಿನ ಭಾಗವನ್ನು ಕಲ್ಲಿನಲ್ಲಿ ಕಟ್ಟಿದ್ದಾರೆ. ಇದೇ ರೀತಿ ಆವನಿಯಲ್ಲಿದ್ದ ಪ್ರಾಚೀನ ದೇವಾಲಯಗಳಿಗೆ ಚೋಳರ ಹಲವು ಭಾಗಗಳನ್ನು ಸೇರಿಸಿದ್ದಾರೆ. ಕೋಲಾರದ ಸಮೀಪದಲ್ಲಿ ನರಸಾಪುರದಲ್ಲಿ, ಭೂಮಿಯಲ್ಲಿ

ಅಡಗಿಸಿಟ್ಟಿದ್ದ, ಈಚೆಗೆ ಹೊರತೆಗೆದ, ನಟರಾಜನ, ಐದು ಅಡಿಗಳಷ್ಟು ಎತ್ತರದ, ಪಂಚಲೋಹದ ಮೂರ್ತಿ ಒಂದು ಅಪೂರ್ವ ಕೃತಿ. ನೀಳವಾದ ಕೈಕಾಲುಗಳು, ವಿಶಾಲವಾದ ಎದೆ ಭುಜಗಳು, ಪ್ರಮಾಣಬದ್ಧ ಅಂಗಸೌಷ್ಠವ, ಬಲಗಾಲಿನಿಂದ ಅಪಸ್ಮಾರವನ್ನು ತುಳಿದು ಎಡಗಾಲನ್ನು ಎತ್ತಿ ಪಕ್ಕಕ್ಕೆ ಚಾಚಿ ಅಭಯ ಡಮರು ಪ್ರಭೆ ಲಂಬಹಸ್ತಗಳಿಂದ ಬಳುಕಿ ಆಡುತ್ತಿರುವ ತಾಂಡವ ನೃತ್ಯ, ಇಕ್ಕೆಲಗಳಲ್ಲಿಯೂ ಅಲೆ ಅಲೆಯಾಗಿ ಹರಡಿರುವ ಜಟೆ, ಮೇಲೆ ಕೆದರಿರುವ ಗರಿ, ಲೀಲಾವಿನೋದದಿಂದ ಪ್ರಸನ್ನವಾಗಿರುವ ಮುಖಮುದ್ರೆ - ಇವುಗಳಿಂದ ಈ ನಟರಾಜನ ಭವ್ಯಮೂರ್ತಿ ಕರ್ನಾಟಕದ ಲೋಹ ಮೂರ್ತಿಗಳಲ್ಲಿ ಒಂದು ಅತ್ಯುತ್ತಮ ಕೃತಿ ಎನ್ನಬಹುದು. ಮುಳಬಾಗಿಲು, ನಂಗಲಿಗಳಲ್ಲಿಯೂ ಚೋಳರ ಕಾಲದ ಹಲವು ಲೋಹಮೂರ್ತಿಗಳು ದೊರೆತಿವೆ.

ಇವುಗಳಲ್ಲದೆ ಅನೇಕ ಸಣ್ಣಪುಟ್ಟ ದೇವಾಲಯಗಳು, ಅವುಗಳ ಅವಶೇಷಗಳು ಚೋಳರು ಆಕ್ರಮಿಸಿದ್ದ ಕರ್ನಾಟಕದ ಭಾಗಗಳಲ್ಲಿ ಅಲ್ಲಲ್ಲಿ ಚದರಿವೆ. ಇವರು ಈ ಭಾಗವನ್ನಾಳಿದ ಅವಧಿಯಲ್ಲಿ ಇಲ್ಲಿ ನಿರ್ಮಾಣವಾದ ವಾಸ್ತುಶಿಲ್ಪರೀತಿಯ ಬೆಳವಣಿಗೆಯನ್ನು ಈಗ ದೊರೆತಿರುವ ಆಧಾರಗಳಿಂದ ಸ್ಪಷ್ಟವಾಗಿ ಗುರುತಿಸುವುದು ಸಾಧ್ಯವಲ್ಲದಿದ್ದರೂ ಚೋಳ ವಾಸ್ತುಶಿಲ್ಪ ಶೈಲಿ ಕರ್ನಾಟಕದಲ್ಲಿ ವ್ಯಾಪಕವಾಗಿ ಹರಡಿತ್ತೆನ್ನುವುದು ಮಾತ್ರ ಸ್ಪಷ್ಟ. ಇಂದಿಗೂ ಹಳ್ಳಿಗಳಲ್ಲಿ ಯಾವ ಕಲ್ಲಿನ ದೇವಾಲಯವಿದ್ದರೂ ಅಲ್ಲಿನವರು ಅದನ್ನು ಚೋಳ ಪ್ರತಿಷ್ಠೆಯೆಂದೇ ಗುರುತಿಸುವುದನ್ನು ಕಂಡಾಗ ಚೋಳ ವಾಸ್ತುಶಿಲ್ಪ ಶೈಲಿ ಕನ್ನಡನಾಡಿನ ಜನಮನದ ಮೇಲೆ ಪ್ರಭಾವವನ್ನು ಎಷ್ಟರಮಟ್ಟಿಗೆ ಅಚ್ಚೊತ್ತಿದೆ ಎಂಬುದು ಗೊತ್ತಾಗುತ್ತದೆ. (ಎಂ.ಎಚ್.)

**ಶಾಸನಗಳು :** ಚೋಳರು ತಮ್ಮ ಆಳಿಕೆಯ ಕಾಲದಲ್ಲಿ ಕರ್ನಾಟಕದ ದಕ್ಷಿಣ ಹಾಗೂ ಪೂರ್ವಭಾಗಗಳಲ್ಲಿ ಅನೇಕ ಶಾಸನಗಳನ್ನು ಹಾಕಿಸಿದರು. ಇವುಗಳಲ್ಲಿ ಮೊದಲಿನ ಕೆಲವು ಶಾಸನಗಳು ಕನ್ನಡ ಭಾಷೆಯಲ್ಲೂ ಅನಂತರದ ಶಾಸನಗಳು ತಮಿಳಿನಲ್ಲೂ ಇವೆ. ಚೋಳರಸರು ತಮ್ಮ ಶಾಸನಗಳನ್ನು ರೂಢಿಯಂತೆ ಪ್ರತ್ಯೇಕವಾಗಿ ತಯಾರಿಸಿದ ಕಲ್ಲುಗಳ ಮೇಲೆ ಕೆತ್ತಿಸಿ, ತಾವು ಕೊಟ್ಟ ದತ್ತಿಗಳ ಬಳಿ ನೆಡಿಸುತ್ತಿರಲಿಲ್ಲ; ಆದರೆ ತಾವು ಕಟ್ಟಿಸಿದ ದೇವಸ್ಥಾನಗಳ ಕಲ್ಲು ಗೋಡೆಗಳು, ತಳಪಾದಿ ಕಲ್ಲುಗಳು ಹಾಗೂ ಮೇಲ್ಚಾವಣಿಗಳ ಮೇಲೆ ಕೆತ್ತಿಸುತ್ತಿದ್ದರು. ಉದಾಹರಣೆಗೆ ಕೋಲಾರದ ಕೋಲಾರಮ್ಮನ ದೇವಸ್ಥಾನ, ಯಳಂದೂರು ತಾಲ್ಲೂಕಿನ ಅಗರದ ರಾಮೇಶ್ವರ ದೇವಸ್ಥಾನ ಮತ್ತು ಲಕ್ಷ್ಮೀನೃಸಿಂಹಸ್ವಾಮಿ ದೇವಸ್ಥಾನದ ಶಾಸನಗಳನ್ನು ಉಲ್ಲೇಖಿಸಬಹುದು.

ತಮಿಳುನಾಡಿನ ಚೋಳರ ಶಾಸನಗಳು ರಾಜರು ಪಟ್ಟಕ್ಕೆ ಬಂದ ಸಂವತ್ಸರಗಳನ್ನು ಮಾತ್ರ ನಮೂದಿಸುತ್ತವೆ. ಇದರಿಂದಾಗಿ ರಾಜರ ಕಾಲ ನಿರ್ಣಯ ಮಾಡಲು ಬಹಳ ದುಸ್ತರ. ಆದರೆ ಕರ್ನಾಟಕದಲ್ಲಿನ ಚೋಳರಸರ ಶಾಸನಗಳು ರಾಜನ ಪಟ್ಟಾಭಿಷೇಕ ಸಂವತ್ಸರವನ್ನು ಮಾತ್ರವಲ್ಲದೆ, ಶಕ ಸಂವತ್ಸರವನ್ನೂ ನಮೂದಿಸುತ್ತವೆ. ಇದರಿಂದ ಚೋಳರಸರ ಕಾಲವನ್ನು ಖಚಿತವಾಗಿ ನಿರ್ಧರಿಸಲು ಕರ್ನಾಟಕದ ಶಾಸನಗಳು ಈ ದಿಶೆಯಲ್ಲಿ ಅಮೂಲ್ಯ ಕೊಡುಗೆಯನ್ನು ನೀಡಿವೆ. ಅನೇಕ ವೇಳೆ ಶಾಸನಗಳಲ್ಲಿ ಚೋಳರಾಜರು ತಮ್ಮ ಬಿರುದುಗಳನ್ನೇ ಉಪನಾಮಗಳಾಗಿ ತಮ್ಮ ಹೆಸರುಗಳ ಜೊತೆಯಲ್ಲಿ ನಮೂದಿಸಿಕೊಂಡಿರುವುದರಿಂದ ಅವರ ನಿಜನಾಮಧೇಯಗಳನ್ನು ಗುರುತಿಸಲು ಬಹಳ ಕಷ್ಟವಾಗುತ್ತದೆ.

ಈ ಶಾಸನಗಳು ಸಾಮಾನ್ಯವಾಗಿ ರಾಜರ ಪ್ರಶಸ್ತಿ ಪರಾಕ್ರಮಗಳನ್ನು, ಅವರು ಮಾಡಿದ ದಾನಧರ್ಮಗಳನ್ನು, ಅವರು ಕಟ್ಟಿಸಿದ ದೇವಾಲಯಗಳನ್ನು ಕುರಿತು ವಿವರವಾಗಿ ತಿಳಿಸುತ್ತವೆ. ಅಲ್ಲದೆ ಈ ಶಾಸನಗಳಿಂದ ಆ ಕಾಲದ ರಾಜರುಗಳ ಆಡಳಿತ ಪದ್ಧತಿ ಹಾಗೂ ಸಾಮಾಜಿಕ ವ್ಯವಸ್ಥೆಯನ್ನೂ ತಿಳಿಯಬಹುದಾಗಿದೆ. ಚನ್ನಪಟ್ಟಣ ತಾಲ್ಲೂಕಿನ ಮಳೂರು ನಾರಾಯಣಸ್ವಾಮಿ ದೇವಸ್ಥಾನದಲ್ಲಿರುವ ರಾಜರಾಜದೇವನ 23ನೆಯ ಆಳಿಕೆಯ ಸಂವತ್ಸರವನ್ನು ಉಲ್ಲೇಖಿಸುವ ಶಾಸನ. ರಾಜರಾಜ ಕಾಂದಲೂರು ಶಾಲೈ (ಮಲಬಾರಿನ ಒಂದು ರೇವುಪಟ್ಟಣ) ಎಂಬಲ್ಲಿ ಹಲವಾರು ಹಡಗುಗಳನ್ನು ನಾಶಪಡಿಸಿದನೆಂದು ತಿಳಿಸುತ್ತದೆ. ಇದಲ್ಲದೆ ಅವನು ವೆಂಗಿನಾಡು (ಕೃಷ್ಣಾ –ಗೋದಾವರಿ ಮಧ್ಯದ ತೆಲುಗು ಸೀಮೆ), ಗಂಗಪಾಡಿ, ನುಲುಂಬಪಾಡಿ, ತಡಿಗೈಪಳ್ಳಿ, ಕುಂದುಮಲೈನಾಡು, ಕೊಲ್ಲಂ, ಕಳಿಂಗ, ಇಳಾಮಂಡಲ (ಶ್ರೀ ಲಂಕಾ), ಸಂಗಲರು, ರಟ್ಟಪಾಡಿ ಏಳೂವರೆ ಲಕ್ಷ ಹನ್ನೆರಡು ಸಾವಿರ ಪುರಾತನ ದ್ವೀಪಗಳು ಹಾಗೂ ಪಾಂಡ್ಯದೇಶಗಳನ್ನು ಜಯಿಸಿದನೆಂದು ತಿಳಿಸುತ್ತದೆ. ಹುಣಸೂರು ತಾಲ್ಲೂಕಿನ ಶಾಸನಗಳು ರಾಜ ಪ್ರತಿನಿಧಿಗಳ ಪರಿಪಾಲನಾಕ್ರಮವನ್ನು ವಿಶದಪಡಿಸುತ್ತವೆ. ರಾಜೇಂದ್ರ ಚೋಳನ ಶಾಸನವೊಂದರಲ್ಲಿ ವಿಶಿಷ್ಟವಾದ ನ್ಯಾಯಪದ್ಧತಿಯ ವಿವರಗಳನ್ನು ಕಾಣಬಹುದಾಗಿದೆ. ಹೀಗೆಯೇ ಭೂಮಿಗಳ ಅಳತೆ, ಕಂದಾಯ ಹಾಗೂ ಸುಂಕಗಳ ಬಗ್ಗೆ ಈ ಶಾಸನಗಳು ಅಮೂಲ್ಯವಾದ ಮಾಹಿತಿಯನ್ನು ನೀಡುತ್ತವೆ.

ತಮಿಳು ಶಾಸನ, ಕೋಲಾರಮ್ಮನ ದೇವಾಲಯ, ಕೋಲಾರ

ಕನ್ನಡ ಭಾಷೆಯಲ್ಲಿರುವ ಕೆಲವು ಶಾಸನಗಳು ಆ ಕಾಲದ (10-11ನೆಯ ಶತಮಾನಗಳ) ಭಾಷಾ ಸ್ವರೂಪದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ರಾಜಾಧಿರಾಜನ ಆಳಿಕೆಗೆ ಸಂಬಂಧಿಸಿದ ಶಾಸನ ಸರಳ ಹಾಗೂ ಸುಂದರವಾದ, ಮನಕರಗಿಸುವ ಕನ್ನಡ ಜನಪದಗೀತೆಯಾಗಿದೆ. ಈ ಶಾಸನದಲ್ಲಿ ಅತ್ಯಂತ ಹೃದಯವಿದ್ರಾವಕವಾದ ಘಟನೆಯೊಂದು ಸಮರ್ಥ ಹಾಗೂ ಸತ್ವಶಾಲಿಯಾದ ಭಾಷೆಯ ಸೊಗಡಿನಲ್ಲಿ ಮೂಡಿ ಬಂದಿದೆ. ಕನ್ನಡದ ಸೊಬಗನ್ನು ಸಮರ್ಪಕವಾದ ರೀತಿಯಲ್ಲಿ ಚಿತ್ರಿಸಿರುವ ಈ ಶಾಸನ ಭಾವ ಭಾಷೆಗಳ ಸಹಜತೆಗೆ ಹಾಗೂ ಅವುಗಳ ಬಂಧುರತೆಗೆ ಶ್ರೇಷ್ಠ ನಿದರ್ಶನವಾಗಿದೆ (ನೋಡಿ: ಮಲ್ಲ). ತಿರುಮಕೂಡಲು ನರಸೀಪುರ ತಾಲ್ಲೂಕಿನ ಕಲಿಯೂರು ಗ್ರಾಮದ ಕನ್ನಡ ಶಾಸನ ರಾಜ ರಾಜದೇವನ ಮಂತ್ರಿ ಹಾಗೂ ಸೇನಾನಿಯಾಗಿದ್ದ ಅಪ್ರಮೇಯನನ್ನು ಕುರಿತದ್ದಾಗಿದೆ. ಈ ಶಾಸನದ ಭಾಷೆ ಅತ್ಯಂತ ಪ್ರೌಢವಾಗಿದೆ. ಹಳಗನ್ನಡದ ಅಚ್ಚತನವನ್ನು ಅಂದವಾಗಿಸಿ ರೂಪಿಸುವುದರ ಜೊತೆಗೆ ಶೌರ್ಯ ಧೈರ್ಯಗಳಿಂದ ಹೋರಾಡಿದ ವೀರರ ಯುದ್ಧಗತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಶಾಸನ ಇನ್ನೊಂದು ದೃಷ್ಟಿಯಿಂದ ಕುತೂಹಲಕರವಾದದ್ದು. ಶಾಸನವನ್ನು ಬರೆಯಿಸಿ ಕೆತ್ತಿಸುವುದರ ಬಗ್ಗೆ ಮಾಹಿತಿಯನ್ನು ಇದರಿಂದ ಪಡೆಯಬಹುದಾಗಿದೆ. ಈ ಶಾಸನದಲ್ಲಿ ಶಾಸನವನ್ನು ಲೇಖಿನವೆಂದು ಕರೆಯಲಾಗಿದೆ. ಸಾಮಾನ್ಯವಾಗಿ ರಾಜನ ಆಸ್ಥಾನದಲ್ಲಿರುವ ಕವಿ ಅಥವಾ ಪಂಡಿತ ಶಾಸನವನ್ನು ರಚಿಸುತ್ತಿದ್ದ. ರಚಿಸಿದ ಶಾಸನವನ್ನು ಸೇನಬೋವ ಅಥವಾ ಅಕ್ಷರಜ್ಞನೊಬ್ಬ ಕಲ್ಲಿನ ಮೇಲಾಗಲಿ ತಾಮ್ರಪತ್ರದ ಮೇಲಾಗಲಿ ಬರೆಯುತ್ತಿದ್ದ. ಈ ಶಾಸನವನ್ನು ಕಲ್ಲುಕುಟಿಗ, ಬಡಗಿ, ಕಮ್ಮಾರ ಅಥವಾ ಅಕ್ಕಸಾಲಿಗ ಅಕ್ಷರರೇಖೆಗಳನ್ನು ಅನುಸರಿಸಿ ಕೆತ್ತುತ್ತಿದ್ದ. (ಎಸ್.ವಿ.ಎಸ್.ಬಿ)

**ನಾಣ್ಯಗಳು :** ಕರ್ನಾಟಕದ ಅನೇಕ ಪ್ರದೇಶಗಳನ್ನು ಕೆಲವುಕಾಲ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದ ಚೋಳರ ನಾಣ್ಯಗಳು ಕರ್ನಾಟಕದಲ್ಲಿಯೂ ದೊರೆತಿವೆ. ಚೋಳರ ನಾಣ್ಯೇತಿಹಾಸವನ್ನು ಅರಿಯಲು ಇವು ಸಹಕಾರಿಯಾಗಿವೆ. ದಕ್ಷಿಣಭಾರತದಲ್ಲಿ ಬೆಳ್ಳಿಯ ನಾಣ್ಯಗಳನ್ನು ಮೊತ್ತಮೊದಲಿಗೆ ಬಳಕೆಗೆ ತಂದ ಕೀರ್ತಿ ಚೋಳರಿಗೆ ಸೇರುತ್ತದೆ. ದೊರೆತಿರುವ ಚೋಳನಾಣ್ಯಗಳಲ್ಲಿ ಉತ್ತಮಚೋಳ ಹೊರಡಿಸಿದ ನಾಣ್ಯಗಳೇ ಹಳೆಯವು. ಇವನ ನಾಣ್ಯಗಳಲ್ಲಿ ಇಕ್ಕೆಡೆಗಳಲ್ಲೂ ಚಾಮರ ಸಹಿತವಾದ

ಛತ್ರಿಯ ಕೆಳಗೆ ದೀಪಸ್ತಂಭ, ಬಿಲ್ಲು, ಹುಲಿ ಮತ್ತು ಮೀನುಗಳ ಚಿತ್ರಗಳಿವೆ. ನಾಣ್ಯಗಳ ಹಿಂಭಾಗದಲ್ಲಿ ನಾಗರೀ ಅಥವಾ ಗ್ರಂಥಲಿಪಿಯಲ್ಲಿ ಉತ್ತಮಚೋಳ ಎಂಬ ಬರೆಹವಿದೆ. ಬಿಲ್ಲು, ಹುಲಿ ಮತ್ತು ಮೀನು ಕ್ರಮವಾಗಿ ಚೇರ, ಚೋಳ ಮತ್ತು ಪಾಂಡ್ಯ ಚಿಹ್ನೆಗಳು; ಉತ್ತಮ ಚೋಳ ತಮಿಳುದೇಶ ಮತ್ತು ಕೇರಳಗಳ ಸಾರ್ವಭೌಮನಾಗಿದ್ದನೆಂದು ಇದರಿಂದ ಗೊತ್ತಾಗುತ್ತದೆ. ಇದೇ ನಮೂನೆಯ ನಾಣ್ಯಗಳಲ್ಲಿ ಚನ್ದ್ರಶಾನ್ತ (ಚಂದ್ರಶಾಂತ) ಎಂಬ ಶಾಸನವಿದೆ. ಚಂದ್ರಶಾಂತ ಎಂಬುದು ಒಬ್ಬನ ಹೆಸರೇ ಅಥವಾ ಬಿರುದೇ ಎನ್ನುವುದು ತಿಳಿದುಬಂದಿಲ್ಲ. ಒಂದನೆಯ ರಾಜರಾಜ ಚಂದಪರಾಕ್ರಮ ಎಂಬ ಬಿರುದನ್ನು ಧರಿಸಿದ್ದುದರಿಂದ ಈ ನಮೂನೆಯ ನಾಣ್ಯಗಳನ್ನು ಅವನು ಹೊರಡಿಸಿರಬಹುದೆಂಬ ಊಹೆಯೂ ಇದೆ. ರಾಜರಾಜನ ನಾಣ್ಯಗಳಲ್ಲಿಯೂ ಹುಲಿ ಮೀನುಗಳ ಚಿತ್ರಗಳಿವೆ. ಹಿಂಭಾಗದಲ್ಲಿ ಶ್ರೀ ರಾಜರಾಜ ಎಂಬ ಬರೆಹವಿರುತ್ತದೆ. ರಾಜರಾಜನ ಬೇರೆ ನಮೂನೆಯ ನಾಣ್ಯಗಳೂ ದೊರೆತಿವೆ. ಒಂದು ನಮೂನೆಯ ನಾಣ್ಯಗಳಲ್ಲಿ ನಿಂತಿರುವ ಮತ್ತು ಕುಳಿತಿರುವ ರಾಜರಾಜನ ಚಿತ್ರವೂ ಹಿಂಭಾಗದಲ್ಲಿ ಶ್ರೀರಾಜರಾಜ ಎಂಬ ನಾಗರೀ ಶಾಸನವೂ ಇವೆ. ನಾಣ್ಯದ ಎರಡೂ ಕಡೆಗಳಲ್ಲಿ ಕುಳಿತಿರುವ ರಾಜನ ಚಿತ್ರ ಮತ್ತು ರಾಜರಾಜನೆಂಬ ಶಾಸನವಿರುವ ತಾಮ್ರದ ನಾಣ್ಯಗಳು ದೊರೆತಿವೆ. ಕುದುರೆಯನ್ನೇರಿರುವ ಮನುಷ್ಯನ ಚಿತ್ರವಿರುವ ನಾಣ್ಯ ಯೂಕ್ರಟೈಡಸ್ ಎಂಬುವನ ನಾಣ್ಯದ ನಮೂನೆಯನ್ನು ಹೋಲುತ್ತದೆ. ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುರಳೀಧರ ಕೃಷ್ಣನ ಚಿತ್ರ ಹಾಗೂ ವಿ ಅಥವಾ ವ ಎಂಬ ಅಕ್ಷರವಿದೆ. ಶ್ರೀಲಂಕಾವೀರ ಎಂಬ ಶಾಸನವಿರುವ ನಾಣ್ಯಗಳು ರಾಜರಾಜನವೇ ಎಂದು ತಿಳಿದುಬರುತ್ತದೆ. ಹುಲಿ, ಮೀನು ಮುಂತಾದ ಚಿತ್ರಗಳಿರುವ ನಾಣ್ಯಗಳನ್ನು ರಾಜೇಂದ್ರನೂ ಅಚ್ಚುಹಾಕಿಸಿ, ತನ್ನ ಹೆಸರಿನ ಶಾಸನವನ್ನು ಸೇರಿಸಿದ. ತನ್ನ ಉತ್ತರಾಪಥದ ದಿಗ್ವಿಜಯಗಳ ಜ್ಞಾಪಕಾರ್ಥವಾಗಿ ಗಂಗೈಕೊಂಡಚೋಳನ್ ಎಂಬ ಬಿರುದಿನ ಶಾಸನವಿರುವ ನಾಣ್ಯಗಳನ್ನು ಹೊರಡಿಸಿದ. ಯುದ್ಧಮಲ್ಲ ಮತ್ತು ಜಯ (ಜಯಂಗೊಂಡ) ಎಂಬ ಶಾಸನಗಳಿರುವ ನಾಣ್ಯಗಳೂ ದೊರೆತಿವೆ. ತನ್ನ ಹೆಸರಿನ ಶಾಸನವಿರುವ ನಾಣ್ಯಗಳನ್ನು ಕುಲೋತ್ತುಂಗನೂ ವೃಷಭದ ಚಿತ್ರ ಮತ್ತು ವಿ ಎಂಬ ಶಾಸನವಿರುವ ನಾಣ್ಯಗಳನ್ನು ವಿಕ್ರಮ ಚೋಳನೂ ವೃಷಭ ಮತ್ತು ಕಠಾರಿಯ ಚಿತ್ರವಿರುವ ನಾಣ್ಯಗಳನ್ನು ಎರಡನೆಯ ಕುಲೋತ್ತುಂಗನೂ ವೃಷಭ ಮತ್ತು ಶಂಖದ ಚಿತ್ರವಿರುವ ನಾಣ್ಯಗಳನ್ನು ಎರಡನೆಯ ರಾಜರಾಜ ಎರಡನೆಯ ರಾಜಾಧಿರಾಜ ಮತ್ತು ಎರಡನೆಯ ರಾಜೇಂದ್ರರೂ ಹೊರಡಿಸಿದರು. (ಎಚ್.ಎಂ.ಎನ್.ಆರ್.)

**ಚೌಂಡರಸ :** ಸು.1185-1240. ಬ್ರಾಹ್ಮಣ ಕವಿ. ದಶಕುಮಾರ ಚರಿತ್ರೆ, ಬಾಣಾಸುರವಿಜಯ, ನಳಚರಿತ್ರೆ ಎಂಬ ಗ್ರಂಥಗಳ ಕರ್ತೃ. ಈತನ ತಂದೆ ಮಧುಸೂಧನ, ತಾಯಿ ಮಲ್ಲವ್ವೆ, ಹೆಂಡತಿ ಲಕ್ಷ್ಮೀ, ಅಣ್ಣ ಸರಸಕವೀಶ್ವರ. ಕವಿಗೆ ಚೌಂಡರಾಜನೆಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಕವಿರಾಜಶೇಖರ, ಕವಿತಾವಿಲಾಸ ಎಂಬವು ಈತನ ಬಿರುದುಗಳು. ಪೂರ್ವಕವಿಗಳಲ್ಲಿ ಪಂಪ, ಪೊನ್ನ, ಚಂದ್ರ, ರುದ್ರಭಟ್ಟ (ಸು.1185) ಇವರನ್ನು ಸ್ಮರಿಸಿದ್ದಾನೆ. 'ಪಂಡರೀರಾಯಭಂಗ ವಿಟ್ಠಲಂ', ವಿಟ್ಠಲಪದಾಂಭೋಜಾತ ಭೃಂಗ' ಎಂದು ಹೇಳಿಕೊಂಡಿರುವುದರಿಂದ ಈತ ಪಂಡರಾಪುರದವನಾಗಿರಬೇಕೆಂದೂ ಪಂಡರಾಪುರದ ವಿಟ್ಠಲನ ಭಕ್ತನೆಂದೂ ಊಹಿಸಬಹುದು.

ಇವನು ನಳಚರಿತ್ರೆಯಲ್ಲದೆ ಬಾಣಾಸುರವಿಜಯ ಮತ್ತು ದಶಕುಮಾರ ಚರಿತ್ರೆ ಎಂಬ ಕಾವ್ಯಗಳನ್ನು ರಚಿಸಿರುವುದಾಗಿ ನಳಚರಿತ್ರೆಯಿಂದ ತಿಳಿದುಬರುತ್ತದೆ. ಬಾಣಾಸುರವಿಜಯ ಉಪಲಬ್ಧವಿಲ್ಲ. ಈತನ ಉಳಿದೆರಡು ಕೃತಿಗಳ ಕೆಲವು ಪದ್ಯಗಳು ಮಲ್ಲಿಕಾರ್ಜುನನ (ಸು.1240) ಸೂಕ್ತಿಸುಧಾರ್ಣವ ಗ್ರಂಥದಲ್ಲಿ ಸಂಕಲಿತವಾಗಿವೆ.

ದಶಕುಮಾರಚರಿತ್ರೆ ಚಂಪೂ ಗ್ರಂಥ. ದಂಡಿಯ ಸಂಸ್ಕೃತ ದಶಕುಮಾರ ಚರಿತೆ ಈ ಗ್ರಂಥಕ್ಕೆ ಆಕರ. ಹತ್ತುಜನ ರಾಜಕುಮಾರರ ಸಾಹಸ, ಪ್ರೇಮ ಇಲ್ಲಿಯ ಕಥಾವಸ್ತು. ಮುಖ್ಯ ಕಥಾನಕ ಯಥಾ ಮೂಲವಾದರೂ ವರ್ಣನೆಗಳಲ್ಲಿ ಮೂಲದಲ್ಲಿಲ್ಲದ ವಿಸ್ತಾರ ಮತ್ತು ಸ್ವತಂತ್ರ ಕಲ್ಪನೆಗಳು ಬಂದಿವೆ. ಕಥನಕಲೆಯಲ್ಲಿ ಸಹಜಗತಿ ಇದೆ. ಬಂಧ ಲಕ್ಷಣಬದ್ಧವಾಗಿಯೂ ಲಲಿತವಾಗಿಯೂ ಇದೆ.

ನಳಚರಿತ್ರೆ ಸು.800 ಪದ್ಯಗಳುಳ್ಳ ಚಂಪೂಕಾವ್ಯ. ಮಹಾಭಾರತದ ನಳೋಪಾಖ್ಯಾನವನ್ನು ಮೂಲವಾಗಿಟ್ಟುಕೊಂಡು ಈ ಕೃತಿಯನ್ನು ರಚಿಸಿರುವಂತೆ ಊಹಿಸಲು ಅವಕಾಶವಿದೆ. ಚಂಪೂ ಸಂಪ್ರದಾಯವನ್ನನುಸರಿಸಿ ಈ ಕಾವ್ಯ ಪ್ರೌಢವಾಗಿದೆ. ವರ್ಣನೆಗಳಲ್ಲಾಗಲಿ ಪಾತ್ರನಿರೂಪಣೆಯಲ್ಲಾಗಲಿ ಹೇಳಿಕೊಳ್ಳುವಂಥ ಕಾವ್ಯಾಂಶ ಕಂಡುಬರುವುದಿಲ್ಲ. (ಎಸ್.ಎನ್.ಕೆ.)

**ಚೌಟ ವಂಶ :** ಸು.12-18ನೆಯ ಶತಮಾನದವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಪ್ರದೇಶದಲ್ಲಿ ರಾಜ್ಯವಾಳಿದ ಕಿರುರಾಜಮನೆತನ. ಮೂಲತಃ ಉಲ್ಲಾಳದ ಬಳಿಯ ಸೋಮೇಶ್ವರ ಇವರ ರಾಜಧಾನಿಯಾಗಿದ್ದು ಕ್ರಮೇಣ ಅದು ಪುತ್ತಿಗೆಗೆ ಹಾಗೂ ಅನಂತರ ಮೂಡಬಿದರೆಗೆ ಬದಲಾಯಿತು. ಚುಟು, ಚತುರ್ಥ ಅಥವಾ ಚಾವುಡ (ರಜಪೂತ)ದಿಂದ ಚೌಟ ಎಂಬ ಪದ ರೂಢಿತವಾಗಿರಬಹುದೆಂಬ ಅಭಿಪ್ರಾಯಗಳಿವೆ.

ಸೋಮವಾರಪೇಟೆ ತಾಲ್ಲೂಕಿನ ಉಲುಗುಲಿ ಗ್ರಾಮದ 1264ರ ಶಾಸನವೊಂದರಲ್ಲಿ ಚಉಟು ಎಂದು ಪ್ರಪ್ರಥಮ ಉಲ್ಲೇಖ ದೊರೆಯುತ್ತದೆ. ಸ್ಥಳೀಯ ಸಂಪ್ರದಾಯದ ಪ್ರಕಾರ ಚೌಟ ವಂಶಸ್ಥರು ಶಿವಮೊಗ್ಗದ ಹೊಸನಗರ ಪ್ರದೇಶದಿಂದ ಬಂದವರು.

ಚೌಟವಂಶಕ್ಕೆ ಸೇರಿದವರೆಂದು ಕೆಲವು ವಿದ್ವಾಂಸರು ಊಹಿಸುವ ತಿರುಮಲರಾಯ (1169-79), ಚೆನ್ನರಾಯ (1179-1219) ಮತ್ತು ದೇವರಾಯ (1219-45) ಮೊದಲಾದ ಅರಸರ ಬಗ್ಗೆ ವಿವರಗಳೇನೂ ತಿಳಿಯದು. ಇವರ ಉಲ್ಲೇಖವಿರುವ ಶಾಸನಗಳೂ ದೊರೆತಿಲ್ಲ. 1390ರ ಶಾಸನವೊಂದರಲ್ಲಿ ವಿಕ್ರಚೌಟನೆಂಬ ಅರಸನ ಉಲ್ಲೇಖವಿದೆ. 1398ರ ಉತ್ತರ ಕನ್ನಡ ಜಿಲ್ಲೆಯ ಕೈಕಿಣಿ ಗ್ರಾಮದ ಶಾಸನಗಳಿಂದ ವಿಜಯನಗರದ ಅರಸ ಇಮ್ಮಡಿ ಹರಿಹರನ ಕಾಲದಲ್ಲಿ ಮಹಾಮಂಡಲೇಶ್ವರ ಮಂಗಪ್ಪ ದಣ್ಣಾಯಕ ಚೌಟರನ್ನು ಸೋಲಿಸಿದ ಸಂಗತಿ ತಿಳಿದುಬರುತ್ತದೆ. 1431ರ ಪುತ್ತೂರ ಶಾಸನದಲ್ಲಿ ಉಕ್ತನಾಗಿರುವ ಚೌಟ ಸಾಂತೆಯ ಶಾಸನಗಳಿಂದ ತಿಳಿದುಬರುವ ಚೌಟ ದೊರೆ. ಮಂಗಳೂರು ತಾಲ್ಲೂಕಿನ ಅದ್ದೂರು ಶಾಸನದ (1434) ಜೋಗಿ ಒಡೆಯ, 1465ರ ಒಂದು ಶಾಸನದಲ್ಲಿ ಹೇಳಿರುವ 'ಪುತ್ತಿಗೆಯ ಜನನದಲು ಬಾಳುವ' ಅಲ್ಲಪ್ಪಶೇಖ ಚೌಟ ಇವರು ಇತರ ಶಾಸನೋಕ್ತರು. 1507ರಲ್ಲಿ ತಿರುಮಲರಾಯಚೌಟ ಪೊಳಲಿ ದೇವಾಲಯಕ್ಕೆ ದತ್ತಿಬಿಟ್ಟ. ಬಹುಶಃ ಈತ ಕೃಷ್ಣದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದಿರಬೇಕು. ಇವನ ಅನಂತರ ತುಳುವರಸ ಚೌಟ ಮತ್ತು ತರುವಾಯ ತಿರುಮಲರಸ ಚೌಟ ಪಟ್ಟಕ್ಕೆ ಬಂದರು. ಈ ತಿರುಮಲರಸ ಕಳಸ-ಕಾರ್ಕಳ ಪ್ರಭುವಾದ ಪಾಂಡ್ಯಪ್ಪ ಒಡೆಯನೊಂದಿಗೆ ರಾಜಕೀಯ ಒಪ್ಪಂದವನ್ನು ಮಾಡಿಕೊಂಡ. 1571ರ ಶಾಸನವೊಂದು ಲೋಕ ದೇವಿಯನ್ನು ಉಲ್ಲೇಖಿಸುತ್ತದೆ. ಈಕೆ ಬಹುಶಃ ಅಬ್ಬಕ್ಕದೇವಿಯ ಸೋದರಿ. ಅಬ್ಬಕ್ಕದೇವಿ ಉಲ್ಲಾಳದಿಂದಲೂ ಲೋಕದೇವಿ ಪುತ್ತಿಗೆಯಿಂದಲೂ ಒಂದೇ ಕಾಲದಲ್ಲಿ ಆಳುತ್ತಿದ್ದಿರಬೇಕೆಂದು ತೋರುತ್ತದೆ. ಈ ಕಾಲದಿಂದ ಮುಂದೆ ಚೌಟರ ಎರಡೂ ಶಾಖೆಗಳು ಆಳಿಕೆ ನಡೆಸಿರಬೇಕು. ಉಲ್ಲಾಳ ಶಾಖೆಯ ಇತಿಹಾಸಕ್ಕೆ ಪೋರ್ಚುಗೀಸ್ ದಾಖಲೆಗಳೇ ಮೂಲಧಾರ. 1556ರಲ್ಲಿ ಪೋರ್ಚುಗೀಸ್ ಸೇನಾನಿಯೊಬ್ಬ ಯುದ್ಧನೌಕೆಯೊಂದಿಗೆ ಉಲ್ಲಾಳದ ಅರಸಿಯಿಂದ ಕಪ್ಪವನ್ನು ವಸೂಲು ಮಾಡಲು ಬಂದು ಮಂಗಳೂರನ್ನು ಲೂಟಿ ಮಾಡಿದ. ರಾಣಿ ಶಾಂತಿ ಒಪ್ಪಂದ ಮಾಡಿಕೊಂಡಳು. ಈಕೆ ಅಬ್ಬಕ್ಕ (ನೋಡಿ) ಇರಬೇಕು.

ಲೋಕದೇವಿಯ ಅನಂತರ ಚಿಕ್ಕರಾಜರಸ ಪುತ್ತಿಗೆ ಶಾಖೆಯ ಉತ್ತರಾಧಿಕಾರಿಯಾದ. ಈತ 1600ರವರೆಗೂ ರಾಜ್ಯವಾಳಿರಬೇಕು. 1640ರ ಶಾಸನವೊಂದು ಹೆಸರಿಸುವ ಚಿಕ್ಕರಾಜ ಒಡೆಯ ಈಗ ತಿಳಿದಿರುವಂತೆ ಚೌಟರ ಕೊನೆಯ ಅರಸ.

ಚೌಟರಸರು ಜೈನಮತಾವಲಂಬಿಗಳಾಗಿದ್ದರು. ಇವರು ಕಾರ್ಕಳದ ಭೈರರಸರೊಂದಿಗೆ ವೈರ ಹೊಂದಿದ್ದರೂ ಕೆಲವೊಮ್ಮೆ ಒಪ್ಪಂದ ಮಾಡಿಕೊಂಡರು. ಹಾಗೆಯೇ ಬಂಗವಾಡಿಯ ಬಂಗರು ಮತ್ತು ಇತರ ಸ್ಥಳೀಯ ರಾಜಮನೆತನಗಳೊಡನೆ ಒಪ್ಪಂದ ಮಾಡಿಕೊಂಡರು. ಈ ಒಪ್ಪಂದಗಳು ಆಗಾಗ್ಗೆ ಭಂಗವಾಗುತ್ತಿದ್ದುದನ್ನೂ ಕಾಣುತ್ತೇವೆ.

ಶಾಸನಗಳ ಆಧಾರದಿಂದ ಚೌಟವಂಶಾವಳಿಯನ್ನು ಹೀಗೆ ರಚಿಸಬಹುದು:

ವಿಕ್ರ ಚೌಟ (1375?- 1410)
|
ಸಾಂತೆಯ (1410 - 35?)
|
ಜೋಗಿ ಒಡೆಯ (1435?- 55?)
|
ಅಲ್ಲಪ್ಪಶೇಖ (1455?-75?)
|
ದೇವರುಶೇಖ (1475?-1500?)
|
ತಿರುಮಲರಾಯ (1500?-25)
|
ತುಳುವರಸ (1525 -40)
|
ತಿರುಮಲರಸ (1540-65)

(ಪುತ್ತಿಗೆ ಶಾಖೆ)
ಲೋಕದೇವಿ (1565 -75)
|
ಚಿಕ್ಕರಾಜರಸ (1575-1600)
|
ಹೆಸರು ತಿಳಿಯದ ಅರಸ
|
ಚಿಕ್ಕರಾಜ ಒಡೆಯ (1640)

(ಉಲ್ಲಾಳ ಶಾಖೆ)
ಅಬ್ಬಕ್ಕದೇವಿ (1544 -98)
|
ಹೆಸರು ತಿಳಿಯದ ಉತ್ತರಾಧಿಕಾರಿಗಳು

(ಎಚ್.ಎಂ.ಎನ್.ಆರ್.)

**ಚೌಡದಾನಪುರ :** ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನಲ್ಲಿ ರಾಣೆಬೆನ್ನೂರಿನಿಂದ ಉತ್ತರಕ್ಕೆ 22ಕಿಮೀ ಹಾಗೂ ದೇವರಗುಡ್ಡ ರೈಲ್ವೆ ನಿಲ್ದಾಣದಿಂದ 6ಕಿಮೀ ಅಂತರದಲ್ಲಿ, ತುಂಗಭದ್ರಾ ನದಿಯ ದಂಡೆಯ ಮೇಲಿರುವ ಒಂದು ಹಳ್ಳಿ.

ಐತಿಹ್ಯಗಳ ಪ್ರಕಾರ ಚೌಡದಾನಪುರಕ್ಕೆ- ಅವಿಮುಕ್ತಕ್ಷೇತ್ರವೆಂದು ಹೆಸರು. ಇಲ್ಲಿ ನದಿ ಪೂರ್ವ-ಪಶ್ಚಿಮವಾಹಿನಿಯಾಗಿ ಇರುವುದರಿಂದ ಸ್ಥಳ ಪವಿತ್ರವೆನಿಸಿದೆ. ಈ ಗ್ರಾಮಕ್ಕೆ 13ನೆಯ ಶತಮಾನದ ಆದಿಭಾಗದಲ್ಲಿ ಕೂರ್ತಗಿ ಎಂಬ ಹೆಸರಿತ್ತೆಂದು ಇಲ್ಲಿಯ ಶಿಲಾಶಾಸನದಿಂದ ತಿಳಿದುಬರುತ್ತದೆ. ಪುರಾಣಕಾಲದಲ್ಲಿ ಈ ಸ್ಥಳ ತ್ರಿಪುರದಹನ ಸ್ಥಾನವೆಂತಲೂ ಈಗ ಈ ಸುತ್ತಿನಲ್ಲಿರುವ ಚೌಡಯ್ಯದಾನಪುರ (ಶಿವಪುರ), ಚಂದಾಪುರ (ಚಂದ್ರಪುರ), ನರಸೀಪುರ (ನರಸಿಂಹಪುರ) - ಇವು ಹಿಂದಿನ ತ್ರಿಪುರಗಳ ಸ್ಮಾರಕಗಳೆಂದೂ ಐತಿಹ್ಯ. ಪ್ರಖ್ಯಾತ ವಚನಕಾರ, ಶ್ರೇಷ್ಠ ಶಿವಶರಣ ಅಂಬಿಗರ ಚೌಡಯ್ಯ ಈ ಗ್ರಾಮದವನು. ಚೌಡಯ್ಯ ಈಗಿರುವ ಶಿವಪುರಕ್ಕೆ ಸೇರಿದ ಭೂಭಾಗವನ್ನು ದಾನವಾಗಿ ಕೊಟ್ಟಿದ್ದರಿಂದ ಇದಕ್ಕೆ ಚೌಡಯ್ಯದಾನಪುರ ಎಂದು ಹೆಸರು ಬಂದಿದೆಯೆಂದು ಪ್ರತೀತಿ. ನಯನಮನೋಹರವಾದ ಚೌಡಯ್ಯನ ಸ್ಮಾರಕ ಮಂದಿರ ತುಂಗಭದ್ರೆಯ ದಂಡೆಯಲ್ಲಿ ಶೋಭಿಸುತ್ತಿದೆ.

ಕಲ್ಯಾಣ ಚಾಳುಕ್ಯ ಚಕ್ರವರ್ತಿ 6ನೆಯ ವಿಕ್ರಮಾದಿತ್ಯ, ಗುತ್ತರ ಮಲ್ಲಿದೇವ, ಹಾನುಗಲ್ಲು ಕದಂಬ ಅರಸು ಕಾಮದೇವ, ಯಾದವ, ಕನ್ನರ, ಮಹಾದೇವ, ರಾಮಚಂದ್ರ ಮೊದಲಾದ ಅರಸರ ಉಲ್ಲೇಖವಿರುವ ಒಂಬತ್ತು ಶಿಲಾಶಾಸನಗಳು ಇಲ್ಲಿ ದೊರೆಕಿವೆ. ಗುತ್ತ ಅರಸರ ಇತಿಹಾಸವನ್ನು ನಿರೂಪಿಸುವ ಮಹತ್ವದ ಶಿಲಾ ಲಿಪಿಗಳು ಇಲ್ಲಿಯೇ ಸಿಕ್ಕಿವೆ. ಈ ವಂಶದ ರಾಜಧಾನಿಯಾಗಿದ್ದ ಗುತ್ತಲ ಈ ಹಳ್ಳಿಯ ನೆರೆಯಲ್ಲಿದೆ.

ನದಿಯ ದಂಡೆಯ ಮೇಲಿರುವ ಮುಕ್ತೇಶ್ವರ ಗುಡಿ ಚಾಳುಕ್ಯ ಶೈಲಿಯ ಸುಂದರ ದೇವಾಲಯ. ಕರಿ ಕಲ್ಲಿನಿಂದ ರಚಿಸಲಾದ ಈ ದೇವಾಲಯ ಶಿಲ್ಪಕಲೆಗೆ ಹೆಸರಾಗಿದೆ. ರುದ್ರಮುನಿ ದೇವಾಲಯ, ಗುಹಮುನಿಗಳ ದೇವಾಲಯ, ವೀರಭದ್ರ ದೇವಾಲಯಗಳಲ್ಲದೆ ದೊಡ್ಡ ಬಸವೇಶ್ವರ, ಸಣ್ಣಬಸವೇಶ್ವರ, ಭೈರವಮೂರ್ತಿಗಳ ಗುಡಿಗಳನ್ನು ಇಲ್ಲಿ ನೋಡಬಹುದು. ಇಲ್ಲಿ ಮಕರ ಸಂಕ್ರಾಂತಿ ಜಾತ್ರೆ ವೈಭವದಿಂದ ನಡೆಯುತ್ತದೆ. ಯುಗಾದಿಯಂದು ವೀರಭದ್ರ ದೇವರ ಉತ್ಸವ ನೆರವೇರುವುದು.

ಇತ್ತೀಚೆಗೆ ಶಿವದೇವ ಒಡೆಯರ ಅವಿರತ ಪರಿಶ್ರಮದಿಂದ ಈ ಊರಿಗೆ ಹೊಸ ಚೈತನ್ಯ ಬಂದಿದೆ. ಹಲವು ಸೌಲಭ್ಯಗಳು ದೊರೆತಿವೆ. (ಎಸ್.ಎಸ್.ಬಿ.)

**ಚೌಡಪ್ಪನಾಯಕ :** ಕೆಳದಿ ರಾಜವಂಶದ ಮೂಲಪುರುಷ (ಸು.1500-30). ಇವನ ಮೂಲ ಹೆಸರು ಚೌಡಗೌಡ. ಈತನ ತಂದೆ ಪಳ್ಳಿವಾಯಲಿನ (ಸಾಗರ ತಾಲ್ಲೂಕು ಹಳ್ಳಿಬೈಲು) ಬಸಪ್ಪ, ತಾಯಿ ಬಸವಾಂಬೆ. ಈತನ ತಮ್ಮ ಭದ್ರಪ್ಪ. ಬೇಸಾಯವೇ ಇವರ ಜೀವನೋಪಾಯವಾಗಿತ್ತು. ಸಾಮಾನ್ಯ ಮನೆತನದಲ್ಲಿ ಹುಟ್ಟಿದ ಚೌಡಪ್ಪ ಮುಂದಕ್ಕೆ ಹೇಗೆ ಬಂದನೆನ್ನುವ ವಿಷಯದಲ್ಲಿ ಶಿವತತ್ತ್ವ ರತ್ನಾಕರ ಮತ್ತು ಕೆಳದಿನೃಪವಿಜಯ ಗ್ರಂಥಗಳಲ್ಲಿ ದಂತಕಥೆಗಳಿವೆ. ಅವುಗಳ ಪ್ರಕಾರ ಚೌಡಪ್ಪನಿಗೆ ಎಲ್ಲೋ ಹೂತಿಟ್ಟ ಒಂದು ಕೊಪ್ಪರಿಗೆ ಹಣ ಮತ್ತು ಒಂದು ಕತ್ತಿ (ನಾಗರಿಮುರಿ) ಸಿಕ್ಕಿತು. ಇದರ ಸಹಾಯದಿಂದ ಚೌಡಪ್ಪ ಮತ್ತು ಇವನ ಸಹೋದರ ಒಂದು ಸೈನ್ಯವನ್ನು ಕಟ್ಟಿ ಕೆಳದಿಯ ಸುತ್ತಮುತ್ತಲ ಪ್ರದೇಶವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಆಗ ಆಳುತ್ತಿದ್ದ ವಿಜಯನಗರದ ಚಕ್ರವರ್ತಿ ಇವರ ಚಟುವಟಿಕೆಯನ್ನು ಒಪ್ಪಲಿಲ್ಲ. ಇವರನ್ನು ವಿಜಯನಗರಕ್ಕೆ ಕರೆತರಿಸಿ ಸೆರೆಮನೆಯಲ್ಲಿಡಿಸಿದ. ಇದೇ ಸಮಯದಲ್ಲಿ ಇನ್ನೊಬ್ಬ ಪಾಳೆಯಗಾರ ವಿಜಯನಗರದ ವಿರುದ್ಧ ದಂಗೆಯೆದ್ದಾಗ, ಆ ದಂಗೆಯನ್ನು ಅಡಗಿಸುತ್ತೇವೆಂದು ಸಹೋದರರು ಚಕ್ರವರ್ತಿಗೆ ಆಶ್ವಾಸನೆ ಕೊಟ್ಟರು. ಸೆರೆಯಿಂದ ಹೊರಬಂದ ಇವರು ಆಶ್ವಾಸನೆಯನ್ನು ಪೂರೈಸಿದರು. ಚಕ್ರವರ್ತಿ ಸಂತುಷ್ಟನಾಗಿ ಇವರು ಗೆದ್ದ ಹಳ್ಳಿಗಳನ್ನು ಇವರಿಗೇ ಮಾನ್ಯವಾಗಿ ಕೊಟ್ಟ.

ಚೌಡಪ್ಪನ ಒಂದೇ ಒಂದು ಶಾಸನ (1506) ಸಿಕ್ಕಿದೆ. ಇದರಲ್ಲಿ ತಾನು ಯಾರಿಗೆ ಅಧೀನನೆಂದು ಹೇಳಿಕೊಂಡಿಲ್ಲ. ಇದರಲ್ಲಿ ಇವನಿಗೆ ಎಡವಮುರಾರಿ ಎನ್ನುವ ಬಿರುದಿದೆ. ಇದು ಮುಂದಿನ ಎಲ್ಲ ಕೆಳದಿನಾಯಕರ ಬಿರುದಾಗಿತ್ತು.

ಚೌಡಪ್ಪನಿಗೆ ಇಬ್ಬರು ಮಕ್ಕಳು: ಸದಾಶಿವ ಮತ್ತು ಭದ್ರ. ಇವನ ಒಬ್ಬ ಹೆಂಡತಿಯ ಹೆಸರು ತಿರುಮಮ್ಮ. ಇವಳು ಸದಾಶಿವನ ತಾಯಿ. ಕೆಳದಿನೃಪವಿಜಯದಲ್ಲಿ ಇವನು ಕೆಳದಿಯಲ್ಲಿ ರಾಮೇಶ್ವರ ದೇವಸ್ಥಾನವನ್ನು ಮರದಲ್ಲಿ ಕಟ್ಟಿಸಿದನೆಂದು ಹೇಳಿದೆ. ಈ ಗ್ರಂಥ ಮತ್ತು ಶಿವತತ್ತ್ವರತ್ನಾಕರದಲ್ಲಿ ಚೌಡಪ್ಪನಿಗೆ ನಾಯಕನೆನ್ನುವ ಬಿರುದನ್ನು ವಿಜಯನಗರದ ಚಕ್ರವರ್ತಿ ಕೊಟ್ಟನೆಂದು ಹೇಳಿದೆ. ಆದರೆ ಶಾಸನದಲ್ಲಿ ಈತನ ಹೆಸರು ಚೌಡಗೌಡನೆಂದು ಇರುವುದಲ್ಲದೆ, ಇವನ ಮಗ ಸದಾಶಿವ ನಾಯಕನ ಶಾಸನದಲ್ಲಿಯೂ ಇದೇ ಹೆಸರಿದೆ. (ಜಿ.ಎಸ್.ಡಿ.)

**ಚೌಡಯ್ಯ, ಟಿ. :** 1895-1967. ಪ್ರಸಿದ್ಧ ಪಿಟೀಲು ವಿದ್ವಾಂಸರು. ಮೈಸೂರಿನಿಂದ 30ಕಿಮೀ ಪೂರ್ವಕ್ಕಿರುವ ತಿರುಮಕೂಡಲಿನಲ್ಲಿ 1895 ಜನವರಿ 1ರಂದು ಜನಿಸಿದರು. ತಂದೆ ಸಂಗೀತಪ್ರಿಯರಾಗಿದ್ದ ಅಗಸ್ತ್ಯ ಗೌಡರು, ತಾಯಿ ಸಂಗೀತ ಮತ್ತು ಭರತನಾಟ್ಯಗಳಲ್ಲಿ ಸ್ವತಃ ಕಲಾವಿದೆಯಾಗಿದ್ದು ಸಂಸ್ಕೃತ ಭಾಷೆಯನ್ನೂ ಬಲ್ಲವರಾಗಿದ್ದ ಸುಂದರಮ್ಮನವರು. ಚೌಡಯ್ಯನವರಿಗೆ ಪ್ರಥಮ ಶಿಕ್ಷಣ ತಾಯಿಯವರಿಂದಲೇ ದೊರಕಿತು. ತಮ್ಮ ಮಗನ ಭವಿಷ್ಯ ಸಂಗೀತದಲ್ಲಿದೆ ಎಂಬುದನ್ನು ಅರಿತ ಇವರ ತಾಯಿ ಮಗನನ್ನು ಮೈಸೂರಿನಲ್ಲಿದ್ದ ತಮ್ಮ ಸೋದರನಲ್ಲಿಗೆ ಕಳುಹಿಸಿಕೊಟ್ಟರು. ಅವರು ಚೌಡಯ್ಯನವರನ್ನು ಪ್ರಸಿದ್ಧ ಸಂಗೀತ

ವಿದ್ವಾಂಸರಾಗಿದ್ದ ಬಿಡಾರಂ ಕೃಷ್ಣಪ್ಪನವರಲ್ಲಿ ಸಂಗೀತವನ್ನು ಕಲಿಯಲು ಸೇರಿಸಿದರು. ಸು.18 ವರ್ಷಕಾಲ ಕೃಷ್ಣಪ್ಪನವರಲ್ಲಿ ಶಿಕ್ಷಣ ಪಡೆದ ಚೌಡಯ್ಯನವರು ಪಿಟೀಲು ವಾದನದಲ್ಲಿ ಅಮೋಘ ಪಾಂಡಿತ್ಯ ಗಳಿಸಿದರು. ಗುರುಗಳ ಅಪ್ಪಣೆಯ ಮೇರೆಗೆ 1926ರಿಂದ ಸೋಲೋ ಕಛೇರಿಗಳನ್ನು ಮಾಡಲು ಪ್ರಾರಂಭಿಸಿದರು. ಪಿಟೀಲು ವಾದ್ಯದ ಮೇಲೆ ಪೂರ್ಣ ಹತೋಟಿ ಪಡೆಯಲು ಶ್ರದ್ಧೆಯ ಜೊತೆಗೆ ಇವರ ಕಠಿಣವಾದ ಸಾಧನೆಯೂ

ಕಾರಣವಾಗಿತ್ತು. ಇವರು ತಮ್ಮ ಸಾಧನೆಗಾಗಿ ದಿನದ 16 ಗಂಟೆಗಳನ್ನು ಮೀಸಲಾಗಿಡುತ್ತಿದ್ದರಂತೆ. ಹಿರಿಯ ವಿದ್ವಾಂಸರಾದ ಅರಿಯಕುಡಿ ರಾಮಾನುಜಯ್ಯಂಗಾರ್, ಪಾಲಘಾಟ್ ರಾಮಭಾಗವತರ್, ಚೆಂಬೈ ವೈದ್ಯನಾಥ ಭಾಗವತರ್, ಶೆಮ್ಮಂಗುಡಿ ಶ್ರೀನಿವಾಸಯ್ಯರ್, ಜಿ.ಎನ್. ಬಾಲಸುಬ್ರಹ್ಮಣ್ಯಂ, ಎಂ.ಎಸ್.ಸುಬ್ಬುಲಕ್ಷ್ಮಿ ಮೊದಲಾದವರು ಚೌಡಯ್ಯನವರ ಪ್ರತಿಭೆಯನ್ನು ಅರಿತು ಇವರನ್ನು ತಮ್ಮ ಕಛೇರಿಗಳಲ್ಲಿ ಪಕ್ಕವಾದ್ಯಕ್ಕಾಗಿ ಆಹ್ವಾನಿಸುತ್ತಿದ್ದರು. ನಾಲ್ಕು ತಂತಿಗಳ ಪಿಟೀಲು ವಾದ್ಯವನ್ನು ಏಳು ತಂತಿಗಳಿಗೆ ಮಾರ್ಪಡಿಸಿ ಅದನ್ನು ಪ್ರಸಿದ್ಧಿಗೆ ತಂದ ಕೀರ್ತಿ ಚೌಡಯ್ಯನವರದು. ಇನ್ನೂ ಮುಂದುವರಿದು 19 ತಂತಿಗಳ ಪಿಟೀಲನ್ನು ಇವರು ಅಮೋಘವಾಗಿ ನುಡಿಸುತ್ತಿದ್ದುದುಂಟು.

ಚೌಡಯ್ಯನವರ ಪಾಂಡಿತ್ಯ ದಿನೇದಿನೇ ವೃದ್ಧಿಯಾಗಿ ಜನತೆ ಇವರನ್ನು ಅನೇಕ ಬಿರುದು ಸನ್ಮಾನಗಳಿಂದ ಗೌರವಿಸಿತು. 1941ರಲ್ಲಿ ಮೈಸೂರು ಮಹಾರಾಜರಿಂದ ಸಂಗೀತರತ್ನ ಎಂಬ ಬಿರುದೂ 1957ರಲ್ಲಿ ರಾಷ್ಟ್ರಪತಿಗಳ ಪ್ರಶಸ್ತಿಯೂ ಮದರಾಸು ಸಂಗೀತ ಅಕಾಡೆಮಿಯಿಂದ ಸಂಗೀತ ಕಲಾನಿಧಿ ಮತ್ತು ಮೈಸೂರು ಸಂಗೀತ ಪರಿಷತ್ತಿನಿಂದ ಗಾನಕಲಾಸಿಂಧು ಎಂಬ ಬಿರುದುಗಳೂ ದೊರಕಿದವು.

ಚೌಡಯ್ಯನವರು ತ್ರಿಮುಕುಟ ಎಂಬ ಅಂಕಿತದಲ್ಲಿ ಅನೇಕ ಸುಂದರ ಕೃತಿಗಳನ್ನು ಮತ್ತು ತಿಲ್ಲಾನಗಳನ್ನು ರಚಿಸಿದ್ದಾರೆ. ಇವರು ಸಂಗೀತ ಬೋಧನೆಗಾಗಿ ಅಯ್ಯನಾರ್ ಕಲಾಶಾಲೆಯನ್ನು ಮೈಸೂರು ಹಾಗೂ ಬೆಂಗಳೂರಿನಲ್ಲಿ ಸ್ಥಾಪಿಸಿದರು. ವಿದ್ವಾನ್ ವಿ.ಸೇತುರಾಮಯ್ಯ, ವಿ.ರಾಮರತ್ನಂ, ಕಂಡದೇವಿ ಅಳಗಿರಿಸ್ವಾಮಿ, ಆರ್.ಕೆ.ವೆಂಕಟರಾಮಶಾಸ್ತ್ರಿ, ಸಿ.ಆರ್.ಮಣಿ ಇವರು ಚೌಡಯ್ಯನವರ ಶಿಷ್ಯವರ್ಗದಲ್ಲಿ ಪ್ರಸಿದ್ಧರಾದ ಕೆಲವರು. ಚಿತ್ರನಟ ಅಂಬರೀಷ್ ಇವರ ಮೊಮ್ಮಗ.

ಪಿಟೀಲು ವಾದನದಲ್ಲಿ ಅದ್ವಿತೀಯರಾಗಿ ಭಾರತದಾದ್ಯಂತ ಖ್ಯಾತಿಗಳಿಸಿದ ಇವರು 1967 ಜನವರಿ 19ರಂದು ನಿಧನರಾದರು.

ಆರ್.ಗುಂಡೂರಾವ್ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಇವರ ಸ್ಮರಣಾರ್ಥವಾಗಿ ಬೆಂಗಳೂರಿನಲ್ಲಿ ಟಿ.ಚೌಡಯ್ಯ ಸ್ಮಾರಕ ಭವನವನ್ನು ನಿರ್ಮಿಸಲಾಗಿದೆ. (ವಿ.ಆರ್.)

**ಚೌಡಿಕೆ ಮೇಳ** : ಧಾರ್ಮಿಕ ಸಂಪ್ರದಾಯದ ವೃತ್ತಿಗಾಯಕರಲ್ಲಿ ಸವದತ್ತಿ ಎಲ್ಲಮ್ಮನ ಭಕ್ತರಾದ ಚೌಡಿಕೆಯವರು ಕಥೆಯನ್ನು ಹಾಡುತ್ತ ಜೊತೆಗೆ ಕುಣಿಯುತ್ತ ನಡೆಸುವ ಮೇಳ. ಇದರಲ್ಲಿ ಉಪಯೋಗಿಸುವ ಪ್ರಧಾನ ವಾದ್ಯ ಚೌಡಿಕೆ. ತಂತಿವಾದ್ಯಗಳ ಗುಂಪಿಗೆ ಸೇರುವ ಚೌಡಿಕೆ ಭಾರತದ ನಾನಾಭಾಗಗಳಲ್ಲಿ ಹಲವಾರು ಹೆಸರುಗಳಿಂದ ಪ್ರಚಲಿತವಿದೆ. ಉತ್ತರ ಕರ್ನಾಟಕದಲ್ಲಿ ಇದಕ್ಕೆ ಚೌಟಗಿ, ಚವುಡಿ ಎಂದು ಕರೆಯುತ್ತಾರೆ. ಜನಪದದಲ್ಲಿ ಇದರ ರಚನೆಯನ್ನು ಕುರಿತು ಕೆಲವು ಕಥೆಗಳು ಕಂಡುಬರುತ್ತವೆ. ಒಂದು ಕಥೆಯ ಪ್ರಕಾರ ಎಲ್ಲಮ್ಮನ ಅಣ್ಣ ಕಾರ್ತವೀರ್ಯಾರ್ಜುನ ಜಮದಗ್ನಿಯ ಬಳಿಯಲ್ಲಿದ್ದ ಕಾಮಧೇನುವನ್ನು ಬಯಸಿ ಕೇಳಲು, ಆತ ಕೊಡಲು ನಿರಾಕರಿಸಿದಾಗ ಅವರನ್ನು ಕೊಂದು ಹಸುವನ್ನು ಕೊಂಡೊಯ್ದ. ಇತ್ತ ಪತಿಯನ್ನು ಕಳೆದುಕೊಂಡ ತಾಯಿಯ ದುಃಖಶಮನಕ್ಕಾಗಿ ಪರಶುರಾಮ ಕೊಡಲಿಯಿಂದ ಕಾರ್ತವೀರ್ಯನ ಶಿರವನ್ನು ಕತ್ತರಿಸಿ, ಅವನ ದೊಕ್ಕೆ ಕಿತ್ತು ಕಂಚಿನ ಚೌಡಿಕೆ ಮಿಂಚಿನ ಚೌಡಿಕೆ ಮಾಡಿ ಪಚ್ಚೆ ಕಿತ್ತು ಹಿಂದೆ ಮುಚ್ಚಗೆಮಾಡಿ, ಕರುಳು ಕಿತ್ತು ನುಡಿಸೋ ತಂತಿ ಮಾಡಿ, ತೋಳನ್ನು ತೆಗೆದು ದಂಡಿಗೆ ಮಾಡಿ, ಗಡ್ಡಾ ಕಿತ್ತು ಜಾಲ್ರ ಮಾಡಿ, ಗ್ವಾಮಾಳೆ ಸರ ತೆಗೆದು ನವಾರ ಮಾಡಿ, ಕಿರುಬೆರಳ ಕಿತ್ತು ನುಡಿಸೋ ಕಡ್ಡಿ ಮಾಡಿ, ಹೆಬ್ಬೆರಳು ಕಿತ್ತು ಬಿರುಟೇ ಮಾಡಿ ಚೌಡಿಕೆ ರಚಿಸಿಕೊಂಡು ನುಡಿಸುತ್ತ ತಾಯ ಬಳಿಗೆ ಬಂದ. ಪರಶುರಾಮ ಲೋಕಕಂಟಕನಾದ ಬೇತಾಸುರನೆಂಬ ರಾಕ್ಷಸನ ಶಿರವನ್ನು ಕತ್ತರಿಸಿ ಅದರಿಂದ ಚೌಡಿಕೆ ಮಾಡಿಕೊಂಡು ನುಡಿಸಿದ ಎಂದು ಇನ್ನೊಂದು ಕಥೆ ಹೇಳುತ್ತದೆ. ಚೌಡಿಕೆಯಲ್ಲಿ ಅಡಗಿರುವ ಉಡಿಕೆ ಎಂಬ ಶಬ್ದ ಸೇಲಂ ಜಿಲ್ಲೆಯ ಮಾದೇಶ್ವರನ ಭಕ್ತರು ಬಳಸುವ ಉಡಕ್ಕೆ ಎಂಬ ವಾದ್ಯವನ್ನು ನೆನಪಿಗೆ ತರುತ್ತದೆ. 'ಚೂಡ' ಎಂಬ ಪದಕ್ಕೆ ಶಿರಸ್ಸು

ಚೌಡಿಕೆಮೇಳ ನಡೆಸುತ್ತಿರುವ ಮೆಣಸಿನಕಾಯಿ ಸಿದ್ರಾಮಣ್ಣ ಮತ್ತು ಸಂಗಡಿಗರು

ಎಂಬ ಅರ್ಥವಿರುವುದರಿಂದ ಶಿರಸ್ಸಿನಿಂದ ಚೌಡಿಕೆಯನ್ನು ಮಾಡಿಕೊಂಡಿದ್ದು (ಜನಪದದಲ್ಲಿರುವ ಕಥೆಯ ಪ್ರಕಾರ) ಎಂಬುದು ಸರಿಯಿದ್ದರೆ ಚೂಡ ಉಡಕ್ಕೆ > ಚೂಡುಡುಕ್ಕೆ > ಚೂವುಡಕೆ > ಚೌಡಿಕೆ ಆಗಿದೆ

ಯೆನ್ನಬಹುದು. ಚರ್ಮದ ಉಡಕ್ಕೆ ಇದರ ಮೂಲ ಎನ್ನುವುದಾದರೆ ಚಮ್ಮುಡುಕ್ಕೆ > ಚೊವುಡುಕೆ > ಚೌಡಿಕೆ ಆಗಿರಬಹುದು ಎಂದು ಊಹಿಸಬಹುದು. ಚಂಡಿಕೆ ಶಬ್ದವೇ ಚೌಡಿಕೆಗೆ ಮೂಲವಿರಬಹುದು ಎಂಬುದು ಮತ್ತೊಂದು ಊಹೆ.

ಚೌಡಿಕೆಯಲ್ಲಿ ಶ್ರುತಿ, ಬಾರ್ಕಿ ಎಂಬ ಎರಡು ರೀತಿಯ ವಾದ್ಯಗಳಿವೆ. ಶ್ರುತಿ ಚೌಡಿಕೆ ರಚಿಸಲು ಹತ್ತು ಅಂಗುಲ ವ್ಯಾಸ, ಹದಿನೈದು ಅಂಗುಲ ಉದ್ದವುಳ್ಳ ಕಂಚು, ಹಿತ್ತಾಳೆ, ಎರಕ, ಹೊನ್ನೆಮರ, ಕೊಂಡಮಾವಿನಮರ ಅಥವಾ ತೆಂಗಿನ ಮರಗಳ ಕುಂದಲಿಗೆಯಾಕಾರದ ಕೊಳವೆ ಇವನ್ನು ಉಪಯೋಗಿಸುತ್ತಾರೆ. ತಳಭಾಗಕ್ಕೆ ಎಳೆ ಆಡಿನ ಮರಿ ಅಥವಾ ಬಾತುಕೋಳಿಯ ಚರ್ಮದ ಮುಚ್ಚಳಿಕೆಯ ಕೇಂದ್ರ ಬಿಂದುವಿಗೆ ಒಂದು ರಂಧ್ರವುಳ್ಳ ತೆಂಗಿನಕಾಯಿ ಚಿಪ್ಪಿನ ಅಥವಾ ಸವಕಲು ನಾಣ್ಯದ ಬಿಲ್ಲೆಯನ್ನು ಕಿತ್ತುಬರದಂತೆ ಹತ್ತಿಸಿ ಈ ರಂಧ್ರದ ಮುಖಾಂತರ ಮತ್ತೊಂದು ಬಾಯಿಯ ಕಡೆಗೆ ಮುದಿಕುರಿಯ ಕರುಳನ್ನು ತಂತಿಯಂತೆ ಎಳೆದು ಕಾಲುಭಾಗ ಹೆರೆದಿರುವ ಮುಕ್ಕಾಲುಭಾಗ ಉಂಡುಗಡ್ಡಿಯಾಗಿಯೆ ಉಳಿದಿರುವ ಸುಮಾರು ಎರಡೂವರೆ ಅಡಿ ಉದ್ದದ ಬಿದಿರು ದಂಡದ ಮೇಲ್ಭಾಗಕ್ಕೆ ಬಂಧಿಸಿರುವ ತೇಗದ ಅಥವಾ ಕಣಿಗಲೆ ಮರದ ಬಿರುಟೆಗೆ ಬಿಗಿಯಲಾಗುತ್ತದೆ. ಇದರ ಸಹಾಯದಿಂದ ಹದವಾದ ನಾದ ಬರುವಂತೆ ಶ್ರುತಿ ಎತ್ತಿಕೊಳ್ಳಬಹುದು. ಮಹಾರಾಷ್ಟ್ರದ ಕುಂತಗೆ ನಮ್ಮ ಈ ಚೌಡಿಕೆ ಹೋಲುತ್ತದೆ. ಬಾರ್ಕಿ ಚೌಡಿಕೆಯ ರಚನೆ ಶ್ರುತಿ ಚೌಡಿಕೆಗಿಂತ ಸರಳ. ಇದರಲ್ಲಿ ಬಿದಿರು ದಂಡವನ್ನು ಬಳಸಲಾಗುವುದಿಲ್ಲ. ತಳಭಾಗದಿಂದ ಎಳೆದ ಕರುಳ ತುದಿಗೆ ಅರ್ಧ ಅಡಿ ಉದ್ದದ ಮತ್ತು ಎರಡು ಬೆರಳು ಗಾತ್ರದ ನೀರ್ಬಂಜಿ ಮರದ ಕಡ್ಡಿಗೆ ಕಟ್ಟಲಾಗುತ್ತದೆ. ಇದನ್ನು ಚೌಡಿಕೆ ಕಂಕಕ್ಕೆ ಬಿರಿಕೊಟ್ಟುಕೊಂಡು ಕರುಳ ತಂತಿಯನ್ನು ಹಿಂದಕ್ಕೂ ಮುಂದಕ್ಕೂ ತುಯ್ಯುತ್ತ ಕೋಲ್ಗಳ್ಳಿ ಕಡ್ಡಿಯಿಂದ ಅಥವಾ ಕೈ ಬೆರಳಿನಿಂದ ನುಡಿಸಿದರೆ ನಾದ ಹೊಮ್ಮುತ್ತದೆ.

ಚೌಡಿಕೆಯವರಲ್ಲಿ ಮೇಳ ಕಟ್ಟುವುದಕ್ಕೆ ಕಟ್ಟುನಿಟ್ಟಾದ ನಿಯಮಗಳಿಲ್ಲದಿದ್ದರೂ ಸಾಂಪ್ರದಾಯಿಕವಾಗಿ ಎಲ್ಲಮ್ಮನನ್ನೂ ಚೌಡಿಕೆಯನ್ನೂ ಇಟ್ಟು ಪೂಜಿಸಿ, ವಿಘ್ನೇಶ್ವರ, ಸರಸ್ವತಿ, ಶಿವ ಮುಂತಾದವರನ್ನು ಪ್ರಾರ್ಥಿಸುತ್ತ ಮೇಳಕ್ಕೆ ತೊಡಗುತ್ತಾರೆ. ಮೇಳಕ್ಕೆ ಒಂದೂವರೆ ಅಡಿ ಎತ್ತರದ ನಿವೇಶನಕ್ಕೆ ಹಸುರು ಚಪ್ಪರ ಹಾಕಿ ಶೃಂಗರಿಸಿರುತ್ತಾರೆ. ಮೇಳ ಮಾಡುವಾಗ ಹಳದಿ ಅಥವಾ ಬಿಳಿ ಬಣ್ಣದ ಪೇಟ, ಹಳದಿ ಅಂಗಿ, ಇದರ ಮೇಲೆ ಕರಿಯ ಕೋಟು, ಹಳದಿ ಪಂಚೆಯ ಕಾಸೆ, ಹಳದಿ ಶಲ್ಯ, ಕಾಲಿಗೆ ಕಿರುಗೆಜ್ಜೆ, ಕೊರಳಿಗೆ ಎಲ್ಲಮ್ಮನ ತಾಳಿ ಮುಂತಾದವುಗಳನ್ನು ಧರಿಸಿರುತ್ತಾರೆ.

ಮೇಳದಲ್ಲಿ ಕುಣಿಯುವುದು, ಪ್ರಧಾನ ಗಾಯಕನೊಡನೆ ಸೊಲ್ಲಿನವರು ಹೂಂಗುಟ್ಟುವುದು, ಪಲ್ಲವಿಯನ್ನು ಹಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಇಲ್ಲಿ ಬಾರ್ಕಿ ಚೌಡಿಕೆಯನ್ನು ನುಡಿಸುವವನೇ ಪ್ರಧಾನ ಗಾಯಕ. ಇವನು ಕಥೆಯನ್ನು ನಿರೂಪಿಸಿದರೆ ಶ್ರುತಿ ಚೌಡಿಕೆ ಹಿಡಿದ ಗಾಯಕ ಅದಕ್ಕೆ ಸೊಲ್ಲು ಕೊಡುತ್ತಾನೆ. ಇವರೊಂದಿಗೆ ಒಮ್ಮೊಮ್ಮೆ ಮತ್ತೊಬ್ಬ ಸೇರಿದಾಗ ಆತ ಬಟ್ಟು ತಾಳವನ್ನು ಹಿಡಿದೊ ಅಥವಾ ಶ್ರುತಿ ಚೌಡಿಕೆಯನ್ನು ಹಿಡಿದೊ ಪ್ರಧಾನ ಗಾಯಕನ ಮತ್ತೊಂದು ಪಕ್ಕದಲ್ಲಿ ನಿಲ್ಲುತ್ತಾನೆ. ಹೀಗೆ ನಿಂತ ಸೊಲ್ಲಿನವರು ಪ್ರಧಾನ ಗಾಯಕ ಕಥೆ ಮುಂದುವರಿಸಲು ಮತ್ತು ಆತನಿಗೆ ಮಧ್ಯ ಮಧ್ಯೆ ಬಿಡುವು ದೊರಕಿಸಿಕೊಡಲು ವಚನದ ಪ್ರತಿಸಾಲಿನಲ್ಲೂ ಹೌದು, ಅಲ್ಲವೆ, ಭಲಾಭಲ, ಉಧೋ ಜಯ, ತಾಯಿ ಎಲ್ಲಮ್ಮ ಎಂದು ಸೊಲ್ಲು ಕೊಡುತ್ತ ನೆರವಾಗುತ್ತಾರೆ. ಪದ್ಯಗಳು ಬಂದಾಗ ಪ್ರಧಾನ ಗಾಯಕ ಒಂದು ಸಾಲನ್ನು ಪ್ರಾರಂಭಿಸಿದರೆ ಇವರು ಅದನ್ನು ಪೂರ್ಣಗೊಳಿಸುತ್ತಾರೆ. ವಚನದ ಪ್ರತಿಸಾಲಿನ ಕೊನೆಗೆ ಚೌಡಿಕೆನಾದ ದನಿ ಕೊಡುತ್ತಿರುತ್ತದೆ.

ಚೌಡಿಕೆಯವರ ಹೆಂಗಸರು ಗಂಡಸರಂತೆ ಚೌಡಿಕೆ ಹಿಡಿದು ಹಾಡುವುದಾಗಲಿ, ಮೇಳ ನಡೆಸುವುದಾಗಲಿ ಕಂಡುಬರುವುದಿಲ್ಲವಾದರೂ ಅಡ್ಲಿಗೆಯನ್ನು (ಎಲ್ಲಮ್ಮ ದೇವತೆ ಇರುವ ಕುಕ್ಕೆ) ತಲೆಯ ಮೇಲೆ ಹೊತ್ತುಕೊಂಡು ಆಕೆಯನ್ನು ಕುರಿತ ಬಿಡಿ ಹಾಡುಗಳನ್ನು ಹಾಡುತ್ತ ಕುಣಿಯುತ್ತ ತಮ್ಮ ವೃತ್ತಿಯನ್ನು ಮಾಡುತ್ತಾರೆ. ಗಂಡಸರು ಚೌಡಿಕೆ ನುಡಿಸುತ್ತ ಹಾಡಿದರೆ ಅದರ ಗತ್ತಿಗೆ ತಕ್ಕಂತೆ ಹೆಂಗಸು ಮನಸಾರೆ ಕುಣಿಯುವ ಪದ್ಧತಿಯನ್ನು ಜೋಗಿತಿ ಸಂಪ್ರದಾಯ ಉಳಿಸಿಕೊಂಡು ಬಂದಿದೆ.

ಚೌಡಿಕೆಯವರು ಎಲ್ಲಮ್ಮ, ಸರ್ಜಪ್ಪನಾಯ್ಕ, ಬಳ್ಳಾರಿತತ್ತ್ವ, ಅಣ್ಣತಂಗಿ, ಬಂಜೆ ಹೊನ್ನಮ್ಮ, ಆನಂದ್ರುತಿ, ವಿಶ್ವಬ್ರಹ್ಮ ಎಂಬ ಕಥೆಗಳನ್ನು ಹಾಡುತ್ತಾರೆ. ಇವುಗಳಲ್ಲಿ ಪ್ರಧಾನವಾದುದು ಎಲ್ಲಮ್ಮನ ಕಥೆ. (ಎಸ್.ಎಸ್.ಜಿ.)

**ಚೌಪದಿ :** ಇದೊಂದು ಅಚ್ಚಗನ್ನಡ ಛಂದಸ್ಸು. ಇದರಲ್ಲಿ ಅಂಶಗಣಾತ್ಮಕ ಮತ್ತು ಮಾತ್ರಾಗಣಾತ್ಮಕ ಎಂದು ಎರಡು ವಿಧ. ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಹೇಳಿರುವ ಲಕ್ಷಣದಂತೆ ಇದರಲ್ಲಿ ಪ್ರತಿಪಾದದಲ್ಲಿಯೂ ಒಂದು ವಿಷ್ಣುಗಣ ಮತ್ತು ಒಂದು ರುದ್ರಗಣ ಬರುತ್ತವೆ. ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ ಇದನ್ನು ಚತುಷ್ಪದಿಕಾ ಎಂದು ಹೆಸರಿಸಿದ್ದಾನೆ. ಚೂಡಾಮಣಿ ಎಂಬ ಗ್ರಂಥದಲ್ಲಿ ಇದು ಬಳಕೆಯಾಗಿರುವುದೆಂದು ಆತ ಹೇಳಿರುವನಾದರೂ ಆ ಗ್ರಂಥ ಅಲಭ್ಯ.

ಚಂದ್ರರಾಜನ ಮದನತಿಲಕದಲ್ಲಿ ಇದು ಬಳಕೆಯಾಗಿರುವುದು ಕಂಡುಬರುತ್ತದೆ.

ವಿ ರು
ರತಿಹೀನಂ | ಪೆಳವಂ ಕುಬ್ಜ |

ಅಂಶಗಣಾನ್ವಿತವಾಗಿದ್ದ ಮೂಲ ಚೌಪದಿ ಅಮಳ ಎಂಬ ಬಂಧದ ಸಂಪರ್ಕದಿಂದ ಮಾತ್ರಾಗಣಕ್ಕೆ ತಿರುಗಿರಬಹುದೆಂಬ ಸಂದೇಹ ಮೂಡುತ್ತದೆ. ಅಮಳದ ಲಯವೂ ಅದರ ಸಾಮಾನ್ಯ ಲಕ್ಷಣವೂ ಚೌಪದಿಯನ್ನೇ ಹೋಲುವುದನ್ನು ಗಮನಿಸಬಹುದು.

ನಾಗವರ್ಮನ ಸೂತ್ರದ ಅಮಳದಲ್ಲಿ ನಾಲ್ಕು ಮಾತ್ರಾಗಣದ ಮುಂದೆ ಆರು ಮಾತ್ರಾಗಣದ ವಿನ್ಯಾಸ ಬಂದಿದೆ. ಚೌಪದಿ ಅಂಶಗಣದಿಂದ ಮಾತ್ರಾಗಣಕ್ಕೆ ತಿರುಗಿರಬಹುದು. ಯಾವ ಹಳಗನ್ನಡ ಕಾವ್ಯಗಳಲ್ಲಿಯೂ ಇದು ಬಳಕೆಯಾಗಿರುವುದು ಕಂಡುಬರುವುದಿಲ್ಲ. ನಡುಗನ್ನಡದಲ್ಲಿ ಮಾತ್ರಾಗಣದಿಂದ ಕೂಡಿದ ನಾಲ್ಕು ಪಾದಗಳುಳ್ಳ ಚೌಪದಿ ಬಳಕೆಯಾಗಿದೆ. ಇದರ ಪ್ರತಿಪಾದದಲ್ಲಿಯೂ ಐದು ಮಾತ್ರೆಯ ಗಣಗಳು ಮೂರು ಮತ್ತು ಒಂದು ಮೂರು ಮಾತ್ರೆಯ ಗಣ ಇವೆ. ಕೆಲವುಕಡೆ 3, 4, 3, 4, ಮಾತ್ರೆಯ ಗಣಗಳು ಬಂದಿರುವುದೂ ಉಂಟು.

ಮಹಾನವಮಿ ಪದಗಳು ನಾಲ್ಕು ಪಾದಗಳಲ್ಲಿ ರಚನೆಯಾಗಿದ್ದು ಅವನ್ನೂ ಚೌಪದಿಗಳೆಂದೇ ಕರೆಯಲಾಗಿದೆ. ಇಲ್ಲಿ ಪ್ರತಿ ಪಾದದಲ್ಲಿ ಐದು ಮಾತ್ರೆಯ ಗಣಗಳು ಮೂರು ಮತ್ತು ಮೂರು ಮಾತ್ರೆಯ ಗಣ ಒಂದು ಕಂಡುಬರುತ್ತವೆ:

ಆಶ್ವಯುಜ | ಶುದ್ಧ ಮಾ | ನವಮಿ ಬರ | ಲೆಂದು
ಶಾಶ್ವತದಿ | ಹರಸಿದೆವು | ಬಾಲಕರು | ಬಂದು
ಈಶ ನಿಮ | ಗತ್ಯಧಿಕ | ಸುಖವ ಕೊಡ | ಲೆಂದು
ಲೇಸಾಗಿ | ಹರಸಿದೆವು | ಬಾಲಕರು | ಬಂದು

ಇವನ್ನು ಪರಿಶೀಲಿಸಿದರೆ ಪಾದಗಳಲ್ಲಿ ಮಾತ್ರ ಪರಸ್ಪರ ಸಾಮ್ಯ ಕಂಡುಬರುತ್ತದೆಯೇ ಹೊರತು ಲಕ್ಷಣದಲ್ಲಿ ಯಾವ ಸಾಮ್ಯವೂ ಕಂಡುಬರುವುದಿಲ್ಲ (ನೋಡಿ: ಕನ್ನಡ ಛಂದಸ್ಸು).
*

# ಛ

**ಛಾಯಾಭಗವತಿ :** ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿ ಕೃಷ್ಣಾನದಿ ತಟದಲ್ಲಿರುವ ಒಂದು ಪುಣ್ಯಕ್ಷೇತ್ರ. ನದಿಯ ದಂಡೆಯಲ್ಲಿ, ಒಂದು ನೈಸರ್ಗಿಕ ಗುಹೆಯಲ್ಲಿ ಸೂರ್ಯನ ಪತ್ನಿ ಛಾಯಾಭಗವತಿದೇವಿಯ ದೇವಾಲಯವಿದೆ. ಇದು ಪುರಾತನವಾದುದು ಮತ್ತು ಪ್ರಸಿದ್ಧವಾದುದು. ಶ್ರೀರಾಮಚಂದ್ರ ವನವಾಸದಲ್ಲಿದ್ದಾಗ

ಕೃಷ್ಣಾ ನದಿ

ಇಲ್ಲಿಗೆ ಬಂದಿದ್ದನೆಂದೂ ಇಲ್ಲಿನ ತೀರ್ಥವೊಂದರಲ್ಲಿ ಶ್ರಾದ್ಧಮಾಡಿದನೆಂದೂ ಅದನ್ನೇ ಈಗ ರಾಮಗಯಾ ಎಂದು ಹೇಳುವರೆಂದೂ ಸ್ಥಳಪುರಾಣ ಸಾರುತ್ತದೆ. ಇದಲ್ಲದೆ ಉತ್ತರವಾಹಿನಿ, ಬ್ರಹ್ಮಹೃದಯ, ಬ್ರಹ್ಮವೇಣಿ, ವಿಷ್ಣುವೇಣಿ, ಗೋಮುಖ, ವಸಿಷ್ಠತೀರ್ಥ, ಜಮದಗ್ನಿ ತೀರ್ಥ, ಕಪಿಲತೀರ್ಥ ಮುಂತಾಗಿ ನೂರಕ್ಕೂ ಮಿಕ್ಕ ತೀರ್ಥಗಳಿವೆ. ಒಂದೊಂದಕ್ಕೂ ಅದರದೇ ಆದ ವೈಶಿಷ್ಟ್ಯವಿದೆ. ಈ ಎಲ್ಲ ತೀರ್ಥಗಳು ಮೂಲತಃ ಕೃಷ್ಣಾ ನದಿಯ ಪ್ರವಾಹ ಹಾಗೂ ಪಾತ್ರದಲ್ಲೇ ಇವೆ. ಕೃಷ್ಣಾನದಿ ಅಲ್ಲಲ್ಲಿ ಟಿಸಿಲಾಗಿ ಹರಿದಿರುವುದರಿಂದ ಕೆಲವು ನಡುಗಡ್ಡೆಗಳಾಗಿವೆ. ಇಂತಹ ನಡುಗಡ್ಡೆಗಳಲ್ಲಿ ಛಾಯಾಭಗವತಿಯ ಸ್ಥಳದ ಪೂರ್ವದಲ್ಲಿ ಒಂದು ಜಲದುರ್ಗವಿದೆ. ಇದು ರಾಯಚೂರು ಜಿಲ್ಲೆಯ ಈಗಿನ ಲಿಂಗಸುಗೂರು ತಾಲ್ಲೂಕಿಗೆ ಸೇರಿದೆ (ನೋಡಿ-ಜಲದುರ್ಗ). ಇನ್ನೊಂದು ನಡುಗಡ್ಡೆಯಲ್ಲೇ ಕೆಲವು ತೀರ್ಥಗಳಿವೆ. ವಸಿಷ್ಠ, ವಿಶ್ವಾಮಿತ್ರ, ಮುಂತಾದವರು ತಪಸ್ಸು ಮಾಡಿದ ಸ್ಥಳಗಳೆಂದು ಕೆಲವನ್ನು ತೋರಿಸುತ್ತಾರೆ. ಒಂದೆಡೆಯಲ್ಲಿ ವಸಿಷ್ಠರ ಬ್ರಹ್ಮದಂಡವಿದೆಯೆಂದು ಹೇಳುತ್ತಾರೆ. ಈ ಕ್ಷೇತ್ರದ ಬಳಿ ಧನುಷ್ಕೋಟಿ ಎಂಬ ಒಂದು ಸುಂದರ ಜಲಪಾತವಿದೆ. ಇಲ್ಲಿ ನೀರು ಬಹಳ ಎತ್ತರದಿಂದ ಕೆಳಕ್ಕೆ ಬೀಳುತ್ತದೆ. ಹೀಗೆ ಬೀಳುವ ನೀರನ್ನು ಬಿಸಿಲಿನಲ್ಲಿ ನೋಡುವುದರಲ್ಲೂ ಶಬ್ದವನ್ನು ಕೇಳುವದರಲ್ಲೂ ಒಂದು ಬಗೆಯ ಆನಂದ ಉಂಟಾಗುತ್ತದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಭಾಗವಾಗಿ ನಾರಾಯಣಪುರದ ಬಳಿ ದೊಡ್ಡ ಅಣೆಕಟ್ಟನ್ನು ಕಟ್ಟಿ ಅದರ ಕೆಳಗಣ ವಿಸ್ತಾರವಾದ ಪ್ರದೇಶಕ್ಕೆ ನೀರಾವರಿಯ ಸೌಕರ್ಯ ಒದಗಿಸಲಾಗಿದೆ.

ಕೃಷ್ಣಾಮಾಹಾತ್ಮ್ಯಂ ಎಂಬ ಸಂಸ್ಕೃತ ಗ್ರಂಥದಲ್ಲಿ ಛಾಯಾಭಗವತೀ ಕ್ಷೇತ್ರದ ವಿಶೇಷ ವಿವರವಿದೆ. ಛಾಯಾದೇವಿ ಬಹುಕಾಲದಿಂದಲೂ ಈ ಪ್ರದೇಶದ ಸರ್ವರಿಗೂ ಆರಾಧ್ಯ ದೇವತೆ. ಕನ್ನಡ ಸಾಹಿತ್ಯದಲ್ಲಿ ಲಕ್ಷ್ಮೀಶ ಈಕೆಯನ್ನು ಸನ್ನುತಛಾಯೆ ಎಂದು ಬಹುಭಕ್ತಿಯಿಂದ ವರ್ಣಿಸಿದ್ದಾನೆ. 'ಸಾದೇವಿದಿಡಗಿಗೆ ದಿಡಗೀಲೆ ಹೋಗೋಣ' ಎಂಬುದು ಒಂದು ಜನಪದ ನುಡಿ. ಈ ದೇವಿಯ ಜಾತ್ರೆ ಪ್ರತಿವರ್ಷ ವೈಶಾಖಮಾಸದ ಶುಕ್ಲಪಕ್ಷದಲ್ಲಿ ಅಕ್ಷಯ ತೃತೀಯಾ ಸುಮಾರಿನಲ್ಲಿ ನಡೆಯುತ್ತದೆ. ಆಗ್ಗೆ ದೇವಿಯ ದರ್ಶನಕ್ಕೆಂದು, ತೀರ್ಥಸ್ನಾನಕ್ಕೆಂದು ಸಹಸ್ರಾರು ಯಾತ್ರಾರ್ಥಿಗಳು ಬರುತ್ತಾರೆ. ಪ್ರಾಚೀನ ಕಾಲದಲ್ಲಿ ಛಾಯಾಭಗವತಿಯ ಕ್ಷೇತ್ರವನ್ನು ತಲುಪುವುದು ಇಲ್ಲಿನ ಅರಣ್ಯ ಹಾಗೂ ವನ್ಯಮೃಗಗಳ ಕಾರಣದಿಂದ ಕಷ್ಟಸಾಧ್ಯವಾಗಿತ್ತು. ಅಂತೆಯೇ 'ಆದೀತು ಕಾಶಿ ಆಗಲಾರದ್ದು ಛಾಯೆ' ಎಂಬ ಗಾದೆಯು ಮಾತು ಇಂದಿಗೂ ಜನಬಳಕೆಯಲ್ಲಿದೆ. (ಎಸ್.ಜೆ.ಎ.)

# ಜ

**ಜಂಗಮ :** ಸ್ಥಾವರ ಮತ್ತು ಜಂಗಮ ಪದಗಳು ಸಾಮಾನ್ಯವಾಗಿ ಅಚರ ಮತ್ತು ಚರ ಎಂಬ ಶಬ್ದಗಳ ಪರ್ಯಾಯ ಪದಗಳು. ಆದರೆ ವೀರಶೈವಧರ್ಮದಲ್ಲಿ ಬಳಕೆಯಲ್ಲಿರುವ ಜಂಗಮ ಪದ ಪಾರಿಭಾಷಿಕ.

ಅಂತರ್ಧಾಯ ಲಲಾಟಾಕ್ಷಿಂ ಶಶಾಂಕಂ ಸಂವಿಧಾಯ ಚ |
ಅವಾಮಭಾಗಲಲನೋ ಜಂಗಮಃ ಪರಮೇಶ್ವರಃ ||

(ಸಿದ್ಧಾಂತಶಿಖಾಮಣಿ)

ಮಂಡೆಯ ಚಂದ್ರಕಲೆ, ಹಣೆಗಣ್ಣು ಮತ್ತು ಎಡಗಡೆಯ ಅಗಜೆಯರನ್ನು ಮರೆಮಾಚಿದ ಸಾಕ್ಷಾತ್ ಪರಮೇಶ್ವರನೇ ಜಂಗಮ ದೇಹಧರಿಸಿ-

ಅಹಮೇವ ಮಹೇಶಾನಿ ಧೃತ್ವಾ ಜಂಗಮವಿಗ್ರಹಂ
ಮದ್ಭಕ್ತಾನುಗ್ರಹಾರ್ಥಾಯ ಪರ್ಯಟಾಮಿ ಮಹೀತಲೇ (ವೀರಾಗಮ)

ಎಂದು ಹೇಳಿದನೆನ್ನಲಾಗಿದೆ.

ಭಕ್ತರನ್ನು ಅನುಗ್ರಹಿಸಲು ಭೂಲೋಕದಲ್ಲಿ ಸಂಚರಿಸುವನೆಂಬುದು ಆಗಮಗಳ ಹೇಳಿಕೆ. ಅಯ್ಯಾ, ನೀನೆನ್ನ ಭವವ ಕೊಂದಹೆನೆಂದು ಜಂಗಮಲಾಂಛನನಾಗಿ ಬಂದಲ್ಲಿ ನಾ ಭಕ್ತನೆಂಬ ವಾಹನವಾಗಿರ್ದೆ ಎಂಬ ಬಸವಣ್ಣನವರ ಮಾತು ಇದನ್ನು ಸಮರ್ಥಿಸುತ್ತದೆ.

ಐತಿಹಾಸಿಕವಾಗಿ ಕ್ರಿಸ್ತಶಕಾರಂಭದ ಸಮಯದಿಂದಲೂ ಜಂಗಮ ಮಠಗಳು ಭರತಖಂಡದಲ್ಲಿದ್ದಂತೆ ತಿಳಿದುಬರುತ್ತದೆ. ಒಂದನೆಯ ಶತಮಾನದ ಹೊತ್ತಿಗೆ ಶ್ರೀಶೈಲದಲ್ಲಿ ಶೈವಮಠವೊಂದು ಅಸ್ತಿತ್ವದಲ್ಲಿದ್ದ ಬಗೆಗೆ ಪರಿಶೋಧನೆಗಳು ನಡೆದಿವೆ (ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ). ಶ್ರೀಶೈಲದ ಜಂಗಮ ಮಲ್ಲಿಕಾರ್ಜುನ ಶಿವಯೋಗಿಗಳ ಪ್ರಭಾವವನ್ನು ನನ್ನೆ ಚೋಡಕವಿ (ಸು.940) ತನ್ನ ತೆಲುಗು ಕಾವ್ಯ ಕುಮಾರಸಂಭವದ ಪ್ರಾರಂಭದಲ್ಲಿ ಮಾಡಿದ್ದಾನೆ. ಸು.800ರಲ್ಲಿದ್ದ ಆನಂದಗಿರಿ ತನ್ನ ಶಂಕರವಿಜಯದಲ್ಲಿ ಶಿರಸಿ ಪಾಷಾಣಲಿಂಗಂಚ ಧಾರಿಣಃ ಜಂಗಮಾಃ ಎಂದು ಶಿರೋಲಿಂಗಧಾರಿ ಜಂಗಮರನ್ನು ಉಲ್ಲೇಖಿಸಿದ್ದಾನೆ. ವೀರಾಗಮದಲ್ಲಿ ಜಂಗಮನ ಸ್ವರೂಪವನ್ನು ಕುರಿತು

ಧಾರಯೇತ್ಸಮತಾಕಂಥಾಂ ಕ್ಷಮಾಖ್ಯಾಂ ಭಸ್ಮಘುಂಟಿಕಾಂ
ದಯಾಕಮಂಡಲುಂ ವತ್ಸ ಜ್ಞಾನದಂಡಂ ಮನೋಹರಂ
ವೈರಾಗ್ಯಭಿಕ್ಷಾಪಾತ್ರಂ ಚ ಭಕ್ತಿಭಿಕ್ಷಾಂ ಚ ಯಾಚತೇ
ಕಂಥಾಕಮಂಡಲುರ್ದಂಡಃ ಖರ್ಪರೋ ಭಸ್ಮಭಸ್ತ್ರಿಕಾ

ಎಂದು ಹೇಳಿರುವ ವರ್ಣನೆ ಪ್ರಭುದೇವರ - ಸಮತೆ ಎಂಬ ಕಂಥೆಯ (ಜೋಳಿಗೆ) ತೊಟ್ಟು, ಸುಬುದ್ಧಿ ಎಂಬ ಟೊಪ್ಪರವನಿಕ್ಕಿ, ವಿಷಯವೆಂಬ ಹಾವುಗೆಯ ಮೆಟ್ಟಿ, ಕಮಲಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮರವೆ ಎಂಬ ಚಳಮೆಟ್ಟದೆ ಗುಹೇಶ್ವರನ ಶರಣ ಬಂದನು ಭಕ್ತಿಭಿಕ್ಷೆಯನಿಕ್ಕು ಸಂಗನ ಬಸವಣ್ಣ ಎಂಬ ವಚನದಲ್ಲಿ ಪಡಿಮೂಡಿದೆ.

ವೀರಶೈವ ಸಿದ್ಧಾಂತದ ಅಷ್ಟಾವರಣಗಳಲ್ಲಿ ಉಕ್ತವಾದ ಜಂಗಮ ಉಪಾಸ್ಯತ್ರಯದಲ್ಲಿ ಒಂದು. ಗುರು ಲಿಂಗ ಜಂಗಮರು ಶಿವನ ಮೂರು ಅಂಶಗಳು (ಏಕಮೂರ್ತಿಸ್ತ್ರಿಧಾ ಭಕ್ತಃ ಗುರುರ್ಲಿಂಗಂ ತು ಜಂಗಮಃ) ವೀರ, ನಂದಿ, ಭೃಂಗಿ, ವೃಷಭ ಮತ್ತು ಸ್ಕಂದ ಎಂಬ ಐದು ಪ್ರಥಮ ಗೋತ್ರಗಳಿಗೆ ಸೇರಿದ ರೇಣುಕ ದಾರುಕ ಮುಂತಾದ ಐವರು ಆಚಾರ್ಯರಿಂದ ವೀರಮಾಹೇಶ್ವರ ದೀಕ್ಷೆ ಹೊಂದಿದ ಐದು ಆರಾಧ್ಯ ಸಂಪ್ರದಾಯಗಳಿಗೂ ಜಂಗಮ ಎಂಬ ಹೆಸರಿದೆ. ಇವರನ್ನು ವೀರಶೈವ ಗುರು ಮತ್ತು ಜಂಗಮರು (ವಿರಕ್ತ) ಪೀಠಗಳಿಗೆ ಕ್ರಮವಾಗಿ ಅಧಿಪತಿಗಳನ್ನಾಗಿ ಆರಿಸುವ ಸಂಪ್ರದಾಯ ಉಂಟು. ಇವರಲ್ಲಿ ಗುರುಭಕ್ತನ ಶಕ್ತಿ ಪಾತವನ್ನು ಗುರುತಿಸಿ ಶಿವದೀಕ್ಷೆ ಎಸಗಿ ತತ್ತ್ವಗಳನ್ನು ಬೋಧಿಸುತ್ತಾನೆ. ಈ ದೃಷ್ಟಿಯಿಂದ ಗುರು, ಜಂಗಮರು ಕ್ರಮವಾಗಿ ಭಕ್ತರ ಬೋಧಕ ಮತ್ತು ಪರೀಕ್ಷಕರೆನಿಸುತ್ತಾರೆ. ಇವರಲ್ಲಿ ಕೆಲವರು ಗೃಹಸ್ಥರು, ಕೆಲವರು ದೇಶಿಕರು (ಬ್ರಹ್ಮಚಾರಿಗಳು), ಈ ಇಬ್ಬರೂ ಸಮಾಜಕ್ಕೆ ಪೂಜ್ಯರು.

ಯೋಗಿನೀಸಹಿತಾಃ ಕೇಚಿತ್ ಕೇಚಿತ್ ದೇಶಿಕಸಂಜ್ಞಿಕಾಃ
ಸ್ವೇಚ್ಛಾಶ್ರಮವಿಹಾರಾಸ್ತೇ ಲಿಂಗಭೋಗೋಪಭೋಗಿನಃ

ಶಿವಶರಣರು ಜಂಗಮರಲ್ಲಿ ಜಾತಿ ಕುಲ ಅಂತಸ್ತುಗಳನ್ನು ಎಣಿಸಬಾರದು ಎನ್ನುತ್ತಾರೆ. ಅರಿವು ಆಚಾರವುಳ್ಳವರೆ ಜಂಗಮ ಎಂದು ಚನ್ನಬಸವಣ್ಣ ಹೇಳಿದ್ದಾನೆ.

ವೀರಶೈವ ಸಾಹಿತ್ಯದಲ್ಲಿ ಅಷ್ಟಾವರಣಾಂತರ್ಗತ ಜಂಗಮ, ವಂಶಾನುಗತ ಜಂಗಮ, ಅತಿಥಿರೂಪಿ ಜಂಗಮ ಎಂಬ ಮೂರು ರೂಪಗಳಲ್ಲಿ ಜಂಗಮ ಶಬ್ದ ವ್ಯವಹರಿಸಲ್ಪಟ್ಟಿದೆ. ಶಿವಾಗಮಗಳಲ್ಲಿಯೂ ವೀರಶೈವ ಪುರಾಣಗಳಲ್ಲಿಯೂ ಅತಿಥಿಗಳನ್ನು ಜಂಗಮರೆಂದು ಕರೆಯಲಾಗಿದೆ. ವೃಷಭೇಂದ್ರ ವಿಜಯದಲ್ಲಿ ಶ್ರೀ ರೇಣುಕಾಚಾರ್ಯನನ್ನು ಜಂಗಮ ಕೋಟಿಗೆ ಮುಖ್ಯವಾದ ಭಾಸ್ವತ್ ಗುರು ಎಂದು ವರ್ಣಿತವಾಗಿದೆ. ಒಟ್ಟಿನಲ್ಲಿ ಜಂಗಮರು ಪೂಜ್ಯರು, ಪೂಜಾರ್ಹರು ಎಂದು ವ್ಯವಹರಿಸಲ್ಪಟ್ಟಿದೆ. ಭಕ್ತಿಭಂಡಾರಿ ಬಸವಣ್ಣನನ್ನು ಜಂಗಮ ಪ್ರಾಣಿ ಎಂದು ಕರೆಯಲಾಗಿದೆ. ಈಗಲೂ ವೀರಶೈವರಲ್ಲಿ ಜಂಗಮ ದಾಸೋಹಕ್ಕೆ ಬಹಳ ಪ್ರಾಮುಖ್ಯವಿದೆ. *

**ಜಂಬಿಟ್ಟಿಗೆ :** ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನಲ್ಲಿ ಹರಿಹರಪುರದಿಂದ 2ಕಿಮೀ ದೂರದಲ್ಲಿ ತುಂಗಾನದಿಯ ದಡದಲ್ಲಿರುವ ಗ್ರಾಮ. ಪ್ರಾಚೀನ ಅಗ್ರಹಾರ. ಚಿಕ್ಕದಾದರೂ ಕೌಶಲ್ಯದಿಂದ ಕೂಡಿರುವ ನೀಲಕಂಠೇಶ್ವರ ದೇವಾಲಯವೇ ಇಲ್ಲಿನ ವೈಶಿಷ್ಟ್ಯ. ಇದನ್ನು ನಿರ್ಮಿಸಿದ ಶಿಲ್ಪಿ ಕಳಸದ ಕೊಲ್ಲೂರನ ಮಗ ಕಾಳಣ್ಣನೆಂದೂ ಇದು 1733ರಲ್ಲಿ ನಿರ್ಮಿತವಾಯಿತೆಂದೂ ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ. ದೇವಾಲಯ 10 ಅಡಿ ಉದ್ದ ಮತ್ತು 8 ಅಡಿ ಅಗಲವಿದೆ. ಇದು ಗರ್ಭಗೃಹ, ಸುಕನಾಸಿ, ಎರಡು ಕಂಬಗಳುಳ್ಳ ಮುಖಮಂಟಪ ಮತ್ತು ಮೇಲೆ ಚಿಕ್ಕ ಶಿಖರ ಇರುವ ದ್ರಾವಿಡ ಶೈಲಿಯ ಗುಡಿ, ದೇವಾಲಯದ ಗೋಡೆಗಳಲ್ಲೆಲ್ಲ ಶಿಲ್ಪಗಳು ತುಂಬಿವೆ. ಕಲಾದೃಷ್ಟಿಯಿಂದ ಈ ಶಿಲ್ಪಗಳು ಅಷ್ಟು ಪರಿಪೂರ್ಣವಾಗಿಲ್ಲ. ಆದರೆ ಒರಟುಕಲ್ಲಿನ ಮೇಲೆ ಈ ಶಿಲ್ಪಗಳನ್ನು ಕಂಡರಿಸಿರುವುದು ನಿಜಕ್ಕೂ ಒಂದು ಸಾಧನೆ. ದೇವಾಲಯದ ದಕ್ಷಿಣ ಮತ್ತು ಪಶ್ಚಿಮ ಭಾಗದ ಗೋಡೆಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳ ಶಿಲ್ಪಗಳಿವೆ. ಉತ್ತರಭಾಗದ ಗೋಡೆಯಲ್ಲಿ ಭಾಗವತಪುರಾಣವನ್ನು ಕಂಡರಿಸಲಾಗಿದೆ. ಅದೇ ಭಾಗದಲ್ಲಿ ಶಿವಲೀಲೆಗಳು ಮತ್ತು ಯಮಲೋಕದಲ್ಲಿ ಪಾಪಿಗಳು ಅನುಭವಿಸಬೇಕಾದ ಚಿತ್ರಹಿಂಸೆಗಳ ದೃಶ್ಯಗಳನ್ನು ಬಿಡಿಸಲಾಗಿದೆ. ವಿಷ್ಣುವಿನ ಹತ್ತು ಅವತಾರಗಳೂ ಪಂಚಮುಖದ ಕಾಮಧೇನುವಿನ ಚಿತ್ರಗಳೂ ಈ ದೇವಾಲಯದಲ್ಲಿವೆ.



ನೀಲಕಂಠೇಶ್ವರ ದೇವಾಲಯ

ಗರ್ಭಗೃಹ ಮತ್ತು ಸುಕನಾಸಿಗಳ ದ್ವಾರಗಳ ತಿರುಗಣೆಯ ಮೇಲೂ ರಾಮಾಯಣದ ಕಥೆ ಇದೆ. ಸುಕನಾಸಿಯ ದ್ವಾರದ ಎಡಕ್ಕೆ ದುರ್ಗಾ, ಚಂದ್ರ ಮತ್ತು ಸೂರ್ಯನಾರಾಯಣರ ಮೂರ್ತಿಗಳಿವೆ. ಬಲಕ್ಕೆ ಗಣಪತಿ, ಸೂರ್ಯ ಮತ್ತು ಗೋಪಾಲರ ಮೂರ್ತಿಗಳಿವೆ. ಪ್ರತಿ ಮೂರ್ತಿಗೂ ಹೆಸರು ಬರೆಯಲಾಗಿದೆ. ಪ್ರತಿ ದೃಶ್ಯ ಸಮೂಹಕ್ಕೂ ವಿವರಣಾತ್ಮಕ ಟಿಪ್ಪಣಿ ಇದೆ. (ಡಿ.ಎಸ್.ಜೆ.)

**ಜಕ್ಕಣಾರ್ಯ :** ಸು.1430. ವೀರಶೈವ ಕವಿ. ಏಕೋತ್ತರಶತಸ್ಥಲ ಎಂಬ ಗ್ರಂಥದ ಕರ್ತೃ. ಈತನಿಗೆ ಜಕ್ಕಣ್ಣ, ಜಕ್ಕಪ್ಪ ಎಂಬ ಹೆಸರೂ ಭಕ್ತಿಭಂಡಾರಿ ಎಂಬ ಬಿರುದೂ ಇದ್ದಂತೆ ತಿಳಿದುಬರುತ್ತದೆ. ಈತ ವಿಜಯನಗರದ ಪ್ರೌಢದೇವರಾಯನ (1424-46) ಮಂತ್ರಿಯೂ ದಂಡನಾಯಕನೂ ಭಂಡಾರಿಯೂ ಆಗಿದ್ದ. ಮಹಾಲಿಂಗದೇವನ ಶಿಷ್ಯನಾದ ಕುಮಾರ ಬಂಕನಾಥ ಈತನ ಗುರು.

ಜಕ್ಕಣಾರ್ಯ ವೀರಶೈವ ಗ್ರಂಥಗಳ ರಚನೆಗಾಗಿ ಅಪರಿಮಿತ ದ್ರವ್ಯವನ್ನು ವೆಚ್ಚಮಾಡಿದನೆಂದು ಗುಬ್ಬಿಯ ಮಲ್ಲಣಾರ್ಯನ ವೀರಶೈವಮಹಾಮೃತಪುರಾಣದಲ್ಲಿ ಹೇಳಿದೆ. ಅದೃಶ್ಯಕವಿಯ ಪ್ರೌಢರಾಯನ ಕಾವ್ಯ, ಸಿದ್ಧನಂಜೇಶನ ರಾಘವಾಂಕಚಾರಿತ್ರ ಮತ್ತು ಶಾಂತಲಿಂಗದೇಶಿಕನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರಗಳಲ್ಲಿ ಈತನ ಪ್ರಸಕ್ತಿಯಿದೆ. ಅದೃಶ್ಯಕವಿಯ ಪ್ರೌಢರಾಯನ ಕಾವ್ಯ ಮತ್ತು ಅದನ್ನೇ ಅನುಸರಿಸಿದ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಇವನಿಗೆ ಸಂಬಂಧಿಸಿದ ಒಂದು ಐತಿಹ್ಯ ಹೀಗಿದೆ: ಕುಂತಲ ದೇಶದ ಪ್ರೌಢರಾಯನ ಆಳಿಕೆಯಲ್ಲಿ

ಜಕ್ಕಣಾರ್ಯ ಮಂತ್ರಿ. ಮುಕುಂದಪೆದ್ದಿ ಮತ್ತು ವೃಂದಾಚಾರ್ಯರು ಗುರುಗಳು. ಈ ಗುರುಗಳು ಪ್ರೌಢರಾಯನಿಗೆ ಒಂಬತ್ತು ತಿಂಗಳು ಭಾರತವನ್ನು ಓದಿ ಹೇಳಿ ಅದರ ಮೆರವಣಿಗೆ ಮಾಡಿದರು. ಅದನ್ನು ಕಂಡ ಜಕ್ಕಣಾರ್ಯ 'ಪ್ರಭುಸ್ವಾಮಿ' ಪೇಳ್ದ ವಚನಂಗಳಿಗೆ ಕ್ರಮದಿಯೇಕೋತ್ತರಶತಸ್ಥಲ ಸೂತ್ರಗಳನ್ನಿಟ್ಟು ರಮಣೀಯವಾಗಿ ವರ್ಣಕ ವಸ್ತುಕಗಳಿಂದ ವ್ಯಾಖ್ಯಾನ ಮಾಡಿದ. ನೂರೊಂದು ವಿರಕ್ತರು, ಕರಸ್ಥಲದ ನಾಗಿದೇವ, ಕಲ್ಲುಮಠದ ಪ್ರಭುದೇವ, ವೀರಣ್ಣೊಡೆಯ, ಚಾಮರಸ ಮೊದಲಾದ ಶರಣರು ಆ ಕೃತಿಯನ್ನು ಮೆರವಣಿಗೆ ಮಾಡಿದರು. ಮರುದಿನ ಬೆಳಗಿನ ಆಸ್ಥಾನದಲ್ಲಿ ಮುಕುಂದಪೆದ್ದಿ ಜಕ್ಕಣಾರ್ಯನನ್ನು ಕುರಿತು 'ರಾತ್ರಿ ನಡೆದುದು ಸತ್ತವರ ಒಸಗೆಯೋ, ಹೆತ್ತ ಸೌರಂಭವೋ ಎಂದು ಪ್ರಶ್ನಿಸಿದ. ಆಗ ಜಕ್ಕಣ್ಣ' 'ಉತ್ಸವದ ವೇಳೆಯೊಳು ಮುಕ್ತಿಯೆಂದೆಂಬ ಶಿಶುವಂ ಭಕ್ತಿಸತಿ ಪೆತ್ತಳು' ಎಂದ.

ಮುಕುಂದಪೆದ್ದಿ ಅಲ್ಲಮನ ಒಂದು ವಚನಕ್ಕೆ ಅಸಂಬದ್ಧ ವ್ಯಾಖ್ಯಾನ ಮಾಡಿದ. ಅದನ್ನು ಪ್ರತಿಭಟಿಸಿ 18 ಮತದವರು ಮೆಚ್ಚುವಂತೆ ಜಕ್ಕಣ್ಣ ವ್ಯಾಖ್ಯಾನ ಮಾಡಿದ. ಪ್ರೌಢದೇವರಾಯ ಮೆಚ್ಚಿ ಜಕ್ಕಣ್ಣನಿಗೆ ತ್ರಿಸರದಪದಕ ಮತ್ತು ರುದ್ರ ಕಂಕಣವನ್ನು ಕೊಡಲು ಹೋದಾಗ ಮುಕುಂದಪೆದ್ದಿಯು ಶರಣರು ಮಾಯೆಯ ಮೋಹಕ್ಕೆ ಬೆರಸಿರುವರೋ ಇಲ್ಲವೋ ಎನ್ನುವುದನ್ನು ಪರೀಕ್ಷೆಮಾಡಿದ ಅನಂತರ ಮನ್ನಿಸುವುದು ಎಂದ. ಈ ಪ್ರಶ್ನೆಗೆ ಹದಿನೈದು ದಿವಸದಲ್ಲಿ ಉತ್ತರ ಕೊಡವುದಾಗಿ ಚಾಮರಸ ಹೇಳಿದ. ಮುಕುಂದಪೆದ್ದಿ ಮನೆಗೆ ಹೋದ.

ದಿವಸ ಒಂದಕ್ಕೆ ನೂರಹನ್ನೊಂದು ಪದ್ಯಗಳಂತೆ ಹನ್ನೊಂದು ದಿನದಲ್ಲಿ ಚಾಮರಸ ಪ್ರಭುಲಿಂಗಲೀಲೆಯನ್ನು ಮುಗಿಸಿ ಪ್ರೌಢರಾಯನಿಗೆ ಒಪ್ಪಿಸಿದ. ದೊರೆ ಆಸ್ಥಾನ ಕವಿಗಳಿಗೆ ಪ್ರಭುಲಿಂಗಲೀಲೆಯ ಅರ್ಥ ಹೇಳಲು ಕೇಳಿದ. ಯಾರೂ ಮುಂದೆ ಬರಲಿಲ್ಲ. ಜಕ್ಕಣಾರ್ಯನು, 'ಪ್ರಭುಲಿಂಗಲೀಲಾಮೃತದ ಅಭಿಪ್ರಾಯವೊಂದುಳಿಯದೆ' ಹೇಳಿದ. ಅರಸ ಮೆಚ್ಚಿ ವಾದಿಗಳನ್ನು ಹೊರಹಾಕಿ ಜಕ್ಕಣಾರ್ಯನಿಗೆ ರನ್ನದೊಡಿಗೆ, ತ್ರಿಸರ, ರುದ್ರಕಂಕಣ, ದಿವ್ಯವಸನ, ವಾಹನ ಮತ್ತು ಐದು ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟ. ಜಕ್ಕಣಾರ್ಯ ತನ್ನಂತೆಯೆ ಚಾಮರಸನಿಗೂ ಸತ್ಕಾರ ಮಾಡಿಸಿದ. ಪ್ರಭುಲಿಂಗಲೀಲೆಯನ್ನು ಆನೆಯ ಮೇಲೆ ಮೆರವಣಿಗೆ ಮಾಡಿಸಿದ. ಲಕ್ಕಣಾರ್ಯರಿಗೆ ಮಂತ್ರಿ ಪದವಿಯನ್ನು ಕೊಟ್ಟು ಬಯಲಾದ.

ಜಕ್ಕಣಾರ್ಯನ ಏಕೋತ್ತರಶತಸ್ಥಲಕ್ಕೆ ಕನ್ನಡದಲ್ಲಿ ವಿಶಿಷ್ಟ ಸ್ಥಾನವಿದೆ. ಕನ್ನಡದಲ್ಲಿ ಗೀತಸಾಹಿತ್ಯ ಹರಿದಾಸರಿಂದ ಈಚೆಗೆ ಬಂದದ್ದು ಎನ್ನುವ ಅಭಿಪ್ರಾಯವಿತ್ತು. ಆದರೆ 12ನೆಯ ಶತಮಾನದಲ್ಲಿಯೇ ಶಿವಶರಣರಿಂದ ಗೀತಸಾಹಿತ್ಯದ ನಿರ್ಮಾಣವಾಗಿದೆ ಎನ್ನುವ ಅಮೂಲ್ಯ ಅಂಶವನ್ನು ಈ ಗ್ರಂಥ ಸೂಚಿಸುತ್ತದೆ. ಮಹಾಲಿಂಗದೇವನ ಏಕೋತ್ತರಶತಸ್ಥಲ ಈ ಕೃತಿಗೆ ಮೂಲ. ಇದರಲ್ಲಿ ಶಿವಶರಣರ ಕೆಲವು ವಚನಗಳು ಇಲ್ಲ; ಉಳಿದಂತೆ ಮಹಾಲಿಂಗದೇವ ಮತ್ತು ಜಕ್ಕಣಾರ್ಯರ ಕೃತಿಗಳು ಸ್ವರೂಪದಲ್ಲಿ ಒಂದೇ ಆಗಿವೆ. (ಜಿ.ಜಿ.ಎಂ.)

**ಜಗದೇಕಮಲ್ಲ II :** ಕಲ್ಯಾಣಚಾಳುಕ್ಯ ವಂಶದ ದೊರೆ (1139-49) ಈತನಿಗೆ ಪೆರ್ಮ ಎಂದೂ ಹೆಸರಿದೆ. ಪ್ರತಾಪಚಕ್ರವರ್ತಿ ಇವನ ಬಿರುದು. ಈತ 3ನೆಯ ಸೋಮೇಶ್ವರನ ಮಗ ಮತ್ತು ಉತ್ತರಾಧಿಕಾರಿ.

ಸೋಮೇಶ್ವರನ ಮರಣದೊಂದಿಗೆ ಚಾಳುಕ್ಯ ರಾಜ್ಯದಲ್ಲಿದ್ದ ಬಿಗಿ ತಪ್ಪಿ ಹಲವು ಸಾಮಂತರು ಸ್ವತಂತ್ರರಾಗುವ ಪ್ರಯತ್ನ ನಡೆಸಿದರು. ಇವನ ಕಾಲಕ್ಕೆ ವೆಂಗಿ ಪೂರ್ಣವಾಗಿ ಕೈಬಿಟ್ಟಿತ್ತಲ್ಲದೆ ಆಂಧ್ರ ದೇಶದಲ್ಲಿ ಕಾಕತೀಯ 2ನೆಯ ಪ್ರೋಲ ಪ್ರಬಲನಾದ. ಗೋವೆಯ ಕದಂಬರೂ ಸ್ವಾತಂತ್ರ್ಯ ಸಾರಿದ್ದರಿಂದ ಕೊಂಕಣ ಮತ್ತು ಪಲಸಿಗೆಗಳು ಕೈಬಿಟ್ಟವು. ದಕ್ಷಿಣದಲ್ಲಿದ್ದ ವಿಷ್ಣುವರ್ಧನ ರಾಜ್ಯವಿಸ್ತರಣೆ ಕೈಕೊಂಡನಾಗಿ 1139ರಲ್ಲಿ ಹಾನಗಲ್ಲು ಅವನ ವಶವಾಯಿತು. ಅನಂತರ ಚಾಳುಕ್ಯ ರಾಜ್ಯಕ್ಕೇ ಆತಂಕ ಉಂಟುಮಾಡುವಂತೆ ಗದಗ ಮತ್ತು ಲಕ್ಕುಂಡಿಗೂ ಮುಂದುವರೆದ. ಆದರೆ ಜಗದೇಕಮಲ್ಲನ ದಂಡನಾಯಕ ಬರ್ಮದೇವಯ್ಯ ಮತ್ತು ಅವನ ತಮ್ಮ ಮಾಧವ ಇವರು ಸು.1143ರಲ್ಲಿ ಹೊಯ್ಸಳ ಸೈನ್ಯವನ್ನು ಹಿಮ್ಮೆಟ್ಟಿಸಿ ಆ ಭಾಗಗಳನ್ನು ಚಾಳುಕ್ಯ ರಾಜ್ಯದಲ್ಲಿ ಉಳಿಸಿದರು.

ಚಾಳುಕ್ಯರ ಬಂಧುಗಳಾಗಿದ್ದ ಕಳಚುರಿಗಳು ಸೋಮೇಶ್ವರನ ಕಾಲದಲ್ಲೇ ಸ್ವತಂತ್ರರಾಗುವ ಸೂಚನೆಗಳನ್ನು ನೀಡಿದ್ದರು. ಪೆರ್ಮ ಜಗದೇಕಮಲ್ಲನ ಕಾಲದಲ್ಲಿ ಬಿಜ್ಜಳ ತರ್ದವಾಡಿ ಮೊದಲಾದ ಭಾಗಗಳನ್ನು ವಶಪಡಿಸಿಕೊಂಡು ಹೆಚ್ಚು ಕಡಿಮೆ ಸ್ವತಂತ್ರನಾಗಿಯೇ ಆಳುತ್ತಿದ್ದನೆಂಬುದು ಬಿಜ್ಜಳನ ಯಾವ ಶಾಸನಗಳಲ್ಲೂ ಸಮ್ರಾಟ ಜಗದೇಕಮಲ್ಲನ ಹೆಸರನ್ನು ಹೇಳದಿರುವುದರಿಂದ ಸ್ಪಷ್ಟವಾಗುತ್ತದೆ.

ಸು.10 ವರ್ಷಗಳ ದುರ್ಬಲ ಆಳಿಕೆಯ ಅನಂತರ ಜಗದೇಕಮಲ್ಲ ನಿಧನಹೊಂದಿದ. ಅನಂತರ ಇವನ ತಮ್ಮ 3ನೆಯ ತೈಲಪ ಚಾಳುಕ್ಯ ಸಿಂಹಾಸನವನ್ನು ವಹಿಸಿಕೊಂಡ. (ಟಿ.ಎಸ್.ಎಸ್.ಎನ್.)

**ಜಗದ್ದಳ ಸೋಮನಾಥ :** ಸು.1175. ಜೈನಕವಿ. ಕರ್ನಾಟಕ ಕಲ್ಯಾಣಕಾರಕ ಎಂಬ ವೈದ್ಯ ಗ್ರಂಥದ ಕರ್ತೃ. ಈತನಿಗೆ ವಿಚಿತ್ರ ಕವಿಯೆಂಬ ಬಿರುದೂ ಇದ್ದಂತೆ ತಿಳಿದುಬರುತ್ತದೆ. ತನ್ನ ಗ್ರಂಥವನ್ನು ಸುಮನೋಬಾಣ ಕವಿಯೂ ಅಭಯಚಂದ್ರ ಸಿದ್ಧಾಂತಿಯೂ ತಿದ್ದಿದಂತೆ ಹೇಳಿಕೊಂಡಿರುವುದರಿಂದ ಈತ ಸುಮನೋಬಾಣನ (ಸು.1175) ಕಾಲದವನೆಂಬ ಅಂಶ ವ್ಯಕ್ತವಾಗುತ್ತದೆ.

ಕನ್ನಡ ವೈದ್ಯ ಗ್ರಂಥಗಳಲ್ಲಿ ಕೀರ್ತಿವರ್ಮನ (ಸು.1100) ಗೋವೈದ್ಯವನ್ನು ಬಿಟ್ಟರೆ ಕಲ್ಯಾಣಕಾರಕ ಅತ್ಯಂತ ಪ್ರಾಚೀನವಾದುದು. ಪೂಜ್ಯಪಾದರಿಂದ ಸಂಸ್ಕೃತದಲ್ಲಿ ರಚಿತವಾದ ಕಲ್ಯಾಣಕಾರಕ ಈ ಗ್ರಂಥಕ್ಕೆ ಆಕರ. ಕಂದ ಮತ್ತು ವೃತ್ತಗಳಲ್ಲಿ ರಚಿತವಾಗಿದೆ. ಇದರಲ್ಲಿ ಪೀಠಿಕಾ ಪ್ರಕರಣ, ಪರಿಭಾಷಾ ಪ್ರಕರಣ, ಷೋಡಶಜ್ವರನಿದಾನ ಚಿಕಿತ್ಸಾ ನಿರೂಪಣಪ್ರಕರಣ, ಅತಿಸಾರಗ್ರಹಣೀನಿದಾನ ಚಿಕಿತ್ಸಾನಿರೂಪಣ ಪ್ರಕರಣ, ರಕ್ತಪಿತ್ತನಿದಾನ ಚಿಕಿತ್ಸಾನಿರೂಪಣ ಪ್ರಕರಣ, ಕ್ಷಯನಿದಾನ ಚಿಕಿತ್ಸಾನಿರೂಪಣ ಪ್ರಕರಣ, ಉದರರೋಗನಿದಾನ ಚಿಕಿತ್ಸಾನಿರೂಪಣ ಪ್ರಕರಣ, ಗುಲ್ಮನಿದಾನ ಚಿಕಿತ್ಸಾ ನಿರೂಪಣಪ್ರಕರಣ, ಅಶ್ಮರೀಪ್ರಕರಣ, ಕಾಮಾಲೆಯ ನಿದಾನ ಚಿಕಿತ್ಸಾಪ್ರಯೋಗ ಪ್ರಕರಣ, ಮೂಲವ್ಯಾಧಿನಿದಾನ ಚಿಕಿತ್ಸಾಪ್ರಕರಣ ಮೊದಲಾದ 11ಕ್ಕೂ ಹೆಚ್ಚು ಪ್ರಕರಣಗಳಿವೆ. ಪ್ರತಿಪ್ರಕರಣದಲ್ಲೂ ವ್ಯಾಧಿಗಳ ವಿವರ ಹಾಗೂ ಅವುಗಳ ಚಿಕಿತ್ಸಾ ವಿಧಾನಗಳನ್ನು ನೀಡಲಾಗಿದೆ. ವ್ಯಾಧಿಗಳಿಗೆ ನಿರೂಪಿಸಿರುವ ನಿದಾನಕ್ರಮ ಸುಲಭವೂ ಪರಿಣಾಮಕಾರಿಯೂ ಆಗಿರುವಂತೆ ತೋರುತ್ತದೆ. ಈ ಗ್ರಂಥದಲ್ಲಿ ನಿರೂಪಿತವಾಗಿರುವ ವಿಷಯಗಳು ಕೆಲವು ಸಂದರ್ಭಗಳಲ್ಲಿ ಹೆಚ್ಚು ವೈಜ್ಞಾನಿಕವಾಗಿದ್ದು ಕೃತಿ ಅತ್ಯಂತ ಉಪಯುಕ್ತವಾಗಿವೆ. (ಬಿ.ಎಸ್.ಆರ್‌ಯು.)

**ಜಗನ್ನಾಥದಾಸ :** ಸು.1728-1809. ಕನ್ನಡದ ಪ್ರಮುಖ ಹರಿದಾಸರಲ್ಲೊಬ್ಬರು. ಪುರಂದರದಾಸ ಮತ್ತು ಕನಕದಾಸರ ಅನಂತರ ಹರಿದಾಸ ಸಾಹಿತ್ಯವನ್ನು ಅದರ ಪರಮೋತ್ಕರ್ಷ ಸ್ಥಿತಿಗೆ ಏರಿಸಿದವರು. ರಾಯಚೂರು ಜಿಲ್ಲೆಯ ಬ್ಯಾನವಟ್ಟೆ ಇವರ ಜನ್ಮಸ್ಥಳ. ಇವರು ಬ್ಯಾನವಟ್ಟೆ ನರಸಿಂಹದಾಸರ ವರಪುತ್ರರು. ಆದವಾನಿಯ ದಿವಾನ ಪಂಗನಾಮದ ತಿಮ್ಮಣ್ಣಯ್ಯನವರ ಶಿಷ್ಯರು. ಶ್ರೀನಿವಾಸಾಚಾರ್ಯ ಎಂಬುದು ಇವರ ಪೂರ್ವಾಶ್ರಮದ ಹೆಸರು. ಇವರು ಚಿಕ್ಕಂದಿನಲ್ಲೇ ಪ್ರತಿಭಾವಂತರಾಗಿದ್ದು ಮಂತ್ರಾಲಯ ಮಠದ ಶ್ರೀ ವರದೇಂದ್ರತೀರ್ಥರಲ್ಲಿ ವ್ಯಾಸಂಗಮಾಡಿ ಶಾಸ್ತ್ರವಿದ್ಯಾಪಾರಂಗತರಾಗಿ ಅನಂತರ ಆಚಾರ್ಯಪೀಠವನ್ನೇರಿ ಬಹುಶಿಷ್ಯಸಂಪತ್ತಿನಿಂದ ಶೋಭಿಸಿದರು. ಆ ಕಾಲದ ಅಪರೋಕ್ಷಜ್ಞಾನಿಗಳಾದ ವಿಜಯದಾಸರನ್ನು ಒಮ್ಮೆ ತಿರಸ್ಕಾರದಿಂದ ಕಂಡು, ಅದರ ಫಲವಾಗಿ ಉದರಬೇನೆಯಿಂದ ನೊಂದು, ಅವರ ಶಿಷ್ಯ ಗೋಪಾಲದಾಸರಿಂದ ರೋಗನಿವಾರಣೆಯಾದೊಡನೆ ಹೃದಯ ಪರಿವರ್ತನೆಹೊಂದಿ ಶ್ರೀಜಗನ್ನಾಥ ವಿಠಲನೆಂಬ ಅಂಕಿತದಿಂದ ಹರಿದಾಸದೀಕ್ಷೆ ಪಡೆದರು. ಇಷ್ಟೇ ಅಲ್ಲದೆ ತಮ್ಮ ಗುರುವಿನಿಂದ ನಲವತ್ತು ವರ್ಷ ಆಯುರ್ದಾನವನ್ನು ಪಡೆದರೆಂದು ಕಥೆ. ಪಂಡಿತೋಹಂ ಎಂಬ ಅಹಂಕಾರದಿಂದ ದಾಸೋಹಂ ಎಂಬ ಭಕ್ತಿಪಂಥಕ್ಕೇರಿದರು.

ಜಗನ್ನಾಥದಾಸರು ತಂತ್ರಸಾರ, ತತ್ತ್ವಸುವಾಲಿ, ಹರಿಕಥಾಮೃತಸಾರ ಎಂಬ ಕೃತಿಗಳನ್ನೂ ಕೀರ್ತನೆಗಳನ್ನೂ ರಚಿಸಿದ್ದಾರೆ. ತತ್ತ್ವಸುವಾಲಿ ತ್ರಿಪದಿ ಛಂದಸ್ಸಿನಲ್ಲಿ ಸು.600 ಪದ್ಯಗಳಿಂದ ಕೂಡಿರುವ ಸರಳ ಶೈಲಿಯಲ್ಲಿ

ತತ್ತ್ವವನ್ನು ಬೋಧಿಸುವ ಗ್ರಂಥ. ತಂತ್ರಸಾರ ವಿಷ್ಣುಸ್ತುತಿ ಮತ್ತು ಮಂತ್ರಸ್ವರೂಪವನ್ನು 27 ನುಡಿಗಳಲ್ಲಿ ಒಳಗೊಂಡ ಹಾಡು. ಇವರು ರಚಿಸಿರುವ ಸುಮಾರು ಇನ್ನೂರು ಕೀರ್ತನೆಗಳಲ್ಲಿ ಜ್ಞಾನಭಕ್ತಿವೈರಾಗ್ಯಗಳು ಮುಪ್ಪುರಿಗೊಂಡು ಮೂಡಿ ಬಂದಿವೆ.

ಹರಿಕಥಾಮೃತಸಾರ ಭಾಮಿನೀ ಷಟ್ಪದಿಯಲ್ಲಿದೆ. ಇದರಲ್ಲಿ 32 ಸಂಧಿಗಳೂ 988 ಪದ್ಯಗಳೂ ಇವೆ. ಇದೊಂದು ತತ್ತ್ವಪುಂಜ ಗ್ರಂಥವಾಗಿದ್ದು ದ್ವೈತಸಿದ್ಧಾಂತದ ಕನ್ನಡ ವಿಶ್ವಕೋಶವೆನಿಸಿದೆ. ಈ ಗ್ರಂಥಕ್ಕೆ ಎರಡು ಸಂಸ್ಕೃತ ವ್ಯಾಖ್ಯಾನಗಳೂ ಸೇರಿ ಒಟ್ಟು ಒಂಬತ್ತು ವ್ಯಾಖ್ಯಾನಗಳಿವೆ. ವೇದವೇದಾಂತಗಳ ತಿರುಳು, ಮಾಧ್ವಸಿದ್ಧಾಂತದ ಸಾರ - ಇವು ಇಲ್ಲಿ ಸಾರವತ್ತಾಗಿ ನಿರೂಪಿತವಾಗಿವೆ. ಇವರ ಕೃತಿಗಳಲ್ಲಿ ಅಪೂರ್ವ ಪದಬಂಧ, ನಿರರ್ಗಳ ಶೈಲಿಯ ಓಟ, ಅರ್ಥಗಾಂಭೀರ್ಯ, ಸಿದ್ಧಾಂತದ ಸಮರ್ಥ ಪ್ರತಿಪಾದನೆ ಈ ಗುಣಗಳು ಕಂಡುಬರುತ್ತವೆ. ಹರಿಕಥಾಮೃತಸಾರ ಕನ್ನಡದ ಒಂದು ಅಪೂರ್ವ ಕೃತಿ ಎಂಬ ಮನ್ನಣೆಗೆ ಪಾತ್ರವಾಗಿದೆ. ಈ ಕೃತಿ ಇಂಗ್ಲಿಷಿಗೂ ಭಾಷಾಂತರವಾಗಿದೆ. (ಕೆ.ಎಂ.ಕೆ.)

**ಜಗಳೂರು :** ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು; ತಾಲ್ಲೂಕಿನ ಮುಖ್ಯ ಸ್ಥಳ. ತಾಲ್ಲೂಕಿನ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ, ದಕ್ಷಿಣದಲ್ಲೂ ಚಿತ್ರದುರ್ಗ ಜಿಲ್ಲೆ, ಪಶ್ಚಿಮದಲ್ಲಿ ದಾವಣಗೆರೆ ಮತ್ತು ಹರಪನಹಳ್ಳಿ, ಉತ್ತರದಲ್ಲಿ ಬಳ್ಳಾರಿ ಜಿಲ್ಲೆ ಇವು ಸುತ್ತುವರಿದಿವೆ. 1882ರವರೆಗೆ ಇದಕ್ಕೆ ಕನಕುಪ್ಪ ಎಂಬ ಹೆಸರಿತ್ತು. ಆ ವರ್ಷ ಚಿತ್ರದುರ್ಗದ ಉಪತಾಲ್ಲೂಕಾಯಿತು. 1886ರಲ್ಲಿ ಸ್ವತಂತ್ರ ತಾಲ್ಲೂಕಾಯಿತು. ಜಗಳೂರು, ಸೊಕ್ಕೆ, ಬಿಳಿಚೋಡು ಹೋಬಳಿಗಳೂ 170 ಗ್ರಾಮಗಳೂ ಇವೆ. ವಿಸ್ತೀರ್ಣ 9,647ಚ.ಕಿಮೀ. ಜನಸಂಖ್ಯೆ 1,58,829.

ತಾಲ್ಲೂಕಿನಲ್ಲಿ ಕಣಶಿಲೆಗಳೂ ಧಾರವಾಡ ಶ್ರೇಣಿಯ ಕಲ್ಲುಗಳೂ ಹರಡಿವೆ. ಈ ತಾಲ್ಲೂಕಿನ ಹೊನ್ನೆಮರಡಿಯಲ್ಲಿ ಹಿಂದೆ ಚಿನ್ನ ತೆಗೆಯುತ್ತಿದ್ದುದಕ್ಕೆ ಸೂಚನೆಗಳಿವೆ. ಹೊಸಕೆರೆಯ ಬಳಿ ಸುಣ್ಣಕಲ್ಲಿನ ಹರಹಿದೆ. ಮ್ಯಾಂಗನೀಸ್ ನಿಕ್ಷೇಪವೂ ಈ ತಾಲ್ಲೂಕಿನಲ್ಲುಂಟು. ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸ್ಲೇಟ್ ರೀತಿಯ ಹಾಸುಚಪ್ಪಡಿಗಳನ್ನು ತೆಗೆಯುವುದುಂಟು. ತಾಲ್ಲೂಕು ಸ್ವಲ್ಪ ಏರುತಗ್ಗುಗಳಿರುವ ಮೈದಾನ ಪ್ರದೇಶ. ವಾಯವ್ಯ ಭಾಗಗಳಲ್ಲಿ ಸಣ್ಣ ಬೆಟ್ಟಗುಡ್ಡಗಳಿವೆ. ಈ ಭಾಗದಲ್ಲಿ ಕುರುಚಲು ಮತ್ತು ಪರ್ಣಪಾತಿ ಮರಗಳು ಇವೆ. ಕೃಷಿಯೋಗ್ಯ ಭೂಮಿಯಲ್ಲಿ ಕಾಲುಭಾಗ ಕಪ್ಪುಮಣ್ಣಿನಿಂದ ಕೂಡಿದ್ದು. ಉಳಿದ ಭಾಗ ಕೆಂಪು ಮಣ್ಣಿನ ಮತ್ತು ಮರಳಿನಿಂದ ಕೂಡಿದ ಫಲವತ್ತಲ್ಲದ ಭೂಮಿ. ಫಲವತ್ತಾದ ಭೂಮಿ ತಾಲ್ಲೂಕಿನ ದಕ್ಷಿಣಭಾಗದಲ್ಲಿ ಮತ್ತು ವಾಯವ್ಯದ ತಗ್ಗಿನ ಕಣಿವೆ ಪ್ರದೇಶಗಳಲ್ಲಿವೆ. ತಾಲ್ಲೂಕಿನಲ್ಲಿ ನೈಋತ್ಯ ಈಶಾನ್ಯಾಭಿಮುಖವಾಗಿ ನೀರ್ಬೇರ್ಪಡೆಯ ಏರು ಹಬ್ಬಿದ್ದು ಈ ಭಾಗದಲ್ಲಿ ವಾಯವ್ಯ ಮತ್ತು ಆಗ್ನೇಯಗಳ ಕಡೆಗೆ ಚಿಕ್ಕ ಹಳ್ಳಗಳು ಹರಿಯುತ್ತವೆ. ಆಗ್ನೇಯದ ಕಡೆ ಹರಿಯುವವು ಜನಗಹಳ್ಳಕ್ಕೆ (ಚಿಕ್ಕಹಗರಿ) ಸೇರುತ್ತವೆ. ಈ ಚಿಕ್ಕ ಹಳ್ಳಗಳು ಹರಿಯುವ ಪ್ರದೇಶದಲ್ಲಿ ಬಾವಿ, ಕೆರೆಗಳನ್ನು ನಿರ್ಮಿಸಲಾಗಿದೆ. ಇಲ್ಲಿ ಕೆಲವೆಡೆ ವ್ಯವಸಾಯ ಚೆನ್ನಾಗಿದ್ದು ವರ್ಷಕ್ಕೆ ಎರಡು ಬೆಳೆಗಳನ್ನು ತೆಗೆಯುವುದೂ ಉಂಟು. ತಾಲ್ಲೂಕಿನ ಪೂರ್ವದ ಕೆಲವು ಗ್ರಾಮಗಳಿಗೆ ಭೀಮ ಸಮುದ್ರ ಕೆರೆಯಿಂದ ಮುಂದೆ ಬರುವ ಜನಗಹಳ್ಳದಿಂದ ವ್ಯವಸಾಯಕ್ಕೆ ಅನುಕೂಲವುಂಟು. ತಾಲ್ಲೂಕಿನಲ್ಲಿ ಮಳೆ ಕಡಿಮೆ. ವಾರ್ಷಿಕ ಸರಾಸರಿ 550ಮಿಮೀ. ನೀರಾವರಿ ಸಹಾಯದಿಂದ ರಾಗಿ, ಬತ್ತ, ಹತ್ತಿ, ತೊಗರಿ, ಜೋಳ, ನವಣೆ, ಎಣ್ಣೆಬೀಜಗಳು, ಅಡಕೆ, ತೆಂಗು ಮತ್ತು ಕಬ್ಬು ಬೆಳೆಯುತ್ತಾರೆ.

ತಾಲ್ಲೂಕಿನಲ್ಲಿ ಬಿಜಾಪುರ-ಉಜನಿ, ನಾಯಕನಹಟ್ಟಿ-ಜಗಳೂರು, ಚಿತ್ರದುರ್ಗ-ಜಗಳೂರು, ದಾವಣಗೆರೆ-ಜಗಳೂರು, ಭರಮಸಾಗರ ಬಿಳಿಚೋಡು-ಬಸವನಕೋಟೆ - ಈ ಮುಖ್ಯ ರಸ್ತೆಗಳಿವೆ. ತಾಲ್ಲೂಕಿನ ಹೆಚ್ಚು ವ್ಯಾಪಾರ ದಾವಣಗೆರೆಯೊಡನೆ ಸಾಗುತ್ತದೆ.

ಈ ತಾಲ್ಲೂಕಿನ ಅಣಗೋಡು ಐತಿಹಾಸಿಕ ಸ್ಥಳ. ಪ್ರಸಿದ್ಧ ಉಚ್ಚಂಗಿದುರ್ಗದಿಂದ 6ಕಿಮೀ ದೂರದಲ್ಲಿರುವ ಈ ಸ್ಥಳ ಬುದ್ಧನ ಕಾಲದಷ್ಟು ಹಿಂದಿನದೆಂದೂ ಅಶೋಕಪಟ್ಟಣ ಎಂಬುದೇ ಅಣಗೋಡು ಎಂದಾಗಿದೆಯೆಂದೂ ಹೇಳಿಕೆಗಳಿವೆ. ಸಮೀಪದಲ್ಲಿ ಬೃಹತ್ ಶಿಲಾಸಮಾಧಿಗಳಿವೆ. ಇಲ್ಲಿಯ ಸ್ವಯಂಭೂಕಲಿದೇವೇಶ್ವರ ದೇವಾಲಯ ಕಲ್ಯಾಣದ ಚಾಳುಕ್ಯರ ಕಾಲದ ರಚನೆ. ಇಲ್ಲಿ ಹಲವು ಶಾಸನಗಳಿವೆ. ಬಿಸ್ತುವಳ್ಳಿ ಎಂಬಲ್ಲಿ ಚಿತ್ರದುರ್ಗದ ಹಿರೇಮದಕರಿ ನಾಯಕನ ದಳವಾಯಿಯಾಗಿದ್ದ ಮುದ್ದಣ್ಣ ಕಟ್ಟಿಸಿದ ದಳವಾಯಿಹೊಂಡ ಎಂಬ ಹೆಸರಿನ ಒಂದು ಹೊಂಡವಿದೆ. ಸು.30 ಗಜ ಚೌಕದ ಈ ಹೊಂಡದ ಸುತ್ತಲ ಪ್ರಾಕಾರದಲ್ಲಿ ಕೆತ್ತನೆಗಳಿವೆ. ಸಮೀಪದ ಗುಡ್ಡದಲ್ಲಿ ರಂಗನಾಥ ದೇವಾಲಯವಿದೆ. ಇಲ್ಲಿ ಪ್ರತಿ ಚೈತ್ರದಲ್ಲಿ ಜಾತ್ರೆ ಜರುಗುತ್ತದೆ. ಕೋಟಿಗುಡ್ಡೆ, ಕಲ್ಲೇದೇವರಪುರ ಮತ್ತು ಗುರುಸಿದ್ಧಾಪುರಗಳಲ್ಲೂ ವಾರ್ಷಿಕ ಜಾತ್ರೆಗಳು ನಡೆಯುತ್ತವೆ. *

ಜಗಳೂರು ಈ ತಾಲ್ಲೂಕಿನ ಕಸಬೆ ಹಾಗೂ ಆಡಳಿತಕೇಂದ್ರ. ಜನಸಂಖ್ಯೆ 14,741. ಚಿತ್ರದುರ್ಗ, ದಾವಣಗೆರೆಗಳಿಂದ ಒಳ್ಳೆಯ ರಸ್ತೆ ಸಂಪರ್ಕವಿದೆ. ಜೋಗಪ್ಪ ಎಂಬ ಋಷಿಯ ಹೆಸರಿನಿಂದ ಈ ಊರಿನ ಹೆಸರು ಬಂದಿದೆಯೆಂದು ಪ್ರತೀತಿ. ಇಲ್ಲಿರುವ ಜೋಗಪ್ಪ ದೇವಾಲಯದಲ್ಲಿ ತ್ರಿಶೂಲ ಕಮಂಡಲಗಳನ್ನು ಹಿಡಿದಿರುವ 3' ಎತ್ತರದ ಮೂರ್ತಿ ಇದೆ. ಇಲ್ಲಿನ ಕೆಮ್ಮವ್ವ ದೇವಾಲಯದಲ್ಲಿ 1.5 ಅಡಿ ಎತ್ತರದ ತ್ರಿಶೂಲ ಮತ್ತು ಡಮರುಧಾರಿ ಆಸೀನ ವಿಗ್ರಹವಿದೆ. ಇದರ ಅರ್ಚನೆಯಿಂದ ಕೆಮ್ಮು ನಿಲ್ಲುವುದೆಂದು ಪ್ರತೀತಿ. ಜಗಳೂರಿನಲ್ಲಿ ಕಲ್ಲುಮಠ ಎಂಬ ವೀರಶೈವ ಮಠವಿದೆ. ಇಲ್ಲಿ ಮುರುಗಿ ಮಠದ ಸ್ವಾಮಿಗಳಲ್ಲೊಬ್ಬರು ಎನ್ನಲಾದ ತೋಟದಸ್ವಾಮಿಯ ಗದ್ದುಗೆಯುಂಟು. (ಕೆ.ಬಿ.ಪಿ.)

**ಜಗ್ಗಲಿಗೆ :** ಬಂಡಿಯಷ್ಟು (ಚಕ್ಕಡಿ) ದೊಡ್ಡದಾದ, ಚಕ್ರಾಕಾರದ ಸುಮಾರು ಐದು ಅಡಿ ಎತ್ತರದ ತಮಟೆಯಂತೆ ಬಾರಿಸುವ ಒಂದು ಜನಪದ ವಾದ್ಯ. ಉತ್ತರ ಕರ್ನಾಟಕದ ಕೆಲವೇ ಪ್ರದೇಶಗಳಲ್ಲಿ ಕಂಡುಬರುವ ಈ ವಾದ್ಯಗಳ ಮೇಳ ಪ್ರದರ್ಶನಾತ್ಮಕ ಕಲೆಯಾಗಿದೆ. ಇದನ್ನು ಮಾಡಿಸುವವರು ಊರಿನ ಶ್ರೀಮಂತರು ಅಥವಾ ದೇವಸ್ಥಾನಗಳ ಮುಖ್ಯಸ್ಥರು. ಈ ತಯಾರಿಕೆ ಕೂಡ ಕುತೂಹಲ ಹುಟ್ಟಿಸುವಂತಹದು. ಚಕ್ಕಡಿ (ಬಂಡಿ) ಬಳೆಯನ್ನೋ ಅಥವಾ ಕಬ್ಬಿಣದ ಸಲಾಕೆಯನ್ನೋ ಜಗ್ಗಲಿಗೆ ತಯಾರಿಕೆಗೆ ಉಪಯೋಗಿಸುತ್ತಾರೆ. ಹದಗೊಳಿಸಿದ ದನ ಅಥವಾ ಎಮ್ಮೆ ಚರ್ಮವನ್ನು ಹಾಳೆಯಂತೆ ಮಾಡಿ, ವೃತ್ತಾಕಾರವಾಗಿ ಹೊದಿಸಿ, ಚರ್ಮದಿಂದಲೇ ಮಾಡಿದ ಹುರಿಯಿಂದ ಅದನ್ನು ಬಿಗಿಯುತ್ತಾರೆ. ಅನಂತರ ಹಲಗೆಯ ಮೇಲೆ ವಿವಿಧ ಬಣ್ಣಗಳಿಂದ ಚಿತ್ರಗಳನ್ನು ಬಿಡಿಸುವರು. ಹಲಗೆಯ ಮಧ್ಯದಲ್ಲಿ 6 ಅಥವಾ 8 ಅಂಗುಲ ವೃತ್ತವನ್ನು ಬಣ್ಣದಿಂದ ತುಂಬುತ್ತಾರೆ.

ಜಗ್ಗಲಿಗೆ ಕುಣಿತದ ಒಂದು ದೃಶ್ಯ

ಒಂದು ಮೇಳದಲ್ಲಿ ಸುಮಾರು 25ರಿಂದ 30 ಜಗ್ಗಲಿಗೆಗಳು ಭಾಗವಹಿಸುವುದುಂಟು. ಜಗ್ಗ ಎನ್ನುವ ಪದಕ್ಕೆ ಬಹಳ ಎಂಬ ಅರ್ಥವೂ ಇದೆ. ಊರಿನಲ್ಲಿ ಜರುಗುವ ಜಾತ್ರೆ, ಸಭೆ ಸಮಾರಂಭ ಮತ್ತು ಹಬ್ಬ ಹರಿದಿನಗಳಲ್ಲಿ ಈ ಕಲೆಯ ಪ್ರದರ್ಶನ ಕಂಡುಬರುತ್ತದೆ. ಇದರಲ್ಲಿ ಭಾಗವಹಿಸುವ ಕಲಾವಿದರ ಉಡುಗೆ ತೊಡುಗೆಗಳು ಸರಳವೂ ಅಷ್ಟೇ

ಆಕರ್ಷಕವೂ ಆಗಿರುತ್ತವೆ. ತಲೆಗೆ ರುಮಾಲು (ಪೇಟ), ಬಿಳಿ ಬಣ್ಣದ ನಿಲುವಂಗಿ, ಬಿಳಿ ದೋತರ ಧರಿಸಿ, ಸೊಂಟಕ್ಕೆ ವಸ್ತ್ರವೊಂದನ್ನು ಬಿಗಿದಿರುತ್ತಾರೆ. ಹಲಗೆಯನ್ನು ಬಾರಿಸಲು ಒಂದು ಚಿಕ್ಕದಾದ ಕುಣಿ ಹಿಡಿದಿರುತ್ತಾರೆ. ಈ ಮೇಳಕ್ಕೆ ಒಬ್ಬ ಮುಖ್ಯಸ್ಥನಿದ್ದು, ಉಳಿದ ಕಲಾವಿದರಿಗೆ ಮಾರ್ಗದರ್ಶನ ನೀಡುವುದು ಈತನ ಕೆಲಸ. ಮೂರು, ಆರು, ಒಂಬತ್ತು, ಹನ್ನೊಂದು ಅಕ್ಷರ ತಾಳಗಳನ್ನು ಲಯಬದ್ಧವಾಗಿ ಬಾರಿಸುತ್ತಾರೆ. ಈ ಮೇಳದ ಜೊತೆಗೆ ಇಬ್ಬರು ಅಥವಾ ನಾಲ್ಕು ಮಂದಿ ಕಲಾವಿದರು ಮಾಮೂಲಿ ಹಲಗೆಗಳನ್ನೂ ಬಾರಿಸುವುದುಂಟು.

ಕಲಾವಿದರು ಜಗ್ಗಲಿಗೆಯನ್ನು ಎಡಗೈಯಿಂದ ಉರುಳಿಸುತ್ತಾ ತಾಳಕ್ಕೆ ಅನುಗುಣವಾಗಿ ಬಾರಿಸುತ್ತಾರೆ. ಡೊಳ್ಳಿನಲ್ಲಿ ಹೊರಡಿಸುವ ವಿವಿಧ ನಾದಗಳನ್ನು ಇದರಲ್ಲಿಯೂ ಹೊಮ್ಮಿಸಲಾಗುತ್ತದೆ. ವಿವಿಧ ನಮೂನೆಯಲ್ಲಿ ಬಾಗಿ ಬಳುಕಿ ಕುಣಿದು ಕುಪ್ಪಳಿಸಿ ಬಾರಿಸುವ ಜಗ್ಗಲಿಗೆ ರಣ ಬಡಿತ, ಅದರ ರಭಸ ದನಿ ಪ್ರೇಕ್ಷಕರ ಮೈಯಲ್ಲಿ ನವಿರೇಳಿಸುವಂತಿರುತ್ತದೆ. ಪ್ರದರ್ಶನದ ಉದ್ದಕ್ಕೂ ಎಲ್ಲಿಯೂ ಹಾಡುಗಾರಿಕೆ ಇಲ್ಲದಿರುವುದು ಈ ಕಲೆಯ ಮತ್ತೊಂದು ವೈಶಿಷ್ಟ್ಯ. ಹಲಗೆಯ ಮೇಳ ಎರಡು ಸಾಲುಗಳಲ್ಲಿ ಸಾಲಾಗಿ ಸಾಗುತ್ತಿರುವಾಗ ಬಣ್ಣ ಬಣ್ಣದ ಕಾಗದದಿಂದ ಬಾವುಟಗಳನ್ನು ಎತ್ತಿ ಹಿಡಿದ ನೋಟ ನೋಡುಗರಿಗೆ ಆನಂದವನ್ನು ಉಂಟುಮಾಡುತ್ತದೆ. (ಎಂ.ಆರ್‌ಇ.)

**ಜಟಿಂಗರಾಮೇಶ್ವರ :** ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬ್ರಹ್ಮಗಿರಿ ಬೆಟ್ಟಕ್ಕೆ ಮೂರು ಕಿಮೀ ಅಂತರದಲ್ಲಿ ರಾಮಸಾಗರದ ಬಳಿ ಇರುವ ಬೆಟ್ಟ. ಇದರಲ್ಲಿ ಸಣ್ಣ ಜಟಿಂಗರಾಮೇಶ್ವರ ಮತ್ತು ಹಿರಿಯ ಜಟಿಂಗರಾಮೇಶ್ವರ ಎಂಬ ಎರಡು ಬೆಟ್ಟಗಳು ಸೇರಿವೆ. ಬೆಟ್ಟದ ಮೇಲಿನ ಒಂದು ಬಂಡೆಯಲ್ಲಿ ಅಶೋಕನ ಶಾಸನವಿದೆ. ಅಶೋಕನ ಕಾಲಕ್ಕಿಂತ ಮೊದಲೇ ಇಲ್ಲಿ ಜನವಸತಿಯಿತ್ತು. ಅಶೋಕನ ಕಾಲದ ಇಸಿಲ ನಗರ ಜಟಿಂಗರಾಮೇಶ್ವರ ಮತ್ತು ಬ್ರಹ್ಮಗಿರಿಗಳ ನಡುವೆ ಹಬ್ಬಿತ್ತು. ಇಲ್ಲಿರುವ ಗವಿಗಳೂ ಏಕಾಂತ ತೀರ್ಥದಂಥ ದೋಣೆಗಳೂ ಜನವಸತಿಗೆ ಅನುಕೂಲವಾಗಿದ್ದುವು.



ಜಟಿಂಗರಾಮೇಶ್ವರ ದೇವಾಲಯ

ರಾವಣ ಸೀತೆಯನ್ನು ಕದ್ದೊಯ್ಯುತ್ತಿದ್ದಾಗ ಜಟಾಯು ಇಲ್ಲಿ ಅವನನ್ನು ತಡೆದು ಹೋರಾಡಿ ಸತ್ತನೆಂಬ ಕಥೆಯನ್ನು ಇಲ್ಲಿನ 961ರ ಶಾಸನವೊಂದು ಹೇಳುತ್ತದೆ. ಜಟಾಯುವಿನ ಹೆಸರಿನಲ್ಲಿ ರಾಮ ಇಲ್ಲಿ ಲಿಂಗವನ್ನು ಪ್ರತಿಷ್ಠೆಮಾಡಿದನೆಂದೂ ದೇವಾಲಯ ಇಟ್ಟಿಗೆಯದಾಗಿತ್ತೆಂದೂ ಇದನ್ನು ಕಿತ್ತು ರಾಮೇಶ್ವರನಿಗಾಗಿ ಕಲ್ಲಿನ ದೇವಾಲಯವೊಂದನ್ನೂ ಮತ್ತೆ ಕೆಲವು ದೇವಾಲಯಗಳನ್ನೂ ಲಿಂಗಶಿವಜೀಯು ಕಟ್ಟಿಸಿದನೆಂದೂ ಅದೇ ಶಾಸನ ತಿಳಿಸುತ್ತದೆ. ಜಟಿಂಗರಾಮೇಶ್ವರ ಎಂಬ ಹೆಸರಿಗೆ ಈ ಕಥೆಯೆ ಕಾರಣವಿರಬಹುದು. ಜಟಾಯು ರಾವಣನೊಂದಿಗೆ ಹೋರಾಡುತ್ತಿದ್ದಾಗ ಸೀತೆ ನಿಂತಿದ್ದ ಸ್ಥಳ ಎಂದು ಕೊಳದ ಬಳಿ ಇರುವ ಪಾದಗಳನ್ನೂ, ರಾವಣನನ್ನು ಜಟಾಯು ಕೆಡವಿದ ಕೊರಕಲು ಜಟಾಯುವಿನ ದೇಹಕ್ಕೆ ರಾಮ ಅಗ್ನಿಸ್ಪರ್ಶಮಾಡಿದ ಸ್ಥಳ ಎಂದೂ ಅಲ್ಲಿ ಜನ ತೋರಿಸುತ್ತಾರೆ.

ನೊಳಂಬರು ಮತ್ತು ಚಾಳುಕ್ಯರ ಕಾಲದಲ್ಲಿ ಇಲ್ಲಿ ಕೆಲವು ಸಣ್ಣ ದೇವಾಲಯಗಳು ನಿರ್ಮಿತವಾದವು. ಆ ಕಾಲದಲ್ಲಿ ಈ ಬೆಟ್ಟಕ್ಕೆ ಬಲ್ಗೋಡಿ ತೀರ್ಥ ಎಂಬ ಹೆಸರಿತ್ತು. ಮುಂದೆ ವಿಜಯನಗರದ ಕಾಲದಲ್ಲೂ ಪಾಳೆಯಗಾರರ ಕಾಲದಲ್ಲೂ ಹಲವು ಗುಡಿಗೋಪುರಗಳನ್ನು ಕಟ್ಟಿಸಲಾಯಿತು; ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲಾಯಿತು. ಸಣ್ಣ ಜಟಿಂಗರಾಮೇಶ್ವರ ಬೆಟ್ಟದ ಮೇಲಿನ ದೊಡ್ಡ ಆವರಣದಲ್ಲಿ ಹಲವಾರು ದೇವಾಲಯಗಳು ಉಳಿದುಬಂದಿವೆ. ವಿಜಯನಗರದ ದೇವರಾಯನ ಕಾಲದಲ್ಲಿ ಕಟ್ಟಿದ ದೊಡ್ಡ ಮಹಾದ್ವಾರದ ಗೋಪುರ ಈಗ ಶಿಥಿಲವಾಗಿದೆ. ಆ ಮಹಾದ್ವಾರದ ಒಳಹೊಕ್ಕರೆ ಮತ್ತೊಂದು ಸಣ್ಣ ಮಹಾದ್ವಾರ, ಅದರ ಎರಡೂ ಕಡೆಯೂ ಗಣಪತಿ ಮತ್ತು ಚಾಮುಂಡಾಂಬಿಕೆ ಗುಡಿಗಳನ್ನು ಕಾಣಬಹುದು. ಎರಡನೆಯ ಗುಡಿಯಲ್ಲಿರುವ ಮಹಿಷಾಸುರಮರ್ದಿನಿ ಮೂರ್ತಿ ಸುಂದರವಾಗಿದೆ. ಮುಂದೆ ನಲವತ್ತು ಅಡಿ ಎತ್ತರದ ದೀಪಸ್ತಂಭವಿದೆ. ಇದು ಪಾಳೆಯಗಾರರ ಕಾಲಕ್ಕೆ ಸೇರಿದ್ದುದು. ಇಲ್ಲಿನ ಪಂಪಾಪತಿ ದೇವಾಲಯಕ್ಕೆ ಕದಂಬ ನಾಗರ ರೀತಿಯ ಶಿಖರವಿದೆ. ಜಂಬುಕೇಶ್ವರನ ಗುಡಿ ಇಟ್ಟಿಗೆಯದು. ಇವಲ್ಲದೆ ವೀರಭದ್ರ, ಸಪ್ತಮಾತೃಕೆಯರು, ಜನಾರ್ದನ, ಅರ್ಕೇಶ್ವರ, ಚಂಡಿಕೇಶ್ವರ, ತಪೋಲಿಂಗ, ಭೈರವ ಮುಂತಾದ ಸರಳವಾಗಿ ಕಟ್ಟಿರುವ ಹಲವಾರು ಗುಡಿಗಳೂ ಇಲ್ಲಿವೆ. ಗರ್ಭಗುಡಿ, ಸುಕನಾಸಿ ಮತ್ತು ನವರಂಗಗಳನ್ನುಳ್ಳ ರಾಮೇಶ್ವರ ದೇವಾಲಯವೇ ಇಲ್ಲಿನ ಪ್ರಾಚೀನ ಹಾಗೂ ಮುಖ್ಯದೇವಾಲಯ. ಇದನ್ನು ವಿಜಯನಗರದ ಕಾಲದಲ್ಲಿ ಸಂಪೂರ್ಣವಾಗಿ ಪುನರ್ನಿರ್ಮಿಸಿದಂತೆ ತೋರುತ್ತದೆ. (ಎಂ.ಎಚ್.)

**ಜಟ್ಟಿ ತಾಯಮ್ಮ :** 1862-1947. ಮೈಸೂರು ನಾಟ್ಯ ಸಂಪ್ರದಾಯದ ಹಿರಿಮೆಯನ್ನು ಎತ್ತಿ ಹಿಡಿದ ಪ್ರಸಿದ್ಧ ಭರತನಾಟ್ಯ ಪ್ರವೀಣೆ ಮತ್ತು ಸಂಗೀತ ವಿದುಷಿ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಖಾಸಾ ಊಳಿಗದವರಾಗಿದ್ದ ಜಟ್ಟಿ ದಾಸಪ್ಪನವರ ಪುತ್ರಿ. ಹುಟ್ಟು ಹೆಸರು ಲಕ್ಷ್ಮೀದೇವಮ್ಮ. ತಂದೆ ಆಂಧ್ರದ ತೆಲುಗು ಜಾವಡಿ, ಮೂವನವರಾದ ಗೋಪಾಲ ಎಂಬುವವರು ಕ್ಷೇತ್ರಜ್ಞನ ಪದಗಳನ್ನೂ ಹಾಡುವುದರಲ್ಲಿಯೂ ಹೆಸರು ಗಳಿಸಿದ್ದರು. ಮಗಳಿಗಿದ್ದ ನಾಟ್ಯಾಭಿರುಚಿ, ಸಂಗೀತಾಭಿಲಾಷೆಯನ್ನು ಕಂಡು ದಾಸಪ್ಪನವರು ಅಕೆಗೆ ಸಂಗೀತ ಕಲಿಸಿದುದಲ್ಲದೆ, ಸುಬ್ಬರಾಯಪ್ಪನವರಿಂದ ಭರತ ನಾಟ್ಯ ಶಿಕ್ಷಣ ಕೊಡಿಸಿದರು. ತಾಯಮ್ಮ ಮುಂದೆ ಕವೀಶ್ವರ ಗಿರಿಯಪ್ಪನವರಿಂದ ಅಭಿನಯ ಮತ್ತು ಚಂದ್ರಶೇಖರಶಾಸ್ತ್ರಿಗಳಿಂದ ತೆಲುಗು ಜಾವಡಿ ಮತ್ತು ಪದಗಳನ್ನು ಕಲಿತರು. ಕವಿತಿಲಕ ಬಸವಪ್ಪಶಾಸ್ತ್ರಿಗಳಿಂದ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ನವರಸ ಭಾವಗಳನ್ನು ಪ್ರದರ್ಶಿಸಲು ಸಹ ಕಾರಿಯಾಗುವಂತೆ ಅತ್ಯುತ್ತಮ ವಾದ ಪದಗಳನ್ನು ಮತ್ತು ಸಾಹಿತ್ಯ ಪದಗಳನ್ನು ಕಲಿತರು. ಹಿಂದುಸ್ಥಾನೀ ಗವಾಯಿಗಳಿಂದ ಹಿಂದುಸ್ಥಾನೀ ರಾಗಗಳ ಪರಿಚಯ ಮಾಡಿ ಕೊಂಡರು. ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಅರಮನೆಯಲ್ಲಿ ಭರತ ನಾಟ್ಯ ಪ್ರದರ್ಶನ ನೀಡಿ ವಿದ್ವಾಂಸರ ಮೆಚ್ಚುಗೆ ಪಡೆದು ರಾಜನರ್ತಕಿಯಾಗಿ ನಿಯಮಿತ

ರಾದರೂ ಅರಮನೆಯ ವೃತ್ತಿಯಿಂದ ದೂರ ಉಳಿದು ಚಾಮರಾಜ ಒಡೆಯರ ಆಹ್ವಾನದ ಮೇಲೆ ವಿಶೇಷ ದಿನಗಳಲ್ಲಿ ರಾಜಸಭೆಯಲ್ಲಿ ನಾಟ್ಯ ಮಾಡುತ್ತಿದ್ದರು. ಇವರ ಭೈರವೀ ರಾಗದ ಸ್ವರಜತಿಯ ಅಭಿನಯ ಪ್ರಸಿದ್ಧವಾದದ್ದು. 1944ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಮ್ಮೆ ನರ್ತನ ಪ್ರದರ್ಶನ ನೀಡಿ ವಿದ್ವಾಂಸರ ಮೆಚ್ಚುಗೆ ಗಳಿಸಿದರು.

1935ರಲ್ಲಿ ರಾಗಿಣಿ ದೇವಿ, ಮಿಸ್ ಮೇಯೊ ಮತ್ತು ಐರ್ಲೆಂಡಿನ ಕೆಲವು ಮಹಿಳೆಯರು ಮೈಸೂರಿಗೆ ಬಂದು ಇವರಿಂದ ಭರತನಾಟ್ಯ ಶಿಕ್ಷಣ ಪಡೆದರೆನ್ನಲಾಗಿದೆ. ರಾಮಗೋಪಾಲ್, ಉದಯಶಂಕರ್, ಎಸ್.ಎನ್.ಸ್ವಾಮಿ, ಇವರ ಶಿಷ್ಯರು. 1945ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ನಡೆದ ಇವರ ನಾಟ್ಯಪ್ರದರ್ಶನವನ್ನು ಮೆಚ್ಚಿಕೊಂಡ ರಾಧಾಕೃಷ್ಣನ್ ಅವರು ನಾಟ್ಯಸರಸ್ವತಿ ಎಂಬ ಬಿರುದನ್ನಿತ್ತು ಗೌರವಿಸಿದರು. ತಾಯಮ್ಮನವರು ಸುಬ್ರಹ್ಮಣ್ಯಶಾಸ್ತ್ರಿಯವರಿಂದ ಸಂಸ್ಕೃತ ಶಿಕ್ಷಣ ಪಡೆದಿದ್ದುದರಿಂದ ಅಭಿನಯಕ್ಕಾಗಿ ಗೀತಗೋವಿಂದ, ಕೃಷ್ಣಕರ್ಣಾಮೃತ ಮತ್ತು ಕಾಳಿದಾಸಾದಿಗಳ ಕೃತಿಗಳನ್ನು ಹೆಚ್ಚು ಬಳಸುತ್ತಿದ್ದರು. ವಾಸುದೇವಾಚಾರ್ಯರು ತಾಯಮ್ಮನವರಿಗೆ ರಾಗ ಮಾಲಿಕೆಯ ಒಂದು ವಾಮನಸ್ತೋತ್ರವನ್ನು ಕಲಿಸಿದ್ದರು. ತಾಯಮ್ಮ ನವರ ನಾಟ್ಯಕೌಶಲವನ್ನು ಗೌರವಿಸಿದ ತಿರುವಾಂಕೂರು ಮಹಾರಾಜರು ತಾಯಮ್ಮನವರ ಭಾವಚಿತ್ರವನ್ನು ತಮ್ಮ ಕಲಾಭವನದಲ್ಲಿ ಹಾಕಿಸಿದರು. ಇವರು 1947 ನವೆಂಬರ್ 17ರಂದು ನಿಧನಹೊಂದಿದರು. (ಕೆ.ಎಸ್.ಐ.)

**ಜಡಿಗೇನಹಳ್ಳಿ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸ ಕೋಟೆ ತಾಲ್ಲೂಕಿನಲ್ಲಿರುವ ಒಂದು ಹಳ್ಳಿ. ಹೊಸಕೋಟೆಯಿಂದ ಈ ಹಳ್ಳಿಗೆ ಹೋಗುವ ಹಾದಿಯಲ್ಲಿ ಉರುಟು ಕಲ್ಲುಗಳಿಂದ ಕೂಡಿರುವ ಒಂದು ದಿಣ್ಣೆ ಅಡ್ಡಲಾಗುತ್ತದೆ. ಅದನ್ನು ದಾಟುತ್ತಿದ್ದಂತೆ ರಸ್ತೆಯ ಎರಡು ಬದಿಯಲ್ಲೂ ಹಲವು ಬೃಹತ್ ಶಿಲಾಸಮಾಧಿಗಳು ಕಣ್ಣಿಗೆ ಬೀಳುತ್ತವೆ. ರಸ್ತೆಯ ಪಕ್ಕದಲ್ಲಿ ಇರುವ ಒಂದು ಹಳ್ಳ ಇಂಥ ಕೆಲವು ಸಮಾಧಿಗಳನ್ನು ಕೊರೆದಿರುವುದನ್ನೂ ನೋಡಬಹುದು. ಗುಂಡಾದ ಕಲ್ಲುಗಳನ್ನಿಟ್ಟು ರಚಿಸಿರುವ 6'-20' ವರೆಗಿನ ವ್ಯಾಸವುಳ್ಳ, ಬೇರೆ ಬೇರೆ ಯಾಗಿ ಅಥವಾ ಒಂದರೊಳಗೊಂದರಂತೆ ಇರುವ ವೃತ್ತಗಳು ಈ ಸಮಾಧಿಗಳ ಮೇಲ್ನೋಟಕ್ಕೆ ತೋರುವ ಹೆಗ್ಗುರುತುಗಳು. ಇವುಗಳಲ್ಲಿ ನಾಲ್ಕರ ಉತ್ಖನನ 1957ರಲ್ಲಿ ನಡೆಯಿತು. ಬೇರೆ ಕೆಲವು ಬೃಹತ್ ಶಿಲಾ ಸಮಾಧಿಗಳಲ್ಲಿರುವಂತೆ ಇವುಗಳಲ್ಲಿ ಚಪ್ಪಡಿಕಲ್ಲಿನ ಪೆಟ್ಟಿಗೆಯಾಗಲಿ, ದೊಡ್ಡ ಗಾತ್ರದ ಮುಚ್ಚುಗಲ್ಲಾಗಲಿ, ಕಲ್ಲುತುಂಡುಗಳ ರಾಶಿಯಾಗಲಿ ಇಲ್ಲದೆ ಇವು ಕುಣಿ ಸಮಾಧಿಯ ಗುಂಪಿಗೆ ಸೇರಿವೆ. ಆಳವಾದ ಕುಣಿಯಲ್ಲಿ ಮಣ್ಣಿನಿಂದ ತಯಾರಿಸಿದ ಶವಸಂಪುಟವನ್ನು ಇಟ್ಟಿರುವುದು ಇಲ್ಲಿಯ ಬೃಹತ್ ಶಿಲಾಸಮಾಧಿಗಳ ಒಂದು ವೈಶಿಷ್ಟ್ಯ.

ಸಣ್ಣ ವೃತ್ತಗಳಿರುವ ಸಮಾಧಿಗಳಲ್ಲಿ 5'-6' ಆಳದ ಗುಂಡಿಗಳಲ್ಲಿ ಚಿಕ್ಕದಾದ ಸು.3'-4' ಉದ್ದದ ಶವಸಂಪುಟಗಳಿದ್ದುವು. ಅವುಗಳ ಸುತ್ತಲೂ ಬಗೆಬಗೆಯ ಮಣ್ಣಿನ ಪಾತ್ರೆಗಳು, ಕಬ್ಬಿಣದ ಸಾಮಾನುಗಳಿದ್ದುವು. ದೊಡ್ಡ ಸಮಾಧಿಗಳಲ್ಲಿ 12' ಗಿಂತ ಹೆಚ್ಚು ಆಳವಾದ ಒಂದು ದೊಡ್ಡ ಗುಂಡಿ, ಅದರ ತಳದಲ್ಲಿ ಪುನಃ ಒಂದರ ಪಕ್ಕದಲ್ಲೊಂದರಂತೆ ಎರಡು ಕಿರುಗುಂಡಿಗಳು, ಅವುಗಳಲ್ಲೊಂದರಲ್ಲಿ ಶವಸಂಪುಟ, ಕೆಲವು ಮಣ್ಣಿನ ಪಾತ್ರೆಗಳು ಮತ್ತು ಕಬ್ಬಿಣದ ಪದಾರ್ಥಗಳು ಇನ್ನೊಂದರಲ್ಲಿ ವಿವಿಧ ಆಕೃತಿಗಳ ಮತ್ತು ಗಾತ್ರಗಳ ಹಲವಾರು ಮಣ್ಣಿನ ಪಾತ್ರೆಗಳು ತುಂಬಿದ್ದುವು. ತೊಟ್ಟಿಲಿನ ಮಾದರಿಯಲ್ಲಿರುವ 7' ಉದ್ದವಾದ ಕೆಂಪು ಬಣ್ಣದ ಶವಸಂಪುಟಕ್ಕೆ ಎಂಟು ಕಾಲುಗಳು, ಉಬ್ಬಿರುವ ಮುಚ್ಚಳ ಇದ್ದುವು. ಗುಂಡಿಯಲ್ಲಿ ಮೊದಲು ಬತ್ತವನ್ನು ಹರಡಿ ಅದರ ಮೇಲೆ ಶವಸಂಪುಟವನ್ನಿಟ್ಟಿದ್ದಕ್ಕೆ ಕುರುಹುಗಳಿವೆ. ಇಲ್ಲಿ ದೊರೆತಿರುವ ಯಾವ ಶವಸಂಪುಟದಲ್ಲೂ ಅಸ್ಥಿಪಂಜರವಾಗಲಿ, ಶವದ ಇತರ ಕುರುಹುಗಳಾಗಲಿ ಕಂಡುಬಂದಿಲ್ಲದಿರುವುದು ಒಂದು ವಿಚಿತ್ರ. ಕಬ್ಬಿಣದ ಪದಾರ್ಥಗಳಲ್ಲಿ ಕತ್ತಿ, ಚೂರಿ, ಕುಡುಗೋಲು, ಗುದ್ದಲಿ, ಮುಕ್ಕಾಲುಪೀಠ, ಬಾಣಲೆ, ತ್ರಿಶೂಲ ಮುಂತಾದವೂ ಮಣ್ಣಿನ ಪಾತ್ರೆಗಳಲ್ಲಿ ಮಡಕೆಗಳು, ತಟ್ಟೆಗಳು, ಬಟ್ಟಲುಗಳು, ಮುಚ್ಚಳವಿರುವ ಉದ್ದಕತ್ತಿನ ಹೂಜಿಗಳು, ಪಾನಪಾತ್ರೆಗಳು ಮತ್ತು ಆಟಿಕೆಯಂತಿರುವ ಕಿರುಪಾತ್ರೆಗಳೂ ಸೇರಿವೆ. ಇವುಗಳಲ್ಲಿ ಕೆಂಪು ಬಣ್ಣದ ಪಾತ್ರೆಗಳೇ ಹೆಚ್ಚು. ಕಪ್ಪು ಹೊಳಪಿನ ಪಾತ್ರೆಗಳೂ ಉಂಟು. ಬೃಹತ್ ಶಿಲಾಸಮಾಧಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಂಪು-ಕಪ್ಪು ಮಡಕೆಗಳೂ ಇವೆ. ಶವಸಂಪುಟಗಳನ್ನೂ ಇತರ ಪದಾರ್ಥಗಳನ್ನೂ ಕಿರುಕುಂಡಿಗಳಲ್ಲಿ ಜೋಡಿಸಿಟ್ಟು ಮೇಲೆ ಜಿಗುಟಾದ ಜೇಡಿಯ ಮಣ್ಣನ್ನು ಗಿಡಿದು ದೊಡ್ಡ ಗುಣಿಯನ್ನು ತುಂಬಿರುವುದರಿಂದ ಅದನ್ನು ಅಗೆದು ತೆಗೆಯುವುದು ಶ್ರಮಸಾಧ್ಯ. ಇಲ್ಲಿಯ ಸಮಾಧಿಗಳನ್ನು ಬೃಹತ್ ಶಿಲಾಸಮಾಧಿಗಳ ಕಾಲದ ಕಡೆಯ ಭಾಗಕ್ಕೆ ಎಂದರೆ ಸ್ಥೂಲವಾಗಿ ಕ್ರಿ.ಶ. 1-3ನೆಯ ಶತಮಾನಗಳ ಕಾಲಕ್ಕೆ ಸೇರಿಸಬಹುದೆಂದು ಅಭಿಪ್ರಾಯ ಪಡಲಾಗಿದೆ. (ಎಂ.ಎಚ್.)

**ಜಡೆಮುನಿ :** ಕರ್ನಾಟಕದ ಜನಪದ ಜೀವನದ ಕುತೂಹಲಕಾರಿ ಕಲ್ಪನೆಗಳಲ್ಲಿ ಹಾಗೂ ಅತಿಮಾನುಷ ಶಕ್ತಿಗಳಲ್ಲಿ ಜನಪದಕ್ಕಿರುವ ನಂಬಿಕೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಐತಿಹ್ಯಗಳಲ್ಲಿ ಒಂದು. ಜಡೆಮುನಿ ಜನಸಾಮಾನ್ಯರನ್ನು ಅಂಜಿಸಿರುವ ಅಗೋಚರ ಶಕ್ತಿವಿಶೇಷಗಳಲ್ಲಿ ಒಂದಾದರೂ ಅದು ಸಾಮಾನ್ಯ ದೆವ್ವ, ಕೊಳ್ಳಿದೆವ್ವಗಳಿಗಿಂತ ಭಿನ್ನವಾದುದು. ಇವೆರಡಕ್ಕಿಂತ ಉನ್ನತ ಸ್ಥಾನ ಅದಕ್ಕೆ. ಅತೀತಬಲ ಪಡೆದ ದೈವಸ್ವರೂಪಿ ಶಕ್ತಿಯೊಂದು ಜ್ವಾಲೆಯ ರೂಪದಲ್ಲಿ ಆಗಾಗ ಕಾಣಿಸಿಕೊಂಡು ಜನರಿಗೆ ತಲ್ಲಣ ಉಂಟುಮಾಡುವುದು. ಅದಕ್ಕೆ ನೆಲದಲ್ಲಿ ಎಳೆದಾಡುವಷ್ಟು ಉದ್ದನೆಯ ಜಡೆ, ಕಾಂತಿಯುಕ್ತವಾದ ಮೈ, ಅಮಾವಾಸ್ಯೆ, ಹುಣ್ಣಿಮೆಯ ರಾತ್ರಿಗಳಲ್ಲಿ ಅದು ಕೆಲವರ ಕಣ್ಣಿಗೆ ಗೋಚರಿಸುವುದುಂಟು. ಅಂಥ ರಾತ್ರಿಗಳಲ್ಲಿ ಒಂದು ನೆಲೆಯಿಂದ ಹೊರಟು ದೇವಾಲಯಗಳಿರುವ ಸ್ಥಳಗಳಲ್ಲಿ ಸಂಚರಿಸಿ ಬೆಳಗಾಗುವುದರಲ್ಲಿ ತನ್ನ ಮೂಲ ನೆಲೆಯನ್ನು ಸೇರಿಕೊಳ್ಳಬೇಕು. ಇಂಥ ಸಂಚಾರದ ಪ್ರದೇಶವನ್ನು ಮುನಿಸಂಚಾರದ ಪ್ರದೇಶ ಎಂದು ನಿರ್ದಿಷ್ಟವಾಗಿ ಜನಪದರು ಗುರುತಿಸುತ್ತಾರೆ. ಮುನಿ ವಾಸಿಸುವುದು ಸಾಮಾನ್ಯವಾಗಿ ಆಲದ ಮರಗಳಲ್ಲಿ. ರಾತ್ರಿ ಆಲದ ಮರದಿಂದ ವಾದ್ಯಮೇಳಗಳೊಡನೆ ಹೊರಟು ಕೊಳದಲ್ಲಿ ಅಥವಾ ತೊರೆಯಲ್ಲಿ ಮಿಂದು ದೇವಾಲಯಗಳಿಗೆ ಹೋಗಿಬರುವುದು ಮುನಿಯ ಪದ್ಧತಿ. ಮುನಿಯ ಪರಿವಾರವಾದರೂ ಇಂಥ ಅಗೋಚರ ಶಕ್ತಿಗಳೇ. ಈ ಮುನಿಯನ್ನು ಪರಿವಾರ ಪಲ್ಲಕ್ಕಿಯಲ್ಲಿ ಹೊತ್ತು ಸಾಗುವುದೂ ಉಂಟು. ಅದನ್ನು ಕಣ್ಣಾರೆ ಕಂಡಂತೆ ಬಣ್ಣಿಸುವವರೂ ಉಂಟು. ಮುನಿಯನ್ನು ಮನುಷ್ಯರು ನೋಡಬಹುದು. ಆದರೆ ಮುನಿಯ ದೃಷ್ಟಿ ಮನುಷ್ಯರ ಮೇಲೆ ಬಿದ್ದರೆ ಮರಣ ಖಂಡಿತ ಎಂಬ ನಂಬಿಕೆಯಿದೆ. ಆದರೆ ಮುನಿಯೊಡನೆ ಮಾತಾಡಿದವರೂ ಇರುವವರೆಂದು ನಂಬಿಕೆ. ಯಾವುದೋ ಗಂಟನ್ನು ಮರೆತು ಅದನ್ನು ತರಲು ಹೋದಾಗ ಮುನಿಯ ದೃಷ್ಟಿಗೆ ಬಿದ್ದು, ಮುನಿ ಅಂಥ ಅಸಹಾಯಕರನ್ನು ಕ್ಷಮಿಸಿ ಈ ವಿಚಾರದಲ್ಲಿ ಯಾರಿಗೂ ಹೇಳದಂತೆ ಎಚ್ಚರಿಸಿ ಕಳಿಸಿದ ಎಂದು ಹೇಳಲಾಗಿದೆ. ಆದರೆ ಅದನ್ನು ಹೇಳಿಕೊಂಡರು. ಪ್ರಾಣ ಬಿಟ್ಟರೆಂದು ಹೇಳುವ ಜನಜನಿತ ಕಥೆಗಳು ಹಲವಾರು. ಜನಪದ ಜೀವನದಲ್ಲಿ ಜಡೆಮುನಿಯ ಕಲ್ಪನೆ ವಿಚಿತ್ರವಾದುದು. ಮುನಿ ಶಬ್ದ ಯತಿಯೊಬ್ಬನನ್ನು ನಿರ್ದೇಶಿಸುತ್ತದೆ. ಇಲ್ಲಿನ ಕಲ್ಪನೆಯೂ ಋಷಿಯನ್ನೇ ನೆನಪಿಗೆ ತರುತ್ತದೆ. ಅಂಥದೇ ದೈವಿಕ ಆವರಣ ಮುನಿಯ ಸುತ್ತ ಕಲ್ಪಿತವಾಗಿದೆ.

ಬೆಳೆ ಬಂದ ಕಾಲದಲ್ಲಿ ಬೆಳೆದ ಹೊಲದಲ್ಲಿ ಮುನಿಯಪ್ಪನನ್ನು ಪೂಜಿಸುವುದುಂಟು. ಅನೇಕ ಕಡೆಯಲ್ಲಿ ಮುನಿಯಪ್ಪ, ಮುನೇಶ್ವರ ಮುಂತಾದ ಹೆಸರಿನ ದೈವಗಳಿಗೆ ಗುಡಿಗಳನ್ನು ಕಟ್ಟಿ ಆರಾಧಿಸುತ್ತಾರೆ. ಆದರೆ ಈ ಮುನೀಶ್ವರನಿಗೂ ಜಡೆಮುನಿಗೂ ಇರುವ ಸಂಬಂಧ ಅಸ್ಪಷ್ಟ. (ಜೆ.ಎಸ್.ಪಿ.)

**ಜತ್ತಿ, ಬಸಪ್ಪ ದಾನಪ್ಪ :** 1912-2001. ಭಾರತ ಗಣರಾಜ್ಯದ ಮಾಜಿ ಉಪಾಧ್ಯಕ್ಷರು (1974). ಇದಕ್ಕೆ ಮೊದಲು ಒರಿಸ್ಸದ ರಾಜ್ಯಪಾಲರೂ ಪುದುಚೇರಿಯ ಉಪರಾಜ್ಯಪಾಲರೂ ಮೈಸೂರು ರಾಜ್ಯದ ಮಂತ್ರಿಯೂ ಮುಖ್ಯಮಂತ್ರಿಯೂ ಜಮಖಂಡಿ ಸಂಸ್ಥಾನದ ಮುಖ್ಯಮಂತ್ರಿಯೂ ಆಗಿದ್ದರು.

ಈಗಿನ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ (ಆಗ ಸಂಸ್ಥಾನ) ಸಾವಳಗಿ ಗ್ರಾಮದಲ್ಲಿ 1912 ಸೆಪ್ಟೆಂಬರ್ 10ರಂದು ಜನಿಸಿದರು. ತಂದೆ ದಾನಪ್ಪ ಜತ್ತಿ, ತಾಯಿ ಭಾಗವ್ವ. ದಾನಪ್ಪ ಜತ್ತಿಯವರು ಒಬ್ಬ ವ್ಯಾಪಾರಿ. ಅವರ ಮೂವರು ಗಂಡುಮಕ್ಕಳಲ್ಲಿ ಒಬ್ಬರಾದ ಜತ್ತಿಯವರು ಹುಟ್ಟೂರಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ವ್ಯಾಸಂಗವನ್ನು ಮುಗಿಸಿ ಅನಂತರ ಬಿಜಾಪುರದಲ್ಲಿ ಪ್ರೌಢಶಾಲೆಯ ಶಿಕ್ಷಣ ಪಡೆದರು. ಕೊಲ್ಹಾಪುರದ ರಾಜಾರಾಮ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿಯನ್ನೂ ಕಾನೂನು

ಕಾಲೇಜಿನಲ್ಲಿ ಕಲಿತು ಎಲ್.ಎಲ್.ಬಿ. ಪದವಿಯನ್ನೂ ಗಳಿಸಿ (1940) ಜಮಖಂಡಿಯಲ್ಲಿ ವಕೀಲರಾಗಿ ಜೀವನ ಆರಂಭಿಸಿದರು (1940-45). ಸಾರ್ವಜನಿಕ ಕ್ಷೇತ್ರ ಪ್ರವೇಶಮಾಡಿ ಜಮಖಂಡಿಯಲ್ಲಿ ಪೌರಸಭೆಯ ಸದಸ್ಯರಾಗಿ ಎರಡು ಬಾರಿ ಆಯ್ಕೆಹೊಂದಿದರಲ್ಲದೆ ಅದರ ಅಧ್ಯಕ್ಷರಾದರು (1940-45). ಜಮಖಂಡಿ ಪ್ರಜಾಪರಿಷತ್ತಿನ ಪ್ರಮುಖ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದ ಇವರು ಜಮಖಂಡಿಯಲ್ಲಿ ಪ್ರಜಾಪ್ರತಿನಿಧಿ ಸರ್ಕಾರ ಸ್ಥಾಪನೆಯಾದಾಗ ಮಂತ್ರಿಮಂಡಲ ರಚಿಸುವ ಹೊಣೆ ಹೊತ್ತರು. ಭಾರತ ಸ್ವತಂತ್ರವಾದ ಮೇಲೆ ಸಂಸ್ಥಾನಗಳ ಭವಿಷ್ಯದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ದಕ್ಷಿಣ ಸಂಸ್ಥಾನಗಳ ಒಕ್ಕೂಟರಚನೆಯ ಪ್ರಯತ್ನಗಳು ನಡೆದಿದ್ದುವು. ಜತ್ತಿಯವರು ಜಮಖಂಡಿ ಸಂಸ್ಥಾನಿಕರ ಮನವೊಲಿಸಿ ಭಾರತ ಒಕ್ಕೂಟದಲ್ಲಿ ಆ ಸಂಸ್ಥಾನ ವಿಲೀನಗೊಳ್ಳುವಂತೆ ಮಾಡಲು ಶ್ರಮಿಸಿದರು. ವಿಲೀನಗೊಂಡ ಪ್ರದೇಶಗಳ ಪ್ರತಿನಿಧಿಯಾಗಿ ಜತ್ತಿಯವರು ಬೊಂಬಾಯಿ ವಿಧಾನಸಭೆಗೆ ನಾಮಕರಣ ಹೊಂದಿದರಲ್ಲದೆ ಅಲ್ಲಿಯ ಮುಖ್ಯಮಂತ್ರಿ ಬಿ.ಜಿ.ಖೇರರ ಸಂಸದೀಯ ಕಾರ್ಯದರ್ಶಿಯಾಗಿ ನೇಮಕ ಗೊಂಡರು(1948). 1952ರ ಚುನಾವಣೆಯಲ್ಲಿ ಬೊಂಬಾಯಿ ವಿಧಾನಸಭೆಗೆ ಚುನಾಯಿತರಾಗಿ ಆ ರಾಜ್ಯದ ಆರೋಗ್ಯ ಮತ್ತು ಕಾರ್ಮಿಕ ಖಾತೆಯ ಉಪ ಮಂತ್ರಿಯಾದರು.

1956ರಲ್ಲಿ ರಾಜ್ಯ ಪುನರ್‌ರಚನೆಯಾದ ಅನಂತರ ಜತ್ತಿಯವರು ನೂತನ ಮೈಸೂರು ರಾಜ್ಯದ (ಈಗ ಕರ್ನಾಟಕ) ಭೂ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡರು. ರಾಜ್ಯದ ಭೂ ಸುಧಾರಣಾ ಕಾಯಿದೆಗಳಿಗೆ ಜತ್ತಿ ಸಮಿತಿಯ ವರದಿ ತಳಹದಿಯಾಯಿತು. 1957 ಮತ್ತು 1967ರ ಚುನಾವಣೆಗಳಲ್ಲಿ ಇವರು ರಾಜ್ಯ ವಿಧಾನಸಭೆಗೆ ಆಯ್ಕೆಯಾದರು.

1958ರಲ್ಲಿ ಜತ್ತಿಯವರು ಮೈಸೂರಿನ ವಿಧಾನಮಂಡಲ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆಯ್ಕೆಯಾಗಿ ರಾಜ್ಯದ ಮುಖ್ಯಮಂತ್ರಿಯಾದರು. 1962ರ ಚುನಾವಣೆಗಳ ಅನಂತರ ರಚಿತವಾದ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ 1965ರವರೆಗೆ ಹಣಕಾಸಿನ ಮಂತ್ರಿಯಾಗಿ, 1968ರ ವರೆಗೆ ಆಹಾರ ಮಂತ್ರಿಯಾಗಿ ಕೆಲಸಮಾಡಿದರು. 1963ರಲ್ಲಿ ಇವರು ಪುದುಚೇರಿಯ ಉಪರಾಜ್ಯಪಾಲರಾಗಿ ನೇಮಕಗೊಂಡರು. 1973ರಲ್ಲಿ ಒರಿಸ್ಸದ ರಾಜ್ಯಪಾಲರಾದರು. 1973-74ರಲ್ಲಿ ಆ ರಾಜ್ಯದಲ್ಲಿ ರಾಷ್ಟ್ರಪತಿ ಆಳಿಕೆ ಜಾರಿಗೆ ಬಂದಾಗ ಜತ್ತಿಯವರು ಅದರ ಆಡಳಿತವನ್ನು ಯಶಸ್ವಿಯಾಗಿ ನಿರ್ವಹಿಸಿದರು. 1974ರಲ್ಲಿ ಭಾರತ ಗಣರಾಜ್ಯದ ಉಪಾಧ್ಯಕ್ಷರಾಗಿ ಚುನಾಯಿತರಾದರು. ಇವರು ಹಂಗಾಮಿ ರಾಷ್ಟ್ರಪತಿ ಯಾಗಿಯೂ ಕಾರ್ಯನಿರ್ವಹಿಸಿದರು (1977). ರಾಜ್ಯ ಸಭೆಯ ಅಧ್ಯಕ್ಷರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿದರು.

ಜತ್ತಿಯವರಿಗೆ ಅನೇಕ ಗೌರವ ಪ್ರಶಸ್ತಿಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯ (1974), ಬರ್ಹಾಂಪುರ ವಿಶ್ವವಿದ್ಯಾಲಯ (1977) ಮತ್ತು ಪಂಜಾಬಿನ ಗುರುನಾನಕ್ ವಿಶ್ವವಿದ್ಯಾಲಯಗಳು (1978) ಗೌರವ ಡಾಕ್ಟರೇಟ್ ನೀಡಿವೆ. ಇವಲ್ಲದೇ ಇವರಿಗೆ ರಾಷ್ಟ್ರೀಯ ನಾಗರೀಕ ಪ್ರಶಸ್ತಿ (1990), ಶಾಂತಿ ಏಕತೆ ಪ್ರಶಸ್ತಿ (1991), ಬದುಕನ್ನು ಶ್ರೀಮಂತಗೊಳಿಸುವವರಿಗೆ ನೀಡಲಾಗುವ ವಿಜಯ ರತ್ನ ಪ್ರಶಸ್ತಿ (1992), ಶಿರೋಮಣಿ ಪ್ರಶಸ್ತಿ, ಭಾರತ ಏಕತಾ ಪ್ರಶಸ್ತಿ ಮತ್ತು ಮಾನವ ಸೇವಾ ಪುರಸ್ಕಾರ (1993) ದೊರೆತಿವೆ. 'ನನಗೆ ನಾನೇ ಮಾದರಿ' ಎಂಬುದು ಇವರ ಆತ್ಮಕಥೆ (1989).

ಪಾಂಡುಚೇರಿಯ ಶ್ರೀಮಾತೆಯವರ ಪ್ರಭಾವಕ್ಕೆ ಒಳಗಾಗಿದ್ದ ಜತ್ತಿಯವರು ಮೊದಲಿನಿಂದಲೂ ಆಧ್ಯಾತ್ಮಿಕ ಪ್ರವೃತ್ತಿಯವರಾಗಿದ್ದರು. ಬಸವೇಶ್ವರರ ಉಪದೇಶ ಮತ್ತು ತತ್ತ್ವಗಳ ಪ್ರಚಾರದ ಉದ್ದೇಶದಿಂದ ರಚಿತವಾಗಿದ್ದ ಬಸವ ಸಮಿತಿಗೆ ಜತ್ತಿಯವರು ಪ್ರಾರಂಭದಿಂದಲೂ ಅಧ್ಯಕ್ಷರಾಗಿದ್ದರು. ಸಂಗವ್ವನವರು ಜತ್ತಿಯವರ ಪತ್ನಿ, ಇವರಿಗೆ ಒಬ್ಬ ಪುತ್ರಿ, ಮೂವರು ಪುತ್ರರಿದ್ದಾರೆ. (ಎಸ್.ಡಿ.)

**ಜನ :** ಕರ್ನಾಟಕದಲ್ಲಿ ಸುಮಾರು 5 ಲಕ್ಷ ವರ್ಷಗಳಿಂದಲೂ ಜನ ನೆಲಸಿದ್ದರೆಂಬುದಕ್ಕೆ ಪ್ರಾಗೈತಿಹಾಸಿಕ ಆಧಾರಗಳು ದೊರಕುತ್ತವೆ. ಆದರೆ ಇಲ್ಲಿಯ ಜನ ಇಲ್ಲಿಯೇ ವಿಕಸನ ಹಂತಗಳಲ್ಲಿ ರೂಪುಗೊಂಡವರೆಂಬುದಕ್ಕೆ ಸ್ಪಷ್ಟಾಧಾರಗಳು ದೊರಕುವುದಿಲ್ಲ. ಬೇರೆ ದೇಶಗಳಲ್ಲಿ ವಿಶಿಷ್ಟ ರೂಪಾಂಶಗಳನ್ನುಳ್ಳ ಹಲವು ಜನಾಂಗಗಳು ಸಾಂದ್ರವಾಗಿರುವುದು, ವಿಕಸನ ಹಂತದ ಪಳೆಯುಳಿಕೆಗಳೂ ಹೆಚ್ಚಿಗೆ ದೊರಕಿರುವುದು - ಈ ಕಾರಣಗಳಿಂದ ಬೇರೆ ಬೇರೆ ದೇಶಗಳಿಂದ ಬೇರೆ ಬೇರೆ ಕಾಲಗಳಲ್ಲಿ ವಲಸೆಬಂದ ಹಲವು ಜನಾಂಗಗಳು ಇಂದಿನ ಕರ್ನಾಟಕದ ಜನಸ್ತೋಮಕ್ಕೆ ಹಾಗೂ ಅದರ ವೈವಿಧ್ಯಕ್ಕೆ ಅವಕಾಶ ಮಾಡಿವೆ ಎಂದು ಹೇಳಬಹುದು. ದೇಹದ ಆಕೃತಿ, ಮುಖದ ಮಾಟ, ಬಣ್ಣ ಇತ್ಯಾದಿಗಳನ್ನು ಶಾಸ್ತ್ರೀಯವಾಗಿ ವಿಶ್ಲೇಷಿಸಿ ಇಂದಿನ ವಿಶ್ವದ ಜನಸಮೂಹವನ್ನು ಹಲವು ಬುಡಕಟ್ಟುಗಳಾಗಿ ವಿಂಗಡಿಸಬಹುದೆಂಬುದು ಮಾನವಶಾಸ್ತ್ರಜ್ಞರ ಅಭಿಪ್ರಾಯ. ಅದರ ಆಧಾರದ ಮೇಲೆ ಕರ್ನಾಟಕದ ಜನರ ಅಧ್ಯಯನವನ್ನು ಕೈಗೊಂಡಲ್ಲಿ ಇಲ್ಲಿ ಹಲವು ಬುಡಕಟ್ಟುಗಳ ಜನರಿದ್ದಂತೆ ತೋರುತ್ತದೆ.

ಮೊದಲಾಗಿ ನಿಗ್ರಿಟೋ ಬುಡಕಟ್ಟಿನ ರೂಪಾಂಶಗಳನ್ನು ಇಂದಿನ ಕರ್ನಾಟಕದ ಜನರಲ್ಲಿ ಅಲ್ಲಲ್ಲಿ ಗುರುತಿಸಬಹುದು. ಕುಳ್ಳುದೇಹ, ಕಪ್ಪಾದ ಮೈಬಣ್ಣ, ದೊಡ್ಡ ನಿತಂಬ, ಮುಂಚಾಚಿದ ಮೂತಿ, ಜಜ್ಜಿದಂಥ ಮೂಗು, ಒಂದೊಂದು ಸುರುಳಿಸುರುಳಿಯಾಗಿ ಸುತ್ತಿಕೊಳ್ಳುವ ಗುಂಗುರು ಕೂದಲು ಇವು ನಿಗ್ರಿಟೋ ಬುಡಕಟ್ಟಿನಲ್ಲಿ ಕಂಡುಬರುವ ಸಾಮಾನ್ಯಾಂಶಗಳು. ಈ ಬುಡಕಟ್ಟಿನ ಜನರು ಮಧ್ಯ ಮತ್ತು ದಕ್ಷಿಣ ಆಫ್ರಿಕದಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ಮಲಯ, ಫಿಲಿಫೀನ್ಸ್, ನ್ಯೂ ಗಿನಿ, ಅಂಡಮಾನ್ ದ್ವೀಪಗಳಲ್ಲೂ ಈ ಸ್ವರೂಪದ ಕೆಲವು ಆದಿವಾಸಿ ಜನಾಂಗಗಳು ಇರುವುದರಿಂದ, ಬಹು ಪ್ರಾಚೀನ ಕಾಲದಲ್ಲಿ ಎಂದೋ ಈ ಬುಡಕಟ್ಟಿನ ಜನ ವಿಶ್ವದಲ್ಲೂ ಪಸರಿಸಿದ್ದಂತೆ ತೋರುತ್ತದೆ. ಭಾರತದಲ್ಲೂ ಕೇರಳದ ಕಾಡಾರ್ ಜನರಲ್ಲಿ ಹಾಗೂ ಬಿಹಾರದ ರಾಜಮಹಲ್ ಬೆಟ್ಟ ಪ್ರದೇಶಗಳ ಜನರಲ್ಲಿ ಈ ರೂಪಾಂಶಗಳು ಕಂಡುಬರುತ್ತವೆ. ಕರ್ನಾಟಕದಲ್ಲಿ ಈ ರೂಪಾಂಶಗಳೆಲ್ಲವನ್ನೂ ಪೂರ್ಣವಾಗಿ ಪಡೆದಿರುವ ವ್ಯಕ್ತಿಗಳು ಕಂಡುಬರುವುದು ವಿರಳವಾದರೂ ಅವರ ಹಲವಂಶಗಳನ್ನು ಹೊಂದಿರುವವರು ಅಲ್ಲಲ್ಲಿ ಕಾಣಸಿಗುತ್ತಾರೆ. ನಿಗ್ರಿಟೋ ಬುಡಕಟ್ಟಿನ ಜನ ಅತ್ಯಂತ ಪ್ರಾಚೀನ ಕಾಲದಲ್ಲಿ ಇತರರೆಲ್ಲರಿಗಿಂತ ಮೊದಲು ಕರ್ನಾಟಕ ದೇಶಕ್ಕೆ ಕಾಲಿಟ್ಟಿರಬಹುದು. ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಅಥವಾ ಇದಕ್ಕೂ ತೀರ ಹಿಂದಿನ ಪಟ್ಟೆಚಕ್ಕೆ ಶಿಲಾಯುಧಗಳನ್ನು ಉಪಯೋಗಿಸುತ್ತಿದ್ದ ಜನ ಈ ನಿಗ್ರಿಟೋ ಬುಡಕಟ್ಟಿನವರೇ ಇರಬಹುದೇನೋ ಎನಿಸುತ್ತದೆ. ಆದರೆ ಇದು ಯಾವುದೇ ಸ್ಪಷ್ಟವಾದ ಮಾಹಿತಿಗಳಿಂದ ಸಿದ್ಧವಾಗದೆ ಇರುವ ವಿಷಯ, ಕೇವಲ ಊಹೆ.

ಸುಮಾರು ಕಪ್ಪಾದ ಮೈಬಣ್ಣ, ಎತ್ತರವಲ್ಲದ ನಿಲವು, ಸ್ವಲ್ಪ ಮುಂಚಾಚಿದ ಮೂತಿ, ಕಿರಿದಾದ ಹಣೆ, ದಪ್ಪ ಮೂಗು, ಅಲೆಯಲೆಯಾಗಿ ಹಬ್ಬುವ ಸಾಧಾರಣ ಗುಂಗುರುಕೂದಲು ಈ ವೈಶಿಷ್ಟ್ಯಗಳುಳ್ಳ ಆಸ್ಟ್ರಲಾಯಿಡ್ ಬುಡಕಟ್ಟಿನ ಜನ ಕರ್ನಾಟಕದ ಜನಸಮೂಹದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಿಳಿತವಾಗಿದ್ದಾರೆ. ಇಂದಿನ ಸೋಲಿಗ, ಚೆಂಚ, ಕಾಡುಕುರುಬ, ಕೊರಗ, ಮುಂತಾದ ಆದಿವಾಸಿ ಜನಾಂಗಗಳವರು ಈ ಗುಂಪಿಗೆ ಸೇರಿದವರು. ಇತರ ಅನೇಕ ಜಾತಿ ಮತ್ತು ವರ್ಗಗಳಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಈ ಬುಡಕಟ್ಟಿನ ರೂಪಾಂಶಗಳು ಕಂಡುಬರುತ್ತವೆ. ಈ ಬುಡಕಟ್ಟಿನ ಜನ ಮೂಲತಃ ಎಲ್ಲಿಯವರು, ಎಂದು ಕರ್ನಾಟಕಕ್ಕೆ ಬಂದರು ಎಂಬ ವಿಷಯಗಳು ನಿಖರವಾಗಿ ತಿಳಿದಿಲ್ಲ. ಆದರೆ ಆಸ್ಟ್ರೇಲಿಯದ ಮತ್ತು ಆಗ್ನೇಯ ವಿಶ್ವದ ಕೆಲವು ಭಾಗಗಳಲ್ಲಿ ಈ ಬುಡಕಟ್ಟಿನ ಆದಿವಾಸಿಗಳು

ನಿಬಿಡವಾಗಿ ಕಂಡುಬರುವುದರಿಂದ ಈ ಜನ ಅತ್ತಣಿಂದಲೇ ಭಾರತಕ್ಕೆ, ಕರ್ನಾಟಕಕ್ಕೆ ಬಂದಿರಬೇಕೆಂದು ಊಹಿಸಲಾಗಿದೆ. ಇವರ ಆಗಮನ ನಿಗ್ರಿಟೋ ಜನರು ಬಂದು ನೆಲಸಿದ ಅನಂತರ ಆಗಿರಬಹುದು.

ಪೇಲಿಲೆಯೋ ಮೆಡಿಟರೇನಿಯನ್ ರೂಪಾಂಶಗಳನ್ನು ಗಮನಾರ್ಹ ಪ್ರಮಾಣದಲ್ಲಿ ಹೊಂದಿರುವ ಜನ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಸಾಮಾನ್ಯ ಎತ್ತರದ ನಿಲುವು, ಉದ್ದ ತಲೆ, ನೇರ ಮುಖ ಮತ್ತು ಹಣೆ, ಸಾಧಾರಣವಾದ ಮೂಗು, ಹೆಚ್ಚು ಗುಂಗುರಿಲ್ಲದ ಕೂದಲು, ಕಡುಗೆಂಪು ಮೈ ಬಣ್ಣ - ಇವು ಮೆಡಿಟರೇನಿಯನ್ ಬುಡಕಟ್ಟಿನ ವೈಶಿಷ್ಟ್ಯಗಳು. ಇದೇ ರೀತಿಯ ಜನ ಮೆಡಿಟರೇನಿಯನ್ ಸಮುದ್ರದ ಸುತ್ತ ಅದರಲ್ಲೂ ಏಷ್ಯ ಮೈನರ್, ಪಶ್ಚಿಮ ಏಷ್ಯ ಮತ್ತು ಉತ್ತರ ಆಫ್ರಿಕಗಳಲ್ಲಿ ವಿಶೇಷವಾಗಿ ಹರಡಿದ್ದಾರೆ. ಈ ಬುಡಕಟ್ಟಿನ ಜನ ಪ್ರಾಯಶಃ ಆಸ್ಟ್ರಲಾಯಿಡ್ ಜನರ ಅನಂತರ ಕರ್ನಾಟಕಕ್ಕೆ ವಲಸೆ ಬಂದಿರಬೇಕೆಂದು ಊಹೆಯಿದೆ. ಮೆಡಿಟರೇನಿಯನ್ ರೀತಿಯ ಜನರ ಅಸ್ಥಿಪಂಜರಗಳು ಕರ್ನಾಟಕದ ನವಶಿಲಾಯುಗದ ಸಮಾಧಿಗಳಲ್ಲಿ ಕಂಡುಬಂದಿವೆ.

ಕ್ರಿ.ಪೂ.2ನೆಯ ಸಹಸ್ರಮಾನದ ಹೊತ್ತಿಗೆ ಕಕೇಶಿಯನ್ ಬುಡಕಟ್ಟಿಗೆ ಸೇರಿದ ಜನ ಮಧ್ಯಏಷ್ಯ ಪ್ರದೇಶದಿಂದ ಹೊರಟು ಭಾರತದ ವಾಯುವ್ಯ ಭಾಗಕ್ಕೆ ತಲುಪಿದ್ದರೆಂದು ಅನೇಕ ಆಧಾರಗಳಿಂದ ತಿಳಿದುಬಂದಿದೆ. ಎತ್ತರದ ನಿಲುವು, ನೀಟಾದ ಮುಖಮಾಟ, ತೆಳುವಾದ ನೇರಮೂಗು, ನೀಲಿಗಣ್ಣು, ನೇರ ಕೂದಲು, ಬಿಳಿಯ ಬಣ್ಣ - ಈ ವಿಶಿಷ್ಟರೂಪದ ಈ ಜನ ಕರ್ನಾಟಕದಲ್ಲೂ ಹರಡಿದ್ದರೇ ಎಂಬುದನ್ನು ಸುಲಭವಾಗಿ ತಿಳಿಯಲು ಸಾಧ್ಯವಾಗಿಲ್ಲ. ಕ್ರಿ.ಪೂ. ಒಂದನೆಯ ಸಹಸ್ರಮಾನದ ಅಂತ್ಯದಲ್ಲಿ ಉತ್ತರ ಭಾರತದಿಂದ ಸಾಂಸ್ಕೃತಿಕ ಪ್ರಭಾವ ಹಬ್ಬಲಾರಂಭಿಸಿದರೂ ಎಷ್ಟರಮಟ್ಟಿಗೆ ಈ ಸ್ವರೂಪದ ಜನ ಇದಕ್ಕೆ ಕಾರಣರಾದರೆಂದು ಇಂದಿನ ಕರ್ನಾಟಕದ ಜನರ ಮಾನವಶಾಸ್ತ್ರೀಯ ವಿಶ್ಲೇಷಣೆಯಿಂದ ಸ್ಪಷ್ಟವಾಗಿಲ್ಲ.

ಕರ್ನಾಟಕದಲ್ಲಿ ಅಗಲ ತಲೆಯ ಕೆಲವು ಜನರ ವರ್ಗಗಳು ಕಾಣಸಿಗುತ್ತವೆ. ಇವುಗಳಲ್ಲಿ ಅಲ್ಪನಾಯಿಡ್ ಎಂಬುದು ಒಂದು. ಈ ವರ್ಗದ ಜನ ಮಧ್ಯಮ ಎತ್ತರದವರಾಗಿದ್ದು ಸಣ್ಣ ಅಗಲ ತಲೆಯುಳ್ಳವರಾಗಿದ್ದಾರೆ. ತಲೆಯ ಹಿಂಭಾಗ ದುಂಡಗಿರುವುದು ಈ ವರ್ಗದ ಜನರ ವಿಶೇಷ ಲಕ್ಷಣ. ದುಂಡನೆಯ ಮುಖ ಮತ್ತು ಎದ್ದು ಕಾಣುವ ಮೂಗು ಇವರ ಇನ್ನಿತರ ಲಕ್ಷಣಗಳು. ದೇಹದ ಮತ್ತು ಮುಖದ ಕೂದಲು ಹೆಚ್ಚಾಗಿ ಇರುತ್ತದೆ. ಇವರ ಚರ್ಮ ತೆಳುಬಣ್ಣದ್ದಾಗಿರುತ್ತದೆ.

ಇನ್ನೊಂದು ಡಿನೇರಿಕ್ ಗುಂಪು. ಈ ವರ್ಗದವರು ಎತ್ತರವಿದ್ದು ಉದ್ದ ಮುಖದ ಓರೆಯಾದ ಮೂಗಿನವರಾಗಿರುತ್ತಾರೆ. ಸಣ್ಣ ತಲೆಯಿದ್ದು ಅದರ ಹಿಂಭಾಗ ಚಪ್ಪಟೆಯಾಗಿರುತ್ತದೆ. ತಲೆಚಿಪ್ಪು ಎತ್ತರವಿದ್ದು ಹಣೆ ಒಳಸರಿದಿರುತ್ತದೆ. ಚರ್ಮ ಮತ್ತು ಕೂದಲು ಕಪ್ಪಾಗಿರುತ್ತದೆ. ಕರ್ನಾಟಕದ ಕೊಡಗರು ಈ ಗುಂಪನ್ನು ಪ್ರತಿನಿಧಿಸುತ್ತಾರೆ. ಕರ್ನಾಟಕದಲ್ಲಿ ಬಹಳ ಜನ ಈ ಮೇಲಿನ ಎರಡು ಗುಂಪುಗಳ ಗುಣಗಳನ್ನು ಹೊಂದಿರುವುದರಿಂದ ಅವರನ್ನು ಆಲ್ಪಿನೊ-ಡಿನೇರಿಕ್ ಜನವರ್ಗಕ್ಕೆ ಸೇರಿಸಲಾಗುತ್ತದೆ. ಪ್ರಾಯಶಃ ಈ ಜನವರ್ಗಕ್ಕೆ ಕಾರಣರಾದವರು ಕ್ರಿಸ್ತಶಕಾರಂಭದ ಆಸುಪಾಸಿನಲ್ಲಿ, ಎಂದರೆ ಚಾರಿತ್ರಿಕ ಯುಗದ ಆದಿಭಾಗದಲ್ಲಿ, ಭಾರತಕ್ಕೆ ವಲಸೆ ಬಂದ ಶಕರು ಎಂಬುದು ಒಂದು ಊಹೆ. ಹಿಮಾಲಯದ ಉತ್ತರ ತಪ್ಪಲಿನಲ್ಲಿದ್ದ ಈ ಬುಡಕಟ್ಟಿನ ಮೂಲ ಜನ, ಆಫ್ಘಾನಿಸ್ತಾನದ ಸೇಸ್ತಾನ್ ಮೂಲಕ ವಾಯುವ್ಯ ಭಾರತವನ್ನು ಪ್ರವೇಶಿಸಿ, ಅನಂತರ ಭಾರತದ ಇತರೆಡೆಗಳಿಗೂ ಹರಡಿದಂತೆ ತೋರುತ್ತದೆ. ಕರ್ನಾಟಕದಲ್ಲಿ ಕಂಡುಬರುವ ಅಗಲ ತಲೆಯ ಜನವರ್ಗಕ್ಕೂ ಈ ವಲಸೆ ಕಾರಣವಾಗಿರಬಹುದು. ಆದರೆ ಇತ್ತೀಚಿನ ಕೆಲವು ಸಂಶೋಧನೆಗಳಿಂದ ಬೃಹತ್ ಶಿಲಾಸಮಾಧಿ ಸಂಸ್ಕೃತಿಗಳ ಕಾಲದಲ್ಲೂ ಈ ರೂಪಾಂಶವನ್ನು ಹೊಂದಿದ್ದ ಜನ ಇದ್ದಿರಬಹುದೆಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳಿರುವುದಿರಂದ ಈ ಸಂಬಂಧದ ಸಮಸ್ಯೆ ಜಟಿಲವಾಗಿದೆ.

ಒಟ್ಟಿನಲ್ಲಿ ಕ್ರಿಸ್ತಶಕಾರಂಭದ 3-4 ನೆಯ ಶತಮಾನಗಳ ಹೊತ್ತಿಗೆ ಕರ್ನಾಟಕ ವಿವಿಧ ಬುಡಕಟ್ಟುಗಳ ನೆಲೆವೀಡಾಗಿತ್ತು. ಇಂದು ಈ ನಾಡಿನಲ್ಲಿರುವ ಬಹುಪಾಲು ಜನರ ಮೂಲವನ್ನು ಈ ವಿಧಗಳಲ್ಲಿಯೇ ಕಾಣಬಹುದು.

ಈ ಎಲ್ಲ ವರ್ಗೀಕರಣವನ್ನು ಬಹಳ ಕಡಿಮೆ ಶರೀರದ ಅಳತೆಗಳ ಆಧಾರದ ಮೇಲೆ ಮಾಡಿರುವುದರಿಂದ ಈ ದಿಸೆಯಲ್ಲಿ ಇನ್ನೂ ಸಂಶೋಧನೆಯಾಗಬೇಕಿದೆ. ಎಲ್ಲ ಜಾತಿಗಳ ಮತ್ತು ಗಿರಿಜನರ ಶರೀರದ ಅಳತೆಗಳನ್ನು ತೆಗೆದುಕೊಂಡು ಪರೀಕ್ಷೆ ಮಾಡಿದಾಗ ಮಾತ್ರ ಜನವರ್ಗಗಳ ಬಗ್ಗೆ ಖಚಿತವಾಗಿ ಹೇಳಬಹುದು. ಭಾರತೀಯ ಮಾನವಶಾಸ್ತ್ರ ಸಂಶೋಧನ ಇಲಾಖೆ ಕರ್ನಾಟಕದ ಎಲ್ಲ ರೀತಿಯ ಜನರ ಶರೀರದಳತೆಗಳನ್ನು ತೆಗೆದುಕೊಂಡಿದೆಯಾದರೂ ಅದರ ಫಲಿತಾಂಶ ಇನ್ನೂ ಪ್ರಕಟವಾಗಬೇಕಾಗಿದೆ. ಹೀಗಾಗಿ ಜನವರ್ಗಗಳ ಬಗ್ಗೆ ಹೆಚ್ಚು ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ.

ಕೆಲವು ಆದಿವಾಸಿಗಳನ್ನು ಹೊರತುಪಡಿಸಿದರೆ, ಯಾವುದೇ ಒಂದು ಬುಡಕಟ್ಟಿನ ಜನ ಅದರ ಮೂಲ ಸ್ವರೂಪದೊಡನೆ ಇಂದು ಉಳಿದುಕೊಂಡಿಲ್ಲ; ಕಾಲಕ್ರಮದಲ್ಲಿ ಪರಸ್ಪರವಾಗಿ ರಕ್ತಸಂಬಂಧ ಬೆಳೆದು ಇಂದು ಈ ಜನ ಬಹು ಮಿಶ್ರಣದೊಡನೆ ಕಾಣಿಸಿಕೊಳ್ಳುತ್ತಾರೆ. ಈ ರಕ್ತಸಂಬಂಧ ಯಾವುದೇ ಒಂದು ಜಾತಿ, ಕುಲ ಅಥವಾ ಪಂಥದವರಿಗೆ ಸೀಮಿತವಾಗಿಲ್ಲ. ವರ್ಗವರ್ಗಗಳಲ್ಲಿ ವ್ಯತ್ಯಾಸಗಳು ಕಂಡುಬಂದರೆ, ಅವು ಕೇವಲ ಮಿಶ್ರಣದ ಪರಿಮಾಣದಲ್ಲಿ ಮಾತ್ರ. ಈ ದೃಷ್ಟಿಯಿಂದ ನೋಡಿದಲ್ಲಿ ಜನರನ್ನು ಬುಡಕಟ್ಟಿನ ಆಧಾರದ ಮೇಲೆ ವರ್ಗೀಕರಿಸುವುದು ಕೇವಲ ಶಾಸ್ತ್ರದೃಷ್ಟಿಯಲ್ಲಿ ಮಾತ್ರ ಸಾಧ್ಯ. ಬಹು ಪ್ರಾಚೀನ ಕಾಲದಿಂದಲೂ ವಿವಿಧ ಜನಾಂಗಗಳು ಜೊತೆ ಜೊತೆಯಾಗೇ ವಾಸಿಸುತ್ತಿದ್ದು ಮಿಶ್ರವಾಗುತ್ತಿದ್ದುವೆಂಬುದಕ್ಕೆ ಕರ್ನಾಟಕದ ಪುರಾತನ ನೆಲೆಗಳಲ್ಲಿ ದೊರೆತ ಅಸ್ಥಿಪಂಜರಗಳು ಸಾಕ್ಷ್ಯಗಳಾಗಿವೆ. ಕರ್ನಾಟಕದ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಸಿಕ್ಕ ಅಸ್ಥಿಪಂಜರಗಳ ವಿಶ್ಲೇಷಣೆ ಅಲ್ಲಿ ಮೆಡಿಟರೇನಿಯನ್ ಮತ್ತು ಪಶ್ಚಿಮದ ಅಗಲ ತಲೆಯವರ ವರ್ಗಕ್ಕೆ ಸೇರಿದವರು ಇದ್ದರೆಂಬುದನ್ನು ಸೂಚಿಸುತ್ತದೆ. ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯಲ್ಲಿ ಸಿಕ್ಕ ಎಲುಬಿನ ಅವಶೇಷಗಳ ಮೇಲಿಂದ ಆ ಜನರನ್ನು ಪೇಲಿಯೊ ಮೆಡಿಟರೇನಿಯನ್ ಮತ್ತು ಆಸ್ಟ್ರಲಾಯಿಡ್ ಗುಣಗಳುಳ್ಳ ಸಮ್ಮಿಶ್ರ ವರ್ಗಕ್ಕೆ ಸೇರಿಸಬಹುದಾಗಿದೆ. ಬ್ರಹ್ಮಗಿರಿಯಲ್ಲಿ ಸಿಕ್ಕ ತಲೆಬುರುಡೆಗಳಲ್ಲಿ ಕೆಲವು ಆಸ್ಟ್ರಲಾಯಿಡ್ ಗುಣಗಳನ್ನೂ ಕೆಲವು ಅಗಲತಲೆಯವರ ಗುಣಗಳನ್ನೂ ಹೊಂದಿವೆ. ಜೇವರಗಿಯಲ್ಲಿ ಸಿಕ್ಕ ತಲೆಬುರುಡೆಯ ಚಿತ್ರವನ್ನು ಮೆಡೋಸ್ ಟೇಲರ್ ಅವರು ಚಿತ್ರದ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಚಿತ್ರದ ಮೇಲಿಂದ ಇದು ನೀಗ್ರಾಯಿಡ್ ಗುಂಪಿಗೆ ಸೇರುತ್ತದೆಂದು ಹೇಳಬಹುದು.

ಹೊರನಾಡುಗಳಿಂದ ಕರ್ನಾಟಕದತ್ತ ಹರಿಯುತ್ತಿದ್ದ ಜನವಲಸೆ ಚಾರಿತ್ರಿಕ ಕಾಲದಲ್ಲೂ ಮುಂದುವರಿಯಿತು. ಕ್ರಿಸ್ತಶಕದ 1-2ನೆಯ ಶತಮಾನಗಳಲ್ಲಿ ಗ್ರೀಕೋ-ರೋಮನರು, 7-8-9ನೆಯ ಶತಮಾನಗಳಲ್ಲಿ ಅರಬ್ಬರು, ಪಾರಸೀಕರು, ಸಿಂಹಳೀಯರು ಹಾಗೂ ಪ್ರಾಯಶಃ ಆಗ್ನೇಯ ಏಷ್ಯದವರು,ಮುಂದೆ 12ನೆಯ ಶತಮಾನದ ಅನಂತರದಲ್ಲಿ ತುರ್ಕಿ, ಅರೇಬಿಯ, ಪರ್ಷಿಯ ಮತ್ತಿತರ ಪಶ್ಚಿಮ ಏಷ್ಯ ದೇಶಗಳ ಮೂಲದ ಮುಸಲ್ಮಾನರು, 14ನೆಯ ಶತಮಾನದಿಂದ ಪೋರ್ಚುಗೀಸರು, ಫ್ರೆಂಚರು, ಡಚ್ಚರು, ಬ್ರಿಟಿಷರು ಈ ನಾಡಿನೊಡನೆ ಸಂಪರ್ಕಹೊಂದಿದರು. ಅಲ್ಲದೆ ಬಹಮನೀ, ಬಿಜಾಪುರ ಸುಲ್ತಾನರ ಕಾಲದಲ್ಲಿ ಆಫ್ರಿಕದಿಂದ ಸಿದ್ದಿಗಳು ಕರ್ನಾಟಕಕ್ಕೆ ವಲಸೆ ಬಂದರು. ಈ ವಿವಿಧ ಮೂಲಗಳವರು ಕರ್ನಾಟಕದ ಜನಸ್ತೋಮದಲ್ಲಿ ಒಂದಲ್ಲ ಒಂದೆಡೆ ಬೆರೆತಿದ್ದಾರೆ. ಆದರೆ ಇದು ಗಮನಾರ್ಹ ಪ್ರಮಾಣದಲ್ಲೇನೂ ಆಗಿಲ್ಲವೆಂದು ತೋರುತ್ತದೆ.

ದ್ರಾವಿಡ, ಆರ್ಯ ಎಂಬ ಬೇರೆಬೇರೆ ಜನವರ್ಗಗಳು ಇವೆ ಎಂಬಕಲ್ಪನೆ ಕೆಲವೆಡೆ ಇದೆ. ಮಾನವಶಾಸ್ತ್ರಜ್ಞರ ದೃಷ್ಟಿಯಲ್ಲಿ ದ್ರಾವಿಡ, ಆರ್ಯ ಎಂಬುವು ಕೇವಲ ಭಾಷಿಕ ಗುಂಪುಗಳನ್ನು ಹೆಸರಿಸುತ್ತವೆಯೇ ಹೊರತು ಆ ವರ್ಗದ ಭಾಷೆಗಳನ್ನು ಆಡುವವರ ದೇಹಮಾಟದಲ್ಲಿರುವ ವ್ಯತ್ಯಾಸವನ್ನು ಸೂಚಿಸುವುದಿಲ್ಲ. ಒಂದೇ ರೀತಿಯ ದೇಹಮಾಟದ ವ್ಯಕ್ತಿಗಳು ಭಾಷೆಯನ್ನು ಆಡುತ್ತಾರೆಂಬುದಾಗಲಿ, ಒಂದೇ ಭಾಷೆಯನ್ನು ಆಡುವ ಜನ ಒಂದೇ ರೀತಿಯ ದೇಹಮಾಟವನ್ನು ಹೊಂದಿರುತ್ತಾರೆಂಬುದಾಗಲಿ ಸುಸಂಬದ್ಧ ತಿಳಿವಳಿಕೆಯಲ್ಲ.

ಈಗೀಗ ಶಾರೀರಿಕ ಮಾನವಶಾಸ್ತ್ರಜ್ಞರು ನಿಖರವಾದ ಮತ್ತು ಖಚಿತವಾಗಿ ಗುರುತಿಸಬಲ್ಲ ಲಕ್ಷಣಗಳನ್ನು ಆಧರಿಸಿ ಜನರನ್ನು ವರ್ಗೀಕರಿಸುತ್ತಾರೆ. ಮುಖ್ಯವಾಗಿ ರಕ್ತಗುಂಪುಗಳು ಮತ್ತು ಕೈ ಬೆರಳು ಮತ್ತು ಕೈಗಳ ಮುದ್ರೆಗಳ ಆಧಾರದ ಮೇಲಿಂದ ಜನರನ್ನು ವರ್ಗೀಕರಿಸುವುದು ಕಂಡುಬರುತ್ತದೆ. ಇದಲ್ಲದೆ ಇನ್ನಿತರ ಜೈವಿಕ ಲಕ್ಷಣಗಳಾದ ಅಸಾಮಾನ್ಯ ಹೆಮೊಗ್ಲೋಬಿನ್‌ಗಳು, ಸಿಕಲ್ ಸೆಲ್ ಹೆಮೊಗ್ಲೋಬಿನ್, ಟ್ರಾನ್ಸ್‌ಫರಿನ್‌ಗಳು, ಪ.ಟಿ.ಸಿ. ರುಚಿ ನೋಡುವುದು ಮತ್ತು ಬಣ್ಣಗುರುಡತನ - ಇವುಗಳ ಆಧಾರದ ಮೇಲಿಂದ ಕೂಡ ಜನರನ್ನು ವಿಭಾಗಿಸಬಹುದು. ಈ ದಿಶೆಯಲ್ಲಿ ಹೆಚ್ಚಿನ ಅಧ್ಯಯನ ನಡೆದಿಲ್ಲವಾದ್ದರಿಂದ ಇದರ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟ. ಭಾರತೀಯ ಮಾನವಶಾಸ್ತ್ರ ಸಂಶೋಧನ ಇಲಾಖೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗ ಈ ದಿಶೆಯಲ್ಲಿ ಕೆಲಸ ಮಾಡುತ್ತಿವೆ.

ರಕ್ತಗುಂಪುಗಳಲ್ಲಿ ಕೂಡ ಅನೇಕ ವಿಧಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ABO, Rh, MNS ಮತ್ತು ಲೀವಿಸ್ ಗುಂಪುಗಳು. ABO ರಕ್ತಗುಂಪುಗಳ ಬಗ್ಗೆ ಆಳವಾದ ಸಂಶೋಧನೆ ಮಾಡುವವರೆಗೆ ಏನೂ ಹೇಳಲಿಕ್ಕಾಗುವುದಿಲ್ಲ. Rh ರಕ್ತ ಗುಂಪುಗಳಲ್ಲಿ ಮುಖ್ಯವಾಗಿ CDe (Ri) ಗುಂಪು ಹೆಚ್ಚಾಗಿರುವುದು ಕಂಡುಬಂದಿದೆ. CDE (r) ಗುಂಪು ಆದಿವಾಸಿಗಳಲ್ಲಿ ಕಂಡುಬಂದಿದೆ. ಚೆಂಚರಲ್ಲಿ ಲೀವಿಸ್ ಪಾಸಿಟಿವ್ ಸೇ.9.2ರಷ್ಟಿದೆ. ಪಿ.ಟಿ.ಸಿ.ಯನ್ನು 70ರಷ್ಟು ಜನರು ರುಚಿ ನೋಡಬಲ್ಲವರಾಗಿದ್ದಾರೆ. ಅಸಾಮಾನ್ಯ ಹೆಮೊಗ್ಲೋಬಿನ್‌ಗಳು ಕರ್ನಾಟಕದ ಜನರಲ್ಲಿ ಇನ್ನೂ ಕಂಡುಬಂದಿಲ್ಲ. ಸಿಕಲ್ ಸೆಲ್ ಹೆಮೊಗ್ಲೋಬಿನ್‌ಗಳು ಆದಿವಾಸಿ ಜನಾಂಗಗಳಲ್ಲಿ ಕಂಡುಬಂದಿವೆ.

ಹೀಗೆ ಆಧುನಿಕ ಗುಣಗಳ ಆಧಾರದ ಮೇಲೆ ಜನರ ವರ್ಗೀಕರಣ ಮಾಡುವ ಸಂಶೋಧನೆಯ ಕೆಲಸವನ್ನು ಕೆಲವೇ ಗುಂಪುಗಳ ಬಗ್ಗೆ ಮಾಡಿರು ವುದರಿಂದ ಎಲ್ಲ ಜನರ ಬಗ್ಗೆ ಇಂಥ ವರ್ಗೀಕರಣ ಬಹಳ ಕಷ್ಟ. (ಯು.)

**ಜನಪದ :** ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟವಾಗುತ್ತಿರುವ ಕನ್ನಡ ಮಾಸಪತ್ರಿಕೆ. ಮಾರ್ಚ್ 1966ರಲ್ಲಿ ಪ್ರಾರಂಭವಾಯಿತು. ಹಿಂದೆ ವಾರ ಪತ್ರಿಕೆಯಾಗಿ ಪ್ರಕಟವಾಗುತ್ತಿತ್ತು. ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಮುಖ್ಯಾಧಿಕಾರಿ ಪತ್ರಿಕೆಯ ಪ್ರಧಾನ ಸಂಪಾದಕರಾಗಿಯೂ ಒಬ್ಬ ಹಿರಿಯ ಸಹಾಯಕ ನಿರ್ದೇಶಕರು ಸಂಪಾದಕರಾಗಿಯೂ ಇರುವರು. ರಾಜ್ಯದ ಅಭಿವೃದ್ಧಿ ಚಟುವಟಿಕೆಗಳ ಪ್ರಕಟಣೆಗೆ ಮೀಸಲಾದ ಈ ಪತ್ರಿಕೆ ಸರ್ಕಾರದ ನೀತಿ – ನಿರ್ಣಯಗಳು ಮತ್ತು ಮುಂಜೂರಾತಿಗಳು ಹಾಗೂ ಕಾರ್ಯಕ್ರಮಗಳನ್ನು ಪರಿಚಯ ಮಾಡಿಕೊಡುತ್ತದೆ. ಅಭಿವೃದ್ಧಿ ಯೋಜನೆಗಳು, ಪ್ರಗತಿಪರ ರೈತರು, ಪ್ರಗತಿಪರ ಕೃಷಿಕ್ಷೇತ್ರಗಳು, ವ್ಯವಸಾಯ ತಿಳಿವಳಿಕೆ, ಕುಟುಂಬ ಯೋಜನೆ, ಉಳಿತಾಯ, ಗೃಹಕೈಗಾರಿಕೆ ಮುಂತಾದ ವಿಷಯಗಳ ಮೇಲೆ ಸರಳವಾದ ಭಾಷೆಯಲ್ಲಿ ಚಿತ್ರ ಮತ್ತು ಅಂಕಿಅಂಶಸಹಿತವಾದ ಲೇಖನಗಳನ್ನು ಪ್ರಕಟಿಸುತ್ತದೆ. (ಪಿ.ಕೆ.ಪಿ.)

**ಜನಪದ ಆಟಗಳು :** ಹೆಚ್ಚಾಗಿ ಗ್ರಾಮೀಣ ಪರಿಸರದಲ್ಲಿ ಕಂಡುಬರುವ, ಮನೋರಂಜನೆಯೇ ಪ್ರಮುಖ ಉದ್ದೇಶವಾಗುಳ್ಳ ಅನೇಕ ಬಗೆಯ ಜನಪದ ಆಟಗಳು ಕರ್ನಾಟಕದಲ್ಲಿ ಪ್ರಚಲಿತವಿವೆ. ಈ ಆಟಗಳನ್ನು ಒಳಾಂಗಣ ಆಟಗಳು, ಹೊರಾಂಗಣ ಆಟಗಳು ಎಂದು ವಿಭಾಗಿಸಿಕೊಳ್ಳಬಹುದು.

**ಒಳಾಂಗಣ ಆಟಗಳು :** ಕರ್ನಾಟಕದಲ್ಲಿ ಪ್ರಚಲಿತವಿರುವ ಒಳಾಂಗಣ ಆಟಗಳಲ್ಲಿ ಇತ್ತೀಚೆಗೆ ಬಳಕೆಗೆ ಬಂದಿರುವ ಇಸ್ಪೀಟನ್ನು ಬಿಟ್ಟರೆ, ಪಗಡೆ ಮತ್ತು ಚದುರಂಗ ಜನಪ್ರಿಯವಾಗಿವೆ. ಈ ಆಟಗಳು ಭಾರತದ ಎಲ್ಲೆಡೆಯೂ ಕಂಡುಬರುವಂಥವು. ಹಿಂದೆ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಾರದಲ್ಲಿದ್ದ ಇಸ್ಪೀಟ್ ರೀತಿಯ ಗಂಜೀಫ (ನೋಡಿ) ಎಂಬ ಆಟ ಈಗ ಎಲ್ಲೋ ಅಪರೂಪವಾಗಿ ಕಾಣಸಿಗುತ್ತದೆ. ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಲಿತವಾಗಿರುವ, ಸಾಮಾನ್ಯವಾಗಿ ಕಿರಿಯರೇ ಭಾಗವಹಿಸುವ ಕೆಲವು ಆಟಗಳು ಹೀಗಿವೆ.



ವಿವಿಧ ಮಾದರಿಯ ಚನ್ನೆಮಣೆಗಳು

**ಅಣ್ಣೇಕಲ್ಲು :** ಹೆಣ್ಣುಮಕ್ಕಳ ಆಟ. ಇದಕ್ಕೆ ಗಜ್ಜುಗದ ಗಾತ್ರದ ಕಲ್ಲುಗಳು ಬೇಕು. ಇಬ್ಬರು ಅಥವಾ ಹೆಚ್ಚು ಜನ ಆಡಬಹುದು. ಒಬ್ಬೊಬ್ಬರಿಗೆ ಐದೈದು ಕಲ್ಲುಗಳು. ಇದರಲ್ಲಿ ವ್ಯತ್ಯಾಸ ಮಾಡಿಕೊಳ್ಳಬಹುದು. ಎಲ್ಲರ ಕಲ್ಲುಗಳನ್ನೂ ಒಟ್ಟಿಗೆ ಇಟ್ಟು ಯಾರಾದರೊಬ್ಬರು ಆಟ ಪ್ರಾರಂಭಿಸಬೇಕು. ಆಮೇಲೆ ಕುಳಿತಿರುವವರಲ್ಲಿ ಅಪ್ರದಕ್ಷಿಣವಾಗಿ ಆಟ ಮುಂದುವರಿಯುತ್ತದೆ. ಕಲ್ಲುಗಳನ್ನೆಲ್ಲ ಅನುಕೂಲವಾದಷ್ಟು ಎತ್ತರಕ್ಕೆ ಎರಡೂ ಅಂಗೈಗಳಿಂದ ಮೇಲೆಸೆದು ಮುಂಗೈಮೇಲೆ ಆಟದ ನಿಬಂಧನೆಯ ಪ್ರಕಾರ ಒಂದೋ ಎಷ್ಟೋ ಆತುಕೊಂಡು ಉಳಿದವನ್ನು ಕೆಳಗೆ ಬೀಳಬಿಡಬೇಕು. ಕೆಲವು ಬಗೆಯ ಆಟದಲ್ಲಿ ಕೈಮೇಲಾಗಲಿ, ನೆಲದ ಮೇಲಾಗಲಿ ಮೂರು ಕಲ್ಲು ಇರಲು ಅವಕಾಶವಿಲ್ಲ. ಇದನ್ನು 'ಮೂಸ' ಎನ್ನುತ್ತಾರೆ. ಮೂಸವಾದರೆ ಆಟ ಹೋಯಿತು. ಆಡುವುದರಲ್ಲೂ ವೈವಿಧ್ಯವಿದೆ. ಕಲ್ಲುಗಳನ್ನು ಮೇಲೆಸೆದು ಒಂದು ಮುಂಗೈ ಮೇಲೆಮಾಡಿ ಕಲ್ಲುಗಳನ್ನು ಮಾರ್ಗಮಧ್ಯದಲ್ಲಿ ಮೇಲಿನಿಂದ ಹಿಡಿಯಬೇಕು. ಇದಕ್ಕೆ ಸೆಣಪಿ ಎನ್ನುತ್ತಾರೆ.ಒಂದು ಕಲ್ಲನ್ನು ಮಾತ್ರ ಮುಂಗೈ ಮೇಲೆ ಆತುಕೊಂಡು ಮತ್ತೆ ಅದನ್ನು ಬೀಳಿಸದಂತೆ ಮೇಲೆಸೆದು ಅಂಗೈಯಲ್ಲಿ ಆನಬೇಕು. ಯಾವ ಸಂದರ್ಭದಲ್ಲೇ ಬಿಟ್ಟರೂ ಆಟ ಹೋಯಿತು. ಕಲ್ಲನ್ನು ಮತ್ತೆ ಮೇಲೆಸೆದು ಅದು ಕೆಳಗೆ ಬೀಳುವಷ್ಟರಲ್ಲಿ ನೆಲದಲ್ಲಿ ಬಿದ್ದಿರುವ ಕಲ್ಲುಗಳಲ್ಲಿ ಒಂದನ್ನು ಎತ್ತಿಕೊಂಡು ಮೇಲಿನದನ್ನು ಆನಬೇಕು. ತಪ್ಪಿದರೆ ಆಟ ಹೋಯಿತು. ನೆಲದ ಮೇಲೆ ಇತರ ಕಲ್ಲುಗಳನ್ನು ಅಲ್ಲಾಡಿಸಿದರೂ ಆಟ ಹೋಯಿತು. ಹೀಗೆ ಒಂದು ಕಲ್ಲಿಂದ ಒಂದೊಂದೇ ಕಲ್ಲಿನಂತೆ ಗೆಲ್ಲುತ್ತ, ಒಂದೂ ಸೀಬೆಬಿ, ಎರಡೂ ಗರಡಾಳ, ಮೂರೂ ಮುತ್ತಿನ ಚೆಂಡು, ನಾಕೂ ನಾಗಪ್ಪ, ಐದೂ ಪಂಚಾಂಗ, ಆರೂ ದಾಳಿಂಬೆ, ಏಳೂ ಬೇಳೆ, ಎಂಟೂ ರಾಯರ ಗಂಟೆ, ಒಂಬೈನೋಲ್ಲ ಎಂದು ಹೇಳುತ್ತ ಇರುವ ಹತ್ತು ಕಲ್ಲುಗಳನ್ನೂ ಇಬ್ಬರಿದ್ದರೆ ಒಬ್ಬೊಬ್ಬರಿಗೆ ಐದು ಕಲ್ಲುಗಳಂತೆ, ಗೆದ್ದರೆ ಆಟಗಾರ್ತಿ ಗೆದ್ದಂತಾಯಿತು. ಆಮೇಲೆ ಮುಂದಿನವಳ ಆಟ. ಕಲ್ಲಿನ ಸಂಖ್ಯೆಯಲ್ಲಿ ಆನುವುದರ ಭಂಗಿಯಲ್ಲಿ, ಗೆದ್ದ ಮೇಲೆ ಸೋತವರಿಗೆ ವಿಧಿಸುವ ಶಿಕ್ಷೆಯಲ್ಲಿ, ಇತರ ನಿಯಮಗಳಲ್ಲಿ ವೈವಿಧ್ಯವಿದೆ.

**ಹುಣಿಸೆ ಬೀಜದ ಆಟ :** ಇದಕ್ಕೆ ಸಾಮಾನ್ಯವಾಗಿ ಇಪ್ಪತ್ತು ಇಪ್ಪತ್ತು ಹುಣಿಸೆಬೀಜಗಳು ಬೇಕು; ಹಾಲುವಾಣದ ಬೀಜಗಳೂ ಆಗಬಹುದು.

ಕೆಲವರು ಕವಡೆಗಳನ್ನೂ ಉಪಯೋಗಿಸುತ್ತಾರೆ. ಇಬ್ಬರು ಅಥವಾ ಹೆಚ್ಚು ಜನ ಆಡಬಹುದು. ಬೀಜಗಳನ್ನೆಲ್ಲ ಬೊಗಸೆಯಲ್ಲಿ ಸೇರಿಸಿ ನೆಲದ ಮೇಲೆ ಚೆಲ್ಲುವುದು; ಆಮೇಲೆ ಮತ್ತೊಂದು ಬೀಜ ಅಲ್ಲಾಡದಂತೆ ಒಂದಕ್ಕೊಂದು ತಾಟಿಸುವುದು - ಹೀಗೆ ತಾಟಿಸಿದ ಎರಡು ಬೀಜಗಳನ್ನು ಗೆದ್ದಂತೆ. ಗುರಿ ತಪ್ಪದಿರುವ ತನಕ ಅಥವಾ ಇತರ ಬೀಜಗಳು ಅಲ್ಲಾಡದಿರುವ ತನಕ ಆಟ ಮುಂದುವರಿಯುತ್ತದೆ. ತಪ್ಪಿದಲ್ಲಿ ಬೇರೆಯವರ ಆಟ. ಎಲ್ಲವನ್ನೂ ಗೆದ್ದಮೇಲೆ ತಮ್ಮ ತಮ್ಮ ಪಾಲಿಗೆ ಬಂದ ಬೀಜಗಳನ್ನು ಎಣಿಸಿದರೆ ಎಷ್ಟು ಕಡಿಮೆಯಾಗಿದೆಯೋ ಅಷ್ಟು ಸೋತಂತೆ. ಹೆಚ್ಚಾಗಿದ್ದರೆ ಅಷ್ಟು ಗೆದ್ದಂತೆ. ಮುಂದಿನ ಆಟಕ್ಕೆ ಇಬ್ಬರೂ ಸಮನಾಗಿ ಬೀಜಗಳನ್ನು ಹಾಕಬೇಕು. ಇದರ ಪರಿಣಾಮವಾಗಿ ಆಟದ ಕೊನೆಯಲ್ಲಿ ಯಾರಾದರೂ ಸೋಲಬಹುದು.



ಚನ್ನೆಮಣೆ ಆಟಕ್ಕೆ ಬಳಸುವ ವಿವಿಧ ಕಾಳುಗಳು

**ಸರಿಬೆಸ :** ಇದನ್ನು ಸಾಮಾನ್ಯವಾಗಿ ಇಬ್ಬರು ಅಡಕೆ ಇಟ್ಟುಕೊಂಡು ಆಡುತ್ತಾರೆ. ಸರಿ ಬೆಸ ಎಂದರೆ ಸಮ, ವಿಷಮ - ಎಂದರ್ಥ. ಮದುವೆಮನೆಗಳಲ್ಲಿ ಈ ಆಟ ಹೆಚ್ಚು. ಇಬ್ಬರು ತಮ್ಮಲ್ಲಿರುವ ಅಡಕೆಗಳಲ್ಲಿ ಇಷ್ಟಬಂದಷ್ಟನ್ನು ಒಂದು ಮುಷ್ಟಿಯಲ್ಲಿ ಅವಿತಿಟ್ಟುಕೊಂಡು ಸರಿಯೊ ಬೆಸವೊ ಎಂದು ಕೇಳಬೇಕು. ಎದುರಾಳಿ ಊಹಿಸಿ ಸರಿ ಇಲ್ಲವೇ ಬೆಸ ಎನ್ನಬೇಕು. ಎಣಿಸಿ ನೋಡಿದಾಗ ಹೇಳಿದಂತೆ ಸರಿಯೋ ಅಥವಾ ಬೆಸವೋ ಆಗಿದ್ದರೆ ಹೇಳಿದವರಿಗೆ ಅಷ್ಟು ಅಡಕೆಯನ್ನು ಕೊಟ್ಟುಬಿಡಬೇಕು. ತಪ್ಪಾಗಿದ್ದರೆ ಹೇಳಿದವರು ಅಷ್ಟು ಅಡಕೆಯನ್ನು ಕಟ್ಟಿಕೊಡಬೇಕು. ಅನಂತರ ಆಟ ಬದಲಾವಣೆ, ಮೊದಲು ತೋರಿಸುತ್ತಿದ್ದವರು ಈಗ ಹೇಳಬೇಕು. ಹೀಗೆ ತಮ್ಮಲ್ಲಿರುವ ಅಡಕೆಗಳನ್ನು ಸೋಲುವ ತನಕ ಆಟವಾಡಬಹುದು.

**ಉದ್ದಿನ ಮೂಟೆ ಆಟ:** ಇದನ್ನು ಆಡಲು ಎರಡು ಕೈಗಳೇ ಸಾಕು. ಪುಟ್ಟ ಮಕ್ಕಳು ಐದಾರು ಜನ ಸೇರಿ ಒಟ್ಟಿಗೆ ತಮ್ಮ ತಮ್ಮ ಎರಡೂ ಕೈಮುಷ್ಟಿಗಳನ್ನು ಒಂದರಮೇಲೊಂದು ಜೋಡಿಸಿ ಹಿಡಿದುಕೊಳ್ಳಬೇಕು. ಇವೆಲ್ಲವೂ ಮೂಡಗಳು (ಮೂಟೆ). ಮಗುವೊಂದು ತನ್ನ ಒಂದು ಕೈ ಮುಷ್ಟಿಯನ್ನು ಮಾತ್ರ ಮೇಲಿಟ್ಟು ಇನ್ನೊಂದು ಕೈ ತರ್ಜನೀ ಬೆರಳಿಂದ ಇದೇನು ಮೂಡೆ, ಇದೇನು ಮೂಡೆ ಎಂದು ಹೇಳಬೇಕು. ಒಂದೊಂದು ಮಗುವೂ ತನ್ನ ಮೂಡೆ ಉದ್ದಿನದೊ, ಹೆಸರಿನದೊ, ಕಡಲೆಯದೊ, ತಡಗುಣಿಯದೊ ಎಂದು ಹೇಳಬೇಕು. ಆಮೇಲೆ ಮೂಡೆಗಳ ಸಾಲಿಗೆ ಎಣ್ಣೆ ಹಚ್ಚಿದಂತೆಯೂ ಮತ್ತು ಉಶ್ ಉಶ್ ಎಂದು ನೀರು ಹುಯ್ದಂತೆ ನಟಿಸಿ, ಒರಸಿ ಚಿನ್ನದ ಕತ್ತೀಲಿ ಹೊಡೆಯಾನೊ ಬೆಳ್ಳಿ ಕತ್ತೀಲಿ ಹೊಡೆಯಾನೊ ಎಂದು ಹೇಳಿ ಕೈಬೀಸುವಷ್ಟರಲ್ಲಿ ಎಲ್ಲರೂ ತಮ್ಮತಮ್ಮ ಕೈಗಳನ್ನು ಬೆನ್ನ ಹಿಂದೆ ಬಚ್ಚಿಟ್ಟುಕೊಳ್ಳಬೇಕು. ಈಗ ಆಟ ಮತ್ತೊಂದು ಮುಖ್ಯ ತಿರುವಿಗೆ ಬಂದು ನಿಲ್ಲುತ್ತದೆ. ದೊಡ್ಡಮಗು ಪ್ರತಿಯೊಬ್ಬರನ್ನೂ ಪ್ರಶ್ನೆ ಕೇಳುತ್ತದೆ. ಕೈಕಾಲೆಲ್ಲ ಎಲ್ಲಿಗೆ ಹೋದೊ? ಸಂತೆಗೆ ಹೋದೊ, ಸಂತೇನ್ ಕೊಡ್ತು? ಕಬ್ಬು ಕೊಡ್ತು, ಕಬ್ಬೇನ್ ಮಾಡ್ದೆ? ತಿಂದು ಸಿಪ್ಪೆ ತಿಪ್ಪೆಗೆ ಹಾಕ್ದೆ, ತಿಪ್ಪೇನ್ ಕೊಡ್ತು? ಗೊಬ್ಬರ ಕೊಡ್ತು, ಗೊಬ್ಬರ ಏನ್ ಮಾಡ್ದೆ? ಹೊಲಕ್ಹಾಕ್ದೆ, ಹೊಲ ಏನ್ ಕೊಡ್ತು? ಹುಲ್ಲು ಕೊಡ್ತು, ಹುಲ್ಲೇನ್ ಮಾಡ್ದೆ? ಹಸೀಗ್ಹಾಕ್ದೆ, ಹಸೇನ್ ಕೊಡ್ತು? ಹಾಲ್ ಕೊಡ್ತು, ಹೀಗೆ ಪ್ರಶ್ನೆ ಅದಕ್ಕೆ ಉತ್ತರ. ಒಂದೊಂದು ಮಗುವೂ ಉತ್ತರ ಕೊಡುತ್ತ ಹೋಗಿ ಕೊನೆಗೆ ಯಾವುದೋ ಒಂದು ರಸಸನ್ನಿವೇಶದಲ್ಲಿ ಚಮತ್ಕಾರದ ಉತ್ತರ ಬಂದಾಗ ಎಲ್ಲರೂ ನಗುವರು. ಅಲ್ಲಿಗೆ ಆಟ ಮುಕ್ತಾಯವಾಗುತ್ತದೆ.

**ಹರಳುಮಣೆ ಆಟ :** ಇದಕ್ಕೆ ಅಳಗುಳಿಮಣೆ ಆಟ, ಚನ್ನೆಮಣೆ ಆಟ ಎಂಬ ಹೆಸರುಗಳೂ ಇವೆ. ಆಟವಾಡಲು ಒಂದೊಂದು ಸಾಲಿನಲ್ಲಿ ಏಳು ಏಳು ಪುಟ್ಟ ಬೋಗುಣಿಗಳಂಥ ಎರಡು ಸಾಲು ಗುಳಿಗಳುಳ್ಳ ಸುಮಾರು ಐದಾರು ಅಂಗುಲ ಅಗಲ, ಹದಿನೈದು ಹದಿನಾರು ಅಂಗುಲ ಉದ್ದವುಳ್ಳ ಆಯತಾಕಾರದ ಒಂದು ಮರದ ಮಣೆ ಮತ್ತು ಒಂದು ಗುಳಿಗೆ ಐದರಂತೆ ಹದಿನಾಲ್ಕು ಗುಳಿಗಳಿಗೆ ಎಪ್ಪತ್ತು ಹುಣಿಸೆಬೀಜ ಬೇಕು. ಒಂದೊಂದು ಕಡೆಗೆ ಒಬ್ಬೊಬ್ಬರಂತೆ ಇಬ್ಬರಾಡುವ ಆಟದಲ್ಲಿ ಮೊದಲು ಎಲ್ಲ ಮನೆಗಳಿಗೂ (ಗುಳಿ) ಐದೈದರಂತೆ ಹರಳು ತುಂಬಿ ಯಾರಾದರೊಬ್ಬರು ಆಟ ಮೊದಲು ಮಾಡಬೇಕು. ಯಾವುದಾದರೂ ಒಂದು ಮನೆಯ ಐದು ಹರಳನ್ನು ತೆಗೆದುಕೊಂಡು ಮುಂದಿನ ಮನೆಗಳಿಗೆ ಒಂದೊಂದರಂತೆ ಹಾಕಬೇಕು. ಮುಗಿದಾಗ ಮುಂದಿನ ಮನೆಯನ್ನು ಮುರಿದು ಅದಕ್ಕೆ ಹಾಕದೆ ಅದರ ಮುಂದಿನ ಮನೆಗಳಿಗೆ ಹಾಕುತ್ತ ಹೋಗಬೇಕು. ಹೀಗೆ ಹಾಕುವಾಗ ಖಾಲಿಮನೆ ಸಿಕ್ಕಿದರೆ ಅದನ್ನು ಬೆರಳುಗಳಿಂದ ಸವರಿ ಮುಂದಿನ ಮನೆಯ ಬೀಜಗಳನ್ನು ತೆಗೆದಿಟ್ಟುಕೊಳ್ಳಬೇಕು. ಅವು ಗೆದ್ದ ಹರಳು, ಅಲ್ಲಿಗೆ ಒಬ್ಬರ ಆಟ ಮುಗಿಯಿತು. ಮನೆ ಬಿಟ್ಟು ಮನೆಯಲ್ಲಿ ಬೀಜವಿದ್ದರೆ ಎಷ್ಟು ಮನೆಗಳಲ್ಲಿದ್ದರೂ ಸವರಿ ತೆಗೆದುಕೊಳ್ಳಬಹುದು. ಎದುರುಬದುರು ಮನೆಗಳು ಖಾಲಿಯಿದ್ದರೂ ಹೀಗೆ ಮಾಡಬಹುದು. ಒಂದು ಮನೆಯಲ್ಲಿ ನಾಲ್ಕು ಹರಳಿದ್ದರೆ ಅದಕ್ಕೆ ಕರು ಎಂದು ಹೆಸರು. ಅದನ್ನು ಆಯಾ ಆಟಗಾರರು ತೆಗೆದಿಟ್ಟುಕೊಳ್ಳಬಹುದು. ಹೀಗೆ ಕೊನೆಯಲ್ಲಿ ತಮ್ಮತಮ್ಮ ಮನೆಗಳಲ್ಲಿ ಹರಳಿರುವ ತನಕವೂ ಆಡಬಹುದು. ಕೊನೆಯಲ್ಲಿ ಎಣಿಸಿ ನೋಡಿದಾಗ ಮೂವತ್ತೈದಕ್ಕಿಂತ ಕಡಿಮೆ ಇದ್ದರೆ ಅಷ್ಟು ಸೋತಂತೆ. ಹೆಚ್ಚಿದಂತೆ ಅಷ್ಟು ಗೆದ್ದಂತೆ. ಒಂದು ಮನೆಗೆ ಐದಕ್ಕಿಂತ ಕಡಿಮೆ ಬೀಜ ತುಂಬುವಂತಿಲ್ಲ. ಹೀಗೆ ಕೊನೆಯಲ್ಲಿ ತಮ್ಮ ಕಡೆ ಒಂದು ಮನೆಯನ್ನು ತುಂಬಲಾರದಾದಾಗ ಸಂಪೂರ್ಣ ಸೋಲು ಒಬ್ಬರಿಗೆ, ಸಂಪೂರ್ಣ ಗೆಲುವು ಮತ್ತೊಬ್ಬರಿಗೆ. ಇದು ಸಾದಾ ಆಟ. ಇದರಲ್ಲೇ ಕಾಶಿಮನೆ, ಮೂಲೆ ಕಟ್ಟುವುದು ಮೊದಲಾದ ಇತರ ಪ್ರಕಾರದ ಆಟಗಳೂ ಇವೆ.



ಪಗಡೆ ಆಟದ ಹಾಸು

**ಆನೆ ಕುರಿ ಆಟ :** ಇದು ಇಬ್ಬರಾಡುವ ಆಟ. ಒಬ್ಬರು ಮೂರು ಆನೆಗಳನ್ನು ವಹಿಸಿಕೊಂಡರೆ, ಒಬ್ಬರು ಇಪ್ಪತ್ತು ಕುರಿಗಳನ್ನು ವಹಿಸಿಕೊಳ್ಳಬೇಕು. ಆನೆ ಒಂದು ಕುರಿಯ ಮೇಲೆ ಮಾತ್ರ ನೆಗೆಯಬಲ್ಲದು. ನೆಗೆದರೆ ಆ ಕುರಿ ಆನೆಗೆ ಸೇರುತ್ತದೆ. ಜಾಗವಿದ್ದರೆ ಒಂದರ ಅನಂತರ ಒಂದನ್ನು ಎಷ್ಟು ಸಾರಿ ಯಾವ ದಿಕ್ಕಿನಲ್ಲಿ ಬೇಕಾದರೂ ನೆಗೆಯಬಹುದು. ಕುರಿ ಆನೆಯ ಮೇಲೆ ನೆಗೆಯಲಾರದು. ಆದರೆ ನೆಗೆಯಲು ಅವಕಾಶ ಸಿಗದಂತೆ ಒಂದು ಕುರಿಯ ಮಗ್ಗಲು ಮನೆಯಲ್ಲಿ ಮತ್ತೊಂದು ಕುರಿ ಇರಬೇಕಷ್ಟೆ. ಹೀಗೆ ಆಡುತ್ತ ಆನೆ ನಡೆಯದಂತೆ ಮಾಡಬೇಕು. ಇಲ್ಲವೇ ಕುರಿಗಳು ಆನೆಗೆ ಆಹುತಿಯಾಗಬೇಕು. ನಡೆಸಲು ಮನೆಯಿದ್ದರೆ ನಡೆಸಲೇಬೇಕು. ನಡೆಸಲಾಗದಾದಾಗ ಸಂಬಂಧಪಟ್ಟವರು ಸೋತಂತೆ.

**ಹುಲಿ ಕುರಿ ಆಟ :** ಇಬ್ಬರಾಡುವ ಆಟ. ಒಬ್ಬ ಕುರಿ ಮತ್ತೊಬ್ಬ ಹುಲಿ, ಹದಿನಾರು ಕುರಿಗಳು (ಸಣ್ಣ ಬೀಜಗಳು), ಎರಡು ಹುಲಿಗಳು (ದೊಡ್ಡ ಕಲ್ಲು) ಇರುತ್ತವೆ. ಆಟದ ಪ್ರಾರಂಭದಲ್ಲಿ ಒಳ ಎಂಟು ಮನೆಗೆ ಎಂಟು ಕುರಿ ಕೂಡಿಸಬೇಕು. ನಡುವೆ ಒಂದು ಹುಲಿ, ಹೊರಚೌಕದ ನಡುಮನೆಯಲ್ಲಿ ಮತ್ತೊಂದು ಹುಲಿಯ ಹಾರಿಕೆಯಿಂದ ಆಟ ಪ್ರಾರಂಭ. ಅದನ್ನು ತಡೆಗಟ್ಟಲು ಕುರಿ ಪ್ರಯತ್ನಿಸಬೇಕು. ಆನೆ ಕುರಿ ಆಟದಂತೆ ಹುಲಿಯಾಗಲಿ ಕುರಿಯಾಗಲಿ ಒಂದೇ ಏಟಿಗೆ ಎರಡರ ಮೇಲೆ ದಾಟುವಂತಿಲ್ಲ. ಒಂದೊಂದು ಸಾರಿಗೆ ಒಂದೊಂದರಂತೆ, ಸ್ಥಳವಿದ್ದರೆ ಎಷ್ಟರ ಮೇಲೆ ಬೇಕಾದರೂ ನೆಗೆಯಬಹುದು. ಹುಲಿ ನೆಗೆದರೆ ಕುರಿ ಸಾಯುತ್ತದೆ. ಹೀಗೆ ಆಡುತ್ತ ಯಾರಾದರೊಬ್ಬರು ಎದುರಿಸಲಾರದ ಸ್ಥಿತಿಗೆ ಬಂದಾಗ ಆಟ ಮುಕ್ತಾಯದ ಘಟ್ಟಕ್ಕೆ ಬರುತ್ತದೆ. ಅಂದರೆ ಹುಲಿಗೆ ನಡೆಯಲು ಜಾಗವಿಲ್ಲದಂತಾಗಬೇಕು. ಇಲ್ಲ ಎಲ್ಲ ಕುರಿಗಳನ್ನೂ ತಿಂದು ಹಾಕಬೇಕು. ಮತ್ತೆ ಮರು ಆಟ.

**ಚೌಕಬಾರ :** ನಾಲ್ಕು ಜನರೊ, ಇಬ್ಬರೊ, ಮೂವರೊ ಆಡಬಹುದಾದ ಆಟ. ಮೊದಲಿಗೆ ತಲಾ ಐದು ಮನೆಗಳ ಅಥವಾ ಏಳು ಮನೆಗಳ ಚೌಕ ಬರೆದುಕೊಳ್ಳಬೇಕು. ಐದರ ಮನೆಗೆ ನಾಲ್ಕು ಹುಣಿಸೆಬೇಳೆಗಳೊ ಕವಡೆಗಳೊ ಬೇಕಾದರೆ ಏಳರ ಮನೆಗೆ ಆರು ಬೇಕು. ಹೊರಭಾಗದ ಮಧ್ಯದ ಮನೆಗಳು ಕಟ್ಟೆಮನೆಗಳು. ಇಲ್ಲಿ ಅಪಾಯವಿಲ್ಲ. ನಡು ಮಧ್ಯದ ಮನೆ ಹಣ್ಣಿನ ಮನೆ. ಏಳರ ಮನೆ ಆಟದಲ್ಲಿ ಮೂಲೆ ಮೂಲೆಯ ಶೃಂಗಾಭಿಮುಖ ಮನೆ ಕಟ್ಟೆಮನೆ. ಯಾರಾದರೊಬ್ಬರು ಆಟ ಪ್ರಾರಂಭಿಸುತ್ತಾರೆ. ಅಲ್ಲಿಂದ ಮುಂದಕ್ಕೆ ಅವರ ಬಲಗಡೆ ಇರುವವರು ಆಡುವುದು ರೂಢಿ. ಹೊರಗಡೆ ಮನೆಗಳಲ್ಲಿ ಒಂದೇ ಕಾಯಿಗೆ ಅವಕಾಶ. ಕಟ್ಟೆಮನೆಗಳಿಗೆ ಈ ನಿಯಮವಿಲ್ಲ. ಬೇಳೆ ಬಿಡುವಾಗ ನಾಲ್ಕೂ ಅಂಗಾತ ಬಿದ್ದರೆ ಚೌಕವೆನ್ನುತ್ತಾರೆ. ಬೋರಲಾಗಿ ಬಿದ್ದರೆ ಬಾರ ಎನ್ನುತ್ತಾರೆ. ಇದೇ ಪ್ರಾಯಶಃ ಆಟದ ಹೆಸರು. ಪ್ರತಿಯೊಬ್ಬರೂ ನಡೆಸುತ್ತ ಒಂದು ಸುತ್ತು ಬಂದು ತಮ್ಮ ತಮ್ಮ ಮನೆಯ ಹಿಂದಿನ ಮನೆಯ ಮೂಲಕ ಒಳನುಗ್ಗಿ ಈಗ ಪ್ರದಕ್ಷಿಣೆಯಾಗಿ ಅನುಕೂಲವಾದ ರೀತಿಯಲ್ಲಿ ಬೇಳೆ ಬಿದ್ದರೆ ಹಣ್ಣು ಮಾಡಬಹುದು. ನಾಲ್ಕು ಕಾಯಿಗಳನ್ನೂ ಮೊದಲು ಹಣ್ಣು ಮಾಡುವವರು ಗೆದ್ದಂತೆ. ಕೊನೆಯಲ್ಲಿ ಉಳಿದವರು ಸೋತಂತೆ. ಈ ಆಟದಲ್ಲಿ ಕೆಲವು ನಿಬಂಧನೆಗಳನ್ನು ಮಾಡಿಕೊಳ್ಳುತ್ತಾರೆ. ಕಾಯಿ ಹೊಡೆದರೆ ಕೊಲೆ ಎಂದು ಹೆಸರು. ಇದನ್ನು ಕಾಯಿ ಕಡಿಯುವುದು ಎಂದೂ ಕರೆಯುತ್ತಾರೆ. ಕಾಯಿ ಕಡಿಯದೆ ಯಾರೂ ಒಳನುಗ್ಗಲು ಅವಕಾಶವಿಲ್ಲ. ಒಂದೇ ಕಾಯನ್ನು ಹೊರಗಡೆಯೇ ಸುತ್ತಿಸುತ್ತಿರಲು ಅವಕಾಶವಿಲ್ಲ. ಎಲ್ಲ ಕಾಯಿಗಳನ್ನು ನಡೆಸಿ ಗತ್ಯಂತರವಿಲ್ಲದಿದ್ದರೆ ಸುತ್ತಿಸಬೇಕು. ಒಂದೇ ಸಮನೆ ಮೂರು ಚೌಕವಾಗಲಿ, ಮೂರು ಬಾರವಾಗಲಿ ಬೀಳಬಾರದು. ಚೌಕ ಅಥವಾ ಬಾರ ಬಿದ್ದಾಗ ಅದರ ಕೈ ಉಂಟು. ಅಂದರೆ ಬೇಳೆ ಬಿಡಲು ಮತ್ತೊಂದು ಅವಕಾಶ. ಬೇಕಿಲ್ಲದಾಗ 'ಇಂಥ' ಕೈ ಬೇಡ ಎನ್ನುವಂತಿಲ್ಲ. ಒಳಗಡೆ ಎರಡು ಕಾಯಿಗಳನ್ನು ಜೊತೆ ಕಟ್ಟಬಹುದು. ಅದಕ್ಕೆ ತಕ್ಕಂತೆ ಬೇಳೆ ಬೀಳಬೇಕು. ನಡೆಸಿದ ಮೇಲೆ ಅವು ಗಟ್ಟಿ ಜೊತೆ. ಒಂಟಿ ಅದನ್ನು ದಾಟಬಹುದೇ, ಜೊತೆ ಒಂಟಿಯನ್ನು ಹೊಡೆಯಬಹುದೆ, ಜೊತೆಯನ್ನು ಕೀಳಬಹುದೇ ಇತ್ಯಾದಿ ವಿಚಾರಗಳಲ್ಲಿ ಮೊದಲೇ ಒಪ್ಪಂದವಾಗಿರಬೇಕು. ಗೆದ್ದವರೆಲ್ಲ ಆಟದ ಬೇಳೆಗಳನ್ನು ಸರಿ-ಬೆಸ ಆಟದಂತೆ ಕೈಯಲ್ಲಿ ಬಚ್ಚಿಟ್ಟಕೊಂಡು ಎಷ್ಟು ಎಂದು ಕೇಳಿ, ತಪ್ಪು ಹೇಳಿದರೆ ಅಷ್ಟು ಗುದ್ದು ಎಂದು ಎಣಿಸಿಕೊಂಡು, ಸರಿಯಾಗಿ ಹೇಳಿದರೆ ಬೇಳೆಗಳನ್ನು ಕೊಟ್ಟು ಕೊನೆಯಲ್ಲಿ ಆದಷ್ಟು ಗುದ್ದುಗಳನ್ನು ಸೋತವನ ಕೈಮೇಲೆ ಕೊಡಬಹುದು. ಇದಿಲ್ಲದೆಯೆ ಮರು ಆಟ ಪ್ರಾರಂಭಿಸಬಹುದು. ಕೆಲವರು ಎಲ್ಲ ಕಾಯಿಗಳನ್ನೂ ಹಣ್ಣಿನ ಮನೆಯಲ್ಲಿಟ್ಟು ಕಾಯಿಸು ಎಂದು ಹೇಳಿ ಪಕ್ಕದಿಂದ ಸೋತವನ ಕೈಗೆ ಏಟು ಕೊಡುತ್ತಾರೆ. ಪ್ರತಿಸಾರಿಯೂ ಒಂದೊಂದು ಕಾಯಿ ಆತನಿಗೆ ದಕ್ಕುತ್ತದೆ. ಏಳರ ಮನೆ ಆಟವೂ ಇದೇ ರೀತಿ. ಎರಡೆರಡು ಮನೆ ಜಾಸ್ತಿ. ಎರಡು ಬೇಳೆ ಜಾಸ್ತಿ. ಎಲ್ಲ ಬೇಳೆಗಳೂ ಅಂಗಾತ ಬಿದ್ದರೆ ಆರು. ಮಗುಚಿಕೊಂಡರೆ ಹನ್ನೆರಡು ಇಷ್ಟೇ ವ್ಯತ್ಯಾಸ.

**ಇಪ್ಪತ್ತರಾಟ :** ಇದು ಇಬ್ಬರು ಅಥವಾ ಹೆಚ್ಚು ಜನ ಆಡುವ ಆಟ. ಇದಕ್ಕೆ ನಾಲ್ಕು ಹುಣಿಸೆಬೇಳೆಗಳೊ ಕವಡೆಗಳೊ ಸಾಕು. ಪ್ರತಿಯೊಬ್ಬರೂ ಸರದಿಯಂತೆ ಆಡಬೇಕು. ಯಾರದು ಸರಿಯಾಗಿ ಇಪ್ಪತ್ತಾಗುತ್ತದೊ ಅವರು ಗೆದ್ದಂತೆ. ಕೊನೆಯಲ್ಲಿ ಉಳಿಯುವವರು ಸೋತಂತೆ. ಗೆದ್ದವರು ಸರಿ-ಬೆಸ ಆಟದಂತೆ ಬೇಳೆಗಳನ್ನು ಬಚ್ಚಿಟ್ಟುಕೊಂಡು ತೋರಿಸಿ ಆದಷ್ಟು ಗುದ್ದುಗಳನ್ನು ಎಣಿಸಿಕೊಂಡು ಸೋತವನ ಕೈಯನ್ನು ನೆಲದಲ್ಲಿರಿಸಿ ಗುದ್ದಬಹುದು.

**ಹೊರಾಂಗಣ ಆಟಗಳು :** ಇಂದು ಗ್ರಾಮೀಣ ಭಾಗಗಳಲ್ಲೂ ಆಧುನಿಕ ವಿದ್ಯಾಭ್ಯಾಸ ಪದ್ಧತಿಯ ಶಾಲೆಗಳು ವ್ಯಾಪಕವಾಗಿ ಇರುವುದರಿಂದ ಆಯಾ ಶಾಲೆಗಳಲ್ಲಿ ಉತ್ತೇಜಿಸುವ ಫುಟ್‌ಬಾಲ್, ಕ್ರಿಕೆಟ್ ಇತ್ಯಾದಿ ಆಟಗಳು ಜನಪ್ರಿಯವಾಗುತ್ತಿವೆಯಾದರೂ ಹಲವು ಬಗೆಯ ಪ್ರಾಚೀನ ಜನಪದ ಆಟಗಳು ಎಷ್ಟೋ ಉಳಿದುಬಂದಿವೆ. ಸಾಹಸದ ಆಟಗಳಾದ ಕತ್ತಿವರಸೆ, ದೊಣ್ಣೆವರಸೆ, ಪಂಜು ತಿರುಗಿಸುವುದು ಮೊದಲಾದವು ಕುಟುಕು ಜೀವ ಉಳಿಸಿಕೊಂಡಿವೆ. ಹಿಂದಿನಿಂದಲೂ ರೂಢಿಯಲ್ಲಿದ್ದ ಕೊಕ್ಕೋ, ಹುತುತು (ಕಬಡಿ) ಮೊದಲಾದವು ಶಿಷ್ಟ ಕ್ರೀಡೆಗಳಾಗಿ ಬೆಳೆದಿವೆ. ಇಲ್ಲಿ ಗ್ರಾಮೀಣ ಪರಿಸರಗಳಲ್ಲಿ ಕಾಣಿಸುವ ಕೆಲವು ಆಟಗಳನ್ನು ಮಾತ್ರ ವಿವರಿಸಲಾಗಿದೆ.

**ಉಪ್ಪೂಪೆಕಡ್ಡಿ :** ಇದು ಪುಟ್ಟ ಮಕ್ಕಳ ಆಟ. ಇಬ್ಬರೇ ಆಟಗಾರರು. ಇದಕ್ಕೆ ಸುಮಾರು ಹತ್ತುಹನ್ನೆರಡು ಅಂಗುಲದ ಪುಟ್ಟದೊಂದು ಮಣ್ಣಿನ ಅಥವಾ ಮರಳಿನ ಏರಿ ಮತ್ತು ಎರಡಂಗುಲ ಉದ್ದದ ದಬ್ಬಳದಂಥ ಕಡ್ಡಿ ಇದ್ದರೆ ಸಾಕು. ಒಂದು ಮಗು ಕಡ್ಡಿಯನ್ನು ಆಚೆ ಈಚೆ ತುದಿಯಲ್ಲಿ ಹೆಬ್ಬೆರಳು ಮತ್ತು ತೋರುಬೆರಳುಗಳ ಮಧ್ಯೆ ಇಟ್ಟುಕೊಂಡು ಮತ್ತೊಂದು ಮಗು ನೋಡು ನೋಡುತ್ತಿದ್ದಂತೆಯೇ ಉಪಾಯವಾಗಿ ಏರಿಯನ್ನು ಎರಡು ಕೈಯಲ್ಲೂ ಮುಚ್ಚಿಕೊಂಡು ಕೈಗಳನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತ ಕಡ್ಡಿಯನ್ನು ಬಚ್ಚಿಟ್ಟು ಕಡ್ಡಿ ಎಲ್ಲಿದೆ ಎಂದಾಗ ಮತ್ತೊಂದು ಮಗು ತನ್ನೆರಡು ಕೈಗಳ ಬೆರಳುಗಳನ್ನು ಒಂದಕ್ಕೊಂದು ಹೆಣೆದು ಮುಂಗೈಗಳು ಮೇಲಾಗುವಂತೆ ಕಡ್ಡಿ ಇರಬಹುದಾದ ಜಾಗವನ್ನು ಮುಚ್ಚಿಕೊಳ್ಳುತ್ತದೆ. ಅದನ್ನು ಬಚ್ಚಿಟ್ಟ ಮಗುವಿಗೆ ಗೊತ್ತಿರುವುದರಿಂದ ನಿಜವಾಗಿದ್ದರೆ ಒಪ್ಪಿಕೊಳ್ಳುತ್ತದೆ. ಇಲ್ಲದಿದ್ದರೆ ಆ ಜಾಗ ಬಿಟ್ಟು ಬೇರೆ ಜಾಗದಲ್ಲಿ ತೋರಿಸುತ್ತದೆ. ಇದರ ಮೇಲೆ ಆಟದಲ್ಲಿ ಸೋಲು ಗೆಲುವು, ಹೇಳುವ ಮಗು ಗೆದ್ದರೆ ಅದಕ್ಕೆ ಆಟ, ಸೋತರೆ ಅದರ ಕೈಗೆ ಬೊಗಸೆ ಮಣ್ಣಿತ್ತು ಮಧ್ಯಕ್ಕೆ ಅದಕ್ಕೆ ಅದೇ ಕಡ್ಡಿಯನ್ನು ನೆಟ್ಟು ಅದರ ಕಣ್ಣು ಮುಚ್ಚಿಕೊಂಡು ಹತ್ತಾರು ಗಜ ದೂರ ಹೋಗಿ ಅಲ್ಲೆಲ್ಲೊ ಒಂದು ಕಡೆ ಅದನ್ನು ಹಾಕಿಸಿ, ವಾಪಸ್ಸು ಹಾಗೆಯೇ ಕರೆದು ತಂದು ಮೊದಲಿನ ಸ್ಥಳದಲ್ಲಿ ಮೂರು ಸುತ್ತು ಸುತ್ತಿಸಿ ದಿಗ್ಭ್ರಮೆ ಬರುವಂತೆ ಮಾಡಿ ಕಣ್ಣು ಬಿಡಿಸುವುದು. ಆ ಮಗು ಈಗ ಹೋಗಿ ಕಡ್ಡಿ ಹುಡುಕಿ ತರಬೇಕು. ಹುಡುಕಿದರೂ ಸಿಗದಿದ್ದಾಗ ಗೆದ್ದ ಮಗು ನಕ್ಕು, ಗೇಲಿ ಮಾಡಿ ಚಪ್ಪಾಳೆ ತಟ್ಟಿ ಕಡ್ಡಿ ತೋರಿಸಿಕೊಡುತ್ತದೆ.

**ಕಣ್ಣುಮುಚ್ಚಾಲೆ :** ಇದನ್ನು ಅವಿತೇ ಗುಮ್ಮನಾಟವೆಂದೂ ಕರೆಯುತ್ತಾರೆ. ಇದೊಂದು ಸಾಮೂಹಿಕ ಆಟ. ಒಬ್ಬರು ಹಿಡಿಯುವರು; ಉಳಿದವರು ಅವಿತುಕೊಳ್ಳುವರು; ಹಿಡಿಯುವವರ ಕಣ್ಣು ಮುಚ್ಚಲು ಒಬ್ಬ ಅಜ್ಜಿ. ಆದ್ದರಿಂದ ಇದಕ್ಕೆ ಕಣ್ಣುಮುಚ್ಚಾಲೆ ಎಂಬ ಹೆಸರು. ಹಿಡಿಯುವವರ ಕಣ್ಣನ್ನು ಮುಚ್ಚುವ ಅಜ್ಜಿಯು ಕಣ್ಣಾಮುಚ್ಚೆ, ಕಾಡೆಗೂಡೆ, ಉದ್ದಿನ ಮೂಟೆ ಉರುಳೇ ಹೋಯ್ತು, ಹಾಲೇ ಕಂಬ ಹರಿದೇ ಹೋಯ್ತು, ನಮ್ಮ ಹಕ್ಕಿ ಬಿಟ್ಟೆನೋ ಬಿಟ್ಟೆ, ನಿಮ್ಮ ಹಕ್ಕಿ ಮುಚ್ಚಿಕೊಳ್ಳಿರೋ ಮುಚ್ಚಿಕೊಳ್ಳಿ ಎಂದು ಗಟ್ಟಿಯಾಗಿ ಹಾಡಿಕೊಂಡು ಹೇಳಿ ತನ್ನ ಹಕ್ಕಿ ಬಿಡುತ್ತಾಳೆ. ಈ ಹಕ್ಕಿ ಬಚ್ಚಿಟ್ಟುಕೊಂಡಿರುವ ಹಕ್ಕಿಗಳನ್ನು ಹಿಡಿಯಬೇಕು. ಯಾವುದಾದರೂ ಬುದ್ಧಿವಂತ ಕಳ್ಳಹಕ್ಕಿ ಇದಕ್ಕೆ ಕಾಣದಂತೆ ಅಜ್ಜಿಯನ್ನು ಬಂದು ಮುಟ್ಟಿಸಿಕೊಂಡುಬಿಟ್ಟರೆ ಮೊದಲು ಹಿಡಿಯುತ್ತಿದ್ದ ಹಕ್ಕಿಯೇ ಕಣ್ಣು ಮುಚ್ಚಿಸಿಕೊಂಡು ಮತ್ತೆ ಹಿಡಿಯಬೇಕು. ಇಲ್ಲವೆ ಯಾವುದಾದರೂ ಒಂದು ಬಚ್ಚಿಟ್ಟುಕೊಂಡಿದ್ದ ಹಕ್ಕಿಯನ್ನು ಕಂಡುಬಿಟ್ಟರೆ ಹೆಸರು ಹಿಡಿದು ಕೂಗಿ ಕಂಡೆ, ಕಂಡೆ ಎಂದು ಹಿಡಿದರಾಯಿತು. ಆ ಹಕ್ಕಿ ಈಗ ಕಣ್ಣು ಮುಚ್ಚಿಸಿಕೊಳ್ಳಬೇಕು. ಈಚೆಗೆ, ಕಣ್ಣು ಮುಚ್ಚುವ ಅಜ್ಜಿಗೆ ಬದಲಾಗಿ ಹಿಡಿಯಬೇಕಾದವರು ಒಂದು ಕಡೆ ನಿಂತು ಗೋಡೆಗೋ ಯಾವುದಾದರೂ ವಸ್ತುವಿಗೋ ಎದುರಾಗಿ ನಿಂತು ಮುಚ್ಚಿಟ್ಟುಕೊಂಡಿದ್ದು ಬಚ್ಚಿಟ್ಟುಕೊಂಡಿರುವವರನ್ನು ಕಂಡಾಗ ಕೂಗಿಕೊಳ್ಳುವ ರೂಢಿ ಇದೆ. ಇದಕ್ಕೆ ಗುಲ್ಲಾರಿಯೋ ಎಂದು ಕರೆಯುವರು.

**ಕುಂಟಾಟ :** ಇದು ಸಾಮಾನ್ಯವಾಗಿ ಮಕ್ಕಳ ಆಟ. ಆಡುವವರೆಲ್ಲರೂ ಸೇರಿ ಒಂದು ಚೌಕವನ್ನು (ಆಟದ ಅಂಗಣ) ಬರೆದುಕೊಳ್ಳುತ್ತಾರೆ. ಯಾರಾದರೊಬ್ಬರು ಹಿಡಿಯಬೇಕು. ಎಲ್ಲರೂ ಸೇರಿ ಒಟ್ಟಿಗೆ ಚಪ್ಪಾಳೆ ಹಾಕಿ ಒಂದರ ಮೇಲೊಂದು ಕೈಯಿಟ್ಟು ತೋರಿಸಬೇಕು. ಕೈಯಿಟ್ಟಿರುವ ರೀತಿಯಲ್ಲಿ ಯಾರದು ಇತರರಿಗಿಂತ ಭಿನ್ನವಾಗಿರುತ್ತದೊ ಅವರು ಹಿಡಿಯಬೇಕು. ಒಬ್ಬರು ಈ ರೀತಿ ಸಿಕ್ಕುವ ತನಕ ಚಪ್ಪಾಳೆ ತಟ್ಟುತ್ತಿರುತ್ತಾರೆ. ಸಿಕ್ಕಿದವರು ಕುಂಟುತ್ತ ಕುಂಟುತ್ತ ಚೌಕಟ್ಟಿನೊಳಗೆ ಬಾಕಿಯವರನ್ನು ಹಿಡಿಯಬೇಕು. ಕಾಲು ಬಿಡಕೂಡದು. ಸುಸ್ತಾದಾಗ ಸಮಯಾವಕಾಶ ಕೇಳಬಹುದು. ಮೊದಲು ಸಿಕ್ಕಿಬಿದ್ದವರು ಮುಂದಕ್ಕೆ ಕುಂಟಿಕೊಂಡು ಹಿಡಿಯಬೇಕು. ಎಲ್ಲೆ ಬಿಟ್ಟು ಹೊರ ಹೋದವರೂ ಸಿಕ್ಕಿಬಿದ್ದಂತೆ ಲೆಕ್ಕ.

**ಕುಂಟುವ ಬಿಲ್ಲೆ :** (ಕುಂಟೆಪಿಲ್ಲಿ) ಸಾಮಾನ್ಯವಾಗಿ ಹೆಣ್ಣುಮಕ್ಕಳ ಆಟ. ಚೌಕನಾಗಿ ನಾಲ್ಕು, ಆರು, ಎಂಟು ಹೀಗೆ ತಮಗೆ ಅನುಕೂಲವಾದಂತೆ ಮನೆಗಳನ್ನು ಎರಡು ಸಾಲಾಗಿ ಬರೆದುಕೊಳ್ಳಬೇಕು. ಹೆಂಚಿನ ಅಥವಾ ಮಡಕೆಯ ಚೂರು ಒಂದನ್ನು ವೃತ್ತಾಕಾರವಾಗಿ ಸವೆದು ಬಚ್ಚವನ್ನಾಗಿ ಮಾಡಿಕೊಂಡು ಅದನ್ನು ಅನುಕ್ರಮವಾಗಿ ಮೊದಲನೆಯ ಮನೆ, ಎರಡನೆಯ ಮನೆ - ಹೀಗೆ ಇಟ್ಟುಕೊಂಡು ಕುಂಟಬೇಕು. ಈ ಬಚ್ಚವನ್ನು ಹಣೆಯ ಮೇಲೆ ಇಟ್ಟುಕೊಂಡು ಸರಿಯೋ ಎಂದು ಕೇಳಿಕೊಂಡು ಕೊನೆಗೆ ಹೋಗಿ ಮನೆಗಳನ್ನು ನೋಡದೆ ಬಚ್ಚವನ್ನು ಹಿಂದಕ್ಕೆ ಯಾವುದಾದರೊಂದು ಮನೆಗೆ ಬೀಳುವಂತೆ ಎಸೆಯಬೇಕು. ಆಗ ಅದು ಯಾವುದಾದರೊಂದು ಮನೆಗೆ ಸರಿಯಾಗಿ ಬಿದ್ದರೆ ಅದು ಅವರ ಮನೆ. ಮುಂದೆ ಮತ್ತೊಬ್ಬರ ಆಟ. ಮೊದಲು ಗೆದ್ದಿರುವ ಮನೆಯನ್ನು ಅವರು ಕುಂಟುತ್ತಲೇ ದಾಟಬೇಕು. ಮೊದಲು ಆಡಿದಂತೆ ತಾವು ಆಡಿದರೆ ಅವರಿಗೂ ಒಂದು ಮನೆ ದಕ್ಕುತ್ತದೆ. ಹೀಗೆ ಮನೆಗಳನ್ನು ಗೆಲ್ಲುತ್ತಹೋದಾಗ ಹೆಚ್ಚು ಮನೆ ಗೆದ್ದವರು ಅಥವಾ ಇನ್ನೊಬ್ಬರು ಹೋಗದಂತೆ ಮಾಡಿದವರು ಗೆದ್ದಂತೆ.

**ಕಲ್ಲೊ ಮಣ್ಣೊ :** ಹೆಣ್ಣುಮಕ್ಕಳು ಗಂಡುಮಕ್ಕಳು ಯಾರಾದರೂ ಭಾಗವಹಿಸಬಹುದಾದ ಈ ಆಟದಲ್ಲಿ ಒಬ್ಬ ಹಿಡಿಯುವವನು, ಹಿಡಿಸಿಕೊಳ್ಳುವವರು ಹೀಗೆ ಎರಡು ಪಕ್ಷಗಳಿರುತ್ತವೆ. ಎಡಗೈ ಹಸ್ತದ ಮೇಲೆ ಬಲಗೈ ಹಸ್ತವನ್ನು ತಾಳಹಾಕುವುದರ ಮೂಲಕ ಹಿಡಿಯುವವನ ನಿರ್ಧಾರವಾಗುತ್ತದೆ. ಸೋತ ವ್ಯಕ್ತಿ ಹಿಡಿಯಲು ತೊಡಗಬೇಕಾಗುತ್ತದೆ. ಆಗ ಹಿಡಿಯುವವನು ಉಳಿದವರನ್ನು ಕಲ್ಲೊ ಮಣ್ಣೊ ಎಂದು ಕೇಳುವನು. ಆಗ ಅವರು ಕಲ್ಲು ಅಂದರೆ ಅವರು ಕಲ್ಲಿನ ಮೇಲೆ ನಿಂತಾಗ, ಮಣ್ಣು ಅಂದರೆ ಅವರು ಮಣ್ಣಿನ ಮೇಲೆ ನಿಂತಾಗ ಹಿಡಿಯಬೇಕು. ಕಲ್ಲು ಎಂದು ಹೇಳಿ ಮಣ್ಣಿನ ಮೇಲೂ ಮಣ್ಣು ಎಂದು ಹೇಳಿ ಕಲ್ಲಿನ ಮೇಲೂ ನಿಂತುಕೊಳ್ಳುವರು. ಆದರೆ ಅವರು ಹಾಗೆಯೇ ನಿಂತುಕೊಂಡುಬಿಟ್ಟರೆ ಇವನು ಹಿಡಿಯಲೂ ಆಗುವುದಿಲ್ಲ. ಆಟವೂ ಸಾಗುವುದಿಲ್ಲ. ಆದ್ದರಿಂದ ಅವರು ಆಟ ಕೊಡಬೇಕಾಗುತ್ತದೆ. ಅಂದರೆ ಅವರು ಕಲ್ಲಿಂದ ಮಣ್ಣಿಗೂ ಮಣ್ಣಿಂದ ಕಲ್ಲಿಗೂ ಓಡಾಡುತ್ತಿರುತ್ತಾರೆ. ಆಟ ಕ್ರಿಯಾತ್ಮಕವಾಗಿ ಸಾಗುತ್ತದೆ. ಹಿಡಿಸಿಕೊಳ್ಳುವವರಲ್ಲಿ ಮತ್ತು ಹಿಡಿಯುವವನಲ್ಲಿ ಎಚ್ಚರಿಕೆ ಸದಾ ಇರುತ್ತದೆ. ಅವರ ಹೇಳಿಕೆಗೆ ವಿರುದ್ಧವಾಗಿ ನಿಂತು ಆಗ ಏನಾದರೂ ತರ್ಕ್ಷಣ ಈತ ಅವರನ್ನು ಮುಟ್ಟಿಬಿಟ್ಟರೆ ಅವರು ಸೋತುಹೋದಂತೆ. ಆಗ ಹಿಡಿಸಿಕೊಂಡವನು ಹಿಡಿಯಬೇಕಾಗುತ್ತದೆ. ಆಟವಾಡುವಾಗ ಆಟಗಾರರು ನಿನ್ನ ಕಲ್ಲಿಗೆ ನಾನು ಬಂದೆ. ನಿನ್ನ ಮಣ್ಣಿಗೆ ನಾನು ಬಂದೆ ಎಂದು ಹೇಳುತ್ತ ಆಟವಾಡುತ್ತಾರೆ. ಹೀಗೆ ಆಟ ನಿರಂತರವಾಗಿ ರಂಜನೀಯವಾಗಿ ಸಾಗುತ್ತದೆ.

**ಕಾಚಿಕೋಲ್ ಬಂದಿಕೋಲ್ :** ಇದು ಈಗಿನ ಸಂಗೀತ ಕುರ್ಚಿ (ಮ್ಯೂಸಿಕಲ್ ಚೇರ್) ಇದ್ದಂತೆ. ಆಡುವವರ ಸಂಖ್ಯೆಗಿಂತ ಒಂದು ಕಡಿಮೆ ಇರುವಷ್ಟು ಕಂಬಗಳನ್ನು ವೃತ್ತಾಕಾರವಾಗಿ ನೆಟ್ಟು ಒಂದೊಂದರ ಬಳಿ ಒಬ್ಬನಂತೆ ನಿಲ್ಲುತ್ತಾರೆ. ಕಂಬ ಇಲ್ಲದವನು ಜಾಗ ಹುಡುಕುತ್ತ ಸುತ್ತುಹಾಕುತ್ತಿರುತ್ತಾನೆ. ಅವನ ಕಣ್ಣುತಪ್ಪಿಸಿ ಉಳಿದವರು ತಮ್ಮ ತಮ್ಮ ಸ್ಥಳ ಬದಲಾಯಿಸುತ್ತಿರುತ್ತಾರೆ. ಖಾಲಿ ಕಂಬ ಕಂಡೊಡನೆ ಓಡುವವ ಅಲ್ಲಿಗೆ ಹೋಗಿ ನಿಲ್ಲುತ್ತಾನೆ. ಜಾಗ ಸಿಗದವ ಸೋತು ಸುತ್ತು ತಿರುಗುತ್ತಾನೆ.

**ರತ್ತೋ ರತ್ತೋ :** ಇದು ಹೆಣ್ಣುಮಕ್ಕಳ ಆಟ. ಆಡುವವರೆಲ್ಲ ವೃತ್ತಾಕಾರವಾಗಿ ಒಬ್ಬರಿಗೊಬ್ಬರು ಕೈಕಟ್ಟಿಕೊಂಡು ರತ್ತೋ ರತ್ತೋ ರಾಯನ ಮಗಳೇ ಬಿತ್ತೋ ಬಿತ್ತೋ ಭೀಮನ ಮಗಳೇ ಹದಿನಾರೆಮ್ಮೆ ಕಾಯಲಾರೆ, ಕರೆಯಲಾರೆ, ಕಾಸಲಾರೆ, ಕುಕ್ಕುರು ಬಸವಿ, ಕೂರು ಬಸವಿ ಎಂದ ಕೂಡಲೇ ಎಲ್ಲರೂ ತರ್ಕ್ಷಣವೇ ಕೂತುಕೊಳ್ಳಬೇಕು. ಕೊನೆಯಲ್ಲಿ ಕುಳಿತವಳು ಸೋತಂತೆ. ಈಗ ಅವಳನ್ನು ಮಧ್ಯದಲ್ಲಿ ನಿಲ್ಲಿಸಿಕೊಂಡು ಉಳಿದವರೆಲ್ಲರೂ ವೃತ್ತಾಕಾರವಾಗಿ ಮೊದಲಿನಂತೆ ಒಬ್ಬರಿಗೊಬ್ಬರು ಕೈಕಟ್ಟಿಕೊಂಡು ಮೊದಲು ಹೇಳಿದಂತೆ ಹೇಳುತ್ತ ಸುತ್ತಲೂ ತಿರುಗಬೇಕು. ಕೊನೆಯಲ್ಲಿ ಕೂರು ಬಸವಿ ಎಂದು ಎಲ್ಲರೂ ಅವಳ ತಲೆಯ ಮೇಲೆ ಕೈಯಿಟ್ಟು ಬಲಾತ್ಕಾರವಾಗಿ ಕುಕ್ಕರಿಸುವಂತೆ ಮಾಡುತ್ತಾರೆ. ಇದೇ ಆಟವನ್ನು ಬೇರೆ ರೀತಿಯಲ್ಲೂ ಆಡುತ್ತಾರೆ.

**ಟೋಪಿಯಾಟ :** ಸಾಮಾನ್ಯವಾಗಿ ಗಂಡುಮಕ್ಕಳ ಆಟ. ಶಾಲೆಗಳಲ್ಲಿ ಆಡಿಸುವುದುಂಟು. ಆಡುವವರೆಲ್ಲರೂ ವೃತ್ತಾಕಾರವಾಗಿ ಸುಖಾಸನ ಹಾಕಿ ಕೊಂಡು ಒಳಮುಖವಾಗಿ ಕುಳಿತುಕೊಳ್ಳಬೇಕು. ಯಾರಾದರೊಬ್ಬ ತನ್ನ ಟೋಪಿಯನ್ನೊ ಅಥವಾ ಹುರಿಯಾಗಿ ಮಾಡಿ ಮಡಿಸಿ ಹಗ್ಗದಂತೆ ಮಾಡಿದ ಟವಲನ್ನೊ ಕೈಯಲ್ಲಿ ಹಿಡಿದುಕೊಂಡು ಕುಳಿತಿರುವವರ ಹಿಂದುಗಡೆ ಸುತ್ತಲೂ ತಿರುಗುತ್ತ ಬುದ್ಧಿವಂತಿಕೆಯಿಂದ ಒಬ್ಬನ ಹಿಂದುಗಡೆ ಕೈಗೆ ನಿಲುಕುವಂತೆ ಅದನ್ನು ಇಡಬೇಕು. ಕೂತವ ಮಂದಬುದ್ಧಿಯವನೊ ಅಲಸಿಗನೊ ಆದರೆ ಟೋಪಿ ಅವನ ಬೆನ್ನ ಹಿಂದೆ ಇದೆ ಎನ್ನುವುದು ಅವನಿಗೆ ತಿಳಿದೇ ಇರುವುದಿಲ್ಲ. ಇಟ್ಟವನು ಒಂದು ಸುತ್ತು ಓಡಿಬಂದು ಕೂತವನ ಬೆನ್ನಮೇಲೆ ಟೋಪಿಯಿಂದ ಏಟುಕೊಡಲು ಪ್ರಾರಂಭಿಸುತ್ತಾನೆ. ಏಟು ತಿನ್ನುವವ ಒಂದು ಸುತ್ತು ಓಡಿಬಂದು ತನ್ನ ಜಾಗದಲ್ಲಿ ಕೂಡಬೇಕು. ಆಟ ಮುಂದುವರಿಯುತ್ತದೆ. ಚುರುಕಾದವ ತನ್ನ ಬೆನ್ನ ಹಿಂದಿರುವ ಟೋಪಿಯನ್ನು ಗುರುತಿಸಿ ಕೈಗೆ ತೆಗೆದುಕೊಂಡು ಇಟ್ಟವನನ್ನು ಅಟ್ಟಿ ಹೋಗುತ್ತಾನೆ. ಇಟ್ಟವ ಹೊಡೆತ ತಿಂದು ಅಥವಾ ಅದರಿಂದ ತಪ್ಪಿಸಿ ಕೊಂಡು ಬಂದು ಸುತ್ತು ಓಡಿ ಎದ್ದವನ ಜಾಗದಲ್ಲಿ ಕೂರಬೇಕು.

**ಮರಕೋತಿ ಆಟ :** ಇದು ಗಂಡುಮಕ್ಕಳಾಟ. ಆಡುವವರೆಲ್ಲ ಒಂದು ಮರವನ್ನು ಏರಿ ಕೋತಿಗಳಂತೆ ಕುಳಿತುಕೊಳ್ಳುತ್ತಾರೆ. ಹಿಡಿಯುವವನೊಬ್ಬ ಆಮೇಲೆ ಮರವನ್ನೇರಿ ಹಿಡಿಯಬೇಕು. ಒಬ್ಬ ಒಂದು ಮೊಳದುದ್ದದ ಕೋಲನ್ನು ತೆಗೆದುಕೊಂಡು ಮರದ ಕೆಳಗೆ ಒಂದು ವೃತ್ತವನ್ನು ಬರೆದು ಕೋಲನ್ನು ತೊಡೆಸಂದಿಯಿಂದ ದೂರ ಬೀಸಿ ಒಗೆಯುತ್ತಾನೆ. ಅನಂತರ ಆತ ಮರ ಹತ್ತುತ್ತಾನೆ. ಹಿಡಿಯುವವನು ಆ ಕೋಲನ್ನು ತಂದು ವೃತ್ತದೊಳಗಿಟ್ಟು ಮರ ಹತ್ತಿ ಯಾರನ್ನಾದರೂ ಹಿಡಿಯಬೇಕು. ಆಗ ಹಿಡಿಸಿಕೊಂಡವನು ಸೋತಂತೆ. ಹಿಡಿಯುವವನು ಯಾರನ್ನಾದರೂ ಮುಟ್ಟುವ ಮುಂಚೆಯೇ ಮರದಿಂದ ಯಾರಾದರೂ ದುಮುಕಿ ಕೋಲನ್ನು ಮುಟ್ಟಿದರೆ ಹಿಡಿಯುವವನು ಸೋತಂತೆ. ಕೋಲು ಮುಟ್ಟಿದವನು ಕೋಲನ್ನು ಮೊದಲಿನಂತೆ ದೂರ ಎಸೆಯುತ್ತಾನೆ. ಹಿಡಿಯುವವನು ಮತ್ತೆ ಅದನ್ನು ವೃತ್ತದಲ್ಲಿ ತಂದಿಟ್ಟು ಯಾರನ್ನಾದರೂ ಹಿಡಿಯಬೇಕು. ಸಿಕ್ಕಿದವನು ಕಳ್ಳನಾಗುತ್ತಾನೆ. ಹೀಗೆ ಆಟ ಮುಂದುವರಿಯುತ್ತದೆ.

**ಗೋಲಿಯಾಟ :** ಗಂಡುಮಕ್ಕಳ ಆಟ. ನೆಲದಲ್ಲಿ ಒಂದು ಗುಳಿ ತೋಡಿ (ಬದ್ದು ಮಾಡಿಕೊಂಡು) ಆಡುವುದು ಒಂದು ಬಗೆ. ಎಲ್ಲರೂ ನಿಗದಿಯಾದ ದೂರದಿಂದ ಬದ್ದಿನ ಕಡೆಗೆ ಗೋಲಿ ಬಿಡಬೇಕು. ಒಂದೇ ಎಸೆತಕ್ಕೆ ಗೋಲಿಯನ್ನು ಬದ್ದಿಗೆ ತುಂಬಿದವರು ಗೆದ್ದಂತೆ. ಹೀಗೆ ಗೋಲಿ ಎಸೆದಾಗ ಬದ್ದಿಗೆ ಅತಿ ಹತ್ತಿರವಿರುವ ಗೋಲಿ ಕುಳ್ಳಿ, ಅತಿ ದೂರವಿರುವ ಗೋಲಿ ಗಟ್ಟಿ, ಒಪ್ಪಂದದಂತೆ ಗಟ್ಟಿ ಗೋಲಿಯವನೊ ಕುಳ್ಳಿ ಗೋಲಿಯವನೊ ಮೊದಲು ಆಡಬೇಕು. ಆತ ಬದ್ದು ತುಂಬಿ ಯಾವುದಾದರೊಂದು ಗೋಲಿಗೆ ಹೊಡೆಯಬೇಕು. ಮತ್ತೆ ಬದ್ದು ತುಂಬಬೇಕು. ಮತ್ತೆ ಹೊಡೆಯಬೇಕು. ಹೀಗೆ ಆಡುವಾಗ ಎಲ್ಲಿ ತಪ್ಪಿದರೂ ಅವನ ಆಟ ಅಲ್ಲಿಗೆ ನಿಲ್ಲುತ್ತದೆ. ಮತ್ತೆ ಮುಂದಿನ ಕುಳ್ಳಿ ಅಥವಾ ಗಟ್ಟಿ ಗೋಲಿಯವನ ಆಟ. ಹೀಗೆ ಮೊದಲು ಹತ್ತು

ಮಾಡಿದವನು ಗೆದ್ದಂತೆ. ಒಬ್ಬ ಹತ್ತು ಮಾಡಿಬಿಟ್ಟರೆ, ಬಾಕಿಯವರ ಲೆಕ್ಕವೆಲ್ಲ ವಜಾ ಆದಂತೆ. ಅವರು ಮತ್ತೆ ಮೊದಲಿನಿಂದ ಆಡಬೇಕು. ಕೊನೆಯಲ್ಲುಳಿಯುವವನೇ ಸೋತವ. ಹೀಗೆ ಸೋತವ ತನ್ನ ಗೋಲಿಯನ್ನು ನಿಗದಿಯಾದ ದೂರದಿಂದ ಬದ್ದಿನ ಕಡೆಗೆ ಎಸೆದು ತುಂಬಲು ಪ್ರಯತ್ನಿಸಬೇಕು. ತುಂಬಿದರೆ ಮೊದಲು ಗೆದ್ದವನಿಗೆ ಆಟ ಕೊಟ್ಟಂತಾಯಿತು. ಮತ್ತೆ ಎರಡನೆಯವನಿಗೆ, ಆದರೆ ಗೋಲಿ ಬದ್ದಿಗೆ ಬೀಳದಿದ್ದರೆ ಗೆದ್ದವನು ಬದ್ದಿನ ಹತ್ತರದಿಂದ ಸೋತವನ ಗೋಲಿಯನ್ನು ಹೊಡೆದು ದೂರ ಓಡಿಸುತ್ತಾನೆ. ಅದನ್ನು ಸೋತವನು ಒಪ್ಪಂದದಂತೆ ಬೆರಳುಗಳಿಂದಲೋ ಮೊಳಕೈಯಿಂದಲೋ ದೇಕ(ತಳ್ಳ)ಬೇಕು. ಬದ್ದು ತುಂಬಲು ಯತ್ನಿಸಬೇಕು. ತುಂಬಿದರೆ ಗೆದ್ದ; ಇಲ್ಲದಿದ್ದರೆ ಮತ್ತೆ ಹೊಡೆತ ಮತ್ತೆ ದೇಕೋಣ. ಹೀಗೆ ಸೋತವ ಗೆದ್ದವರೆಲ್ಲರಿಗೂ ಗೋಲಿಯನ್ನು ಎಸೆದು (ಬಿಟ್ಟು) ದೇಕಿದೇಕಿ, ಬದ್ದು ತುಂಬಿ, ಆಟ ಕೊಡಬೇಕು.

ಈ ಆಟದಲ್ಲಿ ಅನೇಕ ಪ್ರಕಾರಗಳಿವೆ. ಎಣಿಕೆಗೆ ಬದಲಾಗಿ ಹೊನಗನ್ನೆ, ಹೊನಕೆರಡು, ಬಂಗಲಿ, ಬಾಲ ಇತ್ಯಾದಿಯಾಗಿಯೂ ಎಕ್ಕಲ್‌ಗಾಜ, ಡಬ್ಬೀರಾಜ, ತೀನಂತಿರ್ಪು - ಹೀಗೂ ನಾಲ್ಕು ಏಳು ಅಥವಾ ಹತ್ತರ ತನಕ ಎಣಿಸುತ್ತಾರೆ. ಗೋಲಿಗೆ ಬದಲಾಗಿ ಗುಂಜಿಯನ್ನು, ಗುಂಡನೆಯ ಗೂರ್ಚಕಲ್ಲು ಉಪಯೋಗಿಸುವುದುಂಟು. ಬದ್ದಿಗೆ ಬದಲಾಗಿ ಪುಟ್ಟ ಚೌಕ ಬರೆದು ತಮ್ಮ ತಮ್ಮದಾಗಿ ಒಂದೊಂದು ಗೋಲಿಯನ್ನು ಪಣವಾಗಿಟ್ಟು ದೂರದಿಂದ ಅದನ್ನು ಹೊಡೆದು ಚೌಕದಿಂದ ಆಚೆಗೆ ತಳ್ಳಿ ಗೆದ್ದುಕೊಳ್ಳುವುದು - ಹೀಗೆ ನಿಯಮಗಳನ್ನು ಬದಲಾವಣೆ ಮಾಡಿಕೊಂಡು ಪೆಯಿಂದ ಮುಂತಾಗಿ ಹೆಸರಿಟ್ಟುಕೊಂಡು ಆಡುವುದೂ ಉಂಟು.

**ಗ'ಜ್ಜುಗ'ದಾಟ :** ಈ ಆಟಕ್ಕೆ ಹೆಚ್ಚು ಗಜ್ಜುಗಗಳು ಮತ್ತು ಒಂದೊಂದು ಬಚ್ಚ (ಅಥವಾ ಗುಂಚಿ) ಬೇಕು. ಆಯತಾಕಾರವಾಗಿಯೊ ಅಂಡಾಕಾರವಾಗಿಯೊ ಮನೆಯೊಂದನ್ನು ಬರೆದುಕೊಂಡು ಆಡುವವರೆಲ್ಲರೂ ಒಬ್ಬೊಬ್ಬರಿಗೆ ಒಂದೊಂದು ಬಡ್ಡಿ (ಮೂರು ಗಜ್ಜುಗದ ಮೇಲೆ ಒಂದು) ಗಜ್ಜುಗಗಳನ್ನು ಅದರಲ್ಲಿ ಇಡಬೇಕು. ನಿಗದಿಯಾದ ದೂರದಿಂದ ಗಜ್ಜುಗಗಳತ್ತ ಬಚ್ಚ ಎಸೆಯಬೇಕು. ಹೀಗೆ ಎಸೆದಾಗ ಆ ಏಟಿಗೆ ಗಜ್ಜುಗ ಈಚೆಗೆ ಹಾರಿದರೆ ಬಳಿ ಹೊಡೆದಂತಾಯ್ತು. ಎಲ್ಲೆಯ ಗೀರಿನ ಮೇಲೆ ಬಿದ್ದರೆ ಬಿದ್ದಷ್ಟು ಗಜ್ಜುಗಗಳನ್ನು ವಟ್ಟ ಕೊಡಬೇಕು. ಬಚ್ಚವೇ ಬದ್ದಿನೊಳಗೆ ಹೋಗಿ ಕುಳಿತರೆ ಅದಕ್ಕೂ ವಟ್ಟ ಕೊಡಬೇಕು. ಗಜ್ಜುಗ ಅಲುಗಾಡಿದರೆ ಜಮ್ಮಿ ಮಾಡಿಕೊಂಡಂತೆ. ಅಂಥ'ವನಿಗೂ ಮೊದಲಾಟವುಂಟು. ಆದರೆ ಹಳಿ ಹೊಡೆದವನಿದ್ದರೆ ಆತನಿಗೆ ಮೊದಲು ಅವಕಾಶ. ಇಂಥವರು ಯಾರೂ ಇಲ್ಲದಿದ್ದರೆ ಒಪ್ಪಂದದ ಪ್ರಕಾರ ಗಟ್ಟಿ ಅಥ'ವಾ ಕುಳ್ಳಿ ಬಚ್ಚದವರಿಗೆ ಮೊದಲಾಟ. ಹೀಗೆ ಬಚ್ಚದಿಂದ ಹೊಡೆದು ದೂರ ಹೊರಡಿಸಿದ ಗಜ್ಜುಗಗಳು ಗೆದ್ದವನ ಲಾಭ'. ಕಳೆದುಕೊಂಡವನಿಗೆ ನಷ್ಟ. ಈ ಆಟದ ನಿಬಂಧನೆಗಳು ಬೇರೆ ಬೇರೆ ಕಡೆ ಬೇರೆ ಬೇರೆಯಾಗಿರುತ್ತವೆ.

**ಚೆಂಡಾಟ :** ಇದರಲ್ಲಿ ಅನೇಕ ಆಟಗಳಿವೆ. ಲಗ್ಗೆಚೆಂಡು ಗಂಡುಮಕ್ಕಳ ಆಟ. ಇದಕ್ಕೆ ಚಪ್ಪಟೆಯಾದ ಸುಮಾರು ಎಂಟು ಹತ್ತು ಅಂಗುಲ ಆಯತಾಕಾರದ ಕಲ್ಲು (ಇದೇ ಲಗ್ಗೆ) ಮತ್ತು ಆಡಲು ಒಂದು ಹಳೇ ಅರಿವೆಯನ್ನು ಪಟ್ಟಿ ಪಟ್ಟಿಯಾಗಿ ಹರಿದು ಸುತ್ತ ಬಿಚ್ಚಿಕೊಳ್ಳದಂತೆ ಹೊಲೆದ ಚೆಂಡು ಇಷ್ಟು ಸಾಕು. ಕಲ್ಲು ಸಿಗದಿದ್ದರೆ ಹೆಂಚಿನ ಅಥವಾ ಒಡೆದ ಮಡಕೆಯ ಚೂರುಗಳನ್ನು ಒಂದರ ಮೇಲೊಂದಿಟ್ಟು ಸುಮಾರು ಐದಾರು ಅಂಗುಲ ಎತ್ತರ ಬರುವಂತೆ ಪೇರಿಸಿದರೂ ಲಗ್ಗೆಯಾಗುತ್ತದೆ. ಆಡುವವರೆಲ್ಲ ಸಮನಾಗಿ ಎರಡು ಗುಂಪಾಗುತ್ತಾರೆ. ಈಗಿನ ಕ್ರಿಕೆಟ್ ಆಟದಂತೆ ಲಗ್ಗೆಗೆ ಹೊಡೆಯುವವರು ಒಂದು ಗುಂಪು. ಲಗ್ಗೆ ಕಾಯ್ದುಕೊಂಡಿದ್ದು ಚೆಂಡೇನಾದರೂ ಪುಟವೆದ್ದು ಬಂದರೆ ಆಡುವವರು ಒಂದು ಗುಂಪು. ಪ್ರತಿಯೊಬ್ಬರಿಗೂ ಮೂರು ಅವಕಾಶ. ಆಕಸ್ಮಾತ್ ಚೆಂಡನ್ನು ಆತುಬಿಟ್ಟರೆ ಮೊದಲ ಎಸೆತವಾಗಿದ್ದರೂ ಲಗ್ಗೆ ಬಿದ್ದಿದ್ದರೂ ಆಟ ಹೋಯಿತು. ಮುಂದಿನವರಿಗೆ ಆಟ, ಲಗ್ಗೆ ಬಿದ್ದು ಚೆಂಡು ಆನಲು ಸಿಗದೆ ಹೋದರೆ ಲಗ್ಗೆ ಬೀಳಿಸಿದ ಪಂಗಡ ಚೆಂಡನ್ನು ಅವಿತಿಟ್ಟುಕೊಳ್ಳುತ್ತಾರೆ. ಯಾರಲ್ಲಿದೆ ಎಂಬುದು ಅವರಿಗೆ ಮಾತ್ರ ಗೊತ್ತು. ಆದರೆ ಪ್ರತಿಯೊಬ್ಬನೂ ಚೆಂಡಿರುವವನಂತೆ ನಟಿಸಿ ಲಗ್ಗೆ ಕಾಯುತ್ತಿದ್ದ ಗುಂಪಿನವರನ್ನು ಹರತೋ ಹರತೋ ಎಂದು ಕೂಗುತ್ತ ಹೊಡೆಯಲು ಅಟ್ಟಿಸಿಕೊಂಡು ಹೋಗುತ್ತಾನೆ. ಚೆಂಡು ಹೊಡೆದು ಯಾರಿಗಾದರೂ ತಗುಲಿದರೆ ಮತ್ತೆ ಅವಿತಿಟ್ಟುಕೊಳ್ಳುವುದು. ತಗುಲದಿದ್ದರೂ ಚೆಂಡಿಲ್ಲದವನನ್ನು ಯಾರಾದರೂ ಮುಟ್ಟಿಸಿಕೊಂಡು ಬಿಟ್ಟರೂ ಎಚ್ಚರಿಕೆಯಿಂದ ಮರೆಯಲ್ಲೋಡಿ ಬಂದು ಲಗ್ಗೆಯನ್ನೂ ಮೊದಲಿದ್ದಂತೆ ಒಡ್ಡಿದರೂ ಗೆದ್ದಂತೆ. ಆಗ ಕಾಯುತ್ತಿದ್ದವರು ಲಗ್ಗೆ ಹೊಡೆದವರಾಗುತ್ತಾರೆ. ಹೊಡೆಯುತ್ತಿದ್ದವರು ಲಗ್ಗೆ ಕಾಯುತ್ತಾರೆ. ಹರತೋ ಎಂದು ಕೂಗಿಕೊಂಡು ಅಟ್ಟಿಸಿಕೊಂಡು ಹೋಗುವುದರಿಂದ ಇದಕ್ಕೆ ಹರತೋ ಚೆಂಡು ಎಂದೂ ಹೆಸರು. ಲಗ್ಗೆ ಆಟದಲ್ಲಿ ಕೆಲವು ಪ್ರಭೇದಗಳಿವೆ.

**1. ಸಿಕ್ಕಿದವರಿಗೆ ಸಿಕ್ಕುಪಾಲು (ಸಿಕ್ಕಿದವರಿಗೆ ಸೀರುಂಡೆ) :** ಎರಡು ಪಂಗಡ ಮಾಡಿಕೊಳ್ಳದೆ ಯಾರು ಬೇಕಾದರೂ ಲಗ್ಗೆ ಬೀಳಿಸಿ, ಆಡುವ ಲಗ್ಗೆಚೆಂಡಿನ ಒಂದು ಪ್ರಭೇದಕ್ಕೆ ಈ ಹೆಸರಿದೆ.

**2. ಕುದುರೆ ಚೆಂಡು :** ಈ ಆಟದಲ್ಲೂ ಎರಡು ಪಂಗಡ. ಇಲ್ಲಿ ಲಗ್ಗೆಗೆ ಬದಲಾಗಿ ಎರಡುಗಳ ಗಳ ಮೇಲೆ ಒಂದು ಅಡ್ಡಕಡ್ಡಿ. ನಿಗದಿಯಾದ ದೂರದಿಂದ ಚೆಂಡನ್ನು ಅದರಡಿ ನೇರವಾಗಿ ಎಸೆದು ಕಡ್ಡಿಯನ್ನು ಬೀಳಿಸಬೇಕು. ಬೀಳಿಸದಿದ್ದರೆ ಚೆಂಡನ್ನು ಹೊಡೆಯುತ್ತಿರುವ ಪಂಗಡಕ್ಕೆ ಒಬ್ಬನನ್ನು ಕುದುರೆಯಾಗಿ ಕಳುಹಿಸಬೇಕು. ಒಂದು ಗುಂಪಿನವರು ಅಡ್ಡ ಕಡ್ಡಿಯ ಹತ್ತಿರ ನಿಂತುಕೊಂಡು ಒಬ್ಬೊಬ್ಬರೂ ಮೂರು ಮೂರು ಅವಕಾಶದೊಳಗೆ ದಂಡಿನಿಂದ (ಇದನ್ನು ಗಾರು ಎಂತಲೂ ಕರೆಯುತ್ತಾರೆ.) ಚೆಂಡನ್ನು ಕಾಯುವವರತ್ತ ಬಾರಿಸಬೇಕು. ದಂಡನ್ನು ಒಂದು ಸಾರಿ ಬೀಸಿ ಚೆಂಡಿಗೆ ತಾಗದಿದ್ದರೂ ಆ ಅವಕಾಶ ಮುಗಿದಂತೆ. ಹೊಡೆದೂ ಅದನ್ನು ಎದುರಾಳಿಗಳು ಆತುಕೊಂಡು ಬಿಟ್ಟರೆ ಆಯಿತು. ಇಲ್ಲದಿದ್ದರೆ ಹೊಡೆದ ಚೆಂಡನ್ನು ಹಿಡಿದು ಗುರಿಗೆ ಹೊಡೆದು ಅಡ್ಡ ಕಡ್ಡಿಯನ್ನು ಬೀಳಿಸಿದರೂ ಅಥ'ವಾ ಅದರಡಿ ಚೆಂಡು ನುಗ್ಗಿಸಿಬಿಟ್ಟರೂ ಹೊಡೆಯುತ್ತಿರುವ ಪಂಗಡದವರಿಗೆ ಒಬ್ಬ ಆಟಗಾರನನ್ನು ಕುದುರೆಯಾಗಿ ಕಳುಹಿಸಬೇಕು. ಹೊಡೆಯುವವರಲ್ಲಿ ಒಬ್ಬ ಅವನ ಬೆನ್ನಮೇಲೇರಿ ಕುಳಿತುಕೊಳ್ಳುತ್ತಾನೆ. ಹೀಗೆ ಮತ್ತೆ ಅಡ್ಡಕಡ್ಡಿ ಬೀಳಿಸುವ ತನಕವೂ ಆತ ಕುದುರೆಯಾಗಿರಬೇಕು. ಕೆಲವು ಸಾರಿ ಇಂಥ' ಕುದುರೆಗಳ ಸಾಲೇ ಇರುತ್ತದೆ. ಚೆಂಡನ್ನು ಯಶಸ್ವಿಯಾಗಿ ಗುರಿ ಮುಟ್ಟಿಸಿದಾಗ ಈ ಕುದುರೆಗಳು ಸವಾರನನ್ನು ಎತ್ತಿಹಾಕಿ ಓಡುವುದನ್ನು ನೋಡಲು ಮೋಜೆನಿಸುತ್ತದೆ. ಒಂದು ಪಂಗಡದವರೆಲ್ಲರೂ ಹೊಡೆದು ಮುಗಿಸಿದ ಮೇಲೆ ಆಟ ಬದಲಾಯಿಸುತ್ತದೆ. ಯಥಾಪ್ರಕಾರ ಆಟ ಮುಂದುವರಿಯುತ್ತದೆ.

**3. ಟಾಂಗ್‌ಬಿರಾಂಗ್ :** ಚಿಣ್ಣಿಕೋಲಿನ ಆಟದಂತೆ ರೂಲುದೊಣ್ಣೆ ಯಂತಿರುವ ದಾಂಡಿನಿಂದ ಚಿಣ್ಣಿಗೆ ಬದಲಾಗಿ ಚೆಂಡನ್ನು ಹೊಡೆಯುವುದು. ಆದರೆ ಚೆಂಡನ್ನು ನೆಲದ ಮೇಲಿಡದೆ ಟಾಂಗ್ ಎಂದಾಗ ಯಾವುದಾದರೊಂದು ಪಾದವನ್ನೆತ್ತಿ ಅದರ ಮೇಲಿಟ್ಟುಕೊಂಡು ಎಸೆದು, ಬಿರಾಗ್ ಎಂದು ಒಂದು ಮುಂಗೈ ಮೇಲೆ ಮಾಡಿಕೊಂಡು ಹೆಬ್ಬೆರಳು ಮತ್ತು ಮಧ್ಯದ ಎರಡು ಬೆರಳುಗಳನ್ನೂ ಕೆಳಗೆ ಮಡಿಸಿ ತರ್ಜನಿ ಮತ್ತು ಕನಿಷ್ಠ ಬೆರಳುಗಳ ಮೇಲೆ ಚೆಂಡನ್ನಿಟ್ಟುಕೊಂಡು ಮೇಲೆಸೆದು, ಮುಷ್ಟಿ ಎಂದುಕೊಂಡು ಕೈ ಮುಷ್ಟಿಯ ಮೇಲೆ ಚೆಂಡನ್ನಿಟ್ಟುಕೊಂಡು ಎಸೆದು, ಗೋಡ (ಘೋಡಾ) ಎಂದುಕೊಂಡು ಒಂದು ಮಣಿಕಟ್ಟಿನ ಮೇಲೆ ಇಟ್ಟುಕೊಂಡು ಎಸೆದು, ಹೀಗೆಯೇ ಕೋನಿ ಎಂದುಕೊಂಡು ಒಂದು ಮೊಳಕೈ ಮೇಲೆ ಅಂಕಿ ಎಂದುಕೊಂಡು ಕಣ್ಣಿನ ಹುಬ್ಬಿನ ಮೇಲೆ ಇಟ್ಟುಕೊಂಡು ಚೆಂಡು ಬೀಳಿಸಿ ಮೇಲಿರುವಂತೆಯೆ ದಾಂಡಿನಿಂದ ಹೊಡೆದು ಅಟ್ಟುತ್ತಾರೆ. ಚೆಂಡನ್ನು ನಿಗದಿಯಾದ ಒಂದು ಬದ್ದಿನ ಹತ್ತಿರ ಗುರಿಯಿಟ್ಟು ಎಸೆಯಬೇಕು. ಚಿಣ್ಣಿ ಆಟದಂತೆ ಇಲ್ಲೂ ಚೆಂಡನ್ನು ಹೊಡೆದು ಹಿಮ್ಮೆಟ್ಟಿಸಬಹುದು. ನೆಗೆಯುವಷ್ಟು ದೂರದಲ್ಲಿ ಚೆಂಡು ಬಿದ್ದರೆ ಹೊಡೆಯುವವನ ಆಟ ಆಯಿತು. ಮೇಲೆ ಹೇಳಿದ ಯಾವ ಸ್ಥಾನದಲ್ಲಿ ಹೊಡೆದಾಗಲೂ ಏಟು ತಾಗದಿದ್ದರೂ ಅಥವಾ ಚೆಂಡನ್ನು ಆತು ಬಿಟ್ಟರೂ ದಾಂಡನ್ನು ಮೂರು ಸಾರಿ ಬೀಸಿ ತಾಗದಿದ್ದರೂ ಆಡುವವರ ಆಟ ಆಯಿತು. ಗುರಿಯಿಟ್ಟು ಚೆಂಡನ್ನು ಬದ್ದಿನತ್ತ ಹೊಡೆದಾಗ ಬದ್ದಿನಿಂದ ಚೆಂಡಿರುವ ದೂರವನ್ನು ಚಿಣ್ಣಿ ಆಟದಂತೆ ಅಳೆದು ಎಣಿಸುತ್ತಾರೆ. ಆದರೆ

ಟಾಂಗ್‌ಬಿರಾಂಗ್ ಇತ್ಯಾದಿಯಾಗಿ ಏಳರ ತನಕ ಎಣಿಸಿ ಇಷ್ಟು ಆಯಿತು ಎಂದು ಲೆಕ್ಕಹಾಕುತ್ತಾರೆ.

**ಚಿಣ್ಣಿಕೋಲು :** ಇದು ಗಂಡುಮಕ್ಕಳ ಆಟ. ಆಟವಾಡಲು ಎರಡು ತುದಿಗಳಲ್ಲೂ ಚೂಪು ಮಾಡಿದ ಒಂದು ಒಂದೂವರೆ ಅಂಗುಲ ವ್ಯಾಸದಷ್ಟು ಗಾತ್ರದ ಎರಡು ಮೂರಂಗುಲ ಉದ್ದದ ಮರದ ಪುಟ್ಟ ತುಂಡು (ಚಿಣ್ಣಿ)ಬೇಕು. ಇದರ ಒಂದು ತುದಿಗೆ ಮೊಳದುದ್ದದ ದಪ್ಪಕೋಲಿನಿಂದ (ದಾಂಡು) ಮೆಲ್ಲಗೆ ಏಟುಕೊಟ್ಟು ಮೇಲಕ್ಕೆ ಪುಟಿದು ಬರುವಂತೆ ಮಾಡಿ ಹೊಡೆಯಬೇಕು. ಈ ಆಟದಲ್ಲೂ ಎರಡು ಪಂಗಡ. ಹೊಡೆಯುವವರು ಮತ್ತು ಕಾಯುವವರು. ಚೆಂಡಾಟದಂತೆ ಇಲ್ಲೂ ಅನೇಕ ನಿಯಮಗಳು. ಆದರೆ ಬದ್ದಿನಿಂದ ಚಿಣ್ಣಿಗಿರುವ ದೂರವನ್ನು ದಾಂಡಿನಿಂದ ಅಳೆದು ನೂರಾದರೆ ಒಂದು ಬ್ಯಾಂಕು ಎನ್ನುತ್ತಾರೆ. ಈ ಬ್ಯಾಂಕು ನೂರೇ ಆಗಬೇಕಿಲ್ಲ. ಬೇಕಾದರೆ ಒಪ್ಪಂದದ ಪ್ರಕಾರ ಇಳಿಸಬಹುದು. ತಪ್ಪು ಎಣಿಕೆ ಹೇಳಿದರೆ ಆಗಿದ್ದೆಲ್ಲಾ ಉಪ್ಪುಪ ಆಗಿ ವಜಾ ಆಗಿಬಿಡುತ್ತದೆ. ಚಿಣ್ಣಿ ಹೊಡೆಯುವ ಮೊದಲು ತುರ್‌ದಾಂಡ್, ತುರ್‌ಬದ್, ತುರ್‌ಚೀಪ್, ಕಟ್‌ಕೋಲ್, ರೆಡಿ ಎಂದು ಕೇಳಿ ಎದುರಾಳಿಗಳು ರೆಡಿ ಎಂದ ಮೇಲೆ ಹೊಡೆಯುವುದು ವಾಡಿಕೆ (ಇಲ್ಲಿ ರೆಡಿ ಎನ್ನುವ ಮಾತಿನಂತೆ ಟ್ರೂ ಬಿಡ್, ಟ್ರೂ ಚಿಪ್, ಕಟ್ ಮೊದಲಾದ ಇಂಗ್ಲಿಷ್ ಪದಗಳ ಅಪಭ್ರಂಶಗಳೂ ದಾಂಡು, ಕೋಲ್ ಮೊದಲಾದ ಕನ್ನಡ ಶಬ್ದಗಳೂ ಸೇರಿರುವುದು ಗಮನಾರ್ಹವಾಗಿದೆ. ಆಟ ನಮ್ಮದೇ. ಯಾವಾಗಲೋ ಇಂಗ್ಲಿಷ್ ಪರಿಭಾಷೆ ಬಂದು ಸೇರಿ ಅಪಭ್ರಂಶವಾಗಿದೆ).

**ಕೋಲು ಹಾರಿಸುವ ಆಟ :** ಇದಕ್ಕೆ ಎರಡು ಮೂರು ಅಡಿ ಉದ್ದದ ಕೋಲುಗಳು ಬೇಕು. ಆಡುವವರು ಎಷ್ಟು ಜನ ಬೇಕಾದರೂ ಇರಬಹುದು. ಒಬ್ಬ ಮಾತ್ರ ತನ್ನ ಕೋಲನ್ನು ನೆಲದ ಮೇಲೆ ಇಟ್ಟು ಕಾಯಬೇಕು. ಯಾರೂ ಇದಕ್ಕೆ ಒಪ್ಪದಿದ್ದರೆ ಚಪ್ಪಾಳೆ ಹಾಕಿ - ರತ್ತೋ ರತ್ತೋ ಆಟದಂತೆ ತೀರ್ಮಾನಿಸುತ್ತಾರೆ. ಉಳಿದವರೆಲ್ಲ ತಮ್ಮ ಕೋಲನ್ನು ಒಪ್ಪಂದದಂತೆ ಕಲ್ಲ ಮೇಲೆ ಊರಿ ಇಟ್ಟುಕೊಂಡಿದ್ದು ಕೋಲು ಕಾಯುತ್ತಿರುವವನ ಕೈಗೆ ಸಿಕ್ಕದಂತೆ ಕೋಲನ್ನು ಹಾರಿಸಿಕೊಂಡು ಹೋಗಬೇಕು. ನೆಲದ ಮೇಲೆ ಕೋಲು ಊರಿದವನನ್ನು ಕಾಯುವವ ಮುಟ್ಟಿದರೆ ಅವನು ಸೋತಂತೆ. ಕಾಯುವವನಿಗೆ ಕೋಲು ಕೊಟ್ಟವನೂ ಸಿಕ್ಕಿಬಿದ್ದ. ಇಲ್ಲದಿದ್ದರೆ ಆತನ ಕೋಲನ್ನು ಸಾಧ್ಯವಾದಷ್ಟು ದೂರ ಹಾರಿಸುತ್ತಾರೆ. ಎಲ್ಲೋ ಒಂದು ಕಡೆ ಆತ ಗೆಲ್ಲುತ್ತಾನೆ. ಆಗ ಅವನು ಮೊದಲು ಹೊರಟ ಸ್ಥಾನವನ್ನು ಕುಂಟಿಕೊಂಡು ಕವಡೆ ಕವಡೆ, ಕಂಚಿನ ಕವಡೆ, ಕಂಚಿನ ಕವಡೆ ಎಂದು ಹೇಳುತ್ತ ಉಸಿರು ಬಿಡದೆ ಮೂರೇ ಉಸಿರಿನಲ್ಲಿ ತಲುಪಬೇಕು. ಕಾಲೂ ಬಿಡಕೂಡದು. ಇದರಲ್ಲೂ ನಿಯಮಗಳಲ್ಲಿ ವ್ಯತ್ಯಾಸವಿದೆ.

**ಬುಗುರಿ :** ಇದಕ್ಕೆ ಮರದ ಬುಗುರಿಗಳೂ ದಾರವೂ ಬೇಕು. ಎಲ್ಲರೂ ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ ಒಂದೇ ಸಾರಿಗೆ ಬುಗುರಿ ಆಡಿಸಬೇಕು. ಆಡುತ್ತಿದ್ದಂತೆಯೇ ಯಾರು ಬುಗುರಿಯನ್ನು ದಾರ ಸುತ್ತಿ ಮೇಲೆಸೆದು ಆನಲು ತಪ್ಪುವನೋ ಆತನೇ ಬದ್ದಿನಲ್ಲಿ ಗುರಿಯಿಡಬೇಕು. ಉಳಿದವರು ನೇರವಾಗಿ ಹೊಡೆದೊ ಅಥವಾ ಆಡುತ್ತಿದ್ದ ಬುಗುರಿಯನ್ನು ಹಾಗೆಯೇ ಬೆರಳುಗಳಿಂದ ಉಪಾಯವಾಗಿ ಎತ್ತಿಯೋ ಅದರ ಮೇಲೆಸೆದು ಅದನ್ನು ಬದ್ದಿನ ಸುತ್ತ ವೃತ್ತದಿಂದ ಹೊರಹೊರಡಿಸಬೇಕು ಅದು ಹೊರಟ ತತ್‌ಕ್ಷಣವೇ ಮಿಂಚಿನ ವೇಗದಲ್ಲಿ ಎಲ್ಲರೂ ಬುಗುರಿಯಿಟ್ಟಿದ್ದವನೂ - ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ ಆಡಿಸಿ ಮೇಲೆತ್ತಬೇಕು. ಬುಗುರಿ ಹೊರಡಿಸಿದವನ ಬುಗುರಿ ಇನ್ನೂ ಆಡುತ್ತಿದ್ದರೆ ಅದನ್ನೇ ಅವನು ಮೇಲೆತ್ತಬಹುದು. ಕೊನೆಯಲ್ಲುಳಿದವನೇ ಕಳ್ಳ. ಆಟ ಹೀಗೆ ಮುಂದುವರಿಯುತ್ತದೆ. ಚುರುಕಾದ ಆಟಗಾರರಾದರೆ ಸೋತವನ ಬುಗುರಿಯನ್ನು ಗುನ್ನ ಹಾಕಿ ಒಡೆದಿಡುತ್ತಾರೆ.

**ಸುರುಸುರುಕೆ ಬತ್ತಿ :** ಇದರಲ್ಲಿ ಎರಡು ಪಕ್ಷಗಳಿರುತ್ತವೆ. ಪ್ರತಿ ಪಕ್ಷಕ್ಕೂ ಒಬ್ಬೊಬ್ಬ ಮುಖ್ಯಸ್ಥ ಇರುವನು. ಈ ಎರಡು ಪಕ್ಷಗಳ ಆಟಗಾರರೂ ಎದುರುಬದುರಾಗಿ ಸಮಾನಾಂತರವಾಗಿ ಸಾಲಾಗಿ ಕುಳಿತುಕೊಳ್ಳುವರು. ಆಗ ಅವರ ಎರಡು ಕೈಗಳನ್ನೂ ಹಿಂದಕ್ಕೆ ತೆಗೆದು ಎರಡು ಕೈಗಳ ಬೆರಳುಗಳ ಮಧ್ಯೆ ಪರಸ್ಪರ ಸೇರಿಸಿ, ಬೊಗಸೆಯಾಗಿ ಮಾಡಿಕೊಂಡು ಬೆನ್ನಹಿಂದೆ ಕೈಗಳನ್ನು ಬಿಟ್ಟು, ಪಕ್ಷಗಳ ಮುಖ್ಯಸ್ಥರು ತಮ್ಮ ಪಕ್ಷದ ಆಟಗಾರರ ಹಿಂದೆ ನಿಂತುಕೊಳ್ಳುವರು. ಆಟವನ್ನು ಮೊದಲು ಯಾರು ಆಡಬೇಕೆಂಬುದನ್ನು ನಾಣ್ಯವನ್ನು ಮೇಲೆಸೆದು ಟಾಸ್ ಹಾಕುವುದರ ಮೂಲಕ ನಿರ್ಧರಿಸುತ್ತಾರೆ. ಆಟದ ಸರದಿ ಬಂದಾಗ, ಪಕ್ಷದ ಮುಖ್ಯಸ್ಥ, ಒಂದು ಚೂರುಬಟ್ಟೆಯನ್ನು ತೆಗೆದುಕೊಂಡು, ಅದನ್ನು ಉಂಡೆ ಮಾಡಿ, ತಮ್ಮ ಪಕ್ಷದ ಆಟಗಾರರ ಹಿಂದೆ ಬಿಟ್ಟಿರುವ ಎಲ್ಲ ಕೈಗಳಿಗೂ ಬಟ್ಟೆಯನ್ನು ಇಟ್ಟ ಹಾಗೆ ಮಾಡಿ ಇಡದಂತೆ ನಟಿಸುತ್ತ ಹೋಗುವನು. ಹೀಗೆ ಮಾಡುವಾಗ ಸುರುಸುರುಕೆ ಬತ್ತಿ, ಸೊಂಡಾನೆ ಬತ್ತಿ, ನೋಡಿದವರ ಕಣ್ಣಿಗೆ ಜುಮುಜುಮು ಎಂದು ಹೇಳುವನು. ಆ ಬಟ್ಟೆಯ ಬತ್ತಿಯನ್ನು ಕೊನೆಗೆ ಯಾವನೋ ಒಬ್ಬನ ಕೈಲಿ ಬಿಟ್ಟು, ಇನ್ನೊಬ್ಬನ ಕೈಲಿ ಇಟ್ಟಂತೆ ನಟಿಸಿ ಮತ್ತೆ ಅವರ ಕೈಗಳಿಗೂ ಇಡುವಂತೆ ಓಡಾಡಿ ನಿಂತು ಕೊಳ್ಳುವನು. ಆಗ ಟಾಸ್‌ನಲ್ಲಿ ಸೋತವನು ಬಟ್ಟೆ ಬತ್ತಿ ಯಾರ ಹತ್ತಿರ ಇದೆ ಎಂಬುದನ್ನು ಹೇಳಬೇಕು. ಎರಡು ಪಕ್ಷದ ಸಾಲಿಗೂ ಸುಮಾರು ಐದಾರು ಅಡಿ ಅಂತರವಿರುವುದರಿಂದ ಇವನು ಯಾರ ಕೈಲಿ ಬತ್ತಿ ಇಟ್ಟನೋ ಹೇಳುವುದು ಕಷ್ಟ. ಸೋತ ಮುಖ್ಯಸ್ಥ ಊಹಾಶಕ್ತಿಯ ಮೇಲೆ ಹಾಗೂ ಬಟ್ಟೆ ಇರುವವನ ಮುಖದ ಭಾವನೆಗಳ ಮೂಲಕ ಕಲ್ಪಿಸಿ ಹೇಳುವನು. ಹಾಗೆ ಅವನು ಹೇಳಿದುದು ಸರಿಯಾದರೆ ಆಟ ಇವರ ಪಕ್ಷಕ್ಕೆ ಬಂದುಬಿಡುತ್ತದೆ. ಆಗ ಎದುರು ಪಕ್ಷದವರು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಆಟ ಹಾಗೆಯೇ ಮುಂದುವರಿಯುತ್ತೆ.

**ಮೊಟ್ಟೆಯಿಕ್ಕುವಾಟ :** ಅನೇಕ ಆಟಗಾರರಿರುವ ಈ ಆಟದಲ್ಲಿ ಎರಡು ಪಕ್ಷಗಳಿರುತ್ತವೆ. ಇವರ ಆಟಕ್ಕೆ ಇಡೀ ಬೀದಿಯೇ ಆಟದ ಭೂಮಿಯಾಗುತ್ತದೆ. ಎರಡು ಪಕ್ಷಗಳ ಆಟಗಾರರೂ ಪರಸ್ಪರ ಪಕ್ಷಗಳಿಗೆ ತಿಳಿಯದ ಹಾಗೆ ಸಂದಿ ಗೊಂದಿಯಲ್ಲಿ ಮಣ್ಣಿನ ಸಣ್ಣ ಸಣ್ಣ ಗುಪ್ಪೆಗಳನ್ನು ಇಡುತ್ತ ಬರುವರು. ಇವೇ ಮೊಟ್ಟೆಗಳು. ಹೀಗೆ ಅಸಂಖ್ಯಾತ ಮೊಟ್ಟೆಗಳನ್ನು ಇಟ್ಟಮೇಲೆ ಮೊಟ್ಟೆ ಇಡುವುದು ಸಾಕು ಎಂದುಕೊಂಡವರು ಗುಡ್ ಗಾಡಾರಿಯೊ ಎಂದು ಕೂಗುವರು. ಆಗ ಎಲ್ಲರೂ ಮೊಟ್ಟೆ ಇಡುವುದನ್ನು ನಿಲ್ಲಿಸಬೇಕು. ನಿಲ್ಲಿಸಿದ ಮೇಲೆ ಒಂದು ಪಕ್ಷದವರು ಮತ್ತೊಂದು ಪಕ್ಷದವರ ಮೊಟ್ಟೆಗಳನ್ನು ಪತ್ತೆಹಚ್ಚುವ ಕೆಲಸದಲ್ಲಿ ನಿರತರಾಗುವರು. ಹಾಗೆ ಹುಡುಕಿದ ಮೊಟ್ಟೆಗಳನ್ನು ಎಣಿಕೆ ಮಾಡಿಕೊಳ್ಳುವರು. ಇನ್ನು ಹುಡುಕಲು ಆಗುವುದಿಲ್ಲ ಎಂದಮೇಲೆ, ಮೊಟ್ಟೆಗಳನ್ನು ಇಟ್ಟವರೇ ಎದುರು ಪಕ್ಷದವರಿಗೆ ತೋರಿಸುವರು. ಅನಂತರ ಎರಡು ಗುಂಪುಗಳು ಒಂದು ಕಡೆ ಸೇರಿ ಒಬ್ಬೊಬ್ಬರದು ಎಷ್ಟು ಮೊಟ್ಟೆಗಳು ಆಗಿವೆ ಎಂದು ನೋಡುತ್ತಾರೆ. ಹೆಚ್ಚು ಸಂಖ್ಯೆಯ ಮೊಟ್ಟೆಗಳಿಂದ ಕಡಿಮೆ ಸಂಖ್ಯೆಯ ಮೊಟ್ಟೆಗಳನ್ನು ಕಳೆದರೆ ಉಳಿದ ಮೊಟ್ಟೆಗಳ ಗುಂಪಿನವರು ಗೆದ್ದಹಾಗೆ. ಸೋತವರು ಬೈಸ್ಕೆ ಹೊಡೆಯಬೇಕಾಗುತ್ತದೆ.

**ಕೋಲಾಟ :** ಇದು ಜನಪದ ಆಟಗಳಲ್ಲೆಲ್ಲ ಕಲಾತ್ಮಕವೂ ಜನಪ್ರಿಯವೂ ಆಗಿದೆ. ಕೋಲುಗಳ ಮೂಲಕವೇ ಆಟ ವಿವಿಧ ಭಂಗಿಯಲ್ಲಿ ಸಾಗುವುದರಿಂದ ಇದಕ್ಕೆ ಕೋಲಾಟವೆಂದೇ ಹೆಸರಾಯಿತು. ಈ ಆಟವನ್ನು ಸುಗ್ಗಿಯ ಕಾಲದಲ್ಲಿ ಹಬ್ಬ ಹರಿದಿನಗಳಲ್ಲಿ ಹೆಚ್ಚು ಆಡುತ್ತಾರೆ. ಇರುಳ ಬೆಳುದಿಂಗಳಿನಲ್ಲಿ ಆಟ ಆಡುತ್ತಿದ್ದರೆ ಕಣ್ಣಿಗೆ ಹಬ್ಬ, ಕಿವಿಗೆ ರಸದೌತಣ, ಇದರಲ್ಲಿ ಹುಡುಗರಂತೆ ದೊಡ್ಡವರೂ ಭಾಗವಹಿಸುತ್ತಾರೆ. ಇಲ್ಲಿಯ ಆಟಗಾರರ ಸಾಧನಗಳೆಂದರೆ ಕೋಲುಗಳು. ಕೋಲುಗಳನ್ನು ಸೀಬೆ, ಕಣಗಿಲೆ, ನಿರ್‌ಬಂಜಿ ಮೊದಲಾದ ಮರಗಳಿಂದ ತಯಾರಿಸುತ್ತಾರೆ. ಕೋಲಾಟದಲ್ಲಿಯೆ ಸುತ್ತುಕೋಲು, ಹಾರ್‌ಗುಟುಕು, ಜಡೆಕೋಲು, ಬಿಜುಗನ ಕೋಲು, ತೇರುಕೋಲು, ಮನೆಕೋಲು, ಚಿಟುಕಿನ ಕೋಲು, ವಾದದ ಕೋಲು, ಕಾಲುಸಂದಿನ ಕೋಲು, ಕೊರವಂಜಿ ಕೋಲು, ಉಯ್ಯಾಲೆಯಾಟ ಇತ್ಯಾದಿ ಅನೇಕ ಬಗೆಯ ಆಟಗಳಿವೆ (ನೋಡಿ: ಕೋಲಾಟ). ಕೋಲಾಟದಲ್ಲಿ ಬರುವ ಹಾಡು, ಹಾಡಿಗೆ ತಕ್ಕ ಕುಣಿತ, ಕುಣಿತಕ್ಕೆ ತಕ್ಕ ಕೋಲುಗಳ ಸಪ್ಪಳ ಇವುಗಳಿಂದಾಗಿ ಆಟ ಸ್ವಾರಸ್ಯಕರವಾಗಿರುತ್ತದೆ. ಸಂಗೀತ, ನರ್ತನ ಮತ್ತು ಆಟ ಈ ಮೂರರ ಸಮ್ಮಿಲನವಾಗಿರುವ ಕೋಲಾಟ ಒಂದು ಉತ್ಕೃಷ್ಟ ಕಲೆ.

**ಬಳೆಗಾಜಿನ ಆಟ :** ಇದರಲ್ಲಿ ಎರಡು ಪಕ್ಷಗಳಿರುತ್ತವೆ. ನೆಲದಲ್ಲಿ ಮೂರು ಗುಳಿಗಳನ್ನು ತೋಡಿಸುತ್ತಾರೆ. ಅನಂತರ ಆಟಗಾರರೆಲ್ಲ ಒಂದೆಡೆ ಸೇರಿ ಕಾಸನ್ನು ಮೇಲಕ್ಕೆಸೆದು (ಟಾಸ್) ಸೋಲು ಗೆಲುವನ್ನು ನಿರ್ಧರಿಸುತ್ತಾರೆ. ಸೋತವರು ಗುಳಿಯಿಂದ ಬಳೆಗಾಜನ್ನು ತೆಗೆಯಬೇಕಾಗುತ್ತದೆ. ಗೆದ್ದವರು ಬಳೆಗಾಜನ್ನು ಹೂತಿಡುವ ಕೆಲಸವನ್ನು ವಹಿಸಬೇಕಾಗುತ್ತದೆ. ಗೆದ್ದವರು ಇರುವ ಮೂರು ಗುಳಿಗಳಲ್ಲಿ ಯಾವುದಾದರೂ ಒಂದಕ್ಕೆ ಬಳೆಚೂರುಗಳನ್ನು ಹಾಕಿ ಮೂರನ್ನೂ ಮಣ್ಣಿನಿಂದ ಮುಚ್ಚಿರುತ್ತಾರೆ. ಆಗ ಸೋತವರು ಬಳೆಗಾಜು ಎಲ್ಲಿದೆ ಎಂದು ಹುಡುಕಬೇಕು. ಅವರ ಗುಳಿಗಳ ಮೇಲೂ ಕೈಯಾಡಿಸಿ, ಯಾವುದೋ ಒಂದನ್ನು ಗೋರುತ್ತಾರೆ. ಹಾಗೆ ಗುಳಿಯಿಂದ ಮಣ್ಣನ್ನು ಗೋರಿದಾಗ ಅವರಿಗೆ ಬಳೆ ಸಿಕ್ಕಿದರೆ ಅವರು ಗೆದ್ದಹಾಗೆ. ಬಳೆ ಸಿಕ್ಕುವುದೇ ಅವರಿಗೆ ಲಾಭ. ಒಂದು ಪಕ್ಷ ಬಳೆ ಸಿಕ್ಕದೆ ಹೋದರೆ ಅವರು ಸೋತಂತೆ. ಆಗ ಗೆದ್ದವರು ಬಳೆಗಳನ್ನು ತೆಗೆದು ತೋರುವರು. ಸೋತವರು ಆ ಬಳೆಗಳು ಎಷ್ಟಿದ್ದುವೋ ಅಷ್ಟನ್ನು ಸೇರಿಸಿ ಗೆದ್ದವರಿಗೆ ಕೊಡಬೇಕಾಗುತ್ತದೆ. ಹೀಗೆ ಆಟ ಮುಂದುವರಿಯುತ್ತಿರುತ್ತದೆ. ಇದರಲ್ಲಿ ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳು ಇಬ್ಬರೂ ಭಾಗವಹಿಸಬಹುದು. ಈಚೆಗೆ ಈ ಆಟದಲ್ಲಿ ಬಹಳ ಸುಧಾರಣೆಗಳಾಗಿವೆ.

**ತೆಂಗಿನಕಾಯಿ ಜೂಜು :** ಇದು ಗಂಡಸರು ಪಂಥ ಕಟ್ಟಿ ಆಡುವ ಆಟ. ಕಾಯಿಯನ್ನು ಒಡ್ಡುವವನು ಕಲ್ಲುಗಳನ್ನೂ ಮಾರುತ್ತಾನೆ. ಹೊಡೆಯುವವರು ಆ ಕಲ್ಲುಗಳನ್ನು ಕೊಂಡುಕೊಳ್ಳಬೇಕು. ಕೊಂಡುಕೊಂಡ ಮೇಲೆ ನಿರ್ದಿಷ್ಟವಾದ ದೂರದಿಂದ ಕಾಯಿಗೆ ಕಲ್ಲನ್ನು ಬೀಸಿ ಹೊಡೆಯುತ್ತಾರೆ. ಮೊದಲ ಏಟಿಗೆ ಕಾಯಿ ಒಡೆದರೆ ಒಡೆದವರಿಗೆ ಕಾಯಿ ಬಿಟ್ಟಿಯಾಗಿ ಸಿಗುತ್ತದೆ. ಹಾಗಾಗದಿದ್ದರೆ ಮುಂದೆ ಕಾಸಿನ ಎಣಿಕೆ ಪ್ರಾರಂಭವಾಗುತ್ತದೆ. ಹೀಗೆ ಇವರು ಆಟ ಆಡುವಾಗ ಪ್ರೇಕ್ಷಕರು ಕೂಡ ದುಡ್ಡು ಕಟ್ಟಿ ಜೂಜಿನಲ್ಲಿ ಸಕ್ರಿಯವಾಗಿ ಭಾಗವಹಿಸುವುದುಂಟು. ಆಟ ಮೋಜಿನಿಂದ ಸಾಗುತ್ತದೆ.

**ತ್ರಿರಂಗ :** ಇದು ಇಬ್ಬರೇ ಆಟಗಾರರು ಆಡುವ ಆಟ. ನೆಲದ ಮೇಲೆ ಮನೆಯನ್ನು ಬರೆದು ಆಟಗಾರರಿಬ್ಬರೂ ಎದುರುಬದುರಾಗಿ ಕುಳಿತುಕೊಳ್ಳುತ್ತಾರೆ. ಪ್ರತಿಯೊಬ್ಬನ ಹತ್ತಿರವೂ ಒಂಬತ್ತು ಕಾಯಿಗಳು ಇರುತ್ತವೆ. ಇವರು ಕಾಯಿ ಇಡಬೇಕಾದರೆ ನೇರ ರೇಖೆಯೇ ಆಗಿರಬೇಕು ಮತ್ತು ಮೂರು ಕೇಂದ್ರಗಳೇ ಇರಬೇಕು. ಸಿಕ್ಕಾಪಟ್ಟೆಯಾಗಿ ಎಲ್ಲೆಂದರಲ್ಲಿ ಕಾಯನ್ನು ಮೂರು ಕೇಂದ್ರಗಳಿರುವ ಒಂದು ನೇರ ರೇಖೆಯಲ್ಲಿ ಒಬ್ಬನೇ ಮೂರು ಕಾಯಿಗಳನ್ನು ಇಟ್ಟುಬಿಟ್ಟರೆ, ಎದುರು ಪಕ್ಷದವನು ಒಂದು ಕಾಯನ್ನು ಗೆದ್ದುಕೊಳ್ಳುತ್ತಾನೆ. ಆದರೆ ಎದುರು ಪಕ್ಷದವನು ಇವನಿಗೆ ಇಂಥ ಅವಕಾಶ ಮಾಡಿಕೊಡದೆ ಇವನು ಆ ರೇಖೆಯ ಒಂದೋ ಎರಡೋ ಕಾಯನ್ನು ಇಟ್ಟು ಕೂಡಲೇ ಜಾಗರೂಕನಾಗಿ ತನ್ನ ಒಂದು ಕಾಯನ್ನು ಆ ರೇಖೆಯ ಇನ್ನೊಂದು ಕೇಂದ್ರಕ್ಕೆ ಇಟ್ಟುಬಿಡುವನು. ಆಗ ಯಾರ ಕಾಯನ್ನು ಯಾರೋ ಹೊಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗೆ ಯಾರಾದರೊಬ್ಬ ಕಾಯಿಗಳನ್ನು ಕಳೆದುಕೊಳ್ಳುವವರೆಗೆ ಆಟ ನಡೆಯುತ್ತದೆ. ಯಾರೂ ಕಾಯನ್ನು ಹೊಡೆಯಲು ಸಾಧ್ಯವಾಗದೆ ಮನೆಗಳನ್ನು ಕಟ್ಟಿ ನಿಲ್ಲಿಸಿದರೆ ಆಗ ಇಬ್ಬರೂ ತಮ್ಮತಮ್ಮ ಕಾಯಿಗಳನ್ನು ಎತ್ತಿಕೊಂಡು ಮೊದಲಿಂದ ಆಟವಾಡುತ್ತಾರೆ.

**ಬಚ್ಚದ ಕಲ್ಲು :** ಆಟಗಾರರು ಬಚ್ಚ ಮತ್ತು ಕಲ್ಲು ಸಾಧನಗಳ ಜೊತೆಯಲ್ಲಿ ಬರಬೇಕು. ಸಿಗರೇಟಿನ ಅಥವಾ ಬೆಂಕಿಪೊಟ್ಟಣದ ಎಲೆಗಳಿಗೆ ಬಚ್ಚ ಎಂದು ಹೆಸರು. ಇವುಗಳಿಗೆ ಟ್ರಿಕ್ಕಿ ಎಂದೂ ಹೆಸರುಂಟು. ಇದರಿಂದ ಈ ಆಟಕ್ಕೆ ಟ್ರಿಕ್ಕಿ ಆಟ ಎಂತಲೂ ಕರೆವರು. ಇಲ್ಲಿ ಬಚ್ಚ ಅಥವಾ ಟ್ರಿಕ್ಕಿಗಳೇ ಜೂಜಿನ ಎಲೆಗಳು. ಅವುಗಳನ್ನು ಆಟಗಾರರು ಸಂಗ್ರಹಿಸಿಕೊಂಡು ಆಟಕ್ಕೆ ಬರುತ್ತಾರೆ. ಆಟವಾಡುವುದಕ್ಕೆ ಅಗಲ ಬಾಯುಳ್ಳ ಚಪ್ಪಟೆಕಲ್ಲನ್ನು ತರಬೇಕು. ಹೀಗೆ ಆಟಕ್ಕೆ ಬಂದವರು ಮೊದಲು ವೃತ್ತಾಕಾರದ 'ಅಂಡ'ವೊಂದನ್ನು ನಿರ್ಮಿಸಿ, ಅದರಲ್ಲಿ ನಿಯತ ಸಂಖ್ಯೆಯ ಬಚ್ಚಗಳನ್ನು ಹಾಕುತ್ತಾರೆ. ಒಬ್ಬರು ಹಾಕಿದಷ್ಟನ್ನು ಎಲ್ಲರೂ ಹಾಕಬೇಕು. ಹೀಗೆ ಎಲ್ಲರೂ ಹಾಕಿದ ಮೇಲೆ ಎಲ್ಲ ಆಟಗಾರರೂ ನಿಯಮಿತವಾದ ದೂರದಲ್ಲಿ ನಿಂತು ಅಲ್ಲಿಂದ ಬಚ್ಚದ ಕಲ್ಲನ್ನು ಬಿಡುತ್ತಾರೆ. ಹಾಗೆ ಬಿಟ್ಟಾಗ ಕಲ್ಲುಗಳು ಒಂದಕ್ಕೊಂದು ಸ್ಪರ್ಶಿಸಿದರೆ ಅಥವಾ ಪಟ್ಟಿಯೊಳಗೆ ಬಿದ್ದರೆ ಮತ್ತೆ ಎಲ್ಲರೂ ಬಿಡಬೇಕಾಗುತ್ತದೆ. ವೃತ್ತಕ್ಕೆ ತೀರ ಹತ್ತಿರದಲ್ಲಿ ಯಾರ ಕಲ್ಲು ಬಿದ್ದಿರುತ್ತದೋ ಅವರು ಮೊದಲು ಆಟವಾಡಬೇಕಾಗುತ್ತದೆ. ಅನಂತರ ಮುಂದಿನ ಹತ್ತಿರದವನು ಹೊಡೆಯುತ್ತಾನೆ. ಹೀಗೆ ಆಟದ ಸರದಿ ಒಬ್ಬರಿಂದ ಒಬ್ಬರಿಗೆ ಬರುತ್ತದೆ. ಆಟ ಬಂದವನು ಬಚ್ಚದ ಕಲ್ಲಿನಿಂದ ಬಚ್ಚಗಳನ್ನು ವೃತ್ತದಿಂದ ಹೊರಗೆ ಹಾರುವಂತೆ ಹೊಡೆಯುವನು. ಹೊರಗೆ ಹಾರಿದ ಬಚ್ಚಗಳೆಲ್ಲವೂ ಅವನಿಗೆ ಸೇರಿದಂತೆ. ಹೀಗೆ ಆಟವಾಡುತ್ತಿರುವಾಗ ಬಚ್ಚಗಳು ಹೊರಗೆ ಬರದೆ ಹೋದರೆ, ಅವನ ಆಟ ಮುಗಿಯುತ್ತದೆ. ಬೇರೊಬ್ಬ ಹೊಡೆಯುತ್ತಾನೆ. ಹೀಗೆ ಸರದಿ ಪ್ರಕಾರ ಬಚ್ಚಗಳೆಲ್ಲ ವೃತ್ತದಿಂದ ಹೊರಗೆ ಬರುವ ತನಕ ಆಟ ಸಾಗುತ್ತದೆ. ಅವರು ಗೆದ್ದ ಬಚ್ಚಗಳೆಲ್ಲ ಅವರೇ ಇಟ್ಟುಕೊಳ್ಳುವರು. ಬಚ್ಚಗಳನ್ನೆಲ್ಲ ಗೆದ್ದುಕೊಂಡ ಮೇಲೆ ಮತ್ತೆ ನಿಗದಿಯಾದ ಬಚ್ಚಗಳನ್ನು ಹಾಕಿ ಆಟ ಪ್ರಾರಂಭಿಸುತ್ತಾರೆ. ಹೀಗೆ ಆಟ ನಿರಂತರವಾಗಿ ಸಾಗುತ್ತದೆ. ಇದರಲ್ಲಿ ಕೈ ಚಳಕ ಹಾಗೂ ಗುರಿ ಬಹಳ ಮುಖ್ಯ. ಗಂಡುಮಕ್ಕಳು ಮಾತ್ರ ಇದರಲ್ಲಿ ಭಾಗವಹಿಸುವರು.

**ಸೀಯುವ ಆಟ :** ಇದಕ್ಕೆ ಇಬ್ಬರಾದರೂ ಆಟಗಾರರು ಇರಬೇಕು. ಹೆಚ್ಚು ಜನ ಇದ್ದಷ್ಟೂ ಆಟದಲ್ಲಿ ಉತ್ಸುಕತೆ ಹೆಚ್ಚು. ಇದರಲ್ಲಿ ಭಾಗವಹಿಸುವವರು ಹುಡುಗರು. ಅವರು ಹೆಚ್ಚು ಸಮರ್ಥರಾಗಿರಬೇಕಾಗುತ್ತದೆ. ಮೊದಲು ಒಂದು ಗೆರೆ ಎಳೆಯುವರು. ಆಟದ ಸ್ಪರ್ಧಿಗಳು ಎಲ್ಲರೂ ಗೆರೆಯ ಮೇಲೆ ಕೈಗಳನ್ನು ಊರಿಕೊಂಡು ಕಾಲುಗಳನ್ನು ಹಿಂದಕ್ಕೆ ನೀಡಿ ಬಗ್ಗುವರು. ಅನಂತರ ಬಲಗಾಲಿಗೆ ಸಮತೂಕದ ಕೋಲೊಂದನ್ನು ಆರಿಸಿಕೊಂಡು, ಹೆಬ್ಬೆರಳು ಮತ್ತು ಉದ್ದನೆಯ ಬೆರಳುಗಳ ನಡುವೆ ಸಿಕ್ಕಿಸಿ, ಅದನ್ನು ರಭಸದಿಂದ ಹಿಂದಿನಿಂದ ಮುಂದಕ್ಕೆ ಎಸೆಯಬೇಕು. ಯಾರದು ಅತಿ ದೂರಕ್ಕೆ ಹೋಗಿರುತ್ತದೋ ಅವರು ಗೆದ್ದಹಾಗೆ. ಹೀಗೆ ಒಬ್ಬ ಉಳಿಯುವ ತನಕ ಆಟ ಮುಂದುವರಿಯುತ್ತದೆ. ಆಮೇಲೆ ಪುನಃ ಆಟ ಮೊದಲಿಂದ ಪ್ರಾರಂಭವಾಗುತ್ತದೆ. ಈ ಆಟ ಕೆಲವು ಮಟ್ಟಿಗೆ ಬಟ್ಟೆಯಾಟವನ್ನು ಹೋಲುತ್ತದೆ.

**ನರಿಕೊಂತನ ಆಟ :** ಇಲ್ಲಿಯೂ ಕೈ ತಾಳ ಹಾಕುವುದರ ಮೂಲಕ ಪಕ್ಷ ನಿರ್ಧಾರವಾಗುತ್ತದೆ. ನೆಲಕ್ಕೆ ಸುಮಾರು ಕಡ್ಡಿಗಳನ್ನು ನೆಟ್ಟಿರುತ್ತಾರೆ. ಅವುಗಳನ್ನು ಕಾಯುವವನು ಒಬ್ಬ. ಉಳಿದವರೆಲ್ಲ ಕಡ್ಡಿಗಳನ್ನು ಕೀಳಲಿಕ್ಕೆ ಪ್ರಯತ್ನಿಸುವರು. ಹೀಗೆ ಕಡ್ಡಿಗಳನ್ನು ಕೀಳಲು ಬಂದಾಗ, ಕಾಯುವವನು ಅವರನ್ನು ಹಿಡಿದರೆ, ಹಿಡಿಸಿಕೊಂಡವರೇ ಕಡ್ಡಿಗಳನ್ನು ಕಾಯಬೇಕಾಗುತ್ತದೆ. ಕಾಯುವವನು ಹಿಡಿಯಲು ಹೋದಾಗ, ಉಳಿದವರು ಸುಮ್ಮನಿರದೆ ಬೇರೆ ಕಡೆಯಿಂದ ಬಂದು ಕಡ್ಡಿಯನ್ನು ಕೀಳುವರು. ಅಷ್ಟು ಜನರನ್ನೂ ಹೆದರಿಸಿ ಕಡ್ಡಿಗಳನ್ನು ಕಾಯಬೇಕಾಗುತ್ತದೆ.

**ಬಟ್ಟೆ ಆಟ :** ಇದಕ್ಕೆ ಕುದುರೆ ಆಟ ಅಥವಾ ಸವಾರಿ ಆಟ ಎಂದೂ ಹೆಸರಿದೆ. ಇದರಲ್ಲಿ ಭಾಗವಹಿಸುವವರೆಲ್ಲ ಹುಡುಗರೇ. ಈ ಆಟಕ್ಕೆ ಇಬ್ಬರಿಗಿಂತ ಹೆಚ್ಚು ಮಂದಿ ಆಟಗಾರರಿರಬೇಕು. ಹೆಚ್ಚು ಜನ ಇದ್ದಷ್ಟು ಆಟ ರಂಗೇರುತ್ತದೆ. ಮೊದಲು ಆಟಗಾರರು ಎರಡು ಪಕ್ಷಗಳನ್ನು ಮಾಡಿಕೊಳ್ಳುತ್ತಾರೆ. ಪಕ್ಷ ನಿರ್ಧಾರವಾಗುವುದೂ ಒಂದು ವಿಶೇಷ ರೀತಿಯಲ್ಲಿ. ಹೆಚ್ಚು ಜನರಿದ್ದಾಗ ಇಬ್ಬರು ಪ್ರಮುಖರಾಗಿ ನಿರ್ಧಾರವಾಗುತ್ತದೆ. ಆ ಇಬ್ಬರು ಉಳಿದವರನ್ನು ಸಮಭಾಗವಾಗಿ ತಮ್ಮ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ. ಆ ಇಬ್ಬರು ಪ್ರಮುಖರೂ ಟಾಸ್ ಹಾಕಿ ಯಾರು ಆ ಗುಂಪಿನಿಂದ ಮೊದಲು ತಮ್ಮ ಕಡೆಗೆ ಆರಿಸಿಕೊಳ್ಳಬೇಕೆಂಬ ಸರದಿಯನ್ನು ನಿರ್ಧರಿಸುವರು. ಟಾಸ್‌ನಲ್ಲಿ ಗೆದ್ದವನು ತನಗೆ ಬೇಕಾದವರನ್ನು ಕರೆದು ತನ್ನ ಪಕ್ಷವನ್ನು ಕಟ್ಟಿಕೊಳ್ಳುತ್ತಾನೆ. ಉಳಿದವರು ಇನ್ನೊಬ್ಬನ ಪಕ್ಷಕ್ಕೆ ಸೇರಿಕೊಳ್ಳುತ್ತಾರೆ. ಹೀಗೆ ಪಕ್ಷ ನಿರ್ಧಾರವಾದ ಅನಂತರ ಯಾರು ಆಟ ಆಡಬೇಕು, ಯಾರು ಹಿಡಿಯಬೇಕೆಂಬುದನ್ನು ಅದೇ ಟಾಸ್‌ನಿಂದಲೇ ನಿರ್ಧರಿಸುತ್ತಾರೆ. ಅಥವಾ ಪರಸ್ಪರ ಒಪ್ಪಿಗೆಯಿಂದಲೂ ಇದು ಸಾಧ್ಯವಾಗಬಹುದು. ಹೀಗೆ ಮಾಡಿ ಕೊಂಡಮೇಲೆ ಆಟ ಪ್ರಾರಂಭವಾಗುತ್ತದೆ. ಮೊದಲು ಉದ್ದನೆಯ ಗೆರೆಯೊಂದನ್ನು ಎಳೆಯುವರು. ಗೆರೆಯ ಆಚೆ ಈಚೆ ಪಕ್ಷ ಪ್ರತಿಪಕ್ಷಗಳವರು ನಿಂತುಕೊಳ್ಳುವರು. ಆಗ ಗೆದ್ದವರು ಆಟ ಪ್ರಾರಂಭಿಸುವರು. ಆಟದ ಮುಖ್ಯ ಸಾಧನ ಹಗ್ಗ ಹೊಸೆದ ಹಾಗೆ

ನುಲಿದಿರುವ ಚೌಕ (ಟವಲ್). ಚೌಕವನ್ನು ನುಲಿದು ಚೂಪಾದ ತುದಿಗೆ ಒಂದು ದಾರ ಕಟ್ಟುವರು. ಆಗ ಗೆದ್ದವರಲ್ಲಿ ಒಬ್ಬ ಬಂದು ಚೌಕದ ಚೂಪಾದ ತುದಿಯಲ್ಲಿ ತನ್ನ ಬಲಗಾಲಿನ ಹೆಬ್ಬೆರಳನ್ನು ಪಕ್ಕದ ಬೆರಳುಗಳ ಮಧ್ಯೆ ಸಿಕ್ಕಿಸಿ ಗೆರೆಗೆ ಸಮೀಪಿಸಿದಂತೆ ಕೈಗಳೆರಡನ್ನೂ ಊರಿ ರಭಸದಿಂದ ಮುಂದಕ್ಕೆ ಎಸೆಯಬೇಕು. ಹಾಗೆ ಎಸೆಯುವಾಗ ಬಟ್ಟೆ ಹಾಕಿದ ಗೆರೆಯಿಂದ ಹೊರಗೆ ಹೋಗದೆ ಒಳಗೆ ಬಿದ್ದರೆ ಅದು ಲೆಕ್ಕಕ್ಕಿಲ್ಲ. ಹಾಗೆ ಅವನಿಗೆ ಮೂರು ಸರದಿಗಳು ಮಾತ್ರ ಇರುತ್ತವೆ. ಆ ಮೂರರಲ್ಲೂ ಎಸೆಯದಿದ್ದರೆ ಅವನು ಹೊರಬಂದು, ಅವರ ಕಡೆಯ ಇನ್ನೊಬ್ಬನಿಗೆ ಆಟವನ್ನು ಬಿಟ್ಟುಕೊಡಬೇಕಾಗುತ್ತದೆ. ಹಾಗಾದರೆ ಅವನು ಎಸೆದಾಗ ಏನಾದರೂ ಎದುರು ಪಕ್ಷದವರು ಅದನ್ನು ಹಿಡಿದುಕೊಂಡರೆ (ನೆಲ ಸೋಕದಂತೆ) ಆಟ ಆಡುವವನು ಹೊರಬರಬೇಕಾಗುತ್ತದೆ. ಹಾಗೆ ಹಿಡಿದುಕೊಳ್ಳದೆ ನೆಲಕ್ಕೆ ಬಿಟ್ಟು ಕೊಟ್ಟರೆ ನಿಯತವಾದ ಸಂಖ್ಯೆಯ ತನಕ ಲೆಕ್ಕ ಮಾಡುತ್ತ ಹೋಗುತ್ತಾರೆ. ಆ ಸಂಖ್ಯೆಯನ್ನು ತುಂಬಿಬಿಟ್ಟರೆ, ಕೂಡಲೇ ಸೋತವನು ಒಬ್ಬನನ್ನು ಕುದುರೆ ಕೂರಿಸಬೇಕಾಗುತ್ತದೆ. ಅಂದರೆ ಒಬ್ಬ ಬಗ್ಗುವುದು, ಅವನ ಮೇಲೆ ಗೆದ್ದವನೊಬ್ಬ ಸವಾರಿ ಕೂತುಕೊಳ್ಳುವನು. ಆಟ ಮಾತ್ರ ಸಾಗುತ್ತಲೇ ಇರುತ್ತದೆ. ಸೋತವರು ಬಟ್ಟೆಯನ್ನು ಹಿಡಿದು ಆಟವಾಡುತ್ತಿದ್ದವನನ್ನು ಔಟ್ ಮಾಡಿಬಿಟ್ಟರೆ ಆಗ ಕುದುರೆ ಕೂತವನು ಮೇಲೆದ್ದು ಮತ್ತೆ ತನ್ನ ಗುಂಪನ್ನು ಸೇರಿಕೊಳ್ಳುತ್ತಾನೆ. ಹೀಗಾಗಿ ಯಾವುದಾದರೂ ಒಂದು ಪಕ್ಷ ಔಟಾಗಿಯೋ ಅಥವಾ ಗೆದ್ದೋ ಆಟವನ್ನು ಮುಕ್ತಾಯಕ್ಕೆ ತರುವರು. ಆಗ ಹಿಡಿಯುತ್ತಿದ್ದ ಪಕ್ಷ ಬಟ್ಟೆ ಎಸೆಯುವುದಕ್ಕೂ ಎಸೆಯುತ್ತಿದ್ದ ಪಕ್ಷ ಹಿಡಿಯುವುದಕ್ಕೂ ನಿಂತುಕೊಳ್ಳುತ್ತವೆ. ಹೀಗೆ ಆಟ ನಿರಂತರವಾಗಿ ಸಾಗುತ್ತದೆ.

**ಹುಳಸಪ್ಪನ ಆಟ :** ಕಣ್ಣು ಮುಚ್ಚಿ ತಲೆಗೂದಲನ್ನು ಎಳೆಯುವುದು, ಎಳೆದವರ ಹೆಸರನ್ನು ಹೇಳುವ ತನಕವೂ ಹುಳಿ ಹಿಂಡೋದು. ಇದಕ್ಕೆ ಹುಳಸಪ್ಪನಾಟ ಎಂದು ಹೆಸರು.

ಜನಪದ ಆಟಗಳನ್ನು ಕುರಿತಂತೆ ಅರವಿಂದ ಮಾಲಗತ್ತಿಯವರು ಸಂಶೋಧನೆ ನಡೆಸಿ ಮಹಾಪ್ರಬಂಧ ರಚಿಸಿದ್ದಾರೆ, ಇದು ಉತ್ತರ ಕರ್ನಾಟಕದ ಜನಪದ ಕಲೆಗಳನ್ನು ಕುರಿತಂತೆ ಅನನ್ಯ ದಾಖಲೆಯಾಗಿದೆ. *

**ಜನಪದ ಕಥೆ :** ಜನಪದ ಸಾಹಿತ್ಯದ ಒಂದು ಪ್ರಮುಖ ಪ್ರಕಾರ. ಜನಪದ ಕಥೆಗಳನ್ನು ಸಂಕೀರ್ಣ ಜನಪದ ಕಥೆಗಳು, ಸರಳ ಜನಪದ ಕಥೆಗಳು ಎಂದು ಎರಡು ಪ್ರಧಾನ ವರ್ಗಗಳಾಗಿ ವಿಭಾಗಿಸಲಾಗಿದೆ. ಸಂಕೀರ್ಣ ಜನಪದ ಕಥೆ ಹಲವಾರು ಆಶಯಗಳ ಮೇಲೆ ಬೆಳವಣಿಗೆಯನ್ನು ಸಾಧಿಸಿಕೊಳ್ಳುತ್ತದೆ. ಸಂಕೀರ್ಣ ಕಥೆಗಳನ್ನು ಅತಿಮಾನುಷ ಕಥೆಗಳು, ಮಾಂತ್ರಿಕ ಅಥವಾ ಅದ್ಭುತ ಕಥೆಗಳು, ರಮ್ಯ ಕಥೆಗಳು, ವಾಸ್ತವಿಕ ಕಥೆಗಳು - ಹೀಗೆ ಪ್ರಧಾನ ವರ್ಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಕಿನ್ನರಕಥೆಗಳು, ಕಟ್ಟುಕಥೆಗಳು ಎಂಬ ಹೆಸರುಗಳೂ ಈ ವರ್ಗದ ಕಥೆಗಳಿಗೇ ಅನ್ವಯವಾಗುತ್ತವೆ. ಈ ಗುಂಪಿನ ಎಲ್ಲ ಬಗೆಯ ಕಥೆಗಳೂ ಕನ್ನಡದಲ್ಲಿ ಕಂಡುಬಂದಿವೆ. ಅತ್ಯುತ್ತಮ ಮಾದರಿಗಳೂ ದೊರೆತಿವೆ. ಸಾಕಷ್ಟು ಸುದೀರ್ಘ ಕಥೆಗಳೂ ಗುರುತಿಸಲ್ಪಟ್ಟಿವೆ. ಕನ್ನಡದ ತಕ್ಕೊಂಡಪ್ಪನ ಕಥೆ, ಹೂ ಕೊಟ್ಟ ಚದುರೆ ಈ ಕಥೆಗಳಷ್ಟು ಸುದೀರ್ಘವೂ ಸಂಕೀರ್ಣವೂ ಆದ ಕಥೆಗಳು ಇತರೆಡೆಗಳಲ್ಲಿ ವಿರಳವೆಂದೇ ಹೇಳಬೇಕು.

ಕನ್ನಡದ ಅತಿಮಾನುಷ ಕಥೆಗಳಲ್ಲಿ ಅತಿಮಾನುಷ ಪತಿಗಳು, ಅತಿಮಾನುಷ ಪತ್ನಿಯರು, ಅತಿಮಾನುಷ ವಿರೋಧಿಗಳು ಹಾಗೂ ಸಹಾಯಕರು - ಈ ನಾಲ್ಕು ಗುಂಪಿಗೂ ಉತ್ತಮ ಸಂಖ್ಯೆಯ ಕಥೆಗಳು ಲಭ್ಯವಾಗಿವೆ. ಅತಿಮಾನುಷ ಪತಿಗಳಲ್ಲಿ ಸೂರ್ಯ, ಮಳೆರಾಯ, ದೇವೇಂದ್ರರಾಯನ ಮಗ ಮುಂತಾದವರು ಮಾನವ ಲೋಕದ ಸಂಬಂಧವನ್ನು ಬೆಳೆಸಿದ ಸಂದರ್ಭಗಳು ಕಂಡುಬರುತ್ತವೆ. ಅತಿಮಾನುಷ ಪತ್ನಿಯರಲ್ಲಿ ದೇವಗನ್ನೆಯರು, ಅಪೂರ್ವ ರತ್ನ ಕನ್ಯೆಯರು, ನಾಗ ಲೋಕದ ನಾಗೇಂದ್ರರಾಯನ ಮಕ್ಕಳು, ದೇವಲೋಕದ ದೇವೇಂದ್ರರಾಯನ ಮಕ್ಕಳು, ಬಿದರೆ ಒಳಗಿನ ಚದುರೆಯರು ಸಾಮಾನ್ಯ ಮಾನವ ನಾಯಕರನ್ನು ಕೈಹಿಡಿಯುವ ಕುತೂಹಲಕಾರಿ ಘಟನೆಗಳು ಕಾಣಸಿಗುತ್ತವೆ. ಈ ಕಥೆಗಳೆಲ್ಲ ದೇವಲೋಕ, ಮಾನವ ಲೋಕಗಳ ಸಂಬಂಧವನ್ನು ಕಲ್ಪಿಸಿಕೊಂಡು ಕಲ್ಪನಾರಮ್ಯ ರಚನೆಗಳಾಗಿ ಮೈವೆತ್ತಿವೆ. ಕಥಾನಾಯಕ ಅಥವಾ ನಾಯಕಿಯರು ತಮ್ಮ ಸಾಹಸಯಾತ್ರೆಯಲ್ಲಿ ಅನೇಕ ಅಡ್ಡಿ ಆತಂಕಗಳನ್ನು ಎದುರಿಸುತ್ತ ಪರೀಕ್ಷೆಗಳನ್ನು ಗೆಲ್ಲುತ್ತ, ಅತ್ಯಂತ ಆಶ್ಚರ್ಯಕರ ರೀತಿಯಲ್ಲಿ ಯಶಸ್ಸನ್ನು ಸಾಧಿಸಿ ತಮ್ಮ ಪ್ರಿಯವ್ಯಕ್ತಿಗಳನ್ನು ಸೇರುತ್ತಾರೆ. ಕನ್ನಡ ಜನಪದ ಕಥೆಗಳ ಅತ್ಯಂತ ವರ್ಣರಂಜಿತವಾದ ಭಾಗವೇ ಈ ಅತಿಮಾನುಷ ಕಥೆಗಳ ವರ್ಗ.

ಅತಿಮಾನುಷ ಕಥೆಗಳಲ್ಲಿ ಅತಿಮಾನುಷ ವಿರೋಧಿಗಳು, ಅತಿಮಾನುಷ ಸಹಾಯಕರೂ ಬರುವುದುಂಟು. ಈ ಪಾತ್ರಗಳೆಲ್ಲ ಕ್ರೌರ್ಯ, ದರ್ಪ, ಅಟ್ಟಹಾಸ ಅಥವಾ ಮೌಢ್ಯಗಳಿಂದ ಕೂಡಿರುತ್ತವೆ. ನಾಯಕ ನಾನಾ ಚಮತ್ಕಾರಗಳಿಂದ ಅವನ್ನು ಗೆಲ್ಲುತ್ತಾನೆ. ಒಂದೇ ಕಥೆಯಲ್ಲಿ ಹಲವು ವಿರೋಧಿಗಳು ಬರಬಹುದು. ಹಲವು ಸಹಾಯಕರು ಬರಬಹುದು. ಒಬ್ಬನೇ ವಿರೋಧಿ ಇದ್ದರೂ ಇರಬಹುದು. ಕುಂಟನ ಸಾಹಸ ಎಂಬ ಕಥೆಯಲ್ಲಿ ಬರುವ ರಾಕ್ಷಸ ಅತಿಮಾನುಷ ವಿರೋಧಿ. ಗುಳಕಾಯಿ ತಮ್ಮ ಎಂಬ ಕಥೆಯಲ್ಲಿ ಗುಳಕಾಯಿಯೇ ಅತಿಮಾನುಷ ಸಹಾಯಕ.

ಕನ್ನಡ ಜನಪದ ಕಥೆಗಳಲ್ಲಿ ನಾಯಿಯಾದರೂ ತಾಯಿ, ಮಡಿದ ಗಂಡನ ಪಡೆದ ಚೆಲುವೆ, ಗುಲಗಂಜಮ್ಮ, ಚಿಕ್ಕಮ್ಮಿ ದೊಡ್ಡಮ್ಮಿ ಮುಂತಾದ ಕಥೆಗಳ ಭಿನ್ನರೂಪಗಳು ಬೇರೆಬೇರೆ ಪ್ರದೇಶಗಳಲ್ಲಿ ದೊರೆಯುತ್ತವೆ. ನಾಗಮಾಣಿಕ್ಯ, ದೊಂಬರ ಹುಡುಗ - ಈ ಎರಡು ಕಥೆಗಳು ಎಲ್ಲ ಜಿಲ್ಲೆಗಳಲ್ಲೂ ಕಂಡುಬಂದಿವೆ. ಮಾಂತ್ರಿಕ ಕಥೆಗಳ ಸಾಲಿನಲ್ಲಿ ಬರುವ ಈ ಎರಡು ಕಥೆಗಳು ಜಗತ್ತಿನ ಜಾನಪದ ವಿದ್ವಾಂಸರ ಆಸಕ್ತಿಯನ್ನೂ ಸೆಳೆದಿವೆ. ದೊಂಬರ ಹುಡುಗ ಎಂಬ ಕಥೆ ಆರ್ನೆ ಅಂಟಿ ಮತ್ತು ಸ್ಟಿತ್ ಥಾಂಸನ್ ವರ್ಗೀಕರಣದಲ್ಲಿ 325ನೆಯ ಸಂಖ್ಯೆಯನ್ನು ಪಡೆದಿದೆ. ಈ ಕಥೆಯ ಬಗ್ಗೆ ಸಾಕಷ್ಟು ಚರ್ಚೆಗಳೂ ನಡೆದು, ಬೆನ್ಫೆಯ ಕಾಲದಿಂದ ಇಲ್ಲಿಯವರೆಗೆ ಇದು ಗಮನಾರ್ಹ ಕಥೆಯಾಗಿಯೇ ಉಳಿದಿದೆ. ಇದರ ಅತ್ಯುತ್ತಮ ರೂಪಗಳು ಕನ್ನಡದಲ್ಲಿ ಕಂಡುಬಂದಿವೆ. ನಾಗಮಾಣಿಕ್ಯ (5600) ಕಥೆ ಕೂಡ ಇಷ್ಟೇ ಜನಪ್ರಿಯವಾದುದು. ಅಲ್ಲಾಉದ್ದೀನನ ಅದ್ಭುತ ದೀಪ ಕಥೆಯನ್ನು ಹೋಲುವ ಇದು ವಿಶ್ವಮಾದರಿಗಿಂತ ಸುಧಾರಿತ ರೂಪದಲ್ಲಿ ಕನ್ನಡದಲ್ಲಿ ದೊರೆತಿದೆ. ಆರಂಭದ ತಾಯಿ-ಮಗ ಇವರ ಪ್ರಸಂಗ ಕನ್ನಡಕ್ಕೆ ವಿಶಿಷ್ಟವಾದುದು.

ಸರಳ ಕಥೆಗಳು ಸಾಕಷ್ಟು ಸಂಗ್ರಹವಾಗಿರುತ್ತವೆ; ಒಂದು ಅಥವಾ ಹೆಚ್ಚು ಆಶಯಗಳ ಮೇಲೆ ಬೆಳೆದುಕೊಂಡಿರುತ್ತವೆ. ಕನ್ನಡದ ಸರಳ ಜನಪದ ಕಥೆಗಳಲ್ಲಿ ಬುದ್ಧಿವಂತರ ಕಥೆಗಳು, ದಡ್ಡರ ಕಥೆಗಳು, ಪ್ರಾಣಿಕಥೆಗಳು, ವಿನೋದ ಕಥೆಗಳು, ಸೂತ್ರ ಕಥೆಗಳು, ಸಂಚಿತ ಕಥೆಗಳು - ಹೀಗೆ ಎಲ್ಲ ವರ್ಗದ ಕಥೆಗಳೂ ಕಾಣಬರುತ್ತವೆ.

ಬುದ್ಧಿವಂತಿಕೆಯ ಕಥೆಗಳ ಸಾಲಿನಲ್ಲಿ ಕನ್ನಡ ಕಥೆಗಳಿಗೆ ಒಂದು ಗಣ್ಯಸ್ಥಾನವೇ ಲಭ್ಯವಾಗಬೇಕು. ಸಾಮಾನ್ಯವಾಗಿ ಜನಪದ ಕಥೆಗಳಲ್ಲಿ ದಡ್ಡರೂ ಮೂರ್ಖರೂ ಕೆಲವು ಆಕಸ್ಮಿಕ ಘಟನೆಗಳಿಂದ ಬುದ್ಧಿವಂತರಾಗಿ ಕಂಡುಬರುತ್ತಾರೆ. ಕೆಲವು ಅನಿರೀಕ್ಷಿತ ಫಲಗಳನ್ನು ಪಡೆಯುತ್ತಾರೆ. ಈ ಎರಡು ಗುಂಪಿನ ಕಥೆಗಳಿಗೂ ಕನ್ನಡ ಕಥೆಗಳ ಕಣಜದಲ್ಲಿ ಸಾಕಷ್ಟು ನಿದರ್ಶನಗಳಿವೆ. ಕೂಚಂಭಟ್ಟನ ಕಥೆ, ಗೊಲ್ಲನ ಉತ್ತರ, ಚದುರ ಚನ್ನಯ್ಯ ಮುಂತಾದ ಕಥೆಗಳು ಬುದ್ಧಿವಂತರ ಕಥೆಗಳಿಗೆ ಅತ್ಯುತ್ತಮ ನಿದರ್ಶನಗಳಾಗಿವೆ. ಇಬ್ಬರು ಹುಡುಗರ ಸಮಸ್ಯೆಯನ್ನು ಸರಳವಾಗಿ ಬಿಡಿಸಿದ ಗೊಲ್ಲಗೌಡ, ಮುದುಕಿಯನ್ನು ಮೋಸಗೊಳಿಸಿ ವಡೆಗಳನ್ನು ಕದ್ದು ಪಾರಾದ ಚದುರ ಚನ್ನಯ್ಯ, ಶಾಸ್ತ್ರಕಾರನಂತೆ ನಟಿಸಿ ಐಶ್ವರ್ಯವನ್ನು ಪಡೆದ ಕೂಚಂಭಟ್ಟ - ಇಂಥ ಪಾತ್ರಗಳು ನಮ್ಮ ಮನಸ್ಸಿನ ಮೇಲೆ ಅಚ್ಚೊತ್ತಿ ನಿಲ್ಲುತ್ತವೆ. ಇಂಥ ನೂರಾರು ಬುದ್ಧಿವಂತರು ಕನ್ನಡ ಕಥೆಗಳಲ್ಲಿ ಕಂಡುಬರುತ್ತಾರೆ. ಬುದ್ಧಿವಂತಿಕೆಯ ಕಥೆಗಳ ಸಾಲಿನಲ್ಲಿಯೇ ವಿನೋದ ಕಥೆಗಳೂ ಬರುತ್ತವೆ. ಈ ಎರಡು ಕಥಾವರ್ಗಗಳಲ್ಲಿಯೂ ಪರಸ್ಪರ ಸಂಬಂಧ ಇದ್ದೇ ಇದೆ. ನೆಂಟನನ್ನು ಕಟ್ಟು, ಘಾಟಿ ಸೊಸೆ, ಯಾಡಕುಂಬಾರ ಮುಂತಾದ ಅನೇಕ ವಿನೋದ ಕಥೆಗಳನ್ನು ಇಲ್ಲಿ ಹೆಸರಿಸಬಹುದು. ಕೊಂಗನಹಳ್ಳಿ ದಾಸಯ್ಯ, ಮಂಜುಗಣ್ಣನ ಮಾಯಣ್ಣ - ಈ ಕಥೆಗಳು ಜನಪ್ರಿಯವಾದ ಚಮತ್ಕಾರಯುಕ್ತ ವಿನೋದ ಕಥೆಗಳು, ಒಂದು ರಾತ್ರಿಯಲ್ಲಿ ನಾಲ್ಕು ಜನ ಹೆಂಗಸರನ್ನೂ ವಂಚಿಸಿದ ದಾಸಯ್ಯನ ಕಥೆಯಲ್ಲಿ ಹೆಜ್ಜೆಹೆಜ್ಜೆಗೂ ಹಾಸ್ಯದ ಹೊನಲು ಉಕ್ಕುತ್ತದೆ. ಮಂಜು

ಗಣ್ಣಿನ ಅಳಿಯ ಮಾಯಣ್ಣ ಅತ್ತೆಯ ಮನೆಯಲ್ಲಿ ಪಟ್ಟ ಪರಿಪಾಟಲು ನಮ್ಮ ವಿನೋದ ಕಥೆಗಳ ಕಲ್ಪನೆಯ ಸೊಗಸಿಗೆ ಒಳ್ಳೆಯ ನಿದರ್ಶನ.

ಪ್ರಾಣಿ ಕಥೆಗಳ ವರ್ಗ ಜನಪದ ಕಥೆಗಳಲ್ಲಿ ಅತ್ಯಂತ ಪ್ರಮುಖವಾದುದು. ಕನ್ನಡ ನಾಡಿನ ನಾನಾ ಕಡೆಗಳಿಂದ ಪ್ರಕಟವಾಗಿರುವ ಎಲ್ಲ ಸಂಕಲನಗಳಲ್ಲಿಯೂ ಪ್ರಾಣಿ ಕಥೆಗಳಿವೆ. ಶುದ್ಧ ಪ್ರಾಣಿ ಕಥೆಗಳು, ಮಿಶ್ರ ಪ್ರಾಣಿ ಕಥೆಗಳು ಎಂದು ಎರಡು ಪ್ರಮುಖ ವರ್ಗಗಳಲ್ಲಿ ಈ ಗುಂಪಿನ ಕಥೆಗಳನ್ನು ಪರಿಗಣಿಸಬಹುದು. ಕೋತಿ ಕೊಟ್ಟ ಭಾಗ್ಯ, ನಾಯಿಯಾದರೂ ತಾಯಿ, ಸಾವಿತ್ರಮ್ಮ - ಈ ಕಥೆಗಳಲ್ಲಿ ಪ್ರಾಣಿಗಳ ಪ್ರಸ್ತಾಪ ಬಂದರೂ ಅವು ಗೌಣ. ಕೆಲವೊಮ್ಮೆ ಪ್ರಾಣಿಗಳು ಮಾನವ ರೂಪಿನಲ್ಲಿ ಕಾಣಿಸಿಕೊಳ್ಳುತ್ತವೆ. ಸಾಹಸ ಕಾರ್ಯಗಳನ್ನು ನಡೆಸುತ್ತವೆ. ಅತಿಮಾನುಷ ಪತಿ ಪತ್ನಿಯರಾಗಿ ಪರಿವರ್ತಿತವಾಗುತ್ತವೆ. ಆದರೆ ಶುದ್ಧ ಪ್ರಾಣಿಕಥೆಗಳಲ್ಲಿ ಪ್ರಾಣಿಪ್ರಪಂಚದ ಪ್ರಾಚುರ್ಯ ಹೆಚ್ಚು. ಮಾನವ ಪಾತ್ರಗಳು ಇಲ್ಲಿ ಗೌಣವಾಗಿ ಬರಬಹುದು, ಬರದಿರಬಹುದು. ಕನ್ನಡದಲ್ಲಿ ದೊರೆತಿರುವ ಪ್ರಾಣಿ ಕಥೆಗಳು ಈ ಎಲ್ಲ ಗುಣಗಳಿಂದಲೂ ತುಂಬಿವೆ.

ಕನ್ನಡದ ಕಾಗಕ್ಕ ಗುಬ್ಬಕ್ಕನ ಕಥೆ ಕರ್ನಾಟಕ ಮಹಾರಾಷ್ಟ್ರಗಳೆರಡರಲ್ಲೂ ಕಾಣಸಿಗುತ್ತದೆ. ಪಕ್ಷಿಗಳು, ಪ್ರಾಣಿಗಳು ಹೇರಳವಾಗಿ ಕನ್ನಡ ಕಥೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ನರಿ, ಕಿರುಬ, ಕುದುರೆ, ಕತ್ತೆ, ಹುಲಿ, ಮೊಸಳೆ, ಇಲಿ, ಎಮ್ಮೆ, ಎತ್ತು, ಕೋಳಿ, ಗಿಣಿ, ಸರ್ಪ, ಅಳಿಲು, ಬೆಕ್ಕು, ಮುರ್ಕಾಟಿ, ಕಾಗೆ, ಗೂಬೆ, ಗುಬ್ಬಚ್ಚಿ ಮುಂತಾದುವನ್ನು ಕಾಣಬಹುದು. ಈ ಪ್ರಾಣಿಗಳ ಸಾಲಿನಲ್ಲಿ ತಂತ್ರಿಯ ಸ್ಥಾನ ನರಿಗೆ ಮೀಸಲು. ನರಿ ಕೆಲವೆಡೆ ಇತರರನ್ನು ವಂಚಿಸಲು ತನ್ನ ಬುದ್ಧಿಶಕ್ತಿಯನ್ನು ಬಳಸಿಕೊಂಡರೆ, ಕೆಲವೆಡೆ ಇತರರ ನೆರವಿಗೂ ಬಳಸಿಕೊಳ್ಳುತ್ತದೆ. ಮೊಸಳೆಯ ಮೋಸಕ್ಕೆ ಒಳಗಾದ ಹುಡುಗನನ್ನು ಅದು ಉಳಿಸಿತು. ಕುದುರೆಯನ್ನು ಕಳೆದುಕೊಂಡ ವ್ಯಕ್ತಿಗೆ ನ್ಯಾಯವನ್ನು ದೊರಕಿಸಿತು. ಇಂಥ ಆದರ್ಶಗುಣಗಳ ಜೊತೆಗೆ ಗುಳ್ಳೆನರಿ ಎಂಬ ಕಥೆಯಲ್ಲಿ ತೋಟದ ಹುಡುಗ, ಗಾಡಿಯವರು, ಇತರ ನರಿಗಳು ಎಲ್ಲರನ್ನೂ ಮೋಸಗೊಳಿಸಿದ ತಂತ್ರಿ ಎನಿಸಿತು. ನರಿಯ ಪಾತ್ರ ಕನ್ನಡ ಪ್ರಾಣಿಕಥೆಗಳಲ್ಲೆಲ್ಲ ಹರಡಿಕೊಂಡಿದೆ. ಅದರ ಕುಶಾಗ್ರ ಬುದ್ಧಿಗೆ ಎಂಥವರೂ ಬೆರಗಾಗುತ್ತಾರೆ.

ಸೂತ್ರ ಕಥೆ ಮತ್ತು ಸಂಚಿತ ಕಥೆಗಳಿಗೆ ಕನ್ನಡದಲ್ಲಿ ಒಳ್ಳೆಯ ನಿದರ್ಶನಗಳಿವೆ. ತಾವರೆ ಹೂ, ಬೆಲ್ಲದ ಮಲ್ಲ - ಇಂಥ ಕಥೆಗಳು ಸೂತ್ರಕಥೆಗೆ ಒಳ್ಳೆಯ ಮಾದರಿಗಳು. ಕಥೆಯ ಹೆಜ್ಜೆ ಹೆಜ್ಜೆಯಲ್ಲಿ ಪದ್ಯರೂಪದ ಸೂತ್ರಗಳು ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತವೆ. ಕಥೆ ಈ ಸೂತ್ರಗಳ ಮೇಲೆಯೇ ಆಕರ್ಷಕವೆನಿಸುತ್ತದೆ. ಸಂಚಿತ ಕಥೆ ತಂತ್ರದ ಮೇಲೆ ನಿಂತಿರುತ್ತದೆ. ಒಂದು ಘಟ್ಟದಿಂದ ಆರಂಭವಾದ ಕಥೆ ಸುತ್ತಿಕೊಂಡು ಮತ್ತೆ ಅಲ್ಲಿಗೆ ಬಂದು ಸೇರುತ್ತದೆ. ಕನ್ನಡದ ಗಿಣಿಯ ಮರಿ ಕಥೆ ಸಂಚಿತ ಕಥೆಗೆ ಒಳ್ಳೆಯ ಉದಾಹರಣೆ. ಒಂದು ಗಿಣಿಯ ಮರಿ ಮಾವಿನ ಮರವನ್ನು ಕಡಿದುರುಳಿಸಲು ಬಡಗಿಯನ್ನು ಕೇಳುತ್ತದೆ. ಅವನು ಹಾಸ್ಯ ಮಾಡುತ್ತಾನೆ. ಬೆಕ್ಕಿನ ಬಳಿಗೆ ಹೋಗಿ ಅವನ ಕಾಲನ್ನು ಕಡಿಯುವಂತೆ ತಿಳಿಸುತ್ತದೆ. ಬೆಕ್ಕು ನಗುತ್ತದೆ. ನಾಯಿಯ ಬಳಿಗೆ ಹೋಗಿ ಬೆಕ್ಕನ್ನು ಕಡಿಯುವಂತೆ ಹೇಳುತ್ತದೆ; ನಾಯಿ ನಿರಾಕರಿಸುತ್ತದೆ. ಅಜ್ಜಿಯ ಬಳಿಗೆ ಹೋಗಿ ನಾಯಿಯನ್ನು ಹೊಡೆಯುವಂತೆ ಹೇಳುತ್ತದೆ. ಅಜ್ಜಿ ಅದರ ಮಾತನ್ನು ಕೇಳುವುದಿಲ್ಲ. ಅಜ್ಜನ ಬಳಿ ಹೋಗಿ ಅಜ್ಜಿಯನ್ನು ಹೊಡೆಯುವಂತೆ ಹೇಳುತ್ತದೆ; ಅಜ್ಜ ಕೇಳುವುದಿಲ್ಲ. ಹಸುವಿನ ಬಳಿ ಹೋಗಿ, ಅಜ್ಜ ಹಾಲು ಕರೆಯಲು ಬಂದಾಗ ಒದೆಯುವಂತೆ ಹೇಳುತ್ತದೆ; ಅದೂ ನಿರಾಕರಿಸುತ್ತದೆ. ಆದರೆ ಕರು ತಾಯ ಕೆಚ್ಚಲನ್ನು ಕಚ್ಚಲು ಒಪ್ಪಿಕೊಳ್ಳುತ್ತದೆ. ಅಜ್ಜ ಹಾಲು ಕರೆಯಲು ಬಂದಾಗ ಕರು ಕೆಚ್ಚಲು ಕಚ್ಚುತ್ತದೆ. ಹಸು ಒದೆಯುತ್ತದೆ. ಹಾಲು ಉರುಳುತ್ತದೆ. ಅಜ್ಜ ಅಜ್ಜಿಗೆ ಹೊಡೆಯುತ್ತಾನೆ. ಅಜ್ಜಿ ನಾಯಿಗೆ ಹೊಡೆಯುತ್ತಾಳೆ. ನಾಯಿ ಬೆಕ್ಕನ್ನು ಕಚ್ಚುತ್ತದೆ. ಬೆಕ್ಕು ಬಡಗಿಯನ್ನು ಕಚ್ಚಿ ಮಾವಿನ ಮರ ಹತ್ತುತ್ತದೆ. ಬಡಗಿ ಮರವನ್ನು ಕಡಿದುರುಳಿಸುತ್ತಾನೆ. ಗಿಣಿ ಮರಿಯ ಆಸೆ ನೆರವೇರುತ್ತದೆ. ಹೀಗೆ ಕಥೆ ಹೊರಟ ನೆಲೆಗೇ ಬಂದು ಉದ್ದೇಶವನ್ನು ಈಡೇರಿಸುತ್ತದೆ. ಇಂಥ ಸಂಚಿತ ಕಥೆಗಳ ಶೋಧ ಕನ್ನಡದಲ್ಲಿ ಇನ್ನೂ ನಡೆಯಬೇಕಾಗಿದೆ.

ಗಾದೆಯ ಕಥೆಗಳು, ಒಗಟಿನ ಕಥೆಗಳು ಕನ್ನಡದಲ್ಲಿ ಸಾಕಷ್ಟು ದೊರೆತಿವೆ. ಪ್ರಮುಖ ಸಂಕಲನಗಳಲ್ಲೆಲ್ಲ ಇವು ಸೇರಿವೆ. ನೀತಿ ಕಥೆಗಳು ಜನಪದ ಕಥಾ ಕೋಶದಲ್ಲಿ ವಿರಳ. ಇತ್ತೀಚೆಗೆ ಮಲೆನಾಡಿನಲ್ಲಿ ಕೆಲವು ನೀತಿಕಥೆಗಳು ಕಂಡುಬಂದಿವೆ (ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು), ಪೋಲಿ ಕಥೆಗಳು ಎಲ್ಲ ಸಂಸ್ಕೃತಿಯಲ್ಲಿಯೂ ಲಭ್ಯವಾಗುತ್ತವೆ. ಅಶ್ಲೀಲತೆಯೇ ಪೋಲಿ ಕಥೆಗಳ ಮೂಲ ಸೆಲೆ. ಈ ಕಥೆಗಳು ಸಂಗ್ರಹಕಾರರಿಗೆ ಸುಲಭವಾಗಿ ಲಭ್ಯವಾಗುವುದಿಲ್ಲ. ಹೇಳುವವರು ಅಂಥ ಕಥೆಗಳನ್ನು ಸಂಗ್ರಹಕಾರರ ಎದುರು ಹೇಳಲು ನಾಚುವುದೇ ಇದಕ್ಕೆ ಕಾರಣ. ಆದರೆ ಕನ್ನಡದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪೋಲಿ ಕಥೆಗಳು ಸಿಕ್ಕುತ್ತವೆ. ಕೆಲವು ಸಂಗ್ರಹಕಾರರರು ಈ ಕಥೆಗಳನ್ನು ತಮ್ಮ ಸಂಕಲನದಲ್ಲಿ ಸೇರಿಸಿರುವುದು ಗಮನಾರ್ಹ (ನಮ್ಮ ಸುತ್ತಿನ ಜನಪದ ಕಥೆಗಳು).

ಜನಪದ ಕಥೆಗಳ ವೈಜ್ಞಾನಿಕ ಅಧ್ಯಯನ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬಹಳ ಹಿಂದೆಯೇ ಶಿಖರವನ್ನು ಎಟುಕಿಸಿಕೊಂಡಿದ್ದರೂ ಕನ್ನಡದಲ್ಲಿ ಈ ಅಧ್ಯಯನ ತೀರ ತಡವಾಗಿ ಆರಂಭವಾಯಿತು. ಅಬ್ಬೆಡುಬಾಯಿ ಹಾಗೂ ಮೇರಿ ಫ್ರೀರೆ ಅವರ ಗ್ರಂಥಗಳಲ್ಲಿರುವ ಜನಪದ ಕಥೆಗಳು ಕನ್ನಡ ನಾಡಿನ ಕಥೆಗಳೆ ಎಂದು ಖಚಿತವಾದರೆ, ಪಾಶ್ಚಾತ್ಯ ವಿದ್ವಾಂಸರು ಕನ್ನಡ ಕಥೆಗಳ ಕಡೆ ಕಳೆದ ಶತಮಾನದಲ್ಲಿಯೇ ದೃಷ್ಟಿಯನ್ನು ಹರಿಸಿದ್ದು ಗಮನಾರ್ಹ ಅಂಶವಾಗುತ್ತದೆ. ಆದರೆ ಇದಕ್ಕೂ ಮೊದಲೇ ಸಾವಿರ ವರ್ಷಗಳ ಹಿಂದೆಯೇ ಕನ್ನಡದ ಆದ್ಯ ಗದ್ಯ ಗ್ರಂಥ ವಡ್ಡಾರಾಧನೆಯಲ್ಲಿಯೆ ಅನೇಕ ಕನ್ನಡ ಜನಪದ ಕಥೆಗಳು ಸಮಾವೇಶಗೊಂಡಿವೆ. ಪೂಜಾರಿ ಪುಟ್ಟಕ್ಕನ ಕಥೆಯನ್ನು ಇಲ್ಲಿ ಉದಾಹರಿಸಬಹುದು. ಅಲ್ಲಿಂದ ಇಲ್ಲಿಯವರೆಗೆ ಕಥೆಗಳನ್ನು ಅನೇಕ ಕವಿಗಳು ಸ್ವೀಕರಿಸಿ ಸಾಹಿತ್ಯವನ್ನು ಬೆಳೆಸಿದ್ದಾರೆ.

ಕನ್ನಡ ಜನಪದ ಕಥೆಗಳನ್ನು ಕನ್ನಡಿಗರೊಬ್ಬರು ಮೊದಲು ಸಂಗ್ರಹಿಸಿದ ನಿದರ್ಶನ 20ನೆಯ ಶತಮಾನದ ಆದಿಭಾಗದಲ್ಲಿ ಕಂಡುಬರುತ್ತದೆ. ಎಂ.ಎಲ್.ಶ್ರೀಕಂಠೇಶಗೌಡರು ಸುರಭಿ ಪತ್ರಿಕೆಯಲ್ಲಿ ಆಗಾಗ ಪ್ರಕಟಿಸಿದ ಕಥೆಗಳು ಗಮನಾರ್ಹವಾದುವು. ಮುಂದೆ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಗೀತಸಂಕಲನಗಳೇ ಹೆಚ್ಚಾಗಿ ಬಂದುವು. ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಅಲ್ಲೊಂದು ಇಲ್ಲೊಂದು ಸಂಕಲನಗಳು ಕಾಣಿಸಿಕೊಂಡರೂ 1966ರ ಈಚೆಗೆ ಉತ್ತಮ ಕಥಾಸಂಕಲನಗಳು ಪ್ರಕಟವಾಗತೊಡಗಿದವು. ಜಾನಪದ ಕಥಾಮೃತ 1-2 (ಧವಳ ಶ್ರೀ), ಕನ್ನಡ ಜನಪದ ಕಥೆಗಳು (ಜೀಶಂಪ). ಕರ್ನಾಟಕದ ಜನಪದ ಕಥೆಗಳು, (ಜೀಶಂಪ), ಕರ್ನಾಟಕ ಜಾನಪದ ಕಥೆಗಳು (ರಾಗೌ), ಆಯ್ದ ಜನಪದ ಕಥೆಗಳು (ಜೀಶಂಪ), ಜನಪದ ಕಥಾವಳಿ (ಲಕ್ಕಪ್ಪಗೌಡ), ಒಬ್ಬನೇ ಹೇಳಿದ ಇಪ್ಪತ್ತೆರಡು ಕಥೆಗಳು (ಸಿ.ವೀರಣ್ಣ), ಎಪ್ಪತ್ತೊಂದು ಜನಪದ ಕಥೆಗಳು (ಶಿವಕುಮಾರ್), ಧಾರವಾಡ ಜಿಲ್ಲೆಯ ಜನಪದ ಕಥೆಗಳು (ಟಿ.ಎಸ್.ರಾಜಪ್ಪ), ಬೆಳಗಾಂ ಜಿಲ್ಲೆಯ ಭಿನ್ನರೂಪಗಳು ಭಿನ್ನರೂಪಗಳು ಜನಪದ ಕಥೆಗಳು (ಟಿ.ಎಸ್.ರಾಜಪ್ಪ), ಉತ್ತರ ಕನ್ನಡ ಜಿಲ್ಲೆಯ ಜನಪದ ಕಥೆಗಳು, ಜನಪದ ಮತ್ತು ಗಿರಿಜನರ ಕಥೆಗಳು, ಸಿದ್ಧಿಯರ ಕಥೆಗಳು, ಕುಮರಿ ಮರಾಠಿಗಳ ಕಥೆಗಳು, ಅಪೂರ್ವ ಮೃದಂಗ ಮತ್ತು ಇವರ ಕಥೆಗಳು, ಕರ್ನಾಟಕ ಕರಾವಳಿಯ ಜನಪದ ಕಥೆಗಳು, ಗಾದೆ ಕಥೆಗಳು, ಜನಪದ ಭಾರತ ಕಥೆಗಳು, ಹೊನ್ನಮ್ಮನ ಮನೆಯ ಕಥೆಗಳು, (ಎಲ್.ಆರ್.ಹೆಗಡೆ), ಸಂಕೀರ್ಣ ಜನಪದ ಕಥೆಗಳು, (ತೀ.ನಂ.ಶಕಂರ ನಾರಾಯಣ), ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು, (ಎ.ಹಿರಿಯಣ್ಣ), ಹಾಸನ ಜಿಲ್ಲೆಯ ಜನಪದ ಕಥೆಗಳು (ಹಿ.ಶಿ.ರಾಮಚಂದ್ರೇ ಗೌಡ), ಕಬ್ಬಾಳು ದುರ್ಗದಲ್ಲಿ ಹುಲಿ (ಕ್ಯಾತನ ಹಳ್ಳಿ ರಾಮಣ್ಣ), ಇಬ್ಬೀಡಿನ ಜನಪದ ಕಥೆಗಳು (ವೈ.ಸಿ.ಭಾನುಮತಿ), ಕಥೆಕೇಳೆ ಗುಬಲಾಡಿ, ಕಲ್ಲಂಗಡಿ (ಜೀಶಂಪ) ಹಣ್ಣಿನಕಂಕನರಿ (ಜೀನಹಳ್ಳಿ ಸಿದ್ಧಲಿಂಗಪ್ಪ), ಜನಪದ ಕಥಾಮಂಜರಿ (ಬಿ.ಎಸ್.ಸ್ವಾಮಿ), ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳು (ಡಿ.ಕೆ.ರಾಜೇಂದ್ರ), ಮೂವತ್ತು ಜನಪದ ಕಥೆಗಳು (ಕೆ.ಆರ್.ಸಂಧ್ಯಾರೆಡ್ಡಿ), ಲಂಬಾಣಿ ಜನಪದ ಕಥೆಗಳು (ಸೋಮಣ್ಣ ಹೊಂಗಳ್ಳಿ) ಮುಂತಾದ ಕೆಲವು ಮುಖ್ಯ ಸಂಕಲನಗಳು ಕನ್ನಡ ಜನಪದ ಕಥೆಗಳ ದೊಡ್ಡ ಭಂಡಾರದ ಕಡೆ ನಮ್ಮ ಗಮನವನ್ನು ಸೆಳೆಯುತ್ತವೆ.

ಜನಪದ ಕಥೆಗಳ ಸಂಗ್ರಹ, ವರ್ಗೀಕರಣ ಕರ್ನಾಟಕದಲ್ಲಿ ಬಿರುಸಿನಿಂದ ನಡೆಯುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದ ಯೋಜನೆಗಳ ಫಲವಾಗಿ ಪ್ರತಿ ಜಿಲ್ಲೆಯ ಜನಪದ ಕಥೆಗಳೂ ಸಂಗ್ರಹಗೊಳ್ಳುತ್ತಿವೆ. ಸಂಗ್ರಹಗೊಂಡ ಸಾಮಗ್ರಿಯನ್ನು ಶಾಸ್ತ್ರೀಯ ಅಧ್ಯಯನಕ್ಕೆ ಬಳಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಆಯಾ ಸಂಕಲನಗಳಲ್ಲಿಯೇ ಜನಪದ ಕಥೆಗಳ ವ್ಯಾಪಕ ಹಿನ್ನೆಲೆ, ಭಾಷಿಕ ಮೌಲ್ಯ, ಸಾಹಿತ್ಯಕ ಮೌಲ್ಯ, ವಿಶ್ವಮಾದರಿಗಳ ವೈಶಿಷ್ಟ್ಯ, ಸ್ಥಳೀಯ ರೂಪಗಳ ಸೊಗಸು ಮುಂತಾದುವನ್ನು ಕುರಿತು ಅಭ್ಯಾಸಪೂರ್ಣ ಪ್ರಸ್ತಾವನೆಗಳನ್ನು ಬರೆಯಲಾಗಿದೆ. ಆಶಯಗಳು, ವರ್ಗಗಳು ಮತ್ತು ರಚನಾತತ್ತ್ವದ ಹಿನ್ನೆಲೆಯಲ್ಲಿ ಜನಪದ ಕಥೆಗಳನ್ನು ವಿಶ್ಲೇಷಿಸಲೂ ಸಾಕಷ್ಟು ಸಾಮಗ್ರಿ ಲಭ್ಯವಾಗುತ್ತಿದೆ. (ಜೆ.ಎಸ್.ಪಿ.)

**ಜನಪದ ಕಾವ್ಯ :** ವಿಶ್ವದ ಎಲ್ಲ ಸಂಸ್ಕೃತಿಗಳಲ್ಲೂ ಗದ್ಯಾತ್ಮಕ ಹಾಗೂ ಪದ್ಯಾತ್ಮಕ ಜನಪದ ಸಾಹಿತ್ಯ ಕಂಡುಬರುತ್ತದೆ. ಗದ್ಯಾತ್ಮಕ ಜನಪದ ಸಾಹಿತ್ಯವನ್ನು ಪುರಾಣ, ಐತಿಹ್ಯ ಹಾಗೂ ಕಟ್ಟುಕಥೆಗಳೆಂದು ವಿಂಗಡಿಸಲಾಗುತ್ತದೆ. ಪದ್ಯಾತ್ಮಕ ಜನಪದ ಸಾಹಿತ್ಯ ಗೀತೆ, ಲಾವಣಿ, ಖಂಡಕಾವ್ಯ ಹಾಗೂ ದೀರ್ಘ ಕಾವ್ಯಗಳ ಮೊತ್ತವನ್ನು ಒಳಗೊಂಡಿದೆ. ಈ ಪದ್ಯಸಾಹಿತ್ಯದ ಅತ್ಯಂತ ಗಮನಾರ್ಹ ಭಾಗವೇ ಜನಪದ ಕಾವ್ಯಪ್ರಕಾರ. ಜನಪದ ಕಾವ್ಯ ಪದ್ಯ ಹಾಗೂ ಗದ್ಯಗಳೆರಡರಲ್ಲಿಯೂ ಇರಬಹುದು. ಗದ್ಯ ಪದ್ಯಮಿಶ್ರಿತವಾದ ಚಂಪೂರೀತಿಯ ಕಾವ್ಯವೂ ಆಗಿರಬಹುದು. ಅತ್ಯಂತ ಸಂಗ್ರಹವಾದ ಕಥನಗೀತೆ ಅಥವಾ ಲಾವಣಿಗಳನ್ನು ಬೇರ್ಪಡಿಸಿ ಇದಕ್ಕಿಂತ ವ್ಯಾಪ್ತಿಯಲ್ಲಿ ವೈವಿಧ್ಯದಲ್ಲಿ ಭಿನ್ನವಾಗಿ ನಿಲ್ಲುವ ಹಾಡ್ಗತೆಗಳನ್ನೆಲ್ಲ ಜನಪದ ಕಾವ್ಯ ಎಂದು ಪರಿಗಣಿಸಿಕೊಂಡು ಪರಿಶೀಲಿಸಬಹುದು.

ಜನಪದ ಕಾವ್ಯಗಳನ್ನು ಸಾಮಾನ್ಯವಾಗಿ ಷ್ಯಾಮನ್ (ಮಾಂತ್ರಿಕ, ಅಭಿಚಾರಿ) ಸಂಬಂಧ ಕಾವ್ಯಗಳು ವೀರಕಾವ್ಯಗಳು, ರಮ್ಯಕಾವ್ಯಗಳು ಹಾಗೂ ಚಾರಿತ್ರಿಕ ಕಾವ್ಯಗಳು ಎಂದು ನಾಲ್ಕು ಪ್ರಮುಖವರ್ಗಗಳಲ್ಲಿ ವಿಂಗಡಿಸಲಾಗಿದೆ. ದೇವತೆಗಳು, ಪ್ರೇತಗಳು, ಮೊದಲಾದವುಗಳೊಡನೆ ತನಗೆ ಸಂಪರ್ಕವಿದೆಯೆಂದು ಹೇಳಿಕೊಳ್ಳುವ ಉಪಾಸಕ ಅಥವಾ ಅರ್ಚಕ ಅಥವಾ ವೈದ್ಯನ ಸುತ್ತ, ಹರಿಯುವ ಈ ಷಾಮನಿಸ್ಟಿಕ್ ಪಂಥದ ಕಾವ್ಯಗಳಲ್ಲಿ ಮಾಂತ್ರಿಕತೆ ಹಾಗೂ ಅತಿಮಾನುಷ ಘಟನೆಗಳು ಹೆಚ್ಚು. ವೀರಕಾವ್ಯಗಳಲ್ಲಿ ವೀರ ಪರಾಕ್ರಮಗಳಿಗೆ ಆದ್ಯತೆ ಹೆಚ್ಚು. ರಮ್ಯಕಾವ್ಯಗಳಲ್ಲಿ ಪ್ರೇಮ ಹಾಗೂ ಅದ್ಭುತಸಾಹಸಗಳು ಮೇಳವಿಸಿರುತ್ತವೆ. ಚರಿತ್ರೆಯ ಘಟನೆಯೊಂದನ್ನು ಅವಲಂಬಿಸಿ ಬೆಳೆದುಕೊಂಡಿರುವುದೇ ಚಾರಿತ್ರಿಕ ಕಾವ್ಯ. ಫಿನ್‌ಲೆಂಡ್ ಮತ್ತು ಸ್ಲಾವಿಕ್ ಪ್ರದೇಶಗಳಲ್ಲಿ ಜನಪದ ಕಾವ್ಯಗಳನ್ನು ಹೆಚ್ಚಾಗಿ ಗುರುತಿಸಲಾಗಿದೆ. ಮೇಲಿನ ವರ್ಗೀಕರಣ ಈ ಪ್ರದೇಶದ ಜನಪದ ಕಾವ್ಯಗಳನ್ನು ನಿರ್ದೇಶಿಸಿದರೂ ಜಗತ್ತಿನ ಎಲ್ಲ ಭಾಗದ ಕಾವ್ಯಗಳಿಗೂ ಸ್ಥೂಲವಾಗಿ ಅನ್ವಯವಾಗುತ್ತದೆ. ಈ ಜನಪದ ಕಾವ್ಯಗಳನ್ನು ಸಾಮಾನ್ಯವಾಗಿ ವೃತ್ತಿಗಾಯಕರು ಪರಂಪರಾನುಗತವಾಗಿ ವಾಕ್ಸಂಪ್ರದಾಯದಲ್ಲಿ ಉಳಿಸಿಕೊಂಡು ಬರುತ್ತಾರೆ. ವಾದ್ಯವೊಂದರ ಹಿನ್ನೆಲೆಯಲ್ಲಿ ಇವನ್ನು ಹಾಡಲಾಗುವುದು, ನಿರೂಪಿಸಲಾಗುವುದು. ಕೆಲವು ಸಂದರ್ಭಗಳಲ್ಲಿ ಮಾತ್ರ ಯಾವ ವಾದ್ಯದ ಹಿನ್ನೆಲೆಯೂ ಇಲ್ಲದೆ ಸಾಮಾನ್ಯ ಗಾಯಕರೂ ಹಾಡುವುದುಂಟು. ಕರ್ನಾಟಕದ ಜನಪದ ಕಾವ್ಯಗಳಿಗೂ ಮೇಲಿನ ಅಂಶಗಳು ಅನ್ವಯವಾಗುತ್ತವೆ.

ಕಾವ್ಯ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿರುವ ವೃತ್ತಿಗಾಯಕರ ಪರಂಪರೆ ಮತ್ತು ಜನಪದ ಕಾವ್ಯಗಳ ವ್ಯಾಪಕತೆಯನ್ನು ಗಮನಿಸಿದಾಗ ಕರ್ನಾಟಕವು ಜನಪದ ಕಾವ್ಯಗಳ ದೊಡ್ಡ ಕಣಜವಾಗಿ ಕಂಡುಬರುತ್ತದೆ. ಕಂಸಾಳೆಯವರು, ನೀಲಗಾರರು, ಚೌಡಿಕೆಯವರು, ಗೊರವರು, ಗೊಂದಲಿಗರು, ಜುಂಜಪ್ಪನವರು ಮೊದಲಾದ ಕೆಲವು ವರ್ಗದ ಗಾಯಕರು ಧಾರ್ಮಿಕ ವೃತ್ತಿಗಾಯಕರು ಎಂದು ಪರಿಗಣಿಸಲ್ಪಟ್ಟಿದ್ದಾರೆ. ದೊಂಬಿದಾಸರು, ಹೆಳವರು, ತೆಲುಗು ಬಣಜಿಗರು, ಕಿನ್ನರಿ ಜೋಗಿಗಳು, ಕರಪಾಲದವರು, ತಂಬೂರಿಯವರು ಮುಂತಾದ ಅನೇಕ ಬಗೆಯ ಗಾಯಕವರ್ಗವನ್ನು ಲೌಕಿಕ ವೃತ್ತಿಗಾಯಕರು ಎಂದು ಕರೆಯಲಾಗಿದೆ. ಧಾರ್ಮಿಕ ವೃತ್ತಿಗಾಯಕರು ದೈವವೊಂದರ ಹೆಸರಲ್ಲಿ ಜನಪದ ಧರ್ಮಪ್ರಸಾರಕರಾಗಿ ಕೆಲಸ ಮಾಡುವುದರ ಜೊತೆಗೆ ತಮ್ಮ ದೈವದ ಮಹಿಮೆಯನ್ನೂ ಕಾವ್ಯಗಳ ಮೂಲಕ ಪ್ರಸಾರ ಮಾಡುತ್ತಾರೆ. ಮಲೆಯ ಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಎಲ್ಲಮ್ಮನ ಕಾವ್ಯ, ಜುಂಜಪ್ಪನ ಕಾವ್ಯ, ಮೈಲಾರಲಿಂಗನ ಕಾವ್ಯ - ಇವು ಕನ್ನಡದ ಪ್ರಮುಖ ಜನಪದ ಧಾರ್ಮಿಕ ಕಾವ್ಯಗಳು. ಈ ಪಂಚಕಾವ್ಯಗಳೂ ಮುಖ್ಯವಾಗಿ ವೃತ್ತಿಗಾಯಕರಿಗೆ ಸಂಬಂಧಪಡುತ್ತವೆ. ಮಲೆಯ ಮಾದೇಶ್ವರ ಕಾವ್ಯವನ್ನು ಹಾಡುವವರು ದೇವರಗುಡ್ಡರು ಅಥವಾ ಕಂಸಾಳೆಯವರು. ಇವರು ಬೆಂಗಳೂರು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಈ ಜಿಲ್ಲೆಗಳ ಪಶ್ಚಿಮ ಮತ್ತು ಉತ್ತರದ ಭಾಗಗಳನ್ನು ಬಿಟ್ಟರೆ ಮಿಕ್ಕೆಡೆಗಳಲ್ಲೆಲ್ಲ ಮಾದೇಶ್ವರ ಕಾವ್ಯ ಪ್ರಚಲಿತವಾಗಿದೆ. ಕಂಸಾಳೆ ಎಂಬ ಕಂಚಿನ ವಾದ್ಯವನ್ನು ಬಾರಿಸುತ್ತ ಹಲವು ರಾತ್ರಿಗಳು ಈ ಕಾವ್ಯವನ್ನು ಹಾಡಲಾಗುತ್ತದೆ. ಸಾಮಾನ್ಯವಾಗಿ ಮಲೆಯ ಮಾದೇಶ್ವರ ಕಾವ್ಯ ತಾಳುಗತೆ, ಶ್ರವಣದೊರೆಯ ಸಾಲು, ಜುಂಜೇಗೌಡನ ಸಾಲು, ಶಂಕಮ್ಮನ ಸಾಲು, ಇಕ್ಕೇರಿ ದೇವಮ್ಮನ ಸಾಲು, ಬೇವಿನ ಕಾಳಿ ಸಾಲು, ಸರಗೂರಪ್ಪನ ಸಾಲು ಎಂಬ ಏಳು ಭಾಗಗಳಲ್ಲಿ ಕಂಡುಬರುತ್ತದೆ. ಈ ಏಳು ಸಾಲುಗಳು ಅಥವಾ ಕವಲುಗಳು ಒಂದೊಂದು ಸ್ವತಂತ್ರ ಖಂಡಕಾವ್ಯಗಳಂತೆ ಬೇರೆ ಬೇರೆಯಾಗಿಯೇ ಇವೆ. ಮಾದೇಶ್ವರ ಕಾವ್ಯವೃತ್ತದ ಈ ಕವಲುಗಳಲ್ಲಿ ಯಾವ ಕಥೆ ಎಲ್ಲಿ ಬೇಕಾದರೂ ಹಿಂದು ಮುಂದಾಗಬಹುದು. ಆದರೂ ಮೇಲಿನಂತೆ ಒಂದು ಕ್ರಮಬದ್ಧ ಸೂತ್ರವನ್ನು ಹಾಡುಗಾರರೂ ಗುರುತಿಸುತ್ತಾರೆ. ಈ ಏಳು ಭಾಗಗಳನ್ನೂ ಒಂದು ಮೇಳದಲ್ಲಿ ಅಥವಾ ಒಂದು ರಾತ್ರಿಯಲ್ಲಿ ಹಾಡಲು ಸಾಧ್ಯವಾಗುವುದಿಲ್ಲ. ಏಳು ರಾತ್ರಿಗಳೇ ಬೇಕಾಗುತ್ತವೆ. ಭಕ್ತರ ಅಥವಾ ಆಸಕ್ತರ ಕೋರಿಕೆಯಂತೆ ಅಗತ್ಯವಾದ ಭಾಗವನ್ನು ಮಾತ್ರ ಆರಿಸಿಕೊಂಡು ಇವರು ಹಾಡುತ್ತಾರೆ. ಅಖಂಡ ಗುಣ ಈ ಕಾವ್ಯಕ್ಕೆ ಇಲ್ಲವಾದ್ದರಿಂದ ಮಹಾಕಾವ್ಯದ ವ್ಯಾಪ್ತಿಗೆ ಒಳಪಡಿಸುವುದು ಕಷ್ಟವಾಗುತ್ತದೆಯಾದರೂ ಎಲ್ಲ ಕವಲುಗಳಲ್ಲಿಯೂ ಮಾದೇಶ್ವರರು ಇರುವುದರಿಂದ, ಅವರ ಮಹಿಮೆಗಳು, ಪವಾಡಗಳು ಎಲ್ಲೆಡೆಯಲ್ಲಿಯೂ ವಿಜೃಂಭಿಸುವುದರಿಂದ ಇದನ್ನು ಒಂದು ಸಮಗ್ರ ಕಾವ್ಯವೆಂದೇ ಪರಿಗಣಿಸಬಹುದು. ಮಲೆಯ ಮಾದೇಶ್ವರ ಕಾವ್ಯ ನಮ್ಮ ಜನಪದ ಕಾವ್ಯಗಳಲ್ಲೆಲ್ಲ ವಿಸ್ತಾರವಾದುದು. ವ್ಯಾಪಕವಾದುದು. ಏಳು ನೂರು ವರ್ಷಗಳ ಹಿಂದೆ ಮಹಿಮಾಪುರುಷರಾಗಿ ಅವತರಿಸಿದ ಮಾದೇಶ್ವರರು ಕಲ್ಯಾಣದ ಶರಣ ಪರಂಪರೆಯ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿಯೇ ಗುರುತಿಸಲ್ಪಟ್ಟಿದ್ದಾರೆ. ದಕ್ಷಿಣದಿಂದ ಉತ್ತರದ ಕಲ್ಯಾಣಕ್ಕೆ ಹೋಗಿ, ಶರಣ ಕೇಂದ್ರವನ್ನು ಸಂದರ್ಶಿಸಿ ಮತ್ತೆ ದಕ್ಷಿಣಕ್ಕೆ ಬಂದು, ತಮ್ಮದೇ ಆದ ಭಕ್ತ ಪರಂಪರೆಯನ್ನು ಬೆಳೆಸಿಕೊಳ್ಳುತ್ತ ಪೂರ್ವಘಟ್ಟಗಳ ನಡುವೆ ನೆಲಸಿದಂತೆ ಜನಪದ ಕಾವ್ಯಗಳಿಂದ ವ್ಯಕ್ತವಾಗುತ್ತದೆ. ಈ ನೆಲೆ ಮುಂದೆ ಮಲೆಯ ಮಾದೇಶ್ವರ ಕ್ಷೇತ್ರವೆಂದು ಹೆಸರಾಯಿತು.

ಮಾದೇಶ್ವರ ಕಾವ್ಯದ ತಾಳುಗತೆ ಮೇಲಿನ ವಿಷಯಗಳನ್ನು ಪ್ರಸ್ತಾಪಿಸುತ್ತದೆ. ಮಾದೇಶ್ವರರು ಇಲ್ಲಿ ನೆಲೆಸಿದ ಮೇಲೆ ಭಕ್ತರನ್ನು ಪಡೆದುಕೊಳ್ಳುವ ಸಂದರ್ಭಗಳು ಬರುತ್ತವೆ. ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವ ಹೊಣೆ ಅವರದಾಗುತ್ತದೆ. ಆಲಂಬಾಡಿ ಜುಂಜೇಗೌಡ, ಸರಗೂರಪ್ಪ ಇವರನ್ನು ಭಕ್ತರನ್ನಾಗಿ ಪಡೆದುಕೊಂಡ ಸನ್ನಿವೇಶಗಳು ಎರಡು ಅಪೂರ್ವ ಕಥಾನಕಗಳಾಗಿ ಮೂಡಿವೆ. ಬೇವಿನಕಾಳಿಯ ಪ್ರಸಂಗ ಹಾಗೂ ಇಕ್ಕೇರಿ ದೇವಮ್ಮನ ಪ್ರಸಂಗ ದುಷ್ಟ ಶಿಕ್ಷಣದ ಹಿನ್ನೆಲೆಯಲ್ಲಿ ಮೂಡಿಬಂದ ಕಥಾನಕಗಳು. ಶಂಕಮ್ಮನ ಸಾಲು ಶಿಷ್ಟ ರಕ್ಷಣೆಯನ್ನು ಪ್ರತಿಪಾದಿಸುತ್ತದೆ.

ಮಾದೇಶ್ವರ ಕಾವ್ಯದ ಅತ್ಯಂತ ಮುಖ್ಯವಾದ ಪ್ರಸಂಗ ಶ್ರವಣ ದೊರೆ ಸಾಲು. ಶೈವ ಹಾಗೂ ಜೈನಧರ್ಮಗಳ ಸಂಘರ್ಷವೊಂದನ್ನು ಚಿತ್ರಿಸುವ ಈ ಪ್ರಸಂಗದಲ್ಲಿ ಮಾದೇಶ್ವರರು ತೋರುವ ಕೌಶಲ, ಸಾಮಯಿಕ ಪ್ರಜ್ಞೆ ಹಾಗೂ ಶ್ರವಣವಧೆಯ ಸಾಹಸಗಳು ರೋಮಾಂಚಕಾರಕವಾಗಿ ಮೂಡಿಬಂದಿವೆ. ದೇವತೆಗಳನ್ನೆಲ್ಲ ಶ್ರವಣ ತನ್ನ ಸೆರೆಯಲ್ಲಿಟ್ಟುಕೊಂಡಿದ್ದು, ಅವರ ಬಿಡುಗಡೆಗಾಗಿಯೇ ಮಾದೇಶ್ವರರು ಅವತಾರವೆತ್ತಿದರು ಎಂಬಂತೆ ಈ ಭಾಗ ಮೂಡಿಬಂದಿದೆ.

ಮಾದೇಶ್ವರರ ಕಾವ್ಯ ಹಲವು ದೃಷ್ಟಿಗಳಿಂದ ಗಮನಾರ್ಹವಾದದ್ದು. ಶಿಷ್ಟಧರ್ಮಗಳಿಂದ ಭಿನ್ನವಾದ ಜನಪದ ಧರ್ಮವೊಂದರ ಪ್ರತಿಪಾದಕರಾಗಿ ಮಾದೇಶ್ವರರು ಕಾಣಿಸಿಕೊಂಡರೆಂಬ ದೃಷ್ಟಿಯಿಂದ ಈ ಕಾವ್ಯವನ್ನು ವಿಶೇಷ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಶಕ್ತಿವತ್ತಾದ ಪ್ರಾದೇಶಿಕ ಭಾಷೆಯ ಸೊಗಡು, ಪಾತ್ರಗಳ ಸ್ವಭಾವ ವೈಚಿತ್ರ, ಅದ್ಭುತ ವರ್ಣನೆಗಳು ಇವನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸಿದಾಗ, ಧಾರ್ಮಿಕ ಚೌಕಟ್ಟಿನಿಂದ ಪವಾಡಗಳ ಸಂಕೋಲೆಯಿಂದ ಈ ಕಾವ್ಯ ಹೊರಗೆ ನಿಂತು ಅತ್ಯಪೂರ್ವ ಜನಪದ ಕಾವ್ಯವಾಗಿ ನಿಲ್ಲುತ್ತದೆ.

ಮಾದೇಶ್ವರ ಸಂಪ್ರದಾಯಕ್ಕೆ ಸರಿಸಾಟಿಯಾಗಿ, ಸಾಮಾನ್ಯವಾಗಿ ಒಂದೇ ಪ್ರದೇಶದಲ್ಲಿ ಪ್ರಚಲಿತವಾಗಿರುವ ಕಾವ್ಯ ಸಂಪ್ರದಾಯವೆಂದರೆ ನೀಲಗಾರರದು. ಇವರು ಮಳವಳ್ಳಿ, ತಾಲ್ಲೂಕಿನ ಮಂಟೇಸ್ವಾಮಿ ಮಠಕ್ಕೆ ಸಂಬಂಧಪಡುತ್ತಾರೆ. ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲ್ಲೂರಿನ ಸಿದ್ಧಪ್ಪಾಜಿ ಕ್ಷೇತ್ರ, ಕೃಷ್ಣರಾಜನಗರ ತಾಲ್ಲೂಕಿನ ಕಪ್ಪಡಿ ರಾಚಪ್ಪಾಜಿ ಕ್ಷೇತ್ರಗಳೂ ಇವರಿಗೆ ಸಂಬಂಧಪಡುತ್ತವೆ. ಮಂಟೇಸ್ವಾಮಿ ಸಂಪ್ರದಾಯದ ಮೂಲಗುರು ಮಂಟೇಸ್ವಾಮಿ ಎಂಬ ಧರ್ಮ ಪ್ರಸಾರಕರು. ಇವರು ಜನಪದ ಧರ್ಮವೊಂದನ್ನು ಅವಲಂಬಿಸಿ ಅದರ ಪ್ರಸಾರಕ್ಕಾಗಿ ಹೊರಟು ಒಕ್ಕಲನ್ನು ಪಡೆಯುತ್ತ ಉತ್ತರದ ಕಲ್ಯಾಣದ ಕಡೆಯಿಂದ ದಕ್ಷಿಣದ ಬೊಪ್ಪಗೌಡನಪುರಕ್ಕೆ ಬಂದವರು. ಇವರ ಮುಖ್ಯ ಶಿಷ್ಯರು ರಾಚಪ್ಪಾಜಿ ಮತ್ತು ಸಿದ್ಧಪ್ಪಾಜಿ. ಈ ಮೂವರು ಮಹಾಮಹಿಮರಿಗೂ ಸಂಬಂಧಪಟ್ಟಂತೆ ರಚಿತವಾಗಿರುವ ಮಂಟೇಸ್ವಾಮಿ ಕಾವ್ಯ ಧರೆಗೆ ದೊಡ್ಡವರ ವಚನ (ತಾಳುಗತೆ), ಸಿದ್ದಪ್ಪಾಜಿ ವಚನ, ಹಲಗೂರು ಪವಾಡ, ರಾಚಪ್ಪಾಜಿ ವಚನ, ಚಿಕ್ಕಲ್ಲೂರು ಸಾಲು ಎಂಬ - ಐದು ಕವಲುಗಳಾಗಿ ಒಡೆಯುತ್ತದೆ. ಮಾದೇಶ್ವರ ಕಾವ್ಯದಲ್ಲಿರುವ ಏಕಸೂತ್ರತೆಯ ತೊಡಕು ಈ ಕಾವ್ಯದಲ್ಲಿಲ್ಲ. ಸುಸಂಬದ್ಧವಾಗಿ ಸಮಗ್ರವಾಗಿ ಮೂಡಿಬಂದಿದೆ. ಕಲ್ಯಾಣದಿಂದ ಆರಂಭವಾಗುವ ಈ ಕಾವ್ಯ ಮೂಲಗುರುವಿನ ಜೊತೆಯಲ್ಲಿಯೇ ದಕ್ಷಿಣದತ್ತ ಸಾಗಿ ಅನಂತರ ಪೂರ್ವಪಶ್ಚಿಮಗಳಿಗೆ ವ್ಯಾಪಿಸಿ, ಚಿಕ್ಕಲ್ಲೂರು ಕಪ್ಪಡಿಗಳಲ್ಲಿ ನಿಲುಗಡೆಯನ್ನು ಪಡೆಯುತ್ತದೆ. ಮಂಟೇಸ್ವಾಮಿಗಳು ದಾರಿಯುದ್ದಕ್ಕೂ ಶಿಷ್ಯರನ್ನು ಪಡೆದ ರೀತಿ, ಸಿದ್ಧಪ್ಪಾಜಿಯವರನ್ನು ಸ್ವೀಕರಿಸಿದ ಬಗೆ, ಸಿದ್ದಪ್ಪಾಜಿಯವರು ಹಲಗೂರು ಪಾಂಚಾಳರ ಸೊಕ್ಕನ್ನು ಮುರಿದ ವೈಖರಿ, ಗುರು ಪಾತಾಳಬಾವಿಯಲ್ಲಿ ಪವಡಿಸಿದ ಮೇಲೆ ಶಿಷ್ಯರಿಬ್ಬರೂ ಒಂದೊಂದು ತಪೋಭೂಮಿಯನ್ನು ಅರಸಿಕೊಂಡು ಹೋದ ರೀತಿ - ಇದು ಈ ಕಾವ್ಯದ ಮೂಲ ಬಂಡವಾಳ. ಇದೊಂದು ಧಾರ್ಮಿಕ ಕಾವ್ಯವೇ ಆದರೂ ಸಿದ್ಧಪ್ಪಾಜಿಯಂಥ ಉಜ್ವಲ ಪಾತ್ರವೊಂದರಿಂದಾಗಿ ಉನ್ನತ ಕಾವ್ಯವಾಗಿ ರೂಪುಗೊಂಡಿದೆ. ಸಿದ್ಧಪ್ಪಾಜಿ ಮಂಟೇಸ್ವಾಮಿಗಳ ಶಿಷ್ಯರಾದ ಸಂದರ್ಭ, ಹಲಗೂರು ಪಾಂಚಾಳರನ್ನು ಅವರು ಎದುರಿಸಿದ ಸಂದರ್ಭಗಳು ಅತ್ಯಂತ ಶಕ್ತಿವತ್ತಾಗಿ ಮೂಡಿಬಂದಿದ್ದು, ಕಾವ್ಯಕ್ಕೆ ಶೋಭೆಯನ್ನು ತಂದಿವೆ. ನಾಗವೀಣೆ ಎಂದು ಕರೆಯಲಾಗುವ ಒಂದು ಬಗೆಯ ಮಟ್ಟಸ ತಂಬೂರಿ ಈ ಕಾವ್ಯ ಸಂಪ್ರದಾಯದವರ ಮುಖ್ಯ ವಾದ್ಯ.

ಸವದತ್ತಿ ಎಲ್ಲಮ್ಮನಿಗೆ ಸಂಬಂಧಿಸಿದಂತೆ ಚೌಡಿಕೆಯವರು, ಗೊಂದಲಿಗರು ಎಂಬ ಎರಡು ವರ್ಗದ ಗುಡ್ಡರು ಕಂಡುಬರುತ್ತಾರೆ. ಚೌಡಿಕೆ ಎಂಬ ವಿಶಿಷ್ಟ ವಾದ್ಯವನ್ನು ಹಿಡಿದವರೇ ಚೌಡಿಕೆಯವರು. ಇವರು ಎಲ್ಲಮ್ಮ ಕ್ಷೇತ್ರಕ್ಕೆ ಮಾತ್ರ ನಡೆದುಕೊಳ್ಳುವ ಧಾರ್ಮಿಕ ಪ್ರತಿನಿಧಿಗಳು. ಗೊಂದಲಿಗರು ಎಲ್ಲಮ್ಮನ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ ತುಳಜಾ ಭವಾನಿ, ಕೊಲ್ಲಾಪುರದಮ್ಮ ಮುಂತಾದವರಿಗೂ ನಡೆದುಕೊಳ್ಳುತ್ತಾರೆ. ಆದರೆ ಈ ಎರಡು ಸಂಪ್ರದಾಯದವರೂ ಎಲ್ಲಮ್ಮನ ಕಾವ್ಯವನ್ನು ಹಾಡುತ್ತಾರೆ.

ಎಲ್ಲಮ್ಮನ ಕಾವ್ಯ ಸ್ತ್ರೀಪಾತ್ರ ಪ್ರಧಾನವಾದ ಕನ್ನಡದ ಏಕಮಾತ್ರ ಧಾರ್ಮಿಕ ಕಾವ್ಯ. ಈ ಕಾವ್ಯದಲ್ಲಿ ಜನಪದ ಮೂಲದ ಎಲ್ಲಮ್ಮನ ಕಥೆ, ಪುರಾಣ ಮೂಲದ ಎಲ್ಲಮ್ಮನ ಕಥೆ ಎಂಬ ಎರಡು ಕಥಾಸಂಪ್ರದಾಯಗಳು ಕಂಡುಬರುತ್ತವೆ. ಜನಪದ ಮೂಲದ ಎಲ್ಲಮ್ಮನ ಕಥೆ ಚೌಡಿಕೆಯವರಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಶಿವನ ವರದಿಂದ ಹುಟ್ಟಿದ ಓರಂಗಲ್ಲು ರಾಯ ಅಪಾರ ಪ್ರತಾಪದಿಂದ ಮೆರೆಯುತ್ತ ಅಜ್ಞಾತ ನೆಲೆಯಲ್ಲಿ ತಪೋರೂಢಳಾಗಿದ್ದ ಮಹಾದೇವಿ ಎಲ್ಲಮ್ಮನನ್ನೇ ವರಿಸಲು ಪ್ರಯತ್ನಿಸುತ್ತಾನೆ. ಅವನ ಸೊಕ್ಕನ್ನು ಮುರಿಯಲಾಗಿಯೇ ಎಲ್ಲಮ್ಮ ಓರಂಗಲ್ಲಿನತ್ತ ನಡೆದು, ಜಾಣೆ ಮಾತಂಗಿಯನ್ನು ಕೂಡಿಕೊಂಡು, ಕರ್ನಾಟಕದ ಸಮಸ್ತ ದೈವಗಳನ್ನೂ ತನ್ನ ನೆರವಿಗೆ ಪಡೆದು ಓರಂಗಲ್ಲುರಾಯನ ಸೊಕ್ಕನ್ನು ಮುರಿದು ತನ್ನ ಗುಡ್ಡನನ್ನಾಗಿ ಸ್ವೀಕರಿಸುತ್ತಾಳೆ. ಚೌಡಿಕೆ ವಾದ್ಯದ ಗತ್ತಿನಲ್ಲಿ ಸಾಗುವ ಈ ಕಾವ್ಯ ಉದ್ದಕ್ಕೂ ರಸ ರೋಮಾಂಚನವನ್ನುಂಟುಮಾಡುತ್ತ, ಪಾತರಲಿಂಗನ ಪ್ರಸಂಗದಲ್ಲಿ ಭವ್ಯತೆಯನ್ನು ಎಟುಕಿಸಿಕೊಳ್ಳುತ್ತದೆ. ಇದೊಂದು ಅಪೂರ್ವವಾದ ರೀತಿಯ ವೀರಕಾವ್ಯವೂ ಆಗಿ ಮೂಡಿಬಂದಿದೆ. ಇಲ್ಲಿನ ಯುದ್ಧ ಸನ್ನಿವೇಶಗಳು ಕುತೂಹಲವನ್ನು ಕೆರಳಿಸುತ್ತವೆ. ಪುರಾಣ ಮೂಲದ ಕಥೆ ಎಲ್ಲಮ್ಮನ ಮೂಲವನ್ನು ರೇಣುಕೆಯೊಡನೆ ಸಮೀಕರಿಸುತ್ತದೆ. ಜಮದಗ್ನಿ ಪರಶುರಾಮ, ಕಾರ್ತವೀರ್ಯಾರ್ಜುನ ಮುಂತಾದವರ ಪ್ರಸ್ತಾಪವೂ ಇಲ್ಲಿ ಕಂಡುಬರುತ್ತವೆ. ಈ ಕಥೆಯೂ ಆಕರ್ಷಕವಾಗಿ ಮೂಡಿಬಂದಿದೆ.

ಕಾಡುಗೊಲ್ಲರ ಅಧಿದೈವ ಜುಂಜಪ್ಪನ ಹಿನ್ನೆಲೆಯಲ್ಲಿ ಜನಪದ ಕಾವ್ಯವೊಂದು ಸೃಷ್ಟಿಯಾಗಿದೆ. ಚಿಕ್ಕನಾಯಕನಹಳ್ಳಿಯ ಸಮೀಪದ ಹಾಗಲವಾಡಿ, ಶಿರಾ ಸಮೀಪದ ಕಳವೇರಹಳ್ಳಿ ಹಾಗೂ ಬೇವಿನಹಳ್ಳಿಗಳು ಈ ಕಾವ್ಯದ ಮುಖ್ಯ ನೆಲೆಗಳು. ಕಳವೇರಹಳ್ಳಿಯನ್ನು ಕೇಂದ್ರ ಮಾಡಿಕೊಂಡು, ಜುಂಜಪ್ಪನ ಕಾವ್ಯ ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಕಾವ್ಯದುದ್ದಕ್ಕೂ ವಿಸ್ಮಯಕಾರಕ ಘಟನೆಗಳಿಗೆ ಕಾರಣವಾದ ಜುಂಜಪ್ಪನ ದನಗಳು ಮೇದ ಕಾವಲುಗಳು ಈ ಎಲ್ಲ ಜಿಲ್ಲೆಗಳಲ್ಲೂ ಕಾಣಬರುತ್ತವೆ. ಜುಂಜಪ್ಪನ ಸಂಪ್ರದಾಯಕ್ಕೆ ಸೇರಿದ ಗುಡ್ಡರನ್ನು ಗಣೆಯವರು ಎಂದು ಕರೆಯಲಾಗಿದೆ. ಗಣೆ ಎಂದು ಕರೆಯಲ್ಪಡುವ ಒಂದು ದೊಡ್ಡ ಕೊಳಲು ಇವರ ಮುಖ್ಯ ವಾದ್ಯ. ಇದರ ಹಿನ್ನೆಲೆಯಲ್ಲಿ ಕಾವ್ಯವನ್ನು ಹಾಡಿಕೊಂಡು ಹೋಗಲಾಗುವುದು. ಜುಂಜಪ್ಪನ ಕಾವ್ಯ ಹೆಚ್ಚಾಗಿ ಕಂಡುಬರುವುದು ಗಣೆಯವರಲ್ಲಿ, ಇನ್ನೂ ಕೆಲವರು ಈ ಕಾವ್ಯವನ್ನು ಹಾಗೆಯೇ ಹಿಮ್ಮೇಳಮುಮ್ಮೇಳಗಳೊಡನೆ ಹಾಡುತ್ತಾರೆ. ಎರಡು ಅಥವಾ ಮೂರು ರಾತ್ರಿಗಳ ಈ ಸುದೀರ್ಘ ಕಾವ್ಯದಲ್ಲಿ ಉತ್ತರ ಸಂಪ್ರದಾಯದ ಜುಂಜಪ್ಪನ ಕಾವ್ಯ ದಕ್ಷಿಣ ಸಂಪ್ರದಾಯದ ಜುಂಜಪ್ಪನ ಕಾವ್ಯ - ಎಂಬ ಎರಡು ಸಂಪ್ರದಾಯಗಳು ಕಂಡುಬಂದಿವೆ. ಎರಡು ಸಂಪ್ರದಾಯಗಳಲ್ಲಿಯೂ ಮೂಲಸಾಮಗ್ರಿ ಒಂದೇ ಆದರೂ ಕಥೆಗಳ ನಡೆ ವಿಭಿನ್ನವಾಗಿದೆ. ಉತ್ತರ ಸಂಪ್ರದಾಯದ ಕಾವ್ಯದ ಪ್ರಕಾರ ದಕ್ಷಿಣ ಸಂಪ್ರದಾಯದ ಕಾವ್ಯಕ್ಕಿಂತ ಜುಂಜಪ್ಪನ ತಾತ ಮುತ್ತಾತರ ಹೆಸರು ವಂಶಾವಳಿ ಬೇರೆಯಾಗುತ್ತದೆ. ದಕ್ಷಿಣ ಸಂಪ್ರದಾಯದ ಕಾವ್ಯದಲ್ಲಿ ಕಥೆಯ ವೈವಿಧ್ಯ ನಮ್ಮ ದೃಷ್ಟಿಯನ್ನು ಸೆಳೆದರೆ ಉತ್ತರ ಸಂಪ್ರದಾಯದ ಕಾವ್ಯದಲ್ಲಿ ಧಾರ್ಮಿಕ ಅಂಶಗಳು ಹೆಚ್ಚು. ಎರಡು ಸಂಪ್ರದಾಯದ ಕಾವ್ಯಗಳನ್ನು ಜುಂಜಪ್ಪನ ಪೂರ್ವಿಕರ ಕಥೆ, ಜುಂಜಪ್ಪ ಹಾಗೂ ಅವನ ತಮ್ಮಂದಿರಾದ ಮಾರ, ಮೈಲರ ಕಥೆ ಎಂಬ ಎರಡು ಪ್ರಧಾನ ಭಾಗಗಳಲ್ಲಿ ಹಾಡಲಾಗುತ್ತದೆ. ಜುಂಜಪ್ಪನ ಪೂರ್ವಿಕರ ಕಥೆ ಸಾಕಷ್ಟು ವಿಸ್ತಾರವಾಗಿಯೇ ಮೂಡಿಬಂದಿದೆ. ಜುಂಜಪ್ಪನ ತಂದೆ, ತಾತ, ಮುತ್ತಾತ ಅವರ ಜೀವನ ವಿವರಗಳನ್ನೊಳಗೊಂಡ ಮೊದಲ ಭಾಗ ಮುಂದಿನ ಕಾವ್ಯ ವಿಸ್ತಾರಕ್ಕೆ ಒಳ್ಳೆಯ ತಳಹದಿಯನ್ನು ರಚಿಸುತ್ತದೆ. ಜುಂಜಪ್ಪನ ಅವತಾರವಾದ ಮೇಲೆ ಏಳುಗೂಡಿನ ದನಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಕಾದುಕೊಂಡು ಅಲ್ಲಲ್ಲಿನ ಸಮಸ್ಯೆಗಳನ್ನು ನಿವಾರಿಸುತ್ತ ಹೋದ ಅಪೂರ್ವ ಸನ್ನಿವೇಶಗಳು ಕಾವ್ಯದುದ್ದಕ್ಕೂ ಬರುತ್ತವೆ. ಜುಂಜಪ್ಪನ ಸೋದರಮಾವಂದಿರು ಬೇರೆಬೇರೆಯವರನ್ನು ಆಶ್ರಯಿಸಿ, ಜುಂಜಪ್ಪ ಮತ್ತು ಅವನ ತಮ್ಮಂದಿರಿಗೆ ಕೊಟ್ಟ ಕಿರುಕುಳಗಳೇ ಈ ಕಾವ್ಯದ ಬಹುಭಾಗವನ್ನು ಆಕ್ರಮಿಸಿಕೊಳ್ಳುತ್ತವೆ. ಯಾವುದಕ್ಕೂ ಜಗ್ಗದ ಸೋದರಳಿಯನಿಗೆ ಅವರು ಮದ್ದನ್ನು ಕೊಡುತ್ತಾರೆ. ಮದ್ದುಂಡು ಮಡಿದ ಜುಂಜಪ್ಪ, ಏಳು ದಿನಕ್ಕೆ ಮತ್ತೆ ಹುಟ್ಟಿ ಬಂದು ಸೋದರಮಾವಂದಿರ ಹಟ್ಟಿಯನ್ನೂ ಅವರನ್ನೂ ಉರಿ ಬಾಣಗಳಿಂದ ನಾಶಮಾಡುತ್ತಾನೆ.

ಕೃಷ್ಣ ಕಥೆಯ ಚೌಕಟ್ಟಿನಲ್ಲಿ ಬರುವ ಈ ಕಾವ್ಯದ ಕಥಾವಸ್ತು ಗೊಲ್ಲ ಸಂಸ್ಕೃತಿಯ ಮೇಲೆ ವಿಶೇಷವಾಗಿ ಬೆಳಕು ಚೆಲ್ಲುತ್ತದೆ. ಜುಂಜಪ್ಪನ ಪಾತ್ರದ ಔನ್ನತ್ಯದ ದೃಷ್ಟಿಯಿಂದ ಕಾವ್ಯದುದ್ದಕ್ಕೂ ಬರುವ ಅದ್ಭುತ ಸನ್ನಿವೇಶಗಳ ದೃಷ್ಟಿಯಿಂದ, ಬಡಮೈಲನಂಥ ಎತ್ತಿನ ಪಾತ್ರದ ಸೊಗಸಿನಿಂದ ಜುಂಜಪ್ಪನ ಕಾವ್ಯ ನಮ್ಮ ಜನಪದ ಕಾವ್ಯಗಳಲ್ಲಿ

ಅಗ್ರಪಂಕ್ತಿಯಲ್ಲಿ ನಿಲ್ಲಬಹುದಾದ ಕಾವ್ಯವೆನಿಸುತ್ತದೆ. ಒಬ್ಬ ಸಾಂಸ್ಕೃತಿಕ ವೀರನನ್ನು ಕುರಿತ ಈ ಕಾವ್ಯ ಎಲ್ಲ ದೃಷ್ಟಿಗಳಿಂದಲೂ ಒಂದು ಜನಪದ ಮಹಾಕಾವ್ಯ ಎನ್ನುವುದರಲ್ಲಿ ಅಡ್ಡಿ ಇಲ್ಲ.

ಗೊರವ ಸಂಪ್ರದಾಯ ಮೈಲಾರ ಕ್ಷೇತ್ರಕ್ಕೆ ಸಂಬಂಧಪಡುತ್ತದೆ. ಈ ಕ್ಷೇತ್ರದ ಗೊರವರು ಕರ್ನಾಟಕದಾದ್ಯಂತ ಕಂಡುಬರುತ್ತಾರೆ. ಇವರಲ್ಲಿಯೂ ದಕ್ಷಿಣ ಸಂಪ್ರದಾಯ ಹಾಗೂ ಉತ್ತರ ಸಂಪ್ರದಾಯಗಳನ್ನು ಕಾಣಬಹುದು. ದಕ್ಷಿಣ ಸಂಪ್ರದಾಯದ ಗೊರವರಲ್ಲಿ ಮೈಸೂರು ಜಿಲ್ಲೆಯ ಮುಡುಕುತೊರೆ ಕ್ಷೇತ್ರಕ್ಕೆ ಸಂಬಂಧಪಡುವ ಪಾರ್ವತೀ ಗೊರವರು ಮುಡುಕುತೊರೆ ಮಲ್ಲಿಕಾರ್ಜುನ ಹಾಗೂ ಪಾರ್ವತಿಯವರಿಗೆ ಸಂಬಂಧಪಟ್ಟ ಕಾವ್ಯವೊಂದನ್ನು ಹಾಡುತ್ತಾರೆ. ಉಳಿದವರು ಮೈಲಾರಲಿಂಗ ಕೋಮಲೆ ಹಾಗೂ ಮೈಲಾರಲಿಂಗ ಮಣಿಮಲ್ಲಾಸುರನನ್ನು ಕೊಂದ ಕಥೆಗಳನ್ನು ಹಾಡುಗಬ್ಬದ ರೂಪದಲ್ಲಿ ಹಾಡುತ್ತಾರೆ. ಮಲ್ಲಿಕಾರ್ಜುನ-ಪಾರ್ವತಿ ಇವರ ಕಥೆ ಗಂಗೆ-ಗೌರಿ ಪ್ರಸಂಗದ ಹಿನ್ನೆಲೆಯಲ್ಲಿ ಮೂಡಿನಿಂತ ರಚನೆ. ಕೋಮಲೆಯ ಪ್ರಸಂಗ ಮೈಲಾರಲಿಂಗ ಗೊರವನ ರೂಪಿನಲ್ಲಿ ಹೋಗಿ ಕೋಮಲೆಯನ್ನು ಹೊತ್ತುತಂದುದನ್ನು ಚಿತ್ರಿಸುತ್ತದೆ. ಮಣಿಮಲ್ಲಾಸುರ ಸಂಹಾರ ಕನ್ನಡದ ಇತರ ಧಾರ್ಮಿಕ ಜನಪದ ಕಾವ್ಯಗಳಂತೆ ಮೈಲಾರಲಿಂಗನ ಅವತಾರದ ಹಿನ್ನೆಲೆಯನ್ನೂ ಅವನ ಸಾಹಸವನ್ನೂ ಬಣ್ಣಿಸುತ್ತದೆ.

ಕನ್ನಡ ಜನಪದ ಕಾವ್ಯಗಳಲ್ಲಿ ಮೇಲಿನ ಐದು ಕಾವ್ಯಗಳೂ ಆಯಾ ಧಾರ್ಮಿಕ ದೃಷ್ಟಿಯಿಂದ ಗಣನೀಯವೆನಿಸುವಂತೆಯೇ ಕಾವ್ಯದೃಷ್ಟಿಯಿಂದಲೂ ಮುಖ್ಯವೆನಿಸುತ್ತವೆ. ವಿಸ್ತಾರದ ದೃಷ್ಟಿಯಿಂದಲೂ ಈ ಕಾವ್ಯಗಳಿಗೆ ಸರಿಸಮಾನ ಕಾವ್ಯಗಳು ಕಡಿಮೆ. ಮಾಂತ್ರಿಕ ಆವರಣಗಳು, ಮಹಿಮೆಯ ಪ್ರದರ್ಶನಗಳು, ಪವಾಡಗಳ ಪಂಕ್ತಿಗಳು, ದೈವಿಕ ಸನ್ನಿವೇಶಗಳು - ಇವುಗಳ ನಡುವೆಯೂ ಈ ಕಾವ್ಯಗಳಲ್ಲಿ ಕಾವ್ಯ ಮೌಲ್ಯ ಉಳಿದು ಬಂದಿದ್ದು ಒಂದು ಶ್ರೇಷ್ಠ ಕಾವ್ಯ ಪರಂಪರೆಯನ್ನು ಸ್ಥಾಪಿಸಿದೆ.

ಲೌಕಿಕ ವೃತ್ತಿಗಾಯಕರು ಹಾಡುವ ಲೌಕಿಕ ಕಾವ್ಯಗಳ ಜೊತೆಗೆ ಧಾರ್ಮಿಕ ವೃತ್ತಿಗಾಯಕರು ಹಾಡುವ ಹತ್ತಾರು ಲೌಕಿಕ ಕಾವ್ಯಗಳನ್ನೂ ನಿರ್ಲಕ್ಷಿಸುವಂತಿಲ್ಲ. ಸಾಮಾನ್ಯ ಗಾಯಕರು ಹಾಡುವ ಲೌಕಿಕ ಕಾವ್ಯಗಳನ್ನೂ ಈ ವರ್ಗದಲ್ಲಿಯೇ ಪರಿಗಣಿಸಬೇಕಾಗುತ್ತದೆ. ಕನ್ನಡದಲ್ಲಿ ಲಭ್ಯವಾಗಿರುವ ಕೆಲವು ಪ್ರಮುಖ ಲೌಕಿಕ ಕಾವ್ಯಗಳನ್ನು ಪೌರಾಣಿಕ ಕಾವ್ಯಗಳು, ಐತಿಹಾಸಿಕ ಕಾವ್ಯಗಳು, ದೈವ ಸಂಬಂಧಿ ಪ್ರಣಯ ಕಾವ್ಯಗಳು, ರಮ್ಯ ಕಾವ್ಯಗಳು, ಸ್ತ್ರೀಪಾತ್ರ ಪ್ರಧಾನ ಕಾವ್ಯಗಳು, ಪುರುಷಪಾತ್ರ ಪ್ರಧಾನ ಕಾವ್ಯಗಳು, ವಾಸ್ತವಿಕ ಕಾವ್ಯಗಳು, ಆತ್ಮಾರ್ಪಣೆಯ ಕಾವ್ಯಗಳು — ಎಂದು ವರ್ಗೀಕರಿಸಿಕೊಳ್ಳಬಹುದು. ವಿಶ್ವಕಾವ್ಯಗಳ ವರ್ಗೀಕರಣವನ್ನು ಗಮನಿಸಿದಾಗ ವೀರಕಾವ್ಯಗಳು ಹಾಗೂ ಐತಿಹಾಸಿಕ ಕಾವ್ಯಗಳ ನಡುವೆ ಹೆಚ್ಚು ಅಂತರವನ್ನು ಕಲ್ಪಿಸಲು ಸಾಧ್ಯವಾಗುವುದಿಲ್ಲ. ಕನ್ನಡದಲ್ಲಿ ಲಭ್ಯವಾಗಿರುವ ಶಿವಶರಣರ ಕಾವ್ಯಗಳನ್ನು ಲೌಕಿಕ ಕಾವ್ಯಗಳ ಸಾಲಿನಲ್ಲಿ ವೃತ್ತಿ ಗಾಯಕರು ಹಾಡುವುದರಿಂದ ಸೌಲಭ್ಯದೃಷ್ಟಿಯಿಂದ ಅವುಗಳನ್ನು ಪ್ರತ್ಯೇಕ ವರ್ಗವಾಗಿಯೇ ನೋಡಬೇಕು. ರಮ್ಯ ಕಾವ್ಯಗಳನ್ನುಳಿದು ಉಳಿದ ವರ್ಗಗಳೆಲ್ಲ ಕನ್ನಡ ಜನಪದ ಕಾವ್ಯಗಳ ಜಾಯಮಾನಕ್ಕೆ ಅನುಗುಣವಾಗಿ ಪ್ರತ್ಯೇಕ ವರ್ಗಗಳನ್ನು ಪಡೆದುಕೊಳ್ಳುತ್ತವೆ.

ರಾಮಾಯಣ, ಮಹಾಭಾರತ, ಭಾಗವತ ಹಾಗೂ ಶಿವಕಥೆಗಳ ಸಂಬಂಧದ ವಸ್ತುಗಳನ್ನೊಳಗೊಂಡ ಕಾವ್ಯಗಳನ್ನು ಪೌರಾಣಿಕ ಕಾವ್ಯಗಳೆಂದು ಪರಿಗಣಿಸಲಾಗಿದೆ. ಕನ್ನಡದಲ್ಲಿ ಸಮಗ್ರ ಜನಪದ ರಾಮಾಯಣವಾಗಲಿ, ಮಹಾಭಾರತವಾಗಲಿ ದೊರೆತಿಲ್ಲ. ರಾಮಾಯಣ ಸಂಬಂಧವಾದ ಸಮಗ್ರ ಕಾವ್ಯವೊಂದು ಭಾಗವಂತಿಕೆ ಸಂಪ್ರದಾಯದಲ್ಲಿ ಕಂಡುಬಂದರೂ ಅದು ಹೆಚ್ಚಾಗಿ ಶಿಷ್ಟಮೂಲಕ್ಕೆ ವಾಲುವಂತಿದೆ. ರಾಮಾಯಣದ ಕೆಲವು ಪ್ರಮುಖ ಘಟನೆಗಳ ಮೇಲೆ ನಿಂತ ತುಂಡು ಕಾವ್ಯಗಳು ಅಲ್ಲಲ್ಲಿ ಲಭ್ಯವಾಗಿವೆ. ಅವುಗಳಲ್ಲಿ ಕುಶಲವರ ಕಾಳಗ ಅತ್ಯಂತ ಗಮನಾರ್ಹವಾದುದು.

ಮಹಾಭಾರತಕ್ಕೆ ಸಂಬಂಧಿಸಿದ ಸಮಗ್ರ ಕಾವ್ಯ ವಾಕ್ಸಂಪ್ರದಾಯದಲ್ಲಿ ಕಂಡುಬಂದಿಲ್ಲ. ಕಿನ್ನರಿ ಜೋಗಿಗಳು ಹಾಡುವ ಮಹಾಭಾರತದ ವಿವಿಧ ಭಾಗಗಳನ್ನು ಗಮನಿಸಿದರೆ ಆ ಸಂಪ್ರದಾಯದಲ್ಲಿ ಸಮಗ್ರ ಜನಪದ ಕಾವ್ಯವೊಂದಿತ್ತು ಎಂದು ಊಹಿಸುವ ಸಾಧ್ಯತೆ ಇದೆ. ಭಾಗವತ ಹಾಗೂ ಶಿವಪುರಾಣ ಸಂಬಂಧವಾದ ಲಾವಣಿಗಳು ದೊಂಬಿದಾಸರಲ್ಲಿ ಲಭ್ಯವಾಗಿವೆ. ಗೌರಮ್ಮನ ಮದುವೆ, ಗಂಗೆ ಗೌರಿ ಜಗಳ, ಕೃಷ್ಣ ಕೊರವಂಜಿ ಇಂಥ ಕಿರುಲಾವಣಿಗಳನ್ನು ಸುವಿಸ್ತಾರ ಕಾವ್ಯಗಳ ಸಾಲಿನಲ್ಲಿ ಪರಿಗಣಿಸಲು ಸಾಧ್ಯವಾಗುವುದಿಲ್ಲ.

ಐತಿಹಾಸಿಕ ವಿಷಯವನ್ನು ಆಧರಿಸಿ ರಚಿತವಾದ ಕಾವ್ಯಗಳು ಕನ್ನಡದಲ್ಲಿ ಹೇರಳವಾಗಿ ದೊರೆಯುತ್ತವೆ. ಪಿರಿಯಾಪಟ್ಟಣದ ಕಾಳಗ, ಸರ್ಜಪ್ಪನಾಯಕ, ಮಾಗಡಿ ಕೆಂಪೇಗೌಡ, ಸಂಗೊಳ್ಳಿ ರಾಯಣ್ಣ ಮುಂತಾದ ಕೆಲವು ವಿಶಿಷ್ಟ ಸ್ವರೂಪದ ಕಾವ್ಯಗಳು ಗಮನಾರ್ಹವಾಗಿವೆ. ಪಿರಿಯಾಪಟ್ಟಣದ ಕಾಳಗ ಜನಪದ ಐತಿಹಾಸಿಕ ಕಾವ್ಯಗಳ ಸಾಲಿನ ಒಂದು ನಾಯಕರತ್ನ, ಪಿರಿಯಾಪಟ್ಟಣ ಮತ್ತು ಮೈಸೂರುಗಳ ನಡುವೆ ಒಂದು ಯುದ್ಧದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಈ ಕಾವ್ಯ ಅತ್ಯಂತ ವ್ಯಾಪಕವಾದುದು. ಯುದ್ಧಕ್ಕೆ ಪ್ರೇರಕವಾದ ಸನ್ನಿವೇಶಗಳು, ಯುದ್ಧಸಿದ್ಧತೆ, ಯುದ್ಧವರ್ಣನೆಗಳು, ವೀರರಾಜನ ಶೌರ್ಯಸಾಹಸ ಹಾಗೂ ಸ್ವಾಭಿಮಾನ ಪೂರ್ಣ ಸನ್ನಿವೇಶಗಳು - ಇವುಗಳ ದೃಷ್ಟಿಯಿಂದ ಪಿರಿಯಾಪಟ್ಟಣದ ಕಾಳಗ ಒಂದು ಅತ್ಯುತ್ತಮ ಐತಿಹಾಸಿಕ ಜನಪದಕಾವ್ಯವಾಗಿ ಮೂಡಿದೆ.

ಕರ್ನಾಟಕದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಲ್ಲಲ್ಲಿನ ಅಧಿದೈವಗಳಿಗೆ ಸಂಬಂಧಿಸಿದ ಕೆಲವು ವಿಲಕ್ಷಣ ಪ್ರಣಯ ಸಂಬಂಧಿಯಾದ ವಸ್ತು ಆ ಬಗೆಯ ಜನಪದ ಕಾವ್ಯಗಳ ಸೃಷ್ಟಿಗೆ ಪ್ರೇರಕವಾಗಿದೆ. ಬಿಳಿಗಿರಿರಂಗ, ನಂಜುಂಡೇಶ್ವರ, ಚುಂಚನಗಿರಿ ಭೈರವ, ಮೈಲಾರಲಿಂಗ, ಮೇಲುಕೋಟೆ ಚೆಲುವರಾಯ - ಇವರಿಗೆ ಸಂಬಂಧಿಸಿದಂತೆ ಕಾವ್ಯಗಳು ಸೃಷ್ಟಿಯಾಗಿವೆ. ಈ ದೈವಗಳು ಉಪಪತ್ನಿಯೊಬ್ಬಳೊಡನೆ ಸರಸ ಸಲ್ಲಾಪವಾಡುವುದು, ತಮ್ಮ ಪತ್ನಿಯರ ವಿರಸಕ್ಕೆ ಕಾರಣವಾಗುವುದು, ಅದರಿಂದ ನಾನಾರೀತಿಯ ಕಷ್ಟಗಳನ್ನಾದರೂ ಎದುರಿಸಲು ಸಿದ್ಧವಾಗುವುದು, ಮುಂತಾದ ವಿಷಯಗಳ ಸುತ್ತ ಹೆಣೆದುಕೊಂಡಿರುವ ಈ ಕಾವ್ಯಗಳಲ್ಲಿ ನಂಜಯ್ಯ-ಚಾಮುಂಡಿ ಇವರ ಪ್ರಣಯವನ್ನು ನಿರೂಪಿಸುವ ಕಾವ್ಯ ಎರಡು ಮೂರು ಪ್ರಕಾರಗಳಲ್ಲಿ ಸೃಷ್ಟಿಯಾಗಿದೆ. ಸ್ತ್ರೀಯರ ತ್ರಿಪದಿ ಕಾವ್ಯ, ನೀಲಗಾರರ ಕಾವ್ಯ ಹಾಗೂ ಹೆಳವರ ಕಾವ್ಯಗಳನ್ನು ಇಲ್ಲಿ ಹೆಸರಿಸಬಹುದು. ಚಾಮುಂಡಿ ಪುರಾಣ ಎಂಬ ಹೆಸರಿನಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಈ ಕಾವ್ಯ ಬೆಳವಣಿಗೆಯನ್ನು ಸಾಧಿಸಿದೆ.

ಕನ್ನಡ ಜನಪದಕಾವ್ಯಗಳಲ್ಲಿ ರಮ್ಯಕಾವ್ಯಗಳೂ ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಈ ಕಾವ್ಯಗಳ ಸಾಲಿನಲ್ಲಿ ಅತ್ಯುತ್ತಮ ಕಾವ್ಯ ನೀಲವೇಣಿ; ಬಸವಕುಮಾರ ಲೋಹಿತಕುಮಾರ, ನೀಲಕಂಠ ರೂಪಾವತಿ, ಸಾರಂಗಧರ, ಚೆನ್ನಿಗರಾಮ - ಮುಂತಾದ ಕಾವ್ಯಗಳನ್ನು ಇಲ್ಲಿ ಹೆಸರಿಸಬಹುದು.

ಪುರುಷರ ಮೇಳಗಳಿರುವಂತೆಯೇ ಕರ್ನಾಟಕದಲ್ಲಿ ಸ್ತ್ರೀಯರ ಮೇಳಗಳೂ ಕಂಡುಬರುತ್ತವೆ. ಕೆಲವು ಸುದೀರ್ಘ ಕಾವ್ಯಗಳನ್ನು ಕಂಠಗತ ಮಾಡಿಕೊಂಡ ಸ್ತ್ರೀಯರು ಆಹ್ವಾನದ ಮೇಲೆ ಮನೆಗಳಲ್ಲಿ ಈ ಕಾವ್ಯಗಳನ್ನು ಸಮಗ್ರ ರಾತ್ರಿ ಹಾಡುತ್ತಾರೆ. ಈ ಮೇಳಗಳಲ್ಲಿ ಅನೇಕ ಸುಂದರ ಕಾವ್ಯಗಳು ಗುರುತಿಸಲ್ಪಟ್ಟಿವೆ. ಗುಣಸಾಗರಿ, ಅಣಜಿ ಹೊನ್ನಮ್ಮ, ಬಾಲನಾಗಮ್ಮ ಮುಂತಾದ ಸ್ತ್ರೀ ಪಾತ್ರ ಪ್ರಧಾನ ಕಾವ್ಯಗಳು, ಕಾಳಿಂಗರಾಯ ಮುಂತಾದ ಪುರುಷಪಾತ್ರ ಪ್ರಧಾನ ಕಾವ್ಯಗಳು ಇಲ್ಲಿ ಗಮನಾರ್ಹ. ದುರ್ವಿಧಿಯ ಕೈವಾಡದಲ್ಲಿ ನಾನಾ ದುರಂತಗಳಿಗೆ ಪಕ್ಕಾಗಿ ಸಾವು ನೋವುನ್ನು ಅನುಭವಿಸುವ ದುರ್ದೈವಿಗಳ ಕಥೆಗಳಿವು.

ಕನ್ನಡ ಜನಪದ ಕಾವ್ಯಗಳಲ್ಲಿ ವಾಸ್ತವಿಕ ಕಾವ್ಯಗಳನ್ನೂ ಒಂದು ಪ್ರತ್ಯೇಕ ವರ್ಗದಲ್ಲಿ ಪರಿಗಣಿಸಬೇಕಾಗುತ್ತದೆ. ಬಂಜೆ ಹೊನ್ನಮ್ಮ ಈ ಸಾಲಿನ ಕಾವ್ಯಗಳಲ್ಲಿ ಅತ್ಯುತ್ತಮವಾದುದು. ಮಕ್ಕಳಿಲ್ಲದ ಅದೃಷ್ಟಹೀನ ಸ್ತ್ರೀಯೊಬ್ಬಳು ನಾನಾ ರೀತಿಯ ಮಾನಸಿಕ ವೇದನೆಯನ್ನು ಅನುಭವಿಸುವುದು, ಸಮಾಜದ ಕಣ್ಣಿನಲ್ಲಿ ದೈವದ ಕಣ್ಣಿನಲ್ಲಿ ಆಕೆ ತಿರಸ್ಕಾರಕ್ಕೆ ಗುರಿಯಾಗುವುದು. ಕೊನೆಗೆ ಮಗುವೊಂದನ್ನು ಹಡೆದು ತನ್ನ ಬಂಜೆತನದ ಅಪಯಶಸ್ಸನ್ನು ಹೋಗಲಾಡಿಸುವುದು ಮುಂತಾದ ವಿಷಯಗಳ ಸುತ್ತ ಈ

ಕಾವ್ಯ ವಿಸ್ತಾರವಾಗಿ ಹಬ್ಬಿಕೊಂಡಿದೆ. ಉತ್ತರದೇವಿ ವಾಸ್ತವಿಕ ಜನಪದ ಕಾವ್ಯಗಳಲ್ಲೆಲ್ಲ ಹೆಚ್ಚು ಜನಪ್ರಿಯವಾದುದು.

ತ್ಯಾಗ ಬಲಿದಾನಗಳಿಗೆ ಸಂಬಂಧಿಸಿದ ಅನೇಕ ಜನಪದ ಕಾವ್ಯಗಳು ಕನ್ನಡದಲ್ಲಿ ದೊರೆಯುತ್ತವೆ. ಹೊಸಕೆರೆಯೊಂದಕ್ಕೆ ಸೊಸೆಯನ್ನು ಬಲಿಕೊಡುವುದು, ಗಂಡನನ್ನು ಕಳೆದುಕೊಂಡು ಸತಿ ಮಹಾಸತಿಯಾಗುವುದು ಮುಂತಾದ ವಸ್ತುವನ್ನು ಆಧರಿಸಿದ ಅಸಂಖ್ಯಾತ ಕಾವ್ಯಗಳು ಕನ್ನಡದಲ್ಲಿ ದೊರೆಯುತ್ತವೆ. ಹುಳಿಯಾರು ಕೆಂಚಮ್ಮ, ವೀರ ತಿಮ್ಮವ್ವ, ಗೊಲ್ಲರ ನಾಗಮ್ಮ, ಈರೋಬಿ ಮುಂತಾದ ಕಾವ್ಯಗಳು ಸಂಗ್ರಹವಾಗಿಯೂ ವಿಸ್ತಾರವಾಗಿಯೂ ದೊರೆಯುತ್ತವೆ.

ಕನ್ನಡದಲ್ಲಿ ಜನಪದ ಕಾವ್ಯಗಳ ವೈವಿಧ್ಯ ಹೆಚ್ಚು. ಕಾಡುಗೊಲ್ಲ ಜನಾಂಗದಲ್ಲಿ, ಹರಿಜನರಲ್ಲಿ, ಒಕ್ಕಲುಮಕ್ಕಳಲ್ಲಿ ಇವುಗಳ ಪ್ರಾಚುರ್ಯ ಅಧಿಕ. ವೃತ್ತಿಗಾಯಕರು ಜನಪದ ಕಾವ್ಯಗಳ ಸಂರಕ್ಷಕರು. ಈ ಕಾವ್ಯಗಳಲ್ಲಿ ಕೆಲವು ಪ್ರಾದೇಶಿಕವಾಗಿಯೂ ಮತ್ತೆ ಕೆಲವು ಸಮಗ್ರ ಕರ್ನಾಟಕ ದಲ್ಲಿಯೂ ಕಾಣಬರುತ್ತವೆ. ಗುಣಸಾಗರಿ, ಉತ್ತರದೇವಿ, ಬಾಲನಾಗಮ್ಮ ಮುಂತಾದವು ಕರ್ನಾಟಕದಾದ್ಯಂತ ಗುರುತಿಸಲ್ಪಟ್ಟಿವೆ. ಬಾಲನಾಗಮ್ಮ ಕನ್ನಡನಾಡಿನ ಗಡಿಯನ್ನೂ ದಾಟಿ ಆಂಧ್ರ ಪ್ರದೇಶದಲ್ಲಿಯೂ ಹಬ್ಬಿದೆ. (ಜೆ.ಎಸ್.ಪಿ.)

**ಜನಪದ ಗಣಿತ :** ಪ್ರಾಚೀನಕಾಲದಿಂದ ಬೆಳೆದು ಬಂದಿರುವ ಗಣಿತ ವಿಜ್ಞಾನಕ್ಕೆ ಜನಪದ ಗಣಿತವನ್ನು ಹೋಲಿಸಿದಾಗ ಜನಪದ ಗಣಿತಕ್ಕೆ ತನ್ನದೇ ಆದ ಪರಿಮಿತಿಗಳಿದ್ದರೂ ವಿಜ್ಞಾನಪೂರ್ವ ಯುಗದಲ್ಲಿನ ಜನತೆಯ ಸಮಸ್ಯೆಗಳಿಗೆ ಅದು ತಕ್ಕ ಉತ್ತರವನ್ನು ಒದಗಿಸಿಕೊಟ್ಟಿದ್ದಿತೆಂದೇ ಹೇಳಬಹುದು. ಅಲ್ಲದೆ ಇಂದಿನ ಗಣಿತ ವಿಜ್ಞಾನ ಜನಪದ ಗಣಿತದ ಪರಿಷ್ಕೃತ ರೂಪವೇ ಆಗಿದೆ. ಆದ್ದರಿಂದ ಅಂದಿನ ಅಂದಾಜಿನ ಲೆಕ್ಕಾಚಾರ ಇಂದು ಕರಾರುವಾಕ್ಕೆನಿಸದಿರಬಹುದು. ಈ ಮಾತು ಜನಪದ ಗಣಿತಕ್ಕೆ ಎಲ್ಲ ಸಂದರ್ಭಗಳಲ್ಲೂ ಅನ್ವಯವಾಗುವಂಥ'ದಲ್ಲ ಎಂಬುದನ್ನೂ ಮರೆಯಕೂಡದು.

ಜನಪದದಲ್ಲಿ ಉದ್ದ, ಅಗಲ, ತೂಕ, ಎತ್ತರ ಮತ್ತು ಕಾಲಪರಿಮಾಣಗಳ ಲೆಕ್ಕಾಚಾರಗಳಲ್ಲಿ ಹಿಂದಿನ ಕ್ರಮ ಈಗಲೂ ಉಸಿರಾಡುತ್ತಿರುವಂತೆ ಕಂಡರೂ ರಾಜಕೀಯ, ಸಾಮಾಜಿಕ ಬದಲಾವಣೆಗಳಿಂದಾಗಿ, ಪರಕೀಯ ದಾಳಿಗಳಿಂದಾಗಿ ಜನಪದದ ಬಹುತೇಕ ವ್ಯವಹಾರ ಕ್ರಮಗಳೆಲ್ಲ ಕ್ರಮೇಣ ಮೂಲೆಗುಂಪಾದವು. ರೈತ, ಕಮ್ಮಾರ, ಚಮ್ಮಾರ, ಕುಂಬಾರ, ದರ್ಜಿ, ಕೆಲಸಿ, ದೇವಾಂಗಸೆಟ್ಟಿ, ಉಪ್ಪಲಿಗಸೆಟ್ಟಿ ಮುಂತಾದ ಎಲ್ಲ ಕಸಬಿನ ಜನ ತಮ್ಮ ಕಸಬಿನ ಉತ್ಪನ್ನಗಳನ್ನು ಪರಸ್ಪರ ಚಾಟಿ (ಬಾರ್ಟರ್) ಮಾಡಿಕೊಳ್ಳುವ ವ್ಯವಹಾರ ಪದ್ಧತಿಯಿಂದ ಜನಪದ ಗಣಿತ ಪ್ರಾರಂಭವಾಯಿತೆಂದು ಹೇಳಬಹುದು. ಆದರೆ ಚಾಟಿ ಪದ್ಧತಿ ಬಹಳಷ್ಟು ಸಲ ನಿಖರವಾದ ಬೆಲೆಯನ್ನು ನಿರ್ಧಾರಮಾಡದೆಹೋದ ಕಾರಣದಿಂದ ಹಣದ ಕಲ್ಪನೆ ಅನಂತರ ಮೂಡಿತೆಂದು ಕಾಣುತ್ತದೆ. ಒಟ್ಟಿನಲ್ಲಿ ವ್ಯವಹಾರ ಗೊಂದಲವಾಗದಂತೆ ನೋಡಿಕೊಂಡ ವ್ಯಾಪಾರ ಗಣಿತವಿಜ್ಞಾನದ ತಳಹದಿಯೆಂದರೂ ಆದೀತು. ಚಾಟಿ ಪದ್ಧತಿಯಾಗಲಿ ಅಥವಾ ಹಣದಿಂದ ವಸ್ತುವಿನ ಮೌಲ್ಯ ನಿರ್ಧಾರ ಮಾಡುವುದಾಗಲಿ ಅದು ಸಾರ್ವತ್ರಿಕ ರಾಜೀಮನೋಭಾವದ ಫಲಿತಾಂಶವೆಂದು ಹೇಳಬಹುದು. ಹೀಗೆ ಗಣಿತಪ್ರಕಾರ ನಿರ್ದಿಷ್ಟ ರೂಪವನ್ನು ತಾಳಿ ಸಾರ್ವತ್ರಿಕ ಸ್ವೀಕಾರ ಮುದ್ರೆ ಪಡೆಯಬೇಕಾದರೆ ಬಹಳಷ್ಟು ಕಾಲ ಹಿಡಿದಿರಬೇಕೆಂದು ಕಾಣುತ್ತದೆ. ಆದ್ದರಿಂದಲೆ ದಿನ, ವಾರ, ಪಕ್ಷ, ತಿಂಗಳು, ವರ್ಷ, ತೂಕ, ಗಾತ್ರ, ಉದ್ದ, ಅಗಲ, ಎತ್ತರ ಮಂತಾದವುಗಳ ಅಳತೆ ಬಿಡಿಸಲಾಗದ ಕಗ್ಗಂಟಾಗದೆ ವ್ಯವಹಾರದ ಸುಲಭೋಪಾಯವಾಗಿದೆ.

ಜನಪದ ಗಣಿತವನ್ನು ಪ್ರಧಾನವಾಗಿ ವ್ಯವಹಾರ ಗಣಿತ ಮತ್ತು ವಿನೋದ ಗಣಿತ ಎಂದು ಎರಡಾಗಿ ವಿಂಗಡಿಸಿಕೊಳ್ಳಬಹುದು. ವ್ಯವಹಾರ ಗಣಿತ ಜೀವನದ ಸರ್ವ ವ್ಯಾಪಾರಗಳಲ್ಲೂ ವ್ಯಾಪಿಸಿಕೊಂಡಿರುವಂಥದ್ದು. ವಿನೋದ ಗಣಿತ ಆಟ ಮುಂತಾದ ಸಂದರ್ಭಗಳಲ್ಲಿ ಒಡ್ಡುವ ಚಮತ್ಕಾರಗಳಿಂದ ಕೂಡಿರುವಂಥದು.

ವ್ಯವಹಾರ ಗಣಿತದಲ್ಲಿ ನಾಣ್ಯಗಳು ಅಗ್ರಸ್ಥಾನದಲ್ಲಿವೆ. ಹಿಂದೆ ಬಳಕೆಯಲ್ಲಿದ್ದ ನಾಣ್ಯಗಳು ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಯ ಕಾರಣದಿಂದ ಆಗಾಗ ಮಾರ್ಪಟ್ಟಿವೆ. ಮೊದಲು ನಾಣ್ಯಗಳಿಗೆ ಚರ್ಮ, ತಾಡಪತ್ರ ಹಾಗೂ ಲೋಹಗಳನ್ನು ಬಳಸುತ್ತಿದ್ದಂತೆ ತಿಳಿದುಬರುತ್ತದೆ. ಹಿಂದಿದ್ದ ನಾಣ್ಯಗಳಿಗೆ ಈಗಿನ ನಾಣ್ಯಗಳ ಬೆಲೆ ಎಷ್ಟೆಂದು ಹೇಳುವುದು ಅಸಾಧ್ಯವಾಗಿದೆ. ವರಹ, ದುರ್ಗೀವರಹ, ಪಗೋಡ, ರಾಮಟಂಕಿ ವರಹ, ಗದ್ಯಾಣ, ಹೊನ್ನು, ಮೊಹರು, ಕಂಠೀರವ, ಅಡಕೆ, ಅಷರಫಿ, ಕಾಸು, ಅಡ್ಡ, ಪಾವಲಿ, ಚವುರಿ, ಪ್ರಿಯಕಾವೇರಿ, ಗಬರು, ಪುತಲಿ, ಕಲುಕುಂಟಿ ಮುಂತಾದವು ಹಿಂದೆ ಪ್ರಚಲಿತವಿದ್ದ ಕೆಲವು ನಾಣ್ಯಗಳು. ಹಿಂದಿದ್ದ ಕೆಲವು ನಾಣ್ಯಗಳ ಕೋಷ್ಟಕ ಇದು:

| | | | |
|---|---|---|---|
| 4 | ಕಾಣಿ | 1 | ವೀಸ |
| 5 | ವೀಸ | 1 | ಹಾಗ |
| 4 | ಹಾಗ | 1 | ಹಣ |
| 10 | ಹಣ | 1 | ಗದ್ಯಾಣ ಇತ್ಯಾದಿ |

ಧಾನ್ಯಗಳ ಅಳತೆಯಲ್ಲಿ ಸ್ಯಾರೆ, ಹಿಡಿ, ಬೊಗಸೆ, ಸೊಲ್ಲಿಗೆ, ಸೇರು, ಪಾವು, ಚಟಾಕು, ಪಲ್ಲ, ಖಂಡುಗ, ಮಾನ, ಬಳ್ಳ, ಕೊಳಗ, ಪಂಚಕ ಮುಂತಾದ ಬಗೆಗಳಿದ್ದಂತೆ ತಿಳಿದುಬರುತ್ತದೆ. ಇವುಗಳ ಅಳತೆಯೂ ಇಂದಿನ ಅಳತೆಗೆ ಎಷ್ಟೆಷ್ಟು ಸಮವೆಂದು ಖಚಿತವಾಗಿ ಹೇಳಬರುವುದಿಲ್ಲ. ಅಲ್ಲದೆ ಒಂದೇ ಹೆಸರಿನ ಅಳತೆ ಸಾಧನ ಬೇರೆ ಬೇರೆ ಕಡೆ ಬೇರೆ ಬೇರೆ ಗಾತ್ರದಲ್ಲಿದ್ದುದು ಇದಕ್ಕೆ ಕಾರಣ. ಇಂಥ ಸಾಧನಗಳಿಲ್ಲದೆಯೂ ಅವರ ವ್ಯವಹಾರ ನಡೆದುಹೋಗಿದೆ. ಉದಾ: ಹಾಲು, ಜೇನು, ಎಣ್ಣೆ ಮುಂತಾದವುಗಳನ್ನು ಅಳೆಯಲು ಈಗಲೂ ಕೆಲವೊಮ್ಮೆ ಹಳ್ಳಿಗಳಲ್ಲಿ ಬಿದಿರಿನ ಹಂಡೆಗಳನ್ನು ಬಳಸುತ್ತಾರೆ. ಅನ್ನ, ಸಾರು, ಹಿಟ್ಟು ಮುಂತಾದವನ್ನು ಅಡುವಾಗಲು ಅವರ ಅಂದಾಜಿನ ಅಳತೆ ಸರಿಹೋಗುತ್ತದೆ. ಒಂದು ಬೊಗಸೆ ಅಕ್ಕಿ ಅನ್ನವಾಗಿ ಇಂಗಲು ಅವರಲ್ಲಿ ಅವರದೇ ಅಳತೆ ಚೊಂಬುಗಳಿವೆ. ಧಾನ್ಯಗಳ ಅಳತೆಯೂ ಬಿದಿರು ಹೆಡಗೆ, ಕುಕ್ಕೆ, ಬುಟ್ಟಿ, ಕುಂಕುಲು ಮುಂತಾದವುಗಳಿಂದ ಸುಗಮವಾಗುತ್ತದೆ. ಉಪ್ಪು ಸಾಲ ಪಡೆಯುವಾಗ ಒಂದು ಹಿಡಿ ಅಥವಾ ಒಂದು ಮರಗೈ ಲೆಕ್ಕ, ಸಾಸುವೆ ಸಾಲ ಪಡೆಯುವಾಗ ಒಂದು ಸ್ಯಾರೆ ಲೆಕ್ಕ ಬಳಕೆಯಲ್ಲಿದೆ. ಹಾಲು, ಮೊಸರು ಮಜ್ಜಿಗೆಗಳ ಅಳತೆಗೆ ಒಂದು ತೊಟ್ಟು ಹಾಲು, ಒಂದು ಹನಿ ಮೊಸರು, ಒಂದು ಹನಿ ಮಜ್ಜಿಗೆ ಮುಂತಾಗಿ ಹೇಳುವುದರಿಂದ ಆ ಹೇಳಿಕೆಗೆ ತಗುಲುವಷ್ಟು ಹಾಲು ಮೊಸರು ಮಜ್ಜಿಗೆಯನ್ನು ಕೊಡಲಾಗುತ್ತದೆ.

| ಧಾನ್ಯಗಳ | ಅಳತೆ | ಒಂದು | ಕೋಷ್ಟಕ |
|---|---|---|---|
| 1 | ಖಂಡುಗ | 4 | ಪಂಚಕ |
| 1 | ಪಂಚಕ | 5 | ಕೊಳಗ |
| 1 | ಕೊಳಗ | 4 | ಬಳ್ಳ |
| 1 | ಬಳ್ಳ | 4 | ಮಾನ |
| 1 | ಮಾನ | 4 | ಸೊಲ್ಲಿಗೆ |
| 1 | ಸೊಲ್ಲಿಗೆ | 4 | ಗಿದ್ದಿಗೆ ಇತ್ಯಾದಿ |

ಜನಪದರಲ್ಲಿ ಗಾತ್ರನಿರ್ಧಾರ ಅವರು ಕಂಡಿರುವ ವಸ್ತುಗನ್ನು ಆಧರಿಸಿದಂತೆ ಏರ್ಪಡುತ್ತದೆ. ಉದಾ: ಅವರೆಕಾಳು ಗಾತ್ರ, ನಿಂಬೆಕಾಯಿ ಗಾತ್ರ, ಹಿಟ್ಟಿನಮುದ್ದೆ ಗಾತ್ರ, ಕುಂಬಳಕಾಯಿ ಗಾತ್ರ, ಎರಡು ಬೆರಳು ಗಾತ್ರ, ಮೀನಿನ ತತ್ತಿ ಗಾತ್ರ, ಹಿಟ್ಟಿನ ದೊಣ್ಣೆ ಗಾತ್ರ, ಅರುಕಡ್ಡಿ ಗಾತ್ರ, ಮುಂಗೈಗಾತ್ರ, ತೊಡೆಗಾತ್ರ, ಹೆಬ್ಬೆರಳು ಗಾತ್ರ, ಕಿರುಬೆರಳು ಗಾತ್ರ, ಗೆಜ್ಜಗದ ಗಾತ್ರ, ದೆಯ್ಯದ ಗಾತ್ರ ಮುಂತಾಗಿ ಹೇಳಿ ಅವರು ವಸ್ತುಗಳ ಗಾತ್ರಕಲ್ಪನೆ ಕಣ್ಣಿಗೆ ಕಟ್ಟುವಂತೆ ಮಾಡುತ್ತಾರೆ. ಅಗಲವನ್ನು ನಿರ್ದೇಶಿಸುವಾಗ ಕಾಸಿನಗಲ, ರೂಪಾಯಗಲ, ಅಂಗೈ ಅಗಲ, ಆಕಾಶದಗಲ, ಬಾವಾಡಿನಗಲ, ಗಂಗಾಳದಗಲ, ರೊಟ್ಟಿಯಗಲ ಮುಂತಾಗಿ ಹೇಳುತ್ತಾರೆ.

ತೂಕದ ಅಳತೆಗಾಗಿ ತೂಗೋ ಕೋಲನ್ನು ಬಳಸುತ್ತಾರೆ. ಹಳ್ಳಿಗಳಲ್ಲಿ ಈಗಲೂ ಬೆಣ್ಣೆ ತೂಗಲು ಎರಡು ತಟ್ಟೆಗಳಿರುವ ತಕ್ಕಡಿಗೆ ಬದಲಾಗಿ ತೂಗೋ ಕೋಲನ್ನೇ ಬಳಸುತ್ತಾರೆ. ದವಸಧಾನ್ಯಗಳನ್ನು ತೂಗುವ ಪದ್ಧತಿ ಹಿಂದೆ ಇದ್ದಂತೆ ಕಾಣುವುದಿಲ್ಲ. ಆದರೆ ಲೋಹಗಳನ್ನು ತೂಗುವ

ಪದ್ಧತಿ ಇತ್ತು. ಲೋಹದ ತೂಕವನ್ನು ತಕ್ಕಡಿಯ ಸಹಾಯದಿಂದ ನಿರ್ಧರಿಸುತ್ತಿದ್ದರು. ತೂಕಕ್ಕೆ ಸಂಬಂಧಿಸಿದ ಒಂದು ಕೋಷ್ಟಕ:

| | | | |
|---|---|---|---|
| 1 | ಭಾರ | 20 | ತೊಲ |
| 1 | ತೊಲ | 5 | ಬೀಸಗೆ |
| 1 | ಬೀಸಗೆ | 20 | ಪಲ |
| 1 | ಪಲ | 4 | ಕರ್ಷ |
| 1 | ಕರ್ಷ | 4 | ಸುವರ್ಣ |

ಚಿನ್ನ ಬೆಳ್ಳಿಗಳ ತೂಕದಲ್ಲಿ ಗುಲಗಂಜಿಯನ್ನು ಬಳಸುವುದು ಈಗಲೂ ಅಕ್ಕಸಾಲಿಗರಲ್ಲಿ ಬಳಕೆಯಲ್ಲಿದೆ.

ದೂರದ ಅಳತೆಗೆ ಗಾವುದ, ಹರದಾರಿ, ಯೋಜನ, ಒಂದು ಕೂಗುದೂರ, ಕೋಳಿ ಕೂಗುದೂರ, ಒಂದು ಸಿಳ್ಳುದೂರ ಮುಂತಾದ ಮಾನಗಳಿವೆ. ಉದ್ದದ ಅಳತೆಗೆ ಗೇಣು, ಚೋಟು, ಮೊಳ, ಮಾರು, ಒತ್ತೀಳು, ಬೆರಳುದ್ದ ಮುಂತಾದವಿವೆ. ಎತ್ತರವನ್ನು ಹೇಳುವಾಗ ಆಳೆತ್ತರ, ಎರಡಾಳೆತ್ತರವೆಂದು ಹೇಳುವ ರೂಢಿ ಇದೆ. ಆಳವನ್ನು ಹೇಳುವಾಗ ಹಣೆಮಟ್ಟ, ಎದೆಮಟ್ಟ, ಕೊರಳುಮಟ್ಟ, ಸೊಂಟಮಟ್ಟ, ಮೊಣಕಾಲಮಟ್ಟ ಇತ್ಯಾದಿ ಹೇಳುವುದುಂಟು. ದೂರದ ಅಳತೆಯನ್ನು ಹೇಳುವ ಒಂದು ಕೋಷ್ಟಕ ಹೀಗಿದೆ:

| | | | |
|---|---|---|---|
| 1 | ಯೋಜನ | 4000 | ಕ್ರೋಶ |
| 1 | ಕ್ರೋಶ | 2000 | ದಂಡ |
| 1 | ದಂಡ | 4 | ಮೊಳ |
| 1 | ಮೊಳ | 2 | ಗೇಣು |
| 1 | ಗೇಣು | 12 | ಬೆರಳು |

ಕಾಲಪರಿಮಾಣ ಜನಪದರಲ್ಲಿ ವಿಶಿಷ್ಟರೀತಿಯಲ್ಲಿ ಪ್ರಚಲಿತವಿದೆ. ಸೂರ್ಯೋದಯ ಸೂರ್ಯಾಸ್ತಗಳ ಅಂತರ ಹಾಗೂ ಸೂರ್ಯಾಸ್ತದಿಂದ ಸೂರ್ಯೋದಯದ ಅಂತರವನ್ನು ಬೇರೆ ಬೇರೆ ಕಾಲಗಳೆಂದು ಸೂಚಿಸಲು ಅವರು ಬಳಸುವ ಪರಿಭಾಷೆ ಆಶ್ಚರ್ಯಕರವಾಗಿದೆ. ಬೆಳ್ಳಿ ಮೂಡೋಹೊತ್ತು, ಮುಸ್ಸಂಜೆಹೊತ್ತು, ಬೆಳಕರಿಯೋ ಹೊತ್ತು, ಕೋಳಿಕೂಗೋ ಹೊತ್ತು, ಆರ್ಕಟ್ರ್ಯೋ ಹೊತ್ತು, ರೊಟ್ಟಿ ಹೊತ್ತು, ಕರ ಬಿಟ್ಕಳೋಹೊತ್ತು, ದನಬಿಡೋ ಹೊತ್ತು, ದೀಪಕಚ್ಚ್ಯೋ ಹೊತ್ತು, ಕಲ್ಲು ನೀರು ಕರಗೋ ಹೊತ್ತು, ಸೂರ್ಯ ನೆತ್ತೀಗೆ ಬಂದೊತ್ತು, ಸೂರ್ಯ ನಾಕ್ಮಾರಿದ್ದೊತ್ತು, ನಿಸ್ರಾರ್ತೆ ಜಾಮ, ಸಪ್ಪಟು ಸರ್ಹೊತ್ತು - ಇತ್ಯಾದಿ ಪದಗಳಿವೆ. ಇವಲ್ಲದೆ ಖಚಿತವಾದ ಕಾಲನಿರ್ಧಾರಕ್ಕಾಗಿ ಹಿಂದೆ ಘಟಿಕಾ ಪಾತ್ರೆ ಎಂಬ ಸಾಧನವನ್ನು ಬಳಸುತ್ತಿದ್ದರು. ಘಳಿಗೆ ಜಾವ ಮುಂತಾದ ಪದಗಳು ಆಗಾಗ ಕಿವಿಯ ಮೇಲೆ ಬಿದ್ದರೂ ಅವು ಇಂದಿನ ಕಾಲಪರಿಮಾಣದ ಎಷ್ಟಕ್ಕೆ ಸಮ ಎಂಬುದು ಬಹಳ ಜನರಿಗೆ ತಿಳಿಯದ ವಿಚಾರ. ಒಂದು ಘಳಿಗೆ 24 ನಿಮಿಷಗಳಿಗೆ ಸಮವಾಗಿದೆ.

| | | | |
|---|---|---|---|
| 60 | ಘಳಿಗೆ | 30 | ಮುಹೂರ್ತ |
| 30 | ಮುಹೂರ್ತ | 1 | ದಿವಸ |
| 71/2 | ಘಳಿಗೆ | 1 | ಜಾವ |
| 8 | ಜಾವ | 1 | ದಿವಸ |
| 30 | ದಿವಸ | 1 | ಮಾಸ |
| 12 | ಮಾಸ | 1 | ವರ್ಷ |
| 100 | ವರ್ಷ | 1 | ಶತಮಾನ |

ಮಳೆ ಬೆಳೆ ಕಾಲಗಳನ್ನು ಜನಪದರು ಸರಾಗವಾಗಿ ಗುರುತಿಸುತ್ತಾರೆ. ಅಶ್ವಿನಿಯಿಂದ ಹಿಡಿದು ರೇವತಿಯವರೆಗೆ 27 ಮಳೆಗಳಿವೆ. ಒಂದೊಂದು ಮಳೆಗೂ ಒಂದೊಂದು ನಕ್ಷತ್ರದ ಹೆಸರಿದೆ. ಪ್ರತಿಯೊಂದು ನಕ್ಷತ್ರಕ್ಕೂ ನಾಲ್ಕು ಪಾದಗಳು.ಇಂತಿಂಥ ಮಾಸದಲ್ಲಿ ಇಂತಿಂಥ ದಿನದಲ್ಲಿ ಇಂತಿಂಥ ಮಳೆ ಪ್ರಾರಂಭವಾಗುವುದನ್ನು ಅವರು ಯಾವ ಗ್ರಂಥಗಳ ಆಧಾರವೂ ಇಲ್ಲದೆ ನಿರ್ಧರಿಸಿ ಹೇಳಬಲ್ಲರು. ಯಾವುದಾದರೂ ಮಳೆ ಹುಟ್ಟಿದ ದಿನಗಳಲ್ಲಿ ಸರಿಯಾಗಿ ಬೀಳದೆ ಕೊನೆಯ ದಿನಗಳಲ್ಲಿ ಜಡಿ ಹಿಡಿದರೆ ಕೊನೆ ಪಾದದಲ್ಲಿ ಚೆನ್ನಾಗಿ ಮಳೆಯಾಯ್ತು ಎಂದು ಪಾದಗಳ ಲೆಕ್ಕವನ್ನು ಹೇಳುತ್ತಾರೆ. ಒಂದು ಪಾದಕ್ಕೆ 3¼ ದಿನದ ಲೆಕ್ಕವಿದೆ.

ವೀಳೆದೆಲೆ ಲೆಕ್ಕದಲ್ಲಿ

| | | | |
|---|---|---|---|
| 20 | ಎಲೆ | 1 | ಕವಳಿಗೆ |
| 10 | ಕವಳಿಗೆ | 1 | ಕಟ್ಟು |
| 100 | ಕಟ್ಟು | 1 | ಪಿಂಡಿ |

ಕೆಲವು ಕಡೆ ಒಂದು ಪಿಂಡಿಗೆ 25, 50, 75 ಕಟ್ಟುಗಳನ್ನೂ ಹೇಳುತ್ತಾರೆ. ಅಡಕೆಕಾಯನ್ನು ಎಣಿಸುವಾಗ ಒಂದು ಕೈಗೆ 10 ಅಡಕೆಕಾಯಿ ಹಾಕುತ್ತಾರೆ. ಕವಡೆ ಆಟದಲ್ಲಿ ನಾಲ್ಕು ಬಿದ್ದರೆ ಚೌಕ, ಒಂದಕ್ಕೆ ಕೊಷ್ಕಿ, ಮೂರಕ್ಕೆ ಮುಷ್ಯ, ನಾಲ್ಕಕ್ಕೆ ಚೌಕ, ಐದಕ್ಕೆ ಪಂಜ, ಹನ್ನೆರಡಕ್ಕೆ ಬಾರಾ ಮುಂತಾಗಿ ಹೇಳುತ್ತಾರೆ.

ವಿನೋದ ಗಣಿತ ಅಥ‌ವಾ ಚಮತ್ಕಾರ ಗಣಿತ ವಿನೋದದ ಸಮಯಗಳಲ್ಲಿ ಜೂಜುಗಳಲ್ಲಿ ಬಳಕೆಯಾಗುತ್ತಿದ್ದಂತೆ ತಿಳಿಯುತ್ತದೆ. ಇಂಥ ಲೆಕ್ಕಗಳು ಬುದ್ಧಿಯ ಕಸರತ್ತಿಗೆ ಸಾಧನಗಳಾಗಿರುತ್ತಿದ್ದವು. ಈ ಬಗೆಯ ಲೆಕ್ಕಗಳನ್ನು ಸಾಮಾನ್ಯವಾಗಿ ಒಬ್ಬರು ಒಡ್ಡುವುದು ಮತ್ತೊಬ್ಬರು ಒಡಚುವುದು ರೂಢಿಯಲ್ಲಿದೆ. ಆದ್ದರಿಂದ ಇವನ್ನು ಒಗಟುಗಳ ಗುಂಪಿನಲ್ಲಿ ಸಂಖ್ಯಾತ್ಮಕ ಒಗಟು ಎಂದು ಕರೆಯಲಾಗಿದೆ. ಗಣಿತಸಂಧಿ ಒಗಟುಗಳು ಅಥ‌ವಾ ಒಗಟು ಲೆಕ್ಕಗಳು ಜನಪದ ಜೀವನದ ಬೇರೆ ಬೇರೆ ಸಂದರ್ಭಗಳಲ್ಲಿ ಮಹತ್ತ್ವದ ಪಾತ್ರವನ್ನು ವಹಿಸುತ್ತವೆ. ವಿರಾಮದ ವೇಳೆಯಲ್ಲಿ ವಿನೋದಕ್ಕಾಗಿ ಇಂಥ‌ ಒಗಟುಗಳನ್ನು ಒಡ್ಡುವುದು ಒಡಚುವುದು ಒಂದು ವಿಧವಾದರೆ, ಜನಪದರು ತಮ್ಮ ನಿತ್ಯಕಾಯಕವನ್ನು ಹಗುರಗೊಳಿಸಿಕೊಳ್ಳುವುದಕ್ಕೆ ಇವನ್ನು ಬಳಸಿಕೊಳ್ಳುವುದು ಇನ್ನೊಂದು ಬಗೆ. ಪಂಡಿತ ಮಂಡಲಿಗಳಲ್ಲಿ ಪಂಥ‌ಕ್ಕಾಗಿಯೂ ಇಂಥ‌ ಲೆಕ್ಕಗಳನ್ನು ಒಡ್ಡಿ ಬುದ್ಧಿಪರೀಕ್ಷೆಗಾಗಿ ಬಳಸಿಕೊಳ್ಳುತ್ತಿದ್ದುದೂ ಉಂಟು. ಇಂಥ ಸಂಖ್ಯಾತ್ಮಕ ಒಗಟುಗಳು ಅಕ್ಷರಸ್ಥ, ಅನಕ್ಷರಸ್ಥರಿಬ್ಬರಲ್ಲೂ ಸಮಾನ ಪಾತ್ರವನ್ನು ವಹಿಸಿವೆ. ಆಶ್ಚರ್ಯವೆಂದರೆ ಅನಕ್ಷರಸ್ಥರು ಇಂಥ‌ ಲೆಕ್ಕಗಳನ್ನು ನಿರಾಯಾಸವಾಗಿ ಒಡಚುವ ಬಗ್ಗೆ, ಅಂಕಿಗಳ ಮೂಲಕ ರೂಪಿತವಾಗುವ ಇಂಥ ಲೆಕ್ಕಗಳಿಗೆ ಉತ್ತರವನ್ನು ಕಂಡುಹಿಡಿಯುವುದು ಅತ್ಯಂತ ತ್ರಾಸವೇ ಸರಿ. ಆದರೆ ಇವು ಬುದ್ಧಿಗೆ ಬಹಳಷ್ಟು ವ್ಯಾಯಾಮ ಕೊಡುತ್ತವೆ. ಇವುಗಳಲ್ಲಿ ಜನಪದರ ಬುದ್ಧಿಚತುರತೆ, ತಂತ್ರಗಳು ಎದ್ದು ತೋರುತ್ತವೆ. ಅಷ್ಟು ಮಾತ್ರವಲ್ಲ ಅವರ ಜ್ಞಾನಕೋಶದ ಅತ್ಯಮೂಲ್ಯ ಭಾಗ ಇಂಥ ಲೆಕ್ಕಗಳು ಎಂದೆನ್ನಬಹುದು. ಇಂಥ‌ ಲೆಕ್ಕಗಳನ್ನು ಒಡ್ಡಿದಾಗ ಅವುಗಳ ಉತ್ತರ ಹತ್ತಿರದಲ್ಲೇ ಇರುವಂತೆ ಭಾಸವಾದರೂ ಕೂಡದೆ, ಕಳೆಯದೆ, ಗುಣಿಸದೆ, ಭಾಗಿಸದೆ ಹಳ್ಳಿಯವರಂತೆ ಸರಾಗವಾಗಿ ಉತ್ತರಿಸುವುದು ಅಷ್ಟೇನು ಸುಲಭವಲ್ಲ. ಇಂಥ‌ ವಿನೋದಗಣಿತ ಅಥ‌ವಾ ಚಮತ್ಕಾರಗಣಿತದಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು.

ಸಂಕಲನಕ್ಕೆ :
ದೋಸೆ ಕಲ್ಲಿನ ಮೇಲೆ ಏಳು ದೋಸೆ
ಹಸೆ ಕಲ್ಲಿನ ಮೇಲೆ ಆರು ದೋಸೆ
ನೆಲೀನ ಮೇಲೆ ಹತ್ತು ದೋಸೆ
ಅವು ಇವೆಲ್ಲ ಎಷ್ಟು ದೋಸೆ

ಹೀಗೆ ಲೆಕ್ಕವನ್ನು ಒಡ್ಡಿದಾಗ 7+6+10=23 ಎಂದು ಕೂಡಿ ಉತ್ತರವನ್ನು ಕೊಟ್ಟರೆ ಸೋಲಬೇಕಾಗುತ್ತದೆ. ಇಲ್ಲಿರುವ ಚಮತ್ಕಾರವನ್ನು ಎಚ್ಚರದಿಂದ ಗಮನಿಸಬೇಕಾಗುತ್ತದೆ. ದೋಸೆಕಲ್ಲಿನ ಮೇಲೆ ಎದ್ದ ದೋಸೆ ಹಸೆಕಲ್ಲಿನ ಮೇಲೆ ಆರಿತು, ಆರಿದ ದೋಸೆಯನ್ನು ನೆಲೀನ ಮೇಲೆ ಸುರಕ್ಷಿತವಾಗಿ ಇಡಲಾಯಿತು. ಅಂದರೆ ಒಂದೇ ಒಂದು ದೋಸೆ ದೋಸೆಕಲ್ಲಿನ ಮೇಲಿಂದ ಹಸೆಕಲ್ಲಿಗೆ ಹಸೆಕಲ್ಲಿನ ಮೇಲಿಂದ ನೆಲುವಿನ ಮೇಲಕ್ಕೆ ಹೋಯಿತು. ಹೀಗೆ ಏಳು ಆರು ಹತ್ತು ಎಂಬ ಪದಗಳ ಮೇಲೆ ಆಟವಾಡಿರುವ ಚಮತ್ಕಾರವನ್ನು ಗಮನಿಸಬಹುದು.

**ವ್ಯವ‌ಕಲನ‌ :** 30ರಲ್ಲಿ ಹನ್ನೆರಡು ಕಳೆದರೆ 12 ಉಳಿಯುತ್ತದೆ. ಹಾಗಾದರೆ 12ರಲ್ಲಿ 30 ಕಳೆದರೆ ಎಷ್ಟು ಉಳಿಯುತ್ತದೆ.

ಈ ಸಮಸ್ಯೆ ವಿಚಿತ್ರವೆನಿಸಿದರೂ ಅಕ್ಷರಸ್ಥ ಇದಕ್ಕೆ 30 - 18 = 12; 12 - 30 = -18 ಎಂದು ಉತ್ತರಿಸಬಲ್ಲ. ಆದರೆ -18 ಎಂಬ ಉತ್ತರ ಜನಪದರಿಗೆ ಅರ್ಥವಾಗುವುದಿಲ್ಲ. ಈ ಉತ್ತರದಿಂದ ಅವರನ್ನೊಪ್ಪಿಸುವುದು ಸುಲಭವಲ್ಲ. ಏಕೆಂದರೆ ಈ ಸಮಸ್ಯೆಗೆ ಅವರಲ್ಲೇ ಬೇರೆ ಉತ್ತರವಿದೆ. ಆ ಉತ್ತರಕ್ಕೆ ಅಕ್ಷರಸ್ಥನ ಉತ್ತರ ತಾಳೆಯಾಗ ದಿರುವಾಗ ಒಪ್ಪುವುದಾದರು ಹೇಗೆ? ಆದ್ದರಿಂದ ಅವರೇ ಅದಕ್ಕೆ ಪರಿಹಾರ ಒದಗಿಸುತ್ತಾರೆ. ಅದೇನೆಂದರೆ 12ರಲ್ಲಿ 30ನ್ನು ಕಳೆದರೆ 11 ಉಳಿಯುತ್ತಂತೆ. ಅಂದರೆ 1 ವರ್ಷದ 12 ತಿಂಗಳುಗಳಲ್ಲಿ 30 ದಿನಗಳನ್ನು ಅರ್ಥಾತ್ 1 ತಿಂಗಳನ್ನು ಕಳೆದರೆ 11 ತಿಂಗಳು ತಾನೆ ಉಳಿಯುವದು ಆದ್ದರಿಂದ ಉತ್ತರ 30 ದಿನದಲ್ಲಿ 18ನ್ನು ಕಳೆದರೆ ಉಳಿದದ್ದು 12 ದಿನ. 12 ತಿಂಗಳಲ್ಲಿ 30 ದಿನ ಕಳೆದರೆ ಉಳಿದದ್ದು 11 ತಿಂಗಳು.

**ಭಾಗಾಕಾರಕ್ಕೆ :** ಒಂದೆರಡು ಮೂರ‍್ನಾಕು ಸಂಧೀಲೈದಾರೇಳು ಇದನ್ನು ಇಪ್ಪತ್ತೊಂದರಿಂದ ನಿಶ್ಶೇಷವಾಗಿ ಭಾಗಿಸಿ ಎಂದು ಹೇಳುವ ಈ ಲೆಕ್ಕಕ್ಕೆ ಅವರ ಉತ್ತರವೂ ತುದಿಬಾಯಿಯಲ್ಲೇ ಸಿದ್ಧವಾಗಿರುತ್ತದೆ. ಉತ್ತರ ಏಳು ನಾಕಾರು ಮುಂದೊಂಬತ್ತೇಳು. ಪ್ರಶ್ನೆ ಉತ್ತರಗಳೆರಡೂ ಅತ್ಯಂತ ಚಮತ್ಕಾರದಿಂದ ಕೂಡಿವೆ. ಪ್ರಶ್ನೆಯನ್ನು ವಿಭಜಿಸಿ ಬರೆದುಕೊಳ್ಳುವುದರಲ್ಲೆ ಈ ಗಣಿತ ರಹಸ್ಯವೆಲ್ಲ ಅಡಗಿದೆ.

ಒಂದೆರಡು ಅಂದರೆ 1 ಮತ್ತು 1
ಮೂರ‍್ನಾಕು ಅಂದರೆ 3 3 3 3
ಸಂಧೀಲೈದಾರೇಳು ಅಂದರೆ 6 6 6 6 6 7

ಸಂಧೀಲಿ ಎಂದಿರುವುದರಿಂದ ಒಂದೆರಡು ಮೂರ‍್ನಾಕುಗಳ ಮಧ್ಯೆ ಈ 6 6 6 6 6 7ನ್ನು ಬರೆದುಕೊಂಡು 21 ರಿಂದ ಭಾಗಿಸಬೇಕು. ಅಂದರೆ.

16163656637÷21 = 769,69,69,69,7 ಉತ್ತರ ಹೀಗೆ: 7 ನಾಲ್ಕು 6 ಅವುಗಳ ಮುಂದೆಲ್ಲ 9, 7.

**ಗುಣಾಕಾರಕ್ಕೆ :** ಒಂದು ಹೊಲದಲ್ಲಿ ನೂರು ಸಾಲುಗಳಿವೆ. ಒಂದೊಂದು ಸಾಲಿನಲ್ಲೂ ನೂರು ಹುತ್ತಗಳಿವೆ. ಒಂದೊಂದು ಹುತ್ತಕ್ಕೂ ನೂರು ಕೋವೆಗಳಿವೆ. ಪ್ರತಿಯೊಂದು ಕೋವೆಯಲ್ಲೂ ನೂರು ಇಲಿಗಳಿವೆ. ಪ್ರತಿಯೊಂದು ಇಲಿಗೂ ನೂರು ಮರಿಗಳಿವೆ. ಒಂದೊಂದು ಮರಿಗೂ ಒಂದೊಂದು ಪಾವು ರಾಗಿ ಇದೆ. ಹಾಗಾದರೆ ಇರುವ ಹುತ್ತಗಳೆಷ್ಟು? ಕೋವೆಗಳೆಷ್ಟು? ಇಲಿಗಳೆಷ್ಟು? ಮತ್ತು ಒಟ್ಟು ಎಷ್ಟು ಸೇರು ರಾಗಿ ಇದೆ ಇದನ್ನು ಒಡಚಿದವನಿಗೆ ಬಹುಮಾನ ಹೆಣ್ಣಿನ ಸನ್ಮಾನ.

ದೊಡ್ಡ ಸಂಖ್ಯೆಗಳಲ್ಲಿ ಗುಣಿಸಿ ಹೇಳಬೇಕಾದ ಈ ಬಗೆಯ ಲೆಕ್ಕಗಳನ್ನು ಹೇಳಿ ಇವನ್ನು ಒಡಚಲು ಪ್ರಯತ್ನಿಸಿದರೆ ಹುಚ್ಚರಾಗಿ ಹೋಗುತ್ತಾರೆಂದೂ ಅದಕ್ಕೆ ಉತ್ತರ ಹೇಳಿದವರೇ ಇಲ್ಲವೆಂದು ಜನಪದರು ಹೇಳುತ್ತಾರೆ. ಕಾರಣ ಇಷ್ಟೆಲ್ಲವನ್ನೂ ಬರೆವಣಿಗೆಯನ್ನರಿಯದ ಅವರು ಮನಸ್ಸಿನಲ್ಲೆ ಗುಣಿಸಿ ಹೇಳುವುದು ಕಷ್ಟತಾನೆ! ಆದ್ದರಿಂದ ಅವರು ಬೇರೆ ಬೇರೆ ರೀತಿಯಲ್ಲಿ ಭಾವಿಸುವುದು ಸಹಜವೇ ಆಗಿದೆ. ಹೀಗೆ ಅವರಿಗಾರಿಗೂ ಬಿಡಿಸಲು ಬರದ ಲೆಕ್ಕಗಳಿದ್ದಾಗ ಮಾತ್ರ ಒಗಟಿನ ಮುಂದೆ ಒಡಚಿದವರಿಗೆ ಬಹುಮಾನ ಹೆಣ್ಣಿನ ಸನ್ಮಾನ ಎಂದು ಹೇಳುತ್ತಾರೆ. ಅಕ್ಷರಸ್ಥರಿಗೆ ಈ ಬಗೆಯ ಲೆಕ್ಕಗಳು ನೀರು ಕುಡಿದಷ್ಟು ಸುಲಭ.

ಬಹಳಷ್ಟು ಸಮಯ ತಲೆ ಕೆರೆದುಕೊಂಡರೂ ಸುಲಭವಾಗಿ ಉತ್ತರ ಹೇಳಲಾರದಂಥ' ಅನೇಕ ಲೆಕ್ಕಗಳು ಜನಪದರಲ್ಲಿವೆ. ಅಂಥ' ಕೆಲವು ಉದಾಹರಣೆಗಳನ್ನು ಈಗ ನೋಡಬಹುದು.

ಆನೆಗೆ ಐದು ರೂಪಾಯಿ, ಕುದುರೆಗೆ ಮುಕ್ಕಾಲು ರೂಪಾಯಿ, ಕತ್ತೆಗೆ ಕಾಲು ರೂಪಾಯಿಯಂತೆ ನೂರು ರೂಪಾಯಿಗೆ ನೂರು ರಾಸುಗಳನ್ನು ತಂದರೆ ಎಷ್ಟು ಆನೆಗಳಿವೆ ಎಷ್ಟು ಕುದುರೆಗಳಿವೆ ಎಷ್ಟು ಕತ್ತೆಗಳಿವೆ?

ಈ ಬಗೆಯ ಲೆಕ್ಕಗಳಿಗೆ ವಿದ್ಯಾವಂತ ಪ್ರಯತ್ನಪಟ್ಟು ಹೇಳುವುದು ಅಸಾಧ್ಯವೇನಲ್ಲದಿದ್ದರೂ ಅನಕ್ಷರಸ್ಥರು ನಿರಾಯಾಸವಾಗಿ ಉತ್ತರಿಸಿದಾಗ ಆಶ್ಚರ್ಯವಾಗುತ್ತದೆ.

ಭಾಷಾಚಮತ್ಕಾರದಿಂದ ಲೆಕ್ಕಗಳನ್ನು ಒಡ್ಡುವ ರೀತಿ ನೋಡಿ:

ನಾನೂರು ರೂಪಾಯಿ ಕೊಟ್ಟು ಒಂದು ಕುದುರೆ ತಂದು 300 ರೂಪಾಯಿಗೆ ಮಾರಿದರೆ ಎಷ್ಟು ಲಾಭ ಬಂತು.

ಈ ಲೆಕ್ಕಕ್ಕೆ 100 ರೂಪಾಯಿ ನಷ್ಟವೆಂದು ಹೇಳಿದರೆ ತಪ್ಪಾಗಿಬಿಡುತ್ತದೆ. ನಾನೂರು ಎಂದರೆ ನಾನು ನೂರು ಎಂದು ಅರ್ಥೈಸಬೇಕಾಗುತ್ತದೆ. ನಾನು ನೂರು ರೂಪಾಯಿಗೆ ತಂದ ಕುದುರೆಯನ್ನು ಮುನ್ನೂರು ರೂ.ಗಳಿಗೆ ಮಾರಿದರೆ 200 ರೂ.ಲಾಭ ಎಂದು ಹೇಳಬೇಕು.

ಅತ್ಯಂತ ಸುಲಭವಾಗಿದ್ದರೂ ಕ್ಲಿಷ್ಟವಾಗಿ ಕಾಣುವ ಈ ಲೆಕ್ಕವನ್ನು ನೋಡಿ: ಮೂರು ಸಂಖ್ಯೆಗಳನ್ನು ಕೂಡಿದರೆ ಹಾಗೂ ಗುಣಿಸಿದರೆ ಒಂದೇ ಉತ್ತರ ಬರಬೇಕು, ಹಾಗಾದರೆ ಮೂರು ಸಂಖ್ಯೆಗಳಾವುವು ?

ಉತ್ತರ 1, 2 ಮತ್ತು 3
ಕೂಡಿದಾಗ: 1 + 2 + 3 = 6
ಗುಣಿಸಿದಾಗ: 1 x 2 x 3 = 6

ಉತ್ತರವೇ ಇಲ್ಲದಂಥ ಕೆಲವು ಲೆಕ್ಕಗಳನ್ನು ಒಡ್ಡಿ ಉತ್ತರಿಸಲು ಪ್ರಯತ್ನಿಸಿದವರನ್ನು ನೋಡಿ ನಗುವುದೂ ಉಂಟು. ಅಂಥದೊಂದು ಈ ಲೆಕ್ಕ.

55 ಕುದುರೆಗಳನ್ನು, 11 ಗೂಟಗಳಿಗೆ - ಒಂದು ಗೂಟಕ್ಕೆ ಕಟ್ಟಿದವುಗಳ ಸಂಖ್ಯೆ ಮತ್ತೊಂದು ಗೂಟಕ್ಕೆ ಬರದಂತೆ - ಬೆಸಸಂಖ್ಯೆಯಲ್ಲಿ ಕಟ್ಟಿರಿ ಎಂದು ಲೆಕ್ಕವನ್ನು ಒಡ್ಡಿ, ಉತ್ತರಿಸಲು ಪ್ರಯತ್ನಿಸಿದವನ, ಮುಖಭಂಗ ಮಾಡುವುದು ಅಥವಾ ಹಾಸ್ಯಕ್ಕೀಡು ಮಾಡುವುದು ಅಥವಾ ಪಂಥ ಕಟ್ಟಿ ಸೋಲಿಸುವುದು ಜನಪದರಲ್ಲಿ ಸಾಮಾನ್ಯ. ಇಂಥ ನೂರಾರು ಲೆಕ್ಕಗಳು ಜನಪದ ಗಣಿತ ಭಂಡಾರದಲ್ಲಿವೆ. ಕನ್ನಡದಲ್ಲಿ ಈ ಪ್ರಕಾರಕ್ಕೆ ಸಂಬಂಧಿಸಿದಂತೆ 'ಜನಪದ ಚಮತ್ಕಾರ ಗಣಿತ' ಎಂಬ ಹೆಸರಿನ ಹೊತ್ತಿಗೆಯನ್ನು ಪಿ.ಕೆ. ರಾಜಶೇಖರ ಮತ್ತು ವಿಷ್ಣುಸಂತೆ ಸಣ್ಣನಂಜೇಗೌಡರು ಸೇರಿ ಪ್ರಕಟಿಸಿದ್ದಾರೆ. ಜೀನಹಳ್ಳಿ ಸಿದ್ಧಲಿಂಗಪ್ಪನವರು ಜನಪದ ಗಣಿತ ಮತ್ತು ಜನಪದ ಚಮತ್ಕಾರ ಗಣಿತ ಕೃತಿಗಳನ್ನು ಪ್ರಕಟಿಸಿದ್ದಾರೆ. *

**ಜನಪದ ಗೀತೆ:** ಜನಪದ ಸಾಹಿತ್ಯದ ಒಂದು ಪ್ರಕಾರ. ಕನ್ನಡದಲ್ಲಿ ಇದನ್ನು ಹಳ್ಳಿಯ ಹಾಡು ಎಂದು ಕರೆಯಲಾಗುತ್ತದೆ.

ಜನಪದ ಗೀತೆಗಳು ಹೇಗೆ, ಯಾವ ಕಾಲದಲ್ಲಿ ಹುಟ್ಟಿದವು ಎಂಬ ಪ್ರಶ್ನೆಗಳಿಗೆ ಖಚಿತವಾದ ಉತ್ತರ ಹೇಳಲು ಸಾಧ್ಯವಿಲ್ಲ. ಅವು ಹುಟ್ಟಿ ಬೆಳೆದು ಬಂದುದು ಶುದ್ಧವಾದ ವಾಕ್ ಪರಂಪರೆಯಲ್ಲಿ. ಈ ಹುಟ್ಟು ಬೆಳೆವಣಿಗೆಗೆ ಕಾರಣರಾದವರು ಅನಕ್ಷರಸ್ಥರಾದ ಪಂಡಿತರಲ್ಲದ ಸಾಮಾನ್ಯ ಜನ.

ಜನಪದ ಗೀತೆಗಳ ಲಕ್ಷಣಗಳನ್ನು ಖಚಿತವಾಗಿ ಹೇಳುವುದು ಕಷ್ಟವಾದರೂ ವಾಕ್ ಪರಂಪರೆ ತತ್ಪರಿಣಾಮವಾದ ಅಜ್ಞಾತ ಕರ್ತೃತ್ವ - ಇವು ಈ ಗೀತೆಗಳ ಮುಖ್ಯ ಲಕ್ಷಣಗಳೆನ್ನಬಹುದು. ಪ್ರತಿಭಾ ಮೂಲವಾದ ಭಾವನಿರ್ಭರತೆ ಈ ಕಾವ್ಯದ ಮೂಲಸತ್ತ್ವ. ಕೆಲವು ಮೂಲಭೂತವಾದ ಅಂಶಗಳಲ್ಲಿ ಜನಪದ ಗೀತೆ ನಾಗರಿಕ ಶಿಷ್ಟ ಕಾವ್ಯಕ್ಕಿಂತ ಭಿನ್ನವಾದುದು. ಅದು ಮಾರ್ಗವಾದರೆ ಇದು ದೇಸಿ. ಜನಪದ ಗೀತೆ ತನ್ನ ಸೋದರ ಕಲೆಗಳಾದ ಸಂಗೀತ ನೃತ್ಯಗಳನ್ನು ಬಳಸಿಕೊಳ್ಳುತ್ತದೆ. ನೃತ್ಯ ಅದಕ್ಕೆ ಸದಾ ಅನಿವಾರ್ಯವಲ್ಲ. ಆದರೆ ಜನಪದ ಗೀತೆ ಮತ್ತು ಸಂಗೀತ ಅಭಿನ್ನವೆನ್ನಬೇಕು. ಜನಪದ ಗೀತೆಗಳ ಸಂಗೀತ ಶಾಸ್ತ್ರೀಯ ಸಂಗೀತದಂತೆ ಬಿಗಿಯಾದುದಲ್ಲ. ನವ್ಯತೆ, ವೈವಿಧ್ಯಸಾಧ್ಯತೆ ಅದರ ಪ್ರಮುಖ ಲಕ್ಷಣಗಳು. ಜನಪದ ಗೀತೆಗಳ ಬಗ್ಗೆ ಗಮನಿಸಬೇಕಾದ ಇನ್ನೊಂದು ಮಹತ್ತ್ವದ ಸಂಗತಿಯೆಂದರೆ ಅವು ಶಿಷ್ಟಕಾವ್ಯಕ್ಕಿಂತ ಕ್ರಿಯಾತ್ಮಕ ಎಂಬುದು. ನಿರ್ದಿಷ್ಟ ಸಂದರ್ಭ ಸನ್ನಿವೇಶಗಳಲ್ಲಿ ಅವು ಬಳಕೆಗೊಂಡು ಸಾಮಾಜಿಕ ಅಥವಾ ಸಾಮೂಹಿಕ ಉದ್ದೇಶವನ್ನು ನೆರವೇರಿಸುತ್ತವೆ; ತನ್ಮೂಲಕ ಸಮಾಜ ಜೀವನದಲ್ಲಿ ಹಾಸುಹೊಕ್ಕಾಗಿರುತ್ತವೆ.

ಜನಪದ ಗೀತೆಗಳನ್ನು ಹಲವು ಬಗೆಯಾಗಿ ವರ್ಗೀಕರಿಸಬಹುದು. ಅವುಗಳಲ್ಲಿ ಗೀತೆಗಳು ಹಾಗೂ ಕಥನಗೀತೆಗಳು ಎಂದು ಎರಡು ದೊಡ್ಡ ಗುಂಪುಗಳು ಏರ್ಪಡುತ್ತವೆ. ಗೀತೆಗಳಲ್ಲಿ ಮತ್ತೆ ಭಾವಗೀತೆಗಳು, ಧಾರ್ಮಿಕ

ಗೀತೆಗಳು, ಮಾಂತ್ರಿಕ ಗೀತೆಗಳು, ಕಾಯಕ ಗೀತೆಗಳು, ಕ್ರೀಡಾಗೀತೆಗಳು, ನಾಟ್ಯಗೀತೆಗಳು, ಶಿಶುಗೀತೆಗಳು ಇತ್ಯಾದಿಯಾಗಿ ಭೇದ ಕಲ್ಪಿಸಬಹುದು. ಕುಡಿತದ ಹಾಡುಗಳು, ರಾಜಕೀಯ ಸ್ವರೂಪದ ವಿಡಂಬನ ಗೀತೆಗಳು, ಗದ್ಯಮಿಶ್ರಿತ ಗೀತೆಗಳು, ಬೀದಿಹೋಕ ವ್ಯಾಪಾರಿ ಗೀತೆಗಳು ಮುಂತಾದುವೂ ಉಂಟು. ಭಾವಗೀತೆಗಳನ್ನು ಪುನಃ ಪ್ರೇಮಗೀತೆಗಳು, ಶೋಕಗೀತೆಗಳು, ಹಾಸ್ಯಗೀತೆಗಳು ಭಕ್ತಿಗೀತೆಗಳು, ದೇಶಭಕ್ತಿ ಗೀತೆಗಳು ಇತ್ಯಾದಿಯಾಗಿ ವಿಂಗಡಿಸಬಹುದು. ಭಾವಗೀತೆಗಳ ಪ್ರಮುಖ ಗುಣಗಳೆಂದರೆ ತೀವ್ರವಾದ ಆತ್ಮನಿಷ್ಠೆ ಮತ್ತು ಭಾವತೀವ್ರತೆ, ಅವು ಒಮ್ಮೊಮ್ಮೆ ಭಾವಾತಿಸಾರದತ್ತ ಒಲಿಯಲೂಬಹುದು. ಕಥನಗೀತೆಗಳಲ್ಲಿ ಲಾವಣಿಯೂ ಸಮಾವೇಶಗೊಳ್ಳುತ್ತದೆ. ಹಾಗೆ ಸಮಾವೇಶಗೊಳಿಸದೆ ಲಾವಣಿಯನ್ನೇ ಬೇರೆ ಗುಂಪಾಗಿ ವರ್ಗೀಕರಿಸುವುದೂ ಉಂಟು. ಲಾವಣಿಯೆಂದರೆ ಒಂದು ಕಥೆಯನ್ನು ಹೇಳುವ ಹಾಡು ಅಥವಾ ಹಾಡಿನಲ್ಲಿ ಹೇಳಲಾದ ಒಂದು ಕಥೆ ಎಂಬ ಅಭಿಪ್ರಾಯವಿದೆ. ಲಾವಣಿಗಳೆಲ್ಲ ಕಥನಗೀತೆಗಳೇ ಆದರೂ ಕಥನಗೀತೆಗಳೆಲ್ಲ ಲಾವಣಿಗಳಲ್ಲ. ಸರಳವಾದ ಸಣ್ಣಪುಟ್ಟ ಕಥನಗೀತೆಗಳು, ಕಥೆ ಹೇಳುತ್ತವೆ ಎಂಬುದನ್ನು ಬಿಟ್ಟರೆ ಉಳಿದೆಲ್ಲ ಲಕ್ಷಣಗಳಲ್ಲೂ ಗೀತೆಗಳನ್ನೇ ಹೋಲುತ್ತವೆ. ಇವುಗಳದೇ ಒಂದು ಗುಂಪು. ಆದರೆ ಸುದೀರ್ಘವೂ ಕೆಲವು ವಿಶಿಷ್ಟ ಲಕ್ಷಣಗಳುಳ್ಳವೂ ಆದ ಕಥನಗೀತೆಗಳನ್ನು ಲಾವಣಿಗಳೆಂದು ಹೆಸರಿಸಿ ಪ್ರತ್ಯೇಕ ಗುಂಪನ್ನಾಗಿ ಪರಿಗಣಿಸಬಹುದು. ಜನಪದ ಗೀತೆಗಳಲ್ಲಿ ಲಾವಣಿಗಳ (ನೋಡಿ: ಲಾವಣಿ) ಪಾಲು ಬಹು ದೊಡ್ಡದು.

ಜನಪದ ಗೀತೆಗಳು ಇಡೀ ಗುಂಪಿನ ಆಸ್ತಿಯಾದರೂ ಎಲ್ಲರೂ ಎಲ್ಲ ಸಂದರ್ಭಗಳಲ್ಲೂ ಹಾಡುವಂಥವು ಎಂಬ ಪ್ರಮೇಯವೇನೂ ಕಂಡುಬರುವುದಿಲ್ಲ. ಇಲ್ಲಿ ಒಂದು ತೆರನಾದ ವಿಶೇಷತೆಯನ್ನು ನಾವು ಗಣಿಸಬೇಕಾಗುತ್ತದೆ. ಕೆಲವು ಬಗೆಯ ಹಾಡುಗಳು ವಯೋಮಾನಕ್ಕೆ ಅನುಗುಣವಾದುವು. ಮಕ್ಕಳ ಹಾಡುಗಳನ್ನು ದೊಡ್ಡವರು ಹಾಡುವುದೂ ಪ್ರೇಮಗೀತೆಗಳನ್ನು ಮುದುಕರು ಹಾಡುವುದೂ ವಿರಳ. ಮತ್ತೆ ಕೆಲವು ಬಗೆಗಳು ಲಿಂಗಭೇದವನ್ನನುಸರಿಸುತ್ತವೆ. ಹೆಂಗಸರ ಹಾಡುಗಳೇ ಬೇರೆ ಗಂಡಸರ ಹಾಡುಗಳೇ ಬೇರೆ. ನಮ್ಮಲ್ಲಿ ಜೋಗುಳದ ಹಾಡುಗಳು, ಸೋಬಾನೆ ಪದಗಳು, ಶಾಸ್ತ್ರದ ಹಾಡುಗಳು ಮುಂತಾದವು ಸ್ತ್ರೀಯರಿಗೆ ಮೀಸಲು; ಕೋಲಾಟದ ಪದಗಳು, ಕಂಸಾಳೆ ಪದಗಳು, ಕೆಲಬಗೆಯ ಲಾವಣಿಗಳು ಮೊದಲಾದವು ಗಂಡಸರ ಹಾಡುಗಳು. ಒಟ್ಟಿನಲ್ಲಿ ಜನಪದ ಗೀತೆ ಎಲ್ಲ ಅರ್ಥಗಳಲ್ಲೂ ಸಾಮಾಜಿಕವಾದುದು. ಅದರಲ್ಲಿ ವ್ಯಕ್ತಿಗಿಂತ ಗುಂಪಿಗೆ ಪ್ರಾಧಾನ್ಯ, ಸಮಷ್ಟಿ ಪ್ರಜ್ಞೆಯೇ ಅದರ ಅಗ್ಗಳಿಕೆಯಾಗಿದೆ. (ಸಿ.ಪಿ.ಕೆ.,ಆರ್.ವಿ.ಎಸ್.ಎಸ್.)

ಕರ್ನಾಟಕದಲ್ಲಿ ಜನಪದ ಗೀತೆಗಳು ಬಹು ಪ್ರಾಚೀನ ಕಾಲದಿಂದ ಬಳಕೆಯಲ್ಲಿದ್ದಿರಬಹುದಾದರೂ ಅವುಗಳ ಬಗ್ಗೆ ಸ್ಪಷ್ಟ ದಾಖಲೆಗಳು ದೊರಕುವುದು ಕಡಿಮೆ. ಕನ್ನಡದಲ್ಲಿ ಒನಕೆವಾಡುಗಳು ಮುಂತಾದ ಕೆಲಸದ ಹಾಡುಗಳು ಸು.8ನೆಯ ಶತಮಾನದಿಂದಲೇ ಪ್ರಚಲಿತವಾಗಿದ್ದವೆಂಬುದಕ್ಕೆ ಶಾಸನಾಧಾರಗಳಿವೆ. ಗಂಗದೊರೆ ಶಿವಮಾರನ ಗಜಾಷ್ಟಕ ಕನ್ನಡದಲ್ಲಿ ಓವನಿಗೆಯೂ ಒನಕೆವಾಡೂ ಆಗಿದ್ದಂತೆ ತಿಳಿದುಬರುತ್ತದೆ. ಆದರೆ ಪ್ರಾಚೀನ ಕನ್ನಡ ವಿದ್ವಾಂಸರು ಜನಪದ ಗೀತೆಗಳನ್ನು ಅಷ್ಟಾಗಿ ಆದರದಿಂದ ಕಾಣಲಿಲ್ಲ. ಮಧುರಕವಿ ಮತ್ತು ಇತರ ಕವಿಗಳು ಜನಪದ ಕಾವ್ಯವನ್ನು ಅಪಹಾಸ್ಯ ಮಾಡಿರುವುದುಂಟು.

ಕರ್ನಾಟಕದಲ್ಲಿ ಜನಪದ ಗೀತೆಗಳನ್ನು ಸಂಗ್ರಹಿಸುವ ಕಾರ್ಯ ಪಾಶ್ಚಾತ್ಯ ವಿದ್ವಾಂಸರಿಂದ ಪ್ರಾರಂಭವಾಯಿತು. ಮೊದಲಿಗೆ ಜೆ.ಎಫ್. ಫ್ಲೀಟ್ ಅವರು ಕೆಲವು ಕನ್ನಡ ಲಾವಣಿಗಳನ್ನು ಸಂಗ್ರಹಿಸಿ ಇಂಡಿಯನ್ ಆಂಟಿಕ್ವರಿ ಪತ್ರಿಕೆಯಲ್ಲಿ ಪ್ರಕಟಿಸಿದರು. ಅಂದಿನಿಂದ ಜನಪದ ಗೀತೆಗಳ ಸಂಗ್ರಹ ಮತ್ತು ಅಧ್ಯಯನ ನಡೆಯುತ್ತ ಬಂದಿದೆ.

ಜನಪದ ಗೀತೆಗಳಲ್ಲಿ ಕೆಲಸದ ಹಾಡುಗಳೇ ಅತ್ಯಂತ ಪ್ರಾಚೀನವಾದುವೆಂದು ವಿದ್ವಾಂಸರ ಅಭಿಮತ. ಕೃಷಿಕರ ಗೀತೆಗಳು, ಕಾರ್ಮಿಕರ ಗೀತೆಗಳು, ಇತರ ವೃತ್ತಿಗಳಿಗೆ ಸಂಬಂಧಿಸಿದ ಗೀತೆಗಳು ಕೆಲಸದ ಹಾಡುಗಳ ವಿಭಾಗದಲ್ಲಿ ಬರುತ್ತವೆ. ಕೆಲಸದ ಹಾಡುಗಳು ಕೆಲಸ ಮಾಡುವಾಗ ಹುಟ್ಟುವ ಹಾಡುಗಳಾಗಬಹುದು ಅಥವಾ ಆಯಾ ಕೆಲಸವನ್ನು ಕುರಿತ ಹಾಡುಗಳಾಗಿರಬಹುದು. ಉಳುವಾಗ, ಬಿತ್ತುವಾಗ, ನಾಟಿ ಹಾಕುವಾಗ, ಕೊಯ್ಯುವಾಗ, ನೇಯುವಾಗ, ನೂಲುವಾಗ, ದೋಣಿ ನಡೆಸುವಾಗ, ಭಾರ ಎತ್ತುವಾಗ ಮತ್ತು ಎಳೆಯುವಾಗ, ಕುಟ್ಟುವಾಗ, ಬೀಸುವಾಗ ಇಂಥ ಇತರ ಸಂದರ್ಭಗಳಲ್ಲಿ ಶ್ರಮಪರಿಹಾರಕ್ಕಾಗಿ ಹಾಡುಗಳು ಹೊಮ್ಮುತ್ತವೆ. ಈ ಗೀತೆಗಳು ಒಂದು ಸಮಾಜದ ಸಂಸ್ಕೃತಿಯನ್ನರಿಯುವಲ್ಲಿ ಅತ್ಯಂತ ಉಪಯುಕ್ತವಾಗುತ್ತವೆ.

ಕರ್ನಾಟಕದಲ್ಲಿ ಕೃಷಿಕರ ಗೀತೆಗಳ ಸಂಖ್ಯೆ ಹೆಚ್ಚು. ಮೋಟೆಯನ್ನು ನಾಟುವುದು, ಹಂತಿ ಕಟ್ಟುವುದು, ಕಣ ಮಾಡುವುದು, ಕಂಕಿಗಳನ್ನು ವಿಂಗಡಿಸುವುದು, ರಾಶಿ ಮಾಡುವುದು ಇತ್ಯಾದಿ ಕಾರ್ಯಗಳನ್ನು ಮಾಡುವಾಗ ಗೀತೆಗಳನ್ನು ಹಾಡುವುದುಂಟು. ಬೀಜ ಬಿತ್ತುವ ಕೆಲಸದಿಂದ ಹಿಡಿದು ಒಕ್ಕಿದ ಧಾನ್ಯವನ್ನು ಮನೆಗೆ ತೆಗೆದುಕೊಂಡು ಹೋಗುವವರೆಗೂ ಇಂಥ ಹಾಡುಗಳು ರಚನೆಯಾಗಿವೆ.

ಸ್ವಾತೀಯ ಮಳೆ ಬಂದು ಮಳೆರಾಜ
ಸುತ್ತ ದೇಶಕ್ಕೆ ಆಗ್ಯಾದೆ ಮಳೆರಾಜ
ಹಳ್ಳಕೊಳ್ಳ ಹೆಣ ಹರಿದಾಡಿ ಹೋದಾವು
ಯಾವಾಗ ಬಂದ್ಯಪ್ಪ ಮಳೆರಾಜ

ಎಂದು ಮಳೆರಾಜನನ್ನು ರೈತ ಕೇಳುತ್ತಾನೆ. ಮಳೆ ಇಲ್ಲದಿದ್ದರೆ ರೈತನಿಗೆ ಏತವೇ ಗತಿ. ಏತದ ಹಾಡುಗಳನ್ನು ಹಾಡುತ್ತ ಹೊಲದಲ್ಲಿ ಕೆಲಸವನ್ನು ಪ್ರಾರಂಭ ಮಾಡುತ್ತಾನೆ. ಹೊಲದ ಕೆಲಸ ರೈತನಿಗೆ ಪವಿತ್ರವಾದುದು. ಅನ್ನವೇ ಅವನ ಪಾಲಿಗೆ ದೇವರು. ಆದುದರಿಂದಲೇ

ಕಣವೆ ಮಂಟಪವಾತೊ ಗುಣವಂತ ಬಸವೇಶ
ಹೊಣೆಗಾರ ಶ್ವೇತ ದಂಡೇಶ | ಕಣ ಮೇಟಿ
ಗಣೆಗುರುವು ಕಣಕೆ ಪ್ರಭುಲಿಂಗೊ

ಎಂದು ಭಾವಿಸುತ್ತಾನೆ. ಗೃಹಸಂಬಂಧವಾದ ಕೆಲಸಗಳಿಗೆ ಸಂಬಂಧಿಸಿದ ಹಾಡುಗಳಲ್ಲಿ ಮುಖ್ಯವಾದುವು ಬೀಸುವ ಕಲ್ಲಿನ ಹಾಡುಗಳು ಮತ್ತು ಒನಕೆಯ ಹಾಡುಗಳು. ಕನ್ನಡದಲ್ಲಿ ಇವು ಹೇರಳವಾಗಿ ದೊರಕುತ್ತವೆ. ಕಲ್ಲಮ್ಮ ಎಂದರೆ ಜನಪದ ಸ್ತ್ರೀಗೆ ಅತ್ಯಂತ ಪ್ರೀತಿ, ಆ ಕಲ್ಲು ಕೊಟ್ಟವರನ್ನೂ ಅವರು ಮರೆಯುವುದಿಲ್ಲ. ಅಂಥವರನ್ನು:

ಕಲ್ಲು ಕೊಟ್ಟಮ್ಮಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ ಆ ಮನೆಗೆ
ಮಲ್ಲಿಗೇ ಮುಡಿಯೋ ಸೊಸೆ ಬರಲಿ

- ಎಂದು ಹಾಡಿ ಹೊಗಳುತ್ತಾರೆ. ಬೆಳಗಿನ ಜಾವದಲ್ಲೇ ಎದ್ದು ರಾಗಿ ಬೀಸುವಾಗ ನಾ ನಿನ್ನ ನಿದ್ದೆ ಕೆಡಿಸೀದೆ ರಾಗಿಕಲ್ಲೇ ಎಂದು ಅಚೇತನಗಳನ್ನೂ ಚೇತನಗಳಂತೆ ಭಾವಿಸುವ ಮನಸ್ಸು ಜನಪದರದು. ಈ ಕೆಲಸದ ಹಾಡುಗಳು ಜನಪದರ ಕೆಲಸದ ಶ್ರಮವನ್ನು ಮರೆಯುವ ಹಾಗೆ ಮಾಡುತ್ತವೆ.

ಜನಪದ ಗೀತೆಗಳಲ್ಲಿ ಪರಮಾರ್ಥ ಗೀತೆಗಳು ಅತ್ಯಂತ ಪ್ರಾಚೀನ ಕಾಲದಿಂದ ಉಳಿದು ಬಂದಿದೆ. ಮಾನವ ಮಾನವಾತೀತ ಶಕ್ತಿಗಳನ್ನು ನಂಬಿ, ಆ ಶಕ್ತಿಗಳೊಂದಿಗೆ ಸಂಪರ್ಕವನ್ನು ಬೆಳೆಸಿಕೊಳ್ಳುವ ಸಲುವಾಗಿ ರಚಿತವಾದ ಹಾಡುಗಳನ್ನು ಪರಮಾರ್ಥ ಗೀತೆಗಳ ಹೆಸರಿನಲ್ಲಿ ವಿವೇಚಿಸಬಹುದು. ಸ್ತುತಿಪದಗಳು ಭಕ್ತಿ ಮಾರ್ಗದಲ್ಲೂ ವ್ರತಗಳು ಜಾತ್ರೆಗಳಿಗೆ ಸಂಬಂಧಿಸಿದ ಹಾಡುಗಳು ಕರ್ಮ ಮಾರ್ಗದಲ್ಲೂ ತತ್ತ್ವದ ಪದಗಳು ಜ್ಞಾನ ಮಾರ್ಗದಲ್ಲೂ ಸೇರುತ್ತವೆ. ಇವುಗಳಲ್ಲಿ ಸ್ತುತಿಪದಗಳಿಗೆ ಹೆಚ್ಚು ಪ್ರಾಧಾನ್ಯ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋ ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ದೇವತಾಸ್ತುತಿ ಜನಪದರ ಬಾಳನ್ನೇ ಆವರಿಸಿದೆ

ದೇವರ ನೆನೆದಾರೆ ಸಾವುಟ್ಟು ನಮಗಿಲ್ಲ
ಹಾವು ಕಚ್ಚಿದರೂ ವಿಷವಿಲ್ಲ ಸರ್ಪಾನ
ಹೆಡೆಯ ದಾಟಿದರೂ ಭಯವಿಲ್ಲ

ಎಂಬುದು ಅವರ ನಂಬಿಕೆ. ಕನ್ನಡದಲ್ಲಿರುವ ಸ್ತುತಿಪದಗಳನ್ನು ಶಿವಸ್ತುತಿಗಳು, ವಿಷ್ಣುಸ್ತುತಿಗಳು, ಇತರ ದೇವತಾ ಸ್ತುತಿಗಳು ಎಂದು ವಿಂಗಡಿಸಬಹುದು. ಶಿವಸಂಬಂಧಿ ಗೀತೆಗಳಲ್ಲಿ ಶಿವ, ಪಾರ್ವತಿ, ಗಂಗೆ, ಬಸವ, ಗಣಪತಿ, ಷಣ್ಮುಖಕುಮಾರ, ಶಿವಶರಣರು ಮುಂತಾದವರ ಜೀವನ ಸಂಗತಿಗಳು ನಿರೂಪಿತವಾಗಿವೆ. ವಿಷ್ಣು ಸಂಬಂಧ ಗೀತೆಗಳಲ್ಲಿ ವಿಷ್ಣು, ರಾಮ, ಕೃಷ್ಣ, ಲಕ್ಷ್ಮೀ ಮುಂತಾದವರನ್ನು ಕುರಿತ ವರ್ಣನೆಗಳಿರುತ್ತವೆ. ಜೋಕುಮಾರ ಸಂಪ್ರದಾಯ, ಕರಗ, ಗೌರೀಪೂಜೆ, ಎಲ್ಲಮ್ಮ ದೇವತೆಗಳ ಸಂಪ್ರದಾಯಗಳು ಇತ್ಯಾದಿ ಕರ್ಮಮಾರ್ಗದ ಆಚರಣೆಗಳಿಗೆ ಸಂಬಂಧಿಸಿದ ಗೀತೆಗಳೂ ಕನ್ನಡದಲ್ಲಿ ಹೇರಳವಾಗಿವೆ. ತತ್ತ್ವದ ಪದಗಳಲ್ಲಿ ಮಾನವನ ಹುಟ್ಟು, ಸಾವು, ಜಗತ್ತಿನ ಸೃಷ್ಟಿರಹಸ್ಯ, ವೈರಾಗ್ಯಭಾವ, ಮರಣಾನಂತರದ ಸ್ಥಿತಿ ಮಂತಾದುವುಗಳ ಬಗೆಗಿನ ವಿಚಾರಗಳಿರುತ್ತವೆ.

ಗೃಹಜೀವನದ ಹಾಡುಗಳು ಕುಟುಂಬದ ಸುಖದುಃಖಗಳನ್ನು ಬಾಳಿನಲ್ಲಿನ ಆಸರಿಕೆ ಬೇಸರಿಕೆಗಳನ್ನು ವ್ಯಕ್ತಪಡಿಸುತ್ತವೆ. ತೌರಿನ ಬಯಕೆ, ಬಂಜೆತನ, ಸಂತಾನಾಕಾಂಕ್ಷೆ, ದಾಂಪತ್ಯ ಜೀವನ, ಅತ್ತೆಮನೆಯ ಕಾಟ, ವೈಧವ್ಯ, ಮಕ್ಕಳ ಆಟಪಾಟ, ವಿನೋದ ಇತ್ಯಾದಿ ಅನೇಕ ವಿಷಯಗಳು ಈ ಹಾಡುಗಳಲ್ಲಿ ಬರುತ್ತವೆ. ಇವನ್ನು ಗರತಿಯರು ಸಾಮಾನ್ಯವಾಗಿ ರಾಗಿ ಬೀಸುವಾಗಲೋ ಬತ್ತ ಕುಟ್ಟುವಾಗಲೋ ಹಾಡುತ್ತಾರೆ. ತಾಯಿ - ಮಗಳು, ಅಕ್ಕ - ತಂಗಿ, ಅಣ್ಣ - ತಂಗಿ, ಅಕ್ಕ - ತಮ್ಮ, ಅತ್ತೆ - ಸೊಸೆ, ಅತ್ತಿಗೆ - ನಾದಿನಿ, ಗಂಡ - ಹೆಂಡತಿ, ಮೈದುನ - ಅತ್ತಿಗೆ, ಅತ್ತೆ - ಮಾವ, ಮಾವ - ಸೊಸೆ ಮುಂತಾಗಿ ಒಂದು ಕುಟುಂಬದಲ್ಲಿ ಕಾಣಬರುವ ಬಾಂಧವ್ಯಗಳನ್ನು ಪ್ರತಿಬಿಂಬಿಸುವ ಹಾಡುಗಳು ಕನ್ನಡದ ತ್ರಿಪದಿಗಳಲ್ಲಿ ಅತ್ಯಂತ ಹೃದ್ಯವಾಗಿ ಮೂಡಿಬಂದಿವೆ.

ಜನಪದ ಗೀತೆಗಳಲ್ಲಿ ಮಕ್ಕಳ ಹಾಡುಗಳನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಮಕ್ಕಳಿಗಾಗಿ ದೊಡ್ಡವರು ಕಲ್ಪಿಸಿದ ಲಾಲಿಪದಗಳು, ಜೋಗುಳ ಪದಗಳು ಮತ್ತು ಮಕ್ಕಳೇ ರಚಿಸಿದ ಹಾಡುಗಳು ಈ ವಿಭಾಗದಲ್ಲಿ ಬರುತ್ತವೆ. ಮಕ್ಕಳ ಹಾಡುಗಳಲ್ಲಿ ಎಷ್ಟೋ ಬಾರಿ ಅರ್ಥಕ್ಕಿಂತ ಪ್ರಾಸಾನುಪ್ರಾಸದ ಚಮತ್ಕಾರ, ರಂಜನೆ ಹೆಚ್ಚಾಗಿ ಕಂಡುಬರುತ್ತದೆ. ಉದಾಹರಣೆಗೆ

ಕಾಗೆ ಕಾಗೆ ಕವ್ವ ! ಯಾರ್ ಬತ್ತಾರವ್ವ
ಮಾವ್ ಬತ್ತಾನವ್ವ ! ಮಾವ್ಗೇನ್ ಊಟ
ರಾಗಿಕಲ್ ಗೂಟ

ಇಂಥ ಗೀತೆಗಳು ಎಲ್ಲೋ ಪ್ರಾರಂಭವಾಗಿ ಇನ್ನೆಲ್ಲೋ ಮುಕ್ತಾಯ ವಾಗುವುದುಂಟು.

ದೀಪಾವಳಿ, ಹೋಳಿ, ದಸರ ಮುಂತಾದ ಸಂದರ್ಭಗಳಲ್ಲಿ ಹಾಡುವ ಹಾಡುಗಳನ್ನೂ ಮದುವೆಯಲ್ಲಿ ಹಾಡುವ ಹಾಸ್ಯಶೃಂಗಾರ ಗೀತೆಗಳನ್ನೂ ಕೋಲಾಟದ ಪದಗಳನ್ನೂ ವೈನೋದಿಕ ಹಾಡುಗಳೆಂದು ವಿಭಾಗಿಸಬಹುದು. ಜನಪದ ಗೀತೆಗಳಲ್ಲಿ ಶೃಂಗಾರವನ್ನೂ ನವುರಾಗಿ ಚಿತ್ರಿಸಿರುವುದುಂಟು. ಕನ್ನಡ ಜನಪದ ಗೀತೆಗಳಲ್ಲಿ ಶೃಂಗಾರ ಗೀತೆಗಳ ಮೊತ್ತ ಅಪಾರವಿದ್ದು ಸತ್ತ್ವದಿಂದಲೂ ಅವು ಯಾವುದೇ ಶಿಷ್ಟ ಕಾವ್ಯಕ್ಕೆ ಸರಿಸಮಾನವಾಗಿವೆ. ಸಾಮಾನ್ಯವಾಗಿ ಇಂಥ ಹಾಡುಗಳಲ್ಲಿ ಶೃಂಗಾರ ಹಾಸ್ಯರಸಗಳು ಬೆಸೆದುಕೊಂಡಿರುವುದೇ ಹೆಚ್ಚು. (ಆರ್.ವಿ.ಎಸ್.ಎಸ್.)

**ಜನಪದ ಚಿತ್ರಕಲೆ :** ಮಾನವನ ಬರೆವಣಿಗೆಯಲ್ಲಿ ಮೊದಲು ಕಂಡು ಬಂದದ್ದು ಚಿತ್ರಗಳೆ. ಅವನು ವಾಸಿಸುತ್ತಿದ್ದ ಗುಹೆಗಳ ಹೊರ ಮತ್ತು ಒಳ ಮೈಗಳಲ್ಲಿ ಅಂಥ ಚಿತ್ರಗಳನ್ನು ಇಂದಿಗೂ ನೋಡಬಹುದು. ಮುಂದೆ ಆತ ಮಾತಿಗೆ ಬರೆವಣಿಗೆಯ ರೂಪ ಕೊಡಲು ಪ್ರಯತ್ನಿಸಿದಾಗಲೂ ಚಿತ್ರಗಳನ್ನೇ ಬಳಸಿದ. ಇದೇ ಮುಂದೆ ಚಿತ್ರಲಿಪಿಯಾಯಿತು. ಚೀನ, ಜಪಾನ್ ಮುಂತಾದ ದೇಶಗಳ ಲಿಪಿಗಳಲ್ಲಿ ಚಿತ್ರಲಿಪಿಯ ಸುಳುಹನ್ನು ಸ್ಪಷ್ಟವಾಗಿ ಗುರುತಿಸಬಹುದು. ಜನಪದ ಚಿತ್ರಕಲೆ ಜನಪದ ಸಂಗೀತದಷ್ಟೇ ಪ್ರಾಚೀನವಾದುದು. ಜನಪದ ಚಿತ್ರಕಲೆ ಆಯಾ ಜನದ ಜೀವನ ರೀತಿಗಳನ್ನು ನಂಬಿಕೆಗಳನ್ನು ಧಾರ್ಮಿಕ ವಿಚಾರಗಳನ್ನು ಪ್ರತಿನಿಧಿಸುತ್ತದೆ. ಜಿಂಕೆ, ಆನೆ, ಹುಲಿಗಳ ಬೇಟೆ ಹಾಗೂ ಕೃಷಿಗೆ ಸಂಬಂಧಿಸಿದ ಚಿತ್ರಗಳು ಹೇರಳವಾಗಿ ದೊರೆಯುತ್ತವೆ. ಜನ ತಾವು ಆಚರಿಸುವ ಹಬ್ಬ ಹುಣ್ಣಿಮೆಗಳಲ್ಲಿ ಹಾಕುವ ಬಗೆಬಗೆಯ ರಂಗವಲ್ಲಿಗಳಲ್ಲಿ, ಕಟ್ಟುವ ಮಂಟಪಗಳಲ್ಲಿ, ಬಳಸುವ ಮಡಕೆ ಕುಡಿಕೆಗಳ ಮೇಲಿನ ಅಲಂಕರಣಗಳು, ನೇಯುವ ಬಟ್ಟೆಗಳಲ್ಲಿ, ಧರಿಸುವ ಉಡಿಗೆ ತೊಡಿಗೆಗಳಲ್ಲಿ ಚಿತ್ರಕಲಾಭಿರುಚಿಯ ವಿವಿಧ ನಿದರ್ಶನಗಳನ್ನು ಕಾಣಬಹುದು. ಅನೇಕ ವಸ್ತುಸಂಗ್ರಹಾಲಯಗಳು ಜನಪದ ಚಿತ್ರಕಲೆಗೆ ಸಂಬಂಧಿಸಿದ ವಸ್ತುವಿಶೇಷಗಳನ್ನು ಸಂಗ್ರಹಿಸಿಟ್ಟಿವೆ.

ಮಡಕೆಗಳು, ಆಟಿಕೆಗಳು, ಪ್ರತಿಮೆಗಳು, ಮಾತೃದೇವತೆಯ ಶಿಲಾ ವಿಗ್ರಹಗಳು ಭಾರತದಲ್ಲಿ ಸಿಂಧೂಕಣಿವೆಯ ನಾಗರಿಕತೆಯ ನಿವೇಶನಗಳಲ್ಲಿ ಹೇರಳವಾಗಿ ದೊರೆತಿವೆ. ಇವು ಒಂದು ಜನಪ್ರಿಯ ಕಲಾ ರೂಪದ ಸಂಪ್ರದಾಯಕ್ಕೆ, ಅಂದರೆ ಜನಪದ ಕಲಾ ಸಂಪ್ರದಾಯಕ್ಕೆ ಸೇರಿದುವು. ಏಕೆಂದರೆ ಅದರ ಸಮಕಾಲೀನವೂ ಹೆಚ್ಚು ಕೃತಕವೂ ಆದ ಸಂಸ್ಕೃತಿಗಳು ಉತ್ಪಾದಿಸಿದ ಕಲಾವಸ್ತುಗಳಿಗಿಂತ ಅವು ಬೇರೆಯಾಗಿದೆ. ಈ ಜನಪದ ಸಂಪ್ರದಾಯದ ಅವಿಚ್ಛಿನ್ನ ವಹನವಾದರೋ ಬಹಳ ಆಶ್ಚರ್ಯಕರವಾದ ಸತ್ತ್ವದಿಂದ ಕೂಡಿದೆ. ಏಕೆಂದರೆ ಇಂದಿಗೂ ಭಾರತದ ಕೆಲವು ಭಾಗಗಳಲ್ಲಿ ಸಣ್ಣ ಮಣ್ಣಿನ ಬೊಂಬೆಗಳ ತಯಾರಿಕೆ ಕಂಡುಬರುತ್ತದೆ. ಇದು ಕಲ್ಪನೆ ಮತ್ತು ತಯಾರಿಕೆಗಳಲ್ಲಿ ಮಾತೃದೇವತೆ ಹಾಗೂ ಫಲವಂತಿಕೆ ಪಂಥಗಳನ್ನು ಪ್ರತಿನಿಧಿಸುವ ಚರಿತ್ರಪೂರ್ವ ವಿಗ್ರಹಗಳಿಗೆ ಸಮಾನವಾಗಿದೆ. ಮಕ್ಕಳ ಆಟದ ಸಾಮಾನುಗಳೂ ಕಂಡುಬರುತ್ತವೆ. ಅವಿಚ್ಛಿನ್ನ ಪರಂಪರೆಯ ಕೆಲವು ಅಲಂಕಾರಗಳು, ವಿನ್ಯಾಸಗಳು ಮತ್ತೆ ಮತ್ತೆ ಪುನರುಕ್ತವಾಗುತ್ತವೆ. ಹಾಗೆ ಅನೇಕ ಶತಮಾನಗಳಿಂದ ಯುಗಗಳಿಂದ ಪುನರುಕ್ತವಾಗುತ್ತಿದ್ದರೂ ಅವು ಪ್ರತಿಯೊಂದು ಸಾರಿಯೂ ಹೊಸದಾಗಿಯೆ ಕಾಣುತ್ತವೆ. ಇದು ಜನಪದ ಚಿತ್ರಕಲೆಯ ಮುಖ್ಯ ಲಕ್ಷಣಗಳಲ್ಲಿ ಒಂದು. ಹಳ್ಳಿಗರ ಕಲೆಯ ಒಂದು ಲಕ್ಷಣ ಅದರ ಸಂಪ್ರದಾಯ ಪಾಲನೆ. ಕಲೆಗಳಲ್ಲೆಲ್ಲ ಅದರ ಕಾಲವನ್ನು ಕುರಿತು ಖಚಿತವಾಗಿ ನಿರ್ದೇಶಿಸುವುದು ಮಾತ್ರ ಸಾಧ್ಯವಿಲ್ಲ. ಸರಳ ಸುಂದರ ಅಲಂಕಾರ ನಮೂನೆಗಳು ರೂಪುಗೊಂಡು ಶತಮಾನಗಳ ಕಾಲ ಉಳಿಯುತ್ತದೆ. ಹಳ್ಳಿಗರ ಮನಸ್ಸಿನಲ್ಲಿ ವಿನೂತನತೆಗಾಗಿ ಅವಿರತ ಹಂಬಲಿಕೆ ಇರುವುದಿಲ್ಲ. ಅವರು ಕೇಳುವದು ಒಂದು ವಸ್ತು ತನ್ನದೇ ಆದ ಬೆಡಗಿನಿಂದ ಕೂಡಿರಬೇಕು ಎಂದಷ್ಟೇ. ಕೆಲವೇ ಅಲಂಕಾರಗಳು ಮತ್ತು ಬಣ್ಣಗಳ ಮಿಶ್ರಣದಿಂದ ಅಸಂಖ್ಯಾತ ವೈವಿಧ್ಯ ಮತ್ತು ಪರಿಣಾಮಗಳನ್ನು ಪಡೆಯುವುದು ಸಾಧ್ಯ ಎಂಬುದನ್ನು ಅವರು ಅರಿತಂತೆ ತೋರುತ್ತದೆ.

ಹೆಚ್ಚು ಕಾಲ ಉಳಿಯುವ ಲೋಹ ಅಥವಾ ಶಿಲೆಯಲ್ಲದೆ ಬೇರೆಯಾವುದೇ ವಸ್ತುವಿನಲ್ಲಿಯೂ ಕಲೆ ಕಾಲದ ದಾಳಿಗಳನ್ನು ಎದುರಿಸಿ ಉಳಿಯದಿರಬಹುದು. ಆದ್ದರಿಂದ ಚರಿತ್ರಪೂರ್ವ ಕಾಲದ ಅಥವಾ ಅನಂತರದ ಚಾರಿತ್ರಿಕ ಯುಗಗಳ ಜನಪದ ಚಿತ್ರಕಲೆಯ ನಿರೂಪಣೆಯನ್ನುಳ್ಳ ಒಂದು ಸುಸಂಬದ್ಧವಾದ ಕಾಲಾನುಕ್ರಮ ರೂಪರೇಷೆಯನ್ನು ಕೊಡುವುದು ಹೆಚ್ಚು ಕಡಿಮೆ ಅಸಾಧ್ಯವಾಗುತ್ತದೆ. ಮೌರ್ಯ ಪೂರ್ವಕಾಲದ ಆರ್ಷೇಯ ಮಣ್ಣಿನ ವಿಗ್ರಹಗಳು ಮತ್ತು ಸಂಗವಂಶದ ಕಾಲಕ್ಕೆ ಸೇರಿದವು ಜನಪದ ಪರಂಪರೆಯ ಮುಂದುವರಿಕೆಯನ್ನು ಸಮರ್ಥಿಸುತ್ತದೆ.

ಅದೆಷ್ಟೇ ಸ್ವಲ್ಪವಾಗಿರಲಿ, ಚಾರಿತ್ರಿಕ ಆಧಾರ ತೋರಿಸುವಂತೆ ಅಜಂತದ ಅಭಿಜಾತ ಚಿತ್ರಕಲಾಸೃಷ್ಟಿಯ ಅನಂತರ ಚಿತ್ರಕಲೆಯ ದೇಶೀಯ ಸಂಪ್ರದಾಯ ಹೆಚ್ಚಾಗಿ ಜನಪದ ಪರಂಪರೆಯ ಆರ್ಷೇಯ ಕುರುಹುಗಳನ್ನು ಹೊಂದಿದ್ದ ಕೃತಿಗಳಲ್ಲಿ ಉಳಿದುಕೊಂಡು ಬಂತು ಎಂಬುದು ತೀರ ಸ್ಪಷ್ಟ. ನಿದರ್ಶನಕ್ಕೆ ಗುಜರಾತಿನ (ಪಶ್ಚಿಮ ಭಾರತೀಯ ಪದ್ಧತಿ) ಜೈನ ಕಲ್ಪಸೂತ್ರಗಳ ಪ್ರಾಚೀನ ತಾಳೆವೋಲೆಯ ಹಸ್ತಪ್ರತಿಗಳು, ಬಂಗಾಲದ ಪಾಲ ಸಾಮ್ರಾಜ್ಯದ (ಪೂರ್ವ ಭಾರತೀಯ ಪದ್ಧತಿ) ಕೃತಿಗಳು. ಜನಪದ ಚಿತ್ರಕಲೆಯ ಗುಜರಾತ್‌ನ ಜನಪ್ರಿಯ ಶೈಲಿಯ ಕೆಲವು ಮಾದರಿಗಳು 11ನೆಯ ಶತಮಾನದವೆಂದು ಹೇಳಲಾಗಿದೆ. 14 ನೆಯ ಶತಮಾನದಲ್ಲಿ ರಮಾನಂದ ಭಕ್ತಿಪಂಥವನ್ನು ಆರಂಭಗೊಳಿಸಿದ ಮೇಲೆ ಒಂದು ದೊಡ್ಡ ಪ್ರಚೋದಕ ಶಕ್ತಿ ಮತ್ತು ಆವೇಶ ಭಾರತೀಯ ಜೀವನವನ್ನು ಕಲೆ ಮತ್ತು ಸಾಹಿತ್ಯಗಳಲ್ಲಿ ಆವರಿಸಿತು. ಪೌರಾಣಿಕ ಪುನರುಜ್ಜೀವನದ ಈ ಕಾಲದಲ್ಲಿ ಜನಪದ ಗೀತೆಗಳು ಮತ್ತು ಭಕ್ತಿಗೀತೆಗಳು ಉಚ್ಛ್ರಾಯಸ್ಥಿತಿಗೇರಿದುವು. ಗ್ರಾಮ ಚಿತ್ರ ಕಲಾವಿಧಾನದ ಮೇಲೆ ಭಕ್ತಿ ಪಂಥ ತನ್ನದೇ ಪ್ರಭಾವಗಳನ್ನು ಬೀರಿತು. ಭಾಗವತ ಮತ್ತು ಇತರ

ಮೂಲಗಳಿಂದ ಶ್ರೀ ಕೃಷ್ಣನ ಜೀವನವನ್ನು ಚಿತ್ರಿಸುವ ಚಿತ್ರಗಳನ್ನು ಅಪಾರ ಸಂಖ್ಯೆಯಲ್ಲಿ ರಚಿಸಲಾಯಿತು. ವಿಶೇಷತಃ ಹಸ್ತಪ್ರತಿ ಚಿತ್ರಗಳ ರೂಪದಲ್ಲಿ ಮೊದಮೊದಲಿನ ರಾಜಸ್ಥಾನೀ ಚಿತ್ರಕಲೆ (16ನೆಯ ಶತಮಾನ) ಜನಪದ ಕಲೆಯ ಗುರುತುಗಳನ್ನು ತೋರಿಸುತ್ತದೆ. ಮೇವಾರ ಪದ್ಧತಿಯ (17ನೆಯ ಶತಮಾನ) ಪ್ರಾರಂಭವಂತೂ ಇನ್ನು ಪ್ರಾಚೀನವಾದ ಆರ್ಷೇಯ ಅಥವಾ ಜನಪದ ಸಂಪ್ರದಾಯಗಳ ಬೇರುಗಳಿಗೆ ಹರಡಿಕೊಂಡಿತ್ತು. ತೀರ ಇತ್ತೀಚೆಗೆ 19ನೆಯ ಶತಮಾನದಲ್ಲಿ ಕಾಲಿಘಾಟ್ (ಬಂಗಾಲ) ಜನಪದ ಚಿತ್ರಕಲಾವಿದರು ಒಂದು ಓಜಸ್ಸಿನಿಂದ ಕೂಡಿದ ಸತ್ತ್ವಯುಕ್ತವಾದ, ಶೈಲಿಯನ್ನು ರೂಢಿಗೆ ತಂದರು.

ಮಾತೃದೇವತಾ ಪಂಥಗಳ ಜೇಡಿಮಣ್ಣಿನ ವಿಗ್ರಹಗಳು ಪ್ರಾಚೀನ ಜನಪದ ಸಂಸ್ಕೃತಿಗಳಿಂದ ಮೂಡಿದುವು ಎಂಬುದನ್ನು ಆಗಲೇ ನೋಡಿದ್ದೇವೆ. ಮುಂದೆ, ಜನಪದ ಚಿತ್ರಕಾರ ವೈಷ್ಣವ ಧರ್ಮದ ಪುನರುತ್ಥಾನವನ್ನು ಅನುಸರಿಸಿ, ದೊಡ್ಡ ಪ್ರಮಾಣದಲ್ಲಿ ದೇವತಾ ವಿಗ್ರಹಗಳನ್ನು ರಚಿಸಿದ. ನಾಥದ್ವಾರ, ಗುಜರಾತ್ ಮತ್ತು ಒರಿಸ್ಸಗಳಲ್ಲಿ ಕ್ರಮವಾಗಿ ನಾಥಜಿ ಮತ್ತು ಜಗನ್ನಾಥರ ವಿಗ್ರಹಗಳನ್ನು ತಯಾರಿಸಲಾಯಿತು. ಅಲ್ಲಿಗೆ ಬಂದ ಯಾತ್ರಿಕರು ತಮ್ಮ ಯಾತ್ರೆಯ ಗುರುತಾಗಿ ಅವನ್ನು ಒಯ್ಯುತ್ತಿದ್ದರು. ಈ ಪದ್ಧತಿ ಇಂದಿಗೂ ಉಳಿದುಬಂದಿದೆ.

ಕರ್ನಾಟಕದಲ್ಲಿ ಅಂದಂದಿನ ರಾಜಮನೆತನಗಳ ಪ್ರೋತ್ಸಾಹದಿಂದ ದೇಶೀಯ ಸಂಪ್ರದಾಯದ ಚಿತ್ರಕಲೆ ಬೆಳೆದುಬಂದಿದೆ. ಒಂದು ಸಾವಿರದ ನೂರರುವತ್ತು ಪುಟಗಳ ಹೆಬ್ಬೊತ್ತಿಗೆಯಾದ ಶ್ರೀತತ್ತ್ವನಿಧಿಯಲ್ಲಿ ಅಪೂರ್ವವಾದ 1888 ವರ್ಣರಂಜಿತ ಚಿತ್ರಗಳೂ 458 ರೇಖಾಚಿತ್ರಗಳೂ ಇವೆ. ರಾಜರುಗಳ ವಂಶವೃಕ್ಷಗಳ ಭಿತ್ತಿಚಿತ್ರಗಳನ್ನು ಇದರಲ್ಲಿ ಕಾಣಬಹುದು. ಮುಮ್ಮಡಿಯವರ ಧ್ಯಾನಶ್ಲೋಕಗಳಿಗೆ ಅನುಸಾರವಾಗಿ ಬರೆಯಲಾದ ಸುಂದರವಾದ ಚಿತ್ರಗಳನ್ನೂ ಇದರಲ್ಲಿ ನೋಡಬಹುದು. ಶ್ರೀರಂಗಪಟ್ಟಣದಲ್ಲಿರುವ ಹೈದರನ ಕಾಲದ ಕುಡ್ಯ ಚಿತ್ರಗಳು ದೇಶೀಯ ಶೈಲಿಯಲ್ಲಿವೆ. ರಾಜರ ಪ್ರೋತ್ಸಾಹದಿಂದ ರೂಪುಗೊಂಡ ಕನ್ನಡ ರೀತಿಯ ಚಿತ್ರಗಳನ್ನು ಮನೆ ಮನೆಗಳಲ್ಲೂ ಮಠಮಂದಿರಗಳಲ್ಲೂ ಅರಮನೆ ಗುರು ಮನೆಗಳಲ್ಲೂ ನೋಡಬಹುದಾಗಿದೆ. ಕಾಗದದ ಮೇಲೆ ಬಟ್ಟೆಯ ಮೇಲೆ ಇಲ್ಲವೆ ಗಾಜಿನ ಮೇಲೆ ಜಲವರ್ಣ ಅಥವಾ ತೈಲವರ್ಣಗಳಲ್ಲಿ ರಾಜರುಗಳ ರೂಪ ಚಿತ್ರಗಳನ್ನು, ದೇವದೇವತೆಗಳ ಹಾಗೂ ಪೌರಾಣಿಕ ಸನ್ನಿವೇಶಗಳ ಸಂಯೋಜನ ಚಿತ್ರಗಳನ್ನು ವಿಶೇಷವಾಗಿ ರಚಿಸಲಾಗಿದೆ. ಸುವರ್ಣಲೇಪನದ, ವರ್ಣರಂಜಿತ ಕುಸುರಿ ಕೆಲಸದ ಈ ಜನಪದ ಚಿತ್ರರಚನೆಯಲ್ಲಿ ಕಂಡುಬರುವ ಶ್ರದ್ಧೆ, ತಾಳ್ಮೆ, ಭಕ್ತಿ, ಪ್ರತಿಭೆ, ಸಾಧನೆ, ಕಲ್ಪನೆ ಮುಂತಾದುವು ಮೆಚ್ಚುವಂಥವು. ಇಲ್ಲಿ ನಾವು ಕಾಣುವ ಇನ್ನೊಂದು ವಿಶೇಷವೆಂದರೆ ದೇಶೀಯ ಮೂಲವರ್ಣಗಳು. ಮೊದಲು ಸೀಸದ ಕಡ್ಡಿಯಲ್ಲಿ ಆಕೃತಿಯನ್ನು ರೂಪಿಸಿಕೊಂಡು ಅನಂತರ ವರ್ಣಗಳನ್ನು ಹಾಕಿ, ಅಲಂಕಾರ ವೈಖರಿಗಳನ್ನು ತರುಪೆಡೆಗಳಲ್ಲೆಲ್ಲ ಬಿಳಿಯ ಸೀಸದಲ್ಲಿ ರೇಖೆಗಳನ್ನು ಎಳೆದು ಅದರ ಮೇಲೆ ವಜ್ರದ ಅಂಟನ್ನು ಸವರುತ್ತಾರೆ. ಅನಂತರ ಅದರ ಮೇಲೆ ಚಿನ್ನದ ರೇಖನ್ನು ಲೇಪಿಸುತ್ತಾರೆ. ರೇಖಿನ ಮೇಲೆ ವರ್ಣಗಳು ಬಾರದೆ ಭದ್ರವಾಗಿ ಕೂರುವಂತೆ ಒಂದು ಬಗೆಯ ಅಂಟನ್ನು ಬಳಸುತ್ತಾರೆ. ಬೂಟ ಕುಸುರಿನ ಕೆಲಸ ಮಾಡುವಾಗ ವಿವಿಧ ವರ್ಣಗಳನ್ನು ಬಳಸಿ ಆಯಾ ಭಾಗಗಳಿಗೆ ಸ್ವರ್ಣ ರೇಖಿನ ಲೇಪನ ಮಾಡುತ್ತಾರೆ. ಹೀಗೆ ರಚಿತವಾದ ಕೃತಿ ಅನೇಕ ವರ್ಷಗಳ ಕಾಲ ತನ್ನ ಪ್ರಕಾಶವನ್ನು ಕಳೆದುಕೊಳ್ಳದೆ ಚಿರನೂತನ ಎಂಬಂತೆ ಕಾಣುತ್ತಿರುತ್ತದೆ. ಹೆಚ್ಚಾಗಿ ಇವು ಪೂಜಾಚಿತ್ರಗಳಾದುದರಿಂದ ಅವುಗಳ ಮೇಲೆ ಚಿತ್ರಕಾರರ ಹೆಸರು ಕಂಡುಬರುವುದಿಲ್ಲ.

ಈಚೆಗೆ ಪಾಶ್ಚಾತ್ಯ ಸಂಪ್ರದಾಯಗಳ ಸಂಪರ್ಕದಿಂದ ನೂತನ ಪ್ರಯೋಗಗಳು ನಡೆಯುತ್ತಿವೆಯಾದರೂ ಜನಪದ ಶೈಲಿಯ ಪ್ರಗತಿ ಮಂದಗೊಂಡಿದೆ. ಇಲ್ಲಿ ದೇಶೀಯ ವರ್ಣಗಳನ್ನೇ ಬಳಸಲಾಗುತ್ತದೆ. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪೌರಾಣಿಕ ಹಾಗೂ ಚಾರಿತ್ರಿಕ ಸನ್ನಿವೇಶಗಳ ದೃಶ್ಯವನ್ನು ದೇಶೀಯ ಬಟ್ಟೆಯ ಮೇಲೆ ಬಿಡಿಸಲು ಬಣ್ಣಗಳನ್ನು ಬಳಸಿರುವುದನ್ನು ಗಮನಿಸಬೇಕು. ಅನೇಕ ದೇಗುಲಗಳಲ್ಲಿ ಈ ಬಗೆಯ ಚಿತ್ರಫಲಕಗಳನ್ನು ದೇವರುಗಳ ಹಿಂಬದಿಯಲ್ಲಿ ಇಲ್ಲವೆ ರಥಗಳ ಮಂಟಪಗಳಲ್ಲಿ ತೂಗುಹಾಕುವುದು ವಾಡಿಕೆಯಾಗಿತ್ತು.



ಕಲಂ

ಕಲಂಕಾರಿ ಚಿತ್ರಕಲೆಯ ಮುಖ್ಯ ರಹಸ್ಯವಿರುವುದು ಚಿತ್ರಕ್ಕೆ ಬೇಕಾಗುವ ಬಟ್ಟೆ, ಬಣ್ಣ, ಲೇಖನಿಗಳ ಸಿದ್ಧತೆಯಲ್ಲಿ. ಮೂಲಿಕೆಗಳಿಂದ ನೇರವಾಗಿ ಚೆಲುವೆಮಾಡಿದ ಹತ್ತಿ ಇಲ್ಲವೆ ರೇಷ್ಮೆ ಕೋರಾಬಟ್ಟೆಯ ಮೇಲೆ ಸಸ್ಯಗಳಿಂದ ತಯಾರಾದ ದೇಶೀ ಮೂಲವರ್ಣಗಳನ್ನು ಆತ ಜಾಣ್ಮೆಯಿಂದ ಬಳಸುತ್ತಾನೆ. ಚಿತ್ರ ಬರೆಯಲು ಉಪಯೋಗಿಸುವ ಬಟ್ಟೆಯನ್ನು ಮೈರಾಭಲಂ ಎಂಬ ದ್ರವ್ಯದಲ್ಲಿ ಮತ್ತೆ ಮತ್ತೆ ನೆನೆಹಾಕಿ ಹಿಂಡಿ ಮರಳ ಮೇಲೆ, ಬಿಸಿಲಿನಲ್ಲಿ ಒಣಗಿಸಿ ತಯಾರಿಸುತ್ತಾರೆ. ಮೈರಾಭಲಂ ಎಂದರೆ ನೀರಿನಲ್ಲಿ ನೆನೆದ ಅಳಲೆಕಾಯಿ ಚೂರ್ಣವನ್ನು ಎಮ್ಮೆಯ ಹಾಲಿನೊಂದಿಗೆ ಬೆರಸಿ ಮಾಡಿದ ದ್ರವ್ಯ.

ಜನಪದ ಕಲಾವಿದರು ಬಳಸುವ ವರ್ಣಗಳು ಕೇವಲ ಮೂರು ನಾಲ್ಕು. ಆಯಾ ಬಣ್ಣಗಳು ಬಟ್ಟೆಯ ಮೇಲೆ ಸ್ಥಿರವಾಗಿ ನಿಲ್ಲಲು ಸಹಾಯಕವಾಗುವಂತೆ ಪಟಿಕದ ರಸವನ್ನೂ ಉಪಯೋಗಿಸಲಾಗುತ್ತದೆ. ಉಪಯೋಗಿಸುವ ಜಲವರ್ಣಗಳೆಲ್ಲ ಗಿಡಮೂಲಿಕೆಗಳಿಂದ ಆದವು. ಕೆಂಪು, ಕಪ್ಪು, ಹಳದಿ ಮತ್ತು ನೀಲಿ - ಈ ನಾಲ್ಕು ಬಹುಮುಖ್ಯವಾದ ಮೂಲವರ್ಣಗಳು. ತಾಟಿಬೆಲ್ಲ, ಕಬ್ಬಿನಬೆಲ್ಲ ಮತ್ತು ಕಬ್ಬಿಣದ ಚೂರುಗಳ ಜೊತೆಯಲ್ಲಿ ನೀರು ಬೆರಸಿ ಮೂಲರೇಖೆಗಾಗಿ ಬಳಸುವ ಕಪ್ಪುಬಣ್ಣವನ್ನು ತಯಾರಿಸುತ್ತಾರೆ. ಮಂಜಿಷ್ಟ (ಬೇರು), ಸುರುಳು ಪಟ್ಟೆ, ಮರದ ತೊಗಟೆ, ತಾಮ್ರತೇಗ, ಏಟಿಜಲಗ ಮತ್ತು ನೀರು - ಇವುಗಳ ಸಮ್ಮಿಶ್ರಣದಿಂದ ರಕ್ತವರ್ಣವನ್ನು ಸಿದ್ಧಮಾಡುತ್ತಾರೆ. ಕರಕಹೂಗಳಿಂದ ವರ್ಣ ಮತ್ತು ದೇಶೀಯ ನೀಲಿಯನ್ನು ಪಡೆಯುತ್ತಾರೆ.

ಲೇಖನಿಗೆ ಇಲ್ಲಿ ಕುಂಚದ ಸ್ಥಾನ. ನೋಡಲು ಸಾಮಾನ್ಯವಾಗಿ ಕಂಡರೂ ಅದರ ಉಪಯೋಗ ಚಮತ್ಕಾರವಾದುದು. ಒಂದು ತುದಿ ಚೂಪಾಗಿರುವ ಆರು ಅಂಗುಲದ ಬಿದಿರಿನ ಕಡ್ಡಿಯನ್ನು ತಯಾರಿಸಿ ಅದರ ಚೂಪು ತುದಿಯ ಕೊಂಚ ಮೇಲುಭಾಗದಲ್ಲಿ ಸ್ವಲ್ಪ ಉಣ್ಣೆಯನ್ನು ಇಟ್ಟು ಅದರ ಸುತ್ತಲೂ ತೆಳು ನೂಲಿನಿಂದ ಬಿಗಿಯಲಾಗುತ್ತದೆ. ಆ ಭಾಗವನ್ನು ಬಣ್ಣಗಳಲ್ಲಿ ಅದ್ದಿ ತೆಗೆದು ಲೇಖನಿಯಲ್ಲಿರುವ ಉಣ್ಣೆಯ ಭಾಗವನ್ನು ಬೆರಳುಗಳಿಂದ ಒತ್ತುತ್ತ ಹೋದರೆ ಅದರಲ್ಲಿ ಸಂಗ್ರಹವಾದ ಬಣ್ಣ ಕಡ್ಡಿಯ ತುದಿಯ ಮೂಲಕ ಇಳಿದು ಬಟ್ಟೆಯ ಮೇಲೆ ಚಿತ್ರ ಮೂಡುತ್ತದೆ. ಬೇರೆ ಬೇರೆ ವರ್ಣಗಳಿಗೆ ಬೇರೆ ಬೇರೆ ಕಲಂಗಳನ್ನು ಉಪಯೋಗಿಸಲಾಗುತ್ತದೆ.

ಕಲಂಕಾರಿ ಕಲೆಯಲ್ಲಿ ನಾವು ಕಾಣುವ ಮುಖ್ಯ ಲಕ್ಷಣಗಳೆಂದರೆ ಪ್ರಾದೇಶಿಕ ಸಂಪ್ರದಾಯ ನಿಷ್ಠೆ, ಮೌಲಿಕ ಪ್ರತಿಭೆ ಹಾಗೂ ಅಸಾಧಾರಣ ವೇಗ. ಈ ಕಲಾವಿದರ ಕಲ್ಪನಾಚಾತುರ್ಯ ನಿಜವಾಗಿ ದೊಡ್ಡದು. ಜಲವರ್ಣವಾದರೂ ಈ ಚಿತ್ರಗಳು ತೈಲವರ್ಣದ ಮೆರಗನ್ನು ತೋರುತ್ತವೆ.

ಆಂಧ್ರದ ಗುಡ್ಡಗಾಡಿನ ಜನರಲ್ಲಿ ಈ ಕಲೆ ಮೊದಲು ಉಗಮವಾಯಿತು. ಚಿತ್ತೂರು ಜಿಲ್ಲೆಯ ಕಾಳಹಸ್ತಿಯಲ್ಲಿರುವ ವ್ರಾತಪತಿಯಲ್ಲಿ ಇಂದಿಗೂ ಕೆಲವು ಕಲಾವಿದರು ಇದ್ದಾರೆ. ಈ ಕಲೆಯ ಬೆಳೆವಣಿಗೆಗೆ ಕೇಂದ್ರ ಗೃಹ ಕೈಗಾರಿಕಾ ಸಂಸ್ಥೆ ಹೆಚ್ಚಿನ ಆಸಕ್ತಿಯನ್ನು ತೋರುತ್ತ ಬಂದಿದೆ. ಇವರಿಗಾಗಿ ತರಬೇತಿ ಕೇಂದ್ರ ಒಂದನ್ನು ಮದರಾಸಿನಲ್ಲಿ ತೆರೆಯಲಾಗಿದೆ. ಅಲ್ಲಿ ಖ್ಯಾತ ಕಲಾವಿದರೂ ಕಲಾ ವಸ್ತುಗಳ ಸಂಗ್ರಾಹಕರೂ ಆದ ಕೋಡೂರು ರಾಮಮೂರ್ತಿಯವರ ಮುಂದಾಳು ತನದಲ್ಲಿ ಒಳ್ಳೆಯ ಕೆಲಸ ನಡೆಯುತ್ತಿದೆ. ಹೊಸ ಹೊಸ ಪ್ರಯೋಗಗಳಿಗೂ ಅಲ್ಲಿ ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಸಿದ್ಧವಾದ ಕೃತಿಗಳು ದೆಹಲಿ, ಮುಂಬಯಿ, ಮದರಾಸು, ಹೈದರಾಬಾದು, ಬೆಂಗಳೂರು ಮುಂತಾದ ಕಡೆ ಅನೇಕ ಸಾರಿ ಪ್ರದರ್ಶನ ಕಂಡಿವೆ. *

**ಜನಪದ ಛಂದಸ್ಸು :** ಜನಪದ ಹಾಡುಗಳ ರಚನೆ ಅಥವಾ ಅದರ ಛಂದಸ್ಸು ವಿಶಿಷ್ಟವೂ ಸ್ವಕೀಯವೂ ಆದ ಲಕ್ಷಣಗಳನ್ನೊಳಗೊಂಡಿರುತ್ತದೆ. ಇತರ ಶಾಖೆಗಳಂತೆ ಇದೂ ಪ್ರಭಾವಿತವಾಗುವುದಕ್ಕಿಂತ ಪ್ರಭಾವ ಬೀರುವುದು ಹೆಚ್ಚು. ವಿಶೇಷವೆಂದರೆ ಜನಪದ ಛಂದಸ್ಸು ಭಾಷೆ ಇತ್ಯಾದಿಗಳಂತೆ ಬೇಗ ವಿಕಾರಗೊಳ್ಳದೆ ತನ್ನ ತನವನ್ನು ಗರಿಷ್ಠ ಪ್ರಮಾಣದಲ್ಲಿ ಉಳಿಸಿಕೊಂಡಿರುತ್ತದೆ. ಆದುದರಿಂದ ಛಂದಸ್ಸು ಜನಪದೀಯತೆಯ ಮುಖ್ಯ ಲಕ್ಷಣಗಳಲ್ಲೊಂದಾಗಿರುತ್ತದೆ. ಇಲ್ಲಿ ಛಂದೋಬಂಧಗಳು ಸಮೂಹದ ವಸ್ತುವಾಗಿ ಆವರ್ತನಗೊಳ್ಳುವುದರಿಂದಲೂ ಪಲ್ಲವಿಯ ಪುನರುಕ್ತಿಯಿಂದಲೂ ಏಕತಾನ ಸಹಜವಾದರೂ ವಿಕಾಸಶೀಲವೂ ಆದ ಜನಪದ ಸಮಾಜದಲ್ಲಿ ವೈವಿಧ್ಯ ಸಾಧನೆಯೂ ಆಗುತ್ತದೆ. ಈ ವೈವಿಧ್ಯ ಮತ್ತು ಅದರ ಚರಿತ್ರೆ ಆ ಒಂದು ಸಮಾಜದ ವಿಶಿಷ್ಟವಾದ ಸಾಂಸ್ಕೃತಿಕ ಕೊಡುಗೆಯನ್ನು ನಿರ್ಧರಿಸುತ್ತದೆ.

ದ್ರಾವಿಡಛಂದಸ್ಸಿನಲ್ಲಿ ಮುಖ್ಯವಾದ ಪಾತ್ರ ಕನ್ನಡ ಛಂದಸ್ಸಿನದು. ಇದರ ಇತಿಹಾಸವನ್ನು ಗಮನಿಸಿದರೆ ಬಹುಶಃ ಕನ್ನಡ ಸಾಹಿತ್ಯದ ಸುವರ್ಣಯುಗ ಆರಂಭವಾಗುವ ಹೊತ್ತಿಗೆ ಸಂಸ್ಕೃತಪ್ರಾಕೃತಗಳ ಪ್ರಭಾವ ಸಾಕಷ್ಟು ಉಂಟಾದುದರಿಂದ ಕನ್ನಡ ಛಂದಸ್ಸು ಶ್ರೀಮಂತರ ಮನೆಯ ದಾಸಿಯಂತೆ ಮೂಲೆಗುಂಪಾಯಿತು. ಆದರೂ ಬೇರೊಂದು ರೂಪದಲ್ಲಿ ಗುಪ್ತಗಾಮಿನಿಯಾಗಿ ನಿರಂತರವಾಗಿ ಪ್ರವಹಿಸುತ್ತಲೇ ಇತ್ತು. ಚತ್ತಾಣ ಬೆದಂಡೆಯಂಥ ದೇಶೀರೂಪಗಳನ್ನು ಹಾಡುವುದೂ ಕೇಳುವುದೂ ಗೌರವಕ್ಕೆ ಯೋಗ್ಯವೆನಿಸಿರಲಿಲ್ಲ. ಹೀಗೆ ಕನ್ನಡ ಸಾಹಿತ್ಯ ಪಂಡಿತರ ಸೊತ್ತಾಯಿತು. ಜನಪದ ಸಾಹಿತ್ಯ ಅದಕ್ಕೆ ತೊತ್ತಾಯಿತು. ಆದುದರಿಂದಲೇ ಅಕ್ಕರ ತ್ರಿಪದಿ ಷಟ್ಪದಿಗಳನ್ನು ಬಿಟ್ಟರೆ ಉಳಿದುವು ಛಂದಸ್ಸಿನ ಗ್ರಂಥಗಳಲ್ಲಿ ಮಾತ್ರ ದೊರೆಯುತ್ತವೆ. ಜನಪದ ಛಂದಸ್ಸನ್ನು ಪರಿಶೀಲಿಸಿದರೆ ದೇಸಿಯನ್ನು ಅಲಕ್ಷ್ಯದಿಂದ ನೋಡುತ್ತ ಉಪಚಾರಕ್ಕಾಗಿ ವಿವರಿಸುತ್ತಿದ್ದ ಶಾಸ್ತ್ರಕಾರಮಾರ್ಗಿಗಳು ದೇಸೀ ರೂಪಗಳ ಪರಿಚಯವನ್ನು ಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಶಾಸ್ತ್ರದ ಲಕ್ಷಣಗಳು ಜನಪದ ಛಂದಸ್ಸಿನ ವಿಷಯದಲ್ಲಿ ಹೆಚ್ಚು ಬೆಳಕು ಬೀರುವುದಿಲ್ಲ. ಬ್ರಹ್ಮ ವಿಷ್ಣು ರುದ್ರಗಣ ಕಲ್ಪನೆಯಾದರೂ ಬಹುಮಟ್ಟಿಗೆ ಸಾಂಪ್ರದಾಯಿಕ. ಜನಪದ ಛಂದಸ್ಸಿನ ಚರಿತ್ರೆಯ ಪುನರ್ರಚನೆ ಎಂದರೆ ಬೇರೊಂದು ರೂಪದಲ್ಲಿ ಹರಿಯುತ್ತಿದ್ದ ಗುಪ್ತಗಾಮಿನಿಯನ್ನು ಗೊತ್ತುಹಚ್ಚುವುದೇ ಆಗಿದೆ. ಅದಕ್ಕೆ ಇಂದಿನ ಜನಪದ ಛಂದಸ್ಸಿನ ಅರಿವು ತಳಹದಿಯಾಗಿರುತ್ತದೆ. ಈ ಅರಿವು ಅನ್ಯಪ್ರಭಾವಗಳಿಂದ ರೂಪುಗೊಳ್ಳುತ್ತಿರುವ ಆಧುನಿಕ ಸಾಹಿತ್ಯ ಗೀತರೂಪವನ್ನು ಸ್ವದೇಶಿ ಪೋಷಣೆಯಿಂದ ತೇಜಸ್ವಿಗೊಳಿಸತಕ್ಕದಾಗಿದೆ.

ಜನಪದ ಛಂದಸ್ಸನ್ನು ಅಂಶಲಯವೆಂದು ವ್ಯವಹರಿಸುತ್ತಿದ್ದೇವೆ. ಅಂಶಲಯ ಸಂಸ್ಕೃತದ ವರ್ಣಸಂಗೀತಕ್ಕೂ ಪ್ರಾಕೃತದ ತಾಳಸಂಗೀತಕ್ಕೂ ಹೊಂದದೆ ವೈದಿಕ ಛಂದಸ್ಸಿನ ಸ್ವರಸಂಗೀತಕ್ಕೆ ಹೊಂದುತ್ತದೆ ಎಂದು ಎಚ್.ಡಿ.ವೇಲಣಕರರು ಹೇಳುತ್ತಾರೆ. ಇದನ್ನು ಡಿ.ಎಸ್.ಕರ್ಕಿ ಅವರು ಒಪ್ಪುತ್ತಾರೆ. ವೇಲಣಕರ್ ಅವರು ವೈದಿಕ ಛಂದಸ್ಸಿನಲ್ಲಿ ಕಾಲತತ್ತ್ವ ಮುಖ್ಯ ಪಾತ್ರವೇನೂ ವಹಿಸಿಲ್ಲ ಎಂದಿದ್ದಾರೆ. ಆದರೆ ದ್ರಾವಿಡ ಛಂದಸ್ಸಿನಲ್ಲಿ, ಅದರಲ್ಲೂ ಕನ್ನಡ ಜನಪದ ಛಂದಸ್ಸಿನಲ್ಲಿ ಕಾಲತತ್ತ್ವ ಅನಿವಾರ್ಯ ಪಾತ್ರದ್ದಾಗಿದೆ.

ಲಯದಲ್ಲಿ ಎರಡು ವಿಧ. ಮಾತ್ರಾಗಣದ್ದು ಸ್ವಯಂ ವ್ಯಕ್ತಲಯ, ಓದಿದಾಗ ತಾನಾಗಿ ಒಂದು ಮಾತ್ರಾಲಯವನ್ನು ಅದು ವ್ಯಕ್ತಪಡಿಸುತ್ತದೆ. ಅಂಶಗಣಗಳ ವಿಷಯದಲ್ಲಾದರೆ ನಮ್ಮ ಶ್ರಮ ಅಗತ್ಯ. ನಮ್ಮ ಇಷ್ಟದ ಒಂದು ಮಾತ್ರಾಲಯವನ್ನು ಆರೋಪಿಸುತ್ತೇವೆ; ಆದ್ದರಿಂದ ಆರೋಪಿತಲಯ ಅನ್ವಯಿಸುತ್ತೇವೆ; ಅನ್ವಿತಲಯ; ಸಾಧಿಸುತ್ತೇವೆ - ಸಾಧಿತಲಯ ಮಾತ್ರಾಗಣ ತನ್ನಲ್ಲೇ ಒಂದು ಕ್ರಮವನ್ನುಳ್ಳದ್ದು; ಇರುವ ಕ್ರಮವನ್ನು ಅನುಸರಿಸುತ್ತೇವೆ. ಇಲ್ಲಿ ಕ್ರಮವಿಲ್ಲದ್ದು; ಅದನ್ನು ಕ್ರಮಗೊಳಿಸುತ್ತೇವೆ. ನಮ್ಮ ಇಷ್ಟದ ಮಾತ್ರಾಲಯದ ಕ್ರಮವನ್ನು ಬಂಧ ಅನುಸರಿಸುತ್ತದೆ. ಆದ್ದರಿಂದ ವಾಸ್ತವವಾಗಿ ಅಂಶಲಯ ಎಂಬುದಿಲ್ಲ; ಕಾಲತತ್ತ್ವಕ್ಕೆ ಒಳಪಡಿಸಿ ಹಾಡಿದಾಗ ಎಲ್ಲವೂ ಮಾತ್ರಾಲಯದ್ದೇ.

ಸ್ಥೂಲವಾಗಿ ಒಂದು ಆಘಾತದಿಂದ ಇನ್ನೊಂದು ಆಘಾತದವರೆಗಿನ ಕಾಲಾವಕಾಶಕ್ಕೆ ಗಣ ಎಂದು ಹೆಸರು. ತಮಿಳಿನಲ್ಲಿ ಗಣ ಒಂದೇ ಅಕ್ಷರವುಳ್ಳದ್ದೂ ಆಗಿರಬಹುದು. ಆದರೆ ಕನ್ನಡದಲ್ಲಿ (ತಮಿಳಿನಲ್ಲೂ) ಆ ಒಂದಕ್ಷರವೂ ಇರಬೇಕಿಲ್ಲ. ಆಘಾತದಿಂದ ಆಘಾತದವರೆಗೆ ಮೌನವೋ ಹಿಂದಿನ ಗಣದ ಅಂತ್ಯಾಕ್ಷರದ ಸ್ವರದ ಮುಂದುವರಿದ ಆಲಾಪನೆಯೋ ವ್ಯಾಪಿಸಬಹುದು. ಆದ್ದರಿಂದ ಗಣ ಮೂಲ ಘಟಕವಾಗದು. ಕೊನೆಯ ಪಕ್ಷ ಎರಡು ಗಣಗಳಾದರೂ ಎಡೆಬಿಡದೆ ಬಂದಾಗ ಲಯಕ್ಕೆ ಗತಿ ಒದಗುತ್ತದೆ. ತಮಿಳಿನಲ್ಲಿ ಗಣವನ್ನು ಬಿಟ್ಟರೆ ತೋಲ್‌ಕಾಪ್ಪಿಯರ್ ಪ್ರಕಾರ ಪಾದವೂ ತಿರುಗಾಕ್ಕೈಪಾಡಿಯಾರ್ ಪ್ರಕಾರ ತಾಳವೂ ಛಂದಸ್ಸಿನ ಮೂಲಘಟಕವಾಗಿದೆ. ತಾಳಕ್ಕೆ ಆವೃತ್ತಿಯನ್ನೇ ನೀಡತಕ್ಕದ್ದು ಪಾದವಾದುದರಿಂದ ಕನ್ನಡ ಜನಪದಛಂದಸ್ಸಿಗೆ ಪಾದವನ್ನೇ ಮೂಲಘಟಕವನ್ನಾಗಿಟ್ಟುಕೊಳ್ಳಬಹುದು.

ಉಚ್ಚಾರಣಸಾಧ್ಯತೆಯ ಪರಿಮಿತಿಯೊಂದನ್ನು ಬಿಟ್ಟರೆ ಅಂಶಗಣದಲ್ಲಿ ಇಂತಿಷ್ಟೇ ಅಕ್ಷರಗಳು ಹೀಗೇ ಬರಬೇಕೆಂಬ ನಿಯಮವೇನೂ ಇಲ್ಲ. ಸಾಮಾನ್ಯವಾಗಿ ಮೊದಲ ಅಂಶ ಒಂದು ಗುರು ಅಥ್ವಾ ಎರಡು ಲಘುಗಳು. ಅನಂತರದ ಅಂಶಗಳಲ್ಲಿ ಎರಡು ಲಘುಗಳು ತ್ವರಿತಗೊಳ್ಳುವುದೂ ಉಂಟು; ಒಂದು ಗುರುವಿನ ಸ್ಥಾನದಲ್ಲಿ ಎರಡು ಲಘುಗಳು ಬಂದಂತೆ. ಷಟ್ಪದಿಯ ಮೂರು, ಆರನೆಯ ಪಾದಾಂತ್ಯದ ರುದ್ರ ವಿಚ್ಛೇದ್ಯರುದ್ರ ಎಂದರೆ - ವಿಷ್ಣು + ಗುರು. ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬರಬಹುದಾದುದರಿಂದ ಇದು ಬ್ರಹ್ಮ + ಗುರು ಕೂಡ ಆಗಬಹುದು. ಆದ್ದರಿಂದ ವಿಷ್ಣು ರುದ್ರಗಳಲ್ಲಿ ಎರಡು ಬಗೆಗಳಿವೆ. ಒಂದು ಗಣಾವಕಾಶದೊಳಗೆ ಉಚ್ಚರಿಸಲ್ಪಡುವ ವಿಷ್ಣು ಮತ್ತು ರುದ್ರ; ಮತ್ತು ಇವು ವಿಚ್ಛೇದಗೊಂಡು ಕ್ರಮವಾಗಿ ಬ್ರ + ಗು ಮತ್ತು ವಿ + ಗು ಆಗತಕ್ಕವು. ಇಲ್ಲಿನ ಬ್ರಹ್ಮ ವಿಷ್ಣುಗಳ ಸ್ಥಾನದಲ್ಲಿ ಒಂದೇ ಅಕ್ಷರವೂ ಬರಬಹುದು. ಆಗ ಗು + ಗು ಆಗುತ್ತದೆ. ಒಂದು ಗಣದಲ್ಲಿ ಅಕ್ಷರವೇ ಇಲ್ಲದಿರಬಹುದಾಗಿರುವದರ ಜೊತೆಗೆ, ಗಣದ ಆರಂಭದಲ್ಲಿ ಒಂದು ಅಕ್ಷರ ಬರುವುದರ ಜೊತೆಗೆ, ಗಣದ ಆರಂಭ ಮತ್ತು ಅಂತ್ಯಗಳಲ್ಲಿ ಮಾತ್ರ ಅಕ್ಷರ ಬಂದು ಮಧ್ಯೆ ಎಡೆ, ಎಳೆತ, ಮೌನ ಇರಬಹುದು. ಅಥವಾ ಗಣಾಂತ್ಯದಲ್ಲಿ ಮಾತ್ರ ಅಕ್ಷರ ಅಥವಾ ಅಕ್ಷರಗಳು ಬರಬಹುದು. ರುದ್ರವು ವಿ + ಗು ಆಗುವುದೆಂದು ಹೇಳಿದೆವು. ಇಲ್ಲಿಯ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬರಬಹುದಾದುದರ ಜೊತೆಗೆ ರುದ್ರವೇ ಬರಬಹುದು. ಆಗ ಗಣಾವಕಾಶದ ರು + ಗು ಆಗುತ್ತದೆ. ಈ ರುದ್ರ ಅತಿರುದ್ರವೂ ಆಗಬಹುದು. ಇವೆಲ್ಲ ಮುಂದಿನ ಪ್ರಯೋಗಗಳಲ್ಲಿ ಸ್ಪಷ್ಟವಾಗಿವೆ. ಒಂದು ಲಕ್ಷಣಕ್ಕೆ ಉದಾಹರಿಸಿರುವ ಲಕ್ಷ್ಯಗಳಲ್ಲಿ ಇತರ ಪರಿಶೀಲನಾಂಶಗಳೂ ಇರುವುದನ್ನು ಗಮನಿಸಬಹುದು. ಒಟ್ಟಿನಲ್ಲಿ ಗಣಸ್ವರೂಪ ಎಷ್ಟೇ ಸ್ವಚ್ಛಂದವಿರಲಿ ಆಘಾತ (ತಾಳ) ನಿಯಮವನ್ನು ಪಾದ (ಆವರ್ತ) ನಿಯಮವನ್ನು ಜನಪದ ಛಂದಸ್ಸು ಮೀರುವುದಿಲ್ಲ.

ಮುಂದಿನ ಬರೆವಣಿಗೆಯಲ್ಲಿ ಈ ಕೆಲವು ಸಂಕೇತಗಳನ್ನು ಬಳಸಲಾಗಿದೆ. ಅವುಗಳ ಅರ್ಥ ಹೀಗಿದೆ: 1 = ಗಣ; || = ಪಾದ; * = ಯತಿ; - || = ವಿಲಂಬ ಮತ್ತು ಪಾದಾಂತ್ಯ; s = ವಿಲಂಬ; ] = ಇಲ್ಲಿಯವರೆಗೆ ಹುಸಿ.

1.ಒಂದು ಗಣದ ಸ್ಥಾನದಲ್ಲಿ ಒಂದೇ ಗುರ್ವಕ್ಷರ ಬರಬಹುದು. ಲಘು ಬಂದಾಗ ಅದನ್ನೆಳೆದು ವಿಲಂಬಿಸುತ್ತೇವೆ.

ಒಂದು ಸು| ತ್ತಿನ ಕ್ವಾ| ಟೆs| ಅದರೊಳು; ಬಸವಕ | ಬಸವನ್ನಿ| ರೆs| ಬಸವನ; ಜಾಣೆಜಾ| ಗುರುದ್ವೆಣ್ಣೇ| ಸುವ್ವಲಾ| ಲಿs|

2.ಒಂದು ಅಕ್ಷರ ಎರಡು ಗಣಗಳ ಕಾಲವನ್ನು ತೆಗೆದುಕೊಳ್ಳಬಹುದು. ಈ ವಿಲಂಬದಲ್ಲಿ ಹಿಂದಿನ ಸ್ವರವನ್ನು ಆಲಾಪಿಸಬಹುದು; ಇಲ್ಲವೆ ಮೌನ ತುಂಬಬಹುದು; ಉಸಿರ್ದಾಣ ಮಾಡಿಕೊಳ್ಳಬಹುದು.

ಐದುತಿಂ| ಗಳ ಬಸು| ರೀs|| ಕೆನ್ನೆಮೇ| ಗಾಲು ಹಸು| ರುs| s||; ಎಳ್ಳು ಬಣ| ಜಿಗರುಡು| ಗs| s|| ಎಳ್ಳುಮಾ| ರಲು ಬಂ| ದs| s||

3. ಒಂದು ಗಣಾವಕಾಶದೊಳಗೆ ರುದ್ರ ಬರಬಹುದು.

ಭೂಮಿತಾಯಿ| ನೀ ಮಿಂದ| ದಿನಹೇ| ಳೆ - ಸುವ್ವೀ; ಕೊಂತ್ಯಮ್ಮಕೊ| ಟ್ಟಣಕುಟ್ಟಿ| ಭೀಮಣ್ಣಭೀ| ಕ್ಷೆಯ ಬೇಡಿ|

4. ಅತಿರುದ್ರಗಳೂ ಬರಬಹುದು

ಹೊನ್ನಮುತ್ತಿನ| ಮಾತ| ನೀಕೇಳೆ * ನನ್ನವಳೆ; ನಾನು ಮಿಂ| ದಂಥ ದಿನವ| ನೀವೇನು| ಕೇಳಿರಿ|; ಬಾರದ ಪ| ವಾಡಕೆಲ್ಲ| ಬಂದು ಒದಗೊ| ಘನನೀಲಿ|

5. ಅತಿರುದ್ರಕ್ಕೂ ಹೆಚ್ಚಿನ ಅಕ್ಷರಗಳು ಬರಬಹುದು. ಇದನ್ನು ಮಹಾಗಣ ಎನ್ನಬಹುದು.

ಹೊಡಿಸ್ಯಾನು| ಜಯಭೇರಿಗಳ| ಹಿಡಿಸ್ಯಾನು| ಬಿರುದಿನ ಕಾಳೆ; ಬಣ್ಣದಲ್ಲಿ ಬಲು| ಚಲುವ| ನನತಮ್ಮ| ತವರವರು; ಆನೆಮೇಲೆ| ಅಡಿಕೆ | ಜಾಣನ ಮೇಲೆ| ಸುಣ್ಣ|

6. ಗಣದ ಮೊದಲಂಶ ಹ್ರಸ್ವವಾಗಿದ್ದು ಹಾಡುವಾಗ ದೀರ್ಘವಾಗ ಬಹುದು.

ಕೇಳಪ್ಪ| ನನತಂದೆ| ದಕ್ಷಬ್ರ| ಹ್ಮs ನೆ|; ಮನೆಯಾ| ಗಿs ನ| ಬಂಡಿ| ಮುರಿಸಿ| ............ ನಡುವಾ| ಗಿs ನ| ಉಡಿದಾರ| ಮುರಿಸಿ |

7. ಗಣದ ಮೊದಲಂಶ ಹ್ರಸ್ವವಾಗಿದ್ದು ಅದರ ಬೆಲೆ ಹ್ರಸ್ವವಾಗೇ ಇರಬಹುದು.

ಹುಸೇನ| ಸಾಬಿ| ಇರುವ| ನಂತೆ|| ಹುಸೇನ| ಸಾಬಿ| ಸಿನೇತ| ಗಾತಿ; ಸೂರೆ ಮಾ| ಡ್ಯಾರೋ| ಫಿರಂಗೇರು.

8. ಹುಸಿ ಅಥವಾ ಸಾಮಾನ್ಯವಾಗಿ ವಿಲಂಬದ ಮುಂದೆ ಬರುವ, ಗಣಾಘಾತದ ಹಿಂದೆ ಬರುವ ಅಕ್ಷರ ಅಥವಾ ಅಕ್ಷರಗಳು, ಎರಡು ರೀತಿಗಳಲ್ಲಿ ಅಚ್ಚಿಸುವ ರೂಢಿಯಿದೆ. ಮೊದಲ ಪಾದದ ಮೊದಲ ಗಣದ ಹಿಂದಿನ ಹುಸಿಯನ್ನು ಆರಂಭದಲ್ಲಿ ತೋರುವುದು ಒಳ್ಳೆಯದು

ಹೆಣ್ಣೆ ನೀ ಸಣ್ಣವಳೇ ನೆ
ನಿನ್ನಂಗವ ನಾ ಬಲ್ಲೆನೆ

ಅಥವಾ

ಹೆಣ್ಣೆ ನೀ ಸಣ್ಣವಳೇನೆ s - ನೀ
ನಿನ್ನಂದವ ನಾ ಬಲ್ಲೆನೆ

ಹುಸಿ ಎರಡು ರೀತಿಗಳಲ್ಲಿ ಬರಬಹುದು

(ಅ) ಅಕ್ಷರ ಅಥವಾ ಅಕ್ಷರಗಳು + ವಿಚ್ಛೇದ ಯತಿ + ಹುಸಿಯ ಅಕ್ಷರ ಅಥವಾ ಅಕ್ಷರಗಳು

ಕಣಿಯ ಕೇ | ಳಾರೆ ಕಣಿ | ಯ* ರಾಯ | ಗೊಲ್ಲರಹಳ್ಳಿ
ಕಾ] ಲಂದೀ | ಗೆ* ತೋಳು | ಬಂದೀ | ಗೆ

(ಆ) ಅಕ್ಷರ ಅಥವಾ ಅಕ್ಷರಗಳು + ವಿಲಂಬಯತಿ + ಹುಸಿಯ ಅಕ್ಷರ ಅಥವಾ ಅಕ್ಷರಗಳು

ಕೊಡಗು ಮಲೆ | ಯಾಳ ರಾಜ್ಯ | ಕೆs ಗಡಿ | ಯಾವುದೆಂದ್ರೆ;
ಮಲ್ಲಿಗೆಹಾ | ರಗಳೆ | ಲ್ಲೊsನಿ | ಲ್ಲಯ್ಯರಾಜ

(ಅ ಮತ್ತು ಆ)

ರಂಗನೊಲಿ | ದಾs ಗೋ | ವಿಂದ ನೊಲಿ | ದಾs
ರಾಮನೊಲಿ | ದಾs* | ರಾಮ | ಕೃಷ್ಣನೋಲಿ | ದಾs

9. ಗಣಪರಿವೃತ್ತಿ ಎರಡು ಅಂಶಗಣಗಳು ಮೂರು ಉಪಗಣಗಳಾಗಿ ಒಡೆದುಕೊಳ್ಳುತ್ತವೆ.

ಚಿಕ್ಕಾ - ಚಿಕ್ಕಾ - ಕೋಲ | ಚಿಕ್ಕಾ - ಬಂಡೀ - ಕೋಲ;
ಈರೇ - ಹೂವಿs - ನಂತೆ | ತುಪ್ಪಕೆ | ಬಂದದ್ದು;
ಬೆಟ್ಟು - ಗದ್ದೆಗೆ - ನೂರು - ಬಯಲು - ಗದ್ದೆಗೆ - ನೂರು

**ಜನಪದ ಬಂಧಗಳು :** ಜನಪದ ಗೀತಗಳಲ್ಲಿ ಅಗ್ರಸ್ಥಾನ ತ್ರಿಪದಿಗಿದ್ದರೂ ಇನ್ನುಳಿದ ಬಗೆಗಳೂ ಅಷ್ಟೇ ಆಕರ್ಷಕವಾಗಿವೆ; ಹಲವು ಮಾತ್ರಾ ಛಂದೋಬಂಧಗಳ ಮೂಲದ ಬಗೆಗೆ ಬೆಳಕು ಬೀರತಕ್ಕವಾಗಿವೆ. ಅವನ್ನು ಕ್ರಮವಾಗಿ ಪರಿಶೀಲಿಸಬಹುದು.

i ವಿವಿ :

ಕಟಕಟಿ | ಕಲ್ಲೂರು || ಅರಗಿನ | ಆಲೂರು || ಬೆಡಗಿನ | ಬೇಲೂರು || ಹಿಂದೆ ತಾ | ವರೆಗೇರೆ

ii ವಿವಿಗ :

ಕೋಲುಕೋ | ಲಣ್ಣ ಕೋ | ಲೆs | s; ಹೊರೀಕೆ | ಹೋಗಲಾ | ರs |s|| ಹೊರೆಹುಲ್ಲು | ತರಲಾ | ರs |s ||

iii ವಿ ವಿ ವಿ ಗ :

ಇಂದಿನ | ದಿನದಲಿ | ಓಲಗ ವಾಸ || ; ವಡ್ಡೂರು | ದಾಸರು| ಸುವಿಲಾ| ಲೆ; ಕೋಗಿಲೆಂ | ಬೋದು | ಕೋಗಿ | ಲೆ

iv ವಿ ವಿ ವಿ ಬ್ರ :

ಕೋಲೇಕೋ | ಲೇಕೋಲು | ಕೋಲಣ್ಣ | ಕೋಲೆ.

v ವಿ ವಿ ವಿ ವಿ : (ಎರಡನೆಯ ನಾಲ್ಕನೆಯ ಗಣಗಳು ಬ್ರಹ್ಮವಾಗುವ ಪ್ರವೃತ್ತಿ ಇದೆ)

ಹೇಳಿದ | ನಾಗಣ್ಣ | ಕೇಳಿದ | ನಿಂಗಣ್ಣ; ಅರಮನೆ | ಒಳಗೊಬ್ಬ| ದೊರೆಮಗಾ | ಕುಂತವ್ನೆ; ಏರಿಯ | ಕೆಳಗೇ | ಹೋದಾಳು | ಕೊರವಂಜಿ

vi ವಿ ವಿ ವಿ ವಿ

ವಿಬ್ರವಿಬ್ರ:

ಜಾಣೆಯ | ಮನೆಸುತ್ತ | ಜಾಲದ | ವನಗಳು || ಜಾಣೆಯ ಅರ | ಮನೆಗೆ| ಜಾಣ ತಾ | ಬಂದ ; ಆರು ಸು | ತ್ತಿನ ಕೋಟೆ | ಏಳು ಸು| ತ್ತಿನ ಬೇಲಿ || ಒಂದೆ ಜಿಗಿ | ತಕ್ಕೆ | ಜಿಗಿದಳು | ಸುವ್ವಿ

vii ವಿ ವಿ ವಿ ವಿ

ವಿ ವಿ ವಿ ಗ :

ಅರಮನೆಗೆ | ಬಂದಾನ | ಬಾಬಾ ಸಾ | ಹೇಬ || ರಾಣೆನ್ನ | ನುಡಿಸ್ಯಾನ| ಕೌತುಕ | ದಿs || ಚಿಂತೆಯ | ಕಂತ್ಯಾಕ | ಜೀವದ | ಚಿಂತ್ಯಾಕ || ಈಶಸಂ | ಕೇತ | ತಲೆಬಾಗಿ | ರಿs ||

ಇದೇ ಷಟ್ಪದಿಗೆ ಕಾರಣವಾಗಿರುವುದು ಆವರ್ತದೃಷ್ಟಿಯಿಂದ ಷಟ್ಪದಿ ಚೌಪದಿಯೇ ಈ ರಚನೆಯ ದ್ವಿಪದಿಯಲ್ಲಿ ಮಾಡಿಕೊಂಡಿರುವ ವೈವಿಧ್ಯ:

ಸುವ್ವಿ ಸು | ವ್ವಮ್ಮಲಾಲೆ | ಸುವಲಾ | ಲೆ * ನಮ್ಮ | ಜಾಣೆಜಾ | ಗರುದ್ದೆಣ್ಣೆ | ಸುವ್ವಿಲಾ | ಲೆ ; ಎಳ್ಳುಂಡೆ | ಜೇನುತುಪ್ಪ | ಗಣನಾ | ಯ್ಕ* ನಮಗೆ ||| ವಿದ್ಯೇಯ | ಕಲಿಸಯ್ಯ | ಗಣನಾ | ಯ್ಕ

viii ವಿ ವಿ ವಿ ವಿ

ವಿ ವಿ ಗ :

ಬಾರದ ಪ | ವಾಡಕೆಲ್ಲ | ಬಂದು | ಒದಗೊ | ಘನನೀಲಿ || ಸಿದ್ದಯ್ಯ | ನೀವೆ ಬ | ನ್ನಿ || s ||

ನಾಲ್ಕು ಪಾದಗಳೂ ಆಗಬಹುದು. ಈ ರಚನೆಯಲ್ಲಿ ಸಾಧಿಸಿರುವ ವೈವಿಧ್ಯ : ಕೊಡಗು ಮಲೆ | ಯಾಳರಾಜ್ಯ | ಕೆs ಗಡಿ | ಯಾವುದೆಂದ್ರೆ |

ಬೆಡಗಿನಂಥ | ಪೆರಿಯ ಪಟ್ಟ | ಣs s || ; ಹೂವಿನ | ಗೊಲ್ಲಕಾ | ಣೆ | s | ಈರಣ್ಣ || ನಾಡಿಗೆ | ಚೆಲುವ ಕಾ | ಣೆ; ಗೋಕುಲ | ದೊಳಗೆ | ಹುಟ್ಟಿ | ಅಲ್ಲಿ || ಗೋವ್ಗಳ | ಕಾಯ್ದುವ | ಗೆs | s || ಮಾವ | ನ್ನs | ಕೊಂದಂ | ಥ s || ಧೀರಶ್ರೀ | ಕೃಷ್ಣ ನಿ | ಗೆ

ix ವಿ ವಿ ವಿ ವಿ

ವಿ ಬ್ರ ವಿ :

ಏಳೆ ದ್ವಿಪದಿ; ಏಳನೆಯ ಗಣ ವಿಚ್ಛೇದ್ಯ ವಿಷ್ಣು ಅಥವಾ ವಿಚ್ಛೇದ್ಯರುದ್ರ ಆಗಬಹುದು

ಮೂಡಲ | ಸೀಮಿಂದ | ನಾಡದೊಂ | ಬರು ಬಂದು || ಊರಾಗಳ | ಮಠಕ್ಕೆ | ನಿಲುತಾರೆ

x ವಿ ವಿ ವಿ ವಿ

ವಿ ಬ್ರ ವಿ

ವಿ ವಿ ವಿ ವಿ

ವಿಬ್ರವಿ

ಏಳೆ ಚತುಷ್ಪದಿ ದಬ್ಬಣಸಾಲೆ | ಬತ್ತ | ಒಬ್ಬ ಕು | ಟ್ಟs ಲಾರೆ | ಯೆಬ್ಬಿಸೊ | ನಿನ್ನ | ಮಡದೀಯ || ಮಡದಿಯೆ | ಬ್ಬಿಸಿದರೆ | ಅರೆನಿದ್ದೆ|| ಯಾದಾವೆ || ಒಬ್ಬೊಬ್ಬೆ | ಮಾಡಿ | ತೆಗಿತಂಗಿ

xi ವಿ ವಿ ವಿ ವಿ

ವಿ ಬ್ರ ವಿ ವಿ

ವಿ ಬ್ರ ವಿ

ತ್ರಿಪದಿ ಅಥವಾ ಏಳೆ ತ್ರಿಪದಿ. ಏಳು ಮತ್ತು ಹನ್ನೊಂದನೆಯ ಗಣ ವಿಚ್ಛೇದ್ಯ ವಿಷ್ಣು ಅಥವಾ ವಿಚ್ಛೇದ್ಯ ರುದ್ರವಾಗಬಹುದು. ಉಳಿದ ಸ್ಥಾನಗಳಲ್ಲಿ ಬ್ರಹ್ಮ, ರುದ್ರ, (ಸಂಕೋಚ) ಬರುವುದು

1. ತ್ರಿಪದಿಯ ಬ್ರಹ್ಮದ ಸ್ಥಾನದಲ್ಲಿ ಣ- ರೂಪ ಬರಬಹುದು. ಇಂಥ ಕಡೆಗಳಲ್ಲಿ ಮೊದಲ ಹ್ರಸ್ವವನ್ನು ಎಳೆದು ವಿಲಂಬಿಸಬೇಕು.

ಮೂರು ವ | ರ್ಷಾದ; ರಾಯರೆಂ | ಜs ಲ; ಕೊಯ್ಯದೆ ಬ| ಯ್ಯದೇ; ಕೊಟ್ಟ ಭಾ | ಷೆಗೆ

2. ತ್ರಿಪದಿಯ ಬ್ರಹ್ಮದ ಸ್ಥಾನದಲ್ಲಿ ವಿಷ್ಣುವೂ ಕ್ವಚಿತ್ತಾಗಿ ರುದ್ರ ಅತಿರುದ್ರಗಳೂ ಬರಬಹುದು

ಲೋಕದವ | ರೀಗೆಲ್ಲ | ಉಪಕಾರ; | ಪಿತೃಋಣ | ತಿದ್ದೋರು| ನವುಗಿನ್ನು| ದೇವ; ಹಾಡು | ಭೂ | ಲೋಕದ | ಒಡೆಯಾಗೆ | ಶಿವರಾಯ; ಕಂಡಾಳು | ಭೂಮಿತಾಯಿ| ಇದುರೀಗೆ

3. ಈ ಬ್ರಹ್ಮದ ಸ್ಥಾನದಲ್ಲಿ ಒಂದೇ ಅಕ್ಷರವೂ ಬರಬಹುದು.

ಒಬ್ಬೆವಾ | ಡಿs | ತೊಳಸಿಡು | ಹುಟ್ಟಿದರೆ; ತನ್ನ ಸೊಸೆ| ಗೆs| ಉಡಕೊಟ್ಟು (ಸೇಗೆ ಎಂದೂ ಸಾಧ್ಯ)

4. ತ್ರಿಪದಿಯ ಎರಡನೆಯ ಪಾದದ ಮೂರನೆಯ ಗಣ ವಿಷ್ಣುವಿನ ಸ್ಥಾನದಲ್ಲಿ:

(ಅ) ಮಾರ್ಗಿಗಳಿಂದ ಹೇಳಲ್ಪಟ್ಟ ರೂಪ ; ಮನೆಗೆ ಬಂ | ದಳಿಯ ಮಗನಲ್ಲ | ತೌರೀಗೆ |

(ಆ) ಮೊದಲು ಹಾಡುವಾಗ ಇದು ವಿಚ್ಛೇದ್ಯವಿಷ್ಣುವಾಗಬಹುದು; ಮನೆಗೆ ಬಂ | ದಳಿಯ | ಮಗನ | ಲ್ಲ

(ಇ) ಈ ಸ್ಥಾನದಲ್ಲಿ ವಿಚ್ಛೇದ್ಯ ರುದ್ರ ಬರಬಹುದು. ಪುನರಾವೃತ್ತಿಯಲ್ಲಿ ಅದು ಸಂಕುಚಿತ ರುದ್ರವಾಗುತ್ತದೆ:

ನೀರಿದ್ರೆ | ಬಾಳೆ | ಗೊನೆಗೆ ಭೋ | ಗ; ಪುನರಾವೃತ್ತಿಯಲ್ಲಿ ನೀರಿದ್ರೆ| ಬಾಳೆ | ಗೊನೆಗೆ ಭೋಗ | ತಾಯವ್ವ

5. ತ್ರಿಪದಿಯ ಮೂರನೆಯ ಪಾದದ ಮೂರನೆಯ ಗಣವೂ ವಿಚ್ಛೇದ್ಯ ವಿಷ್ಣು (ಬ್ರ + ಗು); ವಿಚ್ಛೇದ್ಯ ರುದ್ರ (ವಿ + ಗು) ಆಗಿರಬಹುದು; ರಂಗನೇ | ರ್‍ಯಾನೆ | ಹೊಸತೇ | ಜಿ

6. ತ್ರಿಪದಿಯ ಎರಡನೆಯ ಪಾದವನ್ನು ಮೂರನೆಯ ಗಣದವರೆಗೆ ಹಾಡಿ ಅನಂತರ ನಾಲ್ಕನೆಯ ಗಣದೊಡನೆ ಅದನ್ನೇ ಮತ್ತೆ ಹಾಡುತ್ತೇವೆ ಎಂದುಕೊಂಡಿದ್ದೇವೆ. ಆದರೆ ಇಲ್ಲಿ ಹಲವು ಪ್ರಕ್ರಿಯೆಗಳಿವೆ:

(ಅ) ಸಾಮಾನ್ಯ ರೂಪ : ಸೂಳೆಯ | ಹೆಣ್ಣು | ನಾನಲ್ಲ | s || ಸೂಳೆಯ | ಹೆಣ್ಣು | ನಾನಲ್ಲ | ದೇವರೆ ||

(ಆ) ಮೂರನೆಯ ಗಣಾನಂತರದ ಅಕ್ಷರ ಎರಡನೆಯ ಬಾರಿ ಹಾಡುವಾಗ ಮೂರನೆಯ ಗಣದೊಳಗೆ ಸೇರಬಹುದು. ಎಂದರೆ ವಿಚ್ಛೇದ್ಯವಿಷ್ಣು > ಸಾಮಾನ್ಯ ವಿಷ್ಣು; ವಿಚ್ಛೇದ್ಯ ರುದ್ರ > ಸಂಕುಚಿತರುದ್ರ:

ಬಸುರಿಲ್ಲ | ವಂತೆ | ಅಳುತಾ | ಳೆs || ಬಸುರಿಲ್ಲ | ವಂತೆ| ಅಳುತಾಳೆ | ನಮಕೊಮರ; ಕೂಸಕಂ | ದಯ್ಯ | ಒಳಹೊರ | ಗೆs || ಕೂಸುಕಂ | ದಯ್ಯ | ಒಳಹೊರಗೆ | ಆಡಿದರೆ

(ಇ) ಮೂರನೆಯ ಗಣಾನಂತರದ ಅಕ್ಷರ ಎರಡನೆಯ ಬಾರಿ ಹಾಡುವಾಗ ಲುಪ್ತವಾಗಬಹುದು: ಕನ್ನೆ ಎಡ | ಗಡೆಗೆ | ಕರೆತನ್ನಿ | ರಿs || ಕನ್ನೆ ಎಡ| ಗಡೆಗೆ | ಕರೆತನ್ನಿ | ನಮ್ಮನೆಯ

(ಈ) ಮೂರನೆಯ ಗಣದ ಆದ್ಯಂತ ಹಿಂಜರಿದು ಎರಡನೆಯ ಗಣವಾದ ಬ್ರಹ್ಮವನ್ನು ವಿಷ್ಣುವನ್ನಾಗಿ ಮಾಡಬಹುದು.

ನಾರಿಗೌ | ರಮ್ಮ | ತೌರಿಂದ | s || ನಾರಿಗೌ | ರಮ್ಮ ತೌ| ರೂರಿಂದ| ಬರುವಾಗ

(ಉ) ಮೂರನೆಯ ಗಣಕ್ಕೆ ಇನ್ನಷ್ಟು ಅಕ್ಷರಗಳು ಸೇರಿಕೊಳ್ಳಬಹುದು:

ಕರುವಲ್ಲೆ | ಚೆಂದ | ಗೌಡರು | s || ಕರುವಲ್ಲೆ | ಚಂದ | ಗೌಡರು ಶಿವ| ರುದ್ರಪ್ಪನ ; ನಾಲ್ವರು ಅಣ್ಣನೋರೆ | ಕುಳುತ | ಲ್ಲೋೀs || ನಾಲ್ವರು ಅಣ್ಣ | ನೋರೆ| ಕುಳುತಲ್ಲೊ ನಾ | ರಿಯಮುಂಡೆ

(ಊ) ಮೂರನೆಯ ಗಣದ ಅಂತ್ಯಾಕ್ಷರಗಳು ವ್ಯತ್ಯಸ್ತವಾಗಬಹುದು:

ಒಂಬತ್ತು | ವರ್ಷ | ಸಲಹಿದೆ | - || ಒಂಬತ್ತು | ವರ್ಷ | ಸಲಹಿಸಾ | ಕಿದ ಮಗಳ; ನೀರು ಹು | ಯ್ದಂಗೆ | ಬೆವತೇವು - || ನೀರು ಹು | ಯ್ದಂಗೆ | ಬೆವತು ಬೆಂ | ಡಾದೆವು

(ಎ) ಇಡೀ ಪಾದದ ಗಣವ್ಯವಸ್ಥೆಯೇ ವ್ಯತ್ಯಾಸ್ತವಾಗಬಹುದು:

ಹಾವಡ್ಡ | ಲಾಗಿ | ಸುಳಿದಾಳೆ -|| ಹಾವಡ್ಡ | ಲಾಗಿಸುಳಿ | ದಾಳೆ ಆ | ಮಾರಿಯ

7. ಊನಗಣತ್ರಿಪದಿ: ಎರಡನೆಯ ಪಾದದಲ್ಲಿ ನಾಲ್ಕನೆಯ ಗಣವಿರದು. ಆ ಸ್ಥಾನದಲ್ಲಿ ಒಂದೇ ಮೀಸಲಕ್ಷರ ಬರಬಹುದು: ನೆಲವಾ | ಳಿಗೆ ಮನೆ | ಯವ್ವ ತಾಯ | ವ್ವ -||; ಗುತ್ತಿನ ಮಳೆ | ನಾಡ ಹೊಳೆಕಟ್ಟೆ||

8. ತ್ರಿಪದಿಯಲ್ಲಿ ಸಾಮಾನ್ಯವಾಗಿ ಪಾದಾಂತಯತಿ ಖಚಿತ. ಪಾದಾರ್ಧಯತಿ (ಮೂರನೆಯ ಪಾದದಲ್ಲಿ ಎರಡು ಗಣಗಳ ಅನಂತರ) ಸಾಮಾನ್ಯ. ಎರಡನೆಯ ಪಾದಾಂತ್ಯದಲ್ಲಿ ಯತಿ ಇಲ್ಲದಿದ್ದರೂ ನಡೆಯುತ್ತದೆಂದು ತೋರುತ್ತದೆ:

ನಾಚಿಕೆ | ಬರಿದೆ | ಮನದೊಳು | ನಿನಗೆನು || ತ್ತಾ ಚದು | ರೆಯರು | ನುಡಿದಾರು

ಆದರೆ ಇಂಥ ಪ್ರಯೋಗಗಳು ಅಪೂರ್ವ. ಎರಡನೆಯ ಪಾದದ ಮೂರನೆಯ ಗಣಾನಂತರ ಯತಿ ಇದ್ದರೂ ಪುನರಾವೃತ್ತಿಯಲ್ಲಿ ಅದು ಲೆಕ್ಕಕ್ಕೆ ಬರುವುದಿಲ್ಲ. ಬ್ರಹ್ಮದ ವಿಲಂಬ ಯತಿಯನ್ನಪೇಕ್ಷಿಸುತ್ತದೆ.

9. ಇತರ ಬಂಧಗಳಲ್ಲಿನಂತೆಯೇ ತ್ರಿಪದಿಯಲ್ಲಿ ಪ್ರಾಸ ಐಚ್ಛಿಕ; ವಡಿಯ ಪ್ರವೃತ್ತಿ ಇದೆ :

ಬಲ್ಲಾಳ ಹಿತ್ತಿಲ - ಬಳ್ಳಿಯ ಹೆಸರೇನು || ಬೆಳ್ಳಿಯ ದಂಡೆ ಬಿಡುನೀರ|| ಬಲ್ಲಾಳು ತಿಂಬ - ಬಿಳಿಯೆಲೆ

xii ವಿ ವಿ ವಿ ವಿ

ವಿ ಬ್ರ ವಿ ವಿ

ವಿ ಬ್ರ ವಿ ವಿ

ವಿ ಬ್ರ ವಿ ಇತ್ಯಾದಿ

ತ್ರಿಪದಿಯಲ್ಲಿ ಬೆಳೆದು ಏಳೆ ಮೂರು ಪಾದವಾದಂತೆ ಇನ್ನೂ ಬೆಳೆದು ಬಹುಪದಿಗಳಾಗಬಹುದು. ಆರು ಪಾದಗಳನ್ನಾಗಿ ಹಾಡಬೇಕಾಗುವ ಏಳೆ ಚತುಷ್ಪದಿ: ರಾಯ ಹರ್ತೀಯ ರುವಾರ್ದ ಬೀದ್ಯಾಗೆ || ಸೂರ್ಯ ಉರಿದಂಗೆ ಉರದಾಳೆ* ಆವೂರಿ| ಹಾವಡ್ಡಲಾಗಿ ಸುಳಿದಾಳೆ + ಆ* ಮಾರಿಯ || ನಾಲ್ಕೆಮೇಲೆ ಬಿಟ್ಟಾಳೆ ಉರಿಬಾಣ; ಏಳೆ ಪಂಚಪದಿ, ಏಳೆ ಷಟ್ಪದಿ ಏಳೆ ಅಷ್ಟಪದಿಗಳಿಗೂ ಉದಾಹರಣೆಗಳಿವೆ.

xiii ಬ್ರಹ್ಮದೀರ್ಘಿಕಾ: ಬ್ರಹ್ಮಗಣದ ನಡೆಯನ್ನು ಪ್ರಧಾನವಾಗಿ ಉಳ್ಳಪಾದಕ್ಕೆ ನಾಲ್ಕು ಗಣಗಣ ಮಿತಿಯಲ್ಲಿ ಬರುವ ಬಂಧಗಳನ್ನು ಹಿಂದೆ ಉದಾಹರಿಸಲಾಗಿದೆ. ಪಾದಕ್ಕೆ ನಾಲ್ಕಕ್ಕಿಂತ ಹೆಚ್ಚು ಗಣಗಳು ಬ್ರಹ್ಮಪ್ರಧಾನವಾಗಿ ಬರುವ ಬಂಧಗಳನ್ನು ಬ್ರಹ್ಮದೀರ್ಘಿಕಾ ಎನ್ನಲಾಗಿದೆ.

1. 4 ಬ್ರ + ಗು

ಅಪ್ರ] ಮಡದಿ | ಹೆಸರು | ಹರಿಯಲ | ದೇವ | ಮ್ಮ || ಮಗನ | ಹೆಸರು| ಸೀತಾಳ | ರಾಮ | ಯ್ಯ ||

2. 6 ಬ್ರ + ಗು

ನಾಗರು | ಕೊಡತಿ | ನಂತ | ಹೇಳಿ | ಸಾರಿ | ಹೇಳ್ಯಾ | ರೊ -|| ; ಸುತ್ತ | ಮುತ್ತ| ಕೋಲು | ಕೊಡಿ | ಸೂಳೆ | ರಾಯ | ಗೆ (4 ಪಾದ, ಇಲ್ಲಿ 3 ನೆಯ ಪಾದದಲ್ಲಿ 8 ಬ್ರ ಇದೆ)

3. 7 ಬ್ರ + ಗು (3 ಪಾದ) + (6 ಬ್ರ + ಗು)

ಊರು | ಊರಿಗ್ | ಯಾವ್ನ | ಮೇಲು | ಕೊಲ್ಲಂ | ಪುರವೆ | ಮೇಲ | ಲ್ಲೊ|; ಕ್ಯಾತಾ | ರೀಫ್ಹೋ | ಇನ್ ಕೊವಿ | ಲಾಕರ್ | ಕಪ್ಪಡಿ | ಸಂಗಮ | ಬಿಸ್ಮಿ | ಲ್ಲಾ

4. (8 ಬ್ರ) + (6 ಬ್ರ + ಗು) ಅಥವಾ 4 ಬ್ರ + 4 ಬ್ರ + 6 ಬ್ರ + ಗು ಪಾದಕ್ಕೆ ನಾಲ್ಕು ಗಣಗಳ ಷಟ್ಪದಿಗೆ ಇದು ಹೋಲುತ್ತದೆ: ಬೆಡಗಿ | ನ ಮಾ | ತಿದು | ಸಲ್ಲ | ಭೀಮ | ಸೇನನ | ಗದೆಯು | ನಿನ್ನ || ತೊಡೆಯ | ಮೇಲೆ | ಬಿದ್ದಿ | ತಂತೆ | ಬೇಡ| ಎಂದ | ಳು ; ಕಡುಕಡು | ಗತ್ತಿ | ಕೈಯಾಗ್ | ಹಿಡಿದು ..........

xiv ಮಿಶ್ರಬಂಧಗಳು :

ಐದು ತಿಂ | ಗಳ ಬಸು | ರೀs | s || ಕೆನ್ನೆವೋ | ಗಾಲುಹಸು | ರುs| s || ಭೂಮಿತಾಯಿ | ನೀಮಿಂದ | ದಿನಹೇ | ಳೆ - ಸುವ್ವಿ || ನಾನು ಮಿಂ | ದಂತ ದಿನವ | ನೀವೇನು | ಕೇಳೀರಿ | ಏಲಕ್ಕಿ | ಮಾವಿನ | ಫಲಬಂ | ದುs | s || ನಾಮಿಂದೇ | ನನ್ನ| ತವರ | ಲಿs ಸುವ್ವಿ ಇತ್ಯಾದಿ. ಮದುವೆ ಹಾಡುಗಳಲ್ಲಿ ಕೆಲವು ಖಚಿತವಾದ ಪಂಚಪದಿಗಳು ರೂಢವಾಗಿವೆ. ವಿವಿವಿಬ್ರ ಎಂಬಂತೆ ಮೂರು ಪಾದಗಳು, ನಾಲ್ಕು ವಿಷ್ಣು ಒಂದು ಪಾದ, ಕೊನೆಗೆ ವಿಬ್ರವಿ ಎಂದು ಒಂದು ಪಾದ.

ದ್ರಾವಿಡ ಛಂದಸ್ಸಿನ ವೈಶಿಷ್ಟ್ಯ, ಕನ್ನಡ ಜನಪದ ಛಂದಸ್ಸಿನ ವೈಶಿಷ್ಟ್ಯ, ಕನ್ನಡ ಜನಪದ ಛಂದಸ್ಸಿನ ಕೊಡುಗೆ, ಇದರ ಚರಿತ್ರೆಯ ರಚನೆಯನ್ನು ಕುರಿತು ಎರಡು ಮಾತುಗಳು ಅಗತ್ಯ.

ತಾಳ (ಗಣಾಘಾತ) ಮತ್ತು ಆವರ್ತವನ್ನು (ಪಾದ) ಆಧಾರವಾಗಿಟ್ಟುಕೊಂಡು ಅದರೊಳಗೆ ಎಲ್ಲ ವೈವಿಧ್ಯದ ನಡೆಗಳನ್ನು ಸಾಧಿಸುವ ಪದ್ಧತಿ ಏಕಮೇವವಾಗಿ ದ್ರಾವಿಡ ಛಂದಸ್ಸಿನದು. ಅಕ್ಷರವೃತ್ತಗಳ ಮಾತ್ರಾಲಯಕ್ಕಿಂತ, ಮಾತ್ರಾಗಣಗಳ; ಮಾತ್ರಾಲಯಕ್ಕಿಂತ ಅಂಶಗಣಗಳ ಮಾತ್ರಾಲಯ ಅತ್ಯಂತ ಕಡಿಮೆ ಪರಿಣತಿಯನ್ನು ಅಪೇಕ್ಷಿಸತಕ್ಕದ್ದಾದುದರಿಂದ ಇದೇ ಅತ್ಯಂತ ಪ್ರಾಚೀನವಿರಬೇಕು. ಜೊತೆಗೆ ಗಣದ ವ್ಯಾಪ್ತಿಯೊಳಗೆ ಅಕ್ಷರಗಳ ಮೊತ್ತ ಹೇಗೂ ಬರಬಹುದಾದುದರಿಂದ ಲಯದ ನಡೆಯಲ್ಲಿ ಸಾಧಿತವಾಗುವ ವೈವಿಧ್ಯವೂ ಇಲ್ಲಿ ಹೆಚ್ಚು.

ಮಲೆಯಾಳಂ ಜನಪದಗೀತೆಯೊಂದರಲ್ಲಿ ಚತ್ತಿ | ಮಂದಾ | ರಂ ತುಳಸಿ ಪಿಚ್ಚ | ಕವಾ | ಲೆಯುಂ ಚೂಡಿ - ಎಂದು ಅಕ್ಷರಗಳ ಲೆಕ್ಕವೇ ಮುಖ್ಯವಾದ, ಅಕ್ಷರ ಪೌಲ್ಯ ಅಗಣ್ಯವಾದ, ಎಲ್ಲ ಅಕ್ಷರಗಳನ್ನೂ ಎಳೆದು ಹೇಳುವಂಥ ರೀತಿ ಇದೆ. ಬೆಡಗಿ | ನಮಾ | ತಿದು | ಸಲ್ಲ......................ಎಂದು ಮೊದಲಾಗುವ ಕನ್ನಡ ಉದಾಹರಣೆ ಇದನ್ನೇ ಹೋಲುತ್ತದೆ. ಪ್ರಾಯಶಃ ಮನುಷ್ಯ ಮೊದಲು ಅಕ್ಷರಗಳ ಹ್ರಸ್ವತೆ ದೀರ್ಘತೆಗಳನ್ನು ಗಮನಿಸಿ ಹಾಡಿರಲು ಸಾಧ್ಯವಿಲ್ಲ. ಕಾಲದ ಒಂದು ಖಚಿತವಾದ ಅಂತರದ ತಾಳವನ್ನು (ಗಣಾಘಾತ) ಮುಖ್ಯವಾಗಿಟ್ಟುಕೊಂಡು, ಆ ತಾಳಕ್ಕೆ ತಪ್ಪದೆ, ಬಂದಂತೆ ಹಾಡಿರುವುದೇ ಸಹಜ.

ತಮಿಳು ಭಾಷೆ ಸಂಸ್ಕೃತದ ಪ್ರಭಾವದಿಂದ ದೂರವಿರಲು ಪ್ರಯತ್ನಿಸಿತು. ಅದರಿಂದಾಗಿ ತನ್ನ ಸಂಪ್ರದಾಯವನ್ನು ಉಳಿಸಿಕೊಂಡು ಬರಲು ಹೆಣಗಿತು. ಈ ಪರಿಸ್ಥಿತಿಯಲ್ಲಿ ತನ್ನಲ್ಲೇ ವೈವಿಧ್ಯವನ್ನು ಸಾಧಿಸುವುದರೆಡೆಗೆ ಹೆಚ್ಚು ಗಮನ ಕೊಡಲಾಗದೆ ಹಳಯದನ್ನು ಉಳಿಸಿಕೊಂಡು ಬರುವುದರಲ್ಲೇ ಹೆಚ್ಚಿನ ಶಕ್ತಿ ವ್ಯಯಮಾಡಬೇಕಾಗಿ ಬಂದಿರಬೇಕು. ಆದ್ದರಿಂದ ತಮಿಳು ಜನಪದ ಛಂದಸ್ಸಿನಲ್ಲಿ ಹಳೆಮೆಯ ಕೆಲವು ವಿಶಿಷ್ಟತೆಗಳು ಉಳಿದಿವೆ. ತೆಲುಗು ಭಾಷೆ ಕನ್ನಡದಂತೆ ಸಂಸ್ಕೃತದ ಪ್ರಭಾವಕ್ಕೊಳಗಾಯಿತು. ಮೇಲಾಗಿ ಶಿಷ್ಟರ ಕೈಯಲ್ಲಿ ಜನಪದ ಛಂದಸ್ಸೂ ಶಿಷ್ಟವಾಗಿ, ನಿಯಮಗಳಿಂದ ಅಲಂಕೃತವಾಗಿ ವೈವಿಧ್ಯಸಾಧನೆಯಲ್ಲಿ ಹಿಂದಾಯಿತು. ಜನಪದದ ಕೋಗಿಲೆಗೆ ಚಿನ್ನದ ಮನೆಯ ಆಶ್ರಯ ದೊರಕಿತು. ಆದರೆ ಕನ್ನಡದ ರೀತಿ ವಿಶಿಷ್ಟವಾದದ್ದು. ಕನ್ನಡ ಭಾಷೆ ಸಂಸ್ಕೃತ ಪ್ರಾಕೃತಗಳಿಂದ ಪ್ರಭಾವಿತವಾದರೂ ಈ ಪ್ರಭಾವ ಜನಪದರ ಮೇಲೆ ಏನೂ ಪರಿಣಾಮ ಬೀರಲಿಲ್ಲ. ವೃತ್ತರತ್ನಾಕರದಂಥ ಗ್ರಂಥಗಳನ್ನು ಶಿಷ್ಟರು ಬಿಡಲಿಲ್ಲ. ಜನಪದರು ಹಿಡಿಯಲಿಲ್ಲ. ಎಲ್ಲೋ ಅಪರೂಪಕ್ಕೊಮ್ಮೊಮ್ಮೆ ಶಿಷ್ಟರುವನ್ನು ಕೆಳಗಿಳಿದು ಬಂದು ಕರೆದಾಗ ಜನಪದರು ಹೋಗಿ ಸೇರಿ, ತಮ್ಮ ರೂಪವನ್ನು ಅವರಿಗೆ ತೊಡಿಸಿದರು ಮತ್ತೆ ತಮ್ಮ ಪಾಡಿಗೆ ತಾವು ಜನಪದರಾಗಿಯೇ ಉಳಿದರು. ಸಂಸ್ಕೃತದ ಪ್ರಭಾವ ಪಡೆದ ಜನಪದವನ್ನು ಅಲಕ್ಷಿಸಿದ್ದು ದೂರವಿರಿಸಿದ್ದು ಅಥವಾ ತಾವೇ ದೂರ ಉಳಿದದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತಲ್ಲದೆ ಜನಪದರ ಸಕ್ರೀಯವಾದ ಬೆಳೆವಣಿಗೆಗೆ ಅವಕಾಶ ಮಾಡಿಕೊಟ್ಟಿತು. ಈ ಸುಸಂಸ್ಕೃತರು ಶಿಷ್ಟರೇ ಬಳಸಿಕೊಂಡು ಬಂದ ಕೆಲವು ಜನಪದ ಬಂಧಗಳನ್ನು ಉಪಚಾರಕ್ಕೆಂಬಂತೆ ಅವರ ನಿಯಮಕ್ಕನುಸಾರ ಅನುಸರಿಸಿ ತಾವೂ ಗ್ರಂಥಗಳಲ್ಲಿ ಬಳಸಿದರು. ಆದರೆ ಜನಪದರ ಪರಿಚಯಕ್ಕೆ ಹೋಗದೆ, ಜನಪದ ಛಂದಸ್ಸಿನ ವೈವಿಧ್ಯ ಕಾಣಲಾರದೆ, ಅದನ್ನು ಬಳಸಲಾರದೆ ಹೋದರು. ಓದುವ ಧಾಟಿಯೇ ಮರೆತು ಹೋದಾಗ ಜನಪದ ಬಂಧದ ಹೆಸರಿನಲ್ಲಿ ತೋಚಿದಂತೆ ಬರೆದರು ಅಥವಾ ಗೀತಿಕೆಯನ್ನು ಹೇಗೋ ಹಾಗೆ ಕೈ ಬಿಟ್ಟರು. ಹೀಗಾಗಿ ತೆಲುಗಿನಲ್ಲಾದಂತೆ ಜನಪದರ ಛಂದಸ್ಸು ಶಿಷ್ಟಗೊಂಡು ನಿಯಮಗಳ ಸಂಕೋಲೆಗೆ ಒಪ್ಪಿಸಿಕೊಳ್ಳುವ ಬಗೆ ಕನ್ನಡಕ್ಕೆ ಬರಲಿಲ್ಲ. ತನ್ನ ಮೇಲೆ ಯಾವ ದಾಳಿಯೂ ಇಲ್ಲದ್ದರಿಂದ ಆತ್ಮರಕ್ಷಣೆಯತ್ತ ಗಮನ ಕೇಂದ್ರೀಕರಿಸಿ ವೈವಿಧ್ಯ ಸಾಧಿಸಲಾಗದ ಸ್ಥಿತಿಯೂ ಬರಲಿಲ್ಲ. ಯಾರ ಹಂಗು ಅಂಕೆಗಳಿಲ್ಲದೆ ಅದು ತನ್ನ ಪಾಡಿಗೆ ತಾನು ಕಾಡಿನ ಮಲ್ಲಿಗೆಯಂತೆ ಅರಳಿತು. ಆದ್ದರಿಂದಲೇ

ಸುಶಿಕ್ಷಿತರ ಗಾಳಿ ಇಲ್ಲದೆಡೆಗಳಲ್ಲಿ ಕನ್ನಡ ಜನಪದ ಸಂಸ್ಕೃತಿ ಛಂದಸ್ಸು ಇಂದಿಗೂ ತನ್ನ ವೈವಿಧ್ಯದಿಂದ ಜೀವ ತುಂಬಿ ನಿಂತಿದೆ. ಯಾವುದೇ ಒಂದು ಛಂದೋ ಪದ್ಧತಿ ಎರಡು ಅನುಕೂಲಗಳನ್ನು ಎಷ್ಟರಮಟ್ಟಿಗೆ ನಡೆಸಿಕೊಡುತ್ತದೆ ಎಂಬುದನ್ನು ಅವಲಂಬಿಸಿದೆ. ಒಂದು ಸಹಜವಾದ ಅಭಿವ್ಯಕ್ತಿಯನ್ನು ವಿಕಾರಗೊಳಿಸುವ ಅಗತ್ಯ ಬೀಳದಂತೆ ಗರಿಷ್ಠ ಪ್ರಮಾಣದಲ್ಲಿ ಹೊಂದಿಸಿಕೊಳ್ಳುವ ಗುಣವಿರಬೇಕು. ಈ ಗುಣ ದ್ರಾವಿಡ ಛಂದಸ್ಸಿಗೆ, ವಿಶೇಷವಾಗಿ ಕನ್ನಡ ಜನಪದ ಛಂದಸ್ಸಿಗೆ ಇದೆ. ಎರಡು ಗಣ: ಹಾಗೂ ಆವರ್ತದ ಪರಿಮಿತಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ನಡೆವೈವಿಧ್ಯ ಸಾಧ್ಯವೇ ಎಂಬುದು. ಈ ಸಾಧ್ಯತೆಯು ಪ್ರಮಾಣವೂ ದ್ರಾವಿಡ ಛಂದಸ್ಸಿನಲ್ಲಿ, ವಿಶೇಷವಾಗಿ ಕನ್ನಡ ಜನಪದ ಛಂದಸ್ಸಿನಲ್ಲಿ ಹೆಚ್ಚು. ಕಾ| ಲಂದೀ |ಗೆ - ತೋಳು | ಬಂದೀ |ಗೆ ಎಂಬಂತೆ ಗಣಾವಕಾಶದೊಳಗೆ ಹಾಗೂ ಪಾದದೊಳಗೆ ನಡೆಭೇದ ಕಲ್ಪಿಸಿರುವುದನ್ನು ಕನ್ನಡ ಜನಪದ ಛಂದಸ್ಸಿನಲ್ಲಿ ಬಹುವಾಗಿ ಕಾಣುತ್ತೇವೆ. ಸಿರಿಗಿರಿ1 ಮಂಚಾ3 ದ ಮುಂದೆ4 (ಅಂಕಿಗಳು ಆ ಅಕ್ಷರಗಳ ಮಾತ್ರಾ ಕಾಲವನ್ನು ಸೂಚಿಸುತ್ತದೆ) ಎಂಬಂಥ ಕಾಲ ವಿತರಣೆ ಶಿಷ್ಟರಲ್ಲೂ ಸಂಗೀತದ ಸಾಧನೆ ಮಾಡಿದವರಿಗೆ ಮಾತ್ರ ಸಾಧ್ಯ; :ಇಲ್ಲಿ ಸಹಜವಾಗಿ ಅಭಿವ್ಯಕ್ತ. ಇದು ಕನ್ನಡ ಜನಪದ ಛಂದಸ್ಸಿನ ಕೋಡು. ಇಲ್ಲಿನ ಮಹಾಗಣಗಳು ತಮಿಳಿನ ಮೂರಶೈಗಳ ಸರಣಿಯಲ್ಲಿ ಕಾಣಬಹುದಾದರೂ ಇವು ತಮಿಳಿನಲ್ಲಿ ಇಲ್ಲಿನಂತೆ ಒಂದು ಗಣಾವಕಾಶ ದೊಳಗೆ ಬಂದಿವೆಯೋ ಎಂಬುದು ಪರಿಶೀಲನಾರ್ಹ. ಪ್ರಾಯಶಃ ತೋಲ್ ಕಾಪ್ಪಿಯರ್ ಸೂತ್ರಗಳು ಅತ್ತ ಗದ್ಯವೂ ಅಲ್ಲದ ಇತ್ತ ಪದ್ಯವೂ ಅಲ್ಲ ಎನ್ನಲಾದ ವಿಶಿಷ್ಟ ರೂಪದ ನೂಱ್ಚೆಯ್ಯುಳ್‌ನ ಸಮಸ್ಯೆಯನ್ನು ಬಿಡಿಸುವಲ್ಲಿ ಕನ್ನಡ ಜನಪದ ಛಂದಸ್ಸಿನ ವೈವಿಧ್ಯಗಳು ಬೆಳಕು ಬೀರಬಲ್ಲವು. ಕೊಡಗು, ತುಳು ಮೊದಲಾದ ಆಡುಭಾಷೆಗಳ ಜನಪದ ಛಂದಸ್ಸಿನ ಅಧ್ಯಯನದಿಂದಲೂ ಮಿಗಿಲಾದ ಪ್ರಯೋಜನವಿದೆ.

ಕಾಲಕಾಲಕ್ಕೆ ಕನ್ನಡ ಸಾಹಿತ್ಯ ರೂಪಗಳು ಬದಲಾಗಲು ಕನ್ನಡ ಜನಪದ ಛಂದಸ್ಸು ಹೇಗೆ ಸಹಾಯವಾಗಿದೆ ಎಂಬುದು ಈ ಲೇಖನದ ವ್ಯಾಪ್ತಿಗೆ ಮೀರಿದ್ದು. ಕರ್ಣಾಟಕ ಸಂಗೀತದ ತಾಳಾಂಗದ ಮೇಲೆ ದ್ರಾವಿಡ ಛಂದಸ್ಸು, ಅದರಲ್ಲೂ ಕನ್ನಡ ಜನಪದ ಛಂದಸ್ಸು ಬೀರಿದ ಪ್ರಭಾವ ಹೆಚ್ಚಿನದು. ಔತ್ತರೇಯರು ಶ್ರುತಿಯಲ್ಲಿಯೂ ದಾಕ್ಷಿಣಾತ್ಯರು ತಾಳದಲ್ಲಿಯೂ ಹೆಚ್ಚು ಗಮನವಿಟ್ಟರು ಎಂಬ ರಾಳ್ಳಪಲ್ಲಿ ಅನಂತಕೃಷ್ಣಶರ್ಮರ ಮಾತು ಗಮನಾರ್ಹ. ಉತ್ತರಾದಿ ಸಂಗೀತದ ಖ್ಯಾಲ್‌ಗೂ ದ್ರಾವಿಡ ಛಂದಸ್ಸು ಹತ್ತಿರದ್ದು. ಸಂಗೀತದಲ್ಲಿ ವಿಲಂಬ ಮಧ್ಯ ದ್ರುತ ಲಯಗತಿಗಳಿವೆಯಷ್ಟೆ. ಈ ಒಂದೊಂದೂ ಒಂದು ಆವರ್ತಕ್ಕೆ ಅನ್ವಯಿಸಿದಾಗ ಆ ಒಂದೊಂದಕ್ಕೆ ತಕ್ಕಂತೆ ಗಣವೂ ಗಣದ ಅಕ್ಷರಗಳೂ ಪ್ರಮಾಣತಃ ಪ್ರವರ್ತಿಸುತ್ತವೆ. ಗಣದ ಕಾಲಾವಕಾಶವನ್ನು ಬದಲಿಸದೆ ಗಣಾಂಶಗಳಿಗೆ ವಿಲಂಬ ಮಧ್ಯದ್ರುತ ಈ ಮೂರನ್ನೂ ಬೇಕಾದರೆ ಅನ್ವಯಿಸಿ ನಡೆಯ ವೈಚಿತ್ರ್ಯವನ್ನು ತೋರತಕ್ಕದ್ದು ಕನ್ನಡ ಜನಪದ ಛಂದಸ್ಸು. ಕರ್ಣಾಟಕ ಸಂಗೀತದ ಸ್ಥಾಯಿ (ತಾಯಿ) ಪದ್ಧತಿಯನ್ನು ಕರ್ನಾಟಕದ ಗೋಪಾಲನಾಯಕ ಸು.1300ರಲ್ಲಿ ಉತ್ತರ ದೇಶದಲ್ಲಿ ಪ್ರಚಾರ ಮಾಡಿದ. ಈ ಪದ್ಧತಿಯಲ್ಲಿ ಸಂಗೀತಗಾರನಿಗೆ ತನ್ನ ಇಚ್ಛೆಯಂತೆ ತಾಳವನ್ನು ಆಧಾರವಾಗಿಟ್ಟುಕೊಂಡು ತನ್ನ ರಾಗವಿಸ್ತರಣ ಪ್ರಾವೀಣ್ಯವನ್ನು ತೋರಿಸುವುದಕ್ಕೆ ಅಧಿಕಾರವುಂಟು; ಹಾಗೂ ಅವಕಾಶ ಉಂಟು ಎಂದು ಹುಲಗೂರು ಕೃಷ್ಣಾಚಾರ್ಯರು ಹೇಳಿದ್ದಾರೆ. ಒಂದು ತಾಳವನ್ನು ಆಧಾರವಾಗಿಟ್ಟುಕೊಳ್ಳುವುದು ಜನಪದ ಛಂದಸ್ಸಿನಲ್ಲೂ ಮೊದಲ ಅಗತ್ಯ. ರಾಗ ವ್ಯಂಜನಾವ್ಯಾಪಾರದಿಂದ ರಸಪ್ರತೀತಿ ಉಂಟು ಮಾಡುವ ವಾಚ್ಯಾರ್ಥವಿಲ್ಲದ ನಾದ, ನಾದ ಪರಂಪರೆ ಇಲ್ಲಿ ಅರ್ಥವುಳ್ಳ ಅಕ್ಷರಗಳ ಸಮೂಹ; ತಾಳಕ್ಕೆ ಸಂಬಂಧಿಸಿದಂತೆ ಪಾಠಾಕ್ಷರಗಳಿಗೆ (ಬೋಲ್) ಸಮಾನ ಕಾಲಘಟಕದ (ಗಣದ) ಮಿತಿಯಲ್ಲಿ ಅಕ್ಷರಗಳ ವಿವಿಧ ರೀತಿಯ ಕಲ್ಪನೆ ಇಲ್ಲಿಗೆ ಆನ್ವಯಿಕ. ಹೀಗೆ ಕೀರ್ತನ ಸಂಪ್ರದಾಯಕ್ಕೆ ಕರ್ಣಾಟಕ ಸಂಗೀತವೂ ಕರ್ಣಾಟಕ ಸಂಗೀತಕ್ಕೆ ವಿಶೇಷವಾಗಿ ಕನ್ನಡ ಜನಪದ ಛಂದಸ್ಸೂ ಮೂಲ ಸ್ರೋತವಾಗಿದೆ. ಆದಿಪ್ರಾಸ ಕನ್ನಡ ಜನಪದ ಛಂದಸ್ಸಿನ ಕೊಡುಗೆ. ಗೀತಗೋವಿಂದದಲ್ಲಿ ಕೆಲವೆಡೆ ಕಾಣತಕ್ಕ ಆದಿಪ್ರಾಸ ಕೇವಲ ಆಕಸ್ಮಿಕವಿರಲಾರದು. ರಗಳೆಗಳಿಗೆ ಪ್ರಾಕೃತ ಮೂಲವನ್ನು ತೀ.ನಂ.ಶ್ರೀ. ಅವರು ಕಂಡುಹಿಡಿದಿದ್ದಾರೆ. ಪ್ರಾಕೃತಕ್ಕೆ ಎಲ್ಲಿಂದ ಬಂತು? ಜನಪದ ರಗಳೆಗಳನ್ನು, ಬಗೆಬಗೆಯ ರಗಳೆಗಳನ್ನು ಮೇಲೆ ನೋಡಿದ್ದೇವೆ. ತಮಿಳಿನಲ್ಲಿ ಒಂದು ಅಥವಾ ಮೂರು ಪಾದಗಳ ಕನಿಷ್ಠ ಮಿತಿಯಿಂದ ಆರಂಭಿಸಿ, ತೋಲ್ಕಾಪ್ಪಿಯರ ಪ್ರಕಾರ ಸಾವಿರ ಪಾದ ಪರಮಾವಧಿಯಿರುವ, ಆದರೆ ಪ್ರಯೋಗದಲ್ಲಿ 782 ಪಾದಗಳು ಸಿಕ್ಕಿರುವ 'ಆಸ್ಸಿರಿಯವಿರುತ್ತು' ಇದೆ. ಅಂಶಷಟ್ಪದಿ ವಿವಿಧ ಮಾತ್ರಾ ಷಟ್ಪದಿಗಳಾಗಬಹುದಾದರೆ, ಅಂಶ ರಗಳೆ, ಜನಪದ ರಗಳೆಗಳು ಮಾತ್ರಾರಗಳೆಗಳೇಕೆ ಆಗಬಾರದು, ಪ್ರಾಕೃತಕ್ಕೂ ದ್ರಾವಿಡರ ಕಾಣಿಕೆ ಏಕಿರಬಾರದು, ಎಂಬ ವಿಚಾರಗಳು ಪರಿಶೀಲನಯೋಗ್ಯ. ರಗಳೆಗಳಿಗೆ ಅಂಶಮೂಲವನ್ನು ಬಿ.ಎಂ.ಶ್ರೀ. ಅವರು ಕಲ್ಪಿಸಿರುವುದು ಹೆಚ್ಚು ಆಧಾರವುಳ್ಳದ್ದೆನ್ನಿಸುತ್ತದೆ.

ಮೊದಲಿನಿಂದಲೂ ತನ್ನ ಪಾಡಿನಲ್ಲಿ ವೈವಿಧ್ಯಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಕನ್ನಡ ಜನಪದ ಛಂದಸ್ಸಿನ ಅರಿವನ್ನು ಆಧಾರವಾಗಿಟ್ಟುಕೊಂಡು ಕನ್ನಡ ಜನಪದ ಛಂದಸ್ಸಿನ ಚರಿತ್ರೆಯನ್ನು ಪುನರ್‌ರಚಿಸಬೇಕಾಗಿದೆ. ಹಾಗೆ ಪುನರ್ ರಚಿಸಲು ಇಂದಿನಿಂದ ಹಿಂದಕ್ಕೆ ಹೀಗೆ ಹೋಗಬೇಕಾಗಿದೆ. ಹರಿದಾಸ ಕೀರ್ತನ ಸಂಪ್ರದಾಯದ ಛಂದಸ್ಸು; ಶಿವದಾಸರ ಗೀತಗಳು; ವಚನಗಳ ಮಧ್ಯೆ ಸೇರಿರುವ ವಚನಕಾರರ ವಚನಗಳೆನ್ನಿಸಿಕೊಂಡಿರುವ ಹಾಡುಗಳು; ಅಂಶಗಣ ಘಟಿತವಾಗಿರುವ ಸೋಮೇಶ್ವರ ಹೇಳಿರುವ (ಅಭಿಲಷಿತಾರ್ಥಚಿಂತಾಮಣಿ) ಮಾತ್ರೈಲಾ ಎಂಬ ಹೆಸರಿನ ಅಂಶಬಂಧಗಳು; ಅಚಲಾನಂದರ ಕೀರ್ತನೆಗಳು ಪೂರ್ವದ ಹಳಗನ್ನಡ ಶಾಸನಗಳಲ್ಲಿ ಸಿಗುವ ಅಂಶಬಂಧಗಳು ನಾಲ್ಕು ಮಾತ್ರೆಗಳ ನಡೆಯಿರುವ, ಆ ನಡೆಯಲ್ಲಿ ಸ್ವಾತಂತ್ರ್ಯ ವಹಿಸಿರುವ ಚಂಪಕಮಾಲೆಯಲ್ಲಿ 'ಎಡೆಪಱು' ಗೀನಡೆಕೆಯ್ದು ತಪಂ ......... ಎಂಬಲ್ಲಿ ನಾಲ್ಕು ಮಾತ್ರೆಗಳ ಸ್ಥಳದಲ್ಲಿ ಆರು ಮಾತ್ರೆಗಳನ್ನು ಅಡಕಿಸಿರುವುದು; ಮುಂದೆ ಕೆಲವು ವೈದಿಕ ಛಂದೋ ಬಂಧಗಳು - ಇವುಗಳ ಸೂಕ್ಷ್ಮ ಪರೀಶೀಲನೆ ನಡೆಯಬೇಕಾಗಿದೆ. ಆಗ ವೈದಿಕ ಛಂದಸ್ಸು ದ್ರಾವಿಡ ಛಂದಸ್ಸಿನ ಒಂದು ಪರಿಣತ ರೂಪವೋ ಪ್ರಭಾವಿತ ರೂಪವೋ ಆಗಿರುವುದು ಸಾಧ್ಯವಿದೆ ಎಂಬ ಹೇಳಿಕೆಗೆ ಖಚಿತ ರೂಪ ದೊರಕಬಹುದು.

(ಕೆ.ಎಸ್‌ಐ.ಐ.)

**ಜನಪದ ಜ್ಯೋತಿಷ್ಯ :** ಹಳ್ಳಿಯ ಜನ ಬಿತ್ತುವಾಗ, ಒಕ್ಕುವಾಗ, ಮದುವೆ ಮುಂಜಿ ಮಾಡುವಾಗ, ದೊಡ್ಡ ವ್ಯಾಪಾರ ವಹಿವಾಟು ಮಾಡುವಾಗ, ಆಕಸ್ಮಿಕಗಳೊದಗಿ ತೀರ ತೊಂದರೆಗಳುಂಟಾದಾಗ, ವ್ಯಾಕುಲರಾಗಿ ಭವಿಷ್ಯ ತಿಳಿಯಲು ಜೋಯಿಸರನ್ನೋ ಪೂಜಾರಿಯನ್ನೋ ನೋಡುತ್ತಾರೆ. ಆತ ಪಂಚಾಂಗ ನೋಡಿ ಅವರ ಗ್ರಹಗತಿಗಳು ಹೇಗಿವೆ ಎಂಬುದನ್ನು ಹೇಳುತ್ತಾನೆ. ಇಂಥ ಜ್ಯೋತಿಷ್ಯವನ್ನು ಸಂಪೂರ್ಣವಾಗಿ ಜನಪದ ಜ್ಯೋತಿಷ್ಯ ಎನ್ನಲಾಗುವುದಿಲ್ಲ. ಶುದ್ಧ ಜನಪದ ಎಂದು ಕರೆಯಬಹುದಾದಂಥವು ಎಂದರೆ ಕವಡೆಶಾಸ್ತ್ರ, ಓಲೆಗರಿ ಶಾಸ್ತ್ರ, ಗಿಣಿಶಾಸ್ತ್ರ, ಕೊರವಂಜಿ, ಕುರುಮಾಮ ಮುಂತಾದವು.

**ಕವಡೆ ಶಾಸ್ತ್ರ :** ಈ ಶಾಸ್ತ್ರ ಹೇಳುವವರು ಜ್ಯೋತಿಷ್ಯ ಕೇಳಲು ಬಂದವರ ಕೈಯಲ್ಲಿ ಹತ್ತಿಪ್ಪತ್ತು ಕವಡೆಗಳನ್ನು ಕೊಟ್ಟು, ಬಿಡಲು ಹೇಳುತ್ತಾರೆ. ಬಿಟ್ಟ ಕವಡೆಗಳನ್ನು ಎಣಿಸಿ ಸರಿಯೊ ಬೆಸವೊ ಎಂಬುದನ್ನು ಲೆಕ್ಕಾಚಾರಹಾಕಿ ಅದಕ್ಕನುಗುಣವಾಗಿ ಒಳ್ಳೆಯದು ಕೆಟ್ಟದ್ದರ ಬಗ್ಗೆ ಸೂಚನೆ ಕೊಡುತ್ತಾರೆ.

**ಓಲೆಗರಿ ಶಾಸ್ತ್ರ :** ಜ್ಯೋತಿಷಿಯ ಬಳಿ ಓಲೆಗರಿಗಳ ಕಟ್ಟೊಂದು ಇರುತ್ತದೆ. ಒಂದೊಂದು ಗರಿಯಲ್ಲೂ ಬೇರೆ ಬೇರೆ ವಿಷಯಗಳನ್ನು ಕುರಿತು ಬರೆದಿರಲಾಗುತ್ತದೆ. ಜ್ಯೋತಿಷ್ಯ ಕೇಳಲು ಬಂದಾತನ ಮುಂದುಗಡೆ ಈ ಗರಿಗಳ ಕಟ್ಟನ್ನು ಇಟ್ಟು ಆತನ ಕೈಯಲ್ಲಿ ಒಂದು ಕಡ್ಡಿಯನ್ನು ಕೊಟ್ಟು ತನ್ನ ಮನಸ್ಸಿಗೆ ಬಂದ ಕಡೆ ಕಟ್ಟಿನ ಮಧ್ಯೆ ಕಡ್ಡಿಯನ್ನು ತೂರಿಸಲು ಹೇಳಲಾಗುತ್ತದೆ. ಆ ಕಡ್ಡಿ ಎಲ್ಲಿ ತೂರಿರುತ್ತದೋ ಅಲ್ಲಿನ ಗರಿಯನ್ನು ಜೋಯಿಸ ಕೈಗೆತ್ತಿಕೊಂಡು ಅದರಲ್ಲಿ ಬರೆದಿರಬಹುದಾದ ವಿಚಾರವನ್ನು ಓದಿ ಹೇಳಿ ವ್ಯಾಖ್ಯಾನಮಾಡಿ ಶುಭ ಅಶುಭಗಳ ಬಗ್ಗೆ ತಿಳಿವಳಿಕೆ ಕೊಡುತ್ತಾನೆ.

**ಗಿಣಿ ಶಾಸ್ತ್ರ :** ಸಾಮಾನ್ಯವಾಗಿ ಇದೂ ಹೆಚ್ಚು ಕಡಿಮೆ ಓಲೆಗರಿ ವಿಧಾನದಂತೆಯೆ. ಇದರಲ್ಲಿ ಗಿಣಿ ಪ್ರಮುಖ ಪಾತ್ರವಹಿಸುತ್ತದೆ. ಬಂದವರ

ಹಣೆಬರಹವನ್ನು ನಿರ್ಧರಿಸುವುದು ಈ ಗಿಣಿಯೆ. ಜ್ಯೋತಿಷಿಯ ಬಳಿ ದಪ್ಪ ಕಾಗದದ ಇಪ್ಪತ್ತು ಮೂವತ್ತು ಲಕೋಟೆಗಳಿರುತ್ತವೆ. ಒಂದೊಂದರಲ್ಲೂ ಒಂದೊಂದು ದೇವರ ಭಾವಚಿತ್ರವಿದ್ದು ಕೆಲವು ವಾಕ್ಯಗಳನ್ನು ಬರೆದಿರುತ್ತಾರೆ. ಒಳಗೆ ಏನು ಬರೆದಿದೆ ಎನ್ನುವುದು ಹೊರಗಿನಿಂದ ಕಾಣುವುದಿಲ್ಲ. ಜ್ಯೋತಿಷ್ಯ ಹೇಳುವ ಕಾಲಕ್ಕೆ ಪಂಜರದಿಂದ ಹೊರಬಂದ ಗಿಣಿ ಹರಡಿರುವ ಲಕೋಟೆಗಳಲ್ಲಿ ಒಂದನ್ನು ತನ್ನ ಕೊಕ್ಕಿನಿಂದ ಎಳೆದು ಪ್ರತ್ಯೇಕಿಸಿಡುತ್ತದೆ. ಅದನ್ನೆತ್ತಿಕೊಂಡು ಅದರಲ್ಲಿನ ಬರೆಹದಂತೆ ಜೋಯಿಸ ಗಿರಾಕಿಗೆ ಭವಿಷ್ಯ ಏನು ಎಂಬುದನ್ನು ಹೇಳುತ್ತಾನೆ. ಈ ಶಾಸ್ತ್ರದಲ್ಲಿ ಲಕೋಟೆಗಳ ಬದಲಾಗಿ ಒಮ್ಮೊಮ್ಮೆ ಓಲೆಗರಿಗಳನ್ನು ಕಾಣಬಹುದು. ವಿಧಾನವಮಾತ್ರ ಮೊದಲಿನಂತೆಯೆ. ಓಲೆಗರಿಗಳಾದಲ್ಲಿ ದೇವರ ಪಟವಿರುವುದಿಲ್ಲ.

ಮೇಲೆ ಕಾಣಿಸಿದ ಮೂರು ಬಗೆಯ ಜ್ಯೋತಿಷಿಗಳು ಸಾಮಾನ್ಯವಾಗಿ ಜಾತ್ರೆ, ಸಂತೆ, ಮಾರುಕಟ್ಟೆ, ಚೌಕ ಮುಂತಾಗಿ ಜನಸಂದಣಿ ಇರುವ ಕಡೆ ಕಾಣಸಿಗುತ್ತಾರೆ.

**ಕೊರವಂಜಿ :** ಸಾಮಾನ್ಯವಾಗಿ ಇವರು ಹಳ್ಳಿಗಳಲ್ಲಿ ಹೆಚ್ಚಾಗಿ ಓಡಿಯಾಡುತ್ತಾರೆ. ಕಣಿ ಕೇಳ್ತೀರೇನಮ್ಮ ಕಣಿ ಎಂದು ಸಾರಿಕೊಂಡು ಬೀದಿ ಬೀದಿಗಳಲ್ಲಿ ಸುತ್ತುತ್ತಿರುತ್ತಾರೆ. ಕೇಳಲು ಇಚ್ಛಿಸುವ ಜನರ ಹಸ್ತರೇಖೆಗಳನ್ನು ಗಮನಿಸಿ ಅದಕ್ಕನುಗುಣವಾಗಿ ಆ ವ್ಯಕ್ತಿಯ ಹಿಂದಿನ ಮತ್ತು ಮುಂದಿನ ವಿಚಾರಗಳನ್ನು ವಿವರಿಸುತ್ತಾರೆ.

**ಕುರುಮಾಮ :** ಕೊರವಂಜಿಯ ರೀತಿ ಇವರೂ ಅಲೆಮಾರಿ ಜನ. ಕೈಯಲ್ಲಿ ಏಕನಾದ ಹಿಡಿದುಕೊಂಡು, 'ರಾಮಾನಂದಂ, ರಾಮಾನಂದಂ, ಮಸ್ತಾನನ್ನ ಗುರುನಾದನ್ನ, ಕೊಂಡದೇವತೆ' ಮುಂತಾಗಿ ಹಾಡಿಕೊಂಡು ಬೀದಿ ಬೀದಿ ಸುತ್ತುತ್ತಾರೆ. ಹಸ್ತರೇಖೆಯನ್ನು ಪರೀಕ್ಷಿಸಿ ಜ್ಯೋತಿಷ್ಯ ನುಡಿಯುತ್ತಾರೆ. ನಾವು ಮನಸ್ಸಿನಲ್ಲಿ ಕುರಿತುಕೊಂಡ ವಿಚಾರ ಇಂಥದೇ ಎಂದು ಹೇಳುವ ಚಾಣಾಕ್ಷತನ, ಬುದ್ಧಿವಂತಿಕೆ ಇವರದು (ನೋಡಿ: ಕುರುಮಾಮ).

ಇವಿಷ್ಟು ಮುಖ್ಯವಾಗಿ ಜನಪದ ಜ್ಯೋತಿಷ್ಯದ ಮುಖ್ಯ ಅಂಗಗಳು. ಇವಲ್ಲದೆ ಕಾಡು ಸಿದ್ದ, ಗೊರವ ಮುಂತಾದವರು ಕೂಡ ಭಿಕ್ಷಾಟನೆಯ ವೇಳೆಯಲ್ಲಿ ಆ ಊರಿಗೆ ಅಥವಾ ಯಾವುದೋ ಮನೆಗೆ ಮುಂದೊದಗಬಹುದಾದ ಗಂಡಾಂತರಗಳನ್ನೋ ಶುಭವನ್ನೋ ಸೂಚಿಸುತ್ತ ತಿರುಗುತ್ತಾರೆ. ಕಾಡುಗೊಲ್ಲರು ಕೂಡ ಗಣೆ ಊದಿ ಕಣಿ ಹೇಳುತ್ತಾರೆ. ಇಷ್ಟಲ್ಲದೆ ದೇವರು ಕೆಲವರ ಮೈಮೇಲೆ ಬಂದು ಇಷ್ಟಾನಿಷ್ಟಗಳನ್ನು ಶುಭಾಶುಭ ಫಲಗಳನ್ನು ಹೇಳುವುದೂ ಉಂಟು. *

**ಜನಪದ ದೇವತೆಗಳು :** ಗ್ರಾಮ್ಯ ಜನಾಂಗಗಳಲ್ಲಿ ಆದಿಕಾಲದಿಂದಲೂ ಉಳಿದುಬಂದಿರುವ ದೇವತೆಗಳನ್ನು ಜನಪದ ದೇವತೆಗಳೆಂದು ಕರೆಯಬಹುದು. ಶಿಷ್ಟದೇವತೆಗಳ ಆರಾಧನೆ ಬಳಕೆಗೆ ಬರುವ ಮುನ್ನವೇ ಈ ದೇವತೆಗಳು ಇದ್ದುದಲ್ಲದೆ ಅವುಗಳಲ್ಲಿ ಅನೇಕವಕ್ಕೆ ಮೂಲವೂ ಆಗಿದ್ದುವು. ಸಾಮಾನ್ಯವಾಗಿ ಜನಪದ ದೇವತೆಗಳು ಶಿಷ್ಟ ಜನಾಂಗದಿಂದ ಆರಾಧನೆಗೊಳ್ಳುವುದಿಲ್ಲ. ನಾಗರಿಕರ ದೃಷ್ಟಿಯಲ್ಲಿ ಇವು ಕ್ಷುದ್ರ ದೈವಗಳೆನಿಸಿಕೊಂಡಿವೆ.

ಜನಪದ ದೇವತೆಗಳ ಕಲ್ಪನೆ, ಆರಾಧನೆ, ಆಚರಣೆ ಮುಂತಾದವುಗಳಿಗೆಲ್ಲ ಖಚಿತವಾದ ಹಿನ್ನೆಲೆಯನ್ನು ಒದಗಿಸುವುದು ಕಷ್ಟ. ಏಕೆಂದರೆ ಇವನ್ನು ಕುರಿತ ಯಾವ ಐತಿಹಾಸಿಕ ದಾಖಲೆಗಳೂ ಲಿಖಿತರೂಪದಲ್ಲಿ ದೊರೆಯುವುದಿಲ್ಲ. ಆದ್ದರಿಂದ ಇವುಗಳ ಇತಿವೃತ್ತಗಳಿಗೆಲ್ಲ ಪರಂಪರೆಯಿಂದ ಕಂಠಸ್ಥ ರೂಪದಲ್ಲಿ ಬೆಳೆದುಳಿದು ಬಂದಿರುವ ಜಾನಪದವನ್ನೇ ಮೊರೆಹೋಗಬೇಕಾಗುತ್ತದೆ. ಈ ದೇವತೆಗಳ ಆರಾಧನೆಗೆ ಸಂಬಂಧಿಸಿದಂತೆ ಹೇಳುವ ಸ್ತುತಿ ಗೀತೆಗಳು, ಪುರಾಣ ಕಥೆಗಳು, ಐತಿಹ್ಯಗಳು, ಲಾವಣಿಗಳು ಮುಂತಾದವುಗಳಿಂದ ಅವುಗಳಲ್ಲಿ ಅಡಗಿರಬಹುದಾದ ಐತಿಹಾಸಿಕತೆಯನ್ನು ಅಗೆದು ತೆಗೆಯಬಹುದಾಗಿದೆ. ಈ ಬಗೆಯ ಆಧಾರಗಳನ್ನು ಗಮನಿಸಿದಾಗ ವೀರರು, ಪತಿವ್ರತೆಯರು, ಸಾಧುಸಂತರು, ಪಿತೃಗಳು, ಪ್ರಾಣಿಗಳು, ಬಲಿಯಾದವರು, ಆತ್ಮಹತ್ಯೆ ಮಾಡಿಕೊಂಡವರು, ಭೂತಪ್ರೇತಗಳು, ಮರಗಿಡಗಳು, ಗ್ರಹನಕ್ಷತ್ರಗಳು ನದೀನದಗಳು - ಎಲ್ಲವೂ ಜನಪದ ದೇವತೆಗಳಾಗಿರುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿ ಜನಪದ ದೇವತೆಗಳಿಲ್ಲದ ಗ್ರಾಮವೇ ಇಲ್ಲವೆಂದು ಹೇಳಬಹುದು. ಈ ಎಲ್ಲ ದೇವತೆಗಳಿಗೂ ಪರಂಪರಾನುಗತ ಪದ್ಧತಿ, ನಂಬಿಕೆ, ಆಚರಣೆ ಇದ್ದು ಹಬ್ಬಹರಿದಿನಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಆದರೂ ಈ ದೇವತೆಗಳಲ್ಲಿ ಹೆಚ್ಚಿನವಕ್ಕೆ ನಿತ್ಯ ಪೂಜೆಯಿಲ್ಲ. ವರ್ಷದ ಯಾವುದೋ ಕೆಲವು ಸಂದರ್ಭಗಳಲ್ಲಿ ಇವುಗಳಿಗೆ ಹಬ್ಬ ಜಾತ್ರೆ ಪೂಜೆ ಇತ್ಯಾದಿಗಳು ನಡೆಯುತ್ತವೆ. ಶಿಷ್ಟ ದೇವತೆಗಳಿಗಿರುವಂತೆ ಈ ದೇವತೆಗಳಿಗೆ ಸುಂದರವಾದ ದೊಡ್ಡ ಆಲಯಗಳೂ ಇರುವುದಿಲ್ಲ. ಊರಿನ ಹೊರಗೋ ಮರದ ಕೆಳಗೋ ಕಣಿವೆಯಲ್ಲೋ ಕೆರೆ ಏರಿಯ ಮೇಲೋ ಗುಡ್ಡದ ಮೇಲೋ ಮರದ ತೋಪಿನಲ್ಲೋ ನಾಲ್ಕು ಒರಟು ಕಲ್ಲಿನ ಚಪ್ಪಡಿಗಳನ್ನು ನಿಲ್ಲಿಸಿ ಕಟ್ಟಿದ ಗುಡಿಗಳೇ ಈ ದೇವತೆಗಳಿಗೆ ಆಲಯಗಳು. ಶಿಷ್ಟದೇವತೆಗಳಂತೆ ಇವು ಎಷ್ಟೋ ವೇಳೆ ಕೆತ್ತನೆಯ ಸುಂದರವಾದ ವಿಗ್ರಹಗಳಾಗಿರದೆ ಒರಟು ಕಲ್ಲುಗಳಾಗಿರುತ್ತವೆ. ಹೀಗೆ ಶಿಷ್ಟದೇವತೆಗಳಿಗಿರುವ ಸವಲತ್ತುಗಳು ಜನಪದ ದೇವತೆಗಳಿಗಿರದಿದ್ದರೂ ಇವು ಗ್ರಾಮದ ಅಧಿಷ್ಠಾತ್ರಿ ದೇವತೆಗಳಾಗಿದ್ದು ಗ್ರಾಮದ ಆಗುಹೋಗುಗಳ ಸರ್ವಾಧಿಕಾರಿಗಳಾಗಿ ಗ್ರಾಮದ ಸಂರಕ್ಷಕರಾಗಿ ಗ್ರಾಮದ ಜನತೆಯ ಭಯಭಕ್ತಿಗಳನ್ನು ಗಳಿಸಿಕೊಂಡಿವೆ.

ದುರ್ಗಾದೇವಿ

ಜನಪದ ದೇವತೆಗಳನ್ನು ಪೂಜಿಸುವ ಅರ್ಚಕರು ಸಾಮಾನ್ಯವಾಗಿ ಶೂದ್ರರೇ ಆಗಿದ್ದರೂ ವಿರಳವಾಗಿ ಬ್ರಾಹ್ಮಣರೂ ವೀರಶೈವರೂ ಅರ್ಚಕರಾಗಿರುವ ಉದಾಹರಣೆಗಳೂ ಇವೆ. ಶಿಷ್ಟದೇವತೆಗಳ ಆರಾಧನೆಗೂ ಜನಪದ ದೇವತೆಗಳ ಆರಾಧನೆಗೂ ಬಹಳಷ್ಟು ವ್ಯತ್ಯಾಸಗಳಿವೆ. ಅವುಗಳಲ್ಲಿ ಮುಖ್ಯವಾದುದು ಬಲಿ. ಜನಪದ ದೇವತೆಗಳು ಬಲಿಯಿಂದ ಸುಪ್ರೀತವಾಗುತ್ತವೆ ಎಂಬ ನಂಬಿಕೆ ಇದೆ. ಈ ದೇವತೆಗಳ ಅಲಂಕಾರ

ಇತ್ಯಾದಿಗಳೂ ತೀರ ವಿಲಕ್ಷಣವಾಗಿರುವುದಲ್ಲದೆ ಭಯ ಹುಟ್ಟಿಸುವಂತಿರುತ್ತವೆ. ಸಾಮಾನ್ಯವಾಗಿ ಕೋಳಿ, ಕುರಿ, ಆಡು, ಹಂದಿ, ಕೋಣ - ಈ ಪ್ರಾಣಿಗಳನ್ನು ಬಲಿಕೊಟ್ಟು, ಬೇವಿನಸೋಪ್ಪು, ತಾಳೆಹೂ ಹೊಂಬಾಳೆಗಳಿಂದ ಅಲಂಕರಿಸಿ, ಎಣ್ಣೆಮಜ್ಜನ ಮಾಡಿಸಿ, ತಂಬಿಟ್ಟು ಎಳನೀರು ಮಡೆಯನ್ನ ರಕ್ತದನ್ನ ಅರಿಸಿನದನ್ನ ಕುಂಕುಮದನ್ನ ಮೊಸರನ್ನ ಎಳ್ಳುಂಡೆ ಮುಂತಾದ ತಳಿಗೆ ನೀಡಿ - ಈ ದೇವತೆಗಳನ್ನು ಆರಾಧಿಸುತ್ತಾರೆ. ಜನಪದ ದೇವತೆಗಳಿಗೆ ಪ್ರಾಣಿಬಲಿ ಕೊಡುತ್ತಿದ್ದಂತೆ ನರಬಲಿಯನ್ನೂ ಕೊಟ್ಟ ಉದಾಹರಣೆಗಳೂ ಇವೆ. ನರಬಲಿಯನ್ನು ಕೇಳಿದ ಕೆಲವು ದೇವತೆಗಳ ಗುಡಿಯನ್ನೇ ಕಲ್ಲುಮಣ್ಣುಗಳಿಂದ ಮುಚ್ಚಿದ ಉದಾಹರಣೆಗಳು ಕಾಣದೊರೆಯುತ್ತವೆ. ಈಗ ನರಬಲಿ ಇಲ್ಲದೆ ಇದ್ದರೂ ಪ್ರಾಣಿಗಳನ್ನು ಬಲಿಕೊಡುವ ಮತ್ತು ಹೆಂಡ, ಭಂಗಿಯಿಂದ ದೇವತೆಗಳನ್ನು ಸಂತೃಪ್ತಿಪಡಿಸುವ ಸಂಪ್ರದಾಯಗಳು ಇನ್ನೂ ಜೀವಂತವಾಗಿರುವುದನ್ನು ನೋಡಬಹುದಾಗಿದೆ.

ಮಾರಿಕಾಂಬಾ, ಶಿರಸಿ

ಜನಪದ ದೇವತೆಗಳಿಗೆ ಒಪ್ಪಿಸುವ ಹರಕೆಗಳೂ ಸೇವೆಗಳೂ ತೀರ ವಿಚಿತ್ರವಾದವು. ದಿಂಡುರುಳು ಸೇವೆ, ಹೆಜ್ಜೆ ನಮಸ್ಕಾರ ಮೊದಲಾದ ಸರಳ ಸೇವೆಗಳಲ್ಲದೆ ಮೈಗೆಲ್ಲ ದಬ್ಬಳದ ಗಾತ್ರ ಸರಳುಗಳನ್ನು ಚುಚ್ಚಿಕೊಂಡು ತಮ್ಮಟೆ ಹೊಡೆಸುತ್ತ ಅದರ ಗತ್ತಿಗೆ ತಕ್ಕಂತೆ ಕುಣಿದಾಡುತ್ತ ಹರಕೆ ಒಪ್ಪಿಸುವ ಸರಳು ಪವಾಡದ ಸೇವೆ, ದಬ್ಬಳದಂಥ ಸರಳನ್ನು ಬಾಯಿಗೆ ಚುಚ್ಚಿಕೊಳ್ಳುವ ಬಾಯಿ ಬೀಗದ ಸೇವೆ, ಬೆಂಕಿಯ ಮೇಲೆ ನಡೆಯುವ ಕೆಂಡಕೊಂಡ ಸೇವೆ (ಕೊಂಡ ಹಾಯುವುದು), ಎಲ್ಲಮ್ಮನಿಗೆ ಹರಕೆ ಹೊತ್ತವರು ನಡೆಸಿಕೊಂಡು ಬಂದಿರುವ ಗಂಡಸು ಹೆಂಗಸಾಗುವ, ಹೆಂಗಸುಗಂಡಸಾಗುವ ಜೋಗಿತಿ ಸಂಪ್ರದಾಯ (ನೋಡಿ) ಇತ್ಯಾದಿ ಇನ್ನೂ ಕೆಲವು ಭಯಂಕರ ಸೇವೆಗಳೂ ಜನಪದ ದೇವತೆಗಳಿಗೆ ಸಲ್ಲುತ್ತವೆ. ಜನಪದ ಧಾರ್ಮಿಕ ವೃತ್ತಿ ಗಾಯಕರೆಲ್ಲರೂ ತಮ್ಮ ತಮ್ಮ ದೇವರುಗಳಿಗೆ ಗುಡ್ಡರಾಗಿದ್ದುಕೊಂಡು ಆ ದೇವತೆಯನ್ನು ಭಕ್ತಿಯಿಂದ ಪೂಜಿಸಿಕೊಂಡು ಬರುತ್ತಾರೆ. ಇವಲ್ಲದೆ ಅನೈತಿಕವೆನಿಸಿದರೂ ದೇವರ ಹೆಸರಿನಲ್ಲಿ ಕೆಲವು ಹೆಂಗಸರು ಸಂತಾನಾಪೇಕ್ಷೆಯಿಂದ ಜಾತ್ರೆಪರಿಸೆಗಳಲ್ಲಿ ಪರಪುರುಷನನ್ನು ಕೂಡುವ ತೇರಿನ ಪಟ್ಟಡಿಸೇವೆ, ತಾಳೆಮೆಳೆ ಸೇವೆ, ಹೊಳೆಕರೆ ಸೇವೆಗಳೂ ಇವೆಯಂತೆ. (ನೋಡಿ: ದೇವರ ಸೇವೆಗಳು).

ಶಿಷ್ಟಪುರಾಣಗಳ ತ್ರಿಮೂರ್ತಿಗಳು ಸೃಷ್ಟಿಸ್ಥಿತಿಲಯಗಳ ಪ್ರತೀಕವೆನಿಸಿರುವಂತೆ ಜನಪದ ದೇವತೆಗಳು ಈ ಬಗೆಯ ವಿಶ್ವದೇವತೆಗಳಾಗಿರದೆ ವಿಶ್ವದ ವ್ಯಾಪಕತೆಗೆ ಸಂಬಂಧಿಸಿದ ಸಂಕೇತಗಳೂ ಆಗಿರದೆ ಅವು ಗ್ರಾಮಜೀವನದ ಪ್ರತೀಕಗಳಾಗಿ ಕಾಲರ ಸಿಡುಬು ದಡಾರ ಪ್ಲೇಗು ಹಾಗೂ ದನಕರುಗಳಿಗೆ ಬರುವ ರೋಗಗಳ ಅಧಿದೇವತೆಗಳಾಗಿ ಕಾಣಿಸಿಕೊಳ್ಳುತ್ತವೆ.

ತಮ್ಮ ಶಕ್ತಿಯ ಪರಿಮಿತಿಯೊಳಗೇ ಪ್ರಭಾವ ಬೀರುವ ಜನಪದ ದೇವತೆಗಳಲ್ಲಿ ಹೆಚ್ಚಿನವು ಹೆಣ್ಣುದೇವತೆಗಳು. ಗಂಡುದೇವತೆಗಳು ಬಂದರೂ ಅವು ಹೆಣ್ಣುದೇವತೆಗಳ ಸಹೋದರರಾಗಿಯೋ ಗಂಡಂದಿರಾಗಿಯೋ ಕಾಣಿಸಿಕೊಳ್ಳುತ್ತವೆ. ಆರ್ಯ ದೇವತೆಗಳಲ್ಲಿ ಈಶ್ವರ, ವಿಷ್ಣು ಬ್ರಹ್ಮರಾದಿಯಾಗಿ ಗಂಡುದೇವತೆಗಳ ಪ್ರಾಬಲ್ಯವನ್ನು ಹೆಚ್ಚಾಗಿ ಕಾಣುತ್ತೇವೆ. ಆದರೆ ಜನಪದ ದೇವತೆಗಳಲ್ಲಿ ಶಿಷ್ಟದೇವತೆಯಾಗಿ ಪರಿವರ್ತನೆ ಹೊಂದಿರುವ ಈಶ್ವರನ ಮಡದಿ ಪಾರ್ವತಿಯೇ ಕಾಳಿ ಮುಂತಾದ ಹೆಸರುಗಳಲ್ಲಿ ಜನಪದ ದೇವತೆಯಾಗಿದ್ದಾಳೆ. ಅಥವಾ ಎಲ್ಲ ಹೆಣ್ಣುದೇವತೆಗಳಿಗೂ ಆಧಾರಭೂತಳಾಗಿದ್ದಾಳೆ. ಇದಕ್ಕೆ ವಿದ್ವಾಂಸರನೇಕರು ಬೇರೆ ಬೇರೆ ಕಾರಣಗಳನ್ನು ಕೊಡಲು ಪ್ರಯತ್ನಿಸಿದ್ದರೂ ಅವು ಅಷ್ಟು ತರ್ಕಸಮ್ಮತವಾಗಿಲ್ಲವೆಂದೇ ಹೇಳಬಹುದು. ಆದರೂ ಅವರ ಅಭಿಪ್ರಾಯದಲ್ಲಿ ಪ್ರಪಂಚದಾದ್ಯಂತ ಯುದ್ಧ ದೇವತೆಗಳೆಲ್ಲ ಗಂಡೇ ಆಗಿದ್ದು ಬೇಸಾಯ ದೇವತೆಗಳು ಹೆಣ್ಣು ದೇವತೆಗಳೆಂದು ಅಭಿಪ್ರಾಯಪಡುತ್ತಾರೆ. ಜನಪದ ಗಂಡು ದೇವತೆಗಳಲ್ಲಿ ಮಾದೇಶ್ವರ, ಮಂಟೇಸ್ವಾಮಿ, ಜೋಕುಮಾರ, ಮುಡುಕುತೊರೆ ಮಲ್ಲಪ್ಪ, ಹನುಮಪ್ಪ ಮುಂತಾದ ದೇವತೆಗಳು ಸ್ವತಂತ್ರ ಅಸ್ತಿತ್ವವನ್ನು ಗಳಿಸಿಕೊಂಡಿವೆ.

ಜನಪದ ದೇವತೆಗಳನ್ನು ಪ್ರಧಾನವಾಗಿ ಗ್ರಾಮದೇವತೆ, ಸ್ಥಾನದೇವತೆ, ಕುಲದೇವತೆ, ಇಷ್ಟದೇವತೆ, ಗೃಹದೇವತೆ ಎಂಬ ಐದು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಈ ಸಂಖ್ಯೆಯನ್ನು ವಿಸ್ತರಿಸಲೂಬಹುದು. ಆದರೂ ಈ ಬಗೆಯ ವಿಭಜನೆಯಿಂದ ಕೆಲಮಟ್ಟಿನ ತೊಡಕುಗಳು ಉಳಿದೇ ಉಳಿಯುವುದರಿಂದ ಈ ಕ್ರಮವೇ ಸರಿಯೆಂದು ಹೇಳುವಂತಿಲ್ಲ. ಏಕೆಂದರೆ ಕೆಲವೊಮ್ಮೆ ಒಂದು ಗ್ರಾಮದೇವತೆ ಕೆಲವರಿಗೆ ಮನೆದೇವರಾಗಿರಬಹುದು; ಒಬ್ಬರ ಇಷ್ಟದೇವತೆ ಒಂದು ಸ್ಥಾನದೇವತೆಯಾಗಿರಬಹುದು. ಒಂದು ಸ್ಥಾನದೇವತೆ ಕೆಲವರ ಕುಲದೇವತೆಯೂ ಆಗಿರಬಹುದು.

ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮಕ್ಕೂ ಒಂದು ಗ್ರಾಮದೇವತೆ ಇರುತ್ತದೆಯಾದರೂ ಗ್ರಾಮದೇವತೆ ಇಲ್ಲದ ಗ್ರಾಮಗಳೂ ಉಂಟು. ಗ್ರಾಮದೇವತೆಗಳೆಲ್ಲ ಹೆಣ್ಣುದೇವತೆಗಳೇ ಆಗಿದ್ದರೂ ಕೆಲವು ಕಡೆ ಬಸವ, ಹನುಮ, ಭೈರವ, ಬೀರಪ್ಪ, ಶಿವ ಮುಂತಾದ ಗಂಡು ದೇವತೆಗಳೂ ಗ್ರಾಮದೇವತೆಗಳಾಗಿರುವುದು ಕಂಡುಬಂದಿದೆ. ಗ್ರಾಮದೇವತೆಗಳು ಗ್ರಾಮದ ಸಂರಕ್ಷಕ ಶಕ್ತಿಗಳು. ಅವು ರೋಗರುಜಿನ ಮೊದಲಾದ ಅನಿಷ್ಟಗಳು ಗ್ರಾಮವನ್ನು ಪ್ರವೇಶಿಸದಂತೆ ಕಾಯ್ದುಕೊಂಡಿರುತ್ತವೆ. ಅದಕ್ಕಾಗಿಯೆ ಗ್ರಾಮದೇವತೆಗಳ ಗುಡಿ ಊರಿನ ಹೆಬ್ಬಾಗಿಲ ಬಳಿಯಲ್ಲೇ ಇರುತ್ತವೆ. ಪರಸ್ಥಳದಿಂದ ವಲಸೆ ಬಂದ ಕ್ರೂರ ದೇವತೆಗಳು ಗ್ರಾಮವನ್ನು ಹೊಗಲು ಪ್ರಯತ್ನಿಸಿದಾಗ ಗ್ರಾಮದೇವತೆಗಳು ಅವನ್ನು ಹೊಡೆದೋಡಿಸುತ್ತವೆಯಂತೆ. ಊರಿನ ಜನ ಗ್ರಾಮದೇವತೆಯ ಹಬ್ಬ ಮಾಡದೆ ಅಲಕ್ಷ್ಯ ಮಾಡಿದಾಗ ಕೂಗುಮಾರಿ ಊರನ್ನು ನಟ್ಟಿರುಳಿನಲ್ಲಿ ಪ್ರವೇಶಿಸಿ ಕಾಕುಹಾಕುತ್ತ ಬೀದಿ ಬೀದಿಗಳಲ್ಲೆಲ್ಲ ಓಡಾಡುತ್ತಿರುತ್ತಾಳಂತೆ. ಇವಳ ದನಿಯನ್ನು ಕೇಳಿದವರು ಓಗೊಟ್ಟರೆ ಸತ್ತುಹೋಗುತ್ತಾರಂತೆ. ಅದಕ್ಕಾಗಿ ಹಳ್ಳಿಯ ಜನ ಈ ಮಾರಿ ತಮ್ಮ ಮನೆಯೊಳಕ್ಕೆ ಬರದಿರಲೆಂದು ಬಾಗಿಲ ಮೇಲೆ ನಾಳೆ ಬಾ ಎಂದು ಬರೆದಿರುತ್ತಾರೆ. ಕೂಗುಮಾರಿ ಗ್ರಾಮದೇವತೆಯ ತಂಗಿಯೋ ಇನ್ನಾವುದಾದರೂ ಸಂಬಂಧದವಳೋ ಆಗಿರುತ್ತಾಳೆ. ಗ್ರಾಮದೇವತೆಯ ಪರವಾಗಿ ಇವಳು ಊರಿನ ಜನರನ್ನು ಎಚ್ಚರಿಸಿ ಹಬ್ಬ ಮಾಡಲು ಸೂಚನೆ ಕೊಡುತ್ತಾಳೆಂಬ ನಂಬಿಕೆಯುಂಟು. ಗ್ರಾಮದೇವತೆ ರೋಗದೇವತೆಗಳನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿರುತ್ತಾಳೆ.

ಸಾಧಾರಣವಾಗಿ ಪ್ರತಿ ಗ್ರಾಮದವರೂ ತಮ್ಮ ಗ್ರಾಮದೇವತೆಗೆ ಹರಕೆ ಮಾಡಿಕೊಳ್ಳುವುದು ವಾಡಿಕೆ. ಈ ವಿಷಯದಲ್ಲಿ ಗ್ರಾಮದವರು ಬಹುಮಟ್ಟಿಗೆ ಕಟ್ಟುನಿಟ್ಟು. ಗ್ರಾಮದೇವತೆ ಒಂದು ಗ್ರಾಮಕ್ಕೆ ಸೇರಿದ್ದರಿಂದ ಅದರ ಅನುಗ್ರಹ ಆ ಗ್ರಾಮದವರಿಗೇ ಮೀಸಲು. ಗ್ರಾಮದವರೂ ಅವಳನ್ನೇ ನಂಬಿ ಸರ್ವಕ್ಕೂ ಅವಳನ್ನೇ ಯಾಚಿಸಿ ಪಡೆಯಬೇಕೆಂಬುದು ಸಾಮಾನ್ಯ ನಿಯಮ. ಆದರೆ ಕೆಲವೊಮ್ಮೆ ತನ್ನೂರ ಗ್ರಾಮದೇವತೆಗೆ ಮಾಡಿಕೊಂಡ ಹರಕೆ ವಿಫಲವಾದರೆ ಬೇರೆ ಊರಿನ ಮತ್ತೊಂದು ದೇವತೆಗೆ ಹರಕೆ ಹೊರುತ್ತಾರೆ. ಹೀಗೆ ಮಾಡುವುದು ಕೇವಲ ಅಪರೂಪವಾದ ಮತ್ತು ವಿಶೇಷವಾದ ಸಂದರ್ಭಗಳಲ್ಲಿ ಮಾತ್ರ. ಸಾಮಾನ್ಯ ಕಾಲದಲ್ಲಿ ಊರ ದೇವರನ್ನು ಬಿಟ್ಟು ಇತರ ದೇವರಿಗೆ ಹರಕೆ ಹೊತ್ತರೆ ಊರಿನವರು ಸುಮ್ಮನಿರುವುದಿಲ್ಲ. ಹಾಗೆಯೇ ಬೇರೆ ಊರಿನವರೂ ತಮ್ಮೂರ ದೇವರಿಗೆ ಬಂದು ಹರಕೆ ಹೊತ್ತರೆ ಸಾಧಾರಣವಾಗಿ ಸುಮ್ಮನಿರುವುದಿಲ್ಲ. ಆದರೆ ಒಂದೂರಿನ ದೇವರಿಗಿಂತ ಮತ್ತೊಂದೂರಿನ ದೇವರು ಹೆಚ್ಚು ಪ್ರಬಲ, ಫಲದಾಯಕ ಎಂದು ತೋರಿದರೆ ಆ ದೇವರಿಗೆ ನಡೆದುಕೊಳ್ಳುತ್ತಾರೆ.

ನಾಡದೇವತೆ ಶಾಂತಾದುರ್ಗ, ಅಂಕೋಲ

ಕರ್ನಾಟಕದ ಹೆಚ್ಚು ಕಡೆಗಳಲ್ಲಿ ಮಾರಮ್ಮ ಗ್ರಾಮ ದೇವತೆಯಾಗಿದ್ದಾಳೆ. ಮಾರಿಗೆ ಕಬ್ಬಾಳದ ದುರುಗಮ್ಮ, ಏಳು ನಾಲಗೆ ದುರಗಿ, ಹಟ್ಟಿ ಲಕ್ಕಮ್ಮ, ಹಟ್ಟಿ ಕಲ್ಲಮ್ಮ, ಬಾಚಳ್ಳಿ ಅಮ್ಮ, ಕಿಕ್ಕೇರಿ ಅಮ್ಮ, ಬೆಟ್ಟದ ಚಿಕ್ಕಮ್ಮ, ಕರುಳಕೆಲ್ಲ ದೇವಮ್ಮ, ಬೆಟ್ಟಳ್ಳಿ ಮಾರಮ್ಮ, ಕಲ್ಲೂರ ಮಲ್ಲಿಗದೇವಿ, ಮುಡುಗುಂಡದ ಮುಳ್ಳಾಚಿ, ಬನ್ನೂರು ಹ್ಯಾಮಾದ್ರಿ, ಮೂಗೂರು ತಿಬ್ಬಾದೇವಿ, ಉತ್ತನಹಳ್ಳಿ ಉರುಕಾಡಿ, ಗೊಂಡನಹಳ್ಳಿ ಗೊತ್ತುಕಾಡಿ, ಪಿರಿಯಾಪಟ್ಟಣದ ಬರಿಮುಸ್ನಿ, ಎಲ್ಲಮ್ಮ, ಅಗರ ದಿಂಡಿನ ಮಾರಿ, ಕುಂಡ್ಮಾರಿ, ಕಿವುಡ್ಮಾರಿ, ಕುಂಟ್ಮಾರಿ, ಬೆಟ್ಟದ ಚಾಮುಂಡಿ, ಬೆಂಕಿಮಾರಿ, ದೂರದ ದುಬ್ಬಮ್ಮ, ಕೊಡಗಿನ ಮಮ್ಮಾಯಿ, ಮೂಕಳ್ಳಿ ಮಾಮಾರಿ, ಬಲಮುಂಕಾಳಿ, ಉತ್ತನಳ್ಳಿ ಮಾರಿ, ಹೊನ್ನಾಲದಮ್ಮ, ಬಾಣಂತಮ್ಮ, ಬಿಸಲಾಳಿಯಮ್ಮ, ಹಾಸನಮ್ಮ, ಮದ್ದೂರಮ್ಮ, ಅಂಕಾಲಮ್ಮ ಮುಂತಾದ ಬೇರೆ ಬೇರೆ ಹೆಸರುಗಳಿವೆ.

ಮಂಟೇಸ್ವಾಮಿ ಮತ್ತು ಮಾದೇಶ್ವರರು ಈ ಮಾರಿಯರನ್ನು ಕಟ್ಟಿ ಆಳುತ್ತಿದ್ದರಂತೆ. ಅವರ ಅಪ್ಪಣೆಯ ಮೇರೆಗೆ ಇವರೆಲ್ಲ ಬೇರೆ ಬೇರೆ ಊರುಗಳನ್ನು ಸೇರಿ ಗ್ರಾಮದೇವತೆಗಳಾದರಂತೆ. ಈ ಮಾರಿಯರೆಲ್ಲ ಉತ್ತರದಿಂದ ಬಂದವರೆಂಬುದು ಅತ್ಯಂತ ಪ್ರಚಲಿತವಾದ ಆಶಯ. ಇವರ ಸಂಖ್ಯೆ ಪ್ರಾರಂಭದಲ್ಲಿ ಏಳು ಇದ್ದು ಅನಂತರದಲ್ಲಿ ಏಳುನೂರು ಏಳು ಸಾವಿರ ಆಗಿದೆ.

ಸ್ಥಾನದೇವತೆಗಳು ಒಂದು ಸುತ್ತಿನ ಹತ್ತಾರು ಊರುಗಳ ಮೇಲೆ ಪ್ರಭಾವ ಬೀರುತ್ತವೆ. ಇವನ್ನು ಸ್ಥಳದೇವತೆಗಳೆಂದೂ ಕರೆಯುತ್ತಾರೆ. ಸ್ಥಾನದೇವತೆಗಳು ಹತ್ತಾರು ಹಳ್ಳಿಗಳ ದೇವತೆಗಳನ್ನು ಆಳುವಂಥವು. ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಭೈರವ, ಸಿದ್ಧಪ್ಪಾಜಿ, ರಾಚಪ್ಪಾಜಿ, ಕೊಂಗಳ್ಳಿಮಲ್ಲಮ್ಮ, ಮುಡುಕುತೊರೆ ಮಲ್ಲಮ್ಮ, ಬೆಟ್ಟದ ಚಾಮುಂಡಿ, ಸವದತ್ತಿ ಎಲ್ಲಮ್ಮ, ತುಳಜಾಪುರದ ಭವಾನಿ, ಕೊಲ್ಲೂರು ಮೂಕಾಂಬಿಕೆ, ಶಿರಸಿ ಮಾರಿಕಾಂಬೆ, ಮಳಲಿ ಗಿಡ್ಡಮ್ಮ, ಅಂಗಡಿ ವಸಂತಮ್ಮ, ಧರ್ಮಸ್ಥಳದ ಮಂಜುನಾಥ, ಬಿಳಿಗಿರಿರಂಗ ಮುಂತಾದ ದೇವತೆಗಳು ಈ ಗುಂಪಿನಲ್ಲಿ ಸೇರುತ್ತವೆ. ಇವುಗಳ ಸ್ಥಾನಮಾನಗಳು ಇನ್ನಿತರ ದೇವತೆಗಳಿಗಿಂತ ಹೆಚ್ಚಿನವಾಗಿರುತ್ತವೆ.

ಪ್ರಾಚೀನ ಬಡುಕಟ್ಟಿನ ಜನಗಳಲ್ಲಿ ರಕ್ತಸಂಬಂಧಕ್ಕನುಗುಣವಾಗಿ ಹಲವಾರು ಗುಂಪುಗಳು ಕಂಡುಬರುತ್ತವೆ. ಈ ಪ್ರತಿಯೊಂದು ಗುಂಪೂ ಪ್ರಾಣಿಗಳನ್ನಾಗಲಿ ಸಸ್ಯಗಳನ್ನಾಗಲಿ ಗ್ರಹನಕ್ಷತ್ರಗಳನ್ನಾಗಲಿ ತಮ್ಮ ಕುಲದೈವವೆಂದು ಪರಿಗಣಿಸಿ ತಮ್ಮ ವಂಶದ ಮೂಲವನ್ನು ಅವುಗಳಿಗೆ ಆರೋಪಿಸುವ ಪದ್ಧತಿ ಪ್ರಪಂಚದಾದ್ಯಂತ ಕಂಡುಬಂದಿದೆ. ಮುಂದುವರಿದ ಜನಾಂಗಗಳಲ್ಲೂ ಈ ಪದ್ಧತಿ ಇದೆ ಎಂಬುದು ನಮ್ಮಲ್ಲಿ ಕಂಡುಬರುವ ಆನೆಗುಲ, ಬೆಳ್ಳಿಗುಲ ಎನ್ನುವ ಮಾತುಗಳಿಂದ ವ್ಯಕ್ತವಾಗುತ್ತದೆ. ತಾವು ಆರಾಧಿಸುವ ವಸ್ತುವನ್ನು ಗೋತ್ರ ಎಂದು ಕರೆಯಲಾಗಿದೆ. ಗೋತ್ರವೆಂದರೆ ತಮ್ಮ ಬುಡಕಟ್ಟಿನ ಮೂಲಪುರುಷನೆಂದೂ ತಮ್ಮ ಕುಲದೇವತೆಯೆಂದೂ ತಿಳಿಯುವವರಿದ್ದಾರೆ. ತೋಡರು ತಮ್ಮ ಕುಲದೇವರು ಎಮ್ಮೆ ಎಂದೂ ಭಾರತದಲ್ಲಿರುವ ಕಾಡುಜನ ಸರ್ಪವನ್ನು ತಮ್ಮ ಕುಲದೇವರೆಂದೂ ಕರೆದುಕೊಳ್ಳುತ್ತಾರೆ. ಕುಲದೇವತೆಯು ಅತೃಪ್ತಿ ಮತ್ತು ಕೋಪಕ್ಕೆ ತುತ್ತಾಗಬಾರದೆಂದು ಅವುಗಳ ಬಗೆಗಿನ ಭಯಭಕ್ತಿಯಿಂದ ಹಲವಾರು ಬಹಿಷ್ಕಾರಾಜ್ಞೆಗಳನ್ನು ರೂಢಿಗೆ ತಂದಿರುವುದನ್ನು ತೋಡರು ಎಮ್ಮೆಯ ಬಗೆಗೆ ತಳೆದಿರುವ ವಿಚಿತ್ರ ನಿಲುವುಗಳು ಸಮರ್ಥಿಸುತ್ತವೆ. ಹೀಗಾಗಿ ಆದಿಜನಾಂಗದವರು ಯಾವುದಾದರೂ ಒಂದು ಪ್ರಾಣಿಯನ್ನೋ ಅಥವಾ ವಸ್ತುವನ್ನೋ ತಮ್ಮ ಕುಲದ ಸಂಕೇತವೆಂದು ಭಾವಿಸಿ, ಅದನ್ನು ಪವಿತ್ರ ಹಾಗೂ ಪೂಜ್ಯವೆಂದು ಪರಿಗಣಿಸುತ್ತಿದ್ದರು. ಈ ಪದ್ಧತಿ ಪರಂಪರೆಯಿಂದ ಇಂದಿಗೂ ಹಲವು ಕಡೆಗಳಲ್ಲಿ ಮುಂದುವರಿದುಕೊಂಡು ಬಂದಿದೆ.

ಇಷ್ಟದೇವತೆಗಳನ್ನು ಜನಪದದಲ್ಲಿ ಮೊರೆಬಿದ್ದ ದೇವರು ಎಂದು ಕರೆಯುತ್ತಾರೆ. ಯಾವುದಾದರೂ ಕಷ್ಟಸಂಕಷ್ಟಗಳು ಒದಗಿ ಬಂದಾಗ ಗೃಹದೇವತೆಯಾಗಲಿ ಕುಲದೇವತೆಯಾಗಲಿ ಸ್ಥಾನದೇವತೆಯಾಗಲಿ ಗ್ರಾಮದೇವತೆಯಾಗಲಿ ರಕ್ಷಿಸಲು ಸಮರ್ಥ ಎನಿಸದೆ ಹೋದಾಗ ಇವುಗಳಿಗಿಂತಲೂ ಬೇರೆ ಯಾವುದಾದರೂ ದೊಡ್ಡ ದೇವರನ್ನು ಹುಡುಕಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ತಮಗೆ ಬಂದಿರುವ ಕಷ್ಟವನ್ನು ಪರಿಹರಿಸಿದರೆ ಪ್ರತಿವರ್ಷವೂ ಹರಕೆ ಸಲ್ಲಿಸುವುದಾಗಿ ಬೇರೆ ಯಾವುದಾದರೂ ಪ್ರಸಿದ್ಧ ದೇವತೆಗೆ ಮೊರೆಹೋಗುತ್ತಾರೆ. ಕಷ್ಟ ಪರಿಹಾರವಾದರೆ ಆ ಹೊಸ ದೇವತೆ ಅವರ ಇಷ್ಟದೇವತೆಯಾಗುತ್ತದೆ.

ಗೃಹದೇವತೆಗಳನ್ನು ಮಂದೇವರು (ಮನೆದೇವರು) ಎಂದು ಕರೆಯುತ್ತಾರೆ. ಪ್ರತಿಯೊಂದು ಮನೆಯೂ ಪವಿತ್ರ ದೇವಾಲಯ ಎಂದು ಪರಿಗಣಿಸಲಾಗುತ್ತದೆ. ಮನೆಯಲ್ಲಿ ತೆಂಗಿನಕಾಯಿ ಮಡಗಿರುವ ಕಳಸವನ್ನು ಪೂಜಿಸಿ ಗೃಹಲಕ್ಷ್ಮೀ ಪೂಜೆಯನ್ನು ಮಾಡುತ್ತಾರೆ. ಗೃಹಪ್ರವೇಶದ ಸಂದರ್ಭದಲ್ಲೂ ಈ ಪೂಜೆ ಅತ್ಯಂತ ಶಾಸ್ತ್ರೀಯವಾಗಿ ನಡೆಯುತ್ತದೆ. ಜನಪದರಿಗೆ ಲಕ್ಷ್ಮೀ ಮಾತ್ರವಲ್ಲದೆ ಬೇರೆ ಬೇರೆ ಮಂದೇವರುಗಳು ಇರುತ್ತವೆ. ಸಾಮಾನ್ಯವಾಗಿ ಮನೆದೇವರನ್ನು ಹೊಂದಿರುವವರು ತಮ್ಮ ಕುಟುಂಬವನ್ನು ಆ ದೇವರ ಹೆಸರಿನಲ್ಲಿ ಗುರುತಿಸಿಕೊಳ್ಳುವುದು ವಾಡಿಕೆ ಉದಾಹರಣೆಗೆ ತಿರುಪತಿ ತಿಮ್ಮಪ್ಪನ ಮನೆದೇವರಾಗಿದ್ದರೆ ಆ

ಕುಟುಂಬದವರು ತಮ್ಮನ್ನು ತಿರುಪತಿ ತಿಮ್ಮಪ್ಪನ ಒಕ್ಕಲಿನವರು ಎಂದು ಕರೆದುಕೊಂಡರೆ ಮಳಲಿ ಗಿಡ್ಡಮ್ಮ ಮನೆದೇವರಾಗಿದ್ದವರು ತಮ್ಮನ್ನು ಮಳಲಿಗಿಡ್ಡಿ ಒಕ್ಕಲೆಂದು ಕರೆದುಕೊಳ್ಳುತ್ತಾರೆ.

ಹಳೆಮಾರಿಯಮ್ಮ, ಕಾಪು

ಜನಪದ ದೇವತೆಗಳಲ್ಲಿ ರೋಗದೇವತೆಗಳು ಅತ್ಯಂತ ಪ್ರಭಾವಿ ದೈವಗಳಾಗಿವೆ. ಈ ದೇವತೆಗಳಲ್ಲಿ ಐತ್ಗಮ್ಮ, ಪ್ಲೇಗಮ್ಮ, ಸೀತಾಳಮ್ಮ, ಕಾಲರಮ್ಮ, ದಡಾರಮ್ಮ, ಸಿಡುಬಮ್ಮ ಮುಂತಾದವರು ಸುಪ್ರಸಿದ್ಧರು. ಇತ್ತೀಚೆಗೆ ಏಡ್ಸ್‌ಅಮ್ಮ ಎಂಬ ಹೊಸ ದೇವತೆಯು ಸೇರ್ಪಡೆಗೊಂಡಿದೆ. ಗ್ರಾಮದೇವತೆ ದುರ್ಬಲಳಾದಾಗ ಇವರು ಊರನ್ನು ಪ್ರವೇಶಿಸುತ್ತಾರಂತೆ. ಇವರು ಒಂದು ಕಿವಿಯನ್ನು ಹಾಸಿಕೊಂಡು ಒಂದು ಕಿವಿಯನ್ನು ಹೊದ್ದುಕೊಂಡು ಕಗ್ಗತ್ತಲ ಗವಿಗಳಲ್ಲಿ ಮಲಗಿರುತ್ತಾರಂತೆ. ಹಸಿವಿನಿಂದ ತತ್ತರಿಸಿದಾಗ ಕಾಕುಹಾಕುತ್ತ ಗುಡ್ಡದ ಗಾತ್ರ ಕಣ್ಣುಗಳಲ್ಲಿ ಕಿಡಿಕಾರುತ್ತ ಕೊಳಗದ ಅಗಲ ಬಾಯಿ ಬಿಟ್ಟುಕೊಂಡು ಎಡಗೈಯಲ್ಲಿ ಮೊರಹಿಡಿದುಕೊಂಡು ಮಾನವರನ್ನೆಲ್ಲ ತೊಡೆದು ತಿಪ್ಪೆಗೆಸಯಲು ಬರುತ್ತಾರಂತೆ. ಕಾಯಿಲೆಗಳ ರೂಪದಲ್ಲಿ ಮಾನವರನ್ನು ಇವರು ಕೊಲ್ಲುತ್ತಾರೆ. ಇವರಿಗೆ ಕೋಳಿ, ಕುರಿ, ಆಡು, ಹಂದಿ, ಕೋಣಗಳನ್ನು ಬಲಿಕೊಟ್ಟು ಜನ ತಮ್ಮ ಗ್ರಾಮವನ್ನು ಉಳಿಸಿಕೊಳ್ಳುತ್ತಾರೆ. ಸಣ್ಣ ಪುಟ್ಟ ಚಳಿಜ್ವರಗಳಿಗೆಲ್ಲ ಚೌಡಿ ಎಂಬ ದೇವತೆಯ ಸೋಂಕೇ ಕಾರಣವಂತೆ. ಇವಳ ಸ್ಪರ್ಶದಿಂದ ಕಾಯಿಲೆಗಳು ಬರುತ್ತವೆ. ಆದರೆ ಹರಕೆ ಹೊತ್ತು ಕೋಳಿ ಬಲಿ ಕೊಟ್ಟರೆ ಈ ದೇವತೆ ತೃಪ್ತಳಾಗುತ್ತಾಳೆ. ಇವಳ ಗಂಡ ಮುನೇಶ್ವರ ಅಥವಾ ಜಡೆಮುನಿ. ಈತ ಭೂತಪ್ರೇತಗಳ ಒಡೆಯನೆಂದೂ ನಟ್ಟ ನಡುರಾತ್ರಿ ಕಲ್ಲು ನೀರು ಕರಗುವ ವೇಳೆಯಲ್ಲಿ ಸಂಚಾರ ಮಾಡುತ್ತಾನೆಂದೂ ಹೇಳಲಾಗುತ್ತದೆ (ನೋಡಿ: ಜಡೆಮುನಿ). ಇಂಥ ಬಗೆಬಗೆಯ ಬಣ್ಣ ಬಣ್ಣದ ಕಲ್ಪನೆಯ ದೇವತೆಗಳು ಆದಿವಾಸಿಗಳಲ್ಲಿ ಜೀವಂತವಾಗಿವೆ. ತಮ್ಮ ಜೀವನ ಸರ್ವಸ್ವವೂ ಈ ದೇವತೆಗಳ ಅವಲಂಬನೆಯಿಂದಲೇ ರೂಪಿತವಾಗುತ್ತದೆ ಎಂದು ಅವರು ದೃಢವಾಗಿ ನಂಬುತ್ತಾರೆ. *

**ಜನಪದ ಧರ್ಮ :** ಜನಪದ ಧರ್ಮ ಹಾಗೂ ಶಿಷ್ಟ ಧರ್ಮ ಇವುಗಳ ನಡುವಿನ ನಿರ್ದಿಷ್ಟ ಗಡಿ ರೇಖೆಯನ್ನು ಗುರುತಿಸುವುದು ಕಷ್ಟಸಾಧ್ಯವಾದರೂ ಕೆಲವು ಪ್ರಮುಖ ಅಂಶಗಳಿಂದ ಸ್ವಲ್ಪಮಟ್ಟಿಗೆ ಅವುಗಳಿಗಿರುವ ವ್ಯತ್ಯಾಸಗಳನ್ನು ಕಾಣಬಹುದು. ಪ್ರಪಂಚದ ಇತರ ಜನಪದ ಧರ್ಮಗಳಂತೆ ಕರ್ನಾಟಕದ ಜನಪದ ಧರ್ಮಕ್ಕೂ ಯಾವ ಲಿಖಿತ ಗ್ರಂಥಗಳ ಆಧಾರ ಅಥವಾ ತಾತ್ತ್ವಿಕ ವಿವೇಚನೆಯ ಹಿನ್ನೆಲೆ ಇಲ್ಲವೆನ್ನಬಹುದು. ಅದು ನೈಸರ್ಗಿಕ ಧರ್ಮಕ್ಕೆ ತುಂಬಾ ಹತ್ತಿರವಾಗಿದೆ. ಜನಪದ ಧರ್ಮ ಅನುಕರಣೆ ಮತ್ತು ಆಚರಣೆಗಳಿಂದ ಉಳಿದು ಬಂದಿದ್ದು, ಹೆಚ್ಚಾಗಿ ಅತಿಮಾನುಷ ಅಂಶ, ಅಲೌಕಿಕ ಜೀವಿಗಳ ಆರಾಧನೆ ಮತ್ತು ಅನೇಕ ಧಾರ್ಮಿಕ ನಂಬಿಕೆಗಳಿಂದ ಕೂಡಿದೆ. ಅದರಲ್ಲಿ ಕಂಡುಬರುವ ಆಚಾರ-ವಿಚಾರಗಳು, ನಡಾವಳಿಗಳು, ನಂಬಿಕೆಗಳು, ಕಲೆಗಳು ಮತ್ತು ಹುಟ್ಟುಸಾವುಗಳ ಮಧ್ಯೆ ಅನುಸರಿಸಲೇಬೇಕಾದ ಸಂಪ್ರದಾಯಗಳು ಜನರ ಜೀವನವಿಧಾನ ಮತ್ತು ಅವರ ಮನೋದೃಷ್ಟಿಯನ್ನು ಪ್ರತಿನಿಧಿಸುತ್ತವೆ. ತಾವು ಪರಿಪಾಲಿಸುವ ಧರ್ಮದ ಧ್ಯೇಯೋದ್ದೇಶಗಳ ಅರಿವಿಲ್ಲವಾದರೂ ತಮ್ಮ ಸುತ್ತ ಕಾಪಾಡುವ ಒಂದು ಶಕ್ತಿಯಿದೆ ಎಂಬುದನ್ನು ಜನಪದರು ನಂಬುತ್ತಾರೆ. ಹೀಗಾಗಿ ಅವರು ನದಿ ಜಲಪಾತಗಳು, ಬೆಟ್ಟ ಗುಡ್ಡಗಳು, ದಟ್ಟವಾದ ಕಾಡು ಎಲ್ಲವುಗಳಲ್ಲೂ ದೈವತ್ವವನ್ನು ಅರಸುತ್ತಾರೆ. ಇವುಗಳ ಒಡೆಯನೇ ಆ ಪ್ರದೇಶದಲ್ಲಿ ವಾಸವಾಗಿದ್ದು ಕಾಯಿಲೆ ಮತ್ತು ಅನಿಷ್ಟಗಳಿಗೆ ಕಾರಣನೆಂದು ನಂಬಿ ಅವುಗಳನ್ನು ಪೂಜಿಸುತ್ತಾರೆ. ಇಂಥ ಸರ್ವಚೇತನವಾದ ವಾಸ್ತವವಾಗಿ ಜನಪದಧರ್ಮದ ಅಡಿಗಲ್ಲಾಗಿದೆ ಎಂದು ಹೇಳಬಹುದು. ನೈಸರ್ಗಿಕ ವಸ್ತುಗಳ ಸುತ್ತ ಅನೇಕ ದಂತಕಥೆ, ಪುರಾಣಗಳನ್ನು ಹೆಣೆದು ಅವುಗಳ ಪ್ರಾಮುಖ್ಯತೆಯನ್ನು ಹೆಚ್ಚಿಸುವುದಲ್ಲದೆ ಹಿಂದಿನಿಂದ ನಡೆಸಿಕೊಂಡು ಬಂದ ಬೇಕು-ಬೇಡಗಳನ್ನು ತಪ್ಪದೆ ಪಾಲಿಸುತ್ತಾರೆ. ಸರ್ವಚೇತನತ್ವದಲ್ಲಿ ಜನಪದರಿಗೆ ನಂಬಿಕೆ ಬಹಳ. ಆಲ, ಬೇವು, ಅರಳಿ, ತೆಂಗು, ತುಳಸಿ, ಎಕ್ಕ ಮುಂತಾದ ಮರ ಗಿಡಗಳನ್ನು ತಮ್ಮ ಇಷ್ಟಾರ್ಥ ಸಿದ್ಧಿಗೆಂದು ಪೂಜಿಸುವ ಪದ್ಧತಿ ಕರ್ನಾಟಕದ ಜನಪದ ಧರ್ಮದಲ್ಲಿದೆ. ಕೆಲವರು ಅವುಗಳನ್ನು ಕಡಿಯುವುದಿಲ್ಲ. ಪವಿತ್ರ ವೃಕ್ಷಗಳನ್ನು ನಾಶಮಾಡಿದರೆ ತಮ್ಮ ವಂಶವೇ ನಾಶಹೊಂದುತ್ತದೆ ಎಂಬ ಭಯ ಹಾಗೂ ನಂಬಿಕೆ ಅವರಲ್ಲಿದೆ. ಅರಳಿ-ಬೇವನ್ನು ಒಟ್ಟಿಗೆ ಬೆಳೆಸಿ ಅವುಗಳಿಗೆ ಕಲ್ಲುಕಟ್ಟೆಯನ್ನು ಕಟ್ಟಿಸಿ ಪೂಜಿಸುವುದನ್ನು ಕರ್ನಾಟಕದ ಎಲ್ಲ ಕಡೆ ಕಾಣಬಹುದು. ಗಿಡ-ಮರಗಳಿಂದ ದೊರಕಿದ ಮೊದಲ ಹಣ್ಣು ಅಥವಾ ಕಾಯನ್ನು ದೇವರುಗಳಿಗೆ ಅರ್ಪಿಸುವುದು, ಮರಗಳನ್ನು ನೆಟ್ಟು ಬೆಳೆಸುವುದು. ಕಣಿಗಲು ಗಿಡಗಳನ್ನು ನೆಡುವುದು ಪುಣ್ಯಕಾರ್ಯವೆಂದು ತಿಳಿಯುತ್ತಾರೆ.

ಪ್ರಕೃತಿಪೂಜೆ ಜನಪದ ಧರ್ಮದಲ್ಲಿ ಹೆಚ್ಚು. ತುಮಕೂರು, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಆಚರಿಸುವ ಮುಂಗಾರು ಹಬ್ಬ ಅಥವಾ ಕಾರುಹಬ್ಬ ವಿಶಿಷ್ಟವಾಗಿದೆ. ಮುಂಗಾರು ಮಳೆ ಬಿದ್ದು ತಂಪಾದ ಭೂಮಿಯನ್ನು ಉತ್ತು ಬಿತ್ತುವ ಕಾಲದಲ್ಲಿ ಮಳೆರಾಜನಿಗೆ ಕೃತಜ್ಞತೆಯನ್ನು ಈ ಹಬ್ಬದ ಮೂಲಕ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಗೋವುಗಳನ್ನು ಮೈತೊಳೆದು ಶೃಂಗರಿಸಿ ವ್ಯವಸಾಯೋಪಕರಣಗಳನ್ನು ತೊಳೆದು ಒಂದೆಡೆ ಇಟ್ಟು ಪೂಜಿಸುತ್ತಾರೆ. ಮಳೆ ಬಾರದೆ ಹೋದಾಗ ತಿಂಗಳುಮಾವನ ಪೂಜೆ (ನೋಡಿ) ಕೈಗೊಳ್ಳುವ ಪದ್ಧತಿ ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಪರಮಾಡುವುದು, ಮಳೆರಾಯನನ್ನು ಕರೆಯುವುದು, ಮಾರಿಗೆ ಮೊರೆಹೊಕ್ಕು ಮಳೆರಾಜನನ್ನು ಬರುವಂತೆ ಮಾಡು ಎಂದು ಬೇಡುವುದನ್ನು ಹಳ್ಳಿಗಳಲ್ಲಿ ಕಾಣಬಹುದು. ಉತ್ತರ ಕನ್ನಡ ಜಿಲ್ಲೆಯ ಗುಂಗರು (ಬ್ರಾಹ್ಮಣೇತರ ಪೂಜಾರಿಗಳು) ಮಳೆರಾಜನನ್ನು

ಕರೆಯುವ ರೀತಿ ಕುತೂಹಲಕಾರಿಯಾಗಿದೆ. ಗುಂಗನೊಬ್ಬ ರಾತ್ರಿಯಲ್ಲಿ ನಗ್ನಾವಸ್ಥೆಯಲ್ಲಿ ಪ್ರತಿಮನೆಗೂ ಹೋಗಿ ಅಡಿಗೆ ಸಾಮಾನುಗಳನ್ನು ಸಂಗ್ರಹಿಸಿ ಬೆಳಗಾಗುವುದರೊಳಗೆ ಹತ್ತಿರದ ಕಾಡನ್ನು ಸೇರುತ್ತಾನೆ. ಇದೇ ರೀತಿ ಮೂರು ದಿನಗಳ ಕಾಲ ಸಂಗ್ರಹಿಸಿ ಮೂರನೆಯ ದಿನ ಮಧ್ಯರಾತ್ರಿಯಲ್ಲಿ ಬೆತ್ತಲೆಯಲ್ಲಿಯೇ ಮಳೆರಾಜನಿಗೆ ಪೂಜೆ ಸಲ್ಲಿಸಿದ ಅನಂತರ ತಾನು ಸಂಗ್ರಹಿಸಿದ್ದ ಸಾಮಾನುಗಳಿಂದ ಅಡುಗೆ ಮಾಡಿ ಬಟ್ಟೆ ಧರಿಸಿಕೊಂಡು ಬೆಳಗ್ಗೆ ಊರವರನ್ನು ತಾನಿದ್ದ ಕಾಡಿಗೆ ಆಹ್ವಾನಿಸಿ ಊಟಕ್ಕೆ ಹಾಕುತ್ತಾನೆ. ಎಲ್ಲರೂ ಸೇರಿ ಊಟ ಮಾಡುವಾಗ ಮಳೆ ಬಂದೇ ಬರುವುದೆಂಬ ನಂಬಿಕೆ ಈ ಜನಗಳಲ್ಲಿದೆ.

ಸಾಕುಪ್ರಾಣಿಗಳು ಮತ್ತು ಉಪಯುಕ್ತ ಪ್ರಾಣಿಗಳನ್ನು ದೇವರ ಅಥ‌ವಾ ದೇವತೆಗಳ ವಾಹನವೆಂದು ತಿಳಿಯುವುದು, ಅವತಾರವೆಂದು ಪರಿಗಣಿಸುವುದು ಜನಪದರಲ್ಲಿದೆ. ವ್ಯವಸಾಯದಲ್ಲಿ, ಹೈನುಗಾರಿಕೆಯಲ್ಲಿ ಹೆಚ್ಚು ಉಪಯುಕ್ತವಾಗುವ ಗೋವುಗಳನ್ನು ಪೂಜಿಸುವುದು, ಸಾಕುಪ್ರಾಣಿಗಳಾದ ನಾಯಿ, ಬೆಕ್ಕು ಮುಂತಾದವುಗಳನ್ನು ಗೌರವದಿಂದ ಕಾಣುವುದನ್ನು ನೋಡಬಹುದು. ನಾಯಿಯನ್ನು ಕಾಲಿನಿಂದ ಒದೆಯಬಾರದು ಎಂಬ ನಂಬಿಕೆ ಇದೆ. ನಾಯಿ ಒದ್ದೆಯೋ ತಾಯಿ ಒದ್ದೆಯೋ ಎಂಬ ಗಾದೆಯಲ್ಲಿ ತಾಯಿಯಷ್ಟೇ ನಾಯಿಯೂ ಪವಿತ್ರವಾದುದು ಎಂಬರ್ಥ ಧ್ವನಿತವಾಗಿರುವುದನ್ನು ಕಾಣಬಹುದು. ನಾಯಿ ನಾರಾಯಣ ಎನ್ನುವಲ್ಲಿ ದೇವರ ಪವಿತ್ರತೆಯನ್ನು ಪ್ರಾಣಿಗೆ ಆರೋಪಿಸಲಾಗಿದೆ. ಹಲ್ಲಿ ನುಡಿದರೆ ಅದು ದೇವರ ನುಡಿಯೆಂದೂ ಶುಭಾಶುಭಗಳನ್ನು ಹೇಳುತ್ತದೆ ಎಂದೂ ನಂಬುತ್ತಾರೆ.

ಜನಪದ ಧರ್ಮದಲ್ಲಿ ಬಹಳವಾಗಿ ಕಂಡುಬರುವ ಸರ್ಪಾರಾಧನೆ ಕರ್ನಾಟಕದಲ್ಲಿ ಮಾತ್ರವಲ್ಲ ಜಗತ್ತಿನ ಬಹಳಷ್ಟು ಕಡೆ ಪ್ರಚಲಿತವಿದ್ದಂತೆ ತಿಳಿದುಬರುತ್ತದೆ. ವೇದಗಳ ಕಾಲದಲ್ಲೂ ಈ ಸಂಪ್ರದಾಯವಿತ್ತು. ಸರ್ಪದ ವಿಗ್ರಹಗಳನ್ನು ಮಾಡಿಸಿ ಅರಳಿ ಮರದ ಬುಡದಲ್ಲಿ ಅಥವಾ ಪ್ರತ್ಯೇಕ ಮಂಟಪಗಳಲ್ಲಿ ಇಟ್ಟು ವರ್ಷಕ್ಕೊಮ್ಮೆ ಅಥ‌ವಾ ಕಷ್ಟಬಂದಾಗ ಪೂಜಿಸುವುದುಂಟು. ನಾಗರಪಂಚಮಿಯ ಹಬ್ಬದಂದು ಸರ್ಪದ ವಿಗ್ರಹಕ್ಕೆ ಅಥವಾ ಹುತ್ತಕ್ಕೆ ತನಿ ಎರೆಯುವ ಪದ್ಧತಿ ಕರ್ನಾಟಕದಲ್ಲಿದೆ. ಮಕ್ಕಳಿಗೆ ಅಥವಾ ದೊಡ್ಡವರಿಗೆ ನಾಗರು ಎಂಬ ಚರ್ಮರೋಗ ಕಾಣಿಸಿಕೊಂಡಾಗ ನಾಗರ ಕಲ್ಲು ಕಡೆಸಿ ಚಿನ್ನ ಅಥವಾ ಬೆಳ್ಳಿಯ ಸರ್ಪದಾಕೃತಿಯನ್ನು ಮಾಡಿಸಿ ಅದನ್ನು ಪೂಜಿಸುತ್ತಾರೆ. ಸರ್ಪಕ್ಕೆ ಆರೋಪಿಸಿರುವ ದೈವತ್ವದ ಕಲ್ಪನೆಯಿಂದಾಗಿ ಅವುಗಳನ್ನು ಕೊಲ್ಲಬಾರದೆಂಬ ನಂಬಿಕೆ ಉಳಿದುಬಂದಿದೆ. ನಾಗಾರಾಧನೆ ಭಾರತದಾದ್ಯಂತ ಕಂಡುಬಂದರೂ ಕರ್ನಾಟಕದ ಕರಾವಳಿಯ ಪ್ರದೇಶಗಳಲ್ಲಿ ನಾಗಮಂಡಲವನ್ನು ಹಾಕಿ ನೃತ್ಯವನ್ನು ಮಾಡುವುದರ ಮೂಲಕ ನಾಗದೇವತೆಯನ್ನು ಒಲಿಸುವ ರೀತಿ ವಿಶಿಷ್ಟವಾದುದು (ನೋಡಿ: ವೈದ್ಯನೃತ್ಯ).

ಪಿತೃಪೂಜೆ ಜನಪದ ಧರ್ಮದಲ್ಲಿ ಪ್ರಮುಖವಾಗಿದೆ. ಸತ್ತವರು ಸ್ವರ್ಗದಲ್ಲಿ ಸುಖವಾಗಿರಲು ಪಿತೃಪೂಜೆ ಅಗತ್ಯ ಎಂಬ ನಂಬಿಕೆ ಇದೆ. ಪಿತೃಗಳು ಭೂತಗಳಾಗಿ ಬಂದು ಕಾಯುತ್ತವೆ ಅಥವಾ ಪೀಡಿಸುತ್ತವೆ ಎಂದು ತಿಳಿದು ಅವುಗಳನ್ನು ಸಂಪ್ರೀತಗೊಳಿಸಲು ಪೂಜಿಸುವುದುಂಟು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಭೂತಾರಾಧನೆ (ನೋಡಿ) ಹೆಚ್ಚು ಕಡಿಮೆ ಪಿತೃಪೂಜೆಯೇ ಆಗಿದೆ. ಈ ಪ್ರದೇಶದ ಜನ ಸುಮಾರು ಅರವತ್ತಕ್ಕೂ ಹೆಚ್ಚು ಭೂತಗಳಿವೆ ಎಂದು ನಂಬುತ್ತಾರೆ. ಇವುಗಳಲ್ಲಿ ಕಲ್ಕುಡ, ಪಂಜುರ್ಲಿ, ಬೊಬ್ಬರ್ಯ ಮುಖ್ಯವಾದವುಗಳು. ಭೂತಗಳನ್ನು ಸಾಮಾನ್ಯವಾಗಿ ಪ್ರತಿಮೆಗಳ ರೂಪದಲ್ಲಿ ಅಥವಾ ಕೆಲವು ವಸ್ತುಗಳನ್ನೇ ಭೂತಗಳೆಂದು ಪರಿಗಣಿಸಿ ಪೂಜಿಸುವುದುಂಟು. ಗತಕಾಲದಲ್ಲಿ ಬದುಕಿದ್ದ ಐತಿಹಾಸಿಕ ವ್ಯಕ್ತಿಗಳ ಸ್ಮರಣಾರ್ಥವಾಗಿ ಅಥವಾ ಊರಿನ ರಕ್ಷಣೆಯಲ್ಲಿ ಮಡಿದವನ ಜ್ಞಾಪಕಾರ್ಥವಾಗಿ ಭೂತಾರಾಧನೆಯನ್ನು ಕೈಗೊಳ್ಳಬಹುದು. ಗತಿಸಿದ ವೀರರಾದ ಕೋಟಿ ಚನ್ನಯ್ಯರು ಭೂತಗಳಾಗಿ ಬಂದು ಊರನ್ನು ಕಾಯುತ್ತಿರುವರೆಂಬ ನಂಬಿಕೆಯಿಂದ ವರ್ಷಕ್ಕೊಮ್ಮೆ ಅವರ ಭೂತಾರಾಧನೆ ನಡೆಯುತ್ತದೆ. ಈ ಸಂದರ್ಭದಲ್ಲಿ ವಿಶಿಷ್ಟ ವೇಷಗಳನ್ನು ಧರಿಸಿ ಭೂತ ನೃತ್ಯವನ್ನು ಕೈಗೊಳ್ಳುತ್ತಾರೆ. ಪರವ, ಬೈದ್ಯ ಮತ್ತು ಪಾಣಾರ ಜಾತಿಯವರು ಭೂತಗಳ ಅರ್ಚಕರಾಗಿದ್ದು, ಭೂತನೃತ್ಯಕ್ಕೆ ಹೆಸರಾಗಿದ್ದಾರೆ. ಭೂತಾರಾಧನೆಯೂ ಭಯಮೂಲವಾಗಿದ್ದು ಅವುಗಳ ಮನವೊಲಿಸಿಕೊಳ್ಳಲು ಹಂದಿ, ಕುರಿ, ಕೋಳಿಗಳನ್ನು ಬಲಿ ಕೊಡುತ್ತಾರೆ. ಭೂತಗಳಿಗೆ ಸಂಬಂಧಿಸಿದ ಪಾಡ್ದನಗಳಲ್ಲಿ ಅವುಗಳ ಇತಿವೃತ್ತಗಳನ್ನಲ್ಲದೆ ಭಯವನ್ನುಂಟುಮಾಡುವ ಉಕ್ತಿಗಳಿರುತ್ತವೆ. ಉದಾಹರಣೆಗೆ ಪ್ರಾಣಿಬಲಿ ಕೊಡದಿದ್ದರೆ, ನನ್ನಲ್ಲಿ ನಂಬಿಕೆ ಇಟ್ಟು ಪೂಜಿಸದಿದ್ದರೆ ನಿನ್ನ ಪ್ರಾಣವನ್ನೇ ಬಲಿ ತೆಗೆದುಕೊಳ್ಳುತ್ತೇನೆ ಎಂದು ಹೇಳುವ ಅನೇಕ ಪಾಡ್ದನಗಳು ಭೂತಾರಾಧನೆಯ ಸಂಪ್ರದಾಯದಲ್ಲಿದೆ.

ಜನಪದ ಧರ್ಮದ ಮತ್ತೊಂದು ಮುಖ ಕುಲದೇವತಾಪದ್ಧತಿ ಎನ್ನಬಹುದು. ಈ ಪದ್ಧತಿಯಲ್ಲಿ ಒಂದು ಗುಂಪಿನ ಅಥವಾ ಬುಡಕಟ್ಟಿನ ಜನ ತಮ್ಮ ವಂಶದ ಅಥವಾ ಕುಲದ ಮೂಲವನ್ನು ಕೆಲವು ಪ್ರಾಣಿ, ವಸ್ತು ಅಥವಾ ಗಿಡಮರಗಳಿಗೆ ಆರೋಪಿಸಿಕೊಂಡು ಅವುಗಳನ್ನು ತಮ್ಮ ಕುಲದೇವರುಗಳೆಂದು ಪೂಜಿಸುತ್ತಾರೆ. ಹೀಗೆ ಪೂಜಿಸುವ ವಸ್ತುಗಳನ್ನು ಅಥ‌ವಾ ಪ್ರಾಣಿ, ಗಿಡಮರಗಳನ್ನು ಅವರು ನಾಶಮಾಡುವ ಅಥ‌ವಾ ಕೊಲ್ಲುವ ಕೆಲಸಕ್ಕೆ ಕೈಹಾಕುವುದಿಲ್ಲ. ಈ ಪದ್ಧತಿಯನ್ನು ಅನುಸರಿಸುವ ಕೆಲವು ಕಾಡುಕುರುಬರು ತಮ್ಮ ಕುಲವನ್ನು ಆನೆಗೆ ಆರೋಪಿಸಿಕೊಂಡಿದ್ದಾರೆ. ಅವರು ಎಂದೂ ಆನೆ ಸವಾರಿ ಮಾಡುವುದಿಲ್ಲ. ಆಡುಕುರುಬರು ಆಡನ್ನು ಕೊಲ್ಲುವುದಿಲ್ಲ ಹಾಗೂ ಅದರ ಮಾಂಸವನ್ನು ಸೇವಿಸುವುದಿಲ್ಲ. ಇದೇ ರೀತಿ ಬಸರಿ ಕುರುಬರು ಬಸರಿ ಮರವನ್ನು ಕಡಿಯುವುದಿಲ್ಲ. ಸರ್ಪ ಒಕ್ಕಲಿಗರು ಸರ್ಪವನ್ನೆಂದಿಗೂ ಕೊಲ್ಲುವುದಿಲ್ಲ. ಈ ಪದ್ಧತಿ ತಮ್ಮ ವಂಶದ ಅಥವಾ ಕುಲದ ರಕ್ತಶುದ್ಧಿಯನ್ನು ಕಾಯ್ದುಕೊಂಡು ಬರುವ ಉದ್ದೇಶವುಳ್ಳದ್ದಾಗಿದೆ ಎಂದು ಅವರು ನಂಬುತ್ತಾರೆ.

ಊರನ್ನು ಕಾಯುವ ಗ್ರಾಮದೇವತೆಗಳ ಹಾಗೂ ರೋಗರುಜಿನಗಳನ್ನು ತರುವ ಮತ್ತು ನಿವಾರಿಸುವ ಇನ್ನಿತರ ಅತಿಮಾನುಷ ಶಕ್ತಿಗಳ ಕಲ್ಪನೆ ಜನಪದರಲ್ಲಿ ವಿಶೇಷವಾಗಿದೆ. ಇವಕ್ಕೆ ಅವಿಧೇಯರಾದರೆ, ಹಿಂದಿನಿಂದ ಬಂದ ಸಂಪ್ರದಾಯಗಳನ್ನು ಅನುಸರಿಸದಿದ್ದರೆ, ಊರಿಗೋ ವಂಶಕ್ಕೋ ಅಥ‌ವಾ ದನಕರುಗಳಿಗೋ ಕೇಡುಕು ಸಂಭವಿಸುತ್ತದೆ ಎಂದು ತಿಳಿದು ಅವುಗಳನ್ನು ಭಯಭಕ್ತಿಗಳಿಂದ ಆರಾಧಿಸುವುದಲ್ಲದೆ ಊರನ್ನು ಕಾಯುವ ಶಕ್ತಿಗಳೆಂದು ಬಗೆದು ಶಾಂತಗೊಳಿಸಲು ಬಲಿಕೊಡುತ್ತಾರೆ. ಹೀಗಾಗಿ ಕರ್ನಾಟಕದ ಪ್ರತಿಹಳ್ಳಿಗಳಲ್ಲೂ ಗ್ರಾಮದೇವತೆಗಳ ದೇವಮಾನವರ ಅಥವಾ ಭೂತಗಳ ಗುಡಿಗಳನ್ನು ಕಾಣಬಹುದು. ಸಾಮಾನ್ಯವಾಗಿ ರೋಗದೇವತೆಗಳು ಮತ್ತು ಸಾಮಾನ್ಯದೇವತೆಗಳು ಕರ್ನಾಟಕದ ಎಲ್ಲ ಹಳ್ಳಿಗಳಲ್ಲಿ ಗುಡ್ಡಗಾಡು ಜನಾಂಗಗಳಲ್ಲಿ ನೆಲಸಿವೆ. ಪ್ಲೇಗಿನಮ್ಮ, ಸಿಡುಬಿನಮ್ಮ, ದಡಾರದಮ್ಮ, ಕುಕ್ಕಲಮ್ಮ, ಸುಂಕಿನಮಾರಿ, ಊರಮ್ಮ, ಕರಿಯಮ್ಮ, ಕೆಂಪಮ್ಮ, ಎಲ್ಲಮ್ಮ, ಗಂಗಮ್ಮ, ಮಾಸ್ತಮ್ಮ, ಮದ್ದೂರಮ್ಮ, ದೊಡ್ಡಮ್ಮ, ಬಿಸಿಲುಮಾರಿ, ಕೂಗುಮಾರಿ ಇನ್ನೂ ಮುಂತಾದ ದೇವತೆಗಳು ಜನಪದರ ಆರಾಧ್ಯದೇವತೆಗಳಾಗಿವೆ. ಈ ದೇವತೆಗಳಿಗೆ ವಿಶಿಷ್ಟ ಶಕ್ತಿಗಳನ್ನು ಆರೋಪ ಮಾಡಿ ದೈವಿಕ ಆವರಣವನ್ನು ಕಲ್ಪಿಸಿರುವುದಲ್ಲದೆ ಪ್ರತಿವರ್ಷ ನಡೆಯುವ ಮಾರಿಹಬ್ಬ ರೋಗಗಳು ತಲೆದೋರಿದಾಗ ಕೈಗೊಳ್ಳುವ ಹಬ್ಬಗಳು. ಈ ಮಾರಿಯರನ್ನು ಒಲಿಸಿಕೊಳ್ಳುವ ಹಾಗೂ ಅವು ಕೋಪಗೊಂಡಿವೆ ಎಂದು ತಿಳಿದು ಶಮನ ಮಾಡುವ ದೃಷ್ಟಿಯಿಂದ ಅವುಗಳ ಆರಾಧನೆಯಲ್ಲಿ ತೊಡಗುತ್ತಾರೆ. ಸಾಮಾನ್ಯವಾಗಿ ಆಕಾರ ರಹಿತ ಕಲ್ಲು ಅಥವಾ ಕೆಲವು ಗುರುತುಗಳು ಅಥವಾ ವಸ್ತುಗಳನ್ನೇ ದೇವತೆಗಳೆಂದು ಭಾವಿಸಿ ಅವುಗಳಿರುವ ಜಾಗದಲ್ಲಿ ಗುಡಿಕಟ್ಟಿ ದೇವತೆಯ ಸಂಕೇತವಾಗಿ ಪೂಜಿಸುವುದೂ ಉಂಟು.

ದೇವತೆಗಳ ಹೆಸರಿನಲ್ಲಿ ಸಾಕಿದ ಕುರಿ, ಕೋಳಿ, ಕೋಣ, ಹಂದಿ, ಮೇಕೆ ಮುಂತಾದ ಪ್ರಾಣಿಗಳನ್ನು ಹಬ್ಬಗಳಲ್ಲಿ ಸಾಮಾನ್ಯವಾಗಿ ಬಲಿ (ನೋಡಿ) ಕೊಡುವುದುಂಟು. ಗ್ರಾಮದೇವತೆಯ ಜಾತ್ರೆಗಳಲ್ಲಿ ಧಾರ್ಮಿಕ ಆಚರಣೆಗಳಾದ ಗಾವುಸಿಗಿಯುವಿಕೆ- ಕುರಿ ಅಥವಾ ಮೇಕೆಯನ್ನು ಬಾಯಲ್ಲಿ ಕಚ್ಚಿಕೊಂಡು ಆವೇಶದಿಂದ ದೇವರು ಮೈತುಂಬಿ ಬಂದವನಂತೆ ಓಡಾಡುವುದು, ಸಿಡಿ (ನೋಡಿ) ಆಡುವುದು, ಸೋಮನ ಕುಣಿತ (ನೋಡಿ), ಮಣೆವು ಹಾಕುವುದು (ನೋಡಿ), ಕೊಂಡ ಹಾಯುವುದು (ನೋಡಿ) - ಇವೇ ಮುಂತಾದ ಆಚರಣೆಗಳು ಕಡ್ಡಾಯವಾಗಿರುತ್ತವೆ. ಇಂಥ ಆಚರಣೆಗಳು ದೇವತೆಗಳ ಪ್ರತಿಷ್ಠೆಯನ್ನು ಹೆಚ್ಚಿಸುವುದರಲ್ಲಿ ಹೆಚ್ಚು ಪಾತ್ರವಹಿಸುತ್ತವೆ.

ಗುಡ್ಡಗಾಡಿನ ದೇವತೆಗಳಿಗೆ ಹಾಗೂ ಕೆಲವು ಗ್ರಾಮದೇವತೆಗಳಿಗೆ ಹೆಂಡವನ್ನು ಅರ್ಪಿಸುವುದುಂಟು. ಇದನ್ನು ಘಟೆ ಉಕ್ಕಿಸುವಿಕೆ ಎನ್ನುತ್ತಾರೆ.

ದೇವರು ಮೈ ಮೇಲೆ ಬಂದವನು ಬೇವಿನಸೊಪ್ಪನ್ನು ಹೆಂಡ ತುಂಬಿದ ಹೊಸ ಗಡಿಗೆಗಳಲ್ಲಿ ಅದ್ದಿ ಕಲಕಿದಾಗ ನೊರೆ ಉಕ್ಕುತ್ತದೆ. ಮಾಂಸದ ಅಡುಗೆಯನ್ನು ರಾಶಿಯೋಪಾದಿಯಲ್ಲಿ ಎಡೆ ಹಾಕಿರುತ್ತಾರೆ. ಈ ಸಂದರ್ಭದಲ್ಲಿ ಊರಿನ ಪಿಡುಗುಗಳ ಬಗ್ಗೆ, ಭವಿಷ್ಯದ ಬಗ್ಗೆ ಮತ್ತು ಜನರ ವೈಯಕ್ತಿಕ ಕಷ್ಟನಷ್ಟಗಳ ಬಗ್ಗೆ ಆ ವ್ಯಕ್ತಿ ಭವಿಷ್ಯ ನುಡಿಯುತ್ತಾನೆ. ಇಂಥ ಆಚರಣೆಗಳೇ ಅಲ್ಲದೆ ಮಾರಿ ಹಬ್ಬಗಳಲ್ಲಿ ರಥೋತ್ಸವ, ಹರಕೆ ಹೊತ್ತವರ ಬಾಯಿ ಬೀಗ ಸೇವೆಗಳೂ ಇರುತ್ತವೆ. ಹರೆವಾದ್ಯಗಳ ಗದ್ದಲಗಳೊಂದಿಗೆ ಸ್ತುತಿ ಗೀತೆಗಳನ್ನು ಹಾಡುತ್ತ ಮಧ್ಯೆ ಮಧ್ಯೆ ಕೇಕೆ ಹಾಕುತ್ತ ಸೋಮಗಳನ್ನು ಆವೇಶಪೂರಿತವಾಗಿ ಕುಣಿಸುತ್ತ ಭಯಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಬೆಳೆದ ಫಸಲಿಗೆ ಹೆಚ್ಚು ಮಾಡುವುದು, ರಾಶಿಪೂಜೆ, ರಾಗಿಕಲ್ಲು ಪೂಜೆ, ಒರಳು ಕಲ್ಲು ಪೂಜೆ ಹೆಚ್ಚಾಗಿ ಜನಪದರಲ್ಲಿ ಕಂಡುಬರುತ್ತವೆ. ಪ್ರತಿ ಜನಾಂಗ ಅಥವಾ ಜಾತಿಯವರು ತಮ್ಮ ವೃತ್ತಿಯಲ್ಲಿ ಬಳಸುವ ಸಲಕರಣೆಗಳನ್ನು ಪೂಜಿಸುವುದು ವಾಡಿಕೆಯಲ್ಲಿದೆ. ಕುಂಬಾರ ತಾನು ಮಡಕೆ ಮಾಡುವ ಚಕ್ರವನ್ನು ಪೂಜಿಸಿದರೆ, ಅಕ್ಕಸಾಲಿಗ ಕುಲುಮೆ ಮತ್ತಿತರ ತನ್ನ ಉಪಕರಣಗಳನ್ನೂ ಒಕ್ಕಲಿಗ ವ್ಯವಸಾಯೋಪಕರಣಗಳನ್ನೂ ಪೂಜಿಸುತ್ತಾನೆ.

ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುವ ಕೊಂತಿಪೂಜೆ (ನೋಡಿ) ಒಂದು ವಿಶಿಷ್ಟ ಧಾರ್ಮಿಕ ಸಂಪ್ರದಾಯವಾಗಿದೆ. ಆದರ್ಶಮಾತೆ ಕುಂತಿಯ ನೆನಪಿಗಾಗಿ ಆಚರಿಸುವ ಈ ಪೂಜೆಯನ್ನು ಸಾಮಾನ್ಯವಾಗಿ ಮೈನೆರೆದ ಹೆಣ್ಣನ್ನು ಗುಡ್ಲು ಕೂಡಿಸುವಾಗ ಹಾಗೂ ಒಸಗೆಯ ಸಂದರ್ಭಗಳಲ್ಲಿ ಕೈಗೊಳ್ಳುತ್ತಾರೆ.

ಮಾಟ-ಮಂತ್ರ ಜನಪದ ಧರ್ಮದ ಒಂದು ಪ್ರಮುಖ ಭಾಗ. ಕಾಯಿಲೆ ಬಂತೆಂದರೆ ಊರದೇವತೆಗೆ ಪೂಜೆ ಸಲ್ಲಿಸುವುದು ಅಥವಾ ಪೂಜಾರಿಯಿಂದ ಮಂತ್ರ ಹಾಕಿಸಿಕೊಳ್ಳುವುದು, ಯಂತ್ರಕಟ್ಟಿಸಿಕೊಳ್ಳುವುದು ರೂಢಿಯಲ್ಲಿದೆ. ಮಣ್ಣಿನ ಗೊಂಬೆಗೆ ಕಕ್ಕಡಬತ್ತಿಗಳನ್ನು ಹಚ್ಚಿ ಅನ್ನದುಂಡೆಗಳಿಂದ ಪೂಜಿಸಿ ಊರ ಹೊರಗೆ ಇಟ್ಟು ಹಿಂತಿರುಗಿನೋಡದೆ ಬಂದರೆ ಬಂದ ಜ್ವರ ಇಳಿಯುತ್ತದೆ ಎಂಬ ನಂಬಿಕೆ ಇದೆ. ಮಂತ್ರಗಾರರು ಕೆಲವೊಮ್ಮೆ ದೇವತೆಗಳ ಪ್ರತಿಷ್ಠಾಪಕರಾಗುತ್ತಾರೆ. ದೇವತೆಗಳ ಆಕೃತಿಯನ್ನು ಮಾಡಿ ಅವಕ್ಕೆ ಕಣ್ಣು ಧರಿಸಿ ಶಕ್ತಿಯನ್ನು ತುಂಬಿದಾಗ ಆ ದೇವತೆಗಳು ಪೂಜಿಸಲು ಯೋಗ್ಯವಾಗುತ್ತವೆ. ಭೂತಪ್ರೇತಗಳನ್ನು ಓಡಿಸುವುದರಲ್ಲಿ, ಬೇಕಾದ ವಸ್ತುಗಳ ಅಪಹರಣದಲ್ಲಿ, ಬೆಳೆಯನ್ನು ಸಮೃದ್ಧಿಯಾಗಿಸುವಲ್ಲಿ ಹಾಗೂ ಶತ್ರುಗಳ ನಾಶ ಕಾರ್ಯದಲ್ಲಿ ಮಂತ್ರವಿದ್ಯೆಯನ್ನು ಬಳಸುವುದುಂಟು. ಇದರಿಂದಾಗಿ ಜನಪದ ಧರ್ಮದಲ್ಲಿ ಮಾಟ ಮಾಡಿಸುವಿಕೆ, ಸೆರೆ ಬಿಡಿಸುವಿಕೆ, ಮೋಡಿ ಹಾಕುವುದು, ಗಾಳಿ (ನೋಡಿ) ಬಿಡಿಸುವುದು ಮುಂತಾದ ಕ್ರಿಯೆಗಳು ಜೀವಂತವಾಗಿವೆ. ಮಂತ್ರಶಕ್ತಿಯಿಂದ ಮಾಡುವ ಅದ್ಭುತಗಳು ಹಳ್ಳಿಗರನ್ನು ಚಕಿತರನ್ನಾಗಿ ಮಾಡುತ್ತವೆ; ಕೆಲವೊಮ್ಮೆ ಮಂತ್ರವಾದಿಯನ್ನು ದೇವರ ಪ್ರತಿನಿಧಿಯೆಂದೂ ತಿಳಿಯುವುದುಂಟು.

ಹುಟ್ಟುಸಾವುಗಳಿಗೆ ಸಂಬಂಧಿಸಿದ ಆಚರಣೆಗಳನ್ನು ಜನಪದ ಧರ್ಮದಲ್ಲೇ ಸೇರಿಸಬಹುದು. ಕರ್ನಾಟಕದಲ್ಲಿ ಸಾಮಾನ್ಯವಾಗಿ ಮಗು ಹುಟ್ಟಿದ 3, 7, 8, 11, 12ನೆಯ ದಿನದಲ್ಲಿ ನಾಮಕರಣಮಾಡಿ ಸೂತಕ ಕಳೆದುಕೊಳ್ಳುವುದು ಅನೇಕ ಧಾರ್ಮಿಕ ವಿಧಿಗಳಿಂದ ಕೂಡಿರುತ್ತದೆ. ಶವಸಂಸ್ಕಾರ ವಿವಿಧ ರೀತಿಯದಾಗಿರುತ್ತದೆ. ಸತ್ತವರನ್ನು ಸುಡುವ ಅಥವಾ ಹೂಳುವ ಪದ್ಧತಿಯಿದೆ. ತೊನ್ನು ಹತ್ತಿದವರನ್ನು ಹೂಳದೆ ಕಾಡುಗಾಣಿಸುತ್ತಾರೆ. ಇದಕ್ಕೆ ಕಲ್ಲುಸೇವೆ ಎಂತಲೂ ಹೆಸರು. ಅಂಥವರನ್ನು ಹೂಳಿದರೆ ಹಳ್ಳಿಗೆ ಕೇಡು ಬರುವುದೆಂದೂ ಮಳೆಯಿಲ್ಲದ ಕ್ಷಾಮ ಬರುತ್ತದೆಂದೂ ನಂಬಿಕೆ ಇದೆ. ಕೂಳು ಹಾಕುವುದು, ಕರ್ಮ ಕಳೆದುಕೊಳ್ಳುವುದು ಇವೇ ಮುಂತಾದ ಸಂಪ್ರದಾಯಗಳು ಅಂತ್ಯಕ್ರಿಯೆಯಲ್ಲಿ ಸೇರಿರುತ್ತವೆ.

ಕೆಲವು ಆಚರಣೆಗಳಲ್ಲಿ ಕರ್ನಾಟಕದ ಜನಪದ ಧರ್ಮ ಶಿಷ್ಟ ಧರ್ಮದಿಂದ ಪ್ರಭಾವಿತವಾಗದೆ ಇಲ್ಲ. ನಾಗರಿಕತೆಯ ಪ್ರಭಾವ ಹೆಚ್ಚಾದಂತೆ ಸ್ವಾಭಾವಿಕವಾಗಿ ಕೆಲವು ಮೂಲ ಸಂಪ್ರದಾಯಗಳು ಕಣ್ಮರೆಯಾಗುತ್ತವೆ. ಅಲ್ಲದೆ ಈ ಎರಡು ಧರ್ಮಗಳ ನಡುವೆ ಸಂಘರ್ಷಣೆ ಮತ್ತು ಸಂಕರಕ್ರಿಯೆಗಳು ಸತತವಾಗಿ ನಡೆಯುತ್ತಿರುತ್ತವೆ. ಮಾರಮ್ಮನನ್ನು ಪೂಜಿಸುವವರು ಇಷ್ಟದೇವರುಗಳನ್ನೂ ಪೂಜಿಸುತ್ತಾರೆ. ವಿಶಿಷ್ಟ ಶಕ್ತಿಗಳನ್ನು ಹೊಂದಿರುವ ಮಾರಮ್ಮಗಳನ್ನು ಶಿಷ್ಟ ಧರ್ಮದವರೂ ಕೆಲವರು ನಂಬಿ ಪೂಜಿಸುವುದುಂಟು.

ಧರ್ಮ, ಅದು ಜನಪದ ಧರ್ಮವಾಗಲಿ ಶಿಷ್ಟಧರ್ಮವಾಗಲಿ, ಎರಡರ ಮುಖ್ಯ ಉದ್ದೇಶವು ಬದುಕಿಗೆ ಒಳ್ಳೆಯದಾಗಲಿ ಎಂಬುದೇ ಆಗಿದೆ. (ಎಸ್.ಎನ್.ಜಿ.)

ಜನಪದ ಧರ್ಮದಲ್ಲಿ ಇವೆಲ್ಲಕ್ಕಿಂತ ಮುಖ್ಯವಾದುದೆಂದರೆ ಜನಪದರು ತಮ್ಮ ಕರ್ತವ್ಯದಲ್ಲಿ ಇಟ್ಟಿರುವ ಶ್ರದ್ಧೆ ಹಾಗೂ ನಂಬಿಕೆ.

ಮರ್ತ್ಯಕ್ಕ ಬಂದೀದಿ ಕರ್ತವ್ಯ ಮಾಡಾಕ
ವ್ಯರ್ಥ ನೀನಾಗಬ್ಯಾಡ ನನ ಕಂದಮ್ಮ
ಶರ್ತ ಗೆದಿಯವ್ವ ಬಂದುದಕ

ಎಂಬ ಮಾತಿನಲ್ಲಿ ಈ ಬದುಕು ಒಂದು ಪಂಥಾಹ್ವಾನ. ಆದ್ದರಿಂದ ಇದು ಎಷ್ಟರ ಮಟ್ಟಿಗೆ ಕರ್ತವ್ಯಶೀಲವಾಗಿರಬೇಕು, ಪ್ರಾಮಾಣಿಕವಾಗಿರಬೇಕು ಮತ್ತು ಹೇಗೆ ಎಲ್ಲ ಕಷ್ಟಗಳನ್ನೂ ಎದುರಿಸಿ ನಿಂತು ಬದುಕಬೇಕು ಎಂಬುದರ ವಿವೇಚನೆಯಿದೆ. ಮರ್ತ ಕುಂತೀ ಯಾಕ ಮುರ್ತ ಹೋಯ್ತಿತೀ ತುರ್ತ ಮಾಡಣ್ಣ ನಿನ ಕೆಲಸ ಮುಂದಿನೇಚನಿ ಯಾಕ ಹಿಂದಾದ ಮರಿಬೇಕ ಇಂದೀನ ಗ್ಯಾನ ಇರಬೇಕ - ಎನ್ನುವಲ್ಲಿ ಈಗಿನ ಕೆಲಸ ಮುಖ್ಯ, ಮುಂದಾಗುವುದರ ಬಗ್ಗೆ ಸುಮ್ಮನೆ ಯೋಚಿಸುವುದರಿಂದ ಯಾವ ಪ್ರಯೋಜನವೂ ಇಲ್ಲ, ಕೆಲಸಮಾಡಿ ಬದುಕು ಸಾಗಿಸು ಎನ್ನುವ ಹಿತನುಡಿಯಿದೆ. ಜನಪದರು, ಬದುಕುವುದೊಂದೇ ಮುಖ್ಯವಲ್ಲ ನಡೆನುಡಿಯೂ ಶುದ್ಧವಾಗಿರಬೇಕು ಎಂದು ನಂಬಿದವರು. ಜೀವನ ಪರಿಶುದ್ಧವಾಗಿರಬೇಕು ಆಗ ಬದುಕಿದ್ದು ಸಾರ್ಥಕವೆಂದು ತಿಳಿದವರು. ಸುಳ್ಳು, ಕಳ್ಳತನ, ಹಾದರ, ಮೋಸ, ಕಾಠಿಣ್ಯ, ಅನ್ಯಾಯ, ಅತ್ಯಾಚಾರಕ್ಕೆ ಸುಖವಿಲ್ಲ. ಇವುಗಳಿಗೆ ಸುಡುಗಾಡೇ ಗತಿ ಎಂಬ ನಂಬಿಕೆ ಉಳ್ಳವರು. ಸತ್ಯ, ಸದಾಚಾರ, ನಿಷ್ಕಪಟತನ, ಕಾರುಣ್ಯ, ಪಾವಿತ್ರ್ಯ ಮೊದಲಾದ ಗುಣಗಳಿಗೆ ಜನಪದರು ಅದ್ಯತೆ ನೀಡಿದ್ದಾರೆ. (ಕೆ.ಐ.ಜಿ.)

**ಜನಪದ ನಂಬಿಕೆಗಳು** : ಜಾನಪದದ ಒಂದು ಪ್ರಕಾರ. ನಂಬಿಕೆ ಎಂದರೆ ಒಂದು ಹೇಳಿಕೆ ಅಥ‌ವಾ ವಸ್ತುಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ. ಜನಪದರ ಜೀವನದಲ್ಲಿ ಹಾಸುಹೋಕ್ಕಾಗಿರುವ ಈ ನಂಬಿಕೆಗಳು ಜನತೆಯ ಆಂತರಿಕ ಮನೋಭಾವ ಹಾಗೂ ಮೂಲಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪರಿಚಯಿಸುವ ಪ್ರಮುಖ ಸಾಧನಗಳಾಗಿವೆ. ಎಷ್ಟೋ ವೇಳೆ ಇವು ಜನಪದರ ಬಾಳನ್ನೇ ನಿರ್ದೇಶಿಸುತ್ತವೆ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರಪಂಚದಾದ್ಯಂತ ಕಂಡುಬರುವಂತೆ ನಂಬಿಕೆಗಳು ಕರ್ನಾಟಕದಲ್ಲೂ ಕಂಡುಬರುತ್ತವೆ. ಹೀಗೆ ಕಂಡುಬರುವ ನಂಬಿಕೆಗಳಲ್ಲಿ ಬಹಳಷ್ಟು ಮೂಢನಂಬಿಕೆಗಳೇ ಆದರೂ ಕೆಲವು ನಂಬಿಕೆಗಳಲ್ಲಿ ವೈಜ್ಞಾನಿಕ ಸತ್ಯ, ಸಾಮಾನ್ಯ ಜ್ಞಾನ, ಪೌರಾಣಿಕ, ಐತಿಹ್ಯಾಂಶ ಹಾಗೂ ಕಥಾಂಶಗಳೂ ಅಡಕವಾಗಿವೆ.

ಜನಪದ ನಂಬಿಕೆಗಳ ಉಗಮ ಮುಖ್ಯವಾಗಿ ಮೂರು ರೀತಿಗಳಲ್ಲಿ ಆಯಿತೆನ್ನಬಹುದು - ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೈಯಕ್ತಿಕ. ಧಾರ್ಮಿಕ ನಂಬಿಕೆಗಳು ಭಯದಿಂದ ಹುಟ್ಟಿದವು. ಮನಸ್ಸಿನ ಅಸ್ಥಿರತೆ ಮತ್ತು ಅತಿಮಾನುಷಭಯ ಈ ವರ್ಗದ ನಂಬಿಕೆಗಳ ಹುಟ್ಟಿಗೆ ಮುಖ್ಯ ಕಾರಣ. ಭೂತಾರಾಧನೆ, ಪಿತೃಪೂಜೆ, ದೇವತೆಗಳ ಆರಾಧನೆ, ಕುಲದೇವತಾಪದ್ಧತಿ ಇತ್ಯಾದಿಗಳಿಗೆ ಸಂಬಂಧಿಸಿದ ನಂಬಿಕೆಗಳು ಈ ಗುಂಪಿನಲ್ಲಿ ಸೇರುತ್ತವೆ. ಜನ ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಳ್ಳುವಾಗ ಅವರ ಚಟುವಟಿಕೆಗಳಿಗೆ ತಕ್ಕಂತೆ ಈ ಕೆಲವು ನಂಬಿಕೆಗಳು ರೂಪತಾಳಿದವು. ಇವು ಸಾಂಸ್ಕೃತಿಕ ನಂಬಿಕೆಗಳು. ಉದಾಹರಣೆಗೆ ವಿಧವೆ ಶುಭಕಾರ್ಯಗಳಲ್ಲಿ ಭಾಗವಹಿಸಬಾರದು ಎಂಬುದನ್ನು ಸಮಾಜ ಒಪ್ಪಿದ್ದರಿಂದ ಅದು ಆಚರಣೆಯಲ್ಲಿದ್ದು ನಮ್ಮ ಸಂಸ್ಕೃತಿಯಲ್ಲಿ ಸೇರಿದ ಒಂದು ನಂಬಿಕೆಯಾಗಿ ಉಳಿದುಬಂತು.

ವೈಯಕ್ತಿಕ ನಂಬಿಕೆಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ನಂಬಿಕೆಗಳ ಸಂಸ್ಕಾರದಿಂದ ಒಬ್ಬ ವ್ಯಕ್ತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಸಾರ್ವತ್ರಿಕವಾದರೂ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಬಹುದು. ಒಬ್ಬನಿಗೆ ಮಂಗಳವಾರ ಅಶುಭವಾದರೆ ಮತ್ತೊಬ್ಬನಿಗೆ ಅದು ಶುಭವಾಗಬಹುದು. ಒಬ್ಬನಿಗೆ ಒಂದು ಅಂಕಿ ಅದೃಷ್ಟಸಂಖ್ಯೆಯಾದರೆ ಮತ್ತೊಬ್ಬನಿಗೆ ದುರದೃಷ್ಟದ ಸಂಕೇತವಾಗಬಹುದು. ಈ ಬಗೆಯ ನಂಬಿಕೆಗಳಲ್ಲಿ ಬಾಳಿನ ಅನುಭವ ಹಾಗೂ ಮಾನಸಿಕ ಅನುಭವಗಳ ಮಿಳಿತವನ್ನು ಕಾಣಬಹುದು. ಯಾವ ಗಳಿಗೆಯಲ್ಲಿ ಅವಳು ನನ್ನ ಮನೆಗೆ ಹೆಜ್ಜೆ ಇಟ್ಟು ಬಂದಳೋ ನನ್ನ ಮನೆ ಬಂಗಾರವಾಯಿತು - ಎಂದು ಸೊಸೆ ಮನೆಗೆ ಬಂದ ಅನಂತರ ಮನೆಯ ಉತ್ತಮ ಪರಿಸ್ಥಿತಿಯನ್ನು ಕಂಡು ಅವಳ ಅತ್ತೆ ಅಥವಾ ಮಾವ ಹೇಳಿಕೊಳ್ಳಬಹುದು. ಹಾಗೆಯೇ ಸೊಸೆ ಕಾಲಿಟ್ಟಂದಿನಿಂದ ಅವಳು ಬಂದ ಕಾಲುಗುಣ ಚೆನ್ನಾಗಿಲ್ಲವೆಂದೂ ನನ್ನ ಮನೆ ಗುಡಿಸಿ ಗುಂಡಾಂತರವಾಯಿತೆಂದೂ ಹೇಳಬಹುದು. ವೈಯಕ್ತಿಕ ನಂಬಿಕೆಗಳು ಕೆಲವೊಮ್ಮೆ ವ್ಯಕ್ತಿಯ ಶ್ರೇಯಸ್ಸಿಗೆ ಮಾರಕವಾಗುವುದುಂಟು. ಮಹತ್ ಕಾರ್ಯಕ್ಕೆಂದು ಹೊರಟವನು ಅಪಶಕುನವಾಯಿತೆಂದು ಹಿಂತಿರುಗುವುದರಿಂದ ನಷ್ಟವನ್ನು ಅನುಭವಿಸಬಹುದು. ದೇವರೇ ತನ್ನ ರೋಗವನ್ನು ವಾಸಿಮಾಡುತ್ತಾನೆಂದು ನಂಬಿ ವೈದ್ಯನನ್ನು ಕಾಣದೆ ವಾಸಿಮಾಡಿಕೊಳ್ಳದೆ, ವಾಸಿಮಾಡಿಕೊಳ್ಳಲು ಪ್ರಯತ್ನಿಸದೆ ಪ್ರಾಣವನ್ನೇ ಕಳೆದುಕೊಳ್ಳಬಹುದು.

ನಂಬಿಕೆಗಳು ತಪ್ಪುಗ್ರಹಿಕೆಯಿಂದಲೂ ಹುಟ್ಟಬಹುದು. ವಿಚಾರಶಕ್ತಿ ಕಡಿಮೆ ಇರುವವರು ಮನೋದೌರ್ಬಲ್ಯವುಳ್ಳವರು ಸಮಾಜದಲ್ಲಿ ಪ್ರಭಾವಿತಶಕ್ತಿಗಳಾಗಿದ್ದರೆ ಅಂಥವರು ನಂಬಿಕೆಗಳ ಹುಟ್ಟಿಗೆ ಕಾರಣರಾಗುತ್ತಾರೆ.

ನಂಬಿಕೆಗಳಲ್ಲಿ ಸಾರ್ವತ್ರಿಕತೆ ಮತ್ತು ಪ್ರಾದೇಶಿಕತೆ ಕಂಡುಬರುತ್ತವೆ. ಇವುಗಳ ಮೂಲ ಆಶಯ ಸಾಮಾನ್ಯವಾಗಿ ಒಂದೇ. ಕೆಲವೊಮ್ಮೆ ರೂಪ ಮಾತ್ರ ಬೇರೆಯಾಗಿರುತ್ತವೆ. ಕೆರೆಗೆ ಬಲಿಕೊಟ್ಟರೆ ಏರಿ ಭದ್ರವಾಗಿ ನಿಲ್ಲುತ್ತದೆ, ನರಬಲಿ ಕೊಟ್ಟರೆ ಐಶ್ವರ್ಯ ಮತ್ತು ದೇವರ ದಯೆ ಗಳಿಸಬಹುದು, ಮನೆ ಭದ್ರವಾಗಿ ನಿಲ್ಲಬೇಕಾದರೆ ತಳಹದಿಗೆ ಮಕ್ಕಳ ಬಲಿಕೊಡಬೇಕು ಮುಂತಾದ ನಂಬಿಕೆಗಳು ಪ್ರಪಂಚದ ಎಲ್ಲೆಡೆ ಇರುವಂತೆ ಕರ್ನಾಟಕದಲ್ಲೂ ಇದ್ದವೆಂಬುದಕ್ಕೆ ಜನಪದ ಸಾಹಿತ್ಯದಲ್ಲಿ ಅನೇಕ ಪುರಾವೆಗಳು ದೊರೆಯುತ್ತವೆ. (ಜಿ.ವಿ.ಡಿ.)

ಕರ್ನಾಟಕದಲ್ಲಿನ ನಂಬಿಕೆಗಳನ್ನು ಅಧ್ಯಯನ ದೃಷ್ಟಿಯಿಂದ ಸ್ಥೂಲವಾಗಿ ವೈಜ್ಞಾನಿಕ, ಅವೈಜ್ಞಾನಿಕ ಎಂದು ವಿಭಜಿಸಬಹುದು. ಈ ರೀತಿಯ ವಿಭಜನೆಯಡಿಯಲ್ಲಿ ಎಲ್ಲ ತರಹದ ನಂಬಿಕೆಗಳನ್ನೂ ಸೇರಿಸಲು ಸಾಧ್ಯವಾಗುವುದಿಲ್ಲ. ಎಲ್ಲ ನಂಬಿಕೆಗಳಲ್ಲೂ ವೈಜ್ಞಾನಿಕ ಅಂಶ ದೊರೆಯುವುದಿಲ್ಲ. ವೈಜ್ಞಾನಿಕವಲ್ಲದ ಕೆಲವು ನಂಬಿಕೆಗಳಲ್ಲಿ ನಂಬಿಕೆ ಇಡುವುದರಿಂದ ಮಾನಸಿಕ ತೃಪ್ತಿಯಾದರೂ ದೊರೆಯಬಹುದು. ಉದಾಹರಣೆಗೆ ಪಿತೃಪಕ್ಷವನ್ನು ಆಚರಿಸುವುದರಿಂದ ಸತ್ತವರ ಆತ್ಮಕ್ಕೆ ಶಾಂತಿ ದೊರೆಯುತ್ತದೆ; ಅವರು ಪದೇ ಪದೇ ಬಂದು ಪೀಡಿಸುವುದಿಲ್ಲ ಎಂದು ನಂಬುವುದರಲ್ಲಿ ವೈಜ್ಞಾನಿಕ ಸತ್ಯವಿಲ್ಲದಿದ್ದರೂ ಅಂಥ ಆಚರಣೆಗಳಿಂದ ಆಚರಿಸುವವನಿಗೆ ಮಾನಸಿಕ ಸಂತೃಪ್ತಿ ದೊರೆಯಬಹುದು.

ವೈಜ್ಞಾನಿಕ ಸತ್ಯವನ್ನೊಳಗೊಂಡ ನಂಬಿಕೆಗಳು ಬಹಳಷ್ಟಿವೆ. ಊಟಕ್ಕೆ ಕುಳಿತಾಗ ತಟ್ಟೆ ಅಥವಾ ಎಲೆಯ ಸುತ್ತಲೂ ನೀರನ್ನು ಚುಮುಕಿಸಬೇಕು ಎಂಬ ನಂಬಿಕೆಯಿಂದ ಸಣ್ಣ ಕ್ರಿಮಿಕೀಟಗಳು ತಟ್ಟೆಯ ಒಳಗೆ ಹರಿದು ಬರುವುದನ್ನು ತಡೆಗಟ್ಟಬಹುದು. ಉಗುರು ನೀರನ್ನು ಹಾರಿಸಬಾರದು. ಹಾರಿಸಿದರೆ ಉಗುರುಸುತ್ತಾಗುತ್ತದೆ ಎಂಬಲ್ಲಿ ಇರುವ ಸತ್ಯವಿಷ್ಟು; ಉಗುರು ಸಂದುಗಳಲ್ಲಿ ಕೊಳೆ ಸೇರಿದರೆ ವಿಷವಸ್ತು ಉಂಟಾಗುತ್ತದೆ. ಇದನ್ನು ಬೇರೆಯವರಿಗೆ ಹಾರಿಸುವುದರಿಂದ ಅವರಿಗೆ ಹಾನಿಯಾಗಬಹುದು. ಅಂತೆಯೇ ಬೇರೆಯವರ ಚಪ್ಪಲಿಗಳನ್ನು ಮೆಟ್ಟಬಾರದು, ಬೇರೆಯವರು ಬಟ್ಟೆಯನ್ನು ಬಳಸಬಾರದು ಎಂಬಲ್ಲಿ ಚರ್ಮರೋಗವನ್ನು ತಡೆಗಟ್ಟಬಹುದು ಎಂಬ ಸತ್ಯವನ್ನು ಕಾಣಬಹುದು.

ಕೆಲವು ನಂಬಿಕೆಗಳಲ್ಲಿ ವೈದ್ಯಕೀಯ ಸಂಗತಿಗಳು ಅಡಕವಾಗಿವೆ. ಅಜೀರ್ಣದಿಂದ ಹೊಟ್ಟೆ ಉಬ್ಬರಿಸಿಕೊಂಡರೆ, ನೋವು ಕಾಣಿಸಿಕೊಂಡರೆ ಬೆಂಬೂದಿ (ಬೆಚ್ಚನೆಯ ಬೂದಿ) ತಿಕ್ಕಿದರೆ ಸರಿಯಾಗುತ್ತದೆ ಎಂಬಲ್ಲಿ ಆ ರೀತಿ ಮಾಡುವುದರಿಂದ ಪಚನಕ್ರಿಯೆ ಚೇತನಗೊಂಡು ನೋವು ಕಡಮೆಯಾಗಬಹುದು. ತಲೆನೋವು ಬಂದರೆ ಚಿಟಿಕೆ (ಗಾಜಿನ ಬಳೆಚೂರಿನಿಂದ ಗಂಡಸ್ಥಲಕ್ಕೆ ಚುರುಕ್ ಎನ್ನುವಂತೆ ಸುಡುವುದು) ಹಾಕಿದರೆ ವಾಸಿಯಾಗುತ್ತದೆ ಎಂಬ ನಂಬಿಕೆ ಚೀನದಲ್ಲಿರುವ ಆಕ್ಯೂಪಂಕ್ಚರ್ ವೈದ್ಯಪದ್ಧತಿಯನ್ನೂ ನೆನಪಿಗೆ ತರುತ್ತದೆ. ನಿಗದಿಯಾದ ಜಾಗದಲ್ಲಿ ಚಿಟಿಕೆ ಹಾಕುವುದರಿಂದ ನರದ ಮೇಲೆ ಒಂದೆಡೆಯೇ ಸಂಗ್ರಹವಾಗಿದ್ದ ವಿಷವಸ್ತುಗಳು ಕ್ರಿಯೆಯ ವರ್ಧನೆಯಿಂದ ಬೇರೆಡೆಗೆ ಸಾಗಿಸಲ್ಪಟ್ಟು ನೋವು ಕಡಿಮೆಯಾಗಬಹುದು.

ಪ್ರಕೃತಿಯೊಡನೆ ಹೊಂದಿರುವ ಸತತ ಸಂಪರ್ಕದಿಂದಾಗಿ ರೈತ ಅದರಲ್ಲಾಗುವ ಬದಲಾವಣೆಗಳನ್ನು ಗಮನಿಸಿ ಕೆಲವು ನಂಬಿಕೆಗಳನ್ನು ಸೃಷ್ಟಿಸಿದ. ಇವು ಕೆಲವೊಮ್ಮೆ ಸತ್ಯವಾಗುವುದುಂಟು. ಕೋಟೆ ಮುಗಿಲೆದ್ದರೆ ಮಳೆಯಾಗುತ್ತದೆ. ಸೂರ್ಯ ಗುಡಿಕಟ್ಟಿದರೆ, (ಪ್ರಭಾವಳಿ ಸುತ್ತುಗಟ್ಟಿದರೆ) ಸೂರೆಲ್ಲ ಮಳೆಯಾಗುತ್ತದೆ. ಕೊಡತಿ ಹುಳು ಕಾಣಿಸಿಕೊಂಡರೆ ಮಳೆಯಾಗುತ್ತದೆ. ತಿಂಗಳು (ಚಂದ್ರ) ಗುಡಿಕಟ್ಟಿದರೆ ತಿಂಗಳು ಮಳೆಯಿಲ್ಲ. ಎತ್ತುಮಾರು ಮಿಂಚಿದರೆ (ಕುರ್ತೇಟು) ಖಂಡಿತ ಮಳೆ ಇತ್ಯಾದಿ ನಂಬಿಕೆಗಳಿಗೂ ವಾತಾವರಣದಲ್ಲಾಗುವ ಬದಲಾವಣೆಗಳಿಗೂ ಏನೋ ಸಂಬಂಧವಿರಬೇಕು. ಅವುಗಳ ಆಂತರಿಕ ಸತ್ಯಾಸತ್ಯಗಳ ವಿವೇಚನೆ ರೈತರಿಗೆ ಇಲ್ಲವಾದರೂ ಅವು ಪರಂಪರಾನುಗತವಾಗಿ ಅನುಭವದಿಂದ ಬಂದವುಗಳಾದ್ದರಿಂದ ಅಂಥ ನಂಬಿಕೆಗಳು ಉಳಿದುಬಂದಿವೆ.

ನಂಬಿಕೆಗಳ ಮತ್ತೊಂದು ರೀತಿಯ ವಿಭಜನಕ್ರಮವೆಂದರೆ ಅವುಗಳನ್ನು ಮಾನುಷ, ಅತಿಮಾನುಷ, ಪ್ರಾಣಿ, ಪ್ರಕೃತಿ, ಕೌಟುಂಬಿಕ ಹಾಗೂ ಸಂಕೀರ್ಣ ಸಂಬಂಧದವು ಎಂದು ವಿಭಜಿಸುವುದು. ಈ ಪ್ರಕಾರಗಳ ನಡುವಿನ ಎಲ್ಲೆಯನ್ನು ಗುರುತಿಸುವಾಗ ಅಸ್ಪಷ್ಟತೆ ಕಾಣಬಂದರೂ ಎಲ್ಲ ರೀತಿಯ ನಂಬಿಕೆಗಳನ್ನೂ ವಿಷಯಪ್ರಧಾನತೆಯ ಆಧಾರದ ಮೇಲೆ ಸಮರ್ಪಕವಾಗಿ ವಿಂಗಡಿಸಬಹುದೆಂದು ತೋರುತ್ತದೆ.

ದೆವ್ವ, ಪೀಡೆ, ದೇವರುಗಳ ಬಗ್ಗೆ ಇರುವ ನಂಬಿಕೆಗಳು ಅತಿಮಾನುಷ ಗುಂಪಿನಲ್ಲಿ ಸೇರುತ್ತವೆ. ಪೂರ್ಣಿಮೆ ಅಮಾವಾಸ್ಯೆಗಳಲ್ಲಿ ದೆವ್ವಗಳ ಸಂಚಾರ ಹೆಚ್ಚು, ಜುಟ್ಟಿಲ್ಲದ ತೆಂಗಿನ ಕಾಯನ್ನು ದೇವರಿಗೆ ಒಡೆಯಬಾರದು, ಹುಣಿಸೆ ಮರದಲ್ಲಿ ದೆವ್ವಗಳಿರುತ್ತವೆ ಇತ್ಯಾದಿ ನಂಬಿಕೆಗಳು ಸಾಮಾನ್ಯವಾಗಿ ಅತಿಮಾನುಷ ಭಯದಿಂದ ಹುಟ್ಟಿದ ಮನಸ್ಸಿನ ಅಸ್ಥಿರ ಭಾವನೆಗಳು ಮನಸ್ಸಿನ ಅಂಗೀಕಾರಮುದ್ರೆ ಧರಿಸಿ ಸಮಾಜದಲ್ಲಿ ಬಳಕೆಯಲ್ಲಿವೆ.

ಹಬ್ಬ-ಹರಿದಿನಗಳು, ಹುಟ್ಟು-ಸಾವು, ಕಾಲ, ಕನಸು ನಿದ್ರೆ, ವಾರಗಳು, ಒಡಹುಟ್ಟಿದವರು, ವಿವಾಹ, ಪುರುಷ ಹಾಗೂ ಸ್ತ್ರೀ ದೇಹಗಳಿಗೆ ಸಂಬಂಧಿಸಿದ ವಿಷಯಗಳನ್ನೊಳಗೊಂಡ ನಂಬಿಕೆಗಳನ್ನು ಮಾನುಷ ಗುಂಪಿನಲ್ಲಿ ಸೇರಿಸಬಹುದು. ಈ ಗುಂಪಿನಲ್ಲಿ ವೈಯಕ್ತಿಕ ಹಾಗೂ ಸಾಂಪ್ರದಾಯಿಕ ನಂಬಿಕೆಗಳು ಸೇರುತ್ತವೆ. ವರ್ಷಕ್ಕೊಮ್ಮೆ ಬರುವ ಹಬ್ಬದದಿನ ಮಕ್ಕಳನ್ನು ಹೊಡೆಯಬಾರದು, ತೊಲೆ ಕೆಳಗೆ ಮಲಗಿದರೆ ಕನಸುಗಳು ಜಾಸ್ತಿ, ಸಂಜೆಯಾದ ಮೇಲೆ ಅಂಗಡಿಯಿಂದ ಅಥವಾ ಮನೆಯಿಂದ ಹೊರಗಡೆಗೆ ಸೀಗೆಕಾಯಿಪುಡಿ ಅರಿಸಿನ ಮಜ್ಜಿಗೆ ಉಪ್ಪು ಕೊಡಬಾರದು, ಹೊತ್ತು ಮುಳುಗಿದ ಮೇಲೆ ಅಕ್ಕಿ ತಿನ್ನಬಾರದು ಇತ್ಯಾದಿಗಳು ಈ ವಿಭಾಗಕ್ಕೆ ಸೇರುತ್ತವೆ. ವಾರಗಳ ಶುಭಾಶುಭಗಳನ್ನು ಕುರಿತ ನಂಬಿಕೆಗಳೂ ಇವೆ. ಸಾಮಾನ್ಯವಾಗಿ ಮಂಗಳವಾರ ಅಶುಭ, ಶನಿವಾರ ಹೊಸ ಬಟ್ಟೆ ಹಾಕಬಾರದು, ಶುಕ್ರವಾರ ಸೊಸೆ ಕಳುಹಿಸಬಾರದು, ಮಂಗಳವಾರ ಮಗಳನ್ನು ಕಳುಹಿಸಬಾರದು, ಹುಟ್ಟಿದ ವಾರದಲ್ಲಿ ತಲೆಕೂದಲು ಚೌರಮಾಡಿಸಬಾರದು ಇತ್ಯಾದಿ. ಮಾನವನ ಅಂಗಾಂಗಗಳಲ್ಲಿನ ಕುರುಹು ಅಥವಾ ಕೆಲವು ನ್ಯೂನತೆಗಳನ್ನು ಕುರಿತು ಅವು ಅವನ ಅದೃಷ್ಟ - ದುರದೃಷ್ಟಗಳನ್ನು ತಿಳಿಸುತ್ತವೆ ಎಂಬ ನಂಬಿಕೆಗಳೂ ಸಾಕಷ್ಟು ಕಂಡುಬರುತ್ತವೆ. ಆರು ಬೆರಳಿದ್ದವರು, ಮಾಲುಗಣ್ಣಿನವರು ಅದೃಷ್ಟವಂತರಂತೆ. ಮೂಗು ಉದ್ದವಿದ್ದರೆ ಪುಣ್ಯವಂತ, ಕಣ್ಣು ಸಣ್ಣವಾಗಿದ್ದರೆ ಬುದ್ಧಿವಂತ, ತಲೆ ದಪ್ಪವಾಗಿದ್ದರೆ ಬುದ್ಧಿವಂತ, ಹಸ್ತದಲ್ಲಿ ಗರುಡಮಚ್ಚೇ ಇದ್ದವರನ್ನು ಹಾವು ಕಚ್ಚುವುದಿಲ್ಲ, ಎದೆಯ ಬಲಭಾಗದಲ್ಲಿ ಮಚ್ಚೆ ಇದ್ದ ಪುರುಷ

ಅದೃಷ್ಟವಂತ, ಎಡಭಾಗದಲ್ಲಿದ್ದರೆ ಸ್ತ್ರೀ ಅದೃಷ್ಟವಂತೆ ಇತ್ಯಾದಿ. ದೇಹದಲ್ಲಿ ಆಗುವ ಆಕಸ್ಮಿಕ ಚಲನೆಯನ್ನು ಕುರಿತ ನಂಬಿಕೆಗಳಿವೆ. ಉದಾಹರಣೆಗೆ ಹಣೆ ಅದುರಿದರೆ ಶುಭ, ಬಲಭುಜ ಅದುರಿದರೆ ಸಂಭೋಗಸುಖ, ಎಡಭುಜ ಅದುರಿದರೆ ಕೇಡು, ಬೆನ್ನು ಅದುರಿದರೆ ಧನಲಾಭ, ಬಲಗಣ್ಣು ಅದುರಿದರೆ ಶುಭ, ಎಡಗಣ್ಣು ಅದುರಿದರೆ ಅಶುಭ ಇತ್ಯಾದಿ.

ವಿವಾಹಕ್ಕೆ ಸಂಬಂಧಿಸಿದ ನೂರಾರು ನಂಬಿಕೆಗಳು ಕರ್ನಾಟಕದಲ್ಲಿವೆ. ವಿವಾಹದ ದಿನ ಮಳೆ ಬಂದರೆ ಗಂಡು ಅಥವಾ ಹೆಣ್ಣು ಅಕ್ಕಿ ತಿಂದಿದ್ದಾರೆಂದು ಹೇಳುತ್ತಾರೆ. ಲಗ್ನ ಕಟ್ಟಿಸಿದ ದಿನದಿಂದ ಮದುವೆ ಮುಗಿಯುವವರೆಗೆ ಮನೆಯಲ್ಲಿ ಮಾಂಸ ಮಾಡಬಾರದು. ಮದುವೆಯಾದ ವರ್ಷ ಮನೆ ಕಟ್ಟಬಾರದು. ಮದುವೆಯಾದ ವರ್ಷವೇ ಮೂರು ತಲೆ ಕಾಣಬಾರದು. ಕಂಡರೆ ಅವ್ವನಿಗೋ ಅಪ್ಪನಿಗೋ ಕೇಡು ಇತ್ಯಾದಿ. ಪ್ರಾಣಿಸಂಬಂಧ ನಂಬಿಕೆಗಳಲ್ಲಿ ಪ್ರಾಣಿಗಳ ಚತುರತೆ, ಅವುಗಳಿಂದ ಬರುವ ಅನಿಷ್ಟ, ಅವುಗಳ ಬಗ್ಗೆ ಮಾನವನಿಗಿರುವ ಅನುಕಂಪ ಮೊದಲಾದವನ್ನು ಕಾಣಬಹುದು. ಇರುವೆಗೂಡಿಗೆ ಅಕ್ಕಿ ಬೆಲ್ಲ ಹಾಕಿದರೆ ಪುಣ್ಯಬರುತ್ತದೆ, ಕೋತಿ ಸಾಯಿಸಿದರೆ ಕಾಶಿಗೆ ಹೋದರೂ ಪಾಪ ಕಳೆಯುವುದಿಲ್ಲ - ಈ ಮೊದಲಾದ ನಂಬಿಕೆಗಳು ಪ್ರಾಣಿಗಳ ಮೇಲಿನ ಮಮತೆ, ಅನುಕಂಪೆಯನ್ನು ತೋರುತ್ತವೆ. ನಡುರಾತ್ರಿಯಲ್ಲಿ ನಾಯಿಗಳು ಒಟ್ಟಿಗೆ ಊಳಿಡಲಾರಂಭಿಸಿದರೆ ಯಾರಾದರೂ ಸಾಯುತ್ತಾರೆ ಎಂಬ ನಂಬಿಕೆ ಅನಿಷ್ಟವನ್ನು ಸೂಚಿಸುತ್ತದೆ. ಪ್ರಾಣಿ ನಂಬಿಕೆಗಳಲ್ಲಿ ಭವಿಷ್ಯವಾಚನಗಳು ಬಹಳಷ್ಟಿವೆ. ಇದರಲ್ಲಿ ಶಕುನಗಳು ಸಾಮಾನ್ಯವಾಗಿ ಪ್ರಯಾಣಕ್ಕೆ ಸಂಬಂಧಿಸಿದವುಗಳು. ಪ್ರಯಾಣದಲ್ಲಿ ಹಾವು ಎಡದಿಂದ ಬಲಕ್ಕೆ ಬಂದರೆ ಒಳ್ಳೆಯದು, ಹಲ್ಲಿ ಬಲದಿಂದ ತಲೆಯ ಮೇಲೆ ನುಡಿದರೆ ಶುಭ, ನರಿ ಆಗ್ನೇಯ ದಿಕ್ಕಿನಲ್ಲಿ ಕೂಗಿದರೆ ಅಶುಭ, ಗೂಬೆ ಊರೊಳಗೆ ಬಂದು ಕೂಗಿದರೆ ಯಾರಾದರೂ ಸಾಯುತ್ತಾರೆ, ಬೆಕ್ಕು ಅಡ್ಡಲಾಗಿ ಎಡದಿಂದ ಬಲಕ್ಕೆ ಹೋದರೆ ಶುಭ ಹೀಗೆಂದು ಹೇಳುವುದುಂಟು. ಮನೆಯ ಮೇಲೆ ಕಾಗೆಗಳು ಕುಳಿತು ಕೂಗಿದರೆ ಆ ದಿನ ನೆಂಟರು ಬರುತ್ತಾರೆ ಎಂಬ ನಂಬಿಕೆ ಕೆಲವು ಕಡೆ ಇದೆ.

ಪ್ರಕೃತಿಯನ್ನು ಕುರಿತ ನಂಬಿಕೆಗಳಲ್ಲಿ ಗಿಡ, ಮರ, ಫಲ, ಹೂವುಗಳಿಗೆ ಸಂಬಂಧಿಸಿದ ವಿಷಯಗಳು ಬರುತ್ತವೆ. ಫಲಬಿಡುವ ಮರವನ್ನು ಕಡಿಯಬಾರದು, ಅರಳಿಮರ ಕಡಿಯಬಾರದು ಇತ್ಯಾದಿ. ಇಂಥ ನಂಬಿಕೆಗಳಿಗೆ ಬಹುಶಃ ಅರಳಿಮರ ದೊಡ್ಡದಾಗಿದ್ದು ದಾರಿಹೋಕರಿಗೆ ನೆರಳನ್ನು ನೀಡುತ್ತದೆ. ಫಲಬಿಡುವ ಮರ ಮನುಷ್ಯನಿಗೆ ಉತ್ಕೃಷ್ಟ ಹಣ್ಣುಗಳನ್ನು ಕೊಡುತ್ತದೆ ಎಂಬುದು ಕಾರಣವಿರಬೇಕು.

ಕೌಟುಂಬಿಕ ನಂಬಿಕೆಗಳು ಅಡುಗೆ, ಊಟ ಮತ್ತು ಕುಟುಂಬದ ವಿಷಯಗಳಿಗೆ ಸಂಬಂಧಿಸಿದವುಗಳು. ಊಟದ ತಟ್ಟೆಯನ್ನು ಕಾಲಿನಿಂದ ಒದೆಯಬಾರದು. ಎಂಜಲು ತಟ್ಟೆಯನ್ನು ದಾಟಬಾರದು; ದಾಟಿದರೆ ಊಟಮಾಡಿದವರಿಗೆ ಹೊಟ್ಟೆ ನೋವು ಬರುತ್ತದೆ. ತುತ್ತು ತೂಕ ಮಾಡಬಾರದು ಇತ್ಯಾದಿಗಳಲ್ಲದೆ ಕುಟುಂಬದಲ್ಲಿ ಅನುಸರಿಸಬೇಕಾದ ನಿಯಮಗಳ ಬಗ್ಗೆ, ಅದರ ಐಕ್ಯತೆಗೆ ಹಿರಿಕಿರಿಯರು ಅನುಸರಿಸಬೇಕಾದ ನಡತೆಯ ಬಗ್ಗೆ, ಬಳಕೆಯ ವಸ್ತುಗಳ ಬಗ್ಗೆ ಇರುವ ನಂಬಿಕೆಗಳು ಈ ವಿಭಜನೆಯಡಿಯಲ್ಲಿಯೇ ಸೇರುತ್ತವೆ.

ಕೆಲವು ನಂಬಿಕೆಗಳು ಒಳ್ಳೆಯ ಐತಿಹ್ಯಗಳಾಗುತ್ತವೆ. ಇದಕ್ಕೆ ತುರುವೇಕೆರೆ ಸಮೀಪದಲ್ಲಿ ಮಲ್ಲಾಘಟ್ಟದ ಬಳಿ ಇರುವ ಅಣ್ಣ ತಮ್ಮಂದಿರ ಗುಡ್ಡಕ್ಕಿರುವ ಕಥೆಯನ್ನು ಉದಾಹರಣೆಯಾಗಿ ಹೇಳಬಹುದು. ಅಣ್ಣತಮ್ಮಂದಿರಲ್ಲಿ ಪರಸ್ಪರ ಆಸೆ ಹೆಚ್ಚಾದಾಗ ಅಣ್ಣನನ್ನು ಊಟಕ್ಕೆ ಕಳುಹಿಸಿ ತಮ್ಮ ಅವನ ರಾಶಿಯನ್ನು ದೋಚುತ್ತಾನೆ. ತಮ್ಮ ಮನೆಗೆ ಹೋದಾಗ ಅಣ್ಣ ತಮ್ಮನ ರಾಶಿಯಲ್ಲಿ ಕದಿಯುತ್ತಾನೆ. ಅವರ ಆಸೆಬುರುಕತನಕ್ಕೆ ಪ್ರಾಯಶ್ಚಿತ್ತವೆಂಬಂತೆ ಇಬ್ಬರ ರಾಶಿಗಳು ಬೆಳಕುಹರಿಯುವುದರೊಳಗೆ ಮಣ್ಣಿನ ಗುಡ್ಡೆಗಳಾಗಿರುತ್ತವೆ. ತುಂಬಿದ ರಾಶಿಯಲ್ಲಿ ಧಾನ್ಯ ಕದಿಯಬಾರದು ಎಂಬ ಈ ಒಂದು ನಂಬಿಕೆ ಈಗಲೂ ಸುತ್ತಮುತ್ತಲ ಜನರ ಮೇಲೆ ನೈತಿಕ ಪ್ರಭಾವವನ್ನು ಬೀರಿರುವುದುಂಟು. ಹೀಗೆ ಎಷ್ಟೋ ನಂಬಿಕೆಗಳಿಗೆ ಕಾರಣವಾದ ದಂತಕಥೆಗಳಿವೆ.

ಕೆಲವು ನಂಬಿಕೆಗಳಂತೂ ನೀತಿಪ್ರಧಾನವಾಗಿವೆ. ಉಂಡಮನೆಗೆ ಎರಡು ಬಗೆಯಬಾರದು, ತುಂಬಿದ ಕೆರೆಗೆ ಕಲ್ಲು ಹೊಡೆಯಬಾರದು (ಅಂದರೆ ನೆಮ್ಮದಿಯಿಂದಿರುವವರ ಜೀವನದ ಮಧ್ಯೆ ಪ್ರವೇಶಿಸಿ ಅಶಾಂತಿಯನ್ನು ತರುವ ಯತ್ನ ಬೇಡ ಇತ್ಯಾದಿ, ಹಸಿದವನಿಗೆ ಅನ್ನ ಹಾಕಿದರೆ ಪುಣ್ಯ ಬರುತ್ತದೆ ಎಂಬ ನಂಬಿಕೆ ಮಾನವೀಯತೆಯನ್ನು ಪ್ರತಿನಿಧಿಸುತ್ತದೆ.

ನಂಬಿಕೆಗಳಿಂದ ಮಾನವನಿಗೆ ಉಪಕಾರವಾಗುವ ಸಂದರ್ಭಗಳಿದ್ದಾಗ್ಯೂ ಮುಗ್ಧಜನತೆಗೆ ಬಹಳಷ್ಟು ಸಲ ಈ ಬಗೆಯ ಕೆಲವು ಮೂಢನಂಬಿಕೆಗಳಿಂದ ತಮ್ಮ ಸರ್ವಸ್ವವನ್ನೂ ನಾಶಮಾಡಿಕೊಳ್ಳುವ ಸಮಯ ಒದಗಿಬರುವುದುಂಟು. ಆದ್ದರಿಂದ ಮೊದಲಿಗೆ ಅವುಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಈ ಹಿಡಿತಕ್ಕೆ ಸಿಕ್ಕದೆ ಹೋದ ನಂಬಿಕೆಗಳಿಂದ ಎಚ್ಚರವಿರಬೇಕಾದ ಅಗತ್ಯವನ್ನೂ ಅಲಕ್ಷಿಸಕೂಡದು.

ಕನ್ನಡದಲ್ಲಿ ಜನಪದ ನಂಬಿಕೆಗಳ ಸಂಗ್ರಹ ಸಂಪಾದನೆ ಪ್ರಕಟಣೆಯ ಕಾರ್ಯ ತಕ್ಕಮಟ್ಟಿಗೆ ನಡೆದಿರುವುದರ ಜೊತೆಗೆ ಅವನ್ನು ವೈಜ್ಞಾನಿಕ ಒರೆಗಲ್ಲಿನಿಂದ ಪರೀಕ್ಷಿಸಿ ಪೃಥಃಕರಿಸುವ ಕಾರ್ಯವೂ ನಡೆದಿದೆ. ಇಂಥ ಪ್ರಯತ್ನಗಳಲ್ಲಿ ಮೊದಲನೆಯದು ರಾಗೌ ಮತ್ತು ಎಂ.ಸಿ. ವಸಂತಕುಮಾರ್ ಅವರು ಜೊತೆಯಾಗಿ ಪ್ರಕಟಿಸಿರುವ ಜನಪದ ನಂಬಿಕೆಗಳು ಎಂಬ ಸಂಕಲನ (1972). ಇದರಲ್ಲಿ ವಿಸ್ತಾರವಾದ ಬಹು ಉಪಯುಕ್ತವಾದ ಪ್ರಸ್ತಾವನೆಯಿದೆ. ಅನಂತರ ಜಿ.ವಿ.ದಾಸೇಗೌಡರ ನಮ್ಮ ಜನಪದ ನಂಬಿಕೆಗಳು ಎಂಬ ಹೊತ್ತಿಗೆ ಪ್ರಕಟವಾಯಿತು (1972). ಈ ಕೃತಿಯ ವಿಶೇಷವೆಂದರೆ ಉಪಯುಕ್ತ ಪ್ರಸ್ತಾವನೆಯ ಜೊತೆಗೆ ನಂಬಿಕೆಗಳು, ವಿಭಜನೆ, ವ್ಯಾಖ್ಯಾನ ಇತ್ಯಾದಿಗಳು ಇರುವುದು. ಮತ್ತೊಂದು ಉತ್ತಮ ಸಂಕಲನ ಡಿ.ಕೆ.ರಾಜೇಂದ್ರ ಅವರ ನಮ್ಮ ಸುತ್ತಿನ ನಂಬಿಕೆಗಳು (1973). ಈ ದಿಶೆಯಲ್ಲಿ ನಡೆಯಬೇಕಾಗಿರುವ ಅಪಾರ ಕೆಲಸಕ್ಕೆ ಈ ಮೂರೂ ಸಂಕಲನಗಳು ದಿಕ್ಸೂಚಿಯಾಗಿವೆ. *

**ಜನಪದ ನಿರುಕ್ತಿ :** ಊರು, ಕೇರಿ, ನದಿ, ಬೆಟ್ಟ, ಗುಡ್ಡ, ಕೆರೆ ಕಾಲುವೆ ಮುಂತಾದವುಗಳ ಹೆಸರುಗಳ ಬಗ್ಗೆ ಜನಸಾಮಾನ್ಯರು ಕೊಡುವ ವಿವರಗಳಿಗೆ ಜನಪದ ನಿರುಕ್ತಿ ಎಂಬ ಹೆಸರಿದೆ. ತಾವು ಕೊಡುವ ಪ್ರತಿಯೊಂದು ವಿವರಕ್ಕೂ ಪುರಾಣ, ಇತಿಹಾಸ, ಇಲ್ಲವೆ ಐತಿಹ್ಯದ ಆಧಾರವನ್ನು ಕಲ್ಪಿಸುವುದು ಇಲ್ಲಿನ ವಾಡಿಕೆ. ಪದಗಳಿಗೆ ನಿಜವಾದ ನಿಷ್ಪತ್ತಿ ತಿಳಿಯದಿದ್ದಾಗ, ಅವುಗಳ ನಿಷ್ಪತ್ತಿಯನ್ನು ತಪ್ಪು ಗ್ರಹಿಸುವುದು, ಇಲ್ಲವೆ ಸಂಬಂಧವಿರಬಹುದಾದ ಇತರ ಪದಗಳ ಜೊತೆ ತಪ್ಪು ಸಾದೃಶ್ಯ ಕಲ್ಪಿಸುವುದು ಇಲ್ಲಿ ಸಾಮಾನ್ಯ. ಎಷ್ಟೋ ವೇಳೆ ತಮ್ಮ ವಿವರಣೆಗೆ ತಕ್ಕಂತೆ ಜನ ಮೂಲಪದದ ರೂಪವನ್ನೇ ಬದಲಾಯಿಸಿರುವುದುಂಟು. ಪದಗಳ ಈ ಬಗೆಯ ರೂಪಾಂತರಕ್ಕೆ ಕೆಲವು ಕಾರಣಗಳಿವೆ. ಹಳೆಯ ಪದಗಳು ರೂಢಿ ತಪ್ಪಿದಾಗ ಅವುಗಳ ಅರ್ಥ ಬದಲಾವಣೆ ಹೊಂದಬಹುದು ಅಥವಾ ಪದಗಳು ತಾವಾಗಿಯೇ ಬದಲಾವಣೆಗೆ ಒಳಗಾಗಬಹುದು. ಜೊತೆಗೆ ಪರಕೀಯರ ಭಾಷೆ ಉಡುಪು ಸಂಪ್ರದಾಯ ನಡಾವಳಿಗಳ ಬಗ್ಗೆ ಸ್ವಾಭಾವಿಕವಾಗಿಯೇ ಒಂದು ರೀತಿಯ ಹೇವರಿಕೆಯಿರುವುದರಿಂದ ಪರಕೀಯ ಭಾಷೆಯನ್ನು ತಪ್ಪು ಉಚ್ಚರಿಸುವುದು ಅಥವಾ ಪದಗಳನ್ನು ಉದ್ದೇಶ ಪೂರ್ವಕವಾಗಿ ತಿರುಚುವುದು ಸಾಮಾನ್ಯವಾಗಿ ನಡೆಯುತ್ತದೆ. ಎಷ್ಟೋ ವೇಳೆ ತಪ್ಪು ನಿರುಕ್ತಿಗಳು ಸ್ಥಿರವಾಗಲು ಪ್ರಾಚೀನ ಪದಗಳನ್ನು ಕುರಿತಾದ ವಿದ್ವಾಂಸರ ತಪ್ಪು ವ್ಯಾಖ್ಯಾನಗಳೂ ಕಾರಣವಾಗುತ್ತವೆ. ಕೆಲವೊಂದು ತಪ್ಪು ಸಮೀಕರಣದಿಂದ ಪದಗಳ ರೂಪ ಹೀಗೆ ರೂಪಾಂತರಗೊಳ್ಳುವಾಗ ತಪ್ಪು ಸಂಬಂಧ ಮತ್ತು ಸಾದೃಶ್ಯದಿಂದಾಗಿ ಅವುಗಳ ಭಾವ ಕೂಡ ಭ್ರಷ್ಟಗೊಳ್ಳುವುದು ಸಹಜ. ಜನಪದ ನಿರುಕ್ತಿ ಅನೇಕ ಪದಗಳ ಸುತ್ತ ಅಸಂಖ್ಯಾತ ನಂಬಿಕೆಗಳು ಮತ್ತು ಪುರಾಣಗಳನ್ನು ಸೃಷ್ಟಿಸಿದೆ.

ಐತಿಹ್ಯಗಳಿಗೂ ಜನಪದ ನಿರುಕ್ತಿಗೂ ನಿಕಟ ಸಂಬಂಧವಿದೆ. ಐತಿಹ್ಯಗಳಲ್ಲಿ ಸ್ಥಳೀಯ ಐತಿಹ್ಯಗಳು ಜನಪದ ನಿರುಕ್ತಿಗಳಿಂದ ಹೆಚ್ಚು ಪ್ರಭಾವಿತವಾಗಿವೆ. ಇಂಥದಕ್ಕೆ ಪಿರಿಯಾಪಟ್ಟಣದ ಸಮೀಪದಲ್ಲಿರುವ ಮಾಕಲ್ಲಯ್ಯನ ಗುಡ್ಡ ಒಂದು ನಿದರ್ಶನ. ಇದರ ಹಿನ್ನೆಲೆಯಲ್ಲಿ ಸೊಗಸಾದ ಪುರಾಣ ಕತೆಯೊಂದಿದೆ. ಸೀತಾ ರಾಮಲಕ್ಷ್ಮಣರು ಅರಣ್ಯವಾಸದ ಕಾಲದಲ್ಲಿ

ದಶರಥನ ಹೆಸರಿನ ಲಿಂಗವೊಂದನ್ನು ಸ್ಥಾಪಿಸಿ ಪೂಜಿಸುತ್ತಿದ್ದರು. ಇದನ್ನು ಈಗ ದಶರಥೇಶ್ವರ ಎಂದು ಕರೆಯಲಾಗುತ್ತಿದೆ. ಇದು ಅವರಿಗೆ ಕಷ್ಟಕಾಲದಲ್ಲಿ ಮಾತನಾಡಿ ಎಚ್ಚರಿಕೆ ನೀಡುತ್ತ ಮಾರ್ಗದರ್ಶಿಯಾಗಿತ್ತು. ಹೀಗಿರುವಾಗ ಸಂನ್ಯಾಸಿ ರೂಪದಲ್ಲಿ ಬಂದ ರಾವಣ ಸೀತೆಗೆ ಭಿಕ್ಷೆ ನೀಡಲು ಕೇಳಿದ. ಲಿಂಗದ ಎಚ್ಚರಿಕೆಯನ್ನೂ ಗಮನಿಸದೆ ಸೀತೆ ಋಷಿಯೆಂದು ತಿಳಿದು ರಾವಣನಿಗೆ ಭಿಕ್ಷೆ ನೀಡಲು ಮುಂದಾದಳು. ಫಲವಾಗಿ ದಶರಥೇಶ್ವರ ಮಾತನಾಡದೆ ಕಲ್ಲಾದನಂತೆ. ರಾವಣನಿಂದ ಸೀತಾಪಹರಣವಾಗುವಾಗ ಸೀತೆ, ಮಾವ ಕಲ್ಲಾದೆಯಾ ಎಂದು ಕೂಗಿಕೊಂಡಳಂತೆ. ಈಗ ಮಾವ ಕಲ್ಲಾದೆಯಾ ರೂಪವೇ ಮಾಕಲ್ಲಯ್ಯ ಆಗಿ, ಆ ಪ್ರದೇಶ ಮಾಕಲ್ಲಯ್ಯನ ಗುಡ್ಡ ಎಂದೇ ಪ್ರಸಿದ್ಧವಾಯಿತೆಂದು ಹೇಳುತ್ತಾರೆ.

ಅನೇಕ ಸ್ಥಳ ಮತ್ತು ನದಿಗಳ ಹೆಸರುಗಳ ಮೂಲ ಕೂಡ ಜನಪದ ನಿರುಕ್ತಿಯಂತಿರುವುದು ಗಮನಾರ್ಹ. ಸ್ಥಳದ ಹೆಸರಿಗೆ ಬೆಂಗಳೂರು ಒಳ್ಳೆಯ ಉದಾಹರಣೆ. ಇದು ಬೆಂಗಾಳು ಎಂಬುದರಿಂದ ಬಂದಿದ್ದು, ಇದರ ಹಿಂದೆ ಮಾಗಡಿ ಕೆಂಪೇಗೌಡನಿಗೆ ಸಂಬಂಧಿಸಿದ ಐತಿಹ್ಯವೊಂದಿದೆ. ಈಗ ಬೆಂಗಳೂರು ಇರುವ ಪ್ರದೇಶದಲ್ಲಿ ಒಮ್ಮೆ ಸಂಚಾರ ಹೊರಟ ಕೆಂಪೇಗೌಡನಿಗೆ ತುಂಬ ಹಸಿವಾಯಿತಂತೆ. ಅದೇ ಸಮಯದಲ್ಲಿ ಅವನ ಮನೆದೇವತೆ ಕೆಂಪಮ್ಮ ಬೇಯಿಸಿದ ಕಾಳನ್ನು ಇರಿಸಿಕೊಂಡು ಕುಳಿತಿದ್ದಳು. ಹಸಿದು ಬಂದ ಕೆಂಪೇಗೌಡನಿಗೆ ಆಕೆ ಕಾಳು ಕೊಟ್ಟು, ಆ ಜಾಗದಲ್ಲಿ ಕೋಟೆ ಕಟ್ಟಿಸುವಂತೆ ಸೂಚಿಸಿ ಅದೃಶ್ಯವಾದಳು. ಅಲ್ಲಿ ಕಟ್ಟಿಸಿದ ಊರಿಗೆ ಕೆಂಪೇಗೌಡ ಬೆಂದ ಕಾಳಿನ ನೆನಪಿಗಾಗಿ ಬೆಂಗಾಳು ಎಂದು ಹೆಸರಿಟ್ಟನೆಂದು ಹೇಳಲಾಗಿದೆ. ಇದಕ್ಕೆ ಊರು ಪದ ಸೇರಿಕೊಂಡು ಬೆಂಗಾಳೂರು ಆಗಿ ಕ್ರಮೇಣ ಈಗ ಬೆಂಗಳೂರು ಆಗಿ ಈ ಪದ ಮಾರ್ಪಾಡಾಗಿದೆ ಎಂಬುದಾಗಿ ಜನಜನಿತ ಕಥೆಯೊಂದಿದೆ. ನದಿಯ ಹೆಸರಿಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ನೇತ್ರಾವತಿಯನ್ನು ನೋಡಬಹುದು. ಹಿರಣ್ಯಾಕ್ಷ ಭೂಮಿಯನ್ನು ಅಪಹರಿಸಿ ಪಾತಾಳ ಲೋಕಕ್ಕೆ ತೆಗೆದುಕೊಂಡು ಹೋದಾಗ ಆ ಭೂಮಿಯನ್ನು ಹಿಂದಕ್ಕೆ ತರಲು ವಿಷ್ಣು ವರಾಹಾವತಾರವೆತ್ತಿ ಹಿರಣ್ಯಾಕ್ಷನನ್ನು ಕೊಲ್ಲಬೇಕಾಯಿತು. ಭೂಮಿಯನ್ನು ಸ್ವಸ್ಥಾನದಲ್ಲಿರಿಸಿದ ಮೇಲೆ ವಿಷ್ಣು ವಿಶ್ರಾಂತಿಗಾಗಿ ಒಂದು ಬೆಟ್ಟದ ಮೇಲೆ ಕುಳಿತುಕೊಂಡಾಗ ವರಾಹದ ಎರಡು ಕೋರೆದಾಡೆಗಳೂ ಎರಡು ಬೆಟ್ಟಗಳಿಗೆ ತಾಕಿ ಎರಡು ನದಿಗಳು ಉದ್ಭವವಾದವು. ಅವೇ ತುಂಗಾ ಮತ್ತು ಭದ್ರಾ ನದಿಗಳು. ಕೋರೆ ತಾಕಿ ಸಿಡಿದ ಮಣ್ಣು ವರಾಹಮೂರ್ತಿಯ ಕಣ್ಣಿಗೆ ಬಿತ್ತು. ಕೂಡಲೇ ಕಣ್ಣಿನಿಂದ ನೀರು ಚಿಮ್ಮಿತು. ಹೀಗೆ ವಿಷ್ಣುವಿನ ನೇತ್ರದಿಂದ ಚಿಮ್ಮಿದ ನದಿಯೇ ನೇತ್ರಾವತಿ ಎಂದು ಹೆಸರಾಯಿತಂತೆ.

ಹೀಗೆಯೇ ಸಾಮ್ರಾಜ್ಯಗಳ ಹೆಸರುಗಳಾದ ಕದಂಬ, ಚಾಳುಕ್ಯ, ಹೊಯ್ಸಳ ಮೊದಲಾದವು ಕೂಡ ಐತಿಹ್ಯ ಮೂಲದವಾಗಿದ್ದು ಅವುಗಳ ವಿವರಗಳು ಜನಪದ ನಿರುಕ್ತಿಯಂತೆಯೇ ಇವೆ. (ಆರ್.ಜಿ.)

**ಜನಪದ ನೃತ್ಯಗಳು :** ಕರ್ನಾಟಕದಾದ್ಯಂತ ನಲವತ್ತಕ್ಕೂ ಹೆಚ್ಚು ಜನಪದ ನೃತ್ಯಗಳು ಪ್ರಚಲಿತವಾಗಿವೆ ಎಂದು ಅಂದಾಜು ಮಾಡಲಾಗಿದೆ. ಅವುಗಳನ್ನು ಪ್ರಾದೇಶಿಕವಾಗಿ ಹೀಗೆ ವರ್ಗೀಕರಿಸಬಹುದು.

**ಉತ್ತರ ಕರ್ನಾಟಕ :** ಕರಡೆ ಮಜಲು, ಡೊಳ್ಳು ಕುಣಿತ, ಗೊಂದಲಿಗರ ಮೇಳ, ವಾಘೆಮುರಳಿ ಮೇಳ, ಕೋಲಾಟ.

**ದಕ್ಷಿಣ ಕರ್ನಾಟಕ :** ವೀರಗಾಸೆ ಕುಣಿತ, ಸೋಮನ ಕುಣಿತ, ಕುರುಬ ದೇವರ ಕುಣಿತ, ಲಿಂಗದ ಬೀರರ ಕುಣಿತ, ಕೋಲ ಕುಣಿಯುವುದು, ಗುಡ್ಡರ ಕುಣಿತ, ರಂಗದ ಕುಣಿತ, ಗಾರುಡಿ ಕುಣಿತ, ಬೀಸು ಕಂಸಾಳೆ ಕುಣಿತ, ಭಾಗವಂತಿಕೆ ಮೇಳ, ಕರಪಾಲ ಮೇಳ, ಚೌಡಿಕೆ ಮೇಳ, ಪಟಕುಣಿತ, ಪೂಜಾಕುಣಿತ, ಚಿಟ್ ಮೇಳ, ಗೊರವರ ಕುಣಿತ, ನಂದಿಕೋಲು ಕುಣಿತ, ಕಂಬಳಿಕುಣಿತ, ಮಾರಮ್ಮನ ಕುಣಿತ, ಮಣೇವು ಕುಣಿತ, ಕೋಲಾಟ.

**ಕೊಡಗು :** ಹುತ್ತರಿ ಕುಣಿತ, ಬೊಳಕಾಟ, ಉಮ್ಮತ್ತಾಟ, ಕತ್ತಿ ಕುಣಿತ, ಕೊಂಬು ಕುಣಿತ.

**ದಕ್ಷಿಣ ಕನ್ನಡ ಜಿಲ್ಲೆ :** ದುಡಿ ಕುಣಿತ, ಡೋಲಿನ ಕುಣಿತ, ವೈದ್ಯನೃತ್ಯ, ಭೂತನೃತ್ಯ, ಹೋಲಿನೃತ್ಯ, ಆಟಿಕಡೆಂಜ, ಕೋರತನಯ, ಕೋಲಾಟ.

**ಉತ್ತರ ಕನ್ನಡ ಜಿಲ್ಲೆ :** ಸುಗ್ಗಿ ಕುಣಿತ, ಕರಡಿ ಕುಣಿತ, ಸಿಂಹ ನೃತ್ಯ, ಹೂವಿನ ಮಕ್ಕಳ ಕುಣಿತ, ಕೋಲಾಟ.

ಈ ನೃತ್ಯಗಳಲ್ಲಿ ಕೆಲವು ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿಬಂದವುಗಳಾದರೆ ಇನ್ನು ಕೆಲವು ಮನರಂಜನೆಯೇ ಏಕೈಕ ಉದ್ದೇಶವಾಗಿ ಹುಟ್ಟಿಕೊಂಡಂಥವು. ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿದ ನೃತ್ಯಗಳು ಆಯಾ ದೇವತೆಯ ಹೆಸರಿನಲ್ಲಿ ನಿರ್ದಿಷ್ಟ ಕಾಲದಲ್ಲಿ ಸಂಪ್ರದಾಯಬದ್ಧವಾಗಿ ನಡೆಯುತ್ತವೆ. ಮನರಂಜನೆಯ ಹಿನ್ನೆಲೆಯಲ್ಲಿ ಹುಟ್ಟಿ ಲೌಕಿಕ ಕಲೆಯಾಗಿ ಬೆಳೆದುಬಂದ ನೃತ್ಯಗಳಿಗೆ ಇಂಥ ಕಟ್ಟುಪಾಡುಗಳು ಅಷ್ಟಾಗಿ ಅನ್ವಯಿಸುವುದಿಲ್ಲ.

ಕೋಲಾಟ

ಜನಪದ ಲೌಕಿಕ ನೃತ್ಯಗಳಲ್ಲಿ ಕೋಲಾಟ (ನೋಡಿ) ಅತ್ಯಂತ ಜನಪ್ರಿಯವಾದುದು. ಇದು ನಾಡಿನ ಎಲ್ಲ ಕಡೆಗಳಲ್ಲೂ ಕಾಣಬರುವ ಏಕಮಾತ್ರ ಕಲೆಯಾಗಿದ್ದು ಉಳಿದವು ಪ್ರಾದೇಶಿಕ ಹಿನ್ನೆಲೆಯಲ್ಲಿ ಬರುತ್ತವೆ. ಕೋಲಾಟಕ್ಕೆ ಹೆಸರಾದ ಜನಾಂಗ ಕಾಡುಗೊಲ್ಲರದು. ಇವರ ಗೆಜ್ಜೆಯ ಕೋಲಾಟ ಅತ್ಯಂತ ಪ್ರಾಚೀನವಾದುದು. ಕೋಲಾಟಗಳಲ್ಲಿ ಹತ್ತಾರು ಬಗೆಗಳಿರುವಂತೆಯೇ ಸಾಕಷ್ಟು ಪ್ರಾದೇಶಿಕ ವೈವಿಧ್ಯವೂ ಕಾಣಬರುತ್ತದೆ. ದಕ್ಷಿಣ ಕರ್ನಾಟಕದ ಕೋಲಾಟದ ತಂಡಗಳಲ್ಲಿ ಯಾವ ವಿಶಿಷ್ಟ ರೀತಿಯ ವೇಷಭೂಷಣವೂ ಕಾಣಬರುವುದಿಲ್ಲ. ಉತ್ತರ ಕರ್ನಾಟಕಕ್ಕೂ ಈ ಮಾತು ಅನ್ವಯಿಸುತ್ತದೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿಗೌಡರ ಸುಗ್ಗಿಯ ಕುಣಿತ, ದಕ್ಷಿಣ ಕನ್ನಡ ಜಿಲ್ಲೆಯ ಮರಾಟ ನೃತ್ಯಗಳಲ್ಲಿ ಕೋಲಾಟ ವೈವಿಧ್ಯದಂತೆಯೇ ಆಕರ್ಷಕ ವೇಷಗಾರಿಕೆಯಾಗಿ ತೋರಿಬರುತ್ತದೆ. ಕೊಡಗಿನ ಹುತ್ತರಿ ಕುಣಿತದಲ್ಲಿ ಕೋಲಾಟದ ಪಾತ್ರ ಪ್ರಧಾನವಾದುದೇ. ಕೊಡವರ ಸಾಂಪ್ರದಾಯಿಕ ರೀತಿಯ ವೇಷಭೂಷಣ ಇಲ್ಲಿನ ಒಂದು ವೈವಿಧ್ಯ. ಇವರು ಬಳಸುವ ಕೋಲುಗಳು ಉದ್ದವಾಗಿರುತ್ತವೆ. ಎರಡು ಮೂರು ಅಡಿ ಉದ್ದದ ಬೆರಳುಗಾತ್ರದ ಜೋಡಿ ಬೆತ್ತವನ್ನು ಇಲ್ಲಿ ಬಳಸಲಾಗುತ್ತದೆ. ಹಾಲಕ್ಕಿಗೌಡರ ಕುಣಿತ, ಹುತ್ತರಿ ಕುಣಿತಗಳಲ್ಲಿ ಕೆಲವು ವಾದ್ಯಗಳನ್ನು ಹಿನ್ನೆಲೆಗೆ ಬಳಸಲಾಗುವುದು. ಕುಣಿತದ ವೈಖರಿ, ತಾಳದ ಗತ್ತು, ಕೋಲಾಟದ ಪದಗಳ ವೈವಿಧ್ಯ ಅತ್ಯಂತ ಗಮನಾರ್ಹವಾದುವು. ಹಾಸನ ಹಾಗೂ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡುಬರುವ ಚಿಟ್‌ಮೇಳ (ನೋಡಿ) ಕೋಲಾಟದಂತೆಯೇ ಉಳಿದುಬಂದಿರುವ ಒಂದು ಲೌಕಿಕ ನೃತ್ಯ. ಕರಡೆ ಮೇಳದಂತೆ ವಾದ್ಯಗಳ ವೈಭವ ಇಲ್ಲಿಯೂ ಪ್ರಮುಖವಾಗಿದ್ದು ಮೇಳದಲ್ಲಿ ಕರಡೆ, ಸಮಾಳ, ಘುಮ್ಮಿ, ಮೌರಿ ಮೊದಲಾದ ವಾದ್ಯಗಳನ್ನು ಬಳಸಲಾಗುತ್ತದೆ. ಇಲ್ಲಿ ನೃತ್ಯದ ಪಾತ್ರ ದೊಡ್ಡದು. ಯಕ್ಷಗಾನದ ವಿವಿಧ ಮಟ್ಟುಗಳನ್ನು ಮೌರಿಯಲ್ಲಿ ನುಡಿಸುವ ತಂಡದ ನಾಯಕ, ವಿವಿಧ ವಾದ್ಯಗಳ ಗತ್ತಿನಲ್ಲಿ ಕರಡೆ ಸಮೇಳ

ಘುಮ್ಮಿಗಳ ವಾದ್ಯಪಟಗಳನ್ನು ಕುಣಿಸುತ್ತಾನೆ. ಈ ವಾದ್ಯಗಳನ್ನು ಬಡಿಯುತ್ತ ಬಯಲಾಟದ ನೃತ್ಯಗಳನ್ನೇ ಈ ಕಲಾವಿದರು ಪ್ರದರ್ಶಿಸುತ್ತಾರೆ. ಜಲ್ಲರಿಯನ್ನು ಬಡಿಯುವ ಮತ್ತೊಬ್ಬ ಕಲಾವಿದ ಮೃದುನೃತ್ಯವನ್ನು ಪ್ರದರ್ಶಿಸುತ್ತ ಇವರ ನಡುವೆ ಅತ್ತಿಂದಿತ್ತ ಚಲಿಸುತ್ತ ಆ ಕಲೆಗೆ ಇನ್ನಷ್ಟು ಆಕರ್ಷಣೆಯನ್ನು ತರುತ್ತಾನೆ. ಹೀಗೆಯೇ ಉತ್ತರ ಕರ್ನಾಟಕದ ವಾಘೆ ಮುರುಳಿ ಮೇಳ ಅತ್ಯಂತ ಆಕರ್ಷಕವಾದುದು.

ಕರಗ ಕುಣಿತ

ಈ ಲೌಕಿಕ ಕಲೆಗಳನ್ನು ಬಿಟ್ಟರೆ ಉಳಿದೆಲ್ಲ ಜನಪದ ನೃತ್ಯಗಳೂ ಒಂದಲ್ಲ ಒಂದು ವಿಧದಲ್ಲಿ ಧಾರ್ಮಿಕ ಸಂಬಂಧವನ್ನು ಉಳಿಸಿಕೊಂಡೇ ಬಂದಿವೆ. ಧಾರ್ಮಿಕ ಮೂಲದ ನೃತ್ಯಗಳಲ್ಲಿ ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಜನಪ್ರಿಯವಾಗಿರುವ ಮಲೆಯ ಮಾದೇಶ್ವರನ ಆರಾಧಕರಾದ ದೇವರಗುಡ್ಡರು ಕಂಸಾಳೆ ವಾದ್ಯದೊಂದಿಗೆ ನಡೆಸುವ ಬೀಸುಕಂಸಾಳೆ ನೃತ್ಯ (ನೋಡಿ), ಶಿವಮೊಗ್ಗ, ಕೋಲಾರ, ತುಮಕೂರು, ಮಂಡ್ಯ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ಮೈಲಾರಲಿಂಗನಗುಡ್ಡರ, ಗೊರವರ ಕುಣಿತ (ನೋಡಿ), ನಂದಿಕೋಲು ಕುಣಿತ (ನೋಡಿ), ಬಯಲು ಸೀಮೆಯಲ್ಲಿ ಹೆಚ್ಚಾಗಿ ಕಂಡುಬರುವ ವೀರಗಾಸೆ ಕುಣಿತ (ನೋಡಿ), ಲಿಂಗದಬೀರರ ಕುಣಿತ (ನೋಡಿ)- ಇವು ಶೈವ ಸಂಪ್ರದಾಯಕ್ಕೆ ಸೇರಿದ ನೃತ್ಯಗಳಾಗಿವೆ. ಕಂಸಾಳೆ ನೃತ್ಯದಲ್ಲಿ ಕಂಸಾಳೆ ವಾದ್ಯವನ್ನು ಬಡಿದುಕೊಂಡು ವಿವಿಧ ಭಂಗಿಯಲ್ಲಿ ಬಾಗಿ ಬಳುಕಿ ಕುಣಿದು ಕುಪ್ಪಳಿಸಿ ಕೌಶಲವನ್ನು ಪ್ರದರ್ಶಿಸುವ ವೈಖರಿ ಆಶ್ಚರ್ಯಕರವಾಗಿರುತ್ತದೆ. ಮಾದೇಶ್ವರರ ಪದಗಳೂ ಕಂಸಾಳೆಯ ನಾದವೂ ಈ ಕುಣಿತಕ್ಕೆ ಮೆರುಗು ತರುತ್ತವೆ. ಗೊರವರು ತಲೆಯ ಮೇಲೆ ಕರಡಿಯ ಕೂದಲ ಟೊಪ್ಪಿಗೆ, ಮೈಮೇಲೆ ಕಪ್ಪುನಿಲುವಂಗಿ, ಕವಡೆಯ ಸರಗಳು, ಕೈಯಲ್ಲಿ ಡಮರುಗ ತ್ರಿಶೂಲಗಳನ್ನು ಹಿಡಿದು ವೃತ್ತಾಕಾರವಾಗಿ ನರ್ತಿಸುತ್ತಾರೆ. ವೀರಗಾಸೆ ಕುಣಿತದಲ್ಲಿ ವೀರಭದ್ರನ ಖಡ್ಗಗಳನ್ನು (ಹಾಡುಗಳನ್ನು) ಹೇಳುತ್ತ ನಾಲ್ಕಾರು ಮಂದಿ ಕರಡೆಯ ಹಾಗೂ ಇತರ ವಾದ್ಯಗಳ ಗತ್ತಿಗೆ ನರ್ತಿಸುತ್ತಾರೆ. ನಡುನಡುವೆ ಕರಡೆಯನ್ನು ಬಡಿಯುವ ಮುಂದಾಳು ವೀರಭದ್ರನ ಅವತಾರದ ಹಿನ್ನೆಲೆಯನ್ನು ಬಣ್ಣಿಸುತ್ತಿರುತ್ತಾನೆ. ಲಿಂಗದ ಬೀರರ ಕುಣಿತದಲ್ಲಿ ಒಬ್ಬ ಅಥವಾ ಇಬ್ಬರು ವೀರಭದ್ರನ ಬಿರುದುಗಳನ್ನು ಧರಿಸಿ ಕುಣಿಯುತ್ತಾರೆ. ಒಬ್ಬ ಖಡ್ಗಗಳನ್ನು ಹೇಳುವುದು ಮತ್ತೊಬ್ಬ ಲಾಂಛನಗಳನ್ನು ಧರಿಸಿ ಭಲರೇ ವೀರ ಎಂದು ಸುತ್ತಲೂ ಕುಣಿಯುವುದು ಇಲ್ಲಿನ ವೈಶಿಷ್ಟ್ಯ. ರುದ್ರನೃತ್ಯಗಳಲ್ಲಿ ಲಿಂಗದಬೀರರ ಕುಣಿತಕ್ಕೆ ಹೆಚ್ಚಿನ ಮನ್ನಣೆ ಇದೆ. ದೇವರ ಉತ್ಸವಗಳಲ್ಲಿ, ಮದುವೆ ಮೆರವಣಿಗೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಈ ನೃತ್ಯವನ್ನು ಏರ್ಪಡಿಸಲಾಗುತ್ತದೆ. ಬಯಲುಸೀಮೆಯ ಎಲ್ಲ ಕಡೆಗಳಲ್ಲೂ ಈ ನೃತ್ಯ ಕಾಣಬರುತ್ತದೆ. ನಂದಿಯ ಮೂರ್ತಿಯನ್ನೂ ಹಿತ್ತಾಳೆಯ ಬಿರುದಾವಳಿಗಳನ್ನೂ ಗಗ್ಗರ ಬಳೆಗಳನ್ನೂ ಬಣ್ಣದ ವಸ್ತ್ರಗಳನ್ನೂ ಬಳಸಿ ಅಲಂಕರಿಸಿದ ಹತ್ತು ಹದಿನೈದು ಮಾರು ಉದ್ದದ ಭಾರವಾದ ಬಿದಿರು ಗಳುಗಳನ್ನು ನಂದಿ ಕೋಲು ಎಂದು ಕರೆಯಲಾಗುತ್ತದೆ. ಇಲ್ಲಿ ನಂದಿಕೋಲು ಹೊತ್ತವನು ನಡುವಿಗೆ ಕಟ್ಟಿದ ಒಂದು ಸಣ್ಣಚೀಲದಲ್ಲಿ ಕೋಲಿನ ತಳವನ್ನು ಕೂರಿಸಿ ತಮ್ಮಟೆಯ ಗತ್ತಿಗೆ ಕುಣಿಯುವ ಸಾಹಸ ಮೆಚ್ಚುವಂತಿರುತ್ತದೆ. ಅತ್ಯಂತ ಕಷ್ಟಸಾಧ್ಯವಾದ ನಂದಿಕೋಲುನೃತ್ಯ ದೇವರ ಉತ್ಸವಗಳಲ್ಲಿ ಮೆರವಣಿಗೆಯ ಸಂದರ್ಭಗಳಲ್ಲಿ ಕಂಡುಬರುತ್ತದೆ.

ಶಿವಮೊಗ್ಗ, ಚಿತ್ರದುರ್ಗ, ಉತ್ತರ ಕರ್ನಾಟಕದ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುವ ಡೊಳ್ಳು ಕುಣಿತ (ನೋಡಿ) ಬೀರೇಶ್ವರ ಸಂಪ್ರದಾಯದಕ್ಕೆ ಸೇರಿದ ಧಾರ್ಮಿಕ ನೃತ್ಯ, ಕುರುಬ ಜನಾಂಗದ ಈ ನೃತ್ಯ. ಒಂದು ಗಂಡು ಕಲೆ. ದೊಡ್ಡ ಆಕಾರದ ಡೊಳ್ಳುಗಳನ್ನು ನಡುವಿಗೆ ಕಟ್ಟಿಕೊಂಡು ಅದನ್ನು ಶಕ್ತಿಮೀರಿ ಬಡಿಯುತ್ತ ವಿವಿಧ ಭಂಗಿಗಳಲ್ಲಿ ಬೀರರು ಕುಣಿಯುತ್ತಾರೆ. ನಡುವೆ ಒಬ್ಬ ಜಲ್ಲರಿಯನ್ನು ಬಡಿಯುವ ಮೋಜು, ಕುಣಿಯುವ ಗತ್ತು ಮನೋಹರವಾಗಿರುತ್ತದೆ.

ಗಾರುಡಿ ಕುಣಿತ ವೈಷ್ಣವ ಸಂಪ್ರದಾಯಕ್ಕೆ ಸೇರಿದ ಧಾರ್ಮಿಕ ನೃತ್ಯ. ಇಲ್ಲಿಯ ಕುಣಿತ ಅಪೂರ್ವ ರೀತಿಯದು. ಎರಡು ಮೂರು ಆಳೆತ್ತರದ ಬಿದಿರು ತಡಿಕೆಯ ಆಕೃತಿಯನ್ನು ಮಾಡಿ, ಅದರ ಮೇಲೆ ಮರದ ತಲೆಯನ್ನು ಕೂರಿಸಿ ಮರದ ಕೈ ಮತ್ತು ಪುಂಗಿಯನ್ನು ಅಳವಡಿಸಿ ಮೈ ಮೇಲೆ ವಸ್ತ್ರಗಳನ್ನು ಜೋಡಿಸಿ ಗಾರುಡಿಗಳ ಆಕೃತಿಯನ್ನು ಸಿದ್ಧಪಡಿಸಿಕೊಳ್ಳಲಾಗುತ್ತದೆ. ಕುಣಿಯುವ ವ್ಯಕ್ತಿ ಈ ಆಕೃತಿಯನ್ನು ಧರಿಸಿ ನೃತ್ಯ ಮಾಡುವ ರೀತಿ ನೋಡುವವರಿಗೆ ಬೆರಗನ್ನು ತರುತ್ತದೆ.

ಇದೇ ಸಂಪ್ರದಾಯಕ್ಕೆ ಸೇರಿದ ನೃತ್ಯಗಳಲ್ಲಿ ಪಟಕುಣಿತ (ನೋಡಿ) ಭಾಗವಂತಿಕೆ ಮೇಳ (ನೋಡಿ) ಮುಖ್ಯವಾದುವು. ಪಟಕುಣಿತ ನಂದಿಕೋಲಿನ ನೃತ್ಯವನ್ನೇ ಹೋಲುತ್ತದೆ. ಇದರಲ್ಲಿ ಹತ್ತಾರು ಮಂದಿ ಭಾಗವಹಿಸುತ್ತಾರೆ. ಬಣ್ಣದ ಬಟ್ಟೆಗಳನ್ನು ಸುತ್ತಿ ಅಲಂಕರಿಸಿದ, ತುದಿಯಲ್ಲಿ ಲೋಹದ ಛತ್ರಿಯನ್ನು ಕಟ್ಟಿದ ಉದ್ದವಾದ ಕೋಲುಗಳನ್ನು ಪಟ ಎಂದು ಕರೆಯಲಾಗುತ್ತದೆ. ಇವನ್ನು ಹಿಡಿದು ಸಾಲುಸಾಲಾಗಿ ವಿವಿಧ ವೈಖರಿಯಲ್ಲಿ ತಮ್ಮಟೆ ಹೆಬ್ಬರೆಗಳ ಭಾಗವಂತಿಕೆ ಮೇಳದಲ್ಲಿ ಗತ್ತಿಗೆ ನರ್ತಿಸುವ ಸೊಗಸು ಅಪೂರ್ವವಾದುದು. ಭಾಗವಂತಿಕೆ ಪದಗಳನ್ನು ಎರಡು ಸಾಲಿನಲ್ಲಿ ನಿಂತು ಕೆಲವರು ಹಾಡುತ್ತ ಸಾಗುವಾಗ ಅವರ ನಡುವೆ ಕೋಡಂಗಿಯ ವೇಷವನ್ನು ಧರಿಸಿದ ವ್ಯಕ್ತಿಯೊಬ್ಬ ಮೃದುವಾಗಿ ನರ್ತಿಸುತ್ತಾನೆ.

ಸೋಮನ ಕುಣಿತ

ಶಕ್ತಿದೇವತೆಗಳಿಗೆ ಸಂಬಂಧಿಸಿದ ನೃತ್ಯಗಳಲ್ಲಿ ಸೋಮನ ಕುಣಿತ (ನೋಡಿ), ಗುಡ್ಡರ ಕುಣಿತ, ಪೂಜಾ ಕುಣಿತ (ನೋಡಿ), ಕರಗ (ನೋಡಿ) ಮುಂತಾದ ನೃತ್ಯಗಳಿವೆ. ಸೋಮನ ಕುಣಿತ ಕರ್ನಾಟಕದ ಮುಖವಾಡ ನೃತ್ಯಗಳಲ್ಲಿ ಮುಖ್ಯವಾದುದು. ಬಣ್ಣದ ವಸ್ತ್ರದಲ್ಲಿ ಕಚ್ಚೆಯನ್ನು ಹಾಕಿ, ಕೈಯಲ್ಲಿ ಬೆಳ್ಳಿಬೆತ್ತ ಹಿಡಿದು, ಸಾಮಾನ್ಯವಾಗಿ ಬರಿ ಮೈಯಲ್ಲಿ ಮುಖವಾಡ ಧರಿಸಿ ಗ್ರಾಮದೇವತೆಯ ಉತ್ಸವಮೂರ್ತಿಯ ಮುಂದೆ ಎರಡು ಮೂರು

ಸೋಮಗಳು ತಮ್ಮಟೆ, ಹರೆ, ಡೋಲು, ಮೌರಿಗಳ ಹಿನ್ನೆಲೆಗೆ ನರ್ತಿಸುತ್ತವೆ. ತಮ್ಮಟೆಯನ್ನು ಬಡಿಯುವ ಕಲಾವಿದ ನಡುನಡುವೆ ದೇವರನ್ನು ಕರೆಯುವ ಅಪೂರ್ವ ತ್ರಿಪದಿಗಳನ್ನು ಹಾಡುತ್ತಾನೆ. ಹೆಜ್ಜೆಹೆಜ್ಜೆಗೆ ಹಾಡು, ಕುಣಿತ, ಜೈಕಾರಗಳು ಸೋಮನ ಕುಣಿತವನ್ನು ವಿಶೇಷವಾಗಿ ಕಳೆಗಟ್ಟಿಸುತ್ತವೆ.

ಗುಡ್ಡರ ಕುಣಿತದಲ್ಲಿ ತಮ್ಮಟೆಗೆ ಬದಲಾಗಿ ಚಕ್ರವಾದ್ಯ ಎಂಬ ವಿಶಿಷ್ಟ ರೀತಿಯ ತಾಸೆಯನ್ನು ಬಳಸಲಾಗುತ್ತದೆ. ಮಾರಿಕುಣಿತ ಎಂದು ಈ ನೃತ್ಯವನ್ನು ಕರೆಯುತ್ತಾರೆ. ಇದು ಬಹುಮಟ್ಟಿಗೆ ರಂಗದ ಕುಣಿತವನ್ನೇ ಹೋಲುತ್ತದೆ. ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಈ ಕುಣಿತ ಹೆಚ್ಚಾಗಿ ಉಳಿದುಬಂದಿದೆ.

ಪೂಜಾ ಕುಣಿತ

ಪೂಜಾ ಕುಣಿತ ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಯ ವಿಶಿಷ್ಟ ಕಾಣಿಕೆ. ಏಳು ಅಥವಾ ಒಂಬತ್ತು ಕಳಸಗಳಿಂದ ಅಲಂಕರಿಸಿದ ದೇವಿಯ ಪೂಜೆಯನ್ನು ನೆತ್ತಿಯ ಮೇಲಿನ ಕಳಸದ ಮೇಲಿರಿಸಿ ಕೈ ಬಿಟ್ಟು ತಮ್ಮಟೆಯ ಗತ್ತಿಗೆ ನರ್ತಿಸುವ ವೈಖರಿ ಅದ್ಭುತವಾದುದು. ಪೂಜಾಕುಣಿತದಲ್ಲಿ ಒನಕೆಯ ಕುಣಿತವೂ ಕೆಲವು ಕಡೆ ಸೇರಿಕೊಂಡಿದೆ. ತಲೆಯ ಮೇಲೆ ಒನಕೆಯೊಂದನ್ನು ಹೊತ್ತು ಕೈಬಿಟ್ಟು ಕುಣಿಯುವುದು ಇಲ್ಲಿಯ ಆಕರ್ಷಣೆ. ಕರಗ ಕುಣಿತ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಮಣ್ಣಿನ ಕಳಸವನ್ನು ವಿವಿಧ ರೀತಿಯಲ್ಲಿ ಅಲಂಕರಿಸಿ ನೆತ್ತಿಯಲ್ಲಿ ಧರಿಸಿ ಕೈಬಿಟ್ಟು ಕುಣಿಯುವ ಕುಶಲಿಗಳಾದ ಕಲಾವಿದರು ನೋಡುವವರನ್ನು ಬೆರಗುಗೊಳಿಸುತ್ತಾರೆ.

ರಂಗದ ಕುಣಿತ ಕರ್ನಾಟಕದ ಅನೇಕ ಕಡೆಗಳಲ್ಲಿ ಕಾಣಬರುತ್ತದೆ. ಊರ ದೇವತೆಯ ಹಬ್ಬಕ್ಕೆ ಸಂಬಂಧಿಸಿದ ಈ ನೃತ್ಯ ಹಬ್ಬಕ್ಕೆ ಹದಿನೈದು ದಿನಗಳ ಮುಂಚೆಯೇ ಆರಂಭವಾಗುತ್ತದೆ. ಊರ ರಂಗದಲ್ಲಿ ಬೆಂಕಿಯನ್ನು ಹಾಕಿ, ಕೈಯಲ್ಲಿ ವಸ್ತ್ರವೊಂದನ್ನು ಹಿಡಿದು, ಜನಪದ ಗೀತೆಗಳನ್ನು ನಡುನಡುವೆ ಹಾಡುತ್ತ, ತಮ್ಮಟೆಯ ಗತ್ತಿಗೆ ಊರಿನ ಕಲಿಗಳೆಲ್ಲ ವಿವಿಧ ಭಂಗಿಗಳಲ್ಲಿ ನರ್ತಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಭೂತನೃತ್ಯಗಳಾದ ಆಟಿಕಡೆಂಜ (ನೋಡಿ), ಕೋರತನಯ ಅಲ್ಲಿನ ವಿಶಿಷ್ಟ ಸಂಸ್ಕೃತಿಯನ್ನು ಸಾರುತ್ತವೆ. ನಲ್ಕೆಯವರಲ್ಲಿ ಪ್ರಚಲಿತವಾಗಿರುವ ತುಳು ಆಟಿ ತಿಂಗಳಲ್ಲಿ ಬರುವ ಆಟಿಕಡೆಂಜ ನೃತ್ಯ ವಿಶೇಷವಾದದ್ದು. ತೆಂಬರೆಯ ಗತ್ತಿಗೆ ಈ ನೃತ್ಯ ಕೂಡಿಬರುತ್ತದೆ. ಕೋರತನಯ ನಲ್ಕೆಯವರಲ್ಲಿ ಇರುವ ಇನ್ನೊಂದು ನೃತ್ಯವಿಶೇಷ. ನೃತ್ಯ ಸಮಯದಲ್ಲಿ ಕೋರತನಯ ವೇಷ ಹಾಕಿಕೊಂಡು ರೈತರ ಮನೆಯ ಬಾಗಿಲಲ್ಲಿ ನರ್ತಿಸಿ, ದವಸಧಾನ್ಯಗಳನ್ನು ಸಂಗ್ರಹಿಸಲಾಗುತ್ತದೆ. ಭೂತಾರಾಧನೆಯ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಆವೇಶ ಬರಿಸಿಕೊಂಡು ಮಾಡುವ ನೃತ್ಯವೈಖರಿ ಅಪೂರ್ವವಾದುದು. ಪ್ರಭಾವಳಿಯಂತೆ ತೆಂಗಿನ ಹಾಳೆಯಲ್ಲಿ ಕಟ್ಟಿಕೊಳ್ಳುವ ಅಣಿ, ವೈವಿಧ್ಯಮಯ ಆಭರಣ ವಿಶೇಷಗಳು, ಮುಖದಲ್ಲಿ ಬಣ್ಣಗಾರಿಕೆ, ಕಾಲಗಗ್ಗರ ಮೊದಲಾದುವು ಭೂತವೇಷದ ಆಕರ್ಷಣೆಗಳು. ಚಂಡೆ ಮೊದಲಾದ ವಾದ್ಯಗಳ ಗತ್ತಿಗೆ ಭೂತದ ಪಾತ್ರ ನರ್ತಿಸುವುದರ ಜೊತೆಗೆ ಇಲ್ಲಿನ ಪಾಡ್ದನ ಸಾಹಿತ್ಯವೂ ಗಮನಾರ್ಹವಾಗಿದೆ. *

ಹಿಂದಿನ ಮೈಸೂರು ಸಂಸ್ಥಾನ ಪ್ರದೇಶದಲ್ಲಿ ಕಂಡುಬರುವ ಜನಪದ ನೃತ್ಯಗಳಲ್ಲಿ ಕೋಲ ಕುಣಿಯುವುದು ಎಂಬುದು ಒಂದು. ಕೋಲ ಎಂದರೆ ಒಂದು ದೆವ್ವ ಅಥವಾ ಭೂತ. ಇದು ಸ್ವಲ್ಪ ಹೆಚ್ಚು ಕಡಿಮೆ ದಕ್ಷಿಣ ಕನ್ನಡದ ಭೂತಾರಾಧನೆಯ ಕುಣಿತಕ್ಕೆ ಸರಿಹೋಗುವಂಥದ್ದು. ಇದರಲ್ಲಿ ನಾನಾ ಬಗೆ, ನಾನಾ ಸಂಪ್ರದಾಯಗಳುಂಟು. ಪ್ರತಿ ಹಳ್ಳಿಯೂ ಅನೇಕ ವೇಳೆ ಹಳ್ಳಿಗಳಲ್ಲಿ ಕೆಲವು ಸಂಸಾರಗಳು ಊರಿಗೆ ಒಳ್ಳೆಯದಾಗಲೆಂದು, ಸಂಪ್ರದಾಯಬದ್ಧವಾಗಿ ತಮಗೆ ಆಗಿ ಬಂದಿರುವ ಒಂದು ದೆವ್ವವನ್ನು ಚಪ್ಪರದಲ್ಲಿ ಆವಾಹನೆ ಮಾಡಿ, ಹೂವು ಹಸುರುಚಿಗುರು, ಅಡಕೆ, ಹೊಂಬಾಳೆಗಳಿಂದ ಪೂಜಿಸಿ ಅದರ ಮುಂದೆ ಕುಣಿಯುವುದಕ್ಕೆ ಕೋಲ ಕುಣಿಯುವುದು ಎನ್ನುವರು. ಅನೇಕ ವೇಳೆ ತಮ್ಮಟೆಗಳ ನಾನಾ ಭಂಗಿಗಳಿಗೆ ಅನುಗುಣವಾಗಿ ಈ ನೃತ್ಯ ಅರ್ಧರಾತ್ರಿಯವರೆಗೆ ಕೆಲವೊಮ್ಮೆ ಬೆಳಗಿನ ಜಾವದವರೆಗೆ ನಡೆಯುವುದುಂಟು. ಇದರಲ್ಲಿ ಕುಣಿತಗಾರರೆಲ್ಲ ಒಂದೊಂದು ವಿಚಿತ್ರವಾದ ವೇಷಧರಿಸಿ, ಕೆಲವು ವೇಳೆ ಪುರಾಣದ ವ್ಯಕ್ತಿಗಳಾದ ಭೀಮ, ಅರ್ಜುನ, ಅಭಿಮನ್ಯು, ದ್ರೌಪದಿ, ಕೈಕೇಯಿ ಮುಂತಾದವರಂಥ ವೇಷಗಳನ್ನು ಧರಿಸಿಕೊಂಡು ಕುಣಿಯುತ್ತಾರೆ. ಪುರುಷರೇ ಸ್ತ್ರೀಪಾತ್ರಗಳನ್ನೂ ಹಾಕುವುದುಂಟು. ಒಂದೊಂದು ವೇಷವೂ ಕೋಲನ ಮುಂದೆ ಬಂದಾಗ, ತನಗೆ ಬೇಕಾದ ಧಾಟಿಯಲ್ಲಿ ತಮ್ಮಟೆ ಹೊಡೆಯಿಸಿಕೊಂಡು ಕುಣಿಯುತ್ತದೆ.

ಒಮ್ಮೆ ಜನಪ್ರಿಯವಾಗಿದ್ದು ಈಗಲೂ ಪ್ರಚಾರದಲ್ಲಿರುವ ನೃತ್ಯಗಳಲ್ಲಿ ಮಾರಿಯಮ್ಮನ ಕುಣಿತವೂ ಒಂದು. ಮಾರಿಯಮ್ಮನ ಪೂಜಾರಿಯ ವೇಷ ವಿಶೇಷ ರೀತಿಯಲ್ಲಿ ಆಕರ್ಷಣೀಯವೂ ರುದ್ರಭಯಂಕರವೂ ಆಗಿರುತ್ತದೆ. ಇವನು ಸಾಧಾರಣವಾಗಿ ಒಳ್ಳೆ ಕಟ್ಟುಮಸ್ತಾದ ಪುಷ್ಟ ಆಳು. ಕೊಬ್ಬಿದ ಮೀಸೆ ಬಿಟ್ಟಿರುವ ಈತ ಕೆಂಪು ಬಣ್ಣದ ಸೀರೆಯನ್ನು ಕಚ್ಚೆಪಂಚೆಯಾಗಿ ಸೊಂಟಕ್ಕೆ ಉಟ್ಟಿರುತ್ತಾನೆ. ಸೊಂಟದ ಮೇಲುಭಾಗವೆಲ್ಲ ಬೆತ್ತಲೆಮೈಗೆ ಎದ್ದುಕಾಣುವಂತೆ ವಿಭೂತಿ ಮತ್ತು ಕುಂಕುಮ. ತೋಳಿಗೆ ಬೆಳ್ಳಿ ಮುಲಾಮಿನ ಬಿಗಿಯಾದ ತೋಳಬಂದಿ. ಹಣೆ ಕೆನ್ನೆಗಳಿಗೆ ಪೂರ್ತಿಯಾಗಿ ಕೆಂಪುಬಣ್ಣ. ಉಳಿದ ಸ್ಥಳಗಳಲ್ಲಿ ಅರಸಿನ ಬಣ್ಣ, ನೆತ್ತಿಯಲ್ಲಿ ಹಣೆಗಣ್ಣಿನಂತೆ ರೂಪಾಯಿ ಅಗಲದ ವಿಶಾಲವಾದ ಕೇಸರಿ ಬೊಟ್ಟು, ಸೊಂಟಕ್ಕೆ ಸಣ್ಣ ಗಂಟೆಗಳ ಸರ, ಎರಡೂ ಕಾಲಿಗೆ ಗೆಜ್ಜೆ. ಕೆಲವರು ಮುಂಡಿಗೆ ಸಹ ಗೆಜ್ಜೆ ಸರ

ಕಟ್ಟುವುದುಂಟು. ಕೈಯಲ್ಲಿ ಒಂದೊಂದು ಎರಡು ಅಂಗುಲ ದಪ್ಪವಾದ ಚಾವಟಿ - ಈ ವೇಷದೊಂದಿಗೆ ಮಾರಿಯಮ್ಮನ ಪೆಟ್ಟಿಗೆಯನ್ನು ನೆಲದ ಮೇಲೆ ಇಟ್ಟು, ತಮ್ಮಟೆ ಹರೆಗಳ ಸದ್ದಿಗನುಗುಣವಾಗಿ ದೇವರ ಮುಂದೆ ಕುಣಿಯುತ್ತಾನೆ. ಸೊಂಟದ ಗಂಟೆ ಸದ್ದು, ಕಾಲಿನ ಗೆಜ್ಜೆಸದ್ದು, ಮಾರಿಯಮ್ಮನ ಹೊಗಳಿಕೆ, ಮಧ್ಯೆ ಮಧ್ಯೆ ಚಾವಟಿಯ ಸದ್ದು - ಇವುಗಳೊಂದಿಗೆ ಲಯಬದ್ಧವಾಗಿ ಕುಣಿಯುವ ನೃತ್ಯ ಗಂಭೀರವೂ ಆಕರ್ಷಕವೂ ಆಗಿರುತ್ತದೆ.

ಕುಡಬಿಯರ ಹೋಳಿಕುಣಿತ

ಕಂಬಳಿ ಕುಣಿತ ತುಂಬ ಮನರಂಜಕವಾದ ಒಂದು ಬಗೆಯ ನೃತ್ಯ. ದೇವರ ಮುಂದೆ ಒಬ್ಬೊಬ್ಬ ಭಕ್ತನೂ ಸೊಂಟಕ್ಕೆ ಒಂದು ಕಂಬಳಿ ಸುತ್ತಿಕೊಂಡು ಕುಣಿಯುತ್ತಾನೆ. ಇದರಲ್ಲಿ ನೂರಾರು ಜನ ಭಾಗವಹಿಸುವುದುಂಟು. ಸಾಧಾರಣವಾಗಿ ಬಿಳಿಯ ಉಡುಪನ್ನು ಧರಿಸಿ, ಸೊಂಟಕ್ಕೆ ಕರಿಕಂಬಳಿ ಸುತ್ತಿ, ವಿವಿಧ ಭಂಗಿಯಲ್ಲಿ ಬಾಗಿ, ತಿರುಗಿ, ನೆಗೆದು, ಕುಣಿಯುವಾಗ ಕಪ್ಪು ಬಿಳುಪುಗಳ ವರ್ಣರಾಶಿಯ ಪ್ರದರ್ಶನ ಉಲ್ಲಾಸವನ್ನುಂಟುಮಾಡುತ್ತದೆ.

ಕುರುಬದೇವರ ಕುಣಿತದಲ್ಲಿ ದೇವರ ಮುಂದೆ ಕುಣಿಯುವವರು ಅನೇಕ ಕಡೆಗಳಲ್ಲಿ ವೃತ್ತಿನರ್ತಕರು. ಇವರು ದೇವರ ಮುಂದೆ ಕುಣಿತದ ಪ್ರದರ್ಶನವನ್ನು ಮಾಡುತ್ತ ಹೆಚ್ಚು ಹೊತ್ತು ಕಳೆಯುತ್ತಾರೆ. ಇದರಿಂದ ಬೇಸರಗೊಂಡ ವಾದ್ಯಗಾರರೂ ಕೆಲವು ವೇಳೆ ಭಕ್ತಾದಿಗಳೂ ಇವರನ್ನು ಬೈದು ಮುಂದಕ್ಕೆ ಹೊರಡಿಸುವುದುಂಟು. ಗಾಯಕರು ಹೊಂಟು ಬಾರವ್ವ ಹೊಂಟು ಬಾರವ್ವ ಹೊಂಟು ಬಾರವ್ವ ಎಂದು ಹಾಡುತ್ತಿರಲು ದೇವರು ಒಳಗಿನಿಂದ ಹೊರಕ್ಕೆ ಬರುತ್ತದೆ. ಕುರುಬರ ದೇವರು ಬೈದಲ್ಲದೆ ಮುಂದೆ ಹೋಗದು ಎಂಬ ಒಂದು ಗಾದೆ ಮೇಲಿನ ಮಾತನ್ನು ಸಮರ್ಥಿಸುತ್ತದೆ. ಮಣೇವು ಕುಣಿತ (ನೋಡಿ) ಮಣೇವು ಹಾಕುವುದು ಎಂಬುದು ಮುಖ್ಯವಾಗಿ ದಾಸಯ್ಯಗಳ ಕುಣಿತ. ದೇವರ ಪೂಜೆಯಾದ ಮೇಲೆ ದೇವರ ಮುಂದೆ ಬಿಳಿ ಚೌಕಗಳನ್ನು ಹಾಸಿ, ಅವುಗಳ ಮೇಲೆ ಕಡಲೆಪುರಿ ತೆಂಗಿನಕಾಯಿ ಕೊಬ್ಬರಿ ಬೆಲ್ಲ ಬಾಳೆಹಣ್ಣು ಹಲಸಿನಹಣ್ಣು ಸೌತೆಕಾಯಿ ಚೂರು ಮೊದಲಾದವನ್ನು ಸೇರಿಸಿ ಮಾಡಿದ ರಸಾಯನವನ್ನು ಗುಡ್ಡೆಯಾಗಿಡುತ್ತಾರೆ. ಒಂದೊಂದು ಗುಡ್ಡೆಗೆ ಒಬ್ಬೊಬ್ಬ ದಾಸಯ್ಯನಂತೆ ಕೈಯಲ್ಲಿ ಬೆತ್ತ ಹಿಡಿದು ಉದ್ಗಾರ ಮಾಡುತ್ತ ಅದರ ಸುತ್ತ ಕುಣಿಯುತ್ತಾರೆ. ತಮ್ಮಟೆಯವರು ಒಂದು ಸಂಕೇತವನ್ನು ಬಾರಿಸಿದ ಕೂಡಲೇ ದಾಸಯ್ಯಗಳೆಲ್ಲ ಬಾಗಿ ಕೈಯಿಂದ ಮುಟ್ಟದೆ ಬಾಗಿನರ್ತಿಸುತ್ತಲೇ ರಸಾಯನ ತಿನ್ನುತ್ತಾರೆ. ಈ ನೃತ್ಯಗಳೇ ಅಲ್ಲದೆ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಕಟವಾಗುವ ಹುಲಿವೇಷ, ಪಾಳೆಗಾರವೇಷ, ಕೋಡಂಗಿವೇಷ, ಕೀಲುಕುದುರೆ ಮೊದಲಾದವೂ ಜನಪದ ನೃತ್ಯಗಳೇ ಎನ್ನಬಹುದು. (ಜಿ.ಆರ್.ಐ.)

ಕೊಡಗಿನಲ್ಲಿ ಹೆಚ್ಚು ಪ್ರಸಿದ್ಧವಾಗಿರುವ ಜನಪದ ನೃತ್ಯಗಳಲ್ಲಿ ಹುತ್ತರಿ ಕುಣಿತವನ್ನು (ನೋಡಿ) ಬಿಟ್ಟರೆ ಉಮ್ಮತ್ತಾಟ ಗಮನಾರ್ಹವಾದುದು. ಈ ನೃತ್ಯವನ್ನು ಕೊಡವರು ಉಮ್ಮತ್ತಾಟ್ ಎಂದು ಕರೆಯುತ್ತಾರೆ. ಈ ನೃತ್ಯ ಸಾಮಾನ್ಯವಾಗಿ ಕೊಡವರ ವಿಶಿಷ್ಟ ಹಬ್ಬಗಳಾದ ಕೈಲ್‌ಮೂಹೂರ್ತ, ಕಾವೇರಿ ಸಂಕ್ರಮಣ, ಹುತ್ತರಿ, ಶಿವರಾತ್ರಿ, ಯುಗಾದಿ, ಷಷ್ಠಿ, ವಿಷ್ಣುಸಂಕ್ರಮಣಗಳಲ್ಲಿ ನಡೆಯುತ್ತದೆ. ಇದರಲ್ಲಿ ಸಂಪೂರ್ಣವಾಗಿ ಸ್ತ್ರೀಯರು ಭಾಗವಹಿಸುವರು. ಇವರು ಸಮವಸ್ತ್ರಧಾರಿಗಳಾಗಿರುತ್ತಾರೆ. ಸೀರೆಯ ನೆರಿಗೆಯನ್ನು ಹಿಂದಕ್ಕೆ ಬಿಟ್ಟು, ಸೀರೆಯ ಇನ್ನೊಂದು ತುದಿಯನ್ನು ಬೆನ್ನಿನ ಮೇಲೆ ಇಳಿ ಬಿಟ್ಟು ಎದೆಯ ಮೇಲೆ ಹಾಯಿಸಿ ಬಲಪಕ್ಕಕ್ಕೆ ಕಟ್ಟಿಕೊಳ್ಳುತ್ತಾರೆ. ಜೊತೆಗೆ ಬೆನ್ನಿನ ಮೇಲೆ ಹರಡಿಕೊಳ್ಳುವಂತೆ ಒಂದು ಜರಿ ಹೊದಿಕೆಯನ್ನು ತಲೆಗೆ ಕಟ್ಟಿಕೊಳ್ಳುವರು. ಹೀಗೆ ವಿಶಿಷ್ಟ ಉಡುಗೆತೊಡುಗೆಗಳಿಂದ ಅಲಂಕೃತರಾಗಿ ಎರಡು ಕೈಗಳಲ್ಲೂ ತಾಳಗಳನ್ನು ಹಿಡಿದು ತಮ್ಮ ಕಾಲುಗಳ ಕ್ರಮಬದ್ಧ ಚಲನೆಗೆ ತಕ್ಕಂತೆ ತಾಳಗಳನ್ನು ತಟ್ಟುತ್ತ ತಾಳದ ನಾದಕ್ಕನುಗುಣವಾಗಿ ವಿವಿಧ ಭಂಗಿಗಳಲ್ಲಿ ನೃತ್ಯಕ್ಕೆ ಸಂಬಂಧಪಟ್ಟ ಕೊಡವ ಜನಪದ ಗೀತೆಗಳನ್ನು ಇಂಪಾಗಿ ಹಾಡುತ್ತ ನರ್ತಿಸುವರು. ನೃತ್ಯದಲ್ಲಿ ಏಕತಾನತೆ ಹೆಚ್ಚಾಗಿ ಕಂಡುಬಂದರೂ ನಯನಾಜೂಕು ಶಿಸ್ತುಗಳು ಮುಪ್ಪುರಿಗೊಂಡಿದ್ದು ನೋಡುಗರ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತದೆ.

ಬೊಳಕಾಟ ಕೊಡವರಲ್ಲಿ ಪ್ರಸಿದ್ಧವಾದ ಇನ್ನೊಂದು ಜನಪದ ಧಾರ್ಮಿಕ ನೃತ್ಯ. ಇದನ್ನು ಕೊಡವರು ಬೊಳ್‌ಕಾಟ್ ಎಂದು ಕರೆಯುತ್ತಾರೆ. ಈ ನೃತ್ಯ ಹೆಚ್ಚಾಗಿ ಸುಗ್ಗಿಯ ಕಾಲದಲ್ಲಿ ಮದುವೆ, ದೇವರ ಉತ್ಸವ ಮೊದಲಾದ ಧಾರ್ಮಿಕ ಸಮಾರಂಭಗಳಲ್ಲಿ ನಡೆಯುತ್ತದೆ. ಇದೊಂದು ಬಗೆಯ ದೀಪನೃತ್ಯ. ನೃತ್ಯದಲ್ಲಿ ಇಪ್ಪತ್ತಕೂ ಹೆಚ್ಚು ಬಗೆಗಳಿವೆಯೆಂದು ತಿಳಿದುಬರುತ್ತದೆ. ನೃತ್ಯದಲ್ಲಿ ಗಂಡಸರು ಮಾತ್ರ ಭಾಗವಹಿಸುತ್ತಾರೆ. ನರ್ತಿಸುವವರು ಕಪ್ಪುಬಣ್ಣದ ಉದ್ದನೆಯ ನಿಲುವಂಗಿ ಧೋತಿ ಧರಿಸಿ, ಅದರ ಮೇಲೆ ಸೊಂಟಕ್ಕೆ ಕೆಂಪುಬಣ್ಣದ ರೇಷ್ಮೆಯ ನೀಳ ನಡುದಟ್ಟಿ, ಸುತ್ತಿ, ಅದಕ್ಕೆ ಪೀಚುಕತ್ತಿ ಸಿಕ್ಕಿಸಿ, ತಲೆಗೆ ಉದ್ದನೆಯ ಬಿಳಿ ಜರಿ ಇರುವ ರುಮಾಲು ಸುತ್ತಿ, ಕೈಯಲ್ಲಿ ಒಂದು ದೊಡ್ಡ ಖಡ್ಗ ಒಂದು ಬಿಳಿಯ ಚಾಮರ ಹಿಡಿದಿರುತ್ತಾರೆ. ನೃತ್ಯ ಆರಂಭವಾಗುವುದಕ್ಕೆ ಮುಂಚೆ ವಿಶಾಲವಾದ ಬಯಲಿನಲ್ಲಿ ದೊಡ್ಡ ಕಂಚಿನ ದೀಪಗಳನ್ನಿಡುತ್ತಾರೆ.

ಹಾಲಕ್ಕಿ ಸುಗ್ಗಿಕುಣಿತ

ಬಯಲಿನ ಮಧ್ಯದಲ್ಲಿ ಮರವಿದ್ದರೆ, ಆ ಮರಕ್ಕೆ ದೀಪಗಳನ್ನು ಕಟ್ಟಿರುತ್ತಾರೆ. ದೀಪಗಳ ಸುತ್ತಲೂ ದುಡಿ, ತಮ್ಮಟೆ, ತಾಳ, ಒಲಗ ಈ ವಾದ್ಯಗಳನ್ನು ನುಡಿಸುವ ನಾಲ್ವರಿರುತ್ತಾರೆ. ಇವರು ವಾದ್ಯ ನುಡಿಸುತ್ತಿರುವಾಗ ನರ್ತನದಲ್ಲಿ ಭಾಗವಹಿಸುವವರು ಒಬ್ಬೊಬ್ಬರಾಗಿ ಮುಂದೆ ಬಂದು ವೃತ್ತಾಕಾರವಾಗಿ ಹಿನ್ನೆಲೆ ವಾದ್ಯದ ನಾದಕ್ಕನುಗುಣವಾಗಿ ಹೆಜ್ಜೆ ಹಾಕುತ್ತ ಮುಂದುವರಿಯುತ್ತಾರೆ. ಎದುರು ಬದುರು ನಿಂತ ಈ ಎರಡು ಗುಂಪು ಒಂದರಲ್ಲಿ ಇನ್ನೊಂದು ತೂರಿ ನರ್ತಿಸುತ್ತ ದೀಪವನ್ನು ಪ್ರದಕ್ಷಿಣೆ ಮಾಡುತ್ತದೆ. ವಾದ್ಯದ ನಾದಕ್ಕನುಗುಣವಾಗಿ ಚಾಮರಗಳನ್ನು ಬೀಸುತ್ತ ಆವೇಶಭರಿತರಾಗಿ ನರ್ತಿಸುವ ದೃಶ್ಯ ರಮಣೀಯವಾಗಿರುತ್ತದೆ. ನೃತ್ಯದಲ್ಲಿ

ಹಾಡಿರುವುದಿಲ್ಲ. ಆದರೆ ನರ್ತಿಸುವಾಗ ನಮ್ಮ ತಂದೆ, ನಮ್ಮ ತಾಯಿ, ನಮ್ಮ ಕುಲದೈವ ಎಂದು ಆವೇಶಭರಿತರಾಗಿ ಕೇಕೆ ಹಾಕುತ್ತಿರುತ್ತಾರೆ.

ಗೌಳಿಗರ ಕುಣಿತ

ಮಲೆನಾಡಿನ ಭಾಗಗಳಲ್ಲಿ ಪ್ರಚಲಿತವಿರುವ ಕೋಲಾಟದಲ್ಲಿ ಬೊಳಕಾಟದ ಛಾಯೆ ಕಂಡುಬರುತ್ತದೆ. ಈ ಆಟ ಮೊದಲಿಗೆ ಇಲ್ಲೂ ಪ್ರಚಾರದಲ್ಲಿದ್ದು ಇದನ್ನು ನಾಡಿಗರ ಕುಣಿತವೆಂದು ಕರೆಯುತ್ತಿದ್ದಂತೆ ತಿಳಿಯುತ್ತದೆ. (ಎ.ಎಚ್.)

ಸಾಹಿತ್ಯಪ್ರಧಾನವಾದ ಯಕ್ಷಗಾನ ಬಯಲಾಟಗಳಲ್ಲೂ ಕರಪಾಲ ಮೇಳ (ನೋಡಿ), ಚೌಡಿಕೆ ಮೇಳ (ನೋಡಿ), ಜೋಗಿಗಳ ಮೇಳ ಮುಂತಾದುವುಗಳಲ್ಲೂ ನೃತ್ಯ ಪ್ರಮುಖವಾಗಿಯೇ ಬರುತ್ತದೆ. ಉತ್ತರ ಕರ್ನಾಟಕದ ಗೊಂದಲಿಗರು (ನೋಡಿ) ನಡೆಸುವ ಮೇಳ ಕಥಾ ಪ್ರಧಾನವಾದುದು. ಕರಪಾಲ ಮೇಳ, ಚೌಡಿಕೆ ಮೇಳಗಳಂತೆ ಸಾಹಿತ್ಯ, ಸಂಗೀತ, ಕುಣಿತಗಳು ಇಲ್ಲಿ ಮುಪ್ಪುರಿಗೊಂಡಿರುತ್ತವೆ. ಕಥಾನಿರೂಪಣೆಯ ನಡುವೆ ಹಾಡು, ಕುಣಿತ ಇರುತ್ತವೆ. ಸಮಗ್ರರಾತ್ರಿ ಜನರ ಆಸಕ್ತಿಯನ್ನು ಹಿಡಿದಿಡಬೇಕಾದ ಹೊಣೆಗಾರಿಕೆ ಈ ಕಲೆಗಳದು. ಆದುದರಿಂದಲೇ ಕಥಾಮಾಧ್ಯಮ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಯಕ್ಷಗಾನ ಬಯಲಾಟಗಳು, ತೊಗಲುಗೊಂಬೆ ಆಟ (ನೋಡಿ), ಸೂತ್ರದಗೊಂಬೆ ಆಟ (ನೋಡಿ), ಶ್ರೀಕೃಷ್ಣಪಾರಿಜಾತ (ನೋಡಿ) ಮುಂತಾದ ಮೇಳಗಳಲ್ಲೂ ನೃತ್ಯ ಮತ್ತು ಸಂಗೀತ ಕಥೆಗೆ ಅಧೀನ. ಚಿತ್ರ, ಶಿಲ್ಪ, ಸಂಗೀತ, ನೃತ್ಯ ಹೀಗೆ ಲಲಿತಕಲೆಗಳೆಲ್ಲ ಕೂಡಿಬರುವ ಜನಪದ ನಾಟಕಗಳು ತಮ್ಮದೇ ಆದ ಪ್ರತ್ಯೇಕ ವಿಭಜನೆಗೆ ಒಳಪಡುತ್ತವೆ.

ಗೊಂಡರಮಂಡಲ ಕುಣಿತ

ಜನಪದ ನಾಟಕಗಳ ಸಂಗೀತ, ಸಾಹಿತ್ಯ ಹಾಗೂ ಇತರ ಅಂಶಗಳಂತೆಯೇ ನೃತ್ಯವೂ ಗಣ್ಯವಾದುದೇ. ದೈತ್ಯಪಾತ್ರಗಳ ರೌದ್ರನೃತ್ಯ, ಸ್ತ್ರೀಪಾತ್ರಗಳ ಲಲಿತ ನೃತ್ಯ, ರಾಜಪಾತ್ರಗಳ ಗಂಭೀರನೃತ್ಯ - ಇವು ಮೂಡಲಪಾಯದಲ್ಲಿ ಅಪಾರ ವೈವಿಧ್ಯವನ್ನು ಸಾಧಿಸಿಕೊಂಡಿವೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ತೆಂಕುತಿಟ್ಟು, ಬಡಗುತಿಟ್ಟು, ಉತ್ತರ ಕರ್ನಾಟಕದ ದೊಡ್ಡಾಟ, ದಕ್ಷಿಣ ಕರ್ನಾಟಕದ ಮೂಡಲಪಾಯ, ಘಟ್ಟದ ಕೋರೆ ಯಕ್ಷಗಾನ ಸಂಪ್ರದಾಯಗಳ ಮೂಲಭೂತ ಗುಣ ಒಂದೇ ಆದರೂ ನೃತ್ಯದಲ್ಲಿ ಸಾಕಷ್ಟು ವೈವಿಧ್ಯ ಕಂಡುಬರುತ್ತದೆ. ತೆಂಕುತಿಟ್ಟಿನ ತೀವ್ರ ವೇಗದ ಸುತ್ತು ಹಾಕುವ ವೈಖರಿ, ಬಡಗುತಿಟ್ಟಿನ ಮಂಡಿಯ ಸುತ್ತು, ಮೂಡಲಪಾಯದ ಉಡಂಗ್ ಇವು ಆಯಾ ಕಲೆಗಳಿಗೆ ಮಾತ್ರ ಮೀಸಲಾದುವು. ಮೂಡಲಪಾಯದ ಸ್ತ್ರೀ ಪಾತ್ರ ಕುಳಿತ ಭಂಗಿಯಲ್ಲಿ ನೃತ್ಯವನ್ನು ಆರಂಭಿಸಿ ಕ್ರಮೇಣ ಮೇಲೆದ್ದು ನರ್ತಿಸತೊಡಗಿದರೆ ಪಡವಲಪಾಯದ ಸ್ತ್ರೀ ಪಾತ್ರಗಳು ನೇರವಾಗಿಯೇ ನೃತ್ಯವನ್ನು ಆರಂಭಿಸುತ್ತವೆ. ಇಂಥ ಕಥಾಪ್ರಧಾನ ನೃತ್ಯಗಳನ್ನು ಬಿಟ್ಟರೆ ಇನ್ನುಳಿದ ಕಲೆಗಳೆಲ್ಲ ಪ್ರಧಾನವಾಗಿ ಕುಣಿತಗಳು; ಇಲ್ಲಿ ಕೆಲವು ಕಡೆ ಸಾಹಿತ್ಯದ ಹಿನ್ನೆಲೆ ಬಂದರೂ ಅದು ಪ್ರಮುಖವಲ್ಲ. *

**ಜನಪದ ರಂಗಭೂಮಿ :** ಕರ್ನಾಟಕದ ಜನಪದ ಕಲಾಭಿವ್ಯಕ್ತಿಯ ಒಂದು ಮುಖ್ಯ ಪ್ರಕಾರವಾಗಿರುವ ರಂಗಭೂಮಿ ಕಲೆ ಬಹು ಪ್ರಾಚೀನ ಕಾಲದಿಂದಲೂ ಪ್ರಚಲಿತವಿರುವುದಲ್ಲದೆ, ಶಿಷ್ಟರಂಗಭೂಮಿಗಿಂತ ಅನೇಕ ರೀತಿಗಳಲ್ಲಿ ಭಿನ್ನವಾದ ಕೆಲವು ಅಂಶಗಳನ್ನು ಒಳಗೊಂಡಿದ್ದು ತನ್ನ ಸ್ವಂತಿಕೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಇಂದು ನಾಡಿನ ವಿವಿಧ ಭಾಗಗಳಲ್ಲಿ ಪ್ರಚಲಿತವಾಗಿರುವ ಅನೇಕ ಬಗೆಯ ರಂಗಭೂಮಿಯ ಅಭಿವ್ಯಕ್ತಿ ರೀತಿಗಳನ್ನು ಗುರುತಿಸಬಹುದಾಗಿದೆ. ಜನಪದ ರಂಗಭೂಮಿಗೆ ಸಂಬಂಧಿಸಿದಂತೆ ಯಕ್ಷಗಾನ ಬಯಲಾಟ, ಮೂಡಲಪಾಯ, ಪಡುವಲಪಾಯ, ತಾಳಮದ್ದಲೆ, ಸಣ್ಣಾಟ, ತೊಗಲುಗೊಂಬೆ ಆಟ, ಸೂತ್ರದ ಗೊಂಬೆಆಟ, ಶ್ರೀಕೃಷ್ಣ ಪಾರಿಜಾತ, ಕರಿಬಂಟ, ಕೋಡಂಗಿ - ಇವುಗಳ ಬಗ್ಗೆ ಈ ಸಂಪುಟದಲ್ಲಿ ಪ್ರತ್ಯೇಕ ಲೇಖನಗಳಿವೆ. ಪ್ರಸಕ್ತ ಲೇಖನದಲ್ಲಿ ಜನಪದ ರಂಗಭೂಮಿಯ ಪ್ರಾಚೀನತೆ ಮತ್ತು ಇಂದು ಪ್ರಚಲಿತವಾಗಿರುವ ಮುಖ್ಯ ಪ್ರಕಾರಗಳ ಸ್ಥೂಲ ಸಮೀಕ್ಷೆಯನ್ನು ಕೊಡಲಾಗಿದೆ.

**ಪ್ರಾಚೀನತೆ:** ಕನ್ನಡ ನಾಟಕ ಸಾಹಿತ್ಯದ ಪ್ರಾಚೀನತೆಯನ್ನು ಗಮನಿಸಿದರೆ ನಾಟಕ, ನಾಟಕಾಭಿನಯ, ನಾಟಕಶಾಲೆ, ನಟ, ಪಗರಣ ಮುಂತಾದ ಶಬ್ದಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಕನ್ನಡದಲ್ಲಿ ಶಿಷ್ಟ ನಾಟಕ ಸಾಹಿತ್ಯದ ಚರಿತ್ರೆ ಖಚಿತವಾಗಿ ಆರಂಭವಾಗುವುದು ಹದಿನೇಳನೆಯ ಶತಮಾನದಿಂದ, ಸಿಂಗರಾರ್ಯನ ಮಿತ್ರವಿಂದಾಗೋವಿಂದ ರಚಿತವಾದ ಮೇಲೆ. ಆದರೆ ಜನಪದ ರಂಗಭೂಮಿಗೆ ಪ್ರಾಚೀನ ಪರಂಪರೆ ಇದ್ದಂತೆ ತೋರುತ್ತದೆ.

ಈ ಸಂದರ್ಭದಲ್ಲಿ ಪ್ರಾಚೀನ ಕಾವ್ಯಗಳಲ್ಲಿ ಬರುವ ಪಗರಣ, ನಾಳ್ಪಗರಣ ಶಬ್ದಗಳು ಆಸಕ್ತಿಯನ್ನು ಕೆರಳಿಸುತ್ತವೆ. ಕೆಲವು ವಿದ್ವಾಂಸರು ಇವು ನಾಟಕವನ್ನು ನಿರ್ದೇಶಿಸುವ ಶಬ್ದಗಳಾಗಿರಲಾರವು ಕೇವಲ ಒಂದು ಬಗೆಯ ವಿವಿಧ ವೇಷದ ಮನರಂಜನೆಗಳಾಗಿದ್ದಿರಬಹುದೆಂದು ಊಹಿಸುತ್ತಾರೆ. ಆದರೆ ವಡ್ಡಾರಾಧನೆಯಲ್ಲಿ ಬರುವ ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಗೊಂಡು ಮರಮೊಗಂಗಳನ್ನಿಟ್ಟುಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಂ ಎಂಬ ವರ್ಣನೆಗಳನ್ನು ನೋಡಿದರೆ ನಾಟಕಕಲೆಗೆ ಮೀಸಲಾದ ಪಗರಣಿಗರು ಇದ್ದರೆಂಬ ಕಲ್ಪನೆ ಬರುತ್ತದೆ. ಅವರು ವಿವಿಧ ವೇಷಗಳನ್ನು ಧರಿಸುವ ರೀತಿಯೂ ನಾಟಕದ ಬಗೆಯನ್ನೇ ಪರಿಚಯಿಸುತ್ತದೆ. ನಯಸೇನನ 'ಮೂರು ದಿನದ ಪಗರಣಕ್ಕೆ ಗಡ್ಡ ಮೀಸೆ ಮಂಡೆಯುಂ ಬೋಳಿಸಿದರ್' ಎಂಬ ಮಾತು ಪಗರಣ ಒಂದು ನಾಟಕವೇ ಎಂಬುದನ್ನು ಖಚಿತಪಡಿಸುತ್ತದೆ. ಆದರೆ ಇವು ಜನಪದ ನಾಟಕಗಳೇ ಆಗಿದ್ದುವು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ನಾಳ್ಪಗರಣ ಬಹುಶಃ ಜನಪದ ನಾಟಕದ ಹಿನ್ನೆಲೆಯಲ್ಲಿ ಬಳಸಿದ ಶಬ್ದವಿರಬಹುದು.

ಅಲ್ಲಮ ಪ್ರಭುವಿನ ಸಮಕಾಲೀನನಾದ ಬಹುರೂಪಿ ಚೌಡಯ್ಯ ಒಳ್ಳೆಯ ನಟನಾಗಿದ್ದನಂತೆ. ಇವನು ಶಿವಲೀಲೆಯನ್ನಾಡಿ ನಾಡಿನಾದ್ಯಂತ ಶಿವಗಾಳಿಯನ್ನು ಬೀಸುವಂತೆ ಮಾಡಿದ. ವೈಷ್ಣವ ಕಥೆಗಳನ್ನು ಆಡುತ್ತಿದ್ದ ಕೊಟ್ಟರಗಿಯ ಅಚ್ಯುತನನ್ನೂ ಜಿನಕಥೆಗಳನ್ನು ಆಡುತ್ತಿದ್ದ ಚಿಕ್ಕಯ್ಯನನ್ನೂ ನಾಟಕ ಕಲೆಯಲ್ಲಿ, ಕುಣಿತದಲ್ಲಿ ಸೋಲಿಸಿದನೆಂಬ ಸಂಗತಿಯನ್ನು ತಿಳಿಸುವ

ಜನಪದ ಗೀತೆಯೊಂದನ್ನು ಉಲ್ಲೇಖಿಸಿ ವಿದ್ವಾಂಸರಾದ ಗದ್ದಗಿಮಠ ಅವರು ವಚನಕಾರರ ಕಾಲಕ್ಕೆ ಸಂಗೀತ ಸಾಹಿತ್ಯ ಹಾಗೂ ನೃತ್ಯ ಪ್ರಧಾನವಾಗಿದ್ದ ಬಯಲಾಟದ ಅಸ್ತಿತ್ವವನ್ನು ಗುರುತಿಸಿದ್ದಾರೆ.

ವೇಷಗಾರರು

ಜನಪದ ನಾಟಕಗಳ ಪ್ರಸ್ತಾಪ ಕುಮಾರವ್ಯಾಸನಲ್ಲಿಯೂ ಬರುತ್ತದೆ. ಈ ನಾಟಕಗಳನ್ನು ಅಲ್ಲಿ 'ನಾಡಾಡಿಗಳ ನಾಟಕ' ಎಂದು ಕರೆಯಲಾಗಿದೆ. ದೊಂಬಿದಾಸರು, ಬಹುರೂಪಿಗಳು ಇಂಥ' ನಾಟಕಗಳನ್ನು ಆಡಿ ಜನಪ್ರಿಯಗೊಳಿಸಿರಬೇಕು. ಕುಮಾರವ್ಯಾಸ ನೀಡುವ ಈ ನಾಟಕದ ಚಿತ್ರವನ್ನು ಗಮನಿಸಬಹುದು.

ಬೇಡನಾದನಜಾತರಿಪು ಮಾ
ತಾಡಿಸಿದನಹಿಪತಿಯನೆಲೆ ನಾ
ಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ

ಕಂಠೀರವ ನರಸರಾಜ ವಿಜಯದಲ್ಲಿ ದಶಾವತಾರ ನಾಟಕದ ಬಣ್ಣನೆ ಬರುತ್ತದೆ

ಹರಿಯ ದಶಾವತಾರದ ನಾಟಕವ ತೋರಿ
ಮೆರೆದ ಭಾಗವತರ ಚಂದ
ನರಸರಾಜೇಂದ್ರಚಂದ್ರಮನೋಲಗದಲಿ
ಪರಿಶೋಭಿಸಿದುದೇಪೇಳ್ವೆ

ಯಕ್ಷಗಾನ ಬಯಲಾಟಗಳು ಅತ್ಯಂತ ಪ್ರಾಚೀನ ಕಾಲದಿಂದಲೂ ಶಿಷ್ಟಮೂಲ ಮತ್ತು ಜನಪದ ಮೂಲಗಳೆರಡರಲ್ಲೂ ಪ್ರಚಲಿತವಾಗಿದ್ದು ಬೆಳೆದುಬಂದಂತೆ ತೋರುತ್ತದೆ. ಇದು ಶೈವ, ವೈಷ್ಣವ ಹಾಗೂ ಜೈನ - ಈ ಮೂರು ಮೂಲಗಳಲ್ಲಿಯೂ ಲಭ್ಯವಾಗುತ್ತದೆ. ಈ ಮೂರು ಸಂಪ್ರದಾಯಗಳು ವಚನಕಾರರ ಕಾಲಕ್ಕೂ ಇದ್ದವು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಶಿವರೂಪ, ದಶರೂಪ, ಜಿನರೂಪಗಳೆಂಬ ಮೂರು ವಿವಿಧ' ನೃತ್ಯನಾಟಕ ಹಾಗೂ ಈ ಸಂಪ್ರದಾಯದ ಮುಖ್ಯವಾದ ಮದ್ದಲೆಗಳ ಪ್ರಸ್ತಾಪ ಕೆಲವು ತ್ರಿಪದಿಗಳಲ್ಲಿ ಸ್ಪಷ್ಟವಾಗಿ ಬಂದಿದೆ. ಯಕ್ಷಗಾನ ಎಂಬ ಪದದ ಪ್ರಯೋಗವೂ ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುತ್ತದೆ. ನಾಗಚಂದ್ರನ ಮಲ್ಲಿನಾಥ' ಪುರಾಣದಲ್ಲಿ ಅಮರಿಯರೇಂ ಯಕ್ಷಾಂದೋಳಮನಾಡುವ ಮಾಣ್ಕೆಯಿಂ ಮನಂಗೊಳಿಸಿದರೋ: ಮನಂ ಬಿಡೆ ಯಕ್ಕಲಗಾಣನಂದದಿಂ ಎಂಬ ಸಾಲುಗಳು ಸ್ಪಷ್ಟವಾಗಿ ಯಕ್ಷಗಾನವನ್ನೇ ನಿರ್ದೇಶಿಸುತ್ತವೆ. ಅಗ್ಗಳನ ಚಂದ್ರಪ್ರಭ'ಪುರಾಣದಲ್ಲಿ 'ಲೀಲೆಯಿನೆಕ್ಕಲಗಾಣಮನೋರ್ವನಂ ಕೇಳುತ್ತಮಿರ್ದಂ' ಎಂಬ ಮಾತು ಬರುತ್ತದೆ.

ಯಕ್ಷಗಾನವೇ ಬಹುಶಃ ಏಕಮಾತ್ರ ನೃತ್ಯನಾಟಕವಾಗಿ ಕರ್ನಾಟಕದಲ್ಲಿ ಉಳಿದು ಬಂದಿವೆ ಎನ್ನಬಹುದು. ನಾಟಕ ಎಂದಾಗ ಯಕ್ಷಗಾನವೇ ನಮ್ಮ ಅತ್ಯಂತ ಪ್ರಾಚೀನ ನಾಟಕವಾಗಿ ಕಾಣಿಸಿಕೊಳ್ಳುತ್ತದೆ. ಏಕೆಂದರೆ ಈ ಕಲೆ ಜನಪದ ಮೂಲದಲ್ಲಿ ಮಾತ್ರವಲ್ಲದೆ ಅರಮನೆ ಗುರುಮನೆಗಳಲ್ಲೂ ಪ್ರಚಲಿತವಾಗಿತ್ತು ಎಂಬ ವಿಷಯ ಇಲ್ಲಿ ಮುಖ್ಯವಾದದ್ದು. ಅನೇಕ ಪ್ರೌಢಕವಿಗಳು ಶಿಷ್ಟಕಾವ್ಯಗಳ ಜೊತೆಗೆ ಯಕ್ಷಗಾನಕಾವ್ಯಗಳನ್ನೂ ರಚಿಸಿದ ನಿದರ್ಶನಗಳಿವೆ.

ಶಿವರಾಮ ಕಾರಂತರ ಪ್ರಕಾರ ಅತ್ಯಂತ ಹಳೆಯ ಯಕ್ಷಗಾನ ಕಾವ್ಯ 1564ರದು. ದಕ್ಷಿಣ ಕನ್ನಡ ಜಿಲ್ಲೆಯ ಅಜಪುರದ ವಿಷ್ಣು ಎಂಬ ಕವಿ ಈ ಕೃತಿಯನ್ನು ರಚಿಸಿದ್ದಾನೆ. ಅಲ್ಲಿಂದೀಚೆಗೆ ಅಪಾರ ಸಂಖ್ಯೆಯ ಕೃತಿಗಳು ದೊರೆಯುತ್ತವೆ. ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳ ಕಥೆಗಳ ಜೊತೆಗೆ ಜನಪದ ಮೂಲದ ಕಾವ್ಯಗಳೂ ಈ ಸಂಪ್ರದಾಯದಲ್ಲಿ ದೊರೆಯುತ್ತವೆ. ಮೂಲತಃ ಯಕ್ಷಗಾನ ಕಲೆ ಶುದ್ಧ ಜನಪದ ಮೂಲದ್ದೇ ಆಗಿತ್ತು ಎಂಬುದಕ್ಕೆ ಕರಿಬಂಟನ ಕಥೆ'ಯಂಥ' ಅತ್ಯಂತ ಹಳೆಯ ಯಕ್ಷಗಾನ ಕಥೆಗಳು ನಿದರ್ಶನವಾಗುತ್ತವೆ. ಯಕ್ಷಗಾನ ರೂಪದಲ್ಲಿ ದೊರೆಯುವ ಕರಿಬಂಟನ ಕಥೆ'ಯ ವಸ್ತು ಜನಪದ ಮೂಲದಿಂದ ಆರಿಸಿಕೊಂಡದ್ದು. ಇದೇ ಹಳೆಯ ಯಕ್ಷಗಾನ ನಾಟಕವಾಗಿದ್ದು ಅನಂತರ ಬೇರೆ ಬೇರೆ ಧರ್ಮಗಳ ಪ್ರಭಾವದಿಂದ ವಿವಿಧ ಯಕ್ಷಗಾನ ಕೃತಿಗಳು ರಚಿತವಾಗಿರಬಹುದು. ಶುದ್ಧ ಲೌಕಿಕ ಕಲೆಯಾಗಿದ್ದ ಯಕ್ಷಗಾನ ಧ'ರ್ಮಗಳ ಪ್ರಭಾವದಿಂದ ಧಾರ್ಮಿಕ ವ್ಯಾಪ್ತಿಯನ್ನು ಪಡೆದು ಕೊಂಡಿರಬಹುದು. ಲೌಕಿಕ ಸಂಪ್ರದಾಯದ ಕರಿಬಂಟನ ಕಥೆಯನ್ನು ಅನೇಕ ಕವಿಗಳು ಯಕ್ಷಗಾನಕ್ಕೆ ಅಳವಡಿಸಿದ್ದಾರೆ. ಕೆಂಪಣ್ಣಗೌಡ ವಿರಚಿತ ಕರಿಬಂಟನ ಕಥೆಯೇ ಇತರ ಕವಿಗಳ ಕರಿಬಂಟನ ಕಥೆಗಳಿಗಿಂತ ಪ್ರಾಚೀನ ವೆಂಬಂತೆ ತೋರುತ್ತದೆ. ಏಕೆಂದರೆ ಇದರಲ್ಲಿ ಹೊಸಗನ್ನಡದ ಸಂಭಾಷಣೆಯ ಭಾಗಗಳಿಲ್ಲದೆ ಸಂಪೂರ್ಣ ಗೀತನಾಟಕವಾಗಿದೆ. ಮೂಡಲಪಾಯ ಸಂಪ್ರದಾಯದ ನಾಟಕಗಳೂ ಮೊದಲಿಗೆ ಗೀತನಾಟಕಗಳೇ ಆಗಿದ್ದು ಸಂಭಾಷಣೆ ಅನಂತರ ಸೇರಿರಬೇಕು ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಇದಾದ ಮೇಲೆ ಬಂದಿರಬಹುದಾದ ಗೊಂಬೆಯಾಟದ ಸಿದ್ಧಯ್ಯನ ಕರಿಬಂಟನ ಕಾಳಗ ಯಕ್ಷಗಾನ 1725ರಲ್ಲಿ ರಚಿತವಾಯಿತೆಂದು ತಿಳಿದುಬರುತ್ತದೆ.

ಪಡುವಲಪಾಯ ಯಕ್ಷಗಾನದ ಪ್ರಸಂಗವೊಂದರಲ್ಲಿ ಚಿಟ್ಟಾಣಿರಾಮಚಂದ್ರ ಹೆಗಡೆ

ಯಕ್ಷಗಾನ ಪರಂಪರೆಯ ಕವಿಗಳಲ್ಲಿ ದೇವಿದಾಸ, ನಾಗಪ್ಪಯ್ಯ, ಪಾರ್ತಿಸುಬ್ಬ, ಹಳೆಮಕ್ಕಿ ರಾಮ, ಹಟ್ಟಿಯಂಗಡಿ ರಾಮಭಟ್ಟ, ಅಜಪುರದ ವೆಂಕಟ, ನಿತ್ಯಾನಂದ ಅವಧೂತ, ಪಾಂಡೇಶ್ವರ ವೆಂಕಟ,

ಗೇರುಸೊಪ್ಪೆ ಶಾಂತಪ್ಪಯ್ಯ ಮುಂತಾದವರು ಮುಖ್ಯರು. ಶಿಷ್ಯಕವಿಗಳಲ್ಲಿ ಮುದ್ದಣ ಹಾಗೂ ಅಳಿಯ ಲಿಂಗರಾಜ ಮುಖ್ಯರಾದವರು. ಅಳಿಯ ಲಿಂಗರಾಜ ಸುಮಾರು ನಲವತ್ತು ಪ್ರಸಂಗಗಳನ್ನು ರಚಿಸಿರುವಂತೆ ತಿಳಿಯುತ್ತದೆ.

ಯಕ್ಷಗಾನ ಸಂಪ್ರದಾಯದ ತಾಳಮದ್ದಲೆಯ ಪ್ರಸ್ತಾಪ 1556ರ ಬಳ್ಳಾರಿ ಜಿಲ್ಲೆಯ ಸೋಮಸಮುದ್ರದ ಲಕ್ಷ್ಮೀನಾರಾಯಣ ದೇವಾಲಯಕ್ಕೆ ದತ್ತಿ ಬಿಟ್ಟ ಶಾಸನವೊಂದರಲ್ಲಿ ಬರುತ್ತದೆ.

ಮೇಲಿನ ವಿವರಗಳಿಂದ ಯಕ್ಷಗಾನ, ಬಯಲಾಟ ಜನಪದ, ಶೈವ, ವೈಷ್ಣವ, ಜೈನ ಪರಂಪರೆಗಳಲ್ಲಿ ನಡೆದು ಬಂದುದೆಂಬ ಅಂಶವೂ ಇದು ಕರ್ನಾಟಕದಾದ್ಯಂತ ನೃತ್ಯನಾಟಕ ಹಾಗೂ ತಾಳಮದ್ದಲೆ ಎಂಬ ಎರಡು ರೂಪಗಳಲ್ಲಿ ಉಳಿದು ಬಂದುದರ ಜೊತೆಗೆ ಓದಿಸಿ ಹೇಳಬಹುದಾದ ಒಂದು ಕಾವ್ಯವೂ ಆಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಯಕ್ಷಗಾನ ಕೃತಿಗಳ ರಚನೆಯಲ್ಲಿ ಅನೇಕ ಕವಿಗಳ ಹೆಸರನ್ನೂ ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗುವುದರಿಂದ ಅದರ ಸಾಹಿತ್ಯ ಶಿಷ್ಟ ಹಾಗೂ ಜನಪದಗಳ ಮಧ್ಯಂತರದಲ್ಲಿ ವಿಶಿಷ್ಟ ಸ್ವರೂಪದಲ್ಲಿ ಉಳಿದು ಬಂದಿದೆ ಎಂಬ ಅಂಶ ಖಚಿತವಾದುದು. ಯಕ್ಷಗಾನದ ಮೇಲಿನ ಮೂರು ರೂಪಗಳು ಈಗಲೂ ಉಳಿದು ಬಂದಿವೆ ಎಂಬುದನ್ನೂ ಗಮನಿಸಬಹುದು.

ಗೊಂದಲಿಗರ ಮೇಳ

ಜನಪದ ರಂಗಭೂಮಿಯ ಮತ್ತೊಂದು ಪ್ರಮುಖ ಪ್ರಕಾರವಾದ ಸೂತ್ರದ ಬೊಂಬೆಯಾಟ ತುಂಬ ಪ್ರಾಚೀನವಾದುದು. ಸಂಸ್ಕೃತ ನಾಟಕಗಳಲ್ಲಿ ಬರುವ ಸೂತ್ರಧಾರ ಈ ಬೊಂಬೆಯಾಟಗಳ ಸೂತ್ರಧಾರನೇ. ಈ ನಾಟಕದ ಪ್ರಭಾವದಿಂದಲೇ ನಾಟಕಗಳು ಕವಲೊಡೆದಿರಬೇಕು ಅಥವಾ ಪ್ರಭಾವಿತವಾಗಿರಬೇಕು ಎಂಬ ವಾದ ಇದೆ. ಕನ್ನಡ ಸಾಹಿತ್ಯದಲ್ಲಿ ಬೊಂಬೆಯಾಟಗಳ ಸೂಚನೆ ತುಂಬ ಹಿಂದಿನಿಂದಲೇ ತೋರಿಬರುತ್ತದೆ. ಚೆನ್ನಬಸವಣ್ಣನವರ ಒಂದು ವಚನದಲ್ಲಿ 'ಸೂತ್ರದ ಬೊಂಬೆಗೆ ಪ್ರಾಣವುಂಟೆ'. ಎಂಬ ಮಾತು ಬರುತ್ತದೆ. ದಾಸಸಾಹಿತ್ಯದಲ್ಲಂತೂ ಈ ಬೊಂಬೆಯಾಟದ ಪ್ರಸ್ತಾಪ ಅನೇಕ ಸಂದರ್ಭಗಳಲ್ಲಿ ಬರುತ್ತದೆ. ಡಿಂಬದೊಳು ಕಾಂಬ ಸೂತ್ರದ ಬೊಂಬೆಯಂತೆ ಎಂಬ ಮಾತು ಕನಕದಾಸರಲ್ಲಿ ಕಂಡುಬಂದರೆ, ಬೊಂಬೆಯಾಟವನಾಡಿಸಿದ ಮಹಾಭಾರತವೆಂಬ ಮಾತು ಪುರಂದರದಾಸರಲ್ಲಿ ಕಂಡುಬರುತ್ತದೆ. ಅವರೇ ಇನ್ನೊಂದು ಕಡೆ

ನೀನೇ ಆಡಿಸದಿರಲು ಜಡ ಒನಕೆಯಾ ಬೊಂಬೆ
ನೀನಿಟ್ಟ ಸೂತ್ರದಿಂದ ಚಲಿಸುವುದು ಕೈಕಾಲು

ಎಂದು ಸ್ಪಷ್ಟವಾಗಿ ಸೂತ್ರದ ಬೊಂಬೆಯು ರಚನಾತಂತ್ರವನ್ನೂ ವಿವರಿಸಿದ್ದಾರೆ.

**ಪ್ರಕಾರಗಳು :** ಇಂದು ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ರಂಗಭೂಮಿಯ ಪ್ರಕಾರಗಳನ್ನು ಯಕ್ಷಗಾನ ಮತ್ತು ಸಣ್ಣಾಟ ಎಂಬ ಎರಡು ಮುಖ್ಯ ರೀತಿಗಳಲ್ಲಿ ವಿಂಗಡಿಸಿಕೊಳ್ಳಬಹುದು. ಇವುಗಳಲ್ಲಿ ಯಕ್ಷಗಾನ ಹೆಚ್ಚು ಜನಪ್ರಿಯವಾಗಿರುವುದಲ್ಲದೆ ಅನೇಕ ರೀತಿಯ ಪ್ರಭೇದಗಳನ್ನು ಒಳಗೊಂಡಿದೆ. ಇದು ಹೆಚ್ಚು ಕಡಿಮೆ ಕರ್ನಾಟಕದ ಎಲ್ಲ ಭಾಗಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕಂಡುಬರುತ್ತದೆ. ಸಣ್ಣಾಟದಲ್ಲೂ ಪ್ರಕಾರ ಭೇದಗಳಿದ್ದರೂ ಅವು ಕೆಲವು ಪ್ರದೇಶಗಳಿಗಷ್ಟೇ ಸೀಮಿತವಾಗಿವೆ.

**ಯಕ್ಷಗಾನ :** ಶಿವರಾಮ ಕಾರಂತರ ಪ್ರಕಾರ ಯಕ್ಷಗಾನ ಎಂಬುದು ಒಂದು ಸಂಗೀತ ಸಂಪ್ರದಾಯ. ಅವರು ಅನೇಕ ಆಧಾರಗಳ ಮೇಲೆ ಯಕ್ಷಗಾನ ಸಂಗೀತ ಸಂಪ್ರದಾಯ ಕರ್ನಾಟಕ ಸಂಗೀತಕ್ಕಿಂತ ಹಳೆಯದೆಂದೂ ಅದೊಂದು ದೇಶೀಯ ಸಂಗೀತ ಸಂಪ್ರದಾಯವೆಂದೂ ಸಾಧಿಸಿದ್ದಾರೆ. ಒಂದು ಕಾಲಕ್ಕೆ ರಾಜಾಸ್ಥಾನದ ಮನ್ನಣೆಗೂ ಪಾತ್ರವಾಗಿದ್ದ ಈ ಸಂಗೀತ ಸಂಪ್ರದಾಯ ಕ್ರಮೇಣ ಉಪೇಕ್ಷೆಗೆ ಒಳಗಾಗಿ ಜನಪದ ನಾಟಕಗಳಲ್ಲಿ ಮಾತ್ರ ಉಳಿದಿರಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ಕೆಲವು ಯಕ್ಷಗಾನ ಕವಿಗಳ ಮಾತುಗಳನ್ನೇ ಅವರು ಉಲ್ಲೇಖಿಸಿ ಕವಿಗಳು ಹೇಗೆ ಈ ಸಂಗೀತ ಸಂಪ್ರದಾಯವನ್ನು ಅನುಸರಿಸಿ ಕಾವ್ಯರಚನೆ ಮಾಡಿದರು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಮತ್ತೊಬ್ಬ ಯಕ್ಷಗಾನ ವಿದ್ವಾಂಸರಾದ ಕುಕ್ಕಿಲ ಕೃಷ್ಣಭಟ್ಟರು ಯಕ್ಷಗಾನ ಎಂಬುದಕ್ಕೆ ಬೇರೆ ರೀತಿಯ ವ್ಯಾಖ್ಯಾನವನ್ನು ನೀಡಿ ಯಕ್ಷಗಾನ ಮೇಳಗಳು ಒಂದೊಂದು ದೇವಾಲಯಕ್ಕೆ ಸಂಬಂಧಪಟ್ಟವಾಗಿದ್ದು, ದೇವಸ್ಥಾನದ ನಿತ್ಯಸೇವೆಗಳಲ್ಲಿ ಯಕ್ಷಗಾನಸೇವೆಯೂ ಒಂದಾಗಿತ್ತು ಎಂದು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ ಯಕ್ಷಗಾನ ದೇವರಸೇವೆಗೆ ಮೀಸಲಾದ ಒಂದು ಗೇಯಪ್ರಬಂಧ ಅಥವಾ ಪೂಜಾಪ್ರಬಂಧ. ಈ ಯಕ್ಷಗಾನ ಶಾಸ್ತ್ರೀಯಸಂಗೀತದಿಂದಲೇ ಹಾಡಬೇಕಾದುದೆಂಬುದು ಅವರ ಸ್ಪಷ್ಟ ಅಭಿಮತ.

ದಕ್ಷಿಣ ಕರ್ನಾಟಕ ಉತ್ತರ ಕರ್ನಾಟಕಗಳ ಪರ್ಯಂತ ಕುಣಿತ, ಕರಪಾಲ ಮೇಳಗಳು ಮೂಡಲಪಾಯ ಯಕ್ಷಗಾನಗಳ ಮೇಲೆ ಪ್ರಭಾವ ಬೀರಿರಬಹುದು. ತಾಳಧಾರಿಯಾದ ಕರಪಾಲದ ಅಯ್ಯ ಕಥೆಯನ್ನು ನಿರೂಪಿಸುತ್ತ ನಡುನಡುವೆ ಹಾಡುತ್ತ ಹಾವಭಾವಗಳನ್ನು ಪ್ರದರ್ಶಿಸುತ್ತ ಅಭಿನಯಿಸುತ್ತಾನೆ. ಅವನ ತಾಳದ ಗತ್ತಿಗೆ, ಸಹನರ್ತಕರಿಬ್ಬರು ಹಾಡಿನ ಪಾದಗಳನ್ನು ಮುಂದುವರಿಸಿ ಜೊತೆಯಲ್ಲಿ ನರ್ತಿಸುತ್ತಾರೆ. ಅವರ ನರ್ತನದ ವೈಖರಿ, ಹಾಡಿನ ರೀತಿ ಎಲ್ಲವೂ ಯಕ್ಷಗಾನಕ್ಕೆ ಸಮೀಪವಾಗಿದೆ.

ಯಕ್ಷಗಾನದ ಪ್ರಮುಖ ಪ್ರಭೇದಗಳನ್ನು ಹೀಗೆ ಗುರುತಿಸಬಹುದು:

1 ಯಕ್ಷಗಾನ ಬಯಲಾಟ: (ಅ) ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಪ್ರದೇಶ: i ಮೂಡಲಪಾಯ (ದೊಡ್ಡಾಟ, ಅಟ್ಟದಾಟ, ಯಕ್ಷಗಾನ, ಬಯಲ್ಕತೆ) ii ಘಟ್ಟದ ಕೋರೆ

(ಆ) ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ಜಿಲ್ಲೆ, ಶಿವಮೊಗ್ಗ ಜಿಲ್ಲೆಯ ಮಲೆನಾಡಿನ ಗರ್ಭ ಪ್ರದೇಶ.

ಪಡವಲಪಾಯ (ಬಡಗುತಿಟ್ಟು, ತೆಂಕುತಿಟ್ಟು)

2 ತಾಳಮದ್ದಲೆ

3 ಬೊಂಬೆಯಾಟಗಳು

(ಅ) ಸೂತ್ರದ ಬೊಂಬೆಯಾಟ

(ಆ) ತೊಗಲು ಬೊಂಬೆಯಾಟ

**ಯಕ್ಷಗಾನ ಬಯಲಾಟ :** ಕರ್ನಾಟಕ ಯಕ್ಷಗಾನ ಬಯಲಾಟಗಳು ಸಮಗ್ರ ರಾತ್ರಿ ಪ್ರದರ್ಶಿತವಾಗುವ ಕಲೆಗಳು. ಸುದೀರ್ಘವಾದ ಕಥೆಗಳಿದ್ದರೆ ಎರಡು ಮೂರು ರಾತ್ರಿ ಆಡುವ ಕಥೆಗಳೂ ಉಂಟು. ಜನಪದ ಮೂಲದ ಕರಿಬಂಟನ ಕಥೆ, ಸಾರಂಗಧರನ ಕಥೆಯಂತೆಯೇ ಶಿವಪುರಾಣ,

ಕರಾವಳಿ ಯಕ್ಷಗಾನ

ರಾಮಾಯಣ, ಮಹಾಭಾರತ, ಭಾಗವತಗಳಿಂದ ಕಥಾವಸ್ತುವನ್ನು ಸ್ವೀಕರಿಸಿ ಯಕ್ಷಗಾನ ಕೃತಿಗಳನ್ನು ರಚಿಸಿಕೊಳ್ಳಲಾಗಿರುತ್ತದೆ. ಮೂಡಲಪಾಯ ಸಂಪ್ರದಾಯದಲ್ಲಿ ಭಾಗವತರೊಬ್ಬರನ್ನು ಗೊತ್ತುಪಡಿಸಿಕೊಂಡು ಹಲವಾರು ತಿಂಗಳು ನೃತ್ಯವನ್ನೂ ಸಂಭಾಷಣೆಯನ್ನೂ ಕಲಿಯುತ್ತಾರೆ. ಈ ಭಾಗವತ ಸದಾ ಸಂಚಾರಶೀಲ. ಯಾವ ಊರಿನಲ್ಲಿ ನಾಟಕ ಕಲಿಸಬೇಕು ಆ ಊರಿಗೆ ಹೋಗಿ ಕೆಲವು ದಿನ ಅಲ್ಲಿ ನೆಲಸುತ್ತಾನೆ. ಇವನು ಬ್ರಾಹ್ಮಣ, ವೀರಶೈವ, ಒಕ್ಕಲಿಗ, ದೇವಾಂಗ, ವಿಶ್ವಕರ್ಮ - ಹೀಗೆ ಯಾವ ಜನಾಂಗದವನಾದರೂ ಆಗಿರಬಹುದು. ವಿಶ್ವಕರ್ಮ ಹಾಗೂ ದೇವಾಂಗದವರು ಈ ಕಲೆಯಲ್ಲಿ ಹೆಚ್ಚು ನಿಷ್ಣಾತರು. ಭಾಗವತ ನಾಟಕವನ್ನು ಕಲಿಸಿದ ಮೇಲೆ ಒಮ್ಮೆ ಅಥವಾ ಎರಡು ಬಾರಿ ಅದನ್ನು ಆಡಿಸಿ ಮತ್ತೊಂದು ಊರಿನಿಂದ ವೀಳೆಯವನ್ನು ಸ್ವೀಕರಿಸಿ ಕಲಿಸಲು ಅಲ್ಲಿಗೆ ಹೊರಟು ಹೋಗುತ್ತಾನೆ. ಅವನಿಗೆ ಗೊತ್ತಾದ ಸಂಭಾವನೆ ಹಾಗೂ ಊಟೋಪಚಾರಗಳ ವ್ಯವಸ್ಥೆಯನ್ನು ಕಲಿಯುವವರು ನೋಡಿಕೊಳ್ಳುತ್ತಾರೆ. ಒಮ್ಮೆ ಹೀಗೆ ಕಲಿತ ಯಕ್ಷಗಾನ ಪ್ರದರ್ಶನಕ್ಕೆ ಮುಂಚೆ, ಒಂದು ದಿನ ಗೆಜ್ಜೆಪೂಜೆಯನ್ನು ನಡೆಸುತ್ತಾರೆ. ಕಟ್ಟಲನ್ನು ಕಟ್ಟಿ ವೇಷಭೂಷಣವಿಲ್ಲದೆ ಇಡೀ ನಾಟಕದ ಅಭ್ಯಾಸವನ್ನು ಅಲ್ಲಿ ನಡೆಸುವುದಕ್ಕೆ ಗೆಜ್ಜೆಪೂಜೆ ಎನ್ನಲಾಗಿದೆ. ಯಕ್ಷಗಾನವನ್ನು ಹೀಗೆ ಪ್ರದರ್ಶಿಸಿದ ಮೇಲೆ ಮತ್ತೆ ಅದು ಮರೆತು ಹೋಗಬಹುದು. ಇನ್ನೊಮ್ಮೆ ಆಡುವ ಅವಕಾಶ ಬಂದಾಗ ಭಾಗವತ ಮತ್ತೆ ಬಂದು ಮರೆತು ಹೋದ ನೃತ್ಯ, ಮಾತುಗಾರಿಕೆಗಳನ್ನು ಸರಿಪಡಿಸಿ ಆಡಿಸಬೇಕು. ಕೆಲವು ಕಡೆ ಹೊಸ ನಾಟಕವನ್ನೇ ಕಲಿಯಬಹುದು. ನಾಟಕ ಕಲಿಕೆ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳಲ್ಲಿ ಅದೊಂದು ವೃತ್ತಿಯಾಗಿರದೆ ಹವ್ಯಾಸವಾಗಿ ಬೆಳೆದು ಬಂದಿದೆ. ಆದರೆ ಕರಾವಳಿ ಪ್ರದೇಶದ ಯಕ್ಷಗಾನ ಒಂದು ವೃತ್ತಿಯಂತೆ ಬೆಳೆದು ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ - ಈ ಮೂರು ಪ್ರದೇಶಗಳಲ್ಲಿಯೂ ಯಕ್ಷಗಾನ ಪ್ರಚಲಿತವಾಗಿದ್ದು ತುಂಬ ಜನಪ್ರಿಯವಾಗಿದೆ; ಮನರಂಜನೆಯ ಮುಖ್ಯ ಸಾಧನವಾಗಿದೆ. ಇಲ್ಲಿ ಬಡಗುತಿಟ್ಟು ಮತ್ತು ತೆಂಕುತಿಟ್ಟು ಎಂಬ ಎರಡು ಪ್ರಭೇದಗಳು ಕಂಡುಬರುತ್ತವೆ. ಬಡಗುತಿಟ್ಟು ಉತ್ತರ ಸಂಪ್ರದಾಯ. ಇದು ಉಡುಪಿ, ಕುಂದಾಪುರ, ಹೊನ್ನಾವರ ಭಾಗಗಳ ಯಕ್ಷಗಾನ. ತೆಂಕುತಿಟ್ಟು. ದಕ್ಷಿಣ ಸಂಪ್ರದಾಯ. ಇದು ಮಂಗಳೂರು, ಪುತ್ತೂರು ಹಾಗೂ ಕಾಸರಗೋಡು ಭಾಗಗಳ ಯಕ್ಷಗಾನ. ಬಡಗುತಿಟ್ಟಿನವರು ಕಿರೀಟಗಳಿಗೆ ಬದಲಾಗಿ ಬಟ್ಟೆಯನ್ನು ಸುತ್ತಿ ಮಾಡಿಕೊಂಡ ಪಗಡಿ ಎಂಬ ಅರಳಿ ಎಲೆ ಆಕಾರದ ಸಾಧನವನ್ನು ಸ್ಥಳದಲ್ಲಿಯೇ ಸಿದ್ಧಗೊಳಿಸಿಕೊಳ್ಳುತ್ತಾರೆ. ತೆಂಕುತಿಟ್ಟಿನವರು ಕಿರೀಟಗಳನ್ನು ಬಳಸುತ್ತಾರೆ. ಬಡಗಿನವರು ತಾಳವನ್ನೂ ತೆಂಕಿನವರು ಜಾಗಟೆಯನ್ನೂ ಬಳಸುತ್ತಾರೆ. ನೃತ್ಯದಲ್ಲಿಯೂ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ. ಆದರೆ ಇವೆರಡೂ ಬೇರೆ ಬೇರೆಯ ಕಲೆಗಳೇ ಎಂದು ಸಾಧಿಸಲು ಆಧಾರಗಳು ಕಡಿಮೆ.

ಯಕ್ಷಗಾನ ವೇಷಭೂಷಣಗಳು ಮೂಡಲಪಾಯ ಘಟ್ಟದ ಕೋರೆ, ತೆಂಕುತಿಟ್ಟು, ಬಡಗುತಿಟ್ಟುಗಳಲ್ಲಿ ಬೇರೆ ಬೇರೆಯ ಆಕಾರಗಳಲ್ಲಿ ಕಂಡುಬಂದರೂ ಮುಖ್ಯ ಆಭರಣಗಳು ಒಂದೇ ಬಗೆಯಲ್ಲಿ ತೋರಿಬರುತ್ತವೆ.

ಯಕ್ಷಗಾನ ಬಯಲಾಟ ಒಂದು ಗಂಡುಕಲೆ. ವೀರರಸ ಪ್ರಧಾನ ರಚನೆಗಳೇ ಯಕ್ಷಗಾನ ಕಾವ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಆಭರಣಗಳ ಕಲ್ಪನೆಯಲ್ಲೂ ವೀರೋಚಿತ ದೃಷ್ಟಿ ಇದೆ. ಮೊದಲಿಗೆ ಈ ಆಭರಣಗಳು ಲೋಹದ ಸಾಧನಗಳಾಗಿದ್ದು ಈಗ ಮರದ ವಸ್ತುಗಳು ಬಳಕೆಯಾಗುತ್ತಿವೆ. ತೆಂಕುತಿಟ್ಟು ಬಡಗುತಿಟ್ಟುಗಳು ವೃತ್ತಿನಾಟಕಗಳಾದುದರಿಂದ ಇಲ್ಲಿ ಒಡವೆವಸ್ತ್ರಗಳ ವಿಜೃಂಭಣೆ ಹೆಚ್ಚು.

ಯಕ್ಷಗಾನ ಬಯಲಾಟಗಳ ವಾದ್ಯಗಳಲ್ಲಿ ಮದ್ದಲೆ, ತಾಳ ಮುಖ್ಯ ವಾದ್ಯಗಳು. ಚಂಡೆ, ಮುಖವೀಣೆ, ಶ್ರುತಿಪೆಟ್ಟಿಗೆ ಇವು ಪೋಷಕ ವಾದ್ಯಗಳು. ಎಲ್ಲ ಪ್ರದೇಶಗಳ ಯಕ್ಷಗಾನ ಬಯಲಾಟಗಳಲ್ಲೂ ತಾಳಮದ್ದಲೆ ಅನಿವಾರ್ಯ. ಇವು ಆಕಾರದಲ್ಲಿ ಬದಲಾದರೂ ಸಂಗೀತ, ನೃತ್ಯಗಳ ದೃಷ್ಟಿಯಿಂದ ಸಾಂಪ್ರದಾಯಿಕವಾಗಿ ಬಳಸಿಕೊಂಡು ಬಂದ ವಾದ್ಯಗಳಾಗಿವೆ. ಚಂಡೆ, ಕರಾವಳಿಯ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳಲ್ಲಿ ಮಾತ್ರ ಕಾಣಬರುವ ವಾದ್ಯ. ಚಂಡೆಯ ನಾದ ಯಕ್ಷಗಾನ ಬಯಲಾಟಗಳಿಗೆ ನೃತ್ಯಸಂಗೀತಗಳಿಗೆ ವಿಶೇಷ ವಾತಾವರಣವನ್ನು ಕಲ್ಪಿಸುತ್ತದೆ; ರಮ್ಯತೆಯನ್ನು ತಂದುಕೊಡುತ್ತದೆ. ಮೂಡಲಪಾಯದಲ್ಲಿ ಚಂಡೆಯ ಸ್ಥಾನದಲ್ಲಿ ಮುಖವೀಣೆಯನ್ನು ಬಳಸಲಾಗುತ್ತದೆ. ಚಂಡೆ ಬಡಿಯುವ ವಾದ್ಯವಾದರೆ, ಮುಖವೀಣೆ ಊದುವ ವಾದ್ಯ. ಒಂದು ಅಡಿ ಉದ್ದದ ಈ ಸಣ್ಣ ವಾದ್ಯ ನೀಡುವ ನಾದ ಅದ್ಭುತವಾದುದು; ಮೋಹಕವಾದುದು. ಶ್ರುತಿಗಾಗಿ ಇತ್ತೀಚೆಗೆ ಹಾರ್ಮೋನಿಯಮ್ ಬಳಕೆಯಾಗುತ್ತಿದ್ದರೂ ಮೊದಲಿಗೆ ಶ್ರುತಿಗೆ ಬುರುಡೆಯೊಂದನ್ನು (ಪುಂಗಿ) ಬಳಸಲಾಗುತ್ತಿತ್ತು.

ಮೂಡಲಪಾಯ ಯಕ್ಷಗಾನದ ರಾವಣ

ಯಕ್ಷಗಾನ ಬಯಲಾಟಗಳಿಗೆ ರಂಗಮಂಟಪವೊಂದರ ಅಗತ್ಯವಿದೆಯೆ, ಮೊದಲಿಗೆ ಇದು ಇತ್ತೆ, ಇದ್ದರೆ ಬಯಲಾಟ ಎಂಬ ಹೆಸರು ಬರಲು ಕಾರಣವೇನು ಎಂಬ ಸಮಸ್ಯೆಗಳು ಏಳುತ್ತವೆ. ಯಕ್ಷಗಾನಗಳನ್ನು ಬೀದಿಯಲ್ಲಿ, ತೆರೆದ ಬಯಲಲ್ಲಿ ಆಡಲಾಗುತ್ತದೆಯಾದರೂ ಆಟದ

ಪ್ರದರ್ಶನಕ್ಕೆ ಒಂದು ಚೌಕಟ್ಟು ಅಗತ್ಯ. ನಾಲ್ಕು ಮೂಲೆಗೆ ನಾಲ್ಕು ಕಂಬಗಳನ್ನು ನೆಟ್ಟು ತಳಿರು ತೋರಣಗಳಿಂದ ಅದನ್ನು ಅಲಂಕರಿಸಿಕೊಂಡು ಆ ಚೌಕಟ್ಟಿನ ನಡುವೆ ನಟರು ಕುಣಿತ ಅಭಿನಯಗಳನ್ನು ಪ್ರದರ್ಶಿಸುತ್ತಿದ್ದರು. ಈ ಚೌಕಟ್ಟಿನ ಮೂರು ಕಡೆ ತೆರೆದ ಬಯಲಲ್ಲಿ ಪ್ರೇಕ್ಷಕರು ಕೂರಬಹುದು. ಹಿಂಬದಿಯಲ್ಲಿ ಭಾಗವತರು. ಪಾತ್ರಗಳು ಪ್ರವೇಶಿಸುವುದೂ ಅಲ್ಲಿಂದಲೇ. ಚೌಕಟ್ಟಿನ ನಡುವೆ ಒಂದು ವೇದಿಕೆ ಅಥವಾ ಅಟ್ಟ ಬಂದರೆ ಆಯಿತು. ಗ್ರೀಕ್ ರಂಗಭೂಮಿಯ ಸಾಮ್ಯವನ್ನು ಈ ಅಟ್ಟಗಳಲ್ಲಿ ನಾವು ನೋಡಬಹುದು. ಕರಾವಳಿಯ ಸಂಪ್ರದಾಯದಲ್ಲಿ ಈ ಬಗೆಯ ಬಯಲಾಟವನ್ನು ಅಲ್ಲಲ್ಲಿ ಈಗಲೂ ಕಾಣಬಹುದು.

ಬಸ್ವಂತಿ ಬಲ್ವಂತಿ ಸಣ್ಣಾಟ

ಮೂಡಲಪಾಯದಲ್ಲಿ ಕಟ್ಟಲು ಕಟ್ಟುವ ಸಂಪ್ರದಾಯವಿದೆ. ಈ ಕಟ್ಟಲೇ ರಂಗ. ಸೋಗೆ ಮತ್ತು ಬಿದಿರುಗಳಿಂದ ಕಟ್ಟಿ ನೆಲಕ್ಕೆ ಹಲಗೆಗಳನ್ನು ಅಳವಡಿಸಿ ಅಟ್ಟವನ್ನು ಕಟ್ಟುವರು. ಅಂಕದ ಪರದೆ ಮಾತ್ರ ಮುಂಭಾಗದಲ್ಲಿ ಇರುತ್ತದೆ. ಒಮ್ಮೆ ಆ ಪರದೆಯನ್ನು ಎತ್ತಿದರೆ ಮತ್ತೆ ಅದನ್ನು ನಾಟಕ ಮುಗಿಯುವವರೆಗೆ ಬಿಡುವಂತಿಲ್ಲ. ಕೆಲವು ನಾಟಕಗಳಿಗೆ (ದೇವೀ ಮಹಾತ್ಮೆ, ಶನಿ ಮಹಾತ್ಮೆ ಹಾಗೂ ತ್ರಿಪುರ ಸಂಹಾರ) ಎರಡು ಅಂತಸ್ತಿನ ಕಟ್ಟಲು ಇರುತ್ತದೆ. ದೇವಲೋಕ ಭೂಲೋಕಗಳ ಕಲ್ಪನೆ ಇಲ್ಲಿ ಇರುತ್ತದೆ. ರಾಮಾಯಣ ಸಂಬಂಧವಾದ ನಾಟಕವಾದರೆ ಹನುಮನ ಪಾತ್ರ ಮೇಲಿನಿಂದ ಇಳಿಯುವ ಕಲ್ಪನೆಯನ್ನು ಕೊಡಲು ಕಟ್ಟಲಿನ ತುದಿಯಿಂದ ನೆಲಕ್ಕೆ ಒಂದು ಹಗ್ಗವನ್ನು ಬಿಗಿದು ಕಟ್ಟಿರುತ್ತಾರೆ. ಈ ಪಾತ್ರ ರಂಗದ ಒಳಗೆ ಇರುವುದಿಲ್ಲ. ಅಗತ್ಯ ಬಂದಾಗ ಮಾತ್ರ ಅಲ್ಲಿಗೆ ಹೋಗಿ ಉಳಿದ ವೇಳೆ ತನಗಾಗಿ ರಂಗದ ಹೊರಗೆ ನೆಟ್ಟ ಮರದ ರೆಂಬೆಯೊಂದರ ಮೇಲೆ ಕೂರಬೇಕು.

ರಂಗಸಂಪ್ರದಾಯದಲ್ಲಿ, ಮೊದಲು ಚೌಕಿಯಲ್ಲಿ ಒಡವೆಗಳನ್ನೂ ದೇವರನ್ನೂ ಪೂಜಿಸಲಾಗುತ್ತದೆ. ಪಡುವಲಪಾಯದಲ್ಲಿ ಭಾಗವತ ಹಾಗೂ ವಾದ್ಯದವರು ರಂಗದ ಹಿಂಬದಿಯಲ್ಲಿ ಮೇಜೊಂದರ ಮೇಲೆ ಆಸೀನರಾಗುತ್ತಾರೆ. ಮೂಡಲಪಾಯದಲ್ಲಿ ಭಾಗವತ ಮತ್ತು ವಾದ್ಯದವರು ರಂಗದ ಎಡಬದಿಯಲ್ಲಿ ನಿಲ್ಲುತ್ತಾರೆ. ಭಾಗವತ ಸಭಾವಂದನೆಯನ್ನು ಮಾಡಿದ ಮೇಲೆ, ಪ್ರಾರ್ಥನಾ ಪದ್ಯಗಳನ್ನು ಆರಂಭಿಸುತ್ತಾನೆ. ವಿಘ್ನೇಶ್ವರನ ಪೂಜೆಗೆ ಗಣೇಶನ ಮುಖವಾಡವನ್ನು ಧರಿಸಿದ ಪಾತ್ರಧಾರಿಯೊಬ್ಬನನ್ನು ಪೀಠವೊಂದರಲ್ಲಿ ಕೂರಿಸಿ ಅರ್ಚಿಸಲಾಗುವುದು. ಕೆಲವು ಕಡೆ ಈ ಪಾತ್ರವೂ ನರ್ತಿಸುತ್ತದೆ. ಗಣೇಶ, ಅರ್ಜುನ ಮತ್ತು ಭಾಗವತರ ನಡುವೆ ಸರಸ ಸಂಭಾಷಣೆ ನಡೆಯುತ್ತದೆ. ಗಣೇಶನ ನಿರ್ಗಮನಾನಂತರ ಸರಸ್ವತಿಯ ಪಾತ್ರ ಬರುತ್ತದೆ. ಭಾಗವತ ಸಂಪ್ರದಾಯದ ಯಕ್ಷಗಾನಗಳಲ್ಲಿ ಬಾಲಗೋಪಾಲರು ಅನಂತರ ರಂಗದಲ್ಲಿ ಬಂದು ನರ್ತಿಸುತ್ತಾರೆ. ಪಡುವಲಪಾಯದಲ್ಲಿ ಆರಂಭದಲ್ಲಿ ಎರಡು ಸ್ತ್ರೀ ಪಾತ್ರಗಳು ಬಂದು ನರ್ತಿಸುವುದೂ ಉಂಟು. ದೇವತೆಗಳು ರಂಗದಲ್ಲಿ ಅವತರಿಸುವ ಉದ್ದೇಶ ನಾಟಕಕ್ಕೆ ಯಶಸ್ಸನ್ನು ಕೋರಲು. ಈ ಪೂರ್ವರಂಗದ ಅನಂತರ ನಾಟಕದ ಮುಖ್ಯ ಪಾತ್ರದ ಪ್ರವೇಶದೊಡನೆ ನೇರವಾಗಿ ಆರಂಭವಾಗುತ್ತದೆ.

ಯಕ್ಷಗಾನ ಬಯಲಾಟಗಳಲ್ಲಿ ವಿದೂಷಕನ ಪಾತ್ರವೂ ಮುಖ್ಯವಾದುದೇ. ವಿದೂಷಕನನ್ನು ಹನುಮನಾಯಕ, ಕೋಡಂಗಿ, ಚಾರ, ಸಾರಥಿ ಎಂಬೆಲ್ಲ ಹೆಸರುಗಳಲ್ಲಿ ಕರೆಯಲಾಗುತ್ತದೆ. ಇಲ್ಲಿನ ಈ ವಿದೂಷಕ ನಾಟಕದ ಪಾತ್ರಗಳ ಜೊತೆ ಬೆರೆತರೂ ಮುಖ್ಯಕ್ರಿಯೆಯಲ್ಲಿ ಅವನಿಗೆ ನೇರವಾದ ಸಂಬಂಧ ಇಲ್ಲ. ಅವನು ನಾಟಕದ ಪಾತ್ರಗಳಲ್ಲಿ ಒಬ್ಬನಲ್ಲ. ಆದರೆ ನಾಟಕದುದ್ದಕ್ಕೂ ಅವನಿದ್ದು ನಾಟಕಕ್ಕೆ ಚಾಲನೆಯನ್ನು ಕೊಡುತ್ತಾನೆ.

ಯಕ್ಷಗಾನ ಬಯಲಾಟಗಳಲ್ಲಿ ಅತ್ಯಂತ ಸರಳವಾದ ಎರಡು ಹೆಜ್ಜೆ ಮೂರು ಹೆಜ್ಜೆಯ ನೃತ್ಯಗಳು ಕಂಡುಬರುತ್ತವೆ. ಮೂಡಲಪಾಯದಲ್ಲಿ ಬಲಗಾಲನ್ನು ಎತ್ತಿ ಮೇಲೆ ನೆಗೆಯುವ ವೈಖರಿಯನ್ನು ಉಡಂಗ ಎನ್ನುತ್ತಾರೆ. ಪಡುವಲಪಾಯದಲ್ಲಿ ತೆಂಕುತಿಟ್ಟಿನಲ್ಲಿ ಬುಗರಿಯಂತೆ ತಿರುಗುವ ಚಮತ್ಕಾರ ಕಂಡುಬರುತ್ತದೆ. ಪಡುವಲಪಾಯದಲ್ಲಿ ಮಂಡಿಯ ಸುತ್ತು ಕಷ್ಟಸಾಧ್ಯವಾದುದು. ಸ್ತ್ರೀ ಪಾತ್ರಗಳ ನೃತ್ಯ ಮೃದು, ಲಲಿತ. ಮೂಡಲಪಾಯದಲ್ಲಿ ಕುಳಿತ ಭಂಗಿಯಲ್ಲಿ ನೃತ್ಯವನ್ನು ಆರಂಭಿಸಿ ಕ್ರಮೇಣ ಮೇಲಕ್ಕೆ ಎದ್ದು ನೃತ್ಯ ಮಾಡಲಾಗುತ್ತದೆ. ಕೆಲವೊಮ್ಮೆ ಕುಳಿತ ಭಂಗಿಯಲ್ಲಿ ಹಾಕುವ ಸ್ತ್ರೀ ಪಾತ್ರದ ಹೊರಳು ಆಶ್ಚರ್ಯಕರವಾದುದು. ಅತ್ಯಂತ ಪ್ರೀತಿಯ ವ್ಯಕ್ತಿಗಳನ್ನು ಕೆಲವೊಮ್ಮೆ ಚಂಗನೆ ಕಂಕುಳಲ್ಲಿ ಎತ್ತಿಕೊಂಡು ಕುಣಿಯುವ ಕೌಶಲ ಅದ್ಭುತವಾಗಿರುತ್ತದೆ. ಪತಿ ತನ್ನ ಪತ್ನಿಯನ್ನೂ ತಾಯಿ ತನ್ನ ಮಗುವನ್ನೂ ಈ ರೀತಿ ಎತ್ತಿಕೊಂಡು ಕುಣಿಯಬಹುದು. ಪಾತ್ರಧಾರಿ ವಯಸ್ಕನೇ ಆದರೂ ಅವನನ್ನು ಹೊತ್ತು ಕುಣಿಯುವ ರೀತಿ ಕುತೂಹಲವನ್ನುಂಟುಮಾಡುತ್ತದೆ. ಮೂಡಲಪಾಯದಲ್ಲಿ ಪ್ರೇಕ್ಷಕರಿಗೆ ಬೆನ್ನು ತೋರಿಸುವ ಸಂಪ್ರದಾಯವಿಲ್ಲ. ಪಡವಲಪಾಯದಲ್ಲಿ ಈ ನಿಯಮ ಇದ್ದಂತೆ ಇಲ್ಲ. ಯುದ್ಧಸಂದರ್ಭಗಳಲ್ಲಿ ಪಾತ್ರಧಾರಿಗಳು ಪರಸ್ಪರ ಅಭಿಮುಖವಾಗಿ ಬಿಲ್ಲು ಬಾಣವನ್ನು ಹಿಡಿದ ಭಂಗಿಯಲ್ಲಿ ನರ್ತಿಸಿ ಅನಂತರ ಪರಸ್ಪರ ಬಾಹುಗಳನ್ನು ಹಿಡಿದು ಜೋಡಿನೃತ್ಯವನ್ನು ಮಾಡುತ್ತಾರೆ.

ಸಂಗ್ಯಾ ಬಾಳ್ಯಾ

ಹಾಡಿನ ಮುಕ್ತಾಯದಲ್ಲಿ ಸೋಲಬೇಕಾದ ವ್ಯಕ್ತಿ ಕೆಳಗೆ ಕುಸಿದವನಂತೆ ಮಾಡಿ ಹಿಂದಕ್ಕೆ ಸರಿದುಕೊಳ್ಳುತ್ತಾನೆ. ಕೆಲವೊಮ್ಮೆ ಇವರಿಬ್ಬರ ನಡುವೆ ಘರ್ಷಣೆಯಾಗುವ ಸೂಚನೆಯನ್ನು ಗಮನಿಸಿ ಎರಡು ಪಾತ್ರಗಳ ನಡುವೆ ಒಂದು ಏಣಿಯನ್ನು ಅಡ್ಡಹಿಡಿಯುತ್ತಾರೆ. ಕೆಲವು ದೈವಾಂಶ ಸಂಭೂತ ಪಾತ್ರಗಳು ಭಾವಾವೇಶದಿಂದ ರಂಗದ ಮೇಲೆ ಕುಸಿಯುವುದೂ ಉಂಟು. ಅಂಥ ಸಂದರ್ಭಗಳಲ್ಲಿ ಅವರನ್ನು ನೆಲಕ್ಕೆ ಬೀಳದಂತೆ ಹಿಡಿದು ರಂಗದ ಹೊರಗೆ ಸಾಗಿಸಿ ಗಾಳಿ ಹಾಕುವುದೂ

ಉಂಟು. ಯಕ್ಷಗಾನ ಬಯಲಾಟಗಳ ಸಂಭಾಷಣೆಗಳಲ್ಲಿ ಎರಡು ಪಾಯಗಳೂ ಭಿನ್ನಭಿನ್ನ ಸಂಪ್ರದಾಯಗಳನ್ನು ಹೊಂದಿವೆ.

ಮೂಡಲಪಾಯ ಪಡುವಲಪಾಯ ಸಂಪ್ರದಾಯಗಳಂತೆಯೇ ಈ ಎರಡರ ನಡುವೆ ಘಟ್ಟದ ಮೇಲೆ ಬಯಲುಸೀಮೆ ಮಲೆಸೀಮೆಗಳ ಸಂಗಮಸ್ಥಳದಲ್ಲಿ ಘಟ್ಟದಕೋರೆ ಎಂಬ ಒಂದು ವಿಶಿಷ್ಟ ಸಂಪ್ರದಾಯ ಕಂಡುಬರುತ್ತದೆ. ತುಂಬ ಪ್ರಾಚೀನ ರೂಪದಲ್ಲಿ ಯಕ್ಷಗಾನ ಇಲ್ಲಿ ಉಳಿದುಬಂದಂತೆ ತೋರುತ್ತದೆ. ಪಡುವಲಪಾಯದ ತೆಂಕುತಿಟ್ಟಿಗೆ ಹತ್ತಿರವಾಗಿರುವ ಈ ಸಂಪ್ರದಾಯ ಬಯಲುಸೀಮೆಯ ಮಂಡ್ಯ ಜಿಲ್ಲೆಯ ಹೊಸಹೊಳಲು ಮುಂತಾದ ಕಡೆಗಳಲ್ಲಿ ಕಂಡುಬಂದಿರುವುದು ಆಶ್ಚರ್ಯಕರ. ಇಲ್ಲಿನ ನೃತ್ಯ, ಹಾಡುಗಾರಿಕೆ, ಮಾತುಗಾರಿಕೆಯ ವೈಖರಿ ಯಕ್ಷಗಾನದ ಉನ್ನತ ಕಲಾಪರಂಪರೆಯನ್ನು ಸಾರುವಂತಿದೆ.

**ತಾಳಮದ್ದಲೆ :** ಇದು ಯಕ್ಷಗಾನಗೋಷ್ಠಿ ಇದ್ದಂತೆ. ಕುಣಿತ, ರಂಗ ಹಾಗೂ ವೇಷಭೂಷಣಗಳಿಲ್ಲದೆ ಕುಳಿತೇ ಕಥೆಯನ್ನು ನಡೆಸುವ ಕಲೆಯಿದು. ಭಾಗವತರು, ವಾದ್ಯದವರು, ಮುಖ್ಯಪಾತ್ರಧಾರಿಗಳು ಎಲ್ಲರೂ ಒಂದು ಗೊತ್ತಾದ ಸ್ಥಳದಲ್ಲಿ ಕಲೆತು 'ತಾಳ-ಮದ್ದಲೆ'ಯನ್ನು ನಡೆಸುತ್ತಾರೆ. ಒಂದೊಂದು ಪಾತ್ರವನ್ನು ಒಬ್ಬೊಬ್ಬರು ಹಂಚಿಕೊಂಡು ಮಾತುಗಾರಿಕೆಯನ್ನು ನಡೆಸುತ್ತಾರೆ. ಭಾಗವತರು ಹಾಡುತ್ತಾರೆ. ಇಲ್ಲಿ ಚಂಡೆ, ಮದ್ದಳೆ, ತಾಳ ಎಲ್ಲವೂ ಇರುತ್ತವೆ. ಎರಡು ಪಾಯಗಳಲ್ಲಿಯೂ ತಾಳಮದ್ದಲೆ ಕಂಡುಬರುತ್ತದೆ. ಆದರೆ ಪಡುವಲಪಾಯದಲ್ಲಿ ಇದರ ಪ್ರಾಚುರ್ಯ ಹೆಚ್ಚು. ತಾಳಮದ್ದಲೆಗಳು ವಿಶೇಷವಾಗಿ ನಡೆಯುವುದು ಮಳೆಗಾಲದಲ್ಲಿ.

**ಬೊಂಬೆಯಾಟಗಳು :** ಯಕ್ಷಗಾನ ಬೊಂಬೆಯಾಟಗಳಲ್ಲಿ ಸೂತ್ರದ ಬೊಂಬೆಯಾಟ ಯಕ್ಷಗಾನ ಬಯಲಾಟಕ್ಕೆ ತೀರ ಹತ್ತಿರವಾದದ್ದು. ಮಾನವಪಾತ್ರಧಾರಿಗಳ ಬದಲಾಗಿ ಬೊಂಬೆಗಳನ್ನು ಇಲ್ಲಿ ಬಳಸಲಾಗುತ್ತದೆ. ವೇಷಭೂಷಣ, ಸಾಹಿತ್ಯ, ಸಂಗೀತ, ನೃತ್ಯ ಎಲ್ಲವೂ ಆಯಾ ಪ್ರದೇಶದ ಯಕ್ಷಗಾನ ಕಲೆಗೆ ಹತ್ತಿರವಾಗಿರುತ್ತದೆ. ಬೊಂಬೆಯಾಟಕ್ಕೆ ಬೇಕಾದ ರಂಗಮಂಟಪ ತುಂಬ ಚಿಕ್ಕದು. ಇದನ್ನು ಎರಡು ಮಾರು ಅಗಲ, ಎರಡು ಮಾರು ಎತ್ತರದ, ಹಿಂದಕ್ಕೆ ತುಸು ವಿಸ್ತಾರವಾದ ಬಿದಿರು ಮತ್ತು ತಡಿಕೆಗಳಿಂದ ಕಟ್ಟಿಕೊಳ್ಳುತ್ತಾರೆ. ಮುಂಭಾಗ ಬೊಂಬೆಗಳು ಕುಣಿಯುವ ಸ್ಥಳ. ಅಲ್ಲಿ ಎರಡು ಕಪ್ಪು ಪರದೆಗಳನ್ನು ಕಟ್ಟಿಕೊಳ್ಳುವರು. ಒಂದು ಪರದೆ ಭೂಮಿಯಿಂದ ಎರಡು ಮೂರು ಅಡಿ ಎತ್ತರವಿರುತ್ತದೆ. ಅದರ ಮೇಲೆ ಒಂದು ಅಡಿಯಷ್ಟು ಮುಂದಕ್ಕೆ ಅಷ್ಟೇ ಎತ್ತರದ ಮತ್ತೊಂದು ಪರದೆಯನ್ನು ಕಟ್ಟುತ್ತಾರೆ. ಈ ನಡುವಿನ ಒಂದು ಅಡಿ ಅಗಲದ ಜಾಗ ಇರುವುದು ಬೊಂಬೆಗಳನ್ನು ಇಳಿಯಬಿಟ್ಟು ಬಾಗಿ ಕುಣಿಸುವುದಕ್ಕಾಗಿ. ಬೊಂಬೆಗಳು ತೆರೆಯ ಹೊರಗೆ, ಪ್ರೇಕ್ಷಕರ ಅಭಿಮುಖವಾಗಿ ಕಾಣಿಸಿಕೊಂಡರೆ ಸೂತ್ರಧಾರರು ತೆರೆಯ ಹಿಂದೆ ಉಳಿಯುತ್ತಾರೆ. ಒಳಗೆ ಬೊಂಬೆಗಳನ್ನು ಸಾಲಾಗಿ ಜೋಡಿಸಿಕೊಂಡು ಅಗತ್ಯಬಂದಂತೆ ಎತ್ತಿಕೊಳ್ಳುತ್ತಾರೆ. ಬೊಂಬೆಗಳ ಕುಣಿತ, ತೆರೆಯ ಹಿಂದೆ ನಿಂತ ಸೂತ್ರಧಾರನನ್ನು ಅವಲಂಬಿಸುತ್ತದೆ. ಅವನು ಕುಣಿದಂತೆ ಕುಣಿಸಿದಂತೆ ಇದು ಇಲ್ಲಿ ಕುಣಿಯುತ್ತದೆ. ಎರಡು ಮೂರು ಮಂದಿ ಕುಣಿಸುವವರಿರುತ್ತಾರೆ. ಭಾಗವತರು ತಾಳಮದ್ದಲೆ ಹಾಗೂ ಹಿಮ್ಮೇಳದವರೂ ಸೇರಿದಂತೆ ಈ ಕಲಾವಿದರ ತಂಡದಲ್ಲಿ ಹತ್ತು ಹನ್ನೆರಡು ಮಂದಿ ಇರಬಹುದು. ಯಕ್ಷಗಾನ ಸಂಪ್ರದಾಯದಂತೆಯೇ ಉಳಿದ ಪ್ರದರ್ಶನ ಸಾಗುತ್ತದೆ. ಕರ್ನಾಟಕದ ಅನೇಕ ಕಡೆಗಳಲ್ಲಿ ಸೂತ್ರದ ಬೊಂಬೆಯಾಟ ಈಗಲೂ ಅಸ್ತಿತ್ವದಲ್ಲಿದೆ.

ತೊಗಲುಬೊಂಬೆಯಾಟವೂ ಯಕ್ಷಗಾನಮೇಳವೇ. ಕಿಳ್ಳೇಕ್ಯಾತರು ಎಂಬ ಸಮುದಾಯದವರು ಈ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ. ತೊಗಲುಗೊಂಬೆಗಳು ಜಿಂಕೆಯ ಅಥವಾ ಮೇಕೆಯ ಚರ್ಮದಿಂದ ತಯಾರಿಸಿದವುಗಳಾಗಿರುತ್ತವೆ. ತೊಗಲುಬೊಂಬೆಯಾಟಕ್ಕೆ ಸೂತ್ರದ ಬೊಂಬೆಯಾಟದಂತೆಯೇ ನಾಲ್ಕು ಕಡೆಯೂ ಮುಚ್ಚಿದ ಚಿಕ್ಕ ರಂಗಮಂಟಪಬೇಕು. ಮುಂಬದಿಯಲ್ಲಿ ನೆಲದಿಂದ ಎರಡು ಅಡಿ ಎತ್ತರಕ್ಕೆ ಒಂದು ಕಪ್ಪು ಬಟ್ಟೆಯನ್ನು ಕಟ್ಟುತ್ತಾರೆ. ಅದರ ಮೇಲೆ ಒಂದು ಶುಭ್ರವಾದ ಬಿಳಿಯ ಪಂಚೆಯನ್ನು ಕಟ್ಟುತ್ತಾರೆ. ಪಶ್ಚಿಮ ಸಂಪ್ರದಾಯದಲ್ಲಿ ಕುಳಿತುಕಂಡು ಬೊಂಬೆಗಳನ್ನು ಕುಣಿಸುತ್ತಾರೆ. ಎತ್ತರವಾದ ರಂಗಮಂಟಪವನ್ನು ನಿರ್ಮಿಸಿಕೊಂಡು ಮೂರು ನಾಲ್ಕು ಬಿಳಿಯ ಪಂಚೆಗಳನ್ನು ಅಳವಡಿಸಿ ತೆರೆಯನ್ನು ಸಿದ್ಧಗೊಳಿಸಿಕೊಳ್ಳುತ್ತಾರೆ. ರಂಗದ ಒಳಗೆ ಪ್ರಕಾಶವಾಗಿ ಹೊಳೆಯುವ ದೀಪವೊಂದು ಉರಿಯುತ್ತಿರುತ್ತದೆ. ಬಿಳಿಯ ಪಂಚೆಯ ಮೇಲೆ ತೆರೆಯ ಹಿಂದೆ ಬಣ್ಣದ ಬೊಂಬೆಗಳನ್ನು ಹಿಡಿದಾಗ ದೀಪದ ಬೆಳಕು ಅವುಗಳ ಮೇಲೆ ಬಿದ್ದು ಪ್ರಕಾಶದಿಂದ ಕೂಡಿ ಹೊರಗೆ ಕುಳಿತ ಪ್ರೇಕ್ಷಕರಿಗೆ ಅವು ವರ್ಣರಂಜಿತವಾಗಿ ತೋರಿ ಬರುತ್ತವೆ. ಇಬ್ಬರು ಕುಣಿಸುವರು. ಇತರರು ಹಿಮ್ಮೇಳ, ಭಾಗವಂತಿಕೆ, ಬೊಂಬೆಗಳನ್ನು ಒದಗಿಸುವಿಕೆ ಮುಂತಾದ ಕಾರ್ಯದಲ್ಲಿ ನೆರವಾಗುತ್ತಾರೆ. ಪೂರ್ವ ಸಂಪ್ರದಾಯದಲ್ಲಿ ಕಲಾವಿದರು ಬೊಂಬೆಗಳನ್ನು ಕುಣಿಸುತ್ತ ತಾವೂ ಕುಣಿಯುತ್ತಾರೆ.



ತೊಗಲುಗೊಂಬೆ ಆಟದ ರಾಕ್ಷಸಿ

**ಸಣ್ಣಾಟ :** ಕರ್ನಾಟಕದಲ್ಲಿ ಯಕ್ಷಗಾನ ಬಯಲಾಟ, ಯಕ್ಷಗಾನ, ಬೊಂಬೆಯಾಟಗಳಂತೆಯೇ ಕೆಲವು ಸಣ್ಣಾಟಗಳೂ ಕಂಡುಬರುತ್ತವೆ. ಇವು ಉತ್ತರ ಕರ್ನಾಟಕ ಹಾಗೂ ಅಲ್ಲಿಗೆ ಹತ್ತಿರವಾದ ಮಲೆನಾಡು ಭಾಗಗಳಲ್ಲಿ ಕಂಡುಬರುವುದು ಹೆಚ್ಚು. ಈ ಸಣ್ಣಾಟಗಳಲ್ಲಿ ಶ್ರೀಕೃಷ್ಣಪಾರಿಜಾತ, ಸಂಗ್ಯಾ ಬಾಳ್ಯಾ, ಅಲ್ಲಮ ಪ್ರಭು, ರಾಧಾನಾಟ ಮುಂತಾದುವು ಮುಖ್ಯವಾದವು. ಸಣ್ಣಾಟಗಳನ್ನು ಶೈವ ಸಣ್ಣಾಟಗಳೆಂದೂ ವೈಷ್ಣವ ಸಣ್ಣಾಟಗಳೆಂದೂ ಸಾಮಾಜಿಕ ಹಾಗೂ ಕಾಲ್ಪನಿಕ ಸಣ್ಣಾಟಗಳೆಂದೂ ವಿಭಜಿಸಿಕೊಳ್ಳಬಹುದು. ಇವೂ ಸಹ ಅಟ್ಟಗಳ ಮೇಲೆಯೇ ಆಡತಕ್ಕವು. ಇವೆಲ್ಲವೂ ಗೀತನಾಟಕಗಳೇ. ಎಲ್ಲ ನಾಟಕಗಳೂ ಬರೆವಣಿಗೆಯಲ್ಲಿವೆ. ಇಲ್ಲಿನ ನೃತ್ಯಕ್ಕೂ ಯಕ್ಷಗಾನ ನೃತ್ಯಕ್ಕೂ ಯಾವ ಬಗೆಯ ಸಂಬಂಧವೂ ಇಲ್ಲ. ಒಂದು ಬಗೆಯ ಲಾಸ್ಯನೃತ್ಯ ಇಲ್ಲಿ ಕಂಡುಬರುತ್ತದೆ. ವೇಷಭೂಷಣಗಳೂ ಅತ್ಯಂತ ಸರಳ. ಸಂಭಾಷಣೆಯನ್ನು ಗೀತೆಗಳ ಹಿನ್ನೆಲೆಯಲ್ಲಿ ರಚಿಸಿಕೊಳ್ಳುತ್ತಾರೆ.

ಶ್ರೀಕೃಷ್ಣಪಾರಿಜಾತ

ದಾಸರಾಟದ ಪರಂಪರೆಯಲ್ಲಿ 'ರಾಧಾನಾಟ' ಒಂದಾಗಿ ತೋರಿದರೂ ಅದು ಚಿಮಣಾ ಮತ್ತು ಗೊಡ್ಡಿ ಭೀಮಣ್ಣಾ ಇವರ ಕಥೆಗೆ ಅನಂತರ

ಜಿಗಿಯುತ್ತದೆ. ವೈವಿಧ್ಯಮಯವಾದ ಗೀತ ಕೂಟಗಳನ್ನು ಇಲ್ಲಿ ಕಾಣಬಹುದು. ಆರಂಭದಲ್ಲಿ ಬರುವ ರಾಧಾಕೃಷ್ಣರ ಪ್ರಸಂಗದಿಂದ ಇದನ್ನು ರಾಧಾನಾಟ ಎಂದು ಕರೆಯಲಾಗಿದೆ. ಅಲ್ಲಮಪ್ರಭು ಮತ್ತು ಮಾಯೆಯರಿಗೆ ಸಂಬಂಧಿಸಿದ ಸಣ್ಣಾಟವೇ ಅಲ್ಲಮಪ್ರಭು. ಗೋರಕುಂಬಾರ, ಭಕ್ತಪ್ರಹ್ಲಾದ ಮುಂತಾದ ವೈಷ್ಣವ ಸಂಪ್ರದಾಯದ ಆಟಗಳಂತೆಯೇ ಸಂಗ್ಯಾ-ಬಾಳ್ಯ, ರೂಪಾಸಿಂಗ್, ಮುಕುಂದ-ಗೋವಿಂದ ಎಂಬ ಆಟಗಳೂ ಹೆಚ್ಚು ಜನಪ್ರಿಯವಾಗಿವೆ. ಈ ಸಣ್ಣಾಟಗಳಲ್ಲೆಲ್ಲ ಹೆಚ್ಚು ಪ್ರಚಲಿತವಾಗಿರುವ ನಾಟಕ ಶ್ರೀಕೃಷ್ಣಪಾರಿಜಾತ. ಅಪರಾಳ ತಮ್ಮಣ್ಣ (ನೋಡಿ) ವಿರಚಿತ ಶ್ರೀಕೃಷ್ಣಪಾರಿಜಾತ (ಸು.1800) ಉತ್ತರ ಕರ್ನಾಟಕದ ಹಳ್ಳಿಹಳ್ಳಿಯಲ್ಲಿಯೂ ಜಾತ್ರೆ ಉತ್ಸವಗಳಲ್ಲಿಯೂ ಕಂಡುಬರುತ್ತದೆ.

ರಾಧಾನಾಟ

ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ ಈಗೀಗ ಆಧುನಿಕ ಕಂಪನಿ ನಾಟಕಗಳ ಅನುಕರಣೆಯ ಮೇಲೆ ಹುಟ್ಟಿಕೊಂಡ ಹೊಸ ನಾಟಕ ಪರಂಪರೆಯೊಂದನ್ನು ಸ್ಥಾಪಿಸಿಕೊಳ್ಳುತ್ತಿದೆ. ಈ ನಾಟಕಗಳು ಹೆಚ್ಚಾಗಿ ಪೌರಾಣಿಕ ವಸ್ತುವನ್ನೇ ಅವಲಂಬಿಸಿದ್ದರೂ ನೃತ್ಯಭಾಗ ಕಣ್ಮರೆಯಾಗಿ ಕೇವಲ ಅಭಿನಯ ಪ್ರಧಾನ ನಾಟಕಗಳಾಗಿ ಉಳಿದಿವೆ. ಸಂಗೀತ, ಸಾಹಿತ್ಯ ಈ ಯಾವ ದೃಷ್ಟಿಯಿಂದಲೂ ಇವು ಜನಪದ ನಾಟಕಗಳೆನಿಸದೆ ಪ್ರತ್ಯೇಕವಾಗಿ ಉಳಿದುಹೋಗಿವೆ. (ಜೆ.ಎಸ್.ಪಿ.)

**ಜನಪದ ವಾದ್ಯಗಳು :** ಯಾವ ಸಂಗೀತಕ್ಕೂ ಶ್ರುತಿ ಮತ್ತು ಲಯ ಮುಖ್ಯವಾದುವು. ಜನಪದ ಸಂಗೀತಗಾರರಿಗೆ ಶ್ರುತಿ ಲಯ ತಾಳ ಇವು ಮೂರೂ ಮುಖ್ಯ. ತಮ್ಮ ಸಂಗೀತಕ್ಕೆ ಪೋಷಕಗಳಾಗಿ ಅವರು ಬಗೆಬಗೆಯ ಮಿಡಿಯುವ, ಊದುವ, ಬಡಿಯುವ ವಾದ್ಯಗಳನ್ನು ಸೃಷ್ಟಿಮಾಡಿಕೊಂಡಿದ್ದಾರೆ. ಇವೇ ಜನಪದ ವಾದ್ಯಗಳು. ಸಂಗೀತವಿಲ್ಲದ ಯಾವ ಕುಣಿತವೂ ಇಲ್ಲ. ಒಂದೊಂದು ಬಗೆಯ ಆಟ ಕುಣಿತ ಮೇಳಗಳಲ್ಲಿ ಒಂದು, ನಾಲ್ಕು, ಹತ್ತು ಹೀಗೆ ಸಂಗೀತವಾದ್ಯಗಳಿರುತ್ತವೆ. ಹಾಡುವ ಕುಣಿಯುವ ಜನಪದ ಮೇಳಗಳ ಸಂಖ್ಯೆ ಕಡೆಯ ಪಕ್ಷ ಅರವತ್ತು ಪ್ರಕಾರಗಳಾದರೂ ಇವೆ. ಇವುಗಳಲ್ಲೆಲ್ಲ ಜನಪದ ವಾದ್ಯಗಳನ್ನು ಉಪಯೋಗಿಸುತ್ತಾರೆ.

ಜನಪದ ಕಲೆಗಳಲ್ಲಿ ಸಂಗೀತ ವಾದ್ಯಗಳನ್ನು ಎರಡು ಬಗೆಯಲ್ಲಿ ಉಪಯೋಗಿಸುವುದು ಕಂಡುಬರುತ್ತದೆ. ಒಂದು, ಹಾಡುವಾಗ ಬಾಯಿಧ್ವನಿಯೊಂದಿಗೆ ಉಪಯೋಗಿಸುವುದು. ಮತ್ತೊಂದು, ಬರಿಯ ವಾದ್ಯ ಸಂಗೀತ. ಇದು ವಾದ್ಯಗಾನಕ್ಕಷ್ಟೇ ಮೀಸಲಾದುದು. ಅಲ್ಲದೆ ಇಂಥ ಆಟಕ್ಕೆ ಇಂಥ ವಾದ್ಯಗಳನ್ನೇ ಉಪಯೋಗಿಸಬೇಕೆಂಬ ವಾಡಿಕೆ ಇದೆ. ಅನೇಕ ವಾದ್ಯಗಳು ಅನೇಕ ಪ್ರಕಾರದ ಮೇಳಗಳಿಗೆ ಸರಿಹೋಗುವುದರಿಂದ, ಸ್ವರಮೇಳ ಕೆಡದಂತೆ ಯಾವ ವಾದ್ಯ ಬೇಕೋ ಅದನ್ನು ಉಪಯೋಗಿಸುತ್ತಾರೆ.

ಈಗ ದೊರೆಯುವ ಜನಪದ ವಾದ್ಯಗಳ ಸಂಖ್ಯೆ ತಕ್ಕಮಟ್ಟಿಗೆ ವಿಪುಲವಾಗಿದೆ. ಹಿಂದೆ ಇದ್ದ ಕೆಲವು ವಾದ್ಯಗಳು ಇಂದು ಮಾಯವಾಗಿವೆ. ತಂಬೂರಿ, ಕಿನ್ನರಿ, ಏಕನಾದ - ಇವು ತಂತಿವಾದ್ಯಗಳು. ಇವು ಶ್ರುತಿಗೆ ಸಹಾಯಕವಾಗುವುದರಿಂದ, ಇವುಗಳನ್ನು ಎಲ್ಲ ಸಂದರ್ಭದಲ್ಲಿಯೂ ಉಪಯೋಗಿಸಬಹುದು (ಆದರೆ ಸಾಧಾರಣವಾಗಿ ಸೋಬಾನೆ ಪದ ಮತ್ತು ಗದ್ದೆ ನಾಟಿ ಹಾಕುವಾಗ ಹೇಳುವ ಪದಗಳಿಗೆ ಯಾವ ಶ್ರುತಿಯೂ ಇಲ್ಲ). ಓಲಗ, ತುತ್ತೂರಿ, ಕೊಂಬು, ಕಹಳೆ, ಮುಖವೀಣೆ, ಕೊಳಲು, ಪಿಳ್ಳಂಗೋವಿ, ಶಂಖ ಮುಂತಾದುವು ಊದುವಾದ್ಯಗಳು. ತಮ್ಮಟೆ, ಹರೆ, ದುಡಿ, ಡೊಳ್ಳು, ಚೌಡಿಕೆ, ನಗಾರಿ, ಕಣೆ, ಕುಣಿಮಿಣಿ, ಢಾಲಿ, ಕೋಲು, ಹುಯಿಲುತಮ್ಮಟೆ, ಜಂಡೆ, ಹೆಬ್ಬರೆ, ಮದ್ದಳೆ, ಡವಣಿ, ಡಂಕ, ಡೋಲು, ಕರಡೆ, ಖಂಜರಾ, ಬೋರ್, ರೂಂಜ, ಚಂಗ, ಉಪಂಗ, ತಾಸ್, ಚೌಗಡಿ, ಹಲಗೆ, ಆವಜ, ದಿಮಿಡಿಮಿ ಮುಂತಾದವು ಬಾರಿಸುವವಾದ್ಯಗಳು. ಕರಡೆ ಈಶ್ವರ ಪೂಜೆಗೆ ಮುಖ್ಯ. ವೀರಗೀತಕ್ಕೂ ಇದು ಬೇಕು. ಬಳೆ ಗೆಜ್ಜೆ ತಾಳ ಗಂಟೆ ಕೋಲು ಜಾಗಟೆ ಇವು ಕಂಚಿನ ವಾದ್ಯಗಳು.

ಕಂಸಾಳೆ

ಚೌಡಿಕೆಯ ಹಾಡಿಕೆಯಲ್ಲಿ ನಾಲ್ಕು ಜನರಿರುತ್ತಾರೆ. ಸಣ್ಣ ನಗಾರಿ ಉಪಯೋಗಿಸುತ್ತಾರೆ. ಕೊಡವರು ಶ್ರುತಿಗೆ ಚೀಣಿ ಎಂಬ ವಾದ್ಯವನ್ನೂ ಲಂಬಾಣಿಗರು ಉಪಂಗವನ್ನೂ (ಕಂಚಿನ ತಟ್ಟೆ, ಕಡ್ಡಿ) ಬಳಸುತ್ತಾರೆ. ಈ ವಾದ್ಯಗಳನ್ನೆಲ್ಲ ಬಡಿಯಲು ಊದಲು ನುಡಿಸಲು ಅನೂಚಾನವಾಗಿ ಬಂದ ಪದ್ಧತಿ ಇದೆ. ಇವುಗಳ ಜೊತೆಗೆ ಕೊಡವರು ಸುಗ್ಗಿ ಕುಣಿತ ಮತ್ತು ಹುತ್ತರಿ ಕುಣಿತಗಳಲ್ಲಿ ಉಪಯೋಗಿಸುವ ಓಲಗ, ತಮ್ಮಟೆ ಮುಂತಾದ ವಾದ್ಯಗಳೂ ಇವೆ. ಗಂಟೆಯುನ್ನು ಗಂಟೆಹೆಳವರು ಪದ ಹೇಳುವಾಗ ಉಪಯೋಗಿಸುತ್ತಾರೆ. ಡೊಳ್ಳಿನ ವಾದ್ಯದಲ್ಲಿ ನಾಲ್ಕು ಐದು ದಪ್ಪ ಡೊಳ್ಳುಗಳನ್ನು ಒಟ್ಟಿಗೆ ಬಾರಿಸುವುದರಿಂದ ಭಯಂಕರವಾದ ಅತ್ಯುತ್ಸಾಹ ಯುತವಾದ ಸದ್ದು ಉಂಟಾಗುತ್ತದೆ. ಈ ಎಲ್ಲ ವಾದ್ಯಗಳನ್ನೂ ಸಾಧಾರಣವಾಗಿ ಜಾತ್ರೆಗಳಲ್ಲಿ ದೇವತಾ ಮೆರವಣಿಗೆ ರಥೋತ್ಸವಗಳಲ್ಲಿ



ಚೌಡಿಕೆ ವಾದ್ಯ



ನೀಲಗಾರರ ವಾದ್ಯಗಳು - ತಂಬುರಿ, ಗಗ್ಗರ, ಡಮರುಗ



ಕಿನ್ನರಿ



ದೊಂಬಿದಾಸರ ಏಕತಾರಿ



ಹೆಳವರ ಘಂಟೆ



ಕರಪಾಲಮೇಳದ ಗುಮಟೆ

ಕೇಳಬಹುದು. ಕೊಂಬು ಅತ್ಯಂತ ಮನೋಹರವಾದ ವಾದ್ಯ. ಇದರ ಆಕಾರ ಸೊಗಸಾಗಿದೆ. ಪ್ರಾರಂಭದಲ್ಲಿ ಚಿಕ್ಕದಾಗಿ ಮುಂದೆ ದಪ್ಪವಾಗಿ ಬಾಗಿ ಅಲ್ಲಿಂದ ಮುಂದೆ ಇನ್ನೂ ದಪ್ಪವಾಗಿ ಕೊನೆಯಲ್ಲಿ ಬಾಯನ್ನು ಗಾಳಿಗೆ ತೆಗೆದಿರುತ್ತದೆ. ಅದು ಒಂದೊಂದು ಕಡೆ ಬಾಗಿರುವಲ್ಲಿಗೆ ತೆಗೆಯುವಂತೆ ಮೂರು ಭಾಗ ಮಾಡಿರುತ್ತಾರೆ. ಅಷ್ಟು ಉದ್ದವನ್ನೂ ಒಟ್ಟಿಗೆ ಎತ್ತಿಕೊಂಡು ಹೋಗುವುದು ಕಷ್ಟ. ಸಾಮಾನ್ಯವಾಗಿ ಅದಕ್ಕಾಗಿ ಒಂದರೊಳಗೆ ಒಂದರಂತೆ (ಮೂರು ಭಾಗವೂ ಕೆಲವು ವೇಳೆ ಎರಡೇ ಭಾಗವೂ ಇರುವುದುಂಟು) ಸೇರಿಸಿಟ್ಟುಕೊಂಡಿದ್ದು ಊದುವಾಗ ಮಾತ್ರ ಮೂರನ್ನೂ ಕಮಾನಿನಂತೆ ಸೇರಿಸಿ, ಸಣ್ಣ ತುದಿಯನ್ನು ಬಾಯಲ್ಲಿಟ್ಟುಕೊಂಡು ಊದುತ್ತಾರೆ. ಆಗ ಅದರಿಂದ ನಾದ ಹೊರಟು ಬಾಗಿ ಬಾಗಿ ನಾಲ್ಕನೆಯ ಸ್ವರವನ್ನು ಮುಟ್ಟಿ ಪೂರ್ಣಕಂಠದಲ್ಲಿ ಮೊರೆದು ಮೊಳಗುತ್ತದೆ. ಇದರಲ್ಲಿ ಹೆಚ್ಚಿನ ಧ್ವನಿ ಹೊರಡಿಸಲು ಅನುಭವವುಳ್ಳ ನಿಪುಣ ಊದುಗಾರನಾಗಿರಬೇಕು. ಇಲ್ಲದಿದ್ದರೆ ಮುಕ್ಕಾಲು ವರ್ತುಲಾಕಾರವಾದ ಬಾಗಿ ಬಾಗಿ ಹೋಗುವ ಆ ಧ್ವನಿಯನ್ನು ಪೂರ್ತಿಯಾಗಿ ಮೊಳಗಿಸುವುದು ಸಾಧ್ಯವಿಲ್ಲ. ಕೊಂಬನ್ನು ಊದಲು ಉಸಿರುಬಲವೂ ಚೆನ್ನಾಗಿರಬೇಕು. ಶಂಖ ಮತ್ತು ಜಾಗಟೆಗಳ ಶಬ್ದವೂ ಹಾಗೆಯೇ ಮನೋಹರ. ಜನಪದ ವಾದ್ಯಗಳಲ್ಲಿ ಶಂಖದಲ್ಲಿಯಂತೆ ಘನ ಸ್ವರ ಮತ್ತಾವುದರಿಂದಲೂ ಹೊರಡುವುದಿಲ್ಲ. ಜಾಗಟೆ ಸಹ ಹುರುಪುಗೊಳಿಸುವ ವಾದ್ಯ. ಶಂಖ ಮತ್ತು ಜಾಗಟೆ ದೇವಸ್ಥಾನಗಳಲ್ಲಿಯೂ ಉಪಯೋಗವಾಗುತ್ತವೆ.



ಜುಂಜಪ್ಪನ ಗಣೆ

ಜನಪದ ವಾದ್ಯಗಳಲ್ಲಿ ಕೆಲವು ವಿಶಿಷ್ಟ ಪಂಗಡದವರು ಮಾತ್ರ ಕೆಲವು ವಿಶಿಷ್ಟ ವಾದ್ಯಗಳನ್ನು ಉಪಯೋಗಿಸುವುದು ಕಾಣಬರುತ್ತದೆ. ಕೊಡವರು ಬೊಳಕಾಟದಲ್ಲಿ ದುಡಿ ಎಂಬ ಚರ್ಮವಾದ್ಯವನ್ನು ಉಪಯೋಗಿಸುತ್ತಾರೆ. ಚೌಗಟದಲ್ಲಿ ಶ್ರುತಿ, ಸಣ್ಣ ನಗಾರಿ, ತಾಳ - ಇವು ಬಳಕೆಯಲ್ಲಿವೆ. ಚೌಡಿಕೆ ಎಂಬ ವಾದ್ಯವನ್ನು ಚೌಡಿಕೆ ಪದವನ್ನು ಹೇಳುವವರು ಮಾತ್ರ ಉಪಯೋಗಿಸುತ್ತಾರೆ. ಸೋಮನ ಕುಣಿತ (ಚೋಮನ ಕುಣಿತ)ವನ್ನು ಕುಣಿಯುವಾಗ ತಮ್ಮಟೆ ಹರೆ ಗೆಜ್ಜೆ ಮತ್ತು ಕೈಯಲ್ಲಿ ಚಾವಟಿ ಇರಬೇಕು. ಕಾರವಾರದ ಕಡೆ ಜಾಗಟೆ ಸಹ ಇರಬೇಕು. ಡೊಳ್ಳು ಮೇಳದವರು ಐದು ಆರು ಡೊಳ್ಳುಗಳನ್ನೂ ಜೊತೆಗೆ ತಾಳವನ್ನೂ ಉಪಯೋಗಿಸುತ್ತಾರೆ. ಕುರುಬರು ಬೀರೇದೇವರ ಉತ್ಸವದಲ್ಲಿ ಒಂದು ಎರಡು ಡೊಳ್ಳನ್ನೂ ಉಪಯೋಗಿಸುತ್ತಾರೆ. ಎಲ್ಲಮ್ಮನ ಜಾತ್ರೆಯಲ್ಲಿ ಜೋಗಿತಿಯರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಚೌಡಿಕೆ ವಾದ್ಯವನ್ನು ಬಳಸುತ್ತಾರೆ. ಗುಮಟೆ ವಾದ್ಯವನ್ನು ಗುಮಟೆ ಪದದವರು ಹಾಡಿನ ಜೊತೆ ಉಪಯೋಗಿಸುತ್ತಾರೆ. ಇವರು ಶ್ರುತಿಗೆ ತಂಬೂರಿಯನ್ನೂ ಉಪಯೋಗಿಸುವುದುಂಟು.

ಗೊಂದಲಿಗರ ಸಂಬಾಳ

ಡೊಳ್ಳುವಾದ್ಯವನ್ನು ಹೊಟ್ಟೆಗೆ ಕಟ್ಟಿಕೊಂಡು ತುದಿಗೆ ಬಟ್ಟೆ ಕಟ್ಟಿದ ಕೋಲಿನಿಂದ ಎರಡು ಕಡೆಯೂ ಹೊಡೆಯುತ್ತಾರೆ. ಹರೆಯನ್ನು ಬರಿ ಮರದ ತುಂಡಿನಿಂದ ತಿಕ್ಕಿದರೆ ಭರ್‌ಭರ್ ಎಂದು ಸದ್ದಾಗುತ್ತದೆ. ಕುಣಿಮಿಣಿಯನ್ನು ಕೊರಳಿಗೆ ನೇತು ಹಾಕಿಕೊಂಡು ಅಥವಾ ಹೊಟ್ಟೆಗೆ ಕಟ್ಟಿಕೊಂಡು ಎರಡು ಕೈಗಳಿಂದಲೂ ಎರಡು ಸಣ್ಣಕಡ್ಡಿಗಳಿಂದ ಹೊಡೆಯುತ್ತಾರೆ. ಅದು ಸಣ್ಣ ಧ್ವನಿಯಲ್ಲಿ ಶಬ್ದಮಾಡುತ್ತದೆ. ಡಂಕದಲ್ಲಿ ಎರಡು ತಮ್ಮಟೆಗಳಿರುತ್ತವೆ. ಸೊಂಟಕ್ಕೆ ಕಟ್ಟಿಕೊಂಡು ಎರಡು ಕೈಗಳಿಂದಲೂ ಬಾರಿಸುತ್ತಾರೆ. ಹಿತ್ತಾಳೆ ವಾದ್ಯಗಳು, ತಾಳಗಳು ಕಂಚಿನವು. ಇವುಗಳ ನುಡಿಸುವಿಕೆಯಿಂದ ಖಣಿಲ್ ನಾದವುಂಟಾಗುತ್ತದೆ. (ಜಿ.ಆರ್.ಐ.)

**ಜನಪದ ವಾಸ್ತು:** ನಾಗರಿಕ ಸಮಾಜಗಳಲ್ಲಿ ವಿಶಿಷ್ಟವಾಗಿ ಕಂಡು ಬರುವ ಸಾಮಾಜಿಕ, ರಾಜಕೀಯ, ಔದ್ಯಮಿಕ ಸಂಸ್ಥೆಗಳು, ಸಂಪತ್ತು ಕೇಂದ್ರೀಕೃತವಾಗಿರುವ ಕೆಲವು ವರ್ಗಗಳು ವ್ಯವಹಾರ ಕ್ಲಿಷ್ಟತೆ, ವಿವಿಧ ಆವಶ್ಯಕತೆಗಳು ಮುಂತಾದ ಕಾರಣಗಳಿಂದಾಗಿ ರೂಪಿಸಿಕೊಂಡಿರುವ ವಾಸ್ತುನಿರ್ಮಾಣಗಳು ದೊಡ್ಡವಾಗಿಯೂ ವೈವಿಧ್ಯಮಯವಾಗಿಯೂ ಕಲಾತ್ಮಕವಾಗಿಯೂ ಇರುತ್ತವೆಯಾಗಿ, ಇವುಗಳ ಪರಿಚಯವಿರುವ ಆಧುನಿಕ ಯುಗದಲ್ಲಿ ವಾಸ್ತು ಎಂಬ ಪದವನ್ನು ಇಂಥ' ವಿಶಿಷ್ಟ ರೀತಿಯ ಕೃತಿಗಳಿಗೇ ಬಳಸುವುದು ರೂಢಿಯಾಗಿದೆ. ನಾಗರಿಕ ಸಮಾಜದಿಂದ ಭಿನ್ನವಾಗಿರುವ ಸರಳವಾದ ಜನಪದ ಸಮಾಜಗಳಲ್ಲಿ ವಿಶಿಷ್ಟ ವಾಸ್ತುರಚನೆಗಳಿಗೆ ಆವಶ್ಯಕವಾದ ಸಂಪನ್ಮೂಲಗಳಾಗಲೀ ಅಗತ್ಯಗಳಾಗಲೀ ಇಲ್ಲದಿರುವುದರಿಂದ, ಇಲ್ಲಿಯ ಸಾಮಾನ್ಯ ರಚನೆಗಳನ್ನು ಮೇಲಿನ ಅರ್ಥದಲ್ಲಿ ವಾಸ್ತುಕೃತಿಗಳು ಎಂದು ಹೆಸರಿಸುವುದು ಅಷ್ಟು ಸಾಧುವಾಗಿ ಕಾಣುವುದಿಲ್ಲ. ಜನಪದ ನಿರ್ಮಾಣಗಳು ಬಹುಮಟ್ಟಿಗೆ ಬಿಸಿಲು ಮಳೆಯಿಂದ ರಕ್ಷಣೆಯೊದಗಿಸಿರುವ ಆವರಣಗಳು, ಅಷ್ಟೇ, ಜೋಪಡಿ, ಗುಡಿಸಲು ಮುಂತಾದವನ್ನು ಕಟ್ಟಡಗಳೆಂದು ಹೆಸರಿಸಲಾಗದು.

ಮೊದಲನೆಯದಾಗಿ ಜನಪದ ವಾಸ್ತುರಚನೆಗಳಲ್ಲಿ ಮುಖ್ಯವಾಗಿ ಕಂಡುಬರುವ ಒಂದು ಅಂಶವೆಂದರೆ - ಅವುಗಳ ಸರಳತೆ. ಎಲ್ಲ ಜನಪದ

ವಾಸ್ತು ನಿರ್ಮಾಣಗಳನ್ನೂ ಲೌಕಿಕ ಮತ್ತು ಧಾರ್ಮಿಕ ಎಂಬ ಎರಡು ಗುಂಪುಗಳಲ್ಲಿ ವಿಂಗಡಿಸಬಹುದು. ಲೌಕಿಕ ವಾಸ್ತು ಬಹುಮಟ್ಟಿಗೆ ಕುಟುಂಬಗಳ ವಾಸಗೃಹಗಳಿಗಷ್ಟೇ ಸೀಮಿತವಾಗಿರುತ್ತದೆ. ಅಪರೂಪವಾಗಿ ವಿನೋದಗೃಹಗಳು, ಗರಡಿಗಳು, ಹಲವು ಜನ ಕೂಡುವ ಚಾವಡಿಗೂ ಕಂಡುಬರುವುದುಂಟು. ದೇವಾಲಯಗಳು ಧಾರ್ಮಿಕ ರೀತಿಯ ವಾಸ್ತುಗಳು. ಇವುಗಳ ಸಂಖ್ಯೆ ಬಹು ಕಡಿಮೆ. ಒಂದೋ ಎರಡೋ ಇದ್ದರೆ ಹೆಚ್ಚು. ಬಹುಪಾಲು ಸಂದರ್ಭಗಳಲ್ಲಿ ಮರ, ನದೀ ದಡ, ಬಯಲುಗಳೇ ಪೂಜಾಸ್ಥಾನಗಳಾಗಿದ್ದು ಕೆಲವು ಗ್ರಾಮಗಳಲ್ಲಿ ದೇವಾಲಯಗಳು ಇಲ್ಲದಿರುವುದೂ ಉಂಟು. ಎಷ್ಟೋ ವೇಳೆ ಎರಡು ಪಕ್ಕಗಳಲ್ಲಿ ಎರಡು ಕಲ್ಲು ನೆಟ್ಟು, ಅದರ ತಲೆಯ ಮೇಲೆ ಒಂದು ಚಪ್ಪಡಿ ಎಳೆದು ಅದನ್ನೇ ಗುಡಿ ಎಂದು ಕರೆಯುವುದೂ ಉಂಟು. ಕಲ್ಲುಗುಂಡು ಮಾರಿ ಆಗಬಹುದಾದರೆ ಇದು ಅದರ ದೇಗುಲವಾಗುವುದರಲ್ಲಿ ಯಾವ ಅಚ್ಚರಿಯೂ ಕಾಣದು. ಒಂದೇ ದೇವಾಲಯ ಹಲವು ಗ್ರಾಮಗಳ ಧಾರ್ಮಿಕ ಆವಶ್ಯಕತೆಯನ್ನು ಪೂರೈಸುವುದೂ ಅಪರೂಪವಲ್ಲ. ಕೆಲವು ಸಂದರ್ಭಗಳಲ್ಲಿ ಈ ದೇವಾಲಯಗಳೇ ನ್ಯಾಯತೀರ್ಮಾನ, ವಿನೋದ ಮುಂತಾದ ಲೌಕಿಕ ವ್ಯವಹಾರಗಳಿಗೂ ಉಪಯೋಗವಾಗುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಜನಪದ ವಾಸ್ತುನಿರ್ಮಾಣಗಳು ಅವರ ನಿತ್ಯಜೀವನದ ಕನಿಷ್ಠ ಆವಶ್ಯಕತೆಗಳಿಗಷ್ಟೇ ಸೀಮಿತವಾಗಿರುತ್ತವೆ. ಶ್ರೀಮಂತಿಕೆ ಇಲ್ಲಿಲ್ಲ. ಆದ್ದರಿಂದ ಸಹಜವಾಗಿ ಈ ನಿರ್ಮಾಣಗಳು ಚಿಕ್ಕವಾಗಿಯೂ ವೈವಿಧ್ಯ ರಹಿತವಾಗಿಯೂ ಇರುವುದೇ ಹೆಚ್ಚು.

ಪರಿಸರದ ಗಾಢಪ್ರಭಾವ ಜನಪದ ವಾಸ್ತುರಚನೆಗಳಲ್ಲಿ ಎದ್ದು ಕಾಣುವ ಎರಡನೆಯ ಮುಖ್ಯ ಅಂಶ. ಇದನ್ನು ವಾಸ್ತು ರಚನೆಗೆ ಉಪಯೋಗಿಸುವ ವಸ್ತುಗಳಲ್ಲೂ ಮತ್ತು ರಚನೆಯ ಆಕಾರದಲ್ಲೂ ಕಾಣಬಹುದು. ನಿರ್ಮಾಣಕಾರರು ಆ ಸ್ಥಳದಲ್ಲಿ ಸುಲಭವಾಗಿ ಸಿಕ್ಕುವ ತುಟ್ಟಿಯಲ್ಲದ ವಸ್ತುಗಳನ್ನಷ್ಟೇ ಆರಿಸಿಕೊಂಡಿರುತ್ತಾರೆ. ಉದಾಹರಣೆಗೆ ಮಣ್ಣು ವಿಶೇಷವಾಗಿ ಉಪಯೋಗವಾಗಿರುವ ವಸ್ತು. ಜೊತೆಗೆ ಕಲ್ಲಿನ ಸೀಮೆಯಲ್ಲಿ ಕಲ್ಲು, ಕಾಡುಪ್ರದೇಶಗಳಲ್ಲಿ ಮರ, ಬಿದಿರು, ಸೊಪ್ಪು, ಗರಿ, ಬಯಲು ನಾಡಿನಲ್ಲಿ ಹುಲ್ಲು ಮುಂತಾದವುಗಳಲ್ಲಿ ಕಟ್ಟಿದ ಕಟ್ಟಡಗಳು ಕಂಡುಬರುತ್ತವೆ. ಚೂಪುಚಾವಣಿ, ಇಪ್ಪಾರು, ಒಪ್ಪಾರು, ಅರ್ಧಗೋಲ, ಪೀಪಾಯಿ ಇತ್ಯಾದಿ ಇಳಿಜಾರಿರುವ ನಿರ್ಮಾಣಗಳು, ಮಂಜು, ಮಳೆ ಇರುವ ಪ್ರದೇಶಗಳಲ್ಲಿದ್ದರೆ, ಮಳೆ ಬಹು ಕಡಿಮೆ ಇರುವ ಪ್ರದೇಶಗಳಲ್ಲಿ ಮಟ್ಟವಾದ ಮಣ್ಣಿನ ಮಾಳಿಗೆ ಮನೆಗಳಿರುತ್ತವೆ.

ತೀರ ಕನಿಷ್ಠ ಅಲಂಕರಣ ಜನಪದ ವಾಸ್ತುಕೃತಿಗಳಲ್ಲಿ ಕಾಣುವ ಮೂರನೆಯ ಅಂಶ. ಹೆಚ್ಚಿನವುಗಳಲ್ಲಿ ಅಲಂಕರಣದ ದೃಷ್ಟಿಯೇ ಇರುವುದಿಲ್ಲ.

ನಾಲ್ಕನೆಯದಾಗಿ ಈ ಕಟ್ಟಡಗಳು ಚಿರಕಾಲ ಸ್ಥಿರವಾಗಿ ಉಳಿಯಲೆಂದು ಕಟ್ಟಿದವುಗಳಲ್ಲ. ಇವನ್ನು ಆಗಿಂದಾಗ್ಗೆ ನವೀಕರಿಸುವುದು ಅಥವಾ ಹೊಸವನ್ನೇ ನಿರ್ಮಿಸುವುದು ಬಹುಸಾಮಾನ್ಯ. ಈ ಅಂಶಗಳನ್ನು ವಿಶ್ವದ ನಾನಾಕಡೆಗಳಲ್ಲಿ ಕಂಡುಬರುವ ಕೃತಿಗಳಲ್ಲಿ ಗಮನಿಸಬಹುದು. ಭಾರತದ ಜನಪದ ವಾಸ್ತುರಚನೆಗಳಲ್ಲೂ ಹಲವಾರು ಪರಿಸರ ನಿರ್ಧರಿತವಾದ ವೈಶಿಷ್ಟ್ಯ, ವೈವಿಧ್ಯಗಳನ್ನು ಗಮನಿಸಬಹುದು.

ಕರ್ನಾಟಕದ ಹೆಚ್ಚು ಮಳೆ ಬೀಳುವ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲೂ ಕೇರಳದ ರೀತಿಯ ಕುಳ್ಳು ಗೋಡೆಗಳು ಮತ್ತು ಬಹು ಇಳಿಜಾರಿನ ಎರಡು ಅಥ್ವಾ ನಾಲ್ಕು ಹಾರಿನ ಚಾವಣಿ ಮನೆಗಳು ಕಂಡುಬರುತ್ತವೆ. ಗೋಡೆಗಳು ಸಾಮಾನ್ಯವಾಗಿ ಮಣ್ಣು ಅಥ್ವಾ ಜಂಬಿಟ್ಟಿಗೆಯವು. ಚಾವಣಿಗಳು (ಮಂಗಳೂರು ಹೆಂಚಿನವನ್ನು ಗಮನಿಸದೇ ಹೋದಲ್ಲಿ) ವಿಶೇಷತಃ ಬಿದಿರು ಅಥ್ವಾ ಮರದ ಜಂತಿ ಹಂದರದ ಮೇಲೆ ಮುಚ್ಚಿದ, ಹುಲ್ಲು, ಗರಿ ಮುಂತಾದವುಗಳಿಂದ ಮಾಡಿದವು. ಇಲ್ಲಿಯ ಮನೆಗಳಲ್ಲಿ ಇದ್ದಿಲು ಮುಂತಾದ ಸಾಮಗ್ರಿಗಳನ್ನು ಬೆರೆಸಿ ಅರೆದು ಮಾಡಿದ ನಯಗಾರೆಯನ್ನು ನೆಲ ಮತ್ತು ಗೋಡೆಯ ಕೆಳಮಟ್ಟಗಳಿಗೆ ಹಚ್ಚುವ ರೂಢಿ ಇದೆ. ಕೆಂಪು ಕಾರಣೆಯ ಸರಳ ಅಲಂಕರಣವೂ ಉಂಟು. ಮನೆಗಳ ಮುಂದೆ ಹೆಬ್ಬಾಗಿಲ ಇಕ್ಕೆಲದಲ್ಲಿ ಜಗಲಿ, ಒಳಗೆ ಹಜಾರ ಮತ್ತು ವಿವಿಧ ಗೃಹ ಉದ್ದೇಶಗಳಿಗಾಗಿ ಬಳಸಲು ಬೇರೆ ಬೇರೆ ಕೋಣೆಗಳಿರುತ್ತವೆ. ಬಹು ಸರಳವಾದ ಗುಡಿಸಲುಗಳು ಆಕಾರದಲ್ಲಿ ಸುಮಾರು ಇದೇ ರೀತಿಯಿದ್ದರೂ ಒಳ ಆವರಣದಲ್ಲಿ ಹೆಚ್ಚು ವಿಂಗಡಣೆಗಳಿರುವುದಿಲ್ಲ.

ಉತ್ತರ ಕರ್ನಾಟಕದ ಬಯಲು ಪ್ರದೇಶ ಹಾಗೂ ದಕ್ಷಿಣ ಕರ್ನಾಟಕದ ಮಳೆ ಕಡಿಮೆ ಇರುವ ಚಿತ್ರದುರ್ಗ, ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳು ಮತ್ತು ಸುತ್ತಲ ಪ್ರದೇಶಗಳಲ್ಲಿ ಆಯಾಕಾರದ ಮಾಳಿಗೆ ಮನೆಗಳು ವಿಶೇಷ. ಇವುಗಳ ಗೋಡೆಗಳು ಹೆಚ್ಚು ಮಟ್ಟಿಗೆ ಮಣ್ಣಿನವು. ಕಲ್ಲು ವಿಶೇಷವಾಗಿ ದೊರಕುವ ಕೆಲವೆಡೆಗಳಲ್ಲಿ ಕಲ್ಲುಚೂರುಗಳನ್ನು ಜೋಡಿಸಿ ಮಾಡಿದ ಗೋಡೆಗಳೂ ಇರುತ್ತವೆ. ಹೆಬ್ಬಾಗಿಲು ಕಿರಿದು ಮತ್ತು ಕುಳ್ಳು. ಒಳಭಾಗದಲ್ಲಿ ಆವಶ್ಯಕತೆಗೆ ತಕ್ಕಂತೆ ಕೋಣೆಗಳೂ ಹಜಾರವೂ ಇರುತ್ತವೆ. ಗೋಡೆಗಳ ಮೇಲೆ ತೊಲೆ ಮತ್ತು ಅಡ್ಡಜಂತಿಗಳನ್ನು ಇಟ್ಟು ಹಂದರ ಮಾಡಿ, ಮೇಲೆ ಕಡ್ಡಿ, ಸೊಪ್ಪುಗಳನ್ನು ಜೋಡಿಸಿ, ಅದರ ಮೇಲೆ ಮಣ್ಣನ್ನು ದಪ್ಪಗೆ ಹರವಿ ಮಾಡಿದ ಚಾವಣಿ ಇರುತ್ತದೆ. ಗೋಡೆಗಳು ಮಳೆಯ ಇರುಚಲಿನಿಂದ ನೆನೆಯದಂತೆ ಅವುಗಳ ಮೇಲಂಚಿನಲ್ಲಿ ಮುಂಚಾಚುವ ಲೋವೆಕಲ್ಲುಗಳನ್ನೋ ಭೂತಾಳೆ ಪಟ್ಟಿಗಳನ್ನೋ ಜೋಡಿಸುತ್ತಾರೆ. ಮೇಲೆ ಹರವಿದ ಮಣ್ಣು ಮಳೆಯಿಂದ ಕೊಚ್ಚಿಹೋಗದಂತಿರಲೂ ಬಿದ್ದ ನೀರು ಕಟ್ಟಡಕ್ಕೆ ಅಪಾಯವಾಗದಂತೆ ಒಂದೆಡೆಯಿಂದ ಹರಿದು ಹೋಗಲೂ ಸುತ್ತಂಚಿನಲ್ಲಿ ಮಣ್ಣು ದಿಂಡನ್ನೂ ಅಲ್ಲಲ್ಲಿ ಮಣ್ಣಿನ ದೋಣಿಗಳನ್ನೂ ಒದಗಿಸಿರುತ್ತಾರೆ. ಈ ಕಟ್ಟಡಗಳಿಗೆ ಕಿಟಕಿಗಳಿರವುದಿಲ್ಲವಾದರೂ ಇದಕ್ಕೆ ಅಪವಾದಗಳೂ ಇಲ್ಲದಿಲ್ಲ. ಮನೆಗಳಿಗೆ ಮಣ್ಣುಗಾರೆ, ಸುಣ್ಣ, ಕಾರಣೆಯ ಪರಿಷ್ಕರಣವಿರುತ್ತದೆ. ಕೋಲಾರ, ಬೆಂಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಗ್ರಾನೈಟ್ ಚಪ್ಪಡಿಗಳು ಬಹುವಾಗಿ ದೊರಕುವುದರಿಂದ ಇಲ್ಲಿಯ ಮಾಳಿಗೆ ಮನೆಗಳಲ್ಲಿ ಮಣ್ಣಿನ ಬದಲು ಈ ಕಲ್ಲಿನ ಉಪಯೋಗವೇ ಹೆಚ್ಚು. ಮೊದಲು ಕಲ್ಲಿನ ಕಂಬಗಳನ್ನು ನೆಟ್ಟು, ಅದೇ ಕಲ್ಲಿನ ತೊಲೆಗಳನ್ನು ಜೋಡಿಸಿ, ಮೇಲೆ ಚಪ್ಪಡಿಗಳನ್ನು ಹಾಸುವ ಪದ್ಧತಿ ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಮಳೆ ಕಡಿಮೆ ಬೀಳುವ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾಳಿಗೆ ಮನೆಗಳಲ್ಲದೆ ವೃತ್ತಾಕಾರದ ತಳವಿನ್ಯಾಸವಿರುವ ಮನೆಗಳೂ ಇವೆ. ಇವು ವಿಶೇಷವಾಗಿ ಬಂದೇ ಕೋಣೆಯ ಮನೆಗಳು. ಗೋಡೆ ಮಣ್ಣಿನದು. ಮೇಲೆ ಬಿದಿರಿನ ಅಥವಾ ಕಡ್ಡಿಗಳ ಹಂದರದ ಮೇಲೆ ಹುಲ್ಲು ಮುಚ್ಚಿದ ಶಂಕುತಲೆಯಾಕಾರದ ಚಾವಣಿ ಇರುತ್ತದೆ.

ದಕ್ಷಿಣ ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲಿನ ಜನಪದ ನಿವಾಸಗಳು ಸಾಮಾನ್ಯವಾಗಿ ಆಯಾಕಾರದ ಮಣ್ಣು ಗೋಡೆಯ ಮನೆಗಳು. ಇವುಗಳಲ್ಲೂ ಮುಂದೆ ಬಾಗಿಲಿನ ಇಕ್ಕೆಲಗಳಲ್ಲಿ ಜಗಲಿ, ಒಳಗೆ ಹಜಾರ ಮತ್ತು ಅನೇಕ ಕೋಣೆಗಳಿರುತ್ತವೆ. ದೊಡ್ಡ ಮನೆಗಳಲ್ಲಿ ಪುಟದ ಗೋಡೆ (ಅಂದರೆ ಕಲಸಿದ ಮಣ್ಣಿನ ದಪ್ಪ ಉಂಡೆಗಳನ್ನು ಒಂದರ ಮೇಲೊಂದು ಪೇರಿಸಿ ಎತ್ತಿದ ಗೋಡೆ) ಸಾಮಾನ್ಯ. ಬಹು ಎತ್ತರವಾದ ಗೋಡೆಗಳ ಆವಶ್ಯಕತೆ ಇದ್ದಾಗ ಅಥವಾ ಚಿಕ್ಕ ಮನೆಗಳನ್ನು ಕಟ್ಟುವಾಗ ತಡಿಕೆ ಗೋಡೆಯನ್ನು ಅಂದರೆ ಬಿದಿರಿನ ಕಂಬಗಳಿಗೆ ಬಿಗಿದ ಬಿದಿರುದಬ್ಬೆಗಳ ಹಂದರದ ಮೇಲೆ ಕಲಸಿದ ಮಣ್ಣನ್ನು ಮೆತ್ತಿ ಮಾಡಿದ ತೆಳುಗೋಡೆಯನ್ನು, ಅಳವಡಿಸುವುದುಂಟು. ಮನೆಗಳ ಚಾವಣಿ ಸಾಮಾನ್ಯವಾಗಿ ಇಪ್ಪಾರು. ಪಕ್ಕದ ಗೋಡೆಗಳ ಎತ್ತರದ ಭಾಗದಲ್ಲಿ ಒಂದು ಬೆಮ್ಮರವನ್ನು ಇಟ್ಟು, ಹಾರು ಎರಡೂ ಕಡೆ ಇಳಿಜಾರಾಗಿರುವಂತೆ ಮಾಡಲಾಗಿರುತ್ತದೆ. ಈ ಹಾರುಗಳು ಬೊಂಬು, ಗಳುಗಳಿಂದ ಆದ ಹಂದರಗಳು. ಮೇಲೆ ತೆಂಗಿನ ಗರಿಯಿಂದ ಹೆಣೆದ ಮಟ್ಟಾಳೆಯನ್ನು ಅಥವಾ ಮಣ್ಣಿನ ಅರೆಕೊಳವೆ ಆಕೃತಿಯ ನಾಡ ಹೆಂಚುಗಳನ್ನು ಮುಚ್ಚಲು ಉಪಯೋಗಿಸಲಾಗುತ್ತದೆ. ಕೆಲವೆಡೆ ಸೋಗು ಮತ್ತು ಹುಲ್ಲನ್ನೂ ಬಳಸುವುದುಂಟು. ಮಣ್ಣಿನ ತಡಿಕೆ ಅಥವಾ ಪುಟದ ಗೋಡೆಗಳನ್ನು ಆಯಾಕಾರದಲ್ಲಿ ಕಟ್ಟಿ, ಒಂದು ಗೋಡೆಯನ್ನು ಎತ್ತರಕ್ಕೆ ಮಾಡಿ, ಅದಕ್ಕೆ ಸಮಕೋನದಲ್ಲಿರುವ ಗೋಡೆಗಳನ್ನು ಇಳಿಜಾರಾಗಿರುವಂತೆ ರೂಪಿಸಿ ಇದರ ಮೇಲಿನ ಚಾವಣಿ ಒಂದೇ ಕಡೆಗೆ ಇಳಿಜಾರಾಗಿರುವಂತೆ ಮಾಡಿದ ಒಪ್ಪಾರು ಕಟ್ಟಡಗಳೂ ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಇಂಥಾ ಕಟ್ಟಡಗಳನ್ನು ದನ, ಎಮ್ಮೆಗಳನ್ನು ಕಟ್ಟಲು ಕೊಟ್ಟಿಗೆಯಾಗಿ ಉಪಯೋಗಿಸುವುದೇ ಹೆಚ್ಚು. ಒಂದು ವಿಶಿಷ್ಟ ರೀತಿಯ ವಿಶೇಷವಾಗಿ ಸ್ವಲ್ಪ ಸ್ಥಿತಿವಂತರಿಗೇ ಸೇರಿದ, ತೊಟ್ಟಿಮನೆಗಳು ಕರ್ನಾಟಕದ

ಹಲವೆಡೆಗಳಲ್ಲಿವೆ. ಇವುಗಳ ರಚನಾ ವಿಧಾನ ಇತರ ಮನೆಗಳಿಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಇವುಗಳಲ್ಲಿ ಆಯಾ ಅಥವಾ ಚೌಕ ತಳವಿನ್ಯಾಸವಿದ್ದು ಮಧ್ಯೆ ಒಂದು ತೆರೆದ (ಮುಚ್ಚು ಇಲ್ಲದ) ತೊಟ್ಟಿ ಇರುತ್ತದೆ. ತೊಟ್ಟಿಯ ಸುತ್ತಲೂ ಪಡಸಾಲೆ, ಅದರ ಸುತ್ತಲೂ ಕೋಣೆಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ. ಮುಂದೆ ಮುಂಬಾಗಿಲಿನ ಇಕ್ಕೆಲಗಳಲ್ಲಿ ಜಗಲಿಗಳಿರುತ್ತವೆ. ಈ ತೊಟ್ಟಿಮನೆಗಳು ವಿಶಾಲವಾಗಿದ್ದು ಒಂದು, ಎರಡು ಅಥವಾ ಮೂರು ಅಂಕಣಗಳ ತೊಟ್ಟಿ ಮನೆಗಳು ಇತ್ಯಾದಿಯಾಗಿ ವಿವಿಧ ಪರಿಮಾಣಗಳಲ್ಲಿರುತ್ತವೆ.

ಕರ್ನಾಟಕದ ಜನಪದ ವಾಸ್ತುರಚನೆಗಳಲ್ಲಿ ವಾಸಗೃಹಗಳ ಜೊತೆಗೆ ದೇವಾಲಯಗಳೂ ಕಂಡುಬರುತ್ತವೆ. ಇವು ಶ್ರೀಮಂತ ಸಮಾಜಗಳಿಂದ ಪ್ರೋತ್ಸಾಹಿತವಾದ ರಚನೆಗಳಂತೆ ವಿಶಿಷ್ಟ ರೀತಿಯವುಗಳಲ್ಲ. ಸಾಮಾನ್ಯವಾಗಿ ಬಹು ಚಿಕ್ಕ ಏಕ ಕೋಣೆಯ ಕಟ್ಟಡಗಳು. ರಚನಾತಂತ್ರ ವಾಸಗೃಹಗಳಂತೆಯೇ. ಕೆಲವು ಗ್ರಾಮಗಳಲ್ಲಿ ಅತಿ ಕುಳ್ಳಾದ, ಕೇವಲ 3-4 ಅಡಿ ಎತ್ತರದ, ಮೂರು ಕಡೆ ಮಾತ್ರ ಗೋಡೆಗಳಿದ್ದು ಮಟ್ಟ ಚಾವಣಿಯಿಂದ ಮುಚ್ಚಿದ ಆಯಾಕಾರದ ಕಿರು ದೇವಾಲಯಗಳು ಕಂಡುಬರುತ್ತವೆ.

ಊರಿನ ಜನ ಕೆಲವೊಂದು ಸಾಮಾಜಿಕ ವ್ಯವಹಾರಗಳಿಗಾಗಿ ಸಭೆ ಸೇರಲು, ಕೆಲವು ಬಾರಿ ಹೊರಗಿನಿಂದ ಬಂದವರಿಗೆ ತಂಗುದಾಣವಾಗಿರಲು, ಮತ್ತಿತರ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗವಾಗಲು ಹಳ್ಳಿಗೊಂದು ಚಾವಡಿ ಇರುತ್ತದೆ. ಸಾಮಾನ್ಯವಾಗಿ ಇವುಗಳಿಗೆ ಮೂರು ಕಡೆ ಗೋಡೆ ಇದ್ದು ಮುಂಭಾಗ ತೆರೆದಂತಿರುತ್ತದೆ. ಗ್ರಾಮದ ಆವಶ್ಯಕತೆ, ಆರ್ಥಿಕ ಸ್ಥಿತಿ ಇತ್ಯಾದಿಗಳಿಗೆ ಅನುಗುಣವಾಗಿ ಇವು ಹಲವು ಅಂಕಣಗಳಷ್ಟು ಅಗಲವಾಗಿರುತ್ತವೆ.

ಗ್ರಾಮಗಳಲ್ಲಿ ಕಂಡುಬರುವ ಇನ್ನೊಂದು ರೀತಿಯ ಕಟ್ಟಡ ಗರಡಿ (ನೋಡಿ). ಗ್ರಾಮೀಣರ ಕಸರತ್ತಿಗಾಗಿ ನಿರ್ಮಿತವಾಗಿರುವ ಈ ಗರಡಿಮನೆಗಳಲ್ಲಿ ಒಂದು ಹಜಾರ ಮಾತ್ರ ಇರುತ್ತದೆ. ಆಯಾ ಪ್ರದೇಶದ ರೂಢಿಯಂತೆ ಮಾಳಿಗೆ ಚಾವಣಿಯೋ, ಒಪ್ಪಾರು, ಇಪ್ಪಾರು ಚಾವಣಿಯೋ ಇರುತ್ತದೆ. ಕಿಟಕಿಗಳು ಇಲ್ಲದಿರುವುದು, ಅತಿ ಕುಳ್ಳಾದ ಬಾಗಿಲು ಇವುಗಳ ವೈಶಿಷ್ಟ್ಯ. *

**ಜನಪದ ವೈದ್ಯ :** ಯಾವುದನ್ನು ಜನಸಾಮಾನ್ಯರು ಸಾಮಾನ್ಯವಾಗಿ ಹಳ್ಳಿವೈದ್ಯ ಅಥವಾ ನಾಟಿವೈದ್ಯ ಎಂದು ಕರೆಯುವರೋ ಅದನ್ನೇ ಶಾಸ್ತ್ರೀಯವಾಗಿ ಜನಪದ ವೈದ್ಯ ಎಂದು ಕರೆಯಲಾಗುತ್ತದೆ. ದಿನನಿತ್ಯದ ಜೀವನದಲ್ಲಿ ಜನಪದರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು. ಮನೆಯಲ್ಲಿ ಎತ್ತಿಗೆ ಕಾಲು ಮುರಿದರೆ, ಯಾರಿಗಾದರೂ ಹಾವು ಕಚ್ಚಿದರೆ, ಯಾರಾದರೂ ಕುಡುಗೋಲಿನಿಂದ ಕೈ ಕುಯ್ದುಕೊಂಡರೆ, ಯಾರಿಗಾದರೂ ಕತ್ತು ಉಳುಕಿದರೆ, ರೋಗರುಜಿನಗಳು ಬಂದರೆ ಆಧುನಿಕ ಆಸ್ಪತ್ರೆ ಸೌಕರ್ಯಗಳು ದೊರೆಯದಿದ್ದ ಸಂದರ್ಭಗಳಲ್ಲಿ ಅವಕ್ಕೆ ಪರಿಹಾರಗಳನ್ನೂ ಜನಪದರೇ ಕಂಡುಕೊಳ್ಳಬೇಕಾಗಿತ್ತು. ಅವರು ಪ್ರಕೃತಿಯಲ್ಲಿ ದೊರೆಯುವ ಬಗೆಬಗೆಯ ನಾರು ಬೇರುಗಳು, ಎಲೆಕಾಯಿಹಣ್ಣುಗಳು, ಪ್ರಾಣಿಜನ್ಯವಾದ ವಸ್ತುಗಳು ದಿನಬಳಕೆಯ ಸಾಮಾನ್ಯ ವಸ್ತುಗಳು - ಎಲ್ಲವನ್ನೂ ಬುದ್ಧಿವಂತಿಕೆಯಿಂದ ಬಳಸಿಕೊಂಡು ರೋಗಗಳನ್ನು ಪರಿಹರಿಸಿಕೊಳ್ಳಲು ಯತ್ನಿಸುತ್ತಿದ್ದರು. ಒಂದೊಂದು ಕಾಯಿಲೆಯನ್ನು ಗುಣಪಡಿಸಲು ಒಂದೊಂದು ಔಷಧಿ ಬಳಸಬೇಕೆಂಬುದನ್ನು ಅನುಭವದಿಂದ ಅರಿತರು. ಇದರಿಂದಾಗಿ ಹೊಸ ವಿದ್ಯೆಯೊಂದು ತಿಳಿದಂತಾಯಿತು. ಹಸ್ತಗುಣ ಚೆನ್ನಾಗಿದ್ದ ಕೆಲವರು ಈ ಕ್ರಮಗಳನ್ನು ರೂಢಿಸಿಕೊಂಡರು. ತಲೆಮಾರಿನಿಂದ ತಲೆಮಾರಿಗೆ, ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ ಈ ವಿದ್ಯೆ ಪ್ರಚುರವಾಯಿತು. ಈ ವಿದ್ಯೆಯಲ್ಲಿ ಪಾರಂಗತರಾದವರು ಆಯಾ ಪರಿಸರದಲ್ಲಿ ಹೆಚ್ಚು ಗೌರವ ಹಾಗೂ ಪ್ರಯೋಜನ ಪಡೆದರು. ಜನಪದವೈದ್ಯ ಹುಟ್ಟಿ ಬೆಳೆದು ಈ ವರೆಗೆ ಉಳಿದುಬಂದಿರುವ ಕ್ರಮ ಹೀಗೆ ಎಂದು ಹೇಳಬಹುದು. ಅನಂತರ ಈ ವೈದ್ಯ ಎಲ್ಲ ವೈದ್ಯದ ಮುಖ್ಯವಾಗಿ ಆಯುರ್ವೇದದ ಮೂಲವಾಯಿತೆನ್ನಬಹುದು.

ಮನೋವೈದ್ಯ, ಪಶುವೈದ್ಯ, ಮಕ್ಕಳವೈದ್ಯ, ಬಸುರಿ-ಬಾಣಂತಿ, ವೈದ್ಯ, ಸಾಮಾನ್ಯವೈದ್ಯ ಎಂಬ ವಿಭಾಗಗಳಲ್ಲಿ ಜನಪದ ವೈದ್ಯದ ಸ್ವರೂಪವನ್ನು ವಿವರಿಸಬಹುದು. ಇವು ಮಾತ್ರವಲ್ಲದೆ ಚಿಕ್ಕ ಪುಟ್ಟ ಶಸ್ತ್ರಚಿಕಿತ್ಸೆಗಳನ್ನೂ ಜನಪದ ವೈದ್ಯದಲ್ಲಿ ಗುರುತಿಸಲು ಸಾಧ್ಯ. ಮನೋವೈದ್ಯ ಜನಪದ ವೈದ್ಯದಲ್ಲಿ ಪ್ರಧಾನವಾದ ಸ್ಥಾನ ಪಡೆದಿದೆ. ಮನಸ್ಸಿನ ಮೇಲೆ ಪ್ರೇರಣೆ ಉಂಟುಮಾಡುವ ಪರಿಣಾಮ ಎಷ್ಟೆಂಬುದು ಮನೋವಿಜ್ಞಾನವನ್ನು ಓದಿದ ಎಲ್ಲರಿಗೂ ತಿಳಿದಿರುವ ವಿಷಯ. ಜನಪದ ವೈದ್ಯದ ವಿವರಗಳನ್ನು ಪರಿಶೀಲಿಸಿದಾಗ ಅಲ್ಲಿನ ರೋಗಗಳಿಗೆ ಪ್ರೇರಣೆಯೇ ಮೂಲವಾಗಿದ್ದು, ಮನಸ್ಸಿನ ಪರಿಣಾಮ ದೇಹದ ಮೇಲೆ ಆಗಿರುವುದರಿಂದ ಉಂಟಾಗಿರುವ ಮನೋದೈಹಿಕ ರೋಗಗಳು ಸಾಕಷ್ಟಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ರೀತಿಯ ರೋಗಗಳ ಲಕ್ಷಣಗಳ ವಿವರ, ಚಿಕಿತ್ಸಾಕ್ರಮ, ಇವುಗಳ ಸಂಗ್ರಹ ಹಾಗೂ ಅಧ್ಯಯನ ಜನಪದ ವೈದ್ಯದಲ್ಲಿ ಪ್ರಾಮುಖ ಶಾಖೆಯಾಗುತ್ತದೆ. ಮಂತ್ರ, ಮಾಟ, ದೃಷ್ಟಿತೆಗೆಯುವುದು, ದೆವ್ವ ಬಿಡಿಸುವುದು, ದೇವರ ಪೂಜೆ ಮಾಡಿ ತೀರ್ಥ ಕೊಡುವುದು ಮೊದಲಾದ ಸಂದರ್ಭಗಳಲ್ಲೆಲ್ಲ ಜನಪದ ವೈದ್ಯರು ರೋಗಿಗಳಿಗೆ ಕೊಡುವುದು ಮನೋಚಿಕಿತ್ಸೆ ಎಂದೇ ಹೇಳಬಹುದು. ಉದಾಹರಣೆಗೆ ಕೆಟ್ಟ ಕಣ್ಣಿನಿಂದ ಉಂಟಾದ ದೃಷ್ಟಿದೋಷವನ್ನು ಪರಿಹರಿಸಲು ಜನಪದರು ಮಾಡುವ ಚಿಕಿತ್ಸೆಗಳನ್ನು ಗಮನಿಸಬಹುದು. ಕೆಲವು ಜನರಲ್ಲಿ ಕೆಟ್ಟ ಕಣ್ಣು ಉಂಟೆಂದೂ ಅಂಥ ಜನ ಮಕ್ಕಳನ್ನು ದೃಷ್ಟಿಸಿ ನೋಡಿದಾಗ ಅವಕ್ಕೆ ಹೊಟ್ಟೆನೋವು ಬರುವುದೆಂದೂ ನಂಬುತ್ತಾರೆ. ಈ ನಂಬಿಕೆಯೇ ಒಂದು 'ಪ್ರೇರಣೆ'ಯಾಗಿ ಪರಿಣಮಿಸಿ ದೇಹದ ಮೇಲೆ ಪರಿಣಾಮ ಬೀರುತ್ತದೆ. ಇಂಥ ಸಂದರ್ಭದಲ್ಲಿ ಕೆಟ್ಟಕಣ್ಣಿನ ದೃಷ್ಟಿದೋಷವನ್ನು ಹೋಗಲಾಡಿಸಲು ನೆಟ್ಟಿಗೆ ಮುರಿಯುವುದು, ಕೆಂಡದ ರಾಜು ಹಾಕುವುದು, ಉರಿಯುತ್ತಿರುವ ಹಂಚಿಕಡ್ಡಿಗಳನ್ನು ನೀವಾಳಿಸುವುದು, ನಾಲ್ಕು ದಾರಿಗಳು ಕೂಡುವೆಡೆ ದಾಟು ಹಾಕುವುದು - ಈ ಬಗೆಯ ಕೆಲಸಗಳನ್ನು ಮಾಡುತ್ತಾರೆ. ಈ ಕ್ರಮಗಳೂ ಪ್ರೇರಣೆಗಳೇ. ಈ ಕ್ರಮಗಳಿಂದ ತಮಗೆ ಹೊಟ್ಟೆನೋವು ಹೋಗುವುದೆಂಬ ನಂಬಿಕೆ ಜನರಿಗಿರುವುದರಿಂದ, ಮನಸ್ಸಿನ ಪ್ರೇರಣೆಯ ಕಾರಣದಿಂದಲೇ ಹೊಟ್ಟೆನೋವು ವಾಸಿಯಾಗುವುದುಂಟು. ಮಾಟಕ್ಕೆ ಪ್ರತಿಮಾಟ ಮಾಡುವುದು. ದೆವ್ವ ಹಿಡಿದಿರುವವರಿಗೆ ದೆವ್ವ ಬಿಡಿಸುವುದು ಇವುಗಳಲ್ಲಿಯೂ ನಾವು ಕಾಣುವುದು ಪ್ರೇರಣೆ ಮತ್ತು ಪ್ರತಿಪ್ರೇರಣೆಗಳ ಪರಿಣಾಮವನ್ನು.

ಪಶುಗಳಿಗೆ ಸಾಮಾನ್ಯವಾಗಿ ಲರಡು (ಲಲ್ಲು) ಸೆಲೆ, ಕುಂದು, ಹರುಪತಿ, ದೊಡ್ಡರೋಗ, ಚಪ್ಪೆ (ಕಪ್ಪೆ) ರೋಗ, ಅಳ್ಳೇರೋಗ, ಕಾಲುಜ್ವರ, ಬಾಯಿಜ್ವರ, ಪಿನಾಸಿ ಮೊದಲಾದ ರೋಗಗಳು ಬರುತ್ತವೆ. ಇವು ಮಾತ್ರವಲ್ಲದೆ ಕಾಲು, ಕೋಡು ಮುರಿದು ಹೋಗುವುದುಂಟು. ಕೆಲವೊಮ್ಮೆ ಹೆಗಲು ಬಾತುಕೊಳ್ಳುತ್ತದೆ. ಮೈಗೆ ಉಣ್ಣೆ ಹತ್ತುತ್ತದೆ. ಕಣ್ಣು ಬಿಳುಪಾಗುತ್ತದೆ. ಶರೀರದಲ್ಲಿ ಗಾಯಗಳಾಗಿ ಹುಳು ಬೀಳುತ್ತದೆ. ಕರುಗಳಲ್ಲಿ ಜಂತುಹುಳು ಆಗುತ್ತದೆ. ದನಗಳು ಮುಂಗಾರು ಜೋಳ ತಿಂದು ಸೊಕ್ಕುತ್ತವೆ. ಇದ್ದಕ್ಕಿದ್ದಂತೆ ಹಸುಗಳಲ್ಲಿ ಹಾಲು ಕಡಿಮೆಯಾಗುತ್ತದೆ. ಹಸು ಎಮ್ಮೆಗಳು ಕರು ಹಾಕಿದಾಗ ಸತ್ತೆ ಬೀಳುವುದು ಕಷ್ಟವಾಗುತ್ತದೆ - ಹೀಗೆ ಬಗೆಬಗೆಯಾದ ತೊಂದರೆಗಳುಂಟಾಗುತ್ತವೆ. ಪಶುವೈದ್ಯದಲ್ಲಿ ಪರಿಣತನಾದ ವ್ಯಕ್ತಿ, ರೋಗಗಳ ಲಕ್ಷಣಗಳು ಚೆನ್ನಾಗಿ ತಿಳಿದಿರುವುದರಿಂದ ರೋಗ ವಾಸಿಮಾಡುತ್ತಾನೆ. ಉದಾಹರಣೆಗೆ ಕಾಲುಜ್ವರ; ಇದರಲ್ಲಿ ದನಗಳ ಗೊರಸಿನ ಸಂದು ಊದಿಕೊಂಡು ಕೀವು ಬರುತ್ತದೆ. ನೀರಿನಲ್ಲಿ ಓಡಾಡಿದಾಗ ಗಾಯ ಹೆಚ್ಚಾಗಿ ಕೀವು ಸುರಿಯುವುದು ಮಾತ್ರವಲ್ಲದೆ ಹುಳು ಬೀಳಲು ಆರಂಭವಾಗುತ್ತದೆ. ಕಾಲನ್ನು ಮುಟ್ಟಿದರೆ ಹೆಚ್ಚಾಗಿ ಬಿಸಿಯಾಗಿರುತ್ತದೆ. ಈ ಲಕ್ಷಣಗಳು ಕಂಡುಬಂದಾಗ ಅದನ್ನು ಕಾಲುಜ್ವರ ಎಂದು ಗುರುತಿಸುತ್ತಾರೆ. ಆಗ ಮೀನು ತಂದು ಅದನ್ನು ನೀರಿನೊಡನೆ ಒಂದು ಕಲ್ಲಿನ ಮೇಲೆ ತೇದು ಆ ನೀರನ್ನು ದನಗಳ ಕಾಲ ಗೊರಸಿನ ಮೇಲೆ ಪ್ರತಿನಿತ್ಯ ಹಾಕುತ್ತ ಬಂದರೆ ಕಾಲುಜ್ವರ ಕಡಿಮೆಯಾಗುತ್ತ ಬಂದು ಕ್ರಮೇಣ ಹೊರಟು ಹೋಗುತ್ತದೆ. ದನಕರುಗಳಿಗೆ ಮಾತ್ರವಲ್ಲದೆ, ಎಮ್ಮೆ, ಕೋಣ, ಆಡು, ಹಂದಿ, ಕುರಿ, ಕೋಳಿ ಮೊದಲಾದ ಪ್ರಾಣಿಗಳಿಗೂ ಬರುವ ಬಗೆಬಗೆಯ ಕಾಯಿಲೆಗಳಿಗೆ ಜನಪದ ವೈದ್ಯದಲ್ಲಿ ಪರಿಹಾರಗಳನ್ನು ಕಾಣಬಹುದು.

ಮಕ್ಕಳಿಗೆ ಕೆಲವು ರೋಗಗಳು ಹುಟ್ಟಿನಿಂದಲೇ ಬಂದರೆ ಮತ್ತೆ ಕೆಲವು ಹುಟ್ಟಿದ ಅನಂತರ ಬರುತ್ತವೆ. ರೋಗಗಳು ಬಂದಮೇಲೆ ಅವನ್ನು ಹೋಗಲಾಡಿಸುವುದಕ್ಕೆ ಬದಲಾಗಿ ರೋಗಗಳು ಬರದಂತೆಯೇ ಮುಂಜಾಗರೂಕತೆ ವಹಿಸಬೇಕಾಗುತ್ತದೆ. ಈ ಕಾರಣದಿಂದಾಗಿ ಬಸುರಿಯರಿಗೆ ಕೆಲವು ವಿಶೇಷವಾದ ಔಷಧಿಗಳನ್ನು ಕೊಡುವುದರ ಮೂಲಕ ಮಗು ಆರೋಗ್ಯಕರವಾಗಿರುವಂತೆ ಮಾಡುತ್ತಾರೆ. ತಾಯಿ ತಿನ್ನುವ ಆಹಾರದ ಕಾರಣದಿಂದಾಗಿಯೂ ಮಗುವಿಗೆ ರೋಗ ಬರುವುದುಂಟು. ಈ ಕಾರಣದಿಂದ ಮಗು ಆರೋಗ್ಯವಾಗಿರಬೇಕಾದರೆ ಬಾಣಂತಿ ಹೆಚ್ಚು ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಮಕ್ಕಳಿಗೆ ಬರುವ ಇತರ ರೋಗಗಳಲ್ಲಿ ಹಕ್ಕಿಕಡುಕನ ರೋಗ, ವಾಯು, ಹೊಟ್ಟೆನೋವು, ಹೊಟ್ಟೆ ಉಬ್ಬರ, ಲಾಳಸಂಕಾಲೆ, ಬಾಲಗ್ರಹ, ಇಸಬು, ಕೆಮ್ಮು ಮೊದಲಾದ ಕಾಯಿಲೆಗಳಿವೆ. ಬಸುರಿ - ಬಾಣಂತಿಯರಿಗೆ ಅವರಿಗೇ ಸೀಮಿತವಾದ, ವಿಶಿಷ್ಟವಾದ ಕಾಯಿಲೆಗಳು ಬರುತ್ತವೆ. ಈ ಕಾಯಿಲೆಗಳ ಸ್ವರೂಪವನ್ನು ಮನೆಯಲ್ಲಿನ ಹಿರಿಯ ಹೆಂಗಸರು ತಿಳಿದಿರುತ್ತಾರೆ. ಅವರೇ ಸೂಲಗಿತ್ತಿಯ ಕೆಲಸವನ್ನೂ ಮಾಡುವುದುಂಟು. ಇಂದಿಗೂ ಅನೇಕ ಸಂಸಾರಗಳಲ್ಲಿ ಬಸುರಿ -ಬಾಣಂತಿಯರಿಗೆ ಆಸ್ಪತ್ರೆ ಔಷಧಿ ಕೊಡುವುದಿಲ್ಲ. ಮನೆವೈದ್ಯವನ್ನೇ ಮಾಡುತ್ತಾರೆ. ನಾರು ಬೇರುಗಳ ಕಷಾಯ, ಲೇಹ್ಯ ಅವಲೇಪ, ಊಟೋಪಚಾರಗಳ ಎಚ್ಚರಿಕೆ, ಶುಶ್ರೂಷೆ - ಇತ್ಯಾದಿಗಳಿಂದ ಆಗಬಹುದಾದ ಅನೇಕ ತೊಂದರೆಗಳನ್ನು ಸುಲಭವಾಗಿ ನಿವಾರಿಸುವ ವೈದ್ಯ ಮನೆಯ ಹಿರಿಯರಿಗೆ ಗೊತ್ತಿರುತ್ತದೆ. ಸಾಮಾನ್ಯವಾಗಿ ಎಲ್ಲರಿಗೂ ಬರುವ ನೆಗಡಿ, ಕೆಮ್ಮು, ವಾಂತಿ, ಭೇದಿ ಮೊದಲಾದ ದಿನನಿತ್ಯದ ಕಾಯಿಲೆಗಳಿಗೆ ಅನೇಕ ಚಿಕಿತ್ಸೆಗಳಿವೆ. ಹೀಗೆ ಬಳಸುವ ನಾಟಿ ಔಷಧಿಗಳು ಸರಳ ಸ್ವರೂಪವಾಗಿರುತ್ತವೆ; ಸಂಕೀರ್ಣವಾದ ಔಷಧಿಗಳೂ ಕೆಲವು ಸಲ ಬಳಕೆಯಾಗುತ್ತವೆ. ಸರಳವಾದ ಔಷಧಿಗಳು ಹೆಚ್ಚು ಖರ್ಚಿಲ್ಲದೆ ದೊರೆಯುತ್ತವೆ. ಉದಾ: ಉಗುರು ಸುತ್ತು ಆದಾಗ ಒಂದು ಕೋಳಿ ಮೊಟ್ಟೆಯನ್ನು ತೂತು ಮಾಡಿ ಅದನ್ನು ಬೆರಳಿನೊಳಗೆ ತೂರಿಸಿ ಇಟ್ಟು ಬಟ್ಟೆ ಕಟ್ಟಿದರೆ ಕೋಳಿಮೊಟ್ಟೆ ಉಗುರು ಸುತ್ತಿನಲ್ಲಿ ಇರುವ ಕೀವನ್ನು ಹೀರುತ್ತದೆ. ಕೆಲವು ದಿನಗಳಲ್ಲಿ ಉಗುರು ಸುತ್ತು ವಾಸಿಯಾಗುತ್ತದೆ. ಮೊಟ್ಟೆಯ ಬದಲಿಗೆ ನಿಂಬೆಹಣ್ಣನ್ನು ಬಳಸುವುದೂ ಉಂಟು. ಎಳೆಗೂಸಿಗೆ ಕೊಡುವ ಬಜೆ, ಅತಿಮಧುರ ಮೊದಲಾದ ಸುತ್ತುಕಾರ ಇನ್ನೊಂದು ಒಳ್ಳೆಯ ಔಷಧ. ಇಂಥ ಸರಳವಾದ ಔಷಧಿಗಳು ಜನಪದ ವೈದ್ಯರಲ್ಲಿ ಹಲವಾರು ದೊರೆಯುತ್ತವೆ. ಸಂಕೀರ್ಣ ಔಷಧಿಗಳಿಗೆ ಕಷಾಯಗಳು ಉತ್ತಮ. ಉದಾಹರಣೆ, ಬಗೆಬಗೆಯ ಸೊಪ್ಪುಗಳನ್ನು ನಾರುಬೇರುಗಳನ್ನು ಹಾಕಿ ಕಷಾಯಗಳನ್ನು ತಯಾರಿಸುತ್ತಾರೆ. ಇದರಲ್ಲಿ ಬೇವಿನ ಚಕ್ಕೆ ಬಹು ಮುಖ್ಯವಾದುದು. ಈ ಕಷಾಯಗಳು ಹಲವಾರು ಕಾಯಿಲೆಗಳಿಗೆ ಪರಿಹಾರ ನೀಡುತ್ತವೆ.

ಜನಪದ ವೈದ್ಯದಲ್ಲಿ ಬಳಕೆಯಾಗುವ ವಸ್ತುಗಳು ಸುಲಭವಾಗಿ ದೊರಕುವಂಥವು. ಅವುಗಳಲ್ಲಿ ಬಹುಪಾಲಿನವು ಆ ಸುತ್ತುಮುತ್ತಲೇ ಸಿಗುವಂಥವೂ ಆಗಿವೆ. ಜೇನುತುಪ್ಪ, ನಿಂಬೆಹಣ್ಣು, ಸೊಪ್ಪುಗಳು, ತುಳಸಿ, ತಾವ್ರದ, ತಗಡು, ಸಗಣಿ ವೀಳೆಯದೆಲೆ, ಬಾಳೆಯಕರೆ, ಶುಂಠಿ, ಹೊಗೆಸೊಪ್ಪು, ಹಾಲು, ಕೋಳಿಮೊಟ್ಟೆ, ಹರಳೆಣ್ಣೆ, ಉಪ್ಪು, ಮೆಣಸಿನಕಾಯಿ, ಲೋಳೆಸರ, ಅರಿಸಿನದ ಕೊನೆ, ಬಜೆಕೊನೆ, ಮಜ್ಜಿಗೆ, ದೊಡ್ಡಪತ್ರೆ, ತುಂಬೆಸೊಪ್ಪು, ಎಕ್ಕದೆಲೆ, ಜೇಡನ ಬಲೆ, ನಂದಬಟ್ಟಲ ಹೂ ಮೊದಲಾದ ಹಲವಾರು ಪದಾರ್ಥಗಳು ಜನಪದ ವೈದ್ಯದಲ್ಲಿ ಬಳಕೆಯಾಗುತ್ತವೆ. ಕೆಲವಾರು ಪ್ರಾಣಿಗಳಿಂದ ತೆಗೆದ ಕೊಬ್ಬುಗಳು, ತುಪ್ಪಗಳು (ಮೊಸಳೆ ಕೊಬ್ಬು, ಕೇರೆಹಾವಿನ ತುಪ್ಪ, ಉಡದ ತುಪ್ಪ ಇತ್ಯಾದಿ) ಸಹ ಜನಪದ ವೈದ್ಯದಲ್ಲಿ ಸೇರುತ್ತವೆ.

ದೇಶದ ವಿವಿಧ ಭಾಗಗಳಲ್ಲಿ ಸ್ಥಳೀಯವಾಗಿಯೇ ದೊರಕುವ ಸಾಮಗ್ರಿಗಳ ಮೇಲೆ ಅವಲಂಬಿತವಾಗಿ ರೂಢಿಗತವಾಗಿರುವ ಜನಪದ ವೈದ್ಯದ ಬಗ್ಗೆ ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ನಡೆಸುವ ಅಗತ್ಯ ಈಗ ಹೆಚ್ಚಾಗಿದೆ. (ಟಿ.ಎಸ್.ಎಸ್)

**ಜನಪದ ಶಿಲ್ಪ :** ಜನಪದ ಶಿಲ್ಪವೆಂದರೆ ಯಾವುದು ಎಂಬುದನ್ನು ಸ್ಪಷ್ಟವಾಗಿ ನಿರ್ಧರಿಸುವುದು ಕಷ್ಟಸಾಧ್ಯ. ಅದರ ಹರಹಿನ ಸೀಮೆ, ಲಕ್ಷಣ ಇತ್ಯಾದಿಗಳನ್ನು ನಿರೂಪಿಸುವ ಪ್ರಯತ್ನವನ್ನು ಹಲವು ವಿದ್ವಾಂಸರು ಮಾಡಿರುವರಾದರೂ ಈ ವಿಷಯದಲ್ಲಿ ಒಮ್ಮತವಿಲ್ಲ. ಘನವಸ್ತುಗಳಿಂದ ಆಕೃತಿಗಳನ್ನು ಮೂಡಿಸುವ ಶಿಲ್ಪಕಲೆ ನಿತ್ಯಜೀವನ ನಿರ್ವಹಣೆಯ ಅತ್ಯಾವಶ್ಯಕತೆಗಳಿಂದ ಹೊರಗಿರುವ ಒಂದು ವ್ಯಾಪಾರ. ಇದರ ನೆಲೆ ಇರುವುದು ಮಾನವನ ಸೃಷ್ಟ್ಯಾತ್ಮಕ ಮನೋವಾಂಛೆಯಲ್ಲಿ. ಹೊಸದನ್ನು ಸೃಷ್ಟಿಸಬೇಕೆಂಬ ಆಸಕ್ತಿ ನಾನಾಸ್ತರಗಳಲ್ಲಿ ಅಂದರೆ ಕೆಲವು ಬಾರಿ ಸೌಂದರ್ಯಾನುಭವಕ್ಕೆ ಪ್ರೋತ್ಸಾಹಕವಾಗಿ, ಹಲವು ಬಾರಿ ಧರ್ಮ, ಅಂತಸ್ಸಿನ ಪ್ರಜ್ಞೆ, ವಿನೋದ ಮುಂತಾದ ಮನೋರಂಗದ ಇತರ ವ್ಯಾಪಾರಗಳಿಗಾಗಿ ಉಪಯೋಗವಾಗುತ್ತದೆ. ಈ ಧೋರಣೆಗಳು ಮಾನವನ ಎಲ್ಲ ವರ್ಗ-ಸ್ತರಗಳಲ್ಲೂ ಕಲಾನಿರ್ಮಾಣದ ನೆಲಗಟ್ಟಾಗಿ ಕಾಣಿಸುವುದರಿಂದ, ಧೋರಣೆಯ ಆಧಾರದ ಮೇಲೆ ಜನಪದ ಶಿಲ್ಪ ಯಾವುದು, ಅದು ಅಲ್ಲದ್ದು ಯಾವುದು ಎಂಬುದನ್ನು ನಿರ್ಧರಿಸಲಾಗುವುದಿಲ್ಲ.

ಪರಂಪರಾನುಗತತೆ, ಅಲಿಖಿತತೆ ಇತ್ಯಾದಿ ಜನಪದದ ಇತರ ರಂಗಗಳಲ್ಲಿ ಉಪಯೋಗಿಸುವ ಮಾನದಂಡಗಳು, ಕಲಾರಂಗದಲ್ಲಿ (ಅದರಲ್ಲೂ ಶಿಲ್ಪದಲ್ಲಿ) ಅರ್ಥಹೀನವಾಗುತ್ತವೆ. ಎಲ್ಲ ಕಲೆಗಳೂ ಅವು ಆದಿವಾಸಿಗಳದ್ದಾಗಿರಲಿ ಬಹುಜನವರ್ಗದ್ದಾಗಿರಲಿ, ನಾಗರಿಕ ವರ್ಗಗಳದ್ದಾಗಿರಲಿ, ಪರಂಪರಾಗತವೇ. ಬಹುಮಟ್ಟಿಗೆ ಪೂರ್ವಾನುಭವ ಮತ್ತು ವಾಸನೆಗಳು ಇವುಗಳ ರೂಪನಿರ್ದೇಶ ಮಾಡುತ್ತವೆ. ಶಿಲ್ಪ ಮೂಲತಃ ವೃತ್ತಿಜನ್ಯವಾದುದರಿಂದ, ಇದರ ಸೃಷ್ಟಿಗೆ ಲಿಖಿತಶಾಸ್ತ್ರಗಳ ಉಪಯೋಗ ಅಲ್ಪ; ಇದು ಬಹುಮಟ್ಟಿಗೆ ಗುರು-ಶಿಷ್ಯ ಪರಂಪರೆಯಲ್ಲಿ ಕಲಿಕೆ ಅನುಭವದ ಸೂತ್ರದ ಮೇಲೆ ಮುಂದುವರಿಯುತ್ತದೆ.

ಜನಪದ ಸಮಾಜಗಳಲ್ಲಿ ಪ್ರಚಲಿತವಾಗಿರುವ ಶಿಲ್ಪವೇ ಜನಪದ ಶಿಲ್ಪ ಎಂಬ ವಿವರಣೆ ಸಾಧುವಾಗಿ ಕಂಡರೂ ಶಿಲ್ಪಗಳ ಆಳ ಅಧ್ಯಯನಕ್ಕೆ ತೊಡಗಿದಾಗ ಈ ವಿವರಣೆ ಅಸಮರ್ಪಕವೆನಿಸುತ್ತದೆ. ಜನಪದದಂಥ ಸರಳ ಸಮಾಜದಲ್ಲಿ ಹಲವಾರೆಡೆಗಳಿಂದ ಬಂದ ಅನುಭವ, ಜ್ಞಾನ ಮತ್ತು ವಿಧಾನಗಳು ತಮ್ಮದೇ ಆದ ಮಾರ್ಗದಲ್ಲಿ ರೂಪುಗೊಂಡು ಜನಪದದ ಸ್ವತ್ತಾಗಿಬಿಡುತ್ತವೆ. ಹೊರಪ್ರಪಂಚದ ಸಾಂಸ್ಕೃತಿಕ ಪ್ರಭಾವಗಳ ಸೋಂಕಿಲ್ಲದೆಯೋ ಕೆಲವು ವೇಳೆ ಅವನ್ನು ಪ್ರತಿಭಟಿಸಿಯೋ ನಿಂತ ಸಂಕುಚಿತ ಪ್ರದೇಶದಲ್ಲಿ ಚಿಕ್ಕ ಸಮೂಹಗಳಲ್ಲಿ ವಾಸಿಸುವ ಆದಿವಾಸಿ ಜನಾಂಗಗಳಲ್ಲಿ ಗಾಢವಾಗಿ ಕಾಣುವ ವೃತ್ತಿ, ವಿಧಾನ, ಕಲ್ಪನೆ ಇತ್ಯಾದಿಗಳೂ ಮೂಲತಃ ಈ ವರ್ಗಗಳನ್ನೇ ಹಿನ್ನೆಲೆಯಾಗಿ ಹೊಂದಿರುವ ಜನಪದ ವರ್ಗಗಳಲ್ಲೂ ಕಂಡುಬರುವುದರಿಂದ, ಆದಿವಾಸಿ ಶಿಲ್ಪಗಳ ಮತ್ತು ಜನಪದ ಶಿಲ್ಪಗಳ ನಡುವಿನ ವಿಭಜನ ರೇಖೆಯನ್ನು ಸ್ಪಷ್ಟವಾಗಿ ಗುರುತಿಸಲಾಗುವುದಿಲ್ಲ. ಭಾರತದ ಭಿಲ್ಲರೇ ಮೊದಲಾದ ಆದಿವಾಸಿ ಜನಾಂಗಗಳು ತಮಗೆ ಅವಶ್ಯವಾದ ಶಿಲ್ಪ ನಿರ್ಮಾಣಕ್ಕೆ ಪಕ್ಕದ ಗ್ರಾಮೀಣ ಕಲೆಗಾರರನ್ನೇ ಅವಲಂಬಿಸಿರುತ್ತಾರಾಗಿ, ಇಂಥ ಸಂದರ್ಭಗಳಲ್ಲಿ ಆದ ನಿರ್ಮಾಣಗಳು ಜನಪದದ್ದೋ ಆದಿವಾಸಿಗಳದೋ ಎಂದು ಹೇಳುವುದು ಅಸಾಧ್ಯವಾಗುತ್ತದೆ. ನಾಗರಿಕ ಸಮಾಜಗಳ ಹಲವೊಂದು ಭಾವನೆಗಳು ಸ್ವಲ್ಪಸ್ವಲ್ಪವಾಗಿ ಜನಪದ ವರ್ಗಗಳಿಗೆ ಹರಿಯುವ ಸತತಕ್ರಿಯೆಯಿಂದಾಗಿ ಹಲವಾರು ನಾಗರಿಕ ಮೂಲದ ಶಿಲ್ಪಗಳು ಅಥವಾ ಅವುಗಳ ಬಡ ಅನುಕರಣೆಗಳು ಜನಪದ ಶಿಲ್ಪಗಳಾಗಿಯೇ ಕಾಣಿಸಿಕೊಳ್ಳುತ್ತವೆ. ಇವೆಲ್ಲ ಜನಪದ ಶಿಲ್ಪದ ಸ್ಪಷ್ಟ ಸೀಮೆಯನ್ನು ನಿರ್ಧರಿಸುವಲ್ಲಿ ಹಲವು ಸಮಸ್ಯೆಗಳನ್ನು ಒಡ್ಡುತ್ತವೆ.

ಮೂಲ ಮತ್ತು ರೂಪ ಯಾವುದೇ ಆದರೂ ಜನಪದ ಸಮಾಜಗಳಲ್ಲಿ ಪ್ರಚಲಿತವಾಗಿರುವ ಕೆಲವು ಸಾಮಾನ್ಯಾಂಶಗಳನ್ನು ಗಮನಿಸಬಹುದು. ಮೊದಲನೆಯದಾಗಿ, ಜನಪದದ ಸರಳ ಮನೋಭೂಮಿಕೆಗೆ, ಆರ್ಥಿಕಸ್ಥಿತಿಗೆ ಒಗ್ಗುವ ಸರಳತೆ ಜನಪದ ಶಿಲ್ಪಗಳ ಮುಖ್ಯ ಅಂಶ. ಸಾಮಗ್ರಿ, ತಂತ್ರ ಮತ್ತು ನಿರೂಪಣೆಯಲ್ಲಿ ಈ ಸರಳತೆ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಮಣ್ಣು, ಕಲ್ಲು, ಮರ, ಮರದ ಹೊಟ್ಟು, ಹಿತ್ತಾಳೆ ಮುಂತಾಗಿ ಆಯಾ ಪ್ರದೇಶಗಳಲ್ಲಿ ಸುಲಭವಾಗಿ ದೊರಕುವ ಸಾಮಗ್ರಿಗಳನ್ನಷ್ಟೇ ಶಿಲ್ಪಗಳ ತಯಾರಿಯಲ್ಲಿ ಬಳಸಲಾಗಿರುತ್ತದೆ. ಅತ್ಯಲಂಕರಣ

ವಿಧಾನ, ಕ್ಲಿಷ್ಟ ತಂತ್ರಗಳು ಮುಂತಾದ ನಾಗರಿಕ ಶಿಲ್ಪವಿಧಾನಗಳು ಇಲ್ಲಿಲ್ಲ. ನಿರೂಪಣೆಯಲ್ಲಿ ಆಯಾ ಶಿಲ್ಪಗಳಿಗೆ ಸಂಬಂಧಿಸಿದ ಮುಖ್ಯ ಭಾವನೆಗಳ ಅಭಿವ್ಯಕ್ತಿ ಶಿಲ್ಪದ ಗುರಿಯಾಗಿರುತ್ತದೆಯೇ ಹೊರತು, ಯಥಾಸ್ಥಿತಿಯ ಸಮಗ್ರ ಪ್ರತಿರೂಪೀಕರಣ ಅಥವಾ ಅತಿಚತುರ ನಿರೂಪಣಾ ವಿಧಾನಗಳು ಇವುಗಳಲ್ಲಿ ಇರುವುದಿಲ್ಲ. ಎರಡನೆಯದಾಗಿ, ಕಲೆಗಾಗಿ ಕಲೆ ಸೃಷ್ಟಿ ಮಾಡಬೇಕೆಂಬ ಕಲೆಗಾರನ ಮನಸ್ಸಿನ ಒತ್ತಡದಿಂದ ಹುಟ್ಟಿದ ನಾಗರಿಕ ಕಲಾಸೃಷ್ಟಿಗಳಲ್ಲಿ ಕಂಡುಬರುವ, ಶಿಲ್ಪಿಯೇ ಕೇಂದ್ರವಾಗುಳ್ಳ ಹಿನ್ನೆಲೆ ಜನಪದ ಶಿಲ್ಪ ಸೃಷ್ಟಿಯಲ್ಲಿ ಇರುವುದಿಲ್ಲ. ಇಲ್ಲಿ ಶಿಲ್ಪಿಗಿಂತಲೂ ಶಿಲ್ಪಗಳನ್ನು ಉಪಯೋಗಿಸುವವರ ದೃಷ್ಟಿ, ಆವಶ್ಯಕತೆಗಳೇ ಶಿಲ್ಪ ಸೃಷ್ಟಿಯ ಚೇತನ. ಯಾರಿಗಾಗಿ ಕಲೆ ನಿರ್ಮಾಣವಾಗುತ್ತದೆಯೋ ಆ ಜನಪದವೇ ಜನಪದ ಶಿಲ್ಪದ ಜೀವಾಳ (ಆಂದ್ರೇ ಮಾಲ್ರೋ). ಶಿಲ್ಪಿ ಹೆಚ್ಚು ಕಡಿಮೆ ಕಸಬುಗಾರ. ಮೇಲಿನದಕ್ಕೆ ಹೊಂದಿಕೊಂಡಂತೆ ಬರುವ ಮೂರನೆಯ ಅಂಶವೆಂದರೆ ಈ ಜನಪದ ಶಿಲ್ಪಗಳು ಕೇವಲ ಕಲಾಕೃತಿಗಳಾಗಿರದೆ, ಅವು ಹೆಚ್ಚುಮಟ್ಟಿಗೆ ಯಾವುದೋ ಸಾಮಾಜಿಕ ಉದ್ದೇಶಗಳಿಗಾಗಿ, (ಉದಾ: ಧರ್ಮ, ಮಾಟ, ವಿನೋದ) ರೂಪಿಸಲಾಗಿರುತ್ತದೆ. ಇಲ್ಲಿ ಕಲೆ ಉಪಯೋಗಾತ್ಮಕ. ನಾಲ್ಕನೆಯದಾಗಿ, ಜನಪದ ಶಿಲ್ಪಗಳಲ್ಲದಿದ್ದರೂ ಶಿಲ್ಪಸ್ವರೂಪಗಳು ಬಹುಕಾಲ ಮುಂದುವರಿಯುತ್ತಿರುತ್ತವೆ. ಸಂಪ್ರದಾಯಾತ್ಮಕ ಸಮೂಹ ಪ್ರಜ್ಞೆ ಇವುಗಳ ರಕ್ಷೆ, ನವಸೃಷ್ಟ್ಯಾತ್ಮಕ ವ್ಯಕ್ತಿಪ್ರಜ್ಞೆಗೆ ಇಲ್ಲಿ ಸಾಕಷ್ಟು ಸ್ಥಳವಿಲ್ಲ.

ಜನಪದ ಕಲೆಯ ಅಧ್ಯಯನದಲ್ಲಿ ಸಾಕಷ್ಟು ಕೆಲಸ ಮಾಡಿರುವ ಜೋಸೆಫ್‌ವ್ಯದ್ರ ಎಂಬ ವಿದ್ವಾಂಸ ಸಹ ಶಿಲ್ಪಿಗಿಂತಲೂ ಶಿಲ್ಪಗಳನ್ನು ಉಪಯೋಗಿಸುವ ಮಂದಿಯ ಮನೋಭಾವ, ದೃಷ್ಟಿ ಮತ್ತು ಉದ್ದಿಶ್ಯದ ಗಾಢ ಪ್ರಭಾವ ಜನಪದ ಶಿಲ್ಪಸೃಷ್ಟಿಯಲ್ಲಿರುವುದನ್ನು ಒತ್ತಿ ಹೇಳುತ್ತಾನೆ. ಅವನ ಪ್ರಕಾರ ಆ ಪ್ರಭಾವದಿಂದಾಗಿ ಶಿಲ್ಪಗಳು ಯಾವ ವರ್ಗದ ಜನರಿಗಾಗಿ ಸೃಷ್ಟಿಸಲಾದುವೊ ಆ ಜನಗಳ ಸುಲಭ ಗ್ರಹಣೆಗೆ ಅನುಕೂಲವಾಗುವ ರೀತಿಯಲ್ಲಿ ನಿರೂಪಿತವಾಗಿರುತ್ತವೆ. ಜನರಿಗೆ ಪರಿಚಯವಿರುವ ನೈಸರ್ಗಿಕ ವಿನ್ಯಾಸಗಳು, ವಿಷಯ ಒಮ್ಮೆಯೇ ಮನ ನಾಟುವ ನೇರವೂ ಹರಿತವೂ ನಾಟಕೀಯವೂ ಆದ ರೂಪಣಾ ವಿಧಾನಗಳು ಇವುಗಳಲ್ಲಿ ಬಳಕೆಯಾಗಿರುತ್ತವೆ. ಆ ಸಮಾಜದಿಂದ ಹೊರಗಿರುವವರಿಗೆ ಸುಲಭವಾಗಿ ಅರ್ಥವಾಗದ, ಹಲವು ಸಾಂಕೇತಿಕ ವಿನ್ಯಾಸಗಳು ಒಮ್ಮೊಮ್ಮೆ ಕಂಡುಬಂದರೂ ಅವು ಕಾಲಾನುಕಾಲದಿಂದ ಪರಂಪರೆಯಲ್ಲಿ ಬೆಳೆದು ಬಂದವಾಗಿದ್ದು, ಜನಪದ ಮಂದಿಗೆ ಅವು ಸುಲಭವಾಗಿ ಅರ್ಥವಾಗುತ್ತವೆ. ವ್ಯದ್ರನ ಪ್ರಕಾರ ಆಕಾಶತತ್ತ್ವ ಅಥ'ವಾ ತಾವಿನ ಭಾವನೆ. ಅಂದರೆ ಶಿಲ್ಪನಿರೂಪಣೆಯಲ್ಲಿ ವಸ್ತುಗಳನ್ನು ಹಿಂದೆ ಮುಂದೆ, ಅಡ್ಡ ಉದ್ದವಾಗಿ, ಚಿಕ್ಕ ದೊಡ್ಡದಾಗಿ ನಿರೂಪಿಸಿ ಯಥಾದೃಷ್ಟಿಯನ್ನು ತರುವ ತಂತ್ರ ಜನಪದ ಶಿಲ್ಪಗಳಲ್ಲಿ ಇರುವುದಿಲ್ಲ. ಅಲ್ಲದೆ ಅಲಂಕರಣಾದಿ ವಿವರಗಳ ಅಳವಡಿಕೆಯಿಂದ ವಸ್ತುವಿನ ಮೂಲ ಸ್ವರೂಪದ ಭಾವನೆಯನ್ನು ನಿರೂಪಿಸುವ ತಂತ್ರ ಇಲ್ಲಿರುತ್ತದೆಯೇ ಹೊರತು, ಮೂಲವಸ್ತುವನ್ನು ಕೇಂದ್ರೀಕರಿಸಿ ಅಲಂಕರಣಗಳಿಂದ ಪ್ರಭಾವಯುತವಾಗಿ ಮಾಡುವ ನಾಗರಿಕ ಶಿಲ್ಪಗಳ ತಂತ್ರ ಕಾಣುವುದಿಲ್ಲ. ಇವುಗಳಲ್ಲಿ ಹಲವು ಅಭಿಪ್ರಾಯಗಳು ವಿವಾದಾಸ್ಪದವಾಗಿವೆ. ಮೂಲವಸ್ತುವಿನ ಹೊರಪ್ರಾಕಾರದ ಉಪಾಂಶಗಳು ಶಿಲ್ಪನಿರೂಪಣೆಯಲ್ಲಿ ಅಷ್ಟೇನೂ ಮುಖ್ಯವಲ್ಲ. ಜನಪದ ಶಿಲ್ಪಗಳಲ್ಲಿ ನಿಸರ್ಗ ಸಹಜರೂಪಗಳ ಸತ್ತ್ವವಷ್ಟೇ ನಿರೂಪಿತವಾಗುವುದರಿಂದ ಇತರ ಅಂಶಗಳು ನೋಡುಗನ ಚಿತ್ತದಲ್ಲಿ ತಾವಾಗಿಯೇ ಕೂಡಿಕೊಳ್ಳುತ್ತವೆ. ತಾವಿನ ಭಾವನೆ ಒಂದಲ್ಲ ಒಂದು ರೀತಿ ಸ್ವಪ್ರಕಟನಾ ಶಕ್ತಿಯುಳ್ಳದ್ದು; ಅಲ್ಲದೆ ಜನಪದ ಶಿಲ್ಪ ಹಲವು ಬಾರಿ ಕಲ್ಪನಾರಂಗದ ವಸ್ತು- ಕಥೆಗಳನ್ನು ನಿರೂಪಿಸುವುದರಿಂದ, ಯಥಾದೃಷ್ಟಿ ನಿರೂಪಣೆಗಿಂತ ಕಲ್ಪನಾರಂಗದ ಕೆಲಸವೇ ಇಲ್ಲಿ ಹೆಚ್ಚು - ಇತ್ಯಾದಿ ಕಾರಣಗಳಿಂದ ವ್ಯದ್ರನ ಕೆಲವೊಂದು ಊಹೆಗಳನ್ನು ವಿದ್ವಾಂಸರು ಒಪ್ಪುವುದಿಲ್ಲ.

ಮತ್ತಷ್ಟು ವ್ಯವಸ್ಥಿತ ಅಧ್ಯಯನ ನಡೆಸಿರುವ ಕಾನ್ರಾಡ್ ಹ್ಯಾವರ್‌ನ ಪ್ರಕಾರ ಜನಪದ ಶಿಲ್ಪಗಳಲ್ಲಿ ನೈಸರ್ಗಿಕ ಚಿತ್ರಣ ಅಂದರೆ ಯಥಾಸ್ಥಿತಿ ನಿರೂಪಣೆ ಇರುವುದಿಲ್ಲ. ಇಲ್ಲಿ ಇರುವುದು ಅವುಗಳ ತತ್ತ್ವ ವ್ಯಾಖ್ಯೆ ಮಾತ್ರ; ತತ್ತ್ವದ ಹೊರಗಿನ ಎಲ್ಲ ಅಂಶಗಳೂ ಇಲ್ಲಿ ಗೌಣವಾಗುತ್ತವೆ. ಉದಾಹರಣೆಗೆ ಒಬ್ಬ ಸಂತನನ್ನು ನಿರೂಪಿಸುವಲ್ಲಿ ಸಂತತ್ವವನ್ನು ತೋರಿಸುವ ಅವನ ಪರಿಕರಗಳು ಮುಖ್ಯವಾಗುತ್ತವೆಯೇ ಹೊರತು ಸಂತನ ಅಂಗಾಂಗವಿವರಗಳನ್ನೊಳಗೊಂಡ ಪ್ರತಿರೂಪವಲ್ಲ. ಹ್ಯಾವರ್‌ನ ಅಧ್ಯಯನವನ್ನು ಮುಂದುವರಿಸಿ ತೋಷಿ ಎಂಬ ವಿದ್ವಾಂಸ ಜನಪದ ಕಲೆಯ (ಶಿಲ್ಪಗಳೂ ಸೇರಿದಂತೆ) ಲಕ್ಷಣಗಳನ್ನು ಈ ರೀತಿ ಪಟ್ಟಿಮಾಡಿದ್ದಾನೆ. 1. ಎಲ್ಲ ರೀತಿಯ ಹೆಚ್ಚಿನ ವಿವರಗಳನ್ನೂ ಕೈಬಿಟ್ಟು ಕೆಲವೇ ನಿರ್ದಿಷ್ಟ ಗೆರೆ, ಆಕಾರಗಳಿಂದ ಶಿಲ್ಪ ಭಾವವನ್ನಷ್ಟೇ ಒಗ್ಗೂಡಿಸುವುದು. 2. ವರ್ಣಚ್ಛೇದ, ವರ್ಣಸಾಂದ್ರ ವ್ಯತ್ಯಾಸ ಮುಂತಾದ ಕ್ಲಿಷ್ಟತಂತ್ರಗಳನ್ನು ಬಳಸದೆ ಗೆರೆ, ಬಣ್ಣ, ಗಾತ್ರಗಳ ಸಂಯೋಜನೆಯಿಂದ ಸುಲಭವಾಗಿ ನಿರೂಪಿಸುವುದು. 3. ಕೆಲವೊಂದು ಸಂದರ್ಭಗಳಲ್ಲಿ ನೋಡುಗನ ದೃಷ್ಟಿ ಒಂದು ವಸ್ತುವಿನ ಮೇಲೆ ಕೇಂದ್ರೀಕೃತವಾಗುವಂತೆ ಮಾಡಲು ಅವನ್ನು ಅಸ್ವಾಭಾವಿಕವಾಗಿ ವಿಪರೀತ ದೊಡ್ಡದಾಗಿ ನಿರೂಪಿಸುವುದು (ಉದಾಹರಣೆಗೆ ರಾಜನನ್ನು ಬಹಳ ದೊಡ್ಡದಾಗಿ ನಿರೂಪಿಸಿ, ಪರಿವಾರದವರನ್ನು ಗಿಡ್ಡಾಗಿ ತೋರಿಸುವುದು). 4. ಚಲನೆ, ಧ್ವನಿ, ಮನೋವ್ಯಾಪಾರ ಮತ್ತು ಭಾವನೆಗಳಿಗೆ ಆಕಾರವನ್ನು ಕೊಡುವುದು. 5. ಅನೇಕ ಸಾಮಾನ್ಯ ರೂಪಗಳನ್ನು, ಕಾಲ್ಪನಿಕ ರೀತಿಯಲ್ಲಿ ಪರಿವರ್ತಿಸಿ, ಅವುಗಳ ಒಗ್ಗೂಡಣೆ ಅಲಂಕರಣವನ್ನು ಸಾಧಿಸುವುದು. 6. ಗೆರೆಗಳು, ರೂಪಗಳು ಅಥವಾ ವರ್ಣತಾವುಗಳನ್ನು ನಿರ್ದಿಷ್ಟವಾಗಿ ಹಲವು ಬಾರಿ ನಿರೂಪಿಸುವುದು. ಜನಪದ ಶಿಲ್ಪದ ಅಧ್ಯಯನ ಹಲವು ದೇಶಗಳಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿದೆ.

ಕರ್ನಾಟಕದಲ್ಲಿ ಜನಪದ ಶಿಲ್ಪಗಳ ಅಧ್ಯಯನ, ಜಾನಪದ ದೃಷ್ಟಿಯಿಂದಲೂ ಕಲಾ ಇತಿಹಾಸದ ದೃಷ್ಟಿಯಿಂದಲೂ ಹೊಸದಾಗಿ ಪ್ರಾರಂಭವಾಗಬೇಕಾಗಿದೆ. ಸದ್ಯಕ್ಕೆ ಕೆಲವು ಉದಾಹರಣೆಗಳನ್ನು ಮಾತ್ರ ಪಟ್ಟಿ ಮಾಡಬಹುದು. ತಮಿಳುನಾಡು ಮತ್ತು ಕೇರಳದ ರೀತಿಯ ಮಣ್ಣಿನ ಅಯ್ಯಪ್ಪನ್ ವಿಗ್ರಹಗಳು ಮತ್ತು ಅವಕ್ಕೆ ಅರ್ಪಿಸಿದ ದನ, ನಾಯಿ ಮುಂತಾದ ಬೊಂಬೆಗಳು ಕೊಡಗು ಪ್ರದೇಶದಲ್ಲಿ ಇವೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭೂತಾರಾಧನೆಗೆ ಸಂಬಂಧಿಸಿದ ಹಿತ್ತಾಳೆಯ ಮುಖವಾಡಗಳು, ಆಯಾ ಭೂತ, ದೇವತೆಗಳ ಸ್ವರೂಪ ಕಲ್ಪನೆಗೆ ತಕ್ಕಂಥ ಭಾವಗಳನ್ನು ಬಹು ಪ್ರಭಾವಕಾರಿಯಾಗಿ ನಿರೂಪಿಸುತ್ತವೆ. ಉಡುಪಿ ಜಿಲ್ಲೆ ಮೆಕ್ಕೆಕಟ್ಟೆ ಎಂಬಲ್ಲಿನ ಬೃಹತ್ ಮರದ ವಿಗ್ರಹಗಳು ಅಸಾಧಾರಣ ಕಲಾಕೃತಿಗಳು. ಕರ್ನಾಟಕದ ಹಲವೆಡೆ ಮಾರಮ್ಮ ಇತ್ಯಾದಿ ಜನಪದ ದೇವತೆಗಳನ್ನು ಹಿತ್ತಾಳೆಯಲ್ಲಿ ಮಾಡುವ ರೂಢಿ ಇದೆ. ರಾಜಸ್ತಾನ, ಮಧ್ಯಪ್ರದೇಶಗಳಲ್ಲಿರುವಂಥ ಕುದುರೆಯ ಮೇಲೆ ಕುಳಿತ ಗಂಡುವಿಗ್ರಹಗಳನ್ನು ದಕ್ಷಿಣ ಕರ್ನಾಟಕದಲ್ಲೂ ಕಾಣಬಹುದು. ಇವನ್ನು ಬೀರೇದೇವರು ಎಂದು ಕರೆಯುತ್ತಾರೆ. ಇವು ಸಾಮಾನ್ಯವಾಗಿ ಹಿತ್ತಾಳೆಯಲ್ಲಿ ಮಾಡಿದವು. ಉತ್ತರ ಕರ್ನಾಟಕದ ಹಲವೆಡೆ ಮಾರಿಯಮ್ಮ, ಮರಗಮ್ಮ ಮುಂತಾದ ಮರದ ವಿಗ್ರಹಗಳು ಸಿಗುತ್ತವೆ. ಇವಲ್ಲದೆ ನಾಗರಿಕ ಸಂಪ್ರದಾಯಗಳಿಂದ ಬಂದ ಗಣೇಶ, ಗೌರಿ ಇತ್ಯಾದಿಗಳನ್ನು ಗ್ರಾಮೀಣರೇ ಮಾಡಿ ಉಪಯೋಗಿಸುವುದು ಕರ್ನಾಟಕದ ಹಲವೆಡೆಯಲ್ಲಿ ಕಂಡುಬರುತ್ತದೆ. ಇವೆಲ್ಲ ಧರ್ಮ, ಸಂಪ್ರದಾಯಗಳಿಗೆ ಸಂಬಂಧಿಸಿದ್ದಾದರೆ, ಮಕ್ಕಳ ವಿನೋದಕ್ಕಾಗಿ ಮಾಡಿದ ಮರ ಅಥ'ವಾ ಮಣ್ಣಿನ ಆಟಿಕೆಗಳು ಅದರಲ್ಲೂ ಬಸವ ಇತ್ಯಾದಿ ಪ್ರಾಣಿಗಳ ಬೊಂಬೆಗಳು, ಕಿಸುಕಾಲು ಬೊಂಬೆಗಳು ಬಹುಸಾಮಾನ್ಯವಾಗಿ ಕಂಡುಬರುವ ಜನಪದ ಶಿಲ್ಪಗಳು. ನವರಾತ್ರಿಯ ಕಾಲದಲ್ಲಿ ಈ ರೀತಿಯ ಅನೇಕ ಬೊಂಬೆಗಳನ್ನು ಇಟ್ಟು ಅಲಂಕರಿಸುವ ಸಂಪ್ರದಾಯ ಕರ್ನಾಟಕದಲ್ಲಿದೆ. ಇವಲ್ಲದೆ ಸೂತ್ರದ ಬೊಂಬೆ ಆಟದಲ್ಲಿ ಉಪಯೋಗಿಸುವ ಮರದ ಬೊಂಬೆಗಳು ಆಯಾ ಪ್ರದೇಶಗಳ ಉಡಿಗೆ-ತೊಡಿಗೆಗಳಿಂದ ಅಲಂಕೃತವಾಗಿದ್ದು ಕೆಲವು ಉಚ್ಚತಮ ಕಲಾಕೃತಿಗಳ ಮಟ್ಟಕ್ಕೆ ಏರಬಲ್ಲವಾಗಿವೆ. *

**ಜನಪದ ಸಂಗೀತ :** ಕನ್ನಡ ಜನಪದ ಹಾಡುಗಾರಿಕೆಯಲ್ಲಿ ಕನ್ನಡ ನಾಡಿಗೆ ವಿಶಿಷ್ಟವಾದ ಗುಣಗಳನ್ನೂ ವಿಶ್ವಮಾನ್ಯವಾದ ಸಂಗೀತದ ಅಂಶಗಳನ್ನೂ ಗುರುತಿಸಬಹುದು. ಜನಪದ ಗೀತೆಗಳ ಸಂಗೀತಾಂಶವನ್ನು, ಅಂದರೆ ಅವುಗಳ ದನಿ ಲಯಗಳನ್ನು ಪರಿಶೀಲಿಸಿದಾಗ ಶಾಸ್ತ್ರೀಯ ಸಂಗೀತಕ್ಕೆ ಜನಪದ ಸಂಗೀತ ಅಡಿಪಾಯವಾಗಿದೆ ಎಂಬುದು ಕಂಡುಬರುತ್ತದೆ. ನಾಗರಿಕರ ಸಂಪರ್ಕವೇ ಇಲ್ಲದೆ ಗುಡ್ಡಗಾಡುಗಳಲ್ಲಿ

ಇಂದಿಗೂ ವಾಸಿಸುವ ಅನೇಕ ಬುಡಕಟ್ಟುಗಳವರು ಹಾಡಿಕೊಳ್ಳುವ ಹಾಡುಗಳಲ್ಲಿ ಇಂದಿನ ಕರ್ನಾಟಕ ಹಾಗೂ ಹಿಂದುಸ್ಥಾನೀ ಗಾನ ಪದ್ಧತಿಯ ರಾಗಗಳಿಗೆ ಅಡಿಪಾಯವಾಗಬಲ್ಲ ದನಿಮಾಧುರ್ಯಗಳು ಕೇಳಿಬರುತ್ತವೆ. ಉದಾಹರಣೆಗೆ ಕರ್ನಾಟಕದ ನಾಗರಹೊಳೆಯ ಬೆಟ್ಟಕುರುಬರ ಹಾಡುಗಳಲ್ಲಿ ಖರಹರಪ್ರಿಯ ರಾಗದ ಅನೇಕ ಸ್ವರಸಂಚಾರಗಳನ್ನು ಗುರುತಿಸಲಾಗಿವೆ.

ಪ್ರಪಂಚದಲ್ಲಿ ಬಳಕೆಯಲ್ಲಿರುವ ಎಲ್ಲ ಜನಪದ ಗೀತೆಗಳಲ್ಲಿಯೂ ಐದು ಸ್ವರಗಳ ಸ್ವರಶ್ರೇಣಿಗಳೇ (ಪೆಂಟಾಕೋನಿಕ್) ಅಧಿಕವಾಗಿ ಉಪಯೋಗಿಸಲ್ಪಡುತ್ತವೆ. ಐದಕ್ಕಿಂತ ಕಡಿಮೆಯೂ ಇರಬಹುದು. ಐದು ಅತ್ಯಧಿಕ ಸ್ವರಸಂಖ್ಯೆ. ಈ ಅಂಶವನ್ನು ಕರ್ನಾಟಕದ ಜನಪದ ಹಾಡುಗಳಲ್ಲೂ ಕಾಣಬಹುದು. ಕರ್ನಾಟಕದ ಶಾಸ್ತ್ರೀಯ ಸಂಗೀತದಲ್ಲಿ ಉಪಯೋಗಿಸಲ್ಪಡುವ ರಾಗಗಳಲ್ಲಿ ಸಂಪೂರ್ಣ ರಾಗಗಳಿಗೆ ಆರೋಹಣಾವರೋಹಣಗಳಲ್ಲಿ ಏಳು ಸ್ವರಗಳೂ ಷಾಢವ ರಾಗಗಳಿಗೆ ಆರು ಸ್ವರಗಳೂ ಔಡವ ರಾಗಗಳಿಗೆ ಐದು ಸ್ವರಗಳೂ ಇರುವುದನ್ನು ಇಲ್ಲಿ ನೆನೆಯಬಹುದು. ಐದಕ್ಕಿಂತ ಹೆಚ್ಚು ಸ್ವರಗಳು ಒಂದು ಶ್ರೇಣಿಯಲ್ಲಿ ಬಳಕೆಯಾಗಿರುವ ಜನಪದ ದನಿಗಳು ಅಪರೂಪ.

ಕರ್ನಾಟಕದ ಎಲ್ಲ ಕಡೆಯ ಜನಪದ ಹಾಡುಗಾರರೂ ಹೋ, ಹಾ, ಭಲೆ, ಐಸಾ ಇತ್ಯಾದಿಯಾಗಿ ತಮ್ಮ ತಮ್ಮ ಭಾಷೆಗೆ ಸಹಜವಾಗಿ ಹೊಂದಿಕೊಂಡು ಬರುವ ಉದ್ಗಾರಗಳನ್ನು ತಾವು ಹಾಡುವ ಹಾಡಿಗೆ ಸೇರಿಸಿ ಹಾಡುವುದುಂಟು. ಸಂಗೀತದ ನಡುವೆ ಗದ್ಯವಾಗಿಯೇ ಮೂಡುವ ಈ ಉದ್ಗಾರಗಳು ಲಯಕ್ಕೆ ಒಂದು ನಿಲುಗಡೆಯನ್ನೋ ಬಿರುಸನ್ನೋ ಮುಕ್ತಾಯವನ್ನೋ ಒದಗಿಸಿಕೊಡುವುದರಲ್ಲಿ ಯಶಸ್ವಿಯಾಗಿವೆ.

ಜನಪದ ಸಂಗೀತ ರಾಗಪ್ರಧಾನವಾದುದಾಗಿದ್ದು ಭಾರತದ ಎಲ್ಲ ಜನಪದ ಗಾಯನ ಪದ್ಧತಿಯಲ್ಲಿಯೂ ಸಾಮ್ಯತೆಯನ್ನು ಗುರುತಿಸಬಹುದು. ಗುಜರಾತಿನ ದುಹಾಛಂದಗಳು, ಮಹಾರಾಷ್ಟ್ರದ ಲಾವಣಿಗಳು, ಒರಿಸ್ಸದ ಹಾಡುಗಬ್ಬಗಳು, ಉತ್ತರ ಕರ್ನಾಟಕದ ಗೀಗೀ ಪದಗಳು, ಹಳೆಯ ಮೈಸೂರಿನ ಲಾವಣಿಗಳು ಮೊದಲಾದುವೆಲ್ಲಕ್ಕೂ ನಾದರೂಪದಲ್ಲಿರುವ ಹೋಲಿಕೆ ಅದ್ಭುತವಾದದ್ದು. ಮದುವೆ ಸಂಪ್ರದಾಯದಲ್ಲಿ ಹಾಡುವ ಹಾಡುಗಳು, ದೇವರುದಿಂಡರುಗಳ ಮುಂದೆ ಕುಣಿಯುವಾಗ ನುಡಿಸುವ ವಾದ್ಯಗಳು - ಹೀಗೆ ವಿಮರ್ಶೆ ಮಾಡುತ್ತ ಹೊರಟರೆ ಭಾರತದ ವಿವಿಧ ಪ್ರಾಂತ್ಯಗಳ ಜನಪದ ಗೀತೆಗಳಲ್ಲಿ ನಾದರೀತಿಯಾಗಿ ದನಿ ಲಯಗಳಲ್ಲಿ ಅದ್ಭುತವಾದ ಸಾಮ್ಯ ಕಾಣುತ್ತದೆ. ಉದಾಹರಣೆಗೆ ಒರಿಸ್ಸದ ಕೆಲವು ಜನಪದ ಗೀತೆಗಳ ದನಿಗಳನ್ನು ಉಳಿಸಿಕೊಂಡು ಅವಕ್ಕೆ ಕನ್ನಡ ಮಾತನ್ನೊದಗಿಸಿದರೆ ಇದು ಕನ್ನಡ ನಾಡಿನ ಹಾಡಲ್ಲ ಎಂದು ಹೇಳುವುದು ಕಷ್ಟವಾಗುತ್ತದೆ. ಅಕ್ಷರಮಟ್ಟಿನ ನಾದಸಾಮ್ಯ ಇಲ್ಲಿ ಎದ್ದುಕಾಣುತ್ತದೆ. ಆದರೆ ಇಂದಿನ ಶಾಸ್ತ್ರೀಯ ಸಂಗೀತವನ್ನು ಗಮನಿಸಿದರೆ ಉತ್ತರದ ಹಿಂದುಸ್ಥಾನೀ ಪದ್ಧತಿಗೂ ದಕ್ಷಿಣದ ಕರ್ನಾಟಕ ಸಂಗೀತ ಪದ್ಧತಿಗೂ ಇಂಥ ನಾದಸಾಮ್ಯತೆ ಉಳಿದುಬಂದಿಲ್ಲ. ಜನಪದ ಗೀತಪದ್ಧತಿಯ ತುಲನಾತ್ಮಕ ಅಭ್ಯಾಸದಿಂದ ಶಾಸ್ತ್ರೀಯ ಸಂಗೀತ ಉತ್ತರ ದಕ್ಷಿಣಗಳಲ್ಲಿ ಭಿನ್ನರೂಪ ತಳೆದದ್ದೇಕೆ ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕೀತು.

ಕನ್ನಡದ ಮೂಲ ಛಂದಸ್ಸು ತ್ರಿಪದಿ. ತ್ರಿಪದಿ ಹಾಡಾಗಿಯೇ ಮೂಡಿಬಂದಿದ್ದು. ನಾಡಹಾಡುಗಳಲ್ಲಿ ಬಹು ಹೆಚ್ಚು ಭಾಗ ತ್ರಿಪದಿಗಳೇ. ಸಣ್ಣ ಸರಳ ಭಾವನೆಗಳ ಅಭಿವ್ಯಕ್ತಿಗಾಗಲಿ, ದೊಡ್ಡ ಕಥೆಗಳನ್ನು ಹೇಳುವುದಕ್ಕಾಗಲೀ ತ್ರಿಪದಿಗಳ ಬಳಕೆಯಾಗಿದೆ. ಈ ಎಲ್ಲ ಸಂದರ್ಭಗಳಲ್ಲೂ ತ್ರಿಪದಿ ಸಹಜವಾಗಿ ಸುಂದರವಾಗಿ ಹಾಡಿಕೆಗೆ ಒಗ್ಗಿಕೊಂಡು ಬಂದಿರುವುದು ಸ್ವಾರಸ್ಯಕರ ಅಂಶ. ತ್ರಿಪದಿಯನ್ನು ವಿವಿಧ ಲಯಗಳಿಗೆ ಯಶಸ್ವಿಯಾಗಿ ಹೊಂದಿಸಿಕೊಂಡಿರುವುದು ಲಯಬದ್ಧ ಹಾಡುಗಳಲ್ಲಿ ಕಂಡುಬಂದಿದೆ. ಲಯ ವಿರಹಿತ ದನಿಮಾಧುರ್ಯಗಳಲ್ಲಿ ತ್ರಿಪದಿಯನ್ನು ಎಳೆದೆಳೆದು ಹಾಡುವಲ್ಲಿ ವಿಧವಿಧವಾದ ದನಿಗಳನ್ನು ಬಳಕೆ ಮಾಡಿರುವುದು ಕಾಣುತ್ತದೆ. ತ್ರಿಪದಿಗಳೇ ಅಲ್ಲದೆ ದ್ವಿಪದಿಗಳು, ಚೌಪದಿಗಳು, ರಗಳೆಯ ಧಾಟಿಯ ಚಂಪೂರೀತಿಯ ಕಥನಕವನಗಳು - ಇವೆಲ್ಲ ಕನ್ನಡ ಜನಪದರ ಬಾಯಲ್ಲಿ ಹಾಡಾಗಿಯೇ ಮೂಡಿಬಂದಿವೆ. ನಾಡಹಾಡುಗಾರರು - ಈ ಎಲ್ಲ ಛಂದಸ್ಸುಗಳನ್ನು ನಾದಕ್ಕೆ ಒಗ್ಗಿಸಿಕೊಂಡಿರುವ ರೀತಿ ಅಪೂರ್ವವಾದದ್ದು. ಸಂಗೀತವು ಸಾಹಿತ್ಯದ ಅರ್ಥವನ್ನು ಮುಚ್ಚದೆ ಒಂದಕ್ಕೊಂದು ಪೂರಕವಾಗಿ ಕೂಡಿಕೊಂಡು ಬರುವಂತೆ ಹಾಡಿರುವುದು ಇವರ ಮುಖ್ಯ ಸಾಧನೆ. ಈ ಸಿದ್ಧಿಯ ದೆಸೆಯಿಂದಲೇ ನಮ್ಮ ಜನಪದ ಸಂಗೀತ ಲಘುಸಂಗೀತಕ್ಕೆ ಜನ್ಮದಾಯಿನಿಯಾಯಿತು. ಈ ಕ್ರಿಯೆ ಭಾರತದಾದ್ಯಂತ ನಡೆದಿದೆ.

ನೃತ್ಯದ ಗತಿಭೇದಗಳಿಗೆ ಸರಳ ರಾಗಗಳನ್ನು ಹೊಂದಿಸಿಕೊಳ್ಳುವಲ್ಲೂ ಜನಪದ ಸಂಗೀತದ ಸಾಧನೆ ಗಮನಾರ್ಹವಾದದ್ದು. ಈ ಅಂಶವನ್ನು ಕೋಲಾಟ, ಕಂಸಾಳೆ ನೃತ್ಯ, ವೀರಗಾಸೆ ಕುಣಿತ ಮುಂತಾದವುಗಳಲ್ಲಿ ಕಾಣಬಹುದು. ಈ ಸಂದರ್ಭದಲ್ಲೇ ಲಯವಾದ್ಯಗಳನ್ನು ಜನಪದ ಸಂಗೀತ ವಿಸ್ತಾರವಾಗಿ ಬಳಸಿಕೊಂಡಿದೆ ಎಂಬುದನ್ನು ಕಾಣುತ್ತೇವೆ.

ದುಡಿ, ತಮ್ಮಟೆ, ಡೋಲು, ಗುಮಟೆ, ಧಡ, ಚಂಡೆ ಇತ್ಯಾದಿ ಲಯವಾದ್ಯಗಳು ಕರ್ನಾಟಕದ ಮೂಲೆಮೂಲೆಯಲ್ಲೂ ಒಂದಲ್ಲ ಒಂದು ಹೆಸರಿನಲ್ಲಿ, ರೂಪದಲ್ಲಿ ಸಿಕ್ಕುತ್ತವೆ. ಜನಪದ ವಾದ್ಯಗಾರರು ಅನೇಕ ಸಣ್ಣಪುಟ್ಟ ವ್ಯತ್ಯಾಸಗಳನ್ನು ಮಾಡಿಕೊಂಡು ವಿವಿಧ ರೂಪಗಳಲ್ಲಿ ಈ ವಾದ್ಯಗಳನ್ನು ರಚಿಸಿದ್ದಾರೆ. ತಂತೀ ವಾದ್ಯದಲ್ಲಿ ಇಷ್ಟೊಂದು ವೈವಿಧ್ಯ ಕಾಣಬರುವುದಿಲ್ಲವಾದರೂ ಹಲವಾರು ತಂತೀವಾದ್ಯಗಳನ್ನು ಕನ್ನಡ ನಾಡಿನ ಹಾಡುಗಾರರು ಬಳಸುತ್ತಾರೆ. ತಂತೀವಾದ್ಯಗಳಲ್ಲಿ ತಂಬೂರಿ ಮುಖ್ಯವಾದದ್ದು. ಖಾಲಿ ಬುರುಡೆಯನ್ನು ವಾದ್ಯ ರಚನೆಯಲ್ಲಿ ಉಪಯೋಗಿಸಿ ಆ ಬುರುಡೆಯೊಳಗಿನ ವಾಯುವಿನ ಒತ್ತಡವನ್ನು ಸರಳ ನಿಯಂತ್ರಣಕ್ಕೆ ಒಳಗಾಗಿಸಿ ಒತ್ತಡವನ್ನು ಹೆಚ್ಚು ಕಡಿಮೆ ಮಾಡುತ್ತ ಬುರುಡೆಯ ಒಂದು ಅಥವಾ ಎರಡು ಮುಖಗಳಿಗೆ ಹೊದಿಸಿದ ಚರ್ಮದ ಹೊದಿಕೆಯನ್ನು ಬಡಿಯುವುದರಿಂದ ಕೆಲವಾರು ಸ್ವರಗಳನ್ನು ಹೊರಡಿಸುವ ತಂತ್ರವನ್ನೂ ಜನಪದ ವಾದ್ಯಗಾರರು ಬಹಳವಾಗಿ ಬಳಸಿರುವುದು ಕಾಣುತ್ತದೆ.

ರಾಗಿ ಬೀಸುವ ಹಾಡುಗಳು, ಕೋಲಾಟದ ಹಾಡುಗಳು, ಗೀಗೀ ಪದಗಳು, ಎಲ್ಲಮ್ಮನ ಪದಗಳು, ಕೊಂತ್ಯಮ್ಮನ ಪದಗಳು ಮುಂತಾದವುಗಳಲ್ಲಿ ಕಾಣಬರುವ ದನಿವೈವಿಧ್ಯ ಸಂಗೀತ ಪ್ರಪಂಚದ ಬೆರಗುಗಳಲ್ಲಿ ಒಂದು ಎಂದರೆ ಅತಿಶಯೋಕ್ತಿಯಲ್ಲ. ಮೂರು ನಾಲ್ಕು ಸ್ವರಗಳ ಪರಿಧಿಯಲ್ಲೇ ಇದ್ದು ವಿಸ್ತಾರ ಮಾಡುವ ಪರಿಪಾಠವಿಲ್ಲದೆಯೂ ಬಗೆಬಗೆಯ ದನಿಗಳನ್ನು ಸೃಷ್ಟಿಮಾಡುವ ಸಂಗೀತ ಪ್ರತಿಭೆಯನ್ನು ಇಲ್ಲಿ ಕಾಣುತ್ತೇವೆ. ಈ ನಾದರೂಪಗಳು ಕಷ್ಟವಿಲ್ಲದೆ ಸಹಜವಾಗಿ, ಸರಳವಾಗಿ, ಸಾರ್ಥಕವಾಗಿ, ಇಂಪಾಗಿ ಮೂಡಿಬಂದಿವೆ. ಹಾಗೆಯೇ ಇಲ್ಲಿನ ಲಯದ ಓಟ, ಗತಿಯ ಬೆಡಗುಗಳೂ ಆಕರ್ಷಕವಾಗಿವೆ.

ಸಂಪ್ರದಾಯದ ಹಾಡುಗಳು, ನಾಟಕದ ಹಾಡುಗಳು, ಇವೆಲ್ಲವುಗಳ ರಾಗಗಳು ಜನಪದ ದನಿಗಳಿಂದ ಬಹಳವಾಗಿ ಪ್ರಭಾವಿತವಾದವುಗಳು. ಹೀಗೆ ಜನಪದ ಸಂಗೀತ ವೈವಿಧ್ಯಮಯವೂ ವೈಶಿಷ್ಟ್ಯವುಳ್ಳದ್ದೂ ಆಗಿದೆ. (ಎಲ್.ಜಿ.ಎಸ್.)

**ಜನಪ್ರಗತಿ** : ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಒಂದು ವಾರ ಪತ್ರಿಕೆ. ಮೈಸಿಂಡಿಯ ಇಂಗ್ಲಿಷ್ ವಾರಪತ್ರಿಕೆಯನ್ನು ನಡೆಸುತ್ತಿದ್ದ ಪಿ.ಎಸ್.ಹೊಸಾಳಿ ಜನಪ್ರಗತಿಯನ್ನು 1951 ಜುಲೈ 15ರಂದು ಆರಂಭಿಸಿದರು. ಪ್ರಾರಂಭದಲ್ಲಿ ಎಸ್.ಎಸ್.ಸೀತಾರಾಮಶಾಸ್ತ್ರಿ ಸಂಪಾದಕರಾಗಿದ್ದು ಕೆಲವು ವರ್ಷಗಳ ಅನಂತರ ಪಿ.ಎಸ್.ಹೊಸಾಳಿಯವರೇ ಸಂಪಾದಕರಾದರು.

ಪತ್ರಿಕೆಯ ಧ್ಯೇಯಧೋರಣೆಗಳ ಬಗ್ಗೆ ಪ್ರಥಮ ಸಂಚಿಕೆಯಲ್ಲಿ ಹೀಗೆ ಬರೆಯಲಾಗಿದೆ: ಜನಪ್ರಗತಿಯು ಯಾವ ಪೂರ್ವಸಿದ್ಧಾಂತಕ್ಕೂ ಕಟ್ಟುಬೀಳುವುದಿಲ್ಲ. ಪ್ರಗತಿದಾಯಕವಾದ ಎಲ್ಲ ಉತ್ಕೃಷ್ಟ ವಿಚಾರಗಳಿಗೂ ಅದು ಸ್ವಾಗತ ನೀಡುತ್ತದೆ. ಸಮಸ್ತ ವಿಷಯಗಳಲ್ಲೂ ಕಾಲಧರ್ಮದ ನವ್ಯತೆಯನ್ನು ಅರಸುತ್ತದೆ.

ಜನಪ್ರಗತಿಯನ್ನು ಬಿ.ಎನ್.ಗುಪ್ತ ಅವರು 1959ರ ಮಾರ್ಚ್ 1ರಂದು ತೆಗೆದುಕೊಂಡು ಅವರೇ ಅದರ ಸಂಪಾದಕ ಮತ್ತು ಪ್ರಕಾಶಕರಾದರು. ಉನ್ನತಮಟ್ಟದ ಲೇಖನಗಳು, ಪತ್ರಿಕಾಲಯದ ಆಡಳಿತದ ದಕ್ಷನಿರ್ವಹಣೆ, ನವೀನ ಆಕರ್ಷಕ ಶೀರ್ಷಿಕೆಗಳ ಪ್ರಕಟನೆ

ಮುಂತಾದವುಗಳಿಂದ ನಾಲ್ಕೇ ವರ್ಷಗಳಲ್ಲಿ ಪತ್ರಿಕೆಯ ಪ್ರಸಾರ 1,400ರಿಂದ 21,000ಕ್ಕೆ ಏರಿತು.

ಬಿ.ಎನ್.ಗುಪ್ತ ಅವರು ಜನಪ್ರಗತಿಯಲ್ಲಿ ಬರೆಯತೊಡಗಿದ ಅಯ್ಯಪ್ಪನ ಚಾವಡಿ ಅಂಕಣ ಜನಪ್ರಿಯವಾಗಿತ್ತು. ರಾಜಕೀಯದ ಒಳಹೊರಗನ್ನು ಅರಿತ ಅಯ್ಯಪ್ಪನವರು ಗಮಾರನಾದ, ಆದರೆ ರಾಜಕೀಯ ಪ್ರಜ್ಞೆಯುಳ್ಳ ಬೋರನ ಜೊತೆ ಸಂವಾದ ನಡೆಸುವ ವೈಖರಿಯೇ ಈ ಅಂಕಣದ ಸ್ವಾರಸ್ಯ. ಭಾರತ ದರ್ಶನ, ಲೋಕಸಪ್ತಾಹ - ಇವು ಇನ್ನೆರಡು ಸ್ಥಿರಶೀರ್ಷಿಕೆಗಳು. ಜೊತೆಗೆ ಕಥೆ, ಕವನ ಮುಂತಾದವು ಇದ್ದುವು.

1971 ಜನವರಿ 1ರಿಂದ ಕಲ್ಲೆ ಎನ್.ಶಿವೋತ್ತಮರಾವ್ ಜನ ಪ್ರಗತಿಯನ್ನು ಗುಪ್ತರಿಂದ ವಹಿಸಿಕೊಂಡು ನಡೆಸತೊಡಗಿದರು. (ಎಸ್.ಸಿ.ಜಿ.)

**ಜನಮತ :** ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. ಗಾಂಧೀಸ್ಮಾರಕ ಸಹಕಾರಿ ವೃತ್ತಪತ್ರಿಕಾ ಸಂಘವನ್ನು 1967 ಆಗಸ್ಟ್ 25ರಂದು ಗುದ್ಲೆಪ್ಪ ಹಳ್ಳಿಕೇರಿ ಮತ್ತು ಗೆಳೆಯರು ಸ್ಥಾಪಿಸಿ, ಅದರ ವತಿಯಿಂದ 1969 ನವೆಂಬರ್ 1ರಂದು ಈ ಪತ್ರಿಕೆಯನ್ನು ಆರಂಭಿಸಿದರು. ಗುದ್ಲೆಪ್ಪ ಹಳ್ಳಿಕೇರಿಯವರು ಇದಕ್ಕೆ ರೂ.35,000 ಷೇರು ಬಂಡವಾಳ ಸಂಗ್ರಹಿಸಿದರು. ಸರ್ಕಾರ ರೂ.30,000 ಬಂಡವಾಳ ಹಾಕಿತು. ಪತ್ರಿಕೆಯನ್ನು ಮೊದಲು ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಮುದ್ರಿಸಲಾಗುತ್ತಿತ್ತು. 1970ರ ನವೆಂಬರಿನಿಂದ ತನ್ನ ಸ್ವಂತ ಮುದ್ರಣಾಲಯದಲ್ಲಿ ಪತ್ರಿಕೆ ಅಚ್ಚಾಗತೊಡಗಿತು.

ಸಂಘದ ಅಧ್ಯಕ್ಷರಾದ ಗುದ್ಲೆಪ್ಪ ಹಳ್ಳಿಕೇರಿಯವರು ಪತ್ರಿಕೆಯ ಪ್ರಥಮ ಕಾರ್ಯನಿರ್ವಾಹಕ ಸಂಪಾದಕರಾದರು. 1971 ಮೇ 14ರಂದು ಹಳ್ಳಿಕೇರಿಯವರು ನಿಧನರಾದ ಅನಂತರ ಬಿ.ವಿ.ಪೂರ್ಣೇಂದ್ರ ಮತ್ತು ಎಸ್.ಎಂ.ಸಾಗರ್ ಅವರು ಅನುಕ್ರಮವಾಗಿ ಕಾರ್ಯನಿರ್ವಾಹಕ ಸಂಪಾದಕರಾದರು. ಪತ್ರಿಕೆಯ ಪ್ರಥಮ ಕಾರ್ಯನಿರತ ಸಂಪಾದಕರು ಕಲ್ಲೆ ಎನ್.ಶಿವೋತ್ತಮರಾವ್. ಅನಂತರ ಅನುಕ್ರಮವಾಗಿ ಪಿ.ಸಿದ್ದಪ್ಪ ಹಾಗೂ ವಿ.ಕೆ.ಜಾಗೀರದಾರ್ ಈ ಕೆಲಸ ನಿರ್ವಹಿಸಿದರು. ಕೊನೆಯವರೆಗೂ ಎಸ್.ಎಂ.ಸಾಗರ್ ಅವರು ಪತ್ರಿಕೆಯ ಮುದ್ರಕರೂ ಪ್ರಕಾಶಕರೂ ಆಗಿದ್ದರು. ಈ ಪತ್ರಿಕೆ 1972ರ ಜನವರಿಯಲ್ಲಿ ಪ್ರಕಟಣೆ ನಿಲ್ಲಿಸಿತು. (ಎಸ್.ಸಿ.ಜಿ.)

**ಜನವಾಣಿ :** ಬೆಂಗಳೂರು ನಗರದಿಂದ ಪ್ರಕಟವಾಗುತ್ತಿರುವ ದಿನ ಪತ್ರಿಕೆ. ಸಂಪಾದಕರು ಜಿ.ಎಸ್.ನರಸಿಂಹ ಸೋಮಯಾಜಿ. ಪ್ರಕಾಶಕರು ಎನ್.ವಿ.ಅಂಜಿ, ಮುದ್ರಕರು ಕೆ.ವಿ.ಅನಂತನ್.

1934ರಲ್ಲಿ ಬಿ.ಎನ್.ಗುಪ್ತ ಅವರು ಈ ಪತ್ರಿಕೆಯನ್ನು ಮದರಾಸಿನಲ್ಲಿ ಪ್ರಾರಂಭಿಸಿದರು. ಪತ್ರಿಕೆಯ ಸ್ವತಂತ್ರ ಧೋರಣೆಯ ಫಲವಾಗಿ ಸರ್ಕಾರದ ಆಗ್ರಹಕ್ಕೆ ಗುರಿಯಾಗಿ ಪತ್ರಿಕೆಯ ಪ್ರಕಾಶನವನ್ನು ಮದರಾಸಿನಿಂದ ಬೆಂಗಳೂರಿಗೆ ವರ್ಗಾಯಿಸಲಾಯಿತು. 1935ರಲ್ಲಿ ಪತ್ರಿಕೆ ಒಂದು ನಿಯಮಿತ ಸಂಸ್ಥೆಯಾಗಿ ಪರಿವರ್ತನೆ ಹೊಂದಿತು. ಪತ್ರಿಕೆಯ ಸಂಪಾದಕರಾಗಿದ್ದವರಲ್ಲಿ ಕೆ.ಸಿ.ರೆಡ್ಡಿ ಮತ್ತು ಬಿ.ಪುಟ್ಟಸ್ವಾಮಯ್ಯ ಪ್ರಮುಖರು. 1939ರಲ್ಲಿ ಪತ್ರಿಕೆಯ ಮಾಲೀಕತ್ವವನ್ನು ಸ್ಥಾಪಕರಾದ ಬಿ.ಎನ್.ಗುಪ್ತರೇ ವಹಿಸಿಕೊಂಡರು.

ಜನವಾಣಿಯು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ತನ್ನ ಒಬ್ಬ ಪ್ರತಿನಿಧಿಯನ್ನು ಗಾಂಧೀಯವರ ಬಳಿಗೆ ಕಳುಹಿಸಿ ಅವರ ಚಟುವಟಿಕೆಗಳ ಬಗ್ಗೆ ಆ ಪ್ರತಿನಿಧಿ ಕಳುಹಿಸುತ್ತಿದ್ದ ವರದಿಯನ್ನು ಪ್ರಕಟಿಸುತ್ತಿತ್ತು. ಹರಿತವಾದ ಅಗ್ರಲೇಖನ, ನಿರ್ಭಯ ಟೀಕೆ ಟಿಪ್ಪಣಿಗಳಿಂದ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡುತ್ತಿತ್ತು.

1945ರಲ್ಲಿ ಬಿ.ಎನ್.ಗುಪ್ತ ಅವರು ಜನವಾಣಿಯನ್ನೂ ವಾರಪತ್ರಿಕೆ ಪ್ರಜಾಮತವನ್ನೂ ಬಿ.ಎಂ.ಶ್ರೀನಿವಾಸಯ್ಯನವರಿಗೆ ಮಾರಿದರು. ಆಗ ಪತ್ರಿಕಾಲಯ ರೋಟರಿ ಮುದ್ರಣಯಂತ್ರ, ಟೆಲಿಪ್ರಿಂಟರ್ ಮುಂತಾದವುಗಳಿಂದ ಸಜ್ಜಾಯಿತು. ಜಿ.ಎಸ್.ನರಸಿಂಹ ಸೋಮಯಾಜಿಯವರು ಆಗಿನಿಂದ ಸಂಪಾದಕತ್ವವನ್ನು ವಹಿಸಿಕೊಂಡು ಪತ್ರಿಕೆಯನ್ನು ನಡೆಸಿಕೊಂಡು ಬಂದರು. 1959ರಲ್ಲಿ ಬಿ.ಎಂ.ಶ್ರೀನಿವಾಸಯ್ಯನವರು ಮರಣ ಹೊಂದಿದ್ದರಿಂದ ಅವರ ಮಗ ಬಿ.ಎಸ್.ನಾರಾಯಣ್ ಪತ್ರಿಕಾ ಮಾಲಿಕತ್ವ ವಹಿಸಿಕೊಂಡು ಕೆಲವು ಸುಧಾರಣೆಗಳನ್ನು ಮಾಡಿದರು. 1964ರಲ್ಲಿ ಈ ಪತ್ರಿಕೆ ಅಮೆರಿಕದ ನ್ಯೂಸ್ ವೀಕ್‌ನೊಡನೆ ಸುದ್ದಿ ಸಂಪಾದನೆಯ ವಿಷಯದಲ್ಲಿ ಒಡಂಬಡಿಕೆ ಮಾಡಿಕೊಂಡು ಜನವಾಣಿ ವಾರ್ತಾ ಸಾಪ್ತಾಹಿಕ ಪ್ರಾರಂಭಿಸಿತು. ಕನ್ನಡ ಜನತೆಗೆ ವಿಚಾರಪೂರ್ಣ ಹಾಗೂ ವೈಜ್ಞಾನಿಕ ಲೇಖನಗಳನ್ನೂ ಜಾಗತಿಕ, ರಾಜಕೀಯ ಹಾಗೂ ಆರ್ಥಿಕ ವ್ಯವಹಾರಗಳ ವಿಶ್ಲೇಷಣೆಯನ್ನೂ ಒದಗಿಸುತ್ತಿದ್ದ ಈ ವಾರ್ತಾ ಸಾಪ್ತಾಹಿಕ ಕೆಲವು ತೊಂದರೆಗಳಿಂದ ಸ್ವಲ್ಪ ಕಾಲದಲ್ಲೇ ನಿಂತುಹೋಯಿತು. (ಜಿ.ಎಸ್.ಎನ್.ಎಸ್.)

**ಜನಶಕ್ತಿ :** ಕಾರ್ಮಿಕರ, ರೈತರ ಮತ್ತು ದಲಿತವರ್ಗದವರ ಸಂಘಟನೆ ಮತ್ತು ಪುರೋಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಕಮ್ಯೂನಿಸ್ಟ್ ಪಕ್ಷದಿಂದ 1946ರಲ್ಲಿ ಹುಬ್ಬಳ್ಳಿಯಲ್ಲಿ ಆರಂಭವಾದ ವಾರಪತ್ರಿಕೆ. ಡಿಮ್ಮೈ ಫೋಲಿಯೋ ಆಕಾರದ ಎಂಟು ಪುಟಗಳ ಪತ್ರಿಕೆಯಾಗಿ ಕರ್ನಾಟಕದ ರೈತರು ಮತ್ತು ಕಾರ್ಮಿಕರಲ್ಲಿ ಪ್ರಚಾರದಲ್ಲಿತ್ತು. ಇದರ ಮೊದಲ ಸಂಪಾದಕರು ಕುಳಕುಂದ ಶಿವರಾಯರು (ನಿರಂಜನ). ಸುಮಾರು ಒಂದು ವರ್ಷದ ಅನಂತರ ಸದಾಶಿವ್ ಇದರ ಸಂಪಾದಕತ್ವವನ್ನು ವಹಿಸಿಕೊಂಡರು. 1948ರಲ್ಲಿ ದೇಶಾದ್ಯಂತ ಕಮ್ಯೂನಿಸ್ಟರು ದಸ್ತಗಿರಿಯಾದಾಗ ಇದರ ಪ್ರಕಟಣೆ ನಿಂತುಹೋಯಿತು.

ಇದು ಮತ್ತೆ 1952ರಲ್ಲಿ ಎಂ.ನರಸಿಂಹನ್ ಅವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಪ್ರಕಟವಾಗಲಾರಂಭಿಸಿತು. ಎರಡು ವರ್ಷಗಳ ಕಾಲ ನಡೆದು 1954ರಲ್ಲಿ ಮತ್ತೆ ನಿಂತುಹೋಯಿತು. 1956 ನವೆಂಬರ್ ತಿಂಗಳಲ್ಲಿ ಸಿ.ಆರ್.ಕೃಷ್ಣರಾಯರು ಸಂಪಾದಕರಾಗಿ ಜನಶಕ್ತಿಯನ್ನು ಆರು ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿಕೊಂಡು ಬಂದರು. 1962ರಲ್ಲಿ ಮತ್ತೆ ಇದು ನಿಂತುಹೋಯಿತು. ಕಮ್ಯೂನಿಸ್ಟ್ ನಾಯಕ ದಿವಂಗತ ಬಿ.ಕೆ.ಸುಂದರೇಶ್ ಅವರು ಸಂಪಾದಕರಾಗಿ ಇದೇ ಹೆಸರಿನ ವಾರ ಪತ್ರಿಕೆಯೊಂದನ್ನು 1990ರ ದಶಕದಲ್ಲಿ ಚಿಕ್ಕಮಗಳೂರಿನಿಂದ ಪ್ರಕಟಿಸುತ್ತಿದ್ದರು. ಅದೂ ಕ್ರಮೇಣ ನಿಂತುಹೋಯಿತು. *

**ಜನಸಂಖ್ಯೆ :** ಕರ್ನಾಟಕ ರಾಜ್ಯದ ವಿಸ್ತೀರ್ಣ 1,91,791ಚ.ಕಿಮೀ. ಜನಸಂಖ್ಯೆ 5,27,33,958 (2001). ಜನ ಸಾಂದ್ರತೆ ಚ.ಕಿಮೀಗೆ 275. ಕರ್ನಾಟಕ ಭಾರತದ ಒಟ್ಟು ವಿಸ್ತೀರ್ಣದಲ್ಲಿ ಸೇ.5.85 ರಷ್ಟಿದೆ. ಜನಸಂಖ್ಯೆ ಸೇ.5.35 ರಷ್ಟು ಆಗುತ್ತದೆ. ಭಾರತದ ಇತರ ರಾಜ್ಯಗಳೊಡನೆ ಹೋಲಿಸಿದರೆ ಕರ್ನಾಟಕ ವಿಸ್ತೀರ್ಣದಲ್ಲಿ ಎಂಟನೆಯ ಸ್ಥಾನವನ್ನೂ ಜನಸಂಖ್ಯೆಯಲ್ಲಿ ಒಂಬತ್ತನೆಯ ಸ್ಥಾನವನ್ನೂ ಪಡೆದಿದೆ. 1991ರಲ್ಲಿ ಜನಸಂಖ್ಯೆಯ ದೃಷ್ಟಿಯಿಂದಲೂ ಇದರ ಸ್ಥಾನ ಎಂಟನೆಯದಾಗಿತ್ತು.

**ಬೆಳವಣಿಗೆ :** ಕರ್ನಾಟಕದ ಜನಸಂಖ್ಯೆ 1901ರಲ್ಲಿ 1.3 ಕೋಟಿಯಿತ್ತು; ಭಾರತದ ಜನಸಂಖ್ಯೆ 23.83ಕೋಟಿ. ಅಲ್ಲಿಂದ ಮುಂದೆ, 1901-11ರ ದಶಕವನ್ನು ಬಿಟ್ಟರೆ ಉಳಿದ ದಶಕಗಳಲ್ಲೆಲ್ಲ ಅದು ನಿರಂತರವಾಗಿ ಏರುತ್ತಲೇ ಇದೆ. ಆ ದಶಕದಲ್ಲಿ ದೇಶದಲ್ಲಿ ಹಬ್ಬಿದ ಇನ್‌ಫ್ಲುಯನ್‌ಜಾ ಕಾಯಿಲೆಯಿಂದಾಗಿ ಜನಸಂಖ್ಯೆ ಸೇ.1.09ರಷ್ಟು ಇಳಿಯಿತು. ಭಾರತದ ಜನಸಂಖ್ಯೆಯಲ್ಲಾಗಿದ್ದ ಇಳಿತ ಸೇ.0.30 ಅಲ್ಲಿಂದ ಈಚೆಗೆ ಸಾಮಾನ್ಯವಾಗಿ ಭಾರತದ ಜನಸಂಖ್ಯೆಯ ಏರಿಕೆಯ ದರಕ್ಕಿಂತ ಕರ್ನಾಟಕದಲ್ಲಿ ಏರಿಕೆಯ ದರ ಕಡಿಮೆಯಾಗಿಯೇ ಇದೆ.

1991-2001ರ ದಶಕದಲ್ಲಿ ಕರ್ನಾಟಕದ ಜನಸಂಖ್ಯೆಯ ಏರಿಕೆಯ ದರ ಸೇ.17.25. ಇದರ ಹಿಂದಿನ ದಶಕದಲ್ಲಿ ಈ ದರ ಸೇ.21.12 ಆಗಿತ್ತು. ಒಟ್ಟಾರೆ ಭಾರತದ ಜನಸಂಖ್ಯೆ ಅಧಿಕವಾಗಿದ್ದರೂ ಏರಿಕೆಯ ದರದಲ್ಲಿ ಗಮನಾರ್ಹವಾದ ಇಳಿತವಾಗಿದೆ. 1991-2001ರಲ್ಲಿ ಭಾರತದ ಜನಸಂಖ್ಯೆಯಲ್ಲಿ ಸೇ.21.35ರ ಏರಿಕೆಯಾಯಿತು. ಕರ್ನಾಟಕದ ಜನಸಂಖ್ಯೆಯ ಏರಿಕೆಯ ದರ ಭಾರತದಕ್ಕಿಂತಲೂ ಕಡಮೆಯಾಗಿತ್ತು. ದೇಶದಲ್ಲಿ ಅತ್ಯಂತ ಕಡಿಮೆಯ ಏರಿಕೆಯ ದರ ಸಾಧಿಸಿದ ರಾಜ್ಯ ಕೇರಳ (9.4%).

ಯಾವುದೇ ದೇಶದ ಜನಸಂಖ್ಯೆಯ ಬೆಳವಣಿಗೆಯನ್ನು ಮೂರು ಹಂತಗಳಾಗಿ ವಿಂಗಡಿಸಿ ವಿವರಿಸುವುದು ರೂಢಿ. ಮೊದಲನೆಯದು ಹಿಂದುಳಿದ ಆರ್ಥಿಕ ಸ್ಥಿತಿಯದು. ಎರಡನೆಯದು ಪರಿವರ್ತನೆಯ ಹಂತ.

ಮೂರನೆಯದು ಮುಂದುವರಿದ ಅಥವಾ ಪ್ರಗತಿಪರ ಹಂತ. ಹಿಂದುಳಿದ ಆರ್ಥಿಕ ಸ್ಥಿತಿಯ ಹಂತದಲ್ಲಿ ಜನನ ಹಾಗೂ ಮರಣ ದರಗಳು ಹೆಚ್ಚಿನ ಮಟ್ಟದಲ್ಲಿರುತ್ತವೆ. ಜನರ ತಲಾ ಆದಾಯ ಕಡಿಮೆಯಾಗಿರುತ್ತದೆ. ವೈದ್ಯಕೀಯ ಸೌಲಭ್ಯ, ಪೌಷ್ಟಿಕ ಆಹಾರ, ನೈರ್ಮಲ್ಯ ಹಾಗೂ ವೈದ್ಯಕೀಯ ಸೌಲಭ್ಯಗಳ ಅಭಾವದಿಂದಾಗಿ ಮರಣದ ಅನುಪಾತ ಹೆಚ್ಚಾಗಿರುತ್ತದೆ. ಹೆಚ್ಚು ಮಕ್ಕಳನ್ನು ಪಡೆಯಬೇಕೆಂಬ ಆಸೆಯನ್ನು ಪುಷ್ಟೀಕರಿಸುವಂಥ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆಗಳು ಹಿಂದುಳಿದ ಆರ್ಥಿಕತೆಯಲ್ಲಿ ಪ್ರಬಲವಾಗಿರುವುದರಿಂದ ಈ ಹಂತದಲ್ಲಿ ಜನನ ದರದ ಅನುಪಾತ ಹೆಚ್ಚು. ಹೀಗೆ ಜನನ ಮತ್ತು ಮರಣ ದರಗಳೆರಡು ಹೆಚ್ಚಾಗಿರುವ ಕಾರಣ ಜನಸಂಖ್ಯೆ ಬೆಳೆವಣಿಗೆಯ ದರ ಒಂದು ಮಿತಿಯಲ್ಲಿರುತ್ತದೆ. ಆದರೂ ಒಟ್ಟಾರೆ ಜನಸಂಖ್ಯೆ ಏರುತ್ತಲೇ ಇರಬಹುದು. ಆರ್ಥಿಕತೆಯಲ್ಲಿ ಬೆಳೆವಣಿಗೆ ಕಂಡುಬಂದಂತೆ ತಲಾ ವರಮಾನ ಉತ್ತಮಗೊಂಡು ಪೌಷ್ಠಿಕ ಆಹಾರ ನೈರ್ಮಲ್ಯ ಸಾರ್ವಜನಿಕ ಆರೋಗ್ಯ ಸುಧಾರಿಸಿ, ವೈದ್ಯಕೀಯ ಸೌಲಭ್ಯಗಳು ಜನರಿಗೆ ತಕ್ಕಷ್ಟು ದೊರಕಿ ಮರಣ ದರದಲ್ಲಿ ಇಳಿಕೆ ಉಂಟಾಗುತ್ತದೆ. ಆದರೆ ಜನರ ಸಾಮಾಜಿಕ ಹಾಗೂ ಧಾರ್ಮಿಕ ಭಾವನೆಗಳು ಬೇಗ ಬದಲಾವಣೆಯಾಗುವುದಿಲ್ಲವಾದ್ದರಿಂದ ಮಕ್ಕಳನ್ನು ಪಡೆಯುವುದರ ಬಗ್ಗೆ ಅವರ ಭಾವನೆ ಸ್ಥಿರ ಸ್ಥಿತಿಯಲ್ಲಿರುತ್ತದೆ. ಆದ ಕಾರಣ ಈ ಹಂತದಲ್ಲಿ ಮರಣ ದರ ಇಳಿಕೆಗೊಂಡರೂ ಜನನ ದರ ಹಿಂದಿನ ಮಟ್ಟದಲ್ಲಿಯೇ ಮುಂದುವರಿಯುತ್ತದೆ. ಹೀಗಾಗಿ ಈ ಹಂತದಲ್ಲಿ ಜನಸಂಖ್ಯೆಯ ಬೆಳೆವಣಿಗೆಯ ದರ ಏರಲು ಪ್ರಾರಂಭಿಸುತ್ತದೆ. ಇದು ಅವಸ್ಥಾ ಪರಿವರ್ತನದ ಹಂತ. ಆರ್ಥಿಕತೆ ಮುಂದುವರಿದ ಹಂತವನ್ನು ಮುಟ್ಟಿದ ಅನಂತರ ಜನರ ಭಾವನೆಗಳಲ್ಲಿ ಬದಲಾವಣೆಯಾಗಿ ಜನನ ದರವೂ ಇಳಿಮುಖವಾಗುತ್ತದೆ. ಹಾಗೂ ಅದು ಒಂದು ಕನಿಷ್ಠ ಮಟ್ಟದಲ್ಲಿ ಸ್ಥಿರಗೊಳ್ಳುತ್ತದೆ. ನಿರಂತರವಾಗಿ ಇಳಿಯುತ್ತಿದ್ದ ಮರಣ ದರವೂ ಒಂದು ಕನಿಷ್ಠ ಮಟ್ಟದಲ್ಲಿ ಸ್ಥಿರಗೊಳ್ಳುತ್ತದೆ. ಹೀಗೆ ಎರಡು ದರಗಳೂ ಈಗ ಕೆಳಗಿನ ಮಟ್ಟದಲ್ಲಿ ಒಂದಕ್ಕೊಂದು ಸಮೀಪವಾಗಿದ್ದು ಸ್ಥಿರಗೊಳ್ಳುವುದರಿಂದ ಜನಸಂಖ್ಯೆಯ ಬೆಳೆವಣಿಗೆಯ ದರವೂ ಇಳಿಯತೊಡಗುತ್ತದೆ.

ಕರ್ನಾಟಕದಲ್ಲಿ ಜನನ ಮತ್ತು ಮರಣ ದರಗಳು 1921ರ ತನಕ ಹೆಚ್ಚಿನ ಮಟ್ಟದಲ್ಲಿದ್ದು ಅವು ಒಂದಕ್ಕೊಂದು ಸಮೀಪವಾಗಿದ್ದುವು. ಈ ಕಾರಣದಿಂದ ಈ ಅವಧಿಯ ದಶಕವಾರು ಜನಸಂಖ್ಯೆಯ ಬೆಳೆವಣಿಗೆ ದರ ಸಹ ತೀರ ಕಡಿಮೆಯಾಗಿತ್ತು. ಅನಂತರದ ಅವಧಿಯಲ್ಲಿ ಜನಸಂಖ್ಯೆಯ ಬೆಳೆವಣಿಗೆ ದರ ಏರಲು ಪ್ರಾರಂಭಿಸಿತು. ಈ ಸ್ಥಿತಿ ಮೇಲೆ ವಿವರಿಸಿದ ಎರಡನೆಯ ಹಂತದ ಸ್ಥಿತಿಗೆ ಈಗ ಅವಸ್ಥಾ ಪರಿವರ್ತನೆಯ ಹಂತ ಮುಟ್ಟಿತ್ತು. ಎಂದರೆ ಮರಣದರ ತೀಕ್ಷ್ಣವಾಗಿ ಇಳಿಕೆಗೊಂಡರೂ ಜನನ ದರದಲ್ಲಿ ಹೆಚ್ಚು ಇಳಿಕೆಯಾಗಲಿಲ್ಲ. ಈಚಿನ ದಶಕ ಅಧಿಕ ದರದಲ್ಲಿ ಬೆಳೆಯುವ ಪ್ರವೃತ್ತಿಗೆ ಬಲಿಯಾಗಿತ್ತು. 1991-2001ರ ದಶಕದಲ್ಲಿ ಜನನ ದರ ಮರಣ ದರಗಳೆರಡೂ ಇಳಿಯುತ್ತಿರುವುದರಿಂದ ಕ್ರಮೇಣ ಇವೆರಡು ಪರಸ್ಪರ ಹತ್ತಿರಕ್ಕೆ ಬಂದು ಮೂರನೆಯ ಸ್ಥಿರ ಜನಸಂಖ್ಯೆಯ ಹಂತದತ್ತ ರಾಜ್ಯ ಸಾಗುತ್ತಿದೆ ಎನ್ನಬಹುದು.

**ಜನಸಂಖ್ಯೆಯ ಹಂಚಿಕೆ :** ಕರ್ನಾಟಕದ ಜನಸಾಂದ್ರತೆ ಚ.ಕಿಮೀ. (275) ಭಾರತದ ಜನಸಾಂದ್ರತೆಗಿಂತ (324) ಕಡಿಮೆ. ಕರ್ನಾಟಕದ ಜನಸಾಂದ್ರತೆ ಕೇರಳ (819), ಪಶ್ಚಿಮ ಬಂಗಾಲ (904), ತಮಿಳು ನಾಡು (478), ಪಂಜಾಬ್ (482) ಮೊದಲಾದವುಗಳಿಗಿಂತ ಕಡಿಮೆ. ಮಧ್ಯಪ್ರದೇಶ (196) ರಾಜಸ್ತಾನ (165), ಹಿಮಾಚಲ ಪ್ರದೇಶ (109) ಇವುಗಳಿಗಿಂತ ಹೆಚ್ಚು.

ಜನಸಾಂದ್ರತೆಯಲ್ಲಿ ಕರ್ನಾಟಕದಲ್ಲೇ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಿದೆ. ಬೆಂಗಳೂರು ನಗರ ಜಿಲ್ಲೆಯ ಜನಸಾಂದ್ರತೆ 2979. ಎಲ್ಲಕ್ಕಿಂತಲೂ ಹೆಚ್ಚು. ಬೆಂಗಳೂರು ಗ್ರಾಮಾಂತರ ಜಿಲ್ಲೆಯದು 323. ಎಲ್ಲಕ್ಕಿಂತ ಕಡಿಮೆ ಉತ್ತರ ಕನ್ನಡ ಜಿಲ್ಲೆಯದು 132. ರಾಜ್ಯದ ಸರಾ ಸರಿಗಿಂತ ಹೆಚ್ಚು ಜನಸಾಂದ್ರತೆ. ಇರುವ ಉಳಿದ ಜಿಲ್ಲೆಗಳು ಬೆಳಗಾಂವಿ 314, ಧಾರವಾಡ 376, ಕೋಲಾರ 307, ಮಂಡ್ಯ 355, ಮೈಸೂರು 383, ದಕ್ಷಿಣ ಕನ್ನಡ ಜಿಲ್ಲೆ 416, ಉಡುಪಿ 286, ದಾವಣಗೆರೆ 302, ಹಾವೇರಿ 298 ಮತ್ತು ಬೀದರ್ 276. ರಾಜ್ಯದ ಜನಸಾಂದ್ರತೆ ಸರಾಸರಿಗಿಂತ ಕಡಿಮೆ ಇರುವ ಜಿಲ್ಲೆಗಳು ಬಳ್ಳಾರಿ 240, ಬಿಜಾಪುರ 172, ಚಿಕ್ಕಮಗಳೂರು 158, ಚಿತ್ರದುರ್ಗ 179, ಕೊಡಗು 133, ಗುಲ್ಬರ್ಗ 193, ಗದಗ 209, ಉತ್ತರ ಕನ್ನಡ 132, ಕೊಪ್ಪಳ 166, ಚಾಮರಾಜನಗರ 189, ರಾಯಚೂರು 241 ಮತ್ತು ಶಿವಮೊಗ್ಗ 193.

ಹಂಚಿಕೆಯಲ್ಲಿ ಗ್ರಾಮ ಹಾಗೂ ನಗರವಾರು ಜನಸಂಖ್ಯೆಯ ಹಂಚಿಕೆಯನ್ನೂ ಗಮನಿಸಬಹುದು: 1. ನಗರೀಕರಣದ ಮಟ್ಟ ಹಾಗೂ ಅದು ನಡೆಯುತ್ತಿರುವ ದಿಶೆ. 2. ಆರ್ಥಿಕತೆಯ ರಚನೆಯ ಸ್ವರೂಪ - ಎಂದರೆ ಆರ್ಥಿಕತೆಯು ಗ್ರಾಮೋದ್ಯೋಗ ಪ್ರಧಾನವೋ ಅಥವಾ ನಗರೋದ್ಯಮ ಪ್ರಧಾನವೋ ಎಂಬ ಎರಡು ಅಂಶಗಳನ್ನು ಸೂಚಿಸುತ್ತದೆ.

1961ರ ಜನಗಣತಿಯ ತನಕ ಯಾವುದೇ ಊರನ್ನು ಗ್ರಾಮವೇ ಅಥವಾ ನಗರವೇ ಎಂದು ವಿಂಗಡಿಸುವುದರಲ್ಲಿ ಸರಿಯಾದ ಮಾನದಂಡವನ್ನು ಉಪಯೋಗಿಸುತ್ತಿರಲಿಲ್ಲ. ಈಚೆಗೆ ನಗರವೆಂದು ಗುರುತಿಸಲು ಈ ಕೆಲವು ನಿರ್ಣಾಯಕಗಳನ್ನು ಇಟ್ಟುಕೊಳ್ಳಲಾಗಿದೆ: 1. ಎಲ್ಲ ಮುನಿಸಿಪಾಲಿಟಿಗಳು ಹಾಗೂ ದಂಡುಗಳು. 2. ಜನಸಂಖ್ಯೆ 5000ಕ್ಕಿಂತ ಮತ್ತು ಜನಸಾಂದ್ರತೆ ಚ.ಕಿಮೀಗೆ 400ಕ್ಕಿಂತ ಕಡಿಮೆ ಇಲ್ಲದ ಹಾಗೂ ಕನಿಷ್ಠ ಪಕ್ಷ ಮುಕ್ಕಾಲು ಪಾಲು ಪ್ರಾಯಸ್ಥ ಗಂಡಸರು ಕೃಷಿಯೇತರ ಉದ್ಯಮಗಳಲ್ಲಿ ತೊಡಗಿರುವ ಊರುಗಳು.

1901 ಮತ್ತು 1971ರ ಅವಧಿಯಲ್ಲಿ ನಗರದ ಜನಸಂಖ್ಯೆ 15.2 ಲಕ್ಷದಿಂದ 71.1 ಲಕ್ಷಕ್ಕೆ ಏರಿತು. ಇದೇ ಅವಧಿಯಲ್ಲಿ ಗ್ರಾಮವಾಸಿಗಳ ಸಂಖ್ಯೆ 115.3 ಲಕ್ಷದಿಂದ 221.9 ಲಕ್ಷಕ್ಕೆ ಏರಿತು. ಎಪ್ಪತ್ತು ವರ್ಷಗಳಲ್ಲಿ ನಗರದ ಜನಸಂಖ್ಯೆ ಸೇ.367.7 ರಷ್ಟು ಗ್ರಾಮವಾಸಿಗಳ ಸಂಖ್ಯೆ ಸೇ.92.4ರಷ್ಟು ಏರಿಕೆಯನ್ನು ತೋರಿಸಿದುವು. ರಾಜ್ಯದ ಒಟ್ಟು ಜನಸಂಖ್ಯೆಯ ಏರಿಕೆಯೊಡನೆ ಹೋಲಿಸಿದರೆ ಗ್ರಾಮಪ್ರದೇಶದ ಜನಸಂಖ್ಯೆ ಏರಿಕೆ ಕಡಿಮೆ. ಪಟ್ಟಣ ಪ್ರದೇಶದ ಜನಸಂಖ್ಯೆ ಏರಿಕೆ ತೀರ ಅಧಿಕ. ದಶಕವಾರು ಏರಿಕೆಯಲ್ಲೂ ಇದೇ ನಮೂನೆಯನ್ನು ಗ್ರಾಮ ಹಾಗೂ ನಗರ ಪ್ರದೇಶದ ಜನಸಂಖ್ಯೆ ವೃದ್ಧಿಯಲ್ಲಿ ಕಾಣಬಹುದು. ನಗರ ಪ್ರದೇಶದ ಜನಸಂಖ್ಯೆ ಅಧಿಕ ದರದಲ್ಲಿ ಬೆಳೆಯಲು ಕಾರಣವೆಂದರೆ ಗ್ರಾಮವಾಸಿಗಳು ಪಟ್ಟಣಗಳಿಗೆ ವಲಸೆ ಬರುವುದು. ನಗರ ಪ್ರದೇಶದ ಜನಸಂಖ್ಯೆ ಅಧಿಕ ದರದಲ್ಲಿ ಬೆಳೆಯುತ್ತಿರುವ ಕಾರಣ ಒಟ್ಟು ಜನಸಂಖ್ಯೆಯಲ್ಲಿ ಅದರ ಪ್ರಮಾಣ ಹೆಚ್ಚಾಗುತ್ತ ಹೋಗುತ್ತಿದೆ. ಈ ಪ್ರಮಾಣ ಕರ್ನಾಟಕದಲ್ಲಿ 1901ರಲ್ಲಿ ಸೇ.11.6 ಇದ್ದುದು 1971ರಲ್ಲಿ ಸೇ.24.3ಕ್ಕೆ ಏರಿತು. ಕರ್ನಾಟಕದಲ್ಲಿ ನಗರೀಕರಣ ವೇಗವಾಗಿ ಸಾಗುತ್ತಿದೆ ಎಂಬುದು ಇದರಿಂದ ತಿಳಿಯುತ್ತದೆ.

1991-2001ರಲ್ಲಿ ರಾಜ್ಯದ ಜನಸಂಖ್ಯೆ ಶೇ.17.25ರ ದರದಲ್ಲಿ ಏರಿದರೆ, ಗ್ರಾಮೀಣ ಪ್ರದೇಶದ ಜನಸಂಖ್ಯೆಯ ಏರಿಕೆಯ ದರ ಸೇ.12.05, ನಗರದ ಜನಸಂಖ್ಯೆಯ ಏರಿಕೆಯ ದರ ಸೇ.28.85 ಆಗಿತ್ತು.

ಗ್ರಾಮೀಣ ಜನಸಂಖ್ಯೆಯಲ್ಲಿ ಅತ್ಯಂತ ಹೆಚ್ಚಿನ ಬೆಳೆವಣಿಗೆ ದರ ಸಾಧಿಸಿದ ಜಿಲ್ಲೆ ಕೊಪ್ಪಳ (22.87%), ಅತ್ಯಂತ ಕಡಿಮೆ ಬೆಳೆವಣಿಗೆ ಸಾಧಿಸಿದ್ದು ದಕ್ಷಿಣ ಕನ್ನಡ (4.03%).

ಪಟ್ಟಣ ಜನಸಂಖ್ಯೆಯಲ್ಲಿ ಗರಿಷ್ಠ ಏರಿಕೆಯ ದರ ಹಾವೇರಿ ಜಿಲ್ಲೆಯದು (46.69%). ನಗರ ಜನಸಂಖ್ಯೆಯ ದರದಲ್ಲಿ ಗಮನಾರ್ಹ ಇಳಿತವಾದ್ದು ಉಡುಪಿಯಲ್ಲಿ (9.9%) ಮತ್ತು ಕೊಡಗಿನಲ್ಲಿ (3.49%).

ಕರ್ನಾಟಕದಲ್ಲಿ ನಗರದ ಜನಸಂಖ್ಯೆ 1,79,19,858 (2001). ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಇದರ ಪ್ರಮಾಣ (33.98%). ಬೆಂಗಳೂರು ಜಿಲ್ಲೆಯ ನಗರ ಜನಸಂಖ್ಯೆ 57,45,417. ಇದು ಆ ಜಿಲ್ಲೆಯ ಒಟ್ಟು ಜನಸಂಖ್ಯೆಯ (65,23,110) ಸೆ.88.08. ಕೊಡುಗು ಜಿಲ್ಲೆಯ ನಗರದ ಜನಸಂಖ್ಯೆ ಪ್ರಮಾಣ (13.79) ಅತ್ಯಂತ ಕಡಿಮೆ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ (5,27,33,958) 2,68,56,343 ಮಂದಿ ಪುರುಷರು, 2,58,77,615 ಸ್ತ್ರೀಯರು (2001) ಕಳೆದ ಹಲವು ದಶಕಗಳಲ್ಲಿ ಸ್ತ್ರೀ ಪುರುಷರ ಸಂಖ್ಯಾನುಪಾತ ಸ್ತ್ರೀಯರ ದೃಷ್ಟಿಯಿಂದ

ಪ್ರತಿಕೂಲದ್ದಾಗಿತ್ತು. 1901ರಲ್ಲಿ ಪ್ರತಿ 1000 ಪುರುಷರಿಗೆ 983 ಮಂದಿ ಸ್ತ್ರೀಯರಿದ್ದರು. ಈ ಅನುಪಾತ ಕ್ರಮೇಣವಾಗಿ ಇನ್ನೂ ಇಳಿಯುತ್ತಿತ್ತು. 1971ರಲ್ಲಿ ಇದು 959ಕ್ಕೆ ತಗ್ಗಿತು. 1991-2001ರ ದಶಕದಲ್ಲಿ ಇದು ಮತ್ತೆ ಏರುವ ಪ್ರವೃತ್ತಿಗೆ ಒಳಗಾದದ್ದು ಸಮಾಧಾನದ ಸಂಗತಿ. 2001ರಲ್ಲಿ ಪ್ರತಿ 1000 ಪುರುಷರಿಗೆ ಸ್ತ್ರೀಯರ ಸಂಖ್ಯೆ 964 ಆಗಿತ್ತು. ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಈ ಪ್ರವೃತ್ತಿ ವ್ಯಕ್ತವಾಗಿದೆ. ಈ ವಿಚಾರದಲ್ಲಿ ಉಡುಪಿ ಜಿಲ್ಲೆಯದು ಅಗ್ರಸ್ಥಾನ. ಅಲ್ಲಿ ಪ್ರತಿ ಸಾವಿರ ಗಂಡಸರಿಗೆ 1127 ಮಹಿಳೆಯರಿದ್ದಾರೆ. ಆದರೆ ತುಂಬ ವಿಚಿತ್ರದ ಸಂಗತಿಯೆಂದರೆ, ಕಳೆದ ಐದು ಜನಗಣತಿಗಳಲ್ಲಿ ಈ ಜಿಲ್ಲೆಯ ಪುರುಷ-ಸ್ತ್ರೀ ಅನುಪಾತ ಇಳಿಯುತ್ತ ಬಂದಿದೆ. 1991ರಲ್ಲಿ 1000 ಗಂಡಸರಿಗೆ 1134 ಸ್ತ್ರೀಯರಿದ್ದರು. ಈಗ ಈ ಸಂಖ್ಯೆ 1127ಕ್ಕೆ ಇಳಿದಿದೆ.

ಉಡುಪಿಯ ಅನಂತರದ ಸ್ಥಾನ ದಕ್ಷಿಣ ಕನ್ನಡ ಜಿಲ್ಲೆಗೆ. ಅಲ್ಲಿ ಪ್ರತಿ 1000 ಪುರುಷರಿಗೆ 1023 ಮಂದಿ ಸ್ತ್ರೀಯರು; ಹಾಸನದಲ್ಲಿ ಪ್ರತಿ 1000 ಪುರಷರಿಗೆ 1005 ಮಂದಿ ಸ್ತ್ರೀಯರು. ಬಾಗಲಕೋಟೆ, ಬೀದರ್, ಗದಗ ಜಿಲ್ಲೆಗಳಲ್ಲಿ ಅನುಪಾತ ತೀವ್ರವಾಗಿ ಇಳಿಯುತ್ತಿದೆ. ಬಿಜಾಪುರ ಜಿಲ್ಲೆಯಲ್ಲಿ 1991ರ ಅನುಪಾತ 948, ಈಗಲೂ ಇದೇ ಮುಂದುವರಿದಿದೆ. ಆದರೆ 1981ರಲ್ಲಿ ಇದು 970 ಆಗಿತ್ತು. ಅತ್ಯಂತ ಕಡಿಮೆ ಅನುಪಾತ ಬೆಂಗಳೂರು ಜಿಲ್ಲೆಯದು. 1991ರ ಅನುಪಾತ 903, 2001ರಲ್ಲಿ ಇದು 908ಕ್ಕೆ ಏರಿತು.

ಸಾಕ್ಷರತೆಯ ವಿಚಾರದಲ್ಲಿ ಬೆಂಗಳೂರು ಜಿಲ್ಲೆಯದು ಅಗ್ರಸ್ಥಾನ. ಇಡೀ ಕರ್ನಾಟಕದಲ್ಲಿ 1991ರಲ್ಲಿ ಸಾಕ್ಷರತೆಯ ಸೇಕಡವಾರು 56.04. 2001ರಲ್ಲಿ ಇದು 67.04ಕ್ಕೆ ಏರಿತು. ಮಹಿಳೆಯರಲ್ಲಿ ಸಾಕ್ಷರತೆ ಸೇ.44.34ರಿಂದ ಸೇ.57.45ಕ್ಕೆ ಹೆಚ್ಚಿತು. ಪುರುಷರ ಸಾಕ್ಷರತೆಯ ಪ್ರಮಾಣ ಸೇ.67.26 ರಿಂದ ಸೇ.76.29ಕ್ಕೆ ಅಧಿಕವಾಯಿತು. ಬೆಂಗಳೂರು ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ಸೇ.83.91. ದಕ್ಷಿಣ ಕನ್ನಡ ಜಿಲ್ಲೆಯದು ಅನಂತರದ ಸ್ಥಾನ; ಸೇ.83.47. ಅತ್ಯಂತ ಕಡಿಮೆ ಸಾಕ್ಷರತೆಯ ಜಿಲ್ಲೆ ರಾಯಚೂರು (49.54). ಗುಲ್ಬರ್ಗ ಜಿಲ್ಲೆ ಇದಕ್ಕಿಂತ ಸ್ವಲ್ಪ ಮೇಲಿದೆ. (ಸೇ.50.65).

ಕರ್ನಾಟಕದಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ (67.04%). ಒಟ್ಟು ಭಾರತದಕ್ಕಿಂತ (65.38%) ಅಧಿಕ. ಕರ್ನಾಟಕದ್ದಕ್ಕಿಂತ ಹೆಚ್ಚಿನ ಸಾಕ್ಷರತೆಯ ಪ್ರಮಾಣ ಇರುವ ರಾಜ್ಯಗಳು ಒಕ್ಕೂಟ ಪ್ರದೇಶಗಳು. ಹಿಮಾಚಲ ಪ್ರದೇಶ (77.13), ಪಂಜಾಬ್ (69.95), ಚಂಡೀಗಢ (81,76), ಉತ್ತರಾಂಚಲ (72.28), ಹರಿಯಾಣ (68.59), ದೆಹಲಿ (81.82), ಸಿಕ್ಕಿಂ (69.68), ಅರುಣಾಚಲ ಪ್ರದೇಶ (67.11), ಮಣಿಪುರ (68.87), ಮಿಜೋರಂ (88.49), ತ್ರಿಪುರಾ (73.66), ಪಶ್ಚಿಮ ಬಂಗಾಲ (69.22), ಗುಜರಾತ್ (69.97), ಡಮನ್ ಮತ್ತು ಡಿಯು (81.09), ಮಹಾರಾಷ್ಟ್ರ (77.27), ಗೋವ (82.32), ಲಕ್ಷದ್ವೀಪ (87.52), ಕೇರಳ (90.92), ತಮಿಳುನಾಡು (73.47), ಪಾಂಡಿಚೇರಿ (81.49), ಅಂಡಮಾನ್ ಮತ್ತು ನಿಕೋಬಾರ್ (81.18).

**ಜನಶಕ್ತಿ :** ಆರ್ಥಿಕತೆಯ ಬೆಳವಣಿಗೆ ಹಾಗೂ ಅಲ್ಲಿ ಉಪ ಯೋಗಿಸಲಾಗುವ ತಾಂತ್ರಿಕ ಕ್ರಮಗಳನ್ನು ನಿರ್ಧರಿಸುವ ಅಂಶಗಳಲ್ಲಿ ಜನಶಕ್ತಿಯೂ ಒಂದು. ಸಾಮಾನ್ಯವಾಗಿ ಜನಶಕ್ತಿಯನ್ನು ಉದ್ಯೋಗಿಗಳ ಮತ್ತು ನಿರುದ್ಯೋಗಿಗಳ ಮೊತ್ತವನ್ನು ಒಟ್ಟುಗೂಡಿಸುವುದರ ಮೂಲಕ ಅಂದಾಜು ಮಾಡುವುದು ರೂಢಿಯಾದರೂ ಕರ್ನಾಟಕಕ್ಕೆ ಸಂಬಂಧಿಸಿದ ಇಂಥ ಅಂಕಿಅಂಶಗಳ ಅಭಾವವಿರುವುದರಿಂದ ಈ ಸಂಬಂಧದಲ್ಲಿ ಬೇರೊಂದು ಕ್ರಮವನ್ನು ಅನುಸರಿಸಬಹುದು. ಜನಗಣತಿ ವರದಿಗಳಲ್ಲಿ ಕಾಣುವ ಜನಸಂಖ್ಯೆಯ ವಯೋವರ್ಗಗಳಲ್ಲಿ (0-14, 15-34, 35-59 ಮತ್ತು 60+),0-14ರ ವ್ಯಕ್ತಿಗಳು ಹಸುಳೆಗಳು ಹಾಗೂ ಶಾಲೆಗೆ ಹೋಗುವ ಮಕ್ಕಳು ಮತ್ತು 60+ ವರ್ಗದ ವ್ಯಕ್ತಿಗಳು ವೃದ್ಧರು. ಇವರನ್ನು ಬಿಟ್ಟು 15-59ರ ವಯೋವರ್ಗದವರನ್ನು ಮಾತ್ರ ಶ್ರಮಿಸಬಹುದುದಾದವರೆಂದು ಎಣಿಸಬಹುದು. ಈ ವರ್ಗದಲ್ಲೂ ಕೆಲವರು - ಎಂದರೆ ವಿದ್ಯಾರ್ಥಿಗಳು, ಮದುವೆಯಾದ ಸ್ತ್ರೀಯರು, ಬೇಗ ಕೆಲಸದಿಂದ ವಿಶ್ರಾಂತಿ ಪಡೆಯುವವರು, ಭಿಕ್ಷುಕರು, ವೇತನಕ್ಕಾಗಿ ಕೆಲಸಮಾಡಲು ಇಷ್ಟಪಡದೆ ಇರುವವರು ಇರಬಹುದು. ಆದ್ದರಿಂದ 15-59 ವಯೋವರ್ಗದ ಕೆಲಸದಲ್ಲಿ ತೊಡಗಿಸಬಹುದಾದ ವ್ಯಕ್ತಿಗಳ ಗುಂಪಿನಿಂದ ಕೆಲಸಮಾಡಲು ಇಷ್ಟಪಡುವ ವ್ಯಕ್ತಿಗಳನ್ನು ನಿಷ್ಪನ್ನ ಮಾಡಿದರೆ ಅವರು ಜನಶಕ್ತಿಯನ್ನು ಪ್ರತಿನಿಧಿಸುತ್ತಾರೆ. ಭಾರತದ ಯೋಜನಾ ಆಯೋಗ ಎರಡನೆಯ ಯೋಜನಾವಧಿಯಲ್ಲಿ 15-59ರ ವಯೋವರ್ಗದವರಲ್ಲಿ ಪುರುಷರಲ್ಲಿ ಸೇ.90; ಸ್ತ್ರೀಯರಲ್ಲಿ ಸೇ.35 ಮಂದಿ ಕೆಲಸವನ್ನು ಅರಸುವವರೆಂದು ಅಭಿಪ್ರಾಯಪಟ್ಟಿದೆ ಹಾಗೂ ಸ್ತ್ರೀಯರ ಬಗ್ಗೆ ಈ ಪ್ರಮಾಣ ಕಾಲಕ್ರಮದಲ್ಲಿ ಏರುತ್ತದೆ ಎಂದು ಯೋಜನಾವಧಿಯಲ್ಲಿ ಈ ಪ್ರಮಾಣವನ್ನು ಸೇ.40 ಎಂದು ನಿರ್ಧರಿಸಿತು. ಈ ಆಧಾರದ ಮೇಲೆ ಹೇಳುವುದಾದರೆ ಕೋಷ್ಟಕ 6ರಲ್ಲಿ ತೋರಿಸಿರುವಂತೆ 1961ರಲ್ಲಿ 15-59ರ ವಯೋವರ್ಗದ ಕೆಲಸಕ್ಕೆ ತೊಡಗಿಸಬಹುದಾಗಿದ್ದ ಜನರ ಸಂಖ್ಯೆ 12,285 ಸಾವಿರ. ಇವರ ಪೈಕಿ ಸೇ.90 ಪುರುಷರು ಮತ್ತು ಸೇ.36 ಸ್ತ್ರೀಯರು. ಜನಶಕ್ತಿಯ ವ್ಯಾಖ್ಯೆಗೆ ಒಳಪಟ್ಟರೆ ಕರ್ನಾಟಕದ ಜನಶಕ್ತಿ 1961ರಲ್ಲಿ 7,858 ಸಾವಿರ. 1971ರ ಜನಗಣತಿಯ ಪ್ರಕಾರ 15-59 ವಯೋವರ್ಗದ ಜನಸಂಖ್ಯೆ 15,074 ಸಾವಿರ. ಪುರುಷರಲ್ಲಿ 90% ಸ್ತ್ರೀಯರಲ್ಲಿ 40% ಕೆಲಸವನ್ನರಸುವವರ ಪ್ರಮಾಣವಾದರೆ, 1971ರಲ್ಲಿನ ಜನಶಕ್ತಿ ಪ್ರಮಾಣ 9,877 ಸಾವಿರ. ಎಂದರೆ 1961-71ದಶಕದಲ್ಲಿ ಜನಶಕ್ತಿ 2,019 ಸಾವಿರದಷ್ಟು (25.54%) ಏರಿತು. ಜನಶಕ್ತಿಯ ಏರಿಕೆಯನ್ನು ಜನ ಸಂಖ್ಯೆಯ ಏರಿಕೆಗೆ (ಸೇ.24.21) ಹೋಲಿಸಿದರೆ ಇದು ಹೆಚ್ಚು ಎನಿಸುತ್ತದೆ.

1961ರಲ್ಲಿ ಗ್ರಾಮಪ್ರದೇಶದ ಜನಶಕ್ತಿ 6011 ಸಾವಿರ ಮಂದಿ (ಸೇ.76). ಇದರ ಪೈಕಿ 72% ಪುರುಷರು 28% ಸ್ತ್ರೀಯರು. 1971ರಲ್ಲಿ ಗ್ರಾಮ ಪ್ರದೇಶದ ಜನಶಕ್ತಿ 7,298 ಸಾವಿರಕ್ಕೆ ಏರಿತು (ಒಟ್ಟು ಜನಶಕ್ತಿಯಲ್ಲಿ 74%). ಇವರ ಪೈಕಿ 70% ಪುರುಷರು, 30% ಸ್ತ್ರೀಯರು.

ಪಟ್ಟಣ ಪ್ರದೇಶದ ಜನಶಕ್ತಿ 1961ರಲ್ಲಿ 1848 ಸಾವಿರವಿದ್ದು ಒಟ್ಟು ಜನಶಕ್ತಿಯ ಸೇ.24 ಭಾಗದಷ್ಟಿದ್ದಿತು. ಇವರಲ್ಲಿ 74% ಪುರುಷರು 26% ಸ್ತ್ರೀಯರು. 1971ರಲ್ಲಿ ಇಲ್ಲಿನ ಜನಶಕ್ತಿ 2,582 ಸಾವಿರಕ್ಕೇರಿತು. ಹಾಗೂ ಒಟ್ಟು ಜನಶಕ್ತಿಯಲ್ಲಿನ ಇವರ ಪ್ರಮಾಣ ಸೇ.26ಕ್ಕೆ ಏರಿತು. ಇವರ ಪೈಕಿ ಪುರುಷರ ಪ್ರಮಾಣ 71%; ಸ್ತ್ರೀಯರ ಪ್ರಮಾಣ 29%.

1961-71ರ ಅವಧಿಯಲ್ಲಿ ಒಟ್ಟು ಜನಶಕ್ತಿ ಸೇ.25.54ರಷ್ಟು ಏರಿದ್ದರೆ ಇದೇ ಅವಧಿಯಲ್ಲಿನ ಗ್ರಾಮ ಮತ್ತು ಪಟ್ಟಣ ಪ್ರದೇಶಗಳ ಜನಶಕ್ತಿಯ ಏರಿಕೆ ಕ್ರಮವಾಗಿ ಸೇ.21.4 ಮತ್ತು ಸೇ.41.5 ಹಾಗೂ ಜನಶಕ್ತಿಯಲ್ಲಿ ಸ್ತ್ರೀಪುರುಷರ ಪ್ರಮಾಣ ಗ್ರಾಮಪ್ರದೇಶದಲ್ಲಿ ಅವು ಕ್ರಮವಾಗಿ ಸೇ.32.5 ಮತ್ತು ಸೇ.12.4ರಷ್ಟು ಏರಿತು. ಪಟ್ಟಣ ಪ್ರದೇಶದಲ್ಲಿ ಈ ಅಂಕಿಗಳು ಕ್ರಮವಾಗಿ 57.3 ಮತ್ತು 33.6.

ಜನಶಕ್ತಿ ಹಂಚಿಕೆ ವಿಶ್ಲೇಷಣೆಯಿಂದ ಕೆಲವು ಅಂಶಗಳು ಹೊರಬೀಳುತ್ತವೆ. ಹೆಚ್ಚು ಪಾಲಿನ ಜನಶಕ್ತಿ ಗ್ರಾಮಾಂತರ ಪ್ರದೇಶದ್ದಾಗಿಯೇ ಉಳಿದಿದೆ. ಪಟ್ಟಣ ಪ್ರದೇಶದ ಜನಶಕ್ತಿ ಗ್ರಾಮಪ್ರದೇಶಕ್ಕಿಂತ ಅಧಿಕ ದರದಲ್ಲಿ ಬೆಳೆಯುತ್ತಿದೆ. ಆದಕಾರಣ ಗ್ರಾಮಾಂತರ ಜನಶಕ್ತಿಯ ಪ್ರಮಾಣ ಹೆಚ್ಚಿನ ಮಟ್ಟದಲ್ಲಿದ್ದರೂ ಅದು ಈ ಅವಧಿಯಲ್ಲಿ ಇಳಿಕೆ ತೋರಿರುವುದು ಗಮನಾರ್ಹ. ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶದ ಜನಶಕ್ತಿಯ ಬೆಳವಣಿಗೆಯ ಈ ನಮೂನೆಗೆ ಕಾರಣ ಹಳ್ಳಿಗಾಡಿನಿಂದ ಪಟ್ಟಣಗಳಿಗೆ ಹೆಚ್ಚು ಪ್ರಮಾಣದಲ್ಲಿ ಜನ ವಲಸೆ ಬಂದಿರುವುದು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೇನೆಂದರೆ, ಗ್ರಾಮ ಹಾಗೂ ಪಟ್ಟಣ ಪ್ರದೇಶಗಳೆರಡರಲ್ಲೂ ಸ್ತ್ರೀ ಜನಶಕ್ತಿ ಬೆಳವಣಿಗೆ ದರ ಅಧಿಕ ಎಂಬುದು. ಈ ಕಾರಣದಿಂದ ಪುರುಷ ಜನಶಕ್ತಿ ಪ್ರಮಾಣ ಹೆಚ್ಚಿನ ಮಟ್ಟದಲ್ಲಿದ್ದರೂ ಇದು ಇಳಿಕೆ ತೋರಿಸಿದೆ. ಸ್ತ್ರೀ ಜನಶಕ್ತಿ ಪ್ರಮಾಣ ಏರಿಕೆ ತೋರಿಸಿದೆ. ಉದ್ಯೋಗಗಳಲ್ಲಿ ತೊಡಗುವುದರ ಬಗ್ಗೆ ಸ್ತ್ರೀಯರ ಮನೋಭಾವ ಮುಂದೆ ಬದಲಾದಂತೆ ಅವರಲ್ಲಿ ಹೆಚ್ಚಿನ ಪ್ರಮಾಣದವರು ಉದ್ಯೋಗಗಳನ್ನು ಅರಸುವುದು ಖಂಡಿತ. ಆಗ ಸ್ತ್ರೀ ಜನಶಕ್ತಿಯ ಬೆಳವಣಿಗೆ ಇನ್ನೂ ಏರುವುದರಲ್ಲಿ ಅನುಮಾನವಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು.

ವಾಸ್ತವವಾಗಿ ಉದ್ಯೋಗದಲ್ಲಿರುವವರ ಪ್ರಮಾಣ ಹಾಗೂ ಬೇರೆ ಬೇರೆ ಉದ್ಯೋಗಗಳಲ್ಲಿ ಹಂಚಿಹೋಗಿರುವ ಅವರ ಪ್ರಮಾಣದ ವಿಶ್ಲೇಷಣೆಯಿಂದ ಆರ್ಥಿಕತೆಯ ಬೆಳವಣಿಗೆಗಾಗಿ ಒಟ್ಟು ಜನಸಂಖ್ಯೆಯಲ್ಲಿ

ಎಷ್ಟು ಮಂದಿ ದುಡಿಯುತ್ತಿದ್ದಾರೆ, ಆರ್ಥಿಕತೆ ಕೃಷಿ ಪ್ರಧಾನವೋ ಕೈಗಾರಿಕಾ ಪ್ರಧಾನವೋ ಇತ್ಯಾದಿ ಅಂಶಗಳನ್ನು ತಿಳಿಯಬಹುದು. ಉದ್ಯೋಗಿಗಳಲ್ಲದವರು ಎಂದರೆ ಅವಲಂಬಿತರು, ವಿವಾಹಿತ ಸ್ತ್ರೀಯರು, ನಿವೃತ್ತಿ ಹೊಂದಿದವರು, ಭಿಕ್ಷುಕರು, ಅಲೆಮಾರಿಗಳು, ಬಂದಿಗಳು ಹಾಗೂ ನಿರುದ್ಯೋಗಿಗಳು. ಇವರು ಉದ್ಯೋಗಿಗಳೆನಿಸುವವರಾಗಿದ್ದರೂ ಲಾಭ ಅಥವಾ ವೇತನಕ್ಕಾಗಿ ಉತ್ಪನ್ನಕಾರಕ ಉದ್ಯೋಗದಲ್ಲಿ ತೊಡಗಿರದಂಥವರು. ಆದರೆ ಉದ್ಯೋಗಿಗಳೆಂಬ ಪದವನ್ನು ಏಕರೀತಿಯಲ್ಲಿ ಎಲ್ಲ ಜನಗಣತಿ ವರ್ಷಗಳಲ್ಲಿ ವ್ಯಾಖ್ಯಿಸಿರಲಿಲ್ಲ. ಆದಕಾರಣ ಇವರನ್ನು ಕುರಿತ ಅಂಕಿಅಂಶಗಳು ಹೋಲಿಕೆಗೆ ಅನರ್ಹವಾದುವು. 1971ರ ಜನಗಣತಿಯಲ್ಲಿ ನಿಯತ ಉದ್ಯೋಗಗಳಲ್ಲಿ ನಿರತರಾದವರನ್ನು ಮಾತ್ರ ಉದ್ಯೋಗಿಗಳೆಂದು ಪರಿಗಣಿಸಲಾಗಿದೆ. ಹಿಂದಿನ ಜನಗಣತಿಗಳಲ್ಲಿ ಇದ್ದಂತೆ ತಮ್ಮ ಕಂಟುಂಬದ ಉದ್ಯೋಗದಲ್ಲಿ ಸಹಾಯ ನೀಡುವ ಮನೆ ಹೆಂಗಸರು, ಶಾಲೆಗೆ ಹೋಗುವ ಮಕ್ಕಳು ಮುಂತಾದ ಅವಲಂಬಿತರನ್ನು ಉದ್ಯೋಗಿಗಳೆಂದು ಪರಿಗಣಿಸುವುದಿಲ್ಲ. ಈ ಕಾರಣದಿಂದ ಹಿಂದಿನ ಜನಗಣತಿಗಳಲ್ಲಿ ಉದ್ಯೋಗಿಗಳೆನಿಸಿದ ಅನೇಕರು ಮುಂದಿನ ಜನಗಣತಿಯಲ್ಲಿ ಉದ್ಯೋಗಿಗಳಲ್ಲದವರೆನಿಸುತ್ತಾರೆ.

ಕರ್ನಾಟಕದ ಆರ್ಥಿಕತೆಯಲ್ಲಿ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಉದ್ಯಮ (ಪ್ರಾಥಮಿಕ ಕ್ಷೇತ್ರ) ಪ್ರಧಾನವಾದುದು. ಈ ಕ್ಷೇತ್ರದಲ್ಲಿ ಒಟ್ಟು ಉದ್ಯೋಗಿಗಳಲ್ಲಿನ ಸೇ.71.3ರಷ್ಟು ಮಂದಿ ನಿರತರಾಗಿದ್ದಾರೆ. ಇದು ಭಾರತದ ಪ್ರಮಾಣಕ್ಕೆ ಸರಿಸುಮಾರಾಗಿದೆ ಎಂಬುದನ್ನು ನೋಡಬಹುದು. ಕರ್ನಾಟಕದ ಉದ್ಯೋಗಿಗಳ ಪೈಕಿ ಸೇ.12 ಮಂದಿ ದ್ವಿತೀಯಕ ಕ್ಷೇತ್ರದಲ್ಲೂ ಸೇ.16.7 ಮಂದಿ ತೃತೀಯಕ ಕ್ಷೇತ್ರದಲ್ಲೂ ತೊಡಗಿದ್ದಾರೆ. ಭಾರತಕ್ಕೆ ಸಂಬಂಧಿಸಿದ ಈ ಅಂಕಿಗಳು ಕ್ರಮವಾಗಿ ಸೇ.10.8 ಮತ್ತು ಸೇ.16.8. ಭಾರತ ಮತ್ತು ಕರ್ನಾಟಕಗಳ ಉದ್ಯೋಗಿಗಳ ಕ್ಷೇತ್ರವಾರು ಹಂಚಿಕೆಯ ನಮೂನೆಯಲ್ಲಿ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಹಿಂದುಳಿದ ಆರ್ಥಿಕತೆಗಳಲ್ಲಿ ಸಾಧಾರಣವಾಗಿ ಪ್ರಾಥಮಿಕ ಕ್ಷೇತ್ರದಲ್ಲಿ ತೊಡಗಿರುವ ಉದ್ಯೋಗಿಗಳ ಪ್ರಮಾಣ ಹೆಚ್ಚು. ಆದರೆ ಆರ್ಥಿಕತೆ ಬೆಳವಣಿಗೆ ಹೊಂದಿದಂತೆ ಅದರ ರಚನೆಯಲ್ಲಿ ಬದಲಾವಣೆಗಳುಂಟಾಗುತ್ತವೆ. ಮುಖ್ಯವಾಗಿ ಹೇಳುವುದಾದರೆ ತಾಂತ್ರಿಕ ಕ್ರಮಗಳ ಅಳವಡಿಕೆಯಿಂದಾಗಿ ಪ್ರಾಥಮಿಕ ಕ್ಷೇತ್ರದಿಂದ ಉದ್ಯೋಗಿಗಳು ಬಿಡುಗಡೆ ಹೊಂದಿ ದ್ವಿತೀಯಕ ಮತ್ತು ತೃತೀಯಕ ಕ್ಷೇತ್ರಗಳಲ್ಲಿ ನಿಯಮಿಸಲ್ಪಡುತ್ತ ಹೋಗುವುದು. (ಎ.ಎ.)

**ಜನಸಂಖ್ಯಾನಿಯಂತ್ರಣ ಮತ್ತು ಕುಟುಂಬ ಯೋಜನೆ :** ನಾಗಾಲೋಟದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯ ಕುದುರೆಗೆ ಕಡಿವಾಣ ಹಾಕಿ ನಿಯಂತ್ರಣದಲ್ಲಿಡುವ ಕಾರ್ಯದಲ್ಲಿ ಭಾರತದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹತ್ತರ ಪಾತ್ರ ವಹಿಸುತ್ತಿವೆ. ಸರ್ಕಾರದ ಜೊತೆಗೆ ಹಲವು ಸ್ವಯಂಸೇವಾ ಸಂಸ್ಥೆಗಳೂ ದೇಶದಾದ್ಯಂತ ಕುಟುಂಬ ಯೋಜನೆಯ ಕ್ಷೇತ್ರದಲ್ಲಿ ದುಡಿಯುತ್ತಿವೆ. ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ (1884-1940) ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆ ಹಾಗೂ ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ವಾಣಿವಿಲಾಸ ಆಸ್ಪತ್ರೆಗಳಲ್ಲಿ ಜನನ ನಿಯಂತ್ರಣ ವಿಭಾಗವನ್ನು ಪ್ರಾರಂಭಿಸಿದರು (1930). ಜಗತ್ತಿನ ಮೊಟ್ಟಮೊದಲ ಸರ್ಕಾರಿ ಜನನ ನಿಯಂತ್ರಣ ಆಸ್ಪತ್ರೆಗಳನ್ನು ಸ್ಥಾಪಿಸಿದ ಹೆಗ್ಗಳಿಕೆ ಕರ್ನಾಟಕಕ್ಕೆ ಸಲ್ಲುತ್ತದೆ.

ಮೈಸೂರು ಸಂಸ್ಥಾನದಲ್ಲಿ 1930ರಿಂದಲೂ ಜನಸಂಖ್ಯಾ ನಿಯಂತ್ರಣ ಕಾರ್ಯ ನಡೆಯುತ್ತ ಬಂದಿದೆ. ಕುಟುಂಬ ಯೋಜನೆ ನಿರ್ದಿಷ್ಟ ಕಾರ್ಯಸ್ವರೂಪ ಪಡೆದಿದ್ದು ಎರಡನೆಯ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ. ಗ್ರಾಮೀಣ ಹಾಗೂ ನಗರ ಪ್ರದೇಶದ ಜನರಿಗೆ ಜನಸಂಖ್ಯಾ ಹೆಚ್ಚಳದ ಬಗ್ಗೆ ಅರಿವು ಮೂಡಿಸುವ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಎಲ್ಲಾ ವೈದ್ಯಕೀಯ ಸಂಸ್ಥೆಗಳಲ್ಲಿ ವ್ಯಾಸಕ್ಟಮಿ, ಟ್ಯುಬೆಕ್ಟಮಿ, ಉದರದರ್ಶಕ ಶಸ್ತ್ರ ಚಿಕಿತ್ಸೆ (ಲ್ಯಾಪ್ರೊಸ್ಕೋಪಿ) ಹಾಗೂ ತಂತಿ ಅಳವಡಿಕೆ (ಐ.ಯು.ಡಿ.) ಸೌಲಭ್ಯಗಳನ್ನು ನೀಡಲಾಯಿತು. ಉಪನ್ಯಾಸಗಳು, ಪ್ರದರ್ಶನ ಮುಂತಾದ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಲಾಯಿತು.

ಗ್ರಾಮೀಣ ಪ್ರದೇಶಗಳ ಜನರಿಗೆ ಉತ್ತಮವಾದ ಆರೋಗ್ಯ ಸೇವೆಗಳು ದೊರೆಯಬೇಕೆಂಬ ಉದ್ದೇಶದಿಂದ ಸರ್ಕಾರ ಗ್ರಾಮ ಮಟ್ಟದಿಂದ ಆರೋಗ್ಯ ಸೇವಾ ಸಂಸ್ಥೆಗಳನ್ನು ಸಜ್ಜುಗೊಳಿಸಲು ಕಾರ್ಯಕ್ರಮ ಹಮ್ಮಿಕೊಂಡಿತು. ಎಲ್ಲರಿಗೂ ಆರೋಗ್ಯ ಒದಗಿಸುವುದು, ಗ್ರಾಮೀಣ ಜನತೆಗೆ ಅತ್ಯುತ್ತಮ ಸೇವೆ ಸುಲಭವಾಗಿ ದೊರಕಿಸುವುದು ಇವು ಮೂಲ ಉದ್ದೇಶಗಳಾಗಿದ್ದುವು. ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಅಂತರ್ಗತವಾಗಿರುವ ಹೆರಿಗೆ ಕುರಿತಂತೆ ಇರುವ ಭಯ ನಿವಾರಣೆ, ತಾಯಂದಿರ ಮತ್ತು ಶಿಶು ಮರಣ ಪ್ರಮಾಣ ಇಳಿಸಿ, ಸುರಕ್ಷಿತ ಹೆರಿಗೆ ಸಾಧ್ಯವಾಗುವಂತೆ ಮಾಡುವ ಕಾರ್ಯಕ್ರಮ ಅನುಷ್ಠಾನಗೊಳಿಸಲಾಯಿತು. ಕುಟುಂಬ ಕಲ್ಯಾಣ ಕಾರ್ಯಕ್ರಮ ಪರಿಣಾಮಕಾರಿಯಾಗಿ ನಡೆಸಲು ಅಂಗನವಾಡಿ ಕಾರ್ಯಕರ್ತೆಯರ ಸಹಕಾರವನ್ನೂ ಪಡೆಯಲಾಗುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ತಾಯಿ ಮತ್ತು ಮಗುವಿನ ಆರೋಗ್ಯದ ಬಗ್ಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಮಕ್ಕಳಿಗೆ ಹಾಗೂ ಗರ್ಭಿಣಿಯರಿಗೆ ಚುಚ್ಚುಮದ್ದು ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಭಾರತದ ಜನಸಂಖ್ಯಾ ಯೋಜನೆ viii ಮತ್ತು ix ರ ಅಡಿಯಲ್ಲಿ ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು ಕರ್ನಾಟಕ ಸರ್ಕಾರ ಕೈಗೊಂಡಿತು. 315 ಉಪಕೇಂದ್ರಗಳು, 14 ಪ್ರಾಥಮಿಕ ಆರೋಗ್ಯ ಕೇಂದ್ರ, 43 ವೈದ್ಯಾಧಿಕಾರಿಗಳ ವಸತಿನಿಲಯ ಹಾಗೂ ವೈದ್ಯಕೀಯ ಸೇವೆ ಬಲಪಡಿಸಲು ಹಲವು ಕಟ್ಟಡಗಳನ್ನು ನಿರ್ಮಿಸಲಾಯಿತು. ಇದಲ್ಲದೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ, 8 ಜಿಲ್ಲಾ ತರಬೇತಿ ಕೇಂದ್ರ, 4 ಕಿರಿಯ ಆರೋಗ್ಯ ಸಹಾಯಕರ ತರಬೇತಿ ಕೇಂದ್ರ ಮತ್ತು ಒಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಯಿತು. ಈ ತರಬೇತಿ ವಿಭಾಗದಲ್ಲಿ ಒಟ್ಟು 3994 ವೈದ್ಯಾಧಿಕಾರಿಗಳೂ ಸೇರಿದಂತೆ ವಿವಿಧ ಆರೋಗ್ಯ ಸಿಬ್ಬಂದಿವರ್ಗ ತರಬೇತಿ ಪಡೆದಿದೆ (1998-99).

ಬೆಂಗಳೂರಿನ ಜನಸಂಖ್ಯಾ ಕೇಂದ್ರವು ಕರ್ನಾಟಕ ಸರ್ಕಾರ, ಅದರಲ್ಲೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ಹಮ್ಮಿಕೊಂಡಿರುವ ಹಲವಾರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಕರಿಸುತ್ತಿದೆ.

ಗ್ರಾಮೀಣ ಆರೋಗ್ಯ ಕಾರ್ಯಕ್ರಮಗಳು ಆರೋಗ್ಯದ ಮಟ್ಟವನ್ನು ಹೆಚ್ಚಿಸುವಲ್ಲಿ ಹಾಗೂ ಪ್ರತಿಯೊಬ್ಬರಿಗೂ ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸುವಲ್ಲಿ ತುಂಬ ಪರಿಣಾಮಕಾರಿಯಾಗಿವೆ. ಸರ್ಕಾರ ಪ್ರತಿ 30,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರತಿ 15 ರಿಂದ 20 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಪ್ರತಿ 5,000 ಜನಸಂಖ್ಯೆಗೆ ಒಂದು ಉಪಕೇಂದ್ರ ಪ್ರಾರಂಭಿಸಿದೆ.

**ಕುಟುಂಬ ಕಲ್ಯಾಣ ಸೇವೆಗಳು :** ಕುಟುಂಬ ಕಲ್ಯಾಣ ಕಾರ್ಯಕ್ರಮ ಎರಡನೆಯ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಮಹತ್ವ ಪಡೆಯಿತು. ಈ ಕಾರ್ಯಕ್ರಮವನ್ನು ಹಲವಾರು ಹಂತಗಳಲ್ಲಿ ಅಳವಡಿಸಲು ಉತ್ತಮ ಸುಸಂಘಟನೆ ಮತ್ತು ಮೇಲ್ವಿಚಾರಣೆಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯಾಗಿ ಪುನರ್ ನಿಯೋಜಿಸಲಾಯಿತು.

ಜನಸಂಖ್ಯೆಯ ಬೆಳವಣಿಗೆಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಸಂತಾನೋತ್ಪತ್ತಿ ವಯಸ್ಸಿನಲ್ಲಿರುವ ಮಹಿಳೆಯರ ಮತ್ತು ಐದು ವರ್ಷದ ಒಳಗಿನ ಮಕ್ಕಳ ಆರೋಗ್ಯದತ್ತ ಗಮನ ಹರಿಸುವುದು ಬಹಳ ಮುಖ್ಯವೆಂದು ಭಾವಿಸಲಾಯಿತು. ಕುಟುಂಬಕಲ್ಯಾಣ ಕಾರ್ಯಕ್ರಮ ಸಂತಾನೋತ್ಪತ್ತಿ ವಯಸ್ಸಿನಲ್ಲಿರುವ ಮಹಿಳೆಯರ ಮತ್ತು ಐದು ವರ್ಷದೊಳಗಿನ ಮಕ್ಕಳ ಆರೋಗ್ಯ ಉತ್ತಮಪಡಿಸುವತ್ತ ಕೇಂದ್ರಿಕೃತವಾಗಿತ್ತು. ಇದಲ್ಲದೇ ಅಪೇಕ್ಷಿತರಿಗೆ ಗರ್ಭನಿರೋಧಕ ಸೇವೆಗಳನ್ನು ಹಾಗೂ ಅಂತರದ ಹೆರಿಗೆಗಳಿಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವತ್ತ ಸಾಕಷ್ಟು ಗಮನ ಹರಿಸಲಾಯಿತು. ಯಶಸ್ವಿಯಾಗಿ ತಾಯಿ ಮತ್ತು

ಮಗುವಿನ ಉಳಿವೂ ಹಾಗೂ ಅವರ ಆರೋಗ್ಯ, ದಂಪತಿಗಳು, ಗರ್ಭಿಣಿಯಾಗುವ ಹಾಗೂ ಸಂಬಂಧಿಸಿದ ಕಾಯಿಲೆಗಳ ಭಯವಿಲ್ಲದೆ ಲೈಂಗಿಕ ಸಂಬಂಧ ಹೊಂದುವುದರಲ್ಲಿ ಸಹಕಾರಿಯಾಗಿದೆ. ಫಲಾನುಭವಿಗಳ ಅಗತ್ಯವನ್ನಾಧರಿಸಿದ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸಮಗ್ರ ಸೇವೆಯನ್ನೊದಗಿಸುವುದೇ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದ ಉದ್ದೇಶ.

1932ರಲ್ಲಿ ಮೈಸೂರು ಮೆಡಿಕಲ್ ಕೌನ್ಸಿಲ್ ಸ್ಥಾಪಿಸಲಾಯಿತು. ಇದರಲ್ಲಿ ಎಲ್ಲಾ ವಿವಿಧ ವೈದ್ಯಕೀಯ ವೃತ್ತಿ ಮಾಡುವವರನ್ನು ಗುರುತಿಸಿ ನೋಂದಣಿ ಮಾಡಲಾಯಿತು. ಇದು ವೈದ್ಯವೃತ್ತಿಯವರಿಗೆ ಹಲವಾರು ಸೌಕರ್ಯಗಳನ್ನು ಒದಗಿಸುತ್ತಿದೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಬೆಂಗಳೂರಿನಲ್ಲಿ ಸ್ಥಾಪಿತವಾದದ್ದು 1928ರಲ್ಲಿ. ಈ ಸಂಘ ಕರ್ನಾಟಕದಲ್ಲಿ ಒಟ್ಟು 67 ಶಾಖೆಗಳನ್ನು ಹೊಂದಿದ್ದು ವೈದ್ಯರಿಗೆ ಫೆಲೋಷಿಪ್ ನೀಡುವುದಲ್ಲದೆ ಆರೋಗ್ಯ ಯೋಜನೆಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಸರ್ಕಾರಕ್ಕೆ ಸಲಹೆ ನೀಡುತ್ತ ಬಂದಿದೆ.

ರಾಷ್ಟ್ರದ ಅಭಿವೃದ್ಧಿ ಸಾಮರ್ಥ್ಯವನ್ನು ಮುಂದುವರಿಸಲು ಅನುವಾಗುವಂತೆ ದೇಶದ ಜನಸಂಖ್ಯೆಯಿರಬೇಕು ಎಂಬುದು ಕುಟುಂಬ ಯೋಜನಾ ಕಾರ್ಯಕ್ರಮದ ಮುಖ್ಯ ಗುರಿ. ಮಕ್ಕಳ ಆರೋಗ್ಯ, ಉಳಿವು ಮತ್ತು ದೀರ್ಘಾವಧಿಯ ಆಯಸ್ಸಿನ ಬಗ್ಗೆ ಭರವಸೆ ಉಂಟಾದಲ್ಲಿ ತಂದೆ ತಾಯಿಗಳು ಚಿಕ್ಕ ಸಂಸಾರ ಹೊಂದುತ್ತಾರೆ ಎಂಬುದು ದೃಢಪಟ್ಟಿದೆ. ಅಲ್ಪಾವಧಿಯಲ್ಲಿ ಅಂತರದ ಹೆರಿಗೆ ಮತ್ತು ಸಂತಾನಹರಣ ಶಸ್ತ್ರಚಿಕಿತ್ಸೆಯ ವಿಧಾನಗಳಿಂದ ಅನಪೇಕ್ಷಿತ ಗರ್ಭವನ್ನು ತಡೆಗಟ್ಟುವ ಮೂಲಕ ಪರಿಣಾಮಕಾರಿಯಾಗಿ ಜನಸಂಖ್ಯೆಯನ್ನು ನಿಯಂತ್ರಿಸಬಹುದು. ಆದರೂ ಮಧ್ಯಮಾವಧಿ ಮತ್ತು ದೀರ್ಘಾವಧಿಯಲ್ಲಿ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ಕಾರ್ಯಕ್ರಮ ಚಿಕ್ಕ ಕುಟುಂಬದ ಬಗ್ಗೆ ಭರವಸೆ ಮೂಡಿಸಿ ಜನಸಂಖ್ಯೆಯ ಸ್ಥಿರತೆಗೆ ಕಾರಣವಾಗಬಹುದು. ಆದ್ದರಿಂದ ಏಕಕಾಲದಲ್ಲೇ ರಾಷ್ಟ್ರದ ಜನಸಂಖ್ಯೆಗೆ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳನ್ನು ಒದಗಿಸುವುದು ಹಾಗೂ ಗರ್ಭನಿರೋಧಕ ಹಾಗೂ ಸಂತಾನಹರಣ ವಿಧಾನಗಳನ್ನು ಅಳವಡಿಸಲು ಅಪೇಕ್ಷಿತ ದಂಪತಿಗಳನ್ನು ಪ್ರೋತ್ಸಾಹಿಸುವುದು ಭಾರತ ಸರ್ಕಾರದ ಕುಟುಂಬ ಕಲ್ಯಾಣ ಇಲಾಖೆಯ ಒಟ್ಟಾರೆ ನೀತಿಯಾಗಿದೆ. ಇದನ್ನೇ ಕರ್ನಾಟಕ ರಾಜ್ಯ ಸರ್ಕಾರವೂ ಅನುಸರಿಸುತ್ತ ಬಂದಿದೆ. ಕೆಲವು ಕ್ರಮಗಳನ್ನು ಏಕಕಾಲಕ್ಕೆ ಅನುಸರಿಸುವುದರಿಂದ ಗುರಿಗಳನ್ನು ಸಾಧಿಸಬಹುದು.

ಗ್ರಾಮೀಣ ಮತ್ತು ನಗರ ಪ್ರದೇಶಗಳ ಸಮುದಾಯಗಳಿಗೆ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳನ್ನು ಒದಗಿಸಲು ಸಂಪನ್ಮೂಲಗಳ ವ್ಯವಸ್ಥೆ, ಆರೋಗ್ಯ ವ್ಯವಸ್ಥೆಯಲ್ಲಿ ದಕ್ಷತೆ ಕಾಪಾಡುವುದು. ಮಹಿಳೆಯರಲ್ಲಿ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸುವುದು ಮತ್ತು ಕುಟುಂಬ ಗಳಲ್ಲಿ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವುದು, ಕುಟುಂಬಗಳ ಆರ್ಥಿಕ ಸ್ಥಿತಿ ಉತ್ತಮಪಡಿಸಲು ಪ್ರಯತ್ನಿಸುವುದು, ಅಂತರ ಇಲಾಖೆಗಳ ಸಮನ್ವಯಕ್ಕಾಗಿ ಸಾಧನೆಗಾಗಿ ಯುಕ್ತ ವ್ಯವಸ್ಥೆ ಮಾಡುವುದು ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಹಾಗೂ ಪರಸ್ಪರ ಬೆಂಬಲಕ್ಕಾಗಿ ಗುರುತಿಸಿದ ಇತರ ಕಾರ್ಯಕ್ರಮಗಳ ನಿರ್ವಹಣೆಯನ್ನು ಸಂಯೋಜಿಸುವುದು ಮೊದಲಾದವು ಪ್ರಮುಖವಾದುವು.

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮವು ಶಿಶು ಉಳಿವು ಮತ್ತು ಸುರಕ್ಷಿತ ತಾಯ್ತನದ ಅಂಶಗಳಲ್ಲದೆ, ಲೈಂಗಿಕ ಸಂಪರ್ಕ ಕಾಯಿಲೆಗಳಿಗೆ ಸಂಬಂಧಿಸಿದ ಹಾಗೂ ಜನನಾಂಗ ಮಾರ್ಗದ ಸೋಂಕಿಗೆ ಸಂಬಂಧಿಸಿದ ಎರಡು ಕಾರ್ಯಕ್ರಮಗಳನ್ನೂ ಒಳಗೊಂಡಿದೆ.

ಎಲ್ಲಾ ಕೇಂದ್ರಗಳು ಕುಟುಂಬ ಕಲ್ಯಾಣ ಯೋಜನೆಯ ಕಾರ್ಯ ಚಟುವಟಿಕೆಗಳನ್ನು ಹೇಗೆ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ ಎಂಬುದನ್ನು ಅರಿತುಕೊಳ್ಳಲು ಜಿಲ್ಲಾ ಮಟ್ಟದ ಕುಟುಂಬದ ಸಮೀಕ್ಷೆಯನ್ನು ನಿರಂತರ ಆಧಾರದ ಮೇಲೆ ನಡೆಸಲಾಗುತ್ತದೆ. ಇದರ ದೃಢೀಕರಣಕ್ಕಾಗಿ ಸಹಗಾಮಿ ಮೌಲ್ಯಮಾಪನವನ್ನು ನಡೆಸಲಾಗುತ್ತಿದೆ.

**ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯ (ಎಫ್.ಪಿ.ಎ.ಐ) :** ಇಂಟರ್ ನ್ಯಾಷನಲ್ ಪ್ಲಾನ್ಡ್ ಪೇರೆಂಟ್‌ಹುಡ್ ಅಸೋಸಿಯೇಷನ್‌ನ ಅಂಗಸಂಸ್ಥೆಯಾಗಿರುವ ಬೃಹತ್ ರಾಷ್ಟ್ರೀಯ ಸ್ವಯಂಸೇವಾ ಸಂಸ್ಥೆಯಾದ ಇದು ಮುಂಬೈನಲ್ಲಿ ಮುಖ್ಯ ಕಾರ್ಯಾಲಯ ಹೊಂದಿದೆ. ರಾಷ್ಟ್ರದಾದ್ಯಂತ 39 ಶಾಖೆಗಳನ್ನು ಹೊಂದಿದ್ದು ಕರ್ನಾಟಕದಲ್ಲಿ ಇದರ 11 ಶಾಖೆಗಳಿವೆ: ಬೆಂಗಳೂರು, ಮೈಸೂರು, ಬೆಳಗಾಂವಿ, ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ರಾಯಚೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಉಡುಪಿ. ಜನಸಂಖ್ಯೆ ಮತ್ತು ಸಂಪನ್ಮೂಲಗಳ ನಡುವೆ ಸಮತೋಲನ ಸ್ಥಾಪಿಸುವುದು, ಜವಾಬ್ದಾರಿಯುತ ಲೈಂಗಿಕ ವರ್ತನೆಯನ್ನು ಬೆಳೆಸಿಕೊಳ್ಳಲು ಯುವಜನತೆಯನ್ನು ಸಿದ್ಧಪಡಿಸುವುದು ಇದರ ಗುರಿ. ಆರೋಗ್ಯ, ಕುಟುಂಬ ಕಲ್ಯಾಣ, ಪ್ರಜನನ ಮತ್ತು ಮಗುವಿನ ಆರೋಗ್ಯ, ಪರಿಸರ ರಕ್ಷಣೆ, ಏಡ್ಸ್ ವಿರುದ್ಧ ಹೋರಾಟ, ಹೆಣ್ಣು ಮಕ್ಕಳ ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಸರ್ಕಾರದೊಂದಿಗೆ ಹಾಗೂ ಇತರ ಸ್ವಯಂಸೇವಾ ಸಂಸ್ಥೆಗಳ ನೆರವಿನೊಂದಿಗೆ ಈ ಸಂಸ್ಥೆ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದೆ.

(ಬಿಎಚ್.ಆರ್.)

**ಜನ್ನ** : 12ನೆಯ ಶತಮಾನದ ಉತ್ತರಾರ್ಧ ಮತ್ತು 13ನೆಯ ಶತಮಾನದ ಪೂರ್ವಾರ್ಧದಲ್ಲಿ ಇದ್ದ ಪ್ರಸಿದ್ಧ ಜೈನಕವಿ. ಯಶೋಧರ ಚರಿತೆ, ಅನಂತನಾಥ ಪುರಾಣ ಎಂಬ ಕಾವ್ಯಗಳ ಕರ್ತೃ. ಹಳೇಬೀಡು ಪ್ರಾಂತ್ಯದವನಾದ ಈತನ ತಂದೆ ಸುಮನೋಬಾಣನೆಂಬ ಬಿರುದು ಪಡೆದಿದ್ದ ಶಂಕರ, ತಾಯಿ ಗಂಗಾದೇವಿ, ಹೆಂಡತಿ ಲಕುಮಾದೇವಿ, ಸೋದರಳಿಯ ಕೇಶಿರಾಜ, ಧರ್ಮಗುರು ರಾಮಚಂದ್ರದೇವಮುನಿ, ಉಪಾಧ್ಯಾಯ ಇಮ್ಮಡಿ ನಾಗವರ್ಮ. ಹೊಯ್ಸಳ ಬಲ್ಲಾಳನಿಂದ (1173-1220) ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದು, ಅನಂತರ ನರಸಿಂಹನಲ್ಲಿ (1220-35) ದಂಡಾಧಿಪತಿಯೂ ಮಂತ್ರಿಯೂ ಆಗಿದ್ದ. ನಾಟ್ಯಪ್ರಭು ಜನಾರ್ದನದೇವ ಎಂದು ತನ್ನನ್ನು ಕರೆದುಕೊಂಡಿದ್ದಾನೆ. ಜನ್ನ ಪಂಪನಂತೆ ಬಹುಮುಖ ವ್ಯಕ್ತಿತ್ವವುಳ್ಳವ. ಈತ ಅನುಭವ ಮುಕುರವೆಂಬ ಕಾಮಶಾಸ್ತ್ರ ಸಂಬಂಧವಾದ ಕೃತಿಯೊಂದನ್ನು ಬರೆದಿದ್ದಾನೆ. ಕೆಲವು ಶಾಸನಗಳೂ ಈತನಿಂದ ರಚಿತವಾಗಿವೆ.

ಯಶೋಧರಚರಿತೆ ಸುಂದರವಾದ ಪುಟ್ಟ ಕಾವ್ಯ. ಇದರ ರಚನೆಯ ಕಾಲ 1209. ಇದರಲ್ಲಿ ಕೇವಲ ನಾಲ್ಕು ಅವತಾರಗಳೂ 310 ಪದ್ಯಗಳೂ ಇವೆ. ಕಂದಪದ್ಯಗಳಿಂದಲೇ ರಚಿತವಾಗಿರುವುದು ಈ ಕೃತಿಯ ವಿಶಿಷ್ಟತೆ. ಇದಕ್ಕೆ ಮೂಲ ಸಂಸ್ಕೃತದಲ್ಲಿ ವಾದಿರಾಜ (11ನೆಯ ಶತಮಾನ) ಬರೆದಿರುವ ಯಶೋಧರ ಚರಿತ. ಇದಕ್ಕಿಂತಲೂ ಹಿಂದೆ ಪ್ರಭಂಜನ, ಹರಿಭದ್ರ, ಸೋಮದೇವ ಮುಂತಾದ ಪ್ರಾಕೃತ ಸಂಸ್ಕೃತ ಕವಿಗಳು ಯಶೋಧರನ ಕಥೆಯನ್ನು ನಿರೂಪಿಸಿದ್ದರು. ಮೂಲತಃ ಅದೊಂದು ಜನಪದ ಕಥೆಯಿರಬೇಕು. ವಾದಿರಾಜ ಹಿಂದಿನವರಲ್ಲಿ ಬಹುಮಟ್ಟಿಗೆ ಧಾರ್ಮಿಕ ಸ್ವರೂಪದ ಕಥೆಯಷ್ಟೆ ಆಗಿದ್ದ ಯಶೋಧರಾಖ್ಯಾನವನ್ನು ತೆಗೆದುಕೊಂಡು ಅದರ ಅಸಂಗತಾಂಶಗಳನ್ನು ನಿವಾರಿಸಿ ಉಚಿತ ಮಾರ್ಪಾಡುಗಳನ್ನು ಮಾಡಿಕೊಂಡು ಅದನ್ನೊಂದು ಸರಳ ರಮ್ಯವಾದ, ಮಾನವೀಯ ಸ್ವಾರಸ್ಯವುಳ್ಳ ಕಾವ್ಯವನ್ನಾಗಿ ಪರಿವರ್ತಿಸಿದ. ಅವನ ಕಾವ್ಯಕ್ಕೆ ಸಂಸ್ಕೃತದಲ್ಲಿ ಯಾವ ವೈಶಿಷ್ಟ್ಯವಿದೆಯೋ ಅದೇ ವೈಶಿಷ್ಟ್ಯ ಕನ್ನಡದಲ್ಲಿ ಜನ್ನನ ಕೃತಿಗಿದೆ.

ಯಶೋಧರ ಚರಿತೆಯಲ್ಲಿ ಜನ್ನ ವಾದಿರಾಜನನ್ನು ಹೆಜ್ಜೆಹೆಜ್ಜೆಗೂ ಅನುಸರಿಸಿದ್ದಾನಾದರೂ ತನ್ನ ಸ್ವಂತ ಪ್ರತಿಭೆಯನ್ನು ಸಾಕಷ್ಟು ತೋರಿದ್ದಾನೆ. ಕೆಲವೆಡೆ ಮೂಲವನ್ನು ಸೊಗಸಾಗಿ ಅನುವಾದಿಸಿ ತನ್ನ ಭಾಷಾಂತರ ಶಕ್ತಿಯನ್ನು ಮೆರೆದಿದ್ದಾನೆ; ಕೆಲವೆಡೆ ಮೂಲದ ಚೆಲುವನ್ನು ಹೆಚ್ಚಿಸಿದ್ದಾನೆ; ಎಷ್ಟೋ ಕಡೆ ಮೂಲವನ್ನು ಅಂದವಾಗಿ ಸಂಗ್ರಹಿಸಿದ್ದಾನೆ. ಕಥೆಗೆ ಕೆಲವು ಅಂಶಗಳು ಹೊಸದಾಗಿ ಸೇರಿವೆ. ಅನೇಕ ಕಡೆ ಸೂಕ್ಷ್ಮವಾದ ಕೆಲವು ಮಾರ್ಪಾಟುಗಳಾಗಿವೆ. ಮೂಲದ ಕೆಲವು ಅನೌಚಿತ್ಯಗಳು ಹೋಗಿವೆ. ಅಲ್ಲದೆ, ಜನ್ನ ದೇಸಿಯ ಸೊಬಗನ್ನು ತನ್ನ ಕೃತಿಯಲ್ಲಿ ಸೂರೆಮಾಡಿದ್ದಾನೆ; ಅನ್ಯಭಾಷಾಕೃತಿಯೊಂದನ್ನು ತಾಯ್ನುಡಿಯಲ್ಲಿ ಎಷ್ಟು ಚೆನ್ನಾಗಿ ನಿರ್ವಹಿಸಬಹುದೊ ಅಷ್ಟು ಚೆನ್ನಾಗಿ ನಿರ್ವಹಿಸಿ ಯಶಸ್ವಿಯಾಗಿದ್ದಾನೆ.

'ಜೀವದಯೆ ಜೈನಧರ್ಮಂ' ಎಂಬ ಸಂದೇಶವನ್ನು ಬಿತ್ತರಿಸಿ, ಅಹಿಂಸೆಯ ಪಾರಮ್ಯವನ್ನು ಎತ್ತಿ ಹಿಡಿಯುವುದು ಯಶೋಧರ ಚರಿತೆಯ ಉದ್ದೇಶ. ಹಿಂಸೆಯಿಂದಾಗುವ ಘೋರ ದುರಂತವನ್ನು ಕವಿ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಯಶೋಧರ ಮತ್ತು ಚಂದ್ರಮತಿಯರು ಒಂದು ಹಿಟ್ಟಿನ ಕೋಳಿಯನ್ನು ಬಲಿಕೊಟ್ಟು ಸಂಕಲ್ಪ ಹಿಂಸೆಯನ್ನೆಸಗಿದ ಮಾತ್ರದಿಂದಲೇ ಹಲವಾರು ಜನ್ಮಗಳನ್ನೆತ್ತಿ ತಿರ್ಯಗ್ಗತಿಗಳಲ್ಲಿ ತೊಳಲಿ ಕಡೆಗೆ ಕರ್ಮದಿಂದ ಬಿಡುಗಡೆಗೊಳ್ಳುವುದನ್ನು ಇಲ್ಲಿ ನೋಡುತ್ತೇವೆ. ಈ ಕೃತಿಯಲ್ಲಿ ವ್ಯಕ್ತವಾಗುವ ಅಹಿಂಸಾತತ್ತ್ವ ಜೈನಧರ್ಮಕ್ಕೇ ಸೀಮಿತವಾದುದಲ್ಲ. ಅದು ಇಡೀ ಮಾನವಧರ್ಮದ ಸಂದೇಶವಾಗಿ ನಿಲ್ಲುತ್ತದೆ. ಅದನ್ನು ಕವಿ ಕಲಾವಿಲಾಸಪೂರ್ವಕವಾಗಿ ಪ್ರತಿಪಾದಿಸಿದ್ದಾನೆ.

ಯಶೋಧರಚರಿತೆಯಲ್ಲಿ ಅಮೃತಮತಿಯ ವಿಕೃತ ಪ್ರಣಯದ ಕಥೆಯೊಂದು ಪೂರಕವಾಗಿ ಸೇರಿಕೊಂಡಿದೆ. ಅದರಲ್ಲಿ ಬರುವ ಸಮಸ್ಯೆ ಸಾಮಾಜಿಕವಾದುದು, ನಿತ್ಯನೂತನವಾದುದು; ಕವಿ ಅದನ್ನು ವೈರಾಗ್ಯ ಪ್ರಚೋದನೆಗೆ, ಧರ್ಮಬೋಧನೆಗೆ ಬಳಸಿ ಕೊಂಡಿದ್ದಾ ನಾದರೂ ಅದನ್ನು ಪ್ರತ್ಯೇಕಿಸಿ ನೋಡುವುದು ಸಾಧ್ಯ. 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎಂಬುದು ಇಲ್ಲಿ ಜನ್ನನ ಕಾಣ್ಕೆ.

ಒಟ್ಟಿನಮೇಲೆ ಮಾನವಸ್ವಭಾವದ ಸಂಕೀರ್ಣತೆಯ ಅರಿವು, ಸ್ವಾರಸ್ಯಪೂರ್ಣವೂ ಸಂಕ್ಷಿಪ್ತವೂ ಆದ ನಿರೂಪಣೆ, ಸರಳ ಸಮುಚಿತವಾದ ಅಲಂಕಾರಗಳು, ದೇಸಿಯ ಬೆಡಗು ಬಿನ್ನಾಣಗಳು ಈ ಗುಣಗಳಿಂದ ಕೂಡಿರುವ ಯಶೋಧರ ಚರಿತೆ ಕನ್ನಡದಲ್ಲಿ ಒಂದು ವಿರಳವರ್ಗದ ಕಾವ್ಯವಾಗಿದೆ. ಧರ್ಮ, ಕಾವ್ಯಧರ್ಮಗಳ ಸಮನ್ವಯಕ್ಕೆ ಒಳ್ಳೆಯ ನಿದರ್ಶನವಾಗಿದೆ. (ಸಿ.ಪಿ.ಕೆ.)

ಅನಂತನಾಥಪುರಾಣ 14ನೆಯ ತೀರ್ಥಂಕರನಾದ ಅನಂತನಾಥನ ಕಥೆಯನ್ನು ಬಣ್ಣಿಸುವ 14 ಆಶ್ವಾಸಗಳ ಪ್ರೌಢ ಚಂಪೂಕಾವ್ಯ. ಇದರ ರಚನೆಯ ಕಾಲ 1230. ಕಥಾಬಂಧ ಹೀಗಿದೆ: ಒಂದು ದಿನ ಪದ್ಮರಥ ಮಹಾರಾಜ ಉಲ್ಕಾಪಾತವನ್ನು ಕಂಡು ವಿರಕ್ತನಾಗಿ ತಪಸ್ವಿಯಾದ. ಮರುಭವದಲ್ಲಿ ಇವನು ಅಚ್ಯುತ ಕಲ್ಪದಲ್ಲಿ ಜನಿಸಿದ. ಈ ಅಚ್ಯುತೇಂದ್ರ ಸ್ವರ್ಗದಿಂದ ಚ್ಯುತನಾಗಿ ಅಯೋಧ್ಯೆಯ ಸಿಂಹಸೇನ ಮಹಾರಾಜನಿಗೂ ಇವನ ಮಡದಿಯಾದ ಜಯಶಾಮೆಗೂ ಮಗನಾಗಿ ಹುಟ್ಟಿದ. ಇವನೇ ಅನಂತನಾಥ. ಇವನ ಮಡದಿ ರತ್ನಮಾಲೆ. ಈ ದಂಪತಿಗಳ ಪುತ್ರ ವಿಜಯ. ಒಂದು ದಿನ ಮಿಂಚನ್ನು ಕಂಡು ಅನಂತನಾಥನಿಗೆ ವೈರಾಗ್ಯವುಂಟಾಯಿತು. ಮಗನಿಗೆ ರಾಜ್ಯವನ್ನು ಕೊಟ್ಟು ಮುನಿಯಾದ. ಘಾತಿಕರ್ಮಗಳನ್ನು ಗೆದ್ದು ಜಿನನಾದ, ಮೂರು ಲೋಕಕ್ಕೂ ಧರ್ಮವರ್ಷವನ್ನು ಕರೆದು ತೀರ್ಥಂಕರನಾದ. ಅನಂತನಾಥಪುರಾಣಕ್ಕೆ ಮುಖ್ಯವಾದ ಆಕರ ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ರಚಿಸಿರುವ ಉತ್ತರಪುರಾಣ. ಅಲ್ಲಿ ಕೇವಲ 85 ಶ್ಲೋಕಗಳಲ್ಲಿ ಮುಗಿಯುವ ಅನಂತನಾಥನ ಕಥೆಯನ್ನು ಜನ್ನ ಎಳೆದು ಹಿಗ್ಗಲಿಸಿ 14 ಆಶ್ವಾಸಗಳಷ್ಟು ದೊಡ್ಡದು ಮಾಡಿದ್ದಾನೆ. ಈ ಕಾವ್ಯ ಸಂಪ್ರದಾಯದ ಪ್ರಭಾವಕ್ಕೆ ವಿಶೇಷವಾಗಿ ಪಕ್ಕಾಗಿದೆ. ವಿದ್ವತ್ತಿನ ಪ್ರದರ್ಶನ, ಮಾತಿನ ಆಡಂಬರ, ಅಲಂಕಾರಗಳ ಜಟಿಲತೆ, ಮತೀಯ ಪ್ರಕ್ರಿಯೆಗಳ ಆಧಿಕ್ಯ, ಅನಾವಶ್ಯಕ ವರ್ಣನೆಗಳು, ಔಚಿತ್ಯ ಪ್ರಜ್ಞೆಯ ಕೊರತೆ - ಇವು ಈ ಕಾವ್ಯದ ಎದ್ದು ಕಾಣುವ ಲಕ್ಷಣಗಳು. ಹೀಗಾಗಿ ಈ ಕೃತಿ ರಸವತ್ತಾದ ಕವಿತೆಯಾಗುವುದರ ಬದಲು ಬಹುಮಟ್ಟಿಗೆ ಶುಷ್ಕವಾದ ಪುರಾಣವಾಗಿ ಪರಿಣಮಿಸಿದೆ.

ಆದರೆ ಇದರಲ್ಲಿ ಅಂತರ್ಗತವಾಗಿರುವ ಚಂಡಶಾಸನನ ಉಪಾಖ್ಯಾನ ಒಂದು ಹೃದಯಂಗಮವಾದ ಭಾಗ. ಪ್ರತ್ಯೇಕಿಸಿದರೆ ಅದೊಂದು ಉಜ್ವಲವಾದ ಖಂಡಕಾವ್ಯವಾಗುತ್ತದೆ. ಜಿನಕಥೆಗೂ ಅದಕ್ಕೂ ಸಾವಯವ ಸಂಬಂಧವೇನೂ ಇಲ್ಲ. ಉತ್ತರ ಪುರಾಣದಲ್ಲಿ ಬಿಂದುರೂಪವಾಗಿ ಬರುವ ಕಥೆಯನ್ನು ಇಲ್ಲಿ ಜನ್ನ ಸೊಗಸಾಗಿ ವಿಸ್ತರಿಸಿದ್ದಾನೆ. ಯಶೋಧರಚರಿತೆಯಲ್ಲಿ ಹೆಣ್ಣಿನ ನಿಷಿದ್ಧಕಾಮ ಚಿತ್ರಿತವಾಗಿದ್ದರೆ ಚಂಡಶಾಸನನ ವೃತ್ತಾಂತದಲ್ಲಿ ಗಂಡಿನ ದುರಂತ ವ್ಯಾಮೋಹ ನಿರೂಪಿತವಾಗಿದೆ. ಸುಮಾರು 80 ಪದ್ಯಗಳಷ್ಟು ಚಿಕ್ಕದಾದರೂ ಈ ಉಪಾಖ್ಯಾನ ಸಹೃದಯ ಚಿತ್ತದ ಮೇಲೆ ಅಳಿಸಲಾಗದ ಮುದ್ರೆಯೊತ್ತುತ್ತದೆ. ಅನಂತನಾಥಪುರಾಣದ ಅಮರತ್ವಕ್ಕೆ ಚಂಡಶಾಸನನ ಪ್ರಕರಣವೇ ಅಡಿಗಲ್ಲಾಗಿದೆ.

ಯಶೋಧರಚರಿತೆ ಮತ್ತು ಅನಂತನಾಥಪುರಾಣದ ಚಂಡಶಾಸನನ ಕಥೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನ ಪಡೆಯುತ್ತವೆ. ಸಂಪ್ರದಾಯ ಬದ್ಧವೂ ಚಿರಪರಿಚಿತವೂ ಆದ ವಸ್ತುವನ್ನು ಬಿಟ್ಟು, ವಿಷಮಪ್ರಣಯದ ಎರಡು ದಿಕ್ಕುಗಳನ್ನು ಚಿತ್ರಿಸಿ ಇಲ್ಲಿ ಬದುಕಿನ ವಾಸ್ತವಿಕತೆಗೆ ಕವಿ ಕನ್ನಡಿ ಹಿಡಿದಿದ್ದಾನೆ. ವಿಮರ್ಶಕರೊಬ್ಬರು ಹೇಳುವಂತೆ ಅದಮ್ಯವಾದ ಕಾಮದ, ಧರ್ಮವಿರುದ್ಧ ಪ್ರಣಯದ ಸ್ತ್ರೀಮುಖ ಪುರುಷಮುಖಗಳನ್ನು ಉಜ್ವಲವಾಗಿ ಕ್ರಾಂತಿಕಾರಕ ರೀತಿಯಲ್ಲಿ ಚಿತ್ರಿಸಿ ಕನ್ನಡ ಸಾಹಿತ್ಯಕ್ಕೆ ಸ್ವಂತ ಕಾಣಿಕೆ ಸಲ್ಲಿಸಿದ್ದಾನೆ. ಕನ್ನಡ ಸಾಹಿತ್ಯಕ್ಕೆ ಮಾತ್ರವಲ್ಲ, ಜಾಗತಿಕ ಸಾಹಿತ್ಯಕ್ಕೂ ಬೆಲೆಯುಳ್ಳ ಕಾಣಿಕೆ ಸಲ್ಲಿಸಿದ್ದಾನೆಂದರೆ ತಪ್ಪಲ್ಲ. ಮಹಾಕಾವ್ಯದ ಔನ್ನತ್ಯ, ಭವ್ಯತೆಗಳು ಆಂಶಿಕವಾಗಿಯಾದರೂ ಇವನ ಎರಡು ಕಿರುಗಬ್ಬಗಳಲ್ಲಿ ತಲೆದೋರಿವೆ. ಆದ್ದರಿಂದ ಜನ್ನ ಮಹಾಕವಿಗಳ ಸಾಲಿನಲ್ಲಿ ನಿಲ್ಲಲಾರನಾದರೂ ಮಧ್ಯಮವರ್ಗದ ಕವಿಗಳ ಪಂಕ್ತಿಯಲ್ಲಿ ಅಗ್ರಸ್ಥಾನಕ್ಕೆ ನಿಸ್ಸಂದೇಹವಾಗಿ ಅರ್ಹನಾಗುತ್ತಾನೆ. ನೇಮಿಜನ್ನಮರೀರ್ವರೆ ಕರ್ನಾಟಕೃತಿಗೆ ಸೀಮಾಪುರುಷರ್ ಎಂಬ ಮಧುರಕವಿಯ ಪ್ರಶಂಸೆ ಉತ್ಪ್ರೇಕ್ಷೆ ಎನ್ನಿಸದು.
(ಸಿ.ಪಿ.ಕೆ.,ಜಿ.ಬಿ.)

**ಜಮಖಂಡಿ :** ಬಾಗಲಕೋಟೆ ಜಿಲ್ಲೆಯ ಒಂದು ಉಪವಿಭಾಗ, ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತಕೇಂದ್ರ. ಜಮಖಂಡಿ ಉಪವಿಭಾಗದಲ್ಲಿ ಮುಧೋಳ, ಜಮಖಂಡಿ ಮತ್ತು ಬೀಳಗಿ ತಾಲ್ಲೂಕುಗಳಿವೆ. ತಾಲ್ಲೂಕು ಜಿಲ್ಲೆಯ ವಾಯವ್ಯ ಭಾಗದಲ್ಲಿದೆ. ಪಶ್ಚಿಮ ಮತ್ತು ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯ ರಾಯಬಾಗ, ಅಥಣಿ ತಾಲ್ಲೂಕುಗಳು, ಪೂರ್ವದಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ಬೀಳಗಿ, ದಕ್ಷಿಣದಲ್ಲಿ ಮುಧೋಳ - ಈ ತಾಲ್ಲೂಕುಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,169.2ಚ.ಕಿಮೀ. ತಾಲ್ಲೂಕಿನಲ್ಲಿರುವ ಕಂದಾಯ ವಲಯಗಳು ಜಮಖಂಡಿ, ಸಾವಳಗಿ ಮತ್ತು ತೇರದಾಳ. ಒಟ್ಟು 65 ಹಳ್ಳಿಗಳಿವೆ. ಜನಸಂಖ್ಯೆ 4,08,436.

ತಾಲ್ಲೂಕಿನ ದಕ್ಷಿಣದೆಡೆ ತೇರದಾಳದಿಂದ ಪೂರ್ವಾಭಿಮುಖವಾಗಿ ಹಬ್ಬಿರುವ ಹೆಚ್ಚು ಎತ್ತರವಲ್ಲದ ಬೆಟ್ಟಸಾಲನ್ನು ಬಿಟ್ಟರೆ ತಾಲ್ಲೂಕಿನ ಹೆಚ್ಚು ಪ್ರದೇಶ ಮಟ್ಟಸ ನೆಲ. ಸಾಮಾನ್ಯವಾಗಿ ಕೃಷ್ಣಾನದಿಯೆಡೆಗೆ ಮತ್ತು ಪಶ್ಚಿಮ ಪೂರ್ವವಾಗಿ ಇಳಿಜಾರಾಗಿದೆ. ಬೆಟ್ಟಪ್ರದೇಶ ಕಲಾದಗಿ ಗುಂಪಿನ ಶಿಲೆಗಳದು, ಇತರ ಭಾಗ ಕರಿ ಎರೆಮಣ್ಣಿನ ಪ್ರದೇಶ. ಕೃಷ್ಣಾ ಈ ತಾಲ್ಲೂಕಿನ ಮುಖ್ಯ ನದಿ. ತಾಲ್ಲೂಕಿನ ವಾಯುವ್ಯದಂಚಿನಲ್ಲಿ ಕೃಷ್ಣಾನದಿ ಪ್ರವೇಶಿಸಿ ತಾಲ್ಲೂಕಿನ ನಡುವೆ ಆಗ್ನೇಯಾಭಿಮುಖವಾಗಿ ಮುಂದುವರಿದು ಬೀಳಗಿ ತಾಲ್ಲೂಕನ್ನು ಪ್ರವೇಶಿಸುತ್ತದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 576.99 ಮಿಮೀ. ಕೃಷ್ಣಾ ನದಿಯ ಎರಡೂ ದಂಡೆಯ ಮೈದಾನಗಳಲ್ಲಿ ಅನೇಕ ಬೆಳೆಗಳನ್ನು ಬೆಳೆಯುತ್ತಾರೆ. ಜೋಳ, ಗೋದಿ, ಸಜ್ಜೆ, ಸೇಂಗ, ಬತ್ತ, ದ್ವಿದಳ ಧಾನ್ಯಗಳು, ಕಬ್ಬು ಮತ್ತು ಹತ್ತಿ ತಾಲ್ಲೂಕಿನ ಮುಖ್ಯ ಬೆಳೆಗಳು.

ಸುಣ್ಣದಕಲ್ಲಿನ ಗಣಿಗಳು ತಾಲ್ಲೂಕಿನಲ್ಲಿ ಹೇರಳವಾಗಿವೆ. ಸುಣ್ಣದ ತಯಾರಿಕೆ ಒಂದು ಮುಖ್ಯ ಕಸಬಾಗಿದೆ. ಮನೆಮನೆಯಲ್ಲಿ ಕೈಮಗ್ಗದ ಬಟ್ಟೆಗಳು ತಯಾರಾಗುತ್ತವೆ. ಇಲ್ಲಿಯ ಕೈಮಗ್ಗದ ಬಟ್ಟೆಗಳಿಗೆ ಸಾಕಷ್ಟು ಬೇಡಿಕೆ ಉಂಟು. ಮರಗೆಲಸ ಇಲ್ಲಿನ ಒಂದು ಮುಖ್ಯ ಉದ್ಯೋಗ.

1948ಕ್ಕೆ ಮೊದಲು ಜಮಖಂಡಿ ಒಂದು ಚಿಕ್ಕ ಸಂಸ್ಥಾನವಾಗಿತ್ತು. ಪಟವರ್ಧನ ಸಂಸ್ಥಾನವೆಂದು ಇದನ್ನು ಕರೆಯಲಾಗುತ್ತಿತ್ತು. ಹರಿಭಟ್ಟನೆಂಬುವನು ಈ ಸಂಸ್ಥಾನದ ಮೂಲಪುರುಷ. ಇವನು ಬಾಳಾಜಿ ವಿಶ್ವನಾಥನ ಜೊತೆಗೆ ಇಲ್ಲಿಗೆ ಬಂದು ಈ ಸಂಸ್ಥಾನವನ್ನು ಸ್ಥಾಪಿಸಿದ. 1821ರಲ್ಲಿ ಬ್ರಿಟಿಷರೊಡನೆ ಆದ ಸಂಧಿಗೆ ಅನುಗುಣವಾಗಿ ಈ ಸಂಸ್ಥಾನಿಕರು ಅವರಿಗೆ ಪ್ರತಿವರ್ಷ ರೂ.20,840 ಕಪ್ಪ ಕೊಡುತ್ತಿದ್ದರು. ಈ ಸಂಸ್ಥಾನಿಕರಲ್ಲಿ ಒಬ್ಬನಾಗಿದ್ದ ಪರಶುರಾಮ ಭಾವು ವಿದ್ವಾಂಸ. ಇವನ ಕಾಲದಲ್ಲಿ ಜಮಖಂಡಿ ಸಂಸ್ಥಾನ ಅತ್ಯುನ್ನತ ಶಿಖರ ಮುಟ್ಟಿತ್ತು. 1948ರಲ್ಲಿ ಈ ಸಂಸ್ಥಾನ ಬೊಂಬಾಯಿ

ರಾಜ್ಯದಲ್ಲಿ ವಿಲೀನವಾಯಿತು.

ಜಮಖಂಡಿ ತಾಲ್ಲೂಕಿನಲ್ಲಿ ಅನೇಕಮುಖ್ಯ ಗ್ರಾಮಗಳಿವೆ. ಆಸಂಗಿ ಗ್ರಾಮ ಕೃಷ್ಣಾ ನದಿಯ ದಕ್ಷಿಣ ದಂಡೆಯ ಮೇಲಿದೆ. ಜಮಖಂಡಿಗೆ 16ಕಿಮೀ ದೂರದಲ್ಲಿದೆ. ಈ ಗ್ರಾಮಕ್ಕೆ ಹತ್ತಿರದಲ್ಲೆ ಅಸಗಿ ಎಂಬ ಗ್ರಾಮವೂ ಇದೆ. ಇಲ್ಲಿ ಜಮಖಂಡಿ ರಾಜರು ವಾಸಿಸುತ್ತಿದ್ದ ಅರಮನೆಯ ಅವಶೇಷವನ್ನು ಕಾಣಬಹುದು. ಅರಮನೆಯ ಆವರಣದಲ್ಲಿ ವೇಣುಗೋಪಾಲ ದೇವಾಲಯವಿದೆ. ಅಸಗಿಯಲ್ಲಿ ಅಗಸ್ತ್ಯಮುನಿಯ ಆಶ್ರಮವಿತ್ತೆಂದೂ ಇಲ್ಲಿ ಹರಿಯುವ ಕೃಷ್ಣಾ ನದಿಯನ್ನು ಒಂದು ತೀರ್ಥವೆಂದೂ ಹೇಳುತ್ತಾರೆ. ಜಮಖಂಡಿಗೆ ನೈಋತ್ಯದಲ್ಲಿ 24ಕಿಮೀ ದೂರದಲ್ಲಿರುವ ಚಿಮ್ಮಡ ಗ್ರಾಮದಲ್ಲಿ ರಘುನಾಥ ಮಹಾರಾಜ ಮಠವಿದೆ. ಪ್ರತಿವರ್ಷ ನಾಗರ ಪಂಚಮಿಯ ದಿನ ಇಲ್ಲಿ ರಥೋತ್ಸವ ಜರಗುವುದು. ಬನಹಟ್ಟಿಗೆ 5ಕಿಮೀ ದೂರದಲ್ಲಿರುವ ಕುಲಹಳ್ಳಿಯ ಬಳಿ ಇರುವ ಗೊಂಬೆಗುಡ್ಡದಲ್ಲಿ ಚರಿತ್ರಪೂರ್ವ ಕಾಲದ ಚಿತ್ರಗಳು ಸಿಕ್ಕಿವೆ. ರಬಕವಿ-ಬನಹಟ್ಟಿ, ಹೊಸೂರು ಮತ್ತು ರಾಮಪುರ ಒಂದು ಪುರಸಭಾಡಳಿತಕ್ಕೆ ಸೇರಿವೆ. ಜಮಖಂಡಿಗೆ 16ಕಿಮೀ ದೂರದಲ್ಲಿರುವ ಬನಹಟ್ಟಿ ಪುರಸಭಾ ಕೇಂದ್ರ. ಬನಹಟ್ಟಿಯಲ್ಲಿ ಕಾಡಸಿದ್ದೇಶ್ವರ ದೇವಾಲಯವಿದೆ. ಜಮಖಂಡಿಗೆ ಪಶ್ಚಿಮದಲ್ಲಿ 4ಕಿಮೀ ದೂರದಲ್ಲಿರುವ ರಾಮತೀರ್ಥದಲ್ಲಿ ಹಿಂದಿನ ರಾಜರ ಅರಮನೆ ರಾಮಚಂದ್ರ ಪ್ರಸಾದ ಇದೆ. ಇಲ್ಲಿ ತ್ರಿಪುರಸುಂದರಿ ದೇವಾಲಯ ಅಮೃತಶಿಲೆಯಲ್ಲಿ ಕಟ್ಟಲಾಗಿದೆ. ಇನ್ನೊಂದು ದೇವಾಲಯ ರಾಮೇಶ್ವರನದು. ಕುಶಲ ಕೈಗಾರಿಕಾ ತರಬೇತಿ ಕೇಂದ್ರ ಒಂದಿದೆ. ಜಮಖಂಡಿಗೆ ಉತ್ತರದಲ್ಲಿ 10ಕಿಮೀ ದೂರಕ್ಕಿರುವ ಶೂರ್ಪಾಲಿ ಗ್ರಾಮ ಕೃಷ್ಣಾನದಿ ದಂಡೆಯಲ್ಲಿದೆ. ಇಲ್ಲೊಂದು ಪುರಾತನ ಲಕ್ಷ್ಮೀನರಸಿಂಹ ದೇವಾಲಯವಿದೆ. ಜಮಖಂಡಿಗೆ ಪಶ್ಚಿಮದಲ್ಲಿ ಸು.32ಕಿಮೀ ದೂರದಲ್ಲಿರುವ ತೇರದಾಳ (ನೋಡಿ) ಹೋಬಳಿ ಕೇಂದ್ರ. ಇಲ್ಲಿ ಪ್ರಭುಸ್ವಾಮಿ, ನೇಮಿನಾಥ ಮೊದಲಾದವರ ದೇವಾಲಯಗಳಿವೆ. ಜಮಖಂಡಿಯ ಉತ್ತರಕ್ಕೆ 22ಕಿಮೀ ದೂರದಲ್ಲಿರುವ ತುಂಗಳ ಗ್ರಾಮ ಉಣ್ಣೆಯ ಕಂಬಳಿಗಳಿಗೆ ಪ್ರಸಿದ್ಧ. ಬನಹಟ್ಟಿಗೆ ಸು.3ಕಿಮೀ ದೂರದಲ್ಲಿ ಯಳಹಟ್ಟಿ ಗ್ರಾಮ ಇದೆ. ಇದರ ಹತ್ತಿರ ಇರುವ ಬಂದಿಗಾಣಿ ಬೆಟ್ಟದಲ್ಲಿರುವ ನೈಸರ್ಗಿಕ ಗುಹೆಗಳಲ್ಲಿ ಇತಿಹಾಸಪೂರ್ವಕಾಲದ ಚಿತ್ರಗಳು ಕಂಡುಬಂದಿವೆ.

*

ಜಮಖಂಡಿ ಪಟ್ಟಣ ಈ ತಾಲ್ಲೂಕಿನ ಮತ್ತು ಜಮಖಂಡಿ ಉಪ ವಿಭಾಗದ ಆಡಳಿತ ಕೇಂದ್ರ. ಕುಡಚಿ ರೈಲ್ವೆ ನಿಲ್ದಾಣದಿಂದ 54ಕಿಮೀ ದೂರದಲ್ಲೂ ಬಿಜಾಪುರದ ನೈಋತ್ಯಕ್ಕೆ 62ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 57,887. ಜಮಖಂಡಿ ಒಂದು ವ್ಯಾಪಾರ ಕೇಂದ್ರ. ಇಲ್ಲಿ ವರ್ಷಕ್ಕೊಮ್ಮೆ ಏಪ್ರಿಲ್‌ನಲ್ಲಿ ನಡೆಯುವ ದನಗಳ ಜಾತ್ರೆ ಸುಪ್ರಸಿದ್ಧ.

ಉಮಾರಾಮೇಶ್ವರ, ಜಂಬುಕೇಶ್ವರ, ಕಲ್ಮೇಶ್ವರ ಮತ್ತು ಬಸವಣ್ಣ - ಇವು ಇಲ್ಲಿನ ಮುಖ್ಯ ದೇವಾಲಯಗಳು. ಪಟ್ಟಣದ ಹೊರಗೂ ಅನೇಕ ದೇವಾಲಯಗಳುಂಟು. ಜಮಖಂಡಿಯಿಂದ ಸು.5ಕಿಮೀ ದೂರದಲ್ಲಿರುವ ಎಲ್ಲಮ್ಮನ ದೇವಾಲಯ ಸುಂದರವಾದುದು. ವೆಂಕಟರಮಣನ ಗುಡಿಯೊಂದು ಜಮಖಂಡಿಯಿಂದ ಸು.10ಕಿಮೀ ದೂರದಲ್ಲಿದೆ. ಪಟ್ಟಣದಲ್ಲಿ ಅನೇಕ ಸುಂದರ ಕಟ್ಟಡಗಳುಂಟು. ದರ್ಬಾರ್ ಭವನ ಈಗ ಕಾಲೇಜೊಂದರ ಸಭಾಭವನ. ರಾಮನಿವಾಸ ಎಂಬ ವಿಶ್ರಾಂತಿ ಮಂದಿರವೊಂದು ಗುಡ್ಡದ ಮೇಲುಂಟು.

(ಎನ್.ಸಿ.ವಿ.)

**ಜಮಾಲಾಬಾದ್ :** ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳ್ತಂಗಡಿಯಿಂದ ಸು.6ಕಿಮೀ ಉತ್ತರಕ್ಕೆ ಕುದುರೆಮುಖ ಶ್ರೇಣಿಯ ಚಾಚಿನ ಕೊನೆಯಲ್ಲಿ 545ಮೀ ಎತ್ತರಕ್ಕೆ ಎದ್ದು ನಿಂತಿರುವ ಕಡಿದಾದ ಶಿಖರದ ಮೇಲೆ ಕಟ್ಟಲಾದ ದುರ್ಗ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿದುಳಿದಿರುವ ಕೋಟೆಕೊತ್ತಳಗಳಲ್ಲೆಲ್ಲ ಹೆಚ್ಚು ಸ್ವಾರಸ್ಯಕರವಾದ್ದು. ಈ ಶಿಖರದ ಅಡಿವಾರದಲ್ಲಿರುವ ನರಸಿಂಹಂಗಡಿ ಎಂಬ ಹಳೆಯ ಊರಿಗೂ ಜಮಾಲಾಬಾದ್ ಎಂಬ ಹೊಸ ಹೆಸರೇ ಅಂಟಿಕೊಂಡಿದೆ. ಆ ಊರಿಗೆ 'ನಡ' ಎಂಬ ಹೆಸರೂ ಇದೆ. ದುರ್ಗಕ್ಕೆ ಇರುವುದು ಒಂದೇ ಒಂದು ಇಕ್ಕಟ್ಟಿನ ದಾರಿ. ಫೆಬ್ರುವರಿ-ಮೇ ತಿಂಗಳ ಅವಧಿಯನ್ನು ಬಿಟ್ಟರೆ ಉಳಿದ ಕಾಲದಲ್ಲಿ ಈ ದಾರಿ ದುರ್ಗಮವಾದ್ದು.

1784ರಲ್ಲಿ ಮಂಗಳೂರಿನಿಂದ ಹಿಂದಿರುಗುತ್ತಿದ್ದ ಟಿಪ್ಪು ಸುಲ್ತಾನ್ ಈ ಶಿಖರದ ದುರ್ಗಮ ಸ್ಥಿತಿಸ್ಥಾನಗಳನ್ನು ಮನಗಂಡು, ಅಲ್ಲಿಯ ಪಾಳುಬಿದ್ದ ಹಳೆಯ ಕೋಟೆಯ ಅವಶೇಷಗಳ ಮೇಲೆ ಹೊಸ ದುರ್ಗವೊಂದನ್ನು ನಿರ್ಮಿಸಿದ. ಅದಕ್ಕೆ ತನ್ನ ತಾಯಿ ಜಮಾಲ್ ಬೀಯ ಗೌರವಾರ್ಥವಾಗಿ ಜಮಾಲಾಬಾದ್ ಎಂದು ಹೆಸರಿಟ್ಟು, ಅಲ್ಲಿ ನಾನೂರು ಯೋಧರ ಕಾವಲು ದಂಡೊಂದನ್ನೂ ಅಡಿವಾರದ ಜಮಾಲಾಬಾದಿನಲ್ಲಿ ತನ್ನ ಅಧಿಕಾರಿಯೊಬ್ಬನನ್ನೂ ನಿಲ್ಲಿಸಿದನೆಂದು ತಿಳಿಯುತ್ತದೆ.

ಕಲ್ಲಿನಲ್ಲಿ ಕಡಿಯಲಾದ ಮೆಟ್ಟಲುಗಳನ್ನು ಶ್ರಮವಹಿಸಿ ಹತ್ತಿ ಕೋಟೆಯನ್ನು ಪ್ರವೇಶಿಸುವವರು ಮೇಲ್ಮಟ್ಟದ ಯಂತ್ರಶಿಲ್ಪಜ್ಞಾನವನ್ನು ಬಳಸಿ ಬಂಡೆಗಳನ್ನು ಕೊರೆದು ನಿರ್ಮಿಸಲಾಗಿರುವ ಓಣಿಗಳನ್ನು ಕಾಣಬಹುದು. ದುರ್ಗದ ಗೋಡೆಗಳನ್ನೂ ಕೊತ್ತಳಗಳನ್ನೂ ಪ್ರವೇಶದ್ವಾರಗಳನ್ನೂ ಬೆಣಚುಕಲ್ಲಿನ ದಿಮ್ಮಿಗಳಿಂದ ರಚಿಸಲಾಗಿದೆ. ಕೋಟೆಯೊಳಗೆ ಎರಡು ಕೆರೆಗಳೂ ಸಿಹಿ ನೀರಿನ ಒಂದು ಸಣ್ಣ ಬುಗ್ಗೆಯೂ ಇವೆ. ಯುರೋಪಿನಲ್ಲಿ ತಯಾರಿಸಲಾದ ಫಿರಂಗಿಯೊಂದು ಕೋಟೆಯ ಜೀರ್ಣ ಕೊತ್ತಲವೊಂದರಲ್ಲಿ ಬಿದ್ದಿರುವುದನ್ನು ಇಂದಿಗೂ ಕಾಣಬಹುದು. ದುರ್ಗವನ್ನು ತಲುಪುವ ದಾರಿ ದುಸ್ತರವಾದ್ದರಿಂದ, ಹಿಂದೆ ಆಕ್ರಮಣ ಕಾಲದಲ್ಲಿ ಕೆಳಗಿನಿಂದ ಯೋಧರು ಮೇಲಕ್ಕೆ ಹೋಗಿ ಹೋರಾಡುವುದು ಆಕ್ರಮಣ ಕಾರರನ್ನು ತಡೆಗಟ್ಟುವುದೂ ಅಷ್ಟೇ ಕಷ್ಟದ ಕೆಲಸವಿದ್ದಿರಬೇಕು. ಕೆಲವೇ ಸೈನಿಕರು ಫಿರಂಗಿಗಳ ಸಹಾಯದಿಂದ ದುರ್ಗದ ಎಷ್ಟೇ ದೊಡ್ಡ ರಕ್ಷಣಾಸೇನೆಯನ್ನೂ ಸ್ಥಾನಬದ್ಧಗೊಳಿಸುವುದು ಸುಲಭವೇ ಆಗಿದ್ದಿರಬೇಕು.

1799ರಲ್ಲಿ ಮೈಸೂರು ಯುದ್ಧ ನಡೆಯುತ್ತಿದ್ದಂತೆ ಜಮಾಲಾಬಾದಿನ ಅಡಿವಾರದ ಊರನ್ನು ಕೊಡಗಿನವರು ನಾಶಗೊಳಿಸಿದರು. ಯುದ್ಧದಲ್ಲಿ ಟಿಪ್ಪುವಿಗೆ ಆದ ಪರಾಭವದಿಂದಾಗಿ ಪಶ್ಚಿಮ ಕರಾವಳಿ ಪ್ರದೇಶದ ಆಧಿಪತ್ಯ ಇಂಗ್ಲಿಷರದಾಯಿತು. ಅದೇ ವರ್ಷ ಅವರು ಜಮಾಲಾಬಾದ್ ದುರ್ಗವನ್ನು ವಶಪಡಿಸಿಕೊಂಡರಾದರೂ ಕೆಲವೇ ದಿನಗಳಲ್ಲಿ ಮೈಸೂರು ಸಿಂಹಾಸನದ ಸುಳ್ಳು ಹಕ್ಕುದಾರನೊಬ್ಬನ ಬೆಂಬಲಿಗನಾದ ತಿಮ್ಮನಾಯಕನೆಂಬಾತ ಇಂಗ್ಲಿಷರನ್ನು ಓಡಿಸಿ ಕೋಟೆಯನ್ನು ಆಕ್ರಮಿಸಿಕೊಂಡ. ಮೂರು ತಿಂಗಳು ಸತತ ಮುತ್ತಿಗೆಯ ಅನಂತರ (1800) ಇಂಗ್ಲಿಷರು ಆ ದುರ್ಗವನ್ನು ಸ್ವಾಧೀನಪಡಿಸಿಕೊಂಡರು.

(ಕೆ..ವಿ..ಆರ್.)

**ಜಯಂತಿ[1] :** ಕನ್ನಡದ ಪ್ರಸಿದ್ಧ ಚಿತ್ರನಟಿ. ಬಳ್ಳಾರಿಯಲ್ಲಿ ಜನಿಸಿದರು. ಇವರ ಮೊದಲ ಹೆಸರು ಕಮಲಕುಮಾರಿ. ಬಾಲ್ಯದಲ್ಲಿಯೇ ಕಾಳಹಸ್ತಿಗೆ ವಲಸೆ ಹೋದರು. 1959ರಲ್ಲಿ ಮದರಾಸಿನ ಖ್ಯಾತ ನಾಟ್ಯಾ ಚಾರ್ಯ ಜಗನ್ನಾಥಶರ್ಮ ಹಾಗೂ ಜೈಮಿನಿಚಂದ್ರ ಇವರ ಬಳಿ ನಾಟ್ಯಾಭ್ಯಾಸ ಮಾಡಿದರು. ಕೃಷ್ಣಲೀಲೆ ಹಾಗೂ ಚೆಂಚುಲಕ್ಷ್ಮಿ ಎಂಬ ತೆಲುಗು ಚಿತ್ರಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡ ಮೇಲೆ ಜಯಂತಿ ಎಂಬ ಹೆಸರು ಸ್ಥಿರವಾಗಿ ನಿಂತಿತು. ಅನಂತರ ತಮಿಳು ಮತ್ತು ತೆಲುಗು ಚಿತ್ರಗಳ ಖ್ಯಾತ ನಟರಾದ ಶಿವಾಜಿ ಗಣೇಶನ್, ಎಂ.ಜಿ.ರಾಮಚಂದ್ರನ್, ಎನ್.ಟಿ.ರಾಮರಾವ್, ಎ.ನಾಗೇಶ್ವರರಾವ್ ಅವರ ಜೊತೆ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿದರು. ವೈ.ಆರ್.ಸ್ವಾಮಿ ನಿರ್ದೇಶಿಸಿದ ಜೇನುಗೂಡು ಚಿತ್ರದ ಮೂಲಕ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದರು. ಭಗವಾನ್ ದೊರೈ ನಿರ್ಮಿಸಿದ ಚಂದವಳ್ಳಿಯ ತೋಟದಲ್ಲಿ (1964) ಶೋಕಪ್ರಧಾನ ಪಾತ್ರವನ್ನು ಗಂಭೀರವಾಗಿ ನಿರ್ವಹಿಸಿ ಎಲ್ಲರ ಗಮನ ಸೆಳೆದರು. ಆ ವರ್ಷದ ಅತ್ಯುತ್ತಮ ಚಿತ್ರವಾಗಿ ಅದು ಪ್ರಶಸ್ತಿ ಗಳಿಸಿತು. ಪೆಕೇಟಿ ಶಿವರಾಂ ನಿರ್ದೇಶಿಸಿದ ಚಕ್ರತೀರ್ಥದಲ್ಲಿ ದ್ವಿಪಾತ್ರದಲ್ಲಿ (ತಾಯಿ ಮತ್ತು ಮಗಳು) ಉತ್ತಮ ಅಭಿನಯ ನೀಡಿದರು. ಈ ಚಿತ್ರ 1967ರ ಉತ್ತಮ ಚಿತ್ರವೆಂದು ಪರಿಗಣಿತವಾಯಿತು. 1964ರಿಂದ ಇತರ ಭಾಷೆಯ ಚಿತ್ರಗಳು ಸೇರಿದಂತೆ ಇವರು 100ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಕನ್ನಡದಲ್ಲಿ 80ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಅವುಗಳಲ್ಲಿ 30ಕ್ಕೂ ಹೆಚ್ಚು ಚಿತ್ರಗಳಲ್ಲಿ ರಾಜಕುಮಾರ್ ಜೊತೆ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಪದ್ಮಿನಿ ಚಿತ್ರಸಂಸ್ಥೆಯವರ ವರ್ಣಚಿತ್ರ ಶ್ರೀ ಕೃಷ್ಣದೇವರಾಯ ಇವರ 50ನೆಯ ಚಿತ್ರ. ಚಂದವಳ್ಳಿಯ ತೋಟ, ಮಿಸ್ ಲೀಲಾವತಿ, ಚಕ್ರತೀರ್ಥ, ಶ್ರೀ ಕೃಷ್ಣದೇವರಾಯ, ಗೃಹಲಕ್ಷ್ಮಿ, ಎರಡು ಮುಖ, ಕುಲಗೌರವ, ಬೆಟ್ಟದ ಹುಲಿ, ರೌಡಿರಂಗಣ್ಣ, ದೇವರ ಮಕ್ಕಳು, ಬದುಕು

ಬಂಗಾರವಾಯಿತು, ಮಸಣದ ಹೂವು ಇವು ಇವರು ನಟಿಸಿರುವ ಮುಖ್ಯ ಚಿತ್ರಗಳು. ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ ಎಡಕಲ್ಲು ಗುಡ್ಡದ ಮೇಲೆ ಎಂಬ ವರ್ಣಚಿತ್ರದ ಅತ್ಯುತ್ತಮ ಅಭಿನಯಕ್ಕಾಗಿ ಇವರಿಗೆ ರಾಜ್ಯ ಪ್ರಶಸ್ತಿ ಲಭಿಸಿತು.

ಕನ್ನಡ ಅಭಿಮಾನಿಗಳಿಂದ ಇವರು ಕಲಾಕೋಕಿಲೆ ಹಾಗೂ ಅಭಿನಯಶಾರದೆ ಎಂಬ ಬಿರುದುಗಳನ್ನು ಪಡೆದಿದ್ದಾರೆ. ದಾದ್, ಲಾಲ್ ಬಂಗಾಲಾ, ಏಕ್ ಫೂಲ್ ಏಕ್ ಭೂಲ್, ತೀನ್ ಬಹುರಾಣಿಯಾ, ತುಂಸೆ ಅಚ್ಚಾ ಕೌನ್ ಹೈ ಮೊದಲಾದ ಹಿಂದಿ ಚಿತ್ರಗಳಲ್ಲಿಯೂ ಪ್ರೇಂ ನಜೀರ್ ನಾಯಕನಾಗಿರುವ ಒಂದು ಮಲೆಯಾಳಂ ಚಿತ್ರದಲ್ಲಿಯೂ ಅಭಿನಯಿಸಿ ಪಂಚಭಾಷಾ ತಾರೆ ಎನಿಸಿಕೊಂಡಿದ್ದಾರೆ. ರಾಜಕೀಯ ರಂಗದ ಬಗ್ಗೆ ಆಸಕ್ತರಾದ ಇವರು 2004ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರು. ಜಯಂತಿಯವರು ವಿವಿಧ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನು ತೊಡಗಿಸಿಕೊಂಡಿದ್ದಾರೆ. (ಎಸ್.ಎಸ್.ಎಂಯು.)

**ಜಯಂತಿ²:** ಧಾರವಾಡದಿಂದ ಪ್ರಕಟವಾಗುತ್ತಿದ್ದ ಕನ್ನಡ ಮಾಸ ಪತ್ರಿಕೆ. ಮರಾಠಿಯ ಕಿರ್ಲೋಸ್ಕರದಂಥ ಒಂದು ಪತ್ರಿಕೆ ಕನ್ನಡದಲ್ಲಿರಬೇಕೆಂದು ವಿ.ವೈ.ಜತಾರ, ಶಂಕರರಾವ್ ಜತಾರ, ಸಿ.ಡಿ.ದೇಶಪಾಂಡೆ, ಮಾಧವರಾವ್ ಪಾಟೀಲ ಇವರು 1938ರ ಮೇ ತಿಂಗಳಲ್ಲಿ ಈ ಪತ್ರಿಕೆ ಯನ್ನು ಪ್ರಾರಂಭಿಸಿದರು. ಬೆಟ ಗೇರಿ ಕೃಷ್ಣಶರ್ಮರು ಸಂಪಾದ ಕತ್ವದ ಹೊಣೆ ಹೊತ್ತರು. ಇವರ ಜೊತೆಗೆ ಮೊದಲ ವರ್ಷ ಮಾಧವರಾವ್ ಪಾಟೀಲರೂ ಸಂಪಾದಕರಾಗಿದ್ದರು. 1941ರಲ್ಲಿ ಆರ್ಥಿಕ ಕಾರಣಗಳಿಂದಾಗಿ ಪತ್ರಿಕೆಯನ್ನು ನಿಲ್ಲಿಸ ಬೇಕೆಂದಿದ್ದಾಗ ಬೆಟಗೇರಿ ಯವರು ತಮ್ಮ ಕೆಲವು ಸ್ನೇಹಿತರ ಸಹಾಯದಿಂದ ಪತ್ರಿಕೆಯನ್ನು ತಾವೇ ವಹಿಸಿಕೊಂಡು 1961ರ ಜುಲೈ ವರೆಗೆ ನಡೆಸಿಕೊಂಡು ಬಂದರು. ಸೆಪ್ಟೆಂಬರ್ 1961ರಲ್ಲಿ ಸಿ.ಎಸ್.ಕುಲಕರ್ಣಿ ಇದನ್ನು ವಹಿಸಿಕೊಂಡರು. ಎರಡು ವರ್ಷ ತಮ್ಮ ಸಂಪಾದಕತ್ವದಲ್ಲಿ ಪತ್ರಿಕೆಯನ್ನು ನಡೆಸಿ 1963ರಲ್ಲಿ ಹೊರಡಿಯವರಿಗೆ ಪತ್ರಿಕೆಯನ್ನು ವಹಿಸಿಕೊಟ್ಟರು. ರಾಮಚಂದ್ರ ಕೊಟ್ಟಲಗಿಯವರೂ ಸ್ವಲ್ಪಕಾಲ ಈ ಪತ್ರಿಕೆಯ ಸಂಪಾದಕರಾಗಿದ್ದರು. 1964ರ ಹೊತ್ತಿಗೆ ಪತ್ರಿಕೆಯ ಪ್ರಕಟಣೆ ನಿಂತಿತು.

ಜಯಂತಿಗೆ ಅನೇಕ ಪ್ರಮುಖರು ಲೇಖನಗಳನ್ನು ಬರೆಯುತ್ತಿದ್ದರು. ಹೊಸ ಲೇಖಕರಿಗೆ ಪ್ರೋತ್ಸಾಹ ದೊರೆಯಿತು. ವಿಮರ್ಶೆಯ ಶಿಕ್ಷಣರಂಗ ವಿಭಾಗದ ಮೂಲಕ ಜನರಿಗೆ ವಿಮರ್ಶೆಯ ವಿಷಯದಲ್ಲಿ ತಿಳಿವಳಿಕೆ ನೀಡಲಾಗುತ್ತಿತ್ತು. ಒಳಹೊರನಾಡುಗಳ ಕನ್ನಡಿಗರ ಚಟುವಟಿಕೆಗಳಿಗೆ ಪತ್ರಿಕೆ ಪ್ರಚಾರ ನೀಡಿತು. ಲಲಿತ ಸಾಹಿತ್ಯವನ್ನೇ ಹೆಚ್ಚಾಗಿ ಪ್ರಕಟಿಸುತ್ತಿದ್ದ ಜಯಂತಿ ಒಂದು ಉತ್ತಮ ಮಾಸಪತ್ರಿಕೆ ಎಂಬ ಹೆಸರು ಪಡೆದಿತ್ತು. (ಎಸ್.ವಿ.ಪಿ.)

**ಜಯಕರ್ನಾಟಕ:** ಧಾರವಾಡದಿಂದ ಪ್ರಕಟವಾಗುತ್ತಿದ್ದ ಮಾಸ ಪತ್ರಿಕೆ. 1923ರ ನವೆಂಬರ್‌ನಲ್ಲಿ ಆಲೂರ ವೆಂಕಟರಾಯರು ಈ ಪತ್ರಿಕೆಯನ್ನು ಪ್ರಾರಂಭಿಸಿ ಸಂಪಾದಕತ್ವದ ಹೊಣೆ ಹೊತ್ತರು. ಕನ್ನಡ ನಾಡು ನುಡಿ ಇತಿಹಾಸ ಸಂಸ್ಕೃತಿ ಗಳ ಪರಿಚಯ ಮತ್ತು ಪ್ರಚಾರ ಈ ಪತ್ರಿಕೆಯ ಗುರಿಯಾಗಿತ್ತು. ಪತ್ರಿಕೆಯಲ್ಲಿ ಮೇಲ್ಮಟ್ಟದ ಪ್ರಬಂಧಗಳೂ ರಾಜಕೀಯ ಸಾಮಾಜಿಕ ವಿಚಾರಗಳೂ ಪ್ರಕಟವಾಗಿ ಕನ್ನಡದ ಮಾಡರ್ನ್ ರಿವ್ಯೂ ಎಂಬ ಹೆಸರು ಪಡೆ ಯಿತು. ಹೊಸ ಕವಿಗಳಿಗೆ ಕಥೆಗಾರರಿಗೆ ಪ್ರೋತ್ಸಾಹ ವಿತ್ತು ಈ ಪತ್ರಿಕೆ ಲೇಖಕರ ಬಳಗ ವನ್ನೇ ಸೃಷ್ಟಿಸಿತು.




1929ರಿಂದ ಧಾರವಾಡದ ಗೆಳೆಯರ ಗುಂಪಿನವರು ಈ ಪತ್ರಿಕೆಯನ್ನು ಮೂರು ವರ್ಷ ಪರ್ಯಂತ ನಡೆಸಿಕೊಂಡು ಬಂದು ಅನಂತರ ಬೆಳಗಾಂವಿ (ವಿನೀತ) ರಾಮಚಂದ್ರರಾಯರಿಗೆ ವಹಿಸಿಕೊಟ್ಟರು. ಇವರು ಹಲವು ವರ್ಷಗಳ ಕಾಲ ನಡೆಸಿ ಅನಂತರ ಶಿ.ಶಿ.ಬಸವನಾಳರಿಗೆ ಒಪ್ಪಿಸಿ ಕೊಟ್ಟರು. ಬಸವನಾಳರು ಈ ಮಾಸಪತ್ರಿಕೆಯೊಂದಿಗೆ ಅದೇ ಹೆಸರಿನ ವಾರಪತ್ರಿಕೆಯನ್ನೂ ಪ್ರಾರಂಭಿಸಿದರು. ಶಿ.ಶಿ.ಬಸವನಾಳರು 1951ರ ಡಿಸೆಂಬರಿನಲ್ಲಿ ಮೃತರಾದುದರಿಂದ ಅವರ ತಮ್ಮಂದಿರಾದ ವಿ.ಎಸ್.ಬಸವನಾಳರು ಮಾಸಪತ್ರಿಕೆ ಮತ್ತು ವಾರಪತ್ರಿಕೆ ಎರಡನ್ನೂ ವಹಿಸಿಕೊಂಡರು. ಮುಂದೆ ಈ ಎರಡೂ ಪತ್ರಿಕೆಗಳು ಮೂರು-ನಾಲ್ಕು ವರ್ಷ ಮಾತ್ರ ಪ್ರಕಟವಾಗಿ ಅನಂತರ ನಿಂತವು. (ಬಿ.ಕೆ.)

**ಜಯಕೀರ್ತಿ:** 11ನೆಯ ಶತಮಾನದ ಜೈನ ಲಾಕ್ಷಣಿಕ. ಛಂದೋನುಶಾಸನ ಎಂಬ ಸಂಸ್ಕೃತ ಛಂದೋಗ್ರಂಥದ ಕರ್ತೃ. ಪ್ರಸಿದ್ಧ ಜೈನಸಂನ್ಯಾಸಿ ಹಾಗೂ ಗ್ರಂಥಕರ್ತೃ ಹೇಮಚಂದ್ರ ಮತ್ತು ಮದನತಿಲಕದ ಕರ್ತೃ ಚಂದ್ರರಾಜ (ಸು.1025) ಇವನ ಸಮಕಾಲೀನರು. ಜಯಕೀರ್ತಿ ದಿಗಂಬರಪಂಥದ ಜೈನಸಂನ್ಯಾಸಿಯಾಗಿರಬಹುದು ಎಂಬ ಊಹೆಯಿದೆ. ಕನ್ನಡ ಕವಿ, ಕಾವ್ಯ ಮತ್ತು ಛಂದಸ್ಸುಗಳ ಹೆಚ್ಚಿನ ಪರಿಜ್ಞಾನವನ್ನು ಪ್ರಕಟಿಸುವ ಹಲವು ಉಲ್ಲೇಖಗಳು ಈತನ ಛಂದೋಗ್ರಂಥಗಳಲ್ಲಿ ದೊರೆಯುವುದರಿಂದ ಈತ ದಾಕ್ಷಿಣಾತ್ಯನೆಂದೂ ಈತನ ಮಾತೃಭಾಷೆ ಕನ್ನಡವಾಗಿರಬೇಕೆಂದೂ ತಿಳಿಯಲಾಗಿದೆ. ಕಾಲವನ್ನು ತಿಳಿಯಲು ಗ್ರಂಥದಲ್ಲಿ ನೇರವಾದ ಆಧಾರವಿಲ್ಲ. ಅಲ್ಲಿ ಉಕ್ತವಾಗಿರುವ ಸ್ವಯಂಭು ಮತ್ತು ಅಸಗ ಕವಿಗಳ ಹಾಗೂ ಕರ್ನಾಟಕ ಮಾಲತೀಮಾಧವ ಕಾವ್ಯದ ಈಚೆಗೆ ಎಂದರೆ ಸು.1000ದಿಂದೀಚೆಗೆ, ಛಂದೋನುಶಾಸನದ ಜೈಸಲ್ಮೇರ್ ಹಸ್ತಪ್ರತಿಯ ಕಾಲಕ್ಕೆ ಮೊದಲು ಎಂದರೆ 1133ಕ್ಕೆ ಮೊದಲು ಆ ಗ್ರಂಥದ ಕರ್ತೃವಿದ್ದನೆಂದೂ ಸ್ಥೂಲವಾಗಿ ಆತನ ಕಾಲ 11ನೆಯ ಶತಮಾನವೆಂದೂ ಆ ಕೃತಿಯನ್ನು ಸಂಪಾದಿಸಿ ಪ್ರಕಟಿಸಿರುವ ಎಚ್.ಡಿ. ವೇಲಣಕರ್ ಅಭಿಪ್ರಾಯಪಟ್ಟಿರುತ್ತಾರೆ. 1ನೆಯ ನಾಗವರ್ಮನ ಕನ್ನಡ ಛಂದೋಂಬುಧಿಯನ್ನು ಈತ ತನ್ನ ಗ್ರಂಥದಲ್ಲಿ ಅನುಸರಿಸಿರುವುದಕ್ಕೆ ಅಲ್ಲಲ್ಲಿ ಕೆಲವು ಆಧಾರಗಳು ದೊರೆಯುತ್ತವೆ.

ಛಂದೋನುಶಾಸನದಲ್ಲಿ ಒಟ್ಟು 8 ಅಧಿಕಾರಗಳಿವೆ. ಅವುಗಳಿಗೆ ಕ್ರಮವಾಗಿ ಸಂಜ್ಞಾ, ಸಮವೃತ್ತ, ಅರ್ಧ ಸಮವೃತ್ತ, ವಿಷಮವೃತ್ತ, ಆರ್ಯಾಜಾತಿ-ಮಾತ್ರಾ ಶ್ರಮಿಕಜಾತಿ, ಮಿಶ್ರ, ಕರ್ನಾಟವಿಷಯಭಾಷಾಜಾತಿ. ಪ್ರಸ್ತಾರಾದಿಪ್ರತ್ಯಯ ಎಂಬ ಹೆಸರುಗಳಿವೆ. ವಿಷಯದಲ್ಲಿಯೂ

ನಿರೂಪಣೆಯಲ್ಲಿಯೂ ಕನ್ನಡ ಛಂದಸ್ಸಿನ ಹಾಗೂ ಛಂದೋಗ್ರಂಥದ ಪ್ರಭಾವ ಅನುಸರಣೆಗಳು ಸ್ವಲ್ಪಮಟ್ಟಿಗೆ ಅಲ್ಲಲ್ಲಿ ಗೋಚರಿಸುವುದು, ಸಪ್ತಮಾಧಿಕಾರ ಪೂರ್ತಿಯಾಗಿ ಕನ್ನಡ ಛಂದಸ್ಸಿಗೆ ಮೀಸಲಾಗಿರುವುದು ಈ ಗ್ರಂಥ ಕನ್ನಡಿಗರ ಆದರಣೆಗೆ ಪಾತ್ರವಾಗಲು ಕಾರಣಗಳಾಗಿವೆ. ಮಾಲಾವೃತ್ತ, ರಗಳೆ, ಪ್ರಾಸ, ಕೆಲವು ವರ್ಣವೃತ್ತಗಳು ಹಾಗೂ ವೃತ್ತಸಾಮಗಳು ಸ್ಕಂಧ ಮತ್ತು ಸಂಕೀರ್ಣಗಳೆಂಬ ಮಾತ್ರಾವೃತ್ತಗಳು, ಗುಣಿ, ದ್ವಿಪದಿ, ಉತ್ಸವ ಮತ್ತು ಲಯೋತ್ತರಗಳೆಂಬ ಮಿಶ್ರ ಅಥವಾ ಮಾತ್ರಾವರ್ಣವೃತ್ತಗಳು ಉತ್ಸವ, ದಂಡಕ, ಅಕ್ಕರ, ತ್ರಿಪದಿ ಮುಂತಾದ ಕನ್ನಡದ ದೇಶ್ಯವೃತ್ತಗಳು - ಇಂಥ ಕೆಲವು ಛಂದೋವಿಷಯಗಳ ವಿವೇಚನೆಯಲ್ಲಿ ಈ ಪ್ರಭಾವವನ್ನೂ ಅನುಸರಣೆಯನ್ನೂ ಕಾಣಬಹುದಾಗಿದೆ. ಉಳಿದೆಡೆಗಳಲ್ಲಿ ಸಂಸ್ಕೃತ ಛಂದಸ್ಸಿನ ಚರ್ಚೆಯಿದೆ. ಪ್ರಾಕೃತ ಕಾವ್ಯ ಮತ್ತು ಛಂದಸ್ಸಿನ ಬಗ್ಗೆ ಈ ಗ್ರಂಥದಲ್ಲಿ ಯಾವುದೇ ಮಾಹಿತಿ ದೊರೆಯುವುದಿಲ್ಲ. ಕನ್ನಡ ಛಂದಸ್ಸಿನ ವಿವೇಚನೆಗೆ ಪೂರಕವಾದ ಅಂಶಗಳು ಇಲ್ಲಿ ದೊರೆಯುವುದರಿಂದ ಈ ಗ್ರಂಥ ಕನ್ನಡ ಛಂದಸ್ಸಿನ ಖಚಿತವಾದ ತಿಳಿವಳಿಕೆಗೆ ಸಹಾಯಕವಾಗಿದೆ.

ಜಯಕೀರ್ತಿಯು ಶಿಲೋವಯುಸವಾಲ ಎಂಬ ನೈತಿಕ ಕಾವ್ಯವನ್ನು 116 ಪ್ರಾಕೃತ ಗಾಥೆಗಳಲ್ಲಿ ರಚಿಸಿದಂತೆಯೂ ತಿಳಿದು ಬರುತ್ತದೆ.

(ಟಿ.ವಿ.ವಿ., ಎಚ್.ವಿ.ಎಸ್.)

**ಜಯಕೇಶಿ I :** ಗೋವ ಕದಂಬ ಮನೆತನದ ದೊರೆ (ಸು.1050-78); ಇಮ್ಮಡಿ ಷಷ್ಠದೇವನ ಮಗ. ಸು.1072ರವರೆಗೆ ಈತ ತನ್ನ ತಂದೆಯೊಡನೆಯೇ ರಾಜ್ಯಭಾರ ಮಾಡುತ್ತಿದ್ದ. ಮೊದಲು ಜಯಕೇಶಿ ಚಾಳುಕ್ಯ 1ನೆಯ ಸೋಮೇಶ್ವರನ ಸಾಮಂತನಾಗಿದ್ದು, ಸೋಮೇಶ್ವರನಿಗೂ ಚೋಳರಿಗೂ ಸ್ನೇಹ ಬೆಸೆಯುವುದರಲ್ಲಿ ಕಾರಣನಾದ. 1ನೆಯ ಸೋಮೇಶ್ವರನ ತಮ್ಮ 6ನೆಯ ವಿಕ್ರಮಾದಿತ್ಯ ಜಯಕೇಶಿಯ ಮಗಳನ್ನು ಮದುವೆಯಾಗಿದ್ದರಿಂದ ಮುಂದೆ ಚಾಳುಕ್ಯ ಸಾಮ್ರಾಟತ್ವಕ್ಕಾಗಿ ಅಣ್ಣತಮ್ಮಂದಿರಲ್ಲಿ ಸ್ಪರ್ಧೆ ನಡೆದಾಗ ಜಯಕೇಶಿ ತನ್ನ ಅಳಿಯ ವಿಕ್ರಮಾದಿತ್ಯನ ಪರ ಹೋರಾಡಿ ಅವನಿಗೆ ಸಿಂಹಾಸನ ಸಾಧಿಸಿ ಕೊಟ್ಟ. ಜಯಕೇಶಿ ಬನವಾಸಿಯ ಕೀರ್ತಿರಾಜ ಮತ್ತು ಕಾಮದೇವ ಎಂಬ ರಾಜರನ್ನು ಸೋಲಿಸಿದ. ಕಪರ್ದಿಕ ದ್ವೀಪದ ದೊರೆಯನ್ನು ಕೊಂದ, ಪರಮಾರ ಮತ್ತು ಲಾಟ ದೊರೆಗಳ ಮೇಲೂ ವಿಜಯ ಸಾಧಿಸಿದ ಎಂದು ಶಾಸನಗಳು ತಿಳಿಸುತ್ತವೆ.

ಗೋವ-ಕೊಂಕಣ ಪ್ರದೇಶವಲ್ಲದೆ ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಯ ಕೆಲವು ಭಾಗಗಳೂ ಜಯಕೇಶಿಯ ರಾಜ್ಯಕ್ಕೆ ಸೇರಿದ್ದುವು. ಇವನ ಕಾಲದಲ್ಲಿ ಗೋವ ಪಟ್ಟಣ ಕದಂಬ ರಾಜ್ಯದ ರಾಜಧಾನಿಯಾಗಿ ಪ್ರಮುಖ ವಾಣಿಜ್ಯ ಕೇಂದ್ರವಾಗಿಯೂ ಬೆಳೆಯಿತು. ಜಯಕೇಶಿ ಅರಬರೊಡನೆ ಬೆಳೆಸಿದ್ದ ಸ್ನೇಹ ಮತ್ತು ಇವನು ಕಟ್ಟಿದ್ದ ನೌಕಾಬಲ ಇವುಗಳಿಂದ ಸಮುದ್ರವ್ಯಾಪಾರ ಬಹುವಾಗಿ ಕುದುರಿದ್ದು ಗೋವದ ಬೆಳವಣಿಗೆಗೆ ಕಾರಣವಾಗಿರಬೇಕು. ಅಣಿಲಾಪುರ (ಅಳಣಾವರ, ಧಾರವಾಡ ಜಿಲ್ಲೆ) ಮತ್ತು ಚಂದ್ರಾಪುರ (ಗೋವೆಯ ಚಾಂದೋರ್) ಸಹ ಇವನ ರಾಜಧಾನಿಗಳಾಗಿದ್ದುವೆಂದು ಇವನ ಕಾಲದ ಕೆಲವು ಶಾಸನಗಳು ತಿಳಿಸುತ್ತವೆ.

ಜಯಕೇಶಿಗೆ ಗೂವಲದೇವ III ಮತ್ತು ವಿಜಯಾದಿತ್ಯ ಎಂಬ ಪುತ್ರರಿದ್ದರು. ಚಾಳುಕ್ಯ 6ನೆಯ ವಿಕ್ರಮಾದಿತ್ಯ ಮತ್ತು ಗುಜರಾತಿನ ಚೌಳುಕ್ಯ ಕರ್ಣ ಇವನ ಅಳಿಯಂದಿರು.

(ಎ.ವಿ.ವಿ.)

**ಜಯಕೇಶಿ II :** ಗೋವೆಯ ಕದಂಬ ವಂಶಕ್ಕೆ ಸೇರಿದ ದೊರೆ (ಸು.1125-47). ಕಲ್ಯಾಣ ಚಾಳುಕ್ಯರ ಸಾಮಂತನಾಗಿ ಪಲಸಿಗೆ, ಕೊಂಕಣ ಮುಂತಾದ ಪಶ್ಚಿಮ ಕರಾವಳಿಯ ಪ್ರದೇಶಗಳನ್ನು ಗೋವೆ ರಾಜಧಾನಿಯಿಂದ ಆಳುತ್ತಿದ್ದ. ಈತನ ದೊಡ್ಡಪ್ಪ ಗೂವಲದೇವನಿಗೆ (ಸು.1078-1125) ಮಕ್ಕಳಿರಲಿಲ್ಲ. ತಂದೆಯಾದ ವಿಜಯಾದಿತ್ಯ ಮೊದಲೇ ಮರಣ ಹೊಂದಿದ್ದ. ಆದ್ದರಿಂದ ಕೆಲವು ವರ್ಷಗಳು ಜಯಕೇಶಿ ಗೂವಲದೇವನೊಡನೆ ಅಧಿಕಾರವಹಿಸಿದ್ದುಂಟು. ಅನಂತರ ಇವನೇ ಸಿಂಹಾಸನವನ್ನೇರಿದ.

ಒಂದನೆಯ ಜಯಕೇಶಿಯ ಮಗಳನ್ನು ಮದುವೆಯಾಗಿದ್ದ ಆರನೆಯ ವಿಕ್ರಮಾದಿತ್ಯ ತನ್ನ ಮಗಳಾದ ಮೈಳಲದೇವಿಯನ್ನು ಇಮ್ಮಡಿ ಜಯಕೇಶಿಗೆ 1104ರಲ್ಲಿ ಮದುವೆ ಮಾಡಿಕೊಟ್ಟಿದ್ದ. ಈಕೆಯ ತಾಯಿ ಮಲಯಮತಿ ಮಹಾದೇವಿ. ಮದುವೆಯ ಸಮಯದಲ್ಲಿ ಪಲಸಿಗೆ 12000ದ ಪ್ರಾಂತ್ಯವನ್ನು ಅರಸನು ಅಳಿಯನಿಗೆ ಬಳುವಳಿಯಾಗಿ ನೀಡಿದ. ಆ ಪ್ರಾಂತದ ಮೇಲೆ ಜಯಕೇಶಿ ಸ್ವತಂತ್ರವಾದ ಆಧಿಪತ್ಯವನ್ನು ಪಡೆದಂತೆ ತೋರುತ್ತದೆ.

ಹೊಯ್ಸಳರು ಚಾಳುಕ್ಯ ಮಾಂಡಲಿಕತ್ವವನ್ನು ಕಳಚಿಕೊಂಡು ಸ್ವತಂತ್ರವಾಗಿ ಆಳುವ ಹವಣಿಕೆಯಲ್ಲಿದ್ದ ಸಂಧಿಯನ್ನು ಸಾಧಿಸಿ ಜಯಕೇಶಿಯೂ ಪರಮಾಧಿಕಾರವನ್ನು ಪಡೆಯಲು ಬಯಸಿದ. ಆದರೆ 1122ರ ಸುಮಾರಿಗೆ ಚಾಳುಕ್ಯರ ನಿಷ್ಠ ಸಾಮಂತರಾಗಿದ್ದ ಸಿಂದವಂಶದ ಇಮ್ಮಡಿ ಆಚುಗಿ ಮತ್ತು ಆತನ ಮಗ ಇಮ್ಮಡಿ ಪೆರ್ಮಾಡಿ ಈತನನ್ನು ಅಡಗಿಸಿದರು. ಇದರ ಫಲವಾಗಿ ಗೋವೆಯ ಕದಂಬರ ರಾಜ್ಯದ ಹಲವು ಪ್ರಾಂತ್ಯಗಳು ಅವರ ಕೈಬಿಟ್ಟವು. 1122ರಲ್ಲಿ ಕೊಂಕಣ 900, ಪಲಸಿಗೆ 12000, ಕವಡಿದ್ವೀಪ ಸವಲಕ್ಷ, ಪಾನುಂಗಲ್ 500, ಹೈವೆ 500, ವೇಣುಗ್ರಾಮ 70, ಉತ್ಸುಗ್ರಾಮ 30, ಸಬ್ಬಿ 30, ಪೊಳಲಗುಂದ 30, ಉಣಕಲ್ 30 - ಈ ಭಾಗಗಳನ್ನು ಗೂವಲದೇವನ ಜೊತೆಯಲ್ಲಿ ಜಯಕೇಶಿ ಆಳುತ್ತಿದ್ದ. ಆದರೆ 1125ರಲ್ಲಿ ಪಲಸಿಗೆ 12000, ಕೊಂಕಣ 900, ಹೈವೆ 500, ಕವಡಿದ್ವೀಪ ಸವಲಕ್ಷಗಳು ಮಾತ್ರ ಇವನಿಗೆ ಉಳಿದಿದ್ದವು. ಕೆಲಕಾಲಾನಂತರ ಹೈವೆ 500ರ ಮೇಲಿನ ಅಧಿಕಾರವೂ ಇವನ ಕೈತಪ್ಪಿತು.

ಜಯಕೇಶಿ ಸು.1125ರಿಂದ ಸ್ವತಂತ್ರವಾಗಿ ಆಳಿದಂತೆ ತೋರುತ್ತದೆ. ಸು.1130ರಲ್ಲಿ ಹೊಯ್ಸಳ ವಿಷ್ಣುವರ್ಧನ ಇವನನ್ನು ಸೋಲಿಸಿ ಪಲಸಿಗೆ ಪ್ರಾಂತ್ಯವನ್ನು ಕಸಿದುಕೊಂಡ. ಆದರೆ ಇವನ ಬಲ ಇದರಿಂದ ಕುಗ್ಗಲಿಲ್ಲ. ಕೊಲ್ಹಾಪುರದ ಶಿಲಾಹಾರ ಇಮ್ಮಡಿ ಭೋಜನ ತಂದೆ ವಿಜಯಾದಿತ್ಯ ಇವನಿಗೆ ನೆರವಿತ್ತ. ಇವನು ಉತ್ತರ ಕೊಂಕಣದ ಇನ್ನೊಂದು ಶಿಲಾಹಾರ ಮನೆತನದ ಅಪರಾದಿತ್ಯನನ್ನು ಸೋಲಿಸಿ ಕವಡಿದ್ವೀಪದ ಕೆಲವು ಭಾಗಗಳನ್ನು ಕಸಿದುಕೊಂಡ.

ಜಯಕೇಶಿ ಸು.1147ರವರೆಗೆ ಆಳಿದ. ಈತನಿಗೆ ಪೆರ್ಮಾಡಿ (ಶಿವಚಿತ್ತ) ಮತ್ತು ವಿಜಯಾದಿತ್ಯ (ವಿಷ್ಣುಚಿತ್ತ) ಎಂಬ ಇಬ್ಬರು ಮಕ್ಕಳು. ಜೊತೆಯಾಗಿ ಆಳಿದ ಇವರಿಬ್ಬರನ್ನೂ ಶಾಸನಗಳು ರಾಮಲಕ್ಷ್ಮಣರೆಂದು ವರ್ಣಿಸಿವೆ. ಸಾವಿತ್ರಿ ಎಂಬಾಕೆ ಇವನ ಹಿರಿಯ ಮಗಳು. ಬಹುಶಃ ಹಾನಗಲ್ಲಿನ ಕದಂಬ ವಂಶಕ್ಕೆ ಸೇರಿದ ತೈಲಪನೃಪನ ಮಗನಾದ ಗಂಗಿದೇವನಿಗೆ ಇವಳನ್ನು ಮದುವೆಮಾಡಿಕೊಡಲಾಗಿತ್ತು.

ಜಯಕೇಶಿಗೆ ಪದ್ಮಲದೇವಿ ಎಂಬ ಅಕ್ಕ, ಉದಯವರ್ಮದೇವ ಮತ್ತು ತ್ರಿಭುವನಮಲ್ಲದೇವ ಎಂಬ ತಮ್ಮಂದಿರು ಇದ್ದರು. ಪದ್ಮಲದೇವಿ ಹಾನಗಲ್ಲಿನ ಕದಂಬವಂಶದ ಮಾವುಲದೇವನ ಮಗ ಹಾಕಿಬಲ್ಲನನ್ನು ಮದುಮೆಯಾಗಿದ್ದಳು.

(ಬಿ.ಆರ್.ಜಿ.)

**ಜಯಚಾಮರಾಜ ಒಡೆಯರ್ :** 1919-74. ಮೈಸೂರು ಸಂಸ್ಥಾನದ ಕೊನೆಯ ದೊರೆ (ಆಳಿಕೆ 1940-50). ತತ್ತ್ವಜ್ಞಾನಿ, ಸಂಗೀತಜ್ಞ, ರಾಜನೀತಿಜ್ಞ.

ಜಯಚಾಮರಾಜರು ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರ ಏಕಮಾತ್ರ ಪುತ್ರರು. ತಾಯಿ ಕೆಂಪುಚೆಲುವಾಜಮ್ಮಣ್ಣಿ. 1919 ಜುಲೈ 18ರಂದು ಜನಿಸಿದರು. ಇವರ ಮೊದಲಿನ ವಿದ್ಯಾಭ್ಯಾಸ ರಾಜಮನೆತನದ ಪ್ರತ್ಯೇಕ ಶಾಲೆಯಲ್ಲಿ ನಡೆಯಿತು. ಚಿಕ್ಕಂದಿನಲ್ಲಿ ಇವರು ಸ್ಕೌಟ್ ದಳದ ಹುಡುಗರ ವಿಭಾಗದ ನಾಯಕರಾಗಿದ್ದರು. 1936ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾಗಿ 1938ರಲ್ಲಿ ಬಿ.ಎ. ಪದವೀಧರರಾದರು. ಇಲ್ಲಿ ರಾಜನೀತಿ - ಅರ್ಥಶಾಸ್ತ್ರಗಳ ಅಧ್ಯಯನವನ್ನು ನಡೆಸಿ ಉತ್ತಮ ಪಾಂಡಿತ್ಯಕ್ಕೆ ಮೀಸಲಾದ ಐದು ಬಹುಮಾನಗಳು ಮತ್ತು ಸುವರ್ಣಪದಕಗಳನ್ನು ಗಳಿಸಿದರು. ಮೈಸೂರಿನ ಮಹಾರಾಜ ಕಾಲೇಜಿನ ಹಿಸ್ಟಾರಿಕಲ್ ಅಸೋಸಿಯೇಷನ್ನಿನ ಗೌರವ ಅಧ್ಯಕ್ಷರೂ ಆಗಿದ್ದರು. ಆ ಕಾಲದಲ್ಲಿ ರಾಜಕೀಯ ಸಮಸ್ಯೆಗಳಲ್ಲಿ ಮತ್ತು ಸಾರ್ವಜನಿಕ ಆಡಳಿತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. 1937ರಲ್ಲಿ ಆಗ್ನೇಯ ಏಷ್ಯ ದೇಶಗಳಲ್ಲಿ ಸಂಚಾರ ಕೈಗೊಂಡರು.

ಪದವೀಧರರಾದ ಅನಂತರ ಇಂಡಿಯನ್ ಸಿವಿಲ್ ಸರ್ವಿಸ್

ಹುದ್ದೆಯಲ್ಲಿದ್ದ ಎಲ್ವಿನ್ ಅವರನ್ನು ಇವರಿಗೆ ಆವಶ್ಯಕವಾದ ಆಡಳಿತ ತರಬೇತಿಯನ್ನು ಕೊಡಲು ನೇಮಿಸಲಾಯಿತು. ಜಯ ಚಾಮರಾಜರು ಸಂಸ್ಥಾನದ ಆಡಳಿತದ ಎಲ್ಲಾ ಶಾಖೆಗಳ ಅಧ್ಯಯನವನ್ನು ನಡೆಸಿ, ರೈತಾಪಿ ವರ್ಗದವರ ಸ್ಥಿತಿ ಗತಿಗಳನ್ನು ಖುದ್ದಾಗಿ ತಿಳಿಯಲು ಮೈಸೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಸಂಚರಿಸಿದರು. 1939ರಲ್ಲಿ ಪ್ರಥಮವಾಗಿ ಯುರೋಪಿನಲ್ಲಿ ಸಂಚಾರ ಮಾಡಿದರು. ಲಂಡನ್ನಿನ ಅನೇಕ ಸಂಘ ಸಂಸ್ಥೆಗಳಿಗೆ ಭೇಟಿಕೊಟ್ಟು ಅನೇಕ ವಿದ್ವಾಂಸರ, ಕಲಾವಿದರ ಪರಿಚಯ ಮಾಡಿಕೊಂಡು, ಅವರ ನಿಕಟಸಂಬಂಧ ಹೊಂದಿದ್ದರು.

ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಉತ್ತರಾಧಿಕಾರಿಗಳಾಗಿ 1940 ಸೆಪ್ಟೆಂಬರ್ 8ರಂದು ಮೈಸೂರು ಸಂಸ್ಥಾನದ ಸಿಂಹಾಸನ ವನ್ನೇರಿದರು. 1947ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿದಾಗ ಮೈಸೂರು ಸಂಸ್ಥಾನ ಭಾರತ ಒಕ್ಕೂಟದಲ್ಲಿ ಸೇರುವುದಕ್ಕೆ ಒಪ್ಪಿ, ಸಂಸ್ಥಾನದಲ್ಲಿ ಪ್ರಜಾಸರ್ಕಾರ ಸ್ಥಾಪನೆಗೆ ಅನುವು ಮಾಡಿದರೂ 1950 ಜನವರಿ 26ರಂದು ಭಾರತ ಗಣರಾಜ್ಯವಾಗಿ ಘೋಷಿತವಾಗುವವರೆಗೂ ಮಹಾರಾಜರಾಗಿ ಮುಂದುವರಿದರು. ಅನಂತರ ರಾಜಪ್ರಮುಖರಾದರು (1950-56). ರಾಜ್ಯಗಳ ಪುನರ್ವಿಂಗಡಣೆಯಾದಾಗ ವಿಶಾಲ ಮೈಸೂರಿನ (ಇಂದಿನ ಕರ್ನಾಟಕ) ಪ್ರಥಮ ರಾಜ್ಯಪಾಲರಾದರು (1956-64). ಮುಂದೆ ಮದರಾಸು ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡರು (1964-67). ಅನಂತರ ಮೈಸೂರಿನಲ್ಲೇ ನೆಲಸಿದರು.

ಇವರಿಗೆ ಸತ್ಯಪ್ರೇಮಕುಮಾರಿ ಮತ್ತು ತ್ರಿಪುರಸುಂದರಮ್ಮಣ್ಣಿ ಎಂಬ ಇಬ್ಬರು ಮಡದಿಯರು. ಐವರು ಹೆಣ್ಣು ಮಕ್ಕಳು. ಇವರ ಪುತ್ರ ಶ್ರೀಕಂಠದತ್ತನರಸಿಂಹರಾಜ ಒಡೆಯರ್.

(ಎ.ಎ.ಎ.)

ಜಯಚಾಮರಾಜ ಒಡೆಯರ್ ಅವರು ಸಂಸ್ಥಾನದ ಮಹಾರಾಜರಾಗಿದ್ದ ಹೆಚ್ಚು ಕಾಲ ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲವಾಗಿದ್ದು ಪ್ರಪಂಚದ ಇತರೆಡೆಗಳಂತೆ ಮೈಸೂರು ಸಹ ಆರ್ಥಿಕ ಸಂಕಷ್ಟಗಳನ್ನು ಎದುರಿಸಬೇಕಾಗಿತ್ತು. ಆರ್ಥಿಕ ರಂಗದಲ್ಲಿ ಹೆಚ್ಚಿನ ಸಾಧನೆಗಳಿಗೆ ಅವಕಾಶ ಇರಲಿಲ್ಲ. ಮಹಾರಾಜರೂ ಆಡಳಿತ ವ್ಯವಸ್ಥೆಯಲ್ಲಿ ಮುಖ್ಯ ಅಧಿಕಾರಿಗಳಾಗಿದ್ದ ದಿವಾನರೂ (ಮಿರ್ಜಾ ಇಸ್ಮಾಯಿಲ್ 1941ರ ಮೇ ವರೆಗೆ; ನ್ಯಾಪತಿ ಮಾಧವರಾವ್ 1941-46; ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ 1946-49) ಸಂಸ್ಥಾನದ ಹಣಕಾಸು ಸ್ಥಿತಿಯನ್ನು ಸರಿದೂಗಿಸುವುದಕ್ಕೆ ಶ್ರಮಿಸಿದರು. ರಾಜಕೀಯ ಜಾಗೃತಿ ಬೆಳೆದಿದ್ದ ಕಾಲದಲ್ಲಿ ಅದಕ್ಕೆ ಅನುವಾಗುವ ಹಲವು ಸುಧಾರಣೆಗಳು ನಡೆದವು. ಪ್ರಜಾಪ್ರತಿನಿಧಿ ಸಭೆಗೆ ಹೊಸ ಸ್ವರೂಪವನ್ನು ಕೊಡಲಾಯಿತು. ಅದಕ್ಕಾಗಿ ಚುನಾವಣೆಗಳು 1941 ಮತ್ತು 1945ರಲ್ಲಿ ನಡೆದುವು. 1945ರಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಸದಸ್ಯರು ಬಹುಮತದಿಂದ ಆರಿಸಿಬಂದು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಒತ್ತಾಯ ಮಾಡಿದರು. ಆದರೆ ಅಂದಿನ ದಿವಾನರ ಧೋರಣೆಗಳಿಂದ ಸ್ವಲ್ಪಮಟ್ಟಿನ ವಿರಸವುಂಟಾದರೂ ದೇಶ ಸ್ವತಂತ್ರವಾದಾಗ ಭಾರತ ಒಕ್ಕೂಟದಲ್ಲಿ ತಮ್ಮ ಸಂಸ್ಥಾನವನ್ನು ಸೇರಿಸುವಲ್ಲಿ ಜಯಚಾಮರಾಜರು ಮೊದಲಿಗರಾದರು.

ಪ್ರಜಾಹಿತದೃಷ್ಟಿಯಿದ್ದ ಮಹಾರಾಜರು ಜನಪ್ರಿಯರಾಗಿದ್ದರು. ಮೈಸೂರು ನಗರದಲ್ಲಿ ಇವರು ಆಚರಿಸಿಕೊಂಡು ಬರುತ್ತಿದ್ದ ವೈಭವೋಪೇತ ದಸರ ಉತ್ಸವಕ್ಕೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಹತ್ವ ಬಂದಿತ್ತು. ಆಗ ಪ್ರತಿ ನಿತ್ಯ ಸಂಜೆ ಅರಮನೆಯಲ್ಲಿ ನಡೆಯುತ್ತಿದ್ದ ದರ್ಬಾರು ಮತ್ತು ರಾಜಸಭೆಗಳು, ಮಹಾನವಮಿಯ ಆಯುಧ ಪೂಜೆ, ವಿಜಯ ದಶಮಿಯ ಜಂಬೂಸವಾರಿ - ಇವೆಲ್ಲ ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸಿದ್ದವು. ವಿಶಾಲ ಕರ್ನಾಟಕದ ಕನಸನ್ನು ಬಹುಹಿಂದೆಯೇ ಕಂಡಿದ್ದ ಇವರು ಅದು ನನಸಾಗುವಲ್ಲಿ ರಾಜತ್ವವನ್ನು ತ್ಯಜಿಸಲೂ ಸಿದ್ಧವೆಂದು ಹೇಳಿದ್ದರು. ಮೈಸೂರಿನ ರಾಜ್ಯಪಾಲರಾಗಿದ್ದ ಸಂದರ್ಭದಲ್ಲಿ ಇವರು ಸಂಬಳವನ್ನೂ ಸ್ವೀಕರಿಸುತ್ತಿರಲಿಲ್ಲ. ಅಲ್ಲದೆ ಜನಹಿತ ಕಾರ್ಯಕ್ಕಾಗಿ ಇವರು ಕೊಡುಗೈದಾನಿಯಾಗಿದ್ದರು. ಮೈಸೂರು ನಗರದಲ್ಲಿರುವ ಶ್ರೀ ಜಯಚಾಮರಾಜೇಂದ್ರ ಚಿತ್ರಶಾಲೆಗಾಗಿ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿಕೊಟ್ಟರು. ಕೇಂದ್ರೀಯ ಆಹಾರ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ ಮುಂತಾದವುಗಳಿಗಾಗಿ ನಿವೇಶನ ಮತ್ತು ಕಟ್ಟಡಗಳನ್ನು ದೊರಕಿಸಿಕೊಡುವುದರಲ್ಲಿ ನೆರವಾದರು. ತಮ್ಮ ಹಲವಾರು ಕಟ್ಟಡ, ನಿವೇಶನಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಇವರು ದಾನಮಾಡಿದರು.

ಜಯಚಾಮರಾಜರು ಕ್ರೀಡಾಪಟುವಾಗಿದ್ದರು. ಒಳ್ಳೆಯ ಕುದುರೆ ಸವಾರರೂ ಟೆನಿಸ್ ಆಟವಾಡುವುದರಲ್ಲಿ ನಿಪುಣರೂ ನುರಿತಶಿಕಾರಿಯೂ ಆಗಿದ್ದರು. ವನ್ಯಮೃಗಗಳ ಬಗ್ಗೆ ಇವರಿಗೆ ಹೆಚ್ಚಿನ ಆಸಕ್ತಿ ಇತ್ತು. ಭಾರತೀಯ ವನ್ಯಮೃಗ ಮಂಡಳಿಯ ಅಧ್ಯಕ್ಷರಾಗಿದ್ದರಲ್ಲದೆ, ಮೈಸೂರು ನಗರದಲ್ಲಿನ ತಮ್ಮ ಸ್ವಂತ ಮೃಗಾಲಯವನ್ನು ಸರ್ಕಾರಕ್ಕೆ ವಹಿಸಿಕೊಟ್ಟು ಅದರ ಅಭಿವೃದ್ಧಿಗೆ ಕಾರಣರಾದರು.

ಒಡೆಯರಿಗೆ ಸಂಗೀತವೆಂದರೆ ಪಂಚಪ್ರಾಣ. ಪ್ರತಿನಿತ್ಯ ಇವರು ಶಿವಪೂಜೆಗೆ ಕುಳಿತಾಗ ಸು.4-5 ಗಂಟೆಗಳ ವರೆಗೆ ಅರಮನೆಯ ಸಂಗೀತ ವಿದ್ವಾಂಸರು ಸರದಿಯ ಮೇಲೆ ಹಾಡುತ್ತಿದ್ದರು. ಈ ಕಾರ್ಯಕ್ರಮ ಒಂದೊಂದು ದಿನ ಬೆಳಗಿನ ಜಾವ 3-4 ಗಂಟೆಯಿಂದಲೇ ಪ್ರಾರಂಭವಾಗುತ್ತಿತ್ತು. ಅನೇಕ ವಿದ್ವಾಂಸರನ್ನು ಇವರು ಆಸ್ಥಾನ ವಿದ್ವಾಂಸರನ್ನಾಗಿ ಗೌರವಿಸಿದುದೂ ಉಂಟು. ಸಂಸ್ಕೃತದಲ್ಲಿ ಇವರು ರಚಿಸಿರುವ ಸಂಗೀತ ಕೃತಿಗಳು ಸು.94 ಎನ್ನಲಾಗಿದೆ. ಹಲವನ್ನು ವಿದ್ವಾಂಸರು ಬಳಸಿಕೊಂಡು ಹಾಡುತ್ತಿದ್ದಾರೆ. ಪ್ರಾಯಃ ದೀಕ್ಷಿತ ಸಂಪ್ರದಾಯವೆಂದು ಹೇಳಲಾಗಿರುವ ಇವರ ಕೀರ್ತನೆಗಳಲ್ಲಿ ಅಕ್ಷರಕ್ಕೆ ಹೆಚ್ಚು ಪ್ರಾಧಾನ್ಯ. ವಿದ್ಯಾರಾಜ ಯೋಗೀಂದ್ರ ಮುಂತಾದ ಸಂಕೇತಗಳು ಇವರ ಕೀರ್ತನೆಗಳ ಅಂಕಿತಗಳು. ಈಗ ಬಳಕೆಯಲ್ಲಿರುವ ರಾಗಗಳಲ್ಲದೆ ಬೃಹಸ್ಪತಿಪ್ರಿಯ ಮುಂತಾದ ಕೆಲವು ನೂತನ ರಾಗಗಳನ್ನೂ ಇವರು ಸೃಜಿಸಿದ್ದಾರೆ ಎನ್ನಲಾಗಿದೆ. ಇವರ ಕೃತಿಗಳು ನಾದಮಾಧುರ್ಯಕ್ಕೆ ಅರ್ಥಾಭಿವ್ಯಕ್ತಿಗೆ ಹೆಸರಾಗಿವೆ.

ಪಾಶ್ಚಾತ್ಯ ಸಂಗೀತದಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ಆ ಸಂಗೀತವನ್ನು ಕುರಿತಂತೆ ಭಾರತದಲ್ಲೇ ಅತಿ ದೊಡ್ಡದೆನಿಸುವ ಗ್ರಂಥಭಂಡಾರವನ್ನು ಇವರು ತಮ್ಮ ಅರಮನೆಯಲ್ಲಿ ಕೂಡಿಸಿದ್ದರು. ವಿಶ್ವದ ಹೆಸರಾಂತ ಸಂಗೀತಗಾರರೊಂದಿಗೆ ಇವರಿಗೆ ಸಂಪರ್ಕವಿತ್ತು. ಖ್ಯಾತ ಆಪೇರಾಗಳ ಕರ್ತೃವಾದ ಜರ್ಮನಿಯ ರಿಚರ್ಡ್ ವ್ಯಾಗ್ನರ್ (1813-83), ಪ್ರಸಿದ್ಧ ಜರ್ಮನ್ ಸಂಗೀತಗಾರ ಲಡ್ವಿಗ್ ಫಾನ್ ಬೇತೋವನ್ (1770-1827), ಬಾಕ್ ಮನೆತನದ ಸಂಗೀತ ವಿದ್ವಾಂಸರು ಮುಂತಾದವರು ಇವರ ಮೆಚ್ಚಿನ ಸಂಗೀತಗಾರರಾಗಿದ್ದರು.

ಇವರು ಪಂಡಿತರು, ವಿದ್ವತ್ಪ್ರೇಮಿಗಳು, ರಾಜ್ಯಶಾಸ್ತ್ರ, ಚರಿತ್ರೆ, ಅರ್ಥಶಾಸ್ತ್ರ, ಆಫ್ರಿಕನ್ ವಿಷಯಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದರು. ತತ್ತ್ವಶಾಸ್ತ್ರದಲ್ಲಿ ವಿಶೇಷ ಆಸಕ್ತಿ. ಅರಮನೆಯ ನುರಿತ ಪಂಡಿತರಲ್ಲಿ ಸಂಸ್ಕೃತಭಾಷೆಯನ್ನೂ ತತ್ತ್ವಗ್ರಂಥಗಳನ್ನೂ ಆಳವಾಗಿ ಅಭ್ಯಾಸ ಮಾಡಿದರು. ಹಠಯೋಗವನ್ನೂ ಸ್ವಲ್ಪ ಅಭ್ಯಾಸ ಮಾಡಿದ್ದುಂಟು. ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ, ಜಯಚಾಮರಾಜೇಂದ್ರ ವೇದರತ್ನಮಾಲಾ ಎಂಬ ಪ್ರಕಟನಾಮಾಲೆಗಳಲ್ಲಿ ತತ್ತ್ವಶಾಸ್ತ್ರ ಮೊದಲಾದ ವಿಷಯಗಳು, ವೇದ, ಉಪನಿಷತ್ತು, ಪುರಾಣಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಿದರು. ಈ ಸರಣಿಗಳಲ್ಲಿ ಅಚ್ಚಾದ ಕೃತಿಗಳ ಪುಟಗಳು ಒಂದು ಲಕ್ಷವನ್ನೂ ಮೀರುತ್ತವೆ. ಕನ್ನಡ ಸಾರಸ್ವತ ಪ್ರಪಂಚಕ್ಕೆ ಇವು ಅಮೂಲ್ಯ ಕೊಡುಗೆಗಳು.

ಜಯಚಾಮರಾಜರು ಸ್ವಂತವಾಗಿಯೂ ಹಲವು ಗ್ರಂಥಗಳನ್ನು

ಜಂಬೂಸವಾರಿಯಲ್ಲಿ ನಾಲ್ವಡಿಯವರೊಡನೆ ಜಯಚಾಮರಾಜಒಡೆಯರ್

ಇವರ ಆಳವಾದ ತತ್ತ್ವಶಾಸ್ತ್ರಾಧ್ಯಯನದ ಫಲವೇ ಆಂಗ್ಲ ಭಾಷೆಯಲ್ಲಿ ರಚಿತವಾಗಿರುವ ದತ್ತಾತ್ರೇಯ-ದಿ ವೇ ಅಂಡ್ ದಿ ಗೋಲ್. ಇದಕ್ಕೆ ಭಾರತದ ರಾಷ್ಟ್ರಪತಿಗಳಾಗಿದ್ದ ಎಸ್.ರಾಧಾಕೃಷ್ಣನ್ ಅವರು ಮುನ್ನುಡಿ ಬರೆದಿದ್ದಾರೆ. ಇದು ಇವರು ರಚಿಸಿರುವ ಮೇಲ್ಮಟ್ಟದ ಗ್ರಂಥವೆನಿಸಿದೆ. ಈ ಗ್ರಂಥದ ಐದು ಪ್ರಕರಣಗಳಲ್ಲಿ ಅನುಕ್ರಮವಾಗಿ ಮಾನವನಿಗೆ ಈಶ್ವರಾನುಗ್ರಹದ ಅಗತ್ಯ, ದತ್ತಾತ್ರೇಯನ ಪರತತ್ತ್ವ ಸ್ವರೂಪ, ದತ್ತಾತ್ರೇಯ ಉಪೇಯ ಮತ್ತು ಉಪಾಯ ಎರಡೂ ಆಗಿದ್ದಾನೆ ಎಂಬುದು, ದತ್ತಾದ್ವೈತಸ್ವರೂಪ ಮತ್ತು ಜೀವನ್ಮುಕ್ತಗೀತೆ ಇವು ಬರುತ್ತವೆ. ಅನಂತರ ಅವಧೂತ ಗೀತೆಗಳ ಭಾಷಾಂತರ, ಕಡೆಯಲ್ಲಿ ಇದಕ್ಕೆ ಹಿನ್ನೆಲೆಯಾಗಿ ದತ್ತಾದ್ವೈತದ ತೌಲನಿಕ ವಿಮರ್ಶೆ ಬಂದಿದೆ.

ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್ ಎಂಬುದು ಮತ್ತೊಂದು ಅವಲೋಕನೀಯ ಗ್ರಂಥ. ಇದು ಧರ್ಮ ಮತ್ತು ಗೀತೆ, ಭಗವದ್ಗೀತೆ ಯಲ್ಲಿನ ಕ್ಷೇತ್ರ ಮತ್ತು ಕ್ಷೇತ್ರಜ್ಞ ಎಂಬ ಕಲ್ಪನೆಗಳ ಸ್ವರೂಪ ಎಂಬ ಎರಡು ಪ್ರಬಂಧಗಳ ಸಂಕಲನ. ರಾಜಕೀಯ, ವೈಜ್ಞಾನಿಕ ಹಾಗೂ ತಾತ್ತ್ವಿಕ ಸಮಸ್ಯೆಗಳಿಂದ ಪರಸ್ಪರ ಸೌಹಾರ್ದ ಕಳೆಚುತ್ತಿರುವ ಸಮಯದಲ್ಲಿ ಭಾರತೀಯ ವಿಚಾರಧಾರೆ ಎಷ್ಟು ಅಗತ್ಯ ಎಂದು ತೋರಿಸುವುದೇ ಈ ಸಂಕಲನದ ಮುಖ್ಯ ಉದ್ದೇಶ.

ಭಾರತೀಯ ಸಂಸ್ಕೃತಿ ಮತ್ತು ತತ್ತ್ವಶಾಸ್ತ್ರದ ಅನಧಿಕೃತ ರಾಯಭಾರಿಯಾಗಿ ಇವರು ಅನೇಕ ಸಲ ದೇಶವಿದೇಶಗಳ ಪ್ರವಾಸ ಕೈಗೊಂಡಿದ್ದರು. ಆಗ ಇವರು ಅಲ್ಲಲ್ಲಿ ಮಾಡಿದ ಭಾಷಣಗಳು ವಿಚಾರಪರಿಪೂರಿತವಾಗಿವೆ.

ಬನಾರಸ್ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪದವಿಯನ್ನೂ (1942) ಅಣ್ಣಾಮಲೈ ವಿಶ್ವವಿದ್ಯಾಲಯ ಡಿ.ಲಿಟ್. ಪದವಿಯನ್ನೂ (1965) ನೀಡಿ ಗೌರವಿಸಿವೆ. ಇದಕ್ಕೂ ಮುನ್ನ (1937) ಲಂಡನ್ನಿನ ಗಿಲ್ಡ್ ಹಾಲ್ ಸಂಗೀತಶಾಲೆಯ ಲೈಸೆನ್ಷಿಯೇಟ್ ಪದವೀಧರರಾಗಿದ್ದರು. ಅನಂತರ ಇವರು 1945ರಲ್ಲಿ ಲಂಡನ್ನಿನ ಟ್ರಿನಿಟಿ ಸಂಗೀತ ಕಾಲೇಜಿನ ಗೌರವ ಫೆಲೊ ಆದರು. ಇವರ ಪಾಂಡಿತ್ಯ ಮತ್ತು ಪ್ರತಿಭೆಗಳನ್ನು ಮನಗಂಡು ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡ್ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್. ಪದವಿ ನೀಡಿ (1936) ಸನ್ಮಾನಿಸಿತು. ಬ್ರಿಟಿಷ್ ಸರ್ಕಾರ ಇವರಿಗೆ 1945 ರಲ್ಲಿ ಜಿ.ಸಿ.ಎಸ್.ಐ. ಬಿರುದನ್ನೂ 1946ರಲ್ಲಿ ಜಿ.ಸಿ.ಬಿ. ಬಿರುದನ್ನೂ ನೀಡಿತು.

ತಮ್ಮ ಕೊನೆಯ ದಿನಗಳನ್ನು ಪುರಾಣ ಮತ್ತು ಧಾರ್ಮಿಕ ಗ್ರಂಥಗಳ ಶ್ರವಣದಲ್ಲೇ ಕಳೆಯುತ್ತಿದ್ದ ಇವರು ಶ್ವಾಸಕೋಶದ ಉರಿಯೂತಕ್ಕೆ ಬಲಿಯಾಗಿ 1974 ಸೆಪ್ಟೆಂಬರ್ 23ರಂದು ಬೆಂಗಳೂರು ಅರಮನೆಯಲ್ಲಿ ನಿಧನರಾದರು.

(ಎ.ವಿ.ವಿ.,ಎಂ.ಜಿ.ಎನ್.)

**ಜಯಚಾಮರಾಜೇಂದ್ರ ಚಿತ್ರಶಾಲೆ :** ಮೈಸೂರು ನಗರದಲ್ಲಿರುವ ಪ್ರಸಿದ್ಧ ಚಿತ್ರಶಾಲೆ. ಇದನ್ನು ಮೊದಲಿಗೆ ಜಗನ್ಮೋಹನ ಚಿತ್ರಶಾಲೆ ಎಂದು ಕರೆಯಲಾಗುತ್ತಿತ್ತು. ಇದಿರುವುದು ಮುಮ್ಮಡಿ ಕೃಷ್ಣರಾಜ ಒಡೆಯರು 1861 ರಲ್ಲಿ ಕಟ್ಟಿಸಿದ ಜಗನ್ಮೋಹನ ಅರಮನೆಯಲ್ಲಿ, ಮೈಸೂರು ಮಹಾರಾಜರುಗಳ ಸತತ ಪ್ರಯತ್ನದಿಂದ ಈ ಚಿತ್ರಶಾಲೆಯಲ್ಲಿ ಉತ್ತಮ ಚಿತ್ರಗಳು ಮತ್ತು ಶಿಲ್ಪಕೃತಿಗಳ ಅಪಾರ ಸಂಗ್ರಹವಿದೆ.

ಚಿತ್ರಶಾಲೆ ಇರುವ ಕಟ್ಟಡ ಎರಡು ಉಪ್ಪರಿಗೆಗಳಿಂದ ಕೂಡಿದೆ. ಕೆಳಭಾಗದಲ್ಲಿ ನಾಲ್ಕು ವಿಶಾಲವಾದ ಹಜಾರಗಳುಂಟು. ಪ್ರತಿಯೊಂದು ಹಜಾರಕ್ಕೂ ಲಗತ್ತಿಸಿದಂತೆ ಎಡಬಲಗಳಲ್ಲಿ ಎರಡೆರಡು ಕೋಣೆಗಳಿವೆ. ಮೊದಲನೆಯ ಮತ್ತು ಎರಡನೆಯ ಉಪ್ಪರಿಗೆಗಳಲ್ಲಿ ಕ್ರಮವಾಗಿ ಮೂರು ಮತ್ತು ಎರಡು ಹಜಾರಗಳು ಮತ್ತು ಅವಕ್ಕೆ ಸೇರಿದಂತೆ ಕಿರು ಕೋಣೆಗಳು ಇವೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿಯೆ ಚಿತ್ರಿಸಲಾದ ಭಿತ್ತಿಚಿತ್ರಗಳನ್ನು ಎರಡನೆಯ ಉಪ್ಪರಿಗೆಯ ಮೂರು ಕೋಣೆಗಳಲ್ಲಿ ಕಾಣಬಹುದು. ಮೊದಲ ಉಪ್ಪರಿಗೆಯ ನೆಲದ ಭಾಗವನ್ನು ಮರದಿಂದ ಅಳವಡಿಸಲಾಗಿದೆ. ಹಿಂದೆ ಇದು ನೃತ್ಯಾಲಯವಾಗಿತ್ತು.

1915ರ ಸುಮಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ ಸವಿನೆನಪಿಗಾಗಿ ಈ ಚಿತ್ರಶಾಲೆಯನ್ನು ವ್ಯವಸ್ಥೆಗೊಳಿಸಲಾಯಿತು. ಇದರಲ್ಲಿ ಆ ವರೆಗೆ ಅರಮನೆಯಲ್ಲಿ ಕಾಲಕಾಲಕ್ಕೆ ಸಂಗ್ರಹವಾಗಿದ್ದ ಕಲಾವಸ್ತುಗಳನ್ನೆಲ್ಲ

ಜಯಚಾಮರಾಜೇಂದ್ರ ಚಿತ್ರಶಾಲೆಯನ್ನು ಒಳಗೊಂಡಿರುವ ಜಗನ್ಮೋಹನ ಅರಮನೆ

ಈ ಚಿತ್ರಶಾಲೆಗೆ ಪ್ರತಿವರ್ಷವೂ ಅನೇಕ ಉತ್ತಮ ಚಿತ್ರಗಳನ್ನು ಕೊಳ್ಳಲಾಯಿತು (1932-37). ಮೆಕ್‌ಆಲ್‌ಫೀ ಎಂಬಾತ ಕನ್ನಡ ಕಲಾವಿದ ಕೆ.ವೆಂಕಟಪ್ಪನವರ ಸಹಾಯದಿಂದ ಸಂಗ್ರಹಾಲಯವನ್ನು ಸುವ್ಯವಸ್ಥೆಗೊಳಿಸಿ ಚಿತ್ರಪಟಗಳನ್ನು ಹೊಸತಾಗಿ ಜೋಡಿಸಿ ಪ್ರದರ್ಶಿಸಿದ. ತಿರುವಾಂಕೂರಿನ ಲಲಿತಕಲಾ ಸಂಸ್ಥೆಯ ಮುಖ್ಯಸ್ಥನಾಗಿದ್ದ ಜೇಮ್ಸ್, ಎಚ್.ಕಜಿನ್ಸ್ ಈ ಚಿತ್ರಶಾಲೆಯ ಅಧಿಕಾರಿಗಳಾಗಿದ್ದ ಮದನಗೋಪಾಲರಾಜ ಅರಸರೊಂದಿಗೆ ಕೆಲಸಮಾಡಿ ಇಲ್ಲಿನ ಕಲಾಕೃತಿಗಳನ್ನು ಮತ್ತೊಮ್ಮೆ ಜೋಡಿಸಿ ಹೊಸ ರೂಪಕೊಟ್ಟ. 1942ರಲ್ಲಿ ಇವನ ಸಂಪಾದಕತ್ವದಲ್ಲಿ ಚಾರಿತ್ರಿಕ ವ್ಯಕ್ತಿಗಳ ರೂಪಚಿತ್ರಗಳ ಪಟ್ಟಿಯೊಂದು ಪ್ರಕಟವಾಯಿತು.

ಈ ಚಿತ್ರಶಾಲೆಯಲ್ಲಿ ಹೈದರ್, ಟಿಪ್ಪು ಮತ್ತು ಇಂಗ್ಲಿಷ್ ಅಧಿಕಾರಿಗಳ ಅನೇಕ ಚಿತ್ರಗಳಿದ್ದವು. ಅವನ್ನೆಲ್ಲ ತೆಗೆದುಕೊಂಡು ಹೋಗಿ ಕಾವೇರಿ ನದಿಯ ತೀರದಲ್ಲಿದ್ದ ಸ್ಕಾಟ್ ಬಂಗಲೆಯ ಚಿತ್ರಶಾಲೆಯಲ್ಲಿ ಪ್ರದರ್ಶಿಸಲಾಯಿತು (1942). ಸ್ಕಾಟ್ ಬಂಗಲೆಯಲ್ಲಿದ್ದ ಚಿತ್ರಗಳೆಲ್ಲ ಮತ್ತೆ ಜಯಚಾಮರಾಜೇಂದ್ರ ಚಿತ್ರಶಾಲೆಗೆ ಮರಳಿ ಬಂದುವು (1950).

ಮೈಸೂರು ದಸರ ಕಲಾಪ್ರದರ್ಶನ ನಡೆಯುತ್ತಿದ್ದಾಗ ಅಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ ಪಡೆದ ಉತ್ತಮ ಚಿತ್ರಗಳನ್ನೂ ಖರೀದಿಸಿ ಚಿತ್ರಶಾಲೆಗೆ ಸೇರಿಸಲಾಯಿತು. ಚಿತ್ರಶಾಲೆಯ ಮೇಲ್ವಿಚಾರಕರಾಗಿ ಬಂದ ಚನ್ನರಾಜ ಅರಸರು ಪುನಃ ಕಲಾಕೃತಿ ಮಾಡಿದರು (1946). ಇದರಿಂದಾಗಿ ಭಾರತದ ಚಿತ್ರಕಲಾ ಸಂಪ್ರದಾಯದ ವಿವಿಧ ರೀತಿಯ ಚಿತ್ರಗಳನ್ನು ವೀಕ್ಷಿಸುವ ಅವಕಾಶ ಏರ್ಪಟ್ಟಿತು.

ನಾಲ್ವಡಿ ಕೃಷ್ಣರಾಜ ಒಡೆಯರ ವಿವಾಹ ಮಹೋತ್ಸವಕ್ಕಾಗಿ ಬಂಗಲೆಯ ಮುಂಭಾಗವನ್ನು ಸಭಾಂಗಣವಾಗಿ ವಿಸ್ತಾರಗೊಳಿಸಲಾಯಿತು (1900). ಅಲ್ಲಿಂದೀಚೆಗೆ ಅಲ್ಲಿ ಪ್ರಜಾಪ್ರತಿನಿಧಿ ಸಭೆಗಳೂ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭಗಳೂ ಅನೇಕವರ್ಷ ಜರುಗುತ್ತ ಬಂದುವು. ನಾಲ್ವಡಿಯವರು ಲಾರ್ಡ್ ಕರ್ಜನ್ನನೊಂದಿಗೆ ದರ್ಬಾರು ನಡೆಸಿದ್ದೂ ಇದೇ ಸಭಾಂಗಣದಲ್ಲಿಯೇ (1902).

ಚಿತ್ರಶಾಲೆಯ ಚಿತ್ರಗಳಿರುವುದು ಸಭಾಂಗಣದ ಹಿಂಬದಿಯ ಮಹಲಿನಲ್ಲಿ. ಇಲ್ಲಿನ ಬಹುಪಾಲು ಚಿತ್ರಗಳು ಕನ್ನಡನಾಡಿನ ಅರಸು ಮನೆತನಕ್ಕೆ ಸೇರಿದವಾಗಿವೆ. ಈ ಕಲಾಗಾರಕ್ಕೆ ಹಾಗೂ ಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದ ರಾಜರಲ್ಲಿ ಮುಮ್ಮಡಿ ಮತ್ತು ನಾಲ್ವಡಿ ಕೃಷ್ಣ ರಾಜರನ್ನು ಹೆಸರಿಸಬೇಕು. ಮುಮ್ಮಡಿ ಕೃಷ್ಣರಾಜರ ಆಳ್ವಿಕೆಯ ಕಾಲದಲ್ಲಿ ಕನ್ನಡದ ಅನೇಕ ಚಿತ್ರಕಾರರು ರಚಿಸಿದ ಭಿತ್ತಿಚಿತ್ರಗಳನ್ನು ಎರಡನೆಯ ಉಪ್ಪರಿಗೆಯಲ್ಲಿ ಕಾಣಬಹುದು. ಇವರ ಕಾಲದ ಚಿತ್ರಕಾರರಲ್ಲಿ ಶಿಕಾರಿಪುರದ ಚಿತ್ರಗಾರ ಮನೆತನದ ತಿಪ್ಪಯ್ಯ, ಮೈಸೂರಿನ ಕೊಂಡಯ್ಯ, ವೀರಣ್ಣ, ಬಸಣ್ಣ, ಯಲ್ಲಪ್ಪ ಮುಂತಾದವರು ಮುಖ್ಯರು. ಇವರ ಅನೇಕ ಚಿತ್ರಗಳು ಈಗಲೂ ಮಾಸದೆ ಚಿರನೂತನವಾಗಿವೆ.

ಕರ್ನಾಟಕದ ಚಿತ್ರಶೈಲಿಯನ್ನು ಮೆರೆಯುವ ಈ ಭಿತ್ತಿಚಿತ್ರಗಳನ್ನು ಗಮನಿಸುವುದು ಇಲ್ಲಿ ಮುಖ್ಯ. ಎರಡನೆಯ ಉಪ್ಪರಿಗೆಯ ಮೂರು ಕೋಣೆಗಳ ಗೋಡೆಗಳೆಲ್ಲ ವರ್ಣಮಯವಾಗಿವೆ. ಎಲ್ಲಿ ನೋಡಿದರಲ್ಲಿ ಮುಮ್ಮಡಿ ಕೃಷ್ಣರಾಜಒಡೆಯರ ಆಳಿಕೆಯ ಸಂಕೇತದ ಚಿತ್ರಗಳೇ ಇವೆ. ಮುಮ್ಮಡಿಕೃಶ್ಣರಾಜ ಒಡೆಯವರ ವಂಶವೃಕ್ಷ ಎಲೆಯಾಕಾರದಲ್ಲಿ ಚಿತ್ರಿತವಾಗಿದೆ. ಆದಿಯಿಂದ ಮುಮ್ಮಡಿಯವರ ವರೆಗಿನ ವಂಶಾವಳಿಯನ್ನು
ನಿರ್ದೇಶಿಸುವ ಸಂತಾನಾಂಬುಜ, ವಿಜ
ಕಟ್ಟಿದ ರಥದಲ್ಲಿ ಮುಮ್ಮಡಿಯವರ
ಕೊತ್ತಾಗಾಲ, ಚಟ್ಟಹಳ್ಳಿಗಳಲ್ಲಿ ನಡೆದ
ಕಾಡಿನಲ್ಲಿ ಪಟ್ಟದಾನೆಯಾದ ಕೆಂಪನಂ
ಚದುರಂಗದಾಟವನ್ನು ಆಡುತ್ತಿರುವ
ಮುಮ್ಮಡಿಯವರು ಆಚರಿಸುತ್ತಿರುವ
ಮುಂತಾದ ಭಿತ್ತಿಚಿತ್ರಗಳಿವೆ. ಮುಮ
ರಾಜಬಂಧುಗಳ ಮತ್ತು ಅಧಿಕಾ
ರಣಜಿತ್‌ಸಿಂಗ್, ನಾನಾ ಫಡ್ನವೀಸ್,
ರಾಜರುಗಳ, ಇತರ ನವಾಬರನೇಕರ
ಬಿಡಿಸಲಾಗಿದೆ. ಪ್ರಸನ್ನಪಾರ್ವತಿ, ದುರದು
ಚಾಮುಂಡಿ, ವರಚಾಮುಂಡಿ, ಚೆಲುವೆ
ವಿಜಯ ಎಂಬ ಪಟ್ಟದ ಕುದುರೆಯನ್ನೂ
ಎಂಬ ಮೋಹಕ ಕನ್ಯೆಯರನ್ನೂ ಇಲ್ಲಿ



ಭಕ್ಷಿ ನರಸಪ್ಪಾಜಿಯವರ ಮಕ್ಕಳಾದ ಚಾಮರಾಜ ಒಡೆಯರವರನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ದತ್ತು ಮಗನಾಗಿ ಸ್ವೀಕರಿಸುತ್ತಿರುವುದು, ಕರ್ನಾಟಕ ಚಿತ್ರಶೈಲಿಯ ಒಂದು ನಿದರ್ಶನ

ಶಿಕಾರಿಪುರದ ತಿಪ್ಪಯ್ಯ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಬಹುಸೂಕ್ಷ್ಮವಾಗಿ ಬಿಡಿಸಿದ (1886) ಭೀಷ್ಮಾರ್ಜುನ ಯುದ್ಧದ ಸುಂದರ ಚಿತ್ರ ಈ ಸಂಗ್ರಹಾಲಯದಲ್ಲಿಯೇ ಅಪರೂಪವಾದದ್ದು.

ದೈವಿಕ ಚಿತ್ರಗಳ ಮೇಲೆ ಚಿತ್ರಕಾರ ತನ್ನ ಹೆಸರನ್ನು ಬರೆದಿರುವುದಿಲ್ಲ. ಅವನ ಹೆಸರು ಸಿಕ್ಕಬೇಕಾದರೇ ಏನಿದ್ದರೂ ಲೌಕಿಕ ಚಿತ್ರಗಳ ಅಡಿಯಲ್ಲಿ ಮಾತ್ರ. ಮುಮ್ಮಡಿಯವರ ಚಿತ್ರಪಟದಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಪಾದಚಾರಕನಾದ ಕೊಂಡಯ್ಯ ಬರೆದು ಒಪ್ಪಿಸಿದ್ದು ಎಂದಿದೆ. ಈ ಚಿತ್ರ ಕೆಳಭಾಗದ ಮೊದಲ ಕೋಣೆಯಲ್ಲಿದೆ. ಇದೇ ಶೈಲಿಯ ಮತ್ತೊಂದು ಹೆಸರಿಸಬಹುದಾದ ಕೃತಿಯೆಂದರೆ ಶಿವ ಎಂಬ ಎರಡು ಕನ್ನಡ ಅಕ್ಷರಗಳನ್ನೂ ರೇಖೆಗಳಾಗಿ ಬಳಸಿಕೊಂಡು ಮುಮ್ಮಡಿ ಭೂಪರು ಸಿಂಹಾಸನಾರೂಢರಾಗಿರುವಂತೆ ಚಿತ್ರಿಸಿರುವುದು ಅತ್ಯಮೋಘವಾಗಿದೆ. ಇದನ್ನು ವೀಕ್ಷಿಸಲು ಭೂತಕನ್ನಡಿಯೇಬೇಕು.

ಮುಮ್ಮಡಿಯವರ ಅನಂತರ ಬಂದ ಚಾಮರಾಜರ ಕಾಲದ ಪ್ರಮುಖ ಕಲಾವಿದರಲ್ಲಿ ಕೆ.ವೆಂಕಟಪ್ಪನವರ ತಾತಂದಿರಾದ ದುರ್ಗದ ವೆಂಕಟಪ್ಪನವರೂ ಒಬ್ಬರು. ಇವರು ರಚಿಸಿದ ಚಿತ್ರಗಳನ್ನು ಇಲ್ಲಿ ಕಾಣಬಹುದು.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೊರೆತ ಕಲಾ ಪ್ರೋತ್ಸಾಹದಿಂದಾಗಿ ಒಳನಾಡು ಹಾಗೂ ಹೊರನಾಡುಗಳಿಂದ ಕಲಾವಿದರು ರಾಜಾಶ್ರಯ ಪಡೆದು ಕಲಾಸೇವೆ ಸಲ್ಲಿಸಿದ್ದಾರೆ. ಇವರ ಕಾಲದಲ್ಲಿ ಪಾಶ್ಚಾತ್ಯ ತಂತ್ರದ ಅನೇಕ ಕೃತಿಗಳು ಬೆಳಕು ಕಂಡವು. ಅವನ್ನು ಬಹುಪಾಲು ಪಾಶ್ಚಾತ್ಯ ಹಾಗೂ ಭಾರತೀಯ ಕಲಾವಿದರು ರಚಿಸಿದ್ದಾರೆ. ರಾಜಾಶ್ರಯ ಪಡೆದ ಹೊರನಾಡಿನ ಕಲಾವಿದರಾದ ಜರ್ಮನಿಯ ಜೆರಾರ್ಡ್‌ಟನ್, ಇಂಗ್ಲೆಂಡಿನ ಸ್ಟರ್ಲಿನ್, ಶಿಲ್ಪಿ ಕೋಲ್‌ಟನ್, ವೆಕ್ಸ್‌ಲರ್, ತಿರುವಾಂಕೂರಿನ ರಾಜಾ ರವಿವರ್ಮ ಮತ್ತು ಅವನ ಸೋದರ ರಾಮವರ್ಮ ಮುಂತಾದವರ ತೈಲವರ್ಣದ ಬೃಹದಾಕಾರದ ಚಿತ್ರಗಳನ್ನು ಇಲ್ಲಿ ನೋಡಬಹುದಾಗಿದೆ. ರಷ್ಯದ

ಹಿಮಾಲಯ: ಜಲವರ್ಣ ಚಿತ್ರ, ಕ

ಇಲ್ಲಿಯ ಕಲಾಕೃತಿಗಳನ್ನು
ತೈಲ ಹಾಗೂ ಜಲವರ್ಣದ ಚಿತ್ರ
ವಸ್ತುನಿಷ್ಠ ಚಿತ್ರಣಗಳು, ಪ್ರಕೃತಿ
ಮರದಲ್ಲಿ, ಅಮೃತ ಶಿಲೆಯಲ್ಲಿ ಕೆ
ವಸ್ತುಗಳು, ಕತ್ತಿ, ಗುರಾಣಿ, ಫಿರಂಗಿ
ಕಲಾವಸ್ತುಗಳು, ಹಿಂದಿನ ಕಾಲದ ವಸ್ತ್ರಾ
ಸಂಗೀತ ವಾದ್ಯಗಳು.

ಸಂಗ್ರಹಾಲಯದ ಕೆಳಭಾಗದ
ಉಪ್ಪರಿಗೆಯ 8 ಕೋಣೆಗಳಲ್ಲೂ ಚಿತ್ರ
ಜಿ. ವೆಂಕಟಾಚಲಂ ಅವರು ಕಲಾವಿದ
ಕಲಾಕೃತಿಗಳನ್ನು ಹೊಸದಾಗಿ ವಿಂಗಡಿಸಿ

ಕೃಷ್ಣದೌತ್ಯ, ರವಿವರ್ಮನ ಕಲಾಕೃತಿ

ಸದಾ ನೆನಪಿನಲ್ಲಿರುವ ಮುಖ್ಯ ಕೃತಿಗಳಲ್ಲಿ ಮುಂಬಯಿಯ ಎಸ್.ಎಲ್.ಹಳ್ದಂಕರ ಅವರು ರಚಿಸಿದ, ಬೆಳಗುವ ದೀಪ ಹಿಡಿದು ನಿಂತ ಯುವತಿಯ ಚಿತ್ರ ಪ್ರಮುಖವಾದದ್ದು. ಇದು ತುಂಬ ಜನಪ್ರಿಯತೆ ಗಳಿಸಿದೆ. ಅಬನೀಂದ್ರನಾಥ ಠಾಕೂರರ ಶಿಷ್ಯರಾದ ಕೆ.ವೆಂಕಟಪ್ಪನವರ ಭಾರತೀಯ ಶೈಲಿಯ ನಾಲ್ಕು ಚಿತ್ರಗಳಲ್ಲಿ ವೀಣೆ ಹುಚ್ಚು ಮತ್ತು ಮಹಾಶಿವರಾತ್ರಿ ಬಹು ಪ್ರಸಿದ್ಧ ಕೃತಿಗಳು. ಇಲ್ಲಿನ ಸೂಕ್ಷ್ಮ ಕುಸುರಿ ಕಲೆಗಾರಿಕೆ, ವರ್ಣಸಂಯೋಜನೆ ಅಪ್ರತಿಮವಾದುದು.

ರಾಜಾ ರವಿವರ್ಮನ ಬೃಹದಾಕಾರದ ಚಿತ್ರಗಳು ಇಲ್ಲಿವೆ. ಈತ ಪಾಶ್ಚಾತ್ಯ ಸಂಪ್ರದಾಯದಲ್ಲಿ ಹೆಸರಾದ ಭಾರತದ ಕಲಾವಿದ. ಇಲ್ಲಿರುವ ಇವನ ಹದಿನಾರು ಪೌರಾಣಿಕ ಹಾಗೂ ಚಾರಿತ್ರಿಕ ತೈಲವರ್ಣದ ಚಿತ್ರಗಳು ಕಲಾಪ್ರೇಮಿಗಳ ಹೃದಯವನ್ನು ಸೂರೆಗೊಂಡಿವೆ. ಎರಡನೆಯ ಉಪ್ಪರಿಗೆಯ ಹಿಂಬದಿಯ ಹಜಾರದಲ್ಲಿರುವ ಬೆಳದಿಂಗಳ ಮೋಹಿನಿ, ಮಲಬಾರ್ ಹೆಣ್ಣು, ಹಾಲು ಕುಡಿಯುವ ಮಗು, ದಾನ ಮಾಡುವ ಸ್ತ್ರೀ, ಶ್ರೀರಾಮನ ಸಾಗರದರ್ಪಹರಣ, ಕೀಚಕನ ಮನೆಯತ್ತ ಸಾಗಿರುವ ದ್ರೌಪದಿ ಸೈರಂಧ್ರಿ, ಪತ್ರಲೇಖೆ, ಶಕುಂತಲ, ಮತ್ಸ್ಯಗಂಧಿ, ಹಂಸಗೀತೆ, ಜಟಾಯು ವಧೆ, ಇಂದ್ರಜಿತು ವಿಜಯ, ಕೃಷ್ಣದೌತ್ಯ, ರಾಮಬಲರಾಮ ಮುಂತಾದ ಚಿತ್ರಗಳು ಅಮೋಘವಾಗಿವೆ. ಹರಿಶ್ಚಂದ್ರ ತನ್ನ ಮಡದಿ ಮಕ್ಕಳನ್ನು ಮಾರುವ ದೃಶ್ಯದ ಚಿತ್ರವನ್ನು ರಚಿಸಿದವ ರಾಮವರ್ಮ.

ಚಿತ್ರಶಾಲೆಯ ಎಡಭಾಗದ ಮಹಾದ್ವಾರವನ್ನು ಪ್ರವೇಶಿಸಿದಾಗ ಮುಮ್ಮಡಿಯವರ ಹುಟ್ಟು ಹಬ್ಬದ ಮತ್ತು ಚಾಮರಾಜರ ದಸರ ಮೆರವಣಿಗೆಯ ಚಿತ್ರಗಳು ಕಾಣುತ್ತವೆ. ನಾಲ್ವಡಿಯವರ ದರ್ಬಾರು ಚಿತ್ರವೂ

ಬೆಳ್ಳಿಯ ಮೇಲೆ, ಗಾಜಿನ ಮೇಲೆ
ಉಬ್ಬುಚ್ಚಿನ ಚಿತ್ರಗಳೂ ಆಕರ್ಷಕವಾಗಿವೆ

ಸಭಾಂಗಣದ ನಡುವೆ ರ
ಕೃತಿಗಳಿವೆ. ಪಕ್ಕದಲ್ಲೇ ಹೈದರ್, ಟಿ
ಹಾಗೂ ಛಾಯಾಚಿತ್ರಗಳೂ ಮೈಸೂ
ಮುಂತಾದ ಅರಸರ ಛಾಯಾಚಿತ್ರಗಳೂ

ಚತುರ್ಮುಖ ಬ್ರಹ್ಮ (ಚಂದನ ಕೃತಿ), ಸೊರಬದ ಗುಡಿಗಾರ ವಾಮನಪ್ಪನವರ ಕಲಾಕೃತಿ

ಮೊದಲ ಒಳಾಂಗಣಕ್ಕೆ ಬಂದರೆ ಅಲ್ಲಿ ಮೈಸೂರಿನ ರಾಜರುಗಳ ಬೃಹದಾಕಾರದ ತೈಲವರ್ಣದ ಚಿತ್ರಗಳೂ ಕೆಲವು ಅಮೃತಶಿಲೆಯಲ್ಲಿನ ಅರ್ಧ ದೇಹಾಕೃತಿಗಳೂ ಜೊತೆ ಜೊತೆಯಾಗಿ ಕನ್ನಡ ಕಲಾವಿದರು ರಚಿಸಿರುವ ರೂಪಚಿತ್ರಗಳೂ ಇವೆ. ಪ್ರಸಿದ್ಧ ಆಂಗ್ಲ ಚಿತ್ರಕಾರ ಸ್ಟರ್ಲಿಂಗ್ ರಚಿಸಿದ ಮುಮ್ಮಡಿಯವರೊಡನೆ ಇಂಗ್ಲಿಷರ ದರ್ಬಾರು ಚಿತ್ರ (1853) ಸೊಗಸಾಗಿದೆ. ಚಿತ್ರಕಾರ ತನ್ನನ್ನೂ ಈ ಚಿತ್ರದಲ್ಲಿ ರೂಪಿಸಿಕೊಂಡಿರುವುದು ಇಲ್ಲಿನ ಒಂದು ವೈಶಿಷ್ಟ್ಯ.

ಮತ್ತೊಂದು ಒಳಾಂಗಣದಲ್ಲಿ ಖ್ಯಾತ ಚಿತ್ರಕಾರರಾದ ವೈಕ್ಸ್‌ಲರ್ ಮತ್ತು ಜರಾಲ್ಡೀನ್ ರಚಿಸಿದ ನಾಲ್ವಡಿಯವರ ಚಿತ್ರಗಳು ಅಮೋಘವಾಗಿವೆ. ಉಡ್‌ವಿಲ್ ಎಂಬ ಚಿತ್ರಕಾರ ಚಾಮರಾಜ ಒಡೆಯರ ಹುಟ್ಟುಹಬ್ಬದ ಮೆರವಣಿಗೆಯ ಚಿತ್ರವನ್ನು ರಚಿಸಿದ್ದಾನೆ. ಚಾಮರಾಜರ ಪಟ್ಟಾಭಿಷೇಕದ ಚಿತ್ರರಚಿಸಿದ ಕಲಾವಿದ ಕರ್ನಾಟಕದ ವೆಂಕಟಸುಬ್ಬಯ್ಯ. ಅಜೀಜ್, ಕೇಶವಯ್ಯ, ನಾಗರಾಜು, ರಾಮನರಸಯ್ಯ ಮುಂತಾದವರೂ ರಾಜರುಗಳ ಚಿತ್ರಗಳನ್ನು ಬರೆದಿದ್ದಾರೆ. ನಾಲ್ವಡಿ ಕೃಷ್ಣರಾಜರ ವಿವಾಹ ಮಹೋತ್ಸವದ (1910) ಚಿತ್ರವನ್ನು ವೈಕ್ಸ್‌ಲರ್ ತುಂಬ ಶ್ರಮದಿಂದ ಸ್ವಾಭಾವಿಕವಾಗಿ ರೂಪಿಸಿದ್ದಾನೆ.

ಕೆಳಗಿನ ಮೂರನೆಯ ಒಳಾಂಗಣದಲ್ಲಿ ಪಾಶ್ಚಾತ್ಯ ತಂತ್ರದ ಅನೇಕ ತೈಲವರ್ಣ ಚಿತ್ರಗಳಿವೆ, ಗಾಜಿನ ಕಲಾವಸ್ತುಗಳಿವೆ, ಮಣ್ಣಿನ ಪ್ರತಿಮೆಗಳಿವೆ. ಆನೆಗಳನ್ನು ಹಿಡಿಯುವ ಖೆಡ್ಡದ ಮೂರು ಚಿತ್ರಗಳನ್ನು ರಾಮವರ್ಮ ರಚಿಸಿದ್ದಾನೆ. ಸೈನ್ಯಾಧಿಕಾರಿ ಸ್ಕಾಟ್, ರೆಂಬ್ರಾಂಟ್, ಗ್ಲಾಡ್‌ಸ್ಟನ್, ಜೇಮ್ಸ್ ಗೋರ್ಡನ್ ಮತ್ತು ವೆಲ್ಲೆಸ್ಲಿ ಮುಂತಾದವರ ರೂಪಚಿತ್ರಗಳಿವೆ. ವಿಶ್ವವಿಖ್ಯಾತ ಕಲಾವಿದ ಟಿಷನ್ ಹಾಗೂ ರೂಬನ್ಸರ ಚಿತ್ರಗಳೂ ಇಲ್ಲಿವೆ. ರೆಂಬ್ರಾಂಟನ ಚಿತ್ರಗಳನ್ನು ಕಲಾವಿದ ಎನ್.ಜಿ.ಪಾವಂಜೆ ಸ್ವಾಭಾವಿಕವಾಗಿ ನಕಲು ಮಾಡಿದ್ದಾರೆ. ಅವೂ ಇಲ್ಲಿವೆ. ಈ ಒಳಾಂಗಣಕ್ಕೆ ಲಗತ್ತಿಸಿರುವ ಸುಮಾರು ಏಳು ಕೋಣೆಗಳಲ್ಲಿ ರರಿಕ್ ಅವರ ಚಿತ್ರಗಳನ್ನೂ ರಜಪೂತ, ಮೊಗಲ್ ಶೈಲಿಯ, ಕನ್ನಡ ಶೈಲಿಯ ಚಿತ್ರಗಳನೇಕವನ್ನೂ ಕಾಣಬಹುದು. ರರಿಕ್ ಅವರ ಚಿತ್ರಗಳ ಕೋಣೆಯಲ್ಲಿ ಹಿಮಾಲಯ, ಲಡಾಕ್ ಪ್ರದೇಶದ ಆರು ಪ್ರಕೃತಿ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ರಜಪೂತ ಮತ್ತು ಮೊಗಲ್ ತಂತ್ರದ ಮೂವತ್ತೆರಡು ಚಿತ್ರಗಳನ್ನು ಹಿಂಬದಿಯ ಕೋಣೆಯಲ್ಲಿರಿಸಲಾಗಿದೆ.

ಕೆಳಗಡೆಯ ಮೊದಲ ಹಜಾರದ ಬಲಕೋಣೆಗೆ ಬಂದು ಅಲ್ಲಿನ ಹಂತಗಳನ್ನು ಏರಿ ಮೇಲುಪ್ಪರಿಗೆಗೆ ಹೋಗುವಾಗ ಹದಿನೈದು ಜಲವರ್ಣದ ನಿಸರ್ಗ ಚಿತ್ರಗಳನ್ನು ಕಾಣಬಹುದು. ಲಖನೌ, ಗುಜರಾತ್, ಮದರಾಸು, ಆಂಧ್ರ, ಶಾಂತಿನಿಕೇತನ, ನವದೆಹಲಿ, ಕೋಲ್ಕತ, ಕೇರಳ, ಅಜ್ಮೀರ್, ಬೆಂಗಳೂರು ಮತ್ತು ಮೈಸೂರು ಮುಂತಾದ ಕಡೆಯ ಪ್ರಖ್ಯಾತ ಕಲಾವಿದರಿಂದ ರಚಿತವಾದ 101 ಚಿತ್ರಗಳು ಮೊದಲ ಉಪ್ಪರಿಗೆಯಲ್ಲಿವೆ. ಇವುಗಳಲ್ಲಿ ಚಾರಿತ್ರಿಕ ಸಂಯೋಗ ಚಿತ್ರಗಳು ಹೆಚ್ಚಿನವು. ಕೆಲವು ಪ್ರಕೃತಿ ಚಿತ್ರಗಳು.

ಕೆ.ವೆಂಕಟಪ್ಪನವರ ಐದು ಚಿತ್ರಗಳಿಗೇ ಒಂದು ಕೋಣೆ ಮೀಸಲಾಗಿದೆ. ಅಲ್ಲಿ ಬಂಗಾಲಿ ಶೈಲಿಯ ಭಾರತೀಯ ಸಂಪ್ರದಾಯದ ಚಿತ್ರಗಳೂ ಕೆಲವಿವೆ. ಶಾಂತಿನಿಕೇತನದ ಗಗನೇಂದ್ರನಾಥ ಠಾಕೂರ್, ಅಬನೀಂದ್ರನಾಥ್ ಠಾಕೂರ್, ಬ್ಯಾನರ್ಜಿ ಮತ್ತು ಕೋಲ್ಕತದ, ಪ್ರಮೋದಕುಮಾರ ಚಟರ್ಜಿಯವರಿಂದ ರೂಪಿತವಾದ ಚಿತ್ರಗಳಿವು.

ಕರ್ನಾಟಕದ ಕಲಾವಿದರ ಕೃತಿಗಳಿಗೇ ಒಂದು ಪ್ರತ್ಯೇಕ ಕೋಣೆ ಇದೆ. ಮುಂಬಯಿಯ ಎಸ್.ಎಲ್.ಹಲ್ದಂಕರರ ಪ್ರಸಿದ್ಧ ಕೃತಿ ಬೆಳಗುವ ದೀಪ ಹಿಡಿದಿರುವ ಸ್ತ್ರೀ ಬಿಟ್ಟರೆ ಉಳಿದ ಚಿತ್ರಗಳೆಲ್ಲ ಕೇಶವಯ್ಯ, ಸುಬ್ಬಕೃಷ್ಣ, ರಾಮಚಂದ್ರ, ವೀರಪ್ಪ, ಪಿ.ಆರ್.ತಿಪ್ಪೇಸ್ವಾಮಿ, ರಾಮನರಸಯ್ಯ ಮುಂತಾದವರವು.

ಪಾರಸಿ ಸಂಪ್ರದಾಯದ ಚಿತ್ರ ರಚಿಸುವ ಲಖನೌನ ರಹಮಾನ್ ಚುಗ್ತಾಯ್‌ನ ಒಂಬತ್ತು ಚಿತ್ರಗಳು ಬೇರೊಂದು ಕೋಣೆಯಲ್ಲಿವೆ.

ಅನಂತರ ರಂಗಮಹಲಿಗೆ ಬರುವಾಗ ಹಂತಗಳ ಕೋಣೆಯ ಗೋಡೆಯಲ್ಲಿ ತೂಗುವ ಹದಿನಾರು ಜಲವರ್ಣದ ಕೃತಿಗಳನ್ನು ಮರೆಯುವಂತಿಲ್ಲ. ಮಹಲಿಗೆ ಕಾಲಿಟ್ಟೊಡನೆ ವಿವಿಧ ಸಂಗೀತ ವಾದ್ಯಗಳನ್ನು ನೋಡುತ್ತೇವೆ. ಅದರ ಪಕ್ಕದ ಸಭಾಂಗಣದ ಭಿತ್ತಿಗಳೆಲ್ಲ ಕರ್ನಾಟಕ ಶೈಲಿಯ ಚಿತ್ರಗಳಿಂದ ತುಂಬಿಹೋಗಿವೆ. ಅಲ್ಲದೆ ಅಲ್ಲಿ ರಾಜರುಗಳು ವಿನೋದಕ್ಕಾಗಿ ಇಸ್ಪೀಟಿನಂತೆ ಆಡಲು ಬಳಸುತ್ತಿದ್ದ ಗಂಜೀಫಿನ ಎಲೆಗಳಿವೆ.

ಉಪ್ಪರಿಗೆಯಿಂದ ಕೆಳಭಾಗದ ಹಿಂಬದಿಯ ನಾಲ್ಕನೆಯ ಗಾಜಿನ ಪಡಸಾಲೆಯಲ್ಲಿ ಅನೇಕ ಕಲಾತ್ಮಕವಾದ ಕಂಚು, ಹಿತ್ತಾಳೆ, ತಾಮ್ರ, ಗಂಧ, ಮತ್ತು ದಂತದ ವಸ್ತುಗಳಿವೆ. ಕೆಲವು ಅಪರೂಪದ ಕರಕುಶಲ ವಸ್ತುಗಳನ್ನು ಇಲ್ಲಿ ಹೆಸರಿಸಬಹುದು. ತಂಜಾವೂರಿನ ಕಡೆಯ ತಾಮ್ರದ ತಟ್ಟೆಯೊಂದರಲ್ಲಿ ಮಹಾಭಾರತದ ದೃಶ್ಯವನ್ನು ಉಬ್ಬುಚ್ಚಿನಲ್ಲಿ ಬಿಡಿಸಿದ್ದಾರೆ. ದ್ರೌಪದಿ ಕಲ್ಯಾಣ,
ಪಗಡೆಯಾಟ, ಅಶ್ವಮೇಧಯಾಗ,
ಕರ್ಣಾರ್ಜುನರ ಯುದ್ಧ ಇವನ್ನು
ರೂಪಿಸಿದ್ದಾರೆ. ಅನೇಕ ಹಿತ್ತಾಳೆಯ ದ

ದಂತದ ಕೃತಿಗಳಲ್ಲಿ ಆನೆ,
ಹಸು, ಎಮ್ಮೆ ಮುಂತಾದ ಪ್ರಾಣಿ
ಫಿರಂಗಿ, ಭರಣಿ, ಪಗಡೆ ಆಟದ ವಸ್ತು
ಚಾಮುಂಡೇಶ್ವರಿ, ಶ್ರೀರಾಮ ಮುಂತಾ
ಬಾಚಣಿಗೆ, ಸೀರಣಿಗೆಗಳನ್ನೂ ನೋಡಬ
ದಂತದ ಫಲಕದ ಮೇಲೆ ಮೈಸೂರಿನ
ರೂಪಚಿತ್ರಗಳನ್ನು ಬಿಡಿಸಿದ್ದಾರೆ.
ರಾಮರಾವಣರ ಯುದ್ಧ, ಕೈಲಾಸದ
ಮೋಕ್ಷ, ಶೇಷಶಯನ, ಮಾರ್ಕಂ
ಮುಂತಾದುವು ಅತ್ಯಂತ ಕುಸುರಿ ಕೆ
ಕೀರ್ತಿಯನ್ನು ಬೆಳಗುವಂತಿವೆ. ಒಂದು
ವಿಶ್ವವನ್ನೇ ಸೃಷ್ಟಿಸಲಾಗಿದೆ. ತಾಂಡವನ
ಮೋಹಕ ಕೃತಿಗಳಾಗಿವೆ.

ಹಂಪೆಯ ಕಾವಲು ಗೋಪುರ: ಪಿ.ಆರ್.ತಿಪ್ಪೇಸ್ವಾಮಿಯವರ ಜಲವರ್ಣಚಿತ್ರ

ಸೀಸೆಯೊಂದರಲ್ಲಿ ಮಂದಹಾಸದಲ್ಲಿ ಕುಳಿತ ರಾಜನ ಪ್ರತಿಮೆ ಇದೆ. ಒಂದೊಂದು ಅಕ್ಕಿಕಾಳಿನ ಮೇಲೆ ಒಂದೊಂದರಂತೆ ಶಿವಾಜಿ, ಗಾಂಧಿ, ಕೃಷ್ಣ, ಈಶ್ವರ, ಲಕ್ಷ್ಮೀ, ಸರಸ್ವತಿ, ತಾಜಮಹಲ್ ಮತ್ತು ನವಿಲುಗಳನ್ನು ವರ್ಣಗಳಲ್ಲಿ ಚಿತ್ರಿಸಲಾಗಿದೆ. ಇವು ಕೃಷ್ಣಗಿರಿಯ ವೈದ್ಯನಾಥನ ಕುಸುರಿ ಕೆಲಸ.

ಗಂಧದಲ್ಲಿ ಸೀತಾಪಂಚವಟಿ, ಕೃಷ್ಣಜಲಕ್ರೀಡೆಗಳನ್ನು ಸೊಗಸಾಗಿ ರಚಿಸಿದವ ಸೊರಬದ ಸಿದ್ಧಾಪುರ ತಿಮ್ಮಣ್ಣ. ಅಹಲ್ಯಾ ಶಾಪವಿಮೋಚನೆ, ಭಗವದ್ಗೀತೆ, ಚಾಮುಂಡೇಶ್ವರಿ, ಚತುರ್ಮುಖ ಬ್ರಹ್ಮ ಕೃತಿಗಳನ್ನು ಸೊರಬದ ಗುಡಿಗಾರ ವಾಮನಪ್ಪ, ಎಚ್.ವೆಂಕಟಪ್ಪ ಮುಂತಾದವರು ಸುಂದರವಾಗಿ ರಚಿಸಿದ್ದಾರೆ.

ಇಲ್ಲಿನ ಈಶ್ವರ, ವಿಷ್ಣು, ಬ್ರಹ್ಮ ಮೊದಲಾದ ನೇಪಾಳದ ಕೃತಿಗಳು ನವರತ್ನದಲ್ಲಿ ರಚಿತವಾಗಿವೆ.

ಚಿತ್ರಶಾಲೆಯ ಹಿಂಬದಿಯ ಹಳೆಯ ಕೋಣೆಯಲ್ಲಿ ಮೈಸೂರು ಅರಮನೆಯ ಅಮೃತಶಿಲೆಯ ಮಾದರಿಯೊಂದಿದೆ. ಅನೇಕ ಮರದ ಮೂರ್ತಿಗಳೂ ಇವೆ. ಲಾರ್ಡ್ ಡಾಲ್‌ಹೌಸಿ ಮೈಸೂರು ಅರಸರಿಗೆ ಕಳುಹಿಸಿದ ಟಿಪ್ಪುವಿನ ಮಡದಿಯ ಮರದ ಮೇನೆಯೊಂದನ್ನು ಇಲ್ಲಿರಿಸಲಾಗಿದೆ. ಮೈಸೂರಿನ

ರಾಜರು ಉಪಯೋಗಿಸಿ ಮೆರೆದ ನೂರ ಎರಡು ವಿವಿಧಾಕಾರದ ಸುಂದರ ಕಲಾತ್ಮಕ ಕೈಚಿತ್ರಗಳಿವೆ. ಚಾಮುಂಡೇಶ್ವರಿಯ ಮರದ ರಥದ ಮಾದರಿಯೂ ಇಲ್ಲಿದೆ. ರಾಜರು ಉಪಯೋಗಿಸಿದ ಕಾಶ್ಮೀರಿ ಶಾಲುಗಳೂ ಮೊಸಳೆಯ ಚರ್ಮದಲ್ಲಿ ಮಾಡಿದ ಚಾಮುಂಡಿ ಪಾದದ ಕೃತಿಯೂ ಇದೆ. ಚಿತ್ರ ಕೊರೆತದ ತೆಂಗಿನ ಕರಟ, ನಾನಾ ಆಕಾರದ ರೂಪದ ಕತ್ತಿಗಳು, ಗುರಾಣಿಗಳು, ಬಂದೂಕುಗಳು, ಇತರ ಆಯುಧಗಳು, ಗಂಟೆಗಳು ಇಲ್ಲಿ ಕಾಣಸಿಗುತ್ತವೆ. ಇದರ ನೆರೆಯ ಕೋಣೆಯಲ್ಲಿ ಪೂಜಾಮಂದಿರವಿದೆ. ಅದರ ಬಿತ್ತಿಗಳಲ್ಲಿ ಶಾಸ್ತ್ರೀಯ ರೀತಿಯಲ್ಲಿ ಅನೇಕ ದೇವರುಗಳನ್ನು ಚಿತ್ರಿಸಲಾಗಿದೆ.

ಈ ಚಿತ್ರಶಾಲೆ ಮೈಸೂರಿಗೆ ಬರುವ ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಲ್ಲೊಂದಾಗಿದೆ.

*

**ಜಯತೀರ್ಥ** : ಪ್ರಸಿದ್ಧ ವಿದ್ವಾಂಸ, ವೇದಾಂತಿ. ಬ್ರಹ್ಮಸೂತ್ರಗಳಿಗೆ ಮಧ್ವಾಚಾರ್ಯರು ಬರೆದ ಮಹಾಭಾಷ್ಯವನ್ನು ಸಮಂಜಸವಾಗಿ ಅರ್ಥಮಾಡಿಕೊಳ್ಳಲು ಇವರು ಬರೆದ ತತ್ತ್ವಪ್ರಕಾಶಿಕಾದಿ ವ್ಯಾಖ್ಯಾನಗಳಿಗೇ ಮೊರೆಹೋಗಬೇಕು. ಹೀಗಾಗಿ ಇವರು ಟೀಕಾಚಾರ್ಯ ಎಂಬ ಹೆಸರಿನಿಂದಲೂ ಜನಪ್ರಿಯರಾಗಿದ್ದಾರೆ. ಮಧ್ವವೇದಾಂತದಲ್ಲಿ ಪ್ರವೇಶ ಪಡೆಯುವುದಕ್ಕೆ ಮಹಾದ್ವಾರವಿದ್ದಂತಿದೆ ಇವರ ಪ್ರಮಾಣ ಪದ್ಧತಿ ಎಂಬ ಗ್ರಂಥ. ತತ್ತ್ವವಾದದಲ್ಲಿ ಸಾಮರ್ಥ್ಯ ಸಂಪಾದನೆಗೆ ಇವರ ವಾದಾವಳಿ ಎಂಬ ಗ್ರಂಥ ಸಹಾಯಕವಾಗಿದೆ. ಶ್ರೀಮನ್ ನ್ಯಾಯಸುಧಾ ಇವರ ಬೃಹದ್‌ಗ್ರಂಥ. ಮಾಧ್ವದ್ವೈತ ವೇದಾಂತದ ಪರಮ ಸಮರ್ಥನಾತ್ಮಕವಾದ ವ್ಯಾಖ್ಯಾನ ಗ್ರಂಥವಿದು. ತಾವು ಶಬ್ದಾಬ್ಧಿಯ ಗಾಢತೆಯನ್ನೂ ನಿಗಮಚರ್ಚಾ ಚಾತುರ್ಯವನ್ನೂ ನ್ಯಾಯ ಪ್ರೌಢಿಮೆಯನ್ನೂ ಹೆಚ್ಚಾಗಿ ಸಂಪಾದಿಸಿದವರಲ್ಲವೆಂದು ಜಯತೀರ್ಥರು ಹೇಳಿಕೊಂಡಿರುವರಾದರೂ ಇವರ ಗ್ರಂಥ ಇವೆಲ್ಲದರಲ್ಲಿಯೂ ಇವರಿಗಿದ್ದ ಪ್ರಕಾಂಡ ಪಾಂಡಿತ್ಯ, ಸಾಮರ್ಥ್ಯಗಳಿಗೆ ಸಾಕ್ಷಿಯಾಗಿದೆ.

ಇವರು ಸು.14ನೆಯ ಶತಮಾನದವರು. ಮಹಾರಾಷ್ಟ್ರದ ಅಂಚಿನಲ್ಲಿ ಇರುವ ಮಂಗಳವೇಡೆ ಗ್ರಾಮದ ದೇಶಪಾಂಡೆ ಮನೆತನದಲ್ಲಿ ಜನಿಸಿದರು. ಧೋಂಡೂಪಂತ ಇವರ ಬಾಲ್ಯನಾಮ. ತಂದೆ ರಘುನಾಥರಾಯ. ಶ್ರೀಮಂತಿಕೆ ಮತ್ತು ರಾಜಕೀಯ ಅಧಿಕಾರಗಳು ಹೇರಳವಾಗಿದ್ದ ಮನೆಯಲ್ಲಿ ಬೆಳೆದವರಾಗಿ ಇವರು ಸ್ವೇಚ್ಛೆಯಾಗಿ ಉಂಡು ತಿಂದು, ಕುದುರೆ ಸವಾರಿ, ಓಡಾಟಗಳಲ್ಲಿ ಕಾಲಕಳೆಯುತ್ತ ದೊಡ್ಡವರಾದರು. ಒಮ್ಮೆ, ಮದುವೆಯಾದ ಹೊಸದರಲ್ಲಿ ಕುದುರೆ ಸವಾರಿ ಹೊರಟ ಇವರಿಗೆ ಭೀಮಾನದಿಯನ್ನು ತಲಪುವ ಹೊತ್ತಿಗೆ ಮಧ್ಯಾಹ್ನವಾಗಿ ಬಾಯಾರಿಕೆ ಯಾಯಿತಂತೆ. ಭೀಮಾನದಿಯಲ್ಲಿ ಕುದುರೆಯನ್ನು ಈಜುಬಿಟ್ಟು ಕುದುರೆ ಮುಳುಗುವಷ್ಟು ಬಂದ ನದೀ ಪ್ರವಾಹಕ್ಕೆ ಬಾಯಿ ಹಚ್ಚಿ ನೀರು ಕುಡಿಯಲಾರಂಭಿಸಿದರಂತೆ. ಎದುರು ದಡದಲ್ಲಿ ಕುಳಿತು ಇದನ್ನೆಲ್ಲ ನೋಡುತ್ತಿದ್ದ ವೃದ್ಧ ತಾಪಸ ಯತಿ ಅಕ್ಷೋಭ್ಯತೀರ್ಥ ಇವರು ಕೂಗಿ ಕರೆದು ಕಿಂ ಪಶುಃ ಪೂರ್ವದೇಹೇ - ಹಿಂದಿನ ಜನ್ಮದಲ್ಲಿ ನೀನು ಪಶುವೇನಾದರೂ ಆಗಿದ್ದೆಯಾ ಎಂದು ಕೇಳಿದನಂತೆ. ಈ ಪ್ರಶ್ನೆ ಇವರ ಜಾಗ್ರತಿಗೆ ಕಾರಣವಾಯಿತು. ಹಿಂದಿನ ಜನ್ಮದಲ್ಲಿ ತಾವು ಮಧ್ವಾಚಾರ್ಯರ ಗ್ರಂಥಭಾರವನ್ನು ಹೊತ್ತ ಎತ್ತು ಎಂಬ ಭಾವ ಸ್ಫುರಿಸಿ ತಮ್ಮ ಮೇಲೆ ದ್ವೈತ ವೇದಾಂತ ಜ್ಞಾನಸಂಪಾದನೆ ಹಾಗೂ ಸಮರ್ಥನೆಗಳ ಭಾರವಿದೆಯೆಂಬ ಪ್ರಜ್ಞೆ ಉದಯವಾಯಿತು. ಯತಿಯ ಸಾನ್ನಿಧ್ಯ ತರುಣರಾದ ಇವರನ್ನು ಪೂರ್ಣ ಪರಿವರ್ತಿಸಿತು. ಗೃಹಸ್ಥ ಜೀವನವನ್ನು ತ್ಯಜಿಸಿ ಅಕ್ಷೋಭ್ಯ ತೀರ್ಥರಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿ ವೇದಾಂತಾಧ್ಯಯನದಲ್ಲಿ ತೊಡಗಿದರು.

ಮಧ್ವಾಚಾರ್ಯರ ನಾಲ್ಕು ಜನ ಪ್ರಮುಖ ಶಿಷ್ಯರಲ್ಲಿ ಒಬ್ಬರಾದ ಅಕ್ಷೋಭ್ಯತೀರ್ಥರ ಗರಡಿಯಲ್ಲಿ ತಯಾರಾದ ಇವರು ಅವರನ್ನು ಮೀರಿಸಿದರು. ಇವರಿಬ್ಬರೂ ಪ್ರಖ್ಯಾತ ಅದ್ವೈತ ಯತಿಗಳಾದ ವಿದ್ಯಾರಣ್ಯರ ಸಮಕಾಲೀನರು. ಇಬ್ಬರೂ ವಿದ್ಯಾರಣ್ಯರೊಂದಿಗೆ ಶಾಸ್ತ್ರಾರ್ಥ ವಿಚಾರಗಳನ್ನು ಚರ್ಚಿಸಿದಂತೆ ಉಲ್ಲೇಖಗಳೂ ಆಖ್ಯಾಯಿಕೆಗಳೂ ಇವೆ.

ಇವರು ಹೈದರಾಬಾದು ಹಾಗೂ ಮಹಾರಾಷ್ಟ್ರ ವಿಭಾಗಗಳಲ್ಲಿ ದ್ವೈತಮತ ಹಾಗೂ ಭಕ್ತಿಮಾರ್ಗ ಪ್ರಚಾರಕ್ಕೆ ಕಾರಣರಾದರು. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಕಾಗಿಣನದಿಯ ತೀರದಲ್ಲಿ ಇದ್ದ ಮಳಖೇಡ, ರಾಷ್ಟ್ರಕೂಟರ ಕಾಲದ ಮಾನ್ಯಖೇಟ ಇವರ ಕಾರ್ಯ ಕೇಂದ್ರವಾಗಿತ್ತು.

ರಾಷ್ಟ್ರಕೂಟರ ಕಾಲದಲ್ಲಿ ಪ್ರಸಿದ್ಧಿ ಪಡೆದ ಮಾನ್ಯಖೇಟ ಮಳಖೇಡವಾಗಿ ಮತ್ತೊಮ್ಮೆ ಪ್ರಸಿದ್ಧಿ ಪಡೆದುದು ಇವರಿಂದ. ಅಲ್ಲಿನ ಕಾಗಿಣನದಿಯ ದಂಡೆಯ ಮೇಲೆ ಇವರ ವೃಂದಾವನ ಇದೆ. ಇವರು ಕುಳಿತು ಗ್ರಂಥರಚನೆ ಮಾಡುತ್ತಿದ್ದ ಗುಹೆಯೊಂದು ಗುಲ್ಬರ್ಗ ಜಿಲ್ಲೆ ಯಾದಗಿರಿ ತಾಲ್ಲೂಕಿನ ಯರಗೋಳವೆಂಬ ಗ್ರಾಮದ ಹತ್ತಿರದ ಮರಡಿಯ ಮೇಲೆ ಇದೆ. ಮಳಖೇಡದಲ್ಲಿ ಈಗಲೂ ಪುಣ್ಯತಿಥಿಯನ್ನು ಟೀಕಾರಾಯರ ಪಂಚಮಿಯೆಂದು ಪ್ರತಿವರ್ಷ ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುತ್ತದೆ. *

**ಜಯತೀರ್ಥ ರಾಜಪುರೋಹಿತ** : 1925-86. ಆಡಳಿತ ಹಾಗೂ ಸಾಹಿತ್ಯರಚನೆ ಎರಡೂ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಕರ್ನಾಟಕದ ಐ.ಎ.ಎಸ್. ಅಧಿಕಾರಿ. ಕನ್ನಡ ಅಭಿವೃದ್ಧಿಗಾಗಿ ಹಾಗೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ದಿಕ್ಕಿನಲ್ಲೂ ಇವರ ಕೊಡುಗೆ ಅಪಾರವಾದುದು.

ಗಂಗಾವತಿ ತಾಲ್ಲೂಕಿನ ಕನಕಗಿರಿ ಗ್ರಾಮ ಇವರ ಪೂರ್ವಜರ ಸ್ಥಳ. ಇದು ವಿಜಯನಗರ ಸಾಮ್ರಾಜ್ಯದ ಪತನಾನಂತರ ಒಂದು ಸಣ್ಣ ಪಾಳೆಯಪಟ್ಟಾಗಿತ್ತು. ಈ ಸಂಸ್ಥಾನಕ್ಕೆ ಗುಜ್ಜಲು ವಂಶದವರು ಒಡೆಯರು. ಈ ನಾಯಕರ ರಾಜಮನೆತನಕ್ಕೆ ಜಯತೀರ್ಥರ ಪೂರ್ವಜರು ರಾಜಪುರೋಹಿತರಾಗಿದ್ದರು. ಜಯತೀರ್ಥರದು ಆಗರ್ಭಶ್ರೀಮಂತ ಮನೆತನವಲ್ಲದಿದ್ದರೂ ನಿತ್ಯ ಅಕ್ಕಿಯ ಅನ್ನ ಉಣ್ಣುವಷ್ಟು ಶ್ರೀಮಂತಿಕೆಯಿತ್ತು. ರಾಜಪೌರೋಹಿತ್ಯ ಹಾಗೂ ಇಪ್ಪತ್ತು ಹಳ್ಳಿಗಳ ಜೋಯಿಸತನ ಇವರ ಆಸ್ತಿ. ಇವರು 1925 ಜುಲೈ 1ರಂದು ಜನಿ ಸಿದರು. ಶೇಷಾಚಾರ್ಯ ಹಾಗೂ ರಂಗಮ್ಮ ಇವರ ತಂದೆತಾಯಿಗಳು. ಹನ್ನೆರಡು ಮಕ್ಕಳನ್ನು ಹೆತ್ತ ಆ ತಾಯಿಗೆ ಉಳಿದದ್ದು ಎರಡೇಮಕ್ಕಳು. ಜಯ ತೀರ್ಥ ಹಾಗೂ ನರಸಿಂಹ. ಈ ಇಬ್ಬರ ಮಧ್ಯದ ಅಂತರ 16 ವರ್ಷ. ಇವರ ಬಾಲ್ಯ ಮನೆಯಲ್ಲಿ, ಎಲ್ಲರ ಪ್ರೀತಿಯ ಆಸರೆ ಯಲ್ಲಿ, ಅದರಲ್ಲೂ ಅಜ್ಜಿ ಜೀವಮ್ಮನವರ ಅಕ್ಕರೆಯ ಮಡಿಲಲ್ಲಿ ಕಳೆಯಿತು. ಶಾಲೆಯಲ್ಲಿ ಗುರು ಬಸವಲಿಂಗಯ್ಯನವರೂ ಮನೆಯಲ್ಲಿ ಸಂಸ್ಕೃತ ಪಂಡಿತರಾದ ತಂದೆಯವರೂ ಇವರಿಗೆ ಸಂಸ್ಕೃತ, ಮಾಧ್ವಪಂಥಕ್ಕೆ ಸಂಬಂಧಿಸಿದ ಸಾಹಿತ್ಯ ಹಾಗೂ ಹರಿದಾಸರ ಹಾಡುಗಳ ಅಭ್ಯಾಸ ಮಾಡಿಸಿದರು. ತಂದೆಗೆ ಮಗ ಸಂಸ್ಕೃತ ವಿದ್ವಾಂಸನಾಗಬೇಕೆಂಬ ಹಂಬಲ. ಇವರು ಚಿಕ್ಕವರಿರುವಾಗಲೇ ಜಾತ್ರೆ ಹಾಗೂ ಉತ್ಸವಗಳಲ್ಲಿ ಹರಿಕಥೆಗಳನ್ನೂ ಹೇಳಿ ಸೈ ಎನ್ನಿಸಿಕೊಂಡರು. ಆರೋಗ್ಯ ಕೆಟ್ಟಿದ್ದರಿಂದ ಶಾಲೆಗೆ ಶರಣುಹೊಡೆದು ಲಗ್ನ, ಶ್ರಾದ್ಧ ಹಾಗೂ ಸತ್ಯನಾರಾಯಣ ಪೂಜಾಕಾರ್ಯಗಳಲ್ಲಿ ನಿರತರಾದರು. ತಂದೆಯ ಒತ್ತಡಕ್ಕೆ ಹಾಗೂ ಉತ್ತರಾದಿಮಠದ ಯತಿವರ್ಯ ಸತ್ಯಧ್ಯಾನತೀರ್ಥರ ಸೂಚನೆಯ ಮೇರೆಗೆ ಕೊಪ್ಪಳದ ಖ್ಯಾತ ವಿದ್ವಾಂಸರಾದ ಹುಲಗಿ ಹುಚ್ಚಾಚಾರ್ಯರಲ್ಲಿ ಸಂಸ್ಕೃತದ ತರ್ಕಶಾಸ್ತ್ರದ ತರ್ಕಸಂಗ್ರಹ ಪಾಠ ಆರಂಭವಾಯಿತು. ಈ ಅಧ್ಯಯನ ಶುದ್ಧ ಗುರುಕುಲ ಪದ್ಧತಿಯದು. ರಾಜಪುರೋಹಿತರಿಗೆ ಇದು ಸರಿಬೀಳಲಿಲ್ಲ. ಇದಕ್ಕೆ ಆಸರೆಯಾಗಿ ಲೌಕಿಕ ಅಭ್ಯಾಸ ಮುಂದುವರಿಸಲು ಅಲ್ಲಿಯ ಸ್ಕೂಲಿನ ಹೆಡ್ಮಾಸ್ಟರ್ ಸಂಗಪ್ಪನವರ ಪ್ರೋತ್ಸಾಹ. ಹೊಸ ಜಗತ್ತಿನ ಆಧುನಿಕ ಅಭ್ಯಾಸದ ಆಮಿಷ ಒಂದು ಕಡೆ. ಮನೆಯ ತುಂಬ ಹಾಗೂ ಮನೆಯ ಹೊರಗೆ ಮಡಿಮಡಿ ಎಂಬ ವಾತಾವರಣ ಇನ್ನೊಂದು ಕಡೆ. ಹೀಗಾಗಿ ಪರಂಪರಾಗತ ಅಧ್ಯಯನಕ್ಕೆ ಶರಣು ಹೊಡೆದು ಅಲ್ಲಿಂದ ಪಲಾಯನ ಮಾಡಿದರು. ಪ್ರಯಾಣ ಬೆಳೆಸಿ ರಾಯಚೂರನ್ನು ತಲಪಿದರು. ಗದ್ವಾಲ್ ಸಂಸ್ಥಾನದ ಆಸ್ಥಾನಕ್ಕೆ ಹೋಗಿ ತಮ್ಮ ವಿದ್ಯೆಯನ್ನು ಪ್ರದರ್ಶಿಸಿ ಒಂದಷ್ಟು ಹಣ ಪಡೆದರು. ಹೀಗೆ ಮಂತ್ರಾಲಯದ ಆರಾಧನೆಗೆ ಹೋದಾಗ ಇವರನ್ನೇ ಹುಡುಕುತ್ತ ಹೊರಟಿದ್ದ ತಂದೆಯ ಕೈಗೆ ಸಿಕ್ಕಿ ಬಿದ್ದರು.

ಸಂಗೀತ ಕಲಿಯಲು ಬರೋಡಕ್ಕೆ ಹೋಗಬೇಕೆಂದು ಆಸೆಪಟ್ಟಿದ್ದ ಇವರು ತಂದೆಯ ಜೊತೆಗೆ ಊರಿಗೆ ಹಿಂದಿರುಗಿದರು. ಆ ವೇಳೆಗಾಗಲೇ ಚೆಂಡಿಕೆಯ ಜಾಗದಲ್ಲಿ ಕ್ರಾಪುಕಟ್ಟು ಮಾಡಿಸಿ ಹೊಸಹಾದಿ ತುಳಿದಿದ್ದರು. ಮದುವೆಯ ಹಂಬಲದಿಂದಾಗಿ ಹುಡುಗ ಓಡಿಹೋಗಿರಬೇಕೆಂದು ತರ್ಕಿಸಿದ ಹಿರಿಯರು ಇವರ ಮದುವೆಯ ಏರ್ಪಾಟು ಮಾಡಿದರು. ಅನಂತರ ವಿದ್ವಾಂಸರಾದ ರಾಮಚಂದ್ರರಾವ್ ಪಟವಾರಿ ಅವರ ಪುತ್ರಿ ಸೀತಾ ಜೊತೆಗೆ

ಇವರ ವಿವಾಹವಾಯಿತು. ಆಕೆ ಏಳನೆಯ ತರಗತಿಯವರೆಗೆ ಓದಿದ್ದರು. ಈ ಮದುವೆ ಇವರ ಜೀವನದಲ್ಲಿ ಹೊಸ ತಿರುವನ್ನು ತಂದಿತು. ಮತ್ತೆ ಲೌಕಿಕ ವಿದ್ಯಾರ್ಜನೆಯ ಕಡೆಗೆ ಮುಖ ಮಾಡಿದರು. ಬನಾರಸ್ ಹಿಂದು ವಿಶ್ವವಿದ್ಯಾಲಯದ ಎಸ್.ಎಸ್.ಎಲ್.ಸಿ. ಅಡ್‌ಮಿಷನ್ ಎಕ್ಸಾಮಿನೇಷನ್ ಸರ್ಟಿಫಿಕೇಟ್ ಮುಗಿಸಿದರು. ಖಾಸಗಿಯಾಗಿಯೇ ಅಜಮೇರ್ ಇಂಟರ್ ಪರೀಕ್ಷೆ ಪಾಸಾದರು. ಅನಂತರ ಹೈದರಾಬಾದಿನಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ರ್‍ಯಾಂಕ್‌ನೊಂದಿಗೆ ಗಳಿಸಿದರು.

ಹೈದರಾಬಾದಿನಲ್ಲಿ ನಡೆದ ಅಖಿಲ ಭಾರತ 26ನೆಯ ಕನ್ನಡ ಸಾಹಿತ್ಯ ಸಮ್ಮೇಳನ (1941) ಇವರಿಗೆ ಅನೇಕ ಸಾಹಿತಿಗಳ ಸಂಪರ್ಕಕ್ಕೆ ಕಾರಣವಾಯಿತು. ಈ ಅವಧಿಯಲ್ಲಿಯೇ ಇವರು ತಮ್ಮನ್ನು ಕನ್ನಡ ಸಾಹಿತ್ಯ ರಚನೆ, ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಈ ಸಮ್ಮೇಳನದ ಅಧ್ಯಕ್ಷರಾಗಿದ್ದ ಎ.ಆರ್.ಕೃಷ್ಣ ಶಾಸ್ತ್ರಿಯವರು ರಾಜಪುರೋಹಿತರ ಮಾವ ರಾಮಚಂದ್ರರಾವ್ ಪಟವಾರಿ ಅವರ ಖಾಸಾ ಗುರುಗಳಲ್ಲಿ ಒಬ್ಬರು. ಕನ್ನಡದ ದೀಕ್ಷೆಗೆ ಈ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಧೀರ ಭಾಷಣವೇ ಇವರಿಗೆ ಆಂತರಿಕ ಪ್ರೇರಣೆಯನ್ನೊದಗಿಸಿತು. ಇಂಗ್ಲಿಷ್ ಪ್ರಾಧ್ಯಾಪಕರಾದ ವಿ.ಕೃ.ಗೋಕಾಕರ ಸಹಯೋಗವೂ ಈ ದಿಕ್ಕಿನಲ್ಲಿ ನೆರವಾಯಿತು. ಇವರು 1949ರಲ್ಲಿ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ತಹಸೀಲ್ದಾರರಾಗಿ ನೇಮಕಗೊಂಡರು. ಅನಂತರ ಡೆಪ್ಯುಟಿ ಕಮಿಷನರ್, ಮುನಿಸಿಪಲ್ ಕಮಿಷನರ್, ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಣಾಧಿಕಾರಿ, ನೀರಾವರಿ ಯೋಜನೆಗಳ ಆಡಳಿತಾಧಿಕಾರಿ, ವಿಶೇಷ ಜಿಲ್ಲಾಧಿಕಾರಿ, ಕನ್ನಡ ಅಭಿವೃದ್ಧಿ ನಿರ್ದೇಶನಾಲಯದ ಪ್ರಥಮ ನಿರ್ದೇಶಕ, ವಿದ್ಯಾ ಇಲಾಖೆಯ ಉಪಕಾರ್ಯದರ್ಶಿ, ಸ್ಥಾಪನೆ ಆಗಬೇಕಾಗಿದ್ದ ಗುಲ್ಬರ್ಗ ವಿಶ್ವವಿದ್ಯಾಲಯ ನಿಯೋಜಿತ ಅಧಿಕಾರಿ, ವಿಶ್ವವಿದ್ಯಾಲಯ ಸ್ಥಾಪನೆಗೊಂಡಾಗ ಅದರ ಮೊದಲ ಕುಲಸಚಿವ-ಹೀಗೆ ವಿವಿಧ ಹುದ್ದೆ ಹಾಗೂ ಜವಾಬ್ದಾರಿಗಳಲ್ಲಿ ದುಡಿದರು. ಕನ್ನಡ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಆ ಇಲಾಖೆಗೊಂದು ಭದ್ರ ಬುನಾದಿಯನ್ನು ಹಾಕಿ ಕನ್ನಡ ಅಭಿವೃದ್ಧಿಯ ದಿಕ್ಕುದೆಸೆಗಳನ್ನು ರೂಪಿಸಿದರು.

ರಾಜಪುರೋಹಿತರು ದಕ್ಷ ಆಡಳಿತಗಾರರೆಂದು ಹೆಸರು ಗಳಿಸಿರುವಂತೆ ಉತ್ತಮ ಸಾಹಿತಿಯಾಗಿಯೂ ಹೆಸರು ಗಳಿಸಿದ್ದಾರೆ. ಕಾದಂಬರಿ, ಸಣ್ಣಕಥೆ, ನಾಟಕ, ಜೀವನ ಚರಿತ್ರೆ, ಕನ್ನಡ ತೀರ್ಪುಗಳು, ಆಡಳಿತ ಕನ್ನಡ ಹೀಗೆ ಹಲವು ವಿಷಯಗಳನ್ನು ಕುರಿತು ಗ್ರಂಥಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಹಾಲುಜೇನು, ಸುಳಿಗಾಳಿ, ಅನಂತರ, ಜೇನಸುಳಿ, ಜೊಹರಾ, ಕಡಲತೋಳ (ಜಾಕ್ ಲಂಡನ್‌ನ ಸೀವುಲ್ಫ್ ಕಾದಂಬರಿಯ ಅನುವಾದ)– ಇವು ಕಾದಂಬರಿಗಳು. ಸುಳಿಗಾಳಿ ಕಾದಂಬರಿಗೆ ಸುಧಾ ವಾರ ಪತ್ರಿಕೆಯ ರಾಜ್ಯಮಟ್ಟದ ಬಹುಮಾನವೂ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರವೂ ದೊರೆತಿವೆ. ಜೊಹರಾ ಬಿಜಾಪುರದ ಇತಿಹಾಸಕ್ಕೆ ಸಂಬಂಧಿಸಿದ ಒಂದು ಐತಿಹಾಸಿಕ ಕಾದಂಬರಿ. ಜೊಹರಾ ಮತ್ತು ಅಬ್ಬಾಸ್‌ಖಾನರ ಪ್ರೀತಿ, ಅವರು ಎದುರಿಸಿದ ಅನೇಕ ಎಡರುತೊಡರುಗಳು, ಸಮಾಗಮ ಇವೇ ಈ ಕಾದಂಬರಿಯ ಕೇಂದ್ರಬಿಂದು. ಮುದ್ಗಲ್ಲಿನಲ್ಲಿ ಮೇರಿಯಾ ಎಂಬ ಇವರದೇ ಸಣ್ಣಕಥೆಯ ವಿಸ್ತೃತರೂಪವೇ ಈ ಕಾದಂಬರಿ. ಪಾರವ್ವನ ಪಂಚಾಯಿತಿ, ರೋಹಿಣಿ, ಮೌಲ್ಯಗಳು ಮತ್ತು ಶಿಥಿಲಶಿಲೆ ಇವು ಸಣ್ಣ ಕಥೆಗಳ ಸಂಕಲನಗಳು. ತುಂಗೆಯಂಗಳದಲ್ಲಿ (ಗೀತರೂಪಕ), ಕುಮಾರವ್ಯಾಸ, ಜಯಬಾಂಗ್ಲಾ – ಇವು ನಾಟಕಗಳು. ವ್ಯಾಸರಾಯ, ಜಗನ್ನಾಥದಾಸರು, ಸುರಪುರದ ಶೂರನಾಯಕರು, ಸ್ವಾಮಿ ರಾಮತೀರ್ಥ, ಕೃಷ್ಣದೇವರಾಯ – ಇವು ಜೀವನಚರಿತ್ರೆಗಳು.

ಕನ್ನಡ ತೀರ್ಪುಗಳು ಎಂಬ ಕೃತಿ ಇವರಿಗೆ ಖ್ಯಾತಿಯನ್ನು ತಂದುಕೊಟ್ಟಿತು. ನ್ಯಾಯಾಲಯದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸುವ ದಿಕ್ಕಿನಲ್ಲಿ ಈ ಕೃತಿ ತುಂಬ ಮಹತ್ತ್ವದ ಪಾತ್ರವಹಿಸಿತೆಂದು ಹೇಳಬಹುದು. ಆಡಳಿತದಲ್ಲಿ ಕನ್ನಡ (ಈ ಕೃತಿ ಇಂಗ್ಲಿಷ್‌ನಲ್ಲೂ ಇದೆ) ಇವರ ಇನ್ನೊಂದು ಗ್ರಂಥ. ಕನ್ನಡ ತೀರ್ಪುಗಳು ಕೃತಿಗೆ ವಿಶೇಷ ರಾಜ್ಯ ಪ್ರಶಸ್ತಿ ಲಭ್ಯವಾಗಿದೆ. ತುಂಗಾತರಂಗ, ಕಬೇರಿ ಕೈಪಿಡಿ, ಪಂಪಾ ಸಂಪದ, ಪಂಪಾ ತುಂತುರು, ಆಡಳಿತ ಭಾಷಾ ಸಮಸ್ಯೆಯ ವಿಶ್ಲೇಷಣೆ, ಬಹುಮಾನಿತ ಕನ್ನಡ ತೀರ್ಪುಗಳು -ಇವು ಇವರು ಇತರರೊಡನೆ ಸಂಪಾದಿಸಿರುವ ಕೃತಿಗಳು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಲಭ್ಯವಾಗಿದೆ (1978).

ಇವರು 1986 ಏಪ್ರಿಲ್ 26ರಂದು ರಾಯಚೂರಿನಲ್ಲಿ ನಿಧನರಾದರು.

*

**ಜಯದೇವಿತಾಯಿ ಲಿಗಾಡೆ :** 1912-86. ಆಧುನಿಕ ಕನ್ನಡದ ಪ್ರಸಿದ್ಧ ಕವಯಿತ್ರಿ. ಕರ್ನಾಟಕದ ಏಕೀಕರಣಕ್ಕಾಗಿ, ಗಡಿನಾಡ ಕನ್ನಡಿಗರ ಏಳ್ಗೆಗಾಗಿ ಹೋರಾಡಿದ ಧೀರ ಮಹಿಳೆ ಹಾಗೂ ಶಿವಶರಣೆ. ಜನನ ಸೊಲ್ಲಾಪುರದ ಶ್ರೀಮಂತ ಮನೆತನದಲ್ಲಿ (1912 ಜೂನ್ 23). ಇವರ ತಂದೆ ಮಡಿಕೆ ಚೆನ್ನಬಸಪ್ಪ, ತಾಯಿ ಸಂಗಮ್ಮ. ಇಬ್ಬರೂ ದೈವಭಕ್ತರು, ಉದಾರಿಗಳು ಹಾಗೂ ಸಮಾಜ ಸೇವೆಯಲ್ಲಿ ಆಸಕ್ತಿಯುಳ್ಳವರು. ಜಯದೇವಿ ಯವರ ಮಾತೃಭಾಷೆ ಕನ್ನಡವಾದರೂ ಚಿಕ್ಕಂದಿನಲ್ಲಿ ಮರಾಠಿ ಯಲ್ಲಿ ಶಿಕ್ಷಣ ನಡೆಯಿತು. ಆ ಕಾಲದ ಸಂಪ್ರದಾಯ ದಂತೆ ಇವರಿಗೆ ಚಿಕ್ಕ ವಯಸ್ಸಿನಲ್ಲಿಯೇ (14 ವರ್ಷ) ವಿವಾಹವಾಯಿತು (1926). ಪತಿ ಸೊಲ್ಲಾ ಪುರದ ಮತ್ತೊಂದು ಶ್ರೀಮಂತಮನೆತನದ ಚೆನ್ನಮಲ್ಲಪ್ಪ ಮಹ ದೇವರಾಯ ಲಿಗಾಡೆ. ಜಯದೇವಿಯವರದು ತುಂಬು ಸಂಸಾರ. ಇವರಿಗೆ 5 ಜನ ಮಕ್ಕಳು: ಮೂರು ಗಂಡು, ಎರಡು ಹೆಣ್ಣು. ಮಕ್ಕಳನ್ನು ಚೆನ್ನಾಗಿ ಪೋಷಿಸಿ ಬೆಳೆಸಿ ವಿದ್ಯಾವಂತರನ್ನಾಗಿಸಬೇಕೆಂದು ಆಶಿಸುತ್ತಿರುವಾಗಲೇ ಇವರಿಗೆ ಪತಿವಿಯೋಗವುಂಟಾಯಿತು (1946). ಸಂಸಾರದ ನೊಗಕ್ಕೆ ಹೆಗಲು ಕೊಟ್ಟರು.

ಇವರಿಗೆ ಕನ್ನಡ ಭಾಷೆಯ ಮೇಲೆ ಅಪಾರ ಅಭಿಮಾನ. ಮೂರು ಮಕ್ಕಳ ತಾಯಿಯಾಗಿದ್ದಾಗ ಇವರು ಕನ್ನಡವನ್ನು ಕಲಿತರು. ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಬೆಳೆಸಿಕೊಂಡರು. ಇವರಿಗೆ ಹಿಂದಿ ಭಾಷೆಯಲ್ಲೂ ಸ್ವಲ್ಪ ಪರಿಶ್ರಮವಿತ್ತು. ಅನಂತರ ಇವರು ಸಾಹಿತ್ಯ ಕೃಷಿಗೆ ತೊಡಗಿದರು. ಇವರು ಕನ್ನಡ ಹಾಗೂ ಮರಾಠಿ ಭಾಷೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದರು. ಜಯಗೀತ (1952), ತಾಯಿಯ ಪದಗಳು (1959), ಸಿದ್ಧರಾಮೇಶ್ವರ ಪುರಾಣ (1965), ತಾರಕ ತಂಬೂರಿ (1968), ಸಿದ್ಧರಾಮ - ಇವು ಕನ್ನಡದಲ್ಲಿ ರಚಿತವಾದ ಇವರ ಮುಖ್ಯ ಕೃತಿಗಳು. ಜಯಗೀತ 40 ಕವನಗಳುಳ್ಳ, ಹೆಚ್ಚಾಗಿ ಕವಿಯ ಭಕ್ತಿ, ಅಂತರಂಗದ ಹೋರಾಟ, ಆತೃಪ್ತಿ ಮೊದಲಾದ ಭಾವಗಳನ್ನು ಚಿತ್ರಿಸುವ ಗ್ರಂಥ. ಈ ಸಂಕಲನದ ಹಿಗ್ಗುತಿದೆ ವಿಶ್ವ ಎಂಬ ಒಂದು ಗೀತೆ ಭಾರತದ 14 ಭಾಷೆಗಳಿಗೆ ಅನುವಾದವಾಗಿದೆ. ತಾಯಿಯ ಪದಗಳು ಎಂಬ ಕೃತಿಯಲ್ಲಿ ಧರ್ಮ, ನೀತಿ, ದೇಶಭಕ್ತಿ, ಹೋರಾಟ, ಸ್ವಾತಂತ್ರ್ಯ, ಚರಿತ್ರೆ, ರಾಜಕಾರಣ ಮೊದಲಾದ ವಿಷಯಗಳು ಅಡಕವಾಗಿವೆ. ತಾರಕ ತಂಬೂರಿ 39 ಅನುಭಾವ ಹಾಡುಗಬ್ಬಗಳ ಸಂಕಲನ. ಸಿದ್ಧರಾಮ ಎಂಬ ಕಿರುಹೊತ್ತಗೆ ಇವರಿಂದ ಮಕ್ಕಳಿಗಾಗಿ ರಚಿತವಾದ ಗದ್ಯಗ್ರಂಥ.

ಸಿದ್ಧರಾಮೇಶ್ವರ ಪುರಾಣ ಇವರ ಮಹಾಕಾವ್ಯ. ಇದು ಇವರ 10 ವರ್ಷಗಳ ವಾಙ್ಮಯ ತಪಸ್ಸಿನ ಫಲ. ಸಂಪೂರ್ಣವಾಗಿ ತ್ರಿಪದಿ ಛಂದಸ್ಸಿನಲ್ಲಿ ರಚಿತವಾಗಿರುವ ಈ ಕೃತಿ 12ನೆಯ ಶತಮಾನದ ಪ್ರಮುಖ ವಚನಕಾರರಲ್ಲೊಬ್ಬನಾದ ಸಿದ್ಧರಾಮನ ಜೀವನ ಸಾಧನೆ ಸಿದ್ಧಿಯನ್ನೊಳಗೊಂಡಿದೆ. ಇದರಲ್ಲಿ 41 ಸಂಧಿ, 4100 ಪದ್ಯಗಳಿವೆ. ಈ ನೂತನ ಪುರಾಣದಲ್ಲಿ ರಾಘವಾಂಕನ ಸಿದ್ಧರಾಮಪುರಾಣ, ಶೂನ್ಯ ಸಂಪಾದನೆಯಲ್ಲಿರುವ ಸಿದ್ಧರಾಮನ ಪ್ರಸಂಗ, ಚಾಮರಸನ ಪ್ರಭುಲಿಂಗಲೀಲೆ, ಸಿದ್ಧರಾಮನ ಷಟ್ಸ್ಥಲ ವಚನ, ಕಾಲಜ್ಞಾನವಚನ, ಮಂತ್ರಗೋಪ್ಯ, ಅಷ್ಟಾವರಣ ಸ್ತೋತ್ರ ತ್ರಿವಿಧಿ ಮೊದಲಾದ ಗ್ರಂಥಗಳ ಸಾರವಿದ್ದು ಭಕ್ತಿರಸಭರಿತವಾಗಿದೆ. ಜನತೆಯ ಮನಮುಟ್ಟಲು ಸರಳ ಜನಪದ ಶೈಲಿಯೇ ಉತ್ತಮ ಎಂದು ತಿಳಿದಿದ್ದ ಜಯದೇವಿಯವರು ತಮ್ಮ ಕೃತಿಗಳನ್ನು ತ್ರಿಪದಿಯಲ್ಲಿ ರಚಿಸಿ ಜನಮನದ ಹತ್ತಿರಕ್ಕೆ ಕಾವ್ಯವನ್ನು ಕೊಂಡೊಯ್ದರು. ತ್ರಿಪದಿ ಇವರ ಕಾವ್ಯಾಭಿವ್ಯಕ್ತಿಯ ಪ್ರಮುಖ ಮಾಧ್ಯಮವಾಗಿ ತನ್ನ ಪ್ರಖ್ಯಾತಿಯನ್ನು ಹೆಚ್ಚಿಸಿಕೊಂಡಿತು.

ಮರಾಠಿ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿದ್ದ ಇವರು ಮಹಾರಾಷ್ಟ್ರೀಯರಿಗೆ ಕನ್ನಡ ಶರಣರ ಪರಿಚಯ ಮಾಡಿಕೊಟ್ಟಿರುವುದಷ್ಟೇ ಅಲ್ಲದೆ ಕನ್ನಡಕ್ಕೇ ವಿಶಿಷ್ಟ ಶೈಲಿಯಾದ ವಚನವನ್ನು ಪರಿಚಯ ಮಾಡಿಸುವುದರ ಮೂಲಕ ಕನ್ನಡ, ಮರಾಠಿ ಭಾಷಾಸಾಹಿತ್ಯಗಳೆರಡಕ್ಕೂ ಉತ್ತಮ ಸೇವೆ

ಸಲ್ಲಿಸಿದ್ದಾರೆ. ಸಿದ್ಧವಾಣಿ, ಬಸವದರ್ಶನ, ಮಹಾಯೋಗಿನಿ, ಸಿದ್ಧರಾಮಾಂಚಿ ತ್ರಿವಿಧಿ, ಸಮೃದ್ಧ ಕರ್ನಾಟಕಾಂಚಿ ರೂಪರೇಷಾ, ಬಸವ ವಚನಾಮೃತ - ಇವು ಇವರಿಂದ ಮರಾಠಿ ಭಾಷೆಯಲ್ಲಿ ರಚಿತವಾದ ಕೃತಿಗಳು. ತೋಂಟದ ಸಿದ್ಧಲಿಂಗೇಶ್ವರ ವಚನಗಳನ್ನೂ ಇವರು ಮರಾಠಿ ಭಾಷೆಯಲ್ಲಿ ತಂದಿದ್ದಾರೆ.

ಜಯದೇವಿಯವರು ಉತ್ತಮ ಸಾಹಿತಿಯಾಗಿದ್ದಂತೆ ಉತ್ಕಟ ಕನ್ನಡಾಭಿಮಾನಿಯೂ ಹೌದು. ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದು ಮರಾಠಿಯಲ್ಲೇ ಶಿಕ್ಷಣ ಪಡೆದೂ ಕನ್ನಡತಿ ಎಂದು ಹೇಳಿಕೊಳ್ಳುವುದರಲ್ಲಿ ಇವರಿಗೆ ಹೆಮ್ಮೆ. ಬೇಲೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (1952) ಎರಡು ಕರ್ನಾಟಕವಾಗಬೇಕೆಂಬ ವಾದವೆದ್ದಾಗ ಅದನ್ನು ತಮ್ಮ ದೃಢವಾಣಿಯಿಂದ ಪ್ರಬಲವಾಗಿ ವಿರೋಧಿಸಿದ ಕೆಚ್ಚು ಇವರದು. ಹೈದರಾಬಾದಿಗೆ ಸೇರಿದ್ದ ಕನ್ನಡ ಪ್ರದೇಶಗಳಲ್ಲಿ ಕನ್ನಡ ಪ್ರಚಾರಮಾಡುವ ಸಂದರ್ಭದಲ್ಲಿ ಸ್ವತಃ ನಿಜಾಮನ ವಿರೋಧವನ್ನೂ ಇವರು ಲೆಕ್ಕಿಸಲಿಲ್ಲ. ದಾನಧರ್ಮಗಳಲ್ಲೂ ಜಯದೇವಿಯವರದು ಉದಾರಹಸ್ತ. ರಜಾಕಾರ ಹಾವಳಿಯ ಸಂದರ್ಭದಲ್ಲಿ ಹೈದರಾಬಾದಿನಿಂದ ನಿರಾಶ್ರಿತರಾಗಿ ಬಂದವರಿಗೆಲ್ಲಾ ತಾವೇ ಬಿಡಾರಗಳನ್ನು ಏರ್ಪಡಿಸಿ ಆಶ್ರಯ ನೀಡಿದರು. ಅನೇಕ ವಿದ್ಯಾಸಂಸ್ಥೆಗಳಿಗೆ ಇವರು ಉದಾರ ಸಹಾಯಮಾಡಿದ್ದರು. ಒಮ್ಮೆ ಇವರಿಗೆ ಸನ್ಮಾನವಾಗಿ ಬಂದ 40 ಸಾವಿರ ರೂಪಾಯಿಗಳನ್ನು ವಿದ್ಯಾಸಂಸ್ಥೆಗೆ ದಾನವಾಗಿ ನೀಡಿದರು. ಕನ್ನಡನಾಡು ಇವರಿಗೆ ಹಲವಾರು ಗೌರವಗಳನ್ನಿತ್ತು ಸನ್ಮಾನಿಸಿತು. ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ರಾಜ್ಯ ಸಾಹಿತ್ಯ ಅಕಾಡೆಮಿ ಸಿದ್ಧರಾಮೇಶ್ವರ ಪುರಾಣಕ್ಕೆ ಪ್ರಶಸ್ತಿಯನ್ನಿತ್ತು ಗೌರವಿಸಿತು (1968). ಇದೇ ಗ್ರಂಥಕ್ಕೆ ದೇವರಾಜ ಬಹದ್ದೂರ ಬಹುಮಾನವೂ ಬಂದಿದೆ. 1950ರಲ್ಲಿ ಮುಂಬಯಿಯಲ್ಲಿ ನಡೆದ 32ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರು ಮಹಿಳಾಗೋಷ್ಠಿಯ ಅಧ್ಯಕ್ಷೆ ಯಾಗಿದ್ದರು. ಹುಬ್ಬಳ್ಳಿ ಮತ್ತು ತುಮಕೂರುಗಳಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಿಳಾ ಪರಿಷತ್ತುಗಳ ಅಧ್ಯಕ್ಷೆಯಾಗಿದ್ದರು. ಇವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯೆಯೂ ಆಗಿದ್ದರು. ಉಡುಪಿಯಲ್ಲಿ



ನಡೆದ ವಿಶ್ವಹಿಂದೂ ಪರಿಷತ್ತಿನ ಮಹಿಳಾ ಗೋಷ್ಠಿಯ ಅಧ್ಯಕ್ಷರೂ ಆಗಿದ್ದರು. ಅನಂತರ 1974ರಲ್ಲಿ ಮಂಡ್ಯದಲ್ಲಿ ನಡೆದ 48ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷಸ್ಥಾನಕ್ಕೆ ಆಯ್ಕೆಮಾಡಲಾಯಿತು. ಇವರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ವಹಿಸಿದ ಮೊತ್ತಮೊದಲ ಮಹಿಳೆ.

ಇವರಿಗೆ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ.ಲಿಟ್ ನೀಡಿದೆ (1976). ಇವರು ಕರ್ನಾಟಕ ಸಾಹಿತ್ಯ ಆಕಾಡೆಮಿಯ ಸದಸ್ಯರೂ ಆಗಿದ್ದರು (1971).

ಜಯದೇವಿತಾಯಿಯವರ ವ್ಯಕ್ತಿತ್ವ ಸರಳತೆ ಸೌಜನ್ಯ ನಯವಿನಯ ಗಳಿಂದ ಕೂಡಿದ್ದು, ಸಿದ್ಧರಾಮೇಶ್ವರ ಪುರಾಣದಂಥ ಕೃತಿಯನ್ನು ರಚಿಸಿ ಸಾಹಿತ್ಯಕ ಸಿದ್ಧಿಯನ್ನು ತಲುಪಿದಾಗಲೂ ಇವರು ವಿನಯವನ್ನೇ ಮೆರೆದರು

ಎಲ್ಲ ಬಲ್ಲವಳೆಂಬ ಇಲ್ಲವದು ಭ್ರಮೆ ಎನಗೆ
ಬಲ್ಲವರ ಪಾದ ಹಿಡಿಯುವೆ ಬಲ್ಲಿದರು

ಕಲಿಸಿರಿ ಮತ್ತೆ ನುಡಿಸಿರಿ

ಇವರ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಬಿಡಿಸಿ ಬೇರ್ಪಡಿಸಲಾಗದ ಸಾಮರಸ್ಯವಿತ್ತು. ಇವರು ಉತ್ತಮ ಸಂಗೀತಗಾರ್ತಿ; ಉತ್ತಮ ವಾಗ್ಮಿಯೂ ಆಗಿದ್ದರು. ಕನ್ನಡನಾಡಿಗೆ ಕರ್ನಾಟಕ ಎಂಬ ಹೆಸರಾದಾಗ ಅದರಿಂದ ಬಹಳ ಸಂತೋಷಪಟ್ಟರು. ಆದರೆ ಗಡಿಭಾಗದಲ್ಲಿ ವಿವಾದಾಸ್ಪದವಾಗಿ ಉಳಿದಿರುವ ಅನೇಕ ಪ್ರದೇಶಗಳು, ಸೊಲ್ಲಾಪುರವೂ ಸೇರಿದಂತೆ ಹಲವು ಕನ್ನಡ ಭಾಷಿಕ ಪ್ರದೇಶಗಳು ಕರ್ನಾಟಕಕ್ಕೆ ಸೇರಿಲ್ಲ ಎನ್ನುವ ಕೊರಗು ಇವರನ್ನು ಸದಾ ಕಾಡುತ್ತಿತ್ತು. ಇವರು ಗಡಿನಾಡಿನಲ್ಲಿ ಕನ್ನಡದ ಉಳಿವಿಗಾಗಿ ಹೋರಾಟ ನಡೆಸಿದರು. 1986 ಜುಲೈ 25ರಂದು ನಿಧನರಾದರು.

(ಎಚ್.ಎಸ್.ಪಿ.)

**ಜಯಮಂಗಲಿ :** ತುಮಕೂರು ಜಿಲ್ಲೆಯಲ್ಲಿ ಹುಟ್ಟಿ ಹರಿದು ಮುಂದೆ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಗೆ ಸಾಗಿ ಉತ್ತರಪಿನಾಕಿನಿಯನ್ನು ಸೇರುವ ಚಿಕ್ಕ ನದಿ. ತುಮಕೂರಿಗೆ 14ಕಿಮೀ ಪೂರ್ವದಲ್ಲಿ ದೇವರಾಯನದುರ್ಗದ ಜಲಗೊಂಡಿ ಎಂಬ ಕಮರಿಯಲ್ಲಿ ಮಂಗಲಿ ನದಿ ಉದ್ಭವಿಸುತ್ತದೆ. ದುರ್ಗದ ಮತ್ತಷ್ಟು ಮೇಲೆ ಜಯತೀರ್ಥ ಎಂಬ ಮತ್ತೊಂದು ತೊರೆ ಹುಟ್ಟಿ ಹರಿದು ಇವೆರಡೂ ದೇವರಾಯನದುರ್ಗದ ತಪ್ಪಲಿನ ಇರುಕಸಂದ್ರ ಬಳಿ ಕೂಡಿಕೊಂಡು ಮುಂದೆ ಜಯಮಂಗಲಿ ಎಂಬ ಹೆಸರಿನಿಂದ ಹರಿಯುವುದು. ದೇವರಾಯನದುರ್ಗವನ್ನು ಬಿಟ್ಟು ಜಯಮಂಗಲಿ ಉತ್ತರಕ್ಕೆ ಕೊರಟಗೆರೆ ತಾಲ್ಲೂಕಿನತ್ತ ಸಾಗುವುದು. ದೇವರಾಯನದುರ್ಗದ ಆಗ್ನೇಯ ಭಾಗದ ಬೆಟ್ಟಗಳ ಮಧ್ಯ ಹುಟ್ಟುವ ಗರುಡಾಚಲ ತೊರೆ ಸಹ ಉತ್ತರಕ್ಕೆ ಕೊರಟಗೆರೆಯ ಕಡೆ ಹರಿದು ಅಲ್ಲಿಂದ 8ಕಿಮೀ ದೂರದಲ್ಲಿ ಹೊಳವನಹಳ್ಳಿ ಬಳಿ ಜಯಮಂಗಲಿಯನ್ನು ಸೇರಿಕೊಳ್ಳುವುದು. ಕೊರಟ ಗೆರೆಯ ಮುಂದೆ ಈ ನದಿಗೆ ರಾಂಪುರ ಗ್ರಾಮದ ಬಳಿ ಪಶ್ಚಿಮದಿಂದ ಹರಿದು ಬರುವ ಸುವರ್ಣಮುಖಿ ನದಿ ಕೂಡಿಕೊಳ್ಳುತ್ತದೆ. ಹೀಗೆ ಗರುಡಾಚಲ ಹಾಗೂ ಸುವರ್ಣಮುಖಿ ನದಿಗಳನ್ನು ಕೂಡಿಕೊಂಡು ಹರಿಯುವ ಜಯಮಂಗಲಿ, ಮಧುಗಿರಿ ತಾಲ್ಲೂಕಿನ ಪೂರ್ವಭಾಗದಲ್ಲಿ ಉತ್ತರಪಿನಾಕಿನಿಯ ಸಮಾಂತರದಲ್ಲಿ ಸ್ವಲ್ಪ ದೂರ ಹರಿದು, ಕರ್ನಾಟಕದ ಗಡಿಯನ್ನು ಬಿಟ್ಟು ಅನಂತಪುರ ಜಿಲ್ಲೆಯ ಪರಿಗಿ ಎಂಬಲ್ಲಿ ಉತ್ತರಪಿನಾಕಿನಿಯೊಂದಿಗೆ ಸಂಗಮವಾಗುತ್ತದೆ. ಈ ನದಿ ತುಮಕೂರು ತಾಲ್ಲೂಕಿನಲ್ಲಿ 13ಕಿಮೀ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಒಟ್ಟು 51ಕಿಮೀ ದೂರ ಹರಿಯುತ್ತದೆ.

ಜಯಮಂಗಲಿ ನಿರಂತರ ಹರಿಯುವ ನದಿಯಲ್ಲ. ಅರೆ ಬೆಂಗಾಡು ಪ್ರದೇಶದಲ್ಲಿ ಹುಟ್ಟಿ ಹರಿಯುವ ಈ ನದಿಗೆ ಮಳೆಗಾಲದ ನೀರೇ ಆಧಾರ. ನದಿಯ ಅಂಚಿನಲ್ಲಿ ಕಪಿಲೆ ಬಾವಿಗಳನ್ನು ತೋಡಿ ತೋಟಗಳಿಗೆ ನೀರು ಹಾಯಿಸಿಕೊಳ್ಳುತ್ತಾರೆ. ತುಮಕೂರು ಜಿಲ್ಲೆಯಲ್ಲಿ ನದಿಯ ಮರಳಿನಲ್ಲಿ ಗುಂಡಿತೋಡಿ ಅದರಲ್ಲಿ ಬರುವ ನೀರನ್ನು ಉಪಯೋಗಿಸುವ ಪದ್ಧತಿ ರೂಢಿಯಲ್ಲಿದೆ. ಇಂಥ ತಲಪರಿಗೆಗಳನ್ನು ಜಯಮಂಗಲಿ ನದಿಯ ಉದ್ದಕ್ಕೂ ಜನವಾಸವಿರುವ ಕಡೆಗಳಲ್ಲಿ ಕಾಣಬಹುದು. (ಎ.ಜಿ.ಕೆ.)

**ಜಯಮ್ಮ, ಬಿ. :** 1915-98. ಕನ್ನಡ ಚಲನಚಿತ್ರ ಮತ್ತು ರಂಗ ಭೂಮಿ ಕಲಾವಿದೆ. ಮೂಕಿ ಚಿತ್ರಗಳ ಕಾಲದಿಂದ ಬಣ್ಣದ ಚಿತ್ರಗಳ ವರೆಗೆ ದೀರ್ಘಕಾಲ ಚಲನಚಿತ್ರ ಹಾಗೂ ರಂಗ ಭೂಮಿಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಇವರು 1915ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಟಿ.ಎನ್. ಮಲ್ಲಪ್ಪನವರು, ತಾಯಿ ಕಮಲಮ್ಮ. ತಾಯಿಯ ಮನೆತನದವರೆಲ್ಲ ನಾಟಕ ಮತ್ತು ಸಂಗೀತದಲ್ಲಿ ಪರಿಶ್ರಮವಿದ್ದವರೇ. ಇವರ ದೊಡ್ಡಮ್ಮ ಬಿ.ಸುಂದರಮ್ಮ ಕೂಡ ಆ ಕಾಲದ ಪ್ರಸಿದ್ಧ ನಟಿ. ಈ ಸಂಪರ್ಕದಿಂದಾಗಿ ಜಯಮ್ಮ ನವರಿಗೆ ಬಾಲ್ಯದಿಂದಲೂ ನಾಟಕದಲ್ಲಿ ಆಸಕ್ತಿ ಬೆಳೆ ಯಿತು. ಇವರ ತಂದೆಗೆ ಮಗಳು ಓದಿ ವೈದ್ಯಳಾಗ ಬೇಕೆಂಬ ಆಸೆ. ಆದರೆ ತಂದೆಯ ಅನಿರೀಕ್ಷಿತ ನಿಧನದಿಂದ ಇವರ ಶಾಲಾ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿಲ್ಲವಾಯಿತು. ಒಂಬತ್ತನೆಯ ವಯಸ್ಸಿನಲ್ಲಿಯೇ ರಸಿಕ ಜನಾನಂದ ನಾಟಕ ಸಭೆಯವರ ಸೀತಾಕಲ್ಯಾಣ ನಾಟಕದಲ್ಲಿ ಸೀತೆಯಾಗಿ ಅಭಿನಯಿಸಿದರು. ಇದೇ ಇವರ ಪ್ರಥಮ ವೃತ್ತಿನಾಟಕ.

ಹದಿಮೂರು ವರ್ಷದವರಾಗಿದ್ದಾಗ ಬಾಳ್ಳು ಬಸವೇಗೌಡರ ಕಂಪನಿಯಲ್ಲಿ ಉಪನಾಯಕಿಯ ಪಾತ್ರಗಳನ್ನು ವಹಿಸುತ್ತಿದ್ದರು. 1928ರಲ್ಲಿ ಗುಬ್ಬಿ ವೀರಣ್ಣನವರ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಭಾ ಸೇರಿದರು. ಅಲ್ಲಿ ರಾಜಭಕ್ತಿ, ಸದಾರಮೆ, ಕಬೀರದಾಸ, ದಶಾವತಾರ ಮತ್ತು ತೆಲುಗು ನಾಟಕ ಕುರುಕ್ಷೇತ್ರದಲ್ಲೂ ಪಾತ್ರವಹಿಸಿ ಕರ್ನಾಟಕ ಮತ್ತು ಆಂಧ್ರ -ಈ ಎರಡು ಪ್ರದೇಶಗಳಲ್ಲೂ ಹೆಸರು ಪಡೆದರು. ಗುಬ್ಬಿ ವೀರಣ್ಣನವರ ಕರ್ನಾಟಕ ಕಾರ್ಪೊರೇಷನ್ ಸಂಸ್ಥೆಯ ಮೂಕಿ ಚಿತ್ರಗಳಲ್ಲಿ ನಾಯಕಿಯಾದರು. ಮುಂದೆ ವೀರಣ್ಣನವರೊಂದಿಗೆ ಇವರ ವಿವಾಹವಾಯಿತು.

ಹಿಸ್ ಲವ್ ಅಫೇರ್ ಚಿತ್ರದಲ್ಲಿ ಹಾಲಿವುಡ್ಡಿನ ನಿರ್ದೇಶಕರ ಮುಂದೆ ಪ್ರಥಮವಾಗಿ ನಟಿಸಿ ಚಲನಚಿತ್ರರಂಗಕ್ಕೆ ಅಡಿಯಿಟ್ಟರು. ಇದಾದ ಅನಂತರ ವೈ.ವಿ.ರಾವ್ ನಿರ್ದೇಶಿಸಿದ ಜಾಂಬವತಿ ಚಿತ್ರದಲ್ಲಿ ಅಭಿನಯಿಸಿದರು.

ಗುಬ್ಬಿ ಕಂಪನಿಯ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದುದರ ಜೊತೆಗೇ ಸದಾರಮೆ, ಸುಭದ್ರ, ಜೀವನ ನಾಟಕ, ಹೇಮರೆಡ್ಡಿ ಮಲ್ಲಮ್ಮ, ತ್ಯಾಗಯ್ಯ ಮುಂತಾದ ವಾಕ್ಚಿತ್ರಗಳಲ್ಲೂ ನಾಯಕಿಯ ಪಾತ್ರವಹಿಸಿ ಪ್ರಸಿದ್ಧರಾದರು. ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನ ಸ್ವರ್ಗಸೀಮಾ, ತಮಿಳಿನ ಭರ್ತೃಹರಿ ಮುಂತಾದ ಚಿತ್ರಗಳಲ್ಲಿ ಅಭಿನಯಿಸಿ ತ್ರಿಭಾಷಾತಾರೆ ಎಂದು ಹೆಸರು ಪಡೆದರು. ಮುಕ್ತಿ, ಸಾಕ್ಷಾತ್ಕಾರ, ಗುಣಸಾಗರಿ, ರಾಜಾವಿಕ್ರಮ, ಪ್ರೇಮಮಯಿ, ಮಾವನ ಮಗಳು, ಅಣ್ಣತಂಗಿ – ಇವು ಇವರು ಪಾತ್ರವಹಿಸಿದ ಕೆಲವು ಪ್ರಮುಖ ಚಿತ್ರಗಳು.

ಇವರಿಗೆ ಅಭಿನಯದಂತೆ ಸಂಗೀತದಲ್ಲೂ ಆಸಕ್ತಿಯಿತ್ತು. ಅನೇಕ ಸಂಗೀತ ಕಛೇರಿಗಳನ್ನೂ ಮಾಡಿ ಸಂಗೀತ ಸುಧಾ, ಸಂಗೀತಸರಸ್ವತಿ ಮುಂತಾದ ಪ್ರಶಸ್ತಿಗಳನ್ನು ಪಡೆದರು. ಸಾಮಾಜಿಕ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ಬಹುಕಾಲ ಕನ್ನಡ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿದ್ದರು. ಅಶಕ್ತ ಕಲಾವಿದರ ಸಂಘದ ಆಡಳಿತ ವರ್ಗದಲ್ಲೂ ಇವರು ಸೇವೆ ಸಲ್ಲಿಸಿದ್ದರು. ಇವರ ಅಭಿನಯ ಕಲೆಗಾಗಿ ಕರ್ನಾಟಕ ರಾಜ್ಯಸರ್ಕಾರ ಸನ್ಮಾನಿಸಿತ್ತು. (ಎಚ್.ಎಸ್.ಪಿ.)

**ಜಯಮ್ಮ ಶಾಸ್ತ್ರಿ :** 1950-. ಅರ್ಜುನ ಪ್ರಶಸ್ತಿ ಪಡೆದ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಪಟು. 1950 ಸೆಪ್ಟೆಂಬರ್ 5ರಂದು ತಮಿಳುನಾಡಿನ ತೂತುಕುಡಿಯಲ್ಲಿ ಜನಿಸಿದರು. ಇವರದು ಕ್ರೀಡಾಪಟುಗಳಿಂದ ಹಾಗೂ ಕ್ರೀಡಾಪ್ರೇಮದಿಂದ ಕೂಡಿದ ಮನೆತನ. ತಂದೆ ವಿ.ಟಿ.ಶ್ರೀನಿವಾಸನ್ ಬಿಲಿಯರ್ಡ್ಸ್ ಹಾಗೂ ಟೆನ್ನಿಸ್ ಆಟದಲ್ಲಿ ಅನುಭವಿ ವೃತ್ತಿ ಆಟಗಾರರು. ಅಣ್ಣಂದಿರಾದ ಕಣ್ಣನ್ ಮತ್ತು ರಂಗರಾಜನ್ ರಾಜ್ಯಮಟ್ಟದ ಟೇಬಲ್ ಟೆನ್ನಿಸ್ ಆಟಗಾರರು. ಈ ಹಿನ್ನೆಲೆಯಲ್ಲಿ ಜಯಮ್ಮನವರ ಕ್ರೀಡಾ ಬದುಕು ರೂಪುಗೊಂಡಿತು. ಇವರು ಬಾಲ್‌ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಸರ್ವಶ್ರೇಷ್ಠ ಆಟಗಾರ್ತಿಯಾದರು. ಬೆಂಗಳೂರಿನ ಸೇಂಟ್‌ಆನ್ಸ್ ಹೆಣ್ಣು ಮಕ್ಕಳ ಪ್ರೌಢಶಾಲೆ ಹಾಗೂ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು. ಶಾಲಾದಿನಗಳಲ್ಲೇ ಬಾಲ್‌ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಇವರಿಗೆ ಆಸಕ್ತಿ ಮೂಡಿತು. ಸತತವಾಗಿ 1964-76ರ ತನಕ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದರು. ಕರ್ನಾಟಕ 21 ವರ್ಷಗಳ ಕಾಲ ಮಹಿಳಾ ಬಾಲ್‌ಬ್ಯಾಡ್ಮಿಂಟನ್ ಆಟದಲ್ಲಿ ಅಗ್ರಸ್ಥಾನದಲ್ಲಿತ್ತು. ಅಖಿಲ ಭಾರತ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಗಳಲ್ಲಿ ಇಂದಿಗೂ ಕರ್ನಾಟಕ ತನ್ನ ಅದ್ವಿತೀಯ ಸಾಧನೆಯನ್ನು ಮುಂದುವರಿಸುತ್ತ ಬಂದಿರುವುದಕ್ಕೆ ಬುನಾದಿ ಹಾಕಿದವರಲ್ಲಿ ಜಯಮ್ಮ ನವರೂ ಒಬ್ಬರು. ಇವರು 1967-70ರ ತನಕ ಕರ್ನಾಟಕ ರಾಜ್ಯ ತಂಡದ ನಾಯಕಿಯಾಗಿದ್ದರು. ಇವರ ಕಾರ್ಯಸಾಧನೆಗಾಗಿ ಅನೇಕ ಪ್ರಶಸ್ತಿ, ಗೌರವಗಳು ಲಭಿಸಿವೆ. ಕರ್ನಾಟಕ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ (1969). ಇವರಿಗೆ 1975ರಲ್ಲಿ ಕರ್ನಾಟಕ ಸರ್ಕಾರದ ಕ್ರೀಡಾ ಪರಿಷತ್ತಿನ ಸರ್ವಶ್ರೇಷ್ಠ ಮಹಿಳಾ ಕ್ರೀಡಾಪಟು ಪ್ರಶಸ್ತಿ ದೊರಕಿದೆ. ಭಾರತ ಸರ್ಕಾರ ಇವರಿಗೆ 1972ರಲ್ಲಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ. (ಎಸ್.ಆರ್.ಯು.)

**ಜಯಮಾಲ :** ಕನ್ನಡ ಚಲನಚಿತ್ರ ತಾರೆ. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಲ್ಲಿ ಹುಟ್ಟಿದರು. ಕಾಸ್‌ದಾಯೆ ಕಂಡನೆ ತುಳು ಚಿತ್ರದ ಮೂಲಕ ತಮ್ಮ 13ನೆಯ ವಯಸ್ಸಿನಲ್ಲಿ ಚಿತ್ರರಂಗ ಪ್ರವೇಶಿಸಿದರು. 35 ವರ್ಷಗಳ ಅವಧಿಯಲ್ಲಿ 75ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಇವರು ನಟಿಸಿದ ಪ್ರಥಮ ಚಿತ್ರದಲ್ಲೇ ಶ್ರೇಷ್ಠ ಕಲಾವಿದೆ ಪ್ರಶಸ್ತಿ ಪಡೆದು ಕೊಂಡರು. ದಕ್ಷಿಣಭಾರತದ ಐದೂ ಭಾಷೆಗಳ ಚಲನ ಚಿತ್ರಗಳಲ್ಲಿ ಅಭಿನಯಿಸಿ ಪಂಚಭಾಷಾ ತಾರೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ರಾಜ್‌ಕುಮಾರ್ ಅವ ರೊಂದಿಗೆ ಅನೇಕ ಜನ ಪ್ರಿಯ ಚಿತ್ರಗಳಲ್ಲಿ ನಾಯಕಿಯಾಗಿದ್ದ ಇವರು ಆ ಕಾಲದ ಎಲ್ಲ ನಾಯಕ ನಟರೊಂದಿಗೂ ಅಭಿನಯಿಸಿದ್ದಾರೆ. ವಾಣಿಜ್ಯ ಸಿನಿಮಾಗಳು ಸೃಷ್ಟಿಸಿದ ಸಾಂದರ್ಭಿಕ ಒತ್ತಡಗಳ ನಡುವೆಯೂ ತಮ್ಮೊಳಗಿನ ಕಲಾವಿದೆಯನ್ನು ಇವರು ಜೀವಂತವಾಗಿ ಕಾಪಾಡಿಕೊಂಡು ಬಂದರು. ಅಲ್ಲಿ ಇಲ್ಲಿ ಮಾಯಾಮೃಗದಂತೆ ಮಿನುಗುತ್ತಿದ್ದ ಇವರ ನೈಜ ಪ್ರತಿಭೆ ಪೂರ್ಣಪ್ರಮಾಣದಲ್ಲಿ ಬೆಳಕಿಗೆ ಬಂದದ್ದು ಸ್ವಂತ ತಯಾರಿಕೆಯ ತಾಯಿಸಾಹೇಬ (1998) ಚಿತ್ರದ ಮೂಲಕ. ಗಿರೀಶ ಕಾಸರವಳ್ಳಿ ಈ ಚಿತ್ರದ ನಿರ್ದೇಶಕರು. ಈ ಚಿತ್ರಕ್ಕೆ ಕೇಂದ್ರ ಸರ್ಕಾರದ ಸ್ವರ್ಣಕಮಲ ಪ್ರಶಸ್ತಿ ಲಭ್ಯವಾಯಿತು. ಅತ್ಯುತ್ತಮ ಅಭಿನಯಕ್ಕಾಗಿ ತೀರ್ಪುಗಾರರ ಮಂಡಳಿಯ ವಿಶೇಷ ಪ್ರಶಸ್ತಿಗೂ ಜೊತೆಗೆ 1999ನೆಯ ಸಾಲಿನ ಅತ್ಯುತ್ತಮ ಚಿತ್ರವೆಂದು ರಾಜ್ಯ ಸರ್ಕಾರದ ಪ್ರಶಸ್ತಿಗೂ ಪಾತ್ರವಾಯಿತು. ಈ ಚಿತ್ರದಲ್ಲಿನ ಶ್ರೇಷ್ಠ ಅಭಿನಯಕ್ಕಾಗಿರವರು ಶ್ರೇಷ್ಠನಟಿ ಪ್ರಶಸ್ತಿ ಪಡೆದರು. ತಾಯಿ ಸಾಹೇಬ ಕೆಲವು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಭಾರತವನ್ನು ಪ್ರತಿನಿಧಿಸಿತು.

1986ರಲ್ಲಿ ಬಿಡುಗಡೆಯಾದ ಅಗ್ನಿಪರೀಕ್ಷೆ ಇವರು ಸ್ವಂತವಾಗಿ ನಿರ್ಮಿಸಿದ ಮೊದಲ ಚಿತ್ರ. ನಟಿಯಾಗಿ ಕಲಾತ್ಮಕ ಹಾಗೂ ವಾಣಿಜ್ಯ ಚಿತ್ರಗಳೆರಡರಲ್ಲೂ ಸಮತೋಲನವನ್ನು ಕಂಡುಕೊಳ್ಳಲು ಹೆಣಗಿದ ಇವರು ಎರಡೂ ಬಗೆಯ ಚಿತ್ರಗಳಲ್ಲಿನ ಪ್ರಬುದ್ಧ ಅಭಿನಯದಿಂದ ಗಮನ ಸೆಳೆದವರು. ಹೊಸ ಅಲೆಯ ಚಿತ್ರಗಳೆಂದು ಹೆಸರು ಮಾಡಿದ ಸಂಗೀತಾ, ಗಂಗವ್ವ ಗಂಗಾಮಾಯಿ, ಖಂಡವಿದೆಕೋ ಮಾಂಸವಿದೆಕೋ ಎಂಬ ಚಿತ್ರಗಳಲ್ಲಿ ಇವರ ಅಭಿನಯ ಪ್ರೇಕ್ಷಕರ ನೆನಪಿನಲ್ಲಿ ಸದಾ ಉಳಿಯುವಂಥದ್ದು.

ಕನ್ನಡ ಚಿತ್ರೋದ್ಯಮದೊಂದಿಗೆ ಮೂರು ದಶಕಗಳಿಗಿಂತಲೂ ಹೆಚ್ಚಿನ ಸಂಪರ್ಕವಿರಿಸಿಕೊಂಡಿರುವ ಇವರು ಅದರ ನಿಜವಾದ ಬಣ್ಣವನ್ನು, ಒಳಹೊರಗನ್ನು ಚೆನ್ನಾಗಿ ಬಲ್ಲವರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸಕ್ರಿಯವಾಗಿ ದುಡಿದವರು. ಆ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಮೊಟ್ಟ ಮೊದಲ ಮಹಿಳಾಸದಸ್ಯೆಯಾಗಿ, ಖಜಾಂಚಿಯಾಗಿ, ಉಪಾಧ್ಯಕ್ಷೆಯಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ಚಿತ್ರೋದ್ಯಮ ಸಹಕಾರ ಸಂಘದ ಸಂಸ್ಥಾಪಕ ನಿರ್ದೇಶಕಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇಂಡಿಯನ್ ಪನೋರಮ 2000ದ ತೀರ್ಪುಗಾರರ ಮಂಡಳಿ ಸದಸ್ಯೆಯಾಗಿ, 2000-01ನೆಯ ಸಾಲಿನ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳ ಆಯ್ಕೆ ಮಂಡಳಿ ಅಧ್ಯಕ್ಷೆಯಾಗಿ ದುಡಿದಿರುವ ಇವರು ಹಲವಾರು ಅಂತಾರಾಷ್ಟ್ರೀಯ ಚಿತ್ರೋತ್ಸವಗಳ ಸ್ವಾಗತ ಸಮಿತಿಗೆ ಆಹ್ವಾನಿತರಾಗಿದ್ದಾರೆ. ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿರುವ, ಕನ್ನಡದೊಂದಿಗೆ ತುಳು, ತಮಿಳು, ತೆಲುಗು, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲೂ ವ್ಯವಹರಿಸುವ ಕೌಶಲವಿರುವ ಇವರು ಸದ್ಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪದವಿಗಾಗಿ ಅಧ್ಯಯನ ನಡೆಸುತ್ತಿರುವುದು ಇವರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಸಾಕ್ಷಿ.

ಚಲನಚಿತ್ರ ಮತ್ತು ಸಮಾಜಸೇವಾ ಕ್ಷೇತ್ರಗಳಿಗೆ ಇವರಿಂದ ಸಂದಿರುವ ಕೊಡುಗೆಗಾಗಿ ಇವರಿಗೆ ಅಂತಾರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ, ರಾಜೀವಗಾಂಧಿ ರಾಷ್ಟ್ರೀಯ ಐಕ್ಯತಾ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2001) ದೊರಕಿವೆ. (ಬಿ.ಆರ್‌ಎ.)

**ಜಯರಾಮ್, ಕೆ.ವಿ. :** 1950-. ಚಲನಚಿತ್ರ ನಿರ್ದೇಶಕ, ನಿರ್ಮಾಪಕ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಎಲೆಕೊಪ್ಪದಲ್ಲಿ ಫೆಬ್ರುವರಿ 14ರಂದು ಜನಿಸಿದರು. ಇವರ ತಂದೆ ವೈಕುಂಟೇಗೌಡ, ತಾಯಿ ಕೆಂಪಮ್ಮ.

ಇವರು ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಪೂರೈಸಿದರು. ಉನ್ನತ ಶಿಕ್ಷಣ ಕೊಡಿಸುವುದು ತಂದೆಯ ಹಂಬಲವಾಗಿತ್ತು. ಆದರೆ ಇವರು ಓದಿಗಿಂತ ಚಲನಚಿತ್ರ ಜಗತ್ತಿನಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದು ತಮ್ಮ ಹದಿನಾರನೆಯ ವಯಸ್ಸಿನಿಂದಲೇ ಚಿತ್ರಜಗತ್ತಿನ ಕನಸು ಕಾಣುತ್ತಿದ್ದರು. ಚಲನಚಿತ್ರ ನಿರ್ದೇಶಕನಾಗಬೇಕೆಂಬುದು ಇವರ ಹೆಬ್ಬಯಕೆಯಾಗಿತ್ತು. ಮೊದಲಿಗೆ ಸುಮಾರು ಹತ್ತು ವರ್ಷಗಳ ಕಾಲ ಚಿತ್ರನಿರ್ದೇಶಕರಾದ ಎಂ.ಆರ್.ವಿಠ್ಠಲ ಅವರ ಬಳಿ ಸಹಾಯಕ ನಿರ್ದೇಶಕರಾಗಿ ದುಡಿದರು. ಸುಮಾರು ಅರವತ್ತು ಚಿತ್ರಗಳಿಗೆ ಸಹಾಯಕ ಸಂಕಲನಕಾರರಾಗಿ ದುಡಿದು ಅಪಾರ ಅನುಭವ ಗಳಿಸಿದರು.

ಕನ್ನಡದ ಹೆಸರಾಂತ ಕಾದಂಬರಿಕಾರ ಟಿ.ಕೆ.ರಾಮರಾವ್ ಅವರ ಮರಳು ಸರಪಣಿ ಕಾದಂಬರಿ ಆಧಾರಿತ ಚಿತ್ರವನ್ನು ನಿರ್ದೇಶಿಸುವುದರೊಂದಿಗೆ ಸ್ವತಂತ್ರವಾಗಿ ನಿರ್ದೇಶಕರಾದರು (1979). ಅನಂತರ ಬಾಡದ ಹೂವು ಚಿತ್ರ ನಿರ್ದೇಶಿಸಿದರು (1982). ವರ್ಷಕ್ಕೆ ಎರಡಕ್ಕಿಂತ ಹೆಚ್ಚು ಚಿತ್ರಗಳನ್ನು ನಿರ್ದೇಶಿಸುವುದರ ಮೂಲಕ ಯಶಸ್ವೀ ನಿರ್ದೇಶಕರಾಗಿಯೂ ಚಿತ್ರ ನಿರ್ಮಾಪಕರಾಗಿಯೂ ಹೆಸರು ಗಳಿಸಿದರು.

ಬೆತ್ತಲೆ ಸೇವೆ, ಇಬ್ಬನಿ ಕರಗಿತು, ಮುದುಡಿದ ತಾವರೆ ಅರಳಿತು, ಒಲವೇ ಬದುಕು, ಶ್ವೇತಗುಲಾಬಿ, ಹೊಸ ನೀರು, ಅರುಣರಾಗ, ವರ್ಣಚಕ್ರ, ಒಲವಿನ ಆಸರೆ, ಶರವೇಗದ ಸರದಾರ, ಮತ್ಸರ, ಕೆರಳಿದ ಕೇಸರಿ, ಹೊಸ ರಾಗ, ಪೋಲೀಸ್‌ಪ್ಟಿ, ಮೇಘ ಮಂದಾರ, ರಂಜಿತ, ರಶ್ಮಿ ಮತ್ತು ಗಾಜಿನ ಮನೆ - ಇವು ಇವರು ನಿರ್ದೇಶಿಸಿ ನಿರ್ಮಿಸಿದ ಕೆಲವು ಚಿತ್ರಗಳು. ಕಾದಂಬರಿ ಆಧಾರಿತ ಚಿತ್ರಗಳ ನಿರ್ದೇಶನ ಇವರ ವೈಶಿಷ್ಟ್ಯ.

ಇವರು ನಿರ್ದೇಶಿಸಿದ ಅನೇಕ ಚಿತ್ರಗಳು ಶತದಿನೋತ್ಸವವನ್ನು ಆಚರಿಸಿವೆ. ಇವರ ಅನೇಕ ಚಿತ್ರಗಳು ತಮಿಳು, ತೆಲುಗು ಹಾಗೂ ಬಂಗಾಲಿ ಭಾಷೆಗಳಿಗೆ ಡಬ್ ಆಗಿವೆ. ಇವರು ಹೆಚ್ಚಾಗಿ ತಮ್ಮ ಚಿತ್ರಗಳಲ್ಲಿ ಮಹಿಳಾ ಸಮಸ್ಯೆಗಳು ಹಾಗೂ ಮಹಿಳಾ ಸಬಲೀಕರಣವನ್ನು ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ. ಚಿತ್ರಜಗತ್ತಿಗೆ ಅನೇಕ ಹೊಸ ಪ್ರತಿಭೆಗಳನ್ನು ಪರಿಚಯಿಸಿದ ಹಾಗೂ ಹೊಸ ಪ್ರತಿಭೆಗಳನ್ನು ಗುರುತಿಸಿ ಬೆಳಕಿಗೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇವರಿಗೆ ಅನೇಕ ಪ್ರಶಸ್ತಿ ಸನ್ಮಾನಗಳು ಲಭಿಸಿವೆ. ಬಾಡದ ಹೂ ಚಿತ್ರಕ್ಕೆ ಕರ್ನಾಟಕ ಸರ್ಕಾರದ ಅತ್ಯುತ್ತಮ ಚಲನಚಿತ್ರ ನಿರ್ದೇಶಕ ಪ್ರಶಸ್ತಿ (1982), ಇದೇ ಚಿತ್ರಕ್ಕೆ ಮತ್ತು ಹೊಸ ನೀರು ಹಾಗೂ ರಂಜಿತ ಚಿತ್ರಗಳಿಗೆ ಫಿಲ್ಮ್‌ಫೇರ್ ಪ್ರಶಸ್ತಿ ದೊರಕಿದೆ (1982). ಅತ್ಯುತ್ತಮ ನಿರ್ಮಾಪಕ ಪ್ರಶಸ್ತಿ, ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿಗಳೂ ಜೀವಮಾನದ ಸಾಧನೆಗಾಗಿ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯೂ ಇವರಿಗೆ ಲಭ್ಯವಾಗಿವೆ. ಇವರು ಕಿರುತೆರೆಯಲ್ಲಿ ಮಂದಾರ ಎಂಬ ಧಾರಾವಾಹಿಯನ್ನು ನಿರ್ದೇಶಿಸಿದ್ದಾರೆ.
(ಎಸ್‌ಯು.ಎಂ.)

**ಜಯರಾಯಾಚಾರ್ಯ, ನರಹರಿ :** –1910. ಹತ್ತೊಂಬತ್ತನೆಯ ಶತಮಾನದ ಅಂತ್ಯಭಾಗ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಮೈಸೂರಿನಲ್ಲಿ ಬದುಕಿ ಬಾಳಿದ ಕವಿ. ಇವರು ಆಸ್ಥಾನ ವಿದ್ವಾಂಸರಾಗಿದ್ದರು. ಮಹಾರಾಣಿ ಬಾಲಿಕಾ ಪಾಠಶಾಲೆಯಲ್ಲಿ ಅಧ್ಯಾಪಕರಾಗಿಯೂ ಕೆಲಸ ಮಾಡಿದರು. ಮುದ್ದಣನ ಸಮಕಾಲೀನರಾಗಿದ್ದ ಇವರು ಹಳಗನ್ನಡದಲ್ಲಿ ಕೃತಿರಚನೆ ಮಾಡಿದ್ದೇ ಅಲ್ಲದೆ ಕಂದ, ವೃತ್ತ ಮೊದಲಾದ ನಾನಾ ಛಂದಸ್ಸಿನಲ್ಲಿ ಪದ್ಯಗಳನ್ನು ರಚಿಸಿದ್ದಾರೆ. ಇವರು ರಚಿಸಿದ, ಅನುವಾದಿಸಿದ ಕೃತಿಗಳ ಸಂಖ್ಯೆ ಸುಮಾರು ಮೂವತ್ತನಾಲ್ಕು. ಅವುಗಳ ವಿಷಯವೈವಿಧ್ಯ ಬೆರಗುಗೊಳಿಸುವಂಥದು. ಪಾಕಶಾಸ್ತ್ರ, ವೈದ್ಯ ಗ್ರಂಥಗಳಂಥ ಜನೋಪಯೋಗಿ ಕೃತಿಗಳು, ನಿಘಂಟು, ಅಲಂಕಾರಶಾಸ್ತ್ರಗಳಂಥ ಶಾಸ್ತ್ರಗ್ರಂಥಗಳು, ಕರ್ನಾಟಕ ವೇಣೀಸಂಹಾರನಾಟಕಂ, ಚಂಡಕೌಶಿಕ ನಾಟಕ, ಚಂದ್ರಹಾಸ, ಮದಾಲಸಾಪರಿಣಯ, ಮಹಾಬಧಿರಪ್ರಹಸನ ಮೊದಲಾದ ನಾಟಕಗಳು, ಭವಿಷ್ಯೋತ್ತರ ಪುರಾಣವೆಂಬ ಚಂಪೂಕೃತಿ, ಸಂಗೀತ ಕೃತಿಗಳು, ರಾಮವರ್ಮ ಲೀಲಾವತಿಯಂಥ (ರೋಮಿಯೊ ಜ್ಯೂಲಿಯೆಟ್) ಪಾಶ್ಚಾತ್ಯ ಪ್ರಸಿದ್ಧ ಕೃತಿಯ ಕನ್ನಡ ರೂಪಾಂತರ, ದ್ರೌಪದಿ ಸ್ವಯಂವರ, ಅನಸೂಯಾಚರಿತ್ರೆ, ಪದ್ಮಾವತೀ ಕಲ್ಯಾಣ, ಕನಕಾಂಗಿ ಕಲ್ಯಾಣ, ಚಂದ್ರಹಾಸ ಕಥೆ, ವಾಮನಾವತಾರದ ಕಥೆ ಮುಂತಾದ ಜನಪ್ರಿಯ ಕಥೆಗಳು ಇವರಿಂದ ರಚಿತವಾಗಿವೆ. ಇವರ ಸೋಮೇಶ್ವರ ಶತಕ ವೃತ್ತಛಂದಸ್ಸಿನಲ್ಲಿದೆ. ಪಾಕಶಾಸ್ತ್ರ ಗ್ರಂಥ ತಮಿಳು ಮತ್ತು ತೆಲುಗಿಗೆ ಭಾಷಾಂತರಗೊಂಡಿದೆ.

ಅಳಿಯ ಲಿಂಗರಾಜಕೃತ ನರಪತಿಚರಿತೆ (1899), ಚಲುವಾಂಬೆ (ಚೆಲುವಾಜಮ್ಮಣ್ಣಿ) ಕೃತ ಶ್ರೀವರನಂದೀಕಲ್ಯಾಣ (1901) ಎಂಬ ಕೃತಿಗಳು ಇವರಿಂದ ಪರಿಷ್ಕೃತಗೊಂಡು ಪ್ರಕಟವಾಗಿವೆ. ಹೊಸಗನ್ನಡ ಸಾಹಿತ್ಯ ನವೋದಯಕ್ಕೂ ಮುಂಚೆ ವಿಪುಲ ಹಾಗೂ ವೈವಿಧ್ಯಮಯ ಕೃತಿಗಳಿಂದ ಕನ್ನಡ ಸಾರಸ್ವತ ಪ್ರಪಂಚದ ಒಡಲನ್ನು ತುಂಬಿದ ಇವರು 1910ರಲ್ಲಿ ನಿಧನರಾದಂತೆ ತಿಳಿದುಬರುತ್ತದೆ.
(ಎಚ್.ಕೆ.ಜೆ.)

**ಜಯರಾವ ಮಧ್ವರಾವ ದೇಶಪಾಂಡೆ :** 1887-1922. ಪತ್ರಿಕೋದ್ಯಮಿ, ಸ್ವಾತಂತ್ರ್ಯ ಹೋರಾಟಗಾರ. ಬಿಜಾಪುರ ಜಿಲ್ಲೆ ಬೀಳಗಿ ಪೇಟಾದ ನಾಗರಾಳದ ಪ್ರಸಿದ್ಧ ದೇಶಪಾಂಡೆ ಮನೆತನದಲ್ಲಿ ಜನಿಸಿದ ಇವರು 1905ರಲ್ಲಿ ಧಾರವಾಡದಿಂದ ಮ್ಯಾಟ್ರಿಕ್, 1909ರಲ್ಲಿ ಬಿ.ಎ., 1912ರಲ್ಲಿ ಎಲ್.ಎಲ್.ಬಿ. ಪಡೆದರು. ಕನ್ನಡ ವಿಷಯ ತೆಗೆದುಕೊಂಡು ವ್ಯಾಸಂಗಮಾಡಿದ ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಪದವೀಧರರಲ್ಲಿ ಇವರು ಮೊದಲಿಗರು. ಬಿಜಾಪುರದಲ್ಲಿ ವಕೀಲಿ ಆರಂಭಿಸಿ ಬಹಳ ಬೇಗ ಪ್ರಮುಖ ವಕೀಲರೆಂದು ಖ್ಯಾತಿಪಡೆದರು. ವಿದ್ವತ್ತು, ವಾಕ್ಕೌಶಲ, ನಿರ್ಭಯ ವೃತ್ತಿ ಮತ್ತು ಉದಾರತೆಗೆ ಹೆಸರಾಗಿದ್ದರು. ಮೊದಲು ಸ್ಥಳೀಯ ಕರ್ನಾಟಕ ವೈಭವ ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದು 1918ರಿಂದ ಆ ಪತ್ರಿಕೆಯ ಸಂಪಾದಕರಾದರು. ಇವರ ದೇಶಾಭಿಮಾನಿ ಬರೆಹಗಳಿಂದ ಅಸಹಕಾರ ಯುಗದಲ್ಲಿ ಪತ್ರಿಕೆಯ ಪ್ರಸಾರ ಬಹಳ ಹೆಚ್ಚಿತು. ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಿರಬೇಕೆಂದು ಪ್ರಯತ್ನಿಸಿದ ಪ್ರಮುಖರಲ್ಲಿ ಇವರೂ ಒಬ್ಬರು. ಬಳಿಕ ಸ್ಥಾಪಿತವಾದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಮೂವರು ಕಾರ್ಯದರ್ಶಿಗಳಲ್ಲಿ ಒಬ್ಬರಾಗಿದ್ದರು. ಕಾಂಗ್ರೆಸ್ಸಿನ ಕರೆಯಂತೆ ವಕೀಲಿಯನ್ನು ಬಿಟ್ಟು ಜಿಲ್ಲೆಯಲ್ಲೆಲ್ಲ ಸಂಚರಿಸಿ ಅಸಹಕಾರದ ಪ್ರಚಾರ ಮಾಡಿದರು. ಭಾಷಣ ಲೇಖನಗಳಿಂದ ಇವರು ಮಾಡಿದ ಪ್ರಚಾರದಿಂದ ಬ್ರಿಟಿಷರು ಇವರ ಮೇಲೆ ಖಟ್ಲೆ ಹಾಕಿದರು. ಇವರು ಜಾಮೀನು ಪಡೆಯದೆ ತುರಂಗವಾಸವನ್ನು ಅನುಭವಿಸಲು ಮುಂದಾದರು. ಆದರೆ ಆ ಕಾಲದಲ್ಲಿ ಕ್ಷಯರೋಗ ಪೀಡಿತರಾಗಿದ್ದರಿಂದ ಕೊನೆಗೆ ಜಾಮೀನುಕೊಟ್ಟು ಹೊರಬರಬೇಕಾಯಿತು. ಅನಂತರ ಇವರು 1922ರ ಜೂನ್ ಕೊನೆಯಲ್ಲಿ ಬಾಗಲಕೋಟೆಯಲ್ಲಿ ತಮ್ಮ 35ನೆಯ ವಯಸ್ಸಿನಲ್ಲಿ ನಿಧನಹೊಂದಿದರು. (ಎಚ್.ಆರ್.ಪಿ.)

**ಜಯಲಕ್ಷ್ಮೀ ಶ್ರೀನಿವಾಸನ್ :** 1911-2001. ಹಿರಿಯ ತಲೆಮಾರಿನ

ಹೆಸರಾಂತ ಲೇಖಕಿ. ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಪುರಸ್ಕೃತರು. 1911 ಡಿಸೆಂಬರ್ 12ರಂದು ತಮಿಳುನಾಡಿನ ಕರೂರು ಜಿಲ್ಲೆ ವಾಂಗಲ್‌ನಲ್ಲಿ ಜನಿಸಿದರು. ಇವರ ತಂದೆ ಎ.ವಿ.ರಾಮನಾಥನ್ ಮೈಸೂರು ಸಂಸ್ಥಾನದಲ್ಲಿ ವಿವಿಧ ಆಡಳಿತ ಹುದ್ದೆಗಳಲ್ಲಿ ಕೆಲಸ ಮಾಡಿ ರಾಜಮಂತ್ರ ಪ್ರವೀಣ ಎಂಬ ಬಿರುದು ಪಡೆದು ನಿವೃತ್ತರಾದ ಅನಂತರ ಭರತಪುರ ಸಂಸ್ಥಾನದ ದಿವಾನರಾಗಿದ್ದರು. ತಾಯಿ ಸೀತಾಲಕ್ಷ್ಮಿ. ಜಯಲಕ್ಷ್ಮಿಯವರಿಗೆ ಒಂಬತ್ತನೆಯ ತರಗತಿಯಲ್ಲಿದ್ದಾಗಲೇ ವಿವಾಹವಾಗಿತ್ತು. ಇವರ ಪತಿ ಶ್ರೀನಿವಾಸನ್ ಐ.ಎ.ಎಸ್. ಅಧಿಕಾರಿಯಾಗಿದ್ದರು. ಜಯಲಕ್ಷ್ಮಿಯವರು ಓದಿದ್ದು ಎಸ್.ಎಸ್.ಎಲ್.ಸಿ. ವರೆಗೆ ಮಾತ್ರ. 'ಸರೋಜ' ಇವರ ಕಾವ್ಯನಾಮ. ಇವರು ಕನ್ನಡ, ಇಂಗ್ಲಿಷ್, ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಪರಿಣತರಾಗಿದ್ದರು. ತಮಿಳು ಮತ್ತು ಕನ್ನಡ ಈ ಎರಡೂ ಭಾಷೆಗಳಲ್ಲಿ ಬರೆಯುತ್ತಿದ್ದರು. ಬೆಂಗಳೂರಿನ ಅರ್ಥಸಾಧಕ ಪತ್ರಿಕೆಯಲ್ಲಿ ಪ್ರಕಟಗೊಂಡ ಗ್ರಾಮೋದ್ಧಾರಕ ರಾಮಚಂದ್ರ ಎಂಬ ಕಾದಂಬರಿ ಇವರ ಮೊದಲ ಪ್ರಕಟಿತ ಕೃತಿ (1929). ಅನಂತರ ಸುಶೀಲೆ ಮತ್ತು ಶಿಶು ಸಂರಕ್ಷಣೆ, ಕುಮುದಿನಿ ಕೃಪಾ ಶಂಕರ್, ಚಂಚಲೆ ಎಂಬ ಮೂರು ಕಾದಂಬರಿಗಳನ್ನು ಬರೆದು ಪ್ರಕಟಿಸಿದರು (1930). ಸುಶೀಲೆ ಮತ್ತು ಶಿಶು ಸಂರಕ್ಷಣೆ ಎಂಬುದು ಭಾರತೀಯ ರೆಡ್ ಕ್ರಾಸ್ ಸೊಸೈಟಿಯಿಂದ ರಾಜ್ಯಾದ್ಯಂತ ವಿತರಣೆಗೊಂಡ ಆರೋಗ್ಯ ಸಂಬಂಧಿತ ಪುಸ್ತಕ.
ಅ ಲಿ ಂ ದ ’

ಇವರ ಸಾಹಿತ್ಯ ರಚನೆ ರಭಸದಿಂದ ಮುಂದುವರಿಯಿತು. ಪರಿಮಳೆ, ಸುಲೋಚನೆ ಮತ್ತು ಪುಷ್ಪಹಾರ (1950), ಪರಿಣಯ (1952) ಎಂಬ ಕಾದಂಬರಿಗಳು ಪ್ರಕಟಗೊಂಡವು. ಸರೋಜ ನಳಿನಿ ಎಂಬುದು ಜೀವನ ಚರಿತ್ರೆ(1937). ದೀಪಾವಳಿ ಮತ್ತು ಇತರ ಕಥೆಗಳು(1940), ಮೊಗ್ಗು, ವಾತ್ಸಲ್ಯ (1943) -ಇವು ಕಥಾ ಸಂಕಲನಗಳು. ಮೂರು ಮುತ್ತುಗಳು (1960), ಮೋಹನ್, ಮಿಠಾಯಿ (1974), ಐಸ್ ಕ್ರೀಂ (1970), ಬೇಡಿ ಬೇಡನ್ ಪವೆಲ್(1979) - ಇವು ಮಕ್ಕಳ ಕಥಾ ಸಂಕಲನಗಳು. ಗೃಹ ವಿಜ್ಞಾನ ಕುರಿತದ್ದು 'ವೈಭವದ ಮನೆ' (1971). ಅಮೆರಿಕೆಯ ಪ್ರವಾಸ, ನಾನು ಕಂಡ ಜರ್ಮನಿ (1970) - ಇವು ಪ್ರವಾಸ ಕಥನಗಳು. ಮೂಢ ನಂಬಿಕೆಗಳು, ಮಹಿಳೆಯರ ಪ್ರಗತಿಗೆ ಅಡ್ಡಿಯಾಗಿರುವ ಸಂಪ್ರದಾಯಗಳು ವರ್ಗಭೇದಗಳು - ಇವುಗಳ ಬಗ್ಗೆ ಇವರು ಬಹುಹಿಂದೆಯೇ ತಮ್ಮ ಹೊಸ ಚಿಂತನೆಗಳನ್ನು ಹರಿಸಿದ್ದರು. ಇವರು ತಮಿಳಿನಲ್ಲೂ ಕಥೆಗಳನ್ನು ಬರೆದಿದ್ದಾರೆ. ಜೊತೆಗೆ ಕನ್ನಡದ ಅನೇಕ ಕೃತಿಗಳನ್ನು ತಮಿಳಿಗೆ ಅನುವಾದಿಸಿದ್ದಾರೆ. ಆರ್. ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ವಾಣಿ ಮತ್ತು ಅ.ನ.ಕೃ. ಅವರ ಕೆಲವು ಕಥೆ ಹಾಗೂ ಕಾದಂಬರಿಗಳನ್ನು ತಮಿಳಿಗೂ ಸಿ.ರಾಜಗೋಪಾಲಾಚಾರಿಯವರ ಕೆಲವು ಕಥೆಗಳನ್ನು ಕನ್ನಡಕ್ಕೂ ಅನುವಾದಿಸಿದ್ದಾರೆ. ಇಂಗ್ಲೆಂಡ್, ಫ್ರಾನ್ಸ್, ಮತ್ತು ಪಶ್ಚಿಮ ಜರ್ಮನಿ ಮೊದಲಾದ ವಿದೇಶಗಳಲ್ಲಿ ಇವರು ಪ್ರವಾಸ ಕೈಗೊಂಡಿದ್ದರು.

ಇವರು ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಇವರಿಗೆ ಹಲವು ಪ್ರಶಸ್ತಿ ಗೌರವಗಳು ಸಂದಿವೆ. ಅವುಗಳಲ್ಲಿ ಪ್ರಮುಖವಾದವು: ಮದರಾಸು ಮಕ್ಕಳ ಸಾಹಿತ್ಯ ಸಮ್ಮೇಳನದ ಸನ್ಮಾನ, ತಿರುಕೋಯಿಲೂರು ತಪೋವನದ ಸ್ವಾಮಿಗಳಿಂದ ವಿದ್ಯಾರತ್ನ ಎಂಬ ಬಿರುದು, ಹೈದರಾಬಾದಿನ ಅಖಿಲ ಭಾರತ ಲೇಖಕಿಯರ ಸಮ್ಮೇಳನದ ಸನ್ಮಾನ, ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅತ್ಯುತ್ತಮ ಲೇಖಕಿ ಎಂಬ ಗೌರವ, ಕರ್ನಾಟಕ ಅಕಾಡೆಮಿಯ ಉತ್ತಮ ಲೇಖಕಿ ಗೌರವ ಪ್ರಶಸ್ತಿ (1979), ಬೆಂಗಳೂರಿನ ಸ್ವರ ಲಿಪಿ ಪ್ರತಿಷ್ಠಾನದ ಲಿಪಿ ಪ್ರಾಜ್ಞೆ ಪ್ರಶಸ್ತಿ, ಶಾಶ್ವತಿ ಸಂಸ್ಥೆಯ ಸನ್ಮಾನ, ಕರ್ನಾಟಕ ಸರ್ಕಾರದ ಅತ್ತಿಮಬ್ಬೆ ಪ್ರಶಸ್ತಿ ಇವರಿಗೆ ಸಂದಿದೆ (2000). ಇವರು 2001 ಮಾರ್ಚ್ 3ರಂದು ನಿಧನಹೊಂದಿದರು. (ಕೆ.ಎಂ.ವಿ.)

**ಜಯವಂತಿದೇವಿ, ಹಿರೇಬೆಟ್ :** 1927-. ಸುಗಮ ಸಂಗೀತ ಕಲಾವಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ 1927 ಏಪ್ರಿಲ್ 24ರಂದು ಜನಿಸಿದರು. ತಂದೆ ಪಡುಕೋಣೆ ರಮಾನಂದರಾಯ, ತಾಯಿ ಸೀತಾದೇವಿ. ಇವರದು ಅತ್ಯಂತ ಸುಸಂಸ್ಕೃತ ಮನೆತನ. ಇವರ ಅಜ್ಜ ಪ್ರಸಿದ್ಧ ಸಮಾಜಸೇವಕ ಮೊಳೆಹಳ್ಳಿ ಶಿವರಾಯರು. ಪಡುಕೋಣೆ ರಮಾನಂದರಾಯರ ತಂದೆ ಪಡುಕೋಣೆ ನರಸಿಂಹರಾಯರು ಮಣ್ಣಿನ ಕಲಾಕೃತಿಗಳನ್ನು ಮಾಡುವುದರಲ್ಲೂ ತೆಂಗಿನಚಿಪ್ಪಿನ ಕಲಾಕೃತಿಗಳನ್ನು ಮಾಡುವುದರಲ್ಲೂ ಪ್ರಸಿದ್ಧರಾಗಿದ್ದರು. ಹೆಸರಾಂತ ಹಿಂದಿಚಿತ್ರನಟ ಗುರುದತ್ ಹಾಗೂ ದಿಗ್ದರ್ಶಕ ಆತ್ಮಾರಾಮ್ ಅವರು ನರಸಿಂಹರಾಯರ ಸಹೋದರರಾದ ಶಿವಶಂಕರ್ ಅವರ ಮಕ್ಕಳು. ಇಂಥ ಕಲಾ ಪರಿಸರದಿಂದಾಗಿ ಸಹಜವಾಗಿಯೇ ಜಯವಂತಿಗೆ ಸಂಗೀತ, ಸಾಹಿತ್ಯ, ನಾಟಕಗಳತ್ತ ಒಲವು ಬೆಳೆದು ಬಂತು. ಇವರ ಸೋದರಿ ಚಂದ್ರಭಾಗಾದೇವಿ (ನೋಡಿ) ಕೂಡ ಪ್ರಸಿದ್ಧ ನೃತ್ಯ ಕಲಾವಿದೆ.

ಜಯವಂತಿದೇವಿಯವರ ಶಾಲಾಶಿಕ್ಷಣ ಪುತ್ತೂರಿನಲ್ಲಿ ಎಂಟನೆಯ ತರಗತಿಯವರೆಗಾಗಿತ್ತು. ಶಿವರಾಮಕಾರಂತರ ಬಾಲವನದಲ್ಲಿಯೂ ಇವರು ಒಂದು ವರ್ಷ ವಿದ್ಯಾರ್ಜನೆ ನಡೆಸಿದರು. ಅನಂತರ ಇವರ ತಂದೆಗೆ ವರ್ಗವಾಗಿ ಮದರಾಸಿಗೆ ತೆರಳಿದ್ದರಿಂದ ಅಲ್ಲಿ ಕನ್ನಡ ಶಾಲೆಯ ಸೌಲಭ್ಯವಿಲ್ಲದೆ ಶಿಕ್ಷಣ ಅರ್ಧಕ್ಕೆ ನಿಂತಿತು. ಅಲ್ಲಿ ಇವರ ನೆರೆಮನೆಯವರಾದ ಪ್ರಸಿದ್ಧ ಚಲನಚಿತ್ರ ನಟ, ನಿರ್ದೇಶಕ, ಸಂಗೀತಗಾರ ವಿ.ನಾಗಯ್ಯನವರು ಇವರ ಸಂಗೀತ ಜ್ಞಾನವನ್ನು ಮನಗಂಡು ಎಚ್.ಎಂ.ವಿ. ಕಂಪನಿಯ ವತಿಯಿಂದ ಭಾಗ್ಯದ ಲಕ್ಷ್ಮಿಬಾರಮ್ಮ, ಹೂವ ತರುವರ ಮನೆಗೆ ಎಂಬ ಎರಡು ಧ್ವನಿಮುದ್ರಿಕೆಗಳನ್ನು ಹೊರತರಲು ಕಾರಣರಾದರು (1944 - 45). ಅವರೇ ಈ ಧ್ವನಿ ಮುದ್ರಿಕೆಗಳಿಗೆ ಸಂಗೀತ ಸಂಯೋಜನೆಯನ್ನು ಮಾಡಿದರು. ತ್ಯಾಗಯ್ಯ ಎಂಬ ಚಲನಚಿತ್ರದಲ್ಲಿ ಗಾಯಕಿಯ ಒಂದು ಪಾತ್ರದಲ್ಲಿಯೂ ಜಯವಂತಿ ಕಾಣಿಸಿಕೊಂಡರು. ಇದೇ ಸಮಯದಲ್ಲಿ ಉದಯಶಂಕರ್ ತಯಾರಿಸಿದ ಕಲ್ಪನಾ ಎಂಬ ಹಿಂದಿ ಚಿತ್ರದಲ್ಲಿ ಹಿನ್ನಲೆ ಗಾಯಕಿಯ ಅವಕಾಶ ಲಭಿಸಿತು. ಇದರಿಂದಾಗಿ ಮದರಾಸಿನ ಆಕಾಶವಾಣಿಯ ಕಲಾವಿದರಾಗಿ ಹಿಂದಿ ಭಜನೆಗಳನ್ನು ಹಾಡಲು ಪ್ರಾರಂಭಿಸಿದರು. ಅನಂತರದ ದಿನಗಳಲ್ಲಿ ಇವರೇ ಸಂಗೀತ ಸಂಯೋಜಕಿಯಾಗಿ ತಾವು ಹಾಡುವ ಹಾಡುಗಳಿಗೆ ರಾಗ ಸಂಯೋಜಿಸಿದರು. ದಿನಕರ್ ಹಿರೇಬೆಟ್ ಎಂಬವರೊಂದಿಗೆ ಇವರ ವಿವಾಹ ನಡೆಯಿತು. ಅನಂತರ ಪುಣೆಗೆ ಬಂದರು (1947). ಇವರು ಹಾಡಿದ ಕನ್ನಡ, ಕೊಂಕಣಿ, ಹಿಂದಿ ಹಾಡುಗಳು ಮುಂಬಯಿ ಆಕಾಶವಾಣಿಯಿಂದ ಪ್ರಸಾರವಾದವು. ಇದಲ್ಲದೆ ದೆಹಲಿ, ಬೆಂಗಳೂರು, ಧಾರವಾಡ ಆಕಾಶವಾಣಿಗಳ ಆಹ್ವಾನಿತ ಶ್ರೋತೃಗಳ ಸಮ್ಮುಖದಲ್ಲಿ ಹಾಡಿ ಜನಪ್ರಿಯ ಗಾಯಕಿ ಎನಿಸಿದರು.

ಇವರ ಸಂಗೀತ ಸೇವೆಯನ್ನು ಗುರುತಿಸಿ ಬೆಂಗಳೂರಿನ ಸಂಗೀತ ಗಂಗಾ ಸಂಸ್ಥೆ ಕನ್ನಡ ಸಂಗೀತ ಸಮ್ಮೇಳನದ ಅಧ್ಯಕ್ಷಸ್ಥಾನವನ್ನಿತ್ತು ಗೌರವಿಸಿದೆ (1966). ಸುಗಮ ಸಂಗೀತ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಇವರಿಗೆ ಕರ್ನಾಟಕ ಸರ್ಕಾರ ಸಂತ ಶಿಶುನಾಳಷರೀಫ್ ಪ್ರಶಸ್ತಿ ನೀಡಿ ಗೌರವಿಸಿದೆ (1995).

ಜಯವಂತಿದೇವಿ ಈಗ ತಮ್ಮ ಪತಿಯೊಂದಿಗೆ ಪುಣೆಯಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. (ಎಚ್.ಆರ್.ಎಲ್.)

**ಜಯವೆಂಕಟಾಚಾರ್ಯ :** ಸು.1727. ಕನ್ನಡದಲ್ಲಿ ವಿರಳವಾಗಿರುವ ದಂಡಕ ಹಾಗೂ ಭಟ್ಟಂಗಿಗಳ ಕರ್ತೃ. ಒಂದು ಗಳಿಗೆಯಲ್ಲಿ ನೂರು ಶ್ಲೋಕಗಳನ್ನು ರಚಿಸಬಲ್ಲ ಹೆಗ್ಗಳಿಕೆ ತನ್ನದೆಂದು ಹೇಳಿಕೊಂಡಿದ್ದಾನಾದರೂ ಈಗ ಉಪಲಬ್ಧವಾಗಿರುವುದು ಈತನ ಒಂದು ದಂಡಕ ಮತ್ತು ಇಪ್ಪತ್ತೆಂಟು ಭಟ್ಟಂಗಿಗಳು ಮಾತ್ರ. ಇಂದಿನ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಕನಕಗಿರಿ ಈತನ ಸ್ಥಳ. ಶ್ರೀನಿಧಿ ಆಚಾರ್ಯ ಈತನ ತಂದೆ ಹಾಗೂ ಗುರು. ಕನಕಗಿರಿ ಸಂಸ್ಥಾನವನ್ನು ಅಂದಿಗೆ ಆಳುತ್ತಿದ್ದ ರಂಗಪ್ಪನಾಯಕ ಕವಿಗೆ ಆಶ್ರಯವಿತ್ತಂತೆ ತಿಳಿದುಬರುತ್ತದೆ. ಈತನ ವಂಶದವರಿಗೆ ಅರಳಿಹಳ್ಳಿ, ನರಸಾಪುರ ಎಂಬ ಹಳ್ಳಿಗಳು ಜಹಗೀರುಗಳಾಗಿ ಮೊನ್ನೆ ಮೊನ್ನೆಯವರೆಗೂ ಅನುಭೋಗದಲ್ಲಿದ್ದವು. ಈತ ಬಾಲ್ಯದಲ್ಲಿ ಚಂಚಲಚಿತ್ತನಾಗಿದ್ದು ಸಂಜೀವ ಮುಖ್ಯ ಪ್ರಾಣನ ವರದಿಂದ ಪಾಂಡಿತ್ಯ ಸಂಪಾದಿಸಿದನೆಂದು ಜನಜನಿತ ಕಥೆ. ಒಮ್ಮೆ ಅದ್ವೈತ ಸನ್ಯಾಸಿಯೊಬ್ಬನೊಂದಿಗೆ ವಾದವಿವಾದದಲ್ಲಿ ಕೈಗೆ ಕೈ ಹತ್ತಿ ಈತ ಮುಸ್ಲಿಮ್

ನ್ಯಾಯಾಧೀಶನ ಎದುರಿಗೆ ನಿಲ್ಲುವ ಪ್ರಸಂಗ ಬಂತಂತೆ. ಸಮಯ ಸ್ಫೂರ್ತಿಯಿಂದ ದ್ವೈತ ಮತ್ತು ಇಸ್ಲಾಂನ ಸಮನ್ವಯವನ್ನು ಈತ ಸಾರಿದ ರೀತಿ ಕುತೂಹಲಕರವಾಗಿದೆ. ಆ ಪದ್ಯ ಹೀಗಿದೆ:

ಅಲ್ಲಾ ದೇವೋ ದೇವಪೂಜಾ ನಮಾಜಾ
ಖಾಜೀ ವಿದ್ವಾನ್ ಪಂಡಿತಃ ತತ್ರ ಮುಲ್ಲಃ
ಪುರಾಣಃ ಕುರಾನಃ ಕಿತಾಬಂ ಚ ಶಾಸ್ತ್ರಂ
ಭಾಷಾಭೇದೋ ನೈವ ಶಾಸ್ತ್ರೇಷು ಭೇದಃ

ಈತ ವಿಪುಲವಾಗಿ ದೇಶಾಟನ ಮಾಡಿದ್ದನೆಂದು ಇವನ ಒಂದು ಭಟ್ಟಂಗಿಯಿಂದ ತಿಳಿಯುತ್ತದೆ. ಬಾಲ್ಯದಲ್ಲಿ ತಾನು ರಸಿಕ ಜೀವನಕ್ಕೆ ಮಾರುಹೋಗಿದ್ದುದು, ಕನಕಗಿರಿಯ ಮೇಲೆ ಆದ ದಾಳಿ, ತನಗೆ ಕೊನೆಗಾಲಕ್ಕೆ ಬಂದ ಕಷ್ಟಗಳು ಮೊದಲಾದವನ್ನು ಕವಿ ತನ್ನ ಕೃತಿಯಲ್ಲಿ ಸೂಚ್ಯವಾಗಿ ತಿಳಿಸಿದ್ದಾನೆ. ಈತನ ಭಟ್ಟಂಗಿಗಳಲ್ಲಿ ಕಾವ್ಯಸೌಂದರ್ಯವನ್ನೂ ಕಾಣಬಹುದು. ಈ ಕವಿಯ ದೃಷ್ಟಿಗೆ ಲಕ್ಷ್ಮೀದೇವಿ 'ಮದನನು ಮತ್ತೆ ತನ್ನ ಜೈಭೇರಿಯ ಹೊಯ್ಸುತಾ| ಕದನದಿ ಮೂರು ಲೋಕವ ಗೆದ್ದಮೇಲೆ ಫಲವಿಲ್ಲದ ಭೇರಿಯ ಡಬ್ಬುಹಾಕಿ ತನ್ನ ಹಸನದಿ ತೋರ್ಪ ಕುಚಕುಂಭಗಳೊಳ್ ಸಮಸ್ತ ಸೌಂದರೀ ಅಮಿತಗುಣಾಭಿರಾಮ ಕನಕಾಚಲರಂಗನ ಪಟ್ಟದೊಲ್ಲಭೆ'ಯಾಗಿ ಕಾಣುತ್ತಾಳೆ. ಈತನಿಗೆ ಭಾಷೆಯ ಮೇಲಿದ್ದ ಹಿಡಿತಕ್ಕೆ 'ಅಂಬೇ ದಯಾಕದಂಬೇ ನೆರೆನಂಬಿದೆ ನಿನ್ನ ಪದಾಂಬುಜದ್ವಯಾ' ಮುಂತಾದ ಪಂಕ್ತಿಗಳು ಸಾಕ್ಷಿಯಾಗಿವೆ. ಈ ಕವಿ ಪಡೆದ ದರ್ಶನ ಇಲ್ಲಿದೆ:

ಮೇರೂ ಪೀಠವಾಗಿ ಇನಚಂದ್ರರು ತಾವು ಸೂರ್ಯಪಾನಗಳಾಗಿ
ತಾರಕೆಯು ದಿವ್ಯ ಪುಷ್ಪಗಳಾಗಿ ಧ್ರುವಮಂಡಳವು ದೀಪ್ತಕಿರೀಟವಾಗಿ
ಧಾರುಣಿಯು ರಾಣಿಯಾಗಿ ಶ್ರೀದೇವಿಯು ಭೂಷಣವಾಗಿ
ಪಾರ್ವತಿಯು ದಿವಾಣಕಾಯ್ದು ವಿಭವ ರಕ್ಷಿಸೋ ವೆಂಕಟಶೈಲವಲ್ಲಭಾ

ಈತನ ದಂಡಕದ ಶೈಲಿಯೂ ಮನೋಹರವಾದುದು. ಈತ ಸಂಸ್ಕೃತ ಗ್ರಂಥಗಳನ್ನೂ ರಚಿಸಿರುವನೆಂದು ಪ್ರತೀತಿ. ಆದರೆ ಈತನವೆಂದು ಹೇಳಲಾಗುವ ಒಂದೆರಡು ಶ್ಲೋಕಗಳ ಹೊರತು ಯಾವ ಗ್ರಂಥವೂ ಇದುವರೆಗೆ ದೊರೆತಿಲ್ಲ. (ಜೆ.ಆರ್.ಪಿ.)

**ಜಯಶ್ರೀ, ಬಿ. :** 1950-. ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ರಂಗದ ಪ್ರಸಿದ್ಧ ಕಲಾವಿದೆ. ಕನ್ನಡ ರಂಗಭೂಮಿಯ ಪಿತಾಮಹ ಗುಬ್ಬಿವೀರಣ್ಣನವರ (ನೋಡಿ) ಮೊಮ್ಮಗಳು. 1950 ಜೂನ್ 9ರಂದು ಬೆಂಗಳೂರಿನಲ್ಲಿ ಜನಿಸಿದರು. ರಂಗಭೂಮಿ ಕಲಾವಿದರಾದ ಕೆ.ಎಸ್.ಬಸವರಾಜ್ ಹಾಗೂ ಮಾಲತಮ್ಮ ಇವರ ತಂದೆ ತಾಯಿಗಳು. ರಂಗಭೂಮಿ ಇವರ ವಂಶಕ್ಕೆ ಅಂಟಿಕೊಂಡು ಬಂದ ನಂಟು.

ಜಯಶ್ರೀ ಅವರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಿಂದ (ಎನ್.ಎಸ್.ಡಿ.) ಪದವಿ ಪಡೆದರು (1973). ಇ.ಅಲ್ಕಾಜಿ, ಬಿ.ವಿ.ಕಾರಂತ, ಜಿ.ವಿ.ಶಿವಾನಂದ್, ಪ್ರಸನ್ನ, ನಾಗಾಭರಣ, ಅಶೋಕ್ ಮಂದಣ್ಣ, ಚಿ.ಶ್ರೀನಿವಾಸಪ್ರಭು, ಶಂಕರನಾಗ್, ಎಂ.ಎಸ್.ಸತ್ಯು, ರಾಣೀರಾವ್ ಮತ್ತು ಸುರೇಂದ್ರನಾಥ್ ಮೊದಲಾದವರ ನಿರ್ದೇಶನದ ಕುರುಡು ಕಾಂಚಾಣ, ಜೋಕುಮಾರಸ್ವಾಮಿ, ಟಿಂಗರಬುದ್ಧಣ್ಣ, ಹಯವದನ, ಚೆಗೆವಾರ, ತಾಯಿ, ಅಂತಿಮಯಾತ್ರೆ, ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ, ಬ್ಯಾರಿಸ್ಟರ್, ನಾಗಮಂಡಲ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ ಹೆಗ್ಗಳಿಕೆ ಇವರದು.

ಜಯಶ್ರೀ ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಜನಪದ ಕಲೆಗಳನ್ನು ಕುರಿತಂತೆ ಸಂಶೋಧನೆ ಮಾಡಿ ಅವುಗಳನ್ನು ರಂಗಭೂಮಿಗೆ ಅಳವಡಿಸಿ ಪ್ರಯೋಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಘಾಶಿರಾಮ್ ಕೊತ್ವಾಲ್, ಜಸ್ಮಾಓಡಾನ್, ನೀಲಿಕುದುರೆ, ಕರಿಮಾಯಿ, ಯಕ್ಷನಗರಿ, ಲಕ್ಷಾಪತಿ ರಾಜನಕಥೆ, ವೈಶಾಖ, ಅಗ್ನಿಪಥ, ಸಿರಿಸಂಪಿಗೆ, ಚಿತ್ರಪಟ ಮೊದಲಾದವು ಇವರು ನಿರ್ದೇಶಿಸಿದ ನಾಟಕಗಳು. ಈ ನಾಟಕಗಳನ್ನು ಸ್ಪಂದನ ನಾಟಕ ತಂಡದ ಮೂಲಕ ಪ್ರಯೋಗಿಸಿದ್ದಾರೆ. ಇವರು ನಿರ್ದೇಶಿಸಿದ ಲಕ್ಷಾಪತಿರಾಜನ ಕಥೆ ಕೈರೋ ಮತ್ತು ತಾಷ್ಕೆಂಟ್ ನಗರಗಳಲ್ಲಿ ನಡೆದ ಅಂತಾರಾಷ್ಟ್ರೀಯ ನಾಟಕೋತ್ಸವಗಳಲ್ಲಿ ಭಾರತವನ್ನು ಪ್ರತಿನಿಧಿಸಿತು.

ಕುರಿದೊಡ್ಡಿ ಕುರುಕ್ಷೇತ್ರ, ನಾಗಮಂಡಲ, ಕೌರವ, ಕೊಟ್ರೇಶಿ ಕನಸು ಮೊದಲಾದ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಜೊತೆಗೆ

ಕಂಠದಾನ ಕಲಾವಿದೆಯಾಗಿ ರಾಜ್ ಸಂಸ್ಥೆಯ ಚಿತ್ರಗಳ ನಾಯಕಿಯರಿಗೆ ದನಿ ಕೊಟ್ಟಿದ್ದಾರೆ. ಚಿತ್ರರಂಗದಲ್ಲಿ ಹಾಗೂ ನಾಟಕ ರಂಗದಲ್ಲಿ ತಮ್ಮ ವಿಶಿಷ್ಟ ಕಂಠಸಿರಿಗೆ ಹೆಸರುವಾಸಿಯಾಗಿದ್ದಾರೆ. ಆದಿತ್ಯ ಚಿತ್ರದ 'ರಂಭೆ ನೀ ವಯ್ಯಾರದ ರಂಭೆ', ಯಾರೇ ನೀನು ಚೆಲುವೆ ಚಿತ್ರದ 'ಚಕ್ಕೋತ ಚಕ್ಕೋತ', ನಾಗಮಂಡಲ ಚಿತ್ರದ 'ಗೆದಿಯಬೇಕು ಮಗಳಾ' ನಾಗತಿಹಳ್ಳಿ ಚಂದ್ರಶೇಖರ್ ರವರ ನನ್ನ ಪ್ರೀತಿಯ ಹುಡುಗಿ ಚಿತ್ರದ 'ಕಾರ್‌ಕಾರ್' ಮುಂತಾದ ಗೀತೆಗಳಿಂದ ಹಿನ್ನೆಲೆ ಗಾಯಕಿಯಾಗಿ ಚಿತ್ರರಸಿಕರ ಮನಸೂರೆಗೊಂಡಿದ್ದಾರೆ. ಹಿನ್ನೆಲೆಗಾಯನಕ್ಕಾಗಿ ಇವರಿಗೆ ಹಲವು ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಈಜಿಪ್ಟ್, ರಷ್ಯ, ಸ್ವೀಡನ್ ನಾಟಕೋತ್ಸವಗಳಲ್ಲಿಯೂ ಇವರು ಭಾಗವಹಿಸಿದ್ದಾರೆ. ಎಡಿನ್‌ಬರ್ಗ್‌ನಲ್ಲಿ ನಿರ್ದೇಶಕ ರಾಬರ್ಟ್ ರೇ ಅವರೊಂದಿಗೆ ಮಕ್ಕಳ ನಾಟಕದ ಸಹ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಿದ್ದಾರೆ (1977).

ನಾಡಿನಾದ್ಯಂತ ರಂಗಭೂಮಿ ಹಾಗೂ ಚಲನಚಿತ್ರಕ್ಕೆ ಇವರು ಸಲ್ಲಿಸಿರುವ ಸೇವೆಗಾಗಿ ಹಲವು ಪ್ರಶಸ್ತಿಗಳು ಪುರ ಸ್ಕಾರಗಳು ದೊರೆತಿವೆ. ಅವುಗಳಲ್ಲಿ ಮುಖ್ಯವಾದವು ಉತ್ತರ ಪ್ರದೇಶ ಸರ್ಕಾರದ ಸಫ್ದರ್ ಹಷ್ಮಿ ಪ್ರಶಸ್ತಿ (1991), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1996), ದೆಹಲಿಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1997), ನಾಗಮಂಡಲ ಚಿತ್ರದ ಕುರು ಡವ್ವನ ಪಾತ್ರಾ ಭಿನಯಕ್ಕಾಗಿ ಇವರಿಗೆ ಕರ್ನಾಟಕ ಸರ್ಕಾರ ನೀಡುತ್ತಿರುವ ಚಲನಚಿತ್ರ ಪ್ರಶಸ್ತಿಯಲ್ಲಿ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಲಭಿಸಿದೆ (1996-97). (ಎಸ್.ಜಿ.ಪಿ.)

**ಜಯಸಿಂಹ II :** ಸು.1015-44. ಕಲ್ಯಾಣದ ಚಾಲುಕ್ಯ ಮನೆತನದ ರಾಜ. ಐದನೆಯ ವಿಕ್ರಮಾದಿತ್ಯನ ಕಿರಿಯ ತಮ್ಮ ಮತ್ತು ಉತ್ತರಾಧಿಕಾರಿ. ಸಿಂಗದೇವ ಎಂಬುದು ಇವನ ಇನ್ನೊಂದು ಹೆಸರು. ಒಂದನೆಯ ಜಗದೇಕಮಲ್ಲ ಎಂದೂ ಪ್ರಸಿದ್ಧನಾಗಿರುವ ಈತನಿಗೆ ತ್ರೈಲೋಕ್ಯಮಲ್ಲ, ಮಲ್ಲಿಕಾಮೋದ, ವಿಕ್ರಮಸಿಂಹ ಎಂಬ ಬಿರುದುಗಳೂ ಇದ್ದುವು. ಇವನ ಆಳಿಕೆಯ ಆರಂಭದ ವರ್ಷಗಳಲ್ಲಿ ಪರಮಾರ ವಂಶದ ಭೋಜ, ಕಳಚುರಿ ಗಾಂಗೇಯದೇವ ಮತ್ತು ಚೋಳ ರಾಜೇಂದ್ರ ಒಂದುಗೂಡಿ ಚಾಳುಕ್ಯ ರಾಜ್ಯವನ್ನು ಆಕ್ರಮಿಸುವ ಸನ್ನಾಹ ನಡೆಸಿದರು. ಗೋದಾವರಿ ದಂಡೆಯಲ್ಲಿ ನಡೆದ ಘೋರ ಯುದ್ಧದಲ್ಲಿ ಜಯಸಿಂಹ ಈ ಶತ್ರುಕೂಟವನ್ನು ಹಿಮ್ಮೆಟ್ಟಿಸಿದ. ಇದೇ ಸಂದರ್ಭದಲ್ಲಿ ಚೋಳ ರಾಜೇಂದ್ರ ರಾಜಧಾನಿ ಮಾನ್ಯಖೇಟವನ್ನು ಸುಟ್ಟ. ಭೋಜ ಕೊಂಕಣದ ಮೇಲೆ ದಾಳಿ ಮಾಡಿದ. ಆದರೆ ಶೀಘ್ರದಲ್ಲೇ ಜಯಸಿಂಹ ಚೇತರಿಸಿಕೊಂಡು ತನ್ನ ರಾಜ್ಯವನ್ನು ಸ್ಥಿರಪಡಿಸಿಕೊಂಡ. ಈ ಸಾಧನೆಗಳಿಗೆ ಇವನ ದಂಡನಾಯಕ ವಾವಣರಸ ಮುಖ್ಯ ಕಾರಣನಾಗಿದ್ದ.

ಜಯಸಿಂಹ ತನ್ನ ರಾಜ್ಯದಲ್ಲಿ ಶತ್ರುನಿಗ್ರಹ ಯಶಸ್ವಿಯಾಗಿ ಸಾಧಿಸಿದರೂ ಹೊರಗೆ ಅವರಿನ್ನೂ ಪ್ರಬಲರಾಗಿದ್ದರು. ಅವರಲ್ಲಿ ಚೋಳ ರಾಜೇಂದ್ರ ಸದಾ ದ್ವೇಷ ಮಸೆಯುತ್ತಲೇ ಇದ್ದ. ಈ ಕಾಲದಲ್ಲಿ ಚೋಳರು ವೆಂಗಿಯ ರಾಜಕೀಯದಲ್ಲಿ ಪ್ರಭಾವಿಯಾಗಿದ್ದರು. ಆಗ ಅಲ್ಲಿ

ಆಳುತ್ತಿದ್ದವನು ಚೋಳರ 1ನೆಯ ರಾಜರಾಜ ಚೋಳ ರಾಜೇಂದ್ರನ ಅಳಿಯ. ಆದರೆ ಜಯಸಿಂಹ ವೆಂಗಿಯ 7ನೆಯ ವಿಜಯಾದಿತ್ಯನನ್ನು ಅಲ್ಲಿಯ ಪ್ರಭುವಾಗಿಸಲು ಪ್ರಯತ್ನಿಸಿದ. ಇದರಿಂದಾಗಿ ಚೋಳ ರಾಜೇಂದ್ರನಿಗೂ ಜಯಸಿಂಹನಿಗೂ ಮುಸಂಗಿಯಲ್ಲಿ (ರಾಯಚೂರು ಜಿಲ್ಲೆಯ ಮಸ್ಕಿ) ಘೋರ ಯುದ್ಧ ನಡೆಯಿತು (ಸು.1021). ಮೊದಲು ಚಾಳುಕ್ಯರ ಬಲ ಹಿಂಜರಿದರೂ ಕೊನೆಗೆ ಇವರ ಕೈ ಮೇಲಾಯಿತು. 1031ರ ಹೊತ್ತಿಗೆ ಜಯಸಿಂಹನ ದಂಡನಾಯಕ ವಾವಣರಸ ವೆಂಗಿಗೆ ನುಗ್ಗಿ ವಿಜಯವಾಡವನ್ನು ಆಕ್ರಮಿಸಿದ್ದ. ಪ್ರಾಯಶಃ ಈ ದಾಳಿ 7ನೆಯ ವಿಜಯಾದಿತ್ಯನ ಪರವಾಗಿ ನಡೆದದ್ದು. ವಿಜಯಾದಿತ್ಯ ವೆಂಗಿ ಸಿಂಹಾಸನವನ್ನೇರಿದ. ಆದರೆ ಈ ಸಾಧನೆ ಬಹುಕಾಲ ನಿಲ್ಲಲಿಲ್ಲ. ಕೆಲವೇ ವರ್ಷಗಳಲ್ಲಿ ಒಂದನೆಯ ರಾಜರಾಜ ಪುನಃ ವೆಂಗಿಯನ್ನು ಗೆದ್ದುಕೊಂಡ.

ಜಯಸಿಂಹ ಸು.1044ರಲ್ಲಿ ಮೃತನಾದ. ಅನಂತರ ಇವನ ಹಿರಿಯ ಮಗ 1ನೆಯ ಸೋಮೇಶ್ವರ ಪಟ್ಟಕ್ಕೆ ಬಂದ. ಇವನಲ್ಲದೆ ಸಮರೈಕಮಲ್ಲನೆಂಬ ಬಿರುದು ಧರಿಸಿದ್ದ ಜಯಸಿಂಹ ಎಂಬ ಇನ್ನೊಬ್ಬ ಪುತ್ರ ಸಹ ಇಮ್ಮಡಿ ಜಯಸಿಂಹನಿಗಿದ್ದ. ಸುಗ್ಗಲದೇವಿ, ನೊಳಂಬ ವಂಶದ ದೇವಲದೇವಿ ಮತ್ತು ಲಕ್ಷ್ಮೀದೇವಿ ಎಂಬುವರು ಇಮ್ಮಡಿ ಜಯಸಿಂಹನ ಪತ್ನಿಯರು. ಸುಗ್ಗಲದೇವಿ ಶೈವ ಪಂಥಾನುಯಾಯಿ ಎಂದು ಶಾಸನಗಳಿಂದ ತಿಳಿಯುತ್ತದೆ. ಜೈನನಾಗಿದ್ದ ಜಯಸಿಂಹ ಈಕೆಯ ಪ್ರಭಾವದಿಂದ ಶೈವಮತವನ್ನವಲಂಬಿಸಿದ ಎಂಬ ಹೇಳಿಕೆ ಬಸವಪುರಾಣದಲ್ಲಿದೆ. ಈಕೆ ದೇವರ ದಾಸಿಮಯ್ಯನೆಂಬ ವೀರಶೈವ ಶರಣನ ಭಕ್ತೆಯಾಗಿದ್ದಳು ಎಂಬ ಹೇಳಿಕೆಯೂ ಉಂಟು. ಜಯಸಿಂಹನ ಮಗಳಾದ ಅವ್ವಲ್ಲದೇವಿ ಯಾದವ ಮಾಂಡಳಿಕ ಮೂರನೆಯ ಭಿಲ್ಲಮನನ್ನು ವರಿಸಿದ್ದಳು. ಜಯಸಿಂಹನ ಅಕ್ಕ ಅಕ್ಕಾದೇವಿ ಕದಂಬ ರಾಜನನ್ನು ಮದುವೆಯಾಗಿದ್ದಳು. ರಣಭೈರವಿ ಎಂಬ ಬಿರುದನ್ನು ಹೊಂದಿ ಪ್ರಾಯಶಃ ಯುದ್ಧ ನಿಪುಣೆಯಾಗಿದ್ದ ಈಕೆ ಕಿಸುಕಾಡನ್ನು ಆಳುತ್ತಿದ್ದಳು.

ಜಯಸಿಂಹನ ಆಸ್ಥಾನದಲ್ಲಿ ಹಿರಿಯ ಅಧಿಕಾರಿಯಾಗಿದ್ದ (ಸಂಧಿವಿಗ್ರಹಿ) ದುರ್ಗಸಿಂಹ ಕನ್ನಡ ಪಂಚತಂತ್ರವನ್ನು ಬರೆದಿದ್ದಾನೆ. ಎರಡನೆಯ ಚಾವುಂಡರಾಯ ಜೋತಿಶ್ಯಾಸ್ತ್ರ, ಆಯುರ್ವೇದ, ಪಾಕಶಾಸ್ತ್ರ, ವಾಸ್ತುವಿದ್ಯೆ ಮುಂತಾದ ವಿಚಾರಗಳಿಗೆ ಸಂಬಂಧಿಸಿದ ಸಂಗತಿಗಳಿರುವ ಲೋಕೋಪಕಾರ ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದ. ಜಯಸಿಂಹನ ಆಸ್ಥಾನಿಕನಾಗಿದ್ದ ವಾದಿರಾಜ ಸಂಸ್ಕೃತದಲ್ಲಿ ಯಶೋಧರ ಚರಿತಂ ಎಂಬ ಜೈನಕಾವ್ಯವನ್ನು ರಚಿಸಿದ್ದಾನೆ. (ಕೆ.ಎಸ್.ಎಸ್.,ಟಿ.ಎಸ್.ಎಸ್.ಎನ್.)

**ಜಯಸಿಂಹ III :** ಕಲ್ಯಾಣದ ಚಾಳುಕ್ಯ ಮನೆತನದ ಯುವರಾಜ (ಸು.1072-80). ಮೊದಲನೆಯ ಸೋಮೇಶ್ವರನ ಮಗ. ಈತ ರಾಜನಾಗಿ ಆಳ್ವಿಕೆ ನಡೆಸದಿದ್ದರೂ ಇವನ ಅಣ್ಣ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಪ್ರಸಿದ್ಧಿಗೆ ಬಂದ.

ಎರಡನೆಯ ಸೋಮೇಶ್ವರನ ಆಡಳಿತದ ಕಾಲದಲ್ಲಿ ಮೂರನೆಯ ಜಯಸಿಂಹ ನೊಳಂಬವಾಡಿ ಪ್ರಾಂತ್ಯಕ್ಕೆ ಅಧಿಪತಿಯಾಗಿ 1072ರಲ್ಲಿ ಆಳಿಕೆ ನಡೆಸುತ್ತಿದ್ದನೆಂದೂ ಅವನ ರಾಜಧಾನಿ ಗೌಡವಾಡಿಯಾಗಿತ್ತೆಂದೂ ಚಿತ್ರದುರ್ಗದ ಜಟಂಗರಾಮೇಶ್ವರದ ಶಾಸನದಿಂದ ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ಈತ ತ್ರೈಲೋಕ್ಯಮಲ್ಲ ನೊಳಂಬ ಪೆರ್ಮಾನಡಿ ಎಂಬ ಬಿರುದನ್ನೂ ಧರಿಸಿದ್ದ. 6ನೆಯ ವಿಕ್ರಮಾದಿತ್ಯ ಸಿಂಹಾಸನವನ್ನೇರಿದ ಮೇಲೆ, ಮೂರನೆಯ ಜಯಸಿಂಹ ಅವನಿಗೆ ಸ್ವಲ್ಪಕಾಲ ನೆರವಿಗೆ ನಿಂತು ರಾಜ್ಯ ವಿಸ್ತರಣೆಯಲ್ಲೂ ದಂಗೆಗಳನ್ನು ಅಡಗಿಸುವುದರಲ್ಲೂ ಸಹಾಯ ಮಾಡಿದ. ಮೂರನೆಯ ಜಯಸಿಂಹ ಬನವಾಸಿ 12000, ಸಾಂತಲಿಗೆ 1000, ಬೆಳ್ವೊಲ 300, ಪುಲಿಗೆರೆ 300 ಮತ್ತು ಬಾಸವಳ್ಳಿ 1000 ಪ್ರದೇಶಗಳನ್ನು 6ನೆಯ ವಿಕ್ರಮಾದಿತ್ಯನ ಕಾಲದಲ್ಲಿ ಮಹಾಮಂಡಳೇಶ್ವರನಾಗಿ 1080ರವರೆಗೆ ಆಳಿಕೆ ನಡೆಸಿದನೆಂದು ಶಾಸನಗಳಿಂದ ಗೊತ್ತಾಗುತ್ತದೆ. ಮಹಾಮಂಡಳೇಶ್ವರನಾಗಿದ್ದ ಕಾಲದಲ್ಲಿ ಇವನಿಗೆ ಯುವರಾಜ ಎಂಬ ಬಿರುದಿತ್ತು. 1080ರವರೆಗೆ ಅಣ್ಣ ತಮ್ಮಂದಿರಲ್ಲಿ ಸ್ನೇಹವಿದ್ದಂತೆ ತೋರುತ್ತದೆ. ಆದರೆ ಅಣ್ಣನಾದ 6ನೆಯ ವಿಕ್ರಮಾದಿತ್ಯನ ಉತ್ತರೋತ್ತರಾಭಿವೃದ್ಧಿ ತಮ್ಮನ ಮನಸ್ಸಿನಲ್ಲಿ ಮಾತ್ಸರ್ಯವನ್ನು ಮೂಡಿಸಿದಂತೆ ತೋರುತ್ತದೆ. ಅಣ್ಣನನ್ನು ಪಟ್ಟದಿಂದ ಕಿತ್ತೊಗೆಯುವ ಹವಣಿಕೆಯಿಂದ ಜಯಸಿಂಹ ದಂಗೆಯೆದ್ದ. ತಮ್ಮನ ವಂಚನೆಯಿಂದ ಪ್ರಕ್ಷುಬ್ಧ ಹೃದಯನಾದ ವಿಕ್ರಮಾದಿತ್ಯ ಸೈನ್ಯ ಸಮೇತನಾಗಿ ಕೃಷ್ಣಾನದೀ ದಡಕ್ಕೆ ನಡೆದ. ಅಲ್ಲಿ ಅವನ ಸಾಮಂತರೂ ಬಂದು ಸೇರಿಕೊಂಡರು. ಅಣ್ಣ ತಮ್ಮಂದಿರೊಳಗೆ ಭೀಕರ ಕದನ ನಡೆಯಿತು. ವಿಕ್ರಮಾದಿತ್ಯ ಗೆದ್ದು, ಜಯಸಿಂಹನನ್ನು ಹಿಡಿದು ಕೊಂಚ ಕಾಲ ಸೆರೆಯಲ್ಲಿಟ್ಟ (ಸು.1080). ಇದರ ಅನಂತರ ಇವನ ವಿಷಯವೇನೂ ತಿಳಿಯುವುದಿಲ್ಲ. ಆದರೆ ಜಯಸಿಂಹ ವಿಕ್ರಮಾದಿತ್ಯನಿಗಿಂತ ಮೊದಲೇ ಮೃತನಾದಂತೆ ತೋರುತ್ತದೆ. (ಕೆ.ಎಸ್.ಎಸ್.)

**ಜರಮಲೆ :** ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಕೂಡ್ಲಿಗಿಯ ನೈಋತ್ಯಕ್ಕೆ ಸು.15ಕಿಮೀ ದೂರದಲ್ಲಿರುವ ಒಂದು ಬೆಟ್ಟ ಹಾಗೂ ಹಳ್ಳಿ. ಸಮುದ್ರಮಟ್ಟದಿಂದ 2,750' ಎತ್ತರವಿದ್ದು ಸುತ್ತಲ ಪ್ರದೇಶದಿಂದ 800' ಮೇಲ್ಮಟ್ಟದಲ್ಲಿರುವ ಈ ಬೆಟ್ಟ ಸುತ್ತಲ ಪ್ರದೇಶಕ್ಕೆ ಮುಖ್ಯ ಗುರುತು ತಾಣದಂತಿದೆ. ಬೆಟ್ಟದ ಮೇಲೆ ಒಂದು ಕೋಟೆ ಇದೆ. ಅದು ಬಹುಮಟ್ಟಿಗೆ ಶಿಥಿಲವಾಗಿದೆ.

ಜರಮಲೆ ಹಿಂದೊಮ್ಮೆ ಪಾಳೆಯಗಾರರ ಆವಾಸಸ್ಥಾನವಾಗಿತ್ತು. ಈ ಪಾಳೆಯಗಾರರ ಮೊದಲಿಗ ಪೆನ್ನಪ್ಪನಾಯಕ. ಇವನು ವಿಜಯನಗರದ ಅಚ್ಯುತರಾಯನ ಕಾಲದಲ್ಲಿ ದಂಗೆಕೋರ ಮುಖಂಡನೊಬ್ಬನನ್ನು ಅಡಗಿಸುವುದರಲ್ಲಿ ಸಹಕರಿಸಿದ್ದರಿಂದ ಜರಮಲೆಯನ್ನು ಬಳುವಳಿಯಾಗಿ ಪಡೆದನಲ್ಲದೆ, 15300 ಪಗೋಡ ಬೆಲೆಬಾಳುವ ವೈಯಕ್ತಿಕ ಜಹಗೀರಿಯನ್ನೂ 35150 ಪಗೋಡ ಬೆಲೆಬಾಳುವ ಭೂಮಿಯನ್ನೂ ಬಹುಮಾನವಾಗಿ ಪಡೆದ. ಜರಮಲೆಯ ಪಾಳೆಯಗಾರರು ವಿಜಯನಗರದ ಪ್ರಭುತ್ವಕ್ಕೆ ಅಧೀನರಾಗಿದ್ದರು. ಅವರು ಯುದ್ಧ ಕೈಗೊಂಡ ಸಮಯಗಳಲ್ಲಿ 500 ಅಶ್ವಗಳು ಮತ್ತು 3000 ಕಾಲಾಳು ಸೈನ್ಯವನ್ನು ಒದಗಿಸುವ ಕರಾರು ಮಾಡಿಕೊಂಡಿದ್ದರು.

ವಿಜಯನಗರದ ಪತನದ ಅನಂತರ ಜರಮಲೆಯ ಅನೇಕ ಭಾಗಗಳು ಬಿಜಾಪುರದ ಆದಿಲ್ ಷಾನ ಕೈವಶವಾದವು. ಉಳಿದ ಸ್ವಲ್ಪ ಪ್ರದೇಶಗಳು ಇವರ ವಶದಲ್ಲಿದ್ದರೂ ಅವುಗಳಿಂದ ಬಂದ ಬಹುಭಾಗದ ಆದಾಯವನ್ನು ಸುಲ್ತಾನನಿಗೆ ಒಪ್ಪಿಸಬೇಕಿತ್ತು. ವರ್ಷವೊಂದಕ್ಕೆ 30,000 ರೂಪಾಯಿಗಳಲ್ಲದೆ ಯುದ್ಧ ಸಮಯದಲ್ಲಿ 300 ಅಶ್ವಗಳು ಮತ್ತು 3,000 ಸೈನಿಕರನ್ನು ಒದಗಿಸುವ ಒಪ್ಪಂದವಿತ್ತು. ಬಿಜಾಪುರದ ಪತನಾನಂತರ ಈ ಪಾಳೆಯಗಾರರು ಮುಗಲರ ಅಧೀನರಾದರು. ಔರಂಗಜೇಬನ ಕಾಲದಲ್ಲಿ ವಾರ್ಷಿಕ ತೆರಿಗೆ 50,000 ರೂಪಾಯಿಗಳಿಗೆ ಏರಿತು.

ಆದರೆ 1742ರಲ್ಲಿ ಚಿತ್ರದುರ್ಗ ಮತ್ತು ಹರಪನಹಳ್ಳಿಯ ಪಾಳೆಯಗಾರರು ಜರಮಲೆಯವರ ಆಸ್ತಿಪಾಸ್ತಿಯನ್ನೆಲ್ಲ ಕಿತ್ತುಕೊಂಡು ಕೋಟೆಯ ಸುತ್ತ ಇದ್ದ ಕೆಲವೇ ಹಳ್ಳಿಗಳನ್ನು ಮಾತ್ರ ಬಿಟ್ಟರು. ಅನಂತರ ಕೇವಲ ಹತ್ತು ವರ್ಷಗಳಲ್ಲಿ ಚಿತ್ರದುರ್ಗದ ಪಾಳೆಯಗಾರನ ಆಶ್ರಯ ಕೇಳುವ ಸ್ಥಿತಿ ಇವರಿಗೆ ಒದಗಿ ಬಂತು. 1767ರಲ್ಲಿ ಚಿತ್ರದುರ್ಗದ ಪಾಳೆಯಗಾರ ತನಗೆ ಕೊಟ್ಟ ತೊಂದರೆಗಳನ್ನೂ ನಡೆಸಿಕೊಂಡ ಬಗೆಯನ್ನೂ ಹೈದರ್ ಅಲಿಯಲ್ಲಿ ನಿವೇದಿಸಿಕೊಂಡ. ಇದನ್ನು ತಿಳಿದ ಚಿತ್ರದುರ್ಗದ ಪಾಳೆಯಗಾರನು ಜರಮಲೆಯ ಪಾಳೆಯಗಾರನನ್ನು ಕೊಂದು ತನ್ನ ಸೇಡು ತೀರಿಸಿಕೊಂಡ. ಜರಮಲೆಯ ಪಾಳೆಯಗಾರನ ಮಗ ಹೆದರಿ ಸೊಲ್ಲಾಪುರಕ್ಕೆ ಓಡಿಹೋದ.

1777ರಲ್ಲಿ ಹೈದರ್ ಅಲಿ ಚಿತ್ರದುರ್ಗವನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ತಲೆಮರೆಸಿಕೊಂಡು ಹೋಗಿದ್ದ ಜರಮಲೆಯ ಪಾಳೆಯಗಾರನ ಮಗ ಹಿಂತಿರುಗಿ ಬಂದು ದುರ್ಗದ ಮುತ್ತಿಗೆಯಲ್ಲಿ ಸಹಕರಿಸಿದ್ದ. ಇದರಿಂದ ಸಂತೋಷಗೊಂಡ ಹೈದರ್ ಕೈ ಬಿಟ್ಟುಹೋಗಿದ್ದ ಜರಮಲೆಯನ್ನು ಅವನಿಗೆ ಹಿಂದಕ್ಕೆ ಕೊಟ್ಟು ವರ್ಷವೊಂದಕ್ಕೆ 2000 ಪಗೋಡ ಕಾಣಿಕೆಯನ್ನು ಒಪ್ಪಿಸುವಂತೆ ಆಜ್ಞಾಪಿಸಿದ. 1780ರಲ್ಲಿ ನಡೆದ ಮೈಸೂರು ಕದನದಲ್ಲಿ 100 ಕಾಲಾಳುಗಳೊಂದಿಗೆ ಆತ ಯುದ್ಧದಲ್ಲಿ ಭಾಗವಹಿಸಿದ್ದನೆಂದು ತಿಳಿದುಬರುತ್ತದೆ.

ಮುಂದೆ ಟಿಪ್ಪುಸುಲ್ತಾನ ಪಾಳೆಯಗಾರನಿಗೆ ಕೊಟ್ಟಿದ್ದ ಪ್ರದೇಶಗಳನ್ನು ಹಿಂದಕ್ಕೆ ಪಡೆದು ಅವನನ್ನು ಶ್ರೀರಂಗಪಟ್ಟಣಕ್ಕೆ ಬರಮಾಡಿಕೊಂಡು ತನ್ನಲ್ಲಿ ಒಬ್ಬ ಸಾಮಾನ್ಯ ಅಧಿಕಾರಿಯನ್ನಾಗಿ ನೇಮಿಸಿಕೊಂಡ. ಟಿಪ್ಪು ತನ್ನನ್ನು ಮತಾಂತರಗೊಳಿಸುವನೆಂಬ ವದಂತಿಯನ್ನು ತಿಳಿದು ಜರಮಲೆಯ ಪಾಳೆಯಗಾರ ಸೊಲ್ಲಾಪುರಕ್ಕೆ ಓಡಿಹೋದ. ಟಿಪ್ಪು ಮತ್ತು ಮರಾಠರಿಗೆ ನಡೆದ ಎರಡನೆಯ ಮೈಸೂರು ಯುದ್ಧದ ಸಮಯದಲ್ಲಿ ಜರಮಲೆ ಮರಾಠರ ವಶವಾಯಿತು. ಪಾಳೆಯಗಾರ ಅವರಿಂದ ಮತ್ತೆ ಜರಮಲೆಯನ್ನೂ ಪಡೆದು 38000 ರೂಪಾಯಿ ಪೊಗದಿಯನ್ನು ಅವರಿಗೆ ಕೊಡಲೊಪ್ಪಿದ್ದ. ಆದರೆ 1792ರಲ್ಲಿ ಮರಾಠರಿಗೂ ಟಿಪ್ಪುವಿಗೂ ಏರ್ಪಟ್ಟ ಶಾಂತಿಸಂಧಾನದಿಂದಾಗಿ ಟಿಪ್ಪುವಿನಿಂದ ಪಾಳೆಯಗಾರನ ಉಚ್ಚಾಟನೆಯಾಯಿತು.

1799ರ ವಿಭಜನೆಯ ಒಪ್ಪಂದದ ಪ್ರಕಾರ ಜರಮಲೆ ಹೈದರಾಬಾದು ನಿಜಾಮನ ಆಡಳಿತಕ್ಕೆ ಸೇರಿತು. ಪಾಳೆಯಗಾರ ಕೆಲವು ಹಳ್ಳಿಗಳನ್ನು ನಿಜಾಮನಿಂದ ಗೇಣಿಯಾಗಿ ಪಡೆದು ಕೊನೆಗೆ ಕೊಡಬೇಕಾದ ಹಣವನ್ನು ಬೊಕ್ಕಸಕ್ಕೆ ಕಟ್ಟಲಾರದೆ 1800ರಲ್ಲಿ ಬಳ್ಳಾರಿ ಜಿಲ್ಲೆ ಕಂಪನಿ ಸರ್ಕಾರದ ವಶವಾದ ಸಂದರ್ಭದಲ್ಲಿ ಕಂಪನಿ ಸರ್ಕಾರದ ಆಶ್ರಯವನ್ನು ಕೋರಿದ. ಈ ವಂಶದ ಮೂರು ಮಂದಿ ಸರ್ಕಾರದಿಂದ ಸ್ವಲ್ಪ ಕಾಲ ಸಂಭಾವನೆಯನ್ನು ಪಡೆದರೆಂದು ತಿಳಿದುಬರುತ್ತದೆ. (ಎಸ್.ಎನ್.ಜಿ.)

**ಜಲದುರ್ಗ :** ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಕೃಷ್ಣಾ ನದಿಯ ಒಂದು ನಡುಗಡ್ಡೆಯ ಮೇಲೆ ಕಟ್ಟಿರುವ ಕೋಟೆ. ಲಿಂಗಸುಗೂರು ಹಾಗೂ ಸುರಪುರ ತಾಲ್ಲೂಕುಗಳ ಗಡಿಯಲ್ಲಿ ಲಿಂಗಸುಗೂರಿನಿಂದ ಸು.16ಕಿಮೀ ಹಾಗೂ ನಾರಾಯಣಪುರದ ಬಳಿಯ ಕೃಷ್ಣಾಮೇಲ್ದಂಡೆಯ ಯೋಜನೆಯ ಅಣೆಕಟ್ಟಿನಿಂದ ಸು.9ಕಿಮೀ ಅಂತರದಲ್ಲಿದೆ. ಛಾಯಾಭಗವತಿ (ನೋಡಿ) ದೇವಸ್ಥಾನ ದಾಟಿದ ಮೇಲೆ ಸು.3ಕಿಮೀ ಅಂತರದಲ್ಲಿ ಕೃಷ್ಣಾನದಿ ಎರಡು ಟಿಸಿಲಾಗಿ ಹರಿದು ಮತ್ತೆ ಸುಲ್ತಾನಪುರದ ಬಳಿಯಲ್ಲಿ ಒಂದಾಗುತ್ತದೆ. ಈ ಎರಡು ಟಿಸಿಲುಗಳ ಮಧ್ಯದಲ್ಲಿನ ಬೆಟ್ಟದ ಮೇಲೆ ಜಲದುರ್ಗದ ಕೋಟೆ ನಿಂತಿದೆ. ಅಲ್ಲಿ ಇದ್ದ ದೇವಗಿರಿಯ ಯಾದವರ ಕಾಲದ ಶಾಸನವೊಂದರ ಆಧಾರದ ಮೇಲೆ ಈ ಕೋಟೆಯನ್ನು ಸು. 12ನೆಯ ಶತಮಾನದಲ್ಲಿ ಕಟ್ಟಲಾಯಿತೆಂದು ಹೇಳಲಾಗಿದೆ. ಜಲದುರ್ಗ ಎಂಬ ಹೆಸರು ಅನ್ವರ್ಥ ಎನಿಸಿದೆ, ಸುಂದರವಾಗಿದೆ.

ಕೃಷ್ಣಾ ನದಿಯ ಈ ದ್ವೀಪದಲ್ಲಿ ಸು.300-400 ಅಡಿಗಿಂತಲೂ ಹೆಚ್ಚು ಎತ್ತರದಲ್ಲಿ ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿದೆ. ಇದು ಏಳು ಸುತ್ತಿನ ಕೋಟೆ. ಇದು ಅಲ್ಲಲ್ಲಿ ಈಗ ಬಿದ್ದಿದೆ. ಒಂದೊಂದು ಸುತ್ತಿಗೂ ಒಂದೊಂದು ಮಹಾದ್ವಾರ (ಅಗಸೆ ಬಾಗಿಲು) - ಹೀಗೆ ಏಳು ದ್ವಾರಗಳು ಇವೆ. ಮೊದಲಿನ ದ್ವಾರ ದಾಟಿದ ಕೂಡಲೆ ದೇವಿಯ ಸಣ್ಣ ದೇವಾಲಯವಿದೆ. ಕೋಟೆಯ ಒಳಗೆ ಕೊನೆಯ ಬಾಗಿಲು ದಾಟಿದ ಮೇಲೆ ಒಂದೆಡೆ ಸಂಗಮೇಶ್ವರನ (ಬಸವೇಶ್ವರ) ದೇವಸ್ಥಾನವಿದೆ. ದೇವಸ್ಥಾನದ ಆವರಣದಲ್ಲಿಯೇ ಒಂದು ಸಣ್ಣ ಪುಷ್ಕರಿಣಿ ಇದೆ. ಯಾತ್ರಿಕರು ತಮ್ಮ ರುಮಾಲು ಬಿಚ್ಚಿ ನೀರನ್ನು ಸೇದಿ ದೇವರನ್ನು ಪೂಜಿಸುವರು. ನದಿಯ ನೀರು ಬಳಸುವುದು ಇಲ್ಲಿ ನಿಷಿದ್ಧ. ಹಳೆಯ ಮನೆ-ಮಹಲು, ಎಲ್ಲ ಈಗ ಬಿದ್ದು ಹೋಗಿವೆ. ಒಂದು ಸ್ಥಳವನ್ನು ಮದ್ದಿನ ಮಹಲು ಎಂದು ತೋರಿಸಲಾಗುತ್ತದೆ. ಇನ್ನೊಂದೆಡೆ ಜೈಲು, ಅದರ ಬಳಿಯಲ್ಲೆ ಸೂಲ್ದ (ಶೂಲದ) ಕಲ್ಲು ಇದೆ. ಶೂಲದ ಕಲ್ಲಿಗೆ ಒಂದು ತೊಟ್ಟಿಲು ಇತ್ತಂತೆ. ಶಿಕ್ಷೆಗೊಳಗಾದ ವ್ಯಕ್ತಿಯನ್ನು ಅದರಲ್ಲಿ ಕೂರಿಸಿ ತೂಗಿಬಿಡುತ್ತಿದ್ದರಂತೆ. ಹಾಗೆ ಕೆಳಕ್ಕೆ ನೂಕಿದವ ಬಿದ್ದು ಹೆಣವಾಗಿ ನದಿಯ ಅತ್ಯಂತ ಆಳವಾದ ಮಡುವಿಗೆ ಉರುಳಿ ಬೀಳುತ್ತಿದ್ದನಂತೆ. ಈ ಭೂಭಾಗದಲ್ಲಿ ನಿಂತು ಸುತ್ತಲಿನ ಪ್ರದೇಶವನ್ನು ನೋಡುವುದೂ ಒಂದು ಆನಂದದಾಯಕ ಅನುಭವ. ದಕ್ಷಿಣ, ಪಶ್ಚಿಮ ಹಾಗೂ ಉತ್ತರ ದಿಕ್ಕುಗಳಲ್ಲಿ ಕೃಷ್ಣೆಯ ಕಪ್ಪು ನೀರು. ಪೂರ್ವದಲ್ಲಿ ವೃಕ್ಷರಾಜಿಯ ವಿಸ್ತಾರದ ಹಸುರು ಕಣ್ಣಿಗೆ ಕಟ್ಟುತ್ತವೆ. ಮೆಡೋಸ್ ಟೇಲರನ ನೋಬಲ್ ಕ್ವೀನ್ ಎಂಬ ಕಾದಂಬರಿಯಲ್ಲಿ ಈ ದುರ್ಗ ಸುಂದರವಾಗಿ ವರ್ಣಿತವಾಗಿದೆ.

ಜಲದುರ್ಗ ಯಾದವರ, ವಿಜಯನಗರದ ಹಾಗೂ ಆದಿಲ್‍ಶಾಹಿಗಳ ಕಾಲದಲ್ಲಿ ಒಂದು ಮುಖ್ಯ ಕೋಟೆಯಾಗಿತ್ತು. ಇದರ ಪಕ್ಕದಲ್ಲಿ ನದಿಯ ಆಚೆ ತಾಳೀಕೋಟೆ ಕದನ ಜರುಗಿದ ರಕ್ಕಸತಂಗಡಿ ಹಾಗೂ ತಂಗಡಬೈಲ ಅಮ್ಮಾಪುರದ ಮೈದಾನ, ಪಶ್ಚಿಮದಲ್ಲಿ ಅತಿಪ್ರಸಿದ್ಧ ಛಾಯಾಭಗವತಿ ತೀರ್ಥಕ್ಷೇತ್ರ ಇವೆ. ಅದರ ಪಕ್ಕದಲ್ಲಿಯೇ ಸ್ವಲ್ಪ ದೂರದಲ್ಲಿ ರಮಣೀಯವಾದ ಧನುಷ್ಕೋಟಿ ಎಂಬ ಜಲಪಾತವಿದೆ. ಇದನ್ನು ಜಲದುರ್ಗದ ಜಲಪಾತ ಎಂದೂ ಹೇಳಲಾಗುತ್ತದೆ. ಇದು ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಗಡಿಯಲ್ಲಿದೆ; ಕೃಷ್ಣಾನದಿಯ ಜಲಪಾತಗಳಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವಿದೆ. ಇಲ್ಲಿ ನದಿ ಸು.200 ಅಡಿ ಎತ್ತರದಿಂದ ಕೆಳಕ್ಕೆ ಧುಮುಕುತ್ತದೆ. ಜಲದುರ್ಗವನ್ನು ನೋಡಲು ಹೋದವರಿಗೆ ಇದೊಂದು ಕಣ್ಸವಿ ತಾಣ. (ಎಸ್.ಜೆಎ.)

**ಜವರಪ್ಪಗೌಡ, ಪಿ.ಎನ್. :** ಸು.1916-2003. ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸೇವಕರು, ಪತ್ರಕರ್ತರು. ತಂದೆ ನರಸೇಗೌಡ, ತಾಯಿ ಕರಿಯಮ್ಮ. ಈ ದಂಪತಿಗಳ ಏಳು ಮಕ್ಕಳಲ್ಲಿ ಜವರಪ್ಪಗೌಡರು



ಮೊದಲ ಗಂಡುಮಗು, ಎರಡನೆಯ ಮಗು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೆ ಸೇರಿದ ಪಾಲಗ್ರಹಾರ ಇವರ ಹುಟ್ಟೂರು. ಶಾಲೆಯಾಗಲಿ ರಸ್ತೆಯಾಗಲಿ ಇಲ್ಲದಿದ್ದ ಆ ಪುಟ್ಟ ಹಳ್ಳಿಯಲ್ಲಿ ಗೌಡರ ತಂದೆ ನರಸೇಗೌಡರ ಪ್ರಯತ್ನದಿಂದ ಪ್ರಾರಂಭವಾದ ಕೂಲಿಮಠದಲ್ಲಿ, ಹರಡಿದ ಮರಳಿನ ಮೇಲೆ ತೋರುಬೆರಳಿನಿಂದ ಬರೆಯುವ ವಿಧಾನದಲ್ಲಿ ಇವರ ಅಕ್ಷರಾಭ್ಯಾಸವಾಯಿತು. ಅನಂತರ ನಾಗಮಂಗಲದ ಶಾಲೆಯೊಂದರಲ್ಲಿ ಎಂಟನೆಯ ತರಗತಿಯವರೆಗೆ (ಲೋಯರ್ ಸೆಕೆಂಡರಿ) ವಿದ್ಯಾಭ್ಯಾಸ ಮಾಡಿದರು. ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳವಳಿ ಕಾವೇರತೊಡಗಿತ್ತು. ದೇಶದ ತುಂಬ ಮಹಾತ್ಮ ಗಾಂಧಿಯವರ ಹೆಸರು ಮೊಳಗುತ್ತಿತ್ತು. ಅವರ ಆದರ್ಶಗಳು ಎಳೆಯ ಮನಸ್ಸುಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸತೊಡಗಿತ್ತು. ಇವರೂ ಇಂಥ ಸೆಳೆತಕ್ಕೆ ಒಳಗಾದರು. ಗೆಳೆಯರೊಡನೆ ಚಳವಳಿಗಳಲ್ಲಿ ಮಗ ಭಾಗವಹಿಸುತ್ತಿರುವ ಸುದ್ದಿ ಕಿವಿಗೆ ಬಿದ್ದು ತಂದೆ ನರಸೇಗೌಡರು ಕೆಂಡಮಂಡಲವಾಗುತ್ತಿದ್ದರು. ಆದರೆ ಇವರಿಗೆ ತಾಯಿಯ ರಕ್ಷಣೆ ಹಾಗೂ ಬೆಂಬಲಗಳಿದ್ದವು.

ಸ್ವಾತಂತ್ರ್ಯ ಚಳವಳಿಯ ಆಕರ್ಷಣೆಯಿಂದಾಗಿ ಇವರು ತಮ್ಮ ವಿದ್ಯಾಭ್ಯಾಸವನ್ನು ತೊರೆದರು. ಆ ಸಂದರ್ಭದಲ್ಲೇ ಪ್ರಕಟವಾದ ಕುವೆಂಪು ಅವರ ಹಾಳೂರು ಕೃತಿ ಇವರ ಮೇಲೆ ಅಪಾರ ಪ್ರಭಾವ ಬೀರಿತು. ತಮ್ಮ ಹೋರಾಟಕ್ಕೆ ಪೂರಕವಾಗಿ ಇವರು ಹಾಳೂರಿನ ಕವನಗಳನ್ನು ಬಳಸಿಕೊಳ್ಳುತ್ತಿದ್ದರು.

ಶಿವಪುರದ ಧ್ವಜಸತ್ಯಾಗ್ರಹದ ಪ್ರಮುಖ ಕಾರ್ಯಕರ್ತರಾಗಿ ಗೌಡರು ಹೋರಾಡಿದ್ದರು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಬೇಕೆಂಬ ಹೋರಾಟದಲ್ಲಿಯೂ ಇವರದು ಪ್ರಮುಖ ಪಾತ್ರ. ಕ್ವಿಟ್ ಇಂಡಿಯಾ ಚಳವಳಿ, ವಿದುರಾಶ್ವತ್ಥ ಸಮಾವೇಶ, ಇರ್ವಿನ್ ನಾಲೆ ಚಳವಳಿ, ವರುಣಾ ನಾಲಾ ಪ್ರತಿಭಟನೆ, ಗೋಕಾಕ್ ಚಳವಳಿ - ಹೀಗೆ ಇವರು ಭಾಗವಹಿಸಿದ ಚಳವಳಿಗಳು ಹಲವು. ಒಟ್ಟು ಹತ್ತು ವರ್ಷಗಳಿಗೂ ಹೆಚ್ಚು ಕಾಲದ ಸೆರೆವಾಸ ಅನುಭವಿಸಿದ್ದರು. ಆ ಅವಧಿಯಲ್ಲಿ ಇವರು ಕರ್ನಾಟಕದ ಎಲ್ಲ ಸೆರೆಮನೆಗಳಲ್ಲೂ ಇದ್ದದ್ದು ಒಂದು ದಾಖಲೆ.

ಹಳೆಯ ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಅಷ್ಟಾಗಿ ಒಲವು ಇರಲಿಲ್ಲ. ಪರಿಣಾಮವಾಗಿ ಅಲ್ಲಲ್ಲಿ ಏಕೀಕರಣದ ವಿರುದ್ಧ ಹೋರಾಟಗಳು ನಡೆಯುತ್ತಿದ್ದುವು. 1952ರಲ್ಲಿ ಎಚ್.ಕೆ.ವೀರಣ್ಣ ಗೌಡರ ನೇತೃತ್ವದಲ್ಲಿ ನಡೆದ ಅಂಥ ಚಳವಳಿಯಲ್ಲಿ ಇವರದು ಪ್ರಮುಖ ಪಾತ್ರ. ಅದೇ ಕಾಲದಲ್ಲಿ ಅನಾರೋಗ್ಯಕ್ಕೆ ತುತ್ತಾದ ಇವರು ಚಿಕಿತ್ಸೆಗಾಗಿ ಬೆಂಗಳೂರಿಗೆ ಹೋದರು. ಚೇತರಿಸಿಕೊಂಡ ಮೇಲೆ ಬೆಂಗಳೂರಿನಲ್ಲೇ ಒಂದು ಮುದ್ರಣಾಲಯ ತೆರೆದು ವಿಶ್ವಾಮಿತ್ರ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಅದು ಏಕೀಕರಣವನ್ನು ವಿರೋಧಿಸುವ ಸಲುವಾಗಿಯೇ ಹುಟ್ಟಿಕೊಂಡ ಪತ್ರಿಕೆಯಾಗಿತ್ತು. ಏಕೀಕರಣದ ವಿರುದ್ಧ ಸತತವಾಗಿ ಲೇಖನಗಳು ಅದರಲ್ಲಿ ಕಾಣಿಸಿಕೊಂಡುವು. ಆದರೆ ಕಡೆಗೂ ಹೋರಾಟ ಯಶಸ್ವಿಯಾಗಲಿಲ್ಲ. ಕೆ.ವಿ.ಶಂಕರಗೌಡ, ಎಂ.ಕೆ.ಶಿವನಂಜಪ್ಪ, ಜಿ.ಎಸ್.ಬೊಮ್ಮೇಗೌಡ ಅವರುಗಳ ಪ್ರೇರಣೆಯಿಂದ ಮತ್ತೆ ಮಂಡ್ಯಕ್ಕೆ ವಾಪಸಾಗಿ ಮುದ್ರಣಾಲಯ ಸ್ಥಾಪಿಸಿ ನೆಲೆನಿಂತರು.

ತಂದೆ ನರಸೇಗೌಡರ ಸಹಕಾರಿ ಗುಣ ಮತ್ತು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾದ ಪರಿಣಾಮವಾಗಿ ಇವರು ಜಿಲ್ಲೆಯ ಸಹಕಾರಿ ಚಳವಳಿಯಲ್ಲಿ ಪ್ರಮುಖರಲ್ಲೊಬ್ಬರಾಗಿ ದುಡಿದರು. ಮಂಡ್ಯದ ರೈತ ಸಹಕಾರ ಸಂಘ, ಡಿಸಿಸಿ ಬ್ಯಾಂಕ್, ಪಿ.ಇ.ಎಸ್. ಶಿಕ್ಷಣ ಸಂಸ್ಥೆ ಮುಂತಾದ ಹಲವು ಸಂಸ್ಥೆಗಳ ಹಿಂದೆ ಇವರ ಶ್ರಮವಿತ್ತು.

ಗೌಡರು ಅನಕ್ಷರತೆಯ ವಿರುದ್ಧ ಸತತವಾಗಿ ಹೋರಾಡಿದರು. ಮಂಡ್ಯಕ್ಕೆ ವಾಪಸಾಗಿ ಮುದ್ರಣಾಲಯವನ್ನು ನಡೆಸುತ್ತಿದ್ದ ಕಾಲದಲ್ಲಿಯೇ ವಯಸ್ಕರ ಶಿಕ್ಷಣದ ಸಕ್ರಿಯ ಕಾರ್ಯಕರ್ತರಾಗಿ ಸ್ವಯಂ ಪ್ರೇರಣೆಯಿಂದ ಅನಕ್ಷರಸ್ಥ ವಯಸ್ಕರನ್ನು ಸಂಘಟಿಸುವುದು, ಅಕ್ಷರ ಕಲಿಯಲು ಪ್ರೇರೇಪಿಸುವುದು, ಅವರಿಗಾಗಿ ರಾತ್ರಿ ಶಾಲೆಗಳನ್ನು ನಡೆಸುವುದು ಮುಂತಾದ ಕಾರ್ಯಗಳಲ್ಲಿ ತೊಡಗಿದ್ದರು. ಜೊತೆ ಜೊತೆಗೇ ಜನವಾಣಿ ಎಂಬ ಪತ್ರಿಕೆಗೆ ವರದಿಗಾರರಾಗಿಯೂ ಸೇವೆ ಸಲ್ಲಿಸುತ್ತಿದ್ದರು. ಅಧಿಕಾರದಿಂದ ದೂರ ಉಳಿಯುವುದೇ ಇವರ ಪ್ರವೃತ್ತಿಯಾಗಿತ್ತು. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ನೇಮಕವಾದ ಇವರು ಹಲವು ದಾಖಲೆಗಳನ್ನು ಸಾಧಿಸಿದರು. ಸಂಸ್ಥೆಯ ಶ್ರೇಷ್ಠಮಟ್ಟದ ಕಾರ್ಯವನ್ನು ಗಮನಿಸಿ "ನೆಹರು ರಾಷ್ಟ್ರೀಯ ಸಾಕ್ಷರತಾ ಪ್ರಶಸ್ತಿ" ಇವರನ್ನು ಹುಡುಕಿಕೊಂಡು ಬಂತು. ಸಂಯುಕ್ತ ಕರ್ನಾಟಕ ಪತ್ರಿಕೆಯ ಬೆಂಗಳೂರು ಮುದ್ರಣ ಪ್ರಾರಂಭವಾದಾಗಿನಿಂದ (1947-48) 1980ರವರೆಗೆ ಅದರ ವರದಿ ಗಾರರಾಗಿದ್ದರು. ಪತ್ರಕರ್ತರಾಗಿ ಇವರದು ಐವತ್ತು ವರ್ಷಗಳ ಅನುಭವ.

ಇವರು ಕುವೆಂಪು ಅವರ ಮಂತ್ರಮಾಂಗಲ್ಯ ವಿವಾಹ ವಿಧಾನದಿಂದ ಬಹಳವಾಗಿ ಪ್ರಭಾವಿತರಾಗಿದ್ದರು. 1976ರಲ್ಲಿ ಪತ್ನೀಸಮೇತರಾಗಿ ಕುವೆಂಪು ಅವರನ್ನು ಭೇಟಿ ಮಾಡಿದ ಮೇಲೆ ಮಂತ್ರ ಮಾಂಗ್ಯಲದ ಹರಿಕಾರರಾಗಿ ರೂಪುಗೊಂಡರು. 1977ರಲ್ಲಿ ತಮ್ಮ ಮೊದಲ ಮಗ ಚೈತನ್ಯಕುಮಾರ್‌ನ ಮದುವೆಯನ್ನು ಮಂತ್ರಮಾಂಗಲ್ಯ ವಿಧಾನದಲ್ಲಿ ಮಾಡಿದರು. ಮಂಡ್ಯ ಜಿಲ್ಲೆಯಲ್ಲಿ ಅದು ಆ ಬಗೆಯ ಮೊದಲ ಮದುವೆಯಾಗಿತ್ತು. ಸಾಮಾಜಿಕ ಕ್ರಾಂತಿಯೊಂದನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದ್ದ ಮಂತ್ರಮಾಂಗಲ್ಯ ವಿಧಾನವು ಹಳ್ಳಿಹಳ್ಳಿಗೂ ವ್ಯಾಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಇವರು ಅದರ ಸಾವಿರಾರು ಪ್ರತಿಗಳನ್ನು ಮುದ್ರಿಸಿ ಉಚಿತವಾಗಿ ಹಂಚಿದರು. ಇವರ ಈ ಸಾಮಾಜಿಕ ಸೇವೆಯ ಪರಿಣಾಮವಾಗಿ ಮಂಡ್ಯ ಜಿಲ್ಲೆಯೊಂದರಲ್ಲಿ 25 ಸಾವಿರಕ್ಕೂ ಹೆಚ್ಚು ಮದುವೆಗಳು ಮಂತ್ರಮಾಂಗಲ್ಯ ವಿಧಾನದಲ್ಲಿ ನಡೆದವೆಂದು ತಿಳಿದುಬರುತ್ತದೆ.

ಕುವೆಂಪು ಅವರ ಬಗ್ಗೆ ಇವರಿಗೆ ಅಪಾರ ಅಭಿಮಾನ. ಮಂಡ್ಯದಲ್ಲಿ ಕುವೆಂಪು ಅವರ ಆಳುದ್ದದ ಪ್ರತಿಮೆ ಸ್ಥಾಪಿಸುವಲ್ಲಿ ಇವರದೇ ಮುಖ್ಯ ಪಾತ್ರ. ಕೊಮ್ಮೇರಹಳ್ಳಿಯಲ್ಲಿ ಆದಿಚುಂಚನಗಿರಿ ಕ್ಷೇತ್ರದ ವತಿಯಿಂದ ಪ್ರಾರಂಭವಾದ 'ವಿಶ್ವಮಾನವ ಕ್ಷೇತ್ರ' ವನ ಪ್ರಾರಂಭಕ್ಕೆ ಮತ್ತು ಅದರ ಹೆಸರಿಗೆ ಇವರ ಕೊಡುಗೆ ಅಮೂಲ್ಯ ವಾದದ್ದು. ಸರಳ ಸ್ವಭಾವದ ಮತ್ತು ಸರಳ ಜೀವನದ ಇವರು ನೇರ ನಡೆನುಡಿಗೂ ಹೆಸರುವಾಸಿಯಾಗಿದ್ದರು. ಈ ಗುಣ ಇವರ ವ್ಯಕ್ತಿತ್ವದ ವಿಶೇಷತೆಯಾಗಿತ್ತು.

ಪತ್ರಿಕಾ ಅಕಾಡೆಮಿ ಪ್ರಶಸ್ತಿ, ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಪ್ರಶಸ್ತಿ, ಸರ್ದಾರ್ ವೆಂಕಟರಾಮಯ್ಯ ಸ್ವಾತಂತ್ರ್ಯ ಹೋರಾಟಗಾರ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಇವರಿಗೆ ಲಭ್ಯವಾಗಿವೆ. ಇವರ ಜೀವನ ಸಾಧನೆಗಳನ್ನು ಒಳಗೊಂಡ ಒಂದು ಅಮೂಲ್ಯ ದಾಖಲೆಯಾಗಿ ಸಾಹಸಯಾತ್ರಿ ಎಂಬ ಗೌರವ ಗ್ರಂಥ ಪ್ರಕಟವಾಗಿದೆ (1989). (ಕೆ.ಆರ್.)

**ಜವರೇಗೌಡ, ದೇ. :** 1918-. ದೇಜಗೌ ಎಂಬ ಸಂಕ್ಷಿಪ್ತನಾಮ ದಿಂದ ಪ್ರಸಿದ್ಧರು. ಕನ್ನಡನಾಡಿನ ಹೆಸರಾಂತ ಗದ್ಯ ಲೇಖಕರಲ್ಲೊಬ್ಬರು. ಕನ್ನಡಕ್ಕೆ ಸೂಕ್ತ ಸ್ಥಾನಮಾನವನ್ನು ದೊರಕಿಸಿಕೊಡುವ ಹೋರಾಟದಲ್ಲಿ ಇವರು ವಹಿಸಿದ ಪಾತ್ರ ಹಿರಿದು. ಕನ್ನಡ ಮಾಧ್ಯಮವಾಗಬೇಕು, ಕನ್ನಡ ಆಡಳಿತ ಭಾಷೆಯಾಗಬೇಕು, ಕನ್ನಡನಾಡಿನಲ್ಲಿ ಕನ್ನಡವೇ ಅಗ್ರಪೀಠದಲ್ಲಿ ಪ್ರತಿಷ್ಠಾಪಿತವಾಗಬೇಕು; ಕನ್ನಡ ಸಂಸ್ಕೃತಿ, ಇತಿಹಾಸ, ಕಾವ್ಯ ಪರಂಪರೆಯಿಂದ ಕನ್ನಡಿಗರು ಚೈತನ್ಯವನ್ನು ತುಂಬಿಕೊಂಡು ರಾಷ್ಟ್ರದಲ್ಲಿ ತಲೆಯೆತ್ತಿ ಮೆರೆಯಬೇಕು, ಕನ್ನಡಕ್ಕೆ ವಿಶ್ವಮಾನ್ಯತೆ ದೊರೆಯಬೇಕು ಎಂಬ ಹಂಬಲವನ್ನು ತುಂಬಿಕೊಂಡು ಅವಿರತವಾಗಿ ಶ್ರಮಿಸಿದ ಕೀರ್ತಿ ಇವರದು. ಕನ್ನಡ ಮತ್ತು ದೇಜಗೌ ಈ ಎರಡರ ಸಂಬಂಧ ನಾಡಿನಾದ್ಯಂತ ಜನಜನಿತವಾಗಿದೆ.

ಇವರು ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಗ್ರಾಮದ ಬಡ ರೈತ ಕುಟುಂಬ ಒಂದರಲ್ಲಿ 1918 ಜುಲೈ 6ರಂದು ಜನಿಸಿದರು. ಇವರ ತಂದೆ ದೇವೇಗೌಡರು, ತಾಯಿ ಚೆನ್ನಮ್ಮ. ಬಡತನದಲ್ಲಿದ್ದರೂ ನಿಷ್ಠೆಯ, ಪ್ರಾಮಾಣಿಕತೆಯ ಜೀವನವನ್ನು



ನಡೆಸಿದವರು. ಊರಿನ ಧನಿಕರ ವಿರೋಧವಿದ್ದರೂ ಮಗನನ್ನು ಓದಿಸಲೇಬೇಕೆಂಬ ಛಲವನ್ನು ತುಂಬಿಕೊಂಡವರು. ತಂದೆಯ ಸದ್ಗುಣಗಳನ್ನೆಲ್ಲ ತುಂಬಿಕೊಂಡು ಬೆಳೆದ ಜವರೇಗೌಡರು ಕುವೆಂಪು ಅವರ ಶಿಷ್ಯರಾಗಿ, ಅವರ ಮಾರ್ಗದರ್ಶನದಲ್ಲಿ ಕನ್ನಡದಲ್ಲಿ ಎಂ.ಎ. ಪದವಿ ಪಡೆದರು. ಸ್ವಲ್ಪ ಕಾಲ ಅಠಾರ ಕಚೇರಿಯಲ್ಲಿ ಗುಮಾಸ್ತ ರಾಗಿ ಕೆಲಸ ಮಾಡಿದರು. ಒಳ್ಳೆಯ ರೈತನಾಗಬೇಕೆಂಬ ಹಂಬಲವಿದ್ದ ಇವರು ಕನ್ನಡದ ಕರೆಗೆ ಓಗೊಟ್ಟು ಗುಮಾಸ್ತನ ಕೆಲಸವನ್ನು ತೊರೆದು, 1946ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದರು. ಅನಂತರ ಪ್ರಕಟಣ ಶಾಖೆಯ ಕಾರ್ಯದರ್ಶಿಯಾದರು (1954). ಹಗಲಿರುಳೂ ದುಡಿದು ಪ್ರಕಟಣಶಾಖೆಯನ್ನು ವ್ಯಾಪಕವಾಗಿ ಬೆಳೆಸಿದರು. 1955ರಲ್ಲಿ ಕನ್ನಡದ ಉಪ-ಪ್ರಾಧ್ಯಾಪಕರಾದರು. ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳಾದಾಗ ಇವರ ಕಾರ್ಯದಕ್ಷತೆಯನ್ನು ಗಮನಿಸಿ ಇವರನ್ನು 1957ರಲ್ಲಿ ವಿಶ್ವವಿದ್ಯಾನಿಲಯದ ಪ್ರಪ್ರಥಮ ಪರೀಕ್ಷಾ ನಿಯಂತ್ರಣಾಧಿಕಾರಿಯನ್ನಾಗಿ ನೇಮಿಸಿದರು. ಇವರು ಪರೀಕ್ಷಾ ವಿಭಾಗಕ್ಕೆ ಹೊಸ ಜೀವವನ್ನು ತುಂಬಿ ಅನೇಕ ಹೊಸ ಸುಧಾರಣೆಗಳನ್ನು ತಂದರು.

1960ರಲ್ಲಿ ಇವರು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟರು. ಅದೇ ವರ್ಷ ಮಾನಸಗಂಗೋತ್ರಿಯ ಕನ್ನಡ ಇಲಾಖೆಗೆ ಕನ್ನಡ ರೀಡರ್ ಆಗಿ ಆಯ್ಕೆಯಾದರು. ಪ್ರಾಧ್ಯಾಪಕ ತೀನಂಶ್ರೀ ಅವರೊಡನೆ ಇಲಾಖೆಯ ಉತ್ಕರ್ಷಕ್ಕಾಗಿ ದುಡಿದುದರ ಜೊತೆಗೆ ಮಾನಸಗಂಗೋತ್ರಿಯ ಬೆಳವಣಿಗೆಗೂ ಮೂಲಪ್ರೇರಕರಾದರು. ಮಹಾರಾಜ ಕಾಲೇಜಿನಿಂದ ಆಗಿನ್ನೂ ಬರಡಾಗಿದ್ದ ಗಂಗೋತ್ರಿಯ ದಿಬ್ಬಕ್ಕೆ ಕೆಲವು ಇಲಾಖೆಗಳನ್ನು ವರ್ಗಾಯಿಸಲು ಇವರು ಹೋರಾಟವನ್ನೇ ನಡೆಸಿದರು.

ಇದರಿಂದಾಗಿ ಅಲ್ಲಿಗೆ ಕನ್ನಡ ಇಲಾಖೆ ಮೊದಲು ಕಾಲಿಟ್ಟು, ಇತರರೂ ಅತ್ತ ಹೊರಳಲು ಪ್ರೇರಕವಾಯಿತು.

1962ರಲ್ಲಿ ಇವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರೂ ಇಲಾಖಾ ಮುಖ್ಯರೂ ಆದರು. ಇಲಾಖೆಯನ್ನು ವ್ಯಾಪಕವಾಗಿ ಬೆಳೆಸುವ, ಕನ್ನಡದ ಅಭಿವೃದ್ಧಿಗಾಗಿ ಯೋಜನೆಗಳನ್ನು ಸಿದ್ಧಗೊಳಿಸುವ ಗುರುತರ ಹೊಣೆಗಾರಿಕೆ ಇವರ ಪಾಲಿಗೆ ಬಂತು. ತಾವು ಪ್ರಾಧ್ಯಾಪಕರಾದ ಮೇಲೆ ತಮ್ಮ ಪ್ರಿಯ ವಿಷಯವಾದ ಜಾನಪದವನ್ನು ಸ್ನಾತಕೋತ್ತರ ತರಗತಿಗಳ ಐಚ್ಛಿಕ ವಿಷಯವಾಗಿ ಸೇರಿಸಿ ಕ್ರಾಂತಿಕಾರಕ ಹೆಜ್ಜೆಯನ್ನಿಟ್ಟರು. ವ್ಯಾಕರಣ, ಭಾಷಾವಿಜ್ಞಾನ, ಜಾನಪದಗಳಲ್ಲಿ ವಿಶೇಷ ತಜ್ಞತೆಯನ್ನು ಪಡೆದುಕೊಂಡಿದ್ದ ಇವರು ಉತ್ತಮ ಪ್ರಾಧ್ಯಾಪಕರಾಗಿ ಬಹುಬೇಗ ಕೀರ್ತಿಗಳಿಸಿದರು. ಇವರ ಕಾಲದಲ್ಲಿ ಕನ್ನಡ ಇಲಾಖೆ ಒಂದು ಸಂಸ್ಥೆಯಾಗಿ ರೂಪುಗೊಂಡಿತು. ಕನ್ನಡ ಅಧ್ಯಯನ ಸಂಸ್ಥೆಯ ಕನಸನ್ನು ಕಂಡು ಅದನ್ನು ಸ್ಥಾಪಿಸಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಮೊದಲ ಸ್ಥಾನವನ್ನು ದೊರಕಿಸಿಕೊಟ್ಟರು. ಆ ಸಂಸ್ಥೆಗೆ ಗಂಗೋತ್ರಿಯ ಹೃದಯಸ್ಥಾನದಲ್ಲಿ ಭವ್ಯಕಟ್ಟಡವನ್ನೂ ಒದಗಿಸಿ ಸಂಸ್ಥೆಯ ಪ್ರಥಮ ನಿರ್ದೇಶಕರಾದರು (1966). ಕನ್ನಡದ ಸರ್ವತೋಮುಖವಾದ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ಸಿದ್ಧಗೊಳಿಸಿ ಕನ್ನಡದ ಬಹುಮುಖ ಕಾರ್ಯಗಳು ಅಧ್ಯಯನ ಸಂಸ್ಥೆಯಲ್ಲಿ ನಡೆಯುವಂತೆ ಮಾಡಿದರು. ಸರ್ಕಾರಿ ಇಲಾಖೆಯಲ್ಲಿದ್ದ ಕನ್ನಡ ವಿಶ್ವಕೋಶದ ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ದಕ್ಕಿಸಿಕೊಂಡು ಉತ್ತಮ ಕೆಲಸಗಾರರನ್ನು ಆರಿಸಿಕೊಂಡು ಆ ಕೆಲಸ ತ್ವರಿತಗತಿಯಿಂದ ಸಾಗುವಂತೆ ಚಾಲನೆ ನೀಡಿದರು. ನಮ್ಮ ಪರಂಪರಾನುಗತ ಸಂಸ್ಕೃತಿಯ ವಿವಿಧ ಸ್ತರಗಳನ್ನು ಗುರುತಿಸುವ ಜಾನಪದ ವಸ್ತುಸಂಗ್ರಹಾಲಯದ ಕಲ್ಪನೆಯನ್ನು ಕಾರ್ಯಗತಗೊಳಿಸಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ದೊಡ್ಡ ವಸ್ತುಸಂಗ್ರಹಾಲಯವೊಂದು ಪ್ರಪ್ರಥಮವಾಗಿ ರೂಪುಗೊಳ್ಳಲು ಕಾರಣಕರ್ತರಾದರು. ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಸಂಪಾದನ ವಿಭಾಗವನ್ನು ಪ್ರತ್ಯೇಕಿಸಿ ಅದನ್ನು ಕನ್ನಡ ಅಧ್ಯಯನ ಸಂಸ್ಥೆಯ ತೆಕ್ಕೆಗೆ ತೆಗೆದುಕೊಂಡು ಪ್ರಾಚೀನ ಗ್ರಂಥಗಳು ಹೆಚ್ಚು ಹೆಚ್ಚಾಗಿ ಸಂಗ್ರಹಿತವಾಗಿ ಸಂಪಾದಿತವಾಗಿ ಹೊರಬರಲು ಕಾರಣರಾದರು. ಭಾಷಾಂತರ ಇಲಾಖೆಯ ಬಹುಮುಖ ಪ್ರಯೋಜನವನ್ನು ಕಂಡುಕೊಂಡು ಅದನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಆರಂಭಿಸಿ ಆ ವಿಷಯಕ್ಕೆ ಒಂದು ಮಾನ್ಯತೆಯನ್ನು ತಂದುಕೊಟ್ಟರು. ಕನ್ನಡ ಸರ್ವಶಕ್ತವಾಗಿ ಬೆಳೆಯಲು ಅನ್ಯಭಾಷೆಯ ಕೃತಿಗಳು ಕನ್ನಡದಲ್ಲಿ ಬರಬೇಕು, ಪಠ್ಯಪುಸ್ತಕಗಳು ಹೇರಳವಾಗಿ ಪ್ರಕಟವಾಗಬೇಕು ಎಂಬ ದೂರದೃಷ್ಟಿಯಲ್ಲಿ ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗವನ್ನು ರೂಪಿಸಿದರು. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಕೊರತೆಯನ್ನು ಕಂಡುಕೊಂಡು ಹತ್ತು ಸಂಪುಟಗಳಲ್ಲಿ ಅದು ಪ್ರಕಟವಾಗುವ ಯೋಜನೆಯನ್ನೂ ರೂಪಿಸಿದರು. ಜಾನಪದ, ಭಾಷಾಂತರ ಮುಂತಾದ ವಿಷಯಗಳಲ್ಲಿ ಡಿಪ್ಲೊಮಾ ತರಗತಿಗಳನ್ನು ಆರಂಭಿಸಿದರು. ಕನ್ನಡ ಉಪಭಾಷಾ ಪರಿವೀಕ್ಷಣೆಯನ್ನು ಕೈಗೊಂಡು ಹಾ.ಮಾ.ನಾಯಕರೊಡನೆ ಕ್ಷೇತ್ರಕಾರ್ಯವನ್ನು ನಾಡಿನ ನಾನಾ ಕಡೆಗಳಲ್ಲಿ ನಡೆಸಿದರು.

ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳಲ್ಲಿ ಹಲವು ಪ್ರಮುಖ ಪಾತ್ರವಹಿಸಿ ಗೌಡರು ದುಡಿದಿದ್ದಾರೆ. ಕನ್ನಡದ ಬೆಳೆವಣಿಗೆಗಾಗಿ ಇವರು ನಡೆಸಿದ ಪ್ರಯತ್ನಗಳೂ ರೂಪಿಸಿದ ಯೋಜನೆಗಳೂ ಇವರಿಗೆ ನಾಡಿನಾದ್ಯಂತ ಒಳ್ಳೆಯ ಕೀರ್ತಿಯನ್ನು ತಂದವು. ಇವರ ಸೇವೆಯನ್ನೂ ದಕ್ಷತೆಯನ್ನೂ ಪ್ರಾಮಾಣಿಕ ದುಡಿಮೆಯನ್ನೂ ಗಮನಿಸಿ ಕರ್ನಾಟಕ ಸರ್ಕಾರ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇವರನ್ನು 1969ರಲ್ಲಿ ಕುಲಪತಿಯನ್ನಾಗಿ ನೇಮಿಸಿತು.ಇವರು ಕುಲಪತಿಯಾದ ಮೇಲೆ ವಿಶ್ವವಿದ್ಯಾನಿಲಯದ ಸರ್ವಪ್ರಗತಿಗೂ ಅಪಾರವಾಗಿ ಶ್ರಮಿಸಿದರು. ರಾಜ್ಯ ಸರ್ಕಾರ ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗ ಹಾಗೂ ಇತರ ಮೂಲಗಳಿಂದ ಯಥೇಚ್ಛವಾಗಿ ಹಣ ತಂದು ವಿಶ್ವವಿದ್ಯಾನಿಲಯದ ಸರ್ವತೋಮುಖ ಬೆಳೆವಣಿಗೆಗೂ ಕಾರಣರಾದರು. ಇವರ ದಕ್ಷ ಆಡಳಿತ ಹಾಗೂ ಇವರ ಕಾಲದಲ್ಲಿ ವಿಶ್ವವಿದ್ಯಾನಿಲಯದ ತೀವ್ರಪ್ರಗತಿಯನ್ನು ಗಮನಿಸಿ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದ ಅಧ್ಯಕ್ಷರೂ ಇತರರೂ ಇವರ ಸೇವೆಯನ್ನು ಬಹುವಾಗಿ ಪ್ರಶಂಸಿಸಿದರು. ರಾಜ್ಯ ಸರ್ಕಾರ ಇವರ ನಿಷ್ಠೆ, ಕಾರ್ಯತತ್ಪರತೆ, ಪ್ರಾಮಾಣಿಕ ದುಡಿಮೆಗಳನ್ನು ಮನಗಂಡು ಎರಡನೆಯ ಅವಧಿಗೆ ಇವರನ್ನು ಮತ್ತೆ ಕುಲಪತಿಯನ್ನಾಗಿ ಆರಿಸಿತು. ಇವರು ಆರು ವರ್ಷಗಳ ಕಾಲ ಕುಲಪತಿ ಹುದ್ದೆಯಲ್ಲಿದ್ದರು.

ಇವರು ಕುಲಪತಿಗಳಾಗಿದ್ದ ಕಾಲದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಒಂದು ಶೈಕ್ಷಣಿಕ ಕ್ರಾಂತಿಯೇ ಆಯಿತೆನ್ನಬಹುದು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಪ್ಪತ್ತನಾಲ್ಕಕ್ಕೂ ಮೀರಿ ಹೊಸ ಸ್ನಾತಕೋತ್ತರ ಪದವಿ ತರಗತಿಗಳು ಆರಂಭಿಸಲ್ಪಟ್ಟವು. ಅನೇಕ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ತೆರೆಯಲಾಯಿತು. ಇವರಿಂದ ಆರಂಭಿಸಲ್ಪಟ್ಟ ನ್ಯಾಯಶಾಸ್ತ್ರ, ಗೃಹವಿಜ್ಞಾನ, ಗ್ರಂಥಾಲಯವಿಜ್ಞಾನ, ಭಾಷಾವಿಜ್ಞಾನ, ಜಾನಪದ, ದಕ್ಷಿಣ ಭಾರತೀಯ ಅಧ್ಯಯನ, ಮಾನವಶಾಸ್ತ್ರ ಮೊದಲಾದ ಕೆಲವು ಸ್ನಾತಕೋತ್ತರ ತರಗತಿಗಳನ್ನು ಇಲ್ಲಿ ಹೆಸರಿಸಬಹುದು. ಕನ್ನಡ ಅಧ್ಯಯನ ಸಂಸ್ಥೆ, ವಿದೇಶೀ ಭಾಷೆಗಳ ಅಧ್ಯಯನ ಸಂಸ್ಥೆ, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಿನರಲಾಜಿಕಲ್ ಅಧ್ಯಯನ ಸಂಸ್ಥೆ ಮುಂತಾದ ಸಂಸ್ಥೆಗಳ ಸ್ಥಾಪನೆ ಹಾಗೂ ಬೆಳೆವಣಿಗೆಗಳಲ್ಲಿ ಇವರ ಪಾತ್ರ ಹಿರಿದಾದುದು. ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಇವರ ಕಾಲದಲ್ಲಿ ವ್ಯಾಪಕವಾಗಿ ಬೆಳೆಯಿತು. ಅದೀಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವಾಗಿದೆ. ಎಂ.ಎಸ್ಸಿ.ಎಡ್ ಹಾಗೂ ಎಂ.ಫಿಲ್ ಮುಂತಾದ ಹೊಸ ಶಿಕ್ಷಣ ತರಗತಿಗಳು, ಬಯೋಫಿಸಿಕ್ಸ್, ಎನ್‌ವಿರಾನ್‌ಮೆಂಟಲ್ ಸ್ಟಡೀಸ್, ಹ್ಯೂಮನ್ ಜಿಯಾಗ್ರಫಿ, ಅಗ್ರಿಕಲ್ಚರಲ್ ಮಾರ್ಕೆಟಿಂಗ್, ಮರೀನ್ ಜಿಯಾಲಜಿ, ಇನ್‌ಫರ್ಮೇಷನ್ ಸೈನ್ಸಸ್, ಭಾಷಾಂತರ, ನಾಟಕಶಾಸ್ತ್ರ ಮುಂತಾದ ಅನೇಕ ಹೊಸ ಹೊಸ ವಿಷಯಗಳ ಸ್ನಾತಕ ಶಿಕ್ಷಣವನ್ನು ಆರಂಭಿಸಿದ ದೂರದೃಷ್ಟಿ ಇವರದು. ಶಿವಮೊಗ್ಗದ ಬಿ.ಆರ್. ಪ್ರಾಜೆಕ್ಟ್‌ನಲ್ಲಿ ಆರಂಭವಾದ ಸ್ನಾತಕೋತ್ತರ ಕೇಂದ್ರವೂ ಇವರ ಕಾಣಿಕೆ. ಈಗ ಅದು ಕುವೆಂಪು ವಿಶ್ವವಿದ್ಯಾಲಯವಾಗಿದೆ. ಭಾರತೀಯ ಭಾಷಾ ಸಂಸ್ಥಾನ ಹಾಗೂ ಊಟಿಯಲ್ಲಿದ್ದ ಭಾರತೀಯ ಪುರಾತತ್ತ್ವ ಸರ್ವೇಕ್ಷಣಕ್ಕೆ ಸೇರಿದ ಮುಖ್ಯ ಶಾಸನ ತಜ್ಞರ ಕಚೇರಿ ಮೈಸೂರಿಗೆ ಬರಲು ಗೌಡರು ಕಾರಣ. 1969ಕ್ಕೆ ಮುಂಚೆ ಮಾನಸಗಂಗೋತ್ರಿಯ ಪ್ರದೇಶ 350 ಎಕರೆಯಿದ್ದು ಇವರ ಕಾಲದಲ್ಲಿ ಮತ್ತೆ 150 ಎಕರೆಯಷ್ಟು ವಿಸ್ತಾರವಾದ ಪ್ರದೇಶವನ್ನು ವಿಶ್ವವಿದ್ಯಾನಿಲಯ ಪಡೆದುಕೊಂಡಿತು. ಗಂಗೋತ್ರಿಯ ಆವರಣದಲ್ಲಿ ಅನೇಕ ಭವ್ಯ ಕಟ್ಟಡಗಳು ನಿರ್ಮಾಣಗೊಂಡವು. ತೋಟಗಾರಿಕೆ ಇಲಾಖೆ ವ್ಯಾಪಕವಾಗಿ ಬೆಳೆದು ಗಂಗೋತ್ರಿ ತರುರಾಜಿಯಿಂದ ಕಂಗೊಳಿಸುವಂತಾಯಿತು. ಇವರು ಕುಲಪತಿಯಾದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ಸುಧಾರಣೆಗಳಾದವು. ಅವುಗಳಲ್ಲಿ ಪರೀಕ್ಷಾ ಸುಧಾರಣೆ ಇವರ ಕ್ರಾಂತಿಕಾರಕ ಹೆಜ್ಜೆಗಳಲ್ಲಿ ಒಂದು.

ಕುವೆಂಪು ವಿದ್ಯಾವರ್ಧಕ ಟ್ರಸ್ಟ್ (ನೋಡಿ) ದೇಜಗೌ ಕನಸಿನ ಮತ್ತೊಂದು ಕುಡಿ. ತಮ್ಮ ಗುರು ರಾಷ್ಟ್ರಕವಿ ಕುವೆಂಪು ಅವರ ಹೆಸರಿನಲ್ಲಿ ಈ ಸಂಸ್ಥೆಯನ್ನು ಕಟ್ಟಿರುವ ದೇಜಗೌ ಅದನ್ನು ಸಂಸ್ಕೃತಿ, ಸಾಹಿತ್ಯ ಹಾಗೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ಸಂಶೋಧನೆಗಳ ಕೇಂದ್ರವನ್ನಾಗಿ ಬೆಳೆಸುತ್ತಿದ್ದಾರೆ. ಸ್ವಂತ ಮನೆಯನ್ನೇ ಕುವೆಂಪು ಟ್ರಸ್ಟಿಗೆ ಧಾರೆಯೆರೆದಿದ್ದಾರೆ. ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಿ ಆ ಮೂಲಕ ಗ್ರಾಮಾಂತರ ಪ್ರತಿಭೆಯ ವಿಕಾಸಕ್ಕೆ ನೆರವಾಗಿದ್ದಾರೆ. ತಮ್ಮ ಗ್ರಂಥಗಳಿಂದ ಇತರೆ ಬರೆವಣಿಗೆಗಳಿಂದ ಬರುವ ಗೌರವಧನವನ್ನೆಲ್ಲ ಅರ್ಪಿಸಿ ಒಂದು ದತ್ತಿಯನ್ನು ದೇಜಗೌ ಟ್ರಸ್ಟ್ ಎಂಬ ಹೆಸರಿನಲ್ಲಿ ಬೆಳೆಸಿ, ಆ ಮೂಲಕವೂ ಸಂಶೋಧನೆ, ವಿಮರ್ಶೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ದೇಜಗೌ ಕನ್ನಡದ ಗದ್ಯ ಲೇಖಕರಲ್ಲಿ ಅಗ್ರಗಣ್ಯರು. ಕನ್ನಡ ಹಾಗೂ ಇಂಗ್ಲಿಷ್ ಈ ಎರಡು ಭಾಷೆಗಳಲ್ಲೂ ಕೃತಿರಚನೆ ಮಾಡಿರುವ ಇವರು 135ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಹೋರಾಟದ ಬದುಕು (1968, 1987) ಇವರ ಬದುಕಿನ ಪ್ರಾಮಾಣಿಕ ಚಿತ್ರವನ್ನು ನೀಡುವ ಗಮನಾರ್ಹ ಕೃತಿ. ನೆನಪಿನ ಬುತ್ತಿ (1994), ನನ್ನ ಉಪವಾಸದ ಕಥೆ (1994), ಕುಲಪತಿ ದಿನಚರಿ (1973) - ಇವು ಆತ್ಮ ಕಥೆಗಳು. ಇವರು ಅನೇಕ ಭಾಷಾಂತರಗಳನ್ನು ಹೊರ ತಂದಿದ್ದಾರೆ. ಇವರ

ಭಾಷಾಂತರ ಕೃತಿಗಳಲ್ಲಿ ಮುಖ್ಯವಾದವು: ನೆನಪು ಕಹಿಯಲ್ಲ (ಕೃಷ್ಣ ಹಠೀಸಿಂಗ್, 1949), ಪುನರುತ್ಥಾನ (ಟಾಲ್‌ಸ್ಟಾಯ್, 1965), ಯುದ್ಧ ಮತ್ತು ಶಾಂತಿ (ಟಾಲ್‌ಸ್ಟಾಯ್, 1989), ಅನ್ನಾ ಕರೆನಿನ (ಟಾಲ್‌ಸ್ಟಾಯ್, 1991), ಹಮ್ಮು-ಬಿಮ್ಮು (ಜೇನ್ ಆಸ್ಟಿನ್, 1961). ಟಾಲ್‌ಸ್ಟಾಯ್ ಅವರ ಎರಡು ನಾಟಕಗಳನ್ನೂ ಇವರು ಕನ್ನಡಕ್ಕೆ ತಂದಿದ್ದಾರೆ. ಪುನರುತ್ಥಾನ ಕೃತಿಯ ಅನುವಾದಕ್ಕೆ ಇವರಿಗೆ ಸೋವಿಯತ್‌ಲ್ಯಾಂಡ್ ನೆಹರುಪ್ರಶಸ್ತಿ ಲಭಿಸಿದೆ (1967).

ಇವರು ಸಂಪಾದಿಸಿದ ಪ್ರಮುಖ ಕೃತಿಗಳಿವು: ಕಬ್ಬಿಗರ ಕಾವ (1964), ಗಿರಿಜಾ ಕಲ್ಯಾಣ ಮಹಾಪ್ರಬಂಧಂ (1951), ಚಿಕುಪಾಧ್ಯಾಯನ ರುಕ್ಮಾಂಗದ ಚರಿತ್ರೆ (1982), ಜೈಮಿನಿ ಭಾರತ ಸಂಗ್ರಹ (1959), ಧರ್ಮಾಮೃತ ಸಂಗ್ರಹ (1957), ನಳಚರಿತ್ರೆ (1965). ಆರು ಸಂಪುಟಗಳಲ್ಲಿ ಪ್ರಕಟವಾಗಿರುವ ಕುಲಪತಿಯ ಭಾಷಣಗಳು, ಕುಲಪತಿಯ ಪತ್ರಗಳು - ಮುಂತಾದ ಗ್ರಂಥಗಳು ವಿಚಾರ ಪ್ರಚೋದಕ ಬರೆಹಗಳಿಂದ ಕೂಡಿವೆ. ಸಮಾಜ ಶಿಕ್ಷಣ, ಸಂಸ್ಕೃತಿ, ನಾಡು ನುಡಿ ಮುಂತಾದ ಅನೇಕ ಗಹನ ವಿಷಯಗಳ ಮೇಲೆ ದೇಜಗೌ ಹರಿಸಿರುವ ವಿಚಾರಧಾರೆ ಇವರ ಚಿಂತನಶೀಲತೆಗೆ ಸಾಕ್ಷಿಯಾಗಿದೆ.

ಪ್ರವಾಸ ಸಾಹಿತ್ಯಕ್ಕೆ ದೇಜಗೌ ಅವರ ಕಾಣಿಕೆ ಹಿರಿದಾದುದು. ಇವರ ರಷ್ಯ, ಯುರೋಪ್, ಅಮೆರಿಕ ಹಾಗೂ ಆಫ್ರಿಕ, ಸ್ವಿಟ್ಸರ್‌ಲೆಂಡ್ ಮೊದಲಾದ ದೇಶಗಳ ಪ್ರವಾಸದ ಹಿನ್ನೆಲೆಯಲ್ಲಿ ರಚಿತವಾಗಿರುವ ವಿದೇಶದಲ್ಲಿ ನಾಲ್ಕು ವಾರ (1970), ಪ್ರವಾಸಿಯ ದಿನಚರಿ (1974), ಆಫ್ರಿಕಯಾತ್ರೆ (1975), ಯೇಸು ವಿಭೀಷಣರ ನಾಡಿನಲ್ಲಿ (1978), ಹಚ್ಚ ಹಸುರಿನ ನಾಡಿನಲ್ಲಿ ಮೊದಲಾದ ಪ್ರವಾಸ ಕಥನಗಳೂ ಕೇವಲ ಪ್ರವಾಸ ನಿರೂಪಣೆಯಾಗಿರದೆ ಅನೇಕ ಶೈಕ್ಷಣಿಕ ಅಂಶಗಳನ್ನೊಳಗೊಂಡಿವೆ. ಜೀವನ ಚರಿತ್ರೆಗಳ ಪ್ರಕಾರಕ್ಕೂ ದೇಜಗೌ ಇವರ ಕಾಣಿಕೆ ಸಂದಿದೆ. ಮೋತಿಲಾಲ್ ನೆಹರು (1961), ರಾಷ್ಟ್ರಕವಿ ಕುವೆಂಪು (1967), ತೀನಂಶ್ರೀ (1970), ಲೋಕನಾಯಕ (1980), ಲೋಕದ ಬೆಳಕು (1983) ಮುಂತಾಗಿ 25ಕ್ಕೂ ಹೆಚ್ಚು ಜೀವನಚರಿತ್ರೆಗಳನ್ನು ಇವರು ಪ್ರಕಟಿಸಿ ಆ ಕ್ಷೇತ್ರದಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿದ್ದಾರೆ. ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಇವರು ಹೊಸ ದಿಕ್ಕನ್ನು ತೋರಿಸಿದರು. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ರಚಿಸಿ ಜಾನಪದದ ಹಿರಿಮೆಯನ್ನು ಮೆರೆದಿದ್ದಾರೆ. ಜಾನಪದ ಅಧ್ಯಯನ (1976), ಜಾನಪದ ಸೌಂದರ್ಯ (1977), ಜನಪದ ಗೀತಾಂಜಲಿ (1978), ಜಾನಪದ ವಾಹಿನಿ (1983) - ಇವೇ ಮೊದಲಾದವು ಉಲ್ಲೇಖನೀಯ ಕೃತಿಗಳು. ಫೋಕ್‌ಲೋರ್ ಸೊಸೈಟಿ ಆಫ್ ಸೌತ್ ಇಂಡಿಯನ್ ಲ್ಯಾಂಗ್ವೇಜಸ್‌ನ ಅಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.

ಕುವೆಂಪು ಸಾಹಿತ್ಯದ ಅಧ್ಯಯನಕ್ಕೆ ದೇಜಗೌ ಮಹತ್ತರ ಕೊಡುಗೆ ನೀಡಿದ್ದಾರೆ. ಶ್ರೀರಾಮಾಯಣದರ್ಶನಂ ವಚನಚಂದ್ರಿಕೆ (1954), ಆ ಮಹಾಕಾವ್ಯದ ಗದ್ಯರೂಪ. ಕುವೆಂಪು ಸಾಹಿತ್ಯ: ಕೆಲವು ಅಧ್ಯಯನಗಳು ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿದೆ (1954). ಶ್ರೀ ಕುವೆಂಪು ಅವರ ದಾಂಪತ್ಯ ದರ್ಶನದ ನಾಲ್ಕು ಮೆಗಾ ಕವನಗಳು (1986) ಎಂಬ ಕೃತಿ ದೇಜಗೌ ಅವರ ವ್ಯಾಖ್ಯಾನ ಪ್ರತಿಭೆಗೆ ನಿದರ್ಶನ. ಇವಲ್ಲದೆ ಕುವೆಂಪು ಅವರ ದರ್ಶನ ಮತ್ತು ಸಂದೇಶ (1975), ರಾಷ್ಟ್ರಕವಿ ಸಂದರ್ಶನ (1984), ಕುವೆಂಪು ಶೈಲಿ (1991), ಕುವೆಂಪು ವಿಶ್ವಮಾನವ ಸಂದೇಶ (1993), ಕುವೆಂಪು ಅವರ ಕೊನೆ ದಿನಗಳು - ಇವು ಕವಿಯ ಬದುಕು ಮತ್ತು ಸಾಧನೆಯನ್ನು ಕುರಿತ ಕೃತಿಗಳಾಗಿವೆ.

ಕನ್ನಡದಲ್ಲಿ ಕೆಲವು ವೈಚಾರಿಕ ಕೃತಿಗಳನ್ನು ಇವರು ರಚಿಸಿದ್ದಾರೆ. ಕನ್ನಡಿಗರೇ ಎಚ್ಚರಗೊಳ್ಳಿ (1951), ಕನ್ನಡಕ್ಕಾಗಿ ಕೈ ಎತ್ತು (1981), ಕನ್ನಡಕ್ಕೆ ನಮನ (1985), ರಾಷ್ಟ್ರೀಯ ಮೂಲಭೂತ ಸಮಸ್ಯೆ (1991) - ಇಂಥ ಕೃತಿಗಳು. ಕಡುಗಲಿ ಕುಮಾರರಾಮ (1961) ಇವರು ರಚಿಸಿದ ಐತಿಹಾಸಿಕ ಕಾದಂಬರಿ. ಕಲ್ಚರ್, ಎಜ್ಯುಕೇಷನ್ ಅಂಡ್ ಸೊಸೈಟಿ (1974), ಪೊಯೆಮ್ಸ್ ಆಫ್ ಕುವೆಂಪು (1988) - ಇವರು ಇತರರೊಡನೆ ಸೇರಿ ರೂಪಿಸಿದ ಇಂಗ್ಲಿಷ್ ಕೃತಿಗಳು.

ದೇಜಗೌ ಅವರ ಸಾಹಿತ್ಯಕ ದುಡಿಮೆ ವ್ಯಾಪಕವಾದುದು. ಹಲವು ವರ್ಷ ಇವರು ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿದ್ದರು. ಅನೇಕ ಸಂಭಾವನ ಗ್ರಂಥಗಳ ಸಂಪಾದಕರಾಗಿಯೂ ಕೃತಿಗಳನ್ನು ಹೊರತಂದಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿ, ಬೆಂಗಳೂರಿನ ಕರ್ನಾಟಕ ಸಹಕಾರೀ ಪ್ರಕಾಶನ, ಜ್ಞಾನಗಂಗೋತ್ರಿಯ ಸಂಪುಟಗಳು - ಇಲ್ಲೆಲ್ಲ ಇವರ ಪಾತ್ರ ಇದ್ದೇ ಇದೆ. ಕನ್ನಡದ ಪುರೋಭಿವೃದ್ಧಿಗಾಗಿ ದೇಜಗೌ ಅವರ ದುಡಿಮೆಯನ್ನು ಮತ್ತು ಇವರ ಅಪಾರ ಸಂಖ್ಯೆಯ ಕೃತಿಗಳನ್ನು ಗಮನಿಸಿ ಬೆಂಗಳೂರಿನಲ್ಲಿ ನಡೆದ 47ನೆಯ ಕನ್ನಡ ಸಾಹಿತ್ಯ ಸಮ್ಮೇಳನದ (1970) ಅಧ್ಯಕ್ಷರನ್ನಾಗಿ ಆರಿಸುವುದರ ಮೂಲಕ ಕನ್ನಡ ಜನತೆ ಇವರಿಗೆ ತನ್ನ ಗೌರವವನ್ನು ಸಲ್ಲಿಸಿತು.

ಕನ್ನಡ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸಲ್ಲಿಸಿದ ಅಪಾರ ಸೇವೆಗಾಗಿ ದೇಜಗೌ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪದವಿಯನ್ನು ನೀಡಿ ಗೌರವಿಸಿತು (1975). ಜಾನಪದ ಕ್ಷೇತ್ರಕ್ಕೆ ಇವರು ಸಲ್ಲಿಸಿದ ಅಮೂಲ್ಯ ಸೇವೆಯನ್ನು ಪರಿಗಣಿಸಿ ಇವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆರಿಸಲಾಯಿತು (1976). ಇವರು ಕುರುಕ್ಷೇತ್ರದಲ್ಲಿ ಜರುಗಿದ ಅಖಿಲ ಭಾರತ ಪ್ರಾಚ್ಯ ವಿದ್ಯಾಲಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು (1974). ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸುತ್ತಿದ್ದ ಪುಸ್ತಕ ಪ್ರಪಂಚ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ (1977-90).

ದೇಜಗೌರವರಿಗೆ ಹಲವು ಪ್ರಶಸ್ತಿ – ಗೌರವಗಳು ಸಂದಿವೆ. ತಿರುವಾಂಕೂರಿನ ದ್ರಾವಿಡ ಭಾಷಾವಿಜ್ಞಾನ ಸಂಸ್ಥೆಯ ಸೀನಿಯರ್ ಫೆಲೋ ಗೌರವ (1979), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1984), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985), ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ (1998), ಹಂಪಿಯ ಕನ್ನಡ ವಿಶ್ವವಿದ್ಯಾಲಯದ 'ನಾಡೋಜ' ಗೌರವ ಡಿ.ಲಿಟ್. ಪದವಿ ಇವು ಪ್ರಮುಖವಾದವು. ಇವರಿಗೆ ಹಲವು ಅಭಿನಂದನ ಗ್ರಂಥಗಳು ಅರ್ಪಣೆಯಾಗಿವೆ. ಅವೆಂದರೆ ಅಂತಃಕರಣ, ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ, ರಸಷಷ್ಠಿ, 70ರ ಹೊಸ್ತಿಲಲ್ಲಿ, ಅಮೃತವರ್ಷ ಮತ್ತು ಅಪೂರ್ವ, ನಮ್ಮ ನಾಡೋಜ. ಇವರ ಸಿದ್ಧಿ ಸಾಧನೆಗಳನ್ನು ಕುರಿತಂತೆಯೂ ಹಲವು ಗ್ರಂಥಗಳು ಪ್ರಕಟವಾಗಿವೆ. ಕನ್ನಡದ ಕಣ್ಮಣಿ, ಕನ್ನಡ ಸೇನಾನಿ, ಕರ್ಮಯೋಗಿ, ಕುಲಪತಿಯ ಸಾಧನೆಗಳು, ಗುಡಿಸಲಿನಿಂದ ಗಂಗೋತ್ರಿಗೆ, ದೇಜಗೌ 75 - ಸಂದರ್ಶನ ಇತ್ಯಾದಿ.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿದ ದೇಜಗೌ ಮತ್ತೆ ತಮ್ಮ ಮಾತೃ ಸಂಸ್ಥೆಗೆ ಪ್ರಾಧ್ಯಾಪಕರಾಗಿ ಮರಳಿ ದಕ್ಷಿಣ ಭಾರತದಲ್ಲಿಯೇ ಒಂದು ಹೊಸ ಮೇಲ್ಪಂಕ್ತಿಯನ್ನು ಹಾಕಿದರು. ಬೋಧನೆ, ಸಾಹಿತ್ಯ ರಚನೆ, ಅಧ್ಯಯನಗಳಲ್ಲಿ ಅಪಾರ ಸಂತೋಷವನ್ನು ಕಂಡುಕೊಂಡರು. ನಿವೃತ್ತಿಯ ಅನಂತರ ಈಗ ದೇಜಗೌ ಅವರು ತಾವು ಕಟ್ಟಿದ ಶ್ರೀಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಯಲ್ಲಿ ಈ ಸಂಸ್ಥೆ ಗಣ್ಯ ಪಾತ್ರವನ್ನು ವಹಿಸಬೇಕೆಂಬುದೇ ಇವರ ಹೆಗ್ಗನಸು.

ಇವರ ಪತ್ನಿ ಸಾವಿತ್ರಮ್ಮ. ಜೆ.ಶಶಿಧರ ಪ್ರಸಾದ್ ಇವರ ಮಗ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕರಾಗಿರುವ ಇವರು ಈಗ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ (1 ಸೆಪ್ಟೆಂಬರ್ 2003ರಿಂದ). ತಂದೆ ಮತ್ತು ಮಗ ಇಬ್ಬರೂ ಒಂದೇ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಯಾದದ್ದು ಭಾರತೀಯ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಕ್ಷೇತ್ರದಲ್ಲಿ ಅಪರೂಪದ ಸಂಗತಿಯಾಗಿದೆ. (ಜೆ.ಎಸ್.ಪಿ.)

**ಜವಾಬ್ದಾರಿ ಸರ್ಕಾರ :** ಶಾಸಕಾಂಗಕ್ಕೆ ಜವಾಬ್ದಾರಿಯಾಗಿರುವ ಅಥವಾ ಉತ್ತರವಾದಿಯಾಗಿರುವ ಸರ್ಕಾರ (ರೆಸ್ಪಾನ್ಸಿಬಲ್ ಗವರ್ನ್‌ಮೆಂಟ್). ವಸಾಹತಿನ ವಿದೇಶಾಂಗ ನೀತಿ, ರಕ್ಷಣೆ ಮುಂತಾದ ಕೆಲವು ಅಧಿಕಾರಗಳನ್ನು ಸಾಮ್ರಾಜ್ಯ ಸರ್ಕಾರ ಉಳಿಸಿಕೊಂಡು ಆಂತರಿಕ ಆಡಳಿತವನ್ನು ವಸಾಹತಿನವರಿಗೆ ನೀಡುವುದನ್ನೇ ಹಿಂದಿನ ಬ್ರಿಟಿಷ್ ಸಾಮ್ರಾಜ್ಯದ ಕಾಲದಲ್ಲಿ ಜವಾಬ್ದಾರಿ ಸರ್ಕಾರ ಎಂದು ಕರೆಯಲಾಗಿತ್ತು. ಈ ಬಗೆಯ ವ್ಯವಸ್ಥೆಯನ್ನು

ಉತ್ತರ ಅಮೆರಿಕದಲ್ಲಿ ಈಗಿನ ಕೆನಡದ ಪ್ರದೇಶಕ್ಕೆ ನೀಡಬೇಕೆಂಬುದಾಗಿ ಸಲಹೆ ಬಂದಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಾರಂಭಕಾಲದಲ್ಲಿ ಈ ಬಗೆಯ ಸರ್ಕಾರವನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ವರಾಜ್ಯವೆಂದಿತು. ಸಾಮ್ರಾಜ್ಯದೊಂದಿಗೆ ಯಾವ ಸಂಪರ್ಕವೂ ಇಲ್ಲದೆ ಸ್ವತಂತ್ರ ರಾಷ್ಟ್ರವಾಗಿರುವ ಸ್ಥಿತಿಯನ್ನು ಪೂರ್ಣಸ್ವರಾಜ್ಯವೆಂದು ಕರೆಯಲಾಗಿತ್ತು.

ಉತ್ತರ ಮತ್ತು ದಕ್ಷಿಣ ಕೆನಡದಲ್ಲಿ ಬ್ರಿಟಿಷ್ ವಸಾಹತುಗಳಲ್ಲಿ (ಈಗಿನ ಆಂಟೇರಿಯೊ ಮತ್ತು ಕ್ವಿಬೆಕ್ ಪ್ರಾಂತ್ಯಗಳು) 1837ರಲ್ಲಿ ದಂಗೆಗಳಾದಾಗ, ವಸಾಹತುಗಳ ಪರಿಸ್ಥಿತಿಯನ್ನು ಪರೀಕ್ಷಿಸಿ ಅವುಗಳಿಗೆ ಯಾವ ಮಾದರಿಯ ಸರ್ಕಾರ ಇರಬೇಕೆಂಬ ಬಗ್ಗೆ ವರದಿ ನೀಡಬೇಕೆಂದು ಬ್ರಿಟಿಷ್ ಸರ್ಕಾರ ಉತ್ತರ ಅಮೆರಿಕದ ವಸಾಹತುಗಳ ಗವರ್ನರ್-ಜನರಲ್ ಆಗಿದ್ದ ಲಾರ್ಡ್‌ಡರ್ಹಾಮನನ್ನು ನೇಮಿಸಿತು. ಅವನು 1839ರಲ್ಲಿ ಒಂದು ವರದಿ ಒಪ್ಪಿಸಿ, ಆ ಪ್ರದೇಶದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂದು ಸಲಹೆ ಮಾಡಿದ. ಉತ್ತರ ಮತ್ತು ದಕ್ಷಿಣ ಕೆನಡ ಪ್ರಾಂತ್ಯಗಳು ಮತ್ತು ಇತರ ಪ್ರದೇಶಗಳಿಗೆ ಜವಾಬ್ದಾರಿ ಸರ್ಕಾರದ ಮೂಲಕ ಸ್ಥಳೀಯ ವ್ಯವಹಾರಗಳ ಆಡಳಿತ ವಹಿಸಬಹುದೆಂಬುದು ಅವನ ಶಿಫಾರಸು. ಪ್ರತಿವಸಾಹತಿನಲ್ಲೂ ವಿಧಾನ ಮಂಡಲದ ಬಹುಮತ ಪಡೆದ ವ್ಯಕ್ತಿಗಳಿಂದ ಕೂಡಿದ ಕಾರ್ಯನಿರ್ವಾಹಕ ಪರಿಷತ್ತು ಆಡಳಿತ ನಡೆಸಬೇಕೆಂದೂ ಅವರು ವಿಧಾನಮಂಡಲದ ವಿಶ್ವಾಸವನ್ನು ಕಳೆದುಕೊಂಡಾಗ ರಾಜೀನಾಮೆ ನೀಡಬೇಕೆಂದೂ ಅವನು ಸೂಚಿಸಿದ. ಇಂಗ್ಲೆಂಡಿನಲ್ಲಿದ್ದಂತೆ ಅಲ್ಲೂ ಹೊಣೆಗಾರ ಸಂಪುಟ ವ್ಯವಸ್ಥೆ ಏರ್ಪಡಿಸಬೇಕೆಂಬುದು ಅವನ ಅಭಿಪ್ರಾಯ. ವಸಾಹತಿನ ರಾಜ್ಯಪಾಲ ಎಲ್ಲ ಸ್ಥಳೀಯ ವಿಚಾರಗಳಲ್ಲೂ ಕಾರ್ಯನಿರ್ವಾಹಕ ಪರಿಷತ್ತಿನ ಸಲಹೆಯನ್ನು ಅನುಸರಿಸಬೇಕೆಂದೂ ಹೇಳಿದ.

ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಮೂರು ಅರ್ಥಗಳಿವೆ. (1) ಸಾರ್ವಜನಿಕ ಅಭಿಪ್ರಾಯಕ್ಕೆ ಹೊಣೆಯುಳ್ಳ ಸರ್ಕಾರ ಪದ್ಧತಿ. ಈ ಅರ್ಥದಲ್ಲಿ ಜವಾಬ್ದಾರಿ ಸರ್ಕಾರ ಪ್ರಜಾಭಿಪ್ರಾಯವನ್ನು ಪಡೆಯಲು ಬದ್ಧವಾಗಿರುವ ಪ್ರಜಾಸತ್ತಾತ್ಮಕ ಸರ್ಕಾರಕ್ಕೂ ನಿರಂಕುಶ ಪ್ರಭುವಿನ ಅಧಿಕಾರಕ್ಕೆ ವ್ಯಕ್ತಿಯ ಹಕ್ಕುಗಳು ಒಳಪಟ್ಟಿರುವ ಸರ್ವಾಧಿಕಾರಕ್ಕೂ ಭಿನ್ನವಾದ್ದು. (2) ಸಾರ್ವಜನಿಕರ ಹಿತಕ್ಕಾಗಿ ಸರ್ಕಾರ ನಿರ್ವಹಿಸುವ ಕೆಲಸ ಮತ್ತು ಆ ಬಗ್ಗೆ ಅದರ ನೈತಿಕ ಜವಾಬ್ದಾರಿ. ರಾಷ್ಟ್ರೀಯ ಹಿತಾಸಕ್ತಿ ಸಾರ್ವಜನಿಕ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದರೆ ಸರ್ಕಾರ ರಾಷ್ಟ್ರೀಯ ಹಿತಾಸಕ್ತಿಯನ್ನೇ ಪ್ರಧಾನವೆಂದು ಪರಿಗಣಿಸಬೇಕು. ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಒಂದು ಸರ್ಕಾರ ತನ್ನನ್ನು ನೇಮಿಸಿದವರಿಗೆ ಮತ್ತು ತನ್ನನ್ನು ಅಧಿಕಾರದಲ್ಲಿರಿಸಿದವರಿಗೆ, ಒಬ್ಬ ನೇಮಕಗೊಂಡ ಪ್ರತಿನಿಧಿ ತನ್ನ ಯಜಮಾನನಿಗೆ ಜವಾಬ್ದಾರನಾಗಿರುವಂತೆ, ಜವಾಬ್ದಾರಿ ಹೊಂದಿರುವುದಲ್ಲದೆ ಒಂದು ಸ್ವತಂತ್ರ ಸಂಸ್ಥೆಯೂ ಆಗಿರುತ್ತದೆಂದು ಎಲ್.ಎಸ್.ಅಮೆರಿ ಅಭಿಪ್ರಾಯಪಟ್ಟಿದ್ದ. ಇಂಥ ಸ್ವತಂತ್ರ ಸಂಸ್ಥೆ ಅಧಿಕಾರಕ್ಕೆ ಬಂದಮೇಲೆ ತನ್ನ ಸ್ವಂತ ವಿವೇಚನೆ ಮತ್ತು ಆತ್ಮಸಾಕ್ಷಿಗೆ ಅನುಸಾರವಾಗಿ ಸಂಸತ್ತಿಗೆ ಮತ್ತು ರಾಷ್ಟ್ರಕ್ಕೆ ಮಾರ್ಗದರ್ಶನ ನೀಡುವ ಜವಾಬ್ದಾರಿ ಹೊತ್ತಿದೆಯೆಂದು ಆತ ಹೇಳಿದ. (3) ಜನರಿಂದ ಚುನಾಯಿತವಾದ ಸಭೆಗೆ ಸರ್ಕಾರ ಮತ್ತು ಸರ್ಕಾರದ ಪ್ರತಿಯೊಬ್ಬ ಮಂತ್ರಿಯೂ ಹೊಣೆ ಎಂಬ ಅರ್ಥದಲ್ಲಿ ಜವಾಬ್ದಾರಿ ಸರ್ಕಾರ ಎಂಬ ಪರಿಭಾಷೆ ಈಗ ಬಳಕೆಯಲ್ಲಿದೆ. ಸಂಸದೀಯ ಪದ್ಧತಿ ಇರುವ ಎಲ್ಲ ದೇಶಗಳಲ್ಲೂ ಈ ಪದ್ಧತಿ ರೂಢಿಯಲ್ಲಿದೆ. ಸರ್ಕಾರದ ಕಾರ್ಯನೀತಿಯ ಬಗ್ಗೆ ಮಂತ್ರಿಮಂಡಲ ಸಾಮೂಹಿಕವಾಗಿ ಮತ್ತು ತನ್ನ ಇಲಾಖೆಗೆ ಸಂಬಂಧಪಟ್ಟಂತೆ ಮಂತ್ರಿ ಮಂಡಲದ ಪ್ರತಿಯೊಬ್ಬ ಮಂತ್ರಿಯೂ ವೈಯಕ್ತಿಕವಾಗಿ ಸಂಸತ್ತಿಗೆ ಹೊಣೆಯಾಗಿರಬೇಕು. ಈ ಸರ್ಕಾರಪದ್ಧತಿಯಲ್ಲಿ ಚುನಾಯಿತ ಸಭೆ ವಾಸ್ತವಿಕವಾಗಿ ಪರಮಾಧಿಕಾರವುಳ್ಳ ಸಂಸ್ಥೆ.

ಜವಾಬ್ದಾರಿ ಸರ್ಕಾರದ ಈ ಮೂರು ಪರಿಕಲ್ಪನೆಗಳಲ್ಲಿ ಸೂಚಿತವಾದ ಉದ್ದೇಶಗಳು ಪರಸ್ಪರ ಸಂಗತವಾಗಿರದಿದ್ದರೂ ಅವು ಪ್ರಜಾಸತ್ತಾತ್ಮಕ ರಾಜ್ಯಕ್ಕೆ ಅನ್ವಯಿಸುತ್ತವೆ. ಉದಾಹರಣೆಗೆ, ಸಾರ್ವಜನಿಕ ಅಭಿಪ್ರಾಯವು ಯುಕ್ತವಾದ ಇಲ್ಲವೆ ವಾಸ್ತವಿಕವಾದ ವಿಚಾರಗಳ ಬಗ್ಗೆ ಎಲ್ಲ ಕಾಲಗಳಲ್ಲಿ ಒಂದೇ ರೀತಿ ಇರಲಾರದು. ಸಾರ್ವಜನಿಕ ಅಭಿಪ್ರಾಯದಿಂದ ಮಾರ್ಗದರ್ಶನ ಪಡೆಯುವ ಸರ್ಕಾರ ವ್ಯತಿರಿಕ್ತ ಕಾರ್ಯನೀತಿಗಳನ್ನು ಅನುಸರಿಸುವ ಸಾಧ್ಯತೆಯುಂಟು. ಪರಸ್ಪರ ವಿರುದ್ಧವಾದ ಉದ್ದೇಶಗಳ ವಿಷಯದಲ್ಲಿ ಯುಕ್ತಸಾಮರಸ್ಯವನ್ನು ತಂದುಕೊಂಡು ಆಡಳಿತ ವಹಿಸುವುದೇ ಸರ್ಕಾರಕ್ಕಿರುವ ಉತ್ತಮ ಮಾರ್ಗ. ಈ ಪ್ರಕ್ರಿಯೆಯಲ್ಲಿ ಪ್ರಾತಿನಿಧ್ಯ ಪದ್ಧತಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಪ್ರಾತಿನಿಧ್ಯ ಪದ್ಧತಿಯನ್ನು ಪರಿಗಣಿಸದೆ ಯಾವ ರೂಪದಲ್ಲೇ ಆಗಲಿ ಜವಾಬ್ದಾರಿ ಸರ್ಕಾರವನ್ನು ರೂಢಿಸಿ ತರಲು ಸಾಧ್ಯವಿಲ್ಲ. ಎ.ಎಚ್.ಬರ್ಚ್ ಹೇಳುವಂತೆ, ಪ್ರಜೆಗಳ ಬೇಡಿಕೆಗಳು ಪ್ರಾತಿನಿಧ್ಯ ಪದ್ಧತಿಯ ಮೂಲಕ ವ್ಯಕ್ತವಾಗಿ, ಚರ್ಚೆಯಲ್ಲಿ ಒಂದಿಷ್ಟು ಬದಲಾವಣೆಗೊಂಡು ಸರ್ಕಾರದ ಪರಿಶೀಲನೆಗೆ ಬರುತ್ತವೆ. ರಾಜಕೀಯ ಪಕ್ಷಗಳು ಚರ್ಚಾಸ್ಪದ ವಿಚಾರಗಳ ಬಗ್ಗೆ ಅಭಿಪ್ರಾಯಗಳನ್ನು ಗ್ರಹಿಸಿ ಅವನ್ನು ಆಯ್ಕೆಮಾಡಿಕೊಳ್ಳಬಹುದಾದ ಹಲವಾರು ಕಾರ್ಯನೀತಿಗಳ ರೂಪಕ್ಕೆ ಇಳಿಸುತ್ತವೆ. ರಾಜಕೀಯ ಮುಖಂಡರು ಪಕ್ಷ ಸಭೆಗಳ ಮತ್ತು ಚುನಾವಣಾ ಪ್ರಚಾರ ಸಭೆಗಳ ಮೂಲಕ ತಮ್ಮ ಕಾರ್ಯಕ್ರಮಗಳಿಗೆ ಜನರ ಬೆಂಬಲ ಪಡೆದುಕೊಳ್ಳುತ್ತಾರೆ.

**ಕರ್ನಾಟಕದಲ್ಲಿ :** ಈಗ ಕರ್ನಾಟಕಾಂತರ್ಗತವಾಗಿರುವ ಹಳೆಯ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯ ರೂಪದಲ್ಲಿ ಜವಾಬ್ದಾರಿ ಸರ್ಕಾರದ ಬೀಜವನ್ನು ಬಿತ್ತಿದವರು ದಿವಾನ್ ರಂಗಾಚಾರ್ಲು (1881). 1800ರಿಂದಲೂ ಮೈಸೂರು ಸಂಸ್ಥಾನದಲ್ಲಿ ಒಳಾಡಳಿತದಲ್ಲಿ ಪ್ರಜೆಗಳಿಗೆ ಅವಕಾಶವಿರಲಿಲ್ಲ. ಪ್ರಜಾಪ್ರತಿನಿಧಿ ಸಭೆ 1881ರಲ್ಲಿ ಸ್ಥಾಪಿತವಾದ ಮೇಲೆ, 50 ರೂ.ಗಳಿಂದ 500 ರೂ.ಗಳ ವಾರ್ಷಿಕ ಕಂದಾಯ ಸಲ್ಲಿಸುವವರು ಆ ಸಭೆಗೆ ನಾಮನಿರ್ದೇಶನಗೊಳ್ಳಬಹುದಾಗಿತ್ತು. ಸದಸ್ಯರ ನಾಮನಿರ್ದೇಶನಕ್ಕೆ ಬದಲಾಗಿ ಅವರು ಜನರಿಂದ ಚುನಾಯಿತರಾಗಬೇಕೆಂಬ ಒತ್ತಾಯ 1889ರಲ್ಲಿ ರಂಗದಾಸಪ್ಪನವರಿಂದ ಬಂತು. 1890ರಲ್ಲಿ ದಿವಾನ್ ಕೆ.ಶೇಷಾದ್ರಿ ಅಯ್ಯರ್ ಅದನ್ನು ಒಪ್ಪಿದರು. ಆಗಿನ ಪ್ರಜಾಪ್ರತಿನಿಧಿ ಸಭೆ ಕೇವಲ ಸಮಾಲೋಚಕ ಸಭೆಯಾಗಿತ್ತೇ ಹೊರತು ಆಡಳಿತದ ಮೇಲೆ ಅದಕ್ಕೆ ನಿಯಂತ್ರಣಾಧಿಕಾರವಿರಲಿಲ್ಲ. ಶಾಸನ ರಚನೆಯ ಬಗ್ಗೆ ನಿರ್ಣಯ ಕೈಗೊಳ್ಳಲು ಸಹ ಅದಕ್ಕೆ ಅಧಿಕಾರವಿರಲಿಲ್ಲ. 1907ರಲ್ಲಿ ಮೊದಲ ಬಾರಿಗೆ ನ್ಯಾಯವಿಧಾಯಕ ಸಭೆ ರಚಿತವಾಯಿತು. ಅದಕ್ಕೆ ಶಾಸನ ರಚನೆಯ ಅಧಿಕಾರವಿತ್ತು. ಅದು ದಿವಾನರು, ಸಚಿವರು ಹಾಗೂ ಸರ್ಕಾರದಿಂದ ನೇಮಕಗೊಂಡ 15 ಮಂದಿ ಸದಸ್ಯರಿಂದ ಕೂಡಿತ್ತು. ದಿವಾನ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೆ ಆಯವ್ಯಯ ಪತ್ರದ ಮೇಲೆ ಚರ್ಚೆಮಾಡುವ ಜವಾಬ್ದಾರಿಯನ್ನು ನೀಡಲಾಯಿತು (1919). ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಪ್ರಶ್ನೆ ಕೇಳುವ ಅಧಿಕಾರ ಸದಸ್ಯರಿಗೆ ಇತ್ತು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂಬ ಕೇಳಿಕೆ 1919ರ ಹೊತ್ತಿಗೆ ಹೆಚ್ಚಾಯಿತು. ಸಂಸ್ಥಾನದ ಕೌನ್ಸಿಲ್‌ಗೆ ಅಧಿಕಾರೇತರ ಸದಸ್ಯರನ್ನು ನೇಮಕಮಾಡುವ ಪರಿಪಾಠಕ್ಕೆ ಅವಕಾಶ ಕಲ್ಪಿಸಲಾಯಿತು. 1921ರಲ್ಲಿ ದಿವಾನ್ ಮತ್ತು ಇತರ ಸಚಿವರಿಂದ ಕೂಡಿದ, ಮಹಾರಾಜರಿಗೆ ಉತ್ತರದಾಯಿಯಾದ ಪರಿಷತ್ತಿನ ರಚನೆಯಾಯಿತು. ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಸ್ಥಾನಮಾನಗಳು ಹೆಚ್ಚಿದ್ದುವು. ಈ ವೇಳೆಗೆ ಕಾಂಗ್ರೆಸ್ ಹೂಡಿದ ಸ್ವಾತಂತ್ರ್ಯ ಹೋರಾಟ ಭಾರತದ ದೇಶೀಯ ಸಂಸ್ಥಾನಗಳಿಗೂ ವ್ಯಾಪಿಸಿತು. 1935ರ ಭಾರತ ಸರ್ಕಾರದ ಅಧಿನಿಯಮದ ಪ್ರಕಾರ ಬ್ರಿಟಿಷ್ ಪ್ರಾಂತ್ಯಗಳಲ್ಲಿ ಪ್ರಜಾಪ್ರತಿನಿಧಿಗಳಿಂದ ಕೂಡಿದ ವಿಧಾನ ಸಭೆಗಳು ರಚಿತವಾದವು. ಹಿಂದಿನ ಮುಂಬಯಿ ಮತ್ತು ಮದ್ರಾಸ್ ಪ್ರಾಂತಗಳಿಗೆ ಸೇರಿದ್ದ ಕರ್ನಾಟಕದ ಭಾಗಗಳಿಂದ ಜನಪ್ರತಿನಿಧಿಗಳು ಆಯಾ ಪ್ರಾಂತಗಳ ಸರ್ಕಾರಗಳಿಗೆ ಚುನಾಯಿತರಾಗುತ್ತಿದ್ದರು. ದೇಶೀಯ ಸಂಸ್ಥಾನಗಳಲ್ಲೂ ಪ್ರಜೆಗಳಿಗೆ ಆ ಬಗೆಯ ಅಧಿಕಾರ ಲಭಿಸಬೇಕೆಂಬ ಒತ್ತಡ ಹೆಚ್ಚಿತು. 1937ರಲ್ಲಿ ಪಟ್ಟಾಭಿಸೀತಾರಾಮಯ್ಯ ಮತ್ತು ಬಲವಂತರಾಯ ಮೆಹತಾ ಇವರು ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ಅಭಿಪ್ರಾಯ ಸಂಗ್ರಹಿಸಿ, ಮೈಸೂರು ಸಂಸ್ಥಾನದಲ್ಲಿ ಜನಪ್ರಿಯ ಸರ್ಕಾರ ಸ್ಥಾಪಿತವಾಗಬೇಕೆಂದು ಅಭಿಪ್ರಾಯಪಟ್ಟರು.

ಮೈಸೂರಿನ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಇತಿಹಾಸ ಕಾಂಗ್ರೆಸ್ ಇತಿಹಾಸದೊಂದಿಗೆ ಹಾಸುಹೊಕ್ಕಾಗಿದೆ. ಬ್ರಿಟಿಷರು ಭಾರತದ ಆಡಳಿತದ ಜವಾಬ್ದಾರಿಯನ್ನು ಭಾರತೀಯರಿಗೆ ವರ್ಗಾಯಿಸಿದ ಮೇಲೆ 1947 ಅಕ್ಟೋಬರ್ 24ರಂದು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ

ಸ್ಥಾಪನೆಯಾಗಿ ಹೊಸ ಮಂತ್ರಿ ಮಂಡಲ ರಚನೆಯಾಯಿತು. 1950ರ ಭಾರತ ಸಂವಿಧಾನದ ಪ್ರಕಾರ ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲೂ ಕೇಂದ್ರದಲ್ಲೂ ವಿಧಾನ ಮಂಡಲ ಅಥವಾ ಸಂಸತ್ತಿಗೆ ಹೊಣೆಯಾದ ಸಂಪುಟ ಸರ್ಕಾರಗಳು ಆಡಳಿತ ನಿರ್ವಹಿಸುತ್ತಿವೆ. ಇವು ಜವಾಬ್ದಾರಿ ಸರ್ಕಾರಗಳು. *

**ಜಹಗೀರದಾರ್,ಆರ್.ಎ. :** 1889-1963. ನ್ಯಾಯವಾದಿ ಮತ್ತು ದೇಶಭಕ್ತ. ಖ್ಯಾತ ವಕೀಲರಾಗಿದ್ದು ಮುಂಬಯಿ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶ ಹುದ್ದೆಯಿಂದ ನಿವೃತ್ತರಾದ ಅನಂತರ ಕರ್ನಾಟಕ ವಿಶ್ವವಿದ್ಯಾಲಯದ (ನೋಡಿ) ಪ್ರಥಮ ಉಪಕುಲಪತಿಗಳಾಗಿ ನೇಮಕಗೊಂಡರು (1949-51). 1949ರ ಅಕ್ಟೋಬರ್‌ನಲ್ಲಿ ಧಾರವಾಡದ ಗಂಡುಮಕ್ಕಳ ತರಬೇತಿ ಕಾಲೇಜಿನ ಮೂರು ಕೋಣೆಗಳಲ್ಲಿ ಪ್ರಾರಂಭವಾದ ಈ ವಿಶ್ವ ವಿದ್ಯಾಲಯಕ್ಕೆ ಛೋಟ ಮಹಾಬಲೇಶ್ವರದ ವಿಶಾಲ ಭೂಮಿ ಇವರ ಕಾಲದಲ್ಲಿ ದೊರಕಿತು. 1950ರಲ್ಲಿ ಕುಲಸಚಿವರಾಗಿ ನೇಮಕ ಗೊಂಡ ಎಸ್.ಎಸ್. ಒಡೆಯರೂ ಇವರೂ ಕೂಡಿ ವಿಶ್ವವಿದ್ಯಾಲಯದ ಮುಂದಿನ ಪ್ರಗತಿಗೆ ದುಡಿದರು. 1951ರ ಮಾರ್ಚ್ 30ರಂದು ಅಂದಿನ ರಾಷ್ಟ್ರಪತಿಗಳಾಗಿದ್ದ ಬಾಬು ರಾಜೇಂದ್ರ ಪ್ರಸಾದರು ವಿಶ್ವವಿದ್ಯಾಲಯದ ಹೊಸ ನಿವೇಶನದ ಅಡಿಗಲ್ಲನ್ನಿಟ್ಟು ಶುಭ ಕೋರಿದರು. ವಿಶ್ವವಿದ್ಯಾಲಯದ ಕಾನೂನು, ಕಟ್ಟಳೆ ಮತ್ತು ನಿಬಂಧನೆಗಳನ್ನು ರಚಿಸುವಲ್ಲಿ ಇವರ ಕುಶಾಗ್ರಬುದ್ಧಿ, ಕಾಯಿದೆ ಜ್ಞಾನ ಮತ್ತು ಪ್ರಜಾಪ್ರಭುತ್ವವಾದಿ ಧೋರಣೆ ಬಹಳಷ್ಟು ಸಹಕಾರಿಯಾದವು.

ಉಪಕುಲಪತಿಗಳಾಗಿ ಸೇವೆಸಲ್ಲಿಸಿದ ಇವರರು ದೇಶಪ್ರೇಮಿಗಳೂ ಆಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುತ್ತಿದ್ದ ಕಾಂಗ್ರೆಸ್ ಮುಖಂಡರಿಗೆ, ಕಾರ್ಯಕರ್ತರಿಗೆ ಇವರು ಎಲ್ಲ ರೀತಿಯ ಸಹಾಯವನ್ನೂ ಒದಗಿಸುತ್ತಿದ್ದರು. (ಎಸ್.ಕೆ.ಕೆ.)

**ಜಾಂಬೋಟಿ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಖಾನಾಪುರದಿಂದ 17ಕಿಮೀ ದೂರದಲ್ಲಿ ವಜ್ರಪೋಹಾ ಜಲಪಾತಕ್ಕೆ ಹೋಗುವ ಮಾರ್ಗದಲ್ಲಿ ನಿತ್ಯ ಹಸುರುನಿಂದ ಕೂಡಿದ ಗುಡ್ಡದ ಬದಿಯಲ್ಲಿದೆ. ಸ್ಥಳಪುರಾಣದ ಪ್ರಕಾರ ಇದು ಜಾಂಬುವಂತನ ಮಗಳಾದ ಜಾಂಬುವತಿಯ ಜನ್ಮಸ್ಥಳ. ಈ ಸ್ಥಳದ ಸುತ್ತಮುತ್ತಲಿರುವ ಕಾಡುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕರಡಿಗಳಿರುವುದು ಈ ನಂಬಿಕೆಗೆ ಕಾರಣ ವಾಗಿರಬಹುದು. 1820ರಲ್ಲಿ ಈ ಸ್ಥಳಕ್ಕೆ ಭೇಟಿ ಕೊಟ್ಟಿದ್ದ ಮಾರ್ಷಲ್ ಎಂಬಾತ ಈ ಊರು ಮರಾಠರ ಸರದೇಸಾಯಿ ವೆಂಕಟರಾವ್‌ನಿಂದ ಆಳಲ್ಪಡುತ್ತಿತ್ತೆಂದೂ ಜಾಂಬೋಟಿ ಬೆಟ್ಟ ಹುಲಿಗಳಿಂದ ತುಂಬಿತ್ತೆಂದೂ ದೇಸಾಯಿ ಪ್ರತಿವರ್ಷ ಹುಲಿಬೇಟೆಯಾಡುತ್ತಿದ್ದನೆಂದೂ ತನ್ನ ದಿನಚರಿ ಪುಸ್ತಕದಲ್ಲಿ ಉಲ್ಲೇಖಿಸಿದ್ದಾನೆ. ಈ ಊರ ರಾಮಪುರ ಪೇಟೆಯಲ್ಲಿ ವಿಶಾಲವಾದ ಪ್ರಾಂಗಣವಿರುವ ಮತ್ತು ಅಮೃತಶಿಲೆಯ ರಾಮ, ಸೀತೆ, ಲಕ್ಷ್ಮಣ ಮೂರ್ತಿಗಳಿರುವ ಹೊಸದಾಗಿ ಕಟ್ಟಲ್ಪಟ್ಟ ರಾಮಮಂದಿರವಿದೆ. ರಾಮನವಮಿಯಲ್ಲಿ ಇಲ್ಲಿ ಜಾತ್ರೆ ನಡೆಯುವುದು.

ಇತ್ತೀಚೆಗೆ ಕಟ್ಟಲ್ಪಟ್ಟ ರೋಮನ್ ಕೆಥೊಲಿಕ್ ಚರ್ಚ್ ಹಾಗೂ ಒಂದು ಮಸೀದಿ ಇಲ್ಲಿವೆ. ಒಂದು ಪ್ರವಾಸಿ ಮಂದಿರವಿದೆ. (ಆರ್.ಐ.)

**ಜಾತ್ರೆ :** ವ್ಯಾಪಾರ ವ್ಯವಹಾರಗಳೊಂದಿಗೆ ಜನಪದರಿಗೆ ಮನ ರಂಜನೆಯನ್ನೂ ಒದಗಿಸುವ, ವರ್ಷದ ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ನಡೆಯುವ ಸಾಮಾಜಿಕ ಚಟುವಟಿಕೆ. ಜಾತ್ರೆ ಶಬ್ದ ಯಾತ್ರಾದ ತದ್ಭವ ರೂಪ. ಜಾತ್ರೆಯ ಮುಖ್ಯ ಬಂಡವಾಳ ಜನ. 'ಜನ ಸೇರಿದರೆ ಜಾತ್ರೆ', 'ಜನ ಮರುಳೋ ಜಾತ್ರೆ ಮರುಳೋ' ಇತ್ಯಾದಿ ಗಾದೆಗಳು ಇದನ್ನು ದೃಢಪಡಿಸುತ್ತವೆ. ಹೀಗೆ ಒಂದೆಡೆ ಸೇರಿದ ಜನಕ್ಕೆ ಬೇಕಾಗುವಂಥ ಸಾಮಾನು ಸರಂಜಾಮುಗಳನ್ನು ಮಾರಲು ಅಂಗಡಿ ಮುಂಗಟ್ಟುಗಳೂ ಇಲ್ಲಿ ಬಂದು ಸೇರುತ್ತವೆ. ಕೆಲವು ಜಾತ್ರೆಗಳಲ್ಲಿ ದನಗಳ ಪ್ರದರ್ಶನವೂ ವ್ಯಾಪಾರವೂ ನಡೆಯುತ್ತವೆ. ಇಂಥವುಗಳಲ್ಲಿ ಹಾಸನ, ರಾಮನಾಥಪುರ, ಗೊರೂರು, ಹೊಳೆನರಸೀಪುರ, ಚುಂಚನಗಿರಿ, ಎಡೆಯೂರು, ಹೇಮಗಿರಿ, ಮದ್ದೂರು, ಮಾಗಡಿ, ಸಿದ್ಧಗಂಗೆ, ಚುಂಚನಕಟ್ಟೆ ಮುಂತಾದ ಕಡೆಗಳಲ್ಲಿ ನಡೆಯುವ ಜಾತ್ರೆಗಳು ಗಮನಾರ್ಹವಾದುವು. ಜನಕ್ಕೆ ಸಾಕಷ್ಟು ವ್ಯಾಪಾರ ಸಾಪಾರ ಮನರಂಜನೆ ಒದಗುತ್ತವೆ. ಒಟ್ಟಾರೆ ಜಾತ್ರೆಯ ಸ್ಥಳದಲ್ಲಿ ಸಾಮಾನ್ಯವಾಗಿ ಒಂದಿಲ್ಲೊಂದು ದೇವತೆಯ ಪೂಜೆ ಉತ್ಸವಗಳು ಜರುಗುವುದು ಕಂಡುಬರುತ್ತದೆ. ಇದನ್ನು ಪರಿಷೆ ಎಂದು ಕರೆಯುವುದೂ ರೂಢಿ.

ಜಾತ್ರೆ ಯಶಸ್ವಿಯಾಗಿ ನೆರವೇರಬೇಕಾದರೆ ಮುಖ್ಯವಾಗಿ ಜಾತ್ರೆ ನಡೆಯುವ ಸ್ಥಳದಲ್ಲಿ ನೀರು ನೆರಳಿನ ಸೌಕರ್ಯ, ಜನ ಜಾನುವಾರುಗಳಿಗೆ ಬೇಕಾದ ಆಹಾರ ಸರಬರಾಜು ಇರಬೇಕು. ವಿಶೇಷವಾಗಿ ಜಾತ್ರೆಯ ಕ್ಷೇತ್ರ ದೇವರ ಮಹಿಮೆಯಿಂದ ಕೂಡಿದ್ದು ದೇವರ ಉತ್ಸವ, ರಥೋತ್ಸವ, ಜನಪದ ಕಲೆಗಳಾದ ಕೋಲಾಟ, ಲಾವಣಿ, ದೊಣ್ಣೆವರಸೆಯೇ ಆದಿಯಾದ ಸಾಧನೆ, ಕುಸ್ತಿ, ಕಂಸಾಳೆ ನೃತ್ಯ, ಗಾರುಡಿಗನೃತ್ಯ ಮುಂತಾದವುಗಳ ಉತ್ತಮ ಪ್ರದರ್ಶನ, ಸಿನಿಮಾ ನಾಟಕ ಸರ್ಕಸ್‌ಗಳ ಆಕರ್ಷಣೆ, ಬಣ್ಣದ ಭಿತ್ತಿ ಪತ್ರ, ರೆಕಾರ್ಡ್ ಸಂಗೀತ ಮುಂತಾದ್ದರ ಪ್ರದರ್ಶನ, ಹೋಟೆಲುಗಳ ಸೌಕರ್ಯ ಇತ್ಯಾದಿಗಳು ವ್ಯವಸ್ಥಿತವಾಗಿದ್ದರೆ ಇದಕ್ಕೆ ಹೊಸ ರಂಗು ಬರುತ್ತದೆ. ಜನಪದರು ತಮ್ಮ ವಾರ್ಷಿಕ ಉತ್ಪನ್ನಗಳನ್ನು ಸಾಮಾನ್ಯವಾಗಿ ಸುಗ್ಗಿ ಕಳೆದ ತಕ್ಷಣವೇ ಆರಂಭವಾಗುವ ಬೇಸಗೆಯ ಜಾತ್ರೆಗಳಲ್ಲಿ ಮಾರಾಟ ಮಾಡಿ, ತಮಗೆ ಅಗತ್ಯವಾದ ಸಲಕರಣೆಗಳನ್ನು ನಿತ್ಯೋಪಯೋಗಿ ವಸ್ತುಗಳನ್ನು ಕೊಳ್ಳುತ್ತಾರೆ. ಆದ್ದರಿಂದ ಜಾತ್ರೆಯನ್ನು ಗ್ರಾಮೀಣ ಪ್ರದೇಶಗಳ ಮುಖ್ಯ ವ್ಯಾಪಾರ ಕೇಂದ್ರವೆಂದು ಕರೆಯಬಹುದು.

ಆದರೆ ಈಚೆಗೆ ಮೋಜಿನ ಜಾತ್ರೆ, ವಸ್ತುಪ್ರದರ್ಶನದ ಜಾತ್ರೆ, ದನದ ಜಾತ್ರೆ ಮುಂತಾದ ಬಹುಬಗೆಯ ಸುಧಾರಿತ ಜಾತ್ರೆಗಳು ರೂಢಿಗೆ ಬರುತ್ತಿರುವುದನ್ನು ಕಾಣಬಹುದು. ಅಲ್ಲದೆ ಜಾತ್ರೆಗಳು ಹೆಚ್ಚು ಹೆಚ್ಚು ನಾಗರಿಕವಾಗುತ್ತ ನಡೆದಿವೆ. ಶುದ್ಧೀಕರಣಗೊಂಡ ಕುಡಿಯುವ ನೀರಿನ ಸರಬರಾಜು, ಜನ ದನಗಳಿಗೆ ಔಷಧೋಪಚಾರ, ಆಹಾರ ಸರಬರಾಜು, ಸಾರಿಗೆ ಸೌಲಭ್ಯ, ವಿದ್ಯುತ್ ದೀಪದ ವ್ಯವಸ್ಥೆ, ಜಾನುವಾರುಗಳ ತಂಗಣೆಗೆ ತಕ್ಕಂಥ ತಾತ್ಕಾಲಿಕ ಮಾಡುಗಳ ನಿರ್ಮಾಣ, ಜನಪದರಿಗೆ ಹಿತವೆನ್ನಿಸುವಂಥ ಉತ್ತಮ ಮನರಂಜನೆಯ ಏರ್ಪಾಡು - ಇತ್ಯಾದಿ ಸೌಲಭ್ಯಗಳ ನ್ನೊದಗಿಸಲಾಗುತ್ತಿದೆ. ವಿಶೇಷವಾಗಿ ನಾಡಿನಲ್ಲಿ ತಲೆದೋರಿರುವ ನಾನಾ ಮುಖದ ಪ್ರಗತಿಯನ್ನು ಪ್ರತಿಬಿಂಬಿಸುವಂಥ ವಸ್ತುಪ್ರದರ್ಶನಗಳನ್ನು ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವುದು ಜಾತ್ರೆಯ ಒಂದು ದೊಡ್ಡ ಆಕರ್ಷಣೆ. ಇದರ ಮುಖಾಂತರ ಜನರಂಜನೆಯೊಂದಿಗೆ ಜನತಾ ಶಿಕ್ಷಣವೂ ಒದಗಿದಂತಾಗುತ್ತದೆ. ನಾಡು ಹಾಗೂ ರಾಷ್ಟ್ರದ ಕಲೆ, ಸಂಸ್ಕೃತಿ, ಸಂಗೀತದ ಪ್ರಸಾರ ಸುಲಭವಾಗಿ ಜನಸಾಮಾನ್ಯರಿಗೆ ಮುಟ್ಟುತ್ತದೆ. ಹೀಗೆ ಬಹುಜನೋಪಯೋಗಿಯಾಗಿರುವ ಜಾತ್ರೆಗಳು ಸಂಕೀರ್ಣ ಸ್ವರೂಪದ ಸಾಮಾನ್ಯ ಜನತಾ ಸೇವಾಕೇಂದ್ರಗಳಾಗಿಯೂ ಪರಿಣಮಿಸಿವೆ. (ಎಸ್.ಟಿ.)

**ಜಾನಪದ :** ಜಾನಪದ ವಿಷಯಗಳಿಗೆ ಮೀಸಲಾಗಿದ್ದ ಅರ್ಧವಾರ್ಷಿಕ ಪತ್ರಿಕೆ, ಮೈಸೂರಿನ ಮಾನಸಗಂಗೋತ್ರಿಯ ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ 1969ರ ಜನವರಿಯಿಂದ ಪ್ರಕಟಣೆಯನ್ನು ಆರಂಭಿಸಿತು. ದೇ.ಜವರೇಗೌಡರು ಇದರ ಪ್ರಧಾನ ಸಂಪಾದಕರೂ ಹಾ.ಮಾ.ನಾಯಕ ಹಾಗೂ ಜೀ.ಶಂ.ಪರಮಶಿವಯ್ಯ ಸಂಪಾದಕರೂ ಆಗಿದ್ದರು. ಜಾನಪದ ವಿಷಯಗಳ ಮೇಲೆ ಸಂಶೋಧನಾತ್ಮಕ ವಿಮರ್ಶನಾತ್ಮಕ ಪರಿಚಯಾತ್ಮಕ

ಲೇಖನಗಳನ್ನು ಹಾಗೂ ಇತರ ಸಂಗ್ರಹಗಳನ್ನು ಪ್ರಕಟಿಸುವುದೂ ಸಂಗ್ರಾಹಕರಿಗೆ ವಿದ್ಯಾರ್ಥಿಗಳಿಗೆ ಜಾನಪದ ಅಭಿಮಾನಿಗಳಿಗೆ ಸ್ಫೂರ್ತಿ




ಮತ್ತು ಮಾರ್ಗದರ್ಶನ ನೀಡುವುದೂ ಈ ಪತ್ರಿಕೆಯ ಮುಖ್ಯ ಉದ್ದೇಶವಾಗಿತ್ತು. (ಕೆ.ಆರ್.)

**ಜಾನಪದ ಅಧ್ಯಯನ :** ಭಾರತೀಯ ಜಾನಪದ ಅಧ್ಯಯನ ಭಾರತ ಶಾಸ್ತ್ರದ ಅಂಗವಾಗಿ 19ನೆಯ ಶತಮಾನದಲ್ಲಿಯೇ ಆರಂಭವಾಯಿತು. ಕಥೆಗಳು, ಗಾದೆಗಳು, ಸಂಪ್ರದಾಯಗಳನ್ನು ಕುರಿತ ಸಂಕಲನ ಕೃತಿಗಳು ಉತ್ತರ ಭಾರತದ ಪ್ರದೇಶದಿಂದ ಪ್ರಕಟಗೊಂಡವು. ದಕ್ಷಿಣ ಭಾರತ ಭಾಗದಲ್ಲಿ ಕೆಲಸ ಮಾಡಿದ ಪಾಶ್ಚಾತ್ಯ ವಿದ್ವಾಂಸರು ಕಥೆ, ಗೀತೆ, ಲಾವಣಿ, ಗಾದೆ ಮುಂತಾದ ಜನಪದ ಸಾಹಿತ್ಯ ಪ್ರಕಾರಗಳ ಕ್ಷೇತ್ರದಲ್ಲಿ ತಕ್ಕಮಟ್ಟಿಗೆ ಕೆಲಸ ಮಾಡಿದರೂ ಇತರ ಕ್ಷೇತ್ರಗಳಲ್ಲಿ ನಡೆದಷ್ಟು ಕೆಲಸ ಇಲ್ಲಿ ನಡೆಯಲಿಲ್ಲ.

ಭಾರತೀಯ ಜನಪದ ಜೀವನ ವಿಷಯದಲ್ಲಿ ಆಸಕ್ತಿವಹಿಸಿದ ಆದ್ಯ ವಿದ್ವಾಂಸರಲ್ಲಿ ಗಣ್ಯನಾದ ಅಬ್ಬೆ ಡುಬಾಯಿ ಕರ್ನಾಟಕದಲ್ಲಿ ಬಹಳ ಕಾಲ ಇದ್ದವನು. ಭಾರತೀಯ ಸಾಹಿತ್ಯ, ಧರ್ಮವಿಚಾರದಲ್ಲಿ ಆಸಕ್ತನಾಗಿದ್ದ ಇವನು ಭಾರತೀಯ ಜನಪದ ಜೀವನ ಮತ್ತು ಸಂಸ್ಕೃತಿಯನ್ನು ಸಾಕಷ್ಟು ವಿಸ್ತಾರವಾಗಿ ಅಭ್ಯಸಿಸಿ ಪ್ರಕಟಿಸಿದ ದಿ ಹಿಂದು ಕಸ್ಟಮ್ಸ್ ಮ್ಯಾನರ್ಸ್ ಅಂಡ್ ಸೆರೆಮೋನೀಸ್ ಎಂಬ ಗ್ರಂಥ ಅನೇಕ ದೃಷ್ಟಿಗಳಿಂದ ಗಣನೀಯ ಕೃತಿ ಎನಿಸಿದೆ. 1792ರಲ್ಲಿ ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಭಾರತಕ್ಕೆ ಬಂದ ಈತ ಪಾಂಡಿಚೇರಿಯ ಮಿಷನ್‌ನಲ್ಲಿ ಕೆಲಕಾಲ ಇದ್ದು ಮದರಾಸು ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಕೆಲಸ ಮಾಡಿ ಅನಂತರ ಮೈಸೂರಿಗೆ ಬಂದ. ಇಲ್ಲಿ ಪಾಂಡವಪುರದ ಸಮೀಪದಲ್ಲಿದ್ದುಕೊಂಡು ತನ್ನ ಮತ ಪರಿವರ್ತನೆಯ ಕಾರ್ಯದ ಜೊತೆಗೆ ಇಲ್ಲಿಯ ಸಂಸ್ಕೃತಿಯನ್ನೂ ಅಧ್ಯಯನ ಮಾಡಿದ. ಹಾಸನದ ಬಳಿಯ ಸಾತೇನಹಳ್ಳಿಯಲ್ಲಿಯೂ ಕೆಲವು ವರ್ಷ ಇದ್ದ ಇವನು ಸಿಡುಬು ರೋಗದ ನಿರ್ಮೂಲನಕ್ಕಾಗಿ ಕೆಲಸ ಮಾಡಿ 'ದೊಡ್ಡಸ್ವಾಮಿ' ಎಂದು ಪ್ರಖ್ಯಾತನಾದ. ಜನಸಾಮಾನ್ಯರ ಬದುಕನ್ನು ನಿಕಟವಾಗಿ ಅಭ್ಯಾಸಮಾಡಿ ಅವರ ಸಂಪ್ರದಾಯಗಳು ನಂಬಿಕೆ ಆಚರಣೆಗಳು ಆ ಬಗೆಗಿನ ಸಾಮಗ್ರಿಯನ್ನು ಕಲೆಹಾಕತೊಡಗಿದ. ಈತನ ಕೃತಿಯಲ್ಲಿ ಭಾರತೀಯ ಸಂಸ್ಕೃತಿಯ ಸಾಮಾನ್ಯಚಿತ್ರ ಸಿಕ್ಕುವುದರ ಜೊತೆಗೆ ಜನಪದ ಸಂಸ್ಕೃತಿಗೆ ಸಂಬಂಧಿಸಿದ ವಿಪುಲ ಸಾಮಗ್ರಿ ಅಡಕವಾಗಿದೆ. ಸತಿ ಸಹಗಮನದಂಥ ವಿಲಕ್ಷಣ ಸಂಪ್ರದಾಯಗಳು, ಹಬ್ಬ ಹರಿದಿನಗಳು, ಕಥೆಗಳು, ಗಾದೆಗಳು ಮುಂತಾದುವನ್ನೆಲ್ಲ ಅಭ್ಯಾಸ ಮಾಡಿ ಸಂಗ್ರಹ ನಡೆಸಿ ತನ್ನ ಕೃತಿಯಲ್ಲಿ ಅಳವಡಿಸಿದ್ದಾನೆ.

ಈ ಕ್ಷೇತ್ರದಲ್ಲಿ ಹೆಸರಿಸಬಹುದಾದ ಮತ್ತೊಂದು ಗಮನಾರ್ಹ ಹೆಸರು ಚಾರ್ಲ್ಸ್ ಇ.ಗೋವರನದು. ಈತನ ಕೃತಿ 'ಫೋಕ್‌ಸಾಂಗ್ಸ್ ಆಫ್ ಸದರನ್ ಇಂಡಿಯ' 1871ರಲ್ಲಿ ಪ್ರಕಟವಾಯಿತು. ಈತ ಕನ್ನಡ, ಕೊಡಗು, ಬಡಗ, ತಮಿಳು, ಮಲಯಾಳಂ ಭಾಷೆಗಳ ಜನಪದ ಗೀತೆಗಳನ್ನು ಬೇರೆ ಬೇರೆ ವಿದ್ವಾಂಸರಿಂದ ಕಲೆ ಹಾಕಿ, ಅವನ್ನು ಇಂಗ್ಲಿಷಿಗೆ ಭಾಷಾಂತರಿಸಿ, ಪ್ರತಿಯೊಂದು ಭಾಷಾ ಅವತರಣಿಕೆಗೂ ಉತ್ತಮ ಟಿಪ್ಪಣಿ ಒದಗಿಸಿ, ಬೆಲೆಯುಳ್ಳ ಪ್ರಸ್ತಾವನೆಯೊಂದನ್ನು ಬರೆದು ಪ್ರಕಟಿಸಿದ. ಕನ್ನಡಕ್ಕೆ ಸಂಬಂಧಿಸಿದ ಇಪ್ಪತ್ತೆಂಟು ಹಾಡುಗಳು ಕನ್ನಡ ಜನಪದ ಗೀತೆಗಳು ಎಂಬ ವಿಭಾಗದಲ್ಲಿವೆ. ಇವನ ಸಂಗ್ರಹದ ಹಾಡುಗಳೆಲ್ಲ ಬಹುಮಟ್ಟಿಗೆ ದಾಸರ ಕೀರ್ತನೆಗಳೇ ಆಗಿವೆ. ಈ ಗ್ರಂಥದಲ್ಲಿ ಕೊಡವ ಹಾಡುಗಳ ಭಾಗ ಮಹತ್ತ್ವದ್ದು. ಕೊಡವ ಸಂಸ್ಕೃತಿಯ ವಿಶಿಷ್ಟ ರಚನೆಗಳು ಇಲ್ಲಿ ಲಭ್ಯವಾಗುತ್ತವೆ. ಹುತ್ತರಿ ಹಾಡುಗಳು, ಮದುವೆ ಪದಗಳು, ಶಿಶು ಪ್ರಾಸಗಳು ಇಲ್ಲಿ ಹೆಸರಿಸಬಹುದಾದ ಸಾಹಿತ್ಯ.

ಇವರಲ್ಲದೆ ಕರ್ನಾಟಕ ಜಾನಪದ ಅಧ್ಯಯನಕ್ಕೆ ಕೈಹಾಕಿದ ವಿದೇಶಿ ವಿದ್ವಾಂಸರುಗಳ ಪೈಕಿ ಕರ್ನಲ್ ಮೆಕೆಂಜಿ, ಲೇಡನ್, ಮೋಗ್ಲಿಂಗ್, ಮೇರಿ ಫ್ರೆರಿ, ಟೆಂಪಲ್, ಕಿಟ್ಟೆಲ್, ಫ್ಲೀಟ್, ಮ್ಯಾನರ್, ಬರ್ನೆಲ್, ಪೀಟರ್‌ಕ್ಲಾಸ್, ಮಾರ್ತಾ ಆಸ್ಟಿನ್, ಲಾರಿ ಹಾಂಕೊ, ಮಾರ್ಕ್ ನಿಕ್ಟರ್, ಬ್ರೂಕ್ನರ್ ಮೊದಲಾದವರು ಮುಖ್ಯರಾಗುತ್ತಾರೆ.

ಸ್ಕಾಟ್‌ಲೆಂಡಿನ ಕರ್ನಲ್ ಮೆಕೆಂಜಿ ಗಣಿತಶಾಸ್ತ್ರದ ಬಗೆಗೆ ದೊರಕುವ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಶದಿಂದ 1783ರಲ್ಲಿ ಭಾರತಕ್ಕೆ ಬಂದ. 1796-1816ರ ಅವಧಿಯಲ್ಲಿ ಹಳ್ಳಿ ಹಳ್ಳಿಗೆ ಹೋಗಿ ಪಂಡಿತರಿಂದ, ಊರ ಮುಖಂಡರಿಂದ ವಿಷಯ ವಿವರಗಳನ್ನೊಳಗೊಂಡ ಕೈಫಿಯತ್ತುಗಳನ್ನು ಬರೆಸಿದ. ಕೆಲವು ವಿದ್ವಾಂಸರನ್ನು ಸಹಾಯಕರಾಗಿ ನೇಮಿಸಿಕೊಂಡು ಮಾಹಿತಿಗಳನ್ನು ಸಂಗ್ರಹಿಸಿದ.

ಮೆಕೆಂಜಿಯ ಕೈಫಿಯತ್ತುಗಳಲ್ಲಿ ಕನ್ನಡ ಜಾನಪದಕ್ಕೆ ಸಂಬಂಧಿಸಿದ ಅನೇಕ ಅಮೂಲ್ಯ ಮಾಹಿತಿಗಳಿವೆ. ಈ ಕೈಫಿಯತ್ತುಗಳಲ್ಲಿ ಶಾಸನಗಳು, ಐತಿಹಾಸಿಕ ವಿಚಾರಗಳು, ಐತಿಹ್ಯಗಳು, ಸ್ಥಳನಾಮಗಳು, ಅರಸು ಮನೆತನಗಳು, ಭೌಗೋಳಿಕ ಪರಿಚಯ, ಊರುಗಳ ವಿವರ, ಅಲ್ಲಿನ ಜನರ ಆಚಾರ ವಿಚಾರ, ಭಾಷೆ ನಂಬಿಕೆಗಳು ಜಾತಿ ರಿವಾಜುಗಳು, ವೈದ್ಯ, ವ್ಯಾಪಾರ ವ್ಯವಹಾರ, ಕೃಷಿ, ಆಡಳಿತ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ - ಹೀಗೆ ಎಲ್ಲ ವಿವರಗಳಿವೆ. ಸಮಗ್ರ ಜನಪದ ಬದುಕನ್ನು ದಾಖಲಿಸುವುದೇ ಇಲ್ಲಿನ ಉದ್ದೇಶವಾಗಿದೆ. ಮೆಕೆಂಜಿ ಆ ಕಾಲಕ್ಕೆ ಸಂಗ್ರಹಿಸಿದ ಸಾಮಾಜಿಕ ಇತಿಹಾಸ ಮಹತ್ವದ ಕೈಫಿಯತ್ತುಗಳು, ಒದಗಿಸಿದ ಮಾಹಿತಿಗಳು ಜಾನಪದ ಅಧ್ಯಯನ ಕಾರರಿಗೆ ಇಂದಿಗೂ ಉಪಯುಕ್ತವಾಗಿವೆ.

ಬುಕನಾನ್ ಎಂಬಾತ ಟಿಪ್ಪುವಿನ ಪತನದಿಂದಾಗಿ ಕಂಪನಿಯ ಆಡಳಿತಕ್ಕೆ ಬಂದ ಪ್ರದೇಶಗಳನ್ನು ಕಣ್ಣಾರೆ ಕಂಡು ಆ ಪ್ರದೇಶಗಳ ವಿವರವಾದ ಮಾಹಿತಿಯನ್ನು 'ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಅಂಡ್ ಮಲಬಾರ್' ಎಂಬ ಗ್ರಂಥದಲ್ಲಿ ದಾಖಲಿಸಿದ್ದಾನೆ (1807). ಪ್ರವಾಸದ ಸಂದರ್ಭದಲ್ಲಿ ತಾನು ಕಂಡ, ಕೇಳಿದ ಮಾಹಿತಿಗಳನ್ನು ಯಾವುದೇ ಪೂರ್ವಗ್ರಹವಿಲ್ಲದೆ ವಸ್ತುನಿಷ್ಠವಾಗಿ ನಿರೂಪಿಸುತ್ತ ಹೋಗಿದ್ದಾನೆ. ಇದರಲ್ಲಿ ಆಯಾ ಪ್ರದೇಶಗಳ ಕೃಷಿ, ವಾಣಿಜ್ಯ, ಕಲೆ, ಧರ್ಮ, ರೀತಿ ನೀತಿಗಳು, ಇತಿಹಾಸ, ಪ್ರಾಚೀನ ಪಳೆಯುಳಿಕೆಗಳ ಬಗೆಗೆ ವಿವರಗಳು ಸಿಗುತ್ತವೆ.

ಇದೇ ಅವಧಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಟಿಪ್ಪುವಿನ ಪತನಾನಂತರ ಒದಗಿದ ದುಸ್ಥಿತಿಯನ್ನು ಕುರಿತು ರಚಿತವಾಗಿದ್ದ ಲಾವಣಿಯೊಂದನ್ನು ಜಾನ್ ಲೇಡನ್ ಎಂಬಾತ ಮೌಖಿಕ ಪರಂಪರೆಯಿಂದ ದೊರಕಿಸಿಕೊಂಡು ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಿದ (1803). ಹರ್ಮನ್ ಮೋಗ್ಲಿಂಗ್ ಪ್ರಕಟಿಸಿದ ಮೂರು ಸಾವಿರ ಗಾದೆಗಳು ಕನ್ನಡದ ಮೊತ್ತ ಮೊದಲ ಗಾದೆಗಳ ಸಂಕಲನ ಎನಿಸಿದೆ (1847). 1868ರಲ್ಲೇ ಪ್ರಕಟಗೊಂಡಿರುವ

ಮೇರಿ ಫ್ರೀರೆಯ 'ಓಲ್ಡ್ ಡೆಕ್ಕನ್ ಡೇಸ್' ಇಪ್ಪತ್ತೈದು ಜನಪದ ಕಥೆಗಳ ಒಂದು ಮಹತ್ವದ ಸಂಕಲನ. ತನ್ನ ವಕ್ತೃ ಅನ್ನ ಲಿಬೆರ್ಟಾ ಡಿಸೋಜಾ ಮೂಲತಃ ಲಿಂಗಾಯತರವಳಾಗಿದ್ದು ಅವಳಿಂದ ತಾನು ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಈ ಕಥೆಗಳನ್ನು ಸಂಗ್ರಹಿಸಿರುವುದಾಗಿ ಫ್ರೀರೆ ಒದಗಿಸಿರುವ ಮಾಹಿತಿ ಮಹತ್ವದ್ದಾಗಿದೆ. ಅನ್ನ ಲಿಬೆರ್ಟಾಳ ತಾತ ಕಲ್ಲಿಕೋಟೆಯಲ್ಲಿ ಇದ್ದವನು. ಆತ ಬ್ರಿಟಿಷ್ ಸೈನ್ಯದಲ್ಲಿದ್ದು ನಾಲ್ಕನೆಯ ಮೈಸೂರು ಯುದ್ಧದಲ್ಲಿ ಭಾಗವಹಿಸಿದ್ದ. ಲಿಬೆರ್ಟಾಳ ಅಜ್ಜಿ ಒಳ್ಳೆಯ ಕಥೆಗಾರ್ತಿ. ಅವಳು ತನ್ನ ಮೊಮ್ಮಕ್ಕಳಿಗೆ ಹೇಳಿದ ಕಥೆಗಳೇ ಮೇರಿ ಫ್ರೀರೆ ಲಿಬರ್ಟಾಳಿಂದ ಸಂಗ್ರಹಿಸಿದ ಕತೆಗಳು. ಲಿಬೆರ್ಟಾಳ ಅಜ್ಜಿ ಕನ್ನಡತಿಯೇ ಆಗಿದ್ದಳು ಎಂಬುದಕ್ಕೆ ಈ ಸಂಕಲನದ ಅನೇಕ ಕಥೆಗಳು ಸಾಕ್ಷಿಯಾಗಿವೆ. ಕನ್ನಡ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಜೆ.ಎಫ್.ಫ್ಲೀಟರ (ನೋಡಿ) ಹೆಸರು ಚಿರಸ್ಮರಣೀಯವಾದುದು. ಫ್ಲೀಟ್ ಸಂಗ್ರಹಿಸಿದ 5 ಲಾವಣಿಗಳು "ಇಂಡಿಯನ್ ಆಂಟಿಕ್ವರಿ" ಪತ್ರಿಕೆಯಲ್ಲಿ ಪ್ರಕಟವಾಗಿವೆ (1885-90). ಒಟ್ಟು ಎಂಟು ಲಾವಣಿಗಳನ್ನು ತಾವು ಸಂಗ್ರಹಿಸಿದಂತೆ ಫ್ಲೀಟ್ ಪಟ್ಟಿಯನ್ನು ಕೊಟ್ಟಿದ್ದಾರೆ. ಕಿತ್ತೂರಿನ ಈರವ್ವ, ರಾಯಣ್ಣನ ದಂಗೆ, ರಾಣಮಂಡಲದ ಕೋಟೆಯ ವಶ, ನರಗುಂದದ ವಶ, ಆದಾಯ ತೆರಿಗೆಯ ಜಾರಿ, ಹಲಗಲಿ ಬೇಡರ ದಂಗೆ, ಹಳ್ಳಿಯ ಸಾಹುಕಾರನ ಕೊಲೆ, ಇಂಗ್ಲಿಷ್ ರಾಷ್ಟ್ರದ ವೈಭವದ ಹಾಡು - ಈ ಲಾವಣಿಗಳಲ್ಲಿ ಐದು ಲಾವಣಿಗಳು ಮಾತ್ರ ಅಚ್ಚಾಗಿವೆ. ಇವರು ಇಲ್ಲಿನ ಕೆಲವೊಂದು ಲಾವಣಿಗಳನ್ನು ದಾಸರಿಂದ ಸಂಗ್ರಹಿಸಿರುವುದಾಗಿ ಹೇಳುತ್ತಾನೆ. ಬ್ರಿಟಿಷ್ ಆಡಳಿತಾಧಿಕಾರಿಯಾಗಿದ್ದ ಫ್ಲೀಟ್ ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸುತ್ತಿದ್ದ ಸಂದರ್ಭಗಳಲ್ಲಿ ಈ ಹಾಡುಗಳನ್ನು ದಾಖಲಿಸಿಕೊಂಡಿದ್ದಾರೆ. ಇವರು ಇಲ್ಲಿನ ಲಾವಣಿಗಳ ಕನ್ನಡ ಮೂಲದೊಂದಿಗೆ ಇಂಗ್ಲಿಷ್ ಸಂಗ್ರಹಾನುವಾದವನ್ನು ನೀಡಿದ್ದಾರೆ. ಪ್ರತಿಲಾವಣಿಯ ಮೊದಲಿಗೆ ಆಯಾ ಲಾವಣಿಗೆ ಸಂಬಂಧಿಸಿದಂತೆ ಅದರ ರಾಜಕೀಯ ಸಾಮಾಜಿಕ ಹಿನ್ನೆಲೆಯನ್ನು ಕುರಿತು ಬರೆದಿದ್ದಾರೆ. ಹಾಡುವ ಕ್ರಮವಿಧಾನ ಹಾಗೂ ಲಯದ ಏರಿಳಿತಗಳನ್ನು ಗುರುತಿಸಿದ್ದಾರೆ. ಹೀಗೆ ಜಾನಪದ ವೈಜ್ಞಾನಿಕ ಸಂಗ್ರಹಣೆ ಫ್ಲೀಟರಿಂದಲೇ ಆರಂಭವಾಯಿತು ಎನ್ನಬೇಕು. ಫ್ಲೀಟ್ ಲಾವಣಿಗಳು ಬ್ರಿಟಿಷ್ ಆಳರಸರ ದೌರ್ಜನ್ಯ, ದುಷ್ಟತನ, ಬ್ರಿಟಿಷರ ಅನ್ಯಾಯಕ್ಕೆ ಹಳ್ಳಿಗರು ಎದೆತೆರೆದು ನಡೆಸಿದ ಪ್ರತಿಭಟನೆ, ಹೋರಾಟ, ಇಂಗ್ಲಿಷರ ಕ್ರೌರ್ಯದ ವಿಜಯ, ವೈಭವಗಳಿಗೆ ಸಂಬಂಧಿಸಿವೆ. ಒಬ್ಬ ಉನ್ನತ ಬ್ರಿಟಿಷ್ ಅಧಿಕಾರಿಯಾಗಿದ್ದು ಇಂಗ್ಲಿಷರ ವಿರುದ್ಧದ ಲಾವಣಿಗಳನ್ನು ಸಂಗ್ರಹಿಸುವಲ್ಲಿ ಪ್ರಕಟಿಸುವಲ್ಲಿ ಫ್ಲೀಟ್ ತೋರಿದ ಐತಿಹಾಸಿಕ ಪ್ರಜ್ಞೆ ಗಮನಾರ್ಹವಾದುದು.

ಇವರ ಅನಂತರ ಹೆಸರಿಸಬೇಕಾದ ಮತ್ತೊಂದು ಮುಖ್ಯ ಹೆಸರೆಂದರೆ ಕಿಟ್ಟೆಲ್ ಫರ್ಡಿನೆಂಡ್ (ನೋಡಿ) ಅವರದು. 1894ರಲ್ಲಿ ಪ್ರಕಟವಾದ ಇವರ ಕನ್ನಡ ಇಂಗ್ಲಿಷ್ ಕೋಶದಲ್ಲಿ ಕನ್ನಡದಲ್ಲಿ ಪ್ರಚಲಿತವಿದ್ದ 4168 ಗಾದೆಗಳನ್ನು ಶಬ್ದ ಪ್ರಯೋಗಾರ್ಥವಾಗಿ ನೀಡಿದ್ದಾರೆ. ಕನ್ನಡ ನಾಡಿನ ಎಲ್ಲ ಕಡೆಗಳ ಗಾದೆಗಳು ಇದರಲ್ಲಿ ಸೇರಿವೆ. ಆ ಮೊದಲೇ ಕರ್ನಾಟಕದಲ್ಲಿ ಕೆಲವು ಗಾದೆಗಳ ಸಂಕಲನಗಳು ಪ್ರಕಟವಾಗಿದ್ದುವು. 1852ರಷ್ಟು ಹಿಂದೆಯೇ ಗಾದೆಗಳ ಕಲ್ಲಚ್ಚಿನ ಪ್ರತಿಯೊಂದು ಮಂಗಳೂರಿನಿಂದ ಪ್ರಕಟವಾಗಿತ್ತು. 1859ರಲ್ಲಿ ಮೋಗ್ಲಿಂಗ್ ಕನ್ನಡ ಗಾದೆಗಳು ಎಂಬ ಕೃತಿಯನ್ನು ಹೊರತಂದರು. 1886ರಲ್ಲಿ ಕೊಡವ ಪಡಿಮ ಎಂಬ ಕೊಡವ ಗಾದೆಗಳ ಸಂಕಲನವೊಂದು ಪ್ರಕಟವಾಗಿತ್ತು. ಸಹಸ್ರಗಾಥಾಮೃತ ಕಲಶವು ಎಂಬ ಮತ್ತೊಂದು ಸಂಕಲನ 1874ರಲ್ಲೇ ಪ್ರಕಟವಾಗಿತ್ತು. ಪಾಪ್ಯುಲರ್ ಕೆನರೀಸ್ ಪ್ರಾವರ್ಬ್ಸ್ ಅಂಡ್ ದೇರ್ ಇಂಗ್ಲಿಷ್ ಈಕ್ವಿವಲೆಂಟ್ಸ್ ಎಂಬ ಕೃತಿ 1894ರಲ್ಲೇ ಪ್ರಕಟವಾಗಿತ್ತು. ಅದೇ ವರ್ಷ ಬೆಳಗಾಂವಿಯ ಹನುಮಂತ ಗೋವಿಂದ ಜೋಶಿ ಅವರು ಸಾಮತಿ ಸಂಗ್ರಹ ಎಂಬ ಸಂಕಲನವನ್ನು ಪ್ರಕಟಿಸಿದ್ದರು. ಕಿಟ್ಟೆಲ್ ಅವರು ಈ ಎಲ್ಲ ಸಂಕಲನಗಳಿಗೂ ಋಣಿಯಾಗಿದ್ದರೆ ಆಶ್ಚರ್ಯವಿಲ್ಲ.

ಹತ್ತೊಂಬತ್ತನೆಯ ಶತಮಾನದ ಜಾನಪದ ಸಂಗ್ರಹ ಕಾರ್ಯದಲ್ಲಿ ಪಾಶ್ಚಾತ್ಯ ವಿದ್ವಾಂಸರು ತೋರಿದ ಆಸಕ್ತಿ ಮತ್ತು ಮಾಡಿದ ಸಾಧನೆ ದೇಶೀಯ ವಿದ್ವಾಂಸರ ಮೇಲೆ ಅಷ್ಟೇನೂ ಪ್ರಭಾವ ಬೀರಲಿಲ್ಲ. ಆದರೂ ಅಲ್ಲಲ್ಲಿ ಕೆಲವು ಜಾನಪದ ಸಂಕಲನಗಳನ್ನು ಸ್ಥಳೀಯ ವಿದ್ವಾಂಸರೂ ಪ್ರಕಟಿಸಿದರು. 1891ರಲ್ಲಿ ಪ್ರಕಟವಾದ ಲಾವಣಿ ಸಂಗ್ರಹ (ಮೊದಲನೆಯ ಭಾಗ), 1893ರಲ್ಲಿ ಪ್ರಕಟವಾದ ಬಾಗಿಲು ತಡೆಯುವ ಪದಗಳು, 1896ರಲ್ಲಿ ಪ್ರಕಟವಾದ ಅರ್ಜುನ ಜೋಗಿ ಹಾಡು ಮುಂತಾದವು ಗಮನಾರ್ಹ.

20ನೆಯ ಶತಮಾನದ ಆರಂಭದ ದಶಕಗಳಲ್ಲಿ ಕನ್ನಡ ಜಾನಪದ ಅಧ್ಯಯನ ಅಷ್ಟು ವ್ಯಾಪಕವಾಗಿ ನಡೆಯಲಿಲ್ಲ. ಲಾವಣಿ ಹಾಗೂ ಗಾದೆಗಳಿಗೆ ಸಂಬಂಧಿಸಿದ ಕೆಲವು ಕೃತಿಗಳೂ ಕೆಲವು ಲೇಖನಗಳೂ ಈ ಅವಧಿಯಲ್ಲಿ ಪ್ರಕಟವಾದವು. ಕಲ್ಕಿ ತುರಾಯಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಲ್ಲೊಂದು ಇಲ್ಲೊಂದು ಕೃತಿಗಳು ಬೆಳಕು ಕಂಡವು. ತುರಾಲಾವಣಿ ಜವಾಬುಗಳು ಎಂಬ ಕೃತಿ 1902ರಲ್ಲೇ ಅಚ್ಚಾಗಿದೆ. ಮೈಸೂರಿನ ಪ್ರಕಾಶಕರೊಬ್ಬರು ಈ ಕೃತಿಯನ್ನು ಪ್ರಕಟಿಸಿದ್ದಾರೆ. 1912ರಲ್ಲಿ ಲಾವಣೀ ಪದಗಳು ಎಂಬ ಸಂಕಲನ ಬಳ್ಳಾರಿಯಿಂದ ಪ್ರಕಟವಾಯಿತು. ಮುಂದೆ 1918ರಲ್ಲಿ ಯುರೋಪು ಖಂಡದ ಮಹಾಯುದ್ಧದ ಲಾವಣಿಗಳು ಎಂಬ ಕೃತಿ ಬೆಳಗಾಂವಿಯಿಂದ ಹೊರಬಂದಿತು. ಲಾವಣಿಗಳ ಬಗ್ಗೆ ಕರ್ನಾಟಕ ದಾದ್ಯಂತ ತೀವ್ರವಾದ ಆಸಕ್ತಿ ಇದ್ದಿತೆಂಬುದನ್ನು ಈ ಕೃತಿಗಳು ಸಾದರಪಡಿಸುತ್ತವೆ. 1929ರಲ್ಲಿ ಮೈಸೂರಿನ ಈರಮುದ್ದಿ ಎಂಬವರು ತುರಾಲಾವಣಿ ಎಂಬ ಶೀರ್ಷಿಕೆಯಲ್ಲಿ ನಾಲ್ಕು ಲಾವಣಿಗಳನ್ನೊಳಗೊಂಡ ಪುಟ್ಟ ಸಂಕಲನವನ್ನು ಹೊರತಂದಿದ್ದಾರೆ.

19ನೆಯ ಶತಮಾನದಲ್ಲಿ ಗಾದೆಗಳ ಕ್ಷೇತ್ರದಲ್ಲಿ ನಡೆದ ವ್ಯಾಪಕವಾದ ಸಂಗ್ರಹಕಾರ್ಯ 20ನೆಯ ಶತಮಾನದ ಆದಿಭಾಗದಲ್ಲಿಯೂ ತಕ್ಕಮಟ್ಟಿಗೆ ಮುಂದುವರಿಯಿತು. 1903ರಲ್ಲಿ ಬಾಸೆಲ್ ಮಿಷನ್ ಟ್ರಸ್ಟಿನವರು ಹೊರತಂದ ತ್ರೀ ಹಂಡ್ರೆಡ್ ಕೆನರೀಸ್ ಪ್ರಾವರ್ಬ್ಸ್ ಹಾಗೂ 1912ರಲ್ಲಿ ಪ್ರಕಟವಾದ ಎ ಹ್ಯಾಂಡ್ ಬುಕ್ ಆಫ್ ಕೆನರೀಸ್ ಪ್ರಾವರ್ಬ್ಸ್ ವಿತ್ ಇಂಗ್ಲಿಷ್ ಈಕ್ವಿವಲೆಂಟ್ಸ್ - ಇವು ಕನ್ನಡ ಗಾದೆಗಳನ್ನು ಪಾಶ್ಚಾತ್ಯ ಜಗತ್ತಿಗೆ ಪರಿಚಯ ಮಾಡಿದ ಸಮರ್ಥ ಕೃತಿಗಳಾಗಿವೆ.

ಜಾನಪದ ಅಧ್ಯಯನದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಸ್ಥಾನಕ್ಕೆ ಅರ್ಹವಾದ ಪಟ್ಟೋಲೆಪಳಮೆ ತೀರ ಇತ್ತೀಚಿನವರೆಗೆ ಅಜ್ಞಾತವಾಗಿಯೇ ಉಳಿದು ಹೋಗಿದ್ದ ಕೃತಿ. ಸಮಗ್ರ ಜಾನಪದ ದೃಷ್ಟಿಯಿಂದ ನೋಡಿದಾಗ ಗಮನಾರ್ಹವಾದ ಈ ಕೃತಿಯ ಪ್ರಥಮ ಆವೃತ್ತಿ 1924ರಲ್ಲೇ ಪ್ರಕಟವಾಗಿದ್ದರೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಅದರ ಎರಡನೆಯ ಆವೃತ್ತಿ ಪ್ರಕಟವಾಗುವವರೆಗೆ (1973) ಅದರ ಬಗ್ಗೆ ಯಾರೂ ಬರೆದಂತೆ ತೋರುವುದಿಲ್ಲ. ಕೊಡಗಿನ ನಡಿಕೇರಿಯಂಡ ಚಿಣ್ಣಪ್ಪ (1875-1931) ಅವರು ಕೊಡವ ಸಂಸ್ಕೃತಿಯನ್ನು ವಿವರವಾಗಿ ಅಧ್ಯಯನ ಮಾಡಿ ಈ ಗ್ರಂಥವನ್ನು ಪ್ರಕಟಿಸಿದ್ದಾರೆ. ಕೊಡವರ ಆಚಾರ ವಿಚಾರಗಳು, ಸಂಪ್ರದಾಯಗಳು, ಹಬ್ಬಗಳು, ಗಾದೆಗಳು, ಒಗಟುಗಳು, ಲಾವಣಿಗಳು, ಗೀತೆಗಳು, ನಂಬಿಕೆಗಳು ಮುಂತಾದ ಕೊಡವ ಜಾನಪದದ ಎಲ್ಲ ಮುಖಗಳನ್ನೂ ಈ ಗ್ರಂಥ ಪರಿಚಯ ಮಾಡಿಕೊಡುತ್ತದೆ.

1920ರ ಅನಂತರ ಕನ್ನಡ ಜಾನಪದದ ಕೆಲವು ಪ್ರಕಾರಗಳ ಮೇಲೆ ವಿಚಾರ ವಿಮರ್ಶೆ ಬೆಳೆಯತೊಡಗಿತು. ಕೆ.ಎಚ್.ಮಲ್ಲಪ್ಪ ಅವರ ಕನ್ನಡ ಗಾದೆಗಳ ಜೀರ್ಣೋದ್ಧಾರ ಎಂಬ ಬರೆಹ 1921ರಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿ ಸಮಗ್ರ ಜಾನಪದದ ಜೀರ್ಣೋದ್ಧಾರದ ಕಡೆಗೆ ಕನ್ನಡಿಗರ ದೃಷ್ಟಿಯನ್ನು ಸೆಳೆಯುವ ಆದ್ಯ ಲೇಖನವೆನಿಸಿತು. ಆದರೆ ಈ ಮುನ್ನ 1907ರ ಸುಮಾರಿಗೇ ಎಸ್.ಜಿ.ನರಸಿಂಹಾಚಾರ್ಯರು ಕನ್ನಡ ಗ್ರಂಥಕರ್ತರ ಸಮ್ಮೇಳನದಲ್ಲಿ ಜಾನಪದ ಕುರಿತು ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದರು. ಮುಂದೆ ಸಾಹಿತ್ಯ ಸಮ್ಮೇಳನಗಳ ವೇದಿಕೆಯಲ್ಲಿಯೂ ಜಾನಪದದ ಬಗ್ಗೆ ವಿಚಾರಾತ್ಮಕ ಪ್ರಬಂಧಗಳು ಮಂಡಿತವಾದವು. ಬಿಜಾಪುರದಲ್ಲಿ 1923ರಲ್ಲಿ ನಡೆದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಧುರಚೆನ್ನರು ಬೀಸುವ ಕಲ್ಲಿನ ಹಾಡು ಎಂಬ ಲೇಖನವನ್ನು ಪಿ.ಧೂಲಾ ಅವರು ಲಾವಣಿಗಳ ಲಾವಣ್ಯ ಎಂಬ ಬರೆಹವನ್ನು ಓದಿ, ಜನಪದ ಸಾಹಿತ್ಯದ ಸಾಹಿತ್ಯಕ ಸೊಗಸಿನ ಕಡೆ ಕನ್ನಡಿಗರ ಆಸಕ್ತಿಯನ್ನು ಸೆಳೆದರು. ಈ ಅವಧಿಯಲ್ಲಿ ಹಣಮಂತಗೌಡ

ಮೊದಲಾದವರು ಲಾವಣಿಗಳ ಬಗ್ಗೆ ಮಾತನಾಡಿ ಅವುಗಳ ಅಧ್ಯಯನದತ್ತ ಎಲ್ಲರ ಗಮನ ಸೆಳೆಯಲು ಪ್ರಯತ್ನಿಸಿದರು. 1925ರಲ್ಲಿ ಸಾಹಿತ್ಯ ಪರಿಷತ್ಪತ್ರಿಕೆ ಪ್ರಕಟಿಸಿದ ಮಾಸ್ತಿಯವರ ಕನ್ನಡ ಲಾವಣಿ ಸಾಂಗತ್ಯ ಎಂಬ ಬರೆಹ ಅನೇಕ ದೃಷ್ಟಿಗಳಿಂದ ತುಂಬ ಮಹತ್ವದ್ದು ಎನಿಸುತ್ತದೆ. ಕನ್ನಡ ಜನಪದ ಸಾಹಿತ್ಯದ ನಾನಾ ವೈವಿಧ್ಯದ ಕಡೆ ಮಾಸ್ತಿಯವರು ನಮ್ಮ ಆಸಕ್ತಿಯನ್ನು ಸೆಳೆದು, ಅನೇಕ ಗೀತ ಸಂಪ್ರದಾಯಗಳ ಮೇಲೆ, ಲಾವಣಿ ಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲಿದರು.

ಕನ್ನಡ ಜಾನಪದ ಅಧ್ಯಯನದಲ್ಲಿ 1930ರಿಂದ 1950ರ ನಡುವಣ ಅವಧಿ ಅತ್ಯಂತ ಮಹತ್ವದ ಕಾಲವೆಂದು ಗುರುತಿಸಬಹುದು. ಕರ್ನಾಟಕದಲ್ಲಿ ನವೋದಯ ಸಾಹಿತ್ಯದ ಜೊತೆಯಲ್ಲಿಯೇ ಜಾನಪದದ ಬಗೆಗಿನ ತಿಳಿವಳಿಕೆಯೂ ಬದಲಾಯಿತು. ನವೋದಯ ಕಾಲದ ಅಗ್ರಗಣ್ಯ ಲೇಖಕರೆಲ್ಲ ಒಂದಲ್ಲ ಒಂದು ವಿಧದಲ್ಲಿ ಜಾನಪದದ ಬಗೆಗಿನ ತಿಳಿವಳಿಕೆಯನ್ನು ಇಟ್ಟುಕೊಂಡವರೇ ಆಗಿದ್ದರು. ಜನಪದ ಸಾಹಿತ್ಯದ ವಿವಿಧ ಮೌಲ್ಯಗಳನ್ನು ಮನಗಂಡು ಈ ವಿದ್ವಾಂಸರ ಶ್ರೇಣಿ ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಹುರಿದುಂಬಿಸುತ್ತ ಬಂದಿತು. ಇದರಿಂದಾಗಿ ಹಲವು ಉತ್ಕೃಷ್ಟ ಜನಪದ ಸಂಕಲನಗಳು ಹೊರಬರಲು ಕಾರಣವಾಯಿತು. 1931ರಲ್ಲಿ ಕನ್ನಡದ ಮೊದಲ ತ್ರಿಪದಿಗಳ ಸಂಕಲನವಾದ 'ಗರತಿಯ ಹಾಡು' ಪ್ರಕಟವಾಯಿತು. ಈ ಕೃತಿ ಇಂದಿಗೂ ಕನ್ನಡದ ಅತ್ಯುತ್ತಮ ಗೀತಸಂಕಲನವಾಗಿದೆ. ಅನಂತರದಲ್ಲಿ ಸಿಂಪಿ ಲಿಂಗಣ್ಣ ಮತ್ತು ಪಿ.ಧೂಲಾವರು ಕಲ್ಕಿತುರಾಯಿ ಸಂಪ್ರದಾಯದ ಉತ್ಕೃಷ್ಟ ಸಂಕಲನವೊಂದನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದರು (1933). ಈ ಸಂಪ್ರದಾಯದ ಲಾವಣಿಗಳ ಅನೇಕ ಸಂಕಲನಗಳು ಆವರೆಗೆ ಪ್ರಕಟವಾಗಿದ್ದರೂ ಅವು ಜನಪ್ರಿಯ ಆವೃತ್ತಿಗಳಾಗಿ ಕಿರು ಹೊತ್ತಗೆಗಳ ರೂಪದಲ್ಲಿ ಪ್ರಕಟವಾಗಿದ್ದುವು. ಜೀವನ ಸಂಗೀತ, ಹಳೆಯ ಸಂಪ್ರದಾಯದ ಹದಿನಾಲ್ಕು ಲಾವಣಿಗಳನ್ನೊಳಗೊಂಡ ಉತ್ತಮ ಸಂಕಲನವಾಗಿ ಹೊರಬಂದಿತು. ಮಲ್ಲಿಗೆದಂಡೆ ಸಂಕೀರ್ಣ ಜನಪದ ಗೀತೆಗಳ ಸಂಕಲನವಾಗಿ ಪ್ರಕಟವಾಯಿತು (1935). ಕಥೆಯ ಹಾಡುಗಳು, ಮದುವೆಯ ಹಾಡುಗಳು, ಸೋಬಾನದ ಹಾಡುಗಳು ಇಂಥ ಕೆಲವು ಪ್ರಮುಖ ವಿಭಾಗಗಳ ಜೊತೆಗೆ ಪ್ರಣಯ, ಹಾಸ್ಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಆಕರ್ಷಕ ಗೀತೆಗಳನ್ನೊಳಗೊಂಡ ಈ ಕೃತಿ ತನ್ನ ಸಾಹಿತ್ಯಕ ಸತ್ವದಿಂದ ತುಂಬ ಜನಪ್ರಿಯವಾಯಿತು.

ಈ ಬಗೆಯ ಕೃತಿಗಳ ಪ್ರಕಟಣೆಯಿಂದ ಕನ್ನಡ ಜನಪದ ಸಾಹಿತ್ಯದ ನವೋದಯ ಆರಂಭವಾಯಿತು. ಇಂಥ ಒಂದು ಹೊಸ ಬೆಳವಣಿಗೆಗೆ ಕಾರಣರಾದವರು ಹಲಸಂಗಿ ಸೋದರರು. ಮುಂದೆ ಮೂರು ದಶಕಗಳವರೆಗೆ ಈ ಕೃತಿಗಳ ಮಹತ್ವ ಕುಗ್ಗಲಿಲ್ಲ. ಅನೇಕರು ಜಾನಪದ ಆಸಕ್ತಿಯನ್ನು ಬೆಳೆಸಿಕೊಂಡು ಆ ಕ್ಷೇತ್ರವನ್ನು ಪ್ರವೇಶಿಸಲು ಪ್ರೇರಕವಾಯಿತು.

ಉತ್ತರ ಕರ್ನಾಟಕದಲ್ಲಿ ಆರಂಭವಾದ ಈ ಪ್ರಯತ್ನ ದಕ್ಷಿಣದ ಕಡೆಗೂ ವ್ಯಾಪಿಸಿತು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ - ಇವರು ಈ ಕ್ಷೇತ್ರದ ಕಡೆ ಹೊರಳಿ ಸಂಗ್ರಹಕಾರ್ಯವನ್ನು ಆರಂಭಿಸಿದರು. ಈ ಈರ್ವರೂ ದಕ್ಷಿಣಕರ್ನಾಟಕದ ಜನಪದ ಸಾಹಿತ್ಯದ ಅಭ್ಯಾಸವನ್ನು ಸಾಕಷ್ಟು ನಡೆಸಿದ್ದರೂ ಇವರಿಗೆ ಮೊದಲೇ ಈ ಕ್ಷೇತ್ರದಲ್ಲಿ ಕೆಲಸ ಮಾಡಿ ಉತ್ತಮ ಕೃತಿಯೊಂದನ್ನು ಹೊರತಂದ ಅರ್ಚಕ ಬಿ.ರಂಗಸ್ವಾಮಿಯವರ (ನೋಡಿ) ಹೆಸರು ಮುಖ್ಯವಾದುದು. ಇವರು 1933ರಲ್ಲಿ ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು ಎಂಬ ಕೃತಿಯನ್ನು ಹೊರತಂದರು. ಇದರಲ್ಲಿ ರಂಗಸ್ವಾಮಿಯವರು ಬಯಲು ಸೀಮೆಯ ಜನಜೀವನ, ಆಚಾರ ವಿಚಾರ, ಸಂಪ್ರದಾಯ, ಆಚರಣೆ, ಹಬ್ಬ, ಉತ್ಸವ, ಗಾದೆ, ನಡೆನುಡಿ, ಕುಣಿತ, ಕಲೆ ಮುಂತಾದುವನ್ನು ಕ್ರಮಬದ್ಧವಾಗಿ ಸಂಗ್ರಹಿಸಿ ಅದಕ್ಕೆ ಒಂದು ಕೃತಿರೂಪವನ್ನು ಕೊಟ್ಟರು. ಈ ಕೃತಿಯ ಹೆಸರೇ ಸೂಚಿಸುವಂತೆ 'ಹುಟ್ಟಿದ ಹಳ್ಳಿ' ಆ ಹಳ್ಳಿಯ ವಿವರಗಳನ್ನು ಜನಜೀವನ-ಸಂಸ್ಕೃತಿಗಳನ್ನೂ ಪ್ರತಿನಿಧಿಸಿದರೆ ಹಳ್ಳಿಯ ಹಾಡು ಈ ಕೃತಿಯಲ್ಲಿ ಸಂಕಲಿತವಾಗಿರುವ ಜನಪದ ಗೀತೆಗಳನ್ನು ಪ್ರತಿನಿಧಿಸುತ್ತದೆ. ಇವರು ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಜನಪದ ಗೀತೆಗಳನ್ನೆಲ್ಲ ಹಳ್ಳಿಯ ಪದಗಳು ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ (1940). ತ್ರಿಪದಿಗಳನ್ನು ಮಾತ್ರ ಸಂಗ್ರಹಿಸುವುದರಲ್ಲಿ ಆಸಕ್ತಿ ತೋರಿದ ಇವರು ದೇವರು, ಮದುವೆ ಮತ್ತು ಬಾಂಧವ್ಯ ಸಂಬಂಧವಾದ ಗೀತೆಗಳನ್ನು ಹೆಚ್ಚಾಗಿ ಕಲೆ ಹಾಕಿದ್ದಾರೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು (ನೋಡಿ) ಕನ್ನಡದ ಆದ್ಯಜಾನಪದ ಸಂಗ್ರಾಹಕರಲ್ಲೊಬ್ಬರು. ಸಾಹಿತ್ಯ ಕ್ಷೇತ್ರದಲ್ಲಿ ಇವರು ರಚಿಸಿರುವ ಬಹುಪಾಲು ಕೃತಿಗಳು ಗ್ರಾಮೀಣ ಜೀವನದ ಹಿನ್ನೆಲೆಯಲ್ಲಿಯೇ ಮೂಡಿ ಬಂದಿರುವುದರಿಂದ ಜನಪದ ಸಂಸ್ಕೃತಿ ಇವರಿಗೆ ರಕ್ತಗತವಾಗಿತ್ತು. ಇವರು ಹಾಸನ ಮತ್ತು ಮೈಸೂರು ಜಿಲ್ಲೆಗಳ ಹಾಡುಗಳನ್ನೊಳಗೊಂಡ ಹಳ್ಳಿಯ ಹಾಡುಗಳು ಎಂಬ ಸಂಕಲನವನ್ನು ಪ್ರಕಟಿಸಿದರು (1938).

ದಕ್ಷಿಣ ಕರ್ನಾಟಕದ ಜನಪದ ಗೀತ ಸಂಗ್ರಹಗಳಲ್ಲೆಲ್ಲ ಅತ್ಯಂತ ಗಮನಾರ್ಹ ಸಂಕಲನ 'ನಾಡಪದಗಳು'. ಗುಣದ ದೃಷ್ಟಿಯಿಂದ, ವೈವಿಧ್ಯದ ದೃಷ್ಟಿಯಿಂದ, ಶಾಸ್ತ್ರೀಯ ಸಂಪಾದನೆಯ ದೃಷ್ಟಿಯಿಂದ ಇದೊಂದು ಮಹತ್ವದ ಕೃತಿಯಾಗಿದೆ. ಈ ಕೃತಿ 1947ರಲ್ಲಿ ಪ್ರಕಟವಾಯಿತು. ಹಳೇಬೀಡು ಪ್ರಾಂತ್ಯದ ಪ್ರಾತಿನಿಧಿಕ ಗೀತೆಗಳು ಈ ಸಂಕಲನದಲ್ಲಿವೆ; ಒಂದೇ ಗ್ರಾಮದಲ್ಲಿ ಸಂಕಲನಗೊಂಡ ಹಾಡುಗಳಿವು. ಒಕ್ಕಲಿಗರ ಹಾಡುಗಳು, ಬ್ರಾಹ್ಮಣರ ಹಾಡುಗಳು ಎಂದು ಎರಡು ಪ್ರಧಾನ ವರ್ಗಗಳಲ್ಲಿ ಕೃತಿಯನ್ನು ವಿಭಾಗ ಮಾಡಿಕೊಂಡು ಎರಡೂ ವರ್ಗಗಳು ಸಮರ್ಪಕವಾಗಿ ಪರಿಚಯವಾಗುವಂತೆ ಸಂಗ್ರಾಹಕರು ಸಾಹಿತ್ಯವನ್ನು ಒದಗಿಸಿದ್ದಾರೆ.

ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಕರ್ನಾಟಕ ಜಾನಪದ ಅಧ್ಯಯನ ವ್ಯಾಪಕವಾಗಿ ನಡೆಯದಿದ್ದರೂ ನಡೆದಷ್ಟು ಕೆಲಸದಲ್ಲಿ ಅಚ್ಚುಕಟ್ಟು ಮತ್ತು ಪ್ರಾಮಾಣಿಕ ದೃಷ್ಟಿಯನ್ನು ಕಾಣಬಹುದು. ಆಗಿನ ಅನೇಕ ಸಂಗ್ರಾಹಕರಲ್ಲಿ ಸಾಹಿತ್ಯಕ ದೃಷ್ಟಿಯು ಜೊತೆಗೆ ಆ ಸಾಹಿತ್ಯದ ಶುದ್ಧತೆಯನ್ನು ಕಾಪಾಡಿಕೊಳ್ಳುವ, ಕೇವಲ ಕಲಾತ್ಮಕ ಮೌಲ್ಯದ ಸಾಹಿತ್ಯವನ್ನು ಮಾತ್ರ ಸಂಕಲನಗಳಲ್ಲಿ ನೀಡುವ ಆಯ್ಕೆಯ ದೃಷ್ಟಿ ಕಂಡುಬರುತ್ತದೆ. ಆದರೆ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಜಾನಪದ ಸಂಗ್ರಹದ ದಿಕ್ಕು ಬದಲಾಯಿತು. ಒಂದೊಂದು ಪ್ರಕಾರದ ಮೂಲವನ್ನು ಹಿಡಿದು ಸಾಹಿತ್ಯವನ್ನು ಕಲೆ ಹಾಕುವುದು, ಒಂದೊಂದು ಪ್ರದೇಶದಲ್ಲಿ ವ್ಯಾಪಕವಾಗಿ ಸಂಗ್ರಹಕಾರ್ಯ ನಡೆಸುವುದು, ಸಾಧ್ಯವಾದ ಮಟ್ಟಿಗೂ ಜಾನಪದದ ಬೇರೆ ಬೇರೆ ಪ್ರಕಾರಗಳಲ್ಲಿ ಕೈಯಾಡಿಸುವುದು ಕಂಡುಬರತೊಡಗಿತು.

ಸ್ವಾತಂತ್ರ್ಯೋತ್ತರ ದಿನಗಳಲ್ಲಂತೂ ಜಾನಪದದ ಬೇರೆ ಬೇರೆ ಪ್ರಕಾರಗಳಿಗೆ ಸಂಬಂಧಪಟ್ಟಂತೆ ಗಮನಾರ್ಹವಾದ ಕೆಲಸ ನಡೆಯಿತು. ಇದರಲ್ಲಿ ಹಾಡು, ಲಾವಣಿ ಹಾಗೂ ಕಾವ್ಯಗಳಿಗೆ ಸಂಬಂಧಪಟ್ಟ ಕಾರ್ಯದ ವ್ಯಾಪ್ತಿ ದೊಡ್ಡದು. ವಾಕ್ಪರಂಪರೆಯ ಜನಪದ ಕಾವ್ಯದ ಮೂರು ಮುಖಗಳಾದ ಹಾಡು, ಲಾವಣಿ ಹಾಗೂ ಕಾವ್ಯಗಳ ಕ್ಷೇತ್ರದಲ್ಲಿ ಕರ್ನಾಟಕದ ಬಹುತೇಕ ಎಲ್ಲ ಪ್ರದೇಶಗಳಲ್ಲಿಯೂ ಸಾಕಷ್ಟು ಸಂಗ್ರಹ ಕಾರ್ಯ ನಡೆದಿದೆ. ಹೊಸ ಕಾವ್ಯಸಂಪ್ರದಾಯಗಳನ್ನು ಗುರುತಿಸಿ ಆ ಸಂಪ್ರದಾಯಗಳ ಸಾಹಿತ್ಯವನ್ನು ಸಾಕಷ್ಟು ಸಮಗ್ರವಾಗಿ ಕಲೆಹಾಕುವ ಪ್ರಯತ್ನದ ಜೊತೆಗೆ ಹಳೆಯ ಜಾಡಿನಲ್ಲಿಯೇ ಸಂಗ್ರಹಗಳನ್ನು ಹೊರತರುತ್ತಿರುವ ಪ್ರಯತ್ನಗಳೂ ಕಂಡುಬರುತ್ತಿವೆ.

ಸ್ವಾತಂತ್ರ್ಯಾನಂತರ ಜಾನಪದ ಅಧ್ಯಯನವನ್ನು ಯಶಸ್ವಿಯಾಗಿ ಮುಂದುವರಿಸಿದವರು ಬಿ.ಎಸ್.ಗದ್ದಗಿಮಠ (ನೋಡಿ). ಅವರು ಉತ್ತರ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಸಾಹಿತ್ಯ ಸಂಗ್ರಹ ಮಾಡಿದ ಇವರು ಅಲ್ಲಿನ ಸಂಪ್ರದಾಯಗಳನ್ನು ಜಾನಪದದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದರು. 'ಕನ್ನಡ ಜಾನಪದ ಗೀತೆಗಳು' ಎಂಬ ಇವರ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪಿಎಚ್.ಡಿ.ಪದವಿಯನ್ನು ನೀಡಿದೆ. ಈ ಮಹಾಪ್ರಬಂಧದಲ್ಲಿ ಇವರು ಉತ್ತರ ಕರ್ನಾಟಕದ ಎಲ್ಲ ಪ್ರಮುಖ ಗೀತಸಂಪ್ರದಾಯಗಳನ್ನೂ ಕಲೆಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ನಡೆಸಿದ್ದಾರೆ. ಇದರ ಜೊತೆಗೆ ಇವರು ಕೆಲವು ಗೀತಸಂಕಲನಗಳನ್ನೂ ಹೊರತಂದಿದ್ದಾರೆ. ನಾಲ್ಕು ನಾಡಪದಗಳು (1952) ಹಂತಿಯ ಸಂಪ್ರದಾಯದ ಸುಂದರ ಗೀತೆಗಳನ್ನೊಳಗೊಂಡ ಸಂಕಲನ. ಜನಪದ ಸಾಹಿತ್ಯದಲ್ಲಿ ಶಿವಶರಣರನ್ನು ಕುರಿತ ಸಾಹಿತ್ಯದ ಸ್ವರೂಪವನ್ನು ಅರಿಯಲು ಈ ಕೃತಿ ಸಹಾಯಕವಾಗಿದೆ. ಇವರ ಜನತಾ ಗೀತೆಗಳು

(1959) ಸಂಕೀರ್ಣ ಜನಪದ ಗೀತೆಗಳನ್ನೊಳಗೊಂಡ ಸಂಕಲನ. ಇದು ಗರತಿಯ ಹಾಡು, ಮಲ್ಲಿಗೆ ದಂಡೆ ಮುಂತಾದ ಸಂಕಲನಗಳ ಅನಂತರ ಉತ್ತರ ಕರ್ನಾಟಕದ ಉತ್ಕೃಷ್ಟ ಗೀತಸಾಹಿತ್ಯದ ವೈವಿಧ್ಯವನ್ನು ಪರಿಚಯ ಮಾಡಿಕೊಟ್ಟ ಕೃತಿಯಾಗಿದೆ. ಕುಮಾರರಾಮನ ದುಂದುಮೆ (1955) ಕಂಬಿಯ ಸಂಪ್ರದಾಯದ ಹಾಡುಗಳನ್ನೂ ಮೊದಲ ಬಾರಿಗೆ ಪರಿಚಯ ಮಾಡಿಕೊಡುವ ಕೃತಿ. ಮಲ್ಲ ಮಲ್ಲಾಣಿ (1959) ಒಂದು ಸುಂದರ ಜನಪದ ಶೃಂಗಾರ ಕಾವ್ಯ. ತ್ರಿಪದಿಯಲ್ಲಿ ರಚನೆಗೊಂಡ ಈ ಕಾವ್ಯದ ಕರ್ತೃ ಶಿವಶರಣೆ ಶಾವಂತ್ರಾದೇವಿ ಎಂದು ಹೇಳಲಾಗಿದೆ. ಆದರೆ ಇದು ಜನಪದ ಕಾವ್ಯ ಸಂಪ್ರದಾಯದ ಕಾವ್ಯವೇ ಆಗಿದ್ದು ಶಾವಂತ್ರಾದೇವಿಯವರು ಅದನ್ನು ಹಾಡಿ ಜನಪ್ರಿಯಗೊಳಿಸಿದವರಲ್ಲಿ ಒಬ್ಬರಾಗಿರಬಹುದು. ಲೋಕಗೀತೆಗಳು, ಸಾಕಷ್ಟು ವಿಸ್ತಾರವಾದ ಸಂಕಲನ. ಕೋಲಾಟ ಹಾಗೂ ಮದುವೆ ಸಂಪ್ರದಾಯದ ಗೀತೆಗಳನ್ನೊಳಗೊಂಡ ಈ ಕೃತಿ ಮೊದಲಬಾರಿಗೆ ಉತ್ತರ ಕರ್ನಾಟಕದ ಈ ಎರಡು ಸಂಪ್ರದಾಯಗಳನ್ನು ಸಮರ್ಥವಾಗಿ ಪರಿಚಯಿಸಿತು.

ಉತ್ತರ ಕರ್ನಾಟಕದಲ್ಲಿ ಗದ್ದಗಿಮಠ ಅವರು ಜಾನಪದ ಅಧ್ಯಯನವನ್ನು ಕೈಗೊಂಡಂತೆಯೇ ದಕ್ಷಿಣ ಕರ್ನಾಟಕದಲ್ಲಿ ಜೀ.ಶಂ. ಪರಮಶಿವಯ್ಯನವರು (ನೋಡಿ) ಕ್ಷೇತ್ರಕಾರ್ಯ ನಡೆಸಿದರು. ಜನಪದ ಗೀತೆ, ಲಾವಣಿ, ಕಥೆಗಳ ಜೊತೆಗೆ ದಕ್ಷಿಣ ಕರ್ನಾಟಕ ಪ್ರದೇಶದ ವೃತ್ತಿಗಾಯಕ ಪರಂಪರೆಗಳನ್ನು ಗುರುತಿಸಿ ಅವುಗಳ ಅಧ್ಯಯನ ನಡೆಸಿದರು. 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಎಂಬ ಇವರ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಹಳೆಯ ಮೈಸೂರು ಭಾಗದ ಎಲ್ಲ ಜನಪದ ಕಾವ್ಯ ಸಂಪ್ರದಾಯಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಲಾವಣಿ ಮತ್ತು ಖಂಡಕಾವ್ಯಗಳ ಸ್ವರೂಪ ಲಕ್ಷಣಗಳನ್ನು ಕುರಿತು ಈ ಮಹಾ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಎಲ್ಲಮ್ಮನ ಕಾವ್ಯಗಳ ಸ್ಥೂಲ ಪರಿಚಯ ಈ ಅಧ್ಯಯನದ ವಿಶೇಷ. ಇನ್ನೂ ಹಲವು ಕಾವ್ಯಗಳ ಪರಿಚಯವೂ ಇಲ್ಲಿ ಲಭ್ಯವಾಗುತ್ತದೆ. ಅವರ ನೆನೆದೇವು, ಜನಪದ ಕಾವ್ಯಕಥೆಗಳು, ಜನಪದ ಸಾಹಿತ್ಯ ಸಮೀಕ್ಷೆ - ಇವು ಜನಪದ ಗೀತೆ, ಲಾವಣಿ ಹಾಗೂ ಕಾವ್ಯಗಳಿಗೆ ಸಂಬಂಧಿಸಿದ ಜಾನಪದ ಕೃತಿಗಳು. ವೃತ್ತಿಗಾಯಕರ ಹಲವಾರು ಕಾವ್ಯಗಳನ್ನು ಬೇರೆ ಬೇರೆ ಸಂಕಲನಗಳಲ್ಲಿ ಪ್ರಕಟಿಸಲಾಗಿದೆ. ಜನಪದ ವೀರಕಾವ್ಯಗಳು, ದೊಂಬಿದಾಸರ ಲಾವಣಿಗಳು, ಹೆಳವರ ಕಾವ್ಯಗಳು ಮುಂತಾದ ಕೆಲವು ಗಮನಾರ್ಹ ಕೃತಿಗಳನ್ನು ಇಲ್ಲಿ ಹೆಸರಿಸಬಹುದು.

ದಕ್ಷಿಣ ಕರ್ನಾಟಕ ಭಾಗದ ಜಾನಪದ ಸಂಗ್ರಾಹಕರ ಪೈಕಿ, ಕ.ರಾ.ಕೃಷ್ಣಸ್ವಾಮಿ (ಕ.ರಾ.ಕೃ.) ಅವರ ಹೆಸರು ಮಹತ್ವಪೂರ್ಣವಾದುದು. ಇಪ್ಪತ್ತೈದಕ್ಕೂ ಹೆಚ್ಚು ಸಂಕಲನಗಳನ್ನು ಪ್ರಕಟಿಸಿರುವ ಕರಾಕೃ ಅವರು ಜನಪದಗೀತೆ ಹಾಗೂ ಲಾವಣಿಗಳ ಕ್ಷೇತ್ರದಲ್ಲಿ ಸಾಕಷ್ಟು ಸಂಗ್ರಹಕಾರ್ಯ ಮಾಡಿದ್ದಾರೆ. 1957ರಲ್ಲಿ ಜೇನಹನಿಗಳು ಸಂಕಲನದಿಂದ ಈ ಕ್ಷೇತ್ರವನ್ನು ಪ್ರವೇಶಿಸಿದ ಇವರು ಮಲ್ಲಿಗೆ ನಗುತಾವೆ, ಜಾನಪದ ಕಥನ ಗೀತೆಗಳು, ಶ್ರೀಆದಿಚುಂಚನಗಿರಿ, ಹಣತೆ ಉರಿಯುತ್ತಿದೆ ಮುಂತಾದ ಸಂಕಲನಗಳನ್ನು ಪ್ರಕಟಿಸಿದರು. ಇವರ ಸಂಕಲನಗಳ ಪೈಕಿ ಹೆಣ್ಣು ಕೊಟ್ಟೇವು ಮತ್ತು ಕೋಲು ಮಲ್ಲಿಗೆ ಕೋಲೆ ಎರಡು ಮುಖ್ಯ ಸಂಪ್ರದಾಯಗಳನ್ನು ಪ್ರತಿನಿಧಿಸುತ್ತವೆ. ಚನ್ನಿಗ ಚಲುವಯ್ಯ, ಗಿರಿಕಾಣೆ ಮೂಡಲಗಿರಿ, ಶ್ರೀಆದಿಚುಂಚನಗಿರಿ, ಮಲೆಮಾದೇಶ್ವರ ಮುಂತಾದವು ಒಂದೊಂದು ಧಾರ್ಮಿಕಕ್ಷೇತ್ರಕ್ಕೆ ಸಂಬಂಧಪಡುವ ಸಂಕಲನಗಳು. ಪಾಳೆಯಗಾರರ ಪದಗಳು, ಸೂಸಿ ಹರಿದಾಳೆ ಶಿವಗಂಗೆ, ಮೈಲಾರಲಿಂಗ ಈರಬಡಪ್ಪ, ಹಚ್ಚ ಹೊಂಬಾಳೆ ಕುಣಿದಾವೆ, ಕಾಳಿಂಗರಾಯ, ನಾಡಕತೆಗಳು ಮುಂತಾದ ಅನೇಕ ಸಂಕಲನಗಳಲ್ಲಿ ಇವರ ವ್ಯಾಪಕ ಕ್ಷೇತ್ರಕಾರ್ಯವನ್ನೂ ಗುರುತಿಸಬಹುದಾಗಿದೆ.

ಸ.ಚ.ಮಹಾದೇವನಾಯಕ ಅವರು ಮೈಸೂರು ಜಿಲ್ಲೆಗಷ್ಟೇ ತಮ್ಮ ಕ್ಷೇತ್ರಕಾರ್ಯವನ್ನು ಸೀಮಿತಗೊಳಿಸಿಕೊಂಡು 1958ರಿಂದ 1971ರ ಅವಧಿಯಲ್ಲಿ ನಾಲ್ಕು ಸಂಕಲನಗಳನ್ನು ಹೊರತಂದಿದ್ದಾರೆ. ಹಳೆಯ ಮೈಸೂರು ಪ್ರದೇಶದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಹಾಡುಗಳನ್ನು ಹಾಡಿ ಜನಪದ ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಕೈಗೊಂಡವರ ಪೈಕಿ ಎಸ್.ಕೆ.ಕರೀಂಖಾನ್ (ನೋಡಿ) ಹಾಗೂ ಕೆ.ಆರ್.ಲಿಂಗಪ್ಪ (ನೋಡಿ) ಅವರ ಹೆಸರು ಪ್ರಮುಖವಾದವು. 1950ರ ಈಚೆಗೆ ಈ ಇಬ್ಬರೂ ಗಾಯಕರು ಸಾಹಿತ್ಯ ಸಂಗ್ರಹದಲ್ಲೂ ತೊಡಗಿಸಿಕೊಂಡು ಹಾಡುಗಾರಿಕೆಯನ್ನೂ ಜೊತೆ ಜೊತೆಯಲ್ಲೇ ನಡೆಸಿಕೊಂಡು ಹೋದರು. ಜನಪದ ಕಾವ್ಯ ಸಾಹಿತ್ಯಕ್ಕೆ ಸಾಕಷ್ಟು ಪ್ರಚಾರವನ್ನು ದೊರಕಿಸಿಕೊಟ್ಟರು. ಕರೀಂಖಾನ್ ಅವರು ಅತ್ಯುತ್ತಮ ಹಾಡುಗಳನ್ನೂ ಕಥನಗೀತೆಗಳನ್ನೂ ಆಯ್ದು ಸಂಕಲನಗಳನ್ನು ಹೊರತಂದಿದ್ದಾರೆ. ಕೆ.ಆರ್.ಲಿಂಗಪ್ಪ ಅವರು ಪ್ರಕಟಿಸಿರುವ ಮಾನವಮಿ ಪದಗಳು, ಮಾನವಮಿ ಸಂಪ್ರದಾಯ ಮತ್ತು ಸಾಹಿತ್ಯವನ್ನು ಪರಿಚಯ ಮಾಡಿಕೊಡುವ ವಿಶಿಷ್ಟ ಕೃತಿ.

ಗೊ.ರು.ಚನ್ನಬಸಪ್ಪನವರ ಮೈದುನ ರಾಮಣ್ಣ, ಬಾಗೂರು ನಾಗಮ್ಮ ಮತ್ತು ಇತರ ಹಾಡುಗಳು ಎಂಬ ಗೀತ ಸಂಕಲನಗಳು, ಆರ್.ಎಸ್.ಪಂಚಮುಖಿ ಅವರು ಸಂಪಾದಿಸಿ ಹೊರತಂದಿರುವ 'ಕರ್ನಾಟಕ ಜಾನಪದ ಗೀತೆಗಳು' - ಐವತ್ತರ ದಶಕದ ಉತ್ತಮ ಸಂಕಲನಗಳು. ದೊಡ್ಡ ಭಾವೆಪ್ಪ ಮೂಗಿ ಅವರ ಕಿತ್ತೂರ ಕಾಳಗ ಕಿತ್ತೂರಿನಂಥ ಐತಿಹಾಸಿಕ ಮಹತ್ವದ ಸ್ಥಳಕ್ಕೆ ಸಂಬಂಧಪಟ್ಟ ಸುದೀರ್ಘ ಲಾವಣಿ ಯನ್ನೊಳಗೊಂಡಿದೆ. ಎಂ.ಬಿ.ಮರಕ್ಕಿಣಿ, ಸಿರಿಪತಿ ಮೊದಲಾದವರು ಕಡಲ ತಡಿಯ ಜನಪದ ಗೀತೆಗಳನ್ನು ಪ್ರಕಟಿಸಿದ್ದಾರೆ. 1950ರಿಂದ 1965ರ ಅವಧಿಯ ಗೀತಸಾಹಿತ್ಯದ ಅಧ್ಯಯನದಲ್ಲಿ ಲಾವಣಿಗಳು, ತತ್ತ್ವದ ಪದಗಳು, ಗೀಗೀ ಪದಗಳು-ಹೀಗೆ ಅನೇಕ ಬಗೆಯ ಕಿರುಸಂಕಲನಗಳೂ ಸೇರುತ್ತವೆ.

1966ರ ಅನಂತರ ಕರ್ನಾಟಕ ಜಾನಪದ ಅಧ್ಯಯನದಲ್ಲಿ ಹೊಸ ತಿರುವು ಕಾಣಿಸಿಕೊಂಡಿತು. ಜಾನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಪ್ರವೃತ್ತಿ ಬೆಳೆಯಿತು. ಅಧ್ಯಯನದ ವ್ಯಾಪ್ತಿ ಜನಪದ ಸಾಹಿತ್ಯ ಸಂಗ್ರಹಕ್ಕಷ್ಟೇ ಸೀಮಿತವಾಗದೆ. ಸಾಹಿತ್ಯ ಹಾಗೂ ಇತರ ಕ್ಷೇತ್ರಗಳ ಬಗೆಗೆ ವಿಷಯ ಸಂಗ್ರಹಣೆ ವಿಶ್ಲೇಷಣೆ - ಈ ಕಾರ್ಯಗಳೂ ನಡೆಯತೊಡಗಿವೆ. ಜಾನಪದ ಅಧ್ಯಯನ ಕ್ಷೇತ್ರ ವಿಸ್ತಾರಗೊಂಡಿತು.

1966ರಲ್ಲಿ ಜಾನಪದವನ್ನು ಒಂದು ಅಧ್ಯಯನ ವಿಷಯವಾಗಿ ಕನ್ನಡ ಸ್ನಾತಕೋತ್ತರ ಪದವಿಗೆ ಅಳವಡಿಸುವುದರ ಮೂಲಕ ಮೈಸೂರು ವಿಶ್ವವಿದ್ಯಾನಿಲಯ ಭಾರತೀಯ ಜಾನಪದ ಅಧ್ಯಯನದಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿತು. ಅದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವದ ಅಂಗವಾಗಿ ನಡೆದ ಲೇಖಕರ ಸಮ್ಮೇಳನದ ಜಾನಪದ ಗೋಷ್ಠಿ ಅನಂತರದ ಜಾನಪದ ಅಧ್ಯಯನದ ಮೇಲೆ ವಿಶಿಷ್ಟ ಪ್ರಭಾವವನ್ನು ಬೀರಿತು. ಹಾ.ಮಾ.ನಾಯಕ ಅವರು ಮಂಡಿಸಿದ ಜನಪದ ಸಾಹಿತ್ಯ ಮತ್ತು ಅದರ ಸ್ವರೂಪ ಎಂಬ ಪ್ರಬಂಧ ಜಾನಪದದ ವೈಜ್ಞಾನಿಕ ಅಧ್ಯಯನದ ವ್ಯಾಪ್ತಿ ಉದ್ದೇಶಗಳತ್ತ ಕನ್ನಡಿಗರ ಆಸಕ್ತಿಯನ್ನು ಸೆಳೆದು ಜಾನಪದದ ಸಮಗ್ರ ಸ್ವರೂಪವನ್ನು ಕನ್ನಡ ವಿದ್ವತ್ ಲೋಕಕ್ಕೆ ಪರಿಚಯ ಮಾಡಿಕೊಟ್ಟಿತು. ಜಾನಪದ ಶಬ್ದ ಪ್ರಯೋಗ ಮತ್ತು ವಿಷಯಗಳ ಬಗೆಗೆ ವಿವರಿಸುವ ಪ್ರಯತ್ನವನ್ನು 1936ರಲ್ಲೇ ದೇವುಡು ನರಸಿಂಹಶಾಸ್ತ್ರಿಗಳು ತಮ್ಮ 'ಕರ್ನಾಟಕ ಸಂಸ್ಕೃತಿ' ಗ್ರಂಥದಲ್ಲಿ ಮಾಡಿದ್ದರು. ಆದರೆ ಶಿಷ್ಟಸಂಸ್ಕೃತಿ ಹಾಗೂ ಜನಪದ ಸಂಸ್ಕೃತಿಗಳ ಅಂತರವನ್ನು ಗುರುತಿಸುವಲ್ಲಿ ಅವರು ಯಶಸ್ವಿಯಾಗಿರಲಿಲ್ಲ. ಗದ್ದಗಿಮಠ ಅವರು ತಮ್ಮ ಮಹಾಪ್ರಬಂಧದಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿದ್ದರು. ಆದರೆ ಜನಪದ ಸಾಹಿತ್ಯ ಮತ್ತು ಜಾನಪದ ಪರಿಕಲ್ಪನೆಗಳ ವ್ಯತ್ಯಾಸವನ್ನೂ ಸರಿಯಾಗಿ ಗುರುತಿಸದೆ ಫೋಕ್‌ಲೋರ್‌ಗೆ ಸಂವಾದಿಯಾಗಿ 'ಜಾನಪದ ಸಾಹಿತ್ಯ' ಎಂದೇ ಬಳಸಿದ್ದಾರೆ. 'ಫೆಸ್ಟಿವಲ್ ಆಫ್ ಡಾನ್ಸ್‌ಸ್' ಅಂಗವಾಗಿ 1966ರಲ್ಲಿ ಬೆಂಗಳೂರಿನಿಂದ ಪ್ರಕಟವಾದ ಒಂದು ವಿಶೇಷಾಂಕದಲ್ಲಿ ಜೀ.ಶಂ. ಪರಮಶಿವಯ್ಯ ಅವರು ಕನ್ನಡದಲ್ಲಿ ನಡೆದು ಬಂದ ಜಾನಪದ ಅಧ್ಯಯನ ಕೇವಲ ಗೀತಪ್ರಕಾರಕ್ಕಷ್ಟೇ ಸೀಮಿತವಾದರೆ ಸಾಲದು, ಜಾನಪದದಂಥ ವ್ಯಾಪಕವಾದ ವಿಷಯದ ಎಲ್ಲ ಕ್ಷೇತ್ರಗಳಲ್ಲಿಯೂ ಕೆಲಸ ನಡೆಯಬೇಕು ಎಂದು ಸೂಚಿಸಿ ಪಾಶ್ಚಾತ್ಯದೇಶಗಳ ಜಾನಪದ ಅಧ್ಯಯನದ ಕಡೆ ಗಮನ ಸೆಳೆದರು. ಆದರೆ ಇವರಾರೂ ಹಾ.ಮಾ. ನಾಯಕರಂತೆ 'ಜಾನಪದ'ದ ಸಮಗ್ರ ಅಧ್ಯಯನ ಹಾಗೂ ಅದನ್ನು ಒಂದು ವಿಜ್ಞಾನವಾಗಿ ಅದರ ಸ್ವರೂಪವನ್ನು ಪರಿಶೀಲಿಸಲಿಲ್ಲ. ಫೋಕ್‌ಲೋರ್ ಎಂದರೇನು?

ಅದರ ವಿವಿಧ ಕ್ಷೇತ್ರಗಳಾವುವು? ಫೋಕ್ ಮತ್ತು ಲೋರ್‌ಗಳ ಸಂಬಂಧವೇನು? ಆ ಶಬ್ದಗಳ ವಿವಿಧ ಅರ್ಥ ಛಾಯೆಗಳೇನು? ಕನ್ನಡದಲ್ಲಿ ಫೋಕ್‌ಲೋರ್ ಶಬ್ದಕ್ಕೆ ಸಂವಾದಿಯಾಗಿ 'ಜಾನಪದ' ಎಂಬ ಪ್ರಯೋಗವನ್ನು ಹೇಗೆ ಬಳಸಬಹುದು? ಎಂಬೆಲ್ಲ ವಿಷಯಗಳ ಮೇಲೆ ವಿವರವಾಗಿ ಚರ್ಚಿಸಿ ನಮ್ಮ ಜಾನಪದ ಅಧ್ಯಯನಕ್ಕೆ ಹೊಸ ಆಯಾಮವನ್ನು ಒದಗಿಸಿದವರು ಹಾ.ಮಾ. ನಾಯಕರು. ಮುಂದೆ 1967ರಲ್ಲಿ ಪ್ರಕಟವಾದ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಪ್ರಥಮ ಜಾನಪದ ಸಮ್ಮೇಳನದ ನೆನಪಿನ ಗ್ರಂಥದಲ್ಲಿಯೂ ಹಾ.ಮಾ. ನಾಯಕರು 'ಜಾನಪದ ವೈಜ್ಞಾನಿಕ ಅಧ್ಯಯನ' ಎಂಬ ವಿಷಯದ ಮೇಲೆ ಪ್ರಬಂಧವೊಂದನ್ನು ಪ್ರಕಟಿಸಿ, ಜಾನಪದದ ವೈಜ್ಞಾನಿಕ ಅಧ್ಯಯನ ಸ್ವರೂಪವನ್ನು ವಿವರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನ ಆರಂಭವಾಗಲು ಮುಖ್ಯ ಕಾರಣಕರ್ತರಾದ ದೇಜಗೌ ಅವರು ಅದೇ ವರ್ಷ ಪ್ರಕಟವಾದ 'ಜನಪದ ಸಾಹಿತ್ಯ ಸಮೀಕ್ಷೆ' ಎಂಬ ಗ್ರಂಥಕ್ಕೆ ತಾವು ಬರೆದ ವಿಸ್ತಾರವಾದ ಮುನ್ನುಡಿಯಲ್ಲಿ ಜಾನಪದದ ಮೂಲಚೂಲಗಳನ್ನೆಲ್ಲ ವಿವರಿಸಿ ಅದರ ಸಮಗ್ರ ಸ್ವರೂಪವೇನು ಎಂಬುದನ್ನು ಸಮರ್ಥವಾಗಿ ವಿವರಿಸಿದ್ದರು. ಜನಜೀವನದಲ್ಲಿ ಜಾನಪದ ಹೇಗೆ ಹಾಸುಹೊಕ್ಕಾಗಿದೆ, ಅದು ವಾಕ್‌ಸಂಪ್ರದಾಯದಲ್ಲಿ ಮಾತ್ರವಲ್ಲದೆ ಭೌತಿಕ ವಸ್ತುವಿಶೇಷಗಳ ರೂಪದಲ್ಲಿಯೂ ಹೇಗೆ ಇರಬಲ್ಲದು, ಜಾನಪದ ಸಂಗ್ರಾಹಕರು ಹೇಗೆ ಸಮಸ್ತ ವಸ್ತು ವಿಷಯಗಳನ್ನು ಸಂಗ್ರಹಿಸಬೇಕು, ಹಾಗೆ ಸಂಗ್ರಹಿಸುವುದರ ಮಹತ್ವವೇನು ಎಂಬ ಅಂಶಗಳನ್ನು ಚರ್ಚಿಸಿ ಜಾನಪದ ಅಧ್ಯಯನಕ್ಕೆ ಹೊಸ ಸ್ಫೂರ್ತಿಯನ್ನು ತುಂಬಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ವಸ್ತು ಸಂಗ್ರಹಾಲಯ ರೂಪುಗೊಳ್ಳಲು ಜಾನಪದ ವಿಭಾಗ ಸುಪುಷ್ಟಗೊಳ್ಳಲು ಕಾರಣಕರ್ತರಾದ ದೇಜಗೌ, ಹಾ.ಮಾ.ನಾಯಕ, ಜೀ.ಶಂ.ಪರಮಶಿವಯ್ಯ ಮತ್ತು ಪಿ.ಆರ್.ತಿಪ್ಪೇಸ್ವಾಮಿ ಅವರ ಹೆಸರು ಕರ್ನಾಟಕ ಜಾನಪದ ಅಧ್ಯಯನದ ಇತಿಹಾಸದಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯ ಸಾಂಸ್ಕೃತಿಕ ಮಹತ್ವದ ಅಪೂರ್ವ ವಸ್ತುವಿಶೇಷಗಳಿಂದ ಬೇರೆ ಬೇರೆ ಕ್ಷೇತ್ರದ ವಿದ್ವಾಂಸರ, ಸಂಶೋಧಕರ, ಸಂದರ್ಶಕರ ಆಸಕ್ತಿಯನ್ನು ಸೆಳೆದಿದೆ. ಪರಂಪರಾನುಗತ ಜನಪದ ಸಂಸ್ಕೃತಿಯ ವಿವಿಧ ಮಜಲುಗಳನ್ನು ಗುರುತಿಸುವ, ಜನಜೀವನದ ಪ್ರಾಚೀನ ವೈಭವವನ್ನು ಚಿತ್ರಿಸುವ ಕನ್ನಡಿಗರ ಜೀವನ ಶ್ರದ್ಧೆ, ಕಲಾರಾಧನೆ, ವೃತ್ತಿ ವೈವಿಧ್ಯಗಳನ್ನು ಪರಿಚಯ ಮಾಡಿಕೊಡುವ ಈ ವಸ್ತುಸಂಗ್ರಹಾಲಯ ಭಾರತಕ್ಕೆ ಹೊಸದು. ಈ ವಸ್ತುಸಂಗ್ರಹಾಲಯದ ಬೆಳವಣಿಗೆಯಲ್ಲಿ ಜೀ.ಶಂ.ಪರಮಶಿವಯ್ಯ, ಪಿ.ಆರ್.ತಿಪ್ಪೇಸ್ವಾಮಿ ಮತ್ತು ಯು.ಎಸ್.ರಾಮಣ್ಣ ಮೊದಲಾದವರು ಶ್ರಮಿಸಿದ್ದಾರೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಸಂಗ್ರಹಕಾರ್ಯವನ್ನು ನಡೆಸಲಾಗಿದೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗ ಜಾನಪದ ಮಾಲೆಯಲ್ಲಿ ಇದುವರೆಗೆ ಅರುವತ್ತಾರು ಶೀರ್ಷಿಕೆಗಳನ್ನು ಹೊರತಂದಿದೆ (2002). ಇದರ ಜೊತೆಗೆ ವಿವಿಧ ಪ್ರದೇಶಗಳಲ್ಲಿ ಜಾನಪದ ಪರಿವೀಕ್ಷಣೆಯ ಕಾರ್ಯವನ್ನು ಕೈಗೊಂಡು ಅಧ್ಯಯನ ನಡೆಸುತ್ತಿದೆ. ಇಲ್ಲಿಯ ಸಂಶೋಧಕರು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಜಾನಪದ ಸಂಗ್ರಹಕಾರ್ಯ ನಡೆಸಿದ್ದಾರೆ. ಜನಪದ ಗೀತೆ, ಲಾವಣಿ, ನಾಟಕ ಮುಂತಾದವನ್ನು ಧ್ವನಿಮುದ್ರಣ ಮಾಡಿ ಸಂರಕ್ಷಿಸಿ ಇಡಲಾಗುತ್ತಿದೆ. ಸಂಶೋಧನೆ, ಪ್ರಕಟಣೆಗಳ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕ್ಕೆ ವಿಶೇಷ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಜಾನಪದದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಆರಂಭಿಸಿದುದು ಒಂದು ಕ್ರಾಂತಿಕಾರಕ ಹೆಜ್ಜೆ. ಜಾನಪದದಲ್ಲಿ ಡಿಪ್ಲೊಮಾ, ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಮತ್ತು ದಕ್ಷಿಣ ಭಾರತ ಅಧ್ಯಯನದಲ್ಲಿ ಜಾನಪದ ಅಧ್ಯಯನಕ್ಕೆ ಅವಕಾಶ ಹೀಗೆ ನಾನಾ ರೀತಿಯಲ್ಲಿ ಜಾನಪದಕ್ಕೆ ಪ್ರತಿಷ್ಠಿತ ಸ್ಥಾನವನ್ನು ಕಲ್ಪಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯವೂ ಜಾನಪದ ಅಧ್ಯಯನ ಮತ್ತು ಪ್ರಕಟಣೆಗಳಿಗೆ ಆದ್ಯತೆ ನೀಡಿದೆ. ಕರ್ನಾಟಕ ವಿಶ್ವವಿದ್ಯಾಲಯ ಮೊದಲಿಗೆ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸ್ನಾತಕೋತ್ತರ ಪದವಿ ಶಿಕ್ಷಣವನ್ನು ನೀಡುತ್ತಿತ್ತು. ಇತ್ತೀಚೆಗೆ ಜನಪದ ಸಾಹಿತ್ಯಕ್ಕೆ ಬದಲಾಗಿ ಜಾನಪದದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ನೀಡುತ್ತಿದೆ. ಕಳೆದ ಕಾಲು ಶತಮಾನದಿಂದ ಕರ್ನಾಟಕ ವಿಶ್ವವಿದ್ಯಾಲಯ ತಪ್ಪದೆ ನಡೆಸಿಕೊಂಡು ಬರುತ್ತಿರುವ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಹಾಗೂ ಗೋಷ್ಠಿಗಳಲ್ಲಿ ಮಂಡನೆಗೊಂಡ ಪ್ರಬಂಧಗಳ ಸಂಕಲನಗಳನ್ನು ಹೊರತರುತ್ತಿರುವುದು ಮಹತ್ವದ ಸಂಗತಿಯಾಗಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗ ಮತ್ತು ಬುಡಕಟ್ಟು ಅಧ್ಯಯನ ವಿಭಾಗಗಳು ವ್ಯಾಪಕ ಕ್ಷೇತ್ರಕಾರ್ಯ ಕೈಗೊಂಡು ಬೃಹತ್ ಗಾತ್ರದ ಸಂಪುಟಗಳನ್ನು ಹೊರತರುತ್ತಿವೆ. ಇಲ್ಲಿ ಸ್ನಾತಕೋತ್ತರ ಜಾನಪದ ಪದವಿ ಶಿಕ್ಷಣವನ್ನೂ ಆರಂಭಿಸಲಾಗಿದೆ. 2002-03ನೆಯ ಸಾಲಿನಿಂದ ಬೆಂಗಳೂರು ಮತ್ತು ಮಂಗಳೂರು ವಿಶ್ವವಿದ್ಯಾಲಯಗಳೂ ಜಾನಪದ ಅಧ್ಯಯನ ಮತ್ತು ಪ್ರಕಟಣೆಗಳಿಗೆ ಗಮನ ಹರಿಸುತ್ತ ಬಂದಿವೆ. ಕುವೆಂಪು ವಿಶ್ವವಿದ್ಯಾಲಯ ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯಗಳಲ್ಲೂ ಜಾನಪದ ಪ್ರಕಟಣೆಗಳು ಹೊರಬಂದಿವೆ. ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಕನ್ನಡ ಎಂ.ಎ. ವಿದ್ಯಾರ್ಥಿಗಳಿಗೆ ಜಾನಪದ ಅಧ್ಯಯನ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಇದೇ ಜಾಡಿನಲ್ಲಿ ನಾಡಿನ ಬೇರೆ ಬೇರೆ ಸಂಘ ಸಂಸ್ಥೆಗಳೂ ಕೆಲಸ ಮಾಡುತ್ತಿರುವುದು ಗಮನಾರ್ಹ. ಕರ್ನಾಟಕ ಜಾನಪದ ಪರಿಷತ್ತು, 60ರ ದಶಕದಲ್ಲಿ ತನ್ನ ಚಟುವಟಿಕೆಗಳಿಂದ ನಾಡಿನಾದ್ಯಂತ ಜಾನಪದದತ್ತ ಆಸಕ್ತಿ ಕುದುರಿಸಿತ್ತು. ಪರಿಷತ್ತು ಹೊರತರುತ್ತಿದ್ದ ಜಾನಪದ ಎಂಬ ಪತ್ರಿಕೆ ಜಾನಪದ ಸಂಶೋಧನೆಯ ಕ್ಷೇತ್ರದಲ್ಲಿ ಮಹತ್ವದ ಸ್ಥಾನವನ್ನು ಪಡೆದಿತ್ತು. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಜಾನಪದ ಟ್ರಸ್ಟ್, ಉಡುಪಿಯ ಪ್ರಾದೇಶಿಕ ಜನಪದ ಕಲೆಗಳ ಕೇಂದ್ರ ಮುಂತಾದ ಸಂಸ್ಥೆಗಳು 80ರ ದಶಕದಿಂದೀಚೆಗೆ ಜಾನಪದ ಕ್ಷೇತ್ರದ ಕಡೆ ತೀವ್ರ ಆಸಕ್ತಿ ತಳೆದು ಸಂಶೋಧನೆ, ಪ್ರಕಟಣೆ, ಕಲೆಗಳ ಸಂವರ್ಧನೆ, ಕಲಾವಿದರ ಪೋಷಣೆ ಮುಂತಾದ ಕಾರ್ಯಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದು ನಾಲ್ಕು ನಿಟ್ಟಿನಿಂದ ಜಾನಪದ ಕ್ಷೇತ್ರ ಸುಮುಖವಾಗಿ ಬೆಳೆಯಲು ಕಾರಣವಾಗಿದೆ.

ಜಾನಪದ ಅಧ್ಯಯನಕ್ಕೆ ಅರವತ್ತರ ದಶಕದಲ್ಲಿ ಹೊಸ ತಿರುವು ಬಂದ ಮೇಲೆ ಅಪಾರ ಸಂಖ್ಯೆಯ ಉತ್ಸಾಹಿಗಳು ಕ್ಷೇತ್ರಕಾರ್ಯಕ್ಕೆ ತೊಡಗಿ ಗಣನೀಯ ಪ್ರಮಾಣದಲ್ಲಿ ಜಾನಪದ ಕೃತಿರಾಶಿ ಬೆಳಕು ಕಂಡಿದೆ. ಇಲ್ಲಿನ ಸಾಧನೆ ಹೊಸ ದಿಗಂತವನ್ನೇ ತೆರೆದಿದೆ. ಜಾನಪದದ ಸಾಹಿತ್ಯಕ ಬಗೆ, ಕ್ರಿಯಾತ್ಮಕ ಬಗೆ ಹಾಗೂ ವೈಜ್ಞಾನಿಕ ಬಗೆಗಳಲ್ಲಿ ಸಾಕಷ್ಟು ಕ್ಷೇತ್ರಕಾರ್ಯ ನಡೆದಿರುವುದು ಗಮನಾರ್ಹ ಅಂಶವಾಗಿದೆ. ಅಲಕ್ಷಿತ ಜಾನಪದ ಕ್ಷೇತ್ರಗಳಲ್ಲಿ ಹೊಸ ಪೀಳಿಗೆಯ ಅಧ್ಯಯನಕಾರರು ಆಸಕ್ತಿವಹಿಸಿ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. 70ರ ದಶಕದ ಅನೇಕ ಶೀರ್ಷಿಕೆಗಳು ವಿದ್ವಜ್ಜನರ ಸಂಶೋಧಕರ ಆಸಕ್ತಿಯನ್ನು ಸೆಳೆದಿವೆ. ಹಾ.ಮಾ.ನಾಯಕ ಅವರು ಸಿದ್ಧಪಡಿಸಿದ ಜಾನಪದ ಗ್ರಂಥಸೂಚಿ 1974ರವರೆಗಿನ ಜಾನಪದ ಶೀರ್ಷಿಕೆಗಳ ವಿವರಗಳನ್ನು ನೀಡುತ್ತದೆ. ಕಾವ್ಯ, ಲಾವಣಿ, ಕಥೆ, ಐತಿಹ್ಯ, ಭಾಷಾಂತರ ಕೃತಿಗಳು, ಗಾದೆ, ಒಗಟು, ನಾಟಕ, ರಂಗಭೂಮಿ, ವಿಚಾರ, ವಿಮರ್ಶೆ, ಸಂಶೋಧನೆ ಹಾಗೂ ಸಂಕೀರ್ಣ ಸ್ವರೂಪದ ಕೃತಿ ಮಾಲೆಯಲ್ಲಿ ಐನೂರಕ್ಕೂ ಹೆಚ್ಚು ಕೃತಿಗಳು ಕನ್ನಡದಲ್ಲಿ ಪ್ರಕಟಗೊಂಡಿರುವುದನ್ನು ಅಲ್ಲಿ ಲಕ್ಷಿಸಲಾಗಿದೆ. ಈ ಗ್ರಂಥಸೂಚಿಯ ಪ್ರಕಟಣೆಯ ಮೂಲಕ ಹಾ.ಮಾ.ನಾಯಕ ಅವರು ದೊಡ್ಡ ಸಂಖ್ಯೆಯ ಅಜ್ಞಾತ ಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ಜೊತೆಗೆ ಈ 70ರ ದಶಕದಲ್ಲಿ ಜಾನಪದ ಅಧ್ಯಯನ ಮೈಗೂಡಿಕೊಂಡ ರೀತಿಗೂ ಈ ಕೃತಿ ಸಾಕ್ಷಿಯಾಗಿದೆ.

70ರ ದಶಕದಲ್ಲಿ ಅತ್ಯಂತ ಮಹತ್ವದ ಅಧ್ಯಯನ ನಡೆದಿರುವುದು ವೃತ್ತಿಗಾಯಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ. ದಕ್ಷಿಣ ಕರ್ನಾಟಕದ ವೃತ್ತಿಗಾಯಕ ಕಾವ್ಯ ಸಂಪ್ರದಾಯಗಳನ್ನು ಕುರಿತು ಸಾಕಷ್ಟು ಅಧ್ಯಯನಗಳು ನಡೆದಿರುವುದು ಗಮನಾರ್ಹ. ಕಂಸಾಳೆಯವರು, ನೀಲಗಾರರು, ಚೌಡಿಕೆಯವರು ಮುಂತಾದ ವೃತ್ತಿಗಾಯಕರ ಕಾವ್ಯಗಳು ಸಂಗ್ರಹಗೊಂಡು ಪ್ರಕಟವಾಗಿವೆ. ಈ ಸಂಕಲನಗಳಿಂದ ಕರ್ನಾಟಕದ ಪ್ರಮುಖ ವೃತ್ತಿಗಾಯಕ ಸಂಪ್ರದಾಯಗಳ

ಹಿನ್ನೆಲೆ ಹಾಗೂ ಕಾವ್ಯಗಳ ಸ್ವರೂಪ ಮನದಟ್ಟಾಗುವಂತೆ ಇದ್ದರೂ ಇನ್ನೂ ಸಮಗ್ರವಾದ ಅಧ್ಯಯನ ನಡೆಯಬೇಕಾಗಿದೆ. ಜೀ.ಶಂ. ಪರಮಶಿವಯ್ಯನವರ ಜನಪದ ಕಾವ್ಯಕಥೆಗಳು ಪ್ರಮುಖ ವೃತ್ತಿಗಾಯಕ ಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲುವ ಕೃತಿ. ಇವರ ಮಂಟೇಸ್ವಾಮಿ ಕಾವ್ಯ, ದೊಂಬಿದಾಸರ ಲಾವಣಿಗಳು, ಹೆಳವರ ಕಾವ್ಯಗಳು, ಎರಡು ಜನಪದ ಕಾವ್ಯಗಳು, ಜನಪದ ವೀರ ಕಾವ್ಯಗಳು, ಪಿರಿಯಾಪಟ್ಟಣದ ಕಾಳಗ, ವೃತ್ತಿಗಾಯಕ ಕಾವ್ಯಗಳು ಮುಂತಾದ ಶೀರ್ಷಿಕೆಗಳು ವಿವಿಧ ವೃತ್ತಿಗಾಯಕ ಕಾವ್ಯಗಳನ್ನೊಳಗೊಂಡ ಗಮನಾರ್ಹ ಸಂಕಲನಗಳು. ಪಿ.ಕೆ.ರಾಜಶೇಖರ ಅವರ ಮಲೆಯಮಾದೇಶ್ವರ ಜನಪದ ಮಹಾಕಾವ್ಯ, ಕನ್ನಡ ವಿಶ್ವವಿದ್ಯಾಲಯದ ಮಲೆಮಾದೇಶ್ವರ, ಮಂಟೇಸ್ವಾಮಿ, ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಜುಂಜಪ್ಪ, ವಿವಿಧ ವೃತ್ತಿಗಾಯಕ ಪರಂಪರೆ ಮತ್ತು ಕಾವ್ಯ ಸ್ವರೂಪವನ್ನು ಪರಿಚಯಿಸುವ ಶೀರ್ಷಿಕೆಗಳು ಈ ಅಧ್ಯಯನಕ್ಕೆ ಹೊಸ ಆಯಾಮ ತಂದುಕೊಟ್ಟಿವೆ. ತಂಬೂರಿ ಹಾಡುಗಾರಿಕೆ ಸಂಪ್ರದಾಯವನ್ನು ಕುರಿತು ಹಾ.ತಿ.ಕೃಷ್ಣೇಗೌಡ, ಅಂಬಳಿಕೆ ಹಿರಿಯಣ್ಣ, ಚಂದ್ರುಕಾಳೇನಹಳ್ಳಿ ಅವರು ಅನುಕ್ರಮವಾಗಿ ಗಜಮೋಹಿನಿ (1977) ತಂಬೂರಿ ಸಂಪ್ರದಾಯದ ಕಾವ್ಯಗಳು (1980) ತಂಬೂರಿ ಕಾವ್ಯಗಳು (1978) ಎಂಬ ಸಂಕಲನಗಳನ್ನೂ ಹೊರತಂದಿದ್ದಾರೆ. ಕರ್ನಾಟಕದ ವೃತ್ತಿಗಾಯಕರ ಪೈಕಿ ಗೊಂದಲಿಗರನ್ನು ಕುರಿತು ಕೆಲಸ ಮಾಡಿದವರು ಕ್ಯಾತನಹಳ್ಳಿ ರಾಮಣ್ಣ. ಅವರ ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು ಒಂದು ಗಮನಾರ್ಹ ಸಂಕಲನವಾಗಿದೆ (1975).

ವೃತ್ತಿಗಾಯಕರ ಈ ಕಾವ್ಯ ಸಂಪ್ರದಾಯಗಳ ಜೊತೆಗೆ ಬೇರೆ ಗೀತ ಸಂಪ್ರದಾಯಗಳ ಬಗೆಗೂ ಅಧ್ಯಯನಗಳು ನಡೆದಿವೆ. ಮಲೆನಾಡು ಮತ್ತು ಬಯಲುನಾಡುಗಳ ಅವಳಿ ಸಂಪ್ರದಾಯಗಳಾದ ಅಂಟಿಕೆ ಪಂಟಿಕೆ (ನೋಡಿ) ಹಾಗೂ ಭಾಗವಂತಿಕೆ ಸಂಪ್ರದಾಯಗಳ ಮೇಲೆ ಅನೇಕರು ಕೆಲಸ ಮಾಡಿದ್ದಾರೆ. ಅಂಟಿಕೆ ಪಂಟಿಕೆ ಗೀತ ಸಂಪ್ರದಾಯ ಕುರಿತು ಡಿ.ಟಿ.ಚಂದ್ರಶೇಖರ, ಕೆ.ವಿ.ಸುಬ್ಬಣ್ಣ, ಹಾ.ಮಾ.ನಾಯಕ, ಶ್ರೀಕಂಠಕೂಡಿಗೆ, ಅಂಬಳಿಕೆ ಹಿರಿಯಣ್ಣ, ಜೆ.ಕೆ.ರಮೇಶ ಮೊದಲಾದವರು ಅಧ್ಯಯನ ಮಾಡಿದ್ದಾರೆ. ಭಾಗವಂತಿಕೆ ಸಂಪ್ರದಾಯ ಕುರಿತು ಜೀಶಂಪ ಅವರ ಭಾಗವಂತಿಕೆ ಮೇಳ, ಹಿರಿಯಣ್ಣ ಮೇಟಿಕೆರೆ ಅವರ ಭಾಗವಂತಿಕೆ ಪದಗಳು ಪ್ರಕಟಗೊಂಡಿವೆ. ಅರವಿಂದ ಮಾಲಗತ್ತಿ ಅವರ ಆಣೇಪೀಣೆ ಕೂಡ ದೀಪಾವಳಿ ಸಂದರ್ಭದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಲಿತವಿರುವ ಹಾಡುಗಾರಿಕೆ ಸಂಪ್ರದಾಯವನ್ನೇ ಕುರಿತದ್ದಾಗಿದೆ.

80 ಮತ್ತು 90ರ ದಶಕಗಳಲ್ಲಿ ನಡೆದಿರುವ ಬಹುಮಟ್ಟಿನ ಅಧ್ಯಯನವೆಲ್ಲ ಸಾಹಿತ್ಯಕ ಬಗೆಗಳಿಗೆ ಸಂಬಂಧಪಡುತ್ತದೆ. ಗೀತೆ, ಕಥನಗೀತೆ, ಲಾವಣಿ, ಕಥೆ, ಒಗಟು, ಗಾದೆ, ಶಿಶುಪ್ರಾಸ ಹಾಗೂ ರಂಗಕಲೆಗಳಿಗೆ ಸಂಬಂಧಿಸಿದಂತೆ ತಕ್ಕಮಟ್ಟಿನ ಸಂಗ್ರಹಕಾರ್ಯ ಹಾಗೂ ಅಧ್ಯಯನಗಳು ನಡೆದಿವೆ. ಈ ದಶಕಗಳ ವೈಶಿಷ್ಟ್ಯವೆಂದರೆ ಸಂಗ್ರಹ ಸಂಪಾದನೆಗಳಿಗಿಂತ ಅಧ್ಯಯನ ಸಂಶೋಧನೆಗಳ ಮೊತ್ತವೇ ಅಧಿಕವಾಗಿರುವುದು.

ಅರವಿಂದ ಮಾಲಗತ್ತಿಯವರ ಜಾನಪದ ಶೋಧ (1990), ದೈವಾರಾಧನೆ ಮತ್ತು ವಿಶಿಷ್ಟ ಸಂಪ್ರದಾಯಾಚರಣೆಗಳನ್ನು ಅರ್ಥೈಸಲು ಅವರು ವಿಶೇಷವಾಗಿ ದೊರಕಿಸಿಕೊಂಡಿರುವ ಸಾಮಗ್ರಿಯ ಬಾಹುಳ್ಯ ಹಾಗೂ ಕ್ಷೇತ್ರಕಾರ್ಯದ ವೈಖರಿ ಮಹತ್ವದವಾಗಿವೆ. ತುಳುನಾಡಿನ ಸಂಸ್ಕೃತಿಯನ್ನು ಅರಿಯುವ ಪ್ರಯತ್ನ ಮಾಲಗತ್ತಿಯವರ ಭೂತಾರಾಧನೆ (1991). ಜಾನಪದ ಅಧ್ಯಯನಕ್ಕೆ ಈ ಕೃತಿ ಹೊಸ ಆಯಾಮ ಒದಗಿಸಿದೆ. ಅಂತಾರಾಷ್ಟ್ರೀಯ ನೆಲೆಯಿಂದ ಮಾಲಗತ್ತಿಯವರು ನಡೆಸಿದ ಸಂಶೋಧನೆ ತುಳುವರ ಆಟಿ ಕಳೆಂಜ (1993); ಇದು ಕ್ಷೇತ್ರ ಕಾರ್ಯಾಧ್ಯಯನ. ತುಳುನಾಡಿನ ಸಂಸ್ಕೃತಿಯ ಅಧ್ಯಯನಕ್ಕೆ ಇದೊಂದು ಆಕರ ಗ್ರಂಥ. ಪುರಾಣ ಜಾನಪದ ಮತ್ತು ದೇಶೀವಾದ (1998) ಗ್ರಂಥದಲ್ಲಿ ಮಾಲಗತ್ತಿಯವರು ಪುರಾಣ ಗಳನ್ನು ಕುರಿತು ವೈಚಾರಿಕ ನೆಲೆಯಿಂದ ಅಧ್ಯಯನ ನಡೆಸಿದ್ದಾರೆ.

1980ರ ದಶಕದಲ್ಲಿ ಹೊರ ಬಂದ ಕಥನಗೀತ ಸಂಕಲನಗಳ ಪೈಕಿ ಕೃಷ್ಣಮೂರ್ತಿ ಹನೂರರ ಕತ್ತಲ ದಾರಿ ದೂರ ಗಮನಾರ್ಹವಾದ ಸಂಗ್ರಹ. ಮಹಾಸತಿಯರು ಮತ್ತು ಸ್ತ್ರೀ ಬಲಿದಾನವನ್ನು ಕುರಿತ ರಚನೆಗಳು ಇಲ್ಲಿವೆ. ಸಂಗ್ರಾಹಕರು ಇಲ್ಲಿ ಸತಿ ಪದ್ಧತಿಯ ಬಗೆಗೆ ಉಪಯುಕ್ತ ವಿವರಗಳನ್ನು ಒದಗಿಸಿದ್ದಾರೆ. ಸಂದರ್ಭೋಚಿತವಾಗಿ ಒದಗಿಸಿರುವ ವಕ್ತೃ ಸಂದರ್ಶನ ವಿವರ ಆಯಾ ಕಥನಗೀತೆಯ ಗಟ್ಟಿತನಕ್ಕೆ ಸಾಕ್ಷಿಯಾಗಿವೆ. ಇದೇ ಅವಧಿಯಲ್ಲಿ ಉತ್ತರ ಕರ್ನಾಟಕ ಪ್ರದೇಶದಿಂದ ಹೊರಬಂದ ಜೀವನ ಜೋಕಾಲಿ ಮಾಲೆಯ ಕೃತಿಗಳು (ಕರ್ನಾಟಕ ವಿಶ್ವವಿದ್ಯಾಲಯ), ಸುಶೀಲ ಪಟ್ಟಣಶೆಟ್ಟಿಯವರ ಗುಣದಮ್ಮನ ಕಥೆ, ಟಿ.ಎಸ್.ರಾಜಪ್ಪನವರ ಬೆಳಗಾಂವಿ ಜಿಲ್ಲೆಯ ಲಾವಣಿಗಳು, ಎಲ್.ಆರ್.ಹೆಗಡೆಯವರ ತಿಮ್ಮಕ್ಕನ ಪದಗಳು, ಕೆಲವು ಲಾವಣಿಗಳು, ಪರಮೇಶ್ವರಿಯ ಪದಗಳು ಮುಂತಾದವು ಗಮನಾರ್ಹ ಸಂಕಲನಗಳು. ನಿಂಗಣಸಣ್ಣಕ್ಕಿ ಅವರು ಸಂಪಾದಿಸಿದ ಬಾಳಗೋಪಾಳನ ಲಾವಣಿಗಳು ಕಲ್ಕಿತುರಾಯಿ ಸಂಪ್ರದಾಯದ ಒಂದು ವಿಶಿಷ್ಟ ಕೃತಿ. 1981ರಲ್ಲಿ ಅವರು ಹೊರತಂದ ಸಾತು ಕ್ಯಾಮಣ್ಣನ ಲಾವಣಿಗಳು ಜನಪದ ಸಾಹಿತ್ಯ ಕ್ಷೇತ್ರಕ್ಕೆ ಸಂದ ಒಂದು ವಿಶಿಷ್ಟ ಕೊಡುಗೆಯಾಗಿದೆ. ಕರಾವಳಿ ಪ್ರದೇಶದ ಕೆಲವು ಲಾವಣಿಗಳನ್ನು ಕೈಲಿಯ ಕರೆದ ನೊರೆ ಹಾಲು ಎಂಬ ಸಂಕಲನದಲ್ಲಿ ಗುಂಡ್ಮಿ ಚಂದ್ರಶೇಖರ ಐತಾಳ ಸಂಗ್ರಹಿಸಿ ಕೊಟ್ಟಿದ್ದಾರೆ. ಇಲ್ಲಿನ ಕೆಲವು ಲಾವಣಿಗಳು ಅನನ್ಯವಾಗಿವೆ. ಕೊಡಗು ಪ್ರದೇಶದ ಲಾವಣಿಗಳನ್ನು ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು ಎಂಬ ಹೆಸರಿನಲ್ಲಿ ಬೆಳಕಿಗೆ ತಂದವರು ಟಿ.ಎಸ್.ರಾಜಪ್ಪ.

ಜನಪದ ಲಾವಣಿ, ಕಾವ್ಯಗಳಿಗೆ ಸಂಬಂಧಪಟ್ಟಂತೆ ದಕ್ಷಿಣ ಕರ್ನಾಟಕದಲ್ಲಿ ಸಾಕಷ್ಟು ವ್ಯಾಪಕವಾಗಿ ಕೆಲಸ ನಡೆದಿದೆ. ಮರುಳಸಿದ್ದಪ್ಪನವರ ಲಾವಣಿಗಳು, ಕಾಳೇಗೌಡ ನಾಗವಾರರ ಬಯಲು ಸೀಮೆಯ ಲಾವಣಿಗಳು, ಅಂಬಳಿಕೆ ಹಿರಿಯಣ್ಣನವರ ತೀರ್ಥಹಳ್ಳಿ ಸುತ್ತಿನ ಲಾವಣಿಗಳು (1976), ಕಾಡುಗೊಲ್ಲರ ಜನಪದ ಗೀತೆಗಳು, ಪಿ.ಕೆ.ರಾಜಶೇಖರ ಅವರ ಬೆಟ್ಟದ ಚಾಮುಂಡಿ ಮುಂತಾದ ಕೆಲವನ್ನು ಇಲ್ಲಿ ಹೆಸರಿಸಬಹುದು. ಬಿ.ಸಿದ್ಧಗಂಗಯ್ಯ ಕಂಬಾಳು ಅವರ ಚಂದುಳ್ಳ ಮಕ್ಕಳ ಒಂಬತ್ತು ಕೊಡು ಸ್ವಾಮಿ ಜನಪದ ಗೀತೆಗಳನ್ನು ಅಧ್ಯಯನ ದೃಷ್ಟಿಯಿಂದ ಸೂಕ್ತ ರೀತಿಯಲ್ಲಿ ವಿಭಾಗಿಸಿ ಅಭ್ಯಸಿಸಿದ ಸಂಗ್ರಹ. ಗ್ರಂಥಕ್ಕೆ ಉಪಯುಕ್ತವಾದ ಪ್ರಸ್ತಾವನೆ ಮತ್ತು ಸಂದರ್ಶನ ಭಾಗಗಳನ್ನು ನೀಡಿ ಕೃತಿಯ ಮೌಲ್ಯ ಹೆಚ್ಚುವಂತೆ ಮಾಡಿದ್ದಾರೆ. ಮುಖ್ಯವಾಗಿ ಅವಹೇಳನಕ್ಕೆ ಗುರಿಯಾಗಿರುವ ಬಂಜೆತನವನ್ನು ಸಾಮಾಜಿಕ ದೃಷ್ಟಿಕೋನದಿಂದ ಇಲ್ಲಿ ಅಭ್ಯಸಿಸಲಾಗಿದೆ. ಎಂ.ಬಿ.ನಳಿನಿ ಅವರ ಕಾಡುಮಲ್ಲಿಗೆ ಒಂದು ಸುಂದರ ಕಥನಗೀತ ಸಂಕಲನ. ಮಲೆನಾಡಿನ ಗರ್ಭವಾದ ತೀರ್ಥಹಳ್ಳಿ ಭಾಗದ ವಿರಳ ಲಾವಣಿಗಳು ಇಲ್ಲಿವೆ. ಎನ್.ಆರ್.ನಾಯಕ ಅವರ ಹೇಳುತೇವೋ ಗುಮ್ಮೆ ಪದನಾವಾ (1983) ಮತ್ತು ಕೂಸಾಯ್ತು ನಮ್ಮ ಕೊಮರಾಗೆ ಸಂಗ್ರಹಗಳು ಅಭ್ಯಾಸಯೋಗ್ಯವಾಗಿವೆ. ಒಂದೇ ಜಿಲ್ಲೆಯ ಎಂಟು ಸಮೂಹಗಳಲ್ಲಿ ಮದುವೆಯ ವಿಧಿ ವಿಧಾನಗಳು ಹೇಗೆ ಭಿನ್ನವಾಗಿವೆ ಎಂದು ತೌಲನಿಕ ಅಧ್ಯಯನ ನಡೆಸುವುದಕ್ಕೆ ಈ ಸಂಗ್ರಹ ಸಾಕಷ್ಟು ಸಾಮಗ್ರಿ ಒದಗಿಸುತ್ತದೆ.

ಚನ್ನಣ್ಣ ವಾಲೀಕಾರ (1983) ಸಂಪಾದಿಸಿಕೊಟ್ಟಿರುವ ಗುಲಬರ್ಗಾ ಜಿಲ್ಲೆಯ ಮೊಹರಂ ಪದಗಳು ಕೃತಿ ಕನ್ನಡ ಜನಪದ ಗೀತೆಗಳಲ್ಲಿ ಒಂದು ವಿಶಿಷ್ಟ ವರ್ಗಕ್ಕೆ ಸೇರುತ್ತದೆ. ಜನಪದ ಸಾಹಿತ್ಯದಲ್ಲಿ ಹಿಂದು-ಮುಸ್ಲಿಂ ಸಾಮರಸ್ಯದ ಅರ್ಥಪೂರ್ಣ ಗೀತೆಗಳಾಗಿ ಉಳಿದುಬಂದಿರುವ ಈ ಕೃತಿ ಒಂದು ಗಮನಾರ್ಹ ಸಂಕಲನ. ಬಿ.ಎಸ್.ತಲ್ವಾಡಿ ಅವರ ಕ್ರೈಸ್ತ ಜನಪದ ಗೀತೆಗಳು ಸಮ್ಮಿಶ್ರ ಸಂಸ್ಕೃತಿಯ ಅಂಗವೆಂದೇ ಹೇಳಬೇಕು. ಕ್ರೈಸ್ತ ಜನಪದ ಗೀತೆಗಳ ರಚನೆಯಲ್ಲಿ ಒಂದು ವಿಚಾರಾರ್ಹ ವಿಶೇಷತೆ ಇದೆ. ಮೈಲಹಳ್ಳಿ ರೇವಣ್ಣ ಅವರು ಸಂಪಾದಿಸಿರುವ ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು (1984) ಸ್ತ್ರೀಯರೇ, ಅದರಲ್ಲೂ ಮುಖ್ಯವಾಗಿ ಹರಿಜನ ಮಾದಿಗ ಜನಾಂಗದವರು ಹಾಡಿರುವಂತಹವುಗಳಾಗಿವೆ.

ಇವೇ ಅಲ್ಲದೆ ಪ್ರಮುಖವಾಗಿ ಹೆಸರಿಸಬೇಕಾದ ಕೆಲವು ಸಂಕೀರ್ಣ ಸ್ವರೂಪದ ಕೃತಿಗಳನ್ನೂ ನೋಡಬಹುದು. ಎಚ್.ಎಲ್. ನಾಗೇಗೌಡ ಅವರ ಸೋಬಾನೆ ಚಿಕ್ಕಮ್ಮನ ಪದಗಳು 1970-80ರ ದಶಕದಲ್ಲಿ ಪ್ರಕಟವಾದ ಉತ್ತಮ ಸಂಕಲನಗಳಲ್ಲೊಂದು. ಇಲ್ಲಿ ಒಬ್ಬಳೇ ಅನುಭವಿ ಗಾಯಕಿಯ ಹಾಡುಗಳನ್ನೂ ಹಾಡ್ಗತೆಗಳನ್ನೂ ಕ್ರಮಬದ್ಧ ರೀತಿಯಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಡಿ.ಲಿಂಗಯ್ಯ ಅವರ ಬಯಲು ಸೀಮೆಯ

ಜನಪದ ಗೀತೆಗಳು ಕೂಡ ಒಂದು ಒಳ್ಳೆಯ ಸಂಕಲನ. ಇಲ್ಲಿ ವಿವಿಧ ಸಂಪ್ರದಾಯದ ಹಾಡುಗಳೂ ಹಾಡ್ಗತೆಗಳೂ ಸೇರಿವೆ. ಇಂಥ ಸಂಕೀರ್ಣ ಸ್ವರೂಪದ ಕೃತಿಗಳಲ್ಲಿ ಹೆಸರಿಸಬೇಕಾದ ಹೆಬ್ಬೊತ್ತಿಗೆ ಮತಿಘಟ್ಟ ಕೃಷ್ಣಮೂರ್ತಿಯವರ ಕನ್ನಡ ಜನಪದ ಸಾಹಿತ್ಯ ಭಂಡಾರ - ಗೀತೆಗಳು ಎಂಬ ಕೃತಿ. ಈ ಸಂಪುಟದಲ್ಲಿ ಕೃಷ್ಣಮೂರ್ತಿಗಳು ಅನೇಕ ವರ್ಷಗಳಿಂದ ತಾವು ಸಂಗ್ರಹಿಸಿದ ಗೀತೆಗಳನ್ನೂ ಹಾಡ್ಗತೆಗಳನ್ನೂ ವಿವಿಧ ಸಂಪ್ರದಾಯಕ್ಕೆ ಸಂಬಂಧಿಸಿದ ಹಾಡುಗಳನ್ನೂ ಅಳವಡಿಸಿದ್ದಾರೆ. ಜಿ.ಆರ್.ತಿಪ್ಪೇಸ್ವಾಮಿ ಮತ್ತು ಚಂದ್ರಶೇಖರ ಕಂಬಾರರು ಕ್ಷೇತ್ರಕಾರ್ಯ ನಡೆಸಿ. ನನ್ನ ಜಡೆವೊಳಗೆ ಎಂಬ ಜನಪದ ಗೀತಸಂಕಲನ ಪ್ರಕಟಿಸಿದ್ದಾರೆ (1981). ವೈ.ಸಿ.ಭಾನುಮತಿಯವರ ಪುಟ್ಟ ಮಲ್ಲಿಗೆ ಹಿಡಿ ತುಂಬ (2003) ಎಂಬ ಗೀತ ಸಂಕಲನದಲ್ಲಿ ಹಾಸನ ಜಿಲ್ಲೆಯ ಮಲೆನಾಡು ಭಾಗದ ವಿವಿಧ ಸಂಪ್ರದಾಯದ ಹಾಡುಗಳು, ಹಾಡ್ಗತೆಗಳು ಇವೆ.

ಜಮಖಂಡಿಯ ಸುತ್ತಿನ ಗೀತೆಯನ್ನು ಸಂಗ್ರಹಿಸಿ ಬಿ.ಜಿ.ಖಾಡೆ ಅವರು ಕಾಡು ಹೂಗಳು ಎಂಬ ಹೆಸರಿನಲ್ಲಿ ಪ್ರಕಟಿಸಿ ಆ ಭಾಗದ ಸಾಹಿತ್ಯ ಮೊದಲ ಬಾರಿಗೆ ಜಾನಪದ ಸಂಶೋಧಕರಿಗೆ ಲಭ್ಯವಾಗುವಂತೆ ಮಾಡಿದ್ದಾರೆ. ಜ್ಯೋತಿ ಹೊಸೂರ ಅವರು ಬೆರಸಿ ಇಟ್ಟೀನ ಬೆಲ್ಲ ನೆನಗೆಡಲೆ ಎಂಬ ಸಂಕಲನದ ಮೂಲಕ ಬೆಳಗಾಂವಿ ಭಾಗದ ಜನಪದ ಗೀತೆಗಳನ್ನು ಕಲೆ ಹಾಕಿ ನೀಡಿದ್ದಾರೆ. ಇಲ್ಲಿಯ ತ್ರಿಪದಿಗಳು ಉತ್ತಮ ಕಾವ್ಯಸತ್ವದಿಂದ ಕೂಡಿ ನಮ್ಮ ಆಸಕ್ತಿಯನ್ನು ಸೆಳೆದುಕೊಳ್ಳುತ್ತವೆ. ಉತ್ತರ ಕನ್ನಡ ಜಿಲ್ಲೆಯ ಅನೇಕ ಬುಡಕಟ್ಟು ಸಮೂಹಗಳಲ್ಲಿ ಜನಪದ ಸಾಹಿತ್ಯ ದಟ್ಟವಾಗಿ ಹುದುಗಿದೆ ಎಂಬುದನ್ನು ಆ ಭಾಗದಿಂದ ಪ್ರಕಟಗೊಳ್ಳುತ್ತಿರುವ ಸಂಕಲನಗಳಿಂದ ಗುರುತಿಸಬಹುದಾಗಿದೆ. ಎಲ್.ಆರ್.ಹೆಗಡೆಯವರು ಸಂಗ್ರಹಿಸಿದ ಗೀತೆಗಳಲ್ಲಿ ಪ್ರಮುಖವಾದವು ಹಾಡುಂಟೆ ನನ್ನ ಮಡಿಲಲ್ಲಿ (1971), ಸುವ್ವಿ ಸುವ್ವಿ ಸುವ್ವಾಲೆ (1971), ಪರಮೇಶ್ವರಿಯ ಪದಗಳು (1972). ಎನ್.ಆರ್.ನಾಯಕ ಅವರ ಸುಗ್ಗಿಯ ಪದಗಳು (1986) ಸಂಗ್ರಹದ ಪ್ರಸ್ತಾವನೆಯಲ್ಲಿ ಸುಗ್ಗಿ ಹಬ್ಬದ ಪೂರ್ಣ ವಿವರಗಳನ್ನು ನೀಡಲಾಗಿದೆ. ಟಿ.ಎಸ್.ರಾಜಪ್ಪನವರ ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು ಕೃತಿ, ತ್ರಿಪದಿಗಳು, ಗೀತೆಗಳು, ಶಿಶುಪ್ರಾಸಗಳು, ಕಥನಗೀತೆಗಳನ್ನೊಳಗೊಂಡ ಒಂದು ಸುಂದರ ಸಂಕಲನ. ಟಿ.ಕೇಶವಭಟ್ಟರ ಹವ್ಯಕರ ಶೋಬಾನೆಗಳು ಹವ್ಯಕರು ಮೈಗೂಡಿಸಿಕೊಂಡಿರುವ ಸದ್ಭಾವನೆ, ಸದಾಚಾರಗಳನ್ನು ಬಿಂಬಿಸುತ್ತವೆ. ಎನ್.ಆರ್.ನಾಯಕ ಅವರ ತುಳಸಿ ತಿಮ್ಮಪ್ಪರಾಯ (1987) ಸಂಗ್ರಹದಲ್ಲಿ ತುಳಸಿಯ ಹಾಡನ್ನು ಕಲೆಹಾಕಲಾಗಿದೆ. ಅದೇವರ್ಷ ಹೊರತಂದಿರುವ ಕೃಷ್ಣಮೂರ್ತಿ ಹನೂರು ಅವರ ಜನಪದ ವೀರಗೀತೆಗಳು, ಮ್ಯಾಸಬೇಡರು, ಕುಂಚಿಟಿಗರು, ಹರಿಜನರು ಹಾಡಿರುವ ಕಾವ್ಯಗಳು ಇಲ್ಲಿ ಸೇರಿರುವುದರಿಂದ ಈ ಸಂಕಲನದ ವೈವಿಧ್ಯ ಹೆಚ್ಚಿದೆ. ಗಾಯತ್ರಿ ನಾವಡ ಅವರ ಚಿತ್ತಾರ ಬರೆದ ಬದುಕು (1989) ಸಮಾಜಶಾಸ್ತ್ರೀಯ ದೃಷ್ಟಿಕೋನವುಳ್ಳದ್ದಾಗಿದೆ. ಸಂಪ್ರದಾಯ ಗೀತೆಗಳ ಹಿನ್ನೆಲೆಯಲ್ಲಿ ಹೆಣ್ಣಿನ ಒಂದು ಜೀವನಾವರ್ತನವನ್ನು ಗಮನದಲ್ಲಿರಿಸಿಕೊಂಡು ಸಂಕಲನಿಸಿದ ಕೃತಿ. ಜಯಲಕ್ಷ್ಮೀ ಸೀತಾಪುರ ಅವರ ನಮ್ಮ ಸುತ್ತಿನ ಜನಪದ ಕಥನ ಗೀತೆಗಳು (1992) ಹೆಣ್ಣಿನ ನೋವು ನಲಿವುಗಳನ್ನು ಚಿತ್ರಿಸಿದೆ.

ಮೇಲೆ ಹೆಸರಿಸಲಾದ ಸಂಕಲನಗಳ ಜೊತೆಗೆ ಇನ್ನೂ ಅನೇಕ ಗೀತ ಸಂಕಲನಗಳು ಹೊರಬಂದಿವೆ. ಗುಂಡ್ಮಿ ಚಂದ್ರಶೇಖರ ಐತಾಳರ ಮದ್ದುಂಟೆ ಜನನ ಮರಣಕ್ಕೆ ಸಾಕಷ್ಟು ವೈವಿಧ್ಯಮಯ ಸಾಹಿತ್ಯವನ್ನು ಒದಗಿಸುತ್ತದೆ. ಕೆ.ಶಿವರಾಮ ಐತಾಳರ ದಕ್ಷಿಣ ಕನ್ನಡ ಜನಪದ ಸಾಹಿತ್ಯ ಹಾಗೂ ಟಿ. ಕೇಶವಭಟ್ಟರ ಹಾಡಿನ ಚೂಡಾಮಣಿ ಮತ್ತೆರಡು ಗಮನಾರ್ಹ ಸಂಕಲನಗಳು. ಐತಾಳರು ತಮ್ಮ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಜನಪದ ಗೀತೆಯ ಸ್ವರೂಪ, ಲಕ್ಷಣ ಸಂಪಾದನೆ ಮುಂತಾದ ವಿಷಯಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಹಿಂದಿನ ಸಂಕಲನಗಳ ಸಾಲಿನಲ್ಲಿ ಈ ಕೃತಿಗಳನ್ನು ಇಟ್ಟು ನೋಡಿದಾಗ ಕನ್ನಡ ಜನಪದ ಗೀತೆಗಳ ವೈವಿಧ್ಯ ನಮಗೆ ಆಶ್ಚರ್ಯವನ್ನು ತರುತ್ತದೆ. ಗೀತೆಗಳು, ಗೀತ ಸಂಪ್ರದಾಯಗಳು, ಲಾವಣಿಗಳು, ಲಾವಣಿ ಸಂಪ್ರದಾಯಗಳು ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ತೃಪ್ತಿಕರವಾದ ಕೆಲಸ ಕರ್ನಾಟಕದಲ್ಲಿ ಆಗಿದ್ದರೂ ಇನ್ನೂ ಅಪಾರ ಗೀತ ಸಾಹಿತ್ಯ ಲಭ್ಯವಾಗುವುದರಲ್ಲಿ ಸಂದೇಹವಿಲ್ಲ. ಸಾಮುದಾಯಿಕವಾಗಿ, ಪ್ರಾದೇಶಿಕವಾಗಿ ಗೀತ ಸಾಹಿತ್ಯದ ಕ್ರಮಬದ್ಧ ಸಂಗ್ರಹ ನಡೆದು ಶಾಸ್ತ್ರೀಯ ಅಧ್ಯಯನ ಅಗತ್ಯವಾಗಿ ನಡೆಯಬೇಕಾಗಿದೆ.

ಸಂಗ್ರಹ, ಸಂಪಾದನೆ, ಪ್ರಕಟಣೆಯ ದೃಷ್ಟಿಯಿಂದ ಪದ್ಯಸಾಹಿತ್ಯದ ಅನಂತರ ಗದ್ಯ ಸಾಹಿತ್ಯವನ್ನು ಲಕ್ಷಿಸಬೇಕಾಗುತ್ತದೆ. ಕನ್ನಡ ಜನಪದ ಕಥೆಗಳ ಅಧ್ಯಯನ ಆರಂಭವಾದುದೇ ಎಪ್ಪತ್ತರ ದಶಕದಲ್ಲಿ. ಈ ನಿಟ್ಟಿನ ಸಂಗ್ರಹಕಾರ್ಯ ತಡವಾಗಿ ಆರಂಭವಾದರೂ ಸಾಕಷ್ಟು ತೀವ್ರಗತಿಯ ಕೆಲಸ ನಡೆದು ದೊಡ್ಡ ಸಂಖ್ಯೆಯ ಕಥೆಗಳು ಬೆಳಕು ಕಂಡಿವೆ. ಸ್ಥಳೀಯ ಪರಂಪರೆಯ ಜೊತೆಗೆ ವಿಶ್ವಮಾದರಿಗಳೂ ಕರ್ನಾಟಕದಲ್ಲಿ ದೊರೆತಿವೆ. ಸರಳ ಕಥೆಗಳು, ಸಂಕೀರ್ಣ ಕಥೆಗಳು, ವಿವರಣಾತ್ಮಕ ಕಥೆಗಳು, ಸಂಚಿತ ಕಥೆಗಳು, ಸೂತ್ರ ಕಥೆಗಳು ಹೀಗೆ ಎಲ್ಲ ಗುಂಪಿಗೂ ಕನ್ನಡ ಜನಪದ ಕಥಾ ಪ್ರಪಂಚ ಉತ್ತಮ ಮಾದರಿಗಳನ್ನೊದಗಿಸಿದೆ. ಜೀಶಂಪ ಅವರ ಕನ್ನಡ ಜನಪದ ಕಥೆಗಳು ಮತ್ತು ಆಯ್ದ ಜನಪದ ಕಥೆಗಳು ದಕ್ಷಿಣ ಕರ್ನಾಟಕದ ವಿವಿಧ ಭಾಗಗಳ ಕಥೆಗಳನ್ನೊಳಗೊಂಡ ಸಂಕಲನಗಳು. ರಾಗೌ ಅವರ ಕರ್ನಾಟಕ ಜಾನಪದ ಕಥೆಗಳು 63 ಕಥೆಗಳನ್ನೊಳಗೊಂಡ ಮತ್ತೊಂದು ಗಮನಾರ್ಹ ಸಂಕಲನ. ಮಂಡ್ಯ, ಮೈಸೂರು, ಬೆಂಗಳೂರು, ಹಾಸನ ಮೊದಲಾದ ಜಿಲ್ಲೆಗಳ ಕಥೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಎಚ್.ಜೆ.ಲಕ್ಕಪ್ಪಗೌಡರ ಜನಪದ ಕಥಾವಳಿ ಮತ್ತೊಂದು ಉಲ್ಲೇಖನೀಯ ಸಂಕಲನ.

ಜಾನಪದ ಕಥಾಮೃತ - 1 ಮತ್ತು ಜಾನಪದ ಕಥಾಮೃತ - 2 ಎಂಬ ಎರಡು ಒಳ್ಳೆಯ ಸಂಕಲನಗಳ ಮೂಲಕ ಜನಪದ ಕಥೆಗಳ ವ್ಯಾಪಕ ಅಧ್ಯಯನದ ಕಡೆ ಮೊದಲು ಗಮನ ಸೆಳೆದವರು ಧವಳಶ್ರೀಯವರು. ಜನಪದ ಕಥೆಗಳ ಮೂಲದ ಸೊಗಡನ್ನು ಹಿಡಿದಿಡುವಲ್ಲಿ ಮೂಲದ ಭಾಷೆ ಮತ್ತು ನುಡಿಗಟ್ಟುಗಳನ್ನು ಉಳಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಿರುವುದು ಗಮನಾರ್ಹ.

ಕನ್ನಡ ಜನಪದ ಕಥೆಗಳು, ಆಯ್ದ ಜನಪದ ಕಥೆಗಳು, ಸಂಕೀರ್ಣ ಜನಪದ ಕಥೆಗಳು, ಬೆಳಗಾಂ ಜಿಲ್ಲೆಯ ಜನಪದ ಕಥೆಗಳು, ಧಾರವಾಡ ಜಿಲ್ಲೆಯ ಜನಪದ ಕಥೆಗಳು, ನಮ್ಮ ಜನಪದ ಕಥೆಗಳು, ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು ಮುಂತಾದ ಸಂಕಲನಗಳನ್ನು ಪ್ರಕಟಿಸಿ ಆ ಮೂಲಕ ಕನ್ನಡ ಜನಪದ ಕಥೆಗಳ ಅಧ್ಯಯನಕ್ಕೆ ಒಳ್ಳೆಯ ಪ್ರವೇಶವನ್ನು ದೊರಕಿಸಿದ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯದು.

ನಮ್ಮ ಜನಪದ ಕಥೆಗಳು, ಉತ್ತರ ಕನ್ನಡ ಜನಪದ ಕಥೆಗಳು ಜನಪದ ಮತ್ತು ಗಿರಿಜನರ ಕಥೆಗಳು, ಸಿದ್ದಿಯರ ಕಥೆಗಳು ಮುಂತಾದ ಸಂಕಲನಗಳ ಮೂಲಕ ಎಲ್.ಆರ್.ಹೆಗಡೆಯವರು ಜಾನಪದ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಜನಪದ ಮತ್ತು ಗಿರಿಜನರ ಕಥೆಗಳು ಹೆಗಡೆಯವರ ಬಹುದೊಡ್ಡ ಸಂಗ್ರಹ. ಸಿದ್ದಿಗಳ ಕಥೆಗಳು ಸಂಗ್ರಹದಲ್ಲಿ 35 ಕಥೆಗಳಿವೆ. ಎಪ್ಪತ್ತು ಪುಟಗಳ ಪೀಠಿಕೆ ಇದೆ. ಹೆಗಡೆಯವರ ಕಥೆಗಳು ಆಡು ಮಾತಿನಲ್ಲಿದ್ದು ಭಾಷಾಶಾಸ್ತ್ರ ಅಧ್ಯಯನಕ್ಕೆ ಸಹಕಾರಿಯಾಗಿವೆ. ಈ ಭಾಗದ ಉತ್ತಮ ಕಥೆಗಳ ಶಾಸ್ತ್ರೀಯ ಸಂಪಾದನೆಯ ಮೂಲಕ ಅವರು ಕನ್ನಡ ಜನಪದ ಕಥೆಗಳ ಕ್ಷೇತ್ರಕ್ಕೆ ಉತ್ತಮ ಕಾಣಿಕೆಯನ್ನು ನೀಡಿದ್ದಾರೆ.

ಬಳದರೆ ಬೋರೇಗೌಡ ಅವರ ಗ್ರಾಮಾಂತರ ಕಥೆಗಳು ಸಂಕಲನ ಕಥೆಗಳ ಮೂಲಭಾಷೆ ಹಾಗೂ ಸಹಜ ನಿರೂಪಣೆಗಳಿಂದಾಗಿ ವೈಶಿಷ್ಟ್ಯಪೂರ್ಣ ಕೃತಿಯೆನಿಸಿದೆ. ಬೋರೇಗೌಡರು ಮೊದಲ ಬಾರಿಗೆ ಜನಪದ ಕಥೆಗಳನ್ನು ಅದರ ಮೂಲ ನಿರೂಪಕನ ಭಾಷೆಯಲ್ಲಿಯೇ ಹಿಡಿದಿಡುವ ಪ್ರಯತ್ನ ಮಾಡಿರುವುದು ಗಮನಾರ್ಹ. ಪಡಿನೆರಳು ಮತ್ತು ಮಣ್ಣಿನ ಮಿಡಿತ ಸಂಕಲನಗಳ ಮೂಲಕ ಬಯಲುಸೀಮೆಯ ಕಥೆಗಳನ್ನು ಒದಗಿಸಿದವರು ಡಿ. ಲಿಂಗಯ್ಯ ಅವರು. ಮಂಡ್ಯ ಜಿಲ್ಲೆಯ ಕಥೆಗಳನ್ನೇ ವಿಶೇಷವಾಗಿ ಸಂಗ್ರಹಿಸಿದವರು ಜಿ.ವಿ. ದಾಸೇಗೌಡ ಅವರು. ಕನ್ನಡ ಜನಪದ ಕಥೆಗಳ ಸಾಲಿನಲ್ಲಿ ವಿವರಣಾತ್ಮಕ ಕಥೆಗಳ ಅಧ್ಯಯನಕ್ಕೆ ಒಳ್ಳೆಯ ಆರಂಭವನ್ನು ಒದಗಿಸಿದವರು ಅವರು. ಅವರ ಜನಪದ ವಿವರಣಾತ್ಮಕ ಕಥೆಗಳು ಈ ನಿಟ್ಟಿನಲ್ಲಿ ಮಾಡಿದ ಮೊದಲ ಪ್ರಯತ್ನ ಎನಿಸಿದೆ.

70ರ ದಶಕದಲ್ಲಿ ಜನಪದ ಕಥೆಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿ ಸಂಕಲನಗಳನ್ನು ಹೊರತಂದವರ ಪೈಕಿ ಸಿ.ವೀರಣ್ಣ ಮತ್ತು ಕೆ.ವೈ. ಶಿವಕುಮಾರ್ ಮುಖ್ಯರು. ಶಿವಕುಮಾರ್ ಅವರು ಎಪ್ಪತ್ತೊಂದು ಜನಪದ ಕಥೆಗಳು ಎಂಬ ಸಂಕಲನವನ್ನು ಹೊರತಂದಿದ್ದಾರೆ (1976). ಒಂದು ಪ್ರದೇಶದ ಕಥೆಗಳನ್ನೆಲ್ಲ ಸಂಗ್ರಹಿಸಿ ಸಂಶೋಧಕರಿಗೆ ದಾರಿ ಮಾಡಿಕೊಡುವಂಥ ಇಂಥ ಪ್ರಯತ್ನಗಳು ವಿರಳ. ಒಬ್ಬನೇ ಕಥೆಗಾರನ ಕಥೆಗಳನ್ನು ಅವುಗಳ ನಿರೂಪಣಾಕ್ರಮ ವೈವಿಧ್ಯಕ್ಕಾಗಿ ಹಾಗೂ ವಸ್ತುವಿಗಾಗಿ ಸಂಗ್ರಹಿಸಿ ಒಬ್ಬನೇ ಹೇಳಿದ ಇಪ್ಪತ್ತೆರಡು ಜನಪದ ಕಥೆಗಳು ಎಂಬ ಹೆಸರಿನಲ್ಲಿ ಹೊರತಂದವರು ಸಿ.ವೀರಣ್ಣನವರು. ಈ ರೀತಿ ಒಬ್ಬನೇ ಕಥೆಗಾರನ ಕಥೆಗಳನ್ನೆಲ್ಲ ಸಂಗ್ರಹಿಸಿ ಅಧ್ಯಯನ ಮಾಡುವ ದೃಷ್ಟಿ ಗಮನಾರ್ಹವಾದದು.

ಜನಪದ ಕಥೆಗಳ ವಿಶಿಷ್ಟ ಸಂಗ್ರಹಗಳೂ ಪ್ರಕಟವಾಗಿವೆ. ಶಿವರಾಮ ಕಾರಂತರ ಅನುವಾದ ಕಥೆಗಳ ಕೊಪ್ಪರಿಗೆ [ಮೂಲ: ಜೆ.ಸಿ.ಜೈನ್ (1969)], ದೇಜಗೌ ಅವರ ಅನುವಾದ ಭಾರತದ ಜನಪದ ಕಥೆಗಳು [ಮೂಲ: ಬೇಲಾ ತಿಸ್ಲೆರೋವ (1971)], ಹಿ.ಶಿ.ರಾಮ ಚಂದ್ರೇಗೌಡರ ಹಾಸನ ಜಿಲ್ಲೆಯ ಜನಪದ ಕಥೆಗಳು (1971), ಕ್ಯಾತನಹಳ್ಳಿ ರಾಮಣ್ಣ ಅವರ ಗೊಂದಲಿಗರ ಕಥೆಗಳು (1972), ಸೇವನಮಿರಾಜ ಮಲ್ಲರ ಭೂತಾರಾಧನೆಯ ಕಥೆಗಳು (1973), ಹ.ಕ.ರಾಜೇಗೌಡರ ಜಗತ್ತಿನ ಜನಪದ ಕಥೆಗಳು (1980) - ಇವು ಉಲ್ಲೇಖನೀಯವಾಗಿವೆ.

ಜೀನಹಳ್ಳಿ ಸಿದ್ಧಲಿಂಗಪ್ಪ ಅವರ ಕಥೆ ಕೇಳೇ ಗುಬಲಾಡಿ (1981) ಶಿವಮೊಗ್ಗ ಜಿಲ್ಲೆಯ ಜೀನಹಳ್ಳಿ ಹಾಗೂ ಹೊನ್ನಾಳಿ ತಾಲ್ಲೂಕಿನ ಪರಿಸರದ ಹಳ್ಳಿಗಳಿಂದ ಸಂಗ್ರಹಿಸಿದ ಹದಿನೇಳು ಕಥೆಗಳ ಸಂಕಲನ. ಪ್ರಾದೇಶಿಕ ಅನನ್ಯತೆಯನ್ನು ಅರಿಯುವುದಕ್ಕಾಗಿ ಒಂದೊಂದೂ ಪ್ರದೇಶದ ಕಥೆಗಳ ಸಂಗ್ರಹಕಾರ್ಯ ಕ್ರಮಬದ್ಧವಾಗಿ ನಡೆಯಬೇಕಾಗಿದೆ. ಎಂ.ಎ.ಜಯಚಂದ್ರರ 'ಸಂಸಾರಿ ಹೆಚ್ಚೋ ಸನ್ಯಾಸಿ ಹೆಚ್ಚೋ' ಇಪ್ಪತ್ತೆಂಟು ನಿರೂಪಕರಿಂದ ಸಂಗ್ರಹಿಸಿರುವ ನಲವತ್ತೈದು ಕಥೆಗಳ ಸಂಕಲನ. ನಿರೂಪಕರೆಲ್ಲ ಬೇರೆ ಬೇರೆ ಪ್ರದೇಶದವರಾದುದರಿಂದ ವೈವಿಧ್ಯಪೂರ್ಣ ಭಾಷಾಬಳಕೆಯನ್ನು ನೋಡಬಹುದಾಗಿದೆ. ಸಂಗ್ರಾಹಕರು ಇಲ್ಲಿ ಜನಪದ ಕಥೆಗಳ ವಸ್ತು ಶಿಷ್ಟಕಾವ್ಯರಚನೆಗೆ ಹೇಗೆ ಸ್ಫೂರ್ತಿ ಒದಗಿಸುತ್ತದೆ ಎಂಬುದರ ಜೊತೆಗೆ ಪಂಚತಂತ್ರ, ವಡ್ಡಾರಾಧನೆ ಮುಂತಾದ ಗ್ರಂಥಗಳ ಕಥೆಗಳೊಡನೆ ಈ ಸಂಕಲನದ ಕಥೆಗಳನ್ನು ಹೋಲಿಸಿರುವುದು ಗಮನಾರ್ಹ. ಕುರುವ ಬಸವರಾಜ್ ಅವರ ಗುಲಗಂಜಿ ಮಾದೇವಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಆಸುಪಾಸಿನಲ್ಲಿ ಸಂಗ್ರಹಿಸಿದ ಹದಿನಾಲ್ಕು ಜನಪದ ಕಥೆಗಳ ಸಂಕಲನ. ಈಗಾಗಲೇ ಪ್ರಕಟಗೊಂಡಿರುವ ಕಥೆಗಳ ಭಿನ್ನರೂಪಗಳೇ ಅಲ್ಲದೆ ಒಂದೆರಡು ಹೊಸ ಮಾದರಿಗಳೂ ಇಲ್ಲಿವೆ. ಇಲ್ಲಿಯ ಅತಿಮಾನುಷ ಮತ್ತು ಕಿನ್ನರ ಕಥೆಗಳು ವಿವಿಧ ಆಶಯಗಳ ಸೇರ್ಪಡೆ ಯಿಂದ ಅತಿ ದೀರ್ಘವಾಗಿ ಬೆಳೆದಿರುವುದು ಗಮನಿಸತಕ್ಕ ಅಂಶ. ಒಟ್ಟಾರೆ ಒಂದು ಪ್ರದೇಶದಲ್ಲಿ ಪ್ರಚಲಿತವಿರುವ ಕಥನ ಮಾದರಿಗಳನ್ನು ತಿಳಿಯುವುದಕ್ಕೆ ಈ ಕೃತಿ ಉಪಯುಕ್ತವಾಗಿದೆ. ಶಾಂತಿನಾಯಕ ಅವರ ಉತ್ತರ ಕನ್ನಡದ ಹವ್ಯಕರ ಜನಪದ ಕಥೆಗಳು ಸಂಗ್ರಹದಲ್ಲಿ ಅರವತ್ತೂರು ಕಥೆಗಳಿವೆ.

ಸುಧಾಕರ ಅವರ ಶಿವಗಂಗೆ ಸುತ್ತಿನ ಜನಪದ ಕಥೆಗಳು ಶಿವಗಂಗೆ ಸುತ್ತಿನ ನೆಲಮಂಗಲ ಮತ್ತು ಮಾಗಡಿ ತಾಲ್ಲೂಕಿಗೆ ಸೇರಿದ ಹಳ್ಳಿಗಳಲ್ಲಿ ಸಂಗ್ರಹಿಸಿದ ಇಪ್ಪತ್ತೇಳು ಕಥೆಗಳ ಸಂಕಲನ. ಕಥಾವಸ್ತು, ಆಶಯ ಇತ್ಯಾದಿಗಳಿಗೆ ಅನುಗುಣವಾಗಿ ಈ ಕಥೆಗಳನ್ನು ಐದು ವಿಭಾಗಗಳಾಗಿ ವರ್ಗೀಕರಿಸಲಾಗಿದೆ. ಬಸವರಾಜ ನೆಲ್ಲೀಸರ ಅವರ ಹಠಮಾರಿ ಹೆಣ್ಣು ಮತ್ತು ಇತರ ಜನಪದ ಕಥೆಗಳು ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಸಂಗ್ರಹಿಸಿದ ಮೂವತ್ತೆರಡು ಕಥೆಗಳನ್ನು ಒಳಗೊಂಡಿದೆ. ಇಲ್ಲಿಯ ಕಥೆಗಳಲ್ಲಿ ವಸ್ತು ಮತ್ತು ಭಾಷೆ ಎರಡನ್ನೂ ಗಮನದಲ್ಲಿಟ್ಟುಕೊಂಡು ಸಂಗ್ರಹಿಸುವ ಜಾಣ್ಮೆ ವ್ಯಕ್ತಗೊಂಡಿದೆ. ಜೊತೆಗೆ ಇದು ಪ್ರಾದೇಶಿಕ ಭಾಷೆಯ ವೈಶಿಷ್ಟ್ಯ, ಅಲ್ಲಿಯ ಜನರ ಸಾಂಸ್ಕೃತಿಕ ಸ್ತರಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ. 1982ರಲ್ಲಿ ಪ್ರಕಟವಾದ ಸಂಕಲನಗಳ ಪೈಕಿ ಗಾತ್ರ ಮತ್ತು ಗುಣದ ದೃಷ್ಟಿಯಿಂದ ನಮ್ಮ ಗಮನ ಸೆಳೆಯುವ ಮತ್ತೊಂದು ಸಂಗ್ರಹ ಕಾಶಿಪುಟ್ಟ ಸೋಮಾರಾಧ್ಯ ಅವರ ತಳಗವಾದಿ ಮಲ್ಲವ್ವ ಹೇಳಿದ ಪರಸಂಗಗಳು. ಇದರಲ್ಲಿ ಇಪ್ಪತ್ತೈದು ವಿಶಿಷ್ಟ ಕಥೆಗಳಿವೆ. ಆಡುಭಾಷೆಯನ್ನೇ ಯಥಾವತ್ತಾಗಿ ಉಳಿಸಿಕೊಂಡಿರುವುದು ಇಲ್ಲಿಯ ವಿಶೇಷ. ಎಲ್.ಆರ್.ಹೆಗಡೆ ಅವರ ಮಲೆನಾಡ ಸೆರಗಿನ ಕಥೆಗಳು ಹದಿನೈದು ಕಥೆಗಳ ಸಂಕಲನ. ಇದರಲ್ಲಿ ಹತ್ತು ಕಥೆಗಳು ವೃತ್ತಿಗಾಯಕರವು. ಸಂಗ್ರಾಹಕರು ಈ ಕಥೆಗಳನ್ನು ಮೇಳ ರೂಪದಲ್ಲಿ ಗುರುತಿಸದೆ ಗದ್ಯದಲ್ಲಿ ಹೇಳಿಸಿಕೊಂಡು ದಾಖಲೀಕರಣ ಮಾಡಿದ್ದರಿಂದ ಈ ಕಥೆಗಳ ಎಷ್ಟೋ ಅಂಶಗಳು ನಷ್ಟವಾಗಿವೆ. ಇದೇ ರೀತಿ ವೃತ್ತಿಗಾಯಕ ಮೂಲದಿಂದ ಬಂದ ಜಿ. ವಿಶ್ವೇಶ್ವರಪ್ಪನವರ ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು ದಾವಣಗೆರೆ ಸುತ್ತಿನ ಸಂಕೀರ್ಣ ಕಥೆಗಳ ಒಂದು ಸಂಕಲನ. ಇಲ್ಲಿನ ಒಂದೊಂದೂ ಕಥೆಯೂ ತನ್ನದೇ ಆದ ವೈಶಿಷ್ಟ್ಯದಿಂದ ಪ್ರಾದೇಶಿಕ ಗುಣಗಳಿಂದ ಚಿತ್ರದುರ್ಗ ಜಿಲ್ಲೆಯ ಭಾಷಾ ವೈಖರಿಯಿಂದ, ನಿರೂಪಣಾ ಕೌಶಲದಿಂದ ಗಮನ ಸೆಳೆಯುತ್ತವೆ. ಮೈಲಹಳ್ಳಿ ರೇವಣ್ಣ ಅವರ ಅಡವಿ ಗುಮಾರ ಮತ್ತು ಇತರ ಜನಪದ ಕಥೆಗಳು (1985) ಪ್ರಾದೇಶಿಕ ವೈಶಿಷ್ಟ್ಯ ಉಳಿಸಿಕೊಂಡಿರುವ ಜನಾಂಗೀಕ ಸಂಕಲನ. ಜನಪದ ಕಥಾಕ್ಷೇತ್ರಕ್ಕೆ ಇದೊಂದು ಮೌಲಿಕ ಕೊಡುಗೆ. ಮಲ್ಲಿಕಾರ್ಜುನ ಅವರ ಕಲಮರಳ್ಳಿಯ ಕಥೆಗಳು ಭೌಗೋಳಿಕ ಅಧ್ಯಯನಕ್ಕೆ ಪೂರಕವಾಗುವ ಸಾಮಗ್ರಿಯನ್ನೊದಗಿಸುತ್ತದೆ. ವಿನೂತನ ರೀತಿಯ ಈ ಸಂಕಲನ ನಿರೂಪಕರೊಡನೆ ಉತ್ತಮ ಸಂಬಂಧ ಬೆಳೆಸಿದೆ. ಈ ರೀತಿಯ ಕೆಲಸ ಕನ್ನಡ ಜನಪದ ಕಥೆಗಳ ಸಂಗ್ರಹದಲ್ಲಿ ಇದೇ ಮೊದಲು. ವೈ.ಸಿ.ಭಾನುಮತಿ ಅವರು ಪ್ರಕಟಿಸಿರುವ ಇಬ್ಬೀಡಿನ ಜನಪದ ಕಥೆಗಳು (1989) ಸಂಗ್ರಹದ ಮಾಪಿತ್ರ(ವಕ್ರ) ವಿವರ, ಕತೆಗಳ ಭೌಗೋಳಿಕತೆ, ಸಾಮಾಜಿಕ ಅಧ್ಯಯನಕ್ಕೆ ಉತ್ತಮ ಮಾದರಿ. ಎಂ.ಜಿ.ಈಶ್ವರಪ್ಪ ಅವರ ಬಂಗಾರ ಕೂದಲ ಜೈರಾಣಿ ಉಲ್ಲೇಖನೀಯ ಸಂಕಲನ.

ಕನ್ನಡ ಜನಪದ ಕಥೆಗಳನ್ನೊಳಗೊಂಡ ಸಂಕಲನಗಳ ಜೊತೆಗೆ ಅನ್ಯಭಾಷೆಯ ಕಥೆಗಳನ್ನೂ ಕನ್ನಡಕ್ಕೆ ಅನುವಾದ ಮಾಡಿಕೊಡುವ ಪ್ರಯತ್ನ ಮೊದಲಿನಿಂದಲೂ ನಡೆದಿದೆ. ಬಹುಮಟ್ಟಿಗೆ ಜನಪ್ರಿಯ ಆವೃತ್ತಿಗಳೇ ಈ ನಿಟ್ಟಿನಲ್ಲಿ ಕಂಡುಬರುತ್ತವೆ. ಜಗತ್ತಿನ ಬೇರೆ ಬೇರೆ ಸಂಸ್ಕೃತಿಗಳಿಂದ, ಭಾಷಾ ವರ್ಗಗಳಿಂದ ಐವತ್ತೂರು ಕಥೆಗಳನ್ನು ಆಯ್ಕೆ ಮಾಡಿಕೊಂಡು ಜಗತ್ತಿನ ಜನಪದ ಕಥೆಗಳು ಎಂಬ ಹೆಸರಿನಲ್ಲಿ ಕನ್ನಡಕ್ಕೆ ದೊರಕಿಸಿಕೊಟ್ಟವರು ಹ.ಕ.ರಾಜೇಗೌಡರು. ಗೌರಮ್ಮ ಕೆ.ಬಸವಯ್ಯನವರ ದೇಶವಿದೇಶದ ಜನಪದ ಕಥೆಗಳು ಸಂಕಲನ ಕೂಡ ಈ ದೃಷ್ಟಿಯಿಂದ ಗಮನಾರ್ಹವಾದ ಪ್ರಯತ್ನವೇ ಆಗಿದೆ. ಭಾರತದ ವಿವಿಧ ಪ್ರದೇಶಗಳ ಜನಪದ ಕಥೆಗಳನ್ನು ಜಿ.ಎಸ್.ಭಟ್ಟ ಭಾಷಾಂತರಿಸಿದ್ದಾರೆ.

ಜಾನಪದ ಭಾಷಿಕ ಬಗೆಗಳಲ್ಲಿ ಗಾದೆ, ಒಗಟು, ನುಡಿಗಟ್ಟು ಮುಂತಾದ ಕೆಲವು ಪ್ರಕಾರಗಳಲ್ಲಿ ಬಂದಿರುವ ಸಂಗ್ರಹಗಳೂ ಗಮನಾರ್ಹವಾಗಿವೆ. ನಮ್ಮ ಆಡುಭಾಷೆಯ ಸತ್ವ ವೈಖರಿಗಳನ್ನು ಅರಿಯುವ ದೃಷ್ಟಿಯಿಂದ ಒಗಟು, ಗಾದೆಗಳ ಸಂಕಲನಗಳು ಪರಿಶೀಲನಾರ್ಹವಾಗಿವೆ. ಕಳೆದ ಶತಮಾನದ ಮಧ್ಯಭಾಗದಿಂದಲೂ ಸಂಗ್ರಾಹಕರ ಮತ್ತು ಅಧ್ಯಯನಾಸಕ್ತರ ಆಸಕ್ತಿಯನ್ನು ಕೆರಳಿಸುತ್ತ ಬಂದ ಸುಪುಷ್ಟ ಕ್ಷೇತ್ರ ಗಾದೆಯದು. ಈ ನಿಟ್ಟಿನಲ್ಲಿ ರಾಗೌ ಅವರ ನಮ್ಮ ಗಾದೆಗಳು (1973) ಒಂದು ಗಮನಾರ್ಹ ಸಂಕಲನ. ಬಿ.ಎ.ವಿವೇಕ ರೈ ಅವರ ತುಳುಗಾದೆಗಳು (1971), ಸುಧಾಕರ ಅವರ ನಮ್ಮ ಸುತ್ತಿನ ಗಾದೆಗಳು (1973), ಲಕ್ಕೆಯವರ ಉತ್ತರ ಕರ್ನಾಟಕದ ಗಾದೆಗಳು, ಕಾಳೇಗೌಡ ನಾಗವಾರರ ಬೀದಿ ಮಕ್ಕಳು ಬೆಳದೊ ಮುಂತಾದ ಸಂಕಲನಗಳು ಪ್ರಾದೇಶಿಕ ಗಾದೆಗಳ ಸ್ವರೂಪ ವೈಶಿಷ್ಟ್ಯಗಳನ್ನು ಪರಿಚಯ ಮಾಡಿಕೊಡುವುದರ ಜೊತೆಗೆ ಕನ್ನಡ ಗಾದೆಗಳ ವೈವಿಧ್ಯದ ಮೇಲೂ ಬೆಳಕು ಚೆಲ್ಲುತ್ತವೆ. ಎಚ್.ಎಸ್.ಅಚ್ಚಪ್ಪನವರ ಗ್ರಂಥಸ್ಥ ಗಾದೆಗಳು ಎಂಬ ಬೃಹತ್ ಸಂಪುಟದಲ್ಲಿ ಪ್ರಾಚೀನ ಗ್ರಂಥಗಳಲ್ಲಿ ಸೇರಿ ಹೋದ ಗಾದೆಗಳನ್ನೆಲ್ಲ ಕಲೆಹಾಕಲಾಗಿದೆ. ಬಿ.ಕೃಷ್ಣಪ್ಪ ರೆಡ್ಡಿ ಅವರ ಗ್ರಾಮೀಣ ಗಾದೆಗಳು (1981) ಸಂಗ್ರಹದಲ್ಲಿ ಈವರೆಗಿನ ಗಾದೆಗಳ ಸಂಕಲನದಲ್ಲಿ ಸೇರಿರದ ಸುಮಾರು 1224 ಗಾದೆಗಳನ್ನು ಅಳವಡಿಸಿಕೊಟ್ಟಿದ್ದಾರೆ. ಇಲ್ಲಿನ ಬಹುಮಟ್ಟಿನ ಗಾದೆಗಳು ಸಹಜ ಜನಪದ ಸೊಗಡಿನಿಂದ ಕಂಗೊಳಿಸುತ್ತವೆ. ಲಿಪಿಯೇ ಇಲ್ಲದ ಲಂಬಾಣಿಗರ 200ಕ್ಕೂ ಹೆಚ್ಚಿನ ಗಾದೆಗಳನ್ನು ಕನ್ನಡ ಅನುವಾದದೊಡನೆ ಸಣ್ಣರಾಮ ಅವರು ಲಂಬಾಣಿ ಗಾದೆಗಳು (1982) ಎಂಬ ಸಂಕಲನ

ರೂಪದಲ್ಲಿ ಕೊಟ್ಟಿದ್ದಾರೆ. ಲಂಬಾಣಿಗರ ಆಚಾರವಿಚಾರ, ನ್ಯಾಯನೀತಿ ಧೋರಣೆ, ಸಂಪ್ರದಾಯ ಮೊದಲಾದವುಗಳನ್ನು ಈ ಗಾದೆಗಳಲ್ಲಿ ಗುರುತಿಸಬಹುದಾಗಿದೆ. ಅಲ್ಲಲ್ಲಿ ಗಾದೆಗಳಿಗೆ ಸಂಬಂಧಿಸಿದಂತೆ ಜನಪದ ಕಥೆಗಳನ್ನೂ ನಿರೂಪಿಸಲಾಗಿದೆ. ಪಿ.ಕೆ.ರಾಜಶೇಖರ ಅವರ ಭೂಮಿ ತೂಕದ ಮಾತು (1991) 1501 ಗಾದೆಗಳನ್ನೊಳಗೊಂಡ ಒಂದು ದೊಡ್ಡ ಸಂಗ್ರಹ. ಸಾಮಾಜಿಕ ಮತ್ತು ಭಾಷಿಕ ಕಾರಣಗಳಿಂದ ಇದೊಂದು ಉತ್ತಮ ಅಧ್ಯಯನ ಯೋಗ್ಯ ಕೃತಿಯಾಗಿದೆ. ಮೈಲಹಳ್ಳಿ ರೇವಣ್ಣ ಅವರ ದೀಪದ ಕೆಳಗೆ ಕತ್ತಲೆ (2003) ಹಲವು ವಿಶಿಷ್ಟ ಗಾದೆಗಳ ಸಂಕಲನ.

ಒಗಟುಗಳ ಕ್ಷೇತ್ರದಲ್ಲಿಯೂ ಗಾದೆಗಳಂತೆಯೇ ಸಂಗ್ರಹಕಾರ್ಯ ನಡೆದಿರುವುದು ಕಂಡುಬಂದಿದೆ. ಕನ್ನಡದಲ್ಲಿ ಒಗಟುಗಳ ಸಂಗ್ರಹಕ್ಕೆ ಹೊಸ ತಿರುವನ್ನು ಕೊಟ್ಟ ಜೀಶಂಪ ಅವರ ಕನ್ನಡ ಒಗಟುಗಳು (1967) ಪ್ರಕಟವಾದ ಮೇಲೆ ಅನೇಕ ಸಂಕಲನಗಳು ಬಂದಿವೆ. ಎಚ್.ಜೆ.ಲಕ್ಕಪ್ಪ ಗೌಡರ ಒಗಟುಗಳು (1973), ಬಿ.ಎ.ವಿವೇಕ ರೈ ಅವರ ತುಳು ಒಗಟುಗಳು (1971), ರಾಗೌ ಅವರ ನಮ್ಮ ಒಗಟುಗಳು, ಸೋಮಶೇಖರ ಇಮ್ರಾಪುರ ಅವರ ಸಾವಿರ ಒಗಟುಗಳು (1976), ಸುಧಾಕರ ಅವರ ಜನಪದ ಬೆಡಗಿನ ವಚನಗಳು, ನಂ.ನಾರಾಯಣ ಗೌಡ ಅವರ ಜನಪದ ಒಗಟುಗಳು, ಎಂ.ಎಸ್.ಲಠ್ಠೆ ಅವರ ಉತ್ತರ ಕರ್ನಾಟಕದ ಒಗಟುಗಳು ಮುಂತಾದ ಸಂಕಲನಗಳನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದಾಗಿದೆ. ಒಗಟುಗಳ ಕ್ಷೇತ್ರದಲ್ಲಿ ಸೋಮಶೇಖರ ಇಮ್ರಾಪುರ ಅವರು ಮಹಾಪ್ರಬಂಧ ರಚಿಸಿ ಈ ಕ್ಷೇತ್ರಕ್ಕೆ ಒಳ್ಳೆಯ ಕೊಡುಗೆ ನೀಡಿದ್ದಾರೆ. ವೀರಣ್ಣ ರಾಜೂರ ಮತ್ತಿತರರು ಪ್ರಕಟಿಸಿರುವ ಜಾನಪದ ಜಾಣ್ಮೆ ಪರಿಶೀಲನಾಯೋಗ್ಯವಾದ ಕೃತಿ (1981). ಜನಪದರ ಅನುಭವದ ಗಣಿಗಳಾಗಿರುವ ಜನಪದ ಲೆಕ್ಕಗಳನ್ನು ಕುರಿತಂತೆ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಥಮ ಬಾರಿಗೆ ಸಂಗ್ರಹಗೊಂಡಿರುವ 196 ಒಗಟುಗಳು ಇಲ್ಲಿವೆ. ಲೆಕ್ಕಗಳಲ್ಲಿ ಹೆಚ್ಚು ವೈವಿಧ್ಯವಿರುವ ಜಾನಪದ ಜಾಣ್ಮೆ ಅಭ್ಯಾಸಯೋಗ್ಯವಾಗಿದೆ. ಜೀನಹಳ್ಳಿ ಸಿದ್ಧಲಿಂಗಪ್ಪ ಅವರ ಜನಪದ ಜಾಣಗಣಿತ ಮತ್ತು ಭಾಷಾಚಮತ್ಕಾರ ಅಭ್ಯಾಸಯೋಗ್ಯವಾದ ಒಂದು ಉತ್ತಮ ಸಂಕಲನ. ಜನಪದ ಗಣಿತ ಇಂದಿನ ಗಣಿತಶಾಸ್ತ್ರಕ್ಕೆ ಹೊರತಾದುದಲ್ಲ. ಕೂಡುವ ಕಳೆಯುವ ಭಾಗಿಸುವ ಗುಣಿಸುವ ವಿಧಾನಗಳಲ್ಲಿ ಎರಡರಲ್ಲೂ ಸಮಾನ ಅಂಶಗಳಿವೆ. ನಂ.ತಪಸ್ವೀಕುಮಾರ ಅವರ ಕನ್ನಡ ಒಗಟುಗಳ ಸಮೀಕ್ಷೆ (1979), ಸೋಮಶೇಖರ ಇಮ್ರಾಪುರ ಅವರ ಒಗಟುಗಳು ಕೃತಿಗಳು ಒಗಟುಗಳ ಹುಟ್ಟು ಬೆಳೆವಣಿಗೆ ಹಿನ್ನೆಲೆ ಹಾಗೂ ಅವುಗಳ ಅಂತರಾಳದಲ್ಲಿ ಅಡಗಿರುವ ಮಹತ್ವಪೂರ್ಣ ಸಂಗತಿಗಳನ್ನು ಬಹಳ ಗಂಭೀರವಾಗಿ ಪರಿಶೀಲಿಸುತ್ತವೆ.

ಮೇಲಿನ ಪ್ರಮುಖ ಜಾನಪದ ಪ್ರಕಾರಗಳ ಜೊತೆಗೆ ಇನ್ನೂ ಕೆಲವು ಪ್ರಕಾರಗಳತ್ತ ಸಂಗ್ರಾಹಕರು ತಮ್ಮ ದೃಷ್ಟಿಯನ್ನು ಹರಿಸುತ್ತಿದ್ದಾರೆ. ಜನಪದ ಭಾಷಿಕ ಬಗೆಗಳಲ್ಲಿ ಒಡಪು ಮುಖ್ಯವಾದ ಒಂದು ಬಗೆ. ಜನಪದ ಪ್ರಾಸ ವ್ಯಾಮೋಹವೇ ಒಡಪು ರಚನೆಗಳಲ್ಲಿ ಎದ್ದು ಕಾಣುವ ಆಕರ್ಷಣೆ. ಜನಪದ ಬುದ್ಧಿಮತ್ತೆಯ ದ್ಯೋತಕ ಎಂದೆನಿಸುವ ಇವುಗಳ ಸಂಗ್ರಹವೂ ನಡೆದಿದೆ. ಉತ್ತರ ಕರ್ನಾಟಕದಿಂದ ಪ್ರಕಟವಾಗಿರುವ ಒಡಪುಗಳ ಸಂಕಲನಗಳು (ಹೆಸರು ಹೇಳ್ತೀನಿ ಒಡಪ ಕಟ್ಟಿ, ಒಲವಿನ ಒಡಪುಗಳು) ಪತಿ ಪತ್ನಿಯರ ಹೆಸರುಗಳನ್ನು ಹೇಳುವಾಗ ಬಳಸುವ ಪದ್ಯರೂಪದ ರಚನೆಗಳನ್ನು ಪರಿಚಯಿಸುತ್ತವೆ. ವೈಜ್ಞಾನಿಕ ದೃಷ್ಟಿಯಿಂದ ಒಡಪುಗಳನ್ನು ಸಂಗ್ರಹಿಸಿದವರು ಜ್ಯೋತಿ ಹೊಸೂರ. ಹೆಸರು ಹೇಳ್ತೀನಿ ಒಡಪುಕಟ್ಟಿ (1971) ಸಂಗ್ರಹ ಗಮನಾರ್ಹವಾದುದು. ಎಂ.ಎಸ್.ಲಠ್ಠೆಯವರ ಉತ್ತರ ಕರ್ನಾಟಕದ ಒಡಪುಗಳು (1974), ಶಾಂತಾ ಇಮ್ರಾಪುರ ಅವರ ಜನಪದ ಒಡಪುಗಳು (1979), ಸಾಹಿತ್ಯಾನಂದರ ಬಳ್ಳಾರಿ ಜಿಲ್ಲೆಯ ಒಡಪುಗಳು ಉಲ್ಲೇಖನೀಯ. ಶಂಕರಾನಂದ ಉಲ್ಲಾಸರ ಜನಪದ ಒಡಪುಗಳು ಬಿಜಾಪುರ ಜಿಲ್ಲೆಯಲ್ಲಿ ಪ್ರಚಲಿತವಿರುವ ಒಡಪುಗಳ ಒಂದು ಸಂಕಲನ. ಆ ಪ್ರದೇಶದ ಪ್ರಾದೇಶಿಕ ಭಾಷಾ ಸೊಗಡನ್ನು ಪಡೆದ ಈ ಪುಸ್ತಕದಲ್ಲಿ ನವೀನತೆ ಇದೆ. ನಮ್ಮ ಒಡಪುಗಳು (1991) ಮೈಲಹಳ್ಳಿ ರೇವಣ್ಣ ಅವರು ಸಂಗ್ರಹಿಸಿದ ದಕ್ಷಿಣ ಕರ್ನಾಟಕದ ಒಡಪುಗಳಾಗಿವೆ. ಮೈಲಹಳ್ಳಿ ರೇವಣ್ಣನವರ ಜಂಬುನೇರಲೆಹಣ್ಣು ಜಗ್ಗಿ ಬಿದ್ದಾವೆ (1992), ಜನಪದರ ಜಾಣ್ಮೆ ಕೌಶಲ ಚಾತುರ್ಯಗಳನ್ನು ಸಮರ್ಥವಾಗಿ ಬಿಂಬಿಸುವ ಇನ್ನೊಂದು ಕೃತಿ.

ಸಾಹಿತ್ಯೇತರ ಜಾನಪದ ಪ್ರಕಾರಗಳ ಸಂಬಂಧ ನಡೆದಿರುವ ಅಧ್ಯಯನವಂತೂ ಗುಣ ಮತ್ತು ಗಾತ್ರ ಎರಡೂ ದೃಷ್ಟಿಯಿಂದ ಗಮನಾರ್ಹವಾದುದು. ಮೌಖಿಕ ಸಾಹಿತ್ಯದ ಸಂಗ್ರಹ ಸಂಪಾದನೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಧ್ಯಯನಗಳು ಪ್ರಕಟಗೊಂಡಿರುವುದು ವಿಶೇಷವೆಂದೇ ಹೇಳಬೇಕು. ಡಿ.ಕೆ. ರಾಜೇಂದ್ರರ ನಮ್ಮ ಸುತ್ತಿನ ನಂಬಿಕೆಗಳು, ಜಿ.ವಿ. ದಾಸೇಗೌಡರ ನಮ್ಮ ಜನಪದ ನಂಬಿಕೆಗಳು, ರಾಗೌ ಮತ್ತು ವಸಂತಕುಮಾರ ಅವರ ಜನಪದ ನಂಬಿಕೆಗಳು ಎಲ್ಲ ಪ್ರದೇಶಗಳ ನಂಬಿಕೆ ಸಂಪ್ರದಾಯಗಳ ಅಧ್ಯಯನಕ್ಕೆ ಒತ್ತಾಸೆ ನೀಡಿದವು. ಅರವಿಂದ ಮಾಲಗತ್ತಿಯವರ ಕೊರಗ ಜನಾಂಗ ವಿಶ್ಲೇಷಣಾತ್ಮಕ ಅಧ್ಯಯನ ಕೊರಗ ಸಮಾಜವನ್ನು ಅರಿಯುವ ಒಂದು ಉತ್ತಮ ಪ್ರಯತ್ನ. ಅಂಬಳಿಕೆ ಹಿರಿಯಣ್ಣನವರ ಮಲೆನಾಡ ಜನಪದ ಸಂಪ್ರದಾಯಗಳು, ತ.ಚಿ.ಚಲುವೇಗೌಡರ ಕೆಲವು ಜನಪದ ಸಂಪ್ರದಾಯಗಳು, ವೈ.ಸಿ. ಭಾನುಮತಿ ಅವರ ಮಲೆನಾಡ ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ (1994), ತೀ.ನಂ.ಶಂಕರನಾರಾಯಣ ಅವರ ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು ಮೊದಲಾದ ಗ್ರಂಥಗಳು ಕರ್ನಾಟಕದ ಬೇರೆ ಬೇರೆ ಭಾಗದ ಜನ ಸಮೂಹಗಳ ಜೀವನ ವಿಧಾನವನ್ನು ಅರಿಯಲು ಸಹಾಯಕವಾಗಿವೆ. ಯು.ಎಸ್.ರಾಮಣ್ಣನವರ ಸಂಪಾದಕತ್ವದಲ್ಲಿ ಹೊರ ಬಂದ ಜಾನಪದ ವಸ್ತುಸಂಗ್ರಹಾಲಯ (2004). ಕರ್ನಾಟಕದಲ್ಲಿರುವ ಜಾನಪದ ಸಂಗ್ರಹಾಲಯಗಳ ಜೊತೆಗೆ ಭಾರತದ ಮತ್ತು ಜಗತ್ತಿನ ಸಂಗ್ರಹಾಲಯಗಳತ್ತಲೂ ನೋಟಬೀರುತ್ತದೆ. ಜನಪದ ವೈದ್ಯ ಪದ್ಧತಿಗೆ ಸಂಬಂಧಿಸಿದಂತೆ ಹೊರಬಂದಿರುವ ಕೃತಿಗಳು ಆಯಾ ಪ್ರದೇಶದ ಜನರ ವೈದ್ಯಕೀಯ ಜ್ಞಾನ ಪರಿಜ್ಞಾನಗಳನ್ನು ಪರಿಚಯಿಸುತ್ತವೆ. ಪಿ.ವಿ.ನಾಯಕ ಅವರ ಅಳಲೆಕಾಯಿ, ಬೋಳೂರು ಎಸ್.ರಾವ್ ಅವರ ಊರ ಔಷಧಿಗಳು ಮತ್ತು ಇತರ ಉಪಯುಕ್ತ ಸೂಚನೆಗಳು, ಬಳ್ಕೂರು ಸುಬ್ರಾಯ ಅಡಿಗರ ಗೃಹ ವೈದ್ಯ, ಕೊರಡ್ಕಲ್ ವೆಂಕಟರಾವ್ ಅವರ ಮನೆಮದ್ದು, ಎಂ.ಜಿ.ಮೂತ್ತೂರು ಬ್ರದರ್ಸ್ ಅವರ ಹಳ್ಳಿಯ ವೈದ್ಯ ಮುಂತಾದವು ಕೆಲವು ಗಮನಾರ್ಹ ಕೃತಿಗಳಾಗಿವೆ. ಪಶುವೈದ್ಯಕ್ಕೆ ಸಂಬಂಧಿಸಿದಂತೆಯೂ ಪ್ರಕಟವಾಗಿರುವ ಪಶುವೈದ್ಯ ಚಿಂತಾಮಣಿ ಜನಪದ ವೈದ್ಯದ ಇನ್ನೊಂದು ಮುಖವನ್ನು ಪರಿಚಯ ಮಾಡಿಕೊಡುತ್ತದೆ. ಜನಪದ ಪಶುವೈದ್ಯ ಕೃತಿಯನ್ನು ಜಿ.ಎಸ್.ಭಟ್ಟರು ರಚಿಸಿದ್ದಾರೆ.

ಆಭರಣಗಳ ಅಧ್ಯಯನವೂ ಬಹುಮಟ್ಟಿಗೆ ಜಾನಪದದ ವ್ಯಾಪ್ತಿಗೆ ಬರುತ್ತದೆ. ದಾನೇಶ ಎ.ಚೆಕ್ಕಿ ಅವರ ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನಗಳು ಎಂಬ ಕೃತಿ, ಕೆ.ಸೌಭಾಗ್ಯವತಿಯವರ ಮೈಸೂರು ನಗರದ ಜನಪದ ಆಭರಣಗಳ ಅಧ್ಯಯನ (2000), ಹೇಮಲತಾ ಅವರ ಸೌಭಾಗ್ಯ ಚಿಹ್ನೆಗಳು ಜನಪದ ಆಭರಣ ಸಂಪ್ರದಾಯಗಳನ್ನು ಪರಿಚಯ ಮಾಡಿಕೊಡುತ್ತವೆ. ಮಹಿಳೆಯರ ಅಲಂಕಾರ ಕೂಡ ಈ ಸಾಲಿಗೆ ಸೇರುವ ಕೃತಿ. ಸವಿತಾ ನಾಯಕ ಅವರ ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಪ್ರಸಾಧನಗಳು ಬುಡಕಟ್ಟು ಸಮೂಹಗಳಲ್ಲಿ ಕಂಡುಬರುವ ಪ್ರಸಾಧನಗಳನ್ನು ಸ್ಥೂಲವಾಗಿ ಪರಿಚಯಿಸುವ ಗ್ರಂಥ. ಇಷ್ಟಾದರೂ ಜನಪದ ಸಾಹಿತ್ಯ ಪ್ರಕಾರಗಳನ್ನು ಕುರಿತಂತೆ ನಡೆದಿರುವ ವ್ಯಾಪಕ ಸಂಗ್ರಹಕಾರ್ಯ ಸಾಹಿತ್ಯೇತರ ಕ್ಷೇತ್ರಗಳಿಗೆ ಇನ್ನೂ ಹೆಚ್ಚು ವ್ಯಾಪಿಸಬೇಕಾಗಿದೆ.

ಕ್ಷೇತ್ರವಿಜ್ಞಾನ ಎನಿಸಿರುವ ಜಾನಪದಕ್ಕೆ ಸಂಬಂಧಿಸಿದಂತೆ ಕ್ರಮಬದ್ಧವಾದ ಸಂಗ್ರಹಕಾರ್ಯ ನಡೆಯಬೇಕಾದುದು ಅನಿವಾರ್ಯ. ಅದರ ಜೊತೆ ಜೊತೆಯಲ್ಲೇ ಅಧ್ಯಯನ ಕಾರ್ಯವೂ ನಡೆಯಬೇಕಾದುದು ಅತ್ಯಗತ್ಯ. ಈ ದೃಷ್ಟಿಯಿಂದ ನೋಡಿದಾಗ ಕನ್ನಡದಲ್ಲಿ ನಡೆದಿರುವ ಅಧ್ಯಯನ, ಸಂಗ್ರಹಕ್ಕೆ ಹೋಲಿಸಿಕೊಂಡಾಗ ಇನ್ನೂ ಬೆಳೆವಣಿಗೆಯನ್ನು ಸಾಧಿಸಿಕೊಳ್ಳಬೇಕಾಗಿದೆ. ಪ್ರದರ್ಶನಾತ್ಮಕ ಕಲೆಗಳ ಸಂಬಂಧವಾಗಿ ನಡೆದಿರುವ ಸಂಗ್ರಹ ಅಧ್ಯಯನ ವಿಶೇಷ ಲಕ್ಷ್ಯಾರ್ಹವಾದುದು. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ವಿದ್ವಾಂಸರ ಯಕ್ಷಗಾನ ಆಸಕ್ತಿಯ ಫಲವಾಗಿ ಆ ಕ್ಷೇತ್ರದ ಸಂಶೋಧನೆ ಸಾಕಷ್ಟು ನಡೆದಿರುವುದು ಸಮಾಧಾನದ ಸಂಗತಿ. ಶಿವರಾಮ ಕಾರಂತರು ಪ್ರಕಟಿಸಿರುವ ಯಕ್ಷಗಾನ ಬಯಲಾಟವನ್ನು ಕುರಿತ ಕನ್ನಡ ಹಾಗೂ ಇಂಗ್ಲಿಷ್ ಕೃತಿಗಳು, ಕುಕ್ಕಿಲ ಕೃಷ್ಣಭಟ್ಟರ ಪಾರ್ತಿಸುಬ್ಬನ ಯಕ್ಷಗಾನಗಳು (1975), ಆರ್.ಜಿ.ಕುಲಕರ್ಣಿ ಹಾಗೂ ಎಂ.ಎಸ್.ಸುಂಕಾಪುರ ಅವರ ಶ್ರೀಕೃಷ್ಣಪಾರಿಜಾತ, ಕೆ.ಚಿನ್ನಪ್ಪಗೌಡ

ಮತ್ತು ಪ್ರಭಾಕರ ಜೋಷಿ ಅವರ ಬರೆಹಗಳು ಇಲ್ಲಿ ಮುಖ್ಯವಾದವು. ಕು.ಶಿ.ಹರಿದಾಸಭಟ್ಟರು ಸಂಪಾದಿಸಿರುವ ಸಮಗ್ರ ಯಕ್ಷಗಾನ, ಪರಂಪರೆ ಮತ್ತು ಪ್ರಯೋಗ (1978), ಬಸವರಾಜ ಮಲಶೆಟ್ಟಿಯವರ ಉತ್ತರ ಕರ್ನಾಟಕ ಬಯಲಾಟಗಳು (1983), ಕೆ.ಆರ್.ದುರ್ಗಾದಾಸ್ ಅವರ ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಎನ್.ಆರ್.ನಾಯಕ ಅವರ ಕನ್ನಡ ಬಯಲಾಟ ಪರಂಪರೆ, ಡಿ.ಕೆ.ರಾಜೇಂದ್ರ ಅವರ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ (1980), ಜಿ.ಎಸ್.ಭಟ್ಟರ ಯಕ್ಷಗಾನ ಪರಿಶೀಲನ (1995), ಜಿ.ಎಸ್.ಹೆಗಡೆಯವರ ಯಕ್ಷಗಾನ ಹಸ್ತಾಭಿನಯ ದರ್ಪಣ, ಸಂಗಮೇಶ ಸವದತ್ತಿಯವರ ದುರದುಂಡೀಶನ ಎರಡು ಯಕ್ಷಗಾನಗಳು (1997), ಪ್ರಭಾಕರ ಜೋಷಿಯವರ ಜಾಗರ (1984), ಕೇದಗೆ (1985), ಕೃಷ್ಣಭಟ್ಟರ ಯಕ್ಷಗಾನದಲ್ಲಿ ಅರ್ಥಗಾರಿಕೆ (1990) ಮುಂತಾದವು ಯಕ್ಷಗಾನ ಬಯಲಾಟಗಳನ್ನು ಕುರಿತು ಹೊರಬಂದಿರುವ ಮಹತ್ವದ ಸಂಶೋಧನ ಗ್ರಂಥಗಳು. ಜಿ.ಆರ್.ತಿಪ್ಪೇಸ್ವಾಮಿ ಅವರ ದಾಸಸಾಹಿತ್ಯ ಮತ್ತು ಜಾನಪದ, ಜಾನಪದ ಪರಿಭಾವನೆ, ಮಧುಗಿರಿ ನರಸಿಂಹಮೂರ್ತಿ ಅವರ ಮಧುಗಿರಿ ದಂಡಿನ ಮಾರಮ್ಮ, ಜಾನಪದ ಪರಾಗ ಉಲ್ಲೇಖನೀಯ. ಕರ್ನಾಟಕದ ವಿವಿಧ ಜನಪದ ಕಲೆ, ಆಚರಣೆ, ಸಂಪ್ರದಾಯಗಳನ್ನು ಕುರಿತ ಒಂದು ಸಮಗ್ರ ರೂಪದ ಗ್ರಂಥವನ್ನು ಕನ್ನಡ ವಿಶ್ವವಿದ್ಯಾಲಯ ಕರ್ನಾಟಕ ಜನಪದ ಕಲೆಗಳ ಕೋಶ (1996) ಎಂಬ ಶೀರ್ಷಿಕೆಯಲ್ಲಿ ಹೊರತಂದಿದ್ದು ಕರ್ನಾಟಕದ ಜನಪದ ಕಲೆಗಳ ಸ್ಥೂಲ ಪರಿಚಯವನ್ನು ಒದಗಿಸುತ್ತದೆ. ಎಸ್.ಸಿ.ಪಾಟೀಲ ಅವರ ಕರ್ನಾಟಕ ಜನಪದ ಚಿತ್ರಕಲೆ (1993), ವಿ.ಎಂ.ಚಂದ್ರಶೇಖರಯ್ಯನವರ ಕರ್ನಾಟಕ ಕರಕುಶಲ ಕಲೆಗಳು ಕರ್ನಾಟಕದ ಚಿತ್ರಕಲೆ ಮತ್ತು ಕರಕುಶಲ ಕಲೆಗಳ ಅಧ್ಯಯನಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸುವಂಥ ಗ್ರಂಥಗಳಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಉಪಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ 36 ಬುಡಕಟ್ಟುಗಳನ್ನು ಗುರುತಿಸಿ ಪುಸ್ತಕ ಪ್ರಕಟಿಸಿದೆ. ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿ ಕರ್ನಾಟಕ ಬುಡಕಟ್ಟುಗಳನ್ನು ಕುರಿತಂತೆ ಎರಡು ಸಂಪುಟ ಪ್ರಕಟಿಸಿದೆ (1998). ಕನ್ನಡ ವಿಶ್ವವಿದ್ಯಾಲಯ ಬುಡಕಟ್ಟು ಮಾಲೆಯಲ್ಲಿ ಹೊರತಂದಿರುವ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ ಸಂಪುಟಗಳು, ಸೋಮಶೇಖರ ಇಮ್ರಾಪುರ ಅವರ ಜಾನಪದ ಆಲೋಕನ (2002) ಜಾನಪದ ವಿಮರ್ಶಾ ಸಂಕಲನ ಜನಪದ ಕಾವ್ಯಾಸಕ್ತರಿಗೆ, ಸಂಸ್ಕೃತಿ ಚಿಂತಕರಿಗೆ ಉತ್ತಮ ಆಕರಗಳಾಗಿವೆ. ಜನಪದ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದವರಲ್ಲಿ ಉತ್ತರ ಕರ್ನಾಟಕದ ವಿದ್ವಾಂಸರೆಂದರೆ ಎಂ.ಎಸ್. ಸುಂಕಾಪುರ, ಎಂ.ಎಸ್.ಲಠ್ಠೆ, ಸೋಮಶೇಖರ ಇಮ್ರಾಪುರ, ದೇವೇಂದ್ರ ಕುಮಾರ ಹಕಾರಿ, ಮ.ಗುಂ.ಬಿರಾದಾರ, ಶಿವಾನಂದ ಗುಬ್ಬಣ್ಣನವರ್, ಬಸವರಾಜ ಮಲಶೆಟ್ಟಿ, ಚೆನ್ನಣ್ಣವಾಲೀಕಾರ, ಪಿ.ಕೆ.ಖಂಡೋಬ, ವೀರಣ್ಣ ದಂಡೆ, ಎಂ.ಎಂ.ಕಲಬುರ್ಗಿ, ಕೆ.ಆರ್.ದುರ್ಗಾದಾಸ್. ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ದುಡಿದವರಲ್ಲಿ ಜಿ.ವಿ.ದಾಸೇಗೌಡ, ಟಿ.ಕೇಶವಭಟ್ಟ, ಕೆ.ಆರ್.ಸಂಧ್ಯಾರೆಡ್ಡಿ, ಸಿ.ಸಿ.ಎ.ಪೈ, ಚಂದ್ರು ಕಾಳೇನಹಳ್ಳಿ, ನಿಂಗಣ್ಣ ಸಣ್ಣಕ್ಕಿ ಮೊದಲಾದವರನ್ನು ಹೆಸರಿಸಬಹುದು. ಕರ್ನಾಟಕದ ಜಾತ್ರೆಗಳನ್ನು ಕುರಿತಂತೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪುಸ್ತಕಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಮುಖ್ಯವಾದವು ವೀರಭದ್ರ ಜಾತ್ರೆ, ದೇವರಗುಡ್ಡರ ಜಾತ್ರೆ, ಶಿರಸಿ ಶ್ರೀಮಾರಿಕಾಂಬೆ ಜಾತ್ರೆ. ಸವದತ್ತಿ ಎಲ್ಲಮ್ಮನ ಜಾತ್ರೆ, ಮಲೆಮಾದೇಶ್ವರ ಜಾತ್ರೆ. ಪ್ರತಿವರ್ಷ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾನಪದ ಲೇಖನಗಳನ್ನು ಸಂಗ್ರಹಿಸಿ ಸಂಕಲನಗಳನ್ನು ಜಾನಪದ ಅಕಾಡೆಮಿ 1991ರಿಂದಲೂ ಪ್ರಕಟಿಸುತ್ತಿದೆ. ಈ ಮಾಲಿಕೆಯಲ್ಲಿ ಆರು ಪುಸ್ತಕಗಳು ಪ್ರಕಟವಾಗಿವೆ.

ಕನ್ನಡದಲ್ಲಿ 1975ರಿಂದ 2000 ಜನವರಿಯವರೆಗೆ ಪ್ರಕಟವಾದ ಜಾನಪದ ಗ್ರಂಥಗಳನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕನ್ನಡ ಜಾನಪದ ಗ್ರಂಥಸೂಚಿ ಶೀರ್ಷಿಕೆಯಲ್ಲಿ ಪ್ರಕಟಿಸಿದೆ (2000).

ಕರ್ನಾಟಕ ಜಾನಪದ ಅಧ್ಯಯನದ ಮೇಲೆ ವಿಶೇಷ ಪ್ರಭಾವ ಬೀರಿದ ಸುವರ್ಣ ಸಂಚಯ, ಹೊನ್ನಬಿತ್ತೇವು ಹೊಲಕೆಲ್ಲ, ಕರ್ನಾಟಕ ಜಾನಪದ, ಸುವರ್ಣ ಸಂಪುಟ ಭಾಗ -1 ಮತ್ತು -2 ಸಂಕಲನಗಳು ವಿಶೇಷ ಉಲ್ಲೇಖನಾರ್ಹವಾಗಿವೆ. ಕರ್ನಾಟಕ ಜಾನಪದದ ವಿವಿಧ ಮುಖಗಳನ್ನು ಪರಿಚಯಿಸುವುದರೊಂದಿಗೆ ಜಾನಪದ ಅಧ್ಯಯನಕ್ಕೆ ಪೂರಕವಾದ ಅನೇಕ ಉಪಯುಕ್ತ ಅಂಶಗಳನ್ನು ಒಳಗೊಂಡ ಈ ಪ್ರಕಟಣೆಗಳು ಒಂದೊಂದೂ ದೊಡ್ಡ ಸಾಧನೆ ಎಂದೇ ಹೇಳಬೇಕು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿರುವ ಜಾನಪದ ಸಾಹಿತ್ಯದರ್ಶನ ಸಂಪುಟಗಳು ಕೂಡ ಈ ನಿಟ್ಟಿನ ಉತ್ತಮ ಕೊಡುಗೆಗಳಾಗಿವೆ. ದೊಡ್ಡ ಸಂಖ್ಯೆಯ ವಿದ್ವಾಂಸರ ಅಭ್ಯಾಸಪೂರ್ಣ ಬರೆಹಗಳನ್ನೊಳಗೊಂಡ ಈ ಪ್ರಕಟಣೆಗಳು ಕರ್ನಾಟಕದಲ್ಲಿ ಜಾನಪದ ಆಸಕ್ತಿ ಆಳವಾಗಿ ಬೇರೂರಿರುವುದಕ್ಕೆ ಸಾಕ್ಷಿಯಾಗಿದೆ.

ಕರ್ನಾಟಕದಲ್ಲಿ ಜಾನಪದದ ವೈಜ್ಞಾನಿಕ ಅಧ್ಯಯನ ಆರಂಭವಾದುದು 20ನೆಯ ಶತಮಾನದ 60ರ ದಶಕದಲ್ಲಿ. ಪ್ರಕೃತ ಸಮೀಕ್ಷೆ ಕನ್ನಡದಲ್ಲಿ ಈ ವರೆಗೆ ನಡೆದ ಜಾನಪದ ಅಧ್ಯಯನದ ವಿವಿಧ ಮಜಲುಗಳನ್ನು ಸ್ಥೂಲವಾಗಿ ಗುರುತಿಸುತ್ತದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಜಾನಪದ ಅಧ್ಯಯನಕ್ಕೆ ದೊರೆತ ಆದ್ಯತೆ, ವೈಜ್ಞಾನಿಕ ತಳಹದಿಯ ಮೇಲೆ ಈಗೀಗ ಈ ಅಧ್ಯಯನ ರೂಪುಗೊಳ್ಳುತ್ತಿರುವ ಬಗೆ, ಈ ಅಧ್ಯಯನಕ್ಕೆ ಅಗತ್ಯವೆನಿಸಿದ ಸಮಗ್ರ ಹಾಗೂ ಸಮರ್ಪಕ ಕ್ಷೇತ್ರಕಾರ್ಯ ಹಾಗೂ ದಾಖಲೀಕರಣ, ಜಾನಪದ ಸಂವರ್ಧನೆ ಹಾಗೂ ಪ್ರಸಾರ ಕಾರ್ಯ ಮುಂತಾದ ಚಟುವಟಿಕೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸಿದಾಗ ಕರ್ನಾಟಕ ಜಾನಪದ ಅಧ್ಯಯನ ಅರ್ಥಪೂರ್ಣವಾಗಿ ಸಾಗುತ್ತಿದೆ ಎಂದು ಹೇಳಬಹುದು.
(ಜೆ.ಎಸ್.ಪಿ.;ಎ.ಎಚ್.)

**ಜಾನಪದ ಕ್ಷೇತ್ರಕಾರ್ಯ** : ಒಂದು ವಿಷಯ ಕುರಿತು ಆಮೂಲಾಗ್ರ ಅಧ್ಯಯನಕ್ಕಾಗಿ ಅಗತ್ಯ ದತ್ತಾಂಶ (ಡಾಟ) ಸಂಗ್ರಹಿಸಲು ಒಂದೆಡೆ ನೆಲೆನಿಂತು ಅಥವಾ ವಿವಿಧೆಡೆ ಸಂಚರಿಸುತ್ತ ಮಾಹಿತಿ ಸಂಗ್ರಹಿಸುವ ಕೆಲಸವನ್ನು (ಫೀಲ್ಡ್‌ವರ್ಕ್) ಕ್ಷೇತ್ರ ಕಾರ್ಯವೆಂದು ಕರೆಯುವುದು ರೂಢಿಯಲ್ಲಿದೆ. ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆಯೂ ಕ್ಷೇತ್ರಕಾರ್ಯದ ಸ್ವರೂಪ, ಅಗತ್ಯ ಹಾಗೂ ಲಕ್ಷಣಗಳು ಭಿನ್ನಭಿನ್ನವಾಗಿರುತ್ತವೆ. ಸತ್ಯಾನ್ವೇಷಣೆ, ವಿಷಯದ ಖಚಿತ ಜ್ಞಾನ ಕ್ಷೇತ್ರ ಕಾರ್ಯದ ಮುಖ್ಯ ಉದ್ದೇಶ. ಕ್ಷೇತ್ರಕಾರ್ಯಕರ್ತನಲ್ಲಿ ಮೂಲಭೂತವಾಗಿ ಮೂರು ಗುಣಗಳಿರಬೇಕು: ಬಿಚ್ಚು ಮನಸ್ಸು, ಪ್ರಾಮಾಣಿಕತೆ, ಸಂಗ್ರಹಸಾಮರ್ಥ್ಯ. ಕ್ಷೇತ್ರ ಕಾರ್ಯಕರ್ತನಲ್ಲಿ ಇರಬೇಕಾದ ಇನ್ನೊಂದು ಅರ್ಹತೆ ಶಿಸ್ತು. ಇದು ಕ್ಷೇತ್ರದಲ್ಲಿ ಸಂಚರಿಸುವಾಗಿನ ಅವನ ನಡೆವಳಿಕೆಯಾಗಿರಬಹುದು, ಸಂಗ್ರಹಣೆಯ ಉದ್ದೇಶವನ್ನೂ ಗುರಿಯನ್ನೂ ಕುರಿತದ್ದಾಗಿರಬಹುದು, ಸಂಗ್ರಹಿತ ಸಾಮಗ್ರಿಯನ್ನು ಕ್ರಮಬದ್ಧ ವರ್ಗೀಕರಣಕ್ಕೆ ಒಳಪಡಿಸುವಂಥದ್ದಾಗಿರಬಹುದು.

ಜಾನಪದ ಕ್ಷೇತ್ರಕಾರ್ಯದ ಕೆಲಸ ಮೂರು ಹಂತಗಳಲ್ಲಿ ಜರುಗುತ್ತದೆ: 1. ಪ್ರಾರಂಭಿಕ ಹಂತ, 2. ಸಂಗ್ರಹಣೆ, 3. ವಿಶ್ಲೇಷಣೆ.

**1. ಪ್ರಾರಂಭಿಕ ಹಂತ** : ಒಂದು ಗೊತ್ತಾದ ಸ್ಥಳದಲ್ಲಿ ಯಾವ ಮಾಹಿತಿಯನ್ನು ಸಂಗ್ರಹಿಸಬೇಕಾಗಿದೆಯೋ ಅದರ ಬಗ್ಗೆ ಕ್ಷೇತ್ರ ಕಾರ್ಯಕರ್ತನಿಗೆ ಸ್ಪಷ್ಟ ಕಲ್ಪನೆ ಇರಬೇಕು. ಕ್ಷೇತ್ರಕಾರ್ಯಕ್ಕೆ ತೊಡಗುವ ಪ್ರದೇಶ, ಆ ಪ್ರದೇಶದ ಜನಜೀವನ, ಭಾಷೆ ಇತ್ಯಾದಿಗಳನ್ನು ಕ್ಷೇತ್ರಕಾರ್ಯಕರ್ತ ಗಮನಿಸಬೇಕಾಗುತ್ತದೆ.

**2. ಸಂಗ್ರಹಣೆ** : ಸಂಗ್ರಹಿಸಲು ಉದ್ದೇಶಿಸಿರುವ ನಿರ್ದಿಷ್ಟ ಗುರಿಯ ಕಡೆಗೆ ಮನಸ್ಸನ್ನು ಕೇಂದ್ರೀಕರಿಸಬೇಕು ಮತ್ತು ಉಳಿದ ಪ್ರಕಾರಗಳನ್ನೂ ಕಡೆಗಣಿಸಬಾರದು.

**3. ವಿಶ್ಲೇಷಣೆ** : ಸಂಗ್ರಹಿಸಿ ತಂದ ಸಾಮಗ್ರಿಯನ್ನು ವಿಂಗಡಿಸಿ ವಿಶ್ಲೇಷಿಸಿ ಅಧ್ಯಯನ ನಡೆಸುವುದು.

ಹೀಗೆ ತನ್ನ ಗುರಿಗೆ ಸಂಬಂಧಿಸಿದ ಮುಖ್ಯ ಸಂಗ್ರಹ ಹಾಗೂ ಉಪಸಂಗ್ರಹಗಳನ್ನು ಸೂಕ್ತ ರೀತಿಯಲ್ಲಿ ವಿಂಗಡಿಸಿ ಸಮಾಜ ವಿಜ್ಞಾನ, ಮಾನವ ವಿಜ್ಞಾನ, ಭಾಷಾ ವಿಜ್ಞಾನ ಇತ್ಯಾದಿ ಸಂಬಂಧಪಟ್ಟ ವಿಷಯಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ.

ಚಾರಿತ್ರಿಕ ಅಧ್ಯಯನಕ್ಕಾಗಿ ಹಾಡುಗಳನ್ನು ಸಂಗ್ರಹಿಸುವುದು ಮುಖ್ಯ ಗುರಿಯಾಗಿದ್ದಾಗ ಚಾರಿತ್ರಿಕ ಸಂಗತಿಗಳು, ಪಾತ್ರಗಳ ಹೆಸರುಗಳಲ್ಲಿನ ವ್ಯತ್ಯಾಸಗಳು, ರೀತಿ ನೀತಿಗಳು ಮೊದಲಾದ ಪೂರಕಾಂಶಗಳು 'ಉಪಸಂಗ್ರಹ'ಗಳೆನಿಸುತ್ತವೆ. ಗುರಿಯೆನಿಸುವ ಹಾಡುಗಳು ನೃತ್ಯದೊಡನೆ ಆಂತರಿಕ ಸಂಬಂಧ ಹೊಂದಿದ್ದರೆ ನೃತ್ಯಕ್ಕೆ ಸಂಬಂಧಿಸಿದ ಟಿಪ್ಪಣಿಗಳು, 'ಉಪಸಂಗ್ರಹ'ಗಳೆನಿಸುತ್ತವೆ. ಆದ್ದರಿಂದ ಉಪಸಂಗ್ರಹಗಳಿಲ್ಲದೆ ಕ್ಷೇತ್ರಕಾರ್ಯಗಳಾಗಲಿ, ಅಧ್ಯಯನಗಳಾಗಲಿ ಪೂರ್ಣಗೊಳ್ಳಲಾರವು.

ಸಂಗ್ರಹಕಾರರಲ್ಲಿ ಎರಡು ಬಗೆಗಳಿವೆ. ವೃತ್ತಿನಿರತ ಸಂಗ್ರಹಕಾರ, ಹವ್ಯಾಸಿ ಸಂಗ್ರಹಕಾರ. ಸ್ವಂತ ಆಸಕ್ತಿಯಿಂದ ಮಾಹಿತಿ ಸಂಗ್ರಹಿಸುತ್ತಾ ಪರಿಣತಿ ಗಳಿಸಿಕೊಳ್ಳುವವನು ವೃತ್ತಿನಿರತ ಸಂಗ್ರಹಕಾರ. ಪರಿಣತರ ಬೋಧನೆಗಳ ಮೂಲಕ ತರಬೇತಿ ಹೊಂದಿದವನು ಹವ್ಯಾಸಿ ಸಂಗ್ರಹಕಾರ. ಇವರಲ್ಲಿ ಒಬ್ಬ ಮೇಲು ಒಬ್ಬ ಕೀಳು ಎಂಬ ಭೇದವಿಲ್ಲ. ಯಾರು ಹೆಚ್ಚು ಪ್ರಾಮಾಣಿಕವಾಗಿ, ಪರಿಣಾಮಕಾರಿಯಾಗಿ ಸಂಗ್ರಹಕಾರ್ಯ ನಡೆಸಿದ್ದಾರೆ ಎಂಬುದಷ್ಟೆ ಮುಖ್ಯ. ಸಂಗ್ರಹದೊಂದಿಗೆ, ಅದನ್ನು ಕುರಿತು ವಿಸ್ತೃತ ಅಧ್ಯಯನಾತ್ಮಕ ಪ್ರಸ್ತಾವನೆ ಟಿಪ್ಪಣಿಗಳು, ಅರ್ಥಕೋಶ, ಸಂಗ್ರಹವಿವರ ಇತ್ಯಾದಿಗಳನ್ನು ರೂಪಿಸುವ ಮೂಲಕ ಯಶಸ್ಸನ್ನು ಸಾಧಿಸಬೇಕಾಗುತ್ತದೆ. ಸಂಗ್ರಹಕಾರ ಅಪ್ರಾಮಾಣಿಕನಾದರೆ ಅಗತ್ಯ ವಿವರಗಳೂ ಮೂಲ ದಾಖಲೆಗಳೂ ಶುದ್ಧ ರೂಪದಲ್ಲಿ ದೊರೆಯದೆ ಹೋಗಬಹುದು. ಆಗ ಆ ಅಧ್ಯಯನ ಅಕ್ಷರಮಟ್ಟಿಗೆ ದೋಷಯುಕ್ತವಾಗುತ್ತದೆ. ಗುರಿಬದ್ಧ, ಕಾಲಬದ್ಧ, ಕ್ಷೇತ್ರಕಾರ್ಯ ಶೀಘ್ರ ಫಲಕಾರಿಯಾಗಿ ಪರಿಣಮಿಸುತ್ತದೆ. ಈ ಕ್ರಮವೇ ವೈಜ್ಞಾನಿಕ ಅನ್ವೇಷಣೆ.

ವೈಜ್ಞಾನಿಕ ಅನ್ವೇಷಣೆ ಅನೇಕ ಘಟ್ಟಗಳಲ್ಲಿ ರೂಪುಗೊಳ್ಳುತ್ತದೆ: 1. ಪರಿಹರಿಸಬೇಕಾದ ಸಮಸ್ಯೆಗಳನ್ನು ಕಂಡುಕೊಳ್ಳುವುದು, 2. ಸಂದರ್ಭೋಚಿತವಾದ ದತ್ತಾಂಶಗಳನ್ನು ಗುರುತಿಸುವುದು ಮತ್ತು ಅವನ್ನು ಪಡೆದುಕೊಳ್ಳುವ ಸೂಕ್ತ ವಿಧಾನಗಳನ್ನು ಕಂಡುಕೊಳ್ಳುವುದು, 3. ದತ್ತಾಂಶ ಸಂಗ್ರಹಣೆ, 4. ಸಂಶೋಧನಾಂಶಗಳನ್ನು ಪ್ರಸ್ತುತಪಡಿಸುವುದು, 5. ದತ್ತಾಂಶಗಳ ವ್ಯಾಖ್ಯಾನ ಮತ್ತು ವಿಶ್ಲೇಷಣೆಗಳ ಆಧಾರದಿಂದ ಪೂರ್ವ ಸಿದ್ಧಾಂತಗಳ ಸಾಧ್ಯತೆಗಳನ್ನು ಅಂಗೀಕರಿಸುವುದು.

ಸಂದರ್ಭೋಚಿತ ಸಾಮಗ್ರಿಗಳನ್ನೂ ದತ್ತಾಂಶಗಳನ್ನೂ ಪಡೆದುಕೊಳ್ಳಬೇಕಾದರೆ ನಿರ್ದಿಷ್ಟ ವಿಧಾನಗಳಿವೆ. ಇವೇ ಕ್ಷೇತ್ರವಿಧಾನಗಳು ಅಥವಾ ಸಂಗ್ರಹ ವಿಧಾನಗಳು.

1. **ಮುಕ್ತ ಪದ್ಧತಿ :** ಕ್ಷೇತ್ರಕ್ಕೆ ಕಾಲಿಡದೆ ನಾವು ಇದ್ದಲ್ಲಿಗೇ ಪತ್ರ ವ್ಯವಹಾರದ ಮೂಲಕ ಮಾಹಿತಿ ಸಂಗ್ರಹಿಸುವ ವಿಧಾನ.

2. **ಸಮೀಪ ಪದ್ಧತಿ :** ಕ್ಷೇತ್ರದೊಳಗೆ ಮುಖತಃ ವಕ್ತೃಗಳನ್ನು ಭೇಟಿ ಮಾಡಿ ನೇರವಾಗಿ ಸಂಗ್ರಹಿಸುವ ವಿಧಾನ. ಕ್ಷೇತ್ರದೊಳಗೆ ಸಂಚರಿಸಿ ನೇರವಾಗಿ ಸಂಗ್ರಹಿಸಿ ತಂದುದರಲ್ಲಿ, ವರ್ಗೀಕರಿಸುವ ಹಂತದಲ್ಲೋ ಸಂಶೋಧನೆಯ ಹಂತದಲ್ಲೋ ಸಂಶಯಗಳು ಉದ್ಭವಿಸಿದರೆ, ಅಂಥವನ್ನು ಪತ್ರವ್ಯವಹಾರದ ಮೂಲಕ ಪರಿಹರಿಸಿಕೊಳ್ಳಲು ಸಾಧ್ಯವಿದೆಯೇ ಹೊರತು, ನಾವು ಸಂಗ್ರಹಿಸಲು ಉದ್ದೇಶಿಸಿರುವ ಎಲ್ಲ ಬಗೆಯ ಸಾಮಗ್ರಿಗಳನ್ನೂ ಹಾಗೆ ಸಂಗ್ರಹಿಸಲು ಸಾಧ್ಯವಿಲ್ಲ; ಅಂಥ ಸಾಮಗ್ರಿ ಹೆಚ್ಚು ವಿಶ್ವಾಸಾರ್ಹವಲ್ಲ.

3. **ಪರಿವೀಕ್ಷಣಾ ವಿಧಾನ :** ನಿರ್ದಿಷ್ಟ ಪ್ರದೇಶದ, ನಿರ್ದಿಷ್ಟ ಸಂಸ್ಕೃತಿಯ, ನಿರ್ದಿಷ್ಟ ಸಂಪ್ರದಾಯದ ಅಥವಾ ವ್ಯಕ್ತಿಯ, ಜಾನಪದ ಭಂಡಾರದಲ್ಲಿ ಸಂಕ್ಷಿಪ್ತ ಮಾದರಿಗಳನ್ನಷ್ಟೆ ಸಂಗ್ರಹಿಸಿ ಹೇಳಿಕೆಗಳನ್ನಾಗಲಿ ಸಿದ್ಧಾಂತಗಳನ್ನಾಗಲಿ ರೂಪಿಸುವಿಕೆಯೇ ಈ ವಿಧಾನ. ಸ್ಥೂಲವಾದ ಒಟ್ಟು ನೋಟವನ್ನಷ್ಟೆ ಇದರಿಂದ ಗ್ರಹಿಸಲು ಸಾಧ್ಯ. ಮಾದರಿಗಳನ್ನು ಸಂಗ್ರಹಿಸುವುದು ಕೂಡ ಈ ವಿಧಾನದ ಒಂದು ಲಕ್ಷಣ.

4. **ಸಮಗ್ರ ವಿಧಾನ :** ಒಂದು ಪ್ರದೇಶದ ಎಲ್ಲ ಬಗೆಯ ಜಾನಪದ ದತ್ತಾಂಶಗಳನ್ನೂ ಸಮಗ್ರವಾಗಿ ಸಂಗ್ರಹಿಸುವುದು ಇದರ ಗುಣ. ಇದು ಅತ್ಯಮೂಲ್ಯ ವಿಧಾನ. ಕಾಲ ಮತ್ತು ಸಹನೆ ಹೆಚ್ಚು ಬೇಕು. ಈ ವಿಧಾನದಲ್ಲಿ ಸಮಾನ ಆಸಕ್ತಿಯ ಸಮೂಹ ಶ್ರಮ ಹೆಚ್ಚು ಫಲಕಾರಿಯಾಗುತ್ತದೆ.

5. **ಸ್ಥಳೀಯ ವಿಧಾನ :** ತನ್ನದೇ ಕುಟುಂಬದವರಿಂದ, ನೆರೆಹೊರೆಯವರಿಂದ, ಮಕ್ಕಳಿಂದ, ವಿದ್ಯಾರ್ಥಿಗಳಿಂದ, ವಿವಿಧ ವೃತ್ತಿಗಳವರಿಂದ ಸಂಗ್ರಹಿಸುವ ವಿಧಾನವಿದು. ಈ ಮೇಲಿನ ವಿಧಾನಗಳು ಒಂದು ರೀತಿಯಲ್ಲಿ ಯೋಜನಾಬದ್ಧ ಎಂದೇ ಗುರುತಿಸಲ್ಪಡುತ್ತವೆ.

6. **ಆಕಸ್ಮಿಕ ವಿಧಾನ ಅಥವಾ ಪ್ರಾಸಂಗಿಕ :** ಈ ವಿಧಾನ ಯಾವುದೇ ರೀತಿ ಯಲ್ಲೂ ಯೋಜನಾಬದ್ಧ ಎನಿಸಿಕೊಳ್ಳದೆ, ಆದರೆ ಎಲ್ಲ ವಿಧಾನಗಳಿಗಿಂತ ಹೆಚ್ಚು ಪರಿಣಾಮಕಾರಿಯಾದ ವಿಧಾನವಾಗಿದೆ. ಗುರಿಯ ಪರಿಧಿಯೊಳಗೋ ಗುರಿಯಾಚೆಗೋ ಅನಿರೀಕ್ಷಿತವಾಗಿ ಸಾಮಗ್ರಿ ಲಭ್ಯವಾಗುವ ಸಂದರ್ಭಗಳು ಬರುತ್ತವೆ. ಸಿದ್ಧಪಡಿಸಿಕೊಂಡ ಪ್ರಶ್ನಾವಳಿಯನ್ನು ಇಂಥ ಸಂದರ್ಭಗಳಲ್ಲಿ ಬಳಸಲು ಸಾಧ್ಯವಿಲ್ಲ. ಆದರೂ ಸಂಗ್ರಹಕಾರ್ಯ ಯಶಸ್ವಿಯೆನಿಸಿಕೊಳ್ಳುತ್ತದೆ. ಆದ್ದರಿಂದ ಇದೊಂದು ಅನಿವಾರ್ಯ ವಿಧಾನ.

7. **ಅವಲೋಕನ ವಿಧಾನ :** ಇಲ್ಲಿ ನಮ್ಮ ಸಂಪರ್ಕಕ್ಕೆ ಬರುವ ಪ್ರತಿಯೊಂದು ವಸ್ತುವನ್ನೂ ಗಮನಿಸಲಾಗುವುದು. ಒಂದು ವಸ್ತುವನ್ನು ಕಂಡಾಗ ಆ ವಸ್ತುವಿನ ಹೆಸರು, ಯಾವ ಯಾವ ಮೂಲವಸ್ತುಗಳನ್ನು ಬಳಸಿ ಅದನ್ನು ರೂಪಿಸಲಾಗಿದೆ, ಯಾವ ಯಾವ ಸಂದರ್ಭಗಳಲ್ಲಿ ಯಾವ ಯಾವ ಉದ್ದೇಶಗಳಿಗಾಗಿ ಅದನ್ನು ಬಳಸಲಾಗುತ್ತದೆ ಈ ಮುಂತಾದ ವಿವರಗಳನ್ನು ದಾಖಲಿಸಿಕೊಳ್ಳುವ ಕಾರ್ಯ ಈ ವಿಧಾನದಡಿ ನಡೆಯುತ್ತದೆ.

8. **ಸಂದರ್ಶನ ವಿಧಾನ :** ವಕ್ತೃ ಮತ್ತು ಸಂಗ್ರಹಕಾರನ ನಡುವೆ ಪರಸ್ಪರ ನಂಬಿಕೆ ಹುಟ್ಟುವಷ್ಟು ವಿಶ್ವಾಸ ಬೆಳೆದ ಮೇಲೆ, ಪರಸ್ಪರ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳುವಂಥ ಇಬ್ಬರ ಮನಸ್ಸೂ ತಿಳಿಯಾಗುವಂಥ, ವಾತಾವರಣ ನಿರ್ಮಾಣ ಆದಮೇಲೆ ಈ ವಿಧಾನ ಸಾಧಿತವಾಗಬೇಕು. ವಕ್ತೃ ಪ್ರಸ್ತಾಪಿಸುವ ಅನೇಕ ಸಂಗತಿಗಳು ಅನಗತ್ಯ ಎನ್ನಿಸಬಹುದು. ಆದರೆ ಎಲ್ಲವನ್ನೂ ಒಟ್ಟುಗೂಡಿಸಿದಾಗ ಆ ವಕ್ತೃವಿನ ಒಳನೋಟ ಲಭ್ಯವಾಗುತ್ತದೆ. ಇದರಿಂದ ಅವನ ಸಂಸ್ಕೃತಿಯ ಬಗ್ಗೆ, ಜಾನಪದ ಸಂಬಂಧಿಯಾದ ಅಂಶಗಳ ಬಗ್ಗೆ ವಿಶ್ಲೇಷಿಸಲು ಸಾಧ್ಯವಾಗುತ್ತದೆ. ಪ್ರಶ್ನಾವಳಿಯನ್ನು ಸಿದ್ಧಪಡಿಸುವ ಹಂತದಲ್ಲೇ ಈ ಬಗ್ಗೆ ಯೋಚಿಸಿರಬೇಕಾಗುತ್ತದೆ.

9. **ಜಂಗಮ ವಿಧಾನ :** ಇದನ್ನು ಆಕಸ್ಮಿಕ ವಿಧಾನದಡಿಯಲ್ಲಿ ಗುರುತಿಸಬಹುದು. ಕ್ಷೇತ್ರ ಕಾರ್ಯಕ್ಕಾಗಿ ಹೋಗುವಾಗಲೋ ಕ್ಷೇತ್ರಕಾರ್ಯ ಮುಗಿಸಿ ವಾಪಸ್ಸು ಬರುವಾಗಲೋ ಘಂಟೆಗಟ್ಟಲೆ ರೈಲಿನಲ್ಲೋ ಬಸ್ಸಿನಲ್ಲೋ ಪ್ರಯಾಣ ಮಾಡುವ ಸಂದರ್ಭಗಳಲ್ಲಿ ಸಹ ಪ್ರಯಾಣಿಕರೊಡನೆ ಮಾತುಕತೆಯಲ್ಲಿ ತೊಡಗುವುದರಿಂದಲೂ ಸಂಗ್ರಹಕಾರ್ಯ ನಡೆಸುವ ವಿಧಾನ ಇದು. ಇಲ್ಲಿ ಮಾಹಿತಿ ಸಂಗ್ರಹ ಪ್ರಧಾನ ಪಾತ್ರ ವಹಿಸುತ್ತದೆ. ಇತರ ಸಾಹಿತ್ಯ ರೂಪಗಳ ಸಂಗ್ರಹವೂ ಸಾಧ್ಯವಾಗುತ್ತದೆ.

ಕಾಲಕ್ಕೆ ಸಂಬಂಧಿಸಿದಂತೆ ಎರಡು ವಿಧಗಳಿವೆ. ನಿರ್ದಿಷ್ಟ ಕಾಲದ ಅವಧಿಯನ್ನು ಗೊತ್ತುಪಡಿಸಿಕೊಂಡು, ಆ ಅವಧಿಯಲ್ಲಿ ಎಷ್ಟು ಸಂಗ್ರಹ ಮಾಡಬಹುದೋ ಅಷ್ಟನ್ನು ಮಾತ್ರ ಮಾಡಿಕೊಳ್ಳುವುದು ಒಂದು ವಿಧ. ಒಂದು ಆಚರಣೆಯ ಅಥವಾ ಜಾತ್ರೆಯ ಅಥವಾ ಹಬ್ಬದ ಸಂಪೂರ್ಣ ಮಾಹಿತಿ ಸಂಗ್ರಹಕ್ಕಾಗಿ ಎಷ್ಟು ಕಾಲ ಬೇಕಾಗಬಹುದೋ ಅಷ್ಟು ಕಾಲದ ಅವಧಿಯನ್ನು ಗೊತ್ತುಪಡಿಸಿಕೊಳ್ಳುವುದು ಇನ್ನೊಂದು ವಿಧ.

ಅಲ್ಪ ಕಾಲದ ಅವಧಿಗಿಂತ ದೀರ್ಘ ಕಾಲದ ಅವಧಿಯು ಕ್ಷೇತ್ರಕಾರ್ಯಕ್ಕೆ ಹೆಚ್ಚು ಅನುಕೂಲ. ಅವಧಿಯ ಗಾತ್ರ ದೊಡ್ಡದಾದಷ್ಟೂ ಹೆಚ್ಚು ಸಾಮಗ್ರಿಯನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ; ಒಮ್ಮೊಮ್ಮೆ ಸಮಗ್ರವಾಗಿಯೂ ಸಂಗ್ರಹಿಸಬಹುದು. ಆದರೆ ಇದು ಸ್ವಲ್ಪಮಟ್ಟಿಗೆ ಅಪಾಯಕಾರಿಯೂ ಹೌದು. ವಕ್ತೃಗಳೊಡನೆ ಸಲುಗೆ ಹೆಚ್ಚಿದಷ್ಟೂ ವಸ್ತುನಿಷ್ಠತೆಯಿಂದ ವ್ಯಕ್ತಿನಿಷ್ಠತೆಯೆಡೆಗೆ ಜಾರುವ ಅಪಾಯ ಇದ್ದೇ ಇರುತ್ತದೆ.

ಸ್ಥಳೀಯ ಉಪಭಾಷೆಯನ್ನು ಅರ್ಥಮಾಡಿಕೊಳ್ಳುವ ಸಂಗ್ರಹಕಾರನ ಸಾಮರ್ಥ್ಯ ಕೂಡ ಕಾಲದ ಮೇಲೆ ಪರಿಣಾಮ ಬೀರುತ್ತದೆ. ಸ್ಥಳೀಯ ಜನರ ಪೂರ್ವಕಲ್ಪನೆಗಳು, ಪೂರ್ವಗ್ರಹಗಳೇನಾದರೂ ಇದ್ದರೆ ಅವು, ಅವರ ಭಯ ಆತಂಕ ಇತ್ಯಾದಿಗಳು ಕೂಡ ಸಂಗ್ರಹಕಾರನ ಕಾಲವನ್ನು ಹಿಗ್ಗಿಸುವ ಸಾಧ್ಯತೆಗಳಿರುತ್ತವೆ. ಈ ಎಲ್ಲವನ್ನೂ ಎದುರಿಸಿ ಗೆಲ್ಲುವ ಶಕ್ತಿ, ಚಾಕಚಕ್ಯತೆ ಸಂಗ್ರಹಕಾರನಿಗೆ ಇರಬೇಕಾಗುತ್ತದೆ.

ಕ್ಷೇತ್ರಕಾರ್ಯಕ್ಕಾಗಿ ಉದ್ದೇಶಿತ ಪ್ರದೇಶವನ್ನು ಹೊಕ್ಕ ಕೂಡಲೆ ಸಂಗ್ರಹಕಾರ ಬಿಡುವಿಲ್ಲದವನಾಗುತ್ತಾನೆ. ಆದ್ದರಿಂದ ಕ್ಷೇತ್ರಕ್ಕೆ ಹೊರಡುವ ಮೊದಲೇ ಸರ್ವಸಿದ್ಧತೆಗಳನ್ನೂ ಮಾಡಿಕೊಳ್ಳಬೇಕು. ಮುದ್ರಿತ ಲಭ್ಯ ಆಕರಗಳ ಸಹಾಯದಿಂದ ಉದ್ದೇಶಿತ ಪ್ರದೇಶಕ್ಕೆ ಸಂಬಂಧಿಸಿದ ಸಾಮಾಜಿಕ ಇತಿಹಾಸ, ವೃತ್ತಿಯಾಧಾರಿತ ಹವ್ಯಾಸಗಳು, ಶಿಕ್ಷಣ, ಧರ್ಮ, ಹಣಕಾಸು, ರಾಜಕೀಯ ಇತ್ಯಾದಿ ಪರಿಸ್ಥಿತಿಗಳನ್ನು ಅರಿತುಕೊಳ್ಳಬೇಕು. ಉಪಭಾಷೆ ಬೇರೆಯಾಗಿದ್ದಾಗ ಭಾಷೆಯನ್ನು ಕುರಿತು ತೀಕ್ಷ್ಣವಾಗಿ ಗಮನಿಸಬೇಕು. ಉದ್ದೇಶಿತ ಪ್ರದೇಶದ ನಕ್ಷೆ, ಹಳ್ಳಿಯಿಂದ ಹಳ್ಳಿಗೆ ಇರುವ ಅಂತರ, ಭೌಗೋಳಿಕ ಸ್ಥಿತಿಗತಿ, ಹವಾಮಾನ, ರಸ್ತೆಗಳ ಪರಿಸ್ಥಿತಿ, ವಾಹನ ಸೌಲಭ್ಯ, ಆಹಾರ ಸೌಲಭ್ಯ ಇತ್ಯಾದಿ ತಿಳಿದಿರಬೇಕು.

ಈ ಎಲ್ಲ ಸಿದ್ಧತೆಗಳೊಂದಿಗೆ ಉದ್ದೇಶಿತ ಪ್ರದೇಶದಲ್ಲಿ ಸಿಗಬಹುದಾದ ಜಾನಪದ ಸಾಮಗ್ರಿಗಳ ಬಗ್ಗೆಯೂ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಆ ಪ್ರದೇಶದಲ್ಲಿ ಈಗಾಗಲೇ ಏನೇನು ಸಂಗ್ರಹಿತವಾಗಿದೆ ಎಂಬುದನ್ನು ತಿಳಿಯಬೇಕು. ಅಲ್ಲಿ ಈಗಾಗಲೇ ಬೇರೊಬ್ಬರು ಸಂಗ್ರಹಕಾರ್ಯ ನಡೆಸಿದ್ದರೆ ಅಂಥ ಸಂಗ್ರಹಕಾರನೊಡನೆ ಸಂಪರ್ಕ ಬೆಳೆಸಿ ಏನೇನು ಸಂಗ್ರಹವಾಗಿದೆ ಎಂಬುದನ್ನು ತಿಳಿಯಲು ಪ್ರಯತ್ನಿಸಬೇಕು.

ಸಂಗ್ರಹಕಾರ್ಯಕ್ಕೆ ಹೊರಡುವ ಮೊದಲು ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳುವುದು ಬಹಳ ಮುಖ್ಯ ಸಂಗತಿಯಾಗಿರುತ್ತದೆ. ಈ ಪ್ರಶ್ನಾವಳಿಯಲ್ಲಿ ವಕ್ತೃವಿನ ಹೆಸರು, ವಯಸ್ಸು, ಜಾತಿ, ವಿದ್ಯಾಭ್ಯಾಸ, ಕೌಟುಂಬಿಕ ವಿವರಗಳು, ಆರ್ಥಿಕ ಪರಿಸ್ಥಿತಿ, ಪೂರ್ವಿಕರ ವಿವರಗಳು, ಕಲಿತದ್ದು ಯಾರಿಂದ, ಯಾರಿಗಾದರೂ ಕಲಿಸಿದ್ದೀರಾ ಇತ್ಯಾದಿ ಪ್ರಶ್ನೆಗಳಿರುತ್ತವೆ.

ಕೆಲವೊಮ್ಮೆ ಪ್ರಶ್ನಾವಳಿಗಳನ್ನು ಸಂದರ್ಭಕ್ಕೆ, ಸನ್ನಿವೇಶಕ್ಕೆ ತಕ್ಕಂತೆ ಕೂಡ ಬದಲಾಯಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುವುದುಂಟು. ಹಾಗಾಗಿ ಯಾವಾಗಲೂ ಸಿದ್ಧ ಪ್ರಶ್ನಾವಳಿಯನ್ನು ಆಧರಿಸಿರುವುದು ಸಾಧ್ಯವಾಗದೇ ಹೋಗಬಹುದು. ಪ್ರಯಾಣ ಸಿದ್ಧತೆಯ ಸಂದರ್ಭದಲ್ಲಿ ಬೇಕಾದ ಅನೇಕ ನಿತ್ಯೋಪಯೋಗಿ ವಸ್ತುಗಳಿರುತ್ತವೆ. ಅವುಗಳನ್ನೆಲ್ಲ ಜತನ ಮಾಡಬೇಕಾಗುತ್ತದೆ. ಹೊರಡುವ ಮೊದಲೇ ರಕ್ಷಣಾ ವ್ಯವಸ್ಥೆಗಳೂ ಆಗಿರಬೇಕು. ಉದ್ದೇಶಿತ ಪ್ರದೇಶದ ತಹಶೀಲ್ದಾರರಿಗೆ, ಪೋಲೀಸರಿಗೆ, ಪತ್ರಗಳ ಮೂಲಕ ತಿಳಿಸುವುದೂ ಅಗತ್ಯ.

ಜಾನಪದ ಕ್ಷೇತ್ರದಲ್ಲಿ ಶೀಘ್ರಲಿಪಿಯ ಬಳಕೆ ನಿಷಿದ್ಧ. ಶ್ರೀಘ್ರಲಿಪಿ ಗೊತ್ತಿರುವ ಸಂಗ್ರಹಕಾರನಾಗಿದ್ದರೆ ಟಿಪ್ಪಣಿಗಳನ್ನು ನಮೂದಿಸಲು ಮಾತ್ರ ಅದನ್ನು ಬಳಸಬಹುದು. ಕ್ಷೇತ್ರಕಾರ್ಯದಲ್ಲಿ ಇನ್ನೊಂದು ಬಹುಮುಖ್ಯ ಅಂಶವೆಂದರೆ ವಿಶ್ವಾಸಗಳಿಕೆ. ಸ್ಥಳೀಯರ ವಿಶ್ವಾಸವನ್ನು ಗಳಿಸಿಕೊಂಡು ಸಂಗ್ರಹದ ಕೆಲಸ ಮುಗಿಯುವವರೆಗೆ ಅದನ್ನು ಕಾಯ್ದುಕೊಳ್ಳಬೇಕು.

ಹೀಗೆ ವಿಶ್ವಾಸಗಳಿಸಿಕೊಳ್ಳುವಲ್ಲಿಂದ ಹಿಡಿದು, ಸಹಾಯಕನನ್ನು ಗೊತ್ತುಮಾಡಿಕೊಳ್ಳುವ, ಇತರರ ನೆರವು ಪಡೆಯುವ, ವಕ್ತೃಗಳ ಮನಸ್ಸನ್ನು ನಮ್ಮ ಉದ್ದೇಶಕ್ಕಾಗಿ ಸಿದ್ಧಗೊಳಿಸುವ, ಉದ್ದೇಶ ಈಡೇರಿಸಿಕೊಳ್ಳುವ, ಇತ್ಯಾದಿ ಎಲ್ಲ ಹಂತಗಳಲ್ಲೂ ಸಂಗ್ರಹಕಾರನು ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಾದುದು ತೀರ ಅನಿವಾರ್ಯ.

ಜನಪದ ಕ್ಷೇತ್ರಕಾರ್ಯದಲ್ಲಿ ವಕ್ತೃವಿನ ಆರ್ಥಿಕ ಸ್ಥಿತಿಗತಿಗಳನ್ನೂ ಗಮನಿಸಿ ಕ್ಷೇತ್ರಕಾರ್ಯ ನಿರ್ವಹಿಸಬೇಕಾಗಬಹುದು. ಸಾಮಾನ್ಯವಾಗಿ ಇಂಥ ಸಂದರ್ಭವೇ ಹೆಚ್ಚು. ಆಗ ಸಂಗ್ರಹಕಾರ ಆರ್ಥಿಕವಾಗಿ ಮಾತ್ರವಲ್ಲ, ಮಾನವೀಯವಾಗಿಯೂ ಕಷ್ಟಸುಖಗಳಲ್ಲಿ ಭಾಗಿಯಾಗಬೇಕಾಗುತ್ತದೆ. ಅವರಲ್ಲಿರುವ ಸಾಂಸ್ಕೃತಿಕ ಭಂಡಾರವನ್ನು ಅವರಿಗೆ ಮನವರಿಕೆಯಾಗುವಂತೆ ವಿವರಿಸಿ ಅವರನ್ನು ಪ್ರಚೋದಿಸಬೇಕಾಗುತ್ತದೆ. ಸದಾ ದುಡಿಯುವ ಯೋಚನೆಯನ್ನೇ ತಲೆಯಲ್ಲಿ ತುಂಬಿಕೊಂಡಿರುವ ಅವರಲ್ಲಿ ಸಾಂಸ್ಕೃತಿಕ ಮಹತ್ವವನ್ನು, ಉತ್ಸಾಹವನ್ನು ತುಂಬಬೇಕಾಗುತ್ತದೆ. ಅವರು ಬಯಸಿದ ವಸ್ತುವನ್ನೋ ಹಣವನ್ನೋ ನೀಡುವ ಆಮಿಷವನ್ನೂ ಕೆಲವೊಮ್ಮೆ ಒಡ್ಡಬೇಕಾಗಿ ಬರಬಹುದು.

ಕ್ಷೇತ್ರಕಾರ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು. 1. ಪ್ರಾಕೃತಿಕ ಹಾಗೂ ಲೌಕಿಕ ಸಮಸ್ಯೆಗಳು: ಮಳೆ, ಬಿಸಿಲು, ಕತ್ತಲು ಉಪವಾಸಗಳಂಥವು. ದಾರಿಯ ಬದಿಯಲ್ಲಿ, ಹೊಲಗಳಲ್ಲಿ, ಹಾಳುಮಂಟಪಗಳಲ್ಲಿ, ಶಾಲಾ ಜಗಲಿಗಳಲ್ಲಿ, ರಾತ್ರಿಗಳನ್ನು ಕಳೆಯಬೇಕಾದ ಸಂದರ್ಭಗಳು, ಒಂಟಿಯಾಗಿ ಸಂಚರಿಸುವಾಗ ಕಳ್ಳರ ಕೈಗೆ ಸಿಕ್ಕಿಕೊಳ್ಳುವಂಥ ಕ್ಷಣಗಳು, ನಿರೀಕ್ಷೆಗೂ ಮೀರಿ ಕೈಬಿಟ್ಟು ಹೋಗುವ ಹಣ, ದೂರದೂರುಗಳಲ್ಲಿ ಹಲವಾರು ದಿನಗಳ ಕಾಲ ನಡೆಸುವ ದೀರ್ಘಕಾಲದ ಅವಧಿಯ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಒಯ್ದ ಹಣವೆಲ್ಲ ಮುಗಿದು ಅನುಭವಿಸಬೇಕಾದ ಅನಾಥ ಸ್ಥಿತಿ ಇತ್ಯಾದಿ. 2. ಸಾಂಸ್ಕೃತಿಕ ಸಮಸ್ಯೆಗಳು: ಬಾಯಿಯಿಂದ ಬಾಯಿಗೆ ಹರಿದು ಬರುವ ಒಂದೇ ವಿಚಾರ ಒಬ್ಬೊಬ್ಬರ ಬಾಯಿಯಲ್ಲೂ ಭಿನ್ನರೂಪದಲ್ಲಿ ಗೋಚರಿಸುವ, ಒಬ್ಬನೇ ವ್ಯಕ್ತಿಯ ಬಾಯಿಯಲ್ಲಿಯೇ ಕಾಲದಿಂದ ಕಾಲಕ್ಕೆ ವ್ಯತ್ಯಾಸಗೊಳ್ಳುತ್ತಾ ಸಾಗುವ, ಜನಪದ ಸಾಹಿತ್ಯ; ಕೈಯಿಂದ ಕೈಯಿಗೆ, ತಲೆಯಿಂದ ತಲೆಗೆ, ಮಾರ್ಪಾಡುಗಳನ್ನು ಕಂಡುಕೊಳ್ಳುತ್ತಾ ಸಾಗುವ ಜಾನಪದದ ಇತರ ಅಂಗಗಳು. ಗ್ರಂಥಸಂಪಾದನೆಯನ್ನು ಮೀರಿಸುವಂಥ ಇತರ ಜಟಿಲ ಸಮಸ್ಯೆಗಳು, ಕಥೆಗಾರನು ಅಭಿನಯಪೂರ್ವಕವಾಗಿ ಹೇಳುವ ದೇಹಭಾಷೆ (ಬಾಡಿ ಲ್ಯಾಂಗ್ವೇಜ್)ಯನ್ನು ಅಕ್ಷರಕ್ಕೆ ಇಳಿಸುವಿಕೆ, ಬಳಕೆ ತಪ್ಪಿರುವ ಶಬ್ದಗಳು ಹಾಗೂ ಕೇವಲ ಉಚ್ಚಾರದಲ್ಲಿ ಮಾತ್ರ ಸಾಧ್ಯವಾಗುವ ಶಬ್ದವಿಶೇಷಗಳು - ಇವನ್ನು ಅರ್ಥಪೂರ್ಣವಾಗಿ ಅಕ್ಷರಗೊಳಿಸುವಿಕೆ, ಅಶುದ್ಧ ಶಬ್ದಗಳನ್ನು ತಿದ್ದಬೇಕೋ ತಿದ್ದಬಾರದೋ ಎಂಬ ಸಂದಿಗ್ಧ ಇತ್ಯಾದಿ.

ಕ್ಷೇತ್ರಕಾರ್ಯ ಮುಗಿಸಿ ಬಂದ ಅನಂತರ ಸಂಗ್ರಹಿತ ಮಾಹಿತಿಯನ್ನು ಬರೆಹ ರೂಪಕ್ಕೆ ತರುವುದು, ಅಗತ್ಯಕ್ಕೆ ತಕ್ಕಂತೆ ಸ್ಫುಟ ಪ್ರತಿ ತಯಾರಿಸುವುದು, ಪ್ರಕಟಣೆಗೆ ಸಿದ್ಧಪಡಿಸುವುದು ಸಂಗ್ರಹಕಾರನ ತುರ್ತು ಕೆಲಸವಾಗಿರುತ್ತದೆ.

ಪ್ರಕಟಣೆಗೆ ಸಿದ್ಧಪಡಿಸುವಲ್ಲಿ ಈ ಮುಂದಿನ ಐದು ಅಂಶಗಳನ್ನು ಮುಖ್ಯವಾಗಿ ಗಮನಿಸಬೇಕು. 1. ವಕ್ತೃವಿನ ಹೆಸರು, ವಯಸ್ಸು, ಲಿಂಗ, ಜಾತಿ, ಶಿಕ್ಷಣ, ಊರು, ದೇಶ; 2. ಕಥೆಯಾಗಿದ್ದರೆ ಅದರೊಳಗೆ ಬರುವ ನಾಯಕರು ಖಳನಾಯಕರು ಅಥವಾ ದುಷ್ಟಶಕ್ತಿಗಳು; ಹಾಡಾಗಿದ್ದರೆ ಅದು ಬಿಡಿ ಹಾಡೇ ಅಥವಾ ಕಥನಗೀತೆಯೇ, ಕಥನಗೀತೆಯಾಗಿದ್ದರೆ ವಸ್ತು ಪಾತ್ರ ಇತ್ಯಾದಿ. 3. ಭಾಷೆಯ ಸ್ವರೂಪ, ಅಂದರೆ, ಸಂಗ್ರಹಿತ ಪ್ರದೇಶದ ಉಪಭಾಷೆ ಹಾಗೂ ಅದು ಎಷ್ಟರಮಟ್ಟಿಗೆ ಶುದ್ಧರೂಪದಲ್ಲಿ ಉಳಿದಿದೆ ಎಂಬ ಅಂಶಗಳು 4. ಸಂಗ್ರಹಿಸಿದ ಸ್ಥಳ ಮತ್ತು ದಿನಾಂಕ. 5.ಸಂಗ್ರಹಕಾರನ ವಿವರಗಳು. ಈ ಸೂಚಿಯ ಆಧಾರದ ಮೇಲೆ ಇನ್ನೆರಡು ಸೂಚಿಗಳನ್ನು ರೂಪಿಸಿಕೊಳ್ಳಬೇಕು - ವರ್ಗಸೂಚಿ (ಟೈಪ್ ಇಂಡೆಕ್ಸ್) ಮತ್ತು ಆಶಯ ಸೂಚಿ (ಮೋಟಿಫ್ ಇಂಡೆಕ್ಸ್).

ಕ್ಷೇತ್ರಕಾರ್ಯದಲ್ಲಿ ಸಾಹಿತ್ಯ ಸಂಗ್ರಹದ ಜೊತೆಗೆ ಜನಪದ ಬದುಕಿನ ದಿನನಿತ್ಯದ ಬಳಕೆಯ ವಸ್ತುಗಳ ಸಂಗ್ರಹಣೆಯೂ ಒಳಗೊಳ್ಳುತ್ತದೆ.

ಮಾನವ ವಿಜ್ಞಾನ, ಮನೋವಿಜ್ಞಾನ, ಇತಿಹಾಸ, ಸಂಗೀತ, ಭಾಷಾ ವಿಜ್ಞಾನ, ಸಮಾಜ ವಿಜ್ಞಾನ ಮುಂತಾದುವುಗಳಂತೆ ಜಾನಪದವೂ ಒಂದು ವಿಜ್ಞಾನವಾದುದರಿಂದ ಪರಂಪರಾಗತ ಸಾಹಿತ್ಯವನ್ನು ಅರ್ಥೈಸಲು ಸೈದ್ಧಾಂತಿಕ ನೆಲೆಯೊಂದರ ಅಗತ್ಯ ಇದೆ. ಅಂಥ ನೆಲೆಯೊಂದನ್ನು ಕಂಡುಕೊಳ್ಳಬೇಕಾದರೆ ಸಂಗ್ರಹಕಾರ ಸಂಶೋಧಕನಾಗಿಯೂ ಕೆಲಸ ನಿರ್ವಹಿಸಬೇಕಾಗುತ್ತದೆ. ಇದಕ್ಕಾಗಿ ಪೂರ್ವಶಿಕ್ಷಣವೊಂದರ ಅಗತ್ಯ ಕಂಡುಬಂದರೂ ಗ್ರಂಥಾಲಯದ ಬಳಕೆಯಿಂದ ತನ್ನ ಅನುಭವಗಳ ಆಧಾರದಿಂದ, ಸಿದ್ಧಾಂತವೊಂದನ್ನು ಮಂಡಿಸಲು ಸಾಧ್ಯವಾಗಬಹುದು. (ಕೆ.ಆರ್.)

**ಜಾನಪದ ಲೋಕ :** ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸು.15 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ (1994) ಒಂದು ಸಾಂಸ್ಕೃತಿಕ ಕೇಂದ್ರ. ಹೆಸರಾಂತ ಜಾನಪದ ವಿದ್ವಾಂಸ ಎಚ್.ಎಲ್.ನಾಗೇಗೌಡ (ನೋಡಿ) ಇದರ ಸ್ಥಾಪಕರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಬಳಿಕ (1979) ತಮ್ಮ ಅಭಿಮಾನಿಗಳು ಬೆಂಗಳೂರಿನಲ್ಲಿ ತಮಗೆ ಸಾರ್ವಜನಿಕ ಸನ್ಮಾನ ಸಮಾರಂಭದಲ್ಲಿ ಅರ್ಪಿಸಿದ ಒಂದು ಲಕ್ಷ ಹದಿನೈದು ಸಾವಿರ ರೂಪಾಯಿ ನಿಧಿಯಿಂದ ಕರ್ನಾಟಕ ಜಾನಪದ ಟ್ರಸ್ಟ್ (ರಿ) ಸಂಸ್ಥೆಯನ್ನು ಪ್ರಾರಂಭಿಸಿದರು. ಜನಪದ ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಕುಶಲಕಲೆ, ಚಿತ್ರಕಲೆ ಮುಂತಾದವುಗಳ ಸಂರಕ್ಷಣೆ ಇದರ ಮೂಲ ಉದ್ದೇಶ. ಜಾನಪದ ಲೋಕ ಈ ಟ್ರಸ್ಟಿನ ನಿರ್ಮಾಣ. ನಿರ್ಭಾಗ್ಯ ಜನಪದ ಕಲಾವಿದರ ಬಾಳಿಗೆ ಭರವಸೆ ತುಂಬುವ ಕೆಲಸ ಜಾನಪದ ಲೋಕದ ಆಶಯ. ಜನಪದ ಸಂಸ್ಕೃತಿಯ ಸೌರಭವನ್ನು ನಾಡಿನಾದ್ಯಂತ ಹರಡುವುದು, ಜನಪದರ ಬದುಕು, ಕಲೆ, ಆಚರಣೆ, ಹಬ್ಬ ಹರಿದಿನ, ಕುಣಿತ ಮೆರೆತ, ಹಾಡು ಪಾಡುಗಳ ಸಂಗ್ರಹ ಹಾಗೂ ಸಂಶೋಧನೆ ಜಾನಪದ ಲೋಕದ ಗುರಿ.

ಈ ಕೇಂದ್ರದಲ್ಲಿ ಹನ್ನೆರಡು ಘಟಕಗಳಿವೆ. ಇವುಗಳಿಗೆ ಅರ್ಥಪೂರ್ಣವಾದ ಹೆಸರುಗಳನ್ನು ಕೊಡಲಾಗಿದೆ.

ಜಾನಪದ ಲೋಕದ ಪ್ರವೇಶದ್ವಾರ

**ಲೋಕಮಾತಾ ಮಂದಿರ :** ಗ್ರಾಮೀಣ ಮಹಿಳೆಯರ ಚಿತ್ರಕಲೆ, ಮನೆಬಳಕೆ ವಸ್ತುಗಳಿಗೆ ಮೀಸಲಾದ ಕಟ್ಟಡ. ಗ್ರಾಮೀಣ ಮಹಿಳೆಯರ ಕರಕುಶಲತೆಯನ್ನು ಇಲ್ಲಿನ ಹೆಚ್ಚಿನ ವಸ್ತುಗಳು ಪ್ರತಿಬಿಂಬಿಸುತ್ತವೆ. ಚಿತ್ತಾರಗಳು, ಪಟಗಳು ಮನ ಸೆಳೆಯುತ್ತವೆ. ಸಾಗರದ ದೀವರ ಸಮುದಾಯದ ಮನೆಯ ಹಸೆಗೋಡೆ ಚಿತ್ತಾರಗಳು, ಬುಟ್ಟಿ ಚಿತ್ತಾರಗಳು, ಕುಸರಿ ಕೆಲಸಗಳು ಚಿತ್ತಾಕರ್ಷಕವಾಗಿವೆ. ಹಾಲಕ್ಕಿ ಒಕ್ಕಲಿಗರು, ಗೊಂಡರು, ಮುಕ್ರಿಯರು, ಕುಡುಬಿಯರು, ಗೌಳಿಗರು ಬಳಸುವ ಬಿದಿರು, ಬೆತ್ತ, ಮರದಿಂದ ಮಾಡಿದ ಅಡುಗೆ ಮನೆ ಸಲಕರಣೆಗಳು ಅವರ ಕುಶಲ ಕಲೆಯ ಉತ್ಕೃಷ್ಟ ಉದಾಹರಣೆಗಳಾಗಿವೆ. ವಾಡೆ, ಗುಡಾಣ, ಮಡಕೆಗಳೂ ಮರದ ಪೆಠಾರಿ ಪೆಟ್ಟಿಗೆಗಳೂ ತೊಟ್ಟಿಲುಗಳೂ ಗಮನ ಸೆಳೆಯುತ್ತವೆ.

**ಚಿತ್ರಕುಟೀರ :** ಇಲ್ಲಿ ಧ್ವನಿಮುದ್ರಿಕೆಗಳ ಆಡಿಯೊ, ವಿಡಿಯೊ ಕ್ಯಾಸೆಟ್‌ಗಳೂ ಸ್ಲೈಡುಗಳೂ ಛಾಯಾಚಿತ್ರಗಳೂ ವಸ್ತುಗಳೂ ಪುಸ್ತಕಗಳೂ ಹಸ್ತಪ್ರತಿಗಳೂ ಅಪರೂಪದ ಗ್ರಂಥಗಳ ಸಂಗ್ರಹವೂ ಪ್ರದರ್ಶನಗೊಂಡಿವೆ. ನಾಡಿನ ಹಬ್ಬ, ಕಲೆ, ಆಚರಣೆ, ಜಾತ್ರೆಗಳನ್ನು ಕಣ್ಣ ಮುಂದೆ ತಂದು ನಿಲ್ಲಿಸುವ ಆಕರ್ಷಕ ವರ್ಣಚಿತ್ರಗಳಿವೆ.

**ಲೋಕಮಹಲ್ :** ಇದು ವಸ್ತು ಸಂಗ್ರಹಾಲಯ. ಎರಡಂತಸ್ತಿನ ಕಟ್ಟಡ. ಇದರ ವಿನ್ಯಾಸ ಮನಮೋಹಕವಾಗಿದೆ. ಮದುವೆಯಲ್ಲಿ ಬಳಸುವ ಚಿತ್ತಾರದ ಹಸೆಮಣೆ, ತೇವಟಿಗೆಮಣೆ, ಬಳುವಳಿ ಸಟ್ಟುಗ, ನಾನಾ ಬಗೆಯ ಬಾಸಿಂಗಗಳು, ಬೇಸಾಯದ ಉಪಕರಣಗಳು, ಮೆಕ್ಕೆಕಟ್ಟೆಯ 15 ಅಡಿ ಎತ್ತರದ ಬೃಹತ್ ವಿಗ್ರಹಗಳ ಮಿನಿಮಾದರಿ ವಿಗ್ರಹಗಳು, ತೊಗಲು ಗೊಂಬೆಗಳು ಮೊದಲಾದ ವಸ್ತುಗಳ ವೈವಿಧ್ಯಮಯ ಸಂಗ್ರಹ ಇಲ್ಲಿದೆ. ಸೂತ್ರದ ಗೊಂಬೆಗಳು, ಯಕ್ಷಗಾನ ವೇಷಗಳ ಮಾದರಿಗಳು, ಕರ್ನಾಟಕ ಜನಪದ ವಾದ್ಯಗಳ ಸಂಗ್ರಹ ಅಪಾರವಾಗಿದೆ. ಹೆರಳು, ಕೊರಳು, ಕೈಗಳ ಆಭರಣಗಳನ್ನೂ ಪ್ರದರ್ಶಿಸಲಾಗಿದೆ. ತೂಕ, ಅಳತೆ ಮಾಪನಗಳೂ, ಇಲ್ಲಿವೆ. ಗಂಜೀಫ ಕಲೆಯ ಚಿತ್ರಗಳು, ಮಕ್ಕಳ ಆಟಿಕೆಗಳೂ, ಸೋಮನ ಮುಖವಾಡಗಳು, ಹರಿಗೆ, ಮರದ ಆಳೆತ್ತರದ ಭೂತದ ವಿಗ್ರಹಗಳು ಆಕರ್ಷಕವಾಗಿವೆ.

**ಶಿಲ್ಪಮೇಳ :** ಇಲ್ಲಿರುವ ವೀರಗಲ್ಲು, ಸತೀಕಲ್ಲುಗಳು, ಶಾಸನ ಕಲ್ಲುಗಳು, ರಥ, ಫಿರಂಗಿ ಮೊದಲಾದವು ಗತಕಾಲದ ಚರಿತ್ರೆಯನ್ನು ಸಾರುತ್ತವೆ. ರಾಜ ಮಹಾರಾಜರುಗಳ ಕಾಲದ ಬೃಹದಾಕಾರದ ಕಲ್ಲಿನ ತೊಟ್ಟಿಗಳೂ ಇಲ್ಲಿವೆ.

**ಆಯಗಾರರ ಮೇಳ :** ಕಣ್ಮರೆಯಾಗುತ್ತಿರುವ ಹಳ್ಳಿಯ ಹನ್ನೆರಡು ಬಗೆಯ ಕಸಬುಗಳಾದ ಕುಂಬಾರಿಕೆ, ಕಮ್ಮಾರಿಕೆಯ ಉಪಕರಣಗಳು, ಮರದ ಹಾಗೂ ಕಬ್ಬಿನ ಗಾಣ, ಎಣ್ಣೆಗಾಣ, ಕೊಟ್ಟಣ, ಬೇಸಾಯದ ಸಲಕರಣೆಗಳು ಇಲ್ಲಿ ಪ್ರದರ್ಶನಗೊಂಡಿವೆ. ಬಲೆಗಳು, ನಾಡದೋಣಿಗಳು, ಮೀನು ಕುಣಿಗಳು, ಬೇಟೆಯ ಸಲಕರಣೆಗಳು ಮುಂತಾದ ವಸ್ತುಗಳಿವೆ.

**ದೊಡ್ಡಮನೆ :** ಇದೊಂದು ತೊಟ್ಟಿ ಮನೆ. ಇದು ಎಚ್.ಎಲ್. ನಾಗೇಗೌಡರ ವಂಶದ ದೊಡ್ಡ ಮನೆಯನ್ನು ನೆನಪಿಗೆ ತರುವಂಥ ಪ್ರಯತ್ನ. ಸಭೆಗಳಿಗೆ, ಕಮ್ಮಟ, ಶಿಬಿರಗಳಿಗೆ, ಅತಿಥಿಗಳ ಊಟ ವಸತಿಗೆ ಅತ್ಯಂತ ಅನುಕೂಲಕರವಾಗಿದೆ.

**ಮಹಾದ್ವಾರ :** ಇದು ಬೃಹದಾಕಾರವಾದ ಕೊಂಬುಕಹಳೆ ಹಾಗೂ ಹರಿಗೆಗಳಿಂದ ಅಲಂಕೃತವಾದ ಇಪ್ಪತ್ತು ಅಡಿ ವಿಶಾಲವಾದ ಮಹಾದ್ವಾರ. ದ್ವಾರದ ಎರಡೂ ಬದಿಯಲ್ಲಿ, ಆಕಾಶಕ್ಕೆ ಚಾಚಿನಿಂತ 26 ಅಡಿ ಎತ್ತರದ ಹಿತ್ತಾಳೆಯ ನಂದಿ ಧ್ವಜಗಳಿವೆ. ಮುಖವಾಡದ ಹರಿಗೆ ವೈಷ್ಣವ ಸಂಪ್ರದಾಯವನ್ನು ಪ್ರತಿನಿಧಿಸಿದರೆ, ನಂದಿಧ್ವಜಗಳು ಶೈವ ಸಂಪ್ರದಾಯದ ಪ್ರತೀಕ. ಕಹಳೆಗಳು ಜನಪದ ಸಂಸ್ಕೃತಿಯ ಪ್ರತಿರೂಪ. ಮಹಾದ್ವಾರ ಮುಚ್ಚಿದರೆ, ಎದುರು ಮತ್ತು ಹಿಂಬದಿ ಎರಡರಲ್ಲೂ ಒಂದೇ ಬಗೆಯ ವಿನ್ಯಾಸವನ್ನು ಕಾಣಬಹುದಾಗಿದೆ.

**ಲಾಂಛನ :** ಬೀಸುವ ಕಲ್ಲಿನ ಮುಂದೆ ಕೂತ ಹಳ್ಳಿಯ ಹೆಣ್ಣಿನ ಚಿತ್ರ ಜಾನಪದ ಲೋಕದ ಲಾಂಛನವಾಗಿದೆ. ಗ್ರಾಮೀಣ ಬದುಕಿನಲ್ಲಿ ಬೀಸುವ ಕಲ್ಲು ನಿರಂತರ ಕಾಯಕಕ್ಕೆ ಸಂಕೇತ. ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗೀಯ ಜಲ್ಲ ಜಲ್ಲಾನೆ ಉದುರಮ್ಮ ಎಂದು ಹಳ್ಳಿಯ ಹೆಣ್ಣುಮಗಳು ರಾಗಿಕಲ್ಲನ್ನು ಸ್ತುತಿಸುತ್ತಾಳೆ. ಬೀಸುವಕಲ್ಲಿನಿಂದ ಉದುರುವುದು ನುರಿದ ರಾಗಿ ಹಿಟ್ಟು ಮಾತ್ರವಲ್ಲ ಇಡೀ ಜನಪದ ಕಾವ್ಯ ಭಂಡಾರ. ಈ ಅಂಶವನ್ನು ಸಂಕೇತಿಸುವಂತೆ ಎಪ್ಪತ್ತೈದು ವರ್ಷ ಹಳೆಯದಾದ ಒಂದು ಬೃಹತ್ತಾದ ಬೀಸುವ ಕಲ್ಲು ಲೋಕಮಾತಾ ಮಂದಿರದ ಮುಂದೆ ಸ್ಥಾಪಿತವಾಗಿದೆ. ಎರಡು ಎತ್ತು ಅಥವಾ ಕೋಣಗಳನ್ನು ಕಟ್ಟಿ ತಿರುಗಿಸಬೇಕಾದಷ್ಟು ದೊಡ್ಡದಾದ ಬೀಸುವ ಕಲ್ಲು ಜಾನಪದ ಲೋಕದ ವಿಸ್ಮಯಗಳಲ್ಲೊಂದು.

**ಲೋಕನಿವಾಸ :** ಇದು ಜಾನಪದ ಲೋಕದ ಕಚೇರಿ.

**ಬಯಲು ರಂಗಮಂದಿರ :** ಗ್ರೀಕ್ ರಂಗಭೂಮಿ ಮಾದರಿಯಲ್ಲಿ 800 ಪ್ರೇಕ್ಷಕರು ಕುಳಿತುಕೊಳ್ಳಬಹುದಾದಷ್ಟು ವಿಶಾಲವಾದ ಬಯಲು ರಂಗಮಂದಿರ. ಜಾನಪದ ಲೋಕದ ಸಮಸ್ತ ಚಟುವಟಿಕೆಗಳು ಇಲ್ಲಿ ನಡೆಯುತ್ತವೆ.

(ಎನ್.ಎಚ್.ಎಂ.)

**ಜಾವಗಲ್ ಶ್ರೀನಾಥ್ :** 1969– ಭಾರತದ ಕ್ರಿಕೆಟ್ ಆಟಗಾರ. ವೇಗದ ಬೋಲರ್. 1969 ಆಗಸ್ಟ್ 31ರಂದು ಮೈಸೂರಿನಲ್ಲಿ ಜನಿಸಿದರು. ಕರ್ನಾಟಕ, ಗ್ಲೌಸೆಸ್ಟರ್‌ಷೈರ್, ಲೀಸೆಸ್ಟರ್‌ಷೈರ್ ಮತ್ತು ಭಾರತ ತಂಡಗಳ ಪರವಾಗಿ ಆಡಿದರು. ಬಲಗೈ ಮಧ್ಯಮ ವೇಗದ ಎಸೆತಗಾರರೆಂದು (ಬೋಲರ್) ಪರಿಣತಿ ಪಡೆದರು. ಬ್ಯಾಟಿಂಗ್ ಪ್ರದರ್ಶನವನ್ನೂ ಮಾಡಿದ್ದಾರೆ. ಅದರಲ್ಲೂ ಬಲಗೈ ಆಟಗಾರರೇ. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನ ವಿದ್ಯಾರ್ಥಿ. ಬಿ.ಇ. ಪದವೀಧರ.

ಇವರು 1989ರಲ್ಲಿ ಪ್ರಥಮ ದರ್ಜೆಯ ಪಂದ್ಯಗಳಲ್ಲಿ ಆಡತೊಡಗಿದರು. ಟೆಸ್ಟ್ ಪಂದ್ಯದಲ್ಲಿ ಆಡಲು ಪ್ರವೇಶ ಪಡೆದಾಗ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕದ ವೇಗದ ಬೋಲರುಗಳಿಗೆ ಸರಿಸಮರೆಂಬ ಪ್ರತೀತಿ ಇತ್ತು. ಆಸ್ಟ್ರೇಲಿಯ ಪ್ರವಾಸ ತಂಡದ ಆಲನ್ ಬಾರ್ಡರರಿಂದ ಸೈ ಎನಿಸಿಕೊಂಡರು. ಅನಂತರ ದಕ್ಷಿಣ ಆಫ್ರಿಕದ ಪ್ರವಾಸದಲ್ಲೂ (1992) ಒಳ್ಳೆಯ ಪ್ರದರ್ಶನ ನೀಡಿದರು. ಭಾರತದಲ್ಲಿ ಟೆಸ್ಟ್ ಪಂದ್ಯಾವಳಿಯಲ್ಲಿ ಇವರಿಗೆ ಸ್ಥಾನ ದೊರೆಯಲಿಲ್ಲ. ಕಪಿಲ್‌ದೇವ್ ನಿವೃತ್ತಿಯ ಅನಂತರ ಶ್ರೀನಾಥ್ ಹೆಚ್ಚು ಪ್ರಕಾಶಕ್ಕೆ ಬಂದರು. ಕಪಿಲ್‌ದೇವರ ಸ್ವಿಂಗ್ ಎಸೆತಗಳು ಕ್ರಿಕೆಟ್ ಅಭಿಮಾನಿಗಳ ಮನ ಸೂರೆಗೊಂಡಿದ್ದವು. ಅನಂತರ ಬಂದ ಜಾವಗಲ್ಲರು ಆ ಶೈಲಿಯನ್ನು ಮುಂದುವರಿಸಿದರೆನ್ನಲಾಗಿದೆ. ಹನ್ನೊಂದು ವರ್ಷಗಳ ಕಾಲ ಅಂತಾಷ್ಟ್ರೀಯ ಪಂದ್ಯಾಟಗಳಲ್ಲಿ ಪಾಲ್ಗೊಂಡು ಇವರು ಆ ಕ್ಷೇತ್ರದಿಂದ ನಿರ್ಗಮಿಸಿದರು. ಕಪಿಲದೇವ್ ಅನಂತರದ ಪಟ್ಟ ಇವರದೇ ಎನಿಸಿಕೊಂಡರು. ಇವರ ಎಸೆತದ ಪ್ರಧಾನ ಲಕ್ಷಣವೆಂದರೆ ಭುಜಪರಾಕ್ರಮ. ಪಿಚ್ಚಿಗೆ ನೇರವಾಗಿ



ಅತ್ಯಂತ ಬಲದಿಂದ ಕೂಡಿ ಪ್ರಹಾರ ಮಾಡುವುದರಲ್ಲಿ ನಿಷ್ಣಾತರೆಂದು ಹೆಸರು ಮಾಡಿದರು. ತುಂಬ ಸಪ್ಪೆಯ ವಿಕೆಟ್ಟಿನ ಮೇಲೂ ವೇಗ ಮತ್ತು ಪುಟಿತ ಸಾಧಿಸು ತ್ತಿದ್ದರು. ಅನಿರೀಕ್ಷಿತ ಇನ್ ಸ್ವಿಂಗರ್ ಮತ್ತು ವಿಳಂಬಿತ ಹಾಗೂ ಮಾರಕ ಮಾರ್ಕ ರುಗಳಿಂದಲೂ ಬ್ಯಾಟ್ ದಾರರಿಗೆ ಯಮಸದೃಶ ಎನಿಸಿಕೊಂಡಿದ್ದರು. ಲೈನ್ ಮತ್ತು ಲೆಂಗ್ತ್ ವಿಚಾರದಲ್ಲಿ ಬೋಲಿಂಗಿನ ಮೂಲಭೂತ ಗುಣಲಕ್ಷಣವನ್ನು ಕುರಿತಂತೆ ಎಂದಿಗೂ ರಾಜಿಯ ಮನೋಧರ್ಮ ತೋರಿಸಲಿಲ್ಲ. ಲೈನು ಮತ್ತು ಲೆಂಗ್ತುಗಳನ್ನು ಯಾವಾಗಲೂ ಕಾಪಾಡಿಕೊಳ್ಳುತ್ತಿದ್ದರು.

ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಪ್ರಥಮತಃ ಇವರು ಭಾಗವಹಿಸಿದ್ದು ಪಾಕಿಸ್ತಾನದ ವಿರುದ್ಧ. ಷಾರ್ಜದಲ್ಲಿ ವಿಲ್ಸ್ ಟ್ರೋಫಿಗಾಗಿ ಭಾರತ ಆಡಿದ ಆಟದಲ್ಲಿ. ಟೆಸ್ಟ್ ಆಟದಲ್ಲಿ ಇವರು ಪ್ರಥಮತಃ ಭಾಗವಹಿಸಿದ್ದು 1991-92ರಲ್ಲಿ. ಭಾರತದ ಆಸ್ಟ್ರೇಲಿಯ ಪ್ರವಾಸದ ಅಂಗವಾಗಿ ಬ್ರಿಸ್‌ಬೇನ್‌ನಲ್ಲಿ ನಡೆದ ಪ್ರಥಮ ಪಂದ್ಯದಲ್ಲಿ ಭಾರತದ ವೇಗದ ಆಕ್ರಮಣ ಶೀಲ ಆಟದ ನಾಯಕತ್ವ ಶ್ರೀನಾಥರದಾಗಿತ್ತು. ವೆಸ್ಟ್ ಇಂಡೀಸ್ ತಂಡದ ವಿರುದ್ಧವಾಗಿಯೂ ಇವರು ಆಡಿದರು.

ಶ್ರೀನಾಥರು ಒಂದು ದಿನದ ಅಂತಾರಾಷ್ಟ್ರೀಯ ಆಟದಲ್ಲಿ ಒಳ್ಳೆಯ ದಾಖಲೆ ಸಾಧಿಸಿದರು. ಡೆನಿಸ್‌ಲಿಲೀ ಮತ್ತು ವಾಕಾರ್‌ಯೂನಸ್ ಬಿಟ್ಟರೆ ಬೇರೆ ಯಾರೂ ಇವರಷ್ಟು ಕಡಿಮೆ ಆಟಗಳಲ್ಲಿ ನೂರು ವಿಕೆಟ್ಟುಗಳನ್ನು ಬಗಲಿಗೆ ಹಾಕಿಕೊಂಡಿರಲಿಲ್ಲ. ಇವರು ಇನಿಂಗ್ಸ್ ಕೊನೆಯ ಬ್ಯಾಟ್‌ದಾರರಾಗಿ ಅತ್ಯಂತ ವೇಗದಲ್ಲಿ ರನ್ನು ಮಾಡಿದ್ದೂ ಉಂಟು. ಇವರು 752 ಒಂದು ದಿನದ ಅಂತಾರಾಷ್ಟ್ರೀಯ ಆಟಗಳಲ್ಲಿ ಬ್ಯಾಟ್ ಮಾಡಿ ಒಟ್ಟು 830ರನ್ನು ಗಳಿಸಿದ್ದರು. ಇವರು ಗಳಿಸಿದ ಅತಿ ಹೆಚ್ಚಿನ ರನ್ 53, ಅರ್ಧ ಶತಕ. ಇವರು ಬೋಲರ್ ಆಗಿ ಗಳಿಸಿದ ವಿಕೆಟುಗಳು 267. 23ರನ್ನು ಕೊಟ್ಟು 5 ವಿಕೆಟ್ ತೆಗೆದುಕೊಂಡಿದ್ದು ಇವರ ಅತ್ಯುತ್ತಮ ಸಾಧನೆ. ಗಳಿಸಿದ ಅತಿ ಹೆಚ್ಚಿನ ರನ್ 76. ಬೋಲ್ ಮಾಡಿ ಪಡೆದ ವಿಕೆಟುಗಳು 185. ಅತ್ಯುತ್ತಮ ಸಾಧನೆಯೆಂದರೆ 86ಕ್ಕೆ 8 ವಿಕೆಟ್ ಪಡೆದದ್ದು.

ಮೈಸೂರು ಎಕ್ಸ್‌ಪ್ರೆಸ್ ಎಂಬ ಹೊಗಳಿಕೆಗೆ ಭಾಜನರಾಗಿದ್ದ ಶ್ರೀನಾಥ್ ಅವರು 1997-98ರಲ್ಲಿ ಗಾಯಗೊಂಡು ಶಸ್ತ್ರಚಿಕಿತ್ಸೆ ಪಡೆಯಬೇಕಾಯಿತು. ಅತಿಯಾಗಿ ಬೋಲ್ ಮಾಡಿದ್ದರ ಪರಿಣಾಮವಿದು ಎನ್ನಲಾಗಿದೆ. ಆಮೇಲೆ ಪೂರ್ಣವಾಗಿ ಚೇತರಿಸಿಕೊಂಡರು. ಭಾರತದ ವಿಶ್ವಕಪ್ ಆಟದಲ್ಲಿ ಇವರು ತಮ್ಮ ಹಿಂದಿನ ಸಾಧನೆಯನ್ನು ಮೀರಿಸುವ ರೀತಿಯಲ್ಲಿ ಆಡಿದರು. ಅನಂತರ ಅಂತಾರಾಷ್ಟ್ರೀಯ ಪಂದ್ಯಗಳಿಂದ ನಿವೃತ್ತರಾದರು. 1996ರಲ್ಲಿ ಭಾರತ ಸರ್ಕಾರ ಇವರಿಗೆ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿತು. ಈಗ ಇವರು ಎಳೆಯರಿಗೆ ಕ್ರಿಕೆಟ್ ಆಟದಲ್ಲಿ ಮಾರ್ಗದರ್ಶನ ನೀಡುತ್ತಿದ್ದಾರೆ. (ಎಚ್.ಎಸ್.ಕೆ.)

**ಜಾವಗಲ್ಲು :** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿರುವ ಒಂದು ದೊಡ್ಡ ಹಳ್ಳಿ. ಐತಿಹಾಸಿಕ ಸ್ಥಳ ಹೋಬಳಿ ಕೇಂದ್ರ. ಹಾಸನದಿಂದ 35ಕಿಮೀ ದೂರದಲ್ಲಿ, ಹಳೇಬೀಡಿನಿಂದ 14ಕಿಮೀ ಪೂರ್ವಕ್ಕೆ ಬಾಣಾವರ ರಸ್ತೆಯಲ್ಲಿದೆ.

ಇಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯ ಹೊಯ್ಸಳ ವಾಸ್ತುಶೈಲಿಯ ಉತ್ತಮ ನಿರ್ಮಾಣಗಳಲ್ಲೊಂದು. ಇದು ಬಳಪದ ಕಲ್ಲಿನಲ್ಲಿ ಕಟ್ಟಿರುವ ತ್ರಿಕೂಟಾಚಲ. ದೇವಾಲಯ ನಕ್ಷತ್ರಾಕಾರದ ಜಗತಿಯ ಮೇಲಿದ್ದು, ಮೂರು ಗರ್ಭಗೃಹಗಳು, ಒಂದು ನವರಂಗ ಮತ್ತು ಮುಖಮಂಟಪವನ್ನೊಳಗೊಂಡಿದೆ. ಆದರೆ ಒಂದು ಶಿಖರ ಮಾತ್ರ ಉಳಿದು ಬಂದಿದೆ. ಹೊರಮೈ ವಿನ್ಯಾಸದಲ್ಲಿ ಹೊಯ್ಸಳ ಶೈಲಿಗೆ ಸಹಜವಾದ ಶಿಲ್ಪ ಪಟ್ಟಿಕೆಗಳು ತಳದಲ್ಲೂ ಅದರ ಮೇಲ್ಭಾಗದಲ್ಲಿ ದೇವ ಶಿಲ್ಪಗಳ ಸಾಲೂ ಅದರ ಮೇಲೆ ಮಕರತೋರಣಾದಿ ವಿಮಾನಗಳೂ ಇವೆ. ಅಧಿಷ್ಠಾನದಲ್ಲಿ ಆನೆ, ಅಶ್ವ, ಲತಾ, ಪೌರಾಣಿಕ ಕಥೆ, ಮಕರ, ಸಿಂಹ, ಹಂಸ - ಇವುಗಳಿಂದ ಕೂಡಿದ ಆರು ಪಟ್ಟಿಕೆಗಳಿವೆ. ಪೌರಾಣಿಕ ಕಥೆ ಇರುವ ಪಟ್ಟಿಕೆಯಲ್ಲಿ ರಾಮಾಯಣದ ಕಥೆ, ನರಸಿಂಹ ಅವತಾರ ಮೊದಲಾದುವು ಶಿಲ್ಪಿತವಾಗಿವೆ. ರಾಮಾಯಣದ ಕಥೆಯಲ್ಲಿ ವಿಶ್ವಾಮಿತ್ರನ ಯಜ್ಞದ ಭಾಗದಿಂದ ಆರಂಭವಾಗಿ ರಾಮಪಟ್ಟಾಭಿಷೇಕದವರೆಗಿನ ಘಟನೆಗಳನ್ನು ನಿರೂಪಿಸಲಾಗಿದೆ. ಇವುಗಳಲ್ಲಿನ ಒಂದು ಶಿಲ್ಪದಲ್ಲಿ ಹನುಮಂತ ದೂರದರ್ಶಕದಿಂದ (ಟೆಲಿಸ್ಕೋಪ್) ಲಂಕೆಯನ್ನು ನೋಡುತ್ತಿರುವಂತೆ ತೋರಿಸಿರುವುದು ಕುತೂಹಲಕಾರಿಯಾದುದು. ಭಿತ್ತಿಯ ಮೇಲಿನ ದೇವಶಿಲ್ಪಗಳಲ್ಲಿ ಹರಿಹರ, ಕಾಳಿಂಗಮರ್ದನ, ಪರಶುರಾಮ, ಕೇಶವ ಮೊದಲಾದ ಶಿಲ್ಪಗಳಿವೆ. ಶಿಖರ ನಕ್ಷತ್ರಾಕಾರದ ಅಡ್ಡಕೊಯ್ತ ವಿನ್ಯಾಸದ್ದು. ಹಿಂದಿದ್ದ ಕೋನಾಕಾರದ ಮೂಲಶಿಖರದ ಮೂರು ಅಂತಸ್ತುಗಳು ಮಾತ್ರ ಈಗ ಉಳಿದಿವೆ. ಅದರ ಮೇಲೆ ಇರುವ ಇಟ್ಟಿಗೆಯ ಭಾಗ ಮತ್ತು ಕಳಶ ಇತ್ತೀಚಿನ ರಚನೆಗಳು. ಒಳಗೆ ದಕ್ಷಿಣದ ಗರ್ಭಗುಡಿಯಲ್ಲಿ ವೇಣುಗೋಪಾಲ, ಉತ್ತರದಲ್ಲಿ ಲಕ್ಷ್ಮೀನರಸಿಂಹ, ಪಶ್ಚಿಮದಲ್ಲಿ ಶ್ರೀಧರ - ಈ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಮುಖ್ಯ ಗರ್ಭಗುಡಿಯ ಸುಕನಾಸಿ ದ್ವಾರದಲ್ಲಿ ಜಾಲಂಧ್ರ ಮತ್ತು ಮೇಲ್ಛಾವಣಿಯಲ್ಲಿ ಒಂಬತ್ತು ಪದ್ಮಗಳು ಮೊದಲಾದ ಅಲಂಕರಣವಿದೆ. ಎಲ್ಲ ಅಲಂಕರಣವೂ ಹೊಯ್ಸಳ ಶೈಲಿಯ ಸಹಜಸುಂದರ ರೂಪದವು. ಮುಂದುಗಡೆಯ ಮುಖಮಂಟಪದಲ್ಲಿ ಹಳೆಯ ಕಲ್ಲಿನ ಜಗತಿಗಳು ಮತ್ತು ದುಂಡುಸ್ತಂಭಗಳು ಮತ್ತು ಅಷ್ಟದಿಕ್ಪಾಲಕಯುತ ಭುವನೇಶ್ವರಿ ಇವೆ. ಇದರ ಮುಂದೆ ಇನ್ನೊಂದು ಮಂಟಪ ಇದೆ. ಇದು ಪಾಳೆಯಗಾರರ ಕಾಲದ ನಿರ್ಮಾಣ. ಮುಂದುಗಡೆ ಇರುವ ಮಹಾದ್ವಾರ ವಿಜಯನಗರ ಕಾಲದ್ದು. ಅದರ ಮೇಲೆ ಈಗ ಗೋಪುರವಿಲ್ಲ. ನರಸಿಂಹ ಗುಡಿಯ ದಕ್ಷಿಣದಲ್ಲಿ ಲಕ್ಷ್ಮೀ ಗುಡಿಯಿದೆ. ಇದೂ ವಿಜಯನಗರ ಕಾಲದ್ದು. ಆದರೆ ಹಳೆಯ ಹೊಯ್ಸಳ ಗುಡಿಯೊಂದರ ಕಲ್ಲು ಮತ್ತು ಕಂಬಗಳನ್ನು ಕೆಲವೆಡೆ ಇದಕ್ಕೆ ಉಪಯೋಗಿಸಲಾಗಿದೆ. ಮೂಲ ದೇವಾಲಯದ ಲಕ್ಷ್ಮೀನರಸಿಂಹ ಪ್ರಧಾನ ಗರ್ಭಗುಡಿಯಲ್ಲಿ ಸ್ಥಾಪಿತವಾಗಿಲ್ಲದಿದ್ದರೂ ಗುಡಿ ಲಕ್ಷ್ಮೀನರಸಿಂಹ ದೇವಾಲಯವೆಂದೇ ಪ್ರಸಿದ್ಧವಾಗಿದೆ. ಈ ನರಸಿಂಹ ವಿಗ್ರಹ ಹರಿಹರೇಶ್ವರ ಬೆಟ್ಟದಲ್ಲಿತ್ತೆಂದೂ

ವಿಷ್ಣುವರ್ಧನ ಇದನ್ನು ಕನಸಿನಲ್ಲಿ ಕಂಡು ಅಲ್ಲಿಂದ ತಂದು ಇಲ್ಲಿ ಸ್ಥಾಪಿಸಿದನೆಂದೂ ಸ್ಥಳ ಪ್ರತೀತಿ. ದೇವಾಲಯದ ರಚನೆಯ ಕಾಲದ ಬಗ್ಗೆ ಶಾಸನಾಧಾರಗಳಿಲ್ಲ. ಆದರೆ ಇಲ್ಲಿನ ಹಲವು ಶಿಲ್ಪಗಳ ಮೇಲೆ ಮಲ್ಲಿತಮ್ಮನ ಹೆಸರಿರುವುದರಿಂದ ಈ ಗುಡಿ 13ನೆಯ ಶತಮಾನದ ಮಧ್ಯಭಾಗದಲ್ಲಿ ರಚಿತವಾಗಿರಬೇಕೆಂದು ಊಹಿಸಲಾಗಿದೆ.

ನರಸಿಂಹ ದೇವಾಲಯದ ಉತ್ತರದಲ್ಲಿ ಗಂಗಾಧರೇಶ್ವರ ಗುಡಿ ಇದೆ. ಇದೂ ಹೊಯ್ಸಳ ಕಾಲದ ಕಟ್ಟಡ. ಗರ್ಭಗುಡಿ, ಉತ್ತರ-ದಕ್ಷಿಣದಲ್ಲಿ ದ್ವಾರಗಳಿರುವ ಸುಕನಾಸಿ ಮತ್ತು ಮುಖಮಂಟಪ ಈ ದೇವಾಲಯದಲ್ಲಿರುವ ಅಂಗಗಳು.

ಇವಲ್ಲದೆ ಈ ಊರಿನಲ್ಲಿ ಬಹು ಶಿಥಿಲವಾಗಿರುವ ಒಂದು ವೀರಭದ್ರ ದೇವಾಲಯ ಮತ್ತು ಒಂದು ಜೈನಬಸದಿ (ಚಂದ್ರನಾಥ) ಇವೆ. ಜೈನಬಸದಿಯನ್ನು ಹಳೆಯ ಹೊಯ್ಸಳ ದೇವಾಲಯಗಳ ಶಿಲೆಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ಗೋಡೆಯ ಮೇಲೆ ಕೆಲವು ತೀರ್ಥಂಕರರ ವಿಗ್ರಹಗಳಿವೆ. ಈ ಊರಿನಲ್ಲಿ ಒಂದು ಬನಶಂಕರಿ ದೇವಾಲಯ ಸಹ ಇದೆ. (ಎ.ಎಂ.ಎ.)

**ಜಿನನಾಥಪುರ** : ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದ ಚಿಕ್ಕಬೆಟ್ಟಕ್ಕೆ ಉತ್ತರದಲ್ಲಿರುವ ಒಂದು ಹಳ್ಳಿ. ಇಲ್ಲಿರುವ ಸುಂದರವಾದ ಜೈನಬಸದಿಯೊಂದರಿಂದ ಈ ಹಳ್ಳಿ ಪ್ರಸಿದ್ಧವಾಗಿದೆ. 12ನೆಯ ಶತಮಾನದ ಆದಿಭಾಗದಲ್ಲಿ ಹೊಯ್ಸಳ ವಿಷ್ಣುವರ್ಧನನ ಹಿರಿಯ ದಂಡನಾಯಕನಾಗಿದ್ದ ಗಂಗರಾಜ ಬೆಳಗೊಳ ತೀರ್ಥಕ್ಕೆ ಹೊಂದಿಕೊಂಡಂತೆ ಜಿನನಾಥಪುರವನ್ನು ಮಾಡಿದನೆಂದು ಶಾಸನವೊಂದು ತಿಳಿಸುತ್ತದೆ. ಆದರೆ ಅವನು ಅಲ್ಲಿ ಬಸದಿಯನ್ನು ನಿರ್ಮಿಸಿದನೇ ಎಂಬುದು ತಿಳಿಯದು. ಊರ ಮುಂದಿರುವ ಬಂಡೆಯ ಮೇಲೆ ನಿರಾಡಂಬರವಾದ ಬಸದಿಯೊಂದು ನಿಂತಿದೆ. ಗರ್ಭಗೃಹ, ಸುಕನಾಸಿ ಮತ್ತು ದೊಡ್ಡದಾದ ನವರಂಗಗಳಿಂದ ಕೂಡಿ ಎತ್ತರವಾದ ಜಗತಿಯ ಮೇಲೆ ನಿಂತಿರುವ, ಸರಳವಾದ ಹೊರಗೋಡೆಗಳುಳ್ಳ ಈ ಬಸದಿಯನ್ನು ಗಂಗರಾಜನ ಹಿರಿಯಣ್ಣನಾದ ಬಮ್ಮಚಮೂಪತಿಯ ಮಗ ಏಚ ಚಮೂಪ ಕಟ್ಟಿಸಿದ. ಆದರೆ ಅವನು ಗರ್ಭಗೃಹದಲ್ಲಿ ಪ್ರತಿಷ್ಠೆ ಮಾಡಿಸಿದ ಜಿನಬಿಂಬ ಈಗ ಇಲ್ಲ. ಅದರ ಪೀಠ ಮಾತ್ರ ಅಲ್ಲಿಯ ನವರಂಗದಲ್ಲಿದೆ. ಅದು ಯಾವ ಜಿನನ ಮೂರ್ತಿಯಾಗಿತ್ತೆಂಬುದೂ ತಿಳಿಯದು. ಅದಕ್ಕೆ ಬದಲಾಗಿ ಈಗ ಅಮೃತಶಿಲೆಯ ದೊಡ್ಡದಾದ ಪಾರ್ಶ್ವನಾಥನ ಮೂರ್ತಿ ಇದೆ. ಅದನ್ನು 1889ರಲ್ಲಿ ಭುಜಬಲಯ್ಯ ಎನ್ನುವವರು ಪ್ರತಿಷ್ಠೆ ಮಾಡಿಸಿದರು. ಗರ್ಭಗೃಹದಲ್ಲೂ ಸುಕನಾಸಿಯಲ್ಲೂ ಬೇರೆಡೆಗಳಿಂದ ತಂದು ಇಟ್ಟಿರುವ ಚತುರ್ವಿಂಶತಿ ತೀರ್ಥಂಕರರು, ಪಂಚಪರಮೇಷ್ಠಿಗಳು, ನವದೇವತಾಬಿಂಬ, ನಂದೀಶ್ವರ ಮುಂತಾದ ಸುಂದರವಾದ ಲೋಹಮೂರ್ತಿಗಳಿವೆ.

ಊರಿನ ಪಶ್ಚಿಮಕ್ಕಿರುವ ಶಾಂತಿನಾಥ ಬಸದಿ ಇಲ್ಲಿಯ ಮುಖ್ಯ ಆಕರ್ಷಣೆ. ಬಳಪದ ಕಲ್ಲಿನಲ್ಲಿ ಹೊಯ್ಸಳ ಶೈಲಿಯಲ್ಲಿರುವ ಬಸದಿಯನ್ನು ಕಟ್ಟಿಸಿದವನು ಮೊದಲು ಕಳಚುರಿಗಳಲ್ಲಿ ಮಂತ್ರಿಯಾಗಿದ್ದು ಅನಂತರ ಹೊಯ್ಸಳ ಇಮ್ಮಡಿ ಬಲ್ಲಾಳನಲ್ಲಿ ದಂಡನಾಯಕನಾದ ವಸುಧೈಕಬಾಂಧವ ರೇಚಣ. ಇದರ ನಿರ್ಮಾಣ ಕಾಲ ಸು.1200. ಬಸದಿಯನ್ನು ರೇಚಣ ದಂಡನಾಯಕ ಮಾಡಿಸಿದನೆಂದು ಹೊರಭಿತ್ತಿಯ ಮೇಲಿನ ಶಾಸನ ತಿಳಿಸುತ್ತದೆ. ಅವನು ಶಾಂತಿನಾಥ ದೇವರ ಪ್ರತಿಷ್ಠೆಯನ್ನು ಮಾಡಿ ತನ್ನ ಗುರುಗಳಾದ ಸಾಗರನಂದಿ ಸಿದ್ಧಾಂತ ದೇವರಿಗೆ ಬಿಟ್ಟುದಾಗಿ ಗರ್ಭಗೃಹದ ಮೂರ್ತಿಯ ಪೀಠದ ಮೇಲಿನ ಶಾಸನ ತಿಳಿಸುತ್ತದೆ.

ತಳವಿನ್ಯಾಸದ ಹೊರ ಆಕಾರವನ್ನೇ ಅನುಸರಿಸುವ ಜಗತಿಯ ಮೇಲೆ ನಿರ್ಮಿತವಾಗಿರುವ ಈ ಬಸದಿಗೆ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ಸುಂದರವಾದ ಈ ಬಸದಿಯ ಗರ್ಭಗೃಹದ ಮೇಲೆ ಅಷ್ಟೇ ಸುಂದರವಾಗಿದ್ದ ಗೋಪುರವೂ ಇದ್ದಿರಬೇಕು. ಆದರೆ ಈಗ ಅದರ ಕುರುಹುಗಳೇನೂ ಉಳಿದುಬಂದಿಲ್ಲ. ತಳವಿನ್ಯಾಸ ಚೌಕಾಕಾರವಾಗಿದ್ದರೂ ಹೊರ ಭಿತ್ತಿಯನ್ನು ಕಚ್ಚುಕಚ್ಚಾಗಿ ಹಲವು ಮುಖಗಳನ್ನಾಗಿ ವಿಭಾಗಿಸಿ ಈ ಮುಖಗಳು ಮುಂಚಾಚಿಯೋ ಒಳಸರಿದೋ ಇರುವಂತೆ ನಿರ್ಮಿಸಿದೆ. ಮುಂಚಾಚಿದ ಮುಖಗಳ ಮೇಲೆ ಅರೆಗಂಬಗಳ ನಡುವೆ ಅರೆಮಂಟಪವಿದೆ. ಅದರ ಮೇಲೆ ಮುತ್ತಿನ ತೋರಣವನ್ನುಳ್ಳ ಕಾರ್ನಿಸುಗಳುಂಟು. ಮೇಲೆ 5 ಅಂತಸ್ತಿನ ಅರೆಗೋಪುರಗಳಿವೆ. ಮಂಟಪಗಳಲ್ಲಿ ಜಿನನ ಅಥವಾ ಯಕ್ಷಯಕ್ಷಿಯರ ಮೂರ್ತಿಗಳುಂಟು. ಒಳಸರಿದ ಮುಖಗಳಲ್ಲಿ ಅರೆಗಂಬದ ಮೇಲೆ ಅರೆಗೋಪುರ, ಅದರ ಮೇಲೆ ಕೀರ್ತಿಮುಖ, ಕೀರ್ತಿಮುಖದ ಎರಡು ಕೋರೆಗಳಿಂದಲೂ ಇಳಿಬಿದ್ದಿರುವ ಬಳ್ಳಿ ಸುರುಳಿಗಳಿವೆ. ಅರೆಗಂಬದ ಮುಂದೆ ಮೂರ್ತಿಶಿಲ್ಪವಿದೆ. ಒಂದೊಂದು ದಿಕ್ಕಿನ ಗೋಡೆಯ ಮಧ್ಯದ ಅರೆಮಂಟಪದ ಇಕ್ಕೆಲಗಳಲ್ಲೂ ಲತಾವಿತಾನಗಳ ಕೆಳಗೆ ಹಲವು ಭಂಗಿಗಳಲ್ಲಿರುವ, ಗೀತವಾದ್ಯ ನೃತ್ಯಗಳಲ್ಲಿ ನಿರತರಾದ ಗಂಡು ಹೆಣ್ಣುಗಳನ್ನೂ ಯಕ್ಷಯಕ್ಷಿಯರನ್ನೂ ಸರಸ್ವತಿ ಬ್ರಹ್ಮಮೋಹಿನಿ ಮನ್ಮಥರನ್ನೂ ಕಾಣಬಹುದು. ನಾಟ್ಯದ ಕೆಲವು ಭಂಗಿಗಳಂತೂ ಮೋಹಕವಾಗಿವೆ. ಕಾಲಿಗೆ ಗೆಜ್ಜೆಯ ಪಟ್ಟಿಯೊಂದನ್ನು ಕಟ್ಟಿ ಅರೆ ಬಾಗಿ ತ್ರಿಭಂಗಿಯಲ್ಲಿರುವ, ಅಕ್ಕಪಕ್ಕದವರ ತಾಳಮದ್ದಳೆಯ ಲಯಕ್ಕೆ ಸರಿಯಾಗಿ ಹೆಜ್ಜೆ ಹಾಕುತ್ತಾ ಚಾಮರ ಹಾಕುತ್ತಿರುವ ನರ್ತಕನೊಬ್ಬನ ಮೂರ್ತಿಯನ್ನು ಇಲ್ಲಿ ಗಮನಿಸಬಹುದು. ವಿತಾನಗಳ ಮೇಲೆ ಅರೆಗಂಬಗಳ ನಡುವೆ ಸುರುಳಿ ಸುರುಳಿಯಾಗಿ ಅಲೆಯಲೆಯಾಗಿ ಮೇಲೆ ಹಬ್ಬಿ ಹೋಗುತ್ತಿರುವಂತೆ ಬಿಡಿಸಿರುವ ಬಳ್ಳಿಗಳು ಇಲ್ಲಿಯ ವೈಶಿಷ್ಟ್ಯ. ಇವನ್ನು ಹೊಯ್ಸಳ ಶಿಲ್ಪದಲ್ಲೇ ಅಪೂರ್ವವೆನಿಸುವಷ್ಟು ಅತ್ಯಂತ ಸೂಕ್ಷ್ಮವಾಗಿಯೂ ನವುರಾಗಿಯೂ ಬಿಡಿಸಲಾಗಿದೆ. ಮೂವತ್ತಕ್ಕೂ ಹೆಚ್ಚು ಅರೆಗೋಪುರಗಳಲ್ಲಿ ಒಂದೊಂದೂ ಒಂದೊಂದು ಬಗೆಯಾಗಿದೆ. ಮಣಿತೋರಣಗಳಿಂದ, ಕೀರ್ತಿಮುಖಗಳ ಸಾಲಿನಿಂದ, ಬಳ್ಳಿಸುರುಳಿಯ ಪಟ್ಟಿಕೆಯಿಂದ ಅಲಂಕೃತವಾದ ತಿರುಗಣೆಯಲ್ಲಿ ಕಡೆದ ಹೊಯ್ಸಳ ರೀತಿಯ ಕಂಬಗಳು ನವರಂಗದ ಒಳಹೊಗುತ್ತಿದ್ದಂತೆಯೇ ಕಣ್ಣನ್ನು ಸೆಳೆಯುತ್ತವೆ. ಒಂದು ಕಂಬವನ್ನು ಮಾತ್ರ ಪೂರ್ತಿಗೊಳಿಸಿಲ್ಲ. ನವರಂಗದ ಎರಡು ಕಡೆಯೂ ಎದುರುಬದುರಾಗಿ, ಗೋಡೆಗೆ ಸೇರಿದಂತೆ ಇರುವ, ಕುಸುರಿಕೆಲಸದಿಂದ ತುಂಬಿ ಹೋಗಿರುವ ಎರಡು ಅರೆಮಂಟಪಗಳುಂಟು. ನವರಂಗದ ಒಳಚಾವಣಿಯಲ್ಲಿ ಆಳವಾದ, ಹಲವು ಆಕೃತಿಗಳಲ್ಲಿರುವ ಭುವನೇಶ್ವರಿಗಳಲ್ಲಿಯೂ ಶಿಲ್ಪಚತುರತೆಯನ್ನು ಕಾಣಬಹುದು. ಗರ್ಭಗೃಹದಲ್ಲಿರುವ ಗಂಭೀರ ಮುಖಮುದ್ರೆಯುಳ್ಳ ನೇರನಿಲುವಿನ ಶಾಂತಿನಾಥನ ಮೂರ್ತಿ ಸುಂದರವಾದ್ದು. ಒಟ್ಟಿನಲ್ಲಿ ಶಾಂತಿನಾಥ ಬಸದಿಯಷ್ಟು ಸೂಕ್ಷ್ಮಾಲಂಕರಣದಿಂದ ಕೂಡಿದ ಬಸದಿ ಕರ್ನಾಟಕದಲ್ಲೇ ಬೇರೊಂದು ಇಲ್ಲವೆಂದು ಹೇಳಬಹುದು.

ಊರಿಗೆ ನೈಋತ್ಯದಲ್ಲಿ ಸಮಾಧಿಮಂಟಪವೊಂದುಂಟು. ಐದು ಅಡಿ ಎತ್ತರವಿರುವ, ಚೌಕನಾದ, ನಾಲ್ಕು ಕಡೆಗಳಲ್ಲೂ ಮುಚ್ಚಿರುವ ಈ ಮಂಟಪದ ಮೇಲೆ ಒಂದು ಕಿರುಗೋಪುರ ಇದೆ. 13ನೆಯ ಶತಮಾನದಲ್ಲಿ ಬಾಲಚಂದ್ರದೇವನ ಮಗನೊಬ್ಬ ತೀರಿಕೊಂಡಾಗ ಅವನ ದಹನಸ್ಥಾನದಲ್ಲಿ ನಿರ್ಮಿಸಿದ ಶಿಲಾಕೂಟವಿದೆಂದು ಅದರ ಮೇಲಿನ ಶಾಸನ ತಿಳಿಸುತ್ತದೆ.

ಹೊಯ್ಸಳ ನರಸಿಂಹನ ಮಂತ್ರಿ ಹುಳ್ಳಪ ಈ ಊರಿನಲ್ಲಿ ಒಂದು ಕಲ್ಲಿನ ದಾನಶಾಲೆಯನ್ನು ಕಟ್ಟಿಸಿದನೆಂದು ಶ್ರವಣಬೆಳಗೊಳದ ಒಂದು ಶಾಸನ ತಿಳಿಸುತ್ತದೆ. ಆದರೆ ಈಗ ಅದು ಉಳಿದುಬಂದಿಲ್ಲ. *

**ಜಿನಸೇನಾಚಾರ್ಯ** : ಸು.838. ಪ್ರಸಿದ್ಧ ಜೈನ ಆಚಾರ್ಯರು ಹಾಗೂ ಕವಿ. ಸೇನ ಸಂಘಕ್ಕೆ ಸೇರಿದ ಇವರಿಂದ ಮುಂದೆ ಸೇನಾನ್ವಯ ಅಥವಾ ಸೇನಗಣ ತುಂಬ ಪ್ರಸಿದ್ಧವಾಯಿತು. ಪಂಚಸ್ತೂಪಾನ್ವಯಕ್ಕೆ ಸೇರಿದ ವೀರಸೇನ ಇವರ ಗುರು. ತಮ್ಮ ಗುರುಗಳಂತೆ ಇವರ ವಿದ್ವತ್ತೆಯು ಅಗಾಧವೂ ವಿಶಾಲವೂ ಆಗಿತ್ತು. ಇವರು ಆಜನ್ಮ ಬ್ರಹ್ಮಚಾರಿಗಳಾಗಿದ್ದುಕೊಂಡು ತಮ್ಮ ಇಡೀ ಜೀವನವನ್ನು ವಿದ್ಯಾವ್ಯಾಸಂಗದಲ್ಲೂ ಸಮಾಜೋದ್ಧಾರದಲ್ಲೂ ಕಳೆದರು. ಕರ್ನಾಟಕ ಇವರ ಪ್ರಧಾನ ವಿಹಾರಕ್ಷೇತ್ರವಾಗಿತ್ತು. ವೀರಸೇನ ಮತ್ತು ಜಯಸೇನರಂಥ ವಿದ್ಯಾನಿಧಿಗಳಲ್ಲಿ ವಿದ್ಯಾಭ್ಯಾಸ ನಡೆಸಿದ ಇವರು ಚಿಕ್ಕಂದಿನಲ್ಲೇ ಸರ್ವಶಾಸ್ತ್ರಗಳಲ್ಲಿ ಅಸೀಮಪಾಂಡಿತ್ಯ ಪಡೆದಿದ್ದರು. ಪಾಂಡಿತ್ಯದ ಜೊತೆಗೆ ಪ್ರತಿಭಾಸಂಪತ್ತಿಯೂ ಇತ್ತು. ಇವರ ವಿದ್ವತ್ತು ಪ್ರತಿಭೆ ಕಾವ್ಯಶಕ್ತಿಯನ್ನು ಕುರಿತು ಇವರ ಸಮವಯಸ್ಕರೂ ಸಮಕಾಲೀನರೂ ಹರಿವಂಶಪುರಾಣದ ಕರ್ತೃವೂ ಪುನ್ನಾಟ ಸಂಘಕ್ಕೆ ಸೇರಿದ ಆಚಾರ್ಯರೂ ಆದ ಇನ್ನೊಬ್ಬ ಜಿನಸೇನರು ಪ್ರಶಂಸಿಸಿದ್ದಾರೆ. ರಾಷ್ಟ್ರಕೂಟ ದೊರೆ ಅಮೋಘವರ್ಷ (814-78) ಇವರ ಶಿಷ್ಯವರ್ಗದಲ್ಲಿ ಒಬ್ಬನಾಗಿದ್ದು ಈತ ಜಿನಸೇನಾಚಾರ್ಯರ ಪಾದಗಳಿಗೆ

ವಂದನೆ ಮಾಡಿದ ದಿನದಂದು ತಾನು ಪುನೀತನಾದೆನೆಂದು ಭಾವಿಸುತ್ತಿದ್ದನೆಂದು ಉತ್ತರ ಪುರಾಣದ ಕರ್ತೃ ಗುಣಭದ್ರಾಚಾರ್ಯರು ಹೇಳಿದ್ದಾರೆ. ಪಾರ್ಶ್ವಾಭ್ಯುದಯ, ಜಯಧವಲಾ ಟೀಕೆ, ಪೂರ್ವಪುರಾಣ (ಆದಿಪುರಾಣ) - ಇವು ಜಿನಸೇನರ ಕೃತಿಗಳು.

ಪಾರ್ಶ್ವಾಭ್ಯುದಯ ಒಂದು ಸಂಸ್ಕೃತ ಖಂಡಕಾವ್ಯ. ಇದರಲ್ಲಿ 334 ಮಂದಾಕ್ರಾಂತ ವೃತ್ತಗಳಿವೆ. ಇಲ್ಲಿ ಕಾಳಿದಾಸ ಮಹಾಕವಿಯ ವಿಪ್ರಲಂಭ ಶೃಂಗಾರರಸವಾಹಿನಿಯಾದ ಮೇಘಸಂದೇಶದ ಪದ್ಯಗಳ ಒಂದು ಅಥವಾ ಎರಡು ಪಾದಗಳನ್ನು ತೆಗೆದುಕೊಂಡು ಅವುಗಳಿಗೆ ಸ್ವಂತ ರಚನೆಯ ಪಾದಗಳನ್ನು ಜೋಡಿಸಿ ಪದ್ಯಗಳನ್ನು ರಚನೆ ಮಾಡಿ ವೈರಾಗ್ಯ ಭಾವಪೂರಿತವಾದ ಪಾರ್ಶ್ವನಾಥ' ಚರಿತೆಯನ್ನು ಹೆಣೆಯಲಾಗಿದೆ. ಮೇಘಸಂದೇಶದ ಪದ್ಯಗಳ ಅಂತಿಮ ಪಾದಗಳನ್ನು ಅಳವಡಿಸಿಕೊಂಡು ಸ್ವತಂತ್ರ ಕಾವ್ಯರಚನೆ ಮಾಡಲಾಗಿರುವ ಉದಾಹರಣೆಗಳಿರುವುವಾದರೂ ಅದರ ಎಲ್ಲ ಶ್ಲೋಕಗಳನ್ನಳವಡಿಸಿಕೊಂಡು ತದ್ವಿರುದ್ಧ ಭಾವಪೋಷಕವೂ ಸ್ವತಂತ್ರವೂ ಆದ ಕಾವ್ಯರಚನೆ ಮಾಡಲಾಗಿರುವ ಕೃತಿಯೆಂದರೆ ಇದೊಂದೇ.

ಜಯಧವಲಾ ಟೀಕಾಗ್ರಂಥ. ತಮ್ಮ ಗುರು ವೀರಸೇನರು ಕಷಾಯ ಪಾಹುಡ ಎಂಬ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆಯಲು ಪ್ರಾರಂಭಿಸಿದ್ದರು. ಅಪೂರ್ಣವಾಗಿದ್ದ ಆ ವ್ಯಾಖ್ಯಾನವನ್ನು ಗುರುಗಳ ಆದೇಶದಂತೆ ಜಿನಸೇನರು ಪೂರ್ಣಗೊಳಿಸಿದರು. ಈ ವ್ಯಾಖ್ಯಾನ ಜಿನಸೇನರ ಆಗಮ ವಿದ್ಯಾಪರಿಣತಿಗೆ ಸಾಕ್ಷಿಯಾಗಿದೆ.

ಪೂರ್ವಪುರಾಣ ಅರವತ್ತುಮೂರು ಶಲಾಕಾ ಪುರುಷರ ಚರಿತ್ರವನ್ನು ನಿರೂಪಿಸುವ ಮಹಾಪುರಾಣ ಗ್ರಂಥ. ಇದು ಪೂರ್ವಪುರಾಣ ಮತ್ತು ಉತ್ತರ ಪುರಾಣ ಎಂಬ ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲನೆಯ ಭಾಗದಲ್ಲಿ (ಆದಿಪುರಾಣ) 12 ಸಾವಿರ ಶ್ಲೋಕಗಳೂ 47 ಪರ್ವಗಳೂ ಇವೆ. ಇದರಲ್ಲಿ 42 ಪರ್ವಗಳು ಮತ್ತು 43ನೆಯ ಪರ್ವದ 3 ಶ್ಲೋಕಗಳನ್ನು ಮಾತ್ರ ಇವರು ಬರೆದು ಮುಗಿಸಿ ಕೃತಿ ಪೂರ್ಣಗೊಳ್ಳುವ ಮುನ್ನ ನಿಧನ ಹೊಂದಿದರು. ಪೂರ್ವಪುರಾಣದ ಉಳಿದ ಭಾಗವನ್ನೂ ಉತ್ತರಪುರಾಣವನ್ನೂ (23 ತೀರ್ಥಂಕರರ ಚರಿತ್ರೆ) ಇವರ ಶಿಷ್ಯ ಗುಣಭದ್ರಾಚಾರ್ಯರು ಪೂರ್ಣಗೊಳಿಸಿದರು. ಪೂರ್ವಪುರಾಣ ಪುರಾಣವಷ್ಟೇ ಅಲ್ಲದೆ ಮಹಾಕಾವ್ಯದ ಗುಣವನ್ನೂ ಪಡೆದಿದೆ. ಶೈಲಿ ಅಲಂಕಾರ ಯುಕ್ತವಾಗಿದೆ; ಕಾವ್ಯ ರಸಭರಿತವಾಗಿದೆ. (ಎ.ಎನ್.ಯು.,ಎಂ.ಡಿ.ವಿ.)

**ಜೀವನ :** 1939ರ ನವೆಂಬರಿನಲ್ಲಿ ಆರಂಭವಾದ ಸಾಹಿತ್ಯ ಪ್ರಧಾನ ಮಾಸ ಪತ್ರಿಕೆ. ಮೊದಲ ನಾಲ್ಕು ವರ್ಷ ಧಾರವಾಡದಿಂದ ಪ್ರಕಟವಾಗುತ್ತಿತ್ತು. ದ.ರಾ.ಬೇಂದ್ರೆ, ವಿ.ಕೃ.ಗೋಕಾಕ, ರಂ.ಶ್ರೀ.ಮುಗಳಿ - ಇವರು ಸಂಪಾದಕರಾಗಿದ್ದರು. ನಡುವೆ ಒಂದು ವರ್ಷ, 1942ರಲ್ಲಿ ಪತ್ರಿಕೆ ತ್ರೈಮಾಸಿಕವಾಗಿ ಬರುತ್ತಿತ್ತು. 1944ರಲ್ಲಿ ಇದು ಬೆಂಗಳೂರಿಗೆ ವರ್ಗವಾಯಿತು. 1944ರ ಮೇ ತಿಂಗಳಿಂದ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಸಂಪಾದಕತ್ವದಲ್ಲಿ ಇದು ಪ್ರಕಟವಾಗುತ್ತಿತ್ತು. 1965ರ ಜೂನ್‌ನಲ್ಲಿ ಕೆ.ಗೋಪಾಲಕೃಷ್ಣರಾಯರು, ಅನಂತರ ಸಿದ್ಧವನಹಳ್ಳಿ ಕೃಷ್ಣ ಶರ್ಮರು ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡರು. 1969ರ ಜನವರಿಯಿಂದ ಹಂಪ ನಾಗರಾಜಯ್ಯ ಸಂಪಾದಕರಾದರು. ಪತ್ರಿಕೆ ಆಗಾಗ ವಿಶೇಷ ಸಂಚಿಕೆಗಳನ್ನು ಹೊರತರುತ್ತಿತ್ತು. ಸಾಹಿತ್ಯದಲ್ಲಿ ಒಳ್ಳೆಯದನ್ನು ಬೆಳೆಯಬೇಕು, ಜನಜೀವನದ ಕಂಠವಾಗಿ ಪತ್ರಿಕೆ ತನ್ನ ಮಾತನ್ನು ದಿಟ್ಟವಾಗಿ ಹೇಳಬೇಕು, ಅತ್ಯುಚ್ಚ ಸಾಹಿತ್ಯ-ಸಂಸ್ಕೃತಿಯ ಪರಿಪಕ್ವ ಫಲಗಳನ್ನು ಜನತೆಗೆ ನೀಡಬೇಕು ಎಂಬುದು ಪತ್ರಿಕೆಯ ಸ್ಥೂಲ ಉದ್ದೇಶ. ಕವಿತೆ, ಕಥೆ, ವಿಮರ್ಶೆ, ಪ್ರಬಂಧ, ಪ್ರವಾಸಕಥನ, ಅನುವಾದ, ಕಿರುನಾಟಕ, ಪುಸ್ತಕಪರಿಚಯ ಮೊದಲಾದ ಸಾಹಿತ್ಯದ ಬರೆಹಗಳನ್ನಷ್ಟೇ ಪತ್ರಿಕೆ ಪ್ರಕಟಿಸುತ್ತ ಬಂತು. ಈ ಪತ್ರಿಕೆ ಅನೇಕ ಹೊಸ ಲೇಖಕರನ್ನು ಬೆಳಕಿಗೆ ತಂದಿತು.




ಮಾಸ್ತಿ ವೆಂಕಟೇಶಅಯ್ಯಂಗಾರ್ ಸಂಪಾದಕರಾಗಿದ್ದಾಗ ಬರೆಯುತ್ತಿದ್ದ ಅವರ ಸಂಪಾದಕೀಯ ಬರೆಹಗಳು ವೈಶಿಷ್ಟ್ಯ ಪೂರ್ಣವಾಗಿದ್ದವು. ಪ್ರಚಲಿತ ವಿಚಾರಗಳನ್ನು ಕುರಿತ, ಪೂರ್ವಗ್ರಹವಿಲ್ಲದ ಉತ್ತಮ ಸಮೀಕ್ಷೆಗೆ ಇವು ಮಾದರಿಗಳಾಗಿವೆ. *

**ಜುಂಜಪ್ಪ :** ಕಾಡುಗೊಲ್ಲ ಸಮುದಾಯದ ಒಬ್ಬ ಸಾಂಸ್ಕೃತಿಕ ವೀರ. ಆ ಸಮುದಾಯದ ಸಂಸ್ಕೃತಿಯನ್ನು ರೂಪಿಸಿ ಉನ್ನತಿಯನ್ನು ಬೆಳಗಿದವನೆಂದು ಪ್ರಸಿದ್ಧನಾದವ.

ಕಲಾವಿದ ಪಿ.ಆರ್.ತಿಪ್ಪೇಸ್ವಾಮಿಯವರ ರಚನೆ

ಕಾಡುಗೊಲ್ಲರು ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಗೋವುಗಳ ಸಂರಕ್ಷಣೆ ಹಾಗೂ ಬೆಣ್ಣೆ ತುಪ್ಪಗಳನ್ನು ಮಾರಿ ಜೀವಿಸುವುದು ಈ ಜನಾಂಗದ ಮುಖ್ಯ ಕಸಬು. ವ್ಯವಸಾಯವನ್ನು ಅವಲಂಬಿಸಿದವರೂ ಕುರಿ ಸಾಕಣೆಯಲ್ಲಿ ತೊಡಗಿದವರೂ ಈಗ ಹೆಚ್ಚಾಗಿ ಕಂಡುಬರುತ್ತಾರೆ. ಪ್ರತ್ಯೇಕ ನೆಲೆಗಳಲ್ಲಿ ವಾಸಿಸುವ ಇವರು ಮುಖ್ಯ ಗ್ರಾಮವೊಂದರ ಸಮೀಪದಲ್ಲಿ ಹಟ್ಟಿಯೊಂದನ್ನು ಕಟ್ಟಿಕೊಂಡು ವಾಸಿಸುತ್ತಾರೆ. ಆ ಹಟ್ಟಿಗೆ ಪ್ರತ್ಯೇಕ ಹೆಸರಿರುವುದು ವಿರಳ. ಹಾಗಲವಾಡಿ ಹಟ್ಟಿ, ಜೀರಹಳ್ಳಿ ಹಟ್ಟಿ, ತರಮಕೋಟೆ ಹಟ್ಟಿ - ಹೀಗೆ ಹತ್ತಿರವಿರುವ ಮುಖ್ಯ ಊರುಗಳ ಹೆಸರುಗಳೊಡನೆ ಸೇರಿದಂತೆ ಆ ಹಟ್ಟಿಗಳನ್ನು ಗುರುತಿಸಲಾಗುತ್ತದೆ. ಹಟ್ಟಿಗಳ ನಡುವೆ ಅವರ ಆರಾಧ್ಯದೈವಗಳ ದೇವಾಲಯಗಳು (ಗುಬ್ಬ) ಇರುತ್ತವೆ. ಸಮುದಾಯದ ಮುಖಂಡನೇ ಅಲ್ಲಿನ ಪೂಜಾರಿ. ಮೂಲ ಸಂಸ್ಕೃತಿಯನ್ನು ಇಂದಿಗೂ ನಿಚ್ಚಳವಾಗಿ ಉಳಿಸಿಕೊಂಡು ಬಂದಿರುವ ಕಾಡುಗೊಲ್ಲ ಸಮುದಾಯ ಊರುಗೊಲ್ಲರಿಗಿಂತ ಭಿನ್ನವಾದುದು. ಆದರೆ ಈ ಎರಡೂ ಸಮುದಾಯದವರೂ ತಮ್ಮನ್ನು ಯಾದವ ಮೂಲಕ್ಕೆ

ಆರೋಪಿಸಿಕೊಳ್ಳುತ್ತಾರೆ. ಅದರ ಪ್ರಕಾರ ಇವರು ಕೃಷ್ಣನ ಪರಂಪರೆಗೆ ಸೇರಿದವರು. ಸೋದರಮಾವ ಕಂಸನ ಕಿರುಕುಳವನ್ನು ಕೊನೆಯವರೆಗೂ ಸಹಿಸದ ಶ್ರೀ ಕೃಷ್ಣ ಅವನನ್ನು ಕೊಂದು ತನ್ನ ಸಾಮರ್ಥ್ಯವನ್ನು ಮೆರೆದಂತೆ ಜುಂಜಪ್ಪನ ಕಥೆಯೂ ಕೃಷ್ಣನಕಥೆಯ ಚೌಕಟ್ಟಿನಲ್ಲೇ ಬರುತ್ತದೆ. ಇವನೂ ಕಾಡುಮೇಡುಗಳಲ್ಲಿ ದನಗಳನ್ನು ಕಾದುಕೊಂಡು ಗಣೆಯನ್ನು ಊದಿಕೊಂಡು ತನ್ನ ವಿರೋಧಿಗಳನ್ನು ಸದೆಬಡಿದು ಮಹಿಮಾವಂತನೆನಿಸಿಕೊಳ್ಳುತ್ತಾನೆ. ಇವನಿಗೆ ಕೊನೆಯವರೆಗೂ ಸೋದರ ಮಾವಂದಿರ ಕಿರುಕುಳ ಹೆಚ್ಚಾಗಿರುತ್ತದೆ. ಏಳುಗೂಡಿನ ದನಗಳಿಗೆ ಒದಗಿದ ಕಷ್ಟಗಳಿಗೆಲ್ಲ ಅವನ ಸೋದರಮಾವಂದಿರ ಅಸೂಯೆಯೇ ಕಾರಣ. ಕೊನೆಗೆ ಅವರು ಜುಂಜಪ್ಪನಿಗೆ ವಿಷ ಉಣ್ಣಿಸಿ ಕೊಲ್ಲಲು ಪ್ರಯತ್ನಿಸುತ್ತಾರೆ. ಜುಂಜಪ್ಪ ವಿಷದ ಕಜ್ಜಾಯವನ್ನು ಸೇವಿಸುತ್ತಾನೆ. ಸತ್ತು, ಏಳನೆಯ ದಿವಸಕ್ಕೆ ಮತ್ತೆ ಕಾಣಿಸಿಕೊಳ್ಳುತ್ತಾನೆ. ಉರಿಬಾಣಗಳನ್ನು ಬಿಟ್ಟು ಮಾವಂದಿರನ್ನು ಕೊಂದು ಅವರ ಹಟ್ಟಿಯನ್ನು ನಾಶಮಾಡುತ್ತಾನೆ.

ಜುಂಜಪ್ಪ ಐತಿಹಾಸಿಕ ಪುರುಷನೆಂಬುದಕ್ಕೆ ಸ್ಪಷ್ಟವಾದ ಆಧಾರಗಳು ಸಿಕ್ಕದಿದ್ದರೂ ಹಾಗಲವಾಡಿ, ರಾಯಕಳವೇರಹಳ್ಳಿ ಮುಂತಾದ ಸ್ಥಳಗಳಲ್ಲಿ; ಗುಬ್ಬಿ, ಶಿರಾ, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳ ಕೆಲವು ನೆಲೆಗಳಿಗೆ ಸಂಬಂಧಿಸಿದ ಮಾಹಿತಿಗಳಲ್ಲಿ ಜುಂಜಪ್ಪ ಒಬ್ಬ ಮಹಿಮಾವಂತ ಮಾನವವೀರನಾಗಿಯೇ ಬದುಕಿದ್ದವನು ಎಂಬುದು ಸ್ಪಷ್ಟವಾಗುತ್ತದೆ. ಜುಂಜಪ್ಪ ಕರಡಿಯ ಗೊಲ್ಲರ ವಂಶಕ್ಕೆ ಸೇರಿದವ. ಇವನ ತಂದೆ ಕೆಲವು ಜನಪದ ಕಾವ್ಯಗಳ ಪ್ರಕಾರ ಕೆಂಪನ ಮಲ್ಲೇಗೌಡ. ಕೆಲವು ಕಾವ್ಯಗಳ ಪ್ರಕಾರ ಕೆಂಗುರಿ ಮಲ್ಲೇಗೌಡ. ದಕ್ಷಿಣ ಸಂಪ್ರದಾಯದ ಜನಪದ ಗಾಯಕರು ಜುಂಜಪ್ಪನ ವಂಶಾವಳಿಯನ್ನು ಹೀಗೆ ಗುರುತಿಸುತ್ತಾರೆ.

ಪೂಜಾರಿ ಕೊಂಡಪ್ಪ
|
ಕೆಂಗುರಿ ಮಲ್ಲೇಗೌಡ
|
ಕೆಂಪನ ಮಲ್ಲೇಗೌಡ

ಜುಂಜಪ್ಪ | ಮಾರಣ್ಣ | ಮೈಲಣ್ಣ | ಮಾರಕ್ಕ

ಉತ್ತರ ಸಂಪ್ರದಾಯದ ಕಥೆಯ ಪ್ರಕಾರ ಜುಂಜಪ್ಪನ ವಂಶದ ಮೂಲಪುರುಷ ಯಾರು ಎಂಬುದು ಸ್ಪಷ್ಟವಾಗುವುದಿಲ್ಲ. ಚಿತ್ರದೇವರ ಗುಡಿಯ ಏಳು ಮಂದಿ ಗುರಿಕಾರರಲ್ಲಿ ದೇವರ ದಯಮಾರ ಕೊನೆಯವ. ಅವನ ಮಗ ಕೆಂಗುರಿ ಮಲ್ಲೇಗೌಡ. ಅವನ ಹಿರಿಯ ಮಗನೇ ಜುಂಜಪ್ಪ. ಅವನಿಗೆ ಮಾರಣ್ಣ, ಮೈಲಣ್ಣ ಎಂಬ ಇಬ್ಬರು ಸೋದರರು, ಮಾರಕ್ಕ ಎಂಬ ಒಬ್ಬಳೇ ತಂಗಿ.

ಶಿರಾ ತಾಲ್ಲೂಕಿನ ರಾಯಕಳವೇರಹಳ್ಳಿ ಜುಂಜಪ್ಪನ ಮೂಲನೆಲೆಯೆಂದು ಆ ಸುತ್ತಿನವರೂ ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಮೂಲನೆಲೆಯೆಂದು ಆ ಸುತ್ತಿನವರೂ ಹೇಳುತ್ತಾರೆ. ಇದರಿಂದಾಗಿ ಜುಂಜಪ್ಪನ ಹೆಸರು ಹಾಗಲವಾಡಿಯೊಂದಿಗೆ ಸೇರಿಕೊಂಡು ಹಾಗಲವಾಡಿ ಜುಂಜಪ್ಪ ಎಂದೂ ಪ್ರಸಿದ್ಧವಾಗಿದೆ. ಹಾಗಲವಾಡಿಯ ಹಟ್ಟಿಯಲ್ಲಿ ಜುಂಜಪ್ಪನ ಒಂದು ದೇವಾಲಯವಿದೆ. ಅಲ್ಲಿ ದೀವಳಿಗೆಯಲ್ಲಿ ದೊಡ್ಡ ಜಾತ್ರೆಯೊಂದು ನಡೆಯುತ್ತದೆ. ಹಾಗಲವಾಡಿಯ ಪಶ್ಚಿಮಕ್ಕೆ ಕೆಲವು ಕೂಗಿನ ದೂರದಲ್ಲಿ ಗಿರಿಶ್ರೇಣಿಯ ತಪ್ಪಲಲ್ಲಿ ಜುಂಜಪ್ಪನ ಹಟ್ಟಿ ಇದೆ. ಈ ಹಟ್ಟಿಯಿಂದಾಗಿ ಹಾಗಲವಾಡಿಯ ಹೆಸರು ಹೆಚ್ಚಾಗಿ ಕೇಳಿಬರುತ್ತದೆ.

ಜನಪದ ಕಾವ್ಯಗಳಲ್ಲಿ ಜುಂಜಪ್ಪನನ್ನು ಕುರಿತ ಕಾವ್ಯ ಪ್ರಮುಖವಾದುದು. ಅದು ಜುಂಜಪ್ಪನ ಪೂರ್ವಜರ ಕಥೆ, ಜುಂಜಪ್ಪನ ಕಥೆ - ಹೀಗೆ ಎರಡು ಮುಖವಾದುದು. ಸಾಕಷ್ಟು ವಿಸ್ತಾರವಾದ ಈ ಕಾವ್ಯದಲ್ಲಿ ಗೊಲ್ಲಸಮುದಾಯದ ಸಮಗ್ರ ಸಂಸ್ಕೃತಿಯ ಸಾರವನ್ನೇ ಕಾಣಬಹುದು. ಈ ದೃಷ್ಟಿಯಿಂದ ಇದನ್ನು ಅವರ ಕಾಲಪುರಾಣ ಎಂದು ಕರೆಯಬಹುದು. ಈ ಕಾವ್ಯದ ಪ್ರಕಾರ ಜುಂಜಪ್ಪ ಅವತಾರಪುರುಷ. ವೀರಭದ್ರನೇ ಶಿವನ ಕೋರಿಕೆಯಂತೆ ಜುಂಜಪ್ಪನಾಗಿ ಹುಟ್ಟಿದ. ಕಲಿವೀರ ಜುಂಜಪ್ಪ ಎಂಬುದು ಇವನ ಪೂರ್ಣ ಹೆಸರು. ಈತನ ತಾಯಿ ಚಿನ್ನಮ್ಮ. ಅವಳು ಕಂಬೇರ ಗೊಲ್ಲರ ವಂಶದವಳು. ತಾಯಿಯ ಬೆನ್ನಿನಲ್ಲಿ ಹುಟ್ಟಿದ್ದ ಜುಂಜಪ್ಪ ಮಹಿಮೆಗಳಿಂದ, ಗೊಲ್ಲ ಸಮುದಾಯದ ನಾಯಕನೆನಿಸಿ, ಆ ಸಮುದಾಯದ ಸಂಸ್ಕೃತಿಯನ್ನು ರೂಪಿಸಿ, ಅವರ ದೈವವೇ ಆಗಿ ಪೂಜೆಗೊಂಡವನು.

ಜುಂಜಪ್ಪ ಸಂಚರಿಸಿದ ಅನೇಕ ಸ್ಥಳಗಳ ಪ್ರಸ್ತಾಪವೂ ಜನಪದ ಕಾವ್ಯಗಳಲ್ಲಿ ಬರುತ್ತದೆ. ಶಿವಗಂಗೆ, ಮಾಗಡಿ, ಚಿಕ್ಕಮಗಳೂರಿನ ಸಮೀಪದ ಬಾಬಾಬುಡನ್ ಗಿರಿ, ಈಗಿನ ಮಾರಿಕಣಿವೆ ಪ್ರದೇಶ, ಮದಗದ ಗುಡ್ಡ, ಚೋಳೂರು, ಶಿರಾ ಮುಂತಾದ ಪ್ರದೇಶಗಳಲ್ಲಿ ಈತ ಸಂಚರಿಸಿ ತನ್ನ ಏಳುಗೂಡಿನ ದನಗಳನ್ನು ಇಲ್ಲಿನ ಕಾವಲುಗಳಲ್ಲಿ ಮೇಯಿಸಿ, ಅಲ್ಲಲ್ಲಿನ ಬಲಿಷ್ಠ ವ್ಯಕ್ತಿಗಳನ್ನೆಲ್ಲ ಸದೆಬಡಿದು ತನ್ನ ತಮ್ಮಂದಿರಾದ ಮಾರಣ್ಣ, ಮೈಲಣ್ಣ ಇವರನ್ನು ಕೂಡಿಕೊಂಡು ಗೋಪಾಲಕನಾಗಿಯೇ ಸ್ವಶಕ್ತಿ ಸಾಮರ್ಥ್ಯದಿಂದ ಅದ್ವಿತೀಯನಾಗಿ ಮೆರೆದನೆಂದು ಈ ಕಥೆಗಳು ನಿರೂಪಿಸುತ್ತವೆ.

ಜುಂಜಪ್ಪನ ಹೆಸರಿನಲ್ಲಿ ಊರಾಡಲು ಬರುವ ಭಕ್ತರು ಜುಂಜಪ್ಪನ ಗಣೆ ಎಂಬ ಸಾಧನವನ್ನು ತಮ್ಮ ಹೆಗಲಿನಲ್ಲಿ ಹೊತ್ತು ಜುಂಜಪ್ಪನ ಕಾಣಿಕೆ ಎಂದು ಸಾರಿಕೊಂಡು ಬರುತ್ತಾರೆ. ಜುಂಜಪ್ಪನ ಪ್ರತೀಕವಾದ ಈ ಗಣೆ ಒಂದು ಬಿದಿರ ಕೋಲು. ಅದಕ್ಕೆ ನಾನಾರೀತಿಯ ವಸ್ತ್ರಗಳನ್ನು ಸುತ್ತಿ ನಾಗರಹೆಡೆಯನ್ನು ಸಿಕ್ಕಿಸಿ, ನವಿಲುಗರಿಗಳಿಂದ ಅಲಂಕರಿಸಿರುತ್ತಾರೆ. ಜುಂಜಪ್ಪನಿಗೆ ಹರಕೆಹೊತ್ತವರು ಈ ಗಣೆಯವರಿಗೆ ಕಾಣಿಕೆ ಸಲ್ಲಿಸುತ್ತಾರೆ.

ಜುಂಜಪ್ಪನ ಸಂಪ್ರದಾಯದ ಗಣೆ ಎಂಬ ಮತ್ತೊಂದು ವಾದ್ಯ ಅತ್ಯಂತ ಜನಪ್ರಿಯವಾಗಿದೆ. ಸುಮಾರು ಎರಡೂವರೆ ಅಡಿ ಉದ್ದದ ಈ ಬಿದಿರ ಕೊಳವೆ ಒಂದು ದೊಡ್ಡ ಕೊಳಲು-ಪಿಳ್ಳಂಗೋವಿ. ಇದನ್ನು ಊದಿಕೊಂಡು ಗೊಲ್ಲರು ದೇವರನ್ನು ಮೈದುಂಬಿಸಿಕೊಂಡು ಕಣಿ ಹೇಳುತ್ತಾರೆ. ಜುಂಜಪ್ಪನ ಕಾವ್ಯವನ್ನು ಹಾಡುವಾಗ ಹಿಮ್ಮೇಳದ ಜೊತೆಗೆ ಶ್ರುತಿಗಾಗಿ ಈ ಕೊಳಲನ್ನೇ ಬಳಸಲಾಗುತ್ತದೆ. ಗಣೆಯ ನಾದ ಇಂಪಾದುದು, ಮೋಹಕವಾದುದು. ಜುಂಜಪ್ಪ ಕಂಚಿನ ಗಣೆಯನ್ನು ಬಳಸುತ್ತಿದ್ದನೆಂದೂ ಗಣೆಯೂದಿ ತನ್ನ ದನಗಳನ್ನೆಲ್ಲ ಅವನು ತಿರುವುತ್ತಿದ್ದನೆಂದೂ ಕಾವ್ಯದಲ್ಲಿ ವರ್ಣಿತವಾಗಿದೆ. ಒಮ್ಮೆ ಬಟ್ಟನ್ನ ಬಡಮೈಲ ಎಂಬ ಜುಂಜಪ್ಪನ ನೆಚ್ಚಿನ ಹೋರಿಯನ್ನು ಚೋಳೂರು ಪಾಳೆಯಗಾರರು ಕೋಟೆಯಲ್ಲಿ ಕೂಡಿಕೊಂಡಾಗ ಮದಗದ ಗುಡ್ಡವನ್ನೇರಿ ಜುಂಜಪ್ಪ ತನ್ನ ಗಣೆಯನ್ನು ಊದಲು ಆ ಗಣೆಯ ನಾದಕ್ಕೆ ರೋಮಾಂಚನಗೊಂಡ ಬಡಮೈಲ ಕೋಟೆಯನ್ನು ಹಾರಿ ತನ್ನ ಸ್ವಾಮಿಯನ್ನು ಸೇರಿಕೊಂಡಿತು ಎಂಬ ಅದ್ಭುತವಾದ ವರ್ಣನೆಯೂ ಈ ಕಾವ್ಯದಲ್ಲಿ ಬರುತ್ತದೆ.

ಜುಂಜಪ್ಪನ ಕಾವ್ಯ ನಮ್ಮ ಜನಪದ ಕಾವ್ಯಗಳಲ್ಲೆಲ್ಲ ಅತ್ಯುತ್ಕೃಷ್ಟವಾದುದು. ಕಾಡುಮೇಡುಗಳಲ್ಲಿ ದನದ ಹಿಂಡಿನ ಜೊತೆಯಲ್ಲಿ ಅಡ್ಡಾಡಿಕೊಂಡಿದ್ದ ಜುಂಜಪ್ಪನ ಮಹಿಮೆಯನ್ನಷ್ಟೇ ಅದು ಬಣ್ಣಿಸದೆ ಯಾವುದೋ ಗತಕಾಲದ ಜೀವನ ವೈವಿಧ್ಯವನ್ನೂ ಮಾಟಮಂತ್ರಗಳ ಪ್ರಭಾವವನ್ನೂ ಚಿತ್ರಿಸುತ್ತದೆ. ಮಂತ್ರವಾದಿಗಳನ್ನು, ಮಾಟಗಾರರನ್ನು, ಇತರ ದರ್ಪಿಷ್ಠರನ್ನು ಕ್ರಮವಾಗಿ ಜುಂಜಪ್ಪ ಗೆದ್ದುಕೊಂಡು ಹೋದ ಕೌತುಕದ ಕಥೆಯೇ ಈ ಕಾವ್ಯದ ವಸ್ತು. ಈ ಉದಾತ್ತವೀರನ ಅಪೂರ್ವ ವ್ಯಕ್ತಿತ್ವವನ್ನು ಕಾವ್ಯದಲ್ಲಿ ಸುಂದರವಾಗಿ ಕಡೆಯಲಾಗಿದೆ.

ಜುಂಜಪ್ಪನಿಗೆ ಕಾಡುಗೊಲ್ಲರು ಅತ್ಯಂತ ಭಯ, ಭಕ್ತಿ, ಶ್ರದ್ಧೆಗಳಿಂದ ನಡೆದುಕೊಳ್ಳುತ್ತಾರೆ. ಇತರ ಸಮುದಾಯದವರೂ ನಡೆದುಕೊಳ್ಳುತ್ತಾರೆ. ಜುಂಜಪ್ಪನ ಸಂಕೇತವಾಗಿ ಕಾಡುಗೊಲ್ಲರು ತಮ್ಮ ಬಳಿಯಿರುವ ಗಣೆಯನ್ನು ಪೂಜಿಸುತ್ತಾರೆ. ಹಾವು, ಚೇಳುಗಳ ಅಧಿದೈವವಾಗಿಯೂ ಜುಂಜಪ್ಪ ಆರಾಧಿಸಲ್ಪಡುತ್ತಾನೆ. ಮನೆಯಲ್ಲಿ ಹಾವು, ಚೇಳು, ಜರಿ ಮೊದಲಾದ ದುಷ್ಟಪ್ರಾಣಿಗಳು ಕಾಣಿಸಿಕೊಂಡಾಗ, ಕಷ್ಟಕಾರ್ಪಣ್ಯಗಳು ತಲೆದೋರಿದಾಗ ಜುಂಜಪ್ಪನ ಹೆಸರಿನಲ್ಲಿ ಹರಕೆ ಹೊತ್ತರೆ ದುಷ್ಟಪ್ರಾಣಿಗಳು ಕಾಣಿಸಿಕೊಳ್ಳುವುದಿಲ್ಲವೆಂದೂ ಜುಂಜಪ್ಪ ತಮ್ಮೆಲ್ಲ

ಕಷ್ಟಗಳನ್ನು ಪಾರುಮಾಡುವನೆಂದೂ ಜನ ನಂಬುತ್ತಾರೆ. ಕೆಲವು ಪ್ರದೇಶಗಳಲ್ಲಿ ಹರಕೆಯನ್ನು ಹಾವು, ಚೇಳು ಮೊದಲಾದ ಪ್ರಾಣಿಗಳ ಪ್ರತಿಮೆಯನ್ನು ಚಿನ್ನ ಅಥವಾ ಬೆಳ್ಳಿಯಲ್ಲಿ ಮಾಡಿಸಿ ಒಪ್ಪಿಸುವುದುಂಟು. ಬಹುಶಃ ಉರಗ ಭೂಷಣನಾದ ಶಿವನ ವರಪ್ರಸಾದದಿಂದ ಹುಟ್ಟಿದುದರಿಂದ ಜುಂಜಪ್ಪನಿಗೂ ಹಾವು ಚೇಳು ಮುಂತಾದ ಪ್ರಾಣಿಗಳಿಗೂ ಸಂಬಂಧವನ್ನು ಕಲ್ಪಿಸಿರುವಂತೆ ತೋರುತ್ತದೆ. ಜುಂಜಪ್ಪನ ಸಂಪ್ರದಾಯ ಸಂಶೋಧಕರ ಕುತೂಹಲವನ್ನು ಕೆರಳಿಸುವ ಆಸಕ್ತಿದಾಯಕ ಕ್ಷೇತ್ರವಾಗಿದೆ. (ಎಸ್.ಎನ್.ಡಿ.)

**ಜೇನುಸಾಕಣೆ :** ಕರ್ನಾಟಕದಲ್ಲಿ ಪುರಾತನ ಕಾಲದಿಂದಲೂ ರೂಢಿಯಲ್ಲಿರುವ ಒಂದು ಉದ್ಯಮ. ಹಳೆಯ ಕ್ರಮದ ಜೇನುಸಾಕಣೆಯಲ್ಲಿ ಜೇನುನೊಣಗಳ ಆವಶ್ಯಕತೆಗಳನ್ನು ಪೂರೈಸಲಾಗುತ್ತಿರಲಿಲ್ಲವಾದ್ದರಿಂದ ಜೇನು ತುಪ್ಪದ ಉತ್ಪತ್ತಿ ಹೆಚ್ಚಾಗಿರುತ್ತಿರಲಿಲ್ಲ. ಅಲ್ಲದೆ ಕೈಯಿಂದ, ಬಟ್ಟೆಯಿಂದ ಹಿಂಡಿ ಜೇನನ್ನು ತೆಗೆಯುತ್ತಿದ್ದುದರಿಂದ ಅದು ಉತ್ತಮ ಮಟ್ಟದ್ದಾಗಿರುತ್ತಿರಲಿಲ್ಲ. ಆಧುನಿಕ ಜೇನುಕೃಷಿಪದ್ಧತಿಯಲ್ಲಿ ಉತ್ತಮವಾದ ಮರದಿಂದ, ಸರಿಯಾದ ಅಳತೆಯಲ್ಲಿ ತಯಾರುಮಾಡಿದ ಪೆಟ್ಟಿಗೆಗಳಲ್ಲಿ ಜೇನುನೊಣಗಳ ಕುಟುಂಬಗಳನ್ನು ಸಾಕಲಾಗುತ್ತದೆ. ಸಂಸಾರ ಬೆಳೆಸುವ ಅನುಕೂಲತೆಗೂ ಹೆಚ್ಚಾಗಿ ಬರುವ ಜೇನುತುಪ್ಪದ ಶೇಖರಣೆಗೂ ಬೇರೆ ಬೇರೆ ಕೋಣೆಗಳನ್ನು ಒದಗಿಸುವುದರಿಂದ ಮತ್ತು ಜೇನುತುಪ್ಪವನ್ನು ಸುಧಾರಿತ ರೀತಿಯ ಯಂತ್ರದ ಸಹಾಯದಿಂದ ತೆಗೆಯುವುದರಿಂದ ಉತ್ತಮವಾದ ಜೇನುತುಪ್ಪ ದೊರೆಯುತ್ತದೆ. ಈ ಪದ್ಧತಿಯಲ್ಲಿ ಜೇನುನೊಣಗಳ ಆವಶ್ಯಕತೆಯನ್ನು ಆಗಿಂದಾಗ್ಗೆ ಪೂರೈಸಿಕೊಡಲಾಗುತ್ತಿರುವುದರಿಂದಲೂ ಕುಟುಂಬಕ್ಕೆ ಸಾಕಷ್ಟು ಆಹಾರವನ್ನು ಒದಗಿಸುವುದರಿಂದಲೂ ಜೇನು ಕುಟುಂಬಗಳು ಹೆಚ್ಚು ವರ್ಷಗಳವರೆಗೆ ಗೂಡುಗಳಲ್ಲಿ ಉಳಿದು ಆರ್ಥಿಕ ದೃಷ್ಟಿಯಿಂದ ಹೆಚ್ಚು ಲಾಭವನ್ನು ಒದಗಿಸಿಕೊಡುತ್ತವೆ.

ಜೇನುಕೃಷಿ ಲಾಭದಾಯಕವಾಗಿರಬೇಕಾದರೆ ಕೆಳಗಿನ ಮೂರು ಅಂಶಗಳು ಅಗತ್ಯ.

1 ಜೇನು ನೊಣಗಳಿಗೆ ಧಾರಾಳವಾಗಿ ಮಕರಂದ ಮತ್ತು ಪರಾಗವನ್ನು ಒದಗಿಸಿಕೊಡುವ ಗಿಡಮರಗಳಿರಬೇಕು.

2 ಜೇನುಕೃಷಿಯನ್ನು ಪ್ರಾರಂಭಿಸುವ ಸ್ಥಳದಲ್ಲಿ ನಿಸರ್ಗದ ಜೇನುಕುಟುಂಬಗಳು ಹೇರಳವಾಗಿ ಬರುತ್ತಿರಬೇಕು.

3 ಸಾಕಣೆಗಾರರಿಗೆ ಜೇನುಸಾಕಣೆಯಲ್ಲಿ ಆಸಕ್ತಿ ಇರಬೇಕು.

ಕರ್ನಾಟಕದಲ್ಲಿ ಹೆಚ್ಚಾಗಿ ಮಲೆನಾಡು ಪ್ರದೇಶಗಳಲ್ಲಿ ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮತ್ತು ಹಾಸನ, ಶಿವಮೊಗ್ಗ, ಧಾರವಾಡ, ಬೆಳಗಾಂವಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಜೇನುಸಾಕಣೆ ಹೆಚ್ಚು ಲಾಭದಾಯಕವಾದ ಕುಶಲ ಕೈಗಾರಿಕೆಯಾಗಿದೆ. ರಾಜ್ಯದ ಉಳಿದ ಜಿಲ್ಲೆಗಳಲ್ಲಿ, ಅಂದರೆ ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಕೆಲವು ನೈಸರ್ಗಿಕ ವನಸ್ಪತಿಗಳ ಮತ್ತು ವ್ಯವಸಾಯದ ಬೆಳೆಗಳ ಅವಲಂಬನೆಯಲ್ಲಿ ಜೇನುಸಾಕಣೆ ನಡೆಸುವುದಿದೆ. ಜೇನುನೊಣಗಳು ವ್ಯವಸಾಯದ ಬೆಳೆಗಳ ಪರಾಗಸ್ಪರ್ಶ ಕಾರ್ಯವನ್ನು ನಡೆಸಿ ಬೆಳೆಯ ಉತ್ಪತ್ತಿಯನ್ನು ಹೆಚ್ಚು ಮಾಡುವುದರಿಂದ ಎಲ್ಲ ಕಡೆಗಳಲ್ಲೂ ಜೇನುಸಾಕಣೆಗೆ ಆದ್ಯತೆ ನೀಡಲಾಗಿದೆ.

ಜೇನುಸಾಕಣೆಗೆ ರಾಜ್ಯ ಸರ್ಕಾರದ ಪ್ರೋತ್ಸಾಹವೊಂದೇ ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗಳ ಮತ್ತು ಜೇನುಕೃಷಿಕರ ಸಹಕಾರ ಸಂಘಗಳ ನೆರವೂ ಉಂಟು. ಜೇನುಕೃಷಿಗೆ ಅಗತ್ಯವಾದ ಜೇನುಪೆಟ್ಟಿಗೆ ಮತ್ತು ಇತರ ಉಪಕರಣಗಳನ್ನು ಈ ಸಂಘ ಸಂಸ್ಥೆಗಳು ಒದಗಿಸಿ ಕೊಡುತ್ತವೆ. ಈ ಕೃಷಿಯಲ್ಲಿ ಪರಿಣತರಾದವರನ್ನು ಅಲ್ಲಲ್ಲಿ ನೇಮಿಸಿ ಅವರಿಂದ ಗ್ರಾಮಾಂತರ ಜನರಿಗೆ ಜೇನುಕೃಷಿಯನ್ನು ಮಾಡಲು ಅನುಕೂಲವಾದ ಮಾಹಿತಿಯನ್ನು, ತಾಂತ್ರಿಕ ಜ್ಞಾನವನ್ನು ಒದಗಿಸಲಾಗುತ್ತಿದೆ. ಜೇನುತುಪ್ಪಕ್ಕೆ ಯೋಗ್ಯಮಾರುಕಟ್ಟೆ ಸಿಕ್ಕುವಂತೆ ತಕ್ಕ ಏರ್ಪಾಟೂ ಉಂಟು. ಜೇನುಕೃಷಿಯಲ್ಲಿ ಹೆಚ್ಚು ತಿಳಿವಳಿಕೆಯನ್ನು ಕೊಡುವ ಸಲುವಾಗಿ ರಾಜ್ಯಸರ್ಕಾರ ಎರಡು ತಿಂಗಳ ಅವಧಿಯ ತರಬೇತಿ ನೀಡುವ ವ್ಯವಸ್ಥೆ ಮಾಡಿದೆ.

ಬೆಂಗಳೂರು ಮತ್ತು ಮಡಿಕೇರಿಯಲ್ಲಿ ಜೇನುಸಾಕಣೆಯ ಎರಡು ಪ್ರಮುಖ ಕೇಂದ್ರಗಳುಂಟು. ಕೊಡಗಿನ ಭಾಗಮಂಡಲದಲ್ಲಿ ಜೇನುಕೃಷಿ ತರಬೇತಿಕೇಂದ್ರ ಇದೆ. (ಕೆ.ಎಂ.ಜೆ.)

**ಜೇವರಗಿ :** ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಮುಖ್ಯ ಪಟ್ಟಣ. ಇದು ಗುಲ್ಬರ್ಗದಿಂದ 44ಕಿಮೀ ದೂರದಲ್ಲಿದೆ. ಈ ತಾಲ್ಲೂಕನ್ನು ಪೂರ್ವದಲ್ಲಿ ಚಿತ್ತಾಪುರ, ಆಗ್ನೇಯದಲ್ಲಿ ಶಾಹಪುರ, ದಕ್ಷಿಣದಲ್ಲಿ ಸುರಪುರ, ಉತ್ತರದಲ್ಲಿ ಗುಲ್ಬರ್ಗ, ವಾಯವ್ಯದಲ್ಲಿ ಅಫಜಲಪುರ ತಾಲ್ಲೂಕುಗಳೂ ಪಶ್ಚಿಮದಲ್ಲಿ ಬಿಜಾಪುರ ಜಿಲ್ಲೆಯೂ ಸುತ್ತುವರಿದಿವೆ. ಈ ತಾಲ್ಲೂಕು ಯಾದಗಿರಿ ಉಪವಿಭಾಗಕ್ಕೆ ಸೇರಿದೆ. ಇದನ್ನು ಜೇವರಗಿ, ಇಜೆರಿ, ನಲೋಗಿ, ಯಡ್ರಾಮಿ ಮತ್ತು ಅಂದೋಲಾ ಎಂಬ ಐದು ಕಂದಾಯ ವಲಯಗಳಾಗಿ ವಿಂಗಡಿಸಲಾಗಿದೆ. 158 ಗ್ರಾಮಗಳಿಂದ ಕೂಡಿದ ಈ ತಾಲ್ಲೂಕಿನ ವಿಸ್ತೀರ್ಣ 1812.7ಚ.ಕಿಮೀ. ಜನಸಂಖ್ಯೆ 2,34,825.

ಇಂದಿನ ಜೇವರಗಿ ತಾಲ್ಲೂಕು ಸು.1707ರಿಂದ 1857ರವರೆಗೆ ಸುರಪುರದ ನಾಯಕರ ಆಳಿಕೆಗೊಳಪಟ್ಟಿತ್ತು. 1857ರಲ್ಲಿ ವೆಂಕಟಪ್ಪನಾಯಕ ಬ್ರಿಟಿಷರನ್ನು ಎದುರಿಸಿ ಯುದ್ಧಮಾಡಿದ ಕಾರಣದಿಂದ ಆತನ ಸಂಸ್ಥಾನವನ್ನು ಬ್ರಿಟಿಷರು ರದ್ದುಮಾಡಿ ಅದನ್ನು ನಿಜಾಮ ದೊರೆಗೆ ವಹಿಸಿಕೊಟ್ಟರು. ನಿಜಾಮ ಇದನ್ನು ತನ್ನ ಸರಫ್ ಎ ಖಾಸ್‍ಗೆ ಸೇರಿಸಿದ. ಅಂದಿನಿಂದ ಹೈದರಾಬಾದು ಸಂಸ್ಥಾನ ಸ್ವತಂತ್ರ ಭಾರತದಲ್ಲಿ ವಿಲೀನವಾಗುವವರೆಗೆ ಈ ತಾಲ್ಲೂಕು ಸರಫ್ ಎ ಖಾಸ್ ದಲ್ಲಿಯೇ ಇತ್ತು. 1921ರಲ್ಲಿ ತಾಲ್ಲೂಕಿನ ಮುಖ್ಯ ಸ್ಥಳ ಜೇವರಗಿಗೆ ಸ್ಥಳಾಂತರವಾಗುವವರೆಗೆ ಈ ತಾಲ್ಲೂಕು ಅಂದೋಲಾ ತಾಲ್ಲೂಕು ಎನಿಸಿಕೊಂಡಿತ್ತು. ಸು.1863ರಿಂದ 1921ರವರೆಗೆ ಸರ್ಕಾರಿ ದಾಖಲೆಗಳಲ್ಲೆಲ್ಲ ಆಂದೋಲಾ ತಾಲ್ಲೂಕು ಎಂದೇ ಇದೆ.

ಜೇವರಗಿ ತಾಲ್ಲೂಕಿನ ಭೂಮಿ ಸಮುದ್ರಮಟ್ಟದಿಂದ ಸು.1000'-1500' ಎತ್ತರದಲ್ಲಿದೆ. ಭೂಮಿ ಸಮಪಾತಳಿಯಾಗಿದೆ. ಯಡ್ರಾಮಿಯ ಸಮೀಪ ಕರಿಕಲ್ಲಿನ ಚಿಕ್ಕಬೆಟ್ಟದ ಶ್ರೇಣಿಯೊಂದಿದೆ. ಕಲ್ಯಾಣದ ಚಾಳುಕ್ಯರ ಕಾಲದ ದೇವಾಲಯಗಳನ್ನು ನಿರ್ಮಿಸಿರುವುದು ಇಲ್ಲಿಯ ಕಲ್ಲುಗಳಿಂದ. ಇಲ್ಲಿನ ಮಣ್ಣು ಕಪ್ಪು ಎರೆಭೂಮಿ; ನದಿಯ ದಂಡೆಯಲ್ಲಿ ಮೆಕ್ಕಲುಮಣ್ಣಿದೆ. ಇದು ಫಲವತ್ತಾದ ಭೂಮಿಯಾಗಿದೆ. ಭೀಮಾ ನದಿಯ ದಂಡೆಯುದ್ದಕ್ಕೂ ಪದರಗಲ್ಲುಗಳು ಚೆನ್ನಾಗಿ ಹಬ್ಬಿಕೊಂಡಿವೆ. ಇಲ್ಲಿ ಸುಣ್ಣದಕಲ್ಲು ಹೇರಳವಾಗಿ ದೊರಕುತ್ತದೆ. ಇದನ್ನು ವಾಡಿ ಹಾಗೂ ಶಾಹಬಾದ ಸಿಮೆಂಟ್ ಕಾರ್ಖಾನೆಗಳಿಗೆ ಕಳಿಸಲಾಗುತ್ತದೆ. ತಾಲ್ಲೂಕಿನ ದಕ್ಷಿಣ ಭಾಗ ಧಾರವಾಡ ಶಿಲಾಗುಂಪಿಗೆ ಸೇರಿದ ಭೂಮಿ.

ಭೀಮಾ ನದಿ ಈ ತಾಲ್ಲೂಕಿನ ಉತ್ತರ ಗಡಿಯಲ್ಲಿ ಪಶ್ಚಿಮದಿಂದ ಆಗ್ನೇಯಕ್ಕೆ ಹರಿದು ಅಫಜಲಪುರ, ಗುಲ್ಬರ್ಗ ಮತ್ತು ಚಿತ್ತಾಪುರ ತಾಲ್ಲೂಕುಗಳನ್ನು ಬೇರ್ಪಡಿಸಿದೆ. ಜೇವರಗಿಯ ಹತ್ತಿರ ಈ ನದಿಗೆ ಸೇತುವೆಯೊಂದು ಇರುವುದರಿಂದ ಗುಲ್ಬರ್ಗಕ್ಕೆ ನೇರ ಸಂಪರ್ಕವುಂಟು. ಭೀಮಾ ಯೋಜನೆಯಿಂದ ಈ ಭಾಗಕ್ಕೆ ನೀರಾವರಿಯ ಸೌಲಭ್ಯ ಉಂಟಾಗುತ್ತದೆ. ನದಿಯ ದಂಡೆಯಲ್ಲಿ ಕಪ್ಪುಮಣ್ಣಿನ ಭೂಮಿ ಇದ್ದು ಹತ್ತಿಬೆಳೆಗೆ ಪ್ರಸಿದ್ಧವಾಗಿದೆ. ತಾಲ್ಲೂಕಿನ ಒಟ್ಟು ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚು ಭೂಮಿ ಸಾಗುವಳಿಗೆ ಒಳಪಟ್ಟಿದೆ. ಇದರಲ್ಲಿ ನೀರಾವರಿಯ ಸೌಲಭ್ಯವನ್ನು ಪಡೆದಿರುವ ಭಾಗ ಅಲ್ಪ. ಉಳಿದ ಭಾಗದಲ್ಲಿ ಮಳೆಯನ್ನೇ ಆಶ್ರಯಿಸಿ ಬೆಳೆಯನ್ನು ತೆಗೆಯಬೇಕಾಗಿದೆ. ಇಲ್ಲಿನ ವಾರ್ಷಿಕ ಸರಾಸರಿ ಮಳೆ 600ಮಿಮೀ. ಈ ತಾಲ್ಲೂಕಿನದು ಆರೋಗ್ಯಕರವಾದ ಶುಷ್ಕ ವಾಯುಗುಣ. ಕೃಷಿ ಇಲ್ಲಿಯ ಜನರ ಪ್ರಧಾನ ಕಸಬು. ಜೋಳ, ಸಜ್ಜೆ, ಮೆಣಸಿನಕಾಯಿ, ತೊಗರಿ, ಹತ್ತಿ, ಎಣ್ಣೆಕಾಳುಗಳು, ಬಿಳಿಜೋಳ, ಗೋದಿ, ಕಬ್ಬು-ಇವು ಇಲ್ಲಿಯ ಕೃಷಿ ಉತ್ಪನ್ನಗಳು. ನದಿಯ ದಂಡೆಗುಂಟ ಅಲ್ಲಲ್ಲಿ ನೀರನ್ನು ಬಳಸಿಕೊಂಡು ತೋಟಗಾರಿಕೆ ಬೇಸಾಯ ಮಾಡಲಾಗುತ್ತಿದೆ.

ಜೇವರಗಿ ತಾಲ್ಲೂಕಿನಲ್ಲಿ ಅರಣ್ಯವಿಲ್ಲವೆನ್ನಬಹುದು. ಬೇವು, ಮಾವು, ಬಸಲಿ, ಜಾಲಿ ಮರಗಳನ್ನು ಅಲ್ಲಲ್ಲಿ ಕಾಣಬಹುದು. ಕಾಡು ಪ್ರಾಣಿಗಳಲ್ಲಿ ನರಿ, ಗುಂಜಾನರಿ, ತೋಳ, ಚಿಗರೆ, ಮೊಲ ಸಾಮಾನ್ಯ.

ಈ ತಾಲ್ಲೂಕಿನ ಆಂದೋಲಾ, ಮದ್ರಕ ಮೊದಲಾದ ಸ್ಥಳಗಳಲ್ಲಿ ಬೃಹತ್ ಶಿಲಾ ಸಮಾಧಿಗಳಿವೆ. ಅರಳಗುಂಡಿಗೆ ಶರಣಬಸವೇಶ್ವರರ ಜನ್ಮಸ್ಥಾನ, ಕಡಕೋಳ ಎಂಬ ಗ್ರಾಮ ಕೈವಲ್ಯ ವಾಕ್ಯಾಮೃತದ ಕರ್ತೃ ಮಡಿವಾಳಪ್ಪ ಮಹಾಂತಯೋಗಿ ಎಂಬ ವಚನಕಾರರಿದ್ದ ಸ್ಥಳ. ಸೊನ್ನ ಗ್ರಾಮ ಸಿದ್ಧಲಿಂಗಯೋಗಿ (ಸು.1600) ಎಂಬ ವಚನಕಾರರು ಇದ್ದ ಸ್ಥಳ. ಕೋಳಕೂರು ಎಂಬಲ್ಲಿ ಸೊಪ್ಪೆಯಮಠ ಎಂಬ ವೀರಶೈವ ಮಠವಿದೆ. ಇಲ್ಲಿ ಇದ್ದ ಸೊಪ್ಪೆಯ ಸಿದ್ಧಬಸವ ಎಂಬ ವಚನಕಾರ ತೋಂಟದ ಸಿದ್ಧಲಿಂಗೇಶ್ವರರ (ಸು.1470) ಸಮಕಾಲೀನ. ಇವನ ಚರಿತ್ರೆ ಲಕ್ಕಣದಂಡೇಶನ ಶಿವತತ್ತ್ವಚಿಂತಾಮಣಿಯಲ್ಲಿದೆ. ಹೊನಗುಂಟೆಯಲ್ಲಿ ಉಂಡುಪವಾಸಿ ಎಂಬ ವಚನಕಾರ ಇದ್ದನೆಂದು ತಿಳಿದುಬರುತ್ತದೆ. ಇಲ್ಲಿ ಚಂದ್ರಲಾಪರಮೇಶ್ವರಿಯ ದೇವಸ್ಥಾನವೂ ಉಂಟು. ಸನ್ನತಿಯ ಚಂದ್ರಲಾಪರಮೇಶ್ವರಿಯ ಇನ್ನೊಂದು ಪಾದವೇ ಇಲ್ಲಿ ಇದೆಯೆಂದು ಜನರ ನಂಬುಗೆ. ರಾಮಪುರ ನಿಜಶರಣನ ತ್ರಿವಿಧಿಯ ಕರ್ತೃ ಬೊಕ್ಕಪ್ಪ (17ನೆಯ ಶತಮಾನ) ಎಂಬ ವಚನಕಾರನ ಜನ್ಮಸ್ಥಳ. ಯಡ್ರಾಮಿ ಒಂದು ಪುರಾತನ ತೀರ್ಥಕ್ಷೇತ್ರ. ಸಿಂಹಪರ್ಷೆಯ ಪಾಶುಪತರಿಗೆ ಇದು ಒಂದು ಮಹಾ ಕ್ಷೇತ್ರವಾಗಿತ್ತು. 6ನೆಯ ವಿಕ್ರಮಾದಿತ್ಯನ ಹಲವು ಶಾಸನಗಳಲ್ಲಿ ಇದರ ಪ್ರಸ್ತಾಪವುಂಟು. ಕುಳಗೇರಿಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕೆಲವು ಶಾಸನಗಳೂ ದೇವಸ್ಥಾನಗಳೂ ಇವೆ. ಇದರ ಇತಿಹಾಸ, ಪೌರಾಣಿಕ ಕಥೆ ಚಂದ್ರಹಾಸನಿಗೆ ಸಂಬಂಧಪಟ್ಟಿದ್ದು. ಚಂದ್ರಹಾಸನ ರಾಜಧಾನಿ ಕುಂತಳ ಪ್ರದೇಶ ಇದರ ಸುತ್ತಲಲ್ಲೆ ಇತ್ತೆಂದು ಪ್ರತೀತಿ.

ಜೇವರಗಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಗುಲ್ಬರ್ಗ ಕಿಮೀ ದೂರದಲ್ಲಿದೆ. ಜನಸಂಖ್ಯೆ 19,174. ಶಾಹಪುರ ಗುಲ್ಬರ್ಗ ಮಾರ್ಗ ಮತ್ತು ಗುಲ್ಬರ್ಗ ಬಿಜಾಪುರ ಮಾರ್ಗಗಳು ಈ ಪಟ್ಟಣದ ಮುಖಾಂತರ ಹಾದುಹೋಗಿವೆ. ಜೇವರಗಿ ಪಟ್ಟಣದ ಉತ್ತರದಲ್ಲಿ ಭೀಮಾ ನದಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಇಲ್ಲಿ ಕೆಲವು ಜೈನ ಬಸದಿಗಳಿವೆ. ಇದು ಜೈನರ ಯಾತ್ರಾಸ್ಥಳ. 17ನೆಯ ಶತಮಾನದ ಮಧ್ಯದಲ್ಲಿದ್ದ ಷಣ್ಮುಖಸ್ವಾಮಿಗಳು ಇಲ್ಲಿನ ವೀರಶೈವ ಪುರಾತನ ಮಠದಲ್ಲಿ ಇದ್ದು ಅಖಂಡೇಶ್ವರ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಂತೆ ತಿಳಿದುಬರುತ್ತದೆ. (ಎಸ್.ಜೆ.ಎ.)

**ಜೈತುಗಿ I :** ಸೇವುಣ ವಂಶದ ಅರಸ (ಸು.1192-99). ತನ್ನ ತಂದೆ ಐದನೆಯ ಭಿಲ್ಲಮನ ತರುವಾಯ ಪಟ್ಟವನ್ನೇರಿದ. ಇವನಿಗೆ ಜೈತ್ರಪಾಲ ಮತ್ತು ಜೈತ್ರಸಿಂಹ ಎಂಬ ಹೆಸರುಗಳೂ ಇದ್ದುವು. ಇವನು ಪಟ್ಟಕ್ಕೆ ಬಂದಾಗ ಹೊಯ್ಸಳ ಎರಡನೆಯ ಬಲ್ಲಾಳ ದಕ್ಷಿಣದಲ್ಲಿ ಪ್ರಬಲನಾಗಿದ್ದ. ಇದನ್ನು ಮನಗಂಡ ಜೈತುಗಿ ಪೂರ್ವದತ್ತ ರಾಜ್ಯವಿಸ್ತರಿಸಲು 1193ರಲ್ಲಿ ಕಾಕತೀಯರ ಮೇಲೆ ಯುದ್ಧ ಹೂಡಿದ. ಈ ಯುದ್ಧದಲ್ಲಿ ಕಾಕತೀಯ ರುದ್ರ ಸತ್ತ. ಸೇಡು ತೀರಿಸಿಕೊಳ್ಳಲು ಮತ್ತೆ ಎರಿಬಂದ ಅವನ ತಮ್ಮ ಮಹಾದೇವನೂ ಮರಣವನ್ನಪ್ಪಿದ. ಇವನ ಮಗ ಗಣಪತಿ ಸೇವುಣರ ಬಂದಿಯಾದ. ಕೆಲಕಾಲದ ಅನಂತರ ಜೈತುಗಿ ಅವನನ್ನು ಸೆರೆವಾಸದಿಂದ ವಿಮುಕ್ತಿಗೊಳಿಸಿ ಕಾಕತೀಯ ಸಿಂಹಾಸನದಲ್ಲಿ ಸ್ಥಾಪಿಸಿದ. ಜೈತುಗಿಯ ಮರಣಾನಂತರ (ಸು.1200) ಇವನ ಮಗ ಸಿಂಘಣ ರಾಜ್ಯಭಾರವನ್ನು ವಹಿಸಿಕೊಂಡ. (ಆರ್.ಟಿ.ಎಸ್.ಜಿ.)

**ಜೈನಧರ್ಮ :** ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಜೈನಧರ್ಮ ಮಹತ್ತ್ವದ ಸ್ಥಾನವನ್ನು ಪಡೆದಿದೆ. ಈ ಧರ್ಮ ಉತ್ತರ ಭಾರತದಲ್ಲಿ ಉಗಮವಾದುದಾದರೂ ಕರ್ನಾಟಕದಲ್ಲಿ ಪ್ರಚಾರಗೊಂಡಂದಿನಿಂದ ಇಲ್ಲಿನ ಸಾಹಿತ್ಯ, ಕಲೆ, ಭಾಷೆ, ವಿದ್ಯಾಪ್ರಸಾರ ಮತ್ತು ಸಾಮಾನ್ಯ ಜನರ ಜೀವನ ವಿಧಾನ ಹಾಗೂ ನೈತಿಕ ಮೌಲ್ಯಗಳನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಸಂದರ್ಭದಲ್ಲಿ ಶ್ರವಣಬೆಳಗೊಳ, ಕಾರ್ಕಳ, ಮೂಡಬಿದರೆ, ಹುಮಚ, ಲಕ್ಮೇಶ್ವರ ಮೊದಲಾದೆಡೆಗಳ ಜೈನ ವಾಸ್ತುಶಿಲ್ಪ ಕೃತಿಗಳನ್ನೂ ಕನ್ನಡ ಸಾಹಿತ್ಯದಲ್ಲಿ ಜೈನಯುಗವೆಂದೇ ಹೆಸರಾಗಿರುವ 10-12ನೆಯ ಶತಮಾನಗಳ ಅವಧಿಯಲ್ಲಿ ಹುಟ್ಟಿದ ಉತ್ಕೃಷ್ಟ ಸಾಹಿತ್ಯವನ್ನೂ ನೆನೆಯಬಹುದು. ಜೈನಧರ್ಮದ ಕೊಡುಗೆಗಳಿಂದ ಕರ್ನಾಟಕ ಸಂಸ್ಕೃತಿ ಸಂಪದ್ಭರಿತವಾದಂತೆ, ಜೈನಧರ್ಮಕ್ಕೆ ಕರ್ನಾಟಕದ ಕಾಣಿಕೆ ಅಲ್ಪವಾದುದೇನಲ್ಲ. ತೀರ್ಥಂಕರರೆಲ್ಲ ಉತ್ತರ ಭಾರತದಲ್ಲೆ ಜನಿಸಿ ಧರ್ಮಪ್ರಚಾರ ಮಾಡಿದವರಾದರೂ ಮುಂದೆ ಜೈನಧರ್ಮಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ರಚಿಸಿ ಆಚಾರ ವಿಚಾರಗಳನ್ನು ಪ್ರಚುರಗೊಳಿಸಿದ ಆಚಾರ್ಯರುಗಳಲ್ಲಿ ಹೆಚ್ಚಿನವರು ಕರ್ನಾಟಕದವರೇ ಆಗಿದ್ದಾರೆ. ಕುಂದಕುಂದಾಚಾರ್ಯ (ಕೊಂಡಕುಂದಾಚಾರ್ಯ), ಸಮಂತಭದ್ರ, ಪೂಜ್ಯಪಾದ, ಅಕಲಂಕ, ವೀರಸೇನ, ಜಿನಸೇನ ಮೊದಲಾದ ಈ ನಾಡಿನ ಆಚಾರ್ಯರು ಜೈನಧರ್ಮದ ಇತಿಹಾಸದಲ್ಲಿ ಗೌರವಾನ್ವಿತ ಸ್ಥಾನವನ್ನು ಗಳಿಸಿದವರಾಗಿದ್ದಾರೆ. *

**ಇತಿಹಾಸ :** ಕರ್ನಾಟಕದಲ್ಲಿ ಜೈನಧರ್ಮ ಕ್ರಿಸ್ತಪೂರ್ವದ ಕಾಲದಿಂದಲೇ ಹರಡಿರಬೇಕೆಂಬುದಕ್ಕೆ ಅನಂತರಕಾಲದ ಹಲವು ಸಾಹಿತ್ಯಕ ಮತ್ತು ಶಾಸನಗಳ ಆಧಾರಗಳು ದೊರಕುತ್ತವೆ. ಸು.10ನೆಯ ಶತಮಾನದಲ್ಲಿ ರಚಿತವಾದ ವಡ್ಡಾರಾಧನೆಯಲ್ಲಿರುವ ಈ ಸಂಬಂಧದ ಒಂದು ಕಥೆ ಹೀಗಿದೆ. ಭದ್ರಬಾಹು ಭಟಾರರು ಉಜ್ಜಯಿನಿಯಲ್ಲಿದ್ದಾಗ ಉತ್ತರ ದೇಶದಲ್ಲಿ 12 ವರ್ಷಗಳ ಕಾಲ ಕ್ಷಾಮವುಂಟಾಗುತ್ತದೆ ಎಂಬುದನ್ನು ಅರಿತು ತಮ್ಮ ಶಿಷ್ಯರೊಡಗೂಡಿ ದಕ್ಷಿಣ ದೇಶಕ್ಕೆ ಬರುತ್ತಾರೆ. ಅವರೊಡನೆ ಬಂದ ಶಿಷ್ಯರಲ್ಲಿ ಉಜ್ಜಯಿನಿಯ ರಾಜನಾಗಿದ್ದ ಸಂಪ್ರತಿ ಚಂದ್ರಗುಪ್ತನು ಒಬ್ಬ. ಭದ್ರಬಾಹು ಭಟಾರರು ಕಟ್ವಪ್ಪ ನಾಡನ್ನು (ಶ್ರವಣಬೆಳಗೊಳ) ಸಮೀಪಿಸಿದಾಗ ತಮ್ಮ ಅವಸಾನಕಾಲ ಹತ್ತಿರವಾಯಿತೆಂದು ತಿಳಿದು ಶಿಷ್ಯ ಚಂದ್ರಗುಪ್ತನೊಡನೆ ಅಲ್ಲಿಯೇ ಉಳಿಯುತ್ತಾರೆ. ಭದ್ರಬಾಹು ಮುನಿಗಳು ಸಮಾಧಿ ಮರಣವನ್ನು ಹೊಂದಿದ ಮೇಲೆ ಚಂದ್ರಗುಪ್ತ ಅವರ ನಿಸಿದಿಗೆಯನ್ನು ಪೂಜಿಸುತ್ತ ಅಲ್ಲೇ ಉಳಿದಿರುತ್ತಾನೆ. ದ್ರಾವಿಡದೇಶಕ್ಕೆ ಹೋಗಿದ್ದ ಋಷಿಸಮುದಾಯ ಹಿಂದಕ್ಕೆ ಬಂದು ಚಂದ್ರಗುಪ್ತನಿಗೆ ಸನ್ಯಾಸವನ್ನು ಕೊಟ್ಟು ಮಧ್ಯದೇಶಕ್ಕೆ ಹಿಂತಿರುಗುತ್ತದೆ. ಇದು ಈ ನಾಡಿಗೆ ಜೈನಧರ್ಮದ ಆಗಮನದ ಬಗ್ಗೆ ಸಿಗುವ ಪ್ರಾಚೀನ ಹೇಳಿಕೆ. ಈ ಕಥೆ ಪರಂಪರೆಯಿಂದ ಬಂದಿರಬೇಕು. ಸು.600ರ ಶ್ರವಣಬೆಳಗೊಳದ ಒಂದು ಶಾಸನ, ಹರಿಷೇಣನ ಬೃಹತ್ಕಥೆ (931) ಮತ್ತು ಮುಂದಿನ ಕಾಲದ ಹಲವು ಶಾಸನಗಳಲ್ಲೂ ಈ ವಿಷಯ ಪ್ರಸ್ತಾಪಿತವಾಗಿದೆ. ಈ ಶಾಸನಗಳಲ್ಲಿ ಬರುವ ಚಂದ್ರಗುಪ್ತನು ಮೌರ್ಯವಂಶದ ಸ್ಥಾಪಕ ಚಂದ್ರಗುಪ್ತ ಎಂದು ಲೂಯಿ ರೈಸ್ ಮೊದಲು ಪ್ರತಿಪಾದಿಸಿದರು. ಈ ಹೇಳಿಕೆ ಇತಿಹಾಸಸಿದ್ಧವೆಂಬ ಅಭಿಪ್ರಾಯ ವಿಶೇಷವಾಗಿದೆ. ಹಾಗಿದ್ದಲ್ಲಿ ಜೈನಧರ್ಮ ಕರ್ನಾಟಕಕ್ಕೆ ಮೊದಲು ಕಾಲಿಟ್ಟದ್ದು ಕ್ರಿ.ಪೂ.3ನೆಯ ಶತಮಾನದಲ್ಲಿ. ಇಲ್ಲಿನ ಭದ್ರಬಾಹು ಕ್ರಿ.ಪೂ.30-31ರಲ್ಲಿ ಇದ್ದ. ಇಮ್ಮಡಿ ಭದ್ರಬಾಹು ಮತ್ತು ಅವನ ಶಿಷ್ಯನಾದ ಗುಪ್ತಿಗುಪ್ತ ಎಂಬುವನೇ ಚಂದ್ರಗುಪ್ತ, ಭದ್ರಬಾಹುವಿನೊಡನೆ ಬಂದ ಚಂದ್ರಗುಪ್ತ ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತ (ಕ್ರಿ.ಪೂ.2ನೆಯ ಶತಮಾನ), ನಂದವಂಶದ ಅರಸನಾದ ನಂದ ಚಂದ್ರಗುಪ್ತ (ಕ್ರಿ.ಪೂ.4ನೆಯ ಶತಮಾನ) ಇತ್ಯಾದಿ ಇತರ ಅಭಿಪ್ರಾಯಗಳೂ ಇವೆ. ಈ ಎಲ್ಲ ವಿದ್ವಾಂಸರೂ ಒಂದು ವಿಷಯದಲ್ಲಿ ಎಂದರೆ ಕರ್ನಾಟಕಕ್ಕೆ ಜೈನಧರ್ಮದ ಆಗಮನಕ್ಕೆ, ಭದ್ರಬಾಹು-ಚಂದ್ರಗುಪ್ತರು, ಕಾರಣರು ಎಂಬುದರಲ್ಲಿ ಸರಿಸುಮಾರು ಏಕಾಭಿಪ್ರಾಯವುಳ್ಳವರಾಗಿದ್ದಾರೆ.

ಭದ್ರಬಾಹು-ಚಂದ್ರಗುಪ್ತರ ಆಗಮನಕ್ಕೆ ಮುಂಚೆಯೇ ಜೈನಧರ್ಮ ಕರ್ನಾಟಕದಲ್ಲಿ ಇದ್ದಿರಬೇಕೆಂಬ ಊಹೆಯೂ ಇದೆ. ಕರ್ನಾಟಕಕ್ಕೆ ಜೈನಧರ್ಮ ಪ್ರವೇಶಿಸಿದ ಕಾಲದ ವಿಷಯ ಜಟಿಲವಾದದ್ದು. ಹೀಗೆಯೇ ಎಂದು ಹೇಳಲು ಗಟ್ಟಿ ಆಧಾರಗಳಿಲ್ಲ. ಭದ್ರಬಾಹು ಕರ್ನಾಟಕಕ್ಕೆ ಬಂದಾಗ ಇಲ್ಲಿ ಜೈನಧರ್ಮೀಯರು ಇದ್ದಿರಲಾರರೆಂಬುದಕ್ಕೆ ವಡ್ಡಾರಾಧನೆಯಲ್ಲಿಯ ಕಥೆಯ ವಿವರಗಳೇ ಸೂಚಕಗಳಾಗಿವೆ. ಚಂದ್ರಗುಪ್ತ ಮಾಡುತ್ತಿದ್ದ ಮುನಿಯ ಸೇವೆಯನ್ನು ಮೆಚ್ಚಿ ಅವನಿಗೆ ವನದೇವತೆಗಳು ಭಿಕ್ಷೆ ನೀಡುತ್ತಿದ್ದುವು. ಅವನಿಗೆ ದೀಕ್ಷೆ ಕೊಟ್ಟವರು ಮೊದಲು ಮಧ್ಯದೇಶದಿಂದ ಬಂದು ದ್ರಾವಿಡ ದೇಶಕ್ಕೆ ತೆರಳಿ ವಾಪಸು ಬರುತ್ತಿದ್ದ ಮುನಿಗಣದವರು ಎಂದು ಆ ಕಥೆಯಲ್ಲಿ ಹೇಳಿದೆ. ಈ ಮೊದಲೇ ಇಲ್ಲಿ ಶ್ರಾವಕರು ಅಥವಾ ಮುನಿಗಳು ಇದ್ದ ಬಗ್ಗೆ ಸೂಚನೆಯೇ ಇಲ್ಲ. ಭದ್ರಬಾಹುವಿನೊಡನೆ ಬಂದ ಚಂದ್ರಗುಪ್ತನು ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿ ಚಕ್ರಾಧಿಪತಿಯಾಗಿದ್ದ

ಚಂದ್ರಗುಪ್ತನಾಗಿರುವುದಕ್ಕಿಂತಲೂ ಮೌರ್ಯ ಸಾಮ್ರಾಜ್ಯ ಛಿದ್ರವಾದ ಕಾಲದಲ್ಲಿದ್ದ ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತ ಇರಬಹುದೆಂಬ ಊಹೆ ಪ್ರಾಯಃ ಸಾಧುವಾಗಿದೆ. ಈ ದೃಷ್ಟಿಯಿಂದ ಜೈನಧರ್ಮ ಕರ್ನಾಟಕಕ್ಕೆ ಬಂದ ಕಾಲ ಕ್ರಿ.ಪೂ.2ನೆಯ ಶತಮಾನದ ಆದಿಭಾಗ ಆಗಬಹುದು.



ಪಾರ್ಶ್ವನಾಥ, ಹಿಂಭಾಗದಲ್ಲಿ 1008 ಹೆಡೆಗಳ ಸರ್ಪ

ಭದ್ರಬಾಹು-ಚಂದ್ರಗುಪ್ತರ ಕಥೆಯ ಆಧಾರ ಬಿಟ್ಟರೆ, ಕ್ರಿ.ಶ. 5ನೆಯ ಶತಮಾನದವರೆಗೆ ಜೈನಧರ್ಮ ಇಲ್ಲಿದ್ದ ಬಗ್ಗೆ ಯಾವ ನೇರ ಪುರಾತತ್ತ್ವ ಆಧಾರವೂ ದೊರಕಿಲ್ಲ. ಕದಂಬ ಮೃಗೇಶವರ್ಮನ ಹಲಶಿ ತಾಮ್ರಪಟವೇ (ಸು.500) ಸದ್ಯದಲ್ಲಿ ಅತಿ ಪ್ರಾಚೀನ ಆಧಾರ. ಆದರೂ ದಕ್ಷಿಣ ಭಾರತದಲ್ಲಿ ಜೈನಧರ್ಮದ ಇತಿಹಾಸವನ್ನು ಗಮನಿಸಿದಲ್ಲಿ ಕರ್ನಾಟಕ ಅದರ ನೆಲೆವೀಡಾಗಿತ್ತು ಎಂಬ ಅಂಶ ಶ್ರುತವಾಗುತ್ತದೆ. ಒಂದು ಅಭಿಪ್ರಾಯದಲ್ಲಿ ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕ ಜೈನಧರ್ಮದ ಇತಿಹಾಸವೇ. ಜೈನ ಪರಂಪರೆಯ ಪ್ರಕಾರ ಪ್ರಸಿದ್ಧ ಜೈನಾಚಾರ್ಯರಲ್ಲಿ ಒಬ್ಬರಾದ ಕುಂದಕುಂದಾಚಾರ್ಯರು (ನೋಡಿ) ದಾಕ್ಷಿಣಾತ್ಯರು. ಕರ್ನಾಟಕದಲ್ಲಿ ಇವರ ಪ್ರಭಾವ ಸಾಕಷ್ಟಿರುವುದು ಮುಂದಿನ ಕಾಲದ ಜೈನ ಶಾಸನಗಳಲ್ಲಿ ಎದ್ದು ಕಾಣುತ್ತದೆ. ಇಲ್ಲಿನ ಸುಮಾರು ಎಲ್ಲ ಜೈನಸಂಘೀಯರೂ ತಾವು ಕೊಂಡಕುಂದಾನ್ವಯಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಈ ಕೊಂಡಕುಂದಾಚಾರ್ಯರು ಸು.ಕ್ರಿಶ.1-2 ನೆಯ ಶತಮಾನದವರಾಗಿರಬೇಕೆಂಬ ಊಹೆ ಇದೆ. ಇವರ ಶಿಷ್ಯ ಉಮಾಸ್ವಾತಿ ಸಹ ದಾಕ್ಷಿಣಾತ್ಯನೇ. ಈತನ ಉಲ್ಲೇಖ ಕರ್ನಾಟಕದ ಶಾಸನಗಳಲ್ಲಿ ಅನೇಕ ಕಡೆ ಬರುತ್ತದೆ. ಕೊಂಡಕುಂದಾಚಾರ್ಯರಂಥ ಅನ್ವಯಪ್ರವರ್ತಕರೂ ಉಮಾಸ್ವಾತಿಯಂಥವರೂ ಕರ್ನಾಟಕದಲ್ಲಿ ಇದ್ದಿರಬೇಕಾದರೆ ಜೈನಧರ್ಮ ಇಲ್ಲಿ ಸಾಕಷ್ಟು ಮಟ್ಟಿಗೆ ಹರಡಿರಬೇಕು. ಪಾದಲಿಪ್ತಾಚಾರ್ಯರೆಂಬ ಜೈನ ಗುರುಗಳು (ಸು.1ನೆಯ ಶತಮಾನ) ದಕ್ಷಿಣಕ್ಕೆ ಬಂದಾಗ ಮಾನ್ಯಖೇಟದ ಬಳಿ ಜೈನರು ಇದ್ದರೆಂದು ಹರಿಭದ್ರಸೂರಿಯ ಒಂದು ಗ್ರಂಥ ತಿಳಿಸುತ್ತದೆ.

ಬನವಾಸಿಯ ಕದಂಬ ಅರಸರ ಕಾಲದಲ್ಲಿ ಜೈನಧರ್ಮಕ್ಕೆ ಸ್ವಲ್ಪಮಟ್ಟಿನ ರಾಜಪ್ರೋತ್ಸಾಹ ದೊರಕಿತು. ಯುವರಾಜನಾಗಿದ್ದ ಕದಂಬ ಕಾಕುತ್ಸ್ಥವರ್ಮ ಪಲಾಸಿಕೆಯಲ್ಲಿದ್ದಾಗ (ಬೆಳಗಾಂವಿ ಜಿಲ್ಲೆಯ ಹಲಶಿ) ಅರ್ಹಂತರಿಗೆ ಭೂಮಿದಾನ ಮಾಡಿದನೆಂದು ಹಲಶಿ ತಾಮ್ರಪಟದಲ್ಲಿ ಹೇಳಿದೆ. ಮೃಗೇಶವರ್ಮ ತನ್ನ ತಂದೆಯ ಜ್ಞಾಪಕಾರ್ಥವಾಗಿ ಪಲಾಸಿಕಾನಗರದಲ್ಲಿ ಜಿನಾಲಯವೊಂದನ್ನು ಕಟ್ಟಿಸಿ, ಯಾಪನೀಯ ನಿರ್ಗ್ರಂಥ ಮತ್ತು ಕೂರ್ಚಕರಿಗೆ ದತ್ತಿಗಳನ್ನು ಕೊಟ್ಟಂತೆ ಇನ್ನೊಂದು ಹಲಶಿ ತಾಮ್ರಪಟ ತಿಳಿಸುತ್ತದೆ. ಇದೇ ಅರಸ ಬಹೃತ್ಪರಲೂರ ಎಂಬ ಗ್ರಾಮದ ಚೈತ್ಯಾಲಯದಲ್ಲಿ ಸಮ್ಮಾರ್ಜನ, ಉಪಲೇಪನ, ಅಭ್ಯರ್ಚನ, ಭಿನ್ನ ಸಂಸ್ಕಾರ, ಮಹಿಮೆಗಳನ್ನು (ಉತ್ಸವ) ನಡೆಸಲು ಅರ್ಹಂತರಿಗೆ ಭೂಮಿದಾನ ಮಾಡಿದನೆಂದೂ ಅಲ್ಲದೆ ಕಾಲವಾಟಿಕಾಗ್ರಾಮದಲ್ಲಿ ಒಂದು ಭಾಗವನ್ನು ಜಿನೇಂದ್ರದೇವರಿಗೆ, ಒಂದು ಭಾಗವನ್ನು ಶ್ವೇತಪಟ ಮಹಾಸಂಘಕ್ಕೆ ಉಳಿದುದನ್ನು ನಿರ್ಗ್ರಂಥ ಮಹಾಶ್ರಮಣ ಸಂಘಕ್ಕೆ ಕೊಟ್ಟನೆಂದೂ ದೇವಗಿರಿಯ ಎರಡು ತಾಮ್ರ ಪಟಗಳು ಹೇಳುತ್ತವೆ. ಹಲಶಿಯ ಜಿನಾಲಯಕ್ಕೆ ದತ್ತಿ ನೀಡಿದ ಬಗ್ಗೆ ರವಿವರ್ಮನ ಕಾಲದ ಶಾಸನಗಳೂ ಇವೆ. ರವಿವರ್ಮ ತನ್ನ ರಾಜಧಾನಿಯಲ್ಲಿ ಅರಮನೆಯ ಬಳಿಯಲ್ಲೇ ಕಾಮಜಿನಾಲಯವೊಂದನ್ನು ಕಟ್ಟಿಸಿ ಅಲ್ಲಿ ಪೂಜೆ ಉತ್ಸವಾದಿಗಳಿಗೆ ವ್ಯವಸ್ಥೆ ಮಾಡಿದ್ದನೆಂದು ಗುಡ್ನಾಪುರ ಶಾಸನದಿಂದ ತಿಳಿಯುತ್ತದೆ. ಹರಿವರ್ಮನ 4ನೆಯ ವರ್ಷದ ಹಲಶಿ ತಾಮ್ರಶಾಸನದಲ್ಲಿ ಸಿಂಹಸೇನಾಪತಿಯ ಮಗನಾದ ಮೃಗೇಶ ಪಲಾಸಿಕದಲ್ಲಿ ಕಟ್ಟಿಸಿದ ಅರ್ಹದಾಯತನದಲ್ಲಿಯ ಪೂಜಾ ಪುರಸ್ಕಾರಾರ್ಥವಾಗಿ ಕೂರ್ಚಕ ಸಂಘಕ್ಕೆ ಒಂದು ಗ್ರಾಮವನ್ನು ಅರಸ ದಾನ ಮಾಡಿದ ಎಂದು ಹೇಳಿದೆ. ದೇವಶರ್ಮನೆಂಬ ಕದಂಬ ಯುವರಾಜ ಯಾಪನೀಯ ಸಂಘಕ್ಕೆ ದತ್ತಿಗಳನ್ನು ನೀಡಿದ್ದ. ಕದಂಬರ ಕಾಲದಲ್ಲಿ ಜೈನರು ರಾಜರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ್ದಂತೆ ಕಾಣುತ್ತದೆ. ರವಿಮಹಾರಾಜನು ವಿದ್ವಜ್ಜನರಲ್ಲಿ ಪ್ರಮುಖನಾಗಿದ್ದ ಜೈನ ಕುಮಾರದತ್ತನಿಂದ ರಾಜ್ಯ ಹಾಗೂ ಧರ್ಮದ ವಿಷಯದಲ್ಲಿ ಸಲಹೆ ಪಡೆಯುತ್ತಿದ್ದನೆಂದು ಒಂದು ಶಾಸನ ತಿಳಿಸುತ್ತದೆ.

ಬಾದಾಮಿಯ ಚಳುಕ್ಯರು ವಿಶೇಷವಾಗಿ ಹಿಂದು ಧರ್ಮಾನುಯಾಯಿಗಳಾಗಿದ್ದರೂ ಅವರ ಕಾಲದಲ್ಲಿ ಕೂಡ ರಾಜರ ಹಾಗೂ ಶ್ರೀಮಂತರ ಪ್ರೋತ್ಸಾಹ ಜೈನಧರ್ಮಕ್ಕಿತ್ತು. ದೊರೆ ಮಂಗಲೀಶ ನಿರ್ಮಿಸಿದ ಪ್ರಸಿದ್ಧ ವಿಷ್ಣುಗೃಹವಾದ ಬಾದಾಮಿಯ 3ನೆಯ ಗುಹೆಯ ಜೊತೆಯಲ್ಲೇ ನಾಲ್ಕನೆಯದಾಗಿ ಜೈನಗುಹೆಯೊಂದು ಇರುವುದು ಗಮನಾರ್ಹ. ಐಹೊಳೆಯಲ್ಲಿ ಸಹ ಎರಡು ಚಿಕ್ಕ ಜಿನಗುಹಾಲಯಗಳಿವೆ. ಇಲ್ಲಿ ಇಮ್ಮಡಿ ಪುಲಕೇಶಿಯ ಆತ್ಮೀಯನಾಗಿದ್ದ ರವಿಕೀರ್ತಿ 634ರಲ್ಲಿ ಕಟ್ಟಿಸಿದ ಮೇಗುಟಿಯ ಜಿನಾಲಯ ಬಹು ಪ್ರಸಿದ್ಧ. ಅಲ್ಲದೆ ಚಳುಕ್ಯರ ಕಾಲದವೆನ್ನಬಹುದಾದ ಇನ್ನೂ ಎರಡು ಜಿನಾಲಯಗಳು ಐಹೊಳೆಯಲ್ಲಿವೆ. ಪಟ್ಟದಕಲ್ಲಿನಲ್ಲಿ ಸಹ ಒಂದಿದೆ. ಜೇಬುಳಗೇರಿಯ ಜೈನ ಪ್ರಮುಖನಾದ ಕಲಿಯಮ್ಮ ಎಂಬುವನು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ಅಣ್ಣಿಗೇರಿಯಲ್ಲಿ ಒಂದು ಜಿನಚೈತ್ಯಾಲಯವನ್ನು ಕಟ್ಟಿಸಿದ. ಚಳುಕ್ಯ ವಿನಯಾದಿತ್ಯನ ತಂಗಿ ಕುಂಕುಮದೇವಿ ಪುಲಿಗೆರೆಯಲ್ಲಿ (ಲಕ್ಷ್ಮೇಶ್ವರ) ಜಿನಭವನವೊಂದನ್ನು ಕಟ್ಟಿಸಿದಳು. ಲಕ್ಷ್ಮೇಶ್ವರ (ಧಾರವಾಡ ಜಿಲ್ಲೆ) ಆ ಕಾಲದಲ್ಲಿ ಒಂದು ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಅಲ್ಲಿಯ ಶಂಖಜಿನಾಲಯಕ್ಕೆ ಹಲವು ಚಳುಕ್ಯ ಅರಸರು ಪ್ರೋತ್ಸಾಹವಿತ್ತಿದ್ದರೆಂಬುದಕ್ಕೆ ಶಾಸನೋಲ್ಲೇಖಗಳಿವೆ. ಇಮ್ಮಡಿ ಪುಲಕೇಶಿಯ ಕಾಲದಲ್ಲಿ ಅವನ ಸಾಮಂತನಾಗಿದ್ದ ಸೇಂದ್ರಕ ದುರ್ಗಶಕ್ತಿ, 683ರಲ್ಲಿ ವಿನಯಾದಿತ್ಯ, 723 ಮತ್ತು 730ರಲ್ಲಿ ವಿಜಯಾದಿತ್ಯ, 735ರಲ್ಲಿ ಇಮ್ಮಡಿ ವಿಕ್ರಮಾದಿತ್ಯ - ಇವರು ದತ್ತಿಗಳನ್ನು ನೀಡಿದ್ದರು. ಒಂದು ಶಾಸನದಲ್ಲಿ ಅಲ್ಲಿದ್ದ ಗುರುಪರಂಪರೆಯ ಪ್ರಸ್ತಾಪವಿದೆ. ದೇವಗಣವೆಂಬ ಜೈನಶಾಖೆಯ ಪ್ರವರ್ತಕರೂ ಜೈನೇಂದ್ರ ವ್ಯಾಕರಣವನ್ನು ಬರೆದವರೂ ಆದ ಆಚಾರ್ಯ ಪೂಜ್ಯಪಾದರು ಲಕ್ಷ್ಮೇಶ್ವರದಲ್ಲಿ ಇದ್ದಿರಬಹುದೆಂದು ಅಲ್ಲಿಯ ಶಾಸನಗಳಿಂದ ಊಹಿಸಬಹುದಾಗಿದೆ. ಅವರ ಪ್ರಶಿಷ್ಯರಾದ ನಿರವದ್ಯ ಪಂಡಿತರು ವಿಜಯಾದಿತ್ಯನಿಂದ ದತ್ತಿಗಳನ್ನು ಸ್ವೀಕರಿಸಿದರು. ಈ ಕಾಲದಲ್ಲಿ ಕೊಪ್ಪಳವೂ ಜೈನಕ್ಷೇತ್ರವಾಗಿತ್ತು. ಶ್ರವಣಬೆಳಗೊಳದ ಶಾಸನಗಳಲ್ಲಿ ಇದನ್ನು ಮಹಾತೀರ್ಥ, ಆದಿತೀರ್ಥ ಎಂದು ಕರೆಯಲಾಗಿದೆ.

ತಲಕಾಡಿನ ಗಂಗರಸರು ಜೈನಧರ್ಮದ ಅನುಯಾಯಿಗಳಾಗಿದ್ದರು; ಈ ಧರ್ಮ ಆ ಭಾಗದಲ್ಲಿ ವ್ಯಾಪಕವಾಗಿತ್ತು ಎಂಬ ಅಭಿಪ್ರಾಯ

ಬಹುವಾಗಿ ಕಂಡುಬರುತ್ತದೆ. ಆದರೆ ಪ್ರಸ್ತುತ ಅವಧಿಯ ಶಾಸನಾಧಾರಗಳು ಈ ಕಲ್ಪನೆಗೆ ಪುಷ್ಟಿ ನೀಡುವುದಿಲ್ಲ. ಗಂಗ ಅರಸರಿಗೆ ರಾಜ್ಯ ದೊರಕಿದ್ದೇ ಸಿಂಹನಂದಿ ಎಂಬ ಜೈನ ಆಚಾರ್ಯರಿಂದ ಎಂಬ ಒಂದು ಹೇಳಿಕೆ ಇದೆ. ಈ ವಿಷಯ ಮೊದಲು ದೊರಕುವುದು 1122ರ ಒಂದು ಶಾಸನದಲ್ಲಿ. ಆದರೆ ಮಾಧವ, ಹರಿವರ್ಮ, ವಿಷ್ಣುಗೋಪ ಇತ್ಯಾದಿ ಹೆಸರುಗಳು ನಾರಾಯಣಚರಣಾನುಧ್ಯಾತ ಗುರುಗೋಬ್ರಾಹ್ಮಣಪೂಜಕ, ತ್ರ್ಯಂಬಕ ಚರಣಾನುಧ್ಯಾತ, ಕಮಲೋದರ ಚರಣಕಮಲಾನುಧ್ಯಾತ, ಕಾತ್ಯಾಯನೀಚರಣಪಂಕೇರುಹ ಪರಿಚರವಿದ್ಧಾನ್ತರಾತ್ಮ, ದ್ವಿಜಗುರು ಪೂಜಾ ತತ್ಪರ ಇತ್ಯಾದಿ ಬಿರುದುಗಳು ಮೊದಲ ಗಂಗ ದೊರೆಗಳು ಬೇರೆಯೇ ದೇವರುಗಳ ಆರಾಧಕರಾಗಿದ್ದ ವಿಷಯವನ್ನು ಸೂಚಿಸುತ್ತವೆ. ಈ ಕಾಲದಲ್ಲಿ ಜೈನಧರ್ಮಕ್ಕೆ ರಾಜಾಶ್ರಯ ಎಷ್ಟಿತ್ತೆಂಬುದರ ಬಗ್ಗೆ ಅನುಮಾನ ವ್ಯಕ್ತಪಡಿಸಬಹುದಾದರೂ ಈ ಧರ್ಮ ಗಂಗವಾಡಿ ಭಾಗದಲ್ಲಿ ಪ್ರಾಚುರ್ಯದಲ್ಲಿತ್ತು ಎಂಬುದರ ಬಗ್ಗೆ ಅನುಮಾನವಿಲ್ಲ. ಆ ಸೀಮೆಯ ಶ್ರವಣಬೆಳಗೊಳ ಪ್ರಖ್ಯಾತ ಜೈನತೀರ್ಥಕ್ಷೇತ್ರವಾಗಿತ್ತೆಂಬ ವಿಷಯ ಆ ಕಾಲಕ್ಕೆ ಸೇರುವ ಸುಮಾರು ನೂರು ಶಾಸನಗಳು ಆ ಸ್ಥಳದಲ್ಲಿರುವುದರಿಂದಲೇ ಸ್ಪಷ್ಟವಾಗುತ್ತದೆ. ಆ ಕಾಲದಲ್ಲಿ ತಮಿಳು ನಾಡಿನಿಂದಲೂ ಜೈನಸಾಧಕರು ಇಲ್ಲಿಗೆ ಬರುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಗಂಗರಾಜ್ಯದ ಇತರ ಕೆಲವು ಸ್ಥಳಗಳಲ್ಲೂ ಜೈನಧರ್ಮವಿದ್ದ ಬಗ್ಗೆ ಒಂದೆರಡು ಆಧಾರಗಳು ದೊರಕುತ್ತವೆ. ವಿಜಯಕೀರ್ತಿ ಎಂಬ ಒಬ್ಬ ಮುನಿ ಜನರ ಕಷ್ಟ ನಿವಾರಣೆ ಮಾಡುತ್ತಿದ್ದನೆಂದೂ ವಿದ್ವಜ್ಜನರಿಗೆ ಆಧಾರನಾಗಿದ್ದನೆಂದೂ ಗುಬ್ಬಿ ತಾಲ್ಲೂಕಿನ 812ರ ಒಂದು ತಾಮ್ರಪಟದಲ್ಲಿ ಹೇಳಿದೆ. ನಂದಿಬೆಟ್ಟದ ಈಶಾನ್ಯದಲ್ಲಿರುವ ಗೋಪಿನಾಥಗುಡ್ಡದಲ್ಲಿ ಶ್ರೀರಾಮ ಕಟ್ಟಿಸಿದ ಬಸದಿಯೊಂದಿತ್ತೆಂದೂ ಕುಂತಿ ಅದನ್ನು ಹೊಸದು ಮಾಡಿಸಿದಳೆಂದೂ ಈ ಬಸದಿಯಿಂದಾಗಿ ಅದು ಪವಿತ್ರಸ್ಥಳವಾಗಿತ್ತು ಎಂದೂ ಜಿನಮುನಿಗಳ ತಪಸ್ಸಿಗೆ ಬೇಕಾದ ಗುಹೆಗಳು ಅಲ್ಲಿದ್ದುವು ಎಂದೂ ಸು. 720ರ ಅಲ್ಲಿಯ ಒಂದು ಶಾಸನ ತಿಳಿಸುತ್ತದೆ.

ರಾಷ್ಟ್ರಕೂಟ ಅರಸರ ಕಾಲ ಕರ್ನಾಟಕದಲ್ಲಿ ಜೈನಧರ್ಮದ ಪ್ರಗತಿಯುಗ. ಈ ಕಾಲದಲ್ಲಿ ಅರಸರಷ್ಟೇ ಅಲ್ಲದೆ ಅನೇಕ ಅಧಿಕಾರಿಗಳು ಹಾಗೂ ಸಾಮಂತರೂ ಅನೇಕ ರೀತಿಯಲ್ಲಿ ಈ ಧರ್ಮಕ್ಕೆ ಪ್ರೋತ್ಸಾಹವಿತ್ತರು. ಹಲವು ದೇಗುಲಗಳು ನಿರ್ಮಾಣವಾದುವು. ದಾನದತ್ತಿಗಳು ಹೆಚ್ಚಿದುವು. ಹಲವು ಆಚಾರ್ಯರು ಧರ್ಮಬೋಧನೆಯಲ್ಲಿ ನಿರತರಾಗಿದ್ದರಲ್ಲದೆ ಶಾಸ್ತ್ರಗ್ರಂಥಗಳ ರಚನೆಯನ್ನೂ ಮಾಡಿದರು. ಅಮೋಘವರ್ಷ ನೃಪತುಂಗ ಜೈನಧರ್ಮಕ್ಕೆ ಬಹುವಾಗಿ ಪ್ರೋತ್ಸಾಹ ನೀಡಿದ. ಗಣಿತಸಾರಸಂಗ್ರಹ ಎಂಬ ಗ್ರಂಥದಲ್ಲಿ ಅಮೋಘವರ್ಷ ಸ್ಯಾದ್ವಾದಮತದ ಅನುಯಾಯಿಯಾಗಿದ್ದ, ಅಕಿಂಚನತಾನೀತಿಯನ್ನು ಅನುಸರಿಸಿ ಕೆಲವು ಕಾಲ ಸಿಂಹಾಸನವನ್ನು ತ್ಯಜಿಸಿದ್ದ ಎನ್ನಲಾಗಿದೆ. ಜಿನಸೇನರ ಪಾರ್ಶ್ವಾಭ್ಯುದಯದಲ್ಲಿ ಅಮೋಘವರ್ಷ ಆತನ ಶಿಷ್ಯನೆಂತಲೂ ರಾಜನು ಅವನ ಸ್ಮರಣಮಾತ್ರದಿಂದಲೆ ಪರಿಶುದ್ಧನಾಗುತ್ತಿದ್ದನೆಂತಲೂ ಹೇಳಿದೆ. ಉತ್ತರ ಪುರಾಣದ ಕರ್ತೃ ಗುಣಭದ್ರಾಚಾರ್ಯರು ಇಮ್ಮಡಿ ಕೃಷ್ಣನ ಗುರುವಾಗಿದ್ದರು. ಅನೇಕ ರಾಷ್ಟ್ರಕೂಟ ಸಾಮಂತರೂ ಜಿನಧರ್ಮವನ್ನು ಅನುಸರಿಸುತ್ತಿದ್ದರು.

ಬಹುಶಃ ರಾಷ್ಟ್ರಕೂಟರ ಸಾಮಂತರಾಗಿದ್ದ ಕಾಲದಿಂದ ಗಂಗ ಅರಸರೂ ಜೈನಧರ್ಮಕ್ಕೆ ಹೆಚ್ಚಿನ ಒಲವನ್ನೂ ತೋರಿಸಿದಂತೆ ಕಾಣುತ್ತದೆ. ರಾಚಮಲ್ಲ ಕೊಡಗಿನಲ್ಲಿ ಜಿನಭವನಗಳನ್ನು ಕಟ್ಟಿಸಿದ. ತನ್ನ ವಿಜಯಸಾಧನೆಯ ನೆನಪಿಗಾಗಿ ವಳ್ಳಿಮಲೈ ಎಂಬಲ್ಲಿ ಜೈನ ದೇವಾಲಯ ವೊಂದನ್ನು ಕಟ್ಟಿಸಿದ. ಲಕ್ಷ್ಮೇಶ್ವರದಲ್ಲಿ ರಾಯರಾಚಮಲ್ಲ ವಸದಿ, ಗಂಗಪೆರ್ಮಾಡಿಚೈತ್ಯಾಲಯ, ಗಂಗಕಂದರ್ಪಚೈತ್ಯಮಂದಿರ ಎಂಬ ಜಿನಭವನಗಳಿದ್ದುವು. ಅಮೋಘವರ್ಷನ ದಂಡನಾಯಕನಾಗಿ ಬನವಾಸಿಯಲ್ಲಿದ್ದ ಬಂಕೆಯ ಜೈನಬಸದಿಯೊಂದಕ್ಕೆ ದಾನನೀಡಿದ್ದ. ಬಂಕೆಯನ ಮಗ ಲೋಕಾದಿತ್ಯ ಜೈನಧರ್ಮದ ಪೋಷಕನೆಂದು ಅವನ ಗುರು ಗುಣಭದ್ರಾಚಾರ್ಯರು ಹೊಗಳಿದ್ದಾರೆ. ಸಾಮಂತರಾದ ಚಾಳುಕ್ಯ ನರಸಿಂಹ, ಶ್ರೀವಿಜಯ ಮೊದಲಾದವರೂ ಜಿನಧರ್ಮವನ್ನನುಸರಿಸುತ್ತಿದ್ದರು.

ಈ ಅವಧಿಯ ವೀರಸೇನ, ಜಿನಸೇನ, ಗುಣಭದ್ರ, ಅಕಳಂಕ ಮೊದಲಾದವರು ಜೈನಧರ್ಮ ಮತ್ತು ಸಾಹಿತ್ಯಗಳಿಗೆ ಅಮೂಲ್ಯ ಕಾಣಿಕೆಗಳನ್ನಿತ್ತಿದ್ದಾರೆ. ಸಹಜವಾಗಿ ಈ ದಿಶೆಯಲ್ಲಿ ಇಷ್ಟೊಂದು ಸಾಧನೆಗಳಿರಬೇಕಾದರೆ ಜೈನಧರ್ಮ ಸಾಕಷ್ಟು ಪ್ರೋತ್ಸಾಹ, ಬೆಂಬಲವನ್ನು ಗಳಿಸಿಕೊಂಡಿದ್ದು ಪ್ರಭಾವಿಯಾಗಿದ್ದ ಕಾಲವೇ ಆಗಿರಬೇಕು. ಒಟ್ಟಿನಲ್ಲಿ ಕ್ರಿಸ್ತಪೂರ್ವ ಕಾಲದಲ್ಲಿ ಇಲ್ಲಿ ಉಪಸ್ಥಿತವಾದ ಜೈನಧರ್ಮ ಕ್ರಮೇಣ ತನ್ನ ಪ್ರಭಾವವನ್ನು ಸ್ವಲ್ಪ ಸ್ವಲ್ಪವಾಗಿ ಬೆಳೆಸಿಕೊಳ್ಳುತ್ತ 8-9ನೆಯ ಶತಮಾನದ ಹೊತ್ತಿಗೆ ಬಹುಮುಖವಾಗಿ ಏಳ್ಗೆಯನ್ನು ಪಡೆಯಿತು ಎಂದು ಹೇಳಬಹುದು.

ಈ ಅವಧಿಯಲ್ಲಿ ಜೈನಧರ್ಮದ ವಿವಿಧ ಪ್ರಕಾರಗಳು ಕರ್ನಾಟಕದಲ್ಲಿ ಹರಡಿದ್ದುವು. ದಿಗಂಬರ ಮತ್ತು ಶ್ವೇತಾಂಬರ ಪಂಥಗಳು ಪ್ರಸಿದ್ಧವಾದುವು. ಮೂಲ ಜೈನಧರ್ಮ ಈ ಪಂಥಗಳಾಗಿ ಒಡೆಯಲು ಜೈನಸಂಘದ ದಕ್ಷಿಣದ ಯಾತ್ರೆಯೇ ಒಂದು ಮುಖ್ಯ ಕಾರಣವಾಗಿದ್ದಂತೆ ತೋರುತ್ತದೆ. ದಿಗಂಬರ ಸಂಪ್ರದಾಯದ ಜೈನಕಥೆಗಳಲ್ಲಿ ಜೈನಸಂಘ ದಕ್ಷಿಣಕ್ಕೆ ಬಂದ ಸಂದರ್ಭದಲ್ಲಿ ಅದು ಜೈನಧರ್ಮದ ಮೂಲ ಧಾರ್ಮಿಕ ಸ್ವರೂಪವನ್ನು ಉಳಿಸಿಕೊಂಡಿತು. ಉತ್ತರದಲ್ಲಿ ಉಳಿದಿದ್ದ ಜೈನಪಂಥೀಯರು ಬದಲಾವಣೆಗೆ ಒಳಗಾಗಿ ಶ್ವೇತಾಂಬರರಾದರು ಎಂದು ಹೇಳುವುದರಿಂದ ಕರ್ನಾಟಕದಲ್ಲಿ ಬಹುಮಟ್ಟಿಗೆ ಪ್ರಚಾರವಾಗಿದ್ದುದು ದಿಗಂಬರ ಜೈನಪಂಥವೆಂದು ತಿಳಿಯಬಹುದಾಗಿದೆ. ಆದರೆ ಶ್ವೇತಾಂಬರ ಪಂಥ ಸಹ ಇಲ್ಲಿದ್ದುದಕ್ಕೆ ಸಾಹಿತ್ಯ ಹಾಗೂ ಶಾಸನಗಳ ಆಧಾರಗಳು ದೊರಕುತ್ತವೆ. ಹರಿಭದ್ರನ ಹೇಳಿಕೆಯ ಪ್ರಕಾರ ಕ್ರಿಸ್ತಶಕ ಒಂದನೆಯ ಶತಮಾನದಲ್ಲಿ ಶ್ವೇತಾಂಬರರು ಮಾನ್ಯಖೇಟದ ಸುತ್ತಮುತ್ತ ಇದ್ದರು. ಮೃಗೇಶವರ್ಮನ ಪಲಶಿ ತಾಮ್ರಪಟದಿಂದ ಅಲ್ಲಿ ಶ್ವೇತಪಟಮಹಾಶ್ರಮಣ ಸಂಘ ಮತ್ತು ನಿರ್ಗ್ರಂಥ ಮಹಾಶ್ರಮಣ ಸಂಘಗಳು ಇದ್ದುದು ತಿಳಿಯುತ್ತದೆ. ಈ ಕಾಲದಲ್ಲಿ ಪ್ರಾಯಶಃ ದಿಗಂಬರರಷ್ಟೇ ಪ್ರಭಾವಶಾಲಿಯಾಗಿದ್ದ ಇನ್ನೊಂದು ಜೈನಪಂಥ ಯಾಪನೀಯರದು. ಇದರ ಹೆಚ್ಚಿನ ವ್ಯಾಪ್ತಿ ಕಂಡುಬರುವುದು ಉತ್ತರ ಕರ್ನಾಟಕ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ. ಈ ಸಂಘದ ಸ್ಥಾಪಕ ಕಲಶಆಚಾರ್ಯ ಎಂಬ ಶ್ವೇತಾಂಬರ ಮುನಿ. ಈತ ಕಲ್ಯಾಣದಲ್ಲಿ (ಗುಲ್ಬರ್ಗ ಜಿಲ್ಲೆ) 148ರಲ್ಲಿ ಇದನ್ನು ಸ್ಥಾಪಿಸಿದ ಎಂಬ ಹೇಳಿಕೆ ಇದೆ. ದಕ್ಷಿಣಾಪಥದಲ್ಲಿ ಸಾಮಳಿಪುತ್ರ ಎಂಬ ಶ್ವೇತಭಿಕ್ಷು ಚಾಪುಲ (ಯಾಪನೀಯ) ಸಂಘಕ್ಕೆ ಮೊದಲಿಗನಾದ. ಕರಹಾಟಕದ ರಾಣಿಯೊಬ್ಬಳು ಇದಕ್ಕೆ ಕಾರಣಳಾದಳು ಎಂಬ ಕಥೆ ಸಹ ಇದೆ. ಈ ಉಲ್ಲೇಖಗಳಿಂದ ಯಾಪನೀಯ ಸಂಘ ಹುಟ್ಟಿದ್ದು ಕರ್ನಾಟಕದಲ್ಲಿ ಎಂಬುದು ಅರಿವಾಗುತ್ತದೆ. ಮೃಗೇಶವರ್ಮನ ತಾಮ್ರಪಟದಲ್ಲಿ ಯಾಪನೀಯರ ಸ್ಪಷ್ಟ ಉಲ್ಲೇಖವಿದೆ.

ಈ ಕಾಲದ ಅನೇಕ ಶಾಸನಗಳು ಈ ಪಂಥಗಳಲ್ಲೂ ವಿವಿಧ ಶಾಖೆಗಳಿದ್ದುವೆಂಬುದನ್ನು ತಿಳಿಸುತ್ತವೆ. ಅವು ಸಂಘ, ಗಣ, ಗಚ್ಛ, ಅನ್ವಯ ಎಂಬ ಹೆಸರುಗಳಲ್ಲಿ ಪ್ರಚಲಿತವಾಗಿದ್ದುವು. ಇವುಗಳಲ್ಲಿ ಪ್ರಧಾನವಾದುದು ಸಂಘ, ಅನಂತರ ಗಚ್ಛ; ಗಚ್ಛದ ಶಾಖೆಗಳು ಅನ್ವಯಗಳು. ಅನ್ವಯ ಅಥವಾ ಗಚ್ಛಗಳ ಸಮುದಾಯಗಳು ಗಣಗಳು. ಇವುಗಳಲ್ಲಿ ಕೆಲವು, ವ್ಯಕ್ತಿಗಳ ಅಥವಾ ಊರುಗಳ ಹೆಸರುಗಳಲ್ಲಿ ಪ್ರಚಲಿತವಾಗಿವೆ. ಮೂಲ ಕೂಟದಿಂದ ಹೊರಟು ಮುಂದೆ ತಮ್ಮದೇ ಆದ ಸಂಪ್ರದಾಯವನ್ನು ಸ್ಥಾಪಿಸಿದಾಗ ಹಾಗೆ ಸ್ಥಾಪಿಸಿದ ವ್ಯಕ್ತಿಗಳ ಅಥವಾ ಸ್ಥಾಪನೆಯ ಸ್ಥಳಗಳ ಹೆಸರುಗಳು ಇವಕ್ಕೆ ಬಂದಿರಬೇಕು ಎಂಬ ಊಹೆ. ಪ್ರಸ್ತುತ ಕಾಲದ ಶಾಸನಗಳಲ್ಲಿ ಆ ವಿವಿಧ ಶಾಖೆಗಳ ಬಗ್ಗೆ ಹೆಚ್ಚು ವಿವರಗಳು ದೊರಕುವುದಿಲ್ಲ. ಕಿತ್ತೂರ ಸಂಘ, ಕೊಳತ್ತೂರ ಸಂಘ, ನವಿಲೂರ ಸಂಘ ಮತ್ತು ಶ್ರೀ ಸಂಘಗಳ ಹೆಸರು ಶ್ರವಣಬೆಳಗೊಳದ ಶಾಸನಗಳಲ್ಲಿ ಕಾಣುತ್ತವೆ. ಲಕ್ಷ್ಮೇಶ್ವರದ ಮೂರು ಶಾಸನಗಳಲ್ಲಿ ಮೂಲಸಂಘದ ಪ್ರಸ್ತಾಪ ಇದೆ. ಎರಡು ಶಾಸನಗಳಲ್ಲಿ ಮೂಲಸಂಘದ ದೇವಗಣದ ಹೆಸರಿದೆ.ಈ ವಿವಿಧ ಶಾಖೆಗಳಲ್ಲಿ ಎಷ್ಟು ಮಟ್ಟಿನ ತಾತ್ತ್ವಿಕ ವ್ಯತ್ಯಾಸಗಳು ಇದ್ದುವು ಎಂಬುದು ತಿಳಿಯದು. ಕೆಲವು ಅನಂತರದ ಕಾಲದ ಶಾಸನಗಳಿಂದ ಬೇರೆ ಬೇರೆ ಶಾಖೆಯವರಿಗೆ ಪ್ರತ್ಯೇಕ ಬಸದಿಗಳಿದ್ದುವು ಎಂದು ತಿಳಿಯುತ್ತದೆ. ಮೇಲೆ ಹೇಳಿರುವ ಕದಂಬ ಶಾಸನಗಳಿಂದ ಯಾಪನೀಯ, ದಿಗಂಬರ, ಶ್ವೇತಾಂಬರರ ಪ್ರತ್ಯೇಕ ಬಸದಿಗಳು ಇದ್ದುವೆಂದು

ಸೂಚಿತವಾಗುತ್ತದೆ. ಈ ಸಂಘ ಗಣ, ಗಚ್ಛ ಇತ್ಯಾದಿಗಳು ಹೆಚ್ಚಿನ ಮಟ್ಟಿಗೆ ಮುನಿಸಮುದಾಯಗಳ ಜೊತೆಗೆ ಸೇರಿ ಬರುವುದು ಗಮನಾರ್ಹ. ಈ ಶಾಖೆ ಅನ್ವಯಗಳಿಗೆ ಪ್ರತ್ಯೇಕ ಗುರುಪರಂಪರೆಗಳಿದ್ದುವೆಂದು ತೋರುತ್ತದೆ.

ಈ ಕಾಲದಲ್ಲಿ ಜೈನಧರ್ಮದ ಸೈದ್ಧಾಂತಿಕ ತತ್ತ್ವಗಳು, ದಶವಿಧ ಆಚರಣಾ ಮಾರ್ಗಗಳು, ಶ್ರವಣ, ಕಂತಿ, ಶ್ರಾವಕ, ಶ್ರಾವಕಿ ಸಂಪ್ರದಾಯಗಳು ಇತ್ಯಾದಿಗಳೆಲ್ಲ ಕರ್ನಾಟಕದಲ್ಲಿ ಹರಡಿದವು. ವರ್ಧಮಾನ ಮತ್ತು ಪಾರ್ಶ್ವನಾಥರ ಪೂಜೆ ಈ ಕಾಲದಲ್ಲಿ ವಿಶೇಷವಾಗಿ ಪ್ರಚಲಿತವಾಗಿತ್ತು ಎಂದು ಪ್ರಸ್ತುತ ಕಾಲದ ಪುರಾತತ್ತ್ವ ಆಧಾರಗಳಿಂದ ತಿಳಿಯುತ್ತದೆ. ಈ ದೇಶದಲ್ಲಿ ವಿಶೇಷವಾಗಿ ಪ್ರಚಲಿತವಾಗಿದ್ದ ಇನ್ನೊಂದು ಜೈನಪೌರಾಣಿಕ ಕಲ್ಪನೆ ಗೊಮ್ಮಟನದು. ಪ್ರಾಯಶಃ ಸು.5-8ನೆಯ ಶತಮಾನದ ಹೊತ್ತಿಗೇ ಈ ಕಲ್ಪನೆ ಕರ್ನಾಟಕದಲ್ಲಿದ್ದಿರಬೇಕೆಂಬುದಕ್ಕೆ ಗುಡ್ನಾಪುರ ಶಾಸನದಲ್ಲಿ ಸೂಚನೆಯಿದೆ. ಪಾರಂಪರ್ಯವಾಗಿ ವ್ಯವಸ್ಥಿತವಾಗಿದ್ದ ಜೈನಧರ್ಮದ ವ್ಯವಹಾರಗಳ ಬಗ್ಗೆ ಸಮಕಾಲೀನ ಶಾಸನಗಳು ಬೆಳಕು ಚೆಲ್ಲುತ್ತವೆ. ಮುನಿಗಳ ಕಠಿಣ ತಪಸ್ಸಿನ ಬಗ್ಗೆ ಶ್ರವಣಬೆಳಗೊಳದ ಶಾಸನಗಳು ಮಾಹಿತಿ ನೀಡುತ್ತವೆ. ಸಲ್ಲೇಖನವ್ರತ ಜೈನರಲ್ಲಿ ವ್ಯಾಪಕವಾಗಿತ್ತು. ಇದಕ್ಕೆ ಕೆಲವು ಶಾಸ್ತ್ರನಿಷ್ಪೃಷ್ಟ ವಿಧಿಗಳಿದ್ದುವು. ಇಂಗಿನೀಮರಣ, ಪಾಉಗ್ಗಮರಣ - ಈ ರೀತಿಯ ಪ್ರಭೇದಗಳೂ ಇದ್ದುವು. ಮುನಿಗಳೂ ಕಂತಿಯರೂ ಸಂಸಾರಿಗಳಾದ ಸ್ತ್ರೀಪುರುಷರೂ ಈ ಸಮಾಧಿಮರಣವಿಧಿಯನ್ನು ಅನುಸರಿಸಬಹುದಾಗಿತ್ತು. ಈ ವಿಧಿಯಿಂದ ಮಡಿದವರಿಗೆ ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು. ಇವೇ ನಿಸಿದಿ ಕಲ್ಲುಗಳು. ಈ ನಿಸಿದಿ ಕಲ್ಲುಗಳು ಪವಿತ್ರಸ್ಥಾನಗಳೆಂದು ಪರಿಗಣಿತವಾಗಿದ್ದುವು.

ಶ್ರಾವಕರ ಧರ್ಮಶ್ರದ್ಧೆಯಿಂದ ಜಿನಪೂಜೆಗಾಗಿ ಜೈನ ದೇವಾಲಯಗಳೂ ನಿರ್ಮಾಣವಾಗುತ್ತಿದ್ದುವು. ಪ್ರಾಯಶಃ ಮುನಿಗಳು ಅಲ್ಲಿ ವಾಸಿಸುತ್ತಿದ್ದುದರಿಂದ ಅವುಗಳಿಗೆ ಬಸದಿ (ವಸತಿ) ಎಂಬ ಹೆಸರು ರೂಢಿಗೆ ಬಂದಂತೆ ತೋರುತ್ತದೆ. ಶಾಸನಗಳಲ್ಲಿ ಜಿನಗೃಹ, ಚೈತ್ಯಾಲಯ ಎಂಬ ಮಾತುಗಳೇ ಹೆಚ್ಚಾಗಿ ಬರುತ್ತವೆ. ಇಂಥ ಅನೇಕ ಚೈತ್ಯಾಲಯಗಳನ್ನು ರಾಜರು, ಸಾಮಂತರು ಮತ್ತು ಇತರ ವ್ಯಕ್ತಿಗಳು ನಿರ್ಮಾಣಮಾಡುತ್ತಿದ್ದರು. ಈ ಬಸದಿಗಳಲ್ಲಿದ್ದ ಪೂಜಾವಿಧಾನ ಈಗ ಹಿಂದು ಜೈನಧರ್ಮಗಳಲ್ಲಿ ಕಾಣುವ ವಿಧಾನಕ್ಕಿಂತ ಬೇರೆಯಾಗಿರಲಿಲ್ಲ. ಜಿನಭವನಗಳಲ್ಲಿ ಪೂಜೆ, ಉತ್ಸವ, ಹಬ್ಬ, ಆಹಾರದಾನಗಳು ನಡೆಯುತ್ತಿದ್ದುವು. ಜೈನಧರ್ಮದ ಪ್ರಸಾರದೊಡನೆ ಅದರ ಪರಿಭಾಷೆ ತತ್ಕಾಲದ ಭಾಷೆಯಲ್ಲೂ ಭಾವನೆಗಳಲ್ಲೂ ಬೆರೆತುಕೊಂಡಿತು. ಆ ಧರ್ಮಕ್ಕೆ ಸಂಬಂಧಿಸಿದ ಶಾಸ್ತ್ರಪುರಾಣಗಳ ಪ್ರಸಾರ ಬಹುಮಟ್ಟಿಗೆ ನಡೆಯಿತು. ಇದರಿಂದ ಕನ್ನಡ ಸಾಹಿತ್ಯವೂ ಸಂಪದ್ಭರಿತವಾಯಿತು. ಪಂಪ, ರನ್ನ, ಪೊನ್ನ ಮೊದಲಾದವರು ಉತ್ತಮ ಜೈನಕಾವ್ಯಗಳನ್ನು ರಚಿಸಿದರು.

11ನೆಯ ಶತಮಾನದವರೆಗೆ ದಿನೇ ದಿನೇ ಪ್ರವರ್ಧಮಾನ ವಾಗುತ್ತಿದ್ದ ಜೈನಧರ್ಮ ಆ ಶತಮಾನದ ಪ್ರಾರಂಭದ ಆಸುಪಾಸಿನಲ್ಲಿ, ದೇಶದಲ್ಲಿ ಆದ ಹಲವು ರಾಜಕೀಯ ಆಗುಹೋಗುಗಳ ಪರಿಣಾಮವಾಗಿ ಹಲವು ಬದಲಾವಣೆಗಳನ್ನು ಕಂಡಿತು. ದಕ್ಷಿಣ ಕರ್ನಾಟಕದ ಆಗ್ನೇಯದ ಬಹುಭಾಗ ಚೋಳರ ಆಕ್ರಮಣಕ್ಕೆ ಒಳಪಟ್ಟಾಗ ಜೈನಧರ್ಮಕ್ಕೆ ಆ ಭಾಗದಲ್ಲಿ ಪ್ರತಿಷ್ಠಿತರ ಪ್ರೋತ್ಸಾಹ ದೊರಕಲಿಲ್ಲ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಆಳಿದ ಚಾಳುಕ್ಯ ಅರಸರು ಸ್ವತಃ ಹಿಂದು ಧರ್ಮಾವಲಂಬಿಗಳಾಗಿದ್ದರಾಗಿ ಅಲ್ಲಿಯೂ ಸುಮಾರು ಇದೇ ಸ್ಥಿತಿ ಒದಗಿಬಂತು. ಚೋಳರು ಆಳಿದ ಭಾಗಗಳಲ್ಲಿ ಹುಟ್ಟಿಕೊಂಡ ಶಾಸನಗಳು ಹಾಗೂ ವಾಸ್ತುಕೃತಿಗಳನ್ನು ಗಮನಿಸಿದರೆ ಜೈನಧರ್ಮೀಯವಾದದ್ದು ಕಂಡುಬರುವುದೇ ಇಲ್ಲವೇನೋ ಅನಿಸುತ್ತದೆ. ಹೊರಗಿನಿಂದ ಬಂದ ಚೋಳರು ಸ್ಥಳೀಯ ರೀತಿನೀತಿಗಳಿಗೆ ಗಮನ ನೀಡದಿದ್ದುದು ಇದಕ್ಕೆ ಕಾರಣವೆನ್ನಬಹುದು. ಆದರೆ ಸ್ಥಳೀಯರೇ ಆದ ಕಲ್ಯಾಣದ ಚಾಳುಕ್ಯರು ಹಿಂದಿನ ಧರ್ಮಸಹಿಷ್ಣುತೆಯ ಪರಂಪರೆಯನ್ನು ಉಳಿಸಿಕೊಂಡು ಬಂದದ್ದರಿಂದಲೂ ಆ ಕಾಲದ ಜನಸಮೂಹದಲ್ಲಿ ಬಹುಶಃ ಹೆಚ್ಚು ಸಂಖ್ಯೆಯಲ್ಲಿ ಜೈನರಿದ್ದುದರಿಂದಲೂ ಈ ಧರ್ಮಕ್ಕೆ ಸ್ವಲ್ಪಮಟ್ಟಿನ ಬೆಂಬಲ ಮುಂದುವರಿಯುವಂತಾಯಿತು. ಹೆಚ್ಚಿನ ಸಂಖ್ಯೆಯಲ್ಲಿಲ್ಲದಿದ್ದರೂ ಕೆಲವು ಸಾಮಂತ ರಾಜಕುಲದವರು ತಮ್ಮ ಜಿನಭಕ್ತಿಯನ್ನು ಪ್ರದರ್ಶಿಸುತ್ತಿದ್ದರು. ವಣಿಕ ಸಂಘಗಳ ಉದಾರತೆಯೂ ಕುಂಠಿತವಾಗಲಿಲ್ಲ. ರಾಜರೂ ಈ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೆರೆದ ಬ್ರಾಹ್ಮಣ ದಂಡನಾಯಕರೂ ಸಹಿಷ್ಣುತೆಯನ್ನು ತೋರಿದರೂ ರಚನಾತ್ಮಕ ಪ್ರೋತ್ಸಾಹಗಳೇನೂ ಆಗಿರಲಿಲ್ಲವೆನ್ನಬಹುದು. ಬಹುಶಃ ಈ ಕಾರಣಗಳಿಂದ ಉತ್ತರ ಕರ್ನಾಟಕದ ಭಾಗದಲ್ಲಿ ಸು.11ನೆಯ ಶತಮಾನದ ಮಧ್ಯದ ಹೊತ್ತಿಗೆ ಜೈನಧರ್ಮದ ಇಳಿಮುಖ ಚಿಹ್ನೆಗಳು ಕಾಣಿಸಿಕೊಳ್ಳಲಾರಂಭಿಸಿದುವು. ಮುಂದೆ ಇದು ತ್ವರಿತಗತಿಯಲ್ಲಿ ಸಾಗಿತು. ಆದರೆ ದಕ್ಷಿಣಕರ್ನಾಟಕದ ಮಲೆನಾಡು ಪ್ರದೇಶದಲ್ಲಿದ್ದ ಹೊಯ್ಸಳ, ಚಂಗಾಳ್ವ, ಸಾಂತರ ಇತ್ಯಾದಿ ರಾಜವಂಶಗಳು ಜೈನಧರ್ಮದ ಒಲವನ್ನು ಈ ಕಾಲದಲ್ಲೂ ಮುಂದುವರಿಸಿಕೊಂಡು ಬಂದುವು. ಮುಂದೆ ಚೋಳೋಚ್ಚಾಟನೆಯಾಗಿ ಹೊಯ್ಸಳರಾಜ್ಯ ಸ್ಥಾಪನೆಯಾದಾಗ, ಆ ಭಾಗದ ಸಂಪ್ರದಾಯ ರೀತಿ ನೀತಿ ಮತ್ತು ಶಕ್ತಿಗಳಿಗೆ ಪುನಃ ಚಾಲನೆ ದೊರೆಯಿತು. ಹೊಯ್ಸಳ ರಾಜಧಾನಿಯಲ್ಲಿ ಹುಟ್ಟಿದ ಜಿನಾಲಯಗಳು, ರಾಣಿ ಶಾಂತಲೆ ಕಟ್ಟಿಸಿದ ಜೈನಬಸದಿಗಳು, ಶ್ರವಣಬೆಳಗೊಳದಲ್ಲಿ ಹೊಯ್ಸಳರ ಕಾಲದಲ್ಲಿ ನಡೆದ ಜೀರ್ಣೋದ್ಧಾರ ಕಾರ್ಯಗಳು ಮತ್ತು ನವೀನ ರಚನೆಗಳು ಈ ಗೌರವ ಪ್ರೋತ್ಸಾಹಗಳ ಕುರುಹಾಗಿವೆ. ಅಲ್ಲದೆ ಆ ಕಾಲದ ಪ್ರಸಿದ್ಧ ದಂಡನಾಯಕರಾಗಿದ್ದ ಗಂಗರಾಜ, ಬೀಚ, ಹುಳ್ಳ ಮೊದಲಾದವರು ನೂರಾರು ಜಿನಾಲಯಗಳನ್ನು ನಿರ್ಮಿಸಿದರೆಂದೂ ಹಾಳುಬಿದ್ದಿದ್ದ ಹಲವು ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿದರೆಂದೂ ಶಾಸನಗಳು ತಿಳಿಸುತ್ತವೆ. ಚೋಳರಾಜ್ಯದಲ್ಲಿ ಮಸುಕಾಗಿದ್ದ ಜೈನಧರ್ಮ ಹೊಯ್ಸಳರ ಕಾಲದಲ್ಲಿ ಮತ್ತೆ ಮೆರೆಯುವಂತಾಯಿತು.

ಜೈನಶ್ರಾವಕರಲ್ಲಿ ಪೂಜೆ, ದಾನ, ಉಪವಾಸಗಳು ಹಿಂದಿನಂತೆಯೇ ಆಚರಣಾ ರಂಗದಲ್ಲಿ ಮುಂದುವರಿದುವು. ಅಲ್ಲದೆ ಹಿಂದುಗಳಂತೆಯೇ ಅನೇಕ ಹಬ್ಬಗಳನ್ನು ಆಚರಿಸುವುದು ರೂಢಿಯಲ್ಲಿತ್ತು. ಜೀವದಯಾಷ್ಟಮಿ, ನಂದೀಶ್ವರ ಅಷ್ಟಮಿ, ಸಿದ್ಧಚಕ್ರದ ನೋಂಪಿ, ಶ್ರುತಪಂಚಮಿ ಮೊದಲಾದ ಹಬ್ಬದ ಹೆಸರುಗಳು ಸಮಕಾಲೀನ ಶಾಸನಗಳಲ್ಲಿ ದೊರಕುತ್ತವೆ. ಇವುಗಳ ಜೊತೆಗೆ ಜೈನಪುರಾಣಗಳ ಶ್ರವಣ ಪ್ರಸಾರಗಳೂ ಧರ್ಮಶ್ರದ್ಧೆಯ ಭಾಗವಾಗಿದ್ದಂತೆ ತೋರುತ್ತದೆ.

12ನೆಯ ಶತಮಾನದ ಮಧ್ಯಭಾಗದಿಂದ ಉತ್ತರ ಕರ್ನಾಟಕದಲ್ಲಿ ಆಳಿದ ಕಳಚುರಿಗಳು ಮತ್ತು ಅನಂತರ ಅಲ್ಲಿ ಪ್ರಾಬಲ್ಯಕ್ಕೆ ಬಂದ ಸೇವುಣರು ಸ್ವಧರ್ಮ ಯಾವುದೇ ಆದರೂ ಸರ್ವಧರ್ಮಸಮಾನತೆಯ ತತ್ತ್ವವನ್ನು ಆಚರಿಸುವುದು ಅಂದಿನ ರಾಜನೀತಿಯಾಗಿದ್ದುದರಿಂದ ಜೈನಧರ್ಮಕ್ಕೂ ಸಂಬಂಧಿಸಿದಂತೆ ಪ್ರೋತ್ಸಾಹಕಾರ್ಯಗಳನ್ನು ಸ್ವಲ್ಪಮಟ್ಟಿಗೆ ಮುಂದುವರಿಸಿದರು. ಉದಾಹರಣೆಗೆ, ಜೈತುಗಿಯ ಒಬ್ಬ ಅಧಿಕಾರಿಯನ್ನು ಜೈನಾಗಮವಾರ್ಧಿಸೋಮ ಎಂದು ಒಂದು ಶಾಸನ ಕರೆದಿದೆ. ಎರಡನೆಯ ಸಿಂಘಣನ ಮಂತ್ರಿಯಾದ ಬೀಚಿಸೆಟ್ಟಿಯ ಹೆಂಡತಿ ಲಕ್ಮೇಶ್ವರದ ವಿಜಯ ಜಿನಾಲಯದ ಜೀರ್ಣೋದ್ಧಾರ ಮಾಡಿದಳು. ಇವರ ಮಗ ಕಲ್ಲೇರಿ ಎಂಬಲ್ಲಿ ಒಂದು ಬಸದಿಯನ್ನು ಕಟ್ಟಿಸಿದ. ಸೇವುಣ ಮಹಾದೇವ ಮತ್ತು ರಾಮಚಂದ್ರರ ಕಾಲದಲ್ಲಿ ಲಕ್ಮೇಶ್ವರ ಮತ್ತು ಡಂಬಳಗಳಲ್ಲಿಯ ಬಸದಿಗಳು ದಾನ ಗಳಿಸಿದವು. ಆದರೆ ಉತ್ತರ ಕರ್ನಾಟಕದ ಈ ಕಾಲದ ಅಗಾಧ ಶಾಸನಸಾಮಗ್ರಿಯನ್ನು ಪರೀಕ್ಷಿಸಿದಲ್ಲಿ, ಜೈನಧರ್ಮದ ಬಗ್ಗೆ ಬರುವ ಪ್ರಸ್ತಾಪ ಬಹು ಕಡಿಮೆ ಎನ್ನುವುದು ವೇದ್ಯವಾಗುತ್ತದೆ. ಆ ಕಾಲದ ರಾಜಕೀಯ ಪರಿಸ್ಥಿತಿಯು ತ್ವರಿತಗತಿಯಲ್ಲಿ ಬದಲಾಯಿಸುತ್ತಿದ್ದುದು, ಚಾಳುಕ್ಯ ಕಳಚುರಿ ಯಾದವ ಇವರಲ್ಲಿನ ಅಧಿಕಾರದ ಬದಲಾವಣೆಗಳು ಮುಂತಾದ ಸಂದರ್ಭಗಳಲ್ಲಿ ಆ ವರ್ಗಗಳಿಂದ ಧರ್ಮಕ್ಕೆ ಪ್ರೋತ್ಸಾಹ ಹಿಂದಿನಿಂದ ಒದಗಿ ಬರುವುದು ಅಷ್ಟೇನೂ ಸುಲಭವಾಗಿರಲಿಲ್ಲ.

ಇದೇ ಕಾಲದಲ್ಲಿ ಶೈವಧರ್ಮ ವ್ಯಾಪಕವಾಗಿದ್ದುದು, ವೀರಶೈವಧರ್ಮ ಉದ್ಭವವಾಗಿದ್ದುದು ಇವುಗಳಿಂದ ಈ ಹೊತ್ತಿಗೆ ಜನಸಾಮಾನ್ಯದ ಸಂಪರ್ಕವನ್ನು ಕಳೆದುಕೊಳ್ಳುತ್ತಿದ್ದ ಜೈನಧರ್ಮ ಆ ಜನರಿಂದಲೂ ಹೆಚ್ಚಿನ ಬೆಂಬಲವನ್ನು ಗಳಿಸಲಾರದೆ ಹೋಯಿತು. ಧಾರವಾಡ ಜಿಲ್ಲೆಯ ಅಬ್ಬಲೂರಿನಲ್ಲಿ ದೊರಕಿರುವ ಶಾಸನಗಳು ಅಂದಿನ ಪರಿಸ್ಥಿತಿಯ ಸ್ಪಷ್ಟಸೂಚಕಗಳಾಗಿವೆ. ಏಕಾಂತರಾಮಯ್ಯನ ವೀರಪವಾಡಗಳು, ಆತ

ಜೈನರೊಡನೆ ಸೆಣಸಿ ವಿಜಯಿಯಾಗಿ ಜಿನಾಲಯದಲ್ಲಿ ಲಿಂಗಸ್ಥಾಪನೆ ಮಾಡಿದ್ದು ಇಂಥ ಆಂದೋಲನಗಳು ನಡೆದುವು. ಅಷ್ಟೇ ಅಲ್ಲದೆ ಅವನ ಈ ವೀರಕಾರ್ಯಗಳನ್ನು ಶಿಲ್ಪಗಳಲ್ಲಿ ನಿರೂಪಿಸಿ ಶಾಸನದಲ್ಲಿ ದಾಖಲಿಸಿ ಸಾರ್ವಜನಿಕವಾಗಿ ದೇವಾಲಯದಲ್ಲಿ ಪ್ರದರ್ಶಿಸಿರುವುದು ಕೂಡ ಗಮನಾರ್ಹ ವಿಷಯ. ಸರ್ವಧರ್ಮ ಸಹಿಷ್ಣುತೆಯನ್ನು ಪ್ರತಿಪಾದಿಸುತ್ತಿದ್ದ ಈ ನಾಡಿನಲ್ಲಿ ಅಂಥ ಕಾರ್ಯಗಳು ನಡೆಯಬೇಕಾದರೆ, ಆ ಕಾಲದಲ್ಲಿ ಜೈನಧರ್ಮ ಜನಸಾಮಾನ್ಯರ ಹಾಗೂ ಅಂದಿನ ಆಳರಸರ ಬೆಂಬಲವನ್ನು ಉಳಿಸಿಕೊಳ್ಳಲಾರದ ಸ್ಥಿತಿಗೆ ಇಳಿದಿತ್ತೆಂಬುದನ್ನು ಸೂಚಿಸುತ್ತದೆ. ಆಕಸ್ಮಿಕವಾಗಿ ಆಳುವವರ ನೆರವನ್ನು ಗಳಿಸಿದರೂ ಜೈನಧರ್ಮದ ಅಸ್ತಿತ್ವ ಅಷ್ಟೇನೂ ಸುಲಭವಾಗಿರಲಿಲ್ಲ. ಬಿಜಾಪುರ ಜಿಲ್ಲೆಯ ತೇರದಾಳದ 1181ರ ಒಂದು ಶಾಸನದಲ್ಲಿ ದೊರಕುವ ವಿಷಯ ಈ ಸಂದರ್ಭದಲ್ಲಿ ಕುತೂಹಲಕರವಾಗಿದೆ. ಆ ಊರಿನ ನೇಮಿತೀರ್ಥೇಶ್ವರ ಜಿನಾಲಯ ಹಿಂದೆ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಡಳಿತ ಕಕ್ಷೆಯಲ್ಲಿತ್ತು. ಆದರೆ ಆ ಊರಿನ ಸಮಗ್ರ ನಕರಗಳ ಪ್ರಾರ್ಥನೆಯಂತೆ ಕೊಲ್ಲಾಪುರದ ಘಟಿಕಾಸ್ಥಾನದ ಆಚಾರ್ಯರು ಮತ್ತು 'ಏಳ್ಕೋಟಿಯಸಂಖ್ಯಾತ ಗಣಂಗಳು' ಒಂದುಗೂಡಿ ಆ ಜಿನಾಲಯವನ್ನು ಅದೇ ಊರಿನ ಕಲಿದೇವ ದೇವಾಲಯಕ್ಕೆ ಪ್ರತಿಬದ್ಧ ಮಾಡಿದರು. ಇದಕ್ಕೆ ಕಾರಣ ಆ ಶಾಸನದ ಕೊನೆಯಲ್ಲಿರುವ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. 'ಬಸದಿಯು ಮೇಲೆ ಶೂದ್ರಕನ ಸಿಂಹದ ಚಕ್ರದಾ ಚಿಹ್ನೆಮೆಂಬಿವಂ ಕಿಸುಳದ ಘಂಟೆಯಿಂಪೞಿಯ ನಾಗನಿಪ್ಪುವನ್ನೇಳುಕೋಟಿ ತಾಪಸರ್ಗೆ ಮಹಾವೀರೊಧಿಯರನೀಶ್ವರವೈರಿ' ಎಂಬುದು ಅಲ್ಲಿರುವ ಮಾತು. ಅಂದು ನಡೆಯುತ್ತಿದ್ದ ಧಾರ್ಮಿಕ ಆಂದೋಲನ ಚಿತ್ರವನ್ನೂ ಅಂಥ ದುರ್ಘಟನೆ ತೇರದಾಳದ ಬಸದಿಗೆ ಒದಗಬಾರದೆಂಬ ಉದ್ದೇಶದಿಂದ ಶೈವರಕ್ಷೆಯನ್ನೇ ಬೇಡಿದ ಒಂದು ಸಂದರ್ಭವನ್ನೂ ನಿರೂಪಿಸುವ ಈ ಶಾಸನ 12ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಕರ್ನಾಟಕದಲ್ಲಿ ಜೈನಧರ್ಮ ಯಾವ ಸ್ಥಿತಿಯಲ್ಲಿದ್ದಿತೆಂಬುದಕ್ಕೆ ಸೂಚಕವಾಗಿದೆ. 13ನೆಯ ಶತಮಾನದಲ್ಲಿ ಇದೇ ಪರಿಸ್ಥಿತಿ ಮುಂದುವರಿದಿರಬೇಕು. ಈಗ ಉತ್ತರ ಕರ್ನಾಟಕದಲ್ಲಿ ಕಾಣುವ ಹಲವು ಶಿವಾಲಯಗಳು ಮೂಲತಃ ಜೈನಾಲಯಗಳಾಗಿದ್ದುವೆಂಬುದನ್ನೂ ಈ ಪರಿವರ್ತನೆ ಬಹು ಹಿಂದೆ ನಡೆದಿರಬೇಕೆಂಬುದನ್ನೂ ಅನೇಕ ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಬಹುದು. 13ನೆಯ ಶತಮಾನದ ಉತ್ತರಾರ್ಧ ಮತ್ತು 14ನೆಯ ಶತಮಾನದ ಪೂರ್ವಾರ್ಧದ ಇಸ್ಲಾಮೀಯರ ದಾಳಿಗಳು, ಅದನ್ನು ಅನುಸರಿಸಿ ಬಂದ ಇಸ್ಲಾಮೀ ರಾಜ್ಯ ಸ್ಥಾಪನೆ - ಇವು ಈ ಪ್ರದೇಶದಲ್ಲಿ ಜೈನಧರ್ಮ ಮತ್ತೆ ಚೇತರಿಸಿಕೊಳ್ಳುವ ಅವಕಾಶವನ್ನೂ ಮೂಲೆಗೊತ್ತಿದುವು.

ಈ ಕಾಲದಲ್ಲಿ ಹೊಯ್ಸಳರ ಕಕ್ಷೆಯಲ್ಲಿದ್ದ ದಕ್ಷಿಣ ಕರ್ನಾಟಕದಲ್ಲಾದರೋ ಸರ್ವಧರ್ಮ ಸಹಿಷ್ಣುತೆಯ ತತ್ತ್ವ ಸಾಕಷ್ಟು ಬಲವಾಗಿಯೇ ಇತ್ತು. ಹಲವು ಅರಸರು, ಸಾಮಂತರು, ಅಧಿಕಾರಿಗಳು ಜೈನಧರ್ಮಕ್ಕೂ ಪ್ರೋತ್ಸಾಹ ನೀಡುತ್ತಿದ್ದರು. ಅರಸೀಕೆರೆ, ಶ್ರವಣಬೆಳಗೊಳ, ನಿಟ್ಟೂರು, ಕಂಬದಹಳ್ಳಿ ಮೊದಲಾದ ಹಲವು ಸ್ಥಳಗಳಲ್ಲಿ ಹೊಸ ಬಸದಿಗಳು ರಚನೆಯಾದುದು, ಹಿಂದಿದ್ದ ಬಸದಿಗಳ ಜೀರ್ಣೋದ್ಧಾರ ವಾದುದು, ದಾನ ದತ್ತಿಗಳನ್ನು ಪಡೆದುದು ಮೊದಲಾದ ಕಾರ್ಯಗಳು ನಡೆದ ಬಗ್ಗೆ ಶಾಸನೋಲ್ಲೇಖಗಳು ದೊರಕುತ್ತವೆ. ಅಂದಿನ ಜೈನಶಾಸನಗಳಲ್ಲಿ ರಾಜರು ಮತ್ತು ಅಧಿಕಾರಿಗಳಿಂದ ಗೌರವಪಡೆದಿದ್ದ ಗುರುವರ್ಗದವರ ಪ್ರಸ್ತಾಪ ಅಲ್ಲಲ್ಲಿ ದೊರಕುತ್ತದೆ. ಆದರೆ ಅಂದಿನ ಶಾಸನಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ಎರಡು ಅಂಶಗಳು ಸ್ಪಷ್ಟಗೊಳ್ಳುತ್ತವೆ. ಮೊದಲನೆಯದಾಗಿ ಆ ಕಾಲದ ಜೈನಶಾಸನಗಳ ಸಂಖ್ಯೆ ಹೆಚ್ಚಿಲ್ಲ; ಇದು ಹಿಂದಿನ ಕಾಲದಲ್ಲಿದ್ದ ಪ್ರಮಾಣಕ್ಕಿಂತ ಬಹು ಕಡಿಮೆ ಎಂಬುದು. ಎರಡನೆಯದಾಗಿ ಈ ಎರಡು ಶತಮಾನಗಳ ಅವಧಿಯಲ್ಲಿ ಜೈನಧರ್ಮಕ್ಕಿದ್ದ ಬೆಂಬಲ ಕ್ರಮೇಣ ಇಳಿಮುಖವಾಗುತ್ತಿದ್ದುದು. ಶೈವ ಮತ್ತು ವೀರಶೈವದ ಆಂದೋಲನದ ಪ್ರಭಾವ ಈ ಭಾಗಕ್ಕೂ ಹರಡಿದ್ದರೆ ಆಶ್ಚರ್ಯವಿಲ್ಲ. ಉತ್ತರ ಕರ್ನಾಟಕದಲ್ಲಿ ಆದಂತೆ ಜೈನರು ಮತ್ತು ಜೈನಸಂಸ್ಥೆಗಳ ಮೇಲೆ ದಾಳಿಗಳೇನೂ ನಡೆಯಲಿಲ್ಲವಾದರೂ ಬೆಂಬಲದ ಕ್ಷೀಣತೆ ಮಾತ್ರ ಗಮನಾರ್ಹವಾಗಿ ಕಾಣಿಸಿಕೊಳ್ಳುತ್ತದೆ.

ನಾಡಿನ ಬಹುಭಾಗದಲ್ಲಿ ಜೈನಧರ್ಮ ಅವನತಿ ಹೊಂದುತ್ತಿದ್ದರೂ ಹೊಸ ಆಂದೋಲನದ ಪ್ರಭಾವಕ್ಕೆ ಒಳಗಾಗದಿದ್ದ ಪಶ್ಚಿಮ ಕರಾವಳಿಯ ಭಾಗದಲ್ಲಿ ಈ ಧರ್ಮ ಹೊಸ ನೆಲೆಯನ್ನು ಕಂಡುಕೊಂಡಿತು. ತುಳುನಾಡಿನ ಆಡಳಿತ ಕಾಲದಲ್ಲಿ ಜೈನಧರ್ಮ ಸ್ವಲ್ಪಮಟ್ಟಿನ ಪ್ರೋತ್ಸಾಹವನ್ನು ಗಳಿಸಿತು. ಆ ಭಾಗಕ್ಕೆ ಸಂಬಂಧಿಸಿದಂತೆ ಇದು ಜೈನಧರ್ಮದ ಪ್ರಾರಂಭಕಾಲ ಎಂದು ತೋರುತ್ತದೆ. (ಎಸ್.ಎಸ್.)

14ನೆಯ ಶತಮಾನದ ಮಧ್ಯಭಾಗದಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುತ್ತಿದ್ದಂತೆಯೇ ದೇಶದಲ್ಲಿ ಉಂಟಾಗಿದ್ದ ಆಂತರಿಕ ಧಾರ್ಮಿಕ ಸಂಘರ್ಷಣೆಯ ಸ್ಥಿತಿ ಕಳೆದು ಒಂದು ರೀತಿಯ ಸಮವ್ಯವಸ್ಥೆ ರೂಪಿತವಾಯಿತು. ಇಂಥ ಕಾರ್ಯದಲ್ಲಿ ವಿಜಯನಗರದ ಅರಸರು ಆಸ್ಥೆವಹಿಸಿದ ಬಗ್ಗೆ ಶ್ರವಣಬೆಳಗೊಳ ಇತ್ಯಾದಿ ಎಡೆಗಳಲ್ಲಿ ಇರುವ ಬುಕ್ಕನ ಶಾಸನ ಸೂಚನೆ ನೀಡುತ್ತದೆ. ಆ ಶಾಸನದಲ್ಲಿ ಜೈನರಿಗೂ ಶ್ರೀವೈಷ್ಣವರಿಗೂ ಇದ್ದ ವೈಮನಸ್ಸನ್ನು ಪರಿಹರಿಸಿ ಈ ಎರಡು ಧರ್ಮೀಯರೂ ಸ್ನೇಹದಿಂದಿರಲು ವ್ಯವಸ್ಥೆಮಾಡಿದ ವಿವರಗಳಿವೆ. ಇಂಥ ರಚನಾತ್ಮಕ ಕಾರ್ಯಗಳಿಂದ ಹಿಂದಿನಿಂದಲೂ ಕರ್ನಾಟಕದಲ್ಲಿ ನೆಲೆಗೊಂಡಿದ್ದ ಧರ್ಮಸಹಿಷ್ಣುತಾ ತತ್ತ್ವ ಮತ್ತೆ ಬೆಳೆಯಿತು. ಈ ಹೊತ್ತಿಗೆ ಜೈನ ಧರ್ಮೀಯರು ಸಂಖ್ಯಾದೃಷ್ಟಿಯಿಂದ ಕಡಿಮೆಯಾಗಿದ್ದರೂ ಇವರು ತಮ್ಮ ಧರ್ಮವಿಚಾರಗಳನ್ನು ರೂಢಿಸಿ ಆಚರಿಸಿಕೊಂಡು ಬರಲು ತೊಂದರೆಯೊದಗಲಿಲ್ಲ. ಬೈಚಪ್ಪ, ಇರುಗಪ್ಪ ಮೊದಲಾದ ಜೈನ ದಂಡನಾಯಕರು, ಭೀಮಾದೇವಿಯಂಥ ರಾಣಿಯರು ಜೈನಧರ್ಮೀಯರೇ ಆಗಿದ್ದು ಧರ್ಮಪ್ರೋತ್ಸಾಹಕಾರ್ಯವನ್ನು ಮುಂದುವರೆಸಿದರು. ವಿಜಯನಗರದ ಅರಸರ ಕಾಲದಲ್ಲಿ ಪುನಃ ವ್ಯವಸ್ಥಿತವಾದ ಧಾರ್ಮಿಕರಂಗದ ಶಾಂತಸ್ಥಿತಿ ಅವರ ಉತ್ತರಾಧಿಕಾರಿಗಳಾದ ಕೆಳದಿಯ ಅರಸರು, ಮೈಸೂರು ಒಡೆಯರು ಮುಂತಾದವರ ಕಾಲದಲ್ಲೂ ಮುಂದುವರೆಯಿತು. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ ಆಳಿದ ಭೈರರಸರು, ಚೌಟರು, ಅಜಿಲರು, ಸಾಳುವರು ಮೊದಲಾದ ಚಿಕ್ಕ ರಾಜಮನೆತನಗಳವರೂ ಜೈನಧರ್ಮೀಯರೇ ಆಗಿದ್ದರು. ಶ್ರವಣಬೆಳಗೊಳ, ಮೂಡಬಿದರೆ, ಕಾರ್ಕಳ ಮೊದಲಾದ ಸ್ಥಳಗಳಲ್ಲಿ ಜೈನವಾಸ್ತುಕೃತಿಗಳು ಹುಟ್ಟಿರುವುದೂ ಮಧುರ, ಪಂಚಬಾಣ, ರತ್ನಾಕರವರ್ಣಿ, ದೇವಚಂದ್ರ ಮೊದಲಾದ ಜೈನಧರ್ಮೀಯರು ಕೃತಿರಚನೆಗಳನ್ನು ಮಾಡಿರುವುದೂ ಈ ಕಾಲದ ಜೈನಧರ್ಮದ ಸ್ಥಿತಿಯ ಬಗ್ಗೆ ಸೂಚಕಗಳಾಗಿವೆ.

**ಆಧುನಿಕ ಕಾಲ :** ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಇಂದು ಜೈನ ಧರ್ಮೀಯರು ಕಂಡುಬರುತ್ತಾರೆ. ಕನ್ನಡವನ್ನು ಇನ್ನೂ ಮಾತೃಭಾಷೆಯನ್ನಾಗಿ ಉಳಿಸಿಕೊಂಡಿರುವ ಜೈನರು ಕರ್ನಾಟಕದ ಗಡಿಪ್ರದೇಶ, ಕೇರಳದ ವೈನಾಡು, ಮಹಾರಾಷ್ಟ್ರದ ಸಾಂಗಲಿ, ಕೊಲ್ಲಾಪುರ, ಸೊಲ್ಲಾಪುರ ಜಿಲ್ಲೆಗಳಲ್ಲಿ, ಆಂಧ್ರದ ಹಿಂದೂಪುರ, ಅಮರಾಪುರಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಜೈನಧರ್ಮದಲ್ಲಿ ಬೋಗಾರ, ಕಾಸಾರ, ಪಂಚಮಿ, ಚತುರ್ಥ, ಸೇತುವಾಳ, ಸಾದ, ಗೌಡ ಮೊದಲಾದ ಕೆಲವು ಒಳಪಂಗಡಗಳು ಇವೆ. ಅರ್ಚಕ ವರ್ಗಕ್ಕೆ ದಕ್ಷಿಣ ಕರ್ನಾಟಕದ ಭಾಗದಲ್ಲಿ ಪುರೋಹಿತ, ದಕ್ಷಿಣ ಕನ್ನಡದಲ್ಲಿ ಇಂದ್ರ, ಉತ್ತರ ಕರ್ನಾಟಕದಲ್ಲಿ ಉಪಾಧ್ಯಾಯ ಹೀಗೆ ಹೆಸರುಗಳಿವೆ.

ಜೈನ ಸಮಾಜದ ಮೇಲೆ ತಮ್ಮ ಪ್ರಭಾವವನ್ನು ಉಳಿಸಿ ಕೊಂಡಿರುವ ಜೈನಮಠಗಳು ಕೆಲವು ಮುಖ್ಯ ಧಾರ್ಮಿಕ ಕ್ಷೇತ್ರಗಳಲ್ಲಿವೆ. ಶ್ರವಣಬೆಳಗೊಳ, ಕಾರ್ಕಳ, ಮೂಡಬಿದರೆ, ಹೊಂಬುಜ (ಹುಂಚ), ಸಿಂಹನ ಗದ್ದೆ (ನರಸಿಂಹರಾಜಪುರ) ಮತ್ತು ಸೋದೆ - ಈ ಮಠಗಳು ಪ್ರಮುಖವಾದುವು. ಇಲ್ಲಿನ ಮಠಾಧಿಪತಿಗಳು ಆಯಾ ಕ್ಷೇತ್ರದ ಪಾಲನೆ ಮಾಡಿದುದೇ ಅಲ್ಲದೆ ತಮ್ಮ ಮಠಗಳು ಜೈನ ಸಿದ್ಧಾಂತದ ಅಧ್ಯಯನಕೇಂದ್ರ ಗಳೂ ಆಗುವಂತೆ ನೋಡಿ ಕೊಂಡರು. ಹಾಗಾಗಿ ಈ ಮಠಗಳಲ್ಲಿ ಅಮೂಲ್ಯವಾದ ಕನ್ನಡ, ಸಂಸ್ಕೃತ, ಪ್ರಾಕೃತ ಗ್ರಂಥಗಳ ಹಸ್ತಪ್ರತಿ ಭಂಡಾರಗಳಿವೆ.

ಶ್ರವಣಬೆಳಗೊಳ, ಸಿಂಹನಗದ್ದೆ ಮಠಗಳಲ್ಲಿ ಜೈನಾಗಮವನ್ನು ಕಲಿಸುವ ವ್ಯವಸ್ಥೆಯಿದೆ. ಹೊಂಬುಜದಲ್ಲಿ ಕುಂದಕುಂದ ವಿದ್ಯಾಪೀಠವಿದೆ. ಕಾರ್ಕಳದಲ್ಲಿ ಭುಜಬಲಿ ಬ್ರಹ್ಮಚರ್ಯಾಶ್ರಮ, ಸ್ತವನಿಧಿಯಲ್ಲಿ ಪಾರ್ಶ್ವನಾಥ ಗುರುಕುಲ, ಬೆಲ್ಲದ ಬಾಗೇವಾಡಿಯಲ್ಲಿ ಭರತೇಶ ವಿದ್ಯಾಲಯ, ತೇರದಾಳದಲ್ಲಿ ಜಿನಸೇನ ಗುರುಕುಲ, ಅಕ್ಕಿವಾಟದಲ್ಲಿ ವಿದ್ಯಾಸಾಗರ ಗುರುಕುಲ ಇವೆ. ಇಲ್ಲೆಲ್ಲ ವಿದ್ಯಾರ್ಥಿಗಳು ಪೂರ್ಣಾವಧಿ ಗುರುಕುಲಗಳಲ್ಲೇ ಇದ್ದು ಶಾಲಾಶಿಕ್ಷಣದ ಜೊತೆಯಲ್ಲೇ ಧಾರ್ಮಿಕ ತಿಳಿವಳಿಕೆಯನ್ನೂ ಪಡೆಯುತ್ತಾರೆ. ಕಾರ್ಕಳದಲ್ಲಿ ಹೆಣ್ಣುಮಕ್ಕಳಿಗಾಗಿಯೇ ಒಂದು ಶ್ರಾವಿಕಾಶ್ರಮವಿದೆ. ವೈನಾಡಿನಲ್ಲಿ ವಸತಿಗೃಹ ಸಹಿತವಾದ ಒಂದು ಶಾಲೆಯಿದೆ. ಆಧುನಿಕ ಶಿಕ್ಷಣವು ಇಲ್ಲಿ ಮಲಯಾಳಂ, ಇಂಗ್ಲಿಷ್ ಭಾಷೆಗಳಲ್ಲಿ ದೊರಕಿದರೂ ಧಾರ್ಮಿಕ ಶಿಕ್ಷಣ ಕನ್ನಡದಲ್ಲಿ ಮಾತ್ರ ದೊರೆಯುತ್ತದೆ. ಇಲ್ಲಿಗೆ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಾರೆ.

ಲತ್ತೆ ಎಜುಕೇಶನ್ ಸೊಸೈಟಿಯವರ ವಿದ್ಯಾಸಂಸ್ಥೆಗಳು ಉತ್ತರ ಕರ್ನಾಟಕದಲ್ಲಿವೆ. ಮೂಡಬಿದರೆಯಲ್ಲಿ ಜೈನ್ ಹೈಸ್ಕೂಲ್,ಜೈನ್ ಜೂನಿಯರ್ ಕಾಲೇಜು ಇವೆ. ಬೆಂಗಳೂರಿನ ಮಹಾವೀರ ಮಿಷನ್ ಕರ್ನಾಟಕದಾದ್ಯಂತ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಪ್ರತಿವರ್ಷವೂ ವಿದ್ಯಾರ್ಥಿ ವೇತನವನ್ನು ನೀಡುತ್ತದೆ. ನಗರ ಪ್ರದೇಶಗಳಲ್ಲಿರುವ ಕೆಲವು ಮಹಿಳಾ ಸಮಾಜ ಹಾಗೂ ಯುವಕರ ಸಂಘಗಳು ಮಹಾವೀರ ಜಯಂತಿ ದಶಲಕ್ಷಪರ್ವ ಮೊದಲಾದ ಸಂದರ್ಭಗಳಲ್ಲಿ ಚಟುವಟಿಕೆಯಿಂದ ಕೆಲಸ ಮಾಡುವುದೇ ಅಲ್ಲದೆ ಕೆಲವು ಕಡೆಗಳಲ್ಲಿ ಬೇಸಗೆ ಧಾರ್ಮಿಕ ಶಿಬಿರಗಳನ್ನು ನಡೆಸಿ ಅಲ್ಲಿ ಧಾರ್ಮಿಕ ಶಿಕ್ಷಣವನ್ನು ಅಲ್ಪಾವಧಿಯಲ್ಲಿ ನೀಡುವ ಪ್ರಯತ್ನ ಮಾಡುತ್ತಿವೆ. ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂವಿ ಮೊದಲಾದ ನಗರಗಳಲ್ಲಿ ಜೈನ ವಿದ್ಯಾರ್ಥಿನಿಲಯಗಳಿವೆ.

ಕರ್ನಾಟಕಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಉತ್ತರ ಭಾರತದ ಗುಜರಾತ್, ರಾಜಸ್ಥಾನಗಳಿಂದ ಬಂದು ಇಲ್ಲಿಯೇ ನೆಲಸಿರುವ ಶ್ವೇತಾಂಬರ ಪಂಥದ ಜೈನರು ನಗರ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರಲ್ಲಿ ಮಂದಿರ ಮಾರ್ಗಿ, ಸ್ಥಾನಕವಾಸಿ ಎಂಬ ಎರಡು ಪಂಗಡಗಳಿವೆ. ಜಿನಮಂದಿರಗಳನ್ನೂ ಮೂರ್ತಿಪೂಜೆಯನ್ನೂ ಮಾಡುವವರು ಮಂದಿರ ಮಾರ್ಗಿಗಳು. ಸ್ಥಾನಕವಾಸಿಗಳು ಮೂರ್ತಿಪೂಜೆಯನ್ನು ಮಾಡುವುದಿಲ್ಲ. ಅಲ್ಲಿ ಧಾರ್ಮಿಕ ಅಧ್ಯಯನ ಪ್ರವಚನ ನಡೆಯುತ್ತವೆ. ಧಾರ್ಮಿಕ ಗ್ರಂಥಗಳಿರುತ್ತವೆ. ಸಾಮಾಜಿಕ ಸೇವಾ ಕಾರ್ಯಗಳಲ್ಲೂ ಗೋಶಾಲೆಗಳ ವ್ಯವಸ್ಥೆಯಲ್ಲೂ ಇವರು ಪ್ರಧಾನ ಪಾತ್ರ ವಹಿಸುತ್ತಿದ್ದಾರೆ.

ಧಾರ್ಮಿಕ, ಸಾಹಿತ್ಯಕ ಚಟುವಟಿಕೆಗಳಿಗೆ ಮೀಸಲಾದ ಪತ್ರಿಕೆಗಳನ್ನು ಜೈನ ಸಮಾಜ ನಡೆಸಿಕೊಂಡು ಬಂದಿದೆ. ಒಂದು ಕಾಲಕ್ಕೆ ನಿಯತವಾಗಿ ಪ್ರಕಟವಾಗುತ್ತಿದ್ದ ವಿಶ್ವಬಂಧು, ಜಿನವಿಜಯ ಮತ್ತು ವಿವೇಕಾಭ್ಯುದಯ ಪತ್ರಿಕೆಗಳು ಈಗ ನಿಂತು ಹೋಗಿವೆ. ಆದರೆ ಗುರುದೇವ, ಸನ್ಮತಿ, ಜಿನವಾಣಿ ಮಾಸಪತ್ರಿಕೆಗಳು ಪ್ರಕಟವಾಗುತ್ತಿವೆ. ಜೈನಸಂಸ್ಕೃತಿ ಸಂರಕ್ಷಕ ಸಂಘ (ಕೊಲ್ಹಾಪುರ), ಜೈನ ಸಾಹಿತ್ಯ ಪ್ರಚಾರ ಸಂಘ (ಮೈಸೂರು), ಶಾಂತಿಸೇವಾ ಸದನ (ಶೇಡಬಾಳ), ವಿವೇಕೋದಯ ಗ್ರಂಥಮಾಲೆ (ಗುಡಿಬಂಡೆ) ಮೊದಲಾದ ಸಂಸ್ಥೆಗಳು ಕನ್ನಡದಲ್ಲಿ ಜೈನ ಧಾರ್ಮಿಕ ಸಾಹಿತ್ಯಕ ಗ್ರಂಥಗಳನ್ನು ಬೆಳಕಿಗೆ ತರುತ್ತಿವೆ. ಸಂದರ್ಭಾನುಸಾರ ವೈಯಕ್ತಿಕವಾಗಿ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿ ಶಾಸ್ತ್ರದಾನವೆಂಬುದಾಗಿ ಹಂಚುವ ಪದ್ಧತಿ ಇಂದಿಗೂ ನಡೆದುಕೊಂಡು ಬಂದಿದೆ. ಜೈನಶಾಸ್ತ್ರದ ಅಧ್ಯಯನ, ಸಂಶೋಧನೆಗಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ವಿಭಾಗವಿದೆ. (ಎಸ್.ಪಿ.)

**ಜೊಯಡ :** ಉತ್ತರ ಕನ್ನಡ ಜಿಲ್ಲೆ ಸುಪ ತಾಲ್ಲೂಕಿನ ಆಡಳಿತ ಕೇಂದ್ರ. ಕಾರವಾರ - ಬೆಳಗಾಂವಿ ರಸ್ತೆಯಲ್ಲಿ ಕಾರವಾರದಿಂದ 70ಕಿಮೀ ದೂರದಲ್ಲಿದೆ. ಹಿಂದಿನ ಸುಪ ತಾಲ್ಲೂಕಿನ ಆಡಳಿತ ಕೇಂದ್ರವಾಗಿದ್ದ ಸುಪ ಪಟ್ಟಣ ಕಾಳಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಸುಪ ಅಣೆಕಟ್ಟಿನಿಂದ ಮುಳುಗಿಹೋದದ್ದರಿಂದ ಜೊಯಡಾವನ್ನು 1981ರಿಂದ ಸುಪ ತಾಲ್ಲೂಕಿನ ಆಡಳಿತ ಕೇಂದ್ರವಾಗಿ ಮಾಡಲಾಗಿದೆ. ಇದು ಈಗ ತಾಲ್ಲೂಕು ಕೇಂದ್ರವಾಗಿ ಅಭಿವೃದ್ಧಿ ಹೊಂದುತ್ತಿದೆ. ಮಲೆನಾಡು ಮತ್ತು ಬಯಲು ನಾಡುಗಳ ಸ್ಥಿತ್ಯಂತರ ಪ್ರದೇಶದಲ್ಲಿದೆ. ಇಲ್ಲಿ ಸರಾಸರಿ 2,667.9ಮಿಮೀ ಮಳೆಯಾಗುತ್ತದೆ. ಈ ಊರಿನಲ್ಲಿ ಸಿದ್ದೇಶ್ವರ, ಜಾಲ್ಮಿ ಮತ್ತು ನಾಗನಾಥ ದೇವಾಲಯಗಳಿವೆ. ಇವೆಲ್ಲ ಹೆಂಚಿನ ಛಾವಣಿ ಹೊಂದಿರುವ ದೇವಾಲಯಗಳು. (ನೋಡಿ: ಸುಪ) (ಬಿ.ಎನ್.ಎಂ.)

**ಜೋಕಿನ್, ಅರ್ಬುದಂ :** ಕೊಳೆಗೇರಿ ನಿವಾಸಿಗರ ಜೀವನ ಸುಧಾರಣೆಗಾಗಿ, ಶೋಷಣೆಯ ನಿವಾರಣೆಗಾಗಿ ಹೋರಾಟ ನಡೆಸುತ್ತಿರುವ, ಈಗ ಮುಂಬಯಿಯಲ್ಲಿ ನೆಲೆಸಿರುವ ಮ್ಯಾಗ್ಸೆಸೆ ಪ್ರಶಸ್ತಿ ಪಡೆದ ಸಮಾಜ ಸೇವಕರು; ಅಚ್ಚಕನ್ನಡಿಗರು. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಜನಿಸಿದರು. ಅರ್ಬುದಂ ಚಿನ್ನದ ಗಣಿಯಲ್ಲಿ ಇಂಜನಿಯರ್‌ರಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡದ್ದಕ್ಕಾಗಿ ಕೆಲಸ ಕಳೆದುಕೊಂಡರು. ಜೀವನೋಪಾಯವಾಗಿ ವ್ಯಾಪಾರ ಆರಂಭಿಸಿದರು. ಆದರೆ ರಾಜಕೀಯ ಚಟುವಟಿಕೆಗಳಿಂದಾಗಿ ವ್ಯಾಪಾರದಲ್ಲಿ ಯಶಸ್ವಿಯಾಗಲಿಲ್ಲ. ಒಂಬತ್ತನೆಯ ಇಯತ್ತೆಯವರೆಗೆ ಓದಿದ್ದ ಜೋಕಿನ್ ಸಂಸಾರದ ನಿರ್ವಹಣೆಗಾಗಿ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಹೋದರು.

ಬೆಂಗಳೂರಿನಲ್ಲಿ ಇವರು ಮಣ್ಣು ಹೊತ್ತರು; ಚರಂಡಿ ಸ್ವಚ್ಛಗೊಳಿಸುವ ಕೆಲಸ ಕೈಗೊಂಡರು. ಮಾವನಿಂದ ಮರಗೆಲಸದ ತರಬೇತಿ ಪಡೆದು ಅವರಲ್ಲೇ ಕೆಲಸಕ್ಕೆ ಸೇರಿಕೊಂಡರು. ಅವರಲ್ಲಿ ಉದ್ಯೋಗ ಮಾಡುವುದನ್ನು ಬಿಟ್ಟು ಸ್ವತಂತ್ರವಾಗಿ ಆ ಕೆಲಸ ಕೈಗೊಂಡು ಯಶಸ್ವಿಯಾದರು. ನಾಲ್ವರು ಸಹೋದರರು ಮತ್ತು ಮೂವರು ಸಹೋದರಿಯರ ನಿರ್ವಹಣೆಯ ಜವಾಬ್ದಾರಿ ಹೊತ್ತರು.

1963ರಲ್ಲಿ ಇವರು ಮುಂಬಯಿಗೆ ಬಂದರು. ಮನಖುರ್ದನ ಜನತಾ ಕಾಲೋನಿಯೆಂಬ ಕೊಳೆಗೇರಿಯಲ್ಲಿ ವಾಸಮಾಡುತ್ತ ಕೊಳೆಗೇರಿಯ ಜನರ ಕಷ್ಟ, ಬವಣೆ, ಯಾತನೆಗಳನ್ನು ನೋಡಿ ಅವುಗಳ ಪರಿಹಾರ ಕಾರ್ಯದಲ್ಲಿ ತೊಡಗಿದರು. ಅಲ್ಲಿನ ಬಾಲಕರನ್ನೂ ಯುವಕರನ್ನೂ ಸಂಘಟಿಸಿ ಒಂದು ವಾದ್ಯಮೇಳವನ್ನು ಸ್ಥಾಪಿಸಿದರು. ಇಪ್ಪತ್ತು ವರ್ಷಗಳಿಂದ ಹೀನಸ್ಥಿತಿಯಲ್ಲಿದ್ದ ಶೌಚಾಲಯವನ್ನು ಶುಚಿಗೊಳಿಸಿ ಅದರ ಜೀರ್ಣೋದ್ಧಾರ ಮಾಡಿದರು. ಆ ಕಾಲೋನಿಯಲ್ಲಿನ 70,000 ನಿವಾಸಿಗಳನ್ನು ಒಂದುಗೂಡಿಸಲು ರಾಷ್ಟ್ರೀಯ ಕೊಳೆಗೇರಿ ನಿವಾಸಿಗಳ ಒಕ್ಕೂಟ ಸ್ಥಾಪಿಸಿದರು. ಕಾಲುಹಾದಿಯ ನಿವಾಸಿಗಳ ಸಂಘಟನೆಯಲ್ಲಿ ತೊಡಗಿದಾಗ, ಬಡವರಿಗೆ ಆಗುತ್ತಿದ್ದ ಶೋಷಣೆಯ ವಿರುದ್ಧ ದನಿಯೆತ್ತಿ ಚಳವಳಿಯನ್ನು ಸಂಘಟಿಸಿ ಬಂಧನಕ್ಕೊಳಗಾದರು. ಪರಮಾಣುಶಕ್ತಿ ಕೇಂದ್ರಕ್ಕಾಗಿ ಜನತಾ ಕಾಲೋನಿಯನ್ನು ಚೀತಾ ಕ್ಯಾಂಪಿಗೆ ಸ್ಥಳಾಂತರಿಸುವಾಗ ಆ ನಿವಾಸಿಗಳಿಗೆ ನ್ಯಾಯ ದೊರಕಿಸಿಕೊಡಲು ಹೋರಾಟದಲ್ಲಿ ತೊಡಗಿದರು.

ಇವರು ಸ್ಥಾಪಿಸಿದ ರಾಷ್ಟ್ರೀಯ ಕೊಳೆಗೇರಿ ನಿವಾಸಿಗಳ ಒಕ್ಕೂಟ ಬೃಹತ್ ಸಂಸ್ಥೆಯಾಗಿ ಬೆಳೆದು ಮುಂಬಯಿ ನಗರದ ಎಲ್ಲ ಕೊಳೆಗೇರಿಗಳ ಪ್ರಾತಿನಿಧಿಕ ಸಂಸ್ಥೆಯಾಗಿ ರೂಪುಗೊಂಡಿತು. ಈ ಸಂಸ್ಥೆಯ ಪ್ರಯತ್ನದಿಂದ ಕೊಳೆಗೇರಿಗಳಿಗೆ ಶೌಚಾಲಯ, ನಲ್ಲಿನೀರು ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ವಿದ್ಯುತ್‌ದೀಪ ಮತ್ತು ವೈದ್ಯಕೀಯ ಸೇವೆ ದೊರಕಿದುವು. ಸುಮಾರು ಮೂವತ್ತು ಸಾವಿರ ನಿರ್ವಸಿತರಿಗೆ ವಸತಿ ದೊರಕುವಂತಾಯಿತು. ಬ್ಯಾಂಕ್ ಸಾಲ ದೊರಕಿತು. ಚೆಂಬೂರ್ ಬಳಿ ಮಹುಲ್‌ನಲ್ಲಿ 2,000 ಕಾಲುಹಾದಿ ನಿವಾಸಿಗಳಿಗೆ ವಸತಿ ಸೌಲಭ್ಯ ದೊರಕಿತು. ಭಾರತದಾದ್ಯಂತ ರಾಷ್ಟ್ರೀಯ ಕೊಳೆಗೇರಿ ನಿವಾಸಿಗಳ ಒಕ್ಕೂಟದ 34 ಶಾಖೆಗಳಿವೆ. ಆಫ್ರಿಕ, ನಮೀಬಿಯ, ನೇಪಾಲ, ಶ್ರೀಲಂಕಾ ಮೊದಲಾದ ದೇಶಗಳಲ್ಲೂ ಇದರ ಹನ್ನೊಂದು ಶಾಖೆಗಳಿವೆ. ಇದು ಕ್ಷೇತ್ರ ಸಂಪನ್ಮೂಲ ಕೇಂದ್ರಾಭಿವೃದ್ಧಿ ಸಂಘದ ಸಹಯೋಗದಲ್ಲಿ 'ಮಹಿಳಾ ಮಿಲನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ.

ಕಾಲುಹಾದಿ ಮಹಿಳಾ ನಿವಾಸಿಗಳ ಹಿತರಕ್ಷಣೆಗೆ ಹೋರಾಟ ನಡೆಸಿದೆ. ಬಡವರ ಧ್ವನಿಯಾಗಿ ಮುಂಬಯಿ ಮಹಾನಗರಪಾಲಿಕೆ, ಮಹಾರಾಷ್ಟ್ರ ಸರ್ಕಾರ, ಸಂಯುಕ್ತ ರಾಷ್ಟ್ರ ಸಂಘ ಇವು ಜೋಕಿನ್‌ರ ಸಲಹೆ ಪಡೆಯುತ್ತಿವೆ.

ಇವರ ಸಮಾಜಸೇವಾ ಕಾರ್ಯಕ್ಕಾಗಿ ಅನೇಕ ಪ್ರಶಸ್ತಿ, ಗೌರವಗಳು ಲಭ್ಯವಾಗಿವೆ. ವಿಶ್ವಸಂಸ್ಥೆಯ ವಿಶ್ವನಿವಾಸ (1999), ರಾಮೋನ್ ಮ್ಯಾಗ್ಸೆಸೆ ಪ್ರತಿಷ್ಠಾನ ಪ್ರಶಸ್ತಿ (2000) ಇವರಿಗೆ ದೊರಕಿವೆ. ಇವರ ಪತ್ನಿ ರೀಟಾಡಿಸೌಜಾ ಕೂಡ ಮೂಲತಃ ಕನ್ನಡತಿ, ಮಂಗಳೂರಿನವರು. (ಎಸ್.ಎಂ.ಕೆ.)

**ಜೋಗ :** ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕಾರ್ಗಲ್ ಗ್ರಾಮಕ್ಕೆ ಸೇರಿದ ಒಂದು ಸಣ್ಣ ಊರು. ಪ್ರಸಿದ್ಧವಾದ ಪ್ರವಾಸಿ ಕೇಂದ್ರ. ಸಾಗರದ ವಾಯವ್ಯಕ್ಕೆ 32ಕಿಮೀ ದೂರದಲ್ಲೂ ಶಿವಮೊಗ್ಗದಿಂದ 105ಕಿಮೀ ಅಂತರದಲ್ಲೂ ಇದೆ.

ಈ ಊರಿನ ಸಮೀಪವೇ ಪ್ರಪಂಚ ಪ್ರಸಿದ್ಧ ಜೋಗ ಜಲಪಾತ ಇದೆ. ಇಲ್ಲಿ ಶರಾವತಿ ನದಿ 228ಮೀ. ವಿಸ್ತಾರವಾದ ಪಾತ್ರದಲ್ಲಿ ಹರಿದು, ರಾಜ, ರಾಣಿ, ರೋರರ್ ಮತ್ತು ರಾಕೆಟ್ ಎಂಬ ನಾಲ್ಕು ಸೀಳುಗಳಾಗಿ 292.8ಮೀ ಆಳದ ಕಮರಿಗೆ ದುಮುಕುತ್ತದೆ. ಈ ಚೇತೋಹಾರಿ ದೃಶ್ಯವನ್ನು ನೋಡಲು ಸಾವಿರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಈ ಜಲಪಾತದಷ್ಟು ಪ್ರಸಿದ್ಧವಾದುದಲ್ಲವಾದರೂ ಬಹಳ ಸುಂದರ ಸನ್ನಿವೇಶದಲ್ಲಿರುವ ಇನ್ನೊಂದು ಜಲಪಾತ ಜೋಗದಿಂದ ಸು.3ಕಿಮೀ ಪಶ್ಚಿಮದಲ್ಲಿದೆ. ಇಲ್ಲಿ ತಲಕಳಲೆ ನದಿ ಸು.100ಮೀ. ಆಳದ ಕಂದಕಕ್ಕೆ ಎರಡು ಹಂತಗಳಲ್ಲಿ ಚಿಮ್ಮುತ್ತದೆ.

ಜೋಗದಲ್ಲಿ ಶರಾವತಿ ನದಿಯ ಕಮರಿಯಲ್ಲಿ ಕಟ್ಟಲಾಗಿರುವ ಮಹಾತ್ಮ ಗಾಂಧೀ ವಿದ್ಯುದಾಗರವೂ (ಸ್ಥಾಪನೆ 1948) ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಶರಾವತಿ ವಿದ್ಯುದಾಗರವೂ (ಸ್ಥಾಪನೆ 1965) ಪ್ರಸಿದ್ಧವಾದವು. ಈ ಶರಾವತಿ ಜಲವಿದ್ಯುತ್ ಸ್ಥಾವರ ಆಗ್ನೇಯ ಏಷ್ಯದಲ್ಲೇ ಅತಿ ದೊಡ್ಡದಾಗಿದ್ದು ಹತ್ತು ಲಕ್ಷ ಕಿಲೋವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಪಡೆದಿದೆ. ಈ ವಿದ್ಯುದಾಗರಗಳಿಗೆ ನೀರನ್ನು ಒದಗಿಸುವ ಬೃಹತ್ ಅಣೆಕಟ್ಟು ಜೋಗದಿಂದ ಸು.10ಕಿಮೀ ದೂರದ ಲಿಂಗನಮಕ್ಕಿಯಲ್ಲೂ ನೀರನ್ನು ನಿಯಂತ್ರಿಸಲು ರಚಿಸಿರುವ ಕಾರ್ಗಲ್ ಮತ್ತು ತಲಕಳಲೆ ಅಣೆಕಟ್ಟುಗಳು ಕೇವಲ 3ಕಿಮೀ ಫಾಸಲೆಯಲ್ಲೂ ಇವೆ. ಮಹಾತ್ಮಗಾಂಧೀ ವಿದ್ಯುದಾಗರಕ್ಕೆ ಇಳಿಯುವ ಕೊಳಾಯಿಗಳಿಗೆ ನೀರನ್ನು ಬಿಡಲು ಜೋಗದಲ್ಲೇ ಒಂದು ಚಿಕ್ಕ ಕಟ್ಟೆಯನ್ನು ನಿರ್ಮಿಸಲಾಗಿದೆ. ಈ ಎಲ್ಲ ಜಲಾಶಯಗಳೂ ಹಸುರು ಕಾನನದ ಮಧ್ಯೆ ಇದ್ದು ಸುಂದರ ತಾಣಗಳಾಗಿವೆ.

ಜೋಗದಲ್ಲಿ ಸರ್ಕಾರಿ ಪ್ರವಾಸಿ ಮಂದಿರ, ಹೋಟೆಲುಗಳು, ಪ್ರೌಢಶಾಲೆ, ಆಸ್ಪತ್ರೆ ಮತ್ತು ಅಂಚೆ-ತಂತಿ, ಸೌಲಭ್ಯಗಳು ಇವೆ. *

**ಜೋಗಜಲಪಾತ :** ಶರಾವತಿ ನದಿಯ ಜಲಪಾತ. ಗೇರುಸೊಪ್ಪೆ ಎಂದೂ ಪ್ರಸಿದ್ಧ. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗಡಿ ಮಧ್ಯೆ ಇರುವ ಈ ಜಲಪಾತ ಸಾಗರ ತಾಲ್ಲೂಕಿನ ತಾಳಗುಪ್ಪ ರೈಲು ನಿಲ್ದಾಣಕ್ಕೆ 16ಕಿಮೀ ದೂರದಲ್ಲಿದೆ. ಜಲಪಾತ ಶಿವಮೊಗ್ಗದಿಂದ 100ಕಿಮೀ ದೂರದಲ್ಲೂ ಹೊನ್ನಾವರದಿಂದ 56ಕಿಮೀ ದೂರದಲ್ಲೂ ಇದೆ. ಇಲ್ಲಿ ಶರಾವತಿ ನದಿ 252.7ಮೀ (829') ಆಳದ ಪ್ರಪಾತಕ್ಕೆ ದುಮುಕುತ್ತದೆ. ಸೌಂದರ್ಯಪೂರ್ಣ ಔನ್ನತ್ಯದಲ್ಲಿ ಗೇರುಸೊಪ್ಪೆಯನ್ನು ಮೀರಿಸುವ ಜಲಪಾತ ಪ್ರಪಂಚದಲ್ಲೆಲ್ಲೂ ಇಲ್ಲ. ಆಲ್ಪ್ಸ್ ಪರ್ವತದಲ್ಲಿರುವ ಸೆರೊಸೊಲಿ (2,400'), ಎವಾನ್ಸನ್ (1,200') ಮತ್ತು ಆರ್ವೆ (1,100') ಜೋಗ ಜಲಪಾತಕ್ಕಿಂತ ಎತ್ತರವಾಗಿವೆಯಾದರೂ ಅವುಗಳಲ್ಲಿ ಜೋಗದಷ್ಟು ಜಲಸಮೃದ್ಧಿ ಇಲ್ಲ. ನಯಾಗರ ಜಲಪಾತದ ನೀರಿನ ಮೊತ್ತ ಜೋಗದ್ದಕ್ಕಿಂತ ಅಧಿಕವಾಗಿದ್ದರೂ ಅದರ ಎತ್ತರ (164') ಗೇರುಸೊಪ್ಪೆಯಷ್ಟು ಇಲ್ಲ. ಶರಾವತಿ ನದಿ ಹರಿದು ದುಮುಕುವ ಕಮರಿಯ ಬಂಡೆ 25ಮೀ.ಗಳಷ್ಟು ಉದ್ದವಾಗಿವೆ. ನಾಲ್ಕು ಪ್ರತ್ಯೇಕ ಬಿರುಕುಗಳಿಂದ ನದಿ ರಭಸದಿಂದ ಇಳಿದು ಕಮರಿಗೆ ಬೀಳುತ್ತದೆ. ಅದು ಬೀಳುವ ರೀತಿ ಮನಮೋಹಕವಾದ್ದು. ಜಲಪಾತದ ನಾಲ್ಕು ಕವಲುಗಳ ಪೈಕಿ ರಾಜ ಸು.252.7ಮೀ ಆಳಕ್ಕೆ ದುಮುಕುತ್ತದೆ. ರಾಜ ಬೀಳುತ್ತಿರುವಂತೆಯೇ ಸ್ವಲ್ಪ ಕೆಳಗೆ, ಬಂಡೆಯ ಬಿರುಕಿನಿಂದ ಹರಿದು ಬೀಳುವ ರೋರರ್ ಜಲಪಾತವನ್ನು ಅಪ್ಪಿಕೊಂಡು, ಅದರೊಂದಿಗೆ ಕಮರಿಗೆ ಬೀಳುತ್ತದೆ. ಮೂರನೆಯ ಜಲಪಾತ ರಾಕೆಟ್ ಬಂಡೆಯ ಮೇಲಿಂದ ಹಲವು ಧಾರೆಗಳಲ್ಲಿ ಚಿಮ್ಮಿ ತಳಕ್ಕೆ ಕುಪ್ಪಳಿಸುತ್ತದೆ. ನಾಲ್ಕನೆಯ ರಾಣಿ ಜಲಪಾತ (ಲೇಡಿಬ್ಲಾಂಚೆ) ಬೀಳುವ ರಭಸದಿಂದೇಳುವ ನೊರೆಯಿಂದ ತುಂಬಿ ಸೊಗಸುಗಾತಿಯಂತೆ ಪ್ರಪಾತಕ್ಕೆ ಇಳಿಯುತ್ತದೆ.

ಮಳೆಗಾಲದಲ್ಲಿ ಹೆಚ್ಚು ನೀರು ರಭಸದಿಂದ ಬೀಳುವ ಕಾರಣ ನೀರಿನಿಂದ ಏಳುವ ಧೂಮ ಪ್ರಪಾತವನ್ನು ಆವರಿಸಿದ್ದು ನೀರಿನ ಭೋರ್ಗರೆತದ ಮೊರೆಯುವ ಶಬ್ದ ಹೃದಯವನ್ನು ಕಂಪಿಸು ವಂತಿರುತ್ತದೆ. ಮಳೆಗಾಲದ ಅನಂತರದ ತಿಂಗಳುಗಳಲ್ಲಿ ನದಿಯ ಪ್ರವಾಹ ಸರಿಯಾದ ಪ್ರಮಾಣದಲ್ಲಿರುವುದರಿಂದ ಜಲಪಾತ ನೋಡಲು ರಮ್ಯ ವಾಗಿರುತ್ತದೆ. ಜಲಪಾತದ ಪೂರ್ಣ ದೃಶ್ಯವನ್ನು ಶಿವಮೊಗ್ಗ ಗಡಿ ಭಾಗದಿಂದ ಕಾಣಬಹುದು. ಜಲಪಾತದ ಬಂಡೆಯ ಅಂಚುಗಳಲ್ಲಿರುವ ಪೊಟರೆಗಳಲ್ಲಿ ಕಾಡು ಪಾರಿವಾಳಗಳು ಮನೆಮಾಡಿಕೊಂಡು ಪ್ರಪಾತದ ಬಳಿ ಗುಂಪುಗುಂಪಾಗಿ ಹಾರುತ್ತಿರುತ್ತವೆ. ಸೂರ್ಯಕಿರಣಗಳಿಂದ ಜಲಪಾತ ದಿನದ ವಿವಿಧ ಸಮಯಗಳಲ್ಲಿ ವೈವಿಧ್ಯ ತಾಳುತ್ತದೆ. ಜಲಪಾತದ ಏಕತಾನದ ನಾದ ಹತ್ತಿರ ನಿಂತು ಕೇಳುವವರ ಕಿವಿಗಳಿಗೆ ಘನಗರ್ಜನೆಯಂತೆ ಕೇಳಿಸುತ್ತದೆ. ಅದರ ಮೇಘನಾದದ ಗಾಂಭೀರ್ಯ ನಿಸರ್ಗಸಂಗೀತದ ಒಂದು ನಿರುಪಮ ಮಾದರಿ. ಮೌನವನ್ನು ಸೀಳುವ ಆ ನಿತ್ಯನಾದವನ್ನು ಆಲಿಸುತ್ತ ನಿಂತವರಿಗೆ ಒಮ್ಮೆ ನಾದಸಮಾಧಿಯನ್ನು ಉಂಟುಮಾಡಬಹುದು. ಜೊತೆಗೆ ಬಿಸಿಲು ಹರಿದಂತೆ ಜಲಧಾರೆಗಳ ಮೇಲಿನ ಕಾಮನಬಿಲ್ಲುಗಳು ನಿತ್ಯನವ್ಯವಾಗಿ

ಕಾಣಿಸುವುವು; ಬೆಳದಿಂಗಳ ರಾತ್ರಿಯಲ್ಲೂ ಕಾಮನಬಿಲ್ಲು ಕಾಣಿಸುವುದುಂಟು. ಈ ಜೀವಂತ ಪ್ರವಾಹದ ಸೌಮ್ಯ-ಭೀಕರತೆಗಳ ವರ್ಣನೆ ಮಾತಿಗೆ ನಿಲುಕದ್ದು.

ಗೇರುಸೊಪ್ಪೆ ಜಲಪಾತದ ಮಾಹಿತಿಗಳನ್ನು ಸಂಗ್ರಹಿಸಲು ಮಾರ್ಚ್ 1856ರಲ್ಲಿ ಬಂದ ಇಬ್ಬರು ಬ್ರಿಟಿಷ್ ನೌಕಾಧಿಕಾರಿಗಳ ವರದಿಯಂತೆ ಪ್ರಪಾತದ ಆಳ 829', ಪ್ರಪಾತದ ತಳದಲ್ಲಿ ನದಿ ಕೊರೆದಿರುವ ಮಡುವಿನ ಆಳ 139', ನದಿಯ ಅಡ್ಡಗಲ ಉತ್ತರ ಕನ್ನಡ ಮತ್ತು ಶಿವಮೊಗ್ಗ ದಂಡೆಗಳ ಮೇಲಿರುವ ಬಂಗಲೆಗಳ ನಡುವೆ 2130'.

1869ರ ಜನವರಿಯಲ್ಲಿ ಜಲಪಾತ ಪ್ರದೇಶಕ್ಕೆ ಭೇಟಿ ನೀಡಿದ್ದ ಲೂಯಿ ಬ್ರೌನಿಂಗ್ ತಿಳಿಸಿರುವಂತೆ ಆಗ ಶಿವಮೊಗ್ಗ ಜಿಲ್ಲೆಯ ಅಂಚಿನ ಕಡೆ ಜಲಪಾತದ ಸಮೀಪದಲ್ಲಿ ಡೇರೆಯನ್ನು ಹಾಕಲು ಸಹ ಸಾಧ್ಯವಿಲ್ಲದಂತೆ ಒತ್ತಾದ ಕಾಡು ಬೆಳೆದಿತ್ತು. ಈಗ ಜಲಪಾತದ ಎದುರಿಗೆ, ನದಿ ಭೋರ್ಗರೆದು ಸಾಗುವ ಸುಂದರವಾದ ಸ್ಥಳದಲ್ಲಿ ಪ್ರವಾಸಿ ಬಂಗಲೆ, ಉಪಹಾರಗೃಹ ಮತ್ತು ಅಂಚೆ ಕಚೇರಿ ಇವೆ. ಅಕ್ಟೋಬರಿನಿಂದ ಫೆಬ್ರವರಿಯವರೆಗೆ ಸಹಸ್ರಾರು ಪ್ರವಾಸಿಗಳು ಪ್ರಪಂಚ ಪ್ರಸಿದ್ಧವಾದ ಈ ಮನೋಹರ ಸ್ಥಳಕ್ಕೆ ಭೇಟಿ ನೀಡುವುದುಂಟು. *

**ಜೋಗಪ್ಪ :** ಆದಿಚುಂಚನಗಿರಿ ಭೈರವ ಪಂಥಕ್ಕೆ ಸೇರಿದ್ದ ಗುಡ್ಡರನ್ನು ಜೋಗಪ್ಪಗಳೆಂದು ಸಂಬೋಧಿಸುತ್ತಾರೆ. ಕೇವಲ ದೈವಸಂಬಂಧವಾದ ಆಚರಣೆಗಳನ್ನು ನಡೆಸಿಕೊಂಡು ಬರುವ ದೇವರ ಮಕ್ಕಳು ಇವರು. ತಿರುಪತಿ ವೆಂಕಟರಮಣನ ಒಕ್ಕಲುಗಳಿಗೆ ಸಂಬಂಧಪಡುವ ದಾಸಯ್ಯಗಳಂತೆ ಈ ಜೋಗಪ್ಪಗಳು ಚುಂಚನಗಿರಿಯ ಭೈರವನ ಒಕ್ಕಲಿನವರಿಗೆ ಸಂಬಂಧಪಡುತ್ತಾರೆ. ಆ ಒಕ್ಕಲುಗಳು ಇರುವ ಕಡೆಗಳಲ್ಲೆಲ್ಲ ಗ್ರಾಮಕ್ಕೊಬ್ಬನೋ ಹಲವು ಗ್ರಾಮಕ್ಕೆ ಒಬ್ಬನೋ ಜೋಗಪ್ಪ ಇದ್ದು ಅವರ ಧಾರ್ಮಿಕ ಸಂಪ್ರದಾಯಗಳಲ್ಲಿ ಆಚರಣೆಗಳಲ್ಲಿ ಪಾಲುಗೊಳ್ಳಬೇಕು; ಮುಖ್ಯಸೂತ್ರಧಾರನಾಗಿ ಪೂಜೆಯನ್ನು ನಡೆಸಿಕೊಡಬೇಕು. ಉತ್ತರ ಕರ್ನಾಟಕದ ಎಲ್ಲಮ್ಮನ ಭಕ್ತಭಕ್ತೆಯರಲ್ಲಿ ಸಂನ್ಯಾಸಿಗಳಾಗಿರುವ ಜೋಗಪ್ಪ, ಜೋಗಿತಿಯರುಂಟು, ಅವರಿಗೂ ಇವರಿಗೂ ಯಾವುದೇ ಸಂಬಂಧವಿಲ್ಲ. ಹಾಗೆಯೇ ವೃತ್ತಿ ಗಾಯಕರಾದ ಕಿನ್ನರಿ ಜೋಗಿಗಳಿಗೂ ಜೋಗಪ್ಪಗಳಿಗೂ ಯಾವ ಸಂಬಂಧವೂ ಇಲ್ಲ. (ಎನ್.ಟಿ)

ಚುಂಚನಗಿರಿ ಕ್ಷೇತ್ರಕ್ಕೆ ಎಲ್ಲ ಜಾತಿಮತಗಳಿಗೆ ಸಂಬಂಧಪಟ್ಟವರೂ ನಡೆದುಕೊಳ್ಳುತ್ತಾರಾದ್ದರಿಂದ ಅಲ್ಲಿ ವಿವಿಧ ಮತಕ್ಕೆ ಸಂಬಂಧಪಟ್ಟ ಜೋಗಿಗಳೂ ಕಂಡುಬರುತ್ತಾರೆ. ಚುಂಚನಗಿರಿಯ ಸಮೀಪದ ಚುಂಚನಹಳ್ಳಿ, ಕಂಚನಹಳ್ಳಿ, ಪಾಳ್ಯ - ಈ ಗ್ರಾಮಗಳಲ್ಲಿ ಮಾತ್ರ ಕಾಪಾಲಿಕ ಮತಕ್ಕೆ ಸೇರಿದ ಜೋಗಪ್ಪಗಳು ಹೆಚ್ಚಾಗಿದ್ದಾರೆ. ಜೋಗಪ್ಪಗಳಿಗೆ ವಿವಾಹಪೂರ್ವದಲ್ಲಿ ಚುಂಚನಗಿರಿ ಮಠದ ಅಧ್ಯಕ್ಷರು ದೀಕ್ಷೆ ನೀಡುತ್ತಾರೆ. ದೀಕ್ಷೆ ದೇವರ ಪ್ರೇರಣೆಯ ಮೇಲೆ ಆಗುತ್ತದೆ ಎಂದು ನಂಬಿಕೆ. ಸ್ವಪ್ನದಲ್ಲಿ ದೇವರು ಜೋಗಿಯನ್ನು ಬಿಡುವಂತೆ ಕೇಳಬಹುದು. ಜೋಗಿಯಾಗುತ್ತಾನೆಂದು ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿರಬಹುದು. ಕಷ್ಟಕಾರ್ಪಣ್ಯಗಳು ಒದಗಿದಾಗ ಹರಕೆ ಹೊತ್ತು ಹಿರಿಯ ಮಗನನ್ನು ಜೋಗಿ ಬಿಡಬಹುದು. ವಂಶಪಾರಂಪರ್ಯವಾಗಿಯೂ ಜೋಗಪ್ಪನನ್ನು ಬಿಡುವ ಸಂಪ್ರದಾಯ ಉಂಟು.

ದೀಕ್ಷೆಯ ದಿನ ವಟುವನ್ನು, ಬಂಧುಬಳಗದೊಡನೆ ಚುಂಚನಗಿರಿಗೆ ಕರೆದೊಯ್ಯಲಾಗುವುದು. ಅಲ್ಲಿ ಒಂದು ಪುಟ್ಟ ಸಮಾರಂಭವೇ ನಡೆಯುತ್ತದೆ. ಗುರುವಿನಿಂದ ದೀಕ್ಷೆಯಾದಮೇಲೆ ವಟುವಿನ ಮೆರವಣಿಗೆ ನಡೆಯುತ್ತದೆ. ಲಾಂಛನವಾಗಿ ಈ ಮರಿಜೋಗಿಗೆ ಒಂದು ಸಿಂಗನಾದ, ಕಿವಿಗೆ ಚಿನ್ನದ ಅಥವಾ ಹಿತ್ತಾಳೆಯ ಮುದ್ರೆ, ಒಂದು ತಾಮ್ರದ ಪಾತ್ರೆ (ಹರಿವಾಣ) ಕೊಡಲಾಗುವುದು. ಕೊರಳ ರುದ್ರಾಕ್ಷಿ, ಹಣೆಯ ವಿಭೂತಿ - ಇವೂ ಜೋಗಿಯ ಸಂಕೇತಗಳೇ. ದೀಕ್ಷೆಯ ದಿನ ಮುಕ್ಕಣ್ಣ ಕುಲಾವಿಯನ್ನು ಜೋಗಿಗೆ ತೊಡಿಸಲಾಗುವುದು. ಆದರೆ ಇವನ್ನು ಜೋಗಪ್ಪ ಕೊನೆಯವರೆಗೂ ಉಳಿಸಿಕೊಳ್ಳಬೇಕಾಗಿಲ್ಲ. ಏಕೆಂದರೆ ಈತ ಮುಂದೆ ಸಂಸಾರಿಯಾಗಿ ಬದುಕುತ್ತಾನೆ. ಧಾರ್ಮಿಕ ಆಚರಣೆಗಳಲ್ಲಿ ಮಾತ್ರ ಇವನ ಪಾತ್ರ ಮುಖ್ಯವಾದುದು.

ಸಿಂಗನಾದ ಜೋಗಪ್ಪಗಳ ವಾದ್ಯ. ಇದು ಯಾವ ಹಾಡುಗಾರಿಕೆಗೂ ಸಂಬಂಧಪಡುವುದಿಲ್ಲ. ಕೇವಲ ಪೂಜಾ ಸಂದರ್ಭದಲ್ಲಿ ಊದುವುದಕ್ಕಾಗಿ ಇದನ್ನು ಬಳಸಲಾಗುತ್ತದೆ. ಸಿಂಗನಾದ ಸಂಸ್ಕೃತದ ಶೃಂಗನಾದದಿಂದ ಬಂದದ್ದು (ಶೃಂಗ-ಸಿಂಗ-ಕೋಡು ಅಥವಾ ಕೊಂಬು); ಇದು ಜಿಂಕೆಯ ಕೊಂಬಿನಿಂದ ಮಾಡಿದ ವಾದ್ಯ; 1/2 ಅಥವಾ 1ಅಡಿ ಉದ್ದವಿರಬಹುದು. ಜಿಂಕೆಯ ಕೊಂಬು ಸಿಕ್ಕದ ಕಡೆ ಬೆಳ್ಳಿಯ ಸಿಂಗನಾದವನ್ನು ಬಳಸುತ್ತಾರೆ. ಸಿಂಗನಾದ ಜೋಗಪ್ಪನ ಕೊರಳಲ್ಲಿ ಸದಾ ಇರಬೇಕಾದ ಲಾಂಛನ (ಲಿಂಗವಂತರಲ್ಲಿ ಕರಡಿಗೆ ಇರುವಂತೆ). ಕುರಿಯ ಉಣ್ಣೆಯಿಂದ ಹೊಸೆದ ದಾರವೊಂದನ್ನು ಇದಕ್ಕೆ ಕಟ್ಟಿ ಕೊರಳಿನಿಂದ ಇಳಿಬಿಟ್ಟಿರುತ್ತಾರೆ. ಜೋಗಪ್ಪಗಳು ನಿತ್ಯವೂ ದೇವರ ಹೆಸರನ್ನು ಹೇಳಿ ಸಿಂಗನಾದವನ್ನು ಒಮ್ಮೆ ಊದಿ ಯಾವುದೇ ಕಾರ್ಯಕ್ಕೆ ತೊಡಗುತ್ತಾರೆ.

ಜೋಗಪ್ಪನ ಪಾತ್ರೆ ವಿಶಿಷ್ಟವಾದುದು. ಕಪಾಲದ ಆಕಾರದ ಈ ಪಾತ್ರೆ ಬ್ರಹ್ಮಕಪಾಲದ ಸಂಕೇತವೇ ಇರಬೇಕು. ಇದನ್ನು ಕಡ್ಡಾಯವಾಗಿ ಧಾರ್ಮಿಕ ಆಚರಣೆಗಳಲ್ಲಿ ತರಬೇಕು. ಒಂದು ಎಡೆಯನ್ನು ಈ ಪಾತ್ರೆಗೂ ಅರ್ಪಿಸಲಾಗುವುದು.

ಜೋಗಪ್ಪಗಳು ಭಾನುವಾರವನ್ನು ಆಚರಿಸುತ್ತಾರೆ. ಅದು ಭೈರವನ ವಾರ. ಆ ದಿನ ಮನೆಯನ್ನು ಸಾರಿಸಿ, ಮಡಿಕೆ ಕುಡಿಕೆಗಳನ್ನು ತೊಳೆದು ಮಿಂದು ಮಡಿಯುಟ್ಟು ಒಂದು ಹೊತ್ತು ಮಾತ್ರ ಊಟ ಮಾಡಬೇಕು. ಬಿರುದುಗಳನ್ನೆಲ್ಲ ಮನೆಯಲ್ಲಿ ಇಟ್ಟು ಪೂಜಿಸಬೇಕು. ಜೋಗಪ್ಪಗಳು ಮೊದಲಿಗೆ ಭಾನುವಾರ ಭಿಕ್ಷೆ ಎತ್ತುವ ಸಂಪ್ರದಾಯ ಇದ್ದಿರಬೇಕು. ಜನಪದ ಸಾಹಿತ್ಯದಲ್ಲಿ ಇದಕ್ಕೆ ಆಧಾರವಿದೆ.

ಮೈಸೂರು ಕಡೆಯಲ್ಲಿ ಭೈರವಭಕ್ತರಾದ ಜೋಗಪ್ಪಗಳು ಆದಿತ್ಯವಾರ ತಮ್ಮ ಎಲ್ಲ ಬಿರುದುಗಳನ್ನೂ ಧರಿಸಿ, ಕಾವಿಯ ವಸ್ತ್ರ ಉಟ್ಟು ಹೆಗಲಲ್ಲಿ ದೊಡ್ಡ ತ್ರಿಶೂಲವನ್ನು ಇಟ್ಟುಕೊಂಡು ಸಿಂಗನಾದವನ್ನು ಊದುತ್ತ ಭಿಕ್ಷಾಟನೆಗೆ ಬರುವುದನ್ನು ಕಾಣಬಹುದು. ಭೈರವನ ಒಕ್ಕಲಿನವರು ಅನೇಕ ಆಚರಣೆಗಳಲ್ಲಿ ಜೋಗಪ್ಪನನ್ನು ಬರಮಾಡಿಕೊಳ್ಳುತ್ತಾರೆ. ದೇವರ ತೇರು, ಹಬ್ಬ, ಭುಕ್ತಿ, ಪಿತೃಪಕ್ಷ, ಉತ್ತರಕ್ರಿಯೆ, ಮದುವೆ ಮುಂತಾದ ಸಂದರ್ಭಗಳಲ್ಲಿ ಮನೆದೇವರ ಪ್ರತಿನಿಧಿಯಾದ ಜೋಗಪ್ಪ ತನ್ನ ಬಿರುದುಗಳನ್ನೂ ದೇವರನ್ನೂ ತೆಗೆದುಕೊಂಡು ಬರುವನು. ಇಲ್ಲಿ ದೇವರು ಎಂದರೆ ಒಂದು ತ್ರಿಶೂಲ ಅಷ್ಟೆ. ಮದುವೆಯ ಹಿಂದಿನ ದಿನ ಚಪ್ಪರದ ಶಾಸ್ತ್ರ. ಆ ರಾತ್ರಿ ಜೋಗಪ್ಪ ಬಂದು ದೇವರ ಎಡೆಯನ್ನು ಪೂಜಿಸಬೇಕು. ಎಡೆಗೆ ಮುಂಚೆ ಜೋಗಪ್ಪ ಮಡಿಬಟ್ಟೆಯನ್ನು ಹಾಸಿ, ಮೇಲೆ ಅಗ್ರದ ಬಾಳೆಯ ಎಲೆ ಹಾಕಿ, ಗೋಡೆಯ ಬದಿಯಲ್ಲಿ ತೊಳೆದ ಮಣೆಯೊಂದನ್ನು ಇಟ್ಟು ತಾನು ತಂದ ಎರಡು ಮೂರು ತ್ರಿಶೂಲಗಳನ್ನು ಇಡುತ್ತಾನೆ. ಮೂರು ಎಡೆಗಳನ್ನು ಇಡಲಾಗುವುದು. ಆ ದಿನ ಮಾಡಿದ ವಿಶೇಷ ಅಡುಗೆಯನ್ನೆಲ್ಲ ಎಡೆಗೆ ಇಡುತ್ತಾರೆ. ಮೂರು ಎಡೆಗಳಲ್ಲಿ ಒಂದು ಜೋಗಪ್ಪನಿಗೆ ಇನ್ನೊಂದು ಅವನ ಪಾತ್ರೆಗೆ. ಉಳಿದ ಒಂದು ಮನೆಯವರಿಗೆ. ಪೂಜೆಯ ಅನಂತರ ಮನೆಯವರೆಲ್ಲರೂ ಜೋಗಪ್ಪನಿಂದ ವಿಭೂತಿ ಇಡಿಸಿಕೊಳ್ಳುತ್ತಾರೆ.

ಭೈರವನಿಗೆ ಹರಕೆ ಮಾಡಿಕೊಂಡು ಒಂದು ವಿಶೇಷ ಆಚರಣೆಯನ್ನು ನಡೆಸಲಾಗುವುದು. ಇದನ್ನು ಭುಕ್ತಿ ಎಂದು ಕರೆಯಲಾಗುತ್ತದೆ. ಈ ಆಚರಣೆಗೂ ಜೋಗಪ್ಪ ಬರಬೇಕು. ಭುಕ್ತಿಯ ಬೆಳಗ್ಗೆ ದೇವರಿಗೆ ಮೊಸರು ಅನ್ನದ ತಳಿಗೆಯನ್ನು ಅರ್ಪಿಸಲಾಗುವುದು. ಜೋಗಪ್ಪ ಬಂದು ದೇವರನ್ನು ಪೂಜಿಸಿ, ಹರಕೆಯ ಮರಿಗೆ ತೀರ್ಥ ಹಾಕುವನು. ಅನಂತರ ದೇವರ ಹೆಸರಿನಲ್ಲಿ ಮರಿಯನ್ನು ಕಡಿಯಲಾಗುವುದು. ಈ ಮರಿ, ಕುರಿ ಅಥವಾ ಮೇಕೆ ಆಗಬಹುದು. ಅನಂತರ ಅಡುಗೆಯನ್ನು ಮಾಡಿ ಜೋಗಪ್ಪನಿಂದ ದೇವರ ಪೂಜೆ ಮಾಡಿಸಲಾಗುವುದು. ಮಾಂಸದ ಎಡೆಯನ್ನು ಆರು ದೊನ್ನೆಗಳಲ್ಲಿ ಇಡುತ್ತಾರೆ. ಆರರಲ್ಲಿ ಎರಡು ಮನೆಯವರಿಗೆ, ನಾಲ್ಕು ಜೋಗಪ್ಪನಿಗೆ. ತೇರು ಹಬ್ಬ, ಪಿತೃಪಕ್ಷಗಳಲ್ಲಿಯೂ ಜೋಗಪ್ಪನನ್ನು ಕರೆಸಿ ಇದೇ ಕ್ರಮದಲ್ಲಿ ದೇವರಿಗೆ ಎಡೆ ಅರ್ಪಿಸಲಾಗುವುದು. ಪಿತೃಪಕ್ಷದಲ್ಲಿ ಬ್ರಾಹ್ಮಣ ಪುರೋಹಿತರನ್ನು ಕರೆಸಿ ಮಧ್ಯಾಹ್ನ ಪಿತೃಗಳಿಗೆ ತರ್ಪಣ ಅರ್ಪಿಸಿದರೂ ರಾತ್ರಿ ಜೋಗಪ್ಪನನ್ನು ಕರೆಸಿ ಎಡೆಯನ್ನು ಪೂಜಿಸುವರು.

ಪಿತೃಗಳಿಗೆ ಅರ್ಪಿಸುವ ಎಡೆ ಜೋಗಪ್ಪನ ಮೂಲಕವೇ ಸಲ್ಲಬೇಕೆಂಬುದು ನಂಬಿಕೆ. ಇಲ್ಲಿ ತಿಲತರ್ಪಣಕ್ಕಿಂತ ಎಡೆ ಇಡುವುದಕ್ಕೆ ವಿಶೇಷವಾದ ಮಹತ್ವ ಕೊಡಲಾಗಿದೆ. ಮನೆಯ ಯಜಮಾನ ಆ ದಿನ ಉಪವಾಸವಿದ್ದು ರಾತ್ರಿ ಎಡೆ ಇಟ್ಟು ಆದಮೇಲೆ ಜೋಗಪ್ಪ ಬಂದು ಪೂಜೆ ಮಾಡಿದ ಮೇಲೆ, ಊಟ ಮಾಡಬೇಕು.

ಮನೆಯ ಸೂತಕವನ್ನು ಕಳೆಯಲು, ಉತ್ತರಕ್ರಿಯೆಯಂದು ದೇವರನ್ನು ಪೂಜಿಸಲು ಜೋಗಪ್ಪ ಬರಲೇಬೇಕು. ಒಟ್ಟಿನಲ್ಲಿ ಜೋಗಪ್ಪ ದೇವರ ಪ್ರತಿನಿಧಿ, ಧರ್ಮಪ್ರಸಾರಕ. ಆದಿಚುಂಚನಗಿರಿ ಮಠವನ್ನು ಜೋಗಿಯ ಮಠ ಎಂದೂ ಕರೆಯಲಾಗಿದೆ.

ಇಲ್ಲಿ ಹರ ಗುರು ಜೋಗಪ್ಪಗಳ ನಡುವೆ ಯಾವ ಭಿನ್ನ ಭಾವವನ್ನೂ ಭಕ್ತರು ವ್ಯಕ್ತಪಡಿಸುವುದಿಲ್ಲ. ಹರನೇ ಬೆಟ್ಟದ ಮೇಲಿನ ಶ್ರೀಮಠದಲ್ಲಿ ಗುರುವಾಗಿದ್ದಾನೆ. ಆ ಗುರುವಿನ ಪ್ರತಿನಿಧಿಯಾದ ಜೋಗಪ್ಪನೂ ಭೈರವನ ಸ್ವರೂಪಿ. ಆದುದರಿಂದಲೇ ಚುಂಚನಗಿರಿಯ ಒಕ್ಕಲುಗಳಲ್ಲಿ ಜೋಗಪ್ಪನಿಗೆ ವಿಶೇಷವಾದ ಸ್ಥಾನ, ಆದರ.

ಜೋಗಿ ಎಂಬ ಹೆಸರು ಯೋಗಿ ಎಂಬುದರಿಂದ ಬಂದಿದೆ. ಈ ಜೋಗಿಗಳು ಮೂಲತಃ ಭೈರವನ ಕರಸೇವಕರು. ಪುರಾಣ ಕಾಲದಿಂದಲೂ ಭೈರವ ದೇವಸ್ಥಾನಗಳು ಮತ್ತು ಮಠಗಳು ಇರುವೆಡೆ ಈ ಜೋಗಪ್ಪಗಳು ನೆಲಸಿ ಭೈರವ ದೇವರ ಪೂಜಾ ಕಾರ್ಯಗಳಲ್ಲಿ, ಉತ್ಸವಗಳಲ್ಲಿ ಸೇವೆ ಮಾಡುತ್ತಾ ಬಂದಿದ್ದಾರೆ. ಉತ್ತರ ಭಾರತದ ಕಾಶಿ ಮತ್ತು ನೇಪಾಲದ ಕಠ್ಮಂಡುಗಳಲ್ಲಿ ಇವರ ನೆಲೆಗಳಿವೆ. ಭಾರತದಾದ್ಯಂತ ಭೈರವ ಮಠಗಳಿದ್ದು ಹನ್ನೆರಡು ವರ್ಷಗಳಿಗೊಮ್ಮೆ ಮಹಾರಾಷ್ಟ್ರದಿಂದ ಈ ಮಠಗಳ ಭಕ್ತರು ಜೋಗಿಗಳು ಮತ್ತು ಗುರುಗಳು 'ಝುಂಡಿ' ಎಂಬ ಯಾತ್ರೆ ಹೊರಟು ದಕ್ಷಿಣ ಭಾರತದ ವಿವಿಧ ಮಠಗಳನ್ನು ಸಂದರ್ಶಿಸುತ್ತಾರೆ. ಅಂತಹ ಸಂದರ್ಭದಲ್ಲಿ ಆಯಾ ಮಠದ ಗುರುಗಳನ್ನು ಅಗತ್ಯಬಿದ್ದರೆ ಬದಲಾಯಿಸಲಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ವಿವಿಧ ಭೈರವ ದೇವಾಲಯಗಳಿರುವಲ್ಲಿ ಈ ಜೋಗಿಗಳಿದ್ದಾರೆ. ಮೂಡಿಗೆರೆ ತಾಲ್ಲೂಕಿನ ದೇವರಮನೆ ಮತ್ತು ಭೈರಾಪುರದ ಭೈರವ ದೇವಾಲಯಗಳಿಗೆ ನಡೆದುಕೊಳ್ಳುವ ಜೋಗಿಗಳಿದ್ದಾರೆ. ಅವರಲ್ಲಿ ನಿರ್ದಿಷ್ಟ ವ್ಯಕ್ತಿಗೆ ದೀಕ್ಷೆ ಕೊಡುವ ಸಂಪ್ರದಾಯವಿದೆ. ಮಂಗಳೂರಿನ ಕದ್ರಿ ಮಠದ ಕರಸೇವಕರಾಗಿ ಜೋಗಿಗಳಿದ್ದಾರೆ. ಮಹಾರಾಷ್ಟ್ರದಲ್ಲಿ ಈ ಜೋಗಿ ಮಠಗಳ ಜಾಲವೇ ಇದೆ. ಇದರಿಂದ ಈ ಜೋಗಿಗಳು ವಿಶೇಷವಾಗಿ ಭೈರವನ ಒಕ್ಕಲಾಗಿ ಕಂಡುಬರುತ್ತಾರೆ.

ಇತ್ತೀಚೆಗೆ ವ್ಯವಸಾಯವನ್ನು ಅವಲಂಬಿಸಿ ಜೀವಿಸುವ ಬಹುಪಾಲು ಜೋಗಪ್ಪಗಳು ಭಿಕ್ಷಾಟನೆಯನ್ನು ಕೈಬಿಡುತ್ತಿದ್ದಾರೆ. ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಮಾತ್ರ ಲಾಂಛನಗಳನ್ನೂ ಬಿರುದುಗಳನ್ನೂ ಧರಿಸುತ್ತಾರೆ. (ಜಿ.ಎಸ್.ಪಿ.)

**ಜೋಗಿತಿ ಸಂಪ್ರದಾಯ** : ಜನಪದ ಧಾರ್ಮಿಕ ವೃತ್ತಿಗಾಯಕರಲ್ಲಿ ಗೊಂದಲಿಗರು ಮತ್ತು ಜೋಗಿಯರು ಎಲ್ಲಮ್ಮನಿಗೆ ನಡೆದುಕೊಳ್ಳುವ ಒಂದು ಸಂಪ್ರದಾಯಕ್ಕೆ ಈ ಹೆಸರಿದೆ. ಈ ಸಂಪ್ರದಾಯ ತಲತಲಾಂತರದಿಂದ ಬೆಳೆದು ಉಳಿದುಬಂದಿದೆ.

ಬೆಳಗಾಂವಿ ಜಿಲ್ಲೆಯ ಸವದತ್ತಿಗೆ ಸಮೀಪದಲ್ಲಿರುವ ಎಲ್ಲಮ್ಮನ ಗುಡ್ಡದಲ್ಲಿ ಪ್ರತಿ ಹುಣ್ಣಿಮೆಗೂ ಜಾತ್ರೆ ನಡೆಯುತ್ತದೆ. ಮೊಟ್ಟಮೊದಲ ಸಲಕ್ಕೆ ಜಾತ್ರೆಗೆ ಹೋದ ಯಾರೂ ತಬ್ಬಿಬ್ಬಾಗುವಂಥ' ವಿಚಿತ್ರ ನೋಟವೊಂದು ಕಣ್ಣಿಗೆ ಬೀಳುತ್ತದೆ. ಸೊಂಟಕ್ಕೆ ಸಿಕ್ಕಿಸಿಕೊಂಡಿರುವ ಸಣ್ಣ ಚೀಲವೊಂದರಿಂದ ಎಲ್ಲಮ್ಮನ ಭಂಡಾರವೆಂದು ಹೇಳುವ ಹಳದಿ ಪುಡಿಯನ್ನು ಬಂದವರ ಹಣೆಗೆಲ್ಲ ಹಚ್ಚಿ ಕಾಸಿಗಾಗಿ ಕೈಯೊಡ್ಡುವವರು ಗಂಡಸರೋ ಹೆಂಗಸರೋ ಎಂಬುದನ್ನು ಅವರ ವೇಷ ಭೂಷಣಗಳಿಂದ ನಿರ್ಧರಿಸಲಾಗದ ಸೋಜಿಗವನ್ನು ಅಲ್ಲಿ ಕಾಣಬಹುದು.

ಗಂಡಸರೂ ಹೆಂಗಸರಂತೆ ಓಲೆ, ತಾಲಿ, ಮೂಗುತಿ, ಬಳೆ, ಬುಗಡಿ, ಕಡಗ, ಕಾಲಂದುಗೆ, ಸೀರೆ, ರವಿಕೆ, ಎಲ್ಲಮ್ಮನ ಮುತ್ತಿನ ಸರ, ಕವಡೆಸರ, ಕಾಸಿನಗಲ ಕುಂಕುಮಗಳನ್ನು ಧರಿಸಿ, ಬೆಡಗುಬಿನ್ನಾಣಗಳಿಂದ, ಒನಪು ಒಯ್ಯಾರಗಳಿಂದ ಓಡಾಡುವ ದೃಶ್ಯ ಭಯವಿಸ್ಮಯವನ್ನು ಹುಟ್ಟಿಸುತ್ತದೆ. ದಷ್ಟಪುಷ್ಟ ಬಲಿಷ್ಠ ಗಂಡಸು ಹೀಗೆ ನಪುಂಸಕನಂತೆ ನುಲುಚಾಡುವ ಪರಿಸ್ಥಿತಿ ಅವನಾಗಿಯೇ ಅಭಿಮಾನದಿಂದ ಬರಮಾಡಿಕೊಂಡದ್ದಲ್ಲ; ಹುಟ್ಟಿನಿಂದಲೂ ಆತ ನಪುಂಸಕನಾಗಿರುವುದಿಲ್ಲ. ಆದರೆ ಅವನು ತನ್ನ ಪುರುಷತ್ವವನ್ನು ತನ್ನ ಜನಾಂಗದ ಹಿರಿಯರ ಆದೇಶದ ಮೇರೆಗೆ ಬಲಿಕೊಡಬೇಕಾಗಿ ಬರುವ ಈ ಸಂಪ್ರದಾಯ ಇಂದಿಗೂ ಜೀವಂತವಾಗಿದ್ದು ಯಾವ ನಾಗರಿಕತೆಯ ಪ್ರಭಾವಕ್ಕೂ ವಶವಾಗದೆ ಉಳಿದುಬಂದಿದೆ. ಲೈಂಗಿಕ ಭಾವನೆಗಳು ಅರಳುವ ಮುನ್ನವೇ ಮುಗ್ಧ ಬಾಲಕನ ಬಾಳನ್ನು ಈ ಸ್ಥಿತಿಗೆ ಇಳಿಸುವ ಸಂಪ್ರದಾಯವೇ ಜೋಗಿತಿ ಸಂಪ್ರದಾಯದ ಒಂದು ಕ್ರಮ.

ಎಲ್ಲಮ್ಮ ಜೋಗಿತಿ

ಗಂಡಸಿಗೆ ಹೆಣ್ಣುಡಿಗೆಗಳನ್ನು ತೊಡಿಸುವಂತೆ ಹೆಂಗಸಿಗೆ ಹಳದಿ ಬಣ್ಣದ ನಿಲುವಂಗಿಯನ್ನು ತೊಡಿಸುತ್ತಾರೆ. ಹೆಂಗಸಾಗಲಿ ಗಂಡಸಾಗಲಿ ಎಲ್ಲಮ್ಮನ ಸೇವೆಗೆಂದು ಹೀಗೆ ತಮ್ಮನ್ನು ಅರ್ಪಿಸಿಕೊಳ್ಳುವವರನ್ನು ಜೋಗಿತಿ ಎಂದು ಕರೆಯುತ್ತಾರೆ. ಹೆಣ್ಣು ಗಂಡು ಎಂದು ಗುರುತಿಸಬೇಕಾದಾಗ ಜೋಗಪ್ಪ - ಜೋಗವ್ವ ಎಂದು ಸಂಬೋಧಿಸುತ್ತಾರೆ. ಜೋಗವ್ವನನ್ನು ಎಲ್ಲಮ್ಮನ ಸೂಳೆ ಅಥವಾ ಎಲ್ಲಮ್ಮನ ಬಸವಿ ಎಂಬುದಾಗಿಯೂ ಕರೆಯುತ್ತಾರೆ.

ಎಲ್ಲಮ್ಮನನ್ನು ಕುರಿತ ಜನಪದ ಕಾವ್ಯಗಳಲ್ಲಿ ಜೋಗಿತಿ ಸಂಪ್ರದಾಯ ಐತಿಹಾಸಿಕ ಸತ್ಯವೇನೋ ಎಂಬಂತಿರುವ ಓರಂಗಲ್ಲು

ಪ್ರತಾಪರುದ್ರನ ಕಥೆ ಇದೆ. ಅಪೂರ್ವ ತೇಜದ ಮನೋಹರ ರೂಪಲಾವಣ್ಯಗಳಿಂದಲೂ ಮಹಿಮಾತಿಶಯ ಶಕ್ತಿಗಳಿಂದಲೂ ಪ್ರಖ್ಯಾತಳಾಗಿದ್ದ ಎಲ್ಲಮ್ಮಳ ಸುರಸೌಂದರ್ಯದ ಸುದ್ದಿಯನ್ನು ಕೇಳಿದ ಪ್ರತಾಪರುದ್ರ ಅವಳಲ್ಲಿ ಮೋಹಗೊಂಡು ಆಕೆಯನ್ನು ಒಪ್ಪಿಸಿ ತಪ್ಪದೆ ಕರೆತರಬೇಕೆಂದು ದೂತರನ್ನಟ್ಟುತ್ತಾನೆ. ಕಾಮಿಯಾದರೂ ತಾನು ಸ್ವಾಮಿ ಎಂಬ ಹೆಗ್ಗಳಿಕೆಯಿಂದ ಬಳಿಯಟ್ಟಿದ ರುದ್ರನನ್ನು ಕಂಡು ಎಲ್ಲಮ್ಮ ಕಿಡಿಕಿಡಿಯಾಗಿ ಅವನ ಹಮ್ಮನ್ನು ಮುರಿಯುವ ಪಣ ತೊಡುತ್ತಾಳೆ. ರುದ್ರ ತನ್ನ ಕಾಮುಕತೆಗೆ ಪ್ರಾಯಶ್ಚಿತ್ತವಾಗಿ ಬಗೆಬಗೆಯ ಯಾತನೆಯನ್ನು ಅನುಭವಿಸಿ ಪುರುಷತ್ವವನ್ನು ಕಳೆದುಕೊಂಡು ಎಲ್ಲಮ್ಮನಿಗೆ ಶರಣಾಗತನಾಗಿ ಸ್ತ್ರೀವೇಷ ಧರಿಸಿಕೊಂಡು ಜಗವನ್ನು ಹೊತ್ತುಕೊಂಡು ಊರೂರುಗಳ ಕೇರಿಕೇರಿಗಳ ಮೇಲೆ ಮೆರೆಯಬೇಕಾಗುತ್ತದೆ. ಹೀಗೆ ಜೋಗಿತಿ ಸಂಪ್ರದಾಯ ಪ್ರತಾಪರುದ್ರನಿಂದ ಪ್ರಾರಂಭವಾಗಿ ಅದೇ ಪರಂಪರೆಯಲ್ಲಿ ನಡೆದುಬರುತ್ತಿದೆ. ಎಲ್ಲಮ್ಮನ ನಿಜವಾದ ಭಕ್ತರೆನಿಸಿಕೊಳ್ಳಬೇಕಾದರೆ ಜೋಗಿತಿಯಾಗಿ ಪರಿವರ್ತನೆ ಹೊಂದಲೇಬೇಕೆಂಬ ನಂಬಿಕೆ ಭಕ್ತರಲ್ಲಿ ಬಲವಾಗಿ ಬೇರೂರಿಬಿಟ್ಟಿದೆ.

ಚೌಡಿಕೆ ಹಿಡಿದಿರುವ ಎಲ್ಲಮ್ಮ ಜೋಗಿತಿ

ಜೋಗಿತಿ ಮನೆತನದವರಿರುವ ಊರುಗಳಲ್ಲಿ ಊರಿಗೊಬ್ಬಳನ್ನಾದರೂ ಜೋಗಿತಿಯಾಗಿ ಬಿಡಬೇಕೆಂಬ ನಿಯಮವಿದೆ. ಜೋಗಿತಿ ಎಲ್ಲಮ್ಮನ ತಂಗಿ ಮಾತಂಗಿ ಎಂದು ಭಾವನೆ. ತನ್ನ ಅಕ್ಕ ಎಲ್ಲಮ್ಮನ ಸೇವೆ ಮಾಡುವುದು, ಊರಿನ ಎಲ್ಲಮ್ಮನ ಗುಡಿಯ ಪೂಜಾಕಾರ್ಯವನ್ನು ನಡೆಸಿಕೊಂಡು ಬರುವುದು ತಂಗಿ ಜೋಗಿತಿಯ ಕರ್ತವ್ಯ. ಎಲ್ಲಮ್ಮನನ್ನು ಎಲ್ಲ ಜಾತಿಯವರು ಆರಾಧಿಸಿದರೂ ಜೋಗಿತಿ ಬಿಡುವ ಸಂಪ್ರದಾಯ ನಿಮ್ನವರ್ಗದವರಲ್ಲಿ ಮಾತ್ರ ಉಳಿದುಬಂದಿರುವಂತೆ ಕಾಣುತ್ತದೆ.

ಮುಗ್ಧಕನ್ಯೆಯೊಬ್ಬಳನ್ನು ಜೋಗಿತಿ ಬಿಡುವುದು ಅಪರಾಧವೆಂದಾಗಲಿ, ಅನ್ಯಾಯವೆಂದಾಗಲಿ ಎಲ್ಲಮ್ಮನ ಒಕ್ಕಲಿನವರು ಭಾವಿಸುವುದಿಲ್ಲ. ಅದು ಅವರಿಗೆ ಒಂದು ಧಾರ್ಮಿಕವಾದ ಪವಿತ್ರಕಾರ್ಯ; ಆ ಜನಾಂಗದ ಆ ಮನೆತನದ ಕುಲಧರ್ಮ. ಜೋಗಿತಿ ಬಿಡದಿದ್ದರೆ ಎಲ್ಲಮ್ಮ ಮುನಿದು ಕಷ್ಟಪರಂಪರೆಯ ಜಾಲವನ್ನೇ ಆ ಒಕ್ಕಲಿನ ಮೇಲೆ ಬೀಸುತ್ತಾಳಂತೆ. ಕೆಲವೊಮ್ಮೆ ಎಲ್ಲಮ್ಮನೇ ಯಾರಾದರೊಬ್ಬನ ಮೇಲೆ ಮೈದುಂಬಿ ಬಂದು ಜೋಗಿತಿ ಬಿಡದೇ ಹೋದುದಕ್ಕಾಗಿಯೇ ಇಂತೆಲ್ಲ ಕಷ್ಟಗಳನ್ನು ಕೊಟ್ಟಿದ್ದೇನೆಂದು ತಿಳಿಸುತ್ತಾಳೆ. ಇಂಥ ಸಂದರ್ಭಗಳಲ್ಲಿ ಆ ಊರಿನ ಎಲ್ಲ ಹಿರಿಯರೂ ಸೇರಿ ಚಿಕ್ಕ ಪ್ರಾಯದ ಹೆಣ್ಣುಮಗಳೊಬ್ಬಳನ್ನು ಜೋಗ್ತಿ ಬಿಡಲು ಆಯ್ಕೆಮಾಡುತ್ತಾರೆ. ಕೆಲವು ತಂದೆತಾಯಿಗಳು ತಮ್ಮ ಮಗಳೇ ಜೋಗಿತಿಯಾಗಲಿ ಎಂದು ಹಂಬಲಿಸುವ ನಿದರ್ಶನಗಳೂ ಉಂಟು.

ಹೆಣ್ಣುಮಕ್ಕಳನ್ನು ಜೋಗಿತಿ ಬಿಡಬೇಕಾದರೆ ಅವಳಿಗೆ ಏಳು ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರಕೂಡದು, ಹಲ್ಲು ಬಿದ್ದಿರಬಾರದು, ಹಲ್ಲು ಬಿದ್ದು ಹುಟ್ಟಿದ ಅಥವಾ ಋತುಮತಿಯಾದ ಹೆಣ್ಣು ಜೋಗಿತಿಯಾಗುವ ಅರ್ಹತೆಯನ್ನು ಕಳೆದುಕೊಳ್ಳುತ್ತಾಳೆ. ಗಂಡುಮಕ್ಕಳು ಮದುವೆಯಾದ ಮೇಲೆ ಜೋಗಿತಿಯಾಗುವಂತಿಲ್ಲ. ಇದಕ್ಕೆ ಅಪವಾದಗಳೂ ಉಂಟು. ಮದುವೆಯಾಗಿ ಮಧುರ ಜೀವನವನ್ನು ನಡೆಸುತ್ತಿದ್ದ ಹೆಂಗಸಿನ ಮೇಲೆ ಅಥವಾ ಗಂಡಸಿನ ಮೇಲೆ ಎಲ್ಲಮ್ಮನ ದೃಷ್ಟಿ ಬಿದ್ದರೆ ಅವರಿಗೆ ಸಂಸಾರದಲ್ಲಿ ವಿರಕ್ತಿ ಹುಟ್ಟಿ ಅವರು ಕ್ರಮೇಣ ಜಡ್ಡು ಹಿಡಿದು ಮಲಗಿಬಿಡುತ್ತಾರೆ. ಇದಕ್ಕೆಲ್ಲ ಎಲ್ಲಮ್ಮ ಕಾಡಲು ತೊಡಗಿರುವುದೇ ಕಾರಣವೆಂದು ನಂಬುವ ಜನ ಜಡ್ಡು ಹತ್ತಿ ನೆಲಕಚ್ಚಿರುವವರನ್ನು ಜೋಗಿತಿ ಮಾಡುವುದಾಗಿ ಹರಕೆ ಹೊರುತ್ತಾರೆ. ಆ ಕ್ಷಣದಲ್ಲಿ ಅವರ ಜಡ್ಡು ಹೇಳಹೆಸರಿಲ್ಲದಂತಾಗುತ್ತದಂತೆ. ಹೀಗೆ ಮಡದಿಯಿದ್ದು ಎಲ್ಲಮ್ಮನ ಸೆಳೆತಕ್ಕೆ ಸಿಕ್ಕಿದ ಗಂಡಸು ಜೋಗಿತಿಯಾದರೆ ನಪುಂಸಕನಾಗುತ್ತಾನಂತೆ. ಅವನಿಗೆ ಆಸೆ ಆಮಿಷಗಳೇ ಇರುವುದಿಲ್ಲವಂತೆ. ಅವನು ತನ್ನ ಹೆಂಡತಿಯನ್ನು

ಚಿತ್ತ ಚಂಚಲವಾಗಿ
ಎತ್ತಲಾದರು ಹೋಗಿ
ಹುಲ್ಲಿದ್ದ ಕಡೆ ಮೇದು
ನೀರಿದ್ದ ಕಡೆ ಕುಡಿದು
ಒಂದು ಉತ್ತಮವಾದ ಸ್ಥಳ ಸೇರಿ
ಬದುಕಿಕೋ ಉಧೋ ಎಕ್ಕುಲ್ದೋ ಉಧೋ

ಎಂದು ಹೇಳಿ ಬೀಳ್ಕೊಡುತ್ತಾನೆ.

ಬಾಲ್ಯದಲ್ಲೇ ಜೋಗಿತಿಯಾದ ಸ್ತ್ರೀ ಪ್ರಾಯಕ್ಕೆ ಬಂದಾಗ ಬಯಸಿದ ಪುರುಷನನ್ನು ಕೂಡಿ ತನ್ನ ಲೈಂಗಿಕ ತೃಷೆಯನ್ನು ತೀರಿಸಿಕೊಳ್ಳಲು ಅವಕಾಶವುಂಟು. ಇಚ್ಛೆಪಟ್ಟರೆ ಜೀವನವಿಡೀ ಒಬ್ಬನೇ ಪುರುಷನನ್ನು ನೆಚ್ಚಿ ಸಂಸಾರವನ್ನು ನಡೆಸಬಹುದು. ಇಲ್ಲವೇ ತಾನು ಬಯಸುವವರೊಂದಿಗೆ ಕೂಡಬಹುದು.

ಬಾಲ್ಯದಲ್ಲಿ ಜೋಗಿತಿಯಾದ ಬಾಲಕ ತನ್ನ ವಯಸ್ಸಿನ ಕಾಲದಲ್ಲಿ ಹೇಗೆ ಬದುಕುತ್ತಾನೆಂಬುದು ಒಂದು ರಹಸ್ಯ. ಎಲ್ಲಮ್ಮನ ಜೋಗಿತಿಯಾಗಿರುವುದರಿಂದ ಆತ ನಪುಂಸಕನಾಗಿರುತ್ತಾನೆಂದು ಜನ ಭಾವಿಸುತ್ತಾರೆ. ಇದು ವೈಜ್ಞಾನಿಕ ಸತ್ಯವಾಗಿದ್ದರೆ ಚರ್ಚೆಯ ಆವಶ್ಯಕತೆಯೇ ಇಲ್ಲ. ಇದರ ಸಾಧ್ಯಾಸಾಧ್ಯತೆಯ ಬಗ್ಗೆ ಏನೊಂದನ್ನೂ ಹೇಳಲಾಗುತ್ತಿಲ್ಲ. ಸಲಿಂಗರತಿ ಇವರಲ್ಲಿರಬಹುದೇ ಎಂಬುದಕ್ಕೆ ಉತ್ತರ ಪಡೆಯುವುದು ಅಷ್ಟು ಸುಲಭವಲ್ಲ. ಅವರು ತಾವು ಲೈಂಗಿಕ ವಿಷಯಗಳ ಬಗ್ಗೆ ನಿರಾಸಕ್ತರೆಂದು ಹೇಳಿಕೊಂಡಿದ್ದಾರೆ. ಆದ್ದರಿಂದ ಜೋಗಿತಿಯರಾಗುವ ಪುರುಷರ ಲೈಂಗಿಕ ನಿಷ್ಕ್ರಿಯೆಗೆ ವೈಜ್ಞಾನಿಕ ಪರೀಕ್ಷೆಯ ಅಗತ್ಯವಿದೆಯೆಂದಷ್ಟೇ ಹೇಳಬಹುದು. ಒಟ್ಟಿನಲ್ಲಿ ಇವರಲ್ಲಿ ಜೋಗಿತಿ ಸತಿ, ಎಲ್ಲಮ್ಮ ಪತಿ ಎನ್ನುವ ಕಲ್ಪನೆ ಇದ್ದ ಹಾಗೆ ತೋರುತ್ತದೆ.

ಜೋಗಿತಿಯಾಗಲು ಆಯ್ಕೆಯಾದ ಹೆಣ್ಣುಮಗಳೊಬ್ಬಳನ್ನು ಸೂಳೆ ಬಿಡುವ, ಬಸವಿ ಬಿಡುವ, ಜೋಗಿತಿಯಾಗಿಸುವ ಕಾರ್ಯವನ್ನು ಯಾವುದಾದರೊಂದು ಮಂಗಳವಾರ ಅಥವಾ ಶುಕ್ರವಾರ ಇಟ್ಟು ಕೊಳ್ಳಲಾಗುತ್ತದೆ. ಇದಕ್ಕೆ ಪರಂಪರೆಯಿಂದ ಬಂದ ಕಟ್ಟುನಿಟ್ಟಾದ ವಿಧಿವಿಧಾನಗಳುಂಟು. ಆಯಾ ಊರಿನ ಎಲ್ಲಮ್ಮನ ಗುಡಿಯ ಮುಂದೆ ಶುಚಿ ಮಾಡಿ ಸಾರಿಸಿ, ದೇವರಿಗೆ ಎದುರಾಗಿ ಕುಂಕುಮ, ಭಂಡಾರ, ಕರ್ಕು (ಇದ್ದಿಲು ಪುಡಿ) ರಂಗೋಲಿ, ಹಳದಿ, ಬಿಳಿ, ಕೆಂಪು, ಹಸುರು, ನೀಲಿ – ಈ ಒಂಬತ್ತು ಬಗೆಯ ಬಣ್ಣದ ಪುಡಿಗಳಲ್ಲಿ ಒಂದೊಂದನ್ನೂ ಐದೈದು ಸೇರಿನಂತೆ ಸಂಗ್ರಹಿಸಿ ನೆಲದ ಮೇಲೆ ಜೋಗ್ತಿ ಪಟ್ಟದ ಚಿತ್ರವನ್ನು ಬಿಡಿಸಲಾಗುತ್ತದೆ. ಅದರ ನಾಲ್ಕು ಮೂಲೆಗೂ ಹೊಂಬಾಳೆ, ವೀಳೆಯದೆಲೆ, ಅಂಗನೂಲು, ಅಕ್ಷತೆ, ಗಂಧಗಳಿಂದ ಅಲಂಕರಿಸಿದ ಕಳಸಗಳನ್ನಿಡಲಾಗುತ್ತದೆ. ಎಲ್ಲ ಕಳಸಗಳಿಗೂ ಒಂದು ವಿಭೂತಿಪಟ್ಟೆ, ಒಂದಚ್ಚು ಬೆಲ್ಲ, ಒಂದು ಚಿಪ್ಪು ಬಾಳೆಹಣ್ಣು, ಎಲೆ, ಅಡಕೆ, ಐದೈದು ಹಣಗಳನ್ನಿಡುತ್ತಾರೆ. ನಾಲ್ಕೂ ಕಳಸಗಳನ್ನು ಬಳಸಿ ಬರುವಂತೆ ಮೂರೆಳೆ ಹಸಿನೂಲನ್ನು ಬಿಡುತ್ತಾರೆ. ಪಟ್ಟದ ನಡುವೆ ಜೋಗಿತಿಯಾಗಲಿರುವ ಹೆಣ್ಣುಮಗಳನ್ನು ಕುಳ್ಳಿರಿಸಿ ನಾಲ್ಕು ಕಳಸಗಳ ಕುತ್ತಿಗೆಯಿಂದಲೂ ಒಂದೊಂದೆಳೆ ಹಸಿ ನೂಲನ್ನು ಎಳೆದುಕೊಂಡು ಅದನ್ನು ಅವಳ ಕುತ್ತಿಗೆಗೆ

ಕಟ್ಟುತ್ತಾರೆ. ಅನಂತರ ಎಲ್ಲಮ್ಮನ ವಂಶಜನೆಂದು ಹೇಳುವ ಕ್ಷತ್ರಿಯ ಕುಲದ ತಾನಿಕ (ಸ್ಥಾನಿಕ) ದರ್ಶನಮಣಿ ಅಥವಾ ಮುತ್ತು ಎಂದು ಕರೆಯಲಾಗುವ 2 ಅಥವಾ 5 ಅಥವಾ 9 ಹಾಲುಮಣಿಗಳನ್ನು ಪೋಣಿಸಿದ ದಾರವನ್ನು ಗುಡಿಯಲ್ಲಿರುವ ಎಲ್ಲಮ್ಮನ ಕೈಗೆ ಒಂದು ತುದಿಯನ್ನೂ ಜೋಗಿತಿಯಾಗುವವಳ ಕುತ್ತಿಗೆಗೆ ಮತ್ತೊಂದು ತುದಿಯನ್ನೂ ಕಟ್ಟುತ್ತಾನೆ. ಈಗ ಎಲ್ಲಮ್ಮ ದೇವಿಯನ್ನು ಚೌಡಿಕೆ ದನಿಯೊಡನೆ ಧೂಪದೀಪಗಳಿಂದ ಬಗೆಬಗೆಯಾಗಿ ಅರ್ಚಿಸುವ ತಾನಿಕ ಎಲ್ಲಮ್ಮನ ಕೈಗೆ ಕಟ್ಟಿದ ದಾರದ ತುದಿಯಿಂದ ದರ್ಶನಮಣಿಗಳನ್ನು ಜೋಗಿತಿಯ ಕುತ್ತಿಗೆಯವರೆಗೂ ಸರಿಸಿಕೊಂಡು ಬಂದು ಉಧೋ ಎಲ್ಲಮ್ಮ, ಉಧೋ ಜಯ ಎಂದು ಹೇಳಿ ಮುತ್ತನ್ನು ಕುತ್ತಿಗೆಗೆ ಕಟ್ಟುತ್ತಾನೆ. ಇಷ್ಟಾದ ಮೇಲೆ ತಾನಿಕ ಹೊಸ ಜೋಗಿತಿಗೆ ಪರಂಪರೆಯಿಂದ ಬಂದ ಕೆಲವು ಸಿದ್ಧಪ್ರಶ್ನೆಗಳನ್ನು ಕೇಳಿ ಸಿದ್ಧ ಉತ್ತರಗಳನ್ನು ಪಡೆಯುತ್ತಾನೆ. ಅನಂತರ ಉಧೋ ಎಲ್ಲಮ್ಮ, ಉಧೋ ಜಯ, ಎಕ್ಕಲ್ದೋ ಉಧೋ, ಜೋಗಲ್ದೋ ಉಧೋ ಎಂದು ಹೇಳಿ ಜೋಗಿತಿ ತಲೆಮೇಲೆ ಎಲ್ಲಮ್ಮನ ಜಗ ಹೊರಿಸುತ್ತಾನೆ. ಗಂಡಸಾದರೆ ಜಗಕ್ಕೆ ಹಾಡುತ್ತ ಬದಲಾಗಿ ಕೈಗೆ ಚೌಡಿಕೆ ಕೊಡುತ್ತಾನೆ. ಉಳಿದವರೆಲ್ಲ ಚೌಡಿಕೆಯನ್ನು ನುಡಿಸುತ್ತ ಕುಣಿಯುತ್ತ ಮುಂದಾಗುತ್ತಾರೆ. ಅವರ ಹಿಂದೆ ಜೋಗಿತಿ ನಡೆಮಡಿಯ ಮೇಲೆ ಊರುಕೇರಿಯನ್ನು ಪ್ರವೇಶಿಸುತ್ತಾಳೆ.

ಊರ ಜನ ಹೊಸ ಜೋಗಿತಿಯನ್ನು ಭಕ್ತಿಯಿಂದ ಬರಮಾಡಿಕೊಳ್ಳುತ್ತಾರೆ. ಮೊರದಲ್ಲಿ ಅಕ್ಕಿ, ಅರಿಸಿನ, ಕುಂಕುಮ, ಊದುಗಡ್ಡಿ, ಎಲೆಯಡಿಕೆ, ಒಂದು ಹಣ ಮುಂತಾದವನ್ನಿಟ್ಟುಕೊಂಡು ಬಂದು ಜಗಕ್ಕೆ ಅಥವಾ ಚೌಡಿಕೆಗೆ ಭಯಭಕ್ತಿಯಿಂದ ಪೂಜೆಮಾಡಿ ಜೋಗಿತಿಯ ಪಾದಕ್ಕೆ ನಮಸ್ಕಾರಮಾಡಿ ಕಣ್ಣಿಗೊತ್ತಿಕೊಂಡು ಭಿಕ್ಷೆ ನೀಡುತ್ತಾರೆ. ಭಿಕ್ಷೆಪಡೆದ ಜೋಗಿತಿ ಅವರ ಹಣೆಗೆ ಎಲ್ಲಮ್ಮನ ಭಂಡಾರವನ್ನು ಹಚ್ಚಿ ಮುಂದೆ ಸಾಗುತ್ತಾಳೆ. 3 ಅಥವಾ 5 ಅಥವಾ 9 ಮನೆಗಳಲ್ಲಿ ಉಪಾದಾನ ಮಾಡಿಸುತ್ತಾರೆ. ಭಿಕ್ಷದಿಂದ ಬಂದ ಅಕ್ಕಿಯಲ್ಲಿ ಬೆಲ್ಲದನ್ನ ಮತ್ತು ಉಗ್ಗೇದನ್ನವನ್ನು (ಅರಿಸಿನದ ಅನ್ನ) ಮಾಡಿ ಎಲ್ಲಮ್ಮನಿಗೆ ತಳಿಗೆ ಎರೆಯುತ್ತಾರೆ. ಈ ಪ್ರಸಾದವನ್ನು ಎಲ್ಲರೂ ಭಕ್ತಿಯಿಂದ ಕಣ್ಣಿಗೊತ್ತಿಕೊಂಡು ಸೇವಿಸುತ್ತಾರೆ. ಇದು ಅವರವರ ಊರಿನಲ್ಲೇ ಜೋಗ್ತಿ ಬಿಡುವ ಕ್ರಮ. ಇಷ್ಟೆಲ್ಲ ವೆಚ್ಚವನ್ನು ಭರಿಸಲಾರದವರು ಸವದತ್ತಿಯ ಎಲ್ಲಮ್ಮನ ಗುಡ್ಡಕ್ಕೋ ಚಂದ್ರಗುತ್ತಿ ಎಲ್ಲಮನ ಗುಡಿಗೋ ಹೋಗಿ ಜೋಗಿತಿಯನ್ನು ಎಲ್ಲಮ್ಮನಿಗೆ ಲಗ್ನ ಮಾಡಿಕೊಡುತ್ತಾರೆ.

ಎಲ್ಲಮ್ಮನ ಗುಡ್ಡದಲ್ಲೇ ಜೋಗಿತಿ ಬಿಡುವ ಕ್ರಮ ತುಂಬ ಸರಳವಾದುದು. ಐದು ಜನ ಜೋಗಿತಿಯರು ಜೋಗಿತಿಯಾಗಲಿರುವವಳನ್ನು ಗುಡ್ಡದಲ್ಲಿರುವ ಎಣ್ಣೆಹೊಂಡದಲ್ಲಿ ಮೀಸುತ್ತಾರೆ. ಮಿಂದು ಮಡಿಯುಟ್ಟು ಜೋಗಿತಿಯನ್ನು ಎಲ್ಲಮನ ಗುಡಿಗೆ ಕರೆದುಕೊಂಡು ಬಂದು ಪ್ರತಿಜ್ಞಾವಾಕ್ಯಗಳನ್ನು ಹೇಳಿಸಿ ಮುತ್ತನ್ನು ದೇವಿಯ ಪಾದಕ್ಕೆ ಮುಟ್ಟಿಸಿ ಜೋಗಿತಿ ತನ್ನ ಊರಿಗೆ ಹಿಂದಿರುಗಿದ ಮೇಲೆ ಐದು ಮಂಗಳವಾರಗಳು ತಪ್ಪದೆ ಉಪಾದಾನ ಮಾಡಿ ಬಂದ ಭಿಕ್ಷೆಯನ್ನು ಗುಡ್ಡಕ್ಕೆ ತಂದು ಅದರಿಂದ ಮಾಡಿದ ಅಡಿಗೆಯನ್ನು ಮಾತಂಗಿ ಗುಡಿಗೆ ತೆಗೆದುಕೊಂಡು ಹೋಗಿ ಪೂಜೆ ಮಾಡಿ ಐದಾರು ಜನ ಜೋಗಿತಿಯರಿಗೆ ಬಡಿಸಿ ತಾನೂ ಉಣ್ಣಬೇಕು. ಹೀಗೆ ಶಾಸ್ತ್ರೀಯವಾಗಿ ಚೌಡಿಕೆ ಹಿಡಿದವರು ಮಾತ್ರ ಜೋಗಿತಿಯಾಗಿರುತ್ತಾರೆಯೇ ಹೊರತು ಚೌಡಿಕೆ ಹಿಡಿದವರೆಲ್ಲರೂ ಜೋಗಿತಿಯರೆಂದು ತಿಳಿಯುವಂತಿಲ್ಲ. ನೂರಾರು ಜನ ಚೌಡಿಕೆಯವರಿರುವ ಊರಿಗೆ ಜೋಗಿತಿಯರು ಒಬ್ಬಿಬ್ಬರು ಮಾತ್ರ.

ಯಾರಾದರೂ ಗಂಡಹೆಂಡಿರು ಜೊತೆಯಲ್ಲಿ ಮಲಗಿರುವುದನ್ನು ಜೋಗಿತಿ ಕಂಡರೆ ಅದನ್ನು ಬೇರೆಯವರ ಜೊತೆ ಹೇಳಕೂಡದು. ಕಟ್ಟಿದ್ದ ಕರು ಕಿತ್ತುಕೊಂಡು ಹಸುವಿನ ಮೊಲೆಯುಣ್ಣುತ್ತಿದ್ದರೆ ಕರು ಹಾಲನ್ನುಂಡುಕೊಳ್ಳುತ್ತಿದೆ ಎಂದು ಹೇಳಬಾರದು. ಹಸು ಹೊಲವನ್ನೇ ಮೇಯುತ್ತಿದ್ದರೂ ಅದನ್ನು ಓಡಿಸಲು ಹೇಳಬಾರದು. ಸುಳ್ಳುಪಳ್ಳು ಹೇಳಿ ಸುಖಪಡೆಯಲು ಪ್ರಯತ್ನಿಸಬಾರದು. ಎಲ್ಲೂ ಊಟ ಸಿಗದಿದ್ದರೆ ತಾನು ಹಸಿದಿರುವ ವಿಷಯವನ್ನು ಯಾರ ಮುಂದೂ ತೋಡಿಕೊಳ್ಳಕೂಡದು. ಬೇರೆಯವರ ತುತ್ತಿಗೆ ಆಸೆ ಪಡಬಾರದು. ಬಿಸಿಲಲ್ಲಿರುವವರನ್ನು ಕಂಡರೆ ನೆರಳಿಗೆ ಕರೆಯಬೇಕು; ಹಸಿದಿದ್ದವರನ್ನು ಕಂಡರೆ ತನ್ನ ತುತ್ತಿನಲ್ಲಿ ಅವರಿಗೂ ಸ್ವಲ್ಪ ಕೊಡಬೇಕು. ಬಾಯಾರಿದವರಿಗೆ ನೀರೆರೆಯಬೇಕು. ಕಷ್ಟದಲ್ಲಿರುವವರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡಬೇಕು. ಯಾರಾದರೂ ಬೈದರೆ ಹೊಡೆದರೆ ಹಿಂದಿರುಗಿ ಬೈಯುವುದಾಗಲಿ ಹೊಡೆಯುವುದಾಗಲಿ ಕೂಡದು. ಸತ್ತುಕೆಟ್ಟವರನ್ನು ಕಂಡರೆ ಸ್ನಾನಮಾಡಿ ಎಲ್ಲಮ್ಮನನನ್ನು ಪೂಜಿಸಿ ಅನಂತರ ಊಟ ಮಾಡಬೇಕು. ಅವರಿವರ ಎಂಜಲನ್ನು ನಾಲಿಗೆಗೆ ಸೋಂಕಿಸಕೂಡದು. ಕುಂತಲ್ಲಿ ನಿಂತಲ್ಲಿ ಎಲ್ಲಮ್ಮ ಎನ್ನುವ ಸೊಲ್ಲನ್ನು ಮರೆಯಕೂಡದು. ಪ್ರತಿನಿತ್ಯವೂ ಎಲ್ಲಮ್ಮ ದೇವಿಯನ್ನು ತಪ್ಪದೆ ಪೂಜಿಸಬೇಕು. ಇವು ಜೋಗಿತಿಯ ಮುಖ್ಯ ಕರ್ತವ್ಯಗಳು.

ಜೋಗಿತಿಯನ್ನು ಯಾರೂ ಯಾವ ಕಾರಣಕ್ಕೂ ಬೈಯುವಂತಿಲ್ಲ; ಹೊಡೆಯುವಂತಿಲ್ಲ. ಎಲ್ಲಮ್ಮ ದೇವಿಯ ಕಾರ್ಯಕ್ಕೆಂದೇ ಮೀಸಲಾದ ಜೋಗಿತಿಯನ್ನು ಎಲ್ಲರೂ ಗೌರವದಿಂದ ನಡೆಸಿಕೊಳ್ಳುತ್ತಾರೆ. ಹೀಯಾಳಿಸಿ ಮಾತನಾಡಿದವರಿಗೆ, ಪ್ರತಾಪರುದ್ರ ಅಹಂಕಾರದಿಂದ ಪತನಹೊಂದಿದ ಕಥೆಯನ್ನು ನೆನಪು ಮಾಡಿ ಎಚ್ಚರಿಸುತ್ತಾರೆ.

ಜೋಗಿತಿಯಾದ ಹೆಂಗಸು ಎಲ್ಲಮ್ಮನ ಸತಿಯಾಗುವುದರಿಂದ ಅವಳು ಇತರರಂತೆ ಶಾಸ್ತ್ರೀಯವಾಗಿ ಮದುವೆಯಾಗುವಂತಿಲ್ಲ. ಆದರೆ ಅವಳು ಬಯಸಿದ ಉಪಚಾರದ ಗಂಡನೊಡನೆ ಕೂಡುವ ದಿನದಲ್ಲಿ ಹೆಚ್ಕಟ್ಲೆ ಮಾಡುತ್ತಾರೆ. ಈ ಶೋಭನದ ಕಾರ್ಯ ಎಲ್ಲಮ್ಮನ ಪೂಜೆಯ ಪವಿತ್ರ ಕಾರ್ಯದಷ್ಟೇ ಮಹತ್ತ್ವಪೂರ್ಣವಾದುದೆಂದು ಭಾವನೆ. ಜೋಗಿತಿಯ ತಲೆಯ ನೀಳ್ಗೂದಲು ಜಡೆಗಟ್ಟಿಕೊಂಡರೆ ಅವಳನ್ನು ಸಾಕ್ಷಾತ್ ಎಲ್ಲಮ್ಮನೆಂದು ಭಾವಿಸಲಾಗುವುದರಿಂದ ಆ ಹೆಣ್ಣುಮಗಳು ಕಟ್ಟುನಿಟ್ಟಾಗಿದ್ದು ತನ್ನ ಲೈಂಗಿಕಬಯಕೆಗಳನ್ನು ತ್ಯಾಗಮಾಡಬೇಕಾಗುತ್ತದೆ. ಆ ಸಮುದಾಯದ ಪುರುಷರೂ ಅವಳನ್ನು ಬಯಸಲು ಹೆದರುತ್ತಾರೆ. ಜಡೆಗಟ್ಟದಿದ್ದ ಜೋಗಿತಿಯರು ಯಾರನ್ನಾದರೂ ಕೂಡಿ ಬಸುರಾಗಿ ಪಡೆದ ಕಂದಮ್ಮಗಳನ್ನು ಉಳಿದೆಲ್ಲ ಜೋಗಿತಿಯರು ಸೇರಿ ಪೋಷಿಸಿ, ಜೋಗಿತಿಯರನ್ನಾಗಿ ಮಾಡುತ್ತಾರೆ.

ಜೋಗಿತಿ ಬಿಡುವ ಸಂಪ್ರದಾಯ ಎಷ್ಟು ವಿಚಿತ್ರವೋ ಜೋಗಿತಿಯರ ಶವ ಸಂಸ್ಕಾರಾದಿಗಳೂ ಅಷ್ಟೇ ವಿಚಿತ್ರವಾಗಿವೆ. ಜೋಗಿತಿಯ ಸಾವಿನ ಸೂಚನೆಯಾಗಿ ಮನೆ ಮುಂದೆ ಬೆಂಕಿಕೊಳ್ಳಿ ಉರಿಸುತ್ತಾರೆ. ಹೆಣದ ತಲೆದೆಸೆಯಲ್ಲಿ ಕೈಯೆಣ್ಣೆ ದೀಪ ಹಚ್ಚಿಟ್ಟು, ಹಿಡಿ ಉಪ್ಪಿನ ಗಂಟನ್ನು ಎದೆಯ ಮೇಲಿರಿಸುತ್ತಾರೆ. ಅನಂತರ ಜೋಗಿತಿ ಬಿಡುವಾಗ ಮಾಡಿದಂತೆ ಅಷ್ಟಗಲ ನೆಲವನ್ನು ಸಾರಿಸಿ 'ಸೆರಗುಪಟ್ಟ' ಎಂಬ ಹೆಸರಿನ ಚಿತ್ರವನ್ನು ಒಂಬತ್ತು ಬಣ್ಣಗಳ ಪುಡಿಗಳಿಂದ ಬಿಡಿಸುತ್ತಾರೆ. ಇದರ ನಡುವೆ ಮೈತೊಳೆದ ಹೆಣವನ್ನು ಮೂಡುಮುಖ ಮಾಡಿ ಕುಳ್ಳಿರಿಸುತ್ತಾರೆ. ನಾಲ್ಕು ಮೂಲೆಗೂ ನಾಲ್ಕು ಕಳಸಗಳನ್ನು ಇಟ್ಟು ಪೂಜಿಸಿ, ಪ್ರತಿಯೊಂದು ಕಳಸಕ್ಕೂ ಅರಸಿನ, ಕುಂಕುಮ, ಹೂವು, ಎಲೆ, ಅಡಿಕೆ, ಅಲರಂಗದ ಬಟ್ಟೆಯನ್ನು ಇಡುತ್ತಾರೆ. ನಾಲ್ಕು ಕಳಸಗಳನ್ನು ಒಳಗೊಳ್ಳುವಂತೆ ಮೂರು ಸುತ್ತು ಹಸಿನೂಲೆಳೆ ಬಿಡುತ್ತಾರೆ. ನಾಲ್ಕು ಕಳಸಗಳಿಂದಲೂ ಒಂದೊಂದು ಎಳೆ ಹಸಿನೂಲನ್ನು ಎಳೆದುಕೊಂಡು ಹೆಣದ ಕುತ್ತಿಗೆಗೆ ಕಟ್ಟುತ್ತಾರೆ. ಮಿಂದು ಮಡಿಯುಟ್ಟ ಜೋಗಿತಿಯೊಬ್ಬಳಿಗೆ ಕಣ್ಣುಕಟ್ಟಿ ಹೆಣಕ್ಕೆ ಬೆನ್ನು ಮಾಡಿ ಅಷ್ಟು ದೂರದಲ್ಲಿ ನಿಲ್ಲಿಸುತ್ತಾರೆ. ಅವಳನ್ನು ಹಿಂದುಹಿಂದಕ್ಕೆ ಕರೆದುಕೊಂಡು ಬಂದು ಅವಳೆರಡು ಕೈಗಳನ್ನು ಬೆನ್ನಿನ ಕಡೆಗೆ ನೂಕಿ ಹೆಣದ ಕುತ್ತಿಗೆಯಲ್ಲಿರುವ ದರ್ಶನಮಣಿಹಾರವನ್ನು ನಾಲ್ಕು ಕಳಸಗಳಿಂದ ಎಳೆದುಕೊಂಡಿದ್ದ ನಾಲ್ಕು ದಾರಗಳನ್ನೂ ಕೀಳಿಸುತ್ತಾರೆ. ಹೀಗೆ ಕಿತ್ತೆಸೆಯುವುದರಿಂದ ಜೋಗ್ತಿಯ ಪ್ರಾಣ ದೇವರ ಸೆರಗಿನಿಂದ ಬಿಡಿಸಿಕೊಂಡಂತಾಯಿತೆಂದು ನಂಬುತ್ತಾರೆ. ಈಗ ಜೋಗಿತಿಯ ಪ್ರಾಣ ಎಲ್ಲಮ್ಮನ ಸತಿಯಾಗಿರದೆ ಮಾನವಪ್ರಾಣವಾಗುತ್ತದೆ. ಹೀಗೆ ಮಾಡದೆ ಹೋದಲ್ಲಿ ಅದು ದೇವರ ಸೆರೆಯಲ್ಲಿದ್ದು ದೇವಗಣಕ್ಕೂ ಸೇರದೆ ಮಾನವ ಗಣಕ್ಕೂ ಸೇರದೆ ಅಂತರಪಿಶಾಚಿಯಾಗುತ್ತದೆಯಂತೆ, ಅದಕ್ಕಾಗಿಯೇ ಸೆರಗಿನಿಂದ ಬಿಡಿಸುವ ಈ ಕಾರ್ಯ ನಡೆಯುತ್ತದೆ. ಈಗ ಆ ಪ್ರಾಣ ಪುಣ್ಯಕರ್ಮಾನುಸಾರ ಯಾವ ಗಣಕ್ಕಾದರೂ ಸೇರಿಕೊಳ್ಳುತ್ತದೆ. ಸೆರಗಿನಿಂದ ಬಿಡುಗಡೆಯಾಗಿ ಪಟ್ಟ ಇಳಿದ ಹೆಣವನ್ನು ಚಿತೆಗೇರಿಸಬಹುದು, ಇಲ್ಲವೇ ಮಣ್ಣು ಮಾಡಬಹುದು. ಲೋಕರೂಢಿಯಂತೆ ತಿಥಿ ಇತ್ಯಾದಿ ಉತ್ತರಕ್ರಿಯೆಗಳು ನಡೆಯುತ್ತವೆ. ಚೌಡಿಕೆಯವರು ಆ ದಿನ ಬೆಳಗಾನ ಎಲ್ಲಮ್ಮನ ಕಥೆ ಮಾಡುತ್ತಾರೆ. (ಪಿ.ಕೆ.ಆರ್.)

**ಜೋಗುಳ** : ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಜೋ ಜೋ ಎಂಬ ಪಲ್ಲವಿಯೊಂದಿಗೆ ಜೀಕುತ್ತ (ತೂಗುತ್ತ) ಹಾಡುವ ಹಾಡು. ಇದನ್ನು ಲಾಲಿ ಹಾಡುವುದು ಎಂದೂ ಕರೆಯುವುದುಂಟು. ಈ ಕೆಲಸವನ್ನು ಹೆಚ್ಚಾಗಿ ಮಗುವಿನ ತಾಯಿ ಮಾಡುವಳು:

ಜೋ ಜೋ ಮುದ್ದಿನ ಪುಟಾಣಿ ಕಂದ
ಜೋ ಜೋ ಲಲ್ಲೆಯ ಮಾತಿನ ಅಂದ
ಜೋ ಜೋ ಗೆಜ್ಜೆಯ ಝಣಝಣ ಚಂದ
ಜೋ ಜೋ ತಾರಾಕುವರಿ ಆನಂದ || ಜೋ- ಜೋ ||

ಹೀಗೆ ಜೋಗುಳ ಹಾಡುವುದರಿಂದ ಅಳುವ ಕೂಸು ಸ್ವಲ್ಪ ಮಟ್ಟಿಗೆ ಸಮಾಧಾನಗೊಳ್ಳುತ್ತದೆ. ಮಗುವಿನ ಮುಗ್ಧ ಸೌಂದರ್ಯವನ್ನೂ ಅದರ ಆಟ, ನೋಟ, ತುಂಟತನ ಮೊದಲಾದ ಗುಣಗಳನ್ನೂ ಬಣ್ಣಿಸಿ ಹಾಡುವುದರಿಂದ ತಾಯಿಯ ಎದೆಯಳಲು ಸ್ವಲ್ಪಮಟ್ಟಿಗೆ ಕರಗಿ ಅವಳ ಮನಸ್ಸಿಗೂ ಉಲ್ಲಾಸ ಉಂಟಾಗುತ್ತದೆ. ಇದರಿಂದ ಮಗುವಿನ ಬಗ್ಗೆ ವಾತ್ಸಲ್ಯ, ಮಮತೆ ಇನ್ನೂ ಹೆಚ್ಚಾಗುತ್ತದೆ. ಜನಪದ ಕವಿಗಳು ಮಕ್ಕಳ ಆಟಪಾಟಗಳನ್ನೂ ನಗು-ಅಳುವನ್ನೂ ಕುರಿತು ಸುಂದರವಾಗಿ ವರ್ಣಿಸಿರುವುದುಂಟು. ಮಗು ಅಳುವುದಕ್ಕೆ ನಾನಾ ಕಾರಣಗಳಿರಬಹುದು. ಹೊಟ್ಟೆ ಹಸಿದಿರುವುದುಂಟು ಅಥವಾ ಏನಾದರೂ ನೋವಾಗಿರಬಹುದು. ಹೀಗೆ ಮಗು ಅತ್ತಾಗ ಒಬ್ಬ ತಾಯಿ 'ಹಾಲು ಬೇಡಿ ಅತ್ತಾನ, ಕೋಲ ಬೇಡಿ ಕುಣಿದಾನ, ಮೊಸರು ಬೇಡಿ ಕೆಸರು ತುಳಿದಾನ' ಎಂದು ತನಗೆ ತಾನೇ ಪ್ರಶ್ನೆ ಕೇಳಿಕೊಳ್ಳುತ್ತಾಳೆ. ಬಿಂದಿಗೆ ಹಾಲು ತಂದು ಸುರುವೆಂದೂ ರಾತ್ರಿ ಚಂದ್ರಮನ ಕಟ್ಟಿ ನಿಲ್ಲಿಸೆಂದೂ ಹಟ ಮಾಡುವ, ಕಾಯದ ಹಾಲಿನ ಕೆನೆಯನ್ನು ಬೇಡಿ ಕರೆಕರೆಪಡುವ ಮಕ್ಕಳೂ ಇರುವುದುಂಟು. ಆಗ 'ಅತ್ತರೂ ಅಳಲಿ, ಮನೆಗೆಲಸ ಕೆಟ್ಟರೂ ಕೆಡಲಿ ಈ ಕಂದನಂಥ ಮಕ್ಕಳು ಮನೆ ತುಂಬ ಇರಬೇಕೆಂದು ಬಯಸುವ' ತಾಯಂದಿರೂ ಇದ್ದಾರೆ. ಎಂದೂ ಅಳದಿದ್ದ ಮಗು ಒಮ್ಮೆ ಅತ್ತಾಗ 'ಅಳು ಬಂದು ಅತ್ತರಿಯದ ಹಸಿವು ಬಂದು ಉಂಡರಿಯದ ಹಾಗೂ ಎತ್ತಿಕೊಳ್ಳಲೇಬೇಕೆಂಬ ಹಟವರಿಯದ ನನ ಕಂದ ಅಳದಾತನು ಅತ್ತ ಬಗೆಯೇನು' ಎಂದು ಒಬ್ಬ ತಾಯಿ ದಿಗಿಲುಪಡುತ್ತಾಳೆ. ಇನ್ನೊಮ್ಮೆ ಅಳುತ್ತಿರುವ ಮಗುವಿನಲ್ಲೇ ಆಕೆ ಸೌಂದರ್ಯವನ್ನು ಕಾಣುತ್ತಾಳೆ. ಅಳುವ ಕಂದನ ತುಟಿಯು ಹವಳಾದ ಕುಡಿಹಂಗ ಕುಡಿಹುಬ್ಬು ಬೇವಿನೆಸಳಂಗ ಕಣ್ಣೋಟ ಶಿವನ ಕೈಯಲಗು ಹೊಳೆದಂಗ-ಈ ತ್ರಿಪದಿ ಅಳುವ ಮಗುವಿನ ಕೋಮಲ ಸೌಂದರ್ಯವನ್ನು ತುಂಬ ಸುಂದರವಾಗಿ ಚಿತ್ರಿಸುತ್ತದೆ. ಆಡಿ ಬಾ ನನ ಕಂದ ಅಂಗಾಲ ತೊಳೆದೇನು ತೆಂಗಿನ ಕಾಯಿ ತಿಳಿನೀರ ತಕ್ಕೊಂಡು ಬಂಗಾರ ಮೋರೆ ತೊಳೆದೇನು ಎನ್ನುವಲ್ಲಿ ತಾಯಿಯ ಮನಸ್ಸಿನ ವಾತ್ಸಲ್ಯಪೂರಿತ ಕೋಮಲ ಭಾವನೆಗಳು ಘನೀಭೂತವಾಗಿ ಅಭಿವ್ಯಕ್ತವಾಗಿವೆ. ಜೋಗುಳದ ಹಾಡುಗಳನ್ನು ಕುರಿತು ಗೌರಾಂಬಿಕಾದೇವಿ ಹಂಜಗಿಮಠ ಅವರು ಜೋಗುಳ ಪದಗಳು ಎಂಬ ಸಂಕಲವನ್ನು ಹೊರತಂದಿದ್ದಾರೆ. (ಎಸ್.ಎಲ್.)

**ಜೋದರ ಮಾಯಣ್ಣ** : 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಈತನ ವಿಷಯ ಬಸವೇಶ್ವರಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ, ಚೆನ್ನಬಸವಪುರಾಣ, ಪ್ರಭುದೇವರ ಪುರಾಣಗಳಲ್ಲಿ ಕಂಡುಬರುತ್ತದೆ. ಆ ಕಥೆ ಹೀಗಿದೆ :

ಮಾಯಣ್ಣ ಬಿಜ್ಜಳನ ಆಸ್ಥಾನದಲ್ಲಿ ಆನೆಪಡೆಯ ಮೇಲಧಿಕಾರಿಯಾಗಿದ್ದು ತನ್ನ ವರಮಾನದಿಂದ ಜಂಗಮದಾಸೋಹವನ್ನು ನಡೆಸುತ್ತಿದ್ದ. ಒಂದು ದಿನ ಪರದೇಶದ ರಾಜಕುಮಾರನೊಬ್ಬ ಆನೆಯ ಮೇಲೆ ಕಲ್ಯಾಣಕ್ಕೆ ಬಂದು ಒಬ್ಬ ವೇಶ್ಯೆಯ ಮನೆಯಲ್ಲಿ ಉಳಿದ. ಅದನ್ನು ನೋಡಿದ ಮತ್ತೊಬ್ಬ ವೇಶ್ಯೆ ತನಗೆ ಒಲಿದಿದ್ದ ಮಿಂಡ ಜಂಗಮನನ್ನು ಕುರಿತು, ಆ ರಾಜಕುಮಾರನಂತೆ ಬಿಜ್ಜಳನ ಪಟ್ಟದಾನೆಯನ್ನು ತನ್ನ ಮನೆಯ ಮುಂದೆ ನಿಲ್ಲಿಸಬಲ್ಲೆಯಾ ಎಂದು ಪ್ರಶ್ನಿಸಿದಳು. ಆಗ ಆ ವಿಟಜಂಗಮ ಹಾಗೆಯೇ ಆಗಲೆಂದು ಒಪ್ಪಿಕೊಂಡು ಆನೆಯನ್ನು ಬೇಡುವುದಕ್ಕಾಗಿ ಬಸವಣ್ಣನಲ್ಲಿಗೆ ಹೊರಟ. ದಾರಿಯಲ್ಲಿ ಬಿಜ್ಜಳನ ಪಟ್ಟದಾನೆಯೊಂದಿಗೆ ಎದುರಾದ ಮಾಯಣ್ಣನನ್ನು ಕಂಡ ಜಂಗಮ ತಾನು ಬಸವಣ್ಣನಲ್ಲಿಗೆ ಹೋಗುತ್ತಿರುವ ವಿಷಯವನ್ನು ತಿಳಿಸಿದ. ಅದನ್ನು ಕೇಳಿದ ಮಾಯಣ್ಣ ಆ ಜಂಗಮನಿಗೆ ಬಿಜ್ಜಳನ ಪಟ್ಟದ ಆನೆಯನ್ನು ಕೊಟ್ಟುಕಳುಹಿಸಿದ. ಆ ವಿಟಜಂಗಮ ತನ್ನ ವೇಶ್ಯೆಯ ಮನೆಯ ಮುಂದೆ ಬಿಜ್ಜಳನ ಪಟ್ಟದ ಆನೆಯನ್ನು ಕಟ್ಟಿದ. ಇದನ್ನು ಕಂಡವರು ಬಿಜ್ಜಳನಿಗೆ ವಿಷಯವನ್ನು ತಿಳಿಸಿದರು. ಆಗ ಬಿಜ್ಜಳ ಮಾಯಣ್ಣನನ್ನೂ ಬಸವಣ್ಣನನ್ನೂ ಕರೆಸಿ ಕೇಳಲಾಗಿ ಮಾಯಣ್ಣ ಪಟ್ಟದ ಆನೆ ಗಜಶಾಲೆಯಲ್ಲಿದೆ ಎಂದು ಹೇಳಿದ. ಅದನ್ನು ಪರೀಕ್ಷಿಸಬೇಕೆಂದು ಬಿಜ್ಜಳ ಗಜಶಾಲೆಗೆ ಬಂದು ನೋಡಿದಾಗ ಪಟ್ಟದಾನೆ ಅಲ್ಲೇ ಇತ್ತು. ಅಂಥದೇ ಇನ್ನೊಂದು ಆನೆ ವಿಟಜಂಗಮನ ವೇಶ್ಯೆಯ ಮನೆಯ ಮುಂದೆಯೂ ಇದ್ದುದನ್ನು ಕಂಡು ಆಶ್ಚರ್ಯ ಚಕಿತನಾಗಿ ಬಿಜ್ಜಳ ಮಾಯಣ್ಣನನ್ನು ಗೌರವಿಸಿದ.

ಈತ ಶಂಭುಸೋಮನಾಥಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ರಚಿಸಿದ್ದಾನೆ. ಸದ್ಯದಲ್ಲಿ ಈತನ ಮೂರು ವಚನಗಳು ದೊರೆತಿವೆ. ತನ್ನ ಒಂದು ವಚನದಲ್ಲಿ ಈತ ಬಲ್ಲಾಳನನ್ನು ಸ್ಮರಿಸಿದ್ದಾನೆ. ಇವನ ಒಂದು ವಚನ ಹೀಗಿದೆ:

ಮುನ್ನ ಪರಸತಿ ಪಾರ್ವತಿಯೆಂದು ನಡೆಸಿತ್ತು ನುಡಿಸಿತ್ತು ಗುರುವಚನ ಬಳಿಕ ಯೆನ್ನ ಶರಣಸತಿಯೆಂದು ನಡೆಸಿತ್ತು ನುಡಿಸಿತ್ತು ಗುರುವಚನ; ಇನ್ನು ಸತಿಯರೆಲ್ಲಾ ಗುರುಸತಿಯರೆಂದು ನಡೆಸಿತ್ತು ನುಡಿಸಿತ್ತು ಗುರುವಚನ; ನಡೆದುದು ತಪ್ಪದೆ ನುಡಿದುದು ಹುಸಿಯದೆ ನಡೆಸಿತು ನುಡಿಸಿತ್ತು ಗುರುವಚನ; ಅಚ್ಚಿಗವಿಲ್ಲದೆ ಮುಚ್ಚಿದ ಮನವನು ನಿಶ್ಚಿಂತವ ಮಾಡಿತ್ತು ಗುರುವಚನ; ಶಂಭುಸೋಮನಾಥಲಿಂಗ ಸಂಗುಸಂಗವ ಮಾಡಿತ್ತು ಗುರುವಚನ. (ಎನ್.ಬಿ.)

**ಜೋಯಿಸ್, ಎಂ.ಎನ್.** : 1905-2002. ಸುಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು. ಇವರ ಪೂರ್ಣನಾಮ ಎಂ.ನರಸಿಂಹಜೋಯಿಸ್. 1905 ಡಿಸೆಂಬರ್ 14ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಎಂ.ನಾರಾಯಣ ಜೋಯಿಸ್, ತಾಯಿ ನಂಜಮ್ಮ.

ಇವರು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆಯಲ್ಪಟ್ಟರು. ಆಗ ಇವರು ಓದುತ್ತಿದ್ದ ಮರಿಮಲ್ಲಪ್ಪ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದವರು ಎಂ.ವೆಂಕಟಕೃಷ್ಣಯ್ಯನವರು. ಜೋಯಿಸರ ತಂದೆಯೂ ಅದೇ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಸಾರ್ವಜನಿಕ ಜೀವನದಲ್ಲಿ ತಾತಯ್ಯನವರೆಂದೇ ಪ್ರಸಿದ್ಧರಾಗಿದ್ದ ಎಂ.ವೆಂಕಟಕೃಷ್ಣಯ್ಯನವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲೂ ಸಾರ್ವಜನಿಕ ಜೀವನದಲ್ಲೂ ಪತ್ರಿಕಾರಂಗದಲ್ಲೂ ಮಹತ್ತರ ಸಾಧನೆಗಳನ್ನು ಮಾಡಿದ ಅನೇಕ ವಿದ್ಯಾರ್ಥಿಗಳ ಪೈಕಿ ಜೋಯಿಸರೂ ಒಬ್ಬರು.

1920ರಲ್ಲಿ ಲೋಕಮಾನ್ಯ ಟಿಳಕರು ತೀರಿಕೊಂಡಾಗ ಅವರಿಗೆ ಗೌರವ ಸಮರ್ಪಣೆಗಾಗಿ ಮೈಸೂರು ನಗರದಲ್ಲಿ ನಡೆದ ಬೃಹತ್ ಮೌನ ಮೆರವಣಿಗೆಯಲ್ಲಿ ಪಾಲುಗೊಂಡಿದ್ದ ಜೋಯಿಸ್ ಅವರು ಮುದವೀಡು ಕೃಷ್ಣರಾಯರ ವ್ಯಕ್ತಿತ್ವ ಮತ್ತು ಸಾಧನೆಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದರು. ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾದ ಮುದುವೀಡು ಕೃಷ್ಣರಾಯರು ಮೈಸೂರಿಗೆ ಬಂದು ಒಂದು ವಾರ 'ಸ್ವದೇಶಿ ಸಪ್ತಾಹದ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸದ್ವಿದ್ಯಾ ಪಾಠಶಾಲೆಯ ಹೊರ ಅಂಗಣದಲ್ಲಿ ಅವರ ಭಾಷಣಗಳು ನಡೆಯುತ್ತಿದ್ದವು. ಸಪ್ತಾಹದ ಕೊನೆಯದಿನ ವಿದೇಶಿ ವಸ್ತುಗಳ ದಹನ ಕಾರ್ಯಕ್ರಮವಿತ್ತು. ಬಾಲಕ ಜೋಯಿಸರು ತಮ್ಮ ಉಡುಪನ್ನು ಬಿಚ್ಚಿ ಬೆಂಕಿಗೆ ಹಾಕಿದರು. ಬರೀ ಲಂಗೋಟಿಯಲ್ಲಿ ಮನೆಗೆ ಬಂದಾಗ ತಂದೆಯಿಂದ ಹೊಡೆತ ತಿಂದರು. ಆದರೂ ಇವರು ಖಾದಿಧಾರಿಯಾಗಿ ಮುಂದುವರಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದರು. ಸ್ವಾತಂತ್ರ್ಯ ಹೋರಾಟದಲ್ಲಿ ಮುಂದುವರಿದರು. 1924ರಲ್ಲಿ ಇವರ ವಿವಾಹವಾಯಿತು. ಪತ್ನಿ ಸುಬ್ಬಮ್ಮನವರೂ ಪತಿಯೊಡನೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು.

1928ರಲ್ಲಿ ಎಂ.ವೆಂಕಟಕೃಷ್ಣಯ್ಯನವರ ನೇತೃತ್ವದಲ್ಲಿ ನಡೆದ ಮೈಸೂರು ಸಂಸ್ಥಾನ ಕಾಂಗ್ರೆಸ್ ಸಮಾವೇಶದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಜೋಯಿಸರು ಮೈಸೂರು ಜಿಲ್ಲಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ ಹತ್ತು ವರ್ಷಗಳ ಕಾಲ ಕೆಲಸ ಮಾಡಿದರು. ಈ ಮಧ್ಯೆ ಗಾಂಧೀಜಿ ಆರಂಭಿಸಿದ (1930) ಉಪ್ಪಿನ ಸತ್ಯಾಗ್ರಹದ ಅಂಗವಾಗಿ ದೇಶದಾದ್ಯಂತ ಕರನಿರಾಕರಣ ಚಳವಳಿ ಜರುಗಿತ್ತು. ಉತ್ತರ ಕರ್ನಾಟಕದ ಸಿರಸಿ, ಸಿದ್ದಾಪುರ ಮತ್ತು ಕಾರವಾರ ತಾಲ್ಲೂಕುಗಳಲ್ಲಿ ವ್ಯಾಪಕವಾಗಿ ಜನರು ಈ ಚಳವಳಿಯಲ್ಲಿ ಭಾಗವಹಿಸಿದರು. ಮೈಸೂರು ಸಂಸ್ಥಾನದಿಂದ ಅಲ್ಲಿಗೆ ಹೋಗಿ ಹೋರಾಡಿದವರಲ್ಲಿ ಮುಖ್ಯವಾಗಿ ಜೋಯಿಸ್, ಸುಬ್ಬಮ್ಮಜೋಯಿಸ್, ಸರ್ದಾರ್ ವೆಂಕಟರಾಮಯ್ಯ. ಅವರ ಪತ್ನಿ ಗೌರಮ್ಮ, ಸುಬ್ಬರಾವ್ ಉಪಾಧ್ಯಾಯ ಮತ್ತು ಎಲ್.ವಿ.ರಾಜಗೋಪಾಲ್ ಪ್ರಮುಖರು. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಜೋಯಿಸರಿಗೆ ಸರ್ಕಾರ ಎರಡು ವರ್ಷಗಳ ಕಠಿಣ ಸಜೆ ವಿಧಿಸಿತು. ಮೊದಲು ಇವರನ್ನು ಕಾರವಾರ ಜೈಲಿನಲ್ಲಿಡಲಾಗಿತ್ತು. ಇವರು ಅಲ್ಲಿ ಬಂದಿಯಾಗಿ ತಮ್ಮ ಜೊತೆಗಾರ ಕೈದಿಗಳೊಂದಿಗೆ ರಸ್ತೆಗಾಗಿ ಜಲ್ಲಿ ಒಡೆಯುವುದೇ ಅಲ್ಲದೆ ರಸ್ತೆ ಸಮ ಮಾಡಲು ಉರುಳುಗಲ್ಲನ್ನು ಎಳೆಯಬೇಕಾಗಿತ್ತು. ಅನಂತರ ಇವರು ವಿಲಾಸಪುರ ಜೈಲಿಗೆ ವರ್ಗವಾಗಿ ಅಲ್ಲೂ ಚಿತ್ರಹಿಂಸೆಯನ್ನು ಅನುಭವಿಸಿದರು. ಇವರ ಹೆಂಡತಿ ಸುಬ್ಬಮ್ಮ ಜೋಯಿಸರನ್ನು ಸೆರೆಮನೆಗೆ ಒಯ್ದಾಗ ಅವರು ಹಾಕಿಕೊಂಡಿದ್ದ ಮಾಂಗಲ್ಯವನ್ನು ತೆಗೆದುಕೊಡಬೇಕೆಂದು ಅಧಿಕಾರಿಗಳು ಒತ್ತಾಯ ಮಾಡಿದರು. ಅದಕ್ಕೆ ಸುಬ್ಬಮ್ಮ ಒಪ್ಪದೆ ಸೆರೆಮನೆಯಲ್ಲೇ ಉಪವಾಸ ಸತ್ಯಾಗ್ರಹ ಮಾಡಿದರು. ಅವರ ಜೊತೆಯಲ್ಲಿ ಸೆರೆಮನೆಯಲ್ಲಿದ್ದ ಕಮಲಾದೇವಿಚಟ್ಟೋಪಾಧ್ಯಾಯ ಮತ್ತಿತರ ಮಹಿಳೆಯರ ಪ್ರತಿಭಟನೆಯಿಂದ ಜೈಲಿನ ಅಧಿಕಾರಿಗಳು ತಮ್ಮ ಒತ್ತಾಯವನ್ನು ಕೈಬಿಟ್ಟರು. ಈ ಘಟನೆಯ ಅನಂತರ ಸುಬ್ಬಮ್ಮ ಜೋಯಿಸ ಅವರನ್ನು 'ಮಾಂಗಲ್ಯದ ಸುಬ್ಬಮ್ಮ' ಎಂದೇ ಕರೆಯಲಾಗುತ್ತಿತ್ತು.



ಸಿರಸಿ, ಸಿದ್ದಾಪುರದ ಸತ್ಯಾಗ್ರಹ ಮುಗಿದ ಮೇಲೆ ಮೈಸೂರಿಗೆ ಹಿಂದಿರುಗಿದ ಜೋಯಿಸ ದಂಪತಿಗಳಿಗೆ ಇವರ ಕುಟುಂಬದವರೇ ಬಹಿಷ್ಕಾರ ಹಾಕಿದರು. ಜೀವನ ನಿರ್ವಹಣೆಯೂ ಕಷ್ಟವಾಯಿತು. ಮೋಟಾರು ಗಾಡಿಗಳನ್ನು ತೊಳೆಯುವುದರಿಂದ ಹಿಡಿದು ಅನೇಕ ಬಗೆಯ ದುಡಿಮೆಯಲ್ಲಿ ತೊಡಗಿ, ಬಂದ ಅಲ್ಪ ಸಂಪಾದನೆಯಿಂದಲೇ ಜೀವನ ಸಾಗಿಸುತ್ತಿದ್ದರು. 1938 ಜನವರಿ 26ರಂದು ಸ್ವಾತಂತ್ರ್ಯ ಸಾಧನೆಗಾಗಿ ಪ್ರತಿಜ್ಞೆ ತೆಗೆದುಕೊಳ್ಳುವ ದಿನಾಚರಣೆಯ ಸಂಬಂಧವಾಗಿ ಸುಬ್ಬಮ್ಮ ಜೋಯಿಸ ಸುಬ್ಬರಾಯನಕೆರೆಯಲ್ಲಿ ಕಾಂಗ್ರೆಸ್‌ನ ತ್ರಿವರ್ಣಧ್ವಜ ಹಾರಿಸಿದಾಗ ಅವರನ್ನು ದಸ್ತಗಿರಿ ಮಾಡಲಾಯಿತು. ಅವರು ಮೂರು ತಿಂಗಳ ಮಗುವಿನೊಂದಿಗೆ ಸೆರೆಮನೆಗೆ ಸೇರಿದರು.

1938ರ ಏಪ್ರಿಲ್‌ನಲ್ಲಿ ನಡೆದ ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸರ್ಕಾರದ ಪ್ರತಿಬಂಧಕಾಜ್ಞೆಯನ್ನು ಮುರಿದು ಧ್ವಜಾರೋಹಣ ಮಾಡಿದ ಜೋಯಿಸರು ಮೈಸೂರು ಸಂಸ್ಥಾನದ ಮುಂಚೂಣಿಯ ನಾಯಕರಾದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬಂಧಿತರಾದ ಇವರು ಸುಮಾರು ಎರಡು ವರ್ಷ ಕಾಲ ಸೆರೆಯಲ್ಲಿದ್ದರು. 1947 ಸೆಪ್ಟೆಂಬರ್‌ನಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ನಡೆದ 'ಮೈಸೂರು ಚಲೋ' ಸತ್ಯಾಗ್ರಹ ಸಂಘಟನೆಯಲ್ಲಿ ಇವರು ಪ್ರಧಾನ ಪಾತ್ರ ವಹಿಸಿದರು. ಆಗ ಸ್ವಾತಂತ್ರ್ಯ ಹೋರಾಟದ ಮುಖವಾಣಿ ಎನಿಸಿದ 'ಪೌರವಾಣಿ' ಪತ್ರಿಕೆಯ ಸ್ಥಾಪಕರಲ್ಲಿ ಜೋಯಿಸರೂ ಒಬ್ಬರು.

ಸ್ವಾತಂತ್ರ್ಯ ಪೂರ್ವದಲ್ಲಿ ಕೆಲವು ವರ್ಷಗಳ ಕಾಲ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗಿಯೂ ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿಯೂ (1952-58) ಇದ್ದ ಜೋಯಿಸರು ಒಳ್ಳೆಯ ಮಾತುಗಾರರು, ವಿಚಾರವಾದಿ, ಸಂಸದೀಯ ಪಟುವೆಂದು ಖ್ಯಾತಿ ಪಡೆದಿದ್ದರು. ಜೀವನ ನಿರ್ವಹಣೆಗಾಗಿ ನ್ಯೂ ಇಂಡಿಯಾ ಇನ್‌ಷೂರೆನ್ಸ್ ಕಂಪನಿಯ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ ಇವರು ಜೀವವಿಮೆ ರಾಷ್ಟ್ರೀಕರಣವಾದ ಮೇಲೆ ಕೆಲವು ವರ್ಷಗಳ ಕಾಲ ಜೀವವಿಮಾ ಸಂಸ್ಥೆಯ ವಿಭಾಗೀಯ ಪ್ರಬಂಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಜೋಯಿಸ್ ಮತ್ತು ಇವರ ಪತ್ನಿ ಸುಬ್ಬಮ್ಮಜೋಯಿಸ್ ಅವರಿಗೆ ಭಾರತ ಸರ್ಕಾರ ತಾಮ್ರಪತ್ರ ನೀಡಿ ಗೌರವಿಸಿದೆ. ಇವರಿಗೆ ರಾಷ್ಟ್ರವೀರ ಪ್ರಶಸ್ತಿಯೂ ಸಂದಿತ್ತು. ಜೀವನದ ಕೊನೆಯವರೆಗೂ ಜನಪರ ಹೋರಾಟಗಳಿಗೆ ಸ್ಪಂದಿಸುತ್ತಿದ್ದ ಜೋಯಿಸ್‌ರು ತಮ್ಮ 97ನೆಯ ವಯಸ್ಸಿನಲ್ಲಿ 2002 ಮಾರ್ಚ್ 29ರಂದು ಮೈಸೂರಿನಲ್ಲಿ ನಿಧನಹೊಂದಿದರು. (ಬಿ.ಆರ್.ಪಿ.)

**ಜೋಶಿ, ಜಿ.ಬಿ. :** 1904-93. ಜಡಭರತ, ಅನಾಮಧೇಯ ಎಂಬ ಕಾವ್ಯನಾಮಗಳಿಂದ ಪ್ರಸಿದ್ಧರಾದ ನಾಟಕಕಾರರು ಹಾಗೂ ಪ್ರಕಾಶಕರು. ಗೋವಿಂದ ಭೀಮಾಚಾರ್ಯ ಜೋಶಿ ಇವರ ಪೂರ್ಣ ಹೆಸರು. 1904 ಜುಲೈ 29ರಂದು ಗದಗ ತಾಲ್ಲೂಕಿನ ಹೊಂಬಳದಲ್ಲಿ ಜನಿಸಿದರು. ಇವರ ತಾಯಿ ಭಾರತೀಬಾಯಿ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರ್ ಮಿಡಿಯೇಟ್‌ವರೆಗೆ ಇವರ ವಿದ್ಯಾಭ್ಯಾಸ ನಡೆಯಿತು. ಸಾಹಿತಿಯಾಗಿ ಕವನ, ಕಾದಂಬರಿ, ನಾಟಕಗಳನ್ನು ರಚಿಸಿದ ಇವರು ಮನೋಹರ ಗ್ರಂಥಮಾಲೆ ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ (1933) ಕನ್ನಡದಲ್ಲಿ ಕೆಲವು ಅತ್ಯುತ್ತಮ ಕೃತಿಗಳನ್ನು, ಲೇಖಕರನ್ನು ಬೆಳಕಿಗೆ ತಂದರು. ಕಲೋಪಾಸಕ ಮಂಡಲ ಎಂಬ ಹವ್ಯಾಸಿ ನಾಟಕ ತಂಡವನ್ನು ಕಟ್ಟಿ, ಹೊಸ ಹೊಸ ನಾಟಕಗಳನ್ನು ರಂಗಕ್ಕೆ ತಂದ ಇವರು ಪಂಡಿತ ಭೀಮಸೇನ ಜೋಶಿ, ಪ್ರಭುದೇವ ಸರದಾರರಂತಹವರನ್ನೂ ರಂಗಭೂಮಿಗೆ ತಂದರು.

ಇವರು ಧರ್ಮಸೆರೆ (1934) ಎಂಬ ಕಾದಂಬರಿಯನ್ನೂ ಜಡಭರತನ ಕನಸುಗಳು (1949), ಸ್ವಪ್ನ ಕಥನ ಎಂಬ ಕೃತಿಗಳನ್ನೂ ಜೀವಫಲ (1957) ಎಂಬ ಕವನ ಸಂಗ್ರಹವನ್ನೂ ಮೂಕಬಲಿ (1956), ಕದಡಿದ ನೀರು (1963), ಆ ಊರು ಈ ಊರು (1973), ಸತ್ತವರ ನೆರಳು (1974), ನಾನೇ ಬಿಜ್ಜಳ (1979), ಪರಿಮಳ ದವರು (1986), ಜರ್ಮನ್ ಬಂಗ್ಲೆ (1994) ಮೊದಲಾದ ವಿಳು ನಾಟಕಗಳನ್ನೂ ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಕುಸಿಯುತ್ತಿರುವ ಮೌಲ್ಯಗಳ ಬಗ್ಗೆ ಕಾಳಜಿ, ಗ್ರಾಮೀಣ ಬದುಕಿನ ಮೌಲ್ಯಗಳ ಜತನ, ಇತಿಹಾಸದಲ್ಲಿನ ಸತ್ಯಾನ್ವೇಷಣೆ ಮುಖ್ಯ ಆಶಯವಾಗಿದೆ.



ಮೊದಲಿಗೆ ಅಂಬಿಕಾತನಯದತ್ತರ ನೇತೃತ್ವದಲ್ಲಿ ಗೆಳೆಯರ ಗುಂಪಿನೊಂದಿಗೆ ತಮ್ಮನ್ನು ಗುರುತಿಸಿಕೊಂಡ ಜೋಶಿಯವರು, ಜಯಕರ್ನಾಟಕ ಪತ್ರಿಕೆಯ ಗುಂಪಿನಿಂದ ಹೊರಬಂದು ಪ್ರಹ್ಲಾದ ನರೇಗಲ್, ಗೋವಿಂದರಾವ್ ಚುಳುಕಿ, ಬೆಟಗೇರಿ ಕೃಷ್ಣಶರ್ಮರು ಆರಂಭಿಸಿದ ಮನೋಹರ ಗ್ರಂಥಮಾಲೆಯಲ್ಲಿ ಸೇರಿಕೊಂಡರು. ಮುಂದೆ ಒಂದೇ ವರ್ಷದಲ್ಲಿ ಈ ಗ್ರಂಥಮಾಲೆಯ ಸಂಪೂರ್ಣ ವ್ಯವಹಾರವನ್ನು ಕೈಗೆತ್ತಿಗೊಂಡು ತಮ್ಮ ಆಯುಷ್ಯ ಪೂರ್ತ ಇದನ್ನು ಕರ್ನಾಟಕದ ಪ್ರತಿಷ್ಠಿತ ಪ್ರಕಟಣ ಸಂಸ್ಥೆಯಾಗಿ ಬೆಳೆಸಿದರು. ಈ ಗ್ರಂಥಮಾಲೆಯಲ್ಲಿ ದ.ರಾ.ಬೇಂದ್ರೆ, ವಿ.ಕೃ.ಗೋಕಾಕ್,

ರಂ.ಶ್ರೀ.ಮುಗಳಿ, ಕೀರ್ತಿನಾಥ ಕುರ್ತಕೋಟಿ ಇವರು ಸಾಹಿತ್ಯ ಸಲಹೆಗಾರರಾಗಿದ್ದರು.

ಮೂರು ಸಂಪುಟಗಳಲ್ಲಿ ಪ್ರಕಟವಾದ ನಡೆದು ಬಂದದಾರಿ (1958-60), ಐದು ಸಂಪುಟಗಳಲ್ಲಿ ಪ್ರಕಟವಾದ ಪುಟಬಂಗಾರ (1986-88) ಮನೋಹರ ಗ್ರಂಥಮಾಲೆಯ ಮಹತ್ವದ ಪ್ರಕಟಣೆಗಳಾಗಿವೆ. ಈ ಪ್ರಕಟಣೆಗಳ ಹಿಂದೆ ಜೋಶಿಯವರ ಶ್ರಮ, ನೆರವು ಅಪಾರವಾಗಿತ್ತು. ಇವರು ವಿಮರ್ಶೆಗೆ ಮೀಸಲಾದ ಮನ್ವಂತರ ಎಂಬ ಷಾಣ್ಮಾಸಿಕ ಪತ್ರಿಕೆಯ ಸಂಪಾದಕರಾಗಿದ್ದರು (1962-75). ಇವರು ಸಂಪಾದಿಸಿದ, ಪ್ರಕಟಿಸಿದ ಕೃತಿಗಳಲ್ಲಿ ಹೊಸನೋಟ, ಹೊಸ ವಿಚಾರಗಳನ್ನು ಪುರಸ್ಕರಿಸುವ ಧೋರಣೆಯನ್ನು ಕಾಣಬಹುದಾಗಿದೆ.

ಇವರ ಸಾಹಿತ್ಯ ಸಾಧನೆಗಾಗಿ ಅನೇಕ ಗೌರವ ಪ್ರಶಸ್ತಿಗಳು ಲಭ್ಯವಾಗಿವೆ. ಮೂಕಬಲಿ, ಕದಡಿದ ನೀರು, ಸತ್ತವರ ನೆರಳು, ನಾನೇ ಬಿಜ್ಜಳ, ಪರಿಮಳದವರು - ಈ ನಾಟಕಗಳಿಗೆ ವರ್ಷದ ಅತ್ಯುತ್ತಮ ನಾಟಕ ಪ್ರಶಸ್ತಿ ಬಂದಿದೆ. 1963ರಲ್ಲಿ ಇವರಿಗೆ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ದೊರಕಿತು. 1986ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿ, 1989ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಶ್ರೇಷ್ಠ ನಾಟಕಕಾರ ಪ್ರಶಸ್ತಿ ಇವರಿಗೆ ಲಭ್ಯವಾಗಿದೆ. ಭಾರತೀಯ ಭಾಷೆಗಳಲ್ಲಿನ ಉತ್ತಮ ಪ್ರಕಾಶನಕ್ಕಾಗಿ 1993ರಲ್ಲಿ ಇವರಿಗೆ ಅಖಿಲ ಭಾರತ ಪ್ರಕಾಶಕರ ಫೆಡರೇಶನ್ ಪ್ರಶಸ್ತಿಯನ್ನು ನೀಡಲಾಯಿತು.

ಇವರು 1993 ಡಿಸೆಂಬರ್ 26ರಂದು ಧಾರವಾಡದಲ್ಲಿ ನಿಧನರಾದರು. (ಎಸ್.ಎಂ.ಕೆ.)

**ಜೋಶಿ, ಶಂ. ಬಾ.** : 1896-1991. ಪ್ರಸಿದ್ಧ ಸಂಶೋಧಕರು, ವಿಮರ್ಶಕರು. ಪೂರ್ಣ ಹೆಸರು ಶಂಕರ ಬಾಳದೀಕ್ಷಿತ ಜೋಶಿ. 1896 ಜನವರಿ 4ರಂದು ಬೆಳಗಾಂವಿ ಜಿಲ್ಲೆಯ ಗುರ್ಲಹೊಸೂರಿನಲ್ಲಿ ಜನಿಸಿದ ಜೋಶಿಯವರು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರು. ಇದ್ದೂರಲ್ಲೇ ಮುಲ್ಕಿಯವರೆಗೂ ಓದಿದರು. ಅನಂತರ ಪ್ರಾಥಮಿಕ ಶಿಕ್ಷಕರ ತರಬೇತಿ ಶಾಲೆಯಲ್ಲಿ 3 ವರ್ಷ ಕಲಿತು, ಚಿಕ್ಕೋಡಿಯಲ್ಲಿ ಶಿಕ್ಷಕರಾದರು. 1924ರಲ್ಲಿ ಅಸಹಕಾರ ಚಳವಳಿಗೆ ಸಿಕ್ಕಿ, ನೌಕರಿಗೆ ಶರಣುಹೊಡೆದರು. ಪತ್ರಿಕೋದ್ಯಮಿಯಾಗಿ ಧಾರವಾಡದ ಕರ್ಮವೀರ, ಜಯಕರ್ನಾಟಕಗಳ ಸಂಪಾದಕ ಮಂಡಲಿಯಲ್ಲಿ ಸೇರಿಕೊಂಡರು. ಇದೇ ಸಮಯಕ್ಕೆ ಪ್ರಾರಂಭವಾದ ರಾಷ್ಟ್ರೀಯ ವಿದ್ಯಾಲಯದಲ್ಲಿ ಶಿಕ್ಷಕರಾದರು. ಕರ್ನಾಟಕ ಹೈಸ್ಕೂಲ್, ವಿಕ್ಟೋರಿಯ ಹೈಸ್ಕೂಲುಗಳಲ್ಲಿ ದೀರ್ಘಸೇವೆಯ ಅನಂತರ ರಾಜೀನಾಮೆ ಸಲ್ಲಿಸಿ, ಸಂಶೋಧನೆಯಲ್ಲಿ ನಿರತರಾದರು. ಗುರ್ಲಹೊಸೂರಿನ ವೈಚಾರಿಕ-ಆಧ್ಯಾತ್ಮಿಕ ವಾತಾವರಣ ಜೋಶಿಯವರ ಬುದ್ಧಿಯನ್ನು ವೈಚಾರಿಕತೆಯತ್ತ ತಿರುಗಿಸಿತು. ಮಾತೃಭಾಷೆ ಮರಾಠಿಯಾಗಿದ್ದರಿಂದ ಪುಣೆಯ ವಸಂತ ವ್ಯಾಖ್ಯಾನ ಮಾಲೆ, ಟಿಳಕರ ಕೇಸರಿ ಪತ್ರಿಕೆಗಳಿಂದ ಪ್ರಭಾವಿತರಾದರು. ಕನ್ನಡದ ನೆಲೆ, ಹುಟ್ಟುಗಳ ಬಗ್ಗೆ ಸ್ವತಂತ್ರವಾಗಿ ಚಿಂತಿಸಿದರು. ಇರಾವತಿ ಕರ್ವೆ, ಸುಕಥಣಕರರಂಥ ಮೇಧಾವಿಗಳ ಪ್ರಭಾವದಿಂದ ಪ್ರಾಚೀನ ಗ್ರಂಥಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಅಭ್ಯಸಿಸುವ ಕ್ರಮವನ್ನು ಬೆಳೆಸಿಕೊಂಡರು.



ಜೋಶಿಯವರು ಅರವಿಂದರ ರಾಜಕೀಯ ಆಧ್ಯಾತ್ಮಿಕತೆಯಿಂದ ಪ್ರಭಾವಿತರಾಗಿ ಅರವಿಂದ ಚರಿತ್ರೆಯನ್ನು ರಚಿಸಿದರು (1920). ರಾನಡೆಯವರ ಉಪನಿಷದ್ರಹಸ್ಯ ಗ್ರಂಥದ ಅನುವಾದಕರಲ್ಲಿ ಇವರೊಬ್ಬರು. ಕಣ್ಮರೆಯಾದ ಕನ್ನಡ (1933) ಎಂಬ ಕೃತಿಯಲ್ಲಿ ದೇಶಿಕದಂಥ ಶಬ್ದಗಳ ಮೂಲಕ್ಕೆ ಇರುವ ಸಂಸ್ಕೃತಿಯ ಅಧೋಗತಿಯ ಚಿತ್ರಣವಿದೆ. ಮಹಾರಾಷ್ಟ್ರದಲ್ಲಿ ತೆರಳು ಹುಟ್ಟಿಸಿದ ಮಹಾರಾಷ್ಟ್ರದ ಮೂಲ (1934) ಗ್ರಂಥದಲ್ಲಿ ಮಹಾರಾಷ್ಟ್ರದ ಉಗಮ ವರ್ಹಾಡದಲ್ಲಿ ಎಂದು ಹೇಳಿದೆ. ಕಂನುಡಿಯ ಹುಟ್ಟು (1937) ಭಾಷಾಭ್ಯಾಸಿಗಳಿಗೆ ಉಪಯುಕ್ತ ಕೈಪಿಡಿಯಾಗಿದೆ. ಕಂನುಡಿಯ ಜೀವಾಳ (1944) ಕರ್ನಾಟಕದ ಕುಲಗಳ ಪಿರುಪೇರುಗಳ ಮೇಲಿಂದ ಕಟ್ಟಿದ ಸಾಂಸ್ಕೃತಿಕ ಪುನರ್‍ರಚನೆಯಾಗಿದೆ. ವ್ಯಾಸ, ಪಂಪ ಹಾಗೂ ಕುಮಾರವ್ಯಾಸ-ಈ ಮೂವರು ಮಹಾಕವಿಗಳು ಚಿತ್ರಿಸಿರುವ ಕರ್ಣನ ಪಾತ್ರವನ್ನು ಕುರಿತ ತೌಲನಿಕ ವಿಮರ್ಶೆಯನ್ನು ಕರ್ಣನ ಮೂರು ಚಿತ್ರಗಳು (1947) ಗ್ರಂಥದಲ್ಲಿ ಮಾಡಿದ್ದಾರೆ. ಎಡೆಗಳು ಹೇಳುವ ಕಂನಾಡ ಕತೆಯಲ್ಲಿ (1947) ಕರ್ನಾಟಕದ ಊರುಗಳ ಹೆಸರುಗಳಿಂದ ಸೂಚಿತ ಸಂಸ್ಕೃತಿಯ ವಿಶ್ಲೇಷಣೆ ಇದೆ. ಕನ್ನಡದ ಒಡಪುಗಳು (1950) ಸಾಂಸ್ಕೃತಿಕ ಅಭ್ಯಾಸದ ಗ್ರಂಥ. ಈ ಎಲ್ಲ ಗ್ರಂಥಗಳಲ್ಲೂ ಪ್ರಧಾನವಾಗಿ ಎದ್ದುಕಾಣುವುದು ಜೋಶಿಯವರ ಸಾಂಸ್ಕೃತಿಕ ಹವ್ಯಾಸ. ಇಲ್ಲಿಂದ ಮುಂದೆ ಇವರು ಮೆಲ್ಲನೆ ತಮ್ಮ ಮುಖ್ಯ ಸಿದ್ಧಾಂತದತ್ತ ಹೊರಳುತ್ತಾರೆ. ಹಾಲುಮತದರ್ಶನ (1960) ಗ್ರಂಥದಿಂದ ಪ್ರಾರಂಭವಾದ ಇವರ ಜಾನಪದ ವಿಶ್ವಾಸ-ದೇವತಾ-ಶ್ರದ್ಧೆಗಳ ಅಭ್ಯಾಸ, ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆಯಲ್ಲಿ (1970) ಪರಿಣತಿಗೊಂಡಿರುವುದನ್ನು ಗುರುತಿಸಬಹುದು. ಕರ್ನಾಟಕದ ಪೂರ್ವೇತಿಹಾಸವನ್ನು ಇಂಥ ಜಾನಪದ ವಿಶ್ವಾಸಗಳ ಸಹಾಯದಿಂದ ಪುನರ್‍ರಚಿಸುವುದು ಈ ಗ್ರಂಥದ ಆಶಯವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟವಾದ (1971) ಇವರ ಋಗ್ವೇದಸಾರ: ನಾಗಪ್ರತಿಮಾ ವಿಚಾರ ಎಂಬುದು ಸಹಸ್ರಪುಟಗಳಿಗೂ ಮೀರಿರುವ ಬೃಹದ್ಗ್ರಂಥ. ಮಹಾಭಾರತದಲ್ಲಿ ಆದಂತೆ ಋಗ್ವೇದದಲ್ಲೂ ಒಂದು ಅವಸ್ಥೆಯಲ್ಲಿ ಸಂಪೂರ್ಣ ಮೌಲ್ಯಪಲ್ಲಟವಾಯಿತೆಂದೂ ಅದರ ಮೂಲದ ಆಶಾವಾದ-ಪ್ರಕಾಶ ಸಂಪ್ರದಾಯದ ಸುತ್ತಲೂ-ಜೀವನ-ಹೇಯ ಸಂನ್ಯಾಸ ಮಾರ್ಗದ ಪದರುಗಳು ಕೂಡಿದವೆಂದೂ ಆದ್ದರಿಂದ ಅದರ ಮೂಲ ಆಶಾವಾದದತ್ತ ಹೊರಳದೆ ಭಾರತೀಯ ಸಂಸ್ಕೃತಿಗೆ ಮುಕ್ತಿಯಿಲ್ಲವೆಂದೂ ಈ ಗ್ರಂಥದಲ್ಲಿ ವಿವರಿಸಿದ್ದಾರೆ. ಭಾಷೆ ಮತ್ತು ಸಂಸ್ಕೃತಿ (1975) ಎಂಬ ಕೃತಿಯಲ್ಲಿ ಸಂಸ್ಕೃತಿಯ ಉನ್ನತಿ ಅವನತಿಗೂ ಭಾಷೆಯ ಉನ್ನತಿ ಅವನತಿಗೂ ಇರುವ ಪರಸ್ಪರ ನಿಕಟಸಂಬಂಧದ ವಿವರಣೆಯಿದೆ. ಸತ್-ತ್ಯ ಮತ್ತು ಸತ್ಯ ಗ್ರಂಥದಲ್ಲಿ ನಾಗಪ್ರತಿಮಾ ವಿಚಾರದ ವಿಷಯಗಳ ಹೆಚ್ಚಿನ ವಿವರಣೆ ದೊರೆಯುತ್ತದೆ.

ಮರಾಠಿ ಸಂಸ್ಕೃತಿ ಕೆಲವು ಸಮಸ್ಯೆಗಳು (1980) ಇವರದೇ ಮರಾಠಿ ಪುಸ್ತಕದ ಅನುವಾದ. ಇವರು ರಚಿಸಿದ ಇತರ ಗ್ರಂಥಗಳಿವು: ಶ್ರೀಮದ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ (1997), ಸಾಂಸ್ಕೃತಿಕ ಮೂಲದಲ್ಲಿನ ತಾತ್ವಿಕ ಚಿಂತನೆಗಳು (1978), ಜೀವನದ ಅರ್ಥಗ್ರಹಣ ಪದ್ಧತಿ (1986), ಕಂನಾಡವರ ಸಂಸ್ಕೃತಿಯ ಗತಿಸ್ಥಿತಿ (1981), ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ (1976), ವೈವಸ್ವತಮನು ಪ್ರಣೀತ ಮಾನವ ಧರ್ಮದ ಆಕೃತಿ (1979), ಬುದ್ಧನ ಜಾತಕ (1980), ಬಿತ್ತಿದ್ದನ್ನು ಬೆಳಕೊ (1984) ಶಂಬಾ ಕೃತಿ ಸಂಪುಟ (6 ಸಂಪುಟಗಳು) (1999), ಶಂಬಾ ಅವರ ಆಯ್ದ ಲೇಖನಗಳು (1997).

ಜೋಶಿಯವರ ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ (1970). ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ (1973). ಮಡಿಕೇರಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ (1981) ಅಧ್ಯಕ್ಷರನ್ನಾಗಿ ಆರಿಸಿ ಇವರಿಗೆ ಗೌರವ ಸೂಚಿಸಲಾಗಿದೆ. ಇವರು 1991 ಸೆಪ್ಟಂಬರ್ 28ರಂದು ನಿಧನರಾದರು. (ಎಸ್.ಎಂ.ಪಿ.)

**ಜೋಳ :** ಕರ್ನಾಟಕದ ಪ್ರಮುಖ ಆಹಾರ ಬೆಳೆಗಳಲ್ಲಿ ಒಂದು. ಸುಮಾರು 18.5ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಜೋಳವನ್ನು ಬೆಳೆಸಲಾಗುತ್ತಿದೆ (1998-99). ಕರ್ನಾಟಕದಲ್ಲಿ ಬಿಜಾಪುರ, ಧಾರವಾಡ, ಗುಲ್ಬರ್ಗ, ರಾಯಚೂರು, ಬೆಳಗಾಂವಿ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಇದರ ಕೃಷಿಗೆ ಪ್ರಸಿದ್ಧವಾಗಿವೆ. ಬಾಗಲಕೋಟೆ, ಬಿಜಾಪುರ ಜಿಲ್ಲೆಗಳಲ್ಲಿ ಒಟ್ಟು 4.59 ಲಕ್ಷ ಹೆಕ್ಟೇರುಗಳಷ್ಟು ಕ್ಷೇತ್ರದಲ್ಲಿ ಜೋಳದ ಬೇಸಾಯ ಉಂಟು. ಜೋಳವನ್ನು ವರ್ಷದಲ್ಲಿ ಎರಡು ಸಲ ಅಂದರೆ ಮುಂಗಾರು ಹಾಗೂ ಹಿಂಗಾರು ಕಾಲಗಳಲ್ಲಿ ಬೆಳೆಸಲಾಗುತ್ತದೆ. ಮುಂಗಾರು ಜೋಳವನ್ನು ಜೂನ್-ಜುಲೈ ತಿಂಗಳುಗಳಲ್ಲಿ ಬಿತ್ತಿ, ನವೆಂಬರ್-ಡಿಸೆಂಬರ್ ವೇಳೆಗೆ ಕೊಯ್ಲು ಮಾಡಲಾಗುತ್ತದೆ. ಈ ಜೋಳದ ಜೊತೆಯಲ್ಲಿ ತೊಗರಿ, ಹೆಸರು, ಉದ್ದು, ಅಲಸಂದೆ ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಸುವ ಕ್ರಮವೂ ರೂಢಿಯಲ್ಲುಂಟು. ಕಪ್ಪು ಎರೆಮಣ್ಣು ಇರುವ ಪ್ರದೇಶದಲ್ಲಿ ಹಿಂಗಾರು ಜೋಳವನ್ನು ಬೆಳೆಸಲಾಗುತ್ತದೆ. ಇದರ ಬಿತ್ತನೆಯ ಕಾಲ ಅಕ್ಟೋಬರ್-ನವೆಂಬರ್. ಕೊಯ್ಲಿನ ಕಾಲ ಮಾರ್ಚ್ ತಿಂಗಳು. ಕೆಲವೆಡೆಗಳಲ್ಲಿ ಹಿಂಗಾರು ಜೋಳದೊಂದಿಗೆ ಕಡಲೆ, ಕುಸುಮೆ, ಅಗಸೆಗಳನ್ನು ಮಿಶ್ರಬೆಳೆಯಾಗಿ ಬೆಳೆಸುವುದಿದೆ. ರಾಜ್ಯದಲ್ಲಿ 1998-99ರ ಸಾಲಿನಲ್ಲಿ ಜೋಳದ ಉತ್ಪನ್ನ 14.43ಲಕ್ಷ ಮೆಟ್ರಿಕ್ ಟನ್ನುಗಳು. ಹೀಗೆ ರಾಜ್ಯದ ಪ್ರಮುಖ ಬೆಳೆಯಾದ ಜೋಳದ ತಳಿಯ ಅಭಿವೃದ್ಧಿಯ ಕಡೆಗೂ ಹೆಚ್ಚು ಗಮನ ಕೊಡಲಾಗಿದೆ. 1950ರಲ್ಲಿ ರಾಜ್ಯದ ಕೃಷಿ ಇಲಾಖೆ ಎಣಿಗಾರ ತಳಿಯಿಂದ ಪಡೆದ ಜಿ.ಎಸ್.560-1-1 ಎಂಬ ತಳಿಯನ್ನು ಬಿಡುಗಡೆ ಮಾಡಿತು. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ 1968ರಲ್ಲಿ ಗಿಡ್ಡ ಮಾಲ್ದಂಡಿಯಿಂದ ಶುದ್ಧ ಆಯ್ಕೆ ಮಾಡಿ ಪಡೆದ ಜಿ.ಎಮ್.2-3-1 ಎಂಬ ತಳಿಯನ್ನು ಬೈಲಹೊಂಗಲದಲ್ಲಿ ಬಿಡುಗಡೆ ಮಾಡಲಾಗಿದೆ. ಇದು ಹೆಕ್ಟೇರಿಗೆ 15 ಕ್ವಿಂಟಾಲ್ ಧಾನ್ಯ ಮತ್ತು 20-25 ಟನ್ ಒಣಮೇವನ್ನು ಕೊಡುತ್ತದೆ. ಇದಲ್ಲದೆ ಮಹಾರಾಷ್ಟ್ರದ ಸ್ಥಳೀಯ ಮಾಲ್ದಂಡಿ ತಳಿಯಿಂದ ಆಯ್ಕೆ ಮಾಡಿ ಪಡೆದ 335-1 ಎಂಬ ತಳಿ ಹಿಂಗಾರಿ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲ್ಪಡುತ್ತಿದೆ. ಇದು ಅನಾವೃಷ್ಟಿಯಲ್ಲೂ ಬೆಳೆಯಬಲ್ಲ ತಳಿ. ಕರ್ನಾಟಕದಲ್ಲಿ ತಳಿಸಂಕರಣದಿಂದಲೂ ಜೋಳದ ಬೆಳೆಯ ಸುಧಾರಣೆಯಲ್ಲಿ ಬಹಳ ಪ್ರಗತಿಯನ್ನು ಸಾಧಿಸಲಾಗಿದೆ. ತುಂಗಭದ್ರಾ ಜಲಾಶಯದ ಕಾಲುವೆ ನೀರಾವರಿ ಪ್ರದೇಶಗಳಲ್ಲಿ ಬೆಳೆಸಲಾಗುವ ಮುಂಗಾರು ತಳಿ ಸಿ7-1195 (ನೀರುಜೋಳ) ತಳಿಯನ್ನು ಡಿ-340 ಮತ್ತು ಸಿ2-9ರ ನಡುವೆ ಸಂಕರಣದಿಂದ ಪಡೆಯಲಾಗಿದೆ. ಸಿ10-2 ಎಂಬ ಮೇವಿಗೆ ಹೆಸರುವಾಸಿಯಾಗಿರುವ ತಳಿಯೊಡನೆ ಎಂ35-1 ಎಂಬ ತಳಿಯನ್ನು ಸಂಕರ ಮಾಡಿ ಹಿಂಗಾರಿ ಜೋಳ 5-4-1 (ಮೂಗುತಿ ಜೋಳ) ಎಂಬುದನ್ನು ಅಭಿವೃದ್ಧಿಗೊಳಿಸಲಾಗಿದೆ. ಇದು ಹೆಚ್ಚು ಇಳುವರಿ ಕೊಡುವುದಲ್ಲದೆ ರುಚಿಯಾದ ಒಣಮೇವನ್ನು ಒದಗಿಸುತ್ತದೆ. ಅಣ್ಣಿಗೇರಿ-1 ಎಂಬ ತಳಿಯನ್ನು ಅಭಿವೃದ್ಧಿಗೊಳಿಸಲಾಗಿದೆ.

ಭಾರತೀಯ ಕೃಷಿ ಸಂಶೋಧನ ಸಂಸ್ಥೆ, ರಾಕ್‌ಫೆಲರ್ ಸಂಸ್ಥೆಯ ಸಹಕಾರದಿಂದ ಸಂಕರಣ (ಹೈಬ್ರಿಡ್) ಯೋಜನೆಯನ್ನು ಪ್ರಾರಂಭಿಸಿತು. ಈ ಕಾರ್ಯದ ಅಂಗವಾಗಿ 1964ರಲ್ಲಿ ಸಿಎಸ್‌ಎಚ್-1 ಮತ್ತು 1965ರಲ್ಲಿ ಸಿಎಸ್‌ಎಚ್-2 ಎಂಬುವನ್ನು ಬಿಡುಗಡೆ ಮಾಡಲಾಯಿತು. ಇವು ಮುಂಗಾರು ಕಾಲದಲ್ಲಿ ಹಾಗೂ ನೀರಾವರಿ ಸೌಕರ್ಯವಿರುವೆಡೆ ಬೇಸಗೆಯಲ್ಲಿ ಬೆಳೆಯಲು ಯೋಗ್ಯವಾಗಿವೆ. 1968ರಲ್ಲಿ ಸ್ವರ್ಣ ಎಂಬ ತಳಿಯನ್ನು ಬಿಡುಗಡೆ ಮಾಡಲಾಯಿತು. ತರುವಾಯ ಸಿಎಸ್‌ಎಚ್-5 ಎಂಬುದನ್ನು ವೃದ್ಧಿಸಲಾಗಿದೆ. ಇದನ್ನು ಬೇಸಗೆಯಲ್ಲಿ ನೀರಾವರಿ ಅನುಕೂಲವಿರುವಾಗ ಬೆಳೆಯಬಹುದು. ಇದು ಹಿಂದೆ ಬಿಡುಗಡೆ ಮಾಡಿದ ಹೈಬ್ರಿಡ್ ತಳಿಗಳಿಗಿಂತ ಉತ್ತಮವಾಗಿದೆ. ಜೋಳದ ತಳಿಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯ ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ತೀವ್ರತರವಾಗಿ ನಡೆಯುತ್ತಿದೆ. ಸಂಕರ ತಳಿಗಳಲ್ಲಿ ಮೇವಿಗಿಂತ ಕಾಳಿನ ಇಳುವರಿ ಹೆಚ್ಚು. ಸಂಕರ ತಳಿ ಜೋಳದಿಂದ ನೀರಾವರಿಯಲ್ಲಿ ಹೆಕ್ಟೇರಿಗೆ 50-65 ಕ್ವಿಂಟಾಲ್ ಕಾಳು ಮತ್ತು 10-12 ಟನ್ ಮೇವು ಸಿಕ್ಕುತ್ತದೆ. ಮಳೆಯ ಆಶ್ರಯದಲ್ಲಿ 20-30 ಕ್ವಿಂಟಾಲ್ ಕಾಳು ಮತ್ತು 5-7 ಟನ್ ಮೇವು ಸಿಕ್ಕುತ್ತದೆ. (ಕೆ.ಆರ್.ಜ.)

# ಟಿ

**ಟಿಪ್ಪುಸುಲ್ತಾನ್ :** 1750-1799. ಮೈಸೂರು ಸಂಸ್ಥಾನದ ಪ್ರಖ್ಯಾತ ಸುಲ್ತಾನ (1782-1799). ಹೈದರ್ ಅಲಿಯ ಮಗ. 1750 ನವೆಂಬರ್ 10ರಂದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದ. ಟಿಪ್ಪುಮಸ್ತಾನ್ ಔಲಿಯಾ ಎಂಬ ಸಂತನ ಹೆಸರನ್ನು ಇವನಿಗೆ ಇಡಲಾಯಿತು. ಟಿಪ್ಪು ಬಾಲ್ಯದಿಂದಲೇ ಉತ್ತಮ ವಿದ್ಯಾಭ್ಯಾಸವನ್ನು ಪಡೆದು ತನ್ನ ಕಾಲದ ವಿವಿಧ ರೀತಿಯ ಕಲೆಗಳಲ್ಲಿ, ಪಾಂಡಿತ್ಯದಲ್ಲಿ ಪರಿಶ್ರಮವನ್ನು ಸಾಧಿಸಿದ್ದ. ಬಹು ಚಿಕ್ಕವನಾಗಿದ್ದಾಗಲೇ ತಂದೆಯ ಜೊತೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ. 1763ರಲ್ಲಿ ಹೈದರ್ ಮಲಬಾರನ್ನು ಮುತ್ತಿದಾಗ ಟಿಪ್ಪು ಅವನೊಡನೆ ಇದ್ದ. ಒಂದನೆಯ ಮೈಸೂರು ಯುದ್ಧದ ಕಾಲದಲ್ಲಿ ಹೈದರಾಬಾದಿನ ನಿಜಾಮನೊಡನೆ ಮಾತುಕತೆಗಳನ್ನು ನಡೆಸಿದ. ನಿಜಾಮ ಇವನಿಗೆ ಫತೆ ಅಲಿ ಖಾನ್ ಎಂಬ ಬಿರುದನ್ನು ನೀಡಿದ. ಈ ಯುದ್ಧ ನಡೆದ ಕಾಲದಲ್ಲಿ ಟಿಪ್ಪು ಮದರಾಸಿನವರೆಗೂ ಹೋಗಿ ಮದರಾಸಿನ ಕೌನ್ಸಿಲರ್‌ಗಳ ಮನೆಗಳನ್ನು ಲೂಟಿ ಮಾಡಿದ. 1769-1772ರಲ್ಲಿ ನಡೆದ ಮೈಸೂರು-ಮರಾಠ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದ. ಅದೇ ರೀತಿ 1780ರಲ್ಲಿ ಆರಂಭವಾದ ಎರಡನೆಯ ಮೈಸೂರು ಯುದ್ಧದಲ್ಲೂ ಪ್ರಧಾನ ಪಾತ್ರ ವಹಿಸಿದ. ಸೆಪ್ಟೆಂಬರ್ 1780ರಲ್ಲಿ ಪೊಳ್ಳಿಲೂರ್ ರಣರಂಗದಲ್ಲಿ ಕರ್ನಲ್ ಬೇಯಿಲಿಯನ್ನು ಸೋಲಿಸಿದಾಗ ಮತ್ತು ಫೆಬ್ರವರಿ 1782ರಲ್ಲಿ ಅನ್ನಗುಡಿ ಕದನದಲ್ಲಿ ಕರ್ನಲ್ ಬ್ರೈತ್‌ವೈಟ್‌ನನ್ನು ಸೋಲಿಸಿ ಹಿಮ್ಮೆಟ್ಟಿಸಿದಾಗ ಟಿಪ್ಪುವಿನ ಸಾಮರ್ಥ್ಯ ಪ್ರಕಾಶಕ್ಕೆ ಬಂತು.

ಎರಡನೆಯ ಮೈಸೂರು ಯುದ್ಧ ಸಾಗುತ್ತಿದ್ದ ಕಾಲದಲ್ಲೆ ಡಿಸೆಂಬರ್ 1782ರಲ್ಲಿ ಹೈದರ್ ಮರಣಹೊಂದಿದನಾಗಿ ಟಿಪ್ಪು ಅಧಿಕಾರಕ್ಕೆ ಬಂದ. ಉತ್ತರದಲ್ಲಿ ಕೃಷ್ಣಾನದಿಯಿಂದ ದಕ್ಷಿಣದ ದಿಂಡಿಗಲ್ಲಿನವರೆಗೂ ಅವನು ಪಶ್ಚಿಮದಲ್ಲಿ ಮಲಬಾರಿನಿಂದ ಪೂರ್ವಘಟ್ಟ ಪ್ರದೇಶಗಳವರೆಗೂ ವಿಸ್ತಾರವಾಗಿದ್ದು ಒಂದು ಲಕ್ಷ ಚದರ ಮೈಲಿಗಳಿಗೂ ಹೆಚ್ಚು ವಿಸ್ತೀರ್ಣವನ್ನು ಪಡೆದಿದ್ದ ಸಾಮ್ರಾಜ್ಯಕ್ಕೆ ಟಿಪ್ಪು ಉತ್ತರಾಧಿಕಾರಿಯಾದ. ಇಂಗ್ಲಿಷರೊಡನೆ ಯುದ್ಧವನ್ನು ಮುಕ್ತಾಯಗೊಳಿಸುವುದು ಇವನ ಮೊದಲ ಕೆಲಸವಾಗಿತ್ತು. ಯುದ್ಧವು ಪೂರ್ವ ಮತ್ತು ಪಶ್ಚಿಮ ಕರಾವಳಿಯ ಪ್ರದೇಶಗಳಲ್ಲಿ ನಡೆಯುತ್ತಿತ್ತು. ಯುದ್ಧವನ್ನು ಮತ್ತಷ್ಟು ಬಿರುಸಾಗಿ ನಡೆಸಿದ. ಇಂಗ್ಲಿಷರು ಅದರಿಂದ ತತ್ತರಿಸಿ ಶಾಂತಿಸಂಧಾನವನ್ನು ಏರ್ಪಡಿಸಿಕೊಳ್ಳುವುದಕ್ಕೆ ಕಾತರರಾದರು. ಪಶ್ಚಿಮದ ಕರಾವಳಿ ಪ್ರದೇಶದಲ್ಲಿ ತನ್ನ ಎಲ್ಲಾ ನೆಲೆಗಳನ್ನು ಮರಳಿ ಗಳಿಸಿಕೊಂಡು, ದಕ್ಷಿಣ ಭಾಗದಿಂದ ಬ್ರಿಟಿಷರು ಮೈಸೂರಿನತ್ತ ಸಾಗಿಬರುವ ಪ್ರಯತ್ನಗಳನ್ನು ವಿಫಲಗೊಳಿಸಿದ. ನಾಲ್ಕು ವರ್ಷಗಳ ಸತತವಾದ ಹೋರಾಟದ ಅನಂತರವೂ ಮೈಸೂರಿನವರನ್ನು ಆರ್ಕಾಟಿನಿಂದ ಹಿಮ್ಮೆಟ್ಟಿಸಲು ಇಂಗ್ಲಿಷರು ಅಸಮರ್ಥರಾದರು. ಆದ್ದರಿಂದ ಲಾರ್ಡ್ ಮಕಾರ್ಟನಿ ಟಿಪ್ಪುವಿನೊಡನೆ ಶಾಂತಿ ಮಾತುಕತೆಗಳನ್ನು ಆರಂಭಿಸಿದ. ಈ

ಕಾರ್ಯಕ್ಕಾಗಿ ಇವನು ಸಾಡ್‌ಲಿಯನ್ ಮತ್ತು ಸ್ಟ್ಯಾನ್‌ಟನ್ ಎಂಬ ಇಬ್ಬರು ಇಂಗ್ಲಿಷ್ ಕಮಿಷನರುಗಳನ್ನು ಮಂಗಳೂರಿಗೆ ಕಳುಹಿಸಿಕೊಟ್ಟ. ಮಂಗಳೂರಿನಲ್ಲಿ 1784ರ ಮಾರ್ಚ್ 11 ರಂದು ಒಪ್ಪಂದಕ್ಕೆ ಸಹಿ ಬಿತ್ತು. ಇಂಡೊ-ಬ್ರಿಟಿಷ್ ಇತಿಹಾಸದಲ್ಲೇ ಪ್ರಖ್ಯಾತವಾದ ಹಾಗೂ ಪ್ರಮುಖವಾದ ದಾಖಲೆಯಾಗಿರುವ ಈ ಒಪ್ಪಂದ ಇಂಗ್ಲಿಷರಿಗೆ ಎಷ್ಟರಮಟ್ಟಿಗೆ ನಿರಾಶೆಯನ್ನುಂಟುಮಾಡಿತೆಂದರೆ, ಹೇಸ್ಟಿಂಗ್ಸ್ ಅದನ್ನು ಒಂದು ಅವಮಾನಕರವಾದ ಶಾಂತಿ ಒಪ್ಪಂದ ಎಂದು ಕರೆದ. ಯಾವ ಷರತ್ತಿನ ಮೇಲಾದರೂ ಶಾಂತಿಗೆ ಬರಲು ಒಪ್ಪಿಕೊಳ್ಳಬೇಕಾಗಿ ಬಂದ ಈ ಒಪ್ಪಂದ ಬ್ರಿಟಿಷರ ಪ್ರತಿಷ್ಠೆಗೆ ಕೊಡಲಿಪೆಟ್ಟನ್ನು ಕೊಟ್ಟಿತು.

ಅನಂತರ ಟಿಪ್ಪು 1785-87ರ ಅವಧಿಯವರೆಗೆ ಮರಾಠರು ಮತ್ತು ನಿಜಾಮರ ವಿರುದ್ಧ ಹೋರಾಡಬೇಕಾಗಿ ಬಂತು. ಮಂಗಳೂರಿನ ಒಪ್ಪಂದ ಈ ಇಬ್ಬರು ನೆರೆಯವರಲ್ಲಿ ಅಸೂಯೆಯನ್ನುಂಟುಮಾಡಿತು. ಮೈಸೂರಿನ ಉತ್ತರಕ್ಕೆ ಇದ್ದ ತಾವು ಹಿಂದೆ ಕಳೆದುಕೊಂಡಿದ್ದ ಪ್ರದೇಶಗಳನ್ನು ಪುನಃ ವಶಪಡಿಸಿಕೊಳ್ಳಲು ಅಸಮರ್ಥರಾದುದರಿಂದಲೂ ಮತ್ತು ತಮ್ಮ ಮಧ್ಯಸ್ಥಿಕೆಯ ಆವಶ್ಯಕತೆ ಕಂಡುಬರದಿದ್ದರಿಂದಲೂ ಅವರಿಗೆ ನಿರಾಶೆಯಾಗಿತ್ತು. ಕೃಷ್ಣಾ ನದಿಯ ಪ್ರದೇಶಗಳನ್ನು ಕಳೆದುಕೊಂಡಿದ್ದನ್ನು ಮರಾಠರು ಮರೆಯುವಂತಿರಲಿಲ್ಲ. ಆದುದರಿಂದ 1783ರ ಅಕ್ಟೋಬರ್‌ನಲ್ಲಿ ಮರಾಠರು ಟಿಪ್ಪುವಿನ ವಿರುದ್ಧ ಇಂಗ್ಲಿಷರೊಡನೆ ಸ್ನೇಹವನ್ನು ಬೆಳೆಸಿಕೊಂಡರು. ಈ ಒಪ್ಪಂದದ ಪ್ರಕಾರ ಮರಾಠರು ಟಿಪ್ಪು ಗೆದ್ದಿದ್ದ ಕರ್ನಾಟಕದ ಪ್ರದೇಶಗಳನ್ನು ಮರಾಠರಿಗೆ ಬಿಟ್ಟು ಕೊಡಲು ಕೇಳಬೇಕೆಂದೂ ಹಾಗೆ ಅವನು ಬಿಟ್ಟುಕೊಡಲು ನಿರಾಕರಿಸಿದ ಪಕ್ಷದಲ್ಲಿ ಮರಾಠರು ಮೈಸೂರಿನ ಮೇಲೆ ಯುದ್ಧ ಮಾಡತಕ್ಕದೆಂದೂ ತೀರ್ಮಾನವಾಯಿತು. ಟಿಪ್ಪುವನ್ನು ಹಣ್ಣು ಮಾಡಲು ನಿಜಾಮನಿಗೂ ಆತುರವಿತ್ತು. ಆದರೆ ಒಬ್ಬನೇ ಟಿಪ್ಪುವಿನ ಮೇಲೆ ಬೀಳಲು ಸಮರ್ಥನಲ್ಲದ್ದರಿಂದ, ಮರಾಠರೋ ಅಥ‌ವಾ ಇಂಗ್ಲಿಷರೋ ಟಿಪ್ಪುವಿನ ಮೇಲೆ ಯುದ್ಧಕ್ಕೆ ಹೋಗುವ ಅವಕಾಶವನ್ನು ತಾನು ಉಪಯೋಗಿಸಿಕೊಳ್ಳಲು ನಿರ್ಧರಿಸಿದ. ಉತ್ತರ ಕರ್ನಾಟಕದಲ್ಲಿ ಟಿಪ್ಪುವಿನ ಸಾಮಂತನಾಗಿದ್ದ ನರಗುಂದದ ದೇಸಾಯಿ 1780ರಿಂದಲೂ ವಾರ್ಷಿಕ ಕಪ್ಪ ಕಾಣಿಕೆಯನ್ನು ಸಲ್ಲಿಸದ ಪ್ರಶ್ನೆಯೇ ಯುದ್ಧಕ್ಕೆ ತಕ್ಷಣದ ಕಾರಣವಾಯಿತು. ಟಿಪ್ಪು ಹಣವನ್ನು ಕೇಳಿದಾಗ, ದೇಸಾಯಿ ಮರಾಠರ ಸಹಾಯವನ್ನು ಬೇಡಿದ. ಈ ಸಂದರ್ಭದಲ್ಲಿ ಉಂಟಾದ ಬಿಕ್ಕಟ್ಟು ಮೇ 1786ರಲ್ಲಿ ಯುದ್ಧ ಆರಂಭವಾಗುವುದಕ್ಕೆ ಅವಕಾಶವಾಯಿತು. ನಿಜಾಮ ಮತ್ತು ಮರಾಠರು ಬಾದಾಮಿಯನ್ನು ಮುತ್ತಿದರು. ಜೂನ್ 1786ರಲ್ಲಿ ಹರಿಪಂತ ಗಜೇಂದ್ರಗಡದತ್ತ ನುಗ್ಗಿದ. ನಿಜಾಮನಿಗೆ ಸೇರಿದ್ದ ಆದವಾನಿಯ ಕೋಟೆಯನ್ನು ಟಿಪ್ಪು ಮುತ್ತಿ ಹಿಡಿದ. ಬಹದ್ದೂರ್ ಬಾಂಡ ಕೋಟೆಯನ್ನು ಹಿಡಿದು ಟಿಪ್ಪು ಹರಿಪಂತನನ್ನು ಚಕಿತಗೊಳಿಸಿದ. ಫೆಬ್ರವರಿ 1787ರವರೆಗೂ ಯುದ್ಧವನ್ನು ಮುಂದು ವರೆಸಿಕೊಂಡು ಹೋದ. ಆ ವರ್ಷ ಏಪ್ರಿಲ್‌ನಲ್ಲಿ ಗಜೇಂದ್ರಗಡದ ಒಪ್ಪಂದಕ್ಕೆ ಸಹಿ ಬಿದ್ದು ಯುದ್ಧ ಮುಕ್ತಾಯವಾಯಿತು. ಈ ಯುದ್ಧದಲ್ಲಿ ಯಾರಿಗೂ ಲಾಭವಾಗಲಿಲ್ಲ.

ರಣರಂಗಗಳಲ್ಲಿ ಟಿಪ್ಪುವಿಗೆ ಲಾಭದಾಯಕವಾದ ಸ್ಥಾನಗಳಿದ್ದಾಗ್ಯೂ ಇಂಗ್ಲಿಷರೊಡನೆ ನಡೆಯುವ ತನ್ನ ಹೋರಾಟದಲ್ಲಿ ಅವರ ಬೆಂಬಲ ದೊರೆಯುವುದೆಂಬ ಆಸೆಯ ಮೇರೆಗೆ, ತನ್ನ ಶತ್ರುಗಳ ಬಗ್ಗೆ ಹೆಚ್ಚು ಉದಾರವಾಗಿಯೇ ನಡೆದುಕೊಂಡ. ಆದರೆ ಈ ದಿಶೆಯಲ್ಲಿ ಟಿಪ್ಪುವಿಗೆ ತುಂಬಾ ನಿರಾಶೆ ಉಂಟಾಯಿತು. ತನ್ನ ಕಡೆ ಸೇರಿಸಿಕೊಳ್ಳಬೇಕೆಂದು ಬಯಸಿದ್ದ ರಾಜ್ಯಗಳೇ ಇಂಗ್ಲಿಷರ ಕುತಂತ್ರಗಳಿಂದ ಇವನ ವಿರುದ್ಧವಾಗಿ ರೂಪಗೊಂಡ ಒಕ್ಕೂಟಕ್ಕೆ ಸೇರಿಕೊಳ್ಳುವಂತಾಯಿತು.

ಭಾರತೀಯ ರಾಜ್ಯಗಳಿಗೆ ಪರಂಪರೆಯಿಂದಲೂ ಬಂದಿದ್ದ ದುರ್ಬಲತೆ ಮತ್ತು ಅನೈಕ್ಯತೆಯ ದೆಸೆಯಿಂದ ಟಿಪ್ಪು ಹೊರಗಡೆಯಿಂದ ಸಹಾಯವನ್ನು ನಿರೀಕ್ಷಿಸುವಂತೆ ಮಾಡಿತು, ಇದಕ್ಕಾಗಿ ಇವನು ಫ್ರಾನ್ಸ್, ತುರ್ಕಿ, ಇರಾನ್ ಮತ್ತು ಆಫ್ಘಾನಿಸ್ತಾನಗಳೊಡನೆ ಸಂಪರ್ಕವನ್ನು ಬೆಳೆಸಿದ. ರಾಜಕೀಯ ಬೆಂಬಲವನ್ನು ಹಾಗೂ ಕುಶಲಕರ್ಮಿಗಳನ್ನೂ ಪಡೆಯುವ ಮತ್ತು ವ್ಯಾಪಾರವಾಣಿಜ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಗಳನ್ನು ಇವನು ಈ ದಿಶೆಯಲ್ಲಿ ಹೊಂದಿದ್ದ. ವಾಣಿಜ್ಯ ವಸ್ತುಗಳಾದ ಮೆಣಸು, ಏಲಕ್ಕಿ, ಗಂಧ, ದಂತ, ರೇಷ್ಮೆ, ತೆಂಗಿನಕಾಯಿ, ಹೊಗೆಸೊಪ್ಪು ಮತ್ತು ಆನೆಗಳ ಮೇಲೆ ಮೈಸೂರು ಏಕಸ್ವಾಮ್ಯವನ್ನು ಪಡೆದಿದ್ದು, ಈ ವಸ್ತುಗಳಿಗೆ ಪರದೇಶಗಳಲ್ಲಿ ಅಪಾರವಾದ ಬೇಡಿಕೆಯಿತ್ತು. ಆದುದರಿಂದ, ಆಟ್ಟೋಮನ್ ಸಾಮ್ರಾಜ್ಯ, ಚೀನ, ಮಸ್ಕತ್, ಪೆಗು, ಆರ್ಮೇನಿಯ, ಜಿದ್ದಾ, ಆರ್ಮುಜ್ ಮೊದಲಾದ ವಿದೇಶೀ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧಗಳನ್ನು ಏರ್ಪಡಿಸಿದ. 1784-85ರಲ್ಲಿ ಟಿಪ್ಪು ಕಾನ್ಸ್ಟಾಂಟಿನೋಪಲ್‌ಗೆ ರಾಯಭಾರವನ್ನು ಕಳುಹಿಸಿ ಕೊಟ್ಟ ತುರ್ಕಿಯ ಸುಲ್ತಾನ್ ಅಬ್ದುಲ್ ಹಮೀದನಿಗೆ ಬರೆದ ಪತ್ರದಲ್ಲಿ, ಇಂಗ್ಲಿಷರು ಭಾರತವನ್ನು ಹೇಗೆ ಆಕ್ರಮಿಸಿಕೊಂಡರು ಎಂಬುದನ್ನು ವಿಶದವಾಗಿ ವಿವರಿಸಿ, ಮೈಸೂರು ಮತ್ತು ತುರ್ಕಿಯ ನಡುವೆ ಮಿಲಿಟರಿ ಸಹಕಾರಕ್ಕೆ ಸಂಬಂಧಪಟ್ಟಂತೆ ಒಂದು ಒಪ್ಪಂದ ಏರ್ಪಡಬೇಕೆಂದು ಸೂಚಿಸಿದ. ಒಪ್ಪಂದದ ಮತ್ತೊಂದು ಭಾಗ ತಂತ್ರಜ್ಞರು ಮತ್ತು ಕುಶಲಕರ್ಮಿಗಳಿಗೆ ಸಂಬಂಧಿಸಿದ್ದಾಗಿತ್ತು. ಆದರೆ ತುರ್ಕಿಯ ಸುಲ್ತಾನ ರಷ್ಯನರ ವಿರುದ್ಧ ನಡೆಯುತ್ತಿದ್ದ ಯುದ್ಧದಲ್ಲಿ ಬಿಡುವಿಲ್ಲದ ಹೋರಾಟ ನಡೆಸುತ್ತಿದ್ದುದರಿಂದ ಟಿಪ್ಪುವಿನೊಡನೆ ಮಿಲಿಟರಿ ಒಪ್ಪಂದ ಏರ್ಪಡಿಸಿಕೊಳ್ಳಲು ನಿರಾಕರಿಸಿದ. ಇದಲ್ಲದೆ, ತುರ್ಕಿಯೊಡನೆ ಇಂಗ್ಲಿಷರು ಸ್ನೇಹದಿಂದಿದ್ದರು. ರಾಯಭಾರಿಗಳು 1789ರಲ್ಲಿ ಭಾರತಕ್ಕೆ ನಾಲ್ಕು ವರ್ಷಗಳ ಅನಂತರ ಹಿಂತಿರುಗಿದರು. ತುರ್ಕರಿಂದ ಸಹಾಯ ಪಡೆಯಲು ನಡೆಸಿದ ಪ್ರಯತ್ನ ಸಫಲವಾಗದೆ ಇದ್ದಾಗ, ಟಿಪ್ಪು ಫ್ರೆಂಚರ ಕಡೆ ವಾಲಿದ. ಇವನು ಫ್ರಾನ್ಸಿನ ಚಕ್ರವರ್ತಿಯಾಗಿದ್ದ 16ನೆಯ ಲೂಯಿಯ ಬಳಿಗೆ ನಿಯೋಗವೊಂದನ್ನು ಕಳುಹಿಸಿಕೊಟ್ಟು, ಮಿಲಿಟರಿ ನೆರವು ಮತ್ತು ರಕ್ಷಣಾ ಒಪ್ಪಂದ ಇವುಗಳನ್ನು ಮಾಡಿಕೊಳ್ಳಲು ಪ್ರಯತ್ನಿಸಿದ. ಮದರಾಸು, ಬೊಂಬಾಯಿ ಮತ್ತು ಬಂಗಾಲಗಳಲ್ಲಿ ಇಂಗ್ಲಿಷರನ್ನು ಸದೆಬಡಿಯಲು 10,000 ಫ್ರೆಂಚ್ ಸೈನಿಕರ ಸಹಾಯವನ್ನು ಬೇಡಿದ. 1787ರಲ್ಲಿ ಈ ನಿಯೋಗ ಭಾರತವನ್ನು ಬಿಟ್ಟು 16ನೆಯ ಲೂಯಿಯನ್ನು 1788ರ ಆಗಸ್ಟ್ 3ರಂದು ಭೇಟಿಮಾಡಿ 1789ರಲ್ಲಿ ಭಾರತಕ್ಕೆ ಬರಿಕೈಯಿಂದ ಹಿಂತಿರುಗಿತು. ಫ್ರಾನ್ಸ್ ಆಗ ಕ್ರಾಂತಿಪಥದಲ್ಲಿ ಸಾಗಿತ್ತು. ಆದುದರಿಂದ ಟಿಪ್ಪುವಿನ ನೆರವಿಗೆ ಅದು ಬರುವ ವಿಷಯ ದೂರವೇ ಆಯಿತು. ರಾಜಕೀಯವಾಗಿ ವಿಫಲವಾದಾಗ್ಯೂ ಟಿಪ್ಪು ವಿದೇಶಗಳೊಡನೆ ವಾಣಿಜ್ಯ ಸಂಬಂಧಗಳನ್ನು ಬೆಳೆಸಿಕೊಳ್ಳುವುದರಲ್ಲಿ ಸಫಲನಾದ.

ಇಂಗ್ಲಿಷರೊಡನೆ ಮತ್ತೊಂದು ಯುದ್ಧ ಅನಿವಾರ್ಯವಾಯಿತು. ನಿಜಾಮ ಮತ್ತು ಮರಾಠರು ಸಹ ತಮ್ಮ ಕೈಬಿಟ್ಟುಹೋಗಿದ್ದ ಪ್ರದೇಶಗಳು ದೊರಕದೆ ಇದ್ದುದರಿಂದ ಅಸಂತೃಪ್ತರಾಗಿದ್ದರು. ತಿರುವಾಂಕೂರು ಪ್ರಶ್ನೆಯನ್ನುಪಯೋಗಿಸಿಕೊಂಡು ಅವರು ಟಿಪ್ಪುವಿನ ವಿರುದ್ಧ ಇಂಗ್ಲಿಷರೊಡನೆ ತೃತೀಯ ಒಕ್ಕೂಟವನ್ನು ರಚಿಸಿಕೊಂಡರು. ತಿರುವಾಂಕೂರು ರಾಜ ಕೊಚ್ಚಿಯ ರಾಜನ ಭೂಮಿಯಲ್ಲಿ ಒತ್ತಾಗಿ ಬೊಂಬುಗಳನ್ನು ನೆಟ್ಟು ರಕ್ಷಣಾವ್ಯವಸ್ಥೆಯನ್ನು ಮಾಡಿಕೊಂಡಿದ್ದ. ಕೊಚ್ಚಿಯ ರಾಜ ಟಿಪ್ಪುವಿನ ಸಾಮಂತನಾದ್ದರಿಂದ, ಅವನು ರಕ್ಷಣಾಬೇಲಿಗಳನ್ನು ನಾಶಮಾಡುವಂತೆ ತಿರುವಾಂಕೂರು ರಾಜನಿಗೆ ಹೇಳಿದ. ಆದರೆ ಆ ರಾಜ ಅದನ್ನು ತಿರಸ್ಕರಿಸಿದ. ಆದ್ದರಿಂದ ಯುದ್ಧ ಆರಂಭವಾಯಿತು. ಇದರ ಜೊತೆಗೆ ಮತ್ತೊಂದು ಜಗಳವೂ ಏರ್ಪಟ್ಟಿತು. ಕ್ರಾಂಗನೂರು ಮತ್ತು ಅಯಿಕೋಟಗಳಲ್ಲಿ ಎರಡು ಡಚ್ ಕೋಟೆಗಳಿದ್ದುವು. ಟಿಪ್ಪು ಅವನ್ನು ತಾನೇ ನೋಡಿಕೊಳ್ಳಲು ತೀವ್ರವಾದ ಆಸೆಯನ್ನು ವ್ಯಕ್ತಪಡಿಸಿದಾಗ್ಯೂ ಸಹ ಡಚ್ಚರು ಅವುಗಳನ್ನು ತಿರುವಾಂಕೂರಿನ ರಾಜನಿಗೆ ಮಾರಿದ್ದರಿಂದ, ಟಿಪ್ಪು ತಿರುವಾಂಕೂರಿನ ಮೇಲೆ ದಂಡೆತ್ತಿಹೋದ (1789). (ಬಿ.ಎಸ್.ಎ.)



ಟಿಪ್ಪು ಅರಮನೆ

ತಿರುವಾಂಕೂರು ದೇಶವನ್ನೆಲ್ಲ ಕೊಳ್ಳೆಹೊಡೆದು, ಅನೇಕರನ್ನು ಸಂಹರಿಸಿದ. ಈ ದಾಳಿಯಿಂದ ತಿರುವಾಂಕೂರು ಮಹಾರಾಜ ತತ್ತರಿಸಿದ. ಬ್ರಿಟಿಷರ ಮಿತ್ರನಾದ ಆತ ತನ್ನ ರಕ್ಷಣೆಗೆ ಕೂಡಲೇ ಬರಬೇಕೆಂದು ಮದರಾಸು ಕೌನ್ಸಿಲನ್ನು ಪ್ರಾರ್ಥಿಸಿಕೊಂಡ. ಕಾರನ್‍ವಾಲೀಸ್ ತತ್‍ಕ್ಷಣ ಕ್ರಮ ತೆಗೆದುಕೊಂಡಿದ್ದರಿಂದ ಟಿಪ್ಪು ಮದರಾಸು ಪ್ರಾಂತ್ಯವನ್ನು ಕೊಳ್ಳೆ ಹೊಡೆಯುವುದು ತಪ್ಪಿತು. ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡುವ ಮೊದಲೇ ಕಾರನ್‍ವಾಲೀಸ್ ಪುಣೆಯ ಪೇಷ್ವೆ ಮತ್ತು ಹೈದರಾಬಾದಿನ ನಿಜಾಮರೊಡನೆ 1790ನೆಯ ಜೂನ್ ಮತ್ತು ಜುಲೈಗಳಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡು ಟಿಪ್ಪುವಿನ ವಿರುದ್ಧ ಒಂದು ತ್ರಿಪಕ್ಷ ಕೂಟವನ್ನು ರಚಿಸಿದ್ದ. ತ್ರಿಪಕ್ಷಕೂಟದ ಸದಸ್ಯರು ಸಾಕಷ್ಟು ಪ್ರಮಾಣದಲ್ಲಿ ತಮ್ಮ ತಮ್ಮ ಸೇನೆಯನ್ನು ದಾಳಿಗೆ ಕಳುಹಿಸಿಕೊಟ್ಟು ಯುದ್ಧಾನಂತರ ಗಳಿಸಿದ ಲಾಭವನ್ನು ಸಮನಾಗಿ ಹಂಚಿಕೊಳ್ಳಲು ಒಪ್ಪಿಕೊಂಡಿದ್ದರು. ಆದರೆ ಮರಾಠರಾಗಲಿ ಅಥವಾ ನಿಜಾಮನಾಗಲಿ ಇಂಗ್ಲಿಷರಿಗೆ ಸಾಕಷ್ಟು ಸಹಾಯವನ್ನು ಪೂರೈಸುವ ಸ್ಥಿತಿಯಲ್ಲಿರಲಿಲ್ಲ. ಆದಾಗ್ಯೂ ಇಂಗ್ಲಿಷರಿಗೆ ಬೇಕಾದದ್ದು ಅಂದಿನ ಪರಿಸ್ಥಿತಿಯಲ್ಲಿ, ಅವರ ಸಹಾಯಕ್ಕಿಂತ ಹೆಚ್ಚಾಗಿ ಅವರು ಮೈಸೂರಿನೊಂದಿಗೆ ಸೇರದಿರುವುದು ಮಾತ್ರ. 1790ರಲ್ಲಿ ಜನರಲ್ ಮೆಡೋಸ್ ಮೊದಲು ಆಕ್ರಮಣ ಮಾಡಿದ. ಆದರೆ ಇದು ಪರಿಣಾಮಕಾರಿಯಾಗಿರಲಿಲ್ಲ. ಅದೇ ವರ್ಷದ ಡಿಸೆಂಬರ್‍ನಲ್ಲಿ ಗವರ್ನರ್ ಜನರಲ್ ತಾನೇ ಸೇನಾನಾಯಕತ್ವವನ್ನು ವಹಿಸಿ, ಘಟ್ಟಗಳ ಮೂಲಕ ಹತ್ತಿ ಮೈಸೂರು ದೇಶವನ್ನು ಪ್ರವೇಶಿಸಿದ. 1791ರ ಮಾರ್ಚ್‍ನಲ್ಲಿ ಬೆಂಗಳೂರು ನಗರವನ್ನು ವಶಪಡಿಸಿಕೊಂಡ. ಅನಂತರ ರಾಜಧಾನಿ ಶ್ರೀರಂಗಪಟ್ಟಣದ ಕಡೆ ಹೊರಟ. ಮೇ ತಿಂಗಳಿನಲ್ಲಿ ತಾವೇ ಆಯ್ದುಕೊಂಡ ಪ್ರದೇಶದಲ್ಲಿ ನಡೆದ ಯುದ್ಧದಲ್ಲಿ ಅವನು ಟಿಪ್ಪುವನ್ನು ಸೋಲಿಸಿದ. ಕಾರನ್‍ವಾಲೀಸನಿಗೆ ಅದೊಂದು ಕಷ್ಟಕರವಾದ ಕದನವಾಗಿತ್ತು. ಯುದ್ಧೋಪಕರಣಗಳ ಪೂರೈಕೆ ಸಮರ್ಪಕವಾಗಿರಲಿಲ್ಲವಾಗಿ ಬೆಂಗಳೂರು ಕಡೆಗೆ ವಾಪಸು ನಡೆದ. ಅಲ್ಲಿ ತನ್ನ ಸೈನ್ಯವನ್ನು ಪುನಃ ಸಜ್ಜುಗೊಳಿಸಿಕೊಂಡು ಮಾರನೆಯ ವರ್ಷ ಶ್ರೀರಂಗಪಟ್ಟಣದ ಮೇಲೆ ನುಗ್ಗಿದ. ಶ್ರೀರಂಗಪಟ್ಟಣದ ಹೊರವಲಯದಲ್ಲಿದ್ದ ಪ್ರದೇಶಗಳೆಲ್ಲವನ್ನೂ ವಶಪಡಿಸಿಕೊಂಡು, ಟಿಪ್ಪು ಕೋಟೆಯೊಳಗೇ ರಕ್ಷಣೆ ಪಡೆಯುವಂತೆ ಮಾಡಿದ. 1792ರ ಫೆಬ್ರವರಿ 6ರಂದು ಒಂದು ಚಕಿತವಾದ ದಾಳಿಯಲ್ಲಿ ಕಾರನ್‍ವಾಲೀಸ್ ಶ್ರೀರಂಗಪಟ್ಟಣದತ್ತ ನುಗ್ಗಿ ಬಂದು ಟಿಪ್ಪು ಶರಣಾಗುವಂತೆ ಮಾಡಿದ. ಶ್ರೀರಂಗಪಟ್ಟಣದಲ್ಲಿ ಒಪ್ಪಂದವಾಯಿತು. ಟಿಪ್ಪು ಶಾಂತಿಭಿಕ್ಷೆ ಬೇಡಬೇಕಾಯಿತು. ಇಂಗ್ಲಿಷರಿಗೆ ಮೂರು ಕೋಟಿ ರೂಪಾಯಿ ಪರಿಹಾರ ಕೊಡುವುದಾಗಿ ಒಪ್ಪಿಕೊಂಡ. ಇದಕ್ಕಾಗಿ ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಡಬೇಕಾಯಿತು. ಒಪ್ಪಂದದ ಪ್ರಕಾರ ಇವನ ರಾಜ್ಯದ ಅರ್ಧಭಾಗವನ್ನು ಇಂಗ್ಲಿಷರು ಆಕ್ರಮಿಸಿಕೊಂಡರು. ದಿಂಡಿಗಲ್ ಅದರ ಸುತ್ತಮುತ್ತಲಿನ ಪ್ರದೇಶಗಳು, ಪೂರ್ವಕ್ಕೆ ಬಾರಾಮಹಲ್ ಮತ್ತಿತರ ಕಣಿವೆಗಳು ಇಂಗ್ಲಿಷರ ಕೈಸೇರಿದುವು. ಅವರ ಮಿತ್ರನಾದ ನಿಜಾಮನಿಗೆ ಮೈಸೂರಿನ ಈಶಾನ್ಯ ಭಾಗದ ಬಳ್ಳಾರಿ ಮತ್ತು ಕಡಪ ಜಿಲ್ಲೆಗಳು ಸೇರಿದುವು. ವಾಯುವ್ಯ ಭಾಗಕ್ಕೆ ಮರಾಠರು ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಣ ಪ್ರದೇಶವನ್ನು ಪಡೆದರು. ಈ ಯುದ್ಧ ಟಿಪ್ಪುವಿಗೆ ಬಹುಕಠಿಣವಾದ ಪೆಟ್ಟನ್ನು ಕೊಟ್ಟಿತು. ದಕ್ಷಿಣದ ರಾಜ್ಯಗಳೆಲ್ಲಾ ಒಂದುಗೂಡಿ ಟಿಪ್ಪುವನ್ನು ಎದುರಿಸಿದ್ದರ ಪರಿಣಾಮವಿದು. (ಬಿ.ಎಸ್.ಎ.;ಬಿ.ಎಂ.)

ಯುದ್ಧ ಮುಗಿದ ಮೇಲೆ, ಅತಿಸ್ವಲ್ಪಕಾಲದಲ್ಲೇ ಟಿಪ್ಪು ಯುದ್ಧದಿಂದಾದ ನಷ್ಟವನ್ನು ಸರಿಪಡಿಸಿ, ಯುದ್ಧದ ಖರ್ಚನ್ನು ಇಂಗ್ಲಿಷರಿಗೆ ಕೊಟ್ಟು ತನ್ನ ಇಬ್ಬರು ಮಕ್ಕಳನ್ನು ಮದರಾಸಿನಿಂದ ಬಿಡಿಸಿಕೊಂಡು ಬಂದ. ಆದರೆ ಇವನು ತನಗಾಗಿದ್ದ ಅವಮಾನವನ್ನು ಎಂದೆಂದಿಗೂ ಮರೆಯಲಿಲ್ಲ. ಉಳಿದ ತನ್ನೆಲ್ಲ ಜೀವಿತಕಾಲವನ್ನು ತಾನು ಕಳೆದುಕೊಂಡಿದ್ದ ಪ್ರದೇಶಗಳನ್ನು ಗಳಿಸಿಕೊಂಡು ಪ್ರತಿಷ್ಠೆಯನ್ನು ಪುನಃ ಸ್ಥಾಪಿಸುವುದರಲ್ಲೇ ಕಳೆದ. ಆಡಳಿತವನ್ನು ಸಂಪೂರ್ಣವಾಗಿ ಪುನರ್ ರಚಿಸಿದ. ಸರ್ ಜಾನ್ ಷೋರ್ ಎಂಬ ಮೆದುಸ್ವಭಾವದ ಗವರ್ನರ್ ಜನರಲ್ ಬಂದಿದ್ದರಿಂದ ಟಿಪ್ಪುವಿಗೆ ಉಸಿರಾಡಲು ಅವಕಾಶವಾದ ಹಾಗಾಯಿತು. ಈ ಕಾಲವನ್ನು ತನ್ನ ಸಿದ್ಧತೆಗೆ ಉಪಯೋಗಿಸಿಕೊಂಡ. ಫ್ರೆಂಚ್ ಸಾಹಸಿಯಾದ ರಿಪಾಡ್ ಎಂಬುವನು ಇವನ ಆಸ್ಥಾನಕ್ಕೆ ಬಂದು ದೊಡ್ಡದಾದ ಫ್ರೆಂಚ್ ಸೇನೆಯೊಂದು ಫ್ರಾನ್ಸ್ ದ್ವೀಪದಲ್ಲಿ ನೆಲೆ ಮಾಡಿದೆಯೆಂದು ತಿಳಿಸಿದಾಗ, ಟಿಪ್ಪು ಅವನನ್ನು ನಂಬಿ, ಅವರ ಸಹಾಯವನ್ನಪೇಕ್ಷಿಸಿ ಒಂದು ನಿಯೋಗವನ್ನು ಕಳುಹಿಸಿಕೊಟ್ಟ. ಆದರೆ ಅಲ್ಲಿ ಕಳುಹಿಸಲು ಸೈನ್ಯವೇ ಇರಲಿಲ್ಲ. ಟಿಪ್ಪುವಿನ ಸೈನ್ಯವನ್ನು ಸೇರಲು ಘೋಷಣೆಯನ್ನು ಮಾತ್ರ ಹೊರಡಿಸಲಾಗಿತ್ತು. ಇದು ಆಗಿನ ಗವರ್ನರ್ ಜನರಲ್ ವೆಲ್ಲೆಸ್ಲಿಯನ್ನು ಟಿಪ್ಪುವಿನ ಮೇಲೆ ಯುದ್ಧ ಘೋಷಿಸುವಂತೆ ಪ್ರಚೋದಿಸಿತು. ಟಿಪ್ಪು ನೆಪೋಲಿಯನ್ನನೊಡನೆಯೂ ಸಂಪರ್ಕ ಬೆಳೆಸಿದ. ಈಜಿಪ್ಟಿನಿಂದ ನೆಪೋಲಿಯನ್ ಟಿಪ್ಪುವಿಗೆ ಬರೆದ ಪತ್ರದಲ್ಲಿ ಭಾರತದಿಂದ ಇಂಗ್ಲಿಷರನ್ನು ಹೊಡೆದೋಡಿಸಲು ತಾನು ಸಹಕಾರ ನೀಡುವುದಾಗಿ ತಿಳಿಸಿದ್ದ. ಸಿರಿಯಾದವರೆಗೂ ನೆಪೋಲಿಯನ್ ಬಂದಿದ್ದ. ಆದರೆ ಅಲ್ಲಿ ಸೋಲನ್ನನುಭವಿಸಿ ಫ್ರಾನ್ಸಿಗೆ ಹಿಂತಿರುಗಿ ಹೋಗಬೇಕಾಯಿತು. ಟಿಪ್ಪು ಒಂದು ಸಂಚನ್ನು ಹೂಡಿ, ಆಫ್ಘಾನಿಸ್ತಾನದ ಜಮಾನ್ ಷಾನನ್ನು (ಅಬ್ದಾಲಿಯ ಉತ್ತರಾಧಿಕಾರಿ) ದೆಹಲಿಯಲ್ಲಿದ್ದ ಮುಗಲ್ ಚಕ್ರವರ್ತಿಯನ್ನು ಇಂಗ್ಲಿಷರಿಂದ ಬಿಡುಗಡೆ ಮಾಡಲು ಭಾರತಕ್ಕೆ ದಂಡೆತ್ತಿ ಬರುವಂತೆ ಮಾಡಿದ. ಈ ಯೋಜನೆ ವಿಫಲವಾಯಿತು. ಏಕೆಂದರೆ ವೆಲ್ಲೆಸ್ಲಿ ಬುದ್ಧಿಯನ್ನು ಉಪಯೋಗಿಸಿ ಇರಾನಿನ ರಾಜನಾಗಿದ್ದ ಬಾಬಾಖಾನನ ಸಹಾಯ ಪಡೆದು, ಅಲ್ಲಿಂದಲೇ ಆಫ್ಘನ್ನರನ್ನು ತಡೆಯಲು ಪ್ರಯತ್ನಿಸಿದ. ಕೊನೆಯದಾಗಿ ಟಿಪ್ಪು ರೇಮಾಂಡ್ ಎಂಬ ಫ್ರೆಂಚ್ ಅಧಿಕಾರಿಯ ನೇತೃತ್ವದಲ್ಲಿ 14,000 ಸೇನೆಯೊಂದನ್ನು ಸಿದ್ಧಪಡಿಸಲು ನಿಜಾಮನಿಗೆ ಪ್ರಚೋದನೆ ನೀಡಿದ. ಇಂಗ್ಲಿಷರ ವಿರುದ್ಧ ಇದನ್ನು ಬಳಸಿಕೊಳ್ಳಬಹುದೆಂದನ್ನಿವನ ಆಸೆಯಾಗಿತ್ತು. 1795ರಲ್ಲಿ ನಿಜಾಮ ಮರಾಠರ ವಿರುದ್ಧ ನಡೆಸಿದ ಯುದ್ಧದಲ್ಲೂ ಟಿಪ್ಪು ಸಹಾಯ ನೀಡಿದ್ದ. ಆದರೆ ವೆಲ್ಲೆಸ್ಲಿ ಈ ಯೋಜನೆಯನ್ನು ಮಣ್ಣುಗೂಡಿಸಿದ. ನಿಜಾಮ

ಪರಸ್ಪರ ಸಹಾಯಕ ಸೈನ್ಯಪದ್ಧತಿಗೆ ಒಪ್ಪಿಗೆ ನೀಡುವಂತೆ ಮಾಡಿದ. ಅದರ ಪ್ರಕಾರ ಫ್ರೆಂಚರ ಸೇನೆಯನ್ನು ವಜಾಮಾಡಲಾಯಿತು. ಅವರ ಸ್ಥಾನವನ್ನು ಇಂಗ್ಲಿಷರು ಆಕ್ರಮಿಸಿಕೊಂಡರು.

ಟಿಪ್ಪುವಿನ ಮೇಲೆ ಯುದ್ಧ ಘೋಷಿಸಲು ವೆಲ್ಲೆಸ್ಲಿ ತಡ ಮಾಡಲಿಲ್ಲ. ಇಂಗ್ಲಿಷರನ್ನು ಸೇರಿಕೊಳ್ಳುವಂತೆ ನಿಜಾಮನನ್ನು ಪ್ರಚೋದಿಸಿದ. ಆದರೆ ಮರಾಠರನ್ನು ಈ ಯುದ್ಧದಲ್ಲಿ ಭಾಗವಹಿಸುವಂತೆ ಮಾಡಲು ಆಗಲಿಲ್ಲ. ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಬ್ರಿಟಿಷರು ಎಲ್ಲಾ ದಿಕ್ಕುಗಳಿಂದಲೂ ನುಗ್ಗಿಬಂದರು. ಬೊಂಬಾಯಿ ಕಡೆಯಿಂದ ಆರ್ಥರ್ ವೆಲ್ಲೆಸ್ಲಿ (ಅನಂತರ ಡ್ಯೂಕ್ ಆಫ್ ವೆಲ್ಲಿಂಗ್‌ಟನ್) ಮತ್ತು ಮದರಾಸಿನ ಕಡೆಯಿಂದ ಜನರಲ್ ಹ್ಯಾರಿಸ್ ನುಗ್ಗಿಬಂದರು. ಶ್ರೀರಂಗಪಟ್ಟಣವನ್ನು ಮುತ್ತಿದರು. 1799ರ ಮೇ 4ರಂದು ಇಂಗ್ಲಿಷರು ಕೋಟೆಯ ಮೇಲೆ ದಾಳಿ ನಡೆಸಿದರು. ಒಂದು ಗಂಟೆಯಲ್ಲಿ ಟಿಪ್ಪುವಿಗೆ ಸುದ್ದಿ ಬಂದಿತು. ಭೀಕರ ಹೋರಾಟ ನಡೆಯಿತು, ಇಂಗ್ಲಿಷರ ಸೇನೆಗೆ ಜಯವಾಯಿತು. ಟಿಪ್ಪು ಯುದ್ಧರಂಗದಲ್ಲಿ ಹೋರಾಡುತ್ತ ಮಡಿದ. ಇವನು ಬಳಸುತ್ತಿದ್ದನೆಂದು ಹೇಳಲಾದ ಖಡ್ಗವೊಂದನ್ನು ಇತ್ತೀಚೆಗೆ (2004) ವಿಜಯಮಲ್ಯ ಅವರು ಇಂಗ್ಲೆಂಡಿನಿಂದ ಹರಾಜಿನಲ್ಲಿ ಹಿಡಿದು ಕೊಂಡು ತಂದು ಟಿಪ್ಪುಸುಲ್ತಾನ್ ಸ್ಮಾರಕ ಸಂರಕ್ಷಣಾ ಸಮಿತಿಗೆ ಒಪ್ಪಿಸಲಾಗಿದೆ.

ಅಲ್ಪಕಾಲವಾದರೂ ಬಿರುಗಾಳಿಯೋಪಾದಿಯಲ್ಲಿದ್ದ ಟಿಪ್ಪುವಿನ ಆಳಿಕೆ ಕರ್ನಾಟಕ ಹಾಗೂ ಭಾರತ ಇತಿಹಾಸದ ಪ್ರಮುಖ ಅಧ್ಯಾಯ. ನೂರು ವರ್ಷಗಳ ಕಾಲ ಸಾಮಾನ್ಯವಾಗಿ ಜೀವನ ನಡೆಸುವುದಕ್ಕಿಂತ, ಒಂದು ವರ್ಷ ಸಿಂಹದಂತೆ ಬದುಕುವುದು ಉತ್ತಮವೆಂಬುದು ಇವನ ಜೀವನದ ಆದರ್ಶವಾಗಿತ್ತು. ಭಾರತದಲ್ಲಿ ಬ್ರಿಟಿಷರ ವಿರುದ್ಧ ಪ್ರಬಲ ವ್ಯವಸ್ಥಿತ ಹೋರಾಟ ನಡೆಸಿದ್ದವರಲ್ಲಿ ಟಿಪ್ಪು ಮೊದಲಿಗ. ಇಂಗ್ಲಿಷರನ್ನು ಭಾರತದಿಂದ ಓಡಿಸುವುದನ್ನೆ ತನ್ನ ಜೀವನದ ಪರಮ ಆಕಾಂಕ್ಷೆಯನ್ನಾಗಿ ಮಾಡಿಕೊಂಡಿದ್ದು, ಅದಕ್ಕಾಗಿ ತನ್ನ ಎಲ್ಲ ಐಶ್ವರ್ಯ, ಶಕ್ತಿ ಕೊನೆಗೆ ತನ್ನ ಜೀವನವನ್ನೇ ಪಣವಾಗಿ ಇರಿಸಿದ. ಇಂಗ್ಲಿಷರ ಬಗ್ಗೆಯಿದ್ದ ದ್ವೇಷದ ಭಾವನೆಯೇ ಇವನ ವ್ಯಕ್ತಿತ್ವದ ಪ್ರಮುಖ ಲಕ್ಷಣವಾಗಿತ್ತು. ಈ ವಿಷಯದಲ್ಲಿ ಯಾವ ಕರುಣೆ, ಅನುಕಂಪ, ರಾಜಿ, ನಂಬಿಕೆಗಳಿಗೂ ಬಗ್ಗುತ್ತಿರಲಿಲ್ಲ. ಇವನೇ ಬರೆದಿಟ್ಟಿರುವಂತೆ ಈತ ಕನಸಿನಲ್ಲೂ ಇಂಗ್ಲಿಷರ ವಿರುದ್ಧ ಅವಿಶ್ರಾಂತವಾದ ಹೋರಾಟ ನಡೆಸುತ್ತಿದ್ದ. ಭಾರತದ ರಾಜ್ಯವೊಂದರ ವಿರುದ್ಧವಾಗಿ ಇವನೆಂದೂ ಪರಕೀಯರೊಡನೆ ಸೇರಲಿಲ್ಲ. ಆದರ್ಶಗಳನ್ನು ಕೊನೆಯವರೆಗೂ ಬಿಟ್ಟುಕೊಡಲಿಲ್ಲ. ಅವಮಾನದ ಬದುಕಿಗಿಂತ ಸಾವನ್ನೇ ಆರಿಸಿಕೊಂಡ ಈತ ಸೀಸರನಂತೆ ಅಂತಿಮವಾಗಿ ಕುತಂತ್ರ ಹಾಗೂ ದ್ರೋಹದ ಒಳಸಂಚಿಗೆ ಬಲಿಯಾದ. ಆದರೆ ಭಾರತೀಯರ ಸ್ವಾತಂತ್ರ್ಯಕ್ಕೆ ಬ್ರಿಟಿಷರಿಂದ ಬರುವ ಅಪಾಯದ ಬಗ್ಗೆ ತನ್ನ ದೇಶದ ಬಾಂಧವರಿಗೆ ಎಚ್ಚರಿಕೆಯನ್ನು ನೀಡುವುದನ್ನು ಮರೆಯಲಿಲ್ಲ. ಬ್ರಿಟಿಷರ ದ್ವೇಷದ ಜೊತೆಗೆ ಇವನ ವ್ಯಕ್ತಿತ್ವದಲ್ಲಿ ಜನರು ಮೆಚ್ಚುವಂಥ ಅಂಶಗಳೂ ಇದ್ದವು. ಇವನಲ್ಲಿ ಪ್ರೀತಿ ತೋರುವ ಗುಣವಿತ್ತು. ಸ್ನೇಹಿತರಿಗೆ ಆಪ್ತನಾಗಿದ್ದ. ಮಿಲ್ ಹೇಳುವಂತೆ ಇವನ ಜ್ಞಾನ ಅಪಾರವಾಗಿತ್ತು. ಇವನ ಬುದ್ಧಿ ಕ್ರಿಯಾಶೀಲವಾಗಿಯೂ ಚುರುಕಾಗಿಯೂ ಸಂಶೋಧನಾದೃಷ್ಟಿಯಿಂದ ಕೂಡಿಯೂ ಇತ್ತು. ಇವನೊಬ್ಬ ಪ್ರತಿಭಾವಂತ, ಪ್ರಜಾಪಾಲನೆಯೇ ಧ್ಯೇಯವಾಗಿಯುಳ್ಳ ರಾಜ್ಯಾಡಳಿತಪಟು. ಅನೇಕ ಯುದ್ಧಗಳನ್ನು ನಡೆಸಬೇಕಾದ ಸಂದರ್ಭ ಒದಗಿ ಬಂದಾಗ್ಯೂ ಇವನು ವ್ಯಾಪಾರ-ವಾಣಿಜ್ಯ, ಕೈಗಾರಿಕೆ ಮತ್ತು ವ್ಯವಸಾಯ ಕ್ಷೇತ್ರಗಳ ಅಭಿವೃದ್ಧಿಯನ್ನು, ಸರ್ವತೋಮುಖವಾದ ಪ್ರಗತಿಯನ್ನು ಕಡೆಗಣಿಸಲಿಲ್ಲ. ಕರ್ನಾಟಕವನ್ನು ಸಮೃದ್ಧವಾದ ರಾಜ್ಯವಾಗಿ ಮಾಡಲು ಅವಿಶ್ರಾಂತವಾಗಿ ಶ್ರಮಿಸಿದ. ವಾಣಿಜ್ಯ ಕ್ಷೇತ್ರದಲ್ಲಿ ಅನೇಕ ಆಶ್ಚರ್ಯಕರವಾದ ಪ್ರಯೋಗಗಳನ್ನು ಇವನು ಮಾಡಿದ. ವಿಶೇಷವಾಗಿ ಹಾಗೂ ಪ್ರತ್ಯೇಕವಾಗಿ ವಾಣಿಜ್ಯ ಇಲಾಖೆಯನ್ನು ಏರ್ಪಡಿಸಿದ್ದ. ದೇಶದ ದೂರದೂರದ ಪ್ರದೇಶಗಳಲ್ಲೂ ಹಾಗೂ ಪರದೇಶಗಳಲ್ಲೂ ವ್ಯಾಪಾರದ ಕೋಠಿಗಳನ್ನು ಸ್ಥಾಪಿಸಿದ್ದ. ಕೋವಿ, ಕಾಗದ, ಇತರ ಅನೇಕ ಪದಾರ್ಥಗಳನ್ನು ತಯಾರಿಸುವ ಸಲುವಾಗಿ ವಿದೇಶಗಳಿಂದ ತಜ್ಞರನ್ನು ಕರೆಸಿಕೊಂಡಿದ್ದು ಹಣಕಾಸು, ತೂಕ, ಅಳತೆ, ಬ್ಯಾಂಕಿಂಗ್, ಕಂದಾಯ, ನ್ಯಾಯಾಡಳಿತ, ಸೈನ್ಯ, ನೌಕಾದಳ-ಇವುಗಳ ಆಡಳಿತ ರೀತಿನೀತಿಗಳ ಬಗ್ಗೆ ನಡೆಸಿದ ಸುಧಾರಣೆಗಳು ಇತಿಹಾಸದಲ್ಲಿ ಇವನಿಗೆ ಗಣ್ಯಸ್ಥಾನವನ್ನು ಗಳಿಸಿಕೊಟ್ಟಿವೆ. ಇವನು ಒಳ್ಳೆಯ ನೌಕಾಪಡೆಯನ್ನೂ ವ್ಯಾಪಾರಿ ಹಡಗುಗಳ ಪಡೆಯನ್ನೂ ಕಟ್ಟಿದ. ಆಗ ಇವನ ರಾಜ್ಯದಲ್ಲಿ ಮೂರು ನೌಕಾನಿರ್ಮಾಣ ಕೇಂದ್ರಗಳಿದ್ದವು. ನೌಕಾಧಿಕಾರಿಗಳಿಗೆ ಶಿಕ್ಷಣ ನೀಡಲು ನೌಕಾ ಶಾಲೆಯೊಂದಿತ್ತು. ಸಮರ್ಥವಾಗಿ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದ ಟಿಪ್ಪು ಪಾಶ್ಚಿಮಾತ್ಯ ತತ್ತ್ವಗಳನ್ನು ಸಂಸ್ಥಾನಗಳ ಆಡಳಿತದಲ್ಲಿ ಅಳ ವಡಿಸಿದವರಲ್ಲಿ ಮೊದಲಿಗನೆಂದು ಹೇಳಬಹುದು. ಉಳುವವರಿಗೆ ಭೂ-ಒಡೆತನ ಎಂಬ ತತ್ತ್ವದ ಆಧಾರದ ಮೇಲೆ ರಚಿಸಲ್ಪಟ್ಟ ಕಂದಾಯ ವ್ಯವಸ್ಥೆಯ ಮೂಲಕವೂ ಬಂಜರು ಭೂಮಿಯನ್ನು ಕೆಲವು ವರ್ಷಗಳ ಕಾಲ ತೆರಿಗೆರಹಿತ ಗುತ್ತಿಗೆ ಕೊಡುವ ಕ್ರಮದಿಂದಲೂ ತೆರಿಗೆ ವಸೂಲಿ ಮಾಡುವ ಕ್ರಮದಲ್ಲಿ ಮಧ್ಯವರ್ತಿಗಳನ್ನು ತೆಗೆದು ಹಾಕಿ ಅವರ ಸ್ಥಾನದಲ್ಲಿ ಕಂದಾಯ ಅಧಿಕಾರಿಗಳನ್ನು ನೇಮಿಸುವುದರ ಮೂಲಕವೂ ಜಹಗೀರಿ ಪದ್ಧತಿಯನ್ನು ರದ್ದು ಮಾಡಿ, ಅದಕ್ಕೆ ಬದಲಾಗಿ ಅಧಿಕಾರಿಗಳಿಗೆ ಸಂಬಳವನ್ನು ನಿಗದಿ ಮಾಡುವುದರ ಮೂಲಕವೂ ಟಿಪ್ಪು ಕೃಷಿಯ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ. ನ್ಯಾಯವನ್ನು ವಿಶಿಷ್ಟ ರೀತಿಯಲ್ಲಿ ನಡೆಯುವಂತೆ ಬೇಕಾದ ಏರ್ಪಾಡುಗಳನ್ನು ಮಾಡಿದ್ದು ನಾಣ್ಯ ಹಾಗೂ ಪಂಚಾಂಗದ ಸುಧಾರಣೆ ಇವನ ಇತರ ಸಾಧನೆಗಳು. (ಬಿ.ಎಸ್.ಎ.)

**ನಾಣ್ಯಗಳು :** ಭಾರತೀಯ ನಾಣ್ಯಚರಿತ್ರೆಯಲ್ಲಿ ಟಿಪ್ಪು ಸುಲ್ತಾನನ ನಾಣ್ಯಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಸದಾ ಯುದ್ಧಗಳಲ್ಲಿಯೇ ನಿರತನಾಗಿದ್ದರೂ ಟಿಪ್ಪು ತನ್ನ ನಾಣ್ಯಗಳ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿ ಸುಂದರವೂ ಕಲಾತ್ಮವೂ ವೈವಿಧ್ಯಪೂರ್ಣವೂ ಆದ ಅನೇಕ ನಮೂನೆಯ ನಾಣ್ಯಗಳನ್ನು ಅಚ್ಚುಹಾಕಿಸಿದ್ದಾನೆ.

ಟಿಪ್ಪುವಿನ ಕಾಲದಲ್ಲಿ ಕೊನೆಯ ಪಕ್ಷ ಹದಿನೈದು ವಿವಿಧ ಸ್ಥಳಗಳಲ್ಲಿ ಟಂಕಸಾಲೆಗಳಿದ್ದವು. ಇವುಗಳಲ್ಲಿ ಮುಖ್ಯವಾದವು-ಶ್ರೀರಂಗಪಟ್ಟಣ, ನಗರ, ಗುತ್ತಿ, ಬೆಂಗಳೂರು, ಚಿತ್ರದುರ್ಗ, ಕಲ್ಲಿಕೋಟೆ, ಫೆರೋಕ್, ಸತ್ಯಮಂಗಲ, ದಿಂಡಿಗಲ್, ಗುರ‍್ರಂಕೊಂಡ, ಧಾರವಾಡ ಮತ್ತು ಮೈಸೂರು. ಶಿವಮೊಗ್ಗದ ಹೊಳೆಹೊನ್ನೂರಿನಲ್ಲಿಯೂ ಒಂದು ಟಂಕಸಾಲೆಯಿತ್ತೆಂದು ತಿಳಿದುಬರುತ್ತದೆ. ಆದರೆ ಇಲ್ಲಿಯ ನಾಣ್ಯಗಳು ದೊರಕಿಲ್ಲ. ಈ ಟಂಕಸಾಲೆಗಳಿಗೆ ಟಿಪ್ಪು ಕಾಲ್ಪನಿಕ ಹೆಸರುಗಳನ್ನು ಕೊಟ್ಟಿದ್ದ. ಹೊಳೆಹೊನ್ನೂರಿನ ಟಂಕಸಾಲೆಯನ್ನು ಅಸದೃಶವಾದುದು (ಬೇನಜೀರ್) ಎಂದು ಕರೆದಿದ್ದಾನೆ.

ಟಿಪ್ಪು ತಾನು ಅಚ್ಚುಹಾಕಿಸಿದ ಪ್ರತಿಯೊಂದು ನಾಣ್ಯಕ್ಕೂ ಒಂದೊಂದು ಹೆಸರನ್ನು ಕೊಟ್ಟ. ಆ ಹೆಸರುಗಳು ಸಾಮಾನ್ಯವಾಗಿ ಪ್ರವಾದಿ ಮುಹಮ್ಮದ್, ಕಲೀಫರು ಮತ್ತು ನಕ್ಷತ್ರಗಳು ಇವರಿಗೆ ಸಂಬಂಧಿಸಿದವು. ಇವುಗಳನ್ನು ಈ ರೀತಿ ಹೆಸರಿಸಬಹುದು. ನಾಲ್ಕು ಪಗೋಡಗಳ ನಾಣ್ಯ-ಅಹ್ಮದೀ, ಎರಡು ಪಗೋಡ-ಸಾದಿಕೀ, ಒಂದು ಪಗೋಡ-ಫರೂಕೀ, ಎರಡು ರೂಪಾಯಿ-ಹೈದರೀ, ರೂಪಾಯಿ-ಇಮಾಮೀ, ಅರ್ಧ ರೂಪಾಯಿ-ಆಬಿದೀ, ಕಾಲು ರೂಪಾಯಿ-ಬಾಖರೀ, ಎಂಟನೆಯ ಒಂದು ರೂಪಾಯಿ-ಜಾಫರೀ, ಹದಿನಾರನೆಯ ಒಂದು ರೂಪಾಯಿ-ಖಾಸಿಮೀ, ಮೂವತ್ತೆರಡನೆಯ ಒಂದು ರೂಪಾಯಿ-ಕೈಸರೀ, ಎರಡು ಪೈಸೆ-ಉಸ್ಮಾನೀ ಅಥವಾ ಮುಷ್ತರೀ, ಒಂದು ಪೈಸಾ-ಜೋಹ್ರ, ಅರ್ಧ ಪೈಸಾ-ಬಹ್ರಾಮ್, ಕಾಲು ಪೈಸಾ-ಅಖ್ತರ್, ಎಂಟನೆಯ ಒಂದು ಪೈಸಾ-ಕುತ್ಬ್. ಈ ರೀತಿಯ ಹೆಸರಿಲ್ಲದ ನಾಣ್ಯವೆಂದರೆ ಚಿನ್ನದ ಪಣ. ಇದು ಬಹು ಸಣ್ಣ ನಾಣ್ಯವಾದುದರಿಂದ ಇದರ ಮೇಲೆ ನಾಣ್ಯದ ಹೆಸರನ್ನು ಮುದ್ರಿಸುವಷ್ಟು ಸ್ಥಳವಿರಲಿಲ್ಲವೆಂದು ನಾಣ್ಯಶಾಸ್ತ್ರಜ್ಞ ಹೆಂಡರ್‌ಸನ್ ಅಭಿಪ್ರಾಯಪಡುತ್ತಾರೆ.

ನಾಣ್ಯಗಳ ಮೇಲೆ ಕಾಲವನ್ನು ನಮೂದಿಸುವ ವಿಷಯದಲ್ಲಿಯೂ ಟಿಪ್ಪು ಅನೇಕ ಬದಲಾವಣೆಗಳನ್ನು ಮಾಡಿದ. ತನ್ನ ಆಳ್ವಿಕೆಯ ಮೊದಲ ನಾಲ್ಕು ವರ್ಷಗಳು ನಾಣ್ಯಗಳ ಮೇಲೆ ಹಿಜಿರ ಕಾಲವನ್ನು ಅಚ್ಚುಹಾಕಿಸಿದ. ಐದನೆಯ ವರ್ಷದಿಂದ ತನ್ನ ಆಳಿಕೆಯ ಮೌಲೂದೀ ಕಾಲಮಾನವನ್ನು ಅಚ್ಚುಹಾಕಿಸಿದ. ಇದರಲ್ಲಿ ಸಂಖ್ಯೆಗಳು ಬಲದಿಂದ ಎಡದ ಕಡೆಗೆ ಬರೆಯಲ್ಪಡುತ್ತವೆ. ನಾಣ್ಯಗಳ ಮೇಲೆ ವರ್ಷಗಳನ್ನು ಸೂಚಿಸುವಾಗ

ಮೊದಲು ಅಬ್ಜದ್ ಎಂಬ ಪ್ರಕಾರವನ್ನೂ ಅನಂತರ ಅಖುತ್ ಎಂಬ ಪ್ರಕಾರವನ್ನೂ ಅನುಸರಿಸಿದ. ಇವೆರಡರಲ್ಲಿಯೂ ಅರಬ್ಬೀ ಅಕ್ಷರಗಳಿಗೆ ಕೆಲವು ಸಂಖ್ಯಾಮೌಲ್ಯಗಳನ್ನು ಕೊಡುವ ಕ್ರಮವಿದೆ.

ಅಹ್ಮದೀ, ಸಾದಿಕೀ, ಫರೂಕೀ, ಪಣಂ- ಟಿಪ್ಪು ನಾಣ್ಯಗಳು

ಟಿಪ್ಪುವಿನ ಚಿನ್ನದ ನಾಣ್ಯಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. ಅವುಗಳು ಅಹ್ಮದೀ, ಸಾದಿಕೀ, ಫರೂಕೀ (ಪಗೋಡ) ಮತ್ತು ಪಣಂ. ಅಹ್ಮದೀ ನಾಣ್ಯ ಸುಮಾರು 211 ಗ್ರೇನ್ ತೂಕವಾಗಿದ್ದು ನಾಲ್ಕು ಪಗೋಡಗಳಿಗೆ ಸಮನಾಗಿತ್ತು. ಆ ರೀತಿಯ ನಾಣ್ಯದ ಮುಮ್ಮುಖದಲ್ಲಿ 'ಅಹ್ಮದನ' ಧರ್ಮ ಈ ಪ್ರಪಂಚದಲ್ಲಿ ಹೈದರನ ವಿಜಯಗಳಿಂದ ಪ್ರಕಾಶಗೊಂಡಿದೆ' ಎಂಬ ಅರ್ಥ ಬರುವ ಪರ್ಷಿಯನ್ ಬರೆಹದ ಮತ್ತು ಕಾಲದ ಉಲ್ಲೇಖ ಕಂಡುಬರುತ್ತದೆ. ಸಾದಿಕೀ ನಾಣ್ಯಗಳು 106 ಗ್ರೇನ್ ತೂಕವಿದ್ದು ಹೆಚ್ಚುಕಡಿಮೆ ಅಹ್ಮದೀ ನಾಣ್ಯಗಳನ್ನೇ ಹೋಲುತ್ತವೆ. ಫರೂಕೀ ನಾಣ್ಯ ಸುಮಾರು 52 ಗ್ರೇನ್ ತೂಕವುಳ್ಳದ್ದಾಗಿದ್ದು ಹೈದರನ ಮೊದಲನೆ ಅಕ್ಷರ ಹೆ ಮತ್ತು ಕಾಲ, ಟಂಕಸಾಲೆಯ ಹೆಸರುಗಳನ್ನು ಹೊಂದಿವೆ. ಪಣಂ ಎಂಬ ನಾಣ್ಯ ಬಹು ಸಣ್ಣದಾಗಿದ್ದು ಸುಮಾರು 5-6 ಗ್ರೇನ್ ತೂಗುತ್ತದೆ. ಇದು ದಕ್ಷಿಣಭಾರತದಲ್ಲೇ ಬಹಳ ಜನಾನುರಾಗಿಯಾಗಿದ್ದ ನಾಣ್ಯ. ಇವುಗಳಲ್ಲಿಯೂ ಹೆ ಎಂಬ ಅಕ್ಷರ ಮತ್ತು ಕಾಲದ ಉಲ್ಲೇಖವಿದೆ.

ಟಿಪ್ಪು ಸುಲ್ತಾನನ ಏಳು ರೀತಿಯ ಬೆಳ್ಳಿಯ ನಾಣ್ಯಗಳು, ಬೆಳಕಿಗೆ ಬಂದಿವೆ. ಇವುಗಳಲ್ಲಿ ಎರಡು ರೂಪಾಯಿನ ಹೈದರೀ ನಾಣ್ಯ ಶ್ರೀರಂಗಪಟ್ಟಣ, ನಗರ ಮತ್ತು ಕಲ್ಲಿಕೋಟೆಗಳಲ್ಲಿಯೂ ಒಂದು ರೂಪಾಯಿನ ಇಮಾಮೀ ನಾಣ್ಯ ಶ್ರೀರಂಗಪಟ್ಟಣ, ನಗರ ಮತ್ತು ಧಾರವಾಡಗಳಲ್ಲಿಯೂ 1/2 ರೂಪಾಯಿನ ಆಬಿದೀ ನಾಣ್ಯ ಶ್ರೀರಂಗಪಟ್ಟಣ ಮತ್ತು ನಗರಗಳಲ್ಲಿಯೂ ಬಾಖರೀ, ಜಾಫರೀ, ಕಾಜಿಮೀ, ಖಿಸ್ರೀ ನಾಣ್ಯಗಳು ಶ್ರೀರಂಗಪಟ್ಟಣದಲ್ಲಿ ಮಾತ್ರವೂ ಅಚ್ಚಾದವು. ಎರಡು ರೂಪಾಯಿನ ಹೈದರೀ ನಾಣ್ಯಗಳಲ್ಲಿ ಅಹ್ಮದೀ ಚಿನ್ನದ ನಾಣ್ಯಗಳಲ್ಲಿರುವಂತೆಯೇ ಬರೆಹಗಳಿವೆ. ಇದರ ತೂಕ ಸುಮಾರು 355 ಗ್ರೇನ್. ಒಂದು ರೂಪಾಯಿನ ಇಮಾಮೀ ನಾಣ್ಯ ಸುಮಾರು 175 ಗ್ರೇನ್ ತೂಕವಾಗಿದ್ದು ಹೈದರೀ ನಾಣ್ಯದಂತೆಯೇ ಬರೆಹ ಹೊಂದಿವೆ. ಜಾಫರೀ ಕಾಜಿಮೀ ಮತ್ತು ಖಿಸ್ರೀ ನಾಣ್ಯಗಳಲ್ಲಿ ಬರೆಹ ಕಡಿಮೆ. ಜಾಫರೀ ನಾಣ್ಯದಲ್ಲಿ ಮಹಮ್ಮದ್ ಎಂಬ ಬರೆಹದ ಜೊತೆಗೆ ಟಂಕಸಾಲೆಯ ಹೆಸರಿದೆ. ಕೇವಲ 5 ಗ್ರೇನ್ ತೂಕದ ಖಿಸ್ರೀ ನಾಣ್ಯದಲ್ಲಿ ಟಂಕಸಾಲೆಯ ಹೆಸರು ಮತ್ತು ಕಾಲಗಳು ಮಾತ್ರ ಉಲ್ಲೇಖಿತವಾಗಿವೆ.

ಟಿಪ್ಪು ಸುಲ್ತಾನನ ತಾಮ್ರದ ನಾಣ್ಯಗಳು ಐದು ವಿಧದ ಮೌಲ್ಯಗಳಲ್ಲಿವೆ. ಸಾಮಾನ್ಯವಾಗಿ ಈ ತಾಮ್ರದ ನಾಣ್ಯಗಳು ಎಲ್ಲ ಟಂಕಸಾಲೆಗಳಲ್ಲಿಯೂ ಮುದ್ರಿತವಾಗಿದ್ದುವೆಂದು ಹೇಳಬಹುದು. ತಾಮ್ರದ ನಾಣ್ಯಗಳ ಮೇಲೆ ಸಾಮಾನ್ಯವಾಗಿ ಆನೆಯ ಚಿತ್ರವಿರುವುದು ವಿಶೇಷ ಸಂಗತಿ. ಸುಮ್ಮನೆ ನಿಂತಿರುವ, ಇಲ್ಲವೇ ಸೊಂಡಿಲನ್ನು ಮೇಲೆತ್ತಿ ಸಲಾಂ ಮಾಡುತ್ತಿರುವಂತೆ ತೋರಿಸಿರುವ ಆನೆಯ ಚಿತ್ರ ಬಹು ಸುಂದರವಾಗಿಯೂ ಸ್ಫುಟವಾಗಿಯೂ ಇರುತ್ತದೆ. ಆನೆ ವಿವಿಧ ರೀತಿಯ ಆಭರಣಗಳಿಂದ ಅಲಂಕೃತವಾಗಿರುವುದು ಗಮನಾರ್ಹ ಸಂಗತಿ. ಸಾಮಾನ್ಯವಾಗಿ ತಾಮ್ರದ ನಾಣ್ಯಗಳ ಮೇಲೆ ಬರವಣಿಗೆ ಕಡಿಮೆ. ಕೆಲವು ನಾಣ್ಯಗಳಲ್ಲಂತೂ ಬರವಣಿಗೆ ಹಿಮ್ಮುಖಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆನೆಯ ಮೇಲೆ ಕೆಲವು ನಾಣ್ಯಗಳಲ್ಲಿ ಒಂದು ಧ್ವಜವಿರುವುದು ಕಾಣಬರುತ್ತದೆ. ಎರಡು ಪೈಸೆ ಮೌಲ್ಯದ ಉಸ್ಮಾನೀ ನಾಣ್ಯದ ಮುಮ್ಮುಖದಲ್ಲಿ ಸೊಂಡಿಲನ್ನು ಎತ್ತಿಕೊಂಡಿರುವ ಆನೆ, ಬಾಲದ ಮೇಲೆ ನಾಣ್ಯ ಮುದ್ರಣ ಗೊಂಡ ಕಾಲ ಮತ್ತು ಆನೆಯ ಮೇಲೆ ಧ್ವಜದ ಚಿತ್ರಗಳಿವೆ. ಇದರ ಹಿಮ್ಮುಖದಲ್ಲಿ ನಾಣ್ಯದ ಟಂಕಸಾಲೆಯ ಹೆಸರು ಕಾಣಬರುತ್ತದೆ. ಅತ್ಯಂತ ಚಿಕ್ಕ ಮೌಲ್ಯದ 1.8 ಪೈಸಾ ಅಥವಾ ಕುತ್ಬ್ ತಾಮ್ರನಾಣ್ಯ ಸುಮಾರು 18 ರಿಂದ 21 ಗ್ರೇನ್ ತೂಗುತ್ತದೆ. ಆ ನಾಣ್ಯ ಶ್ರೀರಂಗಪಟ್ಟಣ, ನಗರ, ಬೆಂಗಳೂರು, ಚಿತ್ರದುರ್ಗ ಮತ್ತು ಸತ್ಯಮಂಗಲ ಟಂಕಸಾಲೆಗಳಲ್ಲಿ ಮಾತ್ರ ಅಚ್ಚುಹಾಕಲ್ಪಟ್ಟಿತು. ಈ ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಆನೆಯ ಚಿತ್ರ ಮತ್ತು ಹಿಮ್ಮುಖದಲ್ಲಿ ನಾಣ್ಯದ ಮತ್ತು ಟಂಕಸಾಲೆಯ ಹೆಸರು ಮುದ್ರಿತವಾಗಿದೆ. (ಎ.ವಿ.ಎನ್.)

**ವಾಸ್ತುರಚನೆಗಳು :** ಟಿಪ್ಪುವಿನ ಕಾಲದ ವಾಸ್ತುಕೃತಿಗಳನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು. ರಕ್ಷಣಾದೃಷ್ಟಿಯಿಂದ ರಾಜ್ಯದ ನಾನಾ ಭಾಗಗಳಲ್ಲಿ ಕಟ್ಟಿಸಿರುವ ಕೋಟೆಕೊತ್ತಲಗಳು, ಮದ್ದಿನ ಮನೆಗಳು, ಭದ್ರವಾದ ನೆಲಮಾಳಿಗೆಯ ಕಾರಾಗೃಹಗಳು ಒಂದು ಬಗೆಯಾದರೆ ಅರಮನೆಗಳು, ಮಸೀದಿಗಳು, ಸಮಾಧಿಗಳು ಇನ್ನೊಂದು ಬಗೆಯವು.

ಹೈದರ್ ಮತ್ತು ಟಿಪ್ಪು ಹೊಸ ಹೊಸ ಪ್ರದೇಶಗಳನ್ನು ಗೆದ್ದು ರಾಜ್ಯವನ್ನು ವಿಸ್ತರಿಸುತ್ತ ಹೋದಂತೆಲ್ಲ ಅಲ್ಲಲ್ಲಿ ಸುಭದ್ರವಾದ ಕೋಟೆಗಳನ್ನು ನಿರ್ಮಿಸುತ್ತ ಹೋದರು; ಹಿಂದೆಯೇ ನಿರ್ಮಿಸಿದ್ದ ಕೋಟೆಗಳನ್ನು ಹೊಸ ಯುದ್ಧತಂತ್ರಕ್ಕೆ ಅಳವಡಿಸಿದರು. ದೊಡ್ಡ ದೊಡ್ಡ ಕಲ್ಲಿನ ತುಂಡುಗಳನ್ನು ಪೇರಿಸಿ ಕಟ್ಟಲಾಗಿದ್ದ ಹಳೆಯ ಹಿಂದು ರೀತಿಯ ಕೋಟೆಗಳು ಫಿರಂಗಿಯ ಗುಂಡಿನ ಏಟುಗಳಿಗೆ ಉರುಳಿ ಬೀಳುವ ಸಂಭವ ಹೆಚ್ಚಾಗಿದ್ದುದರಿಂದ ಟಿಪ್ಪು ಕೋಟೆಗಳಿಗೆ ಗಾರೆ-ಗಚ್ಚುಗಳನ್ನು ಹಾಕಿ ಭದ್ರಪಡಿಸಿದ. ಜೊತೆಗೆ ಮದ್ದು ಗುಂಡುಗಳ ಬಳಕೆಗೆ ಉಪಯೋಗವಾಗುವಂತೆ ಕೋಟೆಯ ಮೇಲಿನ ಅಡ್ಡಗೋಡೆಗಳಲ್ಲಿ ಕಿಂಡಿಗಳನ್ನು, ಫಿರಂಗಿಗಳನ್ನು ಸುತ್ತಲು ತಿರುಗಿಸಿ ಹಾರಿಸುವುದಕ್ಕೆ ಅನುಕೂಲವಾಗುವಂತೆ ಗುಂಡು ಬತೇರಿಗಳನ್ನು, ಈ ಕೋಟೆಗಳಲ್ಲಿ ಅಳವಡಿಸಿದ. ದೇವನಹಳ್ಳಿ, ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಪಾವಗಡ, ಮಿಡಿಗೇಶಿ, ರಹಮಾನ್ ದುರ್ಗ ಮುಂತಾದೆಡೆಗಳಲ್ಲೆಲ್ಲ ಈಗಲೂ ಸುಭದ್ರವಾಗಿ ನಿಂತಿರುವ ಕೋಟೆಗಳನ್ನು ನೋಡಬಹುದು. ಅನೇಕ ಕೋಟೆಗಳನ್ನು ಕಟ್ಟುವಲ್ಲಿ ಫ್ರೆಂಚ್ ವಾಸ್ತುತಜ್ಞರ ಸಹಾಯವನ್ನು ಪಡೆದು ಐರೋಪ್ಯ ವಾಸ್ತುತಂತ್ರಗಳನ್ನು ಅಳವಡಿಸಲಾಗಿದೆ. ಟಿಪ್ಪುವಿನ

ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಕೋಟೆಯಲ್ಲಿ ಕೋಟೆ ಗೋಡೆಸಾಲುಗಳು ಕೆಲವು ಕಡೆ ಎರಡು ಮೂರು ಇದ್ದು, ಇವು ಇಟ್ಟಿಗೆಗಾರೆಗಳಿಂದ ನಿರ್ಮಿಸಿದ್ದರೂ ಭದ್ರವಾಗಿವೆ. ಯುದ್ಧಕಾಲದಲ್ಲಿ ಕೆಲವು ಕೋಟೆಯ ಮೇಲೆ ಯೋಧರಿಗೆ ಮದ್ದನ್ನು ಸರಬರಾಜು ಮಾಡಲು ಕೋಟೆಗೆ ಸಮೀಪವಾಗಿ ಅಲ್ಲಲ್ಲಿ ಅರ್ಧಭಾಗ ಭೂಮಿಯಲ್ಲಿಯೇ ಇರುವಂತೆ ಗುಂಡು ಹೊಡೆದರೂ ಬಿರಿಯಬಾರದ ಅತ್ಯಂತ ಭದ್ರವಾದ ದಪ್ಪಗೋಡೆಗಳೂ ಇಳಿಜಾರು ಚಾವಣಿಗಳಿಂದ ಕಟ್ಟಿರುವ ಮದ್ದಿನ ಮನೆಗಳೂ ಸೆರೆಸಿಕ್ಕ ಶತ್ರುಗಳನ್ನು ಕಟ್ಟಿಹಾಕಲು ಕೋಟೆಯ ಬುಡದಲ್ಲಿಯೇ ನಿರ್ಮಿಸಿದ್ದ ತಗ್ಗಾದ ಗುಹೆಯಂತಿರುವ ಕಟ್ಟಡಗಳೂ ಟಿಪ್ಪುವಿನ ಕಾಲದ ವಿಶಿಷ್ಟ ಕಟ್ಟಡಗಳು. ಶ್ರೀರಂಗಪಟ್ಟಣದ ಕೋಟೆಯಲ್ಲಿರುವ ಇನ್ಮನ್ ಮತ್ತು ಕರ್ನಲ್ ಬೈಲಿಯ ಹೆಸರಿನ (ಅವರನ್ನು ಬಂಧಿಸಿದ್ದ) ನೆಲಮಾಳಿಗೆಗಳು ಇಟ್ಟಿಗೆಗಾರೆಯಿಂದ ಕಟ್ಟಿದ್ದು ದಪ್ಪನಾದ ಚೌಕ ಕಂಬಗಳ ಸಾಲು ಮತ್ತು ಕಮಾನುಗಳೊಡನೆ ಭೂಮಿಯ ಒಳಭಾಗಕ್ಕೆ ಹೆಚ್ಚು ಇಳಿದಿವೆ. ಇವುಗಳಲ್ಲಿ ಗೋಡೆಗೆ ಸೇರಿಸಿರುವ ಕಲ್ಲುಗಳ ಸಾಲಿದ್ದು ಅವುಗಳ ಕಿಂಡಿಗಳಿಗೆ ಶತ್ರುಕೈದಿಗಳನ್ನು ಸರಪಣಿಯಿಂದ ಬಿಗಿಯಲಾಗುತ್ತಿತ್ತು. ಪೂರ್ವದಿಕ್ಕಿನಲ್ಲಿರುವ ಕೋಟೆಯ ಬಾಗಿಲುಗಳ ಮುಂದಿನ ಕಂದಕದ ಮೇಲೆ ಹಾದುಹೋಗಲು ತೂಗುಸೇತುವೆಗಳನ್ನು ನಿರ್ಮಿಸಿದ್ದು ಶತ್ರುದಾಳಿಯ ಸಮಯದಲ್ಲಿ ಆ ಸೇತುವೆಯನ್ನು ಮೇಲಕ್ಕೆತ್ತುವ ವ್ಯವಸ್ಥೆ ಇದ್ದುದನ್ನು ಈಗಲೂ ಕಾಣಬಹುದು. ಬೆಂಗಳೂರಿನಲ್ಲಿಯೂ ಕೋಟೆಯ ಬಳಿ ಮದ್ದಿನ ಮನೆಗಳಿದ್ದುವು. ಈಗ ಒಂದು ಮಾತ್ರ ಉಳಿದುಬಂದಿದೆ.

ಸಕಲೇಶಪುರಕ್ಕೆ ಸು.6ಕಿಮೀ ದೂರದಲ್ಲಿ ಮಂಜರಾಬಾದ್ (ನೋಡಿ) ಎಂಬಲ್ಲಿ 200ಅಡಿ ಎತ್ತರದ ಒಂದು ಜಂಬುಕಲ್ಲಿನ ಗುಡ್ಡದ ಮೇಲಿರುವ ಟಿಪ್ಪು ಕಟ್ಟಿಸಿದ ಒಂದು ಚಿಕ್ಕ ಕೋಟೆಯ ವಿನ್ಯಾಸ ಅಪರೂಪವಾದುದು. ಅಷ್ಟಕೋಣಾಕಾರದ ನಕ್ಷತ್ರದಂತಿರುವ ಆ ಕೋಟೆಯ ಪ್ರವೇಶದ್ವಾರದ ಮುಂದೆ ಮತ್ತೊಂದು ಅಡ್ಡ ಗೋಡೆಯಿದ್ದು ಒಳಹೋಗಬೇಕಾದರೆ ಮೂರು ಬಾಗಿಲುಗಳುಂಟು. ಹೊರಬಾಗಿಲು ಅರೆಗೋಲಾಕೃತಿಯ ಕಮಾನು, ಬಳ್ಳಿಸುರುಳಿ ಮತ್ತು ಹುಲಿಯ ಪಟ್ಟೆಗಳ ಅಲಂಕರಣಗಳಿಂದ ಕೂಡಿದ ದ್ವಾರಬಂಧಗಳಿಂದ ಕೂಡಿ ದ್ವಾರದ ಒಳಚಾವಣಿಯಲ್ಲಿ ಕೋಟೆಯ ವಿನ್ಯಾಸವನ್ನು ಬಿಡಿಸಿದೆ. ಎಂಟು ಮೂಲೆಗಳಲ್ಲಿಯೂ ಗುಂಡಾದ ರಕ್ಷಕರ ಕೋಣೆಗಳಿದ್ದು, ಕೋಟೆಯ ನಡುವೆ ಎತ್ತರವಾದ ಬುರುಜು ಮತ್ತು ಕೊಳಗಳಿವೆ. ಈ ಕೋಟೆಯಿಂದ ಸುತ್ತಮುತ್ತಲ ನೋಟ ರಮಣೀಯವಾಗಿದೆ.

ದರಿಯಾದೌಲತ್, ಶ್ರೀರಂಗಪಟ್ಟಣ

ಟಿಪ್ಪು ಕಟ್ಟಿಸಿದ ಇತರ ಕಟ್ಟಡಗಳಲ್ಲಿ ಮುಖ್ಯವಾದುವುಗಳೆಲ್ಲ ಶ್ರೀರಂಗಪಟ್ಟಣದಲ್ಲಿಯೇ ಇವೆ. ಕೋಟೆಯೊಳಗೆ ರಂಗನಾಥಸ್ವಾಮಿ ದೇವಾಲಯದ ಎದುರಿನಲ್ಲಿ ಟಿಪ್ಪುವಿನ ಅರಮನೆಯಿತ್ತು. ಇದು ಪಶ್ಚಿಮಾಭಿಮುಖವಾಗಿದ್ದು ದರಿಯಾದೌಲತ್ತಿನ ಮಾದರಿಯಲ್ಲಿಯೇ ಈ ಅರಮನೆಯೂ ಇದ್ದುದಾಗಿ ತೋರುತ್ತದೆ. ಬ್ರಿಟಿಷರು ಶ್ರೀರಂಗಪಟ್ಟಣವನ್ನು ಆಕ್ರಮಿಸಿದ ಕೂಡಲೇ ಈ ಕಟ್ಟಡವನ್ನು ಹಾಳುಗೆಡವಿದರು. ಕೋಟೆಯಿಂದ ಹೊರಗೆ ಪೂರ್ವಕ್ಕೆ ಒಂದು ದೊಡ್ಡದಾದ ತೋಟದ ನಡುವೆ 1784ರಲ್ಲಿ ಇವನು ಕಟ್ಟಿಸಿದ ಬೇಸಿಗೆ ಅರಮನೆ ದರಿಯಾ ದೌಲತ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದು ಈಗ ಉಳಿದು ಬಂದಿರುವ ಇವನ ಕಟ್ಟಡಗಳಲ್ಲಿಯೇ ಅತ್ಯಂತ ಸುಂದರವಾದುದು. ಎತ್ತರವಾದ ಜಗತಿಯ ಮೇಲೆ ಕಮಲದಾಕೃತಿಯಲ್ಲಿ ಬುಡ ದಪ್ಪನಾಗಿದ್ದು ಮೇಲೇರುತ್ತ ಕಿರಿದಾಗುವ ಎತ್ತರವಾದ ಮರದ ಕಂಬಗಳುಳ್ಳ ದೊಡ್ಡ ಸಜ್ಜೆ. ಅದರ ಇಕ್ಕೆಲಗಳಲ್ಲಿಯೂ ಕಿರುಕೋಟೆಗಳಿದ್ದು ಪಾರಸೀ ಅರಮನೆಗಳ ಮಾದರಿಯನ್ನನುಸರಿಸಿ ಕಟ್ಟಿರುವ ಈ ಕಟ್ಟಡ ಭಾರತದಲ್ಲಿಯೇ ಅಪರೂಪವಾದುದು. ಈ ಅರಮನೆಯ ಗೋಡೆಗಳು, ಚಾವಣಿಗಳು, ಕಮಾನುಗಳು, ಕಂಬಗಳು ಇವುಗಳ ಮೇಲೆಲ್ಲ ಗಾಢವಾದ ಬಣ್ಣಗಳನ್ನು ಉಪಯೋಗಿಸಿ ರಚಿಸಿರುವ ಚಿತ್ರಗಳು ತುಂಬಿವೆ. ಹೈದರ್ ಮತ್ತು ಟಿಪ್ಪು ಬ್ರಿಟಿಷರ ಮೇಲೆ ನಡೆಸಿದ ಯುದ್ಧಚಿತ್ರಗಳು, ಅವರ ಕಾಲದಲ್ಲಿ ಭಾರತದಲ್ಲಿದ್ದ ನಾನಾ ರಾಜರು, ನವಾಬರು, ಅಧಿಕಾರಿಗಳ ವ್ಯಕ್ತಿಚಿತ್ರಗಳು, ಬಗೆಬಗೆಯ ಗಿಡಬಳ್ಳಿಗಳು ಮತ್ತು ಇತರ ವಿನ್ಯಾಸಗಳಿಂದ ಅತ್ಯಂತ ಆಕರ್ಷಕವಾಗಿ ಚಿತ್ರಿತವಾಗಿವೆ.



ಟಿಪ್ಪು ಸಮಾಧಿ, ಶ್ರೀರಂಗಪಟ್ಟಣ

ಟಿಪ್ಪು ಕಟ್ಟಿಸಿದ ಮತ್ತೊಂದು ಕಟ್ಟಡ ಹೈದರನ ಸಮಾಧಿ. ಕಾವೇರಿಯ ಕವಲುಗಳು ಮತ್ತೆ ಕೂಡುವ ಸ್ಥಳದಲ್ಲಿ ವಿಶಾಲವಾದ ತೋಟದ ನಡುವೆ ಕಟ್ಟಿರುವ ಈ ಗುಂಬಜ್ ವಿಶಾಲವಾದ ಜಗತಿಯ ಮೇಲಿರುವ ಚೌಕವಿನ್ಯಾಸದ ಕಟ್ಟಡ. ಸುತ್ತಲೂ ಅತಿನುಣುಪಾಗಿ ಹೊಳಪು ಬರುವಂತೆ ಕಡೆದಿರುವ ಕರಿಯ ಕಲ್ಲಿನ ಕಂಬಗಳಿರುವ ಕೈಸಾಲೆ, ನಾಲ್ಕು ಕಡೆಗೂ ಅದೇ ರೀತಿಯ ಕಲ್ಲಿನ ಬಾಗಿಲುವಾಡಗಳನ್ನುಳ್ಳ ಚೌಕ, ಸಮಾಧಿ ಕೋಣೆ, ಚೌಕನಾಗಿಯೇ ಮತ್ತೊಂದು ಅಂತಸ್ತು ಮೇಲೆದ್ದು ಅದರ ಮೇಲೆ ದೊಡ್ಡದಾದ ಗುಮ್ಮಟವಿರುವ ಈ ಕಟ್ಟಡ ಮುಸ್ಲಿಂ ಶೈಲಿಯಲ್ಲಿಯೇ ವಿಶಿಷ್ಟವಾದುದಾದರೂ ಇದರ ಎತ್ತರಕ್ಕೆ ಸುತ್ತಲಿನ ಕೈಸಾಲೆ ತಗ್ಗಾಗಿದ್ದು ತೂಕ ತಪ್ಪಿದಂತಿದೆ. ಕೋಟೆಯೊಳಗೆ 1787ರಲ್ಲಿ ಟಿಪ್ಪು ಕಟ್ಟಿಸಿದ ಜುಮ್ಮಾಮಸೀದಿಯ ಮುಖ್ಯ ಆಕರ್ಷಣೆ ಅದರ ಎರಡು ಉನ್ನತವಾದ ಮಿನಾರುಗಳು. ಇದು ಹತ್ತಿಹೋಗಲು ಸುತ್ತಿಕೊಂಡು ಮೇಲೇರುವ ಮೆಟ್ಟಲು, ಅಷ್ಟಕೋಣಾಕಾರದ ಹೊರಮೈ ಮೇಲೆ ಪುಷ್ಪಾಲಂಕರಣ, ಮೇಲೆ ಗುಮ್ಮಟ, ತುದಿಯಲ್ಲಿ ಒಂದು ರೀತಿಯ ಲೋಹ ಕಲಶ-ಇವುಗಳಿಂದ ಕೂಡಿ ಆಕರ್ಷಕವಾಗಿವೆ.

ಟಿಪ್ಪುವಿನ ಮತ್ತೊಂದು ಭವ್ಯವಾದ ಕಟ್ಟಡ ಬೆಂಗಳೂರಿನಲ್ಲಿರುವ ಇವನ ಅರಮನೆ. ದರಿಯಾ ದೌಲತ್ ಮಾದರಿಯಲ್ಲಿಯೇ ತೆರೆದ ಸಜ್ಜೆಗಳಿಂದ ಕೂಡಿದ ಈ ಅರಮನೆಗೆ ಅಷ್ಟು ಎತ್ತರವಾದ ಜಗತಿಯಿಲ್ಲ. ಕಟ್ಟಡದ ಒಳಚಾವಣಿಗಳು, ಕಂಬಗಳು, ಕಮಾನುಗಳು ಚಿತ್ರಿತವಾಗಿದ್ದ ಕುರುಹು ಅಲ್ಲಲ್ಲಿ ಉಳಿದಿವೆ. ಚನ್ನಪಟ್ಟಣದಲ್ಲಿರುವ

ಅಕಲ್‍ಷಾ ಖಾದ್ರಿ ದರ್ಗಾ ಮತ್ತು ಸಯ್ಯದ್ ಇಬ್ರಾಹೀಂ ಗೋರಿಗಳು ಕ್ರಮವಾಗಿ ಹೈದರನ ಗುರುವಿನ ಮತ್ತು ಬೆಂಗಳೂರಿನ ಸೇನಾಧಿಕಾರಿಯ ಗೋರಿಗಳು ಚೌಕವಾದ ವಿನ್ಯಾಸ, ಮುಗಲ್ ರೀತಿಯಲ್ಲಿರುವ ಕುಳ್ಳಾದ ಗುಮ್ಮಟ, ಸುತ್ತಲೂ ಅಗಲವಾದ ವರಾಂಡ, ಈ ವರಾಂಡಕ್ಕೆ ದೇವಾಲಯಗಳ ಕಂಬಗಳಂತಿರುವ ಕಲ್ಲಿನ ಕಂಬಗಳಿದ್ದು-ಇವು ಸರಳವಾದ ಮತ್ತು ಸಾಮಾನ್ಯವಾದ ಕಟ್ಟಡಗಳು. ಇವಲ್ಲದೆ ಚಿತ್ರದುರ್ಗ, ನಂದಿದುರ್ಗ, ರಹಮಾನ್ ದುರ್ಗ, ನಗರ ಮುಂತಾದ ಅನೇಕ ಕಡೆಗಳಲ್ಲಿಯೂ ಟಿಪ್ಪು ತನ್ನ ವಾಸಕ್ಕಾಗಿ ಚಿಕ್ಕ ಚಿಕ್ಕ ಸೌಧಗಳನ್ನು ಕಟ್ಟಿಸಿದ್ದ. ಆದರೆ ಅವು ಅಷ್ಟೇನೂ ಆಕರ್ಷಕವಲ್ಲದ ಕಟ್ಟಡಗಳು. ಕೆಲವು ಮಾತ್ರ ಈಗ ಉಳಿದುಬಂದಿವೆ. ಈಗ ಇಲ್ಲವಾಗಿರುವ ಕಟ್ಟಡಗಳಲ್ಲಿ ಮೈಸೂರಿನಲ್ಲಿದ್ದ ಅವನ ಅರಮನೆಯೂ ಒಂದು.

ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಮುಸ್ಲಿಂ ರೀತಿಯ ಕೆಲವೇ ಕಟ್ಟಡಗಳಲ್ಲಿ ಟಿಪ್ಪು ಕಟ್ಟಿಸಿದ ಕಟ್ಟಡಗಳು ಅತ್ಯಂತ ಪ್ರಾಮುಖ್ಯವನ್ನು ಪಡೆದಿವೆ. (ಎಂ.ಎಚ್.)

**ಟೇಕಲ್ :** ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿರುವ ಗ್ರಾಮ. ಬೆಂಗಳೂರು-ಮದರಾಸು ರೈಲುಮಾರ್ಗದಲ್ಲಿ ಮಾಲೂರು-ಬಂಗಾರಪೇಟೆ ಮಧ್ಯದಲ್ಲಿರುವ ನಿಲ್ದಾಣ. ಕೋಲಾರದಿಂದ 18ಕಿಮೀ ದೂರದಲ್ಲಿದೆ. ಟೇಕಲ್ ಮಾರ್ಗವಾಗಿ ಮಾಲೂರಿನಿಂದ ಬಂಗಾರಪೇಟೆಗೆ ದೊಡ್ಡ ರಸ್ತೆ ಸಹ ಇದೆ.

ಹಿಂದೆ ಈ ಊರು ಟೇಕಲ್‍ನಾಡು ಎಂಬ ಪ್ರಾಂತ್ಯದ ಕೇಂದ್ರವಾಗಿತ್ತು. ಇಲ್ಲಿ ಹಲವು ಐತಿಹಾಸಿಕ ಅವಶೇಷಗಳಿವೆ. ಇಲ್ಲಿಯ ವರದರಾಜ ದೇವಸ್ಥಾನ ಸುಂದರವಾದ ದೊಡ್ಡ ಗುಡಿ. ಅದರ ಮಹಾದ್ವಾರ ದ್ರಾವಿಡಶೈಲಿಯಲ್ಲಿದ್ದು ಪಶ್ಚಿಮಾಭಿಮುಖವಾಗಿದೆ. ಅನೇಕ ತಮಿಳು ಶಾಸನಗಳನ್ನು ಹೊಂದಿದೆ. ಜೀರ್ಣವಾಗಿರುವ ಶಿಂಗಪ್ಪೆರುಮಾಳ್ ದೇವಸ್ಥಾನ ಕೂಡ ಉತ್ತಮ ಕಟ್ಟಡವಾಗಿದ್ದು ಶಿಲ್ಪಿತ ಶಿಲಾಸ್ತಂಭಗಳಿಂದ ಕೂಡಿದೆ. ಆಂಜನೇಯ ದೇವಸ್ಥಾನದಲ್ಲಿ ಕೈ ಮುಗಿದು ನಿಂತಿರುವ 7' ಎತ್ತರದ ಆಂಜನೇಯ ಮೂರ್ತಿ ಇದೆ. ಭಗ್ನವಾಗಿರುವ ಪಟಾಳಮ್ಮ ದೇವಸ್ಥಾನದಲ್ಲಿ 3' ಎತ್ತರದ 4 ಕೈಗಳುಳ್ಳ ಕುಳಿತ ಭಂಗಿಯಲ್ಲಿರುವ ದೇವತೆಯಿದೆ. ಈ ಗ್ರಾಮದಲ್ಲಿ ಇನ್ನೂ ಅನೇಕ ಪಾಳುಬಿದ್ದ ದೇವಾಲಯಗಳಿವೆ. ಒಂದು ಕಾಲದಲ್ಲಿ ಈ ಗ್ರಾಮ 101 ದೇವಾಲಯಗಳನ್ನೂ 101 ಹೊಂಡಗಳನ್ನೂ ಹೊಂದಿತ್ತೆಂದು ಪ್ರತೀತಿ.

ದೊಡ್ಡ ಬಂಡೆ ಮತ್ತು ಶಿಲೆಗಳಿಂದ ಕೂಡಿರುವ ಟೇಕಲ್ ಬೆಟ್ಟದಲ್ಲಿ ಭೀಮನ ಗರಡಿಯಾಗಿತ್ತೆಂದು ಪ್ರಸಿದ್ಧವಾಗಿರುವ ಒಂದು ಗುಹೆಯಿದೆ. ಇದಕ್ಕೆ ಹೋಗುವ ಮಾರ್ಗ ಬಹಳ ಕಠಿಣ. ಗುಹೆಯ ಅಳತೆ 150'x70'x50' ಪದರಗಳಿಂದ ಕೂಡಿದ ಮೃದುಮಣ್ಣಿನ ನೆಲದಲ್ಲಿ ಅನೇಕ ಗುಂಡಿಗಳಿವೆ. ಭೀಮ ಬಳಿದುಕೊಳ್ಳಲು ಕೈಬೊಗಸೆಯಲ್ಲಿ ಮಣ್ಣನ್ನು ಎತ್ತಿಕೊಳ್ಳುತ್ತಿದ್ದುದರಿಂದ ಆ ಗುಂಡಿಗಳು ಆದುವು ಎಂದು ನಂಬಿಕೆ.

ಟೇಕಲ್‍ನಿಂದ ಉತ್ತರಕ್ಕೆ ಭೂಪತಿಯಮ್ಮನ ಗುಡ್ಡ ಇದೆ. ಹಿಂದೆ ಅರಸರು ಹಣ ಬಚ್ಚಿಡುತ್ತಿದ್ದರೆಂದು ಹೇಳಲಾಗುವ ಇಲ್ಲಿನ ಕಿರುಗವಿಯೊಂದನ್ನು ರೊಕ್ಕದ ಗವಿಯೆಂದು ಕರೆಯುತ್ತಾರೆ. ಹಿಂದೆ ಟೇಕಲ್‍ನಲ್ಲಿ ಉಪ್ಪು ತಯಾರಿಸಲಾಗುತ್ತಿತ್ತು. (ಕೆ.ವಿ.ಟಿ.)

**ಟೇಲರ್, ಮೆಡೋಸ್ :** 1808-1876. ಭಾರತದಲ್ಲಿದ್ದ ಒಬ್ಬ ಬ್ರಿಟಿಷ್ ಅಧಿಕಾರಿ, ಕಾದಂಬರಿಕಾರ, ಪುರಾತತ್ತ್ವಜ್ಞ. ಫಿಲಿಪ್ ಮೆಡೋಸ್ ಟೇಲರ್ ಎಂಬುದು ಇವನ ಪೂರ್ಣ ಹೆಸರು. ಲಿವರ್‍ಪೂಲ್‍ನ ವರ್ತಕನೊಬ್ಬನ ಮಗನಾದ ಈತ 1808ರಲ್ಲಿ ಹುಟ್ಟಿದ. ಇವನು ತನ್ನ 16ನೆಯ ವಯಸ್ಸಿನಲ್ಲಿ ಭಾರತಕ್ಕೆ ಬಂದು ಹೈದರಾಬಾದ್ ನಿಜಾಮನ ಸೈನ್ಯಕ್ಕೆ ಸೇರಿ ದೊಡ್ಡ ಹುದ್ದೆಗೆ ಏರಿದ. ಸು.1840ರಿಂದ ಸುರಪುರ ನಾಯಕರ ಸಂಸ್ಥಾನದ ಆಗಿನ ಬ್ರಿಟಿಷ್ ಸರ್ಕಾರದ ರಾಜಕೀಯ ಪ್ರತಿನಿಧಿಯಾಗಿ, ಸಂಸ್ಥಾನದ ಏಳಿಗೆಗಾಗಿ ಶ್ರಮಿಸಿ ದಕ್ಷನೆಂದು ಪ್ರಸಿದ್ಧಿಪಡೆದ. ಇವನು ಬರುವ ಮುನ್ನ ಆ ಸಂಸ್ಥಾನದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ ತೀರ ಹದಗೆಟ್ಟಿತ್ತು. ಕೃಷ್ಣಪ್ಪನಾಯಕನ ಮರಣಾನಂತರ ಅವನ ಹಿರಿಯ ರಾಣಿ ಈಶ್ವರಮ್ಮ ತನ್ನ ಚಿಕ್ಕವಯಸ್ಸಿನ ಮಗ ವೆಂಕಟಪ್ಪನಾಯಕನ ಹೆಸರಿನಲ್ಲಿ ಸಂಸ್ಥಾನವನ್ನು ಆಳುತ್ತಿದ್ದಳು. ರಾಜಮನೆತನದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ಒಳಜಗಳಗಳನ್ನು ತಪ್ಪಿಸಲು ಟೇಲರ್ ತಾಳ್ಮೆಯಿಂದಲೂ ಚತುರತೆಯಿಂದಲೂ ಪ್ರಯತ್ನಿಸಿದ. ಸಂಸ್ಥಾನದ ಸುಧಾರಣೆಗಾಗಿ ದುಡಿದ. 10 ವರ್ಷದ ವೆಂಕಟಪ್ಪನಾಯಕನಿಗೆ ಸಿಂಹಾಸನದ ಮೇಲೆ ಕೂರಿಸಿ, ಪಟ್ಟಾಭಿಷೇಕ ನೆರವೇರಿಸಿದ. ವೆಂಕಟಪ್ಪನಾಯಕನಿಗೆ ವಿದ್ವಾಂಸರಿಂದ ಶಿಕ್ಷಣ ಕೊಡಿಸಿದ. ರಾಜ್ಯದಲ್ಲಿ ರೈತರಿಗಾಗುತ್ತಿದ್ದ ತೊಂದರೆಗಳನ್ನು ನಿವಾರಿಸಿ ಸುರಪುರದ ಮೇಲೆ ಅನ್ಯಾಯದ ಸಾಲದ ಹೊರೆ ಏರಿಸಿದ್ದನ್ನು ತಪ್ಪೆಂದು ತೋರಿಸಿ ಅವರಿಂದಲೇ ಸುರಪುರಕ್ಕೆ 11 ಲಕ್ಷ ರೂ. ಬರುವ ಹಾಗೆ ಮಾಡಿದ. ಇವನ ಸುವ್ಯವಸ್ಥಿತ ಆಡಳಿತದಿಂದ ಸಂಸ್ಥಾನದಲ್ಲಿ ದರೋಡೆಗಳು ಕಡಿಮೆಯಾದುವು. ಜೋನಾಳ, ಕಚಕನೂರು ಮುಂತಾದೆಡೆಗಳಲ್ಲಿ ಕೆರೆಗಳು ನಿರ್ಮಾಣವಾದುವು. ರಾಜ್ಯದ ಖರ್ಚನ್ನು ಕಡಿಮೆ ಮಾಡಿ ಆದಾಯವನ್ನು ಹೆಚ್ಚಿಸಿದ. ರಾಜ ವೆಂಕಟಪ್ಪನಾಯಕನು ಇವನಿಂದ ಬ್ರಿಟಿಷರ ರಾಜ್ಯ ಪದ್ಧತಿ, ಸ್ವಾಭಿಮಾನ, ಸ್ವಾತಂತ್ರ್ಯಪ್ರಿಯತೆ ಮುಂತಾದವನ್ನು ಕಲಿತುಕೊಂಡ. 1853ರ ಜೂನ್ 2ರಂದು ಟೇಲರ್ ಆಡಳಿತದ ಅಧಿಕಾರವನ್ನು ವೆಂಕಟಪ್ಪನಾಯಕನಿಗೆ ಒಪ್ಪಿಸಿ ಬೀರಾರ್ ಜಿಲ್ಲಾಧಿಕಾರಿಯ ಹುದ್ದೆ ವಹಿಸಿಕೊಂಡ. ರಾಜ ವೆಂಕಟಪ್ಪನಾಯಕ ಟೇಲರ್‍ನ ಪ್ರೀತಿಯ ಮತ್ತು ಉತ್ತಮ ಕಾರ್ಯಗಳ ಜ್ಞಾಪಕಾರ್ಥವಾಗಿ ಅವನು ಸುರಪುರದಲ್ಲಿ ವಾಸಿಸುತ್ತಿದ್ದ ಬಂಗ್ಲೆಯನ್ನು ಕೃತಜ್ಞತಾಪೂರ್ವಕವಾಗಿ 20,000 ರೂ.ಗಳಿಗೆ ಕೊಂಡ. ಇದನ್ನು ಟೇಲರ್ ಮಂಜಿಲ್ ಎಂದು ಕರೆಯುತ್ತಾರೆ. ಈಗ ಇದು ಕರ್ನಾಟಕ ಸರ್ಕಾರದ ಪುರಾತತ್ತ್ವ ಶಾಖೆಯ ರಕ್ಷಣೆಯಲ್ಲಿದೆ. ಇವನು ಹೈದರಾಬಾದ್ ಸಂಸ್ಥಾನದಲ್ಲಿ ರೆಸಿಡೆಂಟ್ ಜನರಲ್ ಆಗಿದ್ದಾಗ ಠಕ್ಕರನ್ನು ಅಡಗಿಸಿದ್ದು ಇವನ ಇನ್ನೊಂದು ಮುಖ್ಯ ಸಾಧನೆ.

ಕರ್ನಾಟಕ ಪ್ರಾಗಿತಿಹಾಸ ಸಂಶೋಧನೆಯಲ್ಲಿ ಟೇಲರ್‍ನ ಪಾತ್ರ ದೊಡ್ಡದು. ಈತ 1851-62ರಲ್ಲಿ ಸುರಪುರ ಭಾಗದಲ್ಲಿಯ ಹಗರಟಗಿ, ರಾಜನಕೋಳೂರು ಮತ್ತು ಚಿಕನಹಳ್ಳಿ, ಶಾಹಪುರ ತಾಲ್ಲೂಕಿನ ಶಾಹಪುರ, ವಿಭೂತಿಹಳ್ಳಿ ಮತ್ತು ಗೋಗಿ, ಜೇವರಗಿ ತಾಲ್ಲೂಕಿನ ಜೇವರಗಿ, ಆಂದೋಲಾ ಮುಂತಾದ ಕಡೆಗಳಲ್ಲಿ, ಕರ್ನಾಟಕದಲ್ಲೇ ಪ್ರಥಮ ಬಾರಿಗೆ, ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳ ನೆಲೆಗಳನ್ನು ಶೋಧಿಸಿದ. ಅವುಗಳಲ್ಲಿ ಕೆಲವನ್ನು ಉತ್ಖನನ ಮಾಡಿದ. ಈ ಉತ್ಖನನಗಳಿಂದ ತಿಳಿದ ವಿಷಯಗಳನ್ನು ಸ್ಪಷ್ಟವಾದ, ಪ್ರಾಮಾಣಿಕವಾದ, ಆಗಿನ ಸಂಶೋಧನ ಮಟ್ಟದಿಂದ ಅತ್ಯುತ್ತಮವೆನ್ನಬಹುದಾದ, ವಿಮರ್ಶಾತ್ಮಕವಾದ ವಿವರಣೆಗಳಿಂದಲೂ ಚಿತ್ರಗಳಿಂದಲೂ ಕೂಡಿದ ಮೂರು ಲೇಖನಗಳನ್ನು ಜರ್ನಲ್ ಆಫ್ ದಿ ಬೆಂಗಾಲ್ ರಾಯಲ್ ಏಷ್ಯಾಟಿಕ್ ಸೊಸೈಟಿಯಲ್ಲೂ ಟ್ರಾನ್ಸಾಕ್ಷನ್ ಆಫ್ ದಿ ರಾಯಲ್ ಐರಿಷ್ ಅಕಾಡೆಮಿಯಲ್ಲೂ ಪ್ರಕಟಿಸಿದ. ಈ ಲೇಖನಗಳನ್ನು ಸಂಗ್ರಹಿಸಿ ಹಿಂದಿನ ಹೈದರಾಬಾದ್ ಸರ್ಕಾರ ಮೆಗಾಲಿತಿಕ್ ರಿಮೇನ್ಸ್ ಇನ್ ದಿ ಡೆಕ್ಕನ್ ಎಂಬ ಪುಸ್ತಕವಾಗಿ ಪ್ರಕಟಿಸಿತು. ದಕ್ಷಿಣ ಭಾರತದ ಪ್ರಾಗಿತಿಹಾಸದಲ್ಲಿ ಒಂದು ವಿಶಿಷ್ಟಸ್ಥಾನ ಪಡೆದಿರುವ ಬೃಹತ್ ಶಿಲಾಸಂಸ್ಕೃತಿಯ ಬಗ್ಗೆ ಪ್ರಪ್ರಥಮ ಉತ್ಖನನ ನಡೆಸಿ ಶ್ರೇಷ್ಠಮಟ್ಟದ ಸಂಶೋಧನೆ ನಡೆಸಿದ ಕೀರ್ತಿ ಟೇಲರನದು. ಇವನು ಬ್ರಿಟಿಷ್ ಸರ್ಕಾರದಿಂದ ಸಿ.ಎಸ್.ಐ. ಪ್ರಶಸ್ತಿ ಗಳಿಸಿದ.

ಭಾರತದ ಜನಜೀವನವನ್ನು ಕುರಿತು ಇವನು ಕೆಲವು ಕಾದಂಬರಿಗಳನ್ನು ಬರೆದಿದ್ದಾನೆ. ಕನ್ಫೆಷನ್ಸ್ ಆಫ್ ಎ ಠಗ್ (1839), ತಾರಾ (1863), ಎ ನೋಬಲ್ ಕ್ವೀನ್ (1878) ಇವು ಮುಖ್ಯ ಕೃತಿಗಳು. ದಿ ಸ್ಟೋರಿ ಆಫ್ ಮೈ ಲೈಫ್ ಎಂಬುದು ಈತನ ಆತ್ಮಕಥೆ. (ಎ.ಎಸ್.,ಎಚ್.ವಿ.ಎಸ್.)

# ಡ

**ಡಂಬಳ :** ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಗದಗಿನ ಆಗ್ನೇಯಕ್ಕೆ ಸು.20ಕಿಮೀ ದೂರದಲ್ಲಿದೆ. ಸುಂದರ ಪ್ರಾಚೀನ ದೇವಾಲಯಗಳಿಂದ ಪ್ರಸಿದ್ಧವಾಗಿದೆ. 1862ರಲ್ಲಿ ಈ ಊರು ಮುಂಡರಗಿ ತಾಲ್ಲೂಕಿಗೆ ವರ್ಗಾವಣೆಯಾಗುವವರೆಗೆ ಇದೇ ಆಡಳಿತ ವಿಭಾಗದ ಕೇಂದ್ರವಾಗಿತ್ತು. ದ್ರಾಕ್ಷಿ, ಸೀಬೆ ಇಲ್ಲಿಯ ವಿಶೇಷ ಬೆಳೆಗಳು. ಕೈಮಗ್ಗದಲ್ಲಿ ಕಂಬಳಿಗಳನ್ನು ತಯಾರಿಸುವ ಉದ್ಯಮ ಈ ಊರಲ್ಲಿದೆ.

10-12ನೆಯ ಶತಮಾನಗಳಲ್ಲಿ ಇದಕ್ಕಿದ್ದ ಹೆಸರು ಧರ್ಮಪುರ ಅಥವಾ ಧರ್ಮವೊಳಲ್. 6ನೆಯ ವಿಕ್ರಮಾದಿತ್ಯನ ಅರಸಿ ಲಕ್ಷ್ಮೀದೇವಿ ಇಲ್ಲಿಂದ ಆಳುತ್ತಿದ್ದಳು. ಇಲ್ಲಿ ದೊರಕಿರುವ ಒಂದು ಶಾಸನದಿಂದ ಈ ಊರು 10-12ನೆಯ ಶತಮಾನಗಳಲ್ಲಿ ಬೌದ್ಧಕೇಂದ್ರವಾಗಿತ್ತೆಂದೂ ಬುದ್ಧ ಹಾಗೂ ತಾರಾ ದೇವತೆಗಳಿದ್ದ ಎರಡು ವಿಹಾರಗಳಿದ್ದವೆಂದೂ ತಿಳಿಯುತ್ತದೆ. ಆದರೆ ಈಗ ಬೌದ್ಧ ಅವಶೇಷಗಳು ಯಾವುವೂ ಉಳಿದಿಲ್ಲ. ಮತ್ತೆ ಕೆಲವು ಶಾಸನಗಳಿಂದ ಇಲ್ಲಿ ಚೈತ್ಯಾಲಯ, ಅಜ್ಜಮೇಶ್ವರ ಶಿವಭವನ ಮತ್ತು ಸ್ವಯಂಭು ಮೈಲಭೇಶ್ವರ ಎಂಬ ದೇವಾಲಯಗಳು 11 ಮತ್ತು 12ನೆಯ ಶತಮಾನಗಳಲ್ಲಿ ಕಟ್ಟಲಾದುವು ಎಂದು ತಿಳಿದುಬರುತ್ತದೆ. ಈ ಕಾಲದ ಎರಡು ದೇವಾಲಯಗಳು ಮಾತ್ರ ಈಗ ಚೆನ್ನಾಗಿ ಉಳಿದಿವೆ. ಜೈನ ದೇವಾಲಯದ ಮುಂಭಾಗದ ಗೋಡೆಯ ಶಾಸನದಲ್ಲಿ ಇದನ್ನು ಚೈತ್ಯಾಲಯ ಅಥವಾ ನಗರ ಜಿನಾಲಯವೆಂದು ಹೇಳಿದೆ. ಇದನ್ನು ಸಂಗವಸೆಟ್ಟಿ ಎಂಬುವನು 1098ರಲ್ಲಿ ಕಟ್ಟಿಸಿದ. ಇದು ಆಗಿನ ಕಾಲದ ಸಾಮಾನ್ಯವಾದ ಶೈಲಿಯಲ್ಲಿರುವ ಸರಳ ಕಟ್ಟಡ.

ದೊಡ್ಡಬಸಪ್ಪ ದೇವಾಲಯ

ಇದರ ಸಮೀಪದಲ್ಲಿ ಇರುವ ಈಗ ದೊಡ್ಡ ಬಸವಣ್ಣನೆಂದು ಕರೆಸಿಕೊಳ್ಳುತ್ತಿರುವ ದೇವಾಲಯ ಮಾತ್ರ ವಿಶಿಷ್ಟ ಶೈಲಿಯದು. ಇದೇ ಪ್ರಾಯಶಃ 1124 ಅಥವಾ 1126ರಲ್ಲಿ ಅಜ್ಜಯ್ಯ ನಾಯಕನೆಂಬುವನು ಕಟ್ಟಿಸಿದ ಅಜ್ಜಮೇಶ್ವರ ಶಿವಭವನ. ಇದು ಗರ್ಭಗೃಹ, ಅರ್ಧಮಂಟಪ ಮತ್ತು ಸಭಾಮಂಟಪ, ಪೂರ್ವ ಮತ್ತು ದಕ್ಷಿಣಾಭಿಮುಖವಾಗಿರುವ ಎರಡು ಮುಖಮಂಟಪಗಳಿಂದ ಕೂಡಿದೆ. ಹೆಚ್ಚಾಗಿ ಅಲಂಕರಣವಿಲ್ಲದೆ ಸರಳವಾಗಿದ್ದರೂ ಇದರ ತಳವಿನ್ಯಾಸದ ಹಾಗೂ ಊರ್ಧ್ವವಿನ್ಯಾಸದ ವೈಶಿಷ್ಟ್ಯವೇ ಈ ದೇವಾಲಯವನ್ನು ಅಪೂರ್ವವಾಗಿ ಮಾಡಿದೆ. ಗರ್ಭಗೃಹವಷ್ಟೇ ಅಲ್ಲದೆ ಅರ್ಧಮಂಟಪ ಮತ್ತು ಸಭಾಮಂಟಪವೂ ಕೂಡಿ ವೃತ್ತಾಕಾರದ ನಕ್ಷತ್ರಾಕೃತಿಯ ತಳವಿನ್ಯಾಸದಲ್ಲಿದೆ. ತತ್ಪರಿಣಾಮವಾಗಿ ಊರ್ಧ್ವವಿನ್ಯಾಸದಲ್ಲಿ ಶಿಖರದ ತನಕ ಉದ್ದನೆ ಪಟ್ಟಿಗಳನ್ನು ವರ್ತುಳಾಕಾರದಲ್ಲಿ ಕ್ರಮಬದ್ಧವಾಗಿ ಜೋಡಿಸಿಟ್ಟಂತೆ ಎದ್ದುಕಾಣುವುದು. ಗೋಡೆಗಳು ಇದಕ್ಕನುಗುಣವಾಗಿ ಮುಂದಕ್ಕೆ ಚಾಚಿ ಹಿಂದಕ್ಕೆ ಸರಿದು ಉಬ್ಬುತಗ್ಗುಗಳಿಂದ ಕೂಡಿವೆ. ಅಧಿಷ್ಠಾನವನ್ನು ಅಡ್ಡಪಟ್ಟಿಕೆಗಳಿಂದ ಮಡಿಕೆ ಮಡಿಕೆಯಾಗಿ ಬಿಡಿಸಲಾಗಿದೆ. ಗೋಡೆಗಳ ಏರು-ತಗ್ಗುಗಳಲ್ಲಿ ಒಂದಾದಮೇಲೆ ಒಂದರಂತೆ ಆಲಂಕಾರಿಕ ತೋರಣ ಮತ್ತು ಕಂಬಗಳ ಉಬ್ಬುಶಿಲ್ಪಗಳಿವೆ. ಇವುಗಳ ಮೇಲೆ ದೇವ ದೇವತೆಗಳ ಸಣ್ಣಸಣ್ಣ ಅಲ್ಪ ಉಬ್ಬಿನ ಶಿಲ್ಪಗಳಿವೆ.

ಊರ ಹೊರಗೆ ತೋಟದಸ್ವಾಮಿ ಮಠವಿದೆ. ಇದು ಕರಿಕಲ್ಲಿನಲ್ಲಿ ಕಟ್ಟಿರುವ ಈಚಿನ ಕಟ್ಟಡ. ಇಲ್ಲಿ ಹಲವು ಚಾಳುಕ್ಯ ವಾಸ್ತು ಸಂಪ್ರದಾಯದ ಅಂಶಗಳ ಅಳವಡಿಕೆ ಪ್ರಯತ್ನ ನಡೆದಿದೆ. ಆ ಮಠಕ್ಕೆ ಸುತ್ತಲ ಪ್ರದೇಶದಲ್ಲಿ ಅನೇಕ ಉಪಮಠಗಳಿವೆ. ಸ್ವಲ್ಪ ದೂರದಲ್ಲಿ ಹಳೆಯ ಕಾಲದ ಕೋಟೆಯ ಅವಶೇಷಗಳಿವೆ. ಈ ಕೋಟೆಯಲ್ಲಿ ಸು.1842ರವರೆಗೂ ವಸತಿ ಇತ್ತು. ಡಂಬಳದ ಬಳಿ ಇರುವ ಕೆರೆ ದೊಡ್ಡದು. ಇದು ಸು.400 ವರ್ಷಗಳಷ್ಟು ಹಳೆಯದು ಎನ್ನಲಾಗಿದೆ. (ಎ.ಎಸ್.)

**ಡಕ್ಕೆಯ ಬೊಮ್ಮಣ್ಣ :** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಹುನಗುಂದ ತಾಲ್ಲೂಕಿನ ಕಂದಗಲ್ಲು (ಸ್ಕಂದಶಿಲೆ) ಈತನ ಜನ್ಮಸ್ಥಳ. ವೀರಶೈವಾಮೃತ ಮಹಾಪುರಾಣದಲ್ಲಿ ಈತನನ್ನು ಡಕ್ಕೆಯ ಮಾರಿತಂದೆ ಎಂದು ಕರೆದಿದ್ದರೆ, ಪ್ರೌಢರಾಯನ ಕಾವ್ಯದಲ್ಲಿ ಡಕ್ಕೆಯ ಮಾರಿದೇವಯ್ಯನೆಂದೂ ಭೈರವೇಶ್ವರಕಾವ್ಯದಲ್ಲಿ ಡಕ್ಕೆಯ ಬ್ರಹ್ಮದೇವನೆಂದೂ ಹೇಳಲಾಗಿದೆ. ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಡಕ್ಕೆಯ ಮಾರಯ್ಯಗಳು ಭಕ್ತರಂಗಳದಲ್ಲಿ ಡಕ್ಕೆಯಂ ಬಾರಿಸಿ, ಮಾರಿಯಂ ಕುಣಿಸಿ, ಉಡಿಯಲ್ಲಿ ತಲೆಯಲ್ಲಿ ಬೇವಿನ ಸೊಪ್ಪಂ ಕಟ್ಟಿಕೊಂಡು, ಮಾರಿಯಂ ಮುಂದಿಟ್ಟುಕೊಂಡು ಆಚಾರವಂ ತೋರಿ ಸಾರುತ್ತಿಹರು ಎಂಬ ಕಥೆ ಬರುತ್ತದೆ. ಆದ್ಯರ ವಚನಗಳನ್ನು ಉಗ್ಗಡಿಸಿ, ನೀತಿ ವಿನಯ ಭಕ್ತಿ ಸದಾಚಾರಗಳನ್ನು ಜನರಿಗೆ ಕಲಿಸುತ್ತಿದ್ದ ಈತ ಮಾರಿಯನ್ನು ತನ್ನ ಕಾಯಕದ ಸಾಧನವನ್ನಾಗಿ ಮಾಡಿ ಅದನ್ನು ಇಷ್ಟಲಿಂಗದ ಎತ್ತರಕ್ಕೆ ಏರಿಸಿದ.

ಇದುವರೆಗೆ ಇವನ 89 ವಚನಗಳು ಉಪಲಬ್ಧವಿವೆ. ಕಾಲಾಂತಕ ಭೀಮೇಶ್ವರ ಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಶೈಲಿ ಸುಸಂಸ್ಕೃತವೂ ಪ್ರೌಢವೂ ಆತ್ಮೀಯವೂ ಆಗಿದೆ. ಇವನ ವಚನಗಳಲ್ಲಿ ಕಾಯಕ, ಜ್ಞಾನ, ಭಕ್ತಿ, ದಾಸೋಹ, ಮಾಯೆ, ಮಾರಿ ಮುಂತಾದವುಗಳನ್ನು ಕುರಿತ ಹೊಸ ವಿಚಾರಗಳು ನಿರೂಪಿತವಾಗಿವೆ. ಮಹಾದೇವನನ್ನು ಮರೆದವರಿಗೆ ಮಾಯಾಂಗನೆ ಮಾರಿಯಾದಳು; ಸತ್‌ಶ್ರೀ ಸಜ್ಜನಯುಕ್ತಿಯಿಂದ ಸದಾಶಿವನನರಿಯಲಾಗಿ ಉಮಾದೇವಿಯಾದಳು; ಆವ ಕಾಯಕವಾದರೂ ಭಾವಶುದ್ಧವಾಗಿ ಮಾಡುವುದೇ ಜಂಗಮಪೂಜೆ, ನಿಯಮ ಕ್ರಿಯೆ ತಪ್ಪದೆ ಮಾಡುವುದೇ ದೇವಪೂಜೆ; ಡಕ್ಕೆಯ ದನಿ ಬಿಟ್ಟಾಗ ಭವ ಹಿಂಗುವುದು-ಮುಂತಾದ ಸುಂದರ ವಚನಗಳಿಂದ ಅಂದಿನ ಕಾಲದ ಧಾರ್ಮಿಕ ಜೀವನಕ್ಕೆ ಒಂದು ಹೊಸ ತಿರುವು ಕೊಟ್ಟ. ಈತನ ಚರಿತೆ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ, ಅದೃಶ್ಯ ಕವಿಯ ಪ್ರೌಢರಾಯನಕಾವ್ಯ, ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಕಿಕ್ಕೇರಿ ಆರಾಧ್ಯ ನಂಜುಂಡನ ಭೈರವೇಶ್ವರಕಾವ್ಯ ಮೊದಲಾದ ಗ್ರಂಥಗಳಲ್ಲಿ ನಿರೂಪಿತವಾಗಿದೆ. (ಎಸ್.ಆರ್‌ಎ.;ಕೆ.ಎಂ.)

**ಡಾಬಸ್ ಪೇಟೆ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಶಿವಗಂಗೆಗೆ ಸು.8ಕಿಮೀ ಉತ್ತರಕ್ಕಿರುವ ಸಣ್ಣ ಊರು. 1899-1901ರ ನಡುವೆ ಮೈಸೂರು ಸಂಸ್ಥಾನದ ಅಸಿಸ್ಟೆಂಟ್ ರೆಸಿಡೆಂಟನಾಗಿದ್ದ ಮೇಜರ್ ಜನರಲ್ ಎಚ್.ಆರ್.ಸಿ.ಡಾಬ್ಸ್ ಎಂಬಾತನ ನೆನಪಿಗಾಗಿ ಈ ಊರಿಗೆ ಈ ಹೆಸರಿಡಲಾಗಿದೆ.

ಶಿವಗಂಗಾ ಕ್ಷೇತ್ರಕ್ಕೆ ಹೋಗುವ ಯಾತ್ರಿಕರು ತುಮಕೂರು-ಬೆಂಗಳೂರು ರೈಲುಮಾರ್ಗದ ನಿಡುವಂದ ಸ್ಟೇಷನ್ನಿಗೆ ಸಮೀಪದಲ್ಲಿ ಇಳಿದು ಈ ಊರಿನ ಮೂಲಕ ಹೋಗುತ್ತಾರೆ. ಈ ಊರು ಹಲವು ರಸ್ತೆಗಳು ಸೇರುವ ಸ್ಥಳ. ಕೊರಟಗೆರೆ, ದೊಡ್ಡಬಳ್ಳಾಪುರ, ತ್ಯಾಮಗೊಂಡ್ಲು, ನಿಡುವಂದ, ಎಲೆಕ್ಯಾತನಹಳ್ಳಿ ಮೊದಲಾದ ಸ್ಥಳಗಳಿಗೆ ಇಲ್ಲಿಂದ ರಸ್ತೆಗಳಿವೆ. (ವಿ.ಜಿ.ಕೆ.)

**ಡಿಕ್ಕಿ ಮಾಧವರಾವ್ :** ಕನ್ನಡ ವೃತ್ತಿರಂಗಭೂಮಿಯ ಹಿರಿಯ ಕಲಾವಿದ. ಇವರು ಹುಟ್ಟಿದ್ದು 1919ರಲ್ಲಿ ಜನಿಸಿದರು. ಇವರ ತಂದೆ

ಅಮಲ್ದಾರ್ ಮೈಲಾರಿರಾವ್. ಮಾಧವರಾವ್ ಚಿಕ್ಕವ ರಾಗಿದ್ದಾಗಲೇ ನಾಟಕದ ಗೀಳು ಹಚ್ಚಿಸಿಕೊಂಡಿದ್ದರು. ಶಾಲೆಯಲ್ಲಿ ಓದುತ್ತಿದ್ದಾಗ ಶಾಲೆಯ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ನಡೆದ ನಾಟಕದಲ್ಲಿ ಪಾತ್ರ ವಹಿಸಿದ್ದರು. ರಂಗಭೂಮಿ ಯಲ್ಲಿ ಖ್ಯಾತನಾಮರಾದ ಮಹಮದ್ ಪೀರ್, ಎಚ್.ಎಲ್.ಎನ್.ಸಿಂಹ ಇವರಿಗಿಂತ ಹಿರಿಯರಾಗಿದ್ದರು. ಒಮ್ಮೆ ನಾಟಕವನ್ನು ನೋಡಲು ಬಂದಿದ್ದ ಎ.ವಿ.ವರದಾ ಚಾರ್ಯರು ಇವರ ಅಭಿನಯ ವನ್ನು ತುಂಬ ಮೆಚ್ಚಿಕೊಂಡರು. ಮಾರನೆಯ ದಿನವೇ ತಮ್ಮ ರತ್ನಾವಳಿ ಥಿಯೇಟರ್‌ನ ನಾಟಕಗಳಲ್ಲಿ ಪಾತ್ರ ವಹಿಸುವ ಅವಕಾಶವನ್ನು ಇವರಿಗೆ ಒದಗಿಸಿಕೊಟ್ಟರು. ವರದಾಚಾರ್ಯರ ಪ್ರೇರಣೆಯಿಂದ ಚಿಕ್ಕ ಪಾತ್ರಗಳ ಅಭಿನಯದೊಂದಿಗೆ ರಂಗಭೂಮಿಯನ್ನು ಪ್ರವೇಶಿಸಿದರು. ಆದರೆ ಆ ಕಂಪನಿಯಲ್ಲೇ ಉಳಿಯದೆ ಮೈಸೂರಿನ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ, ಗುಬ್ಬಿ ಕಂಪನಿ, ಮಹಮದ್‌ಪೀರ್ ಕಂಪನಿ ಮೊದಲಾದವುಗಳಲ್ಲಿ ತಮ್ಮ ಪ್ರತಿಭೆಯನ್ನು ಹೊಮ್ಮಿಸಿದರು. ಆ ಸಂದರ್ಭದಲ್ಲಿ ಇವರಿಗೆ ಹೆಸರು ತಂದ ನಾಟಕಗಳು ಮತ್ತು ಪಾತ್ರಗಳೆಂದರೆ ಎಚ್ಚಮನಾಯಕದ ಎಚ್ಚಮನಾಯಕನ ಪಾತ್ರ, ಸಂಸಾರನೌಕೆಯ ಡಿಕ್ಕಿಯ ಪಾತ್ರ.

ಸಂಸಾರ ನೌಕೆ ಕನ್ನಡ ವೃತ್ತಿರಂಗಭೂಮಿಯಲ್ಲಿ ಯಶಸ್ಸು ಗಳಿಸಿದ ಮೊದಲ ಸಾಮಾಜಿಕ ನಾಟಕ. ಇದರಲ್ಲಿ ಡಿಕ್ಕಿಯ ಪಾತ್ರದಲ್ಲಿ ಇವರ ಅದ್ಭುತ ಅಭಿನಯದಿಂದ ಇವರ ಹೆಸರಿನೊಂದಿಗೆ ಡಿಕ್ಕಿ ಸೇರ್ಪಡೆಯಾಯಿತು. ಸಂಸಾರನೌಕೆ ಚಲನಚಿತ್ರವಾದಾಗಲೂ ಡಿಕ್ಕಿಯ ಪಾತ್ರ ಇವರಿಗೇ ಮೀಸಲಾಗಿತ್ತು. ಈ ಚಿತ್ರದಲ್ಲಿ ಇವರ ಅಭಿನಯ ಸೊಗಸಾಗಿ ಮೂಡಿಬಂದಿದೆ. ಮಹಮದ್ ಪೀರ್ ಕಂಪನಿಯಲ್ಲಿದ್ದಾಗ ಬಿ.ಆರ್.ಪಂತುಲು ಅವರಂಥ' ನಟರು ಇವರಿಗಿಂತ ಕಿರಿಯರಾಗಿದ್ದರು. ಈ ನಾಟಕಗಳಲ್ಲದೆ ಇನ್ನೂ ಅನೇಕ ನಾಟಕಗಳಲ್ಲಿ ಇವರು ಅಭಿನಯಿಸಿದ್ದರು. ಸದಾರಮೆ (ಕಳ್ಳ-ಜಯವೀರ), ಕಾಳಿದಾಸ (ಭೋಜ), ಸುಭದ್ರೆ (ಅರ್ಜುನ-ಬಭ್ರುವಾಹನ), ದಾನಶೂರ ಕರ್ಣ (ದುರ್ಯೋಧನ-ಕರ್ಣ-ವಿದುರ)-ಇವು ಇವರು ಪಾತ್ರ ವಹಿಸಿದ ಇತರ ಕೆಲವು ನಾಟಕಗಳು. ಇವರ ಅಭಿನಯವನ್ನು ಮೆಚ್ಚಿದ ಜನರಿಂದ ಇವರು ಅರವತ್ತೆರಡಕ್ಕೂ ಹೆಚ್ಚು ಚಿನ್ನದ ಪದಕಗಳನ್ನು ಪಡೆದಿದ್ದರು. ಇವರು ನಾಟಕಗಳಲ್ಲೇ ಅಲ್ಲದೆ ಸಂಸಾರ ನೌಕೆ, ರಾಧಾರಮಣ, ವಾಣಿ, ಕೃಷ್ಣಲೀಲಾ, ಶಿವಪಾರ್ವತಿ, ಸತಿ ತುಳಸಿ, ಮೊದಲತೇದಿ, ಪಂಚರತ್ನ, ಶ್ರೀಶೈಲ ಮಹಾತ್ಮೆ, ವರದಕ್ಷಿಣೆ, ರತ್ನಗಿರಿರಹಸ್ಯ, ಮನೆ ಅಳಿಯ, ಸ್ಕೂಲ್ ಮಾಸ್ಟರ್ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿ ತಮ್ಮ ಅಭಿನಯದಿಂದ ಕಲಾಭಿಮಾನಿಗಳ ಹೃದಯವನ್ನು ಗೆದ್ದಿದ್ದರು. ಮೊದಲ ತೇದಿಯಲ್ಲಿ ಇವರು ಹಾಡಿದ ಹಾಡೊಂದು (ಒಂದರಿಂದ ಇಪ್ಪತ್ತರವರೆಗೆ) ಅಪಾರ ಜನ ಪ್ರಿಯವಾಯಿತು. (ಜಿ.ಆರ್.ಟಿ.)

**ಡೆಪ್ಯುಟಿ ಚೆನ್ನಬಸಪ್ಪ :** 1834-81. ಉತ್ತರ ಕರ್ನಾಟಕದಲ್ಲಿ ಕನ್ನಡದ ಅಭಿವೃದ್ಧಿಗಾಗಿ ಶ್ರಮಿಸಿದ ಕಳೆದ ತಲೆಮಾರಿನ ಹಿರಿಯರು. ಶಿಕ್ಷಣ ತಜ್ಞರೂ ಸಾಹಿತಿಗಳೂ ಆಗಿದ್ದ ಇವರು ಬಹಳ ವರ್ಷಗಳ ಕಾಲ ಡೆಪ್ಯುಟಿ ಇನ್ಸ್‌ಪೆಕ್ಟರ್ ಆಗಿದ್ದುದರಿಂದ ಡೆಪ್ಯುಟಿ ಚೆನ್ನಬಸಪ್ಪ ಎಂದೇ ಪ್ರಸಿದ್ಧರಾಗಿದ್ದರು. ಇವರ ಪೂರ್ಣ ಹೆಸರು ಚೆನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಎಂದು. ಧಾರವಾಡದ ಸಾಮಾನ್ಯ ಕುಟುಂಬವೊಂದರಲ್ಲಿ ಜನಿಸಿದ ಇವರು, ಉದ್ದಕ್ಕೂ ಪ್ರತಿಕೂಲ ಪರಿಸ್ಥಿತಿಯೊಂದಿಗೆ ಹೋರಾಡಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ತಮ್ಮ ಆರನೆಯ ವಯಸ್ಸಿಗೆ ತಂದೆಯನ್ನು ಕಳೆದುಕೊಂಡು, ತಾಯಿಯ ಆಶ್ರಯದಲ್ಲಿ ಬೆಳೆದು ಬಡತನದಲ್ಲಿಯೇ ಕಲಿತರು. ಆರಂಭದ ವ್ಯಾಸಂಗವನ್ನು ಧಾರವಾಡದಲ್ಲಿ ಮುಗಿಸಿ, ಮುಂದಿನ ವ್ಯಾಸಂಗಕ್ಕೆಂದು ಪುಣೆಗೆ ಹೋಗಿ, ಅಲ್ಲಿಯ ಉದಾರಿ ಶ್ರೀಮಂತರೊಬ್ಬರ ಆಶ್ರಯ ಪಡೆದು, ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ಅನಂತರ ಕಾಲೇಜಿನಲ್ಲಿ ಕೆಲವು ವರ್ಷ ಅಧ್ಯಾಪಕರಾಗಿಯೂ ಕೆಲಸ ಮಾಡಿದರು. ಆದರೆ ಕನ್ನಡ ನಾಡುನುಡಿಗಳ ಮೋಹಕ್ಕೆ ಸಿಕ್ಕಿ ಧಾರವಾಡಕ್ಕೆ ಹಿಂದಿರುಗಿದರು. ಕೆಲಕಾಲ ಅಂಚೆ ಇಲಾಖೆಯಲ್ಲಿದ್ದು ಅನಂತರ ಶಿಕ್ಷಣ ಇಲಾಖೆಯನ್ನು ಸೇರಿದರು. ಬೆಳಗಾಂವಿಯ ನಾರ್ಮಲ್ ಶಾಲೆಯ ಪ್ರಿನ್ಸಿಪಾಲರಾಗಿ 1856ರಲ್ಲಿ ನೇಮಕಗೊಂಡ ಇವರು ಐದು ವರ್ಷಗಳ ಅನಂತರ ಡೆಪ್ಯುಟಿ ಇನ್ಸ್‌ಪೆಕ್ಟರ್ ಆಗಿ ಬೆಳಗಾಂವಿ ಮತ್ತು ಧಾರವಾಡಗಳಲ್ಲಿ ಕೆಲಸಮಾಡಿದರು. ಆಗ್ಗೆ ಉತ್ತರ ಕರ್ನಾಟಕದ ಕನ್ನಡ ಶಾಲೆಗಳಲ್ಲಿ ಕನ್ನಡ ವಿದ್ಯಾರ್ಥಿಗಳು ಮರಾಠಿಯನ್ನು ಕಡ್ಡಾಯವಾಗಿ ಕಲಿಯಬೇಕಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಇವರು ಕನ್ನಡ ಅಭಿವೃದ್ಧಿಗಾಗಿ



ತಮ್ಮ ಅಧಿಕಾರದ ಉದ್ದಕ್ಕೂ ಶ್ರಮಿಸಿದರು. ಕನ್ನಡ ವಿದ್ಯಾರ್ಥಿಗಳು ಕನ್ನಡ ಕಲಿಯುವಂತಾಗಲು ಅನೇಕ ಸೌಲಭ್ಯಗಳನ್ನು ಕಲ್ಪಿಸಿದರು. ಕನ್ನಡ ಬಲ್ಲ ಶಿಕ್ಷಕರ ನೇಮಕ, ಕನ್ನಡದಲ್ಲಿ ಕ್ರಮಿಕ ಪುಸ್ತಕಗಳ ರಚನೆ, ಕನ್ನಡ ಪಂಡಿತರಿಗೆ ಪ್ರೋತ್ಸಾಹ-ಇಂಥ ಹಲವು ಕೆಲಸಗಳನ್ನು ಅವರು ಮಾಡಿದರು. ಕನ್ನಡದಲ್ಲಿ ಬರೆಯ ಬಲ್ಲ ಸಂಪ್ರದಾಯ ಪಂಡಿತರನ್ನು ಗುರುತಿಸಿ ಪ್ರೋತ್ಸಾಹ ಕೊಟ್ಟು ಅವರಿಂದ ಕನ್ನಡಕ್ಕೆ ಹೆಚ್ಚಿನ ಸೇವೆ ಸಲ್ಲುವಂತೆಯೂ ಮಾಡಿದರು. ಅಂಥವರಲ್ಲಿ ಗಂಗಾಧರ ಮಡಿವಾಳೇಶ್ವರ ತುರಮರಿ, ವೆಂಕಟರಂಗೋಕಟ್ಟಿ, ಪಾಂಡುರಂಗ ಚಿಂತಾಮಣಿ ಪೇಟಕರ ಮೊದಲಾದವರನ್ನು ಹೆಸರಿಸಬಹುದು.

ಚೆನ್ನಬಸಪ್ಪನವರು ಸ್ವತಃ ಷೇಕ್ಸ್‌ಪಿಯರ್ ಕವಿಯ 'ಕಾಮೆಡಿ ಆಫ್ ಎರರ್ಸ್' ಮತ್ತು 'ಮ್ಯಾಕ್‌ಬೆತ್' ಎಂಬ ಎರಡು ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಗಣಿತಶಾಸ್ತ್ರದಲ್ಲಿ ತಜ್ಞರಾಗಿದ್ದ ಇವರು ಆ ವಿಷಯವನ್ನು ಕುರಿತು ಅನೇಕ ಲೇಖನಗಳನ್ನು ಬರೆದಿದ್ದರೆನ್ನಲಾಗಿದೆ.

ಧಾರವಾಡವನ್ನು ಕನ್ನಡದ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದ ಚೆನ್ನಬಸಪ್ಪನವರು 1881 ಜನವರಿ 5ರಂದು ಧಾರವಾಡದಲ್ಲಿ ನಿಧನಹೊಂದಿದರು. (ಆರ್.ವೈ.ಡಿ.)

**ಡೊಳ್ಳು :** ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕುರುಬ ಜನಾಂಗಕ್ಕೆ ಸೇರಿದವರು ಹಬ್ಬಗಳಲ್ಲಿ, ಉತ್ಸವಗಳಲ್ಲಿ, ತಮ್ಮ ಸಮುದಾಯದ ಸಿದ್ಧಪುರುಷರ ಜಾತ್ರೆಗಳಲ್ಲಿ ಡೊಳ್ಳುವಾದ್ಯದೊಂದಿಗೆ ಹಾಡುತ್ತ ಕುಣಿವ ಮೇಳ. ಇದನ್ನು ಡೊಳ್ಳಿನ ಓಲಗ ಎಂದೂ ಕರೆಯುವರು. ಡೊಳ್ಳು ಒಂದು ಚರ್ಮವಾದ್ಯ. ಇದರ ಗಾತ್ರ ದೊಡ್ಡದು, ಭಾರ ಹೆಚ್ಚು, ನಾದವೂ ಹಿರಿದು. ಇದನ್ನು ಮಾವಿನ ಮರದ ಇಲ್ಲವೆ ಹೊನ್ನೆಮರದ ದಪ್ಪನೆ ಬೊಡ್ಡೆಯ ಟೊಳ್ಳಾದ ಅಖಂಡ ಭಾಗದ ಎರಡೂ ಬದಿಗೆ ಆಡಿನ ಅಥವಾ ಕುರಿಯ ತೊಗಲನ್ನು ನೂಲಿನ ಹಗ್ಗದಿಂದ ಬಿಗಿದು ತಯಾರಿಸುವರು. ಬಲ ಬದಿಯ ಚರ್ಮಕ್ಕೆ ಮಾತ್ರ ಎಣ್ಣೆಯ ಜಿಗಿಯನ್ನು ಲೇಪಿಸುವುದುಂಟು (ಕುಸುಬೆ ಎಣ್ಣೆ ಇದಕ್ಕೆ ಹೆಚ್ಚು ಒಳ್ಳೆಯದು). ಹೀಗೆ ಲೇಪಿಸುವುದರಿಂದ ಡೊಳ್ಳಿನ ಬಲಭಾಗದ ನಾದಮಾಧುರ್ಯ ಗಂಭೀರವಾಗಿರುತ್ತದೆ. ಎಡಬದಿಯ ನಾದ ಪಿರುದನಿಯಾಗಿ ನುಣುಪಾಗಿ ಕೇಳಿಸುತ್ತದೆ. ಡೊಳ್ಳನ್ನು ಗೋಣಿಗೆ ನೇತುಹಾಕಿಕೊಳ್ಳುವ ವ್ಯವಸ್ಥೆಯಿದ್ದು ಬಾರಿಸಲು ಗುಣಿ ಎಂಬ ಒಂದು ಅಡಿ ಉದ್ದವುಳ್ಳ ದಪ್ಪನೆ ಹಾಗೂ ಗಟ್ಟಿಯಾದ ಕೋಲು ಬಳಸುತ್ತಾರೆ.

ಡೊಳ್ಳು ಕುಣಿತ

ಡೊಳ್ಳಿನ ಸೃಷ್ಟಿಯು ಬಗ್ಗೆ ಒಂದು ಸ್ವಾರಸ್ಯಕರ ಜನಪದ ಕಥೆ ದೊರೆಯುತ್ತದೆ. ಒಂದು ದಿನ ಪರಶಿವ ಮತ್ತು ಪಾರ್ವತಿ ಹೊತ್ತುಕಳೆಯಲು ನೆತ್ತ ಆಡಲು ಕುಳಿತರಂತೆ. ಸೋತವರು ತಮ್ಮ ಸರ್ವಸ್ವವನ್ನು ಬಿಟ್ಟುಕೊಟ್ಟು ಕೈಲಾಸದಿಂದ ಹೊರಬಿದ್ದು ಯಾರಿಗೂ ಕಾಣದಂತೆ ವಾಸಿಸಬೇಕು ಎಂದು ಜಿದ್ದು ಕಟ್ಟಿದರು. ಆಟದಲ್ಲಿ ಶಿವ ಸೋತು ಭೂಲೋಕಕ್ಕೆ ಬಂದು ಒಂದು ಕಲ್ಲುಗವಿಯಲ್ಲಿ ಕಲ್ಲಾಗಿ ಬಿದ್ದ. ಇವನ ಕಾವಲಿಗಾಗಿ ಮಾಯಾಮೂರ್ತಿ ಮಾಯೆ ರೂಪದಿಂದ ಸುಳಿದಾಡುತ್ತಿದ್ದು ದಿನ, ಪಕ್ಷ, ಮಾಸಗಳು ಉರುಳಿದವು. ಶಿವನಿಲ್ಲದ ಜಗತ್ತು ಶಿವನಿಗಾಗಿ ಗೋಳಾಡಿತು. ಪಾರ್ವತಿಗೆ ಲೋಕಪಾಲನೆಯ ಭಾರ ಸಾಕಾಗಿ ಶಿವನ ಹುಡುಕಾಟಕ್ಕೆ ವಾಯುದೇವನನ್ನು ಕಳುಹಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಅನಂತರ ನಾರದ ಶಿವನ ನೆಲೆಯನ್ನು ಪತ್ತೆಹಚ್ಚಿ ಮಾಯಾಮೂರ್ತಿಯನ್ನು ಸಂಹರಿಸಿ ಶಿವನನ್ನು ಕರೆದುತರುವಾಗ ಶಿವ ತನಗೆ ಕಾವಲಿದ್ದ ಸ್ವಾಮಿನಿಷ್ಠ ಮಾಯಾಮೂರ್ತಿಯ ಕಳೇಬರವನ್ನು ಬಿಟ್ಟು ಬರಲಾರದೆ ಅದರಿಂದ ಡೊಳ್ಳುಮಾಡಿಕೊಂಡ. ನಾರದ ಇದನ್ನು ಬಾರಿಸುತ್ತ ಹಾಡುತ್ತ ಕೈಲಾಸಕ್ಕೆ ಬಂದ. ಈಗಲೂ ಡೊಳ್ಳುಪದಗಳ ಆರಂಭದಲ್ಲಿ ಬರುವ 'ದೇವಿ ನಿಮ್ಮಯ ದೇವರ ಬಂದಾನ ಬನ್ನಿರೇ' ಎಂಬ ಮಾತು ನಾರದ ಪಾರ್ವತಿಗೆ ಹೇಳಿದ್ದೆಂದೂ 'ಸ್ವಾಮಿ ನಮ್ಮಯ ದೇವರ ಬಂದಾನ ಬನ್ನಿರೇ' ಎಂಬ ಮಾತು ಪಾರ್ವತಿ ತನ್ನ ಗಂಡ ಬಂದದ್ದನ್ನು ಕಂಡು ಸಂಭ್ರಮದಿಂದ ಸಖಿಯರನ್ನು ಕರೆದದ್ದೆಂದೂ ನಂಬಿಕೆಯಿದೆ.

ಡೊಳ್ಳು ಕುಣಿತದಲ್ಲಿ ಹತ್ತರಿಂದ ಇಪ್ಪತ್ತು ಜನ ಭಾಗವಹಿಸುತ್ತಾರೆ. ಒಮ್ಮೊಮ್ಮೆ ಇದಕ್ಕೂ ಅಧಿಕ ಸಂಖ್ಯೆಯ ಜನರಿರುವುದೂ ಉಂಟು. ಕುಣಿತದ ಮೊದಲಿಗೆ ವೃತ್ತಾಕಾರದಲ್ಲಿ ನಿಂತ ಡೊಳ್ಳಿನವರು ಒಂದೇ ಗತ್ತು ಹಾಗೂ ಒಂದೇ ನಾದದಲ್ಲಿ ಡೊಳ್ಳು ಬಡಿಯುವುದು ಪ್ರಾರಂಭವಾಗುತ್ತದೆ. ಅನಂತರ ಆವೇಶ ಬಂದವನೊಬ್ಬ ಮಧ್ಯ ನುಸುಳಿ ತನ್ನ ಡೊಳ್ಳಿನ ಗತ್ತು ಬದಲಿಸಿ ಬಡಿಯುತ್ತ ಲಾಗ ಹಾಕುತ್ತಾನೆ. ಉಳಿದವರು ಅವನ ಗತ್ತನ್ನೇ ಅನುಸರಿಸಿ ಅವನನ್ನು ಹುರಿದುಂಬಿಸಲು ಉಬ್ಬುಬ್ಬಿ ಜೋರಾಗಿ ಡೊಳ್ಳು ಬಾರಿಸುವರು. ಆವೇಶ ಬಂದ ವ್ಯಕ್ತಿ ಸುಸ್ತಾಗುವವರೆಗೂ ಹುರುಪಿನಿಂದ ಕುಣಿದು ಆವೇಶ ಇಳಿದ ಮೇಲೆ ಡೋಲು ಬಾರಿಸುತ್ತಿದ್ದ ತನ್ನ ಗುಣಿ ಬಿಸಾಡಿ ಎರಡೂ ಕೈಗಳಿಂದ ದುಪ್ ದುಪ್ಪಾಂಗ್ . . . ದುಪ್ ದುಪ್ಪಾಂಗ್ ಎಂಬ ಗತ್ತಿನಲ್ಲಿ ನಿಧಾನವಾಗಿ ಬಾರಿಸುತ್ತ ತನ್ನ ಸ್ವಸ್ಥಾನಕ್ಕೆ ಬಂದು ನಿಲ್ಲುತ್ತಾನೆ. ಆಗ ಉಳಿದವರು ಒಂದೇ ಗತ್ತಿನಲ್ಲಿ ಡೊಳ್ಳು ಬಾರಿಸುತ್ತಿರುತ್ತಾರೆ. ಇಷ್ಟರಲ್ಲಿ ಸರತಿ ಕಾಯುತ್ತಿರುವ ಮತ್ತೊಬ್ಬ ಮಧ್ಯದಲ್ಲಿ ನುಸುಳಿ ಇನ್ನೊಂದು ಗತ್ತು ಬಾರಿಸುತ್ತ ಕುಣಿಯುವನು. ಉಳಿದವರು ಮೊದಲಿನಂತೆಯೇ ಡೊಳ್ಳು ಬಾರಿಸಿ ಇವನಿಗೆ ಆವೇಶ ತುಂಬುವರು. ಹೀಗೆ ನಿಪುಣರಾದವರೆಲ್ಲ ಸರತಿಯಂತೆ ಒಬ್ಬೊಬ್ಬರಾಗಿ ಮುಂದೆ ಬಂದು ಕುಣಿತದಲ್ಲಿ ಭಾಗವಹಿಸಿ ತಮ್ಮ ಜಾಣ್ಮೆ ಪ್ರದರ್ಶಿಸುವರು. ಇಂಥ ಕುಣಿತ ಸಾಮಾನ್ಯವಾಗಿ ಒಂದು ಅಥವಾ ಎರಡು ಗಂಟೆಯವರೆಗೂ ಸಾಗುತ್ತದೆ. ಕುಣಿತದಲ್ಲಿ ಇಬ್ಬರು ಎದುರು ಬದುರು ನಿಂತು ಜೋಡುಕೋಲು (ಗುಣಿ) ಬಾರಿಸುತ್ತ ಕಥೆ ಹೇಳುವ ಪರಿಪಾಠವೂ ಉಂಟು. ಆಗ ವರ್ತುಲಾಕಾರದಲ್ಲಿ ನಿಂತು ಡೊಳ್ಳು ಬಡಿಯುತ್ತಿದ್ದವರು ಹಾಗೆಯೆ ಕುಳಿತು ಕಥೆ ಕೇಳುವರು. ಕಥೆ ಹೇಳುವವರಲ್ಲಿ ಒಬ್ಬನು 'ನಮ್ಮಯ ದ್ಯಾವರ ಕತೆಯೊಂದ ಹೇಳ್ತೀನಿ ಕೇಳಣ್ಣಾ' ಎಂದರೆ ಇನ್ನೊಬ್ಬನು 'ಹೂಂ, ಮುಂದೇನು ಮತ್ತೆ ಹೇಳಣ್ಣಾ' ಎನ್ನುತ್ತಾನೆ. 'ಮುಂದೇನಾಯ್ತಂದ್ರೆ ಗುಡ್ಡದ ವಾರ್ಯಾಗ ಗುಗ್ಗರ ಹೊಗೆನೆದ್ದು ಅಪ್ಪ ಭೂತಪ್ಪನ ಶಿವಪೂಜೆ ನಡೆದೈತ್ರಿ ಕೇಳ್ರೆಣ್ಣಾ'-ಎಂದಾಗ 'ಹೌದಂದೆ ಮತ್ತೆ ಮುಂದೇನಾಯ್ತಣ್ಣಾ' ಎನ್ನುವನು. ಹೀಗೆ ಕಥೆ ಮುಂದುವರಿಯುತ್ತದೆ. ಮಾತಿಗೊಮ್ಮೊಮ್ಮೆ ಗುಣಿಯ ಬಡಿತದ ಸಪ್ಪಳ ನಿಲ್ಲುತ್ತಿರುತ್ತದೆ.

**ಡೊಳ್ಳಿನ ಪದಗಳು :** ಡೊಳ್ಳಿನ ಪದಗಳನ್ನು ಈ ಮೇಳದವರು ಪ್ರತಿ ಅಮಾವಾಸ್ಯೆ ರಾತ್ರಿ ಅಥವಾ ಪ್ರತಿ ಸೋಮವಾರ ರಾತ್ರಿ ಸಾಮೂಹಿಕವಾಗಿ ಹಾಡುವುದು ವಾಡಿಕೆ. ಇಲ್ಲಿ ಪದ ಹಾಡುವಾತ ಒಬ್ಬನಾದರೆ ಮೂವರು ಡೊಳ್ಳು, ಜಾಗಟೆ, ತಾಳ ಬಾರಿಸುವರು. ಉಳಿದವರು ಹಿಮ್ಮೇಳದಲ್ಲಿ ಪಲ್ಲವಿಯನ್ನು ಅನುಸರಿಸಿ ಹಾಡುವರು. ಹಿಮ್ಮೇಳದಲ್ಲಿ ಹೆಚ್ಚು ಜನರಿದ್ದಷ್ಟೂ ಅನುಕೂಲ ಹೆಚ್ಚು. ಹಾಡು ಹೇಳುವಾಗ ಡೊಳ್ಳಿನಾತ ಬಹುಮೆಲ್ಲನೆ ದುಪ್ಪಾಂಗ್ ದುಪ್ಪಾಂಗ್ ದುಪ್ಪಡ ದುಪ್ಪಾಂಗ್ ಎಂಬ ನಾದದೊಂದಿಗೆ ತಾಳವನ್ನು ಅನುಸರಿಸುತ್ತಾನೆ. ಹಾಡಿನ ಪಲ್ಲವಿ ಮುಗಿಯುತ್ತಲೇ ಎಲ್ಲ ವಾದ್ಯಗಳ ಸಪ್ಪಳ ಜೋರಾಗಿ ಕೇಳಿಬಂದು ಕೊನೆಗೆ ನಿಲ್ಲುತ್ತದೆ, ಈ ಪದಗಳಲ್ಲಿ ದೇವರ ಸ್ತುತಿ, ಸಿದ್ಧಪುರುಷರ ಜೀವನ ಚರಿತ್ರೆ, ಪವಾಡಗಳು, ನೀತಿ-ತತ್ತ್ವದ ಕಥೆಗಳು ಇರುತ್ತವೆ. ಕೆಲವು ನೀಳ್ಗತೆಗಳಂತೆ ದೊಡ್ಡದಾಗಿರುತ್ತವೆ. ಉದಾಹರಣೆಗೆ–

ನಮ್ಮಯ ದೇವರು ಬಂದಾನ ಬನ್ನಿರೇ
ನಮ್ಮಯ ಸ್ವಾಮಿ ದೇವರು ಬಂದಾನ ಬನ್ನಿರೆ ||ಪಲ್ಲವಿ||
ಅಂಗ್ಯೆಜೋಳಿಗೆ ಮುಂಗ್ಯೆಬೆತ್ತ ತುದಿಬೆರಳೀಬತ್ತಿ ಹಚ್ಚ್ಯಾನೆ
ತುದಿಬೆರಳೀಬತ್ತಿ ಹಚ್ಚ್ಯಾನೆ ಅವ ಕಗ್ಗಾಲ ಕಣವಿ ಹಿಡಿದಾನೆ
ಕಗ್ಗಾಲ ಕಣವಿ ಹಿಡಿದಾನೆ ಅವ ಮುಗ್ಗಾಲದಾರಿಗೆ ಬಂದಾನೆ
ಮುಗ್ಗಾಲದಾರಿಗೆ ಬಂದಾನೆ ಅವ ಗೌಳೇರಣ್ಣನ ಕಂಡಾನೆ
ಗೌಳೇರಣ್ಣ ಗೌಳೇರತಮ್ಮ ಹಾಲಿನ ಭಿಕ್ಷಾ ಬೇಡ್ಯಾನೆ

ಬಾರೋ ಬಾರೋ ಹೇ ನನ್ನ ಗುರುವೆ ಕಂಬಳಿ ಗದ್ದುಗೆ ಮಾಡುವನೆ
ಕಂಬಳಿ ಗದ್ದುಗೆ ಮಾಡ್ಯಾನೆ ಅವ ಶಿವನಲಿ ಮೂರುತನಾದಾನೆ
ಮುಂದಾಲ ಕರುಗಳ ಬಿಟ್ಟ್ಯಾನೆ ಅವ ಹಿಂದಾಲೆ ಹಾಲು ಹಿಂಡ್ಯಾನೆ
ಕರುವುಂಡಹಾಲ ಎಂಜಲೆಂಜಲೆಂದ ನಮ್ಮಯ್ಯ ಹಿಂದಕೆ ಹೊಂಟಾನೆ

ನಮ್ಮಯ್ಯ ಹಿಂದಕೆ ಹೊಂಟಾನೆ ಅವ ಮುಗ್ಗಾಲದಾರಿಗೆ ಬಂದಾನೆ
ಮುಗ್ಗಾಲದಾರಿಗೆ ಬಂದಾನೆ ಅವ ಕಗ್ಗಾಲ ಕಣವಿಯ ಹಿಡಿದಾನೆ
ಕಗ್ಗಾಲ ಕಣವಿಯ ಹಿಡಿದಾನೆ ಅವ ಕುರುಬರಣ್ಣನ ಕಂಡಾನೆ
ಕುರುಬರ ಅಣ್ಣ ಕುರುಬರ ತಮ್ಮ ಹಾಲಿನ ಭಿಕ್ಷಾ ನೀಡಂದಾನೆ

ಬಾರೊ ಬಾರೋ ಹೇ ನನ ಗುರುವೆ ಕಂಬಳಿ ಗದ್ದುಗೆ ಮಾಡುವೆನೆ
ಕಂಬಳಿ ಗದ್ದುಗೆ ಮಾಡ್ಯಾನೆ ಅವ ಶಿವನಲ್ಲಿ ಮೂರುತನಾದಾನೆ
ಮುಂದಾಲ ಹಾಲ ಹಿಂಡ್ಯಾನೆ ಅವ ಹಿಂದಾಲ ಕರುಗಳ ಬಿಟ್ಟ್ಯಾನೆ
ಹಾಲು ಉಂಡು ಹಾರೈಸುತ ನಮ್ಮಯ್ಯ ಹಿಂದಕೆ ಹರಸುತ ಹೊಂಟಾನೆ

ಡೊಳ್ಳು ಕುಣಿತದ ಸಾಹಿತ್ಯವನ್ನು ಕುರಿತಂತೆ ಎ.ಸಿ.ಅಂಜಗಿಮಠ ಅವರ ಡೊಳ್ಳಿನ ಪದಗಳು(1959), ಅತ್ತೀಕೊಳ್ಳ ಯಲ್ಲನಗೌಡ ಅವರ ಡೊಳ್ಳಿನ ಪದಗಳು, ಎ.ಎಂ.ಕರಡಿ ಅವರ ಡೊಳ್ಳಿನ ಪದಗಳು(1961). ಹಾಲೇಶ ಎಂ.ಮೇಟಿ ಅವರ ಡೊಳ್ಳಿನ ಹಾಡುಗಳು(1959) ಎಂಬ ಸಂಕಲನಗಳು ಹೊರಬಂದಿವೆ. (ಇ.ಸಿ.ಸಿ.)

**ಡೋಣಿ :** ಬಿಜಾಪುರ ಜಿಲ್ಲೆಯ ಒಂದು ನದಿ. ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಜಿಲ್ಲೆಯ ಜತ್ ಪಟ್ಟಣದ ದಕ್ಷಿಣಕ್ಕೆ ಸು.7ಕಿಮೀ ದೂರದಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸಿ ಅನಂತರ ಆಗ್ನೇಯಾಭಿಮುಖವಾಗಿ ಹರಿದು ಗುಲ್ಬರ್ಗ ಜಿಲ್ಲೆಯ ಜಮಾಲಪುರ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಕೂಡುತ್ತದೆ. ಡೋಣಿ ನದಿ ಬಿಜಾಪುರ ಜಿಲ್ಲೆಯಲ್ಲಿ ಬಿಜಾಪುರ, ಬಾಗೇವಾಡಿ, ಸಿಂದಗಿ ಮತ್ತು ಮುದ್ದೇಬಿಹಾಳ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಈ ನದಿ ಮಹಾರಾಷ್ಟ್ರ ಬಿಟ್ಟ ಅನಂತರ ಬೆಳಗಾಂವಿ ಜಿಲ್ಲೆಯಲ್ಲಿ 12ಕಿಮೀ ಬಿಜಾಪುರ ಜಿಲ್ಲೆಯಲ್ಲಿ 140ಕಿಮೀ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ 24ಕಿಮೀ ಅಂದರೆ ಕರ್ನಾಟಕದಲ್ಲಿ ಒಟ್ಟು 176ಕಿಮೀ ದೂರ ಹರಿದು ಕೃಷ್ಣಾನದಿಯನ್ನು ಸೇರುತ್ತದೆ. ಈ ನದಿಗೆ ಎರಡೂ ಬದಿಗಳಿಂದ ಬಂದು ಸೇರುವ ಅನೇಕ ಸಣ್ಣಪುಟ್ಟ ಹೊಳೆ ಹಳ್ಳಗಳಲ್ಲಿ ಮುಖ್ಯವಾದವು ಬಸವನ ಬಾಗೇವಾಡಿ ತಾಲ್ಲೂಕಿನ ಹಂಚಿನಾಳ ಗ್ರಾಮದ ಹತ್ತಿರ ಸಣ್ಣ ಡೋಣಿ ನದಿ, ಮುದ್ದೇಬಿಹಾಳ ತಾಲ್ಲೂಕಿನ ಹಡಗಿನಾಳ ಗ್ರಾಮದ ಹತ್ತಿರ ಸೊಗ್ಲಿ ನದಿ ಮತ್ತು ಗುಲ್ಬರ್ಗ ಜಿಲ್ಲೆಯ ಹಿರಾ ನದಿ. ಈ ನದಿಯ ಒಟ್ಟು ಜಲಾನಯನ ಕ್ಷೇತ್ರ ಸುಮಾರು 1025ಚ.ಕಿಮೀ. ಈ ನದಿ ಗದಗ-ಸೊಲ್ಲಾಪುರ ರೈಲುಮಾರ್ಗ ಮತ್ತು ರಸ್ತೆ ಗಳೆರಡನ್ನೂ ಹೊನಗನಹಳ್ಳಿಯ ಹತ್ತಿರವೂ ಜಮಖಂಡಿ-ಬಿಜಾಪುರ ರಸ್ತೆಯನ್ನು ಸಾರವಾಡದ ಹತ್ತಿರವೂ ಅಥಣಿ-ಬಿಜಾಪುರ ರಸ್ತೆಯನ್ನು ಬೊನವಾಡದ ಹತ್ತಿರವೂ ಹೂವಿನಹಿಪ್ಪರಗಿ-ತಾಳಿಕೋಟೆ ಹಾಗೂ ಮುದ್ದೇಬಿಹಾಳ-ತಾಳಿಕೋಟೆ ರಸ್ತೆಗಳನ್ನು ಅಡ್ಡದಾಟುತ್ತದೆ. ಈ ಸ್ಥಳಗಳಲ್ಲಿ ಸೇತುವೆಗಳನ್ನು ಕಟ್ಟಲಾಗಿದೆ. ಹೊನವಾಡ, ಸಾರವಾಡ, ಉಕ್ಕಲಿ, ಯಾಳವಾರ ಮತ್ತು ತಾಳಿಕೋಟೆ-ಇವು ಡೋಣಿ ನದಿಯ ದಂಡೆಯ ಮೇಲಿರುವ ಮುಖ್ಯ ಸ್ಥಳಗಳಾಗಿವೆ.

ಡೋಣಿ ನದಿ ಅಂಕುಡೊಂಕಾಗಿದ್ದು ತಿರುವು ಪ್ರದೇಶಗಳಲ್ಲಿ ಬೇಸಗೆಯ ಕಾಲದಲ್ಲಿ ಉಪ್ಪು ನೀರಿನ ಪರಿಣಾಮವಾಗಿ ದಂಡೆಗಳ ಮೇಲೆ ಉಪ್ಪಿನ ಪದರ ಉಂಟಾಗುತ್ತದೆ. ಈ ನದಿಯ ಕಣಿವೆ ಫಲವತ್ತಾದ ರೇವೆಮಣ್ಣಿನಿಂದ ಹಾಗೂ ಹೊರಭಾಗವು ಆಳವಾದ ಕಪ್ಪುಮಣ್ಣಿನಿಂದ ಕೂಡಿದ್ದು ಇದರ ಜಲಾನಯನ ಕ್ಷೇತ್ರ ಬಹಳ ಫಲವತ್ತಾಗಿದ್ದು ಸಮೃದ್ಧ ಆಹಾರ ಧಾನ್ಯಗಳ ಉತ್ಪಾದನೆಗಾಗಿ ಪ್ರಸಿದ್ಧವಾಗಿದೆ. ಜೋಳ, ಗೋದಿ ಮತ್ತು ಕುಸುಬೆ ಸಮೃದ್ಧವಾಗಿ ಬೆಳೆಯುತ್ತವೆ.

ಡೋಣಿ ನದಿಯ ಕಣಿವೆ ಪ್ರದೇಶ ಬಿಜಾಪುರ ಜಿಲ್ಲೆಯ ಧಾನ್ಯದ ಕಣಜವೆನಿಸಿದೆ. 'ಡೋಣಿ ಬೆಳೆದರೆ ಓಣೆಲ್ಲ ಕಾಳು' ಎಂಬ ಗಾದೆ ಮಾತಿದೆ. ಬಿಜಾಪುರ ಜಿಲ್ಲೆಯಲ್ಲಿ ನಾರಾಯಣಪುರ ಯೋಜನೆಯ ಅಂಗವಾಗಿ ಡೋಣಿ ನದಿಗೆ ಅಡ್ಡಲಾಗಿ ಎಪ್ಪತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಣೆಕಟ್ಟು ನಿರ್ಮಿಸುವ ಯೋಜನೆಯನ್ನು ಅಂಗೀಕರಿಸಲಾಗಿದೆ.

ಡೋಣಿ ನದಿಯ ನೀರು ಮಳೆಗಾಲದ ಹೊರತಾಗಿ ಉಳಿದ ಕಾಲಗಳಲ್ಲಿ ಉಪ್ಪುಪ್ಪಾಗಿರುವುದರಿಂದ ಈ ಪ್ರದೇಶದಲ್ಲಿ ಬೇಸಗೆಯಲ್ಲಿ ಕುಡಿಯುವ ನೀರಿನ ಕೊರತೆಯುಂಟಾಗುತ್ತದೆ. ಮಳೆಗಾಲದಲ್ಲಿ ಈ ನದಿಯಲ್ಲಿ ಮಹಾಪೂರ ಬಂದು ಸಣ್ಣ ಪ್ರಮಾಣದ ಒಡ್ಡುಗಳು ಒಡೆಯುವುದು, ಕೆಲವು ಕಡೆಗಳಲ್ಲಿ ದಪ್ಪವಾಗಿ ಕೆಸರು ಸಂಚಯವಾಗುವುದು ಸಾಮಾನ್ಯ. (ಎಸ್.ಎಸ್.ಎನ್.)

**ಡೋಹರ ಕಕ್ಕಯ್ಯ :** ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಡೋಹರ ಕುಲದಲ್ಲಿ ಹುಟ್ಟಿ ಚರ್ಮ ಹದಮಾಡುವ ಕಾಯಕದಲ್ಲಿ ನಿರತನಾಗಿದ್ದ ಈತ ಮಾಳವ ದೇಶದಿಂದ ಕಲ್ಯಾಣಕ್ಕೆ ಬಂದು ನೆಲಸಿದವ. ಕಾಯಕದಲ್ಲಿಯೇ ಕೈಲಾಸ ಕಂಡ ವ್ಯಕ್ತಿ. ಶಿವನಿಂದೆಯನ್ನು ಕೇಳೆ ಎಂಬ ನಿಯಮ ಪಾಲಿಸುತ್ತಿದ್ದ ಈತ ಒಮ್ಮೆ ಕಲ್ಯಾಣದ ಬೀದಿಯಲ್ಲಿ ಹರಿಮಹಿಮೆಯ ಪುರಾಣ ಹೇಳುತ್ತಿದ್ದ ಬ್ರಾಹ್ಮಣನನ್ನೂ ಮತ್ತೊಮ್ಮೆ ಲಿಂಗವನ್ನು ಕಲ್ಲೆಂದ ವೆಂಗಿಭೂಪನನ್ನೂ ಕೊಂದನೆಂದು ವೀರಶೈವಪುರಾಣಗಳು ಹೇಳುತ್ತವೆ. ಈತನ ಪ್ರಸಾದ ಪವಿತ್ರತಮವೆಂದು ಭಾವಿಸಿದ್ದ ಬಸವಣ್ಣ ತನ್ನ ಕೆಲವು ವಚನಗಳಲ್ಲಿ ಈತನನ್ನು 'ಅಪ್ಪನು ಡೋಹರ ಕಕ್ಕಯ್ಯ, ಕಿರಿಯಯ್ಯಾ ಡೋಹರ ಕಕ್ಕಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಕಕ್ಕಯ್ಯ ಹಿರಿಯಯ್ಯನೊಕ್ಕುದನಿಕ್ಕು ನೋಡಯ್ಯ' - ಎಂದು ಮೊದಲಾಗಿ ಕೊಂಡಾಡಿದ್ದಾನೆ. ಬಿಜ್ಜಳನ ಮರಣದ ಅನಂತರ ಉಳುವಿಯತ್ತ ಹೊರಟಿದ್ದ ಶರಣರನ್ನು ರಕ್ಷಿಸಲು ಕಕ್ಕಯ್ಯ ವೀರಾವೇಶದಿಂದ ಹೋರಾಡಿದನೆಂದೂ ವೀರಶೈವ ಪುರಾಣಗಳಲ್ಲಿ ಹೇಳಿದೆ. ಬೆಳಗಾಂವಿ ಜಿಲ್ಲೆಯ ಕಕ್ಕೇರಿಯಲ್ಲಿ ಇವನ ಹೆಸರಿನ ಎರಡು ಜಲಾಶಯಗಳು, ಒಂದು ದೇವಾಲಯ ಹಾಗೂ ಸಮಾಧಿ ಇವೆ.

ಅಭಿನವ ಮಲ್ಲಿಕಾರ್ಜುನ ಎಂಬುದು ಇವನ ವಚನಗಳ ಅಂಕಿತ. ಇವನು ಎಷ್ಟು ವಚನಗಳನ್ನು ಬರೆದಿದ್ದಾನೆ ಎಂಬುದು ತಿಳಿದಿಲ್ಲ. ಈತನ ವಚನಗಳಲ್ಲಿ ಅನುಭಾವ ದೃಷ್ಟಿ ಕಂಡುಬರುತ್ತದೆ. 'ನೆನೆಯಲರಿಯೆ ನಿರ್ಧರಿಸಲರಿಯೆ-ಮನವಿಲ್ಲಾಗಿ ಭಾವಿಸಲರಿಯೆ ಬೆರಸಲರಿಯೆ-ಭಾವ ನಿರ್ಭಾವವಾಯಿತ್ತಾಗಿ ಧ್ಯಾನ ಮೌನವನರಿಯೆ ಧ್ಯಾನಾತೀತ ತಾನೆಯಾಯಿತ್ತಾಗಿ ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವ ಮೀರಿ ಅಭಿನವಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ಪೆ ಎಂಬ ವಚನ ಇವನ ಅನುಭಾವದೃಷ್ಟಿಗೆ ಸಾಕ್ಷಿಯಾಗಿದೆ. (ಕೆ.ಎಂ.)

**ಡ್ಯಾಲ್ಯೆಲ್, ರಾಬರ್ಟ್ ಆನ್‌ಸ್ಟ್ರುಥರ್:** 1831-90. ಮೈಸೂರು ಸಂಸ್ಥಾನದ ಚೀಫ್ ಕಮಿಷನರ್ (1875-77). 1831ರ ಮೇ 5ರಂದು ಫೈಫ್‌ಷೈರಿನ ಲಿಂಗೋವಿನಲ್ಲಿ ಜನಿಸಿದ. ಜಾನ್ ಡ್ಯಾಲ್ಯೆಲನ ಹಿರಿಯ ಮಗ. ಚೆಲ್ಟನ್‌ಹ್ಯಾಮ್ ಮತ್ತು ಹೈಲ್ಬರಿಯ ಈಸ್ಟ್ ಇಂಡಿಯಾ ಕಂಪನಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮುಗಿಸಿದ ಈತ 1851ರಲ್ಲಿ ಮದರಾಸು ಸಿವಿಲ್ ಸರ್ವಿಸ್‌ಗೆ ಸೇರಿದ. 1861ರಲ್ಲಿ ಮದರಾಸು ಸರ್ಕಾರದ ಕಂದಾಯ ಇಲಾಖೆಯ ಸಹಕಾರ್ಯದರ್ಶಿಯೂ ಅನಂತರ 1867ರಲ್ಲಿ ಅದೇ ಇಲಾಖೆಯ ಮುಖ್ಯ ಕಾರ್ಯದರ್ಶಿಯೂ ಆಗಿ ನೇಮಕಗೊಂಡ. 1865-66ರ ಅವಧಿಯಲ್ಲಿ ಕೇಂದ್ರ ಕ್ಷಾಮಪರಿಹಾರ ಸಮಿತಿಯ ಕಾರ್ಯದರ್ಶಿಯೂ ಆಗಿದ್ದು ಇದಕ್ಕೆ ಸಂಬಂಧಿಸಿದ ವರದಿಯೊಂದನ್ನು ಈತ ಸಲ್ಲಿಸಿದ. ಇದೇ ಸಮಿತಿಯಲ್ಲಿ ಕೆಲಸಮಾಡುತ್ತಿದ್ದ ನೌಕರರಿಗೆ ಈತನ ವರದಿ ಒಂದು ಉತ್ತಮ ಮಾರ್ಗದರ್ಶಿಯಾಯಿತು. ಕಂದಾಯ ಇಲಾಖೆಯ ಹೆಚ್ಚುವರಿ ಸದಸ್ಯನಾಗಿ ನೇಮಕಗೊಂಡು ಸುಂಕದ ಸಂಬಂಧವಾಗಿ ವಿಚಾರಣೆಯನ್ನು ನಡೆಸಿ ಉತ್ತಮ ವರದಿಯೊಂದನ್ನು ಸಿದ್ಧಪಡಿಸಿದನಲ್ಲದೆ, ಮದರಾಸು, ಮೈಸೂರು, ಪಂಜಾಬು ಹಾಗೂ ವಾಯುವ್ಯ ಪ್ರಾಂತ್ಯಗಳ ಆಡಳಿತ, ಸುಧಾರಣೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಅನೇಕ ಸಂಶೋಧನೆಗಳನ್ನು ಕೈಗೊಂಡ.

1875ರಲ್ಲಿ ಮೈಸೂರಿನ ಚೀಫ್ ಕಮಿಷನರ್ ಆಗಿ ನೇಮಕಗೊಂಡ ಈತ ಕೆಲವು ಗಮನಾರ್ಹ ಸುಧಾರಣೆಗಳನ್ನು ಮಾಡಿದ. ತನ್ನ ಕಾಲದಲ್ಲಿ

ಮೈಸೂರು ಪ್ರಾಂತ್ಯದಲ್ಲಿ ಕಾಣಿಸಿಕೊಂಡ ಕ್ಷಾಮದಿಂದ ಉಂಟಾದ ನಷ್ಟವನ್ನು ಹಾಗೂ ಜನರ ಸ್ಥಿತಿಗತಿಗಳನ್ನು ಸುಧಾರಿಸಲು ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡ. ಕಾಫಿ ಬೆಳೆಯ ಮೇಲೆ ವಿಧಿಸುತ್ತಿದ್ದ ಹಾಳತವೆಂಬ ತೆರಿಗೆಗೆ ಬದಲಾಗಿ ಕಾಫಿ ಬೆಳೆಯುವ ಒಟ್ಟು ಎಕರೆಯ ಆಧಾರದ ಮೇಲೆ ತೆರಿಗೆ ಹಾಕುವುದನ್ನು ಅನುಮೋದಿಸಿದವರಲ್ಲಿ ಈತ ಪ್ರಮುಖನಾದವ.

1873-77ರವರೆಗೆ ಭಾರತದ ಶಾಸನಸಭೆಯಲ್ಲಿ ಮದರಾಸನ್ನು ಪ್ರತಿನಿಧಿಸಿದ್ದನಲ್ಲದೆ 1877ರಲ್ಲಿ ಕೌನ್ಸಿಲ್ ಆಫ್ ಸೆಕ್ರೆಟರಿ ಆಫ್ ದಿ ಸ್ಟೇಟ್ ಫಾರ್ ಇಂಡಿಯಾದ ಸದಸ್ಯನಾಗಿದ್ದು 1883ರಲ್ಲಿ ಅದೇ ಸಮಿತಿಯ ಉಪಾಧ್ಯಕ್ಷನೂ ಆದ. ಫೆಬ್ರವರಿ 1879ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ. ಅದೇ ವರ್ಷದ ಜುಲೈ ತಿಂಗಳಲ್ಲಿ ಸಿ.ಎಸ್.ಐ. ಬಿರುದು, 1885ರಲ್ಲಿ ಆ್ಯಂಡ್ರೂಸ್ ವಿಶ್ವವಿದ್ಯಾನಿಲಯದಿಂದ ಎಲ್.ಎಲ್.ಡಿ. ಪದವಿ, 1887ರಲ್ಲಿ ಕೆ.ಸಿ.ಐ.ಇ. ಬಿರುದು ಇವನಿಗೆ ಲಭಿಸಿದುವು. ಲಂಡನ್ನಿನ ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿಯ ಸದಸ್ಯನೂ ರಾಯಲ್ ಅಂಡ್ ಏನ್ಷೆಂಟ್ ಗೋಲ್ಫ್ ಕ್ಲಬ್ಬಿನ ಕ್ಯಾಪ್ಟನನೂ ಅನೇಕ ಸಂಘ ಸಂಸ್ಥೆಗಳಿಗೆ ಸದಸ್ಯನೂ ಆಗಿದ್ದ ಈತ ಕೊನೆಯವರೆಗೂ ಅವಿವಾಹಿತನಾಗಿಯೇ ಉಳಿದು 1890 ಫೆಬ್ರವರಿ 15ರಂದು ಎಡಿನ್‌ಬರೋ ನ್ಯೂ ಕ್ಲಬ್‌ನಲ್ಲಿ ನಿಧನಹೊಂದಿದ. (ಎಸ್.ಎನ್.ಜಿ.)

# ತ

**ತಂಡಗ :** ತುರುವೇಕೆರೆ ತಾಲ್ಲೂಕಿನಲ್ಲಿ ನೊಣವಿನಕೆರೆಗೆ 8ಕಿಮೀ ದೂರದಲ್ಲಿರುವ ಗ್ರಾಮ. ಹಳೇ ತಂಡಗ ಎಂದೂ ಹೆಸರು.

ಇದು ಒಂದು ಹಳೆಯ ಅಗ್ರಹಾರ. ಶಾಸನಗಳಲ್ಲಿ ಶಂಕರನಾರಾಯಣಪುರ ಎಂದು ಕರೆಯಲಾಗಿದೆ. ಶಾಲಿವಾಹನ ಇಲ್ಲಿ ಹುಟ್ಟಿದನೆಂದು ಐತಿಹ್ಯ. ಇಲ್ಲಿರುವ ಸು.14ನೆಯ ಶತಮಾನದ ಚೆನ್ನಕೇಶವ ದೇವಾಲಯ ಹೊಯ್ಸಳ ಶೈಲಿಯಲ್ಲಿರುವ ರಚನೆ. ದೇವಾಲಯದಲ್ಲಿ ಉಪಯೋಗಿಸಿರುವ ಪ್ರತಿ ಕಲ್ಲಿನ ಮೇಲೂ ರಚನೆಯಲ್ಲಿ ಅವುಗಳು ಇರಬೇಕಾದ ಸ್ಥಳ ಮೊದಲಾದವನ್ನು ಅವುಗಳ ಮೇಲೆ ಶಾಸನ ರೂಪದಲ್ಲಿ ಕೆತ್ತಿರುವುದು ಇಲ್ಲಿಯ ವೈಶಿಷ್ಟ್ಯ. ಈ ದೇವಾಲಯದಲ್ಲಿ ಜಗತಿ ಇಲ್ಲದಿದ್ದರೂ ತಳ ಪಟ್ಟಿಕೆಗಳು, ಭಿತ್ತಿವಿಗ್ರಹಗಳು ಮುಂತಾದ ಹೊಯ್ಸಳ ಶೈಲಿಯ ಅಂಗಗಳೂ ಮೂರು ಮೆಟ್ಟಲಾಗಿ ಏರುವ ವಿಮಾನವೂ ಇವೆ. ಗರ್ಭಗೃಹ ಮತ್ತು ಸುಕನಾಸಿಗಳು ಸುಮಾರಾಗಿ ಒಂದೇ ಆಯದವು. ನವರಂಗ ಸ್ವಲ್ಪ ದೊಡ್ಡದು. ದೇವಾಲಯದ ಎಲ್ಲ ದ್ವಾರಗಳೂ ನವರಂಗದ ಆಳದ ಭುವನೇಶ್ವರಿಗಳೂ ನವರಂಗ ಹಾಗೂ ಮುಂದಿನ ಅರ್ಧಮಂಟಪದಲ್ಲಿರುವ ಸ್ತಂಭಗಳೂ ಹೊಯ್ಸಳ ಶೈಲಿಯಲ್ಲಿದ್ದು ಉತ್ತಮ ರಚನೆಗಳಾಗಿವೆ. ಹೊರಭಿತ್ತಿಯ ಮೇಲೆ ನರಸಿಂಹ, ವಿಷ್ಣು, ಉಮಾಮಹೇಶ್ವರ ಮುಂತಾದ ವಿಗ್ರಹಗಳಿವೆ. ಈ ಗರ್ಭಗುಡಿಯಲ್ಲಿರುವ ಕೇಶವ ವಿಗ್ರಹ ಹೊಸದು. ಮೂಲ ವಿಗ್ರಹ ಭಿನ್ನವಾಗಿದ್ದು ಹೊರಗೆ ನಿಂತಿದೆ.

ಇಲ್ಲಿನ ಮಲ್ಲೇಶ್ವರ ದೇವಾಲಯ ಮೂಲತಃ 10-11ನೆಯ ಶತಮಾನದ ದ್ರಾವಿಡ ರೀತಿಯ ರಚನೆ. ಆದರೆ ಈಗ ಇದು ನವೀಕೃತ. ಇನ್ನೊಂದು ಈಶ್ವರ ದೇವಾಲಯ, ಈಚಿನದು. ಇದರಲ್ಲಿ ಪೂರ್ವಭಾಗದಲ್ಲಿ ಮೂರು ಅಂಕಣಗಳಿರುವ ವರಾಂಡ ಮತ್ತು ದಕ್ಷಿಣಕ್ಕೆ ಒಂದು ಸಣ್ಣ ಮುಖಮಂಟಪ ಇವೆ. ವರಾಂಡದಲ್ಲಿ ಸಿಂಹಗಳು ಮತ್ತು ಸವಾರರ ಚಿತ್ರಗಳಿಂದ ಕೂಡಿದ ನಾಲ್ಕು ಕಂಬಗಳೂ ಅವುಗಳ ಮೇಲೆ ಶಿವನ ಲಿಂಗೋದ್ಭವಮೂರ್ತಿ, ಗಜಾಸುರಮರ್ದನ, ತಾಂಡವೇಶ್ವರ, ವಿಷ್ಣು, ಬ್ರಹ್ಮ, ಪ್ರಾಜ್ಞವ್ಯಾಘ್ರಪಾದ, ಬೇಡರ ಕಣ್ಣಪ್ಪ, ಶಿವ-ಪಾರ್ವತಿ ಮುಂತಾದ ಶಿಲ್ಪಗಳಿವೆ.

ತಂಡಗಕ್ಕೆ ಒಂದೂವರೆ ಕಿಮೀ ದೂರದಲ್ಲಿ ಕುಂಬಾರರ ಕರಿಕಲ್ಲು ಎಂಬ ಗುಡ್ಡದಲ್ಲಿ ಗವಿಸಿದ್ಧೇಶ್ವರ ಗುಹೆ ಇದೆ. ಇದು ಒಂದು ಯಾತ್ರಾಸ್ಥಳವಾಗಿದೆ. (ಡಿ.ಎಸ್.ಜೆ.)

**ತಂಬೂರಿಯವರು :** ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆ ಹಾಗೂ ಉತ್ತರ ಕೊಡಗಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಕಂಡುಬರುವ ಲೌಕಿಕ ವೃತ್ತಿ ಗಾಯಕರು. ಇವರ ವಾದ್ಯ ತಂಬೂರಿ, ಜೊತೆಗೆ ಬಟ್ಟುತಾಳ ಹಾಗೂ ಗುಮಟೆ (ಗುಮ್ಮಿ) ಬಳಸುತ್ತಾರೆ. ತಂಬೂರಿಯನ್ನು ಕಣಿಗಲೆ, ಪಕ್ಷೀ, ಕೂಳಿ, ತೇಗ, ಹಲಸು ಮುಂತಾದ ಮರಗಳಲ್ಲಿ ಯಾವುದಾದರೂ ಒಂದರಿಂದ ಮಾಡಿಕೊಳ್ಳುತ್ತಾರೆ. ಸುಮಾರು ಮೂರೂವರೆ ಅಡಿ ಉದ್ದವಿರುವ ತಂಬೂರಿಯ ಮೇಲು ಭಾಗದಲ್ಲಿ ನಾಗರಹಾವಿನ ಹೆಡೆಯ ಕೆತ್ತನೆ ಇರುತ್ತದೆ. ಇರುವ ನಾಲ್ಕು ಉಕ್ಕಿನ ತಂತಿಗಳನ್ನು ಶ್ರುತಿ ಮಾಡಿಕೊಳ್ಳಲು ನಾಲ್ಕು ಬಿರಡೆಗಳಿರುತ್ತವೆ. ಮಂಟೇಸ್ವಾಮಿಯ 'ಸಿಸು' ಮಕ್ಕಳಾದ ನೀಲಗಾರರಂತೆ ಇವರೂ ತಂಬೂರಿಯನ್ನೇ ವಾದ್ಯವನ್ನಾಗಿ ಬಳಸುತ್ತಾರಾದರೂ ವಾದ್ಯವಿಶೇಷದ ಏಕತೆಯಿಂದಲೇ ಈ ಎರಡು ಸಂಪ್ರದಾಯಗಳಿಗೂ ಒಂದೇ ಮೂಲವನ್ನು ಆರೋಪಿಸುವುದಕ್ಕಾಗುವುದಿಲ್ಲ. ನೀಲಗಾರ ಸಂಪ್ರದಾಯಕ್ಕೆ ಧಾರ್ಮಿಕ ಪರಿವೇಷವಿದೆ; ಶೂದ್ರ ವರ್ಗದ ಎಲ್ಲರೂ ನೀಲಗಾರರಾಗಿದ್ದಾರೆ. ನೀಲಗಾರರು ತಂಬೂರಿ ಜೊತೆಗೆ ಬಳಸುವ ಸಾಧನ ಗಗ್ಗರ; ನೀಲಗಾರರು ಹಾಡುವ ಪ್ರಧಾನ ಕಥೆಯಾದ ಧರೆಗೆ ದೊಡ್ಡವರ ವಚನ-ತಂಬೂರಿಯವರಿಗೆ ಅಪರಿಚಿತ ವಸ್ತು. ಆ ಕಾರಣಗಳಿಂದ ತಂಬೂರಿಯವರನ್ನು ಧಾರ್ಮಿಕ ವೃತ್ತಿಗಾಯಕರಾದ ನೀಲಗಾರರ ಸಂಪ್ರದಾಯದೊಡನೆ ಸೇರಿಸುವುದು ಸಮಂಜಸವಲ್ಲ.

ಲೌಕಿಕ ವೃತ್ತಿಗಾಯಕರಲ್ಲಿ ತಂಬೂರಿಯವರಿಗೆ ಶ್ರೇಷ್ಠ ಸ್ಥಾನ ಲಭ್ಯವಾಗಿರುವುದು ಇವರು ಹಾಡುವ ರಾಮಾಯಣ ಹಾಗೂ ಮಹಾಭಾರತಗಳಿಂದ. ಇವುಗಳಲ್ಲದೆ ಇವರು ಇಪ್ಪತ್ತಕ್ಕೂ ಮೀರಿ ಪೌರಾಣಿಕ, ಐತಿಹಾಸಿಕ ಹಾಗೂ ಇತರ ಕಾವ್ಯಗಳನ್ನೂ ಹಾಡುತ್ತಾರೆ. ಜನಪದ ಕಥೆಗಳನ್ನು ಕಾವ್ಯವನ್ನಾಗಿ ಮಾರ್ಪಡಿಸಿಕೊಂಡಿರುವುದೇ ಇವರ ಕಾವ್ಯಸಂಪತ್ತಿನ ಹೆಚ್ಚಳಕ್ಕೆ ಕಾರಣವಾಗಿದೆ. ಸತ್ಯಭೋಜರಾಜ, ಕಾಡುಸಿದ್ದಮ್ಮ, ಸರ್ಜಪ್ಪನಾಯಕ, ಲೋಹಿತಕುಮಾರ ಬಸವಕುಮಾರ, ತಿರುಪತಿ ತಿಮ್ಮಪ್ಪ, ಅಂಜನಾದೇವಿ ಕಥೆ, ಲವಕುಶರ ಕಾಳಗ, ನಿರ್ವಾಣಸ್ವಾಮಿ ಕಥೆ, ಎಲ್ಲಮ್ಮನ ಕಥೆ, ಬಾಲನಾಗಮ್ಮ, ಅರಣ್ಯಕುಮಾರ, ಗಜಾವತಿ ಅಥವಾ ಗಜಮೋಹಿನಿ, ಕೊಡಗಿನ ದೊರೆ, ಬಂಜೆ ಹೊನ್ನಮ್ಮ, ನಂಜುಂಡೇಶ್ವರ, ಭೂದೇವಿ-ಬಸವಣ್ಣ, ಭೂತಾಳಿ ಪಟ್ಟಣದ ಋಷಿ, ಬಾಣಂತಿ ಹಾಡು, ಗೊಲ್ಲರ ಹಾಡು, ರಾಮಾಯಣ, ಮಹಾಭಾರತ ಮುಂತಾದ ಕಾವ್ಯಗಳು ತಂಬೂರಿಯವರು ಕನ್ನಡ ಜನಪದ ಕಾವ್ಯ ಭಂಡಾರಕ್ಕೆ ಕೊಟ್ಟಿರುವ ಕೊಡುಗೆಗಳು, ಇವುಗಳ ಜೊತೆಗೆ ಕಥೆಯ ನಡುವೆ ಕೆಲವು ವಿನೋದ ಲಾವಣಿಗಳನ್ನೂ ಇವರು ಹಾಡುತ್ತಾರೆ.

ಎಲ್ಲ ವೃತ್ತಿಗಾಯಕರಲ್ಲಿ ಕಂಡುಬರುವ ವಚನ ಇವರಲ್ಲಿಯೂ ಕಂಡುಬಂದರೂ ಪದ್ಯಭಾಗಗಳಿಗೇ ಹೆಚ್ಚು ಪ್ರಾಚುರ್ಯ. ಇವರ ಎಲ್ಲ ಕಾವ್ಯಗಳೂ ರಗಳೆಯನ್ನು ಹೋಲುವ ಛಂದಸ್ಸಿನಲ್ಲೇ ಹರಿಯುತ್ತವೆ. ಕಥೆ ಮಾಡಲು ಕೊನೆಯ ಪಕ್ಷ ಇಬ್ಬರು ಮೂವರು ಜನರಾದರೂ ಬೇಕು. ಪ್ರಧಾನ ಗಾಯಕನೊಡನೆ ಉಳಿದವರು ಸೊಲ್ಲು ಕೊಡುತ್ತಾರೆ. ಜೊತೆಗೆ ವಚನ ಬಂದಾಗ ಹೌದೌದು ಎಂದು ಹೇಳುತ್ತ ಕಥೆಯ ಬೆಳವಣಿಗೆಗೆ ಸ್ವಾರಸ್ಯ ತಂದುಕೊಡುತ್ತಾರೆ. ಇವರು ವೃತ್ತಿಗಾಯಕರಾಗಿ ವಿಶಿಷ್ಟ ಸಂಪ್ರದಾಯಕ್ಕೆ ಸೇರಿದವರಾಗಿರುವುದರ ಜೊತೆಗೆ ಊರೊಟ್ಟಿನ ಮದುವೆ ಮುಂಜಿಗಳಲ್ಲಿ ವಾದ್ಯವನ್ನೂ ನುಡಿಸುತ್ತಾರೆ. ಇವರ ಚಿಟ್‌ಮೇಳ (ನೋಡಿ) ಕರಡೆ, ಕೋಲು, ಡುಮ್ಮಿ, ಮೋರಿಗೆಗಳಿಂದ ಕೂಡಿದ ಜನಪದ ನೃತ್ಯ, ಗುರುಶಿಷ್ಯ ಬಾಂಧವ್ಯ, ಧಾರ್ಮಿಕ ವೃತ್ತಿಗಾಯಕರಲ್ಲಿ ಇರುವಷ್ಟು ಗುರುತರವಾಗಿ ಇವರಲ್ಲಿ ಕಂಡುಬರುವುದಿಲ್ಲ.

ತಂಬೂರಿಯವರು ಹರಿಜನರ ಚಲವಾದಿ ಹಾಗೂ ಹಣತರು ಎಂಬ ಉಪಜಾತಿಗೆ ಸೇರಿದವರು. ಇವರ ಮನೆದೇವರು ಕರಿಯಮ್ಮ. ಇವಳನ್ನು ಇವರು ಲಕ್ಷ್ಮೀ ಎಂದು ಭಾವಿಸುತ್ತಾರೆ. ಈ ದೇವತೆಯನ್ನು ಕುರಿತ ಕಥನಕಾವ್ಯ ಯಾವುದನ್ನೂ ಇವರು ಹಾಡುವಂತೆ ಕಾಣುವುದಿಲ್ಲ. ಆದರೆ ಈ ದೇವತೆಯನ್ನು ಕುರಿತ ತ್ರಿಪದಿಗಳನ್ನು ಹಾಡುತ್ತಾರೆ. ತಂಬೂರಿಯವರನ್ನು ಕುರಿತಂತೆ ಗಜಮೋಹಿನಿ (ಹಾ.ತಿ.ಕೃಷ್ಣೇಗೌಡ, 1977), ತಂಬೂರಿ ಕಾವ್ಯಗಳು (ಚಂದ್ರುಕಾಳೇನಹಳ್ಳಿ, 1978), ತಂಬೂರಿ ಸಂಪ್ರದಾಯದ ಕಾವ್ಯಗಳು (ಅಂಬಳಿಕೆ ಹಿರಿಯಣ್ಣ, 1980) ಎಂಬ ಕೃತಿಗಳೂ ತಾಳಬಂದೋ ತಂಬೂರಿಬಂದೋ (ರಾಜೇಗೌಡ ಹೊಸಹಳ್ಳಿ, 2001) ಎಂಬ ಸಂಶೋಧನ ಮಹಾಪ್ರಬಂಧವೂ ಪ್ರಕಟವಾಗಿವೆ. (ಪಿ.ಕೆ.ಆರ್.)

**ತಗಡೂರು ರಾಮಚಂದ್ರರಾವ್ :** 1897-1988. ಸುಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಹನುಮನಪುರದಲ್ಲಿ 1897 ಅಕ್ಟೋಬರ್ 10ರಂದು ಜನಿಸಿದರು. ತಂದೆ ಸೂರ್ಯನಾರಾಯಣಪ್ಪ. ತಾಯಿ ಲಕ್ಷ್ಮಮ್ಮ. ಈ ದಂಪತಿಗಳಿಗೆ ಇವರು ಮೂರನೆಯ ಮಗ. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ದೊಡ್ಡಮ್ಮನ ಕೈಗೂಸಾಗಿ ಬೆಳೆದರು. ಇವರ ತಂದೆ ಶಾನುಭೋಗರು. ತಮ್ಮ ಧಾರಾಳತನದಿಂದ ಪೂರ್ವಿಕರ ಆಸ್ತಿಯನ್ನು ಕಳೆದುಕೊಂಡರು. ಬಡತನ, ಏಕಾಂತಜೀವನ ಇವು ಇವರನ್ನು ಅಂತರ್ಮುಖಿಯಾಗಿ ಚಿಂತಿಸುವಂತೆ ಮಾಡಿದುವು. ತಂದೆಯು ಬಡತನ ಮತ್ತು ಅವರು ಎರಡನೆಯ ಮದುವೆಯಾದುದರಿಂದ ಅಕ್ಕನ ಆಸರೆಯನ್ನು ಪಡೆದರು. ಭಾವನಿಗೆ ಬಹಳಷ್ಟು ದಿನಗಳು ಭಾರವಾಗಬಾರದೆಂಬ ಭಾವನೆ ಇವರಲ್ಲಿ ಬೆಳೆಯಿತು. ಭಾವನ ಆಶ್ರಯ ತೊರೆದು ಸಂಗಡಿಗರೊಂದಿಗೆ ಜೀವಿಸತೊಡಗಿದರು. ನಿರಂತರವಾಗಿ ಬಂದೊದಗಿದ ಕಷ್ಟಗಳಿಂದಾಗಿ ಮಾನಸಿಕ ನೆಮ್ಮದಿ ಕೆಟ್ಟಿತು. ಇಂಥ ಸಂದರ್ಭದಲ್ಲಿ ಭಾರತವನ್ನು ಸುತ್ತಿದರು. ಹೀಗಾಗಿ ಸರಿಯಾದ ವಿದ್ಯಾಭ್ಯಾಸ ಇವರ ಪಾಲಿಗೆ ದೊರೆಯಲಿಲ್ಲ. ಮೈಸೂರು ಮತ್ತೆ ಇವರನ್ನು ಆಕರ್ಷಿಸಿತು. ಜೀವನೋಪಾಯಕ್ಕೆ ಸಣ್ಣ ವ್ಯಾಪಾರ ಆರಂಭಿಸಿದರು. ಈ ವ್ಯಾಪಾರದ ಮೂಲಕ ಹಲವು ಬಗೆಯ ಸ್ನೇಹಿತರು ಇವರಿಗೆ ದೊರೆತರು. ಚಳವಳಿಗಾರರಾಗುವ ಪ್ರೇರಣೆಯೂ ಒದಗಿತ್ತು. ಜನರಲ್ ಡಯರ್‌ನ ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡದ ಚಿತ್ರಗಳು ಮಾರಾಟಕ್ಕಾಗಿ ಮಾರುಕಟ್ಟೆಗೆ ಬಂದುವು. ಈ ಚಿತ್ರಗಳ ಮಾರಾಟವನ್ನು ನಿಷೇಧಿಸಲಾಗಿತ್ತು. ಈ ಚಿತ್ರಗಳನ್ನು ತಮ್ಮ ತಳ್ಳಂಗಡಿಯಲ್ಲಿ ಮಾರಾಟ ಮಾಡುವುದರ ಮೂಲಕ ಸ್ವಲ್ಪ ಹಣವೂ ಇವರಿಗೆ ದೊರೆಯಿತು. ಹೋರಾಟದ ಮನೋಭಾವ ಮತ್ತು ಆತ್ಮಸ್ಥೈರ್ಯವೂ ಬೆಳೆಯಿತು. ಈ ಉದ್ಯೋಗವನ್ನು 1919ರಲ್ಲಿ ಬಿಟ್ಟು ತಗಡೂರು ಸೇರಿದರು. ಮುಂದೆ ಇದು ಇವರ ಎಲ್ಲ ರೀತಿಯ ಕಾರ್ಯಚಟುವಟಿಕೆಗಳಿಗೆ ಕೇಂದ್ರವಾಯಿತು.

ರಾಮಚಂದ್ರರಾವ್ ಅವರನ್ನು ಒಮ್ಮೆ ಮುದವೀಡು ಕೃಷ್ಣರಾಯರು ತಗಡೂರ್ ಎಂದು ಕರೆದರು. ಮುಂದೆ ಜನ ಇವರನ್ನು ಇದೇ ಹೆಸರಿನಿಂದ ಗುರುತಿಸಿದರು. ದೇಶಭಕ್ತರಾಗಿದ್ದ ಇವರ ಉಡುಪು ಕೂಡ ಸ್ವದೇಶಿಯ ಸಂಕೇತವನ್ನು ಅನುಕರಿಸುತ್ತಿತು; ರಾಷ್ಟ್ರಧ್ವಜವನ್ನು ಪ್ರತಿನಿಧಿಸುತ್ತಿತ್ತು. ತಲೆಗೆ ಕೇಸರಿ ವರ್ಣದ ಗಾಂಧಿ ಟೋಪಿ, ಹಸುರು ಬಣ್ಣದ ಜುಬ್ಬ, ಬಿಳಿ ಪಂಚೆಯಿಂದ ವ್ರತನಿಷ್ಠರಾಗಿದ್ದರು. ತಾವು ತೊಡುವ ಉಡುಪಿನ ಮೇಲೆಯೇ ಹಲವಾರು ಘೋಷಣೆಗಳನ್ನು ಬರೆದುಕೊಂಡು ಓಡಾಡುವ ಜಾಹೀರಾತಿನ ಮಾಧ್ಯಮವೂ ಆಗಿದ್ದರು. ಇದು ಇವರ ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಪರಿಚಯಿಸುತ್ತದೆ. ಹಲವಾರು ಚಳವಳಿ, ಸತ್ಯಾಗ್ರಹಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಇವರು ತಗಡೂರಿನ ಬಾಪೂಜಿ ಎನಿಸಿದರು. ತಗಡೂರು ಇವರ ಸತ್ಯಾಗ್ರಹದ ಕೇಂದ್ರವಾದರೆ ಮೈಸೂರು ಇವರ ಬಿಡಾರ ಕೇಂದ್ರ. ಮೈಸೂರಿನ ಹಲವು ಗಣ್ಯವ್ಯಕ್ತಿಗಳ ಸಹಕಾರ ಮತ್ತು ಸಹಾಯ ಇವರ ಹೋರಾಟಕ್ಕೆ ಸ್ಫೂರ್ತಿನೀಡಿತು. ತಗಡೂರಿನ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಚರಕದ ಮಹತ್ತ್ವಸಾರಿ ನೂಲುವ ಮತ್ತು ನೇಯುವ ಕಾರ್ಯದಲ್ಲಿ ಜನರನ್ನು ತೊಡಗಿಸಿದರು. ಮನೆಗಳಲ್ಲಿ ಧೂಳು ತಿನ್ನುತ್ತಿದ್ದ ರಾಟೆಗಳನ್ನು ಹೊರತರುವಂತೆ ಪ್ರೇರೇಪಿಸಿದರು. ಹರಿಜನರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ ಖಾದಿ ಕೆಲಸ ಜೀವನೋಪಾಯಕ್ಕೆ ಮಾರ್ಗವಾಗುವಂತೆ ಮಾಡಿದರು. ಹರಿಜನರ ಕ್ರೈಸ್ತ ಮತಾಂತರದ ವಿರುದ್ಧ ಹೋರಾಟ ನಡೆಸಿದರು. ತಗಡೂರಿನಲ್ಲಿ ಖಾದಿ ಉತ್ಪತ್ತಿಗಾಗಿ ಕರ್ನಾಟಕ ಖದ್ದರ್ ಪರಸ್ಪರ ಸಹಕಾರ ಸಂಘವನ್ನು ಸ್ಥಾಪಿಸಿದರು (1925). ಸರ್ಕಾರ ಪತ್ರಿಕೆಗಳ ವಿರುದ್ಧ ಕರಾಳ ಶಾಸನವನ್ನು ಜಾರಿಗೆ ತಂದಾಗ ಇದರ ವಿರುದ್ಧ ಮೈಸೂರು ಪ್ರಾಂತ್ಯದಲ್ಲಿ ಹೋರಾಟವನ್ನು ಪ್ರಾರಂಭಿಸಿದರು. ಈ ಶಾಸನವನ್ನು ಹಿಂದಕ್ಕೆ ತೆಗೆದು ಕೊಳ್ಳುವವರೆಗೂ ಹೋರಾಟ ಕೈಬಿಡಲಿಲ್ಲ. ಸೈಮನ್ ಕಮಿಷನ್ನಿನ ವಿರುದ್ಧ ಸತ್ಯಾಗ್ರಹ ಮಾಡಿ ಮೊದಲ ಬಾರಿಗೆ ಜೈಲುವಾಸವನ್ನು ಅನುಭವಿಸಿದರು (1928). ಖಾದಿಯನ್ನು ಉಳಿಸಿ ಬೆಳೆಸಲು ಹಲವು ಬಾರಿ ಸತ್ಯಾಗ್ರಹ ಕೈಗೊಂಡರು. ಇವರ ವಿರೋಧಿಗಳು ತಗಡೂರಿನ ಆಶ್ರಮಕ್ಕೆ ಅಗ್ನಿಸ್ಪರ್ಶಮಾಡಿ ನಾಶಮಾಡಿದಾಗಲೂ ಎದೆಗುಂದದೆ ತಮ್ಮ ಧ್ಯೇಯ, ಧೋರಣೆಗಳನ್ನು ಮುಂದುವರೆಸಿದರು. ಖಾದಿ ಪ್ರಚಾರಕ್ಕಾಗಿ ಗಾಂಧೀಜಿ ಮೈಸೂರಿಗೆ ಬಂದಾಗ ತಗಡೂರಿಗೆ ಭೇಟಿ ನೀಡಿದರು. ಆ ಸಂದರ್ಭದಲ್ಲಿ ತಗಡೂರರ ಕೆಲಸಕಾರ್ಯಗಳನ್ನು ಮೆಚ್ಚಿ ಪ್ರೋತ್ಸಾಹಿಸಿದರು. ಗಾಂಧೀಜಿ ತಗಡೂರಿಗೆ ನೀಡಿದ ಈ ಭೇಟಿಯ ಜ್ಞಾಪಕಾರ್ಥವಾಗಿ ಇವರು ಹರಿಜನ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು.

1941ರಲ್ಲಿ ಸುಶೀಲಾಬಾಯಿ ಎಂಬುವರನ್ನು ಪಶ್ಚಿಮವಾಹಿನಿಯಲ್ಲಿ ಹಲವಾರು ಹಿತೈಷಿಗಳ ಸಮ್ಮುಖದಲ್ಲಿ ಇವರು ಮದುವೆಯಾದರು. ಬ್ರಿಟಿಷರೇ ಭಾರತಬಿಟ್ಟು ತೊಲಗಿ ಆಂದೋಲನ ಪ್ರಾರಂಭವಾದಾಗ (1942) ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ದೇಶೀರಾಜರ ವಿರುದ್ಧ ಹೋರಾಟ ನಡೆಸಿದರು. ಮೈಸೂರು ಮಹಾರಾಜರು ಈ ಚಳವಳಿಗೆ ಸೇರಬೇಕೆಂದು ಒತ್ತಾಯಿಸಿದರು. ಮಹಾರಾಜರನ್ನು ಅಣಕಮಾಡಿದ್ದರ ನೆಪದಿಂದ ಸರ್ಕಾರ ಎರಡು ವರ್ಷಗಳ ಕಾಲ ಇವರಿಗೆ ಜೈಲು ಶಿಕ್ಷೆ ವಿಧಿಸಿತು. 1957ರಲ್ಲಿ ವಿನೋಬಾಭಾವೆ ಅವರ ಜೊತೆ ಸೇರಿ ಭೂದಾನ ಚಳವಳಿಯ ಯಾತ್ರೆ ಕೈಗೊಂಡರು. ಮೈಸೂರಿನಲ್ಲಿ ಕಾಂಗ್ರೆಸ್ಸಿನ ಉದಯಕ್ಕೂ ಬೆಳವಣಿಗೆಗೂ ಕಾರಣರಾದವರಲ್ಲಿ ಇವರೂ ಒಬ್ಬರು. ಇವರೊಬ್ಬ ದಿಟ್ಟ ಹೋರಾಟಗಾರರು, ರಚನಾತ್ಮಕ ಕಾರ್ಯಕರ್ತರು. ಗ್ರಾಮೀಣ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಅರ್ಪಿಸಿಕೊಂಡರು. ಇವರ ಪ್ರಯತ್ನದ ಫಲವಾಗಿ ತಗಡೂರಿನ ಖಾದಿ ಕೇಂದ್ರ ಹೆಸರಾಗಿದೆ. ಖಾದಿ ಕೇಂದ್ರದ ಉತ್ಪತ್ತಿಯ ನೆರವಿನಿಂದ ಊರಿನಲ್ಲೊಂದು ಪ್ರೌಢಶಾಲೆಯೂ ತಲೆ ಎತ್ತಿದೆ.

ಇವರ ಸೇವೆಯನ್ನು ಗುರುತಿಸಿದ ಮೈಸೂರಿನ ಅಭಿಮಾನಿಗಳು 'ಕರ್ಮಯೋಗಿ' ಎಂಬ ಅಭಿನಂದನ ಗ್ರಂಥವನ್ನು ಇವರಿಗೆ ಅರ್ಪಿಸಿದರು (1974). ಈ ಗ್ರಂಥ' ತಗಡೂರರ ಆತ್ಮಕಥೆಯನ್ನು ಒಳಗೊಂಡಿದೆ. ಜಮನ್‌ಲಾಲ್ ಪ್ರತಿಷ್ಠಾನ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ (1983). ಭಾರತ ಚೀನ ಸ್ನೇಹಸಂಘದ ಮತ್ತು ಭಾರತ ರಷ್ಯ ಸ್ನೇಹಸಂಘದ ಮೈಸೂರು ಪ್ರಾಂತ್ಯದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಇವರು 1988 ಡಿಸೆಂಬರ್ 28ರಂದು ನಿಧನರಾದರು. *

**ತಡಿಯಂಡಮೋಳ್ :** ಕೊಡಗು ಜಿಲ್ಲೆಯ ಅತ್ಯಂತ ಉನ್ನತ ಶಿಖರ. ಸಮುದ್ರಮಟ್ಟದಿಂದ 1,745ಮೀ ಎತ್ತರವಿದೆ. ಸಹ್ಯಾದ್ರಿ ಪರ್ವತದ ಮಾಲೆಗಳ ಅಲೆಗಳ ಮಧ್ಯದಲ್ಲಿ ಮಡಿಕೇರಿ ತಾಲ್ಲೂಕಿನ ನಾಪೊಕ್ಲು ಪಟ್ಟಣದಿಂದ ಸು.16ಕಿಮೀ ನೈಋತ್ಯಕ್ಕಿದೆ. ಇಲ್ಲಿಗೆ ಮಡಿಕೇರಿಯಿಂದ ಸು.38ಕಿಮೀ ದೂರ, ವಿರಾಜಪೇಟೆಯಿಂದ 32ಕಿಮೀ. ಈ ಬೆಟ್ಟದ ತಳಭಾಗ ಸು.19ಕಿಮೀ ಉದ್ದವಿದ್ದು 12-13ಕಿಮೀ ಅಗಲವಾಗಿದೆ. ಈ ಬೆಟ್ಟದ ಬುಡದಲ್ಲಿ ನಾಲ್ಕು ನಾಡು ಅರಮನೆ ಇದೆ.

ತಡಿಯಂಡಮೋಳ್ ಶಿಖರವನ್ನೇರಲು ಹೋಗಬೇಕಾದ ಕಾಲುದಾರಿ ಈ ಅರಮನೆಯಿಂದಲೇ ಆರಂಭವಾಗುವುದು. ಬೆಟ್ಟದ ಬುಡದಲ್ಲಿ ಭೀಮಾಕಾರದ ಮರಗಳ ನಿಬಿಡ ಕಾಡಿದೆ. ಪರ್ವತದ ಎದೆಭಾಗದಿಂದ ಮೇಲಿನ ಭಾಗವೆಲ್ಲ 5 ರಿಂದ 10 ಅಡಿಗಳ ಎತ್ತರಕ್ಕೂ ಬೆಳೆದಿರುವ ದರ್ಭೆಯಂಥ ಆನೆ ಹುಲ್ಲಿನಿಂದ ತುಂಬಿದೆ. ಅಲ್ಲೊಂದು ಇಲ್ಲೊಂದು ದೊಡ್ಡ ಮರ ವಿರಳವಾಗಿ ಬೆಳೆದಿದೆ. ಹುಲ್ಲು ಬೆಳೆದ ಈ ಗಿರಿಶಿಖರ, ದೂರದ ನೋಟಕ್ಕೆ ಹಸಿರು ಶಾಲು ಹೊದ್ದುಕೊಂಡ ಪರ್ವತರಾಜನ ಗಾಂಭೀರ್ಯ ತೋರಿಸುವಂತಿದೆ. ಈ ಹುಲ್ಲಿನ ಮಧ್ಯದಿಂದ ಮುಂದುವರಿದರೆ ಅನೇಕ ಸಣ್ಣದೊಡ್ಡ ದಿಬ್ಬಗಳು, ಬಂಡೆಕಲ್ಲುಗಳು ಕಾಣುತ್ತವೆ. ಕೆಲವೆಡೆ ಎರಡೂ ಬೆಟ್ಟಗಳು ಒಂದುಗೂಡುವಲ್ಲಿ ಆಳವಾದ ಕಣಿವೆಗಳುಂಟು. ಈ ಕಂದಕದ ತಳದಲ್ಲಿ ನೀರಿನ ಪ್ರವಾಹ ಹರಿಯುತ್ತಿರುತ್ತದೆ.

ಶಿಖರದ ಮೇಲ್ಭಾಗ ವಿಸ್ತಾರವಾಗಿದೆ. ವರ್ಷದ ಎಲ್ಲ ಕಾಲದಲ್ಲೂ ಸಾಮಾನ್ಯವಾಗಿ ಈ ಭಾಗದಲ್ಲಿ ಮಂಜು ಕವಿರುತ್ತದೆ. ಇಲ್ಲಿ ನಿಂತು ಸುತ್ತ ನೋಡಿದಾಗ ಪಶ್ಚಿಮದ ಅರಬ್ಬೀ ಸಮುದ್ರ ಮತ್ತು ಅಲ್ಲಿ ಸಾಗುತ್ತಿರುವ ಚಿಕ್ಕದೊಡ್ಡ ನೌಕೆಗಳು ಕಾಣಿಸುವುದುಂಟು. ಕೊಡಗಿನ ಎಲ್ಲ ಭಾಗಗಳ ಹಾಗೂ ಕೇರಳದ ಕೆಲಭಾಗಗಳ ಪಕ್ಷಿನೋಟ ಒದಗುತ್ತದೆ. ಬೆಟ್ಟದ ಮೇಲಿಂದ ಮಡಿಕೇರಿಯ ಕೋಟೆ, ಅರಮನೆಗಳು ಮಸುಕಾಗಿ ತೋರುತ್ತವೆ. ಎಡಬದಿಗೆ ನೋಡಿದರೆ ತಲಕಾವೇರಿಯ ಬ್ರಹ್ಮಗಿರಿ ಕಾಣುತ್ತದೆ. ಇಲ್ಲಿಂದ ಸೂರ್ಯಾಸ್ತ ಸೂರ್ಯೋದಯಗಳನ್ನು ನೋಡುವುದಂತೂ ಅಪೂರ್ವ ಆನಂದಾನುಭವ. ಬೆಟ್ಟದ ಬುಡದಲ್ಲಿ ಬತ್ತದ ಗದ್ದೆಗಳು, ಕಾಫಿ ತೋಟಗಳು ಇವೆ. ತಡಿಯಂಡಮೋಳ್ ಕೊಡಗಿನ ಬೆಡಗಿನ ಅಂದದ ಮುಡಿ ಎಂಬ ಉದ್ಗಾರಕ್ಕೆ ಪಾತ್ರವಾಗಿರುವ ರಮಣೀಯ ಸ್ಥಳ. (ಕೆ.ಆರ್.ಯು.)

**ತದಡಿ :** ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ ಒಂದು ಸಣ್ಣ ಬಂದರು ಗ್ರಾಮ. ಅಘನಾಶಿನಿ ನದಿ ಅರಬ್ಬೀ ಸಮುದ್ರ ಸೇರುವ ಸಂಗಮಸ್ಥಳ. ಗೋಕರ್ಣಕ್ಕೆ 3ಕಿಮೀ ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ ಇಲ್ಲಿಂದ ವಿದೇಶಿ ವಾಣಿಜ್ಯ ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ಇಲ್ಲಿ ಒಂದು ಕೋಟೆ ಇದ್ದು ಈ ಸ್ಥಳವನ್ನು ಮೀನುಗಾರಿಕೆಗಾಗಿ ಬಳಸಲಾಗುತ್ತಿದೆ. ಪ್ರಕೃತಿ ಸೌಂದರ್ಯದಿಂದ ಕೂಡಿರುವ ಈ ಸ್ಥಳದಿಂದ ಸೂರ್ಯಾಸ್ತವನ್ನು ವೀಕ್ಷಿಸಬಹುದು. ಇಂಡೊ ಡೆನಿಷ್ ಮೀನುಗಾರಿಕೆ ಯೋಜನೆಯ ಕೇಂದ್ರವಿದೆ. ನಾವಿಕರಿಗೆ ದಿಕ್ಸೂಚಿಯಾಗಿ ಇಲ್ಲೊಂದು ಲೈಟ್ ಹೌಸ್ ಇದೆ.

ತದಡಿಗೆ ಹೋಗುವ ಮಾರ್ಗದಲ್ಲಿ ತೊರ್ಕೆ ಎಂಬಲ್ಲಿ ಸಿದ್ದೇಶ್ವರ ದೇವಾಲಯವಿದೆ. ಸಮೀಪದ ಸಾಣಿಕಟ್ಟೆ ಉಪ್ಪು ತಯಾರಿಕೆಗೆ ಪ್ರಸಿದ್ಧವಾಗಿದೆ. ಇಲ್ಲಿ ಮಹಾಬಲಾನಂದ ಸ್ವಾಮಿಗಳು ಸ್ಥಾಪಿಸಿದ (1956) ನಿತ್ಯಾನಂದ ಆಶ್ರಮವಿದೆ. ತದಡಿಯ ಎದುರು ದಡದಲ್ಲಿರುವ ಅಘನಾಶಿನಿ ಎಂಬ ಸ್ಥಳದಲ್ಲಿ ಅಗಸ್ತ್ಯ ವಿನಾಯಕ ದೇವಾಲಯವಿದೆ. ಕಿರುಬೆಲೆ ಎಂಬಲ್ಲಿ ಅಗಸ್ತ್ಯ ಗುಹೆ ಇದೆ. (ಎಸ್.ಎಚ್.ಇ.)

**ತತ್ತ್ವದ ಪದಗಳು :** ಕನ್ನಡದಲ್ಲಿ ತತ್ತ್ವದ ಪದಗಳ ಪ್ರಚಾರ ಪ್ರಾರಂಭವಾದುದು ಸುಮಾರು ಹದಿನೈದನೆಯ ಶತಮಾನದಲ್ಲಿ. ಇದಕ್ಕೂ ಮೊದಲು ಸಂಸ್ಕೃತ ಸಾಹಿತ್ಯದ ಛಾಯೆ ಕನ್ನಡದ ಮೇಲೆ ಮೂಡಿ ತತ್ತ್ವದ ಬಗೆಗೆ ಅಲ್ಲಲ್ಲಿ ವಿಚಾರಗಳು ದಾಖಲೆಯಾಗಿವೆ. ಅದ್ವೈತ, ವಿಶಿಷ್ಟಾದ್ವೈತ ಈ ವಾದಗಳನ್ನು ಕನ್ನಡದಲ್ಲಿ ಪಂಡಿತರು ಮೌಖಿಕವಾಗಿ ಶರಣರ ಕಾಲಕ್ಕಿಂತಲೂ ಮೊದಲು ವಿಚಾರ ಮಾಡಿದಂತಿದೆ. ಜೈನಧರ್ಮದ ಪ್ರಣಾಳಿಕೆಗಳು ತತ್ತ್ವದ ನೀತಿಗೆ ಬೆಂಬಲವಾಗಿವೆ. ರತ್ನಾಕರವರ್ಣಿಯ ಅಣ್ಣನ ಪದಗಳು ನಿಜಕ್ಕೂ ತತ್ತ್ವದ ಪದಗಳಾಗಿವೆ. ಮೌಖಿಕವಾಗಿದ್ದ ಇಂಥ' ದಾಖಲೆಗಳನ್ನು ರತ್ನಾಕರವರ್ಣಿ ಮಾರ್ಗದಾಖಲೆಗಳನ್ನಾಗಿ ಮಾಡಿದ್ದಾನೆ. ಇಂಗಳಿಗಿಯ ಕವಿಯೊಬ್ಬ ಅನುಭವಸಾರಲೀಲಾ ಎಂಬ ತತ್ತ್ವದ ಪದಗಳನ್ನು ಶರಣರ ತತ್ತ್ವದ ಪದಗಳು ಎಂದು ಹಾಡಿ ಪ್ರಚಾರ ಮಾಡಿದ. ಮಾರ್ಗ ಸಾಹಿತ್ಯದಲ್ಲಿ ತತ್ತ್ವ ಬಹಳಷ್ಟು ಮೂಡಿಬಂದಿದೆ. ಈ ದೃಷ್ಟಿಯಿಂದ ನಿಜಗುಣಶಿವಯೋಗಿಯ ಕೈವಲ್ಯಪದ್ಧತಿ, ಸರ್ಪಭೂಷಣ ಶಿವಯೋಗಿಯ ಕೈವಲ್ಯಕಲ್ಪವಲ್ಲರಿ, ಚಿದಾನಂದಾವಧೂತರ ಕೈವಲ್ಯನವನೀತ, ಮುಪ್ಪಿನ ಷಡಕ್ಷರಿಯ ಸುಬೋಧಸಾರ, ಬಾಲಲೀಲಾಮಹಂತ ಶಿವಯೋಗಿಗಳ ತತ್ತ್ವಲೀಲೆಗಳು- ಈ ಮೊದಲಾದವು ಕನ್ನಡ ಜನಮನದಲ್ಲಿ ತತ್ತ್ವದ ಪದಗಳಾಗಿ ಮೂಡಿವೆ. ಇತ್ತೀಚೆಗೆ ಕೂಡಲುಕೇಶ ಎಂಬ ಕವಿಯಿಂದ ತತ್ತ್ವದ ಪದಗಳು ಹುಟ್ಟಿಕೊಂಡಿವೆ. ಆರ್.ಡಿ.ರಾನಡೆ (ಗುರುದೇವ ರಾನಡೆ) ಅವರಿಂದ ತತ್ತ್ವದ ಪದಗಳು ರಚನೆಯಾಗಿವೆ. ಇವುಗಳನ್ನು ಉತ್ತರ ಕರ್ನಾಟಕದಲ್ಲಿ ನಿತ್ಯಭಜನಾವಳಿ ಪದಗಳೆಂದು ಜನ ಹಾಡುತ್ತಾರೆ.

ತತ್ತ್ವದ ಪದಗಳ ಗಾಯಕರು

19-20ನೆಯ ಶತಮಾನಗಳಲ್ಲಿ ತತ್ತ್ವದ ಪದಗಳು ಬಹುವಾಗಿ ಪ್ರಸಾರಗೊಂಡಿವೆ. ಕಡಕೋಳ ಮಡಿವಾಳಪ್ಪ ಹಾಡಿದ ಹಾಲ ಕಾಸ ತಂಗಿ, ಹಾಲಕಾಸ ತಂಗಿ ಎಂಬ ಪದ, ತಳೆವಾಡಿ ನಬಿ ಎಂಬುವನು ತನ್ನ

ಆಟದಲ್ಲಿ ಹಾಡಿದ ಒಂಬತ್ತು ಬಾಗಿಲ ಹಚ್ಚಿ, ಬಾಗಿಲಕೊಂದೊಂದು ಸಾಚಾ ಹಚ್ಚಿ ಪದಗಳು ತತ್ತ್ವದ ಆಳವನ್ನು ಸೂಚಿಸಿವೆ. ಕರ್ನಾಟಕದಲ್ಲಿ ವೃತ್ತಿಗಾಯಕರಾಗಿ ಅಲೆಯುವ ದಂಡಿಗಿದಾಸರು (ಸ್ಪೃಶ್ಯರು, ಕಟ್ಟಿಗೆಯ ತಂಬೂರಿ ಹಿಡಿದವರು), ಹೊಲಿದಾಸರು (ಅಸ್ಪೃಶ್ಯರು, ಏಕತಾರಿ ಹಿಡಿದವರು) ಜಾತ್ರೆಗಳಲ್ಲಿ ಸಮೂಹಗಳಲ್ಲಿ ತತ್ತ್ವದ ಪದಗಳನ್ನು ಹಾಡುತ್ತ ಜನರ ಮನಸ್ಸನ್ನು ತಿದ್ದುವ ಕಾರ್ಯ ಮಾಡಿದ್ದಾರೆ. ಹೊಲಿದಾಸರ ಹೆಣ್ಣುಮಕ್ಕಳು ಸಹ ಏಕತಾರಿ ಹಿಡಿದು ತತ್ತ್ವದ ಪದಗಳನ್ನು ಹಾಡುವುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವು ಹೀಗಿವೆ:

ಮಾಡ ಗ್ವಾಡಿಯ ಹಿಡಿದಿತ್ತು, ಅಲ್ಲಿ ಆಡ ಆನಿಯ ನುಂಗಿತ್ತು. ಬುದ್ಧಿವಂತ ಇಲಿಯು ಹೋಗಿ, ಗುದ್ದಿ ಬೆಕ್ಕನು ಕೊಂದಿತ್ತು; ಸ್ವಾರಿ ಹೋಗುನು ಬನ್ನಿರೋ, ಶಿವಶರಣರೆಲ್ಲ ಕೂಡಿರೋ.

ಕರ್ನಾಟಕದಲ್ಲಿ ಗೊಂದಲಿಗರು ಎಂಬ ವೃತ್ತಿಗಾಯಕರು ತತ್ತ್ವದ ಪದಗಳನ್ನು ಕಥೆಗಳಲ್ಲಿ ಉಪಕಥೆಗಳಲ್ಲಿ ಹೆಣೆದು ಸಾಕಷ್ಟು ಪ್ರಚಾರ ಮಾಡಿದ್ದಾರೆ. ಇವರು ಹಾಡುವ ತತ್ತ್ವದ ಪದಗಳಲ್ಲಿ ಕೆಲವು ಹೀಗಿವೆ:

ಕೇಳ ತಂಗಿ ನನ ಮಾತ, ಕೇಳ ತಾಯವ್ವ ನನ ಮಾತ, ಸತ್ಯದಿಂದಲೆ ಶಕ್ತಿ, ಸತ್ಯದಿಂದಲೆ ಮುಕ್ತಿ, ಗಂಡನಿಂದಲೆ ಶಕ್ತಿ, ಗಂಡನಿಂದಲೆ ಮುಕ್ತಿ;

ಗುರುವೆ ನಿಮ್ಮ ಸ್ಮರಣೆಯ ನಾನು ಮರೆಯಲಾರೆನು;

ತಿಳಿ ಕರಿ ತೆಲಿ ಮಾನವ, ತಳಬುಡ ತಿಳಿ ನೀ, ಅಪ್ಪುದು ಒಪ್ಪುದು ತಿಳಿ, ಬಪ್ಪುದು ಬಾರದು ತಿಳಿ, ಒಪ್ಪತ್ತಾದರ ನೀ, ಉಪ್ಪು ಸಪ್ಪ ನೀ ಮೊದಲು ತಿಳಿ.

ಇತ್ತೀಚಿನ ದಿನಗಳಲ್ಲಿ ಸದಾನಂದಯೋಗಿಯ (ನಿತ್ಯಾತ್ಮ ಎಂಬುದು ಕವಿಯ ಅಂಕಿತ) ಬಳ್ಳಾರಿ ತತ್ತ್ವದ ಪದಗಳು, ಭಟಕಳ ಅಪ್ಪಯ್ಯನ (ವಿನಯಾನಂದ ಎಂಬುದು ಅಂಕಿತ) ಕಾರವಾರ ತತ್ತ್ವದ ಪದಗಳು, ರಾಯಚೂರಿನ ಕಡಕೋಳ ಮಡಿವಾಳಪ್ಪನ ತತ್ತ್ವದ ಪದಗಳು, ರಾಯಚೂರಿನ ಹಸನ ಸಾಹೇಬನ ತತ್ತ್ವದ ಪದಗಳು, ಬಿಜಾಪುರದ ಹಲಸಂಗಿ ಖಾಜಾಸಾಹೇಬನ ತತ್ತ್ವದ ಪದಗಳು ಬಹು ಪ್ರಚಲಿತವಿವೆ. ಗೋಕಾವಿಯ ಸಾತು ಶ್ಯಾಮಣ್ಣನ ತತ್ತ್ವದ ಪದಗಳು, ಹಲಸಂಗಿಯವರ ತತ್ತ್ವದ ಪದಗಳು, ಪರಮಾನಂದವಾಡಿಯ ತತ್ತ್ವದ ಪದಗಳು, ಬೀಳೂರ ಕವಿಯ ತತ್ತ್ವದ ಪದಗಳು ವೃತ್ತಿಗಾಯಕರ ನಾಲಗೆಯಲ್ಲಿ ಇಂದಿಗೂ ಉಳಿದುಬಂದಿವೆ. ಶಿಶುನಾಳ ಶರೀಫ ಶಿವಯೋಗಿಗಳ ಹಾಗೂ ಗೋವಿಂದಭಟ್ಟರ ತತ್ತ್ವದ ಪದಗಳು ಜನಪದ ಸಾಹಿತ್ಯದಲ್ಲಿ ತತ್ತ್ವದ ಪದಗಳಲ್ಲಿ ಪ್ರಸಿದ್ಧವಾಗಿದ್ದು ಇವುಗಳನ್ನು ವೃತ್ತಿಗಾಯಕರೂ ಭಜನಾ ಮಂಡಳದವರೂ ಹಾಡುತ್ತಿದ್ದಾರೆ. ವೃತ್ತಿಗಾಯಕರಾಗಿರುವ ದಾಸರು ಭಜನೆಗಳಲ್ಲಿ ಶೈವ ಮತ್ತು ವೈಷ್ಣವ ತತ್ತ್ವದ ಪದಗಳನ್ನು ಹಾಡುತ್ತಿದ್ದು ಇವರಿಗೆ ಪುರಂದರದಾಸ, ಕನಕದಾಸ, ವಿಜಯದಾಸರ ಕೀರ್ತನೆಗಳು ತತ್ತ್ವದ ಪದಗಳಾಗಿವೆ.

ವೀರಶೈವರಲ್ಲೂ ತತ್ತ್ವದ ಪದಗಳನ್ನು ಹಾಡುವವರಿದ್ದಾರೆ. ಇವರು ವಾದ್ಯಮೇಳಗಳನ್ನು ಮಾಡಿಕೊಂಡಿದ್ದಾರೆ. ವಾದ್ಯಮೇಳದಲ್ಲಿ ದಮಡಿ, ತಾಳ, ಸಂಬಾಳದೊಂದಿಗೆ ತತ್ತ್ವದ ಪದಗಳನ್ನು ಹೇಳುತ್ತಾರೆ. ಹಾಡುವ ಗಾಯಕರು ಧೋತ್ರ ಉಟ್ಟು, ದಡಿಧೋತ್ರ ನಡುವಿಗೆ ಕಟ್ಟಿ, ಕೈಯಲ್ಲಿ ವಸ್ತ್ರ ಹಿಡಿದು, ಹಣೆಗೆ ವಿಭೂತಿ ಹಚ್ಚಿ, ಕೊರಳಲ್ಲಿ ರುದ್ರಾಕ್ಷಿಮಾಲೆ ಹಾಕಿಕೊಂಡಿರುತ್ತಾರೆ. ಮದುವೆ ಮುಂಜಿಗಳಲ್ಲಿ, ಜಾತ್ರೆ ಓಕುಳಿಗಳಲ್ಲಿ ತತ್ತ್ವದ ಪದಗಳನ್ನು ಹಾಡುವುದು ಹೆಚ್ಚು. ಕಂಬಿಯವರು, ಸಾರುವ ಅಯ್ಯಂದಿರು, ಕರಪಾಲದವರು, ಬಹುರೂಪಿಯವರು ಸಹ ತತ್ತ್ವದ ಪದಗಳನ್ನು ಹಾಡುತ್ತಾರೆ. ಇಂಥ ಪದಗಳು ಗ್ರಂಥರೂಪದಲ್ಲೂ ಪ್ರಕಟವಾಗಿವೆ. ನಲುಂದಪುರ (ನರಗುಂದ) ತತ್ತ್ವದ ಪದಗಳು, ಧಾರವಾಡ ತತ್ತ್ವದ ಪದಗಳು ಎಂಬ ಪುಸ್ತಕಗಳನ್ನು ವಾಗ್ವಿಲಾಸ ಹುಬ್ಬಳ್ಳಿಯವರು, ಕೊಡೆಕಲ್ಲು ತತ್ತ್ವದ ಪದಗಳು, ಮುಚಕಂಡಿ ತತ್ತ್ವದ ಪದಗಳು ಎಂಬ ಪುಸ್ತಕಗಳನ್ನು ಬಳ್ಳಾರಿಶೆಟ್ಟರು ಪ್ರಕಟಿಸಿದ್ದಾರೆ. (ಎನ್.ಎನ್.ಎಚ್.)

ತತ್ತ್ವದ ಪದಗಳಲ್ಲಿ ಅದ್ವೈತ, ರಾಜಯೋಗ, ಅಚಲವೇದಾಂತ, ವೈರಾಗ್ಯ, ಗುರುಭಕ್ತಿ, ಅಹಿಂಸೆ ಇತ್ಯಾದಿ ವಿಷಯಗಳಿರುತ್ತವೆ. ಜನರಿಗೆ ಪರಿಚಿತವಾಗುವ ಭಾಷೆ, ಉಪಮಾನ, ರೂಪಕಗಳ ಮೂಲಕ ಈ ಗೀತೆಗಳು ಸೃಷ್ಟಿಯಾಗಿದ್ದು, ವೇದಾಂತ ಜನಸಾಮಾನ್ಯರ ಮಟ್ಟಕ್ಕೂ ನಿಲುಕುವಂತಿರುತ್ತದೆ. ತತ್ತ್ವದ ಪದಗಳನ್ನು ಉಪನಿಷತ್ತುಗಳಿಗೆ ಹೋಲಿಸಬಹುದು. ಉಪನಿಷತ್ತುಗಳಲ್ಲಿಯೂ ಪ್ರಪಂಚ ಸೃಷ್ಟಿ, ಜೀವಾತ್ಮ, ಪರಮಾತ್ಮ, ಸುಖದುಃಖ, ಮರಣಾನಂತರ ಜೀವನ ಇತ್ಯಾದಿಗಳನ್ನು ಕುರಿತ ವಿಚಾರಗಳಿರುತ್ತವೆ. ಈ ದೃಷ್ಟಿಯಿಂದ ಉಪನಿಷತ್ತುಗಳು ಮಹರ್ಷಿಗಳ ತಾತ್ತ್ವಿಕ ಚಿಂತನಪೀಠಗಳಾದರೆ, ತತ್ತ್ವದ ಪದಗಳು ಜನಪದರ ನಿಸರ್ಗಮನೋಹರ ಗೀತೆಗಳಾಗಿವೆ. (ಆರ್.ವಿ.ಎಸ್.ಎಸ್.)

**ತಮ್ಮಯ ಕವಿ :** ಸು.1834. ಬ್ರಾಹ್ಮಣ ಕವಿ. ರಾಜವಂಶ ರತ್ನ ಪ್ರಭೆ ಎಂಬ ಗ್ರಂಥದ ಕರ್ತೃ. ಈತ ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರ ಕೃಪಾಪೋಷಿತನಾಗಿದ್ದ. ಇವನಿಗೆ ವೆಂಕಟಕೃಷ್ಣ ಎಂಬ ಹೆಸರೂ ಇದೆ. ಹಾಸನ ಇವನ ಜನ್ಮಸ್ಥಳ. ತನ್ನನ್ನು ಹೊಸಲ ಕುಲತಿಲಕ ಎಂದು ಕರೆದುಕೊಂಡಿದ್ದಾನೆ.

ರಾಜವಂಶ ರತ್ನಪ್ರಭೆ ಸಂಸ್ಕೃತಭೂಯಿಷ್ಠವಾದ ಚಂಪೂ ಗ್ರಂಥ. ಇದರಲ್ಲಿ ರುಚಿಪ್ರಚಾರ ಎಂಬ ಐದು ಭಾಗಗಳಿವೆ. ಅಲ್ಲಲ್ಲಿ ಕೆಲವು ಸೀಸಪದ್ಯಗಳಿವೆ. ಈ ಗ್ರಂಥವನ್ನು ರಾಜನ ಆಜ್ಞಾನುಸಾರ 1834ರಲ್ಲಿ ಬರೆದು ಮುಗಿಸಿದಂತೆ ತಿಳಿಯುತ್ತದೆ. ಇದರಲ್ಲಿ ಮುಮ್ಮಡಿ ಕೃಷ್ಣರಾಜರ ವರೆಗಿನ ಮೈಸೂರು ಅರಸರ ಚರಿತ್ರೆಯೂ ಮುಮ್ಮಡಿ ಕೃಷ್ಣರಾಜರು ಮಾಡಿದ ಧರ್ಮಕಾರ್ಯಗಳೂ ಅವರು ರಚಿಸಿದ ಗ್ರಂಥಗಳೂ ವರ್ಣಿಸಲ್ಪಟ್ಟಿವೆ. ದೊರೆಯ ಜೀವನ ಕಾರ್ಯವನ್ನು ಕವಿ ಉಪಕಾರರತ್ನ, ಕೀರ್ತಿರತ್ನ ಸಾರಸತರತ್ನ ಮುಂತಾದ ನವರತ್ನಗಳ ಮೂಲಕ ಉಲ್ಲೇಖಿಸಿದ್ದಾನೆ. ಕಾವ್ಯಶೈಲಿ ಪ್ರೌಢವಾಗಿದೆ. ಅಲಂಕಾರಗಳನ್ನು ಯಥೇಚ್ಛವಾಗಿ ಬಳಸಿದ್ದಾನೆ. ಕವಿಗೆ ಸಂಸ್ಕೃತ ಭಾಷೆಯ ಮೇಲಿರುವ ಹಿಡಿತ ಮೆಚ್ಚುವಂಥದ್ದು. ಇವನ ಶೈಲಿಗೆ ಒಂದು ಉದಾಹರಣೆ:

ಆರಾಜಕ್ಷಿತಿಪಾಲ ಖಡ್ಗನಿಹತಾರಾತ್ಯಾದಿ ವಿಶ್ವಂಭರಾ
ಭಾರಾಸಕ್ತನೃಪೌಘರೋಷದಳಿತಪ್ರಾಭಾಕರೋನ್ಮಂಡಲ
ಸ್ವಾರಾನಲ್ಪಮಹಾಕ್ಷತಕ್ಷರದಸೃಗ್ವಾರ ಪ್ರವಾಹಂಗಳಾ
ತಾರಾಮಾರ್ಗವನೈದಿ ಕಾಣಿಸೆ ಜನರ್ ತಾಂ ಸಂಜೆಗೆಂಪೆನ್ನುವರ್

(ಎಸ್.ಆರ್.ಎನ್.)

**ತರೀಕೆರೆ :** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಕೇಂದ್ರ. ಚಿಕ್ಕಮಗಳೂರು ಪಟ್ಟಣದ ಉತ್ತರಕ್ಕೆ 56ಕಿಮೀ ದೂರದಲ್ಲಿದೆ. ಬೆಂಗಳೂರಿನಿಂದ 235ಕಿಮೀ ದೂರದಲ್ಲಿದೆ. ಈ ತಾಲ್ಲೂಕಿನ ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಯೂ ಉತ್ತರಕ್ಕೆ ಶಿವಮೊಗ್ಗ ಜಿಲ್ಲೆಯೂ ದಕ್ಷಿಣದಲ್ಲಿ ಕಡೂರು, ಚಿಕ್ಕಮಗಳೂರು ತಾಲ್ಲೂಕುಗಳೂ ಪಶ್ಚಿಮದಲ್ಲಿ ನರಸಿಂಹರಾಜಪುರ ತಾಲ್ಲೂಕೂ ಇವೆ. ಅಮೃತಾಪುರ, ತರೀಕೆರೆ, ಅಜ್ಜಂಪುರ, ಶಿವನಿ, ಲಿಂಗದಹಳ್ಳಿ ಮತ್ತು ಲಕ್ಕವಳ್ಳಿ ಹೋಬಳಿಗಳಿದ್ದು ಒಟ್ಟು 245 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1224ಚ.ಕಿಮೀ. ಜನಸಂಖ್ಯೆ 2,24,093.

ಈ ತಾಲ್ಲೂಕಿನ ಕೆಲವು ಭಾಗ ಬೆಟ್ಟಗುಡ್ಡಗಳಿಂದಲೂ ಮತ್ತೆ ಕೆಲವು ಭಾಗ ಬಯಲು ಪ್ರದೇಶಗಳಿಂದಲೂ ಕೂಡಿದೆ. ಇಲ್ಲಿನ ಮಣ್ಣು ಮತ್ತು ವಾಯುಗುಣ ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತವೆ. ವಾರ್ಷಿಕ ಸರಾಸರಿ ಮಳೆ 861ಮಿಮೀ. ಈ ತಾಲ್ಲೂಕಿನ ಉತ್ತರಕ್ಕೆ ಉಬ್ರಾಣಿ ಗುಡ್ಡಗಳಿದ್ದು ಅದು ಹಿಂದೆ ದಟ್ಟವಾದ ಬಿದಿರು ಮೆಳೆಗಳಿಂದ ಕೂಡಿತ್ತು. ಅಜ್ಜಂಪುರ ಮತ್ತು ಪೂರ್ವದ ಗಡಿಗೆ ಸೇರಿದಂತೆ ತಾಲ್ಲೂಕಿನ ಈ ಪ್ರದೇಶದಲ್ಲಿ ಕಪ್ಪು ತೆರನ ಮಣ್ಣಿದ್ದು ಅಡಕೆ, ತೆಂಗು, ಗೋದಿ, ಹತ್ತಿ ಮತ್ತು ದ್ವಿದಳಧಾನ್ಯಗಳನ್ನು ಬೆಳೆಯಲಾಗುತ್ತದೆ. ಈ ಭಾಗದಲ್ಲಿ ಮರಗಿಡಗಳು ಕಡಿಮೆ. ತಾಲ್ಲೂಕಿನ ಇತರ ಭಾಗಗಳಲ್ಲಿ ಮರಳು ಮತ್ತು ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದ ಕೆಂಪುಮಣ್ಣು ಕಂಡುಬರುತ್ತದೆ. ರಾಗಿ ಮತ್ತು ಅನೇಕ ಬಗೆಯ ದ್ವಿದಳಧಾನ್ಯಗಳು ಮುಖ್ಯ ಬೆಳೆಗಳಾಗಿವೆ.

ತಾಲ್ಲೂಕಿನ ಪಶ್ಚಿಮ ಭಾಗ ಮಲೆನಾಡು ಪ್ರದೇಶವಾಗಿದೆ. ಇದು ಬಾಬಾಬುಡನ್ ಗಿರಿ ಬೆಟ್ಟದ ಸಾಲಿನ ಒಂದು ಭಾಗವಾಗಿದ್ದು ತಾಲ್ಲೂಕಿನ ನೈಋತ್ಯ ಭಾಗದಲ್ಲಿದೆ. ಬೆಟ್ಟದ ಇಳಿಜಾರು ಪ್ರದೇಶ ದಟ್ಟವಾದ ಕಾಡುಗಳಿಂದ ಕೂಡಿದೆ. ಕೆಲಭಾಗಗಳಲ್ಲಿ ಕಾಡುಗಳನ್ನು ಕಡಿದು ಕಾಫಿ ತೋಟಗಳನ್ನು ಮಾಡಿದ್ದಾರೆ. ಉಬ್ರಾಣಿ ಬೆಟ್ಟ ಮತ್ತು ಲಿಂಗದಹಳ್ಳಿಗಳಲ್ಲಿ ಉತ್ತಮವಾದ ಕಬ್ಬಿಣದ ಅದುರು ಸಿಕ್ಕುತ್ತದೆ.

ಬೆಂಗಳೂರು-ಪುಣೆ ಹಾಗೂ ಬೀರೂರು-ತಾಳಗುಪ್ಪ ರೈಲುಮಾರ್ಗಗಳು ಈ ತಾಲ್ಲೂಕಿನಲ್ಲಿ ಹಾದುಹೋಗಿವೆ. ಬೆಂಗಳೂರು - ಶಿವಮೊಗ್ಗ ರಸ್ತೆ, ಲಕ್ಕವಳ್ಳಿ-ಆಗುಂಬೆ ಘಾಟ್ ರಸ್ತೆ ಮತ್ತು ಚಿಕ್ಕಮಗಳೂರು ರಸ್ತೆ ಮಾರ್ಗಗಳು ಇಲ್ಲಿನ ಮುಖ್ಯವಾದ ಮಾರ್ಗಗಳಾಗಿವೆ.

ಅಜ್ಜಂಪುರ, ಅಮೃತಾಪುರ, ಶಿವನಿ, ಲಕ್ಕವಳ್ಳಿ, ಕೂಡ್ಲೂರು, ಲಿಂಗದಹಳ್ಳಿ ಮತ್ತು ಹುಣಸಗಟ್ಟ ಇವು - ಈ ತಾಲ್ಲೂಕಿನ ಮುಖ್ಯ ಗ್ರಾಮಗಳು. ತರೀಕೆರೆ ತಾಲ್ಲೂಕು ಪ್ರಾಚೀನ ಇತಿಹಾಸ ಹೊಂದಿದೆ. ಇಲ್ಲಿನ ಲಿಂಗದಹಳ್ಳಿ ಮತ್ತು ಶಿವನಿ ಬಳಿ ಶಿಲಾಯುಗದ ನೆಲೆಗಳು ಕಂಡು ಬಂದಿವೆ. ಹೊಯ್ಸಳರ ಕಾಲದ ಅಮೃತಾಪುರದ (ನೋಡಿ) ಅಮೃತೇಶ್ವರ ದೇವಾಲಯ ವಾಸ್ತುಶಿಲ್ಪಕ್ಕೆ ಅತ್ಯಂತ ಪ್ರಸಿದ್ಧವಾಗಿದೆ.

ತರೀಕೆರೆ ಹೋಬಳಿ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಚಿಕ್ಕಮಗಳೂರಿನ ಉತ್ತರಕ್ಕೆ 56ಕಿಮೀ ದೂರದಲ್ಲಿ ಬೀರೂರು-ಶಿವಮೊಗ್ಗ ರೈಲು ಮಾರ್ಗದಲ್ಲೂ ಬೆಂಗಳೂರು-ಶಿವಮೊಗ್ಗ ರಸ್ತೆಮಾರ್ಗದಲ್ಲೂ ಇದೆ. ಜನಸಂಖ್ಯೆ 34,073. ತರೀ ಎಂಬ ಮರಗಳಿಂದ ಈ ಊರಿಗೆ ತರೀಕೆರೆ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾರೆ. ಉತ್ತಮ ರಸ್ತೆ ಸಂಪರ್ಕಗಳಿರುವುದರಿಂದ ಈ ಊರು ವ್ಯಾಪಾರಕೇಂದ್ರವಾಗಿ ಬೆಳೆಯುತ್ತಿದೆ. ಇಲ್ಲಿ ಅನೇಕ ಮರ ಕೊಯ್ಯುವ ಕಾರ್ಖಾನೆಗಳಿವೆ. ತರೀಕೆರೆ ಒಂದು ರೈಲ್ವೆ ನಿಲ್ದಾಣವಾಗಿದೆ.

ತರೀಕೆರೆ ಹೊಯ್ಸಳರ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ಇಲ್ಲಿ ಶರಣೆ ಅಕ್ಕ, ನಾಗಮ್ಮನ ಗದ್ದುಗೆ ಇದೆ. ಕೆರೆಗಳು, ಮಠಗಳು, ದೇವಾಲಯಗಳಿಂದ ಕೂಡಿರುವ ಈ ಊರೊಂದು ಸಾಂಸ್ಕೃತಿಕ ಕೇಂದ್ರ. ವಿಜಯನಗರದ ಕಾಲಾನಂತರ ಇದು ರಾಜಕೀಯವಾಗಿ ಮಹತ್ವ ಪಡೆದು ಒಂದು ಪಾಳೆಯಪಟ್ಟಿನ ಕೇಂದ್ರವಾಗಿತ್ತು. (ಎಂ.)

**ತರೀಕೆರೆ ಪಾಳೆಯಗಾರರು :** 16-18ನೆಯ ಶತಮಾನಗಳಲ್ಲಿ ತರೀಕೆರೆಯಿಂದ ಆ ಸುತ್ತಣ ಪ್ರಾಂತ್ಯಗಳನ್ನು ಆಳಿದ ಪಾಳೆಯಗಾರರು.

ತರೀಕೆರೆಯ ಪಾಳೆಯಗಾರರ ಮೂಲಪುರುಷರು ಮೊದಲು ದಾವಣಗೆರೆ ಜಿಲ್ಲೆಯ ಬಸವಾಪಟ್ಟಣದಲ್ಲಿ ರಾಜ್ಯವಾಳುತ್ತಿದ್ದರೆಂದು (ನೋಡಿ: ಬಸವಾಪಟ್ಟಣದ ಪಾಳೆಯಗಾರರು) ತರೀಕೆರೆ ಪಾಳೆಯಗಾರರ ವಂಶವೃಕ್ಷದಿಂದ ತಿಳಿಯುತ್ತದೆ.

ಈ ಪಾಳೆಯಗಾರರು ಪುವ್ವಲಿ ವಂಶದವರು. ಹನುಮಂತನ ಆರಾಧಕರು. ಈ ವಂಶದಲ್ಲಿ ಕೆಂಗಪ್ಪನಾಯಕ, ಹಿರಿಯ ಹನುಮಪ್ಪನಾಯಕ, ಇಮ್ಮಡಿ ಹನುಮಪ್ಪನಾಯಕ, ನಿಚ್ಚ ಮದುವಣಿಗ ಹನುಮಪ್ಪನಾಯಕ, ಸರ್ಜಾ ಹನುಮಪ್ಪನಾಯಕ, ಸೀತಾರಾಮಪ್ಪನಾಯಕ-ಇವರು ಕ್ರಮವಾಗಿ ಆಳಿದರೆಂದು ಶಾಸನಗಳಿಂದ ತಿಳಿಯುತ್ತದೆ. ಆದರೆ ಕೆಂಗಪ್ಪನಾಯಕನಿಂದ ತೊಡಗಿ ಸರ್ಜಾ ಹನುಮಪ್ಪನಾಯಕನವರೆಗೆ ಹತ್ತು ಜನ ಪಾಳೆಯಗಾರರು ಆಗಿಹೋದರೆಂದು ಪಾಳೆಯಗಾರರ ವಂಶವೃಕ್ಷ ತಿಳಿಸುತ್ತದೆ.

ಬಿಜಾಪುರದ ಸುಲ್ತಾನ ಬಸವಾಪಟ್ಟಣದ ಮೇಲೆ ದಾಳಿ ಇಡಲು (1636) ಅಲ್ಲಿದ್ದ ಕೆಂಗಪ್ಪನಾಯಕ ರಾಜಧಾನಿಯನ್ನು ತರೀಕೆರೆಗೆ ಬದಲಾಯಿಸಿದ. ನಾಯಕರ ಕುಲದೈವವಾದ ಸಂತೆಬೆನ್ನೂರಿನ ಶ್ರೀರಂಗನಾಥ ದೇವಾಲಯವನ್ನು ರಣದುಲ್ಲಾಖಾನ್ ನಾಶಪಡಿಸಿ ಮಸೀದಿಯನ್ನಾಗಿ ಮಾಡಿದ್ದ. ಕೆಂಗಪ್ಪನಾಯಕ ಶತ್ರುಗಳನ್ನು ಅಲ್ಲಿಂದ ಓಡಿಸಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಅಲ್ಲಿ ಒಂದು ಕೊಳವನ್ನು ನಿರ್ಮಿಸಿದ. ಸರ್ಜಾ ಹನುಮಪ್ಪನಾಯಕ ಹೈದರ್‌ಅಲಿಯ ಸಮಕಾಲೀನನಾಗಿದ್ದು ತನ್ನ ಶೌರ್ಯ ಸ್ಥೈರ್ಯಗಳಿಂದ ನವಾಬನ ಗೌರವಾದರಗಳಿಗೆ ಪಾತ್ರವಾಗಿ ಸರ್ಜಾ ಎಂಬ ಬಿರುದನ್ನು ಪಡೆದನೆಂದು ತಿಳಿಯುತ್ತದೆ. ಇವನು ಸ್ಫುರದ್ರೂಪಿಯಾಗಿದ್ದು ದರಿಂದ ನಿಚ್ಚ ಮದುವಣಿಗನೆಂಬ ಜನಪ್ರಿಯ ಬಿರುದನ್ನೂ ಪಡೆದಿದ್ದ. ಹೈದರನಿಗೆ ಸಲ್ಲಿಸಬೇಕಾಗಿದ್ದ ಪೊಗದಿ ಬಾಕಿ ನಿಲ್ಲಲು ಹೈದರ್ ಇವನ ರಾಜ್ಯವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಇದಕ್ಕೆ ಬದಲಾಗಿ 1782 ವರಹದ ಮಂಜರಾಬಾದು ಪ್ರದೇಶವನ್ನು ಇವನಿಗೆ ಕೊಟ್ಟನೆಂದೂ ತಿಳಿದುಬರುತ್ತದೆ. ಇವನ ಮೊಮ್ಮಗನೇ ಮೈಸೂರು ಇತಿಹಾಸದಲ್ಲಿ ಪ್ರಸಿದ್ಧಿಪಡೆದ ಸರ್ಜಾ ರಂಗಪ್ಪನಾಯಕ (1774-1832). ಇವನು ಮೂರನೆಯ ಹಾಗೂ ನಾಲ್ಕನೆಯ ಮೈಸೂರು ಯುದ್ಧಗಳಲ್ಲಿ ಭಾಗವಹಿಸಿದ್ದ.



ತರೀಕೆರೆ ಪಾಳೆಯಗಾರರ ವಂಶಸ್ಥರಲ್ಲಿರುವ ವಿವಿಧರೀತಿಯ ಹಳೆಯ ಆಯುಧಗಳು

ಟಿಪ್ಪು ಸುಲ್ತಾನ್ ಮಡಿದು ಮುಮ್ಮಡಿ ಕೃಷ್ಣರಾಜ ಒಡೆಯರ್ ದೊರೆಯಾದಾಗ, ಅವನ ರಕ್ಷಣೆಗಾಗಿ ಇಂಗ್ಲಿಷರ ದಂಡು ಶ್ರೀರಂಗಪಟ್ಟಣದಲ್ಲಿ ನೆಲೆಯಾಗಿ ನಿಂತಿತು. ಇದು ಕೆಲವು ಸ್ವಾಮಿನಿಷ್ಠ ಪಾಳೆಯಗಾರರಿಗೆ ಸಹನೆಯಾಗಲಿಲ್ಲ. ಅತೃಪ್ತ ಜನತೆಯ ಪಕ್ಷಕಟ್ಟಿ ರಂಗಪ್ಪನಾಯಕನೂ ಅವನ ಮಗ ಸರ್ಜಾ ಹನುಮಪ್ಪ ನಾಯಕನೂ ನಿಂತರು. ಇಂಗ್ಲಿಷರು ಇವರನ್ನು ಸೆರೆಹಿಡಿದು ಶ್ರೀರಂಗಪಟ್ಟಣದಲ್ಲಿ ದೀರ್ಘಕಾಲ ಸೆರೆಯಲ್ಲಿಟ್ಟರು. ಅಲ್ಲಿಂದ ಇವರು ತಪ್ಪಿಸಿಕೊಂಡು ಬಂದರು. ಆ ಸಮಯದಲ್ಲಿ ದೇಶದಲ್ಲಿ ತಲೆದೋರಿದ್ದ ಆಡಳಿತ ಅವ್ಯವಸ್ಥೆ, ಅಧಿಕಾರಿಗಳ ನಿರಂಕುಶ ದಬ್ಬಾಳಿಕೆ ಶೋಷಣೆಗಳಿಂದ ಜನರು ಕೆರಳಿ ಸಾಮೂಹಿಕವಾಗಿ ದಂಗೆ ಎದ್ದರು. ಮೈಸೂರು ಸೈನ್ಯದಲ್ಲಿದ್ದ 1500 ಮಂದಿ ಬೇಡಕಂದಾಚಾರದ ಸಿಪಾಯಿಗಳೂ ಇವರ ಕಡೆ ಸೇರಿದ್ದರು. ಈ ನಾಯಕರು ಈ ದಂಗೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಇವರ ಪಾತ್ರದಿಂದ ಇದಕ್ಕೆ ಬೂದಿಬಸವಪ್ಪನ ದಂಗೆ ಎಂದೂ ರಂಗಪ್ಪನಾಯಕನ ಅಡಾವುಡಿ ಎಂದೂ ಹೆಸರಾಯಿತು. ಇಂಗ್ಲಿಷರು ದಂಗೆಯನ್ನು ಅಡಗಿಸಿ ಸರ್ಜಾ ಹನುಮಪ್ಪನಾಯಕನನ್ನು ಸೆರೆ ಹಿಡಿದು ಬೆಂಗಳೂರಿನಲ್ಲಿ ಗಲ್ಲಿಗೇರಿಸಿದರು. ರಂಗಪ್ಪನಾಯಕ ಮಾತ್ರ ಶತ್ರುಗಳೊಂದಿಗೆ ಹೋರಾಡುತ್ತ ನಿಧನಹೊಂದಿದ.

ಇಂದಿಗೂ ಜನರು ಈ ನಾಯಕರ ಬಗ್ಗೆ ಪದ ಕಟ್ಟಿ ಅವರ ಶೌರ್ಯಸಾಹಸಗಳ ದುರಂತಕಥೆಯನ್ನು ನೆನೆದುಕೊಳ್ಳುತ್ತಾರೆ. (ಎಸ್.ಕೆ.ಟಿ.)

**ತಲಕಾಡು :** ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ಕಾವೇರಿ ನದಿಯ ಉತ್ತರ ದಂಡೆಯಲ್ಲಿರುವ ಊರು. ಇದೊಂದು ಪುಣ್ಯಕ್ಷೇತ್ರ, ಇತಿಹಾಸಪ್ರಸಿದ್ಧ ಸ್ಥಳ. ಮೈಸೂರಿನಿಂದ 90ಕಿಮೀ ದೂರದಲ್ಲಿದೆ.

ತಲಾ, ಕಾಡ ಎಂಬ ಕಿರಾತ ಸೋದರರಿಂದ ಈ ಊರಿಗೆ ತಲಕಾಡು ಎಂಬ ಹೆಸರೂ ಆನೆಯ ಜನ್ಮ ಪಡೆದಿದ್ದ ಸೋಮದತ್ತ ಎಂಬ ಋಷಿ ಮತ್ತು ಆತನ ಶಿಷ್ಯರು ಇಲ್ಲಿ ಮೋಕ್ಷ ಪಡೆದುದರಿಂದ ಗಜಾರಣ್ಯ ಕ್ಷೇತ್ರವೆಂಬ ಹೆಸರೂ ಬಂತೆಂದು ಪೌರಾಣಿಕ ಕಥೆ. ಮೊದಲು ಇಲ್ಲಿ ದಟ್ಟವಾದ ಅರಣ್ಯವಿದ್ದು ಇದಕ್ಕೆ ತಲಕಾಡೆಂಬ ಹೆಸರು

ಬಂದಿರುವುದು ಸಂಭವನೀಯ. ತಲವನಪುರ ಎನ್ನುವುದು ಇದಕ್ಕೆ ಇದ್ದ ಮತ್ತೊಂದು ಹೆಸರು.

ತಲಕಾಡಿನ ಕಾವೇರಿನದಿಯಲ್ಲಿ ಪುಣ್ಯಸ್ನಾನದ ದೃಶ್ಯ

ತಲಕಾಡು ಹಿಂದೆ ಗಂಗ ಅರಸರ ರಾಜಧಾನಿಯಾಗಿತ್ತು. ಮೊದಲು ಕೋಳಾಲದಲ್ಲಿ ಆಳುತ್ತಿದ್ದ ಗಂಗರು ಸು.500ರ ಹೊತ್ತಿಗೆ ತಲಕಾಡಿಗೆ ತಮ್ಮ ರಾಜಧಾನಿಯನ್ನು ಬದಲಾಯಿಸಿರಬೇಕು. ಗಂಗರಾಜ ಹರಿವರ್ಮ ಇಲ್ಲಿ ನೆಲೆಸಿದ್ದನೆಂದು ಒಂದು ಶಾಸನ ತಿಳಿಸುತ್ತದೆ. ಶ್ರೀಪುರುಷನ ಕಾಲದ ಗಂಗ ಶಾಸನಗಳು ಇಲ್ಲಿ ದೊರತಿವೆ. ಚೋಳರ ಆಳಿಕೆಗೆ ಒಳಪಟ್ಟಾಗ ಅವರು ಇದನ್ನು ರಾಜರಾಜಪುರ ಎಂದು ಕರೆದರು. ಚೋಳರು ಆಳಿದ ನೂರು ವರ್ಷಗಳಲ್ಲಿ ಈ ಸ್ಥಳ ಏಳಿಗೆ ಪಡೆದಿತ್ತಾದರೂ ಮುಂದೆ 1116ರಲ್ಲಿ ಹೊಯ್ಸಳರ ಆಳಿಕೆಗೆ ಒಳಪಟ್ಟಾಗ ಈ ಪಟ್ಟಣ ಅತ್ಯಂತ ಉಚ್ಛ್ರಾಯ ಸ್ಥಿತಿಯನ್ನು ಪಡೆಯಿತು. ಆಗ ಏಳು ಪುರಗಳೂ ಪಂಚಮಠಗಳೂ ಇಲ್ಲಿದ್ದುವೆಂತೆ ತಿಳಿದುಬರುತ್ತದೆ. ಆ ಕಾಲದಲ್ಲಿ ಈ ಊರು ಹೊಯ್ಸಳ ರಾಜ್ಯದ ಒಂದು ಉಪರಾಜಧಾನಿಯಾಗಿತ್ತು. ವಿಜಯನಗರ ಸಾಮ್ರಾಜ್ಯ ಪ್ರಾಬಲ್ಯಕ್ಕೆ ಬಂದ ಮೇಲೆ ತಲಕಾಡಿನವನೇ ಆಗಿದ್ದ ಮಾಧವ ಮಂತ್ರಿ ಈ ಊರಿನ ಸಮೀಪದಲ್ಲಿ ಕಾವೇರಿಗೆ ಒಂದು ಅಣೆಕಟ್ಟನ್ನು ಕಟ್ಟಿಸಿದುದಲ್ಲದೆ (ಸು.1342) ಅನೇಕ ಅಭಿವೃದ್ಧಿ ಕಾರ್ಯಗಳನ್ನೂ ನಡೆಸಿದ. ಆದರೆ ಮುಂದೆ ಇದರ ಅವನತಿ ಆರಂಭವಾಯಿತು. ಇದಕ್ಕೆ ಬಹುಶಃ ಮುಖ್ಯ ಕಾರಣ ಮಾಧವ ಮಂತ್ರಿ ಅಣೆಕಟ್ಟೆಯೇ. ಕಟ್ಟೆಯ ಹಿಂದೆ ಉಂಟಾದ ಮರಳು ಹರವಿನಿಂದ ಗಾಳಿಕಾಲದಲ್ಲಿ ತೂರಿ ಬರುವ ಕಣಗಳಿಂದ ಊರಿನ ಮೇಲೆ ಮರಳಿನ ದಿಣ್ಣೆಗಳು ಆವರಿಸುತ್ತ ಬಂದು ಊರು ಮರಳುಮಯವಾಯಿತು. ಈ ಮರಳು ಆವರಿಸುವ ಬಗ್ಗೆ ಒಂದು ಜನಜನಿತ ಕಥೆ ಇದೆ: ವಿಜಯನಗರದ ಪ್ರತಿನಿಧಿಯಾಗಿ ಸೋಮರಾಜ ಅಥವಾ ಶ್ರೀರಂಗರಾಯ ಎಂಬುವನು ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ. ಅವನಿಗೆ ಯಾವುದೋ ರೋಗ ಹತ್ತಿರಲು ನಿವಾರಣೆಗಾಗಿ ವೈದ್ಯೇಶ್ವರನಿಗೆ ಪೂಜೆ ಅರ್ಪಿಸಲು ತಲಕಾಡಿಗೆ ಬಂದ. ಇವನು ಮರಣಾವಸ್ಥೆಯಲ್ಲಿರುವನೆಂದು ಭಾವಿಸಿ ಅವನ ಹೆಂಡತಿಯೂ ಬಂದಿದ್ದಳು. ರಾಜ ಮೃತನಾದಾಗ ಮೈಸೂರಿನ ರಾಜ ಒಡೆಯ ಆಕೆಯ ಅಮೂಲ್ಯವಾದ ಮೂಗುಬಟ್ಟನ್ನು ಪಡೆಯಲು ಸೈನ್ಯಸಮೇತ ಧಾವಿಸಿದ. ಮನನೊಂದ ಶ್ರೀರಂಗರಾಯನ ರಾಣಿ ಆ ಆಭರಣವನ್ನು ಕಾವೇರಿಯ ಮಾಲಿಂಗಿ ಮಡುವಿಗೆ ಎಸೆದು, ಮಾಲಿಂಗಿ ಮಡುವಾಗಿ, ತಲಕಾಡು ಮರಳಾಗಿ, ಮೈಸೂರು ರಾಜರಿಗೆ ಮಕ್ಕಳಾಗದಿರಲಿ ಎಂದು ಶಾಪವಿತ್ತು ತಾನೂ ಮಾಲಿಂಗಿಯಲ್ಲಿ ಬಿದ್ದು ಪ್ರಾಣತೆತ್ತಳು.



[illegible]

ಐತಿಹಾಸಿಕ ಮಹತ್ತ್ವವುಳ್ಳ ತಲಕಾಡಿನಲ್ಲಿ ಮೂವತ್ತಕ್ಕಿಂತಲೂ ಹೆಚ್ಚು ದೇವಾಲಯಗಳು ಇದ್ದುದಾಗಿ ತಿಳಿದುಬಂದರೂ ಹೆಚ್ಚಿನವು ಉಳಿದಿಲ್ಲ. ಗಂಗರ, ಚೋಳರ ಕಾಲದ ಬಸದಿಗಳೂ ದೇವಾಲಯಗಳೂ ಬಹುಶಃ ಮರಳಿನ ರಾಶಿಯಲ್ಲಿ ಹೂತು ಹೋಗಿರಬಹುದು, ಇಲ್ಲವೇ ನಾಶವಾಗಿ ಹೋಗಿರಬಹುದು. ಇತ್ತೀಚೆಗೆ ನಡೆದ ಉತ್ಖನನಗಳಿಂದ ತಲಕಾಡಿನ ಕೆಲವು ದೇವಾಲಯಗಳ ಅವಶೇಷಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಪೂರ್ಣ ಸುಸ್ಥಿತಿಯಲ್ಲಿರುವ ದೇವಾಲಯಗಳೂ ಕೊಳಗಳೂ ಇವೆ. ಜೊತೆಗೆ ಇಲ್ಲಿ ಕ್ರಿಸ್ತಪೂರ್ವ ಕೆಲವು ಶತಮಾನಗಳ ಹಿಂದಿನಿಂದಲೂ ಜನವಸತಿ ಇದ್ದ ಬಗ್ಗೆ ಪುರಾವೆಗಳು ದೊರೆತಿವೆ. ಗಂಗರ ಕಾಲದ ವಾಸ್ತು ಅವಶೇಷಗಳನ್ನು ಮರಳೇಶ್ವರ, ಪಾತಾಳೇಶ್ವರ, ಅರ್ಕೇಶ್ವರ, ದೇವಾಲಯಗಳಲ್ಲಿ ಗುರುತಿಸಬಹುದು. ಚೋಳ ದೇವಾಲಯಗಳಾದ ರಾಜರಾಜೇಶ್ವರ, ವೈಕುಂಠನಾರಾಯಣ ದೇವಾಲಯಗಳು ಈಗ ಕಣ್ಮರೆಯಾಗಿವೆ. ಪಂಚಲಿಂಗೇಶ್ವರ, ಗೋಕರ್ಣೇಶ್ವರ, ವೀರಭದ್ರ, ಆನಂದೇಶ್ವರ ಮುಂತಾದ ದೇವಾಲಯಗಳು ಈಚೆಗೆ ಕಟ್ಟಿಸಿರುವ ಕೆಲವು ಸಾಮಾನ್ಯ ಗುಡಿಗಳು.

ಕೀರ್ತಿನಾರಾಯಣ ಇಲ್ಲಿರುವ ಏಕಮಾತ್ರ ಹೊಯ್ಸಳ ದೇವಾಲಯ. ವಿಷ್ಣುವರ್ಧನ ಚೋಳರ ಮೇಲೆ ಸಾಧಿಸಿದ ವಿಜಯದ ಕುರುಹಾಗಿ 1117ರಲ್ಲಿ ಇದನ್ನು ಕಟ್ಟಿಸಿದ. ಇದು ಹೊಯ್ಸಳ ಕಾಲದ ದೇವಾಲಯವಾದರೂ ಕಗ್ಗಲ್ಲು ಮತ್ತು ಇಟ್ಟಿಗೆಗಳಿಂದ ನಿರ್ಮಿತವಾಗಿದೆ. ಎತ್ತರವಾದ ಜಗತಿಯ ಮೇಲೆ ಗರ್ಭಗುಡಿ, ಸುಕನಾಸಿ ಮತ್ತು ನವರಂಗಗಳಿದ್ದು, ನವರಂಗದ ಮೂರು ಕಡೆಯೂ ದ್ವಾರಗಳಿವೆ. ಹೊರಗೋಡೆಗಳ ಮೇಲೆ ಅರೆಗಂಬಗಳು, ಅವುಗಳ ನಡುವೆ ಅರೆಗೋಪುರಗಳು ನಡುನಡುವೆ ಅರೆಮಂಟಪಗಳಿವೆ. ನವರಂಗ ವಿಶಾಲವಾಗಿದ್ದು ಅದರ ನಡುವೆ ಬಳಪದ ಕಲ್ಲಿನ ನಾಲ್ಕು ದಪ್ಪ ಕಂಬಗಳಿವೆ. ಇವು ಹೊಯ್ಸಳ ರೀತಿಯಲ್ಲಿ ತಿರುಗಣೆಯಲ್ಲಿ ಕಡೆದವು. ಉಳಿದ ಕಂಬಗಳು ಎಂಟು ಅಥವಾ ಹದಿನಾರು ಮೂಲೆಯ ನಕ್ಷತ್ರಾಕಾರದಲ್ಲಿಯೋ ಅಷ್ಟಮುಖವಾಗಿಯೋ ಇವೆ. ಚಾವಣಿಗಳು ಸಾಮಾನ್ಯವಾಗಿ ಚಪ್ಪಟೆ. ಕೆಲವು ಅಂಕಣಗಳಲ್ಲಿ ಮಾತ್ರ ಭುವನೇಶ್ವರಿಯ ಆಕಾರಗಳಿದ್ದು ಅಂದವಾಗಿ ಕಡೆದ ಬಳ್ಳಿಯ ಸಾಲು, ತಾವರೆ, ಆನೆ, ಸಿಂಹ, ನರ್ತಕಿಯರು ಮುಂತಾದ ಶಿಲ್ಪಗಳಿಂದ ಅಲಂಕೃತವಾಗಿದೆ.

ಕೀರ್ತಿನಾರಾಯಣ ದೇವಾಲಯ

ಕೀರ್ತಿನಾರಾಯಣದ ಮೂಲವಿಗ್ರಹ ಹತ್ತು ಅಡಿ ಎತ್ತರವಿದೆ. ಇದು ಸಮಭಂಗದಲ್ಲಿ ನಿಂತ ಚತುರ್ಭುಜ ಮೂರ್ತಿ. ಈ ಮೂರ್ತಿಯ ಪ್ರಭಾವಳಿಯ ಮೇಲೆ ವಿಷ್ಣುವಿನ ದಶಾವತಾರಗಳನ್ನು ನೋಡಬಹುದು. ಗಂಭೀರವಾದ ಮುಖಮುದ್ರೆಯಿಂದ ಕೂಡಿದ ಈ ಮೂರ್ತಿ ಸುಂದರವಾಗಿದೆ. ನವರಂಗದಲ್ಲಿರುವ ನಮ್ಮಾಳ್ವಾರ್, ವೇದಾಂತ ದೇಶಿಕರ್

ಮೊದಲಾದ ಮೂರ್ತಿಗಳು ಮತ್ತು ಲಕ್ಷ್ಮಿಯ ವಿಗ್ರಹ ವಿಜಯನಗರದ ಕಾಲದವು.

ಈ ದೇವಾಲಯದ ಮೇಲೆ ಇರುವ ಚಪ್ಪಟೆಯಾದ ಇಟ್ಟಿಗೆಯ ಗೋಪುರ ಬಹುಶಃ ವಿಜಯನಗರದ ಕಾಲದಲ್ಲಿ ಮೂಲ ಹೊಯ್ಸಳ ಗೋಪುರವನ್ನನುಸರಿಸಿ ಮಾಡಿದ್ದು. ಸುಮಾರು ನೂರು ವರ್ಷಗಳ ಹಿಂದೆ ಮರಳಿನ ರಾಶಿಯನ್ನು ತೆಗೆದುಹಾಕಿ ದೇವಸ್ಥಾನವನ್ನು ಬಿಡಿಸಲಾಯಿತು. (ಎಂ.ಎಚ್.)

ವೈದ್ಯೇಶ್ವರನದು ಊರಿನ ಪ್ರಮುಖ ದೇವಾಲಯ. ಬಹುಶಃ ಚೋಳ ಪ್ರತಿಷ್ಠೆ. ಆದರೆ ಇಂದಿರುವ ಕಟ್ಟಡ ಪೂರ್ಣವಾಗಿ ವಿಜಯನಗರದ ಅರಸರ ಕಾಲದಲ್ಲಿ 14ನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾಯಶಃ ಈ ಊರಿನವನೇ ಆದ ಮಾಧವ ಮಂತ್ರಿಯಿಂದ ರಚಿತವಾದದ್ದು. ಕಣಶಿಲೆಯಲ್ಲಿ ಕಟ್ಟಿರುವ ಈ ಕಟ್ಟಡದಲ್ಲಿ ಉತ್ತಮ ಶಿಲ್ಪಾಲಂಕರಣಗಳಿದ್ದು, ದ್ರಾವಿಡ ಹಾಗೂ ಹೊಯ್ಸಳ ಶೈಲಿಗಳ ಬೆರಕೆ ಕಂಡುಬರುವುದು ಈ ಗುಡಿಯ ವೈಶಿಷ್ಟ್ಯ. ಮೂಲಗುಡಿಯ ಸುತ್ತ ದೊಡ್ಡ ಪ್ರಾಕಾರವಿದ್ದು ಅದಕ್ಕೆ ಸೇರಿದಂತೆ ಅನೇಕ ಸಣ್ಣ ಗುಡಿಗಳಿವೆ. ಇವು ಈಚಿನವು. ಹೊಯ್ಸಳ ವಾಸ್ತು ಶೈಲಿಯ ರೀತಿಯಲ್ಲಿ ದೇವಾಲಯವನ್ನು ದೊಡ್ಡ ಜಗತಿಯ ಮೇಲೆ ಎತ್ತಲಾಗಿದೆ. ಇದರಲ್ಲಿ ಗರ್ಭಗೃಹ, ಮುಂದೆ ಒಂದಂಕಣದ ಅಂತರಾಳ, ಮಧ್ಯದಲ್ಲಿ ನವರಂಗ, ಅದರ ನಾಲ್ಕು ಕಡೆಗಳಲ್ಲೂ ಮೂರು ಅಂಕಣಗಳ ಸಾಲುಗಳು ಇವೆ. ಪೂರ್ವ ಮತ್ತು ದಕ್ಷಿಣದಲ್ಲಿ ಪ್ರವೇಶ ದ್ವಾರಗಳಿವೆ. ಮೂರಂಕಣದ ಪೂರ್ವದ ಮಂಟಪ ಸು.1633ರ ರಚನೆ. ಇಲ್ಲಿರುವ 10 ಅಡಿ ಎತ್ತರದ ದ್ವಾರಪಾಲ ವಿಗ್ರಹಗಳು ಬಹುಶಃ ಕರ್ನಾಟಕದಲ್ಲೇ ದೊಡ್ಡವು. ದಕ್ಷಿಣ ದ್ವಾರ ಮತ್ತು ಮುಮ್ಮಂಟಪ ಹಳೆಯವು. ಈ ಭಾಗದಲ್ಲಿ ವಿಜಯನಗರದ ರೀತಿಯ ಕಂಬಗಳಿದ್ದು, ಉತ್ತಮ ಶಿಲ್ಪಗಳಿಂದ ಕೂಡಿ ಸುಂದರವಾಗಿವೆ. ಹೊರಭಿತ್ತಿಯ ಮೇಲೆ ತಳದಲ್ಲಿ ಅಡ್ಡಪಟ್ಟಿಕೆಗಳ ಮೇಲೆ ನಾನಾ ದೇವರುಗಳ ಶಿಲ್ಪಗಳ ಅಲಂಕರಣ ಇವೆ. ಇಲ್ಲಿಯ ಶಿಲ್ಪವೈವಿಧ್ಯ ಮೂರ್ತಿಶಾಸ್ತ್ರ ಅಭ್ಯಾಸಿಗಳಿಗೆ ಆಸಕ್ತಿಕರವಾಗಿದೆ. ಮೇಲಂಚಿನಲ್ಲಿ ಬಾಗುಕಪೋತ, ಅದರ ಮೇಲೆ ಸಿಂಹಮುಖಗಳಿರುವ ಕೈಪಿಡಿ ಗೋಡೆ ಇದೆ. ಶಿಖರ ಇಟ್ಟಿಗೆಯದು. ದ್ರಾವಿಡ ಶೈಲಿಯಲ್ಲಿದೆ. ಬಹಶಃ 17ನೆಯ ಶತಮಾನದ್ದು. ದೇವಾಲಯದ ಒಳಗಿರುವ ನವರಂಗದ ಬಾಗಿಲುಗಳು, ಕಂಬಗಳು ಹಾಗೂ ಚಾವಣಿಗಳು ಬಹು ಸುಂದರವಾಗಿ ಬಿಡಿಸಿರುವ ಭಾಗಗಳು. ದೇವಾಲಯದ ಒಳಗೆ ಅನೇಕ ಬಿಡಿ ಶಿಲ್ಪಗಳಿವೆ. ಇಲ್ಲಿನ ನಟರಾಜನ ಕಂಚಿನ ವಿಗ್ರಹ (18ನೆಯ ಶತಮಾನ) ಕಳಲೆ ನಂಜರಾಜಯ್ಯನ ಸೇವೆ.

ಅರ್ಕೇಶ್ವರ ದೇವಾಲಯ

ಈ ಊರಿನ ಗೌರೀಶಂಕರ ದೇವಾಲಯ ಚಿಕ್ಕದೇವರಾಜ ಒಡೆಯರ ಕಾಲದ ಕಟ್ಟಡ. ಆನಂದೇಶ್ವರ ದೇವಾಲಯವನ್ನು ಹೈದರನ ಸಮಕಾಲೀನನಾಗಿದ್ದ ಚಿದಾನಂದಸ್ವಾಮಿ ಕಟ್ಟಿಸಿದಂತೆ ತಿಳಿಯುತ್ತದೆ. ಆನಂದೇಶ್ವರ ದೇವಾಲಯ ಶಿಥಿಲವಾಗಿದ್ದ ಕಾರಣ ಅಲ್ಲಿನ ಲಿಂಗವನ್ನು ವೈದ್ಯೇಶ್ವರ ದೇವಾಲಯದ ಬಳಿ ಸ್ಥಾಪಿಸಲಾಗಿದೆ (1932).

ತಲಕಾಡಿನಲ್ಲಿ ಜೈನ ದೇವಾಲಯಗಳೂ ಇದ್ದವೆಂಬುದಕ್ಕೆ ಸೂಚನೆಯಾಗಿ ಸಮೀಪದ ಹೊಲವೊಂದರಲ್ಲಿ 10ನೆಯ ಶತಮಾನದ ಶಾಸನವುಳ್ಳ ಜಿನವಿಗ್ರಹವೊಂದು ನಿಂತಿದೆ. ಕೃಷ್ಣಾನಂದ ಮಠ ಅಥವಾ ಕೊಪ್ಪಳ ಮಠ ಎಂದು ಕರೆಯುವ ಭಾಗವತ ಸಂಪ್ರದಾಯದ ಸ್ಮಾರ್ತ ಮಠವೊಂದು ಈ ಊರಲ್ಲಿದೆ. ಇಲ್ಲಿನ ಗುರು ಪರಂಪರೆಯನ್ನು ಶಂಕರಾಚಾರ್ಯರ ಶಿಷ್ಯರಾದ ಪದ್ಮಪಾದರಿಂದ ವಿಷ್ಣುಸ್ವಾಮಿ, ಕೃಷ್ಣಾನಂದ ಸ್ವಾಮಿ - ಇವರುಗಳ ಮೂಲಕ ಬಂದಿದ್ದೆಂದು ಸ್ಥಳೀಯ ದಾಖಲೆಗಳು ತಿಳಿಸುತ್ತವೆ. ಮಾಧವ ಮಂತ್ರಿ ಮತ್ತು ತಲಕಾಡಿನ ಕೆಲವು ಪ್ರಭುಗಳು ಈ ಮಠಕ್ಕೆ ದಾನಗಳನ್ನಿತ್ತ ದಾಖಲೆಗಳು ಮಠದಲ್ಲಿವೆ. ವೀರಶೈವ ಸಂಪ್ರದಾಯಕ್ಕೆ ಸೇರಿದ ಅತ್ತಿಕೇರಿ ಶಿವಸ್ವಾಮಿ ಮಠ, ಕೊಡಗಣ್ಣ ಸ್ವಾಮಿ ಮಠ ಮತ್ತು ತೋಪಿನ ಮಠ ಇವೆ. ತೋಪಿನ ಮಠದಲ್ಲಿ ಹಾವು ಕಚ್ಚಿದವರಿಗೆ ವಿಷಾಪಹಾರಿ ಮಂತ್ರೌಷಧ ಹಾಕಲಾಗುವುದು.

ವೈದ್ಯೇಶ್ವರ ದೇವಾಲಯ

ಈಗ ತಲಕಾಡು ಹೋಬಳಿ ಕೇಂದ್ರ. 1868ರಲ್ಲಿ ತಿರುಮಕೂಡಲು ನರಸೀಪುರ ಕಸಬೆಯಾಗುವವರೆಗೆ ಇದೇ ತಾಲ್ಲೂಕಿನ ಕೇಂದ್ರವೂ ಆಗಿತ್ತು. ಮೂರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳೊಡನೆ ನಡೆಯುವ ಇಲ್ಲಿಯ ಗ್ರಾಮದೇವತೆ ಬಂಡರಸಮ್ಮನ ಜಾತ್ರೆ ಸುತ್ತಲ ಜನಗಳನ್ನು ಆಕರ್ಷಿಸುತ್ತದೆ. ಮಾಧವ ಮಂತ್ರಿ ಅಣೆಕಟ್ಟಿನ ಒಂದು ನಾಲೆ ತಲಕಾಡಿನ ಮೂಲಕವೇ ಹರಿದುಹೋಗುತ್ತದೆ.

ತಲಕಾಡು ಇಂದು ಹೆಸರಾಗಿರುವುದು ಪುಣ್ಯಕ್ಷೇತ್ರವಾಗಿ. ಇಲ್ಲಿ ತತ್ಪುರುಷ ಮುಖದಿಂದ ಕಾವೇರಿಯ ಉತ್ತರವಾಹಿನಿಯ ಹತ್ತಿರ ಅರ್ಕೇಶ್ವರನಾಗಿಯೂ ಪೂರ್ವವಾಹಿನಿಯ ಹತ್ತಿರ ಅಘೋರಮುಖದಿಂದ ವಾಸುಕೀಶ್ವರನಾಗಿಯೂ (ಪಾತಾಳೇಶ್ವರ) ದಕ್ಷಿಣ ವಾಹಿನಿಯ ಹತ್ತಿರ ಸದ್ಯೋಜಾತ ಮುಖದಿಂದ ಸೈಕತೇಶ್ವರನಾಗಿಯೂ (ಮರಳೇಶ್ವರ) ಪಶ್ಚಿಮ ವಾಹಿನಿಯ ಹತ್ತಿರ (ಮುಡುಕು ತೊರೆಯಲ್ಲಿ) ವಾಮದೇವ ಮುಖದಿಂದ ಮಲ್ಲಿಕಾರ್ಜುನೇಶ್ವರನಾಗಿಯೂ ಮತ್ತು ಮಧ್ಯದಲ್ಲಿ ಈಶಾನ್ಯ ಮುಖದಿಂದ ವೈದ್ಯನಾಥೇಶ್ವರನಾಗಿಯೂ ಪಂಚ ಬ್ರಹ್ಮಮಯನಾದ ಪರಶಿವನು ನೆಲೆಸಿರುವನೆಂದು ಪುರಾಣಗಳು ತಿಳಿಸುತ್ತವೆ.

ಕಾರ್ತಿಕ ಬಹುಳ ಅಮಾವಾಸ್ಯೆಯು ಸೋಮವಾರವಾಗಿದ್ದು, ಸೂರ್ಯಚಂದ್ರರಿಬ್ಬರೂ ವೃಶ್ಚಿಕರಾಶಿಯಲ್ಲಿ ಸೇರಿದಾಗ, ಆ ದಿನ ಉಷಃ ಕಾಲದಲ್ಲಿ ಬರುವ ಕುಹೂಯೋಗ ಈ ಪಂಚಲಿಂಗಗಳ ದರ್ಶನಕ್ಕೆ ಅತ್ಯಂತ ಫಲಪ್ರದವಾದುದು. ಇಂಥ ದಿನ ಸುಮಾರು 4ರಿಂದ 14 ವರ್ಷಗಳ ಸಮಯದಲ್ಲಿ ಒಂದು ಸಲ ಮಾತ್ರ ಬರುತ್ತದೆ. ಆ ದಿನ ಕ್ರಮಬದ್ಧವಾಗಿ ಪಂಚಲಿಂಗದರ್ಶನ ಮಾಡಿದವರಿಗೆ ಸುಖ, ಮುಕ್ತಿ ದೊರೆಯುವುದೆಂದು ನಂಬಿಕೆ. ಪಂಚಲಿಂಗದರ್ಶನಕ್ಕೆ ನಾಡಿನ ನಾನಾ ಕಡೆಗಳಿಂದ ಲಕ್ಷಾಂತರ ಮಂದಿ ಬರುತ್ತಾರೆ. *

**ತಲಕಾವೇರಿ :** ಕಾವೇರಿ ನದಿಯ ಉಗಮಸ್ಥಾನ. ಪವಿತ್ರ ಕ್ಷೇತ್ರ. ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲ ಹೋಬಳಿಯಲ್ಲಿ ಭಾಗಮಂಡಲಕ್ಕೆ ಪಶ್ಚಿಮದಲ್ಲಿ ಪಶ್ಚಿಮಘಟ್ಟಗಳ ಶಿಖರಗಳಲ್ಲಿ ಒಂದಾದ ಬ್ರಹ್ಮಗಿರಿಯ ಇಳಿಜಾರಿನಲ್ಲಿದೆ. ಭಾಗಮಂಡಲದಿಂದ 8ಕಿಮೀ ವಾಹನಯೋಗ್ಯವಾದ ರಸ್ತೆಯ ಮುಖಾಂತರ, ಇಲ್ಲವೆ ಸು.6ಕಿಮೀ ಕಾಲುದಾರಿಯ ಮೂಲಕ ತಲಕಾವೇರಿಯನ್ನು ತಲುಪಬಹುದು. ಮಡಿಕೇರಿಯಿಂದ 40ಕಿಮೀ ದೂರದಲ್ಲಿರುವ ಭಾಗಮಂಡಲಕ್ಕೆ ಜಿಲ್ಲೆಯ ಇತರ ಭಾಗಗಳಿಂದಲೂ ಬಸ್ಸುಗಳ ಸೌಕರ್ಯವಿದೆ.

ಕಾವೇರಿ ಉಗಮ ಸ್ಥಾನ (ಕುಂಡಿಗೆ)

ತಲಕಾವೇರಿಯಲ್ಲಿ ಅಗಸ್ತ್ಯೇಶ್ವರ ದೇವಾಲಯ ಮತ್ತು ಗಣಪತಿ ದೇವಾಲಯ ಇವೆ. ಅಗಸ್ತ್ಯೇಶ್ವರ ದೇವಾಲಯದಲ್ಲಿರುವ ಲಿಂಗವನ್ನು ಅಗಸ್ತ್ಯ ಋಷಿ ಸ್ಥಾಪಿಸಿದನೆಂದು ಪ್ರತೀತಿ. ಈ ದೇವಾಲಯಗಳ ಕೆಳಗಿನ ತಗ್ಗಿನಲ್ಲಿ ಕಾವೇರಿ ನದಿ ಉದ್ಭವವಾಗುವ ಒಂದು ಚಚ್ಚೌಕದ ಚಿಕ್ಕ ಕೊಳವೂ ಅದರ ಮುಂದುಗಡೆ ಯಾತ್ರಾರ್ಥಿಗಳು ಸ್ನಾನ ಮಾಡುವ ಒಂದು ದೊಡ್ಡ ಕೊಳವೂ ಇವೆ. ಕಾವೇರಿ ನದಿ ಹುಟ್ಟುವ ಚಿಕ್ಕ ಕೊಳಕ್ಕೆ ಕುಂಡಿಗೆ ಎಂದು ಹೆಸರು. ಈ ತೀರ್ಥಕ್ಕೆ ಒಂದು ಚಿಕ್ಕದಾದ ಮಂಟಪ ಕಟ್ಟಲಾಗಿದೆ.

ತಲಕಾವೇರಿಯಲ್ಲಿ ತುಲಾಮಾಸದ ಸಂಕ್ರಮಣದಿಂದ ವೃಶ್ಚಿಕ ಮಾಸದ ಸಂಕ್ರಮಣದವರೆಗೆ ಜಾತ್ರೆ ನಡೆಯುತ್ತದೆ. ತುಲಾಸಂಕ್ರಮಣದ ದಿವಸ ಒಂದು ನಿಶ್ಚಿತ ಮುಹೂರ್ತದಲ್ಲಿ ಕಾವೇರಿ ನದಿಯ ತೀರ್ಥ ಕೊಳದಿಂದ ಉಕ್ಕಿ ಹರಿಯುತ್ತದೆ. ಆ ದಿವಸ ತಲಕಾವೇರಿಗೆ ಕೊಡಗು ಜಿಲ್ಲೆಯ ಎಲ್ಲ ಭಾಗಗಳಿಂದ ಮೈಸೂರು, ಹಾಸನ, ದಕ್ಷಿಣ ಕನ್ನಡ ಜಿಲ್ಲೆಗಳಿಂದ, ತಮಿಳುನಾಡು ಮತ್ತು ಕೇರಳದಿಂದ ಸಾವಿರಾರು ಯಾತ್ರಿಕರು ಬಂದು ಸ್ನಾನ ಕೊಳದಲ್ಲಿ ಸ್ನಾನಮಾಡಿ ಕುಂಡಿಗೆಯ ತೀರ್ಥವನ್ನು ಕುಡಿದು ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಇಲ್ಲಿ ಯಾತ್ರಿಕರಿಗೆ ಉಳಿದುಕೊಳ್ಳಲು ವಿಶ್ರಾಂತಿಗೃಹಗಳಿವೆ. ಇಲ್ಲಿಂದ ಸು.300 ಅಡಿ ಎತ್ತರದಲ್ಲಿರುವ ಬ್ರಹ್ಮಗಿರಿಯನ್ನು ಹತ್ತಿ ಅಲ್ಲಿ ಸಪ್ತ ಋಷಿಗಳು ಹೋಮ ಮಾಡಿದ್ದರೆಂದು ಹೇಳುವ ಏಳು ಸಣ್ಣ ಗುಂಡಿಗಳನ್ನು ನೋಡಬಹುದು. ಬ್ರಹ್ಮಗಿರಿಯ ತುದಿಯಿಂದ ಆಕಾಶ ಶುಭ್ರವಾಗಿರುವಾಗ ದೂರದ ಬೆಟ್ಟದ ಪುರದ ಬೆಟ್ಟ, ನೀಲಗಿರಿ ಬೆಟ್ಟ ಹಾಗೂ ಉತ್ತರದ ಕುದುರೆಮುಖ ಶಿಖರಗಳನ್ನೂ ಪಶ್ಚಿಮದಲ್ಲಿ ಬೆಟ್ಟದ ಕೆಳಗಿನ ಕರಾವಳಿ ಪ್ರದೇಶವನ್ನೂ ಅಲ್ಲಿ ಸರ್ಪಾಕೃತಿಯಲ್ಲಿ ಡೊಂಕಾಗಿ ಹರಿಯುವ ನದಿಗಳು ಮತ್ತು ಅವುಗಳ ಆಚೆ ಅರಬ್ಬೀ ಸಮುದ್ರವನ್ನೂ ಕಾಣಬಹುದು.

ತಲಕಾವೇರಿಗೆ ಕಾಲುದಾರಿಯ ಬೆಟ್ಟ ಹತ್ತಿ ಹೋಗುವಾಗ ದಾರಿಯಲ್ಲಿ ಭೀಮನಕಲ್ಲು ಎಂದು ಕರೆಯಲ್ಪಡುವ ಒಂದು ದೊಡ್ಡ ಬಂಡೆಕಲ್ಲಿದೆ. ಪಾಂಡವರು ಹಿಂದೆ ವನವಾಸದ ಸಮಯದಲ್ಲಿ ಕೊಡಗಿಗೆ ಬಂದಿದ್ದರೆಂದೂ ಭೀಮ ಊಟ ಮಾಡುತ್ತಿದ್ದಾಗ ಅನ್ನದಲ್ಲಿ ಸಿಕ್ಕಿದ ಕಲ್ಲಿನ ಚೂರನ್ನು ತೆಗೆದಿಟ್ಟನೆಂದೂ ಹಾಗೆ ತೆಗೆದಿಟ್ಟ ಕಲ್ಲಿನ ಚೂರೇ ಭೀಮನಕಲ್ಲು ಎಂದೂ ಐತಿಹ್ಯ. ಅಲ್ಲಿಂದ ಮುಂದೆ ಬಂದರೆ ಯಾತ್ರಿಕರಿಗೆ ಸಲಾಮ್ ಕಲ್ಲು ಎಂದು ಹೆಸರಾಗಿರುವ ಒಂದು ಬಂಡೆಯಿರುವ ಪ್ರದೇಶ ಸಿಗುವುದು. ಮೈಸೂರಿನ ಟಿಪ್ಪುಸುಲ್ತಾನನು ಕೊಡಗನ್ನು ತನ್ನ ವಶಪಡಿಸಿಕೊಂಡಿದ್ದಾಗ ತಲಕಾವೇರಿಯ ದೇವಸ್ಥಾನಗಳನ್ನು ಕೊಳ್ಳೆಹೊಡೆಯಲು ತನ್ನ ಸೈನ್ಯಸಮೇತ ಈ ಕಲ್ಲಿನವರೆಗೆ ಬಂದು, ಈ ಕಲ್ಲಿರುವ ಪ್ರದೇಶದಲ್ಲಿ ನಿಂತು ಕಾವೇರಿಗೆ ನಮಸ್ಕರಿಸಿ ಹಿಂದಕ್ಕೆ ಹೋದನೆಂದು ಪ್ರತೀತಿ. *

**ತಾತಾ, ಆರ್. :** 1876-1932. ಪ್ರಸಿದ್ಧ ವಿದ್ವಾಂಸರು ಮೈಸೂರಿನವರು. ಪೂರ್ಣ ಹೆಸರು ತಾತಾಚಾರ್ಯ ಎಂದು ಅತ್ತರ್ (ಎಟಿಟಿಎಸ್) ಎಬುದು ಇವರ ಕಾವ್ಯನಾಮ ಇವರದು ಪಂಡಿತ ಮನೆತನ. ಇವರ ತಂದೆ ರಾಜಕವಿ ತಿರುಮಲೆ ವೆಂಕಟಾಚಾರ್ಯರು ಎ.ವಿ. ವರದಾಚಾರ್ಯರಿಗೆ ನಾಟಕಗಳನ್ನು ಬರೆದುಕೊಡುತ್ತಿದ್ದರು. ಹೀಗಾಗಿ ತಾತಾಚಾರ್ಯರಿಗೆ ಬಾಲ್ಯದಲ್ಲಿಯೇ ಕವಿಗಳ, ವಿದ್ವಾಂಸರ ಪರಿಚಯವಾಯಿತು. ಸಂಪ್ರದಾಯ ವ್ಯಾಸಂಗದ ಜೊತೆಗೆ ಆಧುನಿಕ ವಿದ್ಯಾಭ್ಯಾಸವನ್ನು ಮಾಡಿದ ಇವರು ಆಗಿನ್ನೂ ಹಸ್ತಪ್ರತಿಯಲ್ಲಿಯೇ ಇದ್ದ ಪೊನ್ನನ ಶಾಂತಿಪುರಾಣದ ಮೇಲೆ ವಿಮರ್ಶಾತ್ಮಕ ಪ್ರಬಂಧವನ್ನು ಬರೆದು ಮದರಾಸು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಅನಂತರ ಎಲ್.ಟಿ. ಪದವಿ ಪಡೆದು ಮದರಾಸು ವಿದ್ಯಾ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ, ರಾಜಮಹೇಂದ್ರಿಯ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಮದರಾಸು ಟೀಚರ್ಸ್ ಟ್ರೈನಿಂಗ್ ಕಾಲೇಜಿನ ವೈಸ್ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. ಸ್ವಲ್ಪಕಾಲ ಇವರು ಗೋದಾವರಿ ಜಿಲ್ಲೆಯ ವಿದ್ಯಾಧಿಕಾರಿಗಳೂ ಆಗಿದ್ದರು.

ಇವರ ಕಾರ್ಯಕ್ಷೇತ್ರವೆಲ್ಲ ಕನ್ನಡ ನಾಡಿನ ಹೊರಗೇ ಇದ್ದರೂ ಕನ್ನಡದ ಬಗ್ಗೆ ಇವರಿಗಿದ್ದ ಅಭಿಮಾನ ದೊಡ್ಡ ಮಟ್ಟದ್ದು. ಜೈನ ಮತ್ತು ವೀರಶೈವ ಸಿದ್ಧಾಂತಗಳನ್ನು ಆಳವಾಗಿ ಅಭ್ಯಾಸಮಾಡಿದ್ದರು. ಇವರು ಬರೆದಿರುವ ಕಿತ್ತೀಳೆಯೂ ಕನ್ನಡವೂ ಕನ್ನಡ ಶಬ್ದದ ವ್ಯುತ್ಪತ್ತಿ ಮುಂತಾದ ಪ್ರೌಢಲೇಖನಗಳು ಇವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. ಗಿರಿಮಲ್ಲಿಕಾರ್ಜುನ ಶತಕಂ, ಮರುನ್ನಂದನ ಶತಕಂ ಎಂಬ ಎರಡು ಶತಕಗಳನ್ನು ಬರೆದಿದ್ದಾರೆ. ಧರ್ಮಾಮೃತದ ಒಂದು ಕಥೆಯನ್ನು ಆಧರಿಸಿಕೊಂಡು ಗುರುದತ್ತರಾಯನ ಚರಿತ್ರೆ ಎಂಬ ಗ್ರಂಥವನ್ನು ರಚಿಸಿದ್ದಾರೆ. ಎ. ವೆಂಕಟರಾವ್ ಮತ್ತು ಎ. ಶೇಷ ಅಯ್ಯಂಗಾರ್ ಅವರು ಸಂಪಾದಿಸಿ ಪ್ರಕಟಿಸಿರುವ ಪೊನ್ನನ ಶಾಂತಿಪುರಾಣಕ್ಕೆ ಇವರು ಬೆಲೆಯುಳ್ಳ ಪೀಠಿಕೆ ಬರೆದಿದ್ದಾರೆ.

ಇವರು ಒಳ್ಳೆಯ ಲೇಖಕರಾಗಿದ್ದಂತೆ ವಾಗ್ಮಿಗಳೂ ಆಗಿದ್ದರು. ಇವರ ಕನ್ನಡ ಸೇವೆಯನ್ನು ಗಮನಿಸಿ 1927ರಲ್ಲಿ ಮಂಗಳೂರಿನಲ್ಲಿ ನಡೆದ 13ನೆಯ ಕನ್ನಡ ಸಾಹಿತ್ಯ ಸಮ್ಮೇಳನಕೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಲಾಯಿತು. (ಪಿ.ಎಸ್.ಎಸ್.)

**ತಾತಾಚಾರ್, ಟಿ.ಎಸ್. :** 1917-2001. ಪ್ರಸಿದ್ಧ ಪಿಟೀಲು ವಿದ್ವಾಂಸರು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಜನಪ್ರಿಯಗೊಳಿಸಿದವರಲ್ಲಿ ಅಗ್ರಗಣ್ಯರು. 1917 ಮೇ 22ರಂದು ತುಮಕೂರು ಜಿಲ್ಲೆಯ ಪಾವಗಡದಲ್ಲಿ ಜನಿಸಿದರು. ತಂದೆ ಟಿ.ಶ್ರೀನಿವಾಸಾಚಾರ್, ತಾಯಿ ಬಕುಲಮ್ಮ. ತಂದೆ ಶ್ರೀನಿವಾಸಾಚಾರ್ ಮತ್ತು ಚಿಕ್ಕಪ್ಪ ಶೇಷಾಚಾರ್ ಇಬ್ಬರೂ ಪಿಟಿಲು ವಿದ್ವಾಂಸರು.

ತಾತಾಚಾರ್ ಅವರು ಲೋಯರ್ ಸೆಕೆಂಡರಿ ಶಿಕ್ಷಣವನ್ನು ತಮ್ಮ ಹುಟ್ಟೂರಲ್ಲೇ ಮುಗಿಸಿದರು. ಬಳಿಕ ಬೆಂಗಳೂರಿನ ಕೋಟೆ ಪ್ರೌಢಶಾಲೆಯಲ್ಲಿ ಶಿಕ್ಷಣವನ್ನು ಮುಂದುವರೆಸಿದರು. ಸೀನಿಯರ್ ಇಂಟರ್ ಓದುತ್ತಿರುವಾಗ ತಂದೆಯವರ ಅನಾರೋಗ್ಯದ ಸಮಾಚಾರ ತಿಳಿದು ಊರಿಗೆ ತೆರಳಿದರು. ಇವರ ಬರುವನ್ನೇ ಎದುರುನೋಡುತ್ತಿದ್ದವರಂತೆ ಸಂಗೀತದಲ್ಲಿ ಮಗನಿಗಿದ್ದ ಒಲವನ್ನು ತಿಳಿದಿದ್ದ ತಂದೆ ಮಗನನ್ನು ಸಂಗೀತ ವಿದ್ವಾಂಸನಾಗುವಂತೆ ಹರಸಿ ವಿಧಿವಶರಾದರು.

ತಂದೆಯವರ ಪಿಟೀಲು ವಾದನವನ್ನು ಏಕಾಗ್ರಚಿತ್ತರಾಗಿ ಗ್ರಹಿಸುತ್ತಿದ್ದ ಇವರಿಗೆ ಸಂಗೀತ ಸಾಕಷ್ಟು ಹೃದ್ಗತವಾಗಿತ್ತು. ಸಂಗೀತದಲ್ಲಿ ಹೆಚ್ಚಿನ ಶಿಕ್ಷಣವನ್ನು ಬೆಂಗಳೂರಿನಲ್ಲಿ ವಿದ್ವಾನ್ ಕೃಷ್ಣಮಾಚಾರ್ ಅವರಲ್ಲಿ ಪಡೆಯುತ್ತಿದ್ದರು. ಸೀನಿಯರ್ ಇಂಟರ್‌ನಲ್ಲಿ ನಪಾಸಾದ ಸುದ್ದಿಯಿಂದ ಇವರು ನಿರಾಶರಾದರು. ಆಗ ಇವರ ಸಂಗೀತಾಸಕ್ತಿ ತಿಳಿದಿದ್ದ ಇವರ ದೊಡ್ಡಪ್ಪನವರು ತಮ್ಮ ಸ್ನೇಹಿತರೂ ಸಂಗೀತತಜ್ಞರೂ ಆದ ರಾಳ್ಳಪಲ್ಲಿ ಅನಂತ ಕೃಷ್ಣ ಶರ್ಮರಲ್ಲಿ ಸಂಗೀತ ಮುಂದುವರೆಸುವಂತೆ ಸಲಹೆ ನೀಡಿದರು. ಅದರಂತೆ ಮೈಸೂರಿಗೆ ಹೋಗಿ ರಾಳ್ಳಪಲ್ಲಿಯವರಲ್ಲಿ ಶಿಷ್ಯತ್ವ ಪಡೆದರು. ಸರಳರೂ ಸಹೃದಯರೂ ಬಹುಮುಖ ಪ್ರತಿಭೆಯುಳ್ಳವರೂ ವಿದ್ವಾಂಸರೂ ವಿಮರ್ಶಕರೂ ಆಗಿದ್ದ ರಾಳ್ಳಪಲ್ಲಿಯವರು ಸಂಗೀತ ದಿಗ್ಗಜರಾದ ಮುತ್ತಯ್ಯ ಭಾಗವತರ್, ಅರಿಯಾಕುಡಿ ರಾಮಾನುಜ ಅಯ್ಯಂಗಾರ್, ದ್ವಾರಂ ವೆಂಕಟಸ್ವಾಮಿ ನಾಯ್ಡು, ಮೈಸೂರು ವಾಸುದೇವಾಚಾರ್ ಮುಂತಾದವರ ಆಪ್ತಸ್ನೇಹಿತರಾಗಿದ್ದರು. ಇವರೆಲ್ಲರ ಸಹವಾಸದಿಂದ ತಾತಾಚಾರ್ಯರ ಸಂಗೀತವಿದ್ಯೆ ಸಂಪೂರ್ಣ ವಿಕಸಿಸಲು ಸಾಧ್ಯವಾಯಿತು.



ಇವರ ಸಂಗೀತ ಪ್ರೌಢಿಮೆ ಮನೆಮಾತಾಗುತ್ತಿದ್ದಂತೆ ಚೌಡಯ್ಯನವರ ಮುಖಾಂತರ ಮದರಾಸಿನ ಆಕಾಶವಾಣಿಯಲ್ಲಿ ನಿಲಯದ ಕಲಾವಿದರಾಗಿ ನೇಮಕಗೊಂಡರು. ಇದರಿಂದಾಗಿ ಅನೇಕ ಪ್ರೌಢ ಕಲಾವಿದರೊಡನೆ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸುವರ್ಣಾವಕಾಶ ಇವರಿಗೆ ದೊರೆಯಿತು. ಅನಂತರ ಮೈಸೂರು ಆಕಾಶವಾಣಿಯಲ್ಲಿ, ಬೆಂಗಳೂರು ಆಕಾಶವಾಣಿಯಲ್ಲಿ ನಿಲಯ ಕಲಾವಿದರಾಗಿ ದುಡಿದರು. ನಿವೃತ್ತರಾದ ಬಳಿಕ ಪೂರ್ಣಾವಧಿ ಸಂಗೀತಸೇವೆ ಮುಂದುವರಿಸಿ ಭಾರತದಾದ್ಯಂತ ಯಶಸ್ವೀ ಕಾರ್ಯಕ್ರಮಗಳನ್ನು ನೀಡಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಜನಪ್ರಿಯಗೊಳಿಸಿದ ಹಿರಿಮೆ ಇವರದು.

ಅರವತ್ತು ವರ್ಷಗಳಿಗೂ ಹೆಚ್ಚು ಕಾಲ ಸಂಗೀತಸೇವೆ ಸಲ್ಲಿಸಿದ ಇವರಿಗೆ ಅನೇಕ ಸಂಘ ಸಂಸ್ಥೆಗಳು, ವಿದ್ವನ್ಮಣಿಗಳು, ಸರ್ಕಾರ ನೀಡಿರುವ ಬಿರುದು ಸನ್ಮಾನಗಳು ಹಲವಾರು. ಅವುಗಳಲ್ಲಿ ಮುಖ್ಯವಾದವು: ಕರ್ನಾಟಕ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ, ಗಾನಕಲಾ ಪರಿಷತ್ತಿನ ಗಾನಕಲಾಭೂಷಣ, ತ್ಯಾಗರಾಜ ಗಾನಸಭೆಯ ಕಲಾಭೂಷಣ, ಬೆಂಗಳೂರಿನ ಅಕಾಡೆಮಿ ಆಫ್ ಮ್ಯೂಸಿಕ್‌ನ ಚೌಡಯ್ಯ ಪ್ರಶಸ್ತಿ, ದಸರಾ ಸಂಗೀತ ವಿದ್ವಾನ್ (2000). ಇವರು 2001 ಡಿಸೆಂಬರ್ 7ರಂದು ನಿಧನಹೊಂದಿದರು.

(ಎಸ್‌ಯು.ಎಂ.)

**ತಾಯಿನಾಡು** : ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಕನ್ನಡ ದಿನಪತ್ರಿಕೆ. ಪಿ.ಆರ್.ರಾಮಯ್ಯನವರು ಇದನ್ನು ಮೊದಲು ಮೈಸೂರಿನಲ್ಲಿ 1927ರಲ್ಲಿ ಆರಂಭಿಸಿ ಅನಂತರ ಬೆಂಗಳೂರಿಗೆ ವರ್ಗಾಯಿಸಿದರು. ಆಗಿನ ಕಾಲದಲ್ಲಿ ಪತ್ರಿಕೋದ್ಯಮ ಅತ್ಯಂತ ಕಷ್ಟಕರವಾಗಿತ್ತು. ಮೈಸೂರು ಸಂಸ್ಥಾನಾಧೀಶರು ಬ್ರಿಟಿಷ್ ಸಾರ್ವಭೌಮತ್ವಕ್ಕೆ ಅಧೀನರಾಗಿದ್ದುದರಿಂದ ಪತ್ರಿಕೋದ್ಯಮ ಒಂದು ಕಡೆ ರಾಜಪ್ರಭುತ್ವಕ್ಕೂ ಇನ್ನೊಂದು ಕಡೆ ಬ್ರಿಟಿಷ್ ಆಡಳಿತದ ಕ್ರೂರ ಕ್ರಮಗಳಿಗೂ ಒಳಗಾಗಿತ್ತು. ಆದರೂ ರಾಮಯ್ಯನವರು ಧೈರ್ಯಗೆಡದೆ ಹತ್ತಾರು ಅಭಿಮಾನಿಗಳ ಸಹಾಯದಿಂದ ಮುದ್ರಣ ಯಂತ್ರವನ್ನು ಪಡೆದು ತಮ್ಮದೇ ಆದ ಸ್ವಂತ ಮುದ್ರಣಾಲಯವನ್ನು ಬೆಂಗಳೂರಿನ ಕಿಲಾರಿ ರಸ್ತೆಯಲ್ಲಿ ನೆಲೆಗೊಳಿಸಿ, ನಾಲ್ಕು ಪುಟಗಳ ದಿನಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸತೊಡಗಿದರು. ಆಗ ದೇಶವಿದೇಶಗಳ ಸುದ್ದಿಗಳು ರಾಯಿಟರ್ ಮತ್ತು ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ ಸಂಸ್ಥೆಗಳಿಂದ ಒದಗಿಬರುತ್ತಿತ್ತು. ಸಣ್ಣ ಪತ್ರಿಕೆಗಳಿಗೆ ರಿಯಾಯಿತಿ ದರದಲ್ಲಿ ಸುದ್ದಿಯನ್ನೊದಗಿಸುವ ಸೌಲಭ್ಯವನ್ನು ಪಡೆದು ತಾಯಿನಾಡು ದಿನಪತ್ರಿಕೆ ಪತ್ರಿಕಾರಂಗದಲ್ಲಿ ಇನ್ನೊಂದು ಹೆಜ್ಜೆ ಮುಂದಿಟ್ಟಿತು. ತಂತಿ ವಾರ್ತೆಗಳನ್ನು ತರಿಸಿಕೊಳ್ಳತೊಡಗಿದ ಮೊಟ್ಟಮೊದಲ ಕನ್ನಡ ಪತ್ರಿಕೆ ತಾಯಿನಾಡು. ಆ ಪತ್ರಿಕಾಲಯದಲ್ಲಿ ತಮ್ಮ ನೇತೃತ್ವದಲ್ಲಿ ತರಬೇತುಪಡೆದ ಪಿ.ಬಿ.ಶ್ರೀನಿವಾಸನ್ ಅವರನ್ನು ರಾಮಯ್ಯನವರು ಅದರ ಸಂಪಾದಕರನ್ನಾಗಿ ನೇಮಿಸಿದರು.

ಪತ್ರಿಕೆಯದು ರಾಷ್ಟ್ರೀಯ ನೀತಿಯಾಗಿತ್ತು. ಭಾರತದ ಸ್ವಾತಂತ್ರ್ಯ ಸಂಪಾದನೆ, ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ, ರಾಜಕೀಯದಲ್ಲಿ ಪರಿಶುದ್ಧತೆ, ಜನಜೀವನದಲ್ಲಿ ಪ್ರಾಮಾಣಿಕ ಭಾವನೆ, ವ್ಯಾಪಾರ ವಾಣಿಜ್ಯ ವಲಯಗಳಲ್ಲಿ ಶಿಷ್ಟಾಚಾರ, ಸಕಲರಿಗೂ ಜಾತಿ ಮತ ವರ್ಗ ಭೇದವಿಲ್ಲದೆ ಸನ್ಮಂಗಳವಾಗಲೆಂಬ ಬಯಕೆ - ಇಂಥ ಧ್ಯೇಯಗಳಿಂದ ತಾಯಿನಾಡು ಪತ್ರಿಕೆ ಜನಾನುರಾಗ ಪಡೆಯಿತು. ಜನಸಾಮಾನ್ಯರಿಗೆ ಅರ್ಥವಾಗುವ ತಿಳಿಗನ್ನಡ ಶೈಲಿಯಲ್ಲಿ ಸಂಪಾದಕೀಯವನ್ನು ಇದು ಪ್ರಕಟಿಸುತ್ತಿತ್ತಲ್ಲದೆ ವರದಿ ನಿರೂಪಣೆಗಳಲ್ಲೂ ಸುಲಭ ಶೈಲಿಯನ್ನನುಸರಿಸಿ ಎಲ್ಲರ ಮೆಚ್ಚುಗೆಗೂ ಪಾತ್ರವಾಯಿತು.

1930-1935ರಲ್ಲಿ ಪತ್ರಿಕೆಯಲ್ಲಿ ಹೊಸಹೊಸ ಪ್ರಯೋಗಗಳು ನಡೆದುವು. ಕೇಂದ್ರ ಶಾಸನ ಸಭೆಯ ದಿನದಿನದ ಕಾರ್ಯಕಲಾಪಗಳನ್ನು ವರದಿ ಮಾಡಲು ದೆಹಲಿಗೆ ಕಛೇರಿಯ ಪ್ರತಿನಿಧಿಗಳನ್ನು ಪತ್ರಿಕೆ ಕಳುಹಿಸಿ ಕೊಟ್ಟಿತು. ಲಾಬಿವರದಿ, ನಗರ ಸಂಚಾರಿಯ ಡೈರಿ, ಜನರ ನಿತ್ಯ ಸಂಕಟಗಳ ವರದಿ - ಇವು ಪತ್ರಿಕೆಯ ವೈಶಿಷ್ಟ್ಯವನ್ನು ಹೆಚ್ಚಿಸಿದುವು. ಇವುಗಳಿಂದ ಪತ್ರಿಕೆ ಮೇಲು ದರ್ಜೆ ಸಂಪಾದಿಸಿಕೊಂಡಿತು.

ತಾಯಿನಾಡು ಪತ್ರಿಕೆ ಆರಂಭವಾದಾಗ ಪತ್ರಿಕಾ ಶಾಸನವಿರಲಿಲ್ಲ. ಸರ್ಕಾರದ ಅನುಮತಿಪತ್ರ ದೊರಕಿಸಿಕೊಂಡು ಪತ್ರಿಕೆಯನ್ನು ಆರಂಭಿಸಬೇಕಾಗಿತ್ತು. ಹಳೆಯ ಮೈಸೂರು ಕಾಂಗ್ರೆಸ್ಸಿನ ಜವಾಬ್ದಾರಿ ಸರ್ಕಾರ ಹೋರಾಟಕ್ಕೂ ಭಾರತದ ಸ್ವಾತಂತ್ರ್ಯ ಚಳವಳಿಗೂ ಪತ್ರಿಕೆ ಪೂರ್ಣ ಬೆಂಬಲ ನೀಡಿತು. 1938ರಲ್ಲಿ ವಿದುರಾಶ್ವತ್ಥದ ಗಲಭೆಯ ಸಂದರ್ಭದಲ್ಲಿ ಸರ್ಕಾರದವರು ಪತ್ರಿಕೆಯನ್ನು ನಿಲ್ಲಿಸಿಬಿಟ್ಟರು. ಅನಂತರ ಮತ್ತೆ ಅದಕ್ಕೆ ಅನುಮತಿ ದೊರಕಿತು. 1942ರ ಚಳವಳಿಯಲ್ಲಿ ಸಂಪಾದಕರು ಸೆರೆವಾಸವನ್ನನುಭವಿಸಿದರು. 1947ರ ಮೈಸೂರು ಚಲೋ ಚಳವಳಿಯ ಕಾಲಕ್ಕೆ ಸೆನ್ಸಾರ್‌ಶಿಪ್ ಆಜ್ಞೆಯ ಪ್ರಕಾರ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು.

1936ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ವಿದೇಶಯಾತ್ರೆ ಕೈಗೊಂಡಾಗ ಪತ್ರಿಕೆ ಸ್ವಂತ ಖರ್ಚಿನಲ್ಲಿ ತನ್ನ ಬಾತ್ಮೀದಾರರನ್ನು ಅವರೊಂದಿಗೆ ವಿದೇಶಗಳಿಗೆ ಕಳುಹಿಸಿಕೊಟ್ಟಿತು. ಈ ಬಾತ್ಮೀದಾರರು ಆ ಸಮಯದಲ್ಲಿ ಇಂಗ್ಲೆಂಡ್ ಮತ್ತು ಇತರ ಐರೋಪ್ಯ ದೇಶಗಳ ಪತ್ರಿಕೆಗಳು ನಡೆಯುವ ಬಗೆಯನ್ನು ಅರಿತುಕೊಂಡು ಬಂದರು. 1946ರಲ್ಲಿ ತಾಯಿನಾಡು ಬಾತ್ಮೀದಾರರಿಗೆ ಯುದ್ಧ ವರದಿಗೆ ಆಹ್ವಾನ ಬಂದಿತ್ತು. 1952ರಲ್ಲಿ ಅಮೆರಿಕ ಸರ್ಕಾರ ಸ್ಮಿತ್ ಮಾಂಟ್ ಅನುದಾನ ನೀಡಿ ಪತ್ರಿಕೆಯ ಬಾತ್ಮೀದಾರರನ್ನು ಆ ದೇಶಕ್ಕೆ ಕರೆಸಿಕೊಂಡಿತು.

ಮೊದಮೊದಲು ಪತ್ರಿಕೆಯ ವ್ಯವಸ್ಥಾಪನೆಗೆ ರಾಮಯ್ಯನವರೂ ಅವರ ಪತ್ನಿ ಜಯಲಕ್ಷಮ್ಮನವರೂ ಸೋದರರೂ ಕುಟುಂಬವರ್ಗದ ಇತರರೂ ದುಡಿದರು. ಅವರ ಮನೆಯ ಹುಡುಗರು ಪತ್ರಿಕೆಗಳನ್ನು

ಮಾರಾಟ ಮಾಡಿ, ಪತ್ರಿಕೆಯ ಯಶಸ್ಸಿಗೆ ಕಾರಣರಾದರು. ಪತ್ರಿಕೆಯ ಪ್ರಸಾರ, ಜನಪ್ರಿಯತೆ ಅಧಿಕವಾದಂತೆಲ್ಲ ಮುದ್ರಣ ಸೌಲಭ್ಯಗಳನ್ನು ವಿಸ್ತರಿಸಲಾಯಿತು. ರೋಟರಿ ಮುದ್ರಣ ಯಂತ್ರವನ್ನು ಅಳವಡಿಸಲಾಯಿತು. ಅದಕ್ಕೆ ಹೊಸ ಕಟ್ಟಡ ಬಂತು. 1930-34ರಲ್ಲಿ ಕೇವಲ ಇಬ್ಬರು ಮೂವರು ಸಿಬ್ಬಂದಿ ಇದ್ದ ಪತ್ರಿಕೆಗೆ 1950ರ ವೇಳೆಗೆ ಸುಮಾರು 16 ಉಪಸಂಪಾದಕರೂ ವರದಿಗಾರರೂ ಇದ್ದರು. ಕನ್ನಡ ನಾಡಿನ ಮೂಲೆ ಮೂಲೆಗಳಿಗೂ ಪತ್ರಿಕೆಯ ರವಾನೆ ಆಗುತ್ತಿತ್ತು. ಪತ್ರಿಕೆಗೆ ಅನೇಕ ಸ್ಥಳಗಳಲ್ಲಿ ಸ್ವಂತ ಬಾತ್ಮೀದಾರರಿದ್ದರು.

1957ರಲ್ಲಿ ತಾಯಿನಾಡು ಪತ್ರಿಕೆಯ ಒಡೆತನದಲ್ಲಿ ಬದಲಾವಣೆ ಆಯಿತು. ಅದನ್ನು ಎಂ.ಎಸ್.ರಾಮಯ್ಯನವರು ಕೊಂಡರು. ಅನಂತರ ಅನುಕ್ರಮವಾಗಿ ರುಮಾಲೆ ಚೆನ್ನಬಸವಯ್ಯನವರೂ ಟಿ.ಸಿದ್ದಪ್ಪನವರೂ ಅದರ ಸಂಪಾದಕರಾಗಿದ್ದರು. 1969ರಲ್ಲಿ ಪತ್ರಿಕೆ ನಿಂತುಹೋಯಿತು. *

**ತಾವರೆಕೆರೆ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಒಂದು ಗ್ರಾಮ. ಹೋಬಳಿ ಕೇಂದ್ರ. ಬೆಂಗಳೂರು-ಮಾಗಡಿ ಹಾದಿಯಲ್ಲಿ ಬೆಂಗಳೂರಿನಿಂದ 25ಕಿಮೀ ದೂರದಲ್ಲಿದೆ.

ಈಗಿನ ಬಸ್ ನಿಲ್ದಾಣಕ್ಕೆ ಸಮೀಪದಲ್ಲಿರುವ ಕೆರೆಯಲ್ಲಿ ತಾವರೆ ಹೂ ಬಿಡುತ್ತಿದ್ದುದರಿಂದ ಊರಿಗೆ ತಾವರೆಕೆರೆ ಎಂಬ ಹೆಸರು ಬಂತೆಂದು ಹೇಳುವರು. 13ನೆಯ ಶತಮಾನದ ಇಲ್ಲಿನ ಒಂದು ಶಾಸನದಲ್ಲಿ ತಾವರೆಕೆರೆಯ ಉಲ್ಲೇಖವಿದೆ. ತಾವರೆಕೆರೆಗೆ 5ಕಿಮೀ ದೂರದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ನೀರೆತ್ತುವ ಯಂತ್ರ ಸ್ಥಾವರವಿದೆ. ವಿಹಾರದಾಣವಾಗಿ ಪ್ರಸಿದ್ಧವಾಗಿರುವ ದೊಡ್ಡ ಆಲದಮರ ಈ ಹೋಬಳಿಗೆ ಸೇರಿದ್ದು. ಇಲ್ಲಿ ವರ್ಷಕ್ಕೊಮ್ಮೆ ಮಾರಮ್ಮನ ಜಾತ್ರೆ ನಡೆಯುತ್ತದೆ. ಕೊಂಡ ಹಾಯುವುದು, ಉಯ್ಯಾಲೆ ತೂಗುವುದು ಆಗಿನ ಮುಖ್ಯ ಕಾರ್ಯಕ್ರಮಗಳು. ಇತ್ತೀಚೆಗೆ ಊರಿನಲ್ಲಿ ಪಂಚಮುಖಿ ಗಣಪತಿಯನ್ನು ಸ್ಥಾಪಿಸಲಾಗಿದೆ. ವರ್ಷಕ್ಕೊಮ್ಮೆ ಇದರ ರಥೋತ್ಸವ ನಡೆಯುತ್ತದೆ. ಈ ಪಂಚಮುಖಿ ಗಣಪತಿ ಹೆಸರಿನಲ್ಲಿ ಒಂದು ಪ್ರೌಢಶಾಲೆಯನ್ನೂ ನಡೆಸಲಾಗುತ್ತಿದೆ. ಇಲ್ಲಿಂದ ಸುತ್ತಲ ಪ್ರದೇಶಗಳಿಗೆ ಉತ್ತಮ ಮಾರ್ಗ ಸಂಪರ್ಕವಿದೆ. (ಡಿ.ಇ.ಕೆ.ಆರ್.)

**ತಾಳಗುಂದ :** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಬಳ್ಳಿಗಾವೆಗೆ ಸು.3ಕಿಮೀ ಈಶಾನ್ಯದಲ್ಲಿ ಇರುವ ಐತಿಹಾಸಿಕ ಪ್ರಾಮುಖ್ಯದ ಒಂದು ಗ್ರಾಮ. ಆದ್ಯ ಕದಂಬರ ಕಾಲದಲ್ಲಿ ಇದು ಸ್ಥಾನಗುಂದೂರ ಎಂಬ ಹೆಸರಿನ ಪ್ರಸಿದ್ಧ ಅಗ್ರಹಾರವಾಗಿತ್ತು. ಈ ಅಗ್ರಹಾರವನ್ನು ಕದಂಬ ಮಯೂರಶರ್ಮನ ಪೂರ್ವಜನಾದ ಮುಕ್ಕಣ್ಣ ಅಥವಾ ತ್ರಿನೇತ್ರ ಸ್ಥಾಪಿಸಿದ. ಅಹಿಚ್ಛತ್ರವೆಂಬ ಸ್ಥಳದಿಂದ 32 ಬ್ರಾಹ್ಮಣ ಕುಟುಂಬಗಳನ್ನು ಕರೆಸಿ ಇಲ್ಲಿ ನೆಲೆಸುವಂತೆ ಮಾಡಿದ. ಇಲ್ಲಿ 12,000 ಅಥವಾ 32,000 ಬ್ರಾಹ್ಮಣರಿದ್ದರೆಂದು ಉಲ್ಲೇಖಗಳಿವೆ. ಬಹುಶಃ ಇದೇ ಕರ್ನಾಟಕದಲ್ಲಿ ಸ್ಥಾಪನೆಯಾದ ಪ್ರಾಚೀನತಮ ಅಗ್ರಹಾರ. ಈ ಊರಿನಲ್ಲಿ ಅನೇಕ ಪ್ರಾಚೀನ ಶಾಸನಗಳಿವೆ. ಇವುಗಳಲ್ಲಿ ಇಲ್ಲಿನ ಪ್ರಣವೇಶ್ವರ ದೇವಾಲಯದ (ಪಶುಪತಿ) ಮುಂದಿನ ಸ್ತಂಭದ ಮೇಲೆ ಕೆತ್ತಿರುವ ಶಾಸನ ಬಹು ಮುಖ್ಯವಾದುದು. ಕದಂಬ ಶಾಂತಿವರ್ಮನ ಕಾಲದ ಈ ಶಾಸನ (ಸು.450) ಪೆಟ್ಟಿಗೆ ತಲೆಯ ಲಿಪಿಯಲ್ಲಿ ಬರೆಯಲಾಗಿದೆ. ಕುಬ್ಜ ಎಂಬ ಕವಿಯಿಂದ ಭಾವಪೂರ್ಣವಾಗಿ ರಚಿತವಾಗಿರುವ ಸಂಸ್ಕೃತ ಶ್ಲೋಕಗಳಿರುವ ಈ ಶಾಸನ ಕದಂಬ ಇತಿಹಾಸದ ಮುಖ್ಯ ಆಧಾರಗಳಲ್ಲೊಂದು. ಈ ಶಾಸನದಲ್ಲಿ ಸಾತಕರ್ಣಿಯೇ ಮೊದಲಾದ ರಾಜರಿಂದ ಅರ್ಚಿತವಾದ ಮಹಾದೇವ ದೇವಾಲಯ ಮತ್ತು ಅದರ ಸಮೀಪದಲ್ಲಿ ಕಾಕುತ್ಸ್ಥವರ್ಮ ನಿರ್ಮಿಸಿದ ಕೆರೆ - ಇವುಗಳ ಉಲ್ಲೇಖವೂ ಇದೆ.

ಸ್ತಂಭದ ಎದುರಿನಲ್ಲೇ ಇರುವ ಪ್ರಣವೇಶ್ವರ ದೇವಾಲಯವೇ ಮೇಲಿನ ಶಾಸನೋಕ್ತ ಗುಡಿ. ಬಹುಶಃ ಕರ್ನಾಟಕದ ಅತಿ ಪ್ರಾಚೀನ ದೇವಾಲಯ. ಈಗ ಗರ್ಭಗೃಹ ಮತ್ತು ಸುಕನಾಸಿ ಮಾತ್ರ ಇರುವ ಬಹು ಸರಳ ಕಟ್ಟಡ. ಈಚೆಗೆ ನವೀಕೃತವಾಗಿದ್ದು ಹಳೆಯ ವಾಸ್ತು ಅಂಶಗಳೂ ಅಷ್ಟಾಗಿ ಉಳಿದಿಲ್ಲ. ಗರ್ಭಗುಡಿಯಲ್ಲಿ ಪೀಠದ ಮೇಲೆ 6 ಅಡಿ ಎತ್ತರದ ಲಿಂಗವಿದೆ. ತಳದಲ್ಲಿ ಅದು 5 ಅಡಿ ಸುತ್ತಳತೆಯುಳ್ಳದ್ದಾಗಿದೆ. ಇದು ಮೂಲ ಲಿಂಗವಿದ್ದಂತೆ ತೋರುತ್ತದೆ. ಗರ್ಭಗೃಹದ ದ್ವಾರದ ತೋಳಿನ ಮೇಲೆ ಕದಂಬ ಕಾಲದ ಇನ್ನೊಂದು ಶಾಸನವಿದೆ. ದೇವಾಲಯದ ಸಮೀಪದಲ್ಲಿ ಪ್ರಣವನ ಕೆರೆ ಎಂಬ ಚಿಕ್ಕ ಕೆರೆಯಿದೆ. ಇದು ಕಾಕುತ್ಸ್ಥವರ್ಮ ಕಟ್ಟಿಸಿದ ತಟಾಕವಿರಬಹುದು. ತಾಳಗುಂದ ಮತ್ತು ಪ್ರಣವೇಶ್ವರ ದೇವಾಲಯಗಳು ಸು.12-13ನೆಯ ಶತಮಾನಗಳವರೆಗೂ



ತಾಳಗುಂದ ಶಾಸನಸ್ತಂಭ

ಉಚ್ಛ್ರಾಯಸ್ಥಿತಿಯಲ್ಲಿದ್ದುವೆಂಬುದಕ್ಕೆ ಶಾಸನೋಲ್ಲೇಖಗಳಿವೆ. ಹನ್ನೆರಡನೆಯ ಶತಮಾನದ ಮಧ್ಯಕಾಲದಲ್ಲಿ ಈ ದೇವಾಲಯದಲ್ಲಿ ಚಿಕ್ಕದಾದರೂ ಪ್ರಸಿದ್ಧಿಪಡೆದಿದ್ದ ಒಂದು ವಿದ್ಯಾಪೀಠವಿತ್ತು. ಇಲ್ಲಿ 48 ಮಂದಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು. ಈ ಉನ್ನತ ಶಿಕ್ಷಣ ಕೇಂದ್ರದ ಪಠ್ಯಕ್ರಮದಲ್ಲಿ ಯಜುರ್ವೇದ, ಸಾಮವೇದ, ಪ್ರಭಾಕರ ಮೀಮಾಂಸೆ, ವೇದಾಂತ, ಭಾಷಾಧ್ಯಯನ, ಕನ್ನಡ ಮುಂತಾದ ವಿಷಯಗಳು ಸೇರಿದ್ದುವು. ಪ್ರತಿ ಅಧ್ಯಾಪಕರೂ ಎಂಟು ಮಂದಿಗೆ ಪಾಠ ಹೇಳುತ್ತಿದ್ದರು. ಅವರು

ತಮ್ಮ ವಿಶಿಷ್ಟ ವಿಷಯದಲ್ಲಿ ಆಳವಾದ ಪಾಂಡಿತ್ಯವನ್ನು ಸಾಧಿಸಿದ್ದರು. ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯಿತ್ತು. ಅದಕ್ಕಾಗಿ ಇಬ್ಬರು ಅಡಿಗೆಭಟ್ಟರಿದ್ದರು. ದೇವಾಲಯಕ್ಕೆ ಬರುತ್ತಿದ್ದ ಆದಾಯವನ್ನು ಅಧ್ಯಾಪಕರ ಸಂಬಳಕ್ಕೂ ವಿದ್ಯಾರ್ಥಿಗಳ ಊಟೋಪಚಾರಗಳಿಗೂ ಬಳಸುತ್ತಿದ್ದರು. ತಾಳಗುಂದದಲ್ಲಿ ಗಂಗಾಧರೇಶ್ವರ ಮತ್ತು ವೀರಭದ್ರ ಎಂಬ ಇನ್ನೆರಡು ದೇವಾಲಯಗಳೂ ಇವೆ. ಗ್ರಾಮದ ಪೂರ್ವದಲ್ಲಿ ಪ್ರಭುದೇವರ ಗದ್ದುಗೆ ಇರುವ ವಿರಕ್ತ ಮಠವಿದೆ. ಪ್ರಭುದೇವರು ಕೈಲಾಸವಾಸಿಯಾದದ್ದು ಬಳ್ಳಿಗಾವೆಯಲ್ಲಲ್ಲ ತಾಳಗುಂದದಲ್ಲಿ ಎಂಬ ನಂಬಿಕೆ ಇದೆ. ಮತ್ತಷ್ಟು ಪೂರ್ವದಲ್ಲಿ ದೋಣನ ಗುಡ್ಡ ಎಂಬ ಬೆಟ್ಟವಿದೆ. ಸ್ಥಳಪುರಾಣದ ಪ್ರಕಾರ ಭೀಮ ದೋಣನನ್ನು (ಬಕಾಸುರ) ಕೊಂದದ್ದು ಇಲ್ಲಿ; ಏಕಚಕ್ರನಗರ ಈ ಗುಡ್ಡದ ಬಳಿ ಇತ್ತಂತೆ. (ಎನ್.ಎಸ್.ವಿ.)

**ತಾಳಗುಪ್ಪ :** ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಒಂದು ಸ್ಥಳ. ಬೆಂಗಳೂರು-ಮೀರಜ್ ರೈಲು ಮಾರ್ಗದಲ್ಲಿರುವ ಬೀರೂರು ಜಂಕ್ಷನ್‌ನಿಂದ ಕವಲೊಡೆದು ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಲ್ಲಿ ಭದ್ರಾವತಿ ಶಿವಮೊಗ್ಗಗಳ ಮೂಲಕ ಸಾಗರವನ್ನು ತಲಪಿ ಮುಂದುವರಿಯುವ ರೈಲು ಮಾರ್ಗದ ಕೊನೆಯ ನಿಲ್ದಾಣ. ಬೀರೂರಿನಿಂದ 16ಕಿಮೀ, ಶಿವಮೊಗ್ಗದಿಂದ 100ಕಿಮೀ ಮತ್ತು ಸಾಗರದಿಂದ 16ಕಿಮೀ ದೂರದಲ್ಲಿದೆ. ಶರಾವತಿ ಕಣಿವೆಯೂ ಜೋಗ್ ಜಲಪಾತವೂ ತಾಳಗುಪ್ಪದಿಂದ 20ಕಿಮೀ ದೂರದಲ್ಲಿವೆ. ರೈಲು ಮಾರ್ಗವನ್ನು ಇಲ್ಲಿಂದ ಮುಂದುವರಿಸಿ ಪಶ್ಚಿಮ ತೀರದಲ್ಲಿರುವ ಭಟ್ಕಳ ರೇವಿಗೆ ರೈಲ್ವೆ ಸಂಪರ್ಕ ಏರ್ಪಡಿಸಬೇಕೆಂದು ಹಿಂದಿನ ಮೈಸೂರು ಸಂಸ್ಥಾನ ಸರ್ಕಾರದ ಉದ್ದೇಶವಾಗಿತ್ತು. ಇದರಿಂದ ಮಲೆನಾಡಿನ ಉತ್ಪನ್ನಗಳನ್ನೂ ಸಿದ್ಧವಸ್ತುಗಳನ್ನೂ ಸುಲಭವೆಚ್ಚದಲ್ಲಿ ರಫ್ತು ಮಾಡುವುದು ಸಾಧ್ಯವಾಗುವುದೆಂದು ಭಾವಿಸಲಾಗಿತ್ತು. ಆದರೆ ಸಂಸ್ಥಾನ ಸರ್ಕಾರದ ಈ ಉದ್ದೇಶ ಪೂರೈಸಲಿಲ್ಲ. ಈಗ ಅದು ಹಿಂದಿನ ಮಹತ್ವವನ್ನು ಹೊಂದಿಲ್ಲದಿದ್ದರೂ ಸುಂದರವಾದ ದೃಶ್ಯಗಳಿಂದ ಕೂಡಿದ್ದು ಪ್ರವಾಸಿ ತಾಣವಾಗಿದೆ. *

**ತಾಳಮದ್ದಲೆ :** ಯಕ್ಷಗಾನ ಸಂಪ್ರದಾಯದಲ್ಲಿ ವೇಷಭೂಷಣ ನರ್ತನಾದಿಗಳಿಲ್ಲದೆ ಕುಳಿತಲ್ಲಿಯೇ ಪಾತ್ರಧಾರಿಗಳು ರಸಭಾವವಿನ್ಯಾಸಗಳೊಂದಿಗೆ ಪದ್ಯಕ್ಕೆ ತಕ್ಕ ಅರ್ಥ ಹೇಳಿ ಯಾವುದಾದರೊಂದು ಆಖ್ಯಾನವನ್ನು ಪ್ರದರ್ಶಿಸುವ ಒಂದು ಸಂಪ್ರದಾಯ. ಭಾಗವತ ಹಿಮ್ಮೇಳದೊಡನೆ ಕುಳಿತು ಪ್ರಸಂಗವನ್ನು ಹಾಡುತ್ತಿದ್ದರೆ ಪಾತ್ರಧಾರಿಗಳು ಮಾತುಗಳಿಂದ ಅರ್ಥಪ್ರತಿಪಾದನೆ ಮಾಡುತ್ತಾರೆ. ಇಲ್ಲಿ ಭಾಗವತನ ಪಾತ್ರವೆಂಬುದು ಕಥಾಸರಣಿಯನ್ನು ಒದಗಿಸುವುದಕ್ಕೆ ಮಾತ್ರ; ಬಯಲಾಟದಲ್ಲಿ ಅವನ ಕೆಲಸ ಇನ್ನೂ ಹೆಚ್ಚಿರುತ್ತದೆ.

ತಾಳಮದ್ದಲೆಯ ಗೀತ ಸಾಹಿತ್ಯ ಸಂವಾದಗಳಲ್ಲಿ ಬಯಲಾಟದ ಪೂರ್ಣಪ್ರಮಾಣದ ತೀಕ್ಷ್ಣತೆ, ಭಾವಾವೇಶ, ರಂಜನೆಗಳು, ತೋರಿಬರುವುದು ಸಾಧ್ಯವಿಲ್ಲವಾದರೂ ಬಹುಮಟ್ಟಿಗೆ ತಾಳಮದ್ದಲೆ ಬಯಲಾಟದ ಉದ್ದೇಶವನ್ನು ಸಾಧಿಸುತ್ತದೆ. ಬಯಲಾಟದಲ್ಲಿನಂತೆ ಸಭಾಲಕ್ಷಣ, ಪೂರ್ವಪೀಠಿಕೆಗಳು ತಾಳಮದ್ದಳೆಯ ಪ್ರಾರಂಭಕ್ಕೆ ಇಲ್ಲ.

ಹಿಂದೆ ಐಗಳ ಮಠಗಳಲ್ಲಿ ಯಕ್ಷಗಾನ ಪ್ರಸಂಗಗಳ ಹಾಡುಗಾರಿಕೆ, ಅರ್ಥ ಹೇಳುವ ಕ್ರಮ, ಮದ್ದಲೆಯ ವಾದನ - ಇವೂ ಪಾಠ ಕ್ರಮಗಳಲ್ಲಿದ್ದುವು. ವಿದ್ಯಾರ್ಥಿಗಳು ತಾವು ಕಲಿತ ಪ್ರಸಂಗಗಳನ್ನು ತಾಳಮದ್ದಲೆಯ ರೂಪದಲ್ಲಿ ಪ್ರದರ್ಶಿಸುತ್ತಿದ್ದರು. ನವರಾತ್ರಿ ಕಾಲದಲ್ಲಿ ಗುರುಗಳು ತಮ್ಮ ಶಿಷ್ಯರನ್ನು ಒಡಗೂಡಿಕೊಂಡು ತಾಳಮದ್ದಲೆ ನಡೆಸುತ್ತ ಗ್ರಾಮಗಳಲ್ಲಿ ಸಂಚರಿಸಿ ಗುರುಕಾಣಿಕೆ ಪಡೆಯುವ ಕ್ರಮ ಇತ್ತು. ಈ ಸಂಪ್ರದಾಯವನ್ನೇ ಹೂವಿನ ಕೋಲು ಎಂದೂ ಕರೆಯುತ್ತಾರೆ. ಕೈಯಲ್ಲಿ ಅಲಂಕೃತವಾದ ಬೆಂಡಿನ ಹೂವಿನ ಕೋಲನ್ನು ಹಿಡಿದುಕೊಂಡಿರುವ ಅಲಂಕೃತರಾದ ಐಗಳ ಮಠದ ಶಿಷ್ಯರು ಆರಂಭದಲ್ಲಿ ಮಾರನವಮಿ ಚೌಪದದ ಒಂದು ತುಂಡನ್ನು ಹಾಡಿ ಸಮಸ್ತ ಜನಕ್ಕೆ ಕಲ್ಯಾಣವನ್ನು ಕೋರಿ ತಮ್ಮ ಗುರುಗಳಿಗೆ ಯಥೋಚಿತ ಉಡುಗೊರೆ ಬೇಡಿ - ತದನಂತರ ತಾವು ಅಭ್ಯಸಿಸಿದ ಯಾವುದೇ ಒಂದು ಯಕ್ಷಗಾನ ಪ್ರಸಂಗದ ಭಾಗವನ್ನು ತಾಳಮದ್ದಲೆ ರೂಪದಲ್ಲಿ ಪ್ರದರ್ಶಿಸುತ್ತಿದ್ದರು. ಗುರುಗಳೇ ಸ್ವತಃ ಭಾಗವತಿಕೆ ನಡೆಸುತ್ತಿದ್ದರು. ಕಲಾವಿದರಿಗೆ ತರಬೇತಿ ನೀಡುವುದು ತಾಳಮದ್ದಲೆಯ ಇನ್ನೊಂದು ಉದ್ದೇಶ ಎಂಬುದು ಇದರಿಂದ ವೇದ್ಯವಾಗುತ್ತದೆ.

ಯಕ್ಷಗಾನ ಸಾಹಿತ್ಯದಲ್ಲಿ ಹೆಚ್ಚಿನವು ವೀರರಸಪ್ರಧಾನವಾಗಿದ್ದರೂ ಶೃಂಗಾರ ಹಾಸ್ಯರಸ ಪ್ರಧಾನವಾದ ಪ್ರಸಂಗಗಳೇ ತಾಳಮದ್ದಲೆಗೆ ಹೆಚ್ಚು ಒಲಿಯುತ್ತವೆ. ಕರುಣರಸವೂ ತಾಳಮದ್ದಲೆಯಲ್ಲಿ ಸ್ಫುಟಗೊಳ್ಳುತ್ತದೆ. ನೃತ್ಯದ ಪರಿಶ್ರಮವಿಲ್ಲದ, ವೇಷಭೂಷಣಗಳ ಹೊರೆ ಹೊರಲಾರದ, ಆದರೆ ಪುರಾಣಾದಿ ಕಥನಗಳಲ್ಲಿ ತಜ್ಞತೆ ಪಡೆದ ಶ್ರೇಷ್ಠ ವಾಗ್ಮಿಗಳಿಗೆ ತಮ್ಮ ಪ್ರತಿಭಾ ಪ್ರಕಾಶನಕ್ಕೆ ತಾಳಮದ್ದಲೆ ಒಂದು ಯೋಗ್ಯ ಕ್ಷೇತ್ರ. ಶ್ರೇಷ್ಠ ಭಾಗವತರು, ಯೋಗ್ಯ ಹಿಮ್ಮೇಳಗಳ ಸಂಯೋಜನೆ ಹಾಗೂ ಪಾಂಡಿತ್ಯಪೂರ್ಣವಾದ ಪಾತ್ರಧಾರಿಗಳ ಕೂಡುವಿಕೆಯಿಂದ ಜರುಗುವ ಯಾವುದೇ ತಾಳಮದ್ದಲೆಯು ಪ್ರದರ್ಶನ ಬಯಲಾಟದ ಉದ್ದೇಶವನ್ನು ಸಾಧಿಸುತ್ತದೆ. (ಬಿ.ವಿ.ಕೆ.)

**ತಾಳೀಕೋಟೆ :** ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕಸಬೆಯಿಂದ 35ಕಿಮೀ ಈಶಾನ್ಯಕ್ಕಿರುವ ಒಂದು ಪಟ್ಟಣ. ಡೋಣಿನದಿಯ ಎಡದಂಡೆಯಲ್ಲಿದೆ. ಜನಸಂಖ್ಯೆ 26,217. ವಿಜಯನಗರದ ಪತನಕ್ಕೆ ಕಾರಣವಾದ 1565ರ ನಿರ್ಣಾಯಕ ಯುದ್ಧ ನಡೆದದ್ದು ಇದರ ಸಮೀಪದಲ್ಲಿಯೇ. 1750ರಲ್ಲಿ ಪೇಶ್ವೆ ಬಾಲಾಜಿ ಬಾಜೀರಾವ್ ತಾಳೀಕೋಟೆಯನ್ನು ತನ್ನ ಮೈದುನ ಆನಂದರಾವ್‌ಗೆ ಜಾಗೀರಿಯಾಗಿ ಕೊಟ್ಟಿದ್ದ. ಪೇಶ್ವೆಗಳ ಪತನಾನಂತರ ಆನಂದರಾವ್‌ನ ಮೊಮ್ಮಗ ಇದನ್ನು ತನ್ನ ಆಡಳಿತ ಕೇಂದ್ರವಾಗಿ ಮಾಡಿಕೊಂಡು ಇಲ್ಲಿ ಒಂದು ವಾಡೆಯನ್ನು ಕಟ್ಟಿಸಿದ. ಇನಾಂ ರದ್ದಿಯಾತಿಯವರೆಗೂ ಈ ಗ್ರಾಮ 'ಸರಂಜಾಂ ಇನಾಂ' ಗ್ರಾಮವಾಗಿತ್ತು.

ತಾಳೀಕೋಟೆ ಈ ಸುತ್ತಣಪ್ರದೇಶದ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ಜೋಳ, ಸೇಂಗಾ, ಹತ್ತಿ, ಎಳ್ಳು ಹೆಚ್ಚು ವ್ಯಾಪಾರವಾಗುತ್ತದೆ. ಇಲ್ಲಿ ಎರಡು ಪ್ರವಾಸಿ ಮಂದಿರಗಳೂ ಒಂದೊಂದು ಪ್ರೌಢಶಾಲೆ, ಕಾಲೇಜು ಮತ್ತು ಗ್ರಂಥಾಲಯ ಇವೆ. ಊರು ಪಟ್ಟಣ ಪಂಚಾಯತಿಯ ಆಡಳಿತದಲ್ಲಿದೆ.

ಇಲ್ಲಿ ಊರ ಸುತ್ತ ಕೋಟೆಯಿತ್ತು. ಈಗ ಊರು ಅದನ್ನೂ ಮೀರಿ ಬೆಳೆದಿದೆ. ಇಲ್ಲಿರುವ ಎರಡು ಮಸೀದಿಗಳಲ್ಲಿ ಪಾಂಚ್‌ಪೀರ್ ಮಸೀದಿ ಎಂಬುದು ಪಂಚಪಾಂಡವ ದೇವಸ್ಥಾನವೆಂದು ಹಿಂದುಗಳಿಗೂ ಪವಿತ್ರವೆನಿಸಿದೆ. ಇಲ್ಲಿರುವ ನಗರೇಶ್ವರ ಮತ್ತು ಸಿದ್ಧೇಶ್ವರ ದೇವಾಲಯಗಳು ಕಲ್ಯಾಣದ ಚಾಳುಕ್ಯರ ಕಾಲದ ರಚನೆಗಳೆಂದು ಹೇಳಲಾಗಿದೆ.

ತಾಳೀಕೋಟೆ ಪ್ರದೇಶ ಭೂವೈಜ್ಞಾನಿಕ ದೃಷ್ಟಿಯಿಂದ ಮುಖ್ಯವಾಗಿದೆ. ಈ ಊರಿನ ಸುತ್ತಮುತ್ತಲ ಸಮತಲವಾದ ಪ್ರದೇಶದಲ್ಲಿ ಶಿಲಾ ವಯಸ್ಸಿನ ದೃಷ್ಟಿಯಿಂದ ಅತ್ಯಂತ ಪುರಾತನವಾದ ಪ್ರೀಕೇಂಬ್ರಿಯನ್ ಯುಗಕ್ಕೆ ಸೇರಿದ ಶಿಲಾಸ್ತೋಮಗಳು ಭೂಗರ್ಭದಲ್ಲಿ ಹುದುಗಿಕೊಂಡಿವೆ. ಹಿರಿಯ ಪ್ರೀಕೇಂಬ್ರಿಯನ್ (3,000 ಕೋಟಿಗೂ ಮಿಕ್ಕು ವರ್ಷಗಳು) ರೂಪಾಂತರ ಶಿಲೆಗಳು (ಮುಖ್ಯವಾಗಿ ಪದರಶಿಲೆಗಳು) ತಾಳೀಕೋಟೆಯ ಆಗ್ನೇಯದಲ್ಲಿ ಮುದ್ದೇಬಿಹಾಳದ ಪೂರ್ವದಲ್ಲಿ ಗೆದ್ದಲ ಮಾರಿ ಎಂಬ ಹಳ್ಳಿಯ ಸುತ್ತಲೂ ಇವೆ. ಈ ಶಿಲೆಗಳು ಗ್ರಾನೈಟ್ ಶಿಲೆಗಳಿಂದ ಭೇದಿಸಲ್ಪಟ್ಟಿವೆ. ಈ ಹಿರಿಯ ಪ್ರೀಕೇಂಬ್ರಿಯನ್ ಶಿಲೆಗಳ ಮೇಲೆ ಕಾಲಾಂತರದಲ್ಲಿ ಹರಡಿದ ಕಿರಿಯ ಪ್ರೀಕೇಂಬ್ರಿಯನ್ ಶಿಲಾಸ್ತೋಮವಿದೆ. ಭೀಮಾ ಶಿಲಾಸ್ತೋಮಗಳು ಎಂಬ ಹೆಸರಿನ ಈ ಕಿರಿಯ ಪ್ರೀಕೇಂಬ್ರಿಯನ್ ಶಿಲಾಸಮುದಾಯದಲ್ಲಿ ಪೆಂಟ್ಟೆ ಶಿಲೆ, ಮರಳುಶಿಲೆ, ಸುಣ್ಣಶಿಲೆ ಮತ್ತು ಮಡ್ಡಿಶಿಲೆ (ಗ್ರಾಕೊನೈಟ್ ಖನಿಜಾಂಶವುಳ್ಳದ್ದು) ಎಂಬ ಶಿಲಾವೈವಿಧ್ಯಗಳು ಗೊತ್ತಾದ ಸ್ತರಗಳಲ್ಲಿ ಸೇರಿಸಲ್ಪಟ್ಟಿವೆ. ಈ ಎಲ್ಲ ಜಲಜ ಶಿಲೆಗಳನ್ನು ತಾಳೀಕೋಟೆಯ ಆಗ್ನೇಯದಿಂದ ವಾಯುವ್ಯಕ್ಕೆ ಮುದ್ದೇಬಿಹಾಳ, ಜಾಮಲದಿನ್ನಿ, ಇಣಚಘಟ್ಟ, ಮಸಾನಗೇರಿ, ಜೆಕ್ಕೆರಾಳ ಎಂಬ ಹಳ್ಳಿಗಳ ಸುತ್ತ ಕಾಣಬಹುದು.

ಮೇಲೆ ತಿಳಿಸಿದ ಜಲಜ ಶಿಲಾಸಮುದಾಯದಲ್ಲಿ, ಆರ್ಥಿಕ ದೃಷ್ಟಿಯಿಂದ ಅತಿ ಮುಖ್ಯವಾದವು ಸುಣ್ಣಶಿಲೆಗಳು. ಸಾಧಾರಣವಾಗಿ

ಸಮತಲ ಭೂಮಿಯಿಂದ ಮೇಲೆ ಚಾಚದಿರುವ ಈ ಸುಣ್ಣಕಲ್ಲಿನ ಸ್ತರಗಳನ್ನು ತಾಳೀಕೋಟೆ, ಮಿಣಜಗಿ, ಮೂಕೀಹಾಳ ಮತ್ತು ಇತರ ಕೆಲವೆಡೆಗಳಲ್ಲಿ ಖಾಸಗಿ ಕಂಟ್ರಾಕ್ಟರುಗಳು ಚದರಗಳಾಗಿ ಕತ್ತರಿಸಿ ತೆಗೆದು ಕಟ್ಟಡಗಳಲ್ಲಿ ಹಾಸುಗಲ್ಲುಗಳಾಗಿ ಉಪಯೋಗಿಸುತ್ತಾರೆ. ಇಂಥ ಖಾಸಗಿ ಗಣಿಗಳಲ್ಲಿ ಭೂಮಿಯ ಮೇಲ್ಮೈಯಿಂದ 40-50 ಅಡಿಗಳ ಆಳದವರೆಗೂ ಸುಣ್ಣಕಲ್ಲಿನ ಸ್ತರಗಳನ್ನು ಕಾಣಬಹುದು. ವಿಪುಲವಾದ ಈ ಸುಣ್ಣಶಿಲಾಸಂಗ್ರಹವನ್ನು ರಾಜ್ಯದ ಗಣಿ ಮತ್ತು ಭೂವಿಜ್ಞಾನ ವಿಭಾಗದವರು, ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ವಿಭಾಗದವರು, ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಯವರು ಮತ್ತು ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಅನ್ವೇಷಿಸಿ, ಉತ್ತಮ ದರ್ಜೆಯ ಸಿಮೆಂಟ್ ತಯಾರು ಮಾಡುವಂಥ ಸುಣ್ಣಕಲ್ಲುಗಳು ಮತ್ತು ಡಾಲೊಮೈಟ್ ಅಂಶವುಳ್ಳ ಸುಣ್ಣಕಲ್ಲುಗಳು ಎಂದು ವಿಭಾಗಿಸಿದ್ದಾರೆ. ಡಾಲೊಮಿಟಿಕ್ ಸುಣ್ಣಶಿಲೆಗಳು ಇಲ್ಲಿ ದೊರೆಯುತ್ತವೆ. (ಎಸ್ಎ.ಎಸ್.)

**ತಿಂಗಳುಮಾವನ ಪೂಜೆ :** ಮಳೆ ಬಾರದೆ ಇದ್ದಾಗ ಮಳೆರಾಯನನ್ನು ಕಳಿಸಿಕೊಡು ಎಂದು ಜನಪದರು ಮಳೆರಾಯನ ಒಡೆಯನಾದ ತಿಂಗಳುಮಾವನನ್ನು (ಚಂದ್ರ) ಬೇಡಿಕೊಳ್ಳುವ ಮತ್ತು ಮಳೆರಾಯನ ಬರವಿಗಾಗಿ ಕೈಗೊಳ್ಳುವ ಒಂದು ಪೂಜೆ ಹಾಗೂ ಜನಪದ ಧಾರ್ಮಿಕ ಸಂಪ್ರದಾಯ. ತುಮಕೂರು, ಹಾಸನ ಜಿಲ್ಲೆಗಳಲ್ಲಿ ವಿಶೇಷವಾಗಿ ಮತ್ತು ಮಂಡ್ಯ, ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಸ್ವಲ್ಪಮಟ್ಟಿಗೆ ಆಚರಣೆಯಲ್ಲಿ ಕಂಡುಬರುವ ಈ ಪೂಜೆಯನ್ನು ಸಾಮಾನ್ಯವಾಗಿ ಚೈತ್ರದಿಂದ ಕಾರ್ತಿಕ ಮಾಸಗಳವರೆಗಿನ ಶುಕ್ಲಪಕ್ಷದ ದಿನಗಳಲ್ಲಿ ಆಚರಿಸಲಾಗುತ್ತದೆ. ಸಕಾಲಕ್ಕೆ ಮಳೆ ಬರದಿದ್ದರೆ ಮಳೆರಾಯನಾದ ದೇವೇಂದ್ರ ಕೋಪಗೊಂಡಿರುವನೆಂದು ನಂಬುವ ಹಳ್ಳಿಯ ಜನ ತಿಂಗಳುಮಾವನಿಗೆ ಮೊರೆಹೋಗುತ್ತಾರೆ. ಪೂಜೆಗೆ ಮುನ್ನ ಹಳ್ಳಿಯ ಹೆಂಗಸರು ಹಾಗೂ ಮಕ್ಕಳು (ವಿಶೇಷವಾಗಿ ಹೆಣ್ಣುಮಕ್ಕಳು) ಊರಿನ ದೇವಸ್ಥಾನದ ಮುಂಭಾಗದ ಅಂಗಳವನ್ನಾಗಲಿ ಒಂದು ಕೇರಿಯ ವಿಶಾಲವಾದ ಅಂಗಳವನ್ನಾಗಲಿ ಗುಡಿಸಿ, ಸಗಣಿಯಿಂದ ಸಾರಿಸಿದ ಅನಂತರ ತೇರು, ಹಲುಬೆ, ನೇಗಿಲು, ಸರ್ಪ, ಹನುಮ, ಚಂದ್ರ ಮುಂತಾದ ಚಿತ್ರಗಳನ್ನು ರಂಗವಲ್ಲಿಯಿಂದ ಬರೆಯುತ್ತಾರೆ. ಇದನ್ನು ತಿಂಗಳುಮಾವನನ್ನು ಬಿಡುವುದು ಎಂದು ಕರೆಯುತ್ತಾರೆ. ರಂಗವಲ್ಲಿಯಲ್ಲಿ ಬರೆದ ಅರ್ಧಚಂದ್ರನ ಮುಂದೆ ಒಂದು ಮಣೆ ಹಾಗೂ ಅದರ ಮೇಲೊಂದು ಕಳಸವನ್ನು ಪೂರ್ವಾಭಿಮುಖವಾಗಿ ಇಟ್ಟು ತಿಂಗಳುಮಾವನ ಎಡೆಗೆ ಮುದ್ದೆ ಅಥವಾ ರೊಟ್ಟಿಯನ್ನಿಟ್ಟು ಕಾಯಿ ಒಡೆದು ಗಂಧದ ಕಡ್ಡಿ ಹಚ್ಚಿ ಪೂಜಿಸುತ್ತಾರೆ. ಅನಂತರ ಹೆಂಗಸರು ತಿಂಗಳುಮಾವನಿಗೆ ಹಾಗೂ ಮಳೆರಾಯನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಪ್ರತಿದಿನವೂ ಹುಡುಗರು ತಿಂಗಳುಮಾವನ ಎಡೆಯನ್ನು ಕದಿಯುವ ಪದ್ಧತಿ ಇರುತ್ತದೆ. ಕೆಲವು ಕಡೆ ನೀರು ತುಂಬಿರುವ ಮಿಳ್ಳೆಯ ಬಾಯಿಗೆ ಒಂದು ಎಕ್ಕದ ಎಲೆಯನ್ನು ಮುಚ್ಚಿ, ಪೂಜೆ ಮುಗಿದ ಅನಂತರ ಅದನ್ನು ತಲೆಕೆಳಗು ಮಾಡಿ ಅಂಗೈಯಿಂದ ಒತ್ತಿ ಹಿಡಿದು ಗ್ರಾಮದೇವತೆಯ ಗುಡಿ ಹತ್ತಿರಕ್ಕೆ ಬರುತ್ತಾರೆ. ದೇವತೆಗೆ ಪೂಜೆ ಮಾಡಿದ ಅನಂತರ ಒತ್ತಿ ಹಿಡಿದಿದ್ದ ಅಂಗೈಯನ್ನು ಬಿಡುತ್ತಾರೆ. ಆಗ ನೀರು ಎಕ್ಕದ ಎಲೆಯನ್ನು ತಳ್ಳಿಕೊಂಡು ತಕ್ಷಣವೇ ಕೆಳಗೆ ಸುರಿದರೆ ಬೇಗ ಮಳೆಯಾಗುತ್ತದೆ ಎಂದೂ ನಿಧಾನವಾಗಿ ಬಿದ್ದರೆ ತಡವಾಗಿ ಮಳೆಯಾಗುತ್ತದೆಯೆಂದೂ ಬೀಳದೆ ತಡೆದು ನಿಂತರೆ ಮಳೆ ಆಗುವುದಿಲ್ಲವೆಂದೂ ನಂಬಿಕೆ. ತಿಂಗಳು ಗುಡಿಗಟ್ಟಿದರೆ (ಚಂದ್ರನ ಸುತ್ತ ಪರಿವೇಷ ಕಾಣಿಸಿಕೊಳ್ಳುವುದು) ಆ ತಿಂಗಳೆಲ್ಲ ಮಳೆ ಆಗುತ್ತದೆ ಎಂದು ಜನ ನಂಬುತ್ತಾರೆ.

3, 5, 9 ಅಥವಾ 12ನೆಯ ದಿನ ತಿಂಗಳುಮಾವನನ್ನು ಬಿಡುವ ಕಾರ್ಯಕ್ರಮವಿರುತ್ತದೆ. ಸಾಮಾನ್ಯವಾಗಿ ಹುಣ್ಣಿಮೆಯ ದಿನ ಪೂಜೆ ಮುಕ್ತಾಯವಾಗುತ್ತದೆ. ಅಂದು ಪ್ರತಿಮನೆಯಿಂದ ನಿಗದಿ ಮಾಡಿದಷ್ಟು ಹಣ, ಮತ್ತಿತರ ಅಗತ್ಯ ಸಾಮಾನುಗಳನ್ನು ಸಂಗ್ರಹಿಸಿ, ವಿಶಾಲವಾದ ಅಂಗಳವನ್ನು ಸಾರಿಸಿ ಎಂದಿನಂತೆ ರಂಗವಲ್ಲಿಯಿಂದ ಚಿತ್ರಗಳನ್ನು ಬರೆದು ಬಾಳೆಕಂಬ ತೋರಣಾದಿಗಳನ್ನು ಕಟ್ಟಿ ಸಿಂಗರಿಸುತ್ತಾರೆ. ಇಬ್ಬರು ಹುಡುಗರಿಗೆ ಮದುವಣಿಗ ಮದುವಣಗಿತ್ತಿಯರಂತೆ ಸಿಂಗರಿಸಿ ಹಸೆಕೂರಿಸಿ ಸೋಬಾನೆ ಪದಗಳನ್ನೂ ತಿಂಗಳುಮಾವನ ಪದಗಳನ್ನೂ ಹಾಡಿ ತಿಂಗಳುಮಾವನ ಮದುವೆ ಕಾರ್ಯವನ್ನು ಮುಗಿಸುತ್ತಾರೆ. ಪ್ರತಿ ಮನೆಯಿಂದ ತಂದ ತಂಬಿಟ್ಟಿನ ಆರತಿಗಳನ್ನು ಬೆಳಗಿ ಹೆಣ್ಣುಗಂಡುಗಳನ್ನು ದೇವಸ್ಥಾನಕ್ಕೆ ಕರೆದೊಯ್ದು ದೇವರಿಗೆ ಹಣ್ಣುಕಾಯಿ ಮಾಡಿಸಿ ಹಿಂತಿರುಗಿದ ಅನಂತರ ಅಲ್ಲಿ ಸೇರಿದ್ದವರಿಗೆಲ್ಲ ಚರುಪು (ಪ್ರಸಾದ) ಹಂಚುತ್ತಾರೆ. ಈ ಆಚರಣೆಯ ಕೊನೆಯ ದಿನವೂ ಎಂದಿನಂತೆ ಹಿಟ್ಟು ಅಥವಾ ರೊಟ್ಟಿಯನ್ನು, ಕಾಯಿ ಹೋಳುಗಳನ್ನು ಕದಿಯುವುದು, ಹೆಂಗಸರು ಕದಿಯುವವರಿಗೆ ನೀರು ಎರಚುವುದು ಅಥ'ವಾ ಬೆರಣಿಯಿಂದ ಹೊಡೆಯುವುದು - ಇವೇ ಮುಂತಾದ ಮನರಂಜನೆಯ ಕಾರ್ಯಗಳಿರುತ್ತವೆ.

ತಿಂಗಳುಮಾವನ ಆಚರಣಾವಿಧಾನಗಳಲ್ಲಿ ಪ್ರಾದೇಶಿಕ ಭಿನ್ನತೆ ಕಂಡುಬಂದರೂ ಮೂಲ ಆಶಯ ಮಾತ್ರ ಒಂದೇ ಆಗಿದೆ. ತಿಂಗಳು ಮಾವನ ಊಟಕ್ಕೆ ಕೆಲವು ಕಡೆ ರೊಟ್ಟಿಯನ್ನಿಟ್ಟರೆ ಮತ್ತೆ ಕೆಲವು ಕಡೆ ರಾಗಿಮುದ್ದೆಯನ್ನಿಟ್ಟು ತೆಂಗಿನ ಕಾಯಿ ಒಡೆಯುತ್ತಾರೆ. ಹಾಸನ, ಚಿಕ್ಕಮಗಳೂರು ಮತ್ತು ಅರಸೀಕೆರೆ ಈ ಒಳನಾಡಿನ ಪ್ರದೇಶಗಳಲ್ಲಿ ರೊಟ್ಟಿಗಳನ್ನು ಬೆರಣಿಗಳ ಜೊತೆ ಅಡಗಿಸಿಟ್ಟಿರುತ್ತಾರೆ. ರೊಟ್ಟಿ ಕದಿಯಬರುವವನನ್ನು (ಬಸವ) ಬೆರಣಿಯಿಂದ ಹೊಡೆಯಲು ಹೆಣ್ಣುಮಕ್ಕಳು ಎರಡು ಕಡೆಗಳಲ್ಲೂ ಸಾಲಾಗಿ ನಿಂತಿರುತ್ತಾರೆ. ಅವರ ಕಣ್ಣು ತಪ್ಪಿಸಿ ರೊಟ್ಟಿ ಕದ್ದವನು ಯಾರಿಗೂ ಸಿಕ್ಕದೆ ಓಡಿಹೋಗಿ ಕೆರೆಯ ಹತ್ತಿರದ ಒಂದು ಮರದ ಮೇಲೆ ಕುಳಿತು ರೊಟ್ಟಿಯನ್ನು ತಿಂದು, ಗುರುತಿಗೆ ಒಂದು ರೆಂಬೆಯನ್ನು ಮುರಿದು ತರಬೇಕು. ಆದರೆ ತಿಪಟೂರಿನ ಸುತ್ತಮುತ್ತಲ ಹಳ್ಳಿಗಳಲ್ಲಿ ರೊಟ್ಟಿಯ ಬದಲು ಮುದ್ದೆ ಮತ್ತು ತೆಂಗಿನಕಾಯಿ ಹೋಳುಗಳನ್ನು ಇಟ್ಟಿರುತ್ತಾರೆ. ಅವುಗಳನ್ನು ಕದಿಯಲು ಬಂದವನಿಗೆ ತಂಬಿಗೆಯಿಂದ ನೀರನ್ನು ಎರಚುತ್ತಾರೆ. ಅದಕ್ಕೆ ಅಂಜದೆ ಕದ್ದುಕೊಂಡು ಹೋದವನು ಮುದ್ದೆಯನ್ನು ಕರುಗಲ್ಲಿಗೆ (ಮುಂಗಾರು ದೇವರ ಕಲ್ಲು) ಮುಟ್ಟಿಸಿದ ಮೇಲೆ ನಾಯಿಗೆ ಹಾಕಿ ಕಾಯಿ ಹೋಳುಗಳನ್ನು ತನ್ನ ಸ್ನೇಹಿತರಿಗೆ ಹಂಚಿ ತಿನ್ನುತ್ತಾನೆ. ಅಲ್ಲಿಗೆ ಪೂಜೆ ಮುಕ್ತಾಯವಾಗುತ್ತದೆ.

ತಿಂಗಳುಮಾವನ ಪೂಜೆಗೆ ಸಂಬಂಧಿಸಿದಂತೆಯೇ ಹೇಳುವ ಜನಪದ ಗೀತೆಗಳನ್ನು ಮೂರು ಗುಂಪಾಗಿ ವಿಂಗಡಿಸಬಹುದು: i. ತಿಂಗಳುಮಾವನನ್ನು ಸ್ತುತಿಸುವುದು:

'ಕೋಲುಮಲ್ಲಿಗೆ ಕೋಲೆ, ನಾಗಸಂಪಿಗೆ ಕೋಲೆ' ಎಂಬ ಸೊಲ್ಲಿನಿಂದ ಪ್ರಾರಂಭಿಸಿ

ತಿಂಗಳು ತಿಂಗಳಿಗೂ ತಿಂಗಳ ಮಾವನ ಪೂಜೆ
ಗರುಡನಾ ಪೂಜೆ ಘನಪೂಜೆ ಹಾಗಲವಾಡಿ
ಹನುಮನಾ ಪೂಜೆ ಶನಿವಾರ

ಎಂದು ಮೊದಲಾಗಿ ಹಾಡುತ್ತಾರೆ. ಅನಂತರ ತಿಂಗಳುಮಾವನನ್ನು ಆಹ್ವಾನಿಸುವುದು ನಡೆಯುತ್ತದೆ. ತಿಂಗಳುಮಾವ ಪಂಜಿನ ಬೆಳಕಿನಲ್ಲಿ ಮಾತ್ರ ಹೊರಬರುವನೆಂದೂ ಒಂದೆರಡು ಪಂಜಿನ ಬೆಳಕಿನಲ್ಲೇ ಹೊರಗೆ ಬಾ ಎಂದು ಪ್ರಾರಂಭಿಸಿ ಕೊನೆಗೆ ಐದಾರು ಪಂಜಿಗಾದರೂ ಹೊರಡು ಎಂದು ಕೇಳಿಕೊಳ್ಳುವುದೂ ಅದಕ್ಕೆ ಅವನು ಮುನ್ನೂರು, ನಾನೂರು, ಐನೂರು ಪಂಜನ್ನು ತರಿಸಿದರೆ ಹೊರಬರುತ್ತೇನೆ ಎನ್ನುವುದೂ ಐನೂರು ಪಂಜಿಗೆ ಎಣ್ಣೆ ತರಲು ಬಡವರು ಎಂದು ಹೇಳುವ ಪದಗಳೂ ಈ ರೀತಿ ಇವೆ:

ಒಂದೆ ಚಿಬ್ಬುಲಿಗೆ ಒಂದಚ್ಚು ಬೆಲ್ಲನಿಟ್ಟು ಒಂದೆಲೇಮಾವ ಚಿಗುರೆಲೆ, ತಿಂಗಳು ಮಾವ ಒಂದೇ ಪಂಜಿಗೆ ಹೊರಹೊಂಡೊ;

ಒಂದೇ ಪಂಜಾಗೆ ನಾನ್ಹೆಂಗೆ ಹೊರಡಾಲಿ ಐನೂರು ಪಂಜ ತರಿಸಮ್ಮ; ಐನೂರು ಪಂಜಿಗೆ ಐಗೊಳೆಣ್ಣೆ ಬೇಕು ನಾವೆಲ್ತರುವಾನ ಬಡವರು;

ಅನಂತರ ತಿಂಗಳುಮಾವ ಎಷ್ಟು ಹೊತ್ತಾದರೂ ಹೊರಟು ಬರದೆ ಇರಲು ಕಾರಣ ಅವನನ್ನು ಚಿಕ್ಕೇರಿ ದೊಡ್ಡೇರಿ ಸೂಳೆಯರು ತಡೆದಿರಬಹುದೆಂದು ಶಂಕಿಸುತ್ತಾರೆ.

ಚಿಕ್ಕುಚಿಕ್ಕು ಸೌತೆಕಾಯಿ ಮುರಿದು ಚಿಕ್ಕಮಟ್ಟೆ ಕಟ್ಟಿಕೊಂಡು
ಚಿಕ್ಕೇರಿ ಮ್ಯಾಲೆ ಬರುವೋನೆ ತಿಂಗಳುಮಾವ ಚಿಕ್ಕೇರಿ ಸೂಳೆ ತಡದಾಳೋ

- ಎಂದು ಹಾಡುತ್ತ ಮುಂದುವರಿದು ಸೂಳೆಯರು ತಡೆದಿದ್ದರಿಂದಲೇ ಅವನು ಮನೆಗೆ ಬರಲಾಗದೆ ಮನೆಯಲ್ಲಿದ್ದ ಮಂಚ ಬರಿದಾಗಿ ಗಿಲಿಗಿಲಿ ಎಂದು ಶಬ್ದ ಮಾಡುತ್ತಿತ್ತೆಂದು ಹೇಳುವ ಕಲ್ಪನೆ ಸೊಗಸಾಗಿದೆ. ಅನಂತರ ತಿಂಗಳುಮಾವನಿಗೆ ಸ್ನಾನಮಾಡಿಸುವುದು, ಅವನಿಗೆ ಮದುವೆ ಇಲ್ಲವೆಂದು ಜರಿಯುವುದು, ಅವನ ಆರು ಮಂದಿ ತಂಗಿಯರ ಸಂಗತಿ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ.

ಈ ಸಂದರ್ಭದಲ್ಲಿ ಮಳೆರಾಯನನ್ನು ಕರೆಯುವ ಗೀತೆಗಳನ್ನು ಹಾಡುತ್ತಾರೆ. ಅವನು ತಮ್ಮ ಊರಿಗೆ ಬರದುದಕ್ಕೆ ಕಾರಣವನ್ನು ಹೇಳಿ ಯಾರೂ ಅವನನ್ನು ನಿಂದಿಸಕೂಡದು ಎಂದು ಹೇಳುವ ಗೀತೆಯನ್ನು 'ಯಾರೇನಂದೆವು ಬಾರೋ ದೇವೇಂದ್ರುರಾಯ, ಮತ್ತೇ ನೆನೆದೇವು ಬಾರೋ' ಎಂಬ ಸೊಲ್ಲಿನಿಂದ ಆರಂಭಿಸಿ, 'ಮಳೆ ಹೋಯ್ತುಂತಾ ಮಾನ್ಯವರ ಬಯ್ಯಬೇಡಿ ಸಾಲಕ್ಹೋಗವನೆ ಮಳೆರಾಯ, ಆರು ಸಾವಿರದೆಡೆ ಸರ್ಪನ ಸುತಿಗೊಂಡು ಹಡಗೀಗೆ ಮಳೆಯಿಲ್ಲ ಅಂತಾ ಮಳೆರಾಯನ್ನ ಬೈಬೇಡಿ ; ಮಳೆರಾಯ್ನ ಹೆಂಡ್ತಿ ಮಕ್ಕಳೊಂದಿಗಿತ್ತಿ, ಮಳೆ ಬಂದಾರೆಲ್ಲಿ ತಳಗ್ಯಾಳೊ, ಮಳೆ ಬಂದಾರೆಲ್ಲಿ ತಳಗ್ಯಾಳೋ ತಿಂಗಳುಮಾವ ಎಳಿಯ ಹೊಂಬಾಳೆ ಸುಳಿಯಲ್ಲಿ' ಎಂದು ಹಾಡುತ್ತ ಮಳೆರಾಯ ಬರದೆ ಇರುವುದಕ್ಕೆ ಕಾರಣ ಕೊಡುತ್ತಾರೆ. ಮಳೆ ಇಲ್ಲದೆ ಧರೆಯ ಸ್ಥಿತಿ ಎಷ್ಟು ದಾರುಣವಾಗಿದೆ ಎಂಬುದನ್ನು ಮಳೆರಾಯನಿಗೆ ಈ ರೀತಿ ಹೇಳುತ್ತಾರೆ: 'ಹಣ್ಣಾದೊ ಈ ಭೂಮಿ ಹಣ್ಣಾದೋ ಈ ಭೂಮಿ ಅಣ್ಣೆಕಡ್ಯಾದೋ ದನಕಾರ, ರಾಜ್ಯುದ ವ್ಯಾಲೆ ಅಣ್ಣಾ ನೀ ನೋಡಿ ಕರುಣಿಸೋ; ಸಪ್ಪಾದೊ ಈ ಭೂಮಿ ಸಪ್ಪಾದೊ ಈ ಭೂಮಿ ಸಪ್ಪೇ ದಂಟಾದೊ ಕುರಿದಾನ, ಲೋಕುದ ವ್ಯಾಲೆ ಅಪ್ಪಾ ನೀ ನೋಡಿ ಕರುಣಿಸೋ' -ಈ ಮಾತುಗಳಲ್ಲಿ ಕ್ಷಾಮದಿಂದುಂಟಾದ ಭೀಕರ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಊರಿನ ಕೆರೆ ತುಂಬಿ ಹನ್ನೆರಡು ಕೋಡಿ ಹರಿದು ಸಣ್ಣಕ್ಕಿ ಬಯಲು ಬೆಳೆಯಲಿ ಎಂದು ಕೊನೆಗೆ ಮಳೆರಾಯನನ್ನು ಪ್ರಾರ್ಥಿಸಿಕೊಳ್ಳುತ್ತಾರೆ.

ಈ ಸಂದರ್ಭದಲ್ಲಿ ಗುಡಿದುಂಬಿಸುವ ಪದಗಳನ್ನು ಹಾಡುತ್ತಾರೆ. ಐದಾರು ಪಂಜುಗಳಿಗೆ ಹೊರಹೊರಡು ಎಂದು ಹಾಡಿದಂತೆಯೇ ಐದಾರು ಪಂಜುಗಳಿಗೆ ಗುಡಿದುಂಬು ಎಂದು ತಿಂಗಳುಮಾವನನ್ನು ಕೇಳಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ತಿಂಗಳುಮಾವನನ್ನು ಕುರಿತ ಪದ್ಯಗಳಲ್ಲದೆ ತಾವು ಕಲಿತ ಇತರ ಪದಗಳನ್ನೂ ಹಾಡಿಕೊಳ್ಳುವುದುಂಟು.

ತಿಂಗಳುಮಾವನ ಪೂಜೆಯ ಪ್ರಾಚೀನತೆಯ ಬಗ್ಗೆ ಸ್ಪಷ್ಟ ಮಾಹಿತಿಗಳು ದೊರೆಯುವುದಿಲ್ಲ. ಈ ಪೂಜೆ ಶಿಷ್ಟ ಸಾಹಿತ್ಯದಲ್ಲಿ ಕಂಡುಬರುವ ಕೌಮುದಿ ಮಹೋತ್ಸವದ ಉಳಿಕೆಯಾಗಿರಬಹುದೆಂಬ ಅಭಿಪ್ರಾಯವಿದೆ. ಆದರೆ ಇದನ್ನು ಒಪ್ಪುವುದು ಕಷ್ಟ. ಜನಪದರಿಗೆ ಚಂದ್ರ ಹತ್ತಿರದ ಬಂಧುವಾಗಿದ್ದಾನೆ, ಸಲುಗೆಯ ಮಾವನಾಗಿದ್ದಾನೆ. ಅವನ ಪೂಜೆ ಒಂದು ರೀತಿಯ ಸಖ್ಯ ಭಕ್ತಿಯೇ ಆಗಿದೆ. ಈ ಭಾವನೆಯ ಅಭಿ ವ್ಯಕ್ತಿಯನ್ನು ತಿಂಗಳುಮಾವನ ಪದಗಳಲ್ಲಿ ಕಾಣಬಹುದು. ಈ ಪೂಜೆ ಒಂದು ರೀತಿಯಲ್ಲಿ ಹಳ್ಳಿಗರಿಗೆ ಧಾರ್ಮಿಕ ಸಂಪ್ರದಾಯವಾದರೆ ಮತ್ತೊಂದು ರೀತಿಯಲ್ಲಿ ಹೆಂಗಸರು ಮಕ್ಕಳಿಗೆ ಮನರಂಜನೆ ನೀಡುವ ಉತ್ಸವವೂ ಆಗಿದೆ. ಊರಿನ ಎಲ್ಲರೂ ಸೇರಿ ಕೈಗೊಳ್ಳುವ ಈ ಆಚರಣೆ ಗ್ರಾಮೀಣರಲ್ಲಿ ಏಕತಾಭಾವವನ್ನು ಉಂಟುಮಾಡುವಲ್ಲಿ ಸಹಾಯಕವಾಗಿದೆ.

ತಿಂಗಳುಮಾವನ ಪೂಜೆಯ ಪದಗಳನ್ನೇ ಸಂಪೂರ್ಣವಾಗಿ ಒಳಗೊಂಡ ಪ್ರತ್ಯೇಕ ಸಂಕಲನಗಳಿಲ್ಲವಾದರೂ ಎಚ್.ಎಲ್.ನಾಗೇಗೌಡರ ಸೋಬಾನೆ ಚಿಕ್ಕಮ್ಮನ ಪದಗಳು (1972), ಮತಿಘಟ್ಟ ಕೃಷ್ಣಮೂರ್ತಿ ಅವರ ನಾಡಪದಗಳು (1947), ಜಿ.ಎಸ್.ಭಟ್ಟ ಉಬರಡ್ಕ ಅವರ ಸಿರಿಗಂಧ ಸೂಸ್ಯಾವೆ (1968) ಮತ್ತು ಕರಾಕೃ ಅವರ ಕೆಲವು ಸಂಕಲನಗಳಲ್ಲಿ ತಿಂಗಳುಮಾವನನ್ನು ಕುರಿತ ಕೆಲವು ಬಿಡಿ ಪದಗಳು ಸಂಕಲನಗೊಂಡಿವೆ. (ಎಸ್.ಎನ್.ಜಿ.)

**ತಿಂಥಿಣಿ :** ಗುಲ್ಬರ್ಗ ಜಿಲ್ಲೆ ಷೋರಾಪುರ ಅಥವಾ ಸುರಪುರ ತಾಲ್ಲೂಕಿನಲ್ಲಿ ಷೋರಾಪುರಕ್ಕೆ 19ಕಿಮೀ ಅಂತರದಲ್ಲಿ ಬೀದರ್-ಬೆಂಗಳೂರು ಹೆದ್ದಾರಿಯ ಮೇಲೆ ಕೃಷ್ಣಾ ನದಿಯ ತಟದಲ್ಲಿರುವ ಗ್ರಾಮ. ಇಲ್ಲಿ ಈ ನದಿಗೆ ದೊಡ್ಡ ಸೇತುವೆಯನ್ನು ಕಟ್ಟಲಾಗಿದೆ. ಇದಕ್ಕೆ ತಿಂಥಿಣಿ ಸೇತುವೆಯೆಂದೇ ಕರೆಯುತ್ತಾರೆ. ಈ ಸೇತುವೆಯ ನಿರ್ಮಾಣದಿಂದ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ನಡುವೆ ನೇರ ಸಂಪರ್ಕ ಉಂಟಾಗಿದೆ.

ಮೌನೇಶ್ವರ ರಥೋತ್ಸವ

ಈ ಗ್ರಾಮದ ಮಹತ್ತ್ವಕ್ಕೆ ಸೇತುವೆ ಒಂದು ಕಾರಣವಾದರೆ, ಮೋನಪ್ಪಯ್ಯ ಇಲ್ಲವೆ ಮೋನೇಶ್ವರನ ದೇವಾಲಯ ಮತ್ತೊಂದು ಮಹತ್ತ್ವದ ಕಾರಣ. ಈ ಮೋನಪ್ಪಯ್ಯನಿಗೆ ಮೌನೇಶ್ವರ, ಮೋನಪ್ಪ ಎಂಬ ಪರ್ಯಾಯ ನಾಮಗಳಿವೆ. ಮೋನಪ್ಪಯ್ಯ 15 ಇಲ್ಲವೆ 16ನೆಯ ಶತಮಾನದಲ್ಲಿ ಸುಮಾರು 120 ವರ್ಷಗಳ ಕಾಲ ಬಾಳಿದ ಒಬ್ಬ ಸಂತ. ಈತ ಸುರಪುರ ತಾಲ್ಲೂಕಿನ ಗೋನಾಳೆ ಎಂಬಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಸೇರಿದ ಹಾವಪ್ಪ ಹಾವಮ್ಮರ ಮಗನಾಗಿ ಆ ಊರಿನ ಗ್ರಾಮದೇವತೆಯಾದ ಮೌನೇಶ್ವರನ ವರಪ್ರಸಾದದಿಂದ ಹುಟ್ಟಿದವನು. ಈತ ತನ್ನ ಇಡೀ ಆಯುಷ್ಯವನ್ನೇ ಹಿಂದು-ಮುಸ್ಲಿಮರ ಏಕತೆಗಾಗಿ ಮೀಸಲಿಟ್ಟು ಮಾನವಕುಲವೆಲ್ಲ ಒಂದೇ ಎಂಬುದನ್ನು ಸಾಧಿಸಿದ ಸಮನ್ವಯ ಶರಣ. ಅಂತೆಯೇ ಈತನ ಕಾಲದಲ್ಲಿ ಆಳುತ್ತಿದ್ದ ಬಿಜಾಪುರದ ಖಲಂದರ್ ಷಾ ಎಂಬುವನ ಮನಸ್ಸನ್ನು ಪರಿವರ್ತಿಸಿದ. ಆ ಪರಿಣಾಮದಿಂದ ಅವನು ಗದಗಿನ ಹತ್ತಿರವಿರುವ ವರವಿಯಲ್ಲಿ ಉದ್ಭವಿಸಿದ ಲಿಂಗಕ್ಕೆ ಸುಂದರವಾದ ಮಂದಿರವನ್ನು ಕಟ್ಟಿಸಿಕೊಟ್ಟ. ಏಕಲಾಖ ಐಸೀ ಹಜಾರ ಪಾಂಚೋ ಪೀರ ಪೈಗಂಬರ್ ಮೌನದೀನ ಎಂಬ ಘೋಷಣೆಯನ್ನು ಈ ಸಂತ ಜನಜನಿತ ಮಾಡಿದ. ಈ ಘೋಷಣೆ ಮುಸ್ಲಿಮರ ಪರವಾಗಿ ಕಂಡರೂ ಪ್ರಪಂಚದ ಸಕಲ ಜೀವರಾಶಿಗಳಿಗೆ ಆಧಾರಸ್ವರೂಪನಾದ ಪರಮಾತ್ಮ ಎಂದರೆ

ಪಂಚಮುಖ ಈಶ್ವರನೇ (ಪಾಂಚೋಪೀರ್) ಪೈಗಂಬರನು; ಅವನೇ ಮೌನ ಎಂಬ ಅರ್ಥವಿದ್ದು ಇದರಲ್ಲಿ ಹಿಂದು ಮತಪರವಾದ ವಿಷಯಗಳೂ ಅಡಕವಾಗಿವೆ. ಈತ ಈ ಸಮನ್ವಯತತ್ತ್ವವನ್ನು ಗದಗ, ಬಿಜಾಪುರ, ಬಸವಕಲ್ಯಾಣ, ಗುಲ್ಬರ್ಗ, ಅಳ್ಳೊಳ್ಳಿ, ಸಗರ, ಶಾಹಪುರ, ಗೊಗ್ಗಲು, ದೇವದುರ್ಗ ಮೊದಲಾದ ಪ್ರದೇಶಗಳಲ್ಲೆಲ್ಲ ಪ್ರಚಾರಮಾಡಿ ತಿಂಥಿಣಿಯ ಬಳಿ ಕೃಷ್ಣಾನದಿಯ ಆಚೆಯ ದಡದಲ್ಲಿ ಬಂದು ಒಂದು ಕಟ್ಟೆಯ ಮೇಲೆ ಕುಳಿತ. ಆಗ ಕೃಷ್ಣಾ ನದಿ ಪ್ರವಾಹದಿಂದ ತುಂಬಿಸೂಸುತ್ತಿತ್ತು. ಅಂಬಿಗರು ಈತನನ್ನು ಹರಿಗೋಲಿನಲ್ಲಿ ಕರೆದುಕೊಂಡು ಹೋಗಲು ನಿರಾಕರಿಸಿದರು. ತನ್ನ ಆತ್ಮಬಲದಿಂದ ನೀರಿನ ಮೇಲೆ ಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತು ತಿಂಥಿಣಿಯನ್ನು ಸೇರಿದ. ಈತ ಆಚೆಯ ದಡದಲ್ಲಿ ಕೆಲವು ಸಮಯ ಕುಳಿತ ಕಟ್ಟೆಗೆ ಈಗ ಶಾಸನ ಕಟ್ಟೆ ಎಂದು ಜನ ಕರೆಯುತ್ತಾರೆ.

ಮೋನಪ್ಪಯ್ಯ ತಿಂಥಿಣಿ ಗ್ರಾಮದ ಹೊರಗಡೆ ಪ್ರಶಾಂತವಾದ ವಾತಾವರಣದಲ್ಲಿ ಕೆಲವು ದಿವಸ ತತ್ತ್ವದ ಅನುಸಂಧಾನ, ಬೋಧನೆ ಪ್ರಸಾರ ಮಾಡಿ ಅಲ್ಲಿಯೇ ಒಂದು ಗುಹೆಯಲ್ಲಿ ಐಕ್ಯವಾದ. ಅನಂತರ ಅಲ್ಲಿರುವ ಈತನ ಸಮಾಧಿಯ ಸ್ಥಳವನ್ನು ಹಿಂದುಗಳು ದೇವಾಲಯವೆಂದೂ ಮುಸ್ಲಿಮರು ಮೋನಪ್ಪಯ್ಯನ ದರ್ಗಾ ಎಂದೂ ಕರೆಯತೊಡಗಿದರು. ಈತನು ಬಳಸುತ್ತಿದ್ದ ಹೂಜಿ, ಚಪಗೊಡಲಿ, ಪರಸು ಬಟ್ಟಲು, ಪುರುಷಮಣಿ ಮೊದಲಾದ ಐದು ವಸ್ತುಗಳೂ ಇನ್ನೂ ಅಲ್ಲಿ ಪೂಜೆಗೊಳ್ಳುತ್ತವೆ. ಪ್ರತಿವರ್ಷ ಮಾಘ ಶುದ್ಧ 10ರಿಂದ ಪೌರ್ಣಿಮೆಯ ವರೆಗೆ ನಡೆಯುವ ಜಾತ್ರೆಯ ಸಮಯದಲ್ಲಿ ಆ ಪವಿತ್ರ ವಸ್ತುಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ.

ಮೋನಪ್ಪಯ್ಯನ ಸಮಾಧಿಯ ಪೂಜಾರಿಗಳು ಅಕ್ಕಸಾಲಿಗರು. ಈತ ಚೆನ್ನಬಸವೇಶ್ವರನ ಅವತಾರವೆಂದೂ ಅಲ್ಲಮಪ್ರಭುವಿನ ಶಿಷ್ಯನೆಂದೂ ಹೇಳಿಕೊಂಡಿದ್ದಾನೆ. ಈತ ಆರಂಭದಲ್ಲಿ ಓರ್ವ ಸೂಫಿ ತಾತ್ತ್ವಿಕನ ಶಿಷ್ಯನಾಗಿರಬೇಕು. ಅನಂತರ ವೀರಶೈವ ವಿರಕ್ತರ ಪ್ರಭಾವಕ್ಕೆ ಒಳಗಾದಂತೆ ಕಾಣುತ್ತದೆ. ಅಂತೆಯೇ ಇವನು ಹಿರಿಯ ಸಮನ್ವಯ ಶರಣ. ಈತನ ಸಮಕಾಲೀನ ಶರಣರೆಂದರೆ ಕೊಡೇಕಲ್ಲಿನ ಬಸವಪ್ಪಯ್ಯ ಹಾಗೂ ಗಗನಾಪುರದ ಗಂಗಪ್ಪಯ್ಯ.

ಮೋನಪ್ಪಯ್ಯ ಅನೇಕ ವಚನಗಳನ್ನು ಹಾಡಿದ್ದಾನೆ. ಆ ವಚನಗಳ ಕೊನೆಗೆ ಕೇಳಾ ಬಸವಣ್ಣಾ ಎಂಬ ಅಂಕಿತವಿದೆ. ಈತನ ಎಲ್ಲ ವಚನಗಳಲ್ಲಿ ನಿಚ್ಚಳ ಮನಸ್ಸಿನ ಸತ್ಯಸಾತ್ತ್ವಿಕರೂಪದ ಅಭಿವ್ಯಕ್ತಿ ಕಂಡುಬರುತ್ತದೆ. ಮಾದರಿಗಾಗಿ ಒಂದು ವಚನ:

ಅಡ್ಡ ಬಡಿದವ ಹರಭಕ್ತ ಉದ್ದ ಬಡಿದವ ಹರಿಭಕ್ತ
ಅಡ್ಡ ಉದ್ದ ಎರಡೂ ಕಾಣದ ಸಾಹೇಬ ಶೂನಗನಂತೆ
ಬೊಗಳಿದರೆ ಲೋಕಕ್ಕೊಬ್ಬನೇ ಇದ್ದ ದೇವ, ದೈವ ಕಾಣಲಿಲ್ಲ
ಕೇಳಾ ಬಸವಣ್ಣಾ (ಎ.ಕೆ.)

ತಿಂಥಿಣಿ ಪ್ರದೇಶ ಭೂವೈಜ್ಞಾನಿಕ ದೃಷ್ಟಿಯಿಂದಲೂ ಮುಖ್ಯವಾದುದು. ಇದು ಹಟ್ಟಿ ಚಿನ್ನದಗಣಿಗೆ 29ಕಿಮೀ ದೂರದಲ್ಲಿದೆ. ಇಲ್ಲಿ ದೊರಕಿರುವ ಮೂಸೆಗಳು ಮತ್ತು ಕುಲುಮೆಗಳ ಅವಶೇಷಗಳು ಈ ಪ್ರದೇಶದ ಗಣಿ ಉದ್ಯಮದ ಪ್ರಾಚೀನತೆಗೆ ಕುರುಹುಗಳಾಗಿವೆ. ಕಳೆದ ಶತಮಾನದ ಆದಿಯಲ್ಲಿ ಜಾನ್ ಟೇಲರ್ ಕಂಪನಿ ಪ್ರಥಮವಾಗಿ ತಿಂಥಿಣಿಯ ಸುತ್ತಮುತ್ತ ತಾಮ್ರ ಮತ್ತು ಚಿನ್ನದ ನಿಕ್ಷೇಪಗಳಿಗಾಗಿ ವೈಜ್ಞಾನಿಕ ಸಮೀಕ್ಷೆಯನ್ನು ನಡೆಸಿತು. ಅನಂತರ ಭಾರತದ ಭೂವಿಜ್ಞಾನ ಸರ್ವೇಕ್ಷಣ ವಿಭಾಗದವರು ತಾಮ್ರ ನಿಕ್ಷೇಪದ ವಿವರವಾದ ಮಾಹಿತಿಯನ್ನು ಪ್ರಕಟಿಸಿದರು. ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು 20ಕ್ಕೂ ಹೆಚ್ಚು ಕೊರೆಗಳನ್ನು ಹಾಕಿ ನಿಖರವಾದ ಮಾಹಿತಿಯನ್ನು ಒದಗಿಸಿದರು.

ತಿಂಥಿಣಿಯ ಬಳಿ ದೊರಕುವ ಶಿಲೆಗಳಲ್ಲಿ ಕ್ಲೋಸ್‍ಪೇಟೆ ಶಿಲಾಸಮುದಾಯಕ್ಕೆ ಸೇರಿದ ಕೆಂಪು ಕಣಶಿಲೆ, ಮಿಗ್‍ಮಟೈಟ್ ಮತ್ತು ಮೆಟಾ ಡಯಾಬೇಸ್ ಮುಖ್ಯವಾದ ಶಿಲಾರೂಪಗಳು. ತಾಮ್ರದ ಖನಿಜಗಳ ದೊರೆಯುವಿಕೆ ಮೆಟಾ ಡಯಬೇಸ್ ಶಿಲೆಗೆ ಸೀಮಿತವಾಗಿದೆ. ಈ ಶಿಲೆಯು ಪೂರ್ವಪಶ್ಚಿಮವಾಗಿ 15 ಮೀಟರ್‌ಗಳವರೆಗೆ ಪ್ರಸರಿಸಿದ್ದು ಅನೇಕ ಮಾರ್ಪಾಡುಗಳನ್ನು ಹೊಂದಿದೆ. ಡಯಾಬೇಸ್ ಶಿಲೆಯ ಓರೆ $80^0$ ಉತ್ತರಕ್ಕಿದೆ. ಡಯಾಬೇಸ್ ಶಿಲೆ ಅನೇಕ ಬಿರುಕುಗಳನ್ನು ಹೊಂದಿದ್ದು, ಬಿರುಕುಗಳು ಶಿಲೆಯ ಓಟಕ್ಕೆ ಸಮಾನಾಂತರವಾಗಿದೆ. ಚಾಲ್ಕೋಪೈರೈಟ್ ಅತಿ ಮುಖ್ಯ ತಾಮ್ರದ ಖನಿಜವಾಗಿದ್ದು, ತಾಮ್ರದ ಅಂಶ ಸೇ.1.2 ರಷ್ಟಿದೆ. ಈ ಖನಿಜದೊಂದಿಗೆ ಬೆಣಚುಕಲ್ಲು ಕ್ಯಾಲ್‍ಸೈಟ್ ಮತ್ತು ಹಿಮಟೈಟ್‌ಗಳೂ ಅಲ್ಪ ಪ್ರಮಾಣದಲ್ಲಿ ದೊರೆಯುತ್ತವೆ. ಪ್ರಾಯೋಗಿಕ ಪರೀಕ್ಷೆಗಳ ಅನಂತರ ಇಲ್ಲಿನ ತಾಮ್ರದ ಗಣಿಕಾರ್ಯವನ್ನು ಹಟ್ಟಿ ಚಿನ್ನದ ಗಣಿ ಆಡಳಿತಕ್ಕೆ ವಹಿಸಲಾಗಿದೆ. (ಟಿ.ಆರ್.ಎಸ್.)

**ತಿಟ್ಟೆ ಕೃಷ್ಣ ಅಯ್ಯಂಗಾರ್ :** 1902-97. ಕರ್ನಾಟಕ ಸಂಗೀತ ವಿದ್ವಾಂಸರು. 1902 ನವೆಂಬರ್ 24ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ನಾರಾಯಣ ಅಯ್ಯಂಗಾರ್. ಇವರ ಪೂರ್ವಜರು ತಮಿಳುನಾಡಿನ ತಂಜಾವೂರು ಜಿಲ್ಲೆಯ ತಿಟ್ಟೆ ಎಂಬ ಗ್ರಾಮದವರು. ಇವರು ತಾತ ರಂಗಾಚಾರ್ಯರು ತ್ಯಾಗರಾಜರ ನೇರ ಶಿಷ್ಯರಾಗಿದ್ದ ತಿಟ್ಟೆ ಸ್ಥಾನಂ ರಾಮಯ್ಯಂಗಾರ್ಯರ ಶಿಷ್ಯರು. ಅವರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿನಲ್ಲಿ ನೆಲೆಸಿದರು. ಕೃಷ್ಣಅಯ್ಯಂಗಾರರ ತಂದೆ ನಾರಾಯಣ ಅಯ್ಯಂಗಾರರು ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದರು. ಪರಂಪರೆ, ಸಂಸ್ಕಾರ ಮತ್ತು ಪರಿಸರಗಳ ಪ್ರಭಾವದಿಂದ ತಿಟ್ಟೆ ಕೃಷ್ಣ ಅಯ್ಯಂಗಾರ್ಯರು ಹಿರಿಯ ಸಂಗೀತ ಕಲಾವಿದರಾದರು. ತಂದೆಯವರೇ ಇವರ ಮೊದಲ ಗುರು. ಸಂಗೀತಕ್ಕೆ ಪೂರ್ಣವಾಗಿ ಒಲಿದಿದ್ದ ಅಯ್ಯಂಗಾರ್ಯರಿಗೆ ಶಾಲೆಯ ವ್ಯಾಸಂಗದಲ್ಲಿ ಆಸಕ್ತಿ ಇರಲಿಲ್ಲ. ಚಿಕ್ಕಂದಿನಲ್ಲಿ ಇವರು ಶಾಲೆಗೆ ಹೋಗುವುದಾಗಿ ಹೇಳಿ ವಿದ್ವಾಂಸರ ಮನೆಗಳಿಗೆ ಹೋಗಿ ಅಲ್ಲಿ ಸಂಗೀತ ಕೇಳುತ್ತಿದ್ದರು. ಸಂಗೀತಾಭ್ಯಾಸ ಮಾಡುತ್ತಿದ್ದರು. ವೀಣೆ ಶೇಷಣ್ಣನವರು, ಸುಬ್ಬಣ್ಣನವರು ಹಾಗೂ ಬಿಡಾರಂ ಕೃಷ್ಣಪ್ಪನವರು ಇವರ ಗುರುಗಳಾಗಿದ್ದರು.

ತಿಟ್ಟೆ ಕೃಷ್ಣ ಅಯ್ಯಂಗಾರ್ಯರದು ಘನಗಂಭೀರವಾದ ಕಂಚಿನ ಕಂಠ. ತ್ಯಾಗರಾಜ ಆರಾಧನೋತ್ಸವದ ಸಂದರ್ಭದಲ್ಲಿ ಇವರ ಮೊತ್ತ ಮೊದಲನೆಯ ಕಚೇರಿ ತಿರುವಯ್ಯಾರಿನಲ್ಲಿ ನಡೆಯಿತು. ಆಗ ಇವರಿಗೆ 16 ವರ್ಷ. ಇವರು 1924ರಲ್ಲಿ ಮೈಸೂರು ಅರಸರ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು. ಅಲ್ಲಿಯ ಸಹ ವಿದ್ವಾಂಸರ ಸತ್ಸಂಗದಿಂದ ಇವರ ಜ್ಞಾನಾಭಿವೃದ್ಧಿಯಾಯಿತು. ಹಲವು ವಿದ್ವನ್‌ಮಣಿಗಳ ಸಂಗೀತ ಆಲಿಸುತ್ತ ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡರು. ಇವರು ತಾನವನ್ನು ಹಾಡುವುದರಲ್ಲಿ ಒಂದು ವಿಶೇಷತೆ ಪಡೆದಿದ್ದರು. ಹತ್ತು ಹನ್ನೆರಡು ತಾನ ಪ್ರಭೇದಗಳನ್ನು ಪಾಂಡಿತ್ಯಪೂರ್ಣವಾಗಿ ಹಾಡುತ್ತಿದ್ದರು. ತಮ್ಮ ಭಾವಪೂರ್ಣ ಗಾಯನದಿಂದ ರಸಿಕರ ಎದೆಯ ಬಾಗಿಲನ್ನು ತಟ್ಟುತ್ತಿದ್ದರು. ಇವರ ಶೈಲಿಯನ್ನು ಇತರರು ಅನುಕರಿಸುವುದು ಸಾಧ್ಯವಿರಲಿಲ್ಲ. ಇವರಿಗೆ ಗಾಯನವಲ್ಲದೆ ವೀಣೆ ಹಾಗೂ ಜಲತರಂಗ್ ವಾದ್ಯಗಳಲ್ಲೂ ಪರಿಣತಿ ಇತ್ತು.

ಇವರು ಭಾರತದಾದ್ಯಂತ ಅನೇಕ ಪ್ರತಿಷ್ಠಿತ ಸಂಗೀತ ಸಭೆಗಳಲ್ಲಿ ಕಚೇರಿ ನೀಡಿ ಗೌರವಕ್ಕೆ ಪಾತ್ರರಾಗಿದ್ದರು. ನಾಡಿನ ಪ್ರಮುಖ ಉತ್ಸವಗಳಲ್ಲೂ ಗಾಯನ ಕಚೇರಿ ನೀಡಿದರು. ಆಕಾಶವಾಣಿ ಹಾಗೂ ದೂರದರ್ಶನಗಳಲ್ಲೂ ಅನೇಕ ಕಾರ್ಯಕ್ರಮಗಳನ್ನು ನೀಡಿದರು. ಮಹಾತ್ಮಾಗಾಂಧಿಯವರ ಸಮ್ಮುಖದಲ್ಲಿ ಹಾಡಿ ಅವರ ಪ್ರಶಂಸೆ ಹಾಗೂ ಆಶೀರ್ವಾದವನ್ನು ಪಡೆದರು.

ಇವರು ವಾಗ್ಗೇಯಕಾರರು ಕೂಡ. ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತದ್ದೂ ಒಂದು. ಕರ್ನಾಟಕ ಸಂಗೀತ ಲಕ್ಷ್ಯ ಲಕ್ಷಣ ಪದ್ಧತಿ, ವೀಣೆ ಸುಬ್ಬಣ್ಣನವರ ಅಪರೂಪ ಕೃತಿಗಳು - ಇವು ಇವರ ಪ್ರಕಟಿತ ಗ್ರಂಥಗಳು.

ಇವರ ವಿದ್ವತ್ತನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಹಾಗೂ ಸರ್ಕಾರ ಇವರಿಗೆ ಗೌರವವನ್ನು ಸಲ್ಲಿಸಿವೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯ ಸರ್ಕಾರದ ಕನಕ-ಪುರಂದರ ಪ್ರಶಸ್ತಿ, ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ - ಇವು ಇವರಿಗೆ ಸಂದ

ಗೌರವಗಳು. ಇವರು ಮೈಸೂರು ಮಹಾರಾಜರಿಂದ ಗಾನವಿಶಾರದ, ಮೈಸೂರು ಪ್ರಸನ್ನ ಸೀತಾರಾಮ ಮಂದಿರದ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಗಾನಕಲಾಸಿಂಧು, ಗಾಯನ ಸಮಾಜದ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಸಂಗೀತ ಕಲಾರತ್ನ, ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಎಂಬ ಬಿರುದುಗಳನ್ನು ಪಡೆದಿದ್ದರು. ಮದರಾಸು ಮ್ಯೂಸಿಕ್ ಅಕಾಡೆಮಿ, ಬೆಂಗಳೂರಿನ ಗಾಯನ ಸಮಾಜ ಹಾಗೂ ಗಾನಕಲಾ ಪರಿಷತ್ತಿನ ತಜ್ಞರ ಸಮಿತಿಯ ಸದಸ್ಯರಾಗಿದ್ದ ಇವರು ಅನೇಕ ಪ್ರದರ್ಶನ ಭಾಷಣಗಳನ್ನೂ ನೀಡಿದ್ದರು. ಇವರು 1997 ಮಾರ್ಚ್ 16ರಂದು ನಿಧನರಾದರು. (ಎಚ್.ಆರ್.ಎಲ್.)

**ತಿಪಟೂರು :** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು; ತಿಪಟೂರು ಉಪವಿಭಾಗದ ಮತ್ತು ತಾಲ್ಲೂಕಿನ ಕೇಂದ್ರ. ಈ ತಾಲ್ಲೂಕನ್ನು ಪಶ್ಚಿಮದಲ್ಲಿ ಹಾಸನ ಜಿಲ್ಲೆ, ಉತ್ತರದಲ್ಲಿ ಚಿಕ್ಕನಾಯಕನಹಳ್ಳಿ, ಪೂರ್ವದಲ್ಲಿ ಗುಬ್ಬಿ ಮತ್ತು ತುರುವೇಕೆರೆ ತಾಲ್ಲೂಕುಗಳು ಸುತ್ತುವರಿದಿವೆ. ಈ ತಾಲ್ಲೂಕಿನ ವಿಸ್ತೀರ್ಣ 783ಚ.ಕಿಮೀ. ತಾಲ್ಲೂಕಿನಲ್ಲಿ ಕಿಬ್ಬನಹಳ್ಳಿ, ನೊಣವಿನಕೆರೆ, ತಿಪಟೂರು ಮತ್ತು ಹೊನ್ನವಳ್ಳಿ ಹೋಬಳಿಗಳು; ಒಂದು ಪಟ್ಟಣ ಮತ್ತು 216 ಗ್ರಾಮಗಳಿವೆ. ಜನಸಂಖ್ಯೆ 2,16,826.

ಮಹಿಷಾಸುರಮರ್ದಿನಿ, ಲಕ್ಷ್ಮೀನರಸಿಂಹ ದೇವಾಲಯ, ವಿಷ್ಣುಸಂತೆ

ತಿಪಟೂರು ತಾಲ್ಲೂಕಿನಲ್ಲಿ ಕೆಂಪು ಮಣ್ಣು, ದಪ್ಪ ಮರಳು ಮತ್ತು ಸಣ್ಣ ಕಲ್ಲಿನಿಂದ ಕೂಡಿದ ಭೂಮಿ ಇದೆ. ಹತ್ತಿ ಬೆಳೆಗೆ ಉಪಯುಕ್ತವಾದಂಥ ಕಪ್ಪುಮಣ್ಣಿನ ಭೂಮಿ ಮರಳು ಮಿಶ್ರಿತ ಜೇಡಿಮಣ್ಣಿನ ಭೂಮಿಯಿಂದಲೂ ಈ ಪ್ರದೇಶ ಕೂಡಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 730ಮಿಮೀ. ರಾಗಿ, ಬತ್ತ, ನವಣೆ, ಹುರುಳಿ, ಶೇಂಗ, ತೊಗರಿ ಇಲ್ಲಿಯ ಮುಖ್ಯ ಬೆಳೆಗಳು. ತಿಪಟೂರು ತಾಲ್ಲೂಕು ತೆಂಗುಬೆಳೆಗೆ ಪ್ರಸಿದ್ಧವಾದುದು.

ತಾಲ್ಲೂಕಿನಲ್ಲಿ ಕೊಬ್ಬರಿ ಎಣ್ಣೆ ತೆಗೆಯುವ, ಮರ ಕೊಯ್ಯುವ ಕಾರ್ಖಾನೆಗಳು ಇವೆ. ಬೆಂಕಿಕಡ್ಡಿ, ಮರ ಮತ್ತು ಕಬ್ಬಿಣ ಕೆಲಸ, ಸಾಬೂನು ತಯಾರಿಕೆ ಮುಂತಾದ ಕೈಗಾರಿಕೆಗಳಿವೆ. ರೇಷ್ಮೆ ಹತ್ತಿ ಉಣ್ಣೆ ನೇಯ್ಗೆ ಮತ್ತು ತೆಂಗಿನ ನಾರಿನ ಉದ್ಯಮದ ಸಹಕಾರ ಸಂಘಗಳಿವೆ.

ತಾಲ್ಲೂಕಿನಲ್ಲಿ ಉತ್ತಮ ರಸ್ತೆ ಸಂಪರ್ಕವಿದೆ. ಬೆಂಗಳೂರು - ಅರಸೀಕೆರೆ ರೈಲ್ವೆ ಮಾರ್ಗ ಈ ತಾಲ್ಲೂಕಿನಲ್ಲಿ ಹಾದುಹೋಗಿದೆ. ಇದರ ಮುಖಾಂತರ ತಾಲ್ಲೂಕಿನ ವ್ಯವಸಾಯ ಉತ್ಪನ್ನಗಳು ಮತ್ತು ತೆಂಗಿನ ಉತ್ಪಾದನೆಯೂ ಸುತ್ತಲ ಜಿಲ್ಲೆಗಳಿಗೆ ಹಾಗೂ ಇತರ ರಾಜ್ಯಗಳಿಗೆ ಸಾಗುವುವು.

ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ, ಅಂಚೆ, ತಂತಿ, ದೂರವಾಣಿ, ಸಾರ್ವಜನಿಕ ಆಸ್ಪತ್ರೆ, ಆಯುರ್ವೇದ ಔಷಧಾಲಯಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ, ಮಾಧ್ಯಮಿಕ ಪ್ರೌಢಶಾಲೆಗಳೂ ಒಂದು ಕಾಲೇಜು ಇವೆ.

ಈ ತಾಲ್ಲೂಕಿನ ಹೊನ್ನವಳ್ಳಿಯಲ್ಲಿ ಚೋಳರ ಕಾಲದ್ದೆಂದು ಹೇಳುವ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯವಿದೆ. ಇಲ್ಲಿಯ ಎಳನೀರು ಪ್ರಸಿದ್ಧ. ತಿಪಟೂರಿನಿಂದ 6ಕಿಮೀ ದೂರದಲ್ಲಿರುವ ಕೆರೆಗೋಡಿಯಲ್ಲಿ ಸುಂದರವಾದ ಶಂಕರೇಶ್ವರ ದೇವಾಲಯವಿದೆ. ದೇವಾಲಯದ ಒಳಗೆ ಬುದ್ಧ, ವಿಘ್ನೇಶ್ವರ, ನಂದಿ ವಿಗ್ರಹಗಳು ಇವೆ. ಇಲ್ಲಿ ಕೆರೆಗೋಡಿ ಸಂಸ್ಥಾನ ವೀರಶೈವ ಮಠವಿದೆ. ತಿಪಟೂರಿನ ಆಗ್ನೇಯಕ್ಕೆ 13ಕಿಮೀ ದೂರದಲ್ಲಿರುವ ನೊಣವಿನಕೆರೆ ಅನೇಕ ಪ್ರಾಚೀನ ದೇವಾಲಯಗಳಿಂದ ಪ್ರಸಿದ್ಧಿ ಪಡೆದಿದೆ. ತಿಪಟೂರಿನ ದಕ್ಷಿಣಕ್ಕೆ 6ಕಿಮೀ ದೂರದಲ್ಲಿರುವ ರಂಗಾಪುರದಲ್ಲಿ ರಂಗನಾಥ ದೇವಾಲಯವಿದೆ. ವಿಷ್ಣುಸಂತೆಯಲ್ಲಿ ಹೊಯ್ಸಳ ಶೈಲಿಯ ಲಕ್ಷ್ಮೀನರಸಿಂಹ ದೇವಾಲಯವಿದೆ. ಇದನ್ನು 1286ರಲ್ಲಿ ಹೊಯ್ಸಳ ದೊರೆ 3ನೆಯ ನರಸಿಂಹನ ಕಾಲದಲ್ಲಿ ಕಟ್ಟಿದ್ದೆಂದು ಹೇಳುವರು. ಇಲ್ಲಿ ಬಾಲಲಿಂಗೇಶ್ವರ ಮತ್ತು ಬನಶಂಕರಿ ದೇವಾಲಯಗಳೂ ಇವೆ.

ತಿಪಟೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ತುಮಕೂರು ಜಿಲ್ಲೆಯ ಎರಡನೆಯ ದೊಡ್ಡ ಪಟ್ಟಣ. ತುಮಕೂರಿನ ಪಶ್ಚಿಮಕ್ಕೆ 71ಕಿಮೀ ದೂರದಲ್ಲಿದೆ. ಜನಸಂಖ್ಯೆ 53,043. ಇದು ಬೆಂಗಳೂರು-ಪುಣೆ ರೈಲ್ವೆ ಮಾರ್ಗದ ಒಂದು ಮುಖ್ಯ ನಿಲ್ದಾಣ. ತುಮಕೂರು-ಶಿವಮೊಗ್ಗ ಹೆದ್ದಾರಿಯ ಸಂಪರ್ಕವಿದೆ. ಶ್ರೀಕೃಷ್ಣರಾಜೇಂದ್ರ ಬಡಾವಣೆ ಮತ್ತು ಗಾಂಧೀನಗರ ಇವೆರಡು ಬಡಾವಣೆಗಳು ಬೆಳೆಯುತ್ತಿರುವ ತಿಪಟೂರಿಗೆ ಸೇರಿವೆ. ಊರು ನಗರಸಭಾ ಆಡಳಿತಕ್ಕೆ ಒಳಪಟ್ಟಿದೆ. ರಕ್ಷಿತ ಕುಡಿಯುವ ನೀರು ಸರಬರಾಜು, ವಿದ್ಯುಚ್ಛಕ್ತಿ, ಅಂಚೆ, ತಂತಿ, ದೂರವಾಣಿ, ಸಾರ್ವಜನಿಕ ಆಸ್ಪತ್ರೆ ಮುಂತಾದ ಸೌಲಭ್ಯಗಳಿವೆ. ಕೊಬ್ಬರಿ ಎಣ್ಣೆಯ ಮತ್ತು ಮರಕೊಯ್ಯುವ ಕಾರ್ಖಾನೆಗಳಿವೆ. ಈ ಊರು ಪ್ರಮುಖ ವ್ಯಾಪಾರ ಸ್ಥಳ. ಅನೇಕ ವಾಣಿಜ್ಯ ಬ್ಯಾಂಕುಗಳುಂಟು. ತೆಂಗಿನ ಉತ್ಪಾದನೆಗಳ ವ್ಯಾಪಾರ ಇಲ್ಲಿ ವಿಶೇಷವಾಗಿದೆ.

ಕಲ್ಲೇಶ್ವರ, ತಿಪಟೂರಮ್ಮ, ಆಂಜನೇಯಸ್ವಾಮಿ, ಮಲ್ಲಿಕಾರ್ಜುನ, ಕಾಶೀವಿಶ್ವೇಶ್ವರ ಮತ್ತು ಕನ್ಯಕಾಪರಮೇಶ್ವರಿ ಇವು ಈ ಊರಿನ ಇತರ ಪ್ರಮುಖ ದೇವಾಲಯಗಳು. (ಪಿ.ಜಿ.;ಡಿ.ಸಿ.ಜಿ.)

**ತಿಪ್ಪಣಾರ್ಯ :** ಸು.1750. ಹನುಮದ್ವಿಲಾಸ, ಕಾಳಿಂಗಮರ್ದನ, ಕುಚೇಲೋಪಾಖ್ಯಾನ (ಸುಧಾಮ ಚರಿತ್ರೆ), ಕೃಷ್ಣಬಾಲಲೀಲೆ ಎಂಬ ಯಕ್ಷಗಾನಗಳ ಕರ್ತೃ. ಕವಿಚರಿತೆಕಾರರು ಈತನನ್ನು ತಿಪ್ಪಯಾರ್ಯ ಎಂದಿದ್ದಾರೆ. ರಂಗಾರ್ಯ ಮತ್ತು ಗಿರಿಯಮ್ಮ ಇವರ ಮಗನಾದ ಈತ ತನ್ನ ಪಿತಾಮಹನನ್ನು ಸರಸ ಕವಿ ನರಸಿಂಹಾರ್ಯ (ನರಕಂಠೀರವ) ಎಂದು ಹೇಳಿಕೊಂಡಿದ್ದಾನೆ. ಈತನ ಗುರು ಚಂದ್ರರಸಾಯನ. ಈತ ಮಾಧ್ವ ಸಂಪ್ರದಾಯದ ಉಲಚುಕಮ್ಮಿ ಬ್ರಾಹ್ಮಣನೆಂದೂ ವಿಶ್ವಾಮಿತ್ರ ಗೋತ್ರದ ಯಜುಶ್ಶಾಖಾಧ್ಯಾಯಿಯೆಂದೂ ಈತನ ಗ್ರಂಥ'ದಿಂದ ತಿಳಿದುಬರುತ್ತದೆ.

ಕವಿ ಕುಲವೃತ್ತಿಯಾಗಿದ್ದ ಶ್ಯಾನುಭೋಗಿಕೆಯನ್ನು ಮಾಡುತ್ತಿದ್ದನೆಂದೂ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ಆಪಾದನೆ ಮೇಲೆ ಕಾರಾಗೃಹ ಸೇರಿ ಅಲ್ಲಿ ಭಗವಚ್ಚಿಂತನಾಶೀಲನಾಗಿರುತ್ತಿದ್ದನೆಂದೂ ಒಂದು ರಾತ್ರಿ ಶ್ರೀಮದಾಂಜನೇಯಸ್ವಾಮಿ ಸ್ವಪ್ನದಲ್ಲಿ ಕಾಣಿಸಿಕೊಂಡು ಕುಲದೇವತೆ ಖಾದ್ರೀ ನೃಸಿಂಹಾಂಕಿತದಿಂದ ಹನುಮನ ಕಥೆಯನ್ನು ಹೇಳೆಂದು ಆಜ್ಞಾಪಿಸಿದ ಮೇರೆಗೆ ಹನುಮದ್ವಿಲಾಸವನ್ನು ರಚಿಸಿದನೆಂದೂ ತಿಳಿದುಬರುತ್ತದೆ. ಕೃಷ್ಣಬಾಲಲೀಲೆಯಲ್ಲಿ ಕನ್ನಡ, ತೆಲುಗು, ತಮಿಳು, ಉರ್ದು, ಮರಾಠಿ - ಈ ಐದೂ ಭಾಷೆಗಳ ಪದ್ಯಗಳನ್ನು ಅಳವಡಿಸಿರುವುದು ಒಂದು ವೈಶಿಷ್ಟ್ಯ.

ಈತ ತನ್ನ ಎಲ್ಲ ಗ್ರಂಥಗಳನ್ನೂ ಯಕ್ಷಗಾನಗಳೆಂದು ಕರೆದಿದ್ದಾನಾದರೂ ಇವುಗಳಲ್ಲಿ ಪಾತ್ರಗಳಾವುವೂ ಬರುವುದಿಲ್ಲ; ಕಥೆಯ ನಿರೂಪಣೆ ವಿವಿಧ ಛಂದಸ್ಸಿನ ಮಟ್ಟುಗಳಿಂದ ಮುಂದುವರಿಯುತ್ತದೆ. ಹಲವಾರು ವೃತ್ತ, ಕಂದ, ರಗಳೆಗಳು, ಕುರುಕು ಜಂಪೆ, ಸೀಸಪದ್ಯ, ದ್ವಿಪದಿ - ಇವೆಲ್ಲವನ್ನೂ ಇವನ ಕೃತಿಗಳಲ್ಲಿ ಕಾಣಬಹುದಾಗಿದೆ. *

**ತಿಪ್ಪೇರುದ್ರಸ್ವಾಮಿ, ಎಚ್. :** 1928-94. ಕನ್ನಡದ ಪ್ರಸಿದ್ಧ ವಿದ್ವಾಂಸರು, ವಿಮರ್ಶಕರು, ಕಾದಂಬರಿಕಾರರು. ಇವರು ಹುಟ್ಟಿದ್ದು ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನೂ ತೀರ್ಥಹಳ್ಳಿಯಲ್ಲಿ ಪ್ರೌಢಶಾಲೆಯ ಓದನ್ನೂ ಮುಗಿಸಿದರು. ಗುರುಗಳಾದ ಕೆ.ನರಸಿಂಹಶಾಸ್ತ್ರಿಗಳಿಂದ ಕನ್ನಡದ ಬಗೆಗಿನ ಒಲವು

ಜಾಗೃತವಾಯಿತು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಬಿ.ಎ. (ಆನರ್ಸ್, 1951) ಮತ್ತು ಎಂ.ಎ. (1952) ಪದವಿಗಳನ್ನು ಪಡೆದರು. 1952ರಲ್ಲಿ ಅದೇ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಅಧ್ಯಾಪಕರಾಗಿ ಸೇರಿ, ಅನಂತರ ಮಾನಸಗಂಗೋತ್ರಿಯ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿಯೂ (1964-73) ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿಯೂ (1973-75) ಶಿವಮೊಗ್ಗ ಸ್ನಾತಕೋತ್ತರ ಕೇಂದ್ರದಲ್ಲಿ (ಭದ್ರಾಪ್ರಾಜೆಕ್ಟ್) ಪ್ರಾಧ್ಯಾಪಕರಾಗಿಯೂ (1975-84) ದುಡಿದರು. ಅನಂತರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಸೇವೆಸಲ್ಲಿಸಿ (1984-87) ಸ್ವಇಚ್ಛೆಯಿಂದ ನಿವೃತ್ತಿ ಪಡೆದರು.

ಕಾದಂಬರಿ, ಕಥೆ, ಕವನ ಮತ್ತು ನಾಟಕ ಕ್ಷೇತ್ರಗಳಲ್ಲಿ ಇವರು ಸೃಜನಾತ್ಮಕ ಬರೆಹಗಳನ್ನು ನೀಡಿದ್ದಾರೆ. ಧರ್ಮ ಮತ್ತು ಕರ್ನಾಟಕ ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯ ವಿಮರ್ಶೆ, ಅದರಲ್ಲೂ ವಿಶೇಷವಾಗಿ ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆಯೂ ಕಾವ್ಯ ಮೀಮಾಂಸೆ ಮತ್ತು ವಿಮರ್ಶಾತತ್ತ್ವಗಳನ್ನು ಕುರಿತೂ ಬರೆದಿದ್ದಾರೆ. ಬೇಂದ್ರೆ, ಕುವೆಂಪು, ಮಾಸ್ತಿ, ಡಿ.ವಿ.ಜಿ. ಮುಂತಾದ ಸಾಹಿತಿಗಳು ಇವರ ಮೇಲೆ ಪ್ರಭಾವ ಬೀರಿದ್ದಾರೆ. ಹಲವು ವರ್ಷ ಮಾನಸಗಂಗೋತ್ರಿಯ ಗಾಂಧೀ ಭವನದ ನಿರ್ದೇಶಕರಾಗಿ ಕೆಲಸ ಮಾಡಿರುವ ಇವರು ಗಾಂಧೀವಾದಿಯಾಗಿದ್ದರು. ಇವರ ಕೃತಿಗಳನ್ನು ಗಮನಿಸಿದಾಗ ಎದ್ದುಕಾಣುವ ಅಂಶವೆಂದರೆ ಶರಣರ ತತ್ತ್ವ ಮತ್ತು ಜೀವನ ಹೇಗೆ ಇವರನ್ನು ವಿಶೇಷವಾಗಿ ಆಕರ್ಷಿಸಿದೆ ಎಂಬುದು. ಕರ್ನಾಟಕ ಇತಿಹಾಸ ಇವರಿಗೆ ಬಹು ಪ್ರಿಯವಾದ ವಿಷಯ.

ಇವರ ಮಹಾಪ್ರಬಂಧವಾದ ಶರಣರ ಅನುಭಾವ ಸಾಹಿತ್ಯ ಎಂಬುದು ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್ ಪಡೆದ ಕೃತಿ (1963). ಶರಣರ ಅನುಭಾವ ಸಾಹಿತ್ಯದ ಸಮಗ್ರ ಸ್ವರೂಪವನ್ನು ವಿಶೇಷವಾಗಿ ಶರಣರ ವಚನಗಳನ್ನು ಮುಂದಿಟ್ಟುಕೊಂಡು ಇಲ್ಲಿ ಪರಿಶೀಲಿಸಲಾಗಿದೆ. ವೀರಶೈವ ಸಿದ್ಧಾಂತದ ವಿಕಾಸ, ಶರಣರ ತತ್ತ್ವ ಮತ್ತು ಸಾಧನೆ, ಅವರ ವಿಚಾರ ಮತ್ತು ಅನುಭಾವ ಮಾರ್ಗ, ವಚನಗಳ ಸಾಹಿತ್ಯ ಸ್ವರೂಪ ಮುಂತಾದ ಅಂಶಗಳನ್ನು ಇಲ್ಲಿ ವಿವೇಚಿಸಲಾಗಿದೆ. ವಚನಗಳಲ್ಲಿ ವೀರಶೈವಧರ್ಮ ಎಂಬ ಗ್ರಂಥದಲ್ಲಿ (1969) ವೀರಶೈವಧರ್ಮದ ಹಿನ್ನೆಲೆಯಲ್ಲಿ ರಚಿತವಾದ ವಚನಗಳಲ್ಲಿ ಅಭಿವ್ಯಕ್ತವಾಗಿರುವ ಮೂಲಭೂತ ತತ್ತ್ವಗಳನ್ನು ವಿವೇಚಿಸಲಾಗಿದೆ. ಕರ್ನಾಟಕ ಸಂಸ್ಕೃತಿ ಪರಂಪರೆಯನ್ನು ಇಡಿಯಾಗಿ ನೋಡುವ ಪ್ರಯತ್ನವನ್ನು 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಎಂಬ ಗ್ರಂಥದಲ್ಲಿ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ರಾಜಕೀಯ, ಜನಪದ, ಶಾಸನ, ಸಾಹಿತ್ಯ, ವಾಸ್ತು, ಶಿಲ್ಪ, ಸಂಗೀತ, ನೃತ್ಯ, ಚಿತ್ರಕಲೆಗಳನ್ನು ಕುರಿತಿರುವ ಈ ಗ್ರಂಥದ ಹರಹು ಅಚ್ಚರಿಗೊಳಿಸುವಂಥದು. ಇಲ್ಲಿನ ಒಂದೊಂದು ಅಧ್ಯಾಯದ ವಿಷಯವೂ ಒಂದೊಂದು ವ್ಯಾಪಕ ಕ್ಷೇತ್ರ. ಇಲ್ಲಿ ಕರ್ನಾಟಕ ಸಂಸ್ಕೃತಿ ಪರಂಪರೆಯನ್ನು ಸಮೀಕ್ಷಿಸುವ ನಿಟ್ಟಿನಿಂದ ಈ ಎಲ್ಲ ವಿಷಯಗಳ ಒಟ್ಟಂದವನ್ನು ಸೆರೆಹಿಡಿಯಲು ಯತ್ನಿಸಲಾಗಿದೆ.

1963ರಲ್ಲಿ ಪ್ರಕಟವಾದ ಶೂನ್ಯತತ್ತ್ವವಿಕಾಸ ಮತ್ತು ಶೂನ್ಯಸಂಪಾದನೆ, 1973ರಲ್ಲಿ ಪ್ರಕಟವಾದ ಶೂನ್ಯಸಂಪಾದನೆ: ವಿವರಣಾತ್ಮಕ ಪರಿಚಯ - ಈ ಗ್ರಂಥಗಳಲ್ಲಿ ಶೂನ್ಯ ಸಂಪಾದನೆಗಳು ಬೆಳೆದು ಬಂದ ಬಗೆ, ಅಲ್ಲಿಯ ಆಧ್ಯಾತ್ಮಿಕ ನಿಲುವು, ಅಲ್ಲಿಯ ವ್ಯಕ್ತಿಗಳು ಮತ್ತು ಪ್ರಸಂಗಗಳು, ಶೂನ್ಯಸಂಪಾದನೆಯ ಸಾಹಿತ್ಯಸ್ವರೂಪ ಮತ್ತು ಸಾಧನೆ ಈ ಮುಂತಾದ ಅಂಶಗಳನ್ನು ಚರ್ಚಿಸಲಾಗಿದೆ. ವಿಮರ್ಶೆಯ ಉದ್ದೇಶ, ವ್ಯಾಪ್ತಿ, ಸ್ವರೂಪ, ಆನ್ವಯಿಕ ವಿಮರ್ಶೆ - ಈ ಸಂಗತಿಗಳನ್ನು ಕುರಿತ ಗ್ರಂಥ ಸಾಹಿತ್ಯ ವಿಮರ್ಶೆಯ ಮೂಲತತ್ತ್ವಗಳು (1970). ಕುವೆಂಪು ಅವರ ನಾಟಕಗಳನ್ನು ಕುರಿತ ಅಧ್ಯಯನ - ಕುವೆಂಪು ಅವರ ನಾಟಕಗಳು (1969). ಈ ಗುಂಪಿಗೆ ಸೇರುವ ಇವರ ಇತರ ಗ್ರಂಥಗಳು - ಕನ್ನಡದಲ್ಲಿ ಅನುಭಾವ ಸಾಹಿತ್ಯ (1960), ಚಾಮರಸ, ಭೀಮಕವಿ (1970).

ಸಂಶೋಧನೆ ಮತ್ತು ವಿಮರ್ಶೆಗಳನ್ನು ಬಿಟ್ಟರೆ ತಿಪ್ಪೇರುದ್ರಸ್ವಾಮಿಯವರ ಇನ್ನೊಂದು ಪ್ರಧಾನ ಕೃಷಿಕ್ಷೇತ್ರ ಕಾದಂಬರಿ. ಕರ್ನಾಟಕದ ಐತಿಹಾಸಿಕ ಸಂಗತಿಗಳು ಇವರ ಕಾದಂಬರಿಯ ವಸ್ತು. ಶರಣರ ಮತ್ತು ಇತಿಹಾಸ ವ್ಯಕ್ತಿಗಳ ಉನ್ನತ ವ್ಯಕ್ತಿತ್ವವನ್ನು ಕಾದಂಬರಿ ರೂಪದಲ್ಲಿ ಸೆರೆಹಿಡಿಯುವುದು ಇಲ್ಲಿ ಇವರ ಉದ್ದೇಶ. ಅಲ್ಲಮಪ್ರಭುವನ್ನು ಕುರಿತ ಕಾದಂಬರಿಯಾದ ಪರಿಪೂರ್ಣದೆಡೆಗೆ ಎಂಬುದು 1959ರಲ್ಲಿ ರಾಜ್ಯಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆಯಿತು. ಅಕ್ಕಮಹಾದೇವಿಯನ್ನು ಕುರಿತ ಕದಳಿಕರ್ಪೂರ (1971), ಇಮ್ಮಡಿ ಪುಲಿಕೇಶಿಯನ್ನು ಕುರಿತ ಸತ್ಯಾಶ್ರಯ ಸಾಮ್ರಾಜ್ಯ (1967), ವಿಜಯನಗರದ ಪ್ರೌಢದೇವರಾಯನಿಗೆ ಸಂಬಂಧಿಸಿದ ವಿಜಯಕಲ್ಯಾಣ (1969), ಹರಿಹರ ರಾಘವಾಂಕರನ್ನು ಕುರಿತ ವಚನ ವಿರೂಪಾಕ್ಷ (1972), ನೆರಳಿನಾಚೆಯ ಬೆಳಗು (1980) - ಇವು ಇವರ ಇತರ ಕಾದಂಬರಿಗಳು. ನಿಜಗುಣ ಶಿವಯೋಗಿಯ ವಿಷಯವಾಗಿ ಪರಂಪರೆಯಿಂದ ಬೆಳೆದು ಬಂದ ಕಥೆಯ ಸೂಕ್ಷ್ಮ ಎಳೆಯನ್ನಾಧರಿಸಿ, ಅವರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಅವರ ಜೀವನವನ್ನು ಕಟ್ಟಲು ಯತ್ನಿಸಿರುವುದನ್ನು ಜ್ಯೋತಿ ಬೆಳಗುತಿದೆ (1971) ಎಂಬ ಕಾದಂಬರಿಯಲ್ಲಿ ಕಾಣಬಹುದು. ಬಸವಣ್ಣನವರ ವಿವಿಧ ಮುಖಗಳನ್ನು ಕಾದಂಬರಿಯ ರೂಪದಲ್ಲಿ ಅಡಕಗೊಳಿಸುವ ಯತ್ನದ ಫಲವಾಗಿ 1072 ಪುಟಗಳ ಮೂರು ಸಂಪುಟಗಳ ಕರ್ತಾರನ ಕಮ್ಮಟ (1972) ಬೆಳಕು ಕಂಡಿದೆ.

ಘಟ್ಟಿವಾಳಯ್ಯ, ಮೋಳಿಗೆ ಮಾರಯ್ಯ ಮತ್ತು ಸಕಲೇಶ ಮಾದರಸರನ್ನು ಕುರಿತ ನಾಟಕಗಳೇ ಶರಣರ ಮೂರು ನಾಟಕಗಳು (1973). ವಿಧಿಪಂಜರ (1960) ಮತ್ತು ನಿಜಗುಣ ಶಿವಯೋಗಿ ಇವರ ಇತರ ನಾಟಕಗಳು. ತಪೋರಂಗ (1961) ಇವರ ಒಂದು ಕವನಸಂಕಲನ: ಸಾಹಿತ್ಯ ಚಿತ್ರಗಳು (1961) ಕಥಾ ಸಂಕಲನ. ಶಿಸ್ತುಗಾರ ಶಿವಪ್ಪನಾಯಕ (1966) ಎಂಬ ಕೃತಿ ಶಿವಪ್ಪನಾಯಕನ ಜೀವನ ಚರಿತ್ರೆ. ಎ.ಆರ್.ಕೃ.: ಜೀವನ ಮತ್ತು ಸಾಧನೆ (ಹಾ.ಮಾ.ನಾಯಕರೊಂದಿಗೆ), ಪ್ರಸಾದ (1964), ಶ್ರೀ ಶರಣಚರಿತಮಾನಸ (1956), ಅಮುಗಿದೇವಯ್ಯಗಳ ಸಾಂಗತ್ಯ (1965), ಸಿದ್ಧರಾಮಚರಿತೆ (1975)- ಇವು ಇವರ ಸಂಪಾದಿತ ಕೃತಿಗಳು. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ತೌಲನಿಕ ಕಾವ್ಯಮಿಮಾಂಸೆ, ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ (1979), ಆಂಡಯ್ಯ, ಬಸವಕಲ್ಯಾಣ, ಚೆನ್ನಬಸವಣ್ಣ ಮೊದಲಾದ ಮಕ್ಕಳ ಸಾಹಿತ್ಯವನ್ನು ರಚಿಸಿದ್ದಾರೆ.

ಇವರ ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಗ್ರಂಥಕ್ಕೆ 1969ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಕರ್ನಾಟಕ ರಾಜ್ಯ ಸಾಹಿತ್ಯ

ಅಕಾಡೆಮಿ ಪ್ರಶಸ್ತಿ ಲಭ್ಯವಾದದ್ದು 1985ರಲ್ಲಿ. ಸದಾ ಕಾಯಕನಿಷ್ಠರಾಗಿದ್ದ ಇವರು ಕರ್ನಾಟಕ ವಚನಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದಾರೆ. ಇವರು 1994ರಲ್ಲಿ ನಿಧನಹೊಂದಿದರು. *

**ತಿಪ್ಪೇಸ್ವಾಮಿ, ಪಿ.ಆರ್. :** 1922-2000. ಖ್ಯಾತ ಚಿತ್ರಕಲಾವಿದ, ಲೇಖಕ, ಜಾನಪದ ತಜ್ಞ. ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಹರ್ತಿಕೋಟೆಯಲ್ಲಿ 1922 ಆಗಸ್ಟ್ 12ರಂದು ಜನಿಸಿದರು. ಇವರದು ಹೆಸರಾಂತ ಜಮೀನ್ದಾರರ ಮನೆತನ. ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಆಕರ್ಷಿತರಾದವರು. ಇವರು ಸ್ವತಂತ್ರ ಪ್ರವೃತ್ತಿಯ, ಸಾಹಸ ಮನೋಭಾವದ, ಸೇವಾ ದೃಷ್ಟಿಯ ಕಲಾವಿದ. ಕಲಾ ವಿಮರ್ಶಕರಾಗಿ, ಜಾನಪದ ಕ್ಷೇತ್ರ ಕಾರ್ಯಕರ್ತರಾಗಿ, ಅಂಕಣಕಾರರಾಗಿ ಹೆಸರಾಗಿದ್ದರು. ಕಲೆಯ ಸ್ಥಾನಮಾನದ ಬಗ್ಗೆ, ಕಲಾವಿದರ ಹಕ್ಕು ಬಾಧ್ಯತೆಯ ಬಗ್ಗೆ ಹೋರಾಡುವ ಮನೋಭಾವ ಇವರದಾಗಿತ್ತು.



ಮೈಸೂರಿನ ಚಿತ್ರಕಲೆಗೆ ತಮ್ಮ ನಿಸರ್ಗ ಚಿತ್ರಗಳ ಮೂಲಕ ಇವರು ವೈವಿಧ್ಯವನ್ನೂ ಶೋಭೆಯನ್ನೂ ತಂದುಕೊಟ್ಟರು. ಪ್ರತಿಭೆ, ಅನುಭವ, ಕಲ್ಪನಾಶಕ್ತಿಗಳ ಮೂಲಕ ವರ್ಣಚಿತ್ರಕಲೆಯಲ್ಲಿ ಒಂದು ಮೋಡಿಯನ್ನು ಸಾಧಿಸಿದ್ದರು. ತಮ್ಮ ಹಿಂದಿನವರ ಕೃತಿಗಳನ್ನೆಲ್ಲಾ ಅಭ್ಯಾಸ ಮಾಡಿದ್ದರೂ ಇವರ ಮೂಲಸ್ಫೂರ್ತಿ ನಿಸರ್ಗವೇ ಆಗಿತ್ತು. ನಿಸರ್ಗ ಚಿತ್ರಕಲೆಯಲ್ಲಿ, ಅದರಲ್ಲೂ ಕಷ್ಟಕರವಾದ ಜಲವರ್ಣ ಚಿತ್ರಕಲೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ನಿಲ್ಲುವ ಕಲಾವಿದರಾಗಿದ್ದರು. ನಿಸರ್ಗ ಚಿತ್ರಕಾರರಾಗಿ ಅಪ್ರತಿಮ ಸಾಧನೆ ತೋರಿದ್ದ ಇವರ ತ್ರಿವರ್ಣ ಚಿತ್ರಗಳು ಆಗಿನ ಪ್ರಬುದ್ಧ ಕರ್ಣಾಟಕ, ಸುಧಾ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರ ರೇಖಾ ಚಿತ್ರಗಳು ಅನೇಕ ಸಾಹಿತ್ಯ ಕೃತಿಗಳಲ್ಲಿ ಪ್ರಕಟಗೊಂಡಿವೆ. ವ್ಯಂಗ್ಯಚಿತ್ರಗಳು, ಕೊರವಂಜಿ, ವಿನೋದಗಳಲ್ಲಿ ಬೆಳಕು ಕಂಡಿವೆ.

ಮೂಲೆಗುಂಪಾಗಿದ್ದ ಕರ್ನಾಟಕದ ಶಿಲ್ಪಿಗಳನ್ನೂ ಕಲಾವಿದರನ್ನೂ ಸಂಘಟಿಸಿದ್ದು ಇವರ ಬಹು ಮುಖ್ಯ ಸಾಧನೆಗಳಲ್ಲಿ ಒಂದು. ಅಜ್ಞಾತ ಕಲಾವಿದರನ್ನು ಹುಡುಕಿ ಅವರ ಕೃತಿಗಳ ಬಗ್ಗೆ, ಜೀವನದ ಬಗ್ಗೆ ನಾಡಿನ ಪತ್ರಿಕೆಗಳಲ್ಲಿ ಸತತವಾಗಿ ಬರೆಯುತ್ತ ನಾಡಿನ ಕಲಾಪ್ರಜ್ಞೆಯನ್ನು ಜಾಗೃತಗೊಳಿಸಿದರು. ಇವರು ಕನ್ನಡ ನಾಡಿನ ಬಹುತೇಕ ಎಲ್ಲ ಕಲಾವಿದರನ್ನೂ ಕುರಿತು ಬರೆದಿದ್ದಾರೆ. ಅವರ ಕಲಾಕೃತಿಗಳನ್ನು ವಿಮರ್ಶಿಸಿದ್ದಾರೆ. ಕಲಾವಿದರಿಗೆ ದೊರೆಯಬೇಕಾದ ಗೌರವ ಪ್ರಶಸ್ತಿ ಪುರಸ್ಕಾರ ಮಾಸಾಶನಗಳಿಗಾಗಿ ಹೋರಾಟ ನಡೆಸಿದ್ದಾರೆ.

ಚಿತ್ರಕಲೆಗೆ ಸಂಬಂಧಿಸಿದಂತೆ ಇವರು ಅನೇಕ ಲೇಖನಗಳನ್ನೂ ಕೃತಿಗಳನ್ನೂ ರಚಿಸಿದ್ದಾರೆ. ಜಗತ್ತಿನ ಪ್ರತಿಭಾವಂತ ಕಲಾವಿದರನ್ನು ಕುರಿತೂ ಬರೆದಿದ್ದಾರೆ. ಭಾರತೀಯ ಚಿತ್ರಕಲೆ ಇವರ ಮಹತ್ವದ ಕೃತಿ. ಹೋರಾಟಗಾರ ಕೆಂಚಪ್ಪ, ರಸಯಾತ್ರೆ, ಕಲಾವಿದ ಕಂಡ ಫ್ರಾನ್ಸ್ ಇತರ ಮುಖ್ಯ ಕೃತಿಗಳು. ಪರುತಿ ಕಾವ್ಯನಾಮದಿಂದ ಪುಸ್ತಕ ವಿಮರ್ಶಕರಾಗಿಯೂ ಇವರು ಹೆಸರು ಗಳಿಸಿದ್ದರು.

ಇವರ ಬದುಕಿನ ಅತ್ಯಂತ ಸಾರ್ಥಕ ಸಂದರ್ಭ ಎಂದರೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯಕ್ಕಾಗಿ ಕ್ಯೂರೇಟರ್ ಆಗಿ ಅಹರ್ನಿಶಿ, ದುಡಿದದ್ದು. ಕರ್ನಾಟಕದಾದ್ಯಂತ ಸಂಚರಿಸಿ ಅಪೂರ್ವ ಜನಪದ ವಸ್ತುಗಳನ್ನು ಬಹುಪಾಲು ಉಚಿತವಾಗಿ ಸಂಗ್ರಹಿಸಿ ತಂದು ವಸ್ತುಸಂಗ್ರಹಾಲಯವನ್ನು ಕಟ್ಟಿ ಬೆಳೆಸಿದರು.

ಜನಪದ ಸಾಹಿತ್ಯ ಕ್ಷೇತ್ರಕ್ಕೂ ತಿಪ್ಪೇಸ್ವಾಮಿಯವರ ಸೇವೆ ಸಂದಿದೆ. ಕರಾಕೃ ಅವರೊಂದನೆ ಸಾಹಿತ್ಯ ಸಂಗ್ರಹ ಯಾತ್ರೆ ಕೈಗೊಂಡು ಸಾಹಿತ್ಯ ಹಾಗೂ ಅಪೂರ್ವ ಜನಪದ ವಸ್ತುಗಳನ್ನು ಸಂಗ್ರಹಿಸಿರುವುದು ಇಲ್ಲಿ ಉಲ್ಲೇಖಾರ್ಹ. ಕರ್ನಾಟಕ ಜಾನಪದ ಪರಿಷತ್ತಿನ ಸಕ್ರಿಯ ಸದಸ್ಯರಾಗಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದರು.

ಇವರ ಪ್ರತಿಭೆಗೆ ಪ್ರಶಸ್ತಿ ಪುರಸ್ಕಾರಗಳೂ ಸಂದಿವೆ. ಅವುಗಳಲ್ಲಿ ಮುಖ್ಯವಾದುವು: ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1974), ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1981). ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದರು (1991-95). ಚಿತ್ರಕಲೆಗೆ ಮಹತ್ತರ ಸೇವೆ ಸಲ್ಲಿಸಿದ ಇವರಿಗೆ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಲಭಿಸಿದೆ (1997). ಜನಪದ ಕಲೆ, ಚಿತ್ರಕಲೆ, ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಇವರು 7 ಏಪ್ರಿಲ್ 2000ರಂದು ಮೈಸೂರಿನಲ್ಲಿ ನಿಧನಹೊಂದಿದರು. (ಎ.ಎಚ್.)

**ತಿಮ್ಮ :** ಸು.1600. ಕನ್ನಡ ಆಲಂಕಾರಿಕ, ನವರಸಾಲಂಕಾರದ ಕರ್ತೃ. ಕಾವ್ಯಮೀಮಾಂಸೆಯಲ್ಲಿ ಅಲಂಕಾರ, ರೀತಿ, ಧ್ವನಿ - ಇವು ಪ್ರಸ್ಥಾನತ್ರಯ ಎಂದು ಪ್ರಸಿದ್ಧವಾಗಿವೆ. ರಸವಿಚಾರ ಭರತನ ನಾಟ್ಯಶಾಸ್ತ್ರದಲ್ಲಿ ಮೊಟ್ಟಮೊದಲು ಪ್ರತಿಪಾದಿತವಾಗಿದ್ದು, ಆನಂದವರ್ಧನನಿಂದ (9ನೆಯ ಶತಮಾನ) ಈಚೆಗೆ ಪ್ರಾಧಾನ್ಯ ಪಡೆಯಿತು. ಈ ಕಾರಣದಿಂದ ಸಂಸ್ಕೃತ ಲಾಕ್ಷಣಿಕರಾದ ಭಾಮಹ, ದಂಡಿ, ವಾಮನ, ರುದ್ರಟ ಇವರನ್ನು ಅನುಸರಿಸಿ ಬರೆದಿರುವ ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ, ಕಾವ್ಯಾವಲೋಕನ - ಈ ಕನ್ನಡ ಅಲಂಕಾರಶಾಸ್ತ್ರ ಗ್ರಂಥಗಳು ರಸವಿಚಾರವನ್ನು ಪ್ರಾಸಂಗಿಕವಾಗಿ ಪ್ರಸ್ತಾವಿಸಿವೆಯೇ ಹೊರತು ಅದನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗೋಜಿಗೆ ಹೋಗಿಲ್ಲ. ಕವಿಕಾಮನ ಶೃಂಗಾರರತ್ನಾಕರ (ಸು.1200) ರಸವಿಚಾರವನ್ನು ಪ್ರತಿಪಾದಿಸುವ ಮೊದಲ ಕನ್ನಡ ಲಕ್ಷಣ ಗ್ರಂಥ; ಇದರಲ್ಲಿ ಶೃಂಗಾರರಸಕ್ಕೆ ಪ್ರಾಧಾನ್ಯ. ಎರಡನೆಯದು ಸಾಳ್ವನ (ಸು.1550) ರಸರತ್ನಾಕರ. ಮೂರನೆಯದೇ ತಿಮ್ಮನ ನವರಸಾಲಂಕಾರ. ಇದಕ್ಕೆ ಅಲಂಕಾರಸಾರಸಂಗ್ರಹ ಎಂಬ ಹೆಸರೂ ಇರುವಂತಿದೆ.

ಕವಿಯ ವಿಚಾರವಾಗಿ ಹೆಚ್ಚು ಸಂಗತಿಗಳು ತಿಳಿದುಬಂದಿಲ್ಲ. ಆಂತರಿಕ ಪ್ರಮಾಣಗಳಿಂದ ಹೇಳುವುದಾದರೆ ಈತ ಬ್ರಾಹ್ಮಣ ಕವಿ; ರಾಯಣನ ಮಗ; ತಿಮ್ಮಣಾರ್ಯ, ತಿಮ್ಮಣ್ಣ ಎಂದು ಹೆಸರು; ಕವಿಕುಲಚಕ್ರವರ್ತಿ, ಕವಿಭಾಳಲೋಚನ, ರಸಿಕಬ್ರಹ್ಮ, ಉಭಯ ಕವಿಶರಭಭೇರುಂಡ ಬಿರುದುಗಳು. ಸಾಳ್ವನ ರತ್ನಾಕರದ ಹಲಕೆಲವು ಸೂತ್ರಗಳೂ ವಾಕ್ಯಗಳೂ ಇವನ ಕೃತಿಯಲ್ಲಿ ಕಂಡುಬರುವುದರಿಂದ ಈತ ಅವನಿಗಿಂತ ಈಚಿನವನು ಎಂಬುದು ಸ್ಪಷ್ಟ.

ನವರಸಾಲಂಕಾರ ಸಾಳ್ವನ ರಸರತ್ನಾಕರದಂತೆ ಗದ್ಯಪದ್ಯಗಳಿಂದ ಕೂಡಿದೆ. ಆದರೂ ಇದು ಕಾವ್ಯವಲ್ಲವಾದ್ದರಿಂದ ಚಂಪೂ ಎಂಬ ಹೆಸರು ಇದಕ್ಕೆ ಸಲ್ಲುವುದಿಲ್ಲ. ತನಗೆ ಹಿಂದಿನವರಾದ ಶೃಂಗಾರರತ್ನಾಕರದ ಕವಿಕಾಮ, ಕಾವ್ಯಾವಲೋಕನದ ಎರಡನೆಯ ನಾಗವರ್ಮ - ಈ ಕನ್ನಡ ಆಲಂಕಾರಿಕರನ್ನೂ ಹೇಮಚಂದ್ರ, ಅಮೃತಾನಂದ, ಸಿಂಹಭೂಪಾಲ ಎಂಬ ಸಂಸ್ಕೃತ ಆಲಂಕಾರಿಕರನ್ನೂ ತಾನು ಅನುಸರಿಸಿರುವುದಾಗಿ ಹೇಳಿಕೊಂಡಿದ್ದಾನೆ. ಒಟ್ಟಿನ ಮೇಲೆ, ರಸಪ್ರಕ್ರಿಯೆಯ ವಿಚಾರದಲ್ಲಿ ಈತನ ಕೃತಿ ಪೂರ್ವ ಅಲಂಕಾರ ಗ್ರಂಥಗಳ ಸಾರಸಂಗ್ರಹವೇ ಸರಿ; ಇದರಲ್ಲಿ ಸ್ವಂತರಚನೆಯ ಪ್ರಮಾಣ ಬಹು ಕಡಿಮೆ. ಪಂಪ, ಪೊನ್ನ, ನಾಗಚಂದ್ರ, ನೇಮಿಚಂದ್ರ ಮುಂತಾದ ಪೂರ್ವಕವಿಗಳ ಪದ್ಯಗಳನ್ನು ಲಕ್ಷ್ಯಗಳಾಗಿ ಉದಾಹರಿಸಿದ್ದಾನೆ. ಇದೊಂದು ವಿಶೇಷ. ವಿಭಾವಾನುಭಾವ ಸಂಚಾರಿ ಸಾತ್ವಿಕಗಳಿಂ ಉತ್ಸಾಹಸ್ಥಾಯಿ ಪುಷ್ಟಮಾಗೆ ವೀರರಸಂ ಎಂಬ ವಾಕ್ಯವನ್ನು ನೋಡಿದರೆ ರಸನಿಷ್ಪತ್ತಿ ವಿಚಾರದಲ್ಲಿ ಭರತನ ಸೂತ್ರವನ್ನೇ ಈತ ಅನುಸರಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಎತ್ತ ನೋಡಿದರೂ ವೃತ್ತ ಕಂದಗಳೇ

ತುಂಬಿಕೊಂಡಿರುವಾಗ ಇವುಗಳ ನಡುವೆ ಎರಡು ಷಟ್ಪದಿಗಳೂ ಒಂದು ತ್ರಿಪದಿಯೂ ಕಾಣಿಸಿಕೊಳ್ಳುವುದು ಗಮನಾರ್ಹವಾಗಿದೆ ಎಂದು ಹೇಳಿ, ಶಕುಂತಲೆ ಗಿಡಬಳ್ಳಿಗಳಿಗೆ ನೀರೆರೆಯುತ್ತಿರುವಾಗ ದುಷ್ಯಂತ ಮರೆಯಿಂದ ಅವಳನ್ನು ನೋಡಿದ ಸನ್ನಿವೇಶವನ್ನು ಚಿತ್ರಿಸಿರುವ ಒಂದು ವಾರ್ಧಕ ಷಟ್ಪದಿಯ ಪದ್ಯವನ್ನು ತೀ.ನಂ.ಶ್ರೀಕಂಠಯ್ಯನವರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಉದಾಹರಿಸಿದ್ದಾರೆ. ಕಾಳಿದಾಸನ ಶಾಕುಂತಲ ನಾಟಕವನ್ನು ಅವಲಂಬಿಸಿ ಯಾರೋ ಬರೆದಿದ್ದ ಷಟ್ಪದಿಕಾವ್ಯದಿಂದ ತಿಮ್ಮ ಈ ವರ್ಣನೆಯ ಪದ್ಯವನ್ನು ಆರಿಸಿಕೊಂಡಿರಬೇಕು ಎಂದು ಅವರು ಊಹಿಸಿದ್ದಾರೆ. ವಿರಾಜತೇ ರಾಯಣ ತಿಮ್ಮಣಾರ್ಯೋ ಭಾಷಾದ್ವಯೀ ನಿರ್ಮಿತ ಕಾವ್ಯಶೇಷಃ ಎಂಬ ಕವಿಯ ಹೇಳಿಕೆಯನ್ನೂ ಮುಖ್ಯವಾಗಿ ಉಭಯಕವಿಶರಭಭೇರುಂಡ ಎಂಬ ಬಿರುದು ಮತ್ತು ಇತರ ಬಿರುದುಗಳನ್ನೂ ಗಮನಿಸಿದರೆ ಈತ ಕನ್ನಡ ಸಂಸ್ಕೃತಗಳೆರಡರಲ್ಲೂ ಕಾವ್ಯರಚನೆ ಮಾಡಿದ್ದನೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈತನ ಯಾವ ಕಾವ್ಯವೂ ಸಿಕ್ಕಿಲ್ಲ. ಗ್ರಂಥದಲ್ಲಿ ಉದ್ಧೃತವಾಗಿರುವ ಶಕುಂತಲಾದರ್ಶನ ಸನ್ನಿವೇಶವನ್ನು ವರ್ಣಿಸುವ ಪದ್ಯವನ್ನು ತಿಮ್ಮ ತನ್ನ ಸ್ವಂತ ಕಾವ್ಯದಿಂದಲೇ ತೆಗೆದುಕೊಂಡಿರಬಹುದು ಎಂದು ಊಹಿಸುವುದಕ್ಕೂ ಅವಕಾಶವಿದೆ. ತ್ರಿಪದಿಯನ್ನು ಮಾತ್ರ ಜನ್ನನ ಅನಂತನಾಥ' ಪುರಾಣದಿಂದ ತೆಗೆದು ಕೊಂಡಿದ್ದಾನೆ. *

**ತಿಮ್ಮಣ್ಣಕವಿ :** ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿ ಕೃತಿ ರಚನೆ ಮಾಡಿದ ಕವಿಗಳಲ್ಲಿ ಮುಖ್ಯನಾದವ. ಅರ್ಧದಲ್ಲಿಯೇ ನಿಂತುಹೋಗಿದ್ದ ಕನ್ನಡ ಭಾರತವನ್ನು ಪೂರ್ಣ ಮಾಡಿದ ಯಶಸ್ಸು ಇವನದು. ಈತ ವಿಜಯನಗರದ ಕೃಷ್ಣದೇವರಾಯನ (1509-29) ಆಸ್ಥಾನ ಕವಿಯಾಗಿದ್ದ. ಕರ್ನಾಟಕವಿಕುಲಸಾರ್ವಭೌಮ ಎಂಬುದು ಈತನ ಬಿರುದು. ಇವನ ತಂದೆ ಭಾರದ್ವಾಜಗೋತ್ರದ ಭಾನುಭಟ್ಟನೆಂಬ ಕವಿ. ಆದರೆ ಈ ಭಾನುಭಟ್ಟ ಬರೆದ ಕಾವ್ಯಗಳಾವುವೂ ಲಭಿಸಿಲ್ಲ.

ಕುಮಾರವ್ಯಾಸ ಬರೆಯದೆ ಬಿಟ್ಟ ಭಾರತ ಭಾಗವನ್ನು 'ನೀ ಸಕಲ ಜಗ ಮೆಚ್ಚುವಂತೆ ವಿಲಾಸದಲಿ ಪೇಳು' ಎಂದು ಕೃಷ್ಣದೇವರಾಯ ಅಪ್ಪಣೆ ಕೊಡಲು ರಾಜಾಜ್ಞೆಯನ್ನು ಶಿರಸಾವಹಿಸಿ ತಿಮ್ಮಣ್ಣ ತನ್ನ ಅಷ್ಟಪರ್ವಭಾರತವನ್ನು ಭಾಮಿನೀಷಟ್ಪದಿಯಲ್ಲಿ ರಚಿಸಿದ. ರಾಜಪ್ರೇರಣೆಯಿಂದಲೇ ಕೈಕೊಂಡ ಕೃತಿಯಾದ್ದರಿಂದ ಇದನ್ನು ದೊರೆಗೇ ಅಂಕಿತ ಮಾಡಿ ಶ್ರೀಕೃಷ್ಣರಾಯಭಾರತಕಥಾಮಂಜರಿ ಎಂಬ ಹೆಸರು ಕೊಟ್ಟಿದ್ದಾನೆ. ಇದರಲ್ಲಿ 40 ಸಂಧಿಗಳೂ 3736 ಪದ್ಯಗಳೂ ಇವೆ. ಕವಿ ತಾನು ಪದವಾಕ್ಯಪ್ರಮಾಣಜ್ಞನೆಂದು ಹೇಳಿಕೊಂಡಿದ್ದಾನೆ. ಈ ಭಾರತ ಭಾಗವನ್ನಲ್ಲದೆ ಈತ ಇನ್ನಾವ ಕೃತಿಯನ್ನಾದರೂ ರಚಿಸಿರುವನೋ ಇಲ್ಲವೋ ತಿಳಿಯದು.

ತಿಮ್ಮಣ್ಣನಿಗೆ ಕುಮಾರವ್ಯಾಸಯೋಗೀಂದ್ರನಿಗೆ ಲಭಿಸಿದ ಪ್ರಾಸಾದಿಕವಾಣಿ ಇಲ್ಲ. ಅವನ ಪ್ರತಿಭಾತಿಶಯವೂ ಕಾಣುವುದಿಲ್ಲ. ಸಾಲದುದಕ್ಕೆ ಕವಿ ಮೂಲ ಭಾರತವನ್ನು ಓದಿ ತನಗೆ ಸರಿತೋರಿದಂತೆ ಸಂಗ್ರಹಿಸಿ ಸ್ವತಂತ್ರವಾಗಿ ಅನುವಾದ ಮಾಡಿದ್ದರೆ ಕಾವ್ಯ ಇನ್ನೂ ಸ್ವಲ್ಪ ಕಳೆಕಟ್ಟಬಹುದಾಗಿತ್ತು. ಆದರೆ ತಿಮ್ಮಣ್ಣ ಹಾಗೆ ಮಾಡಿಲ್ಲ. ಆ ವೇಳೆಗೆ ಆಂಧ್ರದಲ್ಲಿ ಸುಪ್ರಸಿದ್ಧವಾಗಿದ್ದ ತಿಕ್ಕನಸೋಮಯಾಜಿಯ ಆಂಧ್ರಭಾರತವನ್ನು ಮಾದರಿಯಾಗಿಟ್ಟುಕೊಂಡು ಆತನ ಮಾತುಗಳನ್ನೇ ಕನ್ನಡ ಷಟ್ಪದಿಗೆ ಅಳವಡಿಸಲು ಶ್ರಮಿಸಿ ವಿಫಲನಾಗಿದ್ದಾನೆ. ಸ್ವತಂತ್ರವಾಗಿ ಬರೆಯದೆ ಮಹಾಕವಿ ತಿಕ್ಕನ ಹಾದಿಯಲ್ಲಿ ಹೆಜ್ಜೆಯಿಡಲು ಹವಣಿಸಿ ಕವಿ ತನ್ನ ಕಾವ್ಯವನ್ನು ನೀರಸವಾಗಿಸಿದ್ದಾನೆ. ಅನೇಕ ಭಾಗಗಳಲ್ಲಿ ತೆಲುಗು ಕವಿಯ ಮಾತುಗಳು ಉಂಡುಂಡೆಯಾಗಿ ಬಂದಿವೆ. (ಕೆ.ವಿ.ಇ.)

**ತಿಮ್ಮಪ್ಪದಾಸ :** 1770-1860. ಪ್ರಸಿದ್ಧ ವಾಗ್ಗೇಯಕಾರ ಹಾಗೂ ಕವಿ. ನಿಜಗುಣ ಶಿವಯೋಗಿಯನ್ನು ಬಿಟ್ಟರೆ ಅದ್ವೈತ ಸಿದ್ಧಾಂತವನ್ನು ಕೀರ್ತನೆಗಳ ರೂಪದಲ್ಲಿ ನಿರೂಪಣೆ ಮಾಡಿರುವವರಲ್ಲಿ ಅಗ್ರಗಣ್ಯರು. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಇವರ ಜನ್ಮಸ್ಥಳ. ವೆಂಕಟರಮಣಸ್ವಾಮಿ ಇವರ ಇಷ್ಟದೈವ. ಯತಿಗಳೆಂದು ಪ್ರಸಿದ್ಧರಾಗಿದ್ದ ವಾಸುದೇವಾರ್ಯ ಇವರ ಅಜ್ಜ ಹಾಗೂ ಗುರು. ನೀಲಕಂಠಾರ್ಯ ಇವರ ಇನ್ನೊಬ್ಬ ಗುರು. ದಾಸರು ರಾಮಕೃಷ್ಣಾರ್ಯರೆಂಬ ಗುರುವಿನ ಬಳಿ ಸಂಗೀತ ಹಾಗೂ ಸಾಹಿತ್ಯ ವಿಷಯಗಳನ್ನು ಅಧ್ಯಯನ ಮಾಡಿದ್ದರೆಂದು ತಿಳಿದುಬರುತ್ತದೆ.

ಇವರ ಗುರು ಹಾಗೂ ಅಜ್ಜ ವಾಸುದೇವಾರ್ಯ ಉಪದೇಶ ಮಾಡಿದ ಅದ್ವೈತ ವೇದಾಂತವನ್ನೂ ಜ್ಞಾನಭಕ್ತಿ ವೈರಾಗ್ಯಗಳನ್ನೂ ಕನ್ನಡದಲ್ಲಿ ನೂರಾರು ಕೀರ್ತನೆಗಳ ರೂಪದಲ್ಲಿ ಹೃದಯಂಗಮವಾಗಿ ನಿರೂಪಿಸಿದ್ದಾರೆ. ಪೂಜಾವಿಧಾನ ಕೀರ್ತನೆಗಳು, ಗುರುಸ್ತುತಿ ಕೀರ್ತನೆಗಳು, ಶ್ರೀಕೃಷ್ಣಬಾಲಲೀಲೆ ಮತ್ತು ಅಕ್ರೂರ ಪ್ರಕರಣ (ಕೀರ್ತನೆಗಳು), ಭಾಗವತ ಕೀರ್ತನೆಗಳು, ಉದ್ಯೋಗಪರ್ವದ ಭಾರತದ ಕಥೆ ಅಥವಾ ಕೃಷ್ಣಸಂಧಾನದ ಕೀರ್ತನೆಗಳು, ಜೀವಕಾಯಸಂವಾದ (ವೈರಾಗ್ಯಪರ ಕೀರ್ತನೆಗಳು ಮತ್ತು ಕಂದಪದ್ಯಗಳು), ಧ್ರುವಚರಿತ್ರೆ (ಸಾಂಗತ್ಯ ಕಾವ್ಯ), ಪರಬ್ರಹ್ಮಪ್ರಕಾಶಿಕೆ (ವೇದಾಂತವಿಷಯಕ ಗದ್ಯಗ್ರಂಥ'), ಭಾಗವದ್ವಿಲಾಸದಾಟ (ಅಸಮಗ್ರ ಗದ್ಯಗ್ರಂಥ') ಎಂಬ ಕೃತಿಗಳನ್ನು ರಚಿಸಿದ್ದಾರೆ. ಧ್ರುವಚರಿತ್ರೆ ಮತ್ತು ಶ್ರೀಕೃಷ್ಣಬಾಲಲೀಲೆ ಕಾವ್ಯ ಗುಣದಿಂದಲೂ ಕೂಡಿವೆ. ಸಾಧಾರಣವಾಗಿ ಇವರ ಕೀರ್ತನೆಗಳಲ್ಲಿ ಚಿಕ್ಕನಾಗಪುರದ ತಿರುಪತಿ ವೆಂಕಟರಮಣ ಎಂಬ ಮುದ್ರಿಕೆ ಕಂಡುಬರುತ್ತದೆ. ಅನೇಕ ಕೀರ್ತನೆಗಳಲ್ಲಿ ದೇವತಾಮುದ್ರಿಕೆಯೊಂದಿಗೆ ಗುರು ವೆಂಕಟರಮಣರ ಹೆಸರು ಇದೆ. ಕೆಲವು ಕೀರ್ತನೆಗಳಲ್ಲಿ ತಿಂಮದಾಸ ಎಂಬ ಸ್ವನಾಮ ಮುದ್ರಿಕೆಯೂ ಕಾಣಿಸಿಕೊಳ್ಳುತ್ತದೆ. ದಾಸರು ತಮ್ಮ ಗುರುವಿನ ಉಪದೇಶದಂತೆ ಚಿಕ್ಕನಾಯಕನಹಳ್ಳಿಯ ಪ್ರಾಂತದಲ್ಲಿ ಭಜನೆಯ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದರು. ಇವರ ಭಗವದ್ಭಕ್ತಿಯನ್ನು ಕೇಳಿ ಮೆಚ್ಚಿ ಇವರನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿಗೆ ಕರೆಸಿಕೊಂಡು ಸನ್ಮಾನಿಸಿದರು. ಅಲ್ಲಿ ಅರಸರ ಆದೇಶದಂತೆ ದಾಸರು ಕೋಟೆಯ ತ್ರಿಣಯನೇಶ್ವರಸ್ವಾಮಿ ದೇವಸ್ಥಾನದಲ್ಲಿ ನೆಲಸಿ ತಮ್ಮ ಇಡೀ ಜೀವಮಾನವನ್ನು ಪೂಜೆ ಭಜನೆಯಲ್ಲಿ ಕಳೆದರು. ಭಗವದನುಭವವನ್ನೂ ಗಹನ ವೇದಾಂತ ತತ್ತ್ವಗಳನ್ನೂ ಜನಸಾಮಾನ್ಯಕ್ಕೆ ಸುಲಭ ಭಾಷೆಯಲ್ಲಿ ದೊರಕಿಸಿಕೊಟ್ಟಿರುವ ತಿಮ್ಮಪ್ಪದಾಸರು ಪುರಂದರದಾಸ, ನಿಜಗುಣ ಶಿವಯೋಗಿ, ಕನಕದಾಸ, ತ್ಯಾಗರಾಜ - ಈ ಪರೋಪಕಾರಿಗಳ ಪಂಕ್ತಿಗೆ ಸೇರಿದವರು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ದಾಸರ 108 ಪೂಜಾ ವಿಧಾನ ಕೀರ್ತನೆಗಳು ಅರ್ಚನ ಎಂಬ ಹೆಸರಿನಲ್ಲಿ ಮೊದಲ ಬಾರಿಗೆ 1971ರಲ್ಲಿ ಪ್ರಕಟಗೊಂಡಿವೆ. ಇವರ ಆಧ್ಯಾತ್ಮಿಕ ಕೀರ್ತನೆಗಳಿಗೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಸಲ್ಲುತ್ತದೆ. ಇವರ ಜೇಷ್ಠಪುತ್ರ ನಾರಾಯಣದಾಸರೂ ಕೀರ್ತನೆಗಳನ್ನು ರಚಿಸಿದ್ದಾರೆ. (ಎಂ.ವಿ.ಎಸ್.)

**ತಿಮ್ಮಪ್ಪನಾಯಕ :** 1897-1974. ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗಾಂಧಿ ಎಂದು ಪ್ರಸಿದ್ಧರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಮಾಜಸುಧಾರಕರು.



ಸಿದ್ದಾಪುರದಲ್ಲಿ 1897ರಲ್ಲಿ ಬಡ ಗೌಡಸಾರಸ್ವತ ಕುಟುಂಬವೊಂದರಲ್ಲಿ ಹುಟ್ಟಿದರು. ಕುಮಟದ ಗಿಬ್ಸ್ ಪ್ರೌಢಶಾಲೆಯಲ್ಲಿ ಶಿಕ್ಷಣ ಮುಗಿಸಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ ಪುಣೆಗೆ ತೆರಳಿದರು. ಅಲ್ಲಿ ರ್‍ಯಾಂಗ್ಲರ್ ಪರಂಜಪೆಯವರ ತ್ಯಾಗಮಯ ಜೀವನದಿಂದ ಪ್ರಭಾವಿತರಾದರು. 1918ರಲ್ಲಿ ಬಿ.ಎ. ಪದವಿ ಪಡೆದು, ನೌಕರಿಗಾಗಿ ಮುಂಬಯಿಗೆ ಹೋದರು. ಅಲ್ಲಿ ನೌಕರಿ ಜೊತೆಗೆ ಖಾಸಗಿಯಾಗಿ ಎಂ.ಎ. ಅಭ್ಯಾಸಮಾಡುತ್ತಿರುವಾಗ ಬೇನೆಯಿಂದ ನರಳಿ ಗುಣಮುಖರಾದ ಮೇಲೆ ಹಿಂದಿರುಗಿ ಶಿರಸಿಯ ಶ್ರೀಮಾರಿಕಾಂಬಾ ಮಾಧ್ಯಮಿಕ ಶಾಲೆಯಲ್ಲಿ 1920ರಲ್ಲಿ ಮುಖ್ಯಾಧ್ಯಾಪಕರಾಗಿ ಕೆಲವರ್ಷ ಶಿಕ್ಷಣರಂಗದಲ್ಲಿ ಸೇವೆಸಲ್ಲಿಸಿದರು.

ಗಾಂಧೀಜಿಯವರ ಯಂಗ್ ಇಂಡಿಯಾ ಪತ್ರಿಕೆಯ ಬರೆಹಗಳಿಂದ ಪ್ರಭಾವಿತರಾಗಿ 1921ರಲ್ಲಿ ನೌಕರಿಯನ್ನು ತ್ಯಜಿಸಿದರು. ಆಗ ಶಿರಸಿಯಲ್ಲಿ ವಾಮನ ಹೊದಿಕೆಯವರು ನಡೆಯಿಸುತ್ತಿದ್ದ ರಾಷ್ಟ್ರೀಯ ಶಾಲೆಯ ಅಧ್ಯಾಪಕರಾಗಿ ಸೇರಿದರು. 1922ರಲ್ಲಿ ಶಿರಸಿಯಲ್ಲಿ ಸ್ವಾಮಿ ಧರ್ಮಾನಂದರು ರಾಜಕೀಯ ಭಾಷಣ ಮಾಡಿದರು. ಅಂದು ಸ್ವಾತಂತ್ರ್ಯಕ್ಕಾಗಿ ಎಂಥ ತ್ಯಾಗಕ್ಕಾದರೂ ಸಿದ್ಧರಾಗಿ, ಬ್ರಿಟಿಷರ ವಿರುದ್ಧ ನಿಂತು ಹೋರಾಡುವುದು ಪ್ರತಿಯೊಬ್ಬನ ಕರ್ತವ್ಯ ಎಂದು ನಾಯಕರು ಸಾರಿದರು. ಈ ಭಾಷಣಕ್ಕಾಗಿ ಇವರಿಗೆ ಒಂದು ವರ್ಷ ಕಠಿಣ ಶಿಕ್ಷೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ಪ್ರಥಮ ರಾಜಕೀಯ ಕೈದಿಯಾದವರೂ ಇವರೇ.

1930ರಲ್ಲಿ ಅಂಕೋಲದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಅತಿ ದೊಡ್ಡ ಪ್ರಮಾಣದಲ್ಲಿ ಸಂಘಟಿಸಿದರು. ಆಗ ಮೂರು ತಿಂಗಳ ಶಿಕ್ಷೆಯಾಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಅನೇಕ ಬಾರಿ ಅರಣ್ಯಸತ್ಯಾಗ್ರಹ, ಹುಲ್ಲುಬನ್ನಿ ಸತ್ಯಾಗ್ರಹ, ಕರನಿರಾಕರಣ ಚಳವಳಿ ಮೊದಲಾದುವನ್ನು ಸಂಘಟಿಸಿದುದರಿಂದ ಇವರಿಗೆ ಅನೇಕ ಬಾರಿ ಸೆರೆಮನೆವಾಸ ಒದಗಿತು. ಶಿರಸಿ ಹಾಗೂ ಸಿದ್ಧಾಪುರಗಳಲ್ಲಿ ನಡೆದ ಕರನಿರಾಕರಣ ಚಳವಳಿ ಇಡೀ ಭಾರತದಲ್ಲಿ ಯಶಸ್ವಿಯೆನಿಸಿದ್ದಕ್ಕೆ ಇವರ ಕಾರ್ಯನಿರ್ವಹಣೆಯೂ ಪ್ರಮುಖ ಪಾತ್ರ ವಹಿಸಿತು. ರಾಜೇಂದ್ರಪ್ರಸಾದ್, ರಂಗನಾಥ ದಿವಾಕರ, ಹಣಮಂತರಾವ್ ಕೌಜಲಗಿ, ಕಾಕಾ ಕಾರಖಾನೀಸ ಮೊದಲಾದವರು ತಿಮ್ಮಪ್ಪನಾಯಕರನ್ನು ತಮ್ಮ ಸಮಾನ ಅಂತಃಸ್ಥಿತ ಆತ್ಮೀಯ ಗೆಳೆಯರಾಗಿ ಪರಿಗಣಿಸುತ್ತಿದ್ದರು.

ತಮ್ಮ ತ್ಯಾಗ ಸೇವೆಯಿಂದಾಗಿ ಬರಬರುತ್ತ ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗಾಂಧೀ ಎಂದು ಇವರು ಪರಿಚಿತರಾದರು. ಸ್ವಾತಂತ್ರ್ಯಾನಂತರವೂ ಗಾಂಧೀಜಿ ಹೇಳಿದ ಮಾರ್ಗದಲ್ಲಿಯೇ ಸಾಗಿ ನೂರಾರು ಜನರಿಗೆ ಉದ್ಯೋಗ ನೀಡುತ್ತಿದ್ದ ಅಂಕೋಲದ ಗ್ರಾಮಸೇವಾ ಸಮಿತಿಯ ಮಾರ್ಗದರ್ಶಕರಾಗಿ ಕೆಲಸ ಮಾಡಿದರು. ಅದು ಜಿಲ್ಲೆಗೆ ಪ್ರಥಮವೆನಿಸಿದ ಹೊಸ ಮಾದರಿಯ ವಿಧಾಯಕಕಾರ್ಯಕ್ಷೇತ್ರ. ಗ್ರಾಮಾಂತರ ಪ್ರದೇಶದ ಜನತೆಯ ಕಲ್ಯಾಣಕ್ಕಾಗಿ ಅಲ್ಲಿ ಇವರು ಒಂದೇ ಸಮನೆ ದುಡಿದರು.

ರಾಷ್ಟ್ರಸೇವೆ, ಕ್ರಾಂತಿಕಾರಿ ಹೋರಾಟ, ಸ್ವಾತಂತ್ರ್ಯ ಪ್ರಾಪ್ತಿ, ಸಮಾಜ ಸೇವೆ, ಹರಿಜನಸೇವೆ ಮುಂತಾದ ವಿಷಯಗಳ ಮೇಲೆ ವಿವಿಧ ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಇವರು ಪ್ರಕಟಿಸಿದ್ದಾರೆ. ಧರ್ಮಸಮನ್ವಯ ದರ್ಶನ, ಗಾಂಧೀಜಿಯವರ ಆಧ್ಯಾತ್ಮಿಕ ಜೀವನ, ಶಿವಶರಣರ ಸಾಧನಪಥ - ಇವು ಇವರು ರಚಿಸಿರುವ ಗ್ರಂಥಗಳು.

ಗಾಂಧೀಜಿಯವರ ಕನಸಿನ ಆದರ್ಶವನ್ನು ನನಸಾಗಿಸಲು ಯತ್ನಿಸಿದವರಲ್ಲಿ ತಿಮ್ಮಪ್ಪನಾಯಕರು ಅಗ್ರಗಣ್ಯರು. ತಮ್ಮ ಜೀವನದ ಕೊನೆಯವರೆಗೂ ತಮ್ಮ ಧ್ಯೇಯ ಮತ್ತು ಆದರ್ಶಗಳನ್ನು ಇವರು ನಡೆಸಿಕೊಂಡು ಬಂದರು. ರಚನಾತ್ಮಕ ಕಾರ್ಯಕರ್ತರಾಗಿ, ಸ್ವಾರ್ಥತ್ಯಾಗಿಗಳಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ದೇಶಪ್ರೇಮಿಯಾಗಿ, ಆಧ್ಯಾತ್ಮಿಕ ಬಾಳನ್ನು ಬಾಳಿದ ಈ ಕರ್ಮಯೋಗಿ 26 ನವೆಂಬರ್ 1974ರಂದು ನಿಧನಹೊಂದಿದರು.

*

**ತಿಮ್ಮಯ್ಯ, ಕೆ.ಎಸ್. :** 1906-65. ಭಾರತದ ಮಾಜಿ ಶ್ರೇಷ್ಠ ಸೇನಾನಾಯಕ, ಹಿರಿಯ ಮುತ್ಸದ್ದಿ, ದಕ್ಷ ಆಡಳಿತಗಾರ. 1906 ಮಾರ್ಚ್ 31ರಂದು ಕೊಡಗಿನಲ್ಲಿ ಕೊಡಂದೆರ ತಿಮ್ಮಯ್ಯ ಮತ್ತು ಸೀತಮ್ಮ ದಂಪತಿಗಳ ಮಗನಾಗಿ ಜನಿಸಿದರು. ಮಗುವಿಗೆ ಸುಬ್ಬಯ್ಯ ಎಂದು ಹೆಸರಿಟ್ಟರು. ಆದರೆ ಶಾಲೆಗೆ ಸೇರಿಸುವಾಗ ಇವರ ಹೆಸರು ಕೆ.ಎಸ್. ತಿಮ್ಮಯ್ಯ ಎಂದು ದಾಖಲಾದ್ದರಿಂದ ಈ ಹೆಸರೇ ಇವರಿಗೆ ಶಾಶ್ವತವಾಗಿ ಉಳಿಯಿತು. ಶ್ರೀಮಂತ ಮನೆತನದಲ್ಲಿ ಜನಿಸಿದ ಇವರ ವಿದ್ಯಾಭ್ಯಾಸ ಕೂನೂರಿನ ಸೇಂಟ್ ಜೋಸೆಫ್ ಮತ್ತು ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ ನಡೆಯಿತು. ಹುಟ್ಟಿನಿಂದಲೇ ಉತ್ತಮ ದೇಹದಾರ್ಢ್ಯ ಮತ್ತು ವ್ಯಕ್ತಿತ್ವ ಪಡೆದಿದ್ದ ಇವರು ಡೆಹರಾಡೂನಿನ ರಾಯಲ್ ಇಂಡಿಯನ್ ಮಿಲಿಟರಿ ಶಾಲೆಗೆ ಸೇರಿದರು. ಅಲ್ಲಿನ ಸೇನಾಶಿಕ್ಷಣದಲ್ಲಿ ತೇರ್ಗಡೆಗೊಂಡ ಇವರನ್ನು ಅಂತಿಮ ಶಿಕ್ಷಣಕ್ಕಾಗಿ ಇಂಗ್ಲೆಂಡಿನ ಸ್ಯಾಂಡ್‌ಹರ್ಸ್ಟ್ ಮಿಲಿಟರಿ ಕಾಲೇಜಿಗೆ ಕಳುಹಿಸಲಾಯಿತು. ಆಗಿನ ಭಾರತದ ವೈಸ್‌ರಾಯರು ಸಾವಿರಾರು ಮಂದಿ ಭಾರತೀಯ ಯುವಕರ ಪೈಕಿ ಆರಿಸಿದ ಆರು ಮಂದಿಯಲ್ಲಿ ತಿಮ್ಮಯ್ಯನವರು ಒಬ್ಬರು.

ಸ್ಯಾಂಡ್‌ಹರ್ಸ್ಟ್‌ನ ಶಿಕ್ಷಣಾವಧಿಯನ್ನು ತುಂಬ ಹಿರಿಮೆಯಿಂದ ಪೂರೈಸಿ ಭಾರತಕ್ಕೆ ಮರಳಿದ ಇವರು ಸೆಕೆಂಡ್ ಲೆಫ್ಟಿನೆಂಟ್ ಆಗಿ ಬೆಂಗಳೂರಿನಲ್ಲಿದ್ದ ಹೈಲೆಂಡ್ ಲೈಟ್ ಇನ್‌ಫೆಂಟ್ರಿಗೆ ಬಂದರು (4-2-1926). ಅಲ್ಲಿಂದ ಹೈದರಾಬಾದ್ ರೆಜಿಮೆಂಟಿಗೆ ವರ್ಗವಾಗಿ

(25-5-1927) ಬಾಗ್‌ದಾದಿಗೆ ತೆರಳಿದರು. ಮರುವರ್ಷ ತಮ್ಮ ಬೆಟಾಲಿಯನ್ನಿನೊಡನೆ ಸ್ವದೇಶಕ್ಕೆ ಮರಳಿ ಅಲಹಾಬಾದಿನಲ್ಲಿ ನೆಲೆಸಿದರು. ಆ ವೇಳೆಗೆ ದೇಶದಲ್ಲಿ ಸ್ವಾತಂತ್ರ್ಯ ಸಮರದ ಕಾವು ಕ್ರಮೇಣ ಪಸರಿಸುತ್ತಿತ್ತು. ಬ್ರಿಟಿಷ್ ಸೇನೆಯಲ್ಲಿ ಅಧಿಕಾರಿಗಳಾಗಿದ್ದ ತಿಮ್ಮಯ್ಯನವರಂಥ ತರುಣ ಭಾರತೀಯ ಅಧಿಕಾರಿಗಳು ತಾವು ಕೂಡ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಬೇಕೆಂದು ಬಯಸಿದರು. ಆದರೆ ಅಂದಿನ ದಿನಗಳಲ್ಲಿ ಪ್ರಭಾವೀ ನೇತಾರರಾಗಿದ್ದ ಮೋತೀಲಾಲರು (1930) "ಇಂದಲ್ಲದಿದ್ದರೆ ನಾಳೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸುವುದು ಶತಸ್ಸಿದ್ಧ. ಬ್ರಿಟಿಷರು ತೊಲಗಿಹೋದ ಬಳಿಕ ನಾವೇ ನಮ್ಮನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ. ಅಂಥ ದಿನ ಬಂದಾಗ ನಮ್ಮ ಉಳಿವು ನಿಮ್ಮಂಥವರನ್ನೇ ಅವಲಂಬಿಸಿರುವುದು. ಆದ್ದರಿಂದ ನೀವು ನಿಮ್ಮ ಹುದ್ದೆಗಳಲ್ಲೇ ಮುಂದುವರೆಯಿರಿ" ಎಂದು ಆದೇಶವಿತ್ತರು.

ಮುಂದೆ ಸ್ವಲ್ಪಕಾಲ ತಿಮ್ಮಯ್ಯನವರು ಬಲೂಚಿಸ್ಥಾನದ ಗಡಿನಾಡಿನಲ್ಲಿ ದುಡಿದು ಅನಂತರ ಕ್ವೆಟ್ಟಾದ ಬ್ರಿಟಿಷ್ ಸೇನಾಕೇಂದ್ರಕ್ಕೆ ವರ್ಗವಾಗಿದ್ದಾಗ ನೀನಾ ಕಾರ್ಯಪ್ಪ ಅವರನ್ನು ಮದುವೆಯಾದರು. ದಂಪತಿಗಳು ಕ್ವೆಟ್ಟಾಕ್ಕೆ ಮರಳುವ ಹೊತ್ತಿಗೆ (1935) ಆ ಇಡೀ ವಲಯ ಭೀಕರ ಭೂಕಂಪಕ್ಕೆ ಈಡಾಗಿತ್ತು. ನೊಂದ ಜನರಿಗೆ ಸಾಂತ್ವನ ನೀಡಿ ಅವರನ್ನು ಪುನರ್ವಸಿತರನ್ನಾಗಿಸುವಲ್ಲಿ ಇವರು ಅಮೋಘ ಸೇವೆ ಸಲ್ಲಿಸಿದರು. ಮುಂದೆ ತಿಮ್ಮಯ್ಯನವರು ಮದರಾಸು ವಿಶ್ವವಿದ್ಯಾಲಯದ 5ನೆಯ ಮದರಾಸು ಬೆಟಾಲಿಯನ್ ಯೂನಿವರ್ಸಿಟಿ ಟ್ರೈನಿಂಗ್ ಕೋರ್‌ನ ಅಡ್ಜುಟೆಂಟ್ ಆಗಿದ್ದರು.

ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ ಇವರನ್ನು ಸಿಂಗಪುರಕ್ಕೆ ವರ್ಗ ಮಾಡಲಾಯಿತು (1939). ಆಗ ಅಲ್ಲಿ ಬ್ರಿಟಿಷರ ದಬ್ಬಾಳಿಕೆಯ ನೀತಿಯನ್ನು ಖಂಡಿಸಿ ಭಾರತೀಯ ಯೋಧರು ಮುಷ್ಕರ ಹೂಡಿದ್ದರು. ಅವರ ಮನವೊಲಿಸಿ ಅವರನ್ನು ಮತ್ತೆ ಕಾರ್ಯಪ್ರವೃತ್ತರನ್ನಾಗಿಸುವ ಹಾಗೂ ಅವರ ಧೃತಿ ಆತ್ಮಗೌರವಗಳನ್ನು ಪುನರ್ಭರಿಸುವ ಹೊಣೆಯನ್ನು ಇವರು ಅತ್ಯಂತ ದಕ್ಷರಾಗಿ ಸಾಧಿಸಿದರು.

1941ರಲ್ಲಿ ಭಾರತಕ್ಕೆ ಮರಳಿದ ತಿಮ್ಮಯ್ಯನವರನ್ನು ಆಗ್ರಾದಲ್ಲಿ ನೇಮಿಸಿಲಾಯಿತು. ಮರುವರ್ಷ ಸ್ವಾತಂತ್ರ್ಯ ಸಮರ ಉಲ್ಬಣಾವಸ್ಥೆಗೆ ತಿರುಗಿದಾಗ ಇವರು ಎಲ್ಲಿಯೂ ಗುಂಡುಗರೆಯದೆ ಮಾತಿನ ಮೋಡಿಯಿಂದಲೇ ಶಾಂತಿಪಾಲನೆ ಮಾಡಿದರು. ಆಗ್ರಾದಿಂದ ಸ್ವಲ್ಪ ಕಾಲ ಮಲಯಾಕ್ಕೆ ಹೋಗಿ ಅಲ್ಲಿಂದ ಮರಳಿದೊಡನೆ ಕ್ವೆಟ್ಟಾದಲ್ಲಿನ ಮಿಲಿಟರಿ ಸ್ಟಾಫ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದರು. ಮುಂದೆ ಇವರು ಲೆಫ್ಟಿನೆಂಟ್ ಕರ್ನಲ್ ದರ್ಜೆ ಗಳಿಸಿ (1944) ಅರಕ್ಕಾನ್‌ನಲ್ಲಿದ್ದ 25ನೆಯ ಇಂಡಿಯನ್ ಡಿವಿಜನ್ನನ್ನು ಸೇರಿದರು. ಈ ವಲಯದ ಒಂದು ಬೆಟ್ಟ ಕೋಡಿಯ ಆಯಕಟ್ಟಿನ ಪ್ರದೇಶದಲ್ಲಿ ಜಪಾನೀಯರು ನೆಲೆಸಿ ಮಿತ್ರ ಸೈನ್ಯಗಳಿಗೆ ಘಾಸಿ ಉಂಟುಮಾಡುತ್ತಿದ್ದರು. ಇವರು ಈ ಹೋರಾಟಕ್ಕೆ

ಬೇಕಾದ ಸವಿವರ ಯೋಜನೆಯನ್ನು ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸಿದರು. ಇವರ ಯೋಜನೆಯನ್ನೇನೋ ಅವರು ಒಪ್ಪಿಕೊಂಡರು. ಆದರೆ ನಿಭಾಯಿಸುವ ಹೊಣೆಯನ್ನು ಬ್ರಿಟಿಷ್ ಅಧಿಕಾರಿಯೋರ್ವನಿಗೆ ವಹಿಸಿದರು. ಈ ಆಕ್ರಮಣದಲ್ಲಿ ಬ್ರಿಟಿಷ್ ಅಧಿಕಾರಿ ವಿಪರೀತ ಹೊಡೆತ ತಿಂದು ಸೋತು ಹಿಂತಿರುಗಿದ. ತಿಮ್ಮಯ್ಯನವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ತಮ್ಮ ಯೋಧರ ತಂಡದೊಡನೆ ಹೋಗಿ ಜಪಾನೀಯರನ್ನು ಸದೆಬಡಿದು ಬೆಟ್ಟದ ನೆತ್ತಿಯನ್ನು ವಶಪಡಿಸಿಕೊಂಡರು. ವರಿಷ್ಠರು ಇವರ ದಿಟ್ಟತನವನ್ನು ಶ್ಲಾಘಿಸಿದರು. ಮುಂದೆ ಬರ್ಮ ವಲಯದ ವಿವಿಧ ಕದನಗಳಲ್ಲಿ ತಿಮ್ಮಯ್ಯನವರು ಜಯಗಳಿಸಿದರು. ಯುದ್ಧರಂಗದಲ್ಲಿ ಬ್ರಿಗೇಡ್ ನಾಯಕನಾದ ಪ್ರಥಮ ಭಾರತೀಯ ತಿಮ್ಮಯ್ಯನವರೇ. ಇವರ ಹಿರಿಮೆಯನ್ನು ಗುರುತಿಸಿ ಸರ್ಕಾರ ಇವರಿಗೆ ಡಿಸ್ಟಿಂಗ್‌ವಿಷ್ಡ್ ಸರ್ವಿಸ್ ಆರ್ಡರ್ (ಡಿ.ಎಸ್.ಓ.) ಪ್ರಶಸ್ತಿ ನೀಡಿ ಸನ್ಮಾನಿಸಿತು.

ಮುಂದೆ ಜಪಾನೀಯರು ಶರಣಾಗತರಾದಾಗ (1946) ಸಿಂಗಪುರದಲ್ಲಿ ನಡೆದ ಶಾಂತಿಸಭೆಯಲ್ಲಿ ತಿಮ್ಮಯ್ಯನವರಿಗೆ ಹಾಜರಾಗುವ ಗೌರವ ದೊರೆತಿತ್ತು. ಜಪಾನನ್ನು ಮಿತ್ರಸೇನಾಬಲಗಳು ವಶಪಡಿಸಿಕೊಂಡಾಗ ಅಲ್ಲಿನ ಒಂದು ವಿಭಾಗದ ನಾಯಕರಾಗಿ ಇವರನ್ನು ನೇಮಿಸಲಾಯಿತು. ಆದರೆ ಇವರು ಭಾರತ ಸೇನಾಬಲಗಳ ರಾಷ್ಟ್ರೀಕರಣ ಸಮಿತಿಯನ್ನು (ನವದೆಹಲಿ) ಜನವರಿ 1947ರಲ್ಲಿ ಸೇರಿಕೊಂಡರು. ಭಾರತದ ವಿಭಜನೆಯ ದಿನಗಳಂದು ಮೇಜರ್ ಜನರಲ್ ಆಗಿದ್ದ ಇವರು ಲಾಹೋರ್ ವಿಭಾಗದಲ್ಲಿದ್ದರು. ಜಾತೀಯ ಗಲಭೆಗಳನ್ನು ತಡೆಗಟ್ಟುವುದು, ಪ್ರವಾಹ ರೂಪದಲ್ಲಿ ಬರುತ್ತಿದ್ದ ಮತ್ತು ಹೋಗುತ್ತಿದ್ದ ನಿರ್ವಸಿತರನ್ನು ಕಾಪಾಡುವುದು, ಸಾಮೂಹಿಕ ಶಾಂತಿಯನ್ನು ರಕ್ಷಿಸುವುದು ಇವೇ ಮುಂತಾದ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿಯೇ ನಡೆದ ಕಾಶ್ಮೀರದ ಮೇಲಿನ ದಾಳಿಯನ್ನು ಎದುರಿಸುವಲ್ಲಿ ತಿಮ್ಮಯ್ಯನವರು ದಿಟ್ಟ ಪಾತ್ರವಹಿಸಿದ್ದರು. ಶ್ರೀನಗರದಿಂದ ನಾಲ್ಕು ಮೈಲು ದೂರದವರೆಗೆ ದಾಳಿಕೋರರು ಮುಂದೊತ್ತಿಬಂದಿದ್ದ ಸನ್ನಿವೇಶದಲ್ಲಿ (ಏಪ್ರಿಲ್ 1948) ಇವರು ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಜೂನ್ 1ರಂದು ಪ್ರತಿ ಆಕ್ರಮಣಮಾಡಿ ದಾಳಿಕಾರರನ್ನು ತೊಡೆದುಹಾಕಿ ಕಾಶ್ಮೀರದಲ್ಲಿ ಶಾಂತಿ ಸ್ಥಾಪಿಸಿದರು.

ಕಾಶ್ಮೀರ ರಂಗದಿಂದ ಇವರನ್ನು ಡೆಹರಾಡೂನಿನ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ ಮುಖ್ಯಾಧಿಕಾರಿಯಾಗಿ ವರ್ಗಮಾಡಿದರು. ಮುಂದೆ ಕ್ವಾರ್ಟರ್ ಮಾಸ್ಟರ್ ಜನರಲ್ ಆಗಿ ನೇಮಕಗೊಂಡರು. ಸೇನೆಯ ಸೇವಾ ವ್ಯವಸ್ಥೆಗಳಲ್ಲಿ ಇವರು ಶಾಶ್ವತವಾದ ಸುಧಾರಣೆಗಳನ್ನು ತಂದರು. 1953ರ ತರುಣದಲ್ಲಿ ಇವರು ಲೆಫ್ಟಿನೆಂಟ್ ಜನರಲ್ ಪದವಿಯನ್ನು ಪಡೆದು ಪಶ್ಚಿಮ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. 1953ರ ಮೇ ತಿಂಗಳಿನಲ್ಲಿ ಭಾರತ ಸರ್ಕಾರ ಇವರನ್ನು ವಿಶ್ವಸಂಸ್ಥೆಯ ತಟಸ್ಥ ರಾಷ್ಟ್ರಗಳ ಪುನರ್ದೇಶಾವರ್ತನ ಆಯೋಗದ ಅಧ್ಯಕ್ಷರಾಗಿ ಯುದ್ಧ ಜರ್ಝರಿತ ಕೊರಿಯಕ್ಕೆ ಕಳಿಸಿತು. ಅಲ್ಲಿ ಇವರು ನಡೆದುಕೊಂಡ ರೀತಿ ಇವರಿಗೂ ಭಾರತಕ್ಕೂ ಅಪಾರ ಗೌರವವನ್ನು ತಂದಿತು. ಕೊರಿಯ ವೀರನಾಗಿ ಸ್ವದೇಶಕ್ಕೆ ಮರಳಿದ (1954) ಇವರನ್ನು ರಾಜಾಜಿಯವರು ಸೈನಿಕಋಷಿ ಎಂದು ಕರೆದರು. ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಈ ಯುದ್ಧ ವೀರ ಮತ್ತು ಶಾಂತಿದೂತನನ್ನು ಗೌರವಿಸಿತು.

1957 ಮೇ 4ರಂದು ತಿಮ್ಮಯ್ಯನವರು ಜನರಲ್ ದರ್ಜೆ ಸಮೇತ ಭಾರತದ ವರಿಷ್ಠ ಸೇನಾನಾಯಕರಾಗಿ ನೇಮಕಗೊಂಡರು. ದೇಶದ ಅವಿಭಾಜ್ಯ ಅಂಗವಾಗಿ ಸ್ವತಂತ್ರ ಭಾರತದ ಸೈನ್ಯಕ್ಕೆ ವ್ಯಕ್ತಿತ್ವವನ್ನು ಮತ್ತು ಕ್ರಿಯಾಪಾತ್ರವನ್ನು ನೀಡುವಲ್ಲಿ ಬಹುವಾಗಿ ಶ್ರಮಿಸಿದರು. ಇವರು ಏಪ್ರಿಲ್ 1961ರಲ್ಲಿ ತಮ್ಮ ಸೇನಾ ವೃತ್ತಿಯಿಂದ ನಿವೃತ್ತರಾದರು.

ಅನಂತರ ಇವರ ಸೇವೆಯನ್ನು ವಿಶ್ವಸಂಸ್ಥೆಯ ಪರವಾಗಿ ಸೈಪ್ರಸ್‌ಗೆ ನೀಡಲಾಯಿತು (1964). ಗ್ರೀಕರಿಗೂ ತುರ್ಕಿಯವರಿಗೂ ನಡುವೆ ಶಾಂತಿಪಾಲನೆ ಮಾಡುವುದು ಈ ಸೇನಾನಿಯ ಹೊಣೆಯಾಗಿತ್ತು. ಉಭಯ ಪಕ್ಷಗಳ ಪ್ರೀತಿ ವಿಶ್ವಾಸಗಳನ್ನು ಗಳಿಸಿ ತಮ್ಮ ಕಾರ್ಯವನ್ನು ಸಮರ್ಥವಾಗಿ ನೆರವೇರಿಸುತ್ತಿದ್ದರು. ಆ ವೇಳೆಯಲ್ಲಿ 1965, ಡಿಸೆಂಬರ್ 18ರಂದು ಹೃದಯಾಘಾತದಿಂದ ನಿಧನರಾದರು. (ಬಿ.ಸಿ.ಪಿ.)

**ತಿಮ್ಮರಸ :** ವಿಜಯನಗರದ ಕೃಷ್ಣದೇವರಾಯನ (1509-29) ಪ್ರಧಾನ ಮಂತ್ರಿ. ರಾಚಯ ಎಂಬುವನ ಮಗ. ವೇಮಯನ ಮೊಮ್ಮಗ. ಪೋರ್ಚುಗೀಸ್ ಪ್ರವಾಸಿಗರು ಈತನನ್ನು ತೆಮೆರಸ, ಸಾಲ್ವತಿನಿಕ, ಸಲ್ವತಿನ, ಸಲ್ವತಿಮ್ಮ ಮುಂತಾಗಿ ಹೆಸರಿಸಿದ್ದಾರೆ. ಈತನ ಪೂರ್ಣ ಹೆಸರು ಸಾಳುವ ತಿಮ್ಮಯ್ಯ. ಆದರೆ ಶಾಸನಗಳಲ್ಲಿ ಸಾಳುವತಿಮ್ಮ ಎಂದು ಕರೆಯಲಾಗಿದೆ.

1509ರಲ್ಲಿ ಸಾಳುವ ಇಮ್ಮಡಿ ವೀರನರಸಿಂಹ ತನ್ನ ಮರಣಕ್ಕೆ ಮುಂಚೆ, ತನ್ನ ಎಂಟು ವರ್ಷದ ಮಗನನ್ನು ರಾಜನನ್ನಾಗಿ ಮಾಡಲು ಪ್ರಧಾನಮಂತ್ರಿ ಸಾಳುವ ತಿಮ್ಮನ ನೆರವಿನಿಂದ ಕೃಷ್ಣದೇವರಾಯನ ಕಣ್ಣು ಕೀಳಿಸಲು ಪ್ರಯತ್ನಿಸಿದ. ಆಗ ತಿಮ್ಮ ಕೃಷ್ಣದೇವರಾಯನನ್ನು ರಕ್ಷಿಸಿದ್ದಲ್ಲದೆ ಅವನನ್ನು ಪೋಷಿಸಿ ರಾಜನನ್ನಾಗಿ ಮಾಡಿದುದರಿಂದ ಕೃಷ್ಣದೇವರಾಯ ಈತನನ್ನು ತಂದೆಯೋಪಾದಿಯಲ್ಲಿ ಕಾಣುತ್ತಿದ್ದ. ಆದುದರಿಂದ ತಿಮ್ಮರಸನಿಗೆ ಅಪ್ಪಾಜಿ ಎಂಬ ಹೆಸರು ಬಂತು.

ತಿಮ್ಮರಸನ ರಾಜಕೀಯ ತಂತ್ರ, ಕಾರ್ಯನಿರ್ವಹಣ ಶಕ್ತಿ ಮತ್ತು ಆಡಳಿತ ಕುಶಲತೆಯನ್ನು ಕೃಷ್ಣದೇವರಾಯ ಸಂಪೂರ್ಣವಾಗಿ ಉಪಯೋಗಿಸಿಕೊಂಡ. ಈತನನ್ನು ತಂತ್ರನಾಯಕನೆಂದೂ ಕರೆಯುತ್ತಿದ್ದರು. ಈತ ಪ್ರಧಾನಿ, ಪ್ರಾಂತ್ಯಾಧಿಕಾರಿ ಹಾಗೂ ಸೈನ್ಯಾಧಿಕಾರಿಯೂ ಆಗಿದ್ದ. ರಾಜನ ದಂಡಯಾತ್ರೆಗಳಲ್ಲಿ ರಾಜನೊಡನೆ ಹೋಗಿ ವಶಪಡಿಸಿಕೊಂಡ ಪ್ರದೇಶದ ಆಡಳಿತ ವ್ಯವಸ್ಥೆಮಾಡುತ್ತಿದ್ದ. ಕೊಂಡವೀಡನ್ನು ಆಕ್ರಮಿಸಿದುದಕ್ಕೆ ಪ್ರತಾಪ-ಸಾಲುವ-ತಿಮ್ಮರಸಯ್ಯ ಎಂಬ ಬಿರುದನ್ನು ಪಡೆದ. ಕೆಲಕಾಲ ಕೊಂಡವೀಡುವಿನ ಪ್ರಾಂತ್ಯಾಧಿಕಾರಿಯಾಗಿದ್ದ. ಕೃಷ್ಣದೇವರಾಯನಿಗೆ ಈತನಲ್ಲಿ ಸಂಪೂರ್ಣ ನಂಬಿಕೆ ಇದ್ದಿತು. ಆದರೆ ಕೃಷ್ಣದೇವರಾಯ ತನ್ನ ಚಿಕ್ಕ ಮಗ ತಿರುಮಲದೇವನಿಗೆ ತಿಮ್ಮರಸ ಒಮ್ಮೆ ವಿಷಪ್ರಾಶನ ಮಾಡಲು ಪ್ರಯತ್ನಿಸಿದನೆಂದು ಇವನನ್ನು ಬಹಿರಂಗವಾಗಿ ಅವಮಾನಗೊಳಿಸಿದ. ಇವನನ್ನೂ ಮತ್ತು ಇವನ ಇಬ್ಬರು ಮಕ್ಕಳನ್ನೂ ಸೆರೆಯಲ್ಲಿಟ್ಟ. ಅನಂತರ ತಿಮ್ಮರಸನ ಕಣ್ಣುಕೀಳಿಸಿದ ಎಂಬ ಹೇಳಿಕೆಯೂ ಇದೆ. (ಎ.ವಿ.ವಿ.)

**ತಿಮ್ಮಾಮಾತ್ಯ :** ಸು.1750. ರಾಮಾಭ್ಯುದಯ ಕಥಾಕುಸುಮಮಂಜರಿ ಎಂಬ ಗ್ರಂಥದ ಕರ್ತೃ. ಈತ ಬೆಂಗಳೂರು ತಾಲ್ಲೂಕಿನ ನಗರದವ ನಿರಬಹುದೆಂದು ತೋರುತ್ತದೆ.

ರಾಮಾಭ್ಯುದಯ ಕಥಾಕುಸುಮಮಂಜರಿ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 7 ಕಾಂಡ, 78 ಸಂಧಿ, 3,446 ಪದ್ಯ ಇವೆ. ಇದಕ್ಕೆ ಆನಂದ ರಾಮಾಯಣ ಎಂಬ ಹೆಸರೂ ಇದೆ. ಈ ಕಾವ್ಯವನ್ನು ಆನೇಕಲ್ಲು ತಾಲ್ಲೂಕು ಸಹದೇವಪುರದ (ಸಾದನಹಳ್ಳಿ) ತಿರುಮಲದೇವರ ಅಂಕಿತದಲ್ಲಿ ರಚಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ. ಇದು ಎಲ್ಲ ರಾಮಾಯಣಗಳ (ಅದ್ಭುತರಾಮಾಯಣ, ಮಾರ್ಕಂಡೇಯ ರಾಮಾಯಣ, ಶಂಕರರಾಮಾಯಣ, ಕೌಶಿಕರಾಮಾಯಣ, ಅಧ್ಯಾತ್ಮರಾಮಾಯಣ, ಉತ್ತರ ರಾಮಾಯಣ, ಜೈನ ರಾಮಾಯಣ ಇತ್ಯಾದಿ) ಕಥಾಸಾರವನ್ನೊಳ ಗೊಂಡಿರುವುದಲ್ಲದೆ ವರಾಹ ನೃಸಿಂಹಾವತಾರಗಳ ಮತ್ತು ರಾವಣ ದಿಗ್ವಿಜಯದ ಕಥೆಯನ್ನು ಸಹ ಬಾಲ ಕಾಂಡದಲ್ಲಿಯೇ ಸೇರಿಸಿ ಉತ್ತರ ಕಾಂಡದಲ್ಲಿ ಶ್ರೀರಾಮನ ರಾಜ್ಯಭಾರ, ದಿಗ್ವಿಜಯ, ಅಶ್ವಮೇಧ ಮೊದಲಾದ ಕಥೆಯನ್ನು ಸೇರಿಸಿ ರಚಿಸಲ್ಪಟ್ಟಿದೆ. (ಜಿ.ಜಿ.ಎಮ್.)

**ತಿರುಮಕೂಡಲು ನರಸೀಪುರ :** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯಸ್ಥಳ. ಮೈಸೂರಿನ ಪೂರ್ವಕ್ಕಿರುವ ಈ ತಾಲ್ಲೂಕನ್ನು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮಂಡ್ಯ, ಮಳವಳ್ಳಿ ತಾಲ್ಲೂಕುಗಳೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಚಾಮರಾಜನಗರ, ಮೈಸೂರು ಜಿಲ್ಲೆಯ ಮೈಸೂರು ಮತ್ತು ನಂಜನಗೂಡು, ತಾಲ್ಲೂಕುಗಳೂ ಸುತ್ತುವರಿದಿವೆ. ಬನ್ನೂರು, ಸೋಸಲೆ, ತಿರುಮಕೂಡಲು ನರಸೀಪುರ, ಮೂಗೂರು ಮತ್ತು ತಲಕಾಡು ಹೋಬಳಿಗಳು, 133 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 594ಚ.ಕಿಮೀ. ಜನಸಂಖ್ಯೆ 2,78,156.

1882ರವರೆಗೆ ಈ ತಾಲ್ಲೂಕಿನ ಹೆಚ್ಚು ಪ್ರದೇಶ ತಲಕಾಡು ತಾಲ್ಲೂಕಿನಲ್ಲಿ ಸೇರಿತ್ತು. ಆ ವರ್ಷ ಹಳೆಯ ಅಷ್ಟಗ್ರಾಮ ತಾಲ್ಲೂಕಿನಿಂದ ಬನ್ನೂರು ಮತ್ತು ಬೇವಿನಹಳ್ಳಿಗಳನ್ನು ಈ ತಾಲ್ಲೂಕಿಗೂ ಇಲ್ಲಿದ್ದ ತಾಯೂರು ಹೋಬಳಿಯನ್ನು ನಂಜನಗೂಡು ತಾಲ್ಲೂಕಿಗೂ ಸೇರಿಸಿ

ತಿರುಮಕೊಡಲು ನರಸೀಪುರಕ್ಕೆ ಆಡಳಿತ ಕೇಂದ್ರವನ್ನು ವರ್ಗಾಯಿಸಲಾಯಿತು. 1886ರಲ್ಲಿ ಇಲ್ಲಿದ್ದ ಪೂರಿಗಾಲಿ ಹೋಬಳಿಯನ್ನು ಮಳವಳ್ಳಿ ತಾಲ್ಲೂಕಿಗೆ ವರ್ಗಾಯಿಸಲಾಯಿತು.

ಈ ತಾಲ್ಲೂಕು ಬಹುತೇಕ ಮೈದಾನ ಪ್ರದೇಶ. ವಿರಳವಾಗಿ ಅಲ್ಲಲ್ಲಿ ಕೆಲವು ಬೆಟ್ಟಗಳುಂಟು. ಈ ಬೆಟ್ಟಗಳಲ್ಲಿ ಮಳವಳ್ಳಿ ಎಲ್ಲೆಯ ಬಳಿ ಇರುವ ಕುಂದೂರು ಬೆಟ್ಟ ಎತ್ತರವಾದದ್ದು. ಇಲ್ಲಿನ ಹೆಚ್ಚಿನ ಪ್ರದೇಶದಲ್ಲಿ ಕಣಶಿಲೆ ತಳಶಿಲೆಯಾಗಿ ಕಂಡುಬರುತ್ತದೆ. ಈ ತಾಲ್ಲೂಕಿನ ಕುಪ್ಯ ಬಳಿ ಕೆಂಪು ಕುರಂದಶಿಲೆ ದೊರೆಯುತ್ತದೆ.

ಕಾವೇರಿ ಮತ್ತು ಕಪಿಲಾ ಈ ತಾಲ್ಲೂಕಿನ ಮುಖ್ಯ ನದಿಗಳು. ತಾಲ್ಲೂಕಿನ ವಾಯುವ್ಯ ಭಾಗದಿಂದ ಕಾವೇರಿನದಿ ಬನ್ನೂರು ಹೋಬಳಿಯ ಪಶ್ಚಿಮ ಮತ್ತು ನೈಋತ್ಯದ ಎಲ್ಲೆಯಾಗಿ ದಕ್ಷಿಣಾಭಿಮುಖವಾಗಿ ಹರಿದು ತಿರುಮಕೂಡಲು ನರಸೀಪುರದವರೆಗೂ ಬಂದು ಅನಂತರ ಈಶಾನ್ಯಾಭಿಮುಖವಾಗಿ ಸ್ವಲ್ಪ ದೂರ ಹರಿದು ಮಳವಳ್ಳಿ ತಾಲ್ಲೂಕಿನ ಗಡಿಯಾಗಿ ಅನಂತರ ನೇರ ದಕ್ಷಿಣಕ್ಕೆ ಹರಿದು ತಲಕಾಡನ್ನು ಬಳಸಿ ಮತ್ತೆ ಸ್ವಲ್ಪ ದೂರ ಈಶಾನ್ಯಾಭಿಮುಖವಾಗಿ ಹರಿಯುವಾಗ ಕೊಳ್ಳೇಗಾಲ ತಾಲ್ಲೂಕನ್ನು ಬೇರ್ಪಡಿಸಿ ಮುಂದೆ ಪೂರ್ವಾಭಿಮುಖವಾಗಿ ಹರಿಯುವುದು. ನಂಜನಗೂಡಿನ ಮುಖಾಂತರ ಹರಿದು ಬರುವ ಕಪಿಲಾ ನದಿ ಈ ತಾಲ್ಲೂಕನ್ನು ಪಶ್ಚಿಮದಲ್ಲಿ ಪ್ರವೇಶಿಸಿ ಪೂರ್ವಾಭಿಮುಖವಾಗಿ ಹರಿದು ತಿರುಮಕೂಡಲ ಬಳಿ ಕಾವೇರಿನದಿಯನ್ನು ಸಂಗಮಿಸುವುದು. ಈ ತಾಲ್ಲೂಕಿನಲ್ಲಿ ಕಾವೇರಿನದಿ ಮರಳಿನಿಂದ ಕೂಡಿದ ಅಗಲವಾದ ಪಾತ್ರದಲ್ಲಿ ಹರಿಯುವುದರಿಂದ ಪ್ರವಾಹ ಕಾಲ ಬಿಟ್ಟು ಉಳಿದ ಕಾಲಗಳಲ್ಲಿ ಇದನ್ನು ಹಾಯುವುದು ಸಾಧ್ಯ. ಈ ನದಿಯ ಎರಡು ದಡಗಳಲ್ಲೂ ಪಕ್ಕದ ತಗ್ಗು ಪ್ರದೇಶಗಳಲ್ಲೂ ಕಪ್ಪುಮಣ್ಣಿನ ಭೂಮಿ ಇದೆ. ತಾಲ್ಲೂಕಿನ ಎತ್ತರದ ಪ್ರದೇಶಗಳಲ್ಲಿ ಮತ್ತು ಪಶ್ಚಿಮ ಭಾಗದಲ್ಲಿ ಭೂಮಿ ಫಲವತ್ತಾಗಿಲ್ಲ. ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶ ಇಲ್ಲವೆನ್ನಬಹುದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 644ಮಿಮೀ.

ಈ ತಾಲ್ಲೂಕಿನ ತರಿ ವ್ಯವಸಾಯಕ್ಕೆ ಕಾವೇರಿ ನದಿ ನಾಲೆಗಳ ನೀರೇ ಮುಖ್ಯ ಆಧಾರ. ರಾಮಸ್ವಾಮಿ ಅಣೆಕಟ್ಟಿನಿಂದ ತೆಗೆದಿರುವ ಎರಡು ಕಾಲುವೆಗಳಲ್ಲಿ ಎಡದಂಡೆಯ ರಾಮಸ್ವಾಮಿನಾಲೆ ಸೋಸಲೆ, ಬನ್ನೂರು ಹೋಬಳಿಗಳ ಗದ್ದೆಗಳಿಗೆ ನೀರನ್ನು ಒದಗಿಸಿ ತಲಕಾಡಿಗೆ ಸು.13ಕಿಮೀ ದೂರದಲ್ಲಿ ಕೊನೆಗೊಳ್ಳುವುದು. ಬಲದಂಡೆಯ ರಾಜಪರಮೇಶ್ವರಿನಾಲೆ ತಾಲ್ಲೂಕಿನ ಪಶ್ಚಿಮ ಪ್ರದೇಶಕ್ಕೆ ನೀರನ್ನು ಒದಗಿಸುವುದು. ತಲಕಾಡಿನಿಂದ 3ಕಿಮೀ ಮೇಲೆ ಹೆಮ್ಮಿಗೆಯ ಬಳಿ ಇರುವ ಮಾಧವಮಂತ್ರಿ ಅಣೆಕಟ್ಟಿನಿಂದ ಹೊರಡುವ ನಾಲೆ ತಲಕಾಡಿನ ಉತ್ತರದಲ್ಲಿ ಹರಿದು ಮೂರು ಶಾಖೆಗಳಾಗಿ ಒಡೆಯುವುದು. ತಾಲ್ಲೂಕಿನಲ್ಲಿರುವ ಸುಮಾರು 35 ಕೆರೆಗಳು ನೀರಾವರಿಗೆ ಉಪಯುಕ್ತ.

ಈ ತಾಲ್ಲೂಕಿನ ಮುಖ್ಯ ಬೆಳೆ ಬತ್ತ. ಇದರೊಂದಿಗೆ ರಾಗಿ, ಜೋಳ, ಹುರಳಿ, ಹತ್ತಿ, ಹುರುಳಿ ಮುಂತಾದವನ್ನು ಬೆಳೆಯುತ್ತಾರೆ. ಸೌತೆಕಾಯಿ, ಕಲ್ಲಂಗಡಿ, ಕರಬೂಜ, ಮಾವು ಮುಂತಾದ ಹಣ್ಣುಗಳ ಜೊತೆಗೆ ಬಾಳೆ ಮತ್ತು ದ್ರಾಕ್ಷಿ ಬೆಳೆಯುತ್ತಾರೆ. ನಾನಾ ವಿಧವಾದ ತರಕಾರಿಗಳನ್ನೂ ಬೆಳೆಯುವುದುಂಟು.

ತಾಲ್ಲೂಕಿನಲ್ಲಿ ಕೈಮಗ್ಗದ ಬಟ್ಟೆ ತಯಾರಿಕೆ ಮತ್ತು ರೇಷ್ಮೆ ಹುಳು ಸಾಕಣೆ ಅಲ್ಪ ಪ್ರಮಾಣದಲ್ಲಿದ್ದು ದೊಡ್ಡ ಪ್ರಮಾಣದ ಕೈಗಾರಿಕೆಗಳು ಅಭಿವೃದ್ಧಿಯಾಗಿಲ್ಲ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಉತ್ತೇಜನದಿಂದ ಕೆಲವೊಂದು ಗ್ರಾಮೋದ್ಯೋಗಗಳು ಮುಂದುವರಿಯುತ್ತಿವೆ.

ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ರೈಲ್ವೆ ಮಾರ್ಗವಿಲ್ಲದಿದ್ದರೂ ಸುತ್ತಲ ಊರು ಮತ್ತು ಗ್ರಾಮಗಳಿಗೆ ನರಸೀಪುರದಿಂದ ಯಳಂದೂರು, ಕೊಳ್ಳೇಗಾಲ, ತಲಕಾಡು, ನಂಜನಗೂಡು, ಮೈಸೂರು, ಮಳವಳ್ಳಿ ಕಡೆಗಳಿಗೆ ಹೋಗುವ ರಸ್ತೆಗಳು ತಾಲ್ಲೂಕಿನ ಉತ್ತಮ ಸಂಪರ್ಕ ಸಾಧನಗಳಾಗಿವೆ. ಈ ತಾಲ್ಲೂಕಿನಲ್ಲಿ ತಿರುಮಕೂಡಲ ಬಳಿ ಕಾವೇರಿ ಮತ್ತು ಕಪಿಲಾ ನದಿಗಳಿಗೂ ಬನ್ನೂರಿನ ಬಳಿ ಕಾವೇರಿಗೂ ಕಟ್ಟಿರುವ ಸೇತುವೆಗಳು ಮುಖ್ಯವಾದವು.

ಈ ತಾಲ್ಲೂಕಿನಲ್ಲಿ ಇರುವ ಗರ್ಗೇಶ್ವರಿಯಲ್ಲಿ ಗರ್ಗೇಶ್ವರಿ ದೇವಾಲಯ, ಸೋಸಲೆಯ ಜನಾರ್ದನ, ಹೊನ್ನಾದೇವಿ ದೇವಾಲಯಗಳೂ ತಲಕಾಡಿನ ಬಳಿಯ ಮುಡುಕುತೊರೆ ಬೆಟ್ಟದ ಮೇಲಿನ ಮಲ್ಲಿಕಾರ್ಜುನ ದೇವಾಲಯವೂ ಕಾವೇರಿ ಕಪಿಲಾ ನದಿಗಳು ಸೇರುವ ಸ್ಥಳವಾದ ತಿರುಮಕೂಡಲಿನಲ್ಲಿ ಅಗಸ್ತ್ಯೇಶ್ವರ ದೇವಾಲಯವೂ ಪ್ರಸಿದ್ಧವಾದವು. ಮೂಗೂರು, ಬನ್ನೂರು, ತಲಕಾಡು ಮತ್ತು ಸೋಸಲೆ ಈ ತಾಲ್ಲೂಕಿನ ದೊಡ್ಡ ಸ್ಥಳಗಳು. ಸೋಮನಾಥಪುರ ಹೊಯ್ಸಳರ ಕಾಲದ ಚನ್ನಕೇಶವ ದೇವಾಲಯದ ಪ್ರಸಿದ್ಧ. ತಲಕಾಡಿನ ಹತ್ತಿರವಿರುವ ವಿಜಯಪುರದಲ್ಲಿ ಅರ್ಕೇಶ್ವರ ದೇವಾಲಯವಿದ್ದು ಅದರಲ್ಲಿರುವ ಲಿಂಗ ತಲಕಾಡಿನ ಪಂಚಲಿಂಗಗಳಲ್ಲಿ ಒಂದಾಗಿದೆ.

ತಿರುಮಕೂಡಲು ಕಾವೇರಿ ಮತ್ತು ಕಪಿಲಾ ನದಿಗಳ ಮಧ್ಯೆ ಸಂಗಮದ ಬಳಿ ಇದೆ. ತಳದಲ್ಲಿ ಗುಪ್ತವಾದ ಸ್ಫಟಿಕ ಸರೋವರವೂ ಇಲ್ಲಿರುವುದೆಂಬ ಐತಿಹ್ಯವಿದೆಯಾಗಿ ಈ ಸಂಗಮಕ್ಕೆ ಹಾಗೂ ಸ್ಥಳಕ್ಕೆ ತಿರುಮಕೂಡಲು (ತಿರು-ಮುಕ್ಕೂಡಲ್) ಎಂಬ ಹೆಸರು ಬಂದಿದೆ. ಆಗಾಗ್ಗೆ ನದಿಯ ಪ್ರವಾಹದ ಹಾವಳಿಗೆ ಒಳಗಾಗುವುದರಿಂದ ಇಲ್ಲಿನ ಗ್ರಾಮ ಅಷ್ಟಾಗಿ ಬೆಳೆದಿಲ್ಲ. ಆದರೆ ಪವಿತ್ರ ಕ್ಷೇತ್ರಗಳಲ್ಲಿ ಒಂದೆಂದು ಪರಿಗಣಿತವಾಗಿದ್ದು ಸಾಮಾನ್ಯವಾಗಿ ವರ್ಷಪೂರ್ತ ಯಾತ್ರಾರ್ಥಿಗಳು ಸಂದರ್ಶಿಸುತ್ತಾರೆ. ಇಲ್ಲಿರುವ ಅಗಸ್ತ್ಯೇಶ್ವರ ದೇವಾಲಯ ಪ್ರಮುಖ ಆಕರ್ಷಣೆ.

ಅಗಸ್ತ್ಯಋಷಿ ಲಿಂಗಪೂಜೆ ಮಾಡಬೇಕೆಂದು ಬಯಸಿ ಹನುಮಂತನಿಗೆ ನರ್ಮದೆಯಿಂದ ಒಂದು ಲಿಂಗವನ್ನು ತರುವಂತೆ ನಿರ್ದೇಶಿಸಿದನೆಂದೂ ಆದರೆ ಹನುಮಂತ ಸರಿಯಾದ ಸಮಯಕ್ಕೆ ಬಾರದಿದ್ದುದರಿಂದ ಅಗಸ್ತ್ಯ ಸ್ವತಃ ಮರಳಿನಿಂದ ಲಿಂಗವನ್ನು ನಿರ್ಮಿಸಿ ಪೂಜಿಸಿದನೆಂದೂ ಪೌರಾಣಿಕ ಐತಿಹ್ಯ. ಇದೇ ಅಗಸ್ತ್ಯೇಶ್ವರ ಮೂಲಲಿಂಗ. ಹನುಮಂತ ಹಿಂತಿರುಗಿ ಬಂದು ಈ ಕಾರ್ಯವನ್ನು ನೋಡಿ ಕೋಪಗೊಂಡು ಈ ಲಿಂಗವನ್ನು ಬೇರುಸಹಿತ ಕಿತ್ತೆಸೆಯಲು ಉದ್ಯುಕ್ತನಾದನೆಂದೂ ಆದರೆ ಈತನ ಬಲ ಸಾಧ್ಯವಾಗಲಿಲ್ಲವೆಂದೂ ಲಿಂಗ ಬಹಳ ಕಚ್ಚುಕಚ್ಚಾಗಿ ತಲೆಯ ಮೇಲೆ ಮೂರು ಪೊಳ್ಳುಗಳುಂಟಾದವೆಂದೂ ಕಥೆ. ಈಗ ಪೊಳ್ಳು ಯಾವಾಗಲೂ ಜಲಭರಿತವಾಗಿರುತ್ತದೆ. ಪವಿತ್ರವಾದ ಈ ಜಲವನ್ನು ಭಕ್ತಾದಿಗಳಿಗೆ ಹಂಚುತ್ತಾರೆ. ಹನುಮಂತ ತಂದ ಲಿಂಗವನ್ನು ಅನಂತರ ಹನುಮಂತೇಶ್ವರ ದೇವಾಲಯದಲ್ಲಿ ಸ್ಥಾಪಿಸಲಾಯಿತಂತೆ.

ಅಗಸ್ತ್ಯೇಶ್ವರ ದೇವಾಲಯ

ಅಗಸ್ತ್ಯೇಶ್ವರ ದೇವಾಲಯ ದ್ರಾವಿಡ ಶೈಲಿಯಲ್ಲಿರುವ ಕಟ್ಟಡ. ಗರ್ಭಗುಡಿ ಸೇರಿದಂತಿರುವ ಮೂಲಭಾಗ ಬಹುಶಃ 10-11ನೆಯ ಶತಮಾನದ ನಿರ್ಮಾಣ. ಮುಂದಿರುವ ನವರಂಗ ಮಂಟಪ ಸ್ವಲ್ಪಕಾಲಾನಂತರದಲ್ಲಿ ಕಟ್ಟಲಾದುದು. ಇದರಲ್ಲಿನ ಅನೇಕ ಕಂಬಗಳ ಮೇಲೆ ಪಿಟೀಲುವಾದಕಿ, ದುರ್ಗಾ ಮೊದಲಾದ ಸುಂದರ ಶಿಲ್ಪಗಳಿವೆ. ನವರಂಗದಲ್ಲಿ ಸುಬ್ರಹ್ಮಣ್ಯ, ಹೊಯ್ಸಳ ಕಾಲದ ಮಹಿಷಾಸುರಮರ್ದಿನಿ, ಸೂರ್ಯ ಮೊದಲಾದ ಶಿಲಾಶಿಲ್ಪಗಳಿವೆ. ವಿಜಯನಗರ ಕಾಲದ ಕೆಲವು ಕಂಚಿನ ವಿಗ್ರಹಗಳೂ ಇಲ್ಲವೆ. ಇದರ ಉತ್ತರದಲ್ಲಿರುವ ಒಂದು ಕೋಣೆಯಲ್ಲಿ ಉತ್ಸವಮೂರ್ತಿ

ಇದೆ. ಈ ಮೂಲಗುಡಿಯ ವಾಯವ್ಯದಲ್ಲಿ ಪಾರ್ವತಿ ಗುಡಿ ಇದೆ. ಇದು ಪಾಳೆಯಗಾರರ ಕಾಲದ ನಿರ್ಮಾಣ. ಈ ದೇವಿಯನ್ನು ಪೂರ್ಣಮಂಗಳ ಕಾಮಾಕ್ಷಿಯೆಂದು ಕರೆಯುತ್ತಾರೆ. ಈಕೆಯ ವಿಗ್ರಹ ಸುಂದರವಾಗಿದ್ದು ಸುಮಾರು ನಾಲ್ಕು ಅಡಿ ಎತ್ತರವಿದೆ. ಸುತ್ತಲೂ ಪ್ರಾಕಾರದ ಒಳಭಾಗದಲ್ಲಿ ನಂದಿ, ವಿಷ್ಣು, ದಕ್ಷಿಣಾಮೂರ್ತಿ ಮೊದಲಾದ ಅನೇಕ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿರುವ ಅಶ್ವತ್ಥನಾರಾಯಣನ ಮೂರ್ತಿ ವಿಶಿಷ್ಟ ಕೃತಿ. ಇದು ಸುಮಾರು ಎರಡು ಅಡಿ ಎತ್ತರವಾಗಿದ್ದು ನೃತ್ಯಭಂಗಿಯಲ್ಲಿದ್ದು ಅಷ್ಟಕರಗಳಿಂದ ಕೂಡಿದೆ. ದೇವಾಲಯದಲ್ಲಿ ಅಗಸ್ತ್ಯೇಶ್ವರ ಲಿಂಗವಲ್ಲದೆ ಸೋಮೇಶ್ವರ ಮತ್ತು ಮಾರ್ಕಂಡೇಶ್ವರ ಲಿಂಗಗಳೂ ಇವೆ. ಮುಂದಿರುವ ಮಹಾದ್ವಾರದ ಮೇಲೆ ಚಿಕ್ಕ ಗೋಪುರವಿದೆ. ದೇವಾಲಯದ ಮುಂದೆ ಒಂದು ದೊಡ್ಡ ಉಯ್ಯಾಲೆ ಕಂಬ (ತೋರಣ) ಮತ್ತು ಎರಡು ಎತ್ತರದ ದೀಪಸ್ತಂಭಗಳಿವೆ.

ದೇವಾಲಯದ ಹೊರಗಡೆ ಇರುವ ಅಶ್ವತ್ಥಮರ (ಅಶ್ವತ್ಥನಾರಾಯಣ) ಬಹು ಪವಿತ್ರವಾದುದೆಂದು ನಂಬಿಕೆ. ಇದು ಅನಾದಿಯಿಂದಲೂ ಇದೆಯೆಂದು, ಇದನ್ನು ಮೊದಲು ಬ್ರಹ್ಮ ಪೂಜಿಸಿದನೆಂದು ಪ್ರತೀತಿ. ಇದರ ಸುತ್ತ ಅನೇಕ ನಾಗರಕಲ್ಲುಗಳನ್ನೂ ಹನುಮಂತ ವಿಗ್ರಹಗಳನ್ನೂ ಪ್ರತಿಷ್ಠಾಪಿಸಿದೆ. ಇದರ ಸಮೀಪದಲ್ಲೇ ವ್ಯಾಸರಾಯ ಮಠವಿದ್ದು ಅದರಲ್ಲಿ ಆ ಮಠದ ಕೆಲವು ಗುರುಗಳ ಬೃಂದಾವನಗಳಿವೆ. ತಿರುಮಕೂಡಲಿನ ಎದುರಿಗೆ ಕಾವೇರಿಯ ಎಡದಂಡೆಯಲ್ಲಿ ಆನಂದೇಶ್ವರ, ಭಿಕ್ಷೇಶ್ವರ ಎಂಬ ಎರಡು ಶಿವಾಲಯಗಳಿವೆ. ಆನಂದೇಶ್ವರ ದೇವಾಲಯವನ್ನು ಸು. 18ನೆಯ ಶತಮಾನದಲ್ಲಿ ಚಿದಾನಂದಸ್ವಾಮಿ ಎಂಬ ಯತಿ ಕಟ್ಟಿಸಿದನೆಂದು ಹೇಳಲಾಗುತ್ತದೆ. (ಎಂ.ಎಲ್.ಎಸ್.)

ತಿರುಮಕೂಡಲು ನರಸೀಪುರ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ದೊಡ್ಡ ಊರು. ಮೈಸೂರು ನಗರದಿಂದ ಆಗ್ನೇಯದಲ್ಲಿ 30ಕಿಮೀ ದೂರದಲ್ಲಿ ಕಾವೇರಿ ಕಪಿಲಾ ನದಿಗಳ ಸಂಗಮದ ಬಳಿ ಬಲದಂಡೆಯ ಮೇಲಿದೆ. 1868ರಿಂದ ಇದು ತಾಲ್ಲೂಕು ಕೇಂದ್ರವಾಗಿ 1882ರಲ್ಲಿ ಇದರ ಹೆಸರು ತಾಲ್ಲೂಕಿಗೂ ಬಂತು. ಜನಸಂಖ್ಯೆ 9930.

ತಿರುಮಕೂಡಲನ್ನೂ ನರಸೀಪುರವನ್ನೂ ಸೇರಿಸುವ ಸೇತುವೆಯೊಂದನ್ನು ಕಪಿಲಾ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ತಿರುಮಕೂಡಲಿನಿಂದ ಕಾವೇರಿಯ ಎಡದಂಡೆಗೂ ಒಂದು ಸೇತುವೆ ಇದೆ. ಸುತ್ತಲ ಊರುಗಳೊಡನೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿರುವ ಈ ಊರು ಈ ಭಾಗಕ್ಕೆ ಮುಖ್ಯ ವ್ಯಾಪಾರಸ್ಥಳ. ಪುರಸಭೆ ಇದೆ. ಇಲ್ಲಿ ಒಂದು ರೇಷ್ಮೆ ನೂಲಿನ ಕಾರ್ಖಾನೆ ಸಹ ಇದೆ. (ಎಚ್.ಜಿ.)

ಗುಂಜಾನರಸಿಂಹ ದೇವಾಲಯ

ನರಸೀಪುರಕ್ಕೆ ಈ ಹೆಸರು ಬಂದಿರುವುದು ಇಲ್ಲಿಯ ಗುಂಜಾನರಸಿಂಹ ದೇವಾಲಯದಿಂದಾಗಿ. ಊರಿನ ಉತ್ತರಕ್ಕೆ ನದಿಯ ದಂಡೆಯಲ್ಲಿ ಉತ್ತರಾಭಿಮುಖವಾಗಿರುವ ಈ ದೇವಾಲಯ ಸುಮಾರು ದೊಡ್ಡ ಕಟ್ಟಡ. ಈ ದೇವಾಲಯ ವಿಜಯನಗರದ ಕಾಲದ ರಚನೆ. ಇಲ್ಲಿ ದೊರೆತಿರುವ ಪ್ರಾಚೀನತಮ ಶಾಸನ ಕೃಷ್ಣದೇವರಾಯನ ಕಾಲದ್ದಾಗಿದ್ದು ದೇವಾಲಯಕ್ಕೆ ನೀಡಿದ ದತ್ತಿಯ ವಿಚಾರವನ್ನು ತಿಳಿಸುತ್ತದೆ. ಮೂಗೂರ ಅರಸರು ಹಾಗೂ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಈ ದೇವಾಲಯವನ್ನು ಮತ್ತಷ್ಟು ವಿಸ್ತರಿಸಿದರು. ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿರುವ ಈ ದೇವಾಲಯ ಗರ್ಭಗೃಹ, ಸೊಗಸಾದ ಮಂಟಪ, ಪ್ರಾಕಾರ, ಮಹಾದ್ವಾರ ಮತ್ತು ಗೋಪುರ - ಇವುಗಳಿಂದ ಕೂಡಿದ ವಿಶಾಲ ಕಟ್ಟಡ. ಮಂಟಪದ ಮುಂದೆ ಬಲಿಪೀಠದ ಬಳಿ ಪರಸ್ಪರ ಎದುರಿರುವ ಕಂಬಗಳ ಮೇಲೆ ತುಂಬ ಅಲಂಕೃತವಾದ, ಅಂಜಲಿಬದ್ಧವಾಗಿ ನಿಂತಭಂಗಿಯಲ್ಲಿರುವ ಮತ್ತು ಗಡ್ಡಧಾರಿಯಾದ ಎರಡು ಮೂರ್ತಿಗಳನ್ನು ಕೆತ್ತಿದೆ. ಇವು ಮೂಗೂರ ಅರಸ ಹಾಗೂ ದೇವಾಲಯದ ಈ ಭಾಗವನ್ನು ಕಟ್ಟಿಸಿದ ಅವನ ಸೋದರರನ್ನು ಪ್ರತಿನಿಧಿಸುತ್ತವೆಂದು ಹೇಳಲಾಗಿದೆ. ಇದೇ ರೀತಿ ಮಹಾದ್ವಾರದ ಬಳಿ ಇರುವ ಮೂರ್ತಿಯೊಂದು ಗೋಪುರವನ್ನು ಕಟ್ಟಿಸಿದ ಇನ್ನೊಬ್ಬ ಮೂಗೂರ ಅರಸನನ್ನು ಪ್ರತಿನಿಧಿಸುತ್ತದೆ. ದೇವಾಲಯದ ಪ್ರಾಕಾರದೊಳಗೆ ರಾಮ, ಕೃಷ್ಣ, ವರದರಾಜ, ಆಂಡಾಳ್ ಮುಂತಾದ ಮೂರ್ತಿಗಳನ್ನೊಳಗೊಂಡ ಕೆಲವು ಚಿಕ್ಕ ಗುಡಿಗಳಿವೆ. ದೇವಾಲಯದ ಸುತ್ತ ಇರುವ ಮೇಲ್ಭಾಗದ ಕೈಪಿಡಿಗೋಡೆಯಲ್ಲಿ ವಿಷ್ಣುವಿನ ವಿವಿಧ ರೂಪ ಮತ್ತು ಅವತಾರಗಳ ಗಾರೆಯ ಮೂರ್ತಿಗಳಿವೆ. ಕೆಲವು ಮೂರ್ತಿಗಳ ಕೆಳಗೆ ಹೆಸರುಗಳನ್ನೂ ಕೆತ್ತಿದೆ. ಕೃಷ್ಣನ ಲೀಲೆಗಳನ್ನು ವಿವರಿಸುವ ಮೂರ್ತಿಗಳೂ ಇಲ್ಲಿವೆ. ಕೆಲವು ವಿಚಿತ್ರ ಮೂರ್ತಿಗಳು ಅಲ್ಲಲ್ಲಿ ಕಾಣಸಿಗುತ್ತವೆ. ದಕ್ಷಿಣ ಹಾಗೂ ಪಶ್ಚಿಮದ ಕೈಪಿಡಿ ಗೋಡೆಯಲ್ಲಿ ಹಿರಣ್ಯಕಶಿಪು ಸಂಹಾರ, ಯೋಗಾನರಸಿಂಹ, ಲಕ್ಷ್ಮೀನರಸಿಂಹ, ಅಷ್ಟಪಾಣಿ ನರಸಿಂಹ ಇತ್ಯಾದಿಯಾಗಿ ನರಸಿಂಹನ ಒಂಬತ್ತು ವಿವಿಧ ರೂಪಗಳನ್ನು ಚಿತ್ರಿಸಲಾಗಿದೆ.

ಮೂಲದೇವರಾದ ನರಸಿಂಹನ ಬಲಗೈಯ ಹೆಬ್ಬೆರಳು ಮತ್ತು ತೋರುಬೆರಳುಗಳ ನಡುವೆ ಗುಂಜಾಸಸ್ಯದ ಕಾಂಡವೊಂದನ್ನು ಬಿಡಿಸಲಾಗಿದೆ. ಈ ಕ್ಷೇತ್ರ ಪಾವಿತ್ರ್ಯದಲ್ಲಿ ಕಾಶಿಗಿಂತ ಒಂದು ಗುಂಜಿ ತೂಕ ಹೆಚ್ಚು ಎಂಬ ಅಂಶವನ್ನು ಇದು ಸೂಚಿಸುತ್ತದೆಂಬ ನಂಬುಗೆ ಇದೆ. ಈ ದೇವಾಲಯದ ಎಡಭಾಗಕ್ಕೆ ಅನತಿ ದೂರದಲ್ಲಿ ಸೊಗಸಾದ ಜನಾರ್ದನ ಮೂರ್ತಿಯುಳ್ಳ ಚಿಕ್ಕ ಗುಡಿಯೊಂದಿದೆ. ಅದರ ಪಶ್ಚಿಮಕ್ಕೆ 1855ರಲ್ಲಿ ನಿರ್ಮಿತವಾದ ಪ್ರಹ್ಲಾದ ಮಂಟಪವಿದೆ.

ಊರಿನ ಪೂರ್ವಕ್ಕೆ ನದಿ ದಂಡೆಯಲ್ಲಿ ಮೂಲಸ್ಥಾನೇಶ್ವರ ಗುಡಿ ಇದೆ. ಇದು ಬಹುಶಃ 1300ರ ರಚನೆಯಾಗಿದ್ದು ಅನಂತರ 19ನೆಯ ಶತಮಾನದಲ್ಲಿ ಪುನರ್ನಿರ್ಮಿತವಾದ ದ್ರಾವಿಡ ಶೈಲಿಯ ಚಿಕ್ಕ ಗುಡಿ. (ಎಚ್.ಎಂ.ಎನ್.ಆರ್.)

ತಿರುಮಕೂಡಲು ನರಸೀಪುರದ ಎದುರಿಗೆ ಕಾವೇರಿ ನದಿಯ ಎಡದಂಡೆಯ ಮೇಲೆ ಒಂದು ಪುರಾತನ ನಿವೇಶನವಿದೆ. ಇದನ್ನು ರಾಬರ್ಟ್ ಬ್ರೂಸ್‌ಫುಟ್ 19ನೆಯ ಶತಮಾನದ ಉತ್ತರಾರ್ಧದಲ್ಲಿ ಮೊಟ್ಟ ಮೊದಲಿಗೆ ಕಂಡುಹಿಡಿದ. ಈ ಪ್ರಾಕ್ತನ ನೆಲೆಯಲ್ಲಿ ಎಂ.ಶೇಷಾದ್ರಿಯವರ ನೇತೃತ್ವದಲ್ಲಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಸಂಶೋಧನ ಇಲಾಖೆ 1959 ರಿಂದ 1965ರ ವರೆಗೆ 6 ವರ್ಷಗಳ ಕಾಲ ಉತ್ಖನನ ನಡೆಸಿತು (1959-65). ಅದರ ಫಲವಾಗಿ ಕ್ರಿ.ಪೂ.2000 ವರ್ಷಗಳಷ್ಟು ಹಿಂದೆ ಈ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದ ನವಶಿಲಾಯುಗ ಸಂಸ್ಕೃತಿಯಿಂದ ಆರಂಭಿಸಿ ಕಬ್ಬಿಣಯುಗ ಮತ್ತು ಇತಿಹಾಸಯುಗದ ಪ್ರಾರಂಭ ಹಂತವನ್ನೂ ಒಳಗೊಂಡಂತೆ ಕ್ರಿ.ಶ.200-300ರ ವರೆಗಾದರೂ ಜನವಸತಿ ಇದ್ದ ವಿಷಯವಲ್ಲದೆ ಆ ಸಂಸ್ಕೃತಿಗಳ ಅನೇಕ ವಿವರಗಳೂ ತಿಳಿದುಬಂದವು. (ಬಿ.ಕೆ.ಜಿ.)

**ತಿರುಮಲಭಟ್ಟ :** ಸು.1600. ಬ್ರಾಹ್ಮಣಕವಿ. ಶಿವಗೀತೆ ಎಂಬ ಗ್ರಂಥದ ಕರ್ತೃ. ಈತ ಕೆಳದಿಯ ದೊರೆ ವೆಂಕಟಪ್ಪನಾಯಕನ (1582-1629) ಆಶ್ರಯದಲ್ಲಿದ್ದು ಆತನ ಪ್ರೇರಣೆಯ ಮೇರೆಗೆ ಶಿವಗೀತೆಯನ್ನು ರಚಿಸಿದುದಾಗಿ ತಿಳಿದುಬರುತ್ತದೆ. ಈತನ ತಂದೆ

ವಿಷ್ಣುಸೂರಿ. ಮಗ ಶಂಭುಲಿಂಗಭಟ್ಟ (ಈ ಶಂಭುಲಿಂಗಭಟ್ಟನಿಗೆ ವೆಂಕಟಪ್ಪನಾಯಕನ ಮೊಮ್ಮಗನಾದ ವೀರಭದ್ರನಾಯಕ ಭೂದಾನ ಮಾಡಿದುದಾಗಿ 1631ರ ಸಾಗರದ 41ನೆಯ ಶಾಸನ ತಿಳಿಸುತ್ತದೆ).

ಶಿವಗೀತೆ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ ಹದಿನಾರು ಸಂಧಿಗಳೂ ಮುನ್ನೂರ ಎಪ್ಪತ್ತೇಳು ಪದ್ಯಗಳೂ ಇವೆ. ಕೃತಿ ಪದ್ಮ ಪುರಾಣದ ಉತ್ತರಕಾಂಡದಲ್ಲಿರುವ ಶಿವಗೀತೆಯ ಭಾಷಾಂತರ. ಕವಿ ಹೀಗೆ ಪದ್ಮಪುರಾಣದ ಶಿವಗೀತೆಯನ್ನು ಭಾಷಾಂತರಿಸಿದ ವಿಷಯವನ್ನು ಕೆಳದಿನೃಪವಿಜಯದಲ್ಲಿ ಉಲ್ಲೇಖಿಸಲಾಗಿದೆ. ತೆಂಗಿನಕಾಯಿಯು ಒಳಗೆ ಅಮೃತಕ್ಕೆ ಸಮಾನವಾದ ತಿರುಳಿದ್ದರೂ ಗಿಳಿಗಳ ಹಿಂಡು ಹೊರಗೆ ಒರಟು ಸಿಪ್ಪೆ ಕರಟಗಳಿರುವುದನ್ನು ನೋಡಿ ಅದನ್ನು ಮುಟ್ಟದೆ ಬೇರೆ ಫಲಗಳನ್ನು ಅರಸುವಂತೆ ಅರಸಿಕರಾದ ಜನ ಒಳ್ಳೆಯ ಅರ್ಥವಿದ್ದರೂ ಕಠಿಣವಾದ ಕೃತಿಗಳನ್ನು ಗಮನಿಸುವುದಿಲ್ಲ. ಆದ್ದರಿಂದ ಎಲ್ಲರಿಗೂ ತಿಳಿಯುವಂತೆ ಮೃದುಪದಗಳಿಂದ, ಋಜುಮಾರ್ಗದಿಂದ ಈ ಕೃತಿಯನ್ನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ತನ್ನ ಗ್ರಂಥ ಭಗವದ್ಗೀತೆಗೆ ಸಮಾನವಾದುದೆಂದೂ ಅಭಿಪ್ರಾಯಪಟ್ಟಿದ್ದಾನೆ. ಈತನ ಕಾವ್ಯಶೈಲಿ ಸರಳವಾಗಿದೆ. ಭಾಷಾಂತರವಾದರೂ ಇದರಲ್ಲಿ ಕವಿ ಸ್ವಂತಿಕೆಯನ್ನು ಮೆರೆದಿದ್ದಾನೆ. ಈತನ ಕಲ್ಪನಾವಿಲಾಸ, ವರ್ಣನಾವೈಖರಿ, ಮೃದುಪದ ಪ್ರಯೋಗ, ಪ್ರಾಸಾನು ಪ್ರಾಸಗಳ ಬಳಕೆ ಓದುಗರಿಗೆ ಹಿತವನ್ನುಂಟುಮಾಡುವಂತಿದೆ. (ಎಂ.ಪಿ.ವಿ.)

**ತಿರುಮಲರಾಯ I :** ವಿಜಯನಗರ ಸಾಮ್ರಾಜ್ಯದ ಆರವೀಡು ವಂಶದ ರಾಜ (1570-78). ಆ ವಂಶದ ಸ್ವತಂತ್ರ ಆಳಿಕೆಯ ಸ್ಥಾಪಕ. ಇವನು ಅಳಿಯ ರಾಮರಾಯನ ಸೋದರ. ಅಖಂಡ ವಿಜಯನಗರ ಸಾಮ್ರಾಜ್ಯದ ಕೊನೆಯ ಅರಸು ಸದಾಶಿವನ ಕಾಲದಲ್ಲಿ ಇವನು ತನ್ನ ಸೋದರರೊಂದಿಗೆ ರಾಜ್ಯದ ಆಡಳಿತದಲ್ಲಿ ಪ್ರಮುಖ ಪಾತ್ರವಹಿಸಿದ. ರಾಮರಾಜನಿಗೆ ಬೆಂಬಲವಾಗಿ ನಿಂತು ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದ. 1565ರಲ್ಲಿ ನಡೆದ ತಾಳೀಕೋಟೆ ಯುದ್ಧದಲ್ಲಿ ಬಹಮನೀ ಸುಲ್ತಾನರಿಂದ ಆಕಸ್ಮಿಕ ಪರಾಜಯವನ್ನು ಅನುಭವಿಸಬೇಕಾಗಿಬಂದಾಗ ಅಳಿದುಳಿದ ಸಂಪತ್ತನ್ನು ಸಂಗ್ರಹಿಸಿ ರಾಜಮನೆತನದವರನ್ನು ಕೂಡಿಕೊಂಡು ಇವನು ತಿರುಮಲೆಗೆ ಓಡಿಹೋದ. ಸುಲ್ತಾನರು ಹಂಪೆಯನ್ನು ತೊರೆದಾಗ ಇವನು ಮರಳಿ ಬಂದು ರಾಜಧಾನಿಯ ಪುನರುಜ್ಜೀವನಕ್ಕೆ ಅಗಾಧ ಪ್ರಯತ್ನ ನಡೆಸಿದನೆಂದು ತಿಳಿದುಬರುತ್ತದೆ. ಪೋರ್ಚುಗೀಸರೊಂದಿಗೆ ಪುನಃ ವ್ಯಾಪಾರ ಸಂಬಂಧವನ್ನು ಕುದುರಿಸಲು ಯತ್ನಿಸಿದ. ಆದರೆ ಅವರಿಗೆ ಕೊಡಬೇಕಾದ ಬಾಕಿಯನ್ನು ಕೊಡಲು ತಪ್ಪಿದುದರಿಂದ ಈ ಸಂಬಂಧ ಹಳಸಿತು. ಬಹಮನೀ ಸುಲ್ತಾನರು ವಿಜಯದ ತರುವಾಯ ಬಹುಬೇಗ ತಮ್ಮತಮ್ಮಲ್ಲೇ ಭಿನ್ನಾಭಿಪ್ರಾಯ ತಳೆದಿದ್ದುದರಿಂದ ಅವರೆಲ್ಲರ ಒಟ್ಟಿನ ದಾಳಿಯ ಅಪಾಯದಿಂದ ತಿರುಮಲ ತಪ್ಪಿಸಿಕೊಂಡ. ಆದರೆ ಬಿಜಾಪುರದ ಸುಲ್ತಾನ ಆಗಾಗ ವಿಜಯನಗರ ಸಾಮ್ರಾಜ್ಯದ ಮೇಲೆ ದಾಳಿಗಳನ್ನು ನಡೆಸುತ್ತಿದ್ದ. ಇವೆಲ್ಲದರಿಂದ ಬೇಸತ್ತ ತಿರುಮಲ 1567ರ ಜುಲೈನಲ್ಲಿ ಅಂತಿಮವಾಗಿ ರಾಜಧಾನಿಯನ್ನು ಪೆನುಕೊಂಡೆಗೆ ಬದಲಾಯಿಸಿದ.

ಆಡಳಿತ ಸೂತ್ರ ತಿರುಮಲನ ಕೈಯಲ್ಲಿ ಇದ್ದರೂ ಸದಾಶಿವರಾಯ ನಾಮಮಾತ್ರ ದೊರೆಯಾಗಿದ್ದ. ಸದಾಶಿವ 1570ರಲ್ಲಿ ಮರಣಹೊಂದಿದ ಮೇಲೆ ತಿರುಮಲ ಸ್ವತಃ ಸಾರ್ವಭೌಮನೆಂದು ಘೋಷಿಸಿಕೊಂಡ. ಅವನನ್ನು ತಿರುಮಲನ ಮಗನೇ ಕೊಂದನೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಇವನ ಆಳಿಕೆಯಿಂದ ಆರವೀಡುವಂಶದ ಉದಯವಾಯಿತು. 1560ರಲ್ಲಿಯೇ ಇವನು ಸಾಮ್ರಾಜ್ಯವನ್ನು ಮೂರು ಮಂಡಲಗಳನ್ನಾಗಿ ವಿಂಗಡಿಸಿದ್ದ. ತನ್ನ ಮಕ್ಕಳಾದ ಶ್ರೀರಂಗ, ರಾಮ ಮತ್ತು ವೆಂಕಟಾದ್ರಿಗಳನ್ನು ಕ್ರಮವಾಗಿ ಪೆನುಕೊಂಡೆ, ಶ್ರೀರಂಗಪಟ್ಟಣ ಮತ್ತು ಚಂದ್ರಗಿರಿಗಳಿಗೆ ಮಂಡಲಾಧಿಪತಿಗಳನ್ನಾಗಿ ನೇಮಿಸಿದ್ದ. ತಿರುಮಲ 1578ರಲ್ಲಿ ತನ್ನ ಮಗ ಶ್ರೀರಂಗನಿಗೆ ಸಿಂಹಾಸನವನ್ನು ಬಿಟ್ಟುಕೊಟ್ಟು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನೆನ್ನುವ ಹಾಗೂ ಅದೇ ವರ್ಷ ನಿಧನಹೊಂದಿದ ಎಂದು ಹೇಳುವ ಅಭಿಪ್ರಾಯಗಳೂ ಇವೆ.

ಇವನ ಕಾಲದಲ್ಲಿ ಮದುರೆ, ತಂಜಾವೂರು ಮತ್ತು ಜಿಂಜಿ ಸಾಮಂತರು ಸ್ವತಂತ್ರರಾದರು. ಕೆಳದಿ, ವೆಲ್ಲೂರಿನ ನಾಯಕರು ಮತ್ತು ಮೈಸೂರಿನ ಒಡೆಯರು ಪೆನುಕೊಂಡೆಗೆ ನಿಷ್ಠರಾಗಿದ್ದರು. ಬಿಜಾಪುರದ ಅಲಿ ಆದಿಲ್ ಷಾ ಈ ಕಾಲದಲ್ಲಿ ತನ್ನ ರಾಜ್ಯವನ್ನು ದಕ್ಷಿಣದತ್ತ ವಿಸ್ತರಿಸುವ ಹವಣಿಕೆಯಲ್ಲಿದ್ದ. ಧಾರವಾಡ ಆದಿಲ್ ಷಾನ ವಶವಾಯಿತು. ಅವನ ಸೈನ್ಯ ಬಂಕಾಪುರದವರೆಗೂ ಮುನ್ನಡೆದು ಶ್ರೀರಂಗನ ಕಾಲಕ್ಕೆ ಅದನ್ನು ವಶಪಡಿಸಿ ಕೊಂಡಿತು. ತಿರುಮಲ ಆ ಕಾಲದಲ್ಲಿ ರಾಜ್ಯದ ಹೊಣೆ ಹೊರುವಷ್ಟು ದಕ್ಷನಾಗಿರಲಿಲ್ಲವೆಂಬ ಅಭಿಪ್ರಾಯವಿದೆ. ಆದರೂ ನಿರ್ನಾಮ ವಾಗಬೇಕಾಗಿದ್ದ ವಿಜಯನಗರದ ರಾಜತ್ವವನ್ನು ಉಳಿಸಿ ಮುಂದೆ ಹಲವು ವರ್ಷಗಳ ಕಾಲ ಆಳಿದ ಹೊಸ ಆರವೀಡು ವಂಶದ ಸ್ಥಾಪನೆಗೆ ಕಾರಣವಾದ ಹೆಗ್ಗಳಿಕೆಗೆ ಇವನು ಪಾತ್ರನಾಗುತ್ತಾನೆ. ಸಾಮಂತರನ್ನು ಕುಶಲಮತಿಯಿಂದ ನಡೆಸಿಕೊಂಡು ಅವರ ವಿಶ್ವಾಸ ಗಳಿಸಿಕೊಂಡಿದ್ದು, ಒರಿಸ್ಸ ಮತ್ತು ಆಂಧ್ರದಲ್ಲಿ ನಡೆದ ಕೆಲವು ದಂಗೆಗಳನ್ನು ಅಡಗಿಸಿದು. ಆಡಳಿತ ಸುಭದ್ರತೆಯನ್ನು ಕಾಯ್ದುಕೊಳ್ಳಲು ರಾಜ್ಯವನ್ನು ಮಂಡಲಗಳಾಗಿ ವಿಭಜಿಸಿದ್ದು, ಅಹಮದ್ ನಗರದ ರಾಜಮಾತೆಯ ಸಹಕಾರ ಪಡೆದು ಮುಸ್ಲಿಂ ಆಕ್ರಮಣಗಳನ್ನು ನಿಯಂತ್ರಿಸಿದ್ದು ಇವೆಲ್ಲ ಇವನ ಸಾಧನೆಗೆ ನಿದರ್ಶನಗಳಾಗಿವೆ. (ಡಿ.ಎಸ್.ಜೆ.)

**ತಿರುಮಲಾಂಬಾ :** ವಿಜಯನಗರದ ರಾಜ ಅಚ್ಯುತರಾಯನ (1529-42) ಪತ್ನಿ; ವರದಾಂಬಿಕಾಪರಿಣಯ ಎಂಬ ಕಾವ್ಯವನ್ನು ಸಂಸ್ಕೃತದಲ್ಲಿ ಬರೆದ ಕವಯಿತ್ರಿ. ಈಕೆ ತನ್ನ ಗ್ರಂಥದಲ್ಲಿ ಕಾವ್ಯ, ನಾಟಕ ಪುರಾಣಗಳನ್ನು ಬಲ್ಲವಳು, ಗ್ರಹಣಶಕ್ತಿಯುಳ್ಳವಳು, ಅನೇಕ ಭಾಷೆಗಳನ್ನು ಬಲ್ಲವಳು, ಮಧುರ ಕಂಠದವಳು, ಕವಿಗಳಿಗೆ ಆಶ್ರಯವನ್ನಿತ್ತವಳು, ದತ್ತಿಶಾಸನಗಳನ್ನು ಬರೆದವಳು ಎಂಬುದಾಗಿ ತನ್ನನ್ನು ಕುರಿತು ಹೇಳಿಕೊಂಡಿದ್ದಾಳೆ.

ವರದಾಂಬಿಕಾಪರಿಣಯ ಐತಿಹಾಸಿಕ ಚಂಪೂಕಾವ್ಯ. ಅಚ್ಯುತರಾಯ ವರದಾಂಬಿಕೆಯನ್ನು ಪ್ರೀತಿಸಿ ವರಿಸಿದ ಪ್ರಸಂಗವೇ ಮುಖ್ಯವಸ್ತು. ಕಾವ್ಯದ ಆರಂಭದಲ್ಲಿ ತುಳುವ ಮನೆತನದ ನರಸನಾಯಕನ ವಂಶದ ಪೂರ್ವ ಇತಿಹಾಸವನ್ನು ಹೇಳುತ್ತ ಆ ದೊರೆಗಳು ಚಂದ್ರವಂಶಕ್ಕೆ ಸೇರಿದವರೆಂದು ತಿಳಿಸುತ್ತಾಳೆ. ಇವಳ ಕಾವ್ಯದಲ್ಲಿ ನರಸರಾಜನ ದಿಗ್ವಿಜಯ, ಅಚ್ಯುತರಾಯನ ಯೌವನದ ವರ್ಣನೆ, ವರದಾಂಬಿಕೆಯ ಪರಿಣಯ, ಚಿನವೆಂಕಟಾದ್ರಿಯ ಜನನ, ಯುವರಾಜಪಟ್ಟ ಇತ್ಯಾದಿ ವರ್ಣನೆಗಳು ತುಂಬಿವೆ. ಆದರೆ ಅಚ್ಯುತರಾಯನಿಗಿಂತ ಸದ್ಯ ಹಿಂದೆ ಆಳಿದ ಕೃಷ್ಣದೇವರಾಯನ ಹೆಸರನ್ನೇ ಹೇಳದಿರುವುದು ಆಶ್ಚರ್ಯಕರವಾಗಿದೆ. ಕಾವ್ಯದಲ್ಲಿ ಶಬ್ದಾಲಂಕಾರಗಳ ಬಳಕೆ ಹೆಚ್ಚಾಗಿದ್ದರೂ ಅಚ್ಯುತರಾಯನ ಚರಿತೆ ಸರಳ ಸಹಜ ಅಲಂಕಾರಗಳಿಂದ ಕೂಡಿದೆ. ಅಲ್ಲಲ್ಲಿ ಬರುವ ದೀರ್ಘಸಮಾಸೋಕ್ತಿಗಳೂ ಶ್ಲೇಷೆ, ವಿರೋಧಾಭಾಸ, ಅಲಂಕಾರ ಮುಂತಾದುವುಗಳೂ ಇವಳ ವಿಶೇಷ ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. (ಕೆ.ಎನ್.ಎಸ್.)

**ತಿರುಮಲಾಂಬಾ, ನಂಜನಗೂಡು :** 1887-1982. ಪ್ರಥಮ ಕನ್ನಡ ಲೇಖಕಿ, ಸಂಪಾದಕಿ, ಪ್ರಕಾಶಕಿ, ಸಮಾಜ ಸೇವಕಿ. ಇವರು 1887 ಮಾರ್ಚ್ 25ರಂದು ನಂಜನಗೂಡಿನಲ್ಲಿ ಜನಿಸಿದರು. ತಂದೆ ವೆಂಕಟಕೃಷ್ಣ ಅಯ್ಯಂಗಾರ್, ತಾಯಿ ಅಲಮೇಲಮ್ಮ, ಪತಿ ನರಸಿಂಹಯ್ಯಂಗಾರ್. ಇವರದು ಬಾಲ್ಯವಿವಾಹ. 14ನೆಯ ವಯಸ್ಸಿಗೇ ವಿಧವೆಯಾದರು (1901). ಪ್ರಾಥಮಿಕ ಶಿಕ್ಷಣ ಮಾತ್ರ ಪಡೆದಿದ್ದ ಇವರು ತಂದೆಯ ಪ್ರೇರಣೆ, ಪ್ರೋತ್ಸಾಹಗಳಿಂದ ಲೇಖಕಿಯಾಗಿ ರೂಪಿತ ಗೊಂಡರು. ಸತೀ ಹಿತೈಷಿಣೀ ಎಂಬುದು ಇವರ ಕಾವ್ಯನಾಮ. ಸಂಸ್ಕೃತ, ತಮಿಳು, ಕನ್ನಡ, ತೆಲುಗು ಭಾಷೆಗಳನ್ನು ಇವರು ಬಲ್ಲವರಾಗಿದ್ದರು.

ಇವರು ಅನೇಕ ಸಾಮಾಜಿಕ ಕಾದಂಬರಿಗಳನ್ನೂ ಪತ್ತೇದಾರಿ ಕಾದಂಬರಿಗಳನ್ನೂ ಪೌರಾಣಿಕ ನಾಟಕಗಳನ್ನೂ ಸಣ್ಣಕಥೆಗಳನ್ನೂ ಪ್ರಬಂಧಗಳನ್ನೂ ಕವಿತೆಗಳನ್ನೂ ಬರೆದಿದ್ದಾರೆ. ಸುಶೀಲೆ (1913), ಸಭಾ (1914), ವಿರಾಗಿಣಿ (1915), ವಿದ್ಯುಲ್ಲತಾ (1914), ಮಾತೃ ನಂದಿನಿ (1916), ರವಿವರ್ಮ (1936) ಮಣಿಮಾಲಾ (1939)- ಇವು ಇವರ ಕೆಲವು ಸಾಮಾಜಿಕ ಕಾದಂಬರಿಗಳು. ತಾವು ಕಂಡ ಸಾಮಾಜಿಕ ಪರಿಸರ, ವ್ಯವಸ್ಥೆಯ ವಿವಿಧ ಮುಖಗಳನ್ನು ಈ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ದಕ್ಷಕನ್ಯಾ (1915), ವಿಕ್ರಮ (1916) - ಇವು ಪತ್ತೇದಾರಿ ಕಾದಂಬರಿಗಳು. ರಮಾನಂದ ಒಂದು ಸಾಮಾಜಿಕ ನಾಟಕ. ಚಂದ್ರವದನಾ (1916), ವಿವೇಕೋದಯ (1922), ಭಾರ್ಗವ ಗರ್ವಭಂಗ (1927) - ಇವು

ಪೌರಾಣಿಕ ನಾಟಕಗಳು. ಸಚ್ಚರಿತ ಸುಧಾರ್ಣವ (1927) ಎಂಬುದು ಸಣ್ಣಕಥಾ ಸಂಕಲನ. ವಿದ್ಯಾವಿಚಾರ (1922), ಅಬಲಾ ದೌರ್ಜನ್ಯಂ (1931) - ಇವು ಪ್ರಬಂಧ ಸಂಕಲನಗಳು. ಇವರ ಸಂಪಾದಕತ್ವದಲ್ಲಿ 16 ಕೃತಿಗಳು ಪ್ರಕಟಗೊಂಡಿವೆ.

ಇವರ ಕೆಲವು ಕಾದಂಬರಿಗಳು ಹಾಗೂ ಒಂದು ನಾಟಕ ಮೈಸೂರು, ಮದರಾಸು, ಮುಂಬಯಿ ಪ್ರಾಂತ್ಯಗಳ ವಿದ್ಯಾ ಇಲಾಖೆಯಲ್ಲಿ ವಿವಿಧ ತರಗತಿಗಳಿಗೆ ಪಠ್ಯಪುಸ್ತಕಗಳಾಗಿದ್ದುವು.

ಇವರು ಕರ್ನಾಟಕ ನಂದಿನಿ (1916-20) ಎಂಬ ಪತ್ರಿಕೆಯ ಸಂಪಾದಕಿಯಾಗಿದ್ದರು. ಇದು ಕನ್ನಡದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಗೊಂಡ ಮೊತ್ತಮೊದಲ ಪತ್ರಿಕೆ. ಮಕ್ಕಳಿಗಾಗಿ ಸನ್ಮಾರ್ಗದರ್ಶಿ (1922-26) ಎಂಬ ಮಾಸ ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ಇವರು ಕನ್ನಡದ ಪ್ರಪ್ರಥಮ ಮಹಿಳಾ ಪ್ರಕಾಶಕಿಯೂ ಆಗಿದ್ದರು. ಸತೀ ಹಿತೈಷಿಣೀ ಎಂಬ ಗ್ರಂಥ ಮಾಲೆ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ (1913) ತಮ್ಮ ಅನೇಕ ಕೃತಿಗಳನ್ನೂ ಇತರರ ಕೃತಿಗಳನ್ನೂ ಸಂಪಾದಿಸಿ ಪ್ರಕಟಿ ಸಿದರು. ಇದಲ್ಲದೆ ಸನ್ಮಾರ್ಗ, ನಂದಿನಿ ಎಂಬ ಗ್ರಂಥಮಾಲೆಗಳನ್ನೂ ಸ್ಥಾಪಿಸಿದ್ದರು.

ಇವರ ಬಹುಪಾಲು ಕೃತಿಗಳು ಸಂಪ್ರದಾಯದ ಚೌಕಟ್ಟಿನಲ್ಲಿಯೇ ರಚಿತವಾದಂಥವು. ಆದರೆ ಕೆಲವೊಮ್ಮೆ ಈ ಸಂಪ್ರದಾಯದ ನಡುವೆಯೂ ವೈಚಾರಿಕತೆಯನ್ನು ಎತ್ತಿ ಹಿಡಿದದ್ದು ಇವರ ಬರೆಹದ ವಿಶೇಷತೆಯಾಗಿದೆ. ಸ್ತ್ರೀಪರ ಚಿಂತನೆ ಇವರ ಪ್ರಮುಖ ಕಾಳಜಿಗಳಲ್ಲೊಂದಾಗಿತ್ತು.

ಇವರಿಗೆ ಮೈಸೂರು, ಬೊಂಬಾಯಿ, ಮದರಾಸು ಸರ್ಕಾರದ ವಿದ್ಯಾ ಇಲಾಖೆಯಿಂದ ಅನೇಕ ಬಹುಮಾನಗಳು ದೊರಕಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ (1980), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1981) ಇವರಿಗೆ ಲಭ್ಯವಾಗಿದ್ದವು. ಚಿ.ನ.ಮಂಗಳಾ ಅವರ ಪ್ರಯತ್ನದ ಫಲವಾಗಿ ಇವರ ಹೆಸರಿನಲ್ಲಿ ಶಾಶ್ವತಿ ಎಂಬ ಮಹಿಳಾ ಅಧ್ಯಯನ ಕೇಂದ್ರವೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ತಿರುಮಲಾಂಬಾ ಹೆಸರಿನಲ್ಲಿ ಮಹಿಳೆಯರಿಗಾಗಿ ಪ್ರತಿವರ್ಷ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಇವರು 1982 ಆಗಸ್ಟ್ 31ರಂದು ನಿಧನರಾದರು. ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯನ್ನು ರಚಿಸುವಲ್ಲಿ ಅನೇಕ ಪ್ರಥಮಗಳಿಗೆ ಆದ್ಯರಾದ ತಿರುಮಲಾಂಬಾ ಅವರನ್ನು ಮರೆಯುವಂತಿಲ್ಲ. *

**ತಿರುಮಲಾರ್ಯ :** 1645-1706. ಬ್ರಾಹ್ಮಣ ಕವಿ. ಈತ ಚಿಕ್ಕ ದೇವರಾಜ ಒಡೆಯರ (1673-1704) ಆಸ್ಥಾನ ಕವಿಯಾಗಿದ್ದ. ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣ ಇವನ ಜನ್ಮಸ್ಥಳ. ತಂದೆ ಅಳಸಿಂಗರಾರ್ಯ, ತಾಯಿ ಸಿಂಗಾರಮ್ಮ, ತಮ್ಮ ಸಿಂಗರಾರ್ಯ (ಮಿತ್ರವಿಂದಾಗೋವಿಂದದ ಕರ್ತೃ). ಕವಿ ಬಾಲ್ಯದಿಂದಲೂ ಚಿಕ್ಕದೇವರಾಜನ ಒಡನಾಡಿಯಾಗಿ, ಸಹಪಾಠಿಯಾಗಿ, ಆತ್ಮೀಯ ಗೆಳೆಯನಾಗಿ ಬೆಳೆದು ಆಸ್ಥಾನ ಕವಿಯಾಗಿ ಪಂಡಿತನಾಗಿ ಕೊನೆಗೆ ಮಂತ್ರಿಯಾಗಿ ಗೌರವ ಪಡೆದ. ಈತ ಕೆಲವು ಕಾಲ ಮಧುರೆ ನಾಯಕನ ಹೆಂಡತಿ ಮಂಗಮ್ಮನ ಬಳಿಯೂ ಮಂತ್ರಿಯಾಗಿದ್ದಂತೆ ತಿಳಿಯುತ್ತದೆ. ದೇವಚಂದ್ರನ ರಾಜಾವಳೀ ಕಥೆಯಲ್ಲಿ (ಸು.1832) ಇವನನ್ನು ವಿದ್ಯಾವಿಶಾರದನೆಂದು ಕರೆದಿದೆ. ಅಪ್ರತಿಮ ವೀರಚರಿತೆ, ಚಿಕದೇವರಾಜ ವಂಶಾವಳಿ, ಚಿಕದೇವರಾಜವಿಜಯ, ಚಿಕದೇವರಾಜ ಶತಕ - ಇವು ಈತನ ಕೃತಿಗಳು. ಚಿಕ್ಕದೇವರಾಜರ ಹೆಸರಿನಲ್ಲಿರುವ ಗೀತ ಗೋಪಾಲ, ಚಿಕದೇವರಾಜ ಬಿನ್ನಪಗಳನ್ನೂ ಇವನು ರಚಿಸಿರಬೇಕೆಂಬ ಊಹೆ ಇದೆ. ಇದಕ್ಕೆ ಸಾಕಷ್ಟು ಸಮರ್ಥನೆಯೂ ದೊರೆಯುತ್ತದೆ. ಚಿಕ್ಕದೇವರಾಜ ಈತನ ಎಲ್ಲ ಕೃತಿಗಳ ಕಥಾನಾಯಕನಾಗಿದ್ದಾನೆ. ಕೆಲವೊಮ್ಮೆ ಸ್ವಾಮಿಭಕ್ತಿ, ಆತ್ಮೀಯತೆಯ ಅತಿರೇಕದಿಂದಾಗಿ ಕಾವ್ಯಶಕ್ತಿ ಕುಂಠಿತವಾಗಿದೆ. ಚಿಕದೇವರಾಜ ಶತಕ ಉಪಲಬ್ಧವಿಲ್ಲ.

ಚಿಕದೇವರಾಜ ವಂಶಾವಳಿ ಹಳಗನ್ನಡ ಗದ್ಯಗ್ರಂಥ; ಕೃತಿ ಅಪೂರ್ಣವಾಗಿದೆ. ಇದರಲ್ಲಿ ರಾಜ ಒಡೆಯರಿಂದ ಚಿಕ್ಕದೇವರಾಜ ಒಡೆಯರವರೆಗಿನ ಮೈಸೂರು ಒಡೆಯರ ಇತಿಹಾಸ ನಿರೂಪಿತವಾಗಿದ್ದರೂ ಕವಿಯಲ್ಲಿ ಕಲ್ಪನಾವಿಲಾಸವಿದೆಯೇ ಹೊರತು ಇತಿಹಾಸಕಾರನ ವಸ್ತುಸ್ಥಿತಿಯ ಖಚಿತತೆಯಾಗಲೀ, ಪ್ರಮಾಣಜ್ಞಾನವಾಗಲೀ, ಐತಿಹಾಸಿಕ ಪ್ರಜ್ಞೆಯಾಗಲೀ ಇಲ್ಲ. ರಾಜ ಒಡೆಯರ ಚರಿತ್ರೆಯ ಭಾಗದಲ್ಲಿ ಕಲ್ಪನೆ, ಇತಿಹಾಸ ಎರಡೂ ಬೆರೆತಿದ್ದರೆ ದೊಡ್ಡದೇವರಾಜರ ಚರಿತ್ರೆಯಲ್ಲಿ ಕಲ್ಪನೆ ನಿರಾತಂಕವಾಗಿ ಬೆಳೆದಿದೆ. ಕೆಲವೊಮ್ಮೆ ವರ್ಣನೆಗಳಿಗೆ ಗಟ್ಟಿಯಾದ ಆಧಾರವಿಲ್ಲದೆ ಕೃತಿ ಶಿಲ್ಪದ ಒಟ್ಟಂದದ ಪ್ರಮಾಣ ಮೀರಿ ಅತಿರೇಕವಾಗಿದೆ. ರಣಧೀರನೆಂದು ಇತಿಹಾಸದಲ್ಲಿ ಸುಪ್ರಸಿದ್ಧನಾದ ಕಂಠೀರವ ನರಸರಾಜನ ಜೀವನ ವೃತ್ತಾಂತ ಮೊಟಕಾಗಿದೆ. ಗದ್ಯಶೈಲಿ ಈ ಕೃತಿಯ ಜೀವಾಳ. ಇವನ ಗದ್ಯ ಸಂಸ್ಕೃತ ಹಾಗೂ ಕನ್ನಡಗಳೆರಡರ ಸತ್ವವನ್ನು ಹೀರಿ ಬೆಳೆದು ಪರಿಪುಷ್ಟವಾದ ವೈಯಕ್ತಿಕತೆಯಿಂದ ಕೂಡಿದೆ. ವಡ್ಡಾರಾಧನೆಯ ದೇಸಿಯ ಸೊಬಗು, ಚಾವುಂಡರಾಯ ಪುರಾಣದ ಬಿಗಿಯಾದ ಶೈಲಿ ಇಲ್ಲದಿದ್ದರೂ ಹಳಗನ್ನಡದ ಬೆಳವಣಿಗೆಯ ಗದ್ಯಕೃತಿಗಳಲ್ಲಿ ಇದೂ ಒಂದು ಎಂಬ ದೃಷ್ಟಿಯಿಂದ ಈ ಗ್ರಂಥಕ್ಕೆ ಮಹತ್ವ ದೊರೆತಿದೆ. ಗದ್ಯಕೃತಿಯಾದ ಕಾರಣ ಘಟನಾಪ್ರಧಾನವಾಗಿದ್ದಿದ್ದರೆ ಪ್ರಥಮ ಐತಿಹಾಸಿಕ ಕಾದಂಬರಿಯಾಗಬಹುದಿತ್ತು.

ಚಿಕದೇವರಾಜವಿಜಯ ಆರು ಆಶ್ವಾಸಗಳುಳ್ಳ ಚಂಪೂಕಾವ್ಯ. ವರ್ಣವೃತ್ತಗಳಲ್ಲದೆ ತ್ರಿಪದಿ, ಸಾಂಗತ್ಯ, ಹಾಡುಗಳನ್ನೂ ಒಳಗೊಂಡಿದೆ. ಕೃತಿ ಸಂಪೂರ್ಣವಾಗಿಲ್ಲ. ಇದರಲ್ಲಿ ಮೈಸೂರು ಅರಸರ ಪೂರ್ವೇತಿಹಾಸ ಕಾವ್ಯಮಯವಾಗಿ ವರ್ಣಿತವಾಗಿದೆ. ಚಿಕ್ಕದೇವರಾಜ ಒಡೆಯರ ಬಾಲ್ಯ, ವಿದ್ಯಾಭ್ಯಾಸ, ಸಂಗೀತನೈಪುಣ್ಯ ವಿವರವಾಗಿ ಹೃದಯಂಗಮವಾಗಿ ಬಂದಿದೆ. ಆದರೆ ರಾಜ್ಯಭಾರ ವೈಭವವಾಗಲೀ ಯುದ್ಧ ಸಾಹಸ ವಿಜಯವಾಗಲೀ ನಿರೂಪಿತವಾಗಿಲ್ಲ. ವರ್ಣನೆಯಲ್ಲಿ ಸೊಬಗಿದೆ. ಸಂಗೀತದ ವರ್ಣನೆಯಿಂದಲೇ ನಾದಸುಖದ ಅನುಭವವನ್ನುಂಟುಮಾಡಬಲ್ಲ ಶಕ್ತಿ, ಪ್ರಕೃತಿವರ್ಣನೆಯಲ್ಲಿಯ ನಾವೀನ್ಯ ಈ ಕೃತಿಯ ಗುಣಮೌಲ್ಯವನ್ನು ಹೆಚ್ಚಿಸಿವೆ.

ಅಪ್ರತಿಮವೀರಚರಿತೆ ಅಲಂಕಾರ ಗ್ರಂಥ. ಇದರಲ್ಲಿ ನಾಲ್ಕು ಪ್ರಕರಣಗಳಿವೆ. ಚಂದ್ರಾಲೋಕ, ಕಾವ್ಯಪ್ರಕಾಶ, ಮುಖ್ಯವಾಗಿ ಕುವಲಯಾನಂದ - ಈ ಗ್ರಂಥಗಳನ್ನು ಆಧರಿಸಿ ಇದು ರಚಿತವಾಗಿದೆ. ಒಂದನೆಯ ಪ್ರಕರಣದಲ್ಲಿ ಕಾವ್ಯಲಕ್ಷಣ, ಶಬ್ದಗುಣ, ಅರ್ಥಗುಣಗಳನ್ನು ಹೇಳಿದೆ. ಎರಡನೆಯದರಲ್ಲಿ ರೀತಿ, ಶಯ್ಯೆ, ಪಾಕ, ವೃತ್ತಿ, ಅನುಪ್ರಾಸ ಮೊದಲಾದ ಶಬ್ದಾಲಂಕಾರಗಳನ್ನು ಹೇಳಿದೆ. ಮೂರನೆಯ ಪ್ರಕರಣದಲ್ಲಿ ಉಪಮೆ ಮೊದಲಾದ ನೂರು ಅರ್ಥಾಲಂಕಾರಗಳೂ ನಾಲ್ಕನೆಯದರಲ್ಲಿ ರಸಾಲಂಕಾರಗಳೂ ನಿರೂಪಿತವಾಗಿವೆ. ತಾನು ಈ ಗ್ರಂಥವನ್ನು ಚಿಕ್ಕದೇವರಾಜರ ಆಜ್ಞಾನುಸಾರ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಕೆಲವು ಸಂಸ್ಕೃತ ಗ್ರಂಥಗಳ ಲಕ್ಷಣಪದ್ಯಗಳಿಗೆ ಕನ್ನಡ ವೃತ್ತಿ ಬರೆದಿದೆ. ಉದಾಹರಣಾ ಪದ್ಯಗಳು ಚಿಕ್ಕದೇವರಾಜರ ಸ್ತುತಿರೂಪಕವಾಗಿವೆ. ಈ ಪದ್ಯಗಳೆಲ್ಲವೂ ಸ್ವರಚಿತವೆಂಬ ಅಂಶ ಗಮನಿಸಬೇಕಾದದ್ದು. ಆದರೆ ಕೆಲವೊಮ್ಮೆ ಲಕ್ಷಣ ಲಕ್ಷ್ಯ ಹೊಂದಾಣಿಕೆಯ ಸೊಗಸು ಅಸ್ಪಷ್ಟವಾಗಿದೆ. (ಎಂ.ಎಚ್.ಕೆ.)

**ತಿರುಮಲೆ ತಾತಾಚಾರ್ಯ ಶರ್ಮ :** 1897-1973. ಕನ್ನಡದ ಪ್ರಸಿದ್ಧ ಪತ್ರಿಕೋದ್ಯಮಿ, ಸ್ವಾತಂತ್ರ್ಯ ಹೋರಾಟಗಾರ, ಸಂಶೋಧಕ ಹಾಗೂ ಸಾಹಿತಿ. ಇವರದು ವಿಜಯನಗರದ ರಾಜಗುರು ಮನೆತನ. ಜನಿಸಿದ್ದು ಚಿಕ್ಕಬಳ್ಳಾಪುರದಲ್ಲಿ. ತಂದೆ ಶ್ರೀನಿವಾಸ ತಾತಾಚಾರ್ಯ, ತಾಯಿ ಜಾನಕಿ. ತಿರುಮಲೆ ಮನೆತನದ ಹೆಸರು. ಹಿರಿಯರಿಟ್ಟ ಹೆಸರು ಲಕ್ಷ್ಮೀಕುಮಾರ ತಾತಾಚಾರ್ಯ. ಎಂಟನೆಯ ವರ್ಷದಲ್ಲಿ ಬ್ರಹ್ಮೋಪದೇಶವಾದಾಗ ಇವರ ತಂದೆಯ ಚಿಕ್ಕಪ್ಪನವರು ಇವರನ್ನು ದತ್ತು ಸ್ವೀಕರಿಸಿದರು. ತಾತನ ಜೊತೆಯಲ್ಲಿ

ಕುದುರೆಸವಾರಿ, ಸಂಸ್ಕೃತ, ತೆಲುಗು, ಕನ್ನಡ ವಿದ್ಯಾಭ್ಯಾಸ; ಪ್ರೌಢಶಾಲೆ ವ್ಯಾಸಂಗ ನಡೆದುದು ಹಾಸನದಲ್ಲಿ. ಪದವಿ ವ್ಯಾಸಂಗಕ್ಕೆಂದು ಮೈಸೂರಿನ ಮಹಾರಾಜ ಕಾಲೇಜಿಗೆ ಶರ್ಮರು ಸೇರಿದರಾದರೂ ವ್ಯಾಸಂಗವನ್ನು ಮುಂದುವರಿಸದೆ ಬೆಂಗಳೂರಿಗೆ ಹೋದರು. ಅಲ್ಲಿ ಅಮೆಚೂರ್ ನಾಟಕ ಮಂಡಲಿಯನ್ನು ಪ್ರವೇಶಿಸಿ, ಕೈಲಾಸಂರ ಆಪ್ತಸ್ನೇಹಿತರಾದರು. ತಮ್ಮ ಚಿಕ್ಕಪ್ಪನವರು ಅಪೂರ್ಣವಾಗಿ ಬರೆದ ಲಂಕಾದಹನ ನಾಟಕವನ್ನು ಇವರು ಪೂರ್ಣಗೊಳಿಸಿದರು.

ಶಾಸನ, ಸಂಶೋಧನೆ ಗಳಲ್ಲಿ ಆಸಕ್ತಿ ತಾಳಿದ ಶರ್ಮರು 1919ರಲ್ಲಿ ಭಾರತ ಸರ್ಕಾರದ ಶಾಸನ ಇಲಾಖೆಯಲ್ಲಿ (ಉದಕಮಂಡಲ) ತೆಲುಗು-ಕನ್ನಡ ಸಹಾಯಕರಾಗಿ ಕೆಲಸಕ್ಕೆ ಸೇರಿದರು. ಬ್ರಾಹ್ಮೀ, ಖರೋಷ್ಠಿ, ದೇವನಾಗರಿ ಲಿಪಿಗಳ ಅದ್ವಿತೀಯ ಓದುಗರಾಗಿದ್ದ ಇವರು ಸಹಸ್ರಾರು ಶಿಲಾಶಾಸನಗಳ ಸಾರವನ್ನು ಕಂಠಸ್ಥ ಮಾಡಿದರು. ಶಾಸನಗಳಲ್ಲಿ ಕಂಡುಬರುವ ಕನ್ನಡ ಕವಿಗಳು ಎಂಬ ಪುಸ್ತಕವನ್ನು ಇವರು ಪ್ರಕಟಿಸಿದ್ ದಾರೆ.

ರಾಷ್ಟ್ರಾದ್ಯಂತ ಮೊಳಗುತ್ತಿದ್ದ ಗಾಂಧೀಜಿಯವರ ಅಸಹಕಾರ ಚಳವಳಿಗೆ ಓಗೊಟ್ಟು ಇವರು 1923ರಲ್ಲಿ ನೌಕರಿಗೆ ರಾಜೀನಾಮೆ ಕೊಟ್ಟರು. ಗಾಂಧೀಜಿಯವರ ಸಲಹೆಯಂತೆ 1925ರ ವಿಜಯದಶಮಿಯಂದು ತುಮಕೂರಿನಿಂದ ಹೊರಡುತ್ತಿದ್ದ ಮೈಸೂರು ಕ್ರಾನಿಕಲ್ ಪತ್ರಿಕೆಯನ್ನು ವಹಿಸಿಕೊಂಡು ಅದನ್ನು ವಿಶ್ವಕರ್ನಾಟಕ ಎಂಬ ಹೆಸರಿನಿಂದ ವಾರಪತ್ರಿಕೆಯಾಗಿ ಪ್ರಕಟಿಸಿದರು. 1934ರಲ್ಲಿ ವಿಶ್ವಕರ್ನಾಟಕ ಸಾಪ್ತಾಹಿಕ ಒಳಗೊಂಡ ದಿನಪತ್ರಿಕೆಯಾಯಿತು. ಸುಮಾರು ಇಪ್ಪತ್ತೆರಡು ವರ್ಷಗಳಷ್ಟು ದೀರ್ಘಕಾಲ ಆ ಪತ್ರಿಕೆಯನ್ನು ನಡೆಸಿದ ಶರ್ಮರು ಆ ಮೂಲಕ ಸ್ವರಾಜ್ಯಕ್ಕಾಗಿ ಬ್ರಿಟಿಷರ ವಿರುದ್ಧ ಆಂದೋಳನ ನಡೆಸಿ ಕೃತಾರ್ಥರಾದರು. ಗಾಂಧೀಜಿಯವರ ಆತ್ಮಕಥೆ ಕನ್ನಡದಲ್ಲಿ ಮೊಟ್ಟಮೊದಲು ಪ್ರಕಟವಾದದ್ದು ವಿಶ್ವಕರ್ನಾಟಕದಲ್ಲಿ.



ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಚಳವಳಿಯಲ್ಲೂ ಭಾಗವಹಿಸಿದ್ದ ಶರ್ಮರು ಕೆಲವು ತಿಂಗಳುಗಳ ಕಾಲ ಕಾರಾಗೃಹವಾಸವನ್ನೂ ಅನುಭವಿಸಿದರು.

ಕನ್ನಡ, ಇಂಗ್ಲಿಷ್, ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದ ಇವರು ಶಾಸನ, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮುಂತಾದ ಹತ್ತಾರು ವಿಷಯಗಳನ್ನು ಕುರಿತು ನೂರಾರು ಲೇಖನಗಳನ್ನೂ ಹತ್ತಾರು ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ಇವರ ಅನನ್ಯ ಉತ್ಸಾಹ, ಶ್ರದ್ಧೆ, ಆಳವಾದ ಪಾಂಡಿತ್ಯಗಳ ಫಲವೇ ರಾಮರಾಯನ ಬಖೈರು, ಕರ್ನಾಟಕದಲ್ಲಿ ಸ್ವಾತಂತ್ರ್ಯಸಂಗ್ರಾಮ, ಹೈದರನಾಮೆ, ವಿಕ್ರಾಂತ ಭಾರತ, ವಿಚಾರ, ಕರ್ನಾಟಕ, ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಮಾಸ್ತಿಯವರ ಮನೋಧರ್ಮ, ಜೂಲಿಯಸ್ ಸೀಸರ್, ಕರ್ಮಫಲ - ಈ ಮುಂತಾದ ಕೃತಿಗಳು.

ಇವರು ಸಲ್ಲಿಸಿದ ಸಾರ್ವಜನಿಕ ಸೇವೆ ಗಣ್ಯವಾದದ್ದು. 1943ರಲ್ಲಿ ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾಗಿದ್ದ ಇವರು ಬೆಂಗಳೂರು ಮುನಿಸಿಪಲ್ ಕೌನ್ಸಿಲರೂ (1944-50) ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ (1947-49) ಆಗಿದ್ದರು. ಮೈಸೂರು ಸ್ವಾತಂತ್ರ್ಯ ಚಳವಳಿಯ ಇತಿಹಾಸ ರಚನಾ ಸಮಿತಿ, ಕನ್ನಡ ಟೈಪ್‍ರೈಟರ್ ಸಮಿತಿ ಮುಂತಾದ ಸಮಿತಿಗಳ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಇವರ ನಾಡುನುಡಿಗಳ ಸೇವೆಯನ್ನು ಗಮನಿಸಿ ಕನ್ನಡ ಜನತೆ 1947ರಲ್ಲಿ ಕಾಸರಗೋಡಿನಲ್ಲಿ ನಡೆದ 31ನೆಯ ಕನ್ನಡಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿತು.

ಕನ್ನಡದ ಮೂಲಕವೇ ಕರ್ನಾಟಕದ ಮೋಕ್ಷ ಎಂಬುದನ್ನು ತಮ್ಮ ಜೀವನದುದ್ದಕ್ಕೂ ಪಠಿಸಿದ ಇವರು ತಮ್ಮ 76ನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ನಿಧನರಾದರು. (ಎಂ.ಕೆ.ಆರ್.)

**ತಿರುವಳ್ಳೂರು ಶ್ರೀನಿವಾಸ ರಾಘವಾಚಾರ್ಯ :** 1871-1942. ಪ್ರಾಚೀನ ಪಂಡಿತವರ್ಗದಲ್ಲಿ ಗಣ್ಯರಾದವರು. ಮೈಸೂರಿನ ಸಂಸ್ಕೃತ ಮಹಾಪಾಠಶಾಲೆ, ಕರ್ನಾಟಕ ಭಾಷೋಜ್ಜೀವಿನಿ ಪಾಠಶಾಲೆ, ಗೌರ್ನಮೆಂಟ್ ಟೀಚರ್ಸ್ ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಸಂಸ್ಕೃತ ಸಾಹಿತ್ಯ ವಿದ್ವತ್ತು, ಸಂಸ್ಕೃತ ಸಾಂಖ್ಯಯೋಗ ಪರೀಕ್ಷೆ, ಕರ್ನಾಟಕ ಪಂಡಿತ ಪರೀಕ್ಷೆ, ಮೈಸೂರು ಗೌರ್ನಮೆಂಟ್ ಟೀಚರ್ಸ್ ಎಕ್ಸಾಮಿನೇಷನ್ ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ ಸಂಸ್ಕೃತ - ಕನ್ನಡ ಭಾಷಾಸಾಹಿತ್ಯಗಳಲ್ಲಿ ಪಾಂಡಿತ್ಯವನ್ನು ಗಳಿಸಿಕೊಂಡರು. ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕನ್ನಡ ಪಂಡಿತರಾಗಿದ್ದರು (1894-1926).

ಶೃಂಗೇರಿ ನರಸಿಂಹಭಾರತೀಸ್ವಾಮಿಗಳ ಚರಿತ್ರೆ, ಶ್ರೀಮನ್ಮಹಾರಾಜರ ವಂಶಾವಳಿ ಮೊದಲಾದ ಗ್ರಂಥಗಳನ್ನು ಇವರು ಬರೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ ಕನ್ನಡ ಕೈಪಿಡಿಗೆ ಛಂದೋಭಾಗವನ್ನು ರಚಿಸಿದ್ದಾರೆ. ಡಿ.ಎಲ್.ನರಸಿಂಹಾಚಾರ್ಯರೊಡನೆ ಪಂಪರಾಮಾಯಣ ಸಂಗ್ರಹವನ್ನು ಸಂಪಾದಿಸಿದ್ದಾರೆ. ಕವಿಸಮಯ ಎಂಬುದು ಇವರ ಇನ್ನೊಂದು ಗ್ರಂಥ.

ಮೈಸೂರಿನ ಸಂಸ್ಕೃತ ಮಹಾಪಾಠಶಾಲೆಯ ಕಾರ್ಯನಿರ್ವಾಹಕ ಸಭೆ, ಸಂಸ್ಕೃತ ವಿದ್ವತ್ಪರೀಕ್ಷೆಗಳ ಬೋರ್ಡು, ಪಠ್ಯಪುಸ್ತಕ ಸಮಿತಿ, ಮೈಸೂರು ಓರಿಯಂಟಲ್ ಲೈಬ್ರರಿ ಕಮಿಟಿ, ಮೈಸೂರು ನಗರ ಕರ್ನಾಟಕ ಸಂಘ, ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತ್ಯುತ್ಸವ ಸಮಿತಿ ಮೊದಲಾದವುಗಳಲ್ಲಿ ಅನೇಕ ಕಾಲ ಸದಸ್ಯರಾಗಿದ್ದರು. ಮೈಸೂರು ಅರಮನೆಯ ಮುಜರಾಯಿ ಇಲಾಖೆಯಲ್ಲಿ ಹಲವು ವರ್ಷ ಧರ್ಮದರ್ಶಿಗಳೂ ಅನಂತರ ಧರ್ಮಾಧಿಕಾರಿಗಳೂ ಆಗಿದ್ದರು (1938-42). ಪರಕಾಲ ಮಠದಲ್ಲಿ ಗೌರವ ಮೇಲ್ವಿಚಾರಕರಾಗಿಯೂ ಶ್ರೀಕಾರ್ಯಕರ್ತರಾಗಿಯೂ ಸೇವೆ ಸಲ್ಲಿಸಿದರು (1926-1942). ಉದಾರ ದಾನಿಗಳಾಗಿದ್ದ ಇವರು ಮೈಸೂರು ಸಂಸ್ಕೃತ ಮಹಾಪಾಠಶಾಲೆ, ವೇದಶಾಸ್ತ್ರ ಪೋಷಿಣೀ ಸಭಾ, ಮೈಸೂರು ಟ್ರೇನಿಂಗ್ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ವೇದಾಂತ ದೇಶಿಕ ವಿಹಾರ ಸಭೆ, ವಿದ್ಯೋದಯ ಸಭೆ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದವುಗಳಿಗೆ ದಾನದತ್ತಿಗಳನ್ನು ನೀಡಿದ್ದಾರೆ. ಇವರು ಪ್ರಾಚೀನ ಮಾದರಿಯ ಪಂಡಿತರಾಗಿದ್ದರೂ ಆಧುನಿಕ ಯುಗಕ್ಕೆ ಹೊಂದಿಕೊಂಡಿದ್ದ ಪ್ರಗತಿಶೀಲ ವಿದ್ವಾಂಸರಾಗಿದ್ದರು. (ಎಸ್.ಎ.ಆರ್.)

**ತಿಳವಳ್ಳಿ :** ಹಾವೇರಿ ಜಿಲ್ಲೆ ಹಾನಗಲ್ಲು ತಾಲ್ಲೂಕಿನ ಒಂದು ಗ್ರಾಮ. ಹಾನಗಲ್ಲಿನ ಆಗ್ನೇಯಕ್ಕೆ 16ಕಿಮೀ ದೂರದಲ್ಲಿ, ಬ್ಯಾಡಗಿಯಿಂದ 40ಕಿಮೀ ಅಂತರದಲ್ಲಿದೆ.

ಈ ಊರು ಹಾನಗಲ್ಲು ತಾಲ್ಲೂಕಿನ ಪ್ರಗತಿಪರ ಗ್ರಾಮಗಳಲ್ಲಿ ಒಂದು. ಇಲ್ಲಿ ಗ್ರಾಮಪಂಚಾಯಿತಿ ಇದೆ. ಅನೇಕ ಸಹಕಾರಿ ಸಂಘಗಳಿವೆ. ಪೂರ್ಣ ಹೆಣ್ಣು ಮಕ್ಕಳ ಹಾಗೂ ಗಂಡುಮಕ್ಕಳ ಪ್ರಾಥಮಿಕ ಶಾಲೆಗಳಿವೆ. ಮಾದರಿ ಕೇಂದ್ರಶಾಲೆ ಇದೆ. ಶಾಂತೇಶ್ವರ ಪ್ರೌಢಶಾಲೆ ನಡೆಯುತ್ತಿದೆ. ಆರೋಗ್ಯ ಕೇಂದ್ರವಿದೆ. ತಂತಿಕಚೇರಿ, ದೂರವಾಣಿ ಸೌಲಭ್ಯಗಳಿವೆ.

ಪ್ರಾಚೀನ ಕಾಲದಲ್ಲಿ ಇದು ನಾಗರಖಂಡ-30 ಎಂಬ ವಿಭಾಗದಲ್ಲಿ ನೆಲೆಗೊಂಡಿದ್ದ ಖ್ಯಾತಿವೆತ್ತ ಅಗ್ರಹಾರವಾಗಿತ್ತು. ಕಲ್ಯಾಣದ ಚಾಳುಕ್ಯರ ಮತ್ತು ಸೇವುಣರ ಕಾಲದ ಸುಮಾರು ಇಪ್ಪತ್ತೈದು ಶಿಲಾಶಾಸನಗಳು ಇಲ್ಲಿ ದೊರೆತಿವೆ. ಇದು ಧಾರ್ಮಿಕ ಕ್ಷೇತ್ರವೂ ಆಗಿತ್ತು. ಇಲ್ಲಿ ಜನಾರ್ದನ, ಮಾಲೇಶ್ವರ, ಅಭಿನವ ಶಂಕರದೇವ, ವೀರನಾರಾಯಣ, ಬಸವೇಶ್ವರ, ಸಾವಂತೇಶ್ವರ, ಬಂಟೇಶ್ವರ ಮೊದಲಾದ ಅನೇಕ ದೇವಾಲಯಗಳಿದ್ದವು.

ಊರ ಮಧ್ಯದಲ್ಲಿರುವ ಶಾಂತೇಶ್ವರ ದೇವಾಲಯ ಇಲ್ಲಿನ ಉತ್ತಮ ವಾಸ್ತು ಕೃತಿ. ಗರ್ಭಗುಡಿ, ಸುಕನಾಸಿ, ಮಂಟಪಗಳನ್ನೊಳಗೊಂಡಿರುವ ಈ ದೇವಾಲಯದಲ್ಲಿ ಮೂರ್ತಿಶಿಲ್ಪಗಳು ಹೆಚ್ಚಿಲ್ಲದಿದ್ದರೂ ಹೊರಮೈ ಕಳಶ ಮತ್ತು ತೋರಣಗಳನ್ನು ಹೊತ್ತಿರುವ ಒಂಟಿ ಅರೆಗಂಬಗಳು, ಶಿಖರಗಳನ್ನು ಎತ್ತಿರುವ ಜೋಡಿ ಅರೆಗಂಬಗಳು ಮುಂತಾದವುಗಳಿಂದ ಸುಂದರವಾಗಿ ಅಲಂಕೃತವಾಗಿದೆ. ಗರ್ಭಗುಡಿಯ ಮೇಲೆ ವೇಸರ ಮಾದರಿಯ ಶಿಖರವಿದೆ. ವಿವಿಧ ಭಾಗಗಳ ಸಮತೋಲ ಪ್ರಮಾಣ ಮತ್ತು ನಾಜೂಕಿನ ಅಲಂಕರಣಗಳಿಂದ ದೇವಾಲಯದ ಸೌಂದರ್ಯ ವರ್ಧಿಸಿದೆ. ಸಿಂಘಣನ ಅಧಿಕಾರಿಯಾದ ಸಾವಂತ ಠಕ್ಕೂರ ಯುದ್ಧದಲ್ಲಿ ಮಡಿಯಲು ಕಲಿದೇವ ಮತ್ತು ರನ್ನುಗಿ ಎಂಬ ಅವನ ಮಕ್ಕಳು ತಂದೆಯ ಹೆಸರಿನಲ್ಲಿ ಸಾವಂತೇಶ್ವರ ದೇವಾಲಯವನ್ನು 1238ರಲ್ಲಿ ಕಟ್ಟಿಸಿ ಆ ದೇವರ ಪೂಜಾರ್ಥವಾಗಿ ಐದು ಹಳ್ಳಿಗಳನ್ನು ಕೊಂಡುಕೊಂಡು ಆ ದೇವರಿಗೆ ಬಿಟ್ಟರೆಂದು ಈ ದೇವಾಲಯದಲ್ಲಿರುವ ಒಂದು ದೊಡ್ಡ ಶಾಸನದಿಂದ ತಿಳಿದುಬರುತ್ತದೆ. (ಎಸ್.ಎಸ್.ಬಿ.)

**ತೀರ್ಥಹಳ್ಳಿ :** ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಊರು. ಜಿಲ್ಲೆಯ ದಕ್ಷಿಣಕ್ಕಿರುವ ಈ ತಾಲ್ಲೂಕನ್ನು ಈಶಾನ್ಯದಲ್ಲಿ ಶಿವಮೊಗ್ಗ, ಉತ್ತರ ಮತ್ತು ಪಶ್ಚಿಮದಲ್ಲಿ ಹೊಸನಗರ ತಾಲ್ಲೂಕುಗಳೂ, ಪೂರ್ವ, ಆಗ್ನೇಯ ಮತ್ತು ದಕ್ಷಿಣದ ಸ್ವಲ್ಪ ಭಾಗ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕುಗಳೂ ನೈಋತ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಮತ್ತು ಕಾರ್ಕಳ ತಾಲ್ಲೂಕುಗಳೂ ಸುತ್ತುವರಿದಿವೆ. ಅಗ್ರಹಾರ, ತೀರ್ಥಹಳ್ಳಿ, ಆಗುಂಬೆ, ಮುತ್ತೂರು ಮತ್ತು ಮಂಡಗದ್ದೆ ಹೋಬಳಿಗಳೂ 247 ಗ್ರಾಮಗಳೂ ಇವೆ. ವಿಸ್ತೀರ್ಣ 1,247ಚ.ಕಿಮೀ. ಜನಸಂಖ್ಯೆ 1,43,209.

ಈ ತಾಲ್ಲೂಕು ಮಲೆನಾಡಿಗೆ ಸೇರಿದ್ದು ಬೆಟ್ಟಗುಡ್ಡ, ಕಾಡು, ನದಿ, ಝರಿಗಳಿಂದ ಕೂಡಿರುವ ರಮ್ಯ ಪ್ರದೇಶ. ತಾಲ್ಲೂಕಿನ ಪಶ್ಚಿಮ ಪ್ರದೇಶ ಪಶ್ಚಿಮ ಘಟ್ಟಗಳಿಗೆ ಸೇರಿದ ಭಾಗ. ಕವಲೆದುರ್ಗ, ಕಬ್ಬಿಣದ ಗುಡ್ಡ ಮತ್ತು ಕುಂದದ ಗುಡ್ಡ - ಇವು ತಾಲ್ಲೂಕಿನ ಎತ್ತರದ ಬೆಟ್ಟಗಳು. ಕುಂದದ ಗುಡ್ಡ ಪ್ರಸಿದ್ಧ ಆಗುಂಬೆ ಶ್ರೇಣಿಗೆ ಸೇರಿದ್ದು. ಕಬ್ಬಿಣದ ಗುಡ್ಡದಲ್ಲಿ ದೊರೆಯುವ ಕಬ್ಬಿಣ ಉತ್ತಮ ದರ್ಜೆಯದೆಂದು ಪರಿಗಣಿತವಾಗಿದೆ.

ಈ ತಾಲ್ಲೂಕಿನ ಮುಖ್ಯ ನದಿ ತುಂಗಾ. ಆಗ್ನೇಯದಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ಹರಿದು ಬರುವ ಈ ನದಿ ಭಂಡಿಗಡಿ ಗ್ರಾಮದ ಪಶ್ಚಿಮದಲ್ಲಿ ತಾಲ್ಲೂಕನ್ನು ಪ್ರವೇಶಿಸಿ ಉತ್ತರಾಭಿಮುಖವಾಗಿ ಹರಿದು ಈಶಾನ್ಯಕ್ಕೆ ತಿರುಗಿ ಬಲಗಾರಮಠದ ಹತ್ತಿರ ದಕ್ಷಿಣಮುಖವಾಗಿ ದಿಬ್ಬನ ಗಡ್ಡೆಯನ್ನು ಬಳಸಿಕೊಂಡು ಮಹಿಷಿ ಮತ್ತು ಹೆದ್ದೂರು ಗ್ರಾಮಗಳ ನಡುವೆ ಮತ್ತೆ ಉತ್ತರಾಭಿಮುಖವಾಗಿ ಅನಂತರ ಈಶಾನ್ಯಾಭಿಮುಖವಾಗಿ ಹರಿದು ಮುಂದೆ ಶಿವಮೊಗ್ಗ ತಾಲ್ಲೂಕನ್ನು ಪ್ರವೇಶಿಸುತ್ತದೆ. ತುಂಗಾನದಿಗೆ ಮುಳಬಾಗಿಲ ದಕ್ಷಿಣದಲ್ಲಿ ಆಗುಂಬೆಯ ಹತ್ತಿರದಿಂದ ಹರಿದು ಬರುವ ಮಾಲತಿ ಹೊಳೆಯೂ ಮುಳಬಾಗಿಲ ಗ್ರಾಮದ ಹತ್ತಿರವೇ ಹರಿಯುವ ಬೈರೆಹೊಳೆಯೂ ಇತರ ಸಣ್ಣಪುಟ್ಟ ಹಳ್ಳ, ತೊರೆಗಳೂ ಬಂದು ಸೇರುತ್ತವೆ.

ತಾಲ್ಲೂಕಿನ ಪಶ್ಚಿಮ ಭಾಗ ದಟ್ಟಕಾಡುಗಳಿಂದ ಕೂಡಿದೆ. ಬಹು ಎತ್ತರದ ಬೆಟ್ಟಗಳ ಶಿಖರ ಭಾಗಗಳು ಬೋಳಾಗಿರುವುದು ಇಲ್ಲಿಯ ವೈಶಿಷ್ಟ್ಯ. ಕಾಡಿನ ಮಧ್ಯೆ ಹುಲ್ಲುಗಾವಲುಗಳಿವೆ. ತಾಲ್ಲೂಕಿನ ದಕ್ಷಿಣ ಮತ್ತು ಪೂರ್ವಭಾಗದಲ್ಲೂ ಸ್ವಲ್ಪಮಟ್ಟಿಗೆ ಕಾಡಿದೆ. ಅಡಕೆ ತೋಟಗಳಿಗಾಗಿ, ಎಲೆಗೊಬ್ಬರಕ್ಕಾಗಿ ಕಾಡಿನ ಮರಗಳನ್ನು ಹೆಚ್ಚು ಕಡಿಯಲಾಗಿದ್ದು ಈಚೆಗೆ ಕಾಡಿನ ಪ್ರದೇಶ ಕಡಿಮೆಯಾಗುತ್ತಿದೆ. ತಾಲ್ಲೂಕಿನ ಕಾಡಿನಲ್ಲಿ ಕರಿಮರ, ಹೊನ್ನೆ, ಮತ್ತಿ, ತೇಗ, ಗಂಧ, ಆಳಲೆ, ಸಂಪಾಜಿ, ಅರಸೆಂಬಿಗ, ಬಿರಡಿ, ಬಿಲವಾರ, ಬಾಗಿ, ಜಂಬೆ, ದಿಂಡಿಗ, ನಂದಿ ಮುಂತಾದ ಬೆಲೆ ಬಾಳುವ ಮರಗಳಿವೆ. ಕಾಡುಕೋಣ, ಹಂದಿ, ಹುಲಿ, ಚಿರತೆ, ಕರಡಿ, ಮೊಲ, ನರಿ ಮುಂತಾದ ಕಾಡುಪ್ರಾಣಿಗಳೂ ನದಿಯಲ್ಲಿ ಮೊಸಳೆಗಳೂ ಇವೆ.

ತಾಲ್ಲೂಕಿನ ಅರಣ್ಯಪ್ರದೇಶದಲ್ಲಿ ಜೇಡಿಮಣ್ಣಿನ ಫಲವತ್ತಾದ ಭೂಮಿಯೂ ಬೆಟ್ಟಗಳ ಮೇಲೆ ಕೆಂಪು ಜೇಡಿಮಣ್ಣಿನ ಭೂಮಿಯೂ ಸಾಮಾನ್ಯವಾಗಿ ಕಂಡುಬರುತ್ತದೆ. ಹೆಚ್ಚು ಬೆಟ್ಟಗಳಿಲ್ಲದೆ ಸ್ವಲ್ಪ ತೆರೆದಂತಿರುವ ತಾಲ್ಲೂಕಿನ ಉತ್ತರ ಭಾಗದಲ್ಲಿ ಫಲವತ್ತಾದ ಕರಿಮಣ್ಣಿದೆ. ಈ ತಾಲ್ಲೂಕಿನ ಭಾಗದಲ್ಲಿ ಮಳೆ ಹೆಚ್ಚು. ಆದರೆ ಮಳೆಯ ಪರಿಮಾಣ ಪಶ್ಚಿಮದಿಂದ ಪೂರ್ವಕ್ಕೆ ಬರುತ್ತಿದ್ದಂತೆ ಕಡಿಮೆಯಾಗುತ್ತದೆ. ಉದಾಹರಣೆಗೆ ಆಗುಂಬೆಯಲ್ಲಿ ಮಳೆಯ ವಾರ್ಷಿಕ ಸರಾಸರಿ ಸು. 8,051 ಮಿಮೀ. ಅದೇ ತೀರ್ಥಹಳ್ಳಿಯಲ್ಲಿ ಸು. 2,978 ಮಿಮೀ. ಜಲ, ಸಸ್ಯಸಮೃದ್ಧವಾದ ಈ ತಾಲ್ಲೂಕಿನಲ್ಲಿ ಬತ್ತ ಮತ್ತು ಅಡಕೆ, ಏಲಕ್ಕಿ, ಮೆಣಸು ಮುಖ್ಯ ಬೆಳೆಗಳು. ರಾಗಿ, ಜೋಳ, ಕಬ್ಬು, ಹುರುಳಿ, ತೊಗರಿ, ಅವರೆ, ಮೆಣಸಿನಕಾಯಿ ಇವುಗಳನ್ನೂ ಬೆಳೆಯುತ್ತಾರೆ. ಅನೇಕ ಕೃಷಿ ಉತ್ಪನ್ನಗಳು ಸುತ್ತಲ ಪ್ರದೇಶಕ್ಕೆ ರಫ್ತಾಗುತ್ತವೆ. ಜೇನುಸಾಕಣೆ ಇದ್ದು ಅರಣ್ಯ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಉಪಕಸಬುಗಳಿವೆ. ಕವಲೆದುರ್ಗದ ಬಳಪದ ಕಲ್ಲಿನ ವಸ್ತುಗಳೂ ತೀರ್ಥಹಳ್ಳಿಯ ಬೆಳ್ಳಿಯ ಪಾತ್ರೆಗಳೂ ಪ್ರಸಿದ್ಧ. ಮರ ಕೊಯ್ಯುವ ಕಾರ್ಖಾನೆಗಳೂ ಅಕ್ಕಿ ಗಿರಣಿಗಳೂ ಇಲ್ಲಿವೆ.

ಅಡಕೆ ತೋಟ

ಈ ತಾಲ್ಲೂಕಿನಲ್ಲಿ ರೈಲ್ವೆ ಮಾರ್ಗವಿಲ್ಲದಿದ್ದರೂ ಇತರ ಮಾರ್ಗಗಳಿಂದ ಸುತ್ತಲ ಊರುಗಳಿಗೆ ಸಂಪರ್ಕ ಸುಲಭವಾಗಿದೆ. ಉಡುಪಿ ಜಿಲ್ಲೆಗೆ ಹೋಗುವ ಆಗುಂಬೆ ಘಾಟ್ ಮಾರ್ಗ ಮುಖ್ಯ ಹಾದಿ. ತೀರ್ಥಹಳ್ಳಿಯಿಂದ ಶಿವಮೊಗ್ಗ, ಕೊಪ್ಪ, ಹೊಸನಗರಗಳಿಗೆ ಹೋಗುವ

ರಸ್ತೆಗಳು ತಾಲ್ಲೂಕಿನ ಇತರ ಮುಖ್ಯ ರಸ್ತೆಗಳು. ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ, ಅಂಚೆ, ತಂತಿ, ದೂರವಾಣಿ ಮುಂತಾದ ಸೌಲಭ್ಯಗಳ ಜೊತೆಗೆ ಶಾಲಾ ಕಾಲೇಜುಗಳೂ ವೈದ್ಯಕೀಯ ಕೇಂದ್ರಗಳೂ ಇವೆ.

ಅಗ್ರಹಾರ, ಮಂಡಗದ್ದೆ, ಮುತ್ತೂರು, ಮೇಗರವಳ್ಳಿ ಮತ್ತು ಆಗುಂಬೆ ತಾಲ್ಲೂಕಿನ ದೊಡ್ಡ ಸ್ಥಳಗಳು. ಆಗುಂಬೆಯ ಪ್ರಕೃತಿ ಸೌಂದರ್ಯ ಪ್ರಪಂಚ ವಿಖ್ಯಾತ. ಈ ತಾಲ್ಲೂಕಿನ ಆರಗ ಒಂದು ಇತಿಹಾಸಪ್ರಸಿದ್ಧ ಸ್ಥಳ. ಕವಲೆದುರ್ಗ ಪಾಂಡವರಿದ್ದ ಕಾಮ್ಯಕವನ ಪ್ರದೇಶವೆಂದು ಪ್ರತೀತಿ. ಅದು ಕೆಳದಿ ಅರಸರ ಕಾಲದ ಒಂದು ಪ್ರಖ್ಯಾತ ಗಿರಿದುರ್ಗ. ಈ ತಾಲ್ಲೂಕಿನ ಕುಪ್ಪಳಿ ಪ್ರಸಿದ್ಧ ಕವಿ ಕುವೆಂಪು ಅವರ ಊರು. *

ತೀರ್ಥಹಳ್ಳಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ದೊಡ್ಡ ಊರು. ಈ ನಗರ ತುಂಗಾ ನದಿಯ ಎಡದಂಡೆಯ ಮೇಲೆ ಶಿವಮೊಗ್ಗದ ನೈಋತ್ಯದಲ್ಲಿ ಶಿವಮೊಗ್ಗ-ಆಗುಂಬೆ ಮಾರ್ಗದಲ್ಲಿ 61ಕಿಮೀ ದೂರದಲ್ಲಿದೆ. ಜನಸಂಖ್ಯೆ 14,806.

1882ರವರೆಗೆ ಕವಲೆದುರ್ಗ ತಾಲ್ಲೂಕಿನ ಕೇಂದ್ರವಾಗಿದ್ದ ತೀರ್ಥಹಳ್ಳಿ ಅನಂತರ ಅದೇ ಹೆಸರಿನ ತಾಲ್ಲೂಕು ಕೇಂದ್ರವಾಯಿತು. ಇಲ್ಲಿನ ತುಂಗಾನದಿಯಲ್ಲಿ ಅನೇಕ ತೀರ್ಥಗಳು ಇರುವುದರಿಂದ ಇದಕ್ಕೆ ತೀರ್ಥಹಳ್ಳಿ ಎಂಬ ಹೆಸರು ಬಂದಿತೆನ್ನಲಾಗಿದೆ. ನದಿಯ ಶಿಲಾತಳದಲ್ಲಿ ನೀರಿನಿಂದ ಕೊರೆಯಲ್ಪಟ್ಟಿರುವ ವರ್ತುಲಾಕಾರದ ಅನೇಕ ಡೊಗರುಗಳಿವೆ (ಕುಳಿ). ಅಂಥ ಒಂದು ವಿಶಾಲ ಕುಳಿ ಕೊಳದ ಆಕಾರವನ್ನು ಪಡೆದಿದೆ. ಇಲ್ಲಿನ ನೀರನ್ನು ಪ್ರೋಕ್ಷಿಸಿಕೊಳ್ಳುವುದರಿಂದ ಪಾಪಗಳು ನಿರ್ಮೂಲವಾಗುತ್ತವೆ ಎಂಬ ನಂಬಿಕೆ ಇದೆ. ಪರಶುರಾಮ ತನ್ನ ಕೊಡಲಿಯಿಂದ ಈ ಕುಳಿಯನ್ನು ಮಾಡಿದನೆಂದು ಪ್ರತೀತಿ. ಮಾರ್ಗಶಿರ ಮಾಸದಲ್ಲಿ ಮೂರು ದಿನಗಳವರೆಗೆ ಇಲ್ಲಿ ರಾಮೇಶ್ವರ ಜಾತ್ರೆ ನಡೆಯುವುದು. ಆಗ ಇಲ್ಲಿನ ಡೊಗರಿನ ಮುಖಾಂತರ ಯಾತ್ರಿಕರು ಹಾದು ಹೋಗುತ್ತಾರೆ. ನದೀಪಾತ್ರದಲ್ಲಿನ ಕಲ್ಲುಗುಂಡುಗಳನ್ನು ಹಾಯ್ದು ನದಿಯನ್ನು ದಾಟುತ್ತಾರೆ.

ಊರಿನ ಪಶ್ಚಿಮಕ್ಕೆ ಒತ್ತಾದ ನಿತ್ಯಹರಿದ್ವರ್ಣದ ಕಾಡುಗಳಿದ್ದು ಈ ಊರಿನ ಸುತ್ತಮುತ್ತ ವಿಸ್ತೃತವಾದ ಅಡಕೆ ತೋಟಗಳಿವೆ. ಆಗುಂಬೆಯ ಬಳಿ ಸ್ವಾಭಾವಿಕವಾಗಿ ಬೆಳೆಯುವ ಏಲಕ್ಕಿಯೂ ಇಲ್ಲಿಗೆ ರವಾನೆಯಾಗಿ ವ್ಯಾಪಾರವಾಗುತ್ತದೆ. ಊರಿನಲ್ಲಿ ಮರ ಕೊಯ್ಯುವ ಹಲವು ಕಾರ್ಖಾನೆಗಳು ಇವೆ. ಅಕ್ಕಿ ಗಿರಣಿಗಳೂ ಹೆಚ್ಚಾಗಿವೆ. ಚರ್ಮ ಹಾಗೂ ರಬ್ಬರ್ ವಸ್ತುಗಳ ತಯಾರಿಕಾ ಕೇಂದ್ರ ಮತ್ತು ಅಡಕೆ ಸಂಶೋಧನೆ ಕೇಂದ್ರಗಳಿವೆ. ಈ ಊರು ಬೆಳ್ಳಿ ವಸ್ತುಗಳ ತಯಾರಿಕೆಗೆ ಹಿಂದಿನಿಂದಲೂ ಪ್ರಸಿದ್ಧಿ ಪಡೆದಿದೆ.

ಈ ಊರು ಹೊಸನಗರ ಹಾಗೂ ಕೊಪ್ಪ ತಾಲ್ಲೂಕುಗಳಿಗೆ ಪ್ರಧಾನ ವಾಣಿಜ್ಯ ಕೇಂದ್ರ. ಆಗುಂಬೆ ಮತ್ತು ಹುಲಿಕಲ್ ಘಾಟ್‍ಗಳ ಮುಖಾಂತರ ಕರಾವಳಿ ಪ್ರದೇಶಗಳಿಂದ ತೆಂಗಿನಕಾಯಿ, ಕೊಬ್ಬರಿ ಎಣ್ಣೆ ಬರುತ್ತವೆ. ಮೈದಾನದ ತಾಲ್ಲೂಕುಗಳಿಂದ ವಿವಿಧ ರೀತಿಯ ಬೇಳೆಗಳು, ಬಟ್ಟೆಗಳು, ಎತ್ತುಗಳು ಬರುತ್ತವೆ.

ಈ ಊರಿನಲ್ಲಿ ಹವೀಕ ಮತ್ತು ಪುತ್ತಿಗೆ ಮಠಗಳಿವೆ. ನದಿಯ ದಂಡೆಗಾದಂತೆ ಊರಿನಿಂದ 5ಕಿಮೀ ದೂರದಲ್ಲಿ ಮುಳಬಾಗಿಲು ಮಠವಿದೆ. ಅಲ್ಲಿಂದ ಒಂದೂವರೆ ಕಿಮೀ ದೂರದಲ್ಲಿ ಭೀಮನಕಟ್ಟೆ ಮಠವಿದೆ. ಈ ಮಠ ಪೌರಾಣಿಕ ಪ್ರಾಚೀನತೆಯನ್ನು ಹೊಂದಿದೆಯೆಂಬ ಕಾರಣದಿಂದ ತೀರ್ಥಹಳ್ಳಿ ವೈಷ್ಣವರ ಒಂದು ಪ್ರಮುಖ ಯಾತ್ರಾಸ್ಥಳವಾಗಿದೆ. ಈ ತಾಲ್ಲೂಕಿನ ಕುಪ್ಪಳಿ ರಾಷ್ಟ್ರಕವಿ ಕುವೆಂಪು ಅವರ ಸ್ವಂತ ಊರಾಗಿದ್ದು ಅಲ್ಲಿ ಅವರಿಗೆ ಪ್ರಿಯವಾಗಿದ್ದ ಕವಿಶೈಲ, ಕುವೆಂಪು ಪ್ರತಿಷ್ಠಾನದ ಸಂಶೋಧನ ಕೇಂದ್ರ ಮತ್ತು ಕವಿಗಳ ರುದ್ರಭೂಮಿ ಇವೆ. (ಕೆ.ಆರ್.ಆರ್.)

**ತುಂಗಭದ್ರಾ :** ತುಂಗಾ ಮತ್ತು ಭದ್ರಾ ಎಂಬ ಎರಡು ನದಿಗಳು ಕೂಡಿ ಮುಂದೆ ತುಂಗಭದ್ರಾ ಎಂಬ ಹೆಸರನ್ನು ಗಳಿಸಿ ಕರ್ನಾಟಕದ ಮಧ್ಯಭಾಗದಲ್ಲಿ ಈಶಾನ್ಯಾಭಿಮುಖವಾಗಿ ಹರಿಯುವ ದೊಡ್ಡ ನದಿ. ದೇಶದ ಆರ್ಥಿಕತೆಯಲ್ಲಿ ಪ್ರಾಚೀನ ಕಾಲದಿಂದಲೂ ಉಪಯುಕ್ತ ಪಾತ್ರ ವಹಿಸಿದ್ದು, ದಕ್ಷಿಣಗಂಗೆಯೆಂದು ಪವಿತ್ರವೆನಿಸಿರುವ ಜೀವನದಿ.

ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿಯುವ ತುಂಗಾ (ನೋಡಿ) ಮತ್ತು ಭದ್ರಾ (ನೋಡಿ) ನದಿಗಳು ಕೂಡುವುದು ಶಿವಮೊಗ್ಗದ ಈಶಾನ್ಯದಲ್ಲಿ ಸು.16ಕಿಮೀ ದೂರದಲ್ಲಿರುವ ಕೂಡಲಿಯಲ್ಲಿ. ಇಲ್ಲಿಂದ ಪ್ರಾರಂಭವಾಗುವ ತುಂಗಭದ್ರಾ ಶಿವಮೊಗ್ಗ ಜಿಲ್ಲೆಯನ್ನು ಬಿಡುವವರೆಗೂ ಉತ್ತರಗಾಮಿನಿಯಾಗಿದೆ. ಕೂಡಲಿ ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿಯ ಮಧ್ಯೆ ಮಾತ್ರ ಮೂರು ಸುತ್ತು ಬಳಸುಗಳಿವೆ. ಇಲ್ಲಿಂದ ಮುಂದೆ ಕರ್ನಾಟಕದ ರಾಜ್ಯವನ್ನು ಬಿಡುವವರೆಗೂ ಎಡಭಾಗದಲ್ಲಿ ಹಾವೇರಿ, ಗದಗ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು, ಬಲಭಾಗದಲ್ಲಿ ದಾವಣಗೆರೆ, ಬಳ್ಳಾರಿ ಜಿಲ್ಲೆಗಳು ಮತ್ತು ಸ್ವಲ್ಪ ದೂರ ಆಂಧ್ರಪ್ರದೇಶ ಇವುಗಳ ಮಧ್ಯದ ಗಡಿರೇಖೆಯಾಗಿ ನದಿ ಹರಿಯುತ್ತದೆ. ಶಿವಮೊಗ್ಗ ಜಿಲ್ಲೆಯಂಚಿನಿಂದ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಕೊಡಿಯಾಲದವರೆಗೆ ಈಶಾನ್ಯಗಮನ. ಅಲ್ಲಿಂದ ಕೋಣನತಂಬಿಗಿವರೆಗೆ ಉತ್ತರಾಭಿಮುಖವಾಗಿ ಹರಿದು ಮುಂದೆ ಸ್ವಲ್ಪ ಪಶ್ಚಿಮಕ್ಕೆ ತಿರುಗಿ ಪುನಃ ಹಾವನೂರಿನಿಂದ ಸ್ವಲ್ಪ ಉತ್ತರದವರೆಗೆ ಉತ್ತರಕ್ಕೆ ಸಾಗಿ, ಮತ್ತೆ ಗದಗ ಜಿಲ್ಲೆಯ ಅಂಚನ್ನು ಬಿಡುವವರೆಗೆ ಈಶಾನ್ಯಕ್ಕೆ ಹರಿಯುತ್ತದೆ. ಅಲ್ಲಿಂದ ಸು.20ಕಿಮೀ ದೂರದವರೆಗೆ ಪೂರ್ವಾಭಿಮುಖವಾಗಿ, ಮತ್ತೆ ಬಳ್ಳಾರಿ ಜಿಲ್ಲೆಯಂಚಿನವರೆಗೆ ಮತ್ತು ಮುಂದೆ 15ಕಿಮೀ ದೂರದವರೆಗೆ ಈಶಾನ್ಯಕ್ಕೆ ಸಾಗಿ ಮುಂದೆ ರಾಜ್ಯದ ಎಲ್ಲೆಯನ್ನು ಬಿಡುವ ತನಕ ಪೂರ್ವಕ್ಕೆ ಹರಿಯುತ್ತದೆ. ಅಲ್ಲಿಂದ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ ಸಾಗಿ ಕರ್ನೂಲು ಪಟ್ಟಣದಿಂದ ಸ್ವಲ್ಪ ಮುಂದೆ ಕೃಷ್ಣಾನದಿಯಲ್ಲಿ ಸಂಗಮವಾಗುತ್ತದೆ. ಕರ್ನಾಟಕದಲ್ಲಿ ತುಂಗಭದ್ರಾ ನದಿಯು ಹರಿವಿನ ಒಟ್ಟು ಉದ್ದ 403ಕಿಮೀ. (ಎಸ್.ವಿ.ಪಿ.)

ತುಂಗಭದ್ರಾ ಅಣೆಕಟ್ಟು ಸಮೀಪದ ಉದ್ಯಾನವನ

ಕೂಡಲಿಯಿಂದ ಬಳ್ಳಾರಿ ಜಿಲ್ಲೆಯಂಚನ್ನು ತಲಪುವವರೆಗೂ ಕಡಿದಾದ ಎತ್ತರ ದಂಡೆಗಳ ಮಧ್ಯೆ ಹರಿದು ಬರುತ್ತದೆ. ನದಿಯ ಪಾತ್ರ ಸು.100ರಿಂದ 200ಮೀ. ಅಗಲವಾಗಿದ್ದು ಇಲ್ಲಿ ಹಾಗೂ ಇನ್ನೂ ಮುಂದೆ ಸಹ ಬಹುತೇಕ ಬಂಡೆಗಳಿಂದ ಕೂಡಿದೆ. ಅಲ್ಲಲ್ಲಿ ಮಡುಗಳು, ಸುಳಿಗಳು ಸಾಮಾನ್ಯ. ಬಳ್ಳಾರಿ ಜಿಲ್ಲೆಯ ಹಿಂದಿನ ವಲ್ಲಭಪುರಿ ಅಣೆಕಟ್ಟಿನ ಹತ್ತಿರದವರೆಗೂ ನದಿಯ ಇಳಿವು ಸಾಮಾನ್ಯವಾಗಿ ಒಂದು ಕಿಮೀ ದೂರಕ್ಕೆ 40ಸೆಂಮೀ. ಗಳಷ್ಟು ಮಾತ್ರ. ಇಲ್ಲಿಂದ ಮುಂದೆ ಕಂಪ್ಲಿಯವರೆಗೆ ನದಿ ಇಳಿಜಾರಿನಲ್ಲಿ ವೇಗವಾಗಿ ಹರಿಯುತ್ತ ಸು.115 ಮೀಗಳಷ್ಟು ಕೆಳಗಿಳಿಯುತ್ತದೆ. ಅಂದರೆ ಸರಾಸರಿ ಮಟ್ಟದ ಇಳಿತ ಕಿಮೀಗೆ 280ಸೆಂಮೀ. ಇಲ್ಲಿಂದ ಮುಂದೆ ನದಿಯ ಮಟ್ಟದ ಇಳಿತ ಪುನಃ ಸಾಧಾರಣವಾಗಿರುತ್ತದೆ. ಬಳ್ಳಾರಿ ಜಿಲ್ಲೆಯ ಕೆಲವೆಡೆಗಳಲ್ಲಿ ನದಿಯ

ದಂಡೆಗಳಲ್ಲಿ ಗುಂಡುಕಲ್ಲಿನ ಹರಹುಗಳಿರುವುದುಂಟು. ಕೆಲವು ಕಡೆಗಳಲ್ಲಿ ಇಂಥ ಹರಹುಗಳು ಈಗಿನ ನದಿಯ ಮಟ್ಟಕ್ಕಿಂತ ಸು.20-30 ಮೀಗಳಷ್ಟು ಮೇಲಿದ್ದು, ಇವು ಹಿಂದೆ ನದಿ ಎತ್ತರದಲ್ಲಿ ಹರಿಯುತ್ತಿದ್ದುದಕ್ಕೆ ಸೂಚಕವಾಗಿವೆ. ನದಿ ವಿಶೇಷವಾಗಿ ಬಂಡೆಗಳಲ್ಲಿನ ಪಾತ್ರದಲ್ಲಿ ಹರಿಯುವುದರಿಂದ ಅಲ್ಲಲ್ಲಿ ಅನೇಕ ಕಡೆ ಸೀಳುಗಳಾಗಿ ಒಡೆದು ದ್ವೀಪಗಳನ್ನು ನಿರ್ಮಿಸಿರುವುದುಂಟು. ಹೊಸಪೇಟೆಯಿಂದ ಸ್ವಲ್ಪ ಮುಂದೆ ರೈಲುಹಾದಿ ಹಾದುಹೋಗುವ ಬಳಿ ಇರುವ ದ್ವೀಪ ದೊಡ್ಡದು. ಮುಂದೆ ಸಿರಗುಪ್ಪ ತಾಲ್ಲೂಕಿನ ಕೆಂಚನಗುಡ್ಡದ ಬಳಿ ಮೂರು ದೊಡ್ಡ ದ್ವೀಪಗಳಿವೆ. ಇವುಗಳಲ್ಲಿ ಕೊನೆಯದಾದ ದೇಸನೂರು ಗ್ರಾಮವಿರುವ ದ್ವೀಪ ಸು.10ಕಿಮೀ ವ್ಯಾಪಿಸಿದೆ. ತುಂಗಭದ್ರಾ ಜೀವನದಿಯಾಗಿದ್ದು ವರ್ಷದ ಎಲ್ಲಾ ಕಾಲದಲ್ಲೂ ನೀರು ಹರಿಯುವುದಾದರೂ ಬೇಸಗೆಯಲ್ಲಿ ಹರಿಯುವ ನೀರಿನ ಪ್ರಮಾಣ ಬಹಳ ಕಡಿಮೆ. ಈ ಕಾಲದಲ್ಲಿ ಪಾತ್ರದಲ್ಲಿ ನದಿ ಹಲವು ಸೀಳುಗಳಾಗಿ ಒಡೆದು ಹರಿಯುವುದು ಸಾಮಾನ್ಯ ದೃಶ್ಯ. ಆಗ ಹಲವು ಕಡೆಗಳಲ್ಲಿ ಸುಲಭವಾಗಿ ನದಿಯನ್ನು ದಾಟಬಹುದು. ಮಳೆಗಾಲದಲ್ಲಿ ನದಿ ಏಕಪ್ರವಾಹವಾಗಿ ತುಂಬಿ ಹರಿಯುತ್ತದೆ. ಆಗ ನದಿಯಲ್ಲಿ ಸರಾಸರಿ ಸು.30,000 ಕ್ಯೂಸೆಕ್ಕುಗಳಷ್ಟು ನೀರು ಹರಿಯುವುದೆಂದು ಅಂದಾಜು ಮಾಡಲಾಗಿದೆ. ಹರಿಹರ ಸೇತುವೆಯ ಬಳಿಯ ಮಾಪನ ಕೇಂದ್ರದಲ್ಲಿ ಒಮ್ಮೆ ನದಿಯಲ್ಲಿ 2,07,843 ಕ್ಯೂಸೆಕ್ಕು ನೀರು ಹರಿದಿದ್ದನ್ನು ಗುರುತಿಸಲಾಗಿದೆ. ಬಹುಶಃ ಇದೇ ಅತ್ಯಧಿಕ ಪ್ರಮಾಣ. ಬಂಡೆ ಪ್ರಾಂತ್ಯದಿಂದ ಕೂಡಿರುವ ಈ ನದಿ ಜಲಯಾನಕ್ಕೆ ಉಪಯುಕ್ತವಾಗಿಲ್ಲ.

ತುಂಗಭದ್ರಾ ಅಣೆಕಟ್ಟು

ತುಂಗಭದ್ರಾ ನದಿಯ ಮುಖ್ಯ ಉಪನದಿಗಳಲ್ಲಿ ಮೊದಲು ಸೇರುವುದು ಕುಮುದ್ವತಿ. ಶಿಕಾರಿಪುರ, ಹಿರೇಕೆರೂರು ತಾಲ್ಲೂಕುಗಳಲ್ಲಿ ಹರಿದು ಬರುವ ಈ ನದಿ ಹರಿಹರದಿಂದ ಸ್ವಲ್ಪ ಮೇಲೆ ರಾಣೆಬೆನ್ನೂರು ತಾಲ್ಲೂಕಿನ ಮುದೇನೂರು ಬಳಿಯಲ್ಲಿ ತುಂಗಭದ್ರಾ ನದಿಯನ್ನು ಎಡಭಾಗದಿಂದ ಬಂದು ಕೂಡುತ್ತದೆ. ಮುಂದೆ ಸೇರುವ ವರದಾ ಸಹ ಎಡಭಾಗದ ಉಪನದಿ. ಶಿರಸಿ, ಹಾನಗಲ್ಲು ತಾಲ್ಲೂಕುಗಳಲ್ಲಿ ಹರಿದುಬರುವ ಈ ನದಿ ಕರಜಗಿ ತಾಲ್ಲೂಕಿನ ಗಳಗನಾಥದ ಬಳಿ ಸಂಗಮವಾಗುತ್ತದೆ. ಇಲ್ಲಿಂದ ಮುಂದೆ ಎಡಭಾಗದಿಂದ ಬಂದು ಸೇರುವವುಗಳೆಲ್ಲ ಸಣ್ಣ ಪುಟ್ಟ ಹಳ್ಳಗಳು. ಇವುಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಲಿಂಗಸುಗೂರು, ಸಿಂಧನೂರು ತಾಲ್ಲೂಕುಗಳಲ್ಲಿ ಮಾನ್ವಿಯಿಂದ ಸು.12ಕಿಮೀ ದಕ್ಷಿಣದಲ್ಲಿ ತುಂಗಭದ್ರಾ ನದಿಯನ್ನು ಸೇರುವ ಹಿರೇಹಳ್ಳ ಮತ್ತು ಮಸ್ಕಿನಾಲಾ ಸ್ವಲ್ಪ ದೊಡ್ಡವು. ಬಲದಂಡೆಯ ಉಪನದಿಗಳಲ್ಲಿ ಚಿಕ್ಕಹಗರಿ ಮತ್ತು ಹಗರಿ ಮುಖ್ಯವಾದವು. ಚಿಕ್ಕ ಹಗರಿ ಹರಪನಹಳ್ಳಿ, ಕೂಡ್ಲಿಗಿ ತಾಲ್ಲೂಕುಗಳಲ್ಲಿ ಹರಿದು ಹಗರಿಬೊಮ್ಮನಹಳ್ಳಿಯಿಂದ ಸ್ವಲ್ಪ ಉತ್ತರದಲ್ಲಿ ತುಂಗಭದ್ರಾ ಅಣೆಕಟ್ಟಿನ ಹಿನ್ನೀರನ್ನು ಸೇರುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳನ್ನು ಹಾದು ಬರುವ ಹಗರಿ ಬಳ್ಳಾರಿ ಜಿಲ್ಲೆಯ ಸಿರಗುಪ್ಪದಿಂದ ಈಶಾನ್ಯಕ್ಕೆ ಹಳೇಕೋಟೆ ಬಳಿ ತುಂಗಭದ್ರಾ ನದಿಯನ್ನು ಸೇರುತ್ತದೆ. ಬಲದಂಡೆಯ ಹಳ್ಳಗಳಲ್ಲಿ ಹರಿಹರದ ಬಳಿ ಸೇರುವ ಸ್ಯಾಗಲಹಳ್ಳ (ಹರಿದ್ರಾ, ಸೂಳೇಕೆರೆಹಳ್ಳ), ಹಗರಿಬೊಮ್ಮನ ಹಳ್ಳಿಯಿಂದ ಸ್ವಲ್ಪ ಈಶಾನ್ಯದಲ್ಲಿ ಸೇರುವ ಹಂಪಾಪಟ್ಟಣ ಹಳ್ಳ, ಕಂಪ್ಲಿಯಿಂದ ಸ್ವಲ್ಪ ಪೂರ್ವದಲ್ಲಿ ಕೂಡುವ ರಾಮಪ್ಪವಂಕ ಇವನ್ನು ಹೆಸರಿಸಬಹುದು.

ತುಂಗಭದ್ರಾ ನದಿಯ ನೀರನ್ನು ಸಾಕಷ್ಟುಮಟ್ಟಿಗೆ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ನದಿ ಬಳ್ಳಾರಿ ಜಿಲ್ಲೆಯವರೆಗೆ ಬರುವವರೆಗೂ ಕಡಿದಾದ ದಂಡೆಗಳಿರುವುದರಿಂದ ಆ ಭಾಗದಲ್ಲಿ ಯಾವ ಅಣೆಕಟ್ಟುಗಳೂ ಇಲ್ಲ. ಆದರೆ ಈಚೆಗೆ ಕೊಪ್ಪಳ ಮತ್ತು ಹರಿಹರ ತಾಲ್ಲೂಕುಗಳ ಭಾಗದಲ್ಲಿ ಎತ್ತುನೀರಾವರಿಯನ್ನು ಪ್ರೋತ್ಸಾಹಿಸಲಾಗಿದೆ. ಇಲ್ಲಿಂದ ಮುಂದೆ ನದಿಗೆ ಅಡ್ಡಲಾಗಿ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ಕೆಲವು ಬಹುಪ್ರಾಚೀನವಾದವು. ಅನೇಕ ಅಣೆಕಟ್ಟುಗಳು ವಿಜಯನಗರದ ಕಾಲದಲ್ಲಿ ರಚಿತವಾದವು. ದೊಡ್ಡ ಬಂಡೆಗಳನ್ನು ನದಿಗೆ ಅಡ್ಡಲಾಗಿ ಕಿರುಗೋಡೆಯಂತೆ ಪೇರಿಸಿ ನೀರನ್ನು ನಾಲೆಗಳಿಂದ ಎರಡು ದಂಡೆಗಳಲ್ಲಿ ಹರಿಯುವಂತೆ ವ್ಯವಸ್ಥಿತವಾಗಿರುವ ಒಂಬತ್ತು ಪ್ರಾಚೀನ ಅಣೆಕಟ್ಟುಗಳು ಕರ್ನಾಟಕದ ಭಾಗದಲ್ಲಿವೆ. ಇವನ್ನು ಕೃಷ್ಣದೇವರಾಯನ ದಣ್ಣಾಯಕ ಮುದ್ದ ಎಂಬುವವನು ಕಟ್ಟಿಸಿದನೆಂದು ಪ್ರತೀತಿ. ಇವುಗಳಲ್ಲಿ ಮೊದಲನೆಯದು ಹೊಸಪೇಟೆಯಿಂದ ಸು.10ಕಿಮೀ ಪಶ್ಚಿಮದಲ್ಲಿ ವಲ್ಲಭಪುರ ಎಂಬಲ್ಲಿತ್ತು. ಇದು ಹಾಗೂ ಇದರ ಮುಂದೆ ಕೆಲವೇ ಕಿಮೀ ಕೆಳಗಿದ್ದ ಹೊಸಪೇಟೆ ಅಣೆಕಟ್ಟುಗಳು ಈಗ ತುಂಗಭದ್ರಾ ಜಲಾಶಯದಲ್ಲಿ ಮುಳುಗಿಹೋಗಿವೆ. ಆದರೆ ಇವುಗಳಿಂದ ಹೊರಟು ಹೊಸಪೇಟೆ ತಾಲ್ಲೂಕಿನ ಭಾಗಗಳಿಗೆ ನೀರುಣಿಸುತ್ತಿದ್ದ ಬಸವಣ್ಣ ನಾಲಾ (ಉದ್ದ 10ಕಿಮೀ) ಮತ್ತು ರಾಯನಾಲಾ (28ಕಿಮೀ) ಇವುಗಳಿಗೆ ತುಂಗಭದ್ರಾ ಅಣೆಕಟ್ಟೆಯಿಂದಲೇ ನೀರು ಪೂರೈಸಲಾಗುತ್ತಿದೆ. ಇಲ್ಲಿಂದ ಮುಂದೆ ಹೊಸಪೇಟೆ ಬಳಿ ಇರುವ ತುಂಗಭದ್ರಾ ಅಣೆಕಟ್ಟು ಈಚಿನ ರಚನೆ. ಇದು ಕರ್ನಾಟಕದ ಬೃಹತ್ ನೀರಾವರಿ ಯೋಜನೆಗಳಲ್ಲಿ ಒಂದಾಗಿದ್ದು ಕರ್ನಾಟಕದ ಬಳ್ಳಾರಿ, ರಾಯಚೂರು ಜಿಲ್ಲೆಗಳನ್ನೂ ಮುಂದೆ ಆಂಧ್ರ ಪ್ರದೇಶದ ಬಹುಭಾಗಗಳನ್ನೂ ತನ್ನ ಎಡ ಹಾಗೂ ಬಲದಂಡೆ ನಾಲೆಗಳಿಂದ ಸಮೃದ್ಧವಾಗಿಸಿದೆ. ತುಂಗಭದ್ರಾ ಅಣೆಕಟ್ಟೆಯಿಂದ ಸ್ವಲ್ಪ ಕೆಳಗೆ ಹೊಸಪೇಟೆಯ ಹತ್ತಿರದಲ್ಲಿ ಇರುವ ಹೊಸೂರು ಅಣೆಕಟ್ಟು ಮುಂದಿನದು. ಇಲ್ಲಿಂದ ಹೊರಡುವ ಕಲಘಟ್ಟ ನಾಲಾ (ಉದ್ದ ಆರೂವರೆ ಕಿಮೀ) ಹೊಸಪೇಟೆ ತಾಲ್ಲೂಕಿನ ಭಾಗಕ್ಕೆ ಮತ್ತು ಎಡದಂಡೆಯ ಹುಲ್ಗಿ ನಾಲಾ (ಉದ್ದ 5ಕಿಮೀ) ಗಂಗಾವತಿ ತಾಲ್ಲೂಕಿನ ಸ್ವಲ್ಪ ಭಾಗಕ್ಕೆ ನೀರೊದಗಿಸುತ್ತವೆ. ಮತ್ತಷ್ಟು ಕೆಳಗೆ ಹಂಪೆಯಿಂದ ಸುಮಾರು 3ಕಿಮೀ ಪಶ್ಚಿಮಕ್ಕಿರುವ ತುರ್ತ ಅಣೆಕಟ್ಟಿನಿಂದ ಹೊರಡುವ ತುರ್ತ ಬಲದಂಡೆ ನಾಲೆ (ಉದ್ದ 16ಕಿಮೀ) ಹಂಪೆಯ ಭಾಗಕ್ಕೂ ಎಡದಂಡೆಯ ಆನೆಗೊಂದಿ ನಾಲೆ, ಗಂಗಾವತಿ ತಾಲ್ಲೂಕಿನ ಆನೆಗೊಂದಿ ಭಾಗಕ್ಕೂ ಉಪಯುಕ್ತವಾಗಿವೆ. ಮುಂದೆ ಹಂಪೆಯಿಂದ ಸುಮಾರು 5ಕಿಮೀ ಕೆಳಗೆ ಇರುವ ರಾಮಸಾಗರ ಅಣೆಕಟ್ಟಿನಿಂದ ಬಲದಂಡೆಯ ರಾಮಸಾಗರ ನಾಲೆ (ಉದ್ದ 16ಕಿಮೀ) ಇದೆ. ಎಡದಂಡೆಯ ನಾಲೆ ಮೇಗಣ ಮತ್ತು ಕೆಳಗಣ ಗಂಗಾವತಿ ನಾಲೆಗಳಾಗಿ ಕವಲೊಡೆದು ಗಂಗಾವತಿ, ಹೊಸಹಳ್ಳಿ ಭಾಗಗಳಿಗೆ ನೀರೊದಗಿಸುತ್ತವೆ. ರಾಮಸಾಗರದಿಂದ ಸುಮಾರು 3ಕಿಮೀ ಕೆಳಗೆ ಕಂಪ್ಲಿ ಅಣೆಕಟ್ಟಿದೆ. ಇದಕ್ಕೆ ಬಲದಂಡೆಯ ನಾಲೆ ಮಾತ್ರವಿದ್ದು ಅದೇ ಕಂಪ್ಲಿ ಪ್ರದೇಶದಲ್ಲಿ ಕಂಪ್ಲಿ ನಾಲೆಯಾಗಿ 23ಕಿಮೀ ದೂರಕ್ಕೆ ಹರಿದು ಮುಂದೆ ಬೆಲಗೋಡುಹಾಳು ನಾಲೆಗೂ (ಉದ್ದ 11ಕಿಮೀ) ನೀರೊದಗಿಸುತ್ತದೆ. ಈ ಅಣೆಕಟ್ಟುಗಳೆಲ್ಲಾ ಹತ್ತಿರಹತ್ತಿರದಲ್ಲೇ ಇದ್ದರೆ ಮುಂದಿನವು ಇಲ್ಲಿಂದ ಸು.40ಕಿಮೀ ಕೆಳಗೆ ಸಿರಗುಪ್ಪ ಬಳಿ ಇವೆ. ಸಿರಗುಪ್ಪದಿಂದ ಪಶ್ಚಿಮದಲ್ಲಿ ಸು.6ಕಿಮೀ ದೂರದಲ್ಲಿ ಸಿರಗುಪ್ಪ ಅಣೆಕಟ್ಟಿನಿಂದ ಬಲದಂಡೆ ನಾಲೆ ಹೊರಟು 19ಕಿಮೀ ದೂರ ಸಾಗುತ್ತದೆ. ಸಿರಗುಪ್ಪ ಅಣೆಕಟ್ಟಿನಿಂದ ಸ್ವಲ್ಪವೇ ಕೆಳಗೆ ತುಂಗಭದ್ರಾ ನದಿಯ ಒಂದು ಕವಲಿಗೆ ದೇಸನೂರು ಅಣೆಕಟ್ಟನ್ನು ಕಟ್ಟಲಾಗಿದೆ. ಇಲ್ಲಿನ ನಾಲೆ ದೇಸನೂರು ದ್ವೀಪದ ಭಾಗದಲ್ಲಿ 10ಕಿಮೀ ದೂರ ಹರಿಯುತ್ತದೆ. ಮುಂದಿನದು ಮಾನ್ವಿಯಿಂದ ಸು.15ಕಿಮೀ ಆಗ್ನೇಯದಲ್ಲಿರುವ ರಾಜುಲಬಂಡ

ಅಣೆಕಟ್ಟೆ. 1947ರಲ್ಲಿ ಹೈದರಾಬಾದ್ ಸರ್ಕಾರದಿಂದ ಪ್ರಾರಂಭವಾದ ಈ ಅಣೆಕಟ್ಟೆ ಯೋಜನೆ ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳ ಸಂಯುಕ್ತ ಯೋಜನೆಯಾಗಿ 1962ರಲ್ಲಿ ಪೂರ್ಣವಾಯಿತು. ಇದರಿಂದ ಹೊರಡುವ ಎಡದಂಡೆಯ ನಾಲೆ ರಾಯಚೂರು ಜಿಲ್ಲೆಯ ಮಾನ್ವಿ ಮತ್ತು ರಾಯಚೂರು ತಾಲ್ಲೂಕಿನ ಭಾಗಗಳಲ್ಲಿ ಹರಿದು ಮುಂದೆ ಆಂಧ್ರ ಪ್ರದೇಶವನ್ನು ಪ್ರವೇಶಿಸುತ್ತದೆ. ಇಲ್ಲಿಂದ ಕೆಲವೇ ಕಿಮೀ ಕೆಳಗೆ ಇರುವ ಒಂದು ಚಿಕ್ಕ ಅಣೆಕಟ್ಟಿನಿಂದ ಹೊರಡುವ ಬೋಚಲ ನಾಲೆ ಮಾನ್ವಿ ಮತ್ತು ರಾಯಚೂರು ತಾಲ್ಲೂಕಿನಲ್ಲಿ ತುಂಗಭದ್ರಾ ಅಂಚಿನಲ್ಲೇ ಸುಮಾರು 20ಕಿಮೀ ಸಾಗುತ್ತದೆ. ಇದು ವಿಜಯನಗರದ ನಿರ್ಮಾಣ.

ತುಂಗಭದ್ರಾ ನದಿಯು ಅನೇಕ ಕಡೆ ಇರುವ ಹಾಯ್ಗಡಗಳು ನೀರು ಕಡಿಮೆ ಇರುವ ಬೇಸಗೆಯ ದಿನಗಳಲ್ಲಿ ಆಯಾ ಪ್ರದೇಶದ ಜನರಿಗೆ ಉಪಯುಕ್ತ ಸಂಪರ್ಕ ಮಾರ್ಗಗಳಾಗುತ್ತವೆ. ಪ್ರವಾಹಕಾಲದಲ್ಲಿ ದೋಣಿ, ಹರಿಗೋಲುಗಳನ್ನು ಉಪಯೋಗಿಸಲಾಗುತ್ತದೆ. ಉತ್ತರ ಮತ್ತು ದಕ್ಷಿಣ ಕರ್ನಾಟಕದ ಮಧ್ಯಭಾಗದಲ್ಲಿ ಆಯಕಟ್ಟಿನ ಸ್ಥಳದಲ್ಲಿ ಹರಿಯುವ ಈ ನದಿಗೆ ಹಿಂದಿನ ಕಾಲದಿಂದಲೂ ಸೇತುವೆಗಳಿದ್ದಿರಬೇಕು. ವಿಜಯನಗರದ ಕಾಲದಲ್ಲಿ ನಿರ್ಮಾಣವಾದ ಒಂದು ಸೇತುವೆಯ ಅವಶೇಷಗಳನ್ನು ಹಂಪೆಯ ಬಳಿಯಲ್ಲಿ ಈಗಲೂ ಕಾಣಬಹುದು. ಈಚಿನ ದಿನಗಳಲ್ಲಿ ಅನೇಕ ಸೇತುವೆಗಳು ನಿರ್ಮಾಣವಾಗಿವೆ. ನದಿಯು ಪ್ರಾರಂಭದಿಂದ ಸಿಗುವ ಮೊದಲ ಸೇತುವೆ ಹರಿಹರ-ಶಿವಮೊಗ್ಗ ಮಾರ್ಗದಲ್ಲಿ ಹೊನ್ನಾಳಿಯ ಬಳಿ ಇದೆ. ಮುಂದಿನದು ಬೆಂಗಳೂರು-ಮುಂಬಯಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಹರಿಹರ ಸೇತುವೆ (1868). ಇಲ್ಲಿ ಬೆಂಗಳೂರು-ಹುಬ್ಬಳ್ಳಿ ಮಾರ್ಗದ ರೈಲು ಸೇತುವೆ ಸಹ ಇದೆ. ಮುಂದಿನ ಸೇತುವೆ ಹಾವನೂರು (ಹಾವೇರಿ-ಹರಪನಹಳ್ಳಿ ಮಾರ್ಗ) ಬಳಿ ಇದೆ. ಮುಂದಿನ ತುಂಗಭದ್ರಾ ಅಣೆಕಟ್ಟು ಸಂಚಾರಕ್ಕೂ ಉಪಯುಕ್ತ. ಇದರ ಕೆಳಗೆ ಸುಮಾರು 5ಕಿಮೀ ದೂರದಲ್ಲಿ ಕೊಪ್ಪಳ-ಹೊಸಪೇಟೆ-ಬಳ್ಳಾರಿ ರಸ್ತೆಗಾಗಿ ಹುಲ್ಗಿಯ ಬಳಿ ಒಂದು ಸೇತುವೆ ಇದೆ. ಇಲ್ಲಿ ಗುಂತಕಲ್ಲು-ಹುಬ್ಬಳ್ಳಿ ರೈಲುಮಾರ್ಗದ ಸೇತುವೆಯೂ ಇದೆ. ಮುಂದೆ ಕ್ರಮವಾಗಿ ಕಂಪ್ಲಿ (ಗಂಗಾವತಿ-ಬಳ್ಳಾರಿ ಮಾರ್ಗ) ಧಡೆಸುಗೂರು (ಸಿಂಧನೂರು-ಸಿರಗುಪ್ಪ ಮಾರ್ಗ) – ಈ ಸ್ಥಳಗಳಲ್ಲಿ ಸೇತುವೆಗಳು ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಿಗೆ ಸಂಪರ್ಕವನ್ನೊದಗಿಸುತ್ತವೆ. ಮುಂದಿರುವ ರಾಯಚೂರು–ಗುಂತಕಲ್ಲು ರೈಲುಮಾರ್ಗದ ಸೇತುವೆ ರಾಯಚೂರು ತಾಲ್ಲೂಕಿನ ಗಿಲೇಸುಗೂರು ಬಳಿ ಇದೆ. ಇಲ್ಲಿ ಇತ್ತೀಚೆಗೆ ಒಂದು ಹೊಸ ಸೇತುವೆಯನ್ನೂ ನಿರ್ಮಿಸಲಾಗಿದ್ದು ಇದು ರಾಯಚೂರಿನಿಂದ ಬೆಂಗಳೂರಿಗೆ ಆದವಾನಿ-ಅನಂತಪುರ ಮಾರ್ಗವಾಗಿ ನೇರ ಸಂಪರ್ಕವನ್ನು ಒದಗಿಸುತ್ತದೆ.

ತುಂಗಭದ್ರಾ ನದಿ ಪ್ರಾಗಿತಿಹಾಸಕಾಲದಿಂದಲೂ ಜನೋಪಯೋಗಿ ಯಾಗಿದ್ದು ಇಲ್ಲಿ ಅನೇಕ ಸಂಸ್ಕೃತಿಗಳು ಬೆಳೆಯಲು ಕಾರಣವಾಗಿದೆ. ನದಿಯ ದಂಡೆಯಲ್ಲಿ ಇರುವ ನಿಟ್ಟೂರು, ಹಂಪಸಾಗರ ಮೊದಲಾದ ಪ್ರಾಗಿತಿಹಾಸ ಕಾಲದ ನೆಲೆಗಳು ಇದಕ್ಕೆ ಸಾಕ್ಷಿ. ಇತಿಹಾಸಯುಗದಲ್ಲೂ ಈ ನದಿ ಕರ್ನಾಟಕದ ರಾಜಕೀಯ-ಭೌಗೋಳಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಹಲವು ರಾಜ್ಯಗಳ ಗಡಿಯಾಗಿ ಇರುತ್ತಿತ್ತಲ್ಲದೆ, ಇದರ ದಂಡೆಯಲ್ಲಿ ಹಂಪೆ, ಕಂಪಿಲಿಯಂಥ ರಾಜಧಾನಿಗಳು, ಮುಂಗಳ ಮೊದಲಾದ ಕೋಟೆಗಳು ರಚಿತವಾಗಿದ್ದುವು. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ, ಚಿತ್ರದುರ್ಗ ಜಿಲ್ಲೆಯ ಹರಿಹರ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಂಪ್ಲಿ ಮತ್ತು ಸಿರಿಗುಪ್ಪ, ರಾಯಚೂರು ಜಿಲ್ಲೆಯ ಗಂಗಾವತಿ ಈಗ ತುಂಗಭದ್ರಾ ನದಿಯ ದಡದಲ್ಲಿರುವ ದೊಡ್ಡ ಊರುಗಳು. ಹಂಪೆ ಪವಿತ್ರ ಕ್ಷೇತ್ರವೂ ಆಗಿದೆ. ಶಿವಮೊಗ್ಗ ಜಿಲ್ಲೆಯ ಕೂಡಲಿ, ಚಿತ್ರದುರ್ಗ ಜಿಲ್ಲೆಯ ಹರಿಹರ, ಬಳ್ಳಾರಿ ಜಿಲ್ಲೆಯ ಕುರವತ್ತಿ ಮತ್ತು ಮೈಲಾರ, ಧಾರವಾಡ ಜಿಲ್ಲೆಯ ಗಳಗನಾಥ, ರಾಯಚೂರು ಜಿಲ್ಲೆಯ ಆನೆಗೊಂದಿ (ನವಬೃಂದಾವನ), ಮುಕ್ಕುಂದ - ಇವು ನದಿಯ ದಡದಲ್ಲಿರುವ ಇತರ ಪವಿತ್ರಕ್ಷೇತ್ರಗಳು.

ಪುರಾಣಗಳಲ್ಲಿ ತುಂಗಭದ್ರಾ ನದಿ ಬಗ್ಗೆ ಅನೇಕ ಉಲ್ಲೇಖಗಳಿವೆ. ರಾಮಾಯಣದಲ್ಲಿ ಇದು ಪಂಪಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಭಾಗವತದಲ್ಲೂ ಈ ನದಿಯ ಉಲ್ಲೇಖ ಬರುತ್ತದೆ. ಬ್ರಹ್ಮಾಂಡಪುರಾಣದ ತುಂಗಭದ್ರಾ ಮಹಾತ್ಮ್ಯೆಯಲ್ಲಿ ಈ ನದಿಯ ಮೂಲವನ್ನು ಹೀಗೆ ಹೇಳಿದೆ: ಹಿಂದೆ ಹಿರಣ್ಯಾಕ್ಷ ಭೂದೇವಿಯನ್ನು ಅಪಹರಿಕೊಂಡು ಸಮುದ್ರದಲ್ಲಿ ಬಚ್ಚಿಟ್ಟುಕೊಂಡಿದ್ದಾಗ, ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಿದರು. ಆಗ ವಿಷ್ಣು ವರಾಹ ಅವತಾರ ತಾಳಿ ಹಿರಣ್ಯಾಕ್ಷನನ್ನು ಕೊಂದು ಭೂದೇವಿಯನ್ನು ಕಾಪಾಡಿ, ವಿಶ್ರಾಂತಿಗಾಗಿ ಪಶ್ಚಿಮಘಟ್ಟದ ಮೇಲೆ ಕುಳಿತುಕೊಂಡ. ಅದೇ ವರಾಹ ಪರ್ವತವಾಯಿತು. ವರಾಹನ ಬಲ ಕೊಂಬಿನಿಂದ ಸುರಿದ ಬೆವರೇ ಭದ್ರಾನದಿ, ಎಡಕೊಂಬಿನಿಂದ ಸುರಿದ ಬೆವರೇ ತುಂಗಾನದಿ. ಮತ್ಸ್ಯಪುರಾಣದಲ್ಲಿ ತುಂಗಭದ್ರಾ ನದಿಯನ್ನು ಪವಿತ್ರ ನದಿ ಎಂದು ಕರೆದಿದೆ. ಮಹಾಭಾರತದಲ್ಲಿ ಗಂಗಾ, ಕೃಷ್ಣಾ ನದಿಗಳ ಜೊತೆಗೆ ತುಂಗಭದ್ರಾ ನದಿಯನ್ನು ಸೇರಿಸಿ ಈ ಮೂರೂ ಪವಿತ್ರ ನದಿಗಳೆಂದು ಹೇಳಿದೆ.

**ತುಂಗಭದ್ರಾ ಯೋಜನೆ :** ಕರ್ನಾಟಕದ ಬೃಹತ್ ನೀರಾವರಿ ಯೋಜನೆ ಗಳಲ್ಲಿ ಒಂದು. ಈ ಯೋಜನೆಯ ಮುಖ್ಯವಾದ ಅಂಶಗಳು ಇವು:

1. ತುಂಗಭದ್ರಾ ನದಿಗೆ ಅಡ್ಡಲಾಗಿ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಮಲ್ಲಾಪುರದಲ್ಲಿ 133ಟಿ.ಎಂ.ಸಿ ನೀರನ್ನು ಹಿಡಿಯುವ ಕಟ್ಟೆಯ ಹಿಂದಿನ ಸರೋವರ. 2. ಎಡದಡದ ರಾಯಚೂರು ಜಿಲ್ಲೆಯಲ್ಲಿ 5.8ಲಕ್ಷ ಎಕರೆಗೆ ನೀರನ್ನು ಒದಗಿಸುವ 225.6ಕಿಮೀ ಉದ್ದವಾದ ನಾಲೆ. 3. ಬಲದಡದಲ್ಲಿ 347.2ಕಿಮೀ ಉದ್ದವಾದ ಕೆಳಮಟ್ಟದ ನಾಲೆ. ಈ ನಾಲೆಯಿಂದ ಬಳ್ಳಾರಿ ಜಿಲ್ಲೆಯಲ್ಲಿ 92,435 ಎಕರೆಗಳಿಗೂ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ 1,56,913 ಎಕರೆಗಳಿಗೂ ನೀರಾವರಿ ಒದಗುತ್ತದೆ. 4. ಬಲದಡದಲ್ಲಿ ಪೆನ್ನಾರ್ ಕಣಿವೆಯವರೆಗೆ 195ಕಿಮೀ ಉದ್ದವಾದ ಮೇಲುಮಟ್ಟದ ನಾಲೆ. ಈ ನಾಲೆಯಿಂದ ಬಳ್ಳಾರಿ ಜಿಲ್ಲೆಯಲ್ಲಿ 2ಲಕ್ಷ ಎಕರೆಗಳಿಗೂ ಆಂಧ್ರ ಪ್ರದೇಶದಲ್ಲಿ 2.4ಲಕ್ಷ ಎಕರೆಗೂ ನೀರಾವರಿ ಒದಗುತ್ತದೆ. 5. ತುಂಗಭದ್ರಾ ಕಟ್ಟೆಯಲ್ಲಿ ಒಂದೊಂದು ದಡದಲ್ಲಿಯೂ ಒಂದು ವಿದ್ಯುದುತ್ಪಾದನ ಕೇಂದ್ರವಿದೆ. ನಾಲೆಯ ಮೇಲೆ 5 ವಿದ್ಯುತ್ಕೇಂದ್ರಗಳಿವೆ. ಇವುಗಳಿಂದ ಒಟ್ಟು 1,72,500 ಕಿಲೋವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ.

ಕಟ್ಟೆಯ ಬಳಿ ನದಿಯ ಜಲಾನಯನ ಭೂಮಿ 28,178.1ಚ.ಕಿಮೀ.

ತುಂಗಭದ್ರಾ ಕಟ್ಟೆಯಲ್ಲಿ ಐದು ಭಾಗಗಳಿವೆ :

1. ನದಿಯ ಮಧ್ಯದಲ್ಲಿ ಕಲ್ಲುಗಾರೆಯ ಓಗೀ ಆಕಾರದ ಕೋಡಿ 701.04ಮೀ. 2. ಎಡದಡದಲ್ಲಿ 81.4ಮೀ ಉದ್ದದ ಮುಂದುಗಡೆ ಕಲ್ಲುಗಾರೆ, ಹಿಂದೆ ಮಣ್ಣಿನ ಏರಿ. 3. ಬಲದಡದಲ್ಲಿ 958.6ಮೀ ಉದ್ದದ ಮೇಲುನೀರು ಹರಿಯದ ಕಟ್ಟೆ. 4. ಮೊದಲನೆಯ ನೀರುನೆತ್ತಿಯಲ್ಲಿ ಓಗೀ ಕಟ್ಟೆಯ ಎಡಗಡೆ 152.4ಮೀ ಉದ್ದದ ಮಣ್ಣಿನ ಏರಿ. 5. ಎಡದಡದ ಕೊನೆಯಲ್ಲಿ 472.4ಮೀ ಉದ್ದವಾದ ಮಣ್ಣಿನ ಏರಿ.

ಕಟ್ಟೆಯ ಎತ್ತರ ಆಳವಾದ ತಳಪಾಯದ ಮೇಲೆ 49.4ಮೀ ತಳದಲ್ಲಿ ಅಗಲ 19.4ಮೀ ಮೇಲಿನ ಅಗಲ 6.72ಮೀ ಜಲಾಶಯದ ತುಂಬುಮಟ್ಟ ಸಮುದ್ರಮಟ್ಟದ ಮೇಲೆ 497.7ಮೀ ಸರೋವರದಲ್ಲಿ 133ಟಿ.ಎಂ.ಸಿ ನೀರು ಹಿಡಿಯುತ್ತದೆ. ನೀರು ಹರವಿನ ವಿಸ್ತೀರ್ಣ 378ಚ.ಕಿಮೀ. ಮುಳುಗಿರುವ ಹಳ್ಳಿಗಳ ಸಂಖ್ಯೆ 73.

ಕಟ್ಟೆಯಲ್ಲಿ 37 ಮಿಲಿಯ ಘನ ಅಡಿ ಕಲ್ಲುಗಾರೆ ಸೇರಿದೆ. ಮುಂಭಾಗ ಮೇಲುಗಡೆ ಲಂಬವಾಗಿದ್ದು ಕೆಳಗಡೆ 20ಕ್ಕೆ 1ರಂತೆ ಓಟವಾಗಿದೆ. ಹಿಂಭಾಗ ಮೇಲಿನ 6ಮೀ ಲಂಬವಾಗಿದ್ದು ನಯವಾದ ಬಾಗಿನಲ್ಲಿ ಇಳಿಯುತ್ತದೆ. ಕಟ್ಟೆಯನ್ನು ಕಲ್ಲು ಮತ್ತು ಸುಣ್ಣಸುರ್ಕಿ ಗಾರೆಯಿಂದ ಕಟ್ಟಲಾಗಿದೆ. ಮುಂದಿನ ಮುಖದ 5.3ಮೀ ಹಿಂದೆ 1534 (ಆರ್.ಎಲ್.) ಅಡಿಗಳ ಮಟ್ಟದಲ್ಲಿ ತಳಪಾಯದಿಂದ ಕಟ್ಟೆಯೊಳಗಡೆ ಜಿನುಗಿದ ನೀರನ್ನು ಸಾಗಿಸುವುದಕ್ಕೂ ಪರಿಶೀಲನೆಗೂ 1.5ಮೀ ಅಗಲ

2.3ಮೀ ಎತ್ತರದ ಗೂಡನ್ನು ಉದ್ದಕ್ಕೂ ನಿರ್ಮಿಸಿ ತಳದಲ್ಲಿ ಹೊಳೆಯ ಕಡೆಗೆ ಒಂದು ಆಳವಾದ ಚರಂಡಿಯನ್ನು ಕಲ್ಲುಗಾರೆಯಿಂದ ಕಟ್ಟಿ ಅದರಲ್ಲಿ ಜಿನುಗಿದ ನೀರನ್ನು ಅಲ್ಲಲ್ಲಿ ಕೂಡಿಸಿ ಪಂಪುಗಳಿಂದ ಮೇಲಕ್ಕೆ ಎತ್ತಲಾಗುತ್ತದೆ.

491.6ಮೀ ಮಟ್ಟದಲ್ಲಿ 18.3ಮೀ ಅಗಲ, 6ಮೀ ಎತ್ತರದ 33 ಕೋಡಿಯ ಬಾಗಿಲುಗಳಿವೆ. ಕೋಡಿಯು ಓಗೀ ಆಕಾರವಾಗಿದ್ದು ಕೆಳಗಡೆ ಬಾಗಿದ ಬಕೆಟ್ಟು. ಅದರ ಹಿಂದುಗಡೆ ತಗ್ಗಿಸಿದ ನದೀತಳ ಮತ್ತು 30.5ಮೀ ಅಗಲದ ಕಲ್ಲುಗಾರೆಯ ನೆಲ ಹಾಸಿದೆ. ಕೋಡಿಯ ಕಂಬಗಳ ಅಗಲ 3ಮೀ, ಮೇಲುಗಡೆ 6.7ಮೀ ಅಗಲವಾದ ರಸ್ತೆಯುಳ್ಳ ಸೇತುವೆಯಿದೆ. ಈ ಸೇತುವೆ ನೀರು ಉರುಳದೆ ಇರುವ ಕಟ್ಟೆಯ ಮೇಲೂ ಇದೆ.



ತುಂಗಭದ್ರಾ ಕಾಲುವೆ

ಇದುವರೆಗೆ ಹೊಳೆಯಲ್ಲಿ ಬಂದ ಮಹಾಪ್ರವಾಹ 3.3ಲಕ್ಷ ಕ್ಯೂಸೆಕ್ಕುಗಳು. ಆದರೆ ಕೋಡಿಯನ್ನು 6.5ಲಕ್ಷ ಕ್ಯೂಸೆಕ್ಕುಗಳ ಮಹಾಪ್ರವಾಹವನ್ನು ಸುರಕ್ಷಿತವಾಗಿ ಸಾಗಿಸುವಂತೆ ಸಂವಿಧಾನ ಮಾಡಿದೆ. ಕೋಡಿಯ ಒಂದೊಂದು ಬಾಗಿಲೂ 50ಟನ್ ತೂಕವಾಗಿದೆ.

ಎಡ ದಂಡೆಯು ಮಣ್ಣಿನ ಏರಿಗೆ ಮುಂಭಾಗದ ಇಳುಕಲಿನಲ್ಲಿ ಕಲ್ಲುಕಟ್ಟಣೆಯನ್ನೂ ಹಿಂಭಾಗದಲ್ಲಿ ಹೆಪ್ಪನ್ನೂ ಕಟ್ಟಿದೆ. ಸಂಕೀರ್ಣ ನಮೂನೆಯ ಕಟ್ಟೆಯಲ್ಲಿ ಮುಂದುಗಡೆ ಕಲ್ಲುಗಾರೆಯ ಗೋಡೆಯೂ ಹಿಂದುಗಡೆ ಮಣ್ಣಿನ ಏರಿಯೂ ಇದೆ. ಈ ಗೋಡೆಯ ತಳಪಾಯವನ್ನು ಗಟ್ಟಿ ಬಂಡೆಯವರೆಗೂ ತೆಗೆದುಕೊಂಡು ಹೋಗಿ ಭದ್ರವಾಗಿ ಕಟ್ಟಿದೆ. ಹಿಂದುಗಡೆಯ ಏರಿಯನ್ನು ಸುಮಾರಾಗಿ ನೀರು ಜಿನುಗುವ ಮಣ್ಣಿನಿಂದ 0.6ಮೀ ಮಟ್ಟಕ್ಕೆ 0.3048ಮೀ ಲಂಬದ ಇಳುಕಲಿನಲ್ಲಿ ಕಟ್ಟಿದೆ. ಏರಿಯ ಭದ್ರತೆಗಾಗಿ ಈ ಏರಿಯಲ್ಲಿ ಅಲ್ಲಲ್ಲಿ ಮಟ್ಟವಾದ ಜಗಲಿಗಳನ್ನು ಬಿಟ್ಟು ಇಳುಕಲಿಗೆ ಹೆಪ್ಪನ್ನು ಕಟ್ಟಿದೆ. ಏರಿಯ ತಳದಲ್ಲಿ ಕಲ್ಲಿನ ಫಿಲ್ಟರುಗಳನ್ನು ಕಟ್ಟಿ ಒಳಕ್ಕೆ ಇಳಿಯುವ ನೀರು ಸರಾಗವಾಗಿ ಹೊರಗೆ ಹೋಗುವಂತೆ ಬಂಡೆಗಳಿಂದ ತುಂಬಿದೆ.

ನೀರಾವರಿಗೆ ತೂಬುಗಳನ್ನೂ ವಿದ್ಯುತ್ತಿನ ಉತ್ಪಾದನೆಗಾಗಿ ಪೆನ್‌ಸ್ಟಾಕ್ ಕೊಳವೆಗಳನ್ನೂ ಕಟ್ಟೆಯಲ್ಲಿ ಇಟ್ಟಿದೆ. ಇದಲ್ಲದೆ ಈ ಭಾಗದಲ್ಲಿನ ಪ್ರಾಚೀನ ನಾಲೆಗಳಿಗೆ ಅವಶ್ಯವಾದರೆ ನೀರನ್ನು ಬಿಡುವಂತೆ ಅನುಕೂಲವನ್ನು ಮಾಡಿದೆ. ಕಟ್ಟೆಯ ಒಂದೊಂದು ದಡದಲ್ಲಿಯೂ ಒಂದೊಂದು ವಿದ್ಯುತ್ಕೇಂದ್ರವಿದೆ. ಬಲದಂಡೆಯಿಂದ ಪೆನ್‌ಸ್ಟಾಕಿನ ತಳಮಟ್ಟ 472.4ಮೀ. ಎಡದಂಡೆಯ ಪೆನ್‌ಸ್ಟಾಕಿನ ತಳ 3ಮೀ ಎತ್ತರವಾಗಿದೆ. ಈ ಕೇಂದ್ರಗಳ ಬೀಳುನೀರನ್ನು ನೀರಾವರಿಯ ನಾಲೆಗಳಿಗೆ ಒಯ್ದಿದ್ದಾರೆ.

ಕಟ್ಟೆಯ ಎರಡು ದಡಗಳಲ್ಲಿಯೂ 483ಮೀ ಮಟ್ಟದಲ್ಲಿ ನೀರಾವರಿಗಾಗಿ ಮೇಲ್ಮಟ್ಟದ ತೂಬುಗಳಿವೆ. ಇವು ಮೇಲ್ಮಟ್ಟದ ನಾಲೆಗಳಿಗೆ ನೀರನ್ನು ಬಿಡುತ್ತವೆ. ಬಲದಂಡೆಯ ಮೇಲ್ಮಟ್ಟದ ನಾಲೆ ಬಳ್ಳಾರಿ ಜಿಲ್ಲೆಯ 2ಲಕ್ಷ ಎಕರೆಗಳಿಗೂ ಅನಂತಪುರ, ಕರ್ನೂಲು ಮತ್ತು ಕಡಪ ಜಿಲ್ಲೆಗಳಲ್ಲಿ 2.4ಲಕ್ಷ ಎಕರೆಯ ಕ್ಷಾಮಪೀಡಿತ ಪ್ರದೇಶಗಳಿಗೂ ನೀರನ್ನು ಒದಗಿಸುತ್ತದೆ. ಇದು 184.6ಕಿಮೀ ಹರಿದ ಮೇಲೆ ಗುಂತಕಲ್ಲು ಶಾಖೆ, ಉರವಕೊಂಡದ ತೋಡು - ಎಂಬ ಎರಡು ಸೀಳುಗಳಾಗುತ್ತದೆ. ಈ ತೋಡಿನಿಂದ ಪೆನ್ನಾರ್ ನದಿಯ ನೀರು 2,000 ಕ್ಯೂಸೆಕ್ಕುಗಳಷ್ಟು ಹೆಚ್ಚುತ್ತದೆ. ಇಲ್ಲಿ ನೀರು ಹರಿಯುವಾಗ 20,000 ಕಿಲೋವ್ಯಾಟ್ ವಿದ್ಯುತ್ತು ಉತ್ಪತ್ತಿಯಾಗುತ್ತದೆ. ಪೆನ್ನಾರ್ ನದಿಗೆ ಅಡ್ಡಲಾಗಿ ಪೆನಕಚರಲದ ಹತ್ತಿರ ನಿಯಂತ್ರಕವನ್ನು ಕಟ್ಟಿ ಅದರಿಂದ ಉತ್ತರಕ್ಕೆ ಒಂದು, ದಕ್ಷಿಣಕ್ಕೆ ಒಂದು ನಾಲೆಯನ್ನು ಒಯಲಾಗಿದೆ. ಚಿತ್ರಾವತಿ ನದಿಯ ಸಂಗಮದ ಕೆಳಗೆ ಈ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ಕಟ್ಟಿ ಕಡಪ ಮತ್ತು ಜಮ್ಮಲಮಡಗು ತಾಲ್ಲೂಕುಗಳಿಗೆ ನೀರನ್ನು ಸಾಗಿಸಲಾಗುತ್ತದೆ. ಈ ನಾಲೆ ಒಂದು ಗುಡ್ಡವನ್ನು 309.8ಮೀ ಉದ್ದವಾದ ಸುರಂಗದ ಮೂಲಕ ದಾಟುತ್ತದೆ. ಅನೇಕ ಕಡೆಗಳಲ್ಲಿ ಗುಡ್ಡದ ತಪ್ಪಲುಗಳಲ್ಲಿಯೂ ಆಳವಾದ ತೋಡುಗಳಲ್ಲಿಯೂ ಹೋಗಿ ಎರಡು ಕಮರಿಗಳನ್ನು ಭದ್ರಕಾಂಕ್ರೀಟಿನ ಮೇಲುಗಾಲುವೆಯ ಮೇಲೆ ದಾಟುತ್ತದೆ.

ಎಡ ದಂಡೆಯ ಮೇಲ್ಮಟ್ಟದ ನಾಲೆಯ ತಳದ ಅಗಲ 25.6ಮೀ, ಆಳ 4.3ಮೀ, ತಳಮಟ್ಟ 483ಮೀ. ಇದು ಪ್ರಾರಂಭದಲ್ಲಿ 2000 ಕ್ಯೂಸೆಕ್ಕುಗಳ ನೀರನ್ನು ಸಾಗಿಸುತ್ತದೆ. ಮೊದಲನೆಯ 36 ಕಿಮೀಗಳಲ್ಲಿ ನಾಲೆ ಒರಟಾದ ಭೂಮಿಯ ಮೂಲಕ ಹೋಗುತ್ತದೆ. ಇದಕ್ಕೆ, 203ಕಿಮೀ ಉದ್ದಕ್ಕೂ ನೆಲವು ನೀರನ್ನು ಹೀರದ ಹಾಗೆ ಅಂಚನ್ನು ಕಟ್ಟಿದೆ. ಈ ನಾಲೆ ರಾಯಚೂರು ಜಿಲ್ಲೆಯಲ್ಲಿ 5.8 ಲಕ್ಷ ಎಕರೆಗಳಿಗೆ ನೀರನ್ನು ಒದಗಿಸುತ್ತದೆ. ಈ ನಾಲೆ 30 ಮೈಲಿಯ 1084ಮೀ. ಉದ್ದದ ಸುರಂಗವನ್ನು ಪ್ರವೇಶಿಸಿ ಹೊರಕ್ಕೆ ಬರುತ್ತದೆ. 112ಕಿಮೀನಲ್ಲಿ ಮಸ್ಕಿ ಹಳ್ಳವನ್ನು ದಾಟುವ ಭದ್ರಕಾಂಕ್ರೀಟಿನ ಮೇಲುಗಾಲುವೆ 8.01ಮೀ ಅಗಲ, 5ಮೀ ಎತ್ತರವಾಗಿದೆ. ಕಲ್ಲುಗಾರೆಯ ಕಂಬಗಳು ಮರಳಿನಲ್ಲಿ 9ಮೀ ಆಳಕ್ಕೆ ಇಳಿಸಿದ್ದು ಗುಂಡಾದ ಬಾವಿಗಳ ಮೇಲೆ ನಿಂತಿವೆ. ಹಳ್ಳದಲ್ಲಿ 45,540 ಕ್ಯೂಸೆಕ್ಕುಗಳ ಪ್ರವಾಹವನ್ನು ಸಾಗಿಸುವ 14ಮೀ ಅಗಲ, 7.65ಮೀ ಎತ್ತರವಾದ 11 ಕಣ್ಣುಗಳಿವೆ.

ಬಲ ದಂಡೆಯ ಕೆಳಮಟ್ಟದ ನಾಲೆ 360ಕಿಮೀ ಉದ್ದವಾಗಿದ್ದು ಬಳ್ಳಾರಿ ಜಿಲ್ಲೆಯಲ್ಲಿ 92,345 ಎಕರೆಗಳಿಗೂ ಆಂಧ್ರದ ಕರ್ನೂಲು ಜಿಲ್ಲೆಯಲ್ಲಿ 1,56,913 ಎಕರೆಗಳಿಗೂ ನೀರನ್ನು ಒದಗಿಸುತ್ತದೆ. ನಾಲೆಯ ಅಗಲ ಪ್ರಾರಂಭದಲ್ಲಿ 21.9ಮೀ ಆಳ 3.2ಮೀ ನಾಲೆಯ ತಳ 10,000ಕ್ಕೆ 1ರಂತೆ ಇಳಿದು ಸೆಕೆಂಡಿಗೆ 0.9ಮೀ ವೇಗದಲ್ಲಿ 2500 ಕ್ಯೂಸೆಕ್ಕು ನೀರನ್ನು ಸಾಗಿಸುತ್ತದೆ. ಇದರ ಕೆಳಗೆ ಒಟ್ಟು 8.6ಲಕ್ಷ ಎಕರೆ ಭೂಮಿಯೂ ಬಳ್ಳಾರಿ ಜಿಲ್ಲೆಯ 82 ಮೈಲಿಯವರೆಗೆ 2.5ಲಕ್ಷ ಎಕರೆ ಭೂಮಿಯೂ ಇದೆ. ಈ ನಾಲೆಯು 80ನೆಯ ಮೈಲಿಯಲ್ಲಿ ಹಗರಿ ನದಿಯನ್ನು 10.5ಮೀ ಕಣ್ಣಿನ 58 ಕಮಾನುಗಳ ಮೇಲುಗಾಲುವೆಯಲ್ಲಿ ದಾಟುತ್ತದೆ. ಮೇಲುಗಾಲುವೆ 3.7ಮೀ ಅಗಲ, 2.8ಮೀ ಎತ್ತರವಾಗಿರುವ ಅವಳಿತೊಟ್ಟಿಗಳ ರೂಪದಲ್ಲಿವೆ. ಕೆಳಗಡೆ ಹೊಳೆ 1,85,000 ಕ್ಯೂಸೆಕ್ಕುಗಳ ಪ್ರವಾಹವನ್ನು ಸಾಗಿಸುತ್ತದೆ.

ತುಂಗಭದ್ರಾ ಯೋಜನೆ ವಿವಿಧೋದ್ದೇಶ ಯೋಜನೆ. ನೀರಾವರಿಯೇ ಅಲ್ಲದೆ ವಿದ್ಯುದುತ್ಪಾದನೆ, ಜಲಯಾನ, ಪಟ್ಟಣಗಳಿಗೆ ನೀರಿನ ಸರಬರಾಜು ಮತ್ತು ವಿಹಾರಾನುಕೂಲಗಳು ಯೋಜನೆಯಲ್ಲಿ ಸೇರಿವೆ. ಇದರ ನಾಲೆಗಳಲ್ಲಿ ಕಟ್ಟೆಯ ಕೆಳಗಡೆ ಇರುವ ವಿದ್ಯುತ್ಕೇಂದ್ರಗಳಲ್ಲದೆ ಹಂಪೆಯ ಬಳಿ ಎಡ ದಂಡೆಯ ನಾಲೆಯ ಮೇಲೆ ನಾಲ್ಕು ವಿದ್ಯುತ್ಕೇಂದ್ರಗಳಿವೆ. ಮೊದಲನೆಯ ಘಟ್ಟದಲ್ಲಿ ಇವುಗಳಿಂದ 36,000 ಕಿಲೋವ್ಯಾಟ್ ವಿದ್ಯುತ್ ಉತ್ಪತ್ತಿಯಾಗುತ್ತದೆ.

ಈ ಕೆಲಸದಲ್ಲಿ ಉಪಯೋಗಿಸಲಾದ ಎಲ್ಲ ಕೋಡಿಯ ಮತ್ತು ತೂಬಿನ ಬಾಗಿಲುಗಳನ್ನೂ ಕಟ್ಟೆಯ ಬಳಿ 1952ರಲ್ಲಿ ಸ್ಥಾಪಿತವಾದ ಕಾರ್ಖಾನೆಯಲ್ಲಿ ತಯಾರಿಸಲಾಯಿತು. ಇವಲ್ಲದೆ ಒರಿಸ್ಸದಲ್ಲಿ ಹಿರಾಕುಡ್, ರಾಜಸ್ಥಾನದಲ್ಲಿ ಜವೈ ಕಟ್ಟೆಗಳಲ್ಲಿ ಉಪಯೋಗಿಸಿದ ತೂಬಿನ ಬಾಗಿಲುಗಳನ್ನೂ ಇಲ್ಲಿ ತಯಾರು ಮಾಡಲಾಯಿತೆಂದು ತಿಳಿದುಬರುತ್ತದೆ.

(ಎಸ್.ವಿ.ಪಿ)

**ತುಂಗಾ :** ಕರ್ನಾಟಕದ ಪ್ರಸಿದ್ಧ ನದಿಗಳಲ್ಲೊಂದು. ಶೃಂಗೇರಿ ತಾಲ್ಲೂಕಿನ ಅಂಚಿನಲ್ಲಿ ಶೃಂಗೇರಿಗೆ ಸುಮಾರು 25ಕಿಮೀ ನೈಋತ್ಯದಲ್ಲಿ ಪಶ್ಚಿಮ ಘಟ್ಟ ಶ್ರೇಣಿಯಲ್ಲಿರುವ ವರಾಹಪರ್ವತದ ಗಂಗಾಮೂಲ ಎಂಬ ಸ್ಥಳದಲ್ಲಿ ಹುಟ್ಟುತ್ತದೆ. ಉಗಮಸ್ಥಾನದಿಂದ ಈಶಾನ್ಯಾಭಿಮುಖವಾಗಿ ಪ್ರವಹಿಸುತ್ತ ಶೃಂಗೇರಿಯನ್ನು ಹಾದು ಬಗ್ಗುಂಜಿ ಎಂಬಲ್ಲಿಗೆ ಬಂದು ಅಲ್ಲಿ ಇದ್ದಕ್ಕಿದ್ದಂತೆ ವಾಯುವ್ಯದಿಕ್ಕಿಗೆ ತಿರುಗಿ ಹರಿಹರಪುರವನ್ನು ದಾಟಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸಿ ತೀರ್ಥಹಳ್ಳಿಯನ್ನು ಮುಟ್ಟುತ್ತದೆ. ಇಲ್ಲಿ ಪುನಃ ಈಶಾನ್ಯ ದಿಕ್ಕಿಗೆ ತಿರುಗಿ ಸ್ವಲ್ಪ ದೂರ ದಕ್ಷಿಣದತ್ತ ತಿರುಗಿ ಮಂಡಗದ್ದೆ ಎಂಬಲ್ಲಿಗೆ ಬರುತ್ತದೆ. ಇದೇ ಸ್ಥಳಕ್ಕೆ ಸಮೀಪದಲ್ಲಿ ತುಂಗಾನದಿ ಸ್ವಲ್ಪ ದೂರದವರೆಗೆ ಏಳು ಸೀಳುಗಳಾಗಿ ಹರಿದು ಮುಂದೆ ಸೇರುತ್ತದೆ. ಇದಕ್ಕೆ ಏಳುಕಾಲುಸೀಳು ಎನ್ನುತ್ತಾರೆ. ಇಲ್ಲಿಂದ ಸುಮಾರು ನೇರವಾಗಿ ಈಶಾನ್ಯಕ್ಕೆ ಪ್ರವಹಿಸಿ ಶಿವಮೊಗ್ಗಕ್ಕೆ ಬಂದು ಅನಂತರ ಮುಂದೆ ಕೂಡಲಿ ಎಂಬಲ್ಲಿ ಭದ್ರಾನದಿಯೊಡನೆ ಕೂಡಿಕೊಂಡು ತುಂಗಭದ್ರಾ (ನೋಡಿ) ಎಂಬ ಹೆಸರಿನಿಂದ ಮುಂದೆ ಸಾಗುತ್ತದೆ. ತುಂಗಾನದಿಯ ಹರಿವಿನ ಒಟ್ಟು ಉದ್ದ ಸು.130ಕಿಮೀ. ಈ ನದಿಗೆ 75ಕ್ಕೂ ಹೆಚ್ಚು ಹಳ್ಳಗಳು ಮತ್ತು ಉಪನದಿಗಳೂ ಬಂದು ಸೇರುತ್ತವೆ. ಇವುಗಳಲ್ಲಿ ನಂದಿನಿ, ನಳಿನಿ, ಬೇಗಾರಹಳ್ಳ, ಮಾಲತಿ ಹಳ್ಳ ಮುಂತಾದುವು ಕೆಲವು. ಇವೆಲ್ಲಾ ಪಶ್ಚಿಮಘಟ್ಟಗಳಲ್ಲಿ ಹುಟ್ಟುತ್ತವೆ. ಮಳೆಯೇ ಮುಖ್ಯ ಆಧಾರವಾಗಿರುವ ಈ ನದಿ ಸದಾಕಾಲದಲ್ಲಿಯೂ ತುಂಬಿ ಹರಿಯುವುದಿಲ್ಲ. ಕರ್ನಾಟಕ ರಾಜ್ಯದ ಎಲ್ಲ ನದಿಗಳ ಹಾಗೆ ಇದು ಮಳೆಗಾಲದಲ್ಲಿ ಉಕ್ಕಿ ಹರಿಯುವುದು, ಬೇಸಗೆಯಲ್ಲಿ ಕೃಶವಾಗುವುದು. ದಟ್ಟವಾದ ಕಾಡು, ಬೆಟ್ಟಗುಡ್ಡಗಳಿಂದ ತುಂಬಿರುವ ಅಚ್ಚ ಹಸುರಿನ ಪ್ರದೇಶ ಈ ನದಿಯ ಎರಡು ಕಡೆಗಳಲ್ಲೂ ಹಬ್ಬಿದೆ. ಈ ನದಿಯ ದಡಗಳು ಭದ್ರಾ ನದಿಯ ದಡಗಳ ಹಾಗೆ ತೀರ ಕಡಿದಾಗಿಲ್ಲ. ಆದರೂ ಪ್ರವಾಹದ ಭೀತಿ ಬಹಳವಿಲ್ಲ. ನದಿ ತೀವ್ರಗತಿಯಿಂದ ಹರಿಯುವುದರಿಂದ, ಬಂಡೆಗಳಿಂದ ಕೂಡಿರುವುದರಿಂದ ಜಲಸಂಚಾರಕ್ಕೆ ಅನುಕೂಲವಾಗಿಲ್ಲ. ಈ ನದಿಗೆ ತೀರ್ಥಹಳ್ಳಿ, ಶಿವಮೊಗ್ಗಗಳಲ್ಲಿ ಬೃಹದಾಕಾರವಾದ ಸೇತುವೆಗಳನ್ನು ಕಟ್ಟಿದ್ದಾರೆ. ಇವೆರಡರ ಮಧ್ಯೆ ಮುಡಬ ಎಂಬಲ್ಲಿ ಇನ್ನೊಂದು ದೊಡ್ಡ ಸೇತುವೆಯನ್ನು ಕಟ್ಟಿದ್ದಾರೆ. ಹರಿಹರಪುರದ ಬಳಿ ಮತ್ತೊಂದು ಸೇತುವೆ ಇದೆ.

ಈ ನದಿಯ ದಡದಲ್ಲಿ ಶೃಂಗೇರಿ, ತೀರ್ಥಹಳ್ಳಿ, ಶಿವಮೊಗ್ಗ - ಈ ನಗರಗಳೂ ಶೃಂಗೇರಿ, ತೀರ್ಥಹಳ್ಳಿ, ಹರಿಹರಪುರ, ಭೀಮನಕಟ್ಟೆ, ತೀರ್ಥ, ಮುತ್ತೂರು ಮೊದಲಾದ ಪವಿತ್ರ ಕ್ಷೇತ್ರಗಳೂ ಇವೆ. ಮಂಡಗದ್ದೆಯ ಬಳಿ ಪಕ್ಷಿಧಾಮವಿದೆ. ಶಿವಮೊಗ್ಗದಿಂದ ಸು.11ಕಿಮೀ ನೈಋತ್ಯದಲ್ಲಿರುವ ಗಾಜನೂರು (ಸಕ್ರೆಬೈಲು) ಬಳಿ ತುಂಗಾ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಿದ್ದಾರೆ. ಈ ಅಣೆಕಟ್ಟಿನ ಎರಡು ದಂಡೆಗಳ ನಾಲೆಗಳಿಂದ ಶಿವಮೊಗ್ಗ ಜಿಲ್ಲೆಯ 8.70 ಸಾವಿರ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ದೊರೆತಿದೆ.

ಈ ನದಿಯ ನೀರಿನಿಂದ ಮುಖ್ಯವಾಗಿ ಬತ್ತ, ಕಬ್ಬು ಮತ್ತು ಅಡಕೆಯನ್ನು ವಿಶೇಷವಾಗಿ ಬೆಳೆಯುತ್ತಾರೆ. ತುಂಗಾನದಿಯ ನೀರು ಬಹಳ ರುಚಿಕರವಾದುದು. ಗಂಗಾಸ್ನಾನ ಮತ್ತು ತುಂಗಾಪಾನ ಎಂಬ ನಾಣ್ಣುಡಿಯೇ ಇದೆ.

ಹಿರಣ್ಯಾಕ್ಷ ಭೂಮಿಯನ್ನು ಸಾಗರದಲ್ಲಿ ಅವಿತಿಟ್ಟಿದ್ದಾಗ ವಿಷ್ಣು ವರಾಹಾವತಾರವನ್ನು ತಾಳಿ ಭೂಮಿಯನ್ನು ಮೇಲೆತ್ತಿ ತಂದು ಈ ಪರ್ವತದ ಮೇಲೆ ನಿಂತನೆಂದು, ಆಗ ಅವನ ಕೋರೆಗಳಿಂದ ತೊಟ್ಟಿಕ್ಕಿದ ನೀರೇ ತುಂಗಾ ಮತ್ತು ಭದ್ರಾ ಎಂಬ ಎರಡು ನದಿಗಳಾದುವೆಂದು ಪುರಾಣಕಥೆ ಇದೆ. ವರಾಹದ ತನ್ನ ಉದ್ದವಾದ ಎಡಕೋರೆಯನ್ನು (ತುಂಗ) ಆಯುಧವಾಗಿಯೂ ಬಲವಾದ ಬಲಕೋರೆಯನ್ನು (ಭದ್ರ) ಭೂಮಿಯನ್ನೆತ್ತಲು ಸಾಧನವಾಗಿಯೂ ಉಪಯೋಗಿಸಿದನೆಂದು 3 ವರಾಹದ ಕಣ್ಣಿನಿಂದ (ನೇತ್ರ) ಸುರಿದ ಹನಿಗಳೇ ನೇತ್ರಾವತಿ ನದಿಯಾಯಿತೆಂದೂ ಐತಿಹ್ಯ. (ಕೆ.ಎಂ.ಎಸ್.)

**ತುಂಬಲೂರಾಚಾರ್ಯ :** ಸು.710. ಪಂಪಪೂರ್ವಯುಗದ ಜೈನ ಆಚಾರ್ಯ ಹಾಗೂ ಚೂಡಾಮಣಿ ಎಂಬ ಗ್ರಂಥದ (ಅನುಪಲಬ್ಧ) ಕರ್ತೃ. ಶ್ರೀವರ್ಧದೇವ ಎಂಬುದು ಇವನ ನಿಜನಾಮ. ತುಂಬಲೂರಾಚಾರ್ಯನೆಂದೇ (ತುಂಬಲೂರು ಗ್ರಾಮದ ಆಚಾರ್ಯ) ಪ್ರಸಿದ್ಧನಾಗಿದ್ದಾನೆ. ಕನ್ನಡದ ಹಲವಾರು ಕವಿಗಳು ಇವನನ್ನು ಸ್ಮರಿಸಿದ್ದಾರೆ. ದೇವಚಂದ್ರನ ರಾಜಾವಳೀ ಕಥೆಯಲ್ಲಿ ತುಂಬಲೂರು ನಾಮಾಚಾರ್ಯರ ಎಂಬತ್ತು ನಾಲ್ಕು ಸಾವಿರ ಗ್ರಂಥಕರ್ತೃಗಳಾಗಿ ಕರ್ನಾಟಕ ಭಾಷೆಯಿಂ ಚೂಡಾಮಣಿ ವ್ಯಾಖ್ಯಾನಮಂ ಮಾಡಿದರ್ ಎಂದು ಹೇಳಿದೆ. ಚಾವುಂಡರಾಯ (ಸು.978) ತೆಂಬಳೂರಾಚಾರ್ಯನೆಂಬ ಗುರುವನ್ನು ಸ್ತೋತ್ರ ಮಾಡಿದ್ದಾನೆ. ಭಟ್ಟಾಕಳಂಕ (ಸು.1604) ತನ್ನ ಶಬ್ದಾನುಶಾಸನದಲ್ಲಿ ತೊಂಬತ್ತಾರು ಸಾವಿರ ಗ್ರಂಥಸಂಖ್ಯೆಯ ಚೂಡಾಮಣಿ ಎಂಬ ವ್ಯಾಖ್ಯಾನ ರೂಪದ ಶಾಸ್ತ್ರ ಗ್ರಂಥವನ್ನು ಹೆಸರಿಸಿದ್ದಾನೆ. ಇಂದ್ರನಂದಿ ತನ್ನ ಶ್ರುತಾವತಾರದಲ್ಲಿ ತುಂಬಲೂರಾಚಾರ್ಯ ಎಂಬತ್ತುನಾಲ್ಕು ಸಾವಿರ ಗ್ರಂಥಸಂಖ್ಯೆಯ ಚೂಡಾಮಣಿ ವ್ಯಾಖ್ಯಾನವನ್ನು ಕನ್ನಡದಲ್ಲಿ ರಚಿಸಿರುವನೆಂದು ತಿಳಿಸಿದ್ದಾನೆ. ಶ್ರವಣಬೆಳಗೊಳದ 1129ರ ಶಾಸನವೊಂದರಲ್ಲಿ ಕವಿಚೂಡಾಮಣಿಯಾದ ಶ್ರೀವರ್ಧದೇವ ಚೂಳಾಮಣಿ ನಾಮ ಸೇವ್ಯಕಾವ್ಯವನ್ನು ರಚಿಸಿರುವನೆಂದೂ ಕಾವ್ಯಾದರ್ಶ ಎಂಬ ಸಂಸ್ಕೃತ ಲಕ್ಷಣಗ್ರಂಥದ ಕರ್ತೃ ದಂಡಿ (7ನೆಯ ಶತಮಾನದ ಅಂತ್ಯ) ಈ ಕವಿಯನ್ನು ಹೊಗಳಿದ್ದಾನೆಂದೂ ಹೇಳಿದೆ. ಈ ಎಲ್ಲ ಹೇಳಿಕೆಗಳ ಆಧಾರದ ಮೇಲೆ ಶ್ರೀವರ್ಧದೇವನೇ ತುಂಬಲೂರಾಚಾರ್ಯನೆಂದೂ ಚೂಡಾಮಣಿ ಎಂಬ ಕನ್ನಡ ವ್ಯಾಖ್ಯಾನ ಗ್ರಂಥದ ಕರ್ತೃವೆಂದೂ ಕಾಲ ಸು.650 ಎಂದೂ ಕವಿಚರಿತಕಾರರು ಅಭಿಪ್ರಾಯಪಟ್ಟಿದ್ದಾರೆ. ಚೂಡಾಮಣಿ ಕಾವ್ಯಕರ್ತೃ ಶ್ರೀವರ್ಧದೇವನೂ ಚೂಡಾಮಣಿ ವ್ಯಾಖ್ಯಾನ ಗ್ರಂಥದ ಕರ್ತೃ ತುಂಬಲೂರಾಚಾರ್ಯನೂ ಬೇರೆ ಬೇರೆ ವ್ಯಕ್ತಿಗಳೆಂದು ವೆಂಕಟಸುಬ್ಬಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಶಾಸನದಲ್ಲಿ ಹೇಳಿರುವ ಚೂಡಾಮಣಿ ಕಾವ್ಯ ಶ್ರೀವರ್ಧದೇವನೆಂಬ ನಾಮಾಂತರವುಳ್ಳ ತೋಲಾಮಟಿದೇವರೆಂಬ ಜೈನಕವಿಯಿಂದ ರಚಿತವಾದ ಚೂಳಾಮಣಿಯೆಂಬ ಪುರಾತನ ತಮಿಳು ಕಾವ್ಯವಾಗಿರಬಹುದೆಂದು ಕವಿಚರಿತಕಾರರು ತಮ್ಮ ಅಭಿಪ್ರಾಯವನ್ನು ಅನಂತರ ಮಾರ್ಪಡಿಸಿಕೊಂಡರು.

ಕನ್ನಡದಲ್ಲಿ ಚೂಡಾಮಣಿ ಎಂಬ ಕಾವ್ಯವೊಂದು ಇದ್ದಿತ್ತೆಂಬುದರಲ್ಲಿ ಸಂದೇಹವಿಲ್ಲ. ಸಂಸ್ಕೃತ ಛಂದೋನುಶಾಸನದ ಕರ್ತೃ ಜಯಕೀರ್ತಿ (11ನೆಯ ಶತಮಾನ) ಕರ್ನಾಟಕ ವಿಷಯ ಭಾಷಾಜಾತ್ಯಧಿಕಾರದಲ್ಲಿ ಚತುಷ್ಪದಿಕಾವೃತ್ತ 'ಚೂಡಾಮಣಿ' ಕಾವ್ಯದಲ್ಲಿ ಪ್ರಸಿದ್ಧ ಎಂದು ತಿಳಿಸಿದ್ದಾನೆ. ಶಾಸನದಲ್ಲಿ ತಿಳಿಸಿರುವಂತೆ ದಂಡಿ ಹೊಗಳಿರುವ ಶ್ರೀವರ್ಧದೇವ ತಮಿಳು ಚೂಳಾಮಣಿಯ ಕರ್ತೃವಾಗಿರಲಾರ. ಆದ್ದರಿಂದ ತಮಿಳು ಚೂಳಾಮಣಿಗೂ ಕನ್ನಡ ಚೂಡಾಮಣಿಗೂ ಯಾವುದೇ ಸಂಬಂಧವಿಲ್ಲವೆಂಬುದು ಇದರಿಂದ ತಿಳಿಯುತ್ತದೆ. ಹಾಗೆಯೇ 10ನೆಯ ಶತಮಾನದ ಕವಿ ಕಂದರ್ಪ ಕೃತ ಚೂಡಾಮಣಿ ಕಾವ್ಯವೊಂದಿದ್ದು ಆ ಗ್ರಂಥಕ್ಕೂ ಇದಕ್ಕೂ ಯಾವುದೇ ವಿಧವಾದ ಸಂಬಂಧವಿಲ್ಲ. ಚೂಡಾಮಣಿ ವ್ಯಾಖ್ಯಾನಗ್ರಂಥವಾದರೂ ಕಾವ್ಯ ಎಂಬ ಮನ್ನಣೆಗೆ ಪಾತ್ರವಾಗಿದೆ. (ಎಂ.ವಿ.ಎಸ್.)

**ತುಮಕೂರು :** ಕರ್ನಾಟಕ ರಾಜ್ಯದ ಒಂದು ಜಿಲ್ಲೆಯ, ತಾಲ್ಲೂಕು ಮತ್ತು ಆಡಳಿತ ಕೇದ್ರ, $12^{0}45'$ ಮತ್ತು $14^{0}20'$ ಉತ್ತರ ಅಕ್ಷಾಂಶ; $76^{0}20'$ ಮತ್ತು $77^{0}31'$ ಪೂರ್ವ ರೇಖಾಂಶ -ಇವುಗಳ ನಡುವೆ ಇರುವ ಈ ಜಿಲ್ಲೆ ಉತ್ತರದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ, ವಾಯುವ್ಯ ಮತ್ತು ಪಶ್ಚಿಮಕ್ಕೆ ಚಿತ್ರದುರ್ಗ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ದಕ್ಷಿಣಕ್ಕೆ ಮಂಡ್ಯ ಜಿಲ್ಲೆ, ಪೂರ್ವಕ್ಕೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಿವೆ. ಈ ಜಿಲ್ಲೆಯ ಪಾವಗಡ ತಾಲ್ಲೂಕನ್ನು ಆಂಧ್ರ ಪ್ರದೇಶ ಸುತ್ತುವರಿದಿದೆ. ವಾಯುವ್ಯದಲ್ಲಿ ಮಾತ್ರ ಚಿತ್ರದುರ್ಗ ಜಿಲ್ಲೆಯ ಪೂರ್ವ ದಂಚಿಗೆ ಕೂಡಿಕೊಂಡಿದೆ. ಜಿಲ್ಲೆಯನ್ನು ಮೂರು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ತುಮಕೂರು ಉಪವಿಭಾಗಕ್ಕೆ ಗುಬ್ಬಿ, ತುಮಕೂರು ಮತ್ತು ಕುಣಿಗಲು ತಾಲ್ಲೂಕುಗಳೂ ತಿಪಟೂರು ಉಪವಿಭಾಗಕ್ಕೆ ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ


ತು ಮ ಕೂ ರು ಜಿ ಲ್ಲೆ
ಪಾವಗಡ
ಮಧುಗಿರಿ
ಕೊರಟಗೆರೆ
ತುಮಕೂರು
ಗುಬ್ಬಿ
ತಿಪಟೂರು
ಕುಣಿಗಲ್
ಹುಳಿಯಾರು
ಹುಲಿಯೂರು ದುರ್ಗ
ಚನ್ನರಾಯನ ದುರ್ಗ
ದೇವರಾಯನ ದುರ್ಗ
ಮಾಯಸಂದ್ರ
ಹಂದನಕೆರೆ
ನಿಟ್ಟೂರು
ಕ್ಯಾತಸಂದ್ರ
ಹೆಬ್ಬೂರು
ಹುಲಿಕುಂಟೆ
ಕಳ್ಳಂಬೆಳ್ಳ
14
13
77
0 10 20
ಕಿಲೋಮೀಟರುಗಳು

ತಾಲ್ಲೂಕುಗಳೂ ಮಧುಗಿರಿ ಉಪವಿಭಾಗಕ್ಕೆ ಕೊರಟಗೆರೆ, ಪಾವಗಡ, ಮಧುಗಿರಿ ಮತ್ತು ಶಿರಾ ತಾಲ್ಲೂಕುಗಳೂ ಸೇರಿವೆ. ಜಿಲ್ಲೆಯಲ್ಲಿ ಒಟ್ಟು 49 ಹೋಬಳಿಗಳೂ 12 ಪಟ್ಟಣಗಳೂ 2,725 ಗ್ರಾಮಗಳೂ ಇವೆ. ಜಿಲ್ಲೆಯ ಪೂರ್ವದಿಂದ ಪಶ್ಚಿಮಕ್ಕೆ ಇರುವ ಅಂತರ ಸು.180ಕಿಮೀ. ಉತ್ತರದಿಂದ ದಕ್ಷಿಣಕ್ಕೆ ಸು.164ಕಿಮೀ. ತುಮಕೂರು ಜಿಲ್ಲಾ ಆಡಳಿತ ಕೇಂದ್ರ. ಜಿಲ್ಲೆಯ ಒಟ್ಟು ವಿಸ್ತೀರ್ಣ 10,606ಚ.ಕಿಮೀ. ಜನಸಂಖ್ಯೆ 25,79,516.

ಜಿಲ್ಲೆಯ ಪೂರ್ವಭಾಗದಲ್ಲಿ ಉತ್ತರದ ನಿಡುಗಲ್ ಬೆಟ್ಟಗಳಿಂದ ದಕ್ಷಿಣದ ಹುಲಿಯೂರುದುರ್ಗದವರೆಗಿನ ಬೆಟ್ಟಗಳ ಸಾಲಿನಲ್ಲಿ ಕಾಮನದುರ್ಗ, ನಿಡುಗಲ್ಲು, ಮಿಡಿಗೇಶಿದುರ್ಗ, ಮಧುಗಿರಿ ಬೆಟ್ಟ, ಚನ್ನರಾಯದುರ್ಗ, ಕೊರಟಗೆರೆ ಬೆಟ್ಟ, ದೇವರಾಯನದುರ್ಗ, ನಿಜಗಲ್ಲು ಬೆಟ್ಟ, ಹುತ್ರಿದುರ್ಗ, ಹುಲಿಯೂರು ದುರ್ಗ ಮುಖ್ಯವಾದುವು. ಈ ಬೆಟ್ಟ ಸಾಲು ಮುಂದೆ ಬೆಂಗಳೂರು ಜಿಲ್ಲೆಯ ಪಶ್ಚಿಮಕ್ಕೆ ಶಿವಗಂಗೆ ಮತ್ತು ಸಾವನದುರ್ಗಗಳತ್ತ ಸಾಗಿದೆ. ತುಮಕೂರು ಜಿಲ್ಲೆಯ ಇತರ ಬೆಟ್ಟಗಳೆಂದರೆ ರಾಮದೇವರ ಬೆಟ್ಟ, ಸೀತೆಕಲ್ಲು ಬೆಟ್ಟ, ದೊಡ್ಡ ಸಾರವಂಗಲ, ಬ್ಯಾಲ, ಪಾವಗಡ, ಬೊಮ್ಮನಹಳ್ಳಿ ಬೆಟ್ಟ, ಚೌಡೇನಹಳ್ಳಿ ಬೆಟ್ಟ ಮತ್ತು ರಂಗಸ್ವಾಮಿ ಬೆಟ್ಟ.

ಜಿಲ್ಲೆಯಲ್ಲಿ ಖನಿಜ ಶಿಲೆ, ಭಿನ್ನಸ್ತರ ಶಿಲೆ ಮತ್ತು ಕಣಶಿಲೆಗಳಿಂದ ಕೂಡಿದ ಭೂವಿಭಾಗಗಳಿವೆ. ಖನಿಜಪದರ ಶಿಲೆಗಳು ಹುಲಿಯೂರಿನ ಪೂರ್ವಕ್ಕೆ ಉತ್ತರದಿಂದ ದಕ್ಷಿಣಕ್ಕೆ ಸಾಗಿದೆ. ಚಿಕ್ಕನಾಯಕನಹಳ್ಳಿ ಭಿನ್ನಸ್ತರ ಶಿಲಾವಿಭಾಗ. ಬೆಳ್ಳಾರದ ಬಳಿ ಚಿನ್ನದ ಪದರಶಿಲೆಗಳಿವೆ. ಕಣಶಿಲೆಯ ಭಾಗ ದೇವರಾಯನದುರ್ಗ, ಸಿದ್ಧಬೆಟ್ಟ, ಮಧುಗಿರಿ ಮತ್ತು ಪಾವಗಡದಲ್ಲಿ ಹರಡಿದೆ. ಕಟ್ಟಡಕ್ಕೆ ಯೋಗ್ಯವಾದ ಕಣಶಿಲೆ ಕ್ಯಾತಸಂದ್ರ ಮತ್ತು ಕರಡಿಗಳಲ್ಲಿವೆ. ಸುಣ್ಣಕಲ್ಲಿನೊಡನೆ ಮಿಶ್ರವಾಗಿರುವ ಮ್ಯಾಂಗನೀಸ್ ದೊಡ್ಡಗುಣಿ ಎಂಬಲ್ಲಿ ದೊರೆಯುವುದು. ಇದು ಸು.100 ಮಿಲಿಯ ಮೆಟ್ರಿಕ್ ಟನ್‌ಗಳಷ್ಟಿರಬಹುದೆಂದು ಅಂದಾಜು ಮಾಡಲಾಗಿದೆ. ಓಬಳಾಪುರದ ಬಳಿಯೂ ಈ ನಿಕ್ಷೇಪವಿರುವುದು ತಿಳಿದುಬಂದಿದೆ. ಕೊಂಡ್ಲಿ, ದೊಡ್ಡಗುಣಿ, ಅಬ್ಬಿಗೆ ಗುಡ್ಡ, ಕಾರೆಕುರ್ಚಿ ಮತ್ತು ಜಾಣೇಹಾರುಗಳಲ್ಲಿ ಒಟ್ಟು 35 ಮಿಲಿಯ ಟನ್ ಕಬ್ಬಿಣದ ಅದಿರಿನ ನಿಕ್ಷೇಪವಿದೆಯೆಂದು ಅಂದಾಜು ಮಾಡಲಾಗಿದೆ. ಕೊರಟಗೆರೆ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಸು.64ಕಿಮೀ ಪ್ರದೇಶದಲ್ಲಿ ಕುರಂಗದ ಕಲ್ಲಿದ್ದು ಅದರ ಪೂರ್ಣ ಬಳಕೆಯಾಗುತ್ತಿಲ್ಲ. ಕೊರಟಗೆರೆ ಪಶ್ಚಿಮದಲ್ಲಿ ಮತ್ತು ಇನ್ನು ಕೆಲವು ಪ್ರದೇಶಗಳಲ್ಲಿ ಸು.10,000 ಟನ್ ಕಣಶಿಲೆ, ಗುಬ್ಬಿ, ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಸು.25,000 ಟನ್‌ಗಳಷ್ಟು ಉತ್ತಮದರ್ಜೆಯ ಗಾಜುಮರಳು ಇದೆ. ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ಜೇಡಿಮಣ್ಣು ಇದ್ದು ಚಿಕ್ಕನಾಯಕನಹಳ್ಳಿ ಮತ್ತು ಶಿರಾ ತಾಲ್ಲೂಕುಗಳಲ್ಲಿ ದೊರೆಯುವುದು ಅತ್ಯುತ್ತಮವೆನ್ನಲಾಗಿದೆ. ಕಾವಿಮಣ್ಣು, ಬಳಪದ ಕಲ್ಲು ಈ ಜಿಲ್ಲೆಯಲ್ಲಿ ದೊರೆಯುತ್ತವೆ. ಹುಲಿಯೂರು, ಓಬಳಾಪುರ, ಕೊಂಡ್ಲಿ - ಈ ಗ್ರಾಮಗಳ ಸುತ್ತ ಸುಣ್ಣ ಕಲ್ಲು ಸಿಗುತ್ತದೆ. ಬಾಣಸಂದ್ರದ ಬಳಿ ಬಳಪದ ಕಲ್ಲು ಅಧಿಕವಾಗಿದೆ.

ಜಯಮಂಗಲಿ, ಶಿಂಷಾ, ಸುವರ್ಣಮುಖಿ, ಗರುಡಾಚಲ ಮತ್ತು ಉತ್ತರ ಪಿನಾಕಿನಿ ಈ ಜಿಲ್ಲೆಯ ನದಿಗಳು. ಇವುಗಳ ಜೊತೆಗೆ ಮಳೆಗಾಲದಲ್ಲಿ ತುಂಬಿ ಹರಿಯುವ ಅನೇಕ ತೊರೆಗಳಿವೆ. ದೇವರಾಯನದುರ್ಗದ ಜಲದಗೊಂಡಿ ಎಂಬಲ್ಲಿ ಹುಟ್ಟುವ ಜಯಮಂಗಲಿ ನದಿ ಉತ್ತರಾಭಿಮುಖವಾಗಿ ಹರಿದು ಮಧುಗಿರಿ ತಾಲ್ಲೂಕನ್ನು ಪ್ರವೇಶಿಸಿ ತಾಲ್ಲೂಕಿನ ಪೂರ್ವಭಾಗದಲ್ಲಿ ಈಶಾನ್ಯಾಭಿಮುಖವಾಗಿ ಹರಿಯುತ್ತದೆ. ಜಿಲ್ಲೆಯಲ್ಲಿ ಈ ನದಿ ಒಟ್ಟು 64ಕಿಮೀ ದೂರ ಹರಿದು ಮುಂದೆ ಉತ್ತರ ಪಿನಾಕಿನಿಯನ್ನು ಸೇರಿಸಿಕೊಳ್ಳುವುದು. ಸುವರ್ಣಮುಖಿ ನದಿ ಚನ್ನರಾಯದುರ್ಗದಲ್ಲಿ ಹುಟ್ಟಿ ಕೊರಟಗೆರೆ ತಾಲ್ಲೂಕಿನಲ್ಲಿ 24ಕಿಮೀ ಸಾಗಿ ಮುಂದೆ ರಾಮಪುರದ ಬಳಿ ಜಯಮಂಗಲಿಯನ್ನು ಸೇರುವುದು. ಗರುಡಾಚಲ ತೊರೆ ದೇವರಾಯನದುರ್ಗದ ಆಗ್ನೇಯದಲ್ಲಿ ಹುಟ್ಟಿ ಕೊರಟಗೆರೆ ತಾಲ್ಲೂಕಿನಲ್ಲಿ ಹರಿದು ಹೊಳವನಹಳ್ಳಿ ಬಳಿ ಜಯಮಂಗಲಿಯನ್ನು ಸೇರಿಕೊಳ್ಳುವುದು. ಕೋಲಾರ ಜಿಲ್ಲೆಯ ನಂದಿದುರ್ಗದಲ್ಲಿ ಹುಟ್ಟಿ ಹರಿಯುವ ಉತ್ತರ ಪಿನಾಕಿನಿ ನದಿ ಈ ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಕೆಲವೇ ಕಿಮೀಗಳ ದೂರ ಹರಿದು ಮುಂದೆ ಸಾಗುವುದು. ಕುಮುದ್ವತಿ ಮಧುಗಿರಿ ತಾಲ್ಲೂಕಿನ ಅತ್ಯಂತ ಪೂರ್ವದಲ್ಲಿ ಉತ್ತರಾಭಿಮುಖವಾಗಿ ಹರಿಯುವುದು. ಶಿಂಷಾನದಿ ದೇವರಾಯನದುರ್ಗದ ದಕ್ಷಿಣದಲ್ಲಿ ಹುಟ್ಟಿ ತುಮಕೂರು, ಗುಬ್ಬಿ, ತುರುವೇಕೆರೆ ಮತ್ತು ಕುಣಿಗಲು ತಾಲ್ಲೂಕುಗಳಲ್ಲಿ ದಕ್ಷಿಣಾಭಿಮುಖವಾಗಿ ಒಟ್ಟು 99ಕಿಮೀ ಹರಿದು ಮುಂದೆ ಕಾವೇರಿಯನ್ನು ಸೇರುವುದು. ಈ ನದಿ ತುಮಕೂರು ಜಿಲ್ಲೆಗೆ ಹೆಚ್ಚು ಪ್ರಯೋಜನಕಾರಿ. ನಾಗಿಣಿ ನದಿ ಕುಣಿಗಲು ತಾಲ್ಲೂಕಿನಲ್ಲಿ 10ಕಿಮೀ ದೂರ ಹರಿದು ಶಿಂಷಾ ನದಿಯನ್ನು ಕೂಡಿಕೊಳ್ಳುವುದು. ಈ ನದಿಗಳು ಜಿಲ್ಲೆಯ ಕೆಲವು ವ್ಯವಸಾಯೋಪಯೋಗಿ ಕೆರೆಗಳಿಗೆ ಆಸರೆಯಾಗಿವೆ.

ಜಿಲ್ಲೆಯ ಬೇಸಗೆಯ ಗರಿಷ್ಠ ಉಷ್ಣಾಂಶ $41^0$ ಸೆ.: ಚಳಿಗಾಲದ ಕನಿಷ್ಠ ಉಷ್ಣಾಂಶ $10^0$ ಸೆ. ವಾರ್ಷಿಕ ಸರಾಸರಿ ಮಳೆ 969ಮಿಮೀ.

ತುಮಕೂರು ಜಿಲ್ಲೆ ಬಹುಮಟ್ಟಿಗೆ ಬಯಲುಸಾಡೆಂದು ಹೇಳಬಹುದು. ಈ ಜಿಲ್ಲೆಯ ಅರಣ್ಯಗಳು ಹೆಚ್ಚಾಗಿ ಬೆಟ್ಟಪ್ರದೇಶದ ಸುತ್ತಲೂ ಗುಂಪುಗುಂಪಾಗಿ ಹರಡಿವೆ. ದೇವರಾಯನದುರ್ಗ, ಮಧುಗಿರಿ, ಚಿಕ್ಕನಾಯಕನಹಳ್ಳಿ, ಶಿರಾ, ಕೊರಟಗೆರೆ, ಕಿಬ್ಬನಹಳ್ಳಿ, ಬುಕ್ಕಾಪಟ್ಟಣ, ಹುಲಿಯೂರುದುರ್ಗ, ಕುದುರೆಕಣಿವೆ ಮುಂತಾದ ಕಡೆ ಅರಣ್ಯವಿದ್ದು ಜಿಲ್ಲೆಯ ಒಟ್ಟು ಅರಣ್ಯಪ್ರದೇಶ 883ಚ.ಕಿಮೀ ಇದೆ. ಈ ಅರಣ್ಯಗಳಲ್ಲಿ ಜಾಲರಿ, ದಿಂಡಿಗ, ಹೊನ್ನೆ, ಕರಿಮತ್ತಿ, ಅಳಲೆ, ತೋರೆಮತ್ತಿ, ಹುಣಸೆ, ತೇಗ, ಗಂಧ, ಬಾಗೆ, ಧೂಪ, ಕರ್ಚಿ, ಕಕ್ಕೆ, ಕಗ್ಗಲಿ, ಚಿಜ್ಜಲು, ತಂಗಡಿ, ಸೀತಾಫಲ ಮುಂತಾದ ಮರಗಿಡಗಳನ್ನು ಕಾಣಬಹುದು. ಈ ಜಿಲ್ಲೆಯ ಅರಣ್ಯಗಳಲ್ಲಿ ಹಿಂದೆ ಹುಲಿ, ಚಿರತೆ ಮುಂತಾದವು ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದವು. ಈಗ ಅಪರೂಪವಾಗಿವೆ. ಕರಡಿ, ಕಾಡುಹಂದಿ, ಚುಕ್ಕೆ ಜಿಂಕೆಗಳು ಇವೆ. ಕಾಡುಕೋಳಿ, ಜೀವಂಜೀವ, ಗಿಣಿ, ಕಾಡುಪಾರಿವಾಳ, ಮೈನ ಮೊದಲಾದವೂ ನೀರುಕೋಳಿ, ಕೊಕ್ಕರೆ ಮುಂತಾದ ಜಲಚರ ಪಕ್ಷಿಗಳೂ ಇಲ್ಲಿವೆ.

ಈ ಜಿಲ್ಲೆಯ ದಕ್ಷಿಣ ಮತ್ತು ಉತ್ತರ ತಾಲ್ಲೂಕುಗಳಲ್ಲಿ ಕೆಂಪುಮಣ್ಣಿನ ಭೂಮಿಯೂ ಪೂರ್ವಭಾಗದಲ್ಲಿ ಮರಳು ಮಿಶ್ರಿತ ಭೂಮಿಯೂ ಉತ್ತರದಲ್ಲಿ ಸ್ವಲ್ಪಮಟ್ಟಿಗೆ ಕಪ್ಪುಮಣ್ಣೂ ಇದೆ. ಕೆಂಪು ಮತ್ತು ಕಪ್ಪುಜೇಡಿಮಣ್ಣಿನ ಭೂಮಿಯೂ ಜಿಲ್ಲೆಯಲ್ಲಿದೆ.

ಜಿಲ್ಲೆಯಲ್ಲಿ ನೀರಾವರಿಗೆ ಹೆಚ್ಚಾಗಿ ಕೆರೆ ಹಾಗೂ ತಲಪರಿಗೆಗಳ ಉಪಯೋಗ ಉಂಟು. ಕುಣಿಗಲು ತಾಲ್ಲೂಕಿನಲ್ಲಿ ಶಿಂಷಾನದಿಗೆ ಕಟ್ಟಿರುವ ಅಮೃತೂರಿನ ಮಾರ್ಕೋನಹಳ್ಳಿ ಜಲಾಶಯ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸುವರ್ಣಮುಖಿ ನದಿಯ ಬೋರನಕಣಿವೆ ಜಲಾಶಯ, ಮಾಗಡಿ ಕೆಂಪೇಗೌಡ ಕಟ್ಟಿಸಿದ ದೀಪಾಂಬುಧಿ ಕೆರೆ, ಕುಣಿಗಲು ತಾಲ್ಲೂಕು ಮಂಗಳಗ್ರಾಮದ ಬಳಿ ನಾಗಿಣಿ ನದಿ ಜಲಾಶಯ ಮುಂತಾದವು ಜಿಲ್ಲೆಯ ನೀರಾವರಿಗಾಗಿ ಕಟ್ಟಿರುವ ಕೆಲವು ಮುಖ್ಯ ಕಟ್ಟೆಗಳು. ಹಾಸನ ಜಿಲ್ಲೆಯ ಗೊರೂರು ಬಳಿ ನಿರ್ಮಿಸಲಾಗಿರುವ ಹೇಮಾವತಿ ಜಲಾಶಯದ ಎಡದಂಡೆ ನಾಲೆ ಈ ಜಿಲ್ಲೆಗೆ ನೀರಾವರಿ ಸೌಕರ್ಯವನ್ನು ಒದಗಿಸಿದೆ. ಕುಣಿಗಲು, ತುರುವೇಕೆರೆ, ಗುಬ್ಬಿ ಮತ್ತು ತುಮಕೂರು ತಾಲ್ಲೂಕುಗಳು ಈ ನೀರಾವರಿ ಯೋಜನೆಯಿಂದ ಹೆಚ್ಚಿನ ಪ್ರಯೋಜನ ಪಡೆಯುವ ತಾಲ್ಲೂಕುಗಳು. ಎಲ್ಲ ಮೂಲಗಳಿಂದ ಒಟ್ಟು ಜಿಲ್ಲೆಯ ನೀರಾವರಿ ಪ್ರದೇಶ 1,12,235 ಹೆಕ್ಟೇರ್‌ಗಳು (1988-89).

ಜಿಲ್ಲೆಯ ಮುಖ್ಯ ಬೆಳೆಗಳು ಬತ್ತ, ರಾಗಿ, ಜೋಳ, ಹುರುಳಿ, ನೆಲಗಡಲೆ. ಇವುಗಳ ಜೊತೆಗೆ ಮೆಣಸಿನಕಾಯಿ, ತೆಂಗು, ಅಡಕೆ, ಬಾಳೆ ಬೆಳೆಯುವರಲ್ಲದೆ ಹರಳು, ಎಳ್ಳು ಮೊದಲಾದ ಎಣ್ಣೆ ಬೀಜಗಳನ್ನೂ ಬೆಳೆಯುತ್ತಾರೆ. ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು ತಾಲ್ಲೂಕುಗಳಲ್ಲಿ ತೆಂಗು ಮತ್ತು ಅಡಕೆ ಬೆಳೆ ಅಧಿಕ. ಕೊರಟಗೆರೆ ತಾಲ್ಲೂಕು ಅಗ್ರಹಾರದಲ್ಲಿ ಬಜೆ ಮೂಲಿಕೆ ಬೆಳೆಯುತ್ತಾರೆ. ಹಲಸು, ಮಾವು ಜಿಲ್ಲೆಯ ಮುಖ್ಯ ಫಲ ಉತ್ಪಾದನೆಗಳು.

2001ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯ ವಿವಿಧ ಪ್ರಮುಖ ಬೆಳೆಗಳು ಹಾಗೂ ಆ ಬೆಳೆಗಳನ್ನು ಬೆಳೆಯುವ ಪ್ರದೇಶ ಹೆಕ್ಟೇರ್‌ಗಳಲ್ಲಿ

ಹೀಗಿದೆ: ಬತ್ತ (47,448), ರಾಗಿ (2,06,568), ಜೋಳ (4,579), ಮುಸುಕಿನ ಜೋಳ (6,219), ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು (2,68,871), ಕಡಲೆ (474), ತೊಗರಿ (15,946), ಒಟ್ಟು ದ್ವಿದಳ ಧಾನ್ಯಗಳು (69,514), ನೆಲಗಡಲೆ (1,90,123), ಕಬ್ಬು (1,017), ಹತ್ತಿ (1,343), ಹಿಪ್ಪುನೇರಳೆ (11,015) (1998-99).

ಜಿಲ್ಲೆಯಲ್ಲಿ ಪಶುಸಂಪತ್ತು ಅಧಿಕ. ಜಿಲ್ಲೆಯಲ್ಲಿ 15 ಪಶುವೈದ್ಯ ಆಸ್ಪತ್ರೆಗಳು, 54 ಪಶು ಚಿಕಿತ್ಸಾಲಯಗಳು, 127 ಪ್ರಾಥಮಿಕ ಪಶುವೈದ್ಯ ಕೇಂದ್ರಗಳು ಇವೆ (2000).

ಜಿಲ್ಲೆಯ ಕುಣಿಗಲು ತಾಲ್ಲೂಕಿನಲ್ಲಿ ಪ್ರಸಿದ್ಧ ಕುದುರೆ ಸಾಕಣೆ ಕೇಂದ್ರ ಉಂಟು. ಮಾರ್ಕೋನಹಳ್ಳಿ, ಬೋರನ ಕಣಿವೆ, ಕಡಬ, ಮಲ್ಲಘಟ್ಟ, ಚಂದ್ರಶೇಖರಪುರ, ಕಲ್ಲೂರು, ನಿಟ್ಟೂರು, ಮೈದಾಳ, ತುಂಬಡಿ, ಮಾವತ್ತೂರು, ತುರುವೇಕೆರೆ ಮತ್ತು ಕುಣಿಗಲು ದೊಡ್ಡಕೆರೆ ಮುಂತಾದ ಕೆರೆಗಳು ಮತ್ತು ಜಯಮಂಗಲಿ, ಕುಮುದ್ವತಿ, ಶಿಂಷಾ, ಉತ್ತರ ಪಿನಾಕಿನಿ ನದಿಗಳಲ್ಲಿ ಮತ್ಸ್ಯೋದ್ಯಮ ಬೆಳೆಯುತ್ತಿದೆ. ವಾರ್ಷಿಕವಾಗಿ 13,555 ಟನ್ ಮೀನು ಹಿಡಿಯಲಾಗುತ್ತದೆ.

ತುಮಕೂರು ಜಿಲ್ಲೆಗೆ 1929ರಲ್ಲಿ ವಿದ್ಯುತ್ ಸೌಲಭ್ಯ ಒದಗಿತು. ಜೊತೆಗೆ ಜಿಲ್ಲೆಯಲ್ಲಿ ಸಾಕಷ್ಟು ವಿವಿಧ ಖನಿಜಸಂಪತ್ತಿದ್ದರೂ ಈ ಜಿಲ್ಲೆ ಕೈಗಾರಿಕೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿಲ್ಲ. ಈ ಜಿಲ್ಲೆಯ ಬೆಳ್ಳಾರದಲ್ಲಿ ಸ್ವಲ್ಪಕಾಲ ಚಿನ್ನ ತೆಗೆಯಲಾಗುತ್ತಿತ್ತು.

ಇಡೀ ಜಿಲ್ಲೆಗೆ ದೊಡ್ಡ ಪ್ರಮಾಣದ ಕೈಗಾರಿಕೆಯೆಂದರೆ ಅಮ್ಮಸಂದ್ರದ ಸಿಮೆಂಟ್ ಕಾರ್ಖಾನೆ. ತುಮಕೂರಿನಲ್ಲಿ ಹೆಚ್.ಎಂ.ಟಿ. ಗಡಿಯಾರ ಕಾರ್ಖಾನೆ ಸ್ಥಾಪಿತವಾಗಿದೆ. ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳು ಅನೇಕವಿದ್ದು ಅವುಗಳಲ್ಲಿ ಎಣ್ಣೆ ಮತ್ತು ಬತ್ತದ ಗಿರಣಿಗಳು, ವ್ಯವಸಾಯದ ಉಪಕರಣಗಳ ತಯಾರಿಕೆ, ಮುದ್ರಣಾಲಯಗಳು, ಕಬ್ಬಿಣ ಮತ್ತು ಮರಗೆಲಸ, ಬೆಂಕಿಕಡ್ಡಿ, ಗೃಹೋಪಕರಣಗಳು, ಸಾಬೂನು, ಇಟ್ಟಿಗೆ ಮತ್ತು ಹೆಂಚು, ಬೋಲ್ಟು ಮತ್ತು ನಟ್ಟುಗಳು, ಬೀಡಿ, ಸ್ಲೇಟ್ ಮತ್ತು ಪೆನ್ಸಿಲ್, ರಿಬ್ಬನ್ ಮುಂತಾದವುಗಳ ತಯಾರಿಕೆಯುಂಟು. ಇದರೊಂದಿಗೆ ಗ್ರಾಮೋದ್ಯೋಗಗಳಾದ ಕೈಮಗ್ಗದ ಹತ್ತಿ, ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳ ತಯಾರಿಕೆ, ಮಣ್ಣಿನ ವಸ್ತುಗಳನ್ನು ಮಾಡುವುದು, ಚರ್ಮ ಹದಮಾಡುವುದು, ಗಾಣದ ಎಣ್ಣೆ, ಚಾಪೆ ಮತ್ತು ಬುಟ್ಟಿಗಳ ತಯಾರಿಕೆ, ನಾರಿನ ಕೈಗಾರಿಕೆ, ಸುಣ್ಣ, ಬಾಚಣಿಗೆ ಮುಂತಾದವುಗಳ ಉತ್ಪಾದನೆ ಇದ್ದು ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳ ತಯಾರಿಕೆಯೂ ಉಂಟು. ಜಿಲ್ಲೆಯಲ್ಲಿ ಉದ್ಯೋಗಸಂಬಂಧ ಸಹಕಾರ ಸಂಘಗಳೂ ವ್ಯವಸಾಯ ಮತ್ತು ಕೈಗಾರಿಕಾಭಿವೃದ್ಧಿಗೆ ಉತ್ತೇಜನಕಾರಿಯಾಗಿ ಆರ್ಥಿಕ ಸಹಾಯಸೌಲಭ್ಯ ನೀಡುವಂಥ ವಿವಿಧ ವಾಣಿಜ್ಯ ಸಹಕಾರಿ ಬ್ಯಾಂಕುಗಳೂ ಇವೆ. ಜಿಲ್ಲೆಯಲ್ಲಿ ಒಟ್ಟು 205 ಕಾರ್ಖಾನೆಗಳಿದ್ದು ಉದ್ಯೋಗಿಗಳ ಸಂಖ್ಯೆ 13,276. ಕೈಗಾರಿಕಾ ಎಸ್ಟೇಟ್‌ಗಳು 7, ಕೈಗಾರಿಕಾ ಶೆಡ್ಡುಗಳು 128 (2000). ಜಿಲ್ಲೆಯಲ್ಲಿ 137 ವಾಣಿಜ್ಯ ಬ್ಯಾಂಕುಗಳು, 47 ಗ್ರಾಮೀಣ ಬ್ಯಾಂಕುಗಳು, 12 ಸಹಕಾರಿ ಬ್ಯಾಂಕುಗಳು 10 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಇವೆ.

ಈ ಜಿಲ್ಲೆಯಲ್ಲಿ ವ್ಯಾಪಾರ ವ್ಯವಹಾರಕ್ಕೆ ಅನುಕೂಲಿಸುವಂತೆ ತಿಪಟೂರು, ತುಮಕೂರು, ಶಿರಾ, ತುರುವೇಕೆರೆ, ಮಧುಗಿರಿ, ಕುಣಿಗಲು, ಹುಳಿಯಾರು, ಚಿಕ್ಕನಾಯಕನಹಳ್ಳಿ ಮತ್ತು ಗುಬ್ಬಿಯಲ್ಲಿ ನಿಯಂತ್ರಿತ ಮಾರುಕಟ್ಟೆಗಳಿವೆ. ಬೆಳ್ಳಾವೆ, ಗುಬ್ಬಿ, ನಿಡಸಾಲೆಗಳಲ್ಲಿ ಸೋಮವಾರವೂ ತಿಪಟೂರಿನಲ್ಲಿ ಶನಿವಾರ ಮತ್ತು ಭಾನುವಾರವೂ ಸಂತೆ ನಡೆಯುತ್ತದೆ. ಈ ಜಿಲ್ಲೆಯಿಂದ ಬೆಂಗಳೂರು, ಆಂಧ್ರ ಪ್ರದೇಶದ ಹಿಂದೂಪುರ ಮುಂತಾದ ಸುತ್ತಲ ಜಿಲ್ಲೆಗಳಿಗೆ ಕೊಬ್ಬರಿ, ಅಕ್ಕಿ, ರಾಗಿ, ಹುರುಳಿ, ಹರಳು, ಹುಣಿಸೆಹಣ್ಣು, ಬೆಲ್ಲ, ಅಡಕೆ ಮುಂತಾದವೂ ಮುಂಬಯಿ, ಪುಣೆ, ಬೆಂಗಳೂರು, ಅಹಮದಾಬಾದ್, ದೆಹಲಿ, ಕಾನ್‌ಪುರ ಮುಂತಾದ ಕಡೆಗಳಿಗೆ ತೆಂಗಿನಕಾಯಿ ಮತ್ತು ಕೊಬ್ಬರಿ ಹೆಚ್ಚಾಗಿ ರಫ್ತಾಗುತ್ತವೆ. ಗೋದಿ, ಜೋಳ, ಸಕ್ಕರೆ, ತುಪ್ಪ, ಕಾಫಿ, ಮೆಣಸು, ಏಲಕ್ಕಿ, ಮೆಣಸಿನಕಾಯಿ, ಹತ್ತಿ, ಚಿನ್ನ, ಬೆಳ್ಳಿ ಮತ್ತು ಕಬ್ಬಿಣ - ಇವು ಜಿಲ್ಲೆಯ ಮುಖ್ಯ ಆಮದುಗಳಾಗಿವೆ. ಈ ಜಿಲ್ಲೆಯಲ್ಲಿ ಬೆಂಗಳೂರು-ಪುಣೆ ರೈಲುಮಾರ್ಗ ಜಿಲ್ಲೆಯ ಪೂರ್ವದಿಂದ ಪಶ್ಚಿಮಕ್ಕೆ 98ಕಿಮೀ ದೂರ ಸಾಗುತ್ತದೆ. ಈ ಜಿಲ್ಲೆಯಲ್ಲಿ ಹಾದುಹೋಗುವ ಪ್ರಮುಖ ರಸ್ತೆಗಳಲ್ಲಿ ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು-ಮಂಗಳೂರು ರಸ್ತೆ, ತುಮಕೂರು-ಬಳ್ಳಾರಿ ರಸ್ತೆ, ತುಮಕೂರು-ಕುಣಿಗಲು-ಮದ್ದೂರು ರಸ್ತೆ, ಪಾವಗಡ-ಅರಸೀಕೆರೆ ರಸ್ತೆ ಮುಖ್ಯವಾದವು.

ಜಿಲ್ಲೆಯಲ್ಲಿ 195ಕಿಮೀ ರಾಷ್ಟ್ರೀಯ ಹೆದ್ದಾರಿ, 471ಕಿಮೀ ರಾಜ್ಯ ಹೆದ್ದಾರಿ, 1902ಕಿಮೀ ಜಿಲ್ಲಾ ಮುಖ್ಯ ರಸ್ತೆ, 2203ಕಿಮೀ ಗ್ರಾಮ ರಸ್ತೆಗಳು, 3513ಕಿಮೀ ತಾಲ್ಲೂಕು ಮಂಡಲಿ ರಸ್ತೆಗಳಿವೆ (1999). 20 ದೊಡ್ಡ ಸೇತುವೆಗಳಿವೆ. ಒಟ್ಟು ರೈಲು ಮಾರ್ಗದ ಉದ್ದ 978ಕಿಮೀ. 14 ರೈಲು ನಿಲ್ದಾಣಗಳಿವೆ. ಈ ಜಿಲ್ಲೆಯ ತುಮಕೂರು, ಕುಣಿಗಲು, ಗುಬ್ಬಿ, ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ, ಹೊಸಕೋಟೆ, ತಿಪಟೂರು, ಚಿಕ್ಕನಾಯಕನಹಳ್ಳಿ ಮತ್ತು ತುರುವೇಕೆರೆಗಳಲ್ಲಿ ಪುರಸಭಾಡಳಿತವಿದೆ.

ಬೃಹತ್ ನಂದಿ: ತುರುವೇಕೆರೆ

ಜಿಲ್ಲೆಯಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲವಿದ್ದು ಅನೇಕ ಸರ್ಕಾರಿ ಮತ್ತು ಖಾಸಗಿ ಶಾಲಾ ಕಾಲೇಜುಗಳಿವೆ. 2000ದ ಅಂಕಿ ಅಂಶಗಳ ಪ್ರಕಾರ 3772 ಪ್ರಾಥಮಿಕ ಶಾಲೆಗಳ 541 ಪ್ರೌಢಶಾಲೆಗಳಿದ್ದುವು. 141 ಪದವಿಪೂರ್ವ ಕಾಲೇಜುಗಳು, 39 ಕಾಲೇಜುಗಳು, 5 ಪಾಲಿಟೆಕ್ನಿಕ್‌ಗಳಿವೆ. 4 ಎಂಜಿನಿಯರಿಂಗ್ ಕಾಲೇಜುಗಳು, 1 ವೈದ್ಯಕೀಯ ಕಾಲೇಜು, ಒಂದು ದಂತ ವೈದ್ಯಕೀಯ ಕಾಲೇಜುಗಳಿವೆ. ನ್ಯಾಯಶಾಸ್ತ್ರ, ಶಿಕ್ಷಣ ತರಬೇತಿ ಕಾಲೇಜುಗಳೂ ಕೈಗಾರಿಕಾ ತರಬೇತಿ ಕಾಲೇಜುಗಳೂ ಉಪಾಧ್ಯಾಯ ತರಬೇತಿ ಮತ್ತು ಸಂಸ್ಕೃತ ಶಾಲೆಗಳೂ ಇವೆ. ಸಂಜೆ ಕಾಲೇಜೂ ತುಮಕೂರಿನಲ್ಲಿದ್ದು ಉದ್ಯೋಗಿಗಳೂ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ

ಕೇಂದ್ರವಿದೆ. ಈಗ ಈ ಕೇಂದ್ರವನ್ನು ತುಮಕೂರು ವಿಶ್ವವಿದ್ಯಾಲಯವಾಗಿ ಪರಿವರ್ತಿಸಲಾಗಿದೆ (2004). ಶಾಲಾಕಾಲೇಜು ಗ್ರಂಥಾಲಯಗಳ ಜೊತೆಗೆ ಜಿಲ್ಲಾ ಸಾರ್ವಜನಿಕ ಗ್ರಂಥಭಂಡಾರಗಳಿವೆ. ಸಿದ್ಧಗಂಗಾ ಮಠವು ಜಿಲ್ಲೆಯ ಮತ್ತು ರಾಜ್ಯದ ಬಡವಿದ್ಯಾರ್ಥಿಗಳಿಗೆ ವಿದ್ಯಾ ದಾಸೋಹ ನೀಡುತ್ತಿರುವ ಪ್ರಮುಖ ಧಾರ್ಮಿಕ ಸಂಸ್ಥೆಯಾಗಿದೆ.

ಜಿಲ್ಲೆಯಲ್ಲಿ 4 ಸರ್ಕಾರಿ ಆಸ್ಪತ್ರೆಗಳು ಇವೆ. ತಾಲ್ಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ 97 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 39 ಪ್ರಾಥಮಿಕ ಆರೋಗ್ಯ ಘಟಕಗಳೂ 127 ಆಯುರ್ವೇದ ಹಾಗೂ ಯುನಾನಿ ಔಷಧಾಲಯಗಳೂ ಇವೆ.

ಜಿಲ್ಲೆಯಲ್ಲಿ ಶಿಲ್ಪಕ್ಕೆ ಪ್ರಸಿದ್ಧವಾದ ಹೊಯ್ಸಳ, ದ್ರಾವಿಡ ಶೈಲಿಯ ದೇವಾಲಯಗಳಿವೆ. ಕೆಲವು ಕಡೆ ವೀರಗಲ್ಲುಗಳು ಹಾಗೂ ಮಹಾಸತಿಕಲ್ಲುಗಳಿವೆ. ಶಿರಾ ಪಟ್ಟಣದ ಜುಮ್ಮಾಮಸೀದಿ (1696) ಮತ್ತು ಮಲ್ಲಿಕ್ ರಿಹಾನ್ ಸಮಾಧಿ - ಇವು ಹೆಸರುವಾಸಿಯಾದ ಮುಗಲ್ ಶೈಲಿಯ ಕಟ್ಟಡಗಳು. ಮಧುಗಿರಿ, ಮಿಡಿಗೇಶಿ, ಪಾವಗಡ, ನಿಡುಗಲ್ಲು, ಕೊರಟಗೆರೆ, ದೇವರಾಯನದುರ್ಗ, ಹುಲಿಯೂರು ದುರ್ಗ, ಹುತ್ರಿದುರ್ಗ - ಇವುಗಳಲ್ಲಿರುವ ಹಿಂದಿನ ಕೋಟೆಗಳು ನೋಡತಕ್ಕವು. ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲೂ ಹೆಸರಿಸುವಂಥ ದೇವಾಲಯಗಳಿವೆ. ಅವುಗಳಲ್ಲಿ ದೇವರಾಯನದುರ್ಗದ ನರಸಿಂಹಸ್ವಾಮಿ ದೇವಾಲಯ, ಮಧುಗಿರಿಯ ಮಲ್ಲೇಶ್ವರ ಮತ್ತು ವೆಂಕಟರಮಣಸ್ವಾಮಿ ಗುಡಿಗಳು, ದೊಡ್ಡ ದಾಳಿವಟ್ಟದ ಲಕ್ಷ್ಮೀನರಸಿಂಹ ದೇವಾಲಯ, ಜಕಣಾಚಾರಿ ನಿರ್ಮಿಸಿದ್ದೆಂದು ಹೇಳಲಾದ ಕೈದಾಳದ ಕೇಶವ ದೇವಾಲಯ, ಗೂಳೂರು ಗಣಪತಿ ದೇವಾಲಯ, ಕೊರಟಗೆರೆಯ ಬೆಟ್ಟದ ಮೇಲಿನ ಗಂಗಾಧರೇಶ್ವರ, ಹುಳಿಯಾರಿನ ರಂಗನಾಥ, ಪಂಕಜನಹಳ್ಳಿಯ ಮಲ್ಲಿಕಾರ್ಜುನ, ಸೆಟ್ಟಿಕೆರೆಯ ಯೋಗಮಾಧವ - ಇವು ಪ್ರಸಿದ್ಧ ದೇವಾಲಯಗಳು. ಕುಣಿಗಲಿನ ದೇವಾಲಯಗಳು, ಎಡೆಯೂರಿನ ಸಿದ್ಧಲಿಂಗೇಶ್ವರ, ತುರುವೇಕೆರೆಯ ಬೇಟೆರಾಯ, ನಾಗಲಾಪುರದ ಚೆನ್ನ ಕೇಶವ ಮತ್ತು ಕೇದಾರೇಶ್ವರ ಗುಡಿಗಳು, ನೊಣವಿನಕೆರೆಯ ಗುಡಿಗಳು, ಪಾವಗಡದ ಬೆಟ್ಟದ ಆಂಜನೇಯ ಮೊದಲಾದ ದೇವಾಲಯಗಳು ಉಲ್ಲೇಖಾರ್ಹವಾದವು.

ತುಮಕೂರು ತಾಲ್ಲೂಕಿನ ನರಸಿಂಹಸ್ವಾಮಿ ರಥೋತ್ಸವ, ಸಿದ್ಧಗಂಗಾ ಜಾತ್ರೆ, ದೇವರಾಯನದುರ್ಗದ ನರಸಿಂಹಸ್ವಾಮಿ ತೇರು, ಮಧುಗಿರಿಯ ದಂಡಿ ಮಾರಮ್ಮನ ಜಾತ್ರೆ, ರಟ್ಟನಾಯಕನಹಳ್ಳಿಯ ಗಂಗಬ್ರಹ್ಮೇಶ್ವರ ಜಾತ್ರೆ, ನಾಗಲ ಮಡಕೆಯ ಸುಬ್ರಹ್ಮಣ್ಯಸ್ವಾಮಿ ಜಾತ್ರೆ, ಚಿಕ್ಕನಾಯಕನಹಳ್ಳಿಯ ಹುಲಿಯೂರು ಆಂಜನೇಯ ಸ್ವಾಮಿ ಜಾತ್ರೆ, ಕೆರಗೋಡಿಯ ಶಂಕರೇಶ್ವರಸ್ವಾಮಿ ಜಾತ್ರೆ, ತುರುವೇಕೆರೆಯ ಕಂತೂರಮ್ಮನ ಜಾತ್ರೆ, ಕುಣಿಗನ ಬೈಲಹಳ್ಳಿ ಮಾರಮ್ಮ ಜಾತ್ರೆ, ಎಡೆಯೂರು ಸಿದ್ಧಲಿಂಗೇಶ್ವರ ಸ್ವಾಮಿ ಜಾತ್ರೆ, ಗುಬ್ಬಿ ಚನ್ನಬಸವೇಶ್ವರ ಸ್ವಾಮಿ ರಥೋತ್ಸವ, ಕ್ಯಾಮೇನಹಳ್ಳಿ ಆಂಜನೇಯ ಸ್ವಾಮಿ ರಥೋತ್ಸವ ಮುಂತಾದವು ಜಿಲ್ಲೆಯಲ್ಲಿ ನಡೆಯುವ ದೊಡ್ಡ ಜಾತ್ರೆಗಳು.

ಈ ಜಿಲ್ಲೆಯ ಕಿಬ್ಬನಹಳ್ಳಿ ಬಳಿಯಲ್ಲಿ ಶಿಲಾಯುಗದ ಅವಶೇಷಗಳು ದೊರಕಿವೆ. ಕದಂಬ, ಗಂಗ ರಾಜವಂಶಗಳ ಆಳಿಕೆಯಲ್ಲಿದ್ದ ಈ ಜಿಲ್ಲೆಯಲ್ಲಿ 9-10ನೆಯ ಶತಮಾನದಲ್ಲಿ ನೊಳಂಬರು ಆಳುತ್ತಿದ್ದರು. ಶಿರಾ ತಾಲ್ಲೂಕಿನ ಉತ್ತರದ ಗಡಿಯ ಹತ್ತಿರ ಇರುವ ಮಡಕಶಿರ, ಇಂದಿನ ಹೇಮಾವತಿ (ಹೆಂಜೇರು) - ಇವರ ರಾಜಧಾನಿಯಾಗಿದ್ದು ನಿಡುಗಲ್ಲುದುರ್ಗ ಇವರ ರಕ್ಷಣಾಸ್ಥಳವಾಗಿತ್ತೆಂದು ತಿಳಿದುಬರುತ್ತದೆ. ತುಮಕೂರು ಜಿಲ್ಲೆಯ ಪೂರ್ವಭಾಗ ನೊಳಂಬವಾಡಿ 32,000ಕ್ಕೆ ಸೇರಿತ್ತೆಂದು ತಿಳಿದುಬರುವುದು. ಹೊಯ್ಸಳರ ಆಡಳಿತಕ್ಕೆ ಮುಂದೆ ಈ ಜಿಲ್ಲೆ ಸೇರಿತ್ತೆಂದೂ ಹೆಂಜೇರು ಮತ್ತು ನಿಡುಗಲ್ಲುಗಳಲ್ಲಿ ಆಳುತ್ತಿದ್ದ ಇರುಂಗೊಳ ಚೋಳನನ್ನು ಹೊಯ್ಸಳರು ಗೆದ್ದರೆಂದೂ ಅನೇಕ ಹೊಯ್ಸಳ ಶಾಸನಗಳಿಂದ ತಿಳಿದುಬರುತ್ತದೆ. ಹೊಯ್ಸಳ ಒಂದನೆಯ ನರಸಿಂಹನ ರಾಣಿ ಲೋಕಾಂಬಿಕೆಯ ತವರೂರು ತುರುವೇಕೆರೆಯೆಂದೂ ದೇವಸ್ಥಾನ ಒಂದಕ್ಕೆ ಈಕೆ ದಾನಮಾಡಿದ ಗ್ರಾಮಕ್ಕೆ ಲೋಕಮ್ಮನ ಹಳ್ಳಿಯೆಂದೂ ಹೆಸರಿಸಲಾಗಿದೆ. ವಿಜಯನಗರದ ಅರಸುಗಳ ಸಾಮಂತರಾಗಿ ಅನೇಕ ಪಾಳೆಯಗಾರರು ಈ ಪ್ರಾಂತ್ಯವನ್ನಾಳಿದರು. ಅವರಲ್ಲಿ ನಿಡುಗಲ್ಲು, ಹೊಳವನಹಳ್ಳಿ, ಮಧುಗಿರಿ, ಹಾಗಲವಾಡಿ ಮತ್ತು ಹೆಬ್ಬೂರು ಪಾಳೆಯಗಾರರು ಮುಖ್ಯವಾದವರು. ಬೆಂಗಳೂರು ಕೆಂಪೇಗೌಡನ ಮನೆತನವು ಕುಣಿಗಲನ್ನು ತನ್ನ ಪ್ರಮುಖ ನೆಲೆಯನ್ನಾಗಿ ಮಾಡಿಕೊಂಡಿತ್ತು. ವಿಜಯನಗರದ ಅವನತಿಯ ಅನಂತರ 1638ರಲ್ಲಿ ಬಿಜಾಪುರದ ರಣದುಲ್ಲಾಖಾನ್ ಜಿಲ್ಲೆಯ ಉತ್ತರಭಾಗವನ್ನು ಆಕ್ರಮಿಸಿದ. ಈ ಭಾಗದ ಆಡಳಿತವನ್ನು ಶಿವಾಜಿಯ ತಂದೆ ಶಹಾಜಿಗೆ ವಹಿಸಿಕೊಡಲಾಯಿತು. 1687ರಲ್ಲಿ ಔರಂಗಜೇಬ್ ಗೋಲ್ಕೊಂಡ, ಬಿಜಾಪುರಗಳನ್ನು ಹಿಡಿದಾಗ ಶಿರಾವನ್ನು ತನ್ನ ಆಡಳಿತಕೇಂದ್ರವನ್ನಾಗಿ ಮಾಡಿಕೊಂಡು ಖಾಸಿಂ ಖಾನನನ್ನು ಸುಬೇದಾರನನ್ನಾಗಿ ನೇಮಿಸಿದ. ಅನಂತರ 1757ರಲ್ಲಿ ಶಿರಾವನ್ನು ಮರಾಠರು ಗೆದ್ದರು. 1761ರಲ್ಲಿ ಶಿರಾವನ್ನು ಹೈದರ್ ವಶಪಡಿಸಿಕೊಂಡು ತನ್ನ ಸುಬೇದಾರನನ್ನು ಅಲ್ಲಿ ನೇಮಿಸಿದ. 1766ರಲ್ಲಿ ಇದನ್ನು ಮರಾಠರು ಮತ್ತೆ ತಮ್ಮ ವಶಪಡಿಸಿಕೊಂಡರೂ 1784ರಲ್ಲಿ ಟಿಪ್ಪುಸುಲ್ತಾನ್ ಇದನ್ನು ತನ್ನ ವಶಕ್ಕೆ ತೆಗೆದುಕೊಂಡ. ಮುಂದೆ ಈ ಜಿಲ್ಲೆ ಮೈಸೂರು ಒಡೆಯರ ಆಡಳಿತಕ್ಕೆ ಸೇರಿತು. ಪೂರ್ಣಯ್ಯನವರ ಕಾಲದಲ್ಲಿ ಜಿಲ್ಲೆ ಮಧುಗಿರಿ ಫೌಜುದಾರಿಯ ಭಾಗವಾಗಿತ್ತು. ಕಮಿಷನ್ ಆಡಳಿತದ ಕಾಲದಲ್ಲಿ ತುಮಕೂರು ಡಿವಿಜನ್ ಏರ್ಪಟ್ಟಿತು (1832). 1863ರಲ್ಲಿ ಡಿವಿಜನ್ ರದ್ದಾಗಿ ತುಮಕೂರು ನಂದಿದುರ್ಗ ಡಿವಿಜನ್ನಿಗೆ ಸೇರಿತು. 1886ರಲ್ಲಿ ಚಿತ್ರದುರ್ಗವನ್ನು ಜಿಲ್ಲೆಯಾಗಿ ಏರ್ಪಡಿಸಿದಾಗ ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆಗೆ ಸೇರಿತು. ತರುವಾಯ ಈ ಜಿಲ್ಲೆ ಮೈಸೂರು ರಾಜ್ಯದ 9 ಜಿಲ್ಲೆಗಳಲ್ಲಿ ಒಂದಾಗಿತ್ತು.

ಈ ಜಿಲ್ಲೆಯ ಕೆಲವು ಕೇಂದ್ರಗಳಲ್ಲಿ ಧಾರ್ಮಿಕ ಚಟುವಟಿಕೆಗಳೊಂದಿಗೆ ಸಾಹಿತ್ಯದ ಬೆಳೆವಣಿಗೆಯೂ ಆಗುತ್ತಿದೆ. ಈ ಜಿಲ್ಲೆಯ ಶಿವಕುಮಾರಸ್ವಾಮಿ, ಗುಬ್ಬಿಯಮಲ್ಲಣಾರ್ಯ, ಶಾಂತೇಶ, ನಿಟ್ಟೂರು ನಂಜಯ್ಯ, ನಂಜುಂಡ ಶಿವಯೋಗಿ ಮುಂತಾದವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ವಿದ್ವಾಂಸರಾಗಿದ್ದು ಗ್ರಂಥಗಳನ್ನು ರಚಿಸಿದ್ದಾರೆ. ಇತ್ತೀಚಿನವರಲ್ಲಿ ಗರಣಿ ಕೃಷ್ಣಾಚಾರ್ಯ, ಬಿ.ಸೋಮನಾಥಯ್ಯ, ಹೊಸಕೆರೆ ಚಿದಂಬರಯ್ಯ, ಬೆಳ್ಳಾವೆ ನರಹರಿಶಾಸ್ತ್ರಿ, ಬೆಳ್ಳಾವೆ ವೆಂಕಟನಾರಣಪ್ಪ, ತೀ.ನಂ.ಶ್ರೀಕಂಠಯ್ಯ ಮತ್ತು ಬಿ.ಶಿವಮೂರ್ತಿಶಾಸ್ತ್ರೀ ಮೊದಲಾದ ವಿದ್ವಾಂಸರು ಈ ಜಿಲ್ಲೆಗೆ ಸೇರಿದವರು. ಗುಬ್ಬಿ ಚಂದಣ್ಣ, ಸಾಹುಕಾರ ನೀಲಕಂಠಪ್ಪ, ನಾಟಕರತ್ನ ಗುಬ್ಬಿ ವೀರಣ್ಣ, ದೊಡ್ಡಪ್ಪ, ಶ್ರೀಮತಿ ರಾಜಮ್ಮ, ಜಯಮ್ಮ, ರೇವಣ್ಣ, ಹಿರಣ್ಣಯ್ಯ ಮೊದಲಾದ ಸಂಗೀತ ನಾಟಕ ಕಲಾಕಾರರು ಈ ಜಿಲ್ಲೆಯವರು.

**ತಾಲ್ಲೂಕು :** ಈ ತಾಲ್ಲೂಕಿನ ಪಶ್ಚಿಮದಲ್ಲಿ ಗುಬ್ಬಿ, ವಾಯುವ್ಯಕ್ಕೆ ಶಿರಾ, ಉತ್ತರ, ಈಶಾನ್ಯ ಮತ್ತು ಪೂರ್ವದಲ್ಲಿ ಕೊರಟಗೆರೆ, ದಕ್ಷಿಣಕ್ಕೆ ಕುಣಿಗಲು ತಾಲ್ಲೂಕುಗಳೂ ಆಗ್ನೇಯ ಮತ್ತು ಪೂರ್ವದಲ್ಲಿ ಬೆಂಗಳೂರು ಜಿಲ್ಲೆಯ ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳೂ ಇವೆ. ಬೆಂಗಳೂರಿಗೆ ವಾಯುವ್ಯದಲ್ಲಿರುವ ಈ ತಾಲ್ಲೂಕಿನಲ್ಲಿ ಹೆಬ್ಬೂರು, ತುಮಕೂರು, ಕೋರ, ಗೂಳೂರು, ಬೆಳ್ಳಾವೆ ಮತ್ತು ಊರ್ಡಿಗೆರೆ ಹೋಬಳಿಗಳು ಇವೆ. ಈ ತಾಲ್ಲೂಕಿನ ಗ್ರಾಮಗಳ ಸಂಖ್ಯೆ 351. ವಿಸ್ತೀರ್ಣ 1,025ಚ.ಕಿಮೀ. ಜನಸಂಖ್ಯೆ 2,09,539.

ತಾಲ್ಲೂಕಿನ ಹೆಚ್ಚು ಭಾಗ ಸುಮಾರು ಏರುಪೇರು ಮಾತ್ರವಿರುವ ಮೈದಾನ ಪ್ರದೇಶ. ಪೂರ್ವಭಾಗದಲ್ಲಿ ಮಾತ್ರ ದೇವರಾಯನದುರ್ಗದ ಬೆಟ್ಟಗಳ ಸಾಲಿದೆ. ಈ ತಾಲ್ಲೂಕಿನಲ್ಲಿ 1,18,362 ಎಕರೆ ಕೆಂಪು ಮಣ್ಣಿನ, 24,176 ಎಕರೆ ಜೇಡಿ ಮಣ್ಣಿನ, 30,036 ಎಕರೆ ಕೆಂಪು ಎರೆಮಣ್ಣಿನ ಮತ್ತು 61,100 ಎಕರೆ ಮರಳು ಮಿಶ್ರಿತ ಎರೆಮಣ್ಣಿನ ಭೂಮಿ ಇದೆ. ವಾರ್ಷಿಕ ಸರಾಸರಿ ಮಳೆ 969 ಮಿಮೀ. ಈ ತಾಲ್ಲೂಕಿನ ದೇವರಾಯನದುರ್ಗದ ಉತ್ತರದಲ್ಲಿ ಹುಟ್ಟುವ ಜಯಮಂಗಲಿ ನದಿ ತಾಲ್ಲೂಕಿನಲ್ಲಿ ಸು.13ಕಿಮೀ ದೂರ ಉತ್ತರಾಭಿಮುಖವಾಗಿ ಹರಿದು ಕೊರಟಗೆರೆ-ಮಧುಗಿರಿ ತಾಲ್ಲೂಕುಗಳಲ್ಲಿ ಮುಂದುವರಿಯುತ್ತದೆ. ಇದೇ ತಾಲ್ಲೂಕಿನ ದೇವರಾಯನದುರ್ಗದ ದಕ್ಷಿಣದಲ್ಲಿ ಹುಟ್ಟುವ ಶಿಂಷಾನದಿ ತಾಲ್ಲೂಕಿನಲ್ಲಿ ಸು.28ಕಿಮೀ ದೂರ ಪ್ರವಹಿಸುವುದು.

ವ್ಯವಸಾಯ ಪ್ರಧಾನವಾದರೂ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಗೃಹ ಕೈಗಾರಿಕೆಗಳಿವೆ. ಜಿಲ್ಲಾ ಕೇಂದ್ರವಾದ ತುಮಕೂರು ನಗರ ತಾಲ್ಲೂಕು

ಕೇಂದ್ರವೂ ಆಗಿರುವುದರಿಂದ ನಗರೀಕರಣದ ಪ್ರಭಾವ ತಾಲ್ಲೂಕಿನ ಮೇಲೆ ಆಗಿದೆ. ಎಣ್ಣೆ ಕಾರ್ಖಾನೆಗಳು, ಅಕ್ಕಿ ಗಿರಣಿಗಳು, ಮರ ಕೊಯ್ಯುವ ಕಾರ್ಖಾನೆಗಳು ಇವೆ. ವ್ಯವಸಾಯೋಪಕರಣಗಳು, ಬೆಂಕಿಕಡ್ಡಿ, ಕಬ್ಬಿಣ ಮತ್ತು ಮರದ ವಸ್ತುಗಳು, ಗೃಹೋಪಕರಣಗಳು, ಸಾಬೂನು, ಇಟ್ಟಿಗೆ ಮತ್ತು ಹೆಂಚು, ನಟ್ ಮತ್ತು ಬೋಲ್ಟ್ - ಇವನ್ನು ತಯಾರಿಸುವ ಕಾರ್ಖಾನೆಗಳಿವೆ. ಬೀಡಿ, ಟೇಪು, ಸ್ಲೇಟ್, ಪೆನ್ಸಿಲ್ ಮುಂತಾದವುಗಳ ತಯಾರಿಕೆಯೂ ಉಂಟು. ಗ್ರಾಮೋದ್ಯೋಗವಾಗಿ ತಾಲ್ಲೂಕಿನಲ್ಲಿ ಹತ್ತಿ, ಉಣ್ಣೆ, ರೇಷ್ಮೆ ಕೈಮಗ್ಗದ ಬಟ್ಟೆ ತಯಾರಿಕೆ, ಕಬ್ಬಿಣ ಮತ್ತು ಮರಗೆಲಸ, ಮಣ್ಣಿನ ವಸ್ತುಗಳನ್ನು ತಯಾರಿಸುವುದು ಎಣ್ಣೆ ಉತ್ಪಾದನೆ ಮತ್ತು ಚರ್ಮ ಹದಮಾಡುವುದು, ಚಾಪೆ ಬುಟ್ಟಿಗಳನ್ನು ಹೆಣೆಯುವುದು, ತೆಂಗಿನನಾರಿನ ಉದ್ಯೋಗ, ಹಿತ್ತಾಳೆ ಹಾಗೂ ತಾಮ್ರಪಾತ್ರೆಗಳ ತಯಾರಿಕೆ, ಮರದ ಬಾಚಣಿಗೆ ಮತ್ತು ಸುಣ್ಣ ತಯಾರಿಕೆ ಮುಂತಾದವು ತಾಲ್ಲೂಕಿನಲ್ಲಿ ಅಭಿವೃದ್ಧಿ ದೆಸೆಯಲ್ಲಿವೆ. ಈ ಉದ್ಯೋಗಕ್ಕೆ ಸಂಬಂಧಪಟ್ಟ ಸಹಕಾರಿ ಸಂಘಗಳಿವೆ. ಈ ತಾಲ್ಲೂಕಿನ ವ್ಯವಸಾಯ, ಉದ್ಯೋಗ ಮತ್ತು ಕೈಗಾರಿಕೆಗಳಿಗೆ ಸಹಾಯಕವಾದ ಕೆಲವು ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ.

ತಾಲ್ಲೂಕಿನಲ್ಲಿ ವಿದ್ಯಾಭ್ಯಾಸ ಮುಂದುವರಿದಿದ್ದಾಗಿದೆ. ಪ್ರಥಮ ದರ್ಜೆ ಕಾಲೇಜು, ಕಲಾ ಮತ್ತು ವಿಜ್ಞಾನ ಕಾಲೇಜು, ರಾತ್ರಿ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ವೈದ್ಯಕೀಯ ಕಾಲೇಜು, ಕಾನೂನು ಶಿಕ್ಷಣ, ಶಿಕ್ಷಕ ತರಬೇತಿ ಮುಂತಾದ ಕಾಲೇಜುಗಳಿವೆ. ಈ ತಾಲ್ಲೂಕಿನಲ್ಲಿ ಜಿಲ್ಲಾ ಮಟ್ಟದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳಿವೆ.

ಈ ತಾಲ್ಲೂಕಿನಲ್ಲಿ ಬೆಂಗಳೂರು-ಹೊನ್ನಾವರ ಮತ್ತು ಬೆಂಗಳೂರು -ಚಿತ್ರದುರ್ಗ ಹೆದ್ದಾರಿಗಳು ಹಾದು ಹೋಗುತ್ತವೆ. ಸುತ್ತಲ ನಗರಗಳಾದ ಬೆಂಗಳೂರು, ಕೋಲಾರ, ಮಂಡ್ಯ, ಹಾಸನ, ಚಿಕ್ಕಮಗಳೂರು ಮುಂತಾದೆಡೆಗೆ ಉತ್ತಮ ಮಾರ್ಗಗಳಿದ್ದು ವಾಹನಸಂಪರ್ಕವಿದೆ. ಬೆಂಗಳೂರು-ಅರಸೀಕೆರೆ ರೈಲ್ವೆ ಮಾರ್ಗ ತಾಲ್ಲೂಕಿನಲ್ಲಿ ಹಾದುಹೋಗಿದ್ದು ವ್ಯಾಪಾರಾಭಿವೃದ್ಧಿಗೆ ಅನುಕೂಲವಾಗಿದೆ.

ಕೋಟಿಲಿಂಗ ದೇವಾಲಯ

ತುಮಕೂರಿಗೆ ಸು.3ಕಿಮೀ ದೂರದಲ್ಲಿ ಇರುವ ಬೆಳಗುಂಬ ಬೆಟ್ಟದ ಮೇಲೆ ಸಿದ್ಧರಾಮೇಶ್ವರ ದೇವಾಲಯವಿದ್ದು ಸಿದ್ಧರಾಮೇಶ್ವರ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ತುಮಕೂರಿನ ವಾಯವ್ಯದಲ್ಲಿ ಸು.13ಕಿಮೀ ದೂರದಲ್ಲಿರುವ ಬೆಳ್ಳಾವೆಯಲ್ಲಿ ಪ್ರಸಿದ್ಧ ಸೋಮೇಶ್ವರಸ್ವಾಮಿ ದೇವಾಲಯವೂ ಸೈಕಲ್ ಬಿಡಿ ಭಾಗಗಳನ್ನು ತಯಾರಿಸುವ ಒಂದು ಸಣ್ಣ ಪ್ರಮಾಣದ ಕಾರ್ಖಾನೆಯೂ ಇವೆ. ಗೂಳೂರು (ನೋಡಿ) ಗಣಪತಿ ಪೂಜೆಗೆ ಪ್ರಸಿದ್ಧ. ಹೆಬ್ಬೂರು (ನೋಡಿ) ತುಮಕೂರು-ಕುಣಿಗಲು ಮಾರ್ಗದಲ್ಲಿರುವ ಒಂದು ದೊಡ್ಡ ಗ್ರಾಮ. ತುಮಕೂರಿಗೆ 19ಕಿಮೀ ದೂರದಲ್ಲಿ ಬೆಂಗಳೂರು-ತುಮಕೂರು ಮಾರ್ಗದಲ್ಲಿರುವ ಹಿರೇಹಳ್ಳಿ ಅಡಕೆ ತೋಟಗಳಿಗೆ ಪ್ರಸಿದ್ಧ. ಇಲ್ಲೊಂದು ಅಡಕೆ ಸಂಶೋಧನ ಕೇಂದ್ರವಿದೆ. ಕೈದಾಳ (ನೋಡಿ) ಜಕಣಾಚಾರಿಯ ಹುಟ್ಟೂರೆಂದು ಹೇಳುವರು. ಮರಳೂರಿನಲ್ಲಿ ರಾಮದೇವಾಲಯವಿದೆ. ನಿಜಗಲ್ಲು (ನೋಡಿ) ದೇವಾಲಯಗಳಿರುವ ಒಂದು ಬೆಟ್ಟ. ಶೆಟ್ಟಿಹಳ್ಳಿಯ ಆಂಜನೇಯ ದೇವಾಲಯ ಪ್ರಸಿದ್ಧ. ಸಿದ್ಧಗಂಗಾ (ನೋಡಿ) ತುಮಕೂರು ನಗರಕ್ಕೆ ಸು.4ಕಿಮೀ ದೂರದಲ್ಲಿರುವ ಒಂದು ಯಾತ್ರಾಸ್ಥಳ. ಧಾರ್ಮಿಕ ಮತ್ತು ವಿದ್ಯಾಭ್ಯಾಸ ಕಾರ್ಯಗಳ ಕೇಂದ್ರ.

**ಪಟ್ಟಣ :** ತುಮಕೂರು ಈ ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ದೊಡ್ಡ ಪಟ್ಟಣ. ಬೆಂಗಳೂರಿನ ವಾಯವ್ಯಕ್ಕೆ 70ಕಿಮೀ ದೂರದಲ್ಲಿದೆ. ಜನಸಂಖ್ಯೆ 2,48,592.

ತುಮಕೂರು ನಗರ ದೇವರಾಯನದುರ್ಗಬೆಟ್ಟ ಶ್ರೇಣಿಯ ವಾಯವ್ಯದ ಇಳಿಜಾರು ಪ್ರದೇಶದಲ್ಲಿ ಹರಡಿಕೊಂಡಿದೆ. ಇದರ ಪಕ್ಕದಲ್ಲಿ ವಿಶಾಲವಾದ ಮೈದಾಳ ಕೆರೆ ಇದೆ. ನಗರಕ್ಕೆ ಈ ಕೆರೆಯಿಂದ ನೀರು ಸರಬರಾಜಾಗುತ್ತಿದೆ. ಪಶ್ಚಿಮ, ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ನಗರ ಬೆಳೆಯುತ್ತಿದೆ. ಸಂತೇಪೇಟೆ, ಮಂಡಿಪೇಟೆ, ಗಾಂಧೀನಗರ, ಸೋಮೇಶ್ವರ ಮತ್ತು ಕೃಷ್ಣರಾಜೇಂದ್ರ ಬಡಾವಣೆಗಳು ನಗರದ ಪ್ರಮುಖ ಭಾಗಗಳು. ಈಗ ನಗರ ಕ್ಯಾತ್ಸಂದ್ರವರೆಗೂ ವಿಸ್ತರಿಸಿದ್ದು ಅನೇಕ ಹೊಸ ಬಡಾವಣೆಗಳನ್ನು ಒಳಗೊಂಡಿದೆ. ನಗರದಲ್ಲಿ ಪುರಭವನ, ಸರ್ಕಾರಿ ಪ್ರೌಢಶಾಲೆ, ಕಲೆ, ವಿಜ್ಞಾನ, ನ್ಯಾಯಶಾಸ್ತ್ರ, ಉಪಾಧ್ಯಾಯ ತರಬೇತಿ, ತಾಂತ್ರಿಕ ಕಾಲೇಜುಗಳು ಇವೆ. ಸಾರ್ವಜನಿಕ ಆಸ್ಪತ್ರೆ, ಕೃಷ್ಣರಾಜೇಂದ್ರ ಸಾರ್ವಜನಿಕ ಗ್ರಂಥಾಲಯ, ಅಂಚೆ ತಂತಿ, ದೂರವಾಣಿ, ವಿದ್ಯುಚ್ಛಕ್ತಿ ಮುಂತಾದ ಸೌಲಭ್ಯಗಳಿದ್ದು ಜಿಲ್ಲಾಧಿಕಾರಿಯ ಕಚೇರಿ ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳ ಕಚೇರಿಗಳು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಹಾಗೂ ಮುನ್ಸಿಫ್ ನ್ಯಾಯಾಲಯ ಇವೆ. ಸರ್ಕಾರಿ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಸಹ ಇದ್ದು ತುಮಕೂರು ಬೆಳೆಯುತ್ತಿರುವ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ.

ಇದು ನಗರಸಭಾಡಳಿತಕ್ಕೆ ಸೇರಿದೆ. ಇಲ್ಲಿನ ಲಕ್ಷ್ಮೀನಾರಾಯಣ ದೇವಸ್ಥಾನ ಸು.1560ರಲ್ಲಿ ರಚಿತವಾದುದು.

ಹಿಂದೆ ತುಮಕೂರು ಕ್ರೀಡಾಪುರದ (ಇಂದಿನ ಕೈದಾಳ) ಅರಸನಿಗೆ ಸೇರಿತ್ತು ಎಂದು ಪ್ರತೀತಿ. ಕ್ರೀಡಾಪುರದ ರಾಜ ಈ ಊರನ್ನು ಟುಮಕಿ (ಡೋಲು) ಬಾರಿಸುವವನಿಗೆ ಕೊಟ್ಟಿದ್ದ ಕಾರಣ ಇದಕ್ಕೆ ತುಮಕೂರು ಎಂಬ ಹೆಸರಾಯಿತೆಂದು ಹೇಳಿಕೆ. 10ನೆಯ ಶತಮಾನದ ಶಾಸನವೊಂದರಿಂದ ಈ ಸ್ಥಳಕ್ಕೆ ತುಮೆಗೂರು (ತುಂಬೆ ಊರು) ಎಂಬ ಹೆಸರಿದ್ದಿತೆಂದು ತಿಳಿದುಬರುತ್ತದೆ. ಹಿಂದೆ ಇದು ಆನೆಬಿದ್ದಜರಿ ಪ್ರಾಂತ್ಯಕ್ಕೆ ಸೇರಿತ್ತು. ಮೈಸೂರು ರಾಜವಂಶದ ಕಾಂತೇ ಅರಸು ತುಮಕೂರಿನ ಕೋಟೆಯನ್ನು ಕಟ್ಟಿಸಿದ್ದ. ಇಂದು ಆ ಕೋಟೆಯ ಭಾಗ ನೆಲಸಮವಾಗಿದೆ. (ವಿ.ಜಿ.ಕೆ.)

**ತುರುಗಾಹಿ ರಾಮಣ್ಣ :** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಈತ ಗೋವುಗಳನ್ನು ಕಾಯುವ ಕಾಯಕದಲ್ಲಿ ನಿರತನಾಗಿದ್ದು ದಿವ್ಯಾನುಭವವನ್ನು ಪಡೆದಂತೆ ತಿಳಿಯುತ್ತದೆ. ಈತ ಗೋಪೀನಾಥ ವಿಶ್ವೇಶ್ವರಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ 45 ವಚನಗಳು ದೊರಕಿವೆ. ಇವುಗಳಲ್ಲಿ ಕಾಯಕದ ಮಹತ್ವವನ್ನು ಹೃದಯಂಗಮವಾಗಿ ನಿರೂಪಿಸಿದ್ದಾನೆ. ಕ್ರಿಯಾಶುದ್ಧತೆಯಾದಲ್ಲಿ ಭಾವಶುದ್ಧವಾಗಿಪ್ಪುದು, ಭಾವಶುದ್ಧವಾಗಿದ್ದಲ್ಲಿ ಸರ್ವೇಂದ್ರಿಯಗಳು ಏಕೇಂದ್ರಿಯವಾಗಿ ಚಿತ್ತಶುದ್ಧವಾಗಿಪ್ಪುದು, ಚಿತ್ತಶುದ್ಧಿ ಸಿದ್ಧಿಯಾದಲ್ಲಿ ಸರ್ವಜ್ಞಾನಸಂಪನ್ನವಪ್ಪುದು ಎಂಬುದು ಇವನ ಜೀವನ ಸೂತ್ರವಾಗಿತ್ತು. ಕೋಲೊಂದರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲ್ಲಿಸುವಂತೆ ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುವಡೆದು, ಇಂದ್ರಿಯಂಗಳ ಇಚ್ಛೆಯಲ್ಲಿ ಹಿಡಿದಿರುಹುವರ ಸಂಧಿಯಲ್ಲಿ ನುಸುಳದೆ ವಸ್ತುವಿನ ಅಂಗದಲ್ಲಿಯೆ ತನ್ನಿಂದ ತಲ್ಲೀನವಾಗಿಪ್ಪುದೆ ಮಹಾನಿಜದ ನೆಲೆ ಗೋಪೀನಾಥ; ವಿಶ್ವೇಶ್ವರಲಿಂಗವನರಿವುದಕ್ಕೆ ಇದೇ ಬಟ್ಟೆ ಎಂಬ ವಚನ ಇವನ ಅನುಭಾವಸಂಪತ್ತಿಗೆ ಸಾಕ್ಷಿಯಾಗಿದೆ. (ಬಿ.ಎಸ್.ಎಸ್.)

**ತುರುವನೂರು :** ಚಿತ್ರದುರ್ಗ ತಾಲ್ಲೂಕಿನಲ್ಲಿ ಚಿತ್ರದುರ್ಗದಿಂದ ಈಶಾನ್ಯಕ್ಕೆ 22ಕಿಮೀ ದೂರದಲ್ಲಿರುವ ಪಟ್ಟಣ. ಹೋಬಳಿ ಕೇಂದ್ರ.

ತುರುವನೂರು ಪ್ರಾಚೀನ ಊರು. ಇಲ್ಲಿ 8ನೆಯ ಶತಮಾನದ ನೊಳಂಬ ಶಾಸನವೊಂದು ದೊರಕಿದೆ. ಶಾಸನದ ಬಳಿ ಇರುವ ರಾಮಲಿಂಗ ದೇವಾಲಯ ಮೂಲತಃ ನೊಳಂಬರ ಕಾಲದಲ್ಲಿ ಕಟ್ಟಿದ್ದು. ಈಗ ದೇವಾಲಯದ ಕಟ್ಟಡ ಬಹುವಾಗಿ ನವೀಕೃತವಾಗಿದೆ. ಆದರೆ ಇಲ್ಲಿರುವ ಲಿಂಗ ಮತ್ತು ನಂದಿ ವಿಗ್ರಹ ನೊಳಂಬಕಾಲದವು. ನಂದಿವಿಗ್ರಹ ಸುಂದರ ಶಿಲ್ಪಕೃತಿ. 17ನೆಯ ಶತಮಾನದಲ್ಲಿ ಇದೊಂದು ಆಯಕಟ್ಟಿನ ಸ್ಥಳವಾಗಿತ್ತು. ಊರಿನ ಸುತ್ತ ಹಬ್ಬಿರುವ ಕಂದಕದಿಂದ ಸುತ್ತುವರಿದಿದ್ದು ಎತ್ತರದ ಗೋಡೆಗಳು, ಅಟ್ಟಾಲಕಗಳು, ಹರನಾಲಗೆಗಳು, ಬಂದೂಕರಂಧ್ರಗಳು - ಇವುಗಳಿಂದ ಕೂಡಿರುವ ಆ ಕಾಲದ ಕೋಟೆ ಇನ್ನೂ ಸುಸ್ಥಿತಿಯಲ್ಲಿದೆ. ಕೋಟೆಯ ಒಳಗೆ ಕೆಲವು ಚಿಕ್ಕ ದೇವಾಲಯಗಳಿವೆ. ಕೋಟೆಯ ದಕ್ಷಿಣ ಭಾಗದಲ್ಲಿ ತುರುವಪ್ಪನ ಗುಡಿ ಎಂಬ ದೇವಾಲಯವಿದೆ. ಇದು ಇಲ್ಲಿದ್ದ ತುರುವ ಅಥವಾ ತುರುವಪ್ಪ ಎಂಬ ಸ್ಥಳೀಯ ನಾಯಕನ ನೆನಪಿಗಾಗಿ ಕಟ್ಟಿದ ದೇವಾಲಯವೆಂದೂ ಅವನಿಂದ ಊರಿಗೆ ಈಗಿನ ಹೆಸರು ಬಂದಿರಬೇಕೆಂದೂ ಊಹಿಸಲಾಗಿದೆ. ಈ ದೇವಾಲಯ ಬಹು ಸಾಮಾನ್ಯ ರೀತಿಯ ಆಧುನಿಕ ಕಟ್ಟಡ. ಗರ್ಭಗುಡಿಯಲ್ಲಿ ಕೆಲವು ಕಲ್ಲುಗುಂಡುಗಳನ್ನು ಸಾಲಾಗಿಟ್ಟು ಪೂಜಿಸಲಾಗುತ್ತಿದೆ. *

ಪಟ್ಟಣ ನಗರಸಭಾಡಳಿತಕ್ಕೆ ಒಳಪಟ್ಟಿದೆ. ಶಾಲೆಗಳು, ಆರೋಗ್ಯಕೇಂದ್ರ, ಪಶುವೈದ್ಯಾಲಯ, ಅಂಚೆ, ತಂತಿ ದೂರವಾಣಿ ಮತ್ತು ವಿದ್ಯುತ್ ಸೌಲಭ್ಯಗಳಿವೆ. ಇಲ್ಲಿಂದ ಜಗಳೂರು, ನಾಯಕನಹಟ್ಟಿ, ಚಿತ್ರದುರ್ಗ - ಮುಂತಾದೆಡೆಗಳಿಗೆ ಉತ್ತಮ ರಸ್ತೆಗಳಿವೆ. ಈ ಊರು ವ್ಯಾಪಾರಕೇಂದ್ರವಾಗಿ ಬೆಳೆದಿದೆ. ಇಲ್ಲಿ ತಯಾರಾಗುವ ಕಂಬಳಿಗಳು ಚಿತ್ರದುರ್ಗ ಕಂಬಳಿಗಳೆಂದು ಪ್ರಸಿದ್ಧವಾಗಿವೆ. (ಎ.ಜಿ.ಕೆ)

**ತುರುವೇಕೆರೆ :** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಕೇಂದ್ರ. ತಿಪಟೂರು ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಮಂಡ್ಯ ಜಿಲ್ಲೆಯೂ ಪಶ್ಚಿಮ ಮತ್ತು ವಾಯವ್ಯದಲ್ಲಿ ತಿಪಟೂರು, ಉತ್ತರ, ಪೂರ್ವ ಮತ್ತು ಈಶಾನ್ಯದಲ್ಲಿ ಗುಬ್ಬಿ ಮತ್ತು ಆಗ್ನೇಯದಲ್ಲಿ ಕುಣಿಗಲು - ಈ ತಾಲ್ಲೂಕುಗಳು ಸುತ್ತುವರಿದಿವೆ. ತಾಲ್ಲೂಕಿನಲ್ಲಿ ದಂಡಿನಶಿವರ, ತುರುವೇಕೆರೆ, ಮಾಯಸಂದ್ರ ಮತ್ತು ದಬ್ಬೆಗಟ್ಟ ಹೋಬಳಿಗಳಿದ್ದು ಒಟ್ಟು 222 ಗ್ರಾಮಗಳಿವೆ. ವಿಸ್ತೀರ್ಣ 778ಚ.ಕಿಮೀ. ಜನಸಂಖ್ಯೆ 1,73,615.

ದೇವರಾಯನದುರ್ಗದ ದಕ್ಷಿಣದಲ್ಲಿ ಹುಟ್ಟುವ ಶಿಂಷಾ ನದಿ ದಕ್ಷಿಣಾಭಿಮುಖವಾಗಿ ತುರುವೇಕೆರೆ ತಾಲ್ಲೂಕಿನ ಪೂರ್ವಭಾಗದಲ್ಲಿ ಸು.14ಕಿಮೀ ಹರಿದು ಕುಣಿಗಲು ತಾಲ್ಲೂಕನ್ನು ಸೇರುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 796ಮಿಮೀ. ಈ ತಾಲ್ಲೂಕಿನಲ್ಲಿ ಒಟ್ಟು 77 ಕೆರೆಗಳೂ 407 ಬಾವಿಗಳೂ ಇದ್ದು ವ್ಯವಸಾಯಕ್ಕೆ ಸಹಾಯಕವಾಗಿವೆ. 54,200 ಎಕರೆ ಕೆಂಪು ಮಣ್ಣಿನ ಭೂಮಿ, 10,000 ಎಕರೆ ದಪ್ಪ ಮರಳಿನ ಭೂಮಿ, 10,500 ಎಕರೆ ಮರಳು ಬೆರೆತ ಫಲವತ್ತಾದ ಜೇಡಿಮಣ್ಣಿನ ಭೂಮಿ, 75,489 ಎಕರೆ ಕೆಂಪು ಜೇಡಿ ಮಣ್ಣಿನ ಭೂಮಿ ಮತ್ತು ಹತ್ತಿಬೆಳೆಗೆ ಉಪಯುಕ್ತವಾದ 1,500 ಎಕರೆ ಕಪ್ಪುಮಣ್ಣಿನ ಭೂಮಿ ಇದೆ. ಈ ತಾಲ್ಲೂಕಿನ ವ್ಯವಸಾಯಯೋಗ್ಯ ಭೂಮಿಯಲ್ಲಿ ರಾಗಿ, ಬತ್ತ, ಹಾರಕ, ನವಣೆ, ಹುರುಳಿ, ಅವರೆ, ತೊಗರಿ, ನೆಲಗಡಲೆ, ಕಬ್ಬು ಹಾಗೂ ಜೋಳದ ಬೆಳೆಗಳನ್ನು ಬೆಳೆಯುತ್ತಾರೆ. ಈ ತಾಲ್ಲೂಕಿನ ಪ್ರಮುಖ ಬೆಳೆಗಳಲ್ಲಿ ತೆಂಗೂ ಒಂದಾಗಿದೆ.

ತಾಲ್ಲೂಕಿನಲ್ಲಿ ಪಶುಪಾಲನೆಗೂ ಗಮನ ನೀಡಲಾಗಿದೆ. ತುರುವೇಕೆರೆಯಲ್ಲಿ ತಾಲ್ಲೂಕು ಮಟ್ಟದ ಪಶುವೈದ್ಯಾಲಯವಿದ್ದು ಮಾಯಸಂದ್ರ, ತಂಡಗ ಮತ್ತು ದಂಡಿನಶಿವರಗಳಲ್ಲಿ ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ. ವರ್ಷಕ್ಕೊಮ್ಮೆ ನಡೆಯುವ ದನಗಳ ಜಾತ್ರೆಯಲ್ಲಿ ದನಗಳ ವ್ಯಾಪಾರ ನಡೆಯುತ್ತದೆ. ತುರುವೇಕೆರೆಯ ಕೆರೆಯಲ್ಲೂ ಮತ್ತು ತಾಲ್ಲೂಕಿನ ಇತರ ಕೆರೆಗಳಲ್ಲೂ ಮೀನುಸಾಕಣೆ ಉಂಟು.

ಕೊಬ್ಬರಿ, ತೆಂಗು, ಬೆಲ್ಲ, ರಾಗಿ, ಜೋಳ, ಅಡಕೆ ಮುಂತಾದ ವ್ಯವಸಾಯೋತ್ಪನ್ನಗಳ ವಿಲೇವಾರಿಗೆ ತಾಲ್ಲೂಕು ನಿಯಂತ್ರಿತ ಮಾರುಕಟ್ಟೆ ಇದೆ.

ತಾಲ್ಲೂಕಿನ ಮಾವಿನಕೆರೆ ಗ್ರಾಮ ನೇಯ್ಗೆಬಟ್ಟೆಗೆ ಪ್ರಸಿದ್ಧ. ಮುನಿಯೂರು, ದಂಡಿನಶಿವರ ಮತ್ತು ಮಾವಿನಕೆರೆ ಗ್ರಾಮಗಳಲ್ಲಿ ಹತ್ತಿ ಮತ್ತು ರೇಷ್ಮೆ ನೇಯ್ಗೆಯವರ ಸಂಘಗಳೂ ಮಡಕೆ ಮಾಡುವವರ, ಕಬ್ಬಿಣ ಮತ್ತು ಮರಗೆಲಸದವರ ಸಹಕಾರ ಸಂಘಗಳೂ ಇವೆ. ತಾಲ್ಲೂಕಿನ ವ್ಯಾಪಾರಾಭಿವೃದ್ಧಿಗೆ ಅನುಕೂಲಿಸುವಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರ ಕೆಲವು ವಾಣಿಜ್ಯ ಬ್ಯಾಂಕುಗಳಿವೆ. ತುಮಕೂರಿನ ನೈಋತ್ಯಕ್ಕಿರುವ ಈ ತಾಲ್ಲೂಕಿಗೆ ಉತ್ತಮ ಮಾರ್ಗಗಳಿವೆ. ಬೆಂಗಳೂರು-ಅರಸೀಕೆರೆ ರೈಲುಮಾರ್ಗ ತಾಲ್ಲೂಕಿನ ಉತ್ತರ ಭಾಗದಲ್ಲಿ ಹಾದುಹೋಗಿದೆ. ತಾಲ್ಲೂಕಿನಲ್ಲಿ ಕಿರಿಯ ಪ್ರಾಥಮಿಕ ಮತ್ತು ವಿಸ್ತರಿತ ಪ್ರಾಥಮಿಕ ಶಾಲೆಗಳೂ ಮಾದರಿ ಮಾಧ್ಯಮಿಕ ಶಾಲೆಗಳೂ ಪ್ರೌಢಶಾಲೆಗಳೂ ಇವೆ. ತಾಲ್ಲೂಕು ಮಟ್ಟದ ಹೆರಿಗೆ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಮಾಯಸಂದ್ರ, ದಂಡಿನ ಶಿವರ, ಬಾಣಸಂದ್ರ ಮತ್ತು ತಂಡಗ ಮುಂತಾದೆಡೆಗಳಲ್ಲಿ ಔಷಧಾಲಯಗಳಿವೆ.

ಈ ತಾಲ್ಲೂಕಿಗೆ ಸೇರಿದ ಕೆಲವು ಸ್ಥಳಗಳು ಉಲ್ಲೇಖಾರ್ಹ. ಅಮ್ಮಸಂದ್ರದಲ್ಲಿ 1960ರಲ್ಲಿ ಸ್ಥಾಪಿತವಾದ ಸಿಮೆಂಟ್ ಕಾರ್ಖಾನೆ ಇದೆ. ದುಮ್ಮನಹಳ್ಳಿ ದುಮ್ಮಿಒಡೆಯರ ಪಾಳೆಯಪಟ್ಟಾಗಿತ್ತು. ಹೊಸಹಳ್ಳಿಯಲ್ಲಿ ಹೊಯ್ಸಳರ ಕಾಲದ ಕಲ್ಲೇಶ್ವರ ದೇವಾಲಯವಿದೆ. ಕಡಸೂರಿನ ಭೈರವ ದೇವಾಲಯ ಪ್ರಸಿದ್ಧವಾದದ್ದು. ಮಾಯಸಂದ್ರದಲ್ಲಿ ಮಾಯಮ್ಮ, ಕೊಲ್ಲಾಪುರದಮ್ಮ ದೇವಾಲಯಗಳಿವೆ. ಮಾಯಸಂದ್ರಕ್ಕೆ ಹತ್ತಿರವಿರುವ ರಾಮಸಾಗರದ ವರದರಾಜ ದೇವಾಲಯ ಹೆಸರಾದುದು. ನಾಗಲಾಪುರದಲ್ಲಿ ಹೊಯ್ಸಳರ ಕಾಲದ ಪಾಳುಬಿದ್ದಿರುವ ವಿಷ್ಣು ಮತ್ತು ಶಿವ ದೇವಾಲಯಗಳು ಇವೆ. ಸಂಪಿಗೆಯು ತೆಂಗಿನ ತೋಟಗಳಿಗೆ ಪ್ರಸಿದ್ಧ. ಇಲ್ಲಿ ವೆಂಕಟರಮಣಸ್ವಾಮಿ ದೇವಾಲಯವಿದೆ. ಸೂಳೆಕೆರೆಯಲ್ಲಿ ಹೊಯ್ಸಳ ಶೈಲಿಯ ಈಶ್ವರ ದೇವಾಲಯವೂ ವೀರಭದ್ರನ ದೇವಸ್ಥಾನವೂ ಇದೆ. ತಂಡಗ ಹೊಯ್ಸಳ ಶೈಲಿಯ ದೇವಾಲಯಕ್ಕೆ ಪ್ರಸಿದ್ಧ. *

ತುರುವೇಕೆರೆ ಈ ತಾಲ್ಲೂಕಿನ ಆಡಳಿತ ಕೇಂದ್ರ. ಇದು ಬೆಂಗಳೂರು-ಪುಣೆ ರೈಲುಮಾರ್ಗದಲ್ಲಿರುವ ಬಾಣಸಂದ್ರ ರೈಲುನಿಲ್ದಾಣದ ದಕ್ಷಿಣಕ್ಕೆ ಸು.13ಕಿಮೀ ದೂರದಲ್ಲಿದೆ. ಈ ನಗರ ಈಗ ವಿನೋಬನಗರ, ಸುಬ್ರಹ್ಮಣ್ಯ ನಗರ, ಗಾಂಧೀನಗರ ಮೊದಲಾದ ಬಡಾವಣೆಗಳಿಂದ ವಿಸ್ತಾರಗೊಂಡು ಬೆಳೆಯುತ್ತಿದೆ. ಜನಸಂಖ್ಯೆ 13,275.

ಊರಿನ ಉತ್ತರಕ್ಕೆ ಇರುವ ದೊಡ್ಡ ಕೆರೆ ಮೊದಲಿನಿಂದಲೂ ವ್ಯವಸಾಯಕ್ಕೆ ಮತ್ತು ಕುಡಿಯುವ ನೀರಿಗೆ ಆಧಾರವಾಗಿದೆ. ತುಮಕೂರಿನ ನೈಋತ್ಯಕ್ಕಿರುವ ಈ ಊರು ಒಂದು ವ್ಯಾಪಾರಕೇಂದ್ರವಾಗಿ ಅಭಿವೃದ್ಧಿಹೊಂದುತ್ತಿದ್ದು ಸುತ್ತಲ ಊರುಗಳಿಗೆ ಉತ್ತಮ ಸಂಪರ್ಕ ಪಡೆದಿದೆ. ವಿವಿಧ ನಾಗರಿಕ ಸೌಲಭ್ಯಗಳನ್ನು ಪಡೆದಿದೆ. ಈ ಊರಿನ ಒಂದು ಭಾಗಕ್ಕೆ ಅರಳೇಪೇಟೆ ಎಂಬ ಹೆಸರಿದ್ದು ತುರುವೇಕೆರೆ ಒಂದು ಕಾಲಕ್ಕೆ ಹತ್ತಿಯ ದೊಡ್ಡ ವ್ಯಾಪಾರಕೇಂದ್ರವಾಗಿತ್ತೆಂದು ಹೇಳಲಾಗಿದೆ.

ಹದಿಮೂರನೆಯ ಶತಮಾನದಲ್ಲಿ ಹೊಯ್ಸಳರ ಮೂರನೆಯ ನರಸಿಂಹನ ದಂಡನಾಯಕ ಸೋಮಣ್ಣ ಈ ಊರನ್ನು 1268ರಲ್ಲಿ ಸರ್ವಜ್ಞ ಶ್ರೀವಿಜಯ ನರಸಿಂಹಪುರ ಎಂಬ ಹೆಸರಿನಿಂದ ಬ್ರಾಹ್ಮಣರಿಗೆ ಅಗ್ರಹಾರವಾಗಿ ಕೊಟ್ಟನೆಂದು ಇಲ್ಲಿನ ಒಂದು ಶಾಸನದಿಂದ ತಿಳಿದುಬರುತ್ತದೆ. ತುರುವೇಕೆರೆ ಎಂಬ ಇಂದಿನ ಹೆಸರಿಗೆ ಊರಿನ ಉತ್ತರ ಭಾಗಕ್ಕಿರುವ ದೊಡ್ಡ ಕೆರೆಯೇ ಕಾರಣವೆಂದು ತಿಳಿದುಬರುತ್ತದೆ. ಹದಿನಾರನೆಯ ಶತಮಾನದಲ್ಲಿ ಹಾಗಲವಾಡಿಯ ಸಲನಾಯಕ ಎಂಬುವನು ಈ ಊರನ್ನು ವಶಪಡಿಸಿಕೊಂಡು ಅವನ ಸಹೋದರರಾದ ಚಿಕ್ಕನಾಯಕ ಮತ್ತು ಅಣ್ಣಿನಾಯಕ ಎಂಬುವರಿಗೆ ವಹಿಸಿದ. ಅವರು ಇಲ್ಲಿನ ಹೊರಕೋಟೆಯನ್ನು ಕಟ್ಟಿಸಿ ಕೆರೆಯನ್ನು ವಿಸ್ತರಿಸಿದರು. 1676ರಲ್ಲಿ ಈ ಊರು ಮೈಸೂರು ರಾಜವಂಶದ ಚಿಕ್ಕದೇವರಾಜನಿಗೆ ಸೇರಿತು. (ಕೆ.ಎಸ್.ಎನ್.)

ತುರುವೇಕೆರೆಯಲ್ಲಿ ಪ್ರಾಚೀನ ಕಾಲದ ಹಲವು ಅವಶೇಷಗಳಿವೆ. ಇಲ್ಲಿರುವ ಚನ್ನಕೇಶವ ಮತ್ತು ಮೂಲೆಶಂಕರ ದೇವಾಲಯಗಳು ಹೊಯ್ಸಳ ಕಾಲದವು. ಸೋಮನಾಥಪುರದ ಕೇಶವ ದೇವಾಲಯವನ್ನು ನಿರ್ಮಿಸಿದ ಸೋಮಣ್ಣ ದಂಡನಾಯಕನೇ ಇವುಗಳನ್ನು ಕಟ್ಟಿಸಿದ. ಚನ್ನಕೇಶವ ದೇವಾಲಯ ಪೂರ್ವಾಭಿಮುಖವಾಗಿದೆ. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ, ಮುಂದೆ ಮುಖಮಂಟಪ ಇವೆ. ಗರ್ಭಗೃಹದ ಮೇಲೆ ಹೆಚ್ಚು ಕೆತ್ತನೆಯಿಲ್ಲದ ಶಿಲಾಶಿಖರವಿದೆ. ಹೊರಭಿತ್ತಿ ಅರೆಗಂಬಗಳಿಂದ ಅಲಂಕೃತವಾಗಿದೆ. ಆದರೆ ಶಿಲ್ಪಗಳಿಲ್ಲ. ನವರಂಗ, ಸುಕನಾಸಿ ಭಾಗದಲ್ಲಿ ಆಳವಾದ ಶಿಲ್ಪಿತ ಭುವನೇಶ್ವರಿಗಳಿವೆ. ಸುಕನಾಸಿಯ ಬಾಗಿಲ ಇಕ್ಕೆಲದಲ್ಲಿ ಜಾಲಂಧ್ರಗಳನ್ನು ಕೆತ್ತಲಾಗಿದೆ. ಮೂಲೆಶಂಕರ ದೇವಾಲಯದ ವಿನ್ಯಾಸವೂ ಸುಮಾರು ಮೇಲಿನದರ ರೀತಿಯಿದೆ. ಆದರೆ ಪ್ರವೇಶದ್ವಾರ ಮತ್ತು ಮುಖ ಮಂಟಪಗಳು ದಕ್ಷಿಣಾಭಿಮುಖವಾಗಿವೆ. ಮೂಲ ಲಿಂಗ ಮಾತ್ರ ಪೂರ್ವಾಭಿಮುಖವಾಗಿಯೇ ಇದೆ. ಈ ದೇವಾಲಯದ ಶಿಖರದಲ್ಲಿ ಅನೇಕ ಚಿಕ್ಕ ಶಿಖರ ರೂಪುಗಳನ್ನು ಸಾಲಾಗಿ ಮೇಲೆ ಕಾಣುವಂತೆ ತೋರಿಸಲಾಗಿದೆ. ನವರಂಗದಲ್ಲಿ ಹೊಯ್ಸಳ ಕಾಲದ ಭೈರವ, ವೀರಭದ್ರ ಮತ್ತು ಸುಬ್ರಹ್ಮಣ್ಯ ಶಿಲ್ಪಗಳಿವೆ. ಹೊರಗಡೆ ಅಡಿಪಟ್ಟಿಕೆಗಳ ಮೇಲೆ ಸರೋಜ, ಜಕ್ಕಣ್ಣ, ಈಶ್ವರ ಎಂಬ ಶಿಲ್ಪಿಗಳ ಹೆಸರುಗಳಿವೆ. ಇವುಗಳಲ್ಲಿ ಜಕ್ಕಣ್ಣನ ಹೆಸರು ಕುತೂಹಲಕಾರಿಯಾಗಿದೆ. ಈ ಶಿಲ್ಪಿಗೂ ಐತಿಹ್ಯ ಪ್ರಸಿದ್ಧನಾದ ಜಕ್ಕಣಾಚಾರಿಗೂ ಸಂಬಂಧವಿದೆಯೇ ಎಂಬುದು ತಿಳಿಯದು.

ಮೂಲೆಶಂಕರ ದೇವಾಲಯ

ಗಂಗಾಧರೇಶ್ವರ ಮತ್ತು ಬೇಟೆರಾಯ ದೇವಾಲಯಗಳು ಇಲ್ಲಿನ ಇತರ ಮುಖ್ಯ ಗುಡಿಗಳು. ಗಂಗಾಧರೇಶ್ವರ ಗುಡಿ ದ್ರಾವಿಡ ಶೈಲಿಯ ಕಟ್ಟಡ. ಉತ್ತರಾಭಿಮುಖವಾಗಿರುವ ಈ ದೇವಾಲಯದಲ್ಲಿ ದೊಡ್ಡ ಪ್ರಾಕಾರ, ಶಿವ ಮತ್ತು ಪಾರ್ವತಿ ಗುಡಿಗಳಿವೆ. ದೇವಾಲಯದ ಮುಂದಿರುವ ಕಲ್ಲಿನ ದೀಪಸ್ತಂಭದ ಮೇಲೆ ಭಕ್ತದಂಪತಿಗಳ ವಿಗ್ರಹವಿದ್ದು, ಅದನ್ನು ಈ ದೇವಾಲಯವನ್ನು ರಚಿಸಿದ ಅಯ್ಯಣನಾಯಕ ಎಂಬ ಪಾಳೆಯಗಾರ ಮತ್ತು ಅವನ ಪತ್ನಿಯ ವಿಗ್ರಹ ಎಂದು ಹೇಳಲಾಗುತ್ತದೆ. ಪಾತಾಳಾಂಕಣದಲ್ಲಿರುವ ಒಂದು ಮಂಟಪದಲ್ಲಿ ಬೃಹತ್ ನಂದಿಯೊಂದಿದೆ. ಇದೊಂದು ಆಕರ್ಷಕ ಶಿಲ್ಪ. ಇಲ್ಲಿನ ಉತ್ಸವ ವಿಗ್ರಹದಲ್ಲಿ ಶಿವನ ಜೊತೆಗೆ ಪಾರ್ವತಿ ಮತ್ತು ದಾಕ್ಷಾಯಿಣಿ ವಿಗ್ರಹಗಳೂ ಇರುವುದು ಒಂದು ವಿಶೇಷ.

ಬೇಟೆರಾಯ ದೇವಾಲಯ ಊರಿನ ಮುಖ್ಯಗುಡಿ. ಪೂರ್ವಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ, ಹಜಾರ ಇವೆ. ನವರಂಗದ ಉತ್ತರಕ್ಕೆ ಒಂದು ಅರ್ಧಮಂಟಪ ಮತ್ತು ದಕ್ಷಿಣದೆಡೆಗೆ ಒಂದು ಕೋಣೆ ಇವೆ. ಈ ಮೂಲ ಘಟಕದ ಮುಂದೆ ಸ್ವಲ್ಪ ಕೆಳಮಟ್ಟದ ಪಾತಾಳಾಂಕಣವಿದೆ. ಸುತ್ತ ಪ್ರಾಕಾರವಿದ್ದು ಪೂರ್ವದೆಡೆ ಎತ್ತರದ ಮಹಾದ್ವಾರವಿದೆ. ದೇವಾಲಯ ದ್ರಾವಿಡಶೈಲಿಯ ಸಾಮಾನ್ಯ ವಾಸ್ತುಕೃತಿ. ಮಹಾದ್ವಾರದ ಒಳಕಂಬದ ಮೇಲೆ ಇರುವ ಒಂದು ಭಕ್ತವಿಗ್ರಹವನ್ನು ಈ ದೇವಾಲಯವನ್ನು ಕಟ್ಟಿಸಿದ ಚೌಡಪ್ಪಯ್ಯನದು (ವರದ ಬೇಟೆರಾಯ) ಎಂದು ತೋರಿಸಲಾಗುತ್ತದೆ. ಈ ದೇವಾಲಯದಲ್ಲಿ ಪ್ರತಿ ಫಾಲ್ಗುಣ ಮಾಸದಲ್ಲಿ ಜಾತ್ರೆ ಜರುಗುತ್ತದೆ. *

**ತುಳು :** ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ ಮುಖ್ಯ ಭಾಷೆಗಳಲ್ಲಿ ಒಂದು. ಕರ್ನಾಟಕದ ಪಶ್ಚಿಮ ಕರಾವಳಿ ತುಳು ದೇಶ. ಇಲ್ಲಿನ ಜನರು ತುಳುವರು. ಇವರದು ತುಳು ಸಂಸ್ಕೃತಿ. ಇವರು ಮಾತಾಡುವ ಭಾಷೆ ತುಳು.

ತುಳು ಭಾಷೆಯನ್ನಾಡುವವರು ಈಗ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಕಲ್ಯಾಣಪುರ ಹೊಳೆಯಿಂದ ದಕ್ಷಿಣದಲ್ಲಿ ಕೇರಳದ ಕಾಸರಗೋಡು ಪ್ರದೇಶದ ಚಂದ್ರಗಿರಿ ನದಿಯ ತನಕವಿರುವ ಪ್ರದೇಶದಲ್ಲಿ ವಾಸಿಸುತ್ತಾರೆ. ಪಶ್ಚಿಮದಲ್ಲಿ ಅರಬ್ಬೀಸಮುದ್ರ ಹಾಗೂ ಪೂರ್ವದಲ್ಲಿ ಪಶ್ಚಿಮ ಘಟ್ಟ ಇದರ ಗಡಿಗಳು. ಹಿಂದೆ ತುಳುನಾಡಿನ ಗಡಿ ಇನ್ನೂ ವಿಸ್ತಾರವಾಗಿದ್ದು ಉತ್ತರದಲ್ಲಿ ಉತ್ತರ ಕನ್ನಡದ ಗೋಕರ್ಣ ಗೇರಸೊಪ್ಪೆವರೆಗೂ ದಕ್ಷಿಣದಲ್ಲಿ ಚಂದ್ರಗಿರಿ ಹೊಳೆಗಿಂತಲೂ ದಕ್ಷಿಣಕ್ಕೆ ಶಿರ್ಕರಪುರದವರೆಗೂ ತುಳುನಾಡು ಹರಡಿತ್ತು ಎಂಬುದು ಇತಿಹಾಸಕಾರರ ಅಭಿಪ್ರಾಯ. ಈ ಪ್ರದೇಶದಲ್ಲಿ ತುಳು ಮಾತ್ರವಲ್ಲದೆ ಕನ್ನಡ, ಮಲಯಾಳಂ, ಕೊಂಕಣಿ, ಮರಾಠಿ, ಬ್ಯಾರಿ (ಮಾಪಿಳ್ಳೆ) ಭಾಷೆಗಳನ್ನಾಡುವ ಜನರೂ ಇದ್ದಾರೆ. ಆದರೆ ತುಳು ಮಾತಾಡುವವರ ಸಂಖ್ಯೆ ಅಧಿಕವಾಗಿದ್ದು ಜನಸಾಮಾನ್ಯರ ಸಂಪರ್ಕ ಭಾಷೆಯಾಗಿ ತುಳುವೇ ಹೆಚ್ಚು ಪ್ರಚಾರದಲ್ಲಿದೆ. ರಾಜ್ಯ ಭಾಷೆ ಕನ್ನಡವಾದುದರಿಂದ ವಿದ್ಯಾಭ್ಯಾಸದ ಮಾಧ್ಯಮ ಕನ್ನಡ ಭಾಷೆಯಾಗಿದೆ.

ತುಳು ಶಬ್ದದ ಅರ್ಥವೇನೆಂಬುದರ ಬಗ್ಗೆ ವಿದ್ವಾಂಸರಲ್ಲಿ ಮತಭೇದವಿದೆ. ತೂಳು 'ಯುದ್ಧ ಮಾಡು' ಎಂಬ ಮೂಲದಿಂದ ಬಂದ ಈ ಶಬ್ದ ತುಳುವರ ಶೌರ್ಯ ಪರಾಕ್ರಮಗಳನ್ನು ಸೂಚಿಸುತ್ತದೆ ಎಂಬ ಅಭಿಪ್ರಾಯವಿದೆ. ಕರಾವಳಿಯ ತುಳುವ ಹಲಸಿನಕಾಯಿಯ ತೊಳೆಯಂತೆ ತುಳುವರು ಮೃದು ಸ್ವಭಾವದವರಾದುದರಿಂದ ಅವರಿಗೆ ಈ ಹೆಸರು ಬಂತು ಎಂಬ ಅಭಿಪ್ರಾಯವಿದೆ. ತುರುಗಳನ್ನು, ಅಂದರೆ ಜಾನುವಾರುಗಳನ್ನು ಸಾಕುವವರಾದುದರಿಂದ ಈ ಹೆಸರು ಬಂತು ಎಂದು ಇನ್ನೊಂದು ಅಭಿಪ್ರಾಯ. ತುಳು ಎಂಬುದು ಜಲವಾಚಕ ಪದವಾದುದರಿಂದ ಜಲಾವೃತವಾದ ಈ ಪ್ರದೇಶ ತುಳು ಪ್ರದೇಶವೆಂದು ಪ್ರಸಿದ್ಧಿ ಪಡೆಯಿತು ಎಂಬುದು ಮತ್ತೆ ಕೆಲವರ ವಾದ.

ತುಳುನಾಡಿನ ಮೂಲದ ಬಗೆಗೆ ಹಲವಾರು ಐತಿಹ್ಯಗಳಿವೆ. ಒಂದು ಜನಪದ ನಂಬಿಕೆಯಂತೆ ಮೊದಲು ತುಳುರಾಜ್ಯವನ್ನು ನಂದೂರಾಯ ಎಂಬ ಬಿರುದು ಪಡೆದ ಹುಬಶಿಕ ಎಂಬ ಹರಿಜನ ವರ್ಗದ ಅರಸ ಆಳುತ್ತಿದ್ದನಂತೆ. ಅನಂತರ ಇತರ ವರ್ಗದ ಜನರು ಇಲ್ಲಿಗೆ ಬಂದು ಆತನನ್ನು ಸೋಲಿಸಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರಂತೆ. ಭೂತಾಳ ಪಾಂಡ್ಯನೆಂಬ ಅರಸ ಇಲ್ಲಿ ಅಳಿಯಸಂತಾನ ಕಟ್ಟುಪಾಡುಗಳನ್ನು ಪ್ರಚಾರಕ್ಕೆ ತಂದ ಎಂಬ ನಂಬಿಕೆಯೂ ಇದೆ. ಈ ಭೂತಾಳ ಪಾಂಡ್ಯನ ಕಾಲ ಕ್ರಿ.ಪೂ.ಒಂದನೆಯ ಶತಮಾನವೆಂದೂ ಆತ ದಕ್ಷಿಣದ ಪಾಂಡ್ಯ ವಂಶಕ್ಕೆ ಸೇರಿದವನಿರಬೇಕೆಂದೂ ಇತಿಹಾಸಕಾರರು ಊಹಿಸುತ್ತಾರೆ. ಆತನ ಸೋದರಮಾವ ದೇವಪಾಂಡ್ಯ ದೊಡ್ಡ ಹಡಗೊಂದನ್ನು ಕಟ್ಟಿಸಿ ಅದನ್ನು ಸಮುದ್ರಕ್ಕೆ ಇಳಿಸುವ ಮುನ್ನ ಕುಂಡೋದರ ಎಂಬ ಭೂತಕ್ಕೆ ನರಬಲಿ ಕೊಡಬೇಕಾಗಿ ಬಂದ ಸಂದರ್ಭದಲ್ಲಿ ಆತನ ಪತ್ನಿ ತನ್ನ ಮಕ್ಕಳಲ್ಲಿ ಒಬ್ಬನನ್ನೂ ಬಿಟ್ಟು ಕೊಡಲಿಲ್ಲ. ಆಗ ಆತನ ತಂಗಿ ತನ್ನ ಒಬ್ಬನೇ ಮಗನಾಗಿದ್ದವನನ್ನು ಬಿಟ್ಟುಕೊಟ್ಟಳು. ಈ ತ್ಯಾಗಕ್ಕೆ ಮೆಚ್ಚಿದ ಭೂತ ಆತನ ಬಲಿ ತೆಗೆದುಕೊಳ್ಳದೆ ಇನ್ನು ಮುಂದೆ ಸಹೋದರಿಯ ಮಕ್ಕಳಿಗೆ ಆಸ್ತಿಯ ಅಧಿಕಾರ ಸಿಕ್ಕಲಿ ಎಂದು ಕಟ್ಟಳೆ ಮಾಡಿತಂತೆ. ಈ ಕಥೆ ತುಳುನಾಡಿನಲ್ಲಿ ಅಳಿಯಸಂತಾನ ಕಟ್ಟಿನ ಉಗಮ ಹಾಗೂ ಭೂತಾರಾಧನೆಯ ಪ್ರಾಚೀನ ಸಂಪ್ರದಾಯದ ಬಗ್ಗೆ ಬೆಳಕು ಬೀರುತ್ತದೆ. ತುಳುನಾಡಿನ ಹೆಚ್ಚಿನ ಮುಖ್ಯ ವರ್ಗದವರು - ಅಂದರೆ ಬಂಟರು, ಬಿಲ್ಲವರು, ಬೆಸ್ತರು, ಕುಂಬಾರರು

ಮುಂತಾದವರು ಈ ಅಳಿಯ ಕಟ್ಟನ್ನು ಅನುಸರಿಸುತ್ತಾರೆ. ಸ್ವಾತಂತ್ರ್ಯ ಬಂದ ಅನಂತರ ಆಸ್ತಿ ಸಂಪತ್ತುಗಳ ಒಡೆತನಕ್ಕೆ ಸಮಾನ ಕಾನೂನು ಬಂದರೂ ಇತರ ಸಾಮಾಜಿಕ ಸಾಂಸ್ಕೃತಿಕ ಆಚರಣೆಗಳಲ್ಲಿ ಇಲ್ಲಿಯ ಜನ ಅಳಿಯಸಂತಾನ ಕಟ್ಟಿನ ಸಂಪ್ರದಾಯಗಳನ್ನೇ ಅನುಸರಿಸುತ್ತಾರೆ. ಸಾಮಾಜಿಕ ಧಾರ್ಮಿಕ ಆಚರಣೆಗಳಲ್ಲಿ ಸೋದರ ಮಾವನಿಗೆ ಬಹಳ ಮುಖ್ಯವಾದ ಸ್ಥಾನ ಹಾಗೂ ಹೊಣೆಗಾರಿಕೆಯಿರುತ್ತದೆ.

ಸು.2ನೆಯ ಶತಮಾನದಲ್ಲಿ ರಚಿತವಾದ ತಮಿಳಿನ ಸಂಗಂ ಸಾಹಿತ್ಯದಲ್ಲಿ ತುಳುನಾಡಿನ ವನಗಳಲ್ಲಿ ಗರಿ ಬಿಚ್ಚಿ ಕುಣಿಯುವ, ಸುಂದರ ಕಣ್ಣುಗಳ ನವಿಲುಗಳನ್ನು ನೋಡುವುದು ಕಣ್ಣಿಗೆ ಮಹದಾನಂದ ಎಂಬ ವರ್ಣನೆಯಿದೆ. ತುಳುನಾಡಿನ ಬಗ್ಗೆ ಸಿಗುವ ಲಿಖಿತ ದಾಖಲೆಗಳಲ್ಲಿ ಇದೇ ಮೊದಲನೆಯದು ಎನ್ನಬಹುದು. ಪಲ್ಲವ ಎರಡನೆಯ ನಂದಿವರ್ಮನ ಶಾಸನವೊಂದರಲ್ಲಿ (ಸು.8ನೆಯ ಶತಮಾನ) ಆ ರಾಜನ ಆಸ್ಥಾನದಲ್ಲಿ ಉದ್ಯೋಗ ಪಡೆಯಲು ತುಳುವರೂ ಸೇರಿದಂತೆ ಬೇರೆ ಬೇರೆ ಪ್ರದೇಶದ ಜನರು ಬಂದು ಕಾಯುತ್ತಿದ್ದರು ಎಂಬ ಉಲ್ಲೇಖವಿದೆ. 14ನೆಯ ಶತಮಾನದಲ್ಲಿ ತಮಿಳು ವ್ಯಾಕರಣ ಗ್ರಂಥಕ್ಕೆ ಬರೆದ ವ್ಯಾಖ್ಯಾನದಲ್ಲಿ ತಮಿಳು ಪ್ರಾಂತ್ಯ ಕೊಡಗು, ವಡಗು, ತುಳುವ, ಕನ್ನಡ ಪ್ರದೇಶಗಳಿಂದ ಆವೃತವಾಗಿದೆ ಎಂದು ಬರೆದಿದೆ. ತಮಿಳು ಭಾಷೆಗೆ ಸೇರಿದ ಇತರ ಭಾಷಾ ಪದಗಳ ಬಗ್ಗೆ ಚರ್ಚಿಸುವಾಗ ತುಳುವಿನ ಕುಕ್ಕು (ಮಾವಿನ ಹಣ್ಣು) ಬಗ್ಗೆಯೂ ಆ ಗ್ರಂಥ'ದಲ್ಲಿ ಉಲ್ಲೇಖ ಕಂಡುಬರುತ್ತದೆ.

ತಮಿಳು, ಮಲಯಾಳಂ, ಕನ್ನಡ ಭಾಷೆಗಳ ಜನಪದ ಸಾಹಿತ್ಯದಲ್ಲಿಯೂ ತುಳು ದೇಶ, ತುಳು ಜನ, ತುಳು ಭಾಷೆ ಮುಂತಾದವುಗಳ ಬಗ್ಗೆ ವಿವರಗಳು ದೊರೆಯುತ್ತವೆ. ಮಲಯಾಳಂ ಜನಪದ ಸಾಹಿತ್ಯದಲ್ಲಿ ತುಳುವರ ಯುದ್ಧ ಕೌಶಲದ ಬಗ್ಗೆ ವರ್ಣನೆಯಿದ್ದು ಕಳರಿಪಯಿತ್ತು ಎಂಬ ಯುದ್ಧ ವಿದ್ಯೆಯನ್ನು ಕಲಿಯಲು ಯೋಧರು ಕೇರಳದಿಂದ ತುಳುನಾಡಿಗೆ ಬರುತ್ತಿದ್ದರು ಎಂದು ತಿಳಿದುಬರುತ್ತದೆ.

ಸು.2ನೆಯ ಶತಮಾನದಿಂದ ವಿಜಯನಗರ ರಾಜ್ಯ ಸ್ಥಾಪನೆಯಾಗುವವರೆಗೆ ಸುಮಾರು ಹನ್ನೆರಡು ಶತಮಾನಗಳ ಕಾಲ ಆಳುಪ ವಂಶದ ಅರಸರು ತುಳುನಾಡನ್ನು ಆಳುತ್ತಿದ್ದರು. ವಿಜಯನಗರದ ಅರಸರ ಕಾಲದಲ್ಲಿ ಅವರ ಪ್ರತಿನಿಧಿಗಳು ಜಿಲ್ಲೆಯ ಆಡಳಿತ ನಡೆಸುತ್ತಿದ್ದರು. ಮುಂದಿನ ಮೂರು ಶತಮಾನಗಳ ಕಾಲದಲ್ಲಿ ಕೆಳದಿ ಅರಸರೂ ಇಲ್ಲಿನ ಭೈರ, ಅಜಿಲ, ಚೌಟ ಮುಂತಾದ ಚಿಕ್ಕಪುಟ್ಟ ರಾಜಮನೆತನದವರು ಇಲ್ಲಿ ಮೆರೆದರು. ಹತ್ತೊಂಬತ್ತನೆಯ ಶತಮಾನದಲ್ಲಿ ಈ ಪ್ರದೇಶ ಬ್ರಿಟಿಷರ ಆಡಳಿತಕ್ಕೊಳಗಾಯಿತು.

ಭಾಷಾವೈಜ್ಞಾನಿಕವಾಗಿ ಪರಿಶೀಲನೆ ಮಾಡುವಾಗ ತುಳು ಭಾಷೆ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ ಮುಖ್ಯ ಭಾಷೆಗಳಲ್ಲೊಂದು ಎಂದು ತಿಳಿಯುತ್ತದೆ. ತಮಿಳು, ತೆಲುಗು, ಕನ್ನಡ ಮಲಯಾಳಂದಷ್ಟು ವಿಪುಲವಾದ ಸಾಹಿತ್ಯಸೃಷ್ಟಿ ಆಗದಿದ್ದರೂ ತುಳು ಚೆನ್ನಾಗಿ ಬೆಳೆದ, ವಿಕಾಸವಾದ ಭಾಷೆ ಎಂದು ಈಗ್ಗೆ ನೂರ ಐವತ್ತು ವರ್ಷಕ್ಕೆ ಹಿಂದೆಯೇ ಭಾಷಾತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ತುಳು ಭಾಷೆಯ ಪ್ರಾಚೀನತೆಯನ್ನು ವಿದ್ವಾಂಸರು ಕ್ರಿ.ಪೂ.6ನೆಯ ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ. ಕ್ರಿಸ್ತಶಕ ಒಂದನೆಯ ಶತಮಾನದಲ್ಲಿ ಬರೆದ ಒಂದು ಗ್ರೀಕ್ ನಾಟಕದಲ್ಲಿ ಗ್ರೀಸಿನ ಒಂದು ಹಡಗು ಇಲ್ಲಿನ ಸಮುದ್ರತೀರಕ್ಕೆ ಬಂದಾಗ ಅದರಲ್ಲಿನ ಹುಡುಗಿಯೊಬ್ಬಳನ್ನು ಇಲ್ಲಿನ ವೀರರು ಅಪಹರಿಸುವ ಕಥೆಯಿದೆ. ಆಕೆಯ ಸಹಚರರು ಇಲ್ಲಿನವರಿಗೆ ಶರಾಬು ಕುಡಿಸಿ ಅವರು ಪಾನಮತ್ತರಾಗಿದ್ದಾಗ ಆಕೆಯನ್ನು ಬಿಡಿಸಿಕೊಂಡು ಹೋಗುವ ಘಟನೆ ಅದರಲ್ಲಿ ವರ್ಣಿತವಾಗಿದೆ. ನಾಟಕದಲ್ಲಿ ಇಲ್ಲಿನ ಜನರು ಇಲ್ಲಿನ ಭಾಷೆಯಲ್ಲಿಯೇ ಮಾತಾಡುತ್ತಾರೆ, ಆ ಸಂಭಾಷಣೆಗಳಲ್ಲಿ ಸುಮಾರು ನೂರಐವತ್ತು ಶಬ್ದಗಳು ಬರುತ್ತವೆ, ಅವೆಲ್ಲ ತುಳು ಶಬ್ದಗಳು ಎಂಬುದನ್ನು ಪಿ.ಎಸ್.ರೈ ಎಂಬುವವರು ತೋರಿಸಿಕೊಟ್ಟಿದ್ದಾರೆ. ಸುಮಾರು ಎರಡು ಸಾವಿರ ವರ್ಷಗಳ ಹಿಂದಿನ ತುಳು ರೂಪಗಳು ನಮಗೆ ಹೀಗೆ ದೊರಕುತ್ತವೆ.

ಆದರೆ ಮುಂದೆ ತಮಿಳು, ಕನ್ನಡಗಳಲ್ಲಿ ಸಾಹಿತ್ಯ ಸೃಷ್ಟಿಯಾದ ಕಾಲದಲ್ಲಿ ತುಳುವಿನಲ್ಲಿ ಹೆಚ್ಚು ಸಾಹಿತ್ಯ ಗ್ರಂಥಗಳು ಮೂಡಿ ಬರಲಿಲ್ಲ. ತುಳು ಅರಸರು ಕನ್ನಡ ರಾಜರ ಅಧೀನದಲ್ಲಿದ್ದುದರಿಂದ ತುಳುವಿನಲ್ಲಿ ಸಾಹಿತ್ಯರಚನೆಗೆ ಪ್ರೋತ್ಸಾಹ ದೊರಕದೆ ಹೋಗಿರಬಹುದಾದ ಸಾಧ್ಯತೆಯಿದೆ. ಆದರೆ ತುಳುವಿನಲ್ಲಿ ಜನಪದ ಸಾಹಿತ್ಯ ವಿಪುಲವಾಗಿದೆ. ಪಾಡ್ದನ ಅಥವಾ ಪಾರ್ತನ ಎಂದು ಕರೆಯುವ ಈ ಸಾಹಿತ್ಯವನ್ನು ಧಾರ್ಮಿಕ ಹಾಗೂ ಸಾಮಾಜಿಕ ಎಂಬುದಾಗಿ ವಿಂಗಡಿಸಬಹುದು. ಧಾರ್ಮಿಕ ಸಾಹಿತ್ಯಕೃತಿಗಳು ಭೂತಗಳ ಪುರಾಣಗಳಾಗಿವೆ. ಈ ಭೂತಗಳನ್ನು ಶಿವಗಣಗಳು, ಮಾತೃದೇವತೆಗಳು, ಪ್ರಾಣಿಗಳ ಅಂತರ್ಯಾಮಿ ಶಕ್ತಿಗಳು, ಸತ್ತು ದೈವತ್ವಕ್ಕೇರಿದ ವೀರಪುರುಷರು ಹಾಗೂ ವೀರ ವನಿತೆಯರು ಮುಂತಾಗಿ ವರ್ಗೀಕರಿಸಬಹುದು. ಕೋಟಿ ಚೆನ್ನಯ, ಸಿರಿ, ಕೋಡದಬ್ಬು, ಕಲ್ಕುಡ ಕಲ್ಲುರ್ಟಿ, ಕೊರಗ, ತನಿಯ ಮುಂತಾದವರು ಸಾಂಸ್ಕೃತಿಕ ವೀರರಾಗಿ ಹೋರಾಡಿ ಸತ್ತ ಮೇಲೆ ದೈವಗಳಾದವರು. ಪಂಜುರ್ಲಿ, ಪಿಲಿ ಚಾಮುಂಡಿ, ನಂದಿಗೋಣ ಮುಂತಾದವರು ಪ್ರಾಣಿಗಳ ಅಂತರ್ಯಾಮಿ ಶಕ್ತಿಗಳು. ಉಳ್ಳಾಳ್ತಿ, ಭಗವತಿ, ಪೂರಿಯಮ್ಮ ಮುಂತಾದವರು ಮಾತೃ ದೇವತೆಯ ಅವತಾರಗಳು. ವೀರಭದ್ರ, ಜುಮಾದಿ ಮುಂತಾದವರು ಶಿವನ ಅನುಚರರು. ಈ ಎಲ್ಲ ದೈವಗಳ ಅಥವಾ ಭೂತಗಳ ಆರಾಧನೆ ವಿಜೃಂಭಣೆಯಿಂದ ನಡೆಯುತ್ತದೆ (ನೋಡಿ: ಭೂತಾರಾಧನೆ).

ಭೂತ ನರ್ತಕರ ಹಾಗೂ ನಾಗ ನರ್ತಕರ ಕುಣಿತ ಮಾತ್ರ ವಲ್ಲದೆ ಕಲಾವಿದರು ಮನೆಮನೆಗೆ ಹೋಗಿ ಮಾಡುವ ಆಟಿಕಳಂಜ, ಮಾದಿರ, ಮಾಂಕಾಳಿ ಕುಣಿತ, ಜೆನ್ನು ನಲಿಕೆ, ಸಿದ್ದವೇಷ, ಪಿಲಿ ಪಂಜಿ ಕುಣಿತ, ಮರುಸೆಲ್ ಮುಂತಾದ ಹಲವಾರು ಜನಪದ ಕುಣಿತಗಳೂ ಪರಿಶಿಷ್ಟವರ್ಗದ ಜನರು ಮಾಡುವ ದುಡಿ ಕುಣಿತ, ಕೋಲು ಕುಣಿತ ಮುಂತಾದವುಗಳೂ ಇಲ್ಲಿ ಕಾಣಸಿಗುತ್ತವೆ. ಕಂಬಳ (ನೋಡಿ) ಕೆಸರು ಗದ್ದೆಯಲ್ಲಿ ಕೋಣಗಳನ್ನು ಓಡಿಸುವ ಸ್ಪರ್ಧೆ. ಕೋಳಿ ಅಂಕ (ನೋಡಿ) ಕೋಳಿಗಳ ಕಾಳಗ. ಇವು ತುಳುವರ ವಿಶಿಷ್ಟ ಮನರಂಜನ ಕಾರ್ಯಕ್ರಮಗಳು. ಕರಾವಳಿಯ ಯಕ್ಷಗಾನ ಬಯಲಾಟವೂ ಒಂದು ಪ್ರಸಿದ್ಧ ಜನಪದ ರಂಗಭೂಮಿಯಾಗಿ ಬೆಳೆದು ಕರ್ನಾಟಕದ ಹೊರಗೂ ದೇಶದ ಹೊರಗೂ ಸಂಚಾರ ಮಾಡಿ ಜಯಭೇರಿ ಬಾರಿಸಿದೆ. ಇದರಲ್ಲಿ ತುಳು ಪ್ರಸಂಗಗಳೂ ಕನ್ನಡ ಪ್ರಸಂಗಗಳೂ ಇವೆ (ನೋಡಿ: ಯಕ್ಷಗಾನ).

ತುಳು ಭಾಷೆಗೆ ಲಿಪಿಯಿಲ್ಲ ಎಂಬ ಭಾವನೆ ಕೆಲವು ಕಾಲ ಜನರಲ್ಲಿತ್ತು. ಈಗ ಕನ್ನಡ ಲಿಪಿಯನ್ನೇ ಬಳಸಿದರೂ ಹಿಂದೆ ತುಳುವಿಗೊಂದು ಪ್ರತ್ಯೇಕ ಲಿಪಿಯಿತ್ತು. ದಕ್ಷಿಣ ಕನ್ನಡದ ಬ್ರಾಹ್ಮಣರು ಶಾಸ್ತ್ರಾಭ್ಯಾಸಕ್ಕೆಂದು ಕೇರಳಕ್ಕೆ ಹೋಗುತ್ತಿದ್ದಾಗ ಅವರೂ ಕೇರಳದ ನಂಬೂದಿರಿಗಳೂ ಸೇರಿ ಸಂಸ್ಕೃತ ಬರೆಯಲಿಕ್ಕಾಗಿ ಗ್ರಂಥ' ಲಿಪಿಯ ಆಧಾರದ ಮೇಲೆ ಹೊಸತೊಂದು ಲಿಪಿಯನ್ನು ರೂಢಿಸಿಕೊಂಡರು. ಅದಕ್ಕೆ ತುಳು-ಮಲಯಾಳ ಲಿಪಿ ಎಂದು ಹೆಸರಿಟ್ಟರು. ಆಮೇಲೆ ಆ ಲಿಪಿಯ ಒಂದು ಪ್ರಭೇದದಲ್ಲಿ ಸಂಸ್ಕೃತ ಮಂತ್ರಗಳನ್ನು ಬರೆಯುವುದರ ಜೊತೆಗೆ ಮಲಯಾಳ ಸಾಹಿತ್ಯವನ್ನೂ ಬರೆಯತೊಡಗಿದರು. ಇನ್ನೊಂದು ಪ್ರಭೇದದಲ್ಲಿ ತುಳುವರು ಸಂಸ್ಕೃತ ಮಂತ್ರಗಳನ್ನೂ ತುಳು ಸಾಹಿತ್ಯವನ್ನೂ ಬರೆಯತೊಡಗಿದರು. ಈಗ ಇಲ್ಲಿನ ಬ್ರಾಹ್ಮಣರು ಈ ತುಳು ಲಿಪಿಯನ್ನು ಸಂಸ್ಕೃತ ಮಂತ್ರ ಬರೆಯಲಿಕ್ಕಾಗಿ ಮಾತ್ರ ಉಪ ಯೋಗಿಸುತ್ತಾರೆ. ಆದರೆ ಎರಡು ಮೂರು ಶತಮಾನಗಳ ಹಿಂದೆ ಇದರ ಮೂಲಕ ಸಾಹಿತ್ಯ ರಚನೆಯನ್ನೂ ಮಾಡುತ್ತಿದ್ದರು ಎಂಬುದು ಇತ್ತೀಚೆಗೆ ಬೆಳಕಿಗೆ ಬಂದಿದೆ. ತಾಡವಾಲೆಯಲ್ಲಿ ಬರೆದ ನಾಲ್ಕು ಗ್ರಂಥಗಳು ಈ ಲಿಪಿಯಲ್ಲಿ ಸಿಕ್ಕಿವೆ. ಇವು ಹದಿನಾಲ್ಕು ಹಾಗೂ ಹದಿನೇಳನೆಯ ಶತಮಾನದಲ್ಲಿ ರಚನೆಯಾದುವು ಎಂಬುದು ಅವುಗಳ ಲೇಖಕರು ಬರೆದ ದಿನಾಂಕಗಳ ಆಧಾರದಿಂದಲೂ ಅವರು ಉಪಯೋಗಿಸಿದ ಭಾಷೆಯಿಂದಲೂ ತಿಳಿದುಬರುತ್ತದೆ.

'ಶ್ರೀ ಭಾಗವತೊ' ಎಂಬುದು ಭಾಗವತದ ಕಥೆಯನ್ನು ತುಳುವಿನಲ್ಲಿ ಬರೆದ ಮಹಾಕಾವ್ಯ. ತುಳು ಲಿಪಿಯಲ್ಲಿ ತಾಡವಾಲೆಗಳಲ್ಲಿ ಬರೆದ ಎರಡು ಸಾವಿರ ಪದ್ಯಗಳುಳ್ಳ ಈ ಮಹಾಕಾವ್ಯವನ್ನು ಈಗ ಕನ್ನಡ ಲಿಪಿಯಲ್ಲಿ

ಬರೆದು ಮುದ್ರಿಸಿದೆ. ಕಾಸರಗೋಡು ಪ್ರದೇಶದಲ್ಲಿ ಸಿಕ್ಕಿದ ಈ ಹಸ್ತಪ್ರತಿಯನ್ನು ವೆಂಕಟರಾಜ ಪುಣಿಂಚತ್ತಾಯರು ಸಂಪಾದಿಸಿದ್ದಾರೆ. ಇವರ ಸಂಪಾದಕತ್ವದಲ್ಲಿ ಪ್ರಕಟವಾದ ತುಳು ಲಿಪಿಯಲ್ಲಿ ಸಿಕ್ಕಿದ ಇತರ ಗ್ರಂಥಗಳೆಂದರೆ 'ಕಾವೇರಿ', 'ತುಳುದೇವಿ ಮಹಾತ್ಮೆ' ಹಾಗೂ ಮಹಾಭಾರತೋ. ಕಾವೇರಿ, ಪದ್ಯರೂಪದಲ್ಲಿದ್ದರೆ, ದೇವಿ ಮಹಾತ್ಮೆ ಗದ್ಯದಲ್ಲಿದೆ. ಮಹಾಭಾರತೊ ಎಂಬುದು ಮತ್ತೊಂದು ಮಹಾಕಾವ್ಯ. ಈ ಸಾಹಿತ್ಯ ಕೃತಿಗಳನ್ನು ಮಾತ್ರವಲ್ಲದೆ ಕೆಲವು ಶಿಲಾ ಶಾಸನಗಳಲ್ಲೂ ಈ ಲಿಪಿಯಲ್ಲಿ ಬರೆಯಲಾಗಿದೆ. ಹದಿನೈದನೆಯ ಶತಮಾನದಲ್ಲಿ ಕಾಸರಗೋಡಿನ ಅನಂತಪುರದಲ್ಲಿ ಕೆತ್ತಿಸಿದ ಶಿಲಾಶಾಸನ ಈ ತುಳು ಲಿಪಿಯಲ್ಲಿದೆ. ಅಲ್ಲದೆ ಕನ್ನಡ ಭಾಷೆಯ ವಾಕ್ಯಗಳನ್ನು ತುಳು ಲಿಪಿಯಲ್ಲಿ ಕೆತ್ತಿಸಿದ ಶಾಸನಗಳೂ ದೊರೆತಿವೆ.

ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ (ಸು.1834) ಕ್ರಿಶ್ಚಿಯನ್ ಮಿಶನರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಬೈಬಲ್ ಗ್ರಂಥಗಳನ್ನು ತುಳುವಿಗೆ ಅನುವಾದ ಮಾಡಿ ಅವುಗಳನ್ನು ಕನ್ನಡ ಲಿಪಿಯಲ್ಲಿ ಮುದ್ರಿಸಲಿಕ್ಕೆ ಪ್ರಾರಂಭಿಸಿದರು. ಅಂದಿನಿಂದ ತುಳು ಸಾಹಿತ್ಯ ಗ್ರಂಥಗಳು ಕನ್ನಡ ಲಿಪಿಯಲ್ಲಿಯೇ ಪ್ರಕಟವಾಗುವ ಸಂಪ್ರದಾಯ ಬೆಳೆಯತೊಡಗಿತು. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಅಂದರೆ ಸುಮಾರು 1925-45ರ ದಶಕಗಳಲ್ಲಿ ಎಸ್.ಯು.ಪಣಿಯಾಡಿ ಎಂಬುವರ ನೇತೃತ್ವದಲ್ಲಿ ಅನೇಕ ತುಳು ಪುಸ್ತಕಗಳು ಪ್ರಕಟವಾದುವು. ಎನ್.ಎಸ್.ಕಿಲ್ಲೆ, ಶೀನಪ್ಪ ಹೆಗ್ಗಡೆ, ಸತ್ಯಮಿತ್ರ ಬಂಗೇರ, ಪಣಿಯಾಡಿ, ಎಂ.ವಿ. ಹೆಗ್ಗಡೆ, ತಿಂಗಳಾಯ, ನರಸಿಂಗರಾವ್, ಹೊನ್ನಯ್ಯ ಶೆಟ್ಟಿ ಮೊದಲಾದ ಹಲವರು ತುಳು ಸಾಹಿತ್ಯವನ್ನು ಬೆಳೆಸಿದರು.

ಸ್ವಾತಂತ್ರ್ಯಾನಂತರ ತುಳು ಸಾಹಿತ್ಯ ವಿಪುಲವಾಗಿ ಬೆಳೆಯತೊಡಗಿತು. ಮಂದಾರ ಕೇಶವ ಭಟ್ಟ, ಕೆದಂಬಾಡಿ ಜತ್ತಪ್ಪ ರೈ, ಅಮೃತ ಸೋಮೇಶ್ವರ, ಕುದ್ಕಾಡಿ ವಿಶ್ವನಾಥ ರೈ, ಸೀತಾರಾಮ ಆಳ್ವ, ರಾಮಕೃಷ್ಣ ಆಚಾರ್, ವೆಂಕಟರಾಜ ಪುಣಿಂಚತ್ತಾಯ, ದೂಮಪ್ಪ ಮಾಸ್ಟರ್, ವಾಮನ ನಂದಾವರ, ಪೊಳಲಿ ಬಾಲಕೃಷ್ಣ ಶೆಟ್ಟಿ, ಎಸ್.ಪಿ.ಮಂಚಿ ಮುಂತಾದ ಹಲವರು ತುಳು ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿದ್ದಾರೆ. ನಾಟಕ ಹಾಗೂ ಯಕ್ಷಗಾನ ಸಾಹಿತ್ಯವೂ ಸಾಕಷ್ಟು ಬೆಳೆದಿದೆ. ಕೆಮ್ತೂರು ದೊಡ್ಡಣ್ಣ ಶೆಟ್ಟರಿಂದ ಪ್ರಾರಂಭವಾದ ತುಳು ನಾಟಕ ಪರಂಪರೆಗೆ ಟೈಲರ್, ಕಿರೋಡಿಯಾನ್, ಚಂದರ್, ಭಂಡಾರಿ, ಮಚ್ಛೇಂದ್ರನಾಥ್, ಕುಲಾಲ್, ಎ.ಎಸ್.ರಾವ್, ಕ್ಯಾತರಿನ್ ರೋಡ್ರಿಗ್ಸ್ ಮುಂತಾದವರ ಕಾಣಿಕೆಯೂ ಗಣನೀಯವಾದುದು. ಹಲವು ಚಲನಚಿತ್ರಗಳೂ ತುಳು ಭಾಷೆಯಲ್ಲಿ ನಿರ್ಮಿತವಾಗಿವೆ.

ಆಧುನಿಕ ಸಾಹಿತ್ಯಕ್ಕೆ ಕಲಶಪ್ರಾಯವಾಗಿರುವ ಕೃತಿಯೆಂದರೆ ಮಂದಾರ ಕೇಶವಭಟ್ಟರ ಮಂದಾರ ರಾಮಾಯಣ ಎಂಬ ಮಹಾಕಾವ್ಯ. ಇದರಲ್ಲಿ ತುಳುನಾಡಿನ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನಳವಡಿಸಿಕೊಂಡು ರಾಮಾಯಣದ ಕಥೆಯನ್ನು ಹೆಣೆಯಲಾಗಿದೆ. ಹಳೆಯ ತುಳುವಿನ ಶ್ರೀಭಾಗವತೊ, ಮಹಾಭಾರತೊ ಹಾಗೂ ಹೊಸ ತುಳುವಿನ ಮಂದಾರ ರಾಮಾಯಣ ಈ ಮೂರು ಮಹಾಕಾವ್ಯಗಳು ತುಳು ಸಾಹಿತ್ಯಕ್ಕೆ ಭಾರತದ ಇತರ ಹದಿನೇಳು ಸಾಹಿತ್ಯ ಭಾಷೆಗಳ ಸಾಲಿನಲ್ಲಿ ಗೌರವದ ಸ್ಥಾನ ಗಳಿಸಿಕೊಟ್ಟಿವೆ. ಆಧುನಿಕ ಗದ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಕೆದಂಬಾಡಿಯವರು ಅಗ್ರಗಣ್ಯರು. ಅವರ ಹೆಚ್ಚಿನ ಕೃತಿಗಳು ಪ್ರಖ್ಯಾತ ಕನ್ನಡದವಾದರೂ ತುಳುವಿಗೊಂದು ಸತ್ವಶಾಲಿ ಗದ್ಯಶೈಲಿಯನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ ಅವರು ಉತ್ತಮ ಮಾದರಿಗಳನ್ನೊದಗಿಸಿಕೊಟ್ಟರು. ಅಮೃತರ ಗೊಂದೋಲು, ರಾಯರಾವುತೆ, ತುಳುನಾಡ ಕಲ್ಕುಡೆ, ಕೆ.ವಿ.ರೈ. ಅವರ ಸಂಕ್ರಾಂತಿ, ಮಂಜತ ಕಾಪಡೆ, ದೂಮಪ್ಪ ಮಾಸ್ಟರ್ ಅವರ ಮಾದಿರನ ಗಾದೆಗಳು, ಸೀತಾರಾಮ ಆಳ್ವರ ಗೀತೆ, ತಿರ್ಲ್ ಪಾವೆಂ ಅವರ ಬಯ್ಯಮಲ್ಲಿಗೆ, ಪುಣಿಂಚತ್ತಾಯರ ಅಲಡೆ, ಪಾಲ್ತಾಡಿಯವರ ಪಜ್ಜೆಕುರಲ್, ರತ್ನ ಕುಮಾರರ ರಕುಮನ ಪಡ, ವಾಮನ ನಂದಾವರರ ಬೀರ, ತುಳುವೆರೆ ಕುಸಾಲ್ ಕುಸೆಲ್, ಸುನೀತಾ ಶೆಟ್ಟಿ ಅವರ ಪಿಂಗಾರ, ಬಾಲಕೃಷ್ಣ ಶೆಟ್ಟಿಯವರ ಪೊಡಂಬು ತಿಮ್ಮನ ಕಗ್ಗ, ಬಾ.ಸಾಮಗರ ಕಿನ್ನಿ ಕತೆಕುಲು ಮುದ್ದು, ಮೂಡಬಿಳ್ಳಿಯವರ ಉದಿಪು, ಕೃಷ್ಣಾನಂದ ಹೆಗ್ಗಡೆಯವರು ಸಂಪಾದಿಸಿದ ಅಲ್ರ್ಜ ಕಬಿತೆಲು ಮೊದಲಾದ ಕೃತಿಗಳು ತುಳು ಸಾಹಿತ್ಯವನ್ನು ಸಂಮೃದಗೊಳಿಸಿವೆ. ಕರ್ನಾಟಕದಲ್ಲಿನ ತುಳು ಸಾಹಿತ್ಯ ಅಕಾಡೆಮಿ ತುಳು ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗೆ ನೆರವಾಗುತ್ತಿದೆ.

ತುಳು ಒಂದು ಚಿಕ್ಕ ಪ್ರದೇಶಕ್ಕೆ ಸೀಮಿತವಾದ ಭಾಷೆಯಾದರೂ ಅದರಲ್ಲಿ ಹಲವಾರು ಉಪಭಾಷೆಗಳಿವೆ. ಪ್ರಾದೇಶಿಕವಾಗಿಯೂ ಸಾಮಾಜಿಕವಾಗಿಯೂ ಭಾಷಾ ವ್ಯತ್ಯಾಸ ಕಾಣುತ್ತದೆ. ಮಂಗಳೂರಿನಿಂದ ಉತ್ತರದಲ್ಲಿ ಮಾತಾಡುವ ತುಳುವಿಗೂ ಮಂಗಳೂರಿನಿಂದ ದಕ್ಷಿಣಕ್ಕೆ ಮಾತಾಡುವ ತುಳುವಿಗೂ ವ್ಯತ್ಯಾಸವಿದೆ. ಹಾಗೆಯೇ ಬ್ರಾಹ್ಮಣರ ತುಳು, ಹರಿಜನರ ತುಳು, ಜೈನರ ತುಳು, ಇತರ ಪ್ರಮುಖ ವರ್ಗಗಳಾದ ಬಂಟ, ಬಿಲ್ಲವ, ಮೊಗವೀರ ಮುಂತಾದವರ ತುಳು- ಇವುಗಳೊಳಗೆ ಹಲವಾರು ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ಬಂಟ, ಬಿಲ್ಲವ, ಬಿಸ್ಸ, ಕುಂಬಾರ ಮುಂತಾದವರು ಮಾತನಾಡುವ ತುಳುವನ್ನು 'ಸಾಮಾನ್ಯ ತುಳು' ಎನ್ನಬಹುದು. ಇದೇ ತುಳುವರೆಲ್ಲರ ಸಂಪರ್ಕ ಭಾಷೆಯಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮಾರುಕಟ್ಟೆಗಳಲ್ಲಿ ಈ ಪ್ರಭೇದವನ್ನೇ ಇತರ ಎಲ್ಲ ವರ್ಗದವರೂ ಸಂಪರ್ಕ ಭಾಷೆಯಾಗಿ ಬಳಸುತ್ತಾರೆ. ಆಕಾಶವಾಣಿಯಲ್ಲಿ, ಪತ್ರಿಕೆಗಳಲ್ಲಿ, ಸಾಹಿತ್ಯಕೃತಿಗಳಲ್ಲಿ, ಸಾರ್ವಜನಿಕ ಭಾಷಣಗಳಲ್ಲಿ ಈ ಸಾಮಾನ್ಯ ತುಳು ಎಂಬ ಉಪಭಾಷೆಯನ್ನೇ ಬಳಸಲಾಗುತ್ತದೆ.

ತುಳು ಭಾಷೆಯ ಬಗ್ಗೆ ಪುಣೆ, ಅಣ್ಣಾಮಲೈ, ಕೇರಳ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳು ನಡೆದು ಹಲವಾರು ಗ್ರಂಥಗಳು ಪ್ರಕಟವಾಗಿವೆ. ಅಮೆರಿಕ ಹಾಗೂ ಯುರೋಪಿನ ವಿಶ್ವವಿದ್ಯಾಲಯಗಳಲ್ಲಿಯೂ ತುಳು ಭಾಷೆ ಹಾಗೂ ಜಾನಪದದ ಬಗೆಗೆ ಅಧ್ಯಯನಗಳು ನಡೆಯುತ್ತಿವೆ. ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಹಾಗೂ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ತುಳು ಸಂಶೋಧನೆಯ ಬಗ್ಗೆ ಯೋಜನೆಗಳನ್ನು ಹಾಕಿಕೊಂಡು ಕಾರ್ಯಪ್ರವೃತ್ತವಾಗಿವೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಧರ್ಮಸ್ಥಳದ ಹೆಗ್ಗಡೆ ಹಾಗೂ ಕರ್ನಾಟಕ ಸರ್ಕಾರದ ಅನುದಾನದಿಂದ ತುಳು ಅಧ್ಯಯನ ಪೀಠದ ಸ್ಥಾಪನೆಯಾಗಿದೆ. ಉಡುಪಿಯಲ್ಲಿ ಯು.ಪಿ.ಉಪಾಧ್ಯಾಯರ ಸಂಪಾದಕತ್ವದಲ್ಲಿ ಆರು ಸಂಪುಟಗಳ ತುಳು ಶಬ್ದಕೋಶ ಪ್ರಕಟವಾಗಿದೆ. ತುಳುವಿನ ಉಪಭಾಷೆಗಳ ಸರ್ವೇಕ್ಷಣೆ ಹಾಗೂ ತುಳು ಜನಪದ ಸಾಹಿತ್ಯ ಹಾಗೂ ಕಲೆಗಳ ಸಂಗ್ರಹ, ವಿಶ್ಲೇಷಣೆ ಇತ್ಯಾದಿ ಕೆಲಸಗಳು ನಡೆಯುತ್ತಿವೆ. ಬಿ.ಎ.ವಿವೇಕ ರೈ, ಯು.ಪಿ.ಉಪಾಧ್ಯಾಯ, ಸುಶೀಲಾ ಉಪಾಧ್ಯಾಯ, ಕನರಾಡಿ ವಾದಿರಾಜ ಭಟ್ಟ, ಚಿನ್ನಪ್ಪಗೌಡ, ಪುರುಷೋತ್ತಮ ಬಿಳಿಮಲೆ, ಎ.ವಿ.ನಾವಡ, ಪಾಲ್ತಾಡಿ, ವಾಮನ ನಂದಾವರ ಮುಂತಾದ ವಿದ್ವಾಂಸರು ತುಳು ಜಾನಪದದ ಬಗ್ಗೆ ಸಂಶೋಧನೆ ನಡೆಸಿ ಗ್ರಂಥಗಳನ್ನು ಬರೆದಿದ್ದಾರೆ. ಡಿ.ಎನ್.ಶಂಕರಭಟ್ಟ, ಎ.ಎಸ್.ಆಚಾರ್ಯ, ಯು.ಪಿ.ಉಪಾಧ್ಯಾಯ, ಎಂ.ರಾಮ, ಕೆ.ವಿ.ಜಲಜಾಕ್ಷಿ, ಎಸ್.ಎಲ್.ಭಟ್ಟ, ಮಲ್ಲಿಕಾದೇವಿ, ರಾಮಕೃಷ್ಣಶೆಟ್ಟಿ, ಪದ್ಮನಾಭ ಕೇಕುಣ್ಣಾಯ ಮುಂತಾದವರು ತುಳುವಿನ ಭಾಷಾ ವೈಜ್ಞಾನಿಕ ಅಧ್ಯಯನ ನಡೆಸಿದ್ದಾರೆ.

ಹಿಂದಿನ ದಶಕಗಳಲ್ಲಿ ಕೆಲವು ತುಳು ಮಾಸಪತ್ರಿಕೆಗಳು ಪ್ರಕಟವಾಗುತ್ತಿದ್ದುವು. ಈಗ ಅವು ನಿಂತುಹೋಗಿವೆ. ಈಗ ಮಂಗಳೂರಿನಿಂದ ತುಳುರಾಜ್ಯ ಎಂಬ ಮಾಸಪತ್ರಿಕೆ ಹಾಗೂ ತುಳುವೆರೆ ತುಡರ್ ಎಂಬ ವಾರಪತ್ರಿಕೆ ಹಾಗೂ ದೆಹಲಿಯಿಂದ ತುಳುವೆರ್ ಎಂಬ ಮಾಸಪತ್ರಿಕೆ ಹೊರಬರುತ್ತಿವೆ. ಜಿಲ್ಲೆಯ ಕೆಲವು ಸಂಜೆ ಪತ್ರಿಕೆಗಳು ಹಾಗೂ ವಾರಪತ್ರಿಕೆಗಳು ತುಳು ಅಂಕಣಗಳನ್ನು ಪ್ರಕಟಿಸುತ್ತಿವೆ. (ಯು.ಪಿ.ಯು.)

**ತುಳುನಾಡು :** ತುಳುವ, ತುಳವನಾಡು, ತುಳುದೇಶ ಎಂಬುದಾಗಿಯೂ ಕರೆಯಲ್ಪಡುವ ತುಳುನಾಡು ಕರ್ನಾಟಕ ರಾಜ್ಯದ ಈಗಿನ ದಕ್ಷಿಣ ಕನ್ನಡ ಜಿಲ್ಲೆಯೆಂದು ಸ್ಥೂಲವಾಗಿ ಹೇಳಬಹುದು. ಇತಿಹಾಸದ ಕೆಲವು ಕಾಲಗಳಲ್ಲಿ ಇದು ಉತ್ತರ ಕನ್ನಡದ ಕೆಲವು ಭಾಗಗಳನ್ನೂ ಪಶ್ಚಿಮ ಘಟ್ಟದ ಮೇಲಿನ ಕೆಲವು ಪ್ರದೇಶಗಳನ್ನೂ ಒಳಗೊಂಡಿತ್ತು. ಪರಂಪರಾತ್ಮಕ ಹೇಳಿಕೆಗಳ ಪ್ರಕಾರ ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ನಡುವೆ ದಕ್ಷಿಣದಲ್ಲಿ ಚಂದ್ರಗಿರಿ ಹೊಳೆಯಿಂದ (ಇದು ಈಗ ಕೇರಳದಲ್ಲಿದೆ) ಉತ್ತರದಲ್ಲಿ ಕಲ್ಯಾಣಪುರದ ವರೆಗೆ ಇರುವ ಕರಾವಳಿ ಪ್ರದೇಶವೇ ತುಳುನಾಡು.

ತುಳು ಶಬ್ದದ ವ್ಯುತ್ಪತ್ತಿಯ ಬಗ್ಗೆ ವಿದ್ವಾಂಸರಲ್ಲಿ ಅಭಿಪ್ರಾಯ ಭೇದವಿದೆ. ತುಟಿ ಎಂಬ ಶಬ್ದದಿಂದ ತುಳು ಬಂತೆಂಬುದು ಒಂದು ಅಭಿಪ್ರಾಯವಾದರೆ ತುಳುವೆ (ಮೃದು, ಮೃದುನೆಲ) ಎಂಬ ಶಬ್ದದಿಂದ ಬಂತೆಂಬುದು ಇನ್ನೊಂದು. ತುಳು ಎಂಬುದು ಪ್ರದೇಶವಾಚಕವೂ ಹೌದು, ಭಾಷಾವಾಚಕವೂ ಹೌದು. ತುಳುನಾಡಿನ ಕಲ್ಯಾಣಪುರದ ಉತ್ತರ ಭಾಗದಲ್ಲಿ ತುಳುಭಾಷೆ ಇಲ್ಲದಿರುವಾಗ ತುಳು ಎಂಬ ಶಬ್ದ ಮೂಲತಃ ಪ್ರದೇಶವಾಚಕವೇ ಇದ್ದಿರಬೇಕು. ಈ ಪ್ರದೇಶಕ್ಕೆ ಮತ್ತೆ ಬಂದು ನೆಲಸಿದ ಜನಾಂಗವೊಂದರ ಭಾಷೆಯೂ ತುಳು ಎಂಬ ಅಭಿಧಾನವನ್ನು ಪಡೆದಿರಬಹುದು. ತುಳು ಭಾಷೆ ದಕ್ಷಿಣದ ಇತರ ದ್ರಾವಿಡ ಭಾಷೆಗಳಲ್ಲಿ ಯಾವುದಕ್ಕೆ ಹತ್ತಿರವಾದುದು ಎಂಬುದನ್ನು ಕುರಿತ ಅಭಿಪ್ರಾಯ ಭಿನ್ನತೆಯಿಂದ ಮೇಲಿನ ಸಂದೇಹ ಬಲಪಡುತ್ತದೆ. ತುಳು ಭಾಷೆ ಬಳಕೆಯಲ್ಲಿಲ್ಲದ ಬಾರಕೂರು, ಬಸರೂರು, ಹಾಡುವಳ್ಳಿ, ಗೇರಸೊಪ್ಪೆಗಳು ತುಳುನಾಡಿನ ಕೇಂದ್ರಗಳಾಗಿದ್ದುವು. ಸ್ಕಾಂದಪುರಾಣದ ಪ್ರಕ್ಷಿಪ್ತ ಭಾಗವಾದ ಸಹ್ಯಾದ್ರಿ ಖಂಡದಲ್ಲಿ ತುಳುನಾಡಿಗೆ ಸಂಬಂಧಿಸಿದ ಹಲವು ಅಸಂಬದ್ಧ ವಿಚಾರಗಳಿವೆ. ತುಳುನಾಡು ಪರಶುರಾಮಕ್ಷೇತ್ರದ ಭಾಗವೆಂಬ ಕಥೆಯೂ ಇದೆ. ಕನ್ನಡ ಸಹ್ಯಾದ್ರಿಖಂಡದಲ್ಲಿ ತುಳುನಾಡಿನ ಸಪ್ತಕ್ಷೇತ್ರವೂ ಸೇರಿದಂತೆ ಹಲವು ಕ್ಷೇತ್ರತೀರ್ಥಗಳ ವೃತ್ತಾಂತವಿದೆ.

ಅಶೋಕನ ಶಿಲಾಲೇಖನದಲ್ಲಿ ಬರುವ ಸತಿಯಪುತ ತುಳುನಾಡಿರಬಹುದು. 1ನೆಯ ಶತಮಾನದ ಟಾಲೆಮಿಯ ಭೂಗೋಳದಲ್ಲಿ ನಮೂದಿತವಾದ ಒಲೊಖೊಯ್ರಾ ತುಳುನಾಡಿನ ನಾಮಾಂತರವಾದ ಆಳ್ವಖೇಡವಿರಬೇಕು. 3-4ನೆಯ ಶತಮಾನದ ತಮಿಳಿನ ಸಂಗಮ್ ಸಾಹಿತ್ಯದಲ್ಲಿ ತುಳುನಾಡಿನ ಉಲ್ಲೇಖವಿದೆ. ಪಲ್ಲವ ಅರಸನಾದ 2ನೆಯ ನಂದಿವರ್ಮನ ಕಾಲದ (731-795) ಪಟ್ಟಟ್ಟಾಲ್ ಮಂಗಲಮ್ ತಾಮ್ರ ಶಾಸನದಲ್ಲೂ 1012ರ ಕೊಂಗಾಳ್ವನ ಬಲ್ಮುರಿಯ ಶಾಸನದಲ್ಲೂ ತುಟು ಪದದ ಉಲ್ಲೇಖವಿದೆ. ಎರಡನೆಯದು ಕನ್ನಡ ಭಾಷೆಯಲ್ಲಿ ತುಟುವನ್ನು ಕುರಿತ ಮೊದಲ ಶಾಸನೋಲ್ಲೇಖ. ತುಳುನಾಡಿನಲ್ಲಿ ತುಳುನಾಡಿನ ಉಲ್ಲೇಖ ಮೊದಲು ದೊರಕುವುದು 11ನೆಯ ಶತಮಾನದ ಬಂಕಿಯಾಳುಪೇಂದ್ರನ ಕಾಲದ ಬಾರಕೂರು ಶಾಸನದಲ್ಲಿ. ಹೊಯ್ಸಳ ವಿಜಯನಗರ ಕಾಲದ ಶಾಸನಗಳಲ್ಲಿ ತುಳುನಾಡಿನ ಉಲ್ಲೇಖಗಳು ಹೇರಳವಾಗಿ ದೊರೆಯುತ್ತವೆ. ರತ್ನಾಕರವರ್ಣಿಯ ಭರತೇಶವೈಭವ ಕೃತಿಯಲ್ಲಿ ಮೊದಲಾಗಿ ತುಳು ವಾಕ್ಯವೂ ತುಳುವ ಶಬ್ದವೂ ಸಿಗುತ್ತವೆ.

ಕ್ರಿಸ್ತಪೂರ್ವ ಸುಮಾರು 3-2ನೆಯ ಶತಮಾನಗಳಲ್ಲಿ ಇಲ್ಲಿ ಬೃಹತ್ ಶಿಲಾಸಮಾಧಿ ಸಂಸ್ಕೃತಿ ಹರಡಿದ್ದಂತೆ ತೋರುತ್ತದೆ. ಕ್ರಿ.ಶ. ಆರಂಭದಿಂದ 15ನೆಯ ಶತಮಾನದವರೆಗೆ ಆಳುಪರು (ಆಳುವರು) ಇಲ್ಲಿ ಆಳಿದರು. ಮುಂದೆ ವಿಜಯನಗರದ ಅರಸರ ಆಳಿಕೆಯ ಕಾಲದಲ್ಲಿ ತುಳುನಾಡು ಬಾರಕೂರು ಮತ್ತು ಮಂಗಳೂರು ಪ್ರಾಂತ್ಯಗಳಾಗಿ ವಿಭಾಗವಾಯಿತು. ಅವರಿಂದ ನೇಮಿತರಾದ ರಾಜ್ಯಪಾಲರು ಇದನ್ನು ಆಳುತ್ತಿದ್ದರು. ತುಳುವ ವಂಶದ ಕೃಷ್ಣದೇವರಾಯನ ಪೂರ್ವಜರು ಮೂಲತಃ ತುಳುನಾಡಿನ ಪಾಡುವಳ್ಳಿಯವರೆಂದು ಕೆಲವರ ಅಭಿಪ್ರಾಯವಿದೆ. ವಿಜಯನಗರ ಕಾಲದಲ್ಲಿ ಮತ್ತು ಅನಂತರ ಸುರಾಲಿನ ತೊಳಹರರು (ಈಗಿನ ತೋಳಾರರು), ಬಂಗಾಡಿಯ ಬಂಗರು, ಪುತ್ತಿಗೆಯ ಚೌಟರು ಮೊದಲಾದ ಹಲವು ಕಿರು ಅರಸುಮನೆತನಗಳು ತುಳುನಾಡಿನ ವಿವಿಧ ಭಾಗಗಳ ಮೇಲೆ ಒಡೆತನ ಹೊಂದಿದ್ದುವು. ತುಳುನಾಡು ಕೆಲಕಾಲ ಕೆಳದಿ ಸಂಸ್ಥಾನಕ್ಕೂ ಸೇರಿತ್ತು. ಕೆಳದಿಯ ಅರಸರ ಬಳಿಕ ತುಳುನಾಡು ಹೈದರ್ ಅಲಿಯ ಅಧೀನವಾಯಿತು. ಅದು 19ನೆಯ ಶತಮಾನದಲ್ಲಿ ಬ್ರಿಟಿಷರ ಕೈಸೇರಿ ದಕ್ಷಿಣ ಕನ್ನಡ, ಉತ್ತರ ಕನ್ನಡಗಳಾಗಿ ವಿಭಜಿತವಾಗಿ ದಕ್ಷಿಣ ಕನ್ನಡ ಮದರಾಸು ಪ್ರಾಂತ್ಯಕ್ಕೂ ಉತ್ತರ ಕನ್ನಡ ಬೊಂಬಾಯಿ ಪ್ರಾಂತ್ಯಕ್ಕೂ ಸೇರಿದವು. ಭಾಷಾನುಗುಣ ರಾಜ್ಯ ರಚನೆಯಾದಾಗ ಕಾಸರಗೋಡು ಬಿಟ್ಟು ಉಳಿದ ತುಳುನಾಡು ಕರ್ನಾಟಕಕ್ಕೆ ಸೇರಿತು.

ಪಶ್ಚಿಮಘಟ್ಟಗಳಿಂದಾಗಿ ಈ ನಾಡು ಕರ್ನಾಟಕದ ಇತರ ಭಾಗಗಳಿಂದ ಬಹಳ ಕಾಲ ಬೇರೆಯಾಗಿ ಇದ್ದುದರಿಂದ ಇದು ತನ್ನದೇ ಆದ ಸಂಸ್ಕೃತಿ, ನಡೆನುಡಿ, ಆಚಾರವಿಚಾರಗಳನ್ನು ಕಂಡುಕೊಳ್ಳುವಂತಾಗಿದೆ. ಈ ವಿಶಿಷ್ಟ ಸಂಸ್ಕೃತಿ ಇಂದಿಗೂ ಉಳಿದುಬಂದಿದೆ. ತುಳು ಭಾಷೆ, ಅಳಿಯ ಸಂತಾನ ಪದ್ಧತಿ, ಭೂತಾರಾಧನೆ, ಯಕ್ಷಗಾನ ತಾಳಮದ್ದಲೆಗಳು, ಕೋಲ, ಕೋಳಿ ಅಂಕ, ಕಂಬಳ - ಈ ಪ್ರದೇಶದ ಸಂಸ್ಕೃತಿಯ ಕೆಲವು ವೈಶಿಷ್ಟ್ಯಗಳು. (ನೋಡಿ: ಆಳುಪವಂಶ, ತುಳು, ದಕ್ಷಿಣಕನ್ನಡ) (ಪಿ.ಜಿ.ಬಿ.)

**ತೂಬುಗೆರೆ :** ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಸಬೆಗೆ ಈಶಾನ್ಯದಲ್ಲಿ 13ಕಿಮೀ ದೂರದಲ್ಲಿರುವ ಒಂದು ಗ್ರಾಮ. ಹೋಬಳಿ ಕೇಂದ್ರ.

ಇಲ್ಲಿನ ವೆಂಕಟರಮಣಸ್ವಾಮಿ ದೇವಾಲಯ ಸ್ವಲ್ಪ ಪ್ರಾಚೀನವಾದದ್ದು. ವರ್ಷಕ್ಕೊಮ್ಮೆ ಈ ದೇವರ ರಥೋತ್ಸವ ನಡೆಯುತ್ತದೆ. ಊರಿನಲ್ಲಿರುವ ಮಾರಮ್ಮನ ದೇವಾಲಯದಲ್ಲಿ ವರ್ಷಕ್ಕೊಮ್ಮೆ ದೀಪಗಳು ಬೆಳಗುತ್ತವೆ. ದನಕರುಗಳ ರೋಗಗಳು ಕಾಣಿಸಿಕೊಂಡರೆ ರೋಗಪರಿಹಾರಕ್ಕಾಗಿ ವರ್ಷದ ಮಧ್ಯದಲ್ಲಿಯೂ ದೇಗುಲದಲ್ಲಿ ದೀಪಗಳು ಬೆಳಗುತ್ತವೆ.

ಇದು ಒಂದು ವ್ಯಾಪಾರ ಸ್ಥಳ. ಇಲ್ಲಿ ವೈಜ್ಞಾನಿಕವಾಗಿ ಬಿತ್ತನೆಬೀಜ ಸಂಸ್ಕರಿಸುವ ಒಂದು ಖಾಸಗಿ ಕಾರ್ಖಾನೆಯಿದೆ. ಸರ್ಕಾರಿ ಪ್ರೌಢಶಾಲೆ, ವಿದ್ಯುತ್, ಅಂಚೆ, ವೈದ್ಯಕೀಯ ಮುಂತಾದ ಸೌಲಭ್ಯಗಳಿವೆ. (ಡಿ.ಕೆ.ಆರ್.)

**ತೆಂಗಿನ ಘಟ್ಟ :** ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಸಬೆಯಿಂದ 18ಕಿಮೀ ವಾಯವ್ಯದಲ್ಲಿರುವ ಗ್ರಾಮ.

ಇಲ್ಲಿನ ಶಿವದೇವಾಲಯ ಹೊಯ್ಸಳ ಕಾಲದ ಒಂದು ಸುಂದರ ವಾಸ್ತು ಕೃತಿ. ದೇವಾಲಯದ ಸಮೀಪದಲ್ಲಿರುವ ಶಾಸನವೊಂದರಿಂದ ಈ ಗುಡಿಗೆ ಹೊಯ್ಸಳೇಶ್ವರ ಎಂದು ಹೆಸರಿತ್ತೆಂದೂ ಇದನ್ನು ಒಂದನೆಯ ನರಸಿಂಹನ ಕಾಲದಲ್ಲಿ (1142-73) ವ್ಯಾಪಾರಿಯೊಬ್ಬ ಕಟ್ಟಿಸಿದನೆಂದೂ ತಿಳಿಯುತ್ತದೆ. ದೇವಾಲಯ ಸ್ವಲ್ಪಮಟ್ಟಿಗೆ ಶಿಥಿಲವಾಗಿದ್ದರೂ ಗರ್ಭಗೃಹ, ತೆರೆದ ಸುಕನಾಸಿ, ನವರಂಗ ಮತ್ತು ಮುಖಮಂಟಪ ಭಾಗಗಳು ಇವೆ. ಸುಕನಾಸಿಯಲ್ಲಿ ಹೊಯ್ಸಳ ಶೈಲಿಯ ಸಪ್ತಮಾತೃಕಾ ಮತ್ತು ಉಮಾಮಹೇಶ್ವರ ವಿಗ್ರಹಗಳು ಇವೆ. ಸುಕನಾಸಿಯ ದ್ವಾರಬಂಧ ಅಲ್ಲಿಯ ಹಾಗೂ ನವರಂಗದ ಕಂಬಗಳೂ ಬಹು ನಾಜೂಕಿನ ಕೆತ್ತನೆಗಳು. ನವರಂಗದ ಒಂಬತ್ತು ಭುವನೇಶ್ವರಿಗಳಲ್ಲಿ ಒಂದೊಂದೂ ಸುಮಾರು 2 ಅಡಿಗಳಷ್ಟು ಆಳವಾಗಿದ್ದು ಮಧ್ಯದಲ್ಲಿ ವಿವಿಧ ರೀತಿಯಲ್ಲಿ ಕಮಲ ವಿನ್ಯಾಸಗಳಿಂದ ಅಲಂಕೃತವಾಗಿವೆ. ಮಧ್ಯದಿಂದ ಇಳಿಬಿದ್ದ ಕಮಲದ ಮೊಗ್ಗು ಮತ್ತು ಅದರ ಸುತ್ತಲೂ ಸೆಟೆದೆದ್ದ ಎಂಟು ಸಿಂಹಗಳ ಕೆತ್ತನೆಯಿರುವ ಮಧ್ಯಾಂಕಣದ ಭುವನೇಶ್ವರಿ ಬಹುಶಃ ಹೊಯ್ಸಳ ಕಾಲದ ಅತ್ಯುತ್ತಮ ಭುವನೇಶ್ವರಿಗಳ ಸಾಲಿನಲ್ಲಿ ನಿಲ್ಲುತ್ತದೆ. ಭುವನೇಶ್ವರಿಗಳನ್ನು ವಿವಿಧ ಬಣ್ಣಗಳಲ್ಲಿ ಅಲಂಕರಿಸಲಾಗಿದುದ್ದರ ಕುರುಹುಗಳು ಉಳಿದಿವೆ. ದೇವಾಲಯದ ಹೊರ ಗೋಡೆಗಳ ಮೇಲೆ ಕೆಲವು ಅರೆಗಂಬಗಳ ಅಲಂಕರಣ ಮಾತ್ರ ಇದೆ. ಗೋಪುರ ಉಳಿದಿಲ್ಲ. ಈ ದೇವಾಲಯದ ಸಮೀಪದಲ್ಲಿಯೇ ಭೈರವಶಿಲ್ಪವಿರುವ ಇನ್ನೊಂದು ಚಿಕ್ಕಗುಡಿ ಇದೆ. *

**ತೆಂಗು :** ಕರ್ನಾಟಕದ ಮುಖ್ಯ ಬಹುವಾರ್ಷಿಕ ಬೆಳೆ. ಭಾರತದ ಪ್ರಮುಖ ರಫ್ತು ಬೆಳೆಗಳಲ್ಲೊಂದು. ಭಾರತದ ತೆಂಗಿನ ಕೃಷಿಯಲ್ಲಿ ಕರ್ನಾಟಕ ಎರಡನೆಯ ಸ್ಥಾನವನ್ನು ಪಡೆದಿದೆ. ಕೇರಳಕ್ಕೆ ಪ್ರಥಮ ಸ್ಥಾನ. ತಮಿಳುನಾಡಿನದು ಮೂರನೆಯ ಸ್ಥಾನ.

ಕರ್ನಾಟಕದಲ್ಲಿ ತೆಂಗನ್ನೇ ಪೂರ್ಣ ಬೆಳೆಸಾಗಿ ಕೃಷಿಮಾಡುವುದರ ಜೊತೆಗೆ ಪ್ರತಿ ಮನೆಯಲ್ಲಿ ಒಂದೆರಡು ಗಿಡಗಳನ್ನು ನೆಡುವುದು, ತೋಟದಂಚು, ಬೇಲಿ ಪಕ್ಕ ಮುಂತಾದ ಸ್ಥಳಾವಕಾಶವಿರುವೆಡೆಗಳಲ್ಲೆಲ್ಲ ನೆಡುವುದರಿಂದ ಇದರ ವಿಸ್ತೀರ್ಣವನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಸು.40-50 ಸಸಿಗಳಿಗೆ 1 ಎಕರೆ ಪ್ರದೇಶ ಅಗತ್ಯವೆಂದು ಪರಿಗಣಿಸಲಾಗಿದೆ.

ಮರಗಳ ಬೆಳೆವಣಿಗೆ ಮತ್ತು ಫಲಾವಧಿಯ ಆಧಾರದ ಮೇಲೆ ತೆಂಗಿನಲ್ಲಿ ಕುಳ್ಳಮರಗಳು ಮತ್ತು ನೀಳಮರಗಳೆಂಬ ಎರಡು ಗುಂಪುಗಳನ್ನು ಗುರುತಿಸಬಹುದು. ಇವುಗಳಲ್ಲಿ ಕೆಂಪು, ಬಿಳಿ, ಹಳದಿ ಮತ್ತು

ಹಸುರುಕಾಯಿಗಳುಳ್ಳ ತಳಿಗಳಿವೆ. ಇವುಗಳ ತಿರುಳು ತೆಳುವಾಗಿದ್ದು ಎಳನೀರಿಗೆ ಮಾತ್ರ ಉತ್ತಮವೆನಿಸಿವೆ. ಉದ್ದ ಮರಗಳು ನಿಧಾನವಾಗಿ ಬೆಳೆಯುವವು. ಆದರೆ ಇವುಗಳ ತಿರುಳು ಮಂದ. ಇತ್ತೀಚೆಗೆ ಈ ಎರಡರ ಸಂಕರದಿಂದ ಅಧಿಕ ಇಳುವರಿಯ ಸಂಕರ ತಳಿಗಳನ್ನು ವೃದ್ಧಿಸಲಾಗಿದೆ. ಭೂ ಮತ್ತು ಇತರ ಅನುಕೂಲತೆಗಳನ್ನು ಅವಲಂಬಿಸಿ, ಕುಳ್ಳುಬಗೆಯ ತೆಂಗಿನ ಗಿಡಗಳು 3ನೆಯ ವರ್ಷದಿಂದಲೂ ಇತರ ಸಾಮಾನ್ಯ ಬಗೆಯವು 5-6ನೆಯ ವರ್ಷದಿಂದಲೂ ಸಿಂಗಾರ (ಹೊಂಬಾಳೆ) ಉತ್ಪನ್ನ ಮಾಡುತ್ತವೆ. 90 ಭಾಗದಷ್ಟು ಗಿಡಗಳು ತಮ್ಮ 10ನೆಯ ವರ್ಷದೊಳಗೆ ಪೂರ್ಣ ಉತ್ಪತ್ತಿ ಕೊಡಲುಪಕ್ರಮಿಸುತ್ತವೆ. ಉತ್ತಮ ಮರದಲ್ಲಿ ವಾರ್ಷಿಕವಾಗಿ 100-150 ಕಾಯಾಗಬಹುದು. ಇನ್ನೂ ಹೆಚ್ಚು ಕಾಯಿಗಳನ್ನು ಬಿಡುವ ಮರಗಳೂ ಉಂಟು. ಅದು ಭೂಮಿಯ ಫಲವತ್ತತೆ ಮತ್ತು ಹವಾಗುಣವನ್ನವಲಂಬಿಸಿದೆ. ಗೊನೆಯಲ್ಲಿ ಹೂಗಳ ಸಂಖ್ಯೆ ಹೆಚ್ಚಾಗಿದ್ದಷ್ಟೂ ಕಾಯಿಗಳ ಗಾತ್ರ ಕಡಿಮೆಯಾಗುವುದುಂಟು. ಕಾಯಿಗಳ ಗಾತ್ರದಲ್ಲೂ ಬಣ್ಣದಲ್ಲೂ ಭಿನ್ನತೆಯಿದೆ. ಅವು ಉರುಟು, ಉದ್ದ ಮತ್ತು ಅಂಡಾಕಾರದ ವಾಗಿರಬಹುದು. ಹಾಗೆಯೇ ಹಳದಿ, ಕೆಂಪು, ಮಾಸಲು ಮತ್ತು ಹಸುರು ಬಣ್ಣದವಾಗಿರಬಹುದು.

ತೆಂಗು ವಿವಿಧ ಭೂ ಮತ್ತು ವಾಯುಗುಣಕ್ಕೆ ಹೊಂದಿಕೊಂಡು ಬೆಳೆಯುತ್ತದಾದರೂ ಇದು ಮೂಲತಃ ಉಷ್ಣವಲಯದ ಬೆಳೆಯಾದ್ದರಿಂದ ಉಷ್ಣತೆ ಹೆಚ್ಚಾಗಿದ್ದರೆ ಉತ್ತಮವಾಗಿ ಬೆಳೆಯುವುದು. ಉಷ್ಣವಲಯದಲ್ಲಿ ಸಮುದ್ರಮಟ್ಟದಿಂದ 3000' ಎತ್ತರದವರೆಗೂ ತೆಂಗನ್ನು ಬೆಳೆಯಬಹುದು. ಸಕಾಲದ 635ಮಿಮೀ ಮಳೆ ಅದಕ್ಕೆ ಸಾಕಾಗುತ್ತದೆ. ಆದರೂ 75" ಮಳೆಯಾದರೆ ಉತ್ತಮ. ಸುಲಭವಾಗಿ ನೀರು ಬಸಿಯುವ ಮರಳು ಅಥವಾ ಜಂಬಿಟ್ಟಿಗೆ ಮಣ್ಣು ತೆಂಗಿನ ಕೃಷಿಗೆ ಸೂಕ್ತವಾದ್ದು. ಆದ್ದರಿಂದ ಇಂತಹ ಅನುಕೂಲವಿರುವ ಕರಾವಳಿ ಪ್ರದೇಶದಲ್ಲಿ ತೆಂಗಿನ ಗಿಡಗಳು ಹೆಚ್ಚಾಗಿರುವುದು. ತೆಂಗಿಗೆ ತಾಯಿಬೇರಿಲ್ಲ. ಆದ್ದರಿಂದ ಹೆಚ್ಚು ನೀರು ಆವಶ್ಯಕ. ಆದರೆ ಜೌಗು ಒಳ್ಳೆಯದಲ್ಲ. ತೆಂಗಿಗೆ ಅತೀವ ಉಷ್ಣ ಅಥವಾ ಶೀತ ಕೊರೆ ಸಹಿಸುವ ಸಾಮರ್ಥ್ಯವಿಲ್ಲ. $25^0$-$32^0$ಸೆ. ಉಷ್ಣತೆ ಅತ್ಯಂತ ಹಿತಕರ.

ಪ್ರತಿವರ್ಷವೂ ಉತ್ತಮ ಫಸಲು ಕೊಡುವ ತೋಟಪ್ರದೇಶವನ್ನು ಗುರುತಿಸಿ, ಅಲ್ಲಿ ಅತ್ಯಧಿಕ ಇಳುವರಿ ಕೊಡುವ ತೋಟವನ್ನಾರಿಸಿ, ಉತ್ತಮ ಇಳುವರಿಯ ತಾಯಿಮರಗಳನ್ನು ಗುರುತಿಸಲಾಗುವುದು. ಪ್ರತಿವರ್ಷ 80-100 ದಪ್ಪಕಾಯಿ ಕೊಡುವಂಥ ತಾಯಿಮರವನ್ನು ಆಯ್ದು ಕಾಯಿ ಚೆನ್ನಾಗಿ ಬಲಿತು ಸಾಧ್ಯವಾದಲ್ಲಿ ಪೂರ್ಣ ಹಣ್ಣಾಗಿ ಉದುರುವಂಥ ಹಣ್ಣನ್ನು ಮಾತ್ರ ಆಯ್ದುಕೊಳ್ಳಲಾಗುತ್ತದೆ. ಫೆಬ್ರುವರಿ-ಮೇ ಅವಧಿಯಲ್ಲಿ ಆರಿಸಿಕೊಂಡಂಥವು ಉತ್ತಮವೆನ್ನಲಾಗಿದೆ. ಆರಿಸಿದ ತಳ್ಳನ್ನು (ಬೀಜದ ಕಾಯಿ) ಒಂದು ತಿಂಗಳು ನೆರಳಿನಲ್ಲಿ ಒಣಗಿಸಲಾಗುವುದು. ಚೆನ್ನಾಗಿ ಬಿಸಿಲು ಬೀಳುವಲ್ಲಿ ಮರಳು ಅಥವಾ ಮರಳು ಮಿಶ್ರಿತ ಭೂಮಿಯಲ್ಲಿ 1.2-1.5ಮೀ ಅಗಲದ ಮಡಿಗಳನ್ನು ಮಾಡಿ ಮಧ್ಯೆ ನೀರು ಹಾಯಿಸಲು ಕಾಲುವೆಗಳೇರ್ಪಡಿಸಿ, ಕಾಯಿಯ ತೊಟ್ಟು ಮೇಲಿರುವಂತೆ ಅಥವಾ ಅಡ್ಡವಾಗಿರುವಂತೆ ಇಟ್ಟು ನೆಡಲಾಗುತ್ತದೆ. 12-14 ತಿಂಗಳಲ್ಲಿ ಸಸಿಗಳನ್ನು ಕಿತ್ತು ಬೇರೆಡೆಗೆ ನೆಡುವುದಾದರೆ ಬೀಜದಿಂದ ಬೀಜಕ್ಕೆ 254-635ಮಿಮೀ ಅಂತರವನ್ನೂ 2-3 ವರ್ಷ ಬಿಟ್ಟು ಕೀಳುವುದಾದರೆ 0.8-1.4ಮೀ ಅಂತರವನ್ನೂ ಕೊಡಲಾಗುತ್ತದೆ. ನೆಟ್ಟಮೇಲೆ ಸಸಿಯ ತೊಟ್ಟು ಕಣ್ಣಿಗೆ ಕಾಣುವಂತೆ ಭೂಮಟ್ಟದಿಂದ ಮೇಲಿರುವಂತೆ ಮಾಡಲಾಗುತ್ತದೆ. ಆಗಿಂದಾಗ್ಗೆ ಸಾಕಷ್ಟು ನೀರು ಒದಗಿಸುತ್ತಿದ್ದು ತೀಕ್ಷ್ಣಬಿಸಿಲಿರುವಲ್ಲಿ ಸೊಪ್ಪು ಅಥವಾ ಹುಲ್ಲನ್ನು ಮಡಿಗಳ ಮೇಲೆ ಹರಡಿ ಸಸಿಗಳಿಗೆ ನೆರಳು ಒದಗಿಸಲಾಗುವುದು. ಕಾಯಿ ನೆಟ್ಟ 11-12 ವಾರಗಳಲ್ಲಿ ಮೊಳಕೆಯೊಡೆಯಲು ಆರಂಭಿಸುವುವು. 6 ತಿಂಗಳ ತರುವಾಯವೂ ಮೊಳಕೆಯೊಡೆಯದವನ್ನು ತೆಗೆದುಹಾಕಲಾಗುತ್ತದೆ. ಸಸಿಗಳನ್ನು ನಾಟಿ ಮಾಡಲಾಗುವ ಜಮೀನು ಸಾಧ್ಯವಾದಷ್ಟು ಮಟ್ಟಸವಾಗಿರುವಂತೆ ನೋಡಿಕೊಳ್ಳಲಾಗುತ್ತದೆ. ಜೌಗು ಮತ್ತು ತಗ್ಗು ಭೂಮಿಗಳಲ್ಲಿ ಸಾಕಷ್ಟು ಕಡಗು ತೆಗೆದು ಸಸಿ ಹಾಕುವುದು ರೂಢಿಯಲ್ಲಿರುವ ಕ್ರಮ. ಮರದಿಂದ ಮರಕ್ಕೆ 7.6-9.1ಮೀ ಅಂತರವಿರುವಂತೆ ಸಸಿಗಳನ್ನು ನಾಟಿ ಮಾಡಲಾಗುತ್ತದೆ. ಅಂತರ ಕಡಮೆಯಾದಲ್ಲಿ ಇಳುವರಿ ಕಡಿಮೆಯಾಗುತ್ತದೆ.

ತೆಂಗು ಸು.60 ವರ್ಷಗಳ ಕಾಲ ಫಲ ಕೊಡುತ್ತದೆ. ಅನಂತರ ಇಳುವರಿ ಕಡಿಮೆಯಾಗುತ್ತದೆ. ಆಗ ಹಳೆಯ ಮರಗಳ ಮಧ್ಯೆ ಎಡೆ (ಹೊಸ ಸಸಿಗಳನ್ನು) ನೆಡಲಾಗುತ್ತದೆ. ಇವು ಫಲಕ್ಕೆ ಬಂದಾಗ ಹಳೆಯ ಮರಗಳನ್ನು ತೆಗೆದುಹಾಕುವುದಿದೆ. ಎಡೆ ನೆಟ್ಟಾಗ ಹಳೆಯ ಹಾಗೂ ಹೊಸ ಗಿಡಗಳಿಗೆ ಸಾಕಷ್ಟು ಗೊಬ್ಬರ ಒದಗಿಸಬೇಕು.

ಕರ್ನಾಟಕದಲ್ಲಿ ತೆಂಗಿನ ಬೆಳೆಗೆ ಸುಳಿ ಕೊಳೆಯುವ ರೋಗ, ಎಲೆ ಕೊಳೆಯುವ ರೋಗ, ಎಲೆ ಮಚ್ಚೆ ಮತ್ತು ಚುಕ್ಕೆ, ಕಾಯಿ ಉದುರುವಿಕೆ, ಕಾಯಿ ಕೊಳೆ, ನುಸಿ ರೋಗ ಕಂಡುಬರುತ್ತವೆ. ಕೀಟಗಳಲ್ಲಿ ಆನೆಕೊಂಬಿನ ದುಂಬಿ ಅತ್ಯಂತ ವಿನಾಶಕಾರಿ ಪಿಡುಗು. ತೆಂಗಿನ ಸುಳಿಯಲ್ಲಿ ತೂತು ಉಂಟಾಗಿದ್ದಲ್ಲಿ ತುದಿ ಬಾಗಿರುವ ಕಬ್ಬಿಣದ ಕೊಂಡಿಯನ್ನು ಚುಚ್ಚಿ ಕೀಟವನ್ನು ಹೊರತೆಗೆದು ನಾಶಪಡಿಸಲಾಗುತ್ತದೆ. ಗೊಣ್ಣೆಹುಳು ಹಾಗೂ ಗೆದ್ದಲುಗಳು ಮಣ್ಣಿನೊಳಗೆ ವಾಸಿಸುವ ಇನ್ನಿತರ ಪಿಡುಗುಗಳು. ಮೂತಿಹುಳು, ತೆಂಗಿನ ಪತಂಗ, ನೊಣಗಳು, ಕೆಂಪಿರುವೆ, ಸಾಮಾನ್ಯ ಪೀಡಕಗಳು. ಇಲಿಗಳೂ ಬಾವಲಿಗಳೂ ತೆಂಗಿಗೆ ನಷ್ಟವುಂಟುಮಾಡುವುವು.

ತೆಂಗಿನಿಂದ ರಸವನ್ನು ನೇರವಾಗಿ ತೆಗೆದು ನೀರಾ ಎಂದು ಕುಡಿಯಲೂ ಅದನ್ನು ಕಾಯಿಸಿ ಬೆಲ್ಲ ಪಡೆಯಲೂ ಅಥವಾ ಹುಳಿ ಬರಿಸಿ ಹೆಂಡ ತಯಾರಿಸಲೂ ಉಪಯೋಗಿಸಲಾಗುತ್ತದೆ. ತೆಂಗಿನ ಹೆಂಡ ಇದರ ಸಂಬಂಧಿ ಸಸ್ಯಗಳದ್ದಕ್ಕಿಂತ ರುಚಿಕರವಾದದ್ದು. ಮರದಿಂದ ಯಾವ ತಿಂಗಳಲ್ಲಾದರೂ ರಸ ತೆಗೆಯಲು ಪ್ರಾರಂಭಿಸಿ ವರ್ಷವಿಡೀ ತೆಗೆಯಬಹುದು. ಮಳೆಗಾಲದಲ್ಲಿ ರಸ ಹೆಚ್ಚಾಗುತ್ತದೆ. ಹೊಂಬಾಳೆಯ ತಳಭಾಗ ಬಲಿಯತೊಡಗಿ ಅದರ ಬುಡ ದಪ್ಪವಾದಾಗ ತಳದಿಂದ ಮುಕ್ಕಾಲು ಭಾಗವನ್ನು ನಾರಿನಿಂದ ಬಿಗಿದು ಬೆಳಗ್ಗೆ-ಸಂಜೆ ಮೃದುವಾಗಿ ತಟ್ಟುತ್ತಿದ್ದು 6-7 ದಿನಗಳ ಅನಂತರ ತುದಿಯನ್ನು 19ಮಿಮೀ ನಷ್ಟು ಕೊಯ್ದು, ಎಲೆಚೂರನ್ನು ತುದಿಗೆ ಕೆಳಗೆ ವಾಲಿದಂತೆ ಸಿಕ್ಕಿಸಿ ತಟ್ಟುತ್ತಿದ್ದಲ್ಲಿ ರಸ ಸೋರಲು ಪ್ರಾರಂಭವಾಗುತ್ತದೆ. ಉತ್ತಮವಾಗಿ ರಸ ಒಸರಲು 10-20 ದಿನ ಬೇಕಾಗುತ್ತದೆ. ಬೆಳಗ್ಗೆ-ಸಂಜೆ ಮಡಕೆ ಕಟ್ಟಿ ಇದನ್ನು ಶೇಖರಿಸಲಾಗುತ್ತದೆ. ಕ್ರಮವರಿತು ರಸ ತೆಗೆದಲ್ಲಿ ಗಿಡಕ್ಕೆ ಹಾನಿಯಿಲ್ಲ. ಆದರೆ ದೀರ್ಘಕಾಲ ತೆಗೆಯುತ್ತಿದ್ದರೆ ಹಾನಿಯಾಗುತ್ತದೆ. ಕೆಲವು ಕರಟುಬಿದ್ದ ಮರಗಳಲ್ಲಿ ಹೆಚ್ಚು ರಸ ತೆಗೆಯಬಹುದೆಂದು ಕಂಡುಬಂದಿದೆ.

ತೆಂಗಿನ ಮರದ ಪ್ರತಿಯೊಂದು ಭಾಗವೂ ಉಪಯುಕ್ತ. ಕಾಯಿ, ಜುಂಗು (ನಾರು), ಚಿಪ್ಪು, ಹೊಂಬಾಳೆ, ಎಲೆ ಮತ್ತು ಕಾಂಡಭಾಗಗಳ ವಿವಿಧ ಉತ್ಪನ್ನಗಳು ಸಾಮಾನ್ಯ ಜನಜೀವನದ ನಿತ್ಯಬಳಕೆಯಲ್ಲಿ ಉಪಯುಕ್ತವಾಗಿವೆ. ಎಳನೀರು, ತೆಂಗಿನಕಾಯಿ, ಚಿಪ್ಪು, ಕೊಬ್ಬರಿ ಎಣ್ಣೆ ಮತ್ತು ಹಿಂಡಿ, ಜುಂಗಿನಿಂದ ಚಾಪೆ, ಜಮಖಾನೆ, ಹಗ್ಗಗಳನ್ನು ತಯಾರಿಸುವುದಿದೆ. ಅದರ ಪುಡಿ ಹಾಸಿಗೆ, ದಪ್ಪ ರಟ್ಟು ಮತ್ತು ಉರುವಲಾಗಿ ಉಪಯುಕ್ತವೆನಿಸಿದೆ. ಚಿಪ್ಪು ಪಾತ್ರೆಯಾಗಿ, ಸೌದೆಯಾಗಿ, ಚಿತ್ರಕೌಶಲ ವಸ್ತುಗಳಿಗಾಗಿ, ದಂತಚೂರ್ಣ ಮತ್ತು ಪೊಟ್ಯಾಷ್ ಗೊಬ್ಬರಕ್ಕಾಗಿ ಉಪಯುಕ್ತವಾಗುತ್ತಿದೆ. ತೆಂಗಿನ ರಸದಿಂದ ನೀರಾ, ಬೆಲ್ಲ, ಕೆಂಪುಸಕ್ಕರೆ, ಹೆಂಡ, ಸಾರಾಯಿ ಮತ್ತು ವಿನಿಗರ್ ಉತ್ಪನ್ನ ಮಾಡಲಾಗುತ್ತದೆ. ಎಲೆಗಳು ಮಾಡುಹೊದಿಕೆ, ತಟ್ಟೆ, ಮರಚು ಮತ್ತು ಪೊರಕೆಗಳಿಗೆ ಉಪಯುಕ್ತ. ಬಿದ್ದ ಹೊಂಬಾಳೆಗಳೂ ಎಲೆಯ ಬುಡ, ಗೊಂಚಲು ತಾಳುಗಳೂ ಉತ್ತಮ ಸೌದೆ. ಮರದ ಕಾಂಡದಿಂದ ತೊಲೆ, ತೀರು ತಯಾರಿಸಬಹುದು. ಕರ್ನಾಟಕದಲ್ಲಿ ಈ ಎಲ್ಲ ರೀತಿಯಲ್ಲೂ ತೆಂಗಿನ ಉಪಯೋಗವನ್ನು ಪಡೆಯುವುದು ಸಾಮಾನ್ಯವಾದದ್ದು. ಈ ನಾಡಿನ ಆರ್ಥಿಕತೆಯಲ್ಲಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸುವುದರಲ್ಲಿ ಇದರ ಪಾತ್ರ ಮುಖ್ಯವಾಗಿದೆ. (ಜಿ.ವಿ.ಬಿ.ಎಸ್.)

ಇಂದು ತೆಂಗಿನ ಬೆಳೆ ಕರ್ನಾಟಕದಲ್ಲಿ ವಿಶೇಷವಾಗಿ ಕಂಡುಬಂದರೂ ಈ ಮರ ಮೂಲತಃ ಈ ಪ್ರದೇಶದ್ದಲ್ಲ. ಇದು ಬಹುಶಃ ಶಾಂತಿಸಾಗರದ ದ್ವೀಪಗಳು, ಆಗ್ನೇಯ ಏಷ್ಯ ಈ ಪ್ರದೇಶದಿಂದ

ಬಂದಿರಬಹುದೆಂಬ ಅಭಿಪ್ರಾಯ ಇದೆ. ದಕ್ಷಿಣ ಭಾರತದ ಜನಪದ ಮತ್ತು ಧಾರ್ಮಿಕ ಆಚರಣೆಗಳಲ್ಲಿ ತೆಂಗಿನಕಾಯಿ, ಹೊಂಬಾಳೆ ಮಹತ್ತ್ವದ ಸ್ಥಾನ ಪಡೆದಿರುವುದರಿಂದ ಇದರ ಕೃಷಿ ಬಹಳ ಪ್ರಾಚೀನ ಕಾಲದಲ್ಲೇ ಪ್ರಾರಂಭವಾಗಿರಬೇಕು. ಅದರಲ್ಲೂ ಔತ್ತರೇಯ ವೈದಿಕ ಯಜ್ಞಯಾಗಾದಿಗಳ ಸಂಬಂಧದಲ್ಲಿ ಇದರ ಆಚರಣೆ ಕಾಣಿಸದೆ, ಆರ್ಯಪೂರ್ವ ಸಂಸ್ಕೃತಿಯ ಮುಂದುವರಿಕೆ ಎನ್ನಲಾಗುವ ದೇವಪೂಜಾವಿಧಾನದಲ್ಲಿ ಇದರ ಪಾತ್ರ ಮಹತ್ತ್ವದ್ದಾಗಿರುವುದು ಈ ಸಂದರ್ಭದಲ್ಲಿ ಗಮನಿಸಬೇಕಾದ ವಿಷಯ. ಮೂಲತಃ ಪಾಲಿನೇಷ್ಯ, ಆಗ್ನೇಯ ಏಷ್ಯ ಭಾಗದಿಂದ ಆಸ್ಟ್ರೊ ಏಷ್ಯಾಟಿಕ್ ಭಾಷೆಗಳನ್ನು ಆಡುತ್ತಿದ್ದ, ಆಸ್ಟ್ರಲಾಯಿಡ್ ವರ್ಗದ ಜನ ಪ್ರಾಗಿತಿಹಾಸ ಕಾಲದಲ್ಲಿ ಭಾರತಕ್ಕೆ ವಲಸೆ ಬಂದರೆಂದೂ ಬಹುಶಃ ಆ ಜನರೇ ತೆಂಗಿನ ಕೃಷಿಯನ್ನು ಸಹ ಇಲ್ಲಿ ರೂಢಿಸಿರಬೇಕೆಂದೂ ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆಸ್ಟ್ರಲಾಯಿಡ್ ವರ್ಗದ ಜನರ ಅವಶೇಷಗಳು ಕರ್ನಾಟಕದಲ್ಲಿ ನವಶಿಲಾಯುಗದ ಕಾಲದಿಂದಲೂ (ಕ್ರಿ.ಪೂ.ಸು.2500) ಕಂಡುಬಂದಿದೆಯಾದರೂ ಆ ಕಾಲದಲ್ಲಿ ಇಲ್ಲಿ ತೆಂಗಿನ ಕೃಷಿ ಇದ್ದ ಬಗ್ಗೆ ಸ್ಪಷ್ಟ ಮಾಹಿತಿಗಳು ದೊರಕಿಲ್ಲ. ಮುಂದೆ ಸು.4-5ನೆಯ ಶತಮಾನದಾರಭ್ಯ ಕರ್ನಾಟಕದ ಶಾಸನಗಳಲ್ಲಿ ತೆಂಗು, ತೆಂಗಿನ ತೋಟ ಇವುಗಳ ಬಗ್ಗೆ ಸ್ಪಷ್ಟ ಉಲ್ಲೇಖಗಳು ದೊರಕುತ್ತವೆ. *

**ತೆಕ್ಕಲಕೋಟೆ :** ಬಳ್ಳಾರಿ ಜಿಲ್ಲೆ ಶಿರಗುಪ್ಪ ತಾಲ್ಲೂಕಿನ ಒಂದು ಊರು. ಬಳ್ಳಾರಿಯಿಂದ 44ಕಿಮೀ ದೂರದಲ್ಲಿದೆ. ಇದು ನವ ಶಿಲಾಯುಗ ಕಾಲದ ಅವಶೇಷಗಳಿಗೆ ಪ್ರಸಿದ್ಧವಾಗಿದೆ. ವಿಜಯನಗರದ ಪತನಾನಂತರ ಈ ಗ್ರಾಮ ಬಳ್ಳಾರಿ ಮತ್ತು ಕುರುಗೋಡಿನ ಪಾಳೆಯಗಾರ ಬಾಲದ ಹನುಮಪ್ಪ ನಾಯಕ ಎಂಬುವನಿಗೆ ಕೊಡುಗೆಯಾಗಿ ಸೇರಿತ್ತು. ಆದವಾನಿಯ ಮಹಮ್ಮದೀಯ ಅಧಿಪತಿಗಳು ಈ ಗ್ರಾಮವನ್ನು ನಾಯಕ ಮನೆತನದವರಿಂದ ಕಸಿದುಕೊಂಡರು. 1775ರಲ್ಲಿ ಹೈದರ್‌ಅಲಿ ಈ ಗ್ರಾಮವನ್ನು ವಶಪಡಿಸಿಕೊಂಡು ಚೌಕಾಕಾರದ ಕೋಟೆಯನ್ನು ಕಟ್ಟಿಸಿದ.

ಗ್ರಾಮದ ನೈಋತ್ಯ ದಿಕ್ಕಿನಲ್ಲಿರುವ 'ಹುಡೇದ ಗುಡ್ಡ' ಎಂಬ ಗುಡ್ಡದಲ್ಲಿ ನವಶಿಲಾಯುಗದ 19 ವಾಸದ ನೆಲೆಗಳು ಬೆಳಕಿಗೆ ಬಂದಿವೆ.

1963-64ರಲ್ಲಿ ಇಲ್ಲಿ ನಡೆಸಿದ ಭೂಶೋಧನೆಯಿಂದ ಕರ್ನಾಟಕದ ನವಶಿಲಾಯುಗದ ಜನಜೀವನದ ಬಗ್ಗೆ ಉತ್ತಮವಾದ ಮಾಹಿತಿ ದೊರೆತಿದೆ. ಇಂಗಾಲ-14 ಕಾಲಮಾಪನದ ಪ್ರಕಾರ ತೆಕ್ಕಲಕೋಟೆಯ ನೂತನ ಶಿಲಾಯುಗದ ಕಾಲ ಕ್ರಿ.ಪೂ.1700ರಿಂದ ಕ್ರಿ.ಪೂ.1000ದವರೆಗೆ ಎಂದು ಹೇಳಬಹುದು. ಇಲ್ಲಿ ದೊರೆತ ಸಾಂಸ್ಕೃತಿಕ ಅವಶೇಷಗಳ ಆಧಾರದ ಮೇಲೆ ನೂತನ ಶಿಲಾಯುಗ ಸಂಸ್ಕೃತಿಯಲ್ಲಿ ಎರಡು ಘಟ್ಟಗಳನ್ನು ಕಾಣಬಹುದು.

ಮೊದಲನೆಯ ಘಟ್ಟ ಈ ಸ್ಥಳದ ಅತ್ಯಂತ ಪ್ರಾಚೀನ ಕಾಲಕ್ಕೆ ಸೇರಿದ್ದು. ಈ ಕಾಲದ ನುಣುಪಾಗಿ ಮಾಡಿದ ಕಲ್ಲಿನ ಕೊಡಲಿಗಳು, ಚಕಮುಕಿ ಕಲ್ಲಿನಲ್ಲಿ ಮಾಡಿದ ಆಯುಧಗಳು, ಬಂಗಾರದ ಆಭರಣಗಳು, ತಾಮ್ರದ, ಎಲುಬಿನ ಆಯುಧಗಳು ಹಾಗೂ ಅನೇಕ ವಿಧವಾದ ಮಣಿಗಳು, ಕಂದುಬಣ್ಣದ ನುಣುಪಾದ ಮೃತ್ಪಾತ್ರೆಗಳು ದೊರೆತಿವೆ. ಕೆಲವು ವೇಳೆ ಈ ಮಡಕೆಗಳನ್ನು ಸುಟ್ಟ ಅನಂತರ ಕೆಂಪುಮಣ್ಣನ್ನು ಅಂಚುಗಳಲ್ಲಿ ಸವರಿ ಅವನ್ನು ಅಲಂಕರಿಸಿರುವುದು ಕಂಡುಬರುತ್ತದೆ. ಈ ಕಾಲದ ಕೆಲವು ಸಮಾಧಿಗಳು ಸಹ ದೊರೆತಿವೆ.

ಇಲ್ಲಿನ ನವಶಿಲಾಯುಗದ ಎರಡನೆಯ ಘಟ್ಟದಲ್ಲಿ ಕೆಲವು ವೈಶಿಷ್ಟ್ಯಗಳು ಕಂಡುಬರುತ್ತವೆ. ಈ ಕಾಲದಲ್ಲಿ ತಾಮ್ರವಸ್ತುಗಳೂ ಕಲ್ಲಿನ ನುಣುಪಾದ ಕೊಡಲಿಗಳೂ ಚಕಮುಕಿ ಕಲ್ಲಿನ ಆಯುಧಗಳೂ ಹೆಚ್ಚು ಹೆಚ್ಚಾಗಿ ದೊರೆಯುತ್ತವೆ. ಆದರೆ ಅತಿ ಪ್ರಮುಖ ಬದಲಾವಣೆಗಳು ಮೃತ್ಪಾತ್ರೆಗಳಲ್ಲಿ ಕಂಡುಬರುತ್ತವೆ. ಕೆಂಪು ಸುದ್ದೆಯಿಂದ ಲೇಪಿತವಾದ ಕಂದುಪಾತ್ರೆಗಳು ಕಡಿಮೆಯಾಗುತ್ತವೆ. ಕೆಂಪು ಹಾಗೂ ಕಪ್ಪುವರ್ಣದ ಚಿತ್ರಿತ ಪಾತ್ರೆಗಳು ಹೊಸದಾಗಿ ಕಂಡುಬರುತ್ತವೆ. ಅಲ್ಲದೆ, ಶ್ವೇತವರ್ಣದಿಂದ ಚಿತ್ರಿತವಾದ ಕಪ್ಪು-ಕೆಂಪಿನ ಬಟ್ಟಲುಗಳು ದೊರೆಯುತ್ತವೆ. ಈ ಕಾಲದ ಅನೇಕ ಸಮಾಧಿಗಳು ಸಹ ದೊರೆತಿವೆ.

ತೆಕ್ಕಲಕೋಟೆಯ ಭೂಶೋಧನೆಯ ಫಲವಾಗಿ, ನವಶಿಲಾಯುಗದ ಜನಜೀವನವನ್ನು ಕ್ರಿ.ಪೂ.1700ರಿಂದ ಚಿತ್ರಿಸಬಹುದು. ಈ ಜನರು ಗುಡ್ಡ ಪ್ರದೇಶದಲ್ಲಿ ವಾಸಿಸುತ್ತಿದ್ದರು; ಗುಡ್ಡದ ಬಂಡೆಗಳು ಸ್ವಾಭಾವಿಕವಾದ ಕೋಟೆಗಳಂತಿದ್ದು ಇದರಿಂದ ಆ ಜನರಿಗೆ ರಕ್ಷಣೆ ದೊರೆಯುತ್ತಿದ್ದಿತು. ಗುಡ್ಡದ ತಪ್ಪಲು ವ್ಯವಸಾಯಕ್ಕೆ ಅನುಕೂಲವಾಗಿದ್ದಿತು. ಸಂಶೋಧನೆಯಲ್ಲಿ ಗುಡಿಸಲುಗಳ ಅವಶೇಷಗಳು ದೊರೆತಿವೆ. ಈ ಕಾಲದಲ್ಲಿ ದುಂಡು ಗುಡಿಸಲುಗಳಿದ್ದುವು. ಅವುಗಳ ಗೋಡೆಗೆ ಹೆಣೆದ ಬೊಂಬಿನ ಚಾಪೆಗಳನ್ನಿಟ್ಟು, ಮಣ್ಣಿನಿಂದ ಮೆತ್ತುತ್ತಿದ್ದರು. ಅಲ್ಲಲ್ಲಿ ಬೊಂಬಿನ ಕಂಬಗಳನ್ನು ನೆಟ್ಟು ಗೋಡೆಯನ್ನು ಗಟ್ಟಿ ಮಾಡುತ್ತಿದ್ದರು. ಗುಡಿಸಿಲಿನ ಒಳಭಾಗದ ನೆಲವನ್ನು ಗಟ್ಟಿಮಾಡಿ, ಆಗಾಗ್ಗೆ ಸಾರಿಸುತ್ತಿದ್ದರು. ಗುಡಿಸಿಲಿನ ಗೋಡೆ ಗಟ್ಟಿಯಾಗಿರಲೆಂದು, ಹೊರಭಾಗದಲ್ಲಿ ಕಲ್ಲುಗುಂಡುಗಳನ್ನು ಆಸರೆಯಾಗಿ, ಸುತ್ತಲೂ ಜೋಡಿಸುತ್ತಿದ್ದರು. ಇಂತಹ ಗುಡಿಸಲುಗಳ, ಅವಶೇಷಗಳು ಉತ್ಖನನದಲ್ಲಿ ದೊರೆತಿವೆ.

ಈ ಕಾಲದಲ್ಲಿ ತಿಗರಿಯ (ಕುಂಬಾರನ ಚಕ್ರ) ಉಪಯೋಗ ಇರಲಿಲ್ಲ. ಮಡಕೆಗಳನ್ನು ಕೈಯಿಂದಲೇ ರೂಪಿಸುತ್ತಿದ್ದರು. ಕಾಳುಗಳನ್ನು ಶೇಖರಿಸಲು ದೊಡ್ಡ ರಂಜಣಿಗೆಗಳು, ದುಂಡು ಮಡಕೆಗಳು ಮತ್ತು ಬಟ್ಟಲುಗಳು ದೊರೆತಿವೆ. ಕೆಲವು ಪಾತ್ರೆಗಳ ತಳಭಾಗದಲ್ಲಿ ರಂಧ್ರಗಳು ಕಂಡುಬಂದಿವೆ. ದೊಡ್ಡ ಮಡಕೆಗಳನ್ನು ಸಮಾಧಿಗಳಲ್ಲೂ ಉಪಯೋಗಿಸುತ್ತಿದ್ದರು. ಕಪ್ಪು ಮತ್ತು ಕೆಂಪು ಬಣ್ಣದ ಬಟ್ಟಲುಗಳನ್ನು ವಿಶೇಷವಾಗಿ, ಸಮಾಧಿಗಳಲ್ಲಿ ಉಪಯೋಗಿಸುತ್ತಿದ್ದರು. ಉತ್ಖನನದಲ್ಲಿ ಆಕಳು, ಕುರಿ, ಜಿಂಕೆ, ಅಳಿಲು ಮತ್ತು ಇಲಿಗಳ ಎಲುಬುಗಳು ದೊರಕಿವೆ. ಕೆಲವು ಪ್ರಾಣಿಗಳನ್ನು ಆಹಾರಕ್ಕಾಗಿ ಉಪಯೋಗಿಸಿದ್ದಿರಬಹುದು. ಅನೇಕ ಸುಟ್ಟ ಎಲುಬುಗಳು ದೊರೆತಿರುವುದರಿಂದ, ಮಾಂಸವನ್ನು ಬೇಯಿಸಿ ತಿನ್ನುತ್ತಿದ್ದರೆಂದು ಹೇಳಬಹುದು. ಈ ಜನ ವ್ಯವಸಾಯವನ್ನೂ ಮಾಡುತ್ತಿದ್ದರು. ಉತ್ಖನನದಲ್ಲಿ ಆ ಕಾಲದ ಹುರುಳಿಕಾಳು ದೊರೆತಿರುವುದು ಇದಕ್ಕೆ ಸಾಕ್ಷಿ.

ನುಣುಪುಕಲ್ಲಿನ ಕೈಗೊಡಲಿಗಳು ಮತ್ತು ಚಕಮುಕಿ ಕಲ್ಲಿನ ಹರಿತವಾದ ಸಣ್ಣ ಆಯುಧಗಳನ್ನು ಇಲ್ಲೇ ತಯಾರಿಸಿಕೊಳ್ಳುತ್ತಿದ್ದರು. ಇವಲ್ಲದೆ ಎಲುಬಿನ ಆಯುಧಗಳು, ತಾಮ್ರದ ಕೊಡಲಿ ಮತ್ತು ಮೀನಿನ ಗಾಳಗಳು ದೊರೆತಿವೆ. ಇಲ್ಲಿ ಸಿಕ್ಕಿರುವ ಸುಟ್ಟ ಮಣ್ಣಿನ, ಎಲುಬಿನ ಮತ್ತು ಹರಳಿನ ಮಣಿಗಳು ನವಶಿಲಾಯುಗದ ಜನರು ಅಲಂಕಾರಪ್ರಿಯರು ಎಂಬುದನ್ನು ತೋರಿಸುತ್ತದೆ. ಚಿನ್ನದ ಕಿವಿಯ ಆಭರಣಗಳೂ ದೊರೆತಿವೆ. ಇಲ್ಲಿ ದೊರೆತ ಒಂದು ಮಣ್ಣಿನ ಮುಚ್ಚಳಿಕೆಯ ಮೇಲೆ ಎರಡು ನವಿಲುಗಳು, ಹಾವು, ಗೂಳಿ ಮತ್ತು ಜಿಂಕೆಗಳನ್ನು ಚುಚ್ಚು ಚಿತ್ರವಾಗಿ ಚಿತ್ರಿಸಿದ್ದಾರೆ. ಇದು ಕರ್ನಾಟಕದಲ್ಲಿ ದೊರೆತಿರುವ ಅತಿ ಪ್ರಾಚೀನ ಕಲಾಕೃತಿಗಳಲ್ಲೊಂದು.

ತೆಕ್ಕಲಕೋಟೆಯ ನವಶಿಲಾಯುಗದ ಪ್ರಥಮ ಘಟ್ಟದ ಜನರು ಹೆಣವನ್ನು ಕೆಲವು ಕಾಲ ಹೊರಗಿಟ್ಟು ಅನಂತರ ತಲೆಬುರುಡೆ, ಕೈಕಾಲುಗಳ ಎಲುಬುಗಳನ್ನು ಶೇಖರಿಸಿ, ಗುಂಡಿಯಲ್ಲಿ ಹೂಳುತ್ತಿದ್ದರೆಂದು ಕಾಣಬರುತ್ತದೆ. ಇಂಥ ಒಂದು ಸಮಾಧಿಯಲ್ಲಿ ಮೂವರು ವ್ಯಕ್ತಿಗಳ ಅಸ್ಥಿ ಅವಶೇಷಗಳು ಕಂಡುಬಂದುವು. ಇದರ ಬದಿಯಲ್ಲೇ ದೊರೆತ ಮತ್ತೊಂದು ಸಮಾಧಿಯಲ್ಲಿ ಪೀಠವುಳ್ಳ ಬಟ್ಟಲನ್ನು ತಲೆಯ ಬಳಿ ಇಟ್ಟಿದ್ದರು.

ನವಶಿಲಾಯುಗದ ಎರಡನೆಯ ಘಟ್ಟದಲ್ಲಿ ಶವಸಂಸ್ಕಾರ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯಾದಂತೆ ಕಂಡುಬರುತ್ತದೆ. ಈ ಜನ ಪೂರ್ಣ ಶವವನ್ನೇ ಗುಂಡಿಯಲ್ಲಿ ಹೂಳುತ್ತಿದ್ದರು. ಅದೇ ಗುಂಡಿಯಲ್ಲಿ ಅನೇಕ ಪಾತ್ರೆಗಳನ್ನು ಇಡುತ್ತಿದ್ದರು. ವಿಶೇಷವೆಂದರೆ ಕಪ್ಪು ಮತ್ತು ಕೆಂಪು ವರ್ಣದ ಬಟ್ಟಲುಗಳನ್ನು ತಪ್ಪದೆ ಇಡುತ್ತಿದ್ದರು. ಕೆಲವು ನಿದರ್ಶನಗಳಲ್ಲಿ, ಇಂಥ ಕಪ್ಪು-ಕೆಂಪು ಬಟ್ಟಲುಗಳು ಶ್ವೇತವರ್ಣರೇಖೆಗಳಿಂದ ರಂಜಿತವಾಗಿರುತ್ತಿದ್ದವು. ಅಲ್ಲದೆ, ಶವಗಳನ್ನು ಅಡ್ಡಡ್ಡವಾಗಿ ತಳ ಒಡೆದು ಸಾಲಾಗಿ ಜೋಡಿಸಿದ ಮಡಕೆಗಳಲ್ಲಿಟ್ಟು, ಗುಂಡಿಗಳಲ್ಲಿ ಹೂಳುವ ನಿದರ್ಶನಗಳೂ ತೆಕ್ಕಲಕೋಟೆಯಲ್ಲಿ ಇವೆ. ವಯಸ್ಕರನ್ನು 5 ಮಡಕೆಗಳಲ್ಲಿಯೂ ಮಕ್ಕಳನ್ನು ಒಂದು ಅಥವಾ ಎರಡು ಮಡಕೆಗಳಲ್ಲಿಯೂ

ಸಮಾಧಿ ಮಾಡಿರುವುದು ಇಲ್ಲಿ ಕಂಡುಬಂದಿವೆ. ಈ ಗುಂಡಿಗಳಲ್ಲಿಯೂ ಮಣ್ಣಿನ ಪಾತ್ರೆಗಳನ್ನು ಜೋಡಿಸುತ್ತಿದ್ದರು.

ಎಲ್ಲ ಸಮಾಧಿಗಳೂ ಜನ ವಾಸಮಾಡುತ್ತಿದ್ದಲ್ಲಿಯೇ ಕಂಡುಬಂದಿವೆ. ಕೆಲವು ವೇಳೆ ಅವರು ವಾಸಿಸುತ್ತಿದ್ದ ಗುಡಿಸಿಲಿನ ನೆಲದಲ್ಲಿಯೇ ಅವನ್ನು ಹುಗಿದಿದ್ದಾರೆ. ಸಮಾಧಿ ಮಾಡಿ ಗುಂಡಿಗಳಲ್ಲಿ ಬಹುಶಃ ಆಹಾರಪೂರಿತ ಪಾತ್ರೆಗಳನ್ನು ಹೂಳುತ್ತಿದ್ದುದು, ಇವರಿಗೆ ಮರಣೋತ್ತರ ಜೀವನದಲ್ಲಿ ನಂಬಿಕೆ ಇತ್ತೆಂಬುದನ್ನು ತೋರಿಸುತ್ತದೆ. ಇಂಥ ಸಮಾಧಿಗಳು ಮಹಾರಾಷ್ಟ್ರದ ಸಮಕಾಲೀನ ಸಾಂಸ್ಕೃತಿಕ ಅವಶೇಷಗಳನ್ನು ಹೊಂದಿರುವ ಬಹಾಳ-ಟೇಕವಾಡ, ನೆವಾಸ, ದಾಯಿಮಾಬಾದ್ ಮತ್ತು ಚಂದೋಳಿಗಳಲ್ಲಿ ದೊರೆತಿವೆ. ಇವುಗಳ ಆಧಾರದ ಮೇಲೆ ಕರ್ನಾಟಕದ ನವಶಿಲಾಯುಗದ ಜನಾಂಗಕ್ಕೂ ಮಹಾರಾಷ್ಟ್ರದ ತಾಮ್ರ-ಪಾಷಾಣಯುಗದ ಜನಾಂಗಕ್ಕೂ ಪರಸ್ಪರ ಸಾಂಸ್ಕೃತಿಕ ಸಂಬಂಧವಿತ್ತೆಂದು ಊಹಿಸಬಹುದು.

ತೆಕ್ಕಲಕೋಟೆಯ ಗುಡ್ಡದಲ್ಲಿ ಅನೇಕ ಸ್ವಾಭಾವಿಕ ಗುಹೆಗಳಿವೆ. ಅವುಗಳನ್ನು ನವಶಿಲಾಯುಗದ ಜನರು ಉಪಯೋಗಿಸುತ್ತಿದ್ದರೆಂಬುದಕ್ಕೆ ಆ ಗುಹೆಗಳಲ್ಲಿ ಇರುವ ಕೆಂಪುಮಣ್ಣಿನ ಚಿತ್ರಗಳೇ ಸಾಕ್ಷಿ. ಅಲ್ಲಿ ಚಿತ್ರಿಸಿರುವುದು ಗೂಳಿಗಳು ಮತ್ತು ಮಾನವರನ್ನು. ಇವು ಶೈಲಿಯಲ್ಲಿ ತಾಮ್ರ ಶಿಲಾಯುಗದ ಮಡಕೆಗಳ ಮೇಲಿರುವ ಚಿತ್ರಗಳನ್ನು ಹೋಲುತ್ತವೆ.

ತೆಕ್ಕಲಕೋಟೆಯ ಮತ್ತೊಂದು ವೈಶಿಷ್ಟ್ಯವೆಂದರೆ ಇಲ್ಲಿನ ನವಶಿಲಾಯುಗದ ಅನೇಕ ಸಾಂಸ್ಕೃತಿಕ ಅಂಶಗಳು ಇಂದಿಗೂ ಈ ಸ್ಥಳದಲ್ಲಿ ವಾಸವಾಗಿರುವ ಆದಿವಾಸಿ ಬೇಟೆಗಾರರಾದ ಬೋಯ ಜನಾಂಗದವರಲ್ಲಿ ಉಳಿದಿರುವುದು. ಈ ಜನ ಪ್ರತಿವರ್ಷವೂ ಯುಗಾದಿ ಹಬ್ಬದಂದು ಹುಡೇದ ಗುಡ್ಡಕ್ಕೆ ಬೇಟೆಗಾಗಿ ಹೋಗಿ ಮೊಲ ಮುಂತಾದುವುಗಳನ್ನು ಬೇಟೆಯಾಡಿ, ಸಂಜೆಗೆ ಸಾಮೂಹಿಕ ನೃತ್ಯ ಮಾಡಿ, ಬೇಟೆ ಮಾಡಿದ ಪ್ರಾಣಿಗಳನ್ನು ಸಾಮೂಹಿಕವಾಗಿ ಭುಜಿಸುತ್ತಾರೆ. ಇದೇ ವಸ್ತುವಾಗುಳ್ಳ, ಸುಮಾರು ನವಶಿಲಾಯುಗ ಕಾಲದ ಒಂದು ವರ್ಣಚಿತ್ರ ತೆಕ್ಕಲಕೋಟೆಯ ಗುಹೆಯೊಂದರಲ್ಲಿ ಇದೆ. ಇದರಲ್ಲಿ ಮುಖ್ಯಸ್ಥನೊಬ್ಬನು ಒಂದು ಪ್ರಾಣಿಯ ಮೇಲೆ ಕುಳಿತು ಬೇಟೆಗೆ ಹೊರಟಿದ್ದಾನೆ. ಅನಂತರ ಕೈಕೈಹಿಡಿದು ಸಾಮೂಹಿಕ ನೃತ್ಯ ಮಾಡುತ್ತಿರುವ ಚಿತ್ರವಿದೆ. ಈ ಚಿತ್ರದಲ್ಲಿ ಚಿತ್ರಿಸಿರುವಂತೆ, ಮನುಷ್ಯರ ಚಿತ್ರಗಳನ್ನು ಬೋಯ ಗುಡಿಸಿಲಿನ ಹೊರಗೆ ಕೆಂಪು ಮಣ್ಣಿನಿಂದ ಇಂದಿಗೂ ಚಿತ್ರಿಸುತ್ತಾರೆ. ಈ ಚಿತ್ರದ ವ್ಯಕ್ತಿಗಳು ದುಷ್ಟಶಕ್ತಿಗಳನ್ನು ಗುಡಿಸಿಲಿನಿಂದ ಹೊರಗಿಡುತ್ತಾರೆಂಬುದು ಅವರ ನಂಬಿಕೆ. ಬೋಯ ಜನರ ಗುಡಿಸಿಲುಗಳು ಸಹ ತೆಕ್ಕಲಕೋಟೆಯ ನವ ಶಿಲಾಯುಗ ಕಾಲದ ಗುಡಿಸಿಲುಗಳಂತೆಯೇ ಇವೆ. ಅವುಗಳೂ ದುಂಡಾಕಾರವಾಗಿದ್ದು ಒಳಭಾಗ, ಗೋಡೆ ಮತ್ತು ನೆಲ ಮಣ್ಣಿನಿಂದ ಸಾರಿಸಲ್ಪಡುತ್ತವೆ. ಚಾಪೆ ಅಥವಾ ಜೊಂಡಿನಿಂದ ಮಾಡಿದ ಗೋಡೆಯನ್ನು ಭದ್ರವಾಗಿರಿಸಲು ಕಲ್ಲು ಗುಂಡುಗಳನ್ನು ಗುಡಿಸಿಲಿನ ಸುತ್ತಲೂ ದುಂಡಾಕಾರವಾಗಿ ಜೋಡಿಸುತ್ತಾರೆ. ಈ ರೀತಿಯ ಹಲವು ಸಾಂಸ್ಕೃತಿಕ ಅಂಶಗಳು ತೆಕ್ಕಲಕೋಟೆಯ ಬೋಯ ಜನಾಂಗದಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವುದು. ಆ ಜನರೇ ನವಶಿಲಾಯುಗದ ಜನಾಂಗದ ಆನುವಂಶಿಕರೆಂದು ಊಹೆ ಮಾಡಲು ಅವಕಾಶ ಒದಗಿಸಿದೆ.

ಬಹು ಪ್ರಾಚೀನವಾದ ನವಶಿಲಾಯುಗದ ಸಂಸ್ಕೃತಿಯ ಬಗ್ಗೆ ಹೊಸ ಬೆಳಕನ್ನೂ ಕರ್ನಾಟಕದ ಜನಪದ ಸಂಪ್ರದಾಯಗಳ ಪ್ರಾಚೀನತೆಯ ಬಗ್ಗೆ ಕುರುಹನ್ನೂ ಒದಗಿಸಿರುವ ತೆಕ್ಕಲಕೋಟೆಯ ಪ್ರಾಗೈತಿಹಾಸಿಕ ಅಧ್ಯಯನ ಕರ್ನಾಟಕದಲ್ಲಿ ಇತ್ತೀಚೆಗೆ ನಡೆದಿರುವ ಒಂದು ಮುಖ್ಯ ಸಂಶೋಧನ ಕಾರ್ಯವಾಗಿದೆ. (ಎಂ.ಎಸ್.ಎನ್.ಆರ್.)

**ತೆರಕಣಾಂಬಿ :** ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಸಬೆಯಿಂದ 11ಕಿಮೀ ದೂರದಲ್ಲಿ ಚಾಮರಾಜನಗರದ ರಸ್ತೆಯಲ್ಲಿರುವ ಊರು. ಇದೇ ಹೆಸರಿನ ಹೋಬಳಿಯ ಮುಖ್ಯ ಸ್ಥಳ. ದ್ರಾವಿಡ, ಕೇರಳ ಮತ್ತು ಹದಿನಾಡು ಅಥವಾ ದಕ್ಷಿಣ ಕರ್ನಾಟಕ ಇಲ್ಲಿ ಕೂಡುತ್ತಿದ್ದುದರಿಂದ ಇದು ಕೂಡುಗಲ್ಲೂರು ಎಂದೂ ತ್ರಿಕದಂಬಪುರ ಎಂದೂ ಹೆಸರಾಯಿತೆಂದು ಪ್ರತೀತಿ. ಆರನೆಯ ಶತಮಾನದಲ್ಲಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಆಳುತ್ತಿದ್ದ ಕದಂಬ ವಂಶದ ತ್ರಿನೇತ್ರ ಕದಂಬ (ಲಂಬಕರ್ಣರಾಯ) ಎಂಬುವನು ಈ ಕೂಡು ಸ್ಥಳದಲ್ಲಿ ತ್ರಿಕದಂಬ ಅಥವಾ ಮುಕ್ಕಣ್ಣನ (ಶಿವ) ದೇವಾಲಯವನ್ನು ಕಟ್ಟಿಸಿದ್ದ. ಈ ಕಾರಣದಿಂದ ಈ ಊರಿಗೆ ತೆರಕಣಾಂಬಿ ಹೆಸರು ಬಂತು ಎಂಬುದೂ ಒಂದು ಅಭಿಪ್ರಾಯ.

ತೆರಕಣಾಂಬಿಯಲ್ಲಿ ಶಿವಸಮುದ್ರದ ಮಾಧವರಾಯ ಆಳುತ್ತಿದ್ದ ಎನ್ನಲಾಗಿದೆ. ಹೊಯ್ಸಳ ರಾಜ್ಯದಲ್ಲಿದ್ದ ಈ ಊರನ್ನು ಅನಂತರ ವಿಜಯನಗರದ ಹರಿಹರ ವಿಸ್ತರಿಸಿದ. 16ನೆಯ ಶತಮಾನದಲ್ಲಿ ಈ ಊರು ಉಮ್ಮತ್ತೂರಿನ ನಾಯಕನ ವಶದಲ್ಲಿತ್ತು. ತರುವಾಯ ಇದರ ಸುತ್ತಮುತ್ತಲ ಪ್ರದೇಶವು ತೆಲುಗುಮೂಲದ ದಾಳಿಕೋರರ ಲೂಟಿಗೆ ಒಳಗಾಯಿತು. 1624ರಲ್ಲಿ ಇದು ಮೈಸೂರಿನ ರಾಜ ಒಡೆಯರ ಅಧೀನಕ್ಕೊಳಪಟ್ಟಿತು. ಈ ಕಾಲದಲ್ಲಿ ಇದರ ಮಹತ್ತ್ವ ಕುಗ್ಗುತ್ತ ಬಂದು ಗುಂಡ್ಲುಪೇಟೆ ಮುಖ್ಯ ಸ್ಥಳವಾಯಿತು. ಹಾಗೆಯೇ ಇದು ಇಬ್ಭಾಗವಾಗಿ ಅವಲ್ ತೆರಕಣಾಂಬಿ ಮತ್ತು ದುಯಂ ತೆರಕಣಾಂಬಿ ಎಂದಾಯಿತು. ಪೂರ್ಣಯ್ಯನವರು ಇವೆರಡನ್ನೂ ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿಸಿದರು. 1747ರಲ್ಲಿ ಮರಾಠರು ಈ ಊರಿನ ಕೋಟೆಯನ್ನು ನಾಶಪಡಿಸಿದರು. ಇಂದೂ ಸಹ ಐದು ಪ್ರಾಕಾರದ ಭಗ್ನಕೋಟೆ, ಹಳೆಯ ಅರಮನೆಯ ನಿವೇಶನ ಉಳಿದಿವೆ. ಅರಮನೆ ಆರು ಮಹಡಿಗಳಿಂದ ಕೂಡಿತ್ತೆಂದು ಸ್ಥಳೀಯ ಐತಿಹ್ಯ. ಉಮ್ಮತ್ತೂರು ನಾಯಕರುಗಳು ಬರೆಸಿದ ಶಾಸನಗಳು (1489-1504) ಮತ್ತು ಕೃಷ್ಣದೇವರಾಯನ ಒಂದು ಶಾಸನ (1520) ಇಲ್ಲಿ ದೊರೆತಿವೆ.

ತೆರಕಣಾಂಬಿಯಲ್ಲಿ 12 ದೇವಾಲಯಗಳ ಅವಶೇಷಗಳಿವೆ. ಮುಖ್ಯದೇವಾಲಯ ಲಕ್ಷ್ಮೀವರದರಾಜ ಸ್ವಾಮಿಯದು. ಇದು ಸುಂದರವಾದ ಕಂಬಗಳಿರುವ ದ್ರಾವಿಡ ಶೈಲಿಯ ಕಟ್ಟಡ. ಮುಮ್ಮಡಿ ಕೃಷ್ಣರಾಜ ಒಡೆಯರು ಇದರ ವಿಗ್ರಹವನ್ನು ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನಕ್ಕೆ ಸಾಗಿಸಿ, ಬದಲಿಯಾಗಿ ಬೇರೊಂದನ್ನು ಮಾಡಿಸಿಕೊಟ್ಟಿದ್ದಾರೆ. ಬಾಲಕೃಷ್ಣ, ಬಾಲಬಲರಾಮ, ಕೃಷ್ಣನಿಗೆ ಹಾಲೂಡಿಸುತ್ತಿರುವ ಯಶೋಧೆ - ಈ ಕಂಚಿನ ಶಿಲ್ಪಗಳು ದೇವಾಲಯದಲ್ಲಿವೆ.

ಸುಗ್ರೀವ ದೇವಾಲಯದಲ್ಲಿ 6 ಅಡಿ ಎತ್ತರದ ಸುಗ್ರೀವನ ವಿಗ್ರಹವಿದೆ. ಹನುಮಂತ ದೇವಾಲಯ ಉತ್ತಮ ವಾಸ್ತುಕೃತಿ. 1640ರಲ್ಲಿ ಒಬ್ಬ ವ್ಯಾಪಾರಿ ಇದನ್ನು ಕಟ್ಟಿಸಿದ. ಈ ಊರಿನ ಸುತ್ತಮುತ್ತ ಅನೇಕ ಕೆರೆಗಳಿದ್ದುದು ಹಾಗೂ ರಾಮಭದ್ರ ದೇವಾಲಯದ ಬೃಹತ್ ಅವಶೇಷ ಈಗಲೂ ಕಂಡುಬರುತ್ತದೆ. ಪ್ರತಿ ಗುರುವಾರ ತೆರಕಣಾಂಬಿಯಲ್ಲಿ ದೊಡ್ಡ ಸಂತೆ ನಡೆಯುತ್ತದೆ. (ಕೆ.ಎಸ್.ಎನ್.)

**ತೆರಕಣಾಂಬಿಯ ಬೊಮ್ಮರಸ :** ಸು.1485. ಜೈನಕವಿ. ಸನತ್ಕುಮಾರ ಚರಿತೆ, ಜೀವಂಧರಸಾಂಗತ್ಯ ಎಂಬ ಕಾವ್ಯಗಳ ಕರ್ತೃ. ಮೈಸೂರು ಜಿಲ್ಲೆಯ ತೆರಕಣಾಂಬಿ ಈತನ ಜನ್ಮಸ್ಥಳ. ವಿಜಯನಗರದ ಪ್ರೌಢರಾಯನ (1424-46) ಆಸ್ಥಾನದ ವಿದ್ವಾಂಸರನ್ನು ವಾದದಲ್ಲಿ ಸೋಲಿಸಿದನೆಂದು ಕವಿ ಹೇಳಿರುವ ನೇಮಿಚಂದ್ರ ಈತನ ಅಜ್ಜ, ತಂದೆ ಬೊಮ್ಮರಸೋಪಾಧ್ಯಾಯ.

ಸನತ್ಕುಮಾರಚರಿತೆ ಭಾಮಿನೀಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 17 ಸಂಧಿ, 870 ಪದ್ಯ ಇವೆ. ಹಸ್ತಿನಾಪುರದ ರಾಜ ವಿಶ್ವಸೇನನ ಮಗ ಸನತ್ಕುಮಾರನ ಕಥೆ ಕಾವ್ಯವಸ್ತು. ಕಥಾನಿರೂಪಣೆ ನೇರವಾಗಿದೆ, ವರ್ಣನೆಗಳು ಸುಂದರವಾಗಿವೆ. ಅದರಲ್ಲೂ ಭಕ್ಷ್ಯಭೋಜ್ಯಗಳನ್ನು ಕುರಿತ ವರ್ಣನೆಗಳಂತೂ ಮನೋಹರವಾಗಿವೆ.

ಜೀವಂಧರಸಾಂಗತ್ಯ ಸಾಂಗತ್ಯ ಗ್ರಂಥ. ಇದರಲ್ಲಿ 20 ಸಂಧಿಗಳೂ 1,494 ಪದ್ಯಗಳೂ ಇವೆ. ರಾಜಪುರಿಯ ಸತ್ಯಂಧರ ರಾಜನ ಮಗ ಜೀವಂಧರನ ಚರಿತ್ರೆ ಕಾವ್ಯವಸ್ತು. ಭಾಸ್ಕರನ (ಸು.1424) ಜೀವಂಧರಚರಿತೆ ಹಾಗೂ ವಾದೀಭಸಿಂಹ ಸೂರಿಯ ಸಂಸ್ಕೃತ ಜೀವಂಧರಚರಿತೆ ಈ ಕಾವ್ಯಕ್ಕೆ ಆಕರಗಳು. ಸಾಂಗತ್ಯ ಶೈಲಿ ಸರಸವೂ ಸರಳವೂ ಆಗಿದೆ. (ಎಂ.ಎಚ್.ಕೆ.)

**ತೆಲುಗು ಜಂಗಮರು :** ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ಕಾಣಸಿಗುವ ಲೌಕಿಕ ವೃತ್ತಿಗಾಯಕರು. ಇವರ ಮನೆಮಾತು ತೆಲುಗಾದರೂ ಹಾಡುವ ಕಾವ್ಯಗಳ ಭಾಷೆ ಕನ್ನಡ. ಹಾಡುವಾಗ ಏಕತಾರಿ ಎಂಬ

ವಾದ್ಯ ಹಾಗೂ ಬಟ್ಟುತಾಳವನ್ನೂ ಕೆಲವೊಮ್ಮೆ ಬಟ್ಟುತಾಳಕ್ಕೆ ಬದಲಾಗಿ ಚಿಟಗಿಯನ್ನೂ ಬಳಸುತ್ತಾರೆ. ಮೂಲದಲ್ಲಿ ಇವರು ಏಕತಾರಿಯೊಡನೆ ತತ್ತ್ವ ಪದಗಳನ್ನು ಹೇಳುತ್ತ ಊರೂರುಗಳ ಮೇಲೆ ಸುತ್ತುತ್ತಿದ್ದು ಕ್ರಮೇಣ ಜೀವನ ನಿರ್ವಹಣೆಗಾಗಿ ಕೆಲವು ಕಥೆಗಳನ್ನು ಹಾಡಲು ಕಲಿತರೆಂದು ತೋರುತ್ತದೆ. ಬಾಲನಾಗಮ್ಮ, ಗಂಗೆ-ಗೌರಿ ಜಗಳ, ನಂಜುಂಡೇಶ್ವರ, ಅಣ್ಣತಂಗಿ, ಕೆಂಪೇಗೌಡನ ಲಾವಣಿ-ಇವು ಇವರು ಹಾಡುವ ಮುಖ್ಯ ಕಾವ್ಯಗಳು. ಇವರ ಕುಲದೇವತೆಗಳು ವೀರಭದ್ರಸ್ವಾಮಿ ಮತ್ತು ಗಂಗಮ್ಮ. ಮನೆದೇವತೆಗಳು ನಂಜುಂಡೇಶ್ವರ ಹಾಗೂ ಸುಬ್ರಹ್ಮಣ್ಯ. ಆಂಧ್ರದ ಚಿತ್ತೂರಿನ ಕುಳ್ಳಂಪಲ್ಲಿಯ ವೀರ ಭದ್ರಸ್ವಾಮಿ ಮಠಕ್ಕೆ ಇವರು ನಡೆದುಕೊಳ್ಳುತ್ತಾರೆ. ಇತ್ತೀಚೆಗೆ ತೆಲುಗು ಜಂಗಮರು ಬೇಸಾಯ ಮುಂತಾದ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದ್ದಾರೆ. (ಪಿ.ಕೆ.ಆರ್.)

**ತೆಲುಗು ಜೊಮ್ಮಯ್ಯ :** ಸು.1160. ವಚನಕಾರ. ಬಸವಣ್ಣನ ಸಮಕಾಲೀನ. ಈತನ ಅಂಕಿತ ತೆಲುಗೇಶ್ವರ ಎಂದು ಹೇಳಿದ ಕವಿಚರಿತೆಕಾರರು ಮುಂದೆ ತಮ್ಮ ಅಭಿಪ್ರಾಯವನ್ನು ಬದಲಾಯಿಸಿ,ಈ ಅಂಕಿತ ತೆಲುಗೇಶ ಮಸಣಯ್ಯನದೆಂದು ತಿದ್ದಿಕೊಂಡರು. ಹೀಗಾಗಿ ತೆಲುಗು ಜೊಮ್ಮಯ್ಯ ವಚನಗಳನ್ನು ಬರೆದಿದ್ದಾನೆಯೋ ಇಲ್ಲವೋ ಖಚಿತವಾಗಿ ಹೇಳುವಂತಿಲ್ಲವೆಂಬುದು ಡಿ.ಎಲ್.ನರಸಿಂಹಾಚಾರ್ಯರ ಅಭಿಪ್ರಾಯ. ಈತನ ಕಾಲ ಕ್ರಿ.ಶ. ಸು.1160 ಎಂದು ಆರ್.ನರಸಿಂಹಾಚಾರ್ಯರು ಹೇಳಿದರೆ, ಈತ ಪೆರ್ಮಾಡಿ ಜಗದೇಕಮಲ್ಲನಿಗೆ ಸಮಕಾಲೀನನೆಂಬ ಆಧಾರವನ್ನು ಗಮನಿಸಿ ಡಿ.ಎಲ್.ನರಸಿಂಹಾಚಾರ್ಯರು ಈತನ ಕಾಲವನ್ನು ಸು.1144 ಎಂದು ಹೇಳುತ್ತಾರೆ. ಬಸವಣ್ಣ ತನ್ನ ವಚನಗಳಲ್ಲಿ ಉಲ್ಲೇಖಿಸಿರುವ ಶರಣರು, ವಚನಕಾರರಲ್ಲಿ ಈತನೂ ಸೇರಿದ್ದಾನೆ.

ಈತನ ಕಥೆ ಹರಿಹರನ ಒಂದು ರಗಳೆಗೆ ವಸ್ತುವಾಗಿದೆ. ಇದು ಮತ್ತು ಇತರ ಮೂಲಗಳಿಂದ ತಿಳಿದುಬರುವ ಈತನ ಕಥೆಯನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು:

ಈತ ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದ ಪೆರ್ಮಾಡಿ ರಾಜನ ಮಂತ್ರಿಯಾಗಿದ್ದ. ರಾಜನ ಹೆಂಡತಿ ಲಕುಮಾದೇವಿ, ಶಿವಭಕ್ತೆ. ಒಮ್ಮೆ ರಾಜನ ಪುರಾಣಿಕ ಹರಿಪುರಾಣವನ್ನು ಹೇಳುತ್ತ ಶಿವನಿಂದೆ ಮಾಡಿದ. ಆಗ ಜೊಮ್ಮಯ್ಯ ಕೋಪದಿಂದ ಆತನನ್ನು ಇರಿದು ಕೊಂದ. ಇದರಿಂದ ಅಸಮಾಧಾನಗೊಂಡ ರಾಜ ಜೊಮ್ಮಯ್ಯನನ್ನು ಶಿಕ್ಷಿಸಲು ಪ್ರಯತ್ನಿಸಿದಾಗ ಜೊಮ್ಮಯ್ಯ ಮೆರೆದ ಒಂದು ಪವಾಡದಿಂದ ನಿಜವನ್ನು ಅರಿತ ರಾಜ ಭಕ್ತಿಯಿಂದ ಜೊಮ್ಮಯ್ಯನನ್ನು ಪುರಸ್ಕರಿಸಿದ.

ಬೇಟೆಯ ಕಾಯಕದಿಂದ ಜೊಮ್ಮಯ್ಯ ಗುರು ಲಿಂಗ ಜಂಗಮದ ಆರಾಧನೆ ನಡೆಸುತ್ತಿದ್ದ. ಈತನನ್ನು ಕಂಡು ಗೌರವಿಸಲೆಂದು ಒಮ್ಮೆ ಕೊಂಡುಗುಳಿ ಕೇಶಿರಾಜ ಬಂದ. ಜೊಮ್ಮಯ್ಯನ ಮನೆಯಲ್ಲಿ ಮಾಂಸವಿರುವುದನ್ನು ಕಂಡ ಕೇಶಿರಾಜ ಅಸಹ್ಯಪಟ್ಟು ಹಿಂದಿರುಗಿದ. ಬೇಟೆಯಿಂದ ಮರಳಿದ ಜೊಮ್ಮಯ್ಯನಿಗೆ ಇದು ಗೊತ್ತಾಗಿ ತಾನೇ ಹೋಗಿ ಕೇಶಿರಾಜನನ್ನು ಕರೆದ. ಆದರೆ ಕೇಶಿರಾಜ ಬರಲಿಲ್ಲ. ಅನಂತರ ಕೇಶಿರಾಜ ಮನೆಯಲ್ಲಿ ಶಿವಪೂಜೆಗೆ ಕುಳಿತಾಗ ಜೊಮ್ಮಯ್ಯನ ಮನೆಯಲ್ಲಿ ಲಿಂಗಪೂಜೆ ನಡೆಸಬೇಕೆಂದು ಶಿವಲಿಂಗ ಅಪ್ಪಣೆ ಮಾಡಿತು. ಅದರಂತೆ ಕೇಶಿರಾಜ ಅಲ್ಲಿ ಹೋಗಿ ಲಿಂಗಪೂಜೆ ನಡೆಸಿದ. ತಟ್ಟೆಯಲ್ಲಿಟ್ಟಿದ್ದ ಮಾಂಸ ಜೊಮ್ಮಯ್ಯನ ಮಹಿಮೆಯಿಂದ ಪಕ್ವಾನ್ನವಾಗಿತ್ತು. ಶಾಪಗ್ರಸ್ತರಾಗಿ ಮೃಗ ಜೀವನ ನಡೆಸುತ್ತಿದ್ದ ಇಬ್ಬರು ಗಂಧರ್ವರನ್ನು ಮತ್ತು ಅಮರಿಯರನ್ನು ಜೊಮ್ಮಯ್ಯ ಕೊಂದು ಅವರ ಶಾಪ ವಿಮೋಚನೆ ಮಾಡಿದ.

ಜಂಗಮದಾಸೋಹಕ್ಕಾಗಿ ಬೇಟೆಯಾಡುತ್ತಿದ್ದ ಜೊಮ್ಮಯ್ಯನಿಗೆ ಒಮ್ಮೆ ಶಿವ ವ್ಯಾಘ್ರ ರೂಪದಲ್ಲಿ ಕಾಣಿಸಿಕೊಂಡ. ಅದನ್ನು ಕಂಡು ಹೆದರಿದ ಜೊಮ್ಮಯ್ಯ ಬಿಲ್ವಪತ್ರದ ಮರವನ್ನು ಏರಿಕುಳಿತ. ಶಿವ ಲಿಂಗರೂಪದಲ್ಲಿ ಅದೇ ಮರದ ಕೆಳಗೆ ನೆಲಸಿದ. ಕೆಳಗೆ ಲಿಂಗವನ್ನು ಕಂಡ ಜೊಮ್ಮಯ್ಯ ಬಿಲ್ವಪತ್ರೆಯನ್ನು ಕಿತ್ತು ಹಾಕತೊಡಗಿದ. ಶಿವ ಅದನ್ನು ಸ್ವೀಕರಿಸಿ ಜೊಮ್ಮಯ್ಯನಿಗೆ ಮುಕ್ತಿಯನ್ನು ಕರುಣಿಸಿದ. *

**ತೆಲುಗು ಬಣಜಿಗರು :** ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಲೌಕಿಕ ವೃತ್ತಿಗಾಯಕರು. ಮೂಲದಲ್ಲಿ ಇವರು ಜೀವನ ಸಾಗಿಸಲು ಬಳೆ, ಕುಂಕುಮ ಮುಂತಾದ ಮಂಗಳದ್ರವ್ಯಗಳನ್ನು ಮಾರುತ್ತಿದ್ದರಂತೆ. ಗಂಗೆ ಇವರ ಕುಲದೇವತೆ. ಇವರ ಮನೆಮಾತು ತೆಲುಗು. ಆದರೆ ಹಾಡುವ ಕಾವ್ಯಗಳ ಭಾಷೆ ಕನ್ನಡ. ಹಾಡುವಾಗ ಏಕತಾರಿ ಹಾಗೂ ಬಟ್ಟುತಾಳಗಳನ್ನು ಉಪಯೋಗಿಸುತ್ತಾರೆ. ದೊಂಬಿದಾಸರು ಹಾಗೂ ತೆಲುಗು ಜಂಗಮರು ಹಾಡುವ ಗಂಗೆ-ಗೌರಿ ಜಗಳ, ಸತ್ಯಭೋಜರಾಜ, ಬಾಲನಾಗಮ್ಮ, ಮಾಗಡಿ ಕೆಂಪೇಗೌಡ, ಅಣ್ಣ-ತಂಗಿ, ಬಂಜೆ ಹೊನ್ನಮ್ಮ, ಕಲಿಯುಗದ ಬಾಲೆ ಮುಂತಾದ ಕಾವ್ಯಗಳನ್ನೇ ಇವರೂ ಹಾಡುತ್ತಾರೆ. ತೆಲುಗು ಜಂಗಮರು, ತೆಲುಗು ಬಣಜಿಗರು, ದೊಂಬಿದಾಸರು - ಈ ಮೂರು ಕಾವ್ಯಸಂಪ್ರದಾಯಗಳಿಗೂ ಒಂದೇ ಮೂಲವಿರುವಂತೆ ತೋರುತ್ತದೆ. ವಿಜಯನಗರದ ಪತನಾನಂತರ ತೆಲುಗು ಪ್ರದೇಶಗಳಿಂದ ಇವರು ಬೇರೆ ಬೇರೆ ಕಡೆಗೆ ಚದುರಿ ಹೋದಂತೆ ತಿಳಿದು ಬರುತ್ತದೆ. (ಪಿ.ಕೆ.ಆರ್.)

**ತೆಲುಗೇಶ ಮಸಣಯ್ಯ :** ಸು.1160. ಬಸವಣ್ಣನವರ ಸಮ ಕಾಲೀನನಾದ ಒಬ್ಬ ವಚನಕಾರ. ತೆಲುಗೇಶ್ವರ ಅಥವಾ ಶಂಭು ತೆಲುಗೇಶ್ವರ ಎಂಬುದು ಈತನ ವಚನಾಂಕಿತ. ಸದ್ಯಕ್ಕೆ ಈತನ ನಾಲ್ಕು ವಚನಗಳು ಮಾತ್ರ ದೊರೆತಿವೆ. ಇವನು ಆಂಧ್ರಪ್ರದೇಶದ ಲಿಂಗಪಲ್ಲಿಯವನೆಂದೂ ಗೋವುಗಳನ್ನು ಕಾಯುವ ಕಾಯಕದವನೆಂದೂ ಹೇಳಲಾಗಿದೆ. ಎಸೆವ ಸರ್ವಾಂಗದೊಳ್ ಮಿಸುಪ ಲಿಂಗಂಗಳ ವಶಮಾಡಿದನು ತೆಲುಗೇಶ ಮಸಣಯ್ಯ ಎಂದು ನಂಜುಂಡ ಕವಿಯು ಭೈರವೇಶ್ವರ ಕಾವ್ಯದಲ್ಲಿ ವರ್ಣಿಸಲಾಗಿದೆ.

ಈತ ಮೊದಲು ಬೇಟೆಯಾಡುವ ಕಾಯಕದಿಂದಿದ್ದು, ಮೊದಲು ಸಿಕ್ಕ ಮೃಗವನ್ನು ಶಿವನಿಗರ್ಪಿಸುವ ನೇಮದಿಂದಿದ್ದನೆಂದೂ ಒಂದು ಸಲ ಚಿನ್ನದ ಮೃಗ ಸಿಕ್ಕಿ ಅದನ್ನು ಬಿಟ್ಟ. ಮತ್ತೆ ಮತ್ತೆ ಅದೇ ದೊರೆಯಲು ಕೋಪದಿಂದ ತನ್ನ ಕಾಯಕಕ್ಕೆ ಬೇಸರಪಟ್ಟನೆಂದೂ ಆಗ ಹರ ಕರುಣಾಮಾಯಿತೆಂದೂ ಹೇಳಲಾಗಿದೆ. ವೀರಶೈವವನ್ನು ಸ್ವೀಕರಿಸಿದ ತೆಲುಗೇಶ ಅಂದಿನಿಂದ ಶಿವಭಕ್ತರ ದನಗಳನ್ನು ಕಾಯುವ ಕಾಯಕವನ್ನು ಕೈಕೊಂಡ.

ಪಾಲ್ಕುರಿಕೆ ಸೋಮನಾಥ ಈತನನ್ನು ತನ್ನ ಸಹಸ್ರಗಣನಾಮದಲ್ಲಿ ಸೇರಿಸಿದ್ದಾನೆ. ಹಳದಿಯ ಸೀರೆಯನ್ನುಟ್ಟು, ಬಳಹದೋಲೆ ಕಿವಿಯಲ್ಲಿ, ಮೊಳೆಯ ದಂಗೆಯ ಪಿಡಿದು, ಗುರುಗಂಜಿ ದಂಡೆಯ ಕಟ್ಟಿ, ತುತ್ತುಱು ತುಱು ಎಂದು ಬಾರಿಸುತ್ತ, ಅಪಳ ಚಪಳನೆಂಬ ಉಲಿವ ಘಂಟೆಯ ಕಟ್ಟಿ ತತ್ತುಱು ಜಂಗುಳಿ ದೈವಗಳನೆಲ್ಲವ ಹಿಂಡುಮಾಡಿ ಕಾವ ನಮ್ಮ ಶಂಭು ತೆಲುಗೇಶ್ವರನ ಮನೆಯ ಗೋವಳನೀತ ಎಂಬುದು ಈತನ ವಚನಗಳಲ್ಲೊಂದಾಗಿದೆ.

**ತೇರದಾಳ** : ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನಲ್ಲಿ ಕಸಬೆಯಿಂದ 29ಕಿಮೀ ಪಶ್ಚಿಮಕ್ಕಿರುವ ಪಟ್ಟಣ. ಐತಿಹಾಸಿಕ ಸ್ಥಳ. 1949ರವರೆಗೆ ಈ ಊರು ಸಾಂಗ್ಲಿ ಸಂಸ್ಥಾನದ ಉಪವಿಭಾಗದ ಕೇಂದ್ರವಾಗಿತ್ತು. ನೇಯ್ಗೆ ಉದ್ಯಮ ಈ ಊರಿನಲ್ಲಿ ಸಾಕಷ್ಟಿದೆ. ಜನಸಂಖ್ಯೆ 23,642.

ಊರಿನ ಸುತ್ತಲೂ ಮುಸಲ್ಮಾನ-ಮರಾಠರ ಕಾಲದ ಕಂದಕದಿಂದ ಆವರಿಸಲ್ಪಟ್ಟ ಒಂದು ಕಲ್ಲಿನ ಕೋಟೆಯಿದೆ. ಈ ಊರಿನಲ್ಲಿ 11-12ನೆಯ ಶತಮಾನದ ಹಲವಾರು ಶಾಸನಗಳು ದೊರಕಿದ್ದು ಹಿಂದೆ ಅನೇಕ ವಣಿಕ ಶ್ರೇಣಿಗಳು ನೆಲೆಸಿದ್ದ ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿಯುತ್ತದೆ. 6ನೆಯ ವಿಕ್ರಮಾದಿತ್ಯನ ಸಾಮಂತನಾದ ಗೌರ ಎಂಬುವನು ಮಹಾಮಂಡಲೇಶ್ವರ ಕಾರ್ತವೀರ್ಯನ ಆಜ್ಞೆಯ ಪ್ರಕಾರ ಕಟ್ಟಿಸಿದ ನೇಮಿನಾಥ ದೇವಾಲಯ ಇಂದೂ ಬಳಕೆಯಲ್ಲಿದೆ. ಇದು ಕಲ್ಯಾಣ ಚಾಳುಕ್ಯ ಶೈಲಿಯಲ್ಲಿರುವ ಸುಂದರ ಕಟ್ಟಡ.

17ನೆಯ ಶತಮಾನದ ಉತ್ತರಾರ್ಧದಲ್ಲಿ ಇಲ್ಲಿದ್ದರೆನ್ನಲಾದ ಪ್ರಭುಸ್ವಾಮಿ ಎಂಬ ವೀರಶೈವ ಸಂತರ ದೇವಾಲಯ ಊರಿನ ಪ್ರಮುಖ ದೇಗುಲಗಳಲ್ಲೊಂದು. ನಗರದ ಉತ್ತರದಂಚಿನಲ್ಲಿ ಸುಡುಗಾಡ ಲಕ್ಷ್ಮಿ ದೇವಾಲಯವಿದೆ. ಅಬಶಾನ್ ಪೀರರ ದರ್ಗಾ ಊರಿನ ಆಗ್ನೇಯಕ್ಕಿದೆ.

ಈ ಊರಿನ ಪರಿಸರದಲ್ಲಿ ಹಲವು ಪ್ರಾಗೈತಿಹಾಸಿಕ ನೆಲೆಗಳಿವೆ. ಊರಿನ ಪಶ್ಚಿಮ ದಿಕ್ಕಿಗೆ ಸುಮಾರು 5ಕಿಮೀ ದೂರದಲ್ಲಿ ಬೂದಿ ಮಣ್ಣು ಮತ್ತು ಇತರ ಜನವಸತಿಯ ಅವಶೇಷಗಳಿಂದ ಕೂಡಿದ ಒಂದು ಹಾಳು ಭೂಮಿ ಇದೆ. ಊರಿನ ಎತ್ತರದ ಗುಡ್ಡಪ್ರದೇಶದಲ್ಲಿ ಮತ್ತು ಸಮೀಪದಲ್ಲಿಯ ಹನಗಂಡಿ, ಹಳಿಂಗಳಿ, ಮಾದಲಮಟ್ಟಿ ಮತ್ತು ಆಸಂಗಿ ಮೊದಲಾದ ಹಳ್ಳಿಗಳ ಪ್ರದೇಶದಲ್ಲಿ ಸು.1000 ಬೃಹತ್ ಶಿಲಾಗೋರಿಗಳು ಬಹುಶಃ 5ಕಿಮೀ ದೂರದವರೆಗೆ ಅಲ್ಲಲ್ಲಿ ಗುಂಪುಗುಂಪಾಗಿವೆ. 1964-66ರಲ್ಲಿ ಇಲ್ಲಿನ ಕೆಲವು ಸ್ಥಳಗಳಲ್ಲಿ ಉತ್ಖನನಗಳನ್ನು ನಡೆಸಲಾಯಿತು.

ತೇರದಾಳ ಪ್ರದೇಶದ ಬೃಹತ್ ಶಿಲಾಗೋರಿಗಳಲ್ಲಿ ಕೋಣೆ ಗೋರಿಗಳು ವಿಶಿಷ್ಟ ರೀತಿಯವು. ಕೋಣೆಗೋರಿಗಳಲ್ಲಿ ಎರಡು ವಿಧಗಳಿವೆ - ವರ್ತುಲಾಕಾರದ ದಾರಿ ಕೋಣೆಗೋರಿಗಳು ಮತ್ತು ಶಿಲುಬೆಯಾಕಾರದ ದಾರಿ ಕೋಣೆಗೋರಿಗಳು. ಶಿಲುಬೆಯಾಕಾರದ ದಾರಿ ಕೋಣೆಗೋರಿಗಳಲ್ಲಿ ಕೆಲವಕ್ಕೆ ದಾರಿಯು ಉದ್ದವಿರುತ್ತದೆ. ಪ್ರತಿಯೊಂದು ಬದಿಯಲ್ಲಿಯೂ ಒಂದೊಂದೇ ದೊಡ್ಡ ದೊಡ್ಡ ಚಪ್ಪಡಿ ಕಲ್ಲನ್ನು ನೆಟ್ಟಗೆ ನಿಲ್ಲಿಸಿ ಕೋಣೆಯನ್ನು ನಿರ್ಮಿಸಲಾಗಿರುತ್ತದೆ. ಕೋಣೆ ಮತ್ತು ಅದರ ದಾರಿಯನ್ನು ನಾಲ್ಕಾರು ಚಪ್ಪಡಿಕಲ್ಲುಗಳನ್ನು ಮೇಲೆ ಅಡ್ಡಲಾಗಿಟ್ಟು ಮುಚ್ಚಲಾಗಿರುತ್ತದೆ. ಚಾವಣಿಗೆ ಆಧಾರವಾಗಿ ಕೋಣೆಯೊಳಗೆ ನಾಲ್ಕು ಕಂಬಗಳಿರುತ್ತವೆ. ಕೋಣೆಯ ಹೊರಬದಿಯಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ಒತ್ತೊತ್ತಾಗಿ ರಾಶಿ ಹಾಕಿ, ಈ ರಾಶಿಯು ಚೆಲ್ಲಾಪಿಲ್ಲಿಯಾಗದ ಹಾಗೆ ಸುತ್ತಲೂ ತುಂಡು ಕಲ್ಲುಗಳಿಂದ ಕೋಣೆಯಷ್ಟೇ ಎತ್ತರದ ಅಥವಾ ಕಡಿಮೆ ಎತ್ತರದ ಚೌಕೋನದ ಕಟ್ಟೆಯೊಂದನ್ನು ಕಟ್ಟಲಾಗಿರುತ್ತದೆ. ಒಂದೊಂದು ವೇಳೆ ದುಂಡಾದ ಕಟ್ಟೆಯಿದ್ದು ಅದರ ಹೊರಬದಿಯಲ್ಲಿ ಒತ್ತೊತ್ತಾಗಿ ಕಲ್ಲಿನ ರಾಶಿಯಿದ್ದು, ಅದರ ಸುತ್ತಲೂ ಮತ್ತೆ ಚೌಕೋನದ ಕಟ್ಟೆಯಿರುತ್ತದೆ. ವರ್ತುಲಾಕಾರದ ದಾರಿ - ಕೋಣೆ ಗೋರಿಯಲ್ಲಿ ಒಂದರ ಪಕ್ಕದಲ್ಲಿ ಮತ್ತೊಂದು ಕಲ್ಲನ್ನು ನಿಲ್ಲಿಸಿ, ಮಾಡಿದ ಕೋಣೆಯು ದುಂಡಾಗಿದ್ದು ಅದಕ್ಕೆ ದಾರಿ ಸಣ್ಣದಿರುತ್ತದೆ. ಕೋಣೆಯ ಒಳಗಡೆ ಮೇಲೆ ಮುಚ್ಚಲು ಅಡ್ಡಲಾಗಿ ಹಾಕಿದ ಕಲ್ಲುಚಪ್ಪಡಿಗಳನ್ನು ಹೊರಲು 3 ಅಥವಾ 4 ಕಂಬಗಳಿರುತ್ತವೆ. ಹೊರಬದಿಯಲ್ಲಿ ಒತ್ತೊತ್ತಾಗಿ ಕಲ್ಲುರಾಶಿಯಿದ್ದು ಅದು ಭದ್ರವಾಗಿ ಒಂದು ಅಥವಾ ಎರಡು ದುಂಡುಕಟ್ಟೆಯಿಂದ ಆವರಿಸಲ್ಪಟ್ಟಿರುತ್ತದೆ. ಇವಲ್ಲದೆ ಸುಮಾರು 15 ಕಲ್ಲುರಾಶಿಗಳನ್ನೊಳಗೊಂಡ ದುಂಡುಕಟ್ಟೆಗಳೂ ಉಂಟು.

ಈ ಮೂರು ವಿಧವಾದ ಬೃಹತ್ ಶಿಲಾಗೋರಿಗಳಲ್ಲಿ ಕೆಲವನ್ನು ಉತ್ಖನನ ಮಾಡಲಾಯಿತು (1966). ಆದರೆ ಇವೆಲ್ಲವೂ ಹಿಂದೆಯೇ ಅಗೆಯಲ್ಪಟ್ಟು ಅವುಗಳಲ್ಲಿದ್ದ ವಸ್ತುಗಳು ನಾಶವಾಗಿದ್ದುದು ಕಂಡುಬಂದಿತು. ಕೋಣೆಗೋರಿಗಳಲ್ಲಿ ಮಾನವನ ಅಸ್ಥಿಗಳ ಚೂರುಗಳು, ಮೃತ್‌ಪಾತ್ರೆಗಳು ಮತ್ತು ಕಬ್ಬಿಣದ ವಸ್ತುಗಳ ಭಗ್ನಾವಶೇಷಗಳು ಅಸ್ತವ್ಯಸ್ತವಾಗಿದ್ದವು. ದಾರಿಯುಳ್ಳ ದುಂಡು ಕೋಣೆಗೋರಿಗಳಲ್ಲಿ ಕೆಂಪುವರ್ಣದ ಒಂದು ಮಡಿಕೆಯಲ್ಲಿ ಅಸ್ಥಿಯ ಚೂರುಗಳಿದ್ದವು. ದುಂಡು ಕಟ್ಟೆಗಳಲ್ಲಿ ಮಾತ್ರ ಕೆಲವೇ ಮೃತ್‌ಪಾತ್ರೆಯ ಚೂರುಗಳು ದೊರೆತವು.

ಅಸ್ಥಿಯ ಚೂರುಗಳು ಅವುಗಳಿಗೆ ಸಂಬಂಧಿಸಿದ ವ್ಯಕ್ತಿಗಳ ವಯಸ್ಸು, ಲಿಂಗ, ಪ್ರಮಾಣ ಮತ್ತು ಜನಾಂಗ ತಿಳಿಯಲಾಗದಷ್ಟು ಸಣ್ಣ ಸಣ್ಣವಾಗಿದ್ದವು. ಪ್ರಾಯಶಃ ಒಂದೊಂದು ಕೋಣೆಗೋರಿಯಲ್ಲಿ ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳ ಅಸ್ಥಿಗಳಿದ್ದ ಹಾಗೆ ತೋರುವುದು. ಮೃತ್‌ಪಾತ್ರೆಗಳಲ್ಲಿ ಹೊಳಪಾದ ಕೆಂಪು ವರ್ಣದ್ದೇ ಹೆಚ್ಚಾಗಿದ್ದುವು. ಕೆಲವೇ ಮಾತ್ರ ಕಪ್ಪು-ಕೆಂಪು ವರ್ಣದವು. ಇನ್ನು ಕೆಲವು ದೊರಗುಮೈಯುಳ್ಳವುಗಳಾಗಿ ಲೇಪನವಿಲ್ಲದವು. ಬಲವಾದ ದಪ್ಪ ಹಿಡಿಕೆಯುಳ್ಳ ಕೊಡ, ಗಡಿಗೆ, ಬಾನಿ, ಚೊಂಬು, ಅರ್ಧಗೋಲಾಕೃತಿಯ ಪಾತ್ರೆ, ಬದಿಯನ್ನು ನೆಟ್ಟಗೆ ಮಡಿಸಿದ ತಟ್ಟೆಗಳು, ಸಣ್ಣ ಬುಡದ ಅಗಲ ಬಾಯುಳ್ಳ ಲೋಟಗಳು, ಕಾಲು ಬಟ್ಟಲು ಮುಂತಾದವು. ತಾಮ್ರದ ತಗಡಿನ ಪಟ್ಟಿಗಳು, ಕಬ್ಬಿಣದ ತೂಗುದೀಪದ ತರಹದ ಹಣತೆ, ತಂತಿ ಇತ್ಯಾದಿಗಳೂ ದೊರಕಿದುವು. ಈ ಕೋಣೆಗೋರಿಗಳ ಕಾಲಮಾನ ಸು. ಕ್ರಿ.ಪೂ.1000-800 ಎಂದು ತೋರುವುದು.

ಬೃಹತ್ ಶಿಲಾಗೋರಿಯ ರೀತಿಯಲ್ಲಿದ್ದ ಸು.6ಮೀ ವ್ಯಾಸದ ಒಂದು ದುಂಡು ಕಲ್ಲುಗುಪ್ಪೆಯನ್ನೂ ಇಲ್ಲಿ ಅಗೆಯಲಾಯಿತು. ಅನಿರೀಕ್ಷಿತವಾಗಿ ಇದರಲ್ಲಿ ಶಿಲಾ-ತಾಮ್ರ ಸಂಸ್ಕೃತಿ ಜನವರ್ಗದವರ ಒಂದು ಶವಕುಣಿ ಕಂಡುಬಂದಿತು. ಇದರಲ್ಲಿ ಒಂದು ವ್ಯಕ್ತಿಯ ತಲೆ, ಎದೆ ಹಾಗೂ ತೊಡೆಯ ಭಾಗದ ಅಸ್ಥಿಯ ಚೂರುಗಳನ್ನು ಪೂರ್ವ-ಈಶಾನ್ಯ ಅಭಿಮುಖವಾಗಿ ಉದ್ದಕ್ಕೆ ಇಡಲಾಗಿದ್ದಿತು. ಜೊತೆಗೆ, ಬೂದುವರ್ಣದ ಮೂರು ಮೃತ್‌ಪಾತ್ರೆಗಳ ಅವಶೇಷಗಳು, ಒಂದು ತಾಮ್ರದ ಬಳೆ ಮತ್ತು ಕೆಲವು ಅತಿ ಸಣ್ಣ ಸಣ್ಣ ಕಲ್ಲಿನ ಆಯುಧಗಳು ಇದ್ದವು. ಆದರೆ ಶಿಲಾ-ತಾಮ್ರಯುಗದ ಶವಕುಣಿಗೆ ಹೀಗೆ ಕಲ್ಲುಗುಪ್ಪೆಯಿದ್ದುದು ಕಂಡು ಬಂದಿರುವುದು ಪ್ರಥಮವಾಗಿ ಇಲ್ಲಿಯೇ.

ಶಿಲಾ-ತಾಮ್ರಯುಗದ ಹಾಳು ಬಹುಮಟ್ಟಿಗೆ ನಶಿಸಿದೆ. ಇಲ್ಲಿನ ಸಣ್ಣ ಪ್ರಮಾಣದ ಉತ್ಖನನದಲ್ಲಿ ಸುಟ್ಟುಹೋದ ಮರದ ಕಂಬಗಳು, ವರ್ಣಚಿತ್ರವುಳ್ಳ ಮತ್ತು ಸಾದಾಮಣ್ಣಿನ ಪಾತ್ರೆಗಳು ಕಲ್ಲಿನ ಸೂಕ್ಷ್ಮ ಆಯುಧಗಳು - ಇವುಗಳ ಉಳಿಕೆಗಳು ದೊರಕಿದವು. ಸ್ಥಳೀಯ ರೀತಿಯ ಶಿಲಾ ತಾಮ್ರಯುಗೀನ ಮೃತ್‌ಪಾತ್ರೆಗಳ ಜೊತೆಗೆ ತಪತಿ ನದಿಯ ಬಯಲಿನಲ್ಲಿರುವ ಸಾವಳ್ದ ಮುಂತಾದ ಪ್ರದೇಶಗಳ ರೀತಿಯವೂ ದೊರಕಿವೆ. (ಎ.ಎಸ್.)

**ತೇರು** : ದೇವಾಲಯಗಳಲ್ಲಿರುವ ಚರಮೂರ್ತಿಗಳನ್ನು ಕೂರಿಸಿ ಮೆರೆಸುವ ಒಂದು ವಾಹನ. ಇದನ್ನು ರಥ ಎಂದೂ ಕರೆಯುವುದುಂಟು. ತೇರು ಒಂದು ದೇವಾಲಯವಿದ್ದಂತೆಯೇ. ದೇವಾಲಯಗಳಿಗೆ ವಿಮಾನಗಳಿರುವಂತೆ ತೇರುಗಳಿಗೂ ಉಂಟು. ತೇರುಗಳು ಸಾಮಾನ್ಯವಾಗಿ ಸುಂದರ ಮರದ ರಚನೆಗಳು. ರಥದ ನಾಲ್ಕೂ ಕಡೆಯಲ್ಲಿ ನಾನಾ ರೀತಿಯ ಮರದ ಕೆತ್ತನೆಗಳನ್ನು ಅಳವಡಿಸಲಾಗಿರುತ್ತದೆ. ಭಾರತೀಯ ಶಿಲ್ಪ ಪರಂಪರೆಯಲ್ಲಿ ಈ ದಾರುಶಿಲ್ಪಗಳಿಗೆ ವಿಶಿಷ್ಟ ಸ್ಥಾನವಿದೆ.

ಕರ್ನಾಟಕದ ದೇಗುಲಗಳಲ್ಲಿ ರಥೋತ್ಸವ ಮೊದಲಾದುವುಗಳಲ್ಲಿ ಬಳಸುವ ರಥ ಹಾಗೂ ಬಂಡಿಗಳ ಮಾದರಿಗಳನ್ನು ವಿಶೇಷವಾಗಿ ಕಾಣಬಹುದು. ರಥೋತ್ಸವದ ಸಂಪ್ರದಾಯ ಈ ನಾಡಿನಲ್ಲಿ ಬಹು ಹಿಂದಿನಿಂದ ಪ್ರಚಲಿತವಾಗಿರುವಂತೆ ತೋರುತ್ತದೆ. ನಂಜನಗೂಡು, ಮೇಲುಕೋಟೆ ಮೊದಲಾದೆಡೆಗಳ ರಥಗಳು ಸು.18-19ನೆಯ ಶತಮಾನವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಶ್ರವಣಬೆಳಗೊಳದ ತೇರಿನ ಬಸದಿಯಲ್ಲಿ ಬಾಹುಬಲಿಯ ಮುಂದೆ ಒಂದು ತೇರು ಇದ್ದು ಇದನ್ನು ಮಂದರವೆಂದು

ಕರೆಯುತ್ತಾರೆ. ಹಂಪೆಯ ವಿಜಯವಿಠಲ ದೇಗುಲದ ಮುಂದೆ ಬಹು ಸುಂದರವಾದ ನಾಲ್ಕು ಗಾಲಿಗಳುಳ್ಳ ಕಲ್ಲಿನ ರಥವಿದೆ. ಅನೇಕ ಖ್ಯಾತ ದೇವಾಲಯಗಳ ಭಿತ್ತಿಗಳಲ್ಲಿ ಮೆರವಣಿಗೆಗಳಲ್ಲಿ ಸಾಗುತ್ತಿರುವ ರಥಗಳನ್ನು ಕಾಣಬಹುದಾಗಿದೆ.

ಶರಣ ಬಸವೇಶ್ವರ ತೇರು: ಗುಲ್ಬರ್ಗ

ಉತ್ಸವಕ್ಕೆ ತೇರುಗಳನ್ನು ಸಿದ್ಧಮಾಡುವ ಬಗೆಯೂ ಆಯಾ ಪ್ರದೇಶಗಳಿಗೆ ಅನುಗುಣವಾಗಿರುತ್ತದೆ. ತೇರು ಕಟ್ಟಲು ಕೆಲವು ಕಡೆ ಕತ್ತಾಳೆನಾರಿನ ಹಗ್ಗಗಳಿಂದ ಬಿಗಿಕೊಟ್ಟು ಹಂತಗಳ ಕಂಬಸಾಲನ್ನು ಬಿಗಿಪಡಿಸುತ್ತಾರೆ. ಕೊನೆಯ ಹಂತದಲ್ಲಿ ಬಿದಿರಿನ ಗೋಳಾಕಾರದ ಶಿಖರವನ್ನು ರಚಿಸಿ ತೇರಿಗೆ ಸೇರಿಸುತ್ತಾರೆ. ಅದರ ಮೇಲೆ ಬಣ್ಣದ ಬಟ್ಟೆಯನ್ನು ಅಳವಡಿಸುತ್ತಾರೆ. ಕಳಸವನ್ನು ಅದರ ಹೊಕ್ಕುಳ ಗೂಟಕ್ಕೆ ಸೇರಿಸುತ್ತಾರೆ. ಈ ಕಳಸ ಒಂದರಿಂದ ಐದರತನಕ ಇರಬಹುದು. ಇದು ಹಿತ್ತಾಳೆಯದಾಗಿರುತ್ತದೆ. ಇಲ್ಲವೆ ಸ್ವರ್ಣದ ಲೇಪನದಿಂದ ಕೂಡಿರುತ್ತದೆ. ಇದಕ್ಕೆ ಸೇರಿದಂತೆ ಕೆಲವು ಬಣ್ಣದ ನಿಶಾನಿ ಅಥವಾ ಛತ್ರಿಯನ್ನು ನಿಲ್ಲಿಸಿರುತ್ತಾರೆ. ಪ್ರತಿಯೊಂದು ಅಂತಸ್ತಿನಲ್ಲೂ ನಾಲ್ಕು ಅಥವಾ ಎಂಟು ಮೂಲೆಗಳಲ್ಲೂ ವಿವಿಧ ವರ್ಣದ ಬಾವುಟಗಳನ್ನು (ದಾಳು) ಸೇರಿಸುತ್ತಾರೆ. ಹಂತದ ಬೋದಿಗೆಯ ಸುತ್ತಲೂ ಬಟ್ಟೆಯ ತೋರಣವಿರುತ್ತದೆ. ಮೂಲೆಗಳಲ್ಲಿ ನಾಲ್ಕು ಐದು ಅಡಿಯ ಬಣ್ಣಗಳ ಪಟ್ಟೆಪಟ್ಟೆಯ ದಂಡೆ ನೇತುಬಿಡುತ್ತಾರೆ. ಇದರ ಒಳಗೆ ಒಣಹುಲ್ಲು ಇಲ್ಲವೆ ಹೊಟ್ಟನ್ನು ತುಂಬಿರುತ್ತಾರೆ. ದೇವರು ಕೂರಿಸಲು ಪೀಠವನ್ನು ಮೊದಲ ಅಂತಸ್ತಿನಲ್ಲಿ ನಡುಭಾಗದಲ್ಲಿ ನಿರ್ಮಿಸಿರುತ್ತಾರೆ. ಕೆಲವು ಕಡೆ ಈ ಪೀಠವನ್ನು ಸರಪಣಿಗಳಿಂದ ತೂಗುಹಾಕಿರುತ್ತಾರೆ. ದೇವರನ್ನು ಈ ಪೀಠಕ್ಕೆ ಸಾಗಿಸಲು ಮರದ ಅಥವಾ ಕಬ್ಬಿಣದ ಏಣಿಗಳನ್ನು ಬಳಸುತ್ತಾರೆ. ತೇರಿನ ವಸ್ತ್ರಾಲಂಕಾರದ ವೈಶಿಷ್ಟ್ಯ ಆಯಾ ಪ್ರದೇಶಗಳಿಗೆ ತಕ್ಕಂತೆ ಇರುತ್ತದೆ. ತೇರನ್ನು ಎಳೆಯಲು ತಂತಿ ಅಥವಾ ನಾರಿನಿಂದ ಮಾಡಿದ ಹಗ್ಗವನ್ನು ಬಳಸಲಾಗುತ್ತದೆ.

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ತೇರುಗಳು ಬಹಳ ಸುಂದರವಾಗಿರುತ್ತವೆ. ಕೊಟ್ಟೂರು, ಹಂಪೆ, ನಂಜನಗೂಡು, ಕನಕಗಿರಿ, ಉಡುಪಿ, ನಾಯಕನಹಟ್ಟಿ, ತೆಕ್ಕಲಕೋಟೆ ಈ ಮುಂತಾದ ಕಡೆಗಳಲ್ಲಿರುವ ತೇರುಗಳು ಬಹಳ ಎತ್ತರವಾಗಿದ್ದು ತುಂಬ ಸುಂದರವಾಗಿರುತ್ತವೆ. ನಂಜನಗೂಡಿನ ನಂಜುಂಡೇಶ್ವರನಿಗೆ ಪಂಚರಥಗಳು ಇವೆ. ಮಲೆಮಹದೇಶ್ವರನಿಗೆ ಎರಡು ತೇರುಗಳಿವೆ. ಸಾಮಾನ್ಯವಾಗಿ ಅನೇಕ ದೇವರುಗಳಿಗೆ ಎರಡು ರಥಗಳು ಇರುತ್ತವೆ. ಒಂದನ್ನು ಹೂವಿನ ತೇರು ಅಥವಾ ಚಿಕ್ಕತೇರು ಎಂದೂ ಮತ್ತೊಂದನ್ನು ದೊಡ್ಡತೇರು ಎಂದೂ ಕರೆಯುವುದು ವಾಡಿಕೆ.



ಮೂರುಸಾವಿರಮಠದ ತೇರು, ಹುಬ್ಬಳ್ಳಿ

ಪ್ರತಿಯೊಂದು ಕ್ಷೇತ್ರಕ್ಕೂ ಸಂಬಂಧಿಸಿದಂತೆ ರಥೋತ್ಸವಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಭಕ್ತಾದಿಗಳು ಬಂದು ಸೇರುತ್ತಾರೆ. ಹರಕೆಯ ಜನ ತೇರಿನಲ್ಲಿ ಕುಳಿತ ಉತ್ಸವಮೂರ್ತಿಗೆ ಬಾಳೆಹಣ್ಣು, ಮೆಣಸು, ಪುರಿ, ಉತ್ತುತ್ತೆ, ಬೆಲ್ಲ ಮುಂತಾದವುಗಳನ್ನು ತೂರಿಬಿಡುತ್ತಾರೆ. ಇದನ್ನು ಸೂರುಬೆಲ್ಲ ಎನ್ನುತ್ತಾರೆ. ಕೆಲವೊಮ್ಮೆ ನಾಣ್ಯಗಳನ್ನು ತೂರಿ ತಮ್ಮ ಭಕ್ತಿ ಭಾವವನ್ನು ತೋರುವುದೂ ರೂಢಿಯಲ್ಲಿದೆ. ಕೆಲವೆಡೆ ಬಾಳೆಹಣ್ಣಿಗೆ ದವನವನ್ನು ಸಿಕ್ಕಿಸಿ ದೇವರತ್ತ ತೂರಿ ಎಸೆಯುತ್ತಾರೆ. ಕರ್ನಾಟಕದ ಜನಜೀವನದಲ್ಲಿ ಈ ರಥೋತ್ಸವಗಳ ಪಾತ್ರ ಸಾಕಷ್ಟಿದೆ. ಈ ಜಾತ್ರೆಯ ದಿನಗಳು ಆ ಸುತ್ತಿನ ಜನರಿಗೆ ಪವಿತ್ರ ಹಾಗೂ ಸಂಭ್ರಮದ ದಿನಗಳಾಗಿರುವುದಲ್ಲದೆ, ಬೇರೆಬೇರೆಡೆಗಳಿಂದ ಜನರೂ ಬರುತ್ತಾರಾಗಿ ವ್ಯಾಪಾರ ಉದ್ಯಮಗಳನ್ನು ಬೆಳೆಸಲು ಸಹಾಯಕವಾಗಿರುತ್ತವೆ. (ಪಿ.ಆರ್.ಟಿ.)

**ತೈಲಪ II :** ಕಲ್ಯಾಣದ ಚಾಳುಕ್ಯ ಮನೆತನದ ಅರಸ (973-97). ಆ ವಂಶದ ಆಳಿಕೆಯ ಸ್ಥಾಪಕ. ತೈಲ, ತೈಲಪಯ್ಯ, ತೈಲಪ್ಪ, ನೂರ್ಮಡಿ ತೈಲ ಎಂಬುವು ಇವನ ಪ್ರತಿನಾಮಗಳು. ಆಹವಮಲ್ಲ ಎಂಬುದು ಬಿರುದು. ಈತನಿಗೆ ಮಹಾರಾಜಾಧಿರಾಜ, ಪರಮಭಟ್ಟಾರಕ ಮುಂತಾದ ಸಾಮ್ರಾಜ್ಯ ಪ್ರಶಸ್ತಿ ಸೂಚಕವಾದ ಅನೇಕ ಬಿರುದುಗಳೂ ಇದ್ದುವು. 4ನೆಯ ವಿಕ್ರಮಾದಿತ್ಯ ಇವನ ತಂದೆ. ಇವನ ತಾಯಿ ಚೇದಿ ಅರಸು ಲಕ್ಷ್ಮಣನ ಮಗಳು ಬೊಂತಾದೇವಿ.

957 ಮತ್ತು 965ರಲ್ಲಿ ಈತ ರಾಷ್ಟ್ರಕೂಟರಾಜ ಮುಮ್ಮಡಿ ಕೃಷ್ಣನಿಗೆ ಸಾಮಂತನಾಗಿ ಬಿಜಾಪುರ ಜಿಲ್ಲೆಯಲ್ಲಿ ಆಳುತ್ತಿದ್ದ ಎಂದು ಶಾಸನಗಳಿಂದ ತಿಳಿಯುತ್ತದೆ. ರಾಷ್ಟ್ರಕೂಟರ ಅಧೀನದಲ್ಲಿ ಮೊದಲು ಚಿಕ್ಕದೊಂದು ನಾಡಿನ ನಾಯಕನಾಗಿದ್ದು ಬರುಬರುತ್ತ ಮಹಾಸಾಮಂತ ಪದವಿಗೆ ಏರಿದ. ಮುಮ್ಮಡಿ ಕೃಷ್ಣನ ಉತ್ತರಾಧಿಕಾರಿಗಳು ದುರ್ಬಲರಾಗುತ್ತಹೋದಂತೆ ಈತ ತನ್ನ ಸ್ಥಾನಬಲವನ್ನೂ ಸಾಮರ್ಥ್ಯವನ್ನೂ ಬೆಳೆಸಿಕೊಂಡ. ಪರಮಾರವಂಶದ ಇಮ್ಮಡಿ ಸೀಯಕ ಹರ್ಷ ಮಾನ್ಯಖೇಟದ ಮೇಲೆ ದಾಳಿಮಾಡಿದಾಗ (ಸು.972) ಉದ್ಭವಿಸಿದ ರಾಜಕೀಯ ಅಸ್ತವ್ಯಸ್ತ ಸ್ಥಿತಿಯನ್ನು ಉಪಯೋಗಿಸಿಕೊಂಡು ಶೀಘ್ರದಲ್ಲೇ ರಾಷ್ಟ್ರಕೂಟ ಇಮ್ಮಡಿ ಕಕ್ಕನ ಮೇಲೆ ದಂಡೆತ್ತಿಹೋದ. ಆ ಯುದ್ಧದಲ್ಲಿ (ಸು.973) ಕಕ್ಕ ಮೃತನಾದಮೇಲೆ ಸ್ವತಂತ್ರ ಪ್ರಭುವಾಗಿ ತನ್ನ ವಂಶದ ಆಳಿಕೆಯನ್ನು ಉದ್ಘಾಟಿಸಿದ.

ಆಹವಮಲ್ಲ ತೈಲಪನ ಏಳಿಗೆಯಿಂದ ಹೊಸದಾಗಿ ಉದಿಸಿದ ಚಾಳುಕ್ಯ ಸಾಮ್ರಾಜ್ಯಕ್ಕೆ ಈವರೆಗೆ ರಾಷ್ಟ್ರಕೂಟರಿಗೆ ಸಾಮಂತರಾಗಿದ್ದವರು ತಮ್ಮ ವಿಧೇಯತೆಯನ್ನು ತೋರಿಸಲು ಮೊದಲು ಮಾಡಿದರು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಆಳುತ್ತಿದ್ದ ಬ್ರಹ್ಮಕ್ಷತ್ರಿಯಕುಲದ ಶಾಂತಿವರ್ಮ ಮೊದಲು ಕಕ್ಕಲದೇವನಿಗೆ ಅಧೀನನಾಗಿದ್ದು, ಅನಂತರ ಆಹವಮಲ್ಲನಿಗೆ ಅಧೀನನಾದ. ಗಂಗ ಮಾರಸಿಂಹನ ಅನಂತರ ಗಂಗದೇಶವನ್ನು ಸು.974-75ರಲ್ಲಿ ಆಳುತ್ತಿದ್ದ, ಚಾಳುಕ್ಯರಿಗೆ ಸಿಂಹಪ್ರಾಯನೆಂದು ತನ್ನನ್ನು ಕರೆದುಕೊಂಡು ಮೆರೆಯುತ್ತಿದ್ದ ಪಾಂಚಾಲದೇವನನ್ನು ತೈಲಪ ಶಿವಮೊಗ್ಗ ಜಿಲ್ಲೆಯ ಸಿರಿವೂರಿನಲ್ಲಿ ಬೀಡುಬಿಟ್ಟಿದ್ದಾಗ (ಸು.975) ಯುದ್ಧರಂಗದಲ್ಲಿ ಶಿರಚ್ಛೇದನಮಾಡಿ ಕೊಂದ. 976ರಿಂದ ತೈಲ ಸಾಮ್ರಾಜ್ಯ ಪ್ರಶಸ್ತಿಗಳ ಸಹಿತವಾಗಿ ವರ್ಣಿತವಾಗಿರುವುದು ಬಳ್ಳಾರಿ ಜಿಲ್ಲೆಯ ಶಾಸನಗಳಿಂದ ತಿಳಿದುಬರುತ್ತದೆ. ಮುಮ್ಮಡಿ ಕೃಷ್ಣನ ಕೃಪೆಯಿಂದ ಅಭ್ಯುದಯಕ್ಕೆ ಬಂದ ಸೌಂದತ್ತಿಯ ರಟ್ಟರು ಪ್ರವರ್ಧಮಾನಕ್ಕೆ ಬರುತ್ತಿದ್ದ ತೈಲಪನ ಅಧೀನತೆಯನ್ನು ಒಪ್ಪಿಕೊಂಡ ಹಾಗೆ ಸು.980ರಲ್ಲಿ ಲಿಖಿತವಾದಂತೆ ಭಾವಿಸುವ ಎರಡು ಶಾಸನಗಳಿಂದ ತಿಳಿದುಬರುತ್ತದೆ. ಚೋಳದೊರೆಯೊಬ್ಬನನ್ನು (ಪ್ರಾಯಶಃ ರಾಜರಾಜ) ಸೋಲಿಸಿ ಆತನಿಂದ 150 ಆನೆಗಳನ್ನು ಸೆಳೆದುಕೊಂಡು ಅನಂತಪುರ ಜಿಲ್ಲೆಯ ದೊಡ್ಡ ಶಿಬಿರದಿಂದ ತೈಲಪ ರಾಜ್ಯವಾಳುತ್ತಿದ್ದ ವಿಷಯವನ್ನು ತೈಲಪನ ಕಾಲದ್ದೇ ಆದ ಕೋಗಳಿಯ ಶಾಸನದಲ್ಲಿ (992) ಹೇಳಿದೆ. ತೈಲಪನ ಮಹತ್ಸಾಧನೆಗಳಲ್ಲಿ ಗಣ್ಯವಾದದ್ದು ಎಂದರೆ ಈತ ಮಾಳವ ದೇಶದ ಪರಮಾರ ಮುಂಜನನ್ನು ಸೋಲಿಸಿದ್ದು.ಈ ಮುಂಜ ಸೀಯಕ ಹರ್ಷನ ತರುವಾಯದಲ್ಲಿ ಮಾಳವ ದೇಶವನ್ನಾಳುತ್ತಿದ್ದ ವಾಕ್ಪತಿ ಮುಂಜನೆಂಬುದಾಗಿ ಗುರುತಿಸಲಾಗಿದೆ. ತೈಲಪ ರಾಷ್ಟ್ರಕೂಟರಿಗೆ ಅಧೀನನಾಗಿದ್ದಾಗಲೇ ಅವರ ಶತ್ರುಗಳಾದ ಪರಮಾರರೊಡನೆ ಕಾದಿದ್ದ. ಈತ ಪರಮಾರ ಮುಂಜನನ್ನು ಸೆರೆಹಿಡಿದ ವಿಷಯವನ್ನು ಕಾಠಂ ಶಾಸನಗಳಲ್ಲೂ (1003), ಕೊಂದ ವಿಷಯವನ್ನು ವಿಕ್ರಮಾದಿತ್ಯನ ಗದಗ ಶಾಸನದಲ್ಲೂ ಉಲ್ಲೇಖಿಸಿದೆ. ಮುಂಜ ನಿಧನಹೊಂದಿದ್ದು ಸು.995 ಎಂದು ಊಹಿಸಲಾಗಿದೆ. ಈತ ಚಾಳುಕ್ಯರ ಕೈಯಲ್ಲಿ ಸಿಕ್ಕಿ ಪಾಡುಪಟ್ಟಿದ್ದನ್ನು ಮೇರುತುಂಗನ ಪ್ರಬಂಧ ಚಿಂತಾಮಣಿಯಲ್ಲಿ ವರ್ಣಿಸಿದೆ. ತೈಲಪನ ದಂಡನಾಯಕ ಬಾರಪನು ಲಾಟ ರಾಜ್ಯದ ಮೇಲೆ ದಾಳಿಮಾಡಿದ. ಗುಜರಾತಿನ ಮೂಲ ರಾಜನನ್ನು ಸೋಲಿಸಿದ್ದರಿಂದ ಗೂರ್ಜರಭಯಜ್ವರ ಎಂಬ ಬಿರುದನ್ನು ತೈಲಪ ಪಡೆದ.

ಆಹವಮಲ್ಲ ತೈಲಪನ ಸಾಮಂತವರ್ಗದಲ್ಲಿ ಬಿಜಾಪುರ ಜಿಲ್ಲೆಯ ಸಿಂದರು, ಉತ್ತರ ಕೊಂಕಣದ ಶಿಲಾಹಾರರು, ಸೇವುಣದೇಶದ ಯಾದವರು, ಸೊಸವ್ಯದ ಹೊಯ್ಸಳರು ನೊಳಂಬ ಪಲ್ಲವರು ಸೇರಿದ್ದರು. ಬನವಾಸಿ ಪ್ರಾಂತ್ಯವನ್ನಾಳುತ್ತಿದ್ದವರಲ್ಲಿ ಶೋಭನರಸನೆಂಬಾತ ತೈಲಪನಿಗೆ ಆಪ್ತನಾದ ದಂಡಾಧಿಪನಾದ. ಬನವಾಸಿ, ಸಾಂತಲಿಗೆ, ಕಿಸುಕಾಡು ನಾಡುಗಳಲ್ಲಿ ರಾಜಪ್ರತಿನಿಧಿಯಾಗಿ ಆಳುತ್ತಿದ್ದ ಭೀಮರಸ ಎಂಬುವನು ತೈಲಪನ ಅಂಕಕಾರನೆನಿಸಿದ್ದ. ಅಂತೂ ಆಹವಮಲ್ಲ ಸಮಗ್ರ ರಾಷ್ಟ್ರಕೂಟರ ಸಾಮ್ರಾಜ್ಯಕ್ಕೆ ಒಡೆಯನಾಗಿ, ರಟ್ಟಪಾಡಿ ಏಳೂವರೆ ಲಕ್ಷ ಪ್ರಾಂತ್ಯವನ್ನು ಆಳಿದನೆಂದು ತಿಳಿಯುವುದು.

ತೈಲಪ, ಕವಿ ರನ್ನನಿಗೆ ಆಶ್ರಯದಾತೃವಾಗಿದ್ದ. ರನ್ನ ಸು.990ರಲ್ಲಿ ತೈಲಪನ ಆಸ್ಥಾನವನ್ನು ಪ್ರವೇಶಿಸಿರಬೇಕೆಂದೂ ಅಲ್ಲಿಯೇ ಅಜಿತ ತೀರ್ಥಂಕರಪುರಾಣತಿಲಕ ಎಂಬ ತನ್ನ ಕಾವ್ಯವನ್ನು ರಚಿಸಿರಬೇಕೆಂದೂ ಸು.991-92ರಲ್ಲಿ ಆತನಿಂದಲೇ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದಿರಬೇಕೆಂದೂ ವಿದ್ವಾಂಸರು ಊಹಿಸಿದ್ದಾರೆ. ಚಕ್ರವರ್ತಿಯಾದ ತೈಲಪನಿಂದ ಮಹಿಮೋನ್ನತಿಯೂ ಕವಿಚಕ್ರವರ್ತಿ ಬಿರುದನ್ನೂ ತಾನು ಪಡೆದುಕೊಂಡುದಾಗಿ ರನ್ನನೇ ತನ್ನ ಇನ್ನೊಂದು ಕಾವ್ಯವಾದ ಸಾಹಸಭೀಮವಿಜಯದಲ್ಲಿ ಹೇಳಿಕೊಂಡಿದ್ದಾನೆ. ರನ್ನನ ಆ ಎರಡು ಗ್ರಂಥಗಳಲ್ಲೂ ಅಲ್ಲಲ್ಲಿ ತೈಲಪನ ವಿಚಾರ ಬಂದಿದೆ. ಚಕ್ರಿಗಳೊಳಗಾಹವಮಲ್ಲಂ ಮಿಗಿಲೆನಿಕುಂ ಅವನಿಪರೊಳ್ ನಿಜಭುಜಚಕ್ರವರ್ತಿ ರಣಜಯಕೆ ತೈಲನೆಂತಸಹಾಯಂ, ಜಗತೀ ಚಕ್ರಮನಾಳ್ಗೆ ತೈಲನೃಪನೇಕಚ್ಛತ್ರದಿಂ - ಎಂಬಂಥ ಮಾತುಗಳು ಅಜಿತಪುರಾಣದಲ್ಲಿ ಬಂದಿವೆ. ರನ್ನ ತನ್ನ ಗದಾಯುದ್ಧದಲ್ಲಿ ತೈಲಪನನ್ನು ಸಮಸ್ತಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ, ಮಹಾರಾಜಾಧಿರಾಜಂ, ರಾಜಪರಮೇಶ್ವರಂ, ಪರಮಭಟ್ಟಾರಕಂ, ಕರಹಟಭಯಂಕರಂ, ಜಾವಿಳಾಂದ್ರಕುಲೀನಭುವನಸದ್ಗುಣಮಣಿ ವಿಭೂಷಣಂ, ಸಿಂಧುರಕಂಧರಾಧಿರೂಢಪಲ್ಲಿಕೋಟೋಲ್ಲಂಘನಂ, ಭದ್ರಕವಿದ್ರಾವಣಂ, ಕೊಂಕಣಭಯಂಕರಂ, ಉಭಯಬಲದಲ್ಲಣಂ, ಮಾರ್ಮಲೆವರಿ ಗಜಗೇಸರಿ, ಕರೀಂದ್ರಕಂಠೀರವಮಲ್ಲಂ, ವೈರಿಫಣೀಂದ್ರಸೌಪರ್ಣಂ, ಕ್ರಾಕಲಿಕ ರಾಜಗಜಕೇಸರಿ, ರಣಕುಂಭಿಕುಂಭಕಂಠೀರವಂ, ಯಾದವಕುಲಾಂಬರದ್ಯುಮಣಿ, ರಣರಂಗಭೀಷಣಂ, ರಿಪುಬಲಪುಂಜಗಜಘಟಾಭಂಜನಂ, ಸಾಮಂತಮೃಗಶಾರ್ದೂಲ, ರಣರಂಗರಾಕ್ಷಸಂ, ಅಕಲಂಕರಾಮಂ, ತಳವರ್ಗತಳಪ್ರಾಕಾರಂ, ಅರಿಷ್ಟಘರಟ್ಟಂ ರಾಷ್ಟ್ರಕೂಟ ಕಾಳಕೂಟಂ, ನಿಜಭು, ಚಕ್ರವರ್ತಿ, ಪಾಂಚಾಲಮದೇಭಪಂಚಾನನಂ, ಸಂಹಾರಸಿಂಹಿತ್ವಘೂರ್ಜರವಜ್ರದಂಡಂ, ಘೂರ್ಜರಭಯಜ್ವರಂ, ಸಮಸ್ತ ಮಾಳವಸಪ್ತಾರ್ಚಿ, ಶತ್ರುಗ್ರಹೋಚಾಟನನುಂ ಮತ್ತಂ ಅನೇಕ ದೇಶಾಧೀಶ್ವರಂ ಪರನೃಪ ಮದಗಜಘಟಾಭಂಜನನುಂ ಶ್ರೀಮನ್ನೂರ್ಮಡಿ ತೈಲಪ ನೆನಿಸಿದಾಹವಮಲ್ಲದೇವನಿಂ ಎಂಬುದಾಗಿ ನಾನಾವಿಧವಾಗಿ ಕೀರ್ತಿಸಿದ್ದಾನೆ. ಇದರಲ್ಲಿರುವ ಚಾರಿತ್ರಿಕಾಂಶಗಳು ಹಿಂದೆ ಹೇಳಿರುವ ಘಟನೆಗಳಲ್ಲಿ ಕೆಲವನ್ನು ಘೋಷಿಸುತ್ತವೆ.

ಈ ತೈಲಪ ಮಾನ್ಯಖೇಟವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದನೆಂದು ತೋರುತ್ತದೆ. ರಾಷ್ಟ್ರಕೂಟ 2ನೆಯ ಕೃಷ್ಣನ ಮಗಳು ಜಾಕವ್ವೆ ಈತನ ಹೆಂಡತಿ. ಇವನಿಗೆ ಸತ್ಯಾಶ್ರಯ ಮತ್ತು ದಶವರ್ಮ (ಯಶೋವರ್ಮ) ಎಂಬ ಇಬ್ಬರು ಮಕ್ಕಳಿದ್ದರು. ತೈಲಪನ ಮರಣಾನಂತರ ಇವನ ಹಿರಿಯ ಮಗ ಸತ್ಯಾಶ್ರಯ ಪಟ್ಟವೇರಿದ. (ಪಿ.ಕೆ.ಎನ್.)

**ತೈಲಪ III :** ಕಲ್ಯಾಣದ ಚಾಳುಕ್ಯವಂಶದ ರಾಜ (1149-62). ಮೂರನೆಯ ಸೋಮೇಶ್ವರನ ಕಿರಿಯ ಮಗ. ಅಣ್ಣ ಪೆರ್ಮ ಜಗದೇಕಮಲ್ಲನ ಅನಂತರ ಪಟ್ಟಕ್ಕೆ ಬಂದ. ಈತನಿಗೆ ತ್ರಿಭುವನಮಲ್ಲ, ತ್ರೈಲೋಕ್ಯಮಲ್ಲ ಎಂಬ ಬಿರುದುಗಳಿದ್ದುವು. ಇವನನ್ನು ನೂರ್ಮಡಿ ತೈಲಪ, ತೈಲ, ಚಾಳುಕ್ಯ ಚಕ್ರವರ್ತಿ, ರಕ್ಕಸಗಂಗ, ತ್ರಿಭುವನಮಲ್ಲ, ವೀರಗಂಗ ಎಂದೂ ಉಲ್ಲೇಖಿಸಲಾಗಿದೆ.

ಇವನ ತಂದೆಯ ಕಾಲದಲ್ಲಿ ಮಹಾದಂಡನಾಥನಾಗಿದ್ದ ಕಳಚುರಿ ಬಿಜ್ಜಳ ತುಂಬಾ ಪ್ರಬಲನಾಗಿದ್ದ. ಆದ್ದರಿಂದ ಅವನ ಅನುಯಾಯಿಗಳು ಕೆಲವರು ಮಂಡಳೇಶ್ವರರಾಗಿದ್ದರು. ಇದನ್ನೆಲ್ಲ ತಿಳಿದಿದ್ದ ತೈಲಪ ಬಿಜ್ಜಳನೊಂದಿಗೆ ಹೊಂದಿಕೊಂಡೇ ತನ್ನಾಳಿಕೆಯ ಆರಂಭದ ಕಾಲದಲ್ಲಿ ಕಾಲ ಹಾಕಿದ್ದ. ಸು.1153ರವರೆಗೆ ಬಿಜ್ಜಳ, ಕಾಕತೀಯ ಪ್ರೋಲ ಮೊದಲಾದವರು

ತೈಲಪನನ್ನೇ ಸಾರ್ವಭೌಮನೆಂದು ಪರಿಗಣಿಸಿದ್ದರು. ಆದರೆ ಅನಂತರ ಬಿಜ್ಜಳ, ಶಿಲಾಹಾರರು ಮತ್ತು ಕಾಕತೀಯರು ತೈಲಪನ ನಿರ್ಬಲತೆಯನ್ನು ಕಂಡು ಸ್ವತಂತ್ರರಾದರು. ಈ ರಾಜವಂಶದವರ ಶಾಸನಗಳಲ್ಲಿ ತೈಲಪನ ಉಲ್ಲೇಖವಿಲ್ಲದಿರುವುದೂ ತೈಲಪನ ಶಾಸನಗಳೆಲ್ಲ ಚಾಳುಕ್ಯ ರಾಜ್ಯದ ಮಧ್ಯಪ್ರಾಂತ್ಯಕ್ಕಷ್ಟೇ ಸೀಮಿತವಾಗಿರುವುದೂ ಇದಕ್ಕೆ ಸೂಚಕವಾಗಿದೆ. ತೈಲಪನ ಕೊನೆಗಾಲದಲ್ಲಿ ಇವನಿಗೂ ಕಾಕತೀಯ ರುದ್ರನಿಗೂ ಯುದ್ಧವಾಗಿ ತೈಲಪ ಸೋತಂತೆ ತೋರುತ್ತದೆ. ಅಲ್ಲದೆ ಬಿಜ್ಜಳನ ಹಿಡಿತದಿಂದ ದೂರವಿರಬೇಕೆಂಬ ಉದ್ದೇಶದಿಂದ ಅಣ್ಣಿಗೇರಿಗೆ ತನ್ನ ರಾಜಧಾನಿಯನ್ನು ವರ್ಗಾಯಿಸಿಕೊಂಡ. ಇದರಿಂದ ತನ್ನ ಬಲವರ್ಧಿಸಿಕೊಳ್ಳಲು ಬಿಜ್ಜಳನಿಗೆ ಅನುವಾಗಿ ಅವನು ತೈಲಪನ ಬೆನ್ನಟ್ಟಿದ. ತೈಲಪ ಅಣ್ಣಿಗೇರಿಯಿಂದ ಬನವಾಸಿಗೆ ವರ್ಗಾಯಿಸಿಕೊಂಡ. ಅಲ್ಲಿ 1162ರವರೆಗೆ ರಾಜ್ಯಭಾರ ಮಾಡಿದಂತೆ ತಿಳಿದುಬರುತ್ತದೆ. ಇವನ ಅನಂತರ ರಾಜ್ಯಾಧಿಕಾರ ಸಂಪೂರ್ಣವಾಗಿ ಕಳಚುರಿ ಬಿಜ್ಜಳನ ಕೈಗೆ ಸೇರಿತು. ರಾಜ್ಯವನ್ನು ವಹಿಸಿಕೊಂಡ ಬಿಜ್ಜಳ ಚಾಳುಕ್ಯವಂಶದ ಹಲವರನ್ನು ವಧಿಸಿದಂತೆ ತೋರುತ್ತದೆ. ಹಾಗೆ ಪ್ರಾಣತೆತ್ತವರಲ್ಲಿ 3ನೆಯ ತೈಲನೂ ಒಬ್ಬ ನಾಗಿರಬಹುದು. (ಪಿ.ಕೆ.ಎನ್.)

**ತೊಗಲುಗೊಂಬೆ ಆಟ** : ಕರ್ನಾಟಕ ಜನಪದ ರಂಗಭೂಮಿಯ ಒಂದು ಪ್ರಮುಖ ಕಲೆ. ಇದು ಕರಾವಳಿ ಮತ್ತು ಮಲೆನಾಡಿನ ಪ್ರದೇಶಗಳನ್ನುಳಿದು ಇತರ ಕಡೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಆಟವನ್ನು ಮಾಡುವ ಜನರನ್ನು ಗೊಂಬೆರಾಮರು, ಕಿಳ್ಳಿಕ್ಯಾತರು, ಶಿಳ್ಳೆಕ್ಯಾತರು ಎಂದು ಕರೆಯುವುದು ರೂಢಿ (ಶಿಳ್ಳೆಕ್ಯಾತ ಒಂದು ತೊಗಲುಗೊಂಬೆಯ ಹೆಸರೂ ಹೌದು). ಇವರು ಬಹುಪಾಲು ಅಲೆಮಾರಿಗಳು, ಬಹುಶಃ ಮಹಾರಾಷ್ಟ್ರದಿಂದ ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಿಗೆ ವಲಸೆ ಬಂದವರಿರಬೇಕು. ತಮ್ಮನ್ನು ಮರಾಠಿ ಒಕ್ಕಲಿಗರು, ಚಿತ್ರಮರಾಠಿಗರು ಎಂದೂ ಕರೆದುಕೊಳ್ಳುತ್ತಾರೆ. ಇವರು ಆಡುವ ಭಾಷೆ ಮರಾಠಿಗೆ ಹತ್ತಿರವಾದುದೆಂಬ ಅಭಿಪ್ರಾಯವಿದೆ. ಇವರು ವರ್ಣಚಿತ್ರ ರಚನೆಯಲ್ಲಿ ಪರಿಣತರು ಎಂಬುದನ್ನು ಇವರು ರಚಿಸಿಕೊಳ್ಳುವ ಗೊಂಬೆಗಳು ನಿದರ್ಶಿಸುತ್ತವೆ.



ಪಲ್ಲಕ್ಕಿಯಲ್ಲಿ ರಾಣಿ

ತೊಗಲುಗೊಂಬೆ ಆಟ ಸಾಮಾನ್ಯವಾಗಿ ಒಂದೊಂದು ಕುಟುಂಬಕ್ಕೆ ಸೀಮಿತವಾಗಿದ್ದು ಕುಟುಂಬದ ಯಜಮಾನ ಮುಖ್ಯ ನೇತಾರನಾಗಿರುತ್ತಾನೆ. ಇವನಿಗೆ ಕುಟುಂಬದ ಗಂಡಸರು ಮತ್ತು ಹೆಂಗಸರು ಸಹಾಯಕರಾಗಿದ್ದು ಅಗತ್ಯ ಕಂಡುಬಂದಲ್ಲಿ ತಮ್ಮ ಬಂಧುಗಳಿಂದಲೂ ಸಹಾಯಪಡೆಯುವುದುಂಟು. ಸಾಧಾರಣವಾಗಿ ಒಂದೊಂದು ಕುಟುಂಬದವರು ಇಷ್ಟು ಹಳ್ಳಿಗಳೆಂದು ಹಂಚಿಕೊಂಡು ಸಾಧ್ಯವಾದಷ್ಟು ಆ ಪರಿಧಿಯಲ್ಲಿಯೆ ನಾಟಕ ಆಡಿ ಸಂಚರಿಸುತ್ತ ಜೀವನ ಸಾಗಿಸುತ್ತಾರೆ.

ಹಂದಿಯನ್ನು ಹೊತ್ತ ಬೇಟೆಗಾರರು

ಈ ಆಟದಲ್ಲಿ ಮೂರು ಪ್ರಾದೇಶಿಕ ಭಿನ್ನತೆಗಳನ್ನು ಗುರುತಿಸಬಹುದು.

1. ಬಡಗಲಪಾಯ - ಉತ್ತರ ಕರ್ನಾಟಕ
2. ತೆಂಕಲಪಾಯ - ಹಳೆಯ ಮೈಸೂರು
3. ಮೂಡಲಪಾಯ - ಕರ್ನಾಟಕ ಆಂಧ್ರಗಳ ಗಡಿಭಾಗ

ಬಡಗಲಪಾಯ ಮತ್ತು ತೆಂಕಲಪಾಯಗಳಲ್ಲಿ ಕುಳಿತು ಗೊಂಬೆಗಳನ್ನು ಕುಣಿಸುತ್ತಾರೆ. ಇದಕ್ಕೆ ಹೊಂದಿಕೆಯಾಗುವಂತೆ ಚಾಪೆ ಹಾಗೂ ತಡಿಕೆಗಳ ಸಹಾಯದಿಂದ ಅಡಕವಾದ ಚಿಕ್ಕ ರಂಗಮಂದಿರವನ್ನು ನಿರ್ಮಿಸಿಕೊಳ್ಳುವರು. ರಂಗಮಂಚದ ಮುಂಭಾಗದಲ್ಲಿ ಮಾತ್ರ ಪರದೆಯಂತೆ ಕೆಳಭಾಗಕ್ಕೆ ಎರಡೂವರೆ ಅಡಿಯಷ್ಟು ಎತ್ತರ ಕರಿ ಕಂಬಳಿಯನ್ನೂ ಮೇಲುಭಾಗಕ್ಕೆ ತೆಳುವಾದ ಬಿಳಿ ಪಂಚೆಯನ್ನೂ ಕಟ್ಟುತ್ತಾರೆ. ಇದರಿಂದಾಗಿ ಕಂಬಳಿ ಹಿಂಭಾಗದಲ್ಲಿರುವ ಗೊಂಬೆಗಳನ್ನು ಕುಣಿಸುವಾತ ಪ್ರೇಕ್ಷಕರಿಗೆ ಗೋಚರಿಸುವುದಿಲ್ಲ. ರಂಗದ ಒಳಗೆ ಪಂಚೆಯ ಹಿಂಬದಿಯಲ್ಲಿ ಒಂದು ಪಕ್ಕಕ್ಕೆ ದೀಪವನ್ನು ತೂಗುಹಾಕಿರುತ್ತಾರೆ. ಇದರ ಬೆಳಕು ಪಂಚೆಯ ಹಿಂದೆ ಹಿಡಿದ ಗೊಂಬೆಗಳ ಮೇಲೆ ಬಿದ್ದು ಅವುಗಳ ಪ್ರತಿಬಿಂಬ ಹೊರಗೆ ಕುಳಿತ ಪ್ರೇಕ್ಷಕರಿಗೆ ಆಕರ್ಷಕವಾಗಿ ಕಾಣುತ್ತದೆ. ಹಗಲು ನೋಡಿದಾಗ ಮಸಕುಮಸಕಾಗಿ ಕಾಣುವ ಈ ಗೊಂಬೆಗಳು ರಾತ್ರಿ ಹೊತ್ತು ದೀಪದ ಬೆಳಕಿನಲ್ಲಿ ಬಹಳ ಸುಂದರವಾಗಿ ಕಾಣುತ್ತವೆ. ಬಿಜಾಪುರ, ಬೆಳಗಾಂವಿ–ಈ ಭಾಗಗಳಲ್ಲಿ ಡೋಲು ಬಾರಿಸುವವನು ರಂಗದ ಹೊರಗೆ ಜನರ ಮಧ್ಯೆ ಉಳಿದು, ಕುಣಿಸುವವನು ಮಾತ್ರ ಒಳಗೆ ಸೇರಿಕೊಳ್ಳುತ್ತಾನೆ.

ಮೂಡಲಪಾಯದಲ್ಲಿ ಗೊಂಬೆಗಳ ಆಕೃತಿ ದೊಡ್ಡದಾಗಿರುವುದರಿಂದ ಅಟ್ಟದಂತೆ ದೊಡ್ಡದಾದ ರಂಗಮಂಟಪವನ್ನು ರಚಿಸುತ್ತಾರೆ. ಇಲ್ಲಿ ಕಲಾವಿದ ನಿಂತು ಗೊಂಬೆ ಕುಣಿಸುವುದುಂಟು. ಹೀಗೆ ಕುಣಿಸುವಾಗ ತಾನೂ ಕಾಲಿಗೆ ಗೆಜ್ಜೆ ಕಟ್ಟಿ ಗೊಂಬೆಕುಣಿತಕ್ಕೆ ತಕ್ಕಂತೆ ಹೆಜ್ಜೆಹಾಕುತ್ತಾನೆ.

ಗೊಂಬೆಗಳನ್ನು ಸಾಮಾನ್ಯವಾಗಿ ಜಿಂಕೆ ಅಥವಾ ಎಳೆ ಆಡಿನ ಚರ್ಮದಿಂದ ಮಾಡುತ್ತಾರೆ. ಕೆಲವು ಕಡೆಗಳಲ್ಲಿ ಕುರಿ, ಕತ್ತೆ ಮತ್ತು ಎಮ್ಮೆ ಇವುಗಳ ಚರ್ಮ ಬಳಸುವರು. ಚಿತ್ರ ತಯಾರಿಸಲು ಮೊದಲಿಗೆ ಚರ್ಮ ಹದಮಾಡಿಕೊಂಡು ಅನಂತರ ಅದರ ಮೇಲೆ ಚಿತ್ರ ಬರೆದು ಅನೇಕ ಗಿಡಮೂಲಿಕೆಗಳು, ಚಕ್ಕೆಗಳು ಮತ್ತು ಕೆಲವು ರಾಸಾಯನಿಕ ದ್ರವ್ಯಗಳನ್ನೆಲ್ಲಾ ಒಂದು ನಿಯಮಿತ ಕಾಲದವರೆಗೆ ಕರಗಿಸಿ ಬಣ್ಣ ತಯಾರುಮಾಡಿ ಹಾಕುತ್ತಾರೆ. ಅನಂತರ ಅವುಗಳನ್ನು ನೆರಳಿನಲ್ಲಿ

ಒಣಗಿಸುವರು. ಗೊಂಬೆಗಳು ಒಣಗಿ ಒರಟಾಗದೆ ಮೃದುವಾಗಿರುವ ಸಲುವಾಗಿ ಗಿಡಮೂಲಿಕೆಗಳಿಂದ ತಯಾರುಮಾಡಿದ ಎಣ್ಣೆಯನ್ನು ಆಗಾಗ್ಗೆ

ಪಕ್ಷಿ

ಲೇಪಿಸುವುದುಂಟು. ಗೊಂಬೆಗಳು ನೇರವಾಗಿ ನಿಲ್ಲಲು ಅವುಗಳಿಗೆ ಬಿದಿರಿನ ಕಡ್ಡಿ ಅಥವಾ ಲಾಳದ ಕಡ್ಡಿಗಳನ್ನು ಜೋಡಿಸಿರುತ್ತಾರೆ. ಗೊಂಬೆ ಆಡಿಸುವಾಗ ಶ್ರುತಿಗಾಗಿ ಉಪ್ಪಂಗ, ಮದ್ದಲೆ, ಮುಖವೀಣೆ - ಇವುಗಳ ಜೊತೆಗೆ ಹಾರ್ಮೋನಿಯಂ ಬಳಸುವುದುಂಟು. ಕೆಲವೆಡೆ ಜೋಳದ

ರಾಕ್ಷಸಿ

ಕಡ್ಡಿಯಿಂದ ಮಾಡಿದ ಬುರಿ ಬುರಿ ಅಥವಾ ಪಾವರೆ ಎಂಬ ವಾದ್ಯವನ್ನು ಬಳಸುವರು. ಹಿಮ್ಮೇಳವನ್ನು ಹೆಂಗಸರು ಗಂಡಸರು ಸೇರಿ ಹಾಡುತ್ತಾರೆ. ಶಿಳ್ಳೆಕ್ಯಾತ ಎಂಬ ತೊಗಲುಗೊಂಬೆ ಈ ಆಟದ ಜೀವನಾಡಿ. ಈ ಗೊಂಬೆ ನಾಟಕದ ಮೊದಲಿಂದ ಕೊನೆಯವರೆಗೆ ಅನೇಕ ಬಾರಿ ತನ್ನ ಮಡದಿ ಬಂಗಾರಕ್ಕನೊಡನೆ ರಂಗದ ಮೇಲೆ ಕಾಣಿಸಿಕೊಂಡು ಪ್ರೇಕ್ಷಕರ ಕುತೂಹಲವನ್ನು ಕೆರಳಿಸುತ್ತದೆ. ವ್ಯಂಗ್ಯ ಹಾಗೂ ಹಾಸ್ಯದ ಮಾತಿನಿಂದ ಜನರನ್ನು ನಗಿಸುವುದಷ್ಟೆ ಅಲ್ಲದೆ ಪಾತ್ರಗಳ ಜೊತೆಯಲ್ಲಿ ಕುಣಿಯುವುದು, ಅವರನ್ನು ಪ್ರೇಕ್ಷಕರಿಗೆ ಪರಿಚಯಿಸುವುದು ಮೊದಲಾದ ಕಾರ್ಯಗಳಲ್ಲಿ ತೊಡಗಿ ಜನರಿಗೆ ಮನರಂಜನೆ ಒದಗಿಸುತ್ತದೆ. ಇದರ ಅಭಿನಯ ಸೊಗಸಾಗಿರುತ್ತದೆ.



ಕುದುರೆ ಸವಾರ

ತೊಗಲುಗೊಂಬೆಯಾಟ ಆಡಿಸಿದರೆ ಮಳೆ ಬರುತ್ತದೆಂಬ ನಂಬಿಕೆ ಕೆಲವು ಕಡೆ ಕಂಡುಬರುತ್ತದೆ. ರಾಮಾಯಣ, ಮಹಾಭಾರತ ಮತ್ತು ಭಾಗವತ - ಇವುಗಳಿಗೆ ಸಂಬಂಧಿಸಿದ ಕಥೆಗಳು ಈ ಆಟದಲ್ಲಿ ಜನಪ್ರಿಯವಾಗಿವೆ. (ಟಿ.ಎಸ್.ಆರ್.)

**ತೊಣಚಿ** : ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ. ಹೊಯ್ಸಳರ ಕಾಲದಲ್ಲಿ ಪವಿತ್ರ ಸ್ಥಳವಾಗಿ ಪ್ರಾಮುಖ್ಯ ಪಡೆದಿತ್ತು. ತೊಳಂಚೆ ಅಂದಿನ ಹೆಸರು. ಇಲ್ಲಿ ದೊರಕಿರುವ 1047ರ ಒಂದು ಶಾಸನ ಹೊಯ್ಸಳ ಆಳಿಕೆಯ ಪ್ರಾಚೀನ ಶಾಸನಗಳಲ್ಲೊಂದು. ಗ್ರಾಮದ ಈಶಾನ್ಯದಲ್ಲಿ ಹೊಯ್ಸಳ ಶೈಲಿಯ ಎರಡು ಚಿಕ್ಕ ಶಿವಾಲಯಗಳು ಅಕ್ಕಪಕ್ಕದಲ್ಲಿವೆ. ಇವುಗಳಲ್ಲಿ ಉತ್ತರದ ಕಡೆ ಇರುವುದು ಬಸವೇಶ್ವರ ದೇವಾಲಯ. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ, ಅರ್ಧಮಂಟಪ ಮತ್ತು ನಂದಿಮಂಟಪಗಳಿವೆ. ನಂದಿಮಂಟಪದಲ್ಲಿರುವ ದೊಡ್ಡ ಬಸವನ ವಿಗ್ರಹದಿಂದ ದೇವಾಲಯಕ್ಕೆ ಈ ಹೆಸರು ಬಂತೆಂದು ತೋರುತ್ತದೆ. ಮೂಲತಃ ಇದಕ್ಕೆ ಸಿದ್ಧನಾಥ ದೇವಾಲಯವೆಂಬ ಹೆಸರಿತ್ತೆಂದೂ ಸು.1132ರ ರಚನೆಯೆಂದೂ ಇಲ್ಲಿನ ಶಾಸನದಿಂದ ತಿಳಿಯುತ್ತದೆ. ದೇವಾಲಯ ಚಿಕ್ಕದಾದರೂ ಸುಂದರ ಕಟ್ಟಡ. ನವರಂಗದ ನಾಲ್ಕು ಕಂಬಗಳನ್ನು

ನಾಜೂಕಾಗಿ ಕೆತ್ತಲಾಗಿದೆ. ಗರ್ಭಗೃಹ, ಸುಕನಾಸಿ, ನವರಂಗ ಹಾಗೂ ನಂದಿ ಮಂಟಪಗಳಲ್ಲಿ ಸುಂದರವಾದ ಆಳವಾಗಿ ಕೆತ್ತಿರುವ ಪದ್ಮಭುವನೇಶ್ವರಿಗಳಿವೆ. ನವರಂಗದಲ್ಲಿ ಹೊಯ್ಸಳ ಕಾಲದ ಗಣಪತಿ, ಸಪ್ತಮಾತೃಕಾ ಮತ್ತು ಸೂರ್ಯ ವಿಗ್ರಹಗಳಿವೆ. ಪಕ್ಕದ ಒಂದು ಕೋಣೆಯಲ್ಲಿ ಚೆನ್ನಿಗರಾಯ (ಕೇಶವ) ವಿಗ್ರಹವಿದೆ. ಗರ್ಭಗೃಹದ ಮೇಲೆ ಕಲ್ಲಿನ ಶಿಖರವಿದೆ (ಇದಕ್ಕೆ ಗಾರೆ ಬಳಿಯಲಾಗಿದೆ). ದಕ್ಷಿಣದೆಡೆಗಿರುವ ಇನ್ನೊಂದು ದೇವಾಲಯ ಸಾಮಾನ್ಯ ರೀತಿಯ ರಚನೆ. 1047ರ ಹೊಯ್ಸಳ ಶಾಸನದಲ್ಲಿ ಉಲ್ಲೇಖಿತವಾಗಿರುವ ಅಂಕಕಾರೇಶ್ವರ ದೇವಾಲಯ ಇದೇ ಇರಬಹುದೆಂದು ಊಹಿಸಲಾಗಿದೆ. ಹಾಗಿದ್ದಲ್ಲಿ ಹೊಯ್ಸಳ ಶೈಲಿಯ ಉಗಮಕ್ಕೆ ಮುಂಚಿನ ಹೊಯ್ಸಳ ಕಾಲದ ದೇವಾಲಯದಲ್ಲಿ ಇದೂ ಒಂದೆಂದು ಪರಿಗಣಿಸಬಹುದು. (ಎಸ್.ಇ.)

**ತೊಣ್ಣೂರು** : ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಒಂದು ಹಳ್ಳಿ. ಕಸಬೆಯಿಂದ ವಾಯವ್ಯಕ್ಕೆ 8ಕಿಮೀ ದೂರದಲ್ಲಿದೆ. ಶಾಸನಗಳಲ್ಲಿ ಇದು ಯಾದವಪುರ, ಯಾದವನಾರಾಯಣಪುರ, ಯಾದವನಾರಾಯಣ ಚತುರ್ವೇದಿ ಮಂಗಲಂ ಎಂದು ಉಲ್ಲೇಖವಾಗಿದೆ. ತೊಂಡ ಎಂದರೆ ಭಕ್ತ, ತೊಂಡನೂರು ಎಂದರೆ ಭಕ್ತನ ಊರು ಎಂದು ಅರ್ಥ. ಇದು ಹಿಂದೆ ಹೊಯ್ಸಳರ ಉಪರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ.

ನರಸಿಂಹಸ್ವಾಮಿ ವಿಗ್ರಹ, ತೊಣ್ಣೂರು

ವಿಷ್ಣುವರ್ಧನ ಚೋಳವಿಜಯದ ಕುರುಹಾಗಿ ಕಟ್ಟಿಸಿದ ಮೂರು ನಾರಾಯಣ (ಬೇಲೂರಿನ ವಿಜಯನಾರಾಯಣ, ತಲಕಾಡಿನ ಕೀರ್ತಿನಾರಾಯಣ, ತೊಣ್ಣೂರಿನ ನಂಬಿನಾರಾಯಣ) ದೇವಾಲಯಗಳಲ್ಲಿ ಒಂದಾದ ನಂಬಿನಾರಾಯಣ ದೇವಾಲಯ ಇಲ್ಲಿರುವ ದೇವಾಲಯಗಳಲ್ಲೆಲ್ಲ ದೊಡ್ಡದೂ ಪ್ರಾಚೀನವೂ ಆಗಿದೆ. ಈ ದೇವಸ್ಥಾನ ವಿಷ್ಣುವರ್ಧನನ ಮೇಲ್ವಿಚಾರಣೆಯಲ್ಲಿ ದಂಡನಾಯಕ ಸುರಿಗೆಯ ನಾಗಯ್ಯನಿಂದ ಕಟ್ಟಲ್ಪಟ್ಟಿತ್ತೆಂದು ದೇವಸ್ಥಾನದ ನವರಂಗದಲ್ಲಿರುವ ಶಾಸನದಿಂದಲೂ ಮತ್ತು ಲಕ್ಷ್ಮೀಗುಡಿಯ ಮುಂದಿರುವ ಕಂಬದ ಮೇಲಿನ ಶಾಸನದಿಂದಲೂ ತಿಳಿಯುತ್ತದೆ. ಮೂಲೆಗಳಲ್ಲಿ ಸಿಂಹಲಲಾಟಗಳೂ ಮೇಲ್ಛಾವಣಿಯ

ನಂಬಿನಾರಾಯಣ ದೇವಸ್ಥಾನ

ಮಧ್ಯಭಾಗದಲ್ಲಿ ಪದ್ಮವೂ ಇರುವ ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ 6' ಎತ್ತರದ ನಾರಾಯಣ ವಿಗ್ರಹವಿದೆ. ಹೂವಿನ ಮತ್ತು ಮಣಿಗಳ ಕೆಲಸ ಮಾಡಿರುವ ನವರಂಗದ ಬಳಪದ ಕಲ್ಲಿನ ಕಂಬಗಳು ಹೊಯ್ಸಳ ಶೈಲಿಯಲ್ಲಿವೆ. ಗೋಡೆಗಂಬಗಳೂ ಗೂಡುಗಳೂ ಇರುವ ಹೊರಗಿನ ಗೋಡೆಯು ಕಣಶಿಲೆಯಿಂದ ಕಟ್ಟಲಾಗಿದ್ದರೂ ಹೊಯ್ಸಳ ಛಾಯೆ ಇದೆ. ಇಟ್ಟಿಗೆಯಲ್ಲಿ ಕಟ್ಟಲಾಗಿರುವ ವಿಮಾನದ ಮೇಲಿನ ಗೋಪುರವೂ ವರ್ತುಲಾಕಾರದ 50 ಕಂಬಗಳಿರುವ ಮುಖಮಂಟಪವೂ ಅಷ್ಟಮುಖಾಕೃತಿಯ 40 ಕಂಬಗಳಿರುವ ಪಾತಾಳಾಂಕಣವೂ ಹೊಯ್ಸಳರ ಅನಂತರಕಾಲದ ಕಟ್ಟಡಗಳು. ಆದರೆ ಹೊರಪ್ರಾಕಾರದಲ್ಲಿರುವ ಲಕ್ಷ್ಮೀಗುಡಿ ವಿಷ್ಣುವರ್ಧನನ ಕಾಲದಲ್ಲೇ ಕಟ್ಟಲಾಗಿದೆ ಎಂದು ಹೇಳುವುದಕ್ಕೆ ಅಲ್ಲಿಯೇ ಕಂಬದ ಮೇಲಿರುವ ವಿಷ್ಣುವರ್ಧನನ ಶಾಸನ ಆಧಾರ. ಮಹಾದ್ವಾರದ ಮುಂದೆ 16 ಮೂಲೆಗಳುಳ್ಳ ಗರುಡಗಂಬವಿದೆ.

ಗುಡ್ಡದ ಮೇಲಿರುವ ಯೋಗಾನರಸಿಂಹ ದೇವಸ್ಥಾನ 12ನೆಯ ಶತಮಾನದಲ್ಲಿ ನಿರ್ಮಿತವಾದ್ದು. ಇಲ್ಲಿ ರಾಮಾನುಜರು ಏಕಕಾಲಕ್ಕೆ ಸಾವಿರ ಜೈನರೊಡನೆ ವಾದಮಾಡಿ ಗೆದ್ದರೆಂಬುದಾಗಿ ಐತಿಹ್ಯ. ಅದರ ಕುರುಹಾಗಿ ಗಾರೆಯಲ್ಲಿ ಮಾಡಿರುವ ತಲೆಯ ಮೇಲೆ ಏಳು ಹೆಡೆಯ ಆದಿಶೇಷನಿರುವ ರಾಮಾನುಜರ ಮೂರ್ತಿ ಇಲ್ಲಿದೆ. ಇದು ಬಹಳ ಈಚಿನದೆಂದು ಕಂಡುಬರುತ್ತದೆ. ರಾಮಾನುಜರು ತೊಣ್ಣೂರಿಗೆ ಭೇಟಿಕೊಟ್ಟಿದ್ದರೆಂಬುದಾಗಿಯೂ ವಿಷ್ಣುವರ್ಧನ, ನರಸಿಂಹ, ಬಲ್ಲಾಳ ಮುಂತಾದ ಹೊಯ್ಸಳ ರಾಜರು ರಾಮಾನುಜ ಕೂಟಕ್ಕೆ ದತ್ತಿಗಳನ್ನು ಬಿಟ್ಟಿರುವುದಾಗಿಯೂ ತೊಣ್ಣೂರಿನಲ್ಲಿರುವ ಶಾಸನಗಳಿಂದ ತಿಳಿಯುತ್ತದೆ. ಪಾಳುಬಿದ್ದಿರುವ ಕೈಲಾಸೇಶ್ವರ ದೇವಸ್ಥಾನ ಮತ್ತು ವಿಟ್ಟಿರುಂದ ಪೆರುಮಾಳ್ (ವೀಟ್ರಿರುಂದ-ಕುಳಿತಿರುವ) ಅಥವಾ ಕೃಷ್ಣನ ದೇವಸ್ಥಾನ 1ನೆಯ ನರಸಿಂಹನ ಕಾಲದಲ್ಲಿ 1158ರಲ್ಲಿ ಕಾರ್ಯೆಗುಡಿಯ ಕೂತ್ತಾಡಿ ದಂಡನಾಯಕನಿಂದ ನಿರ್ಮಿಸಲಾದವು.

ತೊಣ್ಣೂರಿಗೆ ನೈಋತ್ಯದಲ್ಲಿ ಸಣ್ಣ ಗುಡ್ಡದ ಮೇಲೆ ಸೈಯದ್ ಸಾಲಾರ್ ಮಸೂದ್ ಘಾಜಿಯ ದರ್ಗಾ ಇದೆ. ಇದರ ಕಾಲ 760 ಹಿಜ್ರಿ (1358) ಎಂದು ಬರೆಯಲಾಗಿದೆ. ಇಲ್ಲಿನ ಹಜಾರದಲ್ಲಿರುವ ಅನೇಕ ಕಂಬಗಳ ಮೇಲೆ ಹಿಂದು ದೇವತೆಗಳ ಶಿಲ್ಪಗಳನ್ನು ಕಾಣಬಹುದು. ಬಾಗಿಲಿನ ಹತ್ತಿರ ಅನೇಕ ಮಾಸ್ತಿಕಲ್ಲುಗಳಿವೆ. ಇದರ ಹತ್ತಿರವಿರುವ ಎರಡು ಸಮಾಧಿಗಳು ಟಿಪ್ಪುವಿನ ಸಂಬಂಧಿಕರದು.

ಇಲ್ಲಿರುವ ಮೋತೀತಲಾಬ್ ಎಂಬ ಕೆರೆಯನ್ನು ರಾಮಾನುಜರು ಕಟ್ಟಿಸಿ ಅದಕ್ಕೆ ತಿರುಮಲಸಾಗರ ಎಂದು ಹೆಸರಿಟ್ಟಿದ್ದಾಗಿ ಐತಿಹ್ಯ. ಈ ಕೆರೆಯಲ್ಲಿ ಅವರಿಗೆ ಒಂದು ಕೃಷ್ಣನ ವಿಗ್ರಹ ಸಿಕ್ಕಿತು. ಆ ವಿಗ್ರಹವೇ ಈಗಿನ ಅಹೋಬಲ ಮಠದಲ್ಲಿರುವ ಕೃಷ್ಣನ ವಿಗ್ರಹ ಎಂಬ ಹೇಳಿಕೆ

ಇದೆ. ಹೊಯ್ಸಳರ ಕಾಲದ ಕಟ್ಟಡದ ಕಲ್ಲುಗಳನ್ನು ಸೋಪಾನ ಕಟ್ಟುವುದಕ್ಕೆ ಉಪಯೋಗಿಸಲಾಗಿದೆ. ಈ ಸೋಪಾನದಲ್ಲಿ ಸಳ, ಗಜೇಂದ್ರಮೋಕ್ಷ ಮುಂತಾದ ಹೊಯ್ಸಳ ಶಿಲ್ಪಗಳು ಅಲ್ಲಲ್ಲಿ ಕಾಣುತ್ತವೆ. ಈ ಸೋಪಾನವೂ ಹೊಯ್ಸಳರ ಕಾಲದಲ್ಲಿ ಕಟ್ಟಲ್ಪಟ್ಟು ಟಿಪ್ಪುವಿನ ಕಾಲದಲ್ಲಿ ಜೀರ್ಣೋದ್ಧಾರವಾದುದೆಂದು ಹೇಳಲಾಗಿದೆ. 1764ರಲ್ಲಿ ದಖನ್ನಿನ ಸುಬೇದಾರನಾದ ನಾಸಿರ್ ಜಂಗ್ ಎಂಬುವನು ಅದರ ತಿಳಿಯಾದ ನೀರನ್ನು ನೋಡಿ ಮೋತೀತಲಾಬ್ (ಮುತ್ತಿನ ಸರೋವರ) ಎಂದು ಕರೆದ. (ಆರ್.ವಿ.)

**ತೊರವಿ (ತೊರವೆ) :** ಬಿಜಾಪುರ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ಬಿಜಾಪುರದ ಪಶ್ಚಿಮಕ್ಕೆ 8ಕಿಮೀ ದೂರದಲ್ಲಿ ಅಥಣಿಗೆ ಹೋಗುವ ಮಾರ್ಗದಲ್ಲಿದೆ. ಇದನ್ನು ತ್ವರಿತಾಲಯ, ನೌಲಾಖಪುರ, ನವರಸಪುರ ಎಂಬ ಹೆಸರುಗಳಿಂದಲೂ ಕರೆಯುವುದುಂಟು. ಇಲ್ಲಿ ಒಂದು ತೊರೆ ಹರಿಯುವುದರಿಂದ ತೊರವಿ ಎಂಬ ಹೆಸರು ಬಂದಿರುವಂತೆ ತೋರುತ್ತದೆ. ಪ್ರಾಚೀನದಲ್ಲಿ ತೊರವಿ ಒಂಬತ್ತು ಲಕ್ಷ ಮನೆಗಳಿಂದ ಕೂಡಿದ ಪ್ರಸಿದ್ಧ ಪಟ್ಟಣವಾಗಿದ್ದು ದಕ್ಷಿಣಕಾಶಿ ಎಂದು ಹೆಸರುವಾಸಿಯಾಗಿತ್ತು. ಬಾದಾಮಿಯ ಚಳುಕ್ಯರ ಹಾಗೂ ದೇವಗಿರಿಯ ಸೇವುಣರ ಕಾಲದ ಅನೇಕ ಕನ್ನಡ ಶಾಸನಗಳಲ್ಲಿ ತೊರವಿಯ ಉಲ್ಲೇಖವಿದೆ.

2ನೆಯ ಇಬ್ರಾಹಿಂ ಆದಿಲ್‍ಷಾ ತನ್ನ ಆಳಿಕೆಯ ಕಾಲದಲ್ಲಿ ಇಲ್ಲಿ ಹೊಸ ರಾಜಧಾನಿಯನ್ನು ಸ್ಥಾಪಿಸುವ ಉದ್ದೇಶದಿಂದ ಅನೇಕ ಅರಮನೆ ಮತ್ತು ಇತರ ಕಟ್ಟಡಗಳನ್ನು ಕಟ್ಟಿಸಿದ. ಇಂದು ಅವುಗಳ ಅವಶೇಷ ಮಾತ್ರ ಉಳಿದಿವೆ. ಇವುಗಳಲ್ಲಿ ನವರಸ್ ಅಥವಾ ಸಂಗೀತ ಮಹಲ್ ಪ್ರಖ್ಯಾತವಾದದ್ದು. ಇದು ಬಿಜಾಪುರಕೋಟೆಯ ಒಳಗಿರುವ ಗಗನಮಹಲ್ ರಚನೆಯನ್ನು ಹೋಲುತ್ತದೆ. ಈ ಮಹಲನ್ನು ಎರಡು ಸಣ್ಣ ತೊರೆಗಳು ಸುತ್ತುವರಿದಿವೆ. ಬೆಟ್ಟ ಗುಡ್ಡಗಳ ಹಿನ್ನೆಲೆ ಈ ಕಟ್ಟಡಕ್ಕೆ ಸೌಂದರ್ಯವನ್ನು ಒದಗಿಸಿದೆ. ಒಂದು ಕಾಲಕ್ಕೆ ತೊರವಿ, ಬಿಜಾಪುರ ಒಂದೇ ಆಗಿದ್ದವು. ಇಂದು ತೊರವಿಯಿಂದ ಬಿಜಾಪುರದವರೆವಿಗೂ ಇರುವ ರಸ್ತೆಯ ಇಕ್ಕೆಲಗಳಲ್ಲಿ ರಾಶಿಬಿದ್ದಿರುವ ಮಣ್ಣು ದಿಬ್ಬಗಳು ಈ ಎರಡೂ ಊರುಗಳ ನಡುವೆ ಇದ್ದ ಉತ್ತಮ ಹೆದ್ದಾರಿಯೊಂದರ ಕುರುಹುಗಳಾಗಿವೆ. ಇಲ್ಲಿ ಅನೇಕ ದೇವಾಲಯಗಳೂ ಮಸೀದಿಗಳೂ ಇವೆ. ಇಲ್ಲಿರುವ ನರಸಿಂಹ ದೇವಾಲಯ ಹೆಚ್ಚು ಪ್ರಸಿದ್ಧವಾದುದು. ಹಿರಣ್ಯಕಶಿಪುವನ್ನು ವಧಿಸುವ ಭಂಗಿಯಲ್ಲಿರುವ ಉಗ್ರನರಸಿಂಹನ ವಿಗ್ರಹ 3 ಅಡಿ ಎತ್ತರವಿದ್ದು ಇದನ್ನು ಸಾಲಿಗ್ರಾಮ ಶಿಲೆಯಿಂದ ತಯಾರಿಸಲಾಗಿದೆ. ಈ ವಿಗ್ರಹವನ್ನು ಬಾಗೇವಾಡಿ ತಾಲ್ಲೂಕಿನ ಚಿಮ್ಮಲಗಿ ಗ್ರಾಮದಿಂದ ತಂದು ಸ್ಥಾಪಿಸಲಾಗಿದೆಯೆಂದು ಪ್ರತೀತಿ. ವಿಗ್ರಹದ ಬಳಿ ಒಂದು ಶಿವಲಿಂಗವಿದೆ. ಸೋಮನಾಥ‘ಕವಿ (ಸು.1650) ತನ್ನ ರುಕ್ಮಾಂಗದ ಚರಿತೆಯಲ್ಲಿ ತೊರವೆಯ ನರಸಿಂಹನನ್ನು ಸ್ಮರಿಸಿದ್ದಾನೆ. ಪುರಂದರದಾಸರು ತೊರವೆಯ ನರಸಿಂಹನ ಬಗೆಗೆ ಅನೇಕ ಪದಗಳನ್ನು ರಚಿಸಿದ್ದಾರೆ. ತೊರವೆ ರಾಮಾಯಣವನ್ನು ರಚಿಸಿದ ಕುಮಾರ ವಾಲ್ಮೀಕಿ (ನೋಡಿ: ತೊರವೆ ನರಹರಿ) ಇಲ್ಲಿಯವನೆಂದು ನಂಬಲಾಗಿದೆ. ಊರಿನ ಒಳಗೆ 400 ಗಜ ಚಚ್ಚೌಕವುಳ್ಳ ನರಸಿಂಹತೀರ್ಥ ಎಂಬ ಒಂದು ಕೊಳವಿದೆ. ತೊರವಿಯಲ್ಲಿ ಏಪ್ರಿಲ್ ತಿಂಗಳಿನಲ್ಲಿ ಒಂದು ದಿನದ ಮಟ್ಟಿಗೆ ವಾರ್ಷಿಕ ಜಾತ್ರೆ ನಡೆಯುತ್ತದೆ. (ಎಲ್.ಆರ್.ಕೆ.)

**ತೊಳಹರ :** ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಸುರಾಲದಲ್ಲಿ ಹೆಸರಾಂತ ತುಳುವ ತುಂಡರಸರಾಗಿ ಮೆರೆದ ಒಂದು ಮನೆತನ. ಸು.11ನೆಯ ಶತಮಾನದ ಹೊತ್ತಿಗೆ ಉಚ್ಛ್ರಾಯ ಸ್ಥಿತಿಗೇರಿದ ಈ ಮನೆತನದವರು ಬಹುಶಃ ಮೂಲತಃ ಸಾಂತಳಿಗೆಯವರು. 12ನೆಯ ಶತಮಾನದಲ್ಲಿ ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಪ್ರಬಲಗೊಂಡರು. ಸುರಾಲ, ಶಂಕರನಾರಾಯಣ, ಕುಡಿ ಮುಂತಾದ ಸ್ಥಳಗಳಲ್ಲಿ ದಾನದತ್ತಿಗಳನ್ನು ಬಿಟ್ಟ ಶಿಲಾಶಾಸನಗಳು ಇವರ ವೀರತೆಯನ್ನು ಹೇರಳವಾಗಿ ಪ್ರಶಂಸಿಸಿರುವುವು. ಇಕ್ಕೇರಿ ಪ್ರಭುತ್ವ ಕಾಲದಲ್ಲಿ ಇವರ ಆಳಿಕೆ ಶಿಥಿಲಗೊಂಡಿತು.

ಇವರು ಜೈನ ಮತಸ್ಥರಾದರೂ ಸುರಾಲದ ಮಹಲಿಂಗೇಶ್ವರನ ಭಕ್ತರಾಗಿದ್ದರು. ವಿಜಯನಗರದ ಅರಸರ ಬಲಗೈ ಎನಿಸಿದ್ದರು. ಸೋಳನಿಗಂಬ ತೊಳಹ, ಬೊಮ್ಮನ್ನಾಡಿ ತೊಳಹ, ಮಾದಾಡಿ ತೊಳಹ, ನಾಗಾಚ ತೊಳಹ ಮೊದಲಾದವರು ಈ ವಂಶದವರಲ್ಲಿ ಪ್ರಮುಖರು. (ಆರ್.ಟಿ.ಎಸ್.)

**ತೋಗೆರೆ ನಂಜುಂಡಶಾಸ್ತ್ರಿ :** 20ನೆಯ ಶತಮಾನದ ಆರಂಭದ ದಶಕಗಳಲ್ಲಿ ಕನ್ನಡ ಭಾಷೆ ಸಾಹಿತ್ಯ ವಿಮರ್ಶೆಗಳ ಕ್ಷೇತ್ರದಲ್ಲಿ ಗಣನೀಯ ಕೆಲಸ ಮಾಡಿದ ಪಂಡಿತರಲ್ಲೊಬ್ಬರು. ಆಗಿನ ಮೈಸೂರು ಸರ್ಕಾರದ ಶಾಸನ ಇಲಾಖೆಯಲ್ಲಿ ಆರ್.ನರಸಿಂಹಾಚಾರ್ಯರ ಸಿಬ್ಬಂದಿಯಲ್ಲಿ ಒಬ್ಬರಾಗಿ ಸ್ವಲ್ಪ ಕಾಲ ಕೆಲಸ ಮಾಡಿದ ಇವರು ಅನಂತರ ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿಯೂ ಇದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಪಂಡಿತರಲ್ಲಿ ಒಬ್ಬರಾಗಿದ್ದ ಇವರು, ಪರಿಷತ್ತಿನ ವಿದ್ವತ್ಸಂಬಂಧವಾದ ಕಾರ್ಯಗಳಲ್ಲಿ ಹಲವು ಬಗೆಯಲ್ಲಿ ಶ್ರಮಿಸಿದರು. ಪಂಪಭಾರತದ ಸಂಪಾದನ ಕಾರ್ಯದಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರಿಗೆ ನೆರವಾಗಿದ್ದರು. ಪಂಪಭಾರತದಲ್ಲಿಯ ಕ್ಲಿಷ್ಟಪದಗಳ ನಿಘಂಟನ್ನು ಸಿದ್ಧಪಡಿಸುವಲ್ಲಿ ಇವರಿಂದ ಹೆಚ್ಚಿನ ಸಹಾಯ ದೊರೆತಂತೆ ತಿಳಿಯುತ್ತದೆ. ಕನ್ನಡ ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ (ಕನ್ನಡ) ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಕೆಲವು ವಿದ್ವತ್ಪೂರ್ಣ ಲೇಖನಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಭಾಷಾಲಿಪಿ, ಕರ್ನಾಟಕ ವರ್ಣಸಮಾಮ್ನಾಯ, ಕನ್ನಡದಲ್ಲಿಯ ಕೆಲವು ಶಬ್ದಗಳ ಸಾಧುತ್ವ ವಿಚಾರ, ನಾಟಕ ವಿಮರ್ಶೆ, ರಸ ನಿರೂಪಣಂ - ಇವು ಇವರ ಲೇಖನಗಳಲ್ಲಿ ಕೆಲವು. ಇವುಗಳಲ್ಲಿ ಇವರ ಆಧುನಿಕ ಸಂಶೋಧನ ದೃಷ್ಟಿಯ ನಿಷ್ಪಕ್ಷ ಪಾಂಡಿತ್ಯವನ್ನು ಗುರುತಿಸಬಹುದು. (ಟಿ.ವಿ.ವಿ.)

**ತೋನ್ಸೆ :** ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಒಂದು ಗ್ರಾಮ. ಕಲ್ಯಾಣಪುರ-ಕೆಮ್ಮಣ್ಣು ಹಾದಿಯಲ್ಲಿ ಉಡುಪಿಯಿಂದ 8ಕಿಮೀ ಉತ್ತರಕ್ಕೆ ಅರಬ್ಬೀ ಸಮುದ್ರದ ದಂಡೆಯ ಮೇಲಿದೆ.

ಇಲ್ಲಿ ಖಂಡಿಗೆ ವಿನಾಯಕ, ದುರ್ಗಾಪರಮೇಶ್ವರಿ, ಪಟ್ಟಾಭಿ ರಾಮಚಂದ್ರ, ಪಡುಕುದುರು ಗಣಪತಿ, ಜನಾರ್ದನ, ಲಕ್ಷ್ಮೀನಾರಾಯಣ ಎಂಬ ದೇವಾಲಯಗಳಿವೆ. ಇವುಗಳಲ್ಲಿ ದುರ್ಗಾ ಮತ್ತು ಗಣಪತಿ ದೇವಾಲಯಗಳು ವಿಜಯನಗರ ಕಾಲದವು. ಇಲ್ಲಿ ಒಂದು ಇಗರ್ಜಿ, ಐದು ಮಸೀದಿಗಳು, ಆರು ಭಜನಮಂದಿರಗಳು, ಐದು ಪ್ರಾಥಮಿಕ ಶಾಲೆ, ಒಂದು ಜೂನಿಯರ್ ಕಾಲೇಜು, ಒಂದು ಬಾಲಿಕೆಯರ ಪ್ರೌಢಶಾಲೆ, ಒಂದು ವಾಣಿಜ್ಯ ಶಾಲೆ, ಒಂದು ಗ್ರಂಥಾಲಯ ಇವೆ.

ಇಲ್ಲಿನ ಹವೆ ತುಂಬ ಹಿತಕರವಾಗಿದೆ. ಇಲ್ಲಿನ ಕಡಲದಂಡೆ ಸುಂದರ ತಾಣ. ತೋನ್ಸೆಗೆ ಸಮೀಪದ ತೋನ್ಸೆಪಾಡು ಎಂಬ ದ್ವೀಪ ಪ್ರವಾಸಿಗರ ಕಣ್ಮನಸೆಳೆಯುವ ವಿಹಾರಕೇಂದ್ರವಾಗಿದೆ.

ಶಾಸನಗಳಲ್ಲಿ ಉಲ್ಲೇಖಿತವಾದ ತೋನ್ಸೆ ಅಥವಾ ತೊಣಾಚೆ ಎಂಬ ಹೆಸರು ಸೇಂಟ್ ಥಾಮಸ್ ಎಂಬುದರಿಂದ ಬಂದಿರಬಹುದೆಂದು ಚರಿತ್ರಕಾರರು ಅಭಿಪ್ರಾಯಪಡುತ್ತಾರೆ. (ಎಸ್.ಪಿ.ಕೆ.)

**ತ್ರಿಭುವನತಾತ :** ಕನ್ನಡದಲ್ಲಿ ಕೆಲವು ರಗಳೆಗಳನ್ನು ಬರೆದಿರುವ ಕವಿ. ಸು.1165ರಲ್ಲಿದ್ದಂತೆ ತಿಳಿದುಬರುತ್ತದೆ. ಈತ ಆಂಧ್ರ ಪ್ರದೇಶ ನಿವಾಸಿ. ವೈಷ್ಣವ ಬ್ರಾಹ್ಮಣ. ಈ ಕವಿಯ ವಿಚಾರವಾಗಿ ಪದ್ಮಣಾಂಕ (ಸು.1385) ಪದ್ಮರಾಜಪುರಾಣದಲ್ಲಿ ತನ್ನ ವಂಶಸ್ಥನಾದ ಕೆರೆಯ ಪದ್ಮರಸನ ಮಹಿಮೆಯನ್ನು ಹೊಗಳುವಾಗ ಪ್ರಸ್ತಾಪಿಸಿದ್ದಾನೆ.

ತ್ರಿಭುವನತಾತ 'ಕೇಶವಂಗಧಿಕ ದೈವವಿಲ್ಲಾ ವೈಷ್ಣವವೆ ಶಾಶ್ವತಂ ಇನಿತರ್ಕೆ ಸಂದೇಹವಿಲ್ಲ' ಎಂದು ಹೋದ ಕಡೆಯಲ್ಲೆಲ್ಲ ಸಾರುತ್ತ ಕಡೆಗೆ ಕರ್ನಾಟಕಕ್ಕೆ ಬಂದು ದೋರಸಮುದ್ರದ ರಾಜ ನರಸಿಂಹ ಬಲ್ಲಾಳನನ್ನು ಕಂಡ. ಬಲ್ಲಾಳನ ಮಂತ್ರಿ ಕೆರೆಯ ಪದ್ಮರಸನಿಗೂ ತಾತನಿಗೂ ನಡೆದ ವಾದದಲ್ಲಿ ಪದ್ಮರಸ ಗೆದ್ದು ಶಿವಪಾರಮ್ಯವನ್ನು ಸ್ಥಾಪಿಸಿದ. ಮೊದಲೇ

ಮಾಡಿಕೊಂಡ ಕರಾರಿನಂತೆ ತ್ರಿಭುವನತಾತ ಪದ್ಮರಸನಿಗೆ ಶಿಷ್ಯನಾಗಿ ವೀರಶೈವ ಮತವನ್ನು ಸ್ವೀಕರಿಸಿದ.

ಪದ್ಮರಾಜ ಪುರಾಣದಲ್ಲಿ ಬರುವ ಈ ವಿಷಯವನ್ನು ಕೆರೆಯ ಪದ್ಮರಸನ ಮಗನಾದ ಪದ್ಮರಸ (ಸು.1180) ತನ್ನ ಕೃತಿಯಾದ ಸಾನಂದಚರಿತೆಯ ಕಥಾಗರ್ಭ ಸಂಧಿಯಲ್ಲೂ ಮುಂದೆ ದೋರಾಂಬುಧಿಯ ರಾಮಣ್ಣ, ಹಂಪೆಯ ರಾಘವಾಂಕ, ಹುಲಿಗೆರೆಯ ಮಾಯಿದೇವ, ಗುರುಭಕ್ತ ಕಾಮಣ್ಣ, ದೇವರಸ ಮೊದಲಾದ ಶಿವಶರಣರೂ ಪುಷ್ಟೀಕರಿಸಿದ್ದಾರೆ.

ತ್ರಿಭುವನತಾತ ಲಲಿತ ರಗಳೆಯಲ್ಲಿ ಬರೆದಿರುವ ಗುರುರಗಳೆ ಗುರುವಿನ ಮಹಿಮೆಯನ್ನು ಕೊಂಡಾಡುತ್ತದೆ. ಗುರುಶರಣು ಎಂಬುದಾಗಿ ಪ್ರತಿಪಂಕ್ತಿಯಲ್ಲಿಯೂ ಅಂತ್ಯಗೊಳ್ಳುವ ಈ ರಗಳೆಗೆ ಆದಿ ಅಂತ್ಯಗಳಲ್ಲಿ ಬರುವ ಕಂದಗಳು ಗುರು ವಿಶ್ವೇಶ ಎಂಬ ಅಂಕಿತದಿಂದೊಡಗೂಡಿವೆ. ಈ ರಗಳೆಗೆ ಶಾಂತಮಲ್ಲ (ಸು.1650) ಒಂದು ಟೀಕೆ ಬರೆದಿದ್ದಾನೆ. ಮಹಾದೇವ ಎಂದು ಮುಗಿಯುವ, ಉತ್ಸಾಹಛಂದಸ್ಸಿನಲ್ಲಿರುವ ಮಹಾದೇವ ರಗಳೆ ಶಿವನ ಪಾರಮ್ಯವನ್ನು ಹೊಗಳುತ್ತದೆ. ಇದರಲ್ಲಿ ತಿರುನೀಲಕಂಠ, ಗುಂಡಬೊಮ್ಮಯ್ಯ, ಸಿರಿಯಾಳ ಚೋಳಿಯಕ್ಕ ಮೊದಲಾದ ಶಿವಶರಣರನ್ನು ಹೆಸರಿಸಿದೆ. ಈ ರಗಳೆಯ ಅಂತ್ಯದಲ್ಲಿರುವ ಕಂದಪದ್ಯದಲ್ಲಿಯೂ ಗುರು ವಿಶ್ವೇಶ ಎಂಬ ಅಂಕಿತ ದೊರಕುತ್ತದೆ. ಇದೇ ರೀತಿಯ ಅಂಕಿತ ಅಮ್ಮವ್ವೆಯ ರಗಳೆ, ಪಗಲ್ಚೋಳನ ರಗಳೆ, ಚೋಳಿಯಕ್ಕನ ರಗಳೆಗಳಲ್ಲಿ ಉಕ್ತವಾಗಿರುವುದರಿಂದ ಈ ರಗಳೆಗಳ ಕರ್ತೃವೂ ತ್ರಿಭುವನತಾತನೇ ಎಂಬುದು ಸ್ಪಷ್ಟ.

ತ್ರಿಭುವನತಾತನ ಗುರುವಾದ ಕೆರೆಯ ಪದ್ಮರಸನ ಇಷ್ಟದೈವ ವಿಶ್ವೇಶ; ಇವನ ಇಷ್ಟದೈವ ಹಾಗೂ ಅಂಕಿತ ಗುರುವಿಶ್ವೇಶ. *

**ತ್ರಿವಿಕ್ರಮ ಪಂಡಿತ :** ಸು.1188. ಒಬ್ಬ ಶಾಸನಕವಿ. ಎರಡನೆಯ ವೀರಬಲ್ಲಾಳನ (1173-1220) ಆಸ್ಥಾನ ವಿದ್ವಾಂಸನಾಗಿದ್ದಂತೆ ತೋರುತ್ತದೆ. ಈತ ಅರಸೀಕೆರೆಯ 55(1187), 7(1189) ಹಾಗೂ 44(1189)ನೆಯ ಶಾಸನಗಳನ್ನು ಬರೆದಂತೆಯೂ ಹರಿಹರಸೂರಿ ಬರೆದ 139ನೆಯ (1194) ಶಾಸನವನ್ನು (ಹಳೆಯ ಶಾಸನ ಸಂಪುಟ) ತಿದ್ದಿದಂತೆಯೂ ತಿಳಿದುಬರುತ್ತದೆ. ಅರಸೀಕೆರೆಯ 205ನೆಯ ಶಾಸನವನ್ನೂ ಈತನೇ ಬರೆದಂತೆ ಆ ಶಾಸನದ ಕೊನೆಯ ತ್ರಿವಿಕ್ರಮಪಂಡಿತರ ಪದ್ಯ ಎಂಬ ಮಾತಿನಿಂದ ತಿಳಿಯುತ್ತದೆ. ಈ ಶಾಸನಗಳಲ್ಲಿ ಬಳಕೆಯಾಗಿರುವ ಕಂದ ಮತ್ತು ವೃತ್ತಗಳ ರಚನೆ ಪ್ರೌಢವಾಗಿದೆ, ಪಾಂಡಿತ್ಯಪೂರ್ಣವಾಗಿದೆ. ಇದನ್ನು ನೋಡಿದರೆ ಈತ ಒಳ್ಳೆಯ ಕವಿಯಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಈತನಿಗೆ ಕವೀಶ್ವರ ಎಂಬ ಬಿರುದಿದ್ದಂತೆ ತಿಳಿದುಬಂದಿದ್ದರೂ ಕನ್ನಡದಲ್ಲಿ ಕಾವ್ಯರಚನೆ ಮಾಡಿದಂತೆ ಕಂಡುಬರುವುದಿಲ್ಲ. ಸಂಸ್ಕೃತದಲ್ಲಿ ಉಷಾಹರಣ ವೆಂಬ ಕಾವ್ಯವನ್ನು ರಚಿಸಿದ್ದಾನೆ. ಇವನಿಗೆ ನಾರಾಯಣಪಂಡಿತನೆಂಬ ಮಗ ನಿದ್ದು ಆತನೂ ಹೊಯ್ಸಳ ರಾಜಾಶ್ರಯದಲ್ಲಿ ಮಧ್ವವಿಜಯವೆಂಬ ಸಂಸ್ಕೃತ ಕಾವ್ಯವನ್ನು ರಚಿಸಿದನೆಂದು ಕವಿಚರಿತ್ರೆಕಾರರ ಹೇಳಿಕೆ. (ಕೆ.ವಿ.ಆರ್.ಜ.)

**ತ್ರಿವೇಣಿ :** 1928-63. ಪ್ರಸಿದ್ಧ ಕಾದಂಬರಿಗಾರ್ತಿ. ಮಂಡ್ಯ ಜಿಲ್ಲೆಯವರಾದ ಇವರು ಬಿ.ಎಂ.ಕೃಷ್ಣಸ್ವಾಮಿ ಮತ್ತು ತಂಗಮ್ಮ ಅವರ ದ್ವಿತೀಯ ಪುತ್ರಿ. ಇವರ ತಂದೆ ಕನ್ನಡದ ಕಣ್ವ ಎನಿಸಿದ ಬಿ.ಎಂ.ಶ್ರೀ ಅವರ ಸಹೋದರ. ತ್ರಿವೇಣಿಯವರ ಹುಟ್ಟು ಹೆಸರು ಭಾಗೀರಥಿ. ಕರೆದ ಹೆಸರು ಅನಸೂಯ. ಮನೆಯಲ್ಲಿ ಎಲ್ಲರೂ ಮೆಚ್ಚಿ ಕೂಗಿದ್ದು ಅಂಚು ಎಂದು. ಲೇಖಕಿ ಎಂ.ಕೆ.ಇಂದಿರಾ ಅವರು ಇವರನ್ನು ಒಮ್ಮೆ ತ್ರಿವೇಣಿ ಎಂದು ಕರೆದರು. ಸಾಹಿತ್ಯ ಪ್ರಪಂಚದಲ್ಲಿ ಪ್ರಸಿದ್ಧವಾದ ಈ ಹೆಸರು ಇವರ ನಿಜಜೀವನದಲ್ಲೂ ಸ್ಥಿರವಾಯಿತು.

ಇವರು ತಮ್ಮ ಎಂಟನೆಯ ವಯಸ್ಸಿನಲ್ಲಿ ತೀವ್ರ ಗೂರಲಿನಿಂದ ಬಳಲಿದರು. ಆ ಸಮಯದಲ್ಲಿ ಕಾಲವನ್ನು ಕಳೆಯಲು ಇವರು ವ್ಯಾಸಂಗನಿರತರಾದರು. ಇದೇ ಇವರು ಮುಂದೆ ಸಾಹಿತ್ಯ ಪ್ರಪಂಚದಲ್ಲಿ ದುಮುಕಲು ಕಾರಣವಾಯಿತು ಎನ್ನಬಹುದು. ಇವರು ತಮ್ಮ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮಂಡ್ಯದಲ್ಲಿ ಮುಗಿಸಿ, ಮೈಸೂರಿನಲ್ಲಿ ಅಜ್ಜಿ ಮನೆ ಸೇರಿ ಮಹಾರಾಜ ಕಾಲೇಜಿನ ವಿದ್ಯಾರ್ಥಿನಿಯಾಗಿ, ಮನಶ್ಶಾಸ್ತ್ರವನ್ನು ಮುಖ್ಯ ವಿಷಯವನ್ನಾಗಿ ಆಯ್ದುಕೊಂಡು ವ್ಯಾಸಂಗ ಮಾಡಿ 1948ರಲ್ಲಿ ಚಿನ್ನದ

ಪದಕದೊಂದಿಗೆ ಬಿ.ಎ. ಪದವಿಯನ್ನು ಪಡೆದರು. ಅನಂತರ ಸ್ವಲ್ಪ ಕಾಲ ಮಂಡ್ಯದಲ್ಲಿ ಅಧ್ಯಾಪಕ ವೃತ್ತಿಯನ್ನವಲಂಬಿಸಿದರಾದರೂ ಅದು ನೀರಸವೆನಿಸಿತು. ಇವರು ಬದಲಾಗುತ್ತಿರುವ ಸಮಾಜವನ್ನು ಸೂಕ್ಷ್ಮವಾಗಿ ಗಮನಿಸತೊಡಗಿದರು. ಕಂಡು ಕೇಳಿದ ಘಟನೆಗಳ ಬೆನ್ನೇರಿ ಕಲ್ಪನೆಯನ್ನು ಕುದುರಿಸಿ ಸಣ್ಣಕಥೆಗಳನ್ನು ಬರೆದರು. ಒಟ್ಟು ಇವರು 41 ಸಣ್ಣ ಕಥೆಗಳನ್ನು ಬರೆದಿದ್ದಾರೆ. ಹೆಂಡತಿಯ ಹೆಸರು, ಎರಡು ಮನಸ್ಸು, ಸಮಸ್ಯೆಯ ಮಗು ಎಂಬ ಮೂರು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ.

1950ರಲ್ಲಿ ತ್ರಿವೇಣಿಯವರು ತಮ್ಮ ಸಮೀಪ ಸಂಬಂಧಿ ಎಸ್.ಎನ್.ಶಂಕರ್ ಅವರನ್ನು ವಿವಾಹವಾದರು. ಪತಿಯ ಪ್ರೋತ್ಸಾಹದಿಂದಾಗಿ ಚಿಕ್ಕಂದಿನಿಂದ ಬೆಳೆದು ಬಂದಿದ್ದ ಸಾಹಿತ್ಯಾಸಕ್ತಿ ವಿಕಾಸಗೊಳ್ಳಲು ಅವಕಾಶವೊದಗಿತು. ಇವರ ಪ್ರಥಮ ಕಾದಂಬರಿ ಅಪಸ್ವರ ಅಷ್ಟು ಯಶಸ್ವಿಯಾಗಲಿಲ್ಲ. ಮುಂದೆ ಹೂವು-ಹಣ್ಣು ಕೃತಿ ಪ್ರಕಟವಾಯಿತು. ಕೇವಲ ಒಂದು ದಶಕದ ಅವಧಿಯಲ್ಲಿ 20 ಕಾದಂಬರಿಗಳನ್ನು ಇವರು ರಚಿಸಿದರು. ಅಪೂರ್ಣವಾಗಿದ್ದ ಇವರ ಕೊನೆಯ ಕಾದಂಬರಿ 'ಅವಳ ಮಗಳು' ಎಂ.ಸಿ.ಪದ್ಮಾರವರಿಂದ ಪೂರ್ಣಗೊಂಡಿತು.

ತ್ರಿವೇಣಿಯವರ ಕಾದಂಬರಿಗಳನ್ನು ಸಾಮಾಜಿಕ ಹಾಗೂ ಮನಶ್ಶಾಸ್ತ್ರಕ್ಕೆ ಸಂಬಂಧಿಸಿದವೆಂದು ಎರಡು ಗುಂಪಾಗಿ ವಿಂಗಡಿಸಬಹುದು. ಬೆಕ್ಕಿನ ಕಣ್ಣು, ದೂರದ ಬೆಟ್ಟ, ಮುಚ್ಚಿದ ಬಾಗಿಲು ಮತ್ತು ಶರಪಂಜರ - ಇವು ಮನಶ್ಶಾಸ್ತ್ರದ ಗುಂಪಿಗೆ ಸೇರುವ ಕಾದಂಬರಿಗಳು. ಸಾಮಾಜಿಕ ವಸ್ತುವನ್ನು ಚಿತ್ರಿಸುವ ಹೂವು-ಹಣ್ಣು, ಸೋತು ಗೆದ್ದವಳು, ಅಪಸ್ವರ, ಅಪಜಯ, ಕಂಕಣ, ಮುಕ್ತಿ, ಬೆಳ್ಳಿಮೋಡ, ಹಣ್ಣೆಲೆ ಚಿಗುರಿದಾಗ, ಅವಳ ಮನೆ, ಮೊದಲ ಹೆಜ್ಜೆ, ಕೀಲುಗೊಂಬೆ - ಈ ಕಾದಂಬರಿಗಳಲ್ಲೂ ಪಾತ್ರಗಳ ಆಂತರಿಕ ತೊಳಲಾಟ ಘರ್ಷಣೆ ಮುಂತಾದ ಮನೋವಿಜ್ಞಾನಕ್ಕೆ ಸಂಬಂಧಿಸಿದಂಥ ಸನ್ನಿವೇಶಗಳು ಕಂಡುಬಂದರೂ ವಸ್ತುವಿನ ದೃಷ್ಟಿಯಿಂದ ಇವು ಸಾಮಾಜಿಕ ಕಾದಂಬರಿಗಳ ಗುಂಪಿಗೆ ಸೇರುತ್ತವೆ. ಕೇವಲ ಮನರಂಜನೆಯ ದೃಷ್ಟಿಯಿಂದಲೇ ರಚಿತವಾಗಿರುವ ಇವರ ಇತರ ಕಾದಂಬರಿಗಳಿವು: ಹೃದಯಗೀತ, ವಸಂತಗಾನ, ಕಾಶಿಯಾತ್ರೆ, ಬಾಳು ಬೆಳಗಿತು.

ತ್ರಿವೇಣಿಯವರ ಸಮಸ್ಯೆಯ ಮಗು ಕಥಾಸಂಕಲನಕ್ಕೆ ರಾಜ್ಯ ಸರ್ಕಾರದ ಬಹುಮಾನ ಬಂದಿದೆ. ಇವರ ಸಣ್ಣಕಥೆಯೊಂದಕ್ಕೆ ಎಸ್.ಸಿದ್ದೇಗೌಡರ ಬಂಗಾರದ ಪದಕ ಮತ್ತು ತಾತಯ್ಯನವರ ವಿಶೇಷ ಪಾರಿತೋಷಕಗಳು ಲಭಿಸಿವೆ. ಇವರ ಬೆಳ್ಳಿಮೋಡ, ಹಣ್ಣೆಲೆ ಚಿಗುರಿದಾಗ, ಶರಪಂಜರ, ಕಂಕಣ, ಹೂವುಹಣ್ಣು - ಈ ಕಾದಂಬರಿಗಳು ರಜತಪರದೆಯ ಮೇಲೆಯೂ ಕಾಣಿಸಿಕೊಂಡಿವೆ. ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ ಮಲಯಾಳಂ ಚಿತ್ರ ಪೂಜಿಕಣ್ಣು ಇವರ ಬೆಕ್ಕಿನ ಕಣ್ಣು ಕಾದಂಬರಿ ಆಧರಿಸಿದ್ದು.

ತಾಯ್ತನಕ್ಕೆ ಹೆಚ್ಚಿನ ಬೆಲೆಯಿತ್ತಿದ್ದ ತ್ರಿವೇಣಿ ಅದಕ್ಕಾಗಿ ಹಂಬಲಿಸಿದರು. ಹಂಬಲವೇನೋ ಈಡೇರಿತು. ಆದರೆ ಹೆಣ್ಣುಮಗುವೊಂದಕ್ಕೆ ಜನ್ಮ ಕೊಟ್ಟ ಹತ್ತು ದಿನಗಳಲ್ಲಿಯೇ ಇವರು ಆಸ್ಪತ್ರೆಯಲ್ಲಿ ತಮ್ಮ 35ನೆಯ ವಯಸ್ಸಿನಲ್ಲಿ ತೀರಿಕೊಂಡರು. *

# ದ

**ದಂಡಾವತಿಮಠ, ಜಿ.ಎಸ್. :** 1900-78. ಕಲಾಗುರು ಎಂದೇ ಪ್ರಸಿದ್ಧರಾಗಿರುವ ಚಿತ್ರ ಕಲಾವಿದ. ಗಂಗಾಧರಯ್ಯ ಶಂಕರಯ್ಯ

ದಂಡಾವತಿಮಠ ಇವರ ಪೂರ್ಣ ಹೆಸರು. ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿ 1900 ಆಗಸ್ಟ್ 20ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣ ಮುಗಿದ ಬಳಿಕ ದಾಯಿ (ದೇವಿ) ಹಾಕುವ ವ್ಯಾಕ್ಸಿನೇಟರ್ ಆಗಿ ಸರ್ಕಾರಿ ನೌಕರಿಗೆ ಸೇರಿದರು. ಇವರಿಗೆ ಬಾಲ್ಯದಿಂದಲೂ ಚಿತ್ರ ಕಲೆಯು ಬಗ್ಗೆ ವಿಶೇಷ ಆಸಕ್ತಿ ಇತ್ತು. ಕುದುರೆಯ ಮೇಲೆ ಹಳ್ಳಿ ಹಳ್ಳಿಗೆ ಹೋಗಿ ಮೈಲಿ ಚುಚ್ಚುಮದ್ದು ನೀಡುವುದು ಇವರ ಉದ್ಯೋಗವಾಗಿತ್ತು. ಹೀಗೆ ತಿರುಗಾಡುವಾಗ ಪ್ರಕೃತಿ ಸೌಂದರ್ಯವನ್ನು ಸವಿದು ತಮಗೆ ಆಕರ್ಷಕವಾಗಿ ಕಂಡ ದೃಶ್ಯಗಳನ್ನು ಗುರುತು ಮಾಡಿಕೊಳ್ಳುತ್ತಿದ್ದರು. ಧಾರವಾಡಕ್ಕೆ ಹೋದಾಗ ಕಲಾಶಿಕ್ಷಕ ಎನ್.ಎಂ. ನೇರ್ಲೆಕರರನ್ನು ಕಂಡು, ತಾವು ರಚಿಸಿದ ಚಿತ್ರಗಳನ್ನು ತೋರಿಸಿದರು. ಅವರು ದಂಡಾವತಿಯವರಲ್ಲಿದ್ದ ಕಲಾ ಪ್ರತಿಭೆಯನ್ನು ಗುರುತಿಸಿ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಕಲಾಶಾಲೆಗೆ ಸೇರಲು ತಿಳಿಸಿದರು. ಅದರಂತೆ ಮುಂಬಯಿಗೆ ಹೋಗಿ (1923) ಡಿಪ್ಲೊಮಾ ಪದವಿ ಪಡೆದರು (1931). ನೈಜ ಹಾಗೂ ಭಾವಚಿತ್ರಗಳ ರಚನೆಯಲ್ಲಿ ಇವರು ಸಿದ್ಧಹಸ್ತರು. ಇವರು ರಚಿಸಿದ ಜಲವರ್ಣ ಚಿತ್ರಕ್ಕೆ ಮುಂಬಯಿ ಆರ್ಟ್ ಸೊಸೈಟಿಯ ಪ್ರಥಮ ಬಹುಮಾನ (1920), ಬಳಪದ ವರ್ಣಚಿತ್ರಕ್ಕೆ ಮದರಾಸು ಮತ್ತು ಮುಂಬಯಿ ಆರ್ಟ್ ಸೊಸೈಟಿಗಳ ಪಾರಿತೋಷಕ, ಕನ್ನಡ ಸಾಹಿತ್ಯ ಸಮ್ಮೇಳನವೊಂದರಲ್ಲಿ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಸುವರ್ಣ ಪದಕ ಗಳಿಸಿದರು. ಇವರು ರಚಿಸಿರುವ ಕಾಶ್ಮೀರಿ ಭಿಕ್ಷುಕ, ಕೈಯಲ್ಲಿ ಕುಂಚ ಹಿಡಿದು ನಿಂತ ಕಲಾವಿದೆ, ನೆಹರೂ, ಮಹಾತ್ಮಾ ಗಾಂಧೀಜಿ, ವಲ್ಲಭಭಾಯಿ ಪಟೇಲ, ರೊದ್ದ ಶ್ರೀನಿವಾಸರಾಯ, ಎ.ಎಸ್.ಅಡಕೆ ಮೊದಲಾದ ತೈಲವರ್ಣ ಚಿತ್ರಗಳು ಇವರ ಪ್ರತಿಭೆಗೆ ಸಾಕ್ಷಿ. ಇವರ ಚಿತ್ರಗಳು ದೆಹಲಿ, ಮುಂಬಯಿ, ಪುಣೆ, ಮದರಾಸು ಮೊದಲಾದ ಪ್ರಮುಖ ನಗರಗಳಲ್ಲಿ ಪ್ರದರ್ಶನಗೊಂಡಿವೆ.

ಮುಂಬಯಿಯಲ್ಲಿ ನೂತನ ಕಲಾಮಂದಿರ (1935) ಎಂಬ ಸಂಸ್ಥೆಯನ್ನು ಇವರು ಕಟ್ಟಿ ಬೆಳೆಸಿದರು. ಇಂಗ್ಲೆಂಡಿನ ರಾಯಲ್ ಅಕಾಡೆಮಿಯಲ್ಲಿ ಕಲಾಪದವಿ ಪಡೆದು ತಾಯ್ನಾಡಿಗೆ ಮರಳಿ ಬಂದ ಡಿ.ಜಿ.ಬಡಿಗೇರ, ವಿ.ಆರ್.ರಾವ್ ಮತ್ತು ದಂಡಾವತಿಮಠ ಮೂವರೂ ಸೇರಿ ಆರಂಭಿಸಿದ ಈ ಸಂಸ್ಥೆಯನ್ನು ಮುಂದೆ ದಂಡಾವತಿಮಠ ಒಬ್ಬರೇ ನಡೆಸಬೇಕಾಯಿತು. ಕಲಾಮಂದಿರದ ಪ್ರಾಂಶುಪಾಲರಾಗಿ ದಕ್ಷತೆಯಿಂದ ಅಗನಲು ನಿರ್ವಹಿಸಿ, ಸಂಸ್ಥೆ ಒಳ್ಳೆಯ ಹೆಸರು ಗಳಿಸುವಂತೆ ಮಾಡಿದರು. ಈ ಶಾಲೆಯ ವಿದ್ಯಾರ್ಥಿಗಳಲ್ಲಿ ಪ್ರಮುಖ ಕಲಾವಿದರೆಂದರೆ ಕೆ.ಕೆ.ಹೆಬ್ಬಾರ, ಎ.ಎ.ಅಲಮೇಲಕರ, ಎಸ್.ಎಂ.ಪಂಡಿತ, ರಾಯೂ, ಲಕ್ಷ್ಮಣ ಪೈ, ಗಾಯತೊಂಡೆ ಮೊದಲಾದವರು. ಇವರೆಲ್ಲ ದೇಶ ವಿದೇಶಗಳಲ್ಲಿ ಕೀರ್ತಿ ಗಳಿಸಿದರು. ಕಲಾಶಿಕ್ಷಣದಿಂದ ಬುದ್ಧಿಮಾಂದ್ಯ ಮಕ್ಕಳ ಮಾನಸಿಕ ಚಟುವಟಿಕೆ ಸಾಧ್ಯವೆಂದು ಸಾಬೀತುಪಡಿಸಲು ಧಾರವಾಡದಲ್ಲಿ ಕಿವುಡ-ಮೂಕರಿಗೆ ಕಲಾಶಾಲೆಯನ್ನು ಪ್ರಾರಂಭಿಸಿದ್ದರು. ಪ್ರಾಂಶುಪಾಲರ ಹುದ್ದೆಯಿಂದ ನಿವೃತ್ತರಾದ (1966) ಅನಂತರ ತಮ್ಮ ವಿಶ್ರಾಂತಿ ಜೀವನವನ್ನು ಇವರು ಧಾರವಾಡದಲ್ಲಿ ಕಳೆದರು.

ಇವರಿಗೆ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿದೆ (1969). ಇವರು 1978 ನವೆಂಬರ್ 15 ರಂದು ನಿಧನರಾದರು. (ಆರ್.ಜಿ.ಆರ್.)

**ದಂತದ ಕೆತ್ತನೆ :** ಕೆತ್ತನೆಯ ಕೆಲಸದಲ್ಲೆಲ್ಲ ಬಹು ನಾಜೂಕಿನದು. ಈ ಕಸಬು ಮಾಡುವ ಶಿಲ್ಪಿಗಳು ಮೊಟ್ಟಮೊದಲು ಕಟ್ಟಿಗೆ ಹಾಗೂ ಗಂಧದ ಮರ ಕೆತ್ತನೆಯ ಕೆಲಸ ಮಾಡಿ ಪ್ರಾವೀಣ್ಯ ಹೊಂದಿದ ಅನಂತರವೇ ಈ ಕೆತ್ತನೆಗೆ ಕೈ ಹಾಕುತ್ತಾರೆ. ಮೊಗಲರ ಕಾಲದಲ್ಲಿ ಹಸ್ತಿದಂತದಲ್ಲಿ ಕೊರೆದ ಅನೇಕ ಉಬ್ಬು ಭಾವಚಿತ್ರಗಳು, ಜಪಾನ್ ಚೀನ ಹಾಗೂ ಭಾರತದ ಅನೇಕಾನೇಕ ಹಸ್ತಿದಂತದ ಒಳ್ಳೆಯ ಕಲಾಕೃತಿಗಳು ಮೈಸೂರು ಜಗನ್ಮೋಹನ ವಸ್ತು ಸಂಗ್ರಹಾಲಯಗಳಲ್ಲಿ ಇಂದಿಗೂ ಕಾಣದೊರೆಯುತ್ತಿದ್ದು ಕಲಾವಿದನ ಸೌಂದರ್ಯ ಪ್ರಜ್ಞೆ, ಪರಿಷ್ಕೃತ ಜ್ಞಾನ ಸೂಕ್ಷ್ಮ ಕಲಾ ಕೌಶಲ್ಯ ಹಾಗೂ ಕಲಾ ಪ್ರತಿಭೆಗಳಿಗೆ ಹೆಸರಾಗಿವೆ.

ರಾಧಕೃಷ್ಣ ಕೃತಿ ರಚನೆ: ಎಚ್. ವೆಂಕಪ್ಪ

ದಂತ ಕೆತ್ತನೆಯ ಕರ್ಮ ಶಾಲಿಗಳು ವಿವಿಧ ರೀತಿಯ ಉಕ್ಕಿನ ಚಾಣ, ಚಾಣ ಹೊಡೆಯಲು ಕಟ್ಟಿಗೆಯ ಪಟ್ಟಿಯಂತಿರುವ ಕೊಡತಿ, ಮರಳುಕಾಗದ, ಉಳಿ, ಅರೆ, ಬೈರಿಗೆ ಯಂತ್ರ, ಪಾಲಿಶ್ ಮಾಡಲು ಬತ್ತದ ದಂಟು, ಮೀನು ಚರ್ಮ, ದಂತದ ಪುಡಿ, ಗರಗಸ, ಇತ್ಯಾದಿಗಳನ್ನು ಉಪಯೋಗಿಸುತ್ತಾರೆ. ಹಸ್ತಿದಂತದ ಮೇಲೆ ಸ್ವಾಭಾವಿಕವಾಗಿ ಇರುವ ತೆಳುವಾದ ಪೊರೆಯನ್ನು ಆಮ್ಲ ರಾಸಾಯನಿಕ ಕ್ರಿಯೆಯಿಂದ ಇಲ್ಲವೆ ಕಾಯಿಸಿ, ಅಥವಾ ತೀವ್ರ ತಂಪು ಮಾಡಿ ತೆಗೆದುಹಾಕಿದ ಅನಂತರವೇ ಕೆತ್ತನೆಯ ಕೆಲಸಕ್ಕೆ ಅನುಕೂಲವಾಗುವುದು. ದಂತವನ್ನು ಪ್ರಮಾಣಕ್ಕೆ ತಕ್ಕಂತೆ ಗರಗಸದಿಂದ ಕತ್ತರಿಸಿ ಅದರ ಮೇಲೆ ನಿರ್ದಿಷ್ಟ ಆಕೃತಿಯನ್ನು ಸೀಸದಕಡ್ಡಿಯಿಂದ ಬರೆದುಕೊಂಡು ಕೆತ್ತಲು ಪ್ರಾರಂಭಿಸುತ್ತಾರೆ. 10" ಎತ್ತರವಿರುವ ವಿಗ್ರಹವೊಂದರ ಬೆಲೆ ಅದರ ಕಲಾಕೌಶಲ್ಯಕ್ಕೆ ಅನುಸಾರವಾಗಿ ಸಾವಿರಾರು ರೂಪಾಯಿಗಳವರೆಗೆ ಇರುವುದು.

ದಂತದಿಂದ ಉಡುಪಿನ ಗುಂಡಿಗಳು, ಕೂದಲ ಸೂಜಿ, ಸೀರೆ ಸೂಜಿ, ಕುಂಕುಮ ಕರಡಿಗೆ, ಚದುರಂಗದ ಕಾಯಿಗಳು, ಉಂಗುರ, ಬಳೆ, ನಕ್ಷೆಪೆಟ್ಟಿಗೆ, ಪೌಡರ್ ಕರಂಡಕಗಳು, ದೇವರ ಮೂರ್ತಿಗಳು, ವ್ಯಕ್ತಿಗಳ ಉಬ್ಬುಚಿತ್ರ, ಪ್ರಾಣಿ, ಪಕ್ಷಿ, ಸಿಂಹಾಸನ, ಊರುಗೋಲು, ಹಿಡಿಕೆ, ಮಣಿಗಳು, ಕಂಠಹಾರಗಳು, ಅಂಗಿಯ ತೋಳಿನ ಗುಂಡಿಗಳು, ದಂತ ಖಚಿತ

ಚಹಮೇಜು, ಆಸನಗಳು, ದೀಪದ ಅಡ್ಡಣಿಗೆ, ತೂಗುದೀಪ, ಫೋಟೊಫ್ರೇಮು, ನಶ್ಯದ ಡಬ್ಬಿ, ಬಿಲಿಯರ್ಡ್ ಚೆಂಡು, ಸಿಗರೇಟ್ ಪೆಟ್ಟಿಗೆ, ಟ್ರೇ, ಸಂದರ್ಶಕ ಚೀಟಿ (ವಿಜಿಟಿಂಗ್ ಕಾರ್ಡ್) ತೊಡೆಯು ಹಿಡಿಕೆ, ಬೀಸಣಿಗೆ, ಹಾರ್ಮೋನಿಯಂ ಸಾಮಗ್ರಿಗಳು, ಆಟದ ವಸ್ತುಗಳು, ತಂತಿ ವಾದ್ಯಗಳಲ್ಲಿ ಹಸ್ತಿದಂತದ ಇನ್‌ಲೇ (ಖಚಿತ) ಕೆಲಸ, ಅಲಂಕಾರಿಕ ಮತ್ತು ಗೃಹಕೃತ್ಯದ ವಸ್ತುಗಳು, ಲೆಕ್ಕಣಿಕೆ ಮತ್ತು ಕಾಗದ ಕತ್ತರಿಸುವ ಚಾಕು ಇತ್ಯಾದಿಗಳನ್ನು ಅಂದವಾಗಿ ತಯಾರಿಸುತ್ತಾರೆ.

ಕರ್ನಾಟಕದ ಮೈಸೂರು ಭಾಗದಲ್ಲಿ ಪ್ರಖ್ಯಾತ ಕುಂದಣ ಕೆಲಸದ ವಸ್ತುಗಳು ಹೆಚ್ಚು ಜನಾದರಣೀಯವಾಗಿವೆ. ಭಾರತದಲ್ಲಿ ಯಾವ ಭಾಗದಲ್ಲಿಯೂ ಕಾಣಸಿಗದಷ್ಟು ಕುಶಲಕೆಲಸಗಾರರು ಇಲ್ಲಿ ಇದ್ದಾರೆ. ಈ ಕೈಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿದವರು ಮಹಮ್ಮದೀಯರು. ಅವರು ಮಾಡಿದ ಮೇಜು, ಚಹಮೇಜು, ಮಡಿಸುವ ತೆರೆ, ಫೋಟೊ ಚೌಕಟ್ಟುಗಳು, ಪೆಟ್ಟಿಗೆಗಳು ಹಾಗೂ ಫಲಕಗಳು ಪ್ರಪಂಚಮಾನ್ಯತೆ ಪಡೆದಿವೆ. ಜಗತ್ತಿನ ವಿವಿಧ ಭಾಗಗಳಿಗೆ ಆ ವಸ್ತುಗಳು ರಫ್ತಾಗುತ್ತವೆ. ಮೈಸೂರಿನ ಮೀರ್ ಷೌಕತ್ ಅಲಿ ಅವರ ಕಲಾ ಪ್ರೌಢಿಮೆಯನ್ನು ಮೆಚ್ಚಿ ಅಖಿಲ ಭಾರತ ಕುಶಲ ಕೈಗಾರಿಕಾ ಮಂಡಳಿಯವರು ಪ್ರಶಸ್ತಿ ನೀಡಿದ್ದಾರೆ. ರಾಜ್ಯ ಸರ್ಕಾರ ಕೂಡ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಭಾರತ ಸರ್ಕಾರ 1966ರಲ್ಲಿ ರಾಷ್ಟ್ರಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ. ಹಾಜಿ ಮಿರ್ಜಾನಯಾಜ್ ವೊಂದ್ ಅಲಿ ಹಾಗೂ ಪರಮಾಚಾರ್ ಅವರೂ ಈ ಕಲೆಯಲ್ಲಿ ಪ್ರಸಿದ್ಧರು.

ದಂತ ಕೆತ್ತನೆ, ಕಟ್ಟಿಗೆ ಕೆತ್ತನೆ, ಕುಂದಣ ಕಲಾಕೃತಿಗಳ ಉತ್ತಮ ಗುಣ ಮೌಲ್ಯವನ್ನು ಕಾದುಕೊಂಡು ಕಲೆಯ ಅಭಿವೃದ್ಧಿಪಡಿಸಲು ನಿಯಂತ್ರಣ ಕಾಯಿದೆಯನ್ನು ಕರ್ನಾಟಕ ಸರ್ಕಾರ 1964ರಲ್ಲಿ ಜಾರಿ ಗೊಳಿಸಿತು. ಕುಶಲ ಕೈಗಾರಿಕೆಯ ಸಿದ್ಧವಸ್ತುಗಳಿಗೆ ಯೋಗ್ಯ ಮಾರುಕಟ್ಟೆಯನ್ನು ದೊರಕಿಸಲು ಹಾಗೂ ವಿದೇಶಿ ವಿನಿಮಯ ಪಡೆಯಲು ಅಖಿಲ ಭಾರತ ಮತ್ತು ರಾಜ್ಯದ ಕರಕುಶಲ ಕೈಗಾರಿಕಾ ಮಂಡಳಿಗಳು ಕಾರ್ಯ ಶೀಲವಾಗಿವೆ. ದಂತ ಮತ್ತು ಗಂಧ ಕೆತ್ತನೆ ಕೆಲಸಗಾರರಿಗೆ ಅಗತ್ಯವಾದ ದಂತ ಹಾಗೂ ಗಂಧದ ಮರವನ್ನು ಸಹಕಾರೀ ಸಂಘಗಳ ಮುಖಾಂತರ ಒದಗಿಸಲಾಗುತ್ತದೆ. ಜಪಾನ್‌ನಲ್ಲಿ ಜರುಗಿದ ಎಕ್ಸ್‌ಪೊ 70ರ ವಸ್ತುಪ್ರದರ್ಶನಗಳಿಗೆ ರವಾನಿಸಲಾದ ಕರ್ನಾಟಕ ರಾಜ್ಯದ ಕರಕುಶಲ ದಂತಕೆತ್ತನೆ ಹಾಗೂ ಕುಂದಣ ಒಡವೆ ವಸ್ತುಗಳು ವಿದೇಶೀಯರನ್ನು ಆಕರ್ಷಿಸಿದವು. ಕರಕುಶಲ ಕಲಾವಸ್ತುಗಳ ಮಾರಾಟದ ಮಳಿಗೆಗಳು (ಎಂಪೋರಿಯಂ) ಪ್ರತಿರಾಜ್ಯದಲ್ಲಿ ಇವೆ. ಪ್ರತಿರಾಜ್ಯದಲ್ಲಿಯೂ ಕುಶಲಕಲಾ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಕರ್ನಾಟಕ ರಾಜ್ಯದ ಮೈಸೂರಿನ ಶ್ರೀ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆ, ಬೆಂಗಳೂರಿನ ಕೇಂದ್ರ ಸರ್ಕಾರದ ಡಿಸೈನ್ ಸೆಂಟರಿನಲ್ಲಿ ವಿದ್ಯಾರ್ಥಿವೇತನ ಕೊಟ್ಟು ಕಲಿಸುವ ಏರ್ಪಾಡು ಮಾಡಲಾಗಿದೆ.

ಎಚ್.ವೆಂಕಪ್ಪನವರು, ಹೊನ್ನಾವರ; ಎಸ್.ನಂಜುಂಡಸ್ವಾಮಿ, ಮೈಸೂರು; ಹಿರಣ್ಯಪ್ಪ, ಮಾಡುಗೋಡ, ಸೊರಬ; ವೆಂಕಟಗಿರಿ ಚಿತ್ರಕ್, ಸಿದ್ದಾಪುರ; ರಘುವೀರಶೆಟ್ಟಿ, ಕುಮಟ; ಸುಬ್ರಾಯ ಆರ್.ಶೆಟ್ಟಿ ಗುಡಿಕಾರ, ಕುಮಟ; ಮಾಧವ ಗಣಪತಿಶೆಟ್ಟಿ, ಗುಡಿಲ್ಲಾರ, ಕುಮಟ; ಗಣಪತಿ ಮಂಜುನಾಥಶೆಟ್ಟಿ ಗುಡಿಗಾರ, ಹೊನ್ನಾವರ; ಮಂಜುನಾಥಪ್ಪ ಪಾಂಡಪ್ಪ ಗುಡಿಗಾರ, ಸಾಗರ; ವಿಠ್ಠಲ್ ರಾಮಚಂದ್ರ ಶೆಟ್ಟಿ, ಕುಮಟ; ವಿಠ್ಠಲ್ ಮಂಜುನಾಥಶೆಟ್ಟಿ, ಹೊನ್ನಾವರ; ಇವರೆಲ್ಲರೂ ಕರ್ನಾಟಕದ ಶ್ರೇಷ್ಠದಂತ ಕೆತ್ತನೆಯ ಕಲಾವಿದರು.

ಮೈಸೂರು, ಸೊರಬ, ಸಾಗರ, ಶಿವಮೊಗ್ಗ, ಹೊನ್ನಾವರ ಮತ್ತು ಕುಮಟ ದಂತ ಕೆತ್ತನೆಯ ಕುಶಲ ಕೆಲಸಗಾರರು ಇಂದಿಗೂ ಕಸುಬಿನಲ್ಲಿ ನಿರತರಾಗಿದ್ದಾರೆ.

*

**ದಂತಿದುರ್ಗ :** ಸು.735-56. ರಾಷ್ಟ್ರಕೂಟ ರಾಜ್ಯದ ಸ್ಥಾಪಕ. ಇಮ್ಮಡಿ ಇಂದ್ರನ ಮಗ.

ದಂತಿದುರ್ಗ ಪ್ರಾರಂಭದಲ್ಲಿ ಚಳುಕ್ಯರ ಸಾಮಂತನಾಗಿದ್ದ. ಆದರೆ ಈ ವೇಳೆಯಲ್ಲಿದ್ದ ರಾಜಕೀಯ ಪರಿಸ್ಥಿತಿ ರಾಷ್ಟ್ರಕೂಟರಿಗೆ ಸಾಮಂತತ್ವದಿಂದ ಸಾಮ್ರಾಟತ್ವದೆಡೆಗೆ ಜಿಗಿಯುವುದಕ್ಕೆ ಸಹಕಾರಿಯಾಗಿತ್ತು. ದಂತಿದುರ್ಗನ ತಂದೆ ಇಂದ್ರರಾಜನ ಕಾಲಕ್ಕಾಗಲೇ ರಾಷ್ಟ್ರಕೂಟರು ಪ್ರಬಲರಾಗಿದ್ದರು. ಇಂದ್ರ ರಾಜನು ಚಳುಕ್ಯ ರಾಜಪುತ್ರಿ ಭವನಾಗಾ ಎಂಬುವಳನ್ನು ವಿವಾಹ ಮಂಟಪದಿಂದ ಅಪಹರಿಸಿ ರಾಕ್ಷಸ ವಿವಾಹ ಮಾಡಿಕೊಂಡನೆಂದು ಅನೇಕ ಶಾಸನಗಳಿಂದ ತಿಳಿಯುತ್ತದೆ. ಈ ಪ್ರಸಂಗದ ಬಗ್ಗೆ ತಿಳಿಯುವ ವಿವರಗಳಿಂದ ಭವನಾಗಾ ಗುಜರಾತಿನ ಚಾಳುಕ್ಯ ಶಾಖೆಯವಳೆಂದೂ ಆಗ್ಗೆ ಇಂದ್ರ ಆ ಅರಸರನ್ನು ಎದುರಿಸುವಷ್ಟು ಶಕ್ತಿಯನ್ನು ಪಡೆದಿದ್ದನೆಂದೂ ಊಹಿಸಬಹುದು. ಈ ವಿವಾಹದಿಂದಾಗಿ ಜನಿಸಿದ ದಂತಿದುರ್ಗ ಚಳುಕ್ಯರ ನೆಂಟನೇ ಆಗಿದ್ದ. ಅಲ್ಲದೆ ರಾಷ್ಟ್ರಕೂಟ ಶಾಸನಗಳಿಂದ ಇವನು ಕಾಂಚಿ, ಕೋಸಲ, ಶ್ರೀಶೈಲ, ಮಾಳವ ಮತ್ತು ಲಾಟದೇಶಗಳನ್ನು ಗೆದ್ದನೆಂದು ತಿಳಿಯುತ್ತದೆ. ಪಟ್ಟದಕಲ್ಲಿನ ಹಲವು ಸಾಧನೆಗಳು, ಅದರಲ್ಲೂ ಕಾಂಚಿ ನಗರದ ಮೇಲಿನ ವಿಜಯ ಚಳುಕ್ಯ ಸಾಮ್ರಾಟ ವಿಕ್ರಮಾದಿತ್ಯನ ಜೊತೆಗೂಡಿ (ಅಥವಾ ಕೀರ್ತಿವರ್ಮನ ಜೊತೆ 743ರಲ್ಲಿ) ಮಾಡಿದ್ದಾಗಿರ ಬೇಕು. ಅಲ್ಲದೆ ಅರಬ್ಬರು ಸಿಂಧ್ ಪ್ರಾಂತ್ಯವನ್ನು ಗೆದ್ದು ಗುಜರಾತಿನ ಮೇಲೆ ದಾಳಿ ಮಾಡಿದಾಗ ಅವರನ್ನು ಹಿಮ್ಮೆಟ್ಟಿಸುವಲ್ಲಿ ಗುಜರಾತಿನ ಅವನಿಜನಾಶ್ರಯ ಪುಲಕೇಶಿಗೆ ಸಹಾಯ ಮಾಡಿದ್ದಂತೆಯೂ ತೋರುತ್ತದೆ. ಇದರಿಂದಾಗಿ ಪೃಥ್ವೀವಲ್ಲಭ, ಖಡ್ಗಾವಲೋಕ ಎಂಬ ಬಿರುದುಗಳನ್ನು ಚಳುಕ್ಯ ಇಮ್ಮಡಿ ವಿಕ್ರಮಾದಿತ್ಯ ಇವನಿಗೆ ನೀಡಿರಬಹುದು.

ಒಟ್ಟಿನಲ್ಲಿ ಈತ ಪ್ರವರ್ಧಮಾನಕ್ಕೆ ಬರುತ್ತಿದ್ದ. ಇಮ್ಮಡಿ ವಿಕ್ರಮಾದಿತ್ಯ ಮರಣಹೊಂದಿದ ಸ್ವಲ್ಪಕಾಲದ ಮೇಲೆ ಈ ವಿಶಿಷ್ಟ ಸಾಧನೆಗಳಿಂದ ಯುದ್ಧತಂತ್ರದಲ್ಲಿ ನುರಿತಿದ್ದ ದಂತಿದುರ್ಗ ಚಳುಕ್ಯ ಅಧಿಪತಿಯನ್ನು ಧಿಕ್ಕರಿಸಿ ಸ್ವತಂತ್ರ ಸಾಮ್ರಾಜ್ಯವನ್ನು ಸ್ಥಾಪಿಸುವ ಯತ್ನ ನಡೆಸಿದ. ಆ ಕಾಲದಲ್ಲಿ ದಂತಿದುರ್ಗನ ರಾಜ್ಯ ಉತ್ತರ ಮಹಾರಾಷ್ಟ್ರ ಮತ್ತು ಪಶ್ಚಿಮ ಮಧ್ಯಪ್ರದೇಶಗಳನ್ನು ಒಳಗೊಂಡಿತ್ತು. ರಾಜತಂತ್ರಚತುರನಾದ ಈತ ಮೊದಲು ಬಾದಾಮಿಯ ಚಳುಕ್ಯರ ಮೇಲೆ ನೇರವಾಗಿ ಸ್ಪರ್ಧಿಸದೆ ತನ್ನ ರಾಜ್ಯದ ಪೂರ್ವ, ಪಶ್ಚಿಮದಲ್ಲಿದ್ದ ಪ್ರದೇಶಗಳನ್ನು ಆಕ್ರಮಿಸ ತೊಡಗಿದ. ಅರಬ್ಬರ ಆಕ್ರಮಣದಿಂದ ಶಿಥಿಲವಾಗಿದ್ದ ನವಸಾರಿಯ ಚಾಳುಕ್ಯ ಮತ್ತು ನಾಂದೀಪುರಿಯ ಗೂರ್ಜರ ರಾಜ್ಯಗಳನ್ನು ವಶಮಾಡಿಕೊಂಡ. ಈ ಕಾರ್ಯಾಚರಣೆಯಲ್ಲಿ ಸಹಾಯಮಾಡಿದ ಇವನ ಸಂಬಂಧಿ ಧ್ರುವನ ಮಗ ಗೋವಿಂದನಿಗೆ ದಕ್ಷಿಣ ಗುಜರಾತ್ ಪ್ರದೇಶದ ಆಳಿಕೆಯನ್ನು ವಹಿಸಿದ.

ಪೂರ್ವದಲ್ಲಿ ಮಾಳವ ದೇಶಕ್ಕೆ ನುಗ್ಗಿ ಗೂರ್ಜರ ಪ್ರತೀಹಾರರನ್ನು ಸೋಲಿಸಿ ಉಜ್ಜಯಿನಿಯಲ್ಲಿ ಹಿರಣ್ಯಗರ್ಭ ಮಹಾಯಜ್ಞವನ್ನು ನಡೆಸಿದ. ಆದರೆ ಆ ಪ್ರಾಂತ್ಯವನ್ನು ವಶಪಡಿಸಿಕೊಂಡಂತೆ ತೋರುವುದಿಲ್ಲ. ಅನಂತರ ಮಹಾಕೋಸಲವನ್ನೂ (ಛತ್ತೀಸ್‌ಗರ್ ವಿಭಾಗ) ಗೆದ್ದ ದಂತಿದುರ್ಗ ಉತ್ತರ ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಗುಜರಾತಿನ ಸಾರ್ವಭೌಮನಾದ. ಇವುಗಳಲ್ಲಿ ದಕ್ಷಿಣ ಗುಜರಾತ್ ವಿನಾ ಮಿಕ್ಕವು ಚಳುಕ್ಯ ಸಾಮ್ರಾಜ್ಯಕ್ಕೆ ಸೇರಿದ್ದಿಲ್ಲವಾದರೂ ಸಾಮ್ರಾಟ ಕೀರ್ತಿವರ್ಮ ಏರುತ್ತಿದ್ದ ಸಾಮಂತನೊಬ್ಬನ ಪ್ರಭಾವವನ್ನು ಸಹಿಸುವಂತಿರಲಿಲ್ಲ. ಇವರಿಬ್ಬರಲ್ಲಿ ಯುದ್ಧ ಅನಿವಾರ್ಯವಾಯಿತು. 754ಕ್ಕೆ ಸ್ವಲ್ಪ ಮುಂಚೆ ನಡೆದ ಯುದ್ಧದಲ್ಲಿ ದಂತಿದುರ್ಗ ವಿಜಯಿಯಾದ. ಮಹಾರಾಷ್ಟ್ರದ ಬಹುಭಾಗ ಇವನ ದೊರೆತನಕ್ಕೆ ಒಳಪಟ್ಟಿತು. 754ರಲ್ಲಿ ಈತ ಸಾತಾರಾ ಜಿಲ್ಲೆಯಲ್ಲಿ ಗ್ರಾಮವೊಂದನ್ನು ದತ್ತಿ ನೀಡಿದ. ಪ್ರಾಯಶಃ ಚಳುಕ್ಯ ಕೀರ್ತಿವರ್ಮನನ್ನು ಪೂರ್ಣವಾಗಿ ಮೂಲೆಗೊತ್ತಲು ಇವನು ಪ್ರಯತ್ನಿಸುತ್ತಿದ್ದಿರಬೇಕು. ಆದರೆ ಅಷ್ಟರಲ್ಲೇ ಅಕಾಲ ಮರಣಕ್ಕೆ ತುತ್ತಾದ (756).

ಇಷ್ಟೆಲ್ಲ ಸಾಧನೆಗಳಿದ್ದರೂ ಅನಂತರದ ರಾಷ್ಟ್ರಕೂಟ ಅರಸರ ಶಾಸನಗಳ ವಂಶಾವಳಿ ಭಾಗದಲ್ಲಿ ದಂತಿದುರ್ಗನ ಪ್ರಸ್ತಾಪ ಅಷ್ಟಾಗಿ ಕಂಡುಬರುವುದಿಲ್ಲ. ಅವುಗಳ ಪ್ರಕಾರ ಚಳುಕ್ಯರನ್ನು ಜಯಿಸಿ ರಾಜ್ಯಸ್ಥಾಪನೆಯನ್ನು ಮಾಡಿದವನು ಒಂದನೆಯ ಕೃಷ್ಣ. ಆದರೆ ಈ ಕೃಷ್ಣನ ಶಾಸನಗಳಲ್ಲಿ ದಂತಿದುರ್ಗನೇ ಈ ಸಾಧನೆಗೆ ಮೂಲಕಾರಣನೆಂದು ಸ್ಪಷ್ಟಪಡಿಸುವುದರಿಂದ ಈತನೇ ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪಕನೆಂಬುದರಲ್ಲಿ ಅನುಮಾನವಿಲ್ಲ.

ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಎಲ್ಲೋರ ಅಥವಾ ಅಮರಾವತಿ ಜಿಲ್ಲೆಯ ಅಚಲಪುರ (ಎಲಿಚ್‍ಪುರ) ಈತನ ರಾಜಧಾನಿಯಾಗಿದ್ದಿರಬೇಕು. ದಂತಿದುರ್ಗ ಪರಮಧಾರ್ಮಿಕನಾಗಿದ್ದನೆಂದೂ ತನ್ನ ತಾಯಿಯ ಮಾತಿನಂತೆ ಅನೇಕ ದಾನಗಳನ್ನು ಮಾಡಿದನೆಂದೂ ಹಲವು ಯಜ್ಞಗಳನ್ನು ಮಾಡಿದನೆಂದೂ ಶಾಸನಗಳಿಂದ ತಿಳಿಯುತ್ತದೆ. ಈತನಿಗೆ ಮಕ್ಕಳಿರಲಿಲ್ಲವಾಗಿ ಇವನ ಅನಂತರ ಇವನ ಚಿಕ್ಕಪ್ಪನಾದ ಒಂದನೆಯ ಕೃಷ್ಣ ರಾಷ್ಟ್ರಕೂಟ ಸಿಂಹಾಸನವನ್ನೇರಿದ. (ಕೆ.ವಿ.ಎಸ್.ಆರ್.)

**ದಕ್ಷಿಣ ಕನ್ನಡ ಜಿಲ್ಲೆ :** ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿಯಲ್ಲಿರುವ ಒಂದು ಜಿಲ್ಲೆ. ಉತ್ತರಕ್ಕೆ ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ದಕ್ಷಿಣಕ್ಕೆ ಕೇರಳ ರಾಜ್ಯದ ಕಾಸರಗೋಡು ತಾಲ್ಲೂಕು ಮತ್ತು ಕೊಡಗು ಜಿಲ್ಲೆ, ಪೂರ್ವಕ್ಕೆ ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳು ಮತ್ತು ಪಶ್ಚಿಮಕ್ಕೆ ಅರಬ್ಬೀ ಸಮುದ್ರ ಇವೆ. ಈ ಜಿಲ್ಲೆಯ ವಿಸ್ತೀರ್ಣ 14,843ಚ.ಕಿಮೀ. ಜನಸಂಖ್ಯೆ 18,96,403. 1997ರಲ್ಲಿ ನಡೆದ ಜಿಲ್ಲೆಗಳ ಪುನರ್ವಿಂಗಡಣೆ ಯಾದಾಗ ಇದರ ಕೆಲವು ತಾಲ್ಲೂಕುಗಳನ್ನು ಸೇರಿಸಿ ಉಡುಪಿ ಜಿಲ್ಲೆಯನ್ನು (ನೋಡಿ) ರಚಿಸಲಾಗಿದೆ. ಹಾಲಿ ಜಿಲ್ಲೆಯಲ್ಲಿ ಪುತ್ತೂರು, ಸುಳ್ಯ, ಬೆಳ್ತಂಗಡಿ, ಮಂಗಳೂರು ಮತ್ತು ಬಂಟ್ವಾಳ ಎಂಬ 5 ತಾಲ್ಲೂಕುಗಳು 17 ಹೋಬಳಿಗಳೂ 371 ಗ್ರಾಮಗಳೂ 68 ಪಟ್ಟಣಗಳೂ ಇವೆ.

ಜಿಲ್ಲೆಯನ್ನು ಮುಖ್ಯವಾಗಿ ಮೂರು ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಬಹುದು. ಅವು ಪೂರ್ವಭಾಗದ ಘಟ್ಟಪ್ರದೇಶ ಮತ್ತು ಇದಕ್ಕೂ ಸಮುದ್ರಕ್ಕೂ ಮಧ್ಯೆ ಇರುವ ಸುಮಾರು ಮಟ್ಟವಾದ ಪ್ರದೇಶ ಹಾಗೂ ಕರಾವಳಿ ಪ್ರದೇಶ. ಈ ಭಾಗಗಳು ಸುಮಾರು ದಕ್ಷಿಣೋತ್ತರವಾಗಿ ಹಬ್ಬಿವೆ. ಪೂರ್ವಭಾಗ ಪಶ್ಚಿಮಘಟ್ಟಶ್ರೇಣಿಯ ಪ್ರದೇಶ. ಕೆಲವೆಡೆ ಶಿಖರಗಳ ಎತ್ತರ 910ರಿಂದ 1,830 ಮೀಟರುಗಳಷ್ಟಿದೆ. ಬೆಳ್ತಂಗಡಿಗೆ ಪೂರ್ವಾಭಿಮುಖವಾಗಿ ಹಬ್ಬಿರುವ ಕುದುರೆ ಮುಖ ಎತ್ತರವಾಗಿದೆ. ಚಾರ್ಮಾಡಿ ಘಾಟ್‍ನ ದಕ್ಷಿಣಕ್ಕಿರುವ ಕಟ್ಟೆಗುಡ್ಡ (1,328ಮೀ), ಬಿಸಿಲೆಘಾಟ್‍ಗೆ ಎದುರಾಗಿರುವ ಸುಳ್ಯ ತಾಲ್ಲೂಕಿನ ಸುಬ್ರಹ್ಮಣ್ಯ (1,727ಮೀ) ಮತ್ತು ಹಳೆ ಸಿಸಲ ಘಾಟ್ ಮೇಲಿರುವ ಸಿಸಲಕಲ್ ಶಿಖರ (1,195ಮೀ) ಇವೆ. ಜಿಲ್ಲೆಯ ಭಾಗದಲ್ಲಿರುವ ಪಶ್ಚಿಮ ಘಟ್ಟ ಶ್ರೇಣಿ ಉತ್ತರದ ಕಡೆ ಕಡಿದಾದ ಗೋಡೆಗಳಾಗಿ ಮೇಲೆದ್ದಿದೆ. ದಕ್ಷಿಣ ಭಾಗದಲ್ಲಿನ ಶ್ರೇಣಿ ಸಮುದ್ರದಿಂದ ಹೆಚ್ಚು ದೂರವಿದ್ದು, ಹಲವು ಸಮಾನಾಂತರ ಶ್ರೇಣಿಗಳು ಇದರಿಂದ ಪಶ್ಚಿಮಕ್ಕೆ ಹಬ್ಬಿ, ಮಧ್ಯೆಮಧ್ಯೆ ಕಂದರಗಳು ಮತ್ತು ಕಣಿವೆಗಳನ್ನು ನಿರ್ಮಿಸಿವೆ. ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ನದಿಗಳು ಉಗಮಿಸಿ ಪ್ರವಹಿಸುವುದು ಇಲ್ಲಿಯೇ. ಈ ಘಟ್ಟಗಳ ಹಂದರದ ನಡುನಡುವೆ ಕಣಿವೆಗಳ ಕೆಳಭಾಗದಲ್ಲಿರುವ ಕಿರುಬಯಲುಗಳು ಘಟ್ಟದ ಮೇಲಿನಿಂದ ನೋಡುವವರಿಗೆ ಇಡೀ ಭೂದೃಶ್ಯಕ್ಕೆ ಅಲ್ಲಲ್ಲಿ ಹಸುರು ಬೊಟ್ಟು ಇಟ್ಟಂತೆ ಕಂಡುಬರುತ್ತವೆ. ಈ ಪರ್ವತಪ್ರದೇಶ ದಟ್ಟವಾದ ಅರಣ್ಯಗಳಿಂದ ಕೂಡಿ ಜಲ ಮತ್ತು ಪ್ರಾಣಿ ಹಾಗೂ ಅರಣ್ಯಸಂಪತ್ತಿನ ಆಗರವಾಗಿದೆ. ಅಡ್ಡ ಶ್ರೇಣಿಗಳಲ್ಲಿ ಬಲ್ಲಾಳರಾಯನದುರ್ಗದಿಂದ ಧರ್ಮಸ್ಥಳದವರೆಗೆ ಹಬ್ಬಿರುವ ಚಿಬ್ಬದ್ರಿ ಪರ್ವತ ಶ್ರೇಣಿ ಅತಿ ಉದ್ದವಾಗಿದೆ. ಕುದುರೆಮುಖದಿಂದ ಹೊರಟು ಜಮಾಲಾಬಾದ್ - ಮೂಡಬಿದರೆ ಎಡೆಗೆ ಹಾಯುವ ಮತ್ತೊಂದು ಪಂಕ್ತಿ ಸಹ ದೊಡ್ಡದು.

ಈ ಘಟ್ಟ ಪ್ರದೇಶದಿಂದ ಇಳಿದು ಪಶ್ಚಿಮದಲ್ಲಿ ಮುಂದೆ ಹೋದರೆ ಕಡಿಮೆ ಎತ್ತರದ ಬಯಲು ಪ್ರದೇಶ ಬರುತ್ತದೆ. ಹಾಗೇ ಮುಂದೆ ಹೋದಂತೆಲ್ಲ ಎತ್ತರವಲ್ಲದ ಗುಡ್ಡಗಳು ವಿರಳವಾಗಿ ಕಂಡುಬರುತ್ತವೆ. ಅಲ್ಲಿ ಸಾಗುವಳಿಗೆ ಯೋಗ್ಯವಾದ ಬಯಲುಗಳು ಮತ್ತು ಎತ್ತರದ ಬರಡು ಪ್ರದೇಶಗಳಿವೆ. ಈ ಜಿಲ್ಲೆಯ ತೀರಪ್ರದೇಶ ಬಹುತೇಕ ನೇರವಾಗಿದೆ. ಆದರೆ ನದಿಗಳು ಸಮುದ್ರ ಸೇರುವ ಸ್ಥಳಗಳಲ್ಲಿ ಮತ್ತು ಇನ್ನಿತರೆಡೆಗಳಲ್ಲಿ ಕೊರೆತದಿಂದ ಕೊಲ್ಲಿ ಹಾಗೂ ಒಳಚಾಚುಗಳುಂಟಾಗಿವೆ.

ಮಂಜುನಾಥಸ್ವಾಮಿ ದೇವಾಲಯ, ಕದ್ರಿ

ಕೋಟೆ ಕಟ್ಟಿದಂತಿರುವ ಪಶ್ಚಿಮ ಘಟ್ಟ ಶ್ರೇಣಿಗಳು. ಅವುಗಳ ಮೇಲೆ ಗೆರೆ ಎಳೆದಂತೆ ಕಾಣುವ ರಸ್ತೆಗಳು, ವೈಭವೋಪೇತ ಅರಣ್ಯರಾಶಿ. ಅದ್ಭುತವಾದ ಗಿರಿಕಂದರಗಳು, ಪರ್ವತಗಳ ಇಳಿಜಾರಿನಿಂದ ದೌಡಾಯಿಸುವ ಅಸಂಖ್ಯಾತ ತೊರೆಗಳು, ರೋಮಾಂಚನಗೊಳಿಸುವ ಶಿಖರಸಮೂಹ, ಮನೋಲ್ಲಾಸಕ್ಕೂ ಸಾಹಸ ಪ್ರವೃತ್ತಿಗೂ ಪ್ರಚೋದಕವಾದ ಸಮುದ್ರತೀರ - ಇವು ಅಲ್ಲಿಯ ಸ್ವಾಭಾವಿಕ ಸನ್ನಿವೇಶವನ್ನು ಜೀವಂತಗೊಳಿಸಿವೆ.

ಜಿಲ್ಲೆಯ ಭೂಶಿಲಾರಚನೆಗಳನ್ನು ಧಾರವಾಡ ಶಿಲಾವರ್ಗ, ಮಧ್ಯಂತರ ಸೇರ್ಪಡೆಗಳು ಮತ್ತು ಈಚಿನ ರಚನೆಗಳು ಎಂದು ವಿಂಗಡಿಸಬಹುದು. ಕೊನೆಯದನ್ನು ಬಿಟ್ಟು ಮಿಕ್ಕವು ಬಹು ಪ್ರಾಚೀನವಾದ ಆರ್ಕೀಯಿಯನ್ ಯುಗಕ್ಕೆ ಸೇರಿದವು. ಧಾರವಾಡ ಶಿಲಾವರ್ಗದಲ್ಲಿ ಅನೇಕ ಸ್ವರೂಪಾಂತರಿಕ ಪ್ರಾಚೀನ ಶಿಲೆಗಳಿವೆ. ಇವುಗಳಲ್ಲಿ ಮುಖ್ಯವಾಗಿ ಪದರಯುತ ಕಬ್ಬಿಣ ಮಿಶ್ರಿತ ಕ್ವಾರ್ಟ್‍ಸೈಟ್ ಮತ್ತು ಸ್ವಲ್ಪಮಟ್ಟಿಗೆ ಟಾಲ್ಕ್ ಮತ್ತು ಹಾರ್ನ್‍ಬ್ಲೆಂಡ್ ಶಿಸ್ಟ್ ಕಂಡುಬರುತ್ತವೆ. ಕ್ವಾರ್ಟ್‍ಸೈಟ್‍ಗಳು ಜಿಲ್ಲೆಯ ಪೂರ್ವಭಾಗದಲ್ಲಿ ಐದು ಶ್ರೇಣಿಗಳಲ್ಲಿ ಹಬ್ಬಿವೆ. ಬಯೋಟೈಟ್ ನೈಸ್‍ಗಳ


ದಕ್ಷಿಣ ಕನ್ನಡ ಜಿಲ್ಲೆ
ಮಂಗಳೂರು
0
10
20
ಕಿಲೋಮೀಟರುಗಳು

ಮಧ್ಯೆ ಸಣ್ಣ ಪದರಗಳಲ್ಲಿ ಟಾಲ್ಕ್ ಕಾಣುತ್ತದೆ. ಅವುಗಳಲ್ಲಿನ ಇತ್ತೀಚಿನ ಒಂದು ಹೊಡೆಪೊರೆ ಬೆಳ್ತಂಗಡಿ ಬಳಿ ಇದೆ. ಹಾರ್ನಬ್ಲೆಂಡ್ ಹೊಡೆಪೊರೆಗಳು ಅಲ್ಲಲ್ಲಿ ಅಪರೂಪವಾಗಿ ಕಾಣಸಿಗುತ್ತವೆ. ಬಯೋಟೈಟ್ ನೈಸ್ ಶಿಲೆ ಜಿಲ್ಲೆಯಲ್ಲಿ ವಿಸ್ತಾರವಾಗಿ ಹರಡಿದೆ. ಇವುಗಳ ಹರವು ಸುಮಾರು ಪಶ್ಚಿಮ ಘಟ್ಟಗಳಿಗೆ ಸಮಾನಾಂತರವಾಗಿದೆ. ಇವುಗಳ ಮಧ್ಯೆ ಅಲ್ಲಲ್ಲಿ ಸ್ಟೆರಾಕ್ಸೆನೈಟ್, ಆಂಫಿ ಬಯೋಟೈಟ್, ಡಾಲರೈಟ್ ಮೊದಲಾದವುಗಳ ಹೊಡೆ ಶಿಲೆಗಳಿರುವುದುಂಟು. ಜಂಬುಕಲ್ಲು ಕರಾವಳಿ ಪ್ರದೇಶದಲ್ಲಿ ಬಹುಮಟ್ಟಿಗೂ ಒಳಭಾಗದಲ್ಲಿ ಸ್ವಲ್ಪಮಟ್ಟಿಗೂ ಇದೆ. ಕರಾವಳಿ ಪ್ರದೇಶದ ಮೆಕ್ಕಲು, ಜೇಡಿ ಮತ್ತು ಸುಣ್ಣಕಲ್ಲು ಪದರಗಳು ಈಚಿನ ರಚನೆಗಳು.

ಪಣಂಬೂರು, ಸಾಗರ ತೀರ

ಈಚೆಗೆ ನಡೆದಿರುವ ಪರಿಶೋಧನೆಗಳಿಂದ ಈ ಜಿಲ್ಲೆಯಲ್ಲಿ ಉಪಯುಕ್ತ ಖನಿಜಗಳಿರುವುದು ತಿಳಿದುಬಂದಿದೆ. ಜೋಗಿಮಲ್ಲೆ ಬೆಟ್ಟ ಮತ್ತು ಉಪ್ಪಿನಂಗಡಿ ಬಳಿ ಕುರಂಗದ ಕಲ್ಲುಗಳ ನಿಕ್ಷೇಪಗಳಿವೆ. ಸುಬ್ರಹ್ಮಣ್ಯ ಮತ್ತು ಸುಳ್ಯ ತಾಲ್ಲೂಕಿನ ಗುಂಡಿಯ ಮೊದಲಾದೆಡೆಗಳಲ್ಲಿ ಗಾರ್ನೆಟ್ ದೊರಕುತ್ತದೆ. ಪುತ್ತೂರು ತಾಲ್ಲೂಕಿನ ಮುದನೂರು ಹೊಳೆಯ ಮೆಕ್ಕಲು ಮಣ್ಣಿನಲ್ಲಿ ಬಂಗಾರ ಕಂಡುಬಂದಿದೆ. ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಹಲವೆಡೆ ಕಬ್ಬಿಣ ನಿಕ್ಷೇಪಗಳಿವೆ. ಇಲ್ಲಿ ಸಿಕ್ಕುವ ಅದಿರಿನಲ್ಲಿ ಶೇ.54ರಿಂದ 57ರವರೆಗೆ ಕಬ್ಬಿಣ ಇರುವುದು ಕಂಡುಬಂದಿದೆ. ಪಣಂಬೂರು ಬಳಿ ಮತ್ತು ಮಂಗಳೂರು ತಾಲ್ಲೂಕು ಹಾಗೂ ಇತರೆಡೆಗಳಲ್ಲಿ ಗ್ರಾನೈಟಿಕ್ ರೂಪದ ಬೆಣಚುಕಲ್ಲನ್ನು ಬಂದರು ಮತ್ತು ಕಟ್ಟಡಗಳ ರಚನೆಗಾಗಿ ಅಗಾಧ ಪ್ರಮಾಣದಲ್ಲಿ ತೆಗೆದು ಬಳಸಲಾಗುತ್ತಿದೆ. ಕ್ಯಾನೈಟ್, ಸುಣ್ಣದ ಚಿಪ್ಪು, ಸಿಲಿಕ ಮರಳು, ಸಿಲಿಮನೈಟ್ ಮತ್ತು ಸೋಪುಕಲ್ಲು ಹಾಗೂ ಹೆಂಚಿನ ಜೇಡಿಮಣ್ಣುಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿ ದೊರೆಯುತ್ತವೆ.

ಇಲ್ಲಿನ ಭೌಗೋಳಿಕ ಸ್ವರೂಪದಿಂದಾಗಿ ಈ ಜಿಲ್ಲೆ ಹೆಚ್ಚಿನ ಜಲಸಮೃದ್ಧಿ ಪಡೆದಿದೆ. ಪಶ್ಚಿಮ ಘಟ್ಟಗಳು ಮುಂಗಾರು ಮಾರುತಗಳನ್ನು ತಡೆಯುವುದರಿಂದ ಇಲ್ಲಿ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಭಾರಿ ಮಳೆ ಬೀಳುತ್ತದೆ. ಘಟ್ಟದ ಪಶ್ಚಿಮ ಭಾಗಕ್ಕೆ ಬಿದ್ದ ನೀರೆಲ್ಲ ಈ ಜಿಲ್ಲೆಯಲ್ಲಿಯೇ ಹರಿದು ಸಮುದ್ರ ಸೇರುತ್ತದೆ. ಇಲ್ಲಿ ಹುಟ್ಟುವ ನದಿಗಳು ಸಾಮಾನ್ಯವಾಗಿ 150ರಿಂದ 160ಕಿಮೀ ಗಳಿಗಿಂತ ಹೆಚ್ಚು ಉದ್ದವಿಲ್ಲ. ಮಳೆಯ ಜೊತೆಗೆ ಭೂಗರ್ಭದಿಂದ ಚಿಮ್ಮುವ ನೀರು ಕೂಡ ಪಶ್ಚಿಮದ ಇಳಿಜಾರಿನ ಕಡೆಯೇ ಹರಿಯುವುದರಿಂದ ಇಲ್ಲಿನ ನದಿಗಳು ಮಳೆ ಗಾಲದಲ್ಲಿ ತುಂಬಿ ಹರಿಯುತ್ತವೆ. ಇದರಿಂದ ಭಾರಿ ಪ್ರವಾಹ ಉಂಟಾಗುತ್ತದೆ. ಇಲ್ಲಿ ನದಿಗಳ ಉದ್ದ ಕಡಿಮೆ ಇರುವುದರಿಂದ ಪ್ರವಾಹವು ಬೇಗ ಇಳಿಯುವ ಸಾಧ್ಯತೆ ಇದೆ.

ನೇತ್ರಾವತಿ, ಗುರುಪುರ ಮತ್ತು ಕುಮಾರಧಾರಾ – ಇವು ಈ ಜಿಲ್ಲೆಯಲ್ಲಿ ಹರಿಯುವ ಮುಖ್ಯ ನದಿಗಳು. ಕುದುರೆಮುಖದಲ್ಲಿ ಹುಟ್ಟುವ ನೇತ್ರಾವತಿ ನದಿ ಕುಮಾರಧಾರಾ ಮತ್ತು ಗುರುಪುರ ಉಪನದಿಗಳನ್ನು ಕೂಡಿಕೊಂಡು ಮಂಗಳೂರಿನ ಬಳಿ ಸಮುದ್ರವನ್ನು ಸೇರುತ್ತದೆ. ನದಿಗಳು ಸಮುದ್ರ ಸೇರುವ ಎಡೆಗಳಲ್ಲಿ ಮರಳಿನಿಂದ ಕೂಡಿದ ವಿಶಾಲ ಭಾಗಗಳಿವೆ. ಈ ಪ್ರದೇಶ ದೋಣಿಸಂಚಾರಕ್ಕೆ ಅನುಕೂಲವಾಗಿದೆ. ಕೆಲವೊಮ್ಮೆ ಈ ನದಿಗಳ ಪ್ರವಾಹದಿಂದ ಭಾರಿ ಹಾನಿಯಾಗುವುದೂ ಉಂಟು. ಈ ನದಿಗಳಲ್ಲದೆ ಅನೇಕ ಕೆರೆಗಳೂ ಇವೆ.

ಈ ಜಿಲ್ಲೆಯಲ್ಲಿ ಒಟ್ಟು 1,28,478 (1988-89) ಹೆಕ್ಟೇರ್‌ಗಳ ಅರಣ್ಯ ಪ್ರದೇಶವಿದ್ದು ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇ.29 ಭಾಗವನ್ನು ಆವರಿಸಿದೆ. ಕಾಡುಗಳಲ್ಲಿ ನಿತ್ಯ ಹರಿದ್ವರ್ಣ ಮತ್ತು ಎಲೆ ಉದುರುವ ಸಸ್ಯವರ್ಗಗಳಿವೆ. ಮರಮುಟ್ಟಿಗೆ ಉಪಯುಕ್ತವಾಗುವ ಮತ್ತಿ, ನಂದಿ, ಮರವು, ಕರಿಮರ, ಸಾಗುವಾನಿ, ಕೋಗಿಲೆ, ಕೀರಲ್‌ಭೋಗಿ, ಸಿರಿಹೊನ್ನೆ, ತೇಗ, ಹಲಸು, ದಬ್ಬೆ ಮೊದಲಾದವಲ್ಲದೆ ಆಲ, ಅತ್ತಿ, ಅರಳೆ, ಬೇವು, ಮಾವು ಮುಂತಾದ ಮರಗಳೂ ಇವೆ. ಕಾಡಿನಲ್ಲಿ ಬಿದಿರು, ಬೆತ್ತ, ವಾಟೆ, ಕೇದಿಗೆ, ಈಚಲು, ಬಗನಿ ಮೊದಲಾದವೂ ಇವೆ. ಏಲಕ್ಕಿ, ಮೆಣಸು, ಸೀಗೆ, ವೀಳ್ಯದೆಲೆ, ತೆಂಗು, ಶುಂಠಿ, ಗೇರು - ಇವು ಕಾಡುಗಳಲ್ಲೂ ತೋಟಗಳಲ್ಲೂ ಕಂಡುಬರುವ ಮುಖ್ಯ ವಾಣಿಜ್ಯ ಬೆಳೆಗಳಾಗಿವೆ. ನಿಂಬೆ, ಕಾಡುಕಂಚಿ ಹುಳಿ, ದೊಡ್ಡೆಳ್ಳಿಕಾಯಿ, ಸಿಯಾಲಿ ಹಣ್ಣು, ಕಾಡುಕಿತ್ತಲೆ, ಚಕ್ಕೋತ, ನೆಲ್ಲಿಕಾಯಿ ಮೊದಲಾದ ಹುಳಿಫಲಗಳನ್ನೀಯುವ ಸಸ್ಯಗಳೂ ಇವೆ.

ದಕ್ಷಿಣ ಭಾರತದ ಕಾಡುಗಳಲ್ಲಿ ಕಂಡುಬರುವ ಬಹುತೇಕ ಪ್ರಾಣಿವರ್ಗಗಳೆಲ್ಲ ಇಲ್ಲಿವೆ. ಜಿಂಕೆ, ಕಾಟಿ, ಕಡವೆ, ಹುಲಿ, ಚಿರತೆ, ಕಾಡುಹಂದಿ, ಕುರಿ, ತೋಳ ಮುಂತಾದ ದೊಡ್ಡ ಪ್ರಾಣಿಗಳಿಂದ ಹಿಡಿದು ಉಡು, ಚಿಪ್ಪಿಗ, ಹಾರಬೆಕ್ಕು, ಕೆಂಜಳಿಲು ಮೊದಲಾದ ಪ್ರಾಣಿಗಳು ಇಲ್ಲಿ ಕಂಡುಬರುತ್ತವೆ. ಮಲೆನಾಡಿನಿಂದ ಬರುವ ಆನೆಗಳು ಕೆಲವೊಮ್ಮೆ ಇಲ್ಲಿಯ ಅರಣ್ಯಗಳಲ್ಲಿ ಕಾಣಿಸಿಕೊಳ್ಳುವುದೂ ಉಂಟು. ಹೆಬ್ಬಾವಿನಿಂದ ಹಿಡಿದು ಹಸುರು ಹಾವಿನವರೆಗೆ ವಿವಿಧ ಉರಗ ಜಾತಿಗಳಿವೆ. ಕಾಡುಕೋಳಿ, ಕೋಗಿಲೆ, ಹದ್ದು, ಗಿಡಗ, ಗಿಣಿ ಮೊದಲಾದ ವಿವಿಧ ಪಕ್ಷಿ ಜಾತಿಗಳನ್ನೂ ನದಿಗಳಲ್ಲಿ ಮೊಸಳೆಗಳನ್ನೂ ಕಾಣಬಹುದು.

ಹಳೆಯ ಬಂದರು, ಮಂಗಳೂರು

ಈ ಜಿಲ್ಲೆಯ ವಾಯುಗುಣದ ಮುಖ್ಯ ಲಕ್ಷಣಗಳೆಂದರೆ ಅತ್ಯಧಿಕ ಮಳೆ, ಅಧಿಕ ತೇವಾಂಶ ಮತ್ತು ಭಾರಿ ಸೆಕೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಅಧಿಕ ಮಳೆ ಇರುತ್ತದೆ. ಮಾರ್ಚಿಯಿಂದ ಮೇವರೆಗೆ ಸೆಕೆ ಹೆಚ್ಚು. ಈ ಜಿಲ್ಲೆಯ ಬಹುಭಾಗ ಸಮುದ್ರಮಟ್ಟಕ್ಕೆ ಹೆಚ್ಚು ಎತ್ತರವಿಲ್ಲದ್ದರಿಂದ ವರ್ಷದ ಬಹು ಕಾಲದಲ್ಲಿ ಸೆಕೆಯ ಅನುಭವ

ವಾಗುತ್ತದೆ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 3,930ಮಿಮೀ. ಇಲ್ಲಿ ಬಿರುಗಾಳಿಯಿಂದ ಕೂಡಿದ ಮಳೆ ಆಗಾಗ ಬರುವುದುಂಟು. ಕೆಲವೆಡೆಗಳಲ್ಲಿ ಒಂದೇ ದಿನದಲ್ಲಿ 20" ಗಿಂತ ಹೆಚ್ಚು ಮಳೆಯಾಗುವ ಸಂಭವವುಂಟು. ಬೇಸಗೆಯಲ್ಲಿ ಅತಿ ಗರಿಷ್ಠ ಉಷ್ಣಾಂಶ $37.8^0$ ಸೆ., ಅತಿ ಕನಿಷ್ಠ ಉಷ್ಣಾಂಶ $16.7^0$ ಸೆ.

ಕುಕ್ಕೆ ಸುಬ್ರಹ್ಮಣ್ಯ ದೇವಾಲಯ

ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಸೇಕಡ 30 ಭಾಗದಷ್ಟು ಪ್ರದೇಶದಲ್ಲಿ ಮಾತ್ರ ಬೆಳೆ ಬೆಳೆಯಲಾಗುತ್ತಿದೆ. ಬತ್ತ, ಕಬ್ಬು, ಅಡಕೆ, ಏಲಕ್ಕಿ, ಮೆಣಸು, ರಾಗಿ, ರಬ್ಬರ್, ಗೇರು ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ. ತೀರಪ್ರದೇಶದ ಕಡೆ ಇರುವ ಬಯಲುಗಳಲ್ಲಿ ಮಣ್ಣು ಹೆಚ್ಚು ಫಲವತ್ತಾಗಿದ್ದು ವ್ಯವಸಾಯಕ್ಕೆ ಹೆಚ್ಚು ಉಪಯುಕ್ತವಾಗಿದೆ. ಜಿಲ್ಲೆಯಲ್ಲಿ ಸಣ್ಣ ಹಿಡುವಳಿಗಳೇ ಅಧಿಕ ಸಂಖ್ಯೆಯಲ್ಲಿವೆ. ಬೆಳೆ ಬೆಳೆಯುವುದನ್ನು ಅನುಸರಿಸಿ ಗದ್ದೆಗಳನ್ನು ಕೊಳಕೆಗದ್ದೆ, ಬೈಲುಗದ್ದೆ, ಮತ್ತು ಪಟ್ಲ ಗದ್ದೆ ಎಂದು ಕರೆಯುತ್ತಾರೆ. ತೆಂಗು, ಅಡಕೆ, ಏಲಕ್ಕಿ ಬೆಳೆಯುವ ತೋಟಗಳಿಗೆ ಬಾಗಾಯ್ತು ಎಂದು ಕರೆಯುತ್ತಾರೆ. ಅಲ್ಲಲ್ಲಿ ರಬ್ಬರ್ ಸಾಗುವಳಿ ನಡೆದಿದೆ. ಕುತ್ಪಾಜೆಯಲ್ಲಿ ರಬ್ಬರ್ ಹದಮಾಡುವ ಕಾರ್ಖಾನೆ ಇದೆ. ಪಶ್ಚಿಮ ಘಟ್ಟದ ತಗು ಪ್ರದೇಶದಲ್ಲಿ ಮೆಣಸು, ಏಲಕ್ಕಿ ಬೆಳೆಯುತ್ತಾರೆ. ಈ ಬೆಳೆಗಳಲ್ಲದೆ ಕೆಲವು ವಿದೇಶಿ ಸಸ್ಯಗಳನ್ನು ತಂದು ಇಲ್ಲಿ ಸಾಗುವಳಿ ಮಾಡಲಾಗಿದೆ. ಅವುಗಳಲ್ಲಿ ಕೋಕೊ, ಕೆಂಪು ಎಣ್ಣೆ ತಾಳೆ ಮುಖ್ಯವಾದವು. ಇತ್ತೀಚೆಗೆ ವೆನಿಲ ಬಳ್ಳಿ ಬೆಳೆಯುವುದು ಕಂಡುಬರುತ್ತಿದೆ. ಆಹಾರ ಬೆಳೆಗಳಲ್ಲಿ 67,754 ಹೆಕ್ಟೇರ್‌ಗಳಲ್ಲಿ ಬತ್ತದ ಬೆಳೆ ಇದೆ. ನೂರಾರು ಹೆಕ್ಟೇರ್‌ಗಳಲ್ಲಿ ರಾಗಿಯನ್ನೂ ಉದ್ದನ್ನೂ ಬೆಳೆಯುತ್ತಾರೆ. ಇತರ ದ್ವಿದಳ ಧಾನ್ಯ ಬೆಳೆಯುವ ಕ್ಷೇತ್ರ 4,497 ಹೆಕ್ಟೇರುಗಳು. 565ಹೆಕ್ಟೇರ್‌ಗಳಲ್ಲಿ ಕಬ್ಬನ್ನು ಬೆಳೆಯುತ್ತಾರೆ. (1998-99). ಕಬ್ಬನ್ನು ಹೆಚ್ಚಾಗಿ ಕರಾವಳಿ ಮತ್ತು ನದಿಗಳ ತೀರದಲ್ಲಿ ಬೆಳೆಯುತ್ತಾರೆ. ಆಲೂಗೆಡ್ಡೆ, ನೆಲಗಡಲೆ, ಮೆಣಸಿನಕಾಯಿ ಮೊದಲಾದವನ್ನೂ ಬೆಳೆಯುವುದುಂಟು. ವಾರ್ಷಿಕ ಅಕ್ಕಿಯ ಉತ್ಪಾದನೆ 1,41,211 ಟನ್‌ಗಳು. ಕಬ್ಬಿನ ಉತ್ಪಾದನೆ 45,087 ಟನ್‌ಗಳು.

ವ್ಯವಸಾಯದ ನೆರವಿಗಾಗಿ 1968ರಲ್ಲಿ ಮಂಗಳೂರಿನಲ್ಲಿ ಮಣ್ಣು ಪರೀಕ್ಷಣಾ ಪ್ರಯೋಗಾಲಯವನ್ನು ಸ್ಥಾಪಿಸಲಾಯಿತು. ಮಂಗಳೂರಿಗೆ ಸು.4ಕಿಮೀ ದೂರದ ಜಪ್ಪಿನಮೊಗರುವಿನಲ್ಲಿ 1944ರಲ್ಲಿ ಸ್ಥಾಪಿತವಾದ ವ್ಯವಸಾಯ ಸಂರಕ್ಷಣಾ ಕೇಂದ್ರವಿದೆ. ತೋಟಗಾರಿಕೆ ಇಲಾಖೆಯು ತೆಂಗು, ಅಡಕೆ, ಪರಂಗಿ, ಬಾಳೆಹಣ್ಣು, ಗೋಡಂಬಿ, ದಾಲ್ಚಿನ್ನಿ ಮರ, ಮೆಣಸು, ಬೆಳ್ಳುಳ್ಳಿ ಮೊದಲಾದ ಸಂಬಾರ ಪದಾರ್ಥಗಳ ಬೆಳೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಈ ಜಿಲ್ಲೆಯಲ್ಲಿ 4 ಬಿತ್ತನೆ ಬೀಜದ ಫಾರಂಗಳಿವೆ. ಈ ಜಿಲ್ಲೆಯಲ್ಲಿ ಬಯಲುಗಳು ಕಿರಿದಾಗಿ ಹೆಚ್ಚು ಏರುತಗ್ಗುಗಳಿಂದ ಕೂಡಿರುವುದರಿಂದ ಭಾರಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿಲ್ಲ. ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳು ಫಲಪ್ರದವಾಗಿ ನಡೆದಿವೆ. ಅವುಗಳಲ್ಲಿ ಪುತ್ತೂರು ತಾಲ್ಲೂಕಿನ ಗೌರಿಹೊಳೆ, ಬಂಟ್ವಾಳ ತಾಲ್ಲೂಕಿನ ಹಂಚಿಕಟ್ಟೆ ಮತ್ತು ನೇತ್ರಾವತಿ ಹಾಗೂ ಕಟ್ಟೆಹೊಳೆ ಜಲಾಶಯ ಯೋಜನೆ - ಇವು ಮುಖ್ಯವಾದವು. ಕೆರೆಗಳು, ಬಾವಿಗಳು ಮತ್ತಿತರ ಸಾಧನಗಳಿಂದ ಒಟ್ಟು 66,015 ಹೆಕ್ಟೇರುಗಳಿಗೆ ನೀರಾವರಿ ಒದಗಿಸಲಾಗಿದೆ (1998-99).

ಜಾನುವಾರುಗಳ ಸಂಪತ್ತಿನಲ್ಲಿ ಜಿಲ್ಲೆ ಉತ್ತಮವಾಗಿದೆ. ಜಿಲ್ಲೆಯಲ್ಲಿ ಈ ಜಾನುವಾರುಗಳ ಆರೈಕೆಗಾಗಿ 9 ಪಶುವೈದ್ಯ ಆಸ್ಪತ್ರೆಗಳು, 20 ಚಿಕಿತ್ಸಾಲಯಗಳು, 54 ಪ್ರಾಥಮಿಕ ಪಶುವೈದ್ಯ ಕೇಂದ್ರಗಳಿವೆ (2000). 5 ಸಂಚಾರಿ ಚಿಕಿತ್ಸಾಲಯಗಳು, 5 ಕೃತಕ ಗರ್ಭಧಾರಣಾ ಕೇಂದ್ರಗಳಿವೆ. ಮತ್ಸ್ಯಸಂಪತ್ತಿಗೆ ಜಿಲ್ಲೆ ಹೆಸರಾದುದು. 2000-01ರಲ್ಲಿ ಮತ್ಸ್ಯೋತ್ಪನ್ನ 81,410 ಮೆಟ್ರಿಕ್ ಟನ್‌ಗಳು.

ದಕ್ಷಿಣ ಕನ್ನಡ ಜಿಲ್ಲೆ ಕೈಗಾರಿಕೆಯಲ್ಲೂ ಗಣನೀಯ ಪ್ರಗತಿ ಸಾಧಿಸಿದೆ. ಇಲ್ಲಿನ ಅರಣ್ಯೋತ್ಪನ್ನಗಳು, ವ್ಯವಸಾಯ ಬೆಳೆಗಳು ಮತ್ತು ಇಲ್ಲಿನ ಬಂದರುಗಳಿಂದಾಗಿ ಕೈಗಾರಿಕೆ ಬೆಳೆದಿದೆ. ಈ ಜಿಲ್ಲೆಯಲ್ಲಿ ನೋಂದಣಿಯಾದ ಕಾರ್ಖಾನೆಗಳ ಸಂಖ್ಯೆ 4475. ಅವುಗಳಲ್ಲಿ 32,202 ಉದ್ಯೋಗಿಗಳಿದ್ದಾರೆ (2001). 7 ಕೈಗಾರಿಕಾ ಎಸ್ಟೇಟುಗಳಿವೆ, 306 ಕೈಗಾರಿಕಾ ಷೆಡ್ಡುಗಳಿವೆ (1998-99).

ಈ ಜಿಲ್ಲೆಯಲ್ಲಿ ಕೆಲವು ದೊಡ್ಡ ಔದ್ಯೋಗಿಕ ಯೋಜನೆಗಳು ಅಸ್ತಿತ್ವಕ್ಕೆ ಬಂದಿವೆ. ಪಣಂಬೂರಿನಲ್ಲಿರುವ ಮಂಗಳೂರು ರಾಸಾಯನಿಕ ಮತ್ತು ಗೊಬ್ಬರ ಕಾರ್ಖಾನೆ, ಮಂಗಳೂರು ಬಂದರು ನಿರ್ಮಾಣ ಯೋಜನೆ ಹಾಗೂ ಜಿಲ್ಲೆಯ ಇತರ ಸಣ್ಣ ಬಂದರುಗಳ

ಗೋಕರ್ಣೇಶ್ವರ ದೇವಾಲಯ, ಮಂಗಳೂರು

ಅಭಿವೃದ್ಧಿ ಯೋಜನೆಗಳು ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸುತ್ತವೆ. ರಾಷ್ಟ್ರೀಯ ಖನಿಜಾಭಿವೃದ್ಧಿ ಸಂಸ್ಥೆ ಕೈಗೊಂಡಿರುವ ಕುದುರೆಮುಖ ಕಬ್ಬಿಣದ ಅದಿರು ತೆಗೆಯುವ ಯೋಜನೆ ರಾಷ್ಟ್ರದಲ್ಲೇ ಒಂದು ಭಾರಿ ಉದ್ಯಮವಾಗಿದ್ದು ಇದಕ್ಕೆ ಸಂಬಂಧಪಟ್ಟ ಇತರ ಕೈಗಾರಿಕೆಗಳ ಅಭಿವೃದ್ಧಿಗೂ ಜಿಲ್ಲೆಯಲ್ಲಿ ಅವಕಾಶ ಒದಗಿದೆ.

ಇಲ್ಲಿನ ಸಣ್ಣ ಕೈಗಾರಿಕೆಗಳು ಆರ್ಥಿಕ ಚಟುವಟಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. 17 ಬಟ್ಟೆ ಗಿರಣಿಗಳು, 10 ರಾಸಾಯನಿಕ ಕಾರ್ಖಾನೆಗಳು, 51 ಎಂಜಿನಿಯರಿಂಗ್ ಘಟಕಗಳು, 397 ಇತರ ಸಣ್ಣ ಕೈಗಾರಿಕಾ ಘಟಗಳಿವೆ. ಹೆಂಚಿನ ತಯಾರಿಕೆಯಲ್ಲಿ ಈ ಜಿಲ್ಲೆ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆದಿದೆ. ಹಡಗು ಮತ್ತು ದೋಣಿಗಳ ದುರಸ್ತಿ ಕೇಂದ್ರಗಳಲ್ಲಿ ಬಹಳಷ್ಟು ಜನರಿಗೆ ಉದ್ಯೋಗ ಒದಗಿದೆ. ಗೇರುಬೀಜ ಹದಮಾಡುವ ಕಾರ್ಖಾನೆಗಳು, ಬೀಡಿ ಉದ್ಯಮ ಘಟಕಗಳು ಉಕ್ಕಿನ

ತಂತಿ, ಯಂತ್ರ ಬಿಡಿಭಾಗಗಳನ್ನು ತಯಾರಿಸುವ ಘಟಕಗಳು ಲಕ್ಷಾಂತರ ಜನರಿಗೆ ಆಸರೆಯಾಗಿವೆ. ವ್ಯವಸಾಯ ಉಪಕರಣಗಳು, ಗೃಹಬಳಕೆ ಪಾತ್ರೆಗಳು, ಟಿನ್ ಡಬ್ಬಗಳು ಮೊದಲಾದವನ್ನು ತಯಾರಿಸುವ ಘಟಕಗಳು ಇವೆ. ವಾಹನಗಳ ಹೊರಕವಚ ರಚನೆ, ವಿದ್ಯುತ್ ಉಪಕರಣಗಳ ತಯಾರಿಕೆ ಮೊದಲಾದವುಗಳಿಗೆ ಸಂಸ್ಕರಿಸುವ ಕಾರ್ಯಾಗಾರಗಳಿವೆ. ಜಿಲ್ಲೆಯಲ್ಲಿ ಸೋಪಿನ ಕಾರ್ಖಾನೆಗಳಿವೆ. ಮರದ ವಸ್ತುಗಳನ್ನು ಸಿದ್ಧಪಡಿಸುವ ಘಟಕಗಳಿವೆ. ಇಲ್ಲಿ ಕಾಫಿಬೀಜ ಸಿದ್ಧಪಡಿಸುವ ಗಿರಣಿಗಳೂ ಕೊಬ್ಬರಿ ಎಣ್ಣೆತಯಾರಿಸುವ ಗಿರಣಿಗಳೂ ಇವೆ. ಮೀನು ಸಂಸ್ಕರಣ ಕಾರ್ಖಾನೆಗಳೂ ಶೈತ್ಯೀಕರಣ ಕಾರ್ಖಾನೆಗಳೂ ಇವೆ. ತಂತ್ರಾಂಶ ಕಂಪೆನಿಗಳು ಈಚೆಗೆ ಆರಂಭವಾಗಿವೆ.



ಸುಲ್ತಾನ್ ಬತೇರಿ

ದಕ್ಷಿಣ ಕನ್ನಡ ಜಿಲ್ಲೆ ಪ್ರಾಚೀನ ಕಾಲದಿಂದಲೂ ದೇಶವಿದೇಶಗಳ ನಡುವೆ ವ್ಯಾಪಾರ ಸಂಬಂಧವಿಟ್ಟುಕೊಂಡಿತ್ತೆಂದು ಐತಿಹಾಸಿಕ ಆಧಾರಗಳಿಂದ ತಿಳಿದುಬರುತ್ತದೆ. ಆಧುನಿಕ ಕಾಲದಲ್ಲೂ ಈ ಜಿಲ್ಲೆ ಪಡೆದಿರುವ ವಿಶೇಷ ಬಂದರು ಸೌಲಭ್ಯಗಳಿಂದಾಗಿ ಇಲ್ಲಿ ವಾಣಿಜ್ಯ ಪ್ರವರ್ಧಮಾನವಾಗುತ್ತಿದೆ. ಮಂಗಳೂರು ಕರ್ನಾಟಕದ ಅತಿ ದೊಡ್ಡ ಬಂದರು. ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿಗೆ ಮುಂಬಯಿ, ಕೊಚ್ಚಿಗಳ ನಡುವೆ ಸಮುದ್ರ ಸಂಪರ್ಕವೂ ಬೆಂಗಳೂರು ಮತ್ತು ಮದರಾಸುಗಳ ನಡುವೆ ರೈಲು ಸಂಪರ್ಕವೂ ಇದ್ದು ಉತ್ತಮ ವಾಣಿಜ್ಯ ಕೇಂದ್ರವೆನಿಸಿದೆ. ಗೋಡಂಬಿ, ಸಂಸ್ಕರಿಸಿದ ಕಾಫಿಬೀಜ, ಅಡಕೆ, ಮರಮುಟ್ಟು, ಮರದ ದಿಮ್ಮಿಗಳು, ಮೀನಿನ ಉತ್ಪನ್ನಗಳು, ಹೆಂಚು, ತೆಂಗು, ಮೆಣಸು, ಕಾಫಿ, ಏಲಕ್ಕಿ, ಕಬ್ಬಿಣದ ಅದಿರು, ಮ್ಯಾಂಗನೀಸ್ ಮೊದಲಾದ ವಸ್ತುಗಳು ಮಂಗಳೂರು ಬಂದರಿನಿಂದ ವಿದೇಶಗಳಿಗೆ ರಫ್ತಾಗುತ್ತವೆ. ಹಾಗೆಯೇ ಈ ಬಂದರಿನ ಮೂಲಕ ಆಹಾರ ಧಾನ್ಯಗಳು, ರಾಸಾಯನಿಕ ಗೊಬ್ಬರ, ಯಂತ್ರಗಳು, ಕಾಗದ ಮೊದಲಾದವು ವಿದೇಶಗಳಿಂದ ಆಮದಾಗುತ್ತವೆ. ಮುಲ್ಕಿ, ಹಂಗಾರಕಟ್ಟೆ, ಪಣಂಬೂರು, ಉಪ್ಪಿನಂಗಡಿ, ಬೆಳ್ತಂಗಡಿ, ಬಂಟವಾಳ, ಉಳ್ಳಾಲ, ಪುತ್ತೂರು ಮೊದಲಾದವು ಜಿಲ್ಲೆಯ ಇತರ ವ್ಯಾಪಾರ ಕೇಂದ್ರಗಳಾಗಿವೆ. ಅಲ್ಲಲ್ಲಿ ನಡೆಯುವ ಸಂತೆಗಳು ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ವ್ಯಾಪಾರ ನಡೆಯುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ ವ್ಯಾಪಾರ ಮತ್ತು ಬ್ಯಾಂಕಿಂಗ್ ಉದ್ಯಮದಲ್ಲಿ ಮುಂದಿದೆ. 1906ರಲ್ಲಿ ಇಲ್ಲಿ ಕೆನರಾ ಬ್ಯಾಂಕ್ ಅಸ್ತಿತ್ವಕ್ಕೆ ಬಂತು. 1913ರಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್ ಸ್ಥಾಪನೆಯಾಯಿತು. ಸಿಂಡಿಕೇಟ್ ಮತ್ತು ಕೆನರಾ ಬ್ಯಾಂಕುಗಳಂಥ' ರಾಷ್ಟ್ರೀಕರಣಗೊಂಡ ಬ್ಯಾಂಕುಗಳು ಪ್ರಾರಂಭಗೊಂಡದ್ದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಇಲ್ಲಿಯ ಕರ್ನಾಟಕ ಮತ್ತು ವಿಜಯಾಬ್ಯಾಂಕುಗಳೂ ರಾಷ್ಟ್ರೀಯ ವ್ಯಾಪ್ತಿಯಲ್ಲಿ ಬೆಳೆದಿವೆ. ಈಗ 13 ಸಹಕಾರಿ ಬ್ಯಾಂಕುಗಳೂ 299 ವಾಣಿಜ್ಯ ಬ್ಯಾಂಕುಗಳೂ ಇವೆ (2001). ಇವುಗಳಲ್ಲದೆ ಕೆಲವು ಹಣಕಾಸಿನ ಕಾರ್ಪೊರೇಷನ್‌ಗಳೂ ಕೈಗಾರಿಕಾ ಸಹಕಾರ ಬ್ಯಾಂಕುಗಳೂ ಇವೆ. ಇಲ್ಲಿಯ ಜನಸಂಖ್ಯೆಯ ದೃಷ್ಟಿಯಿಂದ ರಾಜ್ಯಗಳ ರಾಜಧಾನಿಗಳ ಹೊರತು ಭಾರತದ ಯಾವುದೇ ಜಿಲ್ಲೆಗಿಂತಲೂ ಇಲ್ಲಿ ಅತ್ಯಧಿಕ ಬ್ಯಾಂಕು ಶಾಖೆಗಳಿವೆ. ಪ್ರಾಥ'ಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, ಕೃಷಿ ಸಾಲ ನೀಡಿಕೆ ಸಂಘಗಳು, ರೆಗ್ಯುಲೇಟೆಡ್ ಮಾರುಕಟ್ಟೆಗಳೂ ಇವೆ.

ಸಾರಿಗೆ-ಸಂಪರ್ಕಕ್ಕೆ ಇಲ್ಲಿನ ಭೌಗೋಳಿಕ ಸನ್ನಿವೇಶ ಅನುಕೂಲಕರವಾಗಿಲ್ಲದಿದ್ದರೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲಾಗಿದೆ. ಶಿರಾಡಿ ಘಾಟ್ ರಸ್ತೆ, ಬಿಸಿಲೆ ಘಾಟ್ ರಸ್ತೆ, ನಗೋಡಿ ಘಾಟ್ ರಸ್ತೆ ಮತ್ತು ಸಂಪಾಜೆ ಘಾಟ್ ರಸ್ತೆ – ಇವು ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳೊಂದಿಗೂ ಒಳನಾಡಿಗೂ ಸಂಪರ್ಕ ಒದಗಿಸುತ್ತವೆ. ಮಂಗಳೂರು-ಹಾಸನ ರಸ್ತೆ ಮಾರ್ಗವನ್ನು ರಾಷ್ಟ್ರೀಯ ಹೆದ್ದಾರಿಯೆಂದು ಪರಿಗಣಿಸಲಾಗಿದೆ. ಪಶ್ಚಿಮ ಕರಾವಳಿಯಲ್ಲಿ ಮುಂಬಯಿಯಿಂದ ಕನ್ಯಾಕುಮಾರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ಇದೆ. ಇದು ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯೊಂದಿಗೆ ಸಂಪರ್ಕ ಕಲ್ಪಿಸಿದೆ. ಈಗ ಜಿಲ್ಲೆಯಲ್ಲಿರುವ ಒಟ್ಟು ರಾಷ್ಟ್ರೀಯ ಹೆದ್ದಾರಿಯ ಉದ್ದ 177ಕಿಮೀ.

ಈ ಜಿಲ್ಲೆಯಲ್ಲಿ ಉತ್ತಮ ರಸ್ತೆ ಸಂಪರ್ಕವಿದೆ. ಜಿಲ್ಲೆಯಲ್ಲಿ 849ಕಿಮೀ ಜಿಲ್ಲಾ ಮುಖ್ಯ ರಸ್ತೆ 1269ಕಿಮೀ ಗ್ರಾಮಾಂತರ ರಸ್ತೆಗಳಿವೆ. ತಾಲ್ಲೂಕು ಅಭಿವೃದ್ಧಿ ಮಂಡಲಿ ರಸ್ತೆಗಳ ಉದ್ದ 368ಕಿಮೀ (1999). ಹಾಸನ - ಮಂಗಳೂರು ರೈಲು ಮಾರ್ಗದ ಒಟ್ಟು ಉದ್ದ 189ಕಿಮೀ ಇದರಲ್ಲಿ 112ಕಿಮೀ ಉದ್ದದ ಮಾರ್ಗ ಈ ಜಿಲ್ಲೆಯಲ್ಲಿಯೇ ಹಾದು ಹೋಗುತ್ತದೆ. ಜಿಲ್ಲೆಯಲ್ಲಿ ಒಟ್ಟು 155ಕಿಮೀ ರೈಲು ಮಾರ್ಗವಿದೆ. ಕೊಂಕಣ ರೈಲು ಮಾರ್ಗದಿಂದಾಗಿ ಜಿಲ್ಲೆ ಪಶ್ಚಿಮ ಭಾರತದೊಂದಿಗೆ ನೇರ ಸಂಪರ್ಕ ಹೊಂದಿದೆ. ಇತ್ತೀಚೆಗೆ ಮಂಗಳೂರಿನಲ್ಲಿ ಕಟ್ಟಲಾಗಿರುವ ಹೊಸ ಬಂದರು ಕರ್ನಾಟಕದ ಹಾಗೂ ಈ ಜಿಲ್ಲೆಯ ಅತಿದೊಡ್ಡ ಬಂದರು.

ಮಂಗಳಾದೇವಿ ದೇವಾಲಯ, ಮಂಗಳೂರು

ಇದಲ್ಲದೆ ಇತರ ಚಿಕ್ಕ ಬಂದರುಗಳು ಚಿಕ್ಕ ಹಡಗುಗಳ ಮತ್ತು ದೋಣಿಗಳ ಸಂಚಾರಕ್ಕೆ ಅನುಕೂಲಕರವಾಗಿವೆ. ನದಿಗಳ ಮುಖಾಂತರ ಒಳನಾಡ ದೋಣಿ ಸಂಚಾರಕ್ಕೂ ಅವಕಾಶವಿದೆ. ಮಂಗಳೂರಿನಿಂದ ಬೆಂಗಳೂರು, ಬೆಳಗಾಂವಿ, ಮುಂಬಯಿಗಳಿಗೆ ವಿಮಾನ ಸಂಚಾರವಿದೆ.

ದಕ್ಷಿಣ ಕನ್ನಡ ಜಿಲ್ಲೆ ವಿದ್ಯಾಭ್ಯಾಸದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಈ ಜಿಲ್ಲೆಯಲ್ಲಿ ಶೇ.83.47 ಸಾಕ್ಷರತೆ ಇದೆ (2001).

ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ ಜಿಲ್ಲೆಯನ್ನು ಬಿಟ್ಟರೆ ಈ ಜಿಲ್ಲೆ ಅತಿ ಹೆಚ್ಚಿನ ಪ್ರಮಾಣದ ಸಾಕ್ಷರತೆಯುಳ್ಳ ಜಿಲ್ಲೆಯಾಗಿದೆ. ಇಲ್ಲಿ ಸರ್ಕಾರ, ಖಾಸಗಿ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳಿವೆ. ಜಿಲ್ಲೆ ಉನ್ನತ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣದ ತವರಾಗಿದೆ. ಜಿಲ್ಲೆಯಲ್ಲಿ 1284 ಪ್ರಾಥಮಿಕ ಶಾಲೆಗಳು, 290 ಪ್ರೌಢ ಶಾಲೆಗಳು, 82 ಪದವಿಪೂರ್ವ ಕಾಲೇಜುಗಳು ಇವೆ. 44 ಸಾಮಾನ್ಯ ಶಿಕ್ಷಣ ಕಾಲೇಜುಗಳು, 5 ಪಾಲಿಟೆಕ್ನಿಕ್‌ಗಳಿವೆ. ಎಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ 3, ಒಂದು ವೈದ್ಯಕೀಯ ಕಾಲೇಜು, ಒಂದು ಹೋಮಿಯೊಪತಿ ಕಾಲೇಜು, 3 ಭಾರತೀಯ ಪದ್ಧತಿ ವೈದ್ಯ ಕಾಲೇಜುಗಳಿವೆ. ಎರಡು ದಂತ ವೈದ್ಯಕೀಯ ಕಾಲೇಜುಗಳಿವೆ (2001). ಒಂದು ಸರ್ಕಾರಿ ತಾಂತ್ರಿಕ ಶಾಲೆಯೂ ಇದೆ. 1969ರಲ್ಲಿ ಮಂಗಳೂರಿನಲ್ಲಿ ಮತ್ಸ್ಯೋದ್ಯಮ ಕಾಲೇಜು ಸ್ಥಾಪನೆಯಾಯಿತು. ವಾಣಿಜ್ಯ ಶಿಕ್ಷಣ ಸಂಸ್ಥೆಗಳು ಮತ್ತು ಸಂಸ್ಕೃತ ಪಾಠಶಾಲೆಗಳಿವೆ.

1968ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮಂಗಳೂರಿನ ಬಳಿ ಕೊಣಾಜೆ ಎಂಬಲ್ಲಿ ಮಂಗಳಗಂಗೋತ್ರಿ ಎಂಬ ಒಂದು ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ತೆರೆಯಿತು. ಅಲ್ಲಿ ಮೊದಲಿಗೆ ವಿಜ್ಞಾನ ಮತ್ತು ಮಾನವಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಐದು ವಿಭಾಗಗಳು ಪ್ರಾರಂಭವಾದವು. 1980ರಲ್ಲಿ ಈ ಕೇಂದ್ರ ಪ್ರತ್ಯೇಕ ವಿಶ್ವವಿದ್ಯಾನಿಲಯವಾಗಿ ರೂಪುಗೊಂಡಿತು. (ನೋಡಿ: ಮಂಗಳೂರು ವಿಶ್ವವಿದ್ಯಾಲಯ).

ಇಲ್ಲಿ 6 ಸರ್ಕಾರಿ ಆಸ್ಪತ್ರೆಗಳು, 64 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 40 ಪ್ರಾಥಮಿಕ ಆರೋಗ್ಯ ಘಟಕಗಳು, 28 ಕುಟುಂಬ ಯೋಜನಾ ಕೇಂದ್ರಗಳಿವೆ. ಇತರ ಖಾಸಗಿ ಡಿಸ್ಪೆನ್ಸರಿಗಳಿವೆ.

ಜಿಲ್ಲೆಯ ಜನಸಂಖ್ಯೆಯಲ್ಲಿ ಸೇ.38.41ರಷ್ಟು ಪಟ್ಟಣವಾಸಿಗಳು. ಪಟ್ಟಣಗಳಲ್ಲಿ ಜನಸಾಂದ್ರತೆ ಹೆಚ್ಚುತ್ತಿದೆ. ಜಿಲ್ಲೆಯ ಜನಸಾಂದ್ರತೆ ಚ.ಕಿಮೀಗೆ 371.8. ಈ ಜಿಲ್ಲೆಯ ಜನರು ಹೊರರಾಜ್ಯಗಳಲ್ಲಿ ಹಾಗೂ ಕರ್ನಾಟಕದ ಇತರೆಡೆಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ನೆಲೆಸಿ, ಸರ್ಕಾರಿ ನೌಕರಿ, ಬ್ಯಾಂಕಿಂಗ್ ಉದ್ಯಮ, ತಂತ್ರಾಂಶ, ಪ್ಲಾಂಟೇಷನ್, ಕೃಷಿ, ವ್ಯಾಪಾರ ಮತ್ತು ಹೋಟೆಲು ಉದ್ಯಮಗಳಲ್ಲಿ ನಿರತರಾಗಿದ್ದಾರೆ.

ಕೊಳ, ಮಂಜುನಾಥ ದೇವಾಲಯ, ಕದ್ರಿ

ಇಲ್ಲಿ ಶೈವ, ಭಾಗವತ, ಮಾಧ್ವ, ಬೌದ್ಧ, ಜೈನ ಮೊದಲಾದ ಮತಾನುಯಾಯಿಗಳಿದ್ದಾರೆ. ಕ್ರೈಸ್ತ ಹಾಗೂ ಇಸ್ಲಾಂ ಮತಾನುಯಾಯಿಗಳೂ ಸಾಕಷ್ಟಿದ್ದಾರೆ. ಜನರು ಹೆಚ್ಚಾಗಿ ದ್ರಾವಿಡ ಸಂಸ್ಕೃತಿಯ ವಿವಿಧ ರೀತಿಯ ಶಕ್ತಿಪೂಜೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಮಾರಿ ಮತ್ತು ದುರ್ಗಿ ಪೂಜೆಗಳು, ಭೂತಾರಾಧನೆ, ಕೋಲಕಟ್ಟುವುದು ಮೊದಲಾದ ಜನಪದ ಆರಾಧನಾ ಪದ್ಧತಿಗಳು ಪ್ರಚಲಿತವಾಗಿವೆ. ಈ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳಾದ ಧರ್ಮಸ್ಥಳ, ಸುಬ್ರಹ್ಮಣ್ಯ, ಕದ್ರಿ ಸಹಸ್ರಾರು ಭಕ್ತರನ್ನು ಆಕರ್ಷಿಸುತ್ತವೆ. ಯಕ್ಷಗಾನ ಈ ಜಿಲ್ಲೆಯ ವಿಶಿಷ್ಟ ಜನಪದ ಕಲೆ. ಕೋಳಿ ಅಂಕ ಮತ್ತು ಕಂಬಳ ಇಲ್ಲಿ ವಿಶೇಷವಾಗಿ ಪ್ರಚಲಿತವಿದೆ.

ಈ ಜಿಲ್ಲೆಯಲ್ಲಿ ಧಾರ್ಮಿಕ ಸಮನ್ವಯತೆ ಮತ್ತು ವಿದ್ಯಾದಾನಕ್ಕೆ ಹೆಸರಾದ ಧರ್ಮಸ್ಥಳ, ವೀರಶೈವ ಮಠ ಪರಂಪರೆಯನ್ನು ನಡೆಸಿಕೊಂಡು ಬರುತ್ತಿರುವ ಗುರುಪುರ, ದೇವಾಲಯಗಳಿಗೆ ಹೆಸರಾದ ನಂದಾವರ, ನಾರವಿ, ಪೊಳಲಿ ದುರ್ಗಾಪರಮೇಶ್ವರಿ ದೇವಾಲಯವಿರುವ ಕಟೀಲು, ಆದಿಶಂಕರಾಚಾರ್ಯರು ಸಂದರ್ಶಿಸಿದ ಸುಬ್ರಹ್ಮಣ್ಯ, ಕದ್ರಿ, ಕಡಬ, ಕರಿಮಂಜೇಶ್ವರ, ಪುಣ್ಯಕ್ಷೇತ್ರವೂ ರಮ್ಯದೃಶ್ಯ ತಾಣವೂ ಆದ ಉಪ್ಪಿನಂಗಡಿ, ಸಿಸಿಲ, ಮುಸ್ಲಿಮರ ಯಾತ್ರಾಸ್ಥಳವಾದ ಹಾಗೂ ಹಳೆಯ ಕಾಲದ ಚರ್ಚ್ ಇರುವ ಉಳ್ಳಾಳ - ಮೊದಲಾದ ಧಾರ್ಮಿಕ ಪರಂಪರೆಯನ್ನು ಪಡೆದ ಸ್ಥಳಗಳು ಇವೆ. ಬೈಲಂಗಡಿ, ಬಂಗಾಡಿ, ಮಂಗಳೂರು, ಸಿಸಿಲ, ವೇಣೂರು, ವಿಟ್ಲ ಮೊದಲಾದ ಐತಿಹಾಸಿಕ ಸ್ಥಳಗಳಿವೆ. ಅಳಿಕೆ, ಸುರತ್ಕಲ್, ಉಜಿರೆ ಮೊದಲಾದವು ಶಿಕ್ಷಣಕ್ಕೆ ಪ್ರಸಿದ್ಧ.



ರೋಜಾದ್ರಿಯೋ ಕೆಥಡ್ರಲ್

ದಕ್ಷಿಣ ಕನ್ನಡ ಜಿಲ್ಲೆ ಪ್ರಾಚೀನ ಕಾಲದಿಂದಲೂ ವಿದೇಶಗಳೊಂದಿಗೆ ಸಂಪರ್ಕ ಹೊಂದಿತ್ತು. ರೋಮನ್ ಮತ್ತು ಗ್ರೀಕ್ ಹಾಗೂ ಅರಬ್ ವರ್ತಕರು ಇಲ್ಲಿನ ಬಂದರುಗಳಿಗೆ ಬಂದು ಹೋಗುತ್ತಿದ್ದರು. ಐತಿಹಾಸಿಕವಾಗಿ ಆಳುಪ ವಂಶದ ಅರಸರು ಈ ಪ್ರದೇಶವನ್ನು 7ನೆಯ ಶತಮಾನದಿಂದ 14ನೆಯ ಶತಮಾನದವರೆಗೂ ಆಳಿದರು. ಅವರು ಇಲ್ಲಿನ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ಭದ್ರ ಬುನಾದಿ ಹಾಕಿದರು. ಉದ್ಯಾವರ, ಮಂಗಳೂರು ಮತ್ತು ಬಾರಹ ಕನ್ಯಾಪುರ ಅವರ ರಾಜಧಾನಿಯಾಗಿದ್ದವು (ನೋಡಿ: ಉಡುಪಿ ಜಿಲ್ಲೆ). ಅವರ ರಾಜ್ಯವು ಘಟ್ಟದ ಮೇಲಿನ ಮಲೆನಾಡಿನ ಭಾಗದಲ್ಲೂ ವಿಸ್ತರಿಸಿದ್ದಿತು. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಮಂಗಳೂರು ಮತ್ತು ಬಾರಕೂರನ್ನು ಕೇಂದ್ರವಾಗಿ ಹೊಂದಿ ಅಲ್ಲಿಂದ ಪ್ರಾಂತ್ಯಾಧಿಕಾರಿಗಳು ಆಳುತ್ತಿದ್ದರು. ಅವರ ಸಾಮಂತರಾಗಿ ಕಾರ್ಕಳದ ಭೈರರಸರು, ಮೂಡಬಿದರೆಯ ಚೌಟರಸರು, ವೇಂಬಾರಿನ ಅಜಿಲರು, ಬಂಗವಾಡಿಯ ಬಂಗರು ಆಳುತ್ತಿದ್ದರು. ಇವರೆಲ್ಲ ಹೆಚ್ಚಾಗಿ ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದರು.

ಕೆಳದಿ ಅರಸರ ಕಾಲದಲ್ಲಿ ಇಲ್ಲಿ ಐರೋಪ್ಯ ವಸಾಹತುಕಾರರನ್ನು ನಿಗ್ರಹಿಸುವ ಕಾರ್ಯ ನಡೆಯಿತು. ದಕ್ಷಿಣ ಕನ್ನಡ ಪ್ರದೇಶ 1763ರಲ್ಲಿ ಬಿದನೂರಿನೊಂದಿಗೆ ಹೈದರ್ ಅಲಿಯ ವಶವಾಗಿ ಮುಂದೆ ಅವನ ಮಗ ಟಿಪ್ಪುವಿನ ಆಳಿಕೆಗೆ ಸೇರಿತು. ಶ್ರೀರಂಗಪಟ್ಟಣದ ಪರಾಭವದಿಂದ 1799ರಲ್ಲಿ ಬ್ರಿಟಿಷರ ಆಡಳಿತಕ್ಕೆ ಬಂತು. ಬ್ರಿಟಿಷರ ಆಳಿಕೆಯ ಕಾಲದಲ್ಲಿ ಅವರು ದಕ್ಷಿಣ ಮತ್ತು ಉತ್ತರ ಕನ್ನಡ ಪ್ರದೇಶಗಳನ್ನು ಒಂದಾಗಿಸಿ ಮದರಾಸು ಪ್ರಾಂತ್ಯದ ಆಡಳಿತಕ್ಕೆ ಸೇರಿಸಿದರು. 1860ರಲ್ಲಿ ಮತ್ತೆ ಇದನ್ನು ದಕ್ಷಿಣ, ಉತ್ತರ ಎಂಬುದಾಗಿ ಎರಡಾಗಿ ಒಡೆದು 1862ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಸಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಮದರಾಸು ಪ್ರಾಂತ್ಯದಲ್ಲೇ ಉಳಿಸಲಾಯಿತು.

1895ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಆಗ ಅಮೀನ್ ದೀವಿ ದ್ವೀಪಗಳನ್ನೂ ಒಳಗೊಂಡಿತ್ತು. 1896ರಲ್ಲಿ ಈ ಜಿಲ್ಲೆಯಲ್ಲಿ ಮಂಗಳೂರು, ಕುಂದಾಪುರ, ಉಡುಪಿ, ಕಾಸರಗೋಡು ಮತ್ತು ಉಪ್ಪಿನಂಗಡಿ ತಾಲ್ಲೂಕುಗಳು ಮಾತ್ರ ಇದ್ದವು. 1912ರಲ್ಲಿ ಕಾರ್ಕಳ ತಾಲ್ಲೂಕೂ ಸೇರಿತು. 1954ರಲ್ಲಿ ಬೆಳ್ತಂಗಡಿ ತಾಲ್ಲೂಕನ್ನು ರಚಿಸಲಾಯಿತು. 1956ರ ನವೆಂಬರ್ 1ರ ವರೆಗೂ ಈ ಜಿಲ್ಲೆ ಮದರಾಸು ಪ್ರಾಂತ್ಯದ ಆಡಳಿತದಲ್ಲೇ ಇದ್ದು ರಾಜ್ಯ ಪುನರ್ವಿಂಗಡಣೆಯ ಪ್ರಕಾರ ವಿಶಾಲ ಕರ್ನಾಟಕ ಪ್ರಾಂತ್ಯಕ್ಕೆ ಸೇರಿತು. 1966ರಲ್ಲಿ ಪುತ್ತೂರನ್ನು ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಾಗಿ ವಿಭಾಗಿಸಲಾಯಿತು. 1997ರಲ್ಲಿ ಮತ್ತೆ ಜಿಲ್ಲೆ ವಿಭಜಿತವಾಯಿತು. ಅದರ ಒಂದು ಭಾಗದಿಂದ ಉಡುಪಿ ಜಿಲ್ಲೆಯನ್ನು ರಚಿಸಲಾಗಿದೆ. *

**ದಕ್ಷಿಣ ಪಿನಾಕಿನಿ :** ಕರ್ನಾಟಕದ ಪೂರ್ವಭಾಗದಲ್ಲಿ ಹರಿಯುವ ನದಿ. ಇದಕ್ಕೆ ದಕ್ಷಿಣ ಪೆನ್ನಾರ್ ಎಂದೂ ಹೆಸರಿದೆ. ತಮಿಳುನಾಡಿನ ಭಾಗದಲ್ಲಿ ಇದರ ಹೆಸರು ಪೊನ್ನೈಯಾರ್, ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟದ ವಾಯವ್ಯಕ್ಕೆ ಇರುವ ಚೆನ್ನರಾಯನ ಬೆಟ್ಟದಲ್ಲಿ ಹುಟ್ಟಿ, ಪೂರ್ವಾಭಿಮುಖವಾಗಿ ಶಿಡ್ಲಘಟ್ಟದವರೆಗೂ ಹರಿದು ಅನಂತರ ದಕ್ಷಿಣಾಭಿಮುಖವಾಗಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲ್ಲೂಕನ್ನು ವಿಜಯಪುರದ ದಕ್ಷಿಣದಲ್ಲಿ ಪ್ರವೇಶಿಸುತ್ತದೆ. ಮುಂದೆ ಹೊಸಕೋಟೆ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣಾಭಿಮುಖವಾಗಿ ಹರಿದು, ಆ ತಾಲ್ಲೂಕಿನ ಗುಂಡೂರಿನ ಬಳಿ ಕರ್ನಾಟಕದ ಎಲ್ಲೆಯನ್ನು ಬಿಡುತ್ತದೆ. ಮುಂದೆ ತಮಿಳು ನಾಡಿನ ಧರ್ಮಪುರಿ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳ ಮುಖಾಂತರ ಕಡಲೂರಿನ ಉತ್ತರದಲ್ಲಿ ಬಂಗಾಲ ಕೊಲ್ಲಿಯನ್ನು ಸೇರುತ್ತದೆ. ನದಿಯ ಒಟ್ಟು ಉದ್ದ ಸು.400ಕಿಮೀ. ಕರ್ನಾಟಕದಲ್ಲಿ ಉಗಮಸ್ಥಾನದಿಂದ ಸು.80ಕಿಮೀ ದೂರ ಹರಿಯುತ್ತದೆ. ಜಂಗಮಕೋಟೆ ಮತ್ತು ಹೊಸಕೋಟೆ ಕೆರೆಗಳು ಈ ನದಿಗೆ ಅಡ್ಡಲಾಗಿ ಕಟ್ಟಿರುವ ದೊಡ್ಡ ಕೆರೆಗಳು. ಅಲ್ಲದೆ ಅಲ್ಲಲ್ಲಿ ಸಣ್ಣ ಕೆರೆಗಳು ಮತ್ತು ಒಡ್ಡುಗಳು ಸಹ ಇವೆ. ಕೋಲಾರ ಬೆಂಗಳೂರು ಜಿಲ್ಲೆಗಳಲ್ಲಿ ಈ ನದಿ ಹರಿಯುವ ಪ್ರದೇಶ ಫಲವತ್ತಾಗಿದ್ದು ನದಿಯಲ್ಲಿನ ಸು.90 ಭಾಗ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ.

ನಂದಿಬೆಟ್ಟದ ಸಾಲಿನಲ್ಲಿ ಹುಟ್ಟುವ ದಕ್ಷಿಣ ಮತ್ತು ಉತ್ತರ ಪಿನಾಕಿನಿ ನದಿಗಳು ಶಿವನ ಬಿಲ್ಲಾದ ಪಿನಾಕದಂತೆ ಕಮಾನಾಗಿ ಹರಿಯುವುದರಿಂದ ಇವಕ್ಕೆ ಪಿನಾಕಿನಿ ಎಂಬ ಹೆಸರು ಬಂದಿದೆ ಎಂದು ಪ್ರತೀತಿ. (ಎಂ.)

**ದತ್ತಾತ್ರೇಯ, ಎಚ್.ಜಿ. :** 1942-. ರಂಗಭೂಮಿ ಹಾಗೂ ಚಲನಚಿತ್ರರಂಗದ ಪ್ರಸಿದ್ಧ ನಟ. 1942 ಏಪ್ರಿಲ್ 20ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಜನಿಸಿದರು. ತಂದೆ ಹರಿಹರ ಗುಂಡೂರಾಯ, ತಾಯಿ ವೆಂಕಮ್ಮ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಚಿತ್ರದುರ್ಗದಲ್ಲಿ ಆಯಿತು. ಅನಂತರ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಎಸ್.ಎಸ್.ಎಲ್.ಸಿ. ಪೂರೈಸಿದರು (1958). ಇಂಟರ್‍ಮೀಡಿಯೆಟ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದು ಉತ್ತೀರ್ಣರಾದರು (1959). ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್‍ನಲ್ಲಿ ಬಿ.ಇ. ಪದವಿ ಪಡೆದು, ಅನಂತರ ಬೆಂಗಳೂರಿನ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್‍ನಲ್ಲಿ ಎಂ.ಇ. ಪದವಿ ಪಡೆದರು (1977). ಇದಲ್ಲದೆ ಇವರು ಹಿರಿಯ ಆಡಳಿತ ತಾಂತ್ರಿಕ ಅಧಿಕಾರಿಗಳ ತರಬೇತಿ ಕೋರ್ಸನ್ನು ಭಾರತೀಯ ವಾಯುಪಡೆ ತಾಂತ್ರಿಕ ಕಾಲೇಜಿನಲ್ಲಿ ಪಡೆದರು.

ಭಾರತೀಯ ವಾಯುಪಡೆಯ ಏರೋನಾಟಿಕಲ್ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಪೈಲಟ್ ಅಧಿಕಾರಿಯಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ನವದೆಹಲಿ, ಕಾನ್ಪುರ, ಭಟಿಂಡ, ಚಂಡೀಘಡ, ನಿಕೋಬಾರ್ ದ್ವೀಪ ಹಾಗೂ ಬೆಂಗಳೂರಿನಲ್ಲಿ ವಿಂಗ್‍ಕಮ್ಯಾಂಡರ್ ಆಗಿ ಕಾರ್ಯನಿರ್ವಹಿಸಿದರು. ಅನಂತರ ಹಿಂದೂಸ್ತಾನ್ ಏರೋನಾಟಿಕಲ್ಸ್ ಸಂಸ್ಥೆಗೆ ವರ್ಗಾವಣೆ ಹೊಂದಿ ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿದರು. ಎಚ್.ಎ.ಎಲ್. ಸ್ಟಾಫ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು (1987-94).

ಶಾಲಾ ದಿನಗಳಿಂದಲೇ ಹವ್ಯಾಸಿ ರಂಗಭೂಮಿಯ ಬಗ್ಗೆ ವಿಶೇಷ ಒಲವನ್ನು ಹೊಂದಿದ್ದ ಇವರು ದೆಹಲಿಯ ಕನ್ನಡ ಭಾರತೀ, ಬೆಂಗಳೂರಿನ ಸಮುದಾಯ,



ಕಲಾಗಂಗೋತ್ರಿ, ಮಲ್ಲಿಕಾ, ಗೆಳೆಯರ ಬಳಗ, ವೇದಿಕೆ, ದಕ್ಷಿಣೆ ಮುಂತಾದ ಹಲವು ಹವ್ಯಾಸಿ ರಂಗತಂಡಗಳ ಮೂಲಕ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದರು. ನಾನೇ ಬಿಜ್ಜಳ, ಸಂಕ್ರಾಂತಿ, ದೇವದಾಸಿ, ಹಿಟ್ಟಿನ ಹುಂಜ, ಸಿಂಗಾರೆವ್ವ ಮತ್ತು ಅರಮನೆ, ಸಿಕ್ಕು, ಮಳೆ ನಿಲ್ಲುವವರೆಗೂ, ಮೀನಿನ ಹೆಜ್ಜೆ, ಕೊಂದು ಕೂಗಿತ್ತು ನೋಡಾ, ಈ ಮುಖದವರು - ಇವರು ನಟಿಸಿದ ಕೆಲವು ಹೆಸರಾಂತ ನಾಟಕಗಳು. ಇವರು ಹಿಂದಿ ಭಾಷೆಯ ಪುರುಷ್, ರುಡಾಲಿ, ರಕ್ತ, ಕಲ್ಯಾಣಿ, ಸಯನಾರಾ ಮುಂತಾದ ನಾಟಕಗಳಲ್ಲೂ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.

ಟಿ.ಎಸ್.ರಂಗಾ ಅವರ ಉದ್ಭವ್ ಎಂಬ ಹಿಂದಿ ಕಿರುಚಿತ್ರದ ಮೂಲಕ ಚಲನಚಿತ್ರ ರಂಗ ಪ್ರವೇಶಿಸಿದರು (1987). ಇವರ ಪೂರ್ಣಪ್ರಮಾಣದ ಪ್ರಥಮ ಕನ್ನಡ ಚಲನಚಿತ್ರ ಟಿ.ಎಸ್.ನಾಗಾಭರಣರ 'ಆಸ್ಫೋಟ'. ಅನಂತರ ಸಂಪೂರ್ಣವಾಗಿ ಚಿತ್ರ ಜಗತ್ತಿನಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರು ಮೈಸೂರುಮಲ್ಲಿಗೆ, ಸಂತ ಶಿಶುನಾಳ ಶರೀಫ, ನಾಗಮಂಡಲ, ಹರಕೆಯ ಕುರಿ, ಕ್ರೌರ್ಯ, ಅಮೆರಿಕ-ಅಮೆರಿಕ, ಶರಪಂಜರ, ಸರದಾರ, ಹೂಮಳೆ, ಚಿನ್ನಾರಿ ಮುತ್ತ, ಕೊಟ್ರೇಶಿ ಕನಸು, ಚೈತ್ರದ ಚಿಗುರು, ಉಲ್ಟಾ ಪಲ್ಟಾ, ಊರ್ವಶಿ, ಮುನ್ನುಡಿ, ಅತಿಥಿ, ಮೌನಿ, ದೇವಾಸುರ, ಮರೀಚಿಕೆ, ಕನಕಾಂಬರಿ, ಸೈನಿಕ ಮೊದಲಾದ ಸುಮಾರು ಎಪ್ಪತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಜನ ಮೆಚ್ಚುಗೆ ಗಳಿಸಿದ್ದಾರೆ. ಇವರು ತಿಲದಾನಂ ಎಂಬ ತೆಲುಗು ಚಿತ್ರದಲ್ಲೂ ನಟಿಸಿದ್ದಾರೆ.

ಕಿರುತೆರೆಯ ಅನೇಕ ಖಾಸಗಿ ಮತ್ತು ದೂರದರ್ಶನ ವಾಹಿನಿಗಳಲ್ಲೂ ನಟಿಸಿ ತಮ್ಮ ಅಗಾಧ ಪ್ರತಿಭೆಯಿಂದ ಇವರು ಮನೆಮಾತಾದರು. ಇವರು ನಟಿಸಿದ ಮಾಯಾಮೃಗ, ಬಂಡಾಯ, ಸೃಷ್ಟಿ - ಇವು ಜನಮನ್ನಣೆ ಪಡೆದ ಕೆಲವು ಧಾರಾವಾಹಿಗಳು. ಇವರು ಹಿಂದಿ ಕಿರುತೆರೆಯ ಧಾರಾವಾಹಿಗಳಲ್ಲೂ ಅನೇಕ ಕಿರುಚಿತ್ರಗಳಲ್ಲೂ ಸಾಕ್ಷ್ಯ ಚಿತ್ರಗಳಲ್ಲೂ ನಟಿಸಿದ್ದಾರೆ. ಆಕಾಶವಾಣಿಯ ಹಲವು ಕಾರ್ಯಕ್ರಮಗಳಲ್ಲೂ ಪಾತ್ರವಹಿಸಿದ್ದಾರೆ. ಮುಖ್ಯವಾಗಿ ಸಂಧ್ಯಾರಾಗ ಕಾದಂಬರಿಯ ನಿರೂಪಕನಾಗಿ ಕಾರ್ಯನಿರ್ವಹಿಸಿದ್ದಾರೆ.

ಜಿ.ವಿ.ಅಯ್ಯರ್, ನಾಗತಿಹಳ್ಳಿ ಚಂದ್ರಶೇಖರ, ಕೆ.ವಿ.ಜಯರಾಂ, ಯು.ಪ್ರಭಾಕರರಾವ್, ಸಿ.ಆರ್.ಸಿಂಹ, ಟಿ.ಎನ್.ಸೀತಾರಾಂ, ಪಿ.ಶೇಷಾದ್ರಿ, ನಾಗಾಭರಣ, ಸಿದ್ಧಲಿಂಗಯ್ಯ ಮೊದಲಾದ ಅನೇಕ ಹೆಸರಾಂತ ಚಲನಚಿತ್ರ ನಿರ್ದೇಶಕರೊಂದಿಗೆ ದುಡಿದ ಅನುಭವ ಇವರದು.

ಪಾತ್ರದೊಂದಿಗೆ ತಲ್ಲೀನತೆ ಇವರ ಅಭಿನಯದ ವಿಶಿಷ್ಟ ಗುಣ. ಮಾಯಾಮೃಗದ ಶಾಸ್ತ್ರಿಗಳ ಪಾತ್ರ ಇದಕ್ಕೆ ಸಾಕ್ಷಿ. ಇವರಿಗೆ ಅನೇಕ ಪ್ರಶಸ್ತಿಗಳು ಸಂದಿವೆ. ಮುನ್ನುಡಿ ಚಿತ್ರಕ್ಕೆ ಅತ್ಯುತ್ತಮ ಪೋಷಕನಟ - ರಾಷ್ಟ್ರ ಪ್ರಶಸ್ತಿ (2001), ಆಸ್ಫೋಟ ಚಿತ್ರಕ್ಕೆ ಅತ್ಯುತ್ತಮ ಪೋಷಕನಟ - ರಾಜ್ಯ ಪ್ರಶಸ್ತಿ (1987), ಚಿನ್ನೈ ಚಲನಚಿತ್ರ ಅಭಿಮಾನಿಗಳ ಸಂಘದ ಪ್ರಶಸ್ತಿ ಉಲ್ಲೇಖಾರ್ಹವಾದವು. (ಎಸ್‍ಯು.ಎಂ.)

**ದಲಿತ ಸಾಹಿತ್ಯ :** ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಲಿತ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ವಿಶಿಷ್ಟ ಧ್ವನಿ ಇದೆ. ಕರ್ನಾಟಕದಲ್ಲಿ 'ದಲಿತ' ಪದ ಬಳಕೆಗೆ ಬರಲು ಮೂಲ ಪ್ರೇರಣೆ ಮಹಾರಾಷ್ಟ್ರದ ದಲಿತ ಚಳವಳಿ. ಬುದ್ದಣ್ಣ ಹಿಂಗಮಿರೆ ಮತ್ತಿತರರು ಸೇರಿ 1973ರಲ್ಲಿ 'ದಲಿತ' ಪ್ರತಿಕೆ ಪ್ರಾರಂಭಿಸಿದರು. ಮುಂದೆ ಪ್ರಗತಿ ಪಂಥದಲ್ಲಿ ಒಂದು ಅಂಗವಾಗಿ 'ದಲಿತ ಪಂಥ' ಕಾಣಿಸಿಕೊಂಡಿತು. ಇದಕ್ಕೆ ಮೂಲ ಕಾರಣ ಬಿ.ಬಸವಲಿಂಗಪ್ಪನವರ 'ಬೂಸಾ ಪ್ರಕರಣ'. ಅನಂತರ 1974-75ರ ವೇಳೆಗೆ ಬಿ.ಕೃಷ್ಣಪ್ಪನವರ ನೇತೃತ್ವದಲ್ಲಿ 'ದಲಿತ ಸಂಘರ್ಷದ ಸಮಿತಿ' ರೂಪುಗೊಂಡು 1976ರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮೈತಳೆಯಿತು. ಇದೇ ಸಂದರ್ಭದಲ್ಲಿ ರೂಪುಗೊಂಡ 'ದಲಿತ ಲೇಖಕರ ಮತ್ತು ಕಲಾವಿದರ ಒಕ್ಕೂಟ' ದಲಿತ ಸಂಘರ್ಷ ಸಮಿತಿಯೊಂದಿಗೆ ಒಗ್ಗೂಡಿ ಹಲವಾರು ಕಾರ್ಯಕ್ರಮ, ಜಾಥಾಗಳ ಮೂಲಕ, 'ಪಂಚಮ' ಪತ್ರಿಕೆಯ ಮೂಲಕ ಎಲ್ಲರ ಗಮನ ದಲಿತದ ಕಡೆಗೆ ಸೆಳೆಯುವಂತೆ ಮಾಡಿತು.

ದಲಿತ ಸಾಹಿತ್ಯವನ್ನು ಗಮನಿಸುವಾಗ 'ದಲಿತ'. 'ದಲಿತರು', 'ದಲಿತ ಪ್ರಜ್ಞೆ' ಮೊದಲಾದ ತಾತ್ವಿಕ ಪರಿಕಲ್ಪನೆಗಳ ಸ್ಪಷ್ಟ ಅರಿವು ಅಗತ್ಯವೆನಿಸುತ್ತದೆ. ವಿದ್ವಾಂಸರ ಪ್ರಕಾರ 1943ರಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಚಳವಳಿ 1975ರಲ್ಲಿ ಮತ್ತೆ 'ಪ್ರಗತಿ ಪಂಥ' ಎಂಬ ಹೆಸರಿನಿಂದ ಕಾಣಿಸಿಕೊಂಡ ಸಂದರ್ಭದಲ್ಲಿ ದಲಿತ ಎಂಬ ಪದವೂ ಮೊದಲ ಬಾರಿಗೆ ಬಳಕೆಯಾಯಿತು. ದಲಿತ ಎಂಬ ಪದಕ್ಕೆ 'ದಳ' 'ಗುಂಪು', 'ಸೈನ್ಯ' 'ಶೋಷಿತ', 'ದಮನಕ್ಕೆ ಒಳಗಾದವರು' ಎಂಬ ನಾನಾ ಅರ್ಥಗಳು ಶಬ್ದಕೋಶದಲ್ಲಿ ಇವೆ. ಭಾರತದಾದ್ಯಂತ ಅಸ್ಪೃಶ್ಯತೆಗೆ ದಲಿತ ಎಂಬ ಪದವನ್ನು ಬಳಸಲಾಯಿತು. ಮೊದಲಿಗೆ ಅಂಬೇಡ್ಕರ್ 'ಡಿಪ್ರೆಸ್ಡ್' ಎಂಬ ಪದವನ್ನು ಬಳಸಿದರು. ಮರಾಠಿ ಭಾಷೆಯಲ್ಲಿ ದಲಿತ ಪದಕ್ಕೆ ಬದಲಾಗಿ ಬೌದ್ಧ ಶಬ್ದವನ್ನು ಬಳಸುವ ಪ್ರಯತ್ನವೂ ನಡೆಯಿತು.

ದಲಿತ ಎಂದರೆ ಯಾರು ಎಂಬ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ವಿಭಿನ್ನವಾದಗಳಿಗೆ ಸಂಬಂಧಿಸಿದ ಚಿಂತಕರು ತಮ್ಮದೇ ಆದ ನೆಲೆಯಲ್ಲಿ ಇದನ್ನು ವ್ಯಾಖ್ಯಾನಿಸಿದ್ದಾರೆ. ಶೋಷಣೆ ಎಂಬ ಪದಕ್ಕೆ ಜಾತಿಭೇದವಿಲ್ಲ; ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲ ಶೋಷಣೆಗೆ ಒಳಗಾದ ಎಲ್ಲ ಜನರೂ ದಲಿತರೆಂದು ಮಾರ್ಕ್ಸ್‌ವಾದಿಗಳು ವ್ಯಾಖ್ಯಾನಿಸಿದರೆ, ಪಂಚಮ ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರೆಂದು ಅಂಬೇಡ್ಕರ್‌ವಾದಿಗಳು ಪ್ರತಿಪಾದಿಸಿದ್ದಾರೆ. ಆದರೆ ಲೋಹಿಯಾವಾದಿಗಳು ಅಸ್ಪೃಶ್ಯರೂ ಸೇರಿದಂತೆ ಎಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಶೋಷಣೆಗೊಳಗಾದ ಬಡವರೂ ದಲಿತರೇ ಎಂದು ಸಾರಿದರು. ಅರವಿಂದ ಮಾಲಗತ್ತಿಯವರು ಈ ಮೂರು ವ್ಯಾಖ್ಯಾನಗಳ ಅಂತಃಸತ್ವವನ್ನು ಒಳಗೊಂಡಂತೆ. "ಶತಮಾನಗಳಿಂದ ಜನ ಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು ಒಟ್ಟು ಮನುಷ್ಯ ಸಮಾಜದಲ್ಲಿ ಬದುಕಲಾಗದೆ, ಕೀಳುವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆಪಡುವ ಅಸ್ಪೃಶ್ಯರು ದಲಿತರೆನ್ನಿಸಿಕೊಳ್ಳುತ್ತಾರೆ" ಎಂದು ಪ್ರತಿಪಾದಿಸಿದ್ದನ್ನು ಹೆಚ್ಚು ವಿದ್ವಾಂಸರು ಮಾನ್ಯಮಾಡಿರುವುದು ಕಂಡುಬರುತ್ತದೆ.

ಮೇಲಿನ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ದಲಿತರನ್ನು ಕುರಿತು ಯಾರೇ ಬರೆದರೂ ದಲಿತ ಸಾಹಿತ್ಯವಾಗುತ್ತದೆ ಎಂಬುದು ಒಂದು ವಾದವಾದರೆ, ದಲಿತರೇ ಬರೆದದ್ದು ದಲಿತ ಸಾಹಿತ್ಯವಾಗುತ್ತದೆ ಎನ್ನುವ ವಾದವೂ ಇದೆ. ಆದರೆ ಈ ವಾದಗಳನ್ನು ಸಮೀಕರಿಸಿ ಅಧ್ಯಯನಕ್ಕೆ ಹೆಚ್ಚು ಅನುಕೂಲಕರವಾಗಿ ವ್ಯಾಖ್ಯಾನಿಸಿದ ಸ್ವರೂಪ ಬಳಕೆಯಲ್ಲಿರುವುದು ಕಂಡುಬರುತ್ತದೆ.

'ದಲಿತಪ್ರಜ್ಞೆ' ಎಂದರೆ ಅದು ಮಾನವೀಯತೆಯನ್ನು ಮೆರೆಯುವ ಪ್ರಜ್ಞೆ, 'ಮಾನವಪ್ರಜ್ಞೆ' ಎಂದು ವಿವರಿಸಲಾಗಿದೆ. ಇದು ವ್ಯಕ್ತಿಗತವಲ್ಲ, ಸಮೂಹ ನಿಷ್ಠವಾದದ್ದು. ಸಮಾಜದ ಸಾಮಾಜಿಕ, ಆರ್ಥಿಕ, ರಾಜಕೀಯ ಮೊದಲಾದ ಎಲ್ಲ ಸ್ತರಗಳಲ್ಲಿಯೂ ದಲಿತರ ಮೇಲೆ ನಡೆದ, ನಡೆಯುವ, ನಡೆಯುತ್ತಿರುವ, ನಡೆಯಲಿರುವ ದೌರ್ಜನ್ಯ, ಶೋಷಣೆ ಇತ್ಯಾದಿಗಳ ಬಗೆಗಿನ ಅರಿವು ಅಥವಾ ಪ್ರಜ್ಞೆಯೇ ದಲಿತಪ್ರಜ್ಞೆ ಎನಿಸಿಕೊಳ್ಳುತ್ತದೆ. ದಲಿತಪ್ರಜ್ಞೆ ಇರಲೇ ಬೇಕು ಎಂದರೆ ಅಸ್ಪೃಶ್ಯತೆ, ದಾಸ್ಯ, ವಿಷಮತೆ, ದುಃಖ- ಇತ್ಯಾದಿಗಳನ್ನು, ಸನಾತನ ಮೌಲ್ಯಗಳನ್ನು, ವರ್ಣ ಹಾಗೂ ಜಾತಿ ಶ್ರೇಷ್ಠತೆಯನ್ನು ವಿರೋಧಿಸುವುದೆಲ್ಲ 'ದಲಿತಪ್ರಜ್ಞೆ'ಯಾಗುತ್ತದೆ.

ಹೀಗೆ ದಲಿತ, ದಲಿತರು, ದಲಿತಪ್ರಜ್ಞೆ ಈ ಮೂರರ ಜಿಜ್ಞಾಸೆಯಿಂದ ದಲಿತಸಾಹಿತ್ಯವನ್ನು ಪ್ರವೇಶಿಸಿದಾಗ ದಲಿತಸಾಹಿತ್ಯ ಎಂದು ಯಾವುದನ್ನು ಕರೆಯಬೇಕೆಂಬ ವಿಚಾರದಲ್ಲಿಯೂ ಬಹಳಷ್ಟು ಚರ್ಚೆಗಳು ನಡೆದಿರುವುದು ಗಮನಕ್ಕೆ ಬರುತ್ತದೆ. "ದಲಿತರು, ದಲಿತೇತರರು ದಲಿತಪ್ರಜ್ಞೆಯಿಂದ ದಲಿತರ ಕುರಿತು ಸೃಷ್ಟಿಸಿದ ಸಾಹಿತ್ಯವೇ ದಲಿತ ಸಾಹಿತ್ಯ; ಇದರಲ್ಲಿ ದಲಿತೀಯ ದಲಿತೇಯ ಮತ್ತು ಆಂಶಿಕ ಸಾಹಿತ್ಯವೂ ಒಳಗೊಳ್ಳುತ್ತದೆ. ದಲಿತರು ದಲಿತಪ್ರಜ್ಞೆಯಿಂದ ದಲಿತತ್ವದ ಕುರಿತು ಬರೆದ ಸಾಹಿತ್ಯ ದಲಿತೀಯ ಸಾಹಿತ್ಯವಾದರೆ, ದಲಿತೇತರರು ದಲಿತಪ್ರಜ್ಞೆಯಿಂದ ದಲಿತರನ್ನು ಕುರಿತು ಬರೆದ ಸಾಹಿತ್ಯವೇ ದಲಿತೇಯ ಅಥವಾ ಅದಲಿತೀಯ ಸಾಹಿತ್ಯವಾಗುತ್ತದೆ". ಸಾಹಿತ್ಯದಲ್ಲಿ ದಲಿತಸಾಹಿತ್ಯವೆಂದು ವರ್ಗೀಕರಿಸುವುದೇ ತಪ್ಪು ಎಂಬ ವಾದವೂ ಬಳಕೆಯಲ್ಲಿದೆ. ಮಾಲಗತ್ತಿಯವರು ಹೇಳುವಂತೆ "ಅಸ್ಪೃಶ್ಯತೆಯ ಪರಿಕಲ್ಪನೆ ಏನಿದ್ದರೂ ಮನುಷ್ಯನಲ್ಲಿಯೇ ವಿನಾ ಸಾಹಿತ್ಯ ಭೂಮಿಕೆಗಲ್ಲ. ದಲಿತಸಾಹಿತ್ಯ ಜಾತಿವಾದಿ ಸಾಹಿತ್ಯವಲ್ಲ. ಇತರ ಸಾಹಿತ್ಯಕ ಪಂಥಗಳಂತೆ ಇದು ಕೂಡ ಒಂದು. ದಲಿತರೇ ಬರೆದದ್ದು ಸಾಹಿತ್ಯವಾಗುತ್ತದೆಂದು ನಂಬಿ ಹೊರಟದ್ದೇ ಆದರೆ ಸಾಹಿತ್ಯದಲ್ಲಿ ಮತ್ತೊಂದು ಅಸ್ಪೃಶ್ಯರ ಕೇರಿಯನ್ನು ಸೃಷ್ಟಿಸಿದಂತಾಗುತ್ತದೆ." ದಲಿತೇತರರು ಬರೆಯುವಾಗ ಸಾಹಿತ್ಯದಲ್ಲಿ ದಲಿತರೇ ಕೇಂದ್ರ ಬಿಂದುವಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ.

ಆರಂಭದ ದಲಿತ ಸಾಹಿತ್ಯದಲ್ಲಿ ಕವನ-ಲೇಖನಗಳು ಬಿಡಿಬಿಡಿಯಾಗಿ ಕಂಡುಬಂದರೂ ದಲಿತ ಸಾಹಿತ್ಯದ ಅಧಿಕೃತ ಆರಂಭವನ್ನು 1975ರಲ್ಲಿ ಪ್ರಕಟವಾದ ಸಿದ್ದಲಿಂಗಯ್ಯ ಅವರ 'ಹೊಲೆಮಾದಿಗರ ಹಾಡು' ಸಂಕಲನದಿಂದ ಗುರುತಿಸಲಾಗಿದೆ. ತೆಲುಗಿನಲ್ಲಿ 1972ರ ವೇಳೆಗೆ ಬಂದಿದ್ದ ಈ ನಿಟ್ಟಿನ ಕವನ ಸಂಕಲನಗಳು ಹಾಗೂ 1971ರಲ್ಲಿ ಹೊರಬಂದ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹೊರತಂದ 'ದಿಗಂಬರ' ಕವನ ಸಂಕಲನ ಹಾಗೂ ಹಾ.ಮು. ಪಟೇಲರ 'ಶೂದ್ರ' (1972) ಈ ಎಲ್ಲದರ ಪ್ರಭಾವ 'ಹೊಲೆಮಾದಿಗರ ಹಾಡು' ಕೃತಿಗೆ ಪ್ರೇರಣೆ ನೀಡಿರಬಹುದಾದ ಸಾಧ್ಯತೆಗಳಿವೆ.

ದಲಿತ ಸಾಹಿತ್ಯವನ್ನು ಸಮಗ್ರವಾಗಿ ತೆಗೆದುಕೊಂಡಾಗ ವರ್ಣ ಮತ್ತು ಜಾತಿವ್ಯವಸ್ಥೆಯ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯ ಅನ್ಯಾಯಗಳನ್ನು ಪ್ರಶ್ನಿಸುವುದು ಕೇಂದ್ರ ಭಾವವಾಗಿ ಕಾಣುತ್ತದೆ. "ಆವೇಶ, ಆದ್ರತೆ, ವಿಡಂಬನ ಸ್ವರೂಪದ ಅಭಿವ್ಯಕ್ತಿಯೇ ಕೇಂದ್ರವಾಗಿದ್ದು, ಪರಂಪರಾಗತ ಮೌಢ್ಯದ ಮೌಲ್ಯಗಳನ್ನು ಅನಾದರಣೆಯಿಂದ ಕಾಣುವುದು ಕಂಡುಬರುತ್ತದೆ". ದಲಿತ ಸಾಹಿತ್ಯ ಆರಂಭದ ವಸ್ತುನಿಷ್ಠತೆಯ ಕಡೆಯಿಂದ ಸಮಷ್ಟಿಯ ಕಡೆಗೆ ಹೆಜ್ಜೆ ಹಾಕುತ್ತಿರುವುದನ್ನು ಸದ್ಯದಲ್ಲಿ ಗುರುತಿಸಬಹುದು. *

ಯಾವುದೇ ಸಾಹಿತ್ಯಪರಂಪರೆ ತನ್ನ ಸಾಧ್ಯತೆಗಳನ್ನು ಪೂರೈಸಿಕೊಂಡು ಸ್ಥಗಿತವಾಗುವ ಸಮಯಕ್ಕೆ ಮತ್ತೊಂದು ಸಾಹಿತ್ಯಪರಂಪರೆ ಹುಟ್ಟಿಕೊಳ್ಳುವುದಕ್ಕೆ ಬೇಕಾಗಿರುವ ಆಶಯಗಳನ್ನು ತನ್ನ ಗರ್ಭದಲ್ಲಿಯೇ ಹುದುಗಿಸಿಕೊಂಡಿರುತ್ತದೆ. ಪ್ರಮುಖವಾದ ಈ ಆಶಯದ ಜೊತೆಗೆ ಬೇರೆ ದೇಶದ, ಬೇರೆ ಕಾಲದ, ಬೇರೆ ಶಿಸ್ತಿನ ಹಲವು ಸಂಗತಿಗಳು ನೂತನ ಸಾಹಿತ್ಯದ ನಿರ್ಮಾಣಕ್ಕೆ ಕಾರಣವಾಗಿರುತ್ತವೆ. ಈ ಮಾತುಗಳು ಸಾಹಿತ್ಯದ ಶ್ರೇಷ್ಠತೆಯನ್ನು ಗುರುತಿಸಲು ಬೇಕಾಗುವ ಸೃಜನಶೀಲತೆಯ ನೆಲೆಯನ್ನು ಅರ್ಥಮಾಡಿಸುವುದಕ್ಕೆ ಭದ್ರವಾದ ನೆಲೆಗಟ್ಟನ್ನು ಒದಗಿಸುತ್ತದೆ. ನೋವಿನ ನೆಲೆಯಿಂದ ಬಂದ ಅಂಬೇಡ್ಕರ್ ಅವರು ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ನೋಡಿದ್ದರು. ಇವರ ಶಿಕ್ಷಣ ಪ್ರಸಾರ ಯೋಜನೆಗಳಿಂದಲೂ ದಲಿತರು ಪ್ರಭಾವಿತರಾದರು. ಹಾಗಾಗಿ ತಮ್ಮ ಅನುಭವಗಳನ್ನು ಹಂಚಿಕೊಳ್ಳತೊಡಗಿದರು. ಅಂಬೇಡ್ಕರ್ ಅವರು 1956ರಲ್ಲಿ ಹಿಂದು ಧರ್ಮವನ್ನು ಬಿಟ್ಟು ಬೌದ್ಧ ಧರ್ಮವನ್ನು ಅವಲಂಬಿಸಿದರು. ದಲಿತರಲ್ಲಿ ಇದು ಮಹತ್ವಪೂರ್ಣ ಬದಲಾವಣೆಯನ್ನು ಉಂಟುಮಾಡಿತು. ಅಂಬೇಡ್ಕರರ ಈ ಧರ್ಮ ಬದಲಾವಣೆ ಮೂಲತಃ

ಮೌಲ್ಯಾಂತರವಾಗಿತ್ತು. ದಲಿತರ ನಿಜವಾದ ಪ್ರತಿಭಟನಾ ಸಾಹಿತ್ಯ ಹುಟ್ಟಲು ಇದೂ ಮುಖ್ಯವಾಯಿತು. ಹಿಂದು ಧರ್ಮದಲ್ಲಿನ ಸ್ಥಗಿತತೆಯನ್ನು, ಅಮಾನುಷತೆಯನ್ನು ವಿರೋಧಿಸುತ್ತ ಬೌದ್ಧ ಧರ್ಮದ ಮಾನವೀಯ ನೆಲೆಗಳನ್ನು ಆಪ್ತವಾಗಿ ಕಾಣತೊಡಗಿದ್ದುಂಟು. ದಲಿತರಲ್ಲಿ ಇದರ ಅರಿವು ಮೂಡುತ್ತಲೇ ತಮ್ಮ ಸಂಕಟಗಳಿಗೆ ಉಂಟಾಗಬಹುದಾದ ಮೂಲಭೂತ ಕಾರಣಗಳನ್ನು ಅರಿಯತೊಡಗಿದರು. ಅಸಮಾನತೆ, ಕ್ರೌರ್ಯ, ಮೌಢ್ಯ, ಅನ್ಯಾಯಗಳ ವಿರುದ್ಧ ಸಮರ ನಡೆಸುತ್ತ ಬಂದ ಅಂಬೇಡ್ಕರರ ಪ್ರಭಾವ ದಲಿತ ಲೇಖಕರ ಮೇಲೆ ಗಾಢವಾಯಿತು. ಇಡೀ ದಲಿತ ವರ್ಗಕ್ಕೆ ಅಂಬೇಡ್ಕರ್ ಸ್ಫೂರ್ತಿಯ ಕೇಂದ್ರವಾದರು, ಅವರ ಬದುಕಿನ ಬದಲಾವಣೆಗೆ ನಿಶ್ಚಿತವಾಗಿ ಕಾರಣರಾದರು.

ದಲಿತ ಸಾಹಿತ್ಯದ ಹುಟ್ಟಿಗೆ ಇನ್ನೊಂದು ಕಾರಣವೆಂದರೆ, ಆಧುನಿಕ ಸಾಹಿತ್ಯದಲ್ಲಿ ಪಾಶ್ಚಾತ್ಯರನ್ನು ಅನುಕರಿಸುವುದೇ ಅತಿಯಾದದ್ದು. ಅನುಕರಣೆ ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತವಾಗಿರಲಿಲ್ಲ. ಪ್ರೀತಿ, ಪ್ರಣಯವನ್ನು ವಿಜೃಂಭಿಸಿ ಬರೆಯಲಾಗುತ್ತಿತ್ತು. ಧರ್ಮ ಮತ್ತು ಪುರಾಣದ ಸಂಗತಿಗಳನ್ನು ವೈಭವೀಕರಿಸಲಾಯಿತು. ಹೀಗಾಗಿ ಸಮಾಜದ ಬಹುಸಂಖ್ಯಾತ ಜನರ ಕಡೆಗೆ ಒಲವು ತೋರದೆ ವೈಯಕ್ತಿಕ ನೆಲೆಯಲ್ಲಿಯೇ ತನ್ನ ತೆವಲುಗಳನ್ನು ತೀರಿಸಿಕೊಂಡಿತು. ಆದ್ದರಿಂದ ಹಳ್ಳಿಯಿಂದ ಮತ್ತು ಅಸ್ಪೃಶ್ಯ ನೆಲೆಯಿಂದ ಬಂದವರಿಗೆ ಈ ಸಾಹಿತ್ಯ ಪರಕೀಯವಾಗೇ ಉಳಿಯಿತು. ಹಲವಾರು ಕ್ಷೇತ್ರದಲ್ಲಿ ಬದಲಾವಣೆಗಳು ಆಗಿದ್ದರೂ ಸಾಹಿತ್ಯ ಮಾತ್ರ ತನ್ನ ದಿಕ್ಕನ್ನು ಬದಲಾಯಿಸಿರಲಿಲ್ಲ. ದಲಿತ ಸಾಹಿತ್ಯ ನಿರ್ಮಾಣವಾಗಲು ಈ ಬೆಳವಣಿಗೆಗಳೂ ಕಾರಣವಾಗಿದ್ದವು. ಮಾನವಜಾತಿ ತಾನೊಂದೆ ವಲಂ ಎಂಬ ಪಂಪನ ಕಾವ್ಯದಿಂದ ಹಿಡಿದು ನವೋದಯ ಮತ್ತು ನವ್ಯದವರೆಗೆ ಅಲ್ಲಲ್ಲಿ ದಲಿತ ಧ್ವನಿಗಳು ಕೇಳಿಬರುತ್ತವೆ. ಆಯಾಕಾಲದ ಸಂದರ್ಭಗಳಿಗೆ ತಕ್ಕಂತೆ ಅವು ಅಭಿವ್ಯಕ್ತಗೊಂಡಿವೆ. ಆದರೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿನ ಈ ದಲಿತಪರ ಧ್ವನಿಗಳು ಆಧುನಿಕ ದಲಿತ ಪ್ರಜ್ಞೆಗಿಂತ ಭಿನ್ನವಾದವು. ನಿರೂಪಣೆಯ ಸ್ವರೂಪದಲ್ಲಿಯೂ ಭಿನ್ನತೆ ಹೊಂದಿವೆ. ದಲಿತ ಸಾಹಿತ್ಯವನ್ನು ಅವಲೋಕಿಸುವ ಸಂದರ್ಭದಲ್ಲಿ 12ನೆಯ ಶತಮಾನದ ವಚನ ಚಳವಳಿಯನ್ನು ಮತ್ತು ಅದರ ಪ್ರಭಾವವನ್ನು ಮರೆಯುವಂತಿಲ್ಲ. ಕರ್ನಾಟಕದ ಚರಿತ್ರೆಯಲ್ಲಿ 12ನೆಯ ಶತಮಾನ ಒಂದು ವಿಶಿಷ್ಟ ಕಾಲಘಟ್ಟ. ಈ ಕಾಲದ ಚಳವಳಿ ಸೃಷ್ಟಿಸಿದ ಸಾಹಿತ್ಯ, ನಡೆಸಿದ ಪ್ರಯೋಗಗಳು ಜಾಗತಿಕ ಮಟ್ಟದ ಸಾಹಿತ್ಯದ ವಲಯದಲ್ಲಿ ಚರ್ಚೆಯ ವಸ್ತುವಾದವು. ಗತ ಇತಿಹಾಸದಲ್ಲಿ ಕಂಡರಿಯದಷ್ಟು ಸುಧಾರಣೆಗಳನ್ನು ಕಂಡ ಘಟ್ಟವಿದು. ರಾಜಕೀಯವಾಗಿ ಬಸವಣ್ಣ ಉನ್ನತ ಸ್ಥಾನದಲ್ಲಿದ್ದುಕೊಂಡೇ ಕ್ರಾಂತಿಕಾರಕ ಬದಲಾವಣೆಗಳಿಗೆ ಕಾರಣನಾದ. ಈತನ ಬೆಂಬಲದಿಂದಾಗಿ ಶರಣ ಚಳವಳಿಯಲ್ಲಿ ಅಲ್ಲಿಯವರೆಗೂ ಮೂಕರಾಗಿದ್ದವರಿಗೆ ಮಾತನಾಡುವ ಅವಕಾಶ ಒದಗಿಬಂತು. ಕೆಳವರ್ಗದ ವಚನಕಾರರು ಮೊದಲಬಾರಿಗೆ ನಿರ್ಭಿಡೆಯಿಂದ ಬಾಯಿ ಬಿಟ್ಟರು. ಇಂಥವರೆಲ್ಲ ತಮ್ಮ ವಚನಗಳ ಮೂಲಕ ಆತ್ಮವಿಮರ್ಶೆಯನ್ನು, ಸಮಾಜವಿಮರ್ಶೆಯನ್ನು ಮಾಡಿಕೊಂಡದ್ದಲ್ಲದೆ ಸಮಾಜೋಧಾರ್ಮಿಕ ಆಂದೋಲನವಾಗಿ ಪರಿವರ್ತಿತವಾದ ಈ ಚಳವಳಿಯಲ್ಲಿ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಮಾದಾರ ಧೂಳಯ್ಯ ಮೊದಲಾದ ದಲಿತ ವರ್ಗದ ಅನುಭವಿಗಳು ಮುಂಚೂಣಿಯಲ್ಲಿ ನಿಂತದ್ದು ಚಾರಿತ್ರಿಕ ದಾಖಲೆ. ಚಳವಳಿಯ ಭಾಗವಾಗಿ ನಿರ್ಮಾಣಗೊಂಡ ವಚನಗಳಲ್ಲಿ ಇವರೆಲ್ಲ ತಮ್ಮ ಅನುಭವಗಳಿಗೆ ರೂಪ ನೀಡಿದರು. ಇವರಲ್ಲಿ ದಲಿತ ಮಹಿಳೆಯರ ಪಾತ್ರವನ್ನೂ ನಾವು ಮರೆಯುವಂತಿಲ್ಲ.

20ನೆಯ ಶತಮಾನದಲ್ಲಿ ಜರುಗಿದ ಕೆಲವು ಸುಧಾರಣೆಗಳು, ಸಮಕಾಲೀನ ಶಿಕ್ಷಣ, ಶ್ರಮಜೀವಿಗಳ ಪರವಾದ ಚಿಂತನೆಗಳು ಇವೆಲ್ಲದರಿಂದಾಗಿ ದಲಿತರಲ್ಲಿ ಅರಿವಿನ ವಾತಾವರಣ ಮೂಡತೊಡಗಿತು. ಕಳೆದ ಶತಮಾನದ 60ರ ದಶಕದಲ್ಲಿ ಮಹಾರಾಷ್ಟ್ರದಲ್ಲಿ ಜನಪ್ರಿಯತೆ ಗಳಿಸಿದ ದಲಿತಸಾಹಿತ್ಯ ಚಳವಳಿ ಕನ್ನಡ ನಾಡಿನ ದಲಿತರ ಮೇಲೆ ಯಥೇಚ್ಛವಾಗಿ ಬೀರಿತು. ಅಂಬೇಡ್ಕರ್ ದಲಿತರಿಗೆ ನಾಯಕರಾದುದರಿಂದಲೂ ಈ ಪ್ರಭಾವ ಅನಿವಾರ್ಯವಾಯಿತು. ಈ ನಡುವೆ ದಯಾ ಪವಾರ್, ನಾಮದೇವ ಡಸಾಳ, ಲತೀಫಾ, ಕೇಶವಮೇಶ್ರಾಮ್, ವಾಮನ ನಿಂಬಾಳ್ಕರ್, ಅರುಣ್ ಕಾಂಬ್ಳೆ, ಬಾಬುರಾವ್ ಬಾಗುಲ್ ಮೊದಲಾದವರ ಸಾಹಿತ್ಯಪ್ರಭಾವ ಮತ್ತು ಪ್ರೇರಣೆ ಕನ್ನಡ ದಲಿತ ಲೇಖಕರ ಮೇಲೆ ಆಗಿರುವುದನ್ನು ಗಮನಿಸಬಹುದು. ಕರ್ನಾಟಕದ ಜನಪರ ಚಳವಳಿಗಳಿಗೆ ಇದರಿಂದ ಸಾಕಷ್ಟು ಲಾಭವಾಯಿತು. ಜೊತೆಗೆ ಹಿಂದಿಯಲ್ಲಿ ಮಾರ್ಕ್ಸ್‌ವಾದಿಗಳ ಪ್ರಭಾವದಿಂದ ಕಾಣಿಸಿಕೊಂಡ ಜನವಾದಿ ಸಾಹಿತ್ಯ, ಕೇರಳದ ಮಾರ್ಕ್ಸ್‌ವಾದಿ ಲೇಖಕರ ಸಾಹಿತ್ಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಬೀರುತ್ತಿರುವ ಕಪ್ಪುಸಾಹಿತ್ಯ, ಗೆರಿಲ್ಲಾ ಸಾಹಿತ್ಯ ಮುಂತಾದುವೆಲ್ಲ ದಲಿತಸಾಹಿತ್ಯದ ಮೇಲೆ ಪ್ರಭಾವ ಬೀರಿವೆ.

ಕನ್ನಡದ ದಲಿತ ಬರೆಹಗಾರರಿಗೆ ಮುಖ್ಯವಾಗಿ ಪ್ರೇರಣೆ ದೊರೆತದ್ದು, ಮಹಾರಾಷ್ಟ್ರದ ದಲಿತ ಪ್ಯಾಂಥರ್ ಚಳವಳಿಯಿಂದ. ಪ್ಯಾಂಥರ್ ಚಳವಳಿ ಹಿಂದು ಧರ್ಮದ ಅನಿಷ್ಟಗಳಾದ ಚಾತುರ್ವರ್ಣ್ಯ, ಜಾತೀಯತೆ, ಅಸ್ಪೃಶ್ಯತೆ, ದೇವರ ಪರಿಕಲ್ಪನೆ, ಡಂಭಾಚಾರ, ಧರ್ಮದ ದುರ್ಬಳಕೆ, ದೌರ್ಜನ್ಯ, ವಂಚನೆ ಮೊದಲಾದವುಗಳ ವಿರುದ್ಧ ಪ್ರತಿಭಟಿಸಿ ನಡೆಸಿದ ಚಳವಳಿಯಾಗಿದೆ. ದಲಿತ ಪ್ಯಾಂಥರ್ಸ್‌ನವರು ದಲಿತರ ಭವಿಷ್ಯ ದಲಿತರ ಕೈಯಲ್ಲಿಯೇ ಇದೆ ಎಂದದ್ದಲ್ಲದೆ ದಲಿತರ ಮೇಲೆ ಮೇಲ್ಜಾತಿಯವರು ಕಟ್ಟಿದ ಭೋಗಜೀವನವನ್ನು ಖಂಡಿಸಿದರು. ಕಪ್ಪು ಸಾಹಿತ್ಯದ ಪ್ರತಿಭಟನೆಯಂತೂ ಭಾರತದ ಬೇರೆಬೇರೆ ಭಾಷೆಗಳಲ್ಲಿ ಜರುಗತೊಡಗಿತ್ತು. ಇವೆಲ್ಲದರ ಪ್ರಭಾವ ಕನ್ನಡ ದಲಿತ ಸಾಹಿತ್ಯದ ಮೇಲೂ ಉಂಟಾಗತೊಡಗಿತು.

ಈ ಸಂದರ್ಭದಲ್ಲಿ ಸಾಹಿತ್ಯಕ ಪ್ರೇರಣೆಗಳ ಜೊತೆಗೆ ಸಾಹಿತ್ಯೇತರ ಪ್ರೇರಣೆಗಳೂ ಕೆಲಸ ಮಾಡಿದವು. ಮುಖ್ಯವಾಗಿ ಎಡಪಂಥೀಯ ಸಿದ್ಧಾಂತಗಳೆಲ್ಲವೂ ದಲಿತ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಇದರ ಮೂಲಕವಾಗಿಯೂ ಈ ಪಂಥದ ಲೇಖಕರ ಸೃಜನಶೀಲ ಚಟುವಟಿಕೆಗಳಿಗೆ ಬೆಂಬಲ ಒದಗಿತು. ಮೀಸಲಾತಿಯಿಂದ ದಲಿತರಲ್ಲಾದ ಸುಧಾರಣೆಗಳು, ಮತಾಂತರದ ಪ್ರಸಂಗಗಳು, ವ್ಯಾಪಕವಾಗಿ ಜರುಗುತ್ತಿರುವ ಉಪಸಂಸ್ಕೃತಿಗಳ ಅಧ್ಯಯನ - ಈ ಎಲ್ಲ ನೆಲೆಗಳಿಂದಾಗಿ ದಲಿತರಲ್ಲಿ ಜಾಗೃತಿ ಮೂಡಿ, ಇವರಲ್ಲಿ ಪಟ್ಟ ಪಾಡುಗಳನ್ನು ಸಾಹಿತ್ಯವಾಗಿಸುವ ದಿಸೆಯಲ್ಲಿ ದಲಿತ ಲೇಖಕರು ಕಾರ್ಯೋನ್ಮುಖರಾದರು. ಅಖಂಡ ದುಃಖ ದುಮ್ಮಾನಗಳೇ ದಲಿತ ಸಾಹಿತ್ಯದ ಮೂಲ ಸ್ಫೋಟವಾಯಿತು. ಭೂ ಆಕ್ರಮಣ ಹೋರಾಟಗಳು, ವೆಂಕಟಸ್ವಾಮಿ ಆಯೋಗದ ವರದಿ, ಗಾಂಧಿ ಚಲನ ಚಿತ್ರದ ಬಹಿಷ್ಕಾರ, ಖೋಟಾ ಜಾತಿ ಪತ್ರಗಳ ಹಂಚಿಕೆ ವಿರುದ್ಧದ ಹೋರಾಟ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ ವಿರುದ್ಧದ ಹೋರಾಟ, ಬೆಲ್ಚಿ, ಕುದುರೆ ಮೋತಿ ಪ್ರಕರಣ, ಕಂಬಾಲಪಲ್ಲಿ ಪ್ರಕರಣ, ಬೆಂಡಿಗೇರಿ ಪ್ರಕರಣ, ಚುನಾವಣಾ ಬಹಿಷ್ಕಾರ ಮುಂತಾದ ಘಟನೆಗಳು ದಲಿತ ಚಳವಳಿ ಹೆಚ್ಚು ಚಾಲನೆಗೊಳ್ಳಲು ಕಾರಣವಾದವಲ್ಲದೆ ದಲಿತ ಸಾಹಿತ್ಯ ರಚನೆಯ ಸಂದರ್ಭದಲ್ಲೂ ಪರಿಣಾಮಕಾರಿಯಾಗಿ ಕೆಲಸ ಮಾಡಿದುವು.

ದಲಿತ ಸಾಹಿತ್ಯದ ಆರಂಭದ ಬೆಳವಣಿಗೆಯಲ್ಲಿ ಸಿಟ್ಟು, ಅಬ್ಬರ, ಆಕ್ರೋಶಗಳು ಪ್ರಧಾನವಾಗಿ ಕಂಡುಬಂದರೂ ಆಗಿನ ಸಂದರ್ಭಕ್ಕೆ ಅದು ಅನಿವಾರ್ಯವಾಗಿತ್ತು. ಆಳವಾದ ನೋವನ್ನು ಅಭಿವ್ಯಕ್ತಿಸಲು ಕಂಡುಕೊಂಡ ಮಾರ್ಗವಾಗಿತ್ತು. 20ನೆಯ ಶತಮಾನದ 70ರ ದಶಕದಲ್ಲಿ ಇಂತಹ ಬರೆವಣಿಗೆ ದಲಿತ ಸಾಹಿತ್ಯದ ಲಕ್ಷಣವಾಗಿಯೇ ಗೋಚರವಾಯಿತು. ಜೋರಾಗಿ ಹಾಡಿಕೊಂಡಾಗ ಮಾತ್ರ ಕವಿಯ ಭಾವನೆಗಳು ಮನ ದಟ್ಟಾಗುತ್ತವೆಂಬ ಆಶಯವನ್ನು ವ್ಯಕ್ತಪಡಿಸುವ ಮೂಲಕ ಗೇಯತೆಯ ಗುಣಗಳನ್ನು ಒಳಗೊಂಡ ದಲಿತಕಾವ್ಯ ರಚನೆಯಾಯಿತು. ಈ ಗುಣಗಳು ಕನ್ನಡ ಸಾಹಿತ್ಯಕ್ಕೆ ಹೊಸ ಸೇರ್ಪಡೆಗಳೆನಿಸಿದವು. ಇದರಿಂದಾಗಿಯೂ ಕನ್ನಡ ಕಾವ್ಯಕ್ಕೆ ದಲಿತಕಾವ್ಯ ಒಂದು ಶಕ್ತಿಯನ್ನು ನೀಡಿತು. ಹೊಲೆಮಾದಿಗರ ಹಾಡು ಕವನಸಂಕಲನವನ್ನು ಕೊಡುವುದರ ಮೂಲಕ ಕನ್ನಡ ಕಾವ್ಯಕ್ಕೆ ಚುರುಕು ಮುಟ್ಟಿಸಿದ ಸಿದ್ಧಲಿಂಗಯ್ಯ ಅವರು ನೊಂದವರನ್ನು ಕಾವ್ಯದ ವಸ್ತುವಾಗಿಸುವ ಜನಪರ ಆಶಯದಿಂದ ಜನಪರ ಛಂದಸ್ಸಿನಲ್ಲಿ ಕಾವ್ಯ ಕಟ್ಟಿದ್ದು ಗಮನಾರ್ಹ. ಇವರ ಕಪ್ಪು ನಾಡಿನ ಹಾಡು ಕಲಾತ್ಮಕತೆಯ ಜೊತೆಗೆ ಪ್ರಯೋಗಶೀಲತೆಯನ್ನು ಎತ್ತಿ ಹಿಡಿಯುವ ಕವನಸಂಕಲನ. ಅನಂತರ ಬಂದ ಸಾವಿರಾರು ನದಿಗಳು ಸಂಕಲನದಲ್ಲಿ ವೈಯಕ್ತಿಕ ಕೋಪಕ್ಕಿಂತ ಸಾರ್ವತ್ರಿಕ ಸ್ವರೂಪದ ಕೋಪವೇ ಗಾಢವಾಯಿತು.

ವಿ.ಮುನಿವೆಂಕಟಪ್ಪ, ಮ.ನ.ಜವರಯ್ಯ, ಮುಳ್ಳೂರು ನಾಗರಾಜ, ಸತ್ಯಾನಂದ ಪಾತ್ರೋಟ, ಅರವಿಂದ ಮಾಲಗತ್ತಿ, ಎಲ್.ಹನುಮಂತಯ್ಯ, ಚೆನ್ನಣ್ಣ ವಾಲೀಕಾರ, ಕೆ.ಬಿ.ಸಿದ್ಧಯ್ಯ, ಜಂಬಣ್ಣ ಅಮರಚಿಂತ, ಬರಗೂರು ರಾಮಚಂದ್ರಪ್ಪ, ಅನಸೂಯ ಕಾಂಬಳೆ, ಸುಕನ್ಯಾ ಮಾರುತಿ, ಗಂಗಾರಾಂ ಚಂಡಾಳ, ಕೆ.ರಾಮಯ್ಯ ಮೊದಲಾದ ಕವಿಗಳು ಶೋಷಿತರ ಸ್ಥಿತಿಯ ಸೂಕ್ಷ್ಮಗಳ ಶೋಧನೆಗೆ ತೊಡಗುವುದರ ಮೂಲಕ ಮಹತ್ವದ ಕಾವ್ಯಸೃಷ್ಟಿಗೆ ಕಾರಣರಾದರು. ಅರವಿಂದ ಮಾಲಗತ್ತಿಯವರ 'ಕಪ್ಪುಕಾವ್ಯ', 'ಮೂಕನಿಗೆ ಬಾಯಿ ಬಂದಾಗ', 'ನಾದನಿನಾದ' ಸಂಕಲನಗಳಲ್ಲಿ ಮಾನವನ ಕ್ಷುದ್ರತೆಗಳು ಕಾವ್ಯರೂಪದಲ್ಲಿ ದಾಖಲಾಗುತ್ತಾ ಹೋಗಿವೆ. ಜಮೀನ್ದಾರಿ ಪದ್ಧತಿ, ಅದರಿಂದಾದ ಆರ್ಥಿಕ ಅನ್ಯಾಯ, ಅದರ ವಿರುದ್ಧ ಬಂಡೆದ್ದ ವಿವರಗಳು ಇವೂ ದಲಿತಕಾವ್ಯರಚನೆಯಲ್ಲಿ ಮುಖ್ಯವಾದವು. ಸಿಟ್ಟು, ಆಕ್ರೋಶಗಳ ನಡುವೆಯೂ ಪ್ರೇಮ, ಅನುರಾಗ, ಪ್ರಣಯ ಇತ್ಯಾದಿ ಶೃಂಗಾರ ಭಾವಗಳೂ ಕಾವ್ಯಾಭಿವ್ಯಕ್ತಿಯಲ್ಲಿ ಕಾಣಿಸಿಕೊಂಡವು.

ದಲಿತಕವಿಗಳು ಸಾಮಾನ್ಯವಾಗಿ ಸ್ಥಳೀಯ ಸಮಸ್ಯೆಗಳಿಗೆ ತಮ್ಮ ಕಾವ್ಯಗಳಲ್ಲಿ ಪ್ರಾತಿನಿಧ್ಯ ನೀಡುತ್ತಲೇ ಬಂದಿದ್ದಾರೆ. ದಲಿತರ ಮೇಲೆ ನಡೆದ ಹಲ್ಲೆಗಳು, ಕ್ರೌರ್ಯಗಳು ಇವು ದಲಿತಕವಿಗಳಲ್ಲಿ ಹಾಡಾಗಿ ಪರಿಣಮಿಸಿವೆ. ಆದರೆ ಮರಾಠಿ ದಲಿತಕವಿಗಳಲ್ಲಿ ಇಂಥ ಪ್ರಸಂಗಗಳು ಹಾಡುಗಳಾಗದೆ ಕೇವಲ ಕಾವ್ಯವಾಗಿವೆ. ನೋವು, ಅವಮಾನ ಎರಡೂ ಭಾಷೆಯಲ್ಲಿ ಸ್ಥಾಯಿಯಾಗಿದೆ ನಿಜ. ಶ್ರೀಮಂತರನ್ನು, ಬಡ್ಡಿ ಸಾಲ ವಸೂಲಿಗಾರರನ್ನು ಕಾವ್ಯದಲ್ಲಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಆದರೂ ಕರ್ನಾಟಕೇತರ ರಾಜ್ಯಗಳ ಎಷ್ಟೋ ದಲಿತರ ನೋವಿನ ಘಟನೆಗಳು, ಸಮಸ್ಯೆಗಳು ಕನ್ನಡ ದಲಿತ ಕಾವ್ಯವನ್ನು ಪ್ರವೇಶಿಸಿಯೇ ಇಲ್ಲವೆಂಬುದು ಆಶ್ಚರ್ಯದ ಸಂಗತಿ.

ಕನ್ನಡ ಸಾಹಿತ್ಯದಲ್ಲಿ ಕಥಾವಾಹಿನಿಗೆ ಸಿಕ್ಕ ಪ್ರಾಶಸ್ತ್ಯ ಅನನ್ಯವಾದುದು. ನವೋದಯದಿಂದ ದಲಿತ ಬಂಡಾಯದವರೆಗೆ ಆಯಾ ಪಂಥಗಳ ಆಶಯಗಳಿಗೆ ತಕ್ಕಂತೆಯೇ ಕಥಾಸಾಹಿತ್ಯ ಸೃಷ್ಟಿಯಾಗುತ್ತ ಬಂತು. ಕಾವ್ಯದ ಅನಂತರದ ಸ್ಥಾನ ಕಥೆಗಳಿಗೇ ಸಲ್ಲುತ್ತದೆ. ಮಾಸ್ತಿ, ಕುವೆಂಪು, ಆನಂದ, ಬಸವರಾಜ ಕಟ್ಟೀಮನಿ, ನಿರಂಜನ, ಅನುಪಮಾ ನಿರಂಜನ, ತೇಜಸ್ವಿ, ಅನಂತಮೂರ್ತಿ, ಲಂಕೇಶ್ ಮುಂತಾದವರೆಲ್ಲ ವಿಶಿಷ್ಟ ಸಂವೇದನಾಶೀಲ ಕಥೆಗಳನ್ನು ನೀಡಿದವರು. ದಲಿತ ಚಳವಳಿಯ ಪ್ರಭಾವದಿಂದಾಗಿ ಬಂದ ಕಥೆಗಳು ಸಹ ಕನ್ನಡ ಕಥಾಸಾಹಿತ್ಯದಲ್ಲಿ ಹೊಸ ಅಲೆಗೆ ಹೆಸರಾದವು. ಹಸಿವು, ದುಃಖ; ದುಮ್ಮಾನ, ಶೋಷಣೆ, ಹತಾಶೆ, ಕ್ರೌರ್ಯ, ದೌರ್ಜನ್ಯ, ಅಮಾಯಕತೆಗಳು ಕಥೆಯ ವಸ್ತುಗಳಾದವು. ಇಂಥ ಘಟನೆ, ಪ್ರಸಂಗಗಳನ್ನು ಸೆರೆಹಿಡಿದು ಕಲಾತ್ಮಕವಾಗಿ ಅಭಿವ್ಯಕ್ತಿ ನೀಡಿದ ಕಥೆಗಾರರು ಹಲವರಿದ್ದಾರೆ. ಅವರ ಕಥಾ ಸಂಕಲನಗಳೂ ಕನ್ನಡ ಕಥಾ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಮನ್ನಣೆಗೆ ಪಾತ್ರವಾದವು. ದಲಿತ ಸಾಹಿತ್ಯದ ಶಕ್ತಿಯುತ ಭಾಗವಾಗಿ ಈ ಸಣ್ಣಕಥೆಗಳು ಕಾಣಿಸಿಕೊಂಡಿವೆ. ದೇವನೂರು ಮಹಾದೇವ ಅವರ ದ್ಯಾವನೂರು, ಚೆನ್ನಣ್ಣ ವಾಲೀಕಾರರ ಕಪ್ಪುಕಲೆಗಳು, ಕುತ್ತದಲ್ಲಿ ಕುದ್ದವರ ಕತೆಗಳು, ಬರಗೂರು ರಾಮಚಂದ್ರಪ್ಪ ಅವರ ಸುಂಟರಗಾಳಿ, ಕಪ್ಪುನೆಲದ ಕೆಂಪುಕಾಲು, ಬಯಲಾಟದ ಭೀಮಣ್ಣ, ಅರವಿಂದ ಮಾಲಗತ್ತಿ ಅವರ ಮುಗಿಯದ ಕತೆಗಳು, ಮ.ನ.ಜವರಯ್ಯ ಅವರ ಬುರುಡೆಗೆ ಸ್ವರ್ಗ, ಮೊಗಳ್ಳಿ ಗಣೇಶರ ಬುಗುರಿ, ಭೂಮಿ, ಜನಾರ್ಧನ ಎರ್ಪಕಟ್ಟೆ ಅವರ ಪ್ರಕ್ರಿಯೆ, ತಿರಸ್ಕೃತರು, ಭದ್ರಯ್ಯ ತಿಮ್ಮಸಂದ್ರ ಅವರ ಬಾಗಿಲ ಬೀಗ ಮತ್ತು ರೇಣು, ಎಚೆ ಬಾಲರಾಜು ಅವರ ಸೂರ್ಯ, ಕತ್ತಲು, ಬೆಳಕು, ಹೊಂಗಳ್ಳಿ ಸೋಮಣ್ಣ ಅವರ ತಮ್ಮಟೆ, ನಟರಾಜ್ ಹುಳಿಯಾರ್ ಅವರ ಮತ್ತೊಬ್ಬ ಸರ್ವಾಧಿಕಾರಿ ಇವೆಲ್ಲ ದಲಿತ ಪ್ರಜ್ಞೆಯನ್ನು ಉಳಿಸಿಕೊಂಡು ಕಲಾತ್ಮಕತೆಗೆ ಹೆಸರಾದಂಥವು. ಹಾಗೆಯೇ ಈರಣ್ಣ ಕೋಸಗಿ, ಬಿ.ಚಿನ್ನಸ್ವಾಮಿ, ಬಿ.ಟಿ.ಜಾಹ್ನವಿ, ಬಸವಲಿಂಗಯ್ಯ, ಬಾನಂದೂರು ಕೆಂಪಯ್ಯ, ಮೋಹನ ನಾಗಮ್ಮನವರ, ಎಸ್.ಆರ್. ಗುರುನಾಥ, ರಾಮಕೃಷ್ಣ ಗುಂಡಿ, ಲಕ್ಷ್ಮಣ್, ಸುಬ್ಬು ಹೊಲೆಯಾರ್, ವೀರಯ್ಯ ಕಾಡುಕೊತ್ತನಹಳ್ಳಿ, ಬಸವರಾಜ ಕುಕ್ಕರಹಳ್ಳಿ, ಚಂದ್ರಕಾಂತವಡ್ಡು, ಕುಂ.ವೀರಭದ್ರಪ್ಪ, ಬಿ.ಟಿ.ಲಲಿತಾನಾಯಕ್ ಮೊದಲಾದವರು ತಮ್ಮ ವಲಯದ ಜೀವನಾನುಭವಗಳನ್ನು ಕಥೆಯಾಗಿಸುವಲ್ಲಿ ಯಶಸ್ಸನ್ನು ಹೊಂದಿದವರಾಗಿದ್ದಾರೆ. ಅನೇಕರು ದಲಿತ ಬದುಕಿನ ಸಾಂಸ್ಕೃತಿಕ ವಿವರಗಳನ್ನು ಕಥಾಹಂದರದಲ್ಲಿ ನೀಡುವಲ್ಲಿ ಸಫಲರಾಗಿದ್ದಾರೆ.

ಕಾದಂಬರಿಯ ಪ್ರಕಾರದ ಮೂಲಕವೂ ದಲಿತ ಲೇಖಕರು ತಮ್ಮ ಭಾವನೆಗಳನ್ನು, ಸಿದ್ಧಾಂತಗಳನ್ನು, ತಾವು ತಲುಪಬೇಕಾದ ಗುರಿಯ ಬಗೆಗಿನ ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ಒಂದೊಂದು ಚಳವಳಿಯ ಸಂದರ್ಭದಲ್ಲೂ ಕಾದಂಬರಿಗಳು ಬಿಟ್ಟುಕೊಟ್ಟ ಧೋರಣೆಗಳು ವಿಶಿಷ್ಟ ವಾದವು. ದಲಿತ ಚಳವಳಿಯ ಕಾಲದಲ್ಲಿ ಕಾದಂಬರಿಗಳು ಗ್ರಾಮಾಂತರ ನೆಲೆಗಳ ದಲಿತ ಕುಟುಂಬಗಳ ಸಮಸ್ಯೆಗಳು ಅವರ ಸಾಂಸ್ಕೃತಿಕ ಸಂಪನ್ನತೆಯನ್ನು, ಸ್ಥಿತ್ಯಂತರಗೊಳ್ಳುತ್ತಿರುವ ಮೌಲ್ಯಗಳೊಂದಿಗಿನ ಹೋರಾಟವನ್ನು, ತಮ್ಮ ಸಮಸ್ಯೆಗಳ ಬಗೆಗಿನ ತಿಳುವಳಿಕೆಗಳನ್ನು ನಿರೂಪಿಸುವಲ್ಲಿ ಯಶಸ್ಸನ್ನು ಹೊಂದಿವೆ. ಜಿ.ವೆಂಕಟಯ್ಯ ಅವರ ನೊಂದಜೀವ, ದೇವನೂರರ ಒಡಲಾಳ, ಕುಸುಮಬಾಲೆ, ಮ.ನ.ಜವರಯ್ಯ ಅವರ ಮಾಗಿ, ಅರವಿಂದ ಮಾಲಗತ್ತಿ ಅವರ ಕಾರ್ಯ, ಮುಳ್ಳೂರು ನಾಗರಾಜರ ಮರಣ ಮಂಡಲ ಮಧ್ಯದೊಳಗೆ, ದಂಡಕಾರಣ್ಯ, ಶಿವರುದ್ರ ಕಲ್ಲೋಳಿಕರ್ ಅವರ ಹೊಲಗೇರಿಯ ರಾಜಕುಮಾರ, ಚೆನ್ನಣ್ಣ ವಾಲೀಕಾರರ ಬೆಳ್ಳ, ಹುಲಿಗೆಮ್ಮ, ಕೋಟೆಬಾಗಿಲು, ಒಂದು ಹೆಣ್ಣಿನ ಒಳಜಗತ್ತು, ಬಿ.ಟಿ.ಲಲಿತಾನಾಯಕರ ಗತಿ, ಗೀತಾ ನಾಗಭೂಷಣರ ಮಾಪುರ ತಾಯಿಯ ಮಕ್ಕಳು, ನೋವು ಮುಂತಾದ ಕಾದಂಬರಿಗಳು ದಲಿತ ಸಮುದಾಯದ ವಿವಿಧ ಆಯಾಮಗಳನ್ನು ಗ್ರಹಿಸಿದ್ದಲ್ಲದೆ ಪ್ರಾದೇಶಿಕ ಭಾಷೆಯಲ್ಲಿ ಅವನ್ನು ಅಭಿವ್ಯಕ್ತಿಸಲು ಪ್ರಯತ್ನಿಸಿದ್ದು ಉಪಸಂಸ್ಕೃತಿಗಳ ಅಧ್ಯಯನದ ದೃಷ್ಟಿಯಿಂದ ಪ್ರಮುಖವೆನಿಸಿತು. ಸಾಂಸ್ಕೃತಿಕ ಸಂಘರ್ಷದ ವಿಶ್ಲೇಷಣೆಯಲ್ಲಿಯೂ ಅವು ತೊಡಗಿದವು. ದಲಿತರ ಜಾಗೃತಿಯೂ ಸ್ಥಿತ್ಯಂತರಗೊಳ್ಳುತ್ತಿರುವ ಸಂದರ್ಭದಲ್ಲಿ ಸಮಾಜದ ಸಮಸ್ಯಾತ್ಮಕ ನೆಲೆಗಳು ಅತ್ಯಂತ ಪರಿಣಾಮಕಾರಿಯಾಗಿಯೇ ಚಿತ್ರಿಸಲ್ಪಟ್ಟವು. ಕಥೆ ಮತ್ತು ಕಾದಂಬರಿ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿದ ಸಾಹಿತ್ಯಾಭಿವ್ಯಕ್ತಿಯನ್ನು ಗುರುತಿಸಬಹುದು.

ಇನ್ನು ದಲಿತ ವಸ್ತುವನ್ನಾಧರಿಸಿದ ಶೂದ್ರ ತಪಸ್ವಿ, ಜಲಗಾರ, ಬೆರಳ್ಗೆ ಕೊರಳ್ (ಕುವೆಂಪು), ಏಕಲವ್ಯ (ಕೈಲಾಸಂ) ಮತ್ತು 12ನೆಯ ಶತಮಾನದ ಅಂತರ್ಜಾತೀಯ ವಿವಾಹವನ್ನು ಕುರಿತ ನಾಟಕಗಳು ಬೆಳಕುಕಂಡಿವೆ. ಇಂಥ ನಾಟಕಗಳನ್ನು ಬಿಟ್ಟರೆ ದಲಿತ ಪ್ರಜ್ಞೆಯ ನಾಟಕಗಳು ಹೊರಬಂದಿರುವುದು ತೀರಾ ವಿರಳ. 70ರ ದಶಕದಲ್ಲಿ ದಲಿತ ಪ್ರಜ್ಞೆಯ ನಾಟಕಗಳು ರಂಗಭೂಮಿಯನ್ನು ಪ್ರವೇಶಿಸಿರುವುದಂತೂ ನಿಜ. ಬೆಲ್ಚಿ, ಕುದುರೆ ಮೋತಿ ಪ್ರಸಂಗ, ಬೆಳ್ಳಿಗೇರಿ ಪ್ರಕರಣ, ಪತ್ರೆ ಸಂಗಪ್ಪನ ಕೊಲೆ, ಶೇಷಗಿರಿಯಪ್ಪನ ಕೊಲೆ - ಈ ಘಟನೆಗಳನ್ನು ಆಧರಿಸಿದ ಬೀದಿ ನಾಟಕಗಳು ಹುಟ್ಟಿಕೊಂಡವು. ಆ ಸಂದರ್ಭದಲ್ಲಿ ಇವು ದಲಿತ ಲೋಕದ ಪ್ರಮುಖ ನಾಟಕಗಳಾಗಿದ್ದವು. ದಲಿತ ಜನಾಂಗವನ್ನು ಜಾಗೃತಗೊಳಿಸಲು ಅವರ ಭಾಷೆ, ಸಮಸ್ಯೆಯಲ್ಲಿ ಮೂಡಿದಕಾರ್ಯ ಇದಾಗಿತ್ತು. ಸಿದ್ಧಲಿಂಗಯ್ಯ ಅವರ ಪಂಚಮ ನೆಲಸಮ, ಏಕಲವ್ಯ ನಾಟಕಗಳು ದಲಿತರ ಬಾಳಿನ ಆಧುನಿಕ ಸಮಸ್ಯೆಗಳನ್ನು ಸಮರ್ಥವಾಗಿ ನಿರೂಪಿಸಿದವು. ಅಲ್ಲದೆ ಇವರ ಪ್ರಸಿದ್ಧ ಕವಿತೆಗಳಾದ ಕತ್ತೆ ಮತ್ತು ಧರ್ಮ, ಅಲ್ಲೆ ಕುಂತವರೆ, ಕೊಲೆಯ ಹಿಂದಿನ ರಾತ್ರಿಗಳು ಬೀದಿ ನಾಟಕಗಳಾಗಿ ರೂಪಿತಗೊಂಡು ಪ್ರಯೋಗವಾಗಿ ಜನಪ್ರಿಯತೆ ಗಳಿಸಿದವು. ವರ್ಣ ಹೋರಾಟದಿಂದ ಆರಂಭವಾಗುವ ದಲಿತ ಸಾಹಿತ್ಯ ವರ್ಗ ಹೋರಾಟಕ್ಕೆ ಬಂದು ನಿಲ್ಲಬೇಕೆಂಬುದನ್ನು ತಿಳಿಸುವ ಸಿದ್ಧಲಿಂಗಯ್ಯ ಅವರ ಕೃತಿಗಳು ದಲಿತ ರಂಗಭೂಮಿಯ ಮಹತ್ವದ ಕೊಡುಗೆಗಳಾಗಿವೆ. ದೇವನೂರರ ಒಡಲಾಳ, ಕುಸುಮಬಾಲೆ, ಒಂದು ದಹನದ ಕತೆ ಇತ್ಯಾದಿಗಳು ರಂಗರೂಪಕಗಳಾಗಿ ಪ್ರದರ್ಶನಗೊಂಡಿವೆ. ಸತ್ಯಾನಂದ ಪಾತ್ರೋಟರ ಮತ್ತೊಬ್ಬ ಏಕಲವ್ಯ ಮತ್ತು ಯಾರೂ ಇಲ್ಲೋ ಯಪ್ಪಾ, ನಮಗೆ ಸಾಕ್ಷಿ – ಇವು ಸಹ ಗಮನಿಸಬೇಕಾದ ನಾಟಕಗಳು. ಸಮಾಜದ ಏರುಪೇರುಗಳನ್ನು ದಲಿತ ಲೋಕದ ಸಮಸ್ಯೆಗಳನ್ನು ತೆಗೆದುಕೊಂಡು ಜಾನಪದೀಯ ಲೇಪದಿಂದ ನಾಟಕ ರಚಿಸಿದವರಲ್ಲಿ ಚೆನ್ನಣ್ಣ ವಾಲೀಕಾರ ಪ್ರಮುಖರು. ವೇಶ್ಯಾ ಸಮಸ್ಯೆಯ ಟೊಂಕದ ಕೆಳಗಿನ ಜನ, ದೇವದಾಸಿ ಪದ್ಧತಿಯ ಜೋಗತಿ, ಭೂಮಿ ವಿವಾದದ ಜನವೆಂಬ ಆಸ್ತಿ ಮೊದಲಾದುವು ಗಮನಾರ್ಹ. ಜಾತಿಯ ಕ್ರೂರ ಸಂಕೋಲೆಗಳಿಂದಾಗುವ ಪರಿಣಾಮಗಳನ್ನು ಬಿ.ಚಿನ್ನಸ್ವಾಮಿ ಅವರು ಕೆಂಡಮಂಡಲದಲ್ಲಿ ಅಭಿವ್ಯಕ್ತಿಸಿದ್ದಾರೆ. ಜಮೀನ್ದಾರಿ ಪದ್ಧತಿ ಹಾಗೂ ಜಾತಿ ವ್ಯವಸ್ಥೆಯ ವಿರುದ್ಧ ಬಂಡೇಳುವ ಜಾಜ ಎಂಬ ನಾಟಕವನ್ನು ಮಲ್ಲಿಕಾ ಘಂಟಿ ರಚಿಸಿದ್ದಾರೆ. ಅರವಿಂದ ಮಾಲಗತ್ತಿ ಅವರ ಸಮುದ್ರದೊಳಗಣಉಪ್ಪು

ಮೀಸಲಾತಿಯನ್ನು ಕುರಿತ ವೈಚಾರಿಕ ನಾಟಕ. ವಸ್ತುವಿನ ವಿಭಿನ್ನ ನೆಲೆಗಳನ್ನು ತೆರೆದಿಡುವ ಈ ನಾಟಕದಲ್ಲಿ ಪಾತ್ರಗಳು ಪ್ರಧಾನವಾಗಿರದೆ ವಿಚಾರವೇ ಪ್ರಧಾನವಾಗಿದೆ. ಅಸ್ಪೃಶ್ಯತೆ, ನಗರ ಮತ್ತು ಗ್ರಾಮದ ಪರಿಕಲ್ಪನೆಗಳು, ಪ್ರೀತಿ ಪ್ರೇಮಗಳ ಮಧುರ ಬಾಂಧವ್ಯಗಳನ್ನು ಒಂದೆಡೆ ತೋರಿಸಿದರೆ ಸಾಮಾಜಿಕ ವಿಘಟನೆಯನ್ನು ಮತ್ತೊಂದೆಡೆಗೆ ತೋರಿಸುತ್ತದೆ. ಇದಲ್ಲದೆ ರಾಜಕೀಯ ಕುತಂತ್ರಗಳು, ಧರ್ಮದ ಒಳ ಸಂಘರ್ಷಗಳು, ಕೌಟುಂಬಿಕ ಬಿಕ್ಕಟ್ಟುಗಳನ್ನು ಮುಖಕ್ಕೆ ರಾಚುವಂತೆ ಮುಂದಿಡುವ ಸಂಪೂರ್ಣ ಹೊಸ ಆವಿಷ್ಕಾರದ ನಾಟಕವಾಗಿದೆ. ಇದರ ಕೆಲವು ಭಾಗಗಳು ರಂಗ ಪ್ರಯೋಗಕ್ಕೆ ಒಳಗಾದಂತೆ ಇವರ ಆತ್ಮಕಥೆ, ಗೌರ್ಮೆಂಟ್ ಬ್ರಾಹ್ಮಣದ ಕೆಲವು ಭಾಗಗಳು ಪ್ರದರ್ಶನಕ್ಕೆ ಒಳಗಾಗಿವೆ. ಮ.ನ. ಜವರಯ್ಯ ಜಲ ನಾಟಕದ ಮೂಲಕ ಎರಡು ಸಾವಿರ ವರ್ಷಗಳಷ್ಟು ಹಳೆಯದಾದ ಬುದ್ಧನಿಗೆ ಸಂಬಂಧಿಸಿದ ಅಜ್ಞಾತವಾದೊಂದು ಕಥೆಯನ್ನು ಬೆಳಕಿಗೆ ತಂದಿದ್ದಾರೆ. ನೀರಿಗೆ ಸಂಬಂಧಿಸಿದ ವಿಚಾರ ಸರಣಿಯನ್ನು ಪ್ರಸ್ತುತ ನಾಟಕ ಒಳಗೊಂಡಿದೆ. ನೀರಿಗಾಗಿ ಅಂಬೇಡ್ಕರ್ ನಡೆಸಿದ ಹೋರಾಟವನ್ನು ಕುರಿತಂತೆ ಟಿ.ಎಂ.ಭಾಸ್ಕರ್ ನೀರು ಬೇಕು ನೀರು ಎಂಬ ನಾಟಕವನ್ನು ರಚಿಸಿದ್ದಾರೆ. ಭಾಷೆ ಶಿಷ್ಟವೆನಿಸಿದರೂ ಶೈಲಿ, ತಂತ್ರ, ನಿರೂಪಣೆ ಸಮರ್ಥವಾಗಿ ಮೂಡಿ ಬಂದಿದೆ. ಇದಲ್ಲದೆ ಈ ಕ್ಷೇತ್ರದಲ್ಲಿ ಚೆನ್ನಣ್ಣ ವಾಲೀಕಾರ, ಕುಂ.ವೀರಭದ್ರಪ್ಪ ಕೃಷಿ ಮಾಡಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಫಸಲು ಬಾರದೆ ಹೋಗಿದೆ.

ಇಪ್ಪನೆಯ ಶತಮಾನದ 70ರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಾದ ಬದಲಾವಣೆಗಳು ಹಲವಾರು. ಭಾರೀ ಪ್ರಮಾಣದಲ್ಲಿ ಹೊಸ ವಿಚಾರಗಳ ಅಲೆಯೇ ಕಾಣಿಸಿಕೊಂಡಿತು. ಪಾಶ್ಚಿಮಾತ್ಯ ವಿಚಾರಧಾರೆಗಳಿಗಿಂತ ಸ್ವದೇಶಿ ನೆಲೆಯ ಚಿಂತನಧಾರೆಗಳೇ ಅಧಿಕೃತತೆ ಪಡೆದವು. ಇದರ ಫಲವಾಗಿ ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ವಿಚಾರಕ್ರಾಂತಿಯನ್ನು ಒಳಗೊಂಡ ಚಿಂತನಶೀಲರು ಸೃಷ್ಟಿಯಾದರು. ಸಾಮಾಜಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಶೋಷಣೆಯ ಸ್ವರೂಪ, ಸ್ವಭಾವ, ವ್ಯಾಪ್ತಿ ಮೊದಲಾದ ದೃಷ್ಟಿಕೋನಗಳಲ್ಲಿ ಮುಕ್ತ ಮನಸ್ಸಿನ ಚರ್ಚೆ ನಡೆಸಿದರು. ಜಾತಿ ವ್ಯತ್ಯಾಸಗಳ ನೆಲೆಯಲ್ಲಿ ಚಿಂತನಶೀಲತೆ ಒಂದೆಡೆ ಕಂಡುಬಂದರೆ, ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್ ವಿಚಾರಧಾರೆಯ ಸಾಹಿತ್ಯವನ್ನು ಇನ್ನೊಂದೆಡೆ ಕಾಣುತ್ತೇವೆ. ಜೊತೆಗೆ ಸೈದ್ಧಾಂತಿಕ ನೆಲೆಯೂ ಗೋಚರವಾಯಿತು. ಒಟ್ಟಾರೆ ಬಹುಮುಖೀ ನೆಲೆಯಲ್ಲಾದ ಬದಲಾವಣೆಯ ಫಲವಾಗಿ ಮೂಡಿದ ವಿಚಾರ ಕ್ರಾಂತಿಯ ಪರಿಣಾಮವಾಗಿ ಹಲವಾರು ವೈಚಾರಿಕ ಕೃತಿಗಳು ಹುಟ್ಟಿಕೊಂಡವು. ಹೊಸ ಅಲೆ (ಸಿ.ಪಿ.ಸಿದ್ಧಾಶ್ರಮ), ದಲಿತಯುಗ ಮತ್ತು ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ ಚಳವಳಿಯ ತಾತ್ವಿಕ ಚಿಂತನ, ದಲಿತ ಪ್ರಜ್ಞೆ, ಸಾಹಿತ್ಯ ಮತ್ತು ಸಮಾಜ, ಸಾಂಸ್ಕೃತಿಕ ದಂಗೆ, ದಲಿತ ಸಾಹಿತ್ಯ ಪ್ರವೇಶಿಕೆ, (ಅರವಿಂದ ಮಾಲಗತ್ತಿ), ಕರ್ನಾಟಕ ದಲಿತ ಚಳವಳಿ ಮತ್ತು ಅಂಬೇಡ್ಕರ್ (ಚಂಡಾಳ), ದಲಿತ ಲೋಕದೊಳಗೆ (ಎಲ್.ಹನುಮಂತಯ್ಯ), ದಲಿತ ವರ್ಗದ ಶರಣರು ಮತ್ತು ಶರಣೆಯರು (ಮ.ನ.ಜವರಯ್ಯ), ದಲಿತ ಜಗತ್ತು (ಪುರುಷೋತ್ತಮ ಬಿಳಿಮಲೆ), ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು (ದೇವಯ್ಯ ಹರವೆ), ಹಕ್ಕಿನೋಟ (ಸಿದ್ಧಲಿಂಗಯ್ಯ), ಕನ್ನಡ ದಲಿತ ಸಾಹಿತ್ಯದ ನೆಲೆ (ಜಿ.ಆರ್.ತಿಪ್ಪೇಸ್ವಾಮಿ), ಮತಾಂತರ ಮತ್ತು ಇತರ ಲೇಖನಗಳು (ಮುನಿವೆಂಕಟಪ್ಪ) ಮುಂತಾದ ಕೃತಿಗಳನ್ನು ಸ್ಮರಿಸಬಹುದಾಗಿದೆ. ಪೋಲಂಕಿ ರಾಮಮೂರ್ತಿ, ರಹಮತ್ ತರೀಕೆರೆ, ಎಚ್.ಎಸ್. ರಾಘವೇಂದ್ರರಾವ್, ಕೆ.ಕೇಶವಮೂರ್ತಿ, ಆರ್ಕೆ ಮಣಿಪಾಲ ಮೊದಲಾದವರ ದಲಿತ ಸಾಹಿತ್ಯವನ್ನು ಕುರಿತ ವಿಚಾರ ವಿಮರ್ಶೆ ಚಿಂತನೆಗಳು ದಲಿತ ಚಿಂತನೆ ಹದಗೊಳ್ಳುವಲ್ಲಿ ಸಹಕರಿಸಿವೆ.

ಮರಾಠಿ ದಲಿತ ಸಾಹಿತ್ಯದಲ್ಲಿ ಬಂದಿರುವಷ್ಟು ಲೇಖಕರ ಆತ್ಮಕಥೆಗಳು ಕನ್ನಡದಲ್ಲಿ ಬಂದಿಲ್ಲ. ಅಲ್ಲಿಯ ಬರೆಹಗಳಲ್ಲಿ ದಲಿತ ಲೇಖಕರು ವೈಯುಕ್ತಿಕ ವಿಚಾರಗಳನ್ನು ಹೇಳಿಕೊಂಡಿದ್ದಾರೆ. ಮತಾಂತರ ಮತ್ತು ಇತರ ಲೇಖನಗಳು ಕೃತಿಯಲ್ಲಿ ಮುನಿವೆಂಕಟಪ್ಪ ಅಂತ್ಯಜನ ಆತ್ಮ ಕಥೆ ಎಂಬ ಶೀರ್ಷಿಕೆಯಡಿಯಲ್ಲಿ ಕೆಲವಾರು ಸಂಗತಿಗಳನ್ನು ಪ್ರಸ್ತಾಪಿಸಿದ್ದಾರೆ. ಸಿದ್ಧಲಿಂಗಯ್ಯನವರು ಅವತಾರಗಳು ಕೃತಿಯಲ್ಲಿ ತಮ್ಮ ವೈಯುಕ್ತಿಕ ವಿಚಾರಗಳನ್ನು ಹಾಸ್ಯದ ಲೇಪದೊಂದಿಗೆ ಹರಿಯಬಿಟ್ಟಿದ್ದಾರೆ. ಪೂರ್ಣಪ್ರಮಾಣದಲ್ಲಿ ಹೊರ ಬಂದಿರುವ ಆತ್ಮಚರಿತ್ರೆಗಳೆಂದು ಕರೆಸಿಕೊಳ್ಳುವ ಕೃತಿಗಳಿವು: ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ, ಸಿದ್ಧಲಿಂಗಯ್ಯನವರ ಊರು-ಕೇರಿ, ರಾಮಯ್ಯನವರ ಮಣೇಗಾರ, ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ. ಕನ್ನಡದ ಮೊದಲ ದಲಿತ ಆತ್ಮಕಥೆ ಎಂದು ಕರೆಯಿಸಿಕೊಂಡ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ' ಕವಿತೆ, ಕಾದಂಬರಿಗಳಲ್ಲಿ ಬಳಸಿಕೊಳ್ಳಲಾಗದ ವಿಭಿನ್ನ ಅನುಭವಗಳನ್ನು ಸಹಜವಾಗಿ, ಪ್ರಖರವಾಗಿ ತೆರೆದಿಟ್ಟಿದೆ.

ಇದೇ ಸಂದರ್ಭದಲ್ಲಿ ದಲಿತ ಸಾಹಿತ್ಯ ವಿಮರ್ಶೆಯ ಬಗೆಗೆ ಒಂದೆರಡು ಮಾತುಗಳನ್ನು ಹೇಳಬಹುದು. ದಲಿತ ಸಾಹಿತ್ಯ ತನ್ನ ಅಭಿವ್ಯಕ್ತಿ ವಿಧಾನದಲ್ಲಿ ಸರಳ ಸೂತ್ರಗಳನ್ನು ಅನ್ವಯಿಸಿಕೊಂಡಿದ್ದರಿಂದ ಸಾಹಿತ್ಯ ವಾಚ್ಯವಾಗಿದ್ದರಿಂದ ಲೇಖಕರಿಗೂ ಸಾಮಾನ್ಯ ಓದುಗರಿಗೂ ನೇರ ಸಂಪರ್ಕ ಉಂಟಾಯಿತು. ಹಾಗಾಗಿ ವಿಮರ್ಶೆ ಹಾಗೂ ವಿಮರ್ಶಕ ಇಲ್ಲಿ ಮುಖ್ಯವಾಗಲಿಲ್ಲ. ಇದರಿಂದ ದೂರ ಸರಿದ ವಿಮರ್ಶಕರು ದಲಿತ ಸಾಹಿತ್ಯ ಕೃತಿಗಳನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಹಾಗೊಮ್ಮೆ ವಿಮರ್ಶೆಗೆ ಪರಿಗಣಿಸಿದ್ದರೂ ನವ್ಯ ವಿಮರ್ಶೆಯ ಮಾನದಂಡಗಳನ್ನೇ ದಲಿತ ಬಂಡಾಯ ಕೃತಿಗಳೊಂದಿಗೆ ಅನ್ವಯಿಸತೊಡಗಿದ್ದುಂಟು. ಇದರ ಪರಿಣಾಮವಾಗಿ ಕೃತಿಯ ವಸ್ತುನಿಷ್ಠ ಮೌಲ್ಯಮಾಪನಕ್ಕಿಂತ ಸಾರಾಸಗಟಾಗಿ ತಳ್ಳಿಹಾಕುವ ವಿಮರ್ಶೆ ಆರಂಭವಾಯಿತು. ಆಕ್ರೋಶ, ಅಬ್ಬರ, ಸರಳತೆ, ಘೋಷಿತ ಬಂಡಾಯ ಇವೆಲ್ಲ ಸಾಹಿತ್ಯಕ ಮೌಲ್ಯಗಳೇ ಅಲ್ಲ ಎಂಬ ಅಭಿಪ್ರಾಯ ವಿಮರ್ಶೆಯಲ್ಲಿ ವ್ಯಕ್ತವಾಯಿತು. ಕೆಲವು ವಿಮರ್ಶಕರು ದಲಿತ ಸಾಹಿತ್ಯದ ಮೌಲ್ಯಮಾಪನ ಹಾಗೂ ವಿಮರ್ಶೆಗೆ ಪ್ರತ್ಯೇಕ ಮಾನದಂಡಗಳನ್ನೇ, ವಿಮರ್ಶೆಯ ಪರಿಕಲ್ಪನೆಯನ್ನೇ ಹೊಸದಾಗಿ ಕಂಡುಕೊಳ್ಳಬೇಕಾಗಿದೆ ಎಂದೂ ಅಭಿಪ್ರಾಯಪಟ್ಟರು. ಕನ್ನಡ ಸಾಹಿತ್ಯ ಪರಂಪರೆಯ ಮುಖ್ಯ ವಾಹಿನಿಯಲ್ಲಿಯೇ ಬರುವ ದಲಿತ ಸಾಹಿತ್ಯ ವಿಮರ್ಶೆಗೆ ಪ್ರತ್ಯೇಕ ಮಾನದಂಡಗಳ ಅಗತ್ಯತೆಯನ್ನು ಕೆಲವರು ತಳ್ಳಿ ಹಾಕಿದರು. ಈಗಿರುವ ಸಾಹಿತ್ಯಕ ಮಾನದಂಡಗಳಿಂದಲೇ ವಿಮರ್ಶೆ ಸಾಧ್ಯವೆಂದು ಹೇಳಿದರು. ದಲಿತ ಸಾಹಿತ್ಯವನ್ನು ಕುರಿತು ಸಮರ್ಥ ವಿಮರ್ಶೆಗಳು ಈವರೆಗೆ ಬಂದಿಲ್ಲ. ದಲಿತರೇ ವಿಮರ್ಶೆಯ ಕ್ಷೇತ್ರಕ್ಕೆ ಇಳಿದಾಗ ಅರ್ಥೈಸುವಿಕೆ ಮತ್ತು ವ್ಯಾಖ್ಯಾನಗಳೇ ಬದಲಾಗಬಹುದು ಎನ್ನುವ ವಾದವು ಎದುರಾಗಿದೆ. ಈ ಚರ್ಚೆ ಈಗಲೂ ಮುಂದುವರಿದಿದೆ. ಒಟ್ಟಾರೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ದಲಿತ ಸಾಹಿತ್ಯ ಚಟುವಟಿಕೆಗಳು ನಡೆಯುತ್ತಿವೆ. (ಜಿ.ಆರ್.ಟಿ.)

ಸಾಹಿತ್ಯ ವಿಮರ್ಶೆಯನ್ನು ಪ್ರಸ್ತಾಪಿಸುವಾಗ ಸ್ತ್ರೀವಾದ, ಸ್ತ್ರೀವಾದಿ ಚಳವಳಿ, ಸ್ತ್ರೀವಾದಿ ವಿಮರ್ಶೆಗಳನ್ನು ನಾವು ಮರೆಯುವಂತಿಲ್ಲ. ಸ್ತ್ರೀವಾದಿ ವಿಮರ್ಶೆಯ ಬಗೆಗೆ ಚಿಂತಿಸುವಾಗ ದಲಿತೀಯ ಸ್ತ್ರೀವಾದದ ವಿಚಾರವೂ ಪ್ರಸ್ತಾಪಗೊಳ್ಳುತ್ತದೆ. ದಲಿತ, ಬಂಡಾಯ, ಸ್ತ್ರೀವಾದಿ ಚಳವಳಿಗಳಿಗೆ ಪ್ರಧಾನವಾಗಿರುವ ನೆಲೆ ಸಾಮಾಜಿಕವಾದದ್ದು. ಈ ಸಾಮಾಜಿಕ ನೆಲೆಯಿಂದ ತಾತ್ವಿಕವಾಗಿ ಹೋರಾಡಲು ಈ ವಾದಗಳು ಬಯಸುತ್ತವೆ. ಈ ವಾದಗಳ ಆಶಯ, ಆಲೋಚನೆಗಳಲ್ಲಿ ಹಲವೆಡೆ ಸಮಾನ ಮನಃಸ್ಥಿತಿಗಳನ್ನು ಗುರುತಿಸಲು ಸಾಧ್ಯವಿದೆ.

ಮಹಿಳೆಯರೆಲ್ಲರೂ ಒಂದೇ; ಎಲ್ಲರೂ ಶೋಷಣೆಯ ನೋವುಂಡವರೇ ಎಂಬ ವಿಚಾರಗಳಿದ್ದರೂ ಸ್ತ್ರೀವಾದದಲ್ಲಿ ದಲಿತೀಯ ಸ್ತ್ರೀವಾದ ಸ್ವಲ್ಪ ಭಿನ್ನ ಆಶಯಗಳೊಂದಿಗೆ ತನ್ನ ಪ್ರಸ್ತುತತೆಯನ್ನು ಸ್ಥಾಪಿಸಿಕೊಂಡಿದೆ. ದಲಿತೀಯ ಸ್ತ್ರೀವಾದಕ್ಕೆ ಅರವಿಂದ ಮಾಲಗತ್ತಿಯವರು ಕೊಡುವ ವ್ಯಾಖ್ಯಾನದಲ್ಲಿ ಅದರ ಆಶಯಗಳ ಸ್ಪಷ್ಟ ಅರಿವು ಮೂಡುತ್ತದೆ. "ದಲಿತ ಸ್ತ್ರೀವಾದ ಎನ್ನುವುದು ತಮ್ಮನ್ನು ತಾವು ಅರಿಯಲು, ಬೇರೆಯವರನ್ನು ಅರಿತುಕೊಳ್ಳಲು ಹಾಗೂ ತಾವು ರಕ್ಷಿಸಿಕೊಳ್ಳುವುದರೊಂದಿಗೆ, ಬಂಧನದಿಂದ ಬಿಡುಗಡೆಗೊಳ್ಳುತ್ತ ಇತರರನ್ನು ಬಿಡುಗಡೆಗೊಳಿಸುವಲ್ಲಿ ಸಹಕರಿಸುತ್ತ, ತಾನೂ ಬೆಳೆಯುವುದು ಮತ್ತು ಇತರರನ್ನೂ ಬೆಳೆಸುವಂತಹದ್ದಾಗಿದೆ."

ಸ್ತ್ರೀವಾದಿಗಳು 'ಮಹಿಳೆಯರೆಲ್ಲ ಒಂದೇ' ಎಂಬ ಧೋರಣೆ ಹೊತ್ತವರಾದರೂ ದಲಿತ ಸ್ತ್ರೀವಾದಿ ಪ್ರಜ್ಞೆಯ ಅರಿವು ಮತ್ತು ಜಾತಿವಾದಿ ಧೋರಣೆಗಳಿಂದ ಮುಕ್ತ ಮನಃಸ್ಥಿತಿಯನ್ನು ಹೊಂದಬೇಕಾಗಿರುವ ದಿಶೆಯಲ್ಲಿ

ದಲಿತ ಸ್ತ್ರೀವಾದಕ್ಕೆ ಒಂದು ಪ್ರತ್ಯೇಕ ಅಧ್ಯಯನದ ನೆಲೆಯ ಆವಶ್ಯಕತೆಯನ್ನು ವಿಮರ್ಶಕರು ಒತ್ತಿ ಹೇಳುತ್ತಾರೆ. ದಲಿತ ಮಹಿಳೆ ದಲಿತತ್ವದ ಹಿನ್ನೆಲೆಯ ಸಮಸ್ಯೆಗಳು ಕೇಂದ್ರವಾಗುವುದರೊಂದಿಗೆ ಒಬ್ಬ ಸಾಮಾನ್ಯ ಮಹಿಳೆಯಾಗಿ ಪ್ರತಿಕ್ರಿಯಿಸುವ ಗುಣ ಕಂಡುಬರುತ್ತದೆ. ಮತ್ತು ದಲಿತ ಮಹಿಳೆಗೆ ದಲಿತ ಪರಿಕಲ್ಪನೆಯ ಒಳಗಡೆಯೇ ಎದುರಿಸುವ ಸಮಸ್ಯೆಗಳು ಇನ್ನೊಂದು ಸ್ವರೂಪದ್ದಾಗಿದೆ.

ಸುಕನ್ಯಾಮಾರುತಿ, ಮಲ್ಲಿಕಾಘಂಟಿ, ಲಲಿತಾನಾಯಕ, ಧರಣಿದೇವಿ, ಸರಸ್ವತಿ, ಸಮತಾ ದೇಶಮಾನೆ, ಮಿತಾದೇವನೂರು ಹೀಗೆ ಹಲವರು ತಮ್ಮ ವಿಚಾರ, ಬರೆಹ, ಕವನ ಇತ್ಯಾದಿಗಳ ಮೂಲಕ ದಲಿತೀಯ ಚಿಂತನೆಗಳಲ್ಲಿ ಭಾಗಿಯಾಗಿದ್ದಾರೆ. ಸ್ತ್ರೀವಾದ, ದಲಿತ ವಾದಗಳ ಸಹಯೋಗದಿಂದ ಸ್ತ್ರೀಕೇಂದ್ರಿತ ಪರಿಕಲ್ಪನೆಗಳು ಹೊಸ ಮಾರ್ಗ, ಹೊಸ ಜೀವಕಳೆಗಳನ್ನು ಹೊಂದಲು ಸಾಧ್ಯವಿದೆ ಎಂಬ ಅಭಿಪ್ರಾಯಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ. *

**ದಶಗಣ ಸಿಂಗಿದೇವಯ್ಯ :** ಸು.1160. ಶಿವಶರಣ, ವಚನಕಾರ, ಬಸವಣ್ಣನವರ ಸಮಕಾಲೀನ. ಲಕ್ಕಣ್ಣದಂಡೇಶ ಮೊದಲಾದ ಅನೇಕ ವೀರಶೈವ ಕವಿಗಳು ಈತನನ್ನು ಹೆಸರಿಸಿದ್ದಾರೆ. ಈತ ಹಾಗೂ ಬೊಮ್ಮಕಟ್ಟಿ, ಸಂಗವ್ವೆ, ದೇವರಸ, ಬಸವಯ್ಯ, ಬಾಚಿದೇವ ಮೊದಲಾದವರು ತೇರಸರೆಂದು ಪ್ರಸಿದ್ಧಿ ಪಡೆದಿದ್ದಾರೆ.

ಈತ ತನ್ನ ವಚನಗಳ ಅಂಕಿತದಲ್ಲಿ ತನ್ನ ಗುರುವಾದ ನಾಚಯ್ಯನ ಹೆಸರನ್ನೂ ಸೇರಿಸಿಕೊಂಡಿದ್ದಾನೆ. ಉಪಲಬ್ಧವಿರುವ ಇವನ ಕೆಲವೇ ವಚನಗಳಲ್ಲಿ ಅರ್ಪಣಾಭಾವ, ನಿಃಸ್ವಾರ್ಥತೆ ಗುರುಭಕ್ತಿಗಳನ್ನು ಕಾಣಬಹುದು. ಇವನ ಒಂದು ವಚನ:

ಸತಿಸುತ ಮಾತಾಪಿತರಿಗೆಂದು ಹಡೆದಡೆ ನಿಮ್ಮಾಣೆ ಕಂಡಯ್ಯ
ಮಾನವಸೇವೆ ಮಾಡಿದಡೆ ನಿಮ್ಮಾಣೆ ಕಂಡಯ್ಯ
ನೀವಲ್ಲದನ್ಯಕ್ಕೆರಗಿದಡೆ ನಿಮ್ಮಾಣೆ ಕಂಡಯ್ಯ
ಎನ್ನ ಸತಿಯಲ್ಲದನ್ಯಸತಿಗಳಿಚ್ಛಿದಡೆ ನಿಮ್ಮಾಣೆ ಕಂಡಯ್ಯ
ತನುಮನ ವಂಚನೆಯಾದಡೆ ನಾಚಯ್ಯ ಪ್ರಿಯ ಮಲ್ಲಿನಾಥಯ್ಯ
ನಿಮ್ಮಾಣೆ ಕಂಡಯ್ಯ *

**ದಸರ :** ಆಶ್ವೀಜ ಶುದ್ಧ ಪಾಡ್ಯದಿಂದ ದಶಮಿಯವರೆಗೆ ಹತ್ತು ದಿನಗಳು ನಡೆಯುವ ಹಬ್ಬ. ದಶಹರ, ದಶರಾತ್ರಿ ನವರಾತ್ರಿ ಎಂದೂ ಈ ಹಬ್ಬಸಾಲನ್ನು ಕರೆಯುವುದಿದೆ. ಈ ಸಾಲಿನ ಕೊನೆಯಲ್ಲಿ ಬರುವ ಮಹಾನವಮಿ ಮತ್ತು ವಿಜಯದಶಮಿ ಬಹು ಮುಖ್ಯ ದಿನಗಳು. ದಾನವರಿಗೂ ದೇವತೆಗಳಿಗೂ ನಡೆದ ಯುದ್ಧದಲ್ಲಿ ದೇವತೆಗಳಿಗೆ ಉಂಟಾದ ವಿಜಯವನ್ನಾಚರಿಸುವ ಪದ್ಧತಿ ಬೆಳೆದುಬಂದುದಾಗಿ ಪುರಾಣಗಳು ಸಾರುತ್ತವೆ. ರಾಮ ಲಂಕೆಯ ಮೇಲೆ ದಂಡೆತ್ತಿ ರಾವಣನನ್ನು ಕೊಂದು ವಿಜಯ ಸಾಧಿಸಿದ ದಿನ ವಿಜಯದಶಮಿ. ಹೀಗೆ ದಾನವ ಶಕ್ತಿಯ ಮೇಲೆ ದೈವೀಶಕ್ತಿ ಪಡೆದ ಮೇಲುಗೈಯನ್ನು ಸಂಭ್ರಮದಿಂದ ಆಚರಿಸುವ ಪದ್ಧತಿ ಪ್ರಾಚೀನ ಕಾಲದಿಂದಲೂ ಭಾರತದ ಎಲ್ಲೆಡೆ ನಡೆದುಬಂದಿದೆ. ಈ ದಿನಗಳಲ್ಲಿ ಶಕ್ತಿಪೂಜೆಗೆ ವಿಶೇಷ ಮಹತ್ವ.

ಇತರೆಡೆಗಳಂತೆ ಕರ್ನಾಟಕದಲ್ಲಿಯೂ ಈ ಹಬ್ಬದ ಆಚರಣೆ ಬಹು ಹಿಂದಿನ ಕಾಲದಿಂದಲೂ ಅನೂಚಾನವಾಗಿ ನಡೆದು ಬಂದಿದ್ದರೂ ಇಲ್ಲಿ ಈ ಹಬ್ಬಕ್ಕೆ ವಿಶಿಷ್ಟತೆಯುಂಟು. ಅದರಲ್ಲಿಯೂ ವಿಜಯನಗರದ ಅರಸರು ಅತ್ಯಂತ ಸಂಭ್ರಮದಿಂದ ವೈಭವದಿಂದ ಈ ಹಬ್ಬವನ್ನು ಆಚರಿಸುತ್ತಿದ್ದುದಕ್ಕೆ ಹಲವು ದಾಖಲೆಗಳಿವೆ. ಹೊರದೇಶದ ಯಾತ್ರಿಕರು ಈ ವೈಭವವನ್ನು ಕಂಡು ಮೂಕವಿಸ್ಮಿತರಾಗಿದ್ದಾರೆ. ತಮ್ಮ ಅನಿಸಿಕೆಗಳನ್ನು ಬರೆದಿಟ್ಟಿದ್ದಾರೆ. ಅಬ್ದುಲ್ ರಜಾಕ್, ಪೆಯಸ್, ನ್ಯೂನಿಜ್ ಮೊದಲಾದವರು ಇದನ್ನು ವಿವರವಾಗಿ ವರ್ಣಿಸಿದ್ದಾರೆ. ಮಳೆಗಾಲ ಕಳೆದು ಯುದ್ಧಕ್ಕೆ ಹೊರಡಲು ಸಿದ್ಧತೆ ಮಾಡಿಕೊಳ್ಳಲು ಇದು ಸೂಕ್ತ ಕಾಲ. ಅಂತೆಯೇ ಸೈನ್ಯಗಳ ಜಮಾವಣೆ ನಡೆಯುತ್ತಿದ್ದುದು ಆಗ. ಎಲ್ಲ ಸಾಮಂತರೂ ಮಂಡಲಾಧಿಪತಿಗಳೂ ದಂಡನಾಯಕರೂ ತಮ್ಮತಮ್ಮ ಸೈನ್ಯಗಳೊಡನೆ ರಾಜಧಾನಿಗೆ ಬಂದು ತಮ್ಮ ಸೈನ್ಯಗಳ ಪ್ರದರ್ಶನ ನಡೆಸಬೇಕಾಗಿತ್ತು. ಕಪ್ಪಕಾಣಿಕೆಗಳನ್ನೊಪ್ಪಿಸಬೇಕಾಗಿತ್ತು. ಇದರ ವೀಕ್ಷಣೆಗಾಗಿ ಒಂದು

ಮಹಾನವಮಿ ದಿಬ್ಬ, ಹಂಪಿ

ಉನ್ನತವಾದ ಸುಂದರವಾದ ಮಂಟಪ ನಿರ್ಮಾಣವಾಗಿತ್ತು. ಹಂಪೆಯಲ್ಲಿ ಅದರ ಅವಶೇಷಗಳು ಉಳಿದುಬಂದಿದೆ. ಮಹಾನವಮಿ ದಿಬ್ಬ ಎಂದು ಈಗಲೂ ಅದನ್ನು ಗುರುತಿಸುತ್ತಾರೆ. ಆ ದಿಬ್ಬದ ಸುತ್ತಲೂ ಇರುವ ಶಿಲ್ಪಗಳು ಆಗ ಚಕ್ರವರ್ತಿಯ ಮುಂದೆ ನಡೆಯುತ್ತಿದ್ದ ಸೈನಿಕ ಕವಾಯತುಗಳು, ಆಟಪಾಟಗಳು, ನೃತ್ಯಗಳು ಮುಂತಾದುವನ್ನು ಸೂಚಿಸುತ್ತವೆ. ನವರಾತ್ರಿಯ ಒಂಬತ್ತು ದಿನಗಳಲ್ಲೂ ಸಂಜೆ ರಾಜನು ಈ ಉನ್ನತವಾದ ಮಂಟಪದಲ್ಲಿ ರತ್ನಖಚಿತವಾದ ಹೇಮ ಸಿಂಹಾಸನದ ಮೇಲೆ ಮಂಡಿಸುತ್ತಿದ್ದ.

ಮೈಸೂರು ಅರಮನೆಯೊಳಗೆ ಸಾಂಪ್ರದಾಯಿಕ ಮೆರವಣಿಗೆ

ಮುಂದೆ ವಿಶಾಲವಾದ ಬಯಲಿನಲ್ಲಿ ಸಾಮಂತರು, ಅಧಿಕಾರಿಗಳು ತಮ್ಮ ತಮ್ಮ ಅಂತಸ್ತಿಗೆ ತಕ್ಕಂತೆ ಬಿಡಾರ ಹೂಡುತ್ತಿದ್ದರು. ಮೊದಲು ಪೂಜೆ ರಣಬಲಿಗಳಾದ ಮೇಲೆ ಸಾಲಂಕೃತವಾದ ಪಟ್ಟದ ಕುದುರೆಗಳು, ಆನೆಗಳು ಉತ್ಸವದಲ್ಲಿ ರಾಜನ ಮುಂದೆ ಬಂದಾಗ ಪುರೋಹಿತರು ಅವುಗಳನ್ನು ಪೂಜಿಸುತ್ತಿದ್ದರು. ಅನಂತರ ಸಹಸ್ರ ನರ್ತಕಿಯರ ತಂಡದಿಂದ ನೃತ್ಯ ಗಾಯನಗಳು. ಇದು ಮುಗಿಯುತ್ತಿದ್ದಂತೆಯೇ ಅಲಂಕೃತವಾದ ಕುದುರೆ ಆನೆಗಳ ಸೈನ್ಯ ಪ್ರದರ್ಶನ ಕಡೆಯದಾಗಿ ರಾಣಿವಾಸದ ಅತ್ಯಂತ ಸುಂದರಿಯರಾದ 36 ಜನರು ಚಿನ್ನದ ಕಳಶ, ಆರತಿಗಳೊಂದಿಗೆ ಬಂದಾಗ ಅಂದಿನ ಕಲಾಪ ಮುಗಿದಂತೆ. ಲೆಕ್ಕವಿಲ್ಲದಷ್ಟು ಮಷಾಲುಗಳ ಬೆಳಕಿನಲ್ಲಿ ದಿನದಿನವೂ ಹೊಸ ಹೊಸ ಪ್ರದರ್ಶನಗಳು ನಡೆಯುತ್ತಿದ್ದ ಆ ಆವರಣವೆಲ್ಲ ಕಿನ್ನರಲೋಕದಂತೆ ಭಾಸವಾಗುತ್ತಿತ್ತು. ಇವುಗಳಲ್ಲಿ ಮುಖ್ಯವಾದ ಪ್ರದರ್ಶನವೆಂದರೆ ಮಲ್ಲಯುದ್ಧ. ಸಹಸ್ರ ಮಲ್ಲರು ಇದರಲ್ಲಿ

ಭಾಗವಹಿಸುತ್ತಿದ್ದರು. ಗೆದ್ದವರಿಗೆ ರಾಜ ಬಹುಮಾನಗಳನ್ನು ಹಂಚುತ್ತಿದ್ದ. ನವಮಿಯಂದು ಆಯುಧಗಳಿಗೆ ಪೂಜೆ; ಅಂದು ವಿಶೇಷ ಬಲಿ. ಆ ಹೊತ್ತಿಗೆ ಎಲ್ಲರೂ ಕಪ್ಪಕಾಣಿಕೆ ಗಳನ್ನೊಪ್ಪಿಸುವುದು ಮುಗಿದಿರುತ್ತಿತ್ತು. ಚೈತ್ರಯಾತ್ರೆಗೆ ಪೂರ್ಣ ಸಿದ್ಧತೆ ನಡೆದಂತಾಗುತ್ತಿತ್ತು.

ದಸರ ಗೊಂಬೆಗಳು

ವಿಜಯನಗರ ಸಾಮ್ರಾಜ್ಯ ಕೊನೆಗೊಂಡ ಅನಂತರ ಇಂಥ ವೈಭವದ ಉತ್ಸವಗಳನ್ನು ಪುನರುಜ್ಜೀವನಗೊಳಿಸಿದವರು ಮೈಸೂರಿನ ಒಡೆಯರು. ಮೊದಲಿನ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ನಡೆಯುತ್ತಿದ್ದ ದಸರ ಉತ್ಸವದ ಸಂಭ್ರಮ ಹಲವು ಗ್ರಂಥಗಳಲ್ಲಿ ವರ್ಣಿತವಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಜಂಬೂಸವಾರಿ ನಡೆಸುತ್ತಿದ್ದುದನ್ನು ಜಗನ್ಮೋಹನ ಬಂಗಲೆಯ ಗೋಡೆಯೊಂದರ ಮೇಲೆ ಚಿತ್ರಿಸಿದೆ. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಈ ವೈಭವ, ಆಡಂಬರ ಪರಾಕಾಷ್ಠೆಯನ್ನು ಮುಟ್ಟಿತ್ತು.

ವಿಜಯನಗರದ ಅರಸರು ನಡೆಸುತ್ತಿದ್ದ ಉತ್ಸವದ ಮಾದರಿಯನ್ನೇ ಬಹುತೇಕ ಮೈಸೂರರಸರೂ ಅನುಕರಿಸಿದರು. ದಸರೆಯ ಹತ್ತು ದಿನಗಳಲ್ಲೂ ಅರಮನೆಯಲ್ಲೂ ದೇವಾಲಯಗಳಲ್ಲೂ ವಿಶೇಷ ಪೂಜೆಗಳು ನಡೆಯುತ್ತಿದ್ದವು. ಮೊದಲ ದಿನ ಬೆಳಗ್ಗೆ ಮಹಾರಾಜರು ಅರಮನೆಯ ಮುಂಭಾಗದ ಸಜ್ಜೆಯಲ್ಲಿದ್ದ ರತ್ನಸಿಂಹಾಸನವನ್ನು 21 ಕುಶಾಲುತೋಪುಗಳು ಮೊಳಗುತ್ತಿರುವಂತೆ ಅಲಂಕರಿಸಿ ದರ್ಬಾರನ್ನು ನಡೆಸುತ್ತಿದ್ದರು. ಮುಂದಿನ ಬಯಲಿನಲ್ಲಿ ಸೈನ್ಯಗಳ ಕವಾಯತು, ದೇವಾಲಯ ಮಠಗಳಿಂದ, ಋತ್ವಿಜರಿಂದ ಆಶೀರ್ವಚನ, ಅಧಿಕಾರಿಗಳು, ಪುರಪ್ರಮುಖರಿಂದ ನಜರನ್ನು ಒಪ್ಪಿಸುವುದು, ಮಲ್ಲಯುದ್ಧ ಮುಂತಾದುವು ಜರುಗಿದ ಮೇಲೆ ಅರಮನೆಯ ಮಹಿಳೆಯರು ದೊರೆಗೆ ಗೌರವವನ್ನರ್ಪಿಸುತ್ತಿದ್ದರು. ಅಲ್ಲಿಗೆ ದರ್ಬಾರು ಮುಗಿಯುತ್ತಿತ್ತು. ಅನಂತರ ಪ್ರತಿದಿನ ಸಂಜೆ ಇದೇ ರೀತಿಯ ಕಾರ್ಯಕ್ರಮ ಮಹಾನವಮಿಯವರೆಗೂ ಇರುತ್ತಿತ್ತು. ಈ ದಿನಗಳಲ್ಲಿ ರಾತ್ರಿಯ ವೇಳೆ ಅರಮನೆ ದೀಪಾಲಂಕಾರಗಳಿಂದ ಝಗಝಗಿಸುತ್ತಿತ್ತು. ನವಮಿಯ ದಿನ ಬೆಳಗ್ಗೆ ಪಟ್ಟದಕತ್ತಿ, ಪಟ್ಟದ ಆನೆ, ಪಟ್ಟದ ಕುದುರೆ ಮುಂತಾದುವು ಉತ್ಸವದಲ್ಲಿ ಅರಮನೆಯ ಮುಂದೆ ಬಂದಾಗ ಮಹಾರಾಜರು ಅವುಗಳಿಗೆ ಪೂಜೆ ಸಲ್ಲಿಸುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ನವಮಿಯ ದಿನ ಸಂಜೆ ಐರೋಪ್ಯ ಅತಿಥಿಗಳಿಗಾಗಿ ವಿಶೇಷ ದರ್ಬಾರ್ ನಡೆಯುತ್ತಿತ್ತು. ದಶಮಿಯ ದಿನದಂದು ಬೆಳಗ್ಗೆ ಪಟ್ಟದ ಕತ್ತಿ, ಕುದುರೆ, ಆನೆ ಮೊದಲಾದವು ಬನ್ನಿಮಂಟಪಕ್ಕೆ ತೆರಳುತ್ತಿದ್ದುವು. ಅಂದು ಸಂಜೆ ಜಗತ್ಪ್ರಸಿದ್ಧವಾದ, ವೈಭವೋಪೇತವಾದ ಜಂಬೂಸವಾರಿ. ಮಹಾರಾಜರು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಸಕಲ ಮರ್ಯಾದೆಗಳೊಡನೆ ಬನ್ನಿಮಂಟಪದ ಕಡೆ ರಾಜಬೀದಿಗಳಲ್ಲಿ ಮೆರವಣಿಗೆ ಹೊರಡುತ್ತಿದ್ದುದು ಕಣ್ಣಿಗೊಂದು ಹಬ್ಬವಾಗಿತ್ತು. ಇಡೀ ಮೈಸೂರು ನಗರವೇ ಸಂಭ್ರಮಪಡುತ್ತಿತ್ತು. ಈ ಉತ್ಸವವನ್ನು ನೋಡಲಿಕ್ಕೆಂದೇ ಲಕ್ಷಾಂತರ ಜನ ದೇಶದೇಶಾಂತರಗಳಿಂದ ಬರುತ್ತಿದ್ದರು. ಬನ್ನಿಯ ಮಂಟಪವನ್ನು ತಲುಪಿದ ಮೇಲೆ ಮಹಾರಾಜರು ಆನೆಯಿಂದಿಳಿದು ಕುದುರೆಯ ಮೇಲೆ ಕುಳಿತು ಸೈನ್ಯದ ಪರಿವೀಕ್ಷಣೆ ನಡೆಸುತ್ತಿದ್ದರು. ವಿಜಯನಗರದರಸರ ಕಾಲದಲ್ಲಿ ನಿಜವಾಗಿ ನಡೆಯುತ್ತಿದ್ದ ಕಪ್ಪಕಾಣಿಕೆಗಳ ಸಮರ್ಪಣೆ, ಸೈನ್ಯಗಳ ಪರಿವೀಕ್ಷಣೆ ಅಖಾಡದಲ್ಲಿ ಜೀವದ ಹಂಗು ತೊರೆದು ಜಿದ್ದಾಜಿದ್ದಿನಿಂದ ನಡೆಸುತ್ತಿದ್ದ ಮಲ್ಲಯುದ್ಧ ಮೊದಲಾದುವು ಮೈಸೂರರಸರಲ್ಲಿ ಸಾಂಕೇತಿಕವಾಗಿ ಉಳಿದುಕೊಂಡು ಬಂದಿದ್ದುವು.

ಕೇವಲ ಅರಸರ ವೈಭವದ ಪ್ರದರ್ಶನವಷ್ಟೇ ಆಗಿದ್ದಿದ್ದರೆ ಬಹುಶಃ ಈ ಹಬ್ಬಕ್ಕೆ ಹೆಚ್ಚು ಪ್ರಾಮುಖ್ಯ ಬರುತ್ತಿರಲಿಲ್ಲವೇನೊ. ಕರ್ನಾಟಕದ ಜನತೆಯೂ ಈ ಹಬ್ಬವನ್ನು ಅಷ್ಟೇ ಉತ್ಸಾಹದಿಂದ ಆಚರಿಸುತ್ತಿದ್ದರು. ವಿಜಯನಗರದ ರಾಜಧಾನಿಯಲ್ಲಿ ಮಹಾನವಮಿಯ ಉತ್ಸವಕ್ಕಾಗಿ ಪ್ರತಿ ಮನೆಯ ಮುಂದೆಯೂ ಬೆಲೆ ಬಾಳುವ ಬಟ್ಟೆಗಳಿಂದ ಅಲಂಕರಿಸಿದ ಮಂಟಪಗಳನ್ನೂ ತೋರಣಗಳನ್ನೂ ನಿರ್ಮಿಸುತ್ತಿದ್ದುದನ್ನು ನಿಕೊಲೊ ಕೊಂಟಿ ವರ್ಣಿಸುತ್ತಾನೆ. ಪ್ರತಿ ಮನೆಯಲ್ಲಿಯೂ ಗೊಂಬೆಗಳನ್ನು ಕೂಡಿಸಿ ರಾಜರು ನಡೆಸುತ್ತಿದ್ದ ದರ್ಬಾರುಗಳ ಅನುಕರಣೆಯ ಪ್ರದರ್ಶನಗಳನ್ನು ಅವುಗಳ ಮೂಲಕ ಏರ್ಪಡಿಸುತ್ತಿದ್ದರು. ಗೊಂಬೆಗಳನ್ನು ಕೃತಕವಾದ ಅಲಂಕರಣಗಳು ವಸ್ತ್ರಗಳಿಂದ ಸಿಂಗರಿಸಿ ರಾಜರ, ಅಧಿಕಾರಿಗಳ, ಸೈನ್ಯಗಳ, ಜನಸಾಮಾನ್ಯರ ಪ್ರತೀಕಗಳಾಗಿ ಜನಜೀವನವನ್ನು ಪ್ರತಿಬಿಂಬಿಸುವಂತೆ ಜೋಡಿಸುವುದರಿಂದ ತಮ್ಮ ಕಲೆಗಾರಿಕೆಯ ಜಾಣ್ಮೆಯನ್ನು ಹೊರಗೆಡವುತ್ತಿದ್ದರು. ಹೆಣ್ಣು ಮಕ್ಕಳಿಗೆ

ದಸರ ಮೆರವಣಿಗೆಯಲ್ಲಿ ಸಾಗುತ್ತಿರುವ ಆನೆಗಳು

ಇದೊಂದು ಸಡಗರ. ರಾಮಾಯಣ, ಭಾರತಗಳ ದೃಶ್ಯಾವಳಿಯನ್ನು ಪ್ರದರ್ಶಿಸುತ್ತಿದ್ದುದೂ ಉಂಟು. ಜನಪದ ಕಲೆಗೆ ಇದರಿಂದ ದೊರೆತ

ಪ್ರೋತ್ಸಾಹ ಅಪರಿಮಿತ. ದಸರೆಯ ಹತ್ತುದಿನಗಳಲ್ಲಿಯೂ ಹೆಣ್ಣುಮಕ್ಕಳು ಮನೆ ಮನೆಗೂ ಹೋಗಿ ಈ ಪ್ರದರ್ಶನವನ್ನು ನೋಡುವುದು, ಹಾಡು ಹೇಳಿ ತಿಂಡಿ ಗಿಟ್ಟಿಸಿಕೊಂಡು ಬರುವುದು ಪದ್ಧತಿಯಾಗಿತ್ತು. ಕೋಲು ಹೊಯ್ದು ಕುಣಿಯುತ್ತಿದ್ದುದೂ ಉಂಟು. ಈಚೆಗೆ ಈ ಉತ್ಸಾಹ ಕಡಿಮೆಯಾಗುತ್ತಿದೆ. ಪಟ್ಟಣಗಳಲ್ಲಂತೂ ಅಪರೂಪವೆನ್ನಿಸುತ್ತಿದೆ.

ಚಿನ್ನದ ಅಂಬಾರಿಯಲ್ಲಿ ದೇವಿ ಚಾಮುಂಡೇಶ್ವರಿ

ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕೂಲಿಮಠಗಳಿದ್ದ ಕಡೆ ಶಾಲೆಗೆ ಸೂಟಿ, ಉಪಾಧ್ಯಾಯರಿಗೆ ವಿದ್ಯಾರ್ಥಿಗಳಿಂದ, ಊರವರಿಂದ ವಿಶೇಷ ಸನ್ಮಾನ. ಹುಡುಗರು, ಉಪಾಧ್ಯಾಯರನ್ನು ಮುಂದಿಟ್ಟುಕೊಂಡು ಮನೆಮನೆಗೂ ಹೋಗಿ ಆಶ್ವೀಜ ಶುದ್ಧ ಮಾನವಮಿ ಬರಲೆಂದು ಲೇಸಾಗಿ ಹರಸಿದೆವು ಬಾಲಕರು ಬಂದು ಎಂದು ಮುಂತಾಗಿ ಹಾಡುತ್ತ ಧನ ಧಾನ್ಯಗಳನ್ನು ಸಂಗ್ರಹಿಸಿ ಉಪಾಧ್ಯಾಯರಿಗೆ ಮರ್ಯಾದೆ ಸಲ್ಲಿಸುತ್ತಿದ್ದರು. ಈ ಹತ್ತು ದಿನಗಳೂ ಹಬ್ಬವನ್ನಾಚರಿಸುವುದಲ್ಲದೆ ಸಪ್ತಮಿ ಮೂಲಾನಕ್ಷತ್ರದಂದು ಸರಸ್ವತಿಯ ಪೂಜೆಯನ್ನೂ ಅಷ್ಟಮಿಯಂದು ದುರ್ಗಾಪೂಜೆಯನ್ನೂ ನವಮಿಯಂದು ಆಯುಧಪೂಜೆಯನ್ನೂ ನಡೆಸುವುದು ಪದ್ಧತಿ. ರಾಜರೂ ಅವರ ಸೈನಿಕರೂ ಶತ್ರುನಿಗ್ರಹಕ್ಕಾಗಿ ಉಪಯೋಗಿಸುವ ಆಯುಧಗಳನ್ನು ಪೂಜಿಸುತ್ತಿದ್ದರೆ ಸಾಮಾನ್ಯ ಜನತೆ ತಮ್ಮ ಜೀವನಕ್ಕೆ ದಾರಿ ಮಾಡಿಕೊಡುವ ನೇಗಿಲು, ಕೊಡಲಿ, ಕುಡುಗೋಲು ಮುಂತಾದುವನ್ನು ವಿಶೇಷ ಆಸಕ್ತಿಯಿಂದ ಪೂಜಿಸುತ್ತಾರೆ. ಇದೇ ರೀತಿ ಯಂತ್ರಗಳನ್ನು ಪೂಜಿಸುವ ಪದ್ಧತಿಯೂ ಬೆಳೆದಿದೆ. ವಿಜಯದಶಮಿಯಂದು ಬನ್ನಿ ಮುಡಿಯುವುದು ಒಂದು ವಿಶೇಷ ಆಚರಣೆ. ಗ್ರಾಮ ದೇವತೆಗಳನ್ನೆಲ್ಲ ಆಂಜನೇಯ ಅಥವಾ ಬೇರೆ ದೇವರ ಮುಂದಾಳುತನದಲ್ಲಿ ಉತ್ಸವದಲ್ಲಿ ಕರೆತಂದು ಊರ ಮುಂದೆ ಬನ್ನಿ ಮರದ ಬಳಿ ಸೇರುವುದುಂಟು. ಸುತ್ತಮುತ್ತಲ ಹತ್ತಾರು ಗ್ರಾಮಗಳಿಂದ ದೇವತೆಗಳ ಉತ್ಸವವನ್ನು ನಡೆಸಿಕೊಂಡು ಬಂದು ಇಂಥ ಕಡೆ ಕೂಡಿಕೊಳ್ಳುವುದೂ ಇದೆ. ದೇವರುಗಳಿಗೆ ಪೂಜೆ ಮಂಗಳಾರತಿಗಳಾದ ಅನಂತರ ಅಲ್ಲಿ ನೆರೆದ ಜನರು ಒಬ್ಬರಿಗೊಬ್ಬರು ಬನ್ನಿಯ ಸೊಪ್ಪನ್ನು ವಿನಿಮಯ ಮಾಡಿಕೊಂಡು ಹಿರಿಯರಿಂದ ಆಶೀರ್ವಾದ ಪಡೆಯುವುದು, ಇತರರಿಗೆ ಶುಭ ಕೋರುವುದು ನಡೆಯುತ್ತದೆ. ಹೀಗೆ ಮಾಡುವಾಗ ಶಮೀ ಶಮಯತೇ ಪಾಪಂ ಶಮೀ ಶತ್ರುನಿವಾರಣಂ ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶನಂ ಎಂದು ಹೇಳುವುದು ವಾಡಿಕೆ. ಶಮಿಯ ದರ್ಶನ ಶುಭಪ್ರದವೆಂಬ ನಂಬಿಕೆ ಇದೆ.

ಮೈಸೂರಿನಲ್ಲಿ ಒಡೆಯರ ಆಡಳಿತ ಕೊನೆಗೊಂಡ ಮೇಲೆ ರಾಜದರ್ಬಾರು, ಜಂಬೂಸವಾರಿ ಮುಂತಾದುವು ನಿಂತುಹೋದುವು. ಕೆಲವು ವರ್ಷಗಳ ಕಾಲ ಮಾಜಿ ಅರಸರು ಸ್ವಂತವಾಗಿ ಈ ಉತ್ಸವಗಳನ್ನು ನಡೆಸಿದರೂ ಅದರ ಹಿಂದಿನ ವೈಭವ ಉಳಿಯದಾಯಿತು. ಪ್ರವಾಸಿಗಳನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದ ಈ ನಗರದ ಆಕರ್ಷಣೆಯನ್ನುಳಿಸಿಕೊಳ್ಳಲು ಹಿಂದಿನಿಂದ ನಡೆದುಬರುತ್ತಿದ್ದ ವಸ್ತುಪ್ರದರ್ಶನ, ಅರಮನೆಯ ದೀಪಾಲಂಕಾರಗಳನ್ನು ಉಳಿಸಿಕೊಂಡು ಬಂದುದಲ್ಲದೆ ಈಗ ಜಂಬೂಸವಾರಿಗೆ ಬದಲು ಅದೇ ರೀತಿಯಲ್ಲಿ ಭುವನೇಶ್ವರಿಯ ಅಥವಾ ಚಾಮುಂಡೇಶ್ವರಿಯ ಮೆರವಣಿಗೆ ನಡೆಸಲಾಗುತ್ತದೆ. ಇದು ಜನತಾ ದಸರೆಯಾಗಿ ಮಾರ್ಪಾಟು ಗೊಂಡಿದೆ. ಜಂಬೂಸವಾರಿಯ ಮುಂದೆ ತೆರಳುತ್ತಿದ್ದ ಭವ್ಯ ಸೈನ್ಯದ ಮೆರವಣಿಗೆಯ ಬದಲು ಈಗ ದೇಶದ ಸಂಸ್ಕೃತಿ ನಾಡು ನುಡಿಯ ಬೆಳೆವಣಿಗೆಗಳನ್ನು ಪ್ರತಿನಿಧಿಸುವ ಸ್ತಬ್ಧಚಿತ್ರಗಳು, ಸ್ವಯಂಸೇವಕ ದಳಗಳು, ಜನಪದ ಕಲಾವಿದರು ಮುಂತಾದವರ ಮೆರವಣಿಗೆ ನಡೆಯುತ್ತದೆ. ಶೃಂಗೇರಿಯಲ್ಲಿ ನಡೆಯುವ ದಸರ ಧಾರ್ಮಿಕ ಪೂಜಾದಿ ಸೇವೆಗಳ ಜೊತೆಗೆ ಕಿರೀಟಧಾರಿಯಾಗಿ ಸ್ವಾಮೀಜಿ ಸಿಂಹಾಸನದ ಮೇಲೆ ಕುಳಿತು ದರ್ಬಾರು ನಡೆಸುವ ವಿಧಿಯೂ ನಡೆದುಕೊಂಡು ಬಂದಿದೆ. ಶಕ್ತಿ ದೇವತೆಗಳಿರುವ ಹಲವು ಕಡೆ ನವರಾತ್ರಿ ಉತ್ಸವ ನಡೆಯುತ್ತದೆ. (ಎಂ.ಎಚ್.)

**ದಾಂಡೇಲಿ:** ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ಹಳಿಯಾಳದ ನೈಋತ್ಯಕ್ಕೆ 22ಕಿಮೀ. ದೂರದಲ್ಲಿ ಕಾಳಿನದಿಯ ಎಡದಂಡೆಯ ಮೇಲಿರುವ ಒಂದು ಊರು. ಉದ್ಯಮ ಕೇಂದ್ರ. ಜನಸಂಖ್ಯೆ 53,287 ಧಾರವಾಡದಿಂದ ದಾಂಡೇಲಿಗೆ ಅಳ್ಣಾವರ ಮೂಲಕ ರೈಲು ಸಂಪರ್ಕವಿದೆ. ತಾಲ್ಲೂಕಿನ ಪ್ರಮುಖ ಊರುಗಳೊಂದಿಗೆ ಉತ್ತಮ ರಸ್ತೆಗಳಿದ್ದು ವಾಹನಸಂಪರ್ಕವಿದೆ.

ದಾಂಡೇಲಿ ಸಾಕಷ್ಟು ನಿಸರ್ಗಸಂಪತ್ತನ್ನೊಳಗೊಂಡು ಅರಣ್ಯ ಮೂಲ ಉದ್ಯಮಗಳಿಗೆ ಅನುಕೂಲವಿದೆ. ಇಲ್ಲಿನ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ಲಿಮಿಟೆಡ್ ಕಾಗದ ಕಾರ್ಖಾನೆ 1955ರಲ್ಲಿ ಸ್ಥಾಪಿತವಾಗಿದ್ದು. ಇದರ ಮುಖ್ಯ ಕಚೇರಿ ದಾಂಡೇಲಿಯ ಬಾಂಗೂರ್ ನಗರದಲ್ಲಿದ್ದು ಆಡಳಿತ ಕಚೇರಿ ಮುಂಬಯಿಯಲ್ಲಿದೆ.

ಇಂಡಿಯನ್ ಪ್ಲೈವುಡ್ ಕಾರ್ಖಾನೆ 1944ರಲ್ಲಿ ಸ್ಥಾಪಿತವಾದದ್ದು. ಇಂದು ಈ ಕಾರ್ಖಾನೆಯ ಶಾಖೆಗಳು ಧಾರವಾಡ, ತಾಳಗುಪ್ಪ, ಸುಬ್ರಹ್ಮಣ್ಯ (ದ.ಕ.) ಹಂಗಾರಕಟ್ಟೆ, ಅಹಮದಾಬಾದ್, ಇಟಾರ್ಸಿ (ಮಧ್ಯಪ್ರದೇಶ), ಮುಂಬಯಿಗಳಲ್ಲಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಯುಕ್ತ ಸಹಾಯದಿಂದ ಪ್ರಾರಂಭವಾಗಿದೆ. ಈ ಸಂಸ್ಥೆ ಎಲ್ಲ ವಿಧವಾದ ಪ್ಲೈವುಡ್ ಉತ್ಪಾದಿಸುತ್ತಿದ್ದು ಚಿಪ್‌ಬೋರ್ಡ್ ಕಾರ್ಖಾನೆಯನ್ನೂ ಸ್ಥಾಪಿಸಲಾಗಿದೆ. ಈ ಕಂಪನಿಯ ಮುಖ್ಯ ಕಚೇರಿ ಮುಂಬಯಿಯಲ್ಲಿದೆ.

ಇಲ್ಲಿನ ಫೆರೊ ಮ್ಯಾಂಗನೀಸ್ ಕಾರ್ಖಾನೆ ನಮ್ಮ ದೇಶದಲ್ಲಿ 1956ರಲ್ಲಿ ಸ್ಥಾಪಿಸಲ್ಪಟ್ಟ ಪ್ರಥಮ ಫೆರೊ ಮ್ಯಾಂಗನೀಸ್ ಕಾರ್ಖಾನೆ. ಇಲ್ಲಿ ತಯಾರಾಗುವ ಫೆರೊ ಮ್ಯಾಂಗನೀಸ್ ವಿಶ್ವದಲ್ಲೇ ಅತ್ಯುತ್ತಮವೆಂದು ಪರಿಗಣಿಸಲಾಗಿದೆ. ಇಲ್ಲಿ ಸರ್ಕಾರಿ ಕಟ್ಟಿಗೆ ಕೊರೆಯುವ ಕಾರ್ಖಾನೆ ಸಹ ಇದೆ. ಮೇಲಿನ ಮೂರು ಸ್ವಂತ ಉದ್ದಿಮೆಗಳಾದರೆ ಇದು ಸರ್ಕಾರಿ ಅರಣ್ಯ ಇಲಾಖೆಗೆ ಸೇರಿದೆ. ಈ ಕಾರ್ಖಾನೆಗೆ ಬೇಕಾದ ಕಚ್ಚಾ ಸರಕುಗಳನ್ನು ದಾಂಡೇಲಿಯ ಕಟ್ಟಿಗೆ ಡಿಪೋ ಒದಗಿಸುತ್ತಿದ್ದು. ಈಗ ಇಲ್ಲಿ ರೈಲ್ವೆ ಸ್ಲಿಪರ್ಸ್ ಸಹ ತಯಾರಿಸಲಾಗುತ್ತಿದೆ.

ಕಾಳಿ ಜಲವಿದ್ಯುತ್ ಯೋಜನೆಯ ಕೇಂದ್ರವಾದ ಅಂಬಿಕಾನಗರ (ನೋಡಿ) 22 ಕಿಮೀ ದೂರದಲ್ಲಿದ್ದು ದಾಂಡೇಲಿಯದೇ ಇನ್ನೊಂದು ಭಾಗವೆಂದು ಪರಿಗಣಿಸಲ್ಪಡುತ್ತಿದೆ.

ದಾಂಡೇಲಿಯ ಸುತ್ತಲಿರುವ ಕಾಳಿನದಿಯ ನಿಸರ್ಗಸೌಂದರ್ಯವಲ್ಲದೆ ಇತರ ಕೆಲವು ಆಕರ್ಷಣೆಗಳಲ್ಲಿ ಕಾವಲಾ ಗುಹೆಗಳು, ವಿಂಚೋಲಿ ಧಬಧಬೆ, ನಾಗರಝರಿ ಕಣಿವೆ, ಸಿಂಥೆರಿರಾಕ್ಸ್, ಹೌರಾ ಮಾದರಿಯ ಗುಂದದ ಪ್ರಾಚೀನ ತೂಗುಸೇತುವೆ ಮತ್ತು ಕಾಳಿ ಬೃಹತ್ ಜಲವಿದ್ಯುತ್ ಯೋಜನೆಯ ಸೈಕ್ಸ್ ಪಾಯಿಂಟ್‌ನ ವಿಹಂಗಮ ನೋಟ - ಇವನ್ನು ಹೆಸರಿಸಬಹುದು. ದಾಂಡೇಲಿ ಅರಣ್ಯ ವನ್ಯಮೃಗ ರಕ್ಷಣಾ ಕೇಂದ್ರದಲ್ಲಿ ಆನೆ, ಕಾಡುಕೋಣ, ಹುಲಿ, ಚಿರತೆ, ಸಾಂಬಾರ್ ಜಿಂಕೆ ಮೊದಲಾದವುಗಳನ್ನು ನೋಡಬಹುದು.

ಪಾಂಡವರು ತಮ್ಮ ವನವಾಸ ಮತ್ತು ಅಜ್ಞಾತವಾಸಗಳಲ್ಲಿ ವಾಸಿಸಿದ ದಂಡಕ ಅರಣ್ಯ ದಾಂಡೇಲಿಯಾಗಿದೆ ಎಂದು ಪುರಾಣಗಳು ಹೇಳುತ್ತವೆ. ಕದಂಬರ ರಾಜ್ಯಕ್ಕೆ ಸೇರಿದ್ದು, ಮಹಾರಾಣಿಯ ಕೋರಿಕೆಯಂತೆ ಕಟ್ಟಲಾದುದೆನ್ನುವ ಕೋಟೆಯೊಂದು ಇಲ್ಲಿತ್ತು. ಕರಿಹೊಳೆಯ ಕಾಲಿ ಅಂಚಿನ ಹಿರೇಬಿದರವಳ್ಳಿಯ ಈ ಕೋಟೆ ಇಂದು ಕಾಳಿನದಿಯ ಗರ್ಭ ಸೇರಿದೆ. (ಪಿ.ಎನ್.ಬಿ.)

**ದಾವಣಗೆರೆ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ. 1997ರಲ್ಲಿ ಜಿಲ್ಲಾ ಪುನರ್ವಿಂಗಡಣೆಯಾದಾಗ ಈ ಜಿಲ್ಲೆ ಅಸ್ತಿತ್ವಕ್ಕೆ ಬಂತು. ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲ್ಲೂಕುಗಳನ್ನು ಹಿಂದಿನ ಚಿತ್ರದುರ್ಗ ಜಿಲ್ಲೆಯಿಂದಲೂ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳನ್ನು ಶಿವಮೊಗ್ಗ ಜಿಲ್ಲೆಯಿಂದಲೂ ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಯಿಂದಲೂ ತೆಗೆದುಕೊಂಡು ಆರು ತಾಲ್ಲೂಕುಗಳಿರುವ ಈ ಹೊಸ ಜಿಲ್ಲೆ ರಚಿಸಲಾಗಿದೆ. ಈ ಜಿಲ್ಲೆಯನ್ನು ಉತ್ತರದಲ್ಲಿ ಬಳ್ಳಾರಿ, ಪೂರ್ವದಲ್ಲಿ ಚಿತ್ರದುರ್ಗ, ದಕ್ಷಿಣದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು, ಪಶ್ಚಿಮದಲ್ಲಿ ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳು ಸುತ್ತುವರಿದಿವೆ. ಜಿಲ್ಲೆಯ ವಿಸ್ತೀರ್ಣ 6018ಚಕಿಮೀ. ಹೋಬಳಿಗಳು 24 ಗ್ರಾಮಗಳು, 786. ಜನಸಂಖ್ಯೆ 15,59,222.

**ಭೌತಿಕ ಲಕ್ಷಣಗಳು :** ಪೂರ್ವ ಮತ್ತು ಪಶ್ಚಿಮ ಬೆಟ್ಟಶ್ರೇಣಿಗಳ ನಡುವಿರುವ ಈ ಜಿಲ್ಲೆ ಹೆಚ್ಚು ಎತ್ತರವಲ್ಲದ ಗುಡ್ಡಬೆಟ್ಟಗಳಿಂದ ಮತ್ತು ಸಮತಟ್ಟಾದ ಬಯಲುಗಳಿಂದ ಕೂಡಿದೆ. ಉತ್ತರಕ್ಕೆ ಮತ್ತು ಈಶಾನ್ಯಕ್ಕೆ ಇಳಿಜಾರಾಗಿರುವ ದಖನ್ ಪ್ರಸ್ಥಭೂಮಿಯಲ್ಲಿರುವ ಈ ಜಿಲ್ಲೆ ಒಣ ಪ್ರದೇಶದ ವಲಯದೊಳಗೆ ಬರುತ್ತದೆ. ಇಲ್ಲಿನ ಬಯಲುಗಳ ನಡುವೆ ಸು. 30ಕಿಮೀ ಅಂತರದಲ್ಲಿ ಕಡಿಮೆ ಎತ್ತರದ ಸಮಾನಾಂತವಾಗಿ ವಾಯವ್ಯ ಆಗ್ನೇಯಾಭಿಮುಖವಾಗಿ ಹಬ್ಬಿದ ಬೆಟ್ಟ ಸಾಲುಗಳಿವೆ. ಈ ಬೆಟ್ಟ ಸಾಲುಗಳ ನಡುವೆ ನದಿ ಕಣಿವೆಗಳು ಕಂಡುಬರುತ್ತವೆ. ಚನ್ನಗಿರಿಪಟ್ಟಣ 671ಮೀ ಎತ್ತರವಿರುವ ಒಂದು ಬೆಟ್ಟ ಸಮೂಹದ ಮೇಲಿದೆ. ಹೊನ್ನಾಳಿ 549ಮೀ ಎತ್ತರದಲ್ಲಿದೆ. ಚನ್ನಗಿರಿ ತಾಲ್ಲೂಕಿನ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಗುಡ್ಡ ಸಾಲುಗಳು ಹಬ್ಬಿವೆ. ಹೊನ್ನಾಳಿ ತಾಲ್ಲೂಕಿನ ಕಲ್ವರಂಗನಗಿರಿ 1031ಮೀ ಎತ್ತರವಿದೆ. ಇದು ಜಿಲ್ಲೆಯ ಹೆಚ್ಚು ಎತ್ತರದ ಶಿಖರ. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ದಕ್ಷಿಣದಿಂದ ಉತ್ತರಕ್ಕೆ ತುಂಗಭದ್ರಾ ನದಿ ಹರಿದರೆ ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಯಲ್ಲಿ ವೇದಾವತಿ ನದಿ ಹರಿಯುತ್ತದೆ. ಮಧ್ಯದಲ್ಲಿ ಜನಗಹಳ್ಳ ಅಥವಾ ಚಿಕ್ಕಹಗರಿಹಳ್ಳ ಹರಿಯುತ್ತದೆ. ಇಲ್ಲಿ ಭೂಮಿಯ ಏರುತಗ್ಗುಗಳು ಈ ನದಿ ಕಣಿವೆಗಳ ಜಾಡಿನಲ್ಲೇ ರೂಪುಗೊಂಡಿವೆ.

ಹೊಸದುರ್ಗದಿಂದ ಪ್ರಾರಂಭವಾಗುವ ಬೆಟ್ಟಸಾಲು ಮಾಯಕೊಂಡದ ಮೂಲಕ ದಾವಣಗೆರೆ ತಾಲ್ಲೂಕಿನಲ್ಲಿ ಅಣಜಿವರೆಗೆ ಹಬ್ಬಿದೆ. ದಾವಣಗೆರೆ ತಾಲ್ಲೂಕಿನ ಮಾಯಾಕೊಂಡದ ಬಳಿ ಮತ್ತು ಹರಪನಹಳ್ಳಿ ದಕ್ಷಿಣ ಭಾಗದಲ್ಲಿ ಬೆಟ್ಟ ಸಮೂಹಗಳಿವೆ. ಇಲ್ಲಿನ ಬೆಟ್ಟಗುಡ್ಡಗಳು ಹೆಚ್ಚಾಗಿ ಕಲ್ಲು ಬಂಡೆಗಳಿಂದ ಕೂಡಿವೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಮಲ್ಲಪ್ಪನಗುಡ್ಡ ಶ್ರೇಣಿ ಮತ್ತು ಉತ್ತರಕ್ಕೆ ಕಲ್ಲಹಳ್ಳಗುಡ್ಡ ಶ್ರೇಣಿ ಇವೆ. ಕಲ್ಲಹಳ್ಳಗುಡ್ಡ ಸು.845ಮೀ ಎತ್ತರವಿದೆ. ಚಿಕ್ಕಹಗರಿ ನದಿ ಕಣಿವೆಯಲ್ಲಿರುವ ಶಿಖರ 853ಮೀ ಎತ್ತರವಿದೆ. ಈ ಶ್ರೇಣಿಯಲ್ಲೇ ತೆಲಿಗಿಗುಡ್ಡವಿದೆ. ಹರಪನಹಳ್ಳಿ ಪಟ್ಟಣದ ದಕ್ಷಿಣಕ್ಕೆ ನರಸಿಂಹದೇವರಗುಡ್ಡ (820ಮೀ), ಐತಿಹಾಸಿಕ ಉಚ್ಚಂಗಿದುರ್ಗ (861ಮೀ) ಇವೆ. ಈ ಜಿಲ್ಲೆಯಲ್ಲಿ ಹೆಚ್ಚಾಗಿ ಕುರುಚಲು ಕಾಡುಗಳಿವೆ. ನೀರಾವರಿ ಹೊಂದಿದ ಗದ್ದೆ ಬಯಲುಗಳಿವೆ. ಯಥೇಚ್ಛ ಹುಲ್ಲುಗಾವಲುಗಳು ಕಂಡುಬರುತ್ತವೆ.

ಖನಿಜ ಸಂಪತ್ತು: ಧಾರವಾಡ ಶಿಲಾವರ್ಗ ಮತ್ತು ಗ್ರ್ಯಾನೈಟ್ ಗುಡ್ಡಗಳು ಇಲ್ಲಿ ಹಾಸುಹೊಕ್ಕಾಗಿವೆ. ಭೂಗರ್ಭ ಕ್ರಿಸ್ಟಲೇನ್ ಶಿಲಾವರ್ಗ ಮತ್ತು ಗ್ರ್ಯಾನೈಟ್ ಬೆಣಚುಕಲ್ಲಿನಿಂದ ಕೂಡಿದೆ. ಕಣಶಿಲೆಗಳು, ಧಾರವಾಡ ಶ್ರೇಣಿ ಕಲ್ಲುಗಳು ಹೆಚ್ಚಾಗಿವೆ. ಈ ಶಿಲಾ ಹಂದರ ಭಾರತದ ಅತ್ಯಂತ ಪ್ರಾಚೀನ ಶಿಲಾ ರಚನೆಗೆ ಸೇರಿದವು. ಈ ವಲಯ ಚಿತ್ರದುರ್ಗ ಶಿಲಾವಲಯವೆಂದೇ ಪರಿಗಣಿತವಾಗಿದೆ. ಜ್ವಾಲಾಮುಖಿಯ ಲಾವಾ ರಚನೆಗಳೂ ಅಲ್ಲಲ್ಲಿ ಕಂಡುಬರುತ್ತವೆ. ಇಲ್ಲಿನ ಗ್ರ್ಯಾನೈಟ್ ಶಿಲಾವಲಯ ಹೆಚ್ಚಾಗಿ ನಸು ನೇರಳೆ ಮತ್ತು ಬೂದು ಬಣ್ಣದ್ದು.

ಜಿಲ್ಲೆ ಅಮೂಲ್ಯವಾದ ಖನಿಜ ಸಂಪತ್ತಿನಿಂದ ಕೂಡಿದೆ. ಕಾರ್ಡಿಯರೆಟ್, ಸಿಲಿನಮೈಟ್ ಅಥವಾ ಕಯೊನೈಟ್ ಖನಿಜಗಳಿವೆ. ಮಾಯಾಕೊಂಡದ ಬಳಿ ಕಲ್ನಾರು ದೊರೆಯುತ್ತದೆ. ಆಂಟಿಮನಿ, ತಾಮ್ರ, ಕ್ರೋಮೈಟ್ ಮತ್ತು ಚಿನ್ನದ ಅದುರು ಕಂಡುಬರುತ್ತವೆ. ಕೆಲವು ಝರಿಗಳಲ್ಲಿ ಹಿಂದೆ ಚಿನ್ನದ ಅದುರನ್ನು ಆರಿಸಿ ತೆಗೆಯುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ದಾವಣಗೆರೆ ತಾಲ್ಲೂಕಿನ ಹಳೆಕಲ್ಲು, ಜಗಳೂರು ತಾಲ್ಲೂಕಿನ ಹೊನ್ನೆಮರಡಿಗಳು ಚಿನ್ನದ ನಿಕ್ಷೇಪವನ್ನು ಹೊಂದಿವೆ. ಕೆಲವಡೆ

ಕಬ್ಬಿಣದ ಅದುರಿದೆ. ಜಗಳೂರು ತಾಲ್ಲೂಕಿನ ಹೊಸಕೆರೆ ಮತ್ತು ದಾವಣಗೆರೆ ತಾಲ್ಲೂಕಿನ ದೇವರಬಿಳಿಕೆರೆಗಳಲ್ಲಿ ಸುಣ್ಣಕಲ್ಲು ಅಗಾಧ ಪ್ರಮಾಣದಲ್ಲಿದೆ. ಪೂರ್ವೋಕ್ತ ಉಭಯ ತಾಲ್ಲೂಕುಗಳಲ್ಲೂ ಅಲ್ಲಲ್ಲಿ ಮ್ಯಾಂಗನೀಸ್ ಅದುರು ಕಂಡುಬರುತ್ತದೆ. ಮಲೆಬೆನ್ನೂರು ಬಳಿ ಜೇಡಿಮಣ್ಣು ಸಿಗುತ್ತದೆ. ಅನೇಕ ಸ್ಥಳಗಳಲ್ಲಿ ಕಲ್ಲು ಚಪ್ಪಡಿಗಳನ್ನು ತೆಗೆಯಲು ಅನುಕೂಲಕರವಾದ ಅರೆಗಳಿವೆ. ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಸುಣ್ಣದ ಕಲ್ಲು ಹಾಗೂ ಸಾಬೂನು ಕಲ್ಲುಗಳಿವೆ. ಈ ಜಿಲ್ಲೆಯಲ್ಲಿ ಅನೇಕ ಕಲ್ಲುಗಣಿಗಳಿವೆ.

**ನದಿಗಳು :** ಈ ಜಿಲ್ಲೆಯಲ್ಲಿ, ಬೀಳುವ ಮಳೆ ಪ್ರಮಾಣ ಕಡಿಮೆ ಇರುವುದರಿಂದ ಇಲ್ಲಿ ಹುಟ್ಟಿ ಹರಿಯುವ ದೊಡ್ಡ ನದಿಗಳು ಇಲ್ಲ. ಜಲಸಂಪನ್ಮೂಲವೂ ಕಡಿಮೆ. ಜಿಲ್ಲೆಯ ಸರಾಸರಿ ಮಳೆ 629.10 ಮಿಮೀ. ಆದರೆ ಈ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ರಾಜ್ಯದ ಪ್ರಮುಖ ನದಿಗಳಲ್ಲೊಂದಾದ ತುಂಗಭದ್ರಾ ನದಿ ಹರಿಯುತ್ತದೆ. ಶಿವಮೊಗ್ಗ ಜಿಲ್ಲೆಯಿಂದ ಹೊನ್ನಾಳಿ ತಾಲ್ಲೂಕನ್ನು ಪ್ರವೇಶಿಸುವ ಈ ನದಿ ಮುಂದೆ ಹಾವೇರಿ ಜಿಲ್ಲೆ ಮತ್ತು ದಾವಣಗೆರೆ ಜಿಲ್ಲೆಯ ಗಡಿಯಾಗಿ ಪರಿಣಮಿಸುತ್ತದೆ. ಜಗಳೂರು ತಾಲ್ಲೂಕಿನಲ್ಲಿ ಹುಟ್ಟುವ ಜನಗಹಳ್ಳ ಮುಂದೆ ಚಿಕ್ಕಹಗರಿ ಎನಿಸಿಕೊಂಡು ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿದು ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿ ತುಂಗಭದ್ರಾ ಜಲಾಶಯದ ಬಳಿ ಹಿನ್ನೀರನ್ನು ಕೂಡಿಕೊಳ್ಳುತ್ತದೆ. ಹೊಳಲ್ಕೆರೆ ತಾಲ್ಲೂಕಿನ ಪಶ್ಚಿಮದ ಬೆಟ್ಟದಲ್ಲಿ ಹುಟ್ಟುವ ಸ್ಯಾಗಲಹಳ್ಳ ದಾವಣಗೆರೆ ತಾಲ್ಲೂಕಿನ ಮುಖಾಂತರ ಹರಿದು ತುಂಗಭದ್ರಾ ನದಿಯನ್ನು ಹರಿಹರ ಪಟ್ಟಣದ ಹತ್ತಿರ ಸೇರುತ್ತದೆ. ಇದನ್ನು ಹರಿದ್ರಾ ಅಥವಾ ಸೂಳೆಕೆರೆಹಳ್ಳ ಎಂದೂ ಕರೆಯುತ್ತಾರೆ. ಚನ್ನಗಿರಿ ತಾಲ್ಲೂಕಿನಲ್ಲಿ ಹಿರಿಹಳ್ಳಿ ಮತ್ತು ಸೊಪ್ಪಿನಹಳ್ಳಿ ಗಳೆಂಬ ಕಿರುತೊರೆಗಳಿಗೆ ಅಡ್ಡಲಾಗಿ ಸೂಳೆಕೆರೆಯನ್ನು ನಿರ್ಮಿಸಲಾಗಿದೆ. ಜಗಳೂರು ತಾಲ್ಲೂಕಿನಲ್ಲಿ ಅನೇಕ ಕಿರುತೊರೆಗಳು ಹುಟ್ಟಿ ಹರಿಯುತ್ತವೆ.

ಸಸ್ಯವರ್ಗ: ಜಿಲ್ಲೆ ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿರುವುದು, ಭೂಮಿ ಅಲೆಯೋಪಾದಿಯ ಬಯಲಿನಿಂದ ಕೂಡಿರುವುದು, ಅಲ್ಲಲ್ಲಿ ಚಿಕ್ಕಪುಟ್ಟ ಬೆಟ್ಟಸಾಲುಗಳಿರುವುದು ಹೆಚ್ಚಿನ ಸಸ್ಯವರ್ಗದ ಬೆಳವಣಿಗೆಗೆ ಅನುಕೂಲಕರವಾಗಿಲ್ಲ. ಒಂದು ಕಾಲದಲ್ಲಿ ಫಲವತ್ತಾದ ಮಣ್ಣು ಮತ್ತು ತೇವಾಂಶವಿರುವ ಕಣಿವೆಗಳಲ್ಲಿ ಮಧ್ಯಮ ಪ್ರಮಾಣದ ಕಾಡು ಬೆಳೆದಿದ್ದ ಎಲ್ಲ ಸಾಧ್ಯತೆಗಳಿವೆ. ಈಗ ಭೂಮಿ ವ್ಯಾಪಕ ಸಾಗುವಳಿಗೊಳಗಾಗಿರುವುದರಿಂದ ಸಸ್ಯವರ್ಗ ಕ್ಷೀಣಿಸಿದೆ. ಕಲ್ಲುಬೆಟ್ಟಗಳ ಮಧ್ಯೆ ಬೆಳೆಯುವ ಹುಣಿಸೆ, ಜಾಲಿ, ಹಿಪ್ಪೆ ಮರಗಳು ಹೆಚ್ಚಾಗಿ ಕಂಡುಬರುತ್ತವೆ. ಕಂದಾಯ ಇಲಾಖೆಯ ದಾಖಲೆಗಳು ಒಂದು ಕಾಲದಲ್ಲಿ ಉತ್ತಮವಾದ ನಾಟ ಮರಗಳು ಇದ್ದುದಕ್ಕೆ ಪುರಾವೆ ಒದಗಿಸುತ್ತವೆ. ಉರುವಲಿಗೆ, ಮರಮುಟ್ಟುಗಳಿಗೆ ಅವ್ಯಾಹತವಾಗಿ ಗಿಡಮರಗಳನ್ನು ಕಡಿದಿದ್ದರಿಂದ ಅವುಗಳಿದ್ದ ಜಾಗ ಈಗ ಬಟಾಬಯಲಾಗಿದೆ. ಇತ್ತೀಚೆಗೆ ಅಲ್ಲಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ. ಅಲ್ಲಿ ಹಲಸು, ಬೇವು, ಹುಣಿಸೆ, ಸುಜ್ಜಲು ಮರಗಳು ಕಂಡುಬರುತ್ತವೆ. ದಿಂಡಿಗ, ತರದ (ಕೆಂಪುಕೈರ), ಹೊಂಗೆ, ಕಕ್ಕೆ ಮರಗಳು ಹಳ್ಳ ಕಣಿವೆಗಳಲ್ಲಿ ಕಂಡುಬರುತ್ತವೆ.

ಅರಣ್ಯ ಇಲಾಖೆ ಸಾಲು ಮರಗಳನ್ನು ಸಾಮಾಜಿಕ ಅರಣ್ಯಗಳನ್ನು ಬೆಳೆಸುವ ಯೋಜನೆಯನ್ನು ಕೈಗೊಂಡಿದೆ. ತೇಗದ ಮರ ಬೆಳೆಸುವ ಪ್ರಯತ್ನ ಸಾಗಿದೆ. ಆಗಾಗ ಸಂಭವಿಸುವ ಬರಗಾಲ ಸಸ್ಯಗಳ ಅಭಿವೃದ್ಧಿಗೆ ತಡೆಯಾಗಿದೆ. ಹರಪನಹಳ್ಳಿ, ಜಗಳೂರು ತಾಲ್ಲೂಕುಗಳಲ್ಲಿ ವಿಶೇಷವಾಗಿ ಕುರುಚಲು ಕಾಡು ಹಬ್ಬಿದೆ. ಬಂಜರು ಭೂಮಿಯಲ್ಲಿ ಬೆಳೆಯುವ ಹುಲ್ಲು ಜಾನುವಾರುಗಳಿಗೆ, ಕುರಿಗಳಿಗೆ ಮೇವು ಒದಗಿಸುತ್ತದೆ. ಜಿಲ್ಲೆಯಲ್ಲಿ ವೃಕ್ಷ ಮತ್ತು ತೋಪುಗಳಿರುವ ಪ್ರದೇಶದ ವಿಸ್ತೀರ್ಣ 5048 ಹೆಕ್ಟೇರ್, ಬಂಜರು ಮತ್ತು ಗೋಮಾಳ ಅನುಕ್ರಮವಾಗಿ 9,231 ಹೆಕ್ಟೇರ್ ಮತ್ತು 19,598 ಹೆಕ್ಟೇರ್ (1998-99).

ಪ್ರಾಣಿವರ್ಗ: ಕಾಡು ಹೆಚ್ಚಿಲ್ಲದಿರುವುದರಿಂದ ಪ್ರಾಣಿ ವೈವಿಧ್ಯವೂ ಕಡಿಮೆ. ಆದರೆ ಜಿಲ್ಲೆಯ ಕೆಲವು ಗುಡ್ಡಗಳಲ್ಲಿ ಚಿರತೆ, ಕಿರುಬ, ತೋಳ, ಕರಡಿ, ಕಾಡುಹಂದಿಗಳಿವೆ. ಅಲ್ಲೊಂದು ಇಲ್ಲೊಂದು ಕಪ್ಪುಪಟ್ಟೆ ಹುಲಿ ಕಂಡುಬರುವುದುಂಟು. ಚುಕ್ಕಿ ಜಿಂಕೆಗಳು, ಮುಂಗುಸಿ, ಮೊಲ, ಮಂಗಗಳಿವೆ. ಉರಗಗಳಲ್ಲಿ ಮಂಡಲಗಳಂತಹ ಹಾವುಗಳಿವೆ. ಕಾಡುಕೋಳಿ,ಮರಕುಟಿಗ, ಪಾರಿವಾಳ, ಗೌಜಗ, ನೀರುಕೋಳಿ, ಗಿಡುಗ, ಹದ್ದು, ಕಾಜಾಣ ಮೊದಲಾದ ವರ್ಗವಿದೆ.

ವ್ಯವಸಾಯ: ದಾವಣಗೆರೆ ಜಿಲ್ಲೆ ವ್ಯವಸಾಯ ಪ್ರಧಾನವಾದುದು. ಇಲ್ಲಿನ ಜನಸಂಖ್ಯೆಯ ಮೂರನೆಯ ಎರಡರಷ್ಟು ಭಾಗ ಗ್ರಾಮೀಣ ಪ್ರದೇಶದಲ್ಲಿದೆ. ಇಲ್ಲಿನ ಮಣ್ಣು ವ್ಯವಸಾಯಕ್ಕೆ ಅನುಕೂಲಕರವಾಗಿದೆ. ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರದ ವಾಯುವ್ಯ ಭಾಗದಲ್ಲಿ ಫಲವತ್ತಾದ ಕಪ್ಪುಮಣ್ಣು ಕಂಡುಬರುತ್ತದೆ. ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಮರಳುಮಿಶ್ರಿತ ಮಣ್ಣಿದೆ. ಹೊನ್ನಾಳಿ ತಾಲ್ಲೂಕಿನ ಬಹುಭಾಗ ಮರಳುಮಿಶ್ರಿತ ಕೆಂಪು ಮಣ್ಣು, ಇಲ್ಲಿ ಸಾರಜನಕ ಮತ್ತು ರಂಜಕದ ಕೊರತೆ ಕಂಡುಬರುತ್ತದೆ. ಕಪ್ಪುಮಣ್ಣಿನ ಭೂಮಿ ದಾವಣಗೆರೆ ಮತ್ತು ಹರಪನಹಳ್ಳಿಗಳಲ್ಲಿ ಹೆಚ್ಚು. ಒಟ್ಟು ಜಿಲ್ಲೆಯಲ್ಲಿ ಕಪ್ಪು, ಕೆಂಪು ಮತ್ತು ಮಧ್ಯಮ ಕಪ್ಪು ಮಣ್ಣಿದೆ. ಹತ್ತಿ, ನೆಲಗಡಲೆ, ಜೋಳ, ತೊಗರಿ ಮತ್ತು ರಾಗಿ ಬೆಳೆಯಲು ಜಿಲ್ಲೆಯ ನೆಲ ಪ್ರಶಸ್ತವಾಗಿದೆ. ಭದ್ರಾ ಅಣೆಕಟ್ಟು ಮತ್ತು ಶಾಂತಿಸಾಗರದಿಂದಾಗಿ ಸಾಕಷ್ಟು ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಈ ಅಚ್ಚುಕಟ್ಟು ಪ್ರದೇಶದಲ್ಲಿ ಜೇಡಿಮಣ್ಣು ಅಧಿಕವಿದ್ದು ಹೆಚ್ಚಿನ ಮಣ್ಣು ಪೋಷಣೆಗೆ ಗೊಬ್ಬರ ಹಾಗೂ ಹೊಸಮಣ್ಣು ಹಾಕುವ ಅಗತ್ಯವಿದೆ. ಜಗಳೂರು ತಾಲ್ಲೂಕಿನ ಸಂಗೇನಹಳ್ಳಿ ಮತ್ತು ತುಪ್ಪದಹಳ್ಳ ಕೆರೆಗಳು ಹಾಗೂ ದಾವಣಗೆರೆ ತಾಲ್ಲೂಕಿನ ಅಣಜಿ ಮತ್ತು ಕೊಡಗನೂರು ಕೆರೆಗಳು ಜಿಲ್ಲೆಯ ದೊಡ್ಡಕೆರೆಗಳು. ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಮಳೆ ಆಧಾರಿತ ಭೂಮಿಯೇ ಹೆಚ್ಚು. ಅಲ್ಲಲ್ಲಿ ಕೊಳವೆಬಾವಿಗಳನ್ನು ಕೊರೆಸಿ ನೀರಾವರಿಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಭದ್ರಾ ಜಲಾಶಯದಿಂದ ಬರುವ ನಾಲೆಗಳು ದಾವಣಗೆರೆ ಮತ್ತು ಹರಿಹರ ತಾಲ್ಲೂಕಿನ ಕೆಲವು ಭಾಗಗಳಿಗೆ ನೀರೊದಗಿಸುತ್ತವೆ. ಕಾಲುವೆಗಳಿಂದ ಜಿಲ್ಲೆಯಲ್ಲಿ 74,377 ಹೆಕ್ಟೇರ್ ನೀರೊದಗುತ್ತದೆ. ಕೆರೆಯಿಂದ 4,281 ಹೆಕ್ಟೇರ್, ಬಾವಿಗಳಿಂದ 4835 ಹೆಕ್ಟೇರ್, ಕೊಳವೆ ಬಾವಿಗಳಿಂದ 32,569 ಹೆಕ್ಟೇರ್, ಏತನೀರಾವರಿಯಿಂದ 11,077 ಹೆಕ್ಟೇರ್ ನೀರಾವರಿ ಸೌಲಭ್ಯ ಒದಗಿದೆ.

ಜಿಲ್ಲೆಯಲ್ಲಿ ಬತ್ತ (118,178ಹೆ.), ರಾಗಿ (35,741ಹೆ.), ಜೋಳ (56,587ಹೆ.), ಸಜ್ಜೆ (914ಹೆ.), ಮುಸುಕಿನ ಜೋಳ (103,680 ಹೆ.), ಗೋಧಿ (601ಹೆ.), ಇತರೆ ಏಕದಳ ಧಾನ್ಯ ಮತ್ತು ಉಪತೃಣ ಬೆಳೆಗಳು (3,383ಹೆ.), ಕಡಲೆ (2151ಹೆ.), ತೊಗರಿ (6,657ಹೆ.), ದ್ವಿದಳ ಧಾನ್ಯಗಳು (19,713ಹೆ.), ನೆಲಗಡಲೆ (37,712ಹೆ.), ಕಬ್ಬು (12,519ಹೆ.), ಹತ್ತಿ (26,284ಹೆ.) ಬೆಳೆಯಲಾಗುತ್ತದೆ (1998-99). ಬರಗಾಲದ ಬವಣೆ, ಮಾರುಕಟ್ಟೆಯಲ್ಲಿ ಬೆಲೆಗಳ ಕುಸಿತ, ಸಣ್ಣ ಹಿಡುವಳಿಗಳು ರೈತನ ಋಣಭಾರ ಹೆಚ್ಚಿಸಲು ಕಾರಣವಾಗಿರುವ ಸಂಗತಿಗಳಾಗಿವೆ. ಜಾನುವಾರುಗಳ ಪೋಷಣೆ ಮತ್ತು ಅಭಿವೃದ್ಧಿಗಾಗಿ ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ 7 ಪಶುವೈದ್ಯ ಶಾಲೆಗಳು, 44 ಚಿಕಿತ್ಸಾಲಯಗಳು, 85 ಪಶುವೈದ್ಯ ಕೇಂದ್ರಗಳು, 6 ಸಂಚಾರಿ ಚಿಕಿತ್ಸಾಲಯಗಳು, 21 ಕೃತಕ ಗರ್ಭಧಾರಣಾ ಕೇಂದ್ರಗಳಿವೆ. ಮೀನು ಸಾಕಣೆ ಒಂದು ಕೃಷಿ ಉದ್ಯಮವಾಗಿ ಬೆಳೆದಿದ್ದು ವಾರ್ಷಿಕವಾಗಿ 4080ಮೆ. ಟನ್ ಮೀನನ್ನು ಹಿಡಿಯಲಾಗುತ್ತದೆ.

ಕೈಗಾರಿಕೆ: ಕೈಗಾರಿಕೆ ಮತ್ತು ವ್ಯಾಪಾರೋದ್ಯಮಗಳಿಗೆ ದಾವಣಗೆರೆ ಮೊದಲಿನಿಂದಲೂ ಮಹತ್ವ ಪಡೆದಿರುವ ಸ್ಥಳ. ಇಲ್ಲಿನ 11-12ನೆಯ ಶತಮಾನದ ಶಾಸನಗಳಲ್ಲಿ ಈ ಊರಿನಲ್ಲಿ ವರ್ತಕರು ಮತ್ತು ವಿವಿಧ ಉಪಕಸಬುಗಳ ಜನ ನೆಲಸಿ ದೇವಾಲಯಗಳನ್ನು ಕಟ್ಟಿಸಿದ, ವಿವಿಧ ದಾನಧರ್ಮಗಳನ್ನು ಮಾಡಿದ ವಿಚಾರಗಳು ತಿಳಿದುಬರುತ್ತವೆ. ಪ್ರಾಚೀನ ಕಾಲದಿಂದಲೂ ಈ ಊರು ರಾಜ್ಯದ ಮತ್ತು ಅಂತಾರಾಜ್ಯದ ಹೆದ್ದಾರಿಯ ಮುಖ್ಯಸ್ಥಳವಾಗಿದ್ದದ್ದು ಸಹ ಕಂಡುಬರುತ್ತದೆ. 19ನೆಯ ಶತಮಾನದ

ಪ್ರಾರಂಭದ ವರ್ಷದಲ್ಲಿ (1801) ಫ್ರಾನ್ಸಿಸ್ ಬುಕಾನನ್ ಎಂಬ ಪ್ರವಾಸಿ ದಾವಣಗೆರೆಗೆ ಭೇಟಿ ನೀಡಿ ಇದು ವಾಣಿಜ್ಯ ಮತ್ತು ಕೈ ಕಸಬುಗಳ ಕೇಂದ್ರವಾಗಿದ್ದುದನ್ನು ದಾಖಲಿಸಿದ್ದಾನೆ. ಆಗ ಇಲ್ಲಿ 500 ಮನೆಗಳಿದ್ದುದನ್ನೂ ಒಂದು ಹೊಸ ಬಜಾರನ್ನು ಕಟ್ಟುತ್ತಿದ್ದುದನ್ನೂ ಪ್ರಸ್ತಾಪಿಸಿದ್ದಾನೆ. ಅಡಕೆ, ಮೆಣಸು, ಹತ್ತಿ ಕಂಬಳಿ - ಇವೆಲ್ಲ ಇಲ್ಲಿಂದ ಮದರಾಸು ಪಟ್ಟಣದ ಮೂಲಕ ವಿದೇಶಗಳಿಗೆ ರಫ್ತಾಗುತ್ತಿದ್ದ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ಹತ್ತಿ ಬಟ್ಟೆ ಮತ್ತು ಕಂಬಳಿ ನೇಯ್ಗೆಗೆ ಇದು ಪ್ರಸಿದ್ಧವಾಗಿತ್ತು. ಇಂತಹ ಪ್ರಮುಖ ಕೇಂದ್ರವಾದ ದಾವಣಗೆರೆ ಜಿಲ್ಲಾ ಕೇಂದ್ರವಾದದ್ದು ಇತ್ತೀಚೆಗೆ, ಆದರೆ ಅದರ ಕೈಗಾರಿಕೋದ್ಯಮ 20ನೆಯ ಶತಮಾನದ ಪ್ರಾರಂಭದಿಂದಲೂ ಅಭಿವೃದ್ಧಿ ಹೊಂದುತ್ತ ಬಂದಿತ್ತು. ಬೆಂಗಳೂರಿನಿಂದ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳನ್ನು ಸಂಪರ್ಕಿಸುವ ರಸ್ತೆ ಮತ್ತು ರೈಲು ಮಾರ್ಗಗಳು ದಾವಣಗೆರೆ ಮೂಲಕ ಹಾದುಹೋಗುತ್ತಿದ್ದವು. ಆಗ ದಾವಣಗೆರೆ ಎಲ್ಲ ದಿಕ್ಕುಗಳ ವ್ಯಾಪಾರ ವ್ಯವಹಾರಗಳ ಸ್ಥಳಗಳಿಗೆ ಸಂಪರ್ಕಿಸುವ ಕೂಡುಸ್ಥಳವಾಯಿತು. ಪುಣೆ - ಬೆಂಗಳೂರು ರಾಷ್ಟ್ರೀಯ ಹೆದ್ದಾರಿ, ಮುಂಬಯಿ - ಮೀರಜ್ - ಬೆಂಗಳೂರು ಬ್ರಾಡ್‌ಗೇಜ್ ರೈಲುಮಾರ್ಗ ಇಲ್ಲಿ ಹಾದುಹೋಗುತ್ತದೆ. 19ನೆಯ ಶತಮಾನದ ಪ್ರಾರಂಭದಲ್ಲೇ ಬಟ್ಟೆ ನೇಯ್ಗೆ, ನೂಲು ತೆಗೆಯುವುದು ಮತ್ತು ಎಣ್ಣೆ ತೆಗೆಯುವ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದವು.

1903ರಲ್ಲಿ ಶ್ರೀ ಚಿಗಟೇರಿ ಮಿಲ್ಸ್ ಲಿಮಿಟೆಡ್ ಕಂಪನಿ ಸ್ಥಾಪಿತವಾಯಿತು. ಇದನ್ನು ಜಿಲ್ಲೆಯ ಪ್ರಥಮ ಯಾಂತ್ರೀಕೃತ ಹತ್ತಿಗಿರಣಿ ಎನ್ನಬಹುದು. 1905ರಲ್ಲಿ ಶ್ರೀ ಬಹ್ಮಪ್ಪ ತವನಪ್ಪನವರು ಜಿನ್ನಿಂಗ್ ಕಾರ್ಖಾನೆ ತೆರೆದರು. ಅವರದೇ ಕಂಪನಿಯು ಅಡಿಯಲ್ಲಿ 1918ರಲ್ಲಿ ವನಸ್ಪತಿ ಮತ್ತು ಕಡಲೆಕಾಯಿ ಎಣ್ಣೆ ತಯಾರಿಸುವ ಘಟಕ ಕಾರ್ಯರೂಪಕ್ಕೆ ಬಂತು. ಬಿ.ಟಿ.ಬಾರ್ ಸೋಪ್ ತಯಾರಿಸುವ ಸೋಪಿನ ಉದ್ಯಮವೂ ಇವರಿಂದಲೇ ಪ್ರಾರಂಭವಾಯಿತು. ಕೊಟ್ಟೂರ ಬಸವೇಶ್ವರ ಜಿನ್ನಿಂಗ್ ಕಾರ್ಖಾನೆ, ರವಿ ವೆಜಿಟೆಬಲ್ ಆಯಿಲ್ ಮಿಲ್ಸ್‌ಗಳು ಇದೇ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದವು. 1939ರಲ್ಲಿ ದಾವಣಗೆರೆ ಕಾಟನ್ ಮಿಲ್ಸ್ (ಡಿ.ಪಿ.ಎಂ.) ತೆರೆಯಲಾಯಿತು. 1954ರಲ್ಲಿ ಶ್ರೀಶಂಕರ ಟೆಕ್ಸ್‌ಟೈಲ್ಸ್ ಮಿಲ್ಸ್, 1946ರಲ್ಲಿ ಶ್ರೀ ಗಣೇಶ್ ಟೆಕ್ಸ್‌ಟೈಲ್ಸ್ ಮಿಲ್ಸ್ ಪ್ರಾರಂಭವಾದವು. ಸ್ವಾತಂತ್ರ್ಯ ಬರುವ ಹೊತ್ತಿಗೆ ಬೆಂಗಳೂರನ್ನು ಬಿಟ್ಟರೆ ದಾವಣಗೆರೆ ಮೈಸೂರು ಸಂಸ್ಥಾನದ ಪ್ರಮುಖ ಕೈಗಾರಿಕಾ ನಗರವೆಂಬ ಕೀರ್ತಿಗೆ ಪಾತ್ರವಾಯಿತು. ಭದ್ರಾ ಜಲಾಶಯ ನಿರ್ಮಾಣದಿಂದ ನೀರಾವರಿ ಪ್ರದೇಶ ವಿಸ್ತರಿಸಿದಂತೆಲ್ಲ ಸಕ್ಕರೆ ಕಾರ್ಖಾನೆಗಳು ಸ್ಥಾಪಿತವಾದವು. ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಬೆಳೆಯಿತು. ಹೊರಗಿನಿಂದ ವ್ಯವಹಾರಸ್ಥರು, ಉದ್ಯೋಗಾಕಾಂಕ್ಷಿಗಳು ಬಂದು ಇಲ್ಲಿ ನೆಲಸಿದರು. ಆಟದ ವಸ್ತುಗಳು, ಆಹಾರ, ಮುದ್ರಣ, ಚರ್ಮ ಮತ್ತು ಮರದ ವಸ್ತುಗಳಿಗೆ ಸಂಬಂಧಿಸಿದ ನೂರಾರು ಕೈಗಾರಿಕಾ ಘಟಕಗಳು ತಲೆಎತ್ತಿದವು. ವಿದ್ಯುಚ್ಛಕ್ತಿ, ಉತ್ಪಾದನೆ, ಡಿಸ್ಟಿಲರಿ ಘಟಕಗಳು, ಜೈವಿಕ ಗೊಬ್ಬರ ತಯಾರಿಕೆ ಮುಂತಾದ ಕ್ಷೇತ್ರಗಳಲ್ಲೂ ಉದ್ಯಮಗಳು ತಲೆಎತ್ತಿದವು. ಈ ಎಲ್ಲ ಕಾರಣಗಳಿಗಾಗಿ ದಾವಣಗೆರೆ ನಗರ ಕರ್ನಾಟಕದ ಮ್ಯಾಂಚೆಸ್ಟರ್ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ದಾವಣಗೆರೆಯ ಅನಂತರ ಹೆಚ್ಚು ಕಾರ್ಖಾನೆಗಳಿರುವ ಸ್ಥಳ ಹರಿಹರ. ಇಲ್ಲಿನ ಕೈಗಾರಿಕಾ ಪ್ರದೇಶ 1964ರಿಂದ ಅಸ್ತಿತ್ವದಲ್ಲಿದೆ. ಇಲ್ಲಿ ಎಂಜಿನಿಯರಿಂಗ್ ಕಾರ್ಯಾಗಾರಗಳು, ಕಾರ್ಖಾನೆಗಳು ನೆಲೆಗೊಂಡಿವೆ. ಹತ್ತಿ ಗಿರಣಿಗಳಿವೆ. ಹರಿಹರದ ಪಾಲಿಫೈಬರ್ ಕಾರ್ಖಾನೆ ಪ್ರಸಿದ್ಧವಾದುದು. 1900ರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಮೈಸೂರ್ ಕಿರ್ಲೋಸ್ಕರ್ ಕಂಪನಿ ಹರಿಹರದ ಯಂತ್ರಪುರದಲ್ಲಿ ತನ್ನ ಉದ್ಯಮವನ್ನು ಪ್ರಾರಂಭಿಸಿತು. ಸಣ್ಣ ಕಾರ್ಯಾಗಾರಗಳಿಗೆ ಮತ್ತು ದುರಸ್ತಿ ಕೇಂದ್ರಗಳಿಗೆ ಸೂಕ್ತವೆನಿಸಿದ ಹರಿಹರ ಲೇಥ್‌ಗಳು ಪ್ರಸಿದ್ಧವಾಗಿವೆ. ಜಿಲ್ಲೆಯ ಇತರ ತಾಲ್ಲೂಕು ಕೆಂದ್ರಗಳಲ್ಲೂ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಸ್ಥಾಪಿತವಾಗಿವೆ. ಈಚೆಗೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಖಾಸಗಿ ವಲಯದಲ್ಲಿ ಶಾಮನೂರ್ ಕಂಪನಿಯಿಂದ ಸಕ್ಕರೆ ಕಾರ್ಖಾನೆ ಮತ್ತು ವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಗಿದೆ. ಜಗಳೂರು ಕಂಬಳಿ ನೇಯ್ಗೆಗೆ ಪ್ರಸಿದ್ಧ. ಜಾಗತೀಕರಣದ ಪ್ರಭಾವದಿಂದಾಗಿ ದಾವಣಗೆರೆಯ ಕೈಗಾರಿಕೆಗಳು ಸಂಕಷ್ಟದಲ್ಲಿವೆ. ರಾಜ್ಯದಲ್ಲಿ ಅತಿ ಹೆಚ್ಚು ಕಾರ್ಖಾನೆಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಇದು ಆರನೆಯ ಸ್ಥಾನದಲ್ಲಿದೆ.

ಜಿಲ್ಲೆಯಲ್ಲಿ ಒಟ್ಟು 410 ಉದ್ಯಮಗಳಿವೆ. 2 ಕೈಗಾರಿಕಾ ಪ್ರದೇಶಗಳು, 108 ಕೈಗಾರಿಕಾ ಷೆಡ್ಡುಗಳು, 3 ಸಕ್ಕರೆ ಕಾರ್ಖಾನೆಗಳು, 34 ಹತ್ತಿ ಗಿರಣಿಗಳು, 1 ರಾಸಾಯನಿಕ ಕಾರ್ಖಾನೆ, 12 ಎಂಜಿನಿಯರಿಂಗ್ ಕಾರ್ಖಾನೆಗಳು ಇವೆ. ಜಿಲ್ಲೆಯ ವಿವಿಧೆಡೆ ಮ್ಯಾಂಗನೀಸ್, ಕಬ್ಬಿಣ ಮತ್ತು ತಾಮ್ರದ ಗಣಿಗಳು ಉದ್ಯೋಗ ನಿರ್ಮಾಣಕ್ಕೆ ಕೊಡುಗೆ ನೀಡಿವೆ.

ಜಿಲ್ಲೆಯಲ್ಲಿ 85 ವಾಣಿಜ್ಯ ಬ್ಯಾಂಕುಗಳು ಮತ್ತು 44 ಗ್ರಾಮೀಣ ಬ್ಯಾಂಕುಗಳು ಕಾರ್ಯನಿರತವಾಗಿವೆ. 212 ವ್ಯವಸಾಯ ಸಹಕಾರ ಸಂಘಗಳೂ 97 ವ್ಯವಸಾಯೇತರ ಸಹಕಾರ ಸಂಘಗಳೂ ಅಸ್ತಿತ್ವದಲ್ಲಿವೆ. ನಿಯಂತ್ರಿತಮಾರುಕಟ್ಟೆಗಳ ಸಂಖ್ಯೆ 5, ಉಪಮಾರುಕಟ್ಟೆಗಳು 9.

ಶಿಕ್ಷಣ: ಜಿಲ್ಲೆಯ ಹೆಚ್ಚಿನ ತಾಲ್ಲೂಕುಗಳು ಮೊದಲಿಗೆ ಚಿತ್ರದುರ್ಗ ಜಿಲ್ಲೆಗೆ ಸೇರಿದ್ದವು. ಆದರೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ನಗರಕ್ಕಿಂತ ದಾವಣಗೆರೆ ನಗರವೇ ಹೆಚ್ಚಿನ ಪ್ರಗತಿ ಕಂಡಿತ್ತು. ಇದಕ್ಕೆ ಮುಖ್ಯ ಕಾರಣ ಈ ನಗರದ ಕೈಗಾರಿಕೀಕರಣ. 1900ರಲ್ಲಿ ದಾವಣಗೆರೆಯಲ್ಲಿ ಒಂದು ಆಂಗ್ಲೋವರ್ನಾಕ್ಯುಲರ್ ಶಾಲೆ ಪ್ರಾರಂಭವಾಯಿತು. 1913ರಿಂದ ಮೈಸೂರು ಸರ್ಕಾರ ಅನುದಾನ ಯೋಜನೆಯನ್ನು ಜಾರಿಗೆ ತಂದಿದ್ದರಿಂದ ಗ್ರಾಮಗಳ ಹಂತದಲ್ಲೂ ಪ್ರಾಥಮಿಕ ಶಾಲೆಗಳು ಕಾರ್ಯಾರಂಭ ಮಾಡಿದವು. ದಾವಣಗೆರೆಗೆ 1922ರಲ್ಲಿ ಪ್ರೌಢಶಾಲೆ ಬಂತು. ಇಂಟರ್ ಮಿಡಿಯಟ್ ಕಾಲೇಜಿನ ಪ್ರಾರಂಭ (1947), ದಾವಣಗೆರೆ ಶಿಕ್ಷಣ ಕೇಂದ್ರವಾಗಿ ಬೆಳೆಯಲು ಅಂಕುರವಾಯಿತು. ಚಿತ್ರದುರ್ಗದಲ್ಲಿ ಸ್ಥಾಪನೆಯಾದ ಪ್ರಥಮ ದರ್ಜೆ ಕಾಲೇಜು (1948) ಇಲ್ಲಿನ ವಿದ್ಯಾರ್ಥಿಗಳಿಗೆ ಪದವಿ ಶಿಕ್ಷಣಕ್ಕೆ ದಾರಿ ಮಾಡಿತು.

ಸ್ವಾತಂತ್ರ್ಯಾನಂತರ ದಾವಣಗೆರೆ ನಗರ ಶಿಕ್ಷಣ ಕ್ಷೇತ್ರದಲ್ಲಿ ದಾಪುಗಾಲು ಹಾಕಿ ಮುನ್ನಡೆಯಿತು. ಅನೇಕ ಖಾಸಗಿ ಸಂಘ ಸಂಸ್ಥೆಗಳು ಮಠಗಳು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಮುಂದೆ ಬಂದವು. 1950ರಲ್ಲಿ ಬಾಲಕಿಯರ ಪ್ರೌಢಶಾಲೆ ಅಸ್ತಿತ್ವಕ್ಕೆ ಬಂತು. 1951ರಲ್ಲಿ ಬ್ರಹ್ಮಪ್ರ ದೇವೇಂದ್ರಪ್ಪ ತವನಪ್ಪನವರ ಹೆಸರಿನಲ್ಲಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿತವಾಯಿತು. ಬಾಪೂಜಿ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ 1957ರಲ್ಲಿ ಪದವಿ ಕಾಲೇಜಿಗೆ ಅಸ್ತಿಭಾರ ಹಾಕಲಾಯಿತು. ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು 1960ರಲ್ಲಿ ಶಿಕ್ಷಕರ ತರಬೇತಿ ಸಂಸ್ಥೆಗಳು ತಲೆ ಎತ್ತಿದವು. 1964-65ರಲ್ಲಿ ಸರ್ಕಾರಿ ಆರ್ಟ್ಸ್ ಮತ್ತು ಕ್ರಾಫ್ಟ್ಸ್ ಶಾಲೆ ಜನ್ಮತಳೆಯಿತು. 1965ರಲ್ಲಿ ಬಿ.ಇಡಿ. ಕಾಲೇಜು ಆರಂಭವಾಯಿತು. 1966ರಲ್ಲಿ ಮಹಿಳಾ ಕಾಲೇಜು ಅಸ್ತಿತ್ವಕ್ಕೆ ಬಂದಿತು. 1991ರಲ್ಲಿ ಮತ್ತೊಂದು ಮಹಿಳಾ ಕಾಲೇಜು ಜನ್ಮತಳೆದಿರುವುದು ಇಲ್ಲಿ ಹೆಚ್ಚಿನ ಮಹಿಳಾ ವಿದ್ಯಾಭ್ಯಾಸದ ಬೆಳವಣಿಗೆಗೆ ಸಾಕ್ಷಿಯಾಗಿದೆ. ಜಯದೇವ ಜಗದ್ಗುರು ಮುರುಗರಾಜೇಂದ್ರ ವೈದ್ಯಕೀಯ ಕಾಲೇಜು 1965ರಲ್ಲಿ ಸ್ಥಾಪನೆಯಾಯಿತು. ನರ್ಸಿಂಗ್ ಶಾಲೆ (1970), ಅನಂತರ ಬಾಪೂಜಿ ಸಂಸ್ಥೆಯದಂತ ವಿಜ್ಞಾನ ಕಾಲೇಜು (1979), ಶುಶ್ರೂಷೆ ಕಾಲೇಜು (1991), ಔಷಧೀಯ ಶಾಸ್ತ್ರ (1992) ನೆಲೆಗೊಂಡವು.

ಕುವೆಂಪು ವಿಶ್ವವಿದ್ಯಾಲಯ ಇಲ್ಲಿನ ಲಲಿತಕಲೆ ಮತ್ತು ಕರಕುಶಲ ಶಾಲೆಯನ್ನು ಅಳವಡಿಸಿಕೊಂಡು ಲಲಿತಕಲೆ ಮತ್ತು ವಾಣಿಜ್ಯ (ಅನ್ವಯಿಕ) ಕಲಾ ವಿಷಯಗಳಲ್ಲಿ ಐದು ವರ್ಷದ ಶಿಕ್ಷಣಗಳನ್ನು ತೆರೆದಿದೆ. ದಾವಣಗೆರೆಗೆ ಹೊಂದಿಕೊಂಡಂತೆ 10ಕಿಮೀ ದೂರದ ತೋಳಹುಣಸೆಯಲ್ಲಿರುವ ಶಿವಗಂಗೋತ್ರಿ ಸ್ನಾತಕೋತ್ತರ ಕೇಂದ್ರ ಕುವೆಂಪು ವಿಶ್ವವಿದ್ಯಾಲಯಕ್ಕೆ ಸೇರಿದ. ಸಾರ್ವಜನಿಕ ಗ್ರಂಥ ಭಂಡಾರ, ವಸತಿ ಶಾಲೆಗಳು ಇಲ್ಲಿನ

ಶೈಕ್ಷಣಿಕ ಪರಿಸರಕ್ಕೆ ಪೂರಕವಾಗಿವೆ. ಜಿಲ್ಲೆಯ ಇತರ ತಾಲ್ಲೂಕು ಕೇಂದ್ರಗಳಲ್ಲೂ ವಿವಿಧ ಶಾಲಾ ಕಾಲೇಜುಗಳಿವೆ.

ಜಿಲ್ಲೆಯ ಸಾಕ್ಷರತೆ ಸೇ.67.67ರಷ್ಟಿದೆ. ಪುರುಷ ಸಾಕ್ಷರತೆ ಸೇ.76.44, ಮಹಿಳಾ ಸಾಕ್ಷರತೆ ಸೇ.58.45 (2001), ಜಿಲ್ಲೆಯಲ್ಲಿ 638 ಪ್ರಾಥಮಿಕ ಶಾಲೆಗಳು, 266 ಪ್ರೌಢಶಾಲೆಗಳೂ 86 ಪದವಿಪೂರ್ವ ಕಾಲೇಜುಗಳೂ ಇವೆ. ಸಾಮಾನ್ಯ ಶಿಕ್ಷಣ ಕಾಲೇಜುಗಳು, 3 ಪಾಲಿಟೆಕ್ನಿಕ್, 2 ಎಂಜಿನಿಯರಿಂಗ್ ಕಾಲೇಜುಗಳು, 1 ವೈದ್ಯಕೀಯ ಕಾಲೇಜು, 1 ಭಾರತೀಯ ವೈದ್ಯ ಪದ್ಧತಿ, 2 ದಂತ ವಿಜ್ಞಾನ ಕಾಲೇಜು ಇವೆ (1999 - 2000).

ದಾವಣಗೆರೆ ಜಿಲ್ಲೆ ಆರೋಗ್ಯ ಸೌಲಭ್ಯದ ದೃಷ್ಟಿಯಿಂದ ಇತರ ಕೆಲವು ಜಿಲ್ಲೆಗಳಿಗಿಂತ ಮುಂದಿದೆ. ಇದಕ್ಕೆ ಇಲ್ಲಿನ ಕೈಗಾರಿಕಾ ನಗರ ದಾವಣಗೆರೆ ಮತ್ತು ಇಲ್ಲಿನ ವೈದ್ಯಕೀಯ ಕಾಲೇಜು ಕಾರಣ. ಜಿಲ್ಲೆಯಲ್ಲಿ 5 ಸರ್ಕಾರಿ ಆಸ್ಪತ್ರೆಗಳಿವೆ, 1130 ಹಾಸಿಗೆಗಳಿವೆ. ಒಂದು ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆ ಇದೆ. ಖಾಸಗಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳು ಸಾಕಷ್ಟಿವೆ. 2 ರಕ್ತ ಬ್ಯಾಂಕುಗಳಿವೆ. 70 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 33 ಪ್ರಾಥಮಿಕ ಆರೋಗ್ಯ ಘಟಕಗಳೂ ಇವೆ (2000).

ಸಾರಿಗೆ ಸಂಪರ್ಕ : ದಾವಣಗೆರೆ ಸಾರಿಗೆ ದೃಷ್ಟಿಯಿಂದ ಆಯಕಟ್ಟಿನ ಸ್ಥಳದಲ್ಲಿದೆ. ರಾಷ್ಟ್ರೀಯ ಹೆದ್ದಾರಿಗಳು ಈ ಸ್ಥಳದ ಮೂಲಕ ಹಾದು ಹೋಗುತ್ತವೆ. ಜೊತೆಗೆ ಕರಾವಳಿ ತೀರದಿಂದ ಬಳ್ಳಾರಿ, ಆಂಧ್ರಪ್ರದೇಶ ತಲುಪಲು ಇರುವ ಹೆದ್ದಾರಿ ಈ ಊರಿನ ಮೂಲಕವೇ ಹೋಗಬೇಕು ಉತ್ತರ ಕರ್ನಾಟಕದ ಎಲ್ಲ ಜಿಲ್ಲಾಕೇಂದ್ರಗಳಿಗೂ ಇಲ್ಲಿಂದ ಉತ್ತಮ ರಸ್ತೆ ಸಂಪರ್ಕವಿದೆ. ಈ ಜಿಲ್ಲೆಯಲ್ಲಿ ಸಮತಟ್ಟಾದ ಪ್ರದೇಶ ಹೆಚ್ಚಿರುವುದರಿಂದ ರಸ್ತೆಗಳ ನಿರ್ಮಾಣಕ್ಕೆ ಇರುವ ಅಡೆ ತಡೆಗಳು ಕಡಿಮೆ. ಗ್ರಾಮೀಣ ರಸ್ತೆಗಳಿಗೆ ಇನ್ನೂ ಹೆಚ್ಚಿನ ಆದ್ಯತೆ ದೊರೆಯಬೇಕಾಗಿದೆ.

ಜಿಲ್ಲೆಯಲ್ಲಿ ಬೆಂಗಳೂರು - ಪುಣೆ ಹೆದ್ದಾರಿ ದಾವಣಗೆರೆ, ಹರಿಹರದ ಮೂಲಕ ಹಾದು ಹೋಗುತ್ತದೆ. ಇನ್ನೊಂದು ರಾಷ್ಟ್ರೀಯ ಹೆದ್ದಾರಿ ಚಿತ್ರದುರ್ಗದಿಂದ ಜಿಲ್ಲೆಯ ಜಗಳೂರು ಮೂಲಕ ಮಹಾರಾಷ್ಟ್ರ ರಾಜ್ಯದ ಷೋಲಾಪುರವನ್ನು ತಲುಪುತ್ತದೆ. ಜಿಲ್ಲೆಯಲ್ಲಿ ಈ ಎರಡು ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ 85ಕಿಮೀ, ರಾಜ್ಯ ಹೆದ್ದಾರಿಗಳ ಉದ್ದ 263ಕಿಮೀ, ಮುಖ್ಯ ಜಿಲ್ಲಾ ರಸ್ತೆಗಳು 86ಕಿಮೀ, ಗ್ರಾಮೀಣ ರಸ್ತೆಗಳು 1172ಕಿಮೀ, ತಾಲ್ಲೂಕು ಮಂಡಳಿ ರಸ್ತೆಗಳು 761ಕಿಮೀ. ಜಿಲ್ಲೆಯಲ್ಲಿ ಭಾರಿ ಸೇತುವೆಗಳಿವೆ. ಜಿಲ್ಲೆಯಲ್ಲಿರುವ ಪಕ್ಕಾ ರಸ್ತೆಗಳ ಉದ್ದ 3465ಕಿಮೀ. ಬೆಂಗಳೂರು-ಮೀರಜ್ ರೈಲು ಮಾರ್ಗ ಈ ಜಿಲ್ಲೆಯ ಮೂಲಕ ಹಾದು ಹೋಗುತ್ತದೆ. ಜಿಲ್ಲೆಯಲ್ಲಿ 43ಕಿಮೀ ಬ್ರಾಡ್‍ಗೇಜ್ ರೈಲು ಮಾರ್ಗವಿದೆ. ಹರಿಹರ ಮತ್ತು ದಾವಣಗೆರೆ ಮುಖ್ಯ ರೈಲು ನಿಲ್ದಾಣಗಳು ಹಾಗೂ ಜಂಕ್ಷನ್. ಜಿಲ್ಲೆಯಲ್ಲಿ 258 ಅಂಚೆ ಕಚೇರಿಗಳೂ 44 ದೂರವಾಣಿ ಕೇಂದ್ರಗಳೂ ಇವೆ (2000).

ಸಂಸ್ಕೃತಿ: ದಾವಣಗೆರೆ ಜಿಲ್ಲೆಯದು ಮುಖ್ಯವಾಗಿ ಗ್ರಾಮೀಣ ಸಂಸ್ಕೃತಿ. ವ್ಯವಸಾಯ ಸಂಬಂಧವಾದ ವಿಶಿಷ್ಟ ಹಬ್ಬಗಳನ್ನು ಆಚರಿಸಲಾಗುತ್ತದೆ. ಅವುಗಳಲ್ಲಿ ಸಂಕ್ರಾಂತಿ ಪ್ರಮುಖವಾದುದು. ಈ ಜಿಲ್ಲೆ ವೀರಶೈವ ಸಮುದಾಯದ ಜನಸಂಖ್ಯೆಯನ್ನು ಗಣನೀಯ ಪ್ರಮಾಣದಲ್ಲಿ ಹೊಂದಿರುವುದರಿಂದ ಬಸವಣ್ಣನವರ ಜಯಂತಿ ವಿಜೃಂಭಣೆಯಿಂದ ನಡೆಯುತ್ತದೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಹೆಚ್ಚು ಜನಪ್ರಿಯವಾದ ಹೋಳಿ ಅಥವಾ ಕಾಮನಹಬ್ಬ ಇಲ್ಲಿ ಸಡಗರದಿಂದ ಆಚರಿಸಲ್ಪಡುತ್ತದೆ. ಜನಪದ ರಂಗಭೂಮಿಯ ಬಯಲಾಟ ಅಥವಾ ಬಯಲನಾಟಕಗಳು, ಲಾವಣಿ ಇನ್ನೂ ಸಕ್ರಿಯವಾಗಿ ಉಳಿದಿವೆ. ಜಿಲ್ಲೆಯಲ್ಲಿ ಅನೇಕ ಜಾತ್ರೆ, ಉತ್ಸವಗಳು ನಡೆಯುತ್ತವೆ.

ದಾವಣಗೆರೆಯಲ್ಲಿ ದುರ್ಗಮ್ಮನ ಜಾತ್ರೆ ಫಾಲ್ಗುಣ ಮಾಸದಲ್ಲಿ ಎರಡು ವರ್ಷಕ್ಕೊಮ್ಮೆ ನಡೆಯುತ್ತದೆ. ಹರಿಹರದಲ್ಲಿ ಉಗಾದಿ ಆಚೀಚೆ ಸಂಗಮೇಶ್ವರ ಜಾತ್ರೆ ಏರ್ಪಡುತ್ತದೆ. ಜಗಳೂರು ತಾಲ್ಲೂಕಿನ ಗುರುಸಿದ್ಧಪುರದಲ್ಲಿ ಮಾರ್ಚ್ ತಿಂಗಳಲ್ಲಿ ಚೌಡೇಶ್ವರಿ ಜಾತ್ರೆ ಅದ್ದೂರಿಯಿಂದ ನಡೆಯುತ್ತದೆ. ಜಗಳೂರು ತಾಲ್ಲೂಕಿನ ಕಲ್ಲೇದೇವರಪುರದಲ್ಲಿ ಏಪ್ರಿಲ್‍ನಲ್ಲಿ ನಡೆಯುವ ಮೇಳ ಪ್ರಸಿದ್ಧವಾಗಿದೆ. ಅದೇ ತಾಲ್ಲೂಕಿನ ಕೋಟೆಗುಡ್ಡೆಯಲ್ಲಿ ವೀರಭದ್ರ ದೇವರ ಬೃಹತ್ ಜಾತ್ರೆ ಜರುಗುತ್ತದೆ. ಹೊನ್ನಾಳಿ ತಾಲ್ಲೂಕಿನ ಮಾರಿಕೊಪ್ಪದಲ್ಲಿ ನಡೆಯುವ ಹಾಲದಮ್ಮನ ಜಾತ್ರೆ ವಿಶೇಷವಾದುದು. ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿಯ ರಂಗನಾಥ ರಥೋತ್ಸವ ಜನಪ್ರಿಯವಾಗಿದೆ. ಜಗಳೂರು ತಾಲ್ಲೂಕಿನ ಬಿಸ್ತುಹಳ್ಳಿ ಇನ್ನೊಂದು ಜಾತ್ರಾ ಸ್ಥಳ.

ಅನಗೋಡು, ಅಣಜಿ, ಆನೆಕೊಂಡ, ಅಸಗೂಡು, ಹಾಲುವನ, ಹರಿಹರ, ನಂದಿತಾವರೆ, ಶಂಕರನಹಳ್ಳಿ, ಬಾಡ, ಜಗಳೂರು ಕಬ್ಬೂರು, ಕೊಡಗನೂರು, ಕೊಗ್ಗನೂರು, ಲೊಕ್ಕಿಕೆರೆ, ಮಳಲಕೆರೆ ಬಲ್ಲೇಶ್ವರ, ನ್ಯಾಮತಿ, ಬೆಳಗುತ್ತಿ, ಹಾಲವಾಗಲು, ನೀಲಗುಂದ - ಇವು ಈ ಜಿಲ್ಲೆಯ ಪ್ರೇಕ್ಷಣೀಯ ಹಾಗೂ ಐತಿಹಾಸಿಕ ಸ್ಥಳಗಳು. ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಉಚ್ಚಂಗಿದುರ್ಗ (ನೋಡಿ) ಪಾಂಡ್ಯರ ಪ್ರಾಚೀನ ರಾಜಧಾನಿಯಾಗಿದ್ದು ದುರ್ಗಮವಾದ ದುರ್ಗಕ್ಕೆ ಮಾದರಿಯಾಗಿದೆ. ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿಯಲ್ಲಿ ತೊರೆಗಳಲ್ಲಿ ತೇಲಿ ಬರುತ್ತಿದ್ದ ಚಿನ್ನದ ಅದುರನ್ನು ಸಂಗ್ರಹಿಸಲಾಗುತ್ತಿತ್ತೆಂದು ಹೇಳಲಾಗಿದೆ. ಸಂತೆಬೆನ್ನೂರಿನಲ್ಲಿ ಬಸವಾಪಟ್ಟಣದ ಪಾಳೆಯಗಾರರ ಅರಮನೆಯಿದೆ. ಚೆನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಅಲ್ಲಿನ ಪಾಳೆಯಗಾರರ ರಾಜಧಾನಿಯಾಗಿತ್ತು. ಹೊನ್ನಾಳಿ ತಾಲ್ಲೂಕಿನ ಬಿಳಗುತ್ತಿ ಪ್ರಾಚೀನ ಸಿಂದರ ರಾಜಧಾನಿಯಾಗಿತ್ತು. ಹರಪನಹಳ್ಳಿಯಲ್ಲಿ ಪಾಳೆಗಾರರು ಆಳುತ್ತಿದ್ದರು.

ಇತಿಹಾಸ: ಜಿಲ್ಲೆಯು ಅನೇಕ ಪೌರಾಣಿಕ ಕಥನಗಳಿಂದ ಕೂಡಿದ ಸ್ಥಳಗಳನ್ನು ಹೊಂದಿದೆ. ಅದರಲ್ಲಿ ಹರಿಹರ ಮುಖ್ಯವಾದುದು. ಹರಿಹರದಲ್ಲಿ ಗುಹಾಸುರನೆಂಬ ರಾಕ್ಷಸನಿದ್ದನೆಂದೂ ಅವನು ತನ್ನ ತಪಸ್ಸಿನಿಂದ ಹರಿಹರ ದೇವತೆಗಳ ಅನುಗ್ರಹಕ್ಕೆ ಪಾತ್ರವಾಗಿ ಯಾರಿಂದಲೂ ತನಗೆ ಮರಣ ಬರದಂತೆ ವರ ಕೇಳಿ ಪಡೆದನೆಂದು ಪೌರಣಿಕ ಕತೆ ಇದೆ. ಆಗ ಇವನ ಉಪಟಳದಿಂದ ಜನರನ್ನು ಪಾರು ಮಾಡಲು ಹರಿಹರರಿಬ್ಬರೂ ಹರಿಹರ ಎಂಬ ಏಕರೂಪ ಧರಿಸಿ ಗುಹಾಸುರನನ್ನು ಸಂಹರಿಸಿದರೆಂದು ಸ್ಥಳಪುರಾಣ. ಧರ್ಮರಾಯ ತಂಗಿದ್ದ ಹರಿಹರದಲ್ಲಿ ಆತನ ಮರಿಮಗ ಜನಮೇಜಯರಾಯ ಹರಿಹರ ದೇವರಿಗೆ ದಾನ ನೀಡಿದನೆಂದು ಪ್ರತೀತಿ. ಹೊನ್ನಾಳಿ ತಾಲ್ಲೂಕಿನ ಕಮ್ಮಾರಗಟ್ಟೆಯಲ್ಲಿ ಪರಶುರಾಮನು ದಿಗ್ವಿಜಯದ ಅನಂತರ ತನ್ನ ಕತ್ತಿಯನ್ನು ತೊಳೆದನೆಂದೂ ಇದು ಕರ್ಮಹಾರ ಕ್ಷೇತ್ರವೆಂದು ಹೆಸರಾಗಿದ್ದಿತೆಂದೂ ಸ್ಥಳ ಪುರಾಣವಿದೆ.

ನೆರೆಯ ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ ಮತ್ತು ಬ್ರಹ್ಮಗಿರಿಗಳಲ್ಲಿ ದೊರೆತಿರುವ ಅಶೋಕ ಮೌರ್ಯನ ಶಾಸನಗಳು ಈ ಪ್ರದೇಶದಲ್ಲಿ ಕ್ರಿ.ಪೂ. 3ನೆಯ ಶತಮಾನದಲ್ಲಿ ರಾಜಕೀಯ ವ್ಯವಸ್ಥೆ ಬೇರೂರಿದ್ದಕ್ಕೆ ಸಾಕ್ಷಿಯಾಗಿದೆ. ನಂದರು ಮತ್ತು ಮೌರ್ಯರು ಈ ಪ್ರದೇಶದಲ್ಲಿ ಆಳಿದರೆಂದು ತಿಳಿದುಬರುತ್ತದೆ. ಪ್ರಾಚೀನ ಕುಂತಲ ದೇಶದಲ್ಲಿ ನಂದರು ಆಳುತ್ತಿದ್ದರೆಂದು ಪ್ರತೀತಿ. ಈ ಜಿಲ್ಲೆಯ ಪ್ರದೇಶವಾದ ಅಶೋಕನ ಶಾಸನದಲ್ಲಿ ಉಕ್ತವಾಗಿರುವ 'ಇಸಿಲ' ಎಂಬ ಸ್ಥಳ ಈಗಿನ ಬ್ರಹ್ಮಗಿರಿ ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಮೌರ್ಯರ ಉತ್ತರಾಧಿಕಾರಿಗಳಾದ ಸಾತವಾಹನರು ದಖನ್‍ನ ಬಹುಭಾಗವನ್ನು ಶತಮಾನಗಳ ಕಾಲ ಆಳಿದರು. ಚಂದ್ರವಳ್ಳಿ, ಬ್ರಹ್ಮಗಿರಿ ಮೊದಲಾದೆಡೆಗಳಲ್ಲಿ ದೊರೆತಿರುವ ಆ ಕಾಲದ ನಾಣ್ಯಗಳು ಮತ್ತು ಇತರ ಅವಶೇಷಗಳು ಸಾತವಾಹನರು ಇಲ್ಲಿ ಆಳುತ್ತಿದ್ದುದನ್ನು ದೃಢಪಡಿಸುತ್ತವೆ.

ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ರಾಜ್ಯ ಸ್ಥಾಪಿಸಿದ ಕದಂಬರ ರಾಜ್ಯಕ್ಕೆ ಈ ಜಿಲ್ಲೆ ಸೇರಿದ್ದಿತು. ಚಂದ್ರವಳ್ಳಿ ಕಣಿವೆಯಲ್ಲಿ ಈ

ಮನೆತನದ ಸ್ಥಾಪಕ ಮಯೂರಶರ್ಮನ ಪ್ರಾಕೃತ ಶಾಸನ ದೊರೆತಿದೆ. ಕದಂಬರು 4 ರಿಂದ 6ನೆಯ ಶತಮಾನದವರೆಗೂ ಈ ಪ್ರದೇಶವನ್ನು ಆಳಿದರು. 6ನೆಯ ಶತಮಾನದ ಕೊನೆಯ ಹೊತ್ತಿಗೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ ಚಳುಕ್ಯರು ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಪ್ರಬಲ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದರು. ಎರಡನೆಯ ಪುಲಕೇಶಿಯ ಕಾಲದಲ್ಲಿ (610-642) ಈ ಸಾಮ್ರಾಜ್ಯ ಅತ್ಯುನ್ನತ ವೈಭವವನ್ನು ಕಂಡಿತು. 753ರಲ್ಲಿ ರಾಷ್ಟ್ರಕೂಟರ ದಂತಿದುರ್ಗ ಚಾಳುಕ್ಯರ ಆಳ್ವಿಕೆಯನ್ನು ಕೊನೆಗಾಣಿಸಿದ. 973 ರವರೆಗೂ ಆಳಿದ ರಾಷ್ಟ್ರಕೂಟರು ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಎರಡು ಶತಮಾನಗಳ ಕಾಲ ಭಾರತದ ಪ್ರಮುಖ ರಾಜಕೀಯ ಶಕ್ತಿಯಾಗಿ ಆಳಿದರು. ಈ ಅವಧಿಯಲ್ಲಿ ತಲಕಾಡಿನ ಗಂಗರು, ನೊಳಂಬರು - ಈ ಜಿಲ್ಲೆಯ ಕೆಲವು ಭಾಗಗಳನ್ನು ರಾಷ್ಟ್ರಕೂಟರ ಸಾಮಂತರಾಗಿ ಆಳುತ್ತಿದ್ದುದು ತಿಳಿದುಬರುತ್ತದೆ.

ಕಲ್ಯಾಣಿಚಾಳುಕ್ಯ ವಂಶಸ್ಥನಾದ ಎರಡನೆಯ ತೈಲಪ 973ರಲ್ಲಿ ರಾಷ್ಟ್ರಕೂಟರನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ. ಬಿದರೆ ಜಿಲ್ಲೆಯ ಕಲ್ಯಾಣದಿಂದ ಆಳಿದ ಇವರು ಹಿಂದಿನ ಸಾಮ್ರಾಜ್ಯ ವ್ಯವಸ್ಥೆಯನ್ನು ಮುಂದುವರಿಸಿದರು. ಆದರೆ ಇವರ ಕಾಲದಲ್ಲಿ ಹೊಯ್ಸಳ ವಿಷ್ಣುವರ್ಧನ (1108-42) ಬನವಾಸಿ, ಹಾನಗಲ್ಲು ಮತ್ತು ಉಚ್ಚಂಗಿ ಪ್ರದೇಶಗಳನ್ನು ವಶಪಡಿಸಿಕೊಂಡ. ಮುಂದೆ ಹೊಯ್ಸಳರು ಚಾಳುಕ್ಯರ ಸಾಮಂತರಾಗಿ ಮತ್ತು ಸ್ವತಂತ್ರವಾಗಿ ಈ ಜಿಲ್ಲೆಯ ಮೇಲೆ ಹಿಡಿತ ಹೊಂದಿದ್ದರು. ಚಾಳುಕ್ಯರು 12ನೆಯ ಶತಮಾನದ ಕೊನೆಯ ಹೊತ್ತಿಗೆ ನಿರ್ಗಮಿಸಿದರು. ಮುಂದೆ ಈ ಪ್ರದೇಶ ಹೊಯ್ಸಳರು ಮತ್ತು ದೇವಗಿರಿಯ ಸೇವುಣರ ನಡುವಿನ ಸಂಘರ್ಷದ ವಲಯಕ್ಕೆ ಸೇರಿತು. ರಾಜಕೀಯ ಅಸ್ಥಿರತೆ ಇದ್ದ 12ನೆಯ ಶತಮಾನದ ಉತ್ತರಾರ್ಧ ಭಾಗದಲ್ಲಿ ಉಚ್ಚಂಗಿಯಿಂದ ಪಾಂಡ್ಯ ಮನೆತನದ ಸ್ಥಳೀಯ ಅರಸರು ಆಳುತ್ತಿದ್ದು, ಅವರಿಗೆ ಈ ಜಿಲ್ಲೆಯ ಕೆಲವು ಪ್ರದೇಶಗಳು ಸೇರಿದ್ದವು. ಕದಂಬ ಮನೆತನದ ಸಾಮಂತರು ಇಲ್ಲಿ ಆಳಿದ್ದು ಕಂಡುಬರುತ್ತದೆ. ಸಿಂದರು ಹೊಯ್ಸಳರಿಗೆ ಮತ್ತು ಸೇವುಣರಿಗೆ ಸಾಮಂತರಾಗಿ ಆಳುತ್ತಿದ್ದರು. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಿಂದ ಆಳುತ್ತಿದ್ದ ನಿಡಗಲ್ಲು ಚೋಳರಿಗೆ ಈ ಜಿಲ್ಲೆಯ ಕೆಲವು ಭಾಗಗಳು ಸೇರಿದ್ದವು. ಇವರನ್ನು 1285ರಲ್ಲಿ ಹೊಯ್ಸಳ ಎರಡನೆಯ ನರಸಿಂಹ ಮೂಲೋತ್ಪಾಟನೆ ಮಾಡಿದ. ಹೊಯ್ಸಳರು ಮತ್ತು ಸೇವುಣರ ಅಧೀನದಲ್ಲಿ ಬೇರೆ ಬೇರೆ ಕಾಲಕ್ಕೆ ಸಾಮಂತರಾಗಿದ್ದ ಕುಮ್ಮಟದ ಕಂಪಿಲ ಅರಸರು ಕೆಲವು ಕಾಲ ಇಲ್ಲಿನ ಪ್ರದೇಶಗಳ ಮೇಲೆ ನಿಯಂತ್ರಣ ಹೊಂದಿದ್ದರು.

ಹೊಯ್ಸಳರು ಮತ್ತು ಸೇವುಣರು ಅವನತಿ ಹೊಂದಲು 14ನೆಯ ಶತಮಾನದ ಮಧ್ಯಭಾಗದಲ್ಲಿ ದೆಹಲಿಯ ಸುಲ್ತಾನರು ನಡೆಸಿದ ದಾಳಿಗಳು ಪ್ರಮುಖ ಕಾರಣಗಳಾದವು. 1336ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯಕ್ಕೆ ತುಂಗಭದ್ರಾ ತಟದ ಹಂಪೆ ರಾಜಧಾನಿಯಾಯಿತು. ಆಗಿನಿಂದ ಶತಮಾನಗಳ ಕಾಲ ಈ ಜಿಲ್ಲೆಯೇ ವಿಜಯನಗರದ ಸಾಮ್ರಾಜ್ಯದ ಭಾಗವಾಗಿತ್ತು. ಆಗ ಇಲ್ಲಿ ಕಟ್ಟಿಸಿದ ದೇವಾಲಯಗಳ ಬಗ್ಗೆ, ನೀಡಿದ ದಾನಗಳ ಬಗ್ಗೆ, ಸ್ಥಾಪಿಸಿದ ಅಗ್ರಹಾರಗಳ ಬಗ್ಗೆ ಹಲವಾರು ಶಾಸನಗಳು ಸಾಕ್ಷಿಯಾಗಿವೆ. ಆಗ ಜಗಳೂರು ಸೀಮೆ, ಹರಿಹರಸೀಮೆ, ಮಲೆಯಬೆನ್ನೂರು ಮೊದಲಾದುವು ಸಾಮ್ರಾಜ್ಯದ ಜಹಗೀರುಗಳಾಗಿದ್ದು ಅವನ್ನು ತಮ್ಮ ಪ್ರೀತಿ ಪಾತ್ರ ಅಧಿಕಾರಿಗಳಿಗೆ ನೀಡಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಿ ಸಾಮಂತರು ಮತ್ತು ನಾಯಕತನ ಮಾಡಿಕೊಂಡಿದ್ದ ಹಲವಾರು ಅಧೀನ ಆಳ್ವಿಕೆಗಾರರು ಆ ಸಾಮ್ರಾಜ್ಯದ ಪತನದ ಅನಂತರ ತುಂಡರಸರಾಗಿ ಸ್ವತಂತ್ರವಾಗಿ ಆಳತೊಡಗಿದರು. ಅಂತಹ ಕೆಲವು ಪಾಳೆಯಗಾರರ ಮನೆತನಗಳು ಜಿಲ್ಲೆಯ ವಿವಿಧ ಭಾಗಗಳನ್ನು ಬೇರೆ ಬೇರೆ ಕಾಲದಲ್ಲಿ ತಮ್ಮ ಅಧೀನಕ್ಕೊಳಪಡಿಸಿಕೊಂಡಿದ್ದವು. ಅವುಗಳಲ್ಲಿ ಚಿತ್ರದುರ್ಗದ ನಾಯಕ ಮನೆತನ, ನಿಡುಗಲ್, ಹಾರತಿ, ನಾಯಕನಹಟ್ಟಿ, ಮಾಥೋಡು ಹಾಗೂ ಸಂತೆಬೆನ್ನೂರಿನ ಪಾಳೆಯಗಾರರು ಮುಖ್ಯವಾದವರು. ಬಿದನೂರು ರಾಜ್ಯಕ್ಕೆ ಈ ಜಿಲ್ಲೆ ಪೂರ್ವದ ಸರಹದ್ದು ಪ್ರದೇಶವಾಗಿತ್ತು. ರಾಣಿ ಚನ್ನಮಾಜಿ ಚನ್ನಗಿರಿಯಲ್ಲಿ ಕೋಟೆ ಕಟ್ಟಿಸಿದಳು. ಆಕೆಯ ಹೆಸರನ್ನೇ ಈ ಊರಿಗೆ ಇಡಲಾಯಿತು. ಚಿತ್ರದುರ್ಗ ನಾಯಕರ ಬಂಧುಗಳಾಗಿದ್ದ ನಾಯಕ ಮನೆತನವೊಂದು ಹರಪನಹಳ್ಳಿಯಿಂದ ಆಳುತ್ತಿತ್ತು. ಇವರಿಗೆ 460 ಗ್ರಾಮಗಳು ಸೇರಿದ್ದವು. ಹೈದರ್ ಮತ್ತು ಟಿಪ್ಪು ಸುಲ್ತಾನರು ಚಿತ್ರದುರ್ಗ ಮತ್ತು ಹರಪನಹಳ್ಳಿ ಮನೆತನಗಳ ಅಂತ್ಯಕ್ಕೆ ಕಾರಣರಾದರು. ಮರಾಠರು ಮತ್ತು ಬಿಜಾಪುರದ ಸುಲ್ತಾನರು ಆಗಾಗ ಈ ಪ್ರದೇಶಗಳ ಮೇಲೆ ದಾಳಿ ಮಾಡುತ್ತಿದ್ದು ಅವರ ರಾಜಕೀಯ ಹಸ್ತಕ್ಷೇಪ ನಿರಂತರವಾಗಿದ್ದಿತು.

ದಾವಣಗೆರೆ ಜಿಲ್ಲೆ ಸ್ವಾತಂತ್ರ್ಯ ಹೋರಾಟಕ್ಕೆ ಹೆಚ್ಚಿನ ಕೊಡುಗೆ ನೀಡಿದೆ. ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸುಧಾಕರ ಹರ್ಡೇಕರ ಮಂಜಪ್ಪನವರು 1924ರಲ್ಲಿ ಹರಿಹರದಲ್ಲಿ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿದರು. 1931ರಲ್ಲಿ ಚಿತ್ರದುರ್ಗದಲ್ಲಿ ಇವರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ದೊಡ್ಡ ಸಮಾವೇಶ ಜರುಗಿತು. ದಾವಣಗೆರೆಯಲ್ಲಿ 1932ರಲ್ಲಿ ವಿದೇಶಿ ಬಟ್ಟೆಗಳಿಗೆ ಬೆಂಕಿ ಹಚ್ಚಲಾಯಿತು. ಎಸ್. ನಿಜಲಿಂಗಪ್ಪ, ಚಂದುರ್, ಎಸ್. ವಾಸುದೇವರಾವ್, ಬಳ್ಳಾರಿ ಸಿದ್ದಮ್ಮ, ನಾಗರತ್ನಮ್ಮ, ಎಂ. ಗೋವಿಂದರೆಡ್ಡಿ ಮೊದಲಾದವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳವಳಿ ಮುನ್ನಡೆಯಿತು. 1934ರಲ್ಲಿ ದಾವಣಗೆರೆಗೆ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ್ದು ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ನವಚೈತನ್ಯ ತುಂಬಿದ್ದಿತು. ಜಿಲ್ಲೆಯಲ್ಲಿ ಚಳವಳಿಯನ್ನು ಸಿದ್ಧಗೊಳಿಸಿ ನಡೆಸುವ ಕಾರ್ಯದಲ್ಲಿ ತೊಡಗಿದ್ದವರಲ್ಲಿ ಅ.ಹಿ. ಶಿವಾನಂದಸ್ವಾಮಿ, ಕೊಟಗಿ ಸಿದ್ದಲಿಂಗಪ್ಪ, 'ಪುಢಾರಿ' ಪತ್ರಿಕೆಯ ಮರಗಯ್ಯ, 'ಪ್ರಜಾಶಕ್ತಿ', ಪತ್ರಿಕೆಯ ಡಿ.ಎಂ. ರೇವಣಸಿದ್ದಯ್ಯ, ಖಾದಿಸಿದ್ದಪ್ಪ, ಎಂ. ಜಿ. ಬಸಪ್ಪ, ಎಚ್.ಎಸ್. ಕೊಟ್ರೂರಪ್ಪ, ಕೊಟ್ರೆನಂಜಪ್ಪ, ದೊಡ್ಡ ಹನುಮಂತಪ್ಪ, ಕಾಸಲ ಶ್ರೀನಿವಾಸಶೆಟ್ಟರು, ಇಬ್ರಾಹಿಂ ಸಾಬ್, ಗುರುಶಾಂತಪ್ಪ, ಆಲೂರು ಬಸವರಾಜು, ಎಚ್.ಷಣ್ಮುಖಪ್ಪ ಮೊದಲಾದವರ ಹೆಸರುಗಳು ದಾಖಲಾಗಿವೆ.

ಸ್ವಾತಂತ್ರ್ಯ ಹೋರಾಟಕ್ಕೂ ಜನರ ಜ್ಞಾನ ವಿಸ್ತರಣೆಗೂ ಉತ್ತೇಜನ ನೀಡಿದ ಪ್ರಮುಖ ಮಾಧ್ಯಮವೆಂದರೆ ಪತ್ರಿಕೋದ್ಯಮ. 1906 ರಲ್ಲಿ ದಾವಣಗೆರೆಯಲ್ಲಿ ಧನುರ್ಧಾರಿ ಎಂಬ ಪತ್ರಿಕೆಯನ್ನು ಹರ್ಡೇಕರ್ ಮಂಜಪ್ಪನವರು ಪ್ರಾರಂಭಿಸಿ ಜಿಲ್ಲೆಯ ಪತ್ರಿಕೋದ್ಯಮ ರಂಗಕ್ಕೆ ನಾಂದಿ ಹಾಡಿದರು. ಈ ಪತ್ರಿಕೆಯಲ್ಲಿ ಬಾಲಗಂಗಾಧರ ತಿಲಕರ 'ಕೇಸರಿ' ಪತ್ರಿಕೆಯ ಸುದ್ದಿಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುತ್ತಿದ್ದರು. ಇದರಿಂದ ಅನೇಕ ರಾಷ್ಟ್ರೀಯ ವಿಷಯಗಳು ಜನರಿಗೆ ತಿಳಿಯುತ್ತಿದ್ದವು. ಮಂಜಪ್ಪನವರು ಶರಣ ಸಂದೇಶ ಎಂಬ ಇನ್ನೊಂದು ಪತ್ರಿಕೆಯನ್ನು ಹೊರತಂದು ಮಾನವ ಧರ್ಮದ ಬಗ್ಗೆ ಜನರಿಗೆ ತಿಳಿಯಪಡಿಸುತ್ತಿದ್ದರು, ಖಾದಿ ವಿಜಯ, ಉದ್ಯೋಗ - ಇವು ಇವರು ಆಲಮಟ್ಟಿಯಲ್ಲಿ ನೆಲೆಸಿದಾಗ ಹೊರತಂದ ಪತ್ರಿಕೆಗಳು, ಕಣಕುಪ್ಪಿಗುರುಪಾದಪ್ಪನವರು 1924ರಲ್ಲಿ ದಾವಣಗೆರೆ ಜನಸೇವಕ ಎಂಬ ಪತ್ರಿಕೆ ಆರಂಭಿಸಿದರು. ಅಂದಾನಯ್ಯನವರು 'ಸನ್ಮಾರ್ಗದರ್ಶನ' ಎಂಬ ಕನ್ನಡ ವಾರಪತ್ರಿಕೆ ಹೊರತಂದರು. 1944ರಲ್ಲಿ ಕಡ್ಲೆಬಾಳು ಶಾಮರಾಯರು 'ಸಂಜಯ' ಎಂಬ ಪತ್ರಿಕೆ ಆರಂಭಿಸಿದರು. ಮುಂದೆ ಇವರು ಸಂಯುಕ್ತ ಕರ್ನಾಟಕದ ಪ್ರಸಿದ್ಧ ಸಂಪಾದಕರಾದರು. ಬಸವರಾಜ ಕಟ್ಟೀಮನಿಯವರು ಸ್ವಾತಂತ್ರ್ಯ ಬಂದ ಹೊಸತರಲ್ಲಿ 'ಸ್ವತಂತ್ರ' ವಾರ ಪತ್ರಿಕೆ ಮತ್ತು 'ಉಷಾ' ಮಾಸ ಪತ್ರಿಕೆಯನ್ನು ಇಲ್ಲಿಂದ ಪ್ರಕಟಿಸಿದರು. ಕರ್ನಾಟಕ ಏಕೀಕರಣದ ಪ್ರತಿಪಾದಕ ಇಟಗಿ ವೇದಮೂರ್ತಿಯವರು 'ನೇತಾಜಿ' ಪತ್ರಿಕೆ ಆರಂಭಿಸಿದರು (1948).

ಜಿಲ್ಲೆಯ ಪ್ರಥಮ ದೈನಿಕ 'ಸಮಾಚಾರ'ವನ್ನು ನರಸಿಂಹ ಐಯ್ಯಂಗಾರರು ದಾವಣಗೆರೆಯಿಂದ ಪ್ರಕಟಿಸಿದರು. ಮಹದೇವ ಬಣಕಾರರು ಕೆಲಕಾಲ ಜಾಗೃತಿ ಎಂಬ ಮಾಸಪತ್ರಿಕೆ ನಡೆಸಿದರು. ಅನಂತರ ವಿಚಾರವಾಣಿ, ಬಹಿರಂಗ, ಎಚ್ಚರಿಕೆ, ಛಲದಂಕಮಲ್ಲ, ವಿಚಾರ ಕ್ರಾಂತಿ, ನಗರವಾಣಿ, ಜನತಾವಾಣಿ, ದಾವಣಗೆರೆ ಟೈಮ್ಸ್, ಮಲ್ನಾಡುವಾಣಿ,

ಜನಮಿಡಿತ ಮುಂತಾದ ವಾರ ಹಾಗೂ ದಿನಪತ್ರಿಕೆಗಳು ದಾವಣಗೆರೆ ಜಿಲ್ಲೆಯ ಪತ್ರಿಕೋದ್ಯಮ ರಂಗವನ್ನು ಶ್ರೀಮಂತಗೊಳಿಸಿದವು. (ಡಿ.ಎಸ್.ಜೆ.)

**ದಾವಣಗೆರೆ ತಾಲ್ಲೂಕು :** ತಾಲ್ಲೂಕು ಮತ್ತು ಪಟ್ಟಣ. ತಾಲ್ಲೂಕನ್ನು ಪೂರ್ವದಲ್ಲಿ ಚಿತ್ರದುರ್ಗ, ಈಶಾನ್ಯದಲ್ಲಿ ಜಗಳೂರು, ಆಗ್ನೇಯದಲ್ಲಿ ಹೊಳಲ್ಕೆರೆ, ಪಶ್ಚಿಮದಲ್ಲಿ ಹರಿಹರ ತಾಲ್ಲೂಕುಗಳೂ ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆ ಇವು ಸುತ್ತುವರಿದಿವೆ. ದಾವಣಗೆರೆ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನಲ್ಲಿ ಆನಗೋಡು, ದಾವಣಗೆರೆ ಮತ್ತು ಮಾಯಾಕೊಂಡ ಹೋಬಳಿಗಳೂ ಒಟ್ಟು 174 ಗ್ರಾಮಗಳೂ 2 ಪಟ್ಟಣಗಳೂ ಇವೆ. ತಾಲ್ಲೂಕಿನ ವಿಸ್ತೀಣ 956.6 ಚ.ಕಿಮೀ.

ತಾಲ್ಲೂಕಿನಲ್ಲಿ ಹೆಚ್ಚು ಒಣಭೂಮಿ ಇದೆ. ಮಾಯಾಕೊಂಡದಿಂದ ಅಣಜಿ ವರೆಗೆ ತಾಲ್ಲೂಕಿನ ಪೂರ್ವಭಾಗದಲ್ಲಿ ಬೆಟ್ಟದ ಸಾಲಿದ್ದರೂ ಇದು ಎತ್ತರವಿಲ್ಲದ ಗುಡ್ಡಗಳ ಮಾದರಿ. ಈ ತಾಲ್ಲೂಕಿನ ಮಾಯಕೊಂಡ ಗ್ರಾಮದ ಹತ್ತಿರ ಗಟ್ಟಿ ಎಳೆಯ ಕಲ್ನಾರು ಮತ್ತು ದೇವರಬೆಳ್ಳಿಕೆರೆಯ ಹತ್ತಿರ ಸುಣ್ಣ ಸಿಗುತ್ತವೆ. ತಾಲ್ಲೂಕಿನ ನೈಋತ್ಯದ ಸ್ವಲ್ಪ ಭಾಗದಲ್ಲಿ ಕೆಂಪು ಮಣ್ಣು ಇದೆ. ಉಳಿದ ಭಾಗ ಕಪ್ಪು ಎರೆ ಮಣ್ಣಿನಿಂದ ಕೂಡಿದೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 639.9ಮಿಮೀ.

ಈ ತಾಲ್ಲೂಕಿನ ಪಶ್ಚಿಮದಲ್ಲಿ ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಯ ಗಡಿಯಾಗಿ ಹರಿಯುವ ತುಂಗಭದ್ರಾ ನದಿಯೇ ದಾವಣಗೆರೆ ತಾಲ್ಲೂಕಿಗೆ ಸಮೀಪವಿರುವ ನದಿಯೆನ್ನಬಹುದು.

ಲಕ್ಕವಳ್ಳಿಯ ಭದ್ರಾ ಜಲಾಶಯದಿಂದ ತೆಗೆದಿರುವ ಮಲೆಬೆನ್ನೂರು ಮತ್ತು ದಾವಣಗೆರೆ ಶಾಖೆಯ ಎರಡು ನಾಲೆಗಳು ದಾವಣಗೆರೆಯನ್ನು ಹಾದುಹೋಗುತ್ತವೆ. ಹೊಳಲ್ಕೆರೆ ತಾಲ್ಲೂಕಿನ ಪಶ್ಚಿಮದ ಬೆಟ್ಟದಲ್ಲಿ ಹುಟ್ಟುವ ಸ್ಯಾಗಲಹಳ್ಳ ದಾವಣಗೆರೆ ತಾಲ್ಲೂಕಿನ ಮುಖಾಂತರ ಹರಿದು ತುಂಗಭದ್ರಾವನ್ನು ಹರಿಹರ ನಗರದ ಹತ್ತಿರ ಸೇರುತ್ತದೆ. ಈ ತಾಲ್ಲೂಕಿನಲ್ಲಿ ಹೆಚ್ಚಿನ ವ್ಯವಸಾಯವೆಲ್ಲ ಮಳೆ ಮತ್ತು ಕೆರೆ - ಬಾವಿಗಳ ನೀರನ್ನು ಅವಲಂಬಿಸಿದೆ. ದಾವಣಗೆರೆ ನಾಲೆಯ ಆಶ್ರಯದಲ್ಲಿ ಈ ತಾಲ್ಲೂಕಿನ 56,000 ಎಕರೆಗೆ ನೀರು ಒದಗುತ್ತದೆ. ನೀರನ್ನು ಹೆಚ್ಚು ಹಿಡಿದಿಟ್ಟುಕೊಳ್ಳುವ ಗುಣವುಳ್ಳ ಫಲವತ್ತಾದ ಕರಿಮಣ್ಣಿನ ಭೂಮಿ ಇದ್ದು ಮಳೆಗಾಲದಲ್ಲಿ 50-63 ಸೆಂಮೀ ನಷ್ಟು ಮಳೆ ಬೀಳುವುದರಿಂದ ತಾಲ್ಲೂಕಿನಲ್ಲಿ ವ್ಯವಸಾಯ ಚೆನ್ನಾಗಿದೆ. ಜೋಳ, ಹತ್ತಿ, ನೆಲಗಡಲೆ, ದ್ವಿದಳ ಧಾನ್ಯಗಳು, ರಾಗಿ, ಕಬ್ಬು, ಬತ್ತ - ಇವನ್ನು ಬೆಳೆಯುತ್ತಾರೆ.

ದಾವಣಗೆರೆ ತಾಲ್ಲೂಕು ಇಂದು ಕೈಗಾರಿಕೆಗೆ ಪ್ರಸಿದ್ಧವಾಗಿದೆ. ಇಲ್ಲಿ ಅನೇಕ ಹತ್ತಿ ಮತ್ತು ತೈಲೋತ್ಪಾದನ ಕಾರ್ಖಾನೆಗಳಿವೆ. ಉತ್ತಮ ರೈಲು ಮತ್ತು ವಾಹನ ಸಂಪರ್ಕವುಳ್ಳ ಮಾರ್ಗಗಳಿದ್ದು ತಾಲ್ಲೂಕಿನಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥಿತವಾಗಿದ್ದು ವ್ಯಾಪಾರವಾಣಿಜ್ಯಾಭಿವೃದ್ಧಿಗೆ ನೆರವಾಗಿವೆ.

ಪ್ರೌಢಶಾಲೆಗಳೂ ವೈದ್ಯಕೀಯ, ತಾಂತ್ರಿಕ ತರಬೇತಿ, ಕುಶಲ ಕೈಗಾರಿಕಾ ತರಬೇತಿ ಶಾಲೆ, ಉಪಾಧ್ಯಾಯ ತರಬೇತಿ ಶಾಲೆಗಳೂ ಇದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಕುವೆಂಪು ವಿಶ್ವವಿದ್ಯಾಲಯವು ಇಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆದಿದೆ. ಮಾಯಾಕೊಂಡ, ಹೊನ್ನೂರು, ಕೊಂಡಗಾಲ ಗ್ರಾಮಗಳಲ್ಲಿ ವೈದ್ಯಕೀಯ ಸೌಲಭ್ಯವಿರುವುದರ ಜೊತೆಗೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಇದೆ.

ದಾವಣಗೆರೆಗೆ 16ಕಿಮೀ ಆಗ್ನೇಯದಲ್ಲಿರುವ ಹನ್ನೊಂದನೆಯ ಶತಮಾನದ ಸಿದ್ಧೇಶ್ವರ ದೇವಾಲಯವಿರುವ ಆನಗೋಡು, ಸುಮಾರು 450ರ ಕಾಲದ ಕದಂಬರ ಶಾಸನವಿರುವ ದಾವಣಗೆರೆಯಿಂದ ಪೂರ್ವಕ್ಕೆ 19 ಕಿಮೀ ದೂರದಲ್ಲಿ ಜಗಳೂರು - ದಾವಣಗೆರೆ ಮಾರ್ಗಮಧ್ಯದಲ್ಲಿರುವ ಅಣಜಿ, ದಾವಣಗೆರೆಗೆ ಸಮೀಪದಲ್ಲಿರುವ ಆನೇಕೊಂಡ ತಾಲ್ಲೂಕಿನ ಪ್ರಮುಖ ಸ್ಥಳಗಳಲ್ಲಿ ಕೆಲವು. ಬಾಡ 11-12ನೆಯ ಶತಮಾನದಲ್ಲಿ ಅಭಿವೃದ್ಧಿಹೊಂದಿದ್ದ ಒಂದು ಅಗ್ರಹಾರ ನಗರವಾಗಿತ್ತು. ಹಿಂದಿನ ದೇವಾಲಯಗಳ ಅವಶೇಷಗಳನ್ನು ಇಲ್ಲಿ ಕಾಣಬಹುದು. ಹದಡಿಯಲ್ಲಿ ಪಾಳೆಯಗಾರರರ ಕಾಲದ ಹನುಮಾನ್ ದೇವಾಲಯವಿದೆ. ಕಬ್ಬೂರು ಮಾಯ ಕೊಂಡಕ್ಕೆ 6 ಕಿಮೀ ದೂರದಲ್ಲಿದೆ. 12ನೆಯ ಶತಮಾನದಲ್ಲಿ ಇದೂ ಒಂದು ಅಗ್ರಹಾರವಾಗಿತ್ತು. ಇಲ್ಲಿ ಪ್ರಾಚೀನ ಕಲ್ಲೇಶ್ವರ ದೇವಾಲಯ ಇದೆ. ಹಿಂದೆ ಅಗ್ರಹಾರವಾಗಿದ್ದ ಕೊಡಗನೂರಿನಲ್ಲೂ ಅನೇಕ ಪಾಳು ದೇವಾಲಯಗಳನ್ನು ನೋಡಬಹುದು. ದಾವಣಗೆರೆಯ ಆಗ್ನೇಯಕ್ಕೆ 13 ಕಿಮೀ ದೂರದಲ್ಲಿರುವ ಕೊಗ್ಗನೂರಿನಲ್ಲಿ 11ನೆಯ ಶತಮಾನದ ಈಶ್ವರ ದೇವಾಲಯ ಮತ್ತು ಒಂದು ಹನುಮಂತ ದೇವಾಲಯ ಇದೆ.

ದಾವಣಗೆರೆಯ ದಕ್ಷಿಣಕ್ಕಿರುವ ಲೊಕ್ಕಿಕೆರೆ (ನೋಡಿ) ಚಾಳುಕ್ಯರ ಕಾಲದಲ್ಲಿ ಅಗ್ರಹಾರವಾಗಿತ್ತು. ಮಳಲಕೆರೆ ಗ್ರಾಮದಲ್ಲಿ 1701ರ ಈಶ್ವರ ದೇವಾಲಯವಿದೆ. ವೀರಗಲ್ಲುಗಳೂ ಮತ್ತು ಮಾಸ್ತಿಕಲ್ಲುಗಳೂ ಇಲ್ಲಿವೆ. ಬೆಂಗಳೂರು ಪುಣೇ ರೈಲುಮಾರ್ಗದಲ್ಲಿರುವ ಮಾಯಕೊಂಡದಲ್ಲಿ ಕೇಶವ ಮತ್ತು ಓಬಳ ನರಸಿಂಹ ದೇವಾಲಯಗಳಿವೆ. ಶಂಕರನಹಳ್ಳಿಯಲ್ಲಿ ರಂಗನಾಥಸ್ವಾಮಿ ದೇವಾಲಯವಿದೆ. ಈ ತಾಲ್ಲೂಕಿನ ಆವರಗೊಳದಲ್ಲಿ ಪ್ರತಿ ಮಾಘಮಾಸದಲ್ಲಿ ಜಾತ್ರೆ ನಡೆಯುತ್ತದೆ.

ದಾವಣಗೆರೆ ಈ ತಾಲ್ಲೂಕಿನ ಮುಖ್ಯ ಪಟ್ಟಣ ಮತ್ತು ಆಡಳಿತ ಕೇಂದ್ರ. ಚಿತ್ರದುರ್ಗದ ವಾಯುವ್ಯಕ್ಕೆ ಸುಮಾರು 61 ಕಿಮೀ ದೂರದಲ್ಲಿದೆ. ಈಗ ನಗರ ಕೆಲವು ಬಡಾವಣೆಗಳೊಂದಿಗೆ ವಿಸ್ತಾರಗೊಂಡಿದೆ. ಪುಣೆ-ಬೆಂಗಳೂರು ಹೆದ್ದಾರಿಯಲ್ಲಿದ್ದು ಇದೊಂದು ಪ್ರಮುಖ ರೈಲು ನಿಲ್ದಾಣವಾಗಿ ಸುತ್ತಲ ಅನೇಕ ಊರುಗಳೊಡನೆ ಉತ್ತಮ ರಸ್ತೆ ಸೌಲಭ್ಯವಿದ್ದು ಈ ನಗರ ಕರ್ನಾಟಕದ ಪ್ರಮುಖ ವ್ಯಾಪಾರ ವಾಣಿಜ್ಯ ಕೇಂದ್ರಗಳಲ್ಲೊಂದಾಗಿದೆ.

ಹಳೆ ದಾವಣಗೆರೆ ಪೂರ್ವಕ್ಕೂಹೊಸ ಬಡಾವಣೆ ಪಶ್ಚಿಮಕ್ಕೂ ಮಧ್ಯೆ ರೈಲು ಹಾದಿ ಹಾದುಹೋಗಿದೆ. ಇಡೀ ನಗರ ಒಂದು ಕೈಗಾರಿಕಾ ಕೇಂದ್ರದಂತೆ ಕಾಣುತ್ತದೆ. ಹತ್ತಿ ಕಾರ್ಖಾನೆ ಮತ್ತು ಎಣ್ಣೆ ಉತ್ಪಾದನೆ ಕಾರ್ಖಾನೆಗಳು ಇಲ್ಲಿ ಇದ್ದು ದಾವಣಗೆರೆ ಹತ್ತಿ ಉತ್ಪಾದಿತ ವಸ್ತುಗಳಿಗೆ, ಬಟ್ಟೆಗಳಿಗೆ, ಕಂಬಳಿಗಳಿಗೆ ಮತ್ತು ವನಸ್ಪತಿಗೆ ಪ್ರಸಿದ್ಧವಾಗಿದೆ. ಸರ್ಕಾರ, ನಗರಸಭೆ ಹಾಗೂ ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳೂ ಕೈಗಾರಿಕಾ ಮತ್ತು ಶಿಕ್ಷಣ ತರಬೇತಿ ಶಾಲಾ ಕಾಲೇಜುಗಳೂ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಮತ್ತು ಇತರ ಕಾಲೇಜುಗಳೂ ಇವೆ. ಕುಡಿಯಲು ತುಂಗಭದ್ರಾ ನದಿ ನೀರನ್ನು ಬಳಸಿಕೊಳ್ಳುತ್ತಿದ್ದಾರೆ. ಇಲ್ಲಿ ಸುಂದರ ಉದ್ಯಾನವನಗಳಿವೆ. ದಾವಣಗೆರೆ ನಗರಸಭಾಡಳಿತಕ್ಕೆ ಒಳಪಟ್ಟಿದೆ. ಈ ಊರಿನಲ್ಲಿ ವೀರಭದ್ರ, ದೇವಾಲಯ, ಮಹಲಿಂಗರಂಗರ ಸಮಾಧಿ, ಶಿವಶರಣ ಬರಕ್ಕೇಶ್ವರ, ಸಮಾಧಿ ಮತ್ತು ದೇವಾಲಯ, ನಗರದೇವತೆ ದುರ್ಗಾಂಬೆಯ (ದುಗ್ಗಮ್ಮ) ದೇವಾಲಯ ಇವೆ. ಪ್ರತಿ ಫಾಲ್ಗುಣ ಮಾಸದಲ್ಲಿ ಇಲ್ಲಿ ನಡೆಯುವ (ದುಗ್ಗಮ್ಮ) ಜಾತ್ರೆ ವೈಭವದಿಂದ ಜರುಗುತ್ತದೆ. (ಪಿ.ಕೆ.ವೈ.ಡಿ.)

**ದಾಸಪ್ಪ, ಎಚ್. ಸಿ. :** 1894-1964. ಖ್ಯಾತ ಸ್ವಾತಂತ್ರ್ಯಹೋರಾಟಗಾರರು. 1894 ಡಿಸೆಂಬರ್ 5ರಂದು ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಜನಿಸಿದರು. ಇವರ ತಂದೆ ಚೆನ್ನಯ್ಯ. ತಾಯಿ ತಿಮ್ಮಮ್ಮ. ಇವರ ಪೂರ್ವಿಕರ ಸ್ಥಳ ಹಳೆಯ ಮೈಸೂರು ಸಂಸ್ಥಾನದ ಹಿರಳ್ಳಿ. ಚೆನ್ನಯ್ಯನವರು ಮಡಿಕೇರಿಯಲ್ಲಿ ನ್ಯಾಯಾಧೀಶರಾಗಿ ಖ್ಯಾತಿಪಡೆದಿದ್ದರು. ಅವರಿಗೆ ಅಂದಿನ ಸರ್ಕಾರ ರಾವ್ ಸಾಹೇಬ್ ಎಂಬ ಬಿರುದನ್ನು ನೀಡಿತ್ತು. ತಮ್ಮ ಕೆಲಸದಿಂದ ನಿವೃತ್ತರಾದ ಮೇಲೆ ಬೆಂಗಳೂರಿಗೆ ಬಂದು ನೆಲಸಿದರು. ಅವರು ಸಂಸ್ಥಾನದಲ್ಲಿ ಹಿಂದುಳಿದ ವರ್ಗದವರ ಏಳಿಗೆಗೆ ಆರಂಭವಾದ ಜಸ್ಟಿಸ್ ಚಳವಳಿಯ ಸ್ಥಾಪಕರಲ್ಲೊಬ್ಬರಾಗಿದ್ದರು.

ದಾಸಪ್ಪನವರು ಮಹಾರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆ ಮುಗಿಸಿ ಮದರಾಸಿನಲ್ಲಿ ಬಿ.ಎ. ಪದವಿ ಪಡೆದರು. ಅನಂತರ ಮುಂಬಯಿಗೆ ತೆರಳಿ ಅಲ್ಲಿ ನ್ಯಾಯಶಾಸ್ತ್ರದ ವ್ಯಾಸಂಗಮಾಡಿದರು. 1919ರಲ್ಲಿ ಬೆಂಗಳೂರಿನಲ್ಲಿ ವಕೀಲರಾಗಿ ಉದ್ಯೋಗವನ್ನು ಆರಂಭಿಸಿದ ಇವರು

1921ರಲ್ಲಿ ಮೈಸೂರಿಗೆ ಬಂದು ನೆಲಸಿ ವಕೀಲಿವೃತ್ತಿಯನ್ನೂ ಸಾರ್ವಜನಿಕ ಸೇವಾಕಾರ್ಯವನ್ನೂ ಮುಂದುವರಿಸಿದರು. 1926ರಲ್ಲಿ ಸುಪ್ರಸಿದ್ಧ ಸಮಾಜಸುಧಾರಕ ಕೆ.ಎಚ್.ರಾಮಯ್ಯನವರ ಮಗಳು ಶ್ರೀಮತಿ ಯಶೋಧರಮ್ಮನವರನ್ನು ವಿವಾಹವಾದರು.

1937ರ ವರೆಗೆ ಸಂಯುಕ್ತ ಪ್ರಜಾಪಕ್ಷದ ಮುಖಂಡರಾಗಿ ಮೈಸೂರು ಪುರಸಭೆ ಹಾಗೂ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಿಂದುಳಿದ ವರ್ಗಗಳ ಮುನ್ನಡೆಗೆ ನಡೆದ ಚಳವಳಿಯಲ್ಲಿ ಅಗ್ರನಾಯಕರಾಗಿದ್ದರು. 1937ರಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷ ಸೇರಿದರು. 1939ರಲ್ಲಿ ಅದರ ಅಧ್ಯಕ್ಷರಾದರು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ರಚನೆಗಾಗಿ ನಡೆದ ಸತ್ಯಾಗ್ರಹ ಹೋರಾಟಗಳಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಮನೆಗೆ ಹೋಗಿ ಬಂದರು. ಇವರ ಚಟುವಟಿಕೆಗಳಿಂದ ಕೆರಳಿದ ಅಂದಿನ ಸರ್ಕಾರ ಇವರ ವಕೀಲಿ ಸನ್ನದನ್ನು ರದ್ದು ಮಾಡಿತು. ಆ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಯವರು 13-7-1940ರ ಹರಿಜನ ಪತ್ರಿಕೆಯಲ್ಲಿ ದಾಸಪ್ಪನವರ ಬಗ್ಗೆ ಈ ರೀತಿ ಬರೆದಿದ್ದಾರೆ: "ಶ್ರೀದಾಸಪ್ಪನವರು ಮೈಸೂರಿನ ಅತ್ಯಂತ ಗೌರವಾನ್ವಿತ ವ್ಯಕ್ತಿ. ಇಪ್ಪತ್ತು ವರ್ಷಗಳ ವಕೀಲಿ ಕೆಲಸದ ಅನುಭವವುಳ್ಳವರು. ಮೈಸೂರಿನ ಒಂದು ಭಾಗದಲ್ಲಿ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದ ಕೆಚ್ಚು ಅವರದು. ಜಸ್ಟಿಸ್ ನಾಗೇಶ್ವರ ಐಯರ್ ಅವರಿಂದ ನಡೆಯಲಿದ್ದ ಅಧಿಕೃತ ವಿಚಾರಣೆಯನ್ನು ಬಹಿಷ್ಕರಿಸಬೇಕೆಂದು ರಾಜಕೀಯ ಕೈದಿಗಳಿಗೆ ತಿಳಿಸಿ ಹೇಳುವ ಸಾಹಸ ಮಾಡಿದ್ದರು. ಆ ಕೆಲಸವನ್ನು ಅವರು ನನ್ನ ಸೂಚನೆಯ ಮೇರೆಗೆ ಮಾಡಿದ್ದರು. ಈ ಗುರುತರ ಅಪರಾಧಗಳಿಗಾಗಿ ದಾಸಪ್ಪನವರು ಎಂದೆಂದಿಗೂ ವಕೀಲಿ ವೃತ್ತಿಯನ್ನು ಕೈಗೊಳ್ಳದಂತೆ ಮಾಡಲಾಗಿದೆ. ದಾಸಪ್ಪನವರನ್ನು ನಾನು ಚೆನ್ನಾಗಿ ಬಲ್ಲೆ. ಅವರು ನಿಷ್ಕಳಂಕ ಚಾರಿತ್ರ್ಯವುಳ್ಳವರು; ಅತ್ಯಂತ ಪ್ರಾಮಾಣಿಕರು; ಅವರು ತಮ್ಮ ಕೈಲಾದಮಟ್ಟಿಗೂ ಅಹಿಂಸೆಯನ್ನು ಅನುಸರಿಸಲು ಸ್ಥೈರ್ಯದಿಂದ ಯತ್ನಿಸುತ್ತಿದ್ದಾರೆ. ಬ್ರಿಟಿಷ್ ಇಂಡಿಯಾದ ದೇಶಭಕ್ತ ವಕೀಲರು ಏನು ಮಾಡಿದ್ದಾರೋ ಅಥ‌ವಾ ಇತರ ವಕೀಲರು ಏನು ಮಾಡಲಿಲ್ಲವೋ ಅದನ್ನು ದಾಸಪ್ಪನವರು ಮಾಡಿದ್ದಾರೆ."

ಭಾರತ ಸ್ವಾತಂತ್ರ್ಯ ಪಡೆದ ಅನಂತರ ದಾಸಪ್ಪನವರು ರಾಜಕೀಯ ಹಾಗೂ ವಿಧಾಯಕ ಸೇವಾಕ್ಷೇತ್ರಗಳಲ್ಲಿ ಬಹುವಾಗಿ ದುಡಿದರು. ಶ್ರೀ ರಾಮಕೃಷ್ಣಾಶ್ರಮ, ಕಸ್ತೂರಬಾ ಗಾಂಧೀ ಸ್ಮಾರಕ ಸಂಸ್ಥೆ, ಗಾಂಧೀ ಸ್ಮಾರಕ ನಿಧಿ ಹಾಗೂ ಹಿಂದಿ ಪ್ರಚಾರ ಸಭೆ ಮುಂತಾದ ಸಂಸ್ಥೆಗಳ ಮೂಲಕ ಜನಸೇವೆ ಸಲ್ಲಿಸಿದರು. ಹಿಂದಿನ ಮೈಸೂರು ಸಂಸ್ಥಾನದಲ್ಲಿ 1947ನೆಯ ಅಕ್ಟೋಬರ್‌ನಿಂದ 1952ರ ವರೆಗೆ ಕೈಗಾರಿಕೆ ಮತ್ತು ಹಣಕಾಸಿನ ಮಂತ್ರಿಯಾಗಿದ್ದರು. 1954ರಲ್ಲಿ ರಾಜ್ಯ ಸಭೆಯ ಸದಸ್ಯರಾದರು. ಅನಂತರ 1957ಮತ್ತು 1962ರ ಮಹಾ ಚುನಾವಣೆಗಳಲ್ಲಿ ಲೋಕಸಭೆಗೆ ಚುನಾಯಿತರಾದರು. ಸಂಸತ್ತಿನ ಅಂದಾಜು ಸಮಿತಿ ಅಧ್ಯಕ್ಷರಾಗಿ ಮಹತ್ತರ ಸೇವೆ ಸಲ್ಲಿಸಿದರು. 1963ರಲ್ಲಿ ಕೇಂದ್ರ ಮಂತ್ರಿ ಮಂಡಲದ ರೈಲ್ವೆ ಸಚಿವರಾದರು; ಅನಂತರ ಕೈಗಾರಿಕಾ ಸಚಿವರಾದರು. ಆ ಪದವಿಯಲ್ಲಿರುವಾಗಲೇ 1964 ಅಕ್ಟೋಬರ್ 29ರಂದು ದೆಹಲಿಯಲ್ಲಿ ನಿಧನರಾದರು. (ಬಿ.ಆರ್.ಪಿ.)

**ದಾಸಯ್ಯ:** ಕರ್ನಾಟಕದ ಜನಪದ ಸಂಪ್ರದಾಯದಲ್ಲಿ ವೈಷ್ಣವ ಪಂಥಕ್ಕೆ ಸೇರಿದ ಧಾರ್ಮಿಕ ವ್ಯಕ್ತಿ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಶುಭಾಶುಭ ಸಂದರ್ಭಗಳಲ್ಲಿ ಜೋಯಿಸನಂತೆ ಕೆಲಸ ನಿರ್ವಹಿಸುವ ವೃತ್ತಿಯನ್ನು ಕೈಗೊಂಡವ. ಇವನ ಉಡುಗೆತೊಡುಗೆ, ಪರಿಕರಗಳದು ಒಂದು ವೈಶಿಷ್ಟ್ಯ. ತಲೆಗೆ ಹಳದಿ ರುಮಾಲು ಹಾಗೂ ನೂಲಿನ ದಂಡೀಸರ, ಮೈಗೆ ನಿಲುವಂಗಿ, ಕೊರಳಿಗೆ ತುಳಸಿಹಾರ ಹಾಗೂ ಹನುಮಂತ ವಿಗ್ರಹವಿರುವ ದೊಡ್ಡ ಕಂಚಿನ ಪದಕ, ಬಲಗೈಯಲ್ಲಿ ಜಾಗಟೆ, ಎಡಗೈಯಲ್ಲಿ ಶಂಖ, ಹಣೆಯ ಮೇಲೆ ಮೂರು ನಾಮ,ಬಗಲಿಗೆ ಬನವಾಸಿ (ಭಿಕ್ಷೆಯ ಬಿದಿರ ಬುಟ್ಟಿ,) ವಿಶೇಷ ಸಂದರ್ಭಗಳಲ್ಲಿ ಹರೆಗು (ವರ್ತುಳಾಕಾರದ ಬಣ್ಣದ ತಲೆ), ಹನ್ನೆರಡಕ್ಕಿಂತ ಹೆಚ್ಚು ಗಂಟೆಗಳುಳ್ಳ ಬೆಳ್ಳಿ ಬಾಣ ಇವುಗಳನ್ನು ಉಪಯೋಗಿಸುವುದು ಕಂಡುಬರುತ್ತದೆ. ಇವನು ಉಪಯೋಗಿಸುವ ಹರೆಗು ಘಟೋತ್ಕಚನ ತಲೆಯೆಂಬ ನಂಬಿಕೆಯಿದೆ. ಈಗ ದಾಸಯ್ಯಗಳು ಬಾಣವೆಂದು ಹೇಳುವ ಒನಕೆ ಲಕ್ಷ್ಮಣನ ಮೇಲೆ ರಾವಣ ಪ್ರಯೋಗಿಸಿದ ಶಕ್ತ್ಯಾಯುಧವಂತೆ. ಉತ್ಸವಾದಿ ಸಂದರ್ಭಗಳಲ್ಲಿ ಇವರು ಒಡ್ಡುವ ಬಾಣದ ರೀತಿಯನ್ನು ನೋಡಿದರೆ ಹಿಂದೆ ಯುದ್ಧ ಸಮಯದಲ್ಲಿ ಇವರು ಆಯುಧವಾಹಕರಾಗಿಯೋ ರಕ್ಷಕರಾಗಿಯೋ ಇದ್ದಂತೆ ತೋರುತ್ತದೆ. ನೇಕಾರರು ಮತ್ತು ಬೋಯಿಗಳಲ್ಲಿ ದಾಸಯ್ಯಗಳಾಗುವುದು ಹೆಚ್ಚು. ದಾಸ ಒಕ್ಕಲಿಗರಲ್ಲೂ ಗಂಗಡಿಕಾರ ಒಕ್ಕಲಿಗರಲ್ಲೂ ದಾಸಯ್ಯಗಳಾಗುವುದು ಕೆಲವು ಕಡೆ ಕಂಡುಬರುತ್ತದೆ. ದಾಸಯ್ಯನಾಗಬೇಕಾದರೆ ಗುರುವಿನಿಂದ ವಿಧಿವತ್ತಾಗಿ ದೀಕ್ಷೆಪಡೆಯಬೇಕು. ಜೊತೆಗೆ ಅಷ್ಟಾಕ್ಷರೀ ಮಂತ್ರವನ್ನೂ ರಾಮಗದ್ಯ, ನರಸಿಂಹಗದ್ಯ, ವಿಷ್ಣುಪಾರಮ್ಯ ಮುಂತಾದ ಸ್ತೋತ್ರ ಪಾಠಗಳ ಉಪದೇಶವನ್ನೂ ಗುರುವಿನಿಂದ ಪಡೆಯಬೇಕು. ಹೀಗೆ ದೀಕ್ಷೆವಹಿಸಿ ಅನ್ನದಾನ ಮಾಡಿದಮೇಲೆ ಆತ ದಾಸಯ್ಯನಾಗುತ್ತಾನೆ. ದಾಸಯ್ಯಗಳು ತಮ್ಮನ್ನು ಗರುಡಗೋತ್ರದವರೆಂದು ಕರೆದುಕೊಳ್ಳುತ್ತಾರೆ. ಇವರು ಮೂಲತಃ ವಿಷ್ಣುಭಕ್ತರು.

ಶ್ರೀ ರಾಮಾನುಜಾಚಾರ್ಯರು ಸ್ಥಾಪಿಸಿದ ಶ್ರೀವೈಷ್ಣವ ಪಂಥವು ವೈದ್ಯಕೇತರ ವರ್ಗಗಳಲ್ಲಿ ದಾಸಪಂಥ' ಹೆಚ್ಚು ಜನಪ್ರಿಯವಾಗಲು ಕಾರಣವಾಯಿತೆಂದು ತಿಳಿದುಬರುತ್ತದೆ. ವಿಶೇಷವಾಗಿ ಪರಿಶಿಷ್ಟ ಜಾತಿಗಳಲ್ಲಿ 'ದಾಸಯ್ಯ'ಗಳು ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಮುಖ್ಯ ಹಬ್ಬಗಳಲ್ಲಿ, ಮದುವೆಗಳಲ್ಲಿ, ಹುಟ್ಟು ಸಾವುಗಳಲ್ಲಿ ವಿಶೇಷ ವೇಷಭೂಷಣಗಳನ್ನು ಧರಿಸಿದ ದಾಸಯ್ಯ, ಶಂಖ ಜಾಗಟೆ ಹಿಡಿದು ಕಾಣಿಸಿಕೊಳ್ಳುತ್ತಾನೆ. ಆತನಿಗೆ ವಸ್ತ್ರದಾನ ಮಾಡುವುದು ಮತ್ತು ಪಡಿಕೊಡುವುದು ಶ್ರೇಯಸ್ಕರವೆಂದು ಜನ ಭಾವಿಸುತ್ತಾರೆ. ಹೀಗೆ ಆತನು ನಿರ್ವಹಿಸಬೇಕಾದ ನಿರ್ದಿಷ್ಟ ಕಾರ್ಯಗಳಿದ್ದವು. ಈಗ ಈ ರೀತಿ ರಿವಾಜುಗಳು ಕಡಿಮೆಯಾಗುತ್ತಿವೆ.

ದಾಸ ಒಕ್ಕಲಿಗರಲ್ಲಿ ಮನೆಯ ಮಕ್ಕಳಲ್ಲಿ ಯಾರನ್ನಾದರೂ ಒಬ್ಬನನ್ನು ದಾಸಯ್ಯನನ್ನಾಗಿ ಬಿಡುವ ಸಂಪ್ರದಾಯವಿದ್ದು ಇದನ್ನು 'ದಾಸನ್ನ ಬಿಡುವುದು' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇದು ಮದುವೆಯ ಸಂದರ್ಭದಲ್ಲಿ ನಡೆಯುತ್ತದೆ. ಹೀಗೆ ದಾಸಯ್ಯನಾದವನಿಗೆ ಕೈಗೆ ಕಪ್ಪ ತೊಡಿಸಿ, ಶಂಖ ಜಾಗಟೆ ನೀಡುತ್ತಾರೆ. ಆತ ಯಾವಾಗಲೂ ಭಿಕ್ಷೆ ಬೇಡಬೇಕೆಂದೇನೂ ಕಟ್ಟು ಕಟ್ಟಳೆಗಳಿರುವುದಿಲ್ಲ. ಆದರೆ ವರ್ಷಕ್ಕೊಮ್ಮೆ ಶ್ರಾವಣ ಶನಿವಾರಗಳಲ್ಲಿ ಒಂದು ದಿನವಾದರೂ ಭಿಕ್ಷೆ ಬೇಡಬೇಕು. ದಾಸಯ್ಯ ಸಂಸಾರಿಯೂ ಆಗಿರಬಹುದು.

ವೈಷ್ಣವ ಸಂಪ್ರದಾಯದವರಲ್ಲಿ ತಿರುಪತಿ ತಿಮ್ಮಪ್ಪನ ಒಕ್ಕಲು ಮದುವೆಯಾದರೆ ಶನಿವಾರ ಹರಿಸೇವೆ ಎಂಬ ಸಮಾರಂಭ ನಡೆಯುತ್ತದೆ. ಇದು ಹರಿ ಸೇವೆಗಳಲ್ಲೆಲ್ಲ ಬಹುದೊಡ್ಡದು. ಇದಕ್ಕಾಗಿ ಸುತ್ತಮುತ್ತಲ ದಾಸಪ್ಪಗಳೆಲ್ಲ ಬಂದು ಸೇರಿ ಹತ್ತಾರು ಹರೆಗು ಕಟ್ಟಿ ಉತ್ಸವ ಮಾಡುತ್ತಾರೆ. ಆ ದಿನ ಸಂಜೆ ದಾಸಪ್ಪನು ಬಸವನ ಮೇಲೆ ಕುಳಿತು ಶಂಖು ಜಾಗಟೆ ಬಾರಿಸುತ್ತ ಬರುವನು. ಬರುವ ಬೀದಿಯಲ್ಲಿ ಮಣೇವು ಹಾಕುವುದು (ನೋಡಿ) ವಾಡಿಕೆ. ಹೀಗೆ ಬಂದು ಮನೆಯ ಒಳಗೆ ಪ್ರವೇಶಿಸಿ ಅನಂತರ ಬಾಳೆ ಎಲೆಯ ಮೇಲೆ ಅಕ್ಕಿ ಹಾಕಿ ಬನವಾಸಿ, ಬಾಣ ಇತ್ಯಾದಿಗಳನ್ನು ಇಟ್ಟು ಧೂಪ ದೀಪಗಳಿಂದ ಪೂಜಿಸಿ, ಶಂಖ ಊದಿ ಜಾಗಟೆ ಬಾರಿಸುತ್ತಾನೆ. ಹೀಗೆ ಮನೆಯಲ್ಲಿ ಶಂಖ ಊದಿದರೆ ದುಷ್ಟ ಗ್ರಹಗಳ ಕಾಟ ತಪ್ಪಿ ಮಂಗಳ ಉಂಟಾಗುತ್ತದೆ ಎಂಬ ನಂಬಿಕೆಯಿದೆ. ಶ್ರಾವಣಶನಿವಾರಗಳು ಹಾಗೂ ಸುಗ್ಗಿ ದಾಸಯ್ಯನಿಗೆ ಹೆಚ್ಚು ವರಮಾನ ತಂದುಕೊಡುವ ಕಾಲಗಳು, ಈ ಕಾಲದಲ್ಲಿ ಇವನಿಗೆ ಎಲ್ಲರೂ ದವಸಧಾನ್ಯಗಳನ್ನೂ ಬಟ್ಟೆಬರೆಯನ್ನೂ ನೀಡುತ್ತಾರೆ. ಹಿಂದೆ ತಿರುಪತಿಯಾತ್ರೆಯನ್ನು ಮಾಡತಕ್ಕವರು ದಾಸಯ್ಯನ ಮೂಲಕವೇ ಹೋಗಿ

ಬರುತ್ತಿದ್ದರು. ಹಾಗಾಗಿ ಹಳ್ಳಿಯಲ್ಲಿ ಧಾರ್ಮಿಕ ಸಂಪ್ರದಾಯಗಳ ಆಚರಣೆಗೆ ಈತ ಮೂಲ ಆಧಾರವಾಗಿದ್ದ. ಆದರೆ ಇತ್ತೀಚೆಗೆ ದಾಸಯ್ಯಗಳು ಕಡಿಮೆಯಾಗುತ್ತಿದ್ದು ಇವರ ಪ್ರಭಾವವೂ ಕುಂಠಿತಗೊಂಡಿದೆ. ಜಾಗಟೆಯ ಶ್ರುತಿಯೊಂದಿಗೆ ಈತ ಹೇಳುವ ಕೆಲವು ಸ್ತೋತ್ರಗಳು ಕೇಳಲು ಇಂಪಾಗಿರುತ್ತವೆ. (ಎ.ಬಿ.ಆರ್.)

**ದಿಂಡಗೂರು:** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಸು. 6ಕಿಮೀ ದೂರದಲ್ಲಿರುವ ಗ್ರಾಮ. ಇಮ್ಮಡಿ ಹೊಯ್ಸಳ ವೀರಬಲ್ಲಾಳದೇವನ ಮಂತ್ರಿಗಳಲ್ಲೊಬ್ಬನಾದ ಪಂಡಿತ ದಂಡನಾಥ' ಈ ಗ್ರಾಮವನ್ನು ರಾಜನಿಂದ ಬೇಡಿ ಪಡೆದು. ಇಲ್ಲಿ ಅಗ್ರಹಾರವನ್ನು ಸ್ಥಾಪಿಸಿ ಮಲ್ಲಿಕಾರ್ಜುನ ಪುರವೆಂದು ಹೆಸರಿಟ್ಟು ಕೇಶವ ಮತ್ತು ಮಲ್ಲೇಶ್ವರ ದೇವಾಲಯಗಳನ್ನು ಕಟ್ಟಿಸಿದನೆಂದು 1209ರ ಒಂದು ತಾಮ್ರಶಾಸನ ತಿಳಿಸುತ್ತದೆ.

ಕೇಶವ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖ ಮಂಟಪಗಳಿವೆ. ಗೋಡೆಯ ಮೇಲ್ಭಾಗ, ಚಜ್ಜದ ಮೇಲಿನ ಅಂಕಣ ಮತ್ತು ಗೋಪುರದ ಕೋನ ಶ್ರೇಣಿಗಳು ಅಲಂಕಾರ ರಹಿತವಾಗಿವೆ. ಮಾಳಿಗೆಯ ಒಳಮೈಗಳನ್ನು ಚೆನ್ನಾಗಿ ರೂಪಿಸಲಾಗಿದೆ. ಮಧ್ಯಮಾಳಿಗೆ ಗುಮ್ಮಟಾಕಾರದಲ್ಲಿದೆ. ಕೇಶವ ವಿಗ್ರಹ ಆರು ಅಡಿ ಎತ್ತರವಿದ್ದು ನಾಲ್ಕು ಹಸ್ತಗಳಲ್ಲಿ ಪದ್ಮ, ಶಂಖ, ಚಕ್ರ ಮತ್ತು ಗದೆಗಳಿವೆ. ನವರಂಗದ ಬಾಗಿಲುವಾಡದ ಹಾಸುಗಲ್ಲಿನ ಮೇಲೆ ವೇಣುಗೋಪಾಲ ವಿಗ್ರಹವನ್ನೂ ಗರ್ಭಗೃಹದ ಬಾಗಿಲುವಾಡದ ಮೇಲೆ ಗಜಲಕ್ಷ್ಮೀ ವಿಗ್ರಹವನ್ನೂ ಕೆತ್ತಲಾಗಿದೆ.

ಮಲ್ಲೇಶ್ವರ ದೇವಾಲಯ ರಚನೆಯಲ್ಲಿ ಕೇಶವ ದೇವಾಲಯವನ್ನೇ ಹೋಲುತ್ತದೆ. ಮಾಳಿಗೆಯಲ್ಲಿ ಸುಂದರವಾದ ಕೆತ್ತನೆಗಳಿವೆ. ದೊಡ್ಡಯ್ಯನೆಂಬುವವನು ಇಲ್ಲಿನ ಮಂಟಪವೊಂದನ್ನು ಕಟ್ಟಿಸಿದನೆಂದು ಹೊರ ಅಂಕಣದಲ್ಲಿರುವ 1651ರ ಶಾಸನ ತಿಳಿಸುತ್ತದೆ. (ಎಸ್.ವಿ.ಎಸ್.)

**ದಿನಕರ ದೇಸಾಯಿ :** 1909 - 82. ಚುಟುಕು ಬ್ರಹ್ಮ ಎಂದೇ ಹೆಸರು ಗಳಿಸಿರುವ ಕವಿ, ಪ್ರತಿಕೋದ್ಯಮಿ, ಶಿಕ್ಷಣತಜ್ಞ, ರಾಜಕಾರಣಿ, ಸಮಾಜ ಸೇವಕ, ಕಾರ್ಮಿಕ ಸಂಘಟಕ. ಉತ್ತರ ಕನ್ನಡ ಜಿಲ್ಲೆ ಅಂಕೋಲದ ಹೊನ್ನೆಕೇರಿಯಲ್ಲಿ 1909 ಸೆಪ್ಟೆಂಬರ್ 10 ರಂದು ಜನಿಸಿದರು. ಇವರ ಮೂಲ ಮನೆ ಕುಮಟ ತಾಲ್ಲೂಕಿನ ಅಂಡರುಹಳ್ಳಿ ಗ್ರಾಮದ ಹೊಂಡದ ಹೊಕ್ಕಲು. ಇವರ ತಂದೆ ದತ್ತಾತ್ರೇಯ ದೇಸಾಯಿ, ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಿದ್ದರು. ತಾಯಿ ಅಂಬಿಕಾ ದೇಸಾಯಿ. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡು ಇವರು ತಂದೆಯ ಪ್ರೀತಿಯ ಆರೈಕೆಯಲ್ಲಿ ಬೆಳೆದರು.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಅಂಕೋಲೆಯ ಅಲಗೇರಿಯಲ್ಲಿ ಪೂರೈಸಿದರು. ಅನಂತರ ಅಂಕೋಲ ಮತ್ತು ಕಾರವಾರಗಳಲ್ಲಿ ಹೈಸ್ಕೂಲು ಶಿಕ್ಷಣ ಮುಗಿಸಿದರು. ಬೆಂಗಳೂರಿನಲ್ಲಿ ಪದವಿ ಪಡೆದ ಬಳಿಕ ಮುಂಬಯಿಯಲ್ಲಿ ಸ್ನಾತಕೋತ್ತರ ಪದವಿ ಹಾಗೂ ಎಲ್.ಎಲ್.ಬಿ. ವ್ಯಾಸಂಗಗಳನ್ನು ಏಕಕಾಲದಲ್ಲಿ ಮಾಡಿದರು. ಕಲ್ಯಾಣಿ ಚಾಳುಕ್ಯರ ಆಡಳಿತದಲ್ಲಿಯ ಮಹಾಮಂಡಲೇಶ್ವರರು ಎಂಬ ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಪದವಿಗಾಗಿ ಮಂಡಿಸಿದರು. ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಸೇಂಟ್ ಜೇವಿಯರ ರಜತ ಪದಕ ಪಡೆದರು. ಬಿ.ಎ. ಪದವಿಯಲ್ಲೂ ಇತಿಹಾಸ ವಿಷಯದಲ್ಲಿ ಗರಿಷ್ಟ ಅಂಕ ಗಳಿಸಿದ್ದಕ್ಕಾಗಿ ಕ್ಯಾಂಡಿ ಪಾರಿತೋಷಕ ಪಡೆದಿದ್ದರು.

ಸ್ನಾತಕೋತ್ತರ ಹಾಗೂ ಕಾನೂನು ಪದವಿ ಪಡೆದ ಇವರಿಗೆ ಹಲವು ಉದ್ಯೋಗಗಳು ಸುಲಭವಾಗಿ ದೊರೆಯಬಹುದಾಗಿತ್ತು. ಆದರೆ ಸಮಾಜ ಸೇವಾಸಕ್ತರಾಗಿದ್ದುದರಿಂದ ಇವನ್ನೆಲ್ಲಾ ಬದಿಗೊತ್ತಿ ಗೋಪಾಲಕೃಷ್ಣ ಗೋಖಲೆಯವರ ಗವರ್‌ನರ್ ಆಫ್ ಇಂಡಿಯಾ ಸೂಸೈಟಿ (ಭಾರತ ಸೇವಕ್ ಸಮಾಜ) ಯನ್ನು ಸೇರಿದರು. ದಿನಕರರು ಸಮಾಜ ಸೇವೆಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಮುಂಬಯಿ ಪ್ರಾಂತದ ಟ್ರೇಡ್ ಯೂನಿಯನ್ ಕಾರ್ಯದರ್ಶಿ, ಕಡಲ ಕಾರ್ಮಿಕರ ಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಕಾರ್ಮಿಕ ನಾಯಕರಾಗಿ ಡೆನ್ಮಾರ್ಕ್ ಮತ್ತು ಅಮೇರಿಕಗಳಲ್ಲಿ ನಡೆದ ಮಹಾಧಿವೇಶನದಲ್ಲಿ ಪಾಲ್ಗೊಂಡರು (1946). ಮುಂಬಯಿ ನಗರ ಪಾಲಿಕೆ ಸದಸ್ಯರಾಗಿಯೂ ಗಣನೀಯ ಸೇವೆ ಸಲ್ಲಿಸಿದರು (1948 - 61). ಅಂಕೋಲೆಯಲ್ಲಿ ರೈತಕೂಟ ಮತ್ತು ಕೆನರಾ ವೆಲ್‌ಫೇರ್ ಟ್ರಸ್ಟ್ ಸ್ಥಾಪಿಸಿದರು. ಮುಂಬಯಿಯಲ್ಲಿದ್ದರೂ ಇವರ ಹೃದಯ ಸದಾ ಹಂಬಲಿಸುತ್ತಿದ್ದುದು ಉತ್ತರ ಕನ್ನಡ ಜಿಲ್ಲೆಯನ್ನು. ರೈತರನ್ನು ಸಂಘಟಿಸಿ ಗೇಣಿ ಪದ್ಧತಿಯಲ್ಲಿದ್ದ ಸಾಮಾಜಿಕ ಅನ್ಯಾಯಗಳನ್ನು ಪ್ರತಿಭಟಿಸಿದರು. ಒಡೆಯನನ್ನು ಘಟ್ಟ ಹತ್ತಿಸಿ ಎಂದು ಘೋಷಿಸಿದರು. ಅಂದಿನ ಮುಂಬಯಿ ಸರ್ಕಾರ ಐದು ವರ್ಷಗಳ ಕಾಲ ದಿನಕರರು ಉತ್ತರ ಕನ್ನಡ ಜಿಲ್ಲೆ ಪ್ರವೇಶಿಸುವುದನ್ನು ನಿಷೇಧಿಸಿತ್ತು. ಇವರು ನಡೆಸುತ್ತಿದ್ದ ರೈತ ಚಳವಳಿ ಹೋರಾಟದಿಂದ ಜಮೀನ್ದಾರರು ಇವರನ್ನು ಹಾವಳಿ ಮಂಜ ಎಂದು ಕರೆದರು. ಲೋಕಸಭಾ ಸದಸ್ಯರಾಗಿ (1967) ಸಂಸತ್ತಿನಲ್ಲಿ ತಮ್ಮ ವಾದ ವೈಖರಿಯ ಮೂಲಕ ಜನರ ಹಿತಾಸಕ್ತಿ ಕಾಪಾಡಲು ತೀವ್ರ ಯತ್ನ ನಡೆಸಿದರು. ಜನಸೇವಕ (ನೋಡಿ) ಎಂಬ ವಾರಪತ್ರಿಕೆಯನ್ನು ಹದಿನೇಳು ವರ್ಷಗಳ ಕಾಲ ಪ್ರಕಟಿಸಿ, ಜನಜಾಗೃತಿಯನ್ನುಂಟುಮಾಡಿದರು. ಜನಸೇವಕ ಪತ್ರಿಕೆ ಪ್ರಜಾಸತ್ತೆಯ ಕಾವಲುಗಾರ ಎಂಬ ಬಿರುದಿಗೆ ಪಾತ್ರವಾಯಿತು. ಇವರು ತಮ್ಮ ವಿಚಾರಗಳನ್ನೂ ಜನಪರ ಕಾಳಜಿಯನ್ನೂ ಪುಸ್ತಕಗಳ ಮೂಲಕ ಪ್ರಕಟಿಸಿದ್ದಾರೆ. ಪ್ರಪಂಚದ ಕೆಲಸಗಾರರು (1953) ಪ್ರೈಮರಿ ಎಜ್ಯುಕೇಶನ್ ಇನ್ ಇಂಡಿಯಾ, ಟುವರ್ಡ್ಸ್ ಲಿಟರೇಟ್ ಬೊಂಬೇ, ಲ್ಯಾಂಡ್ಸ್ ರೆಂಟ್ಸ್ ಇನ್ ನಾರ್ತ್ ಕೆನರಾ, ಮೆರಿಟಾಯಿಮ್ ಲೇಬರ್ ಇನ್ ಇಂಡಿಯಾ, ಎಮಂಗ್ ಇಂಡಿಯನ್ ಗೇಮನ್ ಇನ್ ಗ್ರೇಟ್ ಬ್ರಿಟನ್, ರೈತರ ಹಾಡುಗಳು ಮುಂತಾದ ಪುಸ್ತಕ, ಕಿರುವರದಿ ಹಾಗೂ ರೈತ ಸಂಘಟನೆಗೆ ಸ್ಫೂರ್ತಿ ನೀಡುವ ಹಾಡುಗಳನ್ನು ಬರೆದಿದ್ದಾರೆ.

ಇವರೊಬ್ಬ ಕ್ರಾಂತದರ್ಶಿ ಕವಿ. ಸಮಾಜವಾದಿ ದೃಷ್ಟಿಕೋನದಿಂದ ರಚನೆಗೊಂಡ ಇವರ ಕವನಗಳು ಜನಪರವಾಗಿವೆ. ಕವನ ಸಂಗ್ರಹ (1951), ಹೂಗೊಂಚಲು (1958), ದಾಸಾಳ ಮೊದಲಾದ ಸಂಕಲನಗಳಲ್ಲಿ ಜನಜೀವನಕ್ಕೆ ಹತ್ತಿರವಾದ ವಿಚಾರ ಪ್ರಚೋದಕ ಸಾಮಾಜಿಕ ಕಳಕಳಿಯುಳ್ಳ ಸರಳವಾದ ಕವನಗಳನ್ನು ಕಾಣಬಹುದಾಗಿದೆ. ದೀನಗಿಂತ ದೇವ ಬಡವ, ನನ್ನ ದೇಹದ ಬೂದಿ, ಕೆಂಪು ದಾಸಾಳ, ಆತ್ಮ ವಿಶ್ವಾಸ, ಬಿರುಗಾಳಿ ಮುಂತಾದ ಕವನಗಳಲ್ಲಿ ಕವಿಯ ಆಶಯ, ಆದರ್ಶ ಒಡಮೂಡಿವೆ. ಅಂಕೋಲ, ಗೋಕರ್ಣ ಸೀಮೆಯ ಹಾಲಕ್ಕಿ ಒಕ್ಕಲಿಗರು ಇವರ ಹಾಡುಗಳನ್ನು ಗುಮಟೆ ಪಾಂಗಿನಲ್ಲಿ ಹಾಡುತ್ತಿದ್ದುದು ಹಾಡಿನ ಜನಪ್ರಿಯತೆಗೆ ಸಾಕ್ಷಿ. ಮಕ್ಕಳಿಗಾಗಿ ಇವರು ಮಕ್ಕಳ ಗೀತೆಗಳು (1951), ಮಕ್ಕಳ ಪದ್ಯ (1976), ಮಕ್ಕಳ ಪದ್ಯಗಳು (1956) ಎಂಬ ಸಂಕಲನವನ್ನು ಪ್ರಕಟಿಸಿದ್ದಾರೆ. ಇಲ್ಲಿಯ ಹಾಡುಗಳು ಮಕ್ಕಳ ಅರಿವಿನ ಕ್ಷಿತಿಜವನ್ನು ವಿಸ್ತರಿಸುವುದರೊಂದಿಗೆ ವೈಜ್ಞಾನಿಕ ಮನೋಭಾವನೆಯನ್ನು ಪೋಷಿಸುವ ಗುಣವನ್ನು ಹೊಂದಿವೆ. ಈ ಹಾಡುಗಳಲ್ಲಿ ವಿಡಂಬನೆ, ಸಾಮಾಜಿಕ ಕಳಕಳಿ, ಸಮಾನತೆಯ ಮನೋಭಾವವನ್ನು ಕವಿ ಚಿತ್ತರಿಸಿದ್ದಾರೆ. ನಾ ಕಂಡ ಪಡುವಣ (1951) ಎಂಬ ಇವರ ಪ್ರವಾಸ ಕಥನ ಇವರ ಉತ್ತಮ ಗದ್ಯಶೈಲಿ ಹಾಗೂ ರಸವತ್ತಾದ ನಿರೂಪಣೆಯಿಂದ ಕುತೂಹಲಕಾರಿಯಾದ ವಿಷಯ ಸಂಗ್ರಹದಿಂದ ಗಮನಾರ್ಹವಾಗಿದೆ.

ಚುಟುಕ ಬ್ರಹ್ಮ ಎಂದೇ ಪ್ರಸಿದ್ಧರಾಗಿರುವ ಇವರು ಐದು ಸಾವಿರಕ್ಕೂ ಹೆಚ್ಚು ಔಷಧಿಗಳನ್ನು ರಚಿಸಿದ್ದಾರೆ. ಇವರು ಬರೆದುದೆಲ್ಲ ಚುರುಕು ಮುಟ್ಟಿಸುವ ಚುಟುಕುಗಳಾಗಿವೆ. ವ್ಯಂಗ್ಯ, ವಿಡಂಬನೆ ಇವರ ಚುಟುಕದ ಜೀವನಾಡಿ. ಆದರ್ಶವನ್ನು ತಮ್ಮ ಕವಿತೆ ಚುಟುಕಗಳಲ್ಲಿ ಬರೆದ ದಿನಕರರು ಅದರಂತೆ ಬದುಕಿದವರು. ಜನಸೇವಕ ಪತ್ರಿಕೆಯಲ್ಲಿ ಇವರು ಬರೆದ ಮುಖಪುಟದ ಲೇಖನ, ಸಂಪಾದಕೀಯ ಹಾಗೂ ಭತ್ತದ ತೆನೆ ಇಂದಿಗೂ ಪ್ರಸ್ತುತ.

ಉತ್ತರ ಕನ್ನಡದ ಹಳ್ಳಿಗಾಡಿನ ನಿರುತ್ತೇಜನಕ ಪರಿಸರದಲ್ಲಿ ಜನತಾ ವಿದ್ಯಾಲಯಗಳನ್ನು ಸ್ಥಾಪಿಸಿ ಶಿಕ್ಷಣ ಪ್ರಚಾರ ಕೈಗೊಂಡರು. ಇವರು ರಚಿಸಿದ ಮಕ್ಕಳ ಗೀತೆಗಳು ಮತ್ತು ಕವನ ಸಂಗ್ರಹ ಪುಸ್ತಕಗಳಿಗೆ ಮುಂಬಯಿ ಸರ್ಕಾರದ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರ ದಿನಕರ ಚೌಪದಿ ಕೃತಿಗೆ ಪ್ರಶಸ್ತಿ ನೀಡಿದೆ (1980). ಕರ್ನಾಟಕ ವಿಶ್ವವಿದ್ಯಾಲಯದ ಇವರಿಗೆ ಗೌರವ ಡಾಕ್ಟರೇಟ್ ನೀಡಿದೆ (1975). ಗೋಕರ್ಣದ ಪರ್ತಗಾಳಿ ಮಠದ ವಿದ್ಯಾಧಿರಾಜ ಪುರಸ್ಕಾರ, ಜನ್ಮಭೂಮಿ ಟ್ರಸ್ಟಿನ ಪತ್ರಿಕೋದ್ಯಮ ಪ್ರಶಸ್ತಿ ಇವರಿಗೆ ಸಂದಾಯವಾಗಿವೆ (1976). ಇವರು 1982 ರ ನವೆಂಬರ್ 6 ರಂದು ಮುಂಬಯಿಯಲ್ಲಿ ನಿಧನರಾದರು. ಆಗ ವಿ.ಕೃ. ಗೋಕಾಕರು "ದಿನಕರರ ಜೀವನಲತೆಯಲ್ಲಿ ಅರಳಿದ ಎರಡು ಮಂದಾರಗಳು; ಒಂದು ಅವರ ಕಾವ್ಯ, ಇನ್ನೊಂದು ಅವರ ದೇಶಸೇವೆ" ಎಂದು ಬರೆದಿದ್ದಾರೆ. (ಎಸ್.ಎಚ್.ಟಿ.)

**ದಿವಾಕರ, ಆರ್.ಆರ್. :** 1894-1990. ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ. ಕರ್ನಾಟಕ ಏಕೀಕರಣದ ಅಧ್ವರ್ಯು, ಚಿಂತಕ, ಲೇಖಕ, ಪತ್ರಕರ್ತ, ಆಡಳಿತಗಾರ. ದಿವಾಕರ ರಂಗರಾವ್ ರಾಮಚಂದ್ರ ಎಂಬುದು ಇವರ ಪೂರ್ಣ ಹೆಸರು.

1894 ಸೆಪ್ಟೆಂಬರ್ 30ರಂದು ಧಾರವಾಡದ ಮಧ್ಯಮವರ್ಗದ ಕುಟುಂಬವೊಂದರಲ್ಲಿ ಜನಿಸಿದರು. ತಂದೆ ರಾಮಚಂದ್ರ, ತಾಯಿ ಸೀತಾ, ಧಾರವಾಡ, ಬೆಳಗಾಂವಿ, ಪುಣೆ ಹಾಗೂ ಮುಂಬಯಿಗಳಲ್ಲಿ ಶಿಕ್ಷಣ ಪಡೆದು ಎಂ.ಎ. ಪದವೀಧರರಾದರು. ಅನಂತರ ಇಂಗ್ಲಿಷ್ ಅಧ್ಯಾಪಕರಾಗಿ ನೇಮಿತರಾದರು. ಮೊದಲಿನಿಂದಲೂ ಟಿಳಕ, ಅರವಿಂದ ಇವರಿಂದ ಪ್ರಭಾವಿತರಾಗಿದ್ದ ದಿವಾಕರರು ಆ ಕೆಲಸವನ್ನೂ ಬಿಟ್ಟು ಎಲ್.ಎಲ್.ಬಿ. ಪರೀಕ್ಷೆಯಲ್ಲಿ ತೇರ್ಗಡೆಯಾದರೂ (1919) ಪದವಿಯನ್ನು ನಿರಾಕರಿಸಿ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರವೇಶಿಸಿದರು (1920). ಗಾಂಧೀಜೀಯವರ ಕರೆಯ ಮೇರೆಗೆ ಅಸಹಕಾರ ಆಂದೋಲನದಲ್ಲಿ ಧುಮುಕಿದರು (1920-21). ಹಲವಾರು ಸಲ ಸೆರೆಮನೆ ವಾಸವನ್ನು ಅನುಭವಿಸಿದರು. 1921ರಲ್ಲಿಯೇ 'ಕರ್ಮವೀರ' ವಾರಪತ್ರಿಕೆಯನ್ನು ಪ್ರಾರಂಭಿಸಿ ತೀಕ್ಷ್ಣವಾದ ಲೇಖನಗಳನ್ನು ಬರೆದು ಜನಜಾಗೃತಿಗಾಗಿ ಶ್ರಮಿಸಿದರು. ಗಾಂಧೀಜಿಯವರು ಕಾಂಗ್ರೆಸ್ಸಿನ ಸುಗಮ ವ್ಯವಸ್ಥೆಗೆ ಭಾಷಾವಿಭಾಗ ಘಟಕಗಳನ್ನು ರೂಡಿಸಿದಾಗ ಇವರು ಕರ್ನಾಟಕಕ್ಕೂ ಒಂದು ಘಟಕವಿರುವಂತೆ ಮಾಡಿದರು. ಕರ್ನಾಟಕ ಏಕೀಕರಣದ ಬಗ್ಗೆ 1928ರಲ್ಲಿ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದರು. 1930-31ರಲ್ಲಿ ಶಿರಸಿ, ಸಿದ್ದಾಪುರ, ಅಂಕೋಲ ಮತ್ತು ಹಿರೇಕೆರೂರು ತಾಲ್ಲೂಕುಗಳಲ್ಲಿ ಕರನಿರಾಕರಣ ಆಂದೋಲನ ನಡೆಸಿದರು. ಮುಂದೆ ವೈಯಕ್ತಿಕ ಸತ್ಯಾಗ್ರಹದ ಸಮಯದಲ್ಲಿ. ಅನಂತರ ಚಲೇಜಾವ್ ಚಳವಳಿಯಲ್ಲಿ (1942) ಅದ್ವಿತೀಯವಾದ ಪಾತ್ರ ವಹಿಸಿದರು. ಕರ್ನಾಟಕದಲ್ಲಿ ಈ ಆಂದೋಲನದ ಸೂತ್ರಧಾರರೆನಿಸಿದರು. ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದರು. ಘಟನಾಸಮಿತಿ ಸದಸ್ಯರಾಗಿ ಭಾರತದ ಸಂವಿಧಾನದ ರೂಪಕರಾದರು. ಸ್ವಾತಂತ್ರ್ಯ ದೊರಕಿದ ಮೇಲೆ ಕೇಂದ್ರ ಸರ್ಕಾರದ ಸುದ್ದಿಶಾಖೆ ಮಂತ್ರಿಗಳಾಗಿ ಸೇವೆ ಸಲ್ಲಿಸಿದರು (1948-52). ಅನಂತರ ಬಿಹಾರದ ರಾಜ್ಯಪಾಲರಾದರು (1952-57). 1962-68ರ ವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದರು.

ದಿವಾಕರರು ಗಾಂಧೀವಾದಿಗಳು. ಮಹಾತ್ಮಾ ಗಾಂಧೀಜಿಯವರ ಪ್ರಭಾವಕ್ಕೆ ಚಿಕ್ಕಂದಿನಲ್ಲಿಯೇ ಸಿಲುಕಿದ ಇವರು ಗಾಂಧೀಜಿ ಹಾಗೂ ಸತ್ಯಾಗ್ರಹದ ಬಗ್ಗೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಹಲವು ಗಾಂಧೀ ಸಂಬಂಧ ಸಂಸ್ಥೆಗಳೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದ ಇವರು ಈಗ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದರು.

ಪತ್ರಿಕಾ ರಂಗದಲ್ಲಿ ಹಿರಿಯ ವ್ಯಕ್ತಿಗಳಾಗಿದ್ದ ಇವರು ಕರ್ಮವೀರ, ಸಂಯುಕ್ತ ಕರ್ನಾಟಕ, ಕಸ್ತೂರಿ - ಈ ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾಗಿದ್ದರು. (ಎಸ್.ಪಿ.ಪಿ)

ಇವರ ಲೇಖನ ವ್ಯವಸಾಯ ಬಹುಮುಖವಾದುದು. ಗಾಂಧೀ ಕೃತಿಗಳು ಮತ್ತು ತತ್ತ್ವ, ಕರ್ನಾಟಕ ಏಕೀಕರಣ, ಧರ್ಮ, ತತ್ತ್ವಶಾಸ್ತ್ರ, ಸಾಹಿತ್ಯ, ಇತಿಹಾಸ - ಈ ಮುಂತಾದ ಹಲವು ವಿಷಯಗಳನ್ನು ಕುರಿತು ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಸೆರೆಮನೆಯಲ್ಲಿದ್ದಾಗ ಇವರು ಪೌರಸ್ತ್ಯ ಪಾಶ್ಚಾತ್ಯ ತತ್ತ್ವಜ್ಞಾನ ಹಾಗೂ ಆಧ್ಯಾತ್ಮಿಕ ಅನುಭಾವ, ಆಗಮ ಮತ್ತು ತಾಂತ್ರಿಕ ಪರಂಪರೆಗಳನ್ನು ಅಭ್ಯಸಿಸಿ ಭಗವದ್ಗೀತೆ, ಉಪನಿಷತ್ತುಗಳನ್ನು ಕುರಿತು ಅನೇಕ ಅನುವಾದ ಮತ್ತು ಸ್ವತಂತ್ರ ಕೃತಿಗಳನ್ನು ರಚಿಸಿದರು. ಕನ್ನಡದ ಶಿವಶರಣರ ವಚನಗಳನ್ನು ಕುರಿತು ಇವರು ಬರೆದಿರುವ ವಚನಶಾಸ್ತ್ರರಹಸ್ಯ ಎಂಬ ಬೃಹತ್ ಕೃತಿ ಆ ವಿಷಯದಲ್ಲಿ ರಚಿತವಾದ ಬಹುಶಃ ಪ್ರಥಮ ತೌಲನಿಕ ಮತ್ತು ವಸ್ತುನಿಷ್ಠ ಗ್ರಂಥವಾಗಿದೆ. ರಾಮಕೃಷ್ಣ ಪರಮಹಂಸರ ಬಗ್ಗೆ ಕನ್ನಡದಲ್ಲಿ, ಅರವಿಂದರ ಬಗ್ಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಗ್ರಂಥರಚನೆ ಮಾಡಿದ್ದಾರೆ. ಇವರು ತಮ್ಮ ಜೀವನ ದರ್ಶನವನ್ನು ಅಂತರಾತ್ಮನಿಗೆ ಮತ್ತು ವಿಶ್ವಾತ್ಮನಿಗೆ ಎಂಬ ಎರಡು ಗ್ರಂಥಗಳಲ್ಲಿ ಕಾಣಿಸಿದ್ದಾರೆ. ಸೆರೆಯ ಮರೆಯಲ್ಲಿ ಎಂಬ ಗ್ರಂಥದಲ್ಲಿ ಸೆರೆಮನೆಯಲ್ಲಿ ತಮಗಾದ ಅನುಭವಗಳನ್ನು ಹೇಳಿದ್ದಾರೆ. ಎಂ.ಆರ್. ಶ್ರೀನಿವಾಸಮೂರ್ತಿಯವರ ನಾಗರಿಕ ಎಂಬ ಗ್ರಂಥವನ್ನು ಇವರು ಹಿಂದಿಗೆ ಅನುವಾದಿಸಿದ್ದಾರೆ. ಉಪನಿಷತ್ ಪ್ರಕಾಶ, ಉಪನಿಷತ್ ಕಥಾವಲಿ, ಗೀತೆಯ ಗುಟ್ಟು, ಕರ್ಮಯೋಗ, ಹರಿಭಕ್ತಸುಧೆ, ಮಹಾತ್ಮರ ಮನೋರಂಗ - ಇವು ಇವರ ಇತರ ಮುಖ್ಯ ಕೃತಿಗಳು. ಸತ್ಯಾಗ್ರಹ, ಗ್ಲಿಂಪ್ಸಸ್ ಆಫ್ ಗಾಂಧೀಜಿ, ಉಪನಿಷದ್ಸ್ ಇನ್ ಸ್ಟೋರಿ ಅಂಡ್ ಡಯಲಾಗ್, ಭಗವಾನ್ ಬುದ್ಧ - ಇವು ಇವರು ಇಂಗ್ಲಿಷಿನಲ್ಲಿ ಬರೆದಿರುವ ಗ್ರಂಥಗಳು. ಬಿಹಾರ್ ಥ್ರೂ ದಿ ಏಜಸ್, ಕರ್ನಾಟಕ ಥ್ರೂ ದಿ ಏಜಸ್ - ಇವು ಇವರ ಸಂಪಾದಿತ ಗ್ರಂಥಗಳು.

ಇವರ ಸಾಹಿತ್ಯ ಕಾರ್ಯವನ್ನು ಮೆಚ್ಚಿ ಕನ್ನಡ ನಾಡು 1938ರಲ್ಲಿ ಬಳ್ಳಾರಿಯಲ್ಲಿ ಸೇರಿದ್ದ 23ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು. ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿದೆ.

**ದಿವಾಕರನಂದಿ :** ಒಬ್ಬ ಜೈನ ಮುನಿ. ಅದಕ್ಕಿಂತ ಮಿಗಿಲಾಗಿ ಒಬ್ಬ ಕನ್ನಡ ವ್ಯಾಖ್ಯಾನಕಾರ. ಇವನ ಗುರುಪರಂಪರೆಯ ಆಧಾರದ ಮೇಲೆ ಹೇಳುವುದಾದರೆ ಈತ ಕೊಂಡಕುಂದಾನ್ವಯ ಮೂಲ ಸಂಘ ದೇಶಿಗಗಣದ ಪುಸ್ತಕಗಚ್ಛಕ್ಕೆ ಸೇರಿದಾತ. ಗೃಧ್ರ ಪಿಂಛಾಚಾರ್ಯ ಎಂಬ ಹೆಸರಿದ್ದ ಉಮಾಸ್ವಾಮಿ ಅಥವಾ ಉಮಾಸ್ವಾತಿ ಸಂಸ್ಕೃತದಲ್ಲಿ ರಚಿಸಿರುವ ತತ್ತ್ವಾರ್ಥ ಸೂತ್ರವೆಂಬ ಜೈನಾಗಮ ಗ್ರಂಥಕ್ಕೆ ಈತ ಕನ್ನಡದಲ್ಲಿ ವ್ಯಾಖ್ಯಾನ ಬರೆದಿದ್ದಾನೆ. ಈ ವ್ಯಾಖ್ಯಾನದ ಸಮಾಪ್ತಿಭಾಗದಲ್ಲಿ ಇದು ಸಕಲಾಗಮ ಸಂಪನ್ನ ಶ್ರೀಮಚ್ಚಂದ್ರ ಕೀರ್ತಿ ಭಟ್ಟಾರಕ ಪದ್ಮನಂದಿ ಸಿದ್ಧಾಂತದೇವ ಶ್ರೀಪಾದ ಪ್ರಸಾದಾಸಾದಿತ ಸಮಸ್ತ ಸಿದ್ಧಾಂತಾಮೃತ ಪಾರಾವಾರಗ ಶ್ರೀಮದ್ದಿವಾಕರ (ಣಂದಿ) ಭಟ್ಟಾರಕ ಮುನೀಂದ್ರ ವಿರಚಿತ ತತ್ತ್ವಾರ್ಥಸೂತ್ರಾನುಗತ ಕರ್ನಾಟಕ ಲಘುವೃತ್ತಿಯೋಳ್ - ಎಂದು ಹೇಳಿದ್ದಾನೆ. ಜಡರೂ ಬಾಲಕರೂ ಬಂಧರೂ ತತ್ತ್ವಾರ್ಥವನ್ನು ತಿಳಿದು ಪಾಪವನ್ನು ಕಳೆದುಕೊಂಡು ಸಮ್ಯಕ್ತ್ವವನ್ನು ಹೊಂದಿ ಪರಮಸ್ಥಾನವನ್ನು ಪಡೆಯಲೆಂದು ಸಿದ್ಧಾಂತ ರತ್ನಾಕರರು ತತ್ತ್ವಾರ್ಥಸೂತ್ರಕ್ಕೆ ಕನ್ನಡದಲ್ಲಿ ವೃತ್ತಿಯನ್ನು ರಚಿಸಿದರೆಂದು ನಗರದ 57ನೆಯ ಶಾಸನದಿಂದ ತಿಳಿದುಬರುತ್ತದೆ. ದಿವಾಕರಣಂದಿಗೆ ಉಭಯ ಸಿದ್ಧಾಂತ ರತ್ನಾಕರ ಎಂಬ ಬಿರುದಿರುವಂತೆ ತಿಳಿದು ಬರುತ್ತದೆ. ಶಕ 984ರ ಒಂದು ಶಾಸನದಿಂದ ಈತ ಚಂದ್ರಕೀರ್ತಿ ಭಟ್ಟಾರಕರ ಅಗ್ರ ಶಿಷ್ಯನೆಂದೂ ಅರ್ಹತ್ ತತ್ತ್ವ ವಸ್ತುವಿಸ್ತಾರಕನೆಂದು ವರ್ಣಿತನಾಗಿದ್ದಾನೆ. 1068ರಲ್ಲಿದ್ದ ಶಾಂತಿನಾಥ ಕವಿಯ ಸುಕುಮಾರ ಚರಿತದಿಂದ ತಿಳಿದುಬರುವಂತೆ ಈತ ವ್ಯಾಕರಣ ತರ್ಕ ಸಿದ್ಧಾಂತ ಈ ಮೂರೂ ವಿದ್ಯೆಗಳಲ್ಲಿ ಪ್ರವೀಣನಾಗಿದ್ದ. ಶ್ರವಣಬೆಳಗೊಳದ ಒಂದು ಶಾಸನ ಕೂಡ ಈತನನ್ನು ಹೀಗೆ ಕೀರ್ತಿಸಿದೆ. ತತ್ತ್ವಾರ್ಥಸೂತ್ರ ಜೈನಧರ್ಮದಲ್ಲಿ ದಿಗಂಬರ ಶ್ವೇತಾಂಬರ ಎರಡೂ ಪರಂಪರೆಗಳಲ್ಲಿ

ಮಾನ್ಯತೆಯುನ್ನು ಪಡೆದಿರುವ ಪೂಜ್ಯಗ್ರಂಥ'. ದ್ರವ್ಯಾನುಯೋಗಕ್ಕೆ ಸಂಬಂಧಿಸಿದಂತೆ ಸಂಸ್ಕೃತದಲ್ಲಿ ಇದೇ ಮೊದಲ ಗ್ರಂಥ. ಈ ಗ್ರಂಥದ ಮೇಲೆ ಎರಡೂ ಪರಂಪರೆಗಳಲ್ಲಿ ವಿವಿಧ ವ್ಯಾಖ್ಯಾನಗಳು ರಚನೆಯಾಗಿರುವುದು ಇದರ ಪ್ರಾಮುಖ್ಯವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಂಥ ಒಂದು ಶ್ರೇಷ್ಠ ಗ್ರಂಥಕ್ಕೆ ದಿವಾಕರನಂದಿ ಕನ್ನಡ ವ್ಯಾಖ್ಯಾನವನ್ನು ರಚಿಸಿದ್ದಾನೆ. ಮೂಲದಲ್ಲಿರುವಂತೆಯೆ ಇದರಲ್ಲೂ 10 ಅಧ್ಯಾಯಗಳಿವೆ. ದಿವಾಕರಣಂದಿ ಇಲ್ಲಿ ಮೂಲಸೂತ್ರಗಳನ್ನು ವ್ಯಾಖ್ಯಾನಿಸಿರುವುದೇ ಅಲ್ಲದೆ ಅವುಗಳ ವಿವರಣೆಗೆಂದು ಗೊಮ್ಮಟಸಾರ, ತ್ರಿಲೋಕಸಾರ ಗ್ರಂಥಗಳಿಂದ ಪ್ರಾಕೃತ ಗಾಹೆಗಳನ್ನು ಉದ್ಧರಿಸಿ ಅವನ್ನೂ ಪದಶಃ ಅರ್ಥೈಸಿದ್ದಾನೆ. (ಎಸ್.ಎಚ್.ಪಿ.)

**ದೀಕ್ಷಿತ್, ಉಮಾಶಂಕರ :** 1901- . ಕರ್ನಾಟಕದ ಮಾಜಿ ರಾಜ್ಯಪಾಲರು (1976-77). ಉತ್ತರ ಪ್ರದೇಶದ ಉನ್ನಾವ್ ಜಿಲ್ಲೆಯ ಉಗೂ ಗ್ರಾಮದಲ್ಲಿ 1901 ಜನವರಿ 12ರಂದು ಜನಿಸಿದರು. ತಂದೆ ರಾಮಸ್ವರೂಪ್, ತಾಯಿ ಶಿವ್‌ಪ್ಯಾರಿ. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜೈಲುವಾಸ ಅನುಭವಿಸಿದರು. ನವದೆಹಲಿಯ ಇವಾಕ್ಯೂ ಪ್ರಾಪರ್ಟಿಯ ಧರ್ಮದರ್ಶಿ (1948-52), ರಾಷ್ಟ್ರೀಯ ಕೈಗಾರಿಕೆಗಳ ಕಾರ್ಪೊರೇಷನ್ ಗೌರವ ಸಲಹೆಗಾರ (1956), ಬ್ರಿಟಿಷ್ ಇಂಡಿಯನ್ ಕಾರ್ಪೊರೇಷನ್ನಿನ ಅಧ್ಯಕ್ಷ (1971)- ಹೀಗೆ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಇವರು ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ವಸತಿ ಹಾಗೂ ಕಾಮಗಾರಿ (1971-72), ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗೃಹಖಾತೆ (1973-74), ನೌಕಾಯಾನ ಮತ್ತು ಸಾರಿಗೆ (1975) ಮೊದಲಾದ ಹಲವು ಹುದ್ದೆಗಳನ್ನು ನಿರ್ವಹಿಸಿದರು. ಇವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಖಜಾಂಚಿಯಾಗಿಯೂ ದುಡಿದಿದ್ದಾರೆ (1970-75). ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸ್ವಾಮಿ ರಾಮತೀರ್ಥ ಸ್ಮಾರಕ ಸಂಸ್ಥೆ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಜನವರಿ 10, 1976ರಿಂದ 1977 ಆಗಸ್ಟ್ 2ರವರೆಗೆ ಇವರು ಕರ್ನಾಟಕದ ರಾಜ್ಯಪಾಲರಾಗಿದ್ದರು. ಅನಂತರ ಇವರು ಪಶ್ಚಿಮ ಬಂಗಾಲದ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದರು (1984-86). ದೀಕ್ಷಿತ್ .......................... ರಂದು ನಿಧನರಾದರು. (ಟಿ.ಜಿ.)

**ದೀಕ್ಷಿತ್, ಜಿ. ಎಸ್. :** 1911-2004. ಹೆಸರಾಂತ ಇತಿಹಾಸಕಾರ ಮತ್ತು ಸಂಶೋಧಕ. ಇಂದಿನ ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ 1911 ಜನವರಿ 10ರಂದು ಜನಿಸಿದರು. ಇವರ ಪೂರ್ತಿ ಹೆಸರು ಗಿರಿರಾಮ ಶ್ರೀಧರ ದೀಕ್ಷಿತ್. ತಂದೆ ಗಿರಿರಾಮ ದೀಕ್ಷಿತರು ಹರಿಹರೇಶ್ವರ ದೇವಾಲಯದ ಅರ್ಚಕರಾಗಿದ್ದರು. ಇವರು ಹರಿಹರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿ, ದಾವಣಗೆರೆಯಲ್ಲಿ ಪ್ರೌಢಶಾಲಾ ವ್ಯಾಸಂಗವನ್ನು ಮಾಡಿದರು. ಮುಂದೆ ಶಿವಮೊಗ್ಗ ಮತ್ತು ಮೈಸೂರುಗಳಲ್ಲಿ ಕಾಲೇಜು ವಿದ್ಯಾಭ್ಯಾಸ ನಡೆಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಇತಿಹಾಸವನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಚಿನ್ನದ ಪದಕ ಮತ್ತು ಮೊದಲ ರ‍್ಯಾಂಕ್ ಸಹಿತ ಪದವಿ ಪಡೆದರು (1932). ಮುಂಬಯಿ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಗಳಿಸಿದರು.

ಇವರ ವೃತ್ತಿಜೀವನ ಆರಂಭಗೊಂಡದ್ದು ಅಂದಿನ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಮತ್ತು ಈಗ ಒರಿಸ್ಸ ರಾಜ್ಯದಲ್ಲಿರುವ ಪಾರ್ಲಕಿಮೇಡಿನ ಮಹಾರಾಜ ಕಾಲೇಜಿನಲ್ಲಿ ಇತಿಹಾಸದ ಅಧ್ಯಾಪಕನಾಗುವುದರ ಮೂಲಕ. ಅಲ್ಲಿನ ಮಹಾರಾಜರ ಕುಟುಂಬಕ್ಕೆ ಇವರು ಆಪ್ತರಾಗಿದ್ದು ಅವರೊಂದಿಗೆ ಟೆನಿಸ್ ಆಡುತ್ತಿದ್ದುದೂ ಉಂಟು. ದೀಕ್ಷಿತರು 1939ರಲ್ಲಿ ಮೈಸೂರಿನ ಪುರಾತತ್ತ್ವ ಇಲಾಖೆಗೆ ಉತ್ಖನನ ಸಹಾಯಕರಾಗಿ ಸೇರಿದರು. ಪ್ರಸಿದ್ಧ ಪುರಾತತ್ತ್ವಜ್ಞ ಎಂ.ಎಚ್.ಕೃಷ್ಣ ಅವರು ನಡೆಸಿದ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ ಉತ್ಖನನಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಅನಂತರ ಈ ಹುದ್ದೆಯನ್ನು ಬಿಟ್ಟು ಸಾಂಗ್ಲಿಯ ವಿಲಿಂಗ್ಡನ್ ಕಾಲೇಜನ್ನು ಸೇರಿದರು. ಅಲ್ಲಿ ಇವರಿಗೆ ಖ್ಯಾತ ಇತಿಹಾಸ ಸಂಶೋಧಕ ಎಸ್.ಆರ್. ಶರ್ಮರ ಮಾರ್ಗದರ್ಶನ ದೊರೆಯಿತು. ಆ ಕಾಲೇಜಿನ ಪ್ರಾಂಶುಪಾಲರಾಗಿದ್ದ ವಿ.ಕೃ.ಗೋಕಾಕ್ ಮತ್ತು ಅಧ್ಯಾಪಕರಾಗಿದ್ದ ರಂ.ಶ್ರೀ. ಮುಗಳಿಯವರ ಒಡನಾಟದಿಂದ ಇವರು ಪ್ರಭಾವಿತರಾದರು. ಅನಂತರ ಪುಣೆಯ ಫರ್ಗ್ಯುಸನ್ ಕಾಲೇಜಿಗೆ ವರ್ಗವಾಗಿ ಆರು ವರ್ಷಗಳ ಕಾಲ ಅಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಪುಣೆ ವಿಶ್ವವಿದ್ಯಾಲಯ ಪ್ರಾರಂಭವಾದಾಗ (1949) ಇತಿಹಾಸ ಪಠ್ಯದ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1955ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಸೇರಿ ನಿವೃತ್ತರಾಗುವವರೆಗೂ (1971) ಧಾರವಾಡವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. 1961-62ರಲ್ಲಿ ಇವರಿಗೆ ಅಮೆರಿಕದ ಸೀನಿಯರ್ ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ದೊರೆಯಿತು. ಮುಂದೆ 1971ರಲ್ಲಿ ಟೊರಾಂಟೋ ವಿಶ್ವವಿದ್ಯಾನಿಲಯದಲ್ಲಿ ಭಾರತೀಯ ಇತಿಹಾಸ ಬೋಧಿಸಲು ಅಮೆರಿಕಕ್ಕೆ ತೆರಳಿದರು. ಪ್ರಾಧ್ಯಾಪಕರಾದ ಬಿ.ಎ.ಸಾಲೆತ್ತೂರ್‌ರ ಮಾರ್ಗದರ್ಶನದಲ್ಲಿ ಮಧ್ಯಕಾಲೀನ ಕರ್ನಾಟಕದ ಸ್ಥಳೀಯ ಆಡಳಿತಗಳ ಬಗ್ಗೆ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿ ಪಡೆದರು (1962).

ಇವರಿಗೆ ಇತಿಹಾಸ ಸಂಶೋಧನೆಗೆ, ಸಂಬಂಧಿಸಿದ ಹಲವು ಸಂಘ ಸಂಸ್ಥೆಗಳ ಸಂಪರ್ಕವಿತ್ತು. ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್, ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್, ಮಿಥಿಕ್ ಸೊಸೈಟಿ ಮುಂತಾದವು. 1986 ರಿಂದ 1996ರ ವರೆಗೆ ಇವರು ಕರ್ನಾಟಕ ಇತಿಹಾಸ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ನಿಧನರಾಗುವವರೆಗೂ ಅದರ ಆಜೀವ ಗೌರವಾಧ್ಯಕ್ಷರಾಗಿ ಮುಂದುವರಿದಿದ್ದರು. ಇವರನ್ನು ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ. ಇವರು ಅನೇಕ ಗೋಷ್ಠಿ ಸಮ್ಮೇಳನಗಳ ಅಧ್ಯಕ್ಷರಾಗಿದ್ದರು. 1963ರ ಜನವರಿಯಲ್ಲಿ ಈರೋಡ್‌ನಲ್ಲಿ ನಡೆದ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸಿನ 21ನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅದೇ ವರ್ಷ ಆಂಧ್ರ ಹಿಸ್ಟರಿ ಕಾಂಗ್ರೆಸ್ಸಿನ, ಹಾಗೆಯೇ ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಸಮ್ಮೇಳನಾಧ್ಯಕ್ಷರಾಗಿದ್ದರು. ಮಿಥಿಕ್ ಸೊಸೈಟಿ ಇವರನ್ನು ಸನ್ಮಾನಿಸಿದೆ (1979). ಇವರ ಅಭಿಮಾನಿಗಳು ಗಿರಿದರ್ಶಿನಿ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿ ಗೌರವಿಸಿದ್ದಾರೆ (1987).

ಕನ್ನಡ ನಾಡಿನ ಇತಿಹಾಸ ಸಂಶೋಧನೆಯ ಬೆಳೆವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ ಅಗ್ರಗಣ್ಯ ವ್ಯಕ್ತಿಗಳಲ್ಲಿ ಒಬ್ಬರಾದ ಇವರು ಎಳೆಯರಿಗೆ ಇತಿಹಾಸ ಸಂಶೋಧನೆಯ ಪ್ರೇರಣೆ, ಮಾಗದರ್ಶನ ನೀಡಿದವರು. ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಬಸವೇಶ್ವರರನ್ನು ಕುರಿತಂತೆ ಸಂಶೋಧನೆ ನಡೆಸುತ್ತಿದ್ದರು. ಇವರಿಗೆ ಕೃಷ್ಣದೇವರಾಯನ ಇತಿಹಾಸವೆಂದರೆ ಅಚ್ಚುಮೆಚ್ಚು. ಹಾಗೆಯೇ ಚೀನಾದಲ್ಲಿ ಬೌದ್ಧಧರ್ಮ ಬೆಳೆವಣಿಗೆ ಕುರಿತು ಆಸಕ್ತಿ. ಆನ್ವಯಿಕ ಸಂಶೋಧನೆಯತ್ತ ಒಲವು ಹೊಂದಿದ್ದ ಇವರು ಹಲವು ಕೃತಿಗಳನ್ನು ರಚಿಸಿದ್ದಾರೆ ಹಾಗೂ ಸಂಪಾದಿಸಿದ್ದಾರೆ; ವಿದ್ವದ್ಗೋಷ್ಠಿಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ 40ಕ್ಕೂ ಹೆಚ್ಚು ಸಂಪ್ರಬಂಧಗಳನ್ನು ಮಂಡಿಸಿದ್ದರು. ಹಲವು ಕೃತಿಗಳಿಗೆ ಮುನ್ನುಡಿ ಇಲ್ಲವೇ ವಿಮರ್ಶೆ ಬರೆದರು. ವಿಶೇಷ ಉಪನ್ಯಾಸಗಳನ್ನು ನೀಡಿದ್ದುಂಟು. ಇವರು ಬರೆದ ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್ ಮಿಡೀವಲ್ ಕರ್ನಾಟಕ (1964), ಕೆಳದಿ ನಾಯಕರು (1976, ದ್ವಿತೀಯ ಆವೃತ್ತಿ), ಹಾಗೂ ಇವರು ಸಂಪಾದಿಸಿದ ಅಮೆರಿಕನ್ ಹಿಸ್ಟರಿ ಬೈ ಇಂಡಿಯನ್ ಹಿಸ್ಟೋರಿಯನ್ಸ್ (1969) ಮತ್ತು ಸ್ಟಡೀಸ್ ಇನ್ ಕೆಳದಿ ಹಿಸ್ಟರಿ (1981) - ಇವು ಮುಖ್ಯವಾದವು. ಇವರೊಬ್ಬ ಒಳ್ಳೆಯ ಭಾಷಾಂತರಕಾರರೂ ಆಗಿದ್ದರು. ಎರಡು ಸಂಪುಟಗಳಲ್ಲಿ ತಾರಾಚಂದರ ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಇಂಡಿಯಾ ಗ್ರಂಥವನ್ನು ಅನುವಾದಿಸಿದ್ದಾರೆ.

ಇವರು 2004 ಜೂನ್ 26ರಂದು ಧಾರವಾಡದಲ್ಲಿ ನಿಧನರಾದರು.

(ಎಚ್.ಎಂ.ಎಸ್.ಆರ್.)

**ದೀಕ್ಷಿತ್, ದಾಶರಥಿ ಗಿರಿ :** ಕನ್ನಡದ ಪ್ರಸಿದ್ಧ ಹಾಸ್ಯ ಲೇಖಕ,

ನಾಟಕಕಾರ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ 1921 ಫೆಬ್ರವರಿ 2ರಂದು ಜನಿಸಿದರು. ತಂದೆ ಬಾಳ ದೀಕ್ಷಿತ್. ತಾಯಿ ರಂಗೂಬಾಯಿ. ತಂದೆ ಸರ್ಕಾರದಲ್ಲಿ ಶಿರಸ್ತೇದಾರರಾಗಿದ್ದರು. ಮೊಳಕಾಲ್ಮೂರು, ಹಿರಿಯೂರು, ಚಳ್ಳಕೆರೆಗಳಲ್ಲಿ ದೀಕ್ಷಿತರ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಮಾಧ್ಯಮಿಕ ಶಿಕ್ಷಣ ಹೊಸದುರ್ಗ, ತುರುವನೂರು, ಹೊಳಲ್ಕೆರೆಗಳಲ್ಲಿ. ಇವರ ಪ್ರೌಢ ವಿದ್ಯಾಭ್ಯಾಸ ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ನಗರಗಳಲ್ಲಿ ಆಯಿತು. ತಂದೆಯವರಿಗೆ ಪದೇ ಪದೇ ಊರಿಂದೂರಿಗೆ ವರ್ಗವಾಗುತ್ತಿದ್ದುದರಿಂದ ಮಗನ ವಿದ್ಯಾಭ್ಯಾಸ ಹೀಗೆ ಹಲವು ಎಡೆಗಳಲ್ಲಿ ಮುಂದುವರಿಯುವುದು ಅನಿವಾರ್ಯವಾಗಿತ್ತು. ಅನಂತರ ಇವರು ಕೆಲಸಕ್ಕಾಗಿ ಹುಡುಕಾಟ ನಡೆಸಿದರು. ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ಸ್ವಲ್ಪ ಕಾಲ ಉದ್ಯೋಗಿಯಾಗಿದ್ದು ಅನಂತರ ಹಿಂದೂಸ್ತಾನ್ ವಿಮಾನ ಕಾರ್ಖಾನೆಯನ್ನು ಸೇರಿ ಅಲ್ಲಿ ಮೂವತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ತಂದೆಯವರು ಶಿರಸ್ತೇದಾರರಾಗಿದ್ದುದ್ದರಿಂದ ಅವರು ಅಧಿಕಾರ ನಡೆಸುತ್ತಿದ್ದ ಊರಿಗೆ ಯಾವುದೇ ನಾಟಕ ಕಂಪನಿ ಬಂದರೂ ಪ್ರದರ್ಶನಕ್ಕೆ ಅವರ ಅನುಮತಿ ಪಡೆಯಬೇಕಾಗುತ್ತಿತ್ತು. ಇದರಿಂದ ದೀಕ್ಷಿತರಿಗೆ ನಾಟಕಗಳನ್ನು ಉಚಿತವಾಗಿ ನೋಡುವ ಅವಕಾಶ ದೊರೆಕಿತು. ಇದರಿಂದಾಗಿ ಸಹಜವಾಗಿಯೇ ಇವರಿಗೆ ಅಭಿನಯದಲ್ಲಿ ಅಭಿರುಚಿ ಮೂಡಿತು. ನಾಟಕಾಭಿನಯದೊಂದಿಗೆ ಇವರು ಸಂಗೀತದಲ್ಲೂ ಪ್ರವೀಣರಾದರು. ಇವರು ಹಾಡುಗಾರಿಕೆ ಮತ್ತು ಹಾರ್ಮೋನಿಯಂ ವಾದನ ಎರಡನ್ನೂ ಕಲಿತರು. ಹರಿಕಥೆಯೊಂದಿಗೂ ಇವರ ಸಂಬಂಧ ಬೆಳೆಯಿತು. ಕೀರ್ತನ ಕಾರ್ಯಕ್ರಮಗಳಲ್ಲಿ ಪಕ್ಕವಾದ್ಯಗಾರರು ದೊರಕದಿದ್ದಾಗ ಇವರೇ ಪಕ್ಕವಾದ್ಯ ಸಹಕಾರ ನೀಡತೊಡಗಿದರು.

ಬೆಂಗಳೂರಿನಲ್ಲಿ ಶಾಶ್ವತವಾಗಿ ನೆಲೆಯೂರಿ ನಿಂತಾಗ ಇವರ ಮನಸ್ಸು ವಿಶೇಷವಾಗಿ ನಾಟಕ ಕಲೆಯ ಕಡೆಗೆ ಹರಿಯಿತು. ಗೆಳೆಯರೊಂದಿಗೆ ಕೂಡಿ ಇವರು ನಾಟಕ ತಂಡ ಕಟ್ಟಿ ನಾಟಕ ಆಡಲೂ ಆಡಿಸಲೂ ಆರಂಭಿಸಿದರು. ಇವರ ನಾಟಕ ತಂಡದ ಹೆಸರು ಗಾಂಪರ ಗುಂಪು. ಇವರು ಸ್ವತಃ ನಾಟಕಗಳನ್ನೂ ಬರೆಯತೊಡಗಿದರು. ಅಜ್ಜಿ ಆಸ್ತಿ ಎಂಬುದು ಇವರು ಬರೆದ ಮೊದಲನೆಯ ನಾಟಕ. ಅಳಿಯ ದೇವರು ಎರಡನೆಯದು. ಇದು ತುಂಬ ಜನಪ್ರಿಯವಾಯಿತು. ಪ್ರೇತ ಸಂಹಾರ, ವೈದ್ಯನ ವಿವಾಹ ಎಂಬುವು ಪ್ರಹಸನಗಳು. ಲಂಬೋದರ, ಗಾಂಪರ ಗುಂಪು ಮುಂತಾದವು ಓದಲೂ ಆಡಲೂ ಅನುವಾಗಿ ಒದಗಿಬಂದವು.

ನಾಟಕಗಳಲ್ಲದೆ ಇವರು ಕಾದಂಬರಿಗಳನ್ನೂ ಇತರ ಕೃತಿಗಳನ್ನೂ ರಚಿಸಿದ್ದಾರೆ. ಬಾಲ ಬಂಧನ, ಮಾವನ ಮನೆ - ಇವು ಕಾದಂಬರಿಗಳು. ಇವರು ಲೇಖನಗಳನ್ನೂ ಕಥೆಗಳನ್ನೂ ಬರೆಯತೊಡಗಿದರು. ಗೆಳೆಯರ ಅಪೇಕ್ಷೆಯಂತೆ ಗಂಭೀರ ಸಾಹಿತ್ಯವನ್ನು ಬಿಟ್ಟು ನಗೆ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದರು. ರಾಶಿ ಅವರ ಕೊರವಂಜಿ ಪತ್ರಿಕೆಗೂ ದೀಕ್ಷಿತರಿಗೂ ಸಂಬಂಧ ಬೆಳೆಯಿತು. ಆ ಪತ್ರಿಕೆ ಪ್ರಕಟವಾಗುತ್ತಿದ್ದವರೆಗೂ ಅದಕ್ಕಾಗಿ ಇವರು ಬರೆದರು. ನಗೆ ಜಿಲ್ಲಾಡಿದರು. ಪೋಡಪ್ರಿಯ ದಫೇದಾರ್ ದೇರಣ್ಣ, ಗಾಂಪರು ಇತ್ಯಾದಿ ಪಾತ್ರಗಳನ್ನು ಸೃಷ್ಟಿಸಿದ್ದರು. ಅಪ್ಪಟ ಹಾಸ್ಯಕ್ಕೆ, ಒಂದಿಷ್ಟು ವ್ಯಂಗ್ಯಕ್ಕೆ ಹೆಸರಾದ ಲೇಖನಗಳು ದೀಕ್ಷಿತರವು. ಪ್ರೇತಸಂಹಾರ ಎಂಬುದು ಇಂಥ ಲೇಖನಗಳ ಸಂಕಲನ. ಇದು ರಾಶಿ ಅವರ ಮೆಚ್ಚುಗೆ ಗಳಿಸಿತು.

ನಗೆ ಲೇಖನಗಳ ನಡುವೆಯೇ ಇವರಿಗೆ ಒಮ್ಮೊಮ್ಮೆ ಗಂಭೀರ ಸಾಹಿತ್ಯದ ಕಡೆಗೆ ಮನಸ್ಸು ಹರಿಯುತ್ತಿತ್ತು. ಒಂದು ಗಂಭೀರ ಕಾದಂಬರಿಯನ್ನೂ ಇವರು ಬರೆದಿದ್ದಾರೆ. ಹೆಚ್ಚಾಗಿ ಹಾಸ್ಯ ಕಾದಂಬರಿಗಳನ್ನೇ ರಚಿಸತೊಡಗಿದರು. ಮಾವನ ಮನೆ ಒಂದು ಉತ್ತಮ ಹಾಸ್ಯ ಕಾದಂಬರಿ. 'ಗಂಡಾಗಿ ಕಾದಿದ್ದ ಗುಂಡು' ಇನ್ನೊಂದು. ಮರಳಿ ಮಠಕ್ಕೆ ಎಂಬುದು ಗಾಂಪರ ಗುಂಪಿನ ಪ್ರತಾಪ. ಹೀಗೆ ಇವರು ಒಟ್ಟು ಎಂಟು ನಾಟಕಗಳನ್ನೂ೯ಂಟು ಕಾದಂಬರಿಗಳನ್ನೂ ಹನ್ನೆರಡು ನಗೆ ಲೇಖನ ಸಂಕಲನಗಳನ್ನೂ ಪ್ರಕಟಿಸಿದ್ದರು.

ಇವರಿಗೆ ಸೂತ್ರದ ಗೊಂಬೆ ಆಟದಲ್ಲೂ ಆಸಕ್ತಿಯಿತು. ಇದಕ್ಕಾಗಿ ಗೆಳೆಯರೊಂದಿಗೆ ಒಂದು ಸಂಸ್ಥೆ ಕಟ್ಟಿ ಹಲವಾರು ಹಾಸ್ಯ ಪ್ರದರ್ಶನಗಳನ್ನು ನೀಡಿದರು. ಈ ಸಂಸ್ಥೆ ಕರ್ನಾಟಕದ ಹೊರಗೂ ಮೆಚ್ಚುಗೆ ಗಳಿಸಿತು.

ಇವರು ಚಲನಚಿತ್ರ ಕ್ಷೇತ್ರವನ್ನು ಪ್ರವೇಶಿಸಿ ಅನೇಕ ಚಿತ್ರಗಳಲ್ಲಿ ನಟಿಸಿದ್ದರು. ಇವರ ಕಾದಂಬರಿಗಳು ದೂರದರ್ಶನದಲ್ಲೂ ಬಂದುವು. ಇವರ ಗಾಂಪರ ಗುಂಪು ಕೃತಿ ಧಾರಾವಾಹಿಯಾಗಿ ಪ್ರಸಾರವಾಯಿತು.

ದೀಕ್ಷಿತ್ ಅವರ ಹಾಸ್ಯದ ಒಂದು ಮುಖ್ಯ ಲಕ್ಷಣವೆಂದರೆ ಅವು ಕನ್ನಡದ ನೆಲೆಯಲ್ಲೇ, ಕನ್ನಡ ಜನರ ನಡುವಿನಿಂದಲೇ ಮೂಡಿ ಬಂದಂಥವು. ಇವರ ವ್ಯಕ್ತಿ ಚಿತ್ರಗಳಲ್ಲಂತೂ ಈ ಗುಣ ಎದ್ದು ಕಾಣುತ್ತದೆ. ದಫೇದರ್ ದೇರಣ್ಣ, ಗಾಂಪರ ಗುರು ಈ ಪಾತ್ರಗಳು ತಕ್ಕ ಸಹಜತೆಯಿಂದಲೂ, ಸನ್ನಿವೇಶದಿಂದಲೇ ಹೊಮ್ಮುವ ಹಾಸ್ಯದಿಂದಲೂ ಬಹಳ ಜೀವಂತವಾಗಿ ಕಂಗೊಳಿಸುತ್ತವೆ. ಕನ್ನಡದ ಹಾಸ್ಯ ಸಾಹಿತ್ಯದ ಇತಿಹಾಸದಲ್ಲಿ ದೀಕ್ಷಿತರ ಹೆಸರೂ ಶಾಶ್ವತವಾಗಿ ಉಳಿಯುವಂಥದ್ದು.
(ಎಚ್.ಎಸ್.ಕೆ.)

**ದುಮ್ ದುಮೆ ಪದಗಳು :** ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವ ಜನಪದ ಕಥನ ಕಾವ್ಯ ಪ್ರಕಾರ, ಈ ಕಾವ್ಯಗಳನ್ನು ಹಾಡುವಾಗ ದಿಮ್ಮು ಎಂಬ ಚರ್ಮವಾದ್ಯವನ್ನು ಬಳಸುತ್ತಾರೆ. ಆ ವಾದ್ಯದ ದುಮ್ ದುಮ್ಮಿ ಅಥವಾ ದಿಮ್ ದಿಮ್ಮಿ ಎಂಬ ಶಬ್ದದಿಂದ ದುಮ್ ದುಮಿ ಅಥವಾ ದಿಮ್ ದಿಮಿ ಎಂಬ ಪದ ಹುಟ್ಟಿಕೊಂಡಿರಬೇಕು. ದಿಮ್ಮು ವಾದ್ಯವನ್ನು ಈಗಲೂಕರಡೆ ಮಜಲುಗಳಲ್ಲಿ ಹಾಗೂ ಮೋಜು ಮಜಲುಗಳಲ್ಲಿ ಕಾಣಬಹುದಾಗಿದೆ. ದುಮ್ ದಿಮ್ ಎಂಬ ಅನುಕರಣವಾಚಕ ಶಬ್ದದಿಂದಲೆ ದಿಮ್ಮು ಎಂಬ ಹೆಸರು ಆ ವಾದ್ಯಕ್ಕೆ ಬಂದಿದೆ. ದಿಮ್ಮು ಬಳಸಿಕೊಂಡು ಹಾಡುವ ಕಾವ್ಯಗಳೇ ದುಮ್‌ದುಮೆ ಪದಗಳು. ಈ ಪದಗಳ ವೈಶಿಷ್ಟ್ಯ ಆಗಾಗ ತನ್ನ ಗತಿಯನ್ನು ಬದಲಾಯಿಸುವ ದಿಮ್ಮು ವಾದ್ಯದ ತಾಳತಾನಗಳಿಗೆ ಹೊಂದಿಕೊಂಡು ಒಡನುಡಿಯುವುದರಲ್ಲಿ ಅಡಗಿದೆ. ಈ ವಾದ್ಯದ ನೆರವಿಲ್ಲದೆ ಈ ಪದಗಳನ್ನು ಹಾಡುವಂತಿಲ್ಲ. ಹಾಗೆ ಹಾಡಿದರೆ ಅವು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಕಾಣಸಿಗುವ ಹೋಳಿಪದಗಳೆನಿಸಿಕೊಳ್ಳುತ್ತವೆ. ಏಕೆಂದರೆ ದುಮ್ಮ್‌ದುಮೆ ಪದಗಳಿಗೂ ಹೋಳಿ ಪದಗಳಿಗೂ ಇರುವ ಮುಖ್ಯ ವ್ಯತ್ಯಾಸ ಬಳಸುವ ವಾದ್ಯಗಳನ್ನು ಅವಲಂಬಿಸಿದ್ದು. ಅವುಗಳ ಭಾಷೆ, ಶೈಲಿ, ರಚನೆ, ತಂತ್ರ ಮುಂತಾದವುಗಳಲ್ಲಿ ಏಕರೀತಿಯನ್ನು ಕಾಣಬಹುದು. ಆದರೆ ಹೋಳಿಪದಗಳು ಶೃಂಗಾರರಸ ಪ್ರಧಾನವಾಗಿರುತ್ತವೆ. ದುಮ್ ದುಮೆ ಪದಗಳಲ್ಲಿ ವೀರರಸ ಪ್ರಧಾನವಾದರೂ ಉಳಿದ ರಸಗಳೂ ಉಂಟು.

ಬಿ.ಎಸ್. ಗದ್ದಗೀಮಠ ಅವರು ದುಮ್ ದುಮೆ ಹಾಗೂ ದುಂದುಭಿ ಎಂಬ ಎರಡು ಕಾವ್ಯ ಪ್ರಕಾರಗಳನ್ನು ಹೇಳುತ್ತಾರೆ. ಇವೆರಡನ್ನೂ ಬಾಜನಗಬ್ಬವೆಂದು ಹೇಳುವ ಅವರು ಪರಸೆ ಕೂಡಿದಾಗ ಎಲ್ಲೆಂದರಲ್ಲಿ ದುಂ ದುಂ ಶಬ್ದಮಾಡುತ್ತ ತಾಳ, ಲಯ, ಗತಿ, ರಾಗಗಳಿಗೆ ಅನುಸಾರ ಹಾಡುವವು ದುಮ್‌ದುಮೆ ಪದಗಳು, ಅರಸಂಗಳದಲ್ಲಿ ರಾಜ ದಿಗ್ವಿಜಯಕ್ಕೆ ಹೊರಟಂದು ದುಂದುಭಿ ವಾದ್ಯಗಳನ್ನು ಮೊಳಗಿಸುತ್ತ ಹಾಡಲಾಗುತ್ತಿದ್ದವು. ದುಂದುಭಿ ಪದಗಳು, ಆದರೆ ಇಲ್ಲಿ ದುಂದುಭಿ ಶಬ್ದ ದುಮ್ ದುಮೆಗೆ ಸಮೀಕರಿಸಲು ಪ್ರಯತ್ನಿಸಿದ ಸಂಸ್ಕೃತ ಶಬ್ದವೆಂದು ಕಾಣುತ್ತದೆ.

ದುಮ್ ದುಮೆ ಪದಗಳಿಗೆ ಕರಡೆ, ಸಂಬಾಳ, ಮದ್ದಲೆ ಮೊದಲಾದ ವಾದ್ಯಗಳನ್ನು ಬಳಸಿಕೊಂಡು ಹಾಡುತ್ತಿದ್ದರೆಂದು ಅಭಿಪ್ರಾಯವೂ ಬಂದಿದೆ. ಈಗಂತೂ ದಿಮ್ಮು ದಮ್ಮಡಿಗಳು ಬಳಕೆಯಲ್ಲಿವೆ.

ದುಮ್‌ದುಮೆ ಪದಗಳು 12ನೆಯ ಶತಮಾನಕ್ಕೂ ಹಿಂದಿನವೆಂಬುದು ಅಭಿಮಾನದ ಮಾತಾದೀತು. ವೀರಶೈವ ಸಮಾಜದಲ್ಲಿ ಕರಡಿಯವರು ಸಂಬಾಳದವರು ಎಂಬ ಪಂಗಡಗಳಿರುವುದರಿಂದ ಇವರೆಲ್ಲ ದುಮ್ ದುಮೆ

ಪದಗಳ ಗಾಯನ ಸಂಪ್ರದಾಯದವರಿರಬೇಕೆಂಬುದು ಗದ್ದಗಿ ಮಠರ ಅಭಿಪ್ರಾಯ. ಶಿವಶರಣರು ತಮ್ಮ ಧರ್ಮಪ್ರಸಾರಕ್ಕಾಗಿ ನೆಯ ಶತಮಾನದಲ್ಲೇ ಈ ಪದಗಳನ್ನು ಬಳಸಿಕೊಂಡರೆಂಬುದಾಗಿ ಹೇಳುವ ಎಂ.ಎಸ್. ಸುಂಕಾಪುರ ಅವರು ಅದರ ಸಮರ್ಥನೆಗಾಗಿ ಕಲಿಕಾಲ ಹೋಳಿ ಎಂಬ ಪದದ ಪಲ್ಲವಿಯನ್ನು ಉದಾಹರಿಸುತ್ತಾರೆ. ಅದರಲ್ಲಿ ಬಂದಿರುವ ದುಮ್‌ದುಮೆ ಬಸವಂತನ ಹಬ್ಬ ಎಂಬುದರಲ್ಲಿರುವ ಬಸವಂತ ಪದದ ಆಧಾರದ ಮೇಲೆ ಇದು ಬಸವಣ್ಣನವರ ಕಾಲದ್ದೆಂದು ಹೇಳುವುದು ಸರಿಯಲ್ಲವೆಂದು ಸಮಂಜಸವೆಂದು ತೋರುವುದಿಲ್ಲ. ಬಹುಶಃ ಇವು 15ನೆಯ ಶತಮಾನದಿಂದೀಚಿನವೆಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ವಿಜಯನಗರದ ದೊರೆ ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮದ ಪ್ರಚಾರ ಕಾರ್ಯಕ್ಕೆ ಹೊಸಹುರುಪು ದೊರೆತಿತು. ನೂರೊಂದು ವಿರಕ್ತರು ಅವತರಿಸಿ, ಧರ್ಮ, ತತ್ತ್ವ, ಸಂಸ್ಕೃತಿಗಳ ಸಂವರ್ಧನೆಗೆ ಮನಮುಟ್ಟಿ ದುಡಿದರು. ಅವರಲ್ಲೊಬ್ಬನಾದ ಕರಸ್ಥಳದ ನಾಗಿದೇವ ಈ ಕ್ಷೇತ್ರದಲ್ಲಿ ಬಹುವಾಗಿ ಶ್ರಮಿಸಿದವ. ಅವನ ಸಾಹಿತ್ಯ ಸೇವೆಯೂ ಸ್ಮರಣೀಯವಾದುದು. ಅವನು ಅನೇಕ ಕಾಲಜ್ಞಾನದ ಹಾಡುಗಳನ್ನು ರಚಿಸಿದ್ದಾನೆ. ಆ ಹಾಡುಗಳೆಲ್ಲ ದುಮ್ ದುಮೆಯ ಪದಗಳಾಗಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಅವನ ಹಾಡಿನ ಒಂದು ಪಲ್ಲವಿ ಹೀಗಿದೆ.

ದಿಮ್ಮಿಸಲೆನ್ನಿರೊ ನಮ್ಮವರೆಲ್ಲ ದಿಮ್ಮಿಸಲೆನ್ನಿರೊ

ದಿಮುಇಸಲೆಂದು ಬಂದೀವಿ ಸತ್ಯವುಳ್ಳ ಶರಣರೆಲ್ಲ

ಇಲ್ಲಿ ಬಂದಿರುವ ದಿಮ್ಮಿಸು ಎನ್ನುವ ಪದವನ್ನು ಗಮನಿಸಿದರೆ (ದಿಮ್ಮು +ಇಸು=ದಿಮ್ಮಿಸು) ಡಂಗುರ ಸಾರು ಎಂದರ್ಥವಾಗುತ್ತದೆ. ಇಂದಿನ ದಿನಗಳ್ಲಲೂ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಸಾರ್ವಜನಿಕ ಹೇಳಿಕೆ ನೀಡುವಾಗ ದಿಮ್ಮು ಬಳಸುತ್ತಾರೆ. ಇಂಥ ದಿಮ್ಮು ವಾದ್ಯದ ಜೊತೆಗೆ ಕೇಳಿಸುವ ಹಾಡೇ ದುಮ್ ದುಮೆ ಪದ. ಈ ಬಗೆಯ ಸಾಹಿತ್ಯ ಕಿತ್ತೂರು ಅರಸರ ಆಳ್ವಿಕೆಯ ಕಾಲದಲ್ಲಿ ಅಪಾರವಾಗಿ ಬೆಳೆಯಿತು.

ದುಮ್‌ದುಮೆ ಪದಗಳ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು: ಕಥೆ, ಸನ್ನಿವೇಶಗಳು ವರ್ಣನೆಗಳಿಂದ ಕೂಡಿರುತ್ತವೆ. ವರ್ಣನೆಗಳು ಸಂದರ್ಭೋಚಿತವಾಗಿರುತ್ತವೆಯೇ ಹೊರತು ದೀರ್ಘವಾಗಿ ಅಲ್ಲ. ಕಥನಕ್ರಿಯೆ ತೀವ್ರಗತಿಯಲ್ಲಿ ಮುನ್ನಡೆಯುತ್ತದೆ. ವೀರರಸಕ್ಕೆ ಪ್ರಾಧಾನ್ಯವಿದ್ದರೂ ಉಳಿದ ರಸಗಳೂ ಬರಬಲ್ಲವು. ನೀತಿ ಪ್ರಸಾರ ಕಾರ್ಯವೂ ಇದರ ಮತ್ತೊಂದು ಅಂಗ, ಓಟ, ರಭಸ, ಉತ್ಸಾಹವೇ ಇದರ ಜೀವಾಳ. ಪದಗಳು ಅಂಶಗಣದ ಮಟ್ಟಿನಲ್ಲಿರುತ್ತದೆ. ಶಿಥಿಲತೆ ಇದರ ಒಳಗುಟ್ಟು. ತಾಳಬದ್ಧವಾಗಿ ವಿವಿಧ ರಾಗಗಳಿಗೆ ಹೊಂದಿಕೊಳ್ಳುವುದರ ವೈಶಿಷ್ಟ್ಯ ಶಿಥಿಲತೆಗೆ ಹೆಸರಾದ ಅದರ ಅಂಶಗಣದಲ್ಲಿಯೇ ಅಡಗಿದೆ. ಹಾಡಲು ಬಲ್ಲವರಿಗೆ ಇದರ ಮರ್ಮ ಸ್ಪಷ್ಟವಾಗಿ ಗೋಚರಿಸುತ್ತದೆ. ಇಂತಿಷ್ಟೆ ಪಾದಗಳಿರಬೇಕೆಂಬ ನಿಯಮವಿಲ್ಲದಿದ್ದರೂ ಹತ್ತುಪಾದಗಳಿಗೆ ಮೀರಿ ಬೆಳೆಯುವುದಿಲ್ಲ. ಕೆಲವೊಮ್ಮೆ ಚೌಪದಿಯಲ್ಲೂ ಇರಬಹುದು. ಇಲ್ಲಿನದು ಶುದ್ಧ ಜನಪದ ಭಾಷೆಯಲ್ಲಿಲ್ಲ. ಇವು ಅಕ್ಷರ ಬಲ್ಲವರ ರಚನೆಗಳೆಂಬುದರಲ್ಲಿ ಅನುಮಾನವಿಲ್ಲ. ಇವನ್ನು ಬರೆದ ಕವಿಗಳು ಅಂತ್ಯದಲ್ಲಿ ತಮ್ಮ ನಾಮಾಂಕಿತವನ್ನು ಮುದ್ರಿಸುವುದನ್ನೂ ಮರೆತಿಲ್ಲ. ಈ ಕಾಲಣದಿಂದ ಇವನ್ನು ಸಮಷ್ಟಿ ಸೃಷ್ಟಿಯೆಂದು ಹೇಳುವುದಕ್ಕಾಗುವುದಿಲ್ಲ. ಇವು ಜನಪದ ಸಮುದಾಯಕ್ಕೆ ಸಮೀಪದಲ್ಲಿವೆ. ನಾಗರಿಕ ಸಮುದಾಯಕ್ಕೆ ದೂರವಾಗಿವೆ. ಶಿಷ್ಟ ಭಾಷೆ ಹಾಗೂ ಪ್ರಾಸದ ವೈಭವಕ್ಕೆ ಈ ಉದಾಹರಮೆ ನೋಡಿ.

ಈಶ ಮಾಹೇಶ ಗೌರೀಶ ಗಜಾಂತಕ

ನಾಶಮುಕ್ತೀಶ ಮಲ್ಲೇಶ್ವರನೆ | ಪುರ

ನಾಶ ಭೂತೇಶ ಸರ್ವೇಶ್ವರನೆ | ಜಗ

ದೀಶ ಗಂಗಾಂಬೆಯ ತೋಷ ಭೂಷ ಅಘ

ನಾಶ ರಹಿತ ಆಶ ಸಲಹು ಸೋಮೇಶ

ಮೇಲಿನ ಉದಾಹರಣೆಯಲ್ಲಿ ಆದಿಪ್ರಾಸವನ್ನು ಮಾತ್ರ ಕಾಣುತ್ತೇವೆ. ಉತ್ತರ ಕರ್ನಾಟಕದ ಆಡುನುಡಿಯ ಸೊಗಸಾಗಲಿ ಬನಿಯಾಗಲಿ ಇಲ್ಲಿ ಎಳ್ಳಷ್ಟೂ ಕಂಡುಬರುವುದಿಲ್ಲ.

ಚೌಪದ ರೂಪದ ದುಮ್‌ದುಮೆಗಳಲ್ಲಿ ಆದಿ ಅಂತ್ಯ ಪ್ರಾಸಗಳೆರಡನ್ನೂ ಕಾಣಬಹುದು:

ಕರೆಯಬಂದವರೆಲ್ಲ ಬೆರಗಾಗಿ ನೋಡಿ

ಶರೀರದ ನಾಡಿಯ ಹಿಡಿದು ಮಾತಾಡಿ

ಭರದಿಂದ ಬಂದಾರೊ ಅರಮನಿಗೋಡಿ

ದೊರೆ ಮಲ್ಲ ಸರ್ಜನ ಕಳುಹೊ ದಯಮಾಡಿ

ಈ ಕಾವ್ಯಗಳ ಮೇಲೆ ಶಿಷ್ಟಸಂಪ್ರದಾಯದ ಪ್ರಭಾವ ಹೆಚ್ಚಾಗಿದೆ. ಒಬ್ಬ ದುಮ್‌ದುಮೆ ಕವಿ ಕಾವ್ಯದ ಅಂತ್ಯದಲ್ಲಿ ಒಂದು ಕಂದಪದ್ಯವನ್ನು ಬರೆದಿದ್ದಾನೆ:

ಗುರು ಲಘು ಗಣನೇಮಂಗಳ್

ವರ ಪ್ರಾಸ ಲಕ್ಷಣ ವಡಿಗಳ್ ತಪ್ಪಾಗಿರಲಿ

ನೆರೆಜಾಣರು ತಿದ್ದೆ ನಿಮಗೆ

ಸುರಲೋಕದ ಪದವಿಯನೀವ ತುರುವಿ ಗಿರೀಶಂ

ಕಥೆಯನ್ನು ತೀವ್ರಗತಿಯಲ್ಲಿ ಅದರೂ ಶಕ್ತಿಯುತವಾಗಿ ರೂಪಿಸುವ ಕೌಶಲಕ್ಕೆ ಅಭಿಮನ್ಯುವಿನ ಕಾಳಗದ ಈ ಸಾಲುಗಳನ್ನು ನೋಡಿ:

ಕ್ಷಿತಿಪತಿ ಕೇಳ್ ಚಕ್ರವ್ಯೂಹದೊಳಭಿಮನ್ಯು

ಅತಿರಮ್ಯ ಯುದ್ಧವು ಮಾಡಿದನು | ಬಹು

ಖತಿಯಿಂದ ಶಿರವ ಚಂಡಾಡಿದನು| ಅಲ್ಲೆ

ಹತವಾಗಿ ಮುಕ್ತಿಯ ಕೂಡಿದನು| ಜಯ

ದ್ರತ ಮಸ್ತಕ ನರಹರಿಯು ಎಚ್ಚನುಯೆಂದು

ಯತಿರಾಯ ಪೇಳಿದ ಹಿತವ ಭೂವರಗೆ

ಸುಭದ್ರೆ ಹಸುಮಗುವನ್ನು ಯುದ್ಧಕ್ಕೆ ಕಳಿಸುವುದೆ ಎಂದಾಗ ಅಭಿಮನ್ಯುವಿನ ಪರಾಕ್ರಮದ ಮಾತುಗಳಿಗಾಗಿ ಈ ಉದಾಹರಣೆ:

ಹಡೆದವ್ವ ನೀ ಎನ್ನ ತಡೆವುದುಚಿತವೇನ

ಕೊಡುಗೆದ್ದು ಬಾ ಎಂದು ಹರಕೆಯನ್ನು| ಶೋಕ

ನುಡಿ ಸಲ್ಲ ಬಿಡು ಬಿಡು ಚಿಂತೆಯನು| ನಿನ್ನ

ನುಡಿ ಗೇಳಿ ಬಿಡೆನು ನಾನು ಕೇಳಿದೆನು| ಎಂದು

ಒಡಗೊಂಡು ಸಾರಥಿ ವೀರ ಬೊಬ್ಬೆಗಳಿಂದ

ಪೊಡಮಟ್ಟು ಬರುವೆನೆಂದನು

ವರ್ಣನೆಗಳಲ್ಲಿ ದುಮ್‌ದುಮೆ ಕವಿ ಹಿತಮಿತ ಚತುರತೆಯನ್ನು ಮೆರೆಯಬಲ್ಲನೆಂಬುದಕ್ಕೆ ಕೀಚಕ ದ್ರೌಪದಿಯನ್ನು ಕಂಡು ಹೇಳುವ ಮಾತುಗಳಿವು:

ಒಬ್ಬ ದೂತನ ವಾರಿಯೊಳು ನಿಂತು ತನ್ನಯ

ಹುಬ್ಬೀಗೆ ಕೈ ಹಚ್ಚಿ ನೋಡಿದನು| ಇಂಥ

ಹೆಣ್ಣೀನ ಸಮನಿಲ್ಲ ನೋಡೆಂದನು| ಬಣ್ಣ
ನಿಂಬೀಯ ಹಣ್ಣು ಕಾಣೆಂದನು| ಇಂಥ
ಹೆಣ್ಣೀನ ರೂಪವ ಕಂಡು ಸೈರಿಸಲಾರೆ
ಇನ್ನೇನು ಗತಿಯೆಂದು ಅಂದ ಕೀಚಕನು
ಬಡನಡು ಬಳುಕುವ ಹೆಣ್ಣೀನ ನಡಿಗೆಯು
ನಡೆದರೆ ಮುದ್ದಾನೆಯಂದದಲಿ| ಬಲು
ನುಡಿದಳು ಸ್ವರ ಕೋಕಿಲೆಯಂದದಲಿ| ತಾನು
ಕಡೆಗಣ್ಣ ನೋಟದಿ ನೋಡುತಲಿಹಳು| ಇಂಥ
ಸುಂದರಿ ಸುಗುಣಿ ಇಂದಾಗದಿದೆ ಎನಗೆ
ಇನ್ನೊದಿಗೆ ಆಗೋದು ಎಂದ ಕೀಚಕನು

ದುಮ್‌ದುಮೇ ಪದಗಳನ್ನು ಅನೇಕ ಕವಿಗಳಿಲ್ಲರು ರಚಿಸಿದ್ದಾರೆ. ಈ ವರೆಗೆ ಪ್ರಕಟವಾಗಿರುವ ಕೃತಿಗಳ ವಚನಕಾರರಲ್ಲಿ ಮಲ್ಲಸರ್ಜ ದೊರೆಯ ಆಸ್ಥಾನದಲ್ಲಿದ್ದ ರುದ್ರಕವಿ. ಕುಂದಗೋಳದ ಬಸವಲಿಂಗ, ಚನ್ನಬಸವ, ನವಿಲುಗುಂದದ ಬಸವಲಿಂಗ, ಗುರುಶಾಂತವೀರಣ್ಣ, ಮಾಗಡಿ ಬಸವ, ಮುನಿಪುರದ ಪ್ರಭುವಿನ ಶಿಷ್ಯ, ಉಜ್ಜಯಿನಿ ಮರುಳಸಿದ್ಧನ ಬಾಲಕ, ಗೋಕಾವಿ, ಸಿದ್ಧಸೇವಕ ಮುಂತಾದವರು ಪ್ರಸಿದ್ಧರು. ಕೆಲವು ದುಮ್‌ದುಮೆ ಪದಗಳು ಲಾವಣಿ ಎಂಬ ಹೆಸರಿನಿಂದಲೂ ಕೆಲವು ಲಾವಣಿಗಳು ದುಮ್‌ದುಮೆ ಪದಗಳು ಎಂಬ ಹೆಸರಿನಿಂದಲೂ ಪ್ರಕಟವಾಗಿರುವ ಸಾಧ್ಯತೆ ಎದ್ದುಕಾಣುತ್ತವೆ. ಕಿತ್ತೂರಿನ ಐತಿಹಾಸಿಕ ಘಟನೆಗಳನ್ನು ಕುರಿತ ಕಾವ್ಯಗಳಲ್ಲಿ ಈ ಬಗೆಯ ಗೊಂದಲವೇರ್ಪಟ್ಟಿವೆ. ಪ್ರಕಟಿತ ಕೃತಿಗಳಲ್ಲಿ ದೊಡ್ಡ ಭಾವೆಪ್ಪ ಮೂಗಿ ಅವರ ದೊರೆಮಲ್ಲಸರ್ಜನ ದುಮ್‌ದುಮೆ (1951) ಮೊದಲನೆಯದೆಂದು ಕಾಣುತ್ತದೆ. ಅನಂತರ ಗದ್ದಗಿಮಠ ಅದರಿಂದ ಕುಮಾರ ರಾಮನ ದುಮ್‌ದುಮೆ ಪ್ರಕಟವಾಗಿದೆ (1959). ಫ್ಲೀಟ್ ಪ್ರಕಟಿಸಿದ್ದ ಕಿತ್ತೂರಿಗೆ ಸಂಬಂಧಿಸಿದ ಐತಿಹಾಸಿಕ ಕಾವ್ಯಗಳು ಲಾವಣಿಗಳೇ ಅಥವಾ ದುಮ್‌ದುಮೆ ಪದಗಳೇ ಎಂಬಹುದನ್ನು ಜಾನಪದ ವಿದ್ವಾಂಸರು ನಿರ್ಧರಿಸಬೇಕಾಗಿದೆ. ಸುಪ್ರಸಿದ್ಧ ಜನಪದ ಕವಿ ಬಾಳಗೋಪಾಳನ ಕೃತಿಗಳಲ್ಲಿ ಯಾವುವು ದುಮ್‌ದುಮೆ ಪದಗಳೆಂಬುದನ್ನು ಸಂಪಾದಕರು ಗುರುತಿಸಿದಂತೆ ಕಾಣುವುದಿಲ್ಲ. ಸುಂಕಾಪುರ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಜೀವನ ಜೋರಾಲಿ 4 ಮತ್ತು 5 ನೆಯ ಸಂಪುಟಗಳು ಕ್ರಮವಾಗಿ ಹೋಳಿಪದ ಹಾಗೂ ದುಮ್‌ದುಮೆಪದ ಎಂಬ ಶೀರ್ಷಿಕೆಯನ್ನು ಹೊತ್ತಿದ್ದರೂ ಹೋಳಿ ಮಾಡಿಯೂ ಅವುಗಳನ್ನು ಕರಾರುವಾಕ್ಕಾಗಿ ವಿಂಗಡಿಸಿ ಪ್ರಕಟಿಸುವಾಗ ಸಂಪಾದಕರು ಗೊಂದಲಕ್ಕೀಡಾಗಿದ್ದಾರೆ. ತಾಡಪತ್ರಗಳಲ್ಲಿ ಹಾಗೂ ಜನತೆಯ ಬಾಯಲ್ಲಿ ಉಳಿದಿರುವ ಈ ಸಂಪ್ರದಾಯದ ಕಾವ್ಯಗಳನ್ನು ಪಾಠಾಂತರಗಳೊಡನೆ ಪರಿಷ್ಕರಿಸಿ ಪ್ರಕಟಿಸುವ ಕಾರ್ಯ ಜರೂರಾಗಿ ಆಗಬೇಕಾಗಿದೆ.

**ದುಗ್ಗಳೆ:** ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಶಿವಶರಣೆ. ದೇವರ ದಾಸಿಮಯ್ಯನ ಹೆಂಡತಿ. ಅಫಜಲಪುರ ತಾಲ್ಲೂಕಿನ ಗೊಬ್ಬೂರು ಈಕೆಯ ಜನ್ಮಸ್ಥಳ. ಭಕ್ತಿ, ಕಾಯಕ, ದಾಸೋಹ, ಅನುಭಾವ ಮುಂತಾದುವುಗಳ ಆಚರಣೆಯಲ್ಲಿ ಈಕೆ ದೇವರ ದಾಸಿಮಯ್ಯನಷ್ಟೇ ಎತ್ತರಕ್ಕೆ ಏರಿದ್ದಳು. ಧಾರ್ಮಿಕ ಸಾಮಾಜಿಕ ವೈಚಾರಿಕ ಮುಂತಾದ ಎಲ್ಲ ಬಗೆಯ ಸ್ವಾತಂತ್ರ್ಯ ಪಡೆದಿದ್ದಳು. ನೀರಿಲ್ಲದೆ ಅನ್ನ ಮಾಡಿ ನೀಡುವ ಹೆಣ್ಣನ್ನು ಮದುವೆಯಾಗುವೆನೆಂದು ದೇವರ ದಾಸಿಮಯ್ಯ ದಿಬ್ಯವೊಂದನ್ನು ಒಡ್ಡಿದ್ದ. ಜಂಗಮ ಪಾದೋದಕದಿಂದ ಅನ್ನ ಮಾಡಿ ನೀಡಿ ದಾಸಿಮಯ್ಯನನ್ನೊಲಿಸಿ ಕೈಹಿಡಿದು, ಆತ ಕೈಕೊಂಡ ಶರಣಧರ್ಮದ ಪ್ರಸಾದರಲ್ಲಿ ಎಲ್ಲಂದದಿಂದ ನೆರವಿತ್ತು ತನ್ನ ಮುಂದಿನ ಶಿವಶರಣೆಯರಿಗೆ ಆದರ್ಶ ಪ್ರಾಯಳಾದಳು. ಈಕೆಯ ಪತಿಭಕ್ತಿ ಅನುಪಮವಾದುದು.

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ದೇವರ ದಾಸಿಮಯ್ಯನ ವಚನದಿಂದ, ನೆರೆ ನಂಬೋ ನೆರೆ ನಂಬೋ ದಾಸದುಗ್ಗಳೆಯರಂತೆ ಎಂಬ ಬಸವಣ್ಣನವರ ವಚನದಿಂದ ಇವಳ ಸಾಂಸಾರಿಕ ಜೀವನ ಬಹು ತೃಪ್ತಿಕರವಾಗಿದ್ದು, ಈಕೆಯ ಉನ್ನತಿಗೆ ಕಾರಣವಾಯಿತೆಂದು ಹೇಳಬಹುದು. ಇವಳು ವಚನಗಳನ್ನು ಬರೆದಿರುವಳೋ ಇಲ್ಲವೋ ತಿಳಿಯದು. ಇದುವರೆಗೆ ಯಾವುದೇ ವಚನ ದೊರೆತಿಲ್ಲ. (ಎಸ್.ಆರ್.ಎ.)

**ದುರ್ಗಸಿಂಹ :** ಸು. 1031. ಬ್ರಾಹ್ಮಣಕವಿ. ಪಂಚತಂತ್ರ ಎಂಬ ಗ್ರಂಥದ ಕರ್ತೃ. ಒಂದನೆಯ ಜಗದೇಕಮಲ್ಲನಲ್ಲಿ (1015-44) ಈತ ದಂಡ ನಾಯಕನೂ ಸಂಧಿ ವಿಗ್ರಹಿಯೂ ಆಗಿದ್ದ. ಕಿಸುಕಾಡು ನಾಡಿನ ಸಯ್ಯಡಿಯೆಂಬ ಅಗ್ರಹಾರ ಇವನ ಜನ್ಮಸ್ಥಳ. ಇವನ ಅಜ್ಜ ಧರಾಮರಾಗ್ರಗಣ್ಯನಾದ ದುರ್ಗಮಯ್ಯ, ತಂದೆ ದೇವದ್ವಿಜಗುರುಜನಪದಸೇವಾನಿರತನಾದ ಈಶ್ವರಾರ್ಯ, ತಾಯಿ ದೇವಕಬ್ಬೆ, ಗುರು ಮಹಾಯೋಗಿ ಶಂಕರಭಟ್ಟ, ಕವಿ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ಕಟ್ಟಿಸಿದಂತೆ ತಿಳಿಯುತ್ತದೆ. ಪೂರ್ವಕವಿಗಳಲ್ಲಿ ವಿಷ್ಣುಗುಪ್ತ, ಗುಣಾಢ್ಯ, ವರರುಚಿ, ಕಾಳಿದಾಸ, ಮಯೂರ, ಬಾಣ, ಧನಂಜಯ, ಉದ್ಭಟ, ಭವಭೂತಿ, ಭಾರವಿ, ಮಾಘ, ದಂಡಿ, ರಾಜಶೇಖರ ಮೊದಲಾದ ಸಂಸ್ಕೃತ ಕವಿಗಳನ್ನೂ ಶ್ರೀವಿಜಯ, ಕನ್ನಮಯ್ಯ, ಅಸಗ, ಮನಸಿಜ, ಚಂದ್ರ(ಭಟ್ಟ), ಪಂಪ, ಪೊನ್ನ, ಗಜಾಂಕುಶ ಮೊದಲಾದ ಕನ್ನಡ ಕವಿಗಳನ್ನೂ ಸ್ತುತಿಸಿದ್ದಾನೆ. ತನ್ನ ಗ್ರಂಥವನ್ನು ಕವಿಗಮಕಿವಾಗ್ಮಿಪ್ರವರನಾದ ಶ್ರೀ ಮಾದಿರಾಜ ಮುನಿಪುಂಗವ ತಿದ್ದಿದಂತೆ ಹೇಳಿಕೊಂಡಿದ್ದಾನೆ. ತನ್ನ ಗುಣಾದಿಗಳನ್ನು ದಾನಶೂರನಪವಾದಭೀರು ವಿಜ್ಞಾನಮೂರ್ತಿ ಭುವನೈಕವತ್ಸಲಂ ಮಾನನೀಯ ಗುಣನ್, ನಿಜೇಶ ಕಾರ್ಯಧುರೀಣಂ ವಿನಯಾಂಭೋನಿಧಿ ಸತ್ಯವ್ರತಂ ಉದಯೋತ್ತುಂಗನಗ ಸ್ವಭಾವದಿನಪಂ ಪ್ರೌಢ್ಧಾಮಧರ್ಮಕ್ಷಮಾಜದ ಬೇರ್ ಸ್ವಾಮಿಹಿತೌಘನಿರ್ಮಲ ಮಹಾರತ್ನಾಕರಂ ನೀತಿಶಾಸ್ತ್ರದ ಮಂತ್ರಕ್ಕಧಿದೈವತಂ ದ್ವಿಜಕುಲಶ್ರೀಕೇಳಿಸಂವಾಸಮೆಂಬುದು ಸರ್ವೋರ್ವರೆಧರ್ಮನಿರ್ಮಳಯಶಸ್ಸದ್ದುರ್ಗನ್ - ಎಂದು ಮೊದಲಾಗಿ ವಿಶೇಷಿಸಿಕೊಂಡಿದ್ದಾನೆ.

ಪಂಚತಂತ್ರ ಚಂಪೂವಿನಲ್ಲಿ ರಚಿತವಾಗಿದೆ. ಬಿಹಾರ ಪ್ರಾಂತ್ಯದ ಆರಾ ಎಂಬಲ್ಲಿಯ ಜೈನಸಿದ್ಧಾಂತ ಭವನದಲ್ಲಿರುವ ಒಂದು ಹಸ್ತಪ್ರತಿಯ ಅಂತ್ಯದಲ್ಲಿ ಬರುವ ಅತಿಸಂಪನ್ನತೆವೆತ್ತ ಸದ್ಗುಹನಿವಾಸಸ್ಥಾನಮಾದೌ ಪ್ರಜಾಪತಿಸಂವತ್ಸರ ಚೈತ್ರಮಾಸಸಿತಪಕ್ಷ ದ್ವಾದಶೀ ತಾರಾಕಾಪತಿವಾರಂ ಬರೆ ಪಂಚತಂತ್ರಮೆಸದತ್ತೀ ಧಾತ್ರಿಯೋಳ್ ದುರ್ಗನಿರ್ಮಿತಮುದ್ಯತ್ಕ [ವಿಶೇಖರಪ್ರ] ಮದಲೀಲಾಪುಷ್ಪಿತಾಪ್ರುದ್ರುಮಂ - ಎಂಬ ಪದ್ಯದಿಂದ ಈತ ಈ ಕೃತಿಯನ್ನು 1031ರಲ್ಲಿ ಬರೆದಂತೆ ತಿಳಿಯುತ್ತದೆ. ಇದರಲ್ಲಿ ಭೇದಪ್ರಕರಣ ವರ್ಣನಂ, ಮಿತ್ರಕಾರ್ಯಪ್ರಕರಣಂ ಎಂಬ ಐದು ತಂತ್ರಗಳಿದ್ದು 457 ಪದ್ಯಗಳೂ 230 ಶ್ಲೋಕಗಳೂ 48 ಉಪಕಥೆಗಳೂ ಇವೆ.

ಗುಣಾಢ್ಯನಿಂದ ಪೈಶಾಚಿ ಭಾಷೆಯಲ್ಲಿ ರಚಿತವಾದ ಬೃಹತ್ಕಥೆ ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರಕ್ಕೆ ಆಕರ. ತಾನು ಈ ಸಂಸ್ಕೃತ ಕೃತಿಯನ್ನಾಧರಿಸಿ ಕನ್ನಡ ಪಂಚತಂತ್ರವನ್ನು ಬರೆದಿರುವುದಾಗಿ 'ವಸುಭಾಗಭಟ್ಟ ಕೃತಿಯಂ ವಸುಧಾಧಿಪ ಹಿತಮನಖಿಲವಿಬುಧಸ್ತುತಮಂ ಪೊಸತಾಗಿರೆ ವಿರಚಿಸುವೆಂ ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ' ಎಂಬ ಪದ್ಯದಲ್ಲಿ ಕವಿ ಹೇಳಿಕೊಂಡಿದ್ದಾನೆ. ಈ ಹೇಳಿಕೆಯಿಂದ ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರ ಗ್ರಂಥವೊಂದಿತ್ತು ಎಂಬುದಾಗಿ ತಿಳಿದುಬರುತ್ತದೆ. ಇದು ಕವಿಯ ಕಾಲಕ್ಕೆ ಕನ್ನಡನಾಡಿನಲ್ಲಿ ಜನಪ್ರಿಯವಾಗಿದ್ದಿರಬಹುದು. ಇದರಲ್ಲಿ ಇದ್ದುದು ಅಮರಶಕ್ತಿ ಎಂಬ ಅರಸನ ಮೂವರು ಗಂಡುಮಕ್ಕಳು ಮುದ್ದಿನಿಂದ ಬೆಳೆದು ದಾರಿತಪ್ಪಿ ದುಷ್ಟರಾದಾಗ ಅವರನ್ನು ಉಪಾಯವಾಗಿ ತಿದ್ದಿ ವಿವೇಕದ ದಾರಿ ಹಿಡಿಸುವ ಸಲುವಾಗಿ ಅರಸನ ಪ್ರಾರ್ಥನೆಯಂತೆ ಅವನ ಆಸ್ಥಾನಪಂಡಿತ ವಸುಭಾಗಭಟ್ಟ ಕಟ್ಟಿದ ಕಥೆಗಳು. ಈಗ ಈ ಗ್ರಂಥ ಉಪಲಬ್ಧವಿಲ್ಲ. ಆದ್ದರಿಂದ ಕನ್ನಡ ಪಂಚತಂತ್ರ ಅದರ ಕೇವಲ ಅನುವಾದವೇ ಸಾರಸಂಗ್ರಹವೇ ಎಂಬ ವಿವರ ತಿಳಿಯದು.

ಸಂಸ್ಕೃತದಲ್ಲಿ ವಿಷ್ಣುಶರ್ಮನ ಪಂಚತಂತ್ರವೆಂಬ ಇನ್ನೊಂದು ಗ್ರಂಥ ಹೆಸರಾಗಿದೆ. ಈ ಗ್ರಂಥದಲ್ಲಿ ದೊರೆಯದ ಕೆಲವು ಕಥೆಗಳೂ ಜೈನಮತ ತತ್ತ್ವಗಳೂ ಪಾರಿಭಾಷಿಕ ಪದಗಳೂ ಕನ್ನಡ ಪಂಚತಂತ್ರದಲ್ಲಿ ದೊರೆಯುತ್ತವೆ. ಇದರಿಂದ ಈತ ಹೆಚ್ಚಾಗಿ ವಸುಭಾಗಭಟ್ಟನನ್ನು ಅನುಸರಿಸಿದಂತೆ ಊಹಿಸಬಹುದಾಗಿದೆ.

ಪಂಚತಂತ್ರ ಒಂದು ಕಥನಕಾವ್ಯ. ಒಂದೊಂದು ತಂತ್ರದಲ್ಲೂ ಕಥೆಯೊಳಗೆ ಕಥೆ ಬಂದು ಕೃತಿ ಹಲವು ಚಿಕ್ಕದೊಡ್ಡ ಕಥೆಗಳ ಗಣಿಯಾಗಿದೆ. ಇಲ್ಲಿ ಬರುವ ಪಿಂಗಳಕ, ಸಂಜೀವಕ, ಕರಟಕ, ದಮನಕ - ಇವೇ ಮೊದಲಾದ ಹಲವು ಪಾತ್ರಗಳು ಓದುಗರ ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಂತುಬಿಡುತ್ತವೆ. ನರಿ, ಸಿಂಹ, ಎತ್ತು, ಕಾಗೆ ಮೊದಲಾದ ಪ್ರಾಣಿಗಳ ಕಥೆಗಳಲ್ಲಿ ಮನುಷ್ಯರು ಬೇರೆ ಬೇರೆ ಸಮಯಗಳಲ್ಲಿ ಅನುಸರಿಸಬೇಕಾದ ನೀತಿನಿಯಮಗಳನ್ನು ಕವಿ ಇಲ್ಲಿ ಮಾರ್ಮಿಕವಾಗಿ ನಿರೂಪಿಸಿದ್ದಾನೆ. ಈತನ ಕಥನಕೌಶಲ ಮೆಚ್ಚತಕ್ಕದ್ದು. ಶೈಲಿಯಲ್ಲಿ ಸಂಸ್ಕೃತದ ಪ್ರೌಢಿಮೆ ತೋರಿಬಂದರೂ ಅನೇಕ ಭಾಗಗಳಲ್ಲಿ ಸರಳವಾದ ಕನ್ನಡದಲ್ಲಿ ಗದ್ಯಪದ್ಯರಚನೆ ಕಂಡುಬರುತ್ತದೆ. ಚಂಪೂ ಶೈಲಿ ನವೀನವಾಗಿದ್ದು ಗದ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಂದಿದೆ. ಐದು ಪ್ರಕರಣಗಳಲ್ಲಿ ಮೊದಲನೆಯ ಭೇದಪ್ರಕರಣ ಹೆಚ್ಚು ವಿಸ್ತಾರವಾಗಿದೆ. ಇಲ್ಲಿ ಬರುವ ಕಥೆ ಬಹಳ ರಮಣೀಯವಾಗಿದೆ. ನೀತಿನಿರೂಪಣೆ ಕವಿಯ ಮುಖ್ಯ ಉದ್ದೇಶ. ಕೆಲವೊಮ್ಮೆ ಕೆಲವು ವಸ್ತುಗಳಿಗೆ ಸುಲಭವಾದ ಕನ್ನಡ ಪದ್ಯಕ್ಕೆ ಬದಲಾಗಿ ದೊಡ ಸಂಸ್ಕೃತ ಪದಗಳನ್ನು ಬಳಸುವಲ್ಲಿ ಆ ವಸ್ತುವನ್ನು ಕುರಿತು ಒಂದು ರೀತಿಯ ಹಾಸ್ಯವೂ ವಿಡಂಬನೆಯ ದೃಷ್ಟಿಯೂ ಕಂಡುಬರುತ್ತದೆ. ಒಟ್ಟಿನಲ್ಲಿ ಜೈನಧರ್ಮಪರವಾಗಿದ್ದು ಉತ್ತಮ ನಿರೂಪಣೆಯಿಂದ ಕೂಡಿರುವ ಈ ಕಾವ್ಯಕ್ಕೆ ಕನ್ನಡ ಗದ್ಯ ಸಾಹಿತ್ಯದಲ್ಲಿ ಗೌರವದ ಸ್ಥಾನ ದೊರಕಿದೆ. (ಬಿ.ಎಸ್.ಎಸ್.ಕೆ.ವಿ.)

**ದುರ್ವಿನೀತ:** ತಲಕಾಡು ಗಂಗವಂಶದ ರಾಜ ಸು. (529-79). ಅವನೀತನ ಮಗ. ನಿರ್ವಿನೀತ ಎಂಬುದು ಇವನ ಇನ್ನೊಂದು ಹೆಸರು. ಪುನ್ನಾಟ ದೊರೆ ಸ್ಕಂಧವರ್ಮನ ಮಗಳು ಜ್ಯೇಷ್ಠಾದೇವಿ ಇವನ ತಾಯಿ.

ಇವನ ಕಾಲವನ್ನು 5ನೆಯ ಶತಮಾನದ ಉತ್ತರಭಾಗದಿಂದ 7ನೆಯ ಶತಮಾನದ ಉತ್ತರಭಾಗದವರೆಗೂ ಜಗ್ಗುವ ಪ್ರಯತ್ನವನ್ನೂ ಅನೇಕ ವಿದ್ವಾಂಸರು ಮಾಡಿದ್ದಾರೆ. ಒಂದು ಹೇಳಿಕೆಯ ಪ್ರಕಾರ ಚಳುಕ್ಯ ಒಂದನೆಯ ಪುಲಕೇಶಿಯ ತಾತ ಜಯಸಿಂಹನು ದುರ್ವಿನೀತನ ಮೊಮ್ಮಗನಾದರೆ, ಇತರರ ಪ್ರಕಾರ ಒಂದನೆಯ ವಿಕ್ರಮಾದಿತ್ಯ (ಅಥವಾ ವಿಜಯಾದಿತ್ಯ) ಈತನ ದೌಹಿತ್ರ. ದುರ್ವಿನೀತನು ಪಲ್ಲವಸಿಂಹವಿಷ್ಣು ಮತ್ತು ಪೂರ್ವ ಚಾಳುಕ್ಯ ವಂಶದ ಒಂದನೆಯ ವಿಷ್ಣುವರ್ಧನರ ಸಮಕಾಲೀನನೆಂದೂ ಭಾರವಿ ಇವನ ಆಸ್ಥಾನದಲ್ಲಿದ್ದನೆಂದೂ ಹೇಳಿಕೆಗಳಿವೆ. ದುರ್ವಿನೀತ ಅಂದರಿ, ಆಲತೂರಿ, ಪೆರುಬರೆ, ಪೆರ್ನಗರ ಮುಂತಾದೆಡೆಯಲ್ಲಿ ನಡೆದ ಯುದ್ಧಗಳಲ್ಲಿ ಶತ್ರುಗಳನ್ನು ನಿಗ್ರಹಿಸಿದನೆಂದು ಶಾಸನಗಳು ತಿಳಿಸುತ್ತವೆ. ವಿವರಗಳು ದೊರಕುವುದಿಲ್ಲ. (ಪಿ.ಕೆ.ಎನ್.)

ಜೈನ ವೈಯ್ಯಾಕರಣಿ ಪೂಜ್ಯಪಾದ ದುರ್ವಿನೀತನ ಗುರು ಎಂದು ಊಹೆ ಇದೆ. ದುರ್ವಿನೀತ ಶಬ್ದಾವತಾರ (ಪ್ರಾಯಶಃ ಪಾಣಿನಿಯ ಮೇಲಿನ ನ್ಯಾಸ ಗ್ರಂಥ). ಬೃಹತ್ಕಥೆ (ವಡ್ಡಕಥೆಯ ಸಂಸ್ಕೃತರೂಪ) ಇವುಗಳನ್ನಲ್ಲದೆ, ಭಾರವಿಯ ಕಿರಾತಾರ್ಜುನೀಯದ ಹದಿನೈದು (ಅಥವಾ ಹದಿನೈದನೆಯ) ಸರ್ಗಗಳ ಟೀಕಾಕಾರನೆಂದು ಶಾಸನಗಳು ತಿಳಿಸುತ್ತವೆ. ಶಾಸನಗಳಲ್ಲಿ ಈತನನ್ನು ಅನೇಕ ಕಾವ್ಯ ಕಥಾ ನಾಟಕ ಪ್ರಣಯನ ಪ್ರರೂಢ ಪಾಟವ ಎಂದು ಕರೆಯಲಾಗಿದೆ. ವಡ್ಡಕಥಾ ಕೃತಿಯನ್ನು ವಡ್ಡಕಥೆ ಎಂಬ ಹೆಸರಿನಲ್ಲಿ ಈತ ಕನ್ನಡದಲ್ಲಿ ಬರೆದಿರಬಹುದು ಎಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಕವಿರಾಜಮಾರ್ಗಕಾರ ತನಗಿಂತ ಹಿಂದೆ ಇದ್ದ ಕನ್ನಡಗದ್ಯಕವಿಗಳ ಸಾಲಿನಲ್ಲಿ ಈತನನ್ನು ಹೆಸರಿಸಿರುವುದರಿಂದ ಈತ ಗದ್ಯ ಸಾಹಿತ್ಯಕ್ಷೇತ್ರದಲ್ಲಿ ಪ್ರತಿಭಾವಂತನಾಗಿರಬೇಕು. ಹಳಗನ್ನಡ ಚಂಪೂಕಾವ್ಯಗಳ ಮೇಲೆ ಕಿರಾತಾರ್ಜುನೀಯದ ಪ್ರಭಾವ ಬಿದ್ದಿರುವುದಕ್ಕೆ ಈತನೇ ಕಾರಣನೆಂದೂ ಕನ್ನಡ ವ್ಯಾಕರಣಮಾರ್ಗಕ್ಕೂ ಇವನೇ ಕಾರಣನೆಂದೂ ಊಹಿಸಬಹುದಾಗಿದೆ. ಒಟ್ಟಿನಲ್ಲಿ ಕನ್ನಡ ಸಾಹಿತ್ಯದ ತಳಪಾಯವನ್ನು ರಚಿಸಿದವರಲ್ಲಿ ಈತನ ಹೆಸರು ಶಾಶ್ವತವಾಗಿ ನಿಲ್ಲುತ್ತದೆ. (ಕೆ.ಪಿ.ಆರ್.ಜಿ.)

**ದೃಷ್ಟಿ ತೆಗೆಯುವುದು :** ಜನಪದ ನಂಬಿಕೆಗಳಲ್ಲಿ ಒಂದು. ಜನರ ಕೆಟ್ಟ ಕಣ್ಣಿನಿಂದ ಉಂಟಾಗುವ ಹಾನಿಗಳಿಗೆ ಪರಿಹಾರಗಳನ್ನು ಮಾಡುವುದಕ್ಕೆ ಈ ಹೆಸರಿದೆ. ಕೆಲವು ಜನರಿಗೆ ಹುಟ್ಟಿನಿಂದಲೇ ಕೆಟ್ಟಕಣ್ಣು ಇರುತ್ತದೆ. ಮತ್ತೆ ಕೆಲವರಿಗೆ ಅತಿಯಾದ ಅಸೂಯೆ ಮತ್ತು ಕೋಪದಿಂದ ಕೆಟ್ಟಕಣ್ಣಿನ ಶಕ್ತಿ ಉಂಟಾಗುತ್ತದೆ. ವಿಕಾರವಾಗಿರುವವರು ಅಂಗಹೀನರಾಗಿರುವವರು ಮೊದಲಾದ ಜನಗಳಲ್ಲಿ ಕೆಟ್ಟ ಕಣ್ಣಿನ ಶಕ್ತಿ ಉಂಟು; ಅಂಥವರ ನೋಟ ಹಾನಿಕಾರಕವಾದುದು. ಆ ಜನಗಳ ದೃಷ್ಟಿ ಬಿದ್ದರೆ ಊಟ ಮಾಡುತ್ತಿರುವ ವ್ಯಕ್ತಿಗಳಿಗೆ, ಎಳೆಯ ಮಕ್ಕಳಿಗೆ, ಬಸಂಥಿಯನಿಗೆ, ಬಾಣಂತಿಯರಿಗೆ ವಾಂತಿಯಾಗುತ್ತದೆ. ಊಟ ಸೇರುವುದಿಲ್ಲ. ಹೊಟ್ಟೆನೋವು ಬರುತ್ತದೆ. ಹಾಲು ಕೊಡುತ್ತಿರುವ ಹಸುಗಳ, ಎಮ್ಮೆಗಳ ಕೆಚ್ಚಲಿನ ಮೇಲೆ ದೃಷ್ಟಿ ಬಿದ್ದರೆ ಹಾಲಿನ ಬದಲು ರಕ್ತವನ್ನು ಕರೆಯಬೇಕಾದ ಪರಿಸ್ಥಿತಿ ಬರುತ್ತದೆ. ಹಾಲುಕ ಕಾಸಿದರೆ ದುರ್ವಾಸನೆ ಉಂಟಾಗುತ್ತದೆ. ಕೆಟ್ಟ ಕಣ್ಣಿನ ಪ್ರಭಾವ ಜೀವಂತ ವಸ್ತುಗಳ ಮೇಲೆ ಮಾತ್ರವಲ್ಲದೆ ನಿರ್ಜೀವವಾದ ವಸ್ತುಗಳ ಮೇಲೆಯೂ ಉಂಟಾಗುತ್ತದೆ. ಮನುಷ್ಯರಲ್ಲಿ ಮಾತ್ರವಲ್ಲದೆ ಕೆಲವು ಪ್ರಾಣಿಗಳಲ್ಲಿಯೂ ಕೆಟ್ಟಕಣ್ಣಿನ ಪ್ರಭಾವ ಇರುತ್ತದೆ ಎಂಬ ನಂಬಿಕೆಯೂ ಇದೆ. ಈ ರೀತಿಯ ಅನೇಕ ನಂಬಿಕೆಗಳಿಂದ ಕೆಟ್ಟ ಕಣ್ಣಿನಿಂದ ಉಂಟಾಗುವ ದೃಷ್ಟಿದೋಷಕ್ಕೆ ಜನ ವಿಶೇಷವಾಗಿ ಹೆದರುತ್ತಾರೆ.

ದೃಷ್ಟಿದೋಷವಾದಾಗ ಉರಿಯುತ್ತಿರುವ ಹಂಚಿಕಡ್ಡಿಗಳನ್ನು ನಿವಾಳಿಸಿ ಅದರ ಕಪ್ಪನ್ನು ಹಣೆಗೆ ಇಡುವುದು ; ಕೆಟ್ಟಕಣ್ಣು ಹಾಕಿದವರು ಹಾಳಾಗಲಿ ಎಂದು ಲಟಿಗೆ ಮುರಿಯುವುದು ; ಉಪ್ಪು ಮೆಣಸಿನಕಾಯಿ ಎರಡನ್ನೂ ನಿವಾಳಿಸಿ ಒಲೆಗೆ ಹಾಕುವುದು ; ಸಕ್ಕರೆಯನ್ನು ಮಂತ್ರಿಸಿ ತಿನ್ನಲು ಕೊಡುವುದು ; ಕೆಟ್ಟ ಕಣ್ಣುಳ್ಳವರು ಹೋದ ಜಾಗದಲ್ಲಿ ಮೂರು ಸಲ ಉಗುಳುವುದು ; ಕಾಲುರಂಜು ಹಾಕುವುದು ; ಕೆಂಡದ ರಂಜು ಹಾಕುವುದು - ಈ ರೀತಿಯ ಪರಿಹಾರಗಳು ಬಳಕೆಯಲ್ಲಿವೆ. ಹಂಚಿಕಡ್ಡಿಗಳನ್ನು ಉರಿಸುವಾಗ ಅವು ಹೆಚ್ಚು ಚಟಚಟ ಎಂದು ಸದ್ದುಮಾಡುವುದು; ಉಪ್ಪು ಮೆಣಸಿನ ಕಾಯನ್ನು ಒಲೆಗೆ ಹಾಕಿದಾಗ ಮೆಣಸಿನ ಕಾಯಿಯ ಘಾಟು ಕಾಣದೆ ಇರುವುದು ; ಕಾಲುರಂಜು ಕೆಂಡದ ರಂಜು ಅತಿ ಕೆಂಪಾಗಿ ಕಾಣುವುದು - ಇವೆಲ್ಲ ದೃಷ್ಟಿ ದೋಷ ಆಗಿದೆ ಎಂಬುವುದಕ್ಕೆ ರುಜುವಾತು ಎಂದು ಭಾವಿಸುತ್ತಾರೆ. ಮನೆಗಳಿಗೆ, ಬೆಳೆಗಳಿಗೆ ದೃಷ್ಟಿದೋಷ ತಾಗದಿರಲೆಂಬ ಉದ್ದೇಶದಿಂದ ತೆಂಗಿನಕಾಯಿ ಕಟ್ಟುವುದು, ಕುಂಬಳಕಾಯಿ ಕಟ್ಟುವುದು, ಬೆಚ್ಚು ಕಟ್ಟುವುದು ಒಂದು ಕೋಲಿಗೆ ಮನುಷ್ಯನ ಬಟ್ಟೆಗಳನ್ನು ತಗುಲು ಹಾಕಿ ಮೇಲ್ಭಾಗದಲ್ಲಿ ಸುಣ್ಣ ಬಳಿದ ಮಡಕೆಯನ್ನು ನೇತುಹಾಕಿ ಅದನ್ನು ಮನೆಯ ಮೇಲುಭಾಗಕ್ಕೆ ಕಟ್ಟುವುದು ಮೊದಲಾದ ಕ್ರಮಗಳೂ ಉಂಟು.

ದೃಷ್ಟಿದೋಷಕ್ಕೆ ಸಂಬಂಧಿಸಿದ ಈ ರೀತಿಯ ನಂಬಿಕೆಗಳು ಮತ್ತು ದೃಷ್ಟಿತೆಗೆಯುವ ಪರಿಹಾರಗಳು ಕರ್ನಾಟಕ ಹಾಗೂ ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಬಹಳ ಹಿಂದಿನಿಂದಲೂ ಬಳಕೆಯಲ್ಲಿವೆ. ಪ್ರದೇಶದಿಂದ ಪ್ರದೇಶಕ್ಕೆ ಇವುಗಳಲ್ಲಿ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕಾಣಬಹುದೇ ಹೊರತು ಮೂಲತಃ ಕೆಟ್ಟ ಕಣ್ಣಿನಿಂದ ದೃಷ್ಟಿದೋಷ ಉಂಟಾಗುತ್ತದೆಂಬ ನಂಬಿಕೆ ಮಾತ್ರ ಸಾರ್ವತ್ರಿಕ.

ಮನುಷ್ಯನ ಮನಸ್ಸು ಇಂದ್ರಿಯಗಳ ಸಹಾಯವಿಲ್ಲದೆ ವಸ್ತುಗಳ ಮೇಲೆ ತನ್ನ ಪ್ರಭಾವ ಬೀರುತ್ತದೆ ಎಂಬ ಅಂಶವೇ ದೃಷ್ಟಿದೋಷಕ್ಕೆ ಆಧಾರವಾಗಿರುವ ನಂಬಿಕೆ. ಇದನ್ನು ವಿಜ್ಞಾನಿಗಳು ಈ ವರೆಗೆ ಒಪ್ಪುತ್ತಿರಲಿಲ್ಲ. ಆದರೆ ಇತ್ತೀಚೆಗೆ ಪರಾಮನೋವಿಜ್ಞಾನದ ಪ್ರಕಾರ ಮಾನವನಲ್ಲಿ ಅತೀಂದ್ರಿಯ ದರ್ಶನ ಶಕ್ತಿ ಮತ್ತು ಮನಃಚಲನಶಕ್ತಿ ಎಂಬ ಶಕ್ತಿಗಳಿವೆಯೆಂದು ತಿಳಿದುಬಂದಿದೆ. ಕೆಟ್ಟ ಕಣ್ಣಿನ ಪ್ರಭಾವ ಮನಃ

ಚಲನಶಕ್ತಿಯ ಒಂದು ಬಗೆ. ಆದ್ದರಿಂದ ದೃಷ್ಟಿದೋಷ ಸಂಪೂರ್ಣವಾಗಿ ಮೂಢನಂಬಿಕೆ ಅಲ್ಲ ಎನಿಸುತ್ತದೆ.

ದೃಷ್ಟಿದೋಷಕ್ಕೆ ಸಂಬಂಧಿಸಿದ ಪರಿಹಾರಗಳಿಂದ ಮಾನಸಿಕವಾಗಿ ಒಂದು ಬಗೆಯ ಸಮಾಧಾನ ದೊರೆತು ಆ ಮೂಲಕ ಸ್ವಲ್ಪಮಟ್ಟಿಗೆ ಕೆಟ್ಟ ಕಣ್ಣಿನ ಪ್ರಭಾವ ಕಡಿಮೆಯಾಗಬಹುದು. ಈ ದೃಷ್ಟಿಯಿಂದ ಮಾಟ ಮಂತ್ರ ಗಳಿಸಿರುವ ಪ್ರಾಮುಖ್ಯ ಇದಕ್ಕೂ ಇದೆ.

*

**ದೆವ್ವ :** ಮಾನವ ಬಹು ಹಿಂದಿನಿಂದಲೂ ದೇವರ ಆಸ್ತಿತ್ವದಲ್ಲಿ ನಂಬಿಕೆಯಿಟ್ಟಿರುವಂತೆ ಕೆಲವು ಅತಿಮಾನುಷ ಶಕ್ತಿಗಳ ಆಸ್ತಿತ್ವದಲ್ಲಿಯೂ ಬಲವಾದ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾನೆ. ಭೂತ, ಕಾತ, ಪ್ರೇತ, ಪೀಡೆ, ಪಿಶಾಚಿ, ಜಟಿಗಾ, ರಣ, ಮುನಿ, ಮೋಹಿನಿ, ರಾಕ್ಷಸ ಮುಂತಾದುವುಗಳು ಅವನ ಬದುಕಿನ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ. ಇಂಥ ಅತಿಮಾನುಷ ಶಕ್ತಿಗಳ ಕಲ್ಪನೆಗೆ ಹಲವು ಕಾರಣಗಳಿರಬಹುದಾದರೂ ಅವುಗಳಲ್ಲಿ ಮುಖ್ಯವಾದದ್ದು ಆತ್ಮದ ಕಲ್ಪನೆ. ಮಾನವ ಹುಟ್ಟುವುದಕ್ಕೆ ಮುಂಚೆ ಎಲ್ಲಿದ್ದ, ಹೇಗಿದ್ದ, ಅವನು ಸತ್ತ ಮೇಲಿನ ವೃತ್ತಾಂತಗಳೇನು ಎಂಬ ಹುಟ್ಟಿನ ಹಿಂದಿನ, ಸಾವಿನ ಮುಂದಿನ ರಹಸ್ಯಗಳನ್ನು ಕಂಡು ಕೊಳ್ಳುವ ಪ್ರಯತ್ನದಿಂದಾಗಿ ಆತ್ಮದ ಕಲ್ಪನೆ ಹುಟ್ಟಿ ಕೊಂಡಿರಬೇಕು. ಈ ಆತ್ಮ ದೇಹವನ್ನು ತೊರೆದಮೇಲೆನಾಗುತ್ತದೆ. ಎಲ್ಲಿಗೆ ಹೋಗುತ್ತದೆ ಎನ್ನುವ ಒಗಟುಗಳೇ ಸ್ವರ್ಗನರಕಗಳ ಕಲ್ಪನೆಗೂ ಕಾರಣವಾಗಿರಬೇಕು. ಆಯುಸ್ಸು ತುಂಬಿ ಸತ್ತವರು ಸ್ವರ್ಗಕ್ಕೋ ನರಕಕ್ಕೋ ಹೋಗುತ್ತಾರೆಂದು ನಂಬಿಕೊಂಡಿದ್ದರಿಂದ ಇಲ್ಲಿ ಸಮಸ್ಯೆ ಗಹನವಾಗಲಿಲ್ಲ. ಆದರೆ ರುದ್ರ ಭೀಕರವಾಗಿ ಅಮಾನುಷ ರೀತಿಯಲ್ಲಿ ಆಕಾಲ ಮರಣಕ್ಕೆ ತುತ್ತಾದವರ ಆತ್ಮದ ಬಗ್ಗೆ ಸಾಮಾನ್ಯರು ವಿಶೇಷವನ್ನು ತಲೆಗೆ ಹಚ್ಚಿಕೊಂಡಂತೆ ಕಾಣುತ್ತದೆ. ಇಂಥ ಕಾರಣವೊಂದಾದರೆ ಪ್ರಕೃತಿಯಲ್ಲಿ ಜರುಗುವ ಭಯಾನಕ ಘಟನೆಗಳಿಗೆಲ್ಲ ಆದಿ ಮಾನವ ಉತ್ತರ ಕಂಡುಕೊಳ್ಳಲು ವಿಫಲವಾದಾಗ ಅವೆಲ್ಲವೂ ಅಮಾನುಷ ಶಕ್ತಿಗಳ ಕೈವಾಡವೆಂದು ಭಾವಿಸಿದ್ದು ಇನ್ನೊಂದು ಕಾರಣ. ತನ್ನವರೊಡನೆ ದಟ್ಟ ಕಾಡಿನಲ್ಲಿ ಬರುತ್ತಿರುವಾಗ ದಾರಿ ತಪ್ಪಿಸಿಕೊಂಡ ಆದಿವಾಸಿ ಕೋಡಗಲ್ಲುಗಳ ಮೇಲೆ ನಿಂತು ತನ್ನವರನ್ನು ಕೂಗಿ ಕರೆದಾಗ ಗಿರಿಗಹ್ವರಗಳಿಂದ ಬಂದ ಪ್ರತಿಧ್ವನಿಗಳು ಅವನ ಎದೆ ನಡುಗುವಂತೆ ಮಾಡಿರಬಹುದು. ದೈತ್ಯಾಕಾರದಲ್ಲಿ ಬೆಳೆದ ಹೆಮ್ಮರಗಳ ಕೆಳಗೆ ನಿಂತು ಅವನು ಆಲಿಸಿರಬಹುದಾದ ವಿಚಿತ್ರ ಸದ್ದುಗಳು ಅವನನ್ನು ಭಯಗೊಳಿಸಿರಬಹುದು. ಗುವ್ ಎನ್ನುವ ಕತ್ತಲೆಯಲ್ಲಿ ಬರುವಾಗ ಅವನ ಮಾನಸಿಕ ಶೈಶವಸ್ಥಿತಿ ಚಿತ್ರವಿಚಿತ್ರವಾದ ಆಕಾರಗಳನ್ನು ಸೃಷ್ಟಿಸಿಕೊಂಡು ತತ್ತರಿಸಿ ಹೋಗಿರಬಹುದು. ಕಗ್ಗಾಡಿನ ನಡುವೆ ಯಾವುದೋ ಅಪರಿಚಿತ ಪ್ರಾಣಿಯ ಕೂಗು ಭಯವಿಹ್ವಲನಾಗುವಂತೆ ಮಾಡಿರಬಹುದು. ಕಗ್ಗತ್ತಲಿನಲ್ಲಿ ಕೋರೈಸುವ ಕಣ್ಣುಗಳ ಪ್ರಾಣಿಗಳು ಮರದಿಂದ ಮರಕ್ಕೆ ಜಿಗಿಯುತ್ತ ಮರೆಯಾದುದನ್ನು ಕಂಡು ಆತ ಬೆದರಿ ಹೋಗಿರಬಹುದು. ಅಮಾನುಷ ರೀತಿಯಲ್ಲಿ ಕೊಲೆಗೀಡಾದ ವ್ಯಕ್ತಿಯ ರೂಪವೇ ಭ್ರಮೆಯಿಂದ ಅವನ ಕನಸು ಮನಸುಗಳಲ್ಲಿ ಮತ್ತೆ ಮತ್ತೆ ಗೋಚರಿಸಿ ದಿಗ್ಭ್ರಮೆಗೊಳಿಸಿರಬಹುದು. ಇಂಥ ಹಲವಾರು ಘಟನೆಗಳು ಆದಿವಾಸಿಯನ್ನು ದಿಕ್ಕುತಪ್ಪಿಸಿ ಹೃದಯವನ್ನು ಅತಿಕ್ರಮಿಸಿ ಪೀಡಿಸಿರಬಹುದು. ಹಾಗೆಯೇ ಅತಿಮಾನುಷ ಶಕ್ತಿಗಳ ಕಲ್ಪನೆಗೆ ದಾರಿ ಮಾಡಿಕೊಟ್ಟಿರಬಹುದು.

ವೈಜ್ಞಾನಿಕವಾಗಿ ಈ ಅತಿಮಾನುಷ ಶಕ್ತಿಗಳನ್ನು ಕುರಿತು ವಿಚಾರ ಮಾಡಿದರೆ ಇಂಥ ಕಲ್ಪನೆಗಳು ಬಾಲಿಶವಾದದೆಂದು ತೋರುತ್ತವೆ. ಇಂಥ ಶಕ್ತಿಗಳನ್ನು ಬಲವಾಗಿ ನಂಬಿ ಅತಿಯಾಗಿ ತಲೆ ಹಚ್ಚಿಕಂಡಿರುವವರ ಬಗೆಗೆ ನಗೆ ಬರಬಹುದು ಇಲ್ಲವೆ ಮರುಕ ಹುಟ್ಟಬಹುದು. ಆದರೆ ವಿಜ್ಞಾನ ಬಹಳಷ್ಟು ಆಗೋಚರ ಶಕ್ತಿಗಳಿಂದ ಸಂಭವಿಸಿದ ಘಟನೆಗಳಿಗೆ ವಿವರಣೆ ಕೊಡುವಲ್ಲಿ ಕೆಲವೊಮ್ಮೆ ಸೋತಿರುವುದರಿಂದ ನಾಗರಿಕ ಜನಾಂಗಗಳಲ್ಲೂ ದಟ್ಟವಾಗಿಯಲ್ಲದಿದ್ದರೂ ದೆವ್ವ ಮುಂತಾದ ಅತಿಮಾನುಷ ಶಕ್ತಿಗಳ ಬಗ್ಗೆ ನಂಬಿಕೆ ಉಳಿದಿದೆ. ಅಷ್ಟು ಮಾತ್ರವೇಕೆ ಪರಾಮನೋವಿಜ್ಞಾನ ಅತಿಮಾನುಷ ಶಕ್ತಿಗಳನ್ನು ಒಪ್ಪಿಕೊಂಡಿದೆ. ಹೀಗಾಗಿ ಜಗತ್ತಿನ ಎಲ್ಲ ಜನಾಂಗಗಳಲ್ಲೂ ದೆವ್ವಗಳ ಆಸ್ತಿತ್ವದ ಬಗ್ಗೆ ನಂಬಿಕೆ ಉಳಿದುಬಂದಿದೆ.

ದೆವ್ವಗಳಾಗಲು ಕಾರಣಗಳು ಮನುಷ್ಯನಿಗೆ ಮೂರು ಜೀವಗಳಿವೆಯೆಂದು ನಂಬಲಾಗಿದೆ ಮೇವುಜೀವ, ಬೆದರುಜೀವ ರಕ್ತಜೀವ, ಮೇವುಜೀವ ಇಹಪರಗಳೆರಡರ ನಂಟನ್ನೂ ಪೂರ್ಣವಾಗಿ ಪಡೆದಿರುವಂಥದು. ಇದಕ್ಕೆ ತಾನು ಮಾಡಿದ ಧರ್ಮಕರ್ಮ ಪಾಪಪುಣ್ಯಗಳೆಲ್ಲಕ್ಕೂ ಯಮಲೋಕದಲ್ಲಿ ವಿಚಾರಣೆ ನಡೆದು ಸ್ವರ್ಗ ನಕರ ಅಥವಾ ಪುನರ್ಜನ್ಮ ಪ್ರಾಪ್ತಿಯಾಗುತ್ತದೆ. ಬೆದರು ಜೀವ ಸುಖದುಃಖ ನೋವು ನಲಿವು ಆಶೆಆಕಾಂಕ್ಷೆ. ಹೆದರಿಕೆ ಬೆದರಿಕೆಗಳಲ್ಲಕ್ಕೂ ಕಾರಣವಾದದ್ದು ಮಾನವನ ಎಲ್ಲ ಕ್ರಿಯೆಗಳಿಗೂ ಇದೇ ಕಾರಣ. ಇದರ ಪ್ರೇರಣೆಯಿಂದಾದ ಎಲ್ಲ ಕರ್ಮಗಳೂ ಮೇವು ಜೀವಕ್ಕೆ ಅಂಟುತ್ತವೆ. ರಕ್ತ ಜೀವ ಸಂಪೂರ್ಣವಾಗಿ ಇಹಲೋಹಕ್ಕೆ ಸಂಬಂಧಿಸಿದ್ದು. ಮೇವು ಜೀವ ಬೆದರು ಜೀವಗಳು ಪರಲೋಕಕ್ಕೆ ಹೋಗಬೇಕಾದರೆ ರಕ್ತಜೀವ ಆಯುಸ್ಸು ಮುಗಿದಿರಬೇಕು. ಇಲ್ಲದಿದ್ದರೆ ಅವಕ್ಕೆ ಶಕ್ತಿಯೇ ಇಲ್ಲ. ಇದರ ಆಯುಸ್ಸು ವಿಧಿಬರಹವನ್ನು ಅವಲಂಬಿಸಿರುತ್ತವೆ. ಆಯುಸ್ಸು ಮುಗಿಯದಿದ್ದರೆ, ದೇಹ ಯಾವುದಾದರೂ ಕಾರಣದಿಂದ ನಾಶವಾದರೆ, ಆಶರೀರಿಯಾದ ಇದು ಉಳಿಯಲು ಆಶ್ರಯವಿಲ್ಲದೆ ಪರಲೋಕಕ್ಕೆ ದಾರಿಯಿಲ್ಲದೆ ಗಾಳಿ ಅಥವಾ ದೆವ್ವವಾಗುತ್ತದೆ. ರಕ್ತಜೀವ ನಾನನಾಕಾರಣಗಳಿಂದ ಪರಲೋಕದ ಪರವಾನಗಿಯನ್ನು ಕಳೆದುಕೊಂಡು ಇಹದಲ್ಲೇ ಉಳಿಯಬೇಕಾದ ಸಂದರ್ಭಗಳು ಒದಗಿಬರುತ್ತವೆ. ಸಾಯುವಾಗ ಬಾಯಿಗೆ ನೀರು ಬಿಡದಿದ್ದರೆ, ನೀರಿಗೆ ಬಿದ್ದು, ನೇಣುಹಾಕಿಕೊಂಡು, ವಿಷಕುಡಿದು, ಕೊಲೆಯಾಗಿ, ಬೆಂಕಿಯಲ್ಲಿ ಸುಟ್ಟು, ಅಪಘಾತಗಳಿಗೆ ಸಿಕ್ಕಿ ಅಥವಾ ಯಾವುದೇ ವಿಧವಾದ ಆಕಾಲ ಮರಣಕ್ಕೆ ತುತ್ತಾದರೂ ಅಂಥವರು ದೆವ್ವಗಳಾಗುತ್ತಾರೆ. ಅಲ್ಲದೆ ದುರಾಶೆಯುಳ್ಳವರು, ಕಳ್ಳರು, ಕೊಲೆಗಡುಕರು, ಕ್ರೂರಿಗಳು, ಕಾಮಿಗಳು, ಜಿಪುಣರು, ಅಸೂಯಾವರರು. ಆಸಾತ್ತ್ವಿಕರು, ಸ್ತ್ರೀಹತ್ಯೆ, ಭ್ರೂಣಹತ್ಯೆ ಮಾಡಿದವರು. ದ್ರೋಹಿಗಳು ಮುಂತಾದವರೆಲ್ಲರೂ ದೆವ್ವವಾಗುವುದಾಗಿ ನಂಬಿಕೆ.

ಸತ್ತವರು ದೆವ್ವವಾಗಿದ್ದಾರೆಯೇ ಇಲ್ಲವೆ ಎಂಬುದನ್ನು ಅವರ ಸಮಾಧಿ ಪರೀಕ್ಷೆಯಿಂದ ಕಂಡುಕೊಳ್ಳುತ್ತಾರೆ. ಬಹಳ ದಿನಗಳಾದರೂ ಗುದ್ದು ತಗ್ಗದೆ ಉಬ್ಬಿಕೊಂಡೇ ಇದ್ದರೆ ಅವರು ದೆವ್ವವಾಗಿದ್ದಾರೆಂದು ಭಾವಿಸುತ್ತಾರೆ. ಸತ್ತವರು ದೆವ್ವಗಳಾಗಿ ತಮ್ಮ ಬಂಧುಬಳಗವನ್ನು ತೊರೆದು ಇರಲಾರದೆ ಶ್ಮಶಾನದಿಂದ ಹಿಂದಕ್ಕೆ ಬಂದು ಬಿಡುತ್ತವೆ. ಆದ್ದರಿಂದ ಶವವನ್ನು ಶ್ಮಶಾನಕ್ಕೊಯ್ಯುವಾಗ ಅದರ ಹಿಂದೆ ಎಳ್ಳು, ಸಾಸಿವೆ ರಾಗಿ, ಹುಚ್ಚೆಳ್ಳು, ಮುಂತಾದ ಧಾನ್ಯಗಳನ್ನು ಎರಚಿಕೊಂಡು ಹೋಗಬೇಕು. ಹೀಗೆ ಮಾಡುವುದರಿಂದ ಸತ್ತವನ ದೆವ್ವ ಆ ರಾತ್ರಿಯೇ ತನ್ನ ಮನೆಯನ್ನು ಸೇರಲು ಹೊರಟು ದಾರಿಯಲ್ಲಿ ಅಡ್ಡಲಾಗಿ ಸುರಿದಿರುವ ಧಾನ್ಯಗಳನ್ನು ತುಳಿಯದೆ ಆರಿಸಿಕೊಂಡು ಬರಬೇಕಾಗುತ್ತದೆ. ಆ ಧಾನ್ಯಗಳನ್ನೆಲ್ಲ ಆರಿಸುವ ಹೊತ್ತಿಗೆ ಬೆಳಕಾಗಿ ಅದಕ್ಕೆ ದಾರಿತಪ್ಪಿ ಹೋಗುತ್ತದೆ. ಶವಸಂಸ್ಕಾರ ಮಾಡಿ ಹಿಂದಿರುಗಿದ ಮೇಲೆ ಮನೆಯ ಒಂದು ಮೂಲೆಯಲ್ಲಿ ಅಷ್ಟಗಲ ಸಾರಿಸಿ ಒಂದು ಕೈಯೆಣ್ಣೆ ದೀಪ ಹಚ್ಚಿ ಒಂದು ಪಡಿ ಅಕ್ಕಿಯನ್ನು ತಲೆಸವರಿ ಮಡಗಿ ಒಂದು ಚೊಂಬು ನೀರಿಟ್ಟು ಗಂಧದಕಡ್ಡಿ ಬೆಳಗಿ ಅವುಗಳ ಮೇಲೆ ಒಂದು ಹೆಡಿಗೆ ಬೋರಲಿಡಬೇಕು. ಮಾರನೆಯ ದಿನ ಬೆಳಗ್ಗೆ ಹೆಡಿಗೆ ತೆಗೆದುನೋಡಿದಾಗ ಅಕ್ಕಿ ಹಾಗೂ ನೀರು ಕಡಿಮೆಯಾಗಿದ್ದರೆ ಸತ್ತವನಿಗೆ ಇನ್ನೂ ಆಯುಷ್ಯವಿತ್ತೆಂದು ಅವನು ದೆವ್ವವಾಗುವ ಸಂಭವ ಉಂಟೆಂದು ಅರ್ಥ.

**ದೆವ್ವದ ಬಗೆಗಳು :** ಹೆರಿಗೆ ಸಮಯದಲ್ಲೊ ಮೂರು ವರ್ಷ ತುಂಬುವುದಕ್ಕೆ ಮೊದಲೊ ಮಕ್ಕಳು ಸತ್ತರೆ ಪೀಡೆ ಎಂಬ ದೆವ್ವಗಳಾಗುತ್ತವೆ. ಕೊಲೆಯಿಂದ ಸತ್ತವರು ಕಾತ ಎಂಬ ದೆವ್ವವಾಗುತ್ತಾರೆ. ಬೆಂಕಿಯಲ್ಲಿ ಸುಟ್ಟು ಹೋದವರು ಭೂತ ಎಂಬ ದೆವ್ವವಾಗುತ್ತಾರೆ. ನೀರಿನಲ್ಲಿ ಸತ್ತವರು ಪ್ರೇತ ಎಂಬ ದೆವ್ವವಾಗುತ್ತಾರೆ. ಹಣದ ವಿಚಾರದಲ್ಲಿ ದುರಾಶೆಯಿಟ್ಟುಕೊಂಡು ಸತ್ತವರು ರಣ ಎಂಬ ದೆವ್ವವಾಗುತ್ತಆರೆ.

ಹೋರಾಟದಲ್ಲಿ ಸತ್ತ ವೀರರು ಜಟಿಯಾಗಾ ಎಂಬ ದೆವ್ವವಾಗಾತ್ತಾರೆ. ಸತ್ತ ಗರ್ಭಿಣಿಯರು ಗಾಳಿ ಎಂಬ ದೆವ್ವವಾಗುತ್ತಾರೆ. ನೇಣು ಹಾಕಿಕಂಡು ಸತ್ತವರು ಗರಾವು ಎಂಬ ದೆವ್ವವಾಗುತ್ತಾರೆ. ಆಕಾಲ ಮರಣಕ್ಕೆ ತುತ್ತಾದ ಬಾಣಂತಿ ಬನ್ನಿ ಎಂಬ ದ್ವ್ವವಾಗುತ್ತಾಳೆ. ಪ್ರಾಯದ ಹುಡುಗಿ ಆಕಾಲ ಮರಣಕ್ಕೆ ತುತ್ತಾದರೆ ಮೋಹಿನಿ ಎಂಬ ದೆವ್ವವಾಗುತ್ತಾಳೆ. ಬ್ರಾಹ್ಮಣರ ದೆವ್ವಗಳನ್ನು ಪಿಶಾಚಿ ಅಥವಾ ಬ್ರಹ್ಮ ಪಿಶಾಚಿ ಎಂದು ಕರೆಯುತ್ತಾರೆ. ಶಾಪಗ್ರಸ್ತ ದೇವತೆಗಳು ಭೂಲೋಕದಲ್ಲಿ ಬೇತಾಳಗಳಾಗಿ ಜನ್ಮವೆತ್ತುತ್ತಾರೆ. ಹೀಗಿರುವ ನಾನಾ ಬಗೆಯ ದೆವ್ವಗಳಿಗೆ ಅಧಿಪತಿ ಮುನೀಶ್ವರ. ಮುನೀಶ್ವರನನ್ನು ಕೆಲವು ಕಡೆ ಬೇತಾಳ ಭೂತನಾಥ ಎಂದೂ ಕರೆಯುತ್ತಾರೆ.

**ದೆವ್ವಗಳ ಅಧಿಪತಿ :** ದೆವ್ವಗಳ ಅಧಿಪತಿಯಾದ ಮುನೀಶ್ವರರನ್ನು ಈಶ್ವರನ ಅಂಶವೆಂದು ಹೇಳುತ್ತಾರೆ. ಅವನ ಆಕಾರ ರುದ್ರ ಭೀಕರವಾಗಿರುತ್ತದೆ. ಅವನಿಗೆ ಮೂರು ಕಣ್ಣುಗಳಿವೆ. ನೀಲವಾದ ಜಟೆಯಿದೆ. ಎಡದ ಕಾಲಿಗೆ ಏಳವಾದಿ ಜಂಗು, ಬಲದ ಕಾಲಿಗೆ ಭಾಪುರಿ ಜಂಗುಗಳನ್ನು ಆತ ಧರಿಸಿರುತ್ತಾನೆ. ಕೈಯಲ್ಲಿ ತ್ರಿಶೂಲವಿರುತ್ತದೆ. ಅಮವಾಸ್ಯೆಯ ರಾತ್ರಿಯಲ್ಲಿ ಅವನು ತಾನು ವಾಸವಿದ್ದ ಮರದಿಂದ ಮತ್ತೊಂದು ಮರಕ್ಕೆ ಪ್ರಯಾಣ ಮಾಡುತ್ತಾನೆ. ಅವನನ್ನು ಎಲ್ಲ ದೆವ್ವಗಳು ಪಲ್ಲಕ್ಕಿಯಲ್ಲಿ ಹೊತ್ತು ಕೊಳ್ಳಿಗಳನ್ನು ಹಿಡಿದು ಕುಣಿಯುತ್ತಾ ಸಾಗಿಸುತ್ತವೆ. ಮುನಿದೆವ್ವ ಹಗಲಿನಲ್ಲಿ ಸುಂಟರಗಾಳಿ ರೂಪದಲ್ಲಿ ಪ್ರಯಾಣ ಮಾಡುತ್ತಾನೆ. ಈ ಮುನಿ ರಾತ್ರಿಯಲ್ಲಿ ಉರಿಯುವ ಪತ್ತು ಮದ್ದಳೆ ತಾಳ ಮೇಳಗಳಿಂದ ವೈಭವದ ಮೆರವಣಿಗೆ ಹೊರಡುವುದನ್ನು ಕೆಲವರು ಕಂಡಿರುವೆವೆಂದು ಹೇಳುತ್ತಾರೆ. ಮುನಿಯ ಹೆಂಡತಿ ಚೌಡಿ, ಪ್ರತಿವರ್ಷವೂ ಹೊಲ ಗದ್ದೆಗಳ ಬಳಿಯಲ್ಲಿ ಇವರಿಬ್ಬರಿಗೂ ಶಾಂತಿ ಮಾಡುವ ಸಂಪ್ರದಾಯ ಉಳಿದು ಬಂದಿದೆ.

**ದೆವ್ವಗಳ ಆಕಾರ :** ದೆವ್ವಗಳು ಆಶರೀರಗಳಾದ್ದರಿಂದ ಅವನ್ನು ಸಾಮಾನ್ಯವಾಗಿ ಗಾಳಿಗಳೆಂದು ಕರೆಯುತ್ತಾರೆ. ಅಲ್ಲದೆ ಅವು ನೆರಳುಗಳ ರೂಪದಲ್ಲಿ ಸಂಚರಿಸುತ್ತವೆಯೆಂದೂ ಹೇಳುತ್ತಾರೆ. ಆದರೆ ಅವು ಇಷ್ಟಬಂದ ರೂಪಗಳಲ್ಲಿ ಕಾಣಿಸಿಕೊಳ್ಳಬಲ್ಲವು. ಹೀಗಾಗಿ ದೆವ್ವಗಳ ಆಕಾರ ಇದೇ ಸರಿ ಎಂದು ಹೇಳಲಾಗದಿದ್ದರೂ ಸಾಮಾನ್ಯವಾಗಿ ದೆವ್ವ ಎಂದರೆ ಹೇಗಿರುತ್ತದೆ ಎಂಬ ಒಂದು ಕಲ್ಪನೆಯಿದೆ. ದೆವ್ವಗಳು ಕರ್‍ರಗಿರುತ್ತವೆ. ತಲೆಯನ್ನು ಕೆದರಿಕೊಂಡಿರುತ್ತವೆ. ನೆರಳುಗಳಂತೆ ಓಡಾಡುತ್ತವೆ. ನೆಲದ ಮೇಲೆ ಕಾಲೂರಿರುವುದಿಲ್ಲ. ಕಾಲಿನ ಹಿಮ್ಮಡಿ ಮುಂದಾಗಿಯೂ ಬೆರಳುಗಳು ಬೆನ್ನಕಡೆಗೂ ಇರುತ್ತವೆ. ಯಾವಾಗಲೂ ಕಣ್ಣುಗಳನ್ನು ಮೆಡ್ಡರಿಸಿಕೊಂಡಿರುತ್ತವೆ. ಅವಕ್ಕೆ ಕೋರೆಹಲ್ಲುಗಳುಂಟು. ವಿವಿಧ ಪ್ರಾಣಿಗಳ ರೂಪದಲ್ಲೂ ಅವು ಕಾಣಿಸಿಕೊಳ್ಳುತ್ತವೆ. ನಡೆಯುವಾಗ ಕಟ್ ಕಟ್ ಎಂಬ ಶಬ್ದವಾಗುತ್ತದೆ. ಈ ಮುಂತಾಗಿ ದೆವ್ವಗಳ ಆಕಾರವನ್ನು ಕಲ್ಪಿಸಲಾಗಿದೆ.

**ಆಹಾರ ವಿಹಾರಗಳು :** ದೆವ್ವಗಳ ಆಹಾರಗಳೆಲ್ಲ ಸಾಮಾನ್ಯವಾಗಿ ಹೊಲಸು, ಅವು ಮಲಮೂತ್ರವನ್ನು ಸೇವಿಸುವುದಾಗಿ ಹೇಳುತ್ತಾರೆ. ಕೋಳಿ, ಕುರಿ, ದನ, ಕರು, ಕೋಣ, ಮನುಷ್ಯ ಮುಂತಾದವುಗಳ ರಕ್ತಮಾಂಸಗಳಿಂದ ಅವು ತೃಪ್ತಿಗೊಳ್ಳುತ್ತವೆ. ಹಂದಿಯ ಮಾಂಸವೆಂದರೆ ಅವಕ್ಕೆ ಅಪ್ಯಾಯಮಾನವಂತೆ, ಇವಲ್ಲದೆ ಉಳಿದ ತಿಂಡಿತಿನಿಸುಗಳೂ ಅವಕ್ಕೆ ಒಗ್ಗುತ್ತವೆ. ಆದರೆ ಧಾರ್ಮಿಕ ವಿಷಯುಗಳಿಗೆ ಸಂಬಂಧಿಸಿದ ಯಾವುದೇ ಪವಿತ್ರ ವಸ್ತುವೂ ಅವಕ್ಕೆ ಸೇರುವುದಿಲ್ಲ. ಅದನ್ನು ಕಂಡರೆ ಅವಕ್ಕೆ ಭಯ, ಕೊಳಚೆನೀರು, ರಕ್ತ, ಹೆಂಡ ಹಾಗೂ ಮೂತ್ರಗಳೇ ಅವುಗಳ ಪಾನೀಯಗಳು, ಸಿಹಿಪದಾರ್ಥಗಳಲ್ಲಿ ಬೆಲ್ಲವೆಂದರೆ ಅವಕ್ಕೆ ಅಚ್ಚುಮೆಚ್ಚು. ಆದ್ದರಿಂದ ಅವು ಅಲೆಮನೆಯನ್ನು ಸೇರಿ ಬಿಡುತ್ತವೆ. ಅವುಗಳು ಬೆಲ್ಲ ಹದವಾಗದಂತೆ ಕೆಡಿಸುತ್ತವೆ. ಆದ್ದರಿಂದ ಅವು ಅಲೆಮನೆಯನ್ನು ಪ್ರವೇಶಿಸದಂತೆ ಮೊದಲೇ ಪ್ರಾಣಿ ಬಲಿಕೊಡುವ ರೂಢಿಯುಂಟು.

ಹಗಲು ದೆವ್ವಗಳ ಪಾಲಿಗೆ ಶತ್ರು. ಬೆಳಕೆಂದರೆ ಅವು ತತ್ತರಿಸಿಹೋಗುತ್ತವೆ. ಆದರೂ ಮಧ್ಯಾಹ್ನ ಹಾಗೂ ನಡುರಾತ್ರಿಗಳಲ್ಲಿ ಅವುಗಳಿಗೆ ವಿಶೇಷವಾದ ಶಕ್ತಿ ಬರುತ್ತದೆ. ಸಾಮಾನ್ಯವಾಗಿ ಅವು ನಿರ್ಭಯವಾಗಿ ಸಂಚರಿಸುವುದು ರಾತ್ರಿಯ ವೇಲೆಯಲ್ಲಿಯೇ. ಅವು ಯಾವಾಗಲೂ ಕತ್ತಲನ್ನೇ ಬಯಸುವುದರಿಂದ ದಟ್ಟವಾಗಿ ಬೆಳೆದ ಮರಗಳಲ್ಲಿ ಹಳೆಯ ಬಾವಿಗಳಲ್ಲಿ ಹಳೆಯ ಮನೆಗಳಲ್ಲಿ ಆಯುವಿಲ್ಲದ ಮನೆಗಳಲ್ಲಿ ಎಕ್ಕದ ಗಿಡದ ಬುಡದಲ್ಲಿ ಬಿಳಲುಬಿಟ್ಟ ಆಲದಮರ ಹಾಗೂ ಹುಣಸೇ ಮರಗಲಲ್ಲಿ ಕೆರೆ ಕೊಳ ಬಂಡೆ ಗವಿ ಮುಂತಾದ ಕಗ್ಗತ್ತಲ ಸ್ಥಳಗಳಲ್ಲಿ ವಾಸಿಸುತ್ತವೆ. ಸ್ಮಶಾನಗಳಲ್ಲಿ ದೆವ್ವಗಳಿರುವುದಿಲ್ಲ ಎಂಬ ನಂಬಿಕೆ ಕೆಲವರಲ್ಲಿದ್ದರೆ ಮತ್ತೆ ಕೆಲವರು ಇರುತ್ತವೆ ಎಂದು ನಂಬುತ್ತಾರೆ.

ಮೋಹಿನಿ ಎಂಬ ದೆವ್ವಕ್ಕೆ ಹುಣ್ಣಿಮೆಯ ದಿನ ಅತ್ಯಂತ ಪ್ರಿಯವಾದರೆ ಉಳಿದ ದೆವ್ವಗಳಿಗೆ ಅಮಾವಾಸ್ಯೆ ಎಂದರೆ ಸಡಗರವೋ ಸಡಗರ. ಕತ್ತಲ ವೇಳೆಯಲ್ಲಿ ಅವುಗಳ ಚಟುವಟಿಕೆ ನಿರಂತರವಾಗಿ ಸಾಗುತ್ತದೆ. ಹಗಲಲ್ಲಿ ಅವು ನಿದ್ರಿಸುತ್ತವೆ.

**ಗುಣ ಸ್ವಭಾವಗಳು :** ದೆವ್ವಗಳು ಎಲ್ಲರ ಕಣ್ಣಿಗೂ ಕಾಣಿಸುವುದಿಲ್ಲ. ಅವು ದೆವ್ವಗಣ್ಣಿನವರಿಗೆ ಮಾತ್ರ ಕಾಣಿಸಿಕೊಳ್ಳುತ್ತವೆ. ಅಲ್ಲದೆ ನಾಯಿಗಳಿಗೆ ದೆವ್ವಗಳು ಕಾಣಿಸಿಕೊಳ್ಳುತ್ತವೆ. ದೇವಗಣದವರ ಕಣ್ಣಿಗೆ ದೆವ್ವಗಳು ಗೋಚರಿಸುವುದಿಲ್ಲ. ದೆವ್ವಗಳು ಮನುಷ್ಯರನ್ನು ಶತ್ರುಗಳೆಂದೇ ಭಾವಿಸುತ್ತವೆ. ಮನುಷ್ಯರಿಗೆ ಕಿರುಕುಳ ಕೊಡುವುದೆಂದರೆ ಅವಕ್ಕೆ ಎಲ್ಲಿಲ್ಲದ ಉತ್ಸಾಹ ಹಾಗೂ ಆನಂದ. ಹೆಣ್ಣುದೆವ್ವಗಳು ಗಂಡಸರನ್ನು ಗಂಡುದೆವ್ವಗಳು ಹೆಂಗಸರನ್ನು ಹಿಡಿದುಕೊಳ್ಳುವುದು ಸಾಮಾನ್ಯವಾದರೂ ಇದಕ್ಕೆ ಅಪವಾದ ಇಲ್ಲದೆ ಇಲ್ಲ.

ಸ್ವೇಚ್ಛೆಯಾಗಿ ವಿಹರಿಸುವ ದೆವ್ವಗಳು ಮಾನವರನ್ನು ಕಂಡರೆ ಬಗೆಬಗೆಯಾಗಿ ಚೇಷ್ಟೆ ಮಾಡುತ್ತವೆ. ಅವು ಮನುಷ್ಯರನ್ನು ಹಿಡಿದುಕೊಳ್ಳಬೇಕೆಂದು ಬಯಸಿದಾಗ ಮೊದಲು ಅವನ ಹಿಮ್ಮಡಿಯನ್ನು ಮುಟ್ಟುತ್ತವೆ. ಇದರಿಂದಲೇ ಅವನು ಶಕ್ತನೋ ದುರ್ಬಲನೋ ಎಂಬುದು ಅವಕ್ಕೆ ತಿಳಿಯುತ್ತದೆ. ಆಗ ಅವು ಗಾಳಿಯ ರೂಪದಲ್ಲಿ ಗುದದ್ವಾರದ ಮೂಲಕ ಪ್ರವೇಶ ಮಾಡುತ್ತವೆ. ಮಲಗಿದ್ದ ವ್ಯಕ್ತಿಯನ್ನು ಬಾಯಿಯ ಮೂಲಕ ಪ್ರವೇಶಿಸುತ್ತವೆ. ಎಷ್ಟೋ ದೆವ್ವಗಳು ಮಾನವನ ದೇಹವನ್ನು ತಮ್ಮ ಮನೆಯನ್ನಾಗಿ ಮಾಡಕೊಂಡಿದ್ದರೂ ಅದು ಯಾರಿಗೂ ತಿಳಿದಿರುವುದೇ ಇಲ್ಲ. ಬಾಣಂತಿ, ಋತುವಾಗಿರುವ ಹೆಣ್ಣುಮಕ್ಕಳು, ಮದುಮಕ್ಕಳು ಮುಂತಾದ ಹಸಿ ಮೈಯವರನ್ನು ದೆವ್ವಗಳು ಸುಲಭವಾಗಿ ಮೆಟ್ಟುತ್ತವೆ. ದಾರಿಯಲ್ಲಿ ಹೋಗುತ್ತಿರುವವರನ್ನು ಅವು ಅವರ ಪರಿಚಿತ ವ್ಯಕ್ತಿಗಳ ಧ್ವನಿಯನ್ನು ಅನುಕರಿಸಿ ಕೂಗುತ್ತವೆ. ಉತ್ತರಿಸಿದರೆ ಮೆಟ್ಟಿಕೊಳ್ಳುತ್ತವೆ. ದೆವ್ವಗಳ ಅದ್ಭುತ ಶಕ್ತಿಯೆಂದರೆ ಪ್ರಪಂಚದ ಯಾವ ಮೂಲೆಯಲ್ಲಿ ಯಾವ ವಸ್ತುವಿದೆ ಎಲ್ಲಿ ಏನಾಗುತ್ತಿದೆ ಎಂಬುದನ್ನು ಇದ್ದಲ್ಲಿ ತಿಳಿದುಕೊಳ್ಳುವುದು. ದೆವ್ವಗಳು ಮನುಷ್ಯರ ಮೇಲೆ ತುಂಬಿ ಬಂದಾಗ ಅವರು ಮೂರ್ಛೆ ಹೋಗುತ್ತಾರೆ. ಕಟಕಟನೆ ಹಲ್ಲು ಕಡಿಯುತ್ತಾರೆ. ಕಣ್ಣುಗುಡ್ಡೆಗಳನ್ನು ಭಯಂಕರವಾಗಿ ತೇಲಿಸುತ್ತಾರೆ. ತಲೆಯನ್ನು ಕೆದರಿಕೊಂಡು ಓಲಾಡುತ್ತಾರೆ. ಕೆಟ್ಟದಾಗಿ ಕಿರುಚುತ್ತಾರೆ. ಹೊಟ್ಟೆ ನುಲಿದಂತಾಗಿ ಹೊರಳುತ್ತಾರೆ. ವಿಕಾರವಾಗಿ ನಗುತ್ತಾರೆ. ಭಯಂಕರವಾಗಿ ಅಳುತ್ತಾರೆ. ಕೆಲವು ದೆವ್ವಗಳು ಮೈದುಂಬಿ ಬಂದಾಗ ಹರ್ಷಚಿತ್ತದಿಂದ ತಮ್ಮ ವೃತ್ತಾಂತವನ್ನೆಲ್ಲ ಹೇಳಿಕೊಳ್ಳುವುದೂ ಉಂಟು. ಹೇಳಿಕೊಳ್ಳುವಾಗ ತಾವು ದೆವ್ವವಾಗುವ ಮುನ್ನ ಮನುಷ್ಯರಾಗಿದ್ದಾಗ ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದವೋ ಅದೇ ಭಾಷೆಯಲ್ಲಿ ದೆವ್ವವಾದಾಗಲೂ ಮಾತನಾಡುತ್ತವೆ. ಕೆಲವು ದೆವ್ವಗಳು ಜ್ಯೋತಿಷ್ಯ ಹೇಳುವುದು ಕಳುವಾಗಿದ್ದ ವಸ್ತುಗಳನ್ನು ಪತ್ತೆ ಮಾಡುವುದು ಮುಂತಾದ ಕಾರ್ಯಗಳನ್ನು ಮಾಡಿಕೊಟ್ಟಿವೆ. ಕೆಲವು ದೆವ್ವಗಳು ಮೈದುಂಬಿ ಬಂದಾಗ ತಾವು ದೇವರುಗಳೆಂದು ಸುಳ್ಳುಹೇಳಿಕೊಂಡು ಜನರ ಕಷ್ಟಸುಖಾದಿಗಳನ್ನು ವಿಚಾರಿಸಿ ಶಾಸ್ತ್ರ ಮುಂತಾದವುಗಳಿಂದ ಪರಿಹಾರ ಸೂಚಿಸಿರುವ ಘಟನೆಗಳೂ ಇವೆ. ದೆವ್ವಗಳಲ್ಲಿ ಹೆಚ್ಚಿನವು ತುಂಟ ದೆವ್ವಗಳೆ. ಅವು ದೂರದಲ್ಲಿ ನಿಂತು ಮನೆ ಮೇಲೆ ಕಲ್ಲೆಸೆಯುತ್ತವೆ. ಸಿಳ್ಳುಹಾಕಿ ಕರೆಯುತ್ತವೆ. ಮಲಗಿದ್ದವರನ್ನು ಅದುಕಿಕೊಂಡು ಉಸಿರಾಡಲು ತೊಂದರೆ ಕೊಡತ್ತವೆ. ಮೈಮೇಲೆ ಬಂಡೆ ಬಿದ್ದಂತೆ ಭಾರಹಾಕಿ ಕಾಡುತ್ತವೆ. ಗಾಡಿ ಬರುತ್ತಿದ್ದರೆ ಎತ್ತುಗಳನ್ನು ಅಡ್ಡಹಾಕಿ ಚಕ್ರ ಕದಲದಂತೆ ಹಿಡಿದು

ನಿಲ್ಲಿಸುತ್ತವೆ. ಹಾಸಿಗೆಯಲ್ಲಿ ಮಲಗಿರುವವರನ್ನು ಹಾಸಿಗೆ ಸಮೇತ ಬೇರೆಡೆಗ ಕೊಂಡೊಯ್ದು ಮಲಗಿಸುತ್ತವೆ. ಕಾಡಿನಲ್ಲಿ ವಾಸವಿರುವವರ ಗುಡಿಸಲುಗಳಿಗೆ ಬೆಂಕಿಹಾಕಿ ಕುಣಿಯುವುದೂ ಅವುಗಳ ಒಂದು ಚೇಷ್ಟೆ. ರಾತ್ರಿಯ ವೇಳೆಯಲ್ಲಿ ಅವು ಎಳೆಯ ಮಕ್ಕಳಂತೆ ಅತ್ತು ಮನುಷ್ಯರ ಅನುಕಂಪೆಯನ್ನು ಗಳಿಸಿಕೊಂಡು ಅವರು ಮಗುವನ್ನು ಎತ್ತಿಕೊಳ್ಳಹೋದಾಗ ವಿಚಿತ್ರಾಕಾರವಾಗಿ ಬೆಳೆದು ಬೆದರಿಸುತ್ತವೆ. ಅವರು ಹೆದರುವ ಸ್ವಭಾವದವರಾಗಿದ್ದರೆ ಅವರ ಜೀವವನ್ನೂ ಮುಟ್ಟಿಕೊಳ್ಳುತ್ತವೆ. ಹೀಗೆ ದೆವ್ವ ಮುಟ್ಟಿದವರು ರಕ್ತ ಕಾರಿ ಸತ್ತು ತಾವೂ ದೆವ್ವಗಳಾಗುತ್ತಾರೆ.

**ದೆವ್ವ ಕಾಡಿದ ಪ್ರಸಂಗಗಳು :** ದೆವ್ವಗಳು ಕಾಡಿದ ಅಸಂಖ್ಯಾತ ಘಟನೆಗಳನ್ನು ಹಳ್ಳಿಗರು ರಸವತ್ತಾಗಿ ವರ್ಣಿಸುತ್ತಾರೆ. ಕೆಲವರು ತಾವು ದೆವ್ವಗಳೊಡನೆ ಹೋರಾಡಿ ಜಯಶೀಲರಾಗಿ ಬಂದೆವೆಂಬ ಕಥೆಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅವರ ಈ ಸಾಹಸದ ಕಥೆಗಳು ಅವರ ಧೈರ್ಯಶೌರ್ಯಗಳ ಸಂಕೇತವಾಗಿವೆ. ಆದರೆ ಅವುಗಳ ಸತ್ಯಾಂಶ ಅವರಿಗೆ ಮಾತ್ರ ಗೊತ್ತು. ಏಕೆಂದರೆ ದೆವ್ವಗಳಿವೆ ಎಂದು ನಂಬುವ ಬಹಳಷ್ಟು ಮಂದಿ ಅವನ್ನು ನೋಡಿಲ್ಲ. ನೋಡಿಲ್ಲವೆಂದ ಮಾತ್ರಕ್ಕೆ ಅವರು ನಿರ್ಭಯರಾಗಿದ್ದಾರೆ ಎಂದರ್ಥವಲ್ಲ. ದೆವ್ವ ಅಗೋಚರಶಕ್ತಿಯಾದ್ದರಿಂದ ಎಂಥ ಗಂಡುಗಲಿಗಳಿಗೂ ಅವುಗಳ ಬಗೆಗೆ ಕೊಂಚ ಅಳುಕು ಇದ್ದೇ ಇರುತ್ತದೆ. ಹಳ್ಳಿಗರು ಗಾಳಿ ಕಾಟವನ್ನು ಅನುಭವಿಸಿದ ಎದುರಿಸಿದ ಅಥವಾ ಅವಕ್ಕೆ ತುತ್ತಾದ ಪ್ರಸಂಗಗಳು ಬೇಕಾದಷ್ಟಿವೆ. ಒಂದೆರಡು ಪ್ರಸಂಗಗಳನ್ನು ಇಲ್ಲಿ ಉದಾಹರಿಸಲಾಗಿದೆ.

ಕೆಲವು ದೆವ್ವಗಳು ಮನೆಯ ಒಳಭಾಗದಲ್ಲೇ ವಾಸವಿದ್ದರೂ ಯಾರಿಗೂ ಗೊತ್ತಿರುವುದಿಲ್ಲ. ಅವು ಅಮಾವಾಸ್ಯೆಯ ರಾತ್ರಿಗಳಲ್ಲಿ ಧಡಧಡನೆ ಮನೆ ಬಾಗಿಲು ತಟ್ಟುವುದು. ದನಕರುಗಳನ್ನು ಬಲಿ ತೆಗೆದುಕೊಳ್ಳುವುದು. ಮನೆಯಲ್ಲಿ ಕಷ್ಟನಷ್ಟಗಳನ್ನುಂಟು ಮಾಡುವುದು ಮುಂತಾದ ಕಾರ್ಯದಲ್ಲಿ ತೊಡಗುತ್ತವೆ ಎಂದು ನಂಬಲಾಗುತ್ತದೆ. ಇಂಥ ವಿಷಯಕ್ಕೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಪಟೇಲ್ ಕಾಳೇಗೌಡರ ಮನೆಯಲ್ಲಿ ನಡೆದ ಒಂದು ಘಟನೆ ಒಳ್ಳೆಯ ನಿದರ್ಶನ. ಸಣ್ಣಯ್ಯನವರ ಬೀದಿಯಲ್ಲಿ ವಾಸವಿದ್ದ ಗೌಡರು ಬೆಂಗಳೂರು ಮಂಗಳೂರು ರಸ್ತೆ ಬದಿಯಲ್ಲಿದ್ದ ತಮ್ಮ ಹೊಲದಲ್ಲಿ ಒಂದು ಮನೆಯನ್ನು ಕಟ್ಟಿ ವಾಸಕ್ಕೆ ಹೊರಟರು. ಅವರು ಆ ಮನೆಗೆ ಹೋದ ಕೆಲವೇ ದಿನಗಳಲ್ಲಿ ಅವನ ಬೆಲೆ ಬಾಳುವ ಎತ್ತುಗಳಲ್ಲಿ ಒಂದು ಇದ್ದಕ್ಕಿದ್ದಂತೆ ಅಸುನೀಗಿತು. ಇದಕ್ಕೆ ಕಾರಣವೇ ತಿಳಿಯಲಿಲ್ಲ. ಮತ್ತೆರಡು ವರ್ಷಗಳ ತರುವಾಯ ಮತ್ತೊಂದು ಹೋರಿ ಪ್ರಾಣಬಿಟ್ಟಿತು. ಅಲ್ಲದೆ ಅಮಾವಾಸ್ಯೆ ಮುಂದಾರದಲ್ಲಿ ಮನೆಯಸುತ್ತ ಯಾರೋ ಗುಡುಗುಡನೆ ಓಡಾಡಿದಂತಾಗುತ್ತಿತ್ತು. ಕಳ್ಳರಿರಬಹುದೆಂದು ಆಳುಕಾಳುಗಳನ್ನೆಲ್ಲ ಎಚ್ಚರಿಸಿ ಹುಡುಕಿದರೆ ಯಾರ ಸುಳಿವೂ ಇರುತ್ತಿರಲಿಲ್ಲ. ಕಳ್ಳತನವೂ ಆಗುತ್ತಿರಲಿಲ್ಲ. ಕೆಲವೊಮ್ಮೆ ನಡುರಾತ್ರಿಯಲ್ಲಿ ಬಾಗಿಲನ್ನು ಧಡಧಡನೆ ತಟ್ಟಿದಂತಾಗುತ್ತಿತ್ತು. ಬಾಗಿಲು ತೆರೆದರೆ ಯಾರೂ ಇರುತ್ತಿರಲಿಲ್ಲ. ಇದು ಭೂತಚೇಷ್ಟೆಯೆಂದು ನಿರ್ಧರಿಸಿದ ಪಟೇಲರು ಮಲೆಯಾಳಂನಿಂದ ಮಂತ್ರವಾದಿಯೊಬ್ಬನನ್ನು ಕರೆಸಿ ಮನೆಗೆ ದಿಗ್ಬಂಧನ ಮಾಡಿಸಿದರು. ಇದರಿಂದ ಏನೂ ಪ್ರಯೋಜನವಾದಂತೆ ಕಾಣಲಿಲ್ಲ. ಅವರ ಮಗ ಪಿ.ಕೆ. ಶಿವಪ್ಪನವರು ಕೆ.ಆರ್. ನಗರ ತಾಲ್ಲೂಕಿನ ಹೆಬ್ಬಾಳು ಗ್ರಾಮದ ತಮ್ಮ ಹೆಂಡತಿಯ ಮನೆಗೆ ಹೋಗಿದ್ದಾಗ ಅಲ್ಲಿ ಒಬ್ಬ ಮುದುಕಿಯ ಮೈಮೇಲೆ ವೆಂಕಟೇಶ್ವರ ದೇವರು ಮೈತುಂಬಿ ಬಂದು ಯಂತ್ರಮಂತ್ರ ಶಾಸ್ತ್ರಾದಿಗಳನ್ನು ಮಾಡುತ್ತಿರುವುದನ್ನು ಕಂಡು ಕುತೂಹಲಕ್ಕಾಗಿ ತಾವು ಶಾಸ್ತ್ರ ಕೇಳಿದರು. ಆಗ ಆ ದೇವರು ನಿಮ್ಮ ಮನೆಯಲ್ಲೊಂದು ಗಾಳಿ ಸೇರಿಕೊಂಡಿದೆ. ನೀವು ಮನೆ ಕಟ್ಟಿಸುವಾಗ ನೆಲ ಸೋಸಿಲ್ಲ. ಹಿಂದೆ ಯಾರೋ ಒಬ್ಬ ಹೆಂಗಸು ಕದ್ದುಬಸುರಿಯಾಗಿ ಹೆತ್ತಮಗುವನ್ನು ತಂದು ಆ ಸ್ಥಳದಲ್ಲಿ ಹೂತಿದ್ದಳು. ಅದು ದೆವ್ವವಾಗಿ ಈಗಲೂ ಬೆಳೆಯುತ್ತಿದೆ. ನಿಮಗೆ ಕಷ್ಟ ನಷ್ಟಗಳನ್ನು ಉಂಟುಮಾಡುತ್ತಿದೆ ಎಂದಿತು. ವಿಷಯವನ್ನು ಕೇಳಿದ ಶಿವಪ್ಪನವರು ಕುತೂಹಲ ಭರಿತರೂ ಭಯಚಕಿತರೂ ಆಗಿ ಆ ದೆವ್ವವನ್ನು ಮನೆಯಿಂದ ಹೊರಗಟ್ಟಲು ನೆರವು ಕೇಳಿದರು. ದೇವರು ಅದಕ್ಕೊಪ್ಪಿತು. ಹೆಂಗಸನ್ನು ಹೆಬ್ಬಾಳಿನಿಂದ ಪಿರಿಯಾಪಟ್ಟಣಕ್ಕೆ ಕರೆದುತಂದರು. ಅವಳು ಕೋಳಿಕೂಗುವ ಹೊತ್ತಿಗೆ ಎಷ್ಟು ಸ್ನಾನ ಮಡಿ ಮುಗಿಸಿ ಪೂಜೆಗೆ ಕುಳಿತಳು. ಮೈಮೇಲೆ ವೆಂಕಟೇಶ್ವರಸ್ವಾಮಿ ಆವೇಶ ಬಂದಾಗ ಧಿಗ್ಗನೆ ಮೇಲೆದ್ದಳು. ಮನೆಯ ನೆಲದಲ್ಲಿ ಮೂರು ಸ್ಥಳಗಳನ್ನು ತಟ್ಟಿ ಶಬ್ದಮಾಡಿ, ಕಣಜದ ಮನೆಯ ಮೂಲೆಯೊಂದನ್ನು ಅಗೆಯಲು ಸೂಚಿಸಿದಳು. ಆಳುಗಳು ಒಂದಾಳುದ್ದದ ವರೆಗೂ ಗುಂಡಿ ತೋಡಿದರು. ಆಗ ಮುದುಕಿ ಅಗೆಯುವುದನ್ನು ನಿಲ್ಲಿಸುವಂತೆ ಹೇಳಿ ತಾನೇ ಹಳ್ಳಕ್ಕಿಳಿದು ಅಗೆಯ ತೊಡಗಿದಳು. ಮನೆಯ ತುಂಬ ಕೆಟ್ಟವಾಸನೆ ಹರಡಿಕೊಂಡಿತು. ಆ ಮುದುಕಿ ಹಳ್ಳದೊಳಗಿಂದ ಅಸ್ಥಿಪಂಜರವೊಂದನ್ನು ಮೇಲೆತ್ತಿ ತಂದಳು. ಅದನ್ನು ಯಾರೂ ಮುಟ್ಟಬೇಡಿರೆಂದು ಹೇಳಿ ಮಂಕರಿಗೆ ತುಂಬಿ ತಾನೇ ಶ್ಮಶಾನಕಟ್ಟೆಗೊಯ್ದು ವಿಧಿಪೂರ್ವಕವಾಗಿ ಸಂಸ್ಕಾರ ಮಾಡಿಸಿದಳು. ಒಂಬತ್ತನೆಯ ದಿನದಲ್ಲಿ ಆರಾಧನೆ ಮಾಡಿ ಅನ್ನ ಹಾಕಲು ಹೇಳಿದಳು. ಆ ಒಂಬತ್ತು ದಿನಗಳ ರಾತ್ರಿಯೂ ದೆವ್ವ ಬಂದು ಬಾಗಿಲನ್ನು ಧಡಧಡನೆ ಬಡಿಯುತ್ತಿತ್ತು. ಸತ್ತವರಿಗೆ ಗಣಾರಾಧನೆ ಮಾಡುವಂತೆ, ಆ ದೆವ್ವದ ಹೆಸರಿನಲ್ಲಿ ಅನ್ನ ಹಾಕಿದರು. ಈಗ ಆ ಮನೆಯಲ್ಲಿ ದೆವ್ವದ ಕಾಟ ಯಾವುದೂ ಇಲ್ಲ.

**ಭೂತ ವಶೀಕರಣ :** ಬಸುರಿ ಅಥವಾ ಬಣಂತಿ ಸತತರೆ ಅವಳನ್ನು ಹೂಳಬಾರದು. ಹೂತರೆ ಮಳೆ ಬರುವುದಿಲ್ಲ ಎಂಬ ನಂಬಿಕೆ ಕೆಲವು ಕಡೆ ಇದೆ. ಆದರೆ ಇದಕ್ಕೂ ಹೆಚ್ಚಿನ ಕಾರಣ ಮಂತ್ರವಾದಿಗಳ ಕಾಟ ಎಂದು ಹೇಳುತ್ತಾರೆ. ಅದಕ್ಕಾಗಿ ಅವಳನ್ನು ಸುಟ್ಟು ಬರುವ ಪದ್ಧತಿಯಿದೆ. ಸುಡದೆ ಹೂತು ಬಂದ ಪಕ್ಷದಲ್ಲಿ ಇದನ್ನು ನೋಡಿಕೊಂಡಿದ್ದ ಮಂತ್ರವಾದಿ ಹುಣ್ಣಿಮೆಯ ಮಧ್ಯರಾತ್ರಿಯಲ್ಲಿ ಕಾಳಿಕಾದೇವಿಯ ಮಂತ್ರವನ್ನು ಜಪಿಸುತ್ತ ಕರೀಕುರಿಯೊಡನೆ ಶ್ಮಶಾನಕ್ಕೆ ಬಂದು ಗುದ್ದಕ್ಕೆ ನೇರವಾಗಿ ಇಪ್ಪತ್ತುಗಜ ದೂರದಲ್ಲಿ ಏಳು ಬಣ್ಣಗಳ ರಂಗೋಲಿಯಲ್ಲಿ ಮಂಡಲ ಬರೆದು ಅದರ ಮಧ್ಯೆ ಒಂದು ಕಬ್ಬಿಣದ ಗೂಟ ನೆಟ್ಟು ಅದಕ್ಕೆ ಬಲಿ ಕಟ್ಟಿ ಮಂತ್ರ ಹೇಳುತ್ತ ಪೂಜೆಮಾಡುತ್ತಾನೆ. ಆ ಗೂಟದಿಂದ ಒಂದು ಹಸಿ ನೂಲಿನ ಹುರಿಯನ್ನು ಎಳೆದು ತಂದು ಗುಡ್ಡದ ತುದಿಗೊಂದು ಗೂಟನೆಟ್ಟು ಅದಕ್ಕೆ ಕಟ್ಟುತ್ತಾನೆ. ಗುಡ್ಡದ ಹಿಂಭಾಗದಲ್ಲಿ ಮತ್ತೊಂದು ಕಬ್ಬಿಣದ ಗೂಟ ಹೊಡೆದು ಅದನ್ನು ಹಿಡಿದುಕೊಂಡು ಕುಳಿತುಕೊಳ್ಳುತ್ತಾನೆ. ಈಗ ಮಣ್ಣಿನ ಗೊಂಬೆಗಳೆರಡಕ್ಕೆ ಪೂಜೆಮಾಡಿ ಜೀವತುಂಬಿ ಅವುಗಳ ಕೈಗೆ ಕತ್ತಿ ಕೊಡುತ್ತಾನೆ. ಅವು ನೂಲಿನ ಮೇಲ ಹೆಜ್ಜೆಯಿಡುತ್ತ ಮಂಡಲ ಬಳಿಗೆ ಬರುತ್ತವೆ. ಮಂತ್ರವಾದಿ ಒಂದೇ ಸಮನೆ ಮಂತ್ರ ಹೇಳತೊಡಗುತ್ತಾನೆ. ಈಗ ಗುದ್ದು ಇಬ್ಭಾಗವಾಗಿ ಅದರಿಂದ ಹೆಣ ಮೇಲೆದ್ದು ತಕತಕನೆ ಕುಣಿಯಲಾರಂಭಿಸುತ್ತದೆ. ಕುಣಿಕುಣಿದಾಡುತ್ತ ಹರಿಯ ನೇರಕ್ಕೆ ನಡೆದು ಮಂಡಲವನ್ನು ತಲಪಿ ಅಲ್ಲಿ ಕಟ್ಟಿದ್ದ ಕರಿಕುರಿಯ ಗೋಮಾಳೆಯನ್ನು ಕಚ್ಚಿ ರಕ್ತ ಹಿರುತ್ತದೆ. ಆಗ ಮಂತ್ರದ ಗೊಂಬೆಗಳು ಕೈ ಕೊಡ್ತಿಯಾ. ಕಾಲ್ ಕೊಡ್ತೀಯಾ ಎಂದು ಹೇಳುತ್ತ ಕುಣಿಯುತ್ತಿರುತ್ತವೆ. ಆಗ ಹೆಣ ಎಡದ ಕೈಯನ್ನು ನೀಡುತ್ತದೆ. ಗೊಂಬೆಗಳು ಹಸ್ತವನ್ನು ಕತ್ತರಿಸಿಕೊಳ್ಳುತ್ತವೆ. ತತ್‌ಕ್ಷವೆ ಹೆಣ ದೊಪ್ಪನೆ ಕೆಳಗುರುಳುತ್ತದೆ. ಬಿದ್ದ ಹೆಣಕ್ಕೆ ಮೋಡಿಹಾಕಿ ಅದು ಮತ್ತೆ ಗುದ್ದಿದೆ ಬೀಳುವಂತೆ ಮಾಡುತ್ತಾನೆ. ಗೊಂಬೆಗಳು ಕುಣಿದಾಡುತ್ತ ಬಂದು ಕತ್ತರಿಸಿ ತಂದ ಕೈಯನ್ನು ಮಂತ್ರವಾದಿಗೆ ಒಪ್ಪಿಸುತ್ತವೆ. ಆ ಕೈಯನ್ನು ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ಹೊಳೆ ದಡಕ್ಕೆ ತೆಗೆದುಕೊಂಡು ಹೋಗಿ ಕಾಳಿಕಾದೇವಿ ಪೂಜೆಮಾಡಿ ಅವಳಿಗೂ ಒಂದು ಕರೀತಲೆ ಬಲಿಕೊಟ್ಟು ಅವಳ ಹೆಸರಿನಲ್ಲಿ ತಾನು ಮಾಯಮಂತ್ರ ಮುಂತಾದವನ್ನು ಮಾಡುವುದಾಗಿ ಹೇಳುತ್ತಾನೆ. ಆಗ ಕಾಳಿ ಶ್ಮಶಾನದಲ್ಲಿ ಸುಟ್ಟಿರುವ ಹೆಣಗಳ ಬೂದಿಯನ್ನು ಅವನಿಗೆ ಕೊಡುತ್ತಾಳೆ. ಇದರಿಂದ ಭೂತ ಅವನಿಗೆ ವಶವಾಗುತ್ತದೆ. ಈ ಭೂತದ ಸಹಾಯದಿಂದ ಮಂತ್ರವಾದಿ ತನ್ನ ಶಕ್ತಿಯನ್ನು ಹೆಚ್ಚಿಸಿ ಕೊಳ್ಳುತ್ತಾನೆ. ಕೆಲವು ಮಂತ್ರವಾದಿಗಳು ಕಾಳಿಕಾದೇವಿಗೆ ಬದಲಾಗಿ ಬೇತಾಳಗಳನ್ನು ಆಶ್ರಯಿಸುತ್ತಾರೆ.

**ದೆವ್ವ ಬಿಡಿಸುವುದು :** ಅವು ಮೈ ತುಂಬಿ ಬಂದಾಗ ದೆವ್ವಗಳು ಹಿಡಿದು ಕೊಂಡಿವೆ ಎಂದು ಸುಲಭವಾಗಿ ಗೊತ್ತಾಗುತ್ತದೆ. ಇಲ್ಲದೆಹೋದರೆ ಅವು

ಮಾನವ ಶರೀರವನ್ನು ಮನೆಮಾಡಿಕೊಂಡಿದ್ದರೂ ತಿಳಿಯುವುದು ಕಷ್ಟ. ಮಕ್ಕಳಿಗೆ ದೆವ್ವದ ಕಾಟವಿದೆಯೆಂಬುದನ್ನು ಅವು ಮಲಗಿರುವಾಗ ಬೆಚ್ಚುವುದರಿಂದ ಚಟ್ಟನೆ ಚೀರುವುದರಿಂದ ರಚ್ಚೆ ಹಿಡಿಯುವುದರಿಂದ ಗುರುತಿಸಿ ತತ್‌ಕ್ಷಣವೆ ಯಂತ್ರ ಮಂತ್ರಗಳನ್ನು ಹಾಕಿಸುತ್ತಾರೆ. ಇಲ್ಲವೆ ರಚ್ಚೆತಾಳಿಯನ್ನು ಮಾಡಿಸಿ ಕಟ್ಟಿಸುತ್ತಾರೆ.

ಮೈಮೇಲೆ ಆವೇಶ ಬರುವ ದೆವ್ವಗಳನ್ನು ಬಿಡಿಸಲು ಹಲವಾರು ಕ್ರಮಗಳನ್ನು ಪ್ರಪಂಚಾದ್ಯಂತ ಕಾಣಬಹುದಾಗಿದೆ. ಕೆಲವು ಕ್ರಮಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

ದೆವ್ವ ಹಿಡಿದವರನ್ನು ದೇವಾಲಯಗಳಿಗೆ ಕರೆತಂದರೆ ಅರ್ಚಕ ದೆವ್ವವನ್ನು ಬಿಡಿಸುತ್ತಾನೆ. ಬೊಪ್ಪಗೌಡನಪುರದ ಮಂಟೇಸ್ವಾಮಿ ಮಠದ ತಮ್ಮಡಿಗಳು ದೆವ್ವ ಬಿಡಿಸುತ್ತಾರೆ. ಮಂಟೇಸ್ವಾಮಿಗೆ ಪೂಜೆ ಮಾಡಿದಮೇಲೆ, ದೆವ್ವ ಹಿಡಿದವರನ್ನು ತಲೆಮೇಲೆ ಕೈಜೋಡಿಸಿಕೊಂಡು ಕುಳಿತುಕೊಳ್ಳಲು ಹೇಳುತ್ತಾರೆ. ಜಾಗಟೆ, ನಗಾರಿ, ಗಂಟೆಗಳನ್ನು ಕಿವಿಹರಿಯುವಂತೆ ಬಾರಿಸುತ್ತಾರೆ. ಈ ಸದ್ದುಗಳಿಗೆ ದೆವ್ವ ಮೈತುಂಬಿ ಬರುತ್ತದೆ. ತಮ್ಮಡಿ ತತ್‌ಕ್ಷಣವೆ ಒಂದು ಬತ್ತಿ ತಲೆಗೂದಲನ್ನು ಹಿಡಿದು ಗಂಟು ಹಾಕುತ್ತಾನೆ. ಅನಂತರ ದೆವ್ವ ಎಲ್ಲಿಂದ, ಏಕೆ, ಹೇಗೆ ಬಂದಿತೆಂಬುದರ ವಿಚಾರಣೆ ನಡೆಯುತ್ತದೆ. ದೆವ್ವ ಮಾತಾಡದಿದ್ದರೆ ಬೆತ್ತದಿಂದ ರಪರಪನೆ ಬಾರಿಸುತ್ತಾನೆ. ಬೆದರಿದ ದೆವ್ವ ಬಾಯಿ ಬಿಡುತ್ತದೆ. ಅದರ ಬಯಕೆ ಏನೆಂದು ಕೇಳುತ್ತಾನೆ. ಅದು ಬಯಸಿದ ಊಟ ತಿಂಡಿಯನ್ನು ಮುಂದಿನ ವಾರ ಕೊಡಿಸುವುದಾಗಿ ಹೇಳುತ್ತಾನೆ. ಮಂಟೇಸ್ವಾಮಿ ಸಿದ್ದಪ್ಪಾಜಿ, ರಾಚಪ್ಪಾಜಿ, ದೊಡ್ಡಮ್ಮತಾಯಿಯರ ಪಾದದಾಣೆಗೂ ಹೋಗುವುದಾಗಿ ಅದು ಹೇಳುತ್ತದೆ. ಹೋಗುವುದು ನಿಶ್ಚಯವಾದರೆ ನಿನ್ನ ತಲೆಯಿಂದ ಮೂರು ಬತ್ತಿ ಕೂದಲನ್ನು ಕಿತ್ತುಕೊಂಡು ಎಂದು ಕೇಳುತ್ತಾನೆ. ದೆವ್ವ ತಲೆಗೂದಲನ್ನು ಕಿತ್ತು ಕೊಡುತ್ತದೆ. ಮುಂದಿನ ವಾರ ಆ ಜನ ಉಪವಾಸದಿಂದದ್ದು ಸ್ನಾನ ಮಡಿಯಿಂದ ದೇವಾಲಯಕ್ಕೆ ಬರುತ್ತಾರೆ. ಹಿಂದಿನ ವಾರದ ರೀತಿಯಲ್ಲಿಯೇ ದೆವ್ವ ಮೈ ಮೆಲೆ ಬರುವಂತೆ ಮಾಡಲಾಗುತ್ತದೆ. ಅದು ಪ್ರೀತಿ ಪಟ್ಟು ಕೇಳಿ ದೊಡ್ಡನಿಸಿನ್ನು ಅದಕ್ಕೆ ಕೊಡುತ್ತಾರೆ. ಇದಾದ ಮೇಲೆ ದೇವರಿಗೆ ನಮಸ್ಕಾರ ಮಾಡುವಂತೆ ಹೇಳುತ್ತಾರೆ. ಅದು ನಮಸ್ಕರಿಸಿ ತಾನು ಸತ್ಯವಾಗಿಯೂ ಬಿಟ್ಟು ಹೋಗುವುದಾಗಿ ಆಣೆಮಾಡಿ ಹೇಳುತ್ತದೆ. ಅಲ್ಲಿಂದ ಹೊರಕ್ಕೆ ಕರೆತಂದು, ಹೊರಲಾರದ್ದು ಒಂದು ಕಲ್ಲು ಗುಂಡಿಗೆ ತೀರ್ಥ ಸಿಂಪಡಿಸಿ ಪೂಜೆ ಮಾಡಿ ಅದನ್ನು ಹೊತ್ತು ಕೊಳ್ಳಲು ದೆವ್ವಕ್ಕೆ ಹೇಳುತ್ತಾರೆ. ಹತ್ತು ಜನ ಹೊರಲಾರದ ಆ ಗುಂಡನ್ನು ದೆವ್ವ ಹಿಡಿದಿರುವವರು ಸರಾಗವಾಗಿ ಹೊತ್ತು ಕೊಂಡು ಮುಂದೆ ಮುಂದೆ ಸಾಗುತ್ತಾರೆ. ಅಲ್ಲಿಂದ ಎಲ್ಲರೂ ಅವರನ್ನು ದೊಡ್ಡಮ್ಮ ತಾಯಿಯ ಕೆರೆಗೆ ಕರೆದುತಂದು ನಡುಮಟ್ಟ ನೀರಿನಲ್ಲಿ ಐದುವಾರಗಳಲ್ಲಿ ಮೂರು ಸಾರಿ ಮುಳುಗಿಸಿ ಮೇಲ್ಲೆತ್ತುತ್ತಾರೆ. ದೆವ್ವ ಹಿಡಿದಿದ್ದವರು ಈಗ ಅದರಿಂದ ಮುಕ್ತರಾಗುತ್ತಾರೆ. ಇದಾದಮೇಲೆ ದೇವಾಲಯಕ್ಕೆ ಬಂದು ಪೂಜೆ ಮಾಡಿಸಿ ಐದು ಹಣಗಾಳಿಗಾಣ್ಕೆ ಒಪ್ಪಿಸುತ್ತಾರೆ.

ಕಾಡುಕುರುಬರು ದೆವ್ವ ಬಿಡಿಸುವುದರಲ್ಲಿ ಸಿದ್ದಹಸ್ತರು. ಅವರು ದೆವ್ವ ಹಿಡಿದಿದ್ದವರ ಮುಂದೆ ಮಂತ್ರವನ್ನೂದುತ್ತ ಗುಲಗಂಜಿ ತುಂಬಿದ ಸೋರೆ ಬುರುಡೆಯನ್ನು ಅಲ್ಲಾಡಿಸುತ್ತಿರುತ್ತಾನೆ. ದೆವ್ವ ಬಂದವರು ಅದರ ಶಬ್ದಕ್ಕೆ ತಕ್ಕಂತೆ ಕೆದರಿದ ತಲೆಯನ್ನು ಓಲಾಡಿಸುತ್ತಿರುತ್ತಾರೆ. ಅವನು ಮಂತ್ರವನ್ನೂದುತ್ತಿದ್ದಂತೆ ಬುರುಡೆಯೊಳಗಿನ ಬುಲಗಂಜಿಗಳ ಶಬ್ದ ಥಟ್ಟನೆ ನಿಲ್ಲುತ್ತದೆ. ಆಗ ದೆವ್ವ ಬುರುಡೆಯೊಳಕ್ಕೆ ಬಂತೆಂದು ಹೇಳಿ ಅದನ್ನು ಶ್ಮಶಾನಕ್ಕೆ ತೆಗೆದುಕೊಂಡು ಹೋಗಿ ಬಲಿಕೊಟ್ಟು ಸುಟ್ಟುಹಾಕುತ್ತಾರೆ.

ಕಲ್ಲು ಹುಯ್ಯಿಸುತ್ತೇವೆಂದು ಹೇಳಿದರೆ ದೆವ್ವಗಳು ನಡುಗುತ್ತವೆ. ಕಲ್ಲು ಹುಯ್ಯಿಸುವುದೆಂದರೆ ದೆವ್ವಗಳನ್ನು ಸೆರೆಮಾಡುವುದು ಎಂದರ್ಥ. ಮೈಮೇಲೆ ಬಂದು ಕಿರುಕುಳ ಕೊಡುವ ದೆವ್ವಗಳನ್ನು ಗ್ರಾಮದೇವತೆಗಳ ಹೆಸರಿನಲ್ಲಿ ಒಂದು ಚಪ್ಪಡಿಯಲ್ಲಿ ಮುಖಕ್ಕೆ ಕಾಲುಗಳು ಹಿಂದಕ್ಕಿರವಂತೆ ಕೆತ್ತಿಸಿ, ದೇವಸ್ಥಾನದ ಮುಂದೆ ನೆಟ್ಟು, ಅದಕ್ಕೆ ಅನ್ನ ಹಾಕಿ ಗುಡಿಗೆ ಹೋಗುವ ಜನರೆಲ್ಲ ತುಳಿಯುವಂತೆ ಮಾಡುತ್ತಾರೆ. ಹೀಗೆ ದೇವರ ಸನ್ನಿಧಿಯಲ್ಲಿ ಬಂದಿಯಾದ ದೆವ್ವ ಯಾರನ್ನೂ ಹಿಡಿದುಕೊಳ್ಳಲಾರದು.

ಮನೆಗಳಿಗೆ ದೆವ್ವ ಸೇರಿಕೊಂಡಿದ್ದರೆ ಬೇವಿನ ಎಲೆ ಬಜ್ಜೆ ನವಿಲುಗರಿ ಹಾವಿನ ಪೊರೆ ನವಣೆನೆಲ್ಲು ಮತ್ತು ಇಂಗು ಇವುಗಳನ್ನೆಲ್ಲ ಸೇರಿಸಿ ಧೂಪ ಹಾಕಿದರೆ ಅದರ ವಾಸನೆ ಎಷ್ಟು ದೂರ ತಟ್ಟುತ್ತದೋ ಅಲ್ಲಿಯವರೆಗೂ ದೆವ್ವಗಳು ಸುಳಿಯುವುದಿಲ್ಲವೆಂದು ನಂಬಿಕೆ.

ಪ್ರೇತಬಾಧಾ ನಿವಾರಕ ಯಂತ್ರವನ್ನು ಕಟ್ಟುವುದರಿಂದ ದೆವ್ವಗಳು ಆ ಚೀಟಿ ಇದ್ದವರನ್ನು ಸ್ಪರ್ಶಿಸಲು ಹೆದರುತ್ತವೆಯಂತೆ. ಇದು ಚೀಟಿಯ ಒಂದರ ಮಾದರಿ.

| | | | |
|---|---|---|---|
| ಓಂ | ಹ್ರೀಂ | ಸ್ವ | ಮ |
| ಕ್ರೀಂ | ಕ್ರೀಂ | ಲಂ | ಜಂ |
| ತಂ | ಪಂ | ಸಂ | ತಂ |
| ಠಂ | ಠಂ | ಠಂ | ಠಂ |

ಭೋಜಪತ್ರದ ಮೇಲೆ ಈ ಯಂತ್ರವನ್ನು ಬರೆದು ವಿಧ್ಯುಕ್ತವಾಗಿ ಪೂಜಿಸಿ ಕೊರಳಿಗೆ ಕಟ್ಟಿದರೆ ಪ್ರೇತಬಾಧೆ ನಿವಾರಮೇಯಾಗುತ್ತದೆ. ಇಷ್ಟೇ ಅಲ್ಲದೆ ದೆವ್ವ ಬಿಡಿಸುವ ಇನ್ನೂ ಹಲವಾರು ಕ್ರಮಗಳನ್ನು ನಾಡಿನಾದ್ಯಂತ ಕಾಣಬಹುದಾಗಿದೆ.

ಭೂತಗಳಿಗೆ ಹೆದರಿ ಅವನ್ನು ಆರಾಧಿಸುವ ಪದ್ಧತಿ ಪ್ರಪಂಚದ ಬಹಳಷಟಲು ಕಡೆಗಳಲ್ಲಿ ಕಂಡುಬುರತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆ ಇಂಥ ಒಂದು ವಿಶಿಷ್ಟ ಸಂಪ್ರದಾಯ. ತುಮಕೂರು ಹಾಸನ ಚಿತ್ರದುರ್ಗ ಜಿಲ್ಲೆಗಳಲ್ಲಿ ಭೂತಗಳನ್ನು ಚೋಮಗಳು ಎಂದು ಕರೆಯುತ್ತಾರೆ. ಅವು ಗ್ರಾಮದೇವತೆಗಳ ಸಿಬ್ಬಂದಿ ವರ್ಗದಂತಿವೆ. ಅವನ್ನು ತೃಪ್ತಿಪಡಿಸಲು ಬಲಿ ಮುಂತಾದವನ್ನು ಕೊಡುತ್ತಾರೆ. ಬೇತಾಳೇಶ್ವರನ ಗುಡಿಗಳು ಬಹಳ ಕಡೆ ಇದೆ. ದೊಡ್ಡಗದ್ದವಳ್ಳಿಯ ಬೇತಾಳದ ವಿಗ್ರಹವನ್ನು ಇಲ್ಲಿ ನೆನೆಯಬಹುದು. ತಮಿಳುನಾಡು ಹಾಗೂ ಕೇರಳಗಳಲ್ಲೂ ಭೂತರಾಧನೆಯ ಪದ್ಧತಿ ಉಳಿದುಬಂದಿದೆ. ಪ್ರತಿಯೊಂದು ನೈಸರ್ಗಿಕ ಘಟನೆಗಳೂ ಭೂತಶಕ್ತಿಯ ಅಭಿವ್ಯಕ್ತಿಯೆಂದು ಭಾವಿಸುವ ಆದಿವಾಸಿಗಳು ಬಹಳಷ್ಟು ಬಗೆಯ ಮನೋರೋಗಗಳನ್ನು ದೆವ್ವಗಳ ಕುತ್ತಿಗೆಗೆ ಕಟ್ಟಿಬಿಡುತ್ತಾರೆ. ಅಲ್ಲದೆ ವೈಚಾರಿಕ ಚಿಂತನೆಯೂ ಸಂಪೂರ್ಣವಾಗಿ ದೆವ್ವಗಳ ರಹಸ್ಯವನ್ನು ಬಯಲು ಮಾಡಲು ಸಾಧ್ಯವಾಗಿಲ್ಲ.

**ದೆಹಲಿಯ ಸುಲ್ತಾನರು :** ಹದಿಮೂರನೆಯ ಶತಮಾನದ ಕೊನೆಯ ಹೊತ್ತಿಗೆ ದೆಹಲಿಯ ಸುಲ್ತಾನರ ಆಳ್ವಿಕೆ ಉತ್ತರ ಭಾರತದಲ್ಲಿ ಸಂಘಟನೆಗೊಂಡು, ಖಿಲ್ಜಿ ಸಂತತಿಯವರು ಆಡಳಿತವನ್ನು ಆರಂಭಿಸಿದಮೇಲೆ ಅದರ ಪ್ರಾಬಲ್ಯ ವಿಂಧ್ಯಪರ್ವತಗಳನ್ನು ಹಾದು ದಕ್ಷಿಣದತ್ತ ಹಬ್ಬಲು ಪ್ರಾರಂಭವಾಯಿತು. ದಕ್ಷಿಣದ ಕೊಳೆತ ರಾಜಕೀಯ ಪರಿಸ್ಥಿತಿಗಳು ಇದಕ್ಕೆ ಅನುಕೂಲವಾಗಿದ್ದವು. ದೇವಗಿರಿಯ ಯಾದವರಿಗೂ ಮತ್ತು ಹೊಯ್ಸಳರಿಗೂ ತಿಕ್ಕಾಟ ನಡೆಯುತ್ತಿದ್ದು. ಅವರ ಮಧ್ಯೆ ದ್ವೇಷ, ಅಸೂಯೆಗಳು ತುಂಬಿತುಳುಕಾಡುತ್ತಿದ್ದವು. ಸಹಜವಾಗಿ ಈ ಆಕ್ರಮಣಶಾಲಿಗಳು ಇದನ್ನೇ ತಮ್ಮ ಬಂಡವಾಳವಾಗಿ ಉಪಯೋಗಿಸಿಕೊಂಡರು.

ದೆಹಲಿಯ ಸುಲ್ತಾನರಲ್ಲಿ ಕರ್ನಾಟಕದತ್ತ ಗಮನ ಹರಿಸಿದವರಲ್ಲಿ ಮೊದಲಿಗ ಅಲ್ಲಾಉದ್ದೀನ್ ಖಿಲ್ಜಿ. ಅವನು ಭಿಲ್ಸಾವನನ್ನು ಆಕ್ರಮಿಸಿದ್ದ ಸಂದರ್ಭದಲ್ಲಿ ಕರ್ನಾಟಕದ ರಾಜರ ಬಳಿ ಹೇರಳವಾದ ಐಶ್ವರ್ಯವಿದೆ ಎಂಬ ವಿಷಯವನ್ನು ಕೇಳಿದ್ದ. ಆಗ ದೆಹಲಿಯ ಸುಲ್ತಾನನಾಗಿದ್ದ

ಜಲಾಲುದ್ದೀನ್ ಖಿಲ್ಜಿ ತನ್ನ ಅಳಿಯ ಅಲಾಉದ್ದೀನನಿಗೆ ಮಾಳ್ವದ ವರೆಗೆ ಮಾತ್ರ ದಂಡೆತ್ತಿಹೋಗಲು ಅಪ್ಪಣೆ ಕೊಟ್ಟಿದ್ದರೂ ಅದಕ್ಕೆ ವಿರುದ್ಧವಾಗಿ ಅಲಾಉದ್ದೀನ್ ಇನ್ನೂ ಮುಂದೆ ಹೋಗಿ ಯಾದವರ ರಾಜಧಾನಿ ದೇವಗಿರಿಗೆ ಮುತ್ತಿಗೆ ಹಾಕಿದ (ಫೆಬ್ರವರಿ, 1296). ಅಲ್ಲಿನ ರಾಜ ರಾಮಚಂದ್ರನಿಗೆ ಅಲಾಉದ್ದೀನನ ಈ ದಂಡಯಾತ್ರೆ ಆಕಸ್ಮಿಕ ಘಟನೆಯಾಗಿತ್ತು. ಆಗ ದೇವಗಿರಿಯ ಸೈನ್ಯ ದೂರದ ಮತ್ತೊಂದು ಪ್ರದೇಶದಲ್ಲಿ ಕಾರ್ಯಾಚರಣೆ ಮಾಡುತ್ತಿತ್ತು. ಒಂದು ವಾರದ ವರೆಗೆ ಅಲಾಉದ್ದೀನ್ ದೇವಗಿರಿಯ ಕೋಟೆಗೆ ಮುತ್ತಿಗೆ ಹಾಕಿದ ಮೇಲೆ ರಾಮಚಂದ್ರ ಶಾಂತಿ ಒಪ್ಪಂದಕ್ಕೆ ಒಪ್ಪಿಕೊಳ್ಳಬೇಕಾಯಿತು. ಅಪಾರ ಐಶ್ವರ್ಯ, ಕುದುರೆಗಳು, ಆನೆಗಳು ಅಲಾಉದ್ದೀನನ ವಶವಾದವು. ರಾಮಚಂದ್ರ ತನ್ನ ಮಗಳನ್ನು ಅಲಾಉದ್ದೀನನಿಗೆ ಮದುವೆ ಮಾಡಿಕೊಟ್ಟ. ರಾಮಚಂದ್ರನ ಮಗ 3ನೆಯ ಸಿಂಘಣನಿಗೆ ಅಲಾಉದ್ದೀನ್ ದೇವಗಿರಿಯನ್ನು ಮುತ್ತಿದ ವಿಷಯ ತಿಳಿದು ಅವನು ತನ್ನ ಸೈನ್ಯದೊಡನೆ ಬಂದಾಗ, ಅವನ ತಂದೆ ಶತ್ರುವಿನ ಕೈಯಲ್ಲಿದ್ದುದನ್ನು ಕಂಡ. ಸಿಂಘಣ ಸಹ ಅಲಾಉದ್ದೀನನಿಗೆ ಮಣಿಯಬೇಕಾಯಿತು. ಅನಂತರ ಅಲಾಉದ್ದೀನ್ ರಾಮಚಂದ್ರನಿಗೆ ರಾಜ್ಯವನ್ನು ಹಿಂತಿರುಗಿಸಿದ. ಇಬ್ಬರೂ ಆಜೀವಪರ್ಯಂತ ಸ್ನೇಹಿತರಾಗಿ ಉಳಿಯುವ ಒಪ್ಪಂದಕ್ಕೆ ಬಂದರು.

ದೇವಗಿರಿಯಿಂದ ಲೂಟಿ ಹೊಡೆದುಕೊಂಡು ಹೋದ ಐಶ್ವರ್ಯವನ್ನು ಉಪಯೋಗಿಸಿಕೊಂಡು ಜಲಾಲುದ್ದೀನನನ್ನು ಕೊಲೆ ಮಾಡಿ ಅಲಾಉದ್ದೀನನೇ ಮುಂದೆ ದೆಹಲಿಯ ಸುಲ್ತಾನನಾದ. ಆದರೂ ಅವನ ಹಣದ ದಾಹ ಹಿಂಗಲಿಲ್ಲ. ಮತ್ತೆ ದಾಳಿ ಮಾಡಲು ಸನ್ನಾಹ ನಡೆಸಿದ.

1303-04ರಲ್ಲಿ ಬಂಗಾಳದ ಮಾರ್ಗವಾಗಿ ವಾರಂಗಲ್ಲಿನ ವಿರುದ್ಧ, ಮಲಿಕ್ ಫಕ್ರುದ್ದೀನ್ ಎಂಬ ದಂಡನಾಯಕನ ನೇತೃತ್ವದಲ್ಲಿ ಕಳುಹಿಸಿಕೊಟ್ಟ ಅಲಾಉದ್ದೀನನ ಸೈನ್ಯಕ್ಕೆ ತೆಲುಗರಿಂದ ಅಪಾರವಾದ ನಷ್ಟವಾದ ಸಂದರ್ಭದಲ್ಲಿ, ಕರ್ನಾಟಕದ ದೊರೆಗಳಿಗೆ ಸುಲ್ತಾನನ ಬಗ್ಗೆ ಇದ್ದ ಭೀತಿ ಸ್ವಲ್ಪ ಕಡಿಮೆಯಾಗುವಂತಾಯಿತು. ಈ ಘಟನೆಯಿಂದ ಸ್ಫೂರ್ತಿಪಡೆದ ದೇವಗಿರಿಯ ರಾಮಚಂದ್ರದೇವನ ಮಗ ಸಿಂಘಣ ತನ್ನ ತಂದೆ ಅಲಾಉದ್ದೀನನಿಗೆ ಕೊಡುವುದಾಗಿ ಒಪ್ಪಿದ್ದ ಕಪ್ಪಕಾಣಿಕೆಯನ್ನು ಕೊಡಲು ನಿರಾಕರಿಸಿದುದೇ ಅಲ್ಲದೆ, ಗುಜರಾತಿನ ರಾಜ ಮತ್ತು ಆತನ ಮಗಳಿಗೆ ಆಶ್ರಯ ಕೊಡುವ ದಿಟ್ಟತನವನ್ನು ತೋರಿಸಿದ. ಆದರೆ ರಾಮಚಂದ್ರದೇವ ಈ ಕ್ರಮಕ್ಕೆ ಬೆಂಬಲಕೊಡಲಿಲ್ಲ. 1307ರಲ್ಲಿ ಅಲಾಉದ್ದೀನ್ ತನ್ನ ಆಪ್ತಸೇವಕ ಹಾಗೂ ಗುಲಾಮನಾದ ಮಲಿಕ್ ಕಾಫೂರ್‌ನನ್ನು ದೇವಗಿರಿಗೆ ಕಳುಹಿಸಿಕೊಟ್ಟ. ದೇವಗಿರಿಯ ಹತ್ತಿರ ನಡೆದ ಯುದ್ಧದಲ್ಲಿ ಸಿಂಘಣ ಸೋತು ಓಡಿಹೋದ. ಮಲಿಕ್ ಕಾಫೂರ್ ದೇವಗಿರಿಯನ್ನು ಲೂಟಿಮಾಡಿದ. ತನ್ನ ಸ್ವಾಮಿಯ ಹೆಸರಿನಲ್ಲಿ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡು ರಾಮಚಂದ್ರನನ್ನು ಅವನ ಕುಟುಂಬ ಸಮೇತ ದೆಹಲಿಗೆ ಖೈದಿಯಾಗಿ ಕರೆದುಕೊಂಡು ಹೋದ. ಅಲಾಉದ್ದೀನ್ ಖಿಲ್ಜಿ ರಾಮಚಂದ್ರನನ್ನು ಮರ್ಯಾದೆಯಿಂದ ನೋಡಿಕೊಂಡ. ಸುಮಾರು ಆರು ತಿಂಗಳುಗಳ ಕಾಲ ದೆಹಲಿಯಲ್ಲಿ ಅವನನ್ನು ಅತಿಥಿಯಾಗಿ ಇಟ್ಟುಕೊಂಡು ಅನಂತರ ಪುರಸ್ಕರಿಸಿ ವಾಪಸ್ಸು ದೇವಗಿರಿಗೆ ಕಳುಹಿಸಿಕೊಟ್ಟ. ರಾಮಚಂದ್ರ ಧನಕನಕ ವಸ್ತು ವಾಹನಾದಿಗಳನ್ನು ಅಲಾಉದ್ದೀನನಿಂದ ಸ್ವೀಕರಿಸಿದುದೇ ಅಲ್ಲದೆ, ತನ್ನ ರಾಜ್ಯವನ್ನೂ ಮರಳಿ ಪಡೆದ. ಅಲಾಉದ್ದೀನ್ ಗುಜರಾತಿನ ಕೆಲವು ಪ್ರದೇಶಗಳನ್ನೂ ಇವನಿಗೆ ಬಿಟ್ಟುಕೊಟ್ಟ. ಅಲಾಉದ್ದೀನನ ಈ ಔದಾರ್ಯದ ನೀತಿ ಅವನಿಗೆ ಫಲ ತಂದು ಕೊಟ್ಟಿತು. ತನ್ನ ಅವಸಾನದವರೆಗೂ ರಾಮಚಂದ್ರ ಅಲಾಉದ್ದೀನನಿಗೆ ಬೆಂಬಲಿಗನಾಗಿ ನಿಂತ. ದಕ್ಷಿಣದ ದಂಡಯಾತ್ರೆಗಳಲ್ಲಿ ರಾಮಚಂದ್ರನ ಸಹಾಯ ಅಲಾಉದ್ದೀನನಿಗೆ ಬಹಳ ಅವಶ್ಯವಾಗಿದ್ದಿತು. ಅದರಲ್ಲೂ ಕರ್ನಾಟಕದ ಹೊಯ್ಸಳರ ವಿರುದ್ಧ ದಂಡೆತ್ತಿಬಂದ ಸಂದರ್ಭದಲ್ಲಿ ಈ ಸ್ನೇಹ ಅಲಾಉದ್ದೀನನಿಗೆ ವರವಾಗಿ ಬಂತು.

1309ರಲ್ಲಿ ವಾರಂಗಲ್ಲಿನ ವಿರುದ್ಧ ಮತ್ತೊಂದು ದಂಡಯಾತ್ರೆ ನಡೆಸಿ ಜಯಶೀಲನಾದ ಮೇಲೆ ಅಲಾಉದ್ದೀನನ ಕಣ್ಣು ಹೊಯ್ಸಳರ ಮತ್ತು ಪಾಂಡ್ಯರ ಮೇಲೆ ಬಿತ್ತು. 1310ರಲ್ಲಿ ಮಲಿಕ್ ಕಾಫೂರ್ ಮತ್ತು ಖ್ವಾಜಾ ಹಾಜಿ ಇವರ ನಾಯಕತ್ವದಲ್ಲಿ ಒಂದು ದೊಡ್ಡ ಸೇನೆಯನ್ನು ಕಳುಹಿಸಿಕೊಡಲಾಯಿತು. ಹೊಯ್ಸಳರ ವಿರುದ್ಧ ನಡೆದ ಈ ದಂಡಯಾತ್ರೆಗೆ ದೇವಗಿರಿಯೇ ಕೇಂದ್ರವಾಯಿತು. ಅಲಾಉದ್ದೀನನಿಗೆ ನಿಷ್ಠೆಯಿಂದಿದ್ದ ರಾಮಚಂದ್ರ ಸಂತೋಷದಿಂದಲೇ ಈ ದಂಡಯಾತ್ರೆಗೆ ಸಹಾಯ ಮಾಡಿದ. ಮೂರನೆಯ ಬಲ್ಲಾಳ ಪಾಂಡ್ಯರಾಜ್ಯಕ್ಕೆ ಹೋದ ಸಂದರ್ಭವನ್ನು ಉಪಯೋಗಿಸಿಕೊಂಡು ಮಲಿಕ್ ಕಾಫೂರ್ ದೋರಸಮುದ್ರದ ಕಡೆ ಹೊರಟ. ದೇವಗಿರಿಯಿಂದ ದೋರಸಮುದ್ರದ ವರೆಗೂ ಸಿಕ್ಕಿದ ಸ್ಥಳಗಳನ್ನೆಲ್ಲಾ ಲೂಟಿ ಮಾಡುತ್ತ, ನಾಶ ಮಾಡುತ್ತ ನಡೆದ. ಫೆಬ್ರವರಿ 26, 1311ರಂದು ದೋರಸಮುದ್ರವನ್ನು ಮುತ್ತಿದ. ಅಲ್ಲಿನ ಐಶ್ವರ್ಯವನ್ನು ಸೂರೆ ಮಾಡಿದ. ತನ್ನ ರಾಜಧಾನಿ ಮುಸ್ಲಿಮರ ದಾಳಿಗೆ ತುತ್ತಾದ ವಿಷಯ ತಿಳಿದು ತಕ್ಷಣ ಪಾಂಡ್ಯದೇಶದಿಂದ ಬಲ್ಲಾಳ ಓಡಿಬಂದ. ಮುಸಲ್ಮಾನರ ಸೈನ್ಯದ ಮುಂದೆ ತನ್ನವರ ಪಾಡು ನೆಟ್ಟಗಾಗದೆಂದು ಯೋಚಿಸಿ ಮೂರನೆಯ ಬಲ್ಲಾಳ ಒಪ್ಪಂದ ಮಾಡಿಕೊಳ್ಳಲು ಯೋಚಿಸಿದ. ಆದರೆ ಅವನ ಮಂತ್ರಿಗಳು, ದಂಡನಾಯಕರು ಅಲಾಉದ್ದೀನನ ಸೈನ್ಯದ ವಿರುದ್ಧ ಹೋರಾಟ ನಡೆಸಬೇಕೆಂದು ಅಭಿಪ್ರಾಯಪಟ್ಟರು. ಸಾಕಷ್ಟು ಸಿದ್ಧತೆ ನಡೆಸದೆ ಇದ್ದುದರಿಂದಲೂ ಹಾಗೂ ಮುಸ್ಲಿಮರ ಸೈನ್ಯಬಲ ಹೆಚ್ಚಿದ್ದರಿಂದಲೂ ಯುದ್ಧಮಾಡುವುದು ಮೂರ್ಖತನವೆಂದು ಗ್ರಹಿಸಿ ಬಲ್ಲಾಳ ಶಾಂತಿ ಒಪ್ಪಂದ ಮಾಡಿಕೊಳ್ಳಲು ನಿಶ್ಚಯಿಸಿದ. ಇದರಿಂದ ಬಂದಿದ್ದ ಗಂಡಾಂತರ ಪರಿಹಾರವಾದಂತಾಯಿತು ಹಾಗೂ ಹೆಚ್ಚಿನ ನಷ್ಟ ಸಾವುನೋವುಗಳನ್ನು ತಪ್ಪಿಸಿದಂತಾಯಿತು. ಮೂರನೆಯ ಬಲ್ಲಾಳ ಅಲಾಉದ್ದೀನನಿಗೆ ಕಪ್ಪಕಾಣಿಕೆಗಳನ್ನು ಅರ್ಪಿಸಿ ಸಾಮಂತನಾಗಿ ಇರಲು ಒಪ್ಪಿದ. ತನ್ನ ಐಶ್ವರ್ಯ ಆನೆ ಕುದುರೆಗಳನ್ನು ಸುಲ್ತಾನನಿಗೆ ಕೊಟ್ಟ. ಸುಮಾರು ಹದಿನೈದು ದಿವಸಗಳ ಕಾಲ ಮಲಿಕ್ ಕಾಫೂರ್ ದೋರಸಮುದ್ರದಲ್ಲಿ ತಂಗಿದ್ದ. ಅನಂತರ ಅವನು ಪಾಂಡ್ಯ ರಾಜ್ಯದ ಮೇಲೆ ದಂಡೆತ್ತಿಹೋದ. ಮೂರನೆಯ ಬಲ್ಲಾಳನೂ ಅವನಿಗೆ ಸಹಾಯಕನಾಗಿ ನಡೆದ. ಅಕ್ಟೋಬರ್ 1311ರಲ್ಲಿ ದೆಹಲಿಗೆ ವಾಪಸ್ಸು ಹೋಗುವಾಗ ಮಲಿಕ್ ಕಾಫೂರ್ ತನ್ನೊಡನೆ ಮೂರನೆಯ ಬಲ್ಲಾಳನ ಮಗನನ್ನು ಕರೆದುಕೊಂಡು ಹೋಗಿದ್ದ. ಮೂರನೆಯ ಬಲ್ಲಾಳನ ಮಗನನ್ನು ಅಲಾಉದ್ದೀನನಿಗೆ ಪರಿಚಯ ಮಾಡಿಕೊಡುತ್ತ, ಅವನ ತಂದೆಯಿಂದ ತನ್ನ ದಂಡಯಾತ್ರೆಯ ಕಾಲದಲ್ಲಾದ ಸಹಾಯವನ್ನು ವಿವರಿಸಿದ. ಬಲ್ಲಾಳನ ಮಗನನ್ನು ಗೌರವದಿಂದ ನೋಡಿಕೊಂಡ ಅಲಾಉದ್ದೀನ್ ಅವನನ್ನು ದೋರಸಮುದ್ರಕ್ಕೆ ವಾಪಸ್ಸು ಕಳುಹಿಸಿಕೊಟ್ಟ. ಬಲ್ಲಾಳನಿಗೆ ಅವನ ರಾಜ್ಯವನ್ನು ಹಿಂತಿರುಗಿಸಿದ.

1312ರಲ್ಲಿ ರಾಮಚಂದ್ರ ಮರಣಹೊಂದಿದ ಮೇಲೆ ಅವನ ಮಗ ಸಿಂಘಣ ಸಿಂಹಾಸನವನ್ನೇರಿದ. ದೆಹಲಿಗೆ ತಲೆಬಾಗಿ ನಡೆಯಲು ಅಸಮ್ಮತಿಸಿದಾಗ, ಅವನನ್ನು ಶಿಕ್ಷಿಸಿ ಹದಕ್ಕೆ ತರಲು ಮಲಿಕ್ ಕಾಫೂರನನ್ನು ಮತ್ತೆ ಕಳುಹಿಸಿಕೊಡಲಾಯಿತು. ಅವನು ಬರುತ್ತಿದ್ದ ಹಾಗೆ ಸಿಂಘಣ ಓಡಿಹೋದ. ಮಲಿಕ್ ಕಾಫೂರ್ ಅಲ್ಲಿಯೇ ನಿಂತು ರಾಜ್ಯಾಡಳಿತವನ್ನು ಪುನಃ ಸಂಘಟಿಸಿದ. ದೇವಗಿರಿಯ ಸರದಾರರ ಸಲಹೆ ತೆಗೆದುಕೊಂಡ. ಆದರೆ ಯಾದವರ ಸಾಮಂತನಾಗಿದ್ದ ಸಿಂಗೆಯನಾಯಕ ಈ ಹೊಸ ಆಡಳಿತವನ್ನು ಒಪ್ಪಿಕೊಳ್ಳಲಿಲ್ಲ. ಕರ್ನಾಟಕದ ಇಂದಿನ ಬಳ್ಳಾರಿ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳನ್ನೊಳಗೊಂಡಂತೆ ಇರುವ ಭಾಗದಲ್ಲಿ ತನ್ನದೇ ಸ್ವತಂತ್ರ ರಾಜ್ಯವನ್ನು ಅವನು ಸ್ಥಾಪಿಸಿದ. ಕಂಪಿಲಿ, ಕುಮ್ಮಟ ಮತ್ತು ಹೊಸದುರ್ಗ (ಆನೆಗೊಂದಿ) ಎಂಬಲ್ಲಿ ಕೋಟೆಗಳನ್ನು ಕಟ್ಟಿದ. ಮಲಿಕ್ ಕಾಫೂರ್ ಕಂಪಿಲಿಯ ವಿರುದ್ಧ ದಾಳಿ ನಡೆಸಲು ಯತ್ನಿಸಿದ. ಅದು ಕೈಗೂಡುವ ಮೊದಲೇ ದೆಹಲಿಯಿಂದ ಕರೆ ಬಂದಿದ್ದರಿಂದ ವಾಪಸು ಹೋಗಬೇಕಾಯಿತು.

ಐಶ್ವರ್ಯವನ್ನು ಕೊಳ್ಳೆಹೊಡೆಯುವುದೇ ಅಲಾಉದ್ದೀನನ ದಕ್ಷಿಣ ದಂಡಯಾತ್ರೆಗಳ ಉದ್ದೇಶವಾಗಿತ್ತು. ಅವನ ಈ ಯತ್ನ ಕರ್ನಾಟಕದಲ್ಲಿ ಸಫಲವಾಯಿತು. ಮುಸ್ಲಿಂ ಇತಿಹಾಸಕಾರರಾದ ಬರಾನಿ, ಇಸಾಮಿ ಮತ್ತು

ಫೆರಿಸ್ತ ಈ ದಂಡಯಾತ್ರೆಗಳ ವಿಷಯವನ್ನು ಬಹು ವಿಸ್ತಾರವಾಗಿ ವಿವರಿಸಿದ್ದಾರೆ. ಕರ್ನಾಟಕವೂ ಸೇರಿದಂತೆ, ದಕ್ಷಿಣದಲ್ಲಿ ಅಲಾಉದ್ದೀನನು ತನ್ನ ದಂಡಯಾತ್ರೆಗಳಿಂದ 600 ಮಣ ಚಿನ್ನ, 7 ಮಣ ಮುತ್ತು, 2 ಮಣ ವಜ್ರವೈಡೂರ್ಯಗಳು, 1,000 ಮಣ ಬೆಳ್ಳಿ, 4,000 ರೇಷ್ಮೆ ಮೊದಲಾದ ವಸ್ತ್ರಗಳನ್ನು ಕೊಳ್ಳೆಹೊಡೆದನೆಂದು ಫೆರಿಸ್ತ ಹೇಳುತ್ತಾನೆ (ಬಿ.ಎಸ್.ಎ., ಕೆ.ವಿ.ಎಸ್.)

ಅಲಾಉದ್ದೀನ್ ಖಿಲ್ಜಿಯ ಮರಣಾನಂತರ ಸಂಭವಿಸಿದ ರಾಜಕೀಯ ಅಲ್ಲೋಲ್ಲ ಕಲ್ಲೋಲದಲ್ಲಿ. ದೇವಗಿರಿ ದೆಹಲಿಯಿಂದ ಬೇರ್ಪಟ್ಟು ಸ್ವತಂತ್ರವಾಯಿತು. ಆದರೆ ತಕ್ಷಣವೇ ಮುಬಾರಕ್ ಷಾ ಖಿಲ್ಜಿ ಶಾಂತಿಯನ್ನು ಏರ್ಪಡಿಸಿ, ದಕ್ಷಿಣದತ್ತ ನುಗ್ಗಿ, ತನ್ನ ಪ್ರಭುತ್ವವನ್ನು ಸ್ಥಾಪಿಸಲು ಯತ್ನಿಸಿದ. ಆ ಹೊತ್ತಿಗೆ ದೇವಗಿರಿಯಲ್ಲಿ ಪ್ರಬಲನಾಗಿದ್ದ ಹರಪಾಲದೇವನನ್ನು ಅವನು ಸೋಲಿಸಿ ಕೊಂದು, ಯಾದವ ಮನೆತನದ ಆಳ್ವಿಕೆಯನ್ನು ಕೊನೆಗಾಣಿಸಿ, ದೆಹಲಿ ಸಾಮ್ರಾಜ್ಯಕ್ಕೆ ದೇವಗಿರಿಯನ್ನು ಸೇರಿಸಿದ. ಆಡಳಿತವನ್ನು ಪುನರ್ ರಚಿಸಿದ. ಮಲಿಕ್ ಮಾಸ್‍ಲಖಿ ಎಂಬುವನನ್ನು ಪ್ರತಿನಿಧಿಯಾಗಿ ನೇಮಿಸಿದ. ಕೋಟೆಗಳನ್ನು ಕಟ್ಟಿ ಭದ್ರತೆ ಶಿಸ್ತುಗಳನ್ನು ಏರ್ಪಡಿಸಿದ. ಹೊಯ್ಸಳರ ರಾಜಧಾನಿಯಲ್ಲೂ ಒಂದು ಸೈನ್ಯವನ್ನು ಇಡುವ ಅವನ ಪ್ರಯತ್ನ ಸಫಲವಾಗಲಿಲ್ಲ. ಒಟ್ಟಿನಲ್ಲಿ ಇದು ಅಲಾಉದ್ದೀನ್ ಅನುಸರಿಸಿದ ನೀತಿಗಿಂತಲೂ ಭಿನ್ನವಾಗಿತ್ತು.

1320ರಲ್ಲಿ ಅಧಿಕಾರಕ್ಕೆ ಬಂದ ತುಗಲಕರು ಈ ನೀತಿಯನ್ನು ಮತ್ತಷ್ಟು ದೂರ ಕೊಂಡೊಯ್ದರು. ದೆಹಲಿಯ ಪ್ರಾಬಲ್ಯವನ್ನು ಬಲಪಡಿಸುವ ಸಲುವಾಗಿ, ರಾಜಕುಮಾರ ಉಲುಗ್‍ಖಾನ್‍ನನ್ನು 1323ರಲ್ಲಿ ದಖನ್ನಿಗೆ ಕಳುಹಿಸಿಕೊಂಡಲಾಯಿತು. ಅವನು ಕಾಕತೀಯರನ್ನು ಸದೆಬಡಿದು, ಅವರ ರಾಜ್ಯವನ್ನು ವಶಪಡಿಸಿಕೊಂಡ. ಈ ಮಧ್ಯದಲ್ಲೇ ಬಿದರೆಯನ್ನೂ ಅವನು ವಶಪಡಡಿಸಿಕೊಂಡ. ಮಾಬರ್ ಪ್ರಾಂತ್ಯದ ಮೇಲೆ ದೆಹಲಿಯ ಪ್ರಾಬಲ್ಯವನ್ನು ಸ್ಥಾಪಿಸಲು ಒಬ್ಬ ರಾಜ್ಯಪಾಲನನ್ನು ನೇಮಿಸಲಾಯಿತು. ಆ ಕಾಲಕ್ಕಾಗಲೇ ದಕ್ಷಿಣ ಭಾರತದ ಹೆಚ್ಚಿನ ಪ್ರದೇಶ ದೆಹಲಿ ಸಾಮ್ರಾಜ್ಯಕ್ಕೆ ಸೇರಿಹೋಗಿತ್ತು. ಆದರೆ ಕರ್ನಾಟಕದಲ್ಲಿ ಕಂಪಿಲಿ ಮತ್ತು ದೋರಸಮುದ್ರಗಳು ಸ್ವತಂತ್ರವಾಗಿದ್ದವು. ಕಂಪಿಲದೇವ ಕರ್ನಾಟಕದಲ್ಲಿ ಮುಸಲ್ಮಾನರ ವಿರೋಧಿಯಾಗಿದ್ದ. ಹೊಯ್ಸಳರೊಡನೆ ಅವನು ನಡೆಸುತ್ತಿದ್ದ ಕದನಗಳಿಂದ ಅವನಿಗೆ ತೊಂದರೆಯಾಗುತ್ತಿತ್ತಾದರೂ ಬಳ್ಳಾರಿಯ ಸುತ್ತಮುತ್ತಣ ಪ್ರದೇಶದಲ್ಲಿ ತನ್ನ ಚಿಕ್ಕದಾದ ಹಾಗೂ ಪ್ರಬಲವಾದ ರಾಜ್ಯವನ್ನು ಅವನು ಕಟ್ಟಿದ. ದೆಹಲಿಯ ಸುಲ್ತಾನನಿಗೆ ಕಪ್ಪ ಕೊಡಲು ನಿರಾಕರಿಸಿ, ಬಹಾಉದ್ದೀನ್ ಗುರ್ಷಾಸ್ಪ್‍ನೊಡನೆ ಸ್ನೇಹಸಂಬಂಧಗಳನ್ನು ಏರ್ಪಡಿಸಲು ಪ್ರಯತ್ನಿಸಿದ. ಭಾರತದಲ್ಲಿ ಆಡಳಿತ ಏಕತೆಯನ್ನುಂಟುಮಾಡುವ ಆಲೋಚನೆಯಲ್ಲಿದ್ದ ಮಹಮ್ಮದ್-ಬಿನ್- ತುಗಲಕ್ ಕರ್ನಾಟಕದ ವ್ಯವಹಾರಗಳಲ್ಲಿ ಹೆಚ್ಚು ಹೆಚ್ಚಾಗಿ ಪ್ರವೇಶಿಸುವಂತಾಯಿತು. ತನ್ನ ಸಂಬಂಧಿಯೂ ಸಾಗರದ ಗೌರ್ನರ್‌ನೂ ಆಗಿದ್ದ ಬಹಾಉದ್ದೀನ್ ಗುರ್ಷಾಸ್ಪ್‍ನನನ್ನು ಗುಲ್ಬರ್ಗದ ಸುತ್ತಮುತ್ತಲಿನ ಪ್ರದೇಶಕ್ಕೆ ರಾಜ್ಯಪಾಲನನ್ನಾಗಿ ನೇಮಕ ಮಾಡಿದ್ದರ ಅವನ ಉದ್ದೇಶವೆಂದರೆ, ದೆಹಲಿ ಸಾಮ್ರಾಜ್ಯದ ನೇರವಾದ ಹತೋಟಿಗೆ ಕರ್ನಾಟಕವನ್ನು ಒಳಪಡಿಸಬೇಕೆಂಬುದೇ ಆಗಿತ್ತು. ಆದರೆ ಅವನು ಕಂಪಿಲದೇವನೊಡಗೂಡಿ ದಂಗೆ ಎದ್ದ. ಇದರಿಂದ ಸುಲ್ತಾನ ದಕ್ಷಿಣದ ಕಡೆ ಸೈನ್ಯಸಮೇತನಾಗಿ ನುಗ್ಗಿ ದೇವಗಿರಿಯ ಬಳಿ ಬೀಡುಬಿಟ್ಟ. ಗುರ್ಷಾಸ್ಪ್ ವೀರಾವೇಶದಿಂದ ದೆಹಲಿ ಸೈನ್ಯದ ವಿರುದ್ಧ ಹೋರಾಡಿದರೂ ತನ್ನ ಕಡೆಯವನೊಬ್ಬ ದೆಹಲಿ ಕಡೆ ಸೇರಿಕೊಂಡಿದ್ದರಿಂದ, ಅವನ ಹೋರಾಟ ವಿಫಲವಾಯಿತು. ಅವನು ತನ್ನ ಕುಟುಂಬದೊಡನೆ ಕಂಪಿಲದೇವನ ಆಶ್ರಯವನ್ನು ಪಡೆದ. ಧೀಮಂತನಾಯಕನಾಗಿದ್ದ ಕಂಪಿಲ ಅವನಿಗೆ ಬೇಕಾದ ಆಶ್ರಯವನ್ನು ನೀಡಿದ. ಇದರಿಂದ ಅವನೇ ಅವನ ನಾಶಕ್ಕೆ ಅಡಿಪಾಯ ಹಾಕಿಕೊಂಡಂತಾಯಿತು. ಇವರ ವಿರುದ್ಧವಾಗಿ ಮಹಮ್ಮದ್-ಬಿನ್-ತುಗಲಕ್ ಮೂರು ಬಾರಿ ಸೈನ್ಯವನ್ನು ಕಳುಹಿಸಿಕೊಟ್ಟ. ಈ ದಾಳಿಗಳನ್ನು ತಡೆಯಲಾರದೆ ಅವರು ಕುಮ್ಮಟಕ್ಕೆ ಓಡಿಹೋದರು. ಸುಲ್ತಾನನ ಸೇನೆ ಅದನ್ನೂ ಮುತ್ತಿತು. ಗುರ್ಷಾಸ್ಪ್ ಅಲ್ಲಿಂದ ಹೊಸದುರ್ಗಕ್ಕೆ (ಆನೆಗೊಂದಿ) ಓಡಿಹೋದಾಗಲೂ ಸುಲ್ತಾನನ ಸೇನೆ ಅವನನ್ನು ಬೆನ್ನಟ್ಟಿ ಬಂತು. ಒಂದು ತಿಂಗಳು ಕಾಲ ಹೊಸದುರ್ಗ ಕೋಟೆಯನ್ನು ರಕ್ಷಿಸಲು ಹೋರಾಟ ನಡೆಸಿದರೂ ಸಫಲವಾಗದೆ ಕೈಬಿಟ್ಟ. ಕಂಪಿಲದೇವ ಗುರ್ಷಾಸ್ಪ್‍ನನನ್ನು ಮೂರನೆಯ ಬಲ್ಲಾಳನ ಆಶ್ರಯಕ್ಕೆ ಕಳುಹಿಸಿಕೊಟ್ಟು, ತನ್ನ ಎಲ್ಲಾ ಐಶ್ವರ್ಯವನ್ನೂ ಹೆಂಡತಿಯರನ್ನೂ ಮತ್ತು ಹೆಣ್ಣುಮಕ್ಕಳನ್ನೂ ಬೆಂಕಿಗೆ ತಳ್ಳಿ, ತಾನು ಮಾತ್ರ ಕೊನೆಯವರೆಗೂ ರಣರಂಗದಲ್ಲಿ ಹೋರಾಡುತ್ತ ಮಡಿದ. ಅವನ ಹನ್ನೊಂದು ಮಂದಿ ಗಂಡು ಮಕ್ಕಳನ್ನು ಸೆರೆಹಿಡಿದು ಸುಲ್ತಾನನ ಬಳಿ ಕರೆದುಕೊಂಡು ಹೋದಾಗ, ಅವನು ಅವರ ವಂಶವನ್ನು ಗಣನೆಗೆ ತಂದುಕೊಂಡು, ಅವರನ್ನು ಒಳ್ಳೆಯ ಮರ್ಯಾದೆಯಲ್ಲಿ ನಡೆಸಿಕೊಂಡ. ಅವರ ರಾಜ್ಯವನ್ನು ವಶಪಡಿಸಿಕೊಂಡು, ಮಲಿಕ್ ನಾಯಿಬ್ ಎಂಬುವನನ್ನು ಅದರ ಆಡಳಿತಾಧಿಕಾರಿಯಾಗಿ ನೇಮಿಸಿದ.

ದೆಹಲಿ ಸೇನೆ ಹೊಯ್ಸಳರ ರಾಜಧಾನಿ ದೋರಸಮುದ್ರವನ್ನು ಮುತ್ತಿದಾಗ, ಈ ಹಿಂದೆಯೇ ಕಠಿಣ ಅನುಭವದ ರುಚಿಯನ್ನು ಅನುಭವಿಸಿದ ಮೂರನೆಯ ಬಲ್ಲಾಳ, ತನ್ನ ಆಶ್ರಯದಲ್ಲಿದ್ದ ಗುರ್ಷಾಸ್ಪ್‍ನನ್ನು ಸುಲ್ತಾನನಿಗೆ ಒಪ್ಪಿಸಿದ. ಗುರ್ಷಾಸ್ಪ್‍ನನ್ನು ಬಿಟ್ಟುಕೊಟ್ಟರೂ ಬಲ್ಲಾಳ ತನ್ನ ರಾಜ್ಯದ ಅನೇಕ ಭಾಗಗಳನ್ನು ಕಳೆದುಕೊಳ್ಳಬೇಕಾಯಿತು.

ಗುರ್ಷಾಸ್ಪ್‍ನ ಪ್ರಕರಣದಿಂದ ಸುಲ್ತಾನ ಸಾಮ್ರಾಜ್ಯದ ರಾಜಧಾನಿ ಕೇಂದ್ರ ಭಾಗದಲ್ಲಿರಬೇಕಾದ ಆವಶ್ಯಕತೆಯನ್ನು ಮನಗಂಡು ದೇವಗಿರಿಗೆ ಅದನ್ನು ಬದಲಾಯಿಸಿದ. ದೇವಗಿರಿ, ತೆಲಂಗಾಣ, ಕಂಪಿಲಿ, ದೋರಸಮುದ್ರ ಮತ್ತು ಮಾಬರ್‌ಗಳೆಂಬ ಐದು ಪ್ರಾಂತ್ಯಗಳನ್ನು ದಕ್ಷಿಣದಲ್ಲಿ ರಚಿಸಿ, ಅವುಗಳ ಆಡಳಿತವನ್ನು ಸಾದಾ ಅಮೀರ್‌ರೆಂಬ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ. ನಾಯಿಬ್ ಎಂಬ ಗೌರ್ನರ್‌ಗಳನ್ನು ಪ್ರತಿ ಪ್ರಾಂತ್ಯದ ಮೇಲೂ ನೇಮಿಸಿದ. ಕೊತ್ವಾಲನೆಂಬ ಅಧಿಕಾರಿಯೂ ಇದ್ದ.

ದೆಹಲಿ ಸುಲ್ತಾನರ ಕರ್ನಾಟಕದ ಮೇಲಿನ ದಾಳಿ ಅಷ್ಟೇನೂ ಮಹತ್ವಪೂರ್ಣವಾಗಿರಲಿಲ್ಲ. 30 ವರ್ಷಗಳ ಕಾಲದ ಅವಧಿಯಲ್ಲಿ ಅವರು ಬಿಟ್ಟು ಬಿಟ್ಟು ದಾಳಿ ನಡೆಸಿದರು. ಮಹಮ್ಮದ್-ಬಿನ್-ತುಗಲಕ್ ಮಾತ್ರ ಒಂದು ದಶಕದಷ್ಟು ಕಾಲ (1324-35) ಕರ್ನಾಟಕದ ಕೆಲವು ಭಾಗಗಳನ್ನು ತನ್ನ ಬಿಗಿಯಾದ ಹತೋಟಿಯಲ್ಲಿಟ್ಟುಕೊಂಡ. ಆದರೆ ಅವನು ಉತ್ತರದ ಕಡೆ ಹೊರಟ ತಕ್ಷಣ ದಕ್ಷಿಣದಲ್ಲಿ ದಂಗೆಗಳು ನಡೆದವು. ಹರಿಹರ ಮತ್ತು ಬುಕ್ಕ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಒಂದು ದಶಕದ ಅನಂತರ ಬಹಮನೀ ರಾಜ್ಯ ತಲೆ ಎತ್ತಿತು. ಕರ್ನಾಟಕವನ್ನು ಉತ್ತರದೊಡನೆ ಸಂಪರ್ಕಿಸಿದ್ದು ಈ ದಾಳಿಗಳ ಒಂದು ಒಳ್ಳೆಯ ಪರಿಣಾಮವೆನ್ನಬಹುದು. ರಾಜಕೀಯವಾಗಿ ಕರ್ನಾಟಕವನ್ನು ನಿಯಂತ್ರಿಸುವ ಯತ್ನ ಒಂದು ತಾತ್ಕಾಲಿಕ ಘಟ್ಟವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ಈ ದಾಳಿಗಳು ಪರಸ್ಪರ ವಿನಿಮಯಕ್ಕೆ ಅವಕಾಶವನ್ನುಂಟುಮಾಡಿದವು. ಭಾಷೆ ಸಂಪ್ರದಾಯ ಆಚಾರ-ವಿಚಾರ ಕಲೆ ಸಾಹಿತ್ಯ ಕ್ಷೇತ್ರಗಳಲ್ಲಿ ಪರಸ್ಪರ ಗೌರವದ ಭಾವನೆಗಳು, ಬೆಳೆದು ಬಂದವು. ಅಮೀರ್ ಖುಸ್ರು ಇದಕ್ಕೆ ಒಳ್ಳೆಯ ಉದಾಹರಣೆ. ಅವನೊಬ್ಬ ಕವಿಯೂ ಸಂಗೀತಗಾರನೂ ಆಗಿದ್ದು, ದೇವಗಿರಿಯಲ್ಲಿ ಕರ್ನಾಟಕ ಸಂಗೀತವನ್ನು ಕೇಳಿ ಆನಂದಿಸಿ, ಅದರ ಕೆಲವು ರಾಗಗಳನ್ನು ಹಿಂದುಸ್ಥಾನೀ ಸಂಗೀತಕ್ಕೆ ಅಳವಡಿಸಿದ. ವಾಸ್ತುಶಿಲ್ಪದಲ್ಲಿ ಬಹಮನೀ ಸುಲ್ತಾನರು ತುಗಲಕ್ ಸಂಪ್ರದಾಯವನ್ನು ಅನುಸರಿಸಿದರು. ಇದನ್ನು ಅವರ ಗೋರಿ ಮೊದಲಾದ ಕಟ್ಟಡಗಳಲ್ಲಿ ನೋಡಬಹುದು. ಪಂಡಿತರು, ಕಲಾಭಿಮಾನಿಗಳು, ಆಡಳಿತಪಟುಗಳು, ಸಂತರು ದೆಹಲಿಯಿಂದ ಕರ್ನಾಟಕಕ್ಕೆ ಬಂದರು. ಇವರೆಲ್ಲ ಕರ್ನಾಟಕದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಪರಿಣಾಮ ಬೀರಿದರು. ಚಿಸ್ತಿ ಮತ್ತು ಸುಹರ್‌ವಾದಿ ಪಂಥ'ದ ಸೂಫಿ ಸಂತರು ತಮ್ಮ ಶಿಷ್ಯರ ಜೀವನದಿಂದ ಕರ್ನಾಟಕದ ಜನತೆಯನ್ನು ಆಕರ್ಷಿಸಿದರು. ಹಜರತ್ ಖ್ವಾಜಾ ಬಂದೇ ನವಾಜ್ ಗೆಸು ದರಾಜ್ ಎಂಬ ಜನಪ್ರಿಯ ಕರ್ನಾಟಕದ ಸಂತ

ಆಳರಸರ ಮತ್ತು ಪ್ರಜೆಗಳ ಸಾಂಸ್ಕೃತಿಕ ಸಮ್ಮೇಳನದ ಸಂಕೇತವಾಗಿದ್ದ. ಅವನ ಬಳಿ ಹಿಂದು ಶಿಷ್ಯರಿದ್ದರು. ಸಿದ್ದಪ್ಪ ಮತ್ತು ಚನ್ನಬಸವೇಶ್ವರ ಎಂಬುವರು ಅವರಲ್ಲಿ ಮುಖ್ಯರಾದವರು. ಇವನಂಥ ಇನ್ನೂ ಅನೇಕ ಸಾಧುಸಂತರು ಹಿಂದು-ಮುಸ್ಲಿಂ ಐಕ್ಯತೆಗೆ, ಸಾಮರಸ್ಯಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿ, ಸಾಮಾಜಿಕ, ಧಾರ್ಮಿಕ ಹಾಗೂ ಭಾವನಾತ್ಮಕ ಕ್ಷೇತ್ರಗಳಲ್ಲಿ ಕರ್ನಾಟಕದ ವೈವಿಧ್ಯಮಯ ಜನರ ಮಧ್ಯೆ ಸಾಮರಸ್ಯವನ್ನುಂಟುಮಾಡಲು ಪ್ರಯತ್ನಿಸಿದರು. (ಬಿ.ಎಸ್.ಎ.)

**ದೇಗಾಂವಿ :** ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಒಂದು ಗ್ರಾಮ. ಬೈಲಹೊಂಗಲದ ದಕ್ಷಿಣಕ್ಕೆ 34 ಕಿಮೀ ಅಂತರದಲ್ಲೂ ಕಿತ್ತೂರಿನ ನೈಋತ್ಯಕ್ಕೆ 5 ಕಿಮೀ ದೂರದಲ್ಲೂ ಇದೆ.

ಗ್ರಾಮದ ಮಧ್ಯದಲ್ಲಿರುವ ಕಲ್ಲಗುಡಿ (ಬಸ್ತಿ) ಸುಂದರ ವಾಸ್ತುಕೃತಿ. ಈ ದೇವಾಲಯವನ್ನು ಗೋವೆಯ ಕದಂಬರ ದೊರೆ ಶಿವಚಿತ್ತಪೆರ್ಮಾಡಿಯ (1147-92) ಹೆಂಡತಿಯಾದ ಕಮಲಾದೇವಿ ಕಟ್ಟಿಸಿದಂತೆ ತೋರುತ್ತವೆ. ಗುಡಿಯಲ್ಲಿ ಕನ್ನಡ ಹಾಗೂ ದೇವನಾಗರಿಯಲ್ಲಿ ಬರೆದ ಶಿಲಾಶಾಸನಗಳಿವೆ. ದೇಗಾಂವಿ ಅಗ್ರಹಾರಗದಲ್ಲಿ ಕಮಲಾನಾರಾಯಣ ಮತ್ತು ಮಹಾಲಕ್ಷ್ಮೀ ಗುಡಿಗಳನ್ನು ಹೂವಿನ ಬಾಗೆಯ ಹೋನೋಜನ ಮಗ ತಿಪ್ಪೋಜ ಎಂಬ ಸೂತ್ರಧಾರಿ ರಚಿಸಿದನೆಂದು ಒಂದು ಶಾಸನ ತಿಳಿಸುತ್ತದೆ. ಇನ್ನೊಂದು ಶಾಸನದಲ್ಲಿ (1175) ಕಮಲಾದೇವಿ ಬ್ರಾಹ್ಮಣರಿಗೆ ದಾನಕೊಟ್ಟ ವಿಷಯವಿದೆ. (ಎಸ್.ಐ.ಎಸ್.)

ಕಲ್ಲಗುಡಿಯ ವಿನ್ಯಾಸ ವಿಚಿತ್ರ ರೀತಿಯಲ್ಲಿದೆ. ಇದರಲ್ಲಿ ಎಂಟೆಂಟು ಕಂಬಗಳ ಎರಡು ಸಾಲುಗಳುಳ್ಳ ಉತ್ತರ ದಕ್ಷಿಣವಾಗಿ ಹಬ್ಬಿದ ದೊಡ್ಡ ಹಜಾರವಿದ್ದು, ಇದಕ್ಕೆ ಸೇರಿದಂತೆ ಪಶ್ಚಿಮಕ್ಕೆ ಮೂರು ಗರ್ಭಗುಡಿಗಳಿವೆ. ಮಧ್ಯದ ಗರ್ಭಗುಡಿ ಪಕ್ಕದವುಗಳಿಗಿಂತ ಸ್ವಲ್ಪ ಮುಂದೆ ಹಜಾರದೊಳಕ್ಕೆ ಬಂದಿದೆ. ಹಿಂದೆ ಸರಿದಂತಿರುವ ಪಕ್ಕದ ಗರ್ಭಗೃಹಗಳು ಸುಕನಾಸಿಯುತವಾಗಿವೆ. ಹಜಾರಕ್ಕೆ ತೆರೆಯುವಂತೆ ಪಕ್ಕಗಳ ಗರ್ಭಗುಡಿಗಳ ನೇರ ಎದುರಿನಲ್ಲಿ ದ್ವಾರಗಳಿವೆ. ಇನ್ನೊಂದು ದ್ವಾರ ಉತ್ತರದ ಕಡೆ ಇದೆ. ಈ ದ್ವಾರ ಸುರುಳಿಗಳ ಶಾಖೆಗಳಿಂದ ಅಲಂಕೃತವಾದ ನಾಜೂಕಿನ ವಿನ್ಯಾಸದ ಕೃತಿ. ಇದರ ಎದುರಿಗೆ ದಕ್ಷಿಣದ ಗೋಡೆಯಲ್ಲಿ ನಾಗರ ಕಲ್ಲಿರುವ ಒಂದು ಕೋಷ್ಠವಿದೆ. ಹಜಾರದ ಪೂರ್ವಭಾಗದಲ್ಲಿ ಕಕ್ಷಾಸನವಿದ್ದು ಮೇಲೆ ತೆರೆದಂತಿದೆ. ಈ ಭಾಗದ ಮೇಲಿನ ಚಾವಣಿ ಇಳಿಜಾರಾಗಿದೆ. ಹಜಾರದ ಕಂಬಗಳು ಸಮಕಾಲೀನ ಚಾಳುಕ್ಯ ವಾಸ್ತುರೀತಿಯವುಗಳಿಗಿಂತ ವ್ಯತ್ಯಸ್ತವಾಗಿವೆ. ಇವುಗಳಲ್ಲಿ ತಿರುಗಣೆಯ ಕೆಲಸ ಕಡಿಮೆ ಇರುವುದು ಇಲ್ಲಿಯ ವೈಶಿಷ್ಟ್ಯ. ಆದರೂ ಇವುಗಳ ವಿನ್ಯಾಸ ಸುಂದರವಾಗಿದೆ. ಹಜಾರದ ಚಾವಣಿಯಲ್ಲಿ ಪಕ್ಕದ ಗರ್ಭಗುಡಿಗಳ ಮುಂದೆ ಇರುವ ಭುವನೇಶ್ವರಿಗಳು ಆಳವಾಗಿದ್ದು ಹಲವು ಅಲಂಕೃತ ಏಕಕೇಂದ್ರ ವೃತ್ತಗಳಿಂದ ಕೂಡಿದೆ. ಅವುಗಳ ಮಧ್ಯೆ ತೂಗಾಡುವ ಕಮಲಗಳ ಅಲಂಕರಣವಿದೆ. ಇವುಗಳ ಸುತ್ತಲೂ ಸುಮಾರು ಇದೇ ರೀತಿಯ ಚಿಕ್ಕ ಭುವನೇಶ್ವರಿಗಳಿವೆ. ಇವೆಲ್ಲಾ ಅಬು ಬೆಟ್ಟದ ವಿಮಲ ಷಾ ದೇವಾಲಯದ ಭುವನೇಶ್ವರಿಗಳನ್ನು ನೆನಪಿಗೆ ತರುತ್ತವೆ. ಹೊರಗೋಡೆಗಳ ಮೇಲೆ ಅರೆಗಂಬಗಳು ಇತ್ಯಾದಿ ಅಲಂಕರಣಗಳಿವೆ. ಈಗ ಉತ್ತರದ ಗರ್ಭಗುಡಿಯಲ್ಲಿ ಮಹಾಕಾಳಿ, ಮಧ್ಯದರಲ್ಲಿ ಲಕ್ಷ್ಮೀನಾರಾಯಣ ಮತ್ತು ದಕ್ಷಿಣದರಲ್ಲಿ ಸರಸ್ವತಿ - ಈ ವಿಗ್ರಹಗಳಿವೆ. ಆದರೆ ಈ ಗರ್ಭಗುಡಿಗಳ ದಾಲವಂದಗಳ ಮೇಲೆ ಕ್ರಮವಾಗಿ ಮಹಾಕಾಳಿ, ಸರಸ್ವತಿ ಮತ್ತು ವಿಷ್ಣುವಿಗ್ರಹಗಳಿರುವುದರಿಂದ ದಕ್ಷಿಣ ಮತ್ತು ಮಧ್ಯದ ಗರ್ಭಗುಡಿಯ ವಿಗ್ರಹಗಳು ಅದಲುಬದಲಾಗಿರುವಂತೆ ತೋರುತ್ತದೆ. ಈ ವಿಗ್ರಹಗಳೆಲ್ಲ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿವೆ. ಕಲ್ಲಗುಡಿ ಗೋವೆಯ ಕದಂಬರ ಕಾಲದ ಉತ್ತಮ ವಾಸ್ತುರಚನೆಗಳಲ್ಲೊಂದು. *

**ದೇಪರಾಜ :** ಸು. 1410. ಕನ್ನಡದ ಮೊಟ್ಟಮೊದಲ ಸಾಂಗತ್ಯಕವಿ. ಸೊಬಗಿನ ಸೋನೆ ಎಂಬ ಕಾವ್ಯದ ಕರ್ತೃ.

ಸಂಗಮೇಂದ್ರನ ಕುಲದಿಂಗಡಲಿಗೆ ನೆಱುದಿಂಗಳೆನಿಪ ಕಂಪಸುತ ಕೇಳ ಕಂಗೊಳಿಸುವ ದೇಪನೃಪ ಮುನ್ನಱಿಯದ ಮಂಗಳವಪ್ಪೊಂದು ಕಥೆವೇಳ ಎಂಬ ಪದ್ಯದಿಂದ ಈತ ಸಂಗಮವಂಶದ ಕಂಪರಾಜನ ಮಗನೆಂದು ತಿಳಿದುಬರುತ್ತದೆ. ಈ ಸಂಗಮ ವಂಶ ವಿಜಯನಗರ ಸಾಮ್ರಾಜ್ಯವನ್ನು ಆಳಿದ ಮನೆತನಗಳಲ್ಲಿ ಒಂದಾಗಿರುವುದರಿಂದ ಇಲ್ಲಿ ಬರುವ ಒಂದನೆಯ ದೇವರಾಯ ಅಥವಾ ಪ್ರತಾಪದೇವರಾಯನೇ (1406-22) ಈ ದೇಪರಾಜನಿರಬಹುದೆಂದು ಊಹಿಸಲಾಗಿದೆ. ಕವಿ ವೀರ ಶೈವನಹುದೋ ಅಲ್ಲವೋ ತಿಳಿಯದು. ಶೈವನೆಂಬುದಕ್ಕೆ ಸಾಕಷ್ಟು ಆಕಾರ ಇವನ ಕಾವ್ಯಗಳಲ್ಲಿ ದೊರೆಯುತ್ತದೆ. ಅಮರುಕ ಈತನ ಇನ್ನೊಂದು ಕೃತಿ. ತನ್ನ ಎರಡೂ ಕೃತಿಗಳಲ್ಲಿ ಕವಿ ಪಂಪಾಪತಿ ವಿರೂಪಾಕ್ಷನನ್ನು ಸ್ತುತಿಸಿರುವುದರಿಂದ ವಿರೂಪಾಕ್ಷ ಈತನ ಇಷ್ಟದೈವವೆಂದು ತೋರುತ್ತದೆ. ಪೂರ್ವಕವಿಗಳಲ್ಲಿ ವಾಲ್ಮೀಕಿ, ಬಾಣ, ಕಾಳಿದಾಸ - ಇವರನ್ನು ಸ್ಮರಿಸಿದ್ದಾನೆ. ತನ್ನ ಕಾವ್ಯವನ್ನು ಜಾಣರ ಮೆಚ್ಚು ರಸಿಕರ ರಸಾಯನ ವಾಣಿಯ ಸಿರಿ ಭಾವುಕರಿಗೆ ಮಾಣಿಕಗನ್ನಡಿ ಕೇಳ್ವಕೋವಿದರಿಗೆ ಪ್ರಾಣ ಎಂದು ಪ್ರಶಂಸಿಸಿಕೊಂಡಿದ್ದಾನೆ.

ಸೊಬಗಿನ ಸೋನೆ ಕನ್ನಡದಲ್ಲಿ ದೊರೆತ ಮೊದಲ ಸಾಂಗತ್ಯಕೃತಿ. ಶೃಂಗಾರ ಪೂರ್ಣ ಕತೆಗಳನ್ನೊಳಗೊಂಡಿದೆ. ಇದರಲ್ಲಿ 7 ಕಥೆಗಳೂ 26 ಸಂಧಿಗಳೂ 1216 ಪದ್ಯಗಳೂ ಇವೆ. ಕಾವ್ಯದಲ್ಲಿ ಬಳಸಿರುವ ಛಂದಸ್ಸು ಸಾಂಗತ್ಯವಾದರೂ ಸಾಂಗತ್ಯದ ಲಕ್ಷಣದಂತೆ ಪದ್ಯದ ಎರಡು ಮತ್ತು ನಾಲ್ಕನೆಯ ಪಾದಗಳ ಕೊನೆಯಲ್ಲಿ ಬರಬೇಕಾದ ಬ್ರಹ್ಮಕ್ಕೆ ಬದಲಾಗಿ ವಿಷ್ಣುವಿನಿಂದ ಕೂಡಿವೆ. ಆದ್ದರಿಂದ ಇದನ್ನು ಸಾಂಗತ್ಯಕ್ಕೆ ಬದಲಾಗಿ ಸೊಬಗಿನ ಸೋನೆವರ್ಣ ಎಂದು ಕರೆಯುವುದೂ ಉಂಟು. ವರ್ಣನೆಗಳೇ ಕೃತಿಯ ಜೀವಾಳ. ಅತಿಯಾದ ವರ್ಣನೆಗಳಿದ್ದರೂ ಅಲ್ಲಲ್ಲಿ ಬರುವ ಉತ್ತಮ ಭಾಗಗಳು ಕವಿಯ ಪ್ರತಿಭಾಶಕ್ತಿಯ ದ್ಯೋತಕವಾಗಿವೆ. ಕಥೆಯ ಓಟ, ಒಂದು ಕಥೆಗೂ ಇನ್ನೊಂದು ಕಥೆಗೂ ನಡುವೆ ಇರುವ ಸಂಬಂಧ ಬೆಸುಗೆ - ಇವು ಸಂಸ್ಕೃತದ ಕಥಾಸರಿತ್ಸಾಗರ, ದಶಕುಮಾರಚರಿತೆ ಮೊದಲಾದ ಕೃತಿಗಳನ್ನು ನೆನಪಿಗೆ ತರುತ್ತದೆ. ಶೈಲಿ ಸರಳವಾಗಿದೆ. ಸಾಂಗತ್ಯ ಗ್ರಂಥಗಳ ಸಾಲಿನಲ್ಲಿ ಇದಕ್ಕೆ ಐತಿಹಾಸಿಕ ಮಹತ್ವವಿದೆ.

ಅಮರುಕ ವಾರ್ಧಕ ಷಟ್ಪದಿಯಲ್ಲಿದೆ. ಇದು ಸಂಸ್ಕೃತ ಅಮರುಶತಕದ ಅನುವಾದ. (ಬಿ.ಎಸ್.ಎಸ್.)

**ದೇವಕವಿ :** ಸು. 1200. ಬ್ರಾಹ್ಮಣ ಕವಿ. ಕುಸುಮಾವಳಿ ಎಂಬ ಚಂಪೂ ಕಾವ್ಯದ ಕರ್ತೃ. ಕವಿ ತನ್ನ ಹೆಸರನ್ನು ವಾಚ್ಯವಾಗಿ ಕಾವ್ಯದಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಕವಿಕಮಳಜಸೂಕ್ತಿ ಸುಧಾರ್ಣವಸೋಮಂ ದೇವಕವಿದಲೆಂದಿ ನಿತಂ ಸಾಱುವವೋಲ್ ಭೇರೀಭಾಂಕೃತಿ ರವವೊಗೆದತ್ತುತ್ತರಾಶೆಯೊಳ್ ಮತ್ತಾಗಳ್ ಎಂದು ಹೇಳುವಲ್ಲಿ ದೇವಕವಿ ಎಂದು ಸೂಚ್ಯವಾಗಿ ಹೇಳಿರುವಂತೆ ತೋರುತ್ತದೆ. ಕವಿಕಮಳಜಸೂಕ್ತಿಸುಧಾರ್ಣವಸೋಮಂ ಎಂಬುದರಿಂದ ಈತ ಶಾಂತೀಶ್ವರಪುರಾಣವನ್ನು ಬರೆದ ಕಮಲಭವನಿಗೆ ಗ್ರಂಥರಚನೆಯನ್ನು ಪ್ರೋತ್ಸಾಹ ಮಾಡಿದಂತೆ ಊಹಿಸಬಹುದಾಗಿದೆ. ಈ ಊಹೆಗೆ ಸಹಕಾರಿಯಾಗಿ ಋತು, ಸೂರ್ಯಾಸ್ತ ಮೊದಲಾದ ವರ್ಣನಾ ಭಾಗಗಳ ಪದ್ಯಗಳಲ್ಲಿ ಹಲವನ್ನು ಇದೇ ಸಂದರ್ಭಗಳಲ್ಲಿ ಶಾಂತೀಶ್ವರಪುರಾಣದಲ್ಲಿಯೂ ಕಾಣಬಹುದಾಗಿದೆ. ಈತನಿಗೆ ಕವೀಂದ್ರೋತ್ತಂಸ, ಕೃತಿರತಿರಮಣ, ಭಾರತೀಭೂಷಣ ಎಂಬ ಬಿರುದುಗಳಿದ್ದಂತೆ ತಿಳಿದುಬರುತ್ತದೆ. ಪೂರ್ವಕವಿಗಳಲ್ಲಿ ರನ್ನ, ರುದ್ರಭಟ್ಟ, ಅಗ್ಗಳ - ಇವರನ್ನು ಸ್ತುತಿಸಿದ್ದಾನೆ.

ಕುಸುಮಾವಳಿ ಕಾವ್ಯ ಒಂದು ಕಲ್ಪಿತ ರಮ್ಯ ಪ್ರಣಯ ಕಥೆ. ದೊರೆತಿರುವ ಅಸಮಗ್ರ ಪ್ರತಿಯಲ್ಲಿ 15 ಆಶ್ವಾಸನಗಳಿವೆ. ಒಟ್ಟು 18 ಆಶ್ವಾಸಗಳಿರಬಹುದೆಂದು ತೋರುತ್ತದೆ ಎಂದು ಕವಿಚರಿತೆಕಾರರು ಹೇಳುತ್ತಾರೆ. ಕಾವ್ಯದಲ್ಲಿ ಕವಿ ತಾನು ಚಿಕ್ಕರಾಜ ಚಮೂಪನನ್ನು ಕಥಾನಾಯಕನನ್ನಾಗಿ ಮಾಡಿಕೊಂಡಿದ್ದೇನೆಂದು ಹೇಳಿದ್ದಾನೆ. ಆದರೆ ಈತ ಯಾರೆಂಬುದು ತಿಳಿಯುವುದಿಲ್ಲ. ಈ ಕಾವ್ಯವನ್ನು ಬರೆಯುವಲ್ಲಿ ದೇವಕವಿಯು ನೇಮಿಚಂದ್ರನಿಂದ ಪ್ರಭಾವಿತನಾಗಿರುವಂತೆ ತೋರುತ್ತದೆ. ಈತನ ಕವಿತಾಬಂಧ

ಪ್ರೌಢವಾಗಿಯೂ ಗಂಭೀರವಾಗಿಯೂ ನಿರರ್ಗಳವಾಗಿಯೂ ಇದೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ಈ ಕಾವ್ಯದ ಕೆಲವು ಪದ್ಯಗಳು ಉದ್ಧರಿತವಾಗಿವೆ. (ಬಿ.ಎಸ್.ಎಸ್.)

**ದೇವಚಂದ್ರ:** 1770-1841. ಜೈನಕವಿ. ರಾಜಾವಳೀಕಥೆ, ರಾಮಕಥಾವತಾರ ಎಂಬ ಗ್ರಂಥಗಳ ಕರ್ತೃ. ಚಾಮರಾಜನಗರ ಜಿಲ್ಲೆಯ ಈಗಿನ ಮಲೆಯೂರು ಕನಕಗಿರಿ ಈತನ ಜನ್ಮಸ್ಥಳ. ಇವನ ತಂದೆ ದೇವಯ್ಯ, ತಾಯಿ ಕುಸುಮಾಜಮ್ಮ, ಚಂದಪಾರ್ಯ ಮತ್ತು ಪದ್ಮರಾಜ ಅಣ್ಣಂದಿರು. ಮಲೆಯೂರ ಪಾರ್ಶ್ವನಾಥ ಈ ಕವಿಯ ಇಷ್ಟದೈವ. ಈತ ತನ್ನ 14ನೆಯ ವಯಸ್ಸಿನಿಂದಲೇ ಕಾವ್ಯರಚನೆಗೆ ತೊಡಗಿದ. ಪೂಜ್ಯಪಾದಚರಿತೆ, ಸುಮೇರುಶತಕ, ಪದ್ಮಾವತಿ ಯಕ್ಷಗಾನ, ಭಕ್ತಿಸಾರಶತಕತ್ರಯ, ಶಾಸ್ತ್ರ ಸಾರ ಲಘು ವೃತ್ತಿ, ಪ್ರವಚನ ಸಿದ್ಧಾಂತ ದ್ರವ್ಯ ಸಂಗ್ರಹ, ದ್ವಾದಶಾನುಪ್ರೇಕ್ಷೆಕಥೆ, ಧ್ಯಾನಸಾಮ್ರಾಜ್ಯ, ಅಧ್ಯಾತ್ಮವಿಚಾರ - ಮೊದಲಾದ ಗ್ರಂಥಗಳನ್ನೂ ಈತ ಬರೆದಂತೆ ರಾಜಾವಳೀ ಕಥೆಯಿಂದ ತಿಳಿದುಬರುತ್ತದೆ. ಆದರೆ ಇವಾವೂ ಉಪಲಬ್ಧವಿಲ್ಲ. ತನ್ನ ಮೊದಲ ಕೃತಿ ಪೂಜ್ಯಪಾದಚರಿತೆ ಎಂಬ ಸಾಂಗತ್ಯ ಕಾವ್ಯವನ್ನು ಅಣ್ಣ ಪದ್ಮರಾಜನೊಡನೆ 1792ರಲ್ಲಿ ಬರೆದಂತೆ ತಿಳಿಯುತ್ತದೆ.

ರಾಜಾವಳೀ ಕಥೆ ಪ್ರಾಯಿಕವಾಗಿ ಗದ್ಯರೂಪವಾಗಿದೆ. ಅಲ್ಲಲ್ಲಿ ಕೆಲವು ಶ್ಲೋಕಗಳೂ ಪದ್ಯಗಳೂ ಇವೆ. ಇದನ್ನು 1804ರಲ್ಲಿ ತನಗೆ ಪರಿಚಯವಾದ ಮೆಕೆಂಜಿ ಎಂಬ ವಿದೇಶೀಯ ಸರದಾರನ ಸೂಚನೆಯ ಮೇರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ವೈದ್ಯಸೂರಿ ಪಂಡಿತನ ಪ್ರೋತ್ಸಾಹದಿಂದ 1838ರಲ್ಲಿ ಬರೆದಂತೆ ತಿಳಿಯುತ್ತದೆ. ಇದರಲ್ಲಿ 11 ಅಧಿಕಾರಗಳಿವೆ. ಜೈನಧರ್ಮ ಪರವಾದ ಚರಿತ್ರೆ, ಪುರಾಣ ಇವಲ್ಲದೆ ಅನೇಕ ರಾಜರು ಮತ್ತು ಮೈಸೂರು ಅರಸರ ಇತಿಹಾಸ, ಕೆಲವು ಕವಿಗಳ ವಿಷಯಗಳೂ ನಿರೂಪಿತಗೊಂಡಿದ್ದು ಚಾರಿತ್ರಿಕ ದೃಷ್ಟಿಯಿಂದ ಈ ಗ್ರಂಥಕ್ಕೆ ಮಹತ್ವಲಭಿಸಿದೆ. ಹೊಸಗನ್ನಡ ಗದ್ಯದ ಕುರುಹುಗಳು ಈ ಕೃತಿಯಲ್ಲಿ ಕಾಣದೊರೆಯುತ್ತವೆ.

ರಾಮಕಥಾವತಾರ 16 ಆಶ್ವಾಸಗಳುಳ್ಳ ಚಂಪೂ ಗ್ರಂಥ. ನಾಗಚಂದ್ರನ ರಾಮಚಂದ್ರಚರಿತಪುರಾಣದ ಕಥೆಯೇ ಇಲ್ಲಿ ಸ್ವಲ್ಪ ವಿಸ್ತಾರವಾಗಿ ವರ್ಣಿತವಾಗಿದೆ. ಆ ಕಾವ್ಯದ ಅನೇಕ ಪದ್ಯಗಳೂ ಇದರಲ್ಲಿ ಅನುವಾದಗೊಂಡಿವೆ. (ಕೆ.ಚ್.)

**ದೇವದುರ್ಗ:** ರಾಯಚೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ.ಈ ತಾಲ್ಲೂಕನ್ನು ಪೂರ್ವದಲ್ಲಿ ರಾಯಚೂರು, ದಕ್ಷಿಣದಲ್ಲಿ ಮಾನ್ವಿ ಮತ್ತು ಪಶ್ಚಿಮದಲ್ಲಿ ಲಿಂಗಸುಗೂರು ತಾಲ್ಲೂಕುಗಳು ಸುತ್ತುವರಿದಿವೆ. ಉತ್ತರದಲ್ಲಿ ಕೃಷ್ಣಾನದಿ ಗಡಿಯಾಗಿ ಹರಿದು ಗುಲ್ಬರ್ಗ ಜಿಲ್ಲೆಯಿಂದ ಬೇರ್ಪಡಿಸಿದೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 1,541ಚ.ಕಿಮೀ ಜನಸಂಖ್ಯೆ 20, 40, 74 ಈ ತಾಲ್ಲೂಕಿನಲ್ಲಿ ದೇವದುರ್ಗ, ಗಬ್ಬೂರು, ಜಾಲಹಳ್ಳಿ ಮತ್ತು ಅರಕೆರೆ ನಾಲ್ಕು ಹೋಬಳಿಗಳಿದ್ದು 188 ಗ್ರಾಮಗಳಿವೆ.

ಈ ತಾಲ್ಲೂಕಿನಲ್ಲಿರುವ ಕೆಲವು ಸಣ್ಣ ಬೆಟ್ಟಗಳನ್ನು ಕರಡೀಗುಡ್ಡ ಹಾಗೂ ಮಸರಕಲ್ಲು ಬೆಟ್ಟ ಶ್ರೇಣಿಗಳೆಂದು ಕರೆಯುತ್ತಾರೆ. ಅವು ಸು. 1500' ಗಳಿಂದ 1774'ಗಳ ವರೆಗೆ ಇದ್ದು ಕರ್ಗಲ್ ಜಿನ್ನಣ್ಣನಪುರ, ಹುನಗುಂದಾಬಾದ, ರಾಮದುರ್ಗ, ದೇವದುರ್ಗ, ಕರಡಿಗುಡ್ಡ, ಗಬ್ಬೂರು ಹಾಗೂ ಗಣೇಕಲ್ಲು ಮೊದಲಾದೆಡೆಗಳಲ್ಲಿ ಹರಡಿಕೊಂಡಿವೆ. ಕೃಷ್ಣಾನದಿಯ ಸ್ವಲ್ಪ ಭಾಗವೂ ಗುಡ್ಡಗಳ ನಡುವೆ ಹರಿದಿದೆ. ಈ ಬೆಟ್ಟಗಳು ಗಣೇಕಲ್ಲು ವಿಭಾಗದಲ್ಲಿ ಧಾರವಾಡ ಗಚ್ಚಿಯ ಶಿಲಾ ಜಾತಿಯನ್ನೂ ಕಾಚಾಪುರ ವಿಭಾಗದಲ್ಲಿ ಕಲಾದಗಿ ಜಾತಿ ಶ್ರೇಣಿಯನ್ನೂ ಹೊಂದಿವೆ. ಇಲ್ಲಿನ ಭೂಮಿಯ ಸ್ವಲ್ಪ ಭಾಗ ಕೆಂಪು ಮರಳು ಮಿಶ್ರಿತ ಬೆಣಚುಕಲ್ಲು ಬೆರೆತ ಕೆಂಪು ಬಣ್ಣದ್ದಾಗಿದ್ದರೆ ಜಾಲಹಳ್ಳಿ ಹಾಗೂ ದೇವದುರ್ಗ, ಇತರ ಭಾಗಗಳಲ್ಲಿ ಕಪ್ಪು ಅಥವಾ ಎರೆಭೂಮಿ ಇದೆ. ಧಾರವಾಡ ಶಿಲಾಶ್ರೇಣಿ ವಿಶೇಷ ಖನಿಜ ಸಂಪತ್ತಿನಿಂದ ಕೂಡಿದೆ. ಡೆಕ್ಕನ್ ಮೈನಿಂಗ್ ಕಂಪನಿಯವರು ಕೆಲಕಾಲ ವಂಡಳ್ಳಿ, ದೇವದುರ್ಗ ಮುಂತಾದ ಸ್ಥಳಗಳ ಗಣಿಗಳಲ್ಲಿ ಬಂಗಾರವನ್ನು ತೆಗೆದರು; ಆದರೆ ಅದರ ಉತ್ಪತ್ತಿಗಿಂತ ವೆಚ್ಚ ಹೆಚ್ಚಾದುದರಿಂದ ಗಣಿಕೆಲಸ ನಿಂತಿತು.

ತಾಲ್ಲೂಕಿನಲ್ಲಿ ಕೃಷ್ಣಾನದಿಯ ದಂಡೆಯುದ್ದಕ್ಕೂ ತೆಳು ಅರಣ್ಯವಿದೆ. ಈ ಕಾಡಿನಲ್ಲಿ ತರೆ, ತುಮರಿ (ಬೀಡಿ ಎಲೆಯ ಮರ), ಕಕ್ಕೆ, ಜಾಲಿ, ಬೆಟ್ಟಲ, ಹೊಂಗೆ, ಹುಣಿಸೆ, ಇಪ್ಪೆ, ಮುತ್ತುಗ, ತಿರುಮನ್, ದಿಂಡಿಗ, ಚುಜ್ಜಲು, ಬಿಜಸಾರ, ಹೊನ್ನೆ, ಮತ್ತಿ, ಬಾರಿ ಮುಂತಾದವೂ ಇಲ್ಲಿನ ಬೆಟ್ಟಗಳಲ್ಲಿ ಸೀತಾಫಲ ಹಣ್ಣಿನ ಗಿಡಗಳೂ ಸಾಕಷ್ಟಿವೆ. ಇಲ್ಲಿನ ಅಡವಿಗಳಲ್ಲಿ ಗಣಜಲು ಹುಲ್ಲೂ ಅಲ್ಲಲ್ಲಿ ವಿಶೇಷವಾಗಿ ಬೆಳೆಯುತ್ತದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 645 ಮಿಮೀ. ಕೃಷ್ಣಾನದಿ ಗುಡ್ಡಪ್ರದೇಶದಲ್ಲೇ ಹರಿಯುವುದರಿಂದ ನೀರಾವರಿಯ ಸೌಲಭ್ಯ ಅದರಿಂದ ಅಷ್ಟು ಆಗಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಗಳ ಅನ್ವಯ ನಿರ್ಮಿಸಲಾಗಿರುವ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ಈ ತಾಲ್ಲೂಕಿನ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯ ಒದಗಿದೆ. ಇಲ್ಲಿನ ಹೆಚ್ಚು ನೀರಾವರಿಯೆಲ್ಲ ಕೆರೆಗಳ ಮೂಲಕವೆ ನಡೆಯುತ್ತದೆ. ಜೋಳ, ಹತ್ತಿ, ಗೋದಿ, ಬತ್ತ ಈ ತಾಲ್ಲೂಕಿನ ಮುಖ್ಯ ಬೆಳೆಗಳು. ಈ ತಾಲ್ಲೂಕಿನಲ್ಲಿ ಮುಕ್ಯ ಕೈಗಾರಿಕೆ ಕೈಮಗ್ಗವಾಗಿದ್ದು ದೇವದುರ್ಗದ ಬಟ್ಟೆಗಳು ಪ್ರಸಿದ್ಧ.

ಗಬ್ಬೂರು, ಜಾಲಹಳ್ಳಿ, ಅರಕೆರೆ, ರಾಮದುರ್ಗ, ಮಸರಕಲ್ಲು, ಗಣೇಕಲ್ಲು, ವಂಡಳ್ಳಿ ಮತ್ತು ಕೊಪ್ಪರ - ಇವು ಈ ತಾಲ್ಲೂಕಿನ ಇತರ ಮುಖ್ಯಸ್ಥಳಗಳು. ಗಬ್ಬೂರು (ನೋಡಿ) ಒಂದು ಸಣ್ಣ ಊರಾದರೂ ಹಿಂದೊಮ್ಮೆ ವಿದ್ಯಾಕೇಂದ್ರವಾಗಿ ಮೆರೆದು ಪ್ರಸಿದ್ಧ ಸ್ಥಳವಾಗಿತ್ತು.

ಮೊಸರಕಲ್ಲು ಮೊಸಳಿಕಲ್ (ಮುಸಳಿಕಲ್) ಎಂಬ ಪ್ರಾಂತ್ಯ ವಿಭಾಗದ ಮುಖ್ಯ ಸ್ಥಳವಾಗಿತ್ತು. ಇದು ಶಿವಶರಣೆ ಮುಕ್ತಾಯಕ್ಕನ ಗಂಡನ ಊರು ಎಂದು ಹೇಳಲಾಗುತ್ತದೆ. ಪ್ರಸಿದ್ಧ ಹರಿದಾಸರಾದ ಗೋಪಾಲದಾಸರು ಜನಿಸಿದ್ದು ಇಲ್ಲಿ ಎಂಬ ಅಭಿಪ್ರಾಯವೂ ಇದೆ. ಕುಮಾರವಿಜಯ, ಬಸವಶತಕ, ಪಂಪಾಶತಕ, ಭುವನೈಕನಾಯಕೀಶತಕ ಮುಂತಾದ ಗ್ರಂಥಗಳನ್ನು ರಚಿಸಿದ ಸಂಗವಿಭು ಗಣೇಕಲ್ಲಿನವನು. ರಾಮದುರ್ಗದಲ್ಲಿ ಒಂದು ಪುರಾತನ ಕೋಟೆಯಿದೆ. ಜಾಲಹಳ್ಳಿ ಒಂದು ವ್ಯಾಪಾರ ಕೇಂದ್ರ. ಇಲ್ಲಿನ ನಿಂಬೆಹಣ್ಣು ಪ್ರಸಿದ್ಧ. ವಂಡಳ್ಳಿ ಭಾಗದಲ್ಲಿ ಪುರಾತನ ಕಾಲದಲ್ಲಿ ಅದಿರು ಕರಗಿಸುವ ಕಾರ್ಖಾನೆಗಳಿದ್ದವೆಂದು ತಿಳಿದುಬಂದಿದೆ. ಇಲ್ಲಿ ಚಿನ್ನದ ಗಣಿ ಇದ್ದು ಕೆಲಕಾಲ ಚಿನ್ನವನ್ನು ತೆಗೆದಿದ್ದರು. ಕೊಪ್ಪರ ಕೃಷ್ಣಾ ನದಿಯ ದಂಡೆಯಲ್ಲಿರುವ ಒಂದು ಯಾತ್ರಾಕ್ಷೇತ್ರ. ನೃಸಿಂಹಸ್ವಾಮಿ ಇಲ್ಲಿನ ಅಧಿದೈವ. ಇದು ಬಹಮನೀ ಹಾಗೂ ವಿಜಯನಗರದ ರಾಜರ ರಾಯಚೂರು ದೋಆಬ್ ಯುದ್ಧಗಳಲ್ಲಿ ರಹದಾರಿಯಲ್ಲಿನ ಒಂದು ಮುಖ್ಯ ಗ್ರಾಮವಾಗಿತ್ತು.

ದೇವದುರ್ಗ ಈ ತಾಲ್ಲೂಕಿನ ಆಡಳಿತ ಕೇಂದ್ರ. ಜನಸಂಖ್ಯೆ 21,992 ರಾಯಚೂರಿನಿಂದ 60 ಕಿಮೀ ದೂರದಲ್ಲಿದೆ. ಈ ಊರಿನಲ್ಲಿ ಅನೇಕ ಕೈಮಗ್ಗಗಳಿದ್ದು ಕೈಮಗ್ಗದ ಬಟ್ಟೆಗಳ ತಯಾರಿ ಮತ್ತು ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ. ಸರ್ಕಾರಿ ಆಡಳಿತ ಕಚೇರಿಗಳೂ ಪ್ರಾಥಮಿಕ ಮಾಧ್ಯಮಿಕ ಪ್ರೌಢಶಾಲೆಗಳೂ ಅಂಚೆ ತಂತಿ ಮತ್ತು ವೈದ್ಯಕೀಯ ಸೌಲಭ್ಯಗಳೂ ಇಲ್ಲಿವೆ. ಇಲ್ಲಿ ಬೇಡರ ದೊರೆಗಳಿಂದ ಕಟ್ಟಲ್ಪಟ್ಟು ಅವರ ಬಲವಾದ ಸ್ಥಾನವಾಗಿದ್ದ ಒಂದು ಪುರಾತನ ಗಿರಿದುರ್ಗವಿದೆ. ಒಂದನೆಯ ಆಸಫ್ ಜಾನ ಕಾಲಕ್ಕೆ ದೇವದುರ್ಗ ಕಿಲ್ಲೆ ಬೇಡರ ದೊರೆಯೊಬ್ಬನ ಆಡಳಿತಕ್ಕೊಳಪಟ್ಟಿತ್ತು. ಆಸಫ್ ಜಾ ಆ ದೊರೆಯ ಸಹಾಯ ಕೋರಿದ್ದನೆಂದು ತಿಳಿದುಬರುತ್ತದೆ. ಕೊಹರನ್ ಎಂಬ ಅರಬ್ ದಳವಾಯಿ ಕೆಲಕಾಲ ಈ ನಾಡನ್ನು ಆಳಿದ. ಆತ ನಿಜಾಮನ ಸೈನ್ಯದೊಂದಿಗೆ ಹೋರಾಡದೆ ಫ್ರೇಜರಂ ಎಂಬವನಿಗೆ ಶರಣಾದ. ಆ ಮುಂದೆ ಅದು ನಿಜಾಮ ದೊರೆಗಳ ಅಧೀನದಲ್ಲಿಯೇ ಆ ರಾಜ್ಯ ವಿಲೀನವಾಗುವವರೆಗೆ

ಇದ್ದಿತು. ಸ್ವಾತಂತ್ರ್ಯ ಸಮರದಲ್ಲಿ ದೇವದುರ್ಗವೂ ಒಂದು ಸಣ್ಣ ಪಾತ್ರವನ್ನು ವಹಿಸಿತು. ಅದು ಬಾದಾಮಿಯನ್ನು 150 ಅರಬರ ಜೊತೆಗೆ ಮುತ್ತಿದ ನರಸಿಂಗರಾವ್ ಎಂಬ ನಾಯಕನಿಗೆ ಯೋಜನೆ ಹಾಕಿಕೊಳ್ಳಲು, ಕೆಲಕಾಲ ಚಟುವಟಿಕೆಗಳನ್ನು ನಡೆಸಲು ಕಾರ್ಯರಂಗವಾಗಿದ್ದಿತು. ಕರುಣೇಶ್ವರಪುರಾಣದ ಕರ್ತೃ ಚೆನ್ನಮಲ್ಲಕವಿ ಈ ಊರಿನವನು. (ಎಸ್.ಜಿ.ಎ.)

**ದೇವನಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಈ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರು ಜಿಲ್ಲೆಯ ಈಶಾನ್ಯಕ್ಕಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು. ಈಶಾನ್ಯಕ್ಕೆ ಶಿಡ್ಲಘಟ್ಟ, ತಾಲ್ಲೂಕು, ಪೂರ್ವ ಮತ್ತು ಆಗ್ನೇಯಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕು, ದಕ್ಷಿಣಕ್ಕೆ ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕು ಮತ್ತು ಹೊಸಕೋಟೆ ತಾಲ್ಲೂಕುಗಳು, ಪಶ್ಚಿಮ ಮತ್ತು ವಾಯುವ್ಯಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕುಗಳು ಸುತ್ತುವರೆದಿವೆ. ಆವತಿ, ದೇವನಹಳ್ಳಿ, ವಿಜಯಪುರ, ಬಾಗಲೂರು, ಕುಂದಾಣ ಮತ್ತು ಬೂದಿಗೆರೆ ಹೋಬಳಿಗಳಿದ್ದು, 277 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 597.2 ಚ.ಕಿಮೀ. ಜನಸಂಖ್ಯೆ 1,84,872.

ದೇವನಹಳ್ಳಿ ತಾಲ್ಲೂಕು ಹೆಚ್ಚು ಮೈದಾನ ಪ್ರದೇಶದಿಂದ ಕೂಡಿದೆ. ಅಲೆಅಲೆಯಾಗಿ ಏರಿಳಿಯುವ ಇದರ ಸಾಮಾನ್ಯ ಮೇಲ್ಮೈ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದ್ದು ಫಲವತ್ತಾದ ಕಣಿವೆ ಪ್ರದೇಶಗಳನ್ನೊಳಗೊಂಡಿದೆ. ಉತ್ತರ ಮತ್ತು ಪಶ್ಚಿಮದಲ್ಲಿ ಕೆಲವು ಸಣ್ಣ ಬೆಟ್ಟಗಳುಂಟು. ವಾಯುವ್ಯ ಮೂಲೆಯಲ್ಲಿರುವ ದಿಬ್ಬಗೆರೆಬೆಟ್ಟ ತಾಲ್ಲೂಕಿನ ಅತ್ಯಂತ ಎತ್ತರದ ಬೆಟ್ಟ (1173 ಮೀ.). ಬೆಟ್ಟಹಲಸೂರಿನ ದಕ್ಷಿಣದಲ್ಲಿರುವ ಬೆಟ್ಟ ಮತ್ತೊಂದು ಮುಖ್ಯವಾದದ್ದು.

ವಿನ್ಯಾಸ ಮತ್ತು ರೂಪಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುವ ಗ್ರ್ಯಾನೈಟಿಕ್ ನೈಸ್‌ಶಿಲೆ ಈ ತಾಲ್ಲೂಕಿನ ಎಲ್ಲ ಭಾಗಗಳಲ್ಲೂ ಕಂಡುಬರುತ್ತದೆ. ಬೆಟ್ಟ ಹಲಸೂರಿನ ಚಪ್ಪಡಿ ಕಲ್ಲುಗಳನ್ನು ಬೆಂಗಳೂರಿನ ವಿಧಾನಸೌಧದ ನಿರ್ಮಾಣದಲ್ಲಿ ಬಳಸಲಾಗಿದೆ. ಕೊಯಿರಬೆಟ್ಟ ಚಪ್ಪಡಿಕಲ್ಲುಗಳಿಗೆ ಪ್ರಸಿದ್ಧ. ಹೊರದೇಶಗಳಿಗೂ ಇಲ್ಲಿಂದ ಚಪ್ಪಡಿಕಲ್ಲುಗಳನ್ನು ರಫ್ತು ಮಾಡುತ್ತಾರೆ. ತಾಲ್ಲೂಕಿನಲ್ಲಿ ಕೆಂಪು ಲ್ಯಾಟರೈಟ್ ಮತ್ತು ಫಲವತ್ತಾದ ಜೇಡಿ ಮಿಶ್ರಿತ ಮರಳು ಮಣ್ಣು ಇದೆ. ಈ ತಾಲ್ಲೂಕು ಹಿಂದೆ ದಂಡಕಾರಣ್ಯದ ಕುಂದಾರಣ್ಯದ ಭಾಗವಾಗಿತ್ತೆಂದು ಹೇಳುತ್ತಾರೆ. ತಾಲ್ಲೂಕಿನ ಎತ್ತರ ಪ್ರದೇಶಗಳಲ್ಲಿ ಕುರುಚಲು ಗಿಡಗಳ ಕಾಡುಗಳು ಇವೆ. ಕೆಲವು ರಾಜ್ಯ ಕಾಡುಗಳು ಮತ್ತು ರಕ್ಷಿತ ಕಾಡುಗಳು, ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಹರಿಯುವ ದಕ್ಷಿಣ ಪಿನಾಕಿನಿ ಸ್ವಲ್ಪ ದೂರ ಹೊಸ ಕೋಟೆ ತಾಲ್ಲೂಕನ್ನು ಬೇರ್ಪಡಿಸಿ ದಕ್ಷಿಣಾಭಿಮುಖವಾಗಿ ಹರಿಯುವುದು. ವಿಜಯಪುರದ ದಕ್ಷಿಣದಲ್ಲಿ ಈ ನದಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ತಾಲ್ಲೂಕಿನಲ್ಲಿರುವ ನದಿಯು ಬಲ ದಂಡೆಯ ಭೂಭಾಗಕ್ಕೆ ಇದರ ಜಲಾಶ್ರಯವಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಈ ನದಿಯು ಪ್ರದೇಶದಲ್ಲಿ ಅನೇಕ ಕೆರೆ ಮತ್ತು ಬಾವಿಗಳಿವೆ. ಈ ತಾಲ್ಲೂಕಿನ ಅತಿ ದೊಡ್ಡಕೆರೆ ಅಣ್ಣೇಶ್ವರದ ಹತ್ತಿರವಿದ್ದು ಮತ್ತೊಂದು ದೊಡ್ಡ ಕೆರೆ ವಿಜಯಪುರದ ಪಶ್ಚಿಮಕ್ಕೆ ಇದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 701 ಮಿಮೀ. ರಾಗಿ ಈ ತಾಲ್ಲೂಕಿನ ಪ್ರಮುಖ ಆಹಾರ ಬೆಳೆ, ಜೋಳ, ಅವರೆ, ಕಡಲೆ, ಎಣ್ಣೆ ಕಾಳು ಉಳಿದ ಬೆಳೆಗಳು. ಬಾವಿಗಳಿಂದ ಕೆರೆಗಳಿಂದ ಭೂಮಿ ನೀರಾವರಿಗೆ ಒಳಪಟ್ಟಿದೆ. ಆಲೂಗೆಡ್ಡೆ, ಮೆಣಸಿನಕಾಯಿ, ಹೂಕೋಸು, ಎಲೆಕೋಸು, ಬಟಾಣಿ, ಈರುಳ್ಳಿ, ಗಜ್ಜರಿ, ಕೆಂಪು ಮೂಲಂಗಿ ಇಲ್ಲಿಯ ಪ್ರಮುಖ ತರಕಾರಿ ವ್ಯಾಪಾರಿ ಬೆಳೆಗಳು. ಕಬ್ಬು, ಬಾಳೆ ಮತ್ತು ಗೋವಿನ ಜೋಳ ಸಹ ಬೆಳೆಯುತ್ತಾರೆ. ಬತ್ತ, ಉಪ್ಪುನೇರಳೆ, ದ್ರಾಕ್ಷಿ ಇತರ ಬೆಳೆಗಳು. ಆವತಿ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ದ್ರಾಕ್ಷಿಯನ್ನು ಹೆಚ್ಚು ಬೆಳೆಯುತ್ತಾರೆ. ದೇವನಹಳ್ಳಿಯ ಚಕ್ಕೋತ ಪ್ರಸಿದ್ಧವಾದುದು.

ಈ ತಾಲ್ಲೂಕಿನಲ್ಲಿ ದೇವನಹಳ್ಳಿ ಮತ್ತು ವಿಜಯಪುರ - ಈ ಎರಡು ಪಟ್ಟಣಗಳಿವೆ. ಬಾಗಲೂರು, ಮಾರೇನಹಳ್ಳಿ, ಬೂದಿಗೆರೆ, ಹುಣಸಮಾರನಹಳ್ಳಿ, ಕೊಡಿಗೆನಹಳ್ಳಿ, ಚಿಕ್ಕಜಾಲ, ಉತ್ತನಹಳ್ಳಿ, ಗಂಗಾವರ, ಚೌಡಪ್ಪನಹಳ್ಳಿ, ಮೈಲನಹಳ್ಳಿ, ಎಲಿಯೂರು, ಕೋರಮಂಗಲ, ಆವತಿ, ಹಾರೋಹಳ್ಳಿ, ಬಿಜ್ಜವಾರ, ಕಾರಹಳ್ಳಿ, ಕೊಯಿರ, ವಿಶ್ವನಾಥಪುರ, ನವಂತ್ಸ, ಅರದೇಶನಹಳ್ಳಿ ಮತ್ತು ಬೆಟ್ಟಹಲಸೂರು ಇಲ್ಲಿನ ಮುಖ್ಯ ಗ್ರಾಮಗಳು. ಕಲ್ಲುಚಪ್ಪಡಿಗೆ ಕೊಯಿರ ಗ್ರಾಮವೂ ರೇಷ್ಮೆ ಕೈಗಾರಿಕೆಗೆ ವಿಜಯಪುರ ಮತ್ತು ಬಾಗಲೂರುಗಳೂ ಪ್ರಸಿದ್ಧ. ತಾಲ್ಲೂಕಿನ ಪೂರ್ವಭಾಗದಲ್ಲಿರುವ ನಲ್ಲೂರು ಇತಿಹಾಸಪ್ರಸಿದ್ಧ ಸ್ಥಳ. ಕುಂದಾಣ (ನೋಡಿ) ಎಂಬಲ್ಲಿ ಹೊಯ್ಸಳ ದೊರೆ ರಾಮನಾಥ 14ನೆಯ ಶತಮಾನದಲ್ಲಿ ಆಳುತ್ತಿದ್ದ.

ತಾಲ್ಲೂಕಿನ ಮಧ್ಯದಲ್ಲೇ ಬೆಂಗಳೂರು-ಚಿಕ್ಕಬಳ್ಳಾಪುರ ರೈಲುಮಾರ್ಗ ಹಾದು ಹೋಗಿದ್ದು ಬೆಟ್ಟಹಲಸೂರು, ದೊಡ್ಡಜಾಲ, ದೇವನಹಳ್ಳಿ ಮತ್ತು ಆವತಿಯಲ್ಲಿ ರೈಲ್ವೆ ನಿಲ್ದಾಣಗಳಿವೆ. ದೊಡ್ಡಬಳ್ಳಾಪುರ -ದೇವನಹಳ್ಳಿ-ಶಿಡ್ಲಘಟ್ಟ, ಬೆಂಗಳೂರು-ದೇವನಹಳ್ಳಿ-ನಂದೀದುರ್ಗ, ಬೆಂಗಳೂರು - ದೇವನಹಳ್ಳಿ-ಚಿಕ್ಕಬಳ್ಳಾಪುರ, ನಂದೀದುರ್ಗ-ವಿಜಯಪುರ-ಶಿಡ್ಲಘಟ್ಟ. ಕೊಡಿಗೇನಹಳ್ಳಿ-ಬೂದಿಗೆರೆ-ಬೆಂಗಳೂರು ಮತ್ತು ದೇವನಹಳ್ಳಿ-ಚನ್ನರಾಯಪಟ್ಟಣ ರಸ್ತೆಗಳು ಈ ತಾಲ್ಲೂಕಿನ ಮುಖ್ಯ ರಸ್ತೆಗಳಾದ್ದು ಇವು ತಾಲ್ಲೂಕಿನ ವ್ಯಾಪಾರವಾಣಿಜ್ಯಾಭಿವೃದ್ಧಿಗೆ ಸಹಕಾರಿಯಾಗಿವೆ. ಈ ತಾಲ್ಲೂಕಿನ ವಿಜಯಪುರದಲ್ಲಿ ಪುರಸಭೆ ಮತ್ತು ದೇವನಹಳ್ಳಿಯಲ್ಲಿ. ನಗರಸಭೆ ಇದೆ.

ದೇವನಹಳ್ಳಿ ಈ ತಾಲ್ಲೂಕು ಮತ್ತು ಹೋಬಳಿಯ ಆಡಳಿತಕೇಂದ್ರ. ಬೆಂಗಳೂರು ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ, ಬೆಂಗಳೂರು ನಗರಕ್ಕೆ 39 ಕಿಮೀ ದೂರದಲ್ಲಿದೆ. ಬೆಂಗಳೂರು ಚಿಕ್ಕಬಳ್ಳಾಪುರದ ರೈಲು ಮಾರ್ಗ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. ಜನಸಂಖ್ಯೆ 23,190.

ದೇವನಹಳ್ಳಿಯಲ್ಲಿ ನಗರಸಭಾಡಳಿತವಿದೆ. ಉತ್ತಮ ಮಾರ್ಗಸಂಪರ್ಕ ಮತ್ತು ರೈಲ್ವೆ ನಿಲ್ದಾಣವಿದ್ದು ವ್ಯಾಪಾರಕೇಂದ್ರವಾಗಿದೆ. ದೇವನಹಳ್ಳಿ ಬಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಯೋಜನೆ ಕಾರ್ಯಗತವಾಗುವ ಹಂತದಲ್ಲಿದೆ. ರೇಷ್ಮೆ ಕಾರ್ಖಾನೆ ಇದೆ. ಪ್ರತಿ ಬುಧವಾರ ಇಲ್ಲಿ ಸಂತೆ ಸೇರುತ್ತದೆ.

ದೇವನಹಳ್ಳಿ ಮೂಲ ಹೆಸರು ದೇವನದೊಡ್ಡಿ. ಕಂಚಿಯಿಂದ ವಲಸೆ ಬಂದ ಆವತಿ ರಾಜವಂಶದ ಮಲ್ಲಬೈರೇಗೌಡ ಈ ಸ್ಥಳದಲ್ಲಿ ಕೋಟೆಯೊಂದನ್ನು ಕಟ್ಟಿದ (1501). ಇಲ್ಲಿಈತನ ವಂಶದವರು ಆಳಿದರು. 1749ರಲ್ಲಿ ದಳವಾಯಿ ನಂಜರಾಜಯ್ಯ ಇದನ್ನು ವಶಪಡಿಸಿಕೊಂಡು ಮೈಸೂರು ಸಂಸ್ಥಾನಕ್ಕೆ ಸೇರಿಸಿದ. ಹೈದರನ ಶೌರ್ಯ ಮೊದಲು ಬೆಳಕಿಗೆ ಬಂದಿದ್ದು ಈ ಸಂದರ್ಭದಲ್ಲಿ ನಡೆದ ಯುದ್ಧದಲ್ಲಿಯೇ, 1753ರಲ್ಲಿ ಟಿಪ್ಪು ಈ ಊರಿನಲ್ಲಿ ಜನಿಸಿದ. ಕೋಟೆಯ ಪಶ್ಚಿಮಕ್ಕೆ ಹೈದರನ ಮನೆಯಿದ್ದ ಸ್ಥಳವನ್ನೂ ಟಿಪ್ಪು ಹುಟ್ಟಿದ ಎಡೆಯನ್ನೂ ಇಲ್ಲಿನ ಜನರು ತೋರಿಸುತ್ತಾರೆ. ಹಾಳಾಗಿದ್ದ ಇಲ್ಲಿನ ಕೋಟೆಯನ್ನು ಹೈದರ್ ಅಧಿಕಾರಕ್ಕೆ ಬಂದಾಗ ಮತ್ತೆ ಕಟ್ಟಿಸಿದ್ದ. ದೇವನಹಳ್ಳಿಗೆ ಟಿಪ್ಪು ಯೂಸಫಾಬಾದ್ (ಸುಂದರ ನೆಲೆ) ಎಂದು ಹೆಸರಿಟ್ಟ. ಆದರೆ ಅದು ರೂಢಿಗೆ ಬರಲಿಲ್ಲ. ಹೈದರ್ ಮತ್ತು ಟಿಪ್ಪು ಇವರ ಕಾಲದಲ್ಲಿ ದೇವನಹಳ್ಳಿ ಪ್ರಮುಖ ಪಟ್ಟಣವಾಗಿತ್ತು. 1791ರಲ್ಲಿ ಕಾರ್ನ್‌ವಾಲಿಸ್ ಇದನ್ನು ವಶಪಡಿಸಿಕೊಂಡ.

ದೇವನಹಳ್ಳಿಯಲ್ಲಿ ಆಗಿನ ಕೋಟೆಕೊತ್ತಲಗಳು, ಸುಲ್ತಾನ್‌ಪೇಟೆ, ಬತೇರಿ, ಪೂರ್ಣಯ್ಯನ ಸರೋವರ ಮೊದಲಾದವುಗಳ ಅವಶೇಷಗಳಿವೆ. ಟಿಪ್ಪು ಹುಟ್ಟಿದ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವಾಗಿ ರಕ್ಷಿಸಲಾಗಿದೆ. ಹಳೆಯದಾದ ನಂಜುಂಡೇಶ್ವರ ದೇವಾಲಯ, ವೇಣುಗೋಪಾಲಸ್ವಾಮಿ ಗುಡಿ, ಸಿದ್ದೇಶ್ವರ ಗುಡ್ಡಿ, ಆಂಜನೇಯ ಮತ್ತು ಗಂಗಮ್ಮ ಗುಡಿಗಳಿವೆ. ವೇಣುಗೋಪಾಲ ಮತ್ತು ನಂಜುಂಡೇಶ್ವರ ಗುಡಿಗಳು ಪಾಳೆಯಗಾರರ ಕಾಲದ ಕೃತಿಗಳು. ಆ ಕಾಲದ ಅನೇಕ ಪೌರಾಣಿಕ ಶಿಲ್ಪಗಳು ಈ

ದೇವಾಲಯಗಳಲ್ಲಿವೆ. ಪ್ರತಿ ಚೈತ್ರ ಹುಣ್ಣಿಮೆಯದು ವೇಣುಗೋಪಾಲಸ್ವಾಮಿ ಜಾತ್ರೆ ನಡೆಯುತ್ತದೆ (ಆರ್.ಎಸ್.ಆರ್.)

**ದೇವನಹಳ್ಳಿ ಪಾಳೆಯಗಾರರು :** 16ನೆಯ ಶತಮಾನದಾರಭ್ಯ 18ನೆಯ ಶತಮಾನದ ಮಧ್ಯಭಾಗದವರೆಗೆ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಿಂದ ಆ ಸುತ್ತಣ ಪ್ರಾಂತ್ಯವನ್ನು ಆಳುತ್ತಿದ್ದ ಪಾಳೆಯಗಾರರು. ದೇವನಹಳ್ಳಿಗೆ ಮೊದಲು ದೇವ ಎಂಬುವನು ಮುಖ್ಯಸ್ಥನಾಗಿದ್ದುದರಿಂದ ಅದಕ್ಕೆ ದೇವನದೊಡ್ಡಿ ಎಂಬ ಹೆಸರಿದ್ದು ಒಂದು ಚಿಕ್ಕ ಹಳ್ಳಿಯಾಗಿತ್ತಂತೆ. ಕಂಚಿಯಿಂದ ನಿರಾಶ್ರಿತನಾಗಿ ಬಂದು ಆವತಿಯಲ್ಲಿ ನೆಲೆಸಿದ್ದವನೊಬ್ಬನ ಮಗ ಮಲ್ಲಬೈರೇಗೌಡ 1501ರಲ್ಲಿ ದೇವನದೊಡ್ಡಿಯಲ್ಲಿ ಕೋಟೆಯನ್ನು ಕಟ್ಟಿ ಅದಕ್ಕೆ ದೇವನಹಳ್ಳಿ ಅಥವಾ ದೇವಂಡಹಳ್ಳಿ ಎಂದು ಹೆಸರಿಟ್ಟು, ಅದರ ಆಡಳಿತವನ್ನು ಆತನ ಸಹೋದರ ಸಣ್ಣ ಬೈರೇಗೌಡನಿಗೆ ವಹಿಸಿದ. ಸಣ್ಣ ಬೈರೇಗೌಡ ನಲವತ್ತು ವರ್ಷಗಳ ಕಾಲ ಆಳಿ ಆ ಪ್ರದೇಶವನ್ನು ಅಭಿವೃದ್ಧಿಗೆ ತಂದ. ಅವನ ಮಗ ಬೈರೇಗೌಡ ಇಪ್ಪತ್ತೈದು ವರ್ಷಗಳ ಕಾಲ ಆಳಿದ. ಅನಂತರ ಪುತ್ರಾನುಕ್ರಮವಾಗಿ ದಯಾಳು ಬೈರೇಗೌಡ ಮೂವತ್ತೇಳು ವರ್ಷ, ಮುದ್ದಬೈರೇಗೌಡ ಇಪ್ಪತ್ತು ವರ್ಷ, ಇಮ್ಮಡಿ ಬೈರೇಗೌಡ ಮೂವತ್ತೇಳು ವರ್ಷ, ಗೋಪಾಲಗೌಡ ಮೂವತ್ತೈದು ವರ್ಷ, ದೊಡ್ಡಬೈರೇಗೌಡ ಐವತ್ತನಾಲ್ಕು ವರ್ಷ ಪಾಳೆಯಗಾರರಾಗಿದ್ದರು. ದೊಡ್ಡಬೈರೇಗೌಡನ ಮಗ ತಂಗಪ್ಪಗೌಡ ಹತ್ತು ತಿಂಗಳು ಆಳಿ ಮಕ್ಕಳಿಲ್ಲದೆ ಮಡಿದ. ಅನಂತರ ಅವನ ಬಂಧು ಚಿಕ್ಕ ಬಲ್ಲಾಪುರದ ಚಿಕ್ಕಪ್ಪ ಗೌಡ ಪಾಳೆಯಗಾರನಾದ. ಇವನ ಕಾಲದಲ್ಲಿ ಮೈಸೂರಿನ ದಳವಾಯಿ ನಂಜರಾಜಯ್ಯ ದೇವನಹಳ್ಳಿಗೆ ಮುತ್ತಿಗೆ ಹಾಕಿದ (1749). ಈ ಮುತ್ತಿಗೆ ಎಂಟು ತಿಂಗಳುಗಳ ಕಾಲ ಮುಂದುವರಿದು ಕೊನೆಗೆ ಪಾಳೆಯಗಾರ ಸೋತ. ದೇವನಹಳ್ಳಿ ಮೈಸೂರಿನ ಪ್ರಭುತ್ವವನ್ನು ಒಪ್ಪಿಕೊಂಡಿತು. ಹೈದರ್ ಅಲಿಯ ಯುದ್ಧ ಪರಾಕ್ರಮ ಮೊದಲ ಬಾರಿಗೆ ಬೆಳಕಿಗೆ ಬಂದುದು ಈ ಯುದ್ಧದಲ್ಲಿ. ಹೈದರ್ ದೇವನಹಳ್ಳಿಗೆ ತೆರಳಿದಾಗ, ಚಿಕ್ಕಪ್ಪಗೌಡ, ಗುತ್ತಿಯ ನಾಯಕ ಮುರಾರಿನಾಯಕನ ಸ್ನೇಹವನ್ನು ಸಂಪಾದಿಸಿ, ಆತನ ಸೈನ್ಯವನ್ನು ಚಿಕ್ಕಬಳ್ಳಾಪುರದ ಕೋಟೆಯ ರಕ್ಷಣೆಗೆ ನೇಮಿಸಿ, ತಾನು ನಂದಿದುರ್ಗಕ್ಕೆ ಪಲಾಯನ ಮಾಡಿದ. ಆದರೆ ಹೈದರ್ ಚಿಕ್ಕಪ್ಪಗೌಡನನ್ನು ಸೆರೆಹಿಡಿದು ಅವನನ್ನು ಮತ್ತು ಅವನ ಕುಟುಂಬದವರನ್ನು ಬೆಂಗಳೂರಿನಲ್ಲಿ ಸೆರೆಯಲ್ಲಿಟ್ಟ. ಅಲ್ಲಿ ಚಿಕ್ಕಪ್ಪಗೌಡ ಮೃತನಾದ. ದೇವನಹಳ್ಳಿ ಮೈಸೂರು ರಾಜ್ಯಕ್ಕೆ ಸೇರಿಹೋಯಿತು. (ಎ.ವಿ.ವಿ.,; ಎಂ.ಕೆ.ಬಿ.)

**ದೇವನೂರು :** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿ ಕಡೂರಿನಿಂದ ಆಗ್ನೇಯಕ್ಕೆ 21 ಕಿಮೀ ದೂರದಲ್ಲಿರುವ ಗ್ರಾಮ. ಇದು ಜನಪ್ರಿಯ ಜೈಮಿನಿ ಭಾರತವನ್ನು ಬರೆದ ಕವಿ ಲಕ್ಷ್ಮೀಶನ ಜನ್ಮಸ್ಥಳ ಹಾಗೂ ಪುರಾಣ ಪ್ರಸಿದ್ಧವಾದ ಸ್ಥಳ. ನವಸಿದ್ಧರು ನಿಂತು ತಪಸ್ಸು ಮಾಡಿದ ಕ್ಷೇತ್ರವೆಂದೂ ಅಮರಪುರ, ಗೀರ್ವಾಣಪುರ, ಸುರಪುರ, ದೇವಪುರವೆಂಬ ಹೆಸರುಗಳಿಂದ ಸಂಸ್ಕೃತಿಯ ಕೇಂದ್ರವಾಗಿತ್ತೆಂದೂ ಉಲ್ಲೇಖಗಳಿವೆ.

ದೇವನೂರು 13ನೆಯ ಶತಮಾನದಿಂದಲೂ ಪ್ರಸಿದ್ಧವಾಗಿತ್ತು. 1234ರ ಇಲ್ಲಿನ ಒಂದು ಶಾಸನ ಈ ಊರಿಗೆ ಲಕ್ಷ್ಮೀನಾರಾಯಣಪುರವೆಂದು ಪ್ರತಿನಾಮವಿತ್ತೆಂದು ತಿಳಿಸುತ್ತದೆ. ಕೆರೆಯ ಬಳಿ ಹಲವು ಹೊಯ್ಸಳ ಕೃತಿಗಳ ಅವಶೇಷಗಳು ದೊರಕಿವೆ. ಇಲ್ಲಿ ಒಂದು ರಾಮೇಶ್ವರ ದೇವಾಲಯ, ಒಂದು ಜೈನಬಸದಿ ಇತ್ತೆಂದು ಹೇಳಲಾಗುತ್ತದೆ.

ಈಗಿರುವ ಲಕ್ಷ್ಮೀಕಾಂತ ಅಥವಾ ಲಕ್ಷ್ಮೀನಾರಾಯಣ ದೇವಾಲಯ ಸು. 17ನೆಯ ಶತಮಾನದಲ್ಲಿ ಕಣಶಿಲೆಯಲ್ಲಿ ಕಟ್ಟಿದ ಸಾಮಾನ್ಯ ಕಟ್ಟಡ. ಅದರ ಒಳಗಿರುವ ವಿಗ್ರಹ ಹೊಯ್ಸಳ ಶೈಲಿಯದು. ಇದರಲ್ಲಿ ಗರ್ಭಗೃಹ, ಅಂತರಾಳ, ಒಳನವರಂಗ ಮತ್ತು ಹೊರನವರಂಗ ಇವೆ. ಒಳನವರಂಗದಲ್ಲಿ ಆಳ್ವಾರುಗಳು ಮೊದಲಾದ ವಿಗ್ರಹಗಳಿವೆ. ಅವುಗಳಲ್ಲಿ ಒಂದು ಲಕ್ಷ್ಮೀಶನದು (ಸ್ಥಳೀಯ ಹೆಸರು ಲಕ್ಷ್ಮೀಕಾಂತ ಹೆಬ್ಬಾರ). ಹೊರನವರಂಗದಲ್ಲಿ ವಿಶ್ವಕ್ಸೆನ, ಭೂದೇವಿ ಮೊದಲಾದ ದೇವವಿಗ್ರಹಗಳಿವೆ. ದೇವಾಲಯ ಪ್ರಾಕಾರದ ಹಿಂಗೋಡೆಯ ಬಳಿಯ ಮಂಟಪವೊಂದನ್ನು ಲಕ್ಷ್ಮೀಶನ ಜನ್ಮಸ್ಥಳವೆಂದು ತೋರಿಸಲಾಗುತ್ತದೆ. ಲಕ್ಷ್ಮೀಶನ ಮನೆಯ ನಿವೇಶನದ ಬಳಿ ಇರುವ ಒಂದು ಮಂಟಪ ಕವಿಯೇ ಕಟ್ಟಿಸಿದ್ದೆಂದು ಪ್ರತೀತಿ.

ಈ ಊರಿನಲ್ಲಿ ಒಂದು ಸಿದ್ದೇಶ್ವರ ದೇವಾಲಯವೂ ಇದೆ. ಇದು ಹೊಯ್ಸಳ ಕಾಲದ ಸರಳ ಶೈಲಿಯಲ್ಲಿರುವ ಕಟ್ಟಡ. ದೇವಾಲಯದ ಬಳಿ ಸೂರ್ಯ, ಸಪ್ತಮಾತೃಕೆಯರು, ಗಣೇಶ ಮೊದಲಾದ ಶಿಲ್ಪಗಳಿವೆ. ಈ ದೇವಾಲಯದಲ್ಲಿರುವ ಲಿಂಗವನ್ನು ಜಗನ್ನಾಥ ವಿಜಯವನ್ನು ಬರೆದ ಕವಿ ರುದ್ರಭಟ್ಟ ನರ್ಮದೆಯಿಂದ ತಂದು ಸ್ಥಾಪಿಸಿದನೆಂದು ಪ್ರತೀತಿ. (ಕೆ.ಟಿ.ಆರ್.)

**ದೇವನೂರು ಮಹಾದೇವ :** 1948- ಕನ್ನಡದ ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ದಲಿತ ಸಂವೇದನೆಗಳನ್ನು ಅತ್ಯಂತ ಸೃಜನಶೀಲವಾಗಿ ಪ್ರಕಟಿಸಿದ ಪ್ರಸಿದ್ಧ ಕಥೆಗಾರ, ಕಾದಂಬರಿಕಾರ ಹಾಗೂ ಸಾಮಾಜಿಕ ಹೋರಾಟಗಾರ. ಇವರ ನಿಜವಾದ ಹೆಸರು ಎನ್. ಮಹಾದೇವಯ್ಯ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೇವನೂರಲ್ಲಿ 10 ಜೂನ್ 1948ರಂದು ಜನಿಸಿದರು. ತಂದೆ ನಂಜಯ್ಯ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದರು. ತಾಯಿ ನಂಜಮ್ಮ. ದೇವನೂರು, ನಂಜನಗೂಡು, ಮೈಸೂರುಗಳಲ್ಲಿ ಮಹಾದೇವ ಅವರ ವಿದ್ಯಾಭ್ಯಾಸ ಜರುಗಿತು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಪದವಿ ಪಡೆದರು. ಅನಂತರ ಕೆಲಕಾಲ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಅಧ್ಯಾಪಕ - ಸಂಶೋಧಕರಾಗಿ ಕಾರ್ಯನಿರ್ವಹಿಸಿದರು (1989). ಅನಂತರದ ವರ್ಷದಲ್ಲಿ ಪೂರ್ಣಾವಧಿ ವ್ಯವಸಾಯಗಾರರಾದರು.

ವಿದ್ಯಾಭ್ಯಾಸ ಮಾಡುತ್ತಿದ್ದ ದಿನಗಳಲ್ಲಿಯೇ ಮಹಾದೇವ ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು. ಆರಂಭದಲ್ಲಿ ಇವರು ಬರೆದದ್ದು ಕವನಗಳನ್ನು ನವ್ಯಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿದ್ದ ಕಾಲದಲ್ಲಿ ಇವರು ಕಥಾ ರಚನೆಯಲ್ಲಿ ತೊಡಗಿದ್ದರು. ಅಮಾಸ, ಡಾಂಬರು ಬಂದುದು, ಮಾರಿಕೊಂಡವರು - ಮೊದಲಾದ ದಲಿತ ಸಂವೇಧನೆಯನ್ನೊಳಗೊಂಡ ಮೌಲಿಕ ಕಥೆಗಳನ್ನು ಪ್ರಕಟಿಸಿದರು. ಕನ್ನಡ ಸಾಹಿತ್ಯ ವಲಯದಲ್ಲಿ ಈ ಕಥೆಗಳು ಬಹುಬೇಗ ಚರ್ಚೆಯ ವಸ್ತುಗಳಾದುವು. ಜೊತೆಗೆ ನವ್ಯೋತ್ತರದ ಅಗ್ರಗಣ್ಯ ಲೇಖಕನೆನಿಸುವ ಸೂಚನೆಗಳನ್ನು ನೀಡಿದವು. ಕಾಲಕ್ರಮದಲ್ಲಿ ಇವರು ದ್ಯಾವನೂರು (ಕಥಾಸಂಕಲನ), ಒಡಲಾಳ, ಕುಸುಮಬಾಲೆ (ಕಾದಂಬರಿ) ಈ ಕೃತಿಗಳನ್ನು ಹೊರತಂದರು. ಸಂಖ್ಯಾದೃಷ್ಟಿಯಿಂದ ಕೃತಿಗಳು ಕಡಿಮೆ ಎನಿಸಿದರೂ ಸತ್ತ್ವದ ದೃಷ್ಟಿಯಿಂದ, ಹಿರಿಮೆಯ ದೃಷ್ಟಿಯಿಂದ ಮಹತ್ತ್ವದ ಕೃತಿಗಳು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ರೂಢಿಗೆ ಬಂದ ಶಿಕ್ಷಣ ಕ್ರಮ ಅಂಬೇಡ್ಕರ್ ಚಳವಳಿಯ ಪ್ರಭಾವ ಮತ್ತು ಆಧುನಿಕ ವಿದ್ಯಮಾನಗಳಿಂದಾದ ದೃಷ್ಟಿಕೋನಗಳಿಂದ ದಲಿತರಲ್ಲಿ ಜಾಗೃತಿ ಮೂಡಿ ದಲಿತ ಲೇಖಕರು, ದಲಿತ ಪ್ರಪಂಚದ ಒಳ ಹೊರಗನ್ನು ಅದುವರೆಗೆ ಕಂಡರಿಯದ ರೀತಿಯಲ್ಲಿ ಅನಾವರಣ ಮಾಡತೊಡಗಿದರು. ಶತಶತಮಾನಗಳಿಂದ ದಲಿತರನ್ನು ಕಾಡುತ್ತ ಬಂದಿರುವ ಅಸ್ಪೃಶ್ಯತೆ, ಧಾರ್ಮಿಕ, ಸಾಮಾಜಿಕ ಅಮಾನುಷ ಪದ್ಧತಿಗಳು, ಅಪಮಾನದ ಸಂಗತಿಗಳು ಸಾಹಿತ್ಯದಲ್ಲಿ ಅನಾವರಣಗೊಳ್ಳತೊಡಗಿದವು. ದಲಿತನೊಬ್ಬನ ಸಂಕಷ್ಟಗಳು ಸಾಮಾಜಿಕ ಸಂಘರ್ಷವೊಂದಕ್ಕೆ ಪ್ರೇರಣೆಯಾಗಬೇಕು ಎಂಬುದು ದಲಿತ ಸಾಹಿತ್ಯದ ಮುಖ್ಯ ಲಕ್ಷಣವೆನಿಸಿತು. ಪೂರ್ಣವಾಗಿ ದಲಿತ ಲೋಕವನ್ನು, ದಲಿತ ಸಂಸ್ಕೃತಿಯ ಸೂಕ್ಷ್ಮಗಳನ್ನು ತೆರೆದಿಡುವುದೇ ಇಲ್ಲಿ ಪ್ರಮುಖ ವಿಷಯವಾಯಿತು. ಮಹಾದೇವ ಅವರ ಕಥಾ ಸಾಹಿತ್ಯ ಈ ಮಾತಿಗೆ ಉದಾಹರಣೆಯಾಗಿದೆ. ಸಾಮಾನ್ಯವಾಗಿ ಇವರ ಕಥೆಗಳಲ್ಲಿ ಬರುವ ದಲಿತರ ವಾಸಸ್ಥಾನ, ಹಟ್ಟಿ, ಹರಿದಿರುವ ಬಟ್ಟೆ, ಊರಿನ ದಾರಿಯ ವಿವರಗಳು ಕುವೆಂಪು ಅವರ ಕಾದಂಬರಿಗಳಲ್ಲಿನ ಕಾಡಿನ ವಿವರಗಳಂತೆ ದಟ್ಟವಾಗಿರುವುದನ್ನು ಕಾಣಬಹುದು. ಒಂದು ದಹನದ ಕತೆಯಲ್ಲಿ ನಾಯಕ ಕಾಣುವ ತನ್ನ ಹಟ್ಟಿಯ ವರ್ಣನೆ ಈ ಮೇಲಿನ ಮಾತಿಗೆ ಉದಾಹರಣೆ ಎಂಬಂತಿದೆ. ಇಂಥ ಬರೆವಣಿಗೆಯ

ಮೂಲಕ ಪ್ರಪ್ರಥಮಬಾರಿಗೆ ದಲಿತರ ಊರು ಕೇರಿಗಳ ವಿಷಯ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಯಿತು.

ದ್ಯಾವನೂರು ಕಥಾಸಂಕಲನದ ಅನಂತರ ಬಂದ ಒಡಲಾಳ ಕಾದಂಬರಿ ದಲಿತ ಕುಟುಂಬಗಳ ಬದುಕನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ ಕೃತಿ. ದಲಿತ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುವಲ್ಲಿ ಮಹಾದೇವ ಯಶಸ್ವಿ ಬರೆಹಗಾರರಾಗಿದ್ದಾರೆ. ಸಾಕವ್ವ ಈ ಕಾದಂಬರಿಯ ಕೇಂದ್ರ ಪಾತ್ರ. ಇವಳ ಸುತ್ತ ಹಬ್ಬಿರುವ ವರ್ತಮಾನದ ಶೋಷಣೆಮೂಲ ಬದುಕಿನ ನಿರೂಪಣೆಯ ಈ ಬರವಣಿಗೆಗೆ ಲಾಲಿತ್ಯವಿದೆ. ಹಾಸ್ಯವಿದೆ, ಮೇಲುದನಿ ಇದೆ, ಅಭಿವ್ಯಕ್ತಿ ಕ್ರಮದಲ್ಲಿ ಕುವೆಂಪು ಮತ್ತು ಮಾಸ್ತಿಯವರನ್ನು ನೆನಪಿಸುವಂತಿದೆ. ಅಕ್ಷರಮಟ್ಟಿಗೆ ದಲಿತ ಸಂವೇದನೆ ಪ್ರಕಟವಾಗಿದೆ.

ಕುಸುಮಬಾಲೆ ಮಹಾದೇವ ಅವರ ಮೂರನೆಯ ಕೃತಿ. ಈ ಕಾದಂಬರಿಯ ರಚನಾಸ್ವರೂಪ ವಿಶಿಷ್ಟವಾದದ್ದು. ನಿರ್ದಿಷ್ಟ ಕಾಲದಲ್ಲಿ ಕತೆಯನ್ನು ಹೇಳದೆ ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಗಳಲ್ಲಿ ಹೇಳತೊಡಗಿರುವುದು ಕಂಡುಬರುತ್ತದೆ. ಹೊಲೆಯರ ಕೇರಿಯಲ್ಲಿ ಜರುಗುವ ಕಾರ್ಯಾಚರಣೆಗಳೆಲ್ಲ ವರ್ತಮಾನಕ್ಕೂ ಅಕ್ಕಮಹಾದೇವಮ್ಮ ಮತ್ತು ಯಾಡರ ವಿವರಗಳು ಭೂತಕಾಲಕ್ಕೂ ಪರ್ಯಾದ (ಕುಸುಮಳ ತಮ್ಮ), ಈರಿಯ ಮಗು ಕೆಂಪಿಯ ಗರ್ಭದಲ್ಲಿರುವ ಶಿಶು ಇವು ಭವಿಷ್ಯತ್ಕಾಲಕ್ಕೂ ಸಂಬಂಧಿಸಿದವಾಗಿವೆ. ಜೀವಾತ್ಮಕ್ಕೂ ಮಂಚಕ್ಕೂ ನಡೆಯುತ್ತಿದ್ದ ಸಂಭಾಷಣೆ, ಜೋತಮ್ಮಗಳ ನಡುವೆ ನಡೆಯುತ್ತಿದ್ದ ಚರ್ಚೆ, ಜನನ ಮರಣಗಳಿಗೆ ಸಂಬಂಧಿಸಿದ ಜಾನಪದಗಳು ಇತ್ಯಾದಿಗಳಲ್ಲೇ ಮತ್ತೊಂದು ಹಂತವನ್ನು ತಲುಪುವಂಥವು. ಅಲ್ಲಲ್ಲಿ ಕಲಸು ಮೇಲೋಗರವಾಗಿರುವ, ಎಲ್ಲೆಲ್ಲೋ ಹರಡಿಕೊಂಡಿರುವ ವಿವರಗಳನ್ನು ತುಂಬ ಎಚ್ಚರಿಕೆಯಿಂದ ಗಂಭೀರವಾಗಿ ಗಮನಿಸುತ್ತ ಕ್ರೋಡೀಕರಿಸುತ್ತ ಹೋದರೆ ಕಾದಂಬರಿಯ ಆರಂಭದಲ್ಲಿ ಲೇಖಕರು ಸಂಗ್ರಹಿಸಿಕೊಂಡಿರುವ ಕತೆಯನ್ನು ಅದರ ವಸ್ತುವನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಮಹಾದೇವ ಅವರ ಉಳಿದೆರಡು ಕೃತಿಗಳಿಗಿಂತ ಇದು ಭಿನ್ನ ಸ್ವರೂಪದ್ದಾಗಿದೆ. ಇಲ್ಲಿಯ ಭಾಷೆ ಅದುವರೆಗೆ ಕನ್ನಡ ಸಾಹಿತ್ಯದಲ್ಲಿ ದಾಖಲಾಗಿರದ ಗ್ರಾಮ್ಯ ಸೊಗಡಿನಿಂದ ಕೂಡಿದ್ದು ವಿಶಿಷ್ಟವಾಗಿದೆ. ಏನೂ ಅರಿಯದ ಪರ್ಯಾದನಂಥವರು ಪಡುವ ಸಂತೋಷ, ಕುಸುಮ ಈರಿಯಂಥವರು ಅನುಭವಿಸುವ ಯಾತನೆ, ತಮ್ಮ ಮಿತಿಯಲ್ಲಿಯೇ ಗಾರಸಿದ್ಧಮಾವ, ಯಾಡ, ಅಮಾಸ ಮೊದಲಾದವರು ಪಡುವ ಶ್ರಮ, ಸಂದಿಗ್ಧತೆಯ ಸಂದರ್ಭಗಳು ಬಂದೊದಗಿದ್ದರೂ ತಮ್ಮ ಜೀವನದಲ್ಲಿ ಸುಖ ಸಂತೋಷಗಳಿಗೆ ಧಕ್ಕೆಯನ್ನುಂಟುಮಾಡಿಕೊಳ್ಳಲಾರದ ಚೆನ್ನನ ಅಪ್ಪನಂಥ'ವರ ಲವಲವಿಕೆಯ ಬದುಕು ಇತ್ಯಾದಿಗಳೆಲ್ಲ ಸಂವೇದನಾಶೀಲ ಚೌಕಟ್ಟಿನೊಳಗೇ ನಡೆಯುತ್ತವೆ. ಹೀಗಾಗಿ ಇಲ್ಲಿಯ ಬದುಕಿನಲ್ಲಿ ವೈವಿಧ್ಯತೆ ಇದೆ. ಇದಕ್ಕೆ ಪ್ರೇರಕವಾಗಿರುವ ಪರಿಸರದ ಸಾಂಸ್ಕೃತಿಕ ವಿವರಗಳನ್ನು ಕೇವಲ ಚರ್ಚೆಗೆ, ಪರಿಶೀಲನೆಯ ಹಂತಕ್ಕೆ ಸೀಮಿತಗೊಳಿಸದೆ ಮೌಖಿಕ ಅಂಶಗಳನ್ನೆಲ್ಲಾ ಒಟ್ಟಾರೆಯಾಗಿ ಸಂಗ್ರಹಿಸಿ ಸುಂದರ ಕಥಾ ಚೌಕಟ್ಟಿನಲ್ಲಿ ಅಳವಡಿಸುವ ಕುಶಲಗಾರಿಕೆಯನ್ನು ಕಾದಂಬರಿಗಾರರು ಪ್ರದರ್ಶಿಸಿರುವುದು ಕಂಡುಬರುತ್ತದೆ.

60-70ರ ದಶಕದಲ್ಲಿನ ಲೋಹಿಯಾವಾದಿ ಸಮಾಜವಾದಿ ಪಕ್ಷ, ಸಮಾಜವಾದಿ ಯುವಜನಸಭಾದ ಚಟುವಟಿಕೆಗಳ ಪ್ರಭಾವಕ್ಕೆ ಒಳಗಾಗಿದ್ದ ಮಹಾದೇವ ಅವರ ವ್ಯಕ್ತಿತ್ವದ ಮೇಲೆ ಅನಂತಮೂರ್ತಿ, ಅಲನಹಳ್ಳಿಕೃಷ್ಣ ಮೊದಲಾದ ಲೇಖಕರ ಪ್ರಭಾವವೂ ಆಗಿತ್ತೆಂದು ಹೇಳಬಹುದು. ವಿದ್ಯಾರ್ಥಿ ದೆಸೆಯಲ್ಲಿಯೇ ನರ ಎಂಬ ಪ್ರತಿಭಟನಾ ಪತ್ರಿಕೆಯ ಸಂಪಾದಕ-ಪ್ರಕಾಶಕರಾಗಿದ್ದ ಮಹಾದೇವ ಅವರು 1975ರಲ್ಲಿ ಜನಪ್ರಕಾಶ ನಾರಾಯಣರು ಮೈಸೂರಿಗೆ ಬಂದಿದ್ದಾಗ ಸಾರ್ವಜನಿಕ ಸಭೆಯೊಂದರ ಅಧ್ಯಕ್ಷತೆ ವಹಿಸಿ ಗೌರವಕ್ಕೆ ಪಾತ್ರರಾಗಿದ್ದರು. ಇವರು 1979ರಲ್ಲಿ ದಲಿತ ಬಂಡಾಯ ಸಾಹಿತ್ಯ ಚಳವಳಿಯ ನಿಕಟ ಸಂಬಂಧ ಹೊಂದಿದ್ದ ದಲಿತಸಂಘರ್ಷ ಸಮಿತಿಯ ಪ್ರಧಾನ ಸಂಘಟಕರಾಗಿಯೂ ಕಾರ್ಯನಿರ್ವಹಿಸಿದರು. 1989ರಲ್ಲಿ ಅಮೆರಿಕದ ಅಯೋವಾ ವಿಶ್ವವಿದ್ಯಾಲಯದಲ್ಲಿ ನಡೆದ ಇಂಟರ್ ನ್ಯಾಷನಲ್ ರೈಟಿಂಗ್ ಪ್ರೋಗ್ರಾಮ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದರು. ಇವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಮಹಾದೇವ ಅವರ ಕಥಾ ಸಾಹಿತ್ಯದಲ್ಲಿ ಗಮನ ಸೆಳೆದ ಒಡಲಾಳ, ಕುಸುಮಬಾಲೆ ಮತ್ತು ಅಮಾಸ - ಇವೆಲ್ಲ ನಾಟಕಗಳಾಗಿ ರೂಪಾಂತರಗೊಂಡು ರಂಗಭೂಮಿಯಲ್ಲಿ ಯಶಸ್ವಿಯಾಗಿವೆ. 1984ರಲ್ಲಿ ಕಲ್ಕತ್ತೆಯ ಭಾರತೀಯ ಭಾಷಾಪರಿಷತ್ತು ಒಡಲಾಳಕ್ಕೆ ಪ್ರಶಸ್ತಿ ನೀಡಿ ಗೌರವಿಸಿದೆ. 1991ರಲ್ಲಿ ಕುಸುಮಬಾಲೆಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. 1995ರಲ್ಲಿ ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಲಭಿಸಿವೆ. ಇವರ ಕೃತಿಗಳು ಇಂಗ್ಲಿಷ್ ಹಾಗೂ ಮತ್ತಿತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. "ಯಾರ ಜಪ್ತಿಗೂ ಸಿಗದ ನವಿಲುಗಳು" ಇವರ ಸಾಹಿತ್ಯ ಕುರಿತ ಚರ್ಚೆ ಹಾಗೂ ವಿಮರ್ಶೆಯ ವಿಶೇಷ ಬಗೆಯ ಕೃತಿಯಾಗಿದೆ. (ಜಿ.ಆರ್.ಟಿ)

**ದೇವಪುರ** : ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಒಂದು ಐತಿಹಾಸಿಕ ಗ್ರಾಮ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಸ್ಥಳ ಪ್ರಾಮುಖ್ಯ ಪಡೆದಿತ್ತು. ಪ್ರಾಚೀನ ನಗರ ಮಂಡಲಕ್ಕೆ ಈ ಸ್ಥಳ ಸೇರಿದ್ದಾಗಿ ತಿಳಿದುಬರುತ್ತದೆ. ಕೃಷ್ಣಾ (ಪೆರ್ದೊರೆ) ನದಿಯ ಎರಡೂ ಪಕ್ಕದಲ್ಲಿ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಿಂದ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನವರೆಗೆ ನಗರ 500, ನಗರ 300 ಮುಂತಾಗಿ ಕರೆಯಲಾಗುತ್ತಿದ್ದ ನಗರನಾಡು ವ್ಯಾಪಿಸಿತ್ತು. ಕೃಷ್ಣಾನದಿ ಇಲ್ಲಿಗೆ 8 ಕಿಮೀ ದೂರದಲ್ಲಿ ಹರಿಯುತ್ತದೆ. ಚಾಳುಕ್ಯ ಜಗದೇಕಮಲ್ಲ ಜಯಸಿಂಹನಿಂದ ಪೋಷಿತವಾದ ತಿಂಥಣಿ ಎಂಬ ಘಟಿಕಾ ಸ್ಥಾನವಿದ್ದ ಸ್ಥಳ ಇಲ್ಲಿಗೆ ಸಮೀಪದಲ್ಲಿದೆ. ವಿಜಯನಗರ ಸಾಮ್ರಾಜ್ಯ ವಿಘಟನೆಯಾದಾಗ ಪಾಳೆಯಗಾರರ ಮನೆತನವೊಂದಕ್ಕೆ ದೇವಪುರ ರಾಜಧಾನಿಯಾಯಿತು. ಸುರಪುರ ಸಂಸ್ಥಾನದ ರಾಜಮನೆತನದ ಮೂಲಪುರುಷರಲ್ಲಿ ಒಬ್ಬನಾದ ಹಣಮನಾಯಕ ಕಕ್ಕೇರಿಯಿಂದ ದೇವಪುರಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದ. ಚಕ್ರವರ್ತಿ ಔರಂಗಜೇಬನು ದಕ್ಷಿಣ ಭಾರತಕ್ಕೆ ದಂಡೆತ್ತಿ ಬಂದಾಗ ದೇವಪುರದಲ್ಲಿ ಬೀಡುಬಿಟ್ಟಿದ್ದ ಬಿಜಾಪುರದ ಸುಲ್ತಾನರ ಆಳ್ವಿಕೆಯಲ್ಲಿ ಇದನ್ನು ಪರಗಣೆ ದೇವಪುರವೆಂದು ಪರಿಗಣಿಸಲಾಗಿತ್ತು.

ಈಗ ದೇವಪುರ ಒಂದು ಚಿಕ್ಕ ಗ್ರಾಮ. ಊರಿನ ನೈರುತ್ಯದಲ್ಲಿ ಒಂದು ಪ್ರಾಚೀನ ಬಾವಿಯಿದೆ. ಇದರ ಪ್ರವೇಶದ್ವಾರ, ಮೆಟ್ಟಿಲುಗಳು, ಸುತ್ತಲು ಗೋಡೆಗಳನ್ನು ಸುಂದರವಾಗಿ ನಿರ್ಮಿಸಲಾಗಿದೆ. ಬಾವಿಯಿಂದ ಊರಿನ ಕಡೆ ಬರುವ ಹಾದಿಯಲ್ಲಿ ರಾಮಲಿಂಗೇಶ್ವರ ದೇವಾಲಯವಿದೆ. ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿರುವ ಈ ದೇವಾಲಯವನ್ನು ಕಪ್ಪುಕಲ್ಲಿನಿಂದ ಕಟ್ಟಲಾಗಿದೆ. ಒಳಗೆ ಲಿಂಗವಿಲ್ಲ. ಇಲ್ಲಿರುವ ವೀರಭದ್ರ ದೇವಾಲಯ ಒಂದು ಚಿಕ್ಕಗುಡಿ. ಇದರ ದ್ವಾರಪಾಲಕ ವೈಷ್ಣವಮೂರ್ತಿ ಆಗಿರುವುದರಿಂದ ಇದೊಂದು ವಿಷ್ಣು ದೇವಾಲಯವಾಗಿದ್ದಿರಬೇಕೆಂಬ ಅನುಮಾನ ಹುಟ್ಟಿಸುತ್ತದೆ.

ಊರಿನಲ್ಲಿ ಒಂದು ಹೂಡೇವು ಮತ್ತು ಅದರ ಬಳಿಯಲ್ಲಿ ಲಕ್ಷ್ಮೀ ದೇವಾಲಯದ ಗೂಡು ಇವೆ. ಈ ಪ್ರದೇಶದಲ್ಲಿ ಲಕ್ಷ್ಮೀಕಾಂತ ದೇವಾಲಯವಿದ್ದಿರಬೇಕೆಂದೂ ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶ ಈ ಊರಿನವನೆಂದೂ ಆತನ ಕಾವ್ಯದಲ್ಲಿ ಬರುವ ಪೆರ್ದೊರೆ (ಕೃಷ್ಣಾನದಿ) ಛಾಯಾಭಗವತಿ ಮೊದಲಾದ ಆಧಾರಗಳ ಮೇಲೆ ಪ್ರತಿಪಾದನೆ ಮಾಡಲಾಗಿದೆ. ಈ ಬಗ್ಗೆ ಖಚಿತವಾಗಿ ಹೇಳಲು ಇನ್ನೂ ಹೆಚ್ಚಿನ ಆಧಾರಗಳು ದೊರೆಯಬೇಕಾಗಿದೆ.

ಊರಿನ ಮಸೀದಿಯೊಂದರ ಗೋಡೆಯಲ್ಲಿ 1114 ರ ಶಾಸನವೊಂದರ ಚಪ್ಪಡಿ ಸೇರಿಕೊಂಡಿದೆ. ಅದರಲ್ಲಿ ಅಲ್ಲಿನ ನಗರೇಶ್ವರ ದೇವಾಲಯಕ್ಕೆ ದಾನವಿತ್ತುದರ ಬಗ್ಗೆ ಉಲ್ಲೇಖವಿದೆ. ಆದರೆ ಶಾಸನದ

ಮುಖ್ಯ ಭಾಗ ಗೋಡೆಯ ಒಳಗಿರುವುದರಿಂದ ಅದರ ಪೂರ್ಣ ಪಾಠವನ್ನು ತಿಳಿಯಲು ಸಾಧ್ಯವಾಗಿಲ್ಲ. (ಎಸ್.ಜಿ.ಎ.)

**ದೇವಪ್ಪ ಕವಿ :** ಸು. 1540 ಜೈನಕವಿ. ರಾಮವಿಜಯಚರಿತೆ ಎಂಬ ಕಾವ್ಯದ ಕರ್ತೃ. ಹೊಯ್ಸಳ ದೇಶದ ಚೆಂಗನಾಡಿನ ಹುಣಸೂರು ತಾಲ್ಲೂಕಿನ ರಾವಂದೂರು ಇವನ ಜನ್ಮಸ್ಥಳ. ಅಜ್ಜ ಚೆಂಗನಾಡಪೊಳಲ ಸಚಿವ ದೇವಪ್ಪ, ತಂದೆ ಬುಕ್ಕರಸ, ತಾಯಿ ಪಾಯಮ್ಮ, ಕವಿ ರಾವಂದೂರನ್ನು ತ್ಯಜಿಸಿ, ಈಗಿನ ಕೊಡಗಿನ ನಂಜರಾಯಪಟ್ಟಣಕ್ಕೆ ಬಂದು, ಅಲ್ಲಿ ವೀರಶೈವನೂ ಕರೆದೀಪ ದಾನಿಯೂ ಆಗಿದ್ದ ನಂಜುಂಡರಾಯನಿಗೆ ಹಿತವನ್ನಾಗಿ ಮಂತ್ರಿಪದವಿಯಲ್ಲಿದ್ದನೆಂದು ತಿಳಿಯುತ್ತದೆ. ಪೂರ್ವ ಕವಿಗಳಲ್ಲಿ ಗಜಗ, ಗುಣವರ್ಮ, ವಿಜಯ, ಪೊನ್ನ, ಅಗ್ಗಳ, ರನ್ನ, ಪಂಪ, ನೇಮಿಚಂದ್ರ, ನಾಗಚಂದ್ರ - ಇವರನ್ನು ಸ್ತುತಿಸಿದ್ದಾನೆ. ತನ್ನ ಕಾವ್ಯ ಇಂಗಡಲಿನ ರಸದಂತೆ, ಅಂಬುಜಾಕ್ಷಿಯರ ಕಂಬುಕಂಧರದಾಲಿಂಗನದಂತೆ, ಪೊಸಜವ್ವನೆಯ ಬೇಟದ ಸುಗ್ಗಿಯಂತೆ ಸಂತಸವನ್ನುಂಟುಮಾಡುವ ಗುಣದಿಂದ ಕೂಡಿದೆ ಎಂದು ಕವಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ತನ್ನನ್ನು ಕೋವಿದರುಗಳ ಹೃತ್ಕಮಲಭಾಸ್ಕರ, ವಾಗ್ದೇವಿಯ ಮುಖಮಣಿಮುಕುರ, ಭಾವಕರುಗಳ ಸಂತಸಸಾಗರಮಿತ್ರ ಎಂದೂ ಕರೆದುಕೊಂಡಿದ್ದಾನೆ.

ರಾಮವಿಜಯಚರಿತೆ ಸಾಂಗತ್ಯದಲ್ಲಿದೆ. ಇದರಲ್ಲಿ 20 ಸಂಧಿಗಳೂ ಸುಮಾರು 3000 ಪದ್ಯಗಳೂ ಇವೆ. ಗುಣಭದ್ರಾಚಾರ್ಯರ ಉತ್ತರಪುರಾಣದ ಮುನಿಸುವ್ರತಚರಿತ್ರೆಯಲ್ಲಿ ಬರುವ ರಾಮಾಯಣ ಈ ಕಾವ್ಯದ ವಸ್ತು. ಇದು ಪಂಪರಾಮಾಯಣದ ಕಥೆಗಿಂತಲೂ ಬೇರೆಯಾಗಿದೆ. ಶೈಲಿ ಸರಳವಾಗಿದೆ. ಬಂಧ ಲಲಿತವಾಗಿದೆ. ತಾನು ಕಾವ್ಯವನ್ನು ಬರೆದಿರುವುದು ಭವ್ಯರ ಮೆಚ್ಚುಗೆಗಾಗಿ ಎಂಬುದು ಕವಿಯ ಹೇಳಿಕೆ. (ಟಿ.ಕೆ.ಬಿ.)

**ದೇವರಗುಡ್ಡ:** ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿಗೆ ಸೇರಿದ ಒಂದು ಪುಣ್ಯ ಕ್ಷೇತ್ರ. ರಾಣೆಬೆನ್ನೂರಿಗೆ ಉತ್ತರದಲ್ಲಿ ಸು. 13 ಕಿಮೀ ದೂರದಲ್ಲಿ, ದೇವರ ಗುಡ್ಡ ರೈಲು ನಿಲ್ದಾಣದಿಂದ ಸು. 5 ಕಿಮೀ. ದೂರದಲ್ಲಿದೆ. ಈ ಊರಿನ ಮೂಲ ಹೆಸರು ಗುಡ್ಡ ಗುಡ್ಡಾಪುರ. ಊರಿಗೆ ಹೊಂದಿಕೊಂಡಂತಿರುವ ಗುಡ್ಡದ ಮೇಲೆ ಮಾರ್ತಾಂಡ, ಭೈರವ, ಮಲ್ಲಾರಿ ಮೊದಲಾದ ಹೆಸರುಗಳುಳ್ಳ ಪ್ರಸಿದ್ಧ ಮೈಲಾರಲಿಂಗ ದೇವಾಲಯವಿದೆ. ಶಿವನು ಇಲ್ಲಿ ಮಲ್ಲಾರಿಯ ಅವತಾರದಿಂದ ನಾಯಿಯ ರೂಪದಲ್ಲಿ ಏಳು ಕೋಟದೇವತೆಗಳನ್ನು ಕಟ್ಟಿಕೊಂಡು ಮಲ್ಲಾಸುರನನ್ನು ಕೊಂದನೆಂದೂ ಪ್ರತೀತಿ. ಈ ಆರಾಧ್ಯಮೂರ್ತಿಯನ್ನು ವಿವಿಧ ಪಂಗಡದವರು ಪೂಜಿಸುತ್ತಾರೆ. ಇವನ ಅನುಯಾಯಿಗಳಿಗೆ ಗೊರವ, ಗ್ಯಾರೆಪ್ಪ, ಗೊಗ್ಗಯ್ಯನೆಂದು ಕರೆಯುವರು. ಕಂಬಳಿಯ ನಿಲುವಂಗಿ, ಕೊರಳಲ್ಲಿ ಭಂಡಾರವನ್ನಿಡಲು ಹುಲಿಯ ಚರ್ಮದ ಚೀಲ, ಕವಡೆಯ ಸರ, ಹೆಗಲಿಗೆ ನೇತುಬಿದ್ದ ಡೋಣಿ (ಭಿಕ್ಷಾಪಾತ್ರೆ) ಇವರ ವಿಶಿಷ್ಟ ವೇಷಭೂಷಣಗಳು. ಕೈಯಲ್ಲಿ ಡಮರು, ತ್ರಿಶೂಲಗಳು ಹಾಗೂ ಒಮ್ಮೊಮ್ಮೆ ದೀವಟಿಗೆ ಇರುತ್ತವೆ. ಭಿಕ್ಷಾಟನೆ ಇವರ ವೃತ್ತಿ.

ಇಲ್ಲಿ ಪ್ರತಿವರ್ಷ ದಸರ ಸಮಯದಲ್ಲಿ ಬಹುದೊಡ್ಡ ಜಾತ್ರೆ ನೆರೆಯುವುದು. ಆಗ ಇಲ್ಲಿಗೆ ನಾಡಿನ ಎಲ್ಲಾ ಕಡೆಗಳಿಂದ ಭಕ್ತಾದಿಗಳು ಬರುವರು. ಆಗ ಮೈಗೆ ಗೂಟಗಳನ್ನು ಬಡಿದುಕೊಳ್ಳುವುದು, ಆ ಗಾಯದಲ್ಲಿ ಮುಳ್ಳಿನ ಡೊಣ್ಣೆಗಳನ್ನು ಹಾಯಿಸಿಕೊಳ್ಳುವುದು, ಅಂಗೈಯಲ್ಲಿ ಆರತಿಯನ್ನು ಹಚ್ಚಿಕೊಂಡು ದೇವರಿಗೆ ಬೆಳಗುವುದು, ದೇವರೆದುರು ಕಬ್ಬಿಣ ಸರಪಳಿಯನ್ನು ಹರಿಯುವುದು ಮೊದಲಾದ ಪವಾಡಗಳನ್ನೂ ಮಳೆಬೆಳೆಗೆ ಸಂಬಂಧಿಸಿದ ಭವಿಷ್ಯವನ್ನು ನುಡಿಯುವ ಕಾರಣಿಕವನ್ನೂ ನಡೆಸುತ್ತಾರೆ.

ಇಲ್ಲಿ ಮೈಲಾರನ ಉದ್ಭವಮೂರ್ತಿಯಲ್ಲದೆ ತುಪ್ಪದ ಮಾಳವ್ವ ಮಾಳಸಾ ಮತ್ತು ಹೆಗ್ಗಪ್ಪ ಇವರ ಗುಡಿಗಳೂ ಇವೆ. ಪ್ರತಿ ಹುಣ್ಣಿಮೆಗೂ ಭಕ್ತಾದಿಗಳು ಈ ದೇವರ ದರ್ಶನಕ್ಕೆ ಬರುವುದುಂಟು. ದಸರ ಜಾತ್ರೆಯ ಸಮಯದಲ್ಲಿ ದನಗಳ ಜಾತ್ರೆಯೂ ಸೇರುವುದು. ದೇವಸ್ಥಾನದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಮಾಲತೇಶ ಟ್ರಸ್ಟ್ ಕಮಿಟಿ ಇದೆ. ಗುಡ್ಡದ ಮೇಲಿಂದ ದೂರದ ತುಂಗಭದ್ರಾನದಿಯ ಮತ್ತು ಇತರ ಪ್ರಕೃತಿದೃಶ್ಯ ನಯನಮನೋಹರವಾಗಿರುತ್ತದೆ. ಈ ಊರಿಗೆ ಉತ್ತಮ ಮಾರ್ಗ ಸಂಪರ್ಕವಿದೆ. (ಎಸ್.ಎಸ್.ಬಿ.)

**ದೇವರಗುಡ್ಡರು :** ಜನಪದ ಧಾರ್ಮಿಕ ವೃತ್ತಿಗಾಯಕರು. ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ವಿಶೇಷವಾಗಿ ಕಾಣಸಿಕೊಳ್ಳುವ ಇವರು ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಯ ಭಾಗಗಳಲ್ಲೂ ಕಾಣಬರುತ್ತಾರೆ. ಕರ್ನಾಟಕದಲ್ಲೇ ಅಲ್ಲದೆ ವಿರಳವಾಗಿ ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲೂ ಕಂಡುಬರುತ್ತಾರೆ. ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ಏಳುಮಲೆ ಮಾದೇಶ್ವರನ ಪರಮಭಕ್ತರಾದ ಇವರನ್ನು ದೇವರಗುಡ್ಡರು, ಸಿರಿಯದೇವರ ಗುಡ್ಡರು ಮುಂತಾಗಿ ಕರೆಯುವುದು ರೂಢಿಯಲ್ಲಿದೆ. ಇವರು ಬಳಸುವ ಕಂಚಿನ ತಾಳಗಳಿಗೆ ಕಂಸಾಳೆ ನೋಡಿ ಎಂದು ಹೆಸರಿಸುವುದರಿಂದ ಇವರನ್ನು ಕಂಸಾಳೆಯವರು, ಕೈಸಾಳೆಯವರು, ಕೈತಾಳದವರು ಎಂದೂ ಗುರುತಿಸುವುದುಂಟು.

ಕಂಸಾಳೆಯನ್ನು ಹಿಡಿಯುವುದಕ್ಕೆ ಬೇಕಿರುವ ಅರ್ಹತೆ ಎಂದರೆ ದೇವರ ಗುಡ್ಡನಾಗುವುದು. ಮಲೆಯ ಮಾದೇಶ್ವರ ಕಂಚಿನ ತಾಳಗಳನ್ನು ನುಡಿಸುತ್ತ ಭಿಕ್ಷೆಮಾಡುತ್ತಿದ್ದರಿಂದ ದೇವರಗುಡ್ಡರಿಗೆ ಕಂಸಾಳೆಗಳು ಮಾದೇಶ್ವರನ ಬಿರುದುಗಳು. ಆದ್ದರಿಂದ ಇವರಿಗೆ ಕಂಸಾಳೆ ಪವಿತ್ರ ಹಾಗೂ ಪೂಜನೀಯ. ಈ ಕಾರಣದಿಂದಲೇ ಇವರು ಕಂಚಿನ ತಣಿಗೆಯಲ್ಲಿ ಊಟಮಾಡುವುದಿಲ್ಲ. ಅಲ್ಲದೆ ಕಥೆ ಮಾಡುವಾಗ ಅಥವಾ ಭಿಕ್ಷಕ್ಕೆ ಹೋಗುವಾಗ ಎಕ್ಕಡಗಳನ್ನು ಮೆಟ್ಟುವುದಿಲ್ಲ.

ದೇವರಗುಡ್ಡರ ವಿಶಿಷ್ಟವಾದ ಉಡುಗೆ ತೊಡುಗೆಗಳೆಂದರೆ ಕಂಕುಳಲ್ಲಿ ಬೆಳ್ಳಿ ಕಟ್ಟಿನ ನಾಗಬೆತ್ತ, ಭುಜದಲ್ಲಿ ನಾಕುಪಾದದ ಜೋಳಿಗೆ, ಬೆನ್ನಿಗೆ ಹಸುಬೆ ಚೀಲ, ಕೈಯಲ್ಲಿ ಕಂಸಾಳೆ, ಹಣೆಗೆ ಮೂರು ಕಟ್ಟಿನ ವಿಭೂತಿ, ಕಣ್ಣಿನ ರೆಪ್ಪೆ, ಕಿವಿ, ಕುತ್ತಿಗೆಗಳಿಗೂ ವಿಭೂತಿಯ ಅಲಂಕಾರ, ಕುತ್ತಿಗೆಯಲ್ಲಿ ರುದ್ರಾಕ್ಷಿಸರ, ತಪ್ಪಿದರೆ ಒಂದೇ ಒಂದು ಅಡ್ಡಡ್ಡವಾಗಿ ಪೋಣಿಸಿರುವ ರುದ್ರಾಕ್ಷಿ ಗುರುಮಣಿ.

ದೇವರಗುಡ್ಡ ಮಾದೇಶ್ವರನ ಸಿಸುಮಗ. ಮಾದೇಶ್ವರನಿಗೆ ಗುಡ್ಡನನ್ನು ಬಿಡುವ ಸಂಪ್ರದಾಯ ದೇವರಗುಡ್ಡದ ಧಾರ್ಮಿಕ ಆಚರಣೆಗಳಲ್ಲಿ ವಿಶಿಷ್ಟವಾದುದು. ಈ ಸಂಪ್ರದಾಯ ಸುಮಾರು 16ನೆಯ ಶತಮಾನದಿಂದೀಚೆಗೆ ಹುಟ್ಟಿಕೊಂಡದ್ದೆಂದು ಕಾಣುತ್ತದೆ. ವಂಶಪಾರಂಪರ್ಯವಾಗಿ ಮಾದೇಶ್ವರನ ಒಕ್ಕಲಲ್ಲಿ ಮನೆಗೊಬ್ಬ ಗುಡ್ಡನನ್ನು ಬಿಡುವ ಪದ್ಧತಿ ಇದೆ. ಕೆಲವು ವಿಶೇಷ ಕಾರಣಗಳಿಂದ ಅಂದರೆ ಕಷ್ಟಕಾರ್ಪಣ್ಯಗಳು ಒದಗಿ ಬಂದಾಗ ಅಥವಾ ಮಕ್ಕಳಾಗದೆ ಹೋದಾಗ ಹುಟ್ಟಿದ ಮೊದಲನೆಯ ಮಗನನ್ನು ಗುಡ್ಡನನ್ನು ಬಿಡುತ್ತೇವೆಂದು ಮಲೆಯ ಮಾದೇಶ್ವರನಿಗೆ ಹರಕೆ ಹೊತ್ತು ಹಾಗೆ ಹುಟ್ಟಿದ ಮಗುವಿಗೆ ಹನ್ನೆರಡು ವರ್ಷ ತುಂಬಿದ ಅನಂತರ ಗುಡ್ಡನನ್ನು ಮಾಡಿ ಬಿಡುವುದುಂಟು. ಮಗುವನ್ನು ಗುಡ್ಡನನ್ನಾಗಿ ಮಾಡುವುದಕ್ಕೆ ಅವರು ಒಂದು ವಿಶೇಷ ಸಮಾರಂಭವನ್ನೇ ಏರ್ಪಡಿಸಿಕೊಳ್ಳುತ್ತಾರೆ. ಗುಡ್ಡರ ಮುಖ್ಯಸ್ಥ ಪುರುಸಕಾರಿಯ ನೇತೃತ್ವದಲ್ಲಿ ಗುಡ್ಡನನ್ನು ಬಿಡುವ ಆಚರಣೆ ನಡೆಯುತ್ತದೆ. ಈ ದೀಕ್ಷಾಕಾರ್ಯ ಸಾಮಾನ್ಯವಾಗಿ ಸೋಮವಾರಗಳಲ್ಲಿ ಜರಗುತ್ತದೆ. ಶುಕ್ರವಾರವೂ ಇಟ್ಟುಕೊಳ್ಳಬಹುದು. ಮಾದೇಶ್ವರನ ಬೆಟ್ಟದಲ್ಲೇ ಆದರೆ ಯಾವ ದಿನವಾದರೂ ಸರಿ. ಈ ಮಂಗಳ ಕಾರ್ಯಕ್ಕೆ ಮನೆ ಮಠ ಸಾರಿಸಿ ಗುಡಿಸಿ ಮಡಿ ಮಾಡಿಕೊಳ್ಳುತ್ತಾರೆ. ಗುಡ್ಡನಾಗುವ ಹುಡುಗನ ಉಡುದಾರವನ್ನು ಕಿತ್ತು ಮಂಡೆ ಚವುರ ಮಾಡಿಸುತ್ತಾರೆ. ಮೂಡ್ಲುಮುಖವಾಗಿ ಹುಡುಗನ್ನು ಕುಳ್ಳಿರಿಸಿ, ಒಂದಚ್ಚು ಬೆಲ್ಲ, ಐದು ಬಾಳೆಹಣ್ಣು, ಎಲೆ ಅಡಕೆ, ಐದು ಪಾವು ಅಕ್ಕಿ, ಐದು ಪಾವಲಿ, ಒಂದು ವಲ್ಲಿ (ವಸ್ತ್ರ) ಮಡಗಿ ಪೂಜೆ ಮಾಡಿ ಈ ಪರಿಕರಗಳನ್ನು ಕಲಸಿ ಅವನ ಮಡಿಲ ತುಂಬುತ್ತಾರೆ. ಅನಂತರ ಸ್ನಾನಕ್ಕೆ ನೀರು ಕಾಯಿಸುವ ಒಲೆ ಮತ್ತು ಹಂಡೆಯನ್ನು ಪೂಜೆಮಾಡಿ ಆರಿಸಿನದ ನೀರನ್ನು ಕಾಯಿಸಿ ಸಮಾರಂಭಕ್ಕೆ ಬಂದ ಬಂಧುಬಾಂಧವರೆಲ್ಲ ಒಂದೊಂದು ಚೊಂಬು ನೀರನ್ನು

ಆ ಹುಡುಗನ ತಲೆ ಮೇಲೆ ಸುರಿದು ಮಾದೇವ ನಿನ್ನೊಕ್ಲಾಯ್ತುರೋ ಕಂದನ ಉದ್ಧಾರ ಮಾಡಪ್ಪ ಎಂದು ಹೇಳುತ್ತಾರೆ. ನೀರೆರೆಯುವ ಸಂದರ್ಭದಲ್ಲಿ ಗುಡ್ಡರು ಕಂಸಾಳೆ ಕುಟ್ಟುತ್ತ -

ಸ್ನಾನ ಜಲಕ ಮಾಡವ್ರೆ - ಮಾದೇವ

ಮೀದು ಮಡಿಯ ಉಟ್ಟವರೆ

ಶಿವಪೂಜೆಗೆ ಬಂದು ನಿಂತವರೆ

ಇತ್ಯಾದಿಯಾಗಿ ಹಾಡುತ್ತಿರುತ್ತಾರೆ.

ಮೀಯಿಸಿ ಆದಮೇಲೆ ಹೊಸ ಬಟ್ಟೆಗಳನ್ನು ಉಡಿಸಿ ದೇವರನ್ನು ತರಲು ಹೊರಡುತ್ತಾರೆ. ಐದು ಅರುಹೆ ಗಡಿಗೆಗಳನ್ನು (ಅರಿಶಿಣದ ನೀರು ತುಂಬಿದ ಮಡಕೆ) ಹೊತ್ತುಕೊಂಡು ದೇವರಗುಡ್ಡರೊಡನೆ ಐದು ಜನ ಮುತ್ತೈದೆಯರು ಕೆರೆಗೋ ಕೊಳಕ್ಕೋ ಬಾವಿಗೋ ಹೋಗಿ ಗಡಿಗೆಗಳಿಗೆ ನೀರು ತುಂಬಿ ಅಡಕೆ ಹೊಂಬಾಳೆ ಶೃಂಗಾರಮಾಡಿ ಅವುಗಳ ಜೊತೆಯಲ್ಲಿ ನಾಗಬೆತ್ತ, ಉರುಗದಾರ, ಕಂಸಾಳೆ, ರುದ್ರಾಕ್ಷಿಮಣಿ, ದಮ್ಮಡಿ, ಬಟ್ಟುತಾಳ, ವಿಭೂತಿಗಟ್ಟಿ ಇಟ್ಟು ಗುಡ್ಡ ನಾಗುವವನ ಬೋಳುತಲೆಯ ತುಂಬ ವಿಭೂತಿ ಧರಿಸಿ ಕಂಸಾಳೆಯ ಝಣತ್ಕಾರಗಳೊಡನೆ ಪೂಜೆಮಾಡಿ ವಾದ್ಯಸಮೇತ ದೇವರನ್ನು ತಂದು ಗದ್ದುಗೆಯ ಮೇಲಿರಿಸುತ್ತಾರೆ. ಅನಂತರ ಹುಡುಗನ ತಂದೆ ತಾಯಿಗಳು, 'ಬುದ್ದಿ ಇವನು ನಮ್ಮ ಮಗನಲ್ಲ ನಿಮ್ಮ ಮಗ ಒಪ್ಪಿಸಿಕೊಳ್ಳಿ' ಎಂದು ಹೇಳಿ ಅವನ ಕೈಗಳನ್ನು ಹಿಡಿದುಕೊಂಡು ಪುರುಸಕಾರಿಗೆ ಒಪ್ಪಿಸಿಕೊಡುತ್ತಾರೆ. ಆಗ ಪುರುಸಕಾರಿ ಅವನನ್ನು ಕರಿಮರದ ಗದ್ದುಗೆ ಮೇಲೆ ಕೂರಿಸುತ್ತಾನೆ. ಅನಂತರ ಅವನ ಮುಂದೆ ತಲೆ ಹೊಡೆದಂತೆ (ಚೆಲ್ಲಿದಂತೆ) ತುಂಬಿರುವ ಅಕ್ಕಿಯ ಸೇರನ್ನು ಇಟ್ಟು ಅದರ ಮೇಲೆ ಗುಡ್ಡನ ಬಲದ ಹಸ್ತವನ್ನು ಊರಿಸಿ ಅದರ ಮೇಲೆ ಹಾಲು ಬೆಣ್ಣೆ ತುಪ್ಪಗಳನ್ನು ಸವರಿ ಹೂ ಹಾಕಿ ಕರ್ಪೂರ ಸಾಂಬ್ರಾಣಿ ಗಂಧದ ಕಡ್ಡಿ ಬೆಳಗಿ ಅದುಮಿದ್ದ ಕೈಯನ್ನು ಎತ್ತಿ ಅಂಗೈಗೆ ಅಂಟಿಕೊಂಡಿರುವ ಅಕ್ಕಿ ಕಾಳನ್ನು ಅವನ ಹಣೆಗೆ ಐದು ಬಾರಿ ಹಚ್ಚುತ್ತಾನೆ. ಈ ಅಕ್ಕಿ ಹೆಚ್ಚಾಗಿ ಹಣೆಗೆ ಅಂಟಿಕೊಂಡರೆ ಅವನು ಮಾದಪ್ಪನ ಮೆಚ್ಚಿನ ಸಿಸುಮಗ ಎಂಬ ನಂಬಿಕೆ ಇದೆ. ಅನಂತರ ಐದು ಕೊಂಬಿನ ಅರಿಶಿನದ ಕೊನೆಯನ್ನು ಚಿನ್ನ, ಬೆಳ್ಳಿ ಚೂರುಗಳೊಡನೆ ಒಂದು ಅರಿಶಿನದ ಅರಿವೆಗೆ ಸುತ್ತಿ ಅದನ್ನು ಕರಿ ದಾರದಲ್ಲಿ ಕಟ್ಟಿ ಪೂಜೆಮಾಡಿ ಎಲ್ಲರಿಂದಲೂ ಅದನ್ನು ಶರಣು ಮಾಡಿಸಿ ಆ ಕಂಕಣವನ್ನು ಪುರುಸಕಾರಿ 'ಅಪ್ಪಾ ಮಗುವೆ ಇಲ್ಲೀನಾಗ್ಲೂ (ಇಲ್ಲಿಯವರೆಗೂ) ತಾಯಿತಂದೆಗಳ ಮಗನಾಗಿದ್ದೆ. ಇಲ್ಲಿಂದೀಚೆಕ್ಕೆ ಮಾದಪ್ಪನ ಮಗನಾದಿ ಎಂದು ಹೇಳಿ ಅವನ ಬಲ ಮುಂಗೈಗೆ ಕಟ್ಟುತ್ತಾನೆ. ಅನಂತರ 'ಮಲೆಮಾಯ್ಕಾರ' ನನ್ನಪ್ಪಾಜಿ ಮಾದೇವ ಉದ್ಧಾರ ಮಾಡಪ್ಪ ಎಂದು ಹೇಳಿ ರುದ್ರಾಕ್ಷಿಮಣಿಯನ್ನು ಕುತ್ತಿಗೆಗೆ ಧಾರಣೆ ಮಾಡುತ್ತಾನೆ. ಬಂದಿದ್ದ ಬಂಧುಳಗವೆಲ್ಲ 'ಅಕ್ಷಯವಾಗ್ಲಪ್ಪ' ಎಂದು ಹೇಳಿ ಅಕ್ಷತೆಯನ್ನು ಹುಡುಗನ ತಲೆ ಮೇಲೆ ಎರಚುತ್ತಾರೆ. ಅನಂತರ ಪುರುಸಕಾರಿ ಹೊಸ ಗುಡ್ಡನಿಗೆ ಸಾಂಪ್ರದಾಯಿಕವಾಗಿ ಕೆಲವು ಸಿದ್ಧ ಪ್ರಶ್ನೆಗಳನ್ನು ಹಾಕಿ ಸಿದ್ಧ ಉತ್ತರವನ್ನು ಪಡೆಯುತ್ತಾನೆ.

ನೀನು ಯಾರ ಮಗನಪ್ಪ

ನಾನು ಮಾದೇವನ ಮಗ ಸ್ವಾಮಿ

ಹಂಗಾದ್ಮೇಕೆ ತಕ್ಕೊಳಪ್ಪ ಮಾದೇವನ ಜೋಳ್ಗೆಯ

ಎಂದು ಹೇಳಿ ಹೊಸಗುಡ್ಡನ ಕಂಕುಳಗೆ ಜೋಳಿಗೆ, ಕೈಗೆ ನಾಗಬೆತ್ತ ಕೊಡುತ್ತಾನೆ.

ಇದೇನ್ ಮಾಡ್ತೀಯಪ್ಪ

ಸ್ವಾಮಿ ನಾಕಾರ್ ಮನೆ ಭಿಕ್ಷಾ ಮಾಡ್ಕೊಂಡು ಸ್ವಾಮಾರ

ಸುಕ್ರಾರ ಇದನ್ನ ಮಡಗಿ ಪೂಜೆ ಮಾಡ್ತೀನಿ,

ಏನಪ್ಪ ನಿಚ್ಚಯಾವಾಗ್ಲೂ ಮಾಡ್ತಿಯಾ?

ಸ್ವಾಮಿ ನಿಚ್ಚಯಾವಾಗ್ಲೂ ಮಾಡ್ತಿನಿ

ಹಂಗಾದ್ಮ್ಯಾಕೆ ಈ ದುರುಸ್ಥಿಣರು ಬಂದವ್ರುವಲ್ಲ ಅವುರ್ಗೆಲ್ಲ ಹೇಳ್ದಂಗೆ ನಡೀತೀನಿ ಅಂತ್ಹೇಳಿ ಅವುರ ಪಾದಕ್ಕೆ ಬೀಳಪ್ಪ - ಎಂದಾಗ ಹೊಸಗುಡ್ಡ ಮೊದಲು ಪುರುಸಕಾರಿಗೆ ಶರಣುಮಾಡಿ ಉಳಿದ ಹಿರಿಯರ ಪಾದಗಳಿಗೆರಗುತ್ತ ನಿಮ್ಮ ಪಾದಸಾಕ್ಷಿಯಾಗಿ ಹೇಳ್ದಂಗೆ ನಡ್ಕೋತೀನಿ ಎಂದು ಹೇಳುತ್ತಾನೆ.

ಸ್ವಾಮಾರ ಸುಂಕ್ರಾರ ತಪ್ದೆ ಕೋರಣ್ಯ ಮಾಡ್ತಿಯೇನಪ್ಪ

ಮಾಡ್ತೀನಿ ಸ್ವಾಮಿ ಇತ್ಯಾದಿ. ಹಿನ್ನೆಲೆಯಲ್ಲಿ ದೇವರಗುಡ್ಡರು ಸಂದರ್ಭಕ್ಕೆ ತಕ್ಕಂತೆ ಹಾಡುತ್ತಿರುತ್ತಾರೆ.

ಅನಂತರ ಗುಡ್ಡನನ್ನು ಕರೆದುಕೊಂಡು ಉಳಿದ ದೇವರಗುಡ್ಡರು ಕಂಸಾಳೆ ನಾದಮಾಡುತ್ತ ಕೋರಣ್ಯಕ್ಕೆ ಹೊರಡುತ್ತಾರೆ. ಅಂಕದ ಬಾಗಿಲಲ್ಲಿ ತಂದೆತಾಯಿಗಳು ಅಗನಿ ತಂದು ಗುಡ್ಡನಪಾದ ತೊಳೆದು ಪೂಜೆಮಾಡಿ ನಮುಸ್ಕರಿಸಿ ಐದು ಸೇರು ಅಕ್ಕಿ, ಒಂದಚ್ಚು ಬೆಲ್ಲ, ಒಂದು ತೆಂಗಿನಕಾಯಿ, ಎಲೆ ಅಡ್ಕೆ ಹಣ್ಣುಗಳನ್ನು ಗುಡ್ಡನ ಜೋಳಿಗೆಗೆ ತುಂಬುತ್ತಾರೆ. ಹೀಗೆ ನಾಕಾರು ಮನೆಗಳಲ್ಲಿ ಉಪಾದಾನ ಮಾಡಿಸುತ್ತಾರೆ. ಉಪಾದಾನ ಮಾಡಲು ಹೋದಾಗ ಜೋಳಿಗೆ ತುಂಬಾ ಭಿಕ್ಷೆ ಸಿಕ್ಕದೆ ಇದ್ದರೆ ಅಥವಾ ಹಿಂದಕ್ಕೆ ಬಂದ ಹುಡುಗ ಜೋಳಿಗೆಯನ್ನು ತೆಗೆದು ಗೂಟಕ್ಕೆ ನೇತುಹಾಕಿದರೆ ಜೋಳಿಗೆ ಸೂಲುತ್ತದೆ; ಮಾತ್ರವಲ್ಲ, ಅದೇ ರೀತಿ ಅವರ ಮನೆಯೂ ಸೂಲುತ್ತದೆ ಎಂಬ ನಂಬಿಕೆಯಿದೆ.

ಕೋರಣ್ಯದಿಂದ ಹಿಂದಿರುಗಿದ ಮೇಲೆ ಗುಡ್ಡನನ್ನು ಬಾಗಿಲಲ್ಲೇ ನಿಲ್ಲಿಸಿ ಪಾದ ತೊಳೆದು ಪೂಜೆಮಾಡಿ ರತ್ನೀರನ್ನು ಹಾಕಿ ಶಾಂತಿ ಮಾಡುವುದಕ್ಕೆಂದು ಒಂದು ಕೋಳಿಯನ್ನು ಕುಯ್ದು ಅದರ ರಕ್ತವನ್ನು ಹುಡುಗನ ಹಣೆಗೆ ಹಚ್ಚುತ್ತಾರೆ. ತಂದ ಭಿಕ್ಷೆಯನ್ನು ಬಿರುದುಗಳೊಡನೆ (ಕಂಸಾಳೆಗಳೊಡನೆ) ಗದ್ದುಗೆ ಮೇಲಿರಿಸುತ್ತಾರೆ. ಆಗ ಪುರುಸಕಾರಿ ಮೊದಲಿನಂತೆ ತುಂಬಿದ ಸೇರಿನ ಮೇಲೆ ಗುಡ್ಡನ ಅಂಗೈ ಒತ್ತಿಸಿ ಕಂಕಣ ಬಿಚ್ಚುತ್ತಾನೆ. ಕಂಕಣವನ್ನು ಅರುಹೆ ಗಡಿಗೆಯಲ್ಲಿದ್ದ ಹೊಂಬಾಳೆಯೊಡನೆ ಮನೆಯ ಸೂರಿಗೆ ಕಟ್ಟಿ ಧೂಪ ಹಾಕುತ್ತಾರೆ.

ಇದಾದಮೇಲೆ ಗದ್ದಿಗೆ ಪೂಜೆ ನಡೆದು ಕಡುಬು, ಕಜ್ಜಾಯ, ತುಪ್ಪವನ್ನು ಎಲ್ಲರಿಗೂ ಬಡಿಸುತ್ತಾರೆ. ಊಟಕ್ಕೆ ಕುಳಿತಿದ್ದ ಗುಡ್ಡರುಗಳೆಲ್ಲ ತಮ್ಮ ತಮ್ಮ ಅಗಲಿನಿಂದ (ತಟ್ಟೆ) ಸ್ವಲ್ಪ ಸ್ವಲ್ಪ ಕಜ್ಜಾಯ ತುಪ್ಪವನ್ನು ತೆಗೆದು ಗುಡ್ಡನ ಅಗಲಿಗೆ ಬಡಿಸುತ್ತಾರೆ. ಇದನ್ನು ಪಂತಿಸೇವೆ ಎಂದು ಕರೆಯುತ್ತಾರೆ. ಊಟವಾದಮೇಲೆ ತಂದಿದ್ದ ಭಿಕ್ಷವನ್ನೆಲ್ಲ ಸುರಿದು ಗುಡ್ಡನ ಜೋಳಿಗೆಗೆ ಐದು ಬೊಗಸೆ ಅಕ್ಕಿ ಐದು ಪಾವಲಿ ಹಾಕಿ ಅಕ್ಷಯವಾಗ್ಲಪ್ಪ ಎಂದು ಹರಸಿ ಎಲ್ಲರೂ ತೆರಳುತ್ತಾರೆ.

ಹೀಗೆ ಗುಡ್ಡನಾದವನು ಮಾದೇನ ಕಥೆಯನ್ನು ಕಲಿತು ಕಥೆ ಮಾಡುವುದು ಮುಂದಿನ ಹೆಜ್ಜೆ. ಮನೆತುಂಬಿದ ಸೋಮವಾರ ಹುಡುಗನಿಗೆ ಕಥೆ ಕಲಿಸಲು ಪ್ರಾರಂಭಿಸುತ್ತಾರೆ. ರಾಗ ಚನ್ನಾಗಿದೆ ಎಂದು ತಿಳಿದರೆ ಕಥೆಗಳನ್ನು ಕಲಿಸುತ್ತಾರೆ. ಇಲ್ಲದಿದ್ದರೆ ಸೊಲ್ಲು ಕೊಡುವುದಕ್ಕೋ ಅಥವಾ ದಮ್ಮಡಿ ನುಡಿಸಲೋ ನೇಮಿಸಿಕೊಳ್ಳುವರು. ಇದೆಲ್ಲವನ್ನೂ ಗುಡ್ಡ ಗುರುಮುಖೇನ ಮಾಡಬೇಕು. ಅನಂತರ ಗುಡ್ಡ ಪ್ರತಿ ಸೋಮವಾರ ಮತ್ತು ಶುಕ್ರವಾರಗಳಲ್ಲಿ ಮಡಿಯಿಂದ ಮಲೆಯ ಮಾದೇಶ್ವರನನ್ನು ಪೂಜೆ ಮಾಡಿ ಕೋರಣ್ಯಕ್ಕೆ ತಪ್ಪದೆ ಹೋಗುತ್ತಾನೆ. ಈ ಸಂದರ್ಭಗಳಲ್ಲಿ ಅವನಿಗೆ ಕಥೆ ಮಾಡಲು ಬರದಿದ್ದರೆ ಬಿಡೋಲಗ ಅಥವಾ ಕಟ್ಹೋಲ ಮುಂತಾದ ಕೆಲವು ಬಿಡಿಗೀತೆಗಳನ್ನಾದರೂ ಹಾಡುತ್ತಾನೆ.

ಮಕ್ಕಳಿಲ್ಲದೆ ಮಾದೇವನ ವರದಿಂದ ಹುಟ್ಟಿದ ಈ ದೇವರಗುಡ್ಡರಿಗೆ ಮಾದಪ್ಪ, ಮಾದಯ್ಯ, ಮುದ್ದುಮಾದ, ಮಾದೇವಸ್ವಾಮಿ ಮುಂತಾಗಿ ಮಾದೇಶ್ವರನ ಹೆಸರುಗಳನ್ನೇ ಇಡುತ್ತಾರೆ. ಗುಡ್ಡನಾದವನು

ಬ್ರಹ್ಮಚಾರಿಯಾಗಿರಬೇಕೆಂಬ ನಿಯಮವೇನೂ ಇಲ್ಲ. ಅವನು ಸಂಸಾರಿಯೂ ಸ್ಥಿತಿವಂತನೂ ಆಗಿರಬಹುದು. ಜೀವನ ನಿರ್ವಹಣೆಗಾಗಿ ಯಾವ ವೃತ್ತಿಯನ್ನಾದರೂ ಅವಲಂಬಿಸಬಹುದು. ಆದರೆ ಸೋಮವಾರ ಶುಕ್ರವಾರಗಳಲ್ಲಿ ತಪ್ಪದೆ ಒಂದೆರಡು ಮನೆಗಳಲ್ಲಾದರೂ ಕೋರಣ್ಯ ಮಾಡಬೇಕು. ದೇವರ ಗುಡ್ಡರು ಹರಿಜನರು, ಉಪ್ಪಲಿಗಶೆಟ್ಟರು, ಕುರುಬರು, ಕುಂಬಾರರು, ಅಗಸರು, ಪರಿವಾರದವರು, ಒಕ್ಕಲಿಗರು ಮುಂತಾದ ವರ್ಗದವರಲ್ಲಿ ಕಾಣಸಿಗುತ್ತಾರೆ.

ದೇವರಗುಡ್ಡನ ಅಂತ್ಯಸಂಸ್ಕಾರವೂ ಗುಡ್ಡರಿಂದಲೇ ನಡೆಯುತ್ತದೆ. ಗುಡ್ಡರ ಮರಣವೆಂದರೆ ಅದು ಮಹಾತ್ಮನ ಮರಣ. ಗುಡ್ಡರಲ್ಲದೆ ಬೇರೆ ಯಾರೂ ಶವವನ್ನು ಮುಟ್ಟುವಂತಿಲ್ಲ. ಶವಕ್ಕೆ ಸ್ನಾನಮಾಡಿಸಿ ವಿಭೂತಿಧರಿಸಿ ಬಿಲ್ವಪತ್ರೆ ತುಂಬೇ ಹೂವುಗಳಿಂದ ಅಲಂಕಾರಮಾಡಿ ಶವವನ್ನು ಕುಳ್ಳಿರಿಸಿ ಲಿಂಗವನ್ನು ಅಂಗೈಮೇಲೆ ಮಡಗಿ ಪೂಜೆ ಮಾಡಿ ಮಣ್ಣು ಮಾಡುತ್ತಾರೆ.

ಗುಡ್ಡರು ಮಾಡುವ ಹಬ್ಬಗಳಲ್ಲಿ ದೀಪಾವಳಿ ಹಾಗೂ ಶಿವರಾತ್ರಿಗಳು ಅತ್ಯಂತ ಪ್ರಮುಖವಾದವುಗಳು.ಈ ಹಬ್ಬಗಳಲ್ಲಿ ಮತ್ತು ಶುಕ್ರವಾರ, ಸೋಮವಾರಗಳಲ್ಲಿ ಸೀಸಪ್ಪೆ (ಸಸ್ಯಾಹಾರ) ಮಾತ್ರ ಮಾಡುತ್ತಾರೆ. ಮಾಂಸಾಹಾರ ಬಳಸುವುದಿಲ್ಲ. ಬೆಟ್ಟದಲ್ಲಿ ಮಾದೇಶ್ವರನನ್ನು ತಾವೇ ಪೂಜಿಸುವುದಿಲ್ಲ. ಮಾದೇಶ್ವರನ ಪೂಜೆಗೆಂದೇ ಮೀಸಲಾಗಿರುವ ಬೇಡರ ಕಣ್ಣಪ್ಪನ ವಂಶಜರಾದ ತಮ್ಮಡಿಗಳ ಕೈಯಲ್ಲಿ ಪೂಜೆ ಮಾಡಿಸುತ್ತಾರೆ. ಗುಡ್ಡರು ಸೋಮವಾರ, ಶುಕ್ರವಾರಗಳಲ್ಲಿ ಉಪಾದಾನ ಮಾಡುವುದಲ್ಲದೆ ಇತರ ದಿನಗಳಲ್ಲೂ ಜೀವನ ನಿರ್ವಹಣೆಗಾಗಿ ಕರೆದಲ್ಲಿಗೆ ಹೋಗಿ ಕತೆ ಮಾಡುವುದುಂಟು.

ಹೆಣ್ಣುಮಕ್ಕಳನ್ನು ಗುಡ್ಡಮ್ಮ ಅಥವಾ ಗುಡ್ಡಿ ಬಿಡುವ ಪದ್ಧತಿ ಹರಿಜನರಲ್ಲಿ ಮಾತ್ರ ತೀರ ವಿರಳವಾಗಿ ನಡೆದುಕೊಂಡು ಬರುತ್ತಿದೆ. ಗುಡ್ಡಿ ಮಲೆಯಮಾದೇಶ್ವರನಿಗೆ ಸಿಸುಮಗಳಾದ ಮೇಲೆ ಅವಳಿಗೆ ವಿವಾಹವಿಲ್ಲ. ಯಾವನಾದರೂ ಗುಡ್ಡ ಇಷ್ಟಪಟ್ಟರೆ ಅವನ ಸೇವೆಯನ್ನು ಈಕೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಗುಡ್ಡಿ ಬಿಟ್ಟ ಹೆಣ್ಣುಮಕ್ಕಳಿಗೆ ಮಾದಮ್ಮ, ಮಾದೇವಿ, ರಾಮವ್ವೆ, ಮಲ್ಲಮ್ಮ ಇತ್ಯಾದಿ ಹೆಸರುಗಳನ್ನು ಕಟ್ಟುತ್ತಾರೆ. ಇತ್ತೀಚೆಗೆ ಗುಡ್ಡಿ ಬಿಡುವ ಪದ್ಧತಿ ಮಾಯಾಗುತ್ತಿದೆ. (ಪಿ.ಕೆ.ಆರ್.)

**ದೇವರ ದಾಸಿಮಯ್ಯ :** 11ನೆಯ ಶತಮಾನದ ಉತ್ತರಾರ್ಧ ಹಾಗೂ 12ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಹಿರಿಯ ಶಿವಶರಣ ಹಾಗೂ ಆದ್ಯ ವಚನಕಾರ, ಶಂಕರದಾಸಿಮಯ್ಯನ ಸಮಕಾಲೀನ, ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಮುದನೂರು ಇವನ ಜನ್ಮಸ್ಥಳ. ಇವನಿಗೆ ಮುದನೂರು ದಾಸಿಮಯ್ಯ, ಜೇಡರ ದಾಸಿಮಯ್ಯ ಎಂಬ ಹೆಸರುಗಳೂ ಇವೆ. ದೇವರ ದಾಸಿಮಯ್ಯ ಹಾಗೂ ಜೇಡರ ದಾಸಿಮಯ್ಯ ಇಬ್ಬರೂ ಬೇರೆ ಬೇರೆ ವ್ಯಕ್ತಿಗಳೆಂದೂ ಇಬ್ಬರೂ ಒಬ್ಬನೇ ಎಂದೂ ವಾದವಿವಾದಗಳೂ ಇವೆ. ರಾಮನಾಥ ಇವನ ಆರಾಧ್ಯದೈವ. ಈತನ ಪತ್ನಿ ದುಗ್ಗಳೆ (ನೋಡಿ) ಶ್ರೇಷ್ಠ ಶಿವಭಕ್ತೆಯಾಗಿದ್ದು ಇವರಿಬ್ಬರ ದಾಂಪತ್ಯ ಸಾಮರಸ್ಯದಿಂದ ಕೂಡಿತ್ತು. ನೇಯ್ಗೆ ಈತನ ಕಾಯಕ. ಒಮ್ಮೆ ದಾಸಿಮಯ್ಯನ ಶ್ರೇಷ್ಠ ಭಕ್ತಿಗೆ ಮೆಚ್ಚಿ ಶಿವನು ಜಂಗಮ ರೂಪದಲ್ಲಿ ಬಂದು ನೇಯ್ದ ವಸ್ತ್ರವನ್ನು ಕಾಣಿಕೆಯಾಗಿ ಪಡೆದು ತವನಿಧಿಯನ್ನು ಇವನಿಗೆ ಕರುಣಿಸಿದನೆಂದು ಪ್ರತೀತಿ. ಬಸವಣ್ಣ ಇವನ ಭಕ್ತಿಯನ್ನು ಕುರಿತು ಹೇಳುವಾಗ ಭಕ್ತಿ ಎಂತಹುದಯ್ಯ ದಾಸಯ್ಯ ಮಾಡಿದಂತಹುದಯ್ಯ ಎಂದು ಹೇಳಿದ್ದಾರೆ. ಅಲ್ಲದೆ ದಾಸಿಮಯ್ಯನ ಆದರ್ಶ ದಾಂಪತ್ಯವನ್ನು ಹೊಗಳಿದ್ದಾರೆ. ದಾಸಿಮಯ್ಯ ತನ್ನ ವಚನಗಳಲ್ಲಿ ತನಗಿಂತ ಹಿಂದೆ ಇದ್ದಿರಬಹುದಾದ ಅಥವಾ ಸಮಕಾಲೀನರಾಗಿದ್ದ ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಕುಂಬಾರ ಗುಂಡಯ್ಯ, ಕೆಂಬಾವಿಯ ಭೋಗಣ್ಣ ಮೊದಲಾದ ವಚನಕಾರರನ್ನು ಸ್ಮರಿಸಿದ್ದಾನೆ. ಇವನ ವಿಷಯ ಬಸವಣ್ಣನವರ ವಚನಗಳು. ಬಸವಪುರಾಣ, ಶಿವತತ್ತ್ವಚಿಂತಾಮಣಿ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ ಮೊದಲಾದ ಗ್ರಂಥಗಳಲ್ಲಿ ಸ್ವಲ್ಪ ಮಟ್ಟಿಗೆ ನಿರೂಪಿತವಾಗಿವೆ. ಇವನ ಜೀವನಚರಿತ್ರೆಯನ್ನೇ ಪೂರ್ಣವಾಗಿ ಒಳಗೊಂಡು ರಚಿತವಾದ ಗ್ರಂಥಗಳಲ್ಲಿ ದೇವಕವಿಯ ದೇವಾಂಗಪುರಾಣ (ಸಂಸ್ಕೃತ), ಇದನ್ನೇ ಕನ್ನಡಕ್ಕೆ ಅನುವಾದಿಸಿದ ಅಯ್ಯಪ್ಪನ ದೇವಾಂಗಪುರಾಣ, ವಿರೂಪಾಕ್ಷದೇಶಿಕನ ದೇವರ ದಾಸಿಮಯ್ಯನ ಪುರಾಣ ಮುಖ್ಯವಾದುವು. ಈತ ಅನೇಕ ಪವಾಡಗಳನ್ನು ಮೆರೆದನೆಂದೂ ಪ್ರತೀತಿ. ಪೊಟ್ಟಲಕೆರೆಯಲ್ಲಿ ಜೈನರನ್ನು ವಾದದಲ್ಲಿ ಸೋಲಿಸಿದ್ದು, ರಾಣಿ ಸುಗ್ಗಲೆಗೆ ಶಿವದೀಕ್ಷೆ ಕೊಟ್ಟದ್ದು, ಘಟಸರ್ಪವನ್ನು ಶಿವಲಿಂಗಮಾಡಿ ಪೊಟ್ಟಲ ಕೆರೆಯಲ್ಲಿ ಪ್ರತಿಷ್ಠಾಪಿಸಿದ್ದು ಈತ ಮೆರೆದನ್ನೆನಲಾದ ಮುಖ್ಯ ಪವಾಡಗಳು.

ಇದುವರೆಗೆ ದಾಸಿಮಯ್ಯನ 142 ವಚನಗಳು ದೊರಕಿವೆ. ರಾಮನಾಥ ಎಂಬುದು ಇವನ ವನಚಗಳ ಅಂಕಿತ. ಇವುಗಳಲ್ಲಿ ಭಕ್ತಿಯ ಮೇಲ್ಮೆಯನ್ನೂ ತತ್ತ್ವದ ಆಳವನ್ನೂ ಅರಿಯಬಹುದಾಗಿದೆ. ಈ ವಚನಗಳಲ್ಲಿ ಕಂಡುಬರುವ ಆಳವಾದ ಅರ್ಥ, ಭಾವ, ಧ್ವನಿ, ಈತ ಒಬ್ಬ ಉತ್ತಮ ವಚನಕಾರನೆಂಬುದಕ್ಕೆ ಸಾಕ್ಷಿಯಾಗಿವೆ. ಪರಮಾತ್ಮನ ಸ್ವರೂಪ, ಪರಮಾತ್ಮ ಜೀವಾತ್ಮರಿಗಿರುವ ಸಮ್ಯಕ್ ಸಂಬಂಧ, ಮೋಕ್ಷಸ್ವರೂಪ, ಸಯೋಗ್ಯಗುರುವಿನ ಲಕ್ಷಣ, ಭಕ್ತಾಭಿಮಾನ, ದಾಸ್ಯಭಾವ, ಸಮರ್ಪಣಾಭಾವ, ಧರ್ಮ, ನೀತಿ ಮೊದಲಾದ ವಿಷಯಗಳು ಇವನ ವಚನಗಳಲ್ಲಿ ಚೆನ್ನಾಗಿ ಪ್ರತಿಪಾದಿತವಾಗಿವೆ. ತನ್ನ ಅನುಭವಕ್ಕೆ ನಿಲುಕದ ಯಾವದೇ ಸಂಗತಿಯನ್ನು ಈತ ಹೇಳಹೋಗಿಲ್ಲ. ಯಾವುದೇ ಅನುಭವವು ಸಹೃದಯರಿಗೆ ತಲುಪುವಂತೆ ಉಪಮೆ-ರೂಪಕಾದಿಗಳ ಸಹಾಯಗಳಿಂದ ಹೇಳುವ ರೀತಿ ಸೋಪಜ್ಞತೆಯಿಂದ ಕೂಡಿದೆ. ಭಾಷೆಯಲ್ಲಿ ಸರಳತೆ ಕಂಡುಬಂದರೂ ಭಾವದಲ್ಲಿ ಅರ್ಥಶ್ರೀಮಂತಿಕೆ ಎದ್ದು ಕಾಣುತ್ತದೆ.

ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ, ಕುರಿಯ ಕೊರಳನೆ ಕೊಯ್ದುಂಬ ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೇ; ಈಶನ ಶರಣರು ವೇಶಿಯ ಹೋದೆಡೆ ಮೀಸಲೋಗರವ ಹೊರಗಿರಿಸಿದೆಡೆ ಹಂದಿ ಮೂಸಿನೋಡಿದಂತೆ ಸತಿಯರ ಸಂಗವನು ಅತಿಶಯದ ದಾಸ್ಯವನು ಪೃಥ್ವೀಗೀಶ್ವರನ ಪೂಜೆಯನು ಅರಿವುಳ್ಳರೆ ಹೆರರ ಕೈಯಿಂದ ಮಾಡಿಸುವರೆ - ಇಂಥ' ಕೆಲವು ವಚನಗಳಲ್ಲಿ ಸಮಾಜ ವಿಮರ್ಶೆ ಕಟುವಾಗಿ ವಿಡಂಬನಾತ್ಮಕವಾಗಿ ನಿರೂಪಿತವಾಗಿದೆ. ಹಸಿವಿಲ್ಲದ ಬೊಂಬೆಗೆ ತೃಷೆಯಿಲ್ಲದ ನೀರೆಱುದು ಮಸಕವಿಲ್ಲದ ಮಾತ ಮನದಲ್ಲಿ ಹೇಳಿ ಹೆಸರಿಲ್ಲದೆ ಕರೆದರೆ ಓ ಎಂಬವ ನೀನೋ; ಎಣ್ಣೆ ಇದ್ದು ಎಳ್ಳು ನೆನೆಯದ ಭೇದವ, ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ, ಕಾಮವಿದ್ದು ಕನ್ನೆಯನನುಭವಿಸದ ಭೇದವ, ಪರವಿದ್ದೂ ಪ್ರಾಣನ ಪ್ರಕೃತಿಯರಿಯದ ಭೇದವ - ಈ ಮೊದಲಾದ ಕೆಲವು ವಚನಗಳಲ್ಲಿ ಬೆಡಗಿನ ವಚನಗಳ ಶೈಲಿ ಕಂಡುಬರುತ್ತವೆ. ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೇ; ಜಳ್ಳು ತೂರಿದಲ್ಲಿ ಬತ್ತವುಂಟೇ; ಹಂದಿ ಶ್ರೀಗಂಧದ ಪೂಸಿದರೇನು ಗಂಧರಾಜನಾಗ ಬಲ್ಲುದೇ; ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟ ನೆಗೆದಂತೆ; ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ; ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೇ; ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಂಬುದೇ - ಈ ಮೊದಲಾದ ಮಾತುಗಳಲ್ಲಿ ಆಡು ನುಡಿಯ ಸೊಬಗನ್ನೂ ಕಾಣಬಹುದು.

ದಾಸಿಮಯ್ಯನ ವಚನಗಳಲ್ಲಿ ಪ್ರಭಾವ ಮುಂದಿನ ಇಡೀ ವಚನ ಸಾಹಿತ್ಯದ ಮೇಲೆ ಆಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಬಸವಣ್ಣನವರು ಇವನ ಭಾವವನ್ನೂ ಅನುಭಾವವನ್ನೂ ಅನುಸರಿಸಿದ್ದಾರೆ. ಅಲ್ಲಮಪ್ರಭು, ಅಕ್ಕಮಹಾದೇವಿ, ಸರ್ವಜ್ಞ ಮೊದಲಾದ ವಚನಕಾರರು ಈತನ ಪ್ರಭಾವಕ್ಕೊಳಗಾಗಿದ್ದಾರೆ. ಹೀಗೆ ಒಂದು ಸಾಹಿತ್ಯ ಪ್ರಕಾರದ ಆದ್ಯ ಪ್ರವರ್ತಕನಾಗಿ ಉತ್ತಮ ವಚನಗಳನ್ನು ನೀಡಿ ಶ್ರೇಷ್ಠ ವಚನಾಕಾರನೆಂಬ ಬಿರುದಿಗೆ ದಾಸಿಮಯ್ಯ ಪಾತ್ರನಾಗಿದ್ದಾನೆ. (ಬಿ.ಎಸ್.ಎಸ್.)

**ದೇವರ ಸೇವೆಗಳು :** ಜನಪದರು ತಮಗೆ ಸಂಭವಿಸುವ ಶುಭ ಅಶುಭಗಳಿಗೆಲ್ಲ ದೇವರೇ ಕಾರಣನೆಂದೂ ಅವನು ಕೃಪೆ ಕಡಿಮೆಯಾದಾಗ ಕಷ್ಟ ನಷ್ಟ ಒದಗುವುದೆಂದೂ ಕೃಪೆ ಹೆಚ್ಚಾದಾಗ ಸುಖ ಒದಗುವುದೆಂದೂ ನಂಬಿ ಕೈಗೊಳ್ಳುವ, ಕಷ್ಟಪರಿಹಾರಾರ್ಥವಾಗಿ ನಿರ್ದಿಷ್ಟ ದೈವಕ್ಕೆ ಕಟ್ಟಿಕೊಂಡ

ಹರಕೆ ತೀರಿಕೆಯ ವಿಶಿಷ್ಟ ಆಚರಣೆಗಳು. ಇಂಥ ಆಚರಣೆಗಳಲ್ಲಿ ಅನೇಕ ಪ್ರಕಾರಗಳುಂಟು. ಸೇವಾ ನಿಯಮ, ರೀತಿರಿವಾಜುಗಳನ್ನು ಕುರಿತಂತೆ ಹಲವಾರು ಕಟ್ಟುಕಟ್ಟಳೆಗಳುಂಟು. ಇವು ಪ್ರದೇಶದಿಂದ ಪ್ರದೇಶಕ್ಕೆ ಕಾಲಾಕಾಲಕ್ಕೆ ರೂಪ ಸಮಯ ಸಾಧನಗಳಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಪಡೆದುಕೊಂಡು ಬಳಕೆಯಲ್ಲಿರುತ್ತವೆ.

ಇವುಗಳಲ್ಲಿ ಒಚ್ಚಮಗ್ಗಲು ಸೇವೆ, ದುಂಡುರುಳು ಸೇವೆ, ಮಡೆ ಹೊರಳುವುದು, ಹೆಜ್ಜೆ ನಮಸ್ಕಾರ, ಮಣೇವು ಹಾಕುವುದು, ಹರಿಸೇವೆ, ಮೆಟ್ಟಲು ತೆಂಗಿನ ಕಾಯಿ ಸೇವೆ, ಪಂಜಿನ ಸೇವೆ, ಹಾಸಿಗೆ ಸೇವೆ, ಹೊಳೆಕರೆ ಸೇವೆ, ಧೂಪದ ಸೇವೆ, ಫಲಾರ ಸೇವೆ, ತಾಳೆಮೆಳೆ ಸೇವೆ, ಶಿಕ್ರಕ್ಯಾಯ್ ಕಟ್ಟೋ ಸೇವೆ, ದೇವಸ್ಥಾನದ ಬಾಗಿಲಿನಲ್ಲಿ ಎಲ್ಲರೂ ತಿರುಗುವಲ್ಲಿ ತಮ್ಮ ಚಿತ್ರ ಕೆತ್ತಿಸುವುದು, ಬಾಯಿಬೀಗ ಸೇವೆ, ಕೊಂಡ ಹಾಯುವುದು, ಸಿಡಿ ಆಡುವುದು ಮುಂತಾದುವು ಮುಖ್ಯವಾದುವು.

**ಒಚ್ಚಮಗ್ಗಲು ಸೇವೆ :** ಇದನ್ನು ಸಲ್ಲಿಸುವವರು ನದಿಯಲ್ಲಿ ಅಥವಾ ಕೆರೆಯಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯುಟ್ಟು ಹರಕೆ ಹೊತ್ತ ದೈವದ ದೇವಾಲಯದ ಸುತ್ತ ಒಂದೇ ಮಗ್ಗುಲಲ್ಲಿ ಮಲಗುತ್ತ ನಮಸ್ಕಾರ ಮಾಡಿಕೊಂಡು ಬರುವವರು. ಒಂದು ಸುತ್ತಿನಿಂದ ಮೂರು ಸುತ್ತಿನವರೆಗೆ ಈ ಸೇವೆ ನಡೆಯುತ್ತದೆ. ಇದರಲ್ಲಿ ಹೆಚ್ಚಾಗಿ ಹರಕೆ ಸಲ್ಲಿಸುವವರು ಪುರುಷರು. ಕೆಲಮೊಮ್ಮೆ ಸ್ತ್ರೀಯರೂ ಸಲ್ಲಿಸುವುದುಂಟು.

**ದುಂಡುರುಳು ಸೇವೆ, ಮಡೆ ಹೊರಳುವುದು :** ಸ್ವಲ್ಪ ಹೆಚ್ಚುಕಡಮೆ ಇವು ಎರಡೂ ಒಂದೇ ಬಗೆಯವು. ಇವುಗಳಲ್ಲಿಯೂ ಒದ್ದೆಬಟ್ಟೆ ಉಟ್ಟು, ದೇವಸ್ಥಾನವನ್ನು ಉರುಳುತ್ತಲೇ ಬಳಸಿ ಬರುತ್ತಾರೆ. ಕೆಲವು ವೇಳೆ ರಥೋತ್ಸವ, ಪರ್ವಗಳಂಥ ದೊಡ್ಡ ಸಮಾರಾಧನೆಗಳಲ್ಲಿ ನೂರಾರು ಜನ ಊಟ ಮಾಡಿದ ಎಂಜಲು ಎಲೆಗಳನ್ನು ಎತ್ತುವುದಕ್ಕೆ ಮುಂಚೆ ಅದರ ಮೇಲೆ ಉರುಳುವುದೂ ಉಂಟು. ಘಟ್ಟದ ಕೆಳಗಿನ ಸುಬ್ರಹ್ಮಣ್ಯ ದೇವಾಲಯದಲ್ಲಿ ಈ ಸೇವೆ ಹೆಚ್ಚು. ಹಿಂದೆ ಬಿಳಿಗಿರಿ ರಂಗನ ಬೆಟ್ಟದಲ್ಲಿಯೂ ಈ ಸೇವೆ ನಡೆಸುತ್ತಿದ್ದರಂತೆ. ಇದರಿಂದ ಕಾಹಿಲೆಗಳು ಗುಣವಾಗುವುದರ ಜೊತೆಗೆ, ಈ ಸೇವೆ ನಡೆಸುವ ಮಕ್ಕಳಾಗದ ಮಹಿಳೆಯರಿಗೆ ಮಕ್ಕಳಾಗುವುದೆಂಬ ನಂಬಿಕೆ ಇದೆ. ಹೆಂಗಸರಲ್ಲದೆ ಪುರುಷರೂ ಈ ಸೇವೆ ನಡೆಸುತ್ತಾರೆ.

**ಹೆಜ್ಜೆ ನಮಸ್ಕಾರ :** ದೇವಸ್ಥಾನದ ಪ್ರಾಕಾರದಲ್ಲಿ ಹೆಜ್ಜೆ ಹೆಜ್ಜೆಗೂ ನಮಸ್ಕರಿಸುತ್ತ ಹೋಗುವುದು. ಬೆಟ್ಟದ ಮೇಲೆ ದೇವರಿದ್ದರೆ ಮೆಟ್ಟಲು ಮೆಟ್ಟಲಿಗೂ ನಮಸ್ಕರಿಸುತ್ತ ಹೋಗುವುದು.

**ಮೆಟ್ಟಲು ತೆಂಗಿನ ಕಾಯಿಸೇವೆ :** ಮಕ್ಕಳಾಗದಿರುವ ಮಹಿಳೆಯರು ಒಂದೊಂದು ಮೆಟ್ಟಲಿಗೆ, ಕೆಲವು ವೇಳೆ ಹನ್ನೆರಡು ಮೆಟ್ಟಲಿಗೆ ಒಮ್ಮೆ ತೆಂಗಿನಕಾಯಿ ಒಡೆಯುತ್ತ ನಮಸ್ಕರಿಸುತ್ತ ಹೋಗುವರು. ಹೀಗೆ ಮಾಡಿದರೆ ಮಕ್ಕಳಾಗುವುದೆಂಬ ನಂಬಿಕೆಯಿದೆ.

**ಹರಿಸೇವೆ :** ದೇವರಿಗೆ ಪೂಜೆ ಮಾಡಿಸಿ ನೈವೇದ್ಯ ಮಾಡಿಸಿ ಮಂಗಳಾರತಿ ಮಾಡಿಸುವುದು. ಹರಿಸೇವೆಯ ಅಂಗವಾಗಿ ನಡೆಯುವ ಇನ್ನೊಂದು ಸೇವೆ ಮಣೇವು ಹಾಕುವುದು. ಇದರಲ್ಲಿ ಮುಖ್ಯಪಾತ್ರ ವಹಿಸುವವರು ದಾಸಯ್ಯಗಳು.

**ಧೂಪದ ಸೇವೆ :** ಮಾದೇಶ್ವರನ ಭಕ್ತರು ಬೆಟ್ಟ ಹತ್ತಿ ದೇವಸ್ಥಾನದ ಮುಂದೆ ಉರಿಯುತ್ತಿರುವ ಕೊಂಡಕ್ಕೆ ಧೂಪ (ಸಾಂಬ್ರಾಣಿ, ಗಂಧದ ಚಕ್ಕೆ) ಹಾಕುವುದು. ದೇವರಿಗೆ ನೈವೇದ್ಯ ಮಾಡಿದ ಪ್ರಸಾದವನ್ನು ಇವರು ಕೈಯಲ್ಲಿ ಮುಟ್ಟದೆ ತಿನ್ನುತ್ತಾರೆ.

**ಪಂಜಿನ ಸೇವೆ :** ಮಲೆಯ ಮಾದೇಶ್ವರನ ಬೆಟ್ಟದಲ್ಲಿ ಮಾದೇಶ್ವರನ ಭಕ್ತರು ಪಂಜಿನ ಸೇವೆ ನಡೆಸುವರು. ಎರಡೂ ಕೈಯಲ್ಲಿ ಎರಡು ಪಂಜು ಹಿಡಿದು ಒಂದು ವಿಧವಾಗಿ ನಮಸ್ಕರಿಸುವುದು ಇದರ ವೈಶಿಷ್ಟ್ಯ.

**ಫಲಾರ ಸೇವೆ :** ಮಾದೇಶ್ವರನ ಭಕ್ತರು ಮಾದೇಶ್ವರನ ಬೆಟ್ಟಕ್ಕೆ ಹತ್ತುವಾಗ ಊಟತಿಂಡಿ ಮಾಡದೆ ಯಾಲಕ್ಕಿಕಾಯಿಯನ್ನು ಮಾತ್ರ ತಿಂದು ಬೆಟ್ಟ ಹತ್ತುವುದು. ಇದನ್ನು ಸಾಮಾನ್ಯವಾಗಿ ಎಲ್ಲರೂ ಮಾಡುತ್ತಾರೆ.

**ಕೊಂಡ ಹಾಯುವುದು :** ಗ್ರಾಮದೇವತೆಯ ಜಾತ್ರೆಯಂದು ನಿಗಿನಿಗಿ ಉರಿಯುತ್ತಿರುವ ಕೆಂಡವನ್ನು ಬರಿಗಾಲಿನಲ್ಲಿ ನಡೆದುಕೊಂಡು ಹೋಗುವುದೇ ಕೊಂಡ ಹಾಯುವುದು.

**ಬಲಿ :** ದೇವತೆಯ ಸಂತೃಪ್ತಿಗಾಗಿ ಪ್ರಾಣಿ ಕೊಲ್ಲುವಿಕೆ.

**ಸಿಡಿ :** ಆಡುವುದು (ನೋಡಿ: ಸಿಡಿ)

**ಬಾಯಿಬೀಗ :** ಬಾಯನ್ನು ಲೋಹದ ಕಂಬಿಯಿಂದ ಹೊಲಿದುಕೊಳ್ಳುವುದು.

**ಮುಡಿ ಒಪ್ಪಿಸುವುದು :** ಮಂಡೆಯನ್ನು ಬೋಳಿಸಿಕೊಳ್ಳುವುದು

**ಶಿಕ್ರಕ್ಯಾಯ್ ಕಟ್ಟೋ ಸೇವೆ :** ಎಲ್ಲಮ್ಮನ ಭಕ್ತರು ದೇವಾಲಯದ ಶಿಖರಕ್ಕೆ ತೆಂಗಿನಕಾಯಿಯನ್ನು ಕಟ್ಟಿ ಬರುತ್ತಾರೆ. ಇದು ಈ ದೇವತೆಗೆ ಮಾತ್ರ ಮೀಸಲಿರುವ ಸೇವೆ. ದೇವಸ್ಥಾನದ ಮೆಟ್ಟಲಿನ ಮೇಲೆ ತಮ್ಮ ಚಿತ್ರವನ್ನು ಬರೆಸಿ ಅಥವಾ ಕೆತ್ತಿಸಿ ಅದನ್ನು ಎಲ್ಲರೂ ತುಳಿದುಕೊಂಡು ಹೋಗುವಂತೆ ಮಾಡುತ್ತಾರೆ. ಇದರಿಂದ ತಮ್ಮ ಪಾಪ ಪರಿಹಾರವಾಗುವುದೆಂದು ನಂಬಿಕೆ.

**ಬಾಳೆಪಟ್ಟೆ ಪೂಜೆ :** ಪವಿತ್ರ ದಿನಗಳಲ್ಲಿ ಅಂದರೆ ಶಿವರಾತ್ರಿ. ಸಂಕ್ರಾಂತಿ, ಯುಗಾದಿ, ಕಾರ್ತಿಕ ಮುಂತಾದ ದಿನಗಳಲ್ಲಿ ದೇವರಿಗೆ ಚಪ್ಪರ ಅಲಂಕಾರ ನೈವೇದ್ಯ ಮಾಡಿಸುವುದುಂಟು. ಇದಕ್ಕೆ ಪೂಜೆ ಕಟ್ಟಿಸುವುದು ಎಂದು ಹೆಸರು. ಇದರಲ್ಲಿ ಬಾಳೆಪಟ್ಟೆ ಪೂಜೆ ಹೆಚ್ಚು ಪ್ರಸಿದ್ಧ. ಬಾಳೆಯ ಮರವನ್ನು ಕಡಿದು ಅದರ ಪಟ್ಟೆಗಳನ್ನು ವಿವಿಧ ಆಕರಗಳಲ್ಲಿ ಕೊರೆದು, ಕತ್ತರಿಸಿ ದೇವರ ವಿಗ್ರಹದ ಸುತ್ತ ಮಂಟಪ ಕಟ್ಟುತ್ತಾರೆ. ವಿವಿಧ ರೀತಿಯಲ್ಲಿ ಬಾಳೆಯ ಪಟ್ಟೆಯಿಂದಲೇ ವಿಗ್ರಹವನ್ನೂ ಶೃಂಗರಿಸಿ ಪೂಜಿಸುತ್ತಾರೆ.

ಇವುಗಳ ಜೊತೆಗೆ ಮನೆಯಲ್ಲಿ ಏನಾದರೂ ತೊಂದರೆ, ಕಷ್ಟ ಸಂಭವಸಿದರೆ ಆಗಲೂ ದೇವರಿಗೆ ಸೇವೆ ನಡೆಸುತ್ತಾರೆ. ಉದಾಹರಣೆಗೆ ಹಾಲು ಕೊಡುತ್ತಿರುವ ಎಮ್ಮೆ ಇದ್ದಕ್ಕಿದ್ದಂತೆ ನಿಲ್ಲಿಸಿಬಿಟ್ಟರೆ ಅಥವಾ ಒದ್ದರೆ, ಉಚ್ಚಿದರೆ, ಹಳ್ಳಿಗರು ಜೋಯಿಸರಲ್ಲಿ ಶಾಸ್ತ್ರ ಕೇಳುತ್ತಾರೆ. ಜೋಯಿಸರು ಈರನ ಕಾಟ ಎನ್ನುತ್ತಾರೆ. ಈರನ ಕಾಟವೆಂದರೆ, ಮನೆಯಲ್ಲಿ ವಯಸ್ಸಿಗೆ ಬಂದ ಗಂಡೋ ಹೆಣ್ಣೋ ಮದುವೆ ಆಗದೆ ತೀರಿಕೊಂಡಿದ್ದರೆ ಅದರ ಕಾರಣದಿಂದ ಬರುವ ತೊಂದರೆ, ಆಗ ಯಜಮಾನ ತನ್ನ ಮನೆಯಲ್ಲಿ ಮದುವೆಯಾಗದೆ ಸತ್ತಿದ್ದ ಹೆಣ್ಣನ್ನೋ ಗಂಡನ್ನೋ ಜ್ಞಾಪಿಸಿಕೊಂಡು ಈರನ ಮದುವೆ ಮಾಡಿಸುತ್ತೇನೆಂದು ಹರಕೆ ಹೊರುತ್ತಾನೆ. ತನ್ನ ಮನೆಯಲ್ಲಿರುವ ಹೆಣ್ಣು (ಕಡಸು) ಅಥವಾ ಹೋರಿ ಕರುವಿಗೆ, ಬೇರೊಂದು ಮನೆಯಿಂದ ಹೋರಿ ಅಥವಾ ಹೆಣ್ಣು ಕರುವನ್ನು ತಂದು ಎರಡಕ್ಕೂ ಮದುವೆ ಮಾಡಿಸುವುದು ಈರನ ಮದುವೆ. ಈ ಮದುವೆ ಸಾಧಾರಣವಾಗಿ ಮನೆಯಲ್ಲಿ ಆಗುವ ಮದುವೆಯ ಹಿಂದಿನ ದಿನ ನಡೆಯುತ್ತದೆ. ಹೋರಿಗರು ಅಥವಾ ಕಡಸನ್ನು ಕೊಟ್ಟವರಿಗೆ ಅಂದು ಮರ್ಯಾದೆ ಮಾಡುವರು. ಹೀಗೆ ಮದುವೆಯಾದ ಕಡಸು ಅಥವಾ ಹೋರಿಗರುಗಳನ್ನು ಮಾರುವುದಿಲ್ಲ. ಅವು ಮನೆಯಲ್ಲಿಯೇ ಮುಪ್ಪಾಗುತ್ತವೆ.

ದೇವರ ಸೇವಾಕ್ರಮಗಳಲ್ಲಿ ಮುಖ್ಯವಾಗಿ ಅನ್ನದಾನದ ಸೇವೆ ವಿಶೇಷವಾಗಿದೆ. ಜನತೆಯನ್ನು ಅನ್ನದಿಂದ ಸಂತೃಪ್ತಿಪಡಿಸಿದರೆ ದೇವರೂ ಸಂಪ್ರೀತನಾಗುತ್ತಾನೆಂಬ ನಂಬಿಕೆ ಇಂದಿಗೂ ಪ್ರಬಲವಾಗಿದೆ. ಒಂದೂರಿಗೆ ಅಷ್ಟೇ ಅಲ್ಲದೆ ಒಂದು ಪ್ರಾಂತದ ಸಮಸ್ತ ಜನಕ್ಕೂ ಅನ್ನದ ಪರ (ಹಬ್ಬ) ಮಾಡುವ ಸತ್ಸಂಪ್ರದಾಯ ವಿರಳವಾಗಿಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಕಾಣಬರುತ್ತದೆ. ಕೆಲವು ಸೇವೆಗಳಿಗೆ ಕೆಲವು ದೇವರ ದೇವಾಲಯಗಳು ಪ್ರಸಿದ್ಧವಾಗಿರುತ್ತವೆ. ಸಾಧ್ಯವಿರುವವರು ಅಂಥ ದೇವಾಲಯಗಳಿಗೇ ಹೋಗುತ್ತಾರೆ. ಉಳಿದವರು ಹತ್ತಿರದಲ್ಲಿರುವ

ದೇವಾಲಯಗಳಲ್ಲಿ ಸೇವೆ ಸಲ್ಲಿಸುತ್ತಾರೆ. ಪುಣ್ಯಕ್ಷೇತ್ರದರ್ಶನ, ತೀರ್ಥಸ್ನಾನಪಾನ, ಹಲವು ದೇವರ ದರ್ಶನ, ಸ್ಪರ್ಶನ, ದೇವರ ಉತ್ಸವ, ಗುಡಿಗೋಪುರ ರಥ ನಿರ್ಮಾಣ, ಪೂಜೆ ನಡೆಯಲು ಪೋಷಕವಾಗಿ ದಾನ ದತ್ತಿಗಳ ಕೊಡುಗೆ, ಒಡವೆ ವಸ್ತ್ರ ಫಲಪತ್ರ ಪುಷ್ಪ ಸಮರ್ಪಣೆ ಇತ್ಯಾದಿ ಕ್ರಮಗಳೆಲ್ಲ ದೇವರ ಸೇವಾಕಾರ್ಯಗಳೇ ಎನ್ನಬಹುದು.(ಜಿ.ಆರ್.ಐ.;ಎಸ್.ಟಿ)

**ದೇವರಹಳ್ಳಿ:** ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಹೋಬಳಿಗೆ ಸೇರಿದ ಒಂದು ಗ್ರಾಮ. ಚನ್ನಗಿರಿಯ ಈಶಾನ್ಯಕ್ಕೆ 13ಕಿಮೀ ದೂರದಲ್ಲಿದೆ. ಸಂತೇಬೆನ್ನೂರು ಅರಸರಿಗೆ ಸೇರಿದ್ದ ಈ ಹಳ್ಳಿ ಸು. 17ನೆಯ ಶತಮಾನದ ಅಂತ್ಯದಲ್ಲಿ ಚಿತ್ರದುರ್ಗದ ಪಾಳೆಯಪಟ್ಟಿಗೂ 18ನೆಯ ಶತಮಾನದ ಆದಿಯಲ್ಲಿ ಕೆಳದಿ ಅರಸರ ಪಾಳೆಯಪಟ್ಟಿಗೂ ಸೇರಿತ್ತು.

ಇಲ್ಲಿರುವ ಉಡುಮರಡಿ ಬೆಟ್ಟದ ಮೇಲೆ ರಂಗನಾಥಸ್ವಾಮಿ ದೇವಾಲಯವಿದೆ. ಈ ಬೆಟ್ಟ ಚಿಕ್ಕದಾಗಿದ್ದರೂ ಇದರ ಮೇಲಿರುವ ದೇವಾಲಯದಿಂದಾಗಿ ಆಕರ್ಷಣೀಯವಾಗಿ ಕಾಣುತ್ತದೆ. ಹರಿದ್ರಾಮಹಾತ್ಮ್ಯವೆನ್ನುವ ಇಲ್ಲಿಯ ಸ್ಥಳಪುರಾಣ ರಂಗನಾಥನೇ ಉಡದ ರೂಪ ತಾಳಿ ಬಂದು ಈ ಬೆಟ್ಟದಲ್ಲಿ ತಂಗಿದುದರಿಂದ ಈ ಸ್ಥಳಕ್ಕೆ ಉಡುಮರಡಿ ಎಂದು ಹೆಸರಾಯಿತೆಂದು ತಿಳಿಸುತ್ತದೆ. ವಿಜಯನಗರ ಅರಸರ ಕಾಲದಲ್ಲಿ ಬೇಟೆಗಾರರ ತಂಡವೊಂದು ಧೂಪದಮರಡಿ ಎಂಬಲ್ಲಿ ಉಡವೊಂದನ್ನು ಕಂಡು ಅದನ್ನು ಹಿಂಬಾಲಿಸಿದಾಗ ಆ ಉಡವು ಬೆಳ್ಳಿಗನೂಡು ಎಂಬಲ್ಲಿ ಬೆಳ್ಳಿಯ ಬಣ್ಣದಿಂದಲೂ ಚಿನ್ನಾಪುರ ಎಂಬಲ್ಲಿ ಚಿನ್ನದ ಬಣ್ಣದಿಂದಲೂ ಚಿಕ್ಕುಡ ಎಂಬಲ್ಲಿ ಗಾತ್ರದಲ್ಲಿ ಚಿಕ್ಕದಾಗಿಯೂ, ಹಿರೇಉಡು ಎಂಬಲ್ಲಿ ಗಾತ್ರದಲ್ಲಿ ದೊಡ್ಡದಾಗಿಯೂ ಕಾಣಿಸಿಕೊಂಡು ಕಗ್ಗದೂರು ಎಂಬಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸಿ, ರಾಮಗೊಂಡನಹಳ್ಳಿ ಎಂಬಲ್ಲಿ ರಾಮ ಎಂದು ಕೂಗಿ, ನಿಂತಾಪುರ ಎಂಬಲ್ಲಿ ಸ್ವಲ್ಪ ಕಾಲ ನಿಂತು ಅನಂತರ ನೀತಿಗೆರೆ ಎಂಬಲ್ಲಿಗೆ ಹೋಗಿ ಮುಂದೆ ದೇವರಹಳ್ಳಿಗೆ ತಲುಪಿದ ತಕ್ಷಣವೇ ಮಾಯವಾಯಿತೆಂದು ಈ ಸ್ಥಪುರಾಣದಲ್ಲಿ ಹೇಳಿದೆ. ಈ ಕಥೆಗೆ ಸಂಬಂಧಿಸಿದ ಹಾಗೆಯೇ ಈ ಮೇಲಿನ ಸ್ಥಳಗಳ ಹೆಸರುಗಳಲ್ಲಿ ಅವುಗಳ ಶಬ್ದರಚನೆ ಇದೆ. ಈ ಉಡವೇ ರಂಗನಾಥಸ್ವಾಮಿ ಎಂಬ ನಂಬಿಕೆ ಇಂದಿಗೂ ಇದೆ. ಈಗಲೂ ಈ ಬೆಟ್ಟದ ಮೇಲೆ ಉಡಗಳು ತುಂಬಿವೆಯಾದರೂ ಅವುಗಳನ್ನು ಯಾರೂ ಬೇಟೆಯಾಡುವುದಿಲ್ಲ.

1654ರ ಶಾಸನವೊಂದರಲ್ಲಿ ಈ ದೇವರನ್ನು ಉಡುಮರಡಿ ರಂಗನಾಥಸ್ವಾಮಿ ಎಂದು ಕರೆದಿದೆ. ದೇವಸ್ಥಾನದ ನವರಂಗವನ್ನು ಗಿರಿಯಂಮ ಎಂಬುವಳು ಕಟ್ಟಿಸಿದಳೆಂದು ತಿಳಿದುಬರುತ್ತದೆ. ದೇವಾಲಯದಲ್ಲಿರುವ ರಂಗನಾಥ ವಿಗ್ರಹ ಶಂಖ ಮತ್ತು ಚಕ್ರಾಯುಧದ ಕೆತ್ತನೆಯಿಂದ ಕೂಡಿದ ಹಾಗೂ ಗುಂಡನೆಯ ಆಕಾರವಿರುವ ಲಿಂಗ, ಮಾವಿನಕೆರೆ ಮತ್ತು ಹರದೂರುಪುರದ ಬೆಟ್ಟಗಳ ಮೇಲಿರುವ ಲಿಂಗಗಳನ್ನು ಹೋಲುತ್ತದೆ. ಈ ಲಿಂಗ ಹಿಂದೆ, ವಿಜನಯಗರದ ಅರಸು ಕೃಷ್ಣದೇವರಾಯನಿಂದ ಪ್ರತಿಷ್ಠೆಯಾಯಿತೆನ್ನಲಾದ ಬಾಣಾಕಾರದ ಲಿಂಗವೊಂದಿದೆ. ಈ ಲಿಂಗದ ಮೇಲೆ ಸುಮಾರು 1 1/2 ಅಡಿ ಎತ್ತರದ ಕೇಶವನ ಪ್ರತಿಮೆ ಇದೆ. ಈ ದೇವಸ್ಥಾನದಲ್ಲಿ ಸುಮಾರು 1 ಅಡಿ ಎತ್ತರದ ಲೋಹದ ಉತ್ಸವ ವಿಗ್ರಹವೂ ಇದೆ. ಇಲ್ಲಿ ವರ್ಷಕ್ಕೊಮ್ಮೆ ರಥೋತ್ಸವ ನಡೆಯುತ್ತದೆ. ಈ ದೇವಸ್ಥಾನದ ಪ್ರಾಕಾರದಲ್ಲಿ ಲಕ್ಷ್ಮೀಗುಡಿ ಇದೆ. ಇಲ್ಲಿಯ ವಿಗ್ರಹ ಸುಂದರವಾಗಿದೆ. (ಕೆ.ಎಂ.ಎಸ್.)

**ದೇವರಾಜ ಅರಸು, ಡಿ. :** 1915-1982 ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ.

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ಇವರು 1915 ಆಗಸ್ಟ್ 20ರಂದು ಜನಿಸಿದರು. ತಂದೆ ದೇವರಾಜ ಅರಸು, ತಾಯಿ ದೇವೀರಮ್ಮಣ್ಣಿ. ಇವರದು ಅರಸು ಮನೆತನವಾದರೂ ಮಧ್ಯಮ ವರ್ಗಕ್ಕೆ ಸೇರಿದ್ದ ಹಳ್ಳಿಯ ಕುಟುಂಬವಾಗಿತ್ತು. ಅರಸು ಅವರು ಹಳ್ಳಿಯ ಇತರ ಮಕ್ಕಳಂತೆ ಸಾಮಾನ್ಯ ವಾತಾವರಣದಲ್ಲಿ ಬೆಳೆದರು. ತಮ್ಮ ಎಂಟನೆಯ ವಯಸ್ಸಿಗೇ ತಂದೆಯನ್ನು ಕಳೆದುಕೊಂಡ ಇವರು ತಾಯಿ ಮತ್ತು ಅಜ್ಜಿಯವರ ಆರೈಕೆಯಲ್ಲಿ ಬೆಳೆದರು. ನೆರೆಯ ಮನೆಯ ಗೌಡಯ್ಯನ ಜಗಲಿಯಲ್ಲಿ ಪ್ರಾರಂಭಿಸಿದ ವ್ಯಾಸಂಗವನ್ನು ಅನಂತರ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಮುಂದುವರಿಸಿ ಬಿ.ಎಸ್.ಸಿ. ಪದವೀಧರರಾದರು.

ಪದವಿ ಪಡೆದಮೇಲೆ ಇವರು ಮರಳಿ ಕಲ್ಲಹಳ್ಳಿಯಲ್ಲಿ ನೆಲಸಿ ವ್ಯವಸಾಯದಲ್ಲಿ ನಿರತರಾದರು. ಜೊತೆಗೆ ರಾಜಕಾರಣದಲ್ಲೂ ಆಸಕ್ತಿ ವಹಿಸಿದರು. ಹಳೆಯ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಇವರು 1941-48ರ ವರೆಗೆ ಸದಸ್ಯರಾಗಿದ್ದರು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲೂ ಭಾರತಕ್ಕೆ ಸ್ವಾತಂತ್ರ್ಯ ದೊರೆತಮೇಲೆ 1947ರಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಮೈಸೂರು ಚಲೋ ಹೋರಾಟದಲ್ಲೂ (ಮೈಸೂರು ರಾಜಮನೆತನದೊಂದಿಗೆ ಬಾಂಧವ್ಯವಿದ್ದರೂ) ಭಾಗವಹಿಸಿದರು. ಸ್ವತಂತ್ರ ಭಾರತದಲ್ಲಿ ನಡೆದ ಪ್ರಥಮ ಮಹಾಚುನಾವಣೆಗಳಲ್ಲಿ (1952) ಹುಣಸೂರು ಕ್ಷೇತ್ರದಿಂದ ರಾಜ್ಯ ವಿಧಾನ ಸಭೆಗೆ ಆಯ್ಕೆಯಾದರು. ಆಗಿನಿಂದಲೂ ಆ ಕ್ಷೇತ್ರವನ್ನು ಅವಿರತವಾಗಿ ಪ್ರತಿನಿಧಿಸಿದರು. 1962ರಲ್ಲಿ ಎಸ್. ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಸಚಿವರಾದರು. 1967ರ ಸಾರ್ವತ್ರಿಕ ಚುನಾವಣೆಯ ಅನಂತರ ರಚಿತವಾದ ಮಂತ್ರಿಮಂಡಲದಲ್ಲೂ ಸಚಿವರಾಗಿದ್ದರು. ಈ ಅವಧಿಗಳಲ್ಲಿ ಇವರು ಕಾರ್ಮಿಕ, ಸಾರಿಗೆ, ಪ್ರವಾಸೋದ್ಯಮ, ಪಶುಸಂಗೋಪನೆ, ವಾರ್ತಾ ಮತ್ತು ಪ್ರಚಾರ, ಮೀನುಗಾರಿಕೆ, ರೇಷ್ಮೆ ಮೊದಲಾದ ಖಾತೆಗಳನ್ನು ನಿರ್ವಹಿಸಿದರು. 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಅಂದಿನ ಪ್ರಧಾನಮಂತ್ರಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದ ಆಡಳಿತ ಕಾಂಗ್ರೆಸ್ಸಿನ ರಾಜ್ಯ ಸಂಘಟಕರಾಗಿ ಮುಂದುವರಿದ ಇವರು 1970ರಲ್ಲಿ ಆಡಳಿತ ಕಾಂಗ್ರೆಸ್ಸಿನ ರಾಜ್ಯ ಘಟಕದ ಸಂಚಾಲಕರಾಗಿ ಪಕ್ಷದ ಸಂಘಟನೆಯ ಜವಾಬ್ದಾರಿಯನ್ನು ವಹಿಸಿದರು. ಆ ವರ್ಷವೇ ಇವರು ಕೇಂದ್ರರೇಷ್ಮೆ ಮಂಡಲಿಯ ಅಧ್ಯಕ್ಷರಾಗಿ ನೇಮಕಗೊಂಡರು.

1971ರಲ್ಲಿ ನಡೆದ ಲೋಕಸಭಾ ಚುನಾವಣೆಗಳು ಮತ್ತು 1972ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಆಡಳಿತ ಕಾಂಗ್ರೆಸ್ ಬಹುಮತದಿಂದ ಗೆಲ್ಲಲು ಬಹಳವಾಗಿ ಶ್ರಮಿಸಿದ ಇವರು ತಮ್ಮ ರಾಜಕೀಯ ನಿಪುಣತೆ, ಸಂಘಟನಾಶಕ್ತಿ ಮತ್ತು ದೂರದೃಷ್ಟಿಗಳನ್ನು ಪ್ರಕಟಿಸಿ ಜನಪ್ರಿಯರಾದರು. ವಿಧಾನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆಯ್ಕೆಯಾಗಿ 1972 ಮಾರ್ಚ್ 20ರಂದು ಕರ್ನಾಟಕದ ಮುಖ್ಯಮಂತ್ರಿಯಾದರು. ಆ ವರ್ಷ ಜೂನ್‌ನಲ್ಲಿ ನಡೆದ ಉಪಚುನಾವಣೆಯಲ್ಲಿ ಇವರು ಹುಣಸೂರು ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾದರು.

ಪ್ರಗತಿಶೀಲ ಮನೋಭಾವದ ದೇವರಾಜ ಅರಸರು ದಕ್ಷ ಆಡಳಿತ ಒದಗಿಸುವುದು, ದಾರಿದ್ರ್ಯನಿರ್ಮೂಲನ, ಸಾಮಾಜಿಕ ನ್ಯಾಯ ದೊರಕಿಸುವುದು, ಆರ್ಥಿಕ ಪ್ರಗತಿ ಸಾಧಿಸುವುದು ಮೊದಲಾದ ಆಶೋತ್ತರಗಳಲ್ಲಿ ಕಾರ್ಯಮಗ್ನರಾಗಿದ್ದರು. ಅತ್ಯಂತ ಪ್ರಗತಿಶೀಲ ಭೂ ಸುಧಾರಣ ಶಾಸನ ಇವರ ಸರ್ಕಾರದ ಬಹು ದೊಡ್ಡ ಸಾಧನೆ. ಶತಮಾನಗಳಿಂದ ಬೆಳಕಿಗಾಗಿ ಹಾತೊರೆಯುತ್ತಿದ್ದ ಹಿಂದುಳಿದವರ ಆರ್ಥಿಕ, ಸಾಮಾಜಿಕ, ಸುಧಾರಣೇಗಳಿಗಾಗಿ ಹಲವು ಹನ್ನೊಂದು ಕಾರ್ಯಕ್ರಮಗಳನ್ನೂ ಇವರು ರೂಪಿಸಿದ್ದಾರೆ. ಈ ಉದ್ದೇಶಕ್ಕೆಂದೇ ನೇಮಕವಾದ ಹಾವನೂರು ಆಯೋಗ ಮುಖ್ಯವಾದ್ದು. ಈ ಆಯೋಗ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮತ್ತು ಶೈಕ್ಷಣಿಕ ಪ್ರವೇಶಾತಿಗಳಲ್ಲಿ ಮೀಸಲಾತಿ ಕುರಿತಂತೆ ಸಲ್ಲಿಸಿದ ವರದಿಯನ್ನು ಇವರು ಕೂಡಲೇ ಜಾರಿಗೆ ತಂದರು.

ಇವಕು ಅಧಿಕಾರ ವಹಿಸಿಕೊಂಡ ಸ್ವಲ್ಪ ಸಮಯದಲ್ಲೇ ಜಿಲ್ಲಾ ವ್ಯಾಪ್ತಿಗೆ ಮೀರಿದ ಎಲ್ಲ ಕಚೇರಿ ಮತ್ತು ಇಲಾಖೆಗಳಲ್ಲಿ ಅಧಿಕೃತ ವ್ಯವಹಾರಗಳಿಗೆ ಕನ್ನಡ ಬಳಸಬೇಕಂಬ ಆದೇಶ ಹೊರಬಿತ್ತು.

1956ರಿಂದಲೂ ನೆನೆಗುದಿಗೆ ಬಿದ್ದಿದ್ದ ರಾಜ್ಯದ ಹೆಸರು ಬದಲಾವಣೆಯ ಸಮಸ್ಯೆಯನ್ನು ಜನತೆಯ ಇಂಗಿತವರಿತು ಸುಲಭವಾಗಿ ಪರಿಹರಿಸಿದರು. ಮೈಸೂರು ರಾಜ್ಯಕ್ಕೆ 1973 ನವೆಂಬರ್ 1ರಂದು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಭಾಷಾ ಆಯೋಗವನ್ನು ರಚಿಸಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಲು ಭದ್ರ ಬುನಾದಿ ಹಾಕಿದರು.

1975 ಜುಲೈ 1ರಂದು ಪ್ರಧಾನಿ ಇಂದಿರಾ ಗಾಂಧೀಯುವರು ಸಾರಿದ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಭೂ ಹಂಚಿಕೆ, ಬಡವರಿಗೆ ಉಚಿತ ವಸತಿ ಯೋಜನೆ, ನಿವೇಶನ ಹಂಚಿಕೆ, ಹರಿಜನ, ಗಿರಿಜನ ಮತ್ತಿತರ ಹಿಂದುಳಿದ ವರ್ಗಗಳಿಗೆ ತೀವ್ರ ಪ್ರೋತ್ಸಾಹ, ಜೀತಪದ್ಧತಿ ರದ್ದು, ಅಲ್ಪಾದಾಯ ವರ್ಗದ ಸಾಲ ರದ್ದು, ಅಕ್ರಮ ಲೇವಾದೇವಿಗಳ ನಿಷೇಧ, ಕೃಷಿ ಕಾರ್ಮಿಕರ ವೇತನ ಹೆಚ್ಚಳ, ಬಾಡಿಗೆ ಮನೆಗಳ ಮೇಲೆ ನಿಯಂತ್ರಣ - ಈ ಮುಂತಾದ ಕ್ಷೇತ್ರಗಳಲ್ಲೂ ರಾಜ್ಯ ಗಮನಾರ್ಹ ಸಾಧನೆ ಮಾಡಿತು. ಆಹಾರ ಸಮಸ್ಯೆಯನ್ನು ನೀಗಲು, ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಹಲವಾರು ನೀರಾವರಿ ಯೋಜನೆಗಳು ಭರದಿಂದ ಪ್ರಾರಂಭವಾದವು. ಕಬಿನಿ, ಹಾರಂಗಿ, ಹೇಮಾವತಿ, ಘಟಪ್ರಭಾ, ಕೃಷ್ಣಾ ಮೇಲ್ದಂಡೆ ಯೋಜನೆಗಳು ಹಾಗೂ ಇತರ ನೂರಾರು ಸಣ್ಣ ನೀರಾವರಿ ಯೋಜನೆಗಳ ಕೆಲಸ ಚುರುಕಾಯಿತು. ಜಗತ್ತಿನ ಬೃಹತ್ ಯೋಜನೆಗಳ ಸಾಲಿಗೆ ಸೇರುವ ಕಾಳಿ ವಿದ್ಯುತ್ ಯೋಜನೆ ಮತ್ತು ಕುದುರೆಮುಖ ಕಬ್ಬಿಣದ ಅದುರು ಯೋಜನೆಗಳು ಇವರ ಅಧಿಕಾರಾವಧಿಯಲ್ಲಿ ಪ್ರಾರಂಭವಾದುವು.

ಇವರು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಖಾಯಂ ಆಹ್ವಾನಿತ ಸದಸ್ಯರಾಗಿದ್ದಲ್ಲದೆ ರಾಜ್ಯ ಯುವ ಕಾಂಗ್ರೆಸ್ ಸಲಹಾ ಸಮಿತಿಯ ಅಧ್ಯಕ್ಷರೂ ಮೈಸೂರು ವಿಶ್ವವಿದ್ಯಾನಿಲಯದ ವಜ್ರಮಹೋತ್ಸವ ಸಮಿತಿ ಅಧ್ಯಕ್ಷರೂ ಆಗಿದ್ದರು.

ಇವರು ಮುಖ್ಯಮಂತ್ರಿಗಳಾದ ಮೇಲೆ ಮಾಡಿದ ಭಾಷಣಗಳ ಎರಡು ಸಂಕಲನಗಳು ಕರ್ನಾಟಕಕ್ಕೆ ಶುಭವಾಗಲಿ ಮತ್ತು ಪ್ರಗತಿಪಥ ಎಂಬ ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿವೆ.

ಶ್ರೀಮತಿ ಇಂದಿರಾಗಾಂಧಿಯವರು 1975ರಲ್ಲಿ ರಾಷ್ಟ್ರವ್ಯಾಪಿ ತುರ್ತು ಪರಿಸ್ಥಿತಿಯನ್ನು ಹೇರಿದಾಗ ಅದು ಜನರ ಸ್ವಾತಂತ್ರ್ಯದ ಮೇಲೆ ಬೀರುವ ಕೆಟ್ಟ ಪರಿಣಾಮವನ್ನು ತಗ್ಗಿಸಿದ್ದು ದೇವರಾಜ ಅರಸು ಅವರ ದೂರದೃಷ್ಟಿಯ ಫಲ. ಇವರು ಈ ಸಂದರ್ಭವನ್ನು ತಮ್ಮ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಬಳಸಿಕೊಂಡರು. 1977ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರಾಷ್ಟ್ರಮಟ್ಟದಲ್ಲಿ ಭಾರಿ ಸೋಲು ಅನುಭವಿಸಿದರೂ ಕರ್ನಾಟಕದಲ್ಲಿ ಜಯ ಸಾಧಿಸಿತು. ಅರಸು ಅವರು ತಮ್ಮ ಪಕ್ಷದ ಹಲವು ಶಾಸಕರ ಪಕ್ಷಾಂತರದಿಂದಾಗಿ ಅಧಿಕಾರ ಕಳೆದುಕೊಂಡು ರಾಷ್ಟ್ರಪತಿ ಆಡಳಿತ ಜಾರಿಗೆ ತರಲಾಯಿತು. ಆದರೆ 1978ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಅರಸು ಅವರೇ ಮುಖ್ಯಮಂತ್ರಿಗಳಾದರು. ಅದೇ ವರ್ಷ ಸೋಲು ಕಂಡಿದ್ದ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧೀಯುವರನ್ನು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಮಧ್ಯಂತರ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಮಾಡಿ ಅವರ ಗೆಲುವಿಗೆ ಸಹಕಾರಿಯಾದರು.

ದೇವರಾಜ ಅರಸು ಮತ್ತು ಇಂದಿರಾಗಾಂಧಿಯವರ ರಾಜಕೀಯ ಭಿನ್ನಾಭಿಪ್ರಾಯಗಳು ಉಲ್ಬಣಿಸಿ 1979ರಲ್ಲಿ ಅರಸರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಲಾಯಿತು. ಆದರೂ ಇವರು ಅಧಿಕಾರ ಉಳಿಸಿಕೊಳ್ಳುವಲ್ಲಿ ಸಫಲರಾದರು. ಕರ್ನಾಟಕ ಕಾಂಗ್ರೆಸ್ ಎಂಬ ಪ್ರಾದೇಶಿಕ ಪಕ್ಷವನ್ನು ತೇಲಿಬಿಟ್ಟರು. ತರುವಾಯ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಿ ಅದರ ರಾಷ್ಟ್ರೀಯ ಅಧ್ಯಕ್ಷರಾದರು. 1980ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಮತ್ತೆ ಇಂದಿರಾ ಕಾಂಗ್ರೆಸ್ ಪಕ್ಷಕ್ಕೆ ಅಖಂಡ ಬೆಂಬಲವನ್ನು ವ್ಯಕ್ತಪಡಿಸಿದರು. ಆಗ ಆದ ಪಕ್ಷಾಂತರದಿಂದಾಗಿ ಅರಸು ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಟ್ಟರು. ಶಾಸನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದರು. ಅದಕ್ಕೂ ಮುಳುವಾದಾಗ ಪ್ರಗತಿಪರ ದೃಷ್ಟಿಯ ಇವರು ಕರ್ನಾಟಕ ಕ್ರಾಂತಿರಂಗ ಎಂಬ ಹೊಸ ಪ್ರಾದೇಶಿಕ ಪಕ್ಷ ಕಟ್ಟಿದರು. ಈ ರಾಜಕೀಯ ತುಮುಲದಲ್ಲಿದ್ದಾಗಲೇ ಇವರು 1982 ಜೂನ್ 6ರಂದು ಹಠಾತ್ತನೆ ನಿಧನರಾದರು. ಇವರು ಹುಟ್ಟಿದ ದಿನವನ್ನು ಹಿಂದುಳಿದ ವರ್ಗಗಳ ಏಳಿಗೆಯ ದಿನವಾಗಿ ಸ್ಮರಿಸಿಕೊಳ್ಳಲಾಗುತ್ತಿದೆ. ಇವರ ಪತ್ನಿ ಚಿಕ್ಕಮ್ಮಣ್ಣಿ. ಇವರಿಗೆ ಮೂವರು ಪುತ್ರಿಯರು. ಮಗಳು ಚಂದ್ರಪ್ರಭಾ ಅರಸು ಲೋಕಸಭಾ ಸದಸ್ಯರಾಗಿದ್ದರು ಮತ್ತು ಸ್ವಲ್ಪ ಕಾಲ ರಾಜ್ಯ ಸಂಪುಟದಲ್ಲಿ ಸಚಿವೆಯಾಗಿದ್ದರು. (ಡಿ.ಎಸ್.ಜೆ.)

**ದೇವರಾಜ ಒಡೆಯರ್ :** ಮೈಸೂರು ರಾಜವಂಶದ ಖ್ಯಾತ ದೊರೆ (1659-1673) 4ನೆಯ (ಬೋಳ) ಚಾಮರಾಜನ ಮೊಮ್ಮಗ. ಗುಂಡ್ಲು ಮುಪ್ಪಿನ ದೇವರಾಜನ ಮಗ ಜನನ 1627.

ಈತ ಕಂಠೀರವ ನರಸರಾಜನ ಅನಂತರ ಪಟ್ಟಕ್ಕೆ ಬಂದ (1659). ದೊರೆತನ ವಹಿಸಿಕೊಳ್ಳುತ್ತಿದ್ದಂತೆಯೇ ಇವನು ಅನೇಕ ಯುದ್ಧಗಳಲ್ಲಿ ಪಾಲ್ಗೊಳ್ಳಬೇಕಾಯಿತು. ವಿಜಯನಗರದ ಆಳ್ವಿಕೆಯನ್ನು ಸ್ಥಾಪಿಸುವ ನೆಪದಿಂದ ನರಸೀಪುರದ ಲಕ್ಷ್ಮಪ್ಪನಾಯಕನ ಸಹಾಯ ಪಡೆದು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದಿದ್ದ ಕೆಳದಿ ಶಿವಪ್ಪನಾಯಕನನ್ನು ಸೋಲಿಸಿ ಹಿಮ್ಮೆಟ್ಟಿಗಿದ (1659-60). ಕೆಲಕಾಲಾನಂತರ ಬಿದನೂರಿನಲ್ಲಿ ಶಿವಪ್ಪನಾಯಕ ಮೃತನಾದಮೇಲೆ ಮುಂದಿನ ಅರಸರಾದ ಒಂದನೆಯ ವೆಂಕಟಪ್ಪ ಮತ್ತು ಭದ್ರಪ್ಪ ಮೈಸೂರಿನೊಡನೆ ವೈರವನ್ನು ಮುಂದುವರಿಸಿದ್ದರು. ಬಿಜಾಪುರ ಮತ್ತು ಗೋಲ್ಕಂಡದ ಸುಲ್ತಾನರೂ ಸತ್ವಹೀನರಾಗುತ್ತಿದ್ದರು. ಈ ಸುಸಂದರ್ಭವನ್ನು ಉಪಯೋಗಿಸಿಕೊಂಡ ದೇವರಾಜ ಇಕ್ಕೇರಿಯ ಮೇಲಿನ ಯುದ್ಧದ ನೆಪದಲ್ಲಿ ತನ್ನ ರಾಜ್ಯದ ಉತ್ತರಕ್ಕಿದ್ದ ಇತರ ಪ್ರದೇಶಗಳ ಮೇಲೂ ದಾಳಿ ಮಾಡಿದ. ದಳವಾಯಿ ನಂಜನಾಥಯ್ಯನ ನೇತೃತ್ವದಲ್ಲಿ ನಡೆದ ಈ ದಾಳಿಗಳಿಂದಾಗಿ ಶಾಹೀ ರಾಜ್ಯಗಳ ಅಧೀನದಲ್ಲಿದ್ದ ಚೇಳೂರು, ಬಿದರೆ, ಸಂಪಿಗೆ ಮತ್ತು ಚಿಕ್ಕನಾಯಕನಹಳ್ಳಿ ಮೈಸೂರು ಸೈನ್ಯದ ವಶವಾದುವು (1663). 1664ರ ಹೊತ್ತಿಗೆ ಬಿದನೂರಿನಲ್ಲಿ ರಾಜನಾಗಿದ್ದ ಹಿರಿಯ ಸೋಮಶೇಖರ ನಾಯಕ ಮೈಸೂರಿನವರು ಈ ಹಿಂದೆ ವಶಪಡಿಸಿಕೊಂಡಿದ್ದ ಬಿಕ್ಕೋಡು, ಬೇಲೂರು ಮುಂತಾದ ಕೆಲವು ಪ್ರದೇಶಗಳನ್ನು ಗೆದ್ದುಕೊಂಡರೂ ನಂಜನಾಥೈಯ ತನ್ನ ಸೈನ್ಯವನ್ನು ಮಲೆನಾಡಿನ ಮೂಲಕ ಇಕ್ಕೇರಿಯತ್ತ ನುಗ್ಗಿಸಿದ. ಅಲ್ಲಿಯ ರಾಜ ಸೋಮಶೇಖರ ನಾಯಕ ಸಂಧಿ ಮಾಡಿಕೊಂಡ. 1664ರ ಹೊತ್ತಿಗೆ ಒಡೆಯರ ರಾಜ್ಯ ಉತ್ತರದಲ್ಲಿ ಚಿಕ್ಕನಾಯಕನಹಳ್ಳಿ, ಸಕ್ಕರೆಪಟ್ಣ, ವಸ್ತಾರೆಯವರೆಗೂ ಹಬ್ಬಿತು. 1663ರ ಹೊತ್ತಿಗೆ ಬೇಲೂರಿನಲ್ಲಿದ್ದ ವಿಜಯ ನಗರದ ವಂಶದ ಶ್ರೀರಂಗರಾಯ ಬೆಂಬಲ ಸಿಗದೆ ತಳ ಕಿತ್ತಿದ್ದ. ದೇವರಾಜ ಅಂದಿನಿಂದ ಸಾರ್ವಭೌಮ ಬಿರುದುಗಳನ್ನು ಅಳವಡಿಸಿಕೊಳ್ಳಲಾರಂಭಿಸಿದ. ಮೈಸೂರು ಒಡೆಯರು ಒಪ್ಪಿಕೊಂಡಿದ್ದ ನಾಮಮಾತ್ರ ಸಾಮಂತತ್ವವೂ ಕೊನೆಗೊಂಡಿತು.

1666ರಲ್ಲಿ ಅಣ್ಣಾಜಯ್ಯನಿಂದ ಸಾರತವಳ್ಳಿಯನ್ನು ವಶಪಡಿಸಿಕೊಂಡ, ಅನಂತರ ದೇವರಾಜನ ವಿಜಯದೃಷ್ಟಿ ದಕ್ಷಿಣಕ್ಕೆ ಹರಿಯಿತು. ಮಧುರೆಯ ನಾಯಕನ ಸಾಮಂತನಾಗಿದ್ದ ಸಾಂಬಳ್ಳಿಯ ಘಟ್ಟಮುದಲಿಯಾರನನ್ನು ಹತ್ತಿಕ್ಕಿದ. ಇದನ್ನು ಕೇಳಿ ಕೆರಳಿದ ಮಧುರೆಯ ಚೊಕ್ಕನಾಥನಾಯಕ ದಂಡೆತ್ತಿಬಂದು ಈರೋಡಿನಲ್ಲಿ ಕಾದ. ದೇವರಾಜನ ದಳವಾಯಿ ಕುಮಾರೈಯನ ನೇತೃತ್ವದಲ್ಲಿ ಮೈಸೂರು ಸೈನ್ಯ ಧಾವಿಸಿ, ಆ ಹೊತ್ತಿಗೆ ಚೊಕ್ಕನಾಥ ಕಾಲ್ಕಿತ್ತಿದ್ದರೂ ಈರೋಡನ್ನು ವಶಪಡಿಸಿಕೊಂಡಿತು (1667-68). ಉತ್ತರದಲ್ಲಿ ದೇವರಾಜ ಹುಲಿಯೂರುದುರ್ಗ ಮತ್ತು ಕುಣಿಗಳನ್ನು ಮಾಗಡಿಯ ಕೆಂಪೇಗೌಡನಿಂದ ಕಿತ್ತುಕೊಂಡ.

1673ರ ಹೊತ್ತಿಗೆ ದೇವರಾಜ ಪಶ್ಚಿಮದಲ್ಲಿ ಸಕ್ಕರೆಪಟ್ಟಣದಿಂದ ಪೂರ್ವದಲ್ಲಿ ಸೇಲಂ ವರೆಗೂ ಉತ್ತರದಲ್ಲಿ ಚಿಕ್ಕನಾಯಕನಹಳ್ಳಿಯಿಂದ ದಕ್ಷಿಣದಲ್ಲಿ ಕೊಯಮತ್ತೂರು ಜಿಲ್ಲೆಯ ಧಾರಾಪುರದವರೆಗೂ ಹರಡಿದ್ದ ವಿಶಾಲ ರಾಜ್ಯವನ್ನು ಸಾಧಿಸಿಕೊಂಡು ರಾಜಧಾನಿ ಶ್ರೀರಂಗಪಟ್ಟಣದಿಂದ ವೈಭವದಿಂದ ಆಳಲಾರಂಭಿಸಿದ. ಈ ರಾಜನ ಆಶ್ರಯದಲ್ಲಿದ್ದ ಚಾಮಯ್ಯನೆಂಬ ಕವಿ ದೇವರಾಜೇಂದ್ರಸಾಂಗತ್ಯವೆಂಬ ಗ್ರಂಥದಲ್ಲಿ ಈ ರಾಜನ ಆಳ್ವಿಕೆಯ ವಿವರಗಳನ್ನು ಕೊಟ್ಟಿದ್ದಾನೆ.

ಭಕ್ತಾದಿಗಳು ಚಾಮುಂಡಿಬೆಟ್ಟಕ್ಕೆ ಸುಲಭವಾಗಿ ಹತ್ತಿಹೋಗುವಂತೆ ಈ ರಾಜ 1664ರಲ್ಲಿ ಆ ಬೆಟ್ಟಕ್ಕೆ ಸಾವಿರ ಸೋಪಾನಗಳನ್ನು ಕಟ್ಟಿಸಿದ್ದೇ ಅಲ್ಲದೆ ಮಧ್ಯದಲ್ಲಿ ಒಂದು ದೊಡ್ಡ ಬಸವನನ್ನು ನಿರ್ಮಿಸಿ ಪ್ರತಿಷ್ಠಾಪಿಸಿದ. ದೇವರಾಜಪುರವೆಂಬ ಅಗ್ರಹಾರವನ್ನೂ ಮೈಸೂರು ಮತ್ತು ಈ ಅಗ್ರಹಾರಗಳ ನಡುವೆ ದೇವಾಂಬುಧಿ ಕೆರೆಯನ್ನೂ ನಿರ್ಮಿಸಿದ. ದೊಡ್ಡದೇವರಾಜ ಎಂದೂ ಹೆಸರಾಗಿದ್ದ. ಈತ 1673ರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ನಿಧನಹೊಂದಿದ. (ಎಂ.ಪಿ.)

**ದೇವರಾಜಯ್ಯ :** ಕಳಲೆಯ ಸಾಮಂತ ಮನೆತನದ ಅರಸನಾಗಿದ್ದು ಮೈಸೂರು ಅರಸರ ಸೇವೆಯಲ್ಲಿದ್ದ ದಳವಾಯಿ (1735-58). ಇತಿಹಾಸದಲ್ಲಿ ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಅನಂತರ ಅಂದರೆ 1704-61ರ ವರೆಗಿನ ಕಾಲವನ್ನು ದಳವಾಯಿಗಳ ಕಾಲವೆಂದು ಪರಿಗಣಿಸಬಹುದು. ದಳವಾಯಿ ದೇವರಾಜಯ್ಯ ಈ ಯುಗದ ಅತ್ಯಂತ ಪ್ರಭಾವೀ ವ್ಯಕ್ತಿ. ದೊಡ್ಡ ಕೃಷ್ಣರಾಜ (1713-32) ಕಳಲೆಯ ದಳವಾಯಿ ವೀರರಾಜಯ್ಯನ ಅನಂತರ ಅವನ ಮಗ ದೇವರಾಜಯ್ಯನನ್ನು ದಳವಾಯಿಯಾಗಿ ನೇಮಕ ಮಾಡಿದ. ಜೊತೆಗೆ ಇವನ ಸೋದರಸಂಬಂಧಿ ಸರ್ವಾಧಿಕಾರಿ ನಂಜರಾಜ್ಯಯ್ಯನೂ ಅವರ ಸೇವೆಯಲ್ಲಿದ್ದ. ರಾಜ್ಯಾಡಳಿತದ ಸೂತ್ರಾಧಿಕಾರಿಗಳು ಈ ಸೋದರರ ಕೈಸೇರಿದುದರಿಂದ ಮಹತ್ವಾಕಾಂಕ್ಷಿ ದೇವರಾಜಯ್ಯ ರಾಜನ ಆಡಳಿತದಲ್ಲಿದ್ದ ಅದಕ್ಷತೆಯ ದುರುಪಯೋಗಪಡಿಸಿಕೊಂಡು ಬಲಿಷ್ಠನಾದ.

1725ರಲ್ಲಿ ಮೈಸೂರಿನ ಮೇಲೆ ದಾಳಿಯಿತ್ತ ಮರಾಠ ಬಾಜೀರಾಯ 'ಇದು ಶ್ರೀರಂಗಪಟ್ಟಣವಲ್ಲ ಫಿರಂಗಿಪಟ್ಟಣ' ಎನ್ನುವಂತೆ ದಳವಾಯಿ ದೇವರಾಜಯ್ಯ ಸೈನ್ಯವನ್ನು ರೂಪಿಸಿ, ತರಪೇತುಗೊಳಿಸಿದ. ಅನಂತರ ಸಾವನದುರ್ಗವನ್ನು ಲೂಟಿ ಮಾಡಿದುದಲ್ಲದೆ, ಮಾಗಡಿಯಲ್ಲಿ ಗೌಡರ ಆಳ್ವಿಕೆಯನ್ನು ಕೊನೆಗೊಳಿಸಿ, ಆ ಪ್ರದೇಶವನ್ನು ಮೈಸೂರು ರಾಜ್ಯಕ್ಕೆ ಸೇರಿಸಿದ.

ಅಧಿಕಾರ ಪ್ರಭಾವ ಹೆಚ್ಚಿದಂತೆ ದೇವರಾಜಯ್ಯ ಮುಖ್ಯ ಅಧಿಕಾರಗಳಿಗೆಲ್ಲಾ ತನ್ನ ಬೆಂಬಲಿಗರನ್ನು ನೇಮಿಸಿಕೊಂಡು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ದೇವರಾಜಯ್ಯನಿಗೂ ಮತ್ತು ದೊಡ್ಡಕೃಷ್ಣರಾಜನ ಅನಂತರ ಪಟ್ಟಕ್ಕೆ ಬಂದ ಸ್ವಾಭಿಮಾನಿ ಏಳನೆಯ ಚಾಮರಾಜನಿಗೂ ಕಲಹ ಉಂಟಾಯಿತು. ಕೊನೆಗೆ ಚಾಣಾಕ್ಷತೆಯಿಂದ ಕೃಷ್ಣರಾಜನ ಪತ್ನಿ ದೇವಾಜಮ್ಮಣ್ಣಿಯ ಬೆಂಬಲ ಪಡೆದ ದೇವರಾಜಯ್ಯ 1734ರ ಜೂನ್‌ನಲ್ಲಿ ರಾಜ ಮತ್ತು ಅವನ ಮೂವರು ರಾಣಿಯರನ್ನು ಸೆರೆಹಿಡಿದು ಕಬ್ಬಾಳದುರ್ಗದಲ್ಲಿಟ್ಟ.

ಅನಂತರ ಪಟ್ಟಕ್ಕೆ ಬಂದ ಇಮ್ಮಡಿ ಕೃಷ್ಣರಾಜ ಚಿಕ್ಕವನಾಗಿದ್ದುದರಿಂದ ಎಲ್ಲಾ ಅಧಿಕಾರ ದೇವರಾಜಯ್ಯನಲ್ಲಿ ಕೇಂದ್ರೀಕೃತವಾಯಿತು. ಸರ್ವಾಧಿಕಾರಿ ನಂಜರಾಜಯ್ಯನ ಮರಣಾನಂತರ ತನ್ನ ತಮ್ಮ ಕರಾಚುರಿ ನಂಜರಾಜಯ್ಯನನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಿಕೊಂಡುದಲ್ಲದೆ (1739) ಅವನ ಮಗಳನ್ನು ಮಹಾರಾಜನಿಗೆ ಮದುವೆ ಮಾಡಿಸಿ ರಾಜಮನೆತನದ ಬಾಂಧವ್ಯವನ್ನು ಬಿಗಿಗೊಳಿಸಿದ. 1935 -36ರಲ್ಲಿ ಮಲಬಾರಿನ ಮೇಲೆ ದಾಳಿ ಮಾಡಿದ. ಈ ಸಮಯದಲ್ಲಿ ಮೈಸೂರಿನ ಮೇಲೆ ದಾಳಿಯಿಟ್ಟ ಆರ್ಕಾಟಿನ ನವಾಬ ದೋಸ್ತ್ ಆಲಿಖಾನನ್ನು ಚನ್ನಪಟ್ಟಣದ ಬಳಿ ಸಂಪೂರ್ಣವಾಗಿ ಸೋಲಿಸಿ ಮೈಸೂರಿನ ಕೀರ್ತಿಯನ್ನು ಬೆಳಗಿಸಿದ (1737). ಆದರೆ ಇಳಿವಯಸ್ಸಿನ ಪರಿಣಾಮವಾಗಿ ಉತ್ಸಾಹರಹಿತನಾಗಿದ್ದ ದೇವರಾಜಯ್ಯ 1747ರಲ್ಲಿ ದಖನ್ನಿನ ಸುಬೇದಾರ ನಾಸಿರ್‌ಜಂಗ್‌ನಿಗೆ ಸೋಲಬೇಕಾಯಿತು. ಕೊನೆಗೆ ಜನತೆಯ ಕ್ಷೇಮ ಮತ್ತು ರಾಜ್ಯದ ಹಿತದೃಷ್ಟಿಯನ್ನು ಪರಿಗಣಿಸಿ ಕರಾಚುರಿ ನಂಜರಾಜಯ್ಯನಿಗೆ ದಳವಾಯಿತನವನ್ನು ವಹಿಸಿಕೊಟ್ಟ.

ಉಳಿದ ಕಾಲದಲ್ಲಿ ದೇವರಾಜಯ್ಯ ರಾಜಧಾನಿಯಲ್ಲಿದ್ದು ಕೊಂಡು ಆಡಳಿತ ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸುತ್ತಿದ್ದ. 1755ರಲ್ಲಿ ಕರಾಚುರಿ ನಂಜರಾಜ್ಯಯ್ಯ ತಿರುಚಿನಾಪಳ್ಳಿ ವಿವಾದದಲ್ಲಿ ತೊಡಗಿದ್ದಾಗ ದಖನ್ನಿನ ನವಾಬ ಸಲಾಬತ ಜಂಗ್‌ನ ದಾಳಿ ನಡೆಯಿತು. ಆರ್ಥಿಕ ಮುಗ್ಗಟ್ಟಿನಲ್ಲಿ ತೊಳಲಾಡುತ್ತಿದ್ದ ದೇವರಾಜಯ್ಯನಿಗೆ ಇದು ನುಂಗಲಾರದ ತುತ್ತಾಯಿತು. ಅಲ್ಲದೆ ಈ ಸಮಯದಲ್ಲಿ ನಂಜರಾಜಯ್ಯನಿಗೂ ಇಮ್ಮಡಿ ಕೃಷ್ಣರಾಜನಿಗೂ ಮನಸ್ತಾಪ ಬಂದು ಪರಿಸ್ಥಿತಿ ಕೆಟ್ಟಿತ್ತು. ನಂಜರಾಜ ತೋರಿದ ಸ್ವಾಮಿದ್ರೋಹ ಮತ್ತು ವಿಶ್ವಾಸಘಾತುಕತನಕ್ಕಾಗಿ ಮನನೊಂದು ದೇವರಾಜಯ್ಯ 1757ರಲ್ಲಿ ಸತ್ಯಮಂಗಲಕ್ಕೆ ಹೋಗಿ ನೆಲಸಿದ. ದಳವಾಯಿ ಸೋದರರ ವಿರಸದಿಂದಾಗಿ ಸೈನ್ಯದಲ್ಲಿ ಅಶಿಸ್ತು ಹೆಚ್ಚಾಗಿ ಆಡಳಿತ ಚರ್ಯೆ ಕುಂದತೊಡಗಿತು. ಕೊನೆಗೆ ಹೈದರ್ ಆಲಿ ಮತ್ತು ಖಂಡೇರಾಯನ ಪ್ರಯತ್ನದಿಂದಾಗಿ ದಳವಾಯಿ ಸೋದರರ ಮಧ್ಯೆ ವಾಸ್ತವಿಕ ಬಾಂಧವ್ಯ ಏರ್ಪಟ್ಟಿತು. ದೇವರಾಜಯ್ಯ 1758ರಲ್ಲಿ ಮೃತನಾದ.

ಇವನು ನ್ಯಾಯನಿಷ್ಠ, ಧರ್ಮಿಷ್ಠ, ಲೋಕವ್ಯವಹಾರವನ್ನು ತ್ಯಜಿಸುವ ಮುನ್ನ ಕರಾಚುರಿ ನಂಜರಾಜಯ್ಯ ಮಹಾರಾಜರಲ್ಲಿ ಕ್ಷಮೆ ಕೇಳುವಂತೆ ಮಾಡಿದ. ಇದು ದೇವರಾಜಯ್ಯನ ವ್ಯಕ್ತಿತ್ವ ಮತ್ತು ಸ್ವಾಮಿನಿಷ್ಠೆಗೆ ಸಾಕ್ಷಿಯಾಗಿದೆ. ನಂಜನಗೂಡಿನ ಬಳಿ ಕಪಿಲಾ ನದಿಗೆ ಕಟ್ಟಿರುವ ದೊಡ್ಡ ಸೇತುವೆ ಇವನು ಕಟ್ಟಿಸಿದ್ದು. ಶ್ರೀರಾಮನ ಆರಾಧಕನಾಗಿದ್ದ ಈತ ಅನೇಕ ಅಗ್ರಹಾರಗಳನ್ನೂ ಕೆರೆಗಳನ್ನೂ ನಿರ್ಮಿಸಿರುವನಲ್ಲದೆ, ಶ್ರೀರಂಗಪಟ್ಟಣ, ಕೊಯಿಮತ್ತೂರು ಜಿಲ್ಲೆಯ ಅವನಾಶಿ, ಭವಾನಿ ಕೂಡಲ್ ಮುಂತಾದ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದ.

(ಕೆ.ಜಿ.)

**ದೇವರಾಯ I :** ವಿಜಯನಗರದ ಸಂಗಮವಂಶದ ಅರಸ (1406-22). ಇಮ್ಮಡಿ ಹರಿಹರನ ಮೂರನೆಯ ಮಗ. ಇಮ್ಮಡಿ ಹರಿಹರ 1404ರಲ್ಲಿ ಮೃತನಾದಾಗ ರಾಜ್ಯಕ್ಕಾಗಿ ಕಹಲ ನಡೆಯಿತು. ಈ ಕಲಹದಲ್ಲಿ ಹರಿಹರನ ಜ್ಯೇಷ್ಠಪುತ್ರನಾದ ವಿರೂಪಾಕ್ಷ ತಮ್ಮಂದಿರನ್ನು ತಳ್ಳಿ ಪಟ್ಟಕ್ಕೆ ಬಂದ. 1405ರಲ್ಲಿ ಅವನ ತಮ್ಮ ಇಮ್ಮಡಿ ಬುಕ್ಕ ಅಣ್ಣನನ್ನು ಪಟ್ಟದಿಂದ ತಳ್ಳಿ ಅಧಿಕಾರಕ್ಕೆ ಬಂದ. 1406ನೆಯ ಇಸವಿ ನವೆಂಬರ್ 5ರಂದು ಅವನ ತಮ್ಮನಾದ ಈ ದೇವರಾಯ ಅಣ್ಣನನ್ನು ಪದಚ್ಯುತಿಗೊಳಿಸಿ ಪಟ್ಟಕ್ಕೆ ಬಂದ. ಪಟ್ಟಾರೂಢನಾದೊಡನೆ ದೇವರಾಯ ಬಹಮನೀ ಸುಲ್ತಾನ ಫಿರೋಜ್ ಷಾನೊಡನೆ ಯುದ್ಧ ಮಾಡಬೇಕಾಯಿತು. ಸ್ತ್ರೀಸಂಬಂಧವಾಗಿ ಈ ಯುದ್ಧ ನಡೆಯಿತೆಂದು ಫೆರಿಸ್ತನ ಹೇಳಿಕೆ. ಸುಲ್ತಾನನ ಧರ್ಮಯುದ್ಧಾಸಕ್ತಿಯೇ ಈ ಯುದ್ಧಕ್ಕೆ ಕಾರಣ ಎಂದು ಇತರರ ಹೇಳಿಕೆ. ಕಾರಣ ಏನೇ ಇದ್ದರೂ ಘೋರ ಯುದ್ಧ ನಡೆದುದೇನೋ ನಿಜ. ಯುದ್ಧದಲ್ಲಿ ಮೊದಮೊದಲು ದೇವರಾಯ ಗೆಲ್ಲುವಂತೆ ತೋರಿದರೂ ಕೊನೆಗೂ ಮಹಮ್ಮದೀಯರೇ ಗೆದ್ದರು. ಗೆದ್ದ ಫಿರೋಜ್ ಷಾ ಸಂಧಿಪತ್ರವನ್ನು ತನ್ನ ಇಷ್ಟಾನುಸಾರ ಬರೆಯಿಸಿದ. ಆ ಸಂಧಿಯ ಪ್ರಕಾರ ದೇವರಾಯ ಬಂಕಾಪುರವನ್ನು ಕಳೆದುಕೊಂಡ. ಈ ಯುದ್ಧದಲ್ಲಿ ಕೊಂಡವೀಡು ರೆಡ್ಡಿಗಳು ಸುಲ್ತಾನನೊಡನೆ ಸೇರಿಕೊಂಡಿದ್ದರು. ಅವರು ಇದೇ ಕಾಲಕ್ಕೆ ಉದಯಗಿರಿ ರಾಜ್ಯವನ್ನು ಆಕ್ರಮಿಸಿಕೊಂಡ ಭಾಗವನ್ನು ವಶಪಡಿಸಿಕೊಂಡು, 1413ರ ವರೆಗೆ ಅಲ್ಲಿ ನೆಲಸಿದ್ದರು. ಈ ರೆಡ್ಡಿಗಳು ಮಾತ್ರವಲ್ಲದೆ, ತೆಲುಗು ಚೋಡ ವಂಶದ ಅಣ್ಣದೇವನೂ ಬಹಮನೀ ಸುಲ್ತಾನನ ಮಿತ್ರವರ್ಗಕ್ಕೆ ಸೇರಿದ್ದ. ಅಣ್ಣದೇವನ ಪ್ರಭಾವವನ್ನು ತಗ್ಗಿಸುವ ಉದ್ದೇಶದಿಂದ ದೇವರಾಯ 1415ರಲ್ಲಿ ಅವನೊಡನೆ ಯುದ್ಧಕ್ಕಿಳಿದ. ಆದರೆ ಅಣ್ಣದೇವನಿಗೆ ಬಹಮನೀ ಸುಲ್ತಾನನ ನೆರವು

ಸಿಕ್ಕಿತು. ದೇವರಾಯನಿಗೆ ರಾಜಕೊಂಡದ ವೇಲಮರ ಸಹಾಯ ಲಭಿಸಿತು. ಯುದ್ಧದಲ್ಲಿ ದೇವರಾಯನಿಗೆ ವಿಜಯ ಲಭಿಸಿತು (1419). ಆಂಧ್ರದ ಪೂರ್ವಭಾಗ ದೇವರಾಯನಿಗೆ ಸೇರಿತು.

ಬಹಮನೀ ರಾಜ್ಯದ ವಿಸ್ತರಣೆಗೆ ಅವಕಾಶ ಕೊಡದಂತೆ ರಾಜಮಹೇಂದ್ರಿಯನ್ನು ಬಲಪಡಿಸಲು ದೇವರಾಯ ಪ್ರಯತ್ನಿಸಿದ. ಇದರಿಂದಾಗಿ ಗಜಪತಿ ಅರಸ 4ನೆಯ ಭಾನುದೇವ ಕೆರಳಿದ. ಈ ವಿರಸ ಮುಂದೆ ಗಜಪತಿಗಳಿಗೂ ವಿಜಯನಗರಕ್ಕೂ ಆದ ಅನೇಕ ಯುದ್ಧಗಳಿಗೆ ದಾರಿಮಾಡಿಕೊಟ್ಟಿತು.

ಒಂದನೆಯ ದೇವರಾಯನೂ ಇಮ್ಮಡಿ ಬುಕ್ಕನಂತೆ ವಿಜಯನಗರ ರಾಜ್ಯವನ್ನು ಬಹಳವಾಗಿ ವಿಸ್ತರಿಸಿದ. ಹಲವಾರು ನೂತನ ಪ್ರಾಸಾದಗಳನ್ನು ನಿರ್ಮಿಸಿದ. ಅನೇಕ ಕೋಟೆಕೊತ್ತಳಗಳನ್ನು ಕಟ್ಟಿಸಿದ - ಎಂದು ನ್ಯೂನಿಜ್ ಹೇಳುತ್ತಾನೆ. ತುಂಗಭದ್ರೆಗೆ ಹಂಪೆಯ ಬಳಿ ಒಂದು ಭಾರಿ ಅಣೆಕಟ್ಟನ್ನು ಕಟ್ಟಿಸಿ, ನದಿಯಿಂದ ನಗರದವರೆಗೆ 15 ಮೈಲಿ ಉದ್ದದ ಮೋಲ್ಗಾಲುವೆಯೊಂದನ್ನು ರಚಿಸಿ ವಿಜಯನಗರ ಪಟ್ಟಣಕ್ಕೆ ನೀರು ಸರಬರಾಜಿನ ವ್ಯವಸ್ಥೆ ಮಾಡಿದ. ಹಳೆಯ ನಗರದ ಬಹು ಭಾಗದಲ್ಲಿ ಈಗಿರುವ ಅನೇಕಾನೇಕ ಹೊಲಗಳಿಗೆ ಈ ಕಾಲುವೆಯಿಂದಲೇ ನೀರು ಪೂರೈಕೆಯಾಗಿತ್ತಿದೆ. ಮೈಲಿ ಮೈಲಿ ದೂರಕ್ಕೆ ಬೆಟ್ಟಗಳ ಬುಡದ ಬಂಡೆಕಲ್ಲಿನಲ್ಲೇ ಇದನ್ನು ಕೊರೆದಿದೆ. ಭಾರತದಲ್ಲಿ ನಿರ್ಮಿತವಾಗಿರುವ ನೀರಾವರಿ ಕಾಮಗಾರಿಗಳಲ್ಲಿ ಇದು ಅತ್ಯದ್ಭುತವಾಗಿದೆ ಎಂದು ಸಿವೆಲ್ ಹೇಳುತ್ತಾರೆ.

ದೇವರಾಯನಿಗೆ ಮೂವರು ಪತ್ನಿಯರೂ - ವೀರವಿಜಯ, ವೀರಮಲ್ಲಪ್ಪ, ಹರಿಹರ III ಮತ್ತು ರಾಮಚಂದ್ರ ಎಂಬ ನಾಲ್ವರು ಮಕ್ಕಳೂ ಇದ್ದರು. ರಾಮಚಂದ್ರ ಕೆಲಕಾಲ ಉದಯಗಿರಿ ರಾಜ್ಯದಲ್ಲಿ ಪ್ರಾಂತ್ಯಾಧಿಕಾರಿಯಾಗಿ ನೇಮಕವಾಗಿದ್ದ. ಲಕ್ಷ್ಮೀಧರ ದೇವರಾಯನ ಮಂತ್ರಿ.

ಒಂದನೆಯ ದೇವರಾಯ 1422ರಲ್ಲಿ ಮೃತನಾದ. (ಎಂ.ಕೆ.ಬಿ.)

**ದೇವರಾಯ II** : ವಿಜಯನಗರದ ಸಂಗಮ ವಂಶದ ಅರಸ (1424-46); ವಿಜಯರಾಯನ ಹಿರಿಯ ಮಗ ಹಾಗೂ ಉತ್ತರಾಧಿಕಾರಿ. ಇವನಿಗೆ ಇಮ್ಮಡಿ ದೇವರಾಯ, ಅಭಿನವ ವೀರದೇವರಾಯ, ಪ್ರತಾಪದೇವರಾಯ, ಪ್ರೌಢದೇವರಾಯ ಎಂಬ ಹೆಸರುಗಳೂ ಇವೆ. ದೇವರಾಯ ತನ್ನ ತಂದೆಯ ಆಳ್ವಿಕೆಯಲ್ಲಿ ಆಡಳಿತಸೂತ್ರ ವಹಿಸಿಕೊಂಡಿದ್ದುದರಿಂದ, ಹಲವು ವಿದ್ವಾಂಸರು ಇವನ ಆಳ್ವಿಕೆ 1422ರಲ್ಲೇ ಪ್ರಾರಂಭವಾಯಿತೆಂದು ಹೇಳುತ್ತಾರೆ.

ಪ್ರೌಢದೇವರಾಯ ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ವಿಜಯನಗರದ ಪಶ್ಚಿಮದ ಆರಗ ಪ್ರಾಂತ್ಯದಲ್ಲಿ ಒಬ್ಬ ಬೇಡನಾಯಕನ ನೇತೃತ್ವದಲ್ಲಿ ನಡೆದ ದಂಗೆಯನ್ನು ಅಡಗಿಸಿದ. ಇವನು ಮೂರು ಸಾರಿ ಬಹಮನೀ ರಾಜ್ಯದ ವಿರುದ್ಧ ಯುದ್ಧ ಮಾಡಿದ. ಮೊದಲನೆಯ ಬಹಮನೀ ಯುದ್ಧ 1422-23ರಲ್ಲಿ ನಡೆಯಿತು. ಬಹಮನೀ ಸುಲ್ತಾನನಾದ ಒಂದನೆಯ ಅಹ್ಮದ್ ಷಾ ತನ್ನ ಹಿಂದಿನ ಸುಲ್ತಾನನ ಕಾಲದಲ್ಲಿ ಉಂಟಾದ ಪರಾಭವದ ಸೇಡು ತೀರಿಸಿಕೊಳ್ಳಲು ವಿಜಯನಗರದ ವಿರುದ್ಧ ಯುದ್ಧ ಹೂಡಿದ. ಪ್ರಾರಂಭದಲ್ಲಿ ಎರಡು ಪಕ್ಷದವರೂ ನಷ್ಟ ಅನುಭವಿಸಿದರೂ ಅಂತ್ಯದಲ್ಲಿ ವಿಜಯನಗರಕ್ಕೆ ಯಶಸ್ಸು ಲಭಿಸಿತು. ಯುದ್ಧ ನಡೆಯುತ್ತಿದ್ದಾಗಲೇ ಬಹಮನೀ ಸುಲ್ತಾನ ರಾಜಧಾನಿಯನ್ನು ಗುಲ್‌ಬರ್ಗದಿಂದ ಇನ್ನೂ ಉತ್ತರಕ್ಕೆ ಬಿದರೆಗೆ ಬದಲಾಯಿಸಬೇಕಾಯಿತು. ಈ ಯದ್ಧದ ಅನಂತರ ದೇವರಾಯ ಆಂಧ್ರ ಪ್ರದೇಶದತ್ತ ತನ್ನ ಗಮನ ಹರಿಸಬೇಕಾಯಿತು. ಈ ಸಂದರ್ಭದಲ್ಲಿ ಒರಿಸ್ಸಾದ ಗಜಪತಿ ವಂಶದ ರಾಜ ಭಾನುದೇವ ತನ್ನ ರಾಜ್ಯವನ್ನು ವಿಸ್ತರಿಸಲು ರಾಜಮಹೇಂದ್ರಿ ರಾಜ್ಯದ ಮೇಲೆ ನಡೆದಿದ್ದ. ಅವನಿಗೆ ವೇಲಮರು ಬೆಂಬಲ ಕೊಟ್ಟರು. ರಾಜಮಹೇಂದ್ರಿ ರಾಜ ಶರಣಾಗತನಾಗಿ ಭಾನುದೇವನ ಸಾಮಂತನಾದ. ಅನಂತರ ಭಾನುದೇವ ಕೊಂಡವೀಡು ರಾಜ್ಯವನ್ನು ಆಕ್ರಮಿಸಿಕೊಂಡ. ದೇವರಾಯ ತನ್ನ ಸಾಮಂತರ ಪರಾಭವವನ್ನು ಸಹಿಸಲಾರದೆ ಆಂಧ್ರಪ್ರದೇಶಕ್ಕೆ ನುಗ್ಗಿ ಭಾನುದೇವ ಮತ್ತು ವೇಲುಮರನ್ನು ಪರಾಭವಗೊಳಿಸಿ, ಕೊಂಡವೀಡು, ಪ್ರದೇಶವನ್ನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಸಿ ರಾಜಮಹೇಂದ್ರಿಯ ರೆಡ್ಡಿ ರಾಜನಿಗೆ ಪುನಃ ಅಧಿಕಾರ ವಹಿಸಿಕೊಟ್ಟ (1428). ಭಾನುದೇವನ ಉತ್ತರಾಧಿಕಾರಿ ಕಪಿಲೇಂದ್ರ ಮತ್ತೆ ರಾಜಮಹೇಂದ್ರಿಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರೂ ವಿಜಯನಗರ ಮತ್ತು ರೆಡ್ಡಿ ಸೈನ್ಯ ಅವನನ್ನು ಹಿಮ್ಮೆಟ್ಟಿಸಿತು (1436).

ಎರಡನೆಯ ಬಹಮನೀ ಯುದ್ಧ 1435-36ರಲ್ಲಿ ನಡೆಯಿತು. ಮುದ್ಗಲ್ ಮತ್ತು ರಾಯಚೂರು ಕೋಟೆಗಳ ಸ್ವಾಧೀನಕ್ಕೋಸ್ಕರ ಬಹಮನೀ ಸುಲ್ತಾನ ಅಲಾಉದ್ದೀನನೊಡನೆ ನಡೆದ ಈ ಯುದ್ಧದಲ್ಲಿ ದೇವರಾಯ ಜಯ ಹೊಂದಿದ. 1443-44ರಲ್ಲಿ ಬಹಮನೀಯರೊಡನೆ ಮೂರನೆಯ ಸಲ ಯುದ್ಧವಾಯಿತು. 1443ರಲ್ಲಿ ರಾಜಮನೆತನದಲ್ಲಿ ದೇವರಾಯನನನ್ನು ಕೊಲ್ಲುವ ಪಿತೂರಿಯೊಂದು ನಡೆಯಿತು. ಅದು ವಿಫಲವಾದರೂ ಅಂದಿದ್ದಿರಬಹುದಾದ ಅಸ್ತವ್ಯಸ್ಥ ಸ್ಥಿತಿಯ ಲಾಭ ಪಡೆಯುವ ಉದ್ದೇಶದಿಂದ ಬಹಮನೀ ಸುಲ್ತಾನ ದೇವರಾಯನನ್ನು ಪೊಗದಿ ಕೊಡಲು ತಗಾದೆ ಮಾಡಿದ. ದೇವರಾಯ ಒಪ್ಪದಿರಲು ಯುದ್ಧವಾಗಿ ಬಹಮನೀ ಸುಲ್ತಾನ ಪರಾಭವಗೊಂಡ.

ವಿಜಯನಗರ ರಾಜ್ಯಕ್ಕೂ ಸಿಂಹಳದ ತುಂಡರಸರಿಗೂ ಸಂಬಂಧವೇನೂ ಇರಲಿಲ್ಲ. ಆದ್ದರಿಂದ ರಾಜ್ಯದ ದಕ್ಷಿಣ ಭಾಗಗಳ ಭದ್ರತೆಗಾಗಿ ಸಿಂಹಳದ ಅರಸನನು ಹಿಡಿತದಲ್ಲಿಟ್ಟುಕೊಳ್ಳಬೇಕಾಗಿತ್ತು. ಇದಕ್ಕಾಗಿ ದೇವರಾಯ ತನ್ನ ದಳಪತಿ ಲಕ್ಕಣ್ಣ ದಂಡನಾಯಕನನ್ನು ಸಿಂಹಳದ ಮೇಲೆ ನುಗ್ಗಿಸಿದ. ನೌಕಾದಂಡಯಾತ್ರೆಯನ್ನು ಕೈಗೊಂಡ ಈತ ಸಿಂಹಳದ ರಾಜ ಪೊಗದಿ ಕೊಡುವ ಹಾಗೆ ಮಾಡಿದ. ಈ ವಿಜಯಕ್ಕಾಗಿ ರಾಜ ಅವನಿಗೆ ದಕ್ಷಿಣಸಮುದ್ರಾಧಿಪತಿ ಎಂಬ ಬಿರುದಿತ್ತ. ಇದೇ ಸಮಯದಲ್ಲಿ ಗಜಪತಿ ದೊರೆ ಕಪಿಲೇಂದ್ರ ರಾಜಮಹೇಂದ್ರಿಯ ರೆಡ್ಡಿ ನಾಯಕನ ಮೇಲೆ ಯುದ್ಧ ಹೂಡಿದ. ದೇವರಾಯ ಕಪಿಲೇಂದ್ರನನ್ನು ಸೋಲಿಸಿದ (ಸು. 1423).

ದೇವರಾಯ ಕರ್ನಾಟಕದ ಮತ್ತು ದಕ್ಷಿಣ ಭಾರತದ ಉನ್ನತ ರಾಜರುಗಳಲ್ಲಿ ಒಬ್ಬನಾಗಿದ್ದ. ಇವನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಗೋವೆ, ರಾಜ ಮಹೇಂದ್ರಿಗಳಿಂದ ಹಿಡಿದು ರಾಮೇಶ್ವರದವರೆಗೂ ಹಬ್ಬಿತ್ತು. ಕೇರಳದ ಕ್ವಿಲಾನ್, ಮದರಾಸಿನ ಬಳಿಯ ಪುಲಿಕಾಡು, ಸಿಂಹಳ, ಬರ್ಮಾದ ಪೆಗು ಮತ್ತು ತನಸ್ಸೆರಿಮ್‌ನ ರಾಜರು ಇವನಿಗೆ ಕಪ್ಪ ಒಪ್ಪಿಸುತ್ತಿದ್ದರೆಂದು ನೂನಿಜ್ ತಿಳಿಸುತ್ತಾನೆ. ಇವನು ರಾಜನಿಪುಣನಾಗಿದ್ದುದೇ ಅಲ್ಲದೆ ಯುದ್ಧ ನಿಪುಣನೂ ಆಗಿದ್ದ. ತನ್ನ ಸೈನ್ಯದ ಕಾರ್ಯಾಚರಣೆಗಳನ್ನು ಏಕಕಾಲದಲ್ಲಿ ಹಲವು ರಣರಂಗಗಳಲ್ಲಿ ನಿರ್ವಹಿಸುತ್ತಿದ್ದ.

ದೇವರಾಯನ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯ ಅತ್ಯುನ್ನತ ಸ್ಥಿತಿಯಲ್ಲಿ ಇದ್ದಿತು. ಇದಕ್ಕೆ ರಾಜ್ಯದಲ್ಲಿನ ಶಾಂತಿ, ತೃಪ್ತರಾದ ಪ್ರಜೆಗಳು, ಸಾಮಾಜಿಕ ಸ್ಥಿತಿ ಕಾರಣವಾಗಿದ್ದವು. ಅಬ್ದುಲ್ ರಜಾಕ್ ವಿಜಯನಗರ ಸಾಮ್ರಾಜ್ಯದಲ್ಲಿ 300 ರೇವುಪಟ್ಟಣಗಳಿದ್ದುವೆಂದು ತಿಳಿಸಿದ್ದಾನೆ. ಸಾಮಾಜಿಕ ಸೌಹಾರ್ದ ಮತ್ತು ಒಗಟ್ಟಿಗೆ ಧಾರ್ಮಿಕ ಕ್ಷೇತ್ರದಲ್ಲಿ ರಾಜನ ವಿಶಾಲ ಹೃದಯ ಕಾರಣವಾಗಿತ್ತು. ಮುಸ್ಲಿಮರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಗಿತ್ತು. ರಾಜಧಾನಿಯಲ್ಲಿ ದೇವರಾಯ ಒಂದು ಮಸೀದಿಯನ್ನು ಕಟ್ಟಿಸಿದ್ದಲ್ಲದೆ, ಕೊರಾನಿನ ಒಂದು ಪ್ರತಿಯನ್ನು ಸಿಂಹಾಸನದ ಮೇಲೆ ಇಟ್ಟಿದ್ದ.

ವಿಜಯನಗರಕ್ಕೆ ಭೇಟಿಕೊಟ್ಟ ಇಟಲಿಯ ಪ್ರವಾಸಿಗ ನಿಕಾಲೊ ಕೊಂಟಿ ಮತ್ತು ವಿಜಯನಗರದಲ್ಲಿದ್ದ ಪರ್ಷಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕ್ ವಿಜಯನಗರದ ವಿವರವನ್ನೂ ಮತ್ತು ವೈಭವವನ್ನೂ ತಮ್ಮ ಬರೆವಣಿಗೆಗಳಲ್ಲಿ ವರ್ಣಿಸಿದ್ದಾರೆ. ರಾಜಸ್ಥಾನ ಶ್ರೀಮಂತರು, ಆಸ್ಥಾನಿಕರು, ಸರ್ಕಾರಿ ಅಧಿಕಾರಿಗಳು, ವಿದ್ವಾಂಸರು, ಕಲೆಗಾರರು, ಕವಿಗಳು, ರಾಯಭಾರಿಗಳು ಮತ್ತು ನಾನಾ ದೇಶಗಳಿಂದ ಬಂದಿದ್ದ ಪ್ರಖ್ಯಾತ ವ್ಯಕ್ತಿಗಳು ನೆರೆಯುವ ಸ್ಥಳವಾಗಿತ್ತು. ದೇವರಾಯ ಸ್ವತಃ ವಿದ್ವಾಂಸನಾಗಿದ್ದುದಲ್ಲದೆ ವಿದ್ವಾಂಸರು ಮತ್ತು ಕವಿಗಳಿಗೆ ಪ್ರೋತ್ಸಾಹ ಕೊಟ್ಟ. ವೀರಶೈವ ಮತ

ಮತ್ತು ತತ್ತ್ವ ಈ ಕಾಲದಲ್ಲಿ ಪ್ರೋತ್ಸಾಹಿತವಾಯಿತು. ವೀರಶೈವ, ಜೈನ ಮತ್ತು ಬ್ರಾಹ್ಮಣ ಸಾಹಿತ್ಯ ಅಭಿವೃದ್ಧಿ ಹೊಂದಿತು. ಈ ಕಾಲದ ಕನ್ನಡ ಕವಿಗಳಲ್ಲಿ ಚಾಮರಸ ಮತ್ತು ಕುಮಾರವ್ಯಾಸ ಶ್ರೇಷ್ಠರಾಗಿದ್ದರು. ದೇವರಾಯ ವಿಜಯನಗರವನ್ನೂ ಹಜಾರರಾಮಸ್ವಾಮಿ ದೇವಸ್ಥಾನ ಮುಂತಾದ ಕಟ್ಟಡಗಳನ್ನೂ ಅಂದಗೊಳಿಸಿದ.

ದೇವರಾಯನಿಗೆ ಪೊನ್ನಲದೇವಿ ಮತ್ತು ಭೀಮಾದೇವಿ ಎಂಬ ಪತ್ನಿಯರಿದ್ದರು. ಮಲ್ಲಿಕಾರ್ಜುನ ಇವನ ಮಗ. ಲಕ್ಕಣ್ಣ ಮತ್ತು ಮಾದಣ್ಣ ಇವನ ದಂಡನಾಯಕರಲ್ಲಿ ಮುಖ್ಯರು. ವೀರಶೈವ ಕವಿ ಜಕ್ಕಣ್ಣ ಇನ್ನೊಬ್ಬ ದಂಡನಾಯಕ. ಇಮ್ಮಡಿ ದೇವರಾಯ 1446ರ ಮೇ 26ರಂದು ಮೃತನಾದ (ಎ.ವಿ.ವಿ., ಎಂ.ಕೆ.ಬಿ.)

**ದೇವರಾಯನ ದುರ್ಗ:** ತುಮಕೂರು ತಾಲ್ಲೂಕಿನಲ್ಲಿ ತುಮಕೂರಿನಿಂದ ಸು. 15 ಕಿಮೀ ಈಶಾನ್ಯಕ್ಕಿರುವ ಬೆಟ್ಟ. ಗಿರಿದುರ್ಗ ಪವಿತ್ರ ಕ್ಷೇತ್ರ ಹಾಗೂ ಸುಂದರತಾಣ. ಬೆಟ್ಟದ ಶಿಖರ ಸಮುದ್ರಮಟ್ಟದಿಂದ 1,242 ಮೀ ಎತ್ತರವಿದೆ. ಬೆಟ್ಟ ಮೂರು ಘಟ್ಟಗಳಲ್ಲಿ ಮೇಲೆದ್ದಿದೆ. ಈ ಎಲ್ಲಾ ಘಟ್ಟಗಳನ್ನೂ ಒಳಗೊಂಡಂತೆ ಎರಡು ಕೋಟೆಗೋಡೆಗಳಿವೆ. ಮೈಲುಗಟ್ಲೆ ಹಬ್ಬಿರುವ ಈ ಕೋಟೆ ಗೋಡೆಗಳಲ್ಲಿ ಒಳಹೋಗಲು ಅನುಕೂಲವಾಗುವಂತೆ ಏಳು ಹೆಬ್ಬಾಗಿಲುಗಳಿವೆ. ಆಯಕಟ್ಟಿನ ಜಾಗದಲ್ಲಿರುವುದರಿಂದಲೂ ಬೆಟ್ಟದಲ್ಲಿರುವ ಅನೇಕ ಚಿಲುಮೆಗಳಿಂದ ಸತತವಾಗಿ ಉತ್ತಮ ನೀರಿನ ಸೌಕರ್ಯ ಇರುವುದರಿಂದಲೂ ಈ ಕೋಟೆ ಒಂದು ಕಾಲದಲ್ಲಿ ಬಹು ಅಭೇದ್ಯವೆನಿಸಿರಬೇಕು. (ಕೆ.ವಿ.ಟಿ.)

ದೇವರಾಯನದುರ್ಗ ಬೆಟ್ಟದ ಏರುಗಳಲ್ಲಿ ಮೊದಲ ಅಂದರೆ ಕೆಳಗಣ ಘಟ್ಟದ ಮಟ್ಟಸ ಪ್ರದೇಶದಲ್ಲಿ ಮಲಪಟ್ಟಣ ಗ್ರಾಮ ಮತ್ತು ಲಕ್ಷ್ಮೀನರಸಿಂಹ ದೇವಾಲಯ ಇವೆ. ದ್ರಾವಿಡಶೈಲಿಯಲ್ಲಿರುವ ಈ ದೇವಾಲಯ ಒಂದನೆಯ ಕಂಠೀರವ ನರಸರಾಜ ಒಡೆಯ (1639-59) ಕಟ್ಟಿಸಿದ್ದು. ಮುಮ್ಮಡಿ ಕೃಷ್ಣರಾಜ ಒಡೆಯರು 1858ರಲ್ಲಿ ದೇವಾಲಯದ ಪ್ರಾಕಾರ ಮತ್ತು ಗೋಪುರಗಳನ್ನು ದುರಸ್ತಿ ಮಾಡಿದರೆಂದು ಇಲ್ಲಿನ ಒಂದು ಶಾಸನ ತಿಳಿಸುತ್ತದೆ. ಈ ಸುತ್ತಿನ ಹೆಚ್ಚಿನ ಜನರಿಗೆ ಇದು ಮನೆದೇವರು. ಪ್ರತಿ ಚೈತ್ರಮಾಸದಲ್ಲಿ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಆ ಕಾಲದಲ್ಲಿ ಸೇರುವ ಜನಗಳ ಅನುಕೂಲಕ್ಕಾಗಿ ಇಲ್ಲಿ ಅನೇಕ ಮಂಟಪಗಳಿವೆ. ಸಮೀಪದಲ್ಲಿ ಸಂಜೀವರಾಯನ (ಹನುಮಂತ) ಗುಡಿ ಇದೆ. ಇಲ್ಲಿ ಕೈಜೋಡಿಸಿ ನಿಂತಿರುವ ಹನುಮಂತನ ವಿಗ್ರಹವಿದೆ. ಈ ಗುಡಿ ನರಸಿಂಹನ ಗುಡಿಗಿಂತಲೂ ಹಳೆಯದೆಂದು ಪ್ರತೀತಿ.

ಇದೇ ಸುತ್ತಿನಲ್ಲಿ ಕೋಟೆಯ ಬಾಗಿಲುಗಳಲ್ಲಿ ಒಂದಾದ ಪೆನುಗೊಂಡೆ ಬಾಗಿಲು ಮತ್ತು ಆನೆದೊಣೆ (ಚಿಲುಮೆ) ಇವೆ. ಪೆನುಗೊಂಡೆ ಬಾಗಿಲ ಗೋಡೆಯ ಮೇಲೆ ವೀಣೆಯನ್ನು ಹಿಡಿದಿರುವ ವ್ಯಕ್ತಿಯೊಬ್ಬನ ಶಿಲ್ಪವಿದ್ದು ಅದರ ಬಳಿ ಇರುವ ಸು. 15ನೆಯ ಶತಮಾನದ ಶಾಸನ ಇದು ಸುಕುಮಾರದೇವನ ಮಗ ವಿರೂಪಣ್ಣನದು ಎಂದು ತಿಳಿಸುತ್ತದೆ. ಆನೆದೇಣೆಯ ಬಳಿ ಹಿಂದೆ ಸ್ಥಳೀಯ ಪಾಳೆಯಗಾರನೊಬ್ಬನಿಂದ ಕಟ್ಟಲಾದುದೆಂದು ಹೇಳುವ ಒಂದು ಆನೆಯ ಗೋರಿಯ ಅವಶೇಷಗಳಿವೆ. ಬೆಟ್ಟದ ಇಳಿಜಾರಿನಲ್ಲಿರುವ ಒಂದು ಕೊಳ ಮಂಗಲಿ ನದಿಯ ಉಗಮಸ್ಥಾನ. ಸ್ವಲ್ಪ ಮೇಲು ಮಟ್ಟದಲ್ಲಿ ಜಯತೀರ್ಥವಿದೆ. ಇಲ್ಲಿ ಜಯನದಿ ಹುಟ್ಟುತ್ತದೆ (ಈ ಎರಡು ನದಿಗಳೂ ಬೆಟ್ಟದ ಕೆಳಗೆ ಇರುಕಸಂದ್ರ ಗ್ರಾಮದ ಬಳಿ ಕೂಡಿ ಮುಂದೆ ಜಯಮಂಗಲಿ ಎಂದು ಒಂದೇ ನದಿಯಾಗಿ ಪ್ರವಹಿಸುತ್ತದೆ).

ಬೆಟ್ಟದಲ್ಲಿ ಮತ್ತಷ್ಟು ಮೇಲೆ ಎರಡನೆಯ ಘಟ್ಟದ ಮಟ್ಟಸಪ್ರದೇಶವಿದೆ. ಇಲ್ಲಿ ಸರ್ಕಾರಿ ಪ್ರವಾಸೀಮಂದಿರ ಮತ್ತು ಇತರ ಕೆಲವು ಕಟ್ಟಡಗಳಿವೆ. ಇದೇ ಭಾಗದಲ್ಲಿ ರಾಮತೀರ್ಥ ಮತ್ತು ಧನುಸ್‌ತೀರ್ಥ ಎಂಬ ಎರಡು ದೊಣೆಗಳೂ ಸಮೀಪದಲ್ಲಿ ರಾಮಲಕ್ಷ್ಮಣಸೀತೆಯರ ವಿಗ್ರಹಗಳಿರುವ ಒಂದು ಗುಹೆಯೂ ಇವೆ. ಹಿಂದೆ ಇಲ್ಲೊಂದು ಊರಿತ್ತು. ಅದರ ಅವಶೇಷಗಳನ್ನು ಈಗಲೂ ಗುರುತಿಸಬಹುದು. ಬೆಟ್ಟದ ಮೇಲುಗಡೆಯ ಮಟ್ಟದಲ್ಲಿ ಲಕ್ಷ್ಮೀನರಸಿಂಹ (ಕುಂಭಿನರಸಿಂಹ) ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪವಿದ್ದು ಸಾಮಾನ್ಯ ವಿನ್ಯಾಸದಲ್ಲಿ ಕೆಳಗಿನ ನರಸಿಂಹ ದೇವಾಲಯದಂತೆಯೆ ಇದೆ. ದೇವಾಲಯದ ಬಳಿಯಲ್ಲಿ ಒಂದು ದೊಣೆ ಮತ್ತು ಅದರ ಸಮೀಪ ಒಂದು ಗುಹೆ ಇದೆ. ಗುಹೆಯ ಮೆಟ್ಟಲುಗಳು ಪಾದತೀರ್ಥವೆಂಬ ನೀರಿನ ಹೊಂಡಕ್ಕೆ ಬಿಡುತ್ತವೆ. ಇಲ್ಲಿನ ನೀರು ದೇವರ ಪಾದದಿಂದ ಹುಟ್ಟುವುದೆನ್ನುವುದರಿಂದ ಈ ತೀರ್ಥಕ್ಕೆ ಈ ಹೆಸರಿದೆ. ನರಸಿಂಹ ದೇವಾಲಯದಿಂದ ಮತ್ತಷ್ಟು ಮೇಲೆ ಒಂದು ಚಿಕ್ಕ ಗರುಡನ ಗುಡಿ ಇದೆ. ಇದರ ಬಳಿ 'ದೀವಿಗೆ ಗುಂಡು' ಎಂಬ ಬಂಡೆ ಇದೆ. ಈ ಬಂಡೆಯ ಮೆಲೆ ದೀಪ ಸ್ತಂಭವೊಂದನ್ನು ನೆಟ್ಟಿದ್ದು ಇಲ್ಲಿ ದೀಪ ಹಚ್ಚಿದಾಗ ಬಹುದೂರದವರೆಗೆ ಕಾಣಿಸುತ್ತದೆ. ಈ ಸುತ್ತಿನಲ್ಲಿರುವ ಕೋಟೆಯ ಗೋಡೆಯಲ್ಲಿರುವ ಒಂದು ದೊಡ್ಡ ರಂಧ್ರವನ್ನು ಪಕ್ಕದ ಪರಂಗಿ ಬೆಟ್ಟದಿಂದ ಹೊಡೆದ ಗುಂಡಿನಿಂದ ಆದುದೆಂದು ಜನ ತೋರಿಸುವುದುಂಟು.

ದೇವರಾಯನದುರ್ಗದಿಂದ ಸ್ವಲ್ಪದೂರದಲ್ಲಿ ತುಮಕೂರು ರಸ್ತೆಯ ಬದಿಯಲ್ಲಿ ನಾಮದ ಚಿಲುಮೆ ಇದೆ. ಇಲ್ಲಿ ಬಂಡೆಯಿಂದ ಹೊಮ್ಮುವ ನೀರು ಬಂಡೆಯಲ್ಲಿ ಕಡಿದ ಒರಳೊಂದನ್ನು ತುಂಬಿ ಮುಂದೆ ಹರಿಯುತ್ತದೆ. ಶಿಂಷಾನದಿ ಬೆಟ್ಟದ ದಕ್ಷಿಣ ಪಾರ್ಶ್ವದಲ್ಲಿ ಉಗಮಿಸುತ್ತದೆ.

ದೇವರಾಯನದುರ್ಗ ಅಂಧಕ ಅಥವಾ ಲಿಂಗಕ ಎಂಬ ಕಳ್ಳರ ನಾಯಕನೊಬ್ಬನ ಠಾಣ್ಯವಾಗಿತ್ತೆಂದೂ ಯದುಪಟ್ಟಣದಲ್ಲಿ ಆಳುತ್ತಿದ್ದ. ಕರ್ನಾಟಕದ ಅರಸ ಹೇಮಚಂದ್ರನ ಮಗ ಸುಮತಿ ಎಂಬ ರಾಜಕುಮಾರ ಇವನನ್ನು ಹತ್ತಿಕ್ಕಿ ಈ ಪ್ರದೇಶವನ್ನು ಆಕ್ರಮಿಸಿಕೊಂಡ ಎಂದೂ ಸ್ಥಳಪ್ರತೀತಿ. ಅನಂತರ ಅಂಧಕ ನೆಲಮಂಗಲದ ಸಮೀಪದಲ್ಲಿ ಭೂಮಂಡನವೆಂಬ ಪಟ್ಟಣವನ್ನು ಸ್ಥಾಪಿಸಿ ಅಲ್ಲಿ ನೆಲಸಿದನಂತೆ. ಹೊಯ್ಸಳರ ಕಾಲದಲ್ಲಿ ಈ ಬೆಟ್ಟದ ಮೇಲೆ ಆನೆ ಬಿದ್ದ ಸರಿ (ಆನೆ ಬಿದ್ದ ಜರಿ) ಎಂಬ ಊರಿದ್ದಂತೆ ತೋರುತ್ತದೆ. ಬಹುಕಾಲದವರೆಗೆ ಈ ಸುತ್ತಣ ಪ್ರದೇಶ ಇದೇ ಹೆಸರಿನಿಂದ ಪ್ರಸಿದ್ಧವಾಗಿತ್ತು. ಆನೆಯೊಂದು ಜಾರಿಬಿದ್ದಿದ್ದರಿಂದ ಈ ಹೆಸರಾಯಿತೆಂದು ಐತಿಹ್ಯ. ಈ ಬೆಟ್ಟದ ಮೇಲಿನ ಕರಿಗಿರಿ ಶಿಖರದ ಬುಡದಲ್ಲಿರುವ ಆನೆಗೊಂದಿ ಎನ್ನುವ ಒಂದು ತಾಣ ಆನೆಬಿದ್ದ ಸ್ಥಳವೆಂದು ತೋರಿಸುವುದುಂಟು. ತುಡುಗು ಆನೆಯೊಂದು (ಶಾಪಗ್ರಸ್ತ ಗಂಧರ್ವ) ಇಲ್ಲಿಗೆ ಬಂದು ಸಾಕಷ್ಟು ಹಾವಳಿಮಾಡಿ ಇಲ್ಲಿಯಕೆರೆಗೆ ನಷ್ಟಮಾಡಿ ಅನಂತರ ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಏರಲು ಹೋಗಿ ಜಾರಿ ಪ್ರಾಣ ಕಳೆದುಕೊಂಡಿತೆಂದು ಸ್ಥಳಪುರಾಣ. ಅದರ ಪ್ರಕಾರ ಈ ಬೆಟ್ಟದ ಹೆಸರೂ ಕರಿಗಿರಿ. ವಿಜಯನಗರದ ರಾಜರ ಕಾಲದಲ್ಲಿಈ ಬೆಟ್ಟಕ್ಕೆ ಹೆಸರೂ ಇತ್ತು. ಆ ಕಾಲದಲ್ಲಿ ಜಯಮಂಗಲಿಗೆ ಅಡ್ಡವಾಗಿ ಕಟ್ಟಿದ್ದ ಬುಕ್ಕಸಮುದ್ರ ಕಟ್ಟೆ ಮತ್ತು ಸಮೀಪದಲ್ಲಿದ್ದ ಊರಿನ ಅವಶೇಷಗಳನ್ನು ಈಗಲೂ ಕಾಣಬಹುದು. ಕೆಲವು ಕಾಲ ಜಡಕ ಎಂಬ ಪಾಳೆಯಗಾರ ಇಲ್ಲಿದ್ದು ಇದಕ್ಕೆ ಡಕನದುರ್ಗ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಮೈಸೂರಿನ ಚಿಕ್ಕದೇವರಾಜ ಒಡೆಯರು 1696ರಲ್ಲಿ ಇದನ್ನು ಅಕ್ರಮಿಸಿಕೊಂಡಮೇಲೆ ದೇವರಾಯದುರ್ಗ ಎಂಬ ಹೆಸರು ರೂಢಿತವಾಯಿತು. ದುರ್ಗದಲ್ಲಿರುವ ಕೋಟೆಕೊತ್ತಲೆಗಳೂ ಚಿಕ್ಕದೇವರಾಜ ಒಡೆಯರ ಕಾಲದ್ದು. ದೇವರಾಯನದುರ್ಗ ಈಗ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ.

**ದೇವಲಾಪುರ:** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ನಾಗಮಂಗಲದಿಂದ ಪೂರ್ವಕ್ಕೆ 11ಕಿಮೀ ದೂರದಲ್ಲಿರುವ ಗ್ರಾಮ.

ಈ ಊರು ಹಿಂದೆ ಪ್ರಮುಖ ಸ್ಥಳವಾಗಿತ್ತು. 3ನೆಯ ಬಲ್ಲಾಳನ ಕಾಲದ 1300ರ ಒಂದು ಶಾಸನ ಇಲ್ಲಿ ದೊರಕಿದೆ. ಈ ಊರಿನ ಮುಖ್ಯ ಗುಡಿಯಾದ ಲಕ್ಷ್ಮೀನಾರಾಯಣ ದೇವಾಲಯದ ಮೂಲಭಾಗ ಮುಮ್ಮಡಿ

ವೀರಬಲ್ಲಾಳನ ಕಾಲದ್ದು. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪ ಇವೆ. ಮುಂದುಗಡೆ ಪ್ರಾಕಾರದ ಮಹಾದ್ವಾರ ಮತ್ತು ದೊಡ್ಡ ದೀಪದ ಕಂಬ ಇವೆ. ಇವನ್ನು 1472ರಲ್ಲಿ ಲಕ್ಕಣ್ಣನಾಯಕನ ಮಗ ಚಿಕ್ಕ ಅಲ್ಲಪ್ಪನಾಯಕ ಎಂಬುವನು ವಿಜಯನಗರದ ಸಾಳ್ವ ನರಸಿಂಹನಿಂದ ದೇವಲಾಪುರವನ್ನು ದತ್ತಿಯಾಗಿ ಪಡೆದಾಗ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ದೇವಾಲಯದ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿರುವ ಗೋಪುರ 17ನೆಯ ಶತಮಾನದ ರಚನೆ. ದೇವಾಲಯದ ಹೊರಮೈಯಲ್ಲಿ ಅಡ್ಡ ತಳಪಟ್ಟಿಕೆಗಳು, ಅರೆಗಂಬಗಳು ಮತ್ತು ಕೋಷ್ಠಗಳಿಂದ ಅಲಂಕೃತವಾದ ಭಿತ್ತಿ, ನೇರಕಪೋತ ಇವೆ. ಮುಖಮಂಟಪ ಮೂರಂಕಣದ್ದು. ಇಲ್ಲಿನ ಕಂಬಗಳಲ್ಲಿ ಕೆಳಗೆ ಚತುರಸ್ರ ಮೇಲೆ 8 ಮತ್ತು 24 ಮುಖಗಳಿದ್ದು ಮೇಲೆ ದುಂಡು ಮತ್ತು ಚಪ್ಪಟೆ ಬೋದಿಗೆಗಳಿವೆ. ಗರ್ಭಗೃಹದ ಒಳಗಿನ ಲಕ್ಷ್ಮೀನಾರಾಯಣ (ಶಾಸನಗಳಲ್ಲಿ ಲಕ್ಷ್ಮೀಕಾಂತ) ಹೊಯ್ಸಳ ಶೈಲಿಯದು. 8' ಎತ್ತರವಿದೆ.

ಊರಿನ ಕೆರೆಯ ಉತ್ತರದಲ್ಲಿರುವ ಒಂದು ಸಣ್ಣ ಗುಡ್ಡದ ಮೇಲೆ ಕೋಡಿ ತಿರುಮಲ ದೇವಾಲಯವಿದೆ. ದಕ್ಷಿಣಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ನವರಂಗ ಹಾಗೂ ಮುಖಮಂಟಪ ಇವೆ ಜೀರ್ಣಾವಸ್ಥೆಯಲ್ಲಿರುವ ಈ ದೇವಾಲಯ 17ನೆಯ ಶತಮಾನದ್ದು.

(ಡಿ.ವಿ.ಜಿ.)

**ದೇವಲಾಪುರದ ನಂಜುಂಡ :** ಸು. 1841. ವೀರಶೈವ ಕವಿ. ದೇವಲಾಪುರ ಈತನ ಜನ್ಮಸ್ಥಳ. ತಂದೆ ದೇವರಸ. ತಾಯಿ ನಂಜಮಾಂಬೆ, ಇಷ್ಟದೇವತೆ ನಂಜನಗೂಡು ನಂಜುಂಡೇಶ್ವರ, ಕವಿ ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ (1794-1868) ಆಶ್ರಿತನಾಗಿದ್ದ. ಕೃಷ್ಣರಾಜಭಕ್ತಿಸಾರ, ಕೃಷ್ಣರಾಜ ಪಟ್ಟಾಭಿಷೇಕವರ್ಣನೆ, ಕೃಷ್ಣರಾಜಭೋಗಾವಳಿ, ಕೃಷ್ಣರಾಜಶೃಂಗಾರಶತಕ, ಕೃಷ್ಣರಾಜೇಂದ್ರವೃತ್ತರತ್ನಾವಳಿ, ಟೀಕೆ, ಕೃಷ್ಣೇಂದ್ರಗೀತೆ, ತಿಬ್ಬಾಂಬಿಕಾಶತಕ, ಅಪರಾಧಸ್ತೋತ್ರ, ಲಿಂಗಸ್ತುತಿ, ಶಂಕರಾಷ್ಟಕ, ಶೈಲಜಾಧವಸ್ತೋತ್ರ, ಸಮುದ್ರ ಮಥನ ಕಥೆ, ಸೌಗಂಧಿಕಾಪರಿಣಯ - ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಹೆಚ್ಚಿನವು ಮುಮ್ಮಡಿ ಕೃಷ್ಣರಾಜ ಒಡೆಯರ ಸ್ತುತಿಪೂರವಾಗಿವೆ. ಕವಿ ತಾನು ಸಂಸ್ಕೃತ ಹಾಗೂ ಕನ್ನಡದಲ್ಲಿ ಚತುರತೆಯುಳ್ಳವನೆಂದು ಹೇಳಿಕೊಂಡಿದ್ದಾನೆ.

ಕೃಷ್ಣರಾಜಭಕ್ತಿಸಾರ ಭಾಮಿನೀಷಟ್ಪದಿಯ 108 ಪದ್ಯಗಳುಳ್ಳ ಗ್ರಂಥ. ಇದಕ್ಕೆ ಕೃಷ್ಣೇಂದ್ರಭಕ್ತಿಸಾರಾಷ್ಟೋತ್ತರಶತಕ ಎಂಬ ಹೆಸರೂ ಇದೆ. ಪ್ರತಿ ಪದ್ಯವೂ ಕೃಷ್ಣೇಂದ್ರ ರಕ್ಷಿಸು ನಮ್ಮನನವರತೆಂದು ಮುಗಿಯುತ್ತದೆ. ಇದನ್ನು 1862ರಲ್ಲಿ ಬರೆದಂತೆ ತಿಳಿಯುತ್ತದೆ. ಕೃಷ್ಣರಾಜಪಟ್ಟಾಭಿಷೇಕವರ್ಣನೆ ಹಾಗೂ ಸೌಗಂಧಿಕಾಪರಿಣಯ ಸಾಂಗತ್ಯದಲ್ಲಿವೆ. ಸೌಗಂಧಿಕಾಪರಿಣಯದಲ್ಲಿ 14 ಸಂಧಿಗಳೂ 726 ಪದ್ಯಗಳೂ ಇವೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯದ ಸಂಗ್ರಹವೆಂದೂ ತಾನು ದೊರೆಯ ಆಜ್ಞಾನುಸಾರವಾಗಿ ರಚಿಸಿರುವೆನೆಂದೂ ಹೇಳಿಕೊಂಡಿದ್ದಾನೆ. ದೂರ್ವಾಸ ಋಷಿಯ ಶಾಪದಿಂದ ಇಂದ್ರ ರತ್ನ ಪುರಿಯ ರಾಜರಾಣಿಯರಿಗೆ ಸುಗಂಧರಾಯನೆಂಬ ಮಗನಾಗಿ ಹುಟ್ಟಿ ಸೌಗಂಧಿಕೆಯಾಗಿ ಹುಟ್ಟಿದ ಶಚಿಯನ್ನು ಮದುವೆಯಾಗಿ ಕೊನೆಗೆ ತನ್ನ ಪದವಿ ಹೊಂದಿದ. ಇದು ಕಥಾವಸ್ತು. ಕೃಷ್ಣರಾಜಪಟ್ಟಾಭಿಷೇಕವರ್ಣನೆಯಲ್ಲಿ ರಾಜರ ಪಟ್ಟಾಭಿಷೇಕಮಹೋತ್ಸವವನ್ನು ವರ್ಣಿಸಿದೆ. ಅಪರಾಧಸ್ತೋತ್ರ ವಾರ್ಧಕ ಷಟ್ಪದಿಯಲ್ಲಿ ರಚಿತವಾದ ಭಕ್ತಿ ಕಾವ್ಯ. ಇದರಲ್ಲಿ 127 ಪದ್ಯಗಳಿದ್ದು ಶಿವಸ್ತುತಿರೂಪವಾಗಿದೆ. ಇದನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಅನುಗ್ರಹ ತಪ್ಪಿದ ಮೇಲೆ ಬರೆದುದಾಗಿ ಪ್ರತೀತಿ ಇದೆ. ಕೃಷ್ಣರಾಜಶೃಂಗಾರಶತಕ 101 ಕಂದಪದ್ಯಗಳುಳ್ಳ ಪುಟ್ಟ ಶೃಂಗಾರಕಾವ್ಯ. ಅಲ್ಲಲ್ಲಿ ಗದ್ಯಭಾಗಗಳೂ ಇವೆ. ಇದನ್ನು 1841ರಲ್ಲಿ ಬರೆದಂತೆ ಕಾಣುತ್ತದೆ. ಕೃಷ್ಣರಾಜಭೋಗಾವಳಿ ಹಾಡಿನ ರೂಪದಲ್ಲಿದೆ. ಇದರಲ್ಲಿ 27 ಪದ್ಯಗಳಿವೆ. ಶೈಲಜಾಧವಸ್ತೋತ್ರ ಶಿವಸ್ತುತಿರೂಪವಾಗಿದ್ದು 33 ವೃತ್ತಗಳನ್ನೊಳಗೊಂಡಿದೆ. ಕೃಷ್ಣೇಂದ್ರಗೀತೆ ಹಾಡಿನ ರೂಪದಲ್ಲಿದೆ. 32 ಪದ್ಯಗಳಿವೆ. ಲಿಂಗಸ್ತುತಿಯಲ್ಲಿ 27 ಪದ್ಯಗಳೂ, ಶಂಕರಾಷ್ಟಕದಲ್ಲಿ 8 ತೂಣಕ ವೃತ್ತಗಳೂ ಇವೆ.

(ಕೆ.ಆರ್.ಯು.)

**ದೇವವೃಂದ :** ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಒಂದು ಗ್ರಾಮ. ಪ್ರಾಚೀನ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ. ಮೂಡಿಗೆರೆಯಿಂದ ನೈಋತ್ಯಕ್ಕೆ 24 ಕಿಮೀ ದೂರದಲ್ಲಿದೆ. ಈ ಊರಿಗೆ ಸಕಲೇಶಪುರ-ಮೂಡಿಗೆರೆ ರಸ್ತೆಯಲ್ಲಿ ಹಾನುಬಾಳು ಕಡೆಯಿಂದ ಮತ್ತು ಬೆಟ್ಟದಮನೆ ಕಡೆಯಿಂದ ಹೋಗಲು ಎರಡು ಉತ್ತಮ ರಸ್ತೆ ಮಾರ್ಗಗಳಿವೆ. ಬೆಟ್ಟದ ಮನೆ ಮೂಲಕ ಹೋಗುವ ರಸ್ತೆ ಹೊಯ್ಸಳರ ಅಂಗಡಿ ಗ್ರಾಮದ ಮೂಲಕ ಹಾದುಹೋಗುತ್ತದೆ.

ಮಲೆನಾಡಿನ ದಟ್ಟಡವಿಯಲ್ಲಿ ಪಶ್ಚಿಮ ಘಟ್ಟಗಳ ತಪ್ಪಲಲ್ಲಿರುವ ಈ ಊರು ಹಿಂದೆ ಮಲವಿಸ್ನಾಡು ಎಂಬ ನಾಡಿನ ಮುಖ್ಯ ಕೇಂದ್ರವಾಗಿದ್ದಿತು. ಸ್ಥಳ ಪುರಾಣದ ಮೇರೆಗೆ ಇಲ್ಲಿ ಕಪಿಲ ಮಹರ್ಷಿಯ ಆಶ್ರಮವಿತ್ತು. ಇಲ್ಲಿನ ಪ್ರಸಿದ್ಧ ರಾಮೇಶ್ವ ದೇವರನ್ನು ಪರಶುರಾಮ ಸ್ಥಾಪಿಸಿದನೆಂದು ಪ್ರತೀತಿ. ತಲಕಾಡಿನ ಗಂಗರ ಕಾಲದಿಂದಲೂ ಇಲ್ಲಿ ದೇವಾಲಯವಿದ್ದುದಕ್ಕೆ ಸಾಕ್ಷ್ಯಾಧಾರಗಳಿವೆ.

ದೇವವೃಂದವೆಂದರೆ ದೇವತೆಗಳ ಬೀಡು ಎಂಬ ಅರ್ಥವಿದೆ. ಇಲ್ಲಿನ ರಾಮೇಶ್ವರ ದೇವಾಲಯ ಹೊಯ್ಸಳರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂತು. ಹೊಯ್ಸಳರ ಮೂಲ ಸ್ಥಳವಾದ ಅಂಗಡಿ ಅಥವಾ ಸೊಸವೂರು ಇಲ್ಲಿಗೆ ಸು. 5 ಕಿಮೀ ದೂರದಲ್ಲಿದೆ. ರಾಮೇಶ್ವರ ದೇವಾಲಯದ ಗರ್ಭಗೃಹ, ಸುಕನಾಸಿ, ಒಳಗಿನ ನವರಂಗ ಹಾಗೂ ಗೋಪುರಗಳು ಹೊಯ್ಸಳರ ಕಾಲದ ರಚನೆಗಳಾಗಿವೆ. ದೇವಾಲಯದ ಮಹಾದ್ವಾರ ಮತ್ತು ಪ್ರಾಕಾರಗಳು ವಿಜಯನಗರ ಕಾಲದ ನಿರ್ಮಾಣಗಳು. ಕಂಬಗಳ ಮತ್ತು ದ್ವಾರಪಾಲಕರ ಶಿಲ್ಪಗಳು ಮನೋಜ್ಞವಾಗಿವೆ. ಈ ದೇವಾಲಯದ ಆವರಣದಲ್ಲಿ ವೀರಭದ್ರ, ಕೇಶವ, ಆಂಜನೇಯ ಮತ್ತು ದೇವಿಯ ಗುಡಿಗಳಿವೆ. ಈ ರಾಮೇಶ್ವರ ದೇವರಿಗೆ ಯುಗಾದಿಯಲ್ಲಿ ನಡೆಯುವ ರಥೋತ್ಸವ ಮತ್ತು ಜಾತ್ರೆಗಳು ಈ ಸುತ್ತಿನಲ್ಲಿ ಪ್ರಸಿದ್ಧ. ದೀಪಾವಳಿ ಮತ್ತು ಸಂಕ್ರಾಂತಿ ಹಬ್ಬಗಳಲ್ಲಿಯೂ ಚಿಕ್ಕ ರಥೋತ್ಸವಗಳು ನಡೆಯುತ್ತವೆ. ಈಗ ಇಲ್ಲಿನ ದೇವಾಲಯದ ಜೀರ್ಣೋದ್ಧಾರ ಕಾರ್ಯ ಮತ್ತು ಭಕ್ತಾದಿಗಳಿಗೆ ಅನೇಕ ಸೌಕರ್ಯಗಳನ್ನು ಮಾಡಿಕೊಡುವ ಪ್ರಯತ್ನ ನಡೆದಿದೆ. ದೇವಾಲಯದ ಆಡಳಿತ ಹಿಂದಿನ ನಾಡಪದ್ಧತಿಗೆ ಪ್ರತೀಕವಾಗಿದೆ. ನೆರೆಯ ಉಗ್ಗೇಹಳ್ಳಿ, ನಾಡಗೌಡರು ಈ ದೇವಾಲಯದ ಪಾರುಪತ್ಯಗಾರರು. ಅವರು ವಿವಿಧ ಮಂದೆ ಅಥವಾ ಸಾವಿರಗಳ ಪ್ರತಿನಿಧಿಗಳೊಂದಿಗೆ ಇಲ್ಲಿನ ಸೇವೆಗಳನ್ನು ನಡೆಸುತ್ತಾರೆ. ಈಗಲೂ ಐದು ಸಾವಿರ ಸೀಮೆಯವರು ಯುಗಾದಿ ರಥೋತ್ಸವದಲ್ಲಿ ವಾದ್ಯಸಮೇತ ಬಂದು ಜಾತ್ರೆಯಲ್ಲಿ ಒಂದಾಗಿ ಸೇರುತ್ತಾರೆ.

*

**ದೇವುಡು ನರಸಿಂಹ ಶಾಸ್ತ್ರಿ :** 1897-1962. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಘನವಿದ್ವಾಂಸರಾಗಿದ್ದವರು. ಹುಟ್ಟಿದ್ದು ಮೈಸೂರಿನಲ್ಲಿ, ಇವರದು ಪಂಡಿತ ಮನೆತನ. ಇವರ ವಂಶದವರು ಮೈಸೂರು ಅರಮನೆಯಲ್ಲಿ ರಾಜಪುರೋಹಿತರಾಗಿದ್ದರು. ಚಿಕ್ಕಂದಿನಲ್ಲಿಯೇ ಪ್ರತಿಭಾವಂತರೆಂದು ಹೆಸರುಗಳಿಸಿದ್ದ ದೇವುಡು ಅವರು ಮೈಸೂರು ವಿಶ್ವವಿದ್ಯಾಯನಿಲಯದಿಂದ ಎಂ.ಎ. ಪದವಿ ಪಡೆದು ಬೆಂಗಳೂರಿನಲ್ಲಿ ನೆಲೆಸಿದರು. ಸಾಂಪ್ರದಾಯಿಕ ರೀತಿಯಲ್ಲಿ ವೇದಾಂತ, ಪೂರ್ವಮೀಮಾಂಸಾ ಶಾಸ್ತ್ರಗಳನ್ನು ಅಭ್ಯಸಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇದ್ದುದರಿಂದ ಸ್ವಲ್ಪ ಕಾಲ ಆರ್ಯ ವಿದ್ಯಾಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಮಕ್ಕಳಿಗಾಗಿ ಹಲವು ಪುಸ್ತಕಗಳನ್ನು ಬರೆದು ಪ್ರಕಟಿಸಿದರಲ್ಲದೆ ನಮ್ಮ ಪುಸ್ತಕ ಎಂಬ ಪತ್ರಿಕೆಯನ್ನು ಆರಂಭಿಸಿ ಕೆಲಕಾಲ ನಡೆಸಿದರು. ಇವರು ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲೂ ಆಸಕ್ತಿ ವಹಿಸಿದರು. ವರದಾಚಾರ್ಯರ ಶಿಷ್ಯರಾಗಿ, ನಾಟಕಗಳಲ್ಲಿ ಪಾತ್ರವಹಿಸಿದರು. ಮಾರ್ಕಂಡೇಯ ಎಂಬ ಕನ್ನಡ ಚಿತ್ರದಲ್ಲೂ ಅಭಿನಯಿಸಿದರು. ಬೆಂಗಳೂರು ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್ ಸಂಸ್ಥೆಯ ಸದಸ್ಯರಾಗಿ ಆ

ಸಂಸ್ಥೆಯ ರಂಗಭೂಮಿ ಎಂಬ ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದರು.

ಇವರದು ಪ್ರಚಂಡ ಧೀಶಕ್ತಿ. ವೇದ ಉಪನಿಷತ್ತುಗಳ ವಿಷಯದಲ್ಲಿ ಇವರು ಒಳ್ಳೆಯ ಪಾಂಡಿತ್ಯ ಗಳಿಕೊಂಡಿದ್ದರಲ್ಲದೆ ಆಧುನಿಕ ಜೀವನ ದೃಷ್ಟಿಯನ್ನು ಬೆಳೆಸಿಕೊಂಡಿದ್ದರು. ವೈದಿಕ ಕಾಲದ ಜನಜೀವನ, ಸಂಸ್ಕೃತಿ ಮತ್ತು ರೀತಿ ನೀತಿಗಳನ್ನು ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ ಎಂಬ ಮೂರು ಕಾದಂಬರಿಗಳಲ್ಲಿ ಇವರು ಚಿತ್ರಿಸಿದ್ದಾರೆ. 'ಮಹಾಬ್ರಾಹ್ಮಣ'ದಲ್ಲಿ ವಿಶ್ವಾಮಿತ್ರನ ತಪಸ್ಸಾಧನೆಗಳ ಕಥೆಯನ್ನೂ 'ಮಹಾಕ್ಷತ್ರಿಯ'ದಲ್ಲಿ ನಹುಷನ ಕಥೆಯನ್ನೂ 'ಮಹಾದರ್ಶನ'ದಲ್ಲಿ ಯಾಜ್ಞವಲ್ಕ್ಯರ ಕಥೆಯನ್ನೂ ಬಹು ಚೆನ್ನಾಗಿ ಹೇಳಿದ್ದಾರೆ. ಮನುಷ್ಯನ ಮನಸ್ಸಿನ ಸೂಕ್ಷ್ಮ ವ್ಯಾಪಾರಗಳನ್ನು 'ಅಂತರಂಗ', ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಲೈಂಗಿಕ ಸಮಸ್ಯೆಗಳನ್ನು ಕುರಿತು ಎರಡನೆಯ ಜನ್ಮ ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಗೆದ್ದವರು ಯಾರು, ಮಯೂರ, ಕಳ್ಳರ ಕೂಟ - ಇವು ಇವರ ಇತರ ಕೃತಿಗಳು. ವಿವೇಕಾನಂದರ ಕೆಲವು ಭಾಷಣಗಳನ್ನು ಕನ್ನಡಕ್ಕೆ ತಂದಿದ್ದಾರೆ. ಕರ್ನಾಟಕ ಸಂಸ್ಕೃತಿಯ ದರ್ಶನ ಎಂಬುದು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಇವರು ಮಾಡಿದ ಭಾಷಣಗಳ ಸಂಗ್ರಹ. ಇವರ ವಿಮರ್ಶಾಶಕ್ತಿ ಮತ್ತು ವೈಜ್ಞಾನಿಕ ದೃಷ್ಟಿಗಳನ್ನು ಈ ಕೃತಿಯಲ್ಲಿ ಗುರುತಿಸಬಹುದು. ಇವರ ಮಹಾಕ್ಷತ್ರಿಯ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ (1962). ಇವರು 1962 ಅಕ್ಟೋಬರ್ 24ರಂದು ನಿಧನಹೊಂದಿದರು.

(ಡಿ.ಕೆ.ಆರ್)

**ದೇವೇಂದ್ರಪ್ಪ ಬಿ. :** 1899- ಪ್ರಸಿದ್ಧ ಸಂಗೀತ ವಿದ್ವಾಂಸರು. ಶಿವಮೊಗ್ಗ ಜಿಲ್ಲೆಯ ಆಯನೂರು ಗ್ರಾಮದಲ್ಲಿ 1899 ಜೂನ್ 3ರಂದು ಜನಿಸಿದರು. ತಂದೆ ಬಿ.ಎಸ್.ರಾಮಯ್ಯ, ತಾಯಿ ತುಳಸಮ್ಮ.

ರಾಮಯ್ಯನವರಿಗೆ ಹಾಡುಗಾರಿಕೆ, ನಾನಾ ವಾದ್ಯವಾದನ ಮತ್ತು ಭರತನಾಟ್ಯದಲ್ಲಿ ಪಾಂಡಿತ್ಯವಿತ್ತು. ನಾಟಕ ಕಲೆಯಲ್ಲಿಯೂ ಅಭಿರುಚಿ ಇದ್ದ ಅವರು ನಾಟಕಗಳಲ್ಲಿ ರಾಜಾ ಪಾರ್ಟು ಮಾಡುತ್ತಿದ್ದರು. ಅವರಿಗೆ ಸಂಸ್ಕೃತ ಮತ್ತು ತೆಲುಗು ಭಾಷೆಗಳ ಪರಿಚಯವೂ ಇತ್ತು. ತಮ್ಮ ಮಗನಿಗೆ 5ನೆಯ ವಯಸ್ಸಿನಿಂದಲೇ ಶಿಕ್ಷಣ ಕೊಟ್ಟು ಹಾಡುಗಾರಿಕೆಯ ಜೊತೆಗೆ ತಮಗೆ ಬರುತ್ತಿದ್ದ ಎಲ್ಲ ವಾದ್ಯಗಳ ನುಡಿಸುವಿಕೆಯನ್ನು ಕಲಿಸಿದರು. ಇದರ ಫಲವಾಗಿ ದೇವೆಂದ್ರಪ್ಪನವರು ತಮ್ಮ 8ನೆಯ ವಯಸ್ಸಿನಲ್ಲೇ ಹಾಡುಗಾರಿಕೆ ಮತ್ತು ವಾದ್ಯಗಳ ವಾದನಗಳಲ್ಲಿ ಕಚೇರಿ ಮಾಡುವಷ್ಟು ಯೋಗ್ಯತೆಯನ್ನು ಸಂಪಾದಿಸಿದರು. ಮೈಸೂರಿನಲ್ಲಿ ಆಸ್ಥಾನ ಸಂಗೀತ ವಿದ್ವಾಂಸರುಗಳಾಗಿದ್ದ ತಿಟ್ಟೆ ನಾರಾಯಣ ಅಯ್ಯಂಗಾರ್, ಬಿಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣ ಮತ್ತು ಭಕ್ಷಿ ಸುಬ್ಬಣ್ಣನವರಲ್ಲಿ ಹೆಚ್ಚಿನ ವಿದ್ಯಾಭ್ಯಾಸ ನಡೆಯಿತು. ಇವರು ಗಾಯನದಲ್ಲಿ ಸಿದ್ಧಿ ಪಡೆದುದಲ್ಲದೆ ತಮ್ಮ ತಂದೆಯವರು ಹೇಳಿಕೊಟ್ಟಿದ್ದ ವೀಣೆ, ಹಾರ್ಮೋನಿಯಮ್, ಪಿಟೀಲು, ಗೋಟುವಾದ್ಯ, ಜಲತರಂಗ, ದಿಲ್‌ರುಬಾ ಮತ್ತು ಸಿತಾರ್ - ಈ ವಾದ್ಯಗಳನ್ನು ನುಡಿಸುವುದರಲ್ಲಿಯೂ ಪಾಂಡಿತ್ಯವನ್ನು ಗಳಿಸಿದರು.

ದೇವೆಂದ್ರಪ್ಪನವರು ಹಿಂದುಸ್ಥಾನೀ ಸಂಗೀತವನ್ನೂ ಅಭ್ಯಾಸ ಮಾಡಿರುವುದರಿಂದ ಇವರ ಗಾಯನದಲ್ಲಿ ಕರ್ನಾಟಕ ಮತ್ತು ಹಿಂದುಸ್ಥಾನೀ ಸಂಗೀತ ಪದ್ಧತಿಗಳ ಉತ್ತಮಾಂಶವನ್ನು ಕಾಣಬಹುದು. ತ್ರಿಸ್ಥಾಯಿಯಲ್ಲಿ ಲೀಲಾ ಜಾಲವಾಗಿ ಹಾಡಬಲ್ಲವರಾಗಿದ್ದರು. ಇವರ ಕಂಠದಿಂದ ಹೊಮ್ಮುತ್ತಿರುವ ತುಂಬುನಾದ, ಶ್ರುತಿ ಶುದ್ಧತೆ ಮತ್ತು ಲಯಜ್ಞಾನ ಅಸದೃಶ್ಯವಾದುವು. ಅಪರೂಪ ತಾಳಗಳ ಪರಿಚಯವಿದ್ದ ಇವರು ಅಪರೂಪ ರಾಗಗಳನ್ನೂ ವಿಸ್ತಾರವಾಗಿ ಹಾಡಬಲ್ಲವರಾಗಿದ್ದರು. ಷಟ್ಕಾಲ ಪಲ್ಲವಿಗಳನ್ನು ಹಾಡುವುದರಲ್ಲಿ ಇವರು ಪ್ರಸಿದ್ಧರು. ಮಾರ್ದವತೆ, ಓಜಸ್ಸು - ಈ ಎರಡು ಗುಣಗಳೂ ಇವರ ಗಾಯನ ಶೈಲಿಯಲ್ಲಿತ್ತು. ಇವರ ಗಾಯನದಲ್ಲಿ ಸಾಹಿತ್ಯದ ಸ್ಪಷ್ಟವಾದ ಉಚ್ಚಾರಣೆ, ಅರ್ಥಶುದ್ಧತೆಗಳನ್ನು ಮನಗಾಣಬಹುದಾಗಿತ್ತು. ಸಾಹಿತ್ಯದ ಅರ್ಥಭಾಗಗಳನ್ನು ಗ್ರಹಿಸಿ, ಅದನ್ನು ರಾಗದ ರಸಭಾವಗಳೊಡನೆ ಮಿಳನಮಾಡಿ ಹಾಡುತ್ತಿದ್ದುದರಿಂದ ಇವರ ಸಂಗೀತ ಶ್ರೋತೃಗಳ ಮೇಲೆ ಮಹತ್ತರವಾದ ಪರಿಣಾಮವನ್ನು ಉಂಟುಮಾಡುತ್ತಿತ್ತು. ಇವರ ಸಂಗೀತವನ್ನು ಕುರಿತು ಅ.ನ.ಕೃಷ್ಣರಾಯರು 'ಸಿಂಹವೈಖರಿ', ಎಂದು ಕರೆದರೆ ಸಾಂಬಮೂರ್ತಿಯವರು 'ಗಂಡು ಹಾಡುಗಾರಿಕೆ' ಎಂದು ಕರೆದಿದ್ದಾರೆ.

ಇವರು ಕನ್ನಡ ಮತ್ತು ತೆಲುಗಿನಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ವಚನಸಾಹಿತ್ಯವನ್ನು ತ್ಯಾಗರಾಜರ ತೆಲುಗು ಕೀರ್ತನೆಗಳ ಮಾದರಿಯಲ್ಲಿ ಸಂಗೀತದ ಚೌಕಟ್ಟಿಗೆ ಅಳವಡಿಸಿ ಪ್ರಚಾರಕ್ಕೆ ತಂದರು. ಇವರ ಶ್ರೀಬಸವೇಶ್ವರ ಅಷ್ಟೋತ್ತರ ಶತವಚನಕೀರ್ತನಸುಧಾ ಎಂಬ ಕೃತಿ 1969ರಲ್ಲಿ ಬಿಡುಗಡೆಯಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೇವೇಂದ್ರಪ್ಪನವರ ವಿದ್ಯಾಪ್ರೌಢಿಮೆಯನ್ನು ಮೆಚ್ಚಿ 1919ರಲ್ಲಿ ಆಸ್ಥಾನ ಸಂಗೀತ ವಿದ್ವಾಂಸರನ್ನಾಗಿ ನೇಮಿಸಿಕೊಂಡರು. ಜಯಚಾಮರಾಜ ಒಡೆಯರ್ ಅವರು ತಮ್ಮ ಮೆಚ್ಚುಗೆಯ ಪ್ರತೀಕವಾಗಿ ಇವರಿಗೆ ಗಾನವಿಶಾರದ ಎಂಬ ಬಿರುದನ್ನು ಸಕಲರಾಜಮರ್ಯಾದೆಗಳೊಡನೆ ನೀಡಿದರು 1946. ಅಲ್ಲದೆ ಇವರು ಅನೇಕ ರಾಜರು, ಮಠಾಧಿಪತಿಗಳು ಮತ್ತು ಸಂಗೀತ ಸಂಸ್ಥೆಗಳಿಂದ ರಾಗಾಲಾಪನಚತುರ, ಗಾನಕೇಸರಿ, ಗಾಯಕರತ್ನ, ಗಾನಾಲಂಕಾರ, ಗಾಯಕಸಾರ್ವಭೌಮ, ಗಾಯಕಶಿಖಾಮಣಿ, ಗಾಯನವಾದನಕಲಾನಿಧಿ, ಗಾನಸಿಂಧುಸುಧಾಂಶು, ಸಂಗೀತಕಲಾರತ್ನ, ಸಂಗೀತಕಲಾರತ್ನಸಾನು ಮುಂತಾದ ಬಿರುದುಗಳನ್ನು ಗಳಿಸಿ ಸನ್ಮಾನಿತರಾಗಿದ್ದಾರೆ. 1953ರಲ್ಲಿ ಇವರು ಭಾರತೀಯ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ಚೀನಕ್ಕೆ ಹೋಗಿದ್ದರು. ಭಾರತ ಸರ್ಕಾರ ಇವರ ಬಹುಮುಖವಾದ ಪ್ರತಿಭೆಯನ್ನು ಗಮನಿಸಿ 1963ರಲ್ಲಿ ರಾಷ್ಟ್ರಪ್ರಶಸ್ತಿಯನ್ನು ನೀಡಿ ಗೌರವಿಸಿತು. ಕರ್ನಾಟಕ ರಾಜ್ಯ ಸರ್ಕಾರ 1964ರಲ್ಲಿ ರಾಜ್ಯಪ್ರಶಸ್ತಿಯನ್ನೂ ಸಂಗೀತ ನಾಟಕ ಅಕಾಡೆಮಿ 1962ರಲ್ಲಿ ತನ್ನ ಪ್ರಶಸ್ತಿಯನ್ನೂ ನೀಡಿ ಗೌರವಿಸಿವೆ. ಬೆಂಗಳೂರು ಗಾಯನ ಸಮಾಜದ ಆಶ್ರಯದಲ್ಲಿ ನಡೆದ 1972ರ ಸಂಗೀತ ಸಮ್ಮೇಳನದಲ್ಲಿ ಇವರು ಅಧ್ಯಕ್ಷರಾಗಿದ್ದರಲ್ಲದೆ ಈ ಸಂದರ್ಭದಲ್ಲಿ ಸಂಗೀತರತ್ನ ಎಂಬ ಬಿರುದನ್ನೂ ಪಡೆದರು. ಸಂಗೀತ ಸಾಹಿತ್ಯ ಕ್ಷೇತ್ರಗಳಲ್ಲಿ ಇವರ ಸೇವೆಯನ್ನು ಗಮನಿಸಿ ಮೈಸೂರು ವಿಶ್ವವಿದ್ಯಾನಿಲಯ 1972ರಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

ಇವರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಸಂಗೀತ ವಿಭಾಗದ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಅಕಾಡೆಮಿಯ ಸದಸ್ಯರೂ ಆಗಿದ್ದರು. ವಿಶ್ವವಿದ್ಯಾನಿಲಯದ ಸಂಗೀತ ವಿಭಾಗದ ವಿಷಯ ನಿಯಾಮಕ ಮಂಡಳಿಯ ಅಧ್ಯಕ್ಷರಾಗಿಯೂ ವಿದ್ವತ್ ಪರೀಕ್ಷಾ ಮಂಡಲಿಯ ಅಧ್ಯಕ್ಷರಾಗಿಯೂ ಇದ್ದರು. ಅಖಿಲಭಾರತ ಶಾಂತಿ ಸಂಘದ ಸದಸ್ಯರಾಗಿಯೂ ಕರ್ನಾಟಕ ರಾಜ್ಯದ ಚಲನಚಿತ್ರದ ಸಂಗೀತ ವಿಭಾಗದ ಸದಸ್ಯರಾಗಿಯೂ ಸೇವೆಸಲ್ಲಿಸಿದರು. (ಬಿ.ಎಸ್.ವಿ)

**ದೇವೇಂದ್ರಮುನಿ :** ಕನ್ನಡದ ಆದಿಕವಿಯೆಂದು ಪ್ರಸಿದ್ಧನಾದ ಪಂಪನ ಗುರು. ಪಂಪ ತನ್ನ ಆದಿಪುರಾಣದ ಆರಂಭದಲ್ಲಿ ಶ್ರೀ ದೇವೇಂದ್ರಮುನೀಂದ್ರ ಪಂಡಿತಗುಣವ್ರಾತಂ ಜಗತ್‌ಸ್ವಾಮಿ ಎಂದು ಮುಂತಾಗಿ ತೀರ್ಥಂಕರನನ್ನು ಸ್ತೋತ್ರಮಾಡುವ ನೆಪದಲ್ಲಿ ತನ್ನ ಗುರುವನ್ನೂ ಸ್ಮರಿಸಿದ್ದಾನೆ. ಅದೇ ಕೃತಿಯ ಮೊದಲ ಆಶ್ವಾಸನದಲ್ಲಿ 'ದೇವೇಂದ್ರಮುನಿಪದಾಬ್ಜಂ ............ ಹೀಗೆ ಬೋಧೋದಯಮಂ' ಎಂದು ಕೊಂಡಾಡಿದ್ದಾನೆ. ಅದೇ ಆಶ್ವಾಸನದಲ್ಲಿ ಮತ್ತೆ 'ಗುರುದೇವೇಂದ್ರ ಮುನೀಂದ್ರನ್' ಎಂದು ತನ್ನ ಗುರುವಿನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಪ್ರತಿ ಆಶ್ವಾಸದ ಕೊನೆಯಲ್ಲಿ 'ಇದು ದೇವೇಂದ್ರಮುನೀಂದ್ರವಂದ್ಯ ಪರಮಜಿನೇಂದ್ರ' ಎಂದು ಆರಂಭವಾಗುವ ವಾಕ್ಯದಲ್ಲಿ ತನ್ನ ಗುರುವನ್ನು ಸ್ಮರಿಸಿಕೊಂಡು ಅಪಾರಭಕ್ತಿಯನ್ನು ಮೆರೆದಿದ್ದಾನೆ. ದೇವೇಂದ್ರ ಮುನಿಗಳು ಪಂಪನಿಗೆ ವಿದ್ಯಾಗುರುಗಳಾಗಿದ್ದು ಜೈನಧರ್ಮಶಾಸ್ತ್ರವನ್ನು ಬೋಧಿಸಿರಬಹುದು. ಪಂಪನ ಕೃತಿಗಳಿಂದ ಅವರ

ಬಗ್ಗೆ ಇನ್ನಾವ ವಿವರಗಳೂ ದೊರಕುವುದಿಲ್ಲ.

ಶ್ರವಣಬೆಳಗೊಳದ 66ನೆಯ ಶಾಸನದಲ್ಲಿ ಒಬ್ಬ ದೇವೇಂದ್ರಮುನಿಯ ಹೆಸರು ಬಂದಿದೆ. ಇದರಲ್ಲಿ ನಯಕೀರ್ತಿ ಎಂಬ ಮುನಿ 1177ರಲ್ಲಿ ಸಮಾಧಿಮರಣವನ್ನು ಪಡೆದಂತೆ ಹೇಳಿದೆ. ಅವನಿಗಿಂತ ಹಿಂದಿನ ಗುರುಪರಂಪರೆಯಲ್ಲಿ ದೇವೇಂದ್ರಸೈದ್ಧಾಂತಿಕರು ಎಂಟನೆಯವರಾಗುವುದರಿಂದ ಅವರ ಕಾಲ ಸುಮಾರು ಹತ್ತನೆಯ ಶತಮಾನದ ಮಧ್ಯಭಾಗವಾಗುತ್ತದೆ. ಆದ್ದರಿಂದ ಶಾಸನೋಕ್ತ ದೇವೇಂದ್ರಸೈದ್ಧಾಂತಿಕರೂ ಪಂಪನ ಗುರುಗಳೂ ಬಹುಶಃ ಅಭಿನ್ನರೆಂದು ಹೇಳಬಹುದು.

ಆ ಶಾಸನದ ಪ್ರಕಾರ ದೇವೇಂದ್ರಮುನಿಗಳು ಗುಣನಂದಿ ಪಂಡಿತರ ಶಿಷ್ಯರು. ಗುಣನಂದಿಪಂಡಿತರಿಗೆ ಶಾಸ್ತ್ರಾಬ್ಧಿಪಾರಂಗತರಾದ ಮುನ್ನೂರು ಜನ ಶಿಷ್ಯರಿದ್ದರು. ಅವರಲ್ಲಿ ಶಾಸ್ತ್ರಾರ್ಥವ್ಯಾಖ್ಯಾನದಲ್ಲಿ ಪಟುಗಳಾಗಿದ್ದ ಉತ್ಕೃಷ್ಟತಮ ವಿದ್ವಾಂಸರು ಎಪ್ಪತ್ತೆರಡು ಜನ. ಆ ಎಪ್ಪತ್ತೆರಡು ಜನರಲ್ಲಿ ದೇವೇಂದ್ರಮುನಿ ಅತ್ಯಂತ ಪ್ರಸಿದ್ಧರಾದರು. ಆ ದೇವೇಂದ್ರಮುನಿಯನ್ನು ಶಾಸನ ಹೀಗೆ ಹೊಗಳಿದೆ:

ಅಜನಿಮಹಿಪಚೂಡಾರತ್ನರಾರಾಜಿತಾಂಘ್ರಿಃ

ವಿಜಿತಮಕರಕೇತೂದಂಡದೋರ್ದಂಡಗರ್ವಃ

ಕುನಯನಿಕರ ಭೂಧ್ರಾನೀಕದಂಭೋಳಿದಂಡಃ

ಸಜಯತು ವಿಬುಧೇಂದ್ರೋ ಭಾರತೀಭಾಳಪಟ್ಟಃ

ದೇವೇಂದ್ರಮುನಿಗಳು ರಾಜಗುರುಗಳೂ ಮಹಾವಿದ್ವಾಂಸರೂ ಆಗಿದ್ದರು. ಅವರ ಬಿರುದುಗಳಲ್ಲಿ ಭಾರತೀಭಾಳಪಟ್ಟ ಎಂಬುದನ್ನು ಗಮನಿಸಬೇಕು. ಅವರು ಭಾರತೀಭಾಳಪಟ್ಟರಾದರೆ ಅವರ ಶಿಷ್ಯ ಪಂಪ ಸರಸ್ವತೀಮಣಿಹಾರ, ಗುರುಗಳಿಗೆ ತಕ್ಕ ಶಿಷ್ಯ. ಕರ್ನಾಟಕಕ್ಕೆ ಮಹಾಕವಿಯೊಬ್ಬನನ್ನು ದಯಪಾಲಿಸಿದ ಅಪೂರ್ವ ಶ್ರೇಯಸ್ಸು ದೇವೇಂದ್ರಮುನಿಗಳದು. (ಎಂ.ಪಿ.)

**ದೇವೇಗೌಡ, ಹೆಚ್.ಡಿ.:** 1933- . ಭಾರತ ಗಣರಾಜ್ಯದ ಮಾಜಿ ಪ್ರಧಾನ ಮಂತ್ರಿ (ಜೂನ್ 1ರಿಂದ 1997 ಏಪ್ರಿಲ್ 11). ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (1994-96). ಜಾತ್ಯಾತೀತ ಜನತಾ ದಳದ ರಾಷ್ಟ್ರೀಯ ಅಧ್ಯಕ್ಷರು.

ಹರದನಹಳ್ಳಿ ದೊಡ್ಡೇಗೌಡ ದೇವೇಗೌಡ ಇವರ ಪೂರ್ಣ ಹೆಸರು. ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಯಲ್ಲಿ 1933 ಮೇ 18ರಂದು ಜನಿಸಿದರು. ತಂದೆ ದೊಡ್ಡೇಗೌಡ, ತಾಯಿ ಲಕ್ಷ್ಮೀದೇವಮ್ಮ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಹರದನಹಳ್ಳಿಯಲ್ಲೂ ಮಾಧ್ಯಮಿಕ ಶಿಕ್ಷಣ ಸಮೀಪದ ಹಳೇಕೋಟೆಯಲ್ಲೂ ನಡೆಯಿತು. ಸಾಮಾನ್ಯ ಕೃಷಿ ಕುಟುಂಬದಲ್ಲಿ ಹುಟ್ಟಿದ ಇವರು ಬಾಲ್ಯದಿಂದಲೂ ದನ ಮೇಯಿಸುವ ಕೆಲಸದಿಂದ ಹಿಡಿದು ಬೇಸಾಯದ ಕೆಲಸದವರೆಗೆ ತಮ್ಮ ಕುಲಕಸಬಿನ ಅನುಭವ ಪಡೆದರು. ಪ್ರೌಢಶಾಲಾ ಅಭ್ಯಾಸಕ್ಕಾಗಿ ಹೊಳೆನರಸೀಪುರಕ್ಕೆ ಬಂದರು. ಆಗ ಸ್ವಾತಂತ್ರ್ಯ ಚಳವಳಿ ಬಿರುಸಾಗಿ ಸಾಗಿದ್ದ ಕಾಲ. ಮೆರವಣಿಗೆಗಳಲ್ಲಿ ಬಾವುಟವಿಡಿದು ಚಳವಳಿಯಲ್ಲಿ ಪಾಲ್ಗೊಂಡರು. ವೃತ್ತಿ ಶಿಕ್ಷಣ ಪಡೆದು ಸ್ವತಂತ್ರ ಜೀವನ ನಡೆಸಬೇಕೆಂಬ ಹಂಬಲದಿಂದ ಹಾಸನದ ಪಾಲಿಟೆಕ್ನಿಕ್‌ನಲ್ಲಿ ಸಿವಿಲ್‌ಎಂಜನಿಯರಿಂಗ್ ಡಿಪ್ಲೊಮಾ ಶಿಕ್ಷಣ ಮುಗಿಸಿದರು (1953). ಆ ಹೊತ್ತಿಗೆ ಇವರಿಗೆ ಸರ್ಕಾರಿ ನೌಕರಿ ದೊರಕಿಸಿಕೊಳ್ಳುವುದು ಕಷ್ಟವಾಗಿರಲಿಲ್ಲ. ಆದರೆ ಅದಕ್ಕೆ ಮನಸ್ಸು ಕೊಡದೆ ಗುತ್ತಿಗೆ ಕಾಮಗಾರಿಗಳನ್ನು ಮಾಡಿಸುತ್ತ ಸಾರ್ವಜನಿಕ ಜೀವನದ ಪರಿಚಯ ಮಾಡಿಕೊಂಡರು. ಇದೇ ಅವಧಿಯಲ್ಲಿ ಹಾಸನ ತಾಲ್ಲೂಕು ಮುತ್ತಿಗೆಹಳ್ಳಿ ಪಟೇಲ್ ದೇವೇಗೌಡರ ಮಗಳು ಚೆನ್ನಮ್ಮನವರನ್ನು ಮದುವೆಯಾದರು (1954).

ಸ್ವಾತಂತ್ರ್ಯ ಚಳವಳಿಯ ಕಾಲದಿಂದಲೂ ತಮಗೆ ಆದರ್ಶವಾಗಿದ್ದ ಎ.ಜಿ.ರಾಮಚಂದ್ರರಾಯರ ಅನುಯಾಯಿಗಳಾದರು. ಆಗ ರಾಮಚಂದ್ರರಾಯರು ರಾಜ್ಯ ಸಚಿವ ಸಂಪುಟದ ಸದಸ್ಯರಾಗಿದ್ದು ಇವರನ್ನು ಪ್ರೋತ್ಸಾಹಿಸಿದರು. 1960ರಲ್ಲಿ ಗೌಡರು ತಾಲ್ಲೂಕು ಅಭಿವೃದ್ಧಿ ಮಂಡಳಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಜಯ ಪಡೆದರು (1960). 1962ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ರಾಮಚಂದ್ರರಾಯರ ಬೆಂಬಲದಿಂದ ವಿಧಾನಸಭೆಗೆ ಕಾಂಗ್ರೆಸ್ ಟಿಕೆಟ್ ಪಡೆಯಲು ಪ್ರಯತ್ನಿಸಿದರೂ ಸಫಲರಾಗಲಿಲ್ಲ. ಸ್ವತಂತ್ರ್ಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚುನಾಯಿತರಾದರು. 1967ರ ಚುನಾವಣೆಯಲ್ಲಿ ಸ್ವತಂತ್ರರಾಗಿ ಸ್ಪರ್ಧಿಸಿ ವಿಧಾನ ಸಭೆಗೆ ಮರು ಆಯ್ಕೆಯಾದರು. ನೀರಾವರಿ ಸೌಲಭ್ಯ ಒದಗಿಸಿದಾಗಲೇ ರೈತರ ಮತ್ತು ಗ್ರಾಮೀಣ ಜೀವನದ ಪ್ರಗತಿ ಸಾಧ್ಯವೆಂದು ನಂಬಿದ್ದ ಇವರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಿದರು. ಹೇಮಾವತಿ ಜಲಾಶಯ ನಿರ್ಮಾಣಕ್ಕೆ ಸರ್ಕಾರವನ್ನು ಒಡಂಬಡಿಸಿದರು. ಆಗ ಮುಖ್ಯಮಂತ್ರಿಗಳಾಗಿದ್ದ ಡಿ.ವೀರೇಂದ್ರಪಾಟೀಲರು ಇವರನ್ನು ಕಾಂಗ್ರೆಸ್ ಪಕ್ಷದ ತೆಕ್ಕೆಗೆ ತೆಗೆದುಕೊಂಡು ಇವರಿಗೆ ಹೊಸ ರಾಜಕೀಯ ಆಯಾಮ ನೀಡಿದರು. ವಿಧಾನ ಸಭೆಯ ಒಳಹೊರಗೆ ಗೌಡರು ರೈತಪರ ಮತ್ತು ಗ್ರಾಮೀಣರಜನರ ಹೋರಾಟ ನಡೆಸಿದರು. ಕಾಂಗ್ರೆಸ್ ಪಕ್ಷ ಇಬ್ಭಾಗವಾದಾಗ ಇವರು ಎಸ್.ನಿಜಲಿಂಗಪ್ಪನರ ನೇತೃತ್ವದ ಸಂಸ್ಥಾ ಕಾಂಗ್ರೆಸ್‌ನ್ನು ಬೆಂಬಲಿಸಿದರು.

ಇಂದಿರಾ ಗಾಂಧಿಯವರ ನೇತೃತ್ವದ ಆಡಳಿತ ಕಾಂಗ್ರೆಸ್ 1971ರ ಲೋಕಸಭಾ ಚುನಾವಣೆಯಲ್ಲಿ ಪ್ರಚಂಡ ಬಹುಮತ ಗಳಿಸಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. 1972ರಲ್ಲಿ ನಡೆದ ವಿಧಾನಸಭಾ ಚುನಾವಣೆಗೆ ಆಡಳಿತ ಕಾಂಗ್ರೆಸ್ ವಿರುದ್ಧ ಸ್ಪರ್ಧಿಸಲು ವಿರೋಧ ಪಕ್ಷಗಳ ರಾಜಕೀಯ ಮುಖಂಡರು ಹಿಂಜರಿಯುವ ಸ್ಥಿತಿ ನಿರ್ಮಾಣವಾಯಿತು. ಇಂಥ ರಾಜಕೀಯ ಬಿರುಗಾಳಿಯ ವಿರುದ್ಧ ಸ್ಪರ್ಧಿಸಿದ ದೇವೇಗೌಡರು ಹೊಳೆನರಸೀಪುರ ಕ್ಷೇತ್ರದಿಂದ ಚುನಾಯಿತರಾದರು. 1975ರಲ್ಲಿ ಭಾರತದಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ ಅದರ ವಿರುದ್ಧ ಪ್ರತಿಭಟಿಸಿ ಗೌಡರು ಸೆರೆವಾಸ ಅನುಭವಿಸಿದರು. ಅನಂತರ 1977ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸೋತರೂ ರಾಜ್ಯದಲ್ಲಿ ಸಾಕಷ್ಟು ಅಧಿಕ ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಆಗ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸರ ಪ್ರಗತಿಪರ ಕಾರ್ಯಗಳು ರಾಜ್ಯದಲ್ಲಿ ಕಾಂಗ್ರೆಸ್ ಜನಪ್ರಿಯವಾಗಲು ಕಾರಣವಾಗಿದ್ದವು. 1978ರ ವಿಧಾನಸಭಾ ಚುನಾವಣೆಯ ಕಾಲಕ್ಕೆ ಅಸ್ತಿತ್ವಕ್ಕೆ ಬಂದಿದ್ದ ಜನತಾ ಪಕ್ಷದ ರಾಜ್ಯ ಮಟ್ಟದ ಅಧ್ಯಕ್ಷ ಸ್ಥಾನಕ್ಕೆ ದೇವೇಗೌಡರೇ ಆಯ್ಕೆಯಾದರು. ಇವರು ಚುನಾವಣೆಯನ್ನು ಎದುರಿಸಿ, ತಾವೂ ಚುನಾಯಿತರಾಗಿ ಪಕ್ಷಕ್ಕೆ 65 ಸ್ಥಾನಗಳನ್ನು ಗಳಿಸಿಕೊಟ್ಟರು. ಆಗ ಆಡಳಿತ ಪಕ್ಷದೊಂದಿಗೆ ತೀವ್ರ ನಿಷ್ಠುರ ಕಟ್ಟಿಕೊಳ್ಳದೆ ತಮ್ಮ ಕ್ಷೇತ್ರದ, ಜಿಲ್ಲೆಯ ಮತ್ತು ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಆಗ ಮಾಡುವ ಕಾರ್ಯನೀತಿ ಅನುಸರಿಸಿದರು.

1983ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತು ಜನತಾ ಪಕ್ಷ ಮತ್ತು ಕ್ರಾಂತಿರಂಗಗಳ ಒಕ್ಕೂಟದ ಇನ್ನಿತರರ ಬೆಂಬಲದೊಂದಿಗೆ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂತು. ಆಗ ಮುಖ್ಯಮಂತ್ರಿ ಸ್ಥಾನದಿಂದ ಸ್ವಲ್ಪದರಲ್ಲಿ ವಂಚಿತರಾದ ಗೌಡರು ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಸಚಿವರಾದರು. ಆಗ ನೀರಾವರಿ ಕಾಮಗಾರಿಗಳು ಮತ್ತು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡಿದರು. 1985ರಲ್ಲಿ ಉಪಚುನಾವಣೆ ನಡೆದು ಜನತಾ ಪಕ್ಷ ಪೂರ್ಣ ಬಹುಮತದಿಂದ ಅಧಿಕಾರಕ್ಕೆ ಬಂದಾಗಲೂ ಗೌಡರು ಇದೇ ಖಾತೆಗಳಲ್ಲಿ ಮುಂದುವರಿದರು. ಹೇಮಾವತಿ ಜಲಾಶಯದ ನಾಲೆಗಳ ನಿರ್ಮಾಣದ ಕಾರ್ಯ ಇವರ ಕಾಲದಲ್ಲಿ ತ್ವರಿಗೊಂಡಿತು. ಜನತಾದಳ ಪಕ್ಷದಲ್ಲಿ ಆಂತರಿಕ ಒಡಕುಂಟಾಗಿ ಎರಡು ಬಣಗಳಾಗಿ 1989ರ ವಿಧಾನಸಭಾ ಚುನಾವಣೆಯನ್ನು ಎದುರಿಸಬೇಕಾಯಿತು. ಆಗ ಎಲ್ಲರಿಗೂ ಅಘಾತಕರವಾಗುವ ಫಲಿತಾಂಶಗಳು ಬಂದವು. ಗೌಡರೂ ಅದಕ್ಕೆ ಹೊರತಾಗಿಲಿಲ್ಲ. ಇವರು ಸಮಾಜವಾದಿ

ಜನತಾದಳದ ನೇತಾರರಾಗಿ ಮುಂದುವರಿದರು. ತರುವಾಯ 1991ರಲ್ಲಿ ನಡೆದ ಹಾಸನ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎರಡೂ ಬಣಗಳ ಬೆಂಬಲದಿಂದ ಸ್ಪರ್ಧಿಸಿದ ಗೌಡರು ಲೋಕಸಭೆ ಪ್ರವೇಶಿಸಿದರು. ಲೋಕಸಭೆಯಲ್ಲಿ ಇವರು ನೀರಾವರಿ ಮತ್ತು ಗ್ರಾಮೀಣ ಸಮಸ್ಯೆಗಳ ಬಗ್ಗೆ ಸರ್ಕಾರ ಮತ್ತು ಇತರ ಸದಸ್ಯರ ಗಮನ ಸೆಳೆದರು.

1993ರಲ್ಲಿ ಮತ್ತೆ ಎರಡೂ ಬಣಗಳೂ ಒಂದಾದವು. ಆಗ ಇವರು ರಾಜ್ಯ ಜನತಾದಳದ ಅಧ್ಯಕ್ಷರಾದರು. ಇವರ ನೇತೃತ್ವದಲ್ಲಿ 1994ರ ವಿಧಾನಸಭಾ ಚುನಾವಣೆಯಲ್ಲಿ ಇವರ ಪಕ್ಷ 116 ಸ್ಥಾನಗಳನ್ನು ಪಡೆಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾದ ಗೌಡರು ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಮುಖ್ಯಮಂತ್ರಿಯಾಗಿ ಸಮಸ್ಯೆಗಳ ಪರಿಹಾರಕ್ಕೆ ತಾವೇ ಜನತೆಯ ಬಳಿಗೆ ಹೋದರು. ಈ ಕಾರ್ಯಕ್ರಮ ಜನತಾ ದರ್ಶನವೆಂದು ಜನಪ್ರಿಯವಾಯಿತು. ಗೌಡರು ತಮ್ಮ ಅಧಿಕಾರಾವಧಿಯಲ್ಲಿ ಅನೇಕ ಪ್ರಗತಿಪರ ಕಾರ್ಯಗಳನ್ನು ಆಗ ಮಾಡಿದರು. ಕಗ್ಗಂಟಾಗಿದ್ದ ಹುಬ್ಬಳ್ಳಿಯ ಈದ್ಗಾ ಮೈದಾನದ ವಿದಾನವನ್ನು ಬಗೆಹರಿಸಿ ಕೋಮು ಸೌಹಾರ್ದ ಸಾಧಿಸಿದ ಕೀರ್ತಿಗೆ ಪಾತ್ರರಾದರು (1995). ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಮೊರಾರ್ಜಿ ವಸತಿ ಶಾಲೆಗಳ ಸ್ಥಾಪನೆಗೆ ಪ್ರಾಶಸ್ತ್ಯ ನೀಡಲಾಯಿತು. ರೈತರ ಸುಸ್ತಿ ಬಡ್ಡಿ ಮನ್ನಾಕ್ಕೆ ಕ್ರಮಕೈಗೊಳ್ಳಲಾಯಿತು. ಅನೇಕ ವಿದ್ಯುತ್ ಉತ್ಪಾದನಾ ಘಟಕಗಳು ಅನುಷ್ಠಾನಗೊಳ್ಳತೊಡಗಿದವು. ಹಾಸನ ನಗರದ ಕೈಗಾರಿಕಾಭಿವೃದ್ಧಿ ಪ್ರದೇಶ ಹೆಚ್ಚಿನ ಉತ್ತೇಜನ ಪಡೆಯಿತು. ವೈಟ್‌ಫೀಲ್ಡ್‌ನಲ್ಲಿ ಕಂಪ್ಯೂಟರ್ ಉದ್ಯಮ ಜಾಲ ನಿರ್ಮಿಸಲು ಯೋಜನೆ ಸಿದ್ಧವಾಯಿತು. ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರು ಆರ್ಥಿಕ ಉದಾರೀಕರಣದ ಬಗ್ಗೆ ಹೆಚ್ಚಿನ ಒಲವು ತೋರಿದ್ದರು. ಅದಕ್ಕೆ ಪೂರಕಾಗಿ ಗೌಡರು ದಾವೋಸ್‌ಗೆ ತೆರಳಿ ಅಂತಾರಾಷ್ಟ್ರೀಯ ಮುಕ್ತ ವಾಣಿಜ್ಯ ಸಮ್ಮೇಳನದಲ್ಲಿ ಭಾಗವಹಿಸಿ ಜಾಗತೀಕರಣ ಪ್ರಕ್ರಿಯೆಗೆ ಬೆಂಬಲ ಸೂಚಿಸಿದರು. ಕೃಷಿ ಕ್ಷೇತ್ರವೂ ಉದ್ಯಮದಂತೆ ಬೆಳೆಯಬೇಕೆಂದು ಅನೇಕ ಭೂಮಿತಿ ನಿರ್ಬಂಧಗಳನ್ನು ಸಡಿಲಗೊಳಿಸಿದರು.

ಹೀಗಿರುವಲ್ಲಿ 1996ರ ಲೋಕಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬರಲಿಲ್ಲ. ಬಿಜೆಪಿ ಪಕ್ಷ ಸರ್ಕಾರ ರಚಿಸಿದರೂ ಬಹುಮತ ದೊರೆಯಲಿಲ್ಲ. ಆಗ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಂದ ಹೊರತಾದ ತೃತೀಯ ರಂಗದ ಪಕ್ಷಗಳ ಸದಸ್ಯರು ಗಣನೀಯ ಸಂಖ್ಯೆಯಲ್ಲಿ ಲೋಕಸಭೆಗೆ ಆರಿಸಿ ಬಂದಿದ್ದರು. ಈ ಹದಿಮೂರು ತುಂಡು ಪಕ್ಷಗಳಿಗೆ ಒಕ್ಕೂಟದ ಒಬ್ಬ ನಾಯಕನನ್ನು ಆರಿಸುವುದು ಪ್ರಯಾಸದ ಕೆಲಸವಾಗಿತ್ತು. ಅಂತಿಮವಾಗಿ ದೇವೇಗೌಡರು ಆಯ್ಕೆಯಾದರು. 1996 ಜೂನ್ 1ರಂದು ರಾಷ್ಟ್ರದ 12ನೆಯ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಇವರಿಗೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಬೆಂಬಲ ನೀಡಿತು. ಇವರು ತಮ್ಮ ಸು. ಹನ್ನೊಂದು ತಿಂಗಳ ಅಧಿಕಾರಾವಧಿಯಲ್ಲಿ ಜನತೆಯ ಹತ್ತಿರಕ್ಕೆ ಅಧಿಕಾರವನ್ನು ಕೊಂಡೊಯ್ಯಲು ಸಾಧ್ಯವಿದ್ದಷ್ಟು ಪ್ರಯತ್ನಿಸಿದರು. ವಿದೇಶಗಳಿಗೆ ಭೇಟಿ ನೀಡಿ ಅನೇಕ ವಿಚಾರಗಳಲ್ಲಿ ಭಾರತದ ಬಗ್ಗೆ ಒಲುಮೂಡಿಸುವ ಕೆಲಸ ಮಾಡಿದರು. ತಮ್ಮ ಪಾರಂಪರಿಕ ಉಡುಪಿನಲ್ಲೇ ವಿಶ್ವಪರ್ಯಟನೆ ಮಾಡಿ ದೇಸೀಯತೆಯನ್ನು ಮೆರೆದರು. ಸಮಸ್ಯೆಗಳ ಆಗರವಾದ ಜಮ್ಮು ಕಾಶ್ಮೀರ ಮತ್ತು ವಾಯವ್ಯ ಸರಹದ್ದಿಗೆ ಭೇಟಿ ನೀಡಲೂ ಹಿಂಜರಿಯುತ್ತಿದ್ದ ಪ್ರದೇಶಗಳಿಗೆ ಭೇಟಿ ನೀಡಿ ದಾಖಲೆ ಸ್ಥಾಪಿಸಿದರು. ನೈಋತ್ಯ ರೈಲ್ವೆ ವಿಭಾಗ ರಚಿಸಿ ಕರ್ನಾಟಕದ ರೈಲು ವ್ಯವಸ್ಥೆಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿದರು. ಕೃಷ್ಣಾ ಮೇಲ್ದಂಡೆ ಯೋಜನೆಗೆ ದೊಡ್ಡ ಮೊತ್ತದ ಹಣ ಬಿಡುಗಡೆ ಮಾಡಿದರು. ಭದ್ರಾವತಿ ಉಕ್ಕಿನ ಕಾರ್ಖಾನೆಯನ್ನು ಭಾರತದ ಉಕ್ಕು ಪ್ರಾಧಿಕಾರಕ್ಕೆ ವಹಿಸಿ ಅದಕ್ಕೆ ಪುನಶ್ಚೇತನ ನೀಡಿದರು. ಆದರೆ ಕಾಂಗ್ರೆಸ್ ಪಕ್ಷ ಇವರ ನಾಯಕತ್ವಕ್ಕೆ ತನ್ನ ಬೆಂಬಲ ಹಿಂದಕ್ಕೆ ಪಡೆದದ್ದರಿಂದ ಇವರು ಪ್ರಧಾನಿ ಹುದ್ದೆಯನ್ನು ತೊರೆಯಬೇಕಾಯಿತು. ಲೋಕಸಭೆಯಲ್ಲಿ ಇವರ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಯಿತು. ಇದರ ಚರ್ಚೆಯ ಕಾಲದಲ್ಲಿ 1997 ಏಪ್ರಿಲ್ 11ರಂದು ದೇವೇಗೌಡರು ಮಾಡಿದ ಭಾಷಣ ಅತ್ಯಂತ ನಿರ್ಭೀತವೂ ಆತ್ಮವಿಶ್ವಾಸದಿಂದ ಕೂಡಿದುದೂ ಆಗಿತ್ತು. ಈ ಭಾಷಣ ಶ್ಲಾಘನೆಗೆ ಪಾತ್ರವಾಯಿತು.

ಅನಂತರ ಇವರು 1997ರಲ್ಲಿ ನಡೆಯ ಲೋಕಸಭೆ ಮಧ್ಯಂತರ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ ಸ್ಪರ್ಧಿಸಿ ಮರು ಆಯ್ಕೆಗೊಂಡರು. ಈ ಸಂದರ್ಭದಲ್ಲಿ ಬಿಜೆಪಿ ಪಕ್ಷ ತನ್ನ ಮಿತ್ರಪಕ್ಷಗಳ ಬೆಂಬಲದಿಂದ ಕೇಂದ್ರದಲ್ಲಿ ಸರ್ಕಾರ ರಚಿಸಿತು. ಅನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ (1999) ಗೌಡರೂ ಸೇರಿದಂತೆ ಇವರ ಜಾತ್ಯಾತೀತ ಜನತಾದಳ ಪಕ್ಷ ಹಿಂದೆ ಬಿತ್ತು. ಆದರೆ ದೇವೇಗೌಡರು ಎದೆಗುಂದದೆ ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಮುಂದುವರಿದರು. 2002ರಲ್ಲಿ ಕನಕಪುರ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ (2002) ಇವರು ಲೋಕಸಭೆಗೆ ಚುನಾಯಿತರಾದರು. 2004ರಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ ನಡೆದಾಗ ಇವರ ಪಕ್ಷ ಕರ್ನಾಟಕದೆರಡು ಸ್ಥಾನಗಳೂ ಸೇರಿದಂತೆ ಒಟ್ಟು ನಾಲ್ಕು ಸ್ಥಾನಗಳನ್ನು ಲೋಕಸಭೆಯಲ್ಲಿ ಪಡೆಯಿತು; ವಿಧಾನ ಸಭೆಯಲ್ಲಿ 58 ಸ್ಥಾನಗಳನ್ನು ಪಡೆಯಿತು. ಹಾಸನ ಕ್ಷೇತ್ರದಿಂದ ಗೌಡರು ಲೋಕಸಭೆಗೆ ಚುನಾಯಿತರಾದರು. ದೇವೇಗೌಡರು ನೇತೃತ್ವದ ಜಾತ್ಯಾತೀತ ಪಕ್ಷ ಕಾಂಗ್ರೆಸ್‌ನೊಂದಿಗೆ ಸೇರಿ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರವನ್ನು ರಚಿಸಿತು.

ದೇವೇಗೌಡರು ವೃತ್ತಿ ರಾಜಕಾರಣಿ. ಇವರ ಬದುಕು ರಾಜಕೀಯದೊಂದಿಗೆ ಬೆಸೆದುಕೊಂಡಿದೆ. ಇವರ ಪತ್ನಿ ಚೆನ್ನಮ್ಮ. ಇವರ ಇಬ್ಬರು ಪುತ್ರರಾದ ಎಚ್.ಡಿ.ರೇವಣ್ಣ ಮತ್ತು ಎಚ್.ಡಿ.ಕುಮಾರ್‌ಸ್ವಾಮಿ ಶಾಸನಕರಾಗಿ ವಿಧಾನಸಭೆ ಪ್ರವೇಶಿಸಿದ್ದಾರೆ. ಕುಮಾರಸ್ವಾಮಿಯವರು ಲೋಕಸಭಾ ಸದಸ್ಯರೂ ಆಗಿದ್ದರು. ರೇವಣ್ಣನವರು ಎರಡನೆಯ ಬಾರಿಗೆ ರಾಜ್ಯದಲ್ಲಿ ಸಚಿವರಾಗಿದ್ದಾರೆ. ದೇವೇಗೌಡರು ಈಗಲೂ ರಾಷ್ಟ್ರ ರಾಜಕಾರಣದಲ್ಲಿ ಗುರುತಿಸಬಹುದಾದ ಶಕ್ತಿಯಾಗಿದ್ದಾರೆ. ರಾಮಕೃಷ್ಣ ಹೆಗಡೆಯವನ್ನು ಬಿಟ್ಟರೆ ಇದುವರೆಗೂ ಇತರರಿಗೆ ಸಾಧ್ಯವಾಗಿರದ ವ್ಯಕ್ತಿಪ್ರಧಾನ ನೆಲೆಯಲ್ಲಿ ಪಕ್ಷದ ಸಂಘಟನೆ ಮಾಡಿದ ಹೆಗ್ಗಳಿಕೆ ಗೌಡರಿಗೆ ಸಲ್ಲುತ್ತದೆ. ಕರ್ನಾಟಕ ಕಂಡ ಅಪರೂಪದ ರಾಜಕಾರಣಿಗಳ ಸಾಲಿನಲ್ಲಿ ದೇವೆಗೌಡರ ಹೆಸರು ಅಗ್ರ ಪಂಕ್ತಿಯದು.

**ದೇಶಪಾಂಡೆ, ರಾಮಚಂದ್ರ ಹಣಮಂತರಾವ್ :** 1861-1931. ಶಿಕ್ಷಣವೇತ್ತ, ಗ್ರಂಥಕರ್ತ ಮತ್ತು ಕನ್ನಡ ಚಳವಳಿಯ ಸಂಘಟಕ.

ಇವರು ಧಾರವಾಡ ಜಿಲ್ಲೆ ನರೇಂದ್ರದಲ್ಲಿ 1861 ಮಾರ್ಚ್ 21ರಂದು ಜನಿಸಿದರು. ತಂದೆ ವತನದಾರ ಮನೆತನದ ಹಣಮಂತರಾವ್ ದೇಶಪಾಂಡೆ, ಪ್ರತಿಭಾಶಾಲಿ ವಿದ್ಯಾರ್ಥಿಯೆನಿಸಿ ಧಾರವಾಡ, ಪುಣೆಗಳಲ್ಲಿ ಓದಿ ಶ್ರೇಷ್ಠ ದರ್ಜೆಯಲ್ಲಿ ಎಂ. ಎ. ಪಾಸಾದರು. ಅಲ್ಲಿ ರಾಬರ್ಟ್‌ಸನ್ ಸುವರ್ಣಪದಕ ಮತ್ತು 1000 ರೂಪಾಯಿ ಬಹುಮಾನ ಪಡೆದರು. ಮುಂಬಯಿ ಕರ್ನಾಟಕ ಭಾಗದಿಂದ ಎಂ. ಎ. ಮಾಡಿದವರಲ್ಲಿ ಮೊದಲಿಗರಾದ್ದರಿಂದ ಇವರಿಗೆ ಎಂ. ಎ. ದೇಶಪಾಂಡೆ ಎಂಬ ಅಡ್ಡಹೆಸರೂ ಬಿದ್ದಿತ್ತು. ಕಾನೂನು ಪದವಿಗಾಗಿ ಮುಂದೆ ಓದಬೇಕೆಂದಿದ್ದ ಇವರು ರಸೆಲ್ ಎಂಬ ಶಿಕ್ಷಣಾಧಿಕಾರಿಯ ಪ್ರೇರಣೆಯಿಂದ ಅದನ್ನು ಬಿಟ್ಟು, ಶಿಕ್ಷಣವಿಚಾರದಲ್ಲಿ ಹಿಂದೆ ಬಿದ್ದಿದ್ದ ಕನ್ನಡ ಪ್ರದೇಶದಲ್ಲಿ ಸೇವೆ ಸಲ್ಲಿಸುವ ಧ್ಯೇಯಕ್ಕಾಗಿ ಮುಂಬಯಿ ಸರ್ಕಾರದ ವಿದ್ಯಾ ಇಲಾಖೆ ಸೇರಿದರಲ್ಲದೆ ಬೆಳಗಾಂವಿ, ಕಾರವಾರ, ಧಾರವಾಡಗಳಲ್ಲಿ ಪ್ರೌಢಶಾಲಾ ಉಪಾಧ್ಯಾಯರಾಗಿ ಅನಂತರ ಡೆಪ್ಯುಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್, ಮುಖ್ಯೋಪಾಧ್ಯಾಯ, ಶಿಕ್ಷಣ ಕಾಲೇಜು ಅಧ್ಯಾಪಕ ಮೊದಲಾದ ಹುದ್ದೆಗಳನ್ನು ನಿರ್ವಹಿಸಿ 1914ರಲ್ಲಿ ವಿಶ್ರಾಂತರಾದರು.

ದೇಶಪಾಂಡೆಯವರು ಕನ್ನಡಾಭಿಮಾನಗಳಾಗಿದ್ದು ಉತ್ತರ ಕರ್ನಾಟಕ ಭಾಗದಲ್ಲಿ ಕನ್ನಡ ಮತ್ತು ಕನ್ನಡಿಗರ ಹಕ್ಕು ಮತ್ತು ಅಭ್ಯುದಯಕ್ಕಾಗಿ ದುಡಿದ ಮೊದಲಿಗರಲ್ಲಿ ಒಬ್ಬರು. ಮರಾಠಿ ಪ್ರಭಾವ ಪ್ರಬಲವಾಗಿದ್ದು,

ಕನ್ನಡ ಅಸಡ್ಡೆಗೊಳಗಾಗಿದ್ದ ಆ ಕಾಲದಲ್ಲಿ ಕನ್ನಡಿಗರಲ್ಲಿ ಸ್ವಾಭಿಮಾನವನ್ನೂ ಜಾಗೃತಿಯನ್ನೂ ಉಂಟುಮಾಡಲು ಇವರು ಜೀವಮಾನವೆಲ್ಲ ಶ್ರಮಿಸಿದರು. ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಆಸ್ಥೆಯುಂಟು ಮಾಡಲು ಯತ್ನಿಸಿದರು. ಧಾರವಾಡದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಕನ್ನಡ ವಕ್ತೃತ್ವ ಸ್ಪರ್ಧೆಯನ್ನು ಪ್ರಥಮವಾಗಿ ಯೋಜಿಯಲು ಇವರು ಸ್ವತಃ ಬಹುಮಾನಗಳನ್ನು ನೀಡಿದರು. ಮುದವೀಡು ಕೃಷ್ಣರಾಯರಂಥ ವಾಗ್ಮಿಗಳು ಇವರ ನೇತೃತ್ವದಲ್ಲಿ ತರಬೇತಿ ಪಡೆದರು. ಕನ್ನಡ ಕಾದಬಂರಿಕಾರ ಗಳಗನಾಥರಿಗೆ ತಮ್ಮ ಮನೆಯಲ್ಲಿ ಇವರು ಅನುಕೂಲ ಮಾಡಿಕೊಟ್ಟು ಪುಸ್ತಕ ಬರೆಯಲು ನೆರವಾದರಲ್ಲದೆ, ಅವರ ಪ್ರಬುದ್ಧ ಪದ್ಮನಯನೆ ಕಾದಂಬರಿಯನ್ನು ವಾಗ್ಭೂಷಮ ಪತ್ರಿಕೆಯಲ್ಲಿ ಪ್ರಕಟಿಸಲು ಕಾರಣರಾದರು.

ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ನೋಡಿ ಸ್ಥಾಪಿಸುವಲ್ಲಿ 1890 ಇವರ ಪಾತ್ರ ಪ್ರಮುಖವಾಗಿತ್ತು. ಕನ್ನಡ ಭಾಷೆಯ ದೀನಸ್ಥಿತಿಯನ್ನು ದೂರಮಾಡುವುದಕ್ಕಾಗಿ ಸ್ಥಾಪಿಸಲಾದ ಈ ಸಂಘದ ಗೌರವಕಾರ್ಯದರ್ಶಿಯಾಗಿ ಏಳು ವರ್ಷ (1890-95 ಮತ್ತು 1897) ಮತ್ತು ಉಪಾಧ್ಯಕ್ಷ ಹಾಗು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮೂರು ಮೂರು ವರ್ಷ ಕೆಲಸ ಮಾಡಿ ಇವರು ಅದರ ಮುಖ್ಯಚಾಲಕಶಕ್ತಿಯಾಗಿದ್ದರು. ಮುಂಬಯಿ ಕರ್ನಾಟಕ ಶಾಲೆಗಳಲ್ಲಿ ಮರಾಠಿಯ ಬದಲು ಕನ್ನಡಕ್ಕೆ ಸ್ಥಾನ ದೊರಕಿಸುವುದು, ಬ್ರಿಟಿಷ್ ಮತ್ತು ಸಂಸ್ಥಾನಿಕ ಕರ್ನಾಟಕ ಭಾಗಗಳ ಸಾಂಸ್ಕೃತಿಕ ಒಕ್ಕಟ್ಟು, ಲಿಖಿತ ಭಾಷೆಯ ಏಕರೂಪತೆ ಮೊದಲಾದ ಧ್ಯೇಯಗಳಿಗಾಗಿ ಸಂಘದ ಮೂಲಕ ದುಡಿದರು. ಸಂಘಕ್ಕೆ ನಾಡಿನ ಪ್ರಭಾವಶಾಲಿ ವ್ಯಕ್ತಿಗಳನ್ನು, ಆಕರ್ಷಿಸಿದರು. ಕನ್ನಡಕ್ಕಾಗಿ ದುಡಿದ ಕಿಟ್ಟೆಲ್, ಬಿ.ಎಲ್.ರೈಸ್, ಜೀಗ್ಲರ್, ಜಾರ್ಡಿನ್, ಮ್ಯೂರ್ ಮೊದಲಾದ ವಿದೇಶೀಯರ ಸಹಕಾರವನ್ನು ಸಂಘಕ್ಕೆ ದೊರಕಿಸುವಲ್ಲಿ ಯಶಸ್ವಿಯಾದರು.

ಸರ್ಕಾರಿ ಸೇವೆಯಲ್ಲಿರುವಾಗಲೇ ಇವರು ಕನ್ನಡದಲ್ಲಿ ಗ್ರಂಥರಚನೆ ಮಾಡತೊಡಗಿದ್ದರು. ನಿವೃತ್ತರಾದ ಮೇಲೆ, ಆಗ ಮೈಸೂರು ದಿವಾನರಾಗಿದ್ದ ವಿಶ್ವೇಶ್ವರಯ್ಯನವರಿಂದ ಅಲ್ಲಿನ ಶಿಕ್ಷಣಶಾಖೆ ಸೇರಲು ಕರೆ ಬಂದಿದ್ದರೂ ಅದಕ್ಕೆ ಒಪ್ಪದೆ ಕನ್ನಡ ಗ್ರಂಥ ರಚನೆಗೇ ತಮ್ಮ ಸಮಯವನ್ನು ಮೀಸಲಿರಿಸಿದರು. ಇವರು ಕನ್ನಡದಲ್ಲಿ ಬರೆದ 30 ಗ್ರಂಥಗಳಲ್ಲಿ ಇತಿಹಾಸ, ಜೀವನಚರಿತ್ರೆಗಳಿಗೆ ಸಂಬಂಧಿಸಿದವೇ ಹೆಚ್ಚು. ಅವುಗಳಲ್ಲಿ ಕರ್ನಾಟಕ ಸಾಮ್ರಾಜ್ಯ ಎಂಬ ಮೂರು ಭಾಗಗಳ ಇತಿಹಾಸ ಪ್ರಮುಖವಾದದ್ದು. ಅದರ ಮೊದಲಿನ ಎರಡು ಭಾಗಗಳು ಬಾದಾಮಿ ಚಾಳುಕ್ಯರ ವರೆಗಿನ ಇತಿಹಾಸವನ್ನೊಳಗೊಂಡವು 1926ರಲ್ಲಿ ಪ್ರಕಟವಾದವು. ವಿಜಯನಗರ ಕಾಲದ ವರೆಗಿನ ಮೂರನೆಯ ಭಾಗ ಅಪ್ರಕಟಿತವಾಗಿ ಉಳಿಯಿತು. ಛತ್ರಪತಿ ಶಿವಾಜಿ ಮಹಾರಾಜ 1923, ಅಕಬರ ಚರಿತ್ರೆ, ಚೈತನ್ಯ ಚರಿತ್ರ, ಟೀಪುಸುಲ್ತಾನನ ಚರಿತ್ರ, ರಣಜಿತಸಿಂಗನ ಚರಿತ್ರ ಮೊದಲಾದ ಅನೇಕ ಜೀವನಚರಿತ್ರೆಗಳನ್ನೂ ಒಂದೆರಡು ಪತ್ಯಗಳನ್ನೂ ಇವರು ಬರೆದಿದ್ದರು. ಇವರ ಗ್ರಂಥಗಳ ಶೈಲಿಯಲ್ಲಿ ಕನ್ನಡಿಗರನ್ನು ಹುರಿದುಂಬಿಸುವ ಭಾವನಾಪರತೆ ಎದ್ದು ಕಾಣಿಸುತ್ತದೆ.

ನಿರ್ಭಯ ದೇಶಾಭಿಮಾನಿಗಳೂ ಆಗಿದ್ದರು. ಸ್ವಾತಂತ್ರ್ಯ ಚಳವಳಿ ಬಗ್ಗೆ ಇವರಿಗಿದ್ದ ಒಲವಿನ ವರದಿಗಳು ಸರ್ಕಾರಕ್ಕೆ ಹೋಯಿತಾಗಿ ಇವರಿಗೆ ಸಿಗಬೇಕಾದ ಸ್ಥಾನಮಾನಗಳು ತಪ್ಪಿದವೆಂದು ಹೇಳಲಾಗಿದೆ. ಇವರು 1931 ಜೂನ್ 25ರಂದು ನಿಧನಹೊಂದಿದರು.

*

**ದೇಶಬಂಧು** [1]: ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ದಿನ ಹಾಗೂ ವಾರ ಪತ್ರಿಕೆಗಳು. ದಿನಪತ್ರಿಕೆ ಕಿರೀಟ ಆಕಾರದ 4 ಪುಟಗಳನ್ನೂ ವಾರಪತ್ರಿಕೆ ಕಿರೀಟ 1/2 ಆಕಾರದ 10 ಪುಟಗಳನ್ನೂ ಒಳಗೊಂಡಿತ್ತು. ಸಿ.ಹಯವದನರಾಯರ ಪ್ರಧಾನ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಮೇ 1939ರಲ್ಲಿ ಪ್ರಕಟಣೆ ಆರಂಭವಾಯಿತು. ದಿನಪತ್ರಿಕೆಯ ಬಿಡಿ ಪ್ರತಿಯ ಬೆಲೆ ಒಂದು ಅಣೆ. ವಾರ ಪತ್ರಿಕೆಯ ಸಂಚಿಕೆಯ ಬೆಲೆ 1.5 ಅಣೆ. ಪತ್ರಿಕೆಯ ಒಡೆತನ ಮೈಸೂರು ನ್ಯೂಸ್‍ಪೇಪರ್ ಕಂಪೆನಿಯದಾಗಿತ್ತು. ಆಗಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಜರುಗುತ್ತಿದ್ದ ಚಳವಳಿಯ ಬಗ್ಗೆ ಮೈಸೂರು ಸರ್ಕಾರದ ನಿಲುವು ಧೋರಣೆಗಳಿಗೆ ಪ್ರಚಾರ ನೀಡುವುದೇ ಪತ್ರಿಕೆಗಳ ಮೂಲೋದ್ದೇಶವಾಗಿತ್ತು. ರಾಯಿಟರ್ ಮತ್ತು ಅಸೋಸಿಯೇಟೆಡ್ ಪ್ರೆಸ್ ಸಂಸ್ಥೆಗಳ ಸುದ್ದಿಗಳೂ ಜಿಲ್ಲಾ ಮತ್ತು ಸ್ಥಳೀಯ ವಾರ್ತೆಗಳೂ ದಿನಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು. ಮಿರ್ಜಾ ಎಂ. ಇಸ್ಮಾಯಿಲ್‍ರ ಸಂಸ್ಥಾನದ ದಿವಾನ್ ಹುದ್ದೆಗೆ ರಾಜೀನಾಮೆ ನೀಡಿದ ಮೇಲೆ ಪತ್ರಿಕೆಗೆ ಸರ್ಕಾರದ ಪ್ರೋತ್ಸಾಹ ಕಡಿಮೆಯಾಯಿತು. ಮಾಲೀಕ ವರ್ಗಕ್ಕೂ ಸಂಪಾದಕ ವರ್ಗಕ್ಕೂ ನಡುವೆ ಭಿನ್ನಾಭಿಪ್ರಾಯಗಳು ಉಂಟಾದುವು. 1942ರಲ್ಲಿ ಎಸ್.ಎಸ್. ವೆಂಕೋಬರಾಯರು ಸಂಪಾದಕರಾದರು. ಆರ್ಥಿಕ ಮುಗ್ಗಟ್ಟಿನಿಂದಾಗಿ ಪತ್ರಿಕೆಯನ್ನು ನಡಸುವುದು ಕಷ್ಟವಾಯಿತು. 1943ರ ಸೆಪ್ಟೆಂಬರ್‍ನಿಂದ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಲಾಗಿದೆಯೆಂದು ನ್ಯೂಸ್‍ಪೇಪರ್ ಕಂಪನಿ ತನ್ನ ಸಿಬ್ಬಂದಿಗೆ ತಿಳಿವಳಿಕೆ ನೀಡಿತು. ಪತ್ರಿಕೆಯ ಸಂಪಾದಕವರ್ಗದವರಲ್ಲೊಬ್ಬರಾಗಿದ್ದ ಬಿ.ಎಸ್. ವೆಂಕಟರಾಮ್ ಅವರು 1943ರ ಅಕ್ಟೋಬರ್ 1ರಿಂದ ದೇಶಬಂಧು ದಿನ ಮತ್ತು ವಾರಪತ್ರಿಕೆಗಳ ಸಂಪೂರ್ಣ ಒಡೆತನವನ್ನು ಪಡೆದುಕೊಂಡು ಅದನ್ನು ರಾಷ್ಟ್ರಸೇವೆಗೆ ಮುಡಿಪಾಗಿಟ್ಟರು. ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮತ್ತು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮೈಸೂರು ಕಾಂಗ್ರೆಸ್ ಹೂಡಿದ್ದ ಸತ್ಯಾಗ್ರಹ ಚಳವಳಿಗೆ ಈ ಪತ್ರಿಕೆಗಳು ಪೂರ್ಣ ಬೆಂಬಲ ನೀಡಿದವು.

1947ರಲ್ಲಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ಬಿರುಸಾದಾಗ ಈ ಚಳವಳಿಗೆ ಸಂಬಂಧಪಟ್ಟ ಯಾವುದೇ ಸುದ್ದಿಗಳನ್ನಾಗಲಿ ಭಾಷಣಗಳನ್ನಾಗಲಿ ಟೀಕೆಗಳನ್ನಾಗಲಿ ಸಂಸ್ಥಾನ ಸರ್ಕಾರದ ನ್ಯಾಯಾಂಗಶಾಖಾ ಕಾರ್ಯದರ್ಶಿಗಳ ಪರಿಶೀಲನೆಗೆ ಒಳಪಡಿಸದೆ ಪತ್ರಿಕೆಗಳು ಪ್ರಕಟಿಸಲಾಗದೆಂಬ ಆಜ್ಞೆ ಜಾರಿಯಾಯಿತು. ಇದರ ಬಗ್ಗೆ ಅಸಮಾಧಾನಗೊಂಡು ದೇಶಬಂಧು ಒಂದನ್ನುಳಿದು ಎಲ್ಲ ಕನ್ನಡ ಪತ್ರಿಕೆಗಳೂ ಪ್ರಕಟಣೆ ನಿಲ್ಲಿಸಿದುವು. ದೇಶಬಂಧು ಪತ್ರಿಕೆ ಪ್ರಕಟಣೆ ನಿಲ್ಲಿಸದೆ ಸತ್ಯಾಗ್ರಹದ ಸುದ್ದಿ ಟೀಕೆಗಳನ್ನು ಪ್ರಧಾನವಾಗಿ ಪ್ರಕಟಿಸುತ್ತಿತ್ತು. ಸರಸಣ್ಣ ನಿಂತೆಂದ ಎಂಬ ಶಿರೋನಾಮೆಯ ಸರಸ ಸರಣಿಯ ರಾಜಕೀಯ ಮಾರ್ಮಿಕ ಟೀಕೆಗಳು ಜನಪ್ರಿಯವಾದುವು. ಆಗ ಪತ್ರಿಕೆ ಕಾಗದದ ಕೋಟಾ ಕಳೆದುಕೊಳ್ಳಬೇಕಾಯಿತು. ಹೆಚ್ಚು ಬೆಲೆ ಕೊಟ್ಟು ಕಾಗದ ಕೊಂಡು ಪ್ರಕಟಣೆ ಮುಂದುವರಿಸಬೇಕಾಯಿತು. ಕಾಗದದ ಕ್ಷಾಮ, ಆರ್ಥಿಕ ಕಷ್ಟನಷ್ಟಗಳನ್ನು ಎದುರಿಸಬೇಕಾಗಿ ಬಂದ ಈ ಪತ್ರಿಕೆಗಳು 1950ರ ಡಿಸೆಂಬರ್ ಅಂತ್ಯದ ವರೆಗೂ ಮುಂದುವರಿದು ಕೊನೆಗೆ ನಿಂತುಹೋದುವು. ಅನೇಕ ತರುಣರಿಗೆ ಈ ಪತ್ರಿಕೆಗಳು ಪತ್ರಿಕೋದ್ಯಮದ ಅನುಭವ ದೊರಕಿಸಿಕೊಟ್ಟುವು. (ಬಿ.ಎಸ್.;ಪಿ.ಇ.)

**ದೇಶಬಂಧು** [2]: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ 1928ರಲ್ಲಿ ಆರಂಭವಾಯಿತು. ಇದು ಇಂಗ್ಲಿಷ ಭಾಷೆಯಲ್ಲಿ ಹೊರಟ ಮಂಗಳೂರಿನ ಪ್ರಥಮ ಪತ್ರಿಕೆ. ಎಸ್. ಶಾಂತರಾಮ ಪೈ ಇದರ ಸಂಪಾದಕರು. ನಿವೃತ್ತ ಖಜಾನೆ ಡೆಪ್ಯುಟಿ ಕಲೆಕ್ಟರ್ ಎಚ್. ಸುಬ್ಬರಾವ್ ಖಜಾಂಜಿ, ಎಸ್. ವೆಂಕಟರಮಣ ಪೈ ಉಪಸಂಪಾದಕರು. ಎಡ್ವರ್ಡ್ ಡೇವಿಡ್ ಮತ್ತು ಎಸ್. ಗೋಪಾಲರಾವ್ ಕಾರ್ಯದರ್ಶಿಗಳು. ಡೆಮ್ಮಿ 1/8 ಆಕಾರದ ಪತ್ರಿಕೆಯ ಬಿಡಿ ಸಂಚಿಕೆಯ ಬೆಲೆ ಮೂರು ಆಣೆಗಳು. ವಾರ್ಷಿಕ ಚಂದಾ ಎರಡು ರೂಪಾಯಿಗಳು. ಜಾತಿ ಮತ ಭೇದವಿಲ್ಲದೆ ಧಾರ್ಮಿಕ ಮತ್ತು ಸಾಮಾಜಿಕ ಪ್ರಗತಿಗೆ ಮಾಸಲಾಗಿರಿಸಿದ ಪತ್ರಿಕೆಯೆಂದು ಪ್ರಥಮ ಸಂಚಿಕೆಯ ಕೊನೆಯ ಪುಟದಲ್ಲಿ ವಿವರಿಸಲಾಗಿತ್ತು. ದೇಶಭಕ್ತಿಯನ್ನೂ ರಾಷ್ಟ್ರ ಚೈತನ್ಯವನ್ನೂ ಪ್ರತಿಪಾದಿಸುತ್ತಿದ್ದ ಈ ಪತ್ರಿಕೆ ಎಷ್ಟು ಕಾಲ ಬಾಳಿತ್ತು ಎಂಬುದು ತಿಳಿಯುವುದಿಲ್ಲ.(ಪಿ.ಪಿ.ಕೆ.)

**ದೇಶಿಕಚಾರ್ಯ ಹೆಮ್ಮಿಗೆ**: 1902-66. ಕನ್ನಡ ಹಾಗೂ ಸಂಸ್ಕೃತ ವಿದ್ವಾಂಸರು. ತಿರುಮಕೂಡಲು ನರಸೀಪುರದ ಜೋಡಿ ಹೆಮ್ಮಿಗೆ ಆಗ್ರಹಾರದಲ್ಲಿ ಜನಿಸಿದರು. ತಂದೆ ಪಂಡಿತ ವೇದಾಂತ ಕೃಷ್ಣಮಾಚಾರ್. ತಾಯಿ ಕಲ್ಯಾಣಮ್ಮ. ವಿದ್ಯಾಭ್ಯಾಸ ತಲಕಾಡು ಮೈಸೂರುಗಳಲ್ಲಿ ನಡೆಯಿತು. ಇಂಗ್ಲಿಷ್ ಮಾಧ್ಯಮದಲ್ಲಿ ಎನ್‍ಟ್ರೆನ್ಸ್ ಪರೀಕ್ಷೆ ಮತ್ತು ಪಂಡಿತ

ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ (1932) ತೇರ್ಗಡೆಯಾದರು. ಕುದೇರು, ತಲಕಾಡು, ಅಕ್ಕಿಹೆಬ್ಬಳು, ಮಿಡ್ಲ್‌ಸ್ಕೂಲ್‌ನಲ್ಲಿ ಇಂಗ್ಲೀಷ್ ಉಪಾಧ್ಯಾಯರಾಗಿ, ಕೋಲಾರದ ಹೈಸ್ಕೂಲ್‌ನಲ್ಲಿ ಕನ್ನಡ ಪಂಡಿತರಾಗಿ ಕೆಲವು ವರ್ಷಗಳಿದ್ದು, ಕೊನೆಗೆ ಅಲ್ಲಿಂದ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಿದ್ದ ಕನ್ನಡ-ಕನ್ನಡ ಶಬ್ದಕೋಶಕ್ಕೆ ಪಂಡಿತರಾಗಿ ಆಯ್ಕೆಯಾಗಿ ಬಂದು ತಾವು ನಿಧನಹೊಂದುವವರೆಗೂ ಸೀನಿಯರ್ ಪಂಡಿತ್ ಆಗಿ ಡೆಪ್ಯುಟಿ ಎಡಿಟರ್ ಆಗಿ ಕೆಲಸಮಾಡಿದರು.

ಕನ್ನಡ - ಕನ್ನಡ ಶಬ್ದಕೋಶಕ್ಕೆ ಇವರ ಪಾಂಡಿತ್ಯದ ನೆರವು ದೊರೆಯಿತು. ಸಂಸ್ಕೃತದಲ್ಲೂ ಇವರದು ಆಳವಾದ ತಿಳಿವಳಿಕೆ. ಇಂಗ್ಲಿಷ್ ಸಾಹಿತ್ಯದ ಪರಿಚಯವೂ ಇವರಿಗೆ ಸಾಕಷ್ಟಿತ್ತು. ತಮ್ಮ ಮನೆತನದ ವಿದ್ಯೆಯಾದ ಆಯುರ್ವೇದದಲ್ಲೂ ಇವರು ಪ್ರವೀಣರಾಗಿದ್ದರು. ಇವರು ಸಾತ್ತ್ವಿಕರೂ ತತ್ತ್ವನಿಷ್ಠರೂ ಆಗಿದ್ದರು. ಕಂದ ವೃತ್ತಗಳನ್ನು ರಚಿಸುವುದರಲ್ಲಿ ಇವರ ಲೇಖನಿ ಉದಾರವಾದದ್ದು. ಯಾಮುನಾಚಾರ್ಯರ ಸ್ತೋತ್ರ ರತ್ನ, ಕುಲಶೇಖರ ಆಳ್ವಾರರ ಮುಕುಂದಮಾಲೆ, ವೇದಾಂತ ದೇಶಿಕಂ ಅಚ್ಯುತ ಶತಕ ಇವನ್ನು ಪದ್ಯದಲ್ಲಿ ಭಾಷಾಂತರಿಸಿದ್ದಾರೆ. ಪ್ರಣಯತರಂಗಿಣಿ ಎಂಬ ಕಂದವೃತ್ತಗಳ ಪ್ರಬಂಧ ಇವರ ಸ್ವಂತಕೃತಿ. ಇವರು ವಿದ್ವತ್ ಪೂರ್ಣವಾದ ಹಲವಾರು ಪ್ರೌಢಪ್ರಬಂಧಗಳನ್ನೂ ಬರೆದಿದ್ದಾರೆ. ಸಂಸ್ಕೃತ ಭಾಗವತ ಪುರಾಣವನ್ನು ಬಹು ಹೃದಯಂಗಮವಾಗಿ ವ್ಯಾಖ್ಯಾನಿಸಿ ಪಂಡಿತಪಾಮರರನ್ನು ರಂಜಿಸುತ್ತಿದ್ದರು. ಕುಮಾರವ್ಯಾಸಭಾರತ ಮತ್ತು ಜೈಮಿನಿ ಭಾರತಗಳನ್ನು ಗಮಕಿಗಳಿಂದ ಓದಿಸಿ ತಾವು ಅರ್ಥೈಸುತ್ತ ಲೋಕಪ್ರಿಯರಾಗಿದ್ದರು. ಇವರು ತುಂಬ ಸ್ನೇಹಪರರು ಜ್ಞಾನ ಭಕ್ತಿ ವೈರಾಗ್ಯಗಳ ಜೊತೆಗೆ ರಸಿಕತೆಯನ್ನೂ ತಮ್ಮ ಸಾತ್ತ್ವಿಕ ವ್ಯಕ್ತಿತ್ವದಲ್ಲಿ ಪಡೆದುಕೊಂಡಿದ್ದ ಅಪರೂಪದ ವ್ಯಕ್ತಿಯಾಗಿದ್ದರು. ಇವರು 1966 ಡಿಸೆಂಬರ್ 10ರಂದು ನಿಧನರಾದರು. *

**ದೇಸಾಯಿ, ಎನ್. ಸಿ. :** 1924 - 2003. ಕುಂಚ ಬ್ರಹ್ಮ ಎಂದೇ ಖ್ಯಾತರಾದ ಹೆಸರಾಂತ ಕಲಾವಿದ. ನಾನಾ ಸಾಹೇಬ್ ಚಿದಂಬರ ದೇಸಾಯಿ ಇವರ ಪೂರ್ತಿ ಹೆಸರು. 1924 ಏಪ್ರಿಲ್ 4 ರಂದು ಹಾವೇರಿ ತಾಲ್ಲೂಕಿನ ಅಗಡಿ ಗ್ರಾಮದಲ್ಲಿ ಜನಿಸಿದರು. ಇವರದು ಪ್ರಖ್ಯಾತ ಬಹದ್ದೂರ್ ದೇಸಾಯಿ ಕುಟುಂಬ. ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಇವರು ವೃತ್ತಿಯಲ್ಲಿ ಪ್ರೀಮಿಯರ್ ಆಟೋಮೊಬೈಲ್ ಸಂಸ್ಥೆಯ ಉದ್ಯೋಗಿಯಾಗಿ ಮೂವತ್ತೈದು ವರ್ಷ ಸುದೀರ್ಘ ಸೇವೆಸಲ್ಲಿಸಿದ ಬಳಿಕ ಅದೇ ಸಂಸ್ಥೆಯ ಜಾಹೀರಾತು ವಿಭಾಗದ ಮುಖ್ಯ ಕಲಾವಿದರಾಗಿ ನಿವೃತ್ತರಾದರು. ಮುಂಬಯಿಯಲ್ಲಿ ಉದ್ಯೋಗಿಯಾಗಿದ್ದಾಗಲೇ ಅಲ್ಲಿನ ಪ್ರಸಿದ್ಧ ಕಲಾಗುರುಗಳಾದ ದಂಡಾವತಿಮಠ ಅವರಲ್ಲಿ ಕಲಾಭ್ಯಾಸವನ್ನು ಪ್ರಾರಂಭಿಸಿ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸನಲ್ಲಿ ಚಿತ್ರಕಲೆ ಮತ್ತು ಲಲಿತಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದು ಕಲಾ ಪ್ರಪಂಚಕ್ಕೆ ತಮ್ಮನ್ನು ಅರ್ಪಿಸಿಕೊಂಡರು.

ಇವರು ಪ್ರಸಿದ್ಧ ಚಿತ್ರಕಲಾವಿದರು ಮಾತ್ರವಲ್ಲದೆ ಒಬ್ಬ ಉತ್ತಮ ಛಾಯಾಚಿತ್ರಗಾರರಾಗಿಯೂ ಪತ್ರಿಕೋದ್ಯಮಿಯಾಗಿಯೂ ಹೆಸರು ಗಳಿಸಿದ್ದರು. ಇವರು ಮುಂಬಯಿಯ ಅನೇಕ ಪತ್ರಿಕೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ವಿಮರ್ಶಾ ಲೇಖನಗಳನ್ನು ಬರೆಯುತ್ತಿದ್ದರು. ನಾಡಿನ ಸುಪ್ರಸಿದ್ಧ ಪತ್ರಿಕೆಗಳಿಗೆ ಮುಖಪುಟ ಕಲಾಕೃತಿಗಳನ್ನು ರೇಖಿಸುವುದರ ಮೂಲಕ ಪ್ರಸಿದ್ಧಿ ಪಡೆದಿದ್ದರು. ಅವುಗಳಲ್ಲಿ ಬೇಂದ್ರೇಯವರ ಮೇಘದೂತಕ್ಕೆ ಇವರು ಬರೆದ ಚಿತ್ರಲೇಖನ ಅತ್ಯಂತ ಜನಪ್ರಿಯತೆ ಪಡೆದಿತ್ತು. ಅತ್ಯಂತ ವಿರಳವಾಗಿರುವ ವಿಶಿಷ್ಟವಾದ ಕಲಾ ಸಂಶೋಧಕರಲ್ಲಿ ದೇಸಾಯಿಯವರೂ ಒಬ್ಬರು. ಮಹಾರಾಷ್ಟ್ರದ ವರ್ಲಿ ಬುಡಕಟ್ಟು ಜನಾಂಗದ ಜನಪದ ಕಲೆಯನ್ನು ಕುರಿತು ಇವರು ಸಂಶೋಧನೆ ಮಾಡಿದ್ದಾರೆ. ಸಂತ ಕಲಾವಿದರಾದ ಶುಭರಾಯರ ಜೀವನ ಚರಿತ್ರೆ ಹಾಗೂ ಇನ್ನಿತರ ಕೃತಿಗಳನ್ನೂ ರಚಿಸಿದ್ದಾರೆ. ಕರ್ನಾಟಕ ಜನಪದ ಕಲೆಯನ್ನು ಕುರಿತು ಸಂಶೋಧನಾತ್ಮಕ ಚಿತ್ರಲೇಖನ ಬರೆದಿದ್ದಾರೆ. ಇವರ ಪೂರ್ವೇತಿಹಾಸಕ್ಕೆ ಸಂಬಂಧಿಸಿದ ಹಾವನೂರು ಸಂಸ್ಥಾನ ಎಂಬ ಚಿತ್ರಲೇಖನವೂ ಇದೇ ಮಾಲಿಕೆಯಲ್ಲಿ ಸೇರಿದ್ದಾಗಿದೆ.

ಏಕವ್ಯಕ್ತಿ ಕಲಾಪ್ರದರ್ಶನಕ್ಕೆ ಇವರು ಹೆಸರಾಗಿದ್ದರು. ಇವರ ಬಹುರೂಪಿ ಗಣಪತಿ, ಬೇಂದ್ರೆಯವರ ಕವನಕ್ಕೆ ರಚಿಸಿದ ಯಾರಿಗೂ ಹೇಳೋಣು ಬ್ಯಾಡ, ಮೇಘದೂತ ಮುಂತಾದವು ರಾಷ್ಟ್ರದ ಅನೇಕ ಕಡೆಗಳಲ್ಲಿ ಪ್ರದರ್ಶನವಾಗಿ ಪ್ರಖ್ಯಾತವಾಗಿವೆ. ಇವರು ರೇಖಿಸಿದ ಸ್ವಾಮಿ ವಿವೇಕಾನಂದರ ಚಿತ್ರ ಕಲಾಕೃತಿಗಳು ಪ್ರದರ್ಶನವನ್ನು ಮುಂಬಯಿಯ ಕರ್ನಾಟಕ ಸಂಘ ಹಾಗೂ ಸಾಲಿಗ್ರಾಮದ ಡಿವೈನ್ ಪಾರ್ಕ್ ಟ್ರಸ್ಟ್ ಸಂಯುಕ್ತವಾಗಿ ಏರ್ಪಡಿಸಿದ್ದುವು. ಹುಬ್ಬಳ್ಳಿಯಲ್ಲಿರುವ ಬೇಂದ್ರೆ ಕುಟೀರ ಇವರಿಗೆ ಅಚ್ಚುಮೆಚ್ಚಿನ ತಾಣವಾಗಿತ್ತು. ಇಲ್ಲಿ ಇವರ 'ಕನ್ನಡ ಮೇಘದೂತ' ಕಾವ್ಯದ ಚಿತ್ರಗಳ ಸಂಗ್ರಹವಿದೆ. ಬೇಂದ್ರೆಯವರ 108 ನೆಯ ಜನ್ಮದಿನದ ಸವಿನೆನಪಿಗಾಗಿ ಅವರ ಭಾವಚಿತ್ರವನ್ನು ರಚಿಸಿ ನೆನಪಿನ ಕಾಣಿಕೆಯಾಗಿ ಬೇಂದ್ರ ಕುಟೀರಕ್ಕೆ ನೀಡಿದ್ದಾರೆ.

ಇವರ ವೈಯಕ್ತಿಕ ಜೀವನದಲ್ಲಿ ಬಹುಪಾಲು ನೋವೇ ತುಂಬಿತ್ತು. ತಮ್ಮ ಇಬ್ಬರು ಪುತ್ರರನ್ನೂ ಇವರು ಎಳೆವಯಸ್ಸಿನಲ್ಲೇ ಕಳೆದುಕೊಂಡಿದ್ದರು.

ಇವರಿಗೆ ಅನೇಕ ಪ್ರಶಸ್ತಿ ಸನ್ಮಾನಗಳು ಲಭಿಸಿವೆ. ಅವುಗಳಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸರ್ಕಾರ ಮಹಾನ್ ಕಲಾವಿದರಿಗೆ ನೀಡುವ ಫೆಲೋಷಿಪ್ ಮುಂತಾದವು ಉಲ್ಲೇಖನೀಯ. ಇವರು 2003 ರ ಜೂನ್‌ನಲ್ಲಿ ನಿಧನರಾದರು. (ಎಸ್.ಯು.ಎಂ.)

**ದೇಸಾಯಿ, ಪಿ.ಬಿ. :** 1910-76 ಕರ್ನಾಟಕ ಇತಿಹಾಸ ಸಾಹಿತ್ಯ ಸಂಸ್ಕೃತಿಗಳ ಖ್ಯಾತ ಸಂಶೋಧಕರು, ಶಾಸನತಜ್ಞರು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಸಂಸ್ಕೃತಿಗಳ ಪ್ರಾಧ್ಯಾಪಕರಾಗಿದ್ದರು. ಪಾಂಡುರಂಗ ಭೀಮರಾವ್ ದೇಸಾಯಿಯರು ರಾಯಚೂರು ಜಿಲ್ಲೆಯ ಕೊಪ್ಪಳದ ಬಳಿಯ ಕಿನ್ನಾಳದವರಾದ ಭೀಮರಾವ್ ಮತ್ತು ಭಾಗೀರಥೀಬಾಯಿ ದಂಪತಿಗಳ ಐದನೆಯ ಪುತ್ರರಾಗಿ 24-12-1910ರಲ್ಲಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಸೇಡಂನಲ್ಲಿಯೂ ಸೆಕೆಂಡರಿ ಶಿಕ್ಷಣ ಗುಲ್ಬರ್ಗದಲ್ಲಿಯೂ ನಡೆಯಿತು. ಮುಂಬಯಿ ವಿಶ್ವವಿದ್ಯಾನಿಲಯದ ಎಂಟ್ರೆನ್ಸ್ ಪರೀಕ್ಷೆಯ ಅನಂತರ ಅನಾರೋಗ್ಯದ ಕಾರಣ ಸ್ವಲ್ಪಕಾಲ ವಿದ್ಯಾಭ್ಯಾಸವನ್ನು ನಿಲ್ಲಿಸಿದರಾದರೂ ಮುಂದೆ 1935ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತದಲ್ಲಿ ಆನರ್ಸ್ ಪದವಿಯನ್ನು, 1937ರಲ್ಲಿ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಎಂ.ಎ. ಪದವಿಯನ್ನೂ ಪಡೆದರು. ಎಂ.ಎ.ಪರೀಕ್ಷೆಯಲ್ಲಿ ಲಿಪಿಶಾಸ್ತ್ರವೂ ಇವರ ಅಧ್ಯಯನ ವಿಷಯಗಳಲ್ಲಿ ಒಂದಾಗಿತ್ತು. ಅನಾರೋಗ್ಯದಿಂದಾಗಿ ಸ್ವಗ್ರಾಮದಲ್ಲಿ ವಿಶ್ರಾಂತಿಪಡೆಯುತ್ತಿದ್ದಾಗ, ಆ ಗ್ರಾಮದ ಮತ್ತು ಸುತ್ತಲಿನ ಗ್ರಾಮಗಳಲ್ಲಿದ್ದ ಶಿಲಾಶಾಸನಗಳನ್ನು ಪ್ರತಿಮಾಡಿಕೊಂಡು ಅಧ್ಯಯನ ಮಾಡುವ ಹವ್ಯಾಸವನ್ನು ಬೆಳೆಸಿಕೊಂಡರು. ಇದಕ್ಕಾಗಿ ಇವರು ಸುಮಾರು 60 ಗ್ರಾಮಗಳಲ್ಲಿ ತಿರುಗಾಡಿ 200ಕ್ಕೂ ಹೆಚ್ಚಿನ ಶಾಸನಗಳನ್ನು ಪ್ರತಿಮಾಡಿಕೊಂಡರು. 1936ರಲ್ಲಿ ವಿಜಯನಗರದ ಆರನೆಯ ಶತಮಾನೋತ್ಸವ ಸಂದರ್ಭದಲ್ಲಿ ಇವರು ವಿಜಯನಗರದ ಸಾಮ್ರಾಜ್ಯ ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದರು. 1939ರಲ್ಲಿ ಕೇಂದ್ರ ಸರ್ಕಾರದ ಪುರಾತತ್ತ್ವ ಇಲಾಖೆಯ ಶಾಸನ ಶಾಖೆಯಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸಕ್ಕೆ ಸೇರಿದ ಇವರು 17 ವರ್ಷಗಳ ಕಾಲ ಉದಕಮಂಡಲದಲ್ಲಿದ್ದು ಶಾಸನಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿದರು. ದಕ್ಷಿಣ ಭಾರತದ ಶಾಸನ ಸಂಪುಟಗಳ ಪೈಕಿ ಹನ್ನೊಂದನೆಯ ಸಂಪುಟದ ಮೊದಲ ಭಾಗವನ್ನು ಎನ್.ಲಕ್ಷ್ಮೀನಾರಾಯಣರಾಯರೊಂದಿಗೆ ಹಾಗೂ ಹದಿನೈದನೆಯ ಸಂಪುಟವನ್ನು ತಾವೇ ಸ್ವಂತವಾಗಿ ಸಂಪಾದಿಸಿದರು. ಶಾಸನಗಳಿಗೆ ಸಂಬಂಧಿಸಿದಂತೆ 1956ರಲ್ಲಿ ಶಾಸನ ಪರಿಚಯ ಎಂಬ ಗ್ರಂಥವನ್ನು ಪ್ರಕಟಿಸಿದರು.

ಅಂದಿನ ಹೈದರಾಬಾದ್ ಸರ್ಕಾರಕ್ಕಾಗಿ ಎ ಕಾರ್ಪಸ್ ಆಫ್

ಕನ್ನಡ ಇನ್‌ಸ್ಕ್ರಿಪ್ಷನ್ಸ್ ಇನ್ ಹೈದರಾಬಾದ್ ಎಂಬ ಗ್ರಂಥವನ್ನು ಸಂಪಾದಿಸಿಕೊಟ್ಟರು. ಆಂಧ್ರ ಪ್ರದೇಶ ಸರ್ಕಾರಕ್ಕಾಗಿ ಇವರು ಕನ್ನಡ ಇನ್‌ಸ್ಕ್ರಿಪ್ಷನ್ಸ್ ಆಫ್ ಆಂಧ್ರ ಪ್ರದೇಶ್ ಮತ್ತು ಸೆಲೆಕ್ಟ್ ಇನ್‌ಸ್ಕ್ರಿಪ್ಷನ್ಸ್ ಆಫ್ ಆಂಧ್ರ ಪ್ರದೇಶ್ ಎಂಬ ಗ್ರಂಥಗಳನ್ನು ಸಂಪಾದಿಸಿದರು.

ದೇಸಾಯಿಯವರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ಹಾಗೂ ಸಂಸ್ಕೃತಿ ಇಲಾಖೆಯಲ್ಲಿ ರೀಡರ್ ಆಗಿ (1957), ಆ ಇಲಾಖೆಯ ಮುಖ್ಯಸ್ಥರಾಗಿ (1962), ಪ್ರಾಧ್ಯಾಪಕರಾಗಿ (1967) ನಿವೃತ್ತರಾದರು (1971). ಮೊದಲ ಬಾರಿಗೆ ಶಾಸನಶಾಸ್ತ್ರವನ್ನು ವೈಜ್ಞಾನಿಕವಾಗಿ ವಿದ್ಯಾರ್ಥಿಗಳಿಗೆ ಕಲಿಸಿಕೊಡಲು ಶಾಸನಶಾಸ್ತ್ರದ ಡಿಪ್ಲೋಮಾ ಶಿಕ್ಷಣವನ್ನು ಇವರು ರೂಪಿಸಿದರು.

ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿಯೂ ಸೇವೆಸಲ್ಲಿಸಿದ ಇವರು ಆ ಸಂಸ್ಥೆಯ ವಸ್ತುಸಂಗ್ರಹಾಲಯವನ್ನು ಬೆಳೆಸಿದರು. ಅನೇಕ ವಿದ್ವಾಂಸರಿಂದ ಉಪನ್ಯಾಸಗಳನ್ನು ಮಾಡಿಸಿ ಅವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದು ಇವರು ಮಾಡಿದ ಇನ್ನೊಂದು ಮುಖ್ಯ ಕೆಲಸ. ಸಂಸ್ಥೆಯ ಹಸ್ತಪ್ರತಿ ವಿಭಾಗದ ಹಸ್ತಪ್ರತಿಗಳ ವಿವರಣಾತ್ಮಕ ಪಟ್ಟಿಯನ್ನು (ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ ಆಫ್ ಮ್ಯಾನುಸ್ಕ್ರಿಪ್ಟ್ಸ್ ಇನ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಸಂಪುಟ 5-9) ಪ್ರಕಟಿಸಿದರು.

ದೇಸಾಯಿಯವರು ಸಂಶೋಧನ ಗ್ರಂಥಗಳಲ್ಲಿ ಮುಖ್ಯವಾದದ್ದು ಬಸವೇಶ್ವರ ಅಂಡ್ ಹಿಸ್ ಟೈಮ್ಸ್ ಎಂಬುದು. ಕರ್ನಾಟಕ ಇತಿಹಾಸವನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸಬೇಕೆಂಬ ಯೋಜನೆಗನುಗುಣವಾಗಿ ಇವರು ತಮ್ಮ ಇಬ್ಬರು ಸಹೋದ್ಯೋಗಿಗಳೊಡನೆ ಎ ಹಿಸ್ಟರಿ ಆಫ್ ಕರ್ನಾಟಕ ಎಂಬ ಗ್ರಂಥವನ್ನು ಪ್ರಕಟಿಸಿದರು. ಮಿಂಚಿದ ಮಹಿಳೆಯರು, ಕುಂತಲೇಶ್ವರ, ಮದಗಜಮಲ್ಲ, ಕರ್ನಾಟಕದ ಕಲಚುರಿಗಳು, ಕನ್ನಡನಾಡಿನ ಶಾಸನಗಳು - ಇವು ಇವರ ಕನ್ನಡ ಗ್ರಂಥಗಳಲ್ಲಿ ಕೆಲವು. ಶಿವಾಜಿಯ ಜೀವನಕ್ಕೆ ಸಂಬಂಧಿಸಿದ ಮೂಲಸಾಮಗ್ರಿಗಳನ್ನೊಳಗೊಂಡ ಶಿವಚರಿತ್ರ ವೃತ್ತಸಂಗ್ರಹ ಎಂಬ ಗ್ರಂಥವನ್ನು ಮರಾಠಿಯಲ್ಲಿ ಬರೆದಿದ್ದಾರೆ. ಇವರು ಬರೆದು ಪ್ರಕಟಿಸಿದ ಇಂಗ್ಲಿಷ್ ಲೇಖನಗಳ ಸಂಖ್ಯೆ 105, ಕನ್ನಡದವು 230 ಮತ್ತು ಮರಾಠಿಯಲ್ಲಿ 40.

ದೇಸಾಯಿಯವರ ಶಾಸನ ಪರಿಚಯ ಗ್ರಂಥಕ್ಕೆ 1959ರಲ್ಲಿ ಮೈಸೂರು ಸರ್ಕಾರದ ಪುರಸ್ಕಾರ ದೊರೆಯಿತು. ಇವರ ಜೈನಿಸಂ ಇನ್ ಸೌತ್ ಇಂಡಿಯ ಅಂಡ್ ಸಮ್ ಜೈನ್ ಎಪಿಗ್ರಾಫ್ಸ್ ಎಂಬ ಗ್ರಂಥಕ್ಕೆ 1961ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಡಿ.ಲಿಟ್. ಪದವಿ ನೀಡಿತು. ಚಂಡೀಗಢದಲ್ಲಿ 1973ರಲ್ಲಿ ನಡೆದ ಅಖಿಲ ಭಾರತ ಇತಿಹಾಸ ಸಮ್ಮೇಳನದಲ್ಲಿ ಇವರು ಶಾಸನಶಾಸ್ತ್ರ ವಿಭಾಗದ ಅಧ್ಯಕ್ಷರಾಗಿದ್ದರು.

(ಬಿ.ಆರ್.ಜಿ.)

**ದೈವರಾತರು :** 1891-1975.ಚತುರ್ವೇದ ಪಂಡಿತರು. ಛಂದೋದರ್ಶನ ಎಂಬ ಮಹಾಗ್ರಂಥದ ಕರ್ತೃ.

ಉತ್ತರ ಕನ್ನಡ ಜಿಲ್ಲೆ ಗೋಕರ್ಣದಲ್ಲಿ ವೈದಿಕ ಬ್ರಾಹ್ಮಣ ಕುಟುಂಬದಲ್ಲಿ ನಾಗವೇಣಿ ಮತ್ತು ವಿಘ್ನೇಶ್ವರ ಭಟ್ಟರ ಮಗನಾಗಿ ಹುಟ್ಟಿದ ಇವರಿಗೆ ಗಣೆಶಶರ್ಮನೆಂದು ನಾಮಕರಣ ಮಾಡಲಾಯಿತು. ಮುಂದೆ ಇವರು ವಾಸಿಷ್ಠ ಗಣಪತಿ ಮುನಿಗಳ ಶಿಷ್ಯರಾಗಿ ಮಂತ್ರದ್ರಷ್ಟಾರರೆನಿಸಿಕೊಂಡು ದೈವರಾತರಾದರು. ಇವರಿಗೆ ಬಾಲ್ಯ ಶಿಕ್ಷಣವೆಲ್ಲ ವೇದವಿದ್ಯಾಸಂಪನ್ನರಾದ ತಾಯಿ ತಂದೆಗಳಿಂದಲೇ ದೊರಕಿತು.

ಮುಂದೆ ಇವರು ಗೋಕರ್ಣಕ್ಕೆ ಆಗಮಿಸಿದ ಉಜ್ಜಯಿನಿ ರಾಮದಾಸರಿಂದ ಭಕ್ತಿ ಯೋಗವನ್ನೂ ವಾಸುದೇವಾನಂದ ಸರಸ್ವತೀ ಟೇಂಬೆ ಮಹಾರಾಜ ಅವರಿಂದ ಹಠಯೋಗ ದೀಕ್ಷೆಯನ್ನೂ ಪಡೆದರು. ಅನಂತರ ವಾಸಿಷ್ಟ ಗಣಪತಿ ಮುನಿಗಳ ಸೇವೆಯಲ್ಲಿ ನಿರತರಾಗಿ ಅವರೊಡನೆ ಭಾರತಾದ್ಯಂತ ಪ್ರವಾಸ ಕೈಗೊಂಡು ಅನೇಕ ಪುಣ್ಯಕ್ಷೇತ್ರ ಹಾಗೂ ಪ್ರಮುಖನಗರಗಳನ್ನು ಸಂದರ್ಶಿಸಿದರು. ಅಲ್ಲಿಂದ ಮುಂದೆ ಅರುಣಾಚಲಕ್ಕೆ ಬಂದು ರಮಣ ಮಹರ್ಷಿಗಳ ಸೇವೆಯಲ್ಲಿ ತೊಡಗಿ ಬ್ರಹ್ಮಜ್ಞಾನದ ಉಪದೇಶ ಪಡೆದರು. ಮಹರ್ಷಿಗಳ ಆದೇಶಾನುಸಾರ ತಮ್ಮ ಗುರುವಾಸಿಷ್ಠರೊಂದಿಗೆ ಮದರಾಸಿಗೆ ಸಮೀಪದಲ್ಲಿರುವ ಪದವೇಟು ಗ್ರಾಮದ ರೇಣುಕಾಂಬ ಸನ್ನಿಧಿಯಲ್ಲಿ ಶಾರದೀ ನವರಾತ್ರಿಯ ಅನುಷ್ಠಾನದ ತಪಸ್ಸಿನಲ್ಲಿದ್ದಾಗ ಅವರ್ಣನಾಯವಾದ ಮಂತ್ರದರ್ಶನ ಪಡೆದರು. ಇವರ ಮುಖದಿಂದ ನೂತನ ವೇದಮಂತ್ರಗಳು ಅವಿರ್ಭವಿಸಿದುವು. ಅವುಗಳನ್ನು ಕೇಳಿದ ವಾಸಿಷ್ಠರು ಅವನ್ನು ಆಗಲೇ ಬರೆದುಕೊಂಡು ಅದಕ್ಕೆ ಭಾಷ್ಯವನ್ನು ರಚಿಸಿದರು. ಅದೇ ಪ್ರಸಿದ್ಧ ಛಂದೋದರ್ಶನ.

ದೈವರಾತರು ವಿದ್ವತ್‌ಸಭೆಗಳಲ್ಲಿ ನೀಡಿದ ಭಾಷಣಗಳು ಅಸಂಖ್ಯ. ದೆಹಲಿ, ಗೌಹತಿ, ನೇಪಾಳ, ಕಾಶಿ, ಮದ್ರಾಸು, ತಿರುಪತಿ ಮೊದಲಾದೆಡೆ ಜರುಗಿದ ಅಖಿಲಭಾರತ ಮಟ್ಟದ ಸಂಸ್ಕೃತಿ ಸಮ್ಮೇಳನ, ವೇದ ಸಮ್ಮೇಳನದಲ್ಲಿ ಕೆಲವಕ್ಕೆ ಅಧ್ಯಕ್ಷರಾಗಿ ಕೆಲವಕ್ಕೆ ಅತಿಥಿಗಳಾಗಿ ಆಯ್ಕೆಗೊಂಡಿದ್ದರು. 1975ರ ಮೇ ತಿಂಗಳಿನಲ್ಲಿ ಹೃಷಿಕೇಶ ಹಾಗೂ ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ವಿದ್ವತ್ಪರಿಷತ್ತುಗಳಲ್ಲಿ ಭಾಗವಹಿಸಿದ್ದರು. ಇವರ ಪಾಂಡಿತ್ಯಕ್ಕೆ ಮಾರುಹೋದ ಮಹೇಶಯೋಗಿಗಳು ಫ್ರಾನ್ಸ್, ಇಲಿ, ಸ್ಪೇನ್ ಅಮೆರಿಕಗಳಿಗೆ ಇವರನ್ನು ಕರೆದೊಯ್ದು ಇವರಿಂದ ಉಪನ್ಯಾಸಗಳನ್ನು ಮಾಡಿಸಿದರು.

ಸಂಸ್ಕೃತ, ಕನ್ನಡ, ಹಿಂದಿ, ನೇಪಾಳಿ, ತೆಲುಗು, ತಮಿಳು ಮಲೆಯಾಳಂ ಹೀಗೆ ಬಹುಭಾಷಾವಿಶಾರದರಾದ ಇವರಿಗೆ ಕಾಶಿ ಹಿಂದು ವಿಶ್ವವಿದ್ಯಾಲಯದಲ್ಲಿ ಪಂಡಿತ ಮದನ ಮೋಹನ ಮಾಲವೀಯರಿಂದ ವೇದವಾಚಸ್ಪತಿ, ಮುಂಬಯಿಯ ಭಾರತೀಯ ವಿದ್ಯಾಭವನದಿಂದ ವಿದ್ಯಾವಾಚಸ್ಪತಿ, ನೇಪಾಳ ಮಹಾರಾಜರಿಂದ ರಾಜರ್ಷಿ ಎಂಬ ಬಿರುದುಗಳು ಬಂದವು.

ಇವರ ಛಂದೋದರ್ಶನವೆಂಬ ಬೃಹದ್ಗ್ರಂಥವನ್ನು ಭಾರತೀಯ ವಿದ್ಯಾಭವನ ಪ್ರಕಟಿಸಿದೆ. ವೇದಾರ್ಥ ಕಲ್ಪಲತಾ ಮತ್ತು ವಾಕ್‌ಸುಧಾ ಗ್ರಂಥಗಳನ್ನು ಕಲ್ಕತ್ತದ ವಂನಗೋಪಾಲ ಪೋದ್ದಾರ್ ಟ್ರಸ್ಟ್ ಪ್ರಕಟಿಸಿದೆ. ಪಶುಪತಿ ಹೃದಯ ನೇಪಾಳಿ, ಹಿಂದಿಭಾಷೆಗಳಲ್ಲಿ ಪ್ರಕಟವಾಗಿದೆ. ಮೂಲ ಯಜುರ್ವೇದ ಸಂಹಿತಾ, ಇಂದ್ರಯಜ್ಞ, ಸಾಕ್ಷಾತ್ಕಾರ ಯೋಗಸುಧಾ ಇವು ಇವರ ಇತರ ಗ್ರಂಥಗಳು. ಅಪ್ರಕಟಿತ ಆದರೆ ಪೂರ್ಣ ಬರೆದು ಸಿದ್ಧವಾಗಿರುವ ಹಸ್ತಪ್ರತಿಗಳಲ್ಲಿ ಗಾಯತ್ರಿಸುಧಾ, ಪುರುಷಸೂಕ್ತಸುಧಾ, ವೇದವೈದಿಕ, ವೇದಹೃದಯು, ರಾಮರಸಾಯನ, ಅಹಂಪ್ರತ್ಯಯವಿಮರ್ಶೆ, ಸಪ್ತಮರ್ಯಾದಾ ಸದ್ವಿದ್ಯಾ ಇವು ಮುಖ್ಯವಾದವು.

ವೇದ ಉಪನಿಷತ್ತುಗಳನ್ನು ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲ ಈ ಪ್ರಕಾಂಡ ಪಂಡಿತರನ್ನು ಚತುರ್ವೇದಗಳ ಜೀವಂತ ಶಬ್ದಕೋಶ ಎಂದು ಬಣ್ಣಿಸಲಾಗಿದೆ.

ತಂತ್ರದಲ್ಲೂ ಅಷ್ಟೇ ನಿಪುಣರಾದ ಇವರು ಸ್ವತಃ ಹಲವು ನಕ್ಷೆಗಳನ್ನೂ ರಚಿಸಿದ್ದರು. ಋಗ್ವೇದದ ಆರಂಭ ಸುಪ್ರಸಿದ್ಧ ಗಾಯತ್ರಿ ಮಂತ್ರದಿಂದಲೇ ಹೊರತು ಸಾಂಪ್ರದಾಯಿಕವಾಗಿ ಒಪ್ಪಿಕೊಂಡಿರುವಂತೆ ಅಗ್ನಿಮೀಳೆಯಿಂದಲ್ಲ ಎಂಬುದಾಗಿ ಇವರು ಸಾಧಿಸಿದ್ದಾರೆ. ಓಂಕಾರ ಪ್ರಣವ ವೈದಿಕವಲ್ಲ. ವೇದದಲ್ಲಿ ಕಂಡುಬರುವುದು ಮೂಲತಃ ಈ ಕಾರವೆಂಬುದು ಇವರ ನಿಶ್ಚಿತಾಭಿಪ್ರಾಯ.

ಇಂದು ಇವರ ಗುರುಕುಲ ಬ್ರಹ್ಮಚಾರ್ಯಾಶ್ರಮ ಗೋಕರ್ಣದಿಂದ ಸು. 3ಕಿಮೀ ದೂರದಲ್ಲಿ ಅಸೋಗವನ ಎಂದು ಪ್ರಸಿದ್ಧಿ ಪಡೆದಿದೆ. ಅಲ್ಲಿ ಮಲ್ಲಿಕಾರ್ಜುನೇಶ್ವರ ದೇವಮಂದಿರವಿದೆ. ಇವರ ವಾಙ್ಮಯ ಪ್ರಕಾಶನಕ್ಕಾಗಿ, ಗುರುಕುಲ ಯೋಗಾಶ್ರಮದ ಸಂಘಟನೆಗಾಗಿ ಟ್ರಸ್ಟ್ ಒಂದನ್ನು ರಚಿಸಲಾಗಿದೆ.

(ಎಚ್.ಎಸ್.ಎಚ್.ಇ.)

**ದೈಹಿಕ ಶಿಕ್ಷಣ :** ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ದೈಹಿಕ ಶಿಕ್ಷಣ ಕಾರ್ಯಕ್ರಮ ಪಾಠಶಾಲೆಯ ಶಿಕ್ಷಣಕ್ಕೆ ಉಪಭಾಗವಾಗಿದ್ದು ದಿನಂಪ್ರತಿ ಶಾಲಾ ವೇಳಾ ಅವಧಿ ಕಳೆದ ಅನಂತರ ನಡೆಯುವ

ಚಟುವಟಿಕೆಯಾಗಿತ್ತು. ತರಗತಿ ಕಾರ್ಯದಲ್ಲಿ ದಣಿದು ಕಂಗಾಲಾದ ವಿದ್ಯಾರ್ಥಿಗಳನ್ನು ದೈಹಿಕ ವ್ಯಾಯಾಮಕ್ಕಾಗಿ ಒತ್ತಾಯಪಡಿಸಲಾಗುತ್ತಿತ್ತು. ಅಲ್ಲದೆ ಶಾಲೆಗಳಲ್ಲಿ ಸಾಕಷ್ಟು ಉಪಕರಣಗಳಾಗಲೀ ವಿದ್ಯಾರ್ಥಿ ಸಂಖ್ಯೆಗೆ ಅನುಗುಣವಾಗಿ ತರಪೇತಿಪಡೆದ ಶಿಕ್ಷಕರಾಗಲೀ ಇರಲಿಲ್ಲ. ಹಾಗಾಗಿ ಶಾಲೆಗಳಲ್ಲಿ ದೈಹಿಕ ಶಿಕ್ಷಣ ವ್ಯವಸ್ಥೆ ಗೌಣವೂ ತೀರ ಅಸಮರ್ಪಕವೂ ಆಗಿತ್ತು.

1957ರಲ್ಲಿ ಒಂದೂಕಾಲು ಲಕ್ಷ ಸಂಖ್ಯೆಯ ವಿದ್ಯಾರ್ಥಿಗಳುಳ್ಳ ಪ್ರೌಢಶಾಲೆಗಳಲ್ಲಿ ಏಳನೂರು ದೈಹಿಕ ಶಿಕ್ಷಣ ಉಪಾಧ್ಯಾಯರಿದ್ದರು. ಹನ್ನೆರಡು ವರ್ಷಗಳ ಅನಂತರ ಒಂದು ಲಕ್ಷ ಸಂಖ್ಯೆಯ ವಿದ್ಯಾರ್ಥಿಗಳಿಗಾಗಿ 1700 ದೈಹಿಕ ಶಿಕ್ಷಣ ಪಡೆದ ಉಪಾಧ್ಯಾಯರಿದ್ದರು. ಒಬ್ಬ ಶಿಕ್ಷಕನ ಹೊರೆ ಸುಮಾರು 350 ವಿದ್ಯಾರ್ಥಿಗಳು. ಇವರಲ್ಲಿ ಸೇಕಡ ಹತ್ತು ಭಾಗ ಡಿಪ್ಲೋಮ ದರ್ಜೆಯ ಶಿಕ್ಷಣ ಪಡೆದವರೂ ಸೇಕಡ 75 ಭಾಗ ಸರ್ಟಿಫಿಕೇಟ್ ಪಡೆದವರೂ ಉಳಿದವರು 3 ತಿಂಗಳಿಗಿಂತ ಕಡಿಮೆ ಶಿಕ್ಷಣ ಪಡೆದವರೂ ಆರು ವಾರ ಶಿಕ್ಷಣ ಪಡೆದವರೂ ಸೇವಾದಳ ಶಿಕ್ಷಣ ಪಡೆದವರೂ ಮಾಜಿ ಸೈನಿಕರೂ ಇದ್ದರು. ಕೆಲವು ಶಾಲೆಗಳಿಗೆ ಆಟದ ಅಥವಾ ಕವಾಯಿತು ಮಾಡಲು ಮೈದಾನವೇ ಇರಲಿಲ್ಲವಾದರೆ ಸೇಕಡ 17 ಶಾಲೆಗಳಲ್ಲಿ ದೈಹಿಕ ಶಿಕ್ಷಣ ಉಪಾಧ್ಯಾಯರೇ ಇರಲಿಲ್ಲ. ದೊಡ್ಡ ಊರುಗಳಲ್ಲಿ ಮೈದಾನಗಳ ಅಭಾವವಾದರೆ ಗ್ರಾಮಾಂತರ ಶಾಲೆಗಳಲ್ಲಿ ಉಪಾಧ್ಯಾಯರ ಅಭಾವ. ಸಾವಿರಾರು ಪ್ರೈಮರಿ ಶಾಲೆಗಳಿಗೆಲ್ಲ ಈ ರೀತಿಯ ಅಚ್ಚುಕಟ್ಟು ವ್ಯವಸ್ಥೆ ಆಗಬೇಕಾದರೆ ಅನೇಕ ಸಹಸ್ರ ಕಾರ್ಯಕರ್ತರು ಬೇಕಾಗುತ್ತಾರೆ.

ಕರ್ನಾಟಕದ ಸುಮಾರು 250 ಕಾಲೇಜುಗಳಲ್ಲಿ 1 1/2 ಲಕ್ಷ ಶಿಕ್ಷಣಾರ್ಥಿಗಳಿದ್ದಾರೆ. ದೈಹಿಕ ಶಿಕ್ಷಣ ಕಾಲೇಜು ವೇಳಾಪಟ್ಟಿಯಲ್ಲಿ ಕಡ್ಡಾಯವಾಗಿಲ್ಲ. ದೈಹಿಕ ಶಿಕ್ಷಣ ಕಾಲೇಜು ವೇಳೆಯ ಅನಂತರ ನಡೆಯುತ್ತಿರುವುದರಿಂದ ಕೇವಲ ಅಲ್ಪಸಂಖ್ಯೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಾತ್ರ ಪಾತ್ರವಹಿಸುತ್ತಾರೆ.

ಇಪ್ಪತ್ತನೆ ಶತಮಾನದಲ್ಲಿ ದೈಹಿಕ ಶಿಕ್ಷಣವು ಶಾಲಾ ಕಾಲೇಜುಗಳಲ್ಲಿ ಪ್ರಾಶಸ್ತ್ಯ ಪಡೆಯುತ್ತಾ ಬಂದಿತು. ದೈವಿಕ ಕವಾಯಿತನ ಮೂಲಕ ಮತ್ತು ಕ್ರಿಡಾ ವೇಳೆಗಳಲ್ಲಿ ತರಬೇತಿ ಕೊಡುವ ಮೂಲಕ ಈ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಯಿತು. ಕೆಲವು ದೊಡ್ಡ ವ್ಯಕ್ತಿಗಳ ಅಥವಾ ಟ್ರೋಫಿಗಳ ಹೆಸರಿನಲ್ಲಿ ಅಂತರ ಕಾಲೇಜು ಮತ್ತು ಅಂತರ ಶಾಲಾ ಕ್ರೀಡೆಗಳ ಸ್ಪರ್ಧೆ ನಡೆಯುತ್ತಿದ್ದು ಅಂಕಗಳಿಗಾಗಿ ಆ ಸಂಸ್ಥೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸಿದ್ಧ ಪಡಿಸುತ್ತಿದ್ದರು.

1957ರಿಂದ ವಿಶಾಲ ಕರ್ನಾಟಕದಲ್ಲಿ ರಾಜ್ಯಮಟ್ಟದ ದಸರ ಕ್ರೀಡೆಗಳು ಆರಂಭವಾದುವು. 1961ರಿಂದ ಕರ್ನಾಟಕ ಕ್ರೀಡಾಮಂಡಳಿ ಇದನ್ನು ನಡೆಸುವ ಜವಾಬ್ದಾರಿ ಹೊತ್ತಿದೆ. ಪಂದ್ಯಗಳು ಹಂತಹಂತವಾಗಿ ತಾಲ್ಲೂಕು, ಜಿಲ್ಲೆ, ವಿಭಾಗ, ರಾಜ್ಯಮಟ್ಟಗಳಲ್ಲಿ ನಡೆಯುತ್ತಿವೆ. ಈ ಸ್ಪರ್ಧೆಗಳಿಂದ ರಾಜ್ಯದ ಕ್ರೀಡಾ ಮಟ್ಟ ವರ್ಷಂಪ್ರತಿ ಉತ್ತಮಗೊಳ್ಳುತ್ತಿದೆ. ಇವುಗಳಲ್ಲಿ ಶಾಲಾಕಾಲೇಜು ವಿದ್ಯಾರ್ಥಿಗಳಲ್ಲದೆ ಇತರ ತರುಣರೂ ಭಾಗವಹಿಸಲು ಅವಕಾಶವಾಗಿದೆ.

ಕರ್ನಾಟಕದ ಶಿಕ್ಷಣ ಶಾಖೆ 1959ರಲ್ಲಿ, ಅನಂತರ, 1969ರಲ್ಲಿ ದೈಹಿಕ ಶಿಕ್ಷಣಕ್ಕೆ ಹೊಸ ರೂಪ ಕೊಟ್ಟು ಶಿಕ್ಷಣವನ್ನು ಶಾಲಾವೇಳಾಪಟ್ಟಿಯಲ್ಲಿ ಸೇರಿಸಿದೆ; ಹೆಚ್ಚು ಕಾಲವನ್ನೂ ತರಪೇತಿಗೆ ಒದಗಿಸಿದೆ. ದೈಹಿಕ ಕವಾಯಿತು, (ಡ್ರಿಲ್) ಮತ್ತು ಕ್ರೀಡಾಂಗಣ ಆಟ, ಹೊರಾಂಗಣ ಆಟಗಳಿಗೆ ಪ್ರತ್ಯೇಕ ಅವಧಿ (ಪೀರಿಯಡ್)ಗಳನ್ನು ವಿಧಾಯಕ ಮಾಡಿದೆ. ಸಾಮೂಹಿಕ ಕವಾಯಿತು. ಹೊರಪ್ರದೇಶದಲ್ಲಿ ಶಿಬಿರ (ಕ್ಯಾಂಪು) ಹೊರಸಂಚಾರ (ಹೈಕಿಂಗ್), ಸೈಕ್ಲಿಂಗ್, ಯೋಗಾಸನಗಳಿಗೂ ಏರ್ಪಾಟು ಮಾಡಿದೆ. ದೈಹಿಕ ಶಿಕ್ಷಣ ದೈಹಿಕ ಶ್ರಮವಾಗದಂತೆ ಮನರಂಜಕವಾಗುವಂತೆ ಮಾಡಲು ಸೂಚಿಸಲಾಗಿದೆ. ಶಾಲಾ ದೈಹಿಕ ಶಿಕ್ಷಣವನ್ನು ಹೊಸದಾಗಿ ಪ್ರಾರಂಭಿಸುವ ಕಾರ್ಯಾನುಭವ ಚಟುವಟಿಕೆಯ ಗುಂಪಿನಲ್ಲಿ ಸೇರಿಸಿ ಶಾಲಾ ವೇಳಾಪಟ್ಟಿಯಲ್ಲಿ ವಾರಕ್ಕೆ 4 ಅವಧಿಗಳನ್ನು ಕೊಡಲಾಗಿದೆ. ಇದರಲ್ಲಿ 2 ಅವಧಿ ಕವಾಯಿತು ಶಿಕ್ಷಣಕ್ಕೂ 2 ಅವಧಿ ಆಟಗಳಿಗೂ ಮೀಸಲಾಗಿದೆ. ಬಾಲಕ ಬಾಲಕಿಯರಿಗಾಗಿ ಪ್ರತ್ಯೇಕ ಚಟುವಟಿಕೆಗಳನ್ನು ಅವರ ವಯಸ್ಸಿನಗನುಗುಣವಾಗಿ ವಿಂಗಡಿಸಲಾಗಿದೆ.

ಏಕರೂಪ ಪಠ್ಯಕ್ರಮದ ವ್ಯವಸ್ಥೆಗಾಗಿ ಭಾರತ ಸರ್ಕಾರ ನಿರ್ಧರಿಸಿದ ನ್ಯಾಷನಲ್ ಫಿಟ್‍ನೆಸ್ ಕೋರ್ (ಎನ್‍ಎಫ್‍ಸಿ) ಚಟುವಟಿಕೆಗಳನ್ನು ಅನುಸರಿಸಬೇಕೆಂದು ಸೂಚಿಸಿದೆ. ಇದು ಬಹಳ ವ್ಯಾಪಕವಾಗಿದ್ದರೂ ಸ್ಥಳೀಯ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂಥ ವ್ಯವದಾನ ಪಡೆದಿದೆ.ಈ ಪದ್ಧತಿಯಲ್ಲಿ ಲೇಜಿಂ, ಜನಪದ ಗಾನ, ಸಾಮೂಹಿಕ ನೃತ್ಯ ಮುಂತಾದವು ಸೇರಿವೆ. ಇದರಿಂದ ದೈಹಿಕ ಚಟುವಟಿಕೆಗಳು ಸರ್ವತೋಮುಖವಾಗಿ ಬೆಳೆಯಲು ಅವಕಾಶವಿದೆ. ಪ್ರತಿ ಶಾಲೆಯಲ್ಲೂ ಇರಬೇಕಾದ ಕನಿಷ್ಠ ವ್ಯಾಯಾಮ ಸಾಮಗ್ರಿ ಪಟ್ಟಿಯನ್ನೂ ಗೊತ್ತುಮಾಡಿದೆ.

ರಾಷ್ಟ್ರೀಯ ದೈಹಿಕ ಯೋಗ್ಯತಾದಳದ (ನ್ಯಾಷನಲ್ ಎಫಿಷಿಯೆನ್ಸಿ ಟೆಸ್ಟ್) ಮಾನಕದಂತೆ ಪ್ರತಿಯೊಬ್ಬ ಅಭ್ಯರ್ಥಿಗೂ ಅವರವರ ದೈಹಿಕ ಸ್ಪರ್ಧೆಗಳ ಯೋಗ್ಯತೆಯನ್ನು ಪರೀಕ್ಷೆಗಳ ಮೂಲಕ ನಿರ್ಧರಿಸಿ ಹಂತಹಂತವಾಗಿ ಬಾಂದು ಎರಡು ಮೂರು ನಕ್ಷತ್ರಗಳ ಬ್ಯಾಡ್ಜ್ ಅನ್ನೂ ಯೋಗ್ಯತಾಪ್ರಶಸ್ತಿಪತ್ರಗಳನ್ನೂ ಕೊಟ್ಟು ವಿದ್ಯಾರ್ಥಿವಿದ್ಯಾರ್ಥಿನಿಯರು ತಮ್ಮ ದೈಹಿಕ ಚಟುವಟಿಕೆಗಳನ್ನು ಉಳಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಈ ಪದ್ಧತಿ 1961ರಿಂದ ಆಚರಣೆಗೆ ಬಂದಿದೆ.

ಶಾಲೆಗಳಲ್ಲಿ ಮೇಲ್ಕಂಡ ದೈಹಿಕ ಶಿಕ್ಷಣ ಮಾರ್ಪಾಟುಗಳನ್ನು ಸುಲಭವಾಗಿ ಜಾರಿಗೆ ತರಲು ಶಾಲಾ ಶಿಕ್ಷಕರ ಸಂಸ್ಥೆಗಳಲ್ಲೂ ಬಿ.ಎಡ್. ಮತ್ತು ಬಿ.ಪಿ.ಎಡ್. ಕಾಲೇಜುಗಳ ಅಭ್ಯಾಸಪತ್ರಿಕೆಗಳ ವೇಳಾಪಟ್ಟಿಯಲ್ಲೂ ಮೇಲ್ಕಂಡ ದೈಹಿಕ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಸಲಾಗುತ್ತಿದೆ.

ದೈಹಿಕ ಶಿಕ್ಷಣದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು 1970ರಿಂದ ಪ್ರತಿ ಜಿಲ್ಲೆಯ ಜಿಲ್ಲಾ ವಿಭಾಗಾಧಿಕಾರಿಯ ಕಚೇರಿಯಲ್ಲಿ ಉನ್ನತ ದರ್ಜೆಯ ದೈಹಿಕ ಶಿಕ್ಷಣದಲ್ಲಿ ಹೆಚ್ಚಿನ ತರಪೇತು ಪಡೆದ ದೈಹಿಕ ಶಿಕ್ಷಣ ಅಧಿಕಾರಿಯನ್ನು ನೇಮಕ ಮಾಡಲಾಗಿತ್ತು. ಇದಲ್ಲದೆ ಪ್ರತಿ ಶಾಲೆಗೂ ಅಲ್ಲಿಯ ವಿದ್ಯಾರ್ಥಿ ಸಂಖ್ಯೆಗೆ ಅನುಗುಣವಾಗಿ ದೈಹಿಕ ಶಿಕ್ಷಣದ ಉಪಾಧ್ಯಾಯರನ್ನು ಒದಗಿಸಲಾಗುತ್ತಿದೆ.

ದೈಹಿಕ ಶಿಕ್ಷಣಕ್ಕೆ ಪರ್ಯಾಯ ಕಾರ್ಯಕ್ರಮಗಳು: ಎ ಸಿ ಸಿ, ಎನ್ ಸಿ ಸಿ, ಕ್ರೀಡಾಕೂಟಗಳು - ಇವು ದೈಹಿಕ ಶಿಕ್ಷಣಕ್ಕೆ ಪರ್ಯಾಯ ಕಾರ್ಯಕ್ರಮಗಳು. ಎನ್ ಸಿ ಸಿ ದಳವನ್ನು ಏರ್ಪಡಿಸಲಾಗದ ಪ್ರೌಢಶಾಲೆಗಳಲ್ಲಿ ಅದೇ ಉದ್ದೇಶಕ್ಕಾಗಿ ಸಹಾಯಕ ವಿದ್ಯಾರ್ಥಿ ದಳವನ್ನು 1952ರಲ್ಲಿ ಸ್ಥಾಪಿಸಲಾಯಿತು. ಈ ತರಬೇತು ಸ್ವಯಂಪ್ರೇರಿತವಾಗಿಯೂ ಐಚ್ಛಿಕವಾಗಿಯೂ ಇತ್ತು. ಇದನ್ನು 1964ರಲ್ಲಿ ರದ್ದುಪಡಿಸಿ ಎನ್‍ಎಫ್‍ಸಿ ದಳದ ಚಟುವಟಿಕೆಯಲ್ಲಿ ಐಕ್ಯಗೊಳಿಸಲಾಯಿತು.

1954ರಲ್ಲಿ ನ್ಯಾಷನಲ್ ಡಿಫೇನ್ಸ್ ಸ್ಕೀಂ (ಎನ್‍ಡಿಎಫ್) ಎಂಬ ಚಟುವಟಿಕೆಯನ್ನು ಪ್ರೌಢಶಾಲೆಗಳಲ್ಲಿ ಆಚರಣೆಗೆ ತರಲಾಯಿತು. ದೈಹಿಕ ಶಿಕ್ಷಣ, ಸಮಾಜ ಸೇವೆ, ವ್ಯಾಯಾಮ, ಶಿಸ್ತು, ಗುಂಪುಗಳಲ್ಲಿ ಕೆಲಸಮಾಡುವ ಅಭ್ಯಾಸ ಈ ಮುಖವಾದ ಶಿಕ್ಷಣ ನೀಡುವ ವ್ಯವಸ್ಥೆ ಆಗಿತ್ತು. 1966ರಲ್ಲಿ ಇದನ್ನು ಎಸ್‍ಎಫ್‍ಸಿ ಚಟುವಟಿಕೆಯಲ್ಲಿ ಐಕ್ಯಗೊಳಿಸಲಾಯಿತು.

ರಾಷ್ಟ್ರೀಯ ರಕ್ಷಣಾ ವಿದ್ಯಾರ್ಥಿದಳ (ಎನ್‍ಸಿಸಿ) 1948ರಲ್ಲಿ ಭಾರತ ಸರ್ಕಾರದ ಆಜ್ಞೆಯಂತೆ ಶಾಲಾಕಾಲೇಜುಗಳಲ್ಲಿ ಪ್ರಾರಂಭಿಸಲ್ಪಟ್ಟಿತು. ನಾಯಕ ಗುಣ, ಶಿಸ್ತು, ಸೇವಾಬುದ್ಧಿಗಳನ್ನು ಬೆಳೆಸಿ ರಾಷ್ಟ್ರೀಯ ತುರ್ತು ಪರಿಸ್ಥಿತಿಗಳಲ್ಲಿ ರಕ್ಷಣಾದಳಗಳಿಗೆ ಸಹಾಯಕವಾಗುವಂಥ ಸೈನಿಕ ಶಿಕ್ಷಣ ಕೊಡುವುದೇ ಈ ದಳದ ಮುಖ್ಯ ಉದ್ದೇಶ. ಇದರಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಸೀನಿಯರ್ ಡಿವಿಜನ್, ಕಾಲೇಜು ಮತ್ತು ಹೈಸ್ಕೂಲು

ವಿದ್ಯಾರ್ಥಿನಿಯರಿಗಾಗಿ ಜೂನಿಯರ್ ಡಿವಿಜನ್ ಹೀಗೆ ವಿಭಾಗಗಳಿವೆ. ಇವುಗಳಲ್ಲಿ ನೆಲ, ಜಲ, ವಾಯುದಳಗಳೆಂಬ ಪ್ರತ್ಯೇಕ ವಿಭಾಗಗಳೂ ಇವೆ. ಸೀನಿಯರ್ ಡಿವಿಜನ್ ವಿಭಾಗದಲ್ಲಿ ಇಂಜಿನಿಯರಿಂಗ್, ಫಿರಂಗಿ, ಸಿಗ್ನಲ್, ಮೆಡಿಕಲ್ ಮುಂತಾದ ಪ್ರತ್ಯೇಕ ಉಪವಿಭಾಗಗಳಿವೆ. ಇದರ ಚಟುವಟಿಕೆಗಳು ನಾನಾಮುಖವಾಗಿ ವ್ಯಾಪಕವಾಗಿವೆ. ಪ್ರತಿ ವಿಭಾಗಕ್ಕೂ ರಕ್ಷಣಾದಳದ ಅಧಿಕಾರಿಗಳಿದ್ದು ರಕ್ಷಣಾದಳದ ಶಿಕ್ಷಣತಜ್ಞರು ಶಿಕ್ಷಣ ನೀಡುತ್ತಾರೆ.

ಈಗ ಭಾರತ ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳು ಸಮಾಜಕ್ಕೆ ಹೊಂದಿಕೊಂಡು ಗ್ರಾಮಾಂತರ ಪ್ರದೇಶಗಳ ಜನರ ಜೀವನ ಪರಿಚಯ ಮಾಡಿಕೊಡು ಸಮಾಜಸೇವೆ ಮಾಡಲು ನ್ಯಾಷನಲ್ ಸೋಷಿಯಲ್ ಸರ್ವೀಸ್ (ಎನ್‌ಎಸ್‌ಎಸ್) ಎಂಬ ದಳಗಳು ಕಾಲೇಜುಗಳಲ್ಲಿ ಸ್ಥಾಪಿತವಾಗಿರುತ್ತವೆ. ಪ್ರಾಯೋಗಿಕವಾಗಿ ಆರಂಭವಾಗಿರುವ ಈ ಸೇವಾ ಸಂಸ್ಥೆಯ ಶಿಕ್ಷಣವನ್ನು ಎಲ್ಲ ಕಾಲೇಜುಗಳಲ್ಲೂ ಕಡ್ಡಾಯವಾಗಿ ಆರಂಭ ಮಾಡಬೇಕೆಂಬ ವಿಷಯ ತೀವ್ರ ಪರಿಶೀಲನೆಯಲ್ಲಿದೆ.

ಎನ್‌ಸಿಸಿ, ಎಸಿಸಿ, ಎನ್‌ಡಿಎಫ್, ಎನ್‌ಎಸ್‌ಎಸ್ ದಳಗಳಲ್ಲಿ ತರಬೇತಿ ಹಿಂದಿಯಲ್ಲಿ ಜರಗುವುದಲ್ಲದೆ, ಕಾರ್ಯಭಾರ ಚಟುವಟಿಕೆಗಳ ಅಪ್ಪಣೆಗಳು ಕಮಾಂಡ್ಸ್ ಹಿಂದಿಯಲ್ಲೇ ಇರುವುದು ಒಂದು ವಿಶೇಷ. ಇದರಿಂದ ರಾಷ್ಟ್ರೀಯ ಭಾವೈಕ್ಯವಾಗಲೂ ಸಹಾಯಕವಾಗಿದೆ.

ದೈಹಿಕ ಶಿಕ್ಷಕರ ತರಬೇತಿ ಸಂಸ್ಥೆಗಳು: ಬೆಂಗಳೂರಿನ ವೈಎಂಸಿಎ ಸಂಸ್ಥೆ ಬಹಳ ಕಾಲದಿಂದ ಪದವೀಧರರಿಗೆ ಅಲ್ಪಾವಧಿಯ ಶಿಕ್ಷಣವನ್ನೂ ಎಸ್‌ಎಸ್‌ಎಲ್‌ಸಿ ಮುಗಿಸಿದವರಿಗೆ ಸರ್ಟಿಫಿಕೇಟ್ ಕೋರ್ಸನ್ನೂ ಒದಗಿಸುತ್ತಿದೆ. ಇದಲ್ಲದೆ ಬೆಳಗಾಂವಿ, ಧಾರವಾಡ ಮತ್ತು ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿ ಹಳ್ಳಿಯಲ್ಲೂ ಸರ್ಟಿಫಿಕೇಟ್ ಮಟ್ಟದ (ಸಿಪಿಎಡ್) ದೈಹಿಕ ಶಿಕ್ಷಣ ಸಂಸ್ಥೆಗಳಿವೆ.

ಪದವೀಧರ ಉಪಾಧ್ಯಾಯರಿಗೆ ಒಂಬತ್ತು ತಿಂಗಳ ಅವಧಿಯ ದೈಹಿಕ ಶಿಕ್ಷಣದ ಡಿಪ್ಲೊಮ ಮತ್ತು ಪದವೀಧರರದಲ್ಲದವರಿಗೆ ಸರ್ಟಿಫಿಕೇಟ್ ದರ್ಜೆಯ ಶಿಕ್ಷಣ ಒದಗಿಸಲು 1959ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರ ಸುಸಜ್ಜಿತ ಕ್ರೀಡಾಂಗಣವನ್ನೂ ತರಬೇತಿ ಸಂಸ್ಥೆ, ವಿದ್ಯಾರ್ಥಿ ವಸತಿಗೃಹಗಳನ್ನೊಳಗೊಂಡ ಕಾಲೇಜನ್ನೂ ಕಂಠೀರವ ಕ್ರೀಡಾಂಗಣದಲ್ಲಿ ಸ್ಥಾಪಿಸಿತು. ಅಲ್ಲಿ ಪೂರ್ಣ ಅವಧಿಯ ಶಿಕ್ಷಣದ ಜೊತೆಗೆ ಆಟ ಓಟ ಹಾಗೂ ದೈಹಿಕ ಚಟುವಟಿಕೆಗಳ ಬಗ್ಗೆಯೂ ಅಲ್ಪಾವಧಿಯ ಶಿಕ್ಷಣಕ್ಕೂ ವ್ಯವಸ್ಥೆಯುಂಟು.

1971ರಲ್ಲಿ ಈ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟು 100 ಪದವೀಧರರಿಗೆ ಬಿಪಿಎಡ್ ಶಿಕ್ಷಣ ಕೊಡುತ್ತಿದೆ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯವೂ ಬಿ ಪಿ ಎಡ್ ಮತ್ತು ಎಂ.ಪಿ.ಎಡ್. ಶಿಕ್ಷಣಗಳನ್ನು ಆರಂಭಿಸಿದೆ. ಈಗ ಎರಡು ವಿಶ್ವವಿದ್ಯಾನಿಲಯಗಳು ಸ್ನಾತಕೋತ್ತರ ಶಿಕ್ಷಣ (ಎಂ ಪಿ ಎಡ್) ಪ್ರಾರಂಭಿಸಿವೆ. ಇವಲ್ಲದೆ ಸರ್ಕಾರ ಅನೇಕ ದೈಹಿಕ ಶಿಕ್ಷಕರನ್ನೂ ಪಾಟಿಯಾಲಾದ ರಾಷ್ಟ್ರೀಯ ಕ್ರೀಡಾಸಂಸ್ಥೆಯಲ್ಲಿ ವಿಶೇಷ ತರಪೇತಿ ಪಡೆಯಲೂ ಕಳುಹಿಸುತ್ತದೆ.

ದೈಹಿಕ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ: ಸಾಧಾರಣವಾಗಿ ಇವೆರಡೂ ಪರಸ್ಪರ ಸಂಬಂಧಿಸಿದ್ದರೂ ಇತ್ತೀಚಿನವರೆಗೂ ಆರೋಗ್ಯ ಶಿಕ್ಷಣ ದೈಹಿಕ ಶಿಕ್ಷಣ ಕಾರ್ಯಕ್ರಮದಲ್ಲಿ ಬರುತ್ತಿರಲಿಲ್ಲ. ಇತ್ತೀಚಿನ ಪ್ರಗತಿಪರ ಯೋಜನೆಗಳಿಗೆ ಅನುಗುಣವಾಗಿ ಹಾಗೂ ವಿದ್ಯಾ ಇಲಾಖೆಯ ಆದೇಶ ಮತ್ತು ಉಪಾಧ್ಯಾಯ ಶಿಕ್ಷಣದ ಅಭ್ಯಾಸಪತ್ರಿಕೆಗಳಲ್ಲಿ ಇವೆರಡನ್ನೂ ಒಂದೇ ಕಾರ್ಯಕ್ರಮವೆಂದು ಪರಿಗಣಿಸಲಾಗಿದೆ. ಉಪಾಧ್ಯಾಯರಿಗೆ ಮಕ್ಕಳ ಶರೀರ ರಚನೆ, ಮಾನಸಿಕ ಬೆಳೆವಣಿಗೆ, ವಯಸ್ಸಿನ ಚಟುವಟಿಕೆಗಳಿಗೆ ಬೇಕಾದ ವಿಟಮಿನ್ನುಗಳ ಆವಶ್ಯಕತೆ, ಅದನ್ನು ಒದಗಿಸುವ ಪದಾರ್ಥಗಳು, ರೋಗಗಳ ಸೂಚನೆ, ರೋಗಗಳನ್ನು ಗುರುತಿಸುವ ವಿಧಾನಗಳು, ಮಕ್ಕಳ ದೈಹಿಕ ನ್ಯೂನತೆಗಳು, ಕೆಲವು ಆಹಾರಾಂಶಗಳ ಕೊರತೆ ಮತ್ತು ವಿಟಮಿನ್ನುಗಳ ಅಭಾವದಿಂದ ಆಗುವ ದೈಹಿಕ ತೊಂದರೆಗಳು ಮುಂತಾದವನ್ನು ಅಭ್ಯಾಸಪತ್ರಿಕೆಯಲ್ಲಿ ಸೇರಿಸಬೇಕಾಗಿದೆ. ಪ್ರತಿಯೊಬ್ಬ ಶಾಲಾವಿದ್ಯಾರ್ಥಿಯ ಬಗ್ಗೆ ದೈಹಿಕ ಬೆಳೆವಣಿಗೆ ಮತ್ತು ಕೊರತೆಗಳ ಬಗ್ಗೆ ವಿವರವಾದ ಹೆಲ್ತ್ ರಿಕಾರ್ಡುಗಳ ಮಾದರಿ ಪಟ್ಟಿಯನ್ನು ಕೊಡಲಾಗಿದೆ. ಪ್ರತಿ ವರ್ಷವೂ ವೈದ್ಯ ಇಲಾಖೆ ನಡೆಸುವ ವಿದ್ಯಾರ್ಥಿಯ ಆರೋಗ್ಯ ಪರೀಕ್ಷೆಯ ಸಮಯದಲ್ಲಿ ಶಾಲಾ ದೈಹಿಕ ಶಿಕ್ಷಣ ಉಪಾಧ್ಯಾಯರು ಸಹಾಯಮಾಡಲು ಶಿಕ್ಷಣ ಪಡೆದಿದ್ದಾರೆ. ಶಾಲಾ ಹೆಲ್ತ್ ಕ್ಲಿನಿಕ್‌ಗಳು ಈ ಉಪಾಧ್ಯಾಯರ ಮೇಲ್ವಿಚಾರಣೆಯಲ್ಲಿ ನಡೆಯುತ್ತವೆ.

ಕರ್ನಾಟಕ ರಾಜ್ಯದಲ್ಲಿ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಅನೇಕವಿವೆ. ಇದಕ್ಕೆ ಹಣಕಾಸು ಒದಗುವುದು ಶಾಲಾ ಕಾಲೇಜು ವಿದ್ಯಾರ್ಥಿಗಳು ಕೊಡುವ ಶುಲ್ಕದಿಂದಲೇ. ಇದು ಪ್ರೌಢಶಾಲೆಗಳಲ್ಲಿ ಮೂರು ರೂಪಾಯಿಗಳು, ಕಾಲೇಜುಗಳಲ್ಲಿ ವರ್ಷಕ್ಕೆ ಆರು ರೂಪಾಯಿಗಳು, ತೀರ ಸಣ್ಣ ವಿದ್ಯಾರ್ಥಿ ಸಂಖ್ಯೆ ಇರುವ ಕಾಲೇಜುಗಳಲ್ಲಿ ವ್ಯಾಯಾಮ ಶಿಕ್ಷಣಕ್ಕೆ ಬೇಕಾದ ಉಪಕರಣಗಳನ್ನು ಒದಗಿಸುವುದು, ಕ್ರೀಡಾಂಗಣಗಳನ್ನು ದುರಸ್ತಿಮಾಡುವುದು, ಪಂದ್ಯಗಳಿಗೆ ಸಿದ್ಧಪಡಿಸುವುದು, ಆ ಕ್ರೀಡೆಗಳಿಗೆ ಬೇಕಾದ ಆಟದ ವಸ್ತುಗಳನ್ನೂ ಬೆಲೆಬಾಳುವ ಉಪಕರಣಗಳನ್ನೂ ಕೊಳ್ಳುವುದು ಅಸಾಧ್ಯದ ವಿಷಯವಾಗಿದೆ. ಅಂಥ ಸಂಸ್ಥೆಗಳ ಚಟುವಟಿಕೆಗಳು ಸ್ವಾಭಾವಿಕವಾಗಿ ಸ್ಥಗಿತವಾಗುತ್ತವೆ. ಎಷ್ಟೋ ಸಂಸ್ಥೆಗಳಲ್ಲಿ ನುರಿತ ದೈಹಿಕ ಶಿಕ್ಷಣ ಉಪಾಧ್ಯಾಯರಾಗಲೀ ಬೇಕಾದಷ್ಟು ವಿಸ್ತಾರವಾದ ಆಟದ ಬಯಲುಗಳಾಗಲಿ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಇರುವ ಇಂಥ ಕೊರತೆಗಳನ್ನು ನಿವಾರಿಸಬೇಕಾಗಿದೆ.

(ಎಂ.ಆರ್.ಆರ್.,ಎನ್.ಸಿ.ಪಿ.)

**ದೊಂಬರು :** ಸಾಮಾನ್ಯವಾಗಿ ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಕಾಣಬರುವ ಅಲೆಮಾರಿ ಜನಾಂಗ. ಇವರು ಊರಿಂದ ಊರಿಗೆ ತಲೆಯಮೇಲೆ ಸಾಮಾನುಗಳನ್ನು ಹೊತ್ತೋ ಇಲ್ಲವೆ ಕತ್ತೆಯ ಮೇಲೆ ಹೇರಿಕೊಂಡೋ ಇಲ್ಲವೆ ಅಡ್ಡೆಗಳಲ್ಲಿ ಇಟ್ಟುಕೊಂಡೋ ವರ್ಷವೆಲ್ಲ ತಿರುಗಿ ಆಟ ಆಡಿ ಅನಂತರ ತಮ್ಮ ಮೂಲ ಊರುಗಳಿಗೆ ಬಂದು ಅಲ್ಲಿ ಮನೆದೇವರ ಹಬ್ಬ ಆಚರಿಸುತ್ತಾರೆ. ಶಕ್ತಿ ದೇವತೆಗಳು ಹನುಮಂತ ಇವರ ಮನೆದೇವರುಗಳು.

ಶಕ್ತಿಯುತ ವ್ಯಾಯಾಮ ಪ್ರದರ್ಶನಗಳನ್ನು ಮಾಡುವುದು ಇವರ ಒಂದು ವೈಶಿಷ್ಟ್ಯ. ಇದಕ್ಕೆ ದೊಂಬರಾಟ ಎನ್ನುತ್ತಾರೆ. ಇವರು ತಮ್ಮ ಚಾತುರ್ಯ ಹಾಗೂ ಕೈಚಳಕವನ್ನು ಪ್ರದರ್ಶಿಸಿ ತಮ್ಮ ವೃತ್ತಿಗೆ ಮಹತ್ತ್ವವನ್ನು ತಂದು ಕೊಂಡಿದ್ದಾರೆ. ಇವರು ತಮ್ಮ ಆಟಗಳನ್ನು ಮಧ್ಯಾಹ್ನದ ವೇಳೆಯಲ್ಲಿ ನಗರದ ಪ್ರಮುಖ ಬೀದಿಗಳ ಮಧ್ಯದಲ್ಲಿ ಪ್ರಮುಖರ ಅಪ್ಪಣೆ ಪಡೆದು ನಡೆಸುತ್ತಾರೆ. ಆಟವನ್ನು ಪ್ರದರ್ಶಿಸುವಾಗ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಆಕರ್ಷಣೆ ಮಾಡುವ ಉದ್ದೇಶದಿಂದ ಇವರ ತಂಡದಲ್ಲಿನ ಹೆಂಗಸೊಬ್ಬಳು ಡೋಲು ಬಡಿಯುತ್ತಿರುತ್ತಾಳೆ. ಗಂಡಸು ಶಿಳ್ಳೆ, ಕೇಕೆಗಳನ್ನು ಹಾಕುತ್ತ ಊರಿನ ಪ್ರಮುಖರನ್ನು ಹೊಗಳುತ್ತಿರುತ್ತಾನೆ. ಕೆಲವೊಮ್ಮೆ ಚಾಟಿಯನ್ನು ನೆಲಕ್ಕೆ ಬಡಿದು ಶಬ್ದಮಾಡುವುದೂ ಉಂಟು. ಆಟಗಾರ ಆಟದ ಸಮಯದಲ್ಲಿ ಬೇರೆ ಯಾವ ಬಟ್ಟೆಯನ್ನೂ ಧರಿಸದೆ ಹನುಮಂತನ ಚಡ್ಡಿಯೊಂದನ್ನು ಹಾಕಿಕೊಂಡಿರುತ್ತಾನೆ. ಈತ ಕೂದಲಿನಿಂದ ಅಥವಾ ಕಪ್ಪು ಉಣ್ಣೆಯಿಂದ ಮಾಡಿದ ಮಧ್ಯಮ ಗಾತ್ರದ ದಾರವನ್ನು ಬಲತೋಳಿಗೆ ಇಲ್ಲವೆ ಕತ್ತಿಗೆ ಕಟ್ಟಿಕೊಂಡಿರುತ್ತಾನೆ.

ಆಟದ ಪ್ರಾರಂಭದಲ್ಲಿ ದೊಂಬ ಸಗಣಿಯಿಂದ ಮಾಡಿದ ಬೆನಕನನ್ನು ಪೂಜಿಸಿ ಅನಂತರ ಗಣೆಯನ್ನು ನೆಡುತ್ತಾನೆ. ಅನಂತರ ಲಾಗ ಹಾಕುವುದು ಹಿಂಗಣ್ಣು ಮುಂಗಣ್ಣು ಎಸೆಯುವುದು. ಅತರ್‌ಲಾಗ ಹಾಕುವುದು, ನಿಂತ ನಿಲುವಿನಲ್ಲಿಯೇ ಪಲ್ಟಿಗಳನ್ನು ಹಾಕುವುದು, ಭಾರವಾದ ಕಬ್ಬಿಣದ ಗುಂಡುಗಳನ್ನು ಎಸೆಯುವುದು. ಮರಗಾಲು ಕಟ್ಟಿಕೊಂಡು

ನಡೆಯುವುದು, ಚಕ್ರ ಬಾಣ ನಿರ್ಮಿಸುವುದು, ಮರದ ತೊಲೆಗೆ ಮಧ್ಯದಲ್ಲಿ ಹಗ್ಗ ಕಟ್ಟಿ ಅದನ್ನು ಹಲ್ಲಿನಲ್ಲಿ ಕಚ್ಚಿಕೊಂಡು ತೊಲೆಯನ್ನು ಮೇಲೆ ಎತ್ತುವುದು. ಇಲ್ಲವೆ ಅದನ್ನು ತನ್ನ ಜುಟ್ಟಿಗೆ ಕಟ್ಟಿ ಮೇಲೆಕ್ಕೆತ್ತುವುದು ಮುಂತಾದ ಶಕ್ತಿಪ್ರದರ್ಶನಕ ಕೆಲಸಗಳನ್ನು ಮಾಡುತ್ತಾನೆ. ಈ ಮಧ್ಯೆ ಸಣ್ಣಪುಟ್ಟ ಹುಡುಗರು ತಂತಿಯ ಮೇಲೆ ನಡೆಯುವುದು, ಕಬ್ಬಿಣದ ಬಳೆಯೊಳಗಡೆ ನುಗ್ಗುವುದು ಮುಂತಾದ ಚಮತ್ಕಾರಗಳನ್ನು ನಡೆಸುತ್ತಾರೆ. ಅನಂತರ ಆಟಗಾರ ನುರುಜು ಕಲ್ಲಿನ ಮೇಲೆ ಮಲಗಿ ಹೊಟ್ಟೆಯಮೇಲೆ ಚಪ್ಪಡಿ ಕಲ್ಲೊಂದನ್ನು ಮಡಗಿಸಿಕೊಂಡು ದೊಡ್ಡಸುತ್ತಿಗೆಯಿಂದ ಬಡಿಸಿಕೊಳ್ಳುತ್ತಾನೆ. ಜನಗಳಿಂದ ತುಂಬಿದ ಗಾಡಿಯನ್ನು ಒಬ್ಬನೇ ಸಾಕಷ್ಟು ದೂರ ಎಳೆಯುತ್ತಾನೆ. ಗಣೆಯ ಮೇಲೆ ಹತ್ತಿ ಸಮಾನಾಂತರವಾಗಿ ಮಲಗಿ ಅಲ್ಲಿಯೇ ಅನೇಕ ಸೂಕ್ಷ್ಮತರವಾದ ಚಮತ್ಕಾರದ ಪ್ರದರ್ಶನಗಳನ್ನು ಮಾಡುತ್ತಾನೆ. ಈತ ನಡೆಸುವ ಎಲ್ಲ ಆಟಗಳೂ ಕಷ್ಟಸಾಧ್ಯವಾಗಿದ್ದು ಪ್ರೇಕ್ಷಕರನ್ನು ಆಕರ್ಷಿಸುವಂಥವಾಗಿರುತ್ತವೆ.

ಸಾಮಾನ್ಯವಾಗಿ ದೊಂಬರು ಅವಿಭಕ್ತ ಕುಟುಂಬದವರಾಗಿದ್ದು ಎಲ್ಲರೂ ಆಟದಲ್ಲಿ ನಿಷ್ಣಾತರಾಗಿರುತ್ತಾರೆ. ಪ್ರಾಯದವರು ಹಾಗೂ ಮಕ್ಕಳು ಆಟದಲ್ಲಿ ಹೆಚ್ಚಾಗಿ ಭಾಗವಹಿಸುತ್ತಾರೆ. ಕೆಲವರು ಸಣ್ಣ ಪುಟ್ಟ ಮಾಟಮಂತ್ರದ ಕೆಲಸ, ಕೈಚಳಕದ ಕೆಲಸ ಮಾಡುವುದೂ ಉಂಟು. ಆಟ ಮುಗಿದ ಅನಂತರದ ಆ ತಂಡದಲ್ಲಿನ ಸುಂದರವಾದ ಹೆಣ್ಣೊಬ್ಬಳು ತಟ್ಟೆ ಹಿಡಿದು ಪ್ರೇಕ್ಷಕರಿಂದ ಹಣ ಸಂಗ್ರಹಿಸುತ್ತಾಳೆ. ಆದಾಯ ಆಟಕ್ಕೆ ತಕ್ಕಂತಿರುತ್ತದೆ. ಕೆಲವೊಮ್ಮೆ ಆಟದ ಸಮಯದಲ್ಲಿ ಸರ್ಕಸ್ಸಿನಲ್ಲಿ ಮಾಡುವಂತೆ ನಕಲಿ ಮತ್ತು ಕೋಡಂಗಿ ಚೇಷ್ಟೆಗಳನ್ನು ಮಾಡಿ ಪ್ರೇಕ್ಷಕರನ್ನು ಸಂತೋಷಪಡಿಸಿ ಅವರಿಂದ ಹೆಚ್ಚು ಹಣವನ್ನು ಪಡೆಯುವುದೂ ಉಂಟು. ಆಟದ ಸಮಯದಲ್ಲಿ ಇವರು ಒಂದು ಕಡೆ ಬಟ್ಟೆ ಹಾಸಿ ಅದರ ಮೇಲೆ ತಮ್ಮ ಪೂರ್ವಿಕರ ಕಠಾರಿ, ಖಡ್ಗ ಮುಂತಾದ ಕೆಲವು ಹಳೆಯಕಾಲದ ಆಯುಧಗಳನ್ನು ಪ್ರದರ್ಶಿಸುತ್ತಾರೆ.

ದೊಂಬರ ಹೆಂಗಸರು ಬಿಡುವಿನ ವೇಳೆಯಲ್ಲಿ ಮರದ ಬಾಚಣಿಗೆಗಳನ್ನು ಮಾಡಿ ಮಾರುತ್ತಾರೆ. ಮನೆ ಮನೆಗೂ ಹೋಗಿ ಕೈಯಲ್ಲಿ (ಸೂತ್ರದ ಗೊಂಬೆಯಂಥದು) ಗೊಂಬೆ ಹಿಡಿದು ಹಾಡು ಹೇಳಿಕೊಂಡು ಅದನ್ನು ಅವರ ಮುಂದೆ ಕುಣಿಸಿ ದವಸಧಾನ್ಯಗಳನ್ನು ಸಂಗ್ರಹಿಸುವುದೂ ಉಂಟು.

**ದೊಂಬಿದಾಸರು :** ಜನಪದ ವೃತ್ತಿಗಾಯಕರು, ಈ ಜನಾಂಗದವರು ಕರ್ನಾಟಕದಾದ್ಯಂತವೂ ಕರ್ನಾಟಕದ ಹೊರಗೂ ಕಂಡುಬರುತ್ತಾರೆ. ಉತ್ತರ ಕರ್ನಾಟಕದಲ್ಲಿ ಇವರನ್ನು ದುಂಬೇದಾಸರು ಎಂದು ಕರೆಯುತ್ತಾರೆ. ಇವರ ಪೂರ್ವನೆಲೆ ಸರಿಯಾಗಿ ತಿಳಿಯದು. ಇವರಲ್ಲಿ ಹಲವು ಪಂಗಡಗಳಿದ್ದು ಒಂದೊಂದನ್ನೂ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇವರದು ಅಲೆಮಾರಿ ಸ್ವಭಾವ. ಒಂದು ನಿರ್ದಿಷ್ಟ ಕಸಬಿಗೆ ಅಂಟಿಕೊಂಡವರಲ್ಲ. ನರಸಿಂಹ ಸ್ವಾಮಿ, ವೆಂಕಟರಮಣಸ್ವಾಮಿ ಇವರ ಆರಾಧ್ಯದೈವ.

ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರು, ತುಮಕೂರು, ಮಂಡ್ಯ, ಕೋಲಾರ, ಮೈಸೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರ ಮನೆಮಾತು ತೆಲುಗು. ನಾಟಕ ಮಾಡುವುದು, ಕಥೆ ಹಾಡುವುದು ಕನ್ನಡದಲ್ಲಿ, ನಾಟಕ ಮಾಡುವುದನ್ನು ದಾಸಕೂಟ ಎಂದು ಕರೆಯುತ್ತಾರೆ. ನಾಟಕಗಳಲ್ಲಿ ಹೆಂಗಸರೂ ಪಾತ್ರ ವಹಿಸುತ್ತಾರೆ. ಭಕ್ತಪ್ರಹ್ಲಾದ, ಹರಿಶ್ಚಂದ್ರ, ಕೃಷ್ಣಪಾರಿಜಾತ, ಮಾರ್ಕಂಡೇಯ, ನಳಚರಿತ್ರೆ, ಪ್ರೇಮಸತ್ಯಭೋಜ, ಗಂಗೆಗೌರಿ ಜಗಳ - ಇವು ಇವರು ಹೆಚ್ಚಾಗಿ ಆಡುವ ನಾಟಕಗಳು. ಇವರು ಹಾಕುವ ಸ್ತ್ರೀಪಾತ್ರಗಳು ಅತ್ಯಂತ ಆಕರ್ಷಕವಾಗಿರುತ್ತಿದ್ದುದರಿಂದ ಇವರಿಗೆ ಹೆಣ್ಣುವೇಷದವರು ಎಂಬ ಹೆಸರು ಬಂದಿರುವಂತೆ ತೋರುತ್ತದೆ. ದೊಂಬಿದಾಸರು ನಾಟಕಗಳನ್ನು ಆಡಿದರೂ ಹೆಚ್ಚು ಪ್ರಸಿದ್ಧರಾಗಿರುವುದು ಹಾಡುವುದರಿಂದ, ಕಥೆ ಹಾಡಲು ಮೂವರು ಸೇರುತ್ತಾರೆ. ಮುಖ್ಯ ಕಥೆಗಾರ ಏಕತಾರಿಯನ್ನು, ಜೊತೆಯವರು ದಮ್ಮಡಿ, ಚಿಟಗಿಯನ್ನು ಹಿಡಿಯುತ್ತಾರೆ. ಲಾವಣಿಗಳು ನಾದಮಯವಾಗಿ ರಾಗಬದ್ಧವಾಗಿ ಮುಂದುರಿಯುತ್ತವೆ. ಬಹುಮಟ್ಟಿಗೆ ಇವರ ಎಲ್ಲ ಲಾವಣಿಗಳೂ ರಗಳೆ ರೂಪದಲ್ಲಿರುತ್ತವೆ. ಏಕತಾರಿಯ ಸಹಾಯದಿಂದ ಹಾಡುವ ಇವರ ಹಾಡುಗಳು ಕರ್ನಾಟಕದಲ್ಲೆಡೆಯೂ ಪ್ರಸಿದ್ಧಿಗೊಂಡಿವೆ. ಇವನ್ನು 'ತಂದನಾನಾ' ಪದಗಳು ಎನ್ನುವುದೂ ಉಂಟು. ಶಿವಕಥೆಗಳನ್ನೂ ವೈಷ್ಣವ ಕಥೆಗಳನ್ನೂ ಒಟ್ಟೊಟ್ಟಿಗೆ ಹಾಡುತ್ತಾರೆ. ಕೆಲವು ಲೌಕಿಕ ಕಥೆಗಳನ್ನೂ ಕಲಿತಿದ್ದು, ಜನ ಬಯಸಿದಾಗ ಅವನ್ನು ಸೊಗಸಾಗಿ ಹಾಡುವುದುಂಟು. ಇದರಲ್ಲಿ ಹೆಂಗಸರೂ ಪಾಲ್ಗೊಳ್ಳುತ್ತಾರೆ. ಇವರು ಹಾಡುವ ಕೆಲವು ಪ್ರಮುಖ ಕತೆಗಳೆಂದರೆ ಗಂಗೆಗೌರಿ ಕಥೆ, ಹುಟ್ಟಿದಳೆ ಗೌರಮ್ಮ ಭೂಲೋಕದೊಳಗೆ, ಕೃಷ್ಣಕೊರವಂಜಿ, ಬಾಲನಾಗಮ್ಮ, ಮಾಗಡಿ ಕೆಂಪೇಗೌಡ, ಕಲಿಯುಗದ ಬಾಲೆ, ಅಣ್ಣತಂಗಿ, ಬಂಜೆ ಹೊನ್ನಮ್ಮ ಮೊದಲಾದವು. ಈ ಎಲ್ಲಾ ಕಥೆಗಳೂ ಒಂದಲ್ಲ ಒಂದು ರೀತಿಯಲ್ಲಿ ಅತ್ಯಂತ ಜನಪ್ರಿಯಗೊಂಡಿವೆ.

(ಡಿಕೆಆರ್)

**ದೊಡವಾಡ :** ಬೆಳಗಾಂವಿ ಜಿಲ್ಲೆ ಸಂಪಾಗಾಂವ ತಾಲ್ಲೂಕಿನ ಒಂದು ಗ್ರಾಮ. ಐತಿಹಾಸಿಕ ಸ್ಥಳ. ಬೈಲಹೊಂಗಲ ಪಟ್ಟಣದಿಂದ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ: 12,000.

ಹಿಂದೆ ಈ ಊರಿನಲ್ಲಿ ದೊಡ್ಡ ಬಾವಿಗಳಿದ್ದವು. ಅವುಗಳಿಂದಾಗಿಯೇ ಊರಿಗೆ ದೊಡವಾಡ ಎಂಬ ಹೆಸರು ಬಂತೆಂದು ಪ್ರತೀತಿ. ಪ್ರಾಚೀನ ಕಾಲದಲ್ಲಿ ದೊಡವಾಡ ಒಂದು ಅಗ್ರಹಾರವಾಗಿತ್ತು. ಕದಂಬ ಪೆರ್ಮಾಡಿ ಇದನ್ನು ಸ್ಥಾಪಿಸಿದ. ಕೆಲಕಾಲ ಇದು ನವಲಗುಂದ ಆಡಳಿತ ಪ್ರದೇಶಕ್ಕೆ ಒಳಪಟ್ಟಿತ್ತು. ಈ ಊರಿನ ಕೋಟೆ ಸುಂದರವಾಗಿತ್ತೆಂದು ಊರು ವಿಶಾಲವೂ ಅಚ್ಚುಕಟ್ಟಾಗಿಯೂ ಇತ್ತೆಂದು ಕ್ಯಾಪ್ಟನ್ ಮೂರ್ ಎಂಬ ಅಧಿಕಾರಿಯ ದಾಖಲೆಯಿಂದ (1790) ತಿಳಿದುಬರುತ್ತದೆ. ಕೋಟೆ ಇಂದು ಹಾಳಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಈ ಊರು ಸಾಂಗಲಿ ಸಂಸ್ಥಾನಕ್ಕೆ ಸೇರಿತ್ತು. ಇಲ್ಲಿ ವೀರಭದ್ರ ದೇವಾಲಯವಿದೆ. ವೀರಭದ್ರ ದೇವರ ಪಕ್ಕದಲ್ಲಿ ಗಣಪತಿ ಮತ್ತು ನಿಂತ ಭಂಗಿಯ ಶಕ್ತಿದೇವತೆಯ ಮೂರ್ತಿಗಳಿವೆ. ಈ ದೇವಾಲಯದ ಮುಂಭಾಗದಲ್ಲಿರುವ 1081 ರ ಶಾಸನದ ತುದಿಭಾಗದಲ್ಲಿ ತೀರ್ಥಂಕರನ ಮೂರ್ತಿಯನ್ನು ಕಂಡರಿಸಲಾಗಿದೆ. ಇದೊಂದು ದಾನ ಶಾಸನ. 1962 ರಲ್ಲಿ ಈ ದೇವಾಲಯವನ್ನು ನವೀಕರಿಸಲಾಗಿದೆ. ಇದಲ್ಲದೆ ದ್ಯಾಮವ್ವ, ಹನುಮಂತ, ರಾಮಲಿಂಗೇಶ್ವರ, ಬಸವಣ್ಣ, ಕರೆವ್ವ, ಸಂಗಮೇಶ್ವರ, ಗಣಪತಿ ಮಹಾಬಳೇಶ್ವರ ಗುಡಿಗಳು ಈ ಊರಿನಲ್ಲಿವೆ.

ರಾಮಲಿಂಗೇಶ್ವರ ಗುಡಿ ಅತ್ಯಂತ ಪ್ರಾಚೀನವಾಗಿದ್ದು ಚಾಳುಕ್ಯಪೂರ್ವ ವಾಸ್ತುವಿನ್ಯಾಸ ಒಳಗೊಂಡಿದೆ. ವಿಜಯನಗರದ ಕಾಲದಲ್ಲಿ ಇದು ನವೀಕರಣಗೊಂಡಿತೆಂದು ತಿಳಿಯುತ್ತದೆ. ನೆಲಮಾಳಿಗೆಯುಳ್ಳ ಮಹಾಬಳೇಶ್ವರ ಗುಡಿಯೂ ಇತ್ತೀಚೆಗೆ ನವೀಕರಣಗೊಂಡಿದೆ. ಸಂಗಮೇಶ್ವರ ಗುಡಿ ಮತ್ತು ಸಂಗಪ್ಪಜ್ಜನ ಮಠ ಪ್ರತ್ಯೇಕವಾಗಿವೆ. ಸಂಗಮೇಶ್ವರ ಗುಡಿಯ ಹತ್ತಿರ ಒಂದು ವೀರಗಲ್ಲಿದೆ. ಕದಂಬ ವಜ್ರದೇವನ ಸೇವಕ ರಾಯಸಹಾನಿ ಸೋದಪ್ಪನ ಮಗ ವಿಜಯಸಹಾನಿ ಯುದ್ಧದಲ್ಲಿ ಹೋರಾಡಿ ಮಡಿದ ವಿಷಯ ಅದರಲ್ಲಿದೆ. ಬಸವಣ್ಣನ ಗುಡಿಯಲ್ಲಿಯೂ ಒಂದು ವೀರಗಲ್ಲಿದ್ದು ಅದು ಜಯಕೇಶಿ ಅರಸನ ಸೇವಕ (ಡಿಂಗರಿಗ) ಲಹಾದನ ವೀರಮರಣವನ್ನು ಚಿತ್ರಿಸುತ್ತದೆ. ಸಂಗಮೇಶ್ವರ ಗುಡಿಯ ಹಿಂಭಾಗದಲ್ಲಿ ಬಸವಣ್ಣನ ಗುಡಿ ಇದೆ. ಊರ ಹೊರವಲಯದಲ್ಲಿ ಕೆರೆ ಮತ್ತು ದೊಡ್ಡ ಬಾವಿಗಳಿವೆ. ಅಲ್ಲಿಯೇ ಮಡಿವಾಳೇಶ್ವರನ ಗುಡಿ ಇದೆ. ಕಲ್ಮಠದ ಎದುರಿನಲ್ಲಿ ಭಗ್ನಾವಸ್ಥೆಯಲ್ಲಿರುವ ವೀರಸ್ಮಾರಕವಿದೆ.

ಈ ಊರಿನಲ್ಲಿ ಯಮನೂರ ರಾಜಾಭಕ್ಷನ ದರ್ಗಾ ಇದೆ. ಮರಾಠ ಸಮುದಾಯದ ಜನ ಈ ದರ್ಗಾಕ್ಕೆ ನಡೆದುಕೊಳ್ಳುತ್ತಾರೆ. (ಆರ್.ಕೆ.ಎಂ.)

**ದೊಡ್ಡಕಾನ್ಯ :** ಮೈಸೂರು ಜಿಲ್ಲೆಯಲ್ಲಿ ಮ್ಯಾಗ್ನಟೈಟ್ ಗಣಿಗಳ ಸ್ಥಳ. ಮೈಸೂರು ನಗರದ ದಕ್ಷಿಣಕ್ಕೆ 9ಕಿಮೀ ಕಡಕೊಳ ರೈಲ್ವೆ

ನಿಲ್ದಾಣದಿಂದ ಪಶ್ಚಿಮಕ್ಕೆ ಸು. 5 ಕಿಮೀ ದೂರದಲ್ಲಿದೆ. ಮೈಸೂರು ಜಿಲ್ಲೆಯ ಉತ್ತಮವಾದ ಮತ್ತು ದೊಡ್ಡದಾದ ಖನಿಜ ನಿಕ್ಷೇಪಗಳಲ್ಲಿ ದೊಡ್ಡಕಾನ್ಯದ ಮ್ಯಾಗ್ನಟೈಟ್ ನಿಕ್ಷೇಪವೂ ಒಂದು. ದೊಡ್ಡಕಾನ್ಯದ ಭೂವೈಜ್ಞಾನಿಕ ವಲಯದಲ್ಲೇ ಇನ್ನೂ ಕೆಲವು ಮುಖ್ಯ ಗಣಿಗಳಿವೆ. ಅವು ದೊಡ್ಡ ಕಾಟೂರು, ಸಿಂಧುವಳ್ಳಿ, ಗುರೂರು, ತಳೂರು, ಮಾವಿನ ಹಳ್ಳಿ, ಹುಲ್ಲಹಳ್ಳಿ ಮತ್ತು ಚಟ್ಟನಹಳ್ಳಿ, ಇವುಗಳಲ್ಲೆಲ್ಲ ದೊಡ್ಡಕಾನ್ಯದ ಗಣಿಯೇ ಅತಿ ಮುಖ್ಯವಾದುದು ಮತ್ತು ದೊಡ್ಡದು. ಪ್ರಾರಂಭದಲ್ಲಿ ಇಲ್ಲಿಯ ಗಣಿಗಳು ಮುಖ್ಯವಾಗಿ ಕ್ರೋಮೈಟ್ ಅದುರಿಗಾಗಿ ತೆಗೆದವು. ಈ ಖನಿಜನಿಕ್ಷೇಪದಲ್ಲಿ ಆರು ಫರ್ಲಾಂಗು ಉದ್ದ,ಎರಡು ಫರ್ಲಾಂಗು ಅಗಲವುಳ್ಳ ಮಸೂರಾಕಾರದ ಪೆರಿಡೊಟೈಟ್ ಶಿಲೆಯ ಹರವು ಇದೆ. ಇದರಲ್ಲಿ ಒಂದಕ್ಕೊಂದು ಹೆಣೆದುಕೊಂಡಿರುವ ಅನೇಕ ಮ್ಯಾಗ್ನಟೈಟ್ ಎಳೆಗಳಿವೆ. ಈ ಎಳೆಗಳು ಒಂದು ಅಥವಾ ಎರಡು ಅಂಗುಲದಿಂದ ಎರಡು ಅಥವಾ ಮೂರು ಅಡಿಗಳಿಗಿಂತ ಹೆಚ್ಚು ಅಗಲವಾಗಿ ಇರುತ್ತವೆ. ಸರಾಸರಿ ಇಪ್ಪತ್ತು ಅಡಿ ಆಳದವರೆಗೆ ಸುಮಾರು ಐದು ಲಕ್ಷಟನ್ ಮ್ಯಾಗ್ನಟೈಟ್ ಇರುವುದಾಗಿ ಅಂದಾಜು ಮಾಡಲಾಗಿದೆ.

1917ರಿಂದ ಕಬ್ಬಿಣ ಮತ್ತು ಉಕ್ಕಿನ ಕಂಪನಿ, ಮುಂಬಯಿ - ಇದು ಇಲ್ಲಿ ಸರ್ಕಾರದಿಂದ ಗುತ್ತಿಗೆ ಪಡೆದು ಗಣಿಗಳನ್ನು ನಡೆಸುತ್ತಿದೆ. ಈ ಗಣಿಗಳಲ್ಲಿ 1920 ರಿಂದ 1972ರ ವರೆಗೆ, 1,70,974.14 ಮೆಟ್ರಿಕ್ ಟನ್ ಮ್ಯಾಗ್ನಟೈಟ್ ಹೊರ ತೆಗೆಯಲಾಗಿದೆ. 1940ರ ವರೆಗೆ ಈ ಗಣಿಗಳ ವಾರ್ಷಿಕ ಉತ್ಪಾದನೆ ಸರಾಸರಿ 2500 ಟನ್ನುಗಳಷ್ಟಿದ್ದು, ಅನಂತರ 4,000 ದಿಂದ 5,000 ಮೆಟ್ರಿಕ್ ಟನ್ನುಗಳಿಗೆ ಏರಿದೆ. ಈ ಉತ್ಪಾದನೆಯೆಲ್ಲವೂ ಜೆಂಷೆಡ್‍ಪುರದಲ್ಲಿರುವ ತಾತಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿಯೇ ಉಪಯೋಗವಾಗುತ್ತಿದೆ. ಈಗಿರುವ ಗಣಿಗಳಲ್ಲಿ ಇನ್ನೂ ಸುಮಾರು 140000 ಮೆಟ್ರಿಕ್ ಟನ್ ಮ್ಯಾಗ್ನಟೈಟ್ ಇದೆ ಎಂದು ಕಂಪನಿಯವರು ನಿರ್ಧರಿಸಿದ್ದಾರೆ. (ಎಂ.ಎಸ್.ಎಂ.)

**ದೊಡ್ಡಗಂಗವಾಡಿ :** ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ರಾಮನಗರದಿಂದ 15 ಕಿಮೀ ದೂರದಲ್ಲಿರುವ ಐತಿಹಾಸಿಕ ಸ್ಥಳ. 1294 ರ ಹೊಯ್ಸಳರ ಶಾಸನದಲ್ಲಿ ಇದನ್ನು ಹಿರಿಯಗಂಗವಾಡಿ ಎಂದು ಕರೆಯಲಾಗಿದೆ. ಹತ್ತಿರದಲ್ಲಿಯೇ ಚಿಕ್ಕಗಂಗವಾಡಿ ಎಂಬ ಊರಿದೆ. ಈ ಗ್ರಾಮದಲ್ಲಿ ಈಶ್ವರ, ಆಂಜನೇಯ, ಗೋಪಾಲಸ್ವಾಮಿ ಹಾಗೂ ಮಾರಮ್ಮ ದೇವಾಲಯಗಳಿವೆ. ಆಂಜನೇಯ ದೇವಾಲಯ ವಿಜಯನಗರ ಅರಸರಕಾಲದ್ದು; ಈಗ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯದಲ್ಲಿ ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಬಲಹರಿಯ ಪುತ್ರ ಕೇತಣ್ಣ ಎಂಬವನು ಬಲ್ಲಾಳನ ದಾಯಾದಿ ರಾಮನಾಥನೊಂದಿಗೆ ಮಾಡಿದ ತುರುಗಾಳಗವೊಂದರಲ್ಲಿ ಮಡಿದ ಸಂಗತಿಯನ್ನು ತಿಳಿಸುವ ಶಾಸನವಿದೆ.

ಗೋಪಾಲಸ್ವಾಮಿ ದೇವಾಲಯವೂ ವಿಜಯನಗರದ ಕಾಲದ ರಚನೆ ಇದೂ ಜೀರ್ಣೋದ್ಧಾರಗೊಂಡಿದೆ. ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ಮಂಟಪಗಳಿವೆ. ಮಂಟಪದಲ್ಲಿ ಅಷ್ಟಕೋನಾಕೃತಿಯ ಎರಡು ಕಂಬಗಳಿವೆ. ಗರ್ಭಗೃಹದಲ್ಲಿ ವೇಣುಗೋಪಾಲಸ್ವಾಮಿಯ ಪ್ರಾಚೀನ ಮೂರ್ತಿ ಇದೆ. ಇಲ್ಲಿನ ಶಿಖರವನ್ನು ಇಟ್ಟಿಗೆ ಹಾಗೂ ಗಾರೆಯಿಂದ ಜೀರ್ಣೋದ್ಧಾರ ಮಾಡಲಾಗಿದೆ.

ಇಲ್ಲಿಗೆ ಸಮೀಪದ ಕೂಟಗಲ್ಲು ಒಂದು ನಿಸರ್ಗ ರಮಣೀಯ ಸ್ಥಳ. ಕಗ್ಗಲ್ಲು ಮೊರಡಿಯ ಕಿರುಗುಡ್ಡದ ಮೇಲೆ ನಿಂತಿರುವ ಶಿಖರಜೋಡಿಯ ಶಿಲಾನ್ಯಾಸ ಅತ್ಯಂತ ಆಕರ್ಷಣೀಯವಾದುದು. ಸ್ಥಳೀಯರು ಇವನ್ನು ಅಗಸ ಹಾಗೂ ಅಗಸಗಿತ್ತಿ ಎಂದೂ ಹೇಳುತ್ತಾರೆ. ಋಷಿಯ ಶಾಪದಿಂದ ಪ್ರಣಯಿಗಳಿಬ್ಬರು ಕಲ್ಲಾದರೆಂಬುದು ಇಲ್ಲಿಯ ಸ್ಥಳಪುರಾಣ. ಬೆಟ್ಟದ ಮೇಲೆ ತಿಮ್ಮಪ್ಪನ (ವೆಂಕಟರಮಣಸ್ವಾಮಿ) ದೇವಾಲಯವಿದೆ. ಇದನ್ನು ಮೈಸೂರು ಶೈಲಿಯಲ್ಲಿ ಕಟ್ಟಲಾಗಿದೆ. ಇದರಲ್ಲಿ ಗರ್ಭಗೃಹ ಅರ್ಧಮಂಟಪ ಹಾಗೂ ನವರಂಗಗಳಿವೆ, ಶ್ರಾವಣಮಾಸದ ಕೊನೆ ಶನಿವಾರದಂದು ಇಲ್ಲಿ ಜಾತ್ರೆ ನಡೆಯುತ್ತದೆ. ದೇವಾಲಯದ ಹತ್ತಿರದಲ್ಲಿ ಪುಷ್ಕರಣಿ ಇದೆ. ಇಲ್ಲೊಂದು ಕೋಟೆ ಇತ್ತೆಂದು ತಿಳಿಸುವ ಕೋಟೆಯ ಪಳೆಯುಳಿಕೆಗಳೂ ಇವೆ. ದೇವಾಲಯಕ್ಕೆ ಎದುರಿನಲ್ಲಿ ಇನ್ನೊಂದು ಶಿಖರದಲ್ಲಿ ಚಕ್ರತೀರ್ಥ ಎಂಬ ಕೊಳವಿದೆ. ಬೆಟ್ಟದ ಕೆಳಗೆ ಹೊಲವೊಂದರಲ್ಲಿ 1530 ರ ಒಂದು ಶಾಸನವಿದೆ. ಸೋಮೇಶ್ವರ ದೇವಾಲಯಕ್ಕೆ ನೀಡಿದ ದತ್ತಿಯನ್ನು ಇದು ದಾಖಲಿಸಿದೆ. ಶಾನುಭೋಗನಹಳ್ಳಿಗೆ 3 ಕಿಮೀ ದೂರವಿರುವ ಕೃಷ್ಣಗಿರಿಯಲ್ಲಿ ಉಬ್ಬುಶಿಲ್ಪದ ಕೃಷ್ಣಸ್ವಾಮಿ ದೇವರ ಮೂರ್ತಿಯಿದೆ. ಕಬ್ಬಿಣದ ಸಲಾಕೆಗಳನ್ನು ಬಳಸಿ ದೇವಾಲಯದ ಆಕಾರವನ್ನು ನಿರ್ಮಿಸಲಾಗಿದೆ. ಶ್ರಾವಣಮಾಸದ ಕೊನೆಯ ಶನಿವಾರದಂದು ಜಾತ್ರೆ ನಡೆಯುತ್ತದೆ. (ಎಸ್.ಎ.ಜಿ.)

**ದೊಡ್ಡಗದ್ದವಳ್ಳಿ :** ಹಾಸನ ಜಿಲ್ಲೆಯ ಹಾಸನ ತಾಲ್ಲೂಕಿನಲ್ಲಿ ಹಾಸನ -ಬೇಲೂರು ಹೆದ್ದಾರಿಯ ಪಕ್ಕದಲ್ಲಿ ಹಾಸನದಿಂದ 18ಕಿಮೀ ದೂರದಲ್ಲಿರುವ ಗ್ರಾಮ.

ಇಲ್ಲಿರುವ ಲಕ್ಷ್ಮೀ ದೇವಾಲಯ ಹೊಯ್ಸಳ ವಾಸ್ತುಶಿಲ್ಪದ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಇಲ್ಲಿರುವ ಶಾಸನದ ಪ್ರಕಾರ 1113ರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದಲ್ಲಿ ವಣಿಜಶ್ರೇಷ್ಠನಾದ ಕುಲ್ಲಹಣ ರಾಹುತ ಮತ್ತು ಅವನ ಪತ್ನಿ ಸಹಜಾದೇವಿ ಮಹಾಲಕ್ಷ್ಮಿಯ ಈ ದೇವಾಲಯವನ್ನು ಸ್ಥಾಪಿಸಿದರು. ಈ ದೇವಾಲಯದಿಂದ ಈ ಸ್ಥಳಕ್ಕೆ ಅಭಿನವ ಕೊಲ್ಲಾಪುರ ಎಂಬ ಹೆಸರೂ ಇತ್ತು.

ಈ ದೇವಾಲಯ ಹೊಯ್ಸಳ ಶೈಲಿಯ ಮೊದಲ ಹೆಜ್ಜೆ ಎಂದು ಅನೇಕ ವಿದ್ವಾಂಸರ ಅಭಿಪ್ರಾಯ. ಬೇಲೂರಿನ ದೇವಾಲಯಕ್ಕಿಂತಲೂ ಪ್ರಾಚೀನವಾದ ಈ ದೇವಾಲಯದಲ್ಲಿ ಅನೇಕ ವೈಶಿಷ್ಟ್ಯಗಳಿವೆ. ಸಾಮಾನ್ಯವಾಗಿ ಎಲ್ಲ ಹೊಯ್ಸಳ ದೇವಾಲಯಗಳಲ್ಲಿಯೂ ಕಾಣಬರುವ ಜಗತಿ ಇಲ್ಲಿಲ್ಲ. 118' 6" ಉದ್ದ, 116' 9" ಅಗಲದ ಅಂಗಳದ ಮಧ್ಯದಲ್ಲಿರುವ ಈ ದೇವಾಲಯದ ಸುತ್ತಲೂ 7' ಎತ್ತರದ ಗೋಡೆಯಿದೆ. ಪೂರ್ವ ಮತ್ತು ಪಶ್ಚಿಮಗಳಲ್ಲಿ ಎರಡು ಮಹಾದ್ವಾರಗಳಿವೆ. ಪಶ್ಚಿಮದ ಮಹಾದ್ವಾರಕ್ಕೆ ಸೇರಿರುವಂತೆ ಇರುವ ಮಂಟಪದಲ್ಲಿ ಹದಿನಾರು ಕಂಬಗಳೂ ಏಳು ಭುವನೇಶ್ವರಿಗಳೂ ಇವೆ. ಈ ಭುವನೇಶ್ವರಿಗಳು ಉತ್ತಮ ಕೆತ್ತನೆ ಕೆಲಸದಿಂದ ಕೂಡಿದ್ದು ಅಷ್ಟದಿಕ್ಪಾಲಕರು, ತಾಂಡವೇಶ್ವರ ಮುಂತಾದ ಮೂರ್ತಿಗಳಿಂದ ಅಲಂಕೃತವಾಗಿವೆ. ಪೂರ್ವದ ಮಹಾದ್ವಾರ ಸುಂದರ ಶಿಲ್ಪಗಳಿಂದ ಅಲಂಕೃತವಾಗಿದೆ. ಮಧ್ಯದಲ್ಲಿರುವ ಲಕ್ಷ್ಮೀ ದೇವಾಲಯ ಚತುಷ್ಕೂಟಾಚಲ, ನಾಲ್ಕು ದಿಕ್ಕುಗಳಲ್ಲಿಯೂ ಒಂದೊಂದು ಗರ್ಭಗುಡಿಯಿರುವ ದೇವಾಲಯಕ್ಕೆ ಇದೊಂದು ಉತ್ತಮ ಉದಾಹರಣೆ. ಇವುಗಳ ಜೊತೆಗೆ ಅಂಗಳದ ನಾಲ್ಕು ಮೂಲೆಗಳಲ್ಲಿ ನಾಲ್ಕು ಸಣ್ಣ ಗುಡಿಗಳಿವೆ. ಇವುಗಳೂ ಹೊಯ್ಸಳ ರೀತಿಯ ಶಿಖರಗಳನ್ನು ಹೊಂದಿವೆ. ಅಂಗಳದ ಈಶಾನ್ಯದಲ್ಲಿ ಗರ್ಭಗೃಹ ಮತ್ತು ಸುಕನಾಸಿಯನ್ನುಳ್ಳ ಇನ್ನೊಂದು ಸಣ್ಣ ಗುಡಿಯಿದೆ. ಇಲ್ಲಿಯೂ ಹೊಯ್ಸಳ ಶಿಖರವನ್ನು ಕಾಣಬಹುದು. ಪ್ರಧಾನ ದೇವಾಲಯವೂ ಸೇರಿದಂತೆ ಒಟ್ಟು ಇಲ್ಲಿ ಒಂಬತ್ತು ಶಿಖರಗಳಿವೆ. ಈ ಎಲ್ಲ ಶಿಖರಗಳ ಮೇಲೂ ಹೊಯ್ಸಳ ಲಾಂಛನವಿದೆ. ಈ ರೀತಿಯ ಶಿಖರಗಳ ಸಮೂಹವಿರುವುದು ಇಲ್ಲಿಯ ವೈಶಿಷ್ಟ್ಯ. ಈ ಶಿಖರಗಳು ಹೆಚ್ಚಿನ ಅಲಂಕರಣವಿಲ್ಲದೆ ಮೆಟ್ಟಲು ಪಿರಮಿಡ್ಡಿನಾಕಾರದಲ್ಲಿ ಮೇಲೆಳುವ ಕದಂಬ ನಾಗರ ಶೈಲಿಯವು. ಮುಖ್ಯ ದೇವಾಲಯದಲ್ಲಿ ಪೂರ್ವದ ಗರ್ಭಗುಡಿಯಲ್ಲಿ ಲಕ್ಷ್ಮಿ, ಪಶ್ಚಿಮದಲ್ಲಿ ಭೂತನಾಥ ಲಿಂಗ, ದಕ್ಷಿಣದಲ್ಲಿ ವಿಷ್ಣು ಮತ್ತು ಉತ್ತರದಲ್ಲಿ ಕಾಳಿ ಪ್ರತಿಷ್ಠಿಸಲ್ಪಟ್ಟಿದ್ದುವು. ಲಕ್ಷ್ಮೀದೇವಿಯ ಗರ್ಭಗುಡಿಯ ದ್ವಾರದಲ್ಲಿ ತಾಂಡವೇಶ್ವರ, ವಿಷ್ಣುವಿನ ಗರ್ಭಗುಡಿಯ ದ್ವಾರದಲ್ಲಿ ಯೋಗಾನರಸಿಂಹ, ಭೂತನಾಥ ಗುಡಿಯ ದ್ವಾರದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ಪ್ರಧಾನ ದೇವತೆ ಲಕ್ಷ್ಮೀದೇವಿಯ ಮೂರ್ತಿ ಸುಂದರ ಶಿಲ್ಪ. ಮೂರೂವರೆ ಅಡಿ ಎತ್ತರದ ಈ ವಿಗ್ರಹದ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಜಪಸರ ಮತ್ತು ಗದೆಗಳಿವೆ. ಈ

ದೇವಾಲಯವನ್ನು ಮಲ್ಲೋಜ ಮಣಿಯೋಜನೆಂಬ ಶಿಲ್ಪಿ ನಿರ್ಮಿಸಿದನೆಂದು ಶಾಸನವೊಂದರಿಂದ ತಿಳಿದುಬರುತ್ತದೆ. ಈ ದೇವಾಲಯದಲ್ಲಿ ವಿಷ್ಣುವರ್ಧನ, ಮೊದಲನೆಯ ನರಸಿಂಹ, ಎರಡನೆಯ ಬಲ್ಲಾಳ ಮುಂತಾದವರ ಕಾಲದ ದಾನಶಾಸನಗಳಿವೆ. (ಎ.ವಿ.ಎನ್.)

**ದೊಡ್ಡಬಳ್ಳಾಪುರ**: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ದೇವನಹಳ್ಳಿ, ಪಶ್ಚಿಮದಲ್ಲಿ ತುಮಕೂರು, ದಕ್ಷಿಣದಲ್ಲಿ ಬೆಂಗಳೂರು ನಗರ, ನೆಲಮಂಗಲ, ಉತ್ತರದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಗಳು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 790 ಚಕಿಮೀ. ಜನಸಂಖ್ಯೆ 2,68,145. ತಾಲ್ಲೂಕಿನಲ್ಲಿ 295 ಗ್ರಾಮಗಳಿವೆ. ದೊಡ್ಡಬಳ್ಳಾಪುರ, ದೊಡ್ಡಬೆಳಮಂಗಲ, ಮಧುರೆ, ಸಾಸಲು, ತೂಬುಗೆರೆ - ಇವು ತಾಲ್ಲೂಕಿನಲ್ಲಿರುವ ಹೋಬಳಿಗಳು.

ತಾಲ್ಲೂಕಿನ ಉತ್ತರ ಹಾಗೂ ವಾಯುವ್ಯ ಪ್ರದೇಶ ಬೆಟ್ಟಗಳ ಸಾಲಿನಿಂದ ಕೂಡಿದೆ. ಇತರ ಎಲ್ಲಾ ಭಾಗ ಹಳ್ಳದಿಣ್ಣೆಗಳಿಂದ ಕೂಡಿದ ಬಯಲು ಪ್ರದೇಶ. ಅರ್ಕಾವತಿ ನದಿ ನಂದಿದುರ್ಗ ಬೆಟ್ಟಗಳ ಈಶಾನ್ಯ ಭಾಗದಲ್ಲಿ ಹುಟ್ಟಿ ಆಗ್ನೇಯ ದಿಕ್ಕಿನಲ್ಲಿ ಹರಿಯುತ್ತದೆ. ಈ ನದಿ ತನ್ನ ಪಾತ್ರದಲ್ಲಿರುವ ಅನೇಕ ಕೆರೆಗಳಿಗೆ ಹಾಗೂ ತಾಲ್ಲೂಕಿನ ಉತ್ತರ ಭಾಗವನ್ನುಳಿದು ಉಳಿದೆಲ್ಲಾ ಪ್ರದೇಶಗಳಿಗೆ ನೀರನ್ನೊದಗಿಸುತ್ತದೆ. ತಾಲ್ಲೂಕಿನ ಉತ್ತರ ಭಾಗ ಉತ್ತರ-ಪೆನ್ನಾರ್ ಮತ್ತಿತರ ಉಪನದಿಗಳಿಂದ ನೀರನ್ನು ಪಡೆಯುತ್ತದೆ. ತಾಲ್ಲೂಕಿನ ಇತರ ಭಾಗಗಳು ಕೆರೆ, ಬಾವಿಯ ನೀರನ್ನು ಅವಲಂಬಿಸಿವೆ.

ತಾಲ್ಲೂಕಿನ ಹೆಚ್ಚು ಪ್ರದೇಶ ಕೆಂಪು ಮಣ್ಣಿನಿಂದ ಕೂಡಿದೆ. ಕೆಲವು ಕಡೆಗಳಲ್ಲಿ ಇದು ಮರಳುಮಿಶ್ರಿತವಾಗಿದ್ದು ರಾಗಿ ಜೋಳ ಮೊದಲಾದ ಒಣಬೆಳೆಗಳಿಗೆ ಉಪಯುಕ್ತವಾಗಿದೆ. ತಾಲ್ಲೂಕಿನ ದಕ್ಷಿಣ ಹಾಗೂ ಮಧ್ಯ ಭಾಗಗಳಲ್ಲಿ ಕಂಡು ಬರುವ ಭೂಮಿ ಅಧಿಕ ಫಲವತ್ತಾಗಿದೆ. ಇಲ್ಲಿಯ ಮಣ್ಣು ಬೂದು ಹಾಗೂ ಕೆಂಪು ಬಣ್ಣ ಮಿಶ್ರಿತವಾದುದು. ಕಪ್ಪು ಮಣ್ಣು ತಾಲ್ಲೂಕಿನ ಕೆಲವೆಡೆಗಳಲ್ಲಿ ಮಾತ್ರ ಕಂಡುಬರುತ್ತದೆ. ತಾಲ್ಲೂಕಿನ ಉತ್ತರ ಹಾಗೂ ವಾಯುವ್ಯ ಭಾಗಗಳಲ್ಲಿ ಭೂಮಿ ವ್ಯವಸಾಯಕ್ಕೆ ಅಷ್ಟೇನೂ ಉಪಯುಕ್ತವಾಗಿಲ್ಲ. ತಾಲ್ಲೂಕನ್ನು ವಾಯುವ್ಯ ಭಾಗದಲ್ಲಿ ಹಬ್ಬಿರುವ ಕುರುಚಲು ಕಾಡೊಂದನ್ನುಳಿದರೆ ಇಲ್ಲಿ ಇನ್ನಾವುದೇ ಸ್ವಾಭಾವಿಕ ಸಸ್ಯವರ್ಗ ಕಂಡುಬರುವುದಿಲ್ಲ. ಉತ್ತರದಲ್ಲಿನ ಮಾಕಳಿದುರ್ಗದ ಬಳಿ ಒಂದು ರಾಜ್ಯಾರಣ್ಯಪ್ರದೇಶವಿದೆ. ಈ ತಾಲ್ಲೂಕಿನ ವಾಯುಗುಣ ಬೆಂಗಳೂರು ನಗರದ ವಾಯುಗುಣವನ್ನು ಹೋಲುತ್ತದೆ. ಹವೆ ಸಾಮಾನ್ಯವಾಗಿ ತಂಪಾಗಿದ್ದು, ಆರೋಗ್ಯಕ್ಕೆ ತುಂಬಾ ಸಹಕಾರಿಯಾಗಿದೆ.

ರಾಗಿ ಮತ್ತು ಜೋಳ ತಾಲ್ಲೂಕಿನ ಮುಖ್ಯ ಬೆಳೆಗಳು. ಹೊಗೆಸೊಪ್ಪನ್ನು ವಿಶೇಷವಾಗಿ ಬೆಳೆಯುತ್ತಾರೆ. ಸಣ್ಣ ಪ್ರಮಾಣದಲ್ಲಿ ಆಲೂಗೆಡ್ಡೆ ಬೆಳೆಯುವುದುಂಟು. ಸ್ವಲ್ಪಮಟ್ಟಿಗೆ ರೇಷ್ಮೆ ಸಾಕಣೆಯೂ ಇದೆ.

ತಾಲ್ಲೂಕಿನ ಸಾರಿಗೆ ಸೌಲಭ್ಯ ಉತ್ತಮವಾಗಿದೆ. ಬೆಂಗಳೂರು-ಗುಂತಕಲ್ಲು ರೈಲುಮಾರ್ಗ ಈ ತಾಲ್ಲೂಕಿನ ಮಧ್ಯಭಾಗದಲ್ಲಿ ಬೆಂಗಳೂರು-ಗೌರಿಬಿದನೂರು ರಸ್ತೆಯ ಪಕ್ಕದಲ್ಲಿ ಹಾದುಹೋಗುತ್ತದೆ. ರಾಜಾನಕುಂಟೆ, ದೊಡ್ಡಬಳ್ಳಾಪುರ ಹಾಗೂ ಮಾಕಳಿದುರ್ಗ ಈ ರೈಲುಮಾರ್ಗದಲ್ಲಿರುವ ಮುಖ್ಯ ನಿಲ್ದಾಣಗಳು. ಬೆಂಗಳೂರು-ದೊಡ್ಡಬಳ್ಳಾಪುರ-ಗೌರಿಬಿದನೂರು ರಾಜ್ಯ ಹೆದ್ದಾರಿ ದಕ್ಷಿಣದಿಂದ ಉತ್ತರಕ್ಕೆ ತಾಲ್ಲೂಕಿನ ಮಧ್ಯಭಾಗದಲ್ಲಿ ಹಾದುಹೋಗುತ್ತದೆ. ಪೂರ್ವ ಪಶ್ಚಿಮವಾಗಿ ಕೋಲಾರ-ಸೋಮಾಪುರ ಜಿಲ್ಲಾ ಹೆದಾರಿ ದೊಡ್ಡಬಳ್ಳಾಪುರದ ಸಮೀಪದಲ್ಲಿ ಹಾದುಹೋಗುತ್ತದೆ. ದೊಡ್ಡಬಳ್ಳಾಪುರದಿಂದ ಗೌರಿಬಿದನೂರು, ಚಿಕ್ಕಬಳ್ಳಾಪುರ, ದೇವನಹಳ್ಳಿ, ನೆಲಮಂಗಲ, ಮಧುಗಿರಿ ಮುಂತಾದ ಸ್ಥಳಗಳಿಗೆ ಸುಗಮ ಸಾರಿಗೆ ಸಂಪರ್ಕವಿದೆ.

ಘಾಟಿ ಸುಬ್ರಹ್ಮಣ್ಯ (ನೋಡಿ) ಈ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ.

ದೊಡ್ಡಬಳ್ಳಾಪುರ ಈ ತಾಲ್ಲೂಕಿನ ಆಡಳಿತಕೇಂದ್ರ. ಇದು ಅರ್ಕಾವತಿ ನದಿಯ ಬಲದಂಡೆಯ ಮೇಲೆ ಬೆಂಗಳೂರಿನಿಂದ ಈಶಾನ್ಯಕ್ಕೆ 39 ಕಿಮೀ ದೂರದಲ್ಲಿದೆ. ಜನಸಂಖ್ಯೆ 71,509. ಈ ಊರನ್ನು ತೆಲುಗಿನಲ್ಲಿ ಪೆದ್ದಬಳ್ಳಾಪುರ ಎಂದೂ ಹಿಂದುಸ್ಥಾನಿಯಲ್ಲಿ ಬಡಾ ಬಳ್ಳಾಪುರ ಎಂದೂ ಕರೆಯುವುದುಂಟು.

ದೊಡ್ಡಬಳ್ಳಾಪುರ ಪಟ್ಟಣ ಬೆಂಗಳೂರು ನಗರಕ್ಕೆ ಹತ್ತಿರವಾಗಿರುವುದರಿಂದ ನಗರೀಕರಣ ತೀವ್ರಗತಿಯಲ್ಲುಂಟಾಗುತ್ತಿದೆ. ಇದು ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ.

ಇದು ನೇಯ್ಗೆಯ ಪ್ರಮುಖ ಕೇಂದ್ರ. 1932ರ ಅನಂತರ ಕೈಮಗ್ಗಗಳಿಗೆ ಬದಲಾಗಿ ಪವರ್‌ಲೂಂ ಅಸ್ತಿತ್ವಕ್ಕೆ ಬಂತು. ಇಲ್ಲಿ ತಯಾರಾದ ಅರಳೆ ಮತ್ತು ಧರ್ಮಾವರಂ ಮಾದರಿ ಬಟ್ಟೆಗಳಿಗೆ ದೇಶವಿದೇಶಗಳಲ್ಲಿ ಉತ್ತಮ ಬೇಡಿಕೆಯಿದೆ. ಇಲ್ಲಿ ಕಾಟನ್ ರೇಯಾನ್ ಟೆಕ್ಸ್‌ಟೈಲ್ ಕೋ -ಆಪರೇಟಿವ್ ಸೊಸೈಟಿ. ಆದಿನಾರಾಯಣ ಕಾರ್ಖಾನೆ ಸಂಘ ಮೊದಲಾದ ಅನೇಕ ಕಾರ್ಮಿಕ ಸಂಘಸಂಸ್ಥೆಗಳಿವೆ. ಪ್ರತಿ ಗುರುವಾರ ಇಲ್ಲಿ ದೊಡ್ಡ ಸಂತೆ ನಡೆಯುತ್ತದೆ.

ಲೋಕಸೇವನಿರತ ಕೊಂಗಾಡಿಯಪ್ಪ ಸ್ಮಾರಕ ವಿದ್ಯಾಸಂಸ್ಥೆ ಇಲ್ಲಿ ಒಂದು ಪ್ರೌಢಶಾಲೆ ಹಾಗೂ ಕಾಲೇಜನ್ನು ನಡೆಸುತ್ತಿದೆ. ಈ ಊರಿನಲ್ಲಿ ಪುರಸಭಾ ಆಡಳಿತ ಇದೆ.

ದೊಡ್ಡಬಳ್ಳಾಪುರ ಹೊಯ್ಸಳರ ಕಾಲದಲ್ಲಿ ಒಂದು ಮುಖ್ಯ ವ್ಯಾಪಾರ ಸ್ಥಳವಾಗಿತ್ತು. ಆದರೆ ಆವತಿ ಕುಲದ ಮಲ್ಲಭೈರೇಗೌಡ ಇದನ್ನು ಸ್ಥಾಪಿಸಿದನೆಂಬ ಹೇಳಿಕೆ ಸಹ ಇದೆ. 16-17ನೆಯ ಶತಮಾನಗಳಲ್ಲಿ ಆವತಿ ಕುಲದ ಒಂದು ಶಾಖೆ ಇಲ್ಲಿ ಆಳ್ವಿಕೆ ನಡೆಸುತ್ತಿತ್ತು. 1637-38ರ ಹೊತ್ತಿಗೆ ಬಿಜಾಪುರದ ರಣದುಲ್ಲಾಖಾನ್ ಇದನ್ನು ಆಕ್ರಮಿಸಿದ್ದ. ಸುಮಾರು ನಲವತ್ತು ವರ್ಷಗಳ ಕಾಲ ಬಿಜಾಪುರದ ಸುಲ್ತಾನರ ಅಧೀನದಲ್ಲಿದ್ದು ಅನಂತರ ಮರಾಠರ ಕೈಸೇರಿ 1689ರಲ್ಲಿ ಮೊಗಲರ ದಾಳಿಗೆ ತುತ್ತಾಯಿತು. ಅನಂತರ ಇದನ್ನು 54,059 ಪಗೋಡ ಆದಾಯವೀಯುವ ದೊಡ್ಡ ಜಾಗೀರಾಗಿ ಮಾಡಿ ಅಲಿ ಖುಲಿ ಖಾನ್ ಎಂಬ ಸರದಾರನಿಗೆ ಕೊಡಲಾಯಿತು. ಇವನು ಸ್ವಲ್ಪ ಕಾಲ ಅನುಭವಿಸಿ ಮೃತನಾದಮೇಲೆ ಶಿರಾದ ನವಾಬನಾಗಿದ್ದ ಅವನ ಮಗ ದರ್ಗಾ ಖುಲಿ ಖಾನ್ ಮುಂದೆ ಇದರ ಜಾಗೀರದಾರನಾಗಿ ಒಂದು ವರ್ಷ ಅನುಭವಿಸಿದ. ಅನಂತರ ಸುಮಾರು 49 ವರ್ಷಗಳ ಕಾಲ ಶಿರಾ ನವಾಬರ ವಶದಲ್ಲಿದ್ದು ನಿಜಾಮನ ಕೈಸೇರಿತ್ತು. ನಿಜಾಮ ಇದನ್ನು ಅಬ್ಬಾಸ್ ಖಾನ್ ಎಂಬುವವನಿಗೆ ಜಾಗೀರಾಗಿತ್ತಿದ್ದ. 1761ರಲ್ಲಿ ದೊಡ್ಡಬಳ್ಳಾಪುರ ಹೈದರ್ ಆಲಿಯ ವಶವಾಗಿ ಮೈಸೂರು ಸಂಸ್ಥಾನಕ್ಕೆ ಸೇರಿತು. (ಎಚ್.ವಿ.ಎಸ್.)

ಪ್ರಾಚೀನ ಕಾಲಕ್ಕೆ ಸಂಬಂಧಿಸಿದ ಹಲವಾರು ಅವಶೇಷಗಳು ದೊಡ್ಡಬಳ್ಳಾಪುರದಲ್ಲಿ ಉಳಿದಿವೆ. ಹಿಂದಿದ್ದ ಕೋಟೆ ಈಗ ನಾಮಮಾತ್ರವಾಗಿದೆ. ಈ ಭಾಗದಲ್ಲಿ ಹಲವು ಕಟ್ಟೆಗಳು ಮತ್ತು ಕಟ್ಟಡಗಳ ಅವಶೇಷಗಳಿವೆ. ಇವುಗಳಲ್ಲಿ ಅಕುರ್ ಖಾನಾ ಮತ್ತು ಅದರ ಬಳಿಯ ಬಾವಿ ಮುಖ್ಯವಾದವು. ಅಬ್ಬಾಸ್ ಖುಲಿ ಖಾನ್ ಕಟ್ಟಿಸಿದ ಅಕುರ್ ಖಾನಾ ಈಗ ಬಹುಮಟ್ಟಿಗೆ ಹಾಳಾಗಿದೆ. ಬಾವಿ ಸುಸ್ಥಿತಿಯಲ್ಲಿದ್ದು ಮೂರು ಕಡೆ ಮೆಟ್ಟಿಲುಗಳೂ ನೀರಿನ ಮೇಲೆ ಒಂದು ಜಾಲಂಧ್ರವೂ ಇವೆ. ಊರ ಪಶ್ಚಿಮದಲ್ಲಿ 17ನೆಯ ಶತಮಾನದಲ್ಲಿದ್ದ ಮೊಹಿದ್ದೀನ್ ಚಿಷ್ಟಿ ಎಂಬ ಸಂತನ ದರ್ಗಾ ಇದೆ. ಹಲವು ಹಳೆಯ ದೇವಾಲಯಗಳ ಕಲ್ಲನ್ನು ಉಪಯೋಗಿಸಿ ಇದನ್ನು ಕಟ್ಟಲಾಗಿದೆ. ಈ ಊರಿನ ಸಾಗರ ಕೆರೆಯ ಏರಿಯಲ್ಲೂ ಹಲವು ದೇವಾಲಯಗಳ ಕಲ್ಲುಗಳು ಸೇರಿಹೋಗಿವೆ.

ಈಗ ಇಲ್ಲಿರುವ ದೇವಾಲಯಗಳೆಲ್ಲವೂ ಈಚಿನವು. ಈಗ ಪಾಳುಬಿದ್ದಿರುವ ಆದಿನಾರಾಯಣ ದೇವಾಲಯ ಹಿಂದೆ ಸುಂದರ ಕಟ್ಟಡವಾಗಿತ್ತು. ಸದ್ಯ ಉಳಿದಿರುವ ಭಾಗದ ಕೆಲವು ಕಂಬಗಳು ಮತ್ತು ಗೋಡೆಗಳ ಮೇಲೆ ಗಜೇಂದ್ರ ಮೋಕ್ಷ, ರಾಮಾಯಣ, ಭಾಗವತ

ಮೊದಲಾದ ಹಲವು ಕಥೆಗಳು ಶಿಲ್ಪಿತವಾಗಿವೆ. ಇಲ್ಲಿರುವ ಚಂದ್ರಮೌಳೀಶ್ವರ ದೇವಾಲಯದ ಮುಮ್ಮಂಟಪದ ಕಂಬಗಳ ಮೇಲೂ ಭೈರವ, ವೀರಭದ್ರ, ವ್ಯಾಘ್ರಪಾದ, ಕಣ್ಣಪ್ಪ ಮೊದಲಾದ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಅರುಣಾಚಲ ಪಂತ್ ಮತ್ತು ಅವನ ಪತ್ನಿ ಶೇಷಮ್ಮ ಇವರ ಭಕ್ತವಿಗ್ರಹಗಳಿವೆ. ಅರುಣಾಚಲ ಪಂತ್ 18ನೆಯ ಶತಮಾನದ ಅಂತ್ಯಭಾಗದಲ್ಲಿ ಈ ದೇವಾಲಯವನ್ನೂ ಇಲ್ಲಿನ ವೆಂಕಟರಣಸ್ವಾಮಿ ಗುಡಿಯನ್ನೂ ಕಟ್ಟಿಸಿದನೆಂದು ಪ್ರತೀತಿ. ವೆಂಕಟರಮಣಸ್ವಾಮಿ ದೇವಾಲಯ ದೊಡ್ಡದು. ಇದರ ಸುತ್ತ ಪ್ರಾಕಾರವಿದ್ದು ಅದರ ಮೇಲೆ ಹಿಂದು-ಇಸ್ಲಾಮೀ ಶೈಲಿಯ ಗಚ್ಚಿನ ಕೈಪಿಡಿ ಭಾಗ ಇದೆ. ಈ ದೇವಾಲಯದಲ್ಲೂ ಗಣಪತಿ, ದಶಾವತಾರಗಳು ಮೊದಲಾದ ದೇವಶಿಲ್ಪಗಳೂ ಅರುಣಾಚಲ ಪಂತ್ ದಂಪತಿಗಳ ಭಕ್ತವಿಗ್ರಹಗಳೂ ಇವೆ. ಪ್ರಾಕಾರದಲ್ಲಿ ಆದಿನಾರಾಯಣ ದೇವಾಲಯದಿಂದ ತಂದ ಮೂಲವಿಗ್ರಹವನ್ನಿಡಲಾಗಿದೆ. ಈ ಊರಿನಲ್ಲಿ ವಿಟ್ಟಲ ಮತ್ತು ಗೋಪಾಲಕೃಷ್ಣ ದೇವಾಲಯಗಳು ಸಹ ಇವೆ.

*

**ದೊಡ್ಡಬಳ್ಳಾಪುರದ ಪಾಳೆಯಗಾರರು :** ಸು. 1539-1638. ಆವತಿ ಕುಲದ ಪಾಳೆಯಗಾರರ ಒಂದು ಶಾಖೆ. ಈ ಶಾಖೆಯವರ ಇತಿಹಾಸ ಹಲವಾರು ಅಸ್ಪಷ್ಟ ವಿವರಗಳನ್ನೊಳಗೊಂಡಿದೆ. ದೇವನಹಳ್ಳಿಯನ್ನು ಸ್ಥಾಪಿಸಿದ ಆವತಿಯ ಮಲ್ಲಭೈರೇಗೌಡ ದೊಡ್ಡಬಳ್ಳಾಪುರದ ಬಳಿ ಬೇಟೆಯಾಡುವಾಗ ಕೆಲವು ಶಕುನಗಳಾಗಿ ಆ ಬಗ್ಗೆ ಚಿಂತಿಸುತ್ತಿರುವಾಗ ಆದಿನಾರಾಯಣ ದೇವರು ಇರುವೆಯ ಗೂಡಿನಲ್ಲಿ ವಾಸಿಸುವಂತೆ ಅವನಿಗೆ ಕನಸಾಯಿತು. ಸ್ವಲ್ಪ ಕಾಲದಲ್ಲಿಯೇ ಅಲ್ಲಿ ಅವನು ಒಂದು ದೇವಾಲಯ ಮತ್ತು ದುರ್ಗವನ್ನು ಕಟ್ಟಿಸಿ ಸುತ್ತಲಿದ್ದ ಕಾಡುಗಳನ್ನು ಕಡಿಸಿ ಹೆಚ್ಚು ಭೂಮಿಯನ್ನು ವ್ಯವಸಾಯಕ್ಕೆ ಅನುಗೊಳಿಸಿದ ಎಂದು ದೊಡ್ಡಬಳ್ಳಾಪುರ ಸ್ಥಾಪನೆಯನ್ನು ಕುರಿತು ಸ್ಥಳಪುರತೀತಿ ಇದೆ. ಸ್ಥಳೀಯ ದಾಖಲೆಗಳು ಈ ವಂಶದ ಇತಿಹಾಸವನ್ನು ಹೀಗೆ ತಿಳಿಸುತ್ತವೆ. ಸ್ಥಿತಿವಂತನಾದ ಮಲ್ಲಬೈರೇಗೌಡ ಪೆನುಗೊಂಡದ ರಾಜನಿಂದ ನೆರೆಯ ಪಾಳೆಯಗಾರರನ್ನು ದಂಡಿಸುವ ಅಧಿಕಾರ ಪಡೆದು ಒಂದು ಲಕ್ಷ ಪಗೋಡಗಳನ್ನು ಕೊಡುವ ರಾಜ್ಯವನ್ನು ವಶಪಡಿಸಿಕೊಂಡ. ಇದರ ಆಡಳಿತ ನಿರ್ವಹಣೆಗಾಗಿ ತನ್ನ ಸೋದರ ಹಾವಳಿ ಬೈರೇಗೌಡನನ್ನು (I) ನೇಮಿಸಿದ. ಈತ 20 ವರ್ಷಗಳು ರಾಜ್ಯವಾಳಿ ತೀರಿಕೊಂಡ. ಇವನ ಅನಂತರ ದೊಡ್ಡ ಹಾವಳಿ ಬೈರೇಗೌಡ (II) 25 ವರ್ಷಗಳೂ ಅವನ ಪುತ್ರ ಹಾವಳಿ ಬೈರೇಗೌಡ (III) 40 ವರ್ಷಗಳೂ ರಾಜ್ಯವಾಳಿದರು. ಹಾವಳಿ ಬೈರೇಗೌಡ ಸತ್ತಾಗ ಅವನ ಮಗ ಚಿಕ್ಕಪ್ಪಗೌಡ ಅಪ್ರಾಪ್ತವಯಸ್ಕನಾದುದರಿಂದ, ಹಾವಳಿ ಬೈರೇಗೌಡನ ಸೋದರನ ಮಗ ಹಾಗೂ ದಳವಾಯಿಯಾಗಿದ್ದ ತಮ್ಮಣ್ಣ ಗೌಡ ಶ್ರದ್ಧೆ, ನಿಷ್ಠೆಯಿಂದ 10 ವರ್ಷ ರಾಜ್ಯವಾಳಿ ಆಗ್ಗೆ ಪ್ರಾಪ್ತ ವಯಸ್ಕನಾಗಿದ್ದ ಚಿಕ್ಕಪ್ಪಗೌಡನಿಗೆ ಅಧಿಕಾರ ವಹಿಸಿ ನಿವೃತ್ತನಾದ. ಚಿಕ್ಕಪ್ಪಗೌಡ ಅಧಿಕಾರ ಸ್ವೀಕರಿಸಿದ ಮೂರು ವರ್ಷಗಳಲ್ಲಿ ಬಿಜಾಪುರದ ಸೇನಾನಿ ರಣದುಲ್ಲಾಖಾನ್ ದೊಡ್ಡಬಳ್ಳಾಪುರವನ್ನು ವಶಪಡಿಸಿಕೊಂಡಾಗ ಪಾಳೆಯಗಾರರ ಆಳ್ವಿಕೆ ಕೊನೆಗೊಂಡಿತು (ಸು. 1637-38). (ಎಚ್.ವಿ.ಎಸ್.)

**ದೊಡ್ಡಬೆಲೆ ನಾರಾಯಣಶಾಸ್ತ್ರಿ:** 19ನೆಯ ಶತಮಾನದ ಉತ್ತರಾರ್ಧ ಮತ್ತು 20ನೆಯ ಶತಮಾನದ ಪೂರ್ವಾರ್ಧಗಳಲ್ಲಿ ಜೀವಿಸಿದ್ದ ಕನ್ನಡ ವಿದ್ವಾಂಸರು. ಬೆಂಗಳೂರಿನ ಶೀಗೇಬೇಲಿ ಇವರ ಸ್ಥಳ. ವೇದಶಾಸ್ತ್ರಪಾರಂಗತರಾಗಿದ್ದ ಇವರು ಅನೇಕ ಸಂಸ್ಕೃತ ಕಾವ್ಯಗಳನ್ನು ಕನ್ನಡಿಸಿದ್ದಾರೆ. ಜೊತೆಗೆ ವೇದಾಂತ ವಿಷಯದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಇವರು ಆಸ್ಥಾನ ವಿದ್ವಾಂಸರೂ ಆಗಿದ್ದರು. ವೆಸ್ಲಿಯನ್ ಮಿಷನ್ ಕೊಲಿಜಿಯೆಟ್ ಹೈಸ್ಕೂಲಿನಲ್ಲಿ ಕೆಲಕಾಲ ಪ್ರಧಾನ ಪಂಡಿತರಾಗಿ ಕೆಲಸ ಮಾಡಿದರೆಂದು ತೋರುತ್ತದೆ.

ಇವರ ಅನುವಾದಗಳಲ್ಲಿ ಕಾಳಿದಾಸನ ರಘುವಂಶ, ಕುಮಾರಸಂಭವ ಕಾವ್ಯಗಳು ಮುಖ್ಯವಾದುವು. ಪ್ರತಿಯೊಂದು ಸರ್ಗದಲ್ಲಿಯೂ ಕ್ರಮವಾಗಿ ಪದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ, ವಿಗ್ರಹ, ಧಾತುರೂಪಗಳನ್ನು ವಿವರಿಸಿರುವುದು ಇವರ ಅನುವಾದದ ವೈಶಿಷ್ಟ್ಯ. ಟೀಕಾತಾತ್ಪರ್ಯಸಹಿತವಾಗಿ ರಾಮಾಯಣ ಸುಂದರಕಾಂಡ, ವಿಷ್ಣುಸಹಸ್ರನಾಮರತ್ನ, ರಾಘವೇಂದ್ರಸ್ತೋತ್ರ, ಹರಿಸ್ತುತಿ, ಮುಕುಂದಮಾಲಾ, ಭರ್ತೃಹರಿ, ಸುಭಾಷಿತ ಶತಕಗಳು, ವಾಯುಸ್ತುತಿ, ಋಗ್ವೇದಸನ್ಧ್ಯಾರ್ಥವಿಚಾರ ಮುಂತಾದುವುಗಳನ್ನು ಇವರು ಪ್ರಕಟಿಸಿದ್ದಾರೆ. ಧರ್ಮಸಿಂಧುಸಾರದ 1-2ನೆಯ ಪರಿಚ್ಛೇದಗಳು, ವಾಸುದೇವ ಮನನ ಇವು ಗಳನ್ನು ಮೂಲಾನುಸಾರವಾಗಿ ಕನ್ನಡಕ್ಕೆ ತಂದಿದ್ದಾರೆ. ಇವರು ರಚಿಸಿದ ಶಿವಾಪರಾಧ ಕ್ಷಮಾಪಣಸ್ತೋತ್ರ ಹೃದಯಂಗಮವಾಗಿದೆ. ಚಮತ್ಕಾರ ಚಿಂತಾಮಣಿ ಒಂದು ಉತ್ತಮ ಕಥೆ. ಶಾಸ್ತ್ರಿಗಳು ಉತ್ತಮ ಸಂಪಾದಕರೂ ಆಗಿದ್ದರು. ಕಠೋಪನಿಷತ್, ಶ್ರೀಮದ್ವಶೋಪನಿಷದಃ, ಶುಕ್ರನೀತಿ ಮತ್ತು ಜೈಮಿನಿ ಭಾರತಗಳನ್ನು ಪರಿಷ್ಕರಿಸಿ ಸಂಪಾದಿಸಿದ್ದಾರೆ. ಶಾಸ್ತ್ರಿಗಳಿಂದ ಸಂಪಾದಿತವಾದ ಜೈಮಿನಿಭಾರತ ಒಂದು ಉತ್ತಮ ಸಂಪಾದನೆಯೆಂದು ಹೆಸರಾಗಿದೆ.

(ಎಸ್.ಆರ್.ಎನ್.)

**ದೊಡ್ಡಮಳೂರು :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಸಬೆಯಿಂದ ಸು. 5ಕಿಮೀ ಪಶ್ಚಿಮಕ್ಕೆ ಕಣ್ವ ನದಿಯ ಎಡದಂಡೆಯ ಮೇಲಿದೆ. ಮಳೂರು ಎಂದೂ ಕರೆಯಲಾಗುತ್ತಿದೆ. ಇದೊಂದು ಐತಿಹಾಸಿಕ ಸ್ಥಳ. ಸು. 1000 ದಲ್ಲಿ ಚೋಳ ಅಧಿಕಾರಿಯೊಬ್ಬ ಇದನ್ನು ಅಗ್ರಹಾರವಾಗಿ ಸ್ಥಾಪಿಸಿದ. ಪೆರಿಯ ಮಳೂರು ಅಗ್ರಹಾರ ಅಂದಿನ ಹೆಸರು. ಇಲ್ಲಿನ ಅಗ್ರಹಾರಿಕ ಶ್ರೀವೈಷ್ಣವರ ಪ್ರಕಾರ ರಾಜೇಂದ್ರಸಿಂಹನಗರ ಎಂದೂ ಹೆಸರು ಇದ್ದಂತೆ ತಿಳಿಯುತ್ತದೆ. ಇಂದು ಭಾರತದ ಬಹುಭಾಗದಲ್ಲಿ ಹಿಂದು ಕಾನೂನಿಗೆ ಮೂಲಾಧಾರವೆಂದು ಪರಿಗಣಿತವಾಗಿರುವ ಮಿತಾಕ್ಷರಾ ಎಂಬ ಯಾಜ್ಞವಲ್ಕ್ಯ ಸ್ಮೃತಿಯ ಟೀಕೆಯನ್ನು, ಅದರ ಕರ್ತೃ ವಿಜ್ಞಾನೇಶ್ವರ ಬರೆದಿದ್ದು ಇಲ್ಲಿಯೇ.

ಇಲ್ಲಿ ಕೈಲಾಸೇಶ್ವರ ಮತ್ತು ಅಪ್ರಮೇಯ ದೇವರುಗಳ ಎರಡು ಆಲಯಗಳಿವೆ. ಇವೆರಡೂ ಮೂಲತಃ ಅಗ್ರಹಾರದ ಭಾಗವಾಗಿ ಸು. 1000 ದಲ್ಲೇ ಕಟ್ಟಲಾದುವು. ಕೈಲಾಸೇಶ್ವರ ದೇವಾಲಯದಲ್ಲಿ ಗರ್ಭಗೃಹ ಸುಕನಾಸಿ ನವರಂಗ ಮುಖಮಂಟಪ ಇವೆ. ಗರ್ಭಗೃಹ ಮತ್ತು ಸುಕನಾಸಿ ಚೋಳಶೈಲಿಯವು. ನವರಂಗವೂ ಸೇರಿದಂತೆ ಈ ಭಾಗಗಳಲ್ಲಿ ಹೊರಗೋಡೆಯ ಮೇಲೆ ಅನೇಕ ತಮಿಳು ಶಾಸನಗಳಿವೆ. ನವರಂಗದಲ್ಲಿರುವ ನಾಲ್ಕು ಕಂಬಗಳು ಮತ್ತು ಮುಂದಿರುವ ಆರಂಕಣದ ಮುಖಮಂಟಪ ಹೊಯ್ಸಳ 3ನೆಯ ಬಲ್ಲಾಳನ ಕಾಲದ್ದೆಂದು ತೋರುತ್ತದೆ. ನವರಂಗದ ಉತ್ತರದ್ವಾರದ ಪಕ್ಕದಲ್ಲಿ ಪಾರ್ವತಿ ಗುಡಿ ಇದೆ. ಇದರಲ್ಲಿ ಗರ್ಭಗೃಹ ಮತ್ತು ನವರಂಗಗಳಿವೆ. ಈ ಗುಡಿಗಳ ಮೇಲಿನ ಶಿಖರಗಳೂ ಸು. 17ನೆಯ ಶಮಾನದ ರಚನೆಗಳು. ಇವನ್ನು ಸುತ್ತುವರಿದಂತೆ ಪ್ರಾಕಾರ ಮತ್ತು ಮಹಾದ್ವಾರ ಇವೆ. ಇವು 3ನೆಯ ಬಲ್ಲಾಳನ ಕಾಲದ್ದಿರಬಹುದು.

ಅಪ್ರಮೇಯ ದೇವಾಲಯ ಊರಿನ ಮುಖ್ಯ ಗುಡಿ. ದೇವಾಲಯದ ಸುತ್ತ ಬೃಹತ್ ಪ್ರಾಕಾರ ಭಿತ್ತಿ, ಮುಂಭಾಗದಲ್ಲಿ ದೊಡ್ಡ ಮಹಾದ್ವಾರ, ಅದರ ಮೇಲೆ ಎತ್ತರದ ವಿಜಯನಗರ ಶೈಲಿಯ ಗೋಪುರ ಇವೆ. ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಒಳಭಾಗದಲ್ಲಿ ಸುತ್ತಲೂ ಮೂರಂಕಣ ಆಳದ ಕೈಸಾಲೆ ಇದೆ. ಕೈಸಾಲೆಯ ಹಿಂಭಾಗವನ್ನು ಕೆಲವೆಡೆ ಕೋಣೆಗಳಾಗಿ ವಿಂಗಡಿಸಿದ್ದು ಅವುಗಳಲ್ಲಿ ಜೀಯರ್, ನಮ್ಮಾಳ್ವರ್, ಮಡಪಳ್ಳಿ ನಾಚ್ಚಾರ್, ತಿರುಮಂಗೈ ಆಳ್ವಾರ್, ದೇಶಿಕ, ಕೂರತ್ತಾಳ್ವಾರ್, ಪಿಳ್ಳೈಲೋಕಾಚಾರ್ಯ, ಭಾಷ್ಯಾಕಾರ ಮತ್ತು ಬಾಲಕೃಷ್ಣ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಅಂಬೆಗಾಲಿಟ್ಟುಕೊಂಡು ಒಂದು ಕೈಯಲ್ಲಿ ಬೆಣ್ಣೆ ಹಿಡಿದಿರುವ ಇಲ್ಲಿನ ಬಾಲಕೃಷ್ಣ ಉಲ್ಲೇಖಾರ್ಹ ಕೃತಿ. ಮಹಾದ್ವಾರದಿಂದ ಒಳಹೋಗುತ್ತಿದ್ದಂತೆಯೇ ಪಾತಾಳಾಂಕಣವಿದೆ. ಎತ್ತರದ ಅಷ್ಟಮುಖ ಕಂಬಗಳಿಂದ ಎತ್ತಿದ ಈ ಭಾಗದಲ್ಲಿ ರಾಮದಾಸ ಮತ್ತು ಅವನ ಪತ್ನಿ ಮಂಚಿಲಕ್ಷ್ಮಿ ಕೈಮುಗಿದು ನಿಂತಿರುವ ವಿಗ್ರಹಗಳಿವೆ. ಈ ಭಾಗ ಚನ್ನಪಟ್ಟಣದ ಜಗದೇವರಾಯನ ಕಾಲದ ರಚನೆ. ಮಧ್ಯದಲ್ಲಿರುವ ಅಪ್ರಮೇಯ ಗುಡಿ ಮೂಲತಃ ಚೋಳ ಕಾಲದ್ದಾದರೂ ವಿಜಯನಗರದ

ಕಾಲದಲ್ಲಿ ಮತ್ತು ಅನಂತರ ಬಹುವಾಗಿ ನವೀಕೃತವಾಗಿದೆ. ಗರ್ಭಗೃಹದಲ್ಲಿ ಚೋಳ ಕಾಲದ ಕೆಲವು ಉಳಿಕೆಗಳಿವೆ. ಮುಂದಿರುವ ಸುಕನಾಸಿ ಮತ್ತು ನವರಂಗಗಳಲ್ಲಿನ ಕಂಬಗಳು ಮತ್ತು ಶಿಲ್ಪಗಳು ಸ್ಪಷ್ಟವಾಗಿ ವಿಜಯನಗರ ಶೈಲಿಯವು. ಇವೆಲ್ಲಾ 16ನೆಯ ಶತಮಾನದಲ್ಲಿ ರಚಿತವಾದವು. ಗರ್ಭಗೃಹದಲ್ಲಿರುವ ಅಪ್ರಮೇಯ ವಿಗ್ರಹ (ಜನಾರ್ಧನ ಮೂರ್ತಿ) 41/2 ಅಡಿ ಎತ್ತರವಿದೆ. ವಿಗ್ರಹ ಶಿಲ್ಪ ರೂಪಣೆಯಲ್ಲಿ ಕೆಲವು ಹೊಯ್ಸಳ ಅಂಶಗಳಿರುವಂತೆ ಕಂಡರೂ ಇದು ಮೂಲ ಚೋಳರ ಕಾಲದ್ದೇ ಇರಬಹುದೆಂದು ಊಹೆ ಇದೆ. ಅಪ್ರಮೇಯ ದೇವಾಲಯ ಈ ಸುತ್ತಿನ ಪ್ರದೇಶದಲ್ಲೇ ದೊಡ್ಡ ಗುಡಿ. (ಕೆ.ಟಿ.ಆರ್.)

**ದೊಡ್ಡಯ್ಯ :** ಸು. 1550. ಜೈನಕವಿ. ಚಂದ್ರಪ್ರಭಚರಿತೆ ಎಂಬ ಕಾವ್ಯದ ಕರ್ತೃ. ಪಿರಿಯಾಪಟ್ಟಣದ ದೊರೆ ವಿರೂಪರಾಜೇಂದ್ರನ ಆಸ್ಥಾನದಲ್ಲಿ ಕರಣಿಕ ತಿಲಕನೂ ಜಿನಪುರಾಣ ಕಥಾಗಮ ನಿಪುಣನೂ ಆಗಿದ್ದ ದೇವಪ್ಪ ಈತನ ತಂದೆ. ಗುರು ಪಂಡಿತಮುನಿ. ಪೂರ್ವಕವಿಗಳಲ್ಲಿ ಪಂಪ, ರನ್ನ, ವಿಜಯ, ಗುಣವರ್ಮ, ಜನ್ನ, ಮಧುರ, ನಾಗಚಂದ್ರ, ಪೊನ್ನ, ನೇಮಿಚಂದ್ರ, ಬಂಧುವರ್ಮ ಮೊದಲಾದವರನ್ನು ಸ್ತುತಿಸಿದ್ದಾನೆ. ತನ್ನ ಕವಿತಾಚಾತುರ್ಯ ಲಲನೆಯರ ಮೊಗದ ಮೂಗುತಿಯಾಣಿಮಣಿಯಂತೆ, ಸುಲಲಿತಾಂಗಿಯರ ನುಣ್ಗೊರಲ ಕಂಠಿಕೆಯಂತೆ, ರಸದಾಳಿಯ ರಸದಂತೆ, ಮಿಸುಪ ರಸವೊಸರ್ವ ಮಾವಿನ ಹಣ್ಣಿನಂತೆ, ಅಸಿಯಳ ನಳಿತೋಳತಕ್ಕೆಯಂತೆ ಸಹೃದಯರನ್ನು ಮೋಹಿಸುವುದಾಗಿ ಹೇಳಿಕೊಂಡಿದ್ದಾನೆ.

ಚಂದ್ರಪ್ರಭುಚರಿತೆ ಸಾಂಗತ್ಯದಲ್ಲಿದೆ. ಇದರಲ್ಲಿ 28 ಸಂಧಿಗಳೂ 4475 ಪದ್ಯಗಳೂ ಇವೆ. ನಡುನಡುವೆ ವೃತ್ತ ಷಟ್ಪದಿಗಳೂ ಬಳಕೆಯಾಗಿವೆ. 8ನೆಯ ತೀರ್ಥಂಕರ ಚಂದ್ರಪ್ರಭನ ಕಥೆ ಈ ಕಾವ್ಯದ ವಸ್ತು. ಪೂರ್ವದಲ್ಲಿ ಕವಿ ಪರಮೇಷ್ಠಿ, ಗುಣಭದ್ರ ಮೊದಲಾದವರು ಹೇಳಿರುವ ಕಥೆಯನ್ನೇ ತಾನು ಕನ್ನಡಿಸುವುದಾಗಿ ಹೇಳಿಕೊಂಡಿದ್ದಾನೆ. ಹೆಚ್ಚಾಗಿ ವಿಜಯಕವಿಯ ಚಂದ್ರಪ್ರಭ ಪುರಾಣವನ್ನು ಆದರ್ಶವಾಗಿಟ್ಟುಕೊಂಡಿರುವಂತೆ ತೋರುತ್ತದೆ. ಕಾವ್ಯರಚನೆ ಸಾಂಪ್ರದಾಯಿಕವಾಗಿದೆ. ಸಾಂಗತ್ಯದ ನಡಿಗೆಯಲ್ಲಿ ಲಾಲಿತ್ಯವಿದ್ದು ಹಿತವಾಗಿದೆ. ಕವಿಗೆ ಅಲಂಕಾರಪ್ರಿಯತೆ ಹೆಚ್ಚು. ಆದರೂ ಕೆಲವು ಸನ್ನಿವೇಶಗಳನ್ನು ಕಲ್ಪಿಸುವಾಗ ರಸಘಟ್ಟಗಳನ್ನು ರಚಿಸುವಾಗ ಗಣನೀಯ ಸಾಮರ್ಥ್ಯವನ್ನು ತೋರಿಸಿದ್ದಾನೆ. ಮಹಾಕಾವ್ಯೋಚಿತ ವರ್ಣನೆಗಳೂ ಇವೆ. ಸಾಂಗತ್ಯದ ಮಿತಿಯಲ್ಲಿಯೆ ಭಾಷೆಯನ್ನು ಮನೋಜ್ಞವಾಗಿ ಬಳಸಿಕೊಂಡಿರುವುದು ಮೆಚ್ಚತಕ್ಕ ಸಂಗತಿ. ಮೇಘವನ್ನು ವರ್ಣಿಸುವ ಸುಂದರ ಪದ್ಯವೊಂದು ಹೀಗಿದೆ.

ಸಿಡಿಲ್ಗಿಚ್ಚಿನ ಧೂಮವೋ ಸುರಗಂಗೆಯ
ತಡಿಯ ತಮಾಲಕಾನನವೋ
ಜಡದಲಕ್ಷ್ಮಿಯ ಪೀಲಿದಳೆಯೋ ಎಂದೆನೆ
ಕಡುರಯಮಬ್ದ ಸಂದೋಹ (ಎನ್.ಬಿ.ಎಲ್.)

**ದೊಡ್ಡವೀರಪ್ಪ :** ಕೊಡಗು ಸಂಸ್ಥಾನದ ಪ್ರಖ್ಯಾತ ರಾಜ (1687-1736). ಮುದ್ದುರಾಜನ ಹಿರಿಯ ಮಗ. ಕೊಡಗು ಈತನ ಕಾಲದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿತ್ತು. ಇವನ ಕಾಲದಲ್ಲಿ ಮೈಸೂರಿನ ಚಿಕ್ಕದೇವರಾಜ ಕೊಡಗನ್ನು ಗೆದ್ದುಕೊಳ್ಳಬೇಕೆಂಬ ಉದ್ದೇಶದಿಂದ ಒಂದು ಸೈನ್ಯವನ್ನು ಕಳುಹಿಸಿದ. ಆ ಸೈನ್ಯ ಬಾಳೆಲೆ ಎಂಬ ಊರಿನ ಮುಖಾಂತರ ಕೊಡಗನ್ನು ಪ್ರವೇಶಿಸಿ ಪಾಲುಪರೆಯಲ್ಲಿ ಬೀಡುಬಿಟ್ಟಿತು. ಈ ಸುದ್ದಿಯು ತಿಳಿದ ತಕ್ಷಣ ದೊಡ್ಡವೀರಪ್ಪ ರಾತ್ರಿಯೇ ಪಾಲುಪರೆಗೆ ಸೈನ್ಯದೊಂದಿಗೆ ಧಾವಿಸಿ ಬೆಳಗಾಗುವುದರೊಳಗೆ ಚಿಕ್ಕದೇವರಾಜ ಒಡೆಯನ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದ. ಈ ಯುದ್ಧದಿಂದಾಗಿ ಮೈಸೂರಿನ ಅರಸ ನಷ್ಟವನ್ನನುಭವಿಸಿದ. ಉನ್ನತ ಅಧಿಕಾರಿಗಳು ಮತ್ತು ಹೆಚ್ಚು ಸಂಖ್ಯೆಯಲ್ಲಿ ಸೈನಿಕರು ಸಾವನ್ನಪ್ಪಿದ್ದರು. ದೊಡ್ಡ ವೀರಪ್ಪ ಅಳಿದುಳಿದ ಮೈಸೂರಿನ ಸೈನ್ಯವನ್ನು ಹೆಗ್ಗಡದೇವನಕೋಟೆಯ ಹಂಪಾಪುರದವರೆಗೂ ಅಟ್ಟಿಸಿಕೊಂಡು ಹೋಗಿ ಅಲ್ಲಿ ತನ್ನ ವಿಜಯಸ್ತಂಭವನ್ನು ನೆಟ್ಟ. ದೊಡ್ಡ ವೀರಪ್ಪ ಮೈಸೂರಿನ ಚಿಕ್ಕದೇವರಾಜ ಒಡೆಯನ ಸೈನ್ಯದೊಂದಿಗೆ ಹೋರಾಡುತ್ತಿದ್ದಾಗ, ಉತ್ತರ ಮಲಬಾರಿನ ವೀರವರ್ಮರಾಜ ಎಂಬುವನು 500 ನಾಯರ್ ಸೈನಿಕರೊಡನೆ ತೋಮರ ಎಂಬ ಗ್ರಾಮದ ಹತ್ತಿರ ಠಾಣ್ಯ ಹೂಡಿದ. ದೊಡ್ಡ ವೀರಪ್ಪ ಧೈರ್ಯಗುಂದದೆ ಅಲ್ಲಿಗೆ 1500 ಸೈನಿಕರನ್ನು ಕಳುಹಿಸಿ ವೀರವರ್ಮನ ಸೈನ್ಯ ಮುಂದೆ ನುಗ್ಗದಂತೆ ತಡೆಗಟ್ಟಿದ. ಅನಂತರ ದೊಡ್ಡ ವೀರಪ್ಪ ಮೈಸೂರಿನ ಸೈನ್ಯವನ್ನು ಸೋಲಿಸಿದಮೇಲೆ ತಾನೇ ಅಲ್ಲಿಗೆ ಹೋಗಿ ಮಲಬಾರಿನ ಸೈನಿಕರನ್ನು ನಾಶಮಾಡಿದ.

ದೊಡ್ಡವೀರಪ್ಪನ ಔದಾರ್ಯ, ಪ್ರಾಮಾಣಿಕತೆ ಮತ್ತು ನಿಷ್ಠೆಗಳು ಅವನ ಕಾಲದಲ್ಲಿ ನಡೆದ ಒಂದ ಘಟನೆಯಿಂದ ವಿದಿತವಾಗುತ್ತವೆ. ಇಕ್ಕೇರಿಯ ಸೋಮಶೇಖರನಾಯಕ 1730ರಲ್ಲಿ ಚಿರಕ್ಕಲ್ಲಿನ ರಾಜನ ಪ್ರದೇಶಗಳನ್ನು ದಾಳಿ ಮಾಡಿದಾಗ ಆ ರಾಜ ಅಶಕ್ತನಾಗಿದ್ದುದರಿಂದ ದೊಡ್ಡ ವೀರಪ್ಪನ ಸಹಾಯವನ್ನು ಯಾಚಿಸಿದ. ದೊಡ್ಡ ವೀರಪ್ಪ ಮತ್ತು ಇಕ್ಕೇರಿಯ ಸೋಮಶೇಖರನಾಯಕ ಇಬ್ಬರೂ ಪರಸ್ಪರ ಸಂಬಂಧಿಕರಾಗಿದ್ದುದರಿಂದ ಚಿರಕ್ಕಲ್ ರಾಜ ತನ್ನ ರಾಜ್ಯವನ್ನು ಉಳಿಸಬೇಕೆಂದು ದೊಡ್ಡ ವೀರಪ್ಪನ ಮರೆಹೊಕ್ಕ. ದೊಡ್ಡವೀರಪ್ಪ, ಸೋಮಶೇಖರನಾಯಕನಿಗೆ ಯುದ್ಧವನ್ನು ನಿಲ್ಲಿಸುವಂತೆಯೂ ಗೆದ್ದು ಕೊಂಡಿದ್ದ ಪ್ರದೇಶಗಳನ್ನು ಹಿಂತಿರುಗಿಸುವಂತೆಯೂ ಕೇಳಿಕೊಂಡ. ಮೊದಲು ನಾಯಕ ಒಪ್ಪಲಿಲ್ಲವಾದರೂ 18 ಲಕ್ಷ ರೂಪಾಯಿಗಳನ್ನು ಚಿರಕ್ಕಲ್ಲಿನ ರಾಜ ಕೊಡಲೊಪ್ಪುವುದಾದರೆ, ತಾನು ಆಕ್ರಮಿಸಿದ್ದ ಪ್ರದೇಶಗಳನ್ನು ಬಿಟ್ಟುಕೊಡುವುದಾಗಿ ಹೇಳಿದ. ಚಿರಕ್ಕಲ್ಲಿನ ರಾಜ ಹಣವನ್ನು ಕೊಡಲು ಒಪ್ಪಿಕೊಂಡ. ಈ ಹಣಕ್ಕೆ ದೊಡ್ಡ ವೀರಪ್ಪನೇ ಜಾಮೀನಾಗಿ ನಿಂತ. ಆದರೆ ಚಿರಕ್ಕಲ್ ರಾಜ 9 ಲಕ್ಷ ರೂಪಾಯಿಗಳನ್ನು ಮಾತ್ರ ಸಲ್ಲಿಸಿದ. ಉಳಿದ ಬಾಕಿ 9 ಲಕ್ಷ ರೂಪಾಯಿಗಳನ್ನು ಕೇಳಲು ಬಂದ ರಾಜನ ದೂತರನ್ನು ತುಚ್ಛವಾಗಿ ಕಂಡು ಬರಿಗೈಲಿ ಹಿಂದಿರುಗುವಂತೆ ಮಾಡಿದ. ಆಗ ಕೋಪಗೊಂಡ ದೊಡ್ಡವೀರಪ್ಪ ಒಂದು ಸೈನ್ಯವನ್ನು ಬೊನಿರ ಮುತ್ತಣ್ಣ ಎಂಬ ಸೇನಾಪತಿಯ ನಾಯಕತ್ವದಲ್ಲಿ ಹಣ ವಸೂಲಿಮಾಡಲು ಕಳಹಿಸಿಕೊಟ್ಟ. ಮುತ್ತಣ್ಣ ಸೈನ್ಯಸಮೇತನಾಗಿ ಹಣ ಕೇಳುವುದಕ್ಕೆ ಆಗಮಿಸಿದುದನ್ನು ನೋಡಿ ಅವನನ್ನು ಮತ್ತು ಅವನ ಸೈನ್ಯವನ್ನು ನಿರ್ನಾಮ ಮಾಡಬೇಕೆಂದು ಯೋಜನೆ ಹಾಕಿಕೊಂಡ ಚಿರಕ್ಕಲ್ ರಾಜಸಿದ್ಧತೆಗಳನ್ನು ಮಾಡಿಕೊಳ್ಳಲು ಪ್ರಾರಂಭಿಸಿದ. ಈ ಒಳಸಂಚನ್ನು ತಿಳಿದ ಮುತ್ತಣ್ಣ ತಲೆತಪ್ಪಿಸಿಕೊಂಡು ಕಣ್ಣಾನೂರಿಗೆ ಹೋಗಿ ಅಲ್ಲಿಂದ ಕುಂಬಳೆಯ ಮಾರ್ಗವಾಗಿ ಕೊಡಗನ್ನು ತಲುಪಿದ. ದೊಡ್ಡವೀರಪ್ಪ ನಿಷ್ಠಾವಂತ ಹಾಗೂ ಸತ್ಯಪ್ರಿಯ. ಅವನು ಚಿರಕ್ಕಲ್ ರಾಜನು ಸೋಮಶೇಖರನಾಯಕನಿಗೆ ಸಲ್ಲಿಸಬೇಕಾಗಿದ್ದ 9 ಲಕ್ಷ ರೂಪಾಯಿಗಳನ್ನು ತನ್ನ ಖಜಾನೆಯಿಂದ ಪಾವತಿ ಮಾಡಿದ. ದೊಡ್ಡವೀರಪ್ಪ ನಿಷ್ಠೆಯಿಂದ ಸಂತಸಗೊಂಡ ನಾಯಕ ಅವನಿಗೆ ತುಳುನಾಡಿನ ಕೆಲವು ಹಳ್ಳಿಗಳನ್ನು ಉಚಿತವಾಗಿ ಕೊಟ್ಟ. ಈ ಗ್ರಾಮಗಳಿಗೆ ಅಮರ ಮಾಗಣೆ ಎಂದು ಹೆಸರಿಸಲಾಯಿತು. ಅನಂತರ ದೊಡ್ಡವೀರಪ್ಪ ಕೊಡಗಿನ ಕಾವೇರಿ ದೇವಿಯ ಅಭಿಷೇಕಕ್ಕಾಗಿ ಕೊಡಗಿನಲ್ಲಿ ತೆಂಗಿನಕಾಯಿ ಫಲ ಇಲ್ಲದೆ ಇದ್ದುದರಿಂದ ತೆಂಗಿನಕಾಯಿ ಒದಗಿಸುವುದಕ್ಕೋಸ್ಕರ ಭಾಗಮಂಡಲಕ್ಕೆ ಸಮೀಪವಾಗಿರುವ ಸುಳ್ಯ ಮಾಗಣೆಯನ್ನು ಕ್ರಯಕ್ಕೆ ಕೊಡಬೇಕೆಂದು ಸೋಮಶೇಖರನಾಯಕನನ್ನು ಕೇಳಿದ. ಅದಕ್ಕೆ ಒಪ್ಪಿ ಸೋಮಶೇಖರನಾಯಕ ಸುಳ್ಯ ಮಾಗಣೆಯನ್ನು ದೊಡ್ಡವೀರಪ್ಪನಿಗೆ ಮಾರಿದ. ಹೀಗೆ ಇವನ ಕಾಲದಲ್ಲಿ ಕೊಡಗು ರಾಜ್ಯಕ್ಕೆ ಅಮರ ಮತ್ತು ಸುಳ್ಯ ಮಾಗಣೆಗಳು ಸೇರಿದವು.

ದೊಡ್ಡವೀರಪ್ಪ ಸುಭದ್ರವಾದ ಆಡಳಿತ ಯಂತ್ರವನ್ನು ಸ್ಥಾಪಿಸಿದ. ಇವನ ಕಾಲದಲ್ಲೇ ಅರಮನೆ ಕಡಂಗು ಎಂಬ ಅಗಳುಗಳನ್ನು ನಾಡುಗಳ ಎಲ್ಲೆಯನ್ನು ವಿಭಾಗಿಸಲು ತೋಡಿಸಿದ. ಇವನು ಕೊಡವರಲ್ಲಿ ದೇಶತಕ್ಕರೆಂಬ ಹೆಸರಿನಿಂದ ಎಂಟು ಜನರನ್ನು ನ್ಯಾಯತೀರ್ಪಿಗಾಗಿ ನೇಮಿಸಿದ. ಈ ತಕ್ಕಾಮೆ ವಂಶಪಾರಂಪರ್ಯವಾಗಿ ಮುಂದುವರಿಯುವ ಹಾಗೆ ಆಯಿತು.

ದೊಡ್ಡವೀರಪ್ಪ 49 ವರ್ಷ ಕಾಲ ಬಹು ಸಾಮರ್ಥ್ಯದಿಂದ

ರಾಜ್ಯಭಾರ ಮಾಡಿ ತನ್ನ 78ನೆಯ ವಯಸ್ಸಿನಲ್ಲಿ 1736ರಲ್ಲಿ ನಿಧನಹೊಂದಿದ. ಇವನ ಜೊತೆಯಲ್ಲೇ ಇವನ ಇಬ್ಬರು ರಾಣಿಯರೂ ಸಹಗಮನ ಮಾಡಿದರು. ಪ್ರಾಮಾಣಿಕ ಶೂರ ಹಾಗೂ ಅತ್ಯಂತ ನೇರ ನಡವಳಿಕೆಯುಳ್ಳವನಾಗಿದ್ದ ದೊಡ್ಡವೀರಪ್ಪ ತನ್ನ ಮಗ ಅಪ್ಪಾಜಿರಾಜ ತನ್ನ ಕ್ರೂರ ನಡತೆಯಿಂದ ತನ್ನ ಹೆಂಡತಿಯ ಆತ್ಮಹತ್ಯೆಗೆ ಕಾರಣನಾಗಿದ್ದನೆಂದು ಅವನನ್ನು ಶಿಕ್ಷಿಸಿದ. ದೊಡ್ಡವೀರಪ್ಪ ಮರಣಹೊಂದಿದ ಮೇಲೆ ಅಪ್ಪಾಜಿರಾಜನ ಮಗ ಚಿಕ್ಕವೀರಪ್ಪ ಕೊಡಗಿನ ರಾಜನಾದ.

(ಎಸ್.)

**ದೊಡ್ಡಸಂಕಣ್ಣನಾಯಕ :** ಕೆಳದಿಯ ರಾಜ (ಸು. 1566- 70). ಕೆಳದಿ ರಾಜರ ವಂಶಾವಳಿಯಲ್ಲಿ ಇವನ ಸ್ಥಾನ ಖಚಿತವಾಗಿಲ್ಲ. ದೊಡ್ಡಸಂಕಣ್ಣ ನಾಯಕ ಕೆಳದಿಯ ಎರಡನೆಯ ದೊರೆ ಸದಾಶಿವನಾಯಕನೇ ಎಂದೂ ಇವನು ಸದಾಶಿವನಾಯಕನ ಹಿರಿಯ ಮಗ ಮತ್ತು ರಾಮಾರಾಜಯ್ಯನ ಅಣ್ಣ ಎಂದೂ ರಾಮರಾಜಯ್ಯನಿಗೇ ಈ ಹೆಸರಿತ್ತೆಂದೂ ಅನೇಕ ರೀತಿಯ ಅಭಿಪ್ರಾಯಗಳಿವೆ.

ದೊಡ್ಡಸಂಕಣ್ಣನಾಯಕ ಶೂರನೂ ಧಾರ್ಮಿಕನೂ ಆಗಿದ್ದ. ಇವನ ರಾಜ್ಯಭಾರದ ಕಾಲಾವಧಿಯು ನಿಶ್ಚಿತವಾಗಿ ಹೇಳಬರುವಂತಿಲ್ಲವಾದರೂ ವಿಜಯನಗರದ ರಾಮರಾಜನ ಕಾಲದಲ್ಲಿ ಇದ್ದ. ಆ ರಾಜ್ಯದ ಮಾಂಡಲಿಕನಾಗಿದ್ದ ಜಂಬೂರಿನ ವಿರೂಪಣ್ಣ ಒಡೆಯ ಮಲೆತು ನಿಂತಾಗ ಅವನನ್ನು ಸೋಲಿಸಿ ಜಂಬೂರು ಮತ್ತು ಉಡುಗಣೆಗಳನ್ನು ವಶಪಡಿಸಿಕೊಂಡ. ಆಗ ರಾಮರಾಜ ಮಧ್ಯಸ್ಥಿಕೆ ಮಾಡಿ ವಿರೂಪಣ್ಣನ ಪ್ರದೇಶವನ್ನು ಅವನಿಗೆ ಮರಳಿ ಕೊಡಿಸಿದ ಮತ್ತು ದೊಡ್ಡ ಸಂಕಣ್ಣ ನಾಯಕನನ್ನು ರಾಜಧಾನಿಯಲ್ಲಿ ಕೆಲಕಾಲ ನಿಲ್ಲಿಸಿಕೊಂಡು ರಾಜಮರ್ಯಾದೆ ಮಾಡಿದ. ಇವನು ಮುಸಲ್ಮಾನರೊಡನೆಯ ಯುದ್ಧಗಳಲ್ಲಿ ರಾಮರಾಜನಿಗೆ ಸಹಾಯ ಮಾಡಿದ. ಅದರಂತೆ ಕಾರ್ಕಳದ ಭೈರರಸ ಒಡೆಯ ಮತ್ತು ಗೇರುಸೊಪ್ಪೆಯ ಭೈರಾದೇವಿಯೊಡನೆ ನಡೆದ ಯುದ್ಧಗಳಲ್ಲಿಯೂ ತನ್ನ ವಿಕ್ರಮವನ್ನು ಮೆರೆದ. ಗೋವೆಯ ಕೋಟೆಯನ್ನು ವಶಪಡಿಸಿಕೊಳ್ಳಲು ವಿಜಯನಗರದ ಸೇನಾನಿಯಾದ ವಿಠಲರಾಯನಿಗೆ ಸಹಾಯ ಮಾಡಿದನೆಂದೂ ಹೇಳಲಾಗುತ್ತದೆ. ಕೆಳದಿನೃಪವಿಜಯದ ಪ್ರಕಾರ, ದೊಡ್ಡ ಸಂಕಣ್ಣನಾಯಕ ಮಕ್ಕಳೀರ್ವರ ಮದುವೆ ಮಾಡಿ ತಮ್ಮನಿಗೆ ರಾಜ್ಯಭಾರ ವಹಿಸಿ ಜಂಗಮ ವೇಷದಿಂದ ಉತ್ತರ ದೇಶದ ಯಾತ್ರೆಯನ್ನು ಕೈಗೊಂಡ. ದಿಲ್ಲಿಯಲ್ಲಿ ಅಂಕುಶಖಾನನೆಂಬ ವಜೀರನನ್ನು ಖಡ್ಗ ಯುದ್ಧದಲ್ಲಿ ಸೋಲಿಸಿದ. ಮುಂದೆ ಕಾಶಿಗೆ ಬಂದು ಅಲ್ಲಿ ಜಂಗಮ ಘಾಟನ್ನು ಕಟ್ಟಿಸಿದ. ಗಯಾ, ಕಾಶ್ಮೀರಗಳಿಗೂ ಹೋಗಿ ಬಂದ. ತನ್ನ ಊರಿಗೆ ಹಿಂತಿರುಗುವಾಗ ಮೈಸೂರು ಸೀಮೆಯ ವಾಲವಳ್ಳಿ ಎಂಬ ಗ್ರಾಮದಲ್ಲಿದ್ದಾಗ ಸ್ವಪ್ನದಲ್ಲಿ ಕಾಣಿಸಿಕೊಂಡ ವೀರಭದ್ರನಿಗಾಗಿ ಕೆಳದಿಯಲ್ಲಿ ಗುಡಿಯನ್ನು ಕಟ್ಟಿಸಿದ್ದ. ಇವನ ಈ ಉತ್ತರ ಭಾರತ ಯಾತ್ರೆಗೆ ಚಾರಿತ್ರಿಕ ಪುರಾವೆಗಳು ದೊರೆತಿಲ್ಲ. (ಎಸ್.ಎಚ್.)

**ದೊಡ್ಡಹುಲ್ಲೂರು :** ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಒಂದು ಗ್ರಾಮ. ಹೊಸಕೋಟೆಯಿಂದ 4 ಕಿಮೀ ದೂರದಲ್ಲಿದೆ. ಇಲ್ಲಿ ದೊರೆತ 1339 ರ ಒಂದು ಶಾಸನದ ಪ್ರಕಾರ ಈ ಗ್ರಾಮಕ್ಕೆ ಪುಲ್ಲಿಯೂರು ಎಂಬ ಹೆಸರು ಪ್ರಚಲಿತದಲ್ಲಿತ್ತೆಂದು ತಿಳಿದುಬರುತ್ತದೆ. ಸಿಂಗನವರ ಎಂಬ ಅಧಿಕಾರಿ ಪುಲ್ಲಿಯೂರಿನ ದೇಶಿಗಳಿಗೆ ದಾನ ನೀಡಿದ ವಿವರವನ್ನು ನೀಡುತ್ತದೆ. ಗ್ರಾಮದಲ್ಲಿ ಬೀರೇದೇವರ ಗುಡಿಯಿದೆ. ಬೀರೇದೇವರನ್ನು ಹುಲ್ಲೂರಪ್ಪ ಎಂದೂ ಕರೆಯಲಾಗುತ್ತದೆ. ಈ ದೇವಸ್ಥಾನದ ಸುತ್ತ ಸು. 20 ವೀರಗಲ್ಲುಗಳಿವೆ. ಕೆರೆಯ ಹತ್ತಿರ ಪ್ರಾಚೀನ ಕಾಲದ ಈಶ್ವರ ದೇವಾಲಯವೊಂದಿದೆ. ಈ ದೇವಾಲಯ ಚೋಳ ಶೈಲಿಯ ದೇವಾಲಯದಂತೆ ಕಂಡರೂ ಇದರ ನಿರ್ಮಾಣದ ಮೇಲೆ ಸ್ಪಷ್ಟ ಬೆಳಕು ಚೆಲ್ಲುವ ದಾಖಲೆಗಳು ದೊರೆಯುವುದಿಲ್ಲ. ಶಿಥಿಲಾವಸ್ಥೆಯಲ್ಲಿರುವ ಈ ದೇವಾಲಯದ ಗೋಡೆಯಲ್ಲಿ ಕೆಲವು ಸುಂದರ ಉಬ್ಬುಶಿಲ್ಪಗಳಿವೆ. ಈ ದೇವಾಲಯದ ಅಧಿಷ್ಠಾನ ಹೊಯ್ಸಳರ ಕಾಲದ ದ್ರಾವಿಡ ದೇವಾಲಯಗಳ ಅಧಿಷ್ಠಾನವನ್ನು ಜ್ಞಾಪಕಕ್ಕೆ ತರುತ್ತದೆ. ಇಲ್ಲೊಂದು ತಮಿಳು ಶಾಸನವಿದೆ. ಗರ್ಭಗೃಹದಲ್ಲಿ ಚಪ್ಪಟೆ ಶಿರಭಾಗಹೊಂದಿರುವ ಶಿವಲಿಂಗವಿದೆ. ಈ ಗ್ರಾಮಕ್ಕೆ ಸು. 5 ಕಿಮೀ ದೂರದಲ್ಲಿ ಮುಗಬಾಳ ಗ್ರಾಮವಿದ್ದು ಇಲ್ಲಿ ಅನೇಕ ದೇವಾಲಯಗಳಿವೆ. (ಆರ್.ಎಚ್.ಕೆ.)

**ದೊಡ್ಡೇರಿ :** ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಒಂದು ಗ್ರಾಮ, ಪ್ರಾಚೀನ ಐತಿಹಾಸಿಕ ಸ್ಥಳ. ಚಳ್ಳಕೆರೆ ಪಟ್ಟಣದಿಂದ ಪೂರ್ವಕ್ಕೆ ಸು. 7ಕಿಮೀ ದೂರದಲ್ಲಿದೆ. ಇದು ನಿಡಗಲ್ಲು ಅಥವಾ ಹರತಿ-ನಿಡಗಲ್ಲು ಮನೆತನದ ಮೂಲಪುರುಷನಿಂದ ಸ್ಥಾಪಿತವಾಯಿತೆಂದು ತಿಳಿದುಬರುತ್ತದೆ. ಈಚೆಗೆ ನಡೆದ ಸಂಶೋಧನೆಗಳಿಂದ ಈ ಪ್ರದೇಶ ಬಹುಪೂರ್ವದಲ್ಲೇ ನವಶಿಲಾಯುಗದ ಮಾನವ ವಸತಿಯಾಗಿತ್ತೆಂದೂ ನೊಳಂಬ ಪಲ್ಲವ ದೊರೆಗಳ ಕಾಲದಲ್ಲಿ ಒಂದು ಮುಖ್ಯಸ್ಥಳವಾಗಿತ್ತೆಂದೂ ಕಂಡುಬಂದಿದೆ. ಈ ಊರಿನಲ್ಲಿ ಹಳೆಯ ಕೋಟೆಯ ಅವಶೇಷ, ಕೆಲವು ಪ್ರಾಚೀನ ದೇವಾಲಯಗಳು ನೊಳಂಬ ಪಲ್ಲವ ಕಾಲದ ಕೆಲವು ವೀರಗಲ್ಲುಗಳು ಈ ಊರಿಗೆ ಸಮೀಪದಲ್ಲೇ ನವಶಿಲಾಯುಗ ಕಾಲದ ಕಲ್ಲಿನ ಆಯುಧ ಇತ್ಯಾದಿಗಳು ದೊರೆತಿವೆ. ಈ ಊರಿಗೆ ಸಮೀಪದ ಹಳೆಯ ದೊಡ್ಡೇರಿ ಎಂದು ಕರೆಯುವ ಜನವಸತಿಯಿಂದ ಗ್ರಾಮದ ಬಳಿ ಕನ್ನೇಶ್ವರ ಎಂಬ ಹೆಸರಿನ ಬೃಹತ್ ಲಿಂಗದ ಪ್ರಾಚೀನ ದೇವಾಲಯವೊಂದಿದ್ದು, ಈಚೆಗೆ ಅದು ಜೀರ್ಣೋದ್ಧಾರಗೊಂಡಿದೆ. 16 ನೆಯ ಶತಮಾನದಲ್ಲಿ ಈ ಊರು ಹರತಿ-ನಿಡಗಲ್ಲು ಮನೆತನದ ತಿಪ್ಪರಾಜ ಎಂಬುವನಿಗೆ ಸೇರಿತ್ತು. ಅವನು ತನ್ನ ರಾಜ್ಯವನ್ನು ಮಕ್ಕಳಿಗೆ ಹಂಚಿಕೊಟ್ಟಾಗ ಇದು ಅವನ ಮಗ ತಿಮ್ಮಣ್ಣನಾಯಕ ಎಂಬುವನ ಪಾಲಿಗೆ ಬಂತು. ಸ್ವಲ್ಪ ಕಾಲಾನಂತರ ಬಿಜಾಪುರದ ಸುಲ್ತಾನರು ಇತ್ತಕಡೆ ಬಂದು ದೊಡ್ಡೇರಿಯನ್ನು ಮುತ್ತಿದಾಗ ಆತ ತುಮಕೂರು ಜಿಲ್ಲೆಯಲ್ಲಿರುವ ನಿಡುಗಲ್ಲಿಗೆ ಓಡಿಹೋಗಿ ನೆಲೆನಿಂತ. 1698 ರಲ್ಲಿ ಮರಾಠರ ಸಂತಾಜಿ ಘೋರ್ಪಡೆ ಭಾರಿ ಸೈನ್ಯದೊಂದಿಗೆ ಬಂದು ಶಿರಾದ ಮೇಲೆ ದಾಳಿ ಮಾಡಿದಾಗ, ಮೊಗಲರಿಂದ ನೇಮಕವಾಗಿದ್ದ ಅಲ್ಲಿಯ ಸುಬೇದಾರ ಕಾಸೀಂಖಾನ್ (1687 - 98) ಆ ಸೈನ್ಯದೊಂದಿಗೆ ಹೋರಾಡುತ್ತ ದೊಡ್ಡೇರಿಯ ಕಡೆಗೆ ಓಡಿ ಬಂದು, ಕೋಟೆಯೊಳಗೆ ಸೇರಿಕೊಂಡ. ಈ ಸುದ್ದಿ ತಿಳಿದು ಚಿತ್ರದುರ್ಗದ ದೊರೆ ಬರಮಣ್ಣನಾಯಕ (1689 - 1721) ಒಂದು ದಂಡನ್ನು ಕಳಿಸಲು, ಆ ದಂಡಿನ ಮುಖಂಡರು ಸಂತಾಜಿ ಘೋರ್ಪಡೆಯನ್ನು ಭೇಟಿಮಾಡಿ ಮಾತುಕತೆ ನಡೆಸಿ ದೊಡ್ಡೇರಿ ಕೋಟೆಯನ್ನು ಮುತ್ತಿದರು. ಆಗ ಕಾಸೀಂಖಾನ್ ಹೋರಾಟದಲ್ಲಿ ಮಡಿದ. ಸಂತಾಜಿ ಘೋರ್ಪಡೆ ದೊಡ್ಡೇರಿಯನ್ನು ಬರಮಣ್ಣನಾಯಕನಿಗೇ ಬಿಟ್ಟುಕೊಟ್ಟ. ಮುಂದೆ 1779 ರಲ್ಲಿ ಹೈದರ್ ಅಲಿಯ ವಶವಾಗುವರೆಗೂ ದೊಡ್ಡೇರಿ ಒಂದು ಮುಖ್ಯ ಗಡಿಠಾಣ್ಯವಾಗಿ ದುರ್ಗದ ನಾಯಕರ ವಶದಲ್ಲೇ ಇತ್ತು.

ಈಗಿನ ಚಳ್ಳಕೆರೆ ತಾಲ್ಲೂಕನ್ನು ಹಿಂದೆ ದೊಡ್ಡೇರಿ ತಾಲ್ಲೂಕು ಎಂದು ಕರೆಯಲಾಗುತ್ತಿದ್ದು 1882ರಲ್ಲಿ ದೊಡ್ಡೇರಿ ತಾಲ್ಲೂಕು ಕೇಂದ್ರವಾಗಿತ್ತು. ಒಂದು ಕಾಲಕ್ಕೆ ಈ ಊರು ಕಾಗದ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಆ ಕಾಗದ ದೊಡ್ಡೇರಿ ಕಾಗದ ಎಂದೂ ಕಾಗದದ ಹಾಳೆಯ ಗಾತ್ರ ಸರ್ವತ್ರ ಅಂಗೀಕೃತವಾದ ಅಳತೆಯ ಮಾಪನವಾಗಿ ದೊಡ್ಡೇರಿಗಜ ಎಂದೂ ಪ್ರಸಿದ್ಧವಾಗಿದ್ದುವು. (ಬಿ.ಆರ್.ಎ.ಜಿ.)

**ದೊಡ್ಡೇರಿ ವೆಂಕಟಗಿರಿರಾವ್ :** 1913-2004. ಹೆಸರಾಂತ ವೈದ್ಯ, ಸಾಹಿತಿ ಹಾಗೂ ಛಾಯಾಚಿತ್ರಕಾರ.

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನಲ್ಲಿ ದೊಡ್ಡೇರಿ ಗ್ರಾಮದಲ್ಲಿ ಬಡ ಕೃಷಿಕ ಮನೆತನದಲ್ಲಿ 1913 ಡಿಸೆಂಬರ್ 28ರಂದು ಜನಿಸಿದರು. ಆರಂಭಿಕ ಶಿಕ್ಷಣವನ್ನು ಸಾಗರದಲ್ಲಿ ತಮ್ಮ ಬಂಧುಗಳ ನೆರವಿನಿಂದ ಪೂರೈಸಿದರು. ಅನಂತರದ ಶಿಕ್ಷಣಕ್ಕಾಗಿ ಬಳ್ಳಾರಿಯ ಪಂಡಿತ ತಾರಾನಾಥರ ಆಯುರ್ವೇದ ವಿದ್ಯಾಲಯದಲ್ಲಿ ಎಲ್.ಐ.ಎಂ. ಡಿಪ್ಲೊಮಾ ಪಡೆದರು. ಅನಂತರ ಸಾಗರದಲ್ಲಿ ತಮ್ಮ ವೈದ್ಯಕೀಯ ವೃತ್ತಿ ಆರಂಭಿಸಿದರು. ಅನಂತರ ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರಕ್ಕೆ ಸ್ಥಳಾಂತರಿಸಿದರು. ಅಲ್ಲಿ 30-35 ವರ್ಷಗಳ ಸುದೀರ್ಘ ಕಾಲ ವೈದ್ಯರಾಗಿ

ಜನಪ್ರಿಯತೆ ಗಳಿಸಿದರು. ತಮ್ಮನ್ನು ಹುಡುಕಿಕೊಂಡು ಬಂದ ರೋಗಿಗಳಿಗೆ ಉಚಿತವಾಗಿ ವೈದ್ಯಕೀಯ ಸಲಹೆ ಕೊಡುತ್ತಿದ್ದರು.

1932 ರಷ್ಟು ಹಿಂದೆಯೇ ಕವಿತೆಗಳನ್ನು ಬರೆಯುವುದರ ಮೂಲಕ ಸಾಹಿತ್ಯ ಕೃಷಿಗೆ ತೊಡಗಿದರು. ಅನಂತರ ಶಿಶುಸಾಹಿತ್ಯ, ಕಾದಂಬರಿ, ಸಣ್ಣಕತೆ, ವೈದ್ಯಕೀಯ ಸಾಹಿತ್ಯ, ಲೈಂಗಿಕ ಸಾಹಿತ್ಯ, ಪ್ರವಾಸಕಥನ ಮತ್ತು ಫೋಟೊಗ್ರಫಿ ಇತ್ಯಾದಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಇವರು ಕನ್ನಡದಲ್ಲಿ 600ಕ್ಕೂ ಹೆಚ್ಚು ಇಂಗ್ಲಿಷ್‌ನಲ್ಲಿ 150ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. 30ಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆರೋಗ್ಯ, ಲೈಂಗಿಕ ವಿಜ್ಞಾನ ವಿಷಯಗಳ ಬಗ್ಗೆ ಕನ್ನಡದಲ್ಲಿ ಯಾರೂ ಬರೆಯದ ಕಾಲದಲ್ಲಿ ಇವರು ದಾಂಪತ್ಯ ಜೀವನ ಎಂಬ ಮಾಸಪತ್ರಿಕೆಯ ಸಂಪಾದಕರಾಗಿ ಐದು ವರ್ಷಗಳ ಕಾಲ ಅದನ್ನು ಪ್ರಕಟಿಸಿದರು. ಪ್ರಸವ ವಿಜ್ಞಾನ, ಸಂತಾನ ಸಂಯಮ, ವಿಕೃತಕಾಮ, ಕಾಮ ಶಿಕ್ಷಣ ಎಂಬ ಹಲವು ಮೌಲ್ಯಯುತ ಕೃತಿಗಳನ್ನೂ ಪ್ರಕಟಿಸಿದರು. ಇವರ ಕವನ ಸಂಕಲನ ರೋಹಿಣಿ, ದಾಳಿಂಬೆ ಚೆಲುವೆ, ಕರಿಗಡುಬು - ಇವು ಕಥಾಸಂಕಲನಗಳು.

ಇವರು ಬರೆದ ಸಂಪ್ರದಾನ, ಅವಧಾನ, ಸೃಷ್ಟಿದಾನ, ಅತ್ತಿಯ ಹೂವು ಮೊದಲಾದ ಕಾದಂಬರಿಗಳು ಇವರಿಗೆ ಜನಪ್ರಿಯತೆ ತಂದುಕೊಟ್ಟವು. ಕೆಲವು ಕಾದಂಬರಿಗಳು 80ರ ದಶಕದಲ್ಲಿ ಸುಧಾ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಜನಪ್ರಿಯತೆ ಗಳಿಸಿದುವು. ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲರು ಇವರ ಅವಧಾನ ಕಾದಂಬರಿ ಆಧರಿಸಿ ಅಮೃತಘುಳಿಗೆ ಎಂಬ ಚಲನಚಿತ್ರ ನಿರ್ಮಿಸಿದರು.

ಹವ್ಯಾಸಿ ಛಾಯಾಚಿತ್ರಗಾರರಾಗಿಯೂ ಇವರು ಪ್ರಸಿದ್ಧರಾಗಿದ್ದಾರೆ. ಅದರಲ್ಲಿಯೂ ಕಪ್ಪು-ಬಿಳುಪು ಚಿತ್ರಗಳಲ್ಲಿ, ಪಿಕ್ಟೋರಿಯಲ್ ಫೋಟೋಗ್ರಫಿ ವಿಭಾಗದಲ್ಲಿ ತುಂಬ ಪರಿಣಿತರಾಗಿದ್ದ ಇವರು ತಮ್ಮ ಚಿತ್ರಗಳನ್ನು ತಾವೇ ಸ್ವತಃ ಕಪ್ಪು ಕೋಣೆಯಲ್ಲಿ ಕುಳಿತು ಮುದ್ರಿಸಿ ಚಿತ್ರಗಳಿಗೆ ಜೀವಕಳೆ ತುಂಬುತ್ತಿದ್ದರು. ಇವರು ವಿವಿಧ ಸ್ಪರ್ಧೆಗಳಿಗಾಗಿ ಮುದ್ರಿಸಿದ 1940-50ರ ದಶಕದ ಫೋಟೋಗಳು ಇನ್ನೂ ಹೊಚ್ಚ ಹೊಸದಾಗಿ ನಮಗೆ ಕಾಣುತ್ತವೆ. ಕೇವಲ ಒಂದು ಪುಟ್ಟ ಬಾಕ್ಸ್ ಕ್ಯಾಮರದಿಂದ ಫೋಟೋಗ್ರಫಿ ಆರಂಭಿಸಿದ ಇವರು ಉಪಕರಣಕ್ಕಿಂತ ಅದರ ಹಿಂದಿರುವ ಮನಸ್ಸು, ಭಾವ ಮುಖ್ಯ ಎಂಬುದನ್ನು ಸ್ಪಷ್ಟವಾಗಿ ಸಾಬೀತುಪಡಿಸಿದರು. 1958ರಲ್ಲಿ ಅಂತಾರಾಷ್ಟ್ರೀಯ ಮಟ್ಟದ ಎಫ್‌ಐಎಪಿ ಪ್ರಶಸ್ತಿಗೆ ಭಾಜನರಾದ ಇವರು ಕರ್ನಾಟಕಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದು ಕೊಟ್ಟ ಕೆಲವೇ ಛಾಯಾಚಿತ್ರಕಾರರಲ್ಲಿ ಒಬ್ಬರು. ಅಮೆರಿಕ ಫೋಟೋಗ್ರಾಫರ್ ಸೊಸೈಟಿಯು ತ್ರೀಸ್ಟಾರ್ ಸರ್ಟಿಫಿಕೇಟ್ ನೀಡಿ ಇವರನ್ನು ಗೌರವಿಸಿದೆ (1966). ಫೆಡರೇಷನ್ ಆಫ್ ಇಂಡಿಯನ್ ಫೋಟೋಗ್ರಾಫಿಕ್ ಸೊಸೈಟಿಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಇವರು ಕಾರ್ಯನಿರ್ವಹಿಸಿದರು. ಫೋಟೋಗ್ರಾಫಿಯನ್ನು ಹಲವಾರು ಶಿಷ್ಯರಿಗೆ ಕಲಿಸುವಲ್ಲಿ ಯಶಸ್ವಿಯಾದರು. ಫೋಟೋಗ್ರಫಿ ಬಗ್ಗೆಯೇ ನೂರಾರು ಚಿತ್ರ-ಲೇಖನಗಳನ್ನು ಪ್ರಕಟಿಸಿರುವ ಇವರು ಭಾವಭಿವ್ಯಂಜಕ ಛಾಯಾಚಿತ್ರಕಲೆ ಎಂಬ ಅಪರೂಪದ ಪುಸ್ತಕಗಳನ್ನು ಕನ್ನಡದಲ್ಲಿ ಬರೆದರು. ಈ ಕೃತಿಗೆ ಸಾಹಿತ್ಯ ಅಕಾಡೆಮಿ ಹಾಗೂ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳು ದೊರಕಿವೆ (1996). 1982ರಲ್ಲಿ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭ್ಯವಾಗಿದೆ.

ಇವರು 2004 ಮೇ 26ರಂದು ನಿಧನರಾದರು. (ಎಚ್.ಎಸ್.ಎಂ.)

**ದೊಡ್ಮನೆ :** ಉತ್ತರ ಕನ್ನಡ ಜಿಲ್ಲೆ ಸಿದ್ಧಾಪುರ ತಾಲ್ಲೂಕಿನ ಒಂದು ಗ್ರಾಮ. ಸಿದ್ಧಾಪುರದಿಂದ ಕುಮಟಕ್ಕೆ ಹೋಗುವ ರಸ್ತೆಯಲ್ಲಿ 27 ಕಿಮೀ ದೂರದಲ್ಲಿದೆ. ತುಂಬ ಹಳೆಯದಾದ ವಿಶಾಲವಾದ ಭವಂತಿ ಮನೆಯೊಂದರ ಕಾರಣದಿಂದ ದೊಡ್ಮನೆ ಎಂಬ ಹೆಸರು ಈ ಹಳ್ಳಿಗೆ ಬಂದಿತೆಂದು ಪ್ರತೀತಿ. ಸುತ್ತಲಿನ ಹಳ್ಳಿಗಳ ಜಮೀನಿನ ಒಡೆತನವನ್ನು ಹೊಂದಿದ ದೊಡ್ಡ ಜಮೀನ್ದಾರ ಮನೆತನವೊಂದು ಈ ಮನೆಯಲ್ಲಿ ವಾಸವಾಗಿತ್ತು. ಈ ಮನೆತನ ಸ್ವಾತಂತ್ರ್ಯ ಚಳವಳಿಗೆ ಮಹತ್ವದ ಕೊಡುಗೆ ನೀಡಿದೆ. ಇದೇ ಕುಟುಂಬದ ಮಹಾದೇವಿತಾಯಿ ಎಂಬುವವರು ಗಾಂಧೀಜಿಯ ಆಶ್ರಮ ಸೇರಿ, ಅನಂತರ ವಿನೋಬಾ ಜೊತೆ ಪವನಾರ ಆಶ್ರಮದಲ್ಲಿ ವಾಸಮಾಡಿದರು. ಈಗ ಬೆಂಗಳೂರಿನಲ್ಲಿ ವಿಶ್ವನೀಡಂ ಟ್ರಸ್ಟ್ ಸ್ಥಾಪಿಸಿ ನಡೆಸುತ್ತಿದ್ದಾರೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣಹೆಗಡೆಯವರು (ನೋಡಿ) ಈ ಮನೆತನಕ್ಕೆ ಸೇರಿದವರು.

ಈ ಗ್ರಾಮ ಸಹ್ಯಾದ್ರಿ ಶ್ರೇಣಿಯ ಮನೋಹರವಾದ ದೃಶ್ಯಾವಳಿಗಳ ಕಣಿವೆಯ ನಡುವಿದೆ. ಇಲ್ಲಿ ಇತ್ತೀಚೆಗೆ ಕಟ್ಟಲಾದ ಗಣಪತಿ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳಿವೆ. ಇಲ್ಲಿ ಬುರುಡೆ ಜೋಗ ಎಂದು ಕರೆಯುವ ಒಂದು ಜಲಪಾತವಿದೆ. ಇದನ್ನು ದೊಡ್ಮನೆ ಜಲಪಾತವೆಂದೂ ಕರೆಯುತ್ತಾರೆ. ಉಂಚಳ್ಳಿ ಜಲಪಾತದಲ್ಲಿ ದುಮುಕಿ ಹರಿಯುವ ಅಘನಾಶಿನಿ ನದಿ ಇಲ್ಲಿ ಎರಡು ಕಡೆಗಳಲ್ಲಿ ಧುಮ್ಮಿಕ್ಕುತ್ತದೆ. ಮೊದಲನೆಯ ಪಾತದಲ್ಲಿ 60 ಮೀ ಆಳಕ್ಕೆ ಇಳಿದರೆ ಎರಡನೆಯ ಪಾತದಲ್ಲಿ 48 ಮೀ ಆಳಕ್ಕೆ ಇಳಿಯುತ್ತದೆ. ಈ ಸ್ಥಳವನ್ನು ತಲುಪಲು ಹೇಮನಬೈಲ್‌ವರೆಗೂ ರಸ್ತೆ ಮಾರ್ಗವಿದೆ. ಅಲ್ಲಿಂದ ಚಪ್ಪರಮನೆವರೆಗೂ ಸು. 2 ಕಿಮೀ ದೂರ ಕ್ರಮಿಸಿದರೆ ಜಲಪಾತದ ಸ್ಥಳವನ್ನು ಮುಟ್ಟಬಹುದು.

(ಆರ್.ಪಿ.ಎಚ್.)

**ದೊರೆಸ್ವಾಮಿ ಅಯ್ಯಂಗಾರ್, ವಿ. :** 1920-1997. ಅಖಿಲ ಭಾರತ ಖ್ಯಾತಿಯ ಪ್ರಸಿದ್ಧ ವೈಣಿಕರು. 1920ರಲ್ಲಿ ಜನಿಸಿದರು. ತಂದೆ ವೆಂಕಟೇಶ ಅಯ್ಯಂಗಾರ್ ಅವರು ಸ್ವತಃ ವೀಣೆ ನುಡಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ದೊರೆಸ್ವಾಮಿ ಅಯ್ಯಂಗಾರ್ಯರು ತಮ್ಮ ತಂದೆಯವರಲ್ಲಿಯೇ ಮೊದಲಿಗೆ ವೀಣಾಭ್ಯಾಸ ಮಾಡಿ, ಮುಂದಿನ ಪ್ರೌಢ ವ್ಯಾಸಂಗವನ್ನು ವೈಣಿಕಪ್ರವೀಣರೂ ಆಸ್ಥಾನ ವಿದ್ವಾಂಸರೂ ಆಗಿದ್ದ ವೆಂಕಟಗಿರಿಯಪ್ಪನವರಲ್ಲಿ ಮುಂದುವರಿಸಿ ಅವರ ಅತ್ಯಂತ ಪ್ರಿಯ ಶಿಷ್ಯರಾಗಿ, ಅನೇಕ ವರ್ಷಗಳ ಕಾಲ ವಿದ್ಯಾರ್ಜನೆಮಾಡಿ ಗುರುಕೃಪೆಗೆ ಪಾತ್ರರಾದರು. ಚಿಕ್ಕವಯಸ್ಸಿನಲ್ಲಿಯೇ ನಾಲ್ವಡಿ ಕೃಷ್ಣರಾಜೇಂದ್ರರ ಆಸ್ಥಾನದಲ್ಲಿ ವಿದ್ವಾಂಸರಾಗಿ ಗೌರವಕ್ಕೆ ಭಾಜನರಾದರು. ಟಿ.ಚೌಡಯ್ಯನವರ ಜೊತೆಯಲ್ಲಿ ಭಾರತದಾದ್ಯಂತ ಸುಮಾರು ಹತ್ತು ವರುಷಗಳಿಗೂ ಮೀರಿ ಯಶಸ್ವಿಯಾಗಿ ಸಂಗೀತ ಕಛೇರಿಗಳನ್ನು ಮಾಡಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಪಧವೀಧರರೂ ಹೌದು. ಹಿಮಾಲಯದ ಯೋಗವೇಂದಾತ ಆಶ್ರಮದ ಸ್ವಾಮಿ ಶಿವಾನಂದರ ಅನುಗ್ರಹಕ್ಕೆ ಪಾತ್ರರಾಗಿ ವೈಣಿಕ ವಿದ್ಯಪಾರಂಗತ ಎಂಬ ಪ್ರಶಸ್ತಿಯನ್ನು ಗಳಿಸಿದರು (1960). ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಮೊದಲಾದ ಭಾರತದ ಅನೇಕ ಸಂಗೀತ ಸಭೆಗಳಲ್ಲಿ ವೀಣೇ ಕಛೇರಿ ಮಾಡಿ ಕರ್ನಾಟಕಕ್ಕೆ ಕೀರ್ತಿ ತಂದುಕೊಟ್ಟರು. 1970ರಲ್ಲಿ ಶಿರಾಜ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿ ಕೀರ್ತಿಪ್ರಶಂಸೆಗಳಿಗೆ ಪಾತ್ರರಾದರು. ಮೃದುಸ್ವಭಾವದವರೂ ನಿರಾಡಂಬರ ವ್ಯಕ್ತಿತ್ವವುಳ್ಳವರೂ ಆದ ಇವರು ವೀಣಾವಾದನ ಕಲೆಯನ್ನು ತಪಸ್ಸಿನಂತೆ ಸಾಧಿಸಿ ಸಿದ್ಧಿಪಡೆದವರು. ಇವರು ನಾಡಿನಾದ್ಯಂತ ರಸಿಕ ಜನರ ಹಾಗೂ ಖ್ಯಾತ ವಿದ್ವಾಂಸರ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ. 1971ರಲ್ಲಿ ಇವರಿಗೆ ರಾಷ್ಟ್ರಪ್ರಶಸ್ತಿ ದೊರಕಿತು. 1976ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದೆ. 1997 ಅಕ್ಟೋಬರ್ 26ರಂದು ಇವರು ನಿಧನರಾದರು. ಇವರು ಬೆಂಗಳೂರು ಆಕಾಶವಾಣಿ ನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. (ವಿ.ಡಿ.)

**ದೊರೆಸ್ವಾಮಿ, ಆರ್.ಎನ್. :** 1916-2002. ಕರ್ನಾಟಕ ಸಂಗೀತ ಕಲಾವಿದ. ವೀಣ ವಿದ್ವಾಂಸ, ವಾಗ್ಗೇಯಕಾರ. ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣದಲ್ಲಿ 1916 ಡಿಸೆಂಬರ್ 12ರಂದು ಜನಿಸಿದರು. ತಂದೆ ವೆಂಕಟರಾಮಯ್ಯ, ತಾಯಿ ಸಾವಿತ್ರಮ್ಮ. ಇವರ ಪೂರ್ವಜರಾರೂ ಸಂಗೀತ ವಿದ್ವಾಂಸರಾಗಿರಲಿಲ್ಲ. ತಾಯಿ ಸಾವಿತ್ರಮ್ಮ ಮಧುರವಾಗಿ ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ಬಾಲ್ಯದಲ್ಲಿ ಸಂಗೀತದಲ್ಲಿ ಆಸಕ್ತಿ ಬೆಳಸಿಕೊಂಡ ದೊರೆಸ್ವಾಮಿಯವರು ತಮ್ಮ ಊರಿನಲ್ಲಿ

ನಡೆಯುತ್ತಿದ್ದ ಭಜನೆ, ಹರಿಕಥೆ, ಗಮಕ, ಸಂಗೀತ ಮುಂತಾದ ಕಾರ್ಯಕ್ರಮಗಳಿಗೆ ತಪ್ಪದೆ ಹೋಗುತ್ತಿದ್ದರು. ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರಿಂದ ಸಂಗೀತಾಭ್ಯಾಸ ಮಾಡಿ ವೀಣೆಯನ್ನೇ ತಮ್ಮ ಕಲಾಮಾಧ್ಯಮವಾಗಿ ಆಯ್ಕೆ ಮಾಡಿಕೊಂಡ ಇವರು ಚಿದಂಬರಂನಲ್ಲಿ ಗುರುಕುಲವಾಸ ಮಾಡಿ ಸಂಗೀತಾಭ್ಯಾಸ ಮಾಡಿದರು. ವೀಣೆ ವೆಂಕಟಗಿರಿಯಪ್ಪನವರ ಅಚ್ಚುಮೆಚ್ಚಿನ ಶಿಷ್ಯರಾದರು. ಸೇಲಂ ದೊರೆಸ್ವಾಮಿ ಅಯ್ಯಂಗಾರ್ ಅವರ ಶಿಷ್ಯತ್ವ ಪಡೆದು ಹಾಡುಗಾರಿಕೆಯಲ್ಲೂ ಪರಿಣತಿ ಪಡೆದರು. ವೀಣಾವಾದನ ಕಲೆಗೆ ಹೊಸ ಆಯಾಮ ನೀಡಿರುವ ಇವರು ವೀಣೆ ಶೇಷಣ್ಣನವರ ಭವ್ಯ ಮೈಸೂರು ವೀಣಾ ಪರಂಪರೆಗೆ ಸೇರಿದವರು.

ಸುಮಾರು ಎರಡು ದಶಕಗಳ ಕಾಲ ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿ, ಒಂದು ದಶಕ ಕಾಲ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಸುಮಾರು ಹನ್ನೆರಡು ವರ್ಷ ಲಲಿತ ಕಲೆಗಳ ಕಾಲೇಜಿನಲ್ಲಿ ವೀಣಾ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ನಾಲ್ಕು ದಶಕಗಳ ಕಾಲ ವೀಣಾವಾದನ ಕಛೇರಿಗಳನ್ನು ನಡೆಸಿ ಅಪಾರ ಅಭಿಮಾನಗಳನ್ನು ಸಂಪಾದಿಸಿಕೊಂಡರು. ಆಕಾಶವಾಣಿಯ ಉನ್ನತ ದರ್ಜೆಯ ಕಲಾವಿದರೂ ಆಗಿದ್ದ ಇವರು ಉತ್ತಮ ವಾಗ್ಮಿಗಳೂ ಹೌದು. ಸಂಗೀತ, ಸಾಹಿತ್ಯಗಳೆರಡರಲ್ಲೂ ಉನ್ನತ ಮಟ್ಟದ ಪ್ರೌಢಿಮೆಯಿದ್ದ ದೊರೆಸ್ವಾಮಿಯವರು ಸಂಗೀತದಲ್ಲಿ ಯಾವುದೇ ಸಂದೇಹವನ್ನಾದರೂ ಬಲ್ಲವರಾಗಿದ್ದರು.

ದೇಶದ ಹಲವಾರು ಸಂಗೀತ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಇವರು ಎಲ್ಲರೊಂದಿಗೆ ಸಹೃದಯತೆ ಮತ್ತು ಸರಳತೆಯಿಂದಿರುತ್ತಿದ್ದರು. ಯಾವುದೇ ಸಂಗೀತ ಸಂಸ್ಥೆಯ ಯಾವ ಸಂಗೀತ ಸಮ್ಮೇಳನ, ಸಂಕಿರಣ, ಗೋಷ್ಠಿಗಳು ನಡೆದಾಗಲೂ ಅದಕ್ಕೆ ಇವರ ಮಾರ್ಗದರ್ಶನ ದೊರೆಯುತ್ತಿತ್ತು. ಇವರು ವೀಣಾವಾದಕರಾಗಿ ಮಾತ್ರವಲ್ಲದೇ ಸಂಪ್ರದಾಯಬದ್ಧ ಸುರಸ ವಾಗ್ಗೇಯಕಾರರಾಗಿಯೂ ಹೆಸರುವಾಸಿಯಾಗಿದ್ದರು. ಇವರು ಕರ್ನಾಟಕ ಸಂಗೀತದ ಹಲವಾರು ಗೇಯ ರಚನೆಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಜತಿಸ್ವರಗಳು, ವರ್ಣಗಳು, ತಿಲ್ಲಾನ ಮತ್ತು ಕೀರ್ತನೆಗಳನ್ನು ಇಂದಿನ ಅನೇಕ ಖ್ಯಾತ ಕಲಾವಿದರು ತಮ್ಮ ಕಛೇರಿಗಳಲ್ಲಿ ಹಾಡುತ್ತಾರೆ. ಇವರಿಂದ ತರಬೇತಿ ಪಡೆದ ಅನೇಕ ಶಿಷ್ಯರು ಖ್ಯಾತ ಕಲಾವಿದರಾಗಿ ಹೆಸರು ಪಡೆದಿದ್ದಾರೆ.

ಇವರ ಕಲಾಸಾಧನೆಯನ್ನು ಗುರುತಿಸಿ ಇವರಿಗೆ ಹಲವಾರು ಪ್ರಶಸ್ತಿ ಸನ್ಮಾನಗಳು ದೊರಕಿವೆ. ವೈಣಿಕ ಪ್ರವೀಣ, ವೀಣಾ ವಿದ್ಯಾವಾರಿಧಿ ಹಾಗೂ ಶ್ರೀದತ್ತಪೀಠದ ಗಣಪತಿ ಸಚ್ಚಿದಾನಂದ ಸ್ವಾಮಿಯವರು ನೀಡಿದ 'ವೈಣಿಕ ಕಲ್ಪತರು' - ಇವು ಕೆಲವು. ಇವರಿಗೆ 1983ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾತಿಲಕ ಪ್ರಶಸ್ತಿಯೂ 1989ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ 2001ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯೂ ಲಭಿಸಿವೆ. ಇವರು ಮೈಸೂರಿನ ಸಂಗೀತ ಕಲಾಭಿವರ್ಧಿನೀ ಸಭಾ ಹಾಗೂ ಬೆಂಗಳೂರಿನ ಗಾಯನ ಸಮಾಜದ ಸಮ್ಮೇಳನಾಧ್ಯಕ್ಷರಾಗಿದ್ದರು. ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರ ಇವರಿಗೆ ವೀಣಾ ವಾಗ್ಗೇಯಭೂಷಣ ಎಂಬ ಪ್ರಶಸ್ತಿಯನ್ನೂ ಮಹತೀ ಎಂಬ ಅಭಿನಂದನಾ ಗ್ರಂಥವನ್ನೂ ಸಮರ್ಪಿಸಿದೆ (2000). ಇವರು 2002 ಆಗಸ್ಟ್ 17ರಂದು ನಿಧನಹೊಂದಿದರು. (ಎಸ್‌ಯು.ಎಂ)

**ಧನಂಜಯ ಶಿಲ್ಪಿ :** 1934- . ಹೆಸರಾಂತ ಶಿಲ್ಪಿ. 1934ರಲ್ಲಿ ಜನಿಸಿದರು. ಮೆಟ್ರಿಕ್ ಪರೀಕ್ಷೆಗೆ ಬೆಳಗಾಂವಿ ಸರ್ದಾರ್ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಅಲ್ಲಿನ ಡ್ರಾಯಿಂಗ್ ಮಾಸ್ಟರ್ ಸಿ.ವಿ. ಕರದಗಿಯವರಿಂದ ಪ್ರೇರಿತರಾಗಿ, ಚಿತ್ರಕಲೆಯಲ್ಲಿ ಓನಾಮ ಕಲಿತು ಮೆಟ್ರಿಕ್‌ಗೆ ಮೊದಲೇ ಇಂಟರ್‌ಗ್ರೇಡ್ ಪರೀಕ್ಷೆಯಲ್ಲಿ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣರಾದರು (1951). ಅನಂತರ ಮೆಟ್ರಿಕ್‌ನಲ್ಲಿಯೂ ಉತ್ತೀರ್ಣರಾಗಿ (1953) ಸರಕಾರಿ ವೆಲ್‌ಫೇರ್ ಇನ್ಸ್‌ಪೆಕ್ಟರಾಗಿ ಐದು ವರ್ಷ ಸೇವೆ ಸಲ್ಲಿಸಿದರು. ಚಿತ್ರ ಕಲೆಯನ್ನು ಮುಂದುವರಿಸಬೇಕೆಂಬ ಉತ್ಕಟಾಕಾಂಕ್ಷೆಯಿಂದ ಆ ಕೆಲಸಕ್ಕೆ ರಾಜೀನಾಮೆ ನೀಡಿದರು. ಶಿಲ್ಪ ಮತ್ತು ಮಾಡೆಲಿಂಗ್‌ನಲ್ಲಿ ಹೆಚ್ಚಿನ ತರಬೇತಿಗಾಗಿ ಮುಂಬೈನ ಜಿ.ಜಿ. ಕಲಾಶಾಲೆ ಸೇರಿದರು. ಅಲ್ಲಿ ತಮ್ಮ ಜೀವನೋಪಾಯಕ್ಕಾಗಿ ಕಲಾವಿದ ಬಲವಂತರಾವ್ ತಾಲೀಮರಲ್ಲಿ ಸಹಾಯಕರಾಗಿ ದುಡಿಯುತ್ತಿದ್ದರು. ಮೊದಲನೆಯ ವರ್ಷದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದುದರಿಂದ ಇವರನ್ನು ನೇರವಾಗಿ ಮೂರನೆಯ ತರಗತಿಗೆ ಸೇರಿಸಿಕೊಳ್ಳಲಾಯಿತು. ತಮ್ಮ ಐದು ವರ್ಷಗಳ ವ್ಯಾಸಂಗದಲ್ಲಿ ಪ್ರತಿವರ್ಷವೂ ಉನ್ನತ ದರ್ಜೆ ಗಳಿಸಿದವರು. ವ್ಯಾಸಂಗವನ್ನು ಮುಗಿಸಿದ (1964) ಬಳಿಕ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನುರಿತ ಶಿಲ್ಪಿಗಳಾದ ನಾನಾ, ಕರ್ಮರ್‌ಕರ್, ಬಲವಂತರಾವ್ ತಾಲೀಮರಲ್ಲಿ ಕೆಲಸ ಮಾಡಿದರು. ಆ ಸಂದರ್ಭದಲ್ಲಿ ಇವರು ಭಾಗವಹಿಸಿದ ಅಂತಾರಾಷ್ಟ್ರೀಯ ಶಿಲ್ಪಿಗಳ ಶಿಬಿರದಲ್ಲಿ ನಗದು ಬಹುಮಾನ ಗಳಿಸಿದರು.

ಕೆಲವು ಕಾಲ ಶಿಲ್ಪಭಾರತಿಯಲ್ಲಿ ಕೆಲಸ ಮಾಡಿ ಬೆಂಗಾಲ್ ಪಾಟರೀಸ್‌ನ ಮಾಡೆಲರ್ ಆಗಿ ಸೇರಿದರು (1967). ಅನಂತರ ಜಿ.ಜಿ. ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಸೇರಿ, ಆ ಶಾಲೆಯಲ್ಲಿ ಕೆತ್ತನೆ ವಿಭಾಗವನ್ನು ಸ್ಥಾಪಿಸುವುದರಲ್ಲಿ ನೆರವಾದರು. 1979 ರ ವರೆಗೂ ಇವರು ಜಿ.ಜಿ. ಕಲಾಶಾಲೆಯಲ್ಲಿ ಸೇವೆ ಸಲ್ಲಿಸಿದರು.

ಇವರು ರಚಿಸಿರುವ ಕೃತಿಗಳು ಭಾರತದ ನಾನಾ ಭಾಗಗಳಲ್ಲಿ ಹರಡಿವೆ. ದೇವತಾಮೂರ್ತಿಗಳಲ್ಲಿ ಹೆಸರಾಂತ ವ್ಯಕ್ತಿಗಳ ಶಿಲ್ಪಕೃತಿಗಳ ನಿರ್ಮಾಣದಲ್ಲಿಯೂ ಇವರು ಸೈ ಎನಿಸಿಕೊಂಡಿದ್ದಾರೆ. ಚಿತ್ರದುರ್ಗದ ಮದಕರಿನಾಯಕನ ಪ್ಲಾಸ್ಟರ್ ರೂಪ ಹಾಗೂ ಅಂಬೇಡ್ಕರ್ ಕೃತಿ ಇದಕ್ಕೆ ಸಾಕ್ಷಿ. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದರು (1980-83). ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಹಾಗೂ (1984) ಕರ್ನಾಟಕ ಸರ್ಕಾರದ ಜಕಣಾಚಾರಿ ಪ್ರಶಸ್ತಿ (2002) ಲಭಿಸಿವೆ.

(ಎನ್.ಎಮ್.)

**ಧರಣಿಪಂಡಿತ :** ಸು. 1650. ಜೈನಕವಿ. ವರಾಂಗನೃಪಚರಿತೆ, ಬಿಜ್ಜಳರಾಯ ಚರಿತೆ ಎಂಬ ಕಾವ್ಯಗಳ ಕರ್ತೃ. ವಿಷ್ಣುವರ್ಧನಪುರದಲ್ಲಿ ವೈದ್ಯನಾಗಿದ್ದ ಧರಣಿಪಂಡಿತನ ಮೊಮ್ಮಗ. ಪದ್ಮಪಂಡಿತನ ಮಗ. ಪೂರ್ವಕವಿಗಳಲ್ಲಿ ರನ್ನ, ಪಂಪ, ಪೊನ್ನ, ನೇಮಿಚಂದ್ರ, ನಾಗವರ್ಮ ಇವರನ್ನು ಸ್ತುತಿಸಿದ್ದಾನೆ.

ವರಾಂಗನೃಪಚರಿತೆ ಭಾಮಿನೀಷಟ್ಪದಿಯಲ್ಲಿವೆ. ದೊರೆತ ಅಸಮಗ್ರ ಪ್ರತಿಯಲ್ಲಿ 8 ಆಶ್ವಾಸಗಳಿವೆ. ಪೂರ್ವದಲ್ಲಿ ಮುನೀಶ್ವರರು ಹೇಳಿದ ಈ ಕಥೆಯನ್ನು ಕನ್ನಡದಲ್ಲಿ ತಾನು ರಚಿಸಿದಂತೆ ಕವಿ ಹೇಳಿಕೊಂಡಿದ್ದಾನೆ.

ಬಿಜ್ಜಳರಾಯಚರಿತೆ ಮತೀಯ ವಸ್ತುವನ್ನೂ ಚಾರಿತ್ರಿಕ ವಸ್ತುವನ್ನೂ ಅವಲಂಬಿಸಿ ಕಟ್ಟಿರುವ ಕಾಲ್ಪನಿಕ ಕಾವ್ಯ. ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 12 ಸಂಧಿಗಳೂ 1239 ಪದ್ಯಗಳೂ ಇವೆ. ಇನ್ನೊಂದು ಪ್ರತಿಯಲ್ಲಿ ಪದ್ಯ ಸಂಖ್ಯೆ 1371 ಎಂದಿದೆ. ಕಲ್ಯಾಣಪುರದ ಬಿಜ್ಜಳರಾಯನ ಕಥೆ ಕಾವ್ಯವಸ್ತು. ಹಿಂದೆ ವಿಜಯಮ್ಮ ಎಂಬುವಳು ತನ್ನ ತಾಯಿಗೆ ಹೇಳಿದ ಕಥೆಯನ್ನು ತಾನು ವಿಸ್ತರಿಸಿ ಬರೆದಿರುವುದಾಗಿ ಹೇಳಿದ್ದಾನೆ. ಬಿಜ್ಜಳ ಬಸವಣ್ಣನ ತಂಗಿ ಪದ್ಮಿನಿಯನ್ನು ಮದುವೆಯಾಗಿ ಬಸವಣ್ಣನನ್ನು ಸೇನಾಧಿಪತಿಯಾಗಿ ಮಾಡಿದ. ಜೈನಧರ್ಮಿಯಾದ ಬಿಜ್ಜಳ ವೀರಶೈವ ಧರ್ಮಿಯಾದ ಬಸವಣ್ಣನಿಗಿಂತ ತಾನು ಮಿಗಿಲೆಂದು ವಾದಿಸಿ ಬಸವಣ್ಣನನ್ನು ಹಲವು ಸಲ ಸೋಲಿಸಿದ. ಕೊನೆಗೆ ಬಸವಣ್ಣ ವಿಷದ ಮಾವಿನ ಹಣ್ಣನ್ನು ಬಿಜ್ಜಳ ಮೂಸಿ ಸಾಯುವಂತೆ ಮಾಡಿ ತಾನೂ ಉಳಿವೆ ಎಂಬಲ್ಲಿ ಬಾವಿಗೆ ಬಿದ್ದು ಸತ್ತ. ಇದು ಇಲ್ಲಿನ ಕಥಾಸರಣಿ, ವಚನಗಳಲ್ಲಿ ಕಾಣುವ ಬಸವಣ್ಣನ ವ್ಯಕ್ತಿತ್ವಕ್ಕೂ ಇಲ್ಲಿ ಕಾಣುವ ಬಸವಣ್ಣನ ವ್ಯಕ್ತಿತ್ವಕ್ಕೂ ಏನೇನೂ ಹೋಲಿಕೆ ಕಂಡುಬರುವುದಿಲ್ಲ.

ಕೃತಿಗೆ ಐತಿಹಾಸಿಕ ದೃಷ್ಟಿಯಿಂದ ಯಾವುದೇ ಮಹತ್ತ್ವವಿಲ್ಲದಿದ್ದರೂ ಅಂದಿನ ಧಾರ್ಮಿಕ ಹಿನ್ನೆಲೆಯನ್ನು ತಿಳಿಯಲು ಸಹಾಯಕವಾಗಿದೆ.

ಪರಮತವಿಡಂಬನೆ ಎದ್ದು ಕಾಣುತ್ತದೆ. ವೀರಶೈವ ಧರ್ಮವನ್ನು ಕವಿ ಕಟುವಾಗಿ ಟೀಕಿಸಿದ್ದಾನೆ. ಭಾಷೆ ಸರಳವಾಗಿದೆ. ಅಲ್ಲಲ್ಲಿ ಉರ್ದು ಶಬ್ದಗಳ ಬಳಕೆ ಕಂಡುಬರುತ್ತದೆ. (ಎಂ.ಎಲ್.ಎಲ್.)

**ಧರ್ಮಗಳು :** ಕರ್ನಾಟಕದಲ್ಲಿ ಇಂದು ಪ್ರಚಲಿತವಾಗಿರುವ ಪ್ರಧಾನ ಧರ್ಮಗಳೆಂದರೆ ಹಿಂದು, ಇಸ್ಲಾಂ, ಕ್ರೈಸ್ತ, ಜೈನ, ಬೌದ್ಧ ಮತ್ತು ಸಿಖ್.

ಐತಿಹಾಸಿಕವಾಗಿ, ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಪ್ರಚಲಿತವಾಗಿದ್ದುದು ಸ್ಥಳೀಯವಾದ ಜನಪದ ಧರ್ಮ. ಯಾವ ಶಾಸ್ತ್ರ ಅಥವಾ ಸೈದ್ಧಾಂತಿಕ ಹಿನ್ನೆಲೆಯ ಬೆಂಬಲವಿಲ್ಲದಿದ್ದರೂ ಪರಂಪರಾನುಗತ ನಂಬಿಕೆಗಳ ಬಲದ ಮೇಲೆ ಇಂದಿಗೂ ಸಾಕಷ್ಟು ಪ್ರಮಾಣದಲ್ಲಿ ಜನಪದ ಧರ್ಮೀಯ ಆಚರಣೆಗಳು ಉಳಿದುಕೊಂಡಿರುವುದನ್ನು ಗಮನಿಸಿದರೆ ಹಿಂದೆ ಇದೇ ಬಹುಸಂಖ್ಯಾತರಲ್ಲಿ ಹರಡಿದ್ದ ಧರ್ಮವಾಗಿರಬೇಕೆಂಬುದು ಸ್ಪಷ್ಟವಾಗುತ್ತದೆ. ಕ್ರಿ.ಪೂ. ಸು. 4-3ನೆಯ ಶತಮಾನಗಳ ಹೊತ್ತಿಗೆ ಬಹುಶಃ ಕರ್ನಾಟಕ ಮಗಧ ಸಾಮ್ರಾಜ್ಯಕ್ಕೆ ಸೇರಿದಂದಿನಿಂದ ಔತ್ತರೇಯ ಧರ್ಮಗಳಾದ ಹಿಂದು, ಬೌದ್ಧ ಮತ್ತು ಜೈನ ಧರ್ಮಗಳೂ ಇಲ್ಲಿ ಹರಡಲಾರಂಭಿಸಿದುವು. ಪ್ರಾರಂಭದಲ್ಲಿ ಈ ಧರ್ಮಗಳು ನಗರ ಪರಿಸರಗಳಲ್ಲಿ ಹೆಚ್ಚು ವ್ಯಾಪಕವಾಗಿದ್ದು ಕ್ರಮೇಣ ಜನಸಾಮಾನ್ಯರಲ್ಲೂ ಹರಡಲಾರಂಭಿಸಿದಂತೆ ತೋರುತ್ತದೆ. ಬೌದ್ಧಧರ್ಮ ಮುಂದೆ ಸು. 10-12ನೆಯ ಶತಮಾನಗಳ ವರೆಗೆ ಮಾತ್ರ ಇಲ್ಲಿ ಪ್ರಚಲಿತವಾಗಿತ್ತು. ಇತ್ತೀಚೆಗೆ ನಡೆದ ಬೌದ್ಧ ಧರ್ಮದ ಪ್ರಸಾರ ಮತ್ತು ಅನೇಕ ಟಿಬೆಟ್ ಮೂಲದ ಜನ ಈಗ ಇಲ್ಲಿ ಬಂದು ನೆಲೆಸಿರುವುದರಿಂದ ಇಂದು ಪುನಃ ಬೌದ್ಧಧರ್ಮೀಯರು ಸುಮಾರು ಸಂಖ್ಯೆಯಲ್ಲಿದ್ದಾರೆ. ಹಿಂದು ಮತ್ತು ಜೈನಧರ್ಮಗಳು ಕ್ರಿಸ್ತಪೂರ್ವಕಾಲದಿಂದ ಇಂದಿನವರೆಗೂ ಅವಿಚ್ಛಿನ್ನವಾಗಿ ಬೆಳೆದು ಬಂದಿವೆ. ಅದರಲ್ಲೂ ಹಿಂದು ಧರ್ಮ ಮತ್ತು ಜನಪದ ಧರ್ಮಗಳು ಪರಸ್ಪರಾನುವರ್ತಿಗಳಾಗಿ ಸಾಕಷ್ಟು ಕೊಳುಕೊಡೆಗಳೊಡನೆ ಬೆಳೆದದ್ದರಿಂದ ಈ ಸಂಯೋಗಿತ ಹಿಂದು ಧರ್ಮವೇ ಇಂದು ಬಹು ಸುಖ್ಯಾತ ಧರ್ಮವಾಗಿದೆ. ಸು. 8-9ನೆಯ ಶತಮಾನದ ಹೊತ್ತಿಗೆ ಅರಬ್ಬೀ ವ್ಯಾಪಾರಸ್ಥರಿಂದ ಕರ್ನಾಟಕಕ್ಕೆ ಇಸ್ಲಾಂ ಧರ್ಮದ ಸಂಪರ್ಕ ಒದಗಿಬಂದರೂ ಅದು ಇಲ್ಲಿ ನೆಲೆಯೂರಿ ಬೆಳೆಯಲಾರಂಭಿಸಿದ್ದು 14ನೆಯ ಶತಮಾನದಾರಭ್ಯ. ಅಂದರೆ ಕರ್ನಾಟಕದಲ್ಲಿ ಇಸ್ಲಾಮೀ ರಾಜ್ಯಗಳು ಸ್ಥಾಪನೆಯಾದ ಕಾಲದಿಂದ, ಕರ್ನಾಟಕದಲ್ಲಿ ಕ್ರೈಸ್ತಧರ್ಮದ ಬಗ್ಗೆ 14-15ನೆಯ ಶತಮಾನಗಳಲ್ಲಿ ಕೆಲವು ಅಪರೂಪ ಉಲ್ಲೇಖಗಳು ದೊರಕುವುದಾದರೂ ಅದು ಇಲ್ಲಿ ಹೆಚ್ಚುಮಟ್ಟಿಗೆ ಹರಡಲಾರಂಭವಾದದ್ದು ಸು. 16ನೆಯ ಶತಮಾನದಾರಭ್ಯ. ಪೋರ್ಚುಗೀಸ್, ಫ್ರೆಂಚ್, ಜರ್ಮನ್ ಮತ್ತು ಬ್ರಿಟಿಷ್ ಪಾದರಿಗಳು ಇದಕ್ಕಾಗಿ ಶ್ರಮಿಸಿದ್ದಾರೆ. ಸಿಖ್ ಧರ್ಮದ ಪ್ರವರ್ತಕನಾದ ಗುರುನಾನಕ್ ಕರ್ನಾಟಕದ ಬಿದರೆ ಬಳಿಯ ನಾನಕ್‌ಝರಾದ ಬಳಿ ಕೆಲಕಾಲ ತಂಗಿದ್ದನೆಂದು ಹೇಳಿಕೆಗಳಿವೆ. ಆದರೆ ಇಂದು ಕರ್ನಾಟಕದಲ್ಲಿ ಕಂಡುಬರುವ ಹೆಚ್ಚಿನ ಸಿಖ್ ಮತೀಯರು ವ್ಯಾಪಾರ, ಉದ್ಯೋಗಗಳಿಗಾಗಿ ಇತ್ತೀಚಿನ ವರ್ಷಗಳಲ್ಲಿ ವಲಸೆ ಬಂದವರು. ಹಾಗೆಯೇ ಜರತುಷ್ಟ್ರರ ಪ್ರಸ್ತಾಪ ಕ್ರಿ.ಶ. 9ನೆಯ ಶತಮಾನದಲ್ಲಿ ಅಮೋಘವರ್ಷನ ಕಾಲದ ಶಾಸನಗಳಲ್ಲಿ ಕಂಡುಬರುವುದಾದರೂ ಇಂದು ನೆಲೆಸಿರುವ ಜರತುಷ್ಟ್ರರು ಸಹ ಈಚಿನ ವರ್ಷಗಳಲ್ಲಿ ಮುಂಬಯಿ ಸೂರತ್ ಮೊದಲಾದೆಡೆಗಳಿಂದ ಇಲ್ಲಿಗೆ ವಲಸೆ ಬಂದವರು. ಕರ್ನಾಟಕದಲ್ಲಿ ಕಂಡುಬರುವ ಎಲ್ಲ ಪ್ರಮುಖ ಧರ್ಮಗಳಲ್ಲೂ ಅನೇಕ ಪಂಥೋಪಪಂಥಗಳೂ ಜಾತಿಗಳೂ ಇವೆ. ಯಾಪನೀಯ ಜೈನ, ವೀರಶೈವ, ಮತ್ತು ಮಾಧ್ವ ಪಂಥ'ಗಳಿಗೆ ಕರ್ನಾಟಕವೇ ಉಗಮಸ್ಥಾನ. ಕಾಲಾನುಕಾಲದಲ್ಲೂ ಹಲವು ಧರ್ಮಪಂಥ'ಗಳ ಆಗರವಾಗಿದ್ದು ಮತಸಹಿಷ್ಣುತೆಯನ್ನು ವಿಶೇಷವಾಗಿ ಬೆಳೆಸಿಕೊಂಡಿರುವುದು ಈ ನಾಡಿನ ವೈಶಿಷ್ಟ್ಯವಾಗಿದೆ.

(ಕರ್ನಾಟಕದಲ್ಲಿ ಪ್ರಚಲಿತವಾಗಿ ಇದ್ದ ಮತ್ತು ಇರುವ ಪ್ರಮುಖ ಧರ್ಮ ಪಂಥಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಇದೇ ಸಂಪುಟದಲ್ಲಿ ಪ್ರತ್ಯೇಕ ಲೇಖನಗಳಲ್ಲಿ ಕೊಡಲಾಗಿದೆ).

**ಧರ್ಮಸಿಂಗ್ ಎನ್.:** 1936- . ಕರ್ನಾಟಕ ರಾಜ್ಯದ ಮುಖ್ಯಮಂತ್ರಿ (2004 ಮೇನಿಂದ) ಹಿರಿಯ ರಾಜಕಾರಣಿ. ಗುಲ್ಬರ್ಗ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಭೀಮಾ ತೀರದ ಪುಟ್ಟ ಗ್ರಾಮ ನೆಲೋಗಿಯಲ್ಲಿ ನಾರಾಯಣಸಿಂಗ್ ದಂಪತಿಗಳ ಮಗನಾಗಿ 1936 ಡಿಸೆಂಬರ್ 25ರಂದು ಜನಿಸಿದರು. ಇವರದು ಒಂದು ಸಾಮಾನ್ಯ ಕೃಷಿ ಕುಟುಂಬ. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲೇ ಪೂರೈಸಿದರು. ಬಾಲ್ಯದಿಂದಲೂ ಜನಾನುರಾಗ ಮತ್ತು ಸಾತ್ವಿಕ ಗುಣಗಳನ್ನು ರೂಢಿಸಿಕೊಂಡಿದ್ದ ಇವರು ಹೆಚ್ಚಿನ ವಿದ್ಯಾಭ್ಯಾಸ ಮಾಡುವುದರ ಬಗ್ಗೆ ದೃಢ ನಿಶ್ಚಯವುಳ್ಳವರಾಗಿದ್ದರು. ವಿದ್ಯಾರ್ಥಿ ಜೀವನದಲ್ಲಿ ಗಳಿಕೆಗಾಗಿ ಮನೆಪಾಠ ಹೇಳಿಕೊಡುವುದರಿಂದ ಹಿಡಿದು ಶಾಲಾಮಾಸ್ತರಾಗುವ ತನಕ ಸ್ವಾವಲಂಬಿಯಾಗಲು ಪ್ರಯತ್ನಿಸಿದರು. ಅನೇಕ ಹಿತೈಷಿಗಳ ನೆರವೂ ಇವರ ಶಿಕ್ಷಣಕ್ಕೆ ಉತ್ತೇಜನ ನೀಡಿತು. ಇವರು ತಮ್ಮ ಆಸಕ್ತಿಯ ವಿಷಯವಾಗಿದ್ದ ಕಾನೂನು ವಿಷಯದಲ್ಲಿ ಹೈದರಾಬಾದ್‌ನಲ್ಲಿ ಓದಿ ಬಿ.ಎಲ್.ಪದವಿ ಗಳಿಸಿದರು.

ಕಾನೂನು ಪದವೀಧರರಾದ ಅನಂತರ ಗುಲ್ಬರ್ಗದಲ್ಲಿ ವಕೀಲಿ ವೃತ್ತಿ ಕೈಗೊಂಡರು. ಗುಲ್ಬರ್ಗ ನಗರ ಸಭೆಯ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಶೀಲರಾದರು. ಎಡಪಂಥದತ್ತ ಒಲವಿದ್ದ ಇವರು 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಇಂದಿರಾಗಾಂಧಿಯವರ ಆಡಳಿತ ಕಾಂಗ್ರೆಸ್ ಪಕ್ಷ ಸೇರಿದರು. ತರುವಾಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಬಾಲ್ಯದ ಬಡತನವನ್ನೂ ಮರೆಯದೆ ಎಲ್ಲರೊಂದಿಗೆ ಒಂದಾಗಿ ಸಾಗುವ ಹೊಂದಾಣಿಕೆಯ ಗುಣವನ್ನು ರೂಢಿಸಿಕೊಂಡ ಇವರು ಬಹು ಬೇಗನೆ ಸಾರ್ವಜನಿಕ ವಲಯದಲ್ಲಿ ಜನಪ್ರಿಯರಾದರು.

1972ರಲ್ಲಿ ಡಿ.ದೇವರಾಜ ಅರಸು ಕಾಂಗ್ರೆಸ್ ಸಂಚಾಲಕರಾಗಿದ್ದಾಗ ಪಕ್ಷದಿಂದ ರಾಜ್ಯ ವಿಧಾನ ಸಭೆಗೆ ಜೇವರ್ಗಿ ಕ್ಷೇತ್ರದಿಂದ ಸ್ಪರ್ಧಿಸಿದರು. ಆಗ ಇದ್ದ ಇಂದಿರಾ ಅಲೆಯಿಂದಾಗಿ ಸುಲಭವಾಗಿ ಗೆದ್ದರು. ಅನಂತರ ಲೋಕಸಭೆಗೆ ಸ್ಪರ್ಧಿಸಿ ಆಯ್ಕೆಯಾದರು (1980). ಆದರೆ ಇಂದಿರಾಗಾಂಧಿಯವರ ಅಪೇಕ್ಷೆಯ ಮೇರೆಗೆ ಕೇರಳದ ಸ್ಟೀಫನ್‌ರವರಿಗೆ ಸ್ಥಾನ ತೆರವು ಮಾಡಿಕೊಟ್ಟರು. ತರುವಾಯ ರಾಜ್ಯ ಸಚಿವ ಸಂಪುಟ ಸೇರಿದರು. ಜನರ ಕುಂದುಕೊರತೆಗಳಿಗೆ ಸದಾ ಸ್ಪಂದಿಸುತ್ತಿದ್ದ ಇವರು ಸತತವಾಗಿ ಜೇವರ್ಗಿ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗುತ್ತ ಬಂದರು. ಇವರು ವಿವಿಧ ಸಂದರ್ಭಗಳಲ್ಲಿ ನಗರಾಭಿವೃದ್ಧಿ, ಕಂದಾಯ, ಗೃಹ, ಅಬ್ಕಾರಿ, ಸಮಾಜಕಲ್ಯಾಣ, ಲೋಕೋಪಯೋಗಿ ಮೊದಲಾದ ಖಾತೆಗಳನ್ನು ನಿರ್ವಹಿಸಿದರು. 1997-98ರಲ್ಲಿ ಇವರು ಕರ್ನಾಟಕ ಪ್ರದೇಶಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು.

ಇವರು ಆರ್ಥಿಕವಾಗಿ ಹಿಂದುಳಿದ ರಜಪೂತ ಸಮುದಾಯಕ್ಕೆ ಸೇರಿದವರು. ಬಹು ಪೂರ್ವದಲ್ಲಿ ಇವರ ಹಿರಿಯರು ಉತ್ತರ ಭಾರತದ ಕಡೆಯಿಂದ ಬಂದು ನೆಲಸಿದರೆಂದು ತಿಳಿದುಬರುತ್ತದೆ. 2004ರಲ್ಲಿ ನಡೆದ ರಾಜ್ಯವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟಬಹುಮತ ಬಾರದ ಸ್ಥಿತಿಯಲ್ಲಿ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳ ಸಮ್ಮಿಶ್ರ ಸರ್ಕಾರದ ರಚನೆಯಾಯಿತು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಧರ್ಮಸಿಂಗ್ ಅವರು 2004 ಮೇ 28ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಪ್ರಭಾವತಿ ಇವರ ಪತ್ನಿ, ಇವರಿಗೆ ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. *

**ಧರ್ಮವೀರ :** ಕರ್ನಾಟಕದ ಮಾಜಿ ರಾಜ್ಯಪಾಲರು (1969-1972). ಇವರು ಲಖನೌ ಅಲಹಾಬಾದ್ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ. ಲಂಡನ್ನಿನ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಶಾಲೆಗಳಲ್ಲಿ ಅಧ್ಯಯನ ನಡೆಸಿದ ಬಳಿಕ ಸಿವಿಲ್ ಸರ್ವೀಸ್ ಅಧಿಕಾರಿಯಾಗಿ ಜೀವನವನ್ನಾರಂಭಿಸಿದರು. (1929) . ಭಾರತಕ್ಕೆ ಸ್ವಾತಂತ್ರ ಬಂದಾಗ

ಕೇಂದ್ರ ಸಂಪುಟದ ಜಂಟಿ ಕಾರ್ಯದರ್ಶಿಯಾಗಿ ನೇಮಕಗೊಂಡರು. ಮಾಜಿ ಪ್ರಧಾನಿ ಜವಹರಲಾಲ್ ನೆಹರೂ ಅವರ ಆಪ್ತ ಕಾರ್ಯದರ್ಶಿಯಾಗಿದ್ದರು. ತಮ್ಮ ದಕ್ಷ ಆಡಳಿತದಿಂದ ನೆಹರೂ ಅವರ ಮೆಚ್ಚುಗೆಗೆ ಪಾತ್ರರಾದ ಇವರು ಮುಂದೆ ಲಂಡನ್‌ಲ್ಲಿ ಹೈಕಮೀಷನರ್ ಆಗಿದ್ದ ವಿ.ಕೆ.ಕೃಷ್ಣಮೆನನ್‌ರವರ ಜೊತೆ ಉಪ ಹೈಕಮೀಷನರ್ ಆಗಿ ಕೆಲಸ ಮಾಡಿದರು. ಅನಂತರ ಇವರು ಜೆಕೊಸ್ಲೊವಾಕಿಯದ ರಾಯಭಾರಿಯಾಗಿ ನೇಮಕಗೊಂಡರು. ಅಲ್ಲಿಂದ ಆಸ್ಟ್ರೇಲಿಯಾಕ್ಕೆ ಭಾರತದ ಹೈಕಮೀಷನರ್ ಆಗಿ ನೇಮಕಗೊಂಡರಾದರೂ ಅಧಿಕಾರ ವಹಿಸಿಕೊಳ್ಳುವ ಮುನ್ನವೇ ಭಾರತ ಸರ್ಕಾರ ಇವರನ್ನು ವಾಪಸ್ಸು ಕರೆಯಿಸಿಕೊಂಡು ನಿರಾಶ್ರಿತರ ಪುನರ್ವಸತಿ ಸಚಿವಾಲಯದ ಕಾರ್ಯದರ್ಶಿಯನ್ನಾಗಿ ನೇಮಿಸಿತು. ಪಾಕಿಸ್ತಾನದಿಂದ ಬಾರತಕ್ಕೆ ಬಂದ ತೊಂಬತ್ತೈದು ಲಕ್ಷ ನಿರಾಶ್ರಿತರಿಗೆ ನೆಲೆ ಕಲ್ಪಿಸುವ ಹೊಣೆಯನ್ನು ಅತ್ಯಂತ ಯಶಸ್ವಿಯಾಗಿ ಇವರು ನಿರ್ವಹಿಸಿದರು. ಬಳಿಕ ನವದೆಹಲಿಯ ನಗರ ಆಡಳಿತ ನಿರ್ವಹಣೆ ವಹಿಸಿಕೊಂಡರು. ಅನಂತರ ಇವರನ್ನು ಪಂಜಾಬಿನ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. ರಾಜಕೀಯ ಅಶಾಂತಿಯು ನೆಲೆಯಾಗಿದ್ದ ಪಂಜಾಬಿನಲ್ಲಿ ಶಾಂತಿ ನೆಲೆಗೊಳ್ಳಲು ನಿರಂತರ ಪ್ರಯತ್ನ ನಡೆಸಿದರು. ಅನಂತರ ಇವರನ್ನು ಬಂಗಾಲದ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. ತಮ್ಮ ಆಡಳಿತ ಬಿಗಿಮುಷ್ಟಿಯ ಜೊತೆಗೆ ನೈತಿಕಶಕ್ತಿಯ ಸಂಧಾನ ಚಾತುರ್ಯದಿಂದ ಪಶ್ಚಿಮ ಬಂಗಾಲದಲ್ಲಿಯೂ ಸಮರ್ಥವಾಗಿ ಕರ್ತವ್ಯ ನಿರ್ವಹಿಸಿದರು. ಅನಂತರ ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡು ನಾಲ್ಕುವರ್ಷಗಳ ಕಾಲ ಸೇವೆ ಸಲ್ಲಿಸಿದರು. (ಎಚ್.ಎಸ್.ಕೆ.)

**ಧರ್ಮಸ್ಥಳ :** ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಪುಣ್ಯಕ್ಷೇತ್ರ. ಕೊಕ್ಕಡ ಫಿರ್ಕಾದಲ್ಲಿರುವ ಈ ಕ್ಷೇತ್ರದ ವಿಸ್ತೀರ್ಣ 20.73 ಚಕಿಮೀ. ಪಶ್ಚಿಮ ಘಟ್ಟಗಳ ಪಶ್ಚಿಮದ ಇಳಿಜಾರಿನ ಅಂಚಿನಲ್ಲಿರುವ ಧರ್ಮಸ್ಥಳ ಮಂಗಳೂರಿನ ಪೂರ್ವಕ್ಕೆ 75 ಕಿಮೀ, ಬೆಳ್ತಂಗಡಿಯ ಆಗ್ನೇಯಕ್ಕೆ ಸು. 15 ಕಿಮೀ ಮತ್ತು ಪುತ್ತೂರಿಗೆ 50 ಕಿಮೀ ದೂರದಲ್ಲಿ, ಮಂಗಳೂರು-ಚಾರ್ಮಾಡಿ ಮಾರ್ಗದಲ್ಲಿ ಉಜಿರೆಯಿಂದ 10 ಕಿಮೀ ಆಗ್ನೇಯದಲ್ಲಿ ಇದೆ. ಧರ್ಮಸ್ಥಳದ ಪಶ್ಚಿಮದಲ್ಲಿ ನೇತ್ರಾವತಿ ನದಿ ದಕ್ಷಿಣಾಭಿಮುಖವಾಗಿ ಹರಿಯುವುದು. ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ನೆರಿಯ ಹೊಳೆ ಧರ್ಮಸ್ಥಳದ ನೈಋತ್ಯದಲ್ಲಿ ನೇತ್ರಾವತಿಯನ್ನು ಕೂಡಿಕೊಳ್ಳುವುದು. ಇವಲ್ಲದೆ ಇದರ ಸುತ್ತಲೂ ಕೆಲ ಪುಟ್ಟ ತೊರೆಗಳೂ ಇವೆ. ಈ ಪ್ರದೇಶ ಜಯಕೀರ್ತಿ ಬೆಟ್ಟ, ಅಣ್ಣಪ್ಪನ ಬೆಟ್ಟ ಮತ್ತು ಶಾಲೆಯ ಬೆಟ್ಟಗಳಿಂದ ಸುತ್ತುವರಿದಿದೆ.

ಧರ್ಮಸ್ಥಳ ಕ್ಷೇತ್ರಕ್ಕೆ ಬದಿನೆಡೆ, ನೆಲ್ಯಾಡಿಬೀಡು, ಬಳ್ಳಾಳ್ತಿಗುಡಿ, ಚಂದ್ರನಾಥ ಬಸದಿ, ಮಂಜುನಾಥ ದೇವಾಲಯ ಮತ್ತು ಹೆಗ್ಗಡೆಯವರ ಅರಮನೆ ಸೇರಿವೆ. ಧರ್ಮಸ್ಥಳದಲ್ಲಿ ಕುಡುಮದ ದೈವಗಳ ಗುಡಿಗಳು ಚಂದ್ರನಾಥ ಬಸದಿ ಮತ್ತು ಮಂಜುನಾಥ ದೇವಾಲಯ ಇವುಗಳಿದ್ದು, ಇದು ಗ್ರಾಮ್ಯ, ಜೈನ ಮತ್ತು ವೈದಿಕ ಮತೀಯ ಶ್ರದ್ಧಾಭಕ್ತಿಗಳ ಸಂಗಮ ಕ್ಷೇತ್ರವಾಗಿದೆ. ಧರ್ಮಸ್ಥಳದಲ್ಲಿ 39' ಎತ್ತರದ ಸು 175 ಟನ್ನುಗಳ ಗೊಮ್ಮಟ ಶಿಲಾಮೂರ್ತಿಯನ್ನು 1970ರ ದಶಕದಲ್ಲಿ ಸ್ಥಾಪಿಸಲಾಗಿದೆ. ಪ್ರತಿವರ್ಷ ಇಲ್ಲಿ ಸರ್ವಧರ್ಮ ಸಮ್ಮೇಳನ ನಡೆಯುವುದೊಂದು ವಿಶೇಷ. ಧರ್ಮಸ್ಥಳಕ್ಕೆ ನಾಡಿನ ಎಲ್ಲ ಕಡೆಯಿಂದಲೂ ಉತ್ತಮ ಮಾರ್ಗಸಂಪರ್ಕಗಳಿವೆ. ವಿದ್ಯುತ್, ಅಂಚೆ, ತಂತಿ ಮತ್ತು ದೂರವಾಣಿ ಸೌಲಭ್ಯಗಳಿವೆ. ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆ. ಉಜಿರೆಯಲ್ಲಿ ಶ್ರೀ ಮಂಜುನಾಥೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜನ್ನು ದೇವಾಲಯದ ವತಿಯಿಂದ ನಡೆಸಲಾಗುತ್ತಿದೆ.

ಅರಣ್ಯಾವೃತವಾಗಿ ಪ್ರಕೃತಿಸೌಂದರ್ಯವೂ ಕೂಡಿರುವ ಧರ್ಮಸ್ಥಳವನ್ನು ಪ್ರವೇಶಿಸುವಲ್ಲಿ 150' ಎತ್ತರದ ಸುಂದರ ಪ್ರವೇಶದ್ವಾರವಿದೆ. ಎರಡೂ ಕಡೆಗಳಲ್ಲಿ ನಾಲ್ಕಾರು ಅಂತಸ್ತುಗಳುಳ್ಳ ಛತ್ರಗಳಿವೆ. ಸುಮಾರು ಇಪ್ಪತ್ತು ಅಡಿ ಎತ್ತರದ ಕಟ್ಟೆಯ ಮೇಲೆ ಮಣ್ಣು, ಇಟ್ಟಿಗೆ ಮತ್ತು ಮರಗಳಿಂದ ಮಂಜುನಾಥ ದೇವಾಲಯವನ್ನು ಕಟ್ಟಲಾಗಿದೆ. ಇಲ್ಲಿನ ಎರಡು ಪ್ರಾಕಾರಗಳ ಒಳಭಾಗದಲ್ಲಿ ಮಂಜುನಾಥಸ್ವಾಮಿಯ ಮೂಲ ಆಲಯವಿದೆ. ಇದರ ಎದುರಿಗೆ ಅಣ್ಣಪ್ಪ ಹಿಂದೆ ಗಣಪತಿ ಮತ್ತು ಪಕ್ಕದಲ್ಲಿ ಅಮ್ಮನವರ ಆಲಯಗಳಿವೆ. ಆಲಯದ ಬಾಗಿಲುಗಳಿಗೆ ಮತ್ತು ಚೌಕಟ್ಟುಗಳಿಗೆ ಬೆಳ್ಳಿ ತಗಡನ್ನು ಹೊದಿಸಿದ್ದಾರೆ. ಒಳಪ್ರಾಕಾರದ ಮರದ ಕಂಬಗಳ ಮೇಲೆ ಮತ್ತು ಮೇಲ್ಚಾವಣಿಗಳಲ್ಲಿ ಸುಂದರ ಕೆತ್ತನೆ ಕೆಲಸವಿದೆ. ಮುಖಮಂಟಪದ ಬಲಗಡೆಯ ಪ್ರವೇಶದ್ವಾರದ ಎರಡೂ ಕಡೆಗಳಲ್ಲಿ ಮಾನವಾಕೃತಿಗಿಂತಲೂ ಎತ್ತರವಾಗಿರುವ ದ್ವಾರಪಾಲಕ ವಿಗ್ರಹಗಳಿವೆ. ಇಲ್ಲಿನ ಮೊದಲ ಅಂತಸ್ತಿನಲ್ಲಿ ಭಿತ್ತಿಚಿತ್ರಗಳಿವೆ. ದೇವಾಲಯದ ನಾಲ್ಕು ಮೂಲೆಗಳಲ್ಲೂ ಕಳಸವಳ್ಳ ನಾಲ್ಕು ಗೋಪುರಗಳಿವೆ.

ದೇವಾಲಯದ ಎದುರಿರುವ ಹೆಗ್ಗಡೆಯವರ ನಿವಾಸದ ಮೂರನೆಯ ಮಹಡಿಯ ದರ್ಪಣಮಂದಿರ ಪ್ರವಾಸಿ ಆಕರ್ಷಣೆಗಳಲ್ಲಿ ಒಂದು. ಈ ನಿವಾಸದ ಹಿಂದೆ ಇರುವ ಪುಷ್ಪೋದ್ಯಾನ ಮತ್ತು ಕೊಳ ಆಕರ್ಷಕವಾಗಿವೆ. ಇಲ್ಲಿನ ಲಲಿತೋದ್ಯಾನದಲ್ಲಿ ವಿವಿಧ ಹೂಗಳ ಜೊತೆಗೆ ಆಕರ್ಷಕ ಮಾನವಾಕೃತಿ ಬೊಂಬೆಗಳಿವೆ. ವಸಂತಮಹಲ್ ಒಂದು ಪುಟ್ಟ ಕಲಾವಸ್ತು ಪ್ರದರ್ಶನ ಮಂದಿರ. ಧರ್ಮಸ್ಥಳದ ಲಕ್ಷದೀಪೋತ್ಸವ ಪ್ರಸಿದ್ಧ; ನವರಾತ್ರಿ, ಶಿವರಾತ್ರಿಗಳಲ್ಲೂ ಉತ್ಸವಗಳು ನಡೆಯುತ್ತವೆ. ಹನ್ನೆರಡು ವರ್ಷಕ್ಕೊಮ್ಮೆ ನಡಾವಳಿ ಎಂಬ ಉತ್ಸವ ನಡೆಯುತ್ತದೆ.

ಧರ್ಮಸ್ಥಳದಲ್ಲಿ ಯಾತ್ರಾರ್ಥಿಗಳ ಉಪಯೋಗಕ್ಕಾಗಿ ನೇತ್ರಾವತಿ ಮತ್ತು ವೈಶಾಲಿ ಎಂಬ ಎರಡು ದೊಡ್ಡ ನಿವಾಸ ಕೇಂದ್ರಗಳನ್ನು ಕಟ್ಟಲಾಗಿದೆ. ದೇವಾಲಯದ ಬಲಗಡೆಯಲ್ಲಿರುವ ಅನ್ನಪೂರ್ಣ ಕಟ್ಟಡದಲ್ಲಿ ಸರ್ವರಿಗೂ ಸರ್ವಕಾಲದಲ್ಲೂ ಉಚಿತ ಭೋಜನ ವ್ಯವಸ್ಥೆ ಇದೆ. ಧರ್ಮಸ್ಥಳವನ್ನು ಮೊದಲು ಮಲಮಾರ್ಡಿ ಎಂದೂ ಅನಂತರ ಕುಡುಮ ಎಂದೂ ಕರೆಯುತ್ತಿದ್ದರು. ದೇವರಾಜ ಹೆಗ್ಗಡೆಯ ಕಾಲದಲ್ಲಿ ಉಡುಪಿಯ ಸೋದೆ ಮಠದ ಶ್ರೀ ವಾದಿರಾಜ ಸ್ವಾಮಿಗಳು ಧರ್ಮಸ್ಥಳಕ್ಕೆ ಭೇಟಿ ಕೊಟ್ಟು ಧರ್ಮಸ್ಥಳವೆಂದು ಕರೆದರು. ಇಲ್ಲಿನ ಐತಿಹ್ಯದ ಪ್ರಕಾರ ಸುಮಾರು 500 ವರ್ಷಗಳ ಹಿಂದೆ ಬಿರ್ಮಣ್ಣ ಪೆರ್ಗ್ಗಡೆ ಮತ್ತು ಆತನ ಪತ್ನಿ ಹೆಗ್ಗಡತಿ ಅಮ್ಮೊದೇವಿ ಬಲ್ಲಾಳತಿಯರ ನೆಲ್ಯಾಡಿ ಬೀಡಿನ ಮನೆಗೆ ಕುಮಾರಸ್ವಾಮಿ ಮತ್ತು ಕಾಳರಾಹು ಧರ್ಮದೇವತೆಗಳು ವೇಷ ಮರೆಸಿಕೊಂಡು ದಾರಿಕಾರರಾಗಿ ಬಂದು, ಅವರ ಮನೆಯಲ್ಲಿ ತಂಗಿ ಅವರ ಪ್ರೀತ್ಯಾದರವನ್ನು ಮೆಚ್ಚಿಕೊಂಡು, ಹೆಗ್ಗಡೆಯ ಕನಸಿನಲ್ಲಿ ನಿಜರೂಪದಲ್ಲಿ ಕಾಣಿಸಿಕೊಂಡು, ಈ ಬೀಡನ್ನು ನಮಗೆ ಉಳಿಯಲು ಕೊಟ್ಟು ನೀವು ಬೇರೆ ಮನೆ ಮಾಡಿಕೊಳ್ಳಿ ನಮಗೆ ಪರ್ವನಡಾವಳಿ, ಬೇರೆ ಬೇರೆ ಗುಡಿ, ಒಬ್ಬ ಪಾತ್ರಿ, ಉಯ್ಯಾಲೆ, ಎಲ್ಲಾ ವ್ಯವಸ್ಥೆ ಮಾಡಿ, ಈ ಎಲ್ಲಾ ಕಾರ್ಯಗಳನ್ನೂ ನಮ್ಮ ಭೂತ ಅಣ್ಣಪ್ಪ ಮಾಡುವನು. ಈ ದೇವಸ್ಥಾನದ ಮಹಿಮೆ ಎಲ್ಲ ಕಡೆ ಹರಡುವುದು. ಇಲ್ಲಿ ಸರ್ವರಿಗೂ ಸದಾ ಕಾಲವೂ ದಾನಧರ್ಮ ನಡೆಯುತ್ತಿರಲಿ ಎಂದು ಹೇಳಿ ಅಂತರ್ಧಾನರಾದರಂತೆ. ಹೆಗ್ಗಡೆ ದಂಪತಿಗಳು ದೈವಗಳ ಅಪ್ಪಣೆಯಂತೆ ನಡೆದುಕೊಂಡರು. ಹೊಸ ಬೀಡಿಗೆ ಹೋದರು. ದೈವಗಳು ತಂಗಿದ ಬದಿನೆಡೆ, ನೆಲ್ಯಾಡಿ ಬೀಡು, ಅವರ ನೆಲೆಯಾಗಿ ತಮ್ಮ ಹೆಣ್ಣು ದೈವಗಳಾದ ಕನ್ಯಾಕುಮಾರಿ ಕಾಳರ್ಕಾಯಿಗಳೊಂದಿಗೆ ಬಂದು ಉಳಿದರು. ಕುಡುಮದ ದೈವಗಳು ಮತ್ತು ಅಣ್ಣಪ್ಪ ಭೂತನಿಂದ ಮಂಗಳೂರು ಸಮೀಪದ ಕದ್ರಿಯ ಮಂಜುನಾಥ ದೇವಾಲಯದ ಸ್ಥಾಪನೆಯಾಯಿತು.

ಚಂದಯ್ಯ ಹೆಗ್ಗಡೆಯ ಕಾಲದಲ್ಲಿ (1830-49) ದೇವಾಲಯದ ಒಳಭಾಗ ಸುಧಾರಣೆಯಾದವು. ಆಮೇಲೆ ಮಂಜಯ್ಯ ಹೆಗ್ಗಡೆ (1849-95) ಛತ್ರ, ಹೊರಸುತ್ತಿನ ಪ್ರಾಕಾರ, ಉನ್ನತ ಗೋಪುರ, ಉಗ್ರಾಣ, ರಥ, ಆಭರಣ, ಪಲ್ಲಕ್ಕಿ, ಬಸದಿಯ ಜೀರ್ಣೋದ್ಧಾರ ಮತ್ತು ಕ್ಷೇತ್ರಶುದ್ಧಿ ಮಾಡಿಸಿದರು. ದೈವಗಳಿಗೆ ಮೂರು ಮಹಾಧರ್ಮ ನಡಾವಳಿ, ಪೂಜೆ ಉತ್ಸವ ಹೆಚ್ಚಿಸಿ 45 ವರ್ಷ ಆಳಿದರು. ಮುಂದೆ ಬಂದ ಚಂದಯ್ಯ ಹೆಗ್ಗಡೆಯ ಕಾಲದಲ್ಲಿ ದೈವದ ಗುಡಿಗಳನ್ನು ಹೊಸತಾಗಿ ಕಟ್ಟಲಾಯಿತು. ಯಾತ್ರಿಕರಿಗೆ ಧರ್ಮಛತ್ರ, ಬಸದಿಗೆ ಪಂಚಕಲ್ಯಾಣ, ನಲ್ಲಿ ನೀರಿನ

ವ್ಯವಸ್ಥೆಗಳಾದವು.

ಆ ಮೇಲೆ ಮಂಜಯ್ಯ ಹೆಗ್ಗಡೆಯವರ (1918-1955) ಕಾಲದಲ್ಲಿ ಧರ್ಮಸ್ಥಳದ ಪ್ರಭಾವ ಮತ್ತು ದೇವಸ್ಥಾನದ ಶಿಸ್ತು ಬೆಳೆಯಿತು. ಧರ್ಮಾರ್ಥ ಆಸ್ಪತ್ರೆ, ಸಿದ್ಧವನದಲ್ಲಿ ಗುರುಕುಲ (1940), ಕಾರ್ತಿಕ ಲಕ್ಷ ದೀಪೋತ್ಸವದ ಕಾಲಕ್ಕೆ ಸರ್ವಧರ್ಮಸಮ್ಮೇಳನ ಇತ್ಯಾದಿ ಆರಂಭವಾದವು. ನೇತ್ರಾವತಿಗೆ ಸೇತುವೆ ಆಯಿತು. ಸುತ್ತಲಿನ ಜವಳು ನೆಲವೆಲ್ಲ ಆಬಾದಾಗಿ ಸುಂದರ ಉದ್ಯಾನವನಗಳೂ ಕಾರಂಜಿಗಳೂ ನಿರ್ಮಾಣಗೊಂಡವು. ಆರೋಗ್ಯಮಯ ವಾತಾವರಣ ಉಂಟಾಯಿತು. ನೀರು, ವಿದ್ಯುದ್ದೀಪಗಳ ಸರಬರಾಜು ವ್ಯವಸ್ಥೆಗೊಂಡಿತು. ಇವರ ಅನಂತರ ಬಂದ ರತ್ನವರ್ಮ ಹೆಗ್ಗಡೆಯವರೂ ಮತ್ತು ಅನಂತರ ಇವರ ಹಿರಿಯ ಮಗ ವೀರೇಂದ್ರ ಹೆಗ್ಗಡೆಯವರೂ ಸಾಮಾಜಿಕ ಕಾರ್ಯದ ಪರಂಪರೆಯನ್ನು ಮುಂದುವರಿಸಿದರು. ವೀರೇಂದ್ರ ಹೆಗ್ಗಡೆಯವರು ಕಾರ್ಕಳದ ಮಹಾಶಿಲ್ಪಿ ರಂಜಾಳ ಗೋಪಾಲ ಶೆಣೈ ಅವರಿಂದ ಗೊಮ್ಮಟನ ಪ್ರತಿಮೆಯನ್ನು ಕೆತ್ತಿಸಿದ್ದಾರೆ. ಧರ್ಮಸ್ಥಳ ಇಂದು ವೀರೇಂದ್ರ ಹೆಗ್ಗಡೆಯವರ (ನೋಡಿ) ಧರ್ಮಾಧಿಕಾರತ್ವದಲ್ಲಿ ವಿಸ್ತಾರವಾದ ಚಟುವಟಿಕೆಗಳನ್ನು ಹಮ್ಮಿಕೊಂಡ ದೊಡ್ಡ ಧಾರ್ಮಿಕ ಕೇಂದ್ರವಾಗಿದೆ. ಇಲ್ಲಿ 1979ರಲ್ಲಿ 51ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಧರ್ಮಸ್ಥಳದ ವತಿಯಿಂದ ಧರ್ಮಸ್ಥಳದ ಹೊರಗೆ ಕಾಲೇಜುಗಳನ್ನು ಸ್ಥಾಪಿಸಿ ನಡೆಸಲಾಗುತ್ತಿದೆ. ಮೈಸೂರಿನಲ್ಲಿಯೂ ಒಂದು ಕಾಲೇಜನ್ನು ಸ್ಥಾಪಿಸಲಾಯಿತು. ಧಾರವಾಡದಲ್ಲಿ ದಂತವಿಜ್ಞಾನ ಕಾಲೇಜು, ಹಾಸನದಲ್ಲಿ ಆಯುರ್ವೇದ ಕಾಲೇಜುಗಳನ್ನು ಶ್ರೀಕ್ಷೇತ್ರದ ವತಿಯಿಂದ ಸ್ಥಾಪಿಸಲಾಗಿದೆ. ಹಲವಾರು ಕಡೆಗಳಲ್ಲಿ ಕಲ್ಯಾಣ ಮಂಟಪಗಳನ್ನು ಕಟ್ಟಿಸಿ ರಿಯಾಯಿತಿ ದರದಲ್ಲಿ ವಿವಾಹಗಳಿಗೆ ನೀಡಲಾಗುತ್ತಿದೆ. ಧರ್ಮಸ್ಥಳದಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿದೆ. ಗ್ರಾಮೀಣ ಕಸಬುಗಳನ್ನು ಪುನರುಜ್ಜೀವಿಸಿ ಜನರಿಗೆ ಉದ್ಯೋಗ ಒದಗಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಶಿಥಿಲಗೊಂಡ ಅನೇಕ ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವೂ ಶ್ರೀ ಕ್ಷೇತ್ರದಿಂದ ನಡೆಯುತ್ತಿದೆ. ಮೈಸೂರು ತಾಲ್ಲೂಕಿನ ಭೋಗನಂದೀಶ್ವರ ದೇವಾಲಯ, ಮೂಡಿಗೆರೆ ತಾಲ್ಲೂಕಿನ ಭೈರಾಪುರದ ನಾಣ್ಯದ ಭೈರವೇಶ್ವರ ದೇವಾಲಯಗಳು ಇದಕ್ಕೆ ನಿದರ್ಶನಗಳು. ಉಚಿತ ಸಾಮೂಹಿಕ ವಿವಾಹಗಳ ಏರ್ಪಾಡು ಈ ಕ್ಷೇತ್ರದಲ್ಲಿ ಆಗಾಗ ನಡೆಯುತ್ತಿರುತ್ತವೆ.

(ಜಿ..ಕೆ.)

**ಧವಲದ ಹಾಡುಗಳು :** ಮಂಗಳ ಕಾರ್ಯಗಳಲ್ಲಿ ಆರತಿ ಎತ್ತುವಾಗ ಹೆಣ್ಣುಮಕ್ಕಳು ಹೇಳುವ ಹಾಡುಗಳಲ್ಲಿ ಈ ಹಾಡುಗಳನ್ನು ಸೇರಿಸುವುದು ರೂಢಿ. ವಿಶಿಷ್ಟ ಲಯದಿಂದ ಕೂಡಿ ಧವಲಾ ಎಂಬ ಪದವನ್ನೊಳಗೊಂಡ ಈ ಹಾಡುಗಳು ಆಶೀರ್ವಚನಯುಕ್ತ ಪಾದಗಳನ್ನು ಹೊಂದಿದ್ದು ಯಾವ ಛಂದಸ್ಸಿನಲ್ಲಿಯಾದರೂ ಕಳೆಗಟ್ಟುತ್ತವೆ.

ಜನಪದ ಸಾಹಿತ್ಯದಲ್ಲಿ ಹೆಂಗೆಳೆಯರ ಹಾಡಿನಲ್ಲಿ ಬಹುವಾಗಿ ಪ್ರಚಾರದಲ್ಲಿದ್ದ ಧವಲದ ಹಾಡುಗಳ ಲಕ್ಷಣ ಮತ್ತು ಪ್ರಭೇದಗಳನ್ನು ಸೋಮೇಶ್ವರನ ಮಾನ ಸೋಲ್ಲಾಸ, ಹೇಮಚಂದ್ರನ ಛಂದೋನುಶಾಸನ ಮತ್ತು ಶಾರ್ಙ್ಗದೇವನ ಸಂಗೀತರತ್ನಾಕರಗಳಲ್ಲಿ ಕಾಣಬಹುದು. 8 ಪಾದಗಳ ಶ್ರೀಧವಲ ಯಶೋಧವಲ, 6 ಪಾದಗಳ ಕೀರ್ತಿಧವಲ, 4 ಪಾದಗಳ ಗುಣಧವಲ ಅಮರಧವಲ ಭ್ರಮರಧವಲ ಮಂಗಲ ಧವಲ - ಇವು ಧವಲದ ಪ್ರಭೇದಗಳು.

ಧವಲದ ಹಾಡುಗಳ ಬಗ್ಗೆ ರನ್ನ, ರಾಘವಾಂಕ, ರತ್ನಾಕರವರ್ಣಿ ಮುಂತಾದ ಕವಿಗಳೂ ಪ್ರಸ್ತಾಪಿಸಿದ್ದಾರೆ. ಹತ್ತನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದ ಧವಲ ಮಂಗಲ ಗೇಯವನ್ನು ರನ್ನ ಸೂಚಿಸಿದ್ದಾನೆ. 13ನೆಯ ಶತಮಾನದಲ್ಲಿಯೂ ಇವು ಸಾಕಷ್ಟು ಬಳಕೆಯಲ್ಲಿದ್ದವೆಂಬುದನ್ನು ಸಿದ್ಧರಾಮ ಮಾಡಿಸಿದ ಸಾವಿರಾರು ಮಂಗಲ ವಿವಾಹಗಳ ಸಂದರ್ಭದಲ್ಲಿ 'ಅಂಗನೆಯರು ಆರತಿಗಳು ಬೆಳಗಿ ಅಲ್ಲಲ್ಲಿ ಧವಲಗಳನ್ನು ಹಾಡುತ್ತಿದ್ದರು' ಎಂದು ರಾಘವಾಂಕ ಹೇಳಿದ್ದಾನೆ. ಭರತೇಶನ ವಿವಾಹಕಾಲದಲ್ಲಿ ಧವಲಗಳನ್ನು ಹಾಡಿದರೆಂದು ರತ್ನಾಕರವರ್ಣಿ ತನ್ನ ಭರತೇಶ ವೈಭವದಲ್ಲಿ ಉಲ್ಲೇಖಿಸಿದ್ದಾನೆ.

ಈಗ ಉಪಲಬ್ಧವಿರುವ ಸೀಮಂತ, ಜಾತಕರ್ಮ, ಉಪನಯನ, ಭರತೇಶ್ವರ ಧವಲಗಳು ವಿಶಿಷ್ಟವಾದ ಲಯಗಳಿಂದ ಕೂಡಿವೆ.

ಭರತೇಶ್ವರ ಧವಲದಿಂದ ಆಯ್ದ ಎರಡು ಪದ್ಯಗಳು ಹೀಗಿವೆ:

ಶ್ರೀ ಗುರು ಪಂಚಪದಗಳ| ಶ್ರೀಗೆ ನಿಲಯ ನಿಯಮಗಳ

ರಾಗರಸದಿ ಢವಳಾಗಮದಿಂದ

ಪೂಗಿ ಕದಳಿ ನಾರಂಗಗಳಿಂದ

ಬಾಗಿ ಶ್ರೀಚರಣಾಂಬುಜಗಳನರ್ಚಿಪೆ| ಶ್ರೀ ಗಣನಾಥಕೃಪೆದೋರು|

ಪರಮೇಶನುದರಾಬ್ಧಿ ಚಂದ್ರ| ನೆರೆಚಕ್ರಿ ಭರತರಾಜೇಂದ್ರ

ನರಸುರನಾಗಲೋಕವ ಸಾಧಿಸಿದ

ಧರೆಗಾದಿಕುವರನ ಧವಳ ಶೋಭಾನವ

ನೊರೆದು ಲಾಲಿಪುದು ರಸಿಕರು|

ಧವಲದ ಷಟ್ಕಲ ಲಯ ಬಹು ಅಪರೂಪವಾದದ್ದು. ಇದರ ರಹಸ್ಯವನ್ನೂ ಚೆಲುವನ್ನೂ ಬಿ.ಎಂ.ಶ್ರೀ., ಕುವೆಂಪು, ಪುತಿನ - ಇವರ ಕಾವ್ಯಗಳಲ್ಲಿನ ಕೆಲವು ಪದ್ಯಗಳಲ್ಲಿ ಕಾಣಬಹುದು. ಹೊಸಗನ್ನಡದ ಈ ಮಟ್ಟುಗಳನ್ನು ಧವಲದ ಪ್ರಭೇದವೆಂದಾಗಲೀ, ಅಂತ್ಯಪ್ರಾಸ ಸಹಿತ ಧವಲವೆಂದಾಗಲೀ ಕರೆಯಬಹುದು. ತೆಲುಗು ಧವಲದ ಹೆಣ್ಣು ಮಕ್ಕಳ ಹಾಡುಗಳ ಲಯಕ್ಕೂ ಮತ್ತು ಕನ್ನಡ ಧವಲಗಳ ಲಯಕ್ಕೂ ಅತಿ ಸಾಮೀಪ್ಯ ಕಂಡುಬರುತ್ತದೆ. (ಕೆ.ಡಿಎಚ್.)

**ಧಾರವಾಡ :** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ನಗರ.

ರಾಜ್ಯದ ವಾಯುವ್ಯ ಭಾಗದಲ್ಲಿರುವ ಈ ಜಿಲ್ಲೆ ಒಟ್ಟು 17 ತಾಲ್ಲೂಕುಗಳನ್ನು ಹೊಂದಿದ್ದು ರಾಜ್ಯದ ನಾಲ್ಕನೆಯ ದೊಡ್ಡ ಜಿಲ್ಲೆಯಾಗಿದ್ದಿತು. 1997ರಲ್ಲಿ ಜಿಲ್ಲಾ ಮರುವಿಂಗಡಣೆ ಯೋಜನೆಯನ್ನು ಜಾರಿ ಮಾಡಿದಾಗ ಇದು ಐದು ತಾಲ್ಲೂಕುಗಳಿಗೆ ಸೀಮಿತವಾಯಿತು. ಈ ಜಿಲ್ಲೆಯ ಉಳಿದ ತಾಲ್ಲೂಕುಗಳನ್ನು ಹೊಸದಾಗಿ ರಚಿತವಾದ ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸೇರಿಸಲಾಯಿತು. ಈ ಜಿಲ್ಲೆ ಪೂರ್ವದಲ್ಲಿ ಗದಗ, ಪಶ್ಚಿಮದಲ್ಲಿ ಉತ್ತರ ಕನ್ನಡ; ಉತ್ತರದಲ್ಲಿ ಬೆಳಗಾಂವಿ ಮತ್ತು ಗದಗ; ದಕ್ಷಿಣದಲ್ಲಿ ಹಾವೇರಿ ಜಿಲ್ಲೆಗಳಿಂದ ಆವೃತವಾಗಿದೆ. ಧಾರವಾಡ, ಹುಬ್ಬಳ್ಳಿ, ನವಲಗುಂದ, ಕಲಘಟಗಿ ಮತ್ತು ಕುಂದಗೋಳ ಇವು ಜಿಲ್ಲೆಯ ಐದು ತಾಲ್ಲೂಕುಗಳು. ಹೋಬಳಿಗಳು 114; ಗ್ರಾಮಗಳು 362; ಜಿಲ್ಲೆಯ ವಿಸ್ತೀರ್ಣ 4,076 ಚಕಿಮೀ. ಜನಸಂಖ್ಯೆ 1,603,794.

ಜಿಲ್ಲೆಯು ಭೌಗೋಳಿಕವಾಗಿ ಪೂರ್ವ ಮತ್ತು ಈಶಾನ್ಯದತ್ತ ಇಳಿಜಾರಾಗಿದೆ. ಜಿಲ್ಲೆಯನ್ನು ಪಶ್ಚಿಮದ ಗುಡ್ಡಗಾಡು ಪ್ರದೇಶ ಮತ್ತು ಪೂರ್ವದ ಬಯಲು ಪ್ರದೇಶವೆಂದು ವಿಂಗಡಿಸಬಹುದು. ಪಶ್ಚಿಮದ ಗುಡ್ಡಗಾಡು ಪ್ರದೇಶವನ್ನು ಮಲೆನಾಡೆಂದು ಮತ್ತು ನವಲಗುಂದ ತಾಲ್ಲೂಕಿನಿಂದ ಮುಂದುವರಿಯುವ ಭಾಗವನ್ನು ಬೆಳವಲ ನಾಡೆಂದು ಕರೆಯಲಾಗಿದೆ. ಮಧ್ಯದಲ್ಲಿ ಗಡಿನಾಡೆಂಬ ಭಾಗ ಬರುತ್ತದೆ. ಧಾರವಾಡ ಜಿಲ್ಲೆ ತಗ್ಗಾದ ಗುಡ್ಡಬೆಟ್ಟಗಳಿಂದಲೂ ಮಟ್ಟಸವಾದ ಕಣಿವೆಗಳಿಂದಲೂ ಕೂಡಿರುವ ಪ್ರದೇಶ. ಮಲೆನಾಡು ಪ್ರದೇಶದಲ್ಲಿರುವ ಗುಡ್ಡಗಳಲ್ಲಿ ಅಳಣಾವರದ ಪೂರ್ವಕ್ಕಿರುವ ತೇಗೂರು ಗುಡ್ಡ ಮತ್ತು ದಕ್ಷಿಣದಲ್ಲಿ ಕಂಡೂರ ಗುಡ್ಡಗಳು ಮುಖ್ಯವಾದವು. ಧಾರವಾಡ ಮತ್ತು ಕಲಘಟಗಿಗಳ ನಡುವಿನ ಬೂದನ ಗುಡ್ಡ ಸುತ್ತಲ ಪ್ರದೇಶದಿಂದ 152 ಮೀ ಎತ್ತರವಾಗಿ

13 ಕಿಮೀ ಉದ್ದ ಮತ್ತು 11/2 ಕಿಮೀ ಅಗಲವಾಗಿ ದಕ್ಷಿಣೋತ್ತರವಾಗಿ ಹಬ್ಬಿದೆ. ಇದರ ಪಶ್ಚಿಮಕ್ಕೆ ಗಣೇಗುಡ್ಡವಿದೆ. ಧಾರವಾಡ-ಹುಬ್ಬಳ್ಳಿ ನಡುವೆ ರಾಯಾಪುರ ಬೆಟ್ಟಗಳು ಬರುತ್ತವೆ. ಹುಬ್ಬಳ್ಳಿ ತಾಲ್ಲೂಕಿನ ಉಣಕಲ್ಲುಗುಡ್ಡ ಮುಖ್ಯವಾದದ್ದು.

ಧಾರವಾಡದ ಶಿಲಾಸ್ತರ ಧಾರವಾಡ ಶಿಲಾ ಪ್ರಕಾರವೆಂದೇ ಪ್ರಸಿದ್ಧವಾಗಿದೆ. ಹಲವು ಉತ್ಕರ್ಷಿತ ಅಗ್ನಿಶಿಲೆಗಳು ಈ ಭಾಗದ ಮೂಲ ಅರೆಗಳಾಗಿವೆ. ಇವು ಧಾರವಾಡ ಬಂಡೆಗಳಿಂದ ಕೂಡಿದ ಪಳೆಯುಳಿಕೆಯ ಬೆಟ್ಟಗಳಾಗಿವೆ. ಇಲ್ಲಿ ಕಣಿವೆಗಳೂ ಕಂದರಗಳೂ ಹೆಚ್ಚು. ಎತ್ತರದ ಪ್ರದೇಶಗಳು ಬೋಳಾಗಿದ್ದು ದಟ್ಟವಾಗಿ ಹುಲ್ಲು ಬೆಳೆಯುತ್ತದೆ. ಧಾರವಾಡ ಶಿಲಾಭಾಗವನ್ನು ಭೇದಿಸಿಕೊಂಡು ಕಣಶಿಲೆ ಮತ್ತು ನೀಣಕಲ್ಲುಗಳು ಹರಡಿವೆ. ಧಾರವಾಡ ಪದರ ಶಿಲೆ, ಗ್ರ್ಯಾನೈಟ್, ಬೆಣಚುಕಲ್ಲು ಮತ್ತು ಸಣ್ಣಕಲ್ಲುಗಳನ್ನೊಳಗೊಂಡು ಎಲ್ಲ ದಿಕ್ಕುಗಳಲ್ಲಿಯೂ ಡಾಲರೈಟ್ ದಿಂಡುಗಳು ಹರಡಿವೆ. ಮ್ಯಾಂಗನೀಸ್ ಅದಿರು ಇಲ್ಲಿಯ ಮುಖ್ಯ ಖನಿಜ. ತಾಮ್ರ, ಚಿನ್ನದ ಅದಿರು ಪದರಗಳಿದ್ದರೂ ಅಷ್ಟು ಲಾಭಕರವಾಗಿಲ್ಲ. ಕೆಲವೆಡೆ ಜಂಬಿಟ್ಟಿಗೆ ಶಿಲೆಗಳಿವೆ. ಈ ಜಿಲ್ಲೆಯ ಮಣ್ಣು ಫಲವತ್ತಾಗಿದೆ. ಪೂರ್ವ ಭಾಗದಲ್ಲಿ ಎರೆಮಣ್ಣು ಮತ್ತು ಹುಳಿಕೆರಿ ಮಣ್ಣಿದ್ದರೆ ಪಶ್ಚಿಮದಲ್ಲಿ ಕೆಂಪು ಮತ್ತು ಮರಳು ಮಿಶ್ರಿತ ಮಣ್ಣಿದೆ. ಧಾರವಾಡ ಮತ್ತು ಕಲಘಟಗಿ ತಾಲ್ಲೂಕುಗಳಲ್ಲಿ ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣು ಕಂಡುಬರುತ್ತದೆ. ಹುಬ್ಬಳ್ಳಿಯ ಪೂರ್ವಭಾಗ ಎರೆಮಣ್ಣಿನಿಂದ ಕೂಡಿದೆ.

ಅವಿಭಜಿತ ಧಾರವಾಡ ಜಿಲ್ಲೆಯನ್ನು ಉತ್ತರದಲ್ಲಿ ಮಲಪ್ರಭಾ ಮತ್ತು ದಕ್ಷಿಣದಲ್ಲಿ ತುಂಗಭದ್ರಾ ನದಿಗಳು ಸೋಕಿ ಹೋಗುತ್ತಿದ್ದವು. ಅನೇಕ ಉಪನದಿಗಳು ಜಿಲ್ಲೆಯಾದ್ಯಂತ ಹರಿಯುತ್ತಿದ್ದವು. ಆದರೆ ಈಗಿನ ಕಿರಿದಾದ ಜಿಲ್ಲೆಯಲ್ಲಿ ಯಾವುದೇ ಪ್ರಮುಖ ನದಿಗಳಿಲ್ಲ. ಚಿಕ್ಕಪುಟ್ಟ ಹೊಳೆಗಳು ಮತ್ತು ಹಳ್ಳಗಳು ಇವೆ. ಅವುಗಳಲ್ಲಿ ಬೇಡ್ತಿ ಹೊಳೆ, ಬೆಣ್ಣೆಹಳ್ಳ, ತುಪ್ಪರಿಹಳ್ಳ, ತಟ್ಟಿಹಳ್ಳ, ಹಂದಿಗನಹಳ್ಳ ಇವು ಮುಖ್ಯವಾದವು. ಬೇಡ್ತಿ ಹೊಳೆ ನೈರುತ್ಯಾಭಿಮುಖವಾಗಿ ಹರಿದು ಅರಬ್ಬಿ ಸಮುದ್ರ ಸೇರಿದರೆ ಉಳಿದವು ಕೃಷ್ಣಾ ಜಲಾನಯನದತ್ತ ಉತ್ತರ ಮತ್ತು ಪೂರ್ವಾಭಿಮುಖವಾಗಿ ಸಾಗುತ್ತವೆ. ಈ ನದಿಗಳು ನೀರಾವರಿ ಸೌಲಭ್ಯ ಒದಗಿಸುವಲ್ಲಿ ಅತ್ಯಂತ ಉಪಯುಕ್ತವಾಗಿವೆ. ಬೇಡ್ತಿ ಹೊಳೆಗೆ ದುಮ್ಮವಾಡದ ಹತ್ತಿರ ಒಡ್ಡು ಹಾಕಿ ನೀರಸಾಗರವೆಂಬ ದೊಡ್ಡ ಕೆರೆ ಕಟ್ಟಲಾಗಿದೆ. ಈ ಕೆರೆಯಿಂದ ಕುಂದಗೋಳ, ಹುಬ್ಬಳ್ಳಿ ಧಾರವಾಡ ನಗರಗಳಿಗೆ ನೀರೊದಗುತ್ತದೆ. ಬೆಣ್ಣೆಹಳ್ಳ ಹುಬ್ಬಳ್ಳಿ ನವಲಗುಂದ ತಾಲ್ಲೂಕುಗಳ ಮೂಲಕ ಹರಿದು ಮಲಪ್ರಭಾ ನದಿಯನ್ನು ಸೇರುತ್ತದೆ. ಗೂಗಿ ಹಳ್ಳ, ತುಪ್ಪರಿಹಳ್ಳ, ಹಂದಿಗನಹಳ್ಳ ಇವೆಲ್ಲ ಬೆಣ್ಣೆ ಹಳ್ಳವನ್ನು ಕೂಡಿಕೊಳ್ಳುತ್ತವೆ.

ಈ ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಹಿತಕರ. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಅಧಿಕ ಉಷ್ಣಾಂಶವಿರುತ್ತದೆ. ಕೆಲವು ವೇಳೆ ಉಷ್ಣಾಂಶ $105^0$ಫ್ಯಾ.ಯಿಂದ $107^0$ಫ್ಯಾ. ವರೆಗೂ ಇರುತ್ತದೆ. ಜೂನ್ ತಿಂಗಳಲ್ಲಿ ಮಳೆ ಪ್ರಾರಂಭವಾದೊಡನೆ ಉಷ್ಣತೆ ಕಡಿಮೆಯಾಗುವುದು. ನವೆಂಬರ್, ಡಿಸೆಂಬರ್ ಮತ್ತು ಜನವರಿ ಚಳಿಗಾಲವಾಗಿದ್ದು ಇದರ ಮತ್ತು ಬೇಸಿಗೆ ಕಾಲದ ಉಷ್ಣತಾ ಮಾನದ ದೈನಿಕ ವ್ಯತ್ಯಾಸ ಅಧಿಕವಾಗಿರುತ್ತದೆ. ಈ ತಿಂಗಳುಗಳಲ್ಲಿ $35^0$ಫ್ಯಾ.ನಿಂದ $40^0$ಫ್ಯಾ.ವರೆಗೆ ಉಷ್ಣತಾ ವ್ಯತ್ಯಾಸವಿರುತ್ತದೆ. ಫೆಬ್ರುವರಿ ಶುಷ್ಕ ತಿಂಗಳು. ಜಿಲ್ಲೆಯಲ್ಲಿ ಮೇ ತಿಂಗಳಿಂದ ಅಕ್ಟೋಬರ್ ವರೆಗೆ ಮಳೆ ಬೀಳುವುದು. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಗುಡುಗುಮಿಂಚು ಸಹಿತ ಮಳೆಯುಗುವುದುಂಟು. ಜಿಲ್ಲೆಯಲ್ಲಿ 2000 ದಲ್ಲಿ ಬಿದ್ದ ಸರಾಸರಿ ಮಳೆ 726 ಮಿಮೀ. ಜಿಲ್ಲೆಗೆ ಮುಂಗಾರು ಮಳೆ ಹೆಚ್ಚಾಗಿ ಬೀಳುತ್ತದೆ. ಪಶ್ಚಿಮ ಮೇರೆಯ ಹತ್ತಿರ ಕೆಲವು ಪ್ರದೇಶಗಳಲ್ಲಿ 965 ಮಿಮೀ ಗಿಂತಲೂ ಹೆಚ್ಚು ಮಳೆ ಬೀಳುವುದು.

ಜಿಲ್ಲೆಯಲ್ಲಿ ಒಟ್ಟು 35,235 ಹೆಕ್ಟೇರ್‌ಗಳ ವಿಸ್ತೀರ್ಣದ ಅರಣ್ಯವಿದೆ. ಪರ್ಣಪಾತಿ ವೃಕ್ಷಗಳ ಕಾಡು, ಮುಳ್ಳುಕಾಡು ಮತ್ತು ಕುರುಚಲು ಕಾಡುಗಳನ್ನು ಕಾಣಬಹುದು. ಪರ್ಣಪಾತಿ ವೃಕ್ಷಗಳ ಕಾಡು ಮಲೆನಾಡಿಗೆ ಮಾತ್ರ ಸೀಮಿತವಾಗಿದೆ. ತೇಗ ಇಲ್ಲಿನ ಮುಖ್ಯ ಮರ. ಇಲ್ಲಿನ ಮರಗಳು ಸಾಮಾನ್ಯವಾಗಿ 9 ರಿಂದ 12 ಮೀ ಎತ್ತರ ಬೆಳೆಯುತ್ತವೆ. ಕಲಘಟಗಿ, ಕುಂದಗೋಳ ಮತ್ತು ಇವುಗಳ ಸುತ್ತ ಕಾಡು ಸಾಂದ್ರವಾಗಿದ್ದು ಪೂರ್ವಕ್ಕೆ ವಿರಳವಾಗುತ್ತ ಹೋಗುವುದು. ನದೀದಂಡೆಗಳುದ್ದಕ್ಕೂ ಬಿದಿರುಮೆಳೆಗಳುಂಟು. ಜಿಲ್ಲೆಯ ಪಶ್ಚಿಮ ಭಾಗದ ಅರಣ್ಯದಲ್ಲಿ ನಾಟಾ ಮತ್ತು ಮರಮುಟ್ಟು ಬಳಕೆಗೆ ಉಪಯುಕ್ತವಾದ ಮರಗಳಿವೆ. ಧಾರವಾಡ ಮತ್ತು ನವಲಗುಂದ ತಾಲ್ಲೂಕುಗಳಲ್ಲಿ ನೂರಾರು ಎಕರೆಗಳ ಗೋಮಾಳ ಮೀಸಲು ಪ್ರದೇಶವಿದ್ದು ಇತರೆಡೆಗಳಲ್ಲೂ ಗೋಮಾಳ ಮೀಸಲು ಪ್ರದೇಶ ಗಣನೀಯವಾಗಿದೆ. ಇಲ್ಲಿನ ಕಾಡಿನಲ್ಲಿ ಗಂಧ, ತೇಗ, ಮತ್ತಿ, ಅತ್ತಿ, ಹಾರ್ಡ, ಹಲಸು, ಬಿಳಿನಂದಿ, ಬೀಟೆ, ದಿಂಡಲು, ಶಿವನಿ, ಹೊನ್ನೆ, ಮಾವು, ಬೇವು, ಹುಣಿಸೆ, ಈಚಲು, ಮುತ್ತಗ, ನೇರಳೆ, ಬಿದಿರು, ಗೇರು ಮೊದಲಾದವುಗಳು ಬೆಳೆಯುತ್ತವೆ. ದಕ್ಷಿಣ ಭಾರತದ ಕಾಡುಗಳಲ್ಲಿರುವ ವಿವಿಧ ಜಾತಿಯ ಪ್ರಾಣಿಗಳು ಇಲ್ಲಿನ ಪಶ್ಚಿಮ ಭಾಗದ ಅರಣ್ಯದಲ್ಲಿವೆ. ಅವುಗಳಲ್ಲಿ ಹುಲಿ, ಕಾಡುಕೋಣ, ಚಿರತೆ, ಕರಡಿ, ಜಿಂಕೆ, ಕಾಡುಹಂದಿ, ಕಾಡುನಾಯಿ, ಹುಲಿಬೆಕ್ಕು ಮೊದಲಾದ ಪ್ರಾಣಿಗಳು ಮುಖ್ಯವಾದವು.

ಈ ಜಿಲ್ಲೆಯ ಮುಖ್ಯ ಕಸಬು ವ್ಯವಸಾಯ. ಪಶ್ಚಿಮ ಕರಾವಳಿಯಿಂದ ಬೀಸುವ ಮುಂಗಾರು ಮಾರುತಗಳು ಇಲ್ಲಿನ ವ್ಯವಸಾಯಕ್ಕೆ ಹೆಚ್ಚು ಅನುಕೂಲಕರವಾಗಿವೆ. ಈಶಾನ್ಯ ಮಾರುತಗಳಿಂದ ಜಿಲ್ಲೆಯ ಪೂರ್ವಭಾಗಕ್ಕೆ ಹಿಂಗಾರು ಮಳೆ ಸಾಧಾರಣವಾಗಿ ಬೀಳುತ್ತದೆ. ಇಲ್ಲಿನ ವ್ಯವಸಾಯ ಜಮೀನನ್ನು ಮಳೆಮಾರುತಗಳನ್ನವಲಂಬಿಸಿದ ಒಣಬೆಳೆಗಳು ಬೆಳೆಯುವ ಜಿರಾಯತ್ ಜಮೀನು, ಬಾಗಾಯ್ತು ಜಮೀನು, ನೀರಾವರಿ ಬೆಳೆ ಬೆಳೆಯುವ ಬತ್ತದ ಜಮೀನು ಎಂದು ವಿಂಗಡಿಸಬಹುದು.

ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಕಟ್ಟಿದ ಅನೇಕ ಕೆರೆಗಳು ಮತ್ತು ಜಲಾಶಯಗಳು ಇಂದೂ ಉಪಯುಕ್ತವಾಗಿವೆ. ಜಿಲ್ಲೆಯ ಪಶ್ಚಿಮಭಾಗದ ಮಲೆನಾಡು ಪ್ರದೇಶದಲ್ಲಿ ಮಳೆನೀರು ವ್ಯವಸಾಯಕ್ಕೆ ಒದಗುತ್ತದೆ. ಜಿಲ್ಲೆಯ ಮಧ್ಯಭಾಗದಲ್ಲಿ ಭೂಮಿಯಲ್ಲಿ ನೀರಿನ ಒರತೆಯಿರುವುದರಿಂದ ಬಾವಿ ನಿರ್ಮಾಣ ಸುಲಭ. ಅನೇಕ ಪುರಾತನ ಕೆರೆಗಳು ಮತ್ತು ಹೊಸ ಕೆರೆಗಳು ನೀರಾವರಿ ಸೌಲಭ್ಯವನ್ನು ಹೆಚ್ಚಿಸಿವೆ. ಮಲಪ್ರಭಾಬಲದಂಡೆ ಯೋಜನೆಯಿಂದ ನವಲಗುಂದ ಮತ್ತು ಹುಬ್ಬಳ್ಳಿ ತಾಲ್ಲೂಕುಗಳಿಗೆ ನೀರಾವರಿ ಒದಗಿದೆ. ಬತ್ತ, ಅಡಕೆ, ಕಬ್ಬು, ಬಾಳೆ, ವೀಳೆಯದೆಲೆ ಮುಂತಾದ ನೀರಾವರಿ ಬೆಳೆಗಳಿವೆ. ಜಿಲ್ಲೆಯಲ್ಲಿ ಒಟ್ಟು ನೀರಾವರಿಗೊಳಗಾದ ಪ್ರದೇಶ 39,652 ಹೆಕ್ಟೇರ್‌ಗಳು. ಅದರಲ್ಲಿ ಕಾಲುವೆಗಳಿಂದ 22,901 ಹೆಕ್ಟೇರುಗಳಿಗೆ ನೀರಾವರಿ ಒದಗುತ್ತದೆ(1998-19).

ಬತ್ತ ಮತ್ತು ಕಬ್ಬು ಈ ಜಿಲ್ಲೆಯ ಮಲೆನಾಡ ಭಾಗದ ಮುಖ್ಯ ಬೆಳೆಗಳು. ಧಾರವಾಡ ಮತ್ತು ಕಲಘಟಗಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಬತ್ತ ಮತ್ತು ಕಬ್ಬನ್ನು ಬೆಳೆಯುವರು. ಜೋಳ ವಿಶೇಷವಾಗಿ ನವಲಗುಂದ, ಹುಬ್ಬಳ್ಳಿ, ಕುಂದಗೋಳ, ಧಾರವಾಡ ತಾಲ್ಲೂಕುಗಳ ಬೆಳೆ. ಗೋಧಿ, ಹೆಸರು, ಹುರುಳಿ, ಕಡಲೆ, ತೊಗರಿ ಮೊದಲಾದ ಬೆಳೆಗಳನ್ನು ಸಾಮಾನ್ಯವಾಗಿ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಬೆಳೆಯುತ್ತಾರೆ. ಕುಸುಬೆ, ಎಳ್ಳು, ಜೌಡಲ - ಇವು ಜಿಲ್ಲೆಯ ಪೂರ್ವ ಭಾಗದಲ್ಲಿ ಬೆಳೆಯುತ್ತವೆ. ಕುಂದಗೋಳ ತಾಲ್ಲೂಕು ತಂಬಾಕು ಬೆಳೆಗೆ ಪ್ರಸಿದ್ಧ. ಜಿಲ್ಲೆಯ ಕಪ್ಪುಮಣ್ಣಿನ ಪ್ರದೇಶದಲ್ಲಿ ಹೆಚ್ಚಾಗಿ ಹತ್ತಿ ಬೆಳೆಯುವರು. ದ್ರಾಕ್ಷಿ, ಪೇರಲ, ಬೋರೆ, ಗೋಡಂಬಿ, ಮಾವು, ಬಾಳೆ, ನಿಂಬೆ ಮೊದಲಾದ ಹಣ್ಣುಗಳನ್ನೂ ಬದನೆ, ಬೆಂಡೆ, ಹೀರೆ, ಪಡುವಲ, ಬಟಾಟೆ, ಗೆಣಸು, ಈರುಳ್ಳಿ ಮುಂತಾದವನ್ನೂ ಈ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಪುಂಡಿ, ಸೆಣಬು, ಮೊದಲಾದ ನಾರಿನ ಬೆಳೆಗಳು ಈ ಜಿಲ್ಲೆಯಲ್ಲಿವೆ.

ಜಾನುವಾರುಗಳ ಅಭಿವೃದ್ಧಿಗೆ ಮತ್ತು ಹೈನುಗಾರಿಕೆಗೆ ವಿಶೇಷ

ಗಮನ ನೀಡಲಾಗಿದೆ. ಉತ್ತಮ ಎಮ್ಮೆ ರಾಸುಗಳಿಗೆ ಧಾರವಾಡ ಪ್ರಸಿದ್ಧ. ಜಿಲ್ಲೆಯಲ್ಲಿ 5 ಪಶುವೈದ್ಯ ಆಸ್ಪತ್ರೆಗಳೂ 16 ಚಿಕಿತ್ಸಾಲಯಗಳೂ 38 ಪ್ರಾಥಮಿಕ ಪಶುವೈದ್ಯ ಕೇಂದ್ರಗಳೂ ಇವೆ (2000). ಮೀನುಗಾರಿಕೆಗೂ ಪ್ರೋತ್ಸಾಹವಿದ್ದು 2000-01ರಲ್ಲಿ 2,010 ಮೆಟ್ರಿಕ್ ಟನ್ ಮೀನು ಹಿಡಿಯಲಾಗಿದೆ.

ಕೈಗಾರಿಕೆ: 2001ರ ಜನಗಣತಿಯ ಮೇರೆಗೆ ಜಿಲ್ಲೆಯಲ್ಲಿ ಗ್ರಾಮೀಣ ಜನಸಂಖ್ಯೆಗಿಂತ ನಗರವಾಸಿ ಜನಸಂಖ್ಯೆ ಅಧಿಕವಾಗಿದೆ. ಇದರಿಂದ ಜಿಲ್ಲೆ ಕೈಗಾರಿಕೆ ಮತ್ತು ಕೈಕಸುಬುಗಳಲ್ಲಿ ಪ್ರಗತಿ ಸಾಧಿಸಿರುವುದು ತಿಳಿದುಬರುತ್ತದೆ. ಹತ್ತಿ ಸಂಸ್ಕರಿಸುವ ಮತ್ತು ಬಟ್ಟೆ ತಯಾರಿಸುವ ಕೈಗಾರಿಕೆಗಳು ಪ್ರಮುಖವಾಗಿವೆ. ಎಣ್ಣೆತೆಗೆಯುವುದು, ಮುದ್ರಣ, ಬತ್ತದ ಗಿರಣಿಗಳು, ಮರ ಕೊಯ್ಯುವುದು ಮೊದಲಾದ ಉದ್ದೇಶಗಳಿಗಾಗಿ ಯಂತ್ರಗಳನ್ನು ಸ್ಥಾಪಿಸಲಾಗಿದೆ. ರೇಷ್ಮೆ, ಕೈಮಗ್ಗ, ಕಂಬಳಿ ನೇಯುವುದು, ಬೀಡಿ ಕಟ್ಟುವುದು, ಬಿದಿರುವಸ್ತುಗಳು, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳು, ಅವಲಕ್ಕಿ ತಯಾರಿಕೆ, ಚರ್ಮಹದ ಮಾಡುವುದು ಮೊದಲಾದ ವಿವಿಧ ಉದ್ಯಮಗಳಲ್ಲಿ ಸಾವಿರಾರು ಜನರು ನಿರತರಾಗಿದ್ದಾರೆ.

ಧಾರವಾಡ-ಹುಬ್ಬಳ್ಳಿ ನಗರಸಭೆ ರಚನೆ ಈ ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನಕಾರಿಯಾಗಿದೆ. ರಾಜ್ಯ ಸಣ್ಣ ಕೈಗಾರಿಕೆಗಳ ಕಾರ್ಪೊರೇಷನ್ ಮೂಲಕ ರಾಜ್ಯ ಸರ್ಕಾರ ಇವುಗಳಿಗೆ ಹಣಕಾಸಿನ ನೆರವು ನೀಡುತ್ತಿದೆ. ಹುಬ್ಬಳ್ಳಿಯಲ್ಲಿ ಪ್ರಮುಖ ರೈಲ್ವೆ ವರ್ಕ್‌ಷಾಪ್ ಮತ್ತು ವಿದ್ಯುತ್ ವಿತರಣಾ ಕೇಂದ್ರಗಳಿವೆ. ಇವೆಲ್ಲ ಈ ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಅನುಕೂಲಕರವಾಗಿವೆ.

ಹುಬ್ಬಳ್ಳಿ ಹತ್ತಿ ಉದ್ಯಮಕ್ಕೆ ಪ್ರಸಿದ್ಧ. ಇಲ್ಲಿ ಬಟ್ಟೆಯ ಕಾರ್ಖಾನೆಗಳೂ ನೂಲಿನ ಗಿರಣಿಗಳೂ ಇವೆ. ಹತ್ತಿ ಜಿನ್ನಿಂಗ್ ಕಾರ್ಖಾನೆಗಳಿವೆ. ಧಾರವಾಡ ಜಿಲ್ಲೆ ಕೈಮಗ್ಗದ ಬಟ್ಟೆಗೂ ಪ್ರಸಿದ್ಧ. ಖಾದಿ ಬಟ್ಟೆಗಳು ತಯಾರಾಗುತ್ತವೆ. ಧಾರವಾಡ, ನವಲಗುಂದಗಳು ಗುಡಾರಗಳ ತಯಾರಿಕೆಗೂ ಪ್ರಸಿದ್ಧವಾಗಿವೆ. ಕಂಬಳಿ ತಯಾರಿಕೆ ಉದ್ಯಮವಿದೆ. ನವಲಗುಂದದ ಜಮಖಾನೆಗಳು ಉತ್ತಮವೆಂದು ಹೆಸರು ಪಡೆದಿದೆ. ಹುಬ್ಬಳ್ಳಿ ಹಿತ್ತಾಳೆ ಪಾತ್ರೆಗಳ ತಯಾರಿಕೆಗೆ ಪ್ರಸಿದ್ಧ. ಗ್ರಾಮೋದ್ಯೋಗಗಳಾದ ಗಾಣದ ಎಣ್ಣೆ, ಸೋಪು, ಚರ್ಮ ಹದಮಾಡುವುದು, ಖಾದಿ ಬಟ್ಟೆ ತಯಾರಿಕೆ ಮುಂತಾದವು ಧಾರವಾಡ, ಹುಬ್ಬಳ್ಳಿಗಳಲ್ಲಿವೆ. ಕುಟ್ಟಿದ ಅಕ್ಕಿ ಮತ್ತು ಅವಲಕ್ಕಿ ತಯಾರಿಕೆ ಮಿಶ್ರಿಕೋಟೆಯಲ್ಲಿ ಹೆಚ್ಚು. ಮರಗೆಲಸ, ಮರದ ಆಟದ ಸಾಮಾನುಗಳ ತಯಾರಿಕೆ ಕೆಲವೆಡೆ ಇದೆ. ಧಾರವಾಡದಲ್ಲಿ ಪ್ಲೈವುಡ್ ಕಾರ್ಖಾನೆ ಇದೆ. ಅಳ್ನಾವರದಲ್ಲಿ ಬಿದಿರಿನ ವಸ್ತುಗಳ ತಯಾರಿಕೆಯುಂಟು. ಮರ ಕೊಯ್ಯುವ ಕಾರ್ಖಾನೆಗಳು ಧಾರವಾಡ, ಹುಬ್ಬಳ್ಳಿ, ಅಳ್ಣಾವರ, ಕಲಘಟಗಿಗಳಲ್ಲಿವೆ.

ಆಧುನಿಕವಾದ ಸಾಮಾನ್ಯ ಯಂತ್ರೋಪಕರಣ ತಯಾರಿಸುವ ಮತ್ತು ದುರಸ್ತಿ ಮಾಡುವ ಕೈಗಾರಿಕಾ ಘಟಕಗಳು ಹುಬ್ಬಳ್ಳಿ, ಧಾರವಾಡಗಳಲ್ಲಿ ಹೆಚ್ಚಿವೆ. ಕಾಲುಚೀಲ ಮುಂತಾದವನ್ನು ತಯಾರಿಸುವ ಕಾರ್ಖಾನೆ ಹುಬ್ಬಳ್ಳಿಯಲ್ಲಿವೆ. ಧಾರವಾಡ, ಹುಬ್ಬಳ್ಳಿಗಳಲ್ಲಿ ಮುದ್ರಣಾಲಯಗಳಿದ್ದು ಅದಕ್ಕೆ ಸಂಬಂಧಿಸಿದ ಉದ್ದಿಮೆಗಳಿವೆ. ಸುಣ್ಣ, ಗಂಧದ ಕಡ್ಡಿ, ಹೊಗೆಸೊಪ್ಪಿನಿಂದ ನಸ್ಯ ಮತ್ತು ಬೀಡಿ ಇವುಗಳ ತಯಾರಿಕೆಯುಂಟು. ಜಿಲ್ಲೆಯಲ್ಲಿ ಪ್ರಸಿದ್ಧ ಕಿರ್ಲೋಸ್ಕರ್ ವಿದ್ಯುತ್ ಕಾರ್ಖಾನೆ, ಎ.ಕೆ. ಇಂಡಸ್ಟ್ರೀಸ್ ಸಿಮೆಂಟ್ ವಸ್ತು ತಯಾರಿಕಾ ಕಾರ್ಖಾನೆ, ಸುಂದತ್ತಾ ಆಹಾರ ಮತ್ತು ನೂಲಿನ ವಸ್ತುಗಳ ತಯಾರಿಕಾ ಕಾರ್ಖಾನೆ ಹುಬ್ಬಳ್ಳಿಯಲ್ಲೂ ಟೈವಾಕ್ ಗಡಿಯಾರದ ಕಾರ್ಖಾನೆ, ರಟ್ಟು ಮತ್ತು ಕ್ಯಾಲಿಕಾರ್ಟ್ ತಯಾರಿಕಾ ಕಾರ್ಖಾನೆ ಧಾರವಾಡದಲ್ಲೂ ಇವೆ. ತಿಜೋರಿ, ಕಪಾಟು, ಕುರ್ಚಿ, ಟೇಬಲ್ ಮುಂತಾದವುಗಳ ತಯಾರಿಕೆ ಹುಬ್ಬಳ್ಳಿ, ಧಾರವಾಡಗಳಲ್ಲಿ ಹೆಚ್ಚು. ಜಿಲ್ಲೆಯಲ್ಲಿ ಒಟ್ಟು 427 ಕಾರ್ಖಾನೆಗಳಿವೆ. ಒಟ್ಟು ಉದ್ಯೋಗಿಗಳ ಸಂಖ್ಯೆ 44,190; ಕೈಗಾರಿಕಾ ಪ್ರದೇಶಗಳು 5; ಕೈಗಾರಿಕಾ ಶೆಡ್ಡುಗಳು 524.

ಧಾರವಾಡ ಜಿಲ್ಲೆ, ವ್ಯಾಪಾರ-ವಾಣಿಜ್ಯಕ್ಕೆ ಪ್ರಸಿದ್ಧ. ಉತ್ತರ ಕರ್ನಾಟಕದ ಪ್ರಮುಖ ರೈಲ್ವೆ ಜಂಕ್ಷನ್ ಹುಬ್ಬಳ್ಳಿಯಲ್ಲಿದ್ದು ಮುಂಬಯಿ, ಪುಣೆ, ಬೆಂಗಳೂರು, ಗುಂತಕಲ್ಲು ಮೊದಲಾದ ಸ್ಥಳಗಳಿಗೆ ನೇರ ರೈಲ್ವೆ ಸಂಪರ್ಕ ಇದೆ. ಹತ್ತಿ ಕೈಮಗ್ಗದ ಬಟ್ಟೆಗಳು, ಅಡಕೆ, ನೆಲಗಡಲೆ, ಮೆಣಸಿನಕಾಯಿ, ಗೋಧಿ, ನವಣೆ, ಜೋಳ, ಚರ್ಮ, ಕಚ್ಚಾ ಎಣ್ಣೆ, ನಾಟಾ, ಲೋಹದ ಪಾತ್ರೆಗಳು ಮತ್ತು ಕೆಲವು ಉಪಕರಣಗಳು ಈ ಜಿಲ್ಲೆಯ ಪ್ರಮುಖ ರಫ್ತು ವಸ್ತುಗಳಾಗಿವೆ. ಮನೆ ಕಟ್ಟುವ ಸಾಮಗ್ರಿಗಳು, ಲೋಹದ ಉಪಕರಣಗಳು, ಯಂತ್ರಗಳು, ಔಷಧಿ, ಇಂಧನ, ದಿನಬಳಕೆ ಸಾಮಗ್ರಿಗಳು, ಅಲಂಕಾರ ವಸ್ತುಗಳು, ಏಲಕ್ಕಿ, ಕಾಫಿಬೀಜ, ಹೊಗೆಸೊಪ್ಪು ಮೊದಲಾದವು ಹೆಚ್ಚಾಗಿ ಹೊರಗಡೆಯಿಂದ ಬರುತ್ತವೆ. ಧಾರವಾಡ ಹುಬ್ಬಳ್ಳಿ ನಗರಗಳು ಬೆಳೆಯುತ್ತಿರುವಂತೆಯೇ ಜಿಲ್ಲೆಯ ವಾಣಿಜ್ಯ ಚಟುವಟಿಕೆಯೂ ಹೆಚ್ಚುತ್ತಿದೆ.

ಜಿಲ್ಲೆಯಲ್ಲಿ ನಿಯಂತ್ರಿತ ಮಾರುಕಟ್ಟೆಗಳಿದ್ದು ವಾಣಿಜ್ಯ ವ್ಯಾಪಾರಗಳಿಗೆ ಸಂಬಂಧಿಸಿದಂತೆ ವಿವಿಧ ಸಂಸ್ಥೆಗಳು ಸ್ಥಾಪಿತವಾಗಿವೆ. ಹುಬ್ಬಳ್ಳಿಯಲ್ಲಿರುವ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆ ವಿವಿಧ ಚಟುವಟಿಕೆಗಳಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದೆ. ಜಿಲ್ಲೆಯಲ್ಲಿ ಹಣಕಾಸು ಮತ್ತು ಬ್ಯಾಂಕಿಂಗ್‌ಗೆ ಸಂಬಂಧಿಸಿದ ವಿವಿಧ ಸಂಸ್ಥೆಗಳಿವೆ. ಕರ್ನಾಟಕ ರಾಜ್ಯ ಹಣಕಾಸು ಕಾರ್ಪೊರೇಷನ್ನು ವಿವಿಧ ಸಂಘ ಸಂಸ್ಥೆಗಳಿಗೆ ಮತ್ತು ಕೈಗಾರಿಕೆಗಳಿಗೆ ಹಣಕಾಸಿನ ನೆರವೀಯುತ್ತದೆ. ಜಿಲ್ಲೆಯಲ್ಲಿ 144 ವಾಣಿಜ್ಯ ಬ್ಯಾಂಕುಗಳೂ 45 ಗ್ರಾಮೀಣ ಬ್ಯಾಂಕುಗಳೂ ಇವೆ. ಇವಲ್ಲದೆ ಕೃಷಿ ಸಾಲ ನೀಡಿಕೆ ಸಹಕಾರ ಸಂಘಗಳು. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿವೆ. ಕೇಂದ್ರ ಸಹಕಾರಿ ಬ್ಯಾಂಕುಗಳ ಶಾಖಾ ಕಚೇರಿಗಳಿವೆ.

ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಈ ಜಿಲ್ಲೆಯ ಮೂಲಕ ಹಾದುಹೋಗಿದೆ. ಕಾರವಾರ-ಬಳ್ಳಾರಿ ರಾಜ್ಯ ಹೆದ್ದಾರಿ; ಕುಮಟ-ಹುಬ್ಬಳ್ಳಿ, ಸೊಲ್ಲಾಪುರ-ಹುಬ್ಬಳ್ಳಿ, ಧಾರವಾಡ-ಗೋವ ಮೊದಲಾದ ರಸ್ತೆಗಳು ಈ ಜಿಲ್ಲೆಯೊಂದಗೆ ಹೊರಗಿನ ಸಂಪರ್ಕ ಕಲ್ಪಿಸುವ ಕೆಲವು ಮುಖ್ಯ ಮಾರ್ಗಗಳಾಗಿವೆ. 143 ಕಿಮೀ ರಾಷ್ಟ್ರೀಯ ಹೆದ್ದಾರಿ ಹಾಗೂ 163 ಕಿಮೀ ರಾಜ್ಯ ಹೆದ್ದಾರಿ 599 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳಿವೆ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ ಮಾರ್ಗಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿವೆ. ಬೆಂಗಳೂರು-ಪುಣೆ ರೈಲುಮಾರ್ಗ ಈ ಜಿಲ್ಲೆಯಲ್ಲಿ ಹಾದುಹೋಗುತ್ತವೆ. ಹುಬ್ಬಳ್ಳಿಯಿಂದ ಗುಂತಕಲ್ಲು ಸೊಲ್ಲಾಪುರ ಗೋವಾ ಕಡೆಗಳಿಗೆ ರೈಲು ಮಾರ್ಗಗಳಿವೆ. ಹುಬ್ಬಳ್ಳಿ ಕರ್ನಾಟಕದ ದೊಡ್ಡ ಜಂಕ್ಷನ್‌ಗಳಲ್ಲೊಂದಾಗಿದೆ. ಜಿಲ್ಲೆಯಲ್ಲಿ ಒಟ್ಟು 82 ಕಿಮೀ ಬ್ರಾಡ್‌ಗೇಜ್ ರೈಲು ಮಾರ್ಗವಿದೆ.

ಧಾರವಾಡ ಜಿಲ್ಲೆ ಶಿಕ್ಷಣದಲ್ಲಿ ಮಹತ್ತರ ಪ್ರಗತಿ ಸಾಧಿಸಿದೆ. ಉತ್ತರ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ 1950ರಲ್ಲಿ ಸ್ಥಾಪನೆಯಾಯಿತು. ಧಾರವಾಡದಲ್ಲಿ ಕರ್ನಾಟಕ ಕಾಲೇಜು, ಕೃಷಿ ಶಿಕ್ಷಣ ಕಾಲೇಜು, ವಿವಿಧ ತಾಂತ್ರಿಕ ಶಿಕ್ಷಣ ಕಾಲೇಜುಗಳಿವೆ. 1986ರಲ್ಲಿ ಸ್ಥಾಪಿತವಾದ ರಾಜ್ಯದ ಎರಡನೆಯ ಕೃಷಿ ವಿಶ್ವವಿದ್ಯಾನಿಲಯದ ಕೇಂದ್ರ ಧಾರವಾಡದಲ್ಲಿದೆ. ಹುಬ್ಬಳ್ಳಿಯಲ್ಲಿ ವೈದ್ಯಕೀಯ ಕಾಲೇಜಿದೆ. ಧರ್ಮಸ್ಥಳದ ಶಿಕ್ಷಣ ಟ್ರಸ್ಟ್ ನಡೆಸುವ ದಂತ ವೈದ್ಯ ಕಾಲೇಜಿದೆ. ಶಿಕ್ಷಣ ತರಬೇತಿಯೂ ಸೇರಿದಂತೆ ವೃತ್ತಿ ಮತ್ತು ವಿಶೇಷ ಶಿಕ್ಷಣ ಶಾಲೆಗಳಿವೆ. 2 ಪಾಲಿಟೆಕ್ನಿಕ್‌ಗಳಿವೆ. ವಿಶ್ವವಿದ್ಯಾಲಯ ಕಾಲೇಜುಗಳೂ ಸೇರಿದಂತೆ ಕಲಾ ಮತ್ತು ವಿಜ್ಞಾನ ಕಾಲೇಜುಗಳು ಒಂದು ಆಯುರ್ವೇದ ಕಾಲೇಜು ಮತ್ತು ಒಂದು ನ್ಯಾಯ ಶಿಕ್ಷಣ ಕಾಲೇಜು, ವಾಣಿಜ್ಯ ಕಾಲೇಜುಗಳು ಮತ್ತು ಕೈಗಾರಿಕಾ ತರಬೇತಿ ಸಂಸ್ಥೆಗಳೂ ಇವೆ. ಈ ಜಿಲ್ಲೆಯಲ್ಲಿ ಒಟ್ಟು ಸಾಕ್ಷರತೆ ಸೇಕಡ 71.87. ಪುರುಷರಲ್ಲಿ ಸೇಕಡ 81.04 ರಷ್ಟಿದ್ದರೆ ಮಹಿಳೆಯರಲ್ಲಿ ಸೇಕಡ 62.20 ಸಾಕ್ಷರಸ್ಥರಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಧಾರವಾಡ ಜಿಲ್ಲೆ ಉನ್ನತ ಶಿಕ್ಷಣಕ್ಕೆ ಕೇಂದ್ರ ಸ್ಥಾನವಾಗಿದ್ದು ಇಲ್ಲಿನ ವಿವಿಧ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ

ಅನೇಕ ಸಾರ್ವಜನಿಕ ಸಂಘಗಳು ಮತ್ತು ಧಾರ್ಮಿಕ ಸಂಸ್ಥೆಗಳು ಮಹತ್ತರ ಪಾತ್ರವಹಿಸಿವೆ.

ಧಾರವಾಡ ಜಿಲ್ಲೆಯಲ್ಲಿ ಅನೇಕ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ತ್ವದ ಸ್ಥಳಗಳಿವೆ. ಅವುಗಳಲ್ಲಿ ಅಣ್ಣಿಗೇರಿ, ಅಬ್ಬಲೂರು, ಅಮ್ಮಿನಬಾವಿ, ನವಲಗುಂದ, ಕುಂದಗೋಳ, ಉಣಕಲ್, ಯಮನೂರು, ಹೆಬ್ಬಿ, ಹುಬ್ಬಳ್ಳಿ, ಕುಸುಗಲ್ಲು, ಮೂಗಡ, ಛಬ್ಬಿ, ಕುಂದೂರು, ಅಮರಗೋಳ ಮುಖ್ಯವಾದವು. ಈ ಕೆಲವು ಊರುಗಳಲ್ಲಿ ಪುರಾತನ ದೇವಾಲಯಗಳೂ ಇವೆ. ಧಾರವಾಡ, ಹುಬ್ಬಳ್ಳಿ, ಕುಂದಗೋಳ, ಕಲಘಟಗಿ, ನವಲಗುಂದ - ಇವು ಪ್ರಮುಖ ವ್ಯಾಪಾರ ಕೇಂದ್ರಗಳು. (ಡಿ.ಎಸ್.ಜೆ., ಎಸ್.ಎಸ್.ಬಿ.)

ಧಾರವಾಡ ಜಿಲ್ಲೆ ಬಹು ಪ್ರಾಚೀನ ಕಾಲದಿಂದ ಜನವಸತಿಯನ್ನು ಹೊಂದಿದ್ದ ಪ್ರದೇಶ. ತುಂಗಭದ್ರಾ, ವರದಾ ಮತ್ತು ಮಲಪ್ರಭಾ ನದಿಗಳು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಗೆ ಪ್ರೋತ್ಸಾಹಕಾರಿಯಾಗಿವೆ. ಈ ಜಿಲ್ಲೆಯಲ್ಲಿನ ಧಾರವಾಡ ತಾಲ್ಲೂಕಿನ ಬೆಣಚಮಟ್ಟಿ ಮೊದಲಾದ ಸ್ಥಳಗಳಲ್ಲಿ ಪುರಾತನ ಶಿಲಾಯುಗದ ಆದಿಭಾಗದಲ್ಲಿ ಪ್ರಚಲಿತವಾಗಿದ್ದ ಅಬೆವಿಲ್ಲಿಯನ್, ಅಶೂಲಿಯನ್ ಶಿಲಾಯುಧಗಳು ದೊರಕಿವೆ.

ನವಶಿಲಾಯುಗದ ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ನೆಲೆಗಳು ನವಲಗುಂದ ತಾಲ್ಲೂಕಿನ ಗುಡಿಸಾಗರ ಮೊದಲಾದ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ. ಇವುಗಳಲ್ಲಿ ದಕ್ಷಿಣ ಭಾರತದ ನವಶಿಲಾ ಸಂಸ್ಕೃತಿಯ ಸಾಮಾನ್ಯ ಕುರುಹುಗಳಾದ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿ ಮತ್ತು ಇತರ ಆಯುಧಗಳು, ಕಂದುಬಣ್ಣದ ಮಡಕೆಗಳು ಹಾಗೂ ಕೆಲವೆಡೆ ಚಿಕ್ಕ ಚಿಕ್ಕ ಕಲ್ಲಿನ ಚಾಕು ಮತ್ತು ಒರೆಗಳು ದೊರಕಿವೆ. ಇದೇ ಸಂಸ್ಕೃತಿಯ ಮುಂದಿನ ಘಟ್ಟದ ಶಿಲಾ ತಾಮ್ರಯುಗದ ಸಂಸ್ಕೃತಿಯ ಕೆಲವು ನೆಲೆಗಳೂ ಈ ಜಿಲ್ಲೆಯಲ್ಲಿವೆ. ಅವಿಭಜಿತ ಧಾರವಾಡ ಜಿಲ್ಲೆಯ ಉಣಚಗೇರಿ, ಹಿರೇತಾಳ, ಬುಡಪನಹಳ್ಳಿ ಮೊದಲಾದೆಡೆ ಬೃಹತ್ ಶಿಲಾಯುಗದ ಸಂಸ್ಕೃತಿ ಮತ್ತು ತಾಮ್ರ ಯುಗದ ಸಂಸ್ಕೃತಿಯ ನೆಲೆಗಳು ಕಂಡುಬಂದಿದ್ದು ಈ ಪ್ರದೇಶದ ಪುರಾತನ ನೆಲೆಸಿಕೆಗಳಿಗೆ ಸಾಕ್ಷಿಯಾಗಿವೆ.

ಆದಿಚಾರಿತ್ರಿಕ ಕಾಲದ ಹೊತ್ತಿಗೆ ಧಾರವಾಡ ಜಿಲ್ಲೆಯ ಅನೇಕ ಭಾಗಗಳಲ್ಲಿ ಗ್ರಾಮಗಳು ಬಹುಸಂಖ್ಯೆಯಲ್ಲಿ ಹುಟ್ಟಿಕೊಂಡಿದ್ದುವು. ಇವೆಲ್ಲ ಸಾತವಾಹನ ಆಳ್ವಿಕೆಯ ಕಾಲದಲ್ಲಿದ್ದು ತತ್ಕಾಲದಲ್ಲಿ ಪ್ರಚಲಿತವಾಗಿದ್ದ ಸುದ್ದೆ ಅಲಂಕರಣವಿರುವ ಕೆಂಪು ಮಡಕೆಗಳು, ಗಾಜಿನ ಮಣಿಗಳು, ರೋಮನ್ ಮೂಲದ ರೂಲೆಟೆಡ್ ಇತ್ಯಾದಿ ಮಡಕೆಗಳು ಮಂತಾದ ವಸ್ತು ದೊರಕಿರುವ ಅನೇಕ ನೆಲೆಗಳನ್ನು ಈ ಜಿಲ್ಲೆಯಲ್ಲಿ ಕಂಡುಹಿಡಿಯಲಾಗಿದೆ.

ಮೌರ್ಯರು ಮತ್ತು ಸಾತವಾಹನರ ಕಾಲದಿಂದ ಈ ಜಿಲ್ಲೆಯ ಇತಿಹಾಸ ಪ್ರಾರಂಭವಾಗುತ್ತದೆ. ಅನಂತರ ಬನವಾಸಿಯ ಕದಂಬರು, ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ಕಳಚುರಿ ಮತ್ತು ಯಾದವ ವಂಶಗಳವರ ಆಳ್ವಿಕೆಗೆ ಅನುಕ್ರಮವಾಗಿ ಒಳಪಟ್ಟಿದ್ದು ಅನಂತರ ವಿಜಯನಗರದ ಅರಸರ ಆಶ್ರಯಕ್ಕೆ ಬಂತು. ವಿಜಯನಗರ ಕಾಲದಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ಮುಂತಾದ ಪ್ರದೇಶಗಳು ಆಗಾಗ್ಗೆ ವಿಜಯನಗರಕ್ಕೂ ಬಹಮನಿ ರಾಜ್ಯಕ್ಕೂ ಕೈ ಬದಲಾಯಿಸುತ್ತಿದ್ದುವು. ಸು. 1575 ರಿಂದ ಈ ಪ್ರದೇಶ ಆದಿಲ್‌ಶಾಹೀ ಅರಸರ ಕೈಸೇರಿತು. 1686-1820ರ ಅವಧಿಯಲ್ಲಿ ಮುಗಲರ ವಶದಲ್ಲಿತ್ತು. ಆಗ ಅಬ್ದುಲ್ ರಹೂಫ್ ಎಂಬುವನು ಈ ಪ್ರದೇಶದಲ್ಲಿ ಆಳುತ್ತಿದ್ದು ಅನಂತರ ತನ್ನ ರಾಜಧಾನಿಯನ್ನು ಸವಣೂರಿಗೆ ವರ್ಗಾಯಿಸಿದ. ಈ ಕಾಲದಲ್ಲಿ ನವಲಗುಂದ, ಮೊದಲಾದೆಡೆಗಳಲ್ಲಿ ದೇಸಾಯರ ಮನೆತನಗಳು ಅಧಿಕಾರದಲ್ಲಿದ್ದುವು. 1707ರಲ್ಲಿ ಔರಂಗಜೇಬ ಮರಣಹೊಂದುತ್ತಿದ್ದಂತೆ ಕೊಲ್ಹಾಪುರ ಮತ್ತು ಸಾತಾರಾದ ಮರಾಠ ಪ್ರಭುಗಳು ತಮ್ಮ ಪ್ರಭಾವವನ್ನು ಹಬ್ಬಿಸಲು ಆರಂಭಿಸಿದರು. 1720 ರಿಂದ 1818ರ ಅವಧಿಯಲ್ಲಿ ಅನೇಕ ಮರಾಠ ಸರದಾರರು ಮರಾಠ ಪೇಶ್ವೆಗಳ ಅಧೀನದಲ್ಲಿ ಆಡಳಿತ ನಿರ್ವಹಿಸುತ್ತಿದ್ದರು. ಈ ಮಧ್ಯದಲ್ಲಿ ಜಿಲ್ಲೆಯ ಹಲವು ಭಾಗಗಳು ನಾಮತಃ ಹೈದರಾಬಾದಿನ ನಿಜಾಮರ ಅಧೀನದಲ್ಲಿದ್ದುವು. ಈ ಕಾಲದಲ್ಲಿ ಸವಣೂರು ನವಾಬರು ಒಂದು ಮುಖ್ಯ ಪ್ರಭುತ್ವಶಕ್ತಿಯಾಗಿ ತಲೆಯೆತ್ತಿದ್ದರು. ಅಲ್ಲದೆ ಇದೇ ಕಾಲದಲ್ಲಿ ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನ್ ಸಹ ಧಾರವಾಡ ಪ್ರಾಂತ್ಯದ ಮೇಲೆ ಆಗಾಗ್ಗೆ ದಾಳಿ ನಡೆಸಿ ಸವಣೂರು ಮೊದಲಾದ ಕೆಲವು ಭಾಗಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದರು. 1799ರಲ್ಲಿ ಟಿಪ್ಪುವಿನ ಪತನವಾದ ಅನಂತರ ಧಾರವಾಡ ಜಿಲ್ಲೆಯ ಪ್ರದೇಶ ಮರಾಠರ ಅಧೀನಕ್ಕೆ ಬಂತು. ಅನಂತರ 1817-18ರಲ್ಲಿ ಜನರಲ್ ಮನ್ರೋನ ಕಾರ್ಯಾಚರಣೆಗಳಿಂದ ಈ ಭಾಗದಲ್ಲಿ ಮರಾಠರ ಆಳ್ವಿಕೆ ಪೂರ್ಣವಾಗಿ ಕೊನೆಗೊಂಡು ಜಿಲ್ಲೆಯ ಭಾಗವೆಲ್ಲಾ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. 1818 ರಿಂದ 1830ರ ವರೆಗೆ ಬ್ರಿಟಿಷ್ ಮಿಲಿಟರಿ ನಾಯಕರು ಇಲ್ಲಿ ಪ್ರಭುತ್ವ ನಡೆಸುತ್ತಿದ್ದು ಈ ಭಾಗದ ಆಡಳಿತ ಮದರಾಸು ಪ್ರಾಂತ್ಯಕ್ಕೆ ಅಥ'ವಾ ಮುಂಬಯಿ ಪ್ರಾಂತಕ್ಕೆ ಸೇರಬೇಕೆ ಎಂಬ ಬಗ್ಗೆ ಚರ್ಚೆಗಳಾಗುತ್ತಿದ್ದುವು. ಧಾರವಾಡ ಪೊಲಿಟಿಕಲ್ ಏಜೆಂಟ್ ಮತ್ತು ಕಲೆಕ್ಟರ್ ಆಗಿದ್ದ ಥ್ಯಾಕರೆ 1824ರಲ್ಲಿ ಕಿತ್ತೂರು ರಾಜ್ಯವನ್ನು ವಶಪಡಿಸಿಕೊಳ್ಳಲು ಕಿತ್ತೂರಿಗೆ ದಾಳಿ ಇಟ್ಟಾಗ ಗುಂಡಿಗೆ ಬಲಿಯಾದನು.

1830ರಲ್ಲಿ ಧಾರವಾಡ ಜಿಲ್ಲೆ ರಚನೆಯಾಗಿ, ಈಸ್ಟ್ ಇಂಡಿಯ ಕಂಪನಿಯ ಡೈರೆಕ್ಟರುಗಳ ತೀರ್ಮಾನದಂತೆ ಇದನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲಾಯಿತು. ಅಂದಿನ ಧಾರವಾಡ ಜಿಲ್ಲೆ ಈಗಿನ ಜಿಲ್ಲಾ ಪ್ರದೇಶವಲ್ಲದೆ ಇಂದಿನ ಬೆಳಗಾಂವಿ, ಬಿಜಾಪುರ, ಸೊಲ್ಲಾಪುರ ಜಿಲ್ಲೆಗಳ ಹಲವು ಪ್ರದೇಶಗಳನ್ನೂ ಒಳಗೊಂಡಿತ್ತು. 1836ರಲ್ಲಿ ಬೆಳಗಾಂವಿ ಪ್ರತ್ಯೇಕ ಜಿಲ್ಲೆಯಾಯಿತು. 1857-58ರಲ್ಲಿ ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾವ್ ಇವರುಗಳ ನೇತೃತ್ವದಲ್ಲಿ ನಡೆದ ಕ್ರಾಂತಿ ಈ ಕಾಲದ ಬಹು ಮುಖ್ಯ ಘಟನೆ. ಅನಂತರ ಜಿಲ್ಲೆಯಲ್ಲಿ ಬ್ರಿಟಿಷರ ಆಳ್ವಿಕೆ ಸ್ಥಿರವಾಗಿ ನೆಲೆಸಿ, ಬ್ರಿಟಿಷ್ ರೀತಿಯ ಆಡಳಿತಕ್ರಮ, ಇಂಗ್ಲಿಷ್ ವಿದ್ಯಾಭ್ಯಾಸ ಮೊದಲಾದ ಹಲವು ಚಟುವಟಿಕೆಗಳು ಬೆಳೆದುವು. ಜಿಲ್ಲೆ ಪೂರ್ಣವಾಗಿ ಮುಂಬಯಿ ಪ್ರಾಂತ್ಯದ ಭಾಗವಾಗಿದ್ದ ಆಡಳಿತ ಘಟಕವಾಗಿದ್ದರೂ ರಾಮದುರ್ಗ ಮೊದಲಾದ ಚಿಕ್ಕ ಸಂಸ್ಥಾನಗಳೂ ಇಲ್ಲಿ ಅಸ್ತಿತ್ವದಲ್ಲಿದ್ದು, 1949 ಆಗಸ್ಟ್ 1ರಂದು ಹಿಂದಿನ ಹಿರಿಯ ಮಿರಜ ಸಂಸ್ಥಾನದ 15 ಗ್ರಾಮ ಮತ್ತು 2 ಪಟ್ಟಣಗಳೂ ಜಮಖಂಡಿ ರಾಜ್ಯದ 17 ಗ್ರಾಮ ಮತ್ತು 3 ಪಟ್ಟಣಗಳೂ ಕಿರಿಯ ಮಿರಜ ಸಂಸ್ಥಾನದ 72 ಗ್ರಾಮಗಳು ಮತ್ತು ಒಂದು ಪಟ್ಟಣವೂ ರಾಮದುರ್ಗ ರಾಜ್ಯದ 7 ಗ್ರಾಮಗಳೂ ಧಾರವಾಡ ಜಿಲ್ಲೆಗೆ ಸೇರಿದವು. ಅದೇ ಕಾಲದಲ್ಲಿ ರಾಮದುರ್ಗ ತಾಲ್ಲೂಕಿಗೆ ಧಾರವಾಡ ಜಿಲ್ಲೆಯ 3 ಗ್ರಾಮಗಳನ್ನೂ ಹೈದರಾಬಾದು ರಾಜ್ಯಕ್ಕೆ 4 ಗ್ರಾಮಗಳನ್ನೂ ವರ್ಗಾಯಿಸಲಾಯಿತು. ಹೈದರಾಬಾದು ರಾಜ್ಯದಿಂದ 10 ಗ್ರಾಮಗಳನ್ನು ಧಾರವಾಡ ಜಿಲ್ಲೆಗೆ ಸೇರಿಸಲಾಯಿತು. 1962ರಲ್ಲಿ ಧಾರವಾಡ ಹುಬ್ಬಳ್ಳಿ ಪಟ್ಟಣಗಳನ್ನು ಸೇರಿಸಿ ಮಹಾನಗರವೆಂದು ಪರಿಗಣಿಸಲಾಯಿತು. 1969ರಲ್ಲಿ ಹಾವೇರಿ ತಾಲ್ಲೂಕಿನ 21 ಗ್ರಾಮಗಳನ್ನೂ ಮತ್ತು ಶಿಗ್ಗಾಂವಿ ತಾಲ್ಲೂಕಿನ 37 ಗ್ರಾಮಗಳನ್ನೂ ಸೇರಿಸಿ ಸವಣೂರು ತಾಲ್ಲೂಕನ್ನು ರಚಿಸಲಾಯಿತು. 1971ರಲ್ಲಿ ಅಳಣಾವರ ಮತ್ತು ಶಿಗ್ಗಾಂವಿಗಳನ್ನು ಪಟ್ಟಣಗಳೆಂದು ಪರಿಗಣಿಸಾಲಗಿ ಧಾರವಾಡ ಜಿಲ್ಲೆ ಮೊದಲಿನ ಸ್ವರೂಪ ಪಡೆಯಿತು. 1997ರಲ್ಲಿ ಜಿಲ್ಲಾ ಪುನರ್ವಿಂಗಡನೆಯಾದಾಗ ವಿಸ್ತೀರ್ಣದಲ್ಲಿ ಚಿಕ್ಕದಾಯಿತು.

ತಾಲ್ಲೂಕು : ಜಿಲ್ಲೆಯ ವಾಯುವ್ಯ ಭಾಗದಲ್ಲಿರುವ ಈ ತಾಲ್ಲೂಕಿನ ಪೂರ್ವದಲ್ಲಿ ನವಲಗುಂದ ಮತ್ತು ಹುಬ್ಬಳ್ಳಿ, ದಕ್ಷಿಣದಲ್ಲಿ ಕಲಘಟಗಿ, ಈ ತಾಲ್ಲೂಕುಗಳೂ ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯೂ ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕು ಮತ್ತು ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕುಗಳೂ ಇವೆ. ಅಳಣಾವರ, ಗರಗ, ಅಮ್ಮಿನಭಾವಿ ಮತ್ತು ಧಾರವಾಡ ಹೋಬಳಿಗಳು. 110 ಗ್ರಾಮಗಳೂ 2 ಪಟ್ಟಣಗಳೂ ಇವೆ. ವಿಸ್ತೀರ್ಣ 1008 ಚಕಿಮೀ. ಜನಸಂಖ್ಯೆ 2,18,803.

ಈ ತಾಲ್ಲೂಕು ಜಿಲ್ಲೆಯ ಪಶ್ಚಿಮಭಾಗದಲ್ಲಿದ್ದು ಮಲೆನಾಡ ಅಂಚಿನಲ್ಲಿದೆ. ಸಣ್ಣ ಪುಟ್ಟ ಗುಡ್ಡಗಳು ಅಲ್ಲಲ್ಲಿ ಹರಡಿವೆ. ಧಾರವಾಡ ಶಿಲಾಶ್ರೇಣಿಗೆ ಸೇರಿದ ಶಿಲಾರಚನೆ ಇದೆ. ತಾಲ್ಲೂಕಿನ ಪೂರ್ವಭಾಗ ಹುಳಕೆರಿ ಭೂಮಿಯಿಂದ ಮತ್ತು ಉಳಿದೆಡೆ ಕಪ್ಪು ಕೆಂಪು ಮಣ್ಣಿನ ಪ್ರದೇಶಗಳಿಂದ ಕೂಡಿದೆ. ಈ ತಾಲ್ಲೂಕಿನ ಹವಾಗುಣ ಹಿತಕರವಾಗಿದ್ದು ಸರಾಸರಿ ಉಷ್ಣತಾಮಾನ 23.6ಸೇ. ಇರುತ್ತದೆ. ವಾರ್ಷಿಕ ಸರಾಸರಿ ಮಳೆ 833 ಮಿಮೀ. ಈ ತಾಲ್ಲೂಕಿನಲ್ಲಿ ಸು. 141 ಚಕಿಮೀ. ರಕ್ಷಿತ ಅರಣ್ಯಪ್ರದೇಶ ಇದೆ. ಇದರಲ್ಲಿ ಸು.115 ಚಕಿಮೀ. ಅರಣ್ಯಪ್ರದೇಶದಲ್ಲಿ ಪಶ್ಚಿಮಭಾಗ ಹೆಚ್ಚು ದಟ್ಟವಾಗಿದ್ದು ತೇಗ ಇತ್ಯಾದಿ ಮರಗಳಿಂದ ಕೂಡಿದೆ. ಪೂರ್ವಭಾಗ ವಿರಳಕಾಡಾಗಿದ್ದು ಶ್ರೀಗಂಧ ಇತ್ಯಾದಿ ಮರಗಳನ್ನು ಒಳಗೊಂಡಿದೆ. ತಾಲ್ಲೂಕು ವ್ಯವಸಾಯಪ್ರಧಾನವಾಗಿದ್ದು ಜೋಳ, ಗೋದಿ, ಬತ್ತ, ನವಣೆ, ಸೇಂಗ, ರಾಗಿ, ಎಣ್ಣೆಬೀಜಗಳು, ದ್ವಿದಳಧಾನ್ಯಗಳು, ಕಬ್ಬು, ಹತ್ತಿ ಮುಂತಾದುವುಗಳ ಜೊತೆಗೆ ವಿವಿಧ ತರಕಾರಿಗಳನ್ನು ಕೆಲವು ಫಲಗಳನ್ನು ಬೆಳೆಯುತ್ತಾರೆ.

ಈ ತಾಲ್ಲೂಕು ಇಂದು ವಾಣಿಜ್ಯ ಉದ್ಯಮಗಳ ಮತ್ತು ವಿದ್ಯಾಲಯಗಳ ಕೇಂದ್ರವಾಗಿದೆ. ಗುಡಾರಗಳಿಗೆ, ಖಾದಿಗ್ರಾಮೋದ್ಯೋಗಗಳಿಗೆ, ಕೈಮಗ್ಗದ ಬಟ್ಟೆಗಳಿಗೆ ಈ ತಾಲ್ಲೂಕು ಪ್ರಸಿದ್ಧ. ಪ್ಲೈವುಡ್ ಮತ್ತು ಮರಕೊಯ್ಯುವ ಕಾರ್ಖಾನೆಗಳಿವೆ. ಬೀಡಿ ತಯಾರಿಕೆ, ಚರ್ಮ ಹದ ಮಾಡುವುದು, ಕಬ್ಬಿಣದ ತಿಜೋರಿ, ಕಪಾಟು, ಕುರ್ಚಿ ಮೊದಲಾದ ತಯಾರಿಕೆಯುಂಟು. ಗಡಿಯಾರ ತಯಾರಿಕಾ ಕಾರ್ಖಾನೆ, ರಟ್ಟು ತಯಾರಿಸುವ ಕಾರ್ಖಾನೆ ಮುಂತಾದವುಗಳಿವೆ.

ಈ ತಾಲ್ಲೂಕಿನ ಮುಖಾಂತರ ಬೆಂಗಳೂರು-ಬೆಳಗಾಂವಿ-ಪುಣೆ ರೈಲುಮಾರ್ಗ ಹಾದುಹೋಗಿದ್ದು ಧಾರವಾಡ ಪ್ರಮುಖ ರೈಲ್ವೆ ನಿಲ್ದಾಣವಾಗಿದೆ. ಜಿಲ್ಲೆಯ ಎಲ್ಲ ಕಡೆಗೂ ಇಲ್ಲಿಂದ ಉತ್ತಮ ಮಾರ್ಗಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುಚ್ಛಕ್ತಿ ಮತ್ತು ಕೆಲವು ಕಡೆ ರಕ್ಷಿತ ಕುಡಿಯುವ ನೀರಿನ ಸೌಕರ್ಯಗಳಿವೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳೂ ಖಾಸಗಿ ಕಾಲೇಜುಗಳೂ ಕರ್ನಾಟಕ ವಿಶ್ವವಿದ್ಯಾಲಯ ಕಾಲೇಜುಗಳೂ ಇವೆ. ಸರ್ಕಾರಿ ಆಸ್ಪತ್ರೆ, ಸಾರ್ವಜನಿಕ ಗ್ರಂಥಾಲಯ, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ನಿಯಂತ್ರಿತ ಮಾರುಕಟ್ಟೆ ಮುಂತಾದವುಗಳೂ ಇವೆ.

ಈ ತಾಲ್ಲೂಕಿನಲ್ಲಿ ಧಾರವಾಡಕ್ಕೆ ಈಶಾನ್ಯದಲ್ಲಿರುವ ಅಮ್ಮಿನಭಾವಿ ಒಂದು ದೊಡ್ಡ ಗ್ರಾಮ. ಪೇಶ್ವೆಗಳ ಕಾಲದಲ್ಲಿ ಇದೊಂದು ಅಷ್ಟೆಗ್ರಾಮಗಳ ಕೇಂದ್ರವಾಗಿತ್ತೆಂದು ತಿಳಿದುಬರುವುದು. ಊರಿನ ಉತ್ತರದಲ್ಲಿ ನೇಮಿನಾಥ ಜೈನದೇವಾಲಯವಿದೆ. ಕಲಮೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳೂ ಆರನೆಯ ಚಾಳುಕ್ಯ ವಿಕ್ರಮಾದಿತ್ಯ, ಕದಂಬ, ಶಿವಚಿತ್ತ ಪೆರ್ಮಾಡಿ ಮತ್ತು ವಿಜಯನಗರ ಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ ಆರು ಶಾಸನಗಳಿವೆ. ಇದೊಂದು ಅಗ್ರಹಾರವಾಗಿದ್ದು ನೂರು ಮಹಾಜನರ ಆಳ್ವಿಕೆಗೆ ಸೇರಿದ್ದ ಒಂದು ವಿದ್ಯಾಕೇಂದ್ರವಾಗಿತ್ತು. ಅಳಣಾವರ ಹೋಬಳಿ ಕೇಂದ್ರ ಮತ್ತು ವ್ಯಾಪಾರಸ್ಥಳವಾಗಿದೆ. ಗರಗ ಹೋಬಳಿ ಕೇಂದ್ರ ಧಾರವಾಡ ನಗರಕ್ಕೆ ವಾಯುವ್ಯದಲ್ಲಿದ್ದು ಸುತ್ತಲ ಗ್ರಾಮಗಳಿಗೆ ಒಂದು ವ್ಯಾಪಾರ ಕೇಂದ್ರವಾಗಿದೆ. ಹೆಬ್ಬಳ್ಳಿ ಗ್ರಾಮದಲ್ಲಿ ಯಾದವರ ಕಾಲದ ಎರಡು ಶಾಸನಗಳಿವೆ ಮತ್ತು ಶಂಭುಲಿಂಗ ದೇವಾಲಯವಿದೆ. ಧಾರವಾಡದ ಈಶಾನ್ಯಕ್ಕೆ ನರೇಂದ್ರ ಗ್ರಾಮವಿದೆ. ಇಲ್ಲಿ ಶಂಕರಲಿಂಗ ದೇವಾಲಯವಿದೆ. ಆರನೆಯ ವಿಕ್ರಮಾದಿತ್ಯನ 1125-26ರ ಎರಡು ಶಾಸನಗಳಿವೆ. ಗೋವ ಕದಂಬ ಮನೆತನದ ಎರಡನೆ ಜಯಕೇಶಿಯನ್ನು ಮದುವೆಯಾಗಿದ್ದ ವಿಕ್ರಮಾದಿತ್ಯನ ಮಗಳಾದ ಮೈಳಲದೇವಿ ಈ ಪ್ರಾಂತ್ಯವನ್ನಾಳುತ್ತಿದ್ದಳೆಂದು ತಿಳಿದುಬರುವುದು.

**ನಗರ :** ಧಾರವಾಡ ಈ ಜಿಲ್ಲೆಯ ಆಡಳಿತಕೇಂದ್ರ. ಧಾರವಾಡ ಮತ್ತು ಹುಬ್ಬಳ್ಳಿ ನಗರಗಳನ್ನು ಒಂದುಗೂಡಿಸಿ ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ರಚಿಸಲಾಗಿದೆ (ನೋಡಿ: ಹುಬ್ಬಳ್ಳಿ-ಧಾರವಾಡ) (ಡಿ.ಎಸ್.ಜೆ., ಎಸ್.ಎಸ್.ಬಿ.)

**ಧಾರವಾಡಕರ, ರಾ.ಯ. :** 1919-91. ಪ್ರಸಿದ್ಧ ಪ್ರಬಂಧಕಾರರು. ರಾಜೇಂದ್ರ ಯಲದುರ್ಗರಾವ್ ಧಾರವಾಡಕರ ಇವರ ಪೂರ್ಣ ಹೆಸರು. 1919 ಜುಲೈ 15 ರಂದು ಜನಿಸಿದರು. ಬಾಗಲಕೋಟೆ, ಸಾಂಗ್ಲಿ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿ ಮುಂಬಯಿ ಸೆಕ್ರೆಟೇರಿಯಟ್‌ನಲ್ಲಿ ಸರಕಾರಿ ಸೇವೆಗೆ ಸೇರಿದರು (1942). ಅನಂತರ ಧಾರವಾಡದಲ್ಲಿ ಬಿ.ಎಂ.ಶ್ರೀ. ಅವರ ಕೆ.ಇ.ಬೋರ್ಡ್ (ಇಂದಿನ ಜೆ.ಎಸ್.ಎಸ್. ಕಾಲೇಜು) ಕಾಲೇಜಿನಲ್ಲಿ ಕನ್ನಡ-ಇಂಗ್ಲಿಷ್ ಪ್ರಾಧ್ಯಾಪಕರಾದರು. ಅನಂತರ ಕಾಲೇಜಿನ ಪ್ರಾಂಶುಪಾಲರಾಗಿ (1946) ಸುದೀರ್ಘವಾದ ಸೇವೆ ಸಲ್ಲಿಸಿ ನಿವೃತ್ತರಾದರು (1975). ಭಾನುಮತಿ ಇವರ ಪತ್ನಿ. ಇವರಿಗೆ ಐವರು ಗಂಡು ಮಕ್ಕಳು.

ಧಾರವಾಡಕರರು ಅದ್ಭುತ ವಾಗ್ಮಿಗಳು. ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯ ಬೋಧನೆ ಮಾಡುತ್ತಿದ್ದ ಇವರಿಗೆ ಶಬ್ದಮಣಿದರ್ಪಣ ಪ್ರಿಯವಾಗಿತ್ತು. ಪ್ರಬಂಧ ರಚನೆ ಇವರ ಪ್ರಿಯವಾದ ಬರೆವಣಿಗೆಯಾಗಿತ್ತು. ಧೂಮ್ರವಲಯಗಳು, ತೂರಿದ ಚಿಂತನಗಳು, ನವಿಲಗರಿ, ಸೂರ್ಯಪಾನ ಎಂಬ ನಾಲ್ಕು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಲಲಿತ ಪ್ರಬಂಧಗಳಲ್ಲಿ ಜೀವನ ರಸಿಕತೆಯಿದೆ, ತಿಳಿಯಾದ ಹಾಸ್ಯ ಹರಟೆಯ ಗುಣಗಳಿಂದ ಕೂಡಿದ ಈ ಪ್ರಬಂಧಗಳು ಆಕರ್ಷಣೀಯವಾಗಿವೆ. ಹೊಸಗನ್ನಡ ಸಾಹಿತ್ಯದ ಉದಯಕಾಲ ಎಂಬ ಕೃತಿ ಇವರ ಮಹಾಪ್ರಬಂಧವಾಗಿದ್ದು ಅದರಲ್ಲಿ ಹೊಸಗನ್ನಡ ಅರುಣೋದಯದ ಕಾಲದ ಸಾಹಿತ್ಯ ಚಟುವಟಿಕೆಗಳನ್ನು ವಿಪುಲ ಆಕರ ಸಾಮಗ್ರಿಯ ಮೂಲಕ ವಿವೇಚಿಸಿದ್ದಾರೆ. ಕನ್ನಡ ಭಾಷಾ ಶಾಸ್ತ್ರ ಎಂಬ ಕೃತಿ ಕನ್ನಡ ಭಾಷಾವಿಜ್ಞಾನವನ್ನು ಕುರಿತದ್ದು. ನಾನು ಕಂಡ ಅಮೇರಿಕೆ ಎಂಬುದು ಸುಂದರ ಪ್ರವಾಸ ಕಥನ. ಇವರು ಅನೇಕ ಕತೆಗಳನ್ನು ಬರೆದಿದ್ದಾರೆ. ಅನುವಾದಗಳನ್ನು ಮಾಡಿದ್ದಾರೆ. ತೆರೆಯ ಹಿಂದೆ ಎಂಬುದು ಇವರ ಒಂದು ಕಥಾಸಂಕಲನ. ಅಮೆರಿಕನ್ ನಿಗ್ರೋ ಕಥೆಗಳು ಇವರ ಅನುವಾದಿತ ಕತೆಗಳ ಸಂಕಲನ. ಬಿ.ಎಂ. ಶ್ರೀಕಂಠಯ್ಯ ವೆಂಕಟರಂಗೋಕಟ್ಟೆ, ಎಸ್.ಸಿ. ನಂದೀಮಠ ಮೊದಲಾದವರ ಜೀವನ ಸಾಧನೆ ಕುರಿತು ಗ್ರಂಥಗಳನ್ನು ಬರೆದಿದ್ದಾರೆ. 'ಕನ್ನಡದಲ್ಲಿ ಕಾನೂನು ಸಾಹಿತ್ಯ' ಕಾನೂನು ಸಾಹಿತ್ಯ ಕುರಿತಂತೆ ಕನ್ನಡದಲ್ಲಿ ಬರೆದ ಒಂದು ಆಕರ ಗ್ರಂಥವಾಗಿದೆ. ಪತ್ರಿಕಾ ವ್ಯವಸಾಯ, ಕನ್ನಡದಲ್ಲಿ ವೃತ್ತ ಪತ್ರಿಕೆಗಳು. ಇವು ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಗ್ರಂಥಗಳು 'ನಮ್ಮ ದೇಶದ ಯೋಜನೆಗಳು' ಆರ್ಥಿಕಾಭಿವೃದ್ಧಿ ಕುರಿತು ಬರೆದ ಕೃತಿ. ಸಾಹಿತ್ಯ ಸಮೀಕ್ಷೆ, ಆರು ಪ್ರಬಂಧಗಳಗಿವು. ಸಾಹಿತ್ಯ ವಿಮರ್ಶೆ ಸಂಸ್ಕೃತಿಗೆ ಸಂಬಂಧಿಸಿದ ಗ್ರಂಥಗಳು. ನಂದೀಮಠ ನೆನಪು, ರೊದ್ದ ಶ್ರೀನಿವಾಸರಾಯರು, ಕಾವ್ಯಾನಂದ ಪುಣೇಕರ, ಸಾಗರೋತ್ತರ ಕಥೆಗಳು ಇವರ ಇತರ ಕೃತಿಗಳು. ಕನ್ನಡದಲ್ಲಿ ಗಾಂಧಿಸಾಹಿತ್ಯ, ಭೀಷ್ಮ ಪರ್ವಸಂಗ್ರಹ ಮೊದಲಾದ ಕೃತಿಗಳನ್ನೂ ಇವರು ಸಂಪಾದಿಸಿದ್ದಾರೆ.

ಶಿಕ್ಷಣತಜ್ಞರಾಗಿ, ದಕ್ಷ ಆಡಳಿತಗಾರರಾಗಿ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಮಂಡಳಿಗಳ ಸಿಂಡಿಕೇಟ್, ಸೆನೆಟ್ ಸದಸ್ಯರಾಗಿ ಇವರು ಕಾರ್ಯನಿರ್ವಹಿಸಿದ್ದಾರೆ. ಇವರಿಗೆ 71 ತುಂಬಿದಾಗ ಪ್ರಬಂಧ ಪ್ರಪಂಚ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. ತೂರಿದ ಚಿಂತನಗಳು, ನಾನು ಕಂಡ ಅಮೇರಿಕೆ ಗ್ರಂಥಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಇವರು 1991 ಏಪ್ರಿಲ್ 12ರಂದು ಧಾರವಾಡದಲ್ಲಿ ನಿಧನರಾದರು. (ಜಿ.ಎಂ.ಎಚ್.)

**ಧಾರವಾಡ ಶಿಲಾವರ್ಗ:** ಧಾರವಾಡದ ಬಳಿ ಇರುವ ಸ್ಫಟಿಕಾತ್ಮಕ ಪದರುಶಿಲೆಗಳ (ಕ್ರಿಸ್ಟಲೈನ್ ಶಿಲ್ಟ್ಸ್) ಭೂವೈಜ್ಞಾನಿಕ ನಾಮಧೇಯ (ಧಾರ್ವಾರ್ ಸಿಸ್ಟಮ್) ಆರ್.ಬಿ.ಫುಟೆ ಎಂಬಾತ ನೀಡಿದ (1886) ಹೆಸರಿದು. ಧಾರವಾಡ ಪದರುಶಿಲೆಗಳು ಅಥವಾ ಧಾರವಾಡಗಳು ಎಂಬುದಾಗಿ ಕೂಡ ಈ ವರ್ಗವನ್ನು ಉಲ್ಲೇಖಿಸುವುದುಂಟು. ಇದು ಶಿಲಾರಸ, ಶಿಲಾಧೂಳು ಮುಂತಾದ ಜ್ವಾಲಾಮುಖಿಜ ವಸ್ತುವಿಶೇಷಗಳಿಂದ ಮಿಶ್ರಿತವಾದ ಪ್ರಸ್ತರೀ (ಪದರು) ಶಿಲಾ ಸಮುದಾಯ ಎಂದೂ ಈ ಪದರು ಶಿಲಾವರ್ಗ

ಗ್ರಾನಿಟಾಯ್ಡ್ ನೈಸ್‌ಗಳು ಭೂಸಂಮರ್ದದಿಂದ ಮಡಚಿ ಛಿದ್ರಗೊಂಡು ನಗ್ನೀಕೃತವಾದ ಬಳಿಕ ಅವುಗಳ ಮೇಲೆ ಸ್ತರಭಂಗವಾಗಿ ಉತ್ಪನ್ನವಾದ ಜಲಜಶಿಲೆಗಳ ರೂಪಾಂತರಗಳೆಂದೂ ಭಾವಿಸಲಾಗಿತ್ತು. ಮುಂದೆ ಈ ವಿಚಾರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದು ಧಾರವಾಡ ಶಿಲಾವರ್ಗದ ಕೆಲವು ಶಿಲೆಗಳಲ್ಲಿ ಜಲಜಶಿಲೆಗಳ ಸ್ವಾಭಾವಿಕವಾದ ರಚನಾಕೃತಿಗಳ ಸಂದೇಹಾತೀತ ಕುರುಹುಗಳು ಸಾಕಷ್ಟು ಇರುವುದು ದೃಢಪಟ್ಟಿತು.ಆದ್ದರಿಂದ ಇಲ್ಲಿನ ಪೆಂಟೆಕಲ್ಲು (ಕಾಂಗ್ಲೊಮರೇಟ್), ಸಿಕತಶಿಲೆ (ಮರಳ್ಗಲ್ಲು, ಸ್ಯಾಂಡ್ ಸ್ಟೋನ್), ಗೋಡುಕಲ್ಲು, ಸುಣ್ಣಕಲ್ಲು ಮತ್ತು ಕೆಲವು ವಿಧವಾದ ಪದರು ಶಿಲೆಗಳು ನಿರ್ದಿಷ್ಟವಾಗಿ ಜಲಜಶಿಲೆಗಳ ರೂಪಾಂತರಗಳೆಂದು ನಿರ್ಧರಿತವಾಯಿತು (1905).

ಘಟಕ ಶಿಲಾವಿಭಾಗಗಳು ಧಾರವಾಡ ಶಿಲಾವರ್ಗದಲ್ಲಿ ಮುಖ್ಯವಾಗಿ ಈ ಕೆಳಗಿನ ನಾಲ್ಕು ಬಗೆಯ ಶಿಲಾಪಂಗಡಗಳಿವೆ ಜ್ವಾಲಾಮುಖಿಜಶಿಲೆಗಳು, ಸ್ಫಟಿಕಾಕೃತಿಯ ಪದರುಶಿಲೆಗಳು, ರೂಪಗೆಟ್ಟ ಪ್ರಸ್ತರೀ ಶಿಲೆಗಳು, ಅಂತಸ್ತರಿತ ಅಥವಾ ಒಳನುಗ್ಗಿದ ಅಗ್ನಿಶಿಲೆಗಳು.

ಜ್ವಾಲಾಮುಖಿಜ ಶಿಲೆಗಳ ಗುಂಪು ಮುಖ್ಯವಾಗಿ ರಾಸಾಯನಿಕ ವ್ಯತ್ಯಾಸದಿಂದ ಒಡಗೂಡಿದ ಘನೀಭೂತ ವಿವಿಧ ಶಿಲಾರಸಗಳು. ಡೈಕ್‌ಗಳು, ಶಿಲಾಧೂಳು ಮುಂತಾದ ಶಿಲಾವಸ್ತುಗಳಿಂದ ಕೂಡಿರುತ್ತದೆ.

ಸ್ಫಟಿಕಾಕೃತಿಯ ಪದರುಶಿಲೆಗಳ ಸಮುದಾಯದಲ್ಲಿ ಕಪ್ಪು ಹಾರ್ನ್‌ಬ್ಲೆಂಡ್ ಪದರುಶಿಲೆ, ಕ್ಲೋರೈಟ್ ಪದರುಶಿಲೆ, ಅಭ್ರಕ ಪದರುಶಿಲೆ, ಕರಿ ಅಭ್ರಕ, ಕಯನೈಟ್, ಸಿಲ್ಲಿಮನೈಟಂ, ಕಾರ್ಡಿಯರೈಟ್ ಮುಂತಾದ ರೂಪಾಂತರ ಶಿಲೆಗಳಲ್ಲಿ ಸ್ವಾಭಾವಿಕವಾಗಿ ಕಂಡುಬರುವ ಸ್ಫಟಿಕೀಕೃತವಾದ ಖನಿಜಗಳನ್ನು ವಿವಿಧ ಪ್ರಮಾಣಗಳಲ್ಲಿ ಒಳಗೊಂಡ ಪದರುಶಿಲೆಗಳು ಇವೆ. ಈ ಪದರುಶಿಲೆಗಳಲ್ಲಿ ಮೊದಲಿನ ಮೂರು ವಿಧಗಳ ವಿನಾ ಉಳಿದವುಗಳೆಲ್ಲವೂ ಅಧಿಕ ರೂಪಾಂತರಿಸಿದ ಅಶುಭ್ರ ಜಲಜಶಿಲೆಗಳೆಂದು ಕಂಡುಬಂದಿದೆ.

ರೂಪಗೆಟ್ಟ ಅಥವಾ ವಿರೂಪಿಸಿದ ಜಲಜಶಿಲಾಶ್ರೇಣಿಯಲ್ಲಿ ಪೆಂಟಿಕಲ್ಲು, ಮರಳ್ಗಲ್ಲು ಸಿಕತಶಿಲೆ, ಗೋಡುಕಲ್ಲು,ಕಬ್ಬಿಣಸಿಕತ ಮಿಶ್ರಿತ ಪಟ್ಟಿಗಲ್ಲು ಸ್ಫಟಿಕೀಕರಿಸಿದ ಸುಣ್ಣಕಲ್ಲು ಅಥವಾ ಅಮೃತಶಿಲೆಗಳು ಮುಖ್ಯವಾದವು. ಇವೆಲ್ಲವೂ ನಿಸ್ಸಂದೇಹವಾಗಿ ಜಲಜಶಿಲೆಗಳ ರೂಪಾಂತರಗಳೆಂದು ಈಗ ಖಚಿತವಾಗಿ ನಿರ್ಣಯಿಸಲಾಗಿದೆ.

ಅಗ್ನಿಶಿಲಾ ಅಂತಸ್ಸರಣಗಳಲ್ಲಿ ಕ್ಷಾರ ಮತ್ತು ಅತಿಕ್ಷಾರ ಶಿಲೆಗಳೂ ಮತ್ತೆ ಕೆಲವು ಗ್ರಾನೈಟಂ ಪಾರ್ಫಿರಿಗೆ ಕ್ರಮವಾಗಿ ಹೊಂದಿಕೊಳ್ಳುವ ಸೂಕ್ಷ್ಮಕಣ ಶಿಲೆಗಳೂ ಇರುವುದಾಗಿ ಕಂಡುಬಂದಿದೆ.

**ವರ್ಗೀಕರಣ ಮತ್ತು ಕಾಲ :** ಮೈಸೂರಿನಲ್ಲಿ ಧಾರವಾಡ ಶಿಲಾವರ್ಗ ತಳಭಾಗ, ಮಧ್ಯಭಾಗ ಮತ್ತು ಮೇಲುಭಾಗವೆಂದು ಮೂರು ಬಾಗಗಳಾಗಿ ವಿಭಾಗಗೊಂಡಿದೆ. ತಳಭಾಗ ಮುಖ್ಯವಾಗಿ ಸಣ್ಣ ಸಣ್ಣ ಪ್ಯಿಟಗಳಂತಿರುವ ಆದಿಜನಿತ ಅದಿಮ ಗೋಡುಶಿಲೆಗಳಿಂದ ಬೆರೆತಿರುವ ವಿವಿಧ ಜ್ವಾಲಾಮುಖಿಜ ಶಿಲೆಗಳಿಂದಲೂ ಮಧ್ಯಭಾಗ ಜ್ವಾಲಾಮುಖಿಜ ಶಿಲಾಮಿಶ್ರಿತ ಮತ್ತು ಅಂತಸ್ಸರಿತ ಅಗ್ನಿಶಿಲೆಗಳಿಂದ ಕೂಡಿದ ಪ್ರಸ್ತರೀ ಶಿಲೆಗಳಿಂದಲೂ ಮೇಲುಭಾಗ ಮಧ್ಯಭಾಗದ ಪ್ರಸ್ತರೀ ಶಿಲೆಗಳಿಗೆ ರೂಪು ರಚನೆಗಳಲ್ಲಿ ಕೊಂಚ ವ್ಯತ್ಯಾಸವಿರುವ ಪ್ರಸ್ತರೀ ಶಿಲೆಗಳಿಂದಲೂ ಕೂಡಿವೆ. ಈ ಮೂರು ವಿಭಾಗಗಳು ಅಥವಾ ವಿಂಗಡಣೆಗಳನ್ನು ಮೊದಲಿನ ಮೈಸೂರು ಸಂಸ್ಥಾನದ ಉತ್ತರ ಭಾಗದಲ್ಲಿ ಖಚಿತವಾಗಿ ಕಾಣಬಹುದೇ ವಿನಾ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ, ಒತ್ತಡ ಸ್ತರಪಲ್ಲಟ ಮತ್ತು ಅಧಿಕ ರೂಪಾಂತರ ಮುಂತಾದ ಕಾರಣಗಳಿಂದ ಗುರ್ತಿಸಲಾಗುವುದಿಲ್ಲ.

ಧಾರವಾಡದ ಶಿಲಾವರ್ಗ ಉತ್ಪತ್ತಿಯಾದ ಕಾಲ ಜ್ವಾಲಾಮುಖಿಯ ಶಿಲಾರಸಗಳು ಧಾರಾಳವಾಗಿ ಹೊರಹೊಮ್ಮಿ ಹರಿದ್ದು ಘನೀಭೂತವಾದ ಪ್ರಕರಣದಿಂದ ಆರಂಭವಾಯಿತೆಂದು ತಿಳಿದುಬರುತ್ತದೆ. ಈ ಶಿಲಾರಸಗಳು ಅನೇಕ ಸ್ಥಳಗಳಲ್ಲಿ ಮತ್ತು ಜಲಪ್ರದೇಶಗಳಲ್ಲಿ ಹರಿದು ಘನೀಭವಿಸಿರುವುದೂ ಕಂಡುಬಂದಿದೆ. ಅನಂತರ ಬಹುಕಾಲದ ಮೇಲೆ ಕ್ರಮೇಣ ಆಳದಲ್ಲಿ ಹೆಚ್ಚುತ್ತಲಿದ್ದ ಕಡಲು ಪ್ರದೇಶಗಳಲ್ಲಿ ಪ್ರಸ್ತರೀ ಶಿಲೆಗಳ ಉತ್ಪತ್ತಿ ರೂಪುರಚನೆಗಳು ಆರಂಭವಾದದೆಂದು ಕಂಡುಬರುತ್ತದೆ.

ಧಾರವಾಡ ಶಿಲಾವರ್ಗದ ಕೆಲವು ಶಿಲೆಗಳ ಶುದ್ಧವಯಸ್ಸನ್ನು ವಿಕಿರಣ ಮಾಪಕ ಸಲಕರಣೆಗಳಿಂದ ಅಳೆಯಲಾಗಿದೆ. ಆ ಪ್ರಕಾರ ಶಿಲಾವರ್ಗದ ಮೇಲು ಭಾಗ ಪ್ರಾಯಶಃ 100 ಕೋಟಿಯಿಂದ 200 ಕೋಟಿ ವರ್ಷಗಳ ಹಿಂದೆ ಉತ್ಪನ್ನವಾಯಿತೆಂದೂ ಮಧ್ಯಭಾಗದ ಶಿಲೆಗಳು ಸು.220 ಕೋಟಿಯಿಂದ 240 ಕೋಟಿ ವರ್ಷಗಳ ಹಿಂದೆ ಉತ್ಪನ್ನವಾದುವೆಂದೂ ತಳಭಾಗ 250 ಕೋಟಿ ವರ್ಷಗಳಿಗಿಂತಲೂ ಹಿಂದೆ ರೂಪುಗೊಂಡಿತೆಂದೂ ಕಂಡುಬಂದಿದೆ. ಅಂದರೆ ಧಾರವಾಡ ಶಿಲಾವರ್ಗ ಸೂಚಿಸುವ ಅತ್ಯಂತ ಕಾಲ ಒಟ್ಟು ಸು.100 ಕೋಟಿ ವರ್ಷ ಮೀರಿರುವುದಾಗಿ ತೋರುತ್ತದೆ.

**ವಿಸ್ತಾರ ಮತ್ತು ಹಂಚಿಕೆ :** ಧಾರವಾಡ ಶಿಲಾವರ್ಗ ಈಗಿನ ಕರ್ನಾಟಕ ರಾಜ್ಯದಲ್ಲಿ ಸು.12,800 ಚದರ ಕಿ.ಮೀ. ಪ್ರದೇಶವನ್ನು ಆಕ್ರಮಿಸಿದೆ. ಇದು ಅನೇಕ ನೀಳವಾದ ಇಕ್ಕಟ್ಟು ಪದರುಶಿಲಾಪಟ್ಟಿಗಳಂತೆ ಗ್ರ್ಯಾನಿಟಿಕ್ ನೈಸ್ ಪ್ರದೇಶಗಳಲ್ಲಿ ಬೇರೆ ಬೇರೆ ಪಟ್ಟಿಗಳಾಗಿ ಹಂಚಿಕೊಂಡಿದೆ. ಇವು ಉದ್ದದಲ್ಲಿ ಸು.52 ಕಿಮೀ. ಸು. 400ಕಿಮೀ ಮೇಲ್ಪಟ್ಟು ಅಗಲದಲ್ಲಿ ಕೇವಲ 800 ಕಿಮೀನಿಂದ ಬಲು ಅಗಲವಾದ ಭಾಗಗಳಲ್ಲಿ 32 ಕಿಮೀ. ವರೆಗೂ ಇರುತ್ತವೆ. ಇವನ್ನು ಪದರು ಶಿಲಾ ಪಟ್ಟಿಗಳೆಂದು ಕರೆಯುವುದು ರೂಢಿ. ವರ್ಣನೆಯ ಸಲುವಾಗಿ ಇವನ್ನು ಪಶ್ಚಿಮ, ಮಧ್ಯಪಶ್ಚಿಮ, ಮಧ್ಯ, ಪೂರ್ವ ಮತ್ತು ಪೂರ್ವವಲಯಗಳೆಂದು ಐದು ವಲಯಗಳಾಗಿ ವಿಂಗಡಿಸಿದೆ. ಸಾಧಾರಣವಾಗಿ ಕಪ್ಪು ಹಾರ್ನ್‌ಬ್ಲೆಂಡ್ ಪದರುಶಿಲೆಗಳು ರಾಜ್ಯದ ಪೂರ್ವ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿಯೂ ಕ್ಲೋರೈಟ್ ಮತ್ತು ಅಭ್ರಕ ಪದರು ಶಿಲೆಗಳು ಉತ್ತರ ಮತ್ತು ಮಧ್ಯ ಉತ್ತರ ಪ್ರದೇಶಗಳಲ್ಲಿಯೂ ಇತರ ಸಿಲ್ಲಿಮನೈಟ್ ಕಾರ್ಡಿಯರೈಟ್ ಮುಂತಾದ ಖನಿಜಗಳನ್ನು ಒಳಗೊಂಡ ಪದರುಶಿಲೆಗಳು ದಕ್ಷಿಣ ಮತ್ತು ಮಧ್ಯದಕ್ಷಿಣ ಭಾಗಗಳಲ್ಲಿಯೂ ಹರಡಿರುತ್ತವೆ. ಧಾರವಾಡ ಶಿಲಾವರ್ಗದ ವಿವಿಧ ಶಿಲಾಭೇದಗಳೆಲ್ಲವೂ ಪ್ರತಿಯೊಂದು ವಲಯದ ಪ್ರತಿಯೊಂದು ಪದರುಶಿಲಾ ಪಟ್ಟಿಯಲ್ಲಿಯೂ ಇರುವುದಿಲ್ಲ.

**ಶಿಲಾವರ್ಗ ಪರಸ್ಪರ ಸಂಬಂಧ :** ಧಾರವಾಡ ಶಿಲಾವರ್ಗವನ್ನು ಹೋಲುವ ಅಧಿಕ ರೂಪಾಂತರಗೊಂಡ ಸ್ಫಟಿಕಾಕೃತಿಯ ಪದರುಶಿಲೆಗಳು ಮತ್ತು ಇತರ ಶಿಲಾ ವಿಭೇದಗಳು ಭಾರತದ ಇತರ ಭಾಗಗಳಲ್ಲಿವೆ. ಅವುಗಳಲ್ಲಿ ಮುಖ್ಯವಾದವು ರಾಜಸ್ಥಾನದ ಇರಾವತಿ ಶಿಲಾವರ್ಗ, ಗುಜರಾತಿನ ಚಂಪಾನೇರ್ ವರ್ಗ, ಮಧ್ಯಪ್ರದೇಶದ ಸಾಸರನ್ ಸಕೋಲಿ ವರ್ಗಗಳು, ಬಿಹಾರ್, ಒರಿಸ್ಸಗಳ ಕೊಲ್ಹಾನ ಮುಂತಾದ ಶಿಲಾವರ್ಗಗಳು, ಪೂರ್ವಘಟ್ಟಗಳ ಖಾಂಡಲೈಟ್ ಶಿಲಾವರ್ಗ, ಇವುಗಳ ಪೈಕಿ ಅನೇಕವನ್ನು ಸಾಮಾನ್ಯವಾಗಿ ಧಾರವಾಡ ಶಿಲಾವರ್ಗಕ್ಕೆ ಹೋಲಿಸಲಾಗಿದೆ. ಆದರೆ ಅವುಗಳಲ್ಲಿ ಯಾವುವು ಧಾರವಾಡ ಶಿಲಾವರ್ಗದ ಯಾವ ವಿಭಾಗಕ್ಕೆ ಪರಸ್ಪರ ಸಂಬಂಧಪಟ್ಟವು ಎಂಬುದನ್ನು ಖಚಿತವಾಗಿ ತಿಳಿಯಲು ಹೆಚ್ಚಿನ ಪರಿಶೋಧನೆಗಳು ನಡೆಯಬೇಕಾಗಿವೆ.

**ಆರ್ಥಿಕ ಖನಿಜಗಳು :** ಧಾರವಾಡ ಶಿಲಾವರ್ಗ ಕರ್ನಾಟಕದಲ್ಲಿ ದೊರೆಯುವ ಚಿನ್ನ, ಕಬ್ಬಿಣ, ಕ್ರೋಮಿಯಮ್, ಮ್ಯಾಂಗನೀಸ್, ಸೀಸ ಮತ್ತು ಸುರಮ ಲೋಹ ಖನಿಜಗಳ ಅದುರುಗಳನ್ನೂ ಕಲ್ನಾರು, ಕುರುಡ, ಗಾರ್ನೆಟ್, ಗ್ರಾಫೈಟ್, ವಿವಿಧ ಸುಣ್ಣಕಲ್ಲುಗಳು, ಮ್ಯಾಗ್ನಸೈಟ್, ಕಯನೈಟ್, ಸಿಲ್ಲಿಮನೈಟ್ ಮುಂತಾದ ಅನೇಕ ಲೋಹೇತರ ಉಪಯುಕ್ತ ಖನಿಜಗಳನ್ನೂ ಒಳಗೊಂಡಿದೆ.

*

**ಧಾರೇಶ್ವರ:** ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ ಒಂದು ಗ್ರಾಮ. ಪ್ರಾಚೀನ ಧಾರ್ಮಿಕ ಕ್ಷೇತ್ರ. ಗೋಕರ್ಣ ಸಂಬಂಧವಾದ ಪಂಚಕ್ಷೇತ್ರಗಳಲ್ಲೊಂದು. ಕುಮಟದಿಂದ 5ಕಿಮೀ ದೂರದಲ್ಲಿದೆ.

ಈ ಸ್ಥಳ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ರಾವಣ ಗೋಕರ್ಣದಲ್ಲಿ ನೆಲಕಂಡ ಶಿವನ ಆತ್ಮಲಿಂಗವನ್ನು ಕೀಳಲು ಪ್ರಯತ್ನಿಸಿದಾಗ ಆ ಲಿಂಗಕ್ಕೆ ಕಟ್ಟಿದ್ದ ಗಟ್ಟಿಯಾದ ದಾರ ಕಿತ್ತುಬಂತೆಂದೂ ಅದನ್ನು ದೂರಕ್ಕೆ ಎಸೆದಾಗ ಅದು ಬಿದ್ದ ಸ್ಥಳವೇ ಧಾರೇಶ್ವರವೆಂದು ಹೆಸರಾಯಿತೆಂದೂ ಪ್ರತೀತಿ. ಇಲ್ಲಿನ ಧಾರೇಶ್ವರ ದೇವಾಲಯ ತರುವಾಯದ ಕಲ್ಯಾಣ ಚಾಳುಕ್ಯರ ಕಾಲದ ಬೃಹತ್ ರಚನೆಯಾಗಿದೆ. ಇದರಲ್ಲಿ ಗರ್ಭಗೃಹ, ಅರ್ಧ ಮಂಟಪ, ಎರಡು ನವರಂಗಗಳು ಮತ್ತು ಒಂದು ಮುಖಮಂಟಪವಿದೆ. ಗರ್ಭಗೃಹ ನಕ್ಷತ್ರಾಕಾರದಲ್ಲಿದ್ದು ವೇಸರ ಶೈಲಿಯ ಶಿಖರವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದ ಎಡ ಭಾಗದಲ್ಲಿ ಗೋಪಾಲಕೃಷ್ಣನ ವಿಗ್ರಹವಿದ್ದರೆ, ಗರ್ಭಗೃಹದ ಪ್ರವೇಶ ದ್ವಾರದಲ್ಲಿ ದುರ್ಗಾ ಮತ್ತು ಗಣಪತಿ ವಿಗ್ರಹಗಳಿವೆ. ಗರ್ಭಗೃಹದ ಮೇಲೆ ನಾಲ್ಕು ಹಂತಗಳಾಗಿ ನಿರ್ಮಿಸಿರುವ ಶಿಖರದಲ್ಲಿ ಭೈರವ, ಶಿವ ಮತ್ತು ನೃತ್ಯಕಾಳಿಯ ಭವ್ಯ ವಿಗ್ರಹಗಳಿವೆ. ದೇವಾಲಯದ ಬಲಮೂಲೆಯಲ್ಲಿ ಕಾಲಭೈರವನ ಸಣ್ಣ ಗುಡಿಯಿದೆ.

1083 ರ ಶಾಸನವೊಂದು ದೇವಾಲಯದ ಬಳಿ ದೊರೆತಿದ್ದು ಹೈವನರಸನ ರಾಣಿ ಪಟ್ಟಮಹಾದೇವಿ ಭದ್ರಬ್ಬರಸಿಯು ದೇವಾಲಯಕ್ಕೆ ನೀಡಿದ ದಾನವನ್ನು ದಾಖಲಿಸಲಾಗಿದೆ. ಇನ್ನೊಂದು ಶಾಸನ ವಿಜಯನಗರದ ಎರಡನೆಯ ದೇವರಾಯನ ಕಾಲಕ್ಕೆ ಸೇರಿದ್ದು ಹಾಳಾಗಿದೆ. ಸಮೀಪದ ಕೆರೆಯ ಬಳಿ ಕೆಲವು ವೀರಗಲ್ಲುಗಳು ಕಂಡುಬರುತ್ತವೆ. ಪ್ರವಾಸಿ ಬುಕ್‌ನಾನ್ 1801 ರಲ್ಲಿ ಈ ಸ್ಥಳಕ್ಕೆ ಭೇಟಿ ನೀಡಿದ್ದ. ಎರಡನೆಯ ದೇವರಾಯ ಮತ್ತು ಸಾಳ್ವ ಕೃಷ್ಣದೇವರಾಯ ಈ ದೇವಾಲಯಕ್ಕೆ ದಾನ ನೀಡಿ ಹೊರಡಿಸಿದ ಎರಡು ತಾಮ್ರ ಶಾಸನಗಳ ಬಗ್ಗೆ ಈತ ಪ್ರಸ್ತಾಪಿಸಿದ್ದಾನೆ. ಸಂಕ್ರಾಂತಿಯಲ್ಲಿ ಇಲ್ಲಿ ದೊಡ್ಡ ರಥೋತ್ಸವ ಜರುಗುತ್ತದೆ. ಶಿವರಾತ್ರಿಯಂದು ವಿಶೇಷ ಪೂಜೆ ನಡೆಯುತ್ತದೆ.

ದೇವಾಲಯದ ಮುಂದೆ ವಿಶಾಲವಾದ ರಥಬೀದಿ ಇದ್ದು ಇಲ್ಲಿ ಒಂದು ಭಿನ್ನ ಯೋಗಾನಂರಸಿಂಹಮೂರ್ತಿ ಇದೆ. ರಥ ಮರದಿಂದ ರಚಿತವಾಗಿದ್ದು ಸುಂದರ ಕೆತ್ತನೆ ಕೆಲಸದಿಂದ ಕೂಡಿದೆ. ಧಾರೇಶ್ವರದ ಬಳಿಯ ಗುಡ್ಡದಲ್ಲಿ ರಾವಣಖಂಡವೆಂಬ ಸ್ಥಳವಿದ್ದು ಅಲ್ಲಿ ಬೂದಿಗುಡ್ಡೆಗಳಿವೆ. ರಾವಣ ಇಲ್ಲಿ ಯಜ್ಞಗಳನ್ನು ಮಾಡಿದನೆಂದು ಪ್ರತೀತಿ. ಈ ಸ್ಥಳದ ಸಮೀಪದಲ್ಲಿ ಕುಮಟ ರಸ್ತೆಯಲ್ಲಿ ನಾಗಶೃಂಗ ಪರ್ವತವಿದೆ. ಸ್ಥಳೀಯವಾಗಿ ಇದನ್ನು ಸುಬ್ರಹ್ಮಣ್ಯ ಗುಹೆ ಎಂದು ಕರೆಯುತ್ತಾರೆ. ಇಲ್ಲಿನ ಚಿಕ್ಕ ಕೊಳ ನಾಗತೀರ್ಥ ಎಂದು ಹೆಸರಾಗಿದ್ದು ಇಲ್ಲಿ ಅಸಂಖ್ಯ ನಾಗರಕಲ್ಲುಗಳಿವೆ. ಅಗಸ್ತ್ಯ ಗುಹೆ, ಗೋಪಾಲಕೃಷ್ಣ ಮತ್ತು ಯೋಗಾನರಸಿಂಹ ಗುಡಿಗಳಿವೆ. ಯಕ್ಷಗಾನ ಕೋಗಿಲೆ ಎಂದು ಪ್ರಸಿದ್ಧರಾದ ಸುಬ್ರಹ್ಮಣ್ಯ ಧಾರೇಶ್ವರ ಈ ಊರಿನವರು. (ಎಸ್.ಎಚ್.ಇ.)

**ಧುತ್ತರಗಿ, ಪಿ.ಬಿ. :** 1929- . ವೃತ್ತಿ ರಂಗಭೂಮಿಯ ನಟ, ನಾಟಕಕಾರ. ಪುಂಡಲೀಕಗೌಡ ಬಸವನಗೌಡ ಧುತ್ತರಗಿ ಇವರ ಪೂರ್ಣ ಹೆಸರು. ಇಂದಿನ ಬಾಗಲಕೋಟೆ ಜಿಲ್ಲೆಯ ಸೂಳೇ ಭಾವಿಯಲ್ಲಿ 1929 ಜೂನ್ 15 ರಂದು ಜನಿಸಿದರು. ಇವರ ತಂದೆ ಬಸವನಗೌಡ, ತಾಯಿ ಸಂಕಮ್ಮ. ಇವರ ಪೂರ್ವಜರು ಗುಲ್ಬರ್ಗ ಜಿಲ್ಲೆಯ ಧುತ್ತರಗಿಯಿಂದ ವಲಸೆ ಬಂದುದರಿಂದ ಅದೇ ಹೆಸರು ಮನೆತನಕ್ಕೆ ಉಳಿಯಿತು. ನೇಕಾರಿಕೆ ಮತ್ತು ಬಟ್ಟೆ ವ್ಯಾಪಾರ ಇವರ ಮನೆತನದ ಮೂಲವೃತ್ತಿ.

ಬಡತನದ ದೆಸೆಯಿಂದಾಗಿ ಬಸವನ ಗೌಡರಿಗೆ ಮಗನನ್ನು ಓದಿಸುವುದು ಸಾಧ್ಯವಾಗಲಿಲ್ಲ. ನಟನೆಯ ಬಗ್ಗೆ ಒಲವಿದ್ದ ಬಸವನಗೌಡರು ಹಂದಿಗನೂರು ಸಿದ್ರಾಮಪ್ಪನವರ ಕಂಪನಿಗೆ ಸೇರಿ ನಟರಾದರು. ಇದರಿಂದ ಮಗ ಖ್ಯಾತ ನಾಟಕಕಾರನಾಗಲು ಸಾಧ್ಯವಾಯಿತು.

ಹಂದಿಗನೂರು ಸಿದ್ರಾಮಪ್ಪನವರ ನಾಟಕ ಮಂಡಳಿಯಲ್ಲಿ ತಮ್ಮ ಅಂತರಂಗದ ಪ್ರತಿಭೆಯನ್ನು ಗುರುತಿಸಿಕೊಳ್ಳುವ ಸದವಕಾಶ ಧುತ್ತರಗಿಯವರಿಗೆ ದೊರೆಯಿತು. ಹೀಗಾಗಿಯೇ ಎಲ್ಲರ ಅಚ್ಚುಮೆಚ್ಚಿನವರಾದರು. ಕಂಪನಿ ಸಹವಾಸ ಬಹುದಿನ ಅಲ್ಲವೆಂಬ ವ್ಯವಹಾರಜ್ಞಾನ ಬಾಲಕ ಮಂಡಲೀಕನಿಗೆ ಗೊತ್ತಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಹೀಗಾಗಿ ಉದರಪೋಷಣೆಗಾಗಿ ನೇಕಾರಿಕೆಯನ್ನು ಮುಂದುವರಿಸಿ ನಾಟಕದ ಗೀಳಿಗೆ ಓದುವ ಗೀಳನ್ನು ಬೆಳೆಸಿಕೊಂಡು ಬಡತನದಲ್ಲೂ ಆತ್ಮತೃಪ್ತಿಯನ್ನು ಕಂಡುಕೊಂಡರು. ಓದುವ ಗೀಳನ್ನು ಹಿಂಗಿಸುವ ಸಲುವಾಗಿ ಮಿತ್ರರ ಜೊತೆ ಸೇರಿ ರವೀಂದ್ರ ಗ್ರಂಥಾಲಯವನ್ನು ಹುಟ್ಟುಹಾಕಿದರು.

ನಾಟಕದ ಮೂಲಕ ಕಲಾಮೌಲ್ಯ ಮತ್ತು ಜೀವನಮೌಲ್ಯಗಳನ್ನು ಬೆಳೆಯಿಸುವ ಕಾಯಕಕ್ಕೆ ಪಾವಿತ್ರ್ಯವನ್ನು ತಂದುಕೊಡುವಲ್ಲಿ ಇವರು ನಿಷ್ಠೆಯಿಂದ ಸೇವೆಸಲ್ಲಿಸಿದ್ದಾರೆ. ಚಿತ್ತರಗಿಯ ಶ್ರೀ ಕುಮಾರವಿಜಯ ನಾಟ್ಯಸಂಘಕ್ಕೆ ನ್ಯಾಯಾಧೀಶ ಎಂಬ ನಾಟಕ ರಚಿಸಿಕೊಟ್ಟರು. ಈ ನಾಟಕ ಪ್ರದರ್ಶಿಸಿದ ಕಂಪನಿಗೂ ನಾಟಕಕಾರರಿಗೂ ಒಳ್ಳೆಯ ಹೆಸರು ಬಂತು. ಸಂಸಾರದ ನಿರ್ವಹಣೆ ಬಹುದೊಡ್ಡ ಸಮಸ್ಯೆಯಾಗಿ ತಮ್ಮ ನಾಟಕದ ಹಸ್ತಪ್ರತಿಗಳನ್ನು ಇಲಕಲ್ ಮತ್ತು ಗೋಕಾಕದ ಕಂಪನಿಗೆ ಮಾರಿದರು. ಹಣ ತರುವಷ್ಟರಲ್ಲಿಯೇ ಇವರ ಪತ್ನಿ ನಿಧನರಾದದ್ದು ಇವರ ಬದುಕಿನ ದೊಡ್ಡ ದುರಂತ.

ಇವರು ರಚಿಸಿದ ಮಲಮಗಳು ನಾಟಕ ಗುಬ್ಬಿಕಂಪನಿಯೂ ಸೇರಿದಂತೆ ಕರ್ನಾಟಕದ ಎಲ್ಲ ಕಂಪನಿಗಳಲ್ಲೂ ಜಯಭೇರಿ ಬಾರಿಸಿ ಲಕ್ಷಕ್ಕೂ ಮೀರಿದ ಪ್ರಯೋಗ ಕಂಡು ವೃತ್ತಿರಂಗಭೂಮಿಯ ಇತಿಹಾಸದಲ್ಲಿ ದಾಖಲೆ ಸ್ಥಾಪಿಸಿತು. ಇದರೊಂದಿಗೆ ಇವರಿಗೆ ಹೆಸರು ತಂದಿದ್ದು ಸಂಪತ್ತಿಗೆ ಸವಾಲ್ ಎಂಬ ನಾಟಕ. ನಾಡಿನಾದ್ಯಂತ ಅಪಾರ ಜನಮನ್ನಣೆ ಪಡೆದು ಚಲನಚಿತ್ರವಾಗಿ ನಟ ರಾಜಕುಮಾರರನ್ನು ಮೇರು ನಟನನ್ನಾಗಿಸಿತು. ಈ ಚಲನಚಿತ್ರ ತೆಲಗು, ತಮಿಳು ಹಾಗೂ ಮಲೆಯಾಳಂ ಭಾಷೆಗಳಲ್ಲಿ ಮಿಂಚಿದ್ದು ಒಂದು ಇತಿಹಾಸವೆನಿಸಿದೆ.

ಮನೆ ಎರಡು ಮನ ಒಂದು ಎಂಬ ನಾಟಕ ಬರೆದು ಬನಶಂಕರಿಯಲ್ಲಿ ತಾಲೀಮು ನಡೆಸುತ್ತಿದ್ದಾಗ (1968) ಖ್ಯಾತನಟಿ ಸರೋಜಮ್ಮ ಅವರೊಂದಿಗೆ ಪ್ರಣಯಾಂಕುರವಾಗಿ ಅವರನ್ನು ವಿವಾಹವಾದರು. ಅನಂತರ ತ್ರಿಪುರಸುಂದರಿ ನಾಟ್ಯ ಸಂಘವನ್ನು ಕಟ್ಟಿಕೊಂಡು ತಾವೇ ಬರೆದ ನಾಟಕಗಳನ್ನು ರಂಗದ ಮೇಲೆ ತರುವ ಹೊಸ ಅಭಿಯಾನ ಆರಂಭಿಸಿದರು. ಇದರಿಂದಾಗಿ ಆರ್ಥಿಕ ಭದ್ರತೆ ದೊರೆಯಿತು. ಮತ್ತೆ ಅದೇ ವರ್ಷ ಕಂಪನಿಯ ಹೆಸರನ್ನು ಶ್ರೀ ವಿಜಯ ಕಲಾ ನಾಟ್ಯ ಸಂಘ, ಇಲಕಲ್ಲ ಎಂದು ಬದಲಾಯಿಸಿ ಹೆಸರಾಂತ ಗೋಕಾಕದ ಕಂಪನಿಗೂ ಸವಾಲೊಡ್ಡಿದರು.

ಜೀವನಾನುಭವವನ್ನು ನಾಟಕವನ್ನಾಗಿಸುವ ಚತುರತೆ ಇವರಿಗೆ ಕರಗತವಾಗಿತ್ತು. ಇವರು 31 ಸಾಮಾಜಿಕ, 9 ಐತಿಹಾಸಿಕ, 5 ಪೌರಾಣಿಕ ಹಾಗೂ 7 ಭಕ್ತಿ ಪ್ರಧಾನ ನಾಟಕಗಳನ್ನು ರಚಿಸಿ ರಂಗಸಾಹಿತ್ಯಕ್ಕೆ ಹೊಸ ಮೆರುಗು ನೀಡಿದರು. ಇದರೊಂದಿಗೆ ರಂಗಭೂಮಿಯಲ್ಲಿ ಯಶಸ್ವಿಯಾದ ಸಂಪತ್ತಿಗೆ ಸವಾಲ್, ಸೊಸೆ ತಂದ ಸೌಭಾಗ್ಯ (ಮೂಲ: ಚಿಕ್ಕ ಸೊಸೆ) ಎಂಬ ನಾಟಕಗಳು ಬೆಳ್ಳಿಪರದೆಯ ಮೇಲೆ ಮೂಡಿಬಂದದ್ದೂ ಇನ್ನೊಂದು ವಿಶೇಷ.

ನಾಡಿನ ಹೆಸರಾಂತ 35 ಕಂಪನಿಗಳು ಇವರ ನಾಟಕಗಳನ್ನು ಆಡಿ ಪ್ರೇಕ್ಷಕರ ಮನ ತಣಿಸಿವೆ. ಇವರ ನಾಟಕದ ಸವಿಯನ್ನುಂಡ ಅಭಿಮಾನಗಳು ಇವರಿಗೆ ನಾಟಕಸಾಹಿತ್ಯ ರತ್ನ, ನಾಟ್ಯ ಕವಿ ಪ್ರಕಾಶ, ನಾಟ್ಯಕವಿಪುಂಗವ, ಕವಿಶ್ರೇಷ್ಠರವಿಕೀರ್ತಿ ಇತ್ಯಾದಿ ಬಿರುದುಗಳನ್ನಿತ್ತು ಸನ್ಮಾನಿಸಿದ್ದಾರೆ. ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ವೃತ್ತಿ ರಂಗಭೂಮಿಯಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವ ಪ್ರತಿಷ್ಠಿತ ಡಾ. ಗುಬ್ಬಿವೀರಣ್ಣ ಪ್ರಶಸ್ತಿಯನ್ನೂ ಇವರಿಗೆ ನೀಡಲಾಗಿದೆ (1999). (ಕೆ.ಪಿ.ಜಿ.)

**ಧ್ರುವ :** ರಾಷ್ಟ್ರಕೂಟವಂಶದ ಶೂರ ದೊರೆ (ಸು.780-93) 1ನೆಯ ಕೃಷ್ಣನ ಕಿರಿಯ ಮಗ. ಇವನಿಗೆ ನಿರುಪಮ, ಶ್ರೀ ವಲ್ಲಭ ಮತ್ತು

ಕಲಿವಲ್ಲಭ ಎಂಬ ಬಿರುದುಗಳಿದ್ದುವು. ಇವನ ಅಣ್ಣನಾದ 2ನೆಯ ಗೋವಿಂದ ಅಸಮರ್ಥನೂ ವಿಷಯಲೋಲುಪನೂ ಆಗಿದ್ದರಿಂದ ನಾಸಿಕ ಪ್ರಾಂತ್ಯದಲ್ಲಿ ಅಧಿಕಾರ ವಹಿಸಿದ್ದ ಈತ ಮೊದಲು ಆತನನ್ನು ಧಿಕ್ಕರಿಸಿ, ಅನಂತರ ದಂಗೆಯೆದ್ದು ಅವನಿಂದ ರಾಜ್ಯವನ್ನು ಕಸಿದು ತನ್ನ ಪ್ರಭುತ್ವವನ್ನು 780ರಲ್ಲಿ ಆರಂಭಿಸಿದ. ದೊರೆಯಾದ ಅನಂತರ ಹಿಂದಿನ ಅಂತರ್ಯುದ್ಧಕಾಲದಲ್ಲಿ ತನ್ನ ಸೋದರ ಇಮ್ಮಡಿ ಗೋವಿಂದನ ಪಕ್ಷ ವಹಿಸಿದ್ದ ರಾಜರಿಗೆ ಬುದ್ಧಿ ಕಲಿಸಬೇಕೆಂಬ ಉದ್ದೇಶದಿಂದ ಮೊದಲು ಗಂಗ ಶ್ರೀಪುರುಷನನ್ನು ಸೋಲಿಸಿ ಆತನ ಮಗ ಯುವರಾಜನಾಗಿದ್ದ ಶಿವಮಾರನನ್ನು ಸೆರೆಯಲ್ಲಿಟ್ಟ. ಗಂಗವಾಡಿಯನ್ನು ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಅಲ್ಲಿ ತನ್ನ ಮಗ ರಣಾವಲೋಕ ಸ್ತಂಭನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಇವನ ರಾಜ್ಯಕ್ಕೆ ದಕ್ಷಿಣದಲ್ಲಿ ಕಾವೇರಿ ನದಿ ಎಲ್ಲೆಯಾಯಿತು. ಅಲ್ಲಿಂದ ಮುನ್ನಡೆದು ಪಲ್ಲವ ದಂತಿವರ್ಮನನ್ನು ಸೋಲಿಸಿ ಕಪ್ಪವನ್ನು ಪಡೆದ (ಈ ಯುದ್ಧಗಳಲ್ಲಿ ವೆಂಗಿಯ 4ನೆಯ ವಿಷ್ಣುವರ್ಧನ ಈತನಿಗೆ ಸಹಾಯಕನಾಗಿದ್ದಂತೆ ತೋರುತ್ತದೆ).

ಗಂಗರು ಮತ್ತು ಪಲ್ಲವರನ್ನು ಸೋಲಿಸಿ, ವೆಂಗಿಯ ಚಾಳುಕ್ಯರನ್ನು ಸಾಮಂತರ ಮಟ್ಟದಲ್ಲಿಟ್ಟುಕೊಂಡಿದ್ದರಿಂದಾಗಿ ಧ್ರುವ ದಕ್ಷಿಣಾಪಥದ ಅದ್ವಿತೀಯ ನಾಯಕನಾದ. ಈ ಕಾಲದಲ್ಲಿ ಉತ್ತರ ಭಾರತದಲ್ಲಿ ಗೂರ್ಜರ ಪ್ರತೀಹಾರ ವತ್ಸರಾಜ ಕನೂಜಿನ ಇಂದ್ರಾಯುಧನನ್ನು ಸೋಲಿಸಿದ್ದ (ಸು.784). ಇದರಿಂದ ವತ್ಸರಾಜನ ವಿರೋಧಿಯಾದ ಬಂಗಾಲದ ಧರ್ಮಪಾಲ ಅಸೂಯೆಗೊಂಡು ವತ್ಸರಾಜನ ಮೇಲೆ ದಂಡೆತ್ತಿ ಬಂದ. ಈ ಯುದ್ಧದಲ್ಲಿ ಧರ್ಮಪಾಲ ಸೋತರೂ ತನ್ನ ಛಲವನ್ನು ಬಿಡದೆ ಪುನಃ ಧಾಳಿಮಾಡುವ ಸನ್ನಾಹದಲ್ಲಿದ್ದ. ಹಿಂದೆ ವತ್ಸರಾಜ ಅಂತರ್ಯುದ್ಧದಲ್ಲಿ ಅಣ್ಣ ಗೋವಿಂದನಿಗೆ ಸಹಾಯ ಮಾಡಿದ್ದರಿಂದ ಅವನ ಮೇಲೆ ಛಲ ಸಾಧಿಸಲು ಇದೇ ಸುಸಂದರ್ಭವೆಂದರಿತ ಧ್ರುವ ತನ್ನ ಮಗ ಗೋವಿಂದನನ್ನು ಜೊತೆಗಿಟ್ಟು ಕೊಂಡು ಉತ್ತರಭಾರತಕ್ಕೆ ನುಗ್ಗಿದ. ವತ್ಸರಾಜ ಗಂಗಾ ಯಮುನಾ ಬಯಲಿನಲ್ಲಿ ಕಾರ್ಯನಿರತನಾಗಿದ್ದುದರಿಂದ ಮಾಳವದೇಶ ಸುಲಭವಾಗಿ ಧ್ರುವನ ಕೈವಶವಾಯಿತು. ಅನಂತರ ಮುಂದೆ ನಡೆದು ಪ್ರಾಯಶಃ ಝಾನ್ಸಿ ಬಳಿ ನಡೆದ ಕದನದಲ್ಲಿ ವತ್ಸರಾಜನ ಸೈನ್ಯವನ್ನು ಧೂಳೀಪಟ ಮಾಡಿದ. ವತ್ಸರಾಜ ರಾಜಾಸ್ಥಾನದ ಮರಳುಗಾಡಿನಲ್ಲಿ ತಲೆಮರೆಸಿಕೊಂಡ. ಅತ್ತ ಧರ್ಮಪಾಲ ಗಂಗಾ ಬಯಲಿನೆಡೆಗೆ ಮುಂಬರಿಯುತ್ತಿದ್ದ. ಧ್ರುವ ಆತನನ್ನೂ ಸಂಧಿಸಿ ಅವನ ಬಲವನ್ನು ಪುಡಿಮಾಡಿ ಓಡಿಸಿ ಅಪಾರ ಐಶ್ವರ್ಯವನ್ನು ದೋಚಿದ. ಧ್ರುವ ತನ್ನ ಸೈನ್ಯ ಕಾರ್ಯಾಚರಣೆಗಳನ್ನು ನಿಲ್ಲಿಸಿ ಹಿಂದಿರುಗಿದ. ಇವುಗಳಿಂದ ಹೆಚ್ಚಿನ ಪ್ರದೇಶಗಳೇನೂ ದಕ್ಷಿಣಾಪಥದ ರಾಷ್ಟ್ರಕೂಟ ರಾಜ್ಯಕ್ಕೆ ಸೇರಲಿಲ್ಲವಾದರೂ ಅದ್ವಿತೀಯ ಸಾಮ್ರಾಟನಾಗಿದ್ದ ಧ್ರುವ ಉತ್ತರಭಾರತದ ಪ್ರಬಲ ಶಕ್ತಿಗಳಾಗಿದ್ದ ಗೂರ್ಜರ ಪ್ರತೀಹಾರ ಮತ್ತು ದೊರೆಗಳನ್ನು ಬಗ್ಗಿಸಿ ಇಡೀ ಭರತಖಂಡದ ಅಜೇಯಪ್ರಭುವಾಗಿ ಸ್ಥಿರಗೊಂಡ.

ವೆಂಗಿಯ ಚಾಳುಕ್ಯ ಮನೆತನದ ಶೀಲಭಟ್ಟಾರಿಕಾ ಧ್ರುವನ ಪಟ್ಟದರಸಿ, ಇವನಿಗೆ ಕರ್ಕ, ಸ್ತಂಭ, ಗೋವಿಂದ ಮತ್ತು ಇಂದ್ರ ಎಂಬ ಮಕ್ಕಳಿದ್ದರು. ರಾಷ್ಟ್ರಕೂಟ ರಾಜ್ಯದ ಉತ್ತರಾಧಿಕಾರಿಯನ್ನು ನೇಮಿಸುವುದು ಧ್ರುವನ ಜೀವಿತದ ಕೊನೆಗಾಲದ ಮುಖ್ಯ ಕೆಲಸವಾಯಿತು. ಹಿರಿಯ ಮಗ ಕರ್ಕ ತಂದೆಗಿಂತಲೂ ಮುಂಚೆಯೇ ಸತ್ತಿದ್ದನಾದ್ದರಿಂದ ರಾಜ್ಯ ಸ್ತಂಭನಿಗೆ ಸೇರಬೇಕಾಗಿತ್ತು. ಆದರೆ ಉತ್ತರಭಾರತದ ದಿಗ್ವಿಜಯಗಳಲ್ಲಿ ಪಾಲ್ಗೊಂಡು ಅಸೀಮಶೌರ್ಯ ಮತ್ತು ಮುತ್ಸದ್ದಿತನವನ್ನು ಪ್ರದರ್ಶಿಸಿದ್ದ ಮೂರನೆಯ ಮಗ 3ನೆಯ ಗೋವಿಂದ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಸಮರ್ಥ ಉತ್ತರಾಧಿಕಾರಿಯಾಗಬಲ್ಲನೆಂದು ಧ್ರುವ ತೀರ್ಮಾನಿಸಿದ. ಸ್ತಂಭನಿಗೆ ಗಂಗವಾಡಿಯ ಅಧಿಕಾರವನ್ನು ಇತ್ತು ಗೋವಿಂದನಿಗೆ ಯುವರಾಜ ಪಟ್ಟಕಟ್ಟಿದ (ಸು.791-92). ಗೋವಿಂದನಿಗೆ ಸಹಕಾರಿಯಾಗಿದ್ದ 4ನೆಯ ಮಗ ಇಂದ್ರನಿಗೆ ಮಾಳವ ಮತ್ತು ಗುಜರಾತ್ ಪ್ರಾಂತ್ಯಗಳ ಅಧಿಕಾರವನ್ನು ವಹಿಸಿದ. ಸು. 793ರಲ್ಲಿ ಧ್ರುವ ಮೃತನಾದ. (ಎಚ್.ಆರ್.ಆರ್.)

**ಧೋಂಡೊ ನರಸಿಂಹ ಮುಳಬಾಗಿಲ :** (1848-1896). ಹೊಸ ಗನ್ನಡದ ಅರುಣೋದಯ ಕಾಲದಲ್ಲಿ ಲೇಖಕರು. ನೂರಾರು ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆಯನ್ನು ಕೊಟ್ಟವರು. ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಣ ಪಡೆದ ಇವರು ಮೂರು ದಶಕಗಳ ಕಾಲ ಅಧ್ಯಾಪನವೃತ್ತಿಯಲ್ಲಿದ್ದರು. ಇವರ ಕನ್ನಡ ಭಾಷಾಪರಿಣತಿಯನ್ನು ಕಂಡು ಆಗಿನ ಮುಂಬಯಿ ಸರ್ಕಾರದ ಶಿಕ್ಷಣಖಾತೆ 1882ರಲ್ಲಿ ಇವರನ್ನು ಟ್ರೇನಿಂಗ್ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ನೇಮಕ ಮಾಡಿತು. ಆಗ ಉತ್ತರ ಕರ್ನಾಟಕದ ಸಾಂಸ್ಕೃತಿಕ ವಾತಾವರಣದಲ್ಲಿ ಮರಾಠಿಯ ಗಾಳಿ ಭರದಿಂದ ಬೀಸುತ್ತಿತ್ತು. ಇವರು ನೂರಾರು ಶಿಕ್ಷಕ ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆಯನ್ನಿತ್ತು ಗ್ರಾಮಾಂತರದಲ್ಲಿಯೂ ಕನ್ನಡಾಭಿಮಾನ ನೆಲೆಗೊಳ್ಳುವುದಕ್ಕೆ ಕಾರಣರಾದರು. ತಮ್ಮ ವೈದುಷ್ಯ ಹಾಗೂ ಸಾತ್ತ್ವಿಕ ಸ್ವಭಾವದಿಂದಾಗಿ ಇವರು ವಿದ್ಯಾರ್ಥಿಗಳಿಗೆ ಅಚ್ಚು ಮೆಚ್ಚಿನ ಗುರುಗಳಾಗಿದ್ದರು.

ಇವರ ಒಲವು ಪದ್ಯರಚನೆಯ ಕಡೆಗೆ ಹೆಚ್ಚಾಗಿತ್ತು. ತೇಜೋನೃಸಿಂಹ, ಎಂಬುದು ಇವರ ಕಾವ್ಯನಾಮ. ಹಿತೋಪದೇಶವನ್ನು ಕಾವ್ಯರೂಪದಲ್ಲಿ ರಚಿಸಿದ್ದಾರೆ. ಬಹುಶಃ ಇದು ಇವರ ಮೊದಲ ಕೃತಿ. ಸಾಮಾನ್ಯ ಜನರ ಮನರಂಜನಾರ್ಥವಾಗಿ ಕನ್ನಡದಲ್ಲಿ ಗ್ರಂಥಗಳಿಲ್ಲ ಎಂಬುದನ್ನು ಮನಗಂಡು, ಸಂಸ್ಕೃತ ನಾಟಕಗಳನ್ನು ಅನುವಾದಿಸ ಬಯಸಿದರು. ಭವಭೂತಿಯ ಉತ್ತರರಾಮಚರಿತ್ರೆಯನ್ನು ಅನುವಾದಿಸಿದರು. ಹದಿನಾಲ್ಕು ವರ್ಷಗಳ ಕಾಲ ಹಸ್ತಪ್ರತಿಯಾಗಿಯೇ ಉಳಿದರು. ಇದಕ್ಕೆ ಸರ್ಕಾರದಿಂದ 200ರೂ. ಬಹುಮಾನ ದೊರೆತಂದರಿಂದ ಅನಂತರ ಇದು ಪ್ರಕಟವಾಯಿತು. ಆಗ ಸ್ಥಾಪನೆ ಗೊಂಡಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘ ಈ ಕೃತಿಯನ್ನೂ ಬೇರೆ ಕೆಲವನ್ನೂ ಪ್ರಕಟಿಸಿ ಇವರ ಗ್ರಂಥರಚನೆಗೆ ಪ್ರೋತ್ಸಾಹವನ್ನಿತ್ತಿತ್ತು.

ಅನಂತರದಲ್ಲಿ ಇವರು ವೇಣೀಸಂಹಾರ 1883. ಮೃಚ್ಛಕಟಿಕ ಹಾಗೂ ಮಾಳವಿಕಾಗ್ನಿಮಿತ್ರ ಕೃತಿಗಳನ್ನು ಅನುವಾದಿಸಿದ್ದರು.

ವ್ಯಾಕರಣ, ಛಂದಸ್ಸುಗಳ ಮೇಲೆ ಅಚ್ಚುಕಟ್ಟಾದ ಹಾಗೂ ವ್ಯವಸ್ಥಿತವಾದ ನಿರೂಪಣೆಯುಳ್ಳ ಗ್ರಂಥಗಳನ್ನೂ ಇವರು ಬರೆದಿದ್ದಾರೆ. ಇವರ ಕನ್ನಡ ಕೈಪಿಡಿ ಕನ್ನಡ 1890 ವ್ಯಾಕರಣವನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತದೆ. ಹಳೆಯ ವ್ಯಾಕರಣ ಪ್ರಕ್ರಿಯೆಗಳನ್ನು ಹೊಸಕಾಲದ ಭಾಷೆಗೆ ಸಮನ್ವಯಗೊಳಿಸಿದುದು ಈ ಕೃತಿಯ ವೈಶಿಷ್ಟ್ಯ. ಇದರಲ್ಲಿ ಅನೇಕ ಕಡೆ ಇವರ ಸ್ವತಂತ್ರ ವಿಚಾರಸರಣಿ ಎದ್ದು ಕಾಣುತ್ತದೆ. ವ್ಯಾಕರಣ ಕ್ಷೇತ್ರದಲ್ಲಿ ಇದೊಂದು ಹಿರಿಯ ಕೃತಿ. ವಿದ್ಯಾರ್ಥಿಗಳಿಗಾಗಿ ಸುಲಭ ಮತ್ತು ಸಂಕ್ಷಿಪ್ತರೂಪದಲ್ಲಿ ಬರೆಯಲಾದ ನುಡಿಗಟ್ಟು 1892 ಇವರ ಇನ್ನೊಂದು ಕೃತಿ. ಮೈಸೂರು ಕಡೆಯಲ್ಲಿ ಬಿ. ಮಲ್ಲಪ್ಪನವರ ಶಬ್ದಾದರ್ಶಕ್ಕೆ ಇದ್ದ ಮಹತ್ವ ಉತ್ತರ ಕರ್ನಾಟಕದಲ್ಲಿ ಇದಕ್ಕೆ ಇತ್ತು.

ಇನ್ನೂ ನೌಕರಿಯಲ್ಲಿರುವಾಗಲೇ ತಮ್ಮ 40ನೆಯ ವಯಸ್ಸಿನಲ್ಲಿ ಇವರು ನಿಧನರಾದರು. (ಎಸ್.ಎಚ್.)

**ನಂಗಪುರಂ ವೆಂಕಟೇಶ ಅಯ್ಯಂಗಾರ್ :** ಇಪ್ಪತ್ತನೆಯ ಶತಮಾನದ ಆರಂಭ ಕಾಲದ ಹಿರಿಯ ಭಾಷಾಸೇವಕರು. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿದ ಮೊದಲಿಗರಲ್ಲೊಬ್ಬರು.ಆಗಿನ ಮೈಸೂರು ಸರ್ಕಾರದ ಪವನಶಾಸ್ತ್ರ ವೀಕ್ಷಣಾಲಯದ ಮುಖ್ಯಸ್ಥರಾಗಿದ್ದರು. ಸಮಾಜಸೇವೆ ಮತ್ತು ಸಾರ್ವಜನಿಕ ಕಾರ್ಯಗಳಲ್ಲೂ ಆಸಕ್ತಿಯುಳ್ಳವರಾಗಿದ್ದ ಇವರು ಬೆಂಗಳೂರಿನ ದೇಶೀಯ ವಿದ್ಯಾಶಾಲೆ, ಅಮೆಚೂರ್ ನಾಟಕ ಸಂಘ, ಶ್ರೀ ರಾಮ ಕೃಷ್ಣಾಶ್ರಮ ಮುಂತಾದ ಹತ್ತಾರು ಸಂಘಸಂಸ್ಥೆಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಭಿವೃದ್ಧಿಯಲ್ಲಿ ತುಂಬ ಆಸಕ್ತಿ ವಹಿಸಿ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ (1919-21) ಮತ್ತು ಕೋಶಾಧಿಕಾರಿಯಾಗಿ (1921-26) ಸೇವೆಸಲ್ಲಿಸಿದರು.

ಹೊಸಗನ್ನಡ ಭಾಷಾಭಿವೃದ್ಧಿಯ ಕಾರ್ಯಗಳು ಆರಂಭವಾದಾಗ

ಇವರು ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಬೆಳೆವಣಿಗೆಗಾಗಿ ಬೆಳ್ಳಾವೆ ವೆಂಕಟನಾರಣಪ್ಪನವರೊಂದಿಗೆ ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿ ಎಂಬ ಸಂಸ್ಥೆಯನ್ನು ಕಟ್ಟಿದರಲ್ಲದೆ ಅವರು ಆರಂಭಿಸಿದ ವಿಜ್ಞಾನ ಎಂಬ ಮಾಸಪತ್ರಿಕೆಗೆ ಕೆಲಕಾಲ ಸಂಪಾದಕರಾಗಿಯೂ ಕೆಲಸ ಮಾಡಿದರು. ವಿಜ್ಞಾನಕ್ಕೆ ಸಂಬಂಧಿಸಿದ ಹಲವು ಲೇಖನಗಳನ್ನು ಇವರು ಬರೆದಿದ್ದಾರೆ. ಇವರು ಬರೆದ ಜ್ಯೋತಿರ್ವಿನೋದಿನಿ ಎಂಬ ಪುಸ್ತಕ 1931ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಯಿತು. ಇವರು ಬಂಗಾಳಿ ಭಾಷೆಯಿಂದ ಕನ್ನಡಕ್ಕೆ ಕೆಲವು ಗ್ರಂಥಗಳನ್ನು ಅನುವಾದಿಸಿದ್ದಾರೆ. ಅವುಗಳಲ್ಲಿ ಕೆಲವು ನಟರಾಜಭಕ್ತ, ನಾಳೆ ಹೋಗುವ ನಂದ ಮತ್ತು ಮೀರಾಬಾಯಿ, ರಾಮಕೃಷ್ಣ ಪರಮಹಂಸರ ಉಪದೇಶ ವಾಕ್ಯಾವಳಿ, ರಾಮಕೃಷ್ಣ ಪರಮಹಂಸರ ವಚನಾಮೃತ (ಮೂರು ಭಾಗಗಳಲ್ಲಿ) ಮತ್ತು ಸ್ವಾಮಿ ವಿವೇಕಾನಂದರ ಪತ್ರಗಳು. (ವಿ.ಎಸ್.)

**ನಂಜ :** ಸು.1725 ಕಪೋತವಾಕ್ಯ ಎಂಬ ಸಾಂಗತ್ಯ ಗ್ರಂಥದ ಕರ್ತೃ. ಈ ಕೃತಿಗೆ ಕಪೋತಚರಿತೆ ಎಂಬ ಹೆಸರೂ ಉಂಟು. ಕರ್ತೃವಿನ ಹೆಸರು ಕೃತಿಯ ಅದ್ಯಂತ್ಯಗಳಲ್ಲೆಲ್ಲೂ ಉಲ್ಲೇಖವಾಗಿಲ್ಲ. ಆದರೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಗ್ರಹದಲ್ಲಿ ದೊರೆಯುವ ಕೈಬರೆಹದ ಪ್ರತಿಯ ಕೆ.ಬಿ. ರಕ್ಷಾಪತ್ರದಲ್ಲಿ ನಂಜಕವಿ ಎಂದಿದೆ. ಇದರ ಆಧಾರದಿಂದ ಆರ್. ನರಸಿಂಹಾಚಾರ್ಯರು ಕರ್ನಾಟಕ ಕವಿಚರಿತೆಯಲ್ಲಿ ಕಪೋತವಾಕ್ಯದ ಕರ್ತೃ ನಂಜಕವಿ ಎಂದು ಹೆಸರಿಸಿದಂತೆ ಕಾಣುತ್ತದೆ. ಇತ್ತೀಚೆಗೆ ಭೋಜರಾಜ ಪಾಟೀಲರು ಕೃತಿಕಾರನ ಬಗೆಗೆ ವಿವೇಚಿಸಿ ಕೆಂಪುನಂಜಯ್ಯ ಇದರ ಕತೃವಾಗಿರಬಹುದೆಂಬ ನಿಲವಿಗೆ ಬಂದರೂ ಈ ವಿಷಯ ಇನ್ನೂ ಖಚಿತವಲ್ಲ ಎಂದಿದ್ದಾರೆ.

ಕನ್ನಡದಲ್ಲಿ ಹನ್ನೆರಡನೆಯ ಶತಮಾನದ ಶಿವಶರಣ ಅಂಬಿಗರ ಚೌಡಯ್ಯನ ವಚನವೊಂದರಲ್ಲಿ ಕಪೋತವಾಕ್ಯದ ಕಥೆಗೆ ಸಂಬಂಧಿಸಿದ ವಾಕ್ಯವೊಂದು ಹೀಗಿದೆ. ................... ಪರಪುರುಷಾರ್ಥಿಯಾದರೆ ಬಸವಕುಮಾರನಂತಾಗಬೇಕು. ಪರಪುರುಷಾರ್ಥಿಯಾದರೆ ಕಪೋ ತಪಕ್ಷಿಯಂತಾಗಬೇಕು. ಇಂತೀ ಪರಪುರುಷಾರ್ಥಕ್ಕೆ ಪ್ರಾಣದ ಕೊಟ್ಟವರುಂಟು. ನಿತ್ಯಾತ್ಮಾಂಕಿತ ಭಾಮಿನಿ ಷಟ್ಪದಿಯಲ್ಲಿ ವಿರಚಿತವಾದ ಶಾಂತಿ ವರ್ಷದ 22ನೆಯ ಸಂಧಿಯಲ್ಲಿ ಕಪೋತಾಖ್ಯಾನ 73 ಷಟ್ಪದಿಗಳಲ್ಲಿದೆ.

ಕಾವ್ಯದ ಆದಿಯಲ್ಲಿ ಕವಿ ಶಿವ, ಗುರುಸಿದ್ಧವೀರ, ಕೋರಣ್ಯದೈಯ್ಯ (ಕೋರಾನ್ನದೈಯ್ಯ) ಬಸವರಾಜ, ಮಡಿವಾಳ, ಸಪ್ಪಣ್ಣ, ಪ್ರಭುರಾಯ, ಕೊಟ್ಟೂರ ವಿರೂಪಾಕ್ಷ, ಕಲ್ಯಾಣದೈಯ್ಯ, ಎರೆಮಲೆ ಸಿದ್ಧಮುನಿಗಳನ್ನು ಸ್ತುತಿಸಿ, ಅಂತ್ಯದಲ್ಲಿ ಚಿರ್ರೂಲಗಿರಿವಾಸ, ಕಾಶಿ ವಿಶ್ವೇಶ್ವರ, ಚಂಪಕ ಸಿದ್ಧಲಿಂಗೇಶರಿಗೆ ಎರಗಿದ್ದಾನೆ. ಕಾವ್ಯದಲ್ಲಿ ಕೃತಿರಚನೆಯ ಕಾಲನಿರ್ದೇಶವಿಲ್ಲ. ಭೋಜರಾಜ ಪಾಟೀಲರು ಕಪೋತಚಾರಿತ್ರದ ಕರ್ತೃವಾಗಿರಬಹುದಾದ ಕೆಂಪುನಂಜಯ್ಯ ಮುರಿಗೆಯ ಶಾಂತವೀರಸ್ವಾಮಿಗಳ ಸಮಕಾಲೀನ ಹಾಗೂ ಶಿಷ್ಯನಾದುದರಿಂದ ಆತನ ಕಾಲವನ್ನು 1530 ಎಂದು ನಿಶ್ಚಯಿಸಬೇಕಾಗುತ್ತದೆ ಎಂದಿದ್ದಾರೆ.

ಭೋಜರಾಜ ಪಾಟೀಲರ ವಾದವೆಲ್ಲ ಮುರಿಗೆಯ ಶಾಂತವೀರನ ಕಾಲದ ಮೇಲೆ ನಿಂತಿದೆ. ಇತ್ತೀಚಿನ ಸಂಶೋಧನೆಗಳಿಂದ ಮುರಿಗೆಯ ಶಾಂತವೀರನ ಕಾಲ ಸು.1700 ಎಂಬುದು ಖಚಿತವಾಗಿದೆ. ಹೀಗಾಗಿ ಅವನ ಶಿಷ್ಯನ ಕಾಲ ಸು.1700 ಅಗಬೇಕಾಗುತ್ತದೆ. ಈ ಅಂಶಗಳನ್ನು ಗಮನಿಸಿದಾಗ ಹುಲ್ಲೂರು ಶ್ರೀನಿವಾಸ ಜೋಯಿಸರು ಹೇಳುವ ಹದಿನೆಂಟನೆಯ ಶಥಮಾನದ ಪ್ರಥಮಪಾದವನ್ನೆ ಕಪೋತವಾಕ್ಯದ ರಚನಾಕಾರನ ಕಾಲವನ್ನಾಗಿ ಸ್ವೀಕರಿಸಬಹುದು.

ಕಪೋತವಾಕ್ಯದ ಉಪಲಬ್ಧಪ್ರತಿಗಳಲ್ಲಿ ಸಂಧಿಸಂಖ್ಯೆ ಹಾಗೂ ಪದ್ಯಸಂಖ್ಯೆಗಳಲ್ಲಿ ಏಕರೂಪತೆ ಇಲ್ಲ. ಇದುವರೆಗೆ ಪರಿಶೀಲಿಸಲಾದ ಪ್ರತಿಗಳಲ್ಲಿ ಸಂಧಿಸಂಖ್ಯೆ 105 ಪದ್ಯಗಳಿಂದ 398 ಪದ್ಯಗಳ ವರೆಗೂ ಹಿಗ್ಗಿದೆ. ಹೀಗಾಗಿ ಕಪೋತವಾಕ್ಯದ ಪ್ರತಿಗಳು ಹಲವಾರು ಪ್ರಕ್ಷಿಪ್ತಗಳಿಗೆ ಆಡುಂಬೊಲವಾಗಿ ಪರಿಣಮಿಸಿದೆ.

ಈ ಗ್ರಂಥದ ಮೂಲವಸ್ತು ವಾಲ್ಮೀಕಿರಾಮಾಯಣ ಮತ್ತು ವ್ಯಾಸಮಹಾಭಾರತಗಳಲ್ಲಿ ಕಂಡುಬರುತ್ತದೆ. ಕಪೋತದಂಪತಿಗಳು ತಮ್ಮನ್ನು ಮಕ್ಕಳುಮರಿಗಳಿಂದ ಬೇರ್ಪಡಿಸಿ ಸೆರೆಹಿಡಿದ ಬೇಡನಿಗೆ ಆತ ಚಳಿಯಿಂದಾಗ ಬೆಂಕಿಯನ್ನೂ ಹಸಿವೆ ಎಂದಾಗ ಆಹಾರವನ್ನು ಒದಗಿಸಲೋಸುಗ ಅದೇ ಬೆಂಕಿಗೆ ಬಿದ್ದ ಪಕ್ಷಿಗಳ ಕಥೆ ಇದರ ವಸ್ತು. ಇಲ್ಲಿ ಪತಿಪತ್ನಿಯರ ಅನುರಾಗ ಕರ್ತವ್ಯಗಲು ಸುಂದರವಾಗಿ ನಿರೂಪಿತವಾಗಿವೆ. ಹೀಗೆ ಪರಹಿತದಿಂದಲಿ ನಡೆದ ಸತ್ಪುರುಷರ ಕರೆದುಯ್ವನು ಕೈಲಾಸಕ್ಕೆ ಎಂಬ ಸಂದೇಶವನ್ನೂ ಕವಿ ಇಲ್ಲಿ ಸಾರಿದ್ದಾನೆ. ಜನಪ್ರಿಯ ವಸ್ತುವಿನ ಕಾರಣವಾಗಿ ಕನ್ನಡದಲ್ಲಿ ಷಟ್ಪದಿ, ಯಕ್ಷಗಾನ ಮೊದಲಾದ ಇತರ ಪ್ರಕಾರಗಳಲ್ಲೂ ಈ ಕಥೆ ರೂಪುದಾಳಿದೆ. (ಎಸ್.ಎಸ್.ಎಚ್.ಪಿ.)

**ನಂಜಣಾರ್ಯ :** ಸು.1650 ವೀರಶೈವ ಕವಿ. ಏಕೋರಾಮೇಶ್ವರ ಪುರಾಣ ಮತ್ತು ನೀತಿರತಆಭರಣಗಳ ಕರ್ತೃ. ಸ್ಥಳ ಹರದಿಹಳ್ಳಿ , ಏಕೋರಾಮೇಶ್ವರ ಪುರಾಣದಲ್ಲಿ ತನ್ನ ವಂಶಪರಂಪರೆಯ ಬಗೆಗೆ ವಿಸ್ತಾರವಾಗಿ ತಿಳಿಸಿದ್ದಾನೆ. ಅದರಂತೆ ಈತನ ತಂದೆ ಏಕೋತ್ತರಶತಸ್ಥಲ ವಿಶಾರದ ವೀರಣಾಚಾರ್ಯ.

ಈತ ತನ್ನನ್ನು ಕುರಿತು ಪರಮಾವಬೋಧಪ್ರಸಂಗಿ, ತ್ರಿಲಿಂಗಸಂಯೋಗಿ, ಸರಸಲಕ್ಷಣಕಾವ್ಯ ರಚಿತನವಭಾವಕಂ, ಹರ ಕವೀಶ್ವರಣುಗ, ಭೋಗಮಲ್ಲೇಶನ ಲೆಂಕಂ ಇತ್ಯಾದಿಯಾಗಿ ವಿಶೇಷಿಸಿಕೊಂಡಿದ್ದಾನೆ. ಏಕೋರಾಮೇಶ್ವರ ಪುರಾಣದ ಕಥೆಯನ್ನು ಸಿದ್ಧರಾಮ ಗುರುವರನು ತನಗೆ ಮೊದಲು ಉಪದೇಶಿಸಿದನೆಂದೂ ಅನಂತರ ಅದನ್ನು ತಾನು ಪುರಾಣವಾಗಿ ಬರೆದಿರುವೆನೆಂದೂ ತಿಳಿಸಿದ್ದಾನೆ.

ಕೃತಿಯ ಮೊದಲಲ್ಲಿ ಏಕೋರಾಮ, ಸಿದ್ಧರಾಮೇಶ, ಮುದ್ರಾಪುರಾಧೀಶ, ರಾಮಲಿಂಗ, ಶಿವ, ಭೃಂಗಿ, ಪಾರ್ವತಿ, ವೃಷಭೇಂದ್ರ, ವೀರಭದ್ರ, ವಿಘ್ನರಾಜ, ಷಣ್ಮುಖ, ರುದ್ರ ಮೊದಲಾದವರ ಪ್ರಾರ್ಥನೆಯಿದೆ. ಅನಂತರ ಉದ್ಭಟ, ಮಯೂರ, ಬಿಲ್ಹಣ, ಕಾಳಿದಾಸ, ರಾಘವಾಂತಪಂಡಿತ, ಬಾಣ, ಪುಷ್ಪದಂತ, ಮಲಯರಾಜ, ಹಲಾಯುಧ, ಭೋಜ, ಸೌಂದರಗಣೇಶ್ವರ, ಕೇಶಿರಾಜನಿಗೆ ಕವಿ ನಮಸ್ಕರಿಸಿದ್ದಾನೆ.

ಏಕೋರಾಮೇಶ್ವರಪುರಾಣ ವಾರ್ಧಕಷಟ್ಪದಿಯಲ್ಲಿದ್ದು 16 ಕಾಂಡಗಳು, 16 ಸಂಧಿಗಳು ಮತ್ತು 1463 ಪದ್ಯಗಳು ಹೊಂದಿದೆ. ಇದರ ಕಥೆ ಇಷ್ಟು ಈಶ್ವರನ ಆಜ್ಞೆಯಂತೆ ಘಂಟಾಕರ್ಣ ಗಣೇಶ್ವರ ಏಕೋರಾಮನೆಂಬ ಹೆಸರಿನಿಂದ ಮುದ್ರಪುರದ ರಾಮರುದ್ರ ಶಿವಾಚಾರ್ಯನಿಗೆ ಸುತನಾಗಿ ಹುಟ್ಟಿ ರಾಮನಾಥನಿಂದ ದೀಕ್ಷಿತನಾದ. ಮುಂದೆ ಆ ಪುರದ ಅರಸ ವೀರಭಾಸ್ಕರರಾಯನ ಸಮಕ್ಷಮದಲ್ಲಿ ವೈಷ್ಣವರೊಡನೆ ವಾದಿಸಿ ಶಿವಾಧಿಕ್ಯ ಮತ್ತು ಶಿವಭಕ್ತರ ಶ್ರೇಷ್ಠತೆಯನ್ನು ಸ್ಥಿರೀಕರಿಸಿದ. ಅನಂತರ ರಾಮಲಿಂಗನಿಂದ ಗುರುಪದ್ಯವನ್ನು ಹೊಂದಿ, ವೈಷ್ಣವರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟ. ಮುಂದೆ ಅಯೋಧ್ಯಾನಗರಿಯ ವ್ಯಾಸದೀಕ್ಷಿತನೊಡನೆ ವಾದಿಸಿ ಕೊನೆಯಲ್ಲಿ ಆತನನ್ನು ಮತಾಂತರಗೊಳಿಸಿದ. ಕಡೆಗೆ ಶಂಕುಕರ್ಣನೆಂಬ ತನ್ನ ಶಿಷ್ಯನಿಗೆ ಗುರುಪಟ್ಟವನ್ನು ಕಟ್ಟಿ ರಾಮನಾಥನ ದೇವಾಲಯವನ್ನು ಹೋಗಲು ಅಲ್ಲಿ ಶಿವ ಪ್ರತ್ಯಕ್ಷನಾಗಿ ದರ್ಶನಕೊಟ್ಟು ಕೈಲಾಸಕ್ಕೆ ಒಯ್ದ.

ಪುರಾಣೋಕ್ತ ಮುದ್ರಾಪುರ ಇಂದಿನ ಕಲ್ಬುರ್ಗಿ ಜಿಲ್ಲೆಯ ಮುದನೂರು ಆಗಿದ್ದು ಇಂದೂ ಅಲ್ಲಿನ ರಾಮನಾಥ ದೇವಾಲಯ ಪ್ರಸಿದ್ಧಿ ಹೊಂದಿದೆ. ಈ ಪುರಾಣದ ಕಥಾನಾಯಕನಾದ ಏಕೋರಾಮರಾಧ್ಯ ವೀರಶೈವ ಪಂಚಾಚಾರ್ಯರಲ್ಲಿ ಒಬ್ಬನಾಗಿದ್ದು ಸಂಸ್ಕೃತದಲ್ಲಿ ಸಮನ್ವಯಸೂತ್ರವೆಂಬ ಕೃತಿಯನ್ನು ಬರೆದಂತೆ ಶ್ರೀಕರಭಾಷ್ಯದಿಂದ ತಿಳಿದುಬರುತ್ತದೆ. ಅಲ್ಲದೆ ಈತ ಕನ್ನಡದಲ್ಲಿ ವಚನಗಳನ್ನು ರಚಿಸಿರುವುದರ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಈ ಪುರಾಣದ ಕೆಲವು ಪದ್ಯಗಳು ಸಂಪಾದನೆ

ಸಿದ್ಧವೀರಣಾಚಾರ್ಯನ ಸಂಕಲಿತ ಕೃತಿ ಲಿಂಗಸ್ತೋತ್ರಷಟ್ಪದಿಯಲ್ಲಿ ಉಲ್ಲೇಖಗೊಂಡಿದೆ. ನೀತಿರತ್ನಾಭರಣವನ್ನು ಈತ ಪರಮ ಗುರುಸಿದ್ಧಶಾಂತೇಶ್ವರನ ಪ್ರೇರಣೆಯಿಂದ ರಚಿಸಿದ್ದುದಾಗಿ ಹೇಳಿಕೊಂಡಿದ್ದಾನೆ. ಇದರಲ್ಲಿ 169 ಕಂದಗಳಿವೆ.

**ನಂಜನಗೂಡು :** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಸ್ಥಳ. ತಾಲ್ಲೂಕು ಉತ್ತರದಲ್ಲಿ ಮೈಸೂರು, ಪೂರ್ವದಲ್ಲಿ ತಿರುಮಕೂಡಲ ನರಸೀಪುರ ತಾಲ್ಲೂಕುಗಳು ಆಗ್ನೇಯದಲ್ಲಿ ಚಾಮರಾಜನಗರ ಜಿಲ್ಲೆ ಪಶ್ಚಿಮ ಮತ್ತು ವಾಯುವ್ಯದಲ್ಲಿ ಹೆಗ್ಗಡದೇವನಕೋಟೆ - ಈ ತಾಲ್ಲೂಕಿನಿಂದ ಸುತ್ತುವರಿದಿದೆ. ತಾಲ್ಲೂಕಿನ ವಿಸ್ತೀರ್ಣ 982 ಚಕಿಮೀ. ಜನಸಂಖ್ಯೆ 3,58,415. ಕಸಬ, ಚಿಕ್ಕಯ್ಯನ ಛತ್ರ, ಬಿಳಿಗೆರೆ, ದೊಡ್ಡ ಕವಲಂದೆ ಮತ್ತು ಹುಲ್ಲಹಳ್ಳಿ - ಈ ಐದು ಹೋಬಳಿಗಳು. ಒಟ್ಟು ಗ್ರಾಮಗಳು 188.

ಅಲ್ಲಲ್ಲಿ ಇರುವ ಸಣ್ಣ ಗುಡ್ಡಗಳನ್ನು ಬಿಟ್ಟರೆ ತಾಲ್ಲೂಕಿನ ಬಹುಭಾಗ ಮಟ್ಟಸ ಪ್ರದೇಶ. ಭೂಮಿ ಸುಮಾರು ಈಶಾನ್ಯದೆಡೆಗೆ ಇಳಿಜಾರಾಗಿದೆ. ಕಪಿಲಾ ಈ ತಾಲ್ಲೂಕಿನಲ್ಲಿ ಹರಿಯುವ ಮುಖ್ಯ ನದಿ. ಇದು ವಾಯವ್ಯ ಭಾಗದಲ್ಲಿ ಸ್ವಲ್ಪ ದೂರ ಹೆಗ್ಗಡದೇವನಕೋಟೆ ಮತ್ತು ತಾಲ್ಲೂಕಿನ ಗಡಿಯಾಗಿ ಹರಿದು ಮುಂದೆ ತಾಲ್ಲೂಕಿನ ಒಳಗೆ ಉತ್ತರ ಭಾಗದಲ್ಲಿ ನಂಜನಗೂಡು ಪಟ್ಟಣದ ವರೆಗೆ ಪೂರ್ವಾಭಿಮುಖವಾಗಿ ಹರಿದು ಅನಂತರ ಈಶಾನ್ಯಾಭಿಮುಖವಾಗಿ ಮುಂದುವರಿದು ಟಿ.ನರಸೀಪುರ ತಾಲ್ಲೂಕನ್ನು ಪ್ರವೇಶಿಸುತ್ತದೆ. ಗುಂಡ್ಲುಹೊಳೆ ಇನ್ನೊಂದು ಹೆಸರಿಸಬಹುದಾದ ನದಿ. ಇದು ಗುಂಡ್ಲುಪೇಟೆ ತಾಲ್ಲೂಕಿನಿಂದ ಬಂದು ತಾಲ್ಲೂಕಿನ ಮಧ್ಯಭಾಗದಲ್ಲಿ ಸುಮಾರು ಉತ್ತರಾಭಿಮುಖವಾಗಿ ಹರಿದು ನಂಜನಗೂಡಿನಲ್ಲಿ ಕಪಿಲಾ ನದಿಗೆ ಸೇರುತ್ತದೆ. ಕಣಶಿಲೆ ಮತ್ತು ಫೆಲ್ಸ್ ಪಾರ್ ತಾಲ್ಲೂಕಿನ ಬಹುಭಾಗದಲ್ಲಿ ಕಂಡುಬರುವ ತಳ ಶಿಲೆಗಳು. ಹೆಚ್ಚು ಮಟ್ಟಿಗೆ ಎಲ್ಲೆಡೆಯೂ ಕೆಂಪು ನುರುಜು ಭೂಮಿ ಇದೆ. ಕೆಲವೆಡೆ ಕರಿ ಎರೆ ಇದೆ. ನದಿಯ ದಡಗಳಲ್ಲಿ ವಿಶಾಲವಾದ ಮೆಕ್ಕಲು ಹರಹು ಉಂಟು. ಈ ತಾಲ್ಲೂಕಿನ ಕೋಣನೂರಿನ ಬಳಿ ಕಲ್ನಾರಿನ ನಿಕ್ಷೇಪವಿದೆ. ಅಂಬಳೆ, ಒಳಗೆರೆ ಎಂಬ ಸ್ಥಳಗಳಲ್ಲಿ ಹಿಂದೆ ಚಿನ್ನವನ್ನು ತೆಗೆಯಲಾಗುತ್ತಿತ್ತು. ಗುಂಡ್ಲುಹೊಳೆಯ ದಡಗಳಲ್ಲಿ ಸುಣ್ಣ ಕಲ್ಲಿನ ನಿಕ್ಷೇಪವಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಕೆಲವೆಡೆ ಮ್ಯಾಗ್ನಸೈಟ್ ಮತ್ತು ಕ್ರೋಮೈಟ್ ದೊರೆಯುವ ಸಾಧ್ಯತೆ ಇದೆ. ತಗಡೂರು ಮತ್ತು ಚಿನ್ನಂಬಳ್ಳಿ ಗ್ರಾಮಗಳ ಬಳಿಯಲ್ಲಿ 1918 ರವರೆಗೆ ಕಾಗೆ ಬಂಗಾರವನ್ನು ತೆಗೆಯಲಾಗುತ್ತಿತ್ತು. ತಾಲ್ಲೂಕು ವಾಯವ್ಯ ಭಾಗದಲ್ಲಿ ಬಳಪದ ಕಲ್ಲು ದೊರೆಯುತ್ತದೆ. (ಎಸ್.ಎಸ್.,ಎಚ್.)

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ ಸು. 591 ಮಿಮೀ. ಮಳೆ ಕಡಿಮೆಯಾದರೂ ವ್ಯವಸಾಯ ವ್ಯಾಪಕವಾಗಿದೆ. ಕಪಿಲಾ ನದಿಯ ಎಡದಂಡೆಯಲ್ಲಿ ರಾಮಪುರ ನಾಲೆ ಮತ್ತು ಬಲದಂಡೆಯ ಹುಲ್ಲಹಳ್ಳಿ ನಾಲೆ ತಾಲ್ಲೂಕಿನ ಉತ್ತರ ಭಾಗದಲ್ಲಿ ಉದ್ದಕ್ಕೂ ಸಾಗಿ ವಿಶಾಲವಾದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಿವೆ. ಈಚೆಗೆ ನಿರ್ಮಿಸಲಾದ ನುಗು ಅಣೆಕಟ್ಟಿನಿಂದ ಬರುವ ನಾಲೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಭಾಗಕ್ಕೆ ನೀರೊದಗಿಸುತ್ತದೆ. ಕೆರೆಗಳ ಸಂಖ್ಯೆ ಕಡಿಮೆ, ಉತ್ತಮ ನೀರಾವರಿ ಸೌಲಭ್ಯವಿರುವುದರಿಂದ ಬತ್ತ ತಾಲ್ಲೂಕಿನ ಮುಖ್ಯ ಬೆಳೆ. ಸ್ವಲ್ಪ ಮಟ್ಟಿಗೆ ಕಬ್ಬು, ಕಡಲೆ ಕಾಯಿ ಮತ್ತು ದ್ವಿದಳ ಧಾನ್ಯಗಳ ಬೆಳೆಯೂ ಉಂಟು. ಮಳೆಯನ್ನು ಅವಲಂಬಿಸಿರುವ ಪ್ರದೇಶಗಳಲ್ಲಿ ಜೋಳ ಮತ್ತು ರಾಗಿ ಮುಖ್ಯ ಬೆಳೆಗಳು. ಕಡಲೆಕಾಯಿ, ದ್ವಿದಳಧಾನ್ಯಗಳು, ಹತ್ತಿ ಇವೂ ಬೆಳೆಯುತ್ತವೆ. ತಾಲ್ಲೂಕಿನ ದಕ್ಷಿಣದೆಡೆಯಲ್ಲಿ ತೆಂಗಿನ ವ್ಯವಸಾಯವೂ ಸಾಕಷ್ಟಿದೆ. ನಂಜನಗೂಡಿನ ಸುತ್ತಿನಲ್ಲಿ ಬೆಳೆಯುವ ರಸಬಾಳೆ ಉತ್ತಮ ದರ್ಜೆಯದೆಂದು ಪ್ರಸಿದ್ಧವಾಗಿದೆ.

ವ್ಯವಸಾಯ ಪ್ರಧಾನವಾದ ಈ ತಾಲ್ಲೂಕಿನಲ್ಲಿ ಕೈಗಾರಿಕೆಗಳು ಕಡಿಮೆ. ಆದರೆ ನೇಯ್ಗೆ ಮತ್ತು ರೇಷ್ಮೆ ಉದ್ಯಮಗಳು ಸಣ್ಣ ಪ್ರಮಾಣದಲ್ಲಿ ಪ್ರಚಲಿತವಾಗಿವೆ. ಮೈಸೂರು ನಗರದಲ್ಲಿ ಕೈಗಾರಿಕೆಗಳು ವಿಸ್ತರಿಸಿದಂತೆ ಈ ತಾಲ್ಲೂಕಿನ ಭಾಗದಲ್ಲಿ ಕೆಲವು ಕೈಗಾರಿಕೆಗಳು ತಲೆ ಎತ್ತಿವೆ. ನಂಜನಗೂಡು ಪಟ್ಟಣದಲ್ಲಿ ಕೆಲವು ಉದ್ಯಮಗಳಿವೆ. ಮೈಸೂರು-ಚಾಮರಾಜನಗರ ರೈಲುಮಾರ್ಗ ಮತ್ತು ಮೈಸೂರು-ಗುಂಡ್ಲುಪೇಟೆ - ಉದಕಮಂಡಲ ಹೆದ್ದಾರಿ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತವೆ. ಮೈಸೂರು-ಚಾಮರಾಜನಗರ-ತಿರುಚಿನಾಪಲ್ಲಿ ರಸ್ತೆ ನಂಜನಗೂಡಿನ ಬಳಿ ಕವಲೊಡೆದು ಸ್ವಲ್ಪ ದೂರ ತಾಲ್ಲೂಕಿನಲ್ಲಿ ಸಾಗುತ್ತದೆ. ನಂಜನಗೂಡು - ಟಿ.ನರಸೀಪುರ, ನಂಜನಗೂಡು-ಹುಲ್ಲಹಳ್ಳಿ, ಕವಲಂದೆ-ಕೊಳ್ಳೇಗಾಲ ರಸ್ತೆಗಳು ಇತರ ಮುಖ್ಯ ಹಾದಿಗಳು. ತಾಲ್ಲೂಕಿನಲ್ಲಿ ವಿದ್ಯುತ್ ಸೌಕರ್ಯ ಸಾಕಷ್ಟಿದೆ. ಗ್ರಾಮೀಣ ವಿದ್ಯುತ್ ಸೌಲಭ್ಯ ವ್ಯಾಪಕವಾಗಿರುವುದಲ್ಲದೆ ಅನೇಕ ಕಡೆಗಳಲ್ಲಿ ವಿದ್ಯುತ್‌ಚಾಲಿತ ಪಂಪುಗಳು ಉಪಯೋಗದಲ್ಲಿವೆ. ಹಲವು ಗ್ರಾಮಗಳಲ್ಲಿ ಅಂಚೆ ದೂರವಾಣಿ ಮತ್ತು ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇವೆ.

ಈ ತಾಲ್ಲೂಕಿನ ಹದಿನಾರು, ಕಳಲೆ (ನೋಡಿ) ಹಿಂದೆ ಪಾಳೆಯ ಪಟ್ಟಿನ ಕೇಂದ್ರಗಳಾಗಿದ್ದುವು. ಕಳಲೆ, ಹೆಡತಲೆ (ನೋಡಿ), ಸುತ್ತೂರು (ನೋಡಿ) - ಈ ಸ್ಥಳಗಳಲ್ಲಿ ಪ್ರಾಚೀನ ದೇವಾಲಯಗಳಿವೆ. ದೇವನೂರು ಮತ್ತು ಸುತ್ತೂರಿನ ವೀರಶೈವ ಮಠಗಳು ಪ್ರಸಿದ್ಧವಾದವು. ಗಂಗರ ಕಾಲದ ಪ್ರಾಚೀನತೆಯುಳ್ಳ ಇಮ್ಮಾವು ಗ್ರಾಮದಲ್ಲಿ ರಾಮದೇವಾಲಯವಿದೆ. ಇಲ್ಲಿರುವ ಚತುರ್ಭುಜ ಲಕ್ಷ್ಮಣ ಕುತೂಹಲಕಾರೀ ವಿಗ್ರಹ. ನಂಜನಗೂಡಿನಿಂದ ಸು. 15 ಕಿಮೀ ಆಗ್ನೇಯದಲ್ಲಿರುವ ನಗರ್ಲೆ ಚೋಳರ ಕಾಲದಿಂದಲೂ ಪ್ರಸಿದ್ಧವಾಗಿದ್ದ ಊರು. ಇಲ್ಲಿ ಪ್ರಾಚೀನ ದುರ್ಗಾಪರಮೇಶ್ವರಿ ದೇವಾಲಯ ಮತ್ತು ಒಂದು ಜೀರ್ಣವಾದ ಪಾರ್ಶ್ವನಾಥ ಬಸ್ತಿ ಇವೆ. ನೇರಳೆಯಲ್ಲಿ ವೀರಭದ್ರ ದೇವಾಲಯವಿದೆ. ಹೆಮ್ಮರಗಾಲದಲ್ಲಿ ಹೊಯ್ಸಳ ಕಾಲದ ಗೋಪಾಲಕೃಷ್ಣ ಗುಡಿ ಇದೆ. ಕಳಲೆ, ಹೆಮ್ಮರಗಾಲ ಈ ಸ್ಥಳಗಳಲ್ಲಿ ವಾರ್ಷಿಕ ಜಾತ್ರೆ ಜರುಗುತ್ತದೆ. ನಂಜನಗೂಡಿನ ಸಮೀಪದ ಗೋಳೂರಿನ ಬಳಿಯಲ್ಲಿ ಒಂದು ಮೂಲ ಶಿಕ್ಷಣ ಕೇಂದ್ರ (ವಿದ್ಯಾಪೀಠ) ಇದೆ.

ನಂಜನಗೂಡು ಈ ತಾಲ್ಲೂಕಿನ ಆಡಳಿತ ಕೇಂದ್ರ. ಮೈಸೂರಿನಿಂದ ದಕ್ಷಿಣ ಆಗ್ನೇಯಕ್ಕೆ 24 ಕಿಮೀ ದೂರದಲ್ಲಿ ಕಪಿಲಾನದಿಯ ಬಲದಂಡೆಯ ಮೇಲಿದೆ. ಇದು ಕರ್ನಾಟಕದ ಮುಖ್ಯಯಾತ್ರಾಸ್ಥಳಗಳಲ್ಲೊಂದು. ಜನಸಂಖ್ಯೆ 48,220. ಮೈಸೂರು-ಚಾಮರಾಜನಗರ ರೈಲುಮಾರ್ಗದ ನಿಲ್ದಾಣವಾಗಿಯೂ ಮೈಸೂರು ಉದಕಮಂಡಲ ಹೆದ್ದಾರಿಯ ಪಕ್ಕದಲ್ಲೂ ಇದ್ದು, ಸುತ್ತಲ ಅನೇಕ ಊರುಗಳೊಡನೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿರುವ ಈ ಊರು ಈ ಸುತ್ತಲ ಪ್ರದೇಶಕ್ಕೆ ಮುಖ್ಯ ವ್ಯಾಪಾರ ಕೇಂದ್ರವಾಗಿದೆ. ಇಲ್ಲಿ ಬಟ್ಟೆ ಗಿರಣಿ, ಕಾಗದದ ಕಾರ್ಖಾನೆ ಮತ್ತು ಔಷಧ ಮತ್ತು ಸುಗಂಧ ದ್ರವ್ಯಗಳ ಕಾರ್ಖಾನೆ. ಕೆಲವು ಬತ್ತದ ಗಿರಣಿಗಳು, ಮರ ಕೊಯ್ಯುವ ಕಾರ್ಖಾನೆಗಳೂ ಇವೆ. ಸ್ವಲ್ಪ ಮಟ್ಟಿಗೆ ರೇಷ್ಮೆ ವ್ಯಾಪಾರ ಮತ್ತು ರೇಷ್ಮೆ ನೂಲುವ ಉದ್ಯಮವಿದೆ. ಅಂಚೆ ತಂತಿ, ದೂರವಾಣಿ, ವಿದ್ಯುತ್, ಶೋಧಿತ ನೀರು ಸರಬರಾಜು ಸೌಕರ್ಯಗಳಿವೆ. ತಾಲ್ಲೂಕು ಮಟ್ಟದ ಆಸ್ಪತ್ರೆ ಮತ್ತು ಪಶುವೈದ್ಯಶಾಲೆ ಇವೆ. ಹಲವು ಶಾಲೆಗಳು ಮತ್ತು ಒಂದು ಪ್ರಥಮ ದರ್ಜೆ ಕಾಲೇಜು ಇವೆ. ಊರು ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ. ಪ್ರತಿ ಶುಕ್ರವಾರ ಸಂತೆ ಜರುಗುತ್ತದೆ.

ಪ್ರಾಚೀನ ಕಾಲದಿಂದಲೂ ತೀರ್ಥಕ್ಷೇತ್ರವಾಗಿದ್ದ ಈ ಊರು ಉಮ್ಮತ್ತೂರು ಪಾಳೆಯಗಾರರು ಮತ್ತು ಕಳಲೆಯ ಅರಸರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೇರಿತು. ಸುಮಾರು ಈ ಕಾಲಕ್ಕೆ ಸೇರಿದ ಕೋಟೆಯ ಅವಶೇಷಗಳನ್ನು ಊರಿನ ದಕ್ಷಿಣ ಭಾಗದಲ್ಲಿ ಕೆಲವೆಡೆ ಗುಂಡ್ಲುಹೊಳೆಯ ದಡದಲ್ಲಿ ಗುರುತಿಸಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ವಿಶೇಷ ಪ್ರೋತ್ಸಾಹದಿಂದ ನಂಜನಗೂಡು ವೈಭವಯುತವಾಗಿ ಬೆಳೆಯಿತು.

ನಂಜನಗೂಡು ಪ್ರಸಿದ್ಧವಾಗಿರುವುದು ಇಲ್ಲಿನ ಶ್ರೀಕಂಠೇಶ್ವರ (ನಂಜುಂಡೇಶ್ವರ) ದೇವಾಲಯದಿಂದ ಪವಿತ್ರತೆಯಲ್ಲೂ ಪರಿಮಾಣದಲ್ಲೂ ಬೃಹತ್ ಸ್ಥಾನವನ್ನು ಗಳಿಸಿರುವ ಈ ದೇವಾಲಯ ಕರ್ನಾಟಕದ ಸಿರಿವಂತ

ದೇವಾಲಯಗಳಲ್ಲಿ ಒಂದು. ದೇವಾಲಯ ಊರಿನ ಪೂರ್ವದಂಚಿನಲ್ಲಿ ಕಪಿಲಾ ಮತ್ತು ಗುಂಡ್ಲುಹೊಳೆ (ಕೌಂಡಿನ್ಯ ನದಿ) ಇವುಗಳ ಸಂಗಮ ಸ್ಥಾನದಿಂದ ಅನತಿದೂರದಲ್ಲಿದೆ. ನದಿಗಳಲ್ಲಿ ಪ್ರವಾಹ ಬಂದಾಗ ಸಂಗಮಸ್ಥಾನ ದೇವಾಲಯದಿಂದ ಕೇವಲ ನೂರು ಗಜ ದೂರದಲ್ಲಿರುತ್ತದೆ. ಶ್ರೀಕಂಠೇಶ್ವರ ದೇವಾಲಯ ದ್ರಾವಿಡ ಶೈಲಿಯ ಕಟ್ಟಡ. 385' ಉದ್ದ 160' ಅಗಲವಾಗಿದ್ದು ಕರ್ನಾಟಕದ ಬೃಹತ್ ದೇವಾಲಯಗಳಲ್ಲೊಂದಾಗಿದೆ. ಇದರಲ್ಲಿ 147 ಕಂಬಗಳಿದ್ದು ಒಟ್ಟು ಅಚ್ಛಾದಿತ ಪ್ರದೇಶ 52,000 ಚದರ ಅಡಿಗಳಷ್ಟಿದೆ. ಈ ದೃಷ್ಟಿಯಿಂದ ಇದು ಕರ್ನಾಟಕದಲ್ಲೇ ಅತಿ ದೊಡ್ಡ ದೇವಾಲಯ. ದೇವಾಲಯ ಪೂರ್ವಾಭಿಮುಖವಾಗಿದೆ. ಹೊರಗೋಡೆಗಳು ಸು. 12' ಎತ್ತರವಾಗಿದ್ದು ಸುತ್ತಲೂ ದಕ್ಷಿಣ, ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಅಧಿಷ್ಠಾನದ ಮೇಲೆ ಹಿಂಭಾಗಕ್ಕೆ ಗೋಡೆ ಮತ್ತು ಮುಂದೆ ಕಂಬಸಾಲು ಇರುವ ಕೈಸಾಲೆ ಇದೆ (ಈಗ ದಕ್ಷಿಣದ ಕೈಸಾಲೆಯನ್ನು ಪೂರ್ಣವಾಗಿಯೂ ಉತ್ತರದ್ದನ್ನು ಸ್ವಲ್ಪ ಭಾಗಗಳಲ್ಲಿಯೂ ಮುಚ್ಚಲಾಗಿದೆ). ಮೇಲೆ ಸುತ್ತಲೂ ದೇವ ಮತ್ತು ಇತರ ಶಿಲ್ಪಗಳಿರುವ ಗಚ್ಚಿನಲ್ಲಿ ಮಾಡಿದ ಕೋಷ್ಠಗಳ ಹಾರ ಇದೆ. ಪೂರ್ವಭಾಗದಲ್ಲಿನ ಮಹಾದ್ವಾರದ ಮುಂದೆ ಇಕ್ಕಡೆ ಕೈಸಾಲೆಯಿರುವ ಒಂದು ಮುಖಮಂಟಪವಿದೆ. ಮಹಾದ್ವಾರ ಬೃಹತ್ ರಚನೆ. ಒಳಚಾವಣಿ ಎತ್ತರ ಸು. 18' ವಿಶಾಲ ಮಂಟಪದಂತಿರುವ ಈ ಭಾಗದಲ್ಲಿನ ದಪ್ಪ ಎತ್ತರದ ಬಾಗಿಲ ತೋಳುಗಳ ಮೇಲೆ ಮೋಹಿನಿ, ದ್ವಾರಪಾಲಕ ಮೊದಲಾದ ಶಿಲ್ಪಾಲಂಕರಣವಿದೆ. ಮಹಾದ್ವಾರದ ಮೇಲೆ ಏಳು ಅಂತಸ್ತಿನಲ್ಲಿ ಎದ್ದಿರುವ ಸು. 120' ಎತ್ತರವಿರುವ ಬೃಹತ್ ಗೋಪುರವಿದೆ. ಗೋಪುರದ ಮೇಲ್ತುದಿಯಲ್ಲಿ ಚಿನ್ನ ಗಿಲೀಟಿನ 10'ಗೂ ಎತ್ತರವಾಗಿರುವ ಏಳು ಕಳಶಗಳನ್ನು ಅಷ್ಟೇ ಎತ್ತರದ ಎರಡು ಕೊಂಬುಗಳ ಮಧ್ಯೆ ಸಾಲಾಗಿ ಜೋಡಿಸಲಾಗಿದೆ.

ಮಹಾದ್ವಾರದಿಂದ ಒಳಗೆ ಪ್ರವೇಶಿಸುತ್ತಿದ್ದಂತೆಯೇ ದೊಡ್ಡ ತೆರೆದ ಅಂಗಳವಿದೆ. ಇದರ ಮಧ್ಯಭಾಗದಲ್ಲಿ ಸುಂದರವಾದ ಒಂದು ವಸಂತ ಮಂಟಪವಿದೆ. ಈ ಅಂಗಳದ ಆಗ್ನೇಯದಲ್ಲಿ ಪಾಕಶಾಲೆ ಮತ್ತು ಈಶಾನ್ಯದಲ್ಲಿ ಉಗ್ರಾಣ ಇವೆ. ದಕ್ಷಿಣ ಭಾಗದಲ್ಲಿ ಒಂದು ಪ್ರವೇಶದ್ವಾರವಿದೆ. ಅಂಗಳದ ಇಕ್ಕೆಲದಲ್ಲೂ ಎತ್ತರದ ಎರಡು ಕಂಬಸಾಲುಗಳು ಉದ್ದುದ್ದವಾಗಿ ಹಬ್ಬಿದ್ದು ಒಳಸಾಲಿನ ಹಿಂದಿನ ಅಂಕಣಗಳಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಂಗಳದ ಹಿಂದೆ ದೇವಾಲಯದ ಹಿಂಗೋಡೆಯ ವರೆಗೂ ಇರುವ ಈ ಭಾಗ ಪೂರ್ಣವಾಗಿ ಅಚ್ಛಾದಿತವಾಗಿರುವುದಲ್ಲದೆ ಅಂಗಳಕ್ಕಿಂತ ಸ್ವಲ್ಪ ಎತ್ತರದಲ್ಲಿದೆ. ಇಲ್ಲಿ ಮಧ್ಯದಲ್ಲಿರುವ ಗುಡಿಗಳನ್ನು ಬಿಟ್ಟು ಉಳಿದ ಭಾಗವನ್ನೆಲ್ಲ ಉದ್ದುದ್ದವಾಗಿ ಹಬ್ಬಿರುವ ಕಂಬಸಾಲುಗಳಿಂದ ವಿಂಗಡಿಸಲಾಗಿದೆ. ಅಂಗಳದಿಂದ ಮುಂದಕ್ಕೆ ಹೋಗುತ್ತಿದ್ದಂತೆಯೇ ಮೊದಲು ಸಿಗುವುದು ಬಸವನಕಟ್ಟೆ. ಇದು ವಸಂತಮಂಟಪದ ಎದುರಿಗೆ ಇರುವ ವಿಶಾಲವಾದ ಜಗತಿ. ಇದರ ಮೇಲೆ ಮಧ್ಯಸ್ಥಳದಲ್ಲಿ ಚಾವಣಿಯನ್ನೂ ಮೀರಿ ಮೇಲೆ ಎದ್ದಿರುವ ಅಷ್ಟಮುಖದ ಶಿಲಾದೀಪಸ್ತಂಭವಿದೆ. ಇದರ ಈಶಾನ್ಯಭಾಗದಲ್ಲಿ ಬೃಹನ್ನಂದಿಯ ಗುಡಿ ಇದೆ. ಕಟ್ಟೆಯ ವಾಯುವ್ಯದಲ್ಲಿ ಎತ್ತರವಾದ ಅದಿಷ್ಠಾನದ ಮೇಲೆ ನಿಂತಿರುವ ತಾಂಡವೇಶ್ವರ ಗುಡಿ ಇದೆ. ಕಟ್ಟೆಯ ಪಶ್ಚಿಮಕ್ಕೆ ಮತ್ತೊಂದು ಮಹಾದ್ವಾರವಿದೆ. ಈಗ ಇದು ಕಟ್ಟಡದ ಒಳಗೆ ಸೇರಿಹೋಗಿದ್ದರೂ ಹಿಂದೆ ಇದೇ ದೇವಾಲಯದ ಮುಖ್ಯ ಪ್ರವೇಶದ್ವಾರವಾಗಿತ್ತು. ಇದರ ಕೆಳಭಾಗ ಕಲ್ಲಿನ ಕಟ್ಟಡವಾಗಿದ್ದು, ಇದರ ಚಾವಣಿಯ ಮೇಲೆ ಐದು ಅಂತಸ್ತು ಮತ್ತು ಐದು ಚಿನ್ನ ಗಿಲೀಟಿನ ಕಲಶಗಳಿರುವ ಸು. 60' ಎತ್ತರದ ಇಟ್ಟಿಗೆ ಮತ್ತು ಗಾರೆಯ ಶಿಖರವಿದೆ. ಈ ಮಹಾದ್ವಾರಕ್ಕೆ ಸೇರಿದಂತೆಯೇ ಬಲಪಾರ್ಶ್ವ ಮತ್ತು ಮುಂಭಾಗದಲ್ಲಿ ಕೆಲವು ಚಿಕ್ಕ ಗುಡಿಗಳಿವೆ. ಎಡಪಾರ್ಶ್ವದಲ್ಲಿ ನವಗ್ರಹಗಳಿರುವ ಒಂದು ಆವರಣವೂ ಅದರ ಹಿಂದೆ ಯಜ್ಞಶಾಲೆಯೂ ಇವೆ. ಈ ಮಹಾದ್ವಾರದ ಪಶ್ಚಿಮಕ್ಕಿರುವುದೇ ಶ್ರೀಕಂಠೇಶ್ವರ ಲಿಂಗವಿರುವ ಮೂಲಗುಡಿ. ಮೂಲಗುಡಿ ಮತ್ತು ಮಹಾದ್ವಾರದ ಮಧ್ಯೆ ಒಂದು ಕಲ್ಲಿನ ಬಲಿಪೀಠ ಮತ್ತು ಕಲ್ಲಿನ ಪೀಠದ ಮೇಲೆ ಹಿತ್ತಾಳೆಯ ಹೊದಿಕೆಯಿರುವ ಸು. 25' ಎತ್ತರದ ಮರದಯಷ್ಟಿ ಇರುವ ಧ್ವಜಸ್ತಂಭ ಇವೆ.

ಮೂಲ ದೇವಾಲಯದಲ್ಲಿ ಗರ್ಭಗುಡಿ, ಸುತ್ತಲೂ ಪ್ರದಕ್ಷಿಣಾಪಥ ಮತ್ತು ಮುಂದೆ ಎರಡು ಕಂಬಗಳಿರುವ ಒಂದು ಒಳಮಂಟಪ ಇದೆ. ಇದರ ಮುಂದೆ 9 ಕಂಬಗಳ ಸಭಾಮಂಟಪವಿದೆ. ಇದು ಹಿಂದೆ 16 ಕಂಬಗಳಿದ್ದ ಮಂಟಪ. ಕೆಲವು ಕಂಬಗಳ ಮಧ್ಯೆ ಗೋಡೆಗಳನ್ನೆತ್ತಿ ದಕ್ಷಿಣಾಭಿಮುಖವಾಗಿರುವ ಉತ್ಸವ ವಿಗ್ರಹವಿರುವ ಒಂದು ಗುಡಿಯನ್ನೂ ಮುಂದೆ ಎರಡು ಪಕ್ಕಗಳಲ್ಲಿ ಮೂರು ಮೂರು ಲಿಂಗಸ್ಥಾಪಿತ ಕೋಣೆಗಳನ್ನೂ ಅಳವಡಿಸಲಾಗಿದೆ. ಮಂಟಪದ ಪೂರ್ವ ಮತ್ತು ದಕ್ಷಿಣದೆಡೆಗೆ ದ್ವಾರಗಳಿವೆ. ದಕ್ಷಿಣದ್ವಾರದ ಬಲಗಡೆ ಸುಬ್ರಹ್ಮಣ್ಯ, ಎಡಪಕ್ಕಗಳಲ್ಲಿ ಲಿಂಗಗಳನ್ನು ಸ್ಥಾಪಿಸಲಾಗಿದೆ. ಗರ್ಭಗುಡಿಯ ಬಲಭಾಗದಲ್ಲೂ ಹೊರಗಡೆ ಕೆಲವು ಲಿಂಗಗಳನ್ನು ಸ್ಥಾಪಿಸಲಾಗಿದೆ. ಮೂಲ ದೇವಾಲಯಕ್ಕೆ ಸೇರಿದಂತೆ ಎಡಗಡೆ ಒಂದು ವಿಷ್ಣು ಗುಡಿ ಅದರ ಹಿಂದೆ ಚಂಡಿಕೇಶ್ವರ ಗುಡಿ ಇವೆ. ಈ ಘಟಕದ ವಾಯುವ್ಯದಲ್ಲಿ, ಗರ್ಭಗುಡಿ ಮತ್ತು ಸಭಾಮಂಟಪವಿರುವ ಪಾರ್ವತಿ ಗುಡಿ ಇದೆ. ದೇವಾಲಯದ ಬಲಭಾಗದಲ್ಲಿ ಸುತ್ತಲೂ ಪ್ರಾಕಾರದ ಗೋಡೆಗೂ ಅದರ ಸದ್ಯ ಮುಂದಿನ ಕಂಬಸಾಲಿಗೂ ಮಧ್ಯೆ ಇರುವ ಅಂಕಣಗಳಲ್ಲಿ ಅನೇಕ ದೇವರುಗಳನ್ನು ಪ್ರತಿಷ್ಠಾಪಿಸಲಾಗಿದೆ. ಇವುಗಳಲ್ಲಿ ದಕ್ಷಿಣದ ಗೋಡೆಗೆ ಸೇರಿದಂತೆ ಅಂಗಳದ ನೇರದಿಂದ ಪ್ರಾರಂಭವಾಗುವ ಸಾಲಿನಲ್ಲಿ ಶೈವಪುರಾತನ ವಿಗ್ರಹಗಳು ಮುಂದೆ ಲಿಂಗಗಳೂ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಅವರ ಪತ್ನಿ ಪುತ್ರರ ವಿಗ್ರಹಗಳಿರುವ ಒಂದು ಕೋಣೆಯೂ ಪಶ್ಚಿಮದ ಸಾಲಿನಲ್ಲಿ ಲಿಂಗಗಳೂ ಮತ್ತು ಇತರ ಕೆಲವು ವಿಗ್ರಹಗಳೂ ಇವೆ. ಉತ್ತರದ ಗೋಡೆಗೆ ಸೇರಿದಂತೆ ಉಗ್ರಾಣದ ಬಳಿಯಿಂದ ಸಾಲಾಗಿ ಲೀಲಾಮೂರ್ತಿಗಳಿವೆ. ಪಾರ್ವತಿ, ಚಂಡಿಕೇಶ್ವರ ಮತ್ತು ತಾಂಡವೇಶ್ವರ ದೇವರುಗಳ ಗರ್ಭಗುಡಿಗಳ ಮೇಲೆ ಚಿಕ್ಕದಾದ ಗಾರೆಯ ಶಿಖರಗಳಿವೆ.

ಇಡೀ ದೇವಾಲಯ ಒಂದು ಕಾಲದ ರಚನೆಯಲ್ಲ. ದೇವಾಲಯದ ಬೆಳವಣಿಗೆಯಲ್ಲಿ ನಾಲ್ಕು ಘಟ್ಟಗಳನ್ನಾದರೂ ಸ್ಪಷ್ಟವಾಗಿ ಗುರುತಿಸಬಹುದು. ಶ್ರೀಕಂಠೇಶ್ವರ ಲಿಂಗ, ಗರ್ಭಗುಡಿ, ಪ್ರದಕ್ಷಿಣಾಪಥ ಮತ್ತು ಬಹುಶಃ ಒಳಮಂಟಪ ಬಹು ಪ್ರಾಚೀನವಾದುವು. ಈ ಭಾಗ ಕುಳ್ಳಾದಚಿಕ್ಕ ಕಟ್ಟಡ. ಗೋಡೆ ಸರಳವಾಗಿ ಚಪ್ಪಡಿಗಳಿಂದ ಕಟ್ಟಲಾಗಿದೆ. ಹೊರಮೈಯಲ್ಲಿ ಅಧಿಷ್ಠಾನ, ಭಿತ್ತಿ ಭಾಗದಲ್ಲಿ ಅರೆಗಂಬಗಳು, ಮೇಲೆ ಬಳುಕಿದ ಕಪೋತ ಇವೆ. ಇದರ ಮೇಲೆ ಚಿಕ್ಕ ಯಾಳಿ ಸಾಲಿದ್ದಂತೆ ತೋರುತ್ತದೆ. ಉತ್ತರ, ಪಶ್ಚಿಮ ಮತ್ತು ದಕ್ಷಿಣದ ಗೋಡೆಗಳಲ್ಲಿ ಕಿರಿದಾದ ಜಾಲಂಧ್ರಗಳಿವೆ. ಒಳ ಮಂಟಪದ ಕಂಬಗಳು ದುಂಡು ರೀತಿಯವು. ಬಹು ಕುಳ್ಳು. ಈ ವಾಸ್ತು ಅಂಶಗಳಿಂದ ಈ ಭಾಗ ಗಂಗರ ಅಥವಾ ಚೋಳರ ಕಾಲದಲ್ಲಿ 10-11ನೆಯ ಶತಮಾನಗಳಲ್ಲಿ ಕಟ್ಟಲಾಗಿರಬಹುದೆಂದು ಹೇಳಬಹುದು. ಇದರ ಮುಂಭಾಗದಲ್ಲಿರುವ ಮಂಟಪದಲ್ಲಿ ವಿವಿಧ ಮಾದರಿಯ ಕಂಬಗಳಿವೆ. ಕಂಬರೀತಿಗಳಿಂದ ಮಂಟಪ ಹೊಯ್ಸಳರ ಕಾಲದಲ್ಲಿ ಸು. 13ನೆಯ ಶತಮಾನದಲ್ಲಿ ರಚಿತವಾದ್ದೆಂದು ಊಹಿಸಬಹುದು (ಮೂಲಗುಡಿಯ ಮುಂಭಾಗದ ಕೋಣೆಗಳಲ್ಲಿ ಇರುವ ಲಿಂಗಗಳು 19ನೆಯ ಶತಮಾನದಲ್ಲಿ ಪ್ರತಿಷ್ಠಿತವಾದವು). ಈ ಭಾಗದ ಮುಂದಿರುವ ಬಲಿಪೀಠ ಸಹ ಬಹುಶಃ ಈ ಕಾಲದ್ದು. ಒಳಗಿನ ಮಹಾದ್ವಾರದ ಕಲ್ಲಿನ ಭಾಗದಲ್ಲಿ ಇಕ್ಕೆಲದಲ್ಲೂ ಹಂಪೆಯ ರಚನೆಗಳನ್ನು ಹೋಲುವ ಕಂಬಗಳಿವೆ. ಮೇಲಿನ ಗಾರೆಯ ಗೋಪುರ ವಿನ್ಯಾಸದಲ್ಲೂ ವಿಜಯನಗರ ಶೈಲಿಯನ್ನು ಗುರುತಿಸಬಹುದು. ದೇವಾಲಯದಲ್ಲಿ ಕೃಷ್ಣದೇವರಾಯನ 1509-29 ಒಂದು ದತ್ತಿ ಶಾಸನವೂ ಇರುವುದರಿಂದ ಈ ಮಹಾದ್ವಾರ ಮತ್ತು ಗೋಪುರ ಅವನ ಕಾಲದ ರಚನೆಯಿರಬಹುದು. ಪಾರ್ವತಿ ಮತ್ತು ನಾರಾಯಣ ಗುಡಿಗಳು ಮತ್ತು ಬಸವನ ಕಟ್ಟೆಯ ಮೇಲಿರುವ ದೀಪಸ್ತಂಭ ಸಹ ಇದೇ ಕಾಲದಲ್ಲಿ ರಚಿತವಾಗಿರುವಂತೆ ತೋರುತ್ತದೆ. ಮುಂದೆ ಮೈಸೂರು ಅರಸರು, ಕಳಲೆಯ ದಳವಾಯಿಗಳು ಮತ್ತು ದಿವಾನ್ ಪೂರ್ಣಯ್ಯ ಇವರು ದೇವಾಲಯದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದರೆಂಬುದಕ್ಕೆ ಸಾಂದರ್ಭಿಕ ಸಾಕ್ಷ್ಯಗಳಿವೆ. ಆದರೆ ಯಾವ ಯಾವ ಭಾಗಗಳು ರಚಿತವಾದುವೆಂದು ತೀರ್ಮಾನಿಸುವುದು ಕಷ್ಟ. ದೇವಾಲಯ ಇಂದಿನ ರೂಪವನ್ನು ತಳೆದುದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ದೇವಾಲಯದ ಒಳಗೆ ಮತ್ತು ಸುತ್ತಲೂ

ಹಬ್ಬಿರುವ ಸಾಲುಕಂಬಗಳು ಚತುರ್ಮುಖವಾಗಿದ್ದು ಮಧ್ಯೆ ಮಧ್ಯೆ ಅಷ್ಟಕೋನವಾಗಿ ಒಡೆದಿರುವ ರೀತಿಯವು. ಈ ಕಂಬಗಳು ಮತ್ತು ಅವುಗಳ ಮೇಲಿನ ಶಿಲ್ಪಗಳ ರೀತಿಯಿಂದ ಇವು ಹೆಚ್ಚಿನ ಮಟ್ಟಿಗೆ 18 - 19ನೆಯ ಶತಮಾನದವೆಂದು ಹೇಳಬಹುದು. 1820ರ ಅನಂತರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ದೇವಾಲಯದ ಬದಲಾವಣೆಗಳನ್ನು ಆರಂಭಿಸಿ ಹಿಂದಿದ್ದ ಹಲವು ಭಾಗಗಳನ್ನು ಉಪಯೋಗಿಸಿಕೊಂಡು ಇಂದಿನ ಕಟ್ಟಡವನ್ನು ರೂಪಿಸಿದಂತೆ ತೋರುತ್ತದೆ. ದೇವಾಲಯದ ಮುಂದಿರುವ ಮಹಾಗೋಪುರವನ್ನು ಅವರು 1845ರಲ್ಲಿ ರಚಿಸಿದರು. ಈ ವಿಷಯವನ್ನು ಸೂಚಿಸುವ ಶಾಸನ ಮಹಾದ್ವಾರದ ದೂಲದ ಮೇಲೆ ಇದೆ. ಬಹುಶಃ ಇದೇ ಕಾಲದಲ್ಲಿ ದೇವಾಲಯದ ಇಂದಿನ ರೂಪ ಸಿದ್ಧವಾದಂತೆ ತೋರುತ್ತದೆ. ಮಹಾ ದ್ವಾರದ ಮುಂದಿರುವ ಅನೇಕ ಶಿಲ್ಪಗಳಿಂದ ಕೂಡಿದ ಸುಂದರ ಮಂಟಪ ಸು. 1900ರಲ್ಲಿ ನೀಲಗಿರಿ ಮುದ್ದಣ್ಣ ಎಂಬುವರು ಕಟ್ಟಿಸಿದ್ದು.

ಈ ಬೃಹತ್ ದೇವಾಲಯದಲ್ಲಿ ಸು.200ಕ್ಕೂ ಹೆಚ್ಚು ವಿಗ್ರಹಗಳು ಪ್ರತಿಷ್ಠಾಪಿತವಾಗಿವೆ. ಇವುಗಳಲ್ಲಿ ಅರ್ಧದಷ್ಟು ಲಿಂಗಗಳು, ನಂಜಂಡೇಶ್ವರ ಲಿಂಗ ಹಳೆಯದು. ಪೀಠಯುತವಾಗಿ ಸು. 3' ಎತ್ತರವಿದೆ. ಇತರ ಹೆಚ್ಚಿನ ಲಿಂಗಗಳು ಬೇರೆಬೇರೆ ಕಾಲದಲ್ಲಿ ಸ್ಥಾಪಿತವಾದವು. ಹೆಚ್ಚಿನವು ಪ್ರಾಕಾರದ ಗೋಡೆಗೆ ಸೇರಿದಂತಿರುವ ಒಳಸಾಲಿನಲ್ಲಿವೆ. ಕೆಲವು ಗರ್ಭಗುಡಿಯ ಸಭಾಮಂಟಪದಲ್ಲಿಯೂ ದೇವಾಲಯದ ಈಶಾನ್ಯ ಮತ್ತು ವಾಯುವ್ಯ ಭಾಗದ ಕೋಣೆಗಳಲ್ಲಿಯೂ ಮತ್ತು ಅಲ್ಲಲ್ಲಿ ಬಿಡಿಬಿಡಿಯಾಗಿಯೂ ಸ್ಥಾಪಿತವಾಗಿವೆ. ನಾರಾಯಣ ಮತ್ತು ಪಾರ್ವತಿ ಗುಡಿಗಳಲ್ಲಿರುವ ಮೂಲ ವಿಗ್ರಹಗಳು ಸು 13-14ನೆಯ ಶತಮಾನದವು. ಪಾರ್ವತಿ ಸುಂದರ ಶಿಲ್ಪ. ಇದರಲ್ಲಿ ಹೊಯ್ಸಳ ಶೈಲಿಯ ಛಾಯೆಯನ್ನು ಕಾಣಬಹುದು. ಒಳಗಿನ ಮಹಾದ್ವಾರದ ಮುಂಕೋಣೆಯಲ್ಲಿ ಹೊಯ್ಸಳ ಶೈಲಿಯ ಒಂದು ನೃತ್ಯಗಣಪತಿ ಇದೆ. ಸುಬ್ರಹ್ಮಣ್ಯ ಗುಡಿಯಲ್ಲಿರುವ ಸುಬ್ರಹ್ಮಣ್ಯ, ಹಿಂದಿನ ಪ್ರಾಕಾರ ಸಾಲಿನಲ್ಲಿರುವ ಷಣ್ಮುಖ ಮತ್ತು ಉಚ್ಛಿಷ್ಟ ಗಣಪತಿ ಮೂರ್ತಿಸ್ವರೂಪದಲ್ಲಿ ವೈಶಿಷ್ಟ್ಯವುಳ್ಳ ಕೃತಿಗಳು. ದೇವಾಲಯದ ಬಹುಮುಖ್ಯ ಶಿಲ್ಪಗಳೆಂದರೆ ದೇವಾಲಯದ ಬಲಪ್ರಾಕಾರ ಸಾಲಿನಲ್ಲಿರುವ ಶೈವಪುರಾತನರ ವಿಗ್ರಹಗಳು ಮತ್ತು ಎಡಸಾಲಿನಲ್ಲಿರುವ ಲೀಲಾಮೂರ್ತಿಗಳು, ಪುರಾತನರು ಸಾಮಾನ್ಯವಾಗಿ 63 ಎಂದು ಪರಿಗಣಿತವಾಗಿದ್ದರೂ ಇಲ್ಲಿ 66 ವಿಗ್ರಹಗಳು ಮೂರು ಮೂರರಂತೆ 22 ಗಂಪುಗಳಲ್ಲಿವೆ. ಸುಮಾರು ಆಳೆತ್ತರದ ಈ ವಿಗ್ರಹಗಳಲ್ಲಿ ಒಂದೊಂದೂ ವೈಶಿಷ್ಟ್ಯಪೂರ್ಣವಾಗಿ ನಿರೂಪಿತವಾಗಿವೆ. ಸು. 4ರಿಂದ 5' ಎತ್ತರವಿರುವ ಚಂದ್ರಶೇಖರ, ಕಾಲಸಂಹಾರ, ಅಂಧಕಾಸುರಮರ್ದನ, ಲಿಂಗೋದ್ಭವ ಮೊದಲಾದ 25 ಆಗಮೋಕ್ತ ಶಿವಲೀಲಾಮೂರ್ತಿಗಳೂ ಆಗಮ ದೃಷ್ಟಿಯಿಂದಲೂ ಶಿಲ್ಪಸೌಂದರ್ಯದಿಂದಲೂ ಗಮನಾರ್ಹವಾಗಿವೆ. ಈ ಗುಂಪಿನ ದಕ್ಷಿಣಾಮೂರ್ತಿ ಆಕರ್ಷಕ ಕೃತಿ. ಪುರಾತನರು ಮತ್ತು ಲೀಲಾಮೂರ್ತಿಗಳ ವಿಗ್ರಹಗಳ ಗುಂಪುಗಳು ಕರ್ನಾಟಕದಲ್ಲಿ ಎಲ್ಲೋ ಕೆಲವು ಸ್ಥಳಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ನಂಜನಗೂಡಿನವು ದೊಡ್ಡವೂ ಸುಂದರವೂ ಆಗಿವೆ. ಲೀಲಾ ಮೂರ್ತಿಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಮಾಡಿಸಿದರೆಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ. ಪುರಾತನರ ವಿಗ್ರಹಗಳು ಸಹ ಇದೇ ಕಾಲದ ರಚನೆಗಳಿರಬಹುದು. ಉತ್ಸವ ವಿಗ್ರಹದ ಗುಡಿಯ ನೇರ ಎದುರಿನಲ್ಲಿ ಪ್ರಾಕಾರ ಸಾಲಿನಲ್ಲಿ ಪ್ರತ್ಯೇಕಗೊಳಿಸಿರುವ ಒಂದು ಕೋಣೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಅವರ ನಾಲ್ವರು ಪತ್ನಿಯರ ಆಳೆತ್ತರದ ವಿಗ್ರಹಗಳನ್ನಿಡಲಾಗಿದೆ. ಒಡೆಯರ ಕಾಲದ ವ್ಯಕ್ತಿಶಿಲ್ಪಗಳಲ್ಲಿ ಇವು ಅತ್ಯುತ್ತಮವಾದುವು. ಬಸವನಕಟ್ಟೆಯ ಪಕ್ಕದಲ್ಲಿರುವ ಸು. 8 ಅಡಿ ಎತ್ತರದ ನಂದಿ ಈ ದೇವಾಲಯದ ಬಹು ಭವ್ಯಶಿಲ್ಪ. 1644ರಲ್ಲಿ ದಳವಾಯಿ ವಿಕ್ರಮರಾಯ ಇದನ್ನು ಸ್ಥಾಪಿಸಿದನೆಂದು ಅದರ ಪೀಠದ ಮೇಲೆ ಇರುವ ಶಾಸನ ತಿಳಿಸುತ್ತದೆ.

ಈ ದೇವಾಲಯದಲ್ಲಿ ಲೋಹವಿಗ್ರಹಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಪಾರ್ವತೀಸಮೇತ ಚಂದ್ರಶೇಖರ, ಸುಬ್ರಹ್ಮಣ್ಯ, ಪಾರ್ವತಿ, ಗಣಪತಿ, ಚಂಡಿಕೇಶ್ವರ, ಶ್ರೀಭೂಸಮೇತ ನಾರಾಯಣ, ತಾಂಡವೇಶ್ವರ ಮೊದಲಾದ ಲೋಹದ ಉತ್ಸವಮೂರ್ತಿಗಳಿವೆ. ಅಲ್ಲದೆ ಈ ದೇವಾಲಯದಲ್ಲಿ 63 ಪುರಾತನರ ಲೋಹವಿಗ್ರಹಳಿವೆ. ಇವು 1739-59ರಲ್ಲಿ ಮೈಸೂರಿನ ದಳವಾಯಿಯಾಗಿದ್ದ ಕಳಲೆ ನಂಜರಾಜಯ್ಯ ಮಾಡಿಸಿಕೊಟ್ಟವು.

ದೇವಾಲಯದ ಪ್ರಾಕಾರದ ಹಾರದ ಕೋಷ್ಠಗಳಲ್ಲಿ ಗಾರೆಯಲ್ಲಿ ಮಾಡಿದ 122 ದೇವಮೂರ್ತಿಗಳಿವೆ. ಇವುಗಳಲ್ಲಿ ಅಷ್ಟದಿಕ್ಪಾಲಕರು, ವೀರಭದ್ರ, ನಾರಾಯಣ, 10 ವಿಧದ ದಕ್ಷಿಣಾಮೂರ್ತಿಗಳು, 7 ವಿಧದ ತಾಂಡವೇಶ್ವರ ಮೂರ್ತಿಗಳು, 16 ವಿಧದ ಸುಬ್ರಹ್ಮಣ್ಯ ವಿಗ್ರಹಗಳು, 25 ಲೀಲಾಮೂರ್ತಿಗಳು, 32 ವಿಧದ ಗಣಪತಿಗಳು, ಸಪ್ತಮಾತೃಕೆಯರು ಮೊದಲಾದವು ಇದ್ದು ಇವು ಶಿಲ್ಪಶಾಸ್ತ್ರ ಅಧ್ಯಯನ ದೃಷ್ಟಿಯಿಂದ ಬಹುಮುಖ್ಯವಾಗಿವೆ. ಅಲ್ಲದೆ ಮಹಾದ್ವಾರದ ಒಳಗೆ ಅಂಗಳದ ಸುತ್ತಲ ಹಾರದಲ್ಲೂ ಇದೇ ರೀತಿಯ ಮೂರ್ತಿಗಳಿವೆ. ಇವೂ 19ನೆಯ ಶತಮಾನದಲ್ಲಿ ರಚನೆಯಾದವು.

ದೇವಸ್ಥಾನದಲ್ಲಿ ಹಿಂದಿನಿಂದಲೂ ಸಂಗ್ರಹವಾಗಿರುವ ಅನೇಕ ವಸ್ತುವಾಹನಗಳಿವೆ. ದೊಡ್ಡ ತೇರು ಮತ್ತು ಪಾರ್ವತಿಯ ತೇರುಗಳು 1819ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮಾಡಿಸಿಕೊಟ್ಟದ್ದು. ಇವರೂ ಇವರ ಪತ್ನಿಯರೂ ಸಲ್ಲಿಸಿದ ಬೆಳ್ಳಿಕುದುರೆ ವಾಹನ (1830), ಬೆಳ್ಳಿ ಮಂಟಪ ಮತ್ತು ಬೆಳ್ಳಿ ಆನೆ (1834), ಬೆಳ್ಳಿ ಬಸವ (1848), ರುದ್ರಾಕ್ಷಿ ಮಂಟಪ, ಗಜರಥ (1847), ಕುದುರೆ ವಾಹನ (1847), ಕೈಲಾಸವಾಹನ (1852) ಶೇಷವಾಹನ ಮೊದಲಾದವು ದೇವಲಯದಲ್ಲಿವೆ. ಟಿಪ್ಪುಸುಲ್ತಾನ್ ಕೊಟ್ಟಿರುವ ಪಂಚರತ್ನ ಖಚಿತ ಬೆಳ್ಳಿ ಬಟ್ಟಲು ಮತ್ತು ಪಚ್ಚೆಹಾರ, ಶೃಂಗೇರಿಯ ನರಸಿಂಹಭಾರತಿ ಸ್ವಾಮಿಗಳು ಕೊಟ್ಟಿರುವ ಎರಡು ಚಿನ್ನದ ಆಭರಣಗಳು ಮೊದಲಾದ ನೂರಾರು ಆಭರಣಗಳು ಇಲ್ಲಿನ ಆಭರಣ ಸಂಗ್ರಹದಲ್ಲಿ ಮುಖ್ಯವಾದವು.

ಈ ದೇವಾಲಯ ವರ್ಷವಿಡೀ ದೇಶದ ವಿವಿಧ ಭಾಗಗಳಿಂದ ಭಕ್ತರನ್ನು ಆಕರ್ಷಿಸುತ್ತಿದೆ. ಸೋಮವಾರ ಮತ್ತು ಪೂರ್ಣಿಮಾ ದಿನಗಳಲ್ಲಿ ವಿಶೇಷ. ಪ್ರತಿ ಪೂರ್ಣಿಮಾ ರಾತ್ರಿ ರಥೋತ್ಸವವುಂಟು. ಅಲ್ಲದೆ ವಾರ್ಷಿಕವಾಗಿ ಎರಡು ಜಾತ್ರೆಗಳು ನಡೆಯುತ್ತದೆ. ಅಕ್ಟೋಬರ್-ನವೆಂಬರ್‌ನಲ್ಲಿ ತ್ರಿರಥ (ಚಿಕ್ಕಜಾತ್ರೆ) ಮತ್ತು ಮಾರ್ಚ್-ಏಪ್ರಿಲ್‌ನಲ್ಲಿ ಪಂಚರಥ (ದೊಡ್ಡಜಾತ್ರೆ), ಯಾತ್ರಾರ್ಥಿಗಳ ಉಪಯೋಗಕ್ಕಾಗಿ ಇಲ್ಲಿ ಅನೇಕ ಛತ್ರಗಳಿವೆ. ನಂಜನಗೂಡಿನ ನಂಜುಂಡೇಶ್ವರನನ್ನು ಅನೇಕ ಜನ ಕುಲದೈವವೆಂದು ಪರಿಗಣಿಸುತ್ತಾರೆ. ಈ ಸುತ್ತಿನ ಜನಪದದಲ್ಲಿ ನಂಜುಂಡನಿಗೆ ವಿಶೇಷ ಸ್ಥಾನವುಂಟು (ನೋಡಿ: ನಂಜಯ್ಯ).

ಈ ಊರಿನಲ್ಲಿ ಶ್ರೀಕಂಠೇಶ್ವರ ದೇವಾಲಯವಲ್ಲದೆ ಪರಶುರಾಮ, ಚಾಮುಂಡೇಶ್ವರಿ, ಸತ್ಯನಾರಾಯಣ, ದತ್ತಾತ್ರೇಯ, ಗಣಪತಿ ಮೊದಲಾದ ಇತರ ದೇವಾಲಯಗಳೂ ಇವೆ. ಇಲ್ಲಿನ ಪರಶುರಾಮ ದೇವಾಲಯದಲ್ಲಿ ಒಂದು ಶಾಸನಕಲ್ಲು ಪೂಜಾವಸ್ತುವಾಗಿದೆ. ಈ ದೇವಾಲಯವನ್ನು ಸಂದರ್ಶಿಸದಿದ್ದಲ್ಲಿ ನಂಜನಗೂಡಿನ ಯಾತ್ರೆ ಅಪೂರ್ಣವಾಗುವುದೆಂಬ ನಂಬಿಕೆ ಇದೆ.

ನಂಜನಗೂಡಿನಲ್ಲಿ ಶಾಂಕರ, ವೀರಶೈವ ಮತ್ತು ಮಾಧ್ವ ಸಂಪ್ರದಾಯದ ಮಠಗಳಿವೆ. ಇವುಗಳಲ್ಲಿ ರಾಘವೇಂದ್ರಸ್ವಾಮಿ ಮಠ ಪ್ರಾಚೀನವಾದುದು. ಸು. 15ನೆಯ ಶತಮಾನದಲ್ಲಿ ವಿಬುಧೇಂದ್ರ ತೀರ್ಥರಿಂದ ಸ್ಥಾಪಿತವಾದದ್ದು. ಸುಧೀಂದ್ರ, ರಾಘವೇಂದ್ರ ಮೊದಲಾದ ಪ್ರಸಿದ್ಧ ಆಚಾರ್ಯರು ಮಠದ ಪರಂಪರೆಗೆ ಸೇರಿದವರು. ಮಠದಲ್ಲಿ 15-18ನೆಯ ಶತಮಾನಗಳಿಗೆ ಸೇರಿದ. ಅನೇಕ ತಾಮ್ರಪಟಗಳೂ ಸನ್ನದುಗಳೂ ಇವೆ. ಇಲ್ಲಿ ಓಲೆಯ ಹಸ್ತಪ್ರತಿಗಳ ಸಂಗ್ರಹ ಸಹ ಇದೆ.

ಸ್ಥಳಪುರಾಣಗಳ ಪ್ರಕಾರ ನಂಜನಗೂಡಿಗೆ ಗರಳಪುರಿ ಕ್ಷೇತ್ರ. ದಕ್ಷಿಣಕಾಶಿ ಎಂಬ ಹೆಸರುಗಳೂ ಇವೆ. ಇದು ತ್ರಿವೇಣೀಸಂಗಮಸ್ಥಾನ ಎಂಬ ನಂಬಿಕೆ ಇದೆ. ಪರಶುರಾಮ ತನ್ನ ಮಾತೃಹತ್ಯಾಪಾಪವನ್ನು ಇಲ್ಲಿ

ಶಿವಾನುಗ್ರಹದಿಂದ ಕಳೆದುಕೊಂಡ, ಗೌತಮ ಋಷಿಗಳ ಆಶ್ರಮ ಇಲ್ಲಿತ್ತು ಎಂದು ಐತಿಹ್ಯ. (ಎಸ್.ಎಸ್.)

**ನಂಜನಗೂಡು ಶ್ರೀಕಂಠಶಾಸ್ತ್ರಿ :** 1884-1958. ಹೊಸಗನ್ನಡದ ಅರುಣೋದಯ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನಿತ್ತ ಗಣ್ಯರು. ಇವರದು ಪಂಡಿತ ಮನೆತನ. ಪ್ರಸಿದ್ಧ ಪಂಡಿತರಾಗಿದ್ದ ನಂಜನಗೂಡು ಸುಬ್ಬಾಶಾಸ್ತ್ರಿ ಇವರ ತಂದೆ. ಶ್ರೀಕಂಠಶಾಸ್ತ್ರಿಗಳು ಸ್ವತಂತ್ರವಾಗಿ ಸಂಸ್ಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯ ಗಳಿಸಿ, ತಮ್ಮ ಹದಿನೆಂಟನೆಯ ವಯಸ್ಸಿಗೆ ಗ್ರಂಥರಚನಾ ಚಾತುರ್ಯವನ್ನು ಪ್ರದರ್ಶಿಸಿದರು. ಆಗಿನ ಮೈಸೂರು ಮಹಾರಾಜರ ಕೃಪೆಗೆ ಪಾತ್ರರಾಗಿ ಆಸ್ಥಾನ ವಿದ್ವಾಂಸರಾಗಿದ್ದರಲ್ಲದೆ, ಅರಮನೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸು. 40 ವರ್ಷಗಳ ಕಾಲ ಕೆಲಸ ಮಾಡಿದರು. ಅನೇಕ ಐರೋಪ್ಯ ಅಧಿಕಾರಿಗಳಿಗೆ ಇವರು ಕನ್ನಡ ಕಲಿಸಿದರು. ಇವರು ಸು. 78 ಗ್ರಂಥಗಳನ್ನು ಬರೆದಿದ್ದಾರೆ ಎನ್ನಲಾಗಿದೆ. ಇವರ ಕೆಲವು ಗ್ರಂಥಗಳು ತೆಲುಗು, ಮಲೆಯಾಳಂ ಭಾಷೆಗಳಿಗೂ ಅನುವಾದವಾಗಿವೆ.

ಕನ್ನಡ ನಾಟಕ ಸಾಹಿತ್ಯಕ್ಕೆ ಜೀವ ತುಂಬಿದ ಶ್ರೇಯಸ್ಸು ಶಾಸ್ತ್ರಿಗಳದು. ವರದಾಚಾರ್ಯರ ನಾಟಕ ಕಂಪನಿಗೂ ಚಾಮುಂಡೇಶ್ವರಿ ನಾಟಕ ಮಂಡಲಿಗೂ ಶಾಸ್ತ್ರಿಗಳು ಅನೇಕ ನಾಟಕಗಳನ್ನು ಬರೆದುಕೊಟ್ಟರು. ರಂಗಭೂಮಿಯ ಮೇಲೆ ಪ್ರದರ್ಶನಗೊಂಡು ಜನಪ್ರಿಯವಾದ ಇವರ ನಾಟಕಗಳಲ್ಲಿ ಕೆಲವಿವು: ನಿರುಪಮ, ಧ್ರುವವಿಜಯ, ವಿಷ್ಣುಲೀಲಾ, ಸೀತಾಪರಿಣಯ, ಸರ್ವಸುಂದರಿ, ಶ್ರೀರಾಮ ಪಾದುಕಾಪಟ್ಟಾಭಿಷೇಕ, ರಾಜಸೂಯಯಾಗ.

ಕಾದಂಬರಿ ಮತ್ತು ಪ್ರಬಂದಗಳ ಮೂಲಕ ಗದ್ಯವನ್ನು ಹೊಸ ಹದಕ್ಕೆ ತರಲೂ ಶಾಸ್ತ್ರಿಗಳೂ ಶ್ರಮಿಸಿದರು. ಇವರು ಬರೆದಿರುವ 12 ಸ್ವತಂತ್ರ ಕಾದಂಬರಿಗಳಲ್ಲಿ ಅನುಗಸುಂದರಿ, ಸರಳಬಾಲೆ, ರಾಧಾಮಾಧವಿ ಮುಖ್ಯವಾದುವು. ಸುಭಾಷಿತ ಲಹರಿ, ವಿಶ್ವಾಮಿತ್ರ, ಮೈಸೂರು ಯಾತ್ರೆ ಮುಂತಾದ ಕೃತಿಗಳು ಇವರ ಉತ್ತಮ ಗದ್ಯಶೈಲಿಗೆ ಉದಾಹರಣೆಯಾಗಿವೆ. ಕೃಷ್ಣರಾಜೇಂದ್ರ ವಂಶಚರಿತ್ರೆ ಎಂಬ ಇವರ ಚಂಪೂಗ್ರಂಥ ಆಸ್ಥಾನ ವಿದ್ವತ್ಸಭೆಯ ಕವಿತಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆಯಿತು. ತೆಲುಗು ಸಾಹಿತ್ಯದ ವೀರೇಶಲಿಂಗಂ ಪಂತುಲು ಅವರ ಅನೇಕ ಕಾದಂಬರಿಗಳನ್ನೂ ನಾಟಕಗಳನ್ನೂ ಇವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಇವರು ಸಲ್ಲಿಸಿದ ಸಾರ್ವಜನಿಕ ಸೇವೆಯೂ ಗಣ್ಯವಾದುದು. ಕರ್ನಾಟಕ ಚಂದ್ರಿಕೆ ಎಂಬ ಪತ್ರಿಕೆಯನ್ನು 1911ರಲ್ಲಿ ಸ್ಥಾಪಿಸಿ ಸು.14 ವರ್ಷಗಳ ಕಾಲ ನಡೆಸಿದರು. ಮೈಸೂರು ದಳವಾಯಿ ಪ್ರೌಢಶಾಲೆ, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಮುಂತಾದ ಹಲವು ಸಂಸ್ಥೆಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ಮೈಸೂರಿನಲ್ಲಿ ಅನಾಥ ಸಹಾಯಕ ಸಂಘವೊಂದನ್ನು ಆರಂಭಿಸಿ, 35 ವರ್ಷಗಳ ಕಾಲ ಅದರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಇವರ ಸಾಹಿತ್ಯ ಸೇವೆ ಮತ್ತು ಸಾರ್ವಜನಿಕ ಸೇವೆಗಳನ್ನು ಗಮನಿಸಿ, ಮೈಸೂರು ನಾಗರಿಕರು 1927ರಲ್ಲಿ ಇವರಿಗೆ ಸುವರ್ಣಕಂಕಣವನ್ನು ತೊಡಿಸಿ ಗೌರವಿಸಿದರು. ಕನ್ನಡ ಸಾಹಿತ್ಯ ಪರಿಷತ್ತು 1952ರಲ್ಲಿ ಇವರನ್ನು ಸನ್ಮಾನಿಸಿತು. (ಡಿ.ವಿ.)

**ನಂಜನಗೂಡು ಸುಬ್ಬಾಶಾಸ್ತ್ರಿ :** 1834-1906. ಸಂಸ್ಕೃತ ಮತ್ತು ಕನ್ನಡ ಪಂಡಿತರಾಗಿದ್ದ ಇವರು ಮೈಸೂರು ಮಹಾರಾಜರ ಆಸ್ಥಾನ ವಿದ್ವಾಂಸರೂ ಅಧ್ಯಾಪಕರು ಆಗಿದ್ದರು. ಚಾಮರಾಜೇಂದ್ರ ಕೃಪಾಪೋಷಿತ ಅರಮನೆ ನಾಟಕ ಸಂಘದಲ್ಲಿ ಬಸವಪ್ಪಶಾಸ್ತ್ರಿ, ಅಯ್ಯಾಶಾಸ್ತ್ರಿ, ಜಯರಾಯಾಚಾರ್ಯ ಮುಂತಾದ ಭಾಷಾಸೇವಕರೊಂದಿಗೆ ಕೂಡಿ ಕೆಲಸ ಮಾಡಿದರು. ರಂಗಪ್ರಯೋಗವಾಗಬೇಕಿದ್ದ ನಾಟಕಗಳ ಪೂರ್ವಪರೀಕ್ಷಣ ಮಂಡಲಿಯಲ್ಲಿದ್ದ ಇವರು ರಂಗಪ್ರಯೋಗದ ಸಾಧ್ಯಾಸಾಧ್ಯತೆಗಳನ್ನು ಚೆನ್ನಾಗಿ ತಿಳಿದಿದ್ದರು.

ಸಂಸ್ಕೃತದ ಮೃಚ್ಛಕಟಿಕ ಮತ್ತು ಮಾಳವಿಕಾಗ್ನಿಮಿತ್ರ ನಾಟಕಗಳನ್ನು ಇವರು ಕನ್ನಡಕ್ಕೆ ತಂದಿದ್ದಾರೆ. ಸೀತಾಚರಿತ್ರೆ ಮತ್ತು ಉತ್ತರ ಸೀತಾಚರಿತೆ ಇವರ ಸ್ವತಂತ್ರ ಕಾವ್ಯಗಳು. ಸಂಸ್ಕೃತದಲ್ಲಿ ವಿದ್ವಚ್ಚಕೋರಚಂದ್ರಿಕೆ ಮತ್ತು ಶಾರದಾಷ್ಟಕಾದಿ ಸ್ತೋತ್ರ ಎಂಬ ಗ್ರಂಥಗಳನ್ನು ಬರೆದಿದ್ದಾರೆ.

ಇವರು ಮೈಸೂರು ಅರಮನೆ ಮತ್ತು ಶೃಂಗೇರಿ ಪೀಠದಿಂದ ಸನ್ಮಾನಿತರಾಗಿದ್ದರು. ಪ್ರಸಿದ್ಧ ವಿದ್ವಾಂಸರುಗಳಾಗಿದ್ದ ನಂಜನಗೂಡು ಅನಂತ ನಾರಾಯಣಶಾಸ್ತ್ರಿ ಮತ್ತು ನಂಜನಗೂಡು ಶ್ರೀಕಂಠಶಾಸ್ತ್ರಿ ಇವರ ಪುತ್ರರು. (ಡಿ.ವಿ.)

**ನಂಜನಾಢಚಾರ್ಯ :** ಸು.1500 ವೀರಶೈವಕವಿ. ವೈಷ್ಣವವಾದಖಂಡನವೆಂಬ ಗ್ರಂಥದ ಕರ್ತೃ. ತಂದೆ ತ್ರಿಲೋಚನಾಚಾರ್ಯ. ಗದ್ಯರೂಪದಲ್ಲಿದೆ. ಕೃತಿಯಲ್ಲಿ ಪದ್ಮಣಾಂಕನ (ಸು.1385) ಪದ್ಮರಾಜಪುರಾಣವನ್ನು ನಿರ್ದೇಶಿಸುವುದರಿಂದ ಅವನ ಕಾಲಕ್ಕೆ ಈತ ಈಚೆಯವನು. ವೈಷ್ಣವವಾದ ಬಂದನ ಶಿವಾಧಿಕ್ಯ ಪ್ರತಿಪಾದನೆ ಈ ಕೃತಿಯ ಮೂಲಭೂತ ವೈಶಿಷ್ಟ್ಯ. ತ್ರಿಭುವನತಾತನೆ. ಬಾತ ಸ್ಥಾಪಿಸಹೊರಟ ವಿಷ್ಣು ಮಹತ್ತ್ವವನ್ನು ತಾನು ವಚನರೂಪಿನಿಂದ ಖಂಡಿಸಿ ಆ ವಚನದೆಡೆಗೆ ವೇದಪುರಾಣಾಗಮಾದಿಗಳಿಂದ ಆಧಾರಗಳನ್ನೊದಗಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ.

**ನಂಜಪ್ಪ, ಕೆ.ಎಲ್. :** 1914 - 90. ಭಾರತದ ಆಧುನಿಕ ಸಣ್ಣ ಕೈಗಾರಿಕೆಗಳ ಪಿತಾಮಹ. ಕಾರಚೂರು ಲಿಂಗಪ್ಪ ನಂಜಪ್ಪ ಇವರ ಪೂರ್ತಿ ಹೆಸರು. 1914 ಆಗಸ್ಟ್ 14 ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಕಾರಚೂರು ಲಿಂಗಪ್ಪ, ತಾಯಿ ತಿಪ್ಪಮ್ಮ ಆರಂಭಿಕ ಶಿಕ್ಷಣವನ್ನು ಬೆಂಗಳೂರಿನಲ್ಲಿ ಪಡೆದರು. ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ. ವಿದ್ಯಾರ್ಥಿಯಾಗಿದ್ದಾಗಲೆ ಬ್ರಿಟಿಷರ ವಿರುದ್ಧ ಅಸಹಕಾರ ಚಳವಳಿ ಮತ್ತು ಸತ್ಯಾಗ್ರಹಗಳಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸಿದರು (1928).

ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿವೇತನ ಪಡೆದು ಜಪಾನಿಗೆ ತೆರಳಿದರು (1937). ಅಲ್ಲಿ 5 ವರ್ಷಗಳ ಕಾಲ ಸಣ್ಣ ಕೈಗಾರಿಕೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದರು. ಜಪಾನಿನ ಯಾವುದೇ ಕೈಗಾರಿಕೋದ್ಯಮವನ್ನಾದರೂ ಅಧ್ಯಯನ ಮಾಡುವ ವಿಶೇಷ ರಹದಾರಿಯನ್ನು ಆ ಸರ್ಕಾರ ಇವರಿಗೆ ನೀಡಿತ್ತು. ಇಂತಹ ಅನುಮತಿ ಪಡೆದವರಲ್ಲಿ ಇವರೇ ಮೊದಲಿಗರು. ಮಿತ್ಸುಬುಷಿ ಎಕನಾಮಿಕ್ ರಿಸರ್ಚ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಾತ್ಯಕ್ಷಿಕೆಯ ತರಬೇತಿ ಪಡೆದರು. ಈ ಅನುಭವದ ಹಿನ್ನೆಲೆಯಲ್ಲಿ ಸಣ್ಣ ಕೈಗಾರಿಕೋದ್ಯಮಕ್ಕೆ ನಿಶ್ಚಿತ ರೂಪರೇಷೆಗಳನ್ನು ಕೊಡುವಂತೆ ಪ್ರೇರಣೆ ಮತ್ತು ಪರಿಣತಿಯನ್ನು ರೂಢಿಸಿಕೊಂಡರು.

ಇವರು ಭಾರತಕ್ಕೆ ಮರಳಿದ ಬಳಿಕ ಭದ್ರಾವತಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಮಾರಾಟಾಧಿಕಾರಿಯಾಗಿ ವೃತ್ತಿ ಜೀವನ ಆರಂಭಿಸಿದರು. (1942) ಇವರು ಕೈಗಾರಿಕಾ ಸಹ ನಿರ್ದೇಶಕರಾಗಿದ್ದ ಅವಧಿಯಲ್ಲಿ (1944) ಇವರಿಗೆ ಎಂ.ವಿಶ್ವೇಶ್ವರಯ್ಯನವರ ಸಹಯೋಗ ದೊರೆಯಿತು. ಅವರಿಂದ ಪ್ರಭಾವಿತರಾಗಿ ಭಾರತದಲ್ಲೇ ಪ್ರಪ್ರಥಮವಾಗಿ ಗ್ರಾಮೀಣ ಕೈಗಾರಿಕೆಗಳ ಬಗ್ಗೆ ಕಾರ್ಯಕ್ರಮ ನಿರೂಪಿಸಿದರು. ಈ ಸಂಬಂಧವಾಗಿ ವಿಶ್ವೇಶ್ವರಯ್ಯನವರೊಂದಿಗೆ ಸಹ ಲೇಖಕರಾಗಿ ಎರಡು ಸಂಪುಟಗಳನ್ನು ಪ್ರಕಟಿಸಿದರು. ಮೈಸೂರು ಸಂಸ್ಥಾನದಲ್ಲಿ ಮೊತ್ತ ಮೊದಲಿಗೆ ಆರಂಭವಾದ ಮೈಸೂರು ರಾಜ್ಯ ಕೈಗಾರಿಕೆ ಮತ್ತು ವಾಣಿಜ್ಯ ಯೋಜನೆಗೆ ಪ್ರಥಮ ಕಾರ್ಯದರ್ಶಿಯಾಗಿ ನೇಮಕಗೊಂಡರು (1945). ಈ ಅವಧಿಯಲ್ಲಿ ಇವರ ಮಾರ್ಗದರ್ಶನದಲ್ಲಿ ಬೃಹತ್ ಮತ್ತು ಸಣ್ಣ ಕೈಗಾರಿಕೆಗಳು ಆಧುನೀಕರಣಗೊಂಡವು. ಇವರ ಮುಂದಾಳತ್ವ ಹಾಗೂ ದೂರದೃಷ್ಟಿಯ ಫಲವಾಗಿ ಬೆಂಗಳೂರಿನಲ್ಲಿ ಹಲವು ಸಣ್ಣ ಕೈಗಾರಿಕೆಗಳು ಸ್ಥಾಪನೆಗೊಂಡು ಬೃಹತ್ ಕೈಗಾರಿಕೆಗಳಾಗಿ ಮಾರ್ಪಾಡು ಹೊಂದಿದವು.

ಇವರಿಗೆ ಸಣ್ಣ ಕೈಗಾರಿಕೆಗಳಲ್ಲಿದ್ದ ಅನುಭವ ಪರಿಣತಿಗಳನ್ನು ಗುರುತಿಸಿದ ಭಾರತಸರ್ಕಾರ ಇವರನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದಲ್ಲಿ ಸಹ ನಿರ್ದೇಶಕರಾಗಿ ನೇಮಿಸಿತು (1949). ಅನಂತರ ಸ್ಥಾಪನೆಯಾದ ಗುಡಿಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

ಪ್ರಾಧಿಕಾರದ ಸ್ಥಾಪಕ ನಿರ್ದೇಶಕರಾದರು (1954). ಈ ಅವಧಿಯಲ್ಲಿ ಗೃಹ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮವಹಿಸಿದರು. ಅನಂತರ 1962 ರಲ್ಲಿ ಆರಂಭಗೊಂಡ ಭಾರತದ ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೋರೇಶನ್‌ನ ಅಭಿವೃದ್ಧಿ ಕಮಿಷನರ್ ಆಗಿ ಅಧಿಕಾರ ವಹಿಸಿಕೊಂಡರು (1967). ಈ ಹುದ್ದೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದರಲ್ಲದೆ, ಕೈಗಾರಿಕಾ ವ್ಯವಸ್ಥಾಪಕರಿಗೆ ಎಲ್ಲ ಬಗೆಯ ಸೌಲಭ್ಯಗಳನ್ನು ಒದಗಿಸಿ ತಮ್ಮ ಕರ್ತೃತ್ವ ಶಕ್ತಿಯನ್ನು ಮೆರೆದರು. ಇವರ ನಿಸ್ವಾರ್ಥ ಸೇವೆಗಾಗಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ (1972).

ನಂಜಪ್ಪನವರು ಅಂತಾರಾಷ್ಟ್ರೀಯಮಟ್ಟದಲ್ಲೂ ಖ್ಯಾತಿ ಪಡೆದಿದ್ದರು. ಸುಮಾರು 20 ರಾಷ್ಟ್ರಗಳು ಇವರನ್ನು ಆಹ್ವಾನಿಸಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಇವರ ಸಲಹೆಗಳನ್ನೂ ಸೇವೆಯನ್ನು ಪಡೆದವು. ನಿವೃತ್ತರಾದ ಬಳಿಕವೂ ಭಾರತದ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲೂ ಬಲಪಡಿಸಲೂ ಅವಿಶ್ರಾಂತವಾಗಿ ದುಡಿದ ಇವರು 1990 ಅಕ್ಟೋಬರ್ 8 ರಂದು ಬೆಂಗಳೂರಿನಲ್ಲಿ ನಿಧನರಾದರು.

(ಟಿ.ವಿ.ಎಸ್.)

**ನಂಜಯ್ಯ**[1]: ಕರ್ನಾಟಕದ ಜನಪದ ಆರಾಧ್ಯದೈವಗಳಲ್ಲಿ ಪ್ರಸಿದ್ಧನಾದವ. ದಕ್ಷಿಣಕಾಶಿಯೆಂದು ಪ್ರಸಿದ್ಧವಾದ ನಂಜನಗೂಡು (ನೋಡಿ) ಈ ನಂಜಯ್ಯ (ನಂಜುಂಡೇಶ್ವರ) ನೆಲೆಸಿರುವ ಕ್ಷೇತ್ರ. ಸಮುದ್ರಮಥನ ಕಾಲದಲ್ಲಿ ಹುಟ್ಟಿದ ವಿಷವನ್ನು ಸೇವಿಸಿ ಕಂಠದಲ್ಲಿ ಧರಿಸಿದ್ದರಿಂದ ಶಿವ ವಿಷಕಂಠನಾದ, ನಂಜುಂಡೇಶ್ವರನಾದ ಎಂದು ಪುರಾಣಗಳು ಹೇಳುತ್ತವೆ. ಆದರೆ ಜನಪದ ಗೀತೆಗಳನ್ನು ಕಟ್ಟಿದ ಕವಿಗಳ ದೃಷ್ಟಿಯೇ ಬೇರೆ. ಈ ನಂಜಯ್ಯನನ್ನು ಕುರಿತು ತ್ರಿಪದಿಯಲ್ಲಿ ಹೇಳಿರುವ ಕಥೆ ಹೀಗಿದೆ: ಕಪಿನಿ ಮತ್ತು ಗುಂಡ್ಲುಹೊಳೆಯ ಮಧ್ಯೆ ಇರುವ ನಂಜನಗೂಡು ಜಂಗಮರ ಪಟ್ಟಣವೆಂದು ಪ್ರಸಿದ್ಧವಾದದ್ದು. ಶಿವಜಂಗಮನಾದ ನಂಜಯ್ಯ ವಾಸಿಸುವ ಗುಡಿ (ಮಠ) ಹಿಪ್ಪೆ ತೋಪಿನಲ್ಲಿದೆ. ಅದರ ಬಳಿ ಸೂಳೆಯರ ಬೀದಿಯೂ ಇರುವುದನ್ನು ಮೆಚ್ಚಿಯೇ ನಂಜಯ್ಯ ಅಲ್ಲಿ ನೆಲೆಗೊಂಡ. ಆತನ ಹೆಂಡತಿ ದೇವೀರಿ (ದೇವಾರಿ). ಗುಡಿಯ ಕಳಸ ಚಿನ್ನದ್ದು. ಗುಡಿಯಲ್ಲಿ ಗಂಧದ ಪರಿಮಳ ತುಂಬಿದೆ. ಎಂಟೆಂಟು ದಿವಸಕ್ಕೋ ತಿಂಗಳಿಗೊಮ್ಮೆಯೋ ಇಲ್ಲಿ ಪೂಜೆ ನಡೆಯುತ್ತದೆ. ನಂಜನಗೂಡಿಗೆ ಹೋಗುವ ದಾರಿಯಲ್ಲಿ ಕಲ್ಲುಮುಳ್ಳುಗಳಿಲ್ಲದಂತೆ ದಾರಿಯುದ್ದಕ್ಕೂ ದವನದ ತೋಟವೇ. ನಂಜಯ್ಯನಿಗೆ ತುಂಬೆ ಹೂವಿನ ಪೂಜೆ ನಡೆಯುತ್ತದೆ. ಕಂಬಿ ಸೀರೆಯನ್ನು ಕಾಸೆಹಾಕಿ ಉಟ್ಟ ಸಂಬಳದ ಸೂಳೆಯರು ಆರತಿ ಬೆಳಗುವರು. ಅವನು ಗೊಂಬೆ ತೇರು ಹತ್ತಿ ಉತ್ಸವ ಹೊರಟಾಗ ಅವನ ಜೊತೆಗೆ ಇನ್ನೂ ಐದು ತೇರುಗಳೂ ನಂದಿಕೋಲುಗಳೂ ಹಿಂಬಾಲಿಸುತ್ತವೆ. ಜನ ಎಸೆವ ಹಣ್ಣು ದವನ ಹಾರಾಡುತ್ತವೆ. ಆಗ ಆರು ತೇರಿನ ಅರಸ, ಮೂರು ತೇರಿನ ಮುನಿ, ಗೊಂಬೆ ತೇರಿನ (ದಳಪತಿ) ಗುರಿಕಾರನಾದ ಭೋಗಿ ನಂಜಯ್ಯ ನಿನ್ನನ್ನು ಹಡೆದವ್ವ ಧನ್ಯಳು ಎಂದು ಜನ ಹೊಗಳುತ್ತಾರೆ.

ನಂಜಯ್ಯ ಒಳ್ಳೆಯ ರಸಿಕ. ಪ್ರತಿದಿನವೂ ಆತ ಸೂಳೆಯರಿಂದ ಸೇವಿಸಿಕೊಳ್ಳುತ್ತಾನೆ. ಅವರೊಡನೆ ಪಗಡೆಯಾಡುತ್ತಾನೆ. ಆತ ಎಂಥ ರಸಿಕ ಜೀವಿಯೆಂದರೆ ಬೆಟ್ಟದ ಚಾಮಾಯಿ (ಚಾಮುಂಡಿ) ನಂಜನಗೂಡು ಹೊಳೆಗೆಬಂದು ಜಳಕ ಮಾಡುತ್ತಿರುವಾಗ ವೇಷಮರೆಸಿಕೊಂಡು ಹೋಗಿ ಅವಳ ಸೀರೆಯನ್ನು ಬಚ್ಚಿಟ್ಟು ಬಹಳ ಹೊತ್ತು ಕಾಡಿಸಿ ಕೊನೆಗೆ ಕೊಟ್ಟವ. ಬೆಟ್ಟದ ಚಾಮುಂಡಿ ಅವನ ಪ್ರೀತಿಯ ಸೂಳೆ. ಆಗಾಗ ಬೆಟ್ಟಕ್ಕೆ ಹೋಗಿ ಬರುತ್ತಾನೆ. ಒಂದು ದಿನ ರಾತ್ರಿ ಅವನಿಗೆ ಬೆಟ್ಟಕ್ಕೆ ಹೋಗುವ ಮನಸ್ಸಾಗಿ ಪಕ್ಕದಲ್ಲಿ ಮಲಗಿದ್ದ ದೇವೀರಿಗೆ ತಿಳಿಯದಂತೆ ಕಾವಿಕಂತೆ ಧರಿಸಿ, ಕೈಯಲ್ಲಿ ನಾಗಬೆತ್ತ ಹಿಡಿದು, ಸೇರು ಪಾವು ಬಟ್ಟಡಿಕೆ, ಬಿಳಿ ಎಲೆ ತೆಗೆದುಕೊಂಡು, ಮಂದಿಯಿಂದ ಪಂಜನ್ನು ಹಿಡಿಸಿಕೊಂಡು, ಚಾಮುಂಡಿಯ ಅರಮನೆಗೆ ಹೋದ. ತಾವರೆಮೈಯಿನ ಚಾಮುಂಡಿ ಪನ್ನೀರಿಂದ ಪಾದ ತೊಳೆದು, ಮುತ್ತಿನ ಸೆರಗಿನಿಂದ ಒರೆಸಿ ಒಳಗೆ ಕರೆದೊಯ್ದು ಹಾಲು ಸಕ್ಕರೆ ಎಡೆಮಾಡಿ ಗಿಲಿಗಲಿ ಮಂಚದ ಮೇಲೆ ಕುಳ್ಳಿರಿಸಿ ವೀಳೆಯವಿತ್ತಳು. ಪಗಡೆ ಆಟದೊಂದಿಗೆ ನಂಜಯ್ಯ ಆ ರಾತ್ರಿಯನ್ನು ಅವಳೊಂದಿಗೆ ಕಳೆದ. ಅರ್ಧ ರಾತ್ರಿಯಲ್ಲಿ ಎಚ್ಚರಗೊಂಡ ದೇವೀರಿ ತನ್ನ ಗಂಡ ಪಕ್ಕದಲ್ಲಿ ಇಲ್ಲದ್ದನ್ನು ನೋಡಿಳು. ಅವಳ ಸಂಶಯ ಬಲವಾಯಿತು. ಅವನು ಬೆಟ್ಟದ ಹೆಣ್ಣಿನ ಸ್ನೇಹ ಮಾಡಿರುವ ವಿಚಾರ ಅವಳಿಗೂ ಸ್ವಲ್ಪ ಗೊತ್ತಿತ್ತು. ಬೆಳಗ್ಗೆ ಬಂದ ಗಂಡನೊಂದಿಗೆ ವಾಗ್ವಾದ ಹೂಡಿದಳು. ಅವರಿಬ್ಬರಿಗೂ ಬಿರುಸಿನ ಸಂಭಾಷಣೆ ನಡೆಯಿತು. ತನಗೆ ವಯಸ್ಸಾಯಿತೆಂದೂ ಈ ವಯಸ್ಸಿನಲ್ಲಿ ಸೂಳೆಯ ಸಹವಾಸವೇ ಎಂದೂ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ನಂಜಯ್ಯ ಪ್ರಯತ್ನಿಸಿ ಕೊನೆಗೆ ಸೋತ. ದೇವೀರಿ ಗಂಡನ ಚಾತುರ್ಯವನ್ನು ನೋಡಿ ಹುಣಿಸೆಮರ ಮುಪ್ಪಾದರೆ ಹುಳಿ ಮುಪ್ಪಾದಾತಾ? ಜವನ (ದವನ) ಒಣಗಿದರೆ ಅದರ ಘಮಲು ಹೋದಾತಾ? ಕಾಲಕ್ಕೂ ಬಿಡಲಿಲ್ಲ ನಿಮ್ಮ ಕಳ್ಳಬುದ್ಧೀನ: ನಿಮ್ಮಾಸೆ ತೊಡೆಯಾ, ಹೋಗಿ ಸೀಗೇ ಹಾಕ್ಕೊಂಡು ತಲೇ ತೊಳೆದು ಹೊಳೇಲಿ ಮುಳುಗಿ ಬನ್ನಿ ಎಂದ ಮಾತಿಗೆ ನಂಜಯ್ಯ ಕಪಿನಿ ಹೊಳೆಯಲ್ಲಿ ಸ್ನಾನ ಮಾಡಿ ಬಂದ. ಅನಂತರ ಮನ ಕರಗಿದ ದೇವೀರಿ ಗಿಂಡಿಯಲ್ಲಿ ನೀರು ತಂದು ಅವನ ಪಾದ ತೊಳೆದು ಗುಡಿಯೊಳಗೆ ಕರೆದುಕೊಂಡಳು. (ಎಚ್.ಎಂ.ಆರ್.)

ಕರ್ನಾಟಕದ ನಾನಾ ಭಾಗಗಳಲ್ಲಿ ಈ ನಂಜಯ್ಯನಿಗೆ ಸಂಬಂಧಿಸಿದ ಜನಪದ ಕಥೆ. ಗೀತೆ, ಲಾವಣಿ, ಐತಿಹ್ಯಗಳು ಅಪಾರವಾಗಿ ಲಭ್ಯವಾಗುತ್ತವೆ. ಜನಪದ ವೃತ್ತಿಗಾಯಕರಲ್ಲಿ ಅನೇಕ ಸಂಪ್ರದಾಯದವರು ನಂಜಯ್ಯ-ಚಾಮುಂಡಿಯರನ್ನು ಕುರಿತ ಕಾವ್ಯಗಳನ್ನು ಹಾಡುತ್ತಾರೆ. ಹೆಳವರು ಚಾಮುಂಡಿಪುರಾಣ ಎಂಬ ಹೆಸರಿನಲ್ಲಿ ಈ ಕಥೆಯನ್ನು ಸುವಿಸ್ತಾರವಾಗಿ ಹಾಡುತ್ತಾರೆ. ಹೆಣ್ಣುಮಕ್ಕಳು ಹಾಡುವ ತ್ರಿಪದಿರೂಪದ ಹಾಡುಗತೆಗಳು ಹೇರಳವಾಗಿ ಸಿಕ್ಕುತ್ತವೆ. ಈ ಕಥೆಗಳಲ್ಲೆಲ್ಲಾ ಶಿವಕಥೆಯ ಸ್ಥೂಲರೇಖೆಯನ್ನು ಗುರುತಿಸಬಹುದು. ಶಿವಗಿರಿಜೆಯರ ಕಲ್ಯಾಣ, ಗಿರಿಜೆಯ ಮೇಲೆ ಶಿವ ಗಂಗೆಯನ್ನು ತಂದ ಪ್ರಸಂಗ ಅತ್ಯಂತ ಜನಪ್ರಿಯವಾದ ಕಥೆ. ಈ ಗಂಗೆಯ ಪ್ರಸಂಗವೇ ಸ್ಥಳೀಯ ಹಿನ್ನೆಲೆಯಲ್ಲಿ ನಂಜಯ್ಯ-ಚಾಮುಂಡಿ ಇವರ ಪ್ರಣಯಕಥೆಯಾಗಿ ರೂಪುಗೊಂಡಿದೆ. ತನ್ನ ಮಡದಿಯ ಮೇಲೆ ಉಪಪತ್ನಿಯನ್ನು ತರುವ ಆಶಯ ಅನೇಕ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಹಬ್ಬಿ ನಿಂತಿದೆ. ಬಿಳಿಗಿರಿರಂಗ-ಕುಸುಮಾಲೆ, ಚುಂಚನಗಿರಿ ಭೈರವ-ಮಾಳವಿ, ಮೇಲುಕೋಟೆ ಚಲುವರಾಯ-ವರನಂದಿ ಇವರ ಸಂಬಂಧ ಈ ತೆರನಾದುದು. ಇನ್ನೂ ಅನೇಕ ಕ್ಷೇತ್ರಗಳಲ್ಲಿ ಈ ಬಗೆಯ ಕಥೆಗಳು ಕಾಣಬರುತ್ತವೆ. ಆದರೆ ಒಂದು ಸುಸಂಬದ್ಧ ಕಾವ್ಯವಾಗಿ ರೂಪುಗೊಂಡಿರುವುದು ನಂಜಯ್ಯನ ಕಥೆ ಮಾತ್ರ.

ಜನಪದ ಕಾವ್ಯಗಳಲ್ಲಿ ನಂಜಯ್ಯ ದೊಡ್ಡ ರಸಿಕನಾಗಿ ಚಿತ್ರಿತನಾಗಿದ್ದಾನೆ. ಅವನು ದೇವೀರಿ ಮತ್ತು ಪಾರ್ವತಿ ಎಂಬ ಪತ್ನಿಯರನ್ನು ಪಡೆದುದಾದರೂ ಚಾಮುಂಡಿಯ ಪ್ರಣಯಸಂಬಂಧವನ್ನು ಪಡೆದ ಅನಂತರ ಚಾಮುಂಡಿ ಇವನನ್ನು ಯಾವುದೋ ಸಂದರ್ಭದಲ್ಲಿ ಉಪೇಕ್ಷಿಸಿದಾಗ ಅವಳಿಗಿಂತ ಮೇಲಾದ ಪತ್ನಿಯರನ್ನು ತರುವುದಾಗಿ ಹೇಳಿ ಹೊರಟು ದೊಡ್ಡ ಸಾಹಸಯಾತ್ರೆಯನ್ನೇ ಮಾಡುತ್ತಾನೆ. ದೇವಲೋಕ ನಾಗಲೋಕಗಳಿಗೆ ಹೋಗಿ ಅವರಿಬ್ಬರನ್ನು ತರುತ್ತಾನೆ. ತಂದ ಮೇಲೆ ನಂಜಯ್ಯ ಚಾಮುಂಡಿಯೊಡನೆ ಇಟ್ಟುಕೊಂಡ ಪ್ರಣಯಸಂಬಂಧ ಅವರಿಗರಿವಾಗುತ್ತದೆ. ಉಪಾಯಾಂತರದಿಂದ ನಂಜಯ್ಯ ಚಾಮುಂಡಿಯನ್ನು ಜೊತೆಗೂಡಿ ಪಾರ್ವತಿ, ದೇವೀರಿಯರ ಮನಸ್ಸನ್ನು ಒಲಿಸಿಕೊಳ್ಳುವ ವಿಶಿಷ್ಟ ತಂತ್ರ ಈ ಕಾವ್ಯದ ಉತ್ತರಾರ್ಧದಲ್ಲಿ ಕಂಡುಬರುತ್ತದೆ. ಅವರ ಪ್ರಣಯ ಚಿರಂತನವಾಗಿ ನಿಲ್ಲುತ್ತದೆ.

ಈ ಕಥಾವಸ್ತುವಿನ ಹಿನ್ನೆಲೆಯಲ್ಲಿ ಬೇರೆ ಬೇರೆಯ ರೂಪಗಳಲ್ಲಿ ನಂಜಯ್ಯನ ಕಥೆ ಜನಪದ ಜೀವನದಲ್ಲಿ ಪ್ರಚಲಿತವಾಗಿದೆ. ಈ ಕಾವ್ಯವಲ್ಲದೆ ಬೇರೆ ಬೇರೆ ಕಾವ್ಯಗಳಲ್ಲೂ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ನಂಜಯ್ಯನ ಪ್ರಸ್ತಾಪ ಪ್ರಾಸಂಗಿಕವಾಗಿ ಬರುತ್ತದೆ. ದಕ್ಷಿಣ ಕರ್ನಾಟಕದ ಎಲ್ಲ ಭಾಗಗಳಲ್ಲೂ ನಂಜಯ್ಯ ಜನಪ್ರಿಯ ದೈವವಾಗಿ ಜನಪದ ಕಾವ್ಯದ ಒಬ್ಬ ವಿಶಿಷ್ಟ ನಾಯಕನಾಗಿ ನಿಲ್ಲುತ್ತಾನೆ.

ಐತಿಹ್ಯಗಳ ಪ್ರಕಾರ ನಂಜಯ್ಯ ಬಹು ದೊಡ್ಡ ವೈದ್ಯ. 'ಒಳರೋಗದ ಗಂಡ', 'ಹಕೀಮ್ ನಂಜುಂಡ' ಮುಂತಾದ ಹೆಸರಿನಲ್ಲಿ ಅವನು ಜನಪ್ರಿಯನಾಗಿದ್ದಾನೆ. ನಂಜಯ್ಯನಿಗೆ ಹರಸಿಕೊಂಡರೆ ಕೆಲರೋಗಗಳು ಗುಣವಾಗುತ್ತವೆ ಎಂದು ಜನ ನಂಬುತ್ತಾರೆ. ನಂಜಯ್ಯ ಟಿಪ್ಪು ಸುಲ್ತಾನನ ಆನೆಯ ರೋಗವನ್ನು ನಿವಾರಿಸಿ ಅವನಿಂದಲೂ ಪೂಜೆಯನ್ನು ಸ್ವೀಕರಿಸಿದ ಎಂಬ ಪ್ರತೀತಿ ಇದೆ.

**ನಂಜಯ್ಯ$^2$ :** ಸು.1750 ಯಕ್ಷಗಾನಕವಿ.ಕಾಶ್ಯಪ ಗೋತ್ರದವನಾದ ಈತ ಮೂಗೂರು ಅರಸುಗಳ ವಂಶಕ್ಕೆ ಸೇರಿದವ. ಈತನ ವಂಶಪರಂಪರೆ ಹೀಗಿದೆ. ಬಾಗಿಲಿ ಕೆಂಪ ಭೂಪಾಲನ ಮಗ ವೇಶಭೂಪತಿ. ಆತನ ಮಗ ಅಹವವಿಜಯ, ಅವನ ಮಗ ಮಹಲಿಂಗರಾಜೇಂದ್ರ. ಆತನ ಮಗನೇ ಕವಿ ನಂಜಯ್ಯ.

ಈತ ಕಪೋತವಾಕ್ಯ ಮತ್ತು ಶಬರಧನಂಜಯವಿಲಾಸಮಂಜರಿ ಎಂಬೆರಡು ಯಕ್ಷಗಾನ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಎರಡನೆಯದು ಅನುಪಲಬ್ಧ. ವಾಲ್ಮೀಕಿ ರಾಮಾಯಣದ ಸುಂದರಕಾಂಡದ ಮೂರನೆಯ ಸಂಧಿಯಲ್ಲಿ ಬರುವ ಸೂರ್ಯಕುಮಾರನಾದ ಸುಗ್ರೀವ ಶ್ರೀರಾಮನ ಬಳಿಗೆ ಬಂದು ತನ್ನ ಆಶ್ರಯ ಪಡೆದಾಗ ಶ್ರೀರಾಮ ಸುಗ್ರೀವನಿಗೆ ಹೇಳುವ ಕಪೋತಕಥೆಯೇ ಕಪೋತವಾಕ್ಯದ ವಸ್ತು. *

**ನಂಜಯ್ಯ$^3$:** ಸು. 1860. ಯಕ್ಷಗಾನ ಕವಿ. ತ್ರಿಪುರದಹನ, ರಾಧಾವಿಲಾಸ, ಸೋಮಶೇಖರ ಚಿತ್ರಶೇಖರ ಕಥೆ ಎಂಬ ಯಕ್ಷಗಾನಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಈತ ದಕ್ಷಿಣ ಕನ್ನಡ ಜಿಲ್ಲೆಯವನು. ಅಳಿಯ ಲಿಂಗರಾಜನ (1823-74) ಆಶ್ರಿತನಾಗಿ ಮೈಸೂರಿನಲ್ಲಿ ನೆಲೆಸಿದ. ಇವನು ತನ್ನ ಗ್ರಂಥಗಳಲ್ಲಿ ಸ್ವಹೆಸರನ್ನು ಹೇಳಿಕೊಂಡಿಲ್ಲ. ಎಲ್ಲವೂ ಮಂಜುನಾಥ ಎಂಬ ಅಂಕಿತದಲ್ಲಿವೆ.

ಈಶ್ವರ ಪಾಶುಪತಾಸ್ತ್ರದಿಂದ ತ್ರಿಪುರಗಳನ್ನು ದಹಿಸಿದ ಕಥೆ ತ್ರಿಪುರದಹನ ಯಕ್ಷಗಾನದ ವಸ್ತು. ಇದರಲ್ಲಿ ಒಟ್ಟು 320 ಪದ್ಯಗಳಿವೆ. ರಾಧಾಕೃಷ್ಣರ ಲೀಲಾವಿನೋದಗಳು ರಾಧಾವಿಲಾಸದ ವಸ್ತು. ಇದರಲ್ಲಿ ಒಟ್ಟು 241 ಪದ್ಯಗಳಿವೆ. ವಜ್ರಮಕುಟರಾಯನ ಪುತ್ರರಾದ ಸೋಮಶೇಖರ ಕತೆ ಸೋಮಶೇಖರ ಚಿತ್ರಶೇಖರ ಯಕ್ಷಗಾನದ ವಸ್ತು. ಈ ಯಕ್ಷಗಾನ ಕೃತಿಗಳಲ್ಲಿ ಕವಿ ವಿವಿಧ ಛಂದಸ್ಸುಗಳನ್ನು ಬಳಸಿದ್ದಾನೆ.

ಇವನು ಮೋಹವಿವೇಕ ಕಾಳಗ, ಹರಿಶ್ಚಂದ್ರೋಪಾಖ್ಯಾನ, ಬಲಿಚಕ್ರವರ್ತಿಯ ಚರಿತೆ, ಸಾರಂಗಧರನ ಕಥೆ, ಚಂದ್ರಹಾಸನ ಕಥೆ ಎಂಬ ಗ್ರಂಥಗಳನ್ನೂ ರಚಿಸಿದಂತೆ ತೋರುತ್ತದೆ. *

**ನಂಜರಾಜ ಒಡೆಯರ್ :** ಮೈಸೂರು ರಾಜವಂಶದ ನಾಮಮಾತ್ರ ರಾಜ (1766-70). ಇಮ್ಮಡಿ ಕೃಷ್ಣರಾಜ 1766ರಲ್ಲಿ ನಿಧನ ಹೊಂದಿದಾಗ ಅವನ ಮಗನಾದ ಈತನನ್ನು, ಹೈದರನ ಅಭಿಪ್ರಾಯಕ್ಕೆ ಅನುಸಾರವಾಗಿ ಪಟ್ಟಕ್ಕೇರಿಸಲಾಯಿತು. 18 ವರ್ಷದ ಯುವಕನಾದ ನಂಜರಾಜ ಹೈದರನ ಹತೋಟಿಯಲ್ಲಿರಲು ಇಷ್ಟಪಡಲಿಲ್ಲ. ಈತನ ಸ್ವತಂತ್ರ ಪ್ರವೃತ್ತಿಯನ್ನು ಅರಿತ ಹೈದರ್ ರಾಜನಿಗೆ ಸಂದಾಯವಾಗುತ್ತಿದ್ದ ಮೂರು ಲಕ್ಷ ವರಹಗಳನ್ನು ನಿಲ್ಲಿಸಿ, ಅರಮನೆಯ ನಗನಾಣ್ಯಗಳನ್ನು ಕಸಿದುಕೊಂಡು ಇವನ ಸ್ವಾತಂತ್ರ್ಯವನ್ನೂ ಮೊಟಕುಮಾಡಿದ. ಸೇಡನ್ನು ತೀರಿಸಿಕೊಳ್ಳುವ ಉದ್ದೇಶದಿಂದ ನಂಜರಾಜ, ಹೈದರ್ ಮಲಬಾರಿನಲ್ಲಿ ತೇಜೋವಧೆ ಹೊಂದಿದ ಸನ್ನಿವೇಶವನ್ನು ಉಪಯೋಗಿಸಿಕೊಂಡು ಅವನ ಅಧಿಕಾರವನ್ನು ಕಿತ್ತೊಗೆಯಲು ಪ್ರಯತ್ನಪಟ್ಟ. ಈ ಗುರಿಯನ್ನು ಸಾಧಿಸುವುದಕ್ಕಾಗಿ ಮೈಸೂರು ರಾಜರೊಡನೆ ಮೈತ್ರಿಯಿಂದಿದ್ದ ಮರಾಠರೊಡನೆ ಸಂಧಾನ ನಡೆಸಿ, ಹೈದರನ ನಿಗ್ರಹಕ್ಕೆ ಸನ್ನದ್ಧನಾದ. ಆದರೆ ಸಹಕಾರಿಯಾಗಲು ಬಂದವರ ಸ್ವಾರ್ಥಸಾಧನೆ ನಂಜರಾಜನ ಉದ್ದೇಶಕ್ಕೆ ಧಕ್ಕೆತಂದಿತು. ಮೈಸೂರಿನ ಮೇಲೆ ದಾಳಿ ನಡೆಸುವ ಯತ್ನದಲ್ಲಿ ಮರಾಠರು ಹೈದರಾಬಾದಿನ ನಿಜಾಮನೊಡನೆ ಸೇರಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಮಾಧವ ರಾಯನ ನೇತೃತ್ವದಲ್ಲಿ ಮರಾಠರು ಮೈಸೂರು ರಾಜ್ಯದಲ್ಲಿ ಕಾಣಿಸಿಕೊಂಡಾಗ, ಹೈದರ್ ಅವರನ್ನು ತಡೆಯಲು ಯತ್ನಿಸಿ ವಿಫಲನಾದ. ಆದರೆ ಅವರೊಡನೆ ಒಪ್ಪಂದವನ್ನು ಮಾಡಿಕೊಂಡ. ಒಪ್ಪಂದಕ್ಕೆ ಅನುಸಾರವಾಗಿ ಹೈದರ್ ಅವರಿಗೆ 35 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಮರಾಠರ ಸಹಾಯಕ್ಕೆ ಬಂದ ನಿಜಾಮನೊಡನೆ ಹೈದರ್ ಸ್ನೇಹಸಂಬಂಧವನ್ನು ಬೆಳೆಸಿಕೊಂಡ. ನಂಜರಾಜನಿಗೆ ಲಾಭವೇನೂ ಆಗಲಿಲ್ಲ. ಹೈದರನ ಕೃಪೆಯಲ್ಲೇ ತನ್ನ ಜೀವಮಾನವನ್ನು ಕಳೆದು 1770ರಲ್ಲಿ ನಿಗೂಢ ಮರಣಕ್ಕೀಡಾದ. (ಕೆ.ಟಿ.ಆರ್.)

**ನಂಜುಂಡ ಕವಿ :** ಸು. 1525. ರಾಮನಾಥಚರಿತ ಎಂಬ ಕಾವ್ಯದ ಕರ್ತೃ. ಈತನ ತಂದೆ ಎರಡನೆಯ ಮಾಧವ. ಜಯನೃಪಾಕಾವ್ಯದ ಕರ್ತೃ ಮೂರನೆಯ ಮಂಗರಸ (ಸು.1508) ಇವನ ದೊಡ್ಡಪ್ಪ, ಚಂಗಾಳ್ವ ದೊರೆ ನಂಜರಾಜನಿಗಾಗಿ (1502-1533) ಯುದ್ಧಮಾಡಿ ಮಡಿದ ಎರಡನೆಯ ವಿಜಯ ಇವನ ಚಿಕ್ಕಪ್ಪ. ವಿಜಯನೃಪಾಲ ಕವಿಯ ತಾತನೆಂದು ತಿಳಿದುಬರುತ್ತದೆ. ಕವಿ ಮೊದಲಿಗೆ ಜೈನನಾಗಿದ್ದು ಅನಂತರ ಶೈವಧರ್ಮೀಯನಾದಂತೆ ತಿಳಿದುಬರುತ್ತದೆ.

ರಾಮನಾಥಚರಿತ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 12 ಆಶ್ವಾಸಗಳೂ 47 ಸಂಧಿಗಳೂ 5807 ಪದ್ಯಗಳೂ ಇವೆ. ಇದಕ್ಕೆ ಕುಮಾರರಾಮನ ಸಾಂಗತ್ಯ ಎಂಬ ಹೆಸರೂ ಇದೆ. ಈ ಕಥೆಯನ್ನು ಕವಿ ತಾನು ರಸದಿಂ ಪುಟ್ಟಿಸಿ ಭಾವದಿಂ ಬಲಿಯಿಸಿ ಪೊಸಬಗೆವೆತ್ತಲಂಕೃತಿಯ ಎಸಕದಿಂ ಬಳೆಯಿಸಿ ಕೃತಿಯೆನಿಸಿದ್ದೇನೆ ಎಂಬುದಾಗಿ ಹೇಳಿಕೊಂಡಿದ್ದಾನೆ.

ಕಥಾವಸ್ತು ಹೀಗಿದೆ: ಶಿವಾಣಿಯ ಪ್ರತಿಜ್ಞೆಕಾರಣವಾಗಿ ಗಂಧರ್ವನಾಗಿದ್ದ ಅರ್ಜುನ ಹೊಸಮಲೆದುರ್ಗದ ದೊರೆಯಾದ ಕಂಪಿಲನ ಪಟ್ಟದರಸಿ ಹರಿಹರದೇವಿಯವರಿಗೆ ಮಗನಾಗಿ ಕುಮಾರರಾಮ ಹುಟ್ಟಿದ. ಊರ್ವಶಿಯು ಕಂಪಿಲನ ಕಿರಿಯ ಮಡದಿ ರತ್ನಾಜಿಯಾಗಿ ಜನಿಸಿದಳು. ಬೆಳೆದು ದೊಡ್ಡವನಾದ ಕುಮಾರರಾಮ ಪರಾಕ್ರಮ ಮೆರೆದು ಹುಳಿಹೇರುಗೌಡ ಮೊದಲಾದವರ ಸೊಕ್ಕಡಗಿಸಿದ. ಡಿಲ್ಲಿಯ ಸುರತಾಳನಿಂದ ತಪ್ಪಿಸಿಕೊಂಡು ಓಡಿಬಂದ ಬಾದುರಖಾನನಿಗೆ ಆಶ್ರಯ ನೀಡಿ ನೇಮಿಖಾನನ ಸೈನ್ಯವನ್ನು ಹಿಮ್ಮೆಟ್ಟಿಸಿದ. ಶೂಲದ ಹಬ್ಬದಲ್ಲಿ ರತ್ನಾಜಿಗೆ ರಾಮನನ್ನು ಕಂಡು ಮೋಹವಂಕುರಿಸಿತು. ಕುಮಾರರಾಮ ಮತ್ತು ಆತನ ಗೆಳೆಯರು ಮುತ್ತಿನ ಚಂಡಾಟವಾಡಬೇಕೆಂದು ಬಯಸಿದ ದಿನ ಕಂಪಿಲರಾಯ ಬೇಟೆಗೆ ಹೋಗಿದ್ದ. ಆಟದಲ್ಲಿ ರತ್ನಾಜಿಯ ಅಂತಃಪುರಕ್ಕೆ ಸಿಡಿದು ಬಿದ್ದ ಮುತ್ತಿನ ಚೆಂಡನ್ನು ತರಹೋದ ರಾಮನು ಕಾಮಾತುರಳಾಗಿ ಮೇಲೆಬಿದ್ದ ರತ್ನಾಜಿಯನ್ನು ಜರಿದು ನಿವಾರಿಸಿ ಅಲ್ಲಿಂದ ಹೇಗೋ ಪಾರಾಗಿ ಬಂದ. ರತ್ನಾಜಿ ಸೇಡಿನಿಂದ ರಾಮನ ಮೇಲೆ ಸಲ್ಲದ ಅಪವಾದ ಹೊರಸಿದಳು. ರತ್ನಾಜಿಯ ಸುಳ್ಳನ್ನು ನಂಬಿದ ಕಂಪಿಲ ರಾಮನನ್ನು ಕೊಲ್ಲಿಸಲು ಆಜ್ಞೆಮಾಡಿದ. ರಾಜನ ದುಡುಕನ್ನು ತಿಳಿದ ಮಂತ್ರಿ ಬೈಚಪ್ಪ ಉಪಾಯದಿಂದ ರಾಮನಿಗೆ ನೆಲಮಾಳಿಗೆಯಲ್ಲಿ ರಕ್ಷೆ ನೀಡಿದ. ರಾಮನ ಮರಣವಾರ್ತೆ ತಿಳಿದ ಡಿಲ್ಲಿಯ ಸುರತಾಳ ಹೊಸಮಲೆದುರ್ಗವನ್ನು ಮುತ್ತಲು ಸೈನ್ಯ ಕಳುಹಿಸಿದ. ಆ ಸಂದರ್ಭದಲ್ಲಿ ದಾಳಿಯಿಟ್ಟ ನೇಮಿಯನ್ನು ರಾಮನೇ ಹಿಂದೋಡಿಸಬೇಕಾಯಿತು. ಪೂರ್ವಜನ್ಮದ ಸೇಡಿಗಾಗಿ ಸುರತಾಳನಲ್ಲಿ ಮಾತಂಗಿಯಾಗಿದ್ದ ಗಾಂಧಾರಿಯ ಎದುರು ಹೋರಾಡುತ್ತ ರಾಮ ಯುದ್ಧರಂಗದಲ್ಲಿ ಮಡಿದ. ರಾಮನ ಪರಾಕ್ರಮವನ್ನು ಕಂಡು ಮೋಹಿಸಿ ಆತನನ್ನು ಮದುವೆಯಾಗಲು ಬಯಸಿದ್ದ ಸುರತಾಳನ ಮಗಳು ರಾಮನ ಮರಣವನ್ನು ತಿಳಿದು ಪ್ರಾಣಬಿಟ್ಟಳು. ರಾಮನ ಮರಣವಾರ್ತೆಯನ್ನು ನಿಜವಾಗಿ ತಿಳಿದ ಕಂಪಿಲರಾಯ ತನ್ನ ಮಗನ ಅಳಿವಿಗಾಗಿ, ತನ್ನ ದುಡುಕಿಗಾಗಿ ಪಶ್ಚಾತ್ತಾಪಪಟ್ಟ. ಹೊಸಮಲೆದುರ್ಗ ಕೊನೆಗೂ ಸುರತಾಳರ ಕೈವಶವಯಿತು.

ರಾಮನಾಥಚರಿತ ಕನ್ನಡದ ಮೊದಲ ಚಾರಿತ್ರಿಕ ಕಾವ್ಯ. ವೀರಕಾವ್ಯ ಎಂಬ ಅಭಿಧಾನಕ್ಕೆ ಪಾತ್ರವಾಗಿದೆ. ರಾಮನಾಥನ ಶುಚಿತ್ವ ವೀರತ್ವಗಳ ಪ್ರಕಾಶನವೇ ಕಾವ್ಯದ ಮುಖ್ಯ ಉದ್ದೇಶ. ಪುರಾಣದ ಅಲೌಕಿಕತೆಯೊಡನೆ ಮಹಾಭಾರತದ ಪ್ರಮುಖ ಘಟನೆಗಳ ವ್ಯಾಜಾಂತರ ಸಂಯೋಜನೆ.

ಸಮಕಾಲೀನ ಜೀವನದ ಸೊಗಸಾದ ಚಿತ್ರಣ. ವಿಷಮದಾಂಪತ್ಯ ದುಷ್ಪರಿಣಾಮ, ಉನ್ಮತ್ತಶೃಂಗಾರದ ಲೋಕಕಂಟಕತ್ವ, ಶುಚಿತ್ವ, ವೀರತೆ ಇಲ್ಲಿ ಚಿತ್ರಿತವಾಗಿವೆ. ಶೈಲಿಯಲ್ಲಿ ದೇಸೀಯ ನಯಗಾರಿಕೆ, ಅರ್ಥಸ್ಫುಟತ್ವ, ಸುಕುಮಾರತೆ ಕಂಡುಬರುತ್ತದೆ. ಶೂಲದ ಹಬ್ಬದ ಪ್ರಸಂಗ, ಮುತ್ತಿನ ಚೆಂಡಾಟದ ಪ್ರಸಂಗ, ರತ್ನಾಜಿಯ ಸೌಂದರ್ಯ, ಆಕೆಯ ವಿರಹಪರಿತಾಪ, ಯುದ್ಧವಿವರಗಳು ಕಾವ್ಯದಲ್ಲಿ ಸುಂದರವಾಗಿ ವರ್ಣಿತವಾಗಿವೆ. ರತ್ನಾಜಿ ಕುಮಾರರಾಮನನ್ನು ಮೋಹಿಸಿ ಆತನಿಂದ ತಿರಸ್ಕೃತಳಾದ ಸಂದರ್ಭ ಈ ಕಾವ್ಯದ ರಸಘಟ್ಟ. ಕವಿಯು ಇಲ್ಲಿ ಹೆಣ್ಣಿನ ಕಾಮಾತುರದ ಹುಚ್ಚು ಹಂಬಲವನ್ನೂ ಇನ್ನೊಂದೆಡೆ ಗಂಡಿನ ವಜ್ರಕಠೋರ ಮನೋದೃಢತೆಯನ್ನೂ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಶೃಂಗಾರದ ವರ್ಣನೆಯಲ್ಲೂ ಕವಿಯು ಕಲಾವಂತಿಕೆ ಅಭಿವ್ಯಕ್ತಗೊಂಡಿದೆ. ಯುದ್ಧವರ್ಣನೆಗಳು ವೀರರಸೋಪೇತವಾಗಿವೆ. ಪಾತ್ರ ಚಿತ್ರಣಗಳಲ್ಲಿಯೂ ಕವಿಯು ಸಿದ್ಧಹಸ್ತನೆನಿಸಿದ್ದು ಕುಮಾರರಾಮ, ರತ್ನಾಜಿ, ಕಂಪಿಲರಾಯ, ಕಾಟಣ್ಣ, ಬೈಚಪ್ಪ, ಸಂಗಿ ಮೊದಲಾದ ಪಾತ್ರಗಳು ಜೀವಂತವಾಗಿ ಮೂಡಿಬಂದಿವೆ. ಸಾಂಗತ್ಯ ಗ್ರಂಥಗಳಲ್ಲಿ ರತ್ನಾಕರವರ್ಣಿಯ ಭರತೇಶವೈಭವನ್ನು ಬಿಟ್ಟರೆ ರಾಮನಾಥಚರಿತ ಕಾವ್ಯದೃಷ್ಟಿಯಿಂದ ಅದಕ್ಕೆ ಹೆಗಲೆಣೆಯಾಗಿ ನಿಲ್ಲುವ ಸತ್ವವನ್ನು ಒಳಗೊಂಡಿದೆ. (ಕೆ.ಎಸ್‌ಐ.ಐ.)

**ನಂಜುಂಡಯ್ಯ, ಎಚ್.ವಿ. :** 1860-1920. ಕರ್ನಾಟಕದ ಏಕೀಕರಣಕ್ಕಾಗಿ, ಕನ್ನಡನಾಡುನುಡಿಗಳ ಏಳಿಗೆಗಾಗಿ ದುಡಿದ ಹಿರಿಯ ವಿದ್ವಾಂಸರು. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಅಧ್ಯಕ್ಷರೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿಗಳೂ ಆಗಿದ್ದವರು. ಹೆಬ್ಬಳಲು ವೇಳ್ಪನೂರು ನಂಜುಂಡಯ್ಯ ಎಂಬುದು ಇವರ ಪೂರ್ಣ ಹೆಸರು. ಇವರ ಪೂರ್ವಜರು ಹಿಂದೆ ಆಂಧ್ರದಿಂದ ಮೈಸೂರಿಗೆ ಬಂದವರು. ನಂಜುಂಡಯ್ಯನವರು 1860 ಅಕ್ಟೋಬರ್ 13ರಂದು ಬಡ ಕುಟುಂಬದಲ್ಲಿ ಜನಿಸಿದರು. ಮೊದಲಿಗೆ ಮೈಸೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ, ಅನಂತರ ಮದರಾಸಿನ ಕ್ರಿಶ್ಚನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದರು (1880). ಕೆಲಕಾಲ ಕೊಳ್ಳೇಗಾಲದಲ್ಲಿ ಸಬ್‌ರಿಜಿಸ್ಟ್ರಾರ್ ಆಗಿದ್ದು, ಅನಂತರ ಮದರಾಸಿನಲ್ಲಿ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಗುಮಾಸ್ತರಾದರು. ನೌಕರಿಯಲ್ಲಿದ್ದುಕೊಂಡೇ ಖಾಸಗಿಯಾಗಿ ಬಿ.ಎಲ್. ಪದವಿಯನ್ನೂ (1883) ಎಂ.ಎ. ಪದವಿಯನ್ನೂ (1885) ಪಡೆದರು. ಅನಂತರ ಮೈಸೂರು ಸರ್ಕಾರದಲ್ಲಿ ಉದ್ಯೋಗಕ್ಕೆ ಸೇರಿ (1885) ನಂಜನಗೂಡಿನಲ್ಲಿ ಮುನ್ಸಿಫರಾದರು. ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮಿಶನರಾಗಿ (1886) ಹಾಸನ, ಮೈಸೂರು, ಶಿವಮೊಗ್ಗಗಳಲ್ಲಿ ಸೇವೆಸಲ್ಲಿಸಿದಮೇಲೆ ನ್ಯಾಯಾಂಗ ವಿಭಾಗಕ್ಕೆ ಹಿಂದಿರುಗಿ ಬಂದು ಸಬ್ ಜಡ್ಜಿಯಾದರು (1892). ಅನಂತರ ನ್ಯಾಯಶಾಸ್ತ್ರದಲ್ಲಿ ವ್ಯಾಸಂಗ ಮುಂದುವರಿಸಿ ಎಂ.ಎಲ್. ಡಿಗ್ರಿ ಪಡೆದರು (1893). 1895ರಲ್ಲಿ ಮದರಾಸು ವಿಶ್ವವಿದ್ಯಾನಿಲಯದ 'ಫೆಲೋ' ಆಗಿಯೂ ಇದೇ ಸುಮಾರಿನಲ್ಲಿ ಮೈಸೂರು ಸರ್ಕಾರದ ಅಂಡರ್ -ಸೆಕ್ರೆಟರಿಯಾಗಿಯೂ ನೇಮಕಗೊಂಡರು. 1897ರಲ್ಲಿ ಶಿವಮೊಗ್ಗದಲ್ಲಿ ಡೆಪ್ಯುಟಿ ಕಮಿಷನರಾಗಿದ್ದರು. ದಿವಾನ್ ಪಿ.ಎನ್. ಕೃಷ್ಣಮೂರ್ತಿಯವರ ಕಾಲದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದು (1901), ಮೈಸೂರು ಸರ್ಕಾರದ ನ್ಯಾಯಶಾಖೆಯ ಚೀಫ್ ಕೋರ್ಟಿನ ನ್ಯಾಯಾಧೀಶರಾದರು (1904). ಅನಂತರ ಮುಖ್ಯ ನ್ಯಾಯಾಧೀಶರಾಗಿ ಸೇವೆಸಲ್ಲಿಸಿ 1916ರಲ್ಲಿ ನಿವೃತ್ತರಾದರು. ಮೈಸೂರು ವಿಶ್ವವಿದ್ಯಾನಿಲಯ ಜನ್ಮತಾಳಲು ಕಾರಣಕರ್ತರಲ್ಲೊಬ್ಬರಾಗಿದ್ದ ಇವರು ಅದರ ಮೊದಲನೆಯ ಉಪ ಕುಲಪತಿಯಾಗಿ 1916-20ರ ವರೆಗೆ ಸೇವೆ ಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಸಂವರ್ಧನೆಗೆ ಹೋರಾಡಿದ ಮಹನೀಯರಲ್ಲಿ ಪ್ರಮುಖರಾಗಿದ್ದು 1915-19ರ ವರೆಗೆ ಅದರ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು.

ಕಾರುಣ್ಯ, ಸೌಮ್ಯತ್ವ ಹಾಗೂ ಹಾಸ್ಯವಿಲಾಸ ಇವರ ವ್ಯಕ್ತಿತ್ವದ ಮುಖ್ಯ ಪದರುಗಳು. ಎಂ.ವಿಶ್ವೇಶ್ವರಯ್ಯನರು ಇವರ ಆಪ್ತಸ್ನೇಹಿತರಾಗಿದ್ದರು. ನ್ಯಾಯಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳನ್ನೂ ಕಾವ್ಯನಾಟಕಾದಿ ಸಾಹಿತ್ಯ ಪ್ರಕಾರಗಳನ್ನೂ ಆಳವಾಗಿ ಅಭ್ಯಾಸ ಮಾಡಿದ್ದ ಇವರಿಗೆ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲದೆ ಫ್ರೆಂಚ್ ಭಾಷೆಯಲ್ಲೂ ಹೆಚ್ಚಿನ ಪರಿಶ್ರಮವಿತ್ತು. ಇವರು ತಮ್ಮ ಪುತ್ರನನ್ನು ಕಳೆದುಕೊಂಡ ಸಮಯದಲ್ಲಿ ಫ್ರೆಂಚ್ ಮಹಾಕವಿ ವಿಕ್ಟರ್ ಹ್ಯೂಗೋನ ಕೆಲವು ಕವನಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ, ಆ ಸಂಕಲನಕ್ಕೆ 'ರಾತ್ರಿಯಲ್ಲಿ ಕಂಬನಿ' ಎಂದು ಹೆಸರಿಟ್ಟರು. ಕನ್ನಡದಲ್ಲಿ ಗ್ರಂಥರಚನೆಯನ್ನು ಕೈಗೊಂಡು, ಮಾದರಿಯ ಪತ್ರವ್ಯವಹಾರಕುರಿತು ಲೇಖ್ಯಬೋಧಿನಿ, ನ್ಯಾಯಶಾಸ್ತ್ರ ಪರಿಪಾಲನೆ ಕುರಿತು ವ್ಯವಹಾರದೀಪಿಕೆ, ಆರ್ಥಿಕ ವಿಚಾರ ಪರಿಚಯವನ್ನೊಳಗೊಂಡಂತೆ ಅರ್ಥಶಾಸ್ತ್ರ ಎಂಬ ಮೂರು ಅಮೂಲ್ಯ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಆ ವಿಷಯಗಳ ಬಗ್ಗೆ ನಡೆದ ಗ್ರಂಥ ರಚನೆಯ ಪ್ರಯತ್ನಗಳಲ್ಲಿ ಸಂಸ್ಥಾನದ ಮೈಸೂರು ರಾಜ್ಯ ವಿವಿಧ ಜಾತಿಕುಲಗಳ ವಿವರ ಪರಿಚಯವುಳ್ಳ ಮೈಸೂರ್ ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್ ಎಂಬ ಸಂಪುಟಗಳಿಗೆ ಇವರು ಸಂಪಾದಕರಾಗಿದ್ದರು.

ನಂಜುಂಡಯ್ಯನವರು ಪ್ರತಿಭಾ ಪಕ್ಷಪಾತಿಗಳಾಗಿದ್ದರು. ಇವರ ಕಾರ್ಯನಿಷ್ಠೆ, ಸ್ನೇಹಪರ ಮನಸ್ಸು, ರಸಿಕತೆ ಹಾಗೂ ಮಾತಿನ ನಿರಾಡಂಬರತೆಗಳು ಎಲ್ಲರಿಗೂ ಮೆಚ್ಚುಗೆಯಾಗಿದ್ದುವು. ಇವರು ಬೆಂಗಳೂರು (1915, 1916) ಮತ್ತು ಮೈಸೂರು (1917) ಗಳಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಮೂರು ಅಧಿವೇಶನಗಳ ಅಧ್ಯಕ್ಷರಾಗಿದ್ದರು. ಕನ್ನಡದ ಅಂದಿನ ಇತಿಮಿತಿ, ಕನ್ನಡದಲ್ಲಿ ಆಗ ಬೇಕಾದ ಕೆಲಸದ ಆಧಿಕ್ಯ. ಗ್ರಾಂಥಿಕ ಭಾಷೆಯ ಏಕರೂಪತೆ ಮೊದಲಾದ ಗಮನೀಯ ವಿಚಾರಗಳು ಇವರ ಮೊದಲನೆಯ ಅಧ್ಯಕ್ಷಭಾಷಣದಲ್ಲೇ ವ್ಯಕ್ತವಾಗಿವೆ. ಇವರಿಗೆ ಮೈಸೂರು ಮಹಾರಾಜರು 1913ರಲ್ಲಿ ರಾಜಮಂತ್ರಪ್ರವೀಣ ಎಂಬ ಬಿರುದನ್ನು ನೀಡಿ ಗೌರವಿಸಿದರು. 1914ರಲ್ಲಿ ಬ್ರಿಟಿಷ್ ಸರ್ಕಾರ ಸಿ.ಐ.ಇ. ಎಂಬ ಪದವಿಯನ್ನಿತ್ತು ಗೌರವಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಕುರಿತು ಜೀವನ ಚರಿತ್ರೆಯೊಂದನ್ನು ಪ್ರಕಟಿಸಿದೆ. ಇವರು 1920 ಮೇ 2 ರಂದು ನಿಧನಹೊಂದಿದರು.

(ಜಿ.ಜಿ.)

**ನಂಜುಂಡರಾವ್, ಎಂ.ಎಸ್. :** 1932 - 2003. ಹೆಸರಾಂತ ಕಲಾವಿದ, ಲೇಖಕ, ಸಂಘಟಕ, ಕರ್ನಾಟಕ ಚಿತ್ರಕಲಾ ಪರಿಷತ್ತಿನ (ನೋಡಿ) ರೂವಾರಿ, ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಸುದ್ದೇಕುಂಟೆಯಲ್ಲಿ 1932 ಜುಲೈ 5 ರಂದು ಜನಿಸಿದರು. ತಂದೆ ಎಂ. ಎಸ್. ದಾಸಪ್ಪ, ತಾಯಿ ಗೌರಮ್ಮ. ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಇವರ ತಂದೆ ರಂಗಕರ್ಮಿಗಳೂ ಸಾಹಿತ್ಯ ಕಲಾ ಪೋಷಕರೂ ಆಗಿದ್ದರು. ನಂಜುಂಡರಾವ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸಿದ್ದಾಪುರದಲ್ಲೂ ಮಾಧ್ಯಮಿಕ ಶಿಕ್ಷಣವನ್ನು ಕೊಡಗೇನ ಹಳ್ಳಿಯಲ್ಲೂ ಪ್ರೌಢಶಾಲಾ ಶಿಕ್ಷಣವನ್ನು ಬೆಂಗಳೂರು ಮತ್ತು ಮಧುಗಿರಿಯಲ್ಲೂ ಮುಗಿಸಿದರು. ಎಸ್.ಎಸ್.ಎಲ್.ಸಿ. ಪಾಸಾದದ್ದು 1948ರಲ್ಲಿ ತಂದೆಯಿಂದ ಪ್ರಭಾವಿತರಾಗಿ ಬಾಲ್ಯದಲ್ಲಿಯೇ ಖಾದಿ ತೊಟ್ಟು ದೇಶಭಕ್ತಿಯನ್ನು ಬೆಳೆಯಿಸಿಕೊಂಡರು. ತಂದೆಯೊಂದಿಗೆ ಹಳ್ಳಿಗಳಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಇವರು ಗ್ರಾಮೀಣ ಜನರ ಕಲೆ, ಜನಜೀವನ ಸಂಸ್ಕೃತಿಗಳನ್ನು ಅರಿತರು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಮೈಸೂರು ಮಹಾರಾಜರು ಭಾರತ ಒಕ್ಕೂಟಕ್ಕೆ ಸೇರಿಕೊಳ್ಳಲು ಒಪ್ಪದಿದ್ದಾಗ ಮೈಸೂರು ಚಲೋ ಚಳವಳಿ ಆರಂಭವಾಯಿತು. ಆಗ ಇವರು ಮಧುಗಿರಿ ತಾಲ್ಲೂಕಿನ ಹಳ್ಳಿಹಳ್ಳಿಗೂ ಹೋಗಿ ಜನರನ್ನು ಸಂಘಟಿಸಿದರು. ಮಧುಗಿರಿ ತಾಲ್ಲೂಕು ಕಚೇರಿ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಪೋಲೀಸರಿಗೂ ಚಳವಳಿಗಾರರಿಗೂ ಘರ್ಷಣೆ ಉಂಟಾಗಿ ಇವರ ಮೇಲೆ ವಾರಂಟ್ ಹೊರಡಿಸಿದಾಗ ಇವರು ಆಂಧ್ರದ ಗಡಿಯಲ್ಲಿದ್ದ ಸೇವಾಮಂದಿರ ಸೇರಿಕೊಂಡರು.

ಇವರಿಗೆ ಬಾಲ್ಯದಿಂದಲೂ ಚಿತ್ರಕಲೆಯಲ್ಲಿದ್ದ ಆಸಕ್ತಿಯನ್ನು ಗಮನಿಸಿದ ಇವರ ಅಧ್ಯಾಪಕರಾಗಿದ್ದ ಎಸ್. ರಾಮಯ್ಯನವರ ಸಲಹೆ

ಮತ್ತು ತಂದೆಯ ಅನುಮತಿಯಿಂದ ಕಲಾಶಿಕ್ಷಣಕ್ಕಾಗಿ ಮೈಸೂರಿನ ಶ್ರೀ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಶಾಲೆ ಸೇರಿ ತರಬೇತಿ ಪಡೆದರು (1948 - 52). ತಮ್ಮಲ್ಲಿದ್ದ ಪ್ರತಿಭೆಯಿಂದ ಜನಸಂಪರ್ಕ ಬೆಳೆಯಿಸಿಕೊಂಡ ಇವರು ಚಿತ್ರರಚನೆಯನ್ನು ಜೀವನಾಧಾರ ಮಾಡಿಕೊಂಡರು. ಪ್ರಕೃತಿ ಚಿತ್ರ, ರೇಖಾಚಿತ್ರ, ವ್ಯಕ್ತಿ ಚಿತ್ರಗಳನ್ನು ರಚಿಸಿದರು. ಇವರು ರಚಿಸಿದ ವ್ಯಕ್ತಿಚಿತ್ರಗಳಲ್ಲಿ ಮಹಾತ್ಮಾಗಾಂಧಿ, ಎಸ್.ಎಸ್. ಹರ್ಡೇಕರ್, ವಲ್ಲಭಭಾಯಿ ಪಟೇಲ್ ಮುಖ್ಯವಾದವು. ಮಡಿಕೇರಿಯ ನಿಸರ್ಗ ದೃಶ್ಯಗಳು, ತಲಕಾವೇರಿ, ತಲಕಾಡು, ಶೃಂಗೇರಿ, ನಂದಿಬೆಟ್ಟ, ಐಹೊಳೆ, ಬೇಲೂರು, ಹಳೇಬಿಡು ಮೊದಲಾದ ರಮ್ಯ ಐತಿಹಾಸಿಕ ತಾಣಗಳನ್ನು ತಮ್ಮ ಕುಂಚದಿಂದ ಸೆರೆ ಹಿಡಿದರು. ಇವರು ರಚಿಸಿದ ಚಿತ್ರಗಳು ಬೆಂಗಳೂರಿನ ವೆಂಕಟಪ್ಪ ಕಲಾ ಗ್ಯಾಲರಿ, ವಿಧಾನಸೌಧ, ದೆಹಲಿ ಹಾಗೂ ಹಲವು ದೇಶಗಳ ಕಲಾ ಗ್ಯಾಲರಿಗಳಲ್ಲಿ ಸ್ಥಾನಪಡೆದಿದೆ.

ಇವರು 1954 ರಲ್ಲಿ ಬೆಂಗಳೂರಿಗೆ ಬಂದು ಶಿವಾನಂದಶರ್ಮರು ಸ್ಥಾಪಿಸಿದ ರಾಷ್ಟ್ರೀಯವಿದ್ಯಾಲಯದಲ್ಲಿ ಕೆಲವು ಕಾಲ ಉಳಿದುಕೊಂಡಿದ್ದರು. ಅನಂತರ ಖಾದಿ ಮಂಡಳಿಯಲ್ಲಿ ಕಲಾವಿದರಾಗಿ ಕೆಲಸ ಮಾಡಿದರು. ಆಗಿನ ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ವಿಧಾನಸೌದ ಅಲಂಕರಣ ಸಮಿತಿಯಲ್ಲಿ ನಂಜುಂಡರಾಯರನ್ನು ಒಬ್ಬ ಸದಸ್ಯರನ್ನಾಗಿ ನೇಮಿಸಿದರು. ಆಗ ಇವರು ತಮ್ಮ ಕೆಲಸದಲ್ಲಿ ಆಸಕ್ತಿ, ಪ್ರತಿಭೆ, ಪರಿಶ್ರಮಗಳನ್ನು ತೋರಿ ಮುಖ್ಯ ಮಂತ್ರಿಗಳ ಪ್ರಶಂಸೆಗೆ ಪಾತ್ರರಾದರು. ಭಾರತ ಸರ್ಕಾರದ ಪಂಚವಾರ್ಷಿಕ ಯೋಜನೆಗಳ ಪ್ರಚಾರ ಮಳಿಗೆಗಳ ಅಲಂಕರಣ, ಸುಭಾಷನಗರದಲ್ಲಿ ಜರುಗಿದ ಕಾಂಗ್ರೆಸ್ ವಸ್ತುಪ್ರದರ್ಶನದ ದ್ವಾರಗಳ ರಚನೆ, ಬೆಂಗಳೂರಿನ ಸದಾಶಿವನಗರದಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದ (1960) ಮುಖ್ಯ ಪ್ರವೇಶದ್ವಾರ ಮತ್ತು ವೇದಿಕೆಯ ಅಲಂಕರಣ ಮಾಡಿ ಜನ ಮೆಚ್ಚುಗೆ ಪಡೆದರು. ಕೆಂಗಲ್ ಹನುಮಂತಯ್ಯನವರ ಪ್ರೇರಣೆಯಿಂದ ಎಂ. ಆರ್ಯಮೂರ್ತಿ, ಎಸ್.ಎಸ್. ಕುಕ್ಕೆ ಮೊದಲಾದವರೊಂದಿಗೆ ಸೇರಿಕೊಂಡು ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ (1960), ಅದರ ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಈ ವೇಳೆಗೆ ಬಾಲಾಂಬ ಎಂಬ ಕಲಾಪ್ರೇಮಿಯೊಂದಿಗೆ ಇವರ ವಿವಾಹವಾಗಿತ್ತು (1956). 1964 ರಿಂದ ಚಿತ್ರಕಲಾ ವಿದ್ಯಾಲಯದ ಅಧ್ಯಾಪಕರಾಗಿ ಅನೇಕ ತರುಣರನ್ನು ಚಿತ್ರಕಲೆಯತ್ತ ಸೆಳೆದುಕೊಂಡರು. ಅದೇ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಸೇವೆ ಸಲ್ಲಿಸಿದರು (1966 - 72).

ಈ ಸಂದರ್ಭದಲ್ಲಿ ಕರ್ನಾಟಕದ ತರುಣ ಕಲಾವಿದರನ್ನು ಪ್ರೋತ್ಸಾಹಿಸಿದರಲ್ಲದೆ ಕಲಾಶಿಕ್ಷಣದ ಜೊತೆಗೆ ಜನಸಾಮಾನ್ಯರಲ್ಲಿ ಕಲಾಭಿರುಚಿಯನ್ನು ಬೆಳೆಸುವುದು, ಸಾಂಪ್ರದಾಯಿಕ ಚಿತ್ರಕಲೆಯನ್ನು ಪುನರುಜ್ಜೀವಿಸುವುದು, ಕಲಾವಿದರನ್ನು ಸಂಘಟಿಸುವುದು, ಭಾರತೀಯ ಚಿತ್ರಕಲೆಯನ್ನು ವಿಶೇಷವಾಗಿ ಕರ್ನಾಟಕದ ಚಿತ್ರಕಲೆ ಮತ್ತು ಕಲಾವಿದರನ್ನು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸುವುದು, ಕಲಾ ಸಂಸ್ಥೆಗಾಗಿ ಕಲಾಭವನ ನಿರ್ಮಾಣ, ಕಲಾ ಗ್ಯಾಲರಿಗಳ ಸ್ಥಾಪನೆ, ಚಿತ್ರಕಲೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವುದು ಇವರ ಧ್ಯೇಯವಾಗಿತ್ತು. ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಇವರು ಅಖಿಲ ಭಾರತ ಕಲಾ ಪ್ರದರ್ಶನವನ್ನು ಮೊದಲ ಬಾರಿಗೆ ಏರ್ಪಡಿಸಿದ್ದರು (1963). ಅನಂತರ ಪ್ರತಿವರ್ಷಕ್ಕೊಂದರಂತೆ ಒಂಬತ್ತು 'ಇಂಡ' ಪ್ರದರ್ಶನಗಳು ನಡೆದುವು. ಇದರಿಂದ ಅಖಿಲ ಭಾರತ ಮಟ್ಟದ ಕಲಾವಿದರು ಒಂದೆಡೆ ಸೇರಿ ವಿಚಾರ ವಿನಿಮಯ ಮಾಡಲು, ಕಲಾಪ್ರದರ್ಶನ ನಡೆಸಲು ಅವಕಾಶವಾಯಿತು. ಚಿತ್ರಕಲಾ ಪರಿಷತ್ ಟ್ರಸ್ಟ್ ರೂಪುಗೊಂಡಿದ್ದು 1974 ರಲ್ಲಿ.

ಕಲಾವಿಮರ್ಶಕ ಜಿ. ವೆಂಕಟಾಚಲಂ ಅವರ ಪ್ರೇರಣೆಯಿಂದ ಮೈಸೂರು ಸಾಂಪ್ರದಾಯಿಕ ಚಿತ್ರಗಳನ್ನು ಸಂಗ್ರಹಿಸುವ ಕಾರ್ಯವನ್ನು ಕೈಕೊಂಡರು. ಪರಿಣಿತರನ್ನು ಕರೆಯಿಸಿ ಅವರಿಂದ ಸಾಂಪ್ರದಾಯಿಕ ಕಲೆ ಕಲಿಸುವ ಏರ್ಪಾಡು ಮಾಡಿದರು. ಮುಂಬಯಿ, ದೆಹಲಿಗಳಲ್ಲಿ ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿದರು. ಭಾರತದ ಬೇರೆ ಬೇರೆ ಕೇಂದ್ರಗಳಲ್ಲಿ ತೊಗಲುಬೊಂಬೆ ಪ್ರದರ್ಶನ ಏರ್ಪಡಿಸಿದ್ದಲ್ಲದೆ, ಕಲಾವಿದರನ್ನು ಜನಪದ ಉತ್ಸವಗಳಿಗೆ ಕರೆದೊಯ್ದು ಪರಿಚಯಿಸಿದರು.

ಚಿತ್ರಕಲೆಯ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲೂ ಇವರು ಕೆಲಸ ಮಾಡಿದ್ದಾರೆ. ತೊಗಲುಬೊಂಬೆ ಹಾಗೂ ಮೈಸೂರು ಸಾಂಪ್ರದಾಯಿಕ ಚಿತ್ರ ಕಲೆಯ ಬಗ್ಗೆ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಇವರು ಬರೆದ ಕೃತಿಗಳಲ್ಲಿ ನಿಕೋಲಸ್ ರೋರಿಚ್, ಪಿ. ಸುಬ್ಬರಾವ್, ಕರ್ನಾಟಕ ತೊಗಲುಗೊಂಬೆ ಎಂಬ ಬೃಹತ್ ಗ್ರಂಥ - ಇವು ಪ್ರಮುಖವಾಗಿವೆ. ಕಲೆಯ ಅಧ್ಯಯನಕ್ಕಾಗಿ ಇವರು ಜರ್ಮನಿ, ಅಮೆರಿಕ, ರಷ್ಯ ದೇಶಗಳ ಅನೇಕ ಪ್ರಮುಖ ನಗರಗಳನ್ನು ಸಂದರ್ಶಿಸಿದರು. ಮಾಸ್ಕೋದಲ್ಲಿ ಅಂತಾರಾಷ್ಟ್ರೀಯ ರೋರಿಕ್ ಪುರಸ್ಕಾರ ಪಡೆದರು (1999).

ಕರ್ನಾಟಕ ಲಲಿತ ಕಲಾ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಕಲೆ ಮತ್ತು ಕರಕುಶಲ ಶಿಕ್ಷಣ ಸಲಹಾ ಸಮಿತಿಯ ಸದಸ್ಯರಾಗಿ, ಬೆಂಗಳೂರು ವಿಶ್ವವಿದ್ಯಾಲದ ಲಲಿತ ಕಲಾ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ, ಗುಲ್ಬರ್ಗ ವಿಶ್ವವಿದ್ಯಾಲಯದ ಲಲಿತ ಕಲಾ ಅಧ್ಯಯನ ಮಂಡಳಿಯ ಸದಸ್ಯರಾಗಿ ಸೇವೆಸಲ್ಲಿಸಿದರು. ಕೇಂದ್ರ ಲಲಿತಕಲಾ ಅಕಾಡೆಮಿಯ ಕರ್ನಾಟಕದ ಪ್ರತಿನಿಧಿಯಾಗಿದ್ದರು (1975). ಇವರಿಗೆ ಹಲವು ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1980) ರಾಜ್ಯೋತ್ಸವ ಪ್ರಶಸ್ತಿ (1984) ಇವು ಉಲ್ಲೇಖನೀಯ.

ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ವಿಶ್ವವಿದ್ಯಾಲಯದ ಮಾನ್ಯತೆ, ಜನಪ್ರಿಯತೆ, ಅಂತಾರಾಷ್ಟ್ರೀಯ ಕೀರ್ತಿ ತಂದುಕೊಟ್ಟ ಇವರು 2003 ಮೇ 2 ರಂದು ಬೆಂಗಳೂರಿನಲ್ಲಿ ನಿಧನರಾದರು. (ಎಸ್.ಎಂ.ಕೆ.)

**ನಂಜುಂಡ ಶಿವಯೋಗಿ :** ಒಬ್ಬ ಶಿವಯೋಗಿ. ತುಮಕೂರು ಸಮೀಪದ ಈತ ಹುಟ್ಟಿದ ಸ್ಥಳ. ಈತನ ಬಾಲ್ಯಜೀವನದ ವಿವರಗಳು ತಿಳಿದಿಲ್ಲ. ಮಡದಿ, ಮೂವರು ನಾಲ್ವರು ಮಕ್ಕಳಿಂದ ತುಂಬಿದ ಈತನ ಗೃಹಸ್ಥ ಜೀವನ ಆ ಊರಿನ ಕೂಲಿ ಮಠವೊಂದನ್ನು ಆಶ್ರಯಿಸಿತ್ತು. ಹಳ್ಳಿಯ ಮಕ್ಕಳಿಗೆ ತಕ್ಕಷ್ಟು ಓದುಬರೆಹ ಕಲಿಸಿದ ತರುವಾಯ ಅವರಿಗೆ ಶರಣಲಿ, ಲಾವ್ಯುತ, ಸೋಮೇಶ್ವರ ಶತಕ, ಸರ್ವಜ್ಞನ ವಚನಗಳು. ಚನ್ನಬಸವಪುರಾಣ, ಜೈಮಿನಿ ಭಾರತ ಮತ್ತು ರಾಜಶೇಖರವಿಳಾಸದಂಥ ಕನ್ನಡ ಪ್ರೌಢ ಗ್ರಂಥ'ಗಳನ್ನು ಗಮಕ ಗತಿಯಿಂದ ಓದಿ ಅರ್ಥೈಸುವ ಸಾಮರ್ಥ್ಯವನ್ನು ಉಂಟುಮಾಡಿಕೊಡುವುದು ಈತನ ಕೂಲಿಮಠದ ಹೆಗ್ಗುರಿಯಾಗಿತ್ತು.

ಶಿವಪೂಜಾನಿಷ್ಠನಾದ ಈತ ಮೊದಲಿನಿಂದಲೂ ವೈರಾಗ್ಯದ ಕಡೆಗೆ ಗಮನ ಹರಿಸಿದ್ದ. ಮಧ್ಯವಯಸ್ಸಿನಲ್ಲಿ ಒದಗಿದ ಪತ್ನೀವಿಯೋಗ ಈತನ ವಿರಕ್ತಿಗೆ ಪುಟ ಕೊಟ್ಟಿತು. ತರುವಾಯ ಈತ ಸತ್ಸಂಗವನ್ನು ಬಯಸಿ ಸಿದ್ಧಗಂಗಾ ಕ್ಷೇತ್ರಕ್ಕೆ ಆಗಮಿಸಿದ. ಅಲ್ಲಿ ಶ್ರೀ ಆಟಮಿಂದ ಶಿವಯೋಗಿಗಳ ಸನ್ನಿಧಿ ಸೇರಿ ಅವರ ಅನುಗ್ರಹಕ್ಕೆ ಪಾತ್ರನಾದ. ಆಟವೀಂದ್ರ ಶಿವಯೋಗಿ ಲಿಂಗೈಕ್ಯದ ಅನಂತರ ಈತ ಮತ್ತೆ ತುಮಕೂರಿಗೆ ಹಿಂದಿರುಗಿ ಶಿವಾಲಯವೊಂದರಲ್ಲಿ ಸೇರಿದ. ಈತನ ಸಮಾಧಿ ತುಮಕೂರು ಹತ್ತಿರದ ಉಸ್ಕೂರಿನಲ್ಲಿದೆ.

ಈತನ ಪಾಂಡಿತ್ಯ, ಮಧುರಕಂಠಶ್ರೀ, ಚಿತ್ರಕಲಾಪ್ರಿಯತೆಗಳು ಈತ ರಚಿಸಿರುವ ಕೃತಿಗಳಿಂದ ವೇದ್ಯವಾಗುತ್ತವೆ. ಈತನ ಗ್ರಂಥ'ಗಳಲ್ಲಿ ಮಾರ್ಕಂಡೇಯ ವಿಳಾಸ. ಶ್ರೀಮದಟವೀಶ್ವರ ಗುರುಭಕ್ತಿಸಾರ, ಜಟವೀಶ್ವರ ಗೀತಾಮಂಜರಿ, ಸುರಾಭಾಂಡೇಶ್ವರಾಖ್ಯಾನ, ಹಾಲಾಹಲಭಕ್ಷಣೆಯ ಕಥೆಗಳು ದೊರೆಯುತ್ತವೆ. ಇವರ ಚಿತ್ರಗಳಲ್ಲಿ ಸರ್ವಸಿದ್ಧಿಗಣಪತಿ, ಚಂದ್ರಶೇಖರಮೂರ್ತಿ, ಗಿರಿಜಾಕಲ್ಯಾಣ ಮಹೋತ್ಸವ, ಉಮಾಮಹೇಶ್ವರಮೂರ್ತಿ ನಂದಿವಾಹನಮೂರ್ತಿ, ಅಂಧಕಾಸುರ ಸಂಹಾರ ಮತ್ತು ಜೀವನ್ಮುಕ್ತಿವಿವೇಕಗಳು ಮುಖ್ಯವಾದವು. (ಎಂ.ಜಿ.ಎಸ್.)

**ನಂಜುಂಡ ಸ್ವಾಮಿ, ಎಸ್. :** 1906-1969.ಕರ್ನಾಟಕದ ವಿಖ್ಯಾತ ವರ್ಣಚಿತ್ರಕಾರರು ಹಾಗೂ ಶಿಲ್ಪಿಗಳಲ್ಲಿ ಅಗ್ರಗಣ್ಯರು. ಇವರು ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳ ಅಣ್ಣಂದಿರಾದ ಶಿಲ್ಪಸಿದ್ಧಾಂತಿ ವಿರತ್ತಸ್ವಾಮಿಗಳ ಮಕ್ಕಳು. ಇವರ ಮೂಲ ಸ್ಥಳ ಕೊಳ್ಳೇಗಾಲ, ತಾಯಿಯ ತೌರೂರಾದ ಯಳಂದೂರು ತಾಲ್ಲೂಕು ಯರಗಂಬಳ್ಳಿಯಲ್ಲಿ 1906 ಮಾರ್ಚ್ 3ರಂದು ಜನಿಸಿದರು. ಸ್ಥಳ ಕೊಳ್ಳೇಗಾಲ. ತಾಯಿಯ ತೌರೂರಾದ ಯಳಂದೂರು ತಾಲ್ಲೂಕು ಯರಗಂಬಳ್ಳಿಯಲ್ಲಿ ವಂಶಪಾರಂಪರ್ಯವಾಗಿ ಬಂದ ಶಿಲ್ಪಕಲೆಯ ಸಂಪ್ರದಾಯ ಇವರಲ್ಲೂ ನೆಲಸಿ, ಚಿತ್ರಕಲೆಗೆ ಶಾಸ್ತ್ರೀಯ ಅಡಿಪಾಯವನ್ನು ಹಾಕಿಕೊಟ್ಟಿತ್ತು. ಇವರು ಚಿಕ್ಕಂದಿನಿಂದ ಬಡತನದಲ್ಲಿ ಬದುಕಿ ಅಪಾರ ಕಷ್ಟಗಳನ್ನೆದುರಿಸಿ, ಮೈಸೂರಿನ ಶ್ರೀ ಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆಯಲ್ಲಿ ಚಿತ್ರಕಲೆಯ ಅಧ್ಯಾಪಕರಾಗಿ ಜೀವನ ನಡೆಸಿದರು. ಕುಶಲಕಲೆಯ ಎಲ್ಲ ಪ್ರಕಾರಗಳಲ್ಲೂ ಅದ್ವಿತೀಯ ಪ್ರೌಢಿಮೆಗಳಿಸಿ ಕೊಂಡಿದ್ದ. ಇವರು ರೇಖಾಚಿತ್ರ, ತೈಲಚಿತ್ರ, ಜಲವರ್ಣಚಿತ್ರಗಳಲ್ಲಿ ತೋರುತ್ತಿದ್ದ ಚಾಕಚಕ್ಯ ಅಸಾಧಾರಣವಾದದ್ದು. ಪ್ರಕೃತಿಯ ಯಾವುದೇ ವರ್ಣಗಳನ್ನು ಕಣ್ಣಿಗೆ ಕಟ್ಟುವಂತೆ ಸಹಜ ಸುಂದರವಾಗಿ ಕೃತಿಗಳಲ್ಲಿ ಮೂಡಿಸುವ ಶಕ್ತಿಯನ್ನು ಇವರು ಪಡೆದಿದ್ದರು. ಮೈಸೂರಿನ ವಾಣಿವಿಳಾಸ ಮೊಹಲ್ಲಾದಲ್ಲಿರುವ ಮಹಾಜನ ಹೈಸ್ಕೂಲಿನ ಭಿತ್ತಿಯೊಂದರ ಮೇಲೆ ಇವರಿಂದ ರಚಿತವಾದ ಶಾರದಾದೇವಿಯ ಚಿತ್ರವಿದೆ. ಇವರ ಕಬೀರ್ ತೈಲಚಿತ್ರದಲ್ಲಿ ಮುಂಜಾವಿನ ನಸುಗತ್ತಲ ಪ್ರಶಾಂತ ವಾತಾವರಣದ ಕಲ್ಪನೆ ವಿಶಿಷ್ಟವಾದ್ದು. ಮೈಸೂರಿನ ವೃತ್ತಿಶಿಕ್ಷಣ ಶಾಲೆಯ ಪ್ರದರ್ಶನಾಲಯದಲ್ಲಿ ಇದ್ದ ರಾಜನ ಒಡ್ಡೋಲಗದ ಚಿತ್ರ ಕೂಡ ಇವರ ಕಲಾವಂತಿಕೆಗೆ ಉತ್ತಮ ನಿದರ್ಶನವಾಗಿದೆ. ಈಗ ಅದು ಅಲ್ಲಿಲ್ಲ, ಮೈಸೂರಿನ ಕಲಾಭಿಮಾನಿಗಳೊಬ್ಬರ ಬಳಿ ಇದೆ.

ಮೈಸೂರಿನ ವಸ್ತುಪ್ರದರ್ಶನಶಾಲೆಯ ಕಟ್ಟಡವೊಂದರ ಮೇಲೆ ಇವರಿಂದ ರೂಪಿಸಲ್ಪಟ್ಟ ಜಯಚಾಮರಾಜ ಒಡೆಯರ ಭಾವಚಿತ್ರವಿತ್ತು. ಈಗ ಅದು ಅಲ್ಲಿಲ್ಲ. ಆದರೆ ಭಾವಚಿತ್ರ ರಚನೆಯಲ್ಲಿ ಇವರದ್ದು ಪಳಗಿದ ಕೈ ಎನ್ನುವುದಕ್ಕೆ ಇದೊಂದು ಉತ್ತಮ ಮಾದರಿ.

ನಂಜುಂಡಸ್ವಾಮಿಯವರು ಅಡಂಬರವಿಲ್ಲದ ಸಾಮಾನ್ಯ ಜೀವನ ನಡೆಸಿದವರು. ನಿವೃತ್ತರಾದ ಕೆಲವು ವರ್ಷಗಳ ಮೇಲೆ ಒಂಟಿಕೊಪ್ಪಲಿನಲ್ಲಿದ್ದ ತಮ್ಮ ಮನೆಯನ್ನು ಮಾರಿ ತಮ್ಮ ತಾಯಿಯ ಊರಾದ ಯರಗಂಬಳ್ಳಿಗೆ ಹೋದರು. ಅನಂತರ ಅಲ್ಲೂ ಬಹಳ ಕಾಲ ಇರಲಿಲ್ಲ. ಮಾರಿ ಬಂದ ಹಣ ದಕ್ಕಲಿಲ್ಲ. ಮತ್ತೆ ಪತ್ನೀಪುತ್ರರೊಂದಿಗೆ ಮೈಸೂರಿಗೆ ಬಂದು ಒಂಟಿಕೊಪ್ಪಲಿನಲ್ಲಿ ಚಿಕ್ಕ ಮನೆಯೊಂದನ್ನು ಮಾಡಿಕೊಂಡು ಇದ್ದರು.

ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳ ಪುಣ್ಯಕಥೆಗಳನ್ನು ಓದುವುದು, ಕೇಳುವುದು ಎಂದರೆ ಸ್ವಾಮಿಗಳಿಗೆ ಬಹಳ ಇಷ್ಟ. ಅಲ್ಲಿಯ ರಸಸನ್ನಿವೇಶಗಳ ಚಿತ್ರಗಳನ್ನು ಮನಸ್ಸಿನಲ್ಲಿ ಮೂಡಿಸಿಕೊಂಡು ಅದನ್ನು ಕಲೆಯಲ್ಲೇ ರೂಪಿಸುತ್ತಿದ್ದರು. ಇವರ ಗೆಳೆಯರಲ್ಲಿ ಸಾಹಿತಿಗಳು ಕಲಾವಿದರೂ ಹೆಚ್ಚಾಗಿದ್ದರು. ಇವರ ಮಮತೆಯ ಒಬ್ಬ ಗೆಳೆಯರೆಂದರೆ ಕೈಲಾಸಂ.

ಅರಮನೆಯ ಕಲಾವಿದರಾಗಿದ್ದ ಕೇಶವಯ್ಯನವರ ನೆರವು ಸಿಕ್ಕಿದ್ದರಿಂದ ಸ್ವಾಮಿಯವರ ಕಲಾಸಾಧನೆ ಪಕ್ವವಾಯಿತು. ಮೈಸೂರಿನ ಶ್ರೀ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಕಲಾಶಾಲೆಯಲ್ಲಿ ಕಲಾಭ್ಯಾಸಮಾಡಿದ ಅನಂತರ ಮುಂಬಯಿಯ ಜೆಯಜೆ. ಕಲಾಶಾಲೆಯಲ್ಲಿ ಅಭ್ಯಾಸಮಾಡಿ ಹೆಚ್ಚಿನ ಅನುಭವ ಪಡೆದುಕೊಂಡಿದ್ದರಾಗಿ ಇವರ ಕಲೆಗೆ ಶಾಸ್ತ್ರದ ಭದ್ರವಾದ ತಳಹದಿ ಸಿಕ್ಕಿದಂತಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹ ಸಿಕ್ಕಿತಾಗಿ ಇವರ ಕಲಾಪ್ರೌಢಿಮೆ ಪ್ರಕಾಶಕ್ಕೆ ಬರಲು ಅವಕಾಶವಾಯಿತು. ಆಗ ಇವರು ಚಿತ್ರಿಸಿದ ಕೆಲವು ತೈಲವರ್ಣ ಚಿತ್ರಗಳು ಮಹಾರಾಜರ ಮೆಚ್ಚುಗೆಗೆ ಪಾತ್ರವಾಗಿ ಅರಮನೆಯ ಕಲ್ಯಾಣಮಂಟಪವನ್ನು ಅಲಂಕರಿಸಿದುವು. ಅವು ಈಗಲೂ ಅಲ್ಲಿವೆ. ಪಾಶ್ಚಾತ್ಯ ಶೈಲಿಯಲ್ಲಿ ರಚಿಸಿಲಾದ ಈ ಕೃತಿಗಳಲ್ಲಿ ಜನರ ಭಾವಭಂಗಿ, ಚಲನವಲನ ಬಹಳ ಸ್ವಾಭಾವಿಕವಾಗಿ ಮೂಡಿಬಂದಿದೆ.

ಚಿತ್ರಕಲೆಯ ಜೊತೆಗೆ ಇವರು ದಂತ ಮತ್ತು ಗಂಧದಲ್ಲಿ ಸುಂದರ ಮೂರ್ತಿಗಳನ್ನು ನಿರ್ಮಿಸುತ್ತಿದ್ದುದೂ ಉಂಟು. ಬೇಲೂರಿನ ಶಿಲಾಬಾಲಕಿಯರಿಂದ ಸ್ಫೂರ್ತಿಗೊಂಡು ಇವರು ರಚಿಸಿದ ಒಂದು ಆಕೃತಿ ಮತ್ತು ಗಣಪತಿ- ಇವು ತುಂಬ ಮೋಹಕವಾಗಿವೆ.

ಇವರಿಗೆ ವನಸ್ಪತಿ ಔಷಧಿಯ ತಯಾರಿಕೆಯಲ್ಲಿ ಆಸಕ್ತಿ ಇತ್ತು. ತಾವೇ ಮನೆಯಲ್ಲಿ ಅದನ್ನು ತಯಾರಿಸಿಕೊಳ್ಳುತ್ತಿದ್ದರು. ಒಮ್ಮೆ ಯಾವುದೋ ವ್ಯತ್ಯಾಸದಿಂದಾಗಿ ಇವರು ಸಿದ್ಧಪಡಿಸಿ ಸೇವಿಸಿದ ಔಷಧಿ ಇವರ ಮೈಚರ್ಮವನ್ನು ಕಿತ್ತು ತಿಂದಿತು. ಇದರಿಂದಾಗಿ ಇವರು ಮತ್ತೆ ಅಂಥ ಔಷಧಿಗಳ ಗೋಜಿಗೇ ಹೋಗಲಿಲ್ಲ.

ರಸವಾದದಲ್ಲಿಯೂ ಇವರಿಗೆ ಆಸಕ್ತಿಯಿತು. ಚಿನ್ನ ತಯಾರಿಸಪಬೇಕೆಂಬುದು ಇದರ ಇನ್ನೊಂದು ಹುಚ್ಚು. ಅನೇಕ ವೇಳೆ ಈ ಗುಂಗು ಇವರನ್ನು ವಿಕ್ಷಿಪ್ತಗೊಳಿಸಿದ್ದೂ ಉಂಟು. ಚಿನ್ನ ತಯಾರಿಸಬೇಕೆಂಬುದು ಇವರ ಇನ್ನೊಂದು ಹುಚ್ಚು. ತಮ್ಮ ಮನೆಯ ಕೋಣೆಯೊಂದರಲ್ಲಿ ಗಿಡ ಮೂಲಿಕೆಗಳಿಂದ ರಸ ತೆಗೆದು ಪುಟ ಕೊಡುತ್ತಿದ್ದರು. ಆದರೆ ಇದರಿಂದ ಯಾವ ಲಾಭವವೂ ಆಗಲಿಲ್ಲ.

ಇವರಿಗೆ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿನೀಡಿ ಗೌರವಿದೆ. ತಮ್ಮ ಕೊನೆಯ ದಿನಗಳಲ್ಲಿ ದೊಡ್ಡ ಶಿಲೆಯಲ್ಲಿ ಶ್ರೀ ಚಾಮುಂಡೇಶ್ವರಿ ವಿಗ್ರಹವನ್ನು ಕಡೆಯುತ್ತಿದ್ದರು. ಅದು ಪೂರ್ಣಗೊಳ್ಳುವಷ್ಟರಲ್ಲಿಯೇ ಇವರು 1969 ಡಿಸೆಂಬರ್ 27ರಂದು ನಿಧನರಾದರು. (ಪಿ.ಆರ್.ಟಿ.)

**ನಂದಗಡ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರದ ಆಗ್ನೇಯಕ್ಕೆ 10 ಕಿಮೀ ದೂರದಲ್ಲಿದೆ. ಇದನ್ನು ಕಸಬಾ ನಂದಗಡ ಎಂದೂ ಕರೆಯುವರು. ಹಿಂದೆ ಇದೊಂದು ಪ್ರಸಿದ್ಧ ವ್ಯಾಪಾರಿ ಪಟ್ಟಣವಾಗಿತ್ತು. ಮಲ್ಲಸರ್ಜ ದೇಸಾಯಿ ಪೇಶವೆ ಬಾಜಿರಾವ್‌ನಿಂದ ದೊರೆತ ಪ್ರತಾಪರಾವ್ ಎಂಬ ಬಿರುದಿನ ಸಂತೋಷದ ಸ್ಮಾರಕವಾಗಿ ಈ ಗ್ರಾಮದಲ್ಲಿ ಒಂದು ಕೋಟೆ ಕಟ್ಟಿಸಿ ಅದನ್ನು ಪ್ರತಾಪಗಡ ಎಂದು ಕರೆದ. ಈಗ ಅದರ ಅವಶೇಷವಿದೆ. ಕಿತ್ತೂರಿನ ದೊರೆ ಖಾನಾಪುರದ ವ್ಯಾಪಾರಿಗಳನ್ನು ನಂದಗಡದಲ್ಲಿ ನೆಲಸಲು ಪ್ರೋತ್ಸಾಹಿಸುತ್ತಿದ್ದ. ವೀರ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರು 1829ರಲ್ಲಿ ಈ ಗ್ರಾಮದಲ್ಲೇ ಗಲ್ಲಿಗೇರಿಸಿದರು. ಸಂಗೊಳ್ಳಿರಾಯಣ್ಣ ತೋರಿಸಿದ ಸ್ಥಳದಲ್ಲೆ ಆತನನ್ನು ಸಮಾಧಿ ಮಾಡಲಾಯಿತು. ಆ ಸ್ಥಳದಲ್ಲಿ ಈಗ ಬೃಹತ್ ಆಕಾರದ ಆಲದಮರ ಬೆಳೆದಿದೆ. ಜನರು ಸಂತಾನಪಡೆಯಲು, ಸುಖಶಾಂತಿಯನ್ನು ಬೇಡಿಕೊಳ್ಳಲು ಆ ಗಿಡಕ್ಕೆ ಭಕ್ತಿಯಿಂದ ಪೂಜಿಸುತ್ತಾರೆ. ನಂದಗಡದ ಸಮೀಪದಲ್ಲಿ ಷಂಷೇರ್‌ಗಡಿ ಎಂಬ ಇನ್ನೊಂದು ಕೋಟೆ ಇದೆ.

ನಂದಗಡದಲ್ಲಿ ಶಾಲೆ ಮತ್ತು ಅಂಚೆ ದೂರವಾಣಿ ಮುಂತಾದ ಸೌಲಭ್ಯವಿದ್ದು ಉತ್ತಮ ಮಾರ್ಗವಿದ್ದು ಇತರ ಗ್ರಾಮದೊಡನೆ ಮತ್ತು ಬೆಳಗಾಂವಿಗೆ ನೇರ ವಾಹನ ಸಂಪರ್ಕ ಹೊಂದಿದೆ. (ಎಸ್.ವಿ.ಎಸ್.)

**ನಂದಗುಡಿ :** ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಒಂದು ಗ್ರಾಮ. ಕಸಬೆಗೆ 19 ಕಿಮೀ ದೂರದಲ್ಲಿದೆ. ಕನ್ನಡ ಶಾಸನಗಳಲ್ಲಿ ಈ ಊರನ್ನು ನಂದಗುಲಿ ಅಥವಾ ನಂಜುಗುಲಿ ಎಂದೂ ತಮಿಳು ಶಾಸನಗಳಲ್ಲಿ ನೊಂದಗುಲಿ ಎಂದೂ ಕರೆಯಲಾಗಿದೆ. ಸಮೀಪದ ಧರ್ಮೇಶ್ವರ ದೇವಾಲಯದಲ್ಲಿ ಒಂದು ವಿಷಯದ ಬಾವಿ ಇದೆಯೆಂದೂ ನಂಜುಂಗುಲಿಹೆಸರು ಇದಕ್ಕೆ ಸಂಬಂಧಿಸಿದ್ದೆಂದೂ ಊಹೆ ಇದೆ. ನಂದಗುಡಿ ಪ್ರಾಚೀನ ಪಾಟಲೀಪುರದ ನಿವೇಶನವೆಂದೂ ಇಲ್ಲಿಯೇ ಉತ್ತುಂಗಭುಜರಾಯನಿಂದ ಬಂಧಿತರಾದ ನವನಂದರನ್ನು ಚಾಣಕ್ಯ ಬಿಡುಗಡೆ ಮಾಡಿದನೆಂದು ಐತಿಹ್ಯವಿದೆಯಾದರೂ ಇದಕ್ಕೆ ಚಾರಿತ್ರಿಕ ಬೆಂಬಲವಿಲ್ಲ. ಈ ಗ್ರಾಮದ ಪೂರ್ವಪಶ್ಚಿಮ ದಿಕ್ಕುಗಳಲ್ಲಿ ಅನುಕ್ರಮವಾಗಿ ರಾಗುಲರಾಶಿ

(ರಾಗುಲ ಗುಡ್ಡ) ಮತ್ತು ಅಡ್ಡಬೆಟ್ಟ ಎಂಬ ಹೆಸರಿನ ಎರಡು ಸಣ್ಣ ಬೆಟ್ಟಗಳಿವೆ. ದಂತಕಥೆಯ ಪ್ರಕಾರ ರೈತನೊಬ್ಬ ತನ್ನ ಜಮೀನಿನಲ್ಲಿ ಬೆಳೆದ ರಾಗಿಯನ್ನು ಒಂದು ಕಡೆ ಮತ್ತು ಹುಲ್ಲನ್ನು ಮತ್ತೊಂದು ಕಡೆ ರಾಶಿ ಮಾಡಿದ್ದನಂತೆ. ಇದನ್ನು ನೋಡಿದ ಅವನ ಹೆಂಡತಿ ಈ ರಾಗಿ ರಾಶಿಯನ್ನು ತಾನು ಬೀಸಬೇಕಾಗಿ ಬರುತ್ತದಲ್ಲಾ ಎಂದು ವ್ಯಥೆಪಟ್ಟಳಂತೆ. ತಕ್ಷಣ ಈ ರಾಶಿಗಳು ಗುಡ್ಡಗಳಾಗಿ ಮಾರ್ಪಾಡಾದುವಂತೆ. ಅಡ್ಡಬೆಟ್ಟದ ಮೇಲೆ ಒಂದು ಕಾಲದಲ್ಲಿ ಪ್ರಾಚೀನ ಕಾಲದ ಅರಮನೆಯೊಂದಿದ್ದಿತಂತೆ. ರಾಗುಲಗುಡ್ಡ ಒಂದು  ರೀತಿಯ ಜಂಬುಕಲ್ಲಿನ ಗುಡ್ಡ, ಇಲ್ಲಿ ಕಲ್ಲಿನಲ್ಲಿ ಕೊರೆದ ಒಂದು ದೇವಾಲಯವಿತ್ತು. ಈಗ ಹಾಳಾಗಿದೆ. (ಎಚ್.ಎ.ಎಸ್.)

**ನಂದಳಿಕೆ :** ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಒಂದು ಗ್ರಾಮ. ಕಾರ್ಕಳದ ಪಶ್ಚಿಮಕ್ಕೆ 16ಕಿಮೀ ದೂರದಲ್ಲಿದೆ. ಇಲ್ಲಿ ಮಹಾಲಿಂಗೇಶ್ವರ ದೇವಾಲಯವಿದೆ. ಹಿಂದೆ ಈ ಗ್ರಾಮ ನಂದಳಿಕೆ ಹೆಗ್ಗಡೆಗಳು ಎನಿಸಿಕೊಂಡ ಒಂದು ಸಣ್ಣ ಪಾಳೆಯಗಾರಿಕೆಯ ಪೀಠವಾಗಿತ್ತು. ಈಗಿರುವ ಆ ಕಾಲದ ಹಿಂದಿನ ಮನೆಯಲ್ಲಿ ಮರದ ಸುಂದರ ಕೆತ್ತನೆಯ ಕೆಲಸವನ್ನು ಕಾಣಬಹುದು. ಮುಖ್ಯವಾಗಿ ನಂದಳಿಕೆ ಗ್ರಾಮ ಪ್ರಸಿದ್ಧಿಗೆ ಬಂದುದು. ಕನ್ನಡದ ಶ್ರೇಷ್ಠಕವಿ ನಂದಳಿಕೆ ಲಕ್ಷ್ಮೀನಾರಾಯಣಯ್ಯನಿಂದ, ಮುದ್ದಣ (ನೋಡಿ0 ಎಂಬ ಅಂಕಿತನಾಮದಿಂದ ಈತ ರಚಿಸಿದ ಶ್ರೀರಾಮಾಶ್ವಮೇಧ ಮತ್ತು ಇತರ ಕನ್ನಡ ಕೃತಿಗಳು ಇಂದಿಗೂ ಜನಪ್ರಿಯವಾಗಿವೆ. ನಂದಳಿಕೆಯಲ್ಲಿ ಕರ್ನಾಟಕದ ಪ್ರಸಿದ್ಧ ಸಂಗೀತಗಾರರಾಗಿದ್ದ ಬಿಡಾರಂ ಕೃಷ್ಣಪ್ಪನವರ ಪೂರ್ವಿಕರು ವಾಸವಾಗಿದ್ದರೆಂದು ಹೇಳುವರು. (ಕೆ.ಟಿ.ಆರ್.)

**ನ'ಂದಿ :** ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಚಿಕ್ಕಬಳ್ಳಾಪುರದ ನೈಋತ್ಯಕ್ಕೆ 6ಕಿಮೀ ದೂರದಲ್ಲಿರುವ ಗ್ರಾಮ. ಹೋಬಳಿ ಕೇಂದ್ರ. ಇಲ್ಲಿನ ಪ್ರಾಚೀನ ದೇವಾಲಯದಿಂದ ಪ್ರಸಿದ್ಧವಾಗಿದೆ.

ಇಲ್ಲಿನ ಭೋಗನಂದೀಶ್ವರ ದೇವಾಲಯದ ಕರ್ನಾಟಕದ ಪ್ರಾಚೀನ ದೇವಾಲಯಗಳಲ್ಲೊಂದು. ಚಿಕ್ಕಬಳ್ಳಾಪುರದಲ್ಲಿ ದೊರೆತ ತಾಮ್ರ ಶಾಸನವೊಂದರಲ್ಲಿ ಬಾಣವಂಶದ ದೊರೆಯಾದ ಬಾಣ ವಿದ್ಯಾಧರನ ಪತ್ನಿಯೂ ದಡ್ಡನರಾಧಿಪನ ತಾಯಿಯೂ ಆದ ರತ್ನಾವಳಿ ಎಂಬಾಕೆ ಈ ಆಲಯವನ್ನು ಕಟ್ಟಿಸಿದಳೆಂದು ಹೇಳಿದೆ. ನಂದಿ ಗ್ರಾಮದಲ್ಲಿಯೇ ಬಾವಿಯೊಂದರಲ್ಲಿ ದೊರೆತ 806ನೆಯ ವರ್ಷದ ರಾಷ್ಟ್ರಕೂಟ ಮುಮ್ಮಡಿ ಗೋವಿಂದನ ತಾಮ್ರಶಾಸನದಲ್ಲಿಯೂ ಈ ಪ್ರಸ್ತಾಪವಿದೆ. ಅದರಲ್ಲಿ ರತ್ನಾವಳಿ ಇಂದಪ್ಪರಸನ ಮಗಳೆಂದೂ ಆಕೆಗೆ ಮಾಣಿಕಬ್ಬೆ ಎಂಬ ಇನ್ನೊಂದು ಹೆಸರಿತ್ತೆಂದೂ ಹೇಳಿದೆ. ನಾಲ್ಕು ವರ್ಷಗಳ ಅನಂತರ ಮುಮ್ಮಡಿ ಗೋವಿಂದನ ಆಳಿಕೆಯ 17ನೆಯ ವರ್ಷದ ಶಾಸನದಲ್ಲಿ ಈ ಶಿವಾಲಯಕ್ಕೆ ನೀಡಿದ ಭೂದಾನದ ಉಲ್ಲೇಖವಿದೆ. ಬಾಣವಿದ್ಯಾಧರ 8ನೆಯ ಶತಮಾನದ ಅಂತ್ಯದಲ್ಲಿ ಆಳುತ್ತಿದ್ದನೆಂದು ಊಹಿಸಲಾಗಿದ್ದು ಬಹುಶಃ ಆ ಸಮಯದಲ್ಲಿಯೇ ಈ ದೇವಾಲಯವೂ ಕಟ್ಟಿಸಲ್ಪಟ್ಟಿರಬೇಕು. ಇದೇ ದೇವಾಲಯದಲ್ಲಿ ದೊರೆತ 9ನೆಯ ಶತಮಾನದ ಅಂತ್ಯಭಾಗಕ್ಕೆ ಸೇರಿದ ನೊಳಂಬಾಧಿರಾಜನ ಶಾಸನದಿಂದ ಈ ದೇವಾಲಯದ ಗೋಪುರವನ್ನು ಆ ಸುಮಾರಿನಲ್ಲಿ ಕಟ್ಟಿಸಲಾಯಿತೆಂದು ತಿಳಿದುಬರುತ್ತದೆ.

370x250 ಅಡಿಗಳ ವಿಸ್ತಾರದ ದ್ರಾವಿಡ ಶೈಲಿಯಲ್ಲಿ ಕಟ್ಟಲಾದ ಅಲಂಕಾರಿಕವಾದ ಈ ದೇವಾಲಯದಲ್ಲಿ ಎರಡು ಗರ್ಭಗೃಹಗಳು ಮತ್ತು ಪ್ರತ್ಯೇಕವಾದ ಎರಡು ನಂದಿಮಂಟಪಗಳಿವೆ. ಈ ಆಲಯದ ಉತ್ತರದ ಗುಡಿ ಭೋಗನಂದೀಶ್ವರನಿಗೂ ದಕ್ಷಿಣದ ಗುಡಿ ಅರುಣಾಚಲೇಶ್ವರನಿಗೂ ಮೀಸಲಾಗಿವೆ. ಒಂದೊಂದೂ ಗುಡಿಗೂ ಸೇರಿದಂತೆ ಪ್ರತ್ಯೇಕವಾದ ಸುಕನಾಸಿ, ನವರಂಗಗಳೂ ಇವೆ. ಇವುಗಳಲ್ಲಿ ಒಂದೊಂದರಲ್ಲೂ ಒಂದಕ್ಕೆ ಅಭಿಮುಖವಾಗಿ ಇನ್ನೊಂದರಂತೆ ಜಾಲಂಧ್ರಗಳಿವೆ.

ಭೋಗನಂದೀಶ್ವರನ ಗುಡಿಯ ಮುಂದಿನ ನಂದಿಮಂಟಪದಲ್ಲಿ 11ನೆಯ ಶತಮಾನಕ್ಕೆ ಸೇರಿದ ಚೋಳರ ಶಾಸನಗಳಿದ್ದು, ತನ್ಮೂಲಕ ದೇವಾಲಯದ ಆ ಭಾಗಗಳೆಲ್ಲ ಚೋಳರ ಕಾಲದಲ್ಲಿ ಕಟ್ಟಿಸಲ್ಪಟ್ಟವುಗಳೆಂದು ತಿಳಿದುಬರುತ್ತದೆ. ದಕ್ಷಿಣಕ್ಕಿರುವ ಅರುಣಾಚಲೇಶ್ವರ ಗುಡಿಯ ನವರಂಗದಲ್ಲಿನ ಜಾಲಂಧ್ರದಲ್ಲಿ ತಾಂಡವೇಶ್ವರ ವಿಗ್ರಹವಿದ್ದು ಅಲ್ಲಿನ ಶಾಸನ ಅದರ ಕರ್ತೃ ಕೇಶವನೆಂಬುದನ್ನು ತಿಳಿಸುತ್ತದೆ. ಭೋಗನಂದೀಶ್ವರನ ಗುಡಿಯ ನವರಂಗದ ಎಡಭಾಗದಲ್ಲಿ ಧ್ಯಾನ ಮುದ್ರೆಯಲ್ಲಿ ಪದ್ಮಾಸನಸ್ಥಾವಾಗಿರುವ ಒಂದು ವಿಗ್ರಹವಿದೆ. ಇದು ಬಹುಶಃ ಚೋಳ ಅರಸನೊಬ್ಬನ ಪ್ರತಿಕೃತಿಯಾಗಿರಬಹುದೆಂದು ಊಹಿಸಲಾಗಿದೆ. ಈ ನವರಂಗದ ನಾಲ್ಕು ಕಂಬಗಳಲ್ಲಿಯೂ ಉತ್ತಮವಾದ ಕೆತ್ತನೆಯ ಕೆಲಸವನ್ನು ಕಾಣಬಹುದು. ನವರಂಗದ ಭುವನೇಶ್ವರಿ 7' ಚದರವಿದ್ದು ಅದರಲ್ಲಿ ಮಧ್ಯದಲ್ಲಿ ಶಿವ ಮತ್ತು ಪಾರ್ವತಿ ಮತ್ತು ಸುತ್ತಲೂ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಶಿವನಿಗೆ ಸಿಂಹವನ್ನೂ ಪಾರ್ವತಿಗೆ ನಂದಿಯನ್ನೂ ವಾಹನವಾಗಿ ತೋರಿಸಲಾಗಿದೆ. ಎರಡು ಗುಡಿಗಳ ನಡುವೆ ಸಣ್ಣದೊಂದು ಗುಡಿ ಇದೆ. ಎರಡು ಗುಡಿಗಳ ನವರಂಗದ ಹಿಂಭಾಗಕ್ಕೆ ಸಮಾನಾಂತರವಾಗಿರುವ ಈ ಗುಡಿಯ ಸುತ್ತಲೂ ಎರಡು ಅಡಿಗಳಷ್ಟು ಸ್ಥಳವಿದ್ದು ಪ್ರದಕ್ಷಿಣೆಗೆ ಅನುಕೂಲವಾಗಿದೆ. ಇದನ್ನು ಉಮಾಮಹೇಶ್ವರನ ಗುಡಿ ಎಂದು ಕರೆಯುತ್ತಾರೆ.

ಭೋಗನಂದೀಶ್ವರ - ಅರುಣಾಚಲೇಶ್ವರ ಈ ಜೋಡುಗುಡಿಗಳ ಮುಂದಿನ ರಂಗಮಂಟಪ ಕಪ್ಪುಶಿಲೆಯಲ್ಲಿ ಕಟ್ಟಲ್ಪಟ್ಟಿದೆ. ಇದರಲ್ಲಿನ ನಾಲ್ಕು ಕಂಬಗಳಲ್ಲಿ ಸ್ವಲ್ಪವೂ ಸ್ಥಳ ಬಿಡದೆ ಕೆತ್ತನೆ ಕೆಲಸ ಮಾಡಲಾಗಿದೆ. ಮೃಗಗಳು, ಬಳ್ಳಿಗಳು, ಮೂರ್ತಿಗಳು ಹಾಗೂ ಪ್ರಮುಖವಾಗಿ ಪಕ್ಷಿಗಳು ಈ ಕೆತ್ತನೆಯ ಮುಖ್ಯವಸ್ತುಗಳು. ಒಂದೊಂದು ಕಂಬದಲ್ಲಿಯೂ ಎರಡು -ಮೂರು ಕಡೆ ಸುಮಾರು 2.1/2 ಅಡಿಗಳಷ್ಟು ಎತ್ತರದ ಸ್ತ್ರೀವಿಗ್ರಹಗಳು, ಇವುಗಳ ಮಧ್ಯೆ ಅರೆಗಂಬಗಳು, ಸುತ್ತಲೂ ಪಕ್ಷಿಗಳು ಮತ್ತು ಬಳ್ಳಿಗಳು - ಇವನ್ನು ಕೆತ್ತಲಾಗಿದೆ. ಪಕ್ಷಿಗಳನ್ನಂತೂ ಇಲ್ಲಿನ ಬೋದಿಗೆ ಭುವನೇಶ್ವರಿಗಳಲ್ಲಿಯೂ ಕಾಣಬಹುದು. ನಾಲ್ಕು ಅಡಿ ಆಳದ ಭುವನೇಶ್ವರಿಯ ತೊಲೆಗಳ ಒಳಮುಖದಲ್ಲಿ ಗೌರೀಶಂಕರ, ಲಕ್ಷ್ಮೀನಾರಾಯಣ, ಸರಸ್ವತಿ ಮತ್ತು ಬ್ರಹ್ಮ, ಸ್ವಾಹಾದೇವಿ ಮತ್ತು ಅಗ್ನಿ - ಇವರುಗಳ ವಿಗ್ರಹಗಳನ್ನು ಕೆತ್ತಲಾಗಿದೆ. ಇನ್ನೊಂದು ಕಡೆ ಅಷ್ಟದಿಕ್ಪಾಲಕರು, ಮತ್ತೊಂದು ಕಡೆ ಮೇಲಿನಿಂದ ತೂಗುಬಿದ್ದಿರುವ ಕಮಲವನ್ನು ಹಿಡಿದುಕೊಂಡಿರುವ ನಾಲ್ಕು ಗಿಣಿಗಳ ಕೆತ್ತನೆ ಇವೆ.

ನಂದಿಮಂಟಪಗಳ ನಡುವೆ ಕಲ್ಯಾಣಮಂಟಪ ಇದೆ. ಇದರಲ್ಲಿನ 12 ಕಂಬಗಳು ಕರಿಕಲ್ಲಿನವು. ಎಂಟು ಕಂಬಗಳ ಮುಂದಿನ ಮುಖದಲ್ಲಿ 3 ಅಡಿ ಎತ್ತರದ ನಿಲು ಭಂಗಿಯ ಸ್ತ್ರೀ ವಿಗ್ರಹಗಳು, ಬುಡದ ಫಲಕಗಳಲ್ಲಿ ಸಿಂಹಗಳು ಇವೆ. ಇತರತ್ರಮತ್ಸ್ಯವರಾಹಾವತಾರಗಳು, ತಾಂಡವಗಣಪತಿ, ಆಂಜನೇಯ, ಕಾಲಭೈರವ, ಉಮಾಮಹೇಶ್ವರ ಮುಂತಾದ ವಿಗ್ರಹಗಳು ಇವೆ.

ದೇವಾಲಯಗಳ ಹಿಂಭಾಗದಲ್ಲಿ ದೇವಿಯ ಗುಡಿಗಳು ಇವೆ. ಪ್ರಸನ್ನ ಪಾರ್ವತಿ ಭೋಗನಂದೀಶ್ವರನ ದೇವಿಯಾದರೆ, ಇನ್ನೊಂದು ಗುಡಿಯ ಅಪೀತಕುಚಾಂಬ ಅರುಣಾಚಲೇಶ್ವರನ ದೇವಿ. ಎರಡನೆಯ ಪ್ರಾಕಾರದಲ್ಲಿ ವಸಂತಮಂಟಪ ಮತ್ತು ತುಲಾಭಾರ ಮಂಟಪಗಳಿವೆ. ಮೂರನೆಯ ಪ್ರಾಕಾರದ ಮಧ್ಯೆ ಶೃಂಗಿತೀರ್ಥವೆಂಬ ದೊಡ್ಡ ಕೊಳ ಇದೆ. ಇದು ದಕ್ಷಿಣ ಪಿನಾಕಿನಿ ನದಿಯ ಉಗಮಸ್ಥಳ ಎಂದು ಹೇಳಿಕೆ. ದೇವಾಲಯದ ಮಹಾದ್ವಾರ 8 ಅಡಿ ಅಗಲ 16 ಅಡಿ ಎತ್ತರ ಇದೆ. ಬಾಗಿಲುತೋಳುಗಳ ಮೇಲೆ ದ್ವಾರಪಾಲಕರ ವಿಗ್ರಹಗಳು, ಲತೆಯನ್ನು ಹಿಡಿದಿರುವ ಸ್ತ್ರೀವಿಗ್ರಹಗಳು ಇವೆ. ನಂದಿಯ ದೇವಾಲಯದಲ್ಲಿ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಕಾಲದಲ್ಲಿ ಕಟ್ಟಿದ್ದರೂ ಒಂದೊಂದೂ ಇನ್ನೊಂದರೊಡನೆ ಚೆನ್ನಾಗಿ ಹೊಂದಿಕೊಂಡಿದೆ ಎಂಬುದೊಂದು ಇದರ ವೈಶಿಷ್ಟ್ಯ.

11ನೆಯ ಶತಮಾನದಲ್ಲಿ ತಮಿಳುನಾಡಿನ ಚೋಳರ ಅಧೀನದಲ್ಲಿದ್ದ ಈ ನಂದಿ ಗ್ರಾಮ ನಿಗರಿಲಿಶೋಳ ಮಂಡಲದಲ್ಲಿ ಕಳವರನಾಡಿನ ಒಂದು ಭಾಗವಾಗಿತ್ತು. ಕಳವರ ಎಂಬ ಅದೇ ಹೆಸರಿನ ಗ್ರಾಮ ಈಗ ನಂದಿ ಮತ್ತು ಚಿಕ್ಕಬಳ್ಳಾಪುರಗಳ ನಡುವೆ ಇದೆ. ಶಾಸನಗಳಲ್ಲಿ ನಂದಿಯನ್ನು

ಪೆರಿಯನಂದಿ ಎಂತಲೂ ಅಲ್ಲಿನ ದೇವರನ್ನು ಇದು ದಕ್ಷಿಣ ಕೈಲಾಸವೆಂದು ಪ್ರಸಿದ್ಧವಾಗಿತ್ತು. 12ನೆಯ ಶತಮಾನದ (ತಿರು) ಮಹಾನಂದೀಶ್ವರಮುಡೈಯಾರ್ ಎಂದೂ ಕರೆದಿದೆ. ಆಗ ಪೂರ್ವಾರ್ಧದಲ್ಲಿ ಈ ಪ್ರದೇಶ ಹೊಯ್ಸಳ ರಾಮನಾಥ'ನ ವಶವಾಯಿತು. ಅನಂತರ ವಿಜಯನಗರದ ಅರಸರ ಅಧೀನಕ್ಕೆ ಬಂದಿತ್ತು. 15-17ನೆಯ ಶತಮಾನಗಳಲ್ಲಿ ವಿಜಯನಗರದ ಸಾಮಂತರಾದ ಆವತಿಯ ಪ್ರಭುಗಳು ಇಲ್ಲಿ ಆಳಿದರು. 17ನೆಯ ಶತಮಾನದ ಮಧ್ಯಭಾಗದಲ್ಲಿಈ ಪ್ರದೇಶ ಆದಿಲ್‌ಶಾಹೀಗಳ ಆಳ್ವಿಕೆಗೆ ಒಳಪಟ್ಟಾಗ ನಂದಿಗ್ರಾಮವನ್ನು ಶಹಾಜಿ ಜಹಗೀರಾಗಿ ಕೊಟ್ಟ. ಮುಂದಿನ ಶತಮಾನದಲ್ಲಿ ಹೈದರ್ ಇದನ್ನು ಆಕ್ರಮಿಸಿದ. ಟಿಪ್ಪು ಇದನ್ನು ವಿಸ್ತರಿಸಿ ಹೊಸ ಪೇಟೆಯನ್ನು (ಈಗಿನ ಸುಲ್ತಾನಪೇಟೆ) ಕಟ್ಟಿಸಿದ.

1799-1808ರಲ್ಲಿ ಮತ್ತು ಸುಲ್ತಾನಪೇಟೆಗಳ ನಡುವೆ ಬ್ರಿಟಿಷ್ ದಂಡಿನ ನಡುವೆ ಒಂದು ಠಾಣ್ಯ ಇತ್ತು. ನಂದಿಯಲ್ಲಿ ಶಿವರಾತ್ರಿ ಕಾಲದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಬೆಂಗಳೂರು, ಚಿಕ್ಕಬಳ್ಳಾಪುರ, ದೇವನಹಳ್ಳಿ ಮತ್ತು ಕೋಲಾರಗಳಿಂದ ನಂದಿಗೆ ನೇರ ರಸ್ತೆ ಸಂಪರ್ಕ ಇದೆ. ಗ್ರಾಮದಿಂದ ಸು. 2ಕಿಮೀ ದೂರದಲ್ಲಿ, ಬೆಂಗಳೂರು-ಬಂಗಾರಪೇಟೆ ನ್ಯಾರೋಗೇಜ್ ರೈಲು ಹಾದಿಯಲ್ಲಿ ನಂದಿ ನಿಲ್ದಾಣವಿದೆ.

(ಬಿಆರ್‌ಜಿ)

**ನಂದಿಕೇಶ್ವರ :** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಒಂದು ಗ್ರಾಮ. ಬಾದಾಮಿಯ ಈಶಾನ್ಯಕ್ಕೆ ಸು. 18ಕಿಮೀ ಅಂತರದಲ್ಲಿ ಮಲಪ್ರಭಾ ನದಿಯ ಎಡದಂಡೆಯ ಮೇಲಿದೆ. ಸಮುದ್ರಮಟ್ಟದಿಂದ 533 -5 ಮೀಟರು ಎತ್ತರದಲ್ಲಿದೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳೂ ಕೊಳವೆಬಾವಿಗಳು, ಅಂಚೆಕಚೇರಿ, ಗ್ರಾಮಸೇವಾ ಸಹಕಾರಿ ಸಂಘ ಮುಂತಾದವು ಇದ್ದು ವಿದ್ಯುಚ್ಛಕ್ತಿಯ ಸೌಕರ್ಯ ಪಡೆದಿದೆ. ಪ್ರತಿ ಗುರುವಾರ ಸಂತೆ ನಡೆಯುತ್ತದೆ. ಪ್ರತಿವರ್ಷ ಯುಗಾದಿ ಪಾಡ್ಯದ ದಿನ ನಂದೀಬಸವೇಶ್ವರ ಜಾತ್ರೆ ಜರುಗುತ್ತದೆ.

ಶಿವ-ಪಾರ್ವತಿಯರು ಮಹಾಕೂಟದಲ್ಲಿ ತಪಸ್ಸು ಮಾಡುತ್ತಿದ್ದಾಗ ಶಿವ ವಾಹನ ನಂದಿ ಈ ಸ್ಥಳದಲ್ಲಿ ವಾಸಮಾಡುತ್ತಿದ್ದುದರಿಂದ ಈ ಗ್ರಾಮಕ್ಕೆ ನಂದಿಕೇಶ್ವರವೆಂದು ಹೆಸರು ಬಂತೆಂದು ಪ್ರತೀತಿ. ಬಾದಾಮಿ ಗುಹೆಗಳಲ್ಲಿ ದೊರೆತ ಒಂದು ಶಿಲಾಶಾಸನದಲ್ಲಿ ಕೀರ್ತಿವರ್ಮನ ತಮ್ಮನಾದ ಮಂಗಲೀಶ ವೈಷ್ಣವಗುಹೆಯಲ್ಲಿ ಒಂದು ವಿಷ್ಣುಗೃಹವನ್ನು ನಿರ್ಮಿಸಿ ಅದರಲ್ಲಿ ವಿಷ್ಣು ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಆ ದೇವರ ಬಲಿಪೂಜಾ ನಿಮಿತ್ತವಾಗಿ ಲಂಜೀಶ್ವರ ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟನೆಂಬ ಉಲ್ಲೇಖವಿದೆ. ಈ ಲಂಜೀಶ್ವರವೇ ಇಂದಿನ ನಂದಿಕೇಶ್ವರ ಇರಬಹುದು.

ನಂದಿಕೇಶ್ವರಕ್ಕೆ ಸಮೀಪದಲ್ಲಿ ದಕ್ಷಿಣದ ಕಾಶಿ ಎಂದು ಕರೆಯುವ ಮಹಾಕೂಟ ಪುಣ್ಯಕ್ಷೇತ್ರವಿದೆ. (ಎಸ್.ಎಸ್.ಎಸ್.)

**ನಂದಿಕೋಲು :** ಶೈವ ದೇವಾಲಯಗಳಲ್ಲಿ, ವಿಶೇಷವಾಗಿ ಪೂಜಾಸಂದರ್ಭಗಳಲ್ಲಿ ಉತ್ಸವಗಳಲ್ಲಿ ಹೊತ್ತು ಕುಣಿವ ಶೃಂಗಾರಗೊಂಡ ದೊಡ್ಡ ಕೋಲಿನಂಥ ಒಂದು ಸಾಧನ. ಇದನ್ನು ನಂದಿಧ್ವಜ, ನಂದಿಕಂಬ ಎಂದೂ ಕರೆಯುತ್ತಾರೆ.

ನಂದಿಕೋಲು ಸಾಮಾನ್ಯವಾಗಿ ಹದಿನೈದರಿಂದ ಮೂವತ್ತೈದು ಅಡಿ ಉದ್ದವಿರುತ್ತದೆ. ಬೊಂಬಿನ ಕೆಳಭಾಗದಿಂದ ಮೇಲೆ ನಾಲ್ಕು ಅಡಿ ಎತ್ತರದಲ್ಲಿ ಮಂಟಪದಂಥ ನಾಲ್ಕು ಕಂಬದ ಒಂದು ಪೀಠ ಇರುತ್ತದೆ. ಇದರಲ್ಲಿ ಕುಳಿತ ಭಂಗಿಯ ನಂದಿಯ ವಿಗ್ರಹ ಇದ್ದು ಪೀಠದ ಮೇಲ್ಛಾವಣಿಯ ಮೇಲೆ ಪುಟ್ಟ ಸಿಹಿಕುಂಬಳಕಾಯಿ ಆಕಾರದ ಹರಡೆ ಇರುವುದು. ಇದನ್ನು ಗಗ್ರ ಗಗ್ಗರ ಎಂದೂ ಕರೆಯುತ್ತಾರೆ. ಇದು ಒಳಗೆ ಟೊಳ್ಳಾಗಿದ್ದು, ಹೊತ್ತು ಕುಣಿಯುವಾಗ ಶಬ್ದ ಬರಲೆಂದು ಕೆಲವು ಕಡೆ ಸಣ್ಣ ಜಲ್ಲಿಕಲ್ಲುಗಳನ್ನೋ ಹುಣಿಸೆ ಅಥವಾ ಪಾರಿವಾಣದ ಬೀಜಗಳನ್ನೋ ಹಾಕಿರುತ್ತಾರೆ. ಈ ಹರಡೆಯ ಮೇಲುತುದಿ ಕೆಳತುದಿಗಳಲ್ಲಿ ಅದಕ್ಕೆ ಅಂಟಿಕೊಂಡಂತೆ ಇರುವ ಬಳೆಯ ಆಕಾರದ ಎರಡು ವಸ್ತುಗಳನ್ನು ಪ್ಯಾರಿಯ ಎಂದು ಕರೆಯುತ್ತಾರೆ. ಇವು ಕುಣಿದಾಗ ಝಳಪಿಸುವ, ತಿರುಗುವ ಅನುಕೂಲ ಹೊಂದಿದ್ದು ಹರಡೆಯೊಂದಿಗೆ ಬೇರ್ಪಡಿಸಲಾಗದ ರೀತಿಯಲ್ಲಿ ಹೊಂದಿಕೊಂಡಿರುತ್ತವೆ. ನಂದಿಕೋಲಿನಲ್ಲಿ ಅದರ ಎತ್ತರಕ್ಕೆ ತಕ್ಕಂತೆ ಹತ್ತರಿಂದ ಇಪ್ಪತ್ತು ಹರಡೆಗಳಿರುತ್ತವೆ. ಇವು ಮೇಲಕ್ಕೆ ಹೋದಂತೆಲ್ಲ ಒಂದಕ್ಕೊಂದು ಚಿಕ್ಕವಾಗುತ್ತ ಹೋಗುತ್ತವೆ. ಈ ಹರಡೆಗಳ ನಡುವೆ ಇರುವ ಛತ್ರಿಯಾಕಾರದ ತಗಡುಗಳನ್ನು ಜಾಲ್ರು, ಜಾಲರಿ ಎಂದು ಕರೆಯುತ್ತಾರೆ. ಇವುಗಳ ತುದಿಯಲ್ಲಿ ಸುತ್ತಲೂ ಚಿತ್ತಾರ ಮಾಡಿದ ಲೋಲಾಕಿನಂಥ ಸಣ್ಣ ಸಣ್ಣ ತಗಡುಗಳಿದ್ದು ಇವು ಕೂಡ ಮೇಲಕ್ಕೆ ಹೋದಂತೆಲ್ಲ ಚಿಕ್ಕವಾಗುತ್ತ ಹೋಗಿರುತ್ತವೆ. ಸಾಮಾನ್ಯವಾಗಿ ಇವನ್ನು ಅಲಂಕಾರಕ್ಕಾಗಿಯೂ ಶಬ್ದಕ್ಕಾಗಿಯೂ ಹಾಕಲಾಗಿರುತ್ತದೆ. ಬೊಂಬಿನ ಮೇಲುತುದಿಯಿಂದ ಕೆಳಕ್ಕೆ ನಾಲ್ಕು ಅಡಿಗಳ ವರೆಗೆ ಬಿಳಿ ಮತ್ತು ಕೆಂಪು ಬಟ್ಟೆಗಳಿಂದ ಸುತ್ತಿ ಮುಚ್ಚಲಾಗುತ್ತದೆ. ಇದರ ತುದಿಯಲ್ಲಿ ಕೆಂಪು ಅಥವಾ ಕಾವಿಬಣ್ಣದ ಒಂದು ಧ್ವಜವಿರುತ್ತದೆ. ಇದು ಕೆಲವು ಕಡೆ ತ್ರಿಕೋಣಾಕೃತಿಯಲ್ಲಿರುತ್ತದೆ. ಕೆಲವು ಕಡೆ ತುದಿ ಮಾತ್ರ ಎರಡು ತ್ರಿಕೋನವಾಗಿರುವುದುಂಟು. ಧ್ವಜದ ನಡುವೆ ಈಶ್ವರಲಿಂಗದ ಚಿತ್ರವೂ ಅಕ್ಕಪಕ್ಕದಲ್ಲಿ ಲಿಂಗದ ಕಡೆಗೆ ಮುಖಮಾಡಿರುವ ಎರಡು ನಂದಿಗಳ ಚಿತ್ರವೂ ಇರುತ್ತವೆ. ಈ ಚಿತ್ರಗಳನ್ನು ಬಿಳಿ ಬಟ್ಟೆಯಲ್ಲಿ ಹೊಲಿಯಲಾಗಿರುತ್ತದೆ. ಎರಡರಿಂದ ಎಂಟು ಅಡಿಗಳಷ್ಟು ಉದ್ದವಾಗಿರುವ ಈ ಧ್ವಜವನ್ನು ಕೆಲವು ಕಡೆ ಬೊಂಬಿಗೆ ಸುತ್ತುವುದೂ ಇನ್ನು ಕೆಲವು ಕಡೆ ಹಾರಾಡಲು ಬಿಡುವುದೂ ಉಂಟು. ಬೊಂಬಿನ ಮೇಲುತುದಿಯಲ್ಲಿ ಚತ್ತು ಅಥವಾ ಛತ್ರಿ ಇರುತ್ತದೆ. ಇದನ್ನು ಕಳಸ ಎಂದು ಕರೆಯುವರು. ಇದರ ಸುತ್ತ ಕೂಡ ಚಿತ್ತಾರ ಮಾಡಿದ ಲೋಲಾಕಿನಂಥ ಸಣ್ಣ ಸಣ್ಣ ತಗಡುಗಳ ಅಲಂಕಾರವಿರುತ್ತದೆ. ಬೊಂಬು ಮತ್ತು ಬಟ್ಟೆ ಇವನ್ನು ಬಿಟ್ಟರೆ ನಂದಿಕೋಲಿನ ಉಳಿದ ಭಾಗಗಳೆಲ್ಲ ಹಿತ್ತಾಳೆಯಿಂದ ನಿರ್ಮಾಣವಾಗಿರುತ್ತವೆ. ಕೆಲವು ಕಡೆ ನಂದಿಯ ವಿಗ್ರಹವನ್ನು ಪಂಚಲೋಹದಿಂದ ಮಾಡಿರುತ್ತಾರೆ. ಶಿವನಿಗೆ ವಿಶೇಷವಾಗಿ ಪೂಜೆ ಸಂದಾಗ ಅವನ ವಾಹನವಾದ ನಂದಿಯನ್ನು ಮೆರೆಸುವುದು ಸಂಪ್ರದಾಯ. ಆಗ ನಂದಿಕೋಲನ್ನು ಹೊತ್ತು ಕುಣಿಯುವುದುಂಟು.

ಹೀಗೆ ಹೊತ್ತು ಕುಣಿಯುವಾಗ ಭಾರವನ್ನು ತಡೆದುಕೊಳ್ಳಲು ಹೆಗಲಿಗೆ ನೇತುಹಾಕಿಕೊಳ್ಳಬಹುದಾದಂಥ ಒಂದು ಚೀಲವಿದ್ದು ಇದನ್ನು ಪಟ್ಟಿಕಲ್ಲಿ ಅಥವಾ ನಂದಿಕಲ್ಲಿ ಎಂದು ಕರೆಯುತ್ತಾರೆ. ನಂದಿಕೋಲು ಒಬ್ಬ ಆಳು ಹೊರುವುದಕ್ಕಿಂತ ಭಾರವಾಗಿದ್ದರೆ ಹರಡೆಗಳ ಸಾಲು ಮುಗಿಯುವ ಜಾಗದಿಂದ ಮೂರು ಅಥವಾ ಹೆಚ್ಚು ಹಗ್ಗಗಳನ್ನು ಇಳಿಯಬಿಟ್ಟು, ಸುತ್ತಲೂ ಒಂದೊಂದು ಹಗ್ಗವನ್ನು ಒಬ್ಬೊಬ್ಬರು ಹಿಡಿಯುತ್ತಾರೆ. ನಂದಿಕೋಲು ಹೊತ್ತವನು ತಾಳಕ್ಕೆ ತಕ್ಕಂತೆ ಕುಣಿಯುವಾಗ ಹಗ್ಗದವರು ಅವನಿಗೆ ಅನುಕೂಲಕರ ರೀತಿಯಲ್ಲಿ ಚಲಿಸುತ್ತಾರೆ. ನಂಜನಗೂಡು ತಾಲ್ಲೂಕಿನಲ್ಲಿ ನಂದೀಕೋಲು ಹೊತ್ತವನ ಹೆಗಲ ಮೇಲೆ ಇನ್ನೊಬ್ಬ ನಂದಿಕೋಲು ಹಿಡಿದು ನಿಲ್ಲುವ ಪರಿಪಾಠವಿದೆ. ಹಾಗಾದಾಗ, ನೆಲದ ಮೇಲೆ ನಿಂತವನು ಎರಡು ಭಾರಗಳನ್ನೂ ಸಹಿಸಿಕೊಂಡು ಕುಣಿಯಬೇಕಾಗುತ್ತದೆ. ಇದು ಶ್ರಮದ ಕೆಲಸ. ಆದರೆ ಕುಣಿಯುವ ವ್ಯಕ್ತಿ ಆವೇಶದಲ್ಲಿ ಸರಾಗವಾಗಿ ಕುಣಿಯುತ್ತಾನೆ. ಜೋಡಿ ನಂದಿಕೋಲುಗಳನ್ನು ಬಳಸುವುದು ಎಲ್ಲ ಕಡೆಯೂ ಕಂಡು ಬರುವ ಪದ್ಧತಿ.

ನಂದಿಕೋಲಿನ ಕುಣಿತದ ಜೊತೆ ಕರಡೆ, ಡೊಳ್ಳು, ಸೊನಾಮಿ, ಶ್ರುತಿ, ತಾಳ, ಚಮ್ಮಾಳ ಮುಂತಾದ ವಾದ್ಯವಿಶೇಷಗಳನ್ನು ಬಳಸುವರು. ಈ ವಾದ್ಯಗಳೊಂದಿಗೆ ತಮಟೆ ಬಳಸಬಾರದೆಂಬ ನಂಬಿಕೆ ಇದೆ. ಆದರೆ ಇಂಥ ವಾದ್ಯಗಳ ಪರಿಚಯ ಇಲ್ಲದ ಕಡೆ ತಮಟೆಗಳನ್ನೇ ಬಳಸುತ್ತಾರೆ.

ನಂದಿಕೋಲನ್ನು ಹೊತ್ತು ಕುಣಿಯುವ ವ್ಯಕ್ತಿ ಕುಣಿಯುವಾಗ ಅಥವಾ ಮೆರೆಸುವಾಗ ಅದು ಬೀಳದಂತೆ ಎಚ್ಚರ ವಹಿಸಬೇಕಾಗುತ್ತದೆ. ಒಂದು ಪಕ್ಷ ಕಳಸವೋ ನಂದಿ ವಿಗ್ರಹವೋ ಅಥವಾ ಯಾವೊಂದು ಭಾಗವೋ ಕೆಳಕ್ಕೆ ಬಿದ್ದರೆ ಊರಿಗೆ ಕೆಟ್ಟದ್ದಾಗುತ್ತದೆ ಎಂಬ ನಂಬಿಕೆಯಿದೆ.

ಅಲ್ಲದೆ ಬೀಳಿಸಿದವನಿಗೆ ದಂಡ ಹಾಕುವ ಪದ್ಧತಿಯೂ ಕೆಲವೆಡೆ ಕಂಡುಬರುತ್ತದೆ. ನಂದಿಕೋಲನ್ನು ವರ್ಷದ ಇಂತಿಂಥ ವಿಶೇಷ ದಿನಗಳಲ್ಲಿ ಮೆರೆಸಬೇಕೆಂಬ ಸಂಪ್ರದಾಯವುಂಟು. ಕೆಲವು ಸಲ ಹರಕೆ ಹೊತ್ತವರೂ ಆಗಾಗ ಮೆರೆಸುತ್ತಾರೆ.

ಸಾಮಾನ್ಯವಾಗಿ ನಂದಿಕೋಲಿಗಾಗಿ ಬಳಸುವ ನೇರವಾದ ಬೊಂಬನ್ನು ಮಲೆನಾಡು ಪ್ರದೇಶದಿಂದ ತರಿಸುವರು. ಬೊಂಬನ್ನು ಪೂಜೆ ಮಾಡಿ ಕಡಿದು ಅದನ್ನು ನೆಲಕ್ಕೆ ಸೋಂಕಿಸದೆ ತಂದು ದೇವಾಲಯದ ಮುಂದೆ ಮತ್ತೆ ಅದಕ್ಕೆ ಪೂಜೆ ಮಾಡಿ ಮಳೆ ಬಿಸಿಲುಗಳಿಗೆ ಬೀಳದಂತೆ ದೇವಾಲಯದಲ್ಲಿಡುತ್ತಾರೆ. ಹೆಚ್ಚು ಎತ್ತರವಿರುವ ನಂದಿಕೋಲುಗಳು ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯ ತಿಪ್ಪೇಸ್ವಾಮಿ ದೇವಾಲಯ, ಮೈಸೂರು ಅರಮನೆ, ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಕೊಟ್ಟೂರೇಶ್ವರ ದೇವಾಲಯ ಮೊದಲಾದ ಕಡೆಗಳಲ್ಲಿ ಕಂಡುಬರುತ್ತವೆ. (ಕೆ.ಆರ್.)

**ನಂದಿತಾವರೆ :** ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಒಂದು ಗ್ರಾಮ. ಹರಿಹರ ಮಲೆಬೆನ್ನೂರು ರಸ್ತೆಯಲ್ಲಿ 13 ಕಿಮೀ ದೂರದಲ್ಲಿದೆ.

ಇಲ್ಲಿರುವ ಅಮೃತಲಿಂಗಮಾಣಿಕೇಶ್ವರ ದೇವಾಲಯ ಚಿಕ್ಕದಾದರೂ ಸುಂದರವಾದ ಹೊಯ್ಸಳ ಶೈಲಿಯ ಕೃತಿ. ಹೊಯ್ಸಳ ಅಧಿಕಾರಿಯಾಗಿದ್ದ ಮಾಣಿಕಣ್ಣ ಎಂಬುವನು ಸು. 1220ರಲ್ಲಿ ಈ ದೇವಾಲಯವನ್ನು ಕಟ್ಟಿಸಿದಂತೆ ತೋರುತ್ತದೆ. ಬಳಪದ ಕಲ್ಲಿನ ಈ ಕಟ್ಟಡದಲ್ಲಿ ಪ್ರಧಾನ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಉತ್ತರದ ಕಡೆ ಇನ್ನೊಂದು ಚಿಕ್ಕ ಗುಡಿ ಇದೆ. ನವರಂಗದ ಮುಂಭಾಗ ಮತ್ತು ಇದರ ಮುಂದಿದ್ದ ಅರ್ಧಮಂಟಪ ಈಚೆಗೆ ನವೀಕೃತವಾಗಿವೆ. ಗರ್ಭಗೃಹ ಚೌಕಾಕಾರವಾಗಿದ್ದು ಅದರ ಹೊರಗೋಡೆಗಳ ಮೇಲೆ ಅರೆಗಂಬಗಳ ಅಲಂಕಾರವಿದೆ. ಅಧಿಷ್ಠಾನ ಭಾಗದಲ್ಲಿ ಐದೂ ಶಿಲ್ಪಪಟ್ಟಿಕೆಗಳಿವೆ. ಭಿತ್ತಿಯ ಮೇಲೆ ಇಂದ್ರ, ಭೈರವ, ರತಿ, ಮನ್ಮಥ, ನೃತ್ಯಗಣಪತಿ, ದಕ್ಷಿಣಾಮೂರ್ತಿ ಮೊದಲಾದ ಶಿಲ್ಪಗಳಿವೆ. ನವರಂಗ ಮತ್ತು ಗರ್ಭಗೃಹದ ದ್ವಾರಬಂಧಗಳನ್ನು ನಾಜೂಕಾಗಿ ಕೆತ್ತಲಾಗಿದೆ. ದ್ವಾರದ ಸುಕನಾಸಿಯ ಮೇಲೆ ತಾಂಡವೇಶ್ವರ ವಿಗ್ರಹ, ಅದರ ಅಕ್ಕಪಕ್ಕಗಳಲ್ಲಿ ಬ್ರಹ್ಮ ಮತ್ತು ವಿಷ್ಣು ವಿಗ್ರಹಗಳು, ಬಾಗಿಲಿನ ಎಡಗಡೆ ಮಹಿಷಾಸುರಮರ್ದಿನಿಯ ವಿಗ್ರಹ ಇವೆ. ನವರಂಗದಲ್ಲಿ ಬಲಗಡೆ ಸರಸ್ವತಿ ಮತ್ತು ಸಪ್ತಮಾತೃಕೆಯರು, ಎಡಗಡೆ ಸುಬ್ರಹ್ಮಣ್ಯ, ಉಮಾಮಹೇಶ್ವರ ಮತ್ತು ನಾಗದಂಪತಿ ವಿಗ್ರಹಗಳೂ ಎಡಗಡೆಯ ಅಂಕಣವೊಂದರಲ್ಲಿ 41/2 ಎತ್ತರದ ಸುಂದರವಾದ ವಿಷ್ಣು ವಿಗ್ರಹಗಳೂ ಇವೆ. ದೇವಾಲಯದ ಮಧ್ಯಚಾವಣಿಯ ಮೇಲೆ ಅಷ್ಟದಿಕ್ಪಾಲಕರ ವಿಗ್ರಹಗಳೂ ದೇವಾಲಯದ ಎದುರಿಗೆ ನಂದಿಯೂ ಇವೆ. ಗರ್ಭಗುಡಿ ಮತ್ತು ಸುಕನಾಸಿಯ ಹೊರಗೋಡೆಗಳ ಮೇಲೆ ಶಿವ, ಗಣಪತಿ, ವೀರಭದ್ರ, ಹನುಮಂತ, ದಕ್ಷಿಣಾಮೂರ್ತಿ ಮತ್ತು ಮೋಹಿನಿ ವಿಗ್ರಹಗಳು ಹಾಗೂ ಆನೆ ಮತ್ತು ಶಾರ್ದೂಲಗಳ ಸಾಲುಗಳಿವೆ. ನವರಂಗದಲ್ಲಿ ತಿರುಗಣೆಯಿಂದ ಮಾಡಿದ ನಾಲ್ಕು ಕಂಬಗಳಿವೆ. ನವರಂಗಕ್ಕೆ ಸೇರಿದಂತೆ ಉತ್ತರಕ್ಕಿರುವ ಚಿಕ್ಕ ಗುಡಿಯಲ್ಲಿ ಒಂದು ಕೇಶವ ವಿಗ್ರಹವಿದೆ. ದೇವಾಲಯದ ಮುಂಭಾಗದಲ್ಲಿ ಒಂದು ಚಿಕ್ಕ ಗುಡಿಯಿದ್ದು ಇದರಲ್ಲಿ ಹೊಯ್ಸಳ ಕಾಲದ ನಂದಿ ಶಿಲ್ಪವಿದೆ.

ಈ ದೇವಾಲಯದಲ್ಲಿ ಎಲೆಚಟ್ಟು ಎಂಬ 1.1 ಮೀ ಉದ್ದ 0.6 ಮೀ ಅಗಲದ ಚಿತ್ತಾರದ ಮರದ ಚೌಕಟ್ಟು ಇದೆ. ಸಣ್ಣ ಕಿಂಡಿಗಳು ಮೇಲುಗಡೆ ಐದೂ ಹಿಡಿಗಳು ಇರುವ ಈ ಚೌಕಟ್ಟು ತಳಗಿನ ಸಣ್ಣ ಚಕ್ರದ ಮೇಲೆ ಚಲಿಸುತ್ತದೆ. ಹರಕೆ ಹೊತ್ತ ವೀಳ್ಯದೆಲೆಯ ತೋಟಗಾರರು ಈ ಕಿಂಡಿಗಳಲ್ಲಿ ವೀಳ್ಯದೆಲೆಗಳನ್ನಿಟ್ಟು, ಹಿಡಿಗಳಿಗೆ ಸಹ ಎಲೆಗಳನ್ನು ಸುತ್ತಿ ಹಿಡಿಗಳ ಸಹಾಯದಿಂದ ಚೌಕಟ್ಟನ್ನು ಚಲಿಸಿ ಪೂಜೆಯನ್ನು ಸಲ್ಲಿಸುತ್ತಾರೆ. ಈ ಪೂಜೆಗೆ ಅಗತ್ಯವಾದ ಎಲೆಗಳು 2,000 ಪೂಜೆಯಾದ ಮೇಲೆ ಗ್ರಾಮಸ್ಥರಿಗೆ ಆ ವೀಳ್ಯಗಳನ್ನು ಹಂಚುತ್ತಾರೆ. ಎಲೆಯ ತೋಟಗಳಿಗೆ ಕ್ರಿಮಿ ಕೀಟಗಳು ತಾಕದಿರಲಿ ಎಂಬುದು ಎಲೆಚಟ್ಟು ಪೂಜೆಯ ಉದ್ದೇಶ.

(ವಿ.ಜಿ.ಕೆ.)

**ನಂದಿದುರ್ಗ :** ಕೋಲಾರ ಜಿಲ್ಲೆಯ ಪ್ರಸಿದ್ಧ ಗಿರಿಧಾಮ ಮತ್ತು ಐತಿಹಾಸಿಕ ಸ್ಥಳ. ಬೆಂಗಳೂರಿನಿಂದ 60ಕಿಮೀ ದೂರದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಕಸಬೆಯಿಂದ ನೈರುತ್ಯಕ್ಕೆ 8ಕಿಮೀ ದೂರದಲ್ಲಿ ಇದೆ.

ನಂದಿದುರ್ಗ ಕೋಲಾರ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿರುವ ಗಿರಿಪಂಕ್ತಿಯ ದಕ್ಷಿಣಾಗ್ರದಲ್ಲಿರುವ ಬೆಟ್ಟ. ಸಮುದ್ರಮಟ್ಟದಿಂದ 1,478 ಮೀ ಎತ್ತರವಿರುವ ಬೆಟ್ಟ ಆ ಶ್ರೇಣಿಯ ಅತಿ ದೊಡ್ಡ ಬೆಟ್ಟವೂ ಹೌದು. ಪಾಲಾರ್, ಚಿತ್ರಾವತಿ, ಅರ್ಕಾವತಿ, ಪಾಪಾಘ್ನಿ, ಉತ್ತರ ಮತ್ತು ದಕ್ಷಿಣ ಪಿನಾಕಿನಿ ನದಿಗಳು ಈ ಬೆಟ್ಟದಿಂದ ಉಗಮಿಸುತ್ತವೆ. ಪಕ್ಕದ ಬೆಟ್ಟಗಳೊಡನೆ ಹೊಂದಿಕೊಂಡಂತೆ ಇರುವ ಪಶ್ಚಿಮ ಭಾಗವನ್ನು ಬಿಟ್ಟು ಇತರೆಡೆ ಬಹು ಕಡಿದಾದ ಪಾರ್ಶ್ವಗಳಿರುವ ಈ ಬೆಟ್ಟ ನೆಲದಿಂದ ಮೇಲೆದ್ದ ಬೃಹತ್ ಬಂಡೆಯಂತೆ ಕಾಣುತ್ತದೆ. ಬೆಟ್ಟದ ನೆತ್ತಿಯಿಂದ ನೇರವಾಗಿ ಆಳಕ್ಕೆ ಇಳಿಯುವ ನೈರುತ್ಯ ಪಾರ್ಶ್ವವನ್ನು 'ಟಿಪ್ಪು ಡ್ರಾಪ್' ಎಂದು ಕರೆಯುತ್ತಾರೆ (ಟಿಪ್ಪು ಸೆರೆಹಿಡಿದ ಶತ್ರುಗಳನ್ನು ಇಲ್ಲಿಂದ ಕೆಳಕ್ಕೆ ತಳ್ಳುತ್ತಿದ್ದನಂತೆ). ಉತ್ತರದ ಬೆಟ್ಟದಲ್ಲಿರುವ ಇದೇ ರೀತಿಯ, ಆದರೆ ಇದಕ್ಕಿಂತ ಚಿಕ್ಕದಾದ, ಒಂದು ಕಮರಿಗೆ 'ಹೈದರ್ ಡ್ರಾಪ್' ಎಂಬ ಹೆಸರಿದೆ. ಬೆಟ್ಟದ ಮೇಲೆ ಹತ್ತಲು ಹಿಂದೆ ಯಾತ್ರಾರ್ಥಿಗಳು ಉಪಯೋಗಿಸುತ್ತಿದ್ದ ಒಂದು ಮೆಟ್ಟಲು ಹಾದಿ ಇದೆ. ಇದು ಕೆಳಗಿನ ನಂದಿ ಗ್ರಾಮದಿಂದ ಹೊರಟು ಉತ್ತರ ಪಾರ್ಶ್ವದಲ್ಲಿ ಹಾದು ಪಶ್ಚಿಮದೆಡೆಯಿಂದ ಮೇಲಕ್ಕೆ ಬರುತ್ತದೆ. ಈಗ ಉತ್ತರದೆಡೆಯಿಂದಲೇ ನೇರವಾಗಿ ಬರುವ ಒಂದು ಮೆಟ್ಟಲು ಹಾದಿ ಸಹ ಇದೆ. ಉತ್ತರದ ಕಡೆಯಿಂದ ಪಶ್ಚಿಮದತ್ತ ಹತ್ತಿ ಮೇಲೆ ಬರುವ 6 ಕಿಮೀ ಉದ್ದದ ಒಂದು ಸವಾರಿ ಹಾದಿ ಸಹ ಇದೆ. ದುರ್ಗದ ವಾಯವ್ಯದಲ್ಲಿ ಬಸವನ ಕಣಿವೆ ಎಂಬ ಸ್ಥಳದಲ್ಲಿ ಇದಕ್ಕೆ ಇನ್ನೊಂದು ಸವಾರಿ ಹಾದಿ ಬಂದು ಕೂಡುತ್ತದೆ (ಇದರ ಬಳಿಯಲ್ಲಿ ಒಂದು ದೊಡ್ಡ ಬಸವನ ವಿಗ್ರಹ ಇದೆ). ಇವಲ್ಲದೆ ಮೇಲೆ ಹತ್ತಲು ಬಹು ಸಮೀಪವಾಗಿರುವ ದಕ್ಷಿಣದೆಡೆಯಿಂದ ಬರುವ ಇನ್ನೂ ಒಂದು ಮೆಟ್ಟಲು ಹಾದಿ ಇದೆ. ಈಗ ಬೆಟ್ಟದ ಮೇಲಕ್ಕೆ ಹೋಗಲು ಉತ್ತಮವಾದ ಮೋಟಾರ್ ಹಾದಿಯನ್ನೂ ಮಾಡಲಾಗಿದೆ.

ಬೆಟ್ಟದ ಮೇಲೆ ಹೋದಾಗ ಮೊದಲು ಕಾಣಸಿಗುವುದು ದೊಡ್ಡ ಬಯಲಿನ ಮಧ್ಯದಲ್ಲಿರುವ ಅಮೃತಸರೋವರವೆಂಬ ಕೊಳ. ಚೌಕಾಕಾರದ ಈ ಕೊಳದ ಮೆಟ್ಟಲುಗಳು ತಳಭಾಗಕ್ಕೆ ಇಳಿದಂತೆಲ್ಲ ಕಿರಿದಾಗುತ್ತ ಹೋಗುತ್ತದೆ. ಊಟೆಯೊಂದು ಇರುವ ಕಾರಣ ಇಲ್ಲಿ ಸದಾ ನೀರು ಇರುವುದು. ಇಲ್ಲಿ ಇನ್ನೂ ಎರಡು ಕೊಳಗಳು-ಪಾತಾಳಗಂಗೆ, ಅಂತರಗಂಗೆ ಇವೆ. ಅಮೃತಸರೋವರದ ಬಳಿ ಇರುವ ಚಬೂತರ ಎಂಬ ಒಂದು ಕಟ್ಟೆಯನ್ನು ಟಿಪ್ಪು ಪ್ರಾರ್ಥನೆ ಮಾಡಲು ಉಪಯೋಗಿಸುತ್ತಿದ್ದನಂತೆ. ಅನತಿದೂರದಲ್ಲಿ ಟಿಪ್ಪು ಇಲ್ಲಿ ಬಂದಾಗ ತಂಗುತ್ತಿದ್ದನೆನ್ನಲಾಗಿದ ಟಿಪ್ಪು ಲಾಡ್ಜ್ ಇದೆ. ಅಲ್ಲದೆ ಸುತ್ತಮುತ್ತಲಿನ ಪ್ರಾಚೀನ ಕಾಲದ ಕೋಟೆಕೊತ್ತಲಗಳ ಅವಶೇಷಗಳಿವೆ.

ಬೆಟ್ಟದ ಮೇಲೆ ಯೋಗನಂದೀಶ್ವರ ದೇವಾಲಯವಿದೆ. ಇಲ್ಲಿ ಶಿವನು ಯೋಗ ದೀಕ್ಷೆಯಲ್ಲಿರುವುದರಿಂದ ಉತ್ಸವಗಳು ನಡೆಯುವುದಿಲ್ಲ; ಉತ್ಸವಮೂರ್ತಿಯೂ ಇಲ್ಲ. ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಕಲ್ಯಾಣಮಂಟಪಗಳನ್ನೊಳಗೊಂಡ ಈ ದೇವಾಲಯವನ್ನು ಚೋಳರ ಕಾಲದಲ್ಲಿ ಕಟ್ಟಲಾಯಿತೆಂದು ಹೇಳುತ್ತಾರಾದರೂ ಇದಕ್ಕೆ ಸಾಕಷ್ಟು ಆಧಾರಗಳಿಲ್ಲ. ಸುಕನಾಸಿಯ ಬಾಗಿಲುವಾಡದ ಹಿತ್ತಾಳೆ ಚೌಕಟ್ಟಿನಲ್ಲಿ ಅನೇಕ ಚಿತ್ರಗಳನ್ನು ಕೆತ್ತಿದೆ. ಎರಡು ಪಕ್ಕಗಳಲ್ಲಿಯೂ 5 ಅಡಿ ಎತ್ತರದ ಲೋಹದ ದ್ವಾರಪಾಲಕ ವಿಗ್ರಹಗಳು ಇವೆ. ಇವು ವಿಜಯನಗರದ ಕೃಷ್ಣದೇವರಾಯನ ಕಾಣಿಕೆ. ನವರಂಗದ ಉತ್ತರದ ಬಾಗಿಲಿನ ಮುಂದೆ ಕಲ್ಯಾಣಮಂಟಪ, ಸುಕನಾಸಿಯ ದಕ್ಷಿಣಕ್ಕೆ ಇನ್ನೊಂದು ಮಂಟಪ ಇವೆ. ಇದರಲ್ಲಿ ಲಿಂಗೋದ್ಭವ ಮೂರ್ತಿ, ಗಜಸಂಹಾರ ಮೂರ್ತಿ, ದುರ್ಗಾ, ಮಹಿಷಾಸುರ ಮರ್ದಿನಿ, ನಾಟ್ಯಗಣಪತಿ ಮುಂತಾದ ವಿಗ್ರಹಗಳಿವೆ. ಸಮಪ್ರಮಾಣದ ಆಕರ್ಷಕ ಮೂರ್ತಿಗಳಿವು. ಇಲ್ಲಿನ ದೇವಿಯ ಗುಡಿಯಲ್ಲಿ

ಕಾಣುವುದು ಮುಕ್ತಾಂಬೆಯ ವಿಗ್ರಹ. ಈ ಬೆಟ್ಟದ ಮೇಲೆ ತಪಸ್ಸು ಮಾಡಿ ಮುಕ್ತಿ ಪಡೆದಳಾದ ಕಾರಣ ಈ ಹೆಸರು ಎಂಬುದು ಸಾಂಪ್ರದಾಯಿಕ ಕಥೆ.

ನಂದಿದುರ್ಗ ಗಂಗರ ಕಾಲದಿಂದಲೂ ಪ್ರಸಿದ್ಧವಾಗಿದೆ. ಗಂಗರನ್ನು ಶಾಸನಗಳಲ್ಲಿ ನಂದಗಿರಿನಾಥರೆಂದೇ ಕರೆಯಲಾಗಿದೆ. ಆದರೆ ಆ ಕಾಲದ ಅವರ ಶಾಸನಗಳಾವವೂ ಇಲ್ಲಿ ಲಭಿಸದಿರುವುದು ಆಶ್ಚರ್ಯಕರ. ನಂದಿ ಗ್ರಾಮದಲ್ಲಿ ದೊರೆತ ತಾಮ್ರ ಶಾಸನೊಂದರಲ್ಲಿ ನಂದಿಗಿರಿಯಲ್ಲಿಯ ಮಠದ ಸ್ಥಾನಾಧಿಪತಿಯಾದ ಕಾಳಾ ಮುಖರ ಗುರು ಈಶ್ವರದಾಸ ದಾನವನ್ನು ಸ್ವೀಕರಿಸಿದನೆಂದಿದೆ. ಆದ್ದರಿಂದ ಕಾಳಾಮುಖರಿಗೆ ಇದು ಪವಿತ್ರವಾದ ಸ್ಥಳವಾಗಿತ್ತೆನ್ನಬಹುದು. ಜೈನಮತಾವಲಂಬಿಗಳಾದ ಗಂಗರ ಕಾಲದಲ್ಲೂ ಇದು ಆನಂದಗಿರಿ ಎನಿಸಿಕೊಂಡಿತ್ತೆಂದೂ ವೃಷಭ ತೀರ್ಥಂಕರರ ಹೆಸರಿನಿಂದ ವೃಷಭ ಪರ್ವತವೆಂಬ ಹೆಸರನ್ನು ಪಡೆದಿತ್ತೆಂದೂ ಪ್ರತೀತಿಗಳಿವೆ. ಸ್ಥಳಪುರಾಣಗಳಲ್ಲಿ ಈ ದುರ್ಗವನ್ನು ಶೃಂಗಿಪರ್ವತ, ಕೂಷ್ಮಾಂಡ ಪರ್ವತವೆಂದು ಕರೆಯಲಾಗಿದೆ. ಕೂಷ್ಮಾಂಡಋಷಿ ಇಲ್ಲಿ ನೆಲೆಸಿದ್ದು ಶಿವನನ್ನು ಪೂಜಿಸುತ್ತಿದ್ದನೆಂಬುದೊಂದು ನಂಬಿಕೆ ಇಲ್ಲಿ ಪ್ರಚಲಿತವಾಗಿದೆ. ಯೋಗ ನಂದೀಶ್ವರಾಲಯದ್ದಲ್ಲಿರುವ ಹಲವಾರು ವಿಗ್ರಹಗಳಲ್ಲಿ ಒಂದನ್ನು ಕೂಷ್ಮಾಂಡ ಋಶಷಿಯದೆಂದು ತೋರಿಸುತ್ತಾರೆ.

17ನೆಯ ಶತಮಾನದ ಶಾಸನವೊಂದರಿಂದ ಇಲ್ಲಿನ ಅತ್ಯುನ್ನತವೂ ಅಭೇದ್ಯವೂ ಆದ ನಂದಿ ಎಂಬ ಗಿರಿಯನ್ನು ಬಳ್ಳಾಪುರದ ರಾಜರು ದುರ್ಗವನ್ನಾಗಿ ಮಾಡಿದರು ಎಂದು ಹೇಳಿದೆ. ಚಿಕ್ಕಬಳ್ಳಾಪುರದ ಪಾಳೆಯಗಾರನಾಗಿದ್ದ ಚಿಕ್ಕಬೈರೇಗೌಡನ ಮಗ ಮರಿಗೌಡ ಇಲ್ಲಿಯ ಕೋಟೆಯನ್ನು ಕಟ್ಟಿಸಿದ. ಶಿವಾಜಿಯ ಮಗ ಸಾಂಬಾಜಿಯ ಆಳ್ವಿಕೆಯಲ್ಲಿ ರಘುನಾಥ ಪಾಂಡೆಯ ಅಣತಿಯಂತೆ ಬಾಲಾಜಿ ಕೃಷ್ಣ ಈ ದುರ್ಗದ ಮೇಲ್ವಿಚಾರಣೆ ವಹಿಸಿಕೊಂಡ. ಟಿಪ್ಪುಸುಲ್ತಾನ್ ಇಲ್ಲಿನ ಕೋಟೆಕೊತ್ತಳಗಳನ್ನು ಮತ್ತಷ್ಟು ಬಲಪಡಿಸಿದ. ಈಗ ಇಲ್ಲಿ ಕಾಣು ಕೋಟೆಯ ಅವಶೇಷಗಳು ಬಹು ಮಟ್ಟಿಗೆ ಟಿಪ್ಪುಸುಲ್ತಾನರ ಕಾಲದವು. 1791ರಲ್ಲಿ ಈ ದುರ್ಗವನ್ನು ಬ್ರಿಟಿಷರು ಆಕ್ರಮಿಸಿದರು. ಇದರ ನೆನಪಿಗಾಗಿ ಎಂಬಂತೆ, ಕೋಟೆಯನ್ನು ಆಕ್ರಮಿಸಲು ಅವರು ಸಾಧಿಸಿದ ಒಂದು ಬಿರುಕಿನ ಬಳಿ 10th Oct. 1791, BREACH ಎಂದು ಬರೆಯಲಾಗಿದೆ. ಕೋಟೆಯ ಒಳಗಡೆ ಕುದುರೆಯ ಲಾಯಗಳು, ಮದ್ದು ಗುಂಡುಗಳ ಉಗ್ರಾಣ ಇವೆ.

ತಂಪು ಹವೆ, ಸುತ್ತಲ ಅರಣ್ಯಭರಿತ ಸುಂದರ ಪ್ರಕೃತಿ, ಚಾರಿತ್ರಿಕ ಸ್ಮಾರಕಗಳಿಂದ ಶೋಭಿಸುವ ನಂದಿದುರ್ಗಗಳ ಬೇಸಗೆಯ ತಂಗುದಾಣವಾಗಿ ಜನಪ್ರಿಯವಾಗಿದೆ. ವರ್ಷಪೂರ್ತ ಇಲ್ಲಿನ ಹವೆ ಹಿತವಾಗಿರುತ್ತದೆ. ಈ ಬೆಟ್ಟದ ಮೇಲಿನ ಉಷ್ಣಾಂಶ ಸು. 550 ಮೀಟರು ಕೆಳಗಿರುವ ಸುತ್ತಲ ಬಯಲುಪ್ರದೇಶಕ್ಕಿಂತ ಯಾವಾಗಲೂ ಸು. $10^0$ ಸೆ. ನಷ್ಟು ಕಡಿಮೆ ಇರುತ್ತದೆ. ಇಲ್ಲಿನ ಅತಿ ಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶ ಕ್ರಮವಾಗಿ ಬೇಸಗೆಯಲ್ಲಿ $29^0$ ಸೆ. $23^0$ ಸೆ. ಮತ್ತು ಚಳಿಗಾಲದಲ್ಲಿ $21^0$ ಸೆ. $11^0$ ಸೆ. 1799-1808ರಲ್ಲಿ ಬೆಟ್ಟದ ಬುಡದಲ್ಲಿ ಬ್ರಿಟಿಷ್ ದಂಡು ನೆಲಸಿದ್ದಾಗಿನಿಂದ ಬೇಸಗೆ ದಿನಗಳಲ್ಲಿ ಬ್ರಿಟಿಷ್ ಅಧಿಕಾರಿಗಳು ಇಲ್ಲಿ ಬಂದು ತಂಗುತ್ತಿದ್ದರು. ಬೆಟ್ಟದ ಮೇಲೆ ಅಮೃತಸರೋವರದ ಬಳಿ ಇರುವ ಹಣ್ಣಿನ ತೋಟ ಆ ಕಾಲದಲ್ಲಿ ಕರ್ನಲ್ ಕ್ಯುಪ್ರೇಜ್ ಎಂಬುವನು ಬೆಳೆಸಿದ್ದು. 19ನೆಯ ಶತಮಾನದಲ್ಲಿ ಬ್ರಿಟಿಷರು ತಮ್ಮ ವಾಸಕ್ಕಾಗಿ ಕಟ್ಟಿಸಿಕೊಂಡಿದ್ದ ಮನೆಗಳು ಇಲ್ಲಿವೆ. ಕರ್ನಲ್ ಹಿಲ್‌ನ 'ಗ್ಲೆನ್‌ಟಿಲ್ಟ್' 'ಮಾರ್ಕ್ ಕಬ್ಬನ್ನನ' 'ಕಬ್ಬನ್ ಹೌಸ್', ಕ್ಯಾಪ್ಟನ್ ಕನಿಂಗ್‌ಹ್ಯಾಮ್‌ನ ಓಕ್ ಲ್ಯಾಂಡ್ಸ್ ಮುಖ್ಯವಾದವು. (ಕನಿಂಗ್ ಹ್ಯಾಮ್ ಕಟ್ಟಿಸಿದ ಮನೆಯಲ್ಲಿ ಮಹಾತ್ಮಾ ಗಾಂಧಿಯವರು ತಂಗಿದ್ದುದರಿಂದ ಈಗ ಅದನ್ನು ಗಾಂಧೀನಿಲಯ ಎಂದು ಕರೆಯಲಾಗುತ್ತಿದೆ). ಇವಲ್ಲದೆ ಪ್ರವಾಸಿಗರ ತೋಟಗಾರಿಕೆಗಾಗಿ ಉತ್ತಮವಾಗಿ ಸಜ್ಜುಗೊಳಿಸಿದ ಅನೇಕ ಬಂಗಲೆಗಳು ಇಲ್ಲಿವೆ. ಇವು ರಾಜ್ಯದ ಇಲಾಖೆಯ ಅಧೀನದಲ್ಲಿವೆ. ರಾಜ್ಯದ ಪ್ರವಾಸೋದ್ಯಮ ಇಲಾಖೆ ಸಹ ಇಲ್ಲಿ ಕುಟೀರಗಳನ್ನು ಕಟ್ಟಿರುವುದಲ್ಲದೆ ಒಂದು ಉಪಾಹಾರಗೃಹವನ್ನೂ ನಡೆಸುತ್ತಿದೆ

(ಬಿಆರ್‌.ಜಿ)

**ನಂದಿನಾಥ :** ಸು.1745 ವೀರಶೈವ ಕವಿ. ವಲ್ಲೀಕಂಠಾಭರಣ ಎಂಬ ಕೃತಿಯ ಕರ್ತೃ. ಕಾವ್ಯದಲ್ಲಿ ತನ್ನ ಪರಂಪರೆಯನ್ನು ಹೇಳಿಕೊಂಡಿರುವುದರಿಂದ ಈತನ ತಂದೆ ವೀರಭದ್ರೇಶನೆಂದೂ ತಾಯಿ ಕಾಳಿಕಾಂಬೆ ಎಂದೂ ತಿಳಿಯುತ್ತದೆ. ಈತನ ವಿದ್ಯಾಗುರು ಪುಟ್ಟವರ್ಯ. ವಲ್ಲೀಕಂಠಾಭರಣ ಯಕ್ಷಗಾನ ಕೃತಿಯಂತಿದ್ದು 9 ಸ್ಥಲಗಳನ್ನೂ 1610 ಕಂದವೃತ್ತಪದ್ಯಗಳನ್ನೂ ಒಳಗೊಂಡಿದೆ. ಇದನ್ನು ಕ್ರೋಧನ ಸಂವತ್ಸರದಲ್ಲಿ ಬರೆದು ಮುಗಿಸಿದಂತೆ ತಿಳಿಯುತ್ತದೆ. ಈ ಕಾವ್ಯದಲ್ಲಿ ಮುಖ್ಯವಾಗಿ ಷಣ್ಮುಖನ ದಿಗ್ವಿಜಯ, ವಲ್ಲೀಪರಿಣಯ ವರ್ಣಿತವಾಗಿವೆ. ಕಥೆ ಸೂತಮಹಾಪುರಾಣಿಕ ಶೌನಕಾದಿಗಳಿಗೆ ಹೇಳಿದಂತಿದೆ. ಪೂರ್ವಕವಿಗಳಲ್ಲಿ ಸೋಮಾರಾಧ್ಯ, ನಿಜಗುಣ, ಷಡಕ್ಷರದೇವ ಇವರನ್ನು ಸ್ಮರಿಸಿದ್ದಾನೆ.

**ನಂದಿನಿ [1]:** ಅಭಿನಯಶ್ರೇಷ್ಠತೆಗೆ ಊರ್ವಶಿ ಪ್ರಶಸ್ತಿ ಪಡೆದ ಕನ್ನಡ ಚಿತ್ರನಟಿ. ಇವರು ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ನಂಬಿಯಾರರ ಮಗಳು.ಇವರ ಹುಟ್ಟು ಹೆಸರು ಹೇಮಾ, ತಾರಾ ನಾಮ ನಂದಿನಿ, ಬಾಲ್ಯದಿಂದಲೂ ಸಂಗೀತ, ಸಾಹಿತ್ಯ, ನೃತ್ಯಗಳಲ್ಲಿ ಇವರಿಗೆ ತೀವ್ರ ಆಸಕ್ತಿ. ಕೇರಳದಲ್ಲಿ ಜನಿಸಿದ್ದರೂ ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ನಡೆಸಿದರು. ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ಮದುವೆಯಾದರು. ಬೆಂಗಳೂರಿನ ಚಿತ್ರ ಹಂಚಿಕೆದಾರರೂ ಕರ್ನಾಟಕ ಫಿಲ್ಮ್ ಚೆಂಬರಿನ ಅಧ್ಯಕ್ಷರಾಗಿದ್ದ ಮತ್ತು ಫಿಲ್ಮ್ ಫೆಡರೇಷನ್ ಆಫ್ ಇಂಡಿಯದ ಅಧ್ಯಕ್ಷರೂ ಆಗಿದ್ದ, ಭಕ್ತವತ್ಸಲಂ ಇವರ ಪತಿ. ಗಿರೀಶ್ ಕಾರ್ನಾಡ್ ನಿರ್ದೇಶಿಸಿರುವ ಕಾಡು (1974) ಒಂದೇ ನಂದಿನಿ ಅಭಿನಯಿಸಿರುವ ಚಿತ್ರ. ಅದಕ್ಕೆ ಮುನ್ನ ಇವರಿಗೆ ಅಭಿನಯದ ಅನುಭವವಿರಲಿಲ್ಲ. ರಂಗವೇದಿಕೆಯನ್ನು ಹತ್ತಿರದವರೂ ಅಲ್ಲ. ಕಾಡು ಚಿತ್ರದಲ್ಲಿನ ಗೌಡಿತಿಯ ಹೆಚ್ಚು ಮಾತಿಲ್ಲದ ಪಾತ್ರದಲ್ಲಿ ಮುಖಭಾವಗಳಿಂದಲೇ ಅಭಿವ್ಯಕ್ತಿ ನೀಡಿ ಒಳ್ಳೆಯ ಅಭಿನಯದಿಂದಾಗಿ ರಾಜ್ಯಮಟ್ಟದ ಪ್ರಶಸ್ತಿ ಗಳಿಸಿದರು. ರಾಷ್ಟ್ರಮಟ್ಟದಲ್ಲಿಯೂ ಸರ್ವೋತ್ತಮ ಅಭಿನಯಪ್ರಶಸ್ತಿಯಾದ ಊರ್ವಶಿಯನ್ನೂ ಪಡೆದ ಏಕೈಕ ಕನ್ನಡ ಕಲಾವಿದೆ.

*

**ನಂದಿನಿ [2]:** ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಿಂದ ಈ ಹೆಸರಿನ ಒಂದು ಮಾಸಪತ್ರಿಕೆಯೂ ಶಿರಸಿಯಿಂದ ಇದೇ ಹೆಸರಿನ ಒಂದು ವಾರಪತ್ರಿಕೆಯೂ ಪ್ರಕಟವಾಗುತ್ತಿದ್ದುವು. ನಂದಿನೀ ಮಾಸಪತ್ರಿಕೆಯ ಸಂಪಾದಕರು ನಾರಾಯಣ ಸುಬ್ರಹ್ಮಣ್ಯ ಶಾಸ್ತ್ರಿ ಭಡತಿ. ಅವರೇ ಇದರ ಪ್ರಕಾಶಕರು ಹಾಗೂ ಮುದ್ರಕರು. ಈ ಪತ್ರಿಕೆಗಾಗಿಯೇ ಅವರು ನಂದಿನೀ ಮುದ್ರಣಾಲಯವನ್ನು ಸ್ಥಾಪಿಸಿದರು. ಪತ್ರಿಕೆಯ ಪ್ರಥಮ ಸಂಚಿಕೆ ಶಾಲಿವಾಹನ ಶಕ 1847ನೆಯ ಕಾರ್ತೀಕ ಮಾಸ ಶುಕ್ಲಪಕ್ಷದಲ್ಲಿ 1925ರ ಅಕ್ಟೋಬರ್‌ನಲ್ಲಿ ಪ್ರಕಟವಾಯಿತು.

ಡಿಮ್ಮೆ 1/8 ಆಕಾರದ 30-40 ಪುಟಗಳಿಂದ ಕೂಡಿದ್ದ ಈ ಪತ್ರಿಕೆಯ ವಾರ್ಷಿಕ ಚಂದಾ ಅಂಚೆ ಸಹಿತ ರೂ. 2 ಪತ್ರಿಕೆಯ ಪ್ರಸಾರ ಸುಮಾರು ಒಂದೂವರೆ ಸಾವಿರ. ಈ ಪತ್ರಿಕೆ ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ವಿಚಾರಗಳಿಗೆ ಮೀಸಲಾಗಿತ್ತು. ಪತ್ರಿಕೆ ಹತ್ತು ವರ್ಷಗಳ ಕಾಲ ನಡೆದು ಸಂಪಾದಕರು ತೀವ್ರ ಕಾಯಿಲೆಗೆ ಒಳಗಾದ್ದರಿಂದ ಪ್ರಕಟಣೆ ನಿಂತುಹೋಯಿತು. ಮಾಸಪತ್ರಿಕೆ ನಿಂತ ಮೇಲೆ ಅದರ ಮುದ್ರಣಾಲಯ ಶಿರಸಿಗೆ ಸ್ಥಳಾಂತರಗೊಂಡಿತು. ನಂದಿನೀ ವಾರಪತ್ರಿಕೆ ಶಿರಸಿಯಿಂದ ಅದೇ ಮುದ್ರಣಾಲಯದಲ್ಲಿಅಚ್ಚಾಗಿ 1937ರ ಫೆಬ್ರವರಿ 9ರಿಂದ ಪ್ರಕಟವಾಗತೊಡಗಿತು. ಕ್ರೌನ್ 1/4 ಆಕಾರದ 8 ಪುಟಗಳೊಡನೆ ಪ್ರತಿ ಮಂಗಳವಾರ ಪ್ರಕಟವಾಗುತ್ತಿದ್ದ ಈ ಪತ್ರಿಕೆಗೆ ಡಿ.ಎಸ್.ವಿಶ್ವಾಮಿತ್ರರು ಸಂಪಾದಕರೂ, ಮಹಾಬಲೇಶ್ವರ ಕೃಷ್ಣಪ್ಪ ಹೆಗಡೆಯವರು ಪ್ರಕಾಶಕರೂ, ಸೀತಾರಾಮ ವಿಘ್ನೇಶ್ವರ ಭಡತಿಯವರು ಮುದ್ರಕರೂ ಆಗಿದ್ದರು. ಪತ್ರಿಕೆಯ ವಾರ್ಷಿಕ ಚಂದಾ ರೂ.3. ಬಿಡಿ ಪತ್ರಿಕೆಯ ಬೆಲೆ ಒಂದು ಆಣೆ (ಸು. ಆರು ಪೈಸೆ.) ಒಂದುವರೆ ಸಾವಿರಕ್ಕೂ ಹೆಚ್ಚು ಚಂದಾದಾರರಿದ್ದ ಈ

ಪತ್ರಿಕೆಯ ಸಂಪಾದಕೀಯ ಉಚ್ಚಮಟ್ಟದ್ದಾಗಿರುತ್ತಿತ್ತು. ಅರವಿಂದ, ರಮಣಮಹರ್ಷಿ, ರಾಮಕೃಷ್ಣಪರಮಹಂಸ ಮುಂತಾದವರ ತತ್ತ್ವಗಳ ಪ್ರತಿಪಾದನೆಗೆ ಪತ್ರಿಕೆಯಲ್ಲಿ ವಿಶೇಷ ಅವಕಾಶವಿತ್ತು.

ಪತ್ರಿಕೆಯಲ್ಲಿ ರಾಜಕೀಯ ಸಾಮಾಜಿಕ ವರದಿಗಳೂ ಕೃಷಿ ವಿಚಾರಗಳೂ ದೇಶ ವಿದೇಶಗಳ ವರ್ತಮಾನಗಳೂ, ಸ್ಥಾನಿಕ ಸುದ್ದಿಗಳೂ ಪ್ರಕಟವಾಗುತ್ತಿದ್ದವು. ಅಡಕೆ ತೋಟಗಾರರ ಸಮಸ್ಯೆಗಳೂ ಜಿಲ್ಲೆಯ ಅರಣ್ಯ ಸಂಕಷ್ಟಗಳೂ ಚರ್ಚಿಸಲ್ಪಡುತ್ತಿದ್ದವು.

ಅರಣ್ಯ ಪ್ರಧಾನವಾದ ಈ ಭಾಗದಲ್ಲಿ ಆಗ ಸಾರಿಗೆ ಸಂಪರ್ಕಗಳು ಬಹಳ ದುಸ್ತರವಾಗಿದ್ದವು. ಅಂಚೆ ವ್ಯವಸ್ಥೆ ಸಮರ್ಪಕವಾಗಿರಲಿಲ್ಲ. ನಂದಿನೀ ಪತ್ರಿಕೆಯನ್ನು ಸಕಾಲದಲ್ಲಿ ತಲುಪಿಸಲು, ವಿತರಣೆ ಮಾಡಲು ಪತ್ರಿಕೆ ತನ್ನದೇ ಆದ ವ್ಯವಸ್ಥೆ ಮಾಡಿಕೊಂಡಿತ್ತು.

ನಂದಿನೀ ವಾರಪತ್ರಿಕೆ ಜನಜಾಗೃತಿಯನ್ನೂ ವಿಚಾರಕ್ರಾಂತಿಯನ್ನೂ ಉಂಟು ಮಾಡಿ ಜನಸಮುದಾಯದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿ ಪ್ರಸಿದ್ಧಿ ಹಾಗೂ ಗೌರವ ಪಡೆಯಿತಾದರೂ ಆರ್ಥಿಕ ಸಂಕಷ್ಟದಿಂದ ಚೇತರಿಸಿಕೊಳ್ಳಲಾರದೆ 1940ರಲ್ಲಿ ನಿಂತುಹೋಯಿತು. *

**ನಂದೀಮಠ, ಎಸ್.ಸಿ. :** 1900-75. ಪ್ರಸಿದ್ಧ ವಿದ್ವಾಂಸರು, ಶಿಕ್ಷಣತಜ್ಞರು. ಪೂರ್ಣ ಹೆಸರು ಶಿವಲಿಂಗಯ್ಯ ಚೆನ್ನಬಸವಯ್ಯ ನಂದೀಮಠ. ಹುಟ್ಟಿದ್ದು ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ನಂದಿ ಗ್ರಾಮದಲ್ಲಿ, ಗೋಕಾಕ ಬೆಳಗಾಂವಿಗಳಲ್ಲಿ ಆರಂಭದ ಶಿಕ್ಷಣವನ್ನು ಮುಗಿಸಿ, ಧಾರವಾಡದ ಕರ್ನಾಟಕ ಕಾಲೇಜಿನಿಂದ ಬಿ.ಎ. ಪದವಿಯನ್ನೂ (1924) ಮುಂಬಯಿ ವಿಶ್ವವಿದ್ಯಾಲಯದಿಂದ (1926) ಎಂ.ಎ. ಪದವಿಯನ್ನೂ ಪಡೆದರು. ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸ್ವಲ್ಪ ಕಾಲಕೆಲಸ ಮಾಡಿದ ಮೇಲೆ, ಉನ್ನತ ಶಿಕ್ಷಣಕ್ಕಾಗಿ ಲಂಡನ್‍ಗೆ ತೆರಳಿದ ಇವರು, ಅಲ್ಲಿ ಪ್ರಸಿದ್ಧ ವಿದ್ವಾಂಸರಾದ ಬಾರ್ನೆಟ್‍ರ ಮಾರ್ಗದರ್ಶನದಲ್ಲಿ ವೀರಶೈವ ಧರ್ಮ ಹಾಗೂ ತತ್ತ್ವಜ್ಞಾನಗಳ ಕೈಪಿಡಿ ಎಂಬ ವಿಷಯವನ್ನು ಕುರಿತು ಪ್ರೌಢ ಪ್ರಬಂಧವನ್ನು ರಚಿಸಿ 1930ರಲ್ಲಿ ಪಿಎಚ್.ಡಿ. ಪದವಿ ಪಡೆದರು. ಸ್ವದೇಶಕ್ಕೆ ಮರಳಿ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸ್ವಲ್ಪ ಕಾಲ ಕೆಲಸ ಮಾಡಿದರು. ಅನಂತರ ಬೆಳಗಾಂವಿಯ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿಯವರು ಆರಂಭಿಸಬೇಕೆಂದಿದ್ದ ಲಿಂಗರಾಜ ಕಾಲೇಜಿನ ಸ್ಥಾಪನೆಗಾಗಿ ಶ್ರಮಿಸಿದ ಇವರು ಅನಂತರ ಅದೇ ಕಾಲೇಜಿನ ಮೊದಲ ಪ್ರಿನ್ಸಿಪಾಲರಾಗಿ (1933-44) ಕೆಲಸ ಮಾಡಿ, ಅದನ್ನೊಂದು ದೊಡ್ಡ ಸಂಸ್ಥೆಯನ್ನಾಗಿ ಅಭಿವೃದ್ಧಿಪಡಿಸಿದರು. ಬಾಗಲಕೋಟೆಯಲ್ಲಿ ಬಸವೇಶ್ವರ ಕಾಲೇಜನ್ನು ಸ್ಥಾಪಿಸಿ ಬೆಳೆಸಿದರು. ಮುಂಬಯಿ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿದ್ದುಕೊಂಡು ಉತ್ತರ ಕರ್ನಾಟಕಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾಲಯವೊಂದನ್ನು ಪಡೆಯಲು ಶ್ರಮಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾಗುವಾಗ ಅದರ ರೂಪುರೇಷೆಗಳನ್ನು ಮತ್ತು ಕಾಯಿದೆ ಕಾನೂನುಗಳನ್ನು ರೂಪಿಸುವಲ್ಲಿ ಮಹತ್ತ್ವದ ಕೆಲಸಮಾಡಿದ ನಾಲ್ಕಾರು ಶಿಕ್ಷಣತಜ್ಞರಲ್ಲಿ ಇವರೂ ಒಬ್ಬರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪರಕಾಗಿದ್ದ ಇವರು ಸಿಂಡಿಕೇಟ್, ಸೆನೆಟ್, ಅಕೆಡೆಮಿಕ್ ಕೌನ್ಸಿಲುಗಳ ಸದಸ್ಯರಾಗಿಯೂ ಸ್ಮರಣೀಯ ಸೇವೆ ಸಲ್ಲಿಸಿದರು. ವಿಶ್ವವಿದ್ಯಾಲಯದ ಕುಲಸಚಿವರಾಗಿಯೂ ಕುಲಪತಿಗಳಾಗಿಯೂ ಇವರು ಸ್ವಲ್ಪ ಕಾಲ ಕಾರ್ಯನಿರ್ವಹಿಸಿದರು.

ಕನ್ನಡ, ಸಂಸ್ಕೃತ, ಪಾಲಿ, ಪ್ರಾಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಪರಿಶ್ರಮಗಳನ್ನು ಪಡೆದಿದ್ದ ಇವರು ಹಲವು ಅಮೂಲ್ಯ ಲೇಖನಗಳನ್ನೂ ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ಅರ್ಜುನವಾಡದ ಶಾಸನ, ಗುಮ್ಮಳಾಪುರದ ಶಾಸನ ಮತ್ತು ಚೌಡದಾನಪುರ ಶಾಸನಗಳ ಬಗ್ಗೆ ಇವರು ವಿಶ್ಲೇಷಣಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ ಕರ್ನಾಟಕ ಧರ್ಮಗಳು ಇವರ ಒಂದು ಗಣ್ಯಕೃತಿ. ಹರಿಹರನ ಗಿರಿಜಾಕಲ್ಯಾಣ, ಕುವಲಯಾನಂದ - ಇವು ಇವರ ಸಂಪಾದಿತ ಗ್ರಂಥಗಳು. ಇವರ ಪ್ರೌಢ ಪ್ರಬಂಧ ಹ್ಯಾಂಡ್ ಬುಕ್ ಆಫ್ ವೀರಶೈವಿಸಂ ಇಂಗ್ಲಿಷಿನಲ್ಲಿ ಪ್ರಕಟವಾಗಿದೆ.

ಬೇಲೂರಿನಲ್ಲಿ 1952ರಲ್ಲಿ ಸೇರಿದ್ದ 35ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಂದೀಮಠರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಲಾಯಿತು. 1975ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿ ಸನ್ಮಾನಿಸಿತು. (ಎಸ್.ಎಸ್.ಬಿ.)

**ನಗರ** (ಬಿದನೂರು) **:** ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿ ಹೊಸನಗರದಿಂದ 5ಕಿಮೀ ದಕ್ಷಿಣಕ್ಕಿರುವ ಒಂದು ಗ್ರಾಮ. ಇದರ ಹಿಂದಿನ ಹೆಸರು ಬಿದನೂರು, ಬಿದಿರೂರು, ಹಲವು ಶಾಸನಗಳಲ್ಲಿ ಈ ಊರನ್ನು ವೇಣುಪುರ ಎಂದೂ ಕರೆದಿದೆ. ಕೆಳದಿ ಇಕ್ಕೇರಿಗಳಲ್ಲಿ ಆಳಿದ ಅರಸರು 1640ರ ಹೊತ್ತಿಗೆ ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಬಿದನೂರ ಅರಸರಾದರು. ಘಟ್ಟದ ಕೆಳಗೆ ಇಳಿಯುವ ಹೊಸಂಗಡಿ ಘಾಟಿಯ ದಾರಿಯಲ್ಲಿದ್ದು ವ್ಯಾಪಾರ ಕೇಂದ್ರವೂ ಆದುದರಿಂದ ಬಹುಬೇಗನೆ ಬೆಳೆದು ದೊಡ್ಡ ನಗರವಾಯಿತು. ಕೋಟೆಕೊತ್ತಲಗಳು ಅರಮನೆಗಳು ರಚಿತವಾದುವು. ಇಲ್ಲಿಯ ಕೋಟೆಯ ಸುತ್ತಳತೆ ಹನ್ನೆರಡು ಕಿಮೀಗಳಷ್ಟು ಇದ್ದು ಡಿಲ್ಲಿ ಬಾಗಿಲು, ಕೊಡಿಯಾಲದ ಬಾಗಿಲು, ಕವಿಲೆದುರ್ಗದ ಬಾಗಿಲು ಮುಂತಾದ ಹತ್ತು ಬಾಗಿಲುಗಳಿದ್ದುವು. ಊರಿನಲ್ಲಿ ಎತ್ತರವಾದ ಒಂದು ಗುಡ್ಡದ ಮೇಲೆ ಅರಮನೆಯಿದ್ದು ಅದನ್ನು ಸುತ್ತುವರಿದು ಒಂದು ಒಳಕೋಟೆಯೂ ಇತ್ತು. ಶಿವಪ್ಪನಾಯಕ ಈ ಪಟ್ಟಣವನ್ನು ತುಂಬ ಅಭಿವೃದ್ಧಿಪಡಿಸಿದ. 1763ರಲ್ಲಿ ಹೈದರ್ ದಾಳಿಮಾಡಿದಾಗ ಇದು ಅತ್ಯಂತ ಸಂಪದ್ಭರಿತವಾದ ನಗರವಾಗಿತ್ತು. ಸೋಲು ಖಚಿತವಾದಾಗ ಅರಮನೆಗೆ ಬೆಂಕಿಹಚ್ಚಿ ರಾಣಿ ವೀರಮ್ಮಾಜಿ ತಪ್ಪಿಸಿಕೊಂಡು ಓಡಿಹೋದರೂ ಹೈದರನಿಗೆ ಅನೇಕ ಕೋಟಿ ರೂಪಾಯಿಗಳ ಬೆಲೆ ಬಾಳುವ ಕೊಳ್ಳೆ ದೊರೆಯಿತು.

ಹೈದರ್ ತನ್ನ ಸೈನ್ಯವನ್ನು ಅಲ್ಲಿ ಸ್ಥಾಪಿಸಿ ಒಳಕೋಟೆಯ ಮುಂಭಾಗದಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ. ಈ ಊರನ್ನು ಅಭಿವೃದ್ಧಿಪಡಿಸಿ ಅದಕ್ಕೆ ಹೈದರ್‍ನಗರ ಎಂಬ ಹೆಸರಿಟ್ಟ. ಇವನ ಕಾಲದಲ್ಲಿ ಈ ಊರಿನಲ್ಲಿ ಹೇರಳವಾಗಿ ಮದ್ದುಗುಂಡು ತಯಾರಿಸಲಾಗುತ್ತಿತ್ತು. ಇಲ್ಲಿ ಟಂಕಸಾಲೆ ಸ್ಥಾಪಿತವಾಗಿ ಹೈದರಿ ಪಗೋಡಗಳು ಮುದ್ರಿತವಾಗುತ್ತಿದ್ದವು. ಮುಂದೆ ಟಿಪ್ಪುವಿನ ಕಾಲದಲ್ಲಿ ಬ್ರಿಟಿಷರು ಈ ಊರನ್ನು ಮುತ್ತಿದಾಗ ಅರಮನೆಯೂ ಸೇರಿ ಈ ಊರಿನ ಬಹುಭಾಗ ಸುಟ್ಟುಹೋಯಿತು. 1789 ರಿಂದೀಚೆಗೆ ಅದಕ್ಕೆ ನಗರ ಎಂಬ ಹೆಸರು ಬಂತು. ಆ ಕಾಲದಲ್ಲಿ ಶಿವಮೊಗ್ಗ ಕಡೂರು ಜಿಲ್ಲೆಗಳು ಸೇರಿದ್ದ ಫೌಜುದಾರಿಗೆ ನಗರ ಕೇಂದ್ರಸ್ಥಳವಾಗಿತ್ತು (1831ರ ಅನಂತರ ಇದಕ್ಕೆ ನಗರ್ ಡಿವಿಜನ್ ಎಂಬ ಹೆಸರು ಬಂತು. 1831-1881ರ ಮಧ್ಯೆ ಡಿವಿಜನ್ನುಗಳನ್ನು ತೆಗೆದುಹಾಕಲಾಯಿತು). 1830ರಲ್ಲಿ ಬಿದನೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ವಿರುದ್ಧ ದಂಗೆ ನಡೆಯಿತು. ದಂಗೆಯನ್ನೇನೋ ಅಡಗಿಸಲಾದರೂ ಇದರ ಪರಿಣಾಮದಿಂದ ಬಿದನೂರು ಮತ್ತೆ ಹೀನಸ್ಥಿತಿಗೆ ಬಂದಿತು. ಊರಿನಲ್ಲಿ ನಡೆಯುತ್ತಿದ್ದ ವ್ಯಾಪಾರ ಕುಂದಿತು. ಸ್ಟೋಕ್ಸ್ ಎಂಬುವನು 1838ರಲ್ಲಿ ಬಿದನೂರಿನ ಸ್ಥಿತಿಯನ್ನು ಈ ರೀತಿ ವರ್ಣಿಸಿದ್ದಾನೆ: ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಜನಸಂಖ್ಯೆಯಲ್ಲೂ ಮತ್ತು ಐಶ್ವರ್ಯದಲ್ಲೂ ಅವನತಿಯ ಸ್ಥಿತಿಗೆ ಬರುತ್ತಿವೆ. ಹೆಚ್ಚು ಕಡಿಮೆ ಈಗ ನಗರದ ವ್ಯಾಪಾರ ಸಂಪೂರ್ಣ ಕುಸಿದಿದೆ. ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ನಗರ ಅಷ್ಟು ಅನುಕೂಲ ಪರಿಸ್ಥಿತಿಯನ್ನು ಹೊಂದಿಲ್ಲ.

ಪಶ್ಚಿಮ ಘಟ್ಟಗಳ ಹೆದ್ದಾರಿಯನ್ನು ಉತ್ತಮಪಡಿಸಿದಾಗ ನಗರದ ಸ್ಥಿತಿ ಉತ್ತಮಗೊಳ್ಳುವಂತೆ ಕಂಡಿತು. ಆದರೆ 1893ರಲ್ಲಿ ತಾಲ್ಲೂಕಿನ ಕೇಂದ್ರವನ್ನು ಕಲ್ಲೂರು ಕಟ್ಟಿಗೆ (ಹೊಸನಗರ) ವರ್ಗಾಯಿಸಿದಾಗ ಬಿದನೂರು ಮತ್ತಷ್ಟು ಹೀನಸ್ಥಿತಿಗೆ ಬಂದಿತು.

ಬಿದನೂರರಸರ ಕಾಲದಲ್ಲಿ ಇಲ್ಲಿ ನಿರ್ಮಿತವಾದ ಕಟ್ಟಡಗಳಲ್ಲಿ ದೇವಗಂಗೆ ಎಂಬ ಹೆಸರಿನ ಕೊಳ ಆ ಅರಸರ ನಿಪುಣತೆಗೆ ಒಂದು

ಕುರುಹು. ಸುತ್ತ ಆವರಿಸಿರುವ ಬೆಟ್ಟಗಳಿಂದ ಹರಿದು ಬರುವ ಝರಿಯ ನೀರನ್ನು ತಡೆದು ನಿರ್ಮಿಸಿರುವ ಏಳು ಕೊಳಗಳು ಒಂದೊಂದೂ ಒಂದೊಂದು ಆಕೃತಿಯಲ್ಲಿದ್ದು ಆಕರ್ಷಣೀಯವಾಗಿವೆ. ಅದರಲ್ಲಿಯೂ ಕಮಲದಾಕೃತಿಯಲ್ಲಿ ಮತ್ತು ನಕ್ಷತ್ರದಾಕೃತಿಯಲ್ಲಿ ಕಲ್ಲಿನಲ್ಲಿ ಕೊರೆದಿರುವ ಎರಡು ಪುಟ್ಟ ಕೊಳಗಳು ವಿಶಿಷ್ಟವಾಗಿವೆ.

ಊರಿನಲ್ಲಿರುವ ನೀಲಕಂಠೇಶ್ವರ ದೇವಾಲಯ ಮಲೆನಾಡಿನ ವಾಸ್ತು ರೀತಿಗೆ ಮಾದರಿಯಾಗಿದೆ. ಗರ್ಭಗುಡಿ, ದೊಡ್ಡ ಸುಕನಾಸಿ ಮತ್ತು ವಿಶಾಲವಾದ ನವರಂಗಗಳಿರುವ ಇದರ ಗರ್ಭಗುಡಿಯ ಮೆಲಿನ ಗೋಪುರ ಮಾತ್ರ ಇಸ್ಲಾಮೀ ಶೈಲಿಯಲ್ಲಿ ಗೋಳಾಕಾರದಲ್ಲಿದೆ. ಗುಡ್ಡೆ ವೆಂಕಟರಮಣಸ್ವಾಮಿ ದೇವಾಲಯ ಇಕ್ಕೇರಿ ಶಿಲ್ಪ ಶೈಲಿಯಲ್ಲಿರುವ ಒಂದು ಸಣ್ಣ ಗುಡಿ. ಎತ್ತರವಾದ ಜಗತಿಯ ಮೇಲೆ ಗರ್ಭಗುಡಿ ಮುಖಮಂಟಪಗಳು ಮಾತ್ರವಿರುವ ಈ ಗುಡಿಯ ಹೊರ ಗೋಡೆಗಳು ಅಲ್ಲಲ್ಲಿ ಮೂರ್ತಿಶಿಲ್ಪದಿಂದ ಅಲಂಕೃತವಾಗಿವೆ. ಇದರ ಗರ್ಭಗೃಹದ ಬಾಗಿಲುವಾಡ ಮಾತ್ರ ಹೊಯ್ಸಳ ರೀತಿಯಲ್ಲಿದ್ದು ಬೇರೆ ಹಳೆಯ ದೇವಾಲಯವೊಂದರಿಂದ ತಂದು ಸೇರಿಸಿದ್ದಾಗಿದೆ. ಇದರ ಮುಂದೆ ತೂಗುಹಾಕಿರುವ ಬೃಹದಾಕಾರದ ಗಂಟೆಗಳು ಈ ಊರಿನ ಚರ್ಚೊಂದಕ್ಕೆ ಸೇರಿದುದ್ದಾಗಿದ್ದು ಅವುಗಳಲ್ಲಿ ಒಂದನ್ನು 1713ರಲ್ಲಿ ಆ್ಯಂಸ್ಟರ್‌ಡ್ಯಾಮ್‌ನಲ್ಲಿ ತಯಾರಿಸಿದಂತೆ ತಿಳಿದುಬರುತ್ತದೆ. ಇತ್ತೀಚೆಗೆ ಈ ಗಂಟೆಯನ್ನು ಶಿವಮೊಗ್ಗದ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. (ನೋಡಿ) ಕೆಳದಿರಾಜವಂಶ ವಾಸ್ತು ಶಿಲ್ಪ (ಎಂ.ಎಚ್., ಕೆ.ಎಸ್.ಎಸ್.)

**ನಗುವನಂದ :** ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಒಂದು ಪತ್ರಿಕೆ. ಹಾಸ್ಯರಸಪ್ರಧಾನ ನಿಯತಕಾಲಿಕೆಯೊಂದನ್ನು ತರಬೇಕೆಂದು ಸುಬೋಧ ರಾಮರಾಯರು ಈ ಹೆಸರಿನ ಮಾಸಪ್ರತಿಕೆಯನ್ನು ಜಿ.ಎಸ್. ಕೃಷ್ಣರಾಯರ ಸಂಪಾದಕತ್ವದಲ್ಲಿ ಬೆಂಗಳೂರಿನ ಸುಬೋಧ ಮುದ್ರಣಾಲಯದಿಂದ ಹೊರಡಿಸಿದರು. ಇದರ ಪ್ರಥಮ ಸಂಚಿಕೆ ಜನವರಿ 1933ರಲ್ಲಿ ಪ್ರಕಟವಾಯಿತು. ಜಿ.ಎಸ್. ಕೃಷ್ಣರಾಯರು ಕೆಲವು ವರ್ಷಗಳ ತರುವಾಯ ಪ್ರತ್ಯೇಕಗೊಂಡು ಇದನ್ನು ಸ್ವತಂತ್ರವಾಗಿ 1949ರ ವರೆಗೆ ಪ್ರಕಟಿಸಿದರು. ಅನಂತರ ರಂಗನಾಥರಾಯರ ಸಂಪಾದಕತ್ವದಲ್ಲಿ 1949 ರಿಂದ 1950ರ ವರೆಗೆ ಪ್ರಕಟಗೊಂಡಿತು. ಆರ್ಥಿಕ ಮುಗ್ಗಟ್ಟಿನಿಂದ ರಂಗಾನಾಥರಾಯರು ಪತ್ರಿಕೆಯನ್ನು ಇದು ಸುಬೋಧ ರಾಮರಾಯರಿಗೆ ಹಿಂದಿರುಗಿಸಿದರು. ಮತ್ತೆ 1950 ರಿಂದ 1963ರ ವರೆಗೆ ಪ್ರಹ್ಲಾದರಾಯರ ನೇತೃತ್ವದಲ್ಲಿ ಸುಬೋಧ ಪ್ರಕಟಣಾಲಯದಲ್ಲಿ ಪ್ರಕಟವಾಯಿತು.

1963ರಲ್ಲಿ ರಾಮರಾಯರು ಮತ್ತೆ ಜಿ. ಎಸ್. ಕೃಷ್ಣರಾಯರ ಜೀವನೋಪಾಯಕ್ಕೆಂದು ವಹಿಸಿಕೊಟ್ಟರು. ಕೃಷ್ಣರಾಯರು ಕೆಲವು ತಿಂಗಳುಗಳ ಕಾಲ ಪತ್ರಿಕೆಯನ್ನು ನಡೆಸಿ ತೀರಿಕೊಂಡರು. ಪತ್ರಿಕೆಯನ್ನು ರಂಗನಾಥರಾಯರಿಗೆ ಪುನಃ ವರ್ಗಾಯಿಸಲಾಯಿತು. ಅವರಿಂದ ಇದು ಒಂದೂವರೆ ವರ್ಷ ಪ್ರಕಟವಾಯಿತು. ಕೊನೆಗೆ ರಂಗನಾಥರಾಯರು ಪತ್ರಿಕೆಯನ್ನು ರಂಜನಾ ಪಬ್ಲಿಕೇಷನ್ಸ್ ಸಂಸ್ಥೆಗೆ ಮಾರಿದರು. ಇದು ದೀಪಾವಳಿಯ ಕಾಲದಲ್ಲಿ ಮಾತ್ರ ವಾರ್ಷಿಕವಾಗಿ ಪ್ರಕಟವಾಗುತ್ತಿದ್ದು 4 ವರ್ಷಗಳ ತರುವಾಯ ನಿಂತುಹೋಯಿತು.

ನಗುವ ನಂದಕ್ಕೆ 20 ವರ್ಷಗಳಿಗೂ ಹೆಚ್ಚು ಕಾಲ ಅಂಕಣಲೇಖಕರಾಗಿದ್ದವರು ವಿ.ಜಿ. ಕೃಷ್ಣಮೂರ್ತಿ. ಚಿತ್ರಕಾರರಾಗಿದ್ದವರು ರಾಘವೇಂದ್ರ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ನಾ.ಕಸ್ತೂರಿ, ಜಿ. ಪುರುಷೋತ್ತಮರಾವ್, ಎಂ. ವಿ. ಪ್ರಭು, ಸುಪುತ್ರ ಸುಬೋಧ ಪ್ರಹ್ಲಾದರಾವ್, ಡಿ. ಕೆ. ಭಾರದ್ವಾಜ್, ವೈ.ಕೆ. ತಿಮ್ಮರಸಯ್ಯ, ನಾಡಿಗೇರ ಕೃಷ್ಣರಾವ್, ಹೊಯ್ಸಳ, ಬಿ.ಎಚ್. ಶ್ರೀಧರ, ಬಿಸ್ರಾ (ಬಿ.ಎಸ್. ರಾಮಚಾರ್), ಸೇವಿ ನಮಿರಾಜ ಮಲ್ಲ, ನವಗಿರಿನಂದ ಮೊದಲಾದವರು ಪತ್ರಿಕೆಯ ಲೇಖಕರ ಬರಹದಲ್ಲಿದ್ದರು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಗೋಪಿ ಹಾಗೂ ಆನಂದವಿಗಡನ್ ಪತ್ರಿಕೆಯ ಸಿಂಹ ಇವರು ವ್ಯಂಗ್ಯ ಚಿತ್ರಗಳನ್ನು ನೀಡಿದ್ದಾರೆ.

ನಗುವ ನಂದ ಮಾಸಪತ್ರಿಕೆಯಾಗಿದ್ದಾಗ ಡಿಮ್ಮೈ 1/4 ಆಕಾರದಲ್ಲಿ ಬರುತ್ತಿತ್ತು. 1951ರಲ್ಲಿ ಇದು ವಾರಪತ್ಕಿಕೆಯಾಗಿದ್ದಾಗ ಡಿಮ್ಮೈ 1/8 ಆಕಾರದಲ್ಲಿತ್ತು. ನಗೆಮಲ್ಲಿಗೆ, ಸಮಾಧಿಯ ಅಗ್ನಿಕುಂಡ, ಉಪ ಕಥಾವಳಿ ವಿಭಾಗಗಳು ಜನಪ್ರಿಯವಾಗಿದ್ದುವು. ಜಿ.ಎಸ್. ಕೃಷ್ಣರಾಯರು ಮಂಗಳೂರು ಬಾಸಲ್ ಮಿಷನ್ ಪ್ರೆಸ್‌ನಿಂದ ಪತ್ರಿಕೆಯನ್ನು ಹೊರಡಿಸುತ್ತಿದ್ದಾಗ (1938) ಇದರ ಪ್ರಸಾರ ಸಂಸ್ಥೆ 3,000, 1963ರಲ್ಲಿ ಇದು 6,800ಕ್ಕೆ ಏರಿತ್ತು. 'ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರ ಪೂಜನಂ' ಎಂಬುದು ಪತ್ರಿಕೆಯ ಧ್ಯೇಯವಾಕ್ಯವಾಗಿತ್ತು. *

**ನಗೆಯ ಮಾರಿತಂದೆ :** ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಶಿವಭಕ್ತರನ್ನು ತನ್ನ ಮಾತಿನ ಬಗೆಯಿಂದ ನಗಿಸುವುದು ಈತನ ಕಾಯಕವಾಗಿತ್ತು. ಆತುರವೈರಿ ಮಾರೇಶ್ವರೆಂಬ ಅಂಕಿತದಿಂದ ವಚನಗಳನ್ನು ರಚಿಸಿದ್ದಾನೆ. ಇವನ 100 ವಚನಗಳು ದೊರಕಿವೆ. ಈ ವಚನಗಳು ಸಂಗ್ರಹವೂ ಹಿತಕರವೂ ಸವಿಯೂ ಆಗಿವೆ. ಮಾತಿನಲ್ಲಿ ಆತ್ಮಚಿಂತನೆ, ಜ್ಞಾನಪ್ರಭೆ ಕಂಡುಬರುತ್ತದೆ. ಶೈಲಿ ಸರಳವಾಗಿದ್ದು ವಚನಗಳಲ್ಲಿ ಬಳಸಿರುವ ಭಾವ, ಭಾಷೆ, ಉಪಮೆಗಳು ಸೊಗಸಾಗಿವೆ. ಸಾರವತ್ತಾಗಿವೆ. ನಡೆವ ಕಾಲು ಆನುವ ಕೈ ಬೇಡುವ ಬಾಯಿ ಸರ್ವವ ಕೂಡುವ ಮನವುಡುಗಿ ಘನಲಿಂಗದಲ್ಲಿ ತಲ್ಲೀನವಾದವನಂಗ ಮರುಳ ಕಂಡ ಕನಸಿನಂತೆ ಮೂಗನ ಕಾವ್ಯದಂತೆ ಜಲ ಲಿಪಿಯಂತೆ ಉರಿಯ ಧೂಮದಂತೆ ಇದಾರಿಗೂ ಅಸಾಧ್ಯ ಆತುರವೈರಿ ಮಾರೇಶ್ವರ - ಎಂಬ ವಚನ ಭಕ್ತನ ಮೈಮನ ಭಗವಂತನಲ್ಲಿ ಲೀನವಾದಾಗ ಆ ಅನುಭವ ಎಂಥದ್ದು ಎಂಬುದನ್ನು ಮಾತಿನಲ್ಲಿ ವರ್ಣಿಸಿ ಹೇಳಲು ಸಾಧ್ಯವಿಲ್ಲ ಎಂಬುದನ್ನೂ ಆ ಅನುಭವದ ಅತ್ಯುಚ್ಚ ಸ್ಥಿತಿಯನ್ನೂ ಸುಂದರವಾಗಿ ನಿರೂಪಿಸುತ್ತದೆ. (ಓ.ಎನ್.ಎಲ್.)

**ನದೀ ವ್ಯವಸ್ಥೆ ಮತ್ತು ಜಲಸಂಪತ್ತು :** ನೈಋತ್ಯ ಮತ್ತು ಈಶಾನ್ಯ ಮಾರುತಗಳಿಂದ ಒದಗುವ ಮಳೆ ಕರ್ನಾಟಕದ ಜಲಸಂಪತ್ತಿನ ಮೂಲಾಧಾರ. ಆ ನೀರು ದೊಡ್ಡ ನದಿಗಳಾದ ಕೃಷ್ಣಾ, ತುಂಗಭದ್ರಾ ಮತ್ತು ಕಾವೇರಿ ಕಣಿವೆಗಳ ವಿಶಾಲ ಪ್ರದೇಶದಲ್ಲಿ ಹರಿಯುವುದರಿಂದ ಕರ್ನಾಟಕದ ಜಲಸಂಪತ್ತು ಶ್ರೀಮಂತವಾಗಿದೆ. ಈ ನದಿಗಳು ರಾಜ್ಯವನ್ನು ಕ್ರಮವಾಗಿ ಉತ್ತರ ಮಧ್ಯ ಹಾಗೂ ದಕ್ಷಿಣದ ಪ್ರಮುಖ ಜಲಾನಯನದ ಪ್ರದೇಶಗಳಾಗಿ ವಿಭಾಗಿಸುತ್ತವೆಯಾದರೂ ಕರ್ನಾಟಕ ರಾಜ್ಯದ ಒಟ್ಟು ಪ್ರದೇಶವನ್ನು ನೀರೋಟದ ದೃಷ್ಟಿಯಿಂದ ಐದು ಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮ ಘಟ್ಟ ಶ್ರೇಣಿಯಿಂದ ಪಶ್ಚಿಮಾಭಿಮುಖವಾಗಿ ಅರಬ್ಬೀ ಸಮುದ್ರಕ್ಕೆ ಹರಿಯುವ ನದಿಗಳ ಜಲಾನಯನ, ಪಶ್ಚಿಮ ಘಟ್ಟ ಶ್ರೇಣಿಯ ಪೂರ್ವದ ಬಯಲುನಾಡಿನಲ್ಲಿ ಉತ್ತರಕ್ಕೆ ಕೃಷ್ಣಾನದಿ ಮತ್ತು ಅದರ ಉಪನದಿಗಳ ಜಲಾನಯನ, ಮತ್ತು ದಕ್ಷಿಣಕ್ಕೆ ಕಾವೇರಿ ಹಾಗೂ ಅದರ ಉಪನದಿಗಳ ಜಲಾನಯನ ಉತ್ತರದ ತುದಿಯಲ್ಲಿ ಗೋದಾವರಿಯ ಉಪನದಿ ಮಾಂಜರಾ ಜಲಾನಯನ ಮತ್ತು ನೈಋತ್ಯಕ್ಕೆ ನಂದಿದುರ್ಗದಿಂದ ಉಗಮಿಸುವ ಸ್ವತಂತ್ರ ನದಿಗಳಾದ ಪಾಲಾರ್ ಮತ್ತು ಪೆನ್ನಾರ್‌ಗಳ ಜಲಾನಯನ ಪ್ರದೇಶಗಳು.

**1.** ಪಶ್ಚಿಮಕ್ಕೆ ಹರಿಯುವ ನದಿಗಳ ಜಲಾನಯನ : ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ, ಅಲ್ಲಿಂದ ಪಶ್ಚಿಮ ದಿಕ್ಕಿಗೇ ಹರಿದು ಅರಬ್ಬೀ ಸಮುದ್ರವನ್ನು ಸೇರುವ ಉಪನದಿ, ಹೊಳೆ, ಹಳ್ಳಗಳು ಹಲವಾರು. ಮಳೆಗಾಲದಲ್ಲಿ ಇವೆಲ್ಲ ಪ್ರವಾಹ ಪೂರಿತವಾಗಿರುತ್ತವೆ. ಇವುಗಳಲ್ಲಿ ಅತ್ಯಂತ ಉದ್ದವಾದುದು 161 ಕಿಮೀ ಇರುವ ಕಾಳಿ ನದಿ. ಎರಡನೆಯದು 132 ಕಿಮೀ ಉದ್ದದ ಶರಾವತಿ. ಉಳಿದ ಕೆಲವು ಮುಖ್ಯವಾದವೆಂದರೆ: ಅಘನಾಶಿನಿ (121 ಕಿಮೀ), ನೇತ್ರಾವತಿ (96 ಕಿಮೀ), ತಟ್ಟೆಹಳ್ಳ (90 ಕಿಮೀ), ಸೀತಾನದಿ (80 ಕಿಮೀ), ಕುಮಾರಾಧಾರಾ (74 ಕಿಮೀ), ಗಂಗೊಳ್ಳಿ ನದಿ (72 ಕಿಮೀ) ಮತ್ತು ಚಕ್ರನದಿ (72 ಕಿಮೀ) ಇನ್ನೂ ಹೆಸರಿಸಬಹುದಾದ ಹಲವು: ಗೌರಿ ಹೊಳೆ, ಗುರುಪುರ, ಸ್ವರ್ಣ, ವಾರಾಹಿ, ಕುಬ್ಜ, ಹರಿದ್ರಾವತಿ, ಸೋಮ, ಗೋವಿಂದ, ಬೆಣ್ಣೆಹೊಳೆ, ಅತ್ತಿವೇರಿ, ಬೇಡ್ತಿ, ಬರಪೊಳೆ, ಮಹಾದಾಯಿ, ಡೊಂಕನಾಲಾ, ಪಂಡ್ರಿ ನದಿ, ಇಂಥವು

ಒಟ್ಟು 57 ನದಿಗಳೆಂದು ಗುರುತಿಸಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಹುಟ್ಟಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿದು ಸಮುದ್ರ ಸೇರುವ ಶರಾವತಿ ನದಿ ಜಲವಿದ್ಯುತ್ ಯೋಜನೆಗೆ ಪ್ರಸಿದ್ಧವಾಗಿದೆ. ಇದಕ್ಕೆ ಅಡ್ಡಲಾಗಿ ಲಿಂಗನಮಕ್ಕಿ ಜಲಾಶಯವನ್ನು ನಿರ್ಮಿಸಲಾಗಿದೆ. ಕಾಳಿನದಿಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಪಶ್ಚಿಮದತ್ತ ಹರಿದು ಸಮುದ್ರ ಸೇರುತ್ತದೆ. ಇದಕ್ಕೆ ಸುಪ ಬಳಿ ಬೃಹತ್ ಜಲಾಶಯ ನಿರ್ಮಿತವಾಗಿದೆ. ಇದನ್ನು ಜಲವಿದ್ಯುತ್ ಉತ್ಪಾದನೆಗಾಗಿ ಹೆಚ್ಚಾಗಿ ಬಳಸಲಾಗುತ್ತದೆ.

ಈ ಎಲ್ಲ ನದಿಗಳ ಜಲಾನಯನ ಪ್ರದೇಶ ನಾಲೆಗಳಿಂದ ನೀರಾವರಿ ಮಾಡಲು ತಕ್ಕದಾಗಿಲ್ಲ. ಈ ಪ್ರದೇಶದ ವ್ಯವಸಾಯಯೋಗ್ಯ ಭೂಮಿ 12.34 ಲಕ್ಷ ಹೆಕ್ಟೇರುಗಳು. ಇದರಲ್ಲಿ 1.76 ಲಕ್ಷ ಹೆಕ್ಟೇರ್ ಮಾತ್ರ ನೀರಾವರಿಗೊಳಪಟ್ಟಿದೆ. ಈ ಎಲ್ಲ ನದಿಗಳ ಉಪಯುಕ್ತತೆ ಇರುವುದು ಅವುಗಳಿಂದ ಉತ್ಪಾದಿಸಬಹುದಾದ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ, ಇವುಗಳಲ್ಲಿ ಕೆಲವನ್ನಾದರೂ ಪೂರ್ವಕ್ಕೆ ತಿರುಗಿಸಿ ನೀರಾವರಿಗೆ ಉಪಯೋಗಿಸುವ ಸಾಧ್ಯತೆಯ ಬಗ್ಗೆ ಪರಿಶೀಲನೆಗಳಾಗುತ್ತಿವೆ. ಈ ಎಲ್ಲ ನದಿಗಳ ಒಟ್ಟು ಜಲಸಂಪತ್ತಿನ ಅಂದಾಜು ಸರಾಸರಿ 38 ಶತಕೋಟಿ ಘನಮೀಟರ್.

ಇಡೀ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಉತ್ತರ ಕನ್ನಡ ಜಿಲ್ಲೆಯ ಸೇ. 93.8, ಕೊಡಗು ಸೇ. 36.6, ಶಿವಮೊಗ್ಗದ ಸೇ. 25.6, ಬೆಳಗಾಂವಿ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸೇ. 10ಕ್ಕಿಂತ ಕಡಿಮೆ ಪ್ರದೇಶ - ಒಟ್ಟಿನಲ್ಲಿ ರಾಜ್ಯದ ಸೇ. 13.68 ಪ್ರದೇಶ ಎಂದರೆ 26.214 ಚ.ಕಿಮೀ. ಈ ಜಲಾನಯನ ಪ್ರದೇಶಕ್ಕೆ ಸೇರಿರುತ್ತದೆ.

**2.ಕೃಷ್ಣಾ ಜಲಾನಯನ:** ಇದರ ವಿಸ್ತಾರ 1,13.271 ಚಕಿಮೀಗಳಾಗಿದ್ದು ರಾಜ್ಯದ ವಿಸ್ತೀರ್ಣದ ಸೇ. 59 ಭಾಗ ಇದರಲ್ಲಿದೆ. ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ಗುಲ್ಬರ್ಗ ಹಾಗೂ ರಾಯಚೂರು ಜಿಲ್ಲೆಗಳು ಪೂರ್ತಿಯಾಗಿಯೂ ಬೆಳಗಾಂವಿ, ಧಾರವಾಡ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ಸುಮಾರು ಸೇ. 75ರಿಂದ 90ರ ವರೆಗೂ ತುಮಕೂರು, ಹಾಸನ, ಬಿದರೆ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಸೇ. 6ರಿಂದ 38ರ ವರೆಗೂ ಈ ಜಲಾನಯನದಲ್ಲಿ ಬರುತ್ತವೆ.

ಮುಖ್ಯವಾದ ನದಿ ಮತ್ತು ಉಪನದಿಗಳ ಹೆಸರಿನಲ್ಲಿ 6 ಉಪಜಲಾನಯನಗಳನ್ನು ಈ ಕಣಿವೆಯಲ್ಲಿ ಗುರುತಿಸಲಾಗಿದೆ. ಅವೆಂದರೆ: ಕೃಷ್ಣಾ, ಭೀಮಾ, ಮಲಪ್ರಭಾ, ಘಟಪ್ರಭಾ, ತುಂಗಭದ್ರಾ ಮತ್ತು ವೇದಾವತಿ. ಕೃಷ್ಣಾ ಉಪಜಲಾನಯನದಲ್ಲಿ ವೇದಗಂಗಾ, ದೂದಗಂಗಾ, ಅಗರಣಿ, ಡೋಣಿ ಮುಂತಾದ 23 ಉಪಕಣಿವೆಗಳೂ ಭೀಮಾ ಜಲಾನಯನದಲ್ಲಿ ಅಮರಜ ಮುಂತಾದ 22 ಉಪಕಣಿವೆಗಳೂ ಘಟಪ್ರಭಾದಲ್ಲಿ ಮಾರ್ಕಂಡೇಯ, ಹಿರಣ್ಯಕೇಶಿ, ತಾಮ್ರಪರ್ಣಿ ಮುಂತಾದ 8 ಉಪಕಣಿವೆಗಳೂ ಮಲಪ್ರಭಾದಲ್ಲಿ ಬೆಣ್ಣೆ ಹಳ್ಳವೂ ಸೇರಿ 22 ಮುಖ್ಯ ಹಳ್ಳಗಳೂ ಅತಿ ದೊಡ್ಡ ಉಪಜಲಾನಯನವಾದ ತುಂಗಭದ್ರಾದಲ್ಲಿ ತುಂಗಾ, ಭದ್ರಾ, ಮಾಲತಿ ಹೊಳೆ,ಹೈಹೋಳೆ, ಸೋಮವಾಹಿನಿ, ಹರಿದ್ರ, ಜಂಬದಹಳ್ಳ, ಕನಕನಾಲಾ, ಸಿಂಧೂರ ನದಿ, ದಂಡಾವತಿ, ವರದಾ, ಧರ್ಮಾ, ಕುಮುದ್ವತಿ, ಮಾವಿನಹೊಳೆ, ಹಾವೇರಿಹಳ್ಳ ಮುಂತಾದ 56 ಉಪಕಣಿವೆಗಳೂ ವೇದಾವತಿ ಉಪಜಲಾನಯನದಲ್ಲಿ ಹಗರಿ, ಚಿಕ್ಕಹಗರಿ, ಚಿನ್ನಹಗರಿ, ಕೆರೆತೊರೆ, ಸುವರ್ಣಮುಖಿ ಮುಂತಾದ 14 ಉಪಕಣಿವೆಗಳೂ ಇವೆ. ಘಟಪ್ರಭಾ ಭೀಮಾನದಿಗಳು ಮಹಾರಾಷ್ಟ್ರದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಕೃಷ್ಣೆಯನ್ನು ಸೇರಿದರೆ, ತುಂಗಭದ್ರಾ ಕರ್ನಾಟಕದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಹುಟ್ಟಿ, ಆಂಧ್ರ ಪ್ರದೇಶದಲ್ಲಿ ಸ್ವಲ್ಪ ದೂರ ಹರಿದು ಮತ್ತೆ ಆಂಧ್ರ ಪ್ರದೇಶದಲ್ಲಿ ಮುಖ್ಯನದಿಯನ್ನು ಸೇರುತ್ತದೆ. ವೇದಾವತಿಯೂ ಕರ್ನಾಟಕದಲ್ಲಿ ತುಂಗಭದ್ರೆಯನ್ನು ಕೂಡುತ್ತದೆ.

ಈ ಜಲಾನಯನದ ಪಶ್ಚಿಮ ಘಟ್ಟಗಳಲ್ಲಿ ನೈಋತ್ಯ ಮಾರುತಗಳಿಂದಲೇ ವರ್ಷದ ಸೇ. 73ರಷ್ಟು ಎಂದರೆ 1200 ಮಿಮೀಗಳೂ ಹೆಚ್ಚು ಮಳೆಯಾಗುತ್ತಿದ್ದು ಘಟ್ಟಗಳ ಪೂರ್ವಕ್ಕಿರುವ ವಿಶಾಲ ಪ್ರದೇಶದಲ್ಲಿ 400ರಿಂದ 500 ಮಿಮೀ ನಷ್ಟು ಕಡಿಮೆ ಮಳೆಯಾಗುತ್ತ, ಅದರಲ್ಲೂ ವ್ಯತ್ಯಾಸ ಅನಿಶ್ಚಯತೆಗಳಿದ್ದು ಆಗಾಗ್ಗೆ ಅಭಾವ ಪರಿಸ್ಥಿತಿಯನ್ನೆದುರಿಸಬೇಕಾಗಿರುತ್ತದೆ. ಈ ಜಲಾನಯನದಲ್ಲಿನ ವ್ಯವಸಾಯ ಯೋಗ್ಯ ಭೂಮಿ 92.7 ಲಕ್ಷ ಹೆಕ್ಟೇರುಗಳು. ಇದರಲ್ಲಿ 73.1 ಲಕ್ಷ ಹೆಕ್ಟೇರು (71-72) ಸಾಗುವಳಿಯಾಗುತ್ತಿದ್ದು, 7.4 ಲಕ್ಷ ಹೆಕ್ಟೇರುಗಳು ಮಾತ್ರ ನೀರಾವರಿಗೆ ಒಳಪಟ್ಟಿದೆ.

ಕೃಷ್ಣಾನದಿ 1.93 ಶತಕೋಟಿ ಘನ ಮೀಟರ್ ನೀರನ್ನೂ ಘಟಪ್ರಭಾ, ಮಲಪ್ರಭಾ, ತುಂಗಭದ್ರಾ, (ವೇದಾವತಿಯೂ ಸೇರಿ) ಮತ್ತು ಭೀಮಾ ನದಿಗಳು ಕ್ರಮವಾಗಿ 1.79, 2.78, 18.58 ಮತ್ತು 2.41 ಶತಕೋಟಿ ಘನ ಮೀಟರ್ ನೀರನ್ನೂ ತಂದು ಒಟ್ಟು ಸರಾಸರಿ 27.49 ಶತಕೋಟಿ ಘನ ಮೀಟರ್ ನೀರನ್ನು ಒದಗಿಸುತ್ತವೆಂಬುದು ಅಂದಾಜು. ಇವಲ್ಲದೆ ಹಲವಾರು ಸಣ್ಣ ನೀರಾವರಿ ಕಾಮಗಾರಿಗಳಿಂದಾಗಿ ಸು. 2.80 ಶತಕೋಟಿ ಘನ ಮೀಟರ್ ನೀರು ಬಳಸಲ್ಪಡುತ್ತಿದೆಯೆಂದೂ ತಿಳಿಯಲಾಗಿದೆ. ರಾಜ್ಯ ಸರ್ಕಾರ ಕೃಷ್ಣಾ ಜಲಾನಯನ ಪ್ರದೇಶದಿಂದ ಒಟ್ಟು 1,156 ಟಿ.ಎಂ.ಸಿ. ನೀರನ್ನು ನೀರಾವರಿಗೆ ಬಳಸುವ ಸಮಗ್ರ ಯೋಜನೆಯನ್ನು ರೂಪಿಸಿದೆ. ಕೃಷ್ಣಾ ಮತ್ತು ಅದರ ಉಪನದಿಗಳಿಗೆ ಅಡ್ಡಲಾಗಿ ಕೃಷ್ಣಾ ಮೇಲ್ದಂಡೆ ಜಲಾಶಯ. ಆಲಮಟ್ಟಿ ಜಲಾಶಯ, ಭದ್ರಾ ಜಲಾಶಯ, ತುಂಗಭದ್ರಾ ಜಲಾಶಯ ಮೊದಲಾದ ಪ್ರಮುಖ ನೀರಾವರಿಯೋಜನೆ ಜಲಾಶಯಗಳನ್ನು ನಿರ್ಮಿಸಲಾಗಿದೆ.

**3. ಕಾವೇರಿ ಜಲಾನಯನ:** ಇದರ ವಿಸ್ತಾರ 34,273 ಚಕಿಮೀಗಳಿದ್ದು ರಾಜ್ಯದ ಒಟ್ಟು ಸೇ. 17.87 ಪ್ರದೇಶವನ್ನು ಒಳಗೊಂಡಿದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳು ಪೂರ್ತಿಯಾಗಿ, ಹಾಸನ ಜಿಲ್ಲೆಯ ಸೇ. 73.5 ಕೊಡಗು ಮತ್ತು ಬೆಂಗಳೂರು ಜಿಲ್ಲೆಗಳ ಸರಾಸರಿ ಸೇ. 65, ತುಮಕೂರು ಜಿಲ್ಲೆಯ ಸೇ. 35.4 ಮತ್ತು ಚಿಕ್ಕಮಗಳೂರು ಜಿಲ್ಲೆಯ ಸೇ. 8.4 ಭಾಗ ಈ ಜಲಾನಯನದಲ್ಲಿವೆ.

ಕಾವೇರಿ ಕಣಿವೆಯ ಮುಖ್ಯ ಉಪಜಲಾನಯನಗಳು ಐದು. ಅವು ಕಾವೇರಿ, ಹೇಮಾವತಿ, ಕಪಿಲಾ, ಶಿಂಷಾ ಮತ್ತು ಅರ್ಕಾವತಿ, ಕಾವೇರಿ, ಹಾರಂಗಿ, ರಾಮತೀರ್ಥ, ಲಕ್ಷ್ಮಣತೀರ್ಥ, ಮಚ್ಚಿಗೆಹೊಳೆ, ಮೊಸರುಹಳ್ಳ, ಲೋಕಪಾವನಿ, ಸುವರ್ಣಾವತಿ, ಎಣ್ಣೆಹೊಳೆ, ಹಂದಿಹಳ್ಳ, ಉಡುತೊರೆಹಳ್ಳ, ಪಾಲಾರ್ ಮುಂತಾದ 52 ಉಪ ಕಣಿವೆಗಳೂ ಸೇರಿ ಕಾವೇರಿ ಉಪಜಲಾನಯನ; ಹೇಮಾವತಿ ಉಪಜಲಾನಯನದಲ್ಲಿ ಹೇಮಾವತಿ, ಬಕ್ಕಿ ಹಳ್ಳ, ಕಡದಾಳು ಹಳ್ಳ, ಜಯಪಾರ್ವತಿ, ಐಗೂರು ಹಳ್ಳ, ಉಚ್ಚಂಗಿಹೊಳೆ, ಯಗಚಿ, ಸಗರಿಹಳ್ಳ ಮುಂತಾದ 11 ಉಪಕಣಿವೆಗಳು; ಕಪಿಲಾ ಉಪಜಲಾನಯನದಲ್ಲಿ ಕಪಿಲಾ, ನಾಗರಹೊಳೆ, ಸಾರತ್ ಹೊಳೆ, ತಾರಕ, ನುಗು ಮುಂತಾದ 17 ಉಪಕಣಿವೆಗಳು; ಶಿಂಷಾ ಉಪಜಲಾನಯನದಲ್ಲಿ ಶಿಂಷಾ, ಕಣ್ವ, ವೀರವೈಷ್ಣವಿ, ನಾಗಿನಿ, ಭಾರ್ಗವತಿ, ಹುಲುಹಳ್ಳ, ಹೆಬ್ಬಳ್ಳ, ಕಾನಿಹಳ್ಳ, ಚಿಕ್ಕತೊರೆ ಮುಂತಾದ 13 ಉಪಕಣಿವೆಗಳೂ ಅರ್ಕಾವತಿ ಉಪಜಲಾನಯನದಲ್ಲಿ ಅರ್ಕಾವತಿ, ವೃಷಭಾವತಿ, ಕುಮುದ್ವತಿ, ಸುವರ್ಣಮುಖಿ, ಕುನಂದವತಿ, ಮಡಿವಾಳಹೊಳೆ, ಮಾರಿಹಳ್ಳ ಮುಂತಾದ 9 ಉಪಕಣಿವೆಗಳು - ಹೀಗೆ ಇವನ್ನು ವಿಂಗಡಿಸಬಹುದು.

ಕಾವೇರಿ ಜಲಾನಯದ ಸರಾಸರಿ ಮಳೆ ವರ್ಷಕ್ಕೆ 1,400 ಮಿಮೀ, ಇದರ ಒಟ್ಟು ವಿಸ್ತೀರ್ಣದ ಸೇ. 15.8 ರಷ್ಟು ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿನ ಕಾಡುಪ್ರದೇಶವೇ ಆಗಿದೆ. ವ್ಯವಸಾಯ ಯೋಗ್ಯವಾದ 24.5 ಲಕ್ಷ ಹೆಕ್ಟೇರುಗಳಲ್ಲಿ ಬಹುತೇಕ ಸಾಗುವಳಿಯಾಗಿದ್ದು, 2000ದ ಮಾರ್ಚ್‌ವರೆಗೂ 3 ಲಕ್ಷ ಹೆಕ್ಟೇರುಗಳಲ್ಲಿ ನೀರಾವರಿಯಾಗುತ್ತದೆ. 2,500 ಮಿಮೀ ಮಳೆಯಾಗುವ ಘಟ್ಟಪ್ರದೇಶಗಳಲ್ಲಿ ದಟ್ಟವಾದ ಕಾಡುಗಳ ನಡುವೆ ಕಾಫಿ, ಏಲಕ್ಕಿ, ಮೆಣಸು, ಅಡಕೆ, ಕಿತ್ತಳೆ ಬೆಳೆಯುವ ಎಸ್ಟೇಟುಗಳಿದ್ದು, ತಗ್ಗು ಪ್ರದೇಶಗಳಲ್ಲಿ ಮಳೆಯ ಆಶ್ರಯದಿಂದಲೇ ಒಂದು ಬತ್ತದ ಬೆಳೆಯನ್ನು ತೆಗೆಯುತ್ತಾರೆ. ಉಳಿದ ಹಾಸನ, ತುಮಕೂರು, ಬೆಂಗಳೂರು ಜಿಲ್ಲೆಗಳ ಭಾಗಗಳೂ ಹಾಗೂ

ಮಂಡ್ಯ ಜಿಲ್ಲೆ 600 ರಿಂದ 750 ಮಿಮೀ ಮಳೆ ಬೀಳುವ ಪ್ರದೇಶವಾಗಿದ್ದು ಆಗಾಗ್ಗೆ ಅಭಾವಕ್ಕೊಳಪಡುತ್ತವೆ.

ಕೇಂದ್ರ ಸರ್ಕಾರ ನೇಮಿಸಿದ್ದ ಕಾವೇರಿ ಅಂಕಿ ಅಂಶಗಳ ಸಂಗ್ರಹಣ ಸಮಿತಿ ರಾಜ್ಯದಲ್ಲಿ ಈ ನದಿಯ ಜಲಸಂಪತ್ತು ಸು. 11 ಶತಕೋಟಿ ಘನ ಮೀಟರ್ ಎಂದು ಗೊತ್ತು ಮಾಡಿದೆ. ಆದರೆ ರಾಜ್ಯದ ಎಂಜಿನಿಯರುಗಳ ಅಂದಾಜು ಇನ್ನೂ ಹೆಚ್ಚಿನದಿದೆ. ಹೇಮಾವತಿ (ಅಕ್ಕಿಹೆಬ್ಬಾಳಿನ ಬಳಿ) 2.92, ಲಕ್ಷ್ಮಣತೀರ್ಥ (ಮುಂಡುವಾಡಿಯಬಳಿ) 0.54 ಕಾವೇರಿ (ಕೃಷ್ಣಾರಾಜಸಾಗರದ ಬಳಿ) 6.71, ಕಪಿಲಾ (ಹುಲ್ಲಹಳ್ಳಿಯ ಬಳಿ) 3.48, ಸುವರ್ಣಾವತಿ 0.31, ಶಿಂಷಾ 1.19, ಅರ್ಕಾವತಿ 0.48, ಉಡುತೊರೆ ಹಳ್ಳ 0.119, ಪಾಲಾರ್ 0.25 ಮತ್ತು ಕಾವೇರಿ ಕಪಿಲಾಗಳ ಉಳಿದ ಭಾಗಗಳಿಂದ 0.99 ಹೀಗೆ ಒಟ್ಟು 17 ಶತಕೋಟಿ ಘನ ಮೀಟರ್ ಈ ನದಿಯಿಂದ ಒದಗುವುದೆಂದು ಅಂದಾಜು ಮಾಡಲಾಗಿದೆ. 2000ದ ಮಾರ್ಚ್‌ವರೆಗೆ 392.87 ಟಿ.ಎಂ.ಸಿ. ನೀರನ್ನು ನೀರಾವರಿಗಾಗಿ ಬಳಸಲಾಗಿದೆ. ಹೇಮಾವತಿ ಜಲಾಶಯ, ಕೃಷ್ಣರಾಜ ಸಾಗರ ಹಾರಂಗಿ ಜಲಾಶಯ, ಕಬಿನಿ ಜಲಾಶಯ - ಇವು ಈ ಪ್ರದೇಶದ ಪ್ರಮುಖ ನೀರಾವರಿ ಯೋಜನೆಗಳಾಗಿವೆ.

**4. ಗೋದಾವರಿ ಜಲಾನಯನ್ನು:** ಉತ್ತರದ ಬೀದರ್ ಜಿಲ್ಲೆಯ ಸೇ. 82 ಭೂ ವಿಸ್ತಾರ ಎಂದರೆ 4,405 ಚಕಿಮೀ (ರಾಜ್ಯದ ಸೇ. 2.3) ಗೋದಾವರಿಯ ಉಪನದಿಯಾದ ಮಾಂಜರಾ ನದಿಯ ಜಲಾನಯನ ಪ್ರದೇಶವಾಗಿದೆ. ಈ ಭಾಗದಲ್ಲಿ ಮಾಂಜರಾ ಮತ್ತು ಕಾರಂಜಿ ನದಿಗಳಲ್ಲದೆ ಮಧುರನಾಲಾ, ದೇವನಾಲಾ, ಚುಳಕಿ ನಾಲಾ, ಹೆಬ್ಬಾಳ್ ನದಿ, ಚಿಟಗುಪ್ತ ನಾಲಾ ಮುಂತಾದವುಗಳ ಒಟ್ಟು 14 ಉಪಕಣಿವೆಗಳು ಇದರಲ್ಲಿ ಸೇರಿವೆ. ಈ ಪ್ರದೇಶದ ಸರಾಸರಿ ಮಳೆ 750ರಿಂದ 1,000 ಮಿಮೀ ವರೆಗೆ ಇದ್ದು, ಕೆಲವು ಕೆರೆಗಳು ಮತ್ತು ಬಾವಿಗಳಿಂದ ಮಾತ್ರ ನೀರಾವರಿ ಸಾಧ್ಯವಾಗಿರುತ್ತದೆ. ವ್ಯವಸಾಯ ಯೋಗ್ಯವಾದ 4 ಲಕ್ಷ ಹೆಕ್ಟ್ರೇರುಗಳಲ್ಲಿ 2.72 ಲಕ್ಷ ಹೆಕ್ಟೇರುಗಳು ಮಾತ್ರ ಸಾಗುವಳಿಯಾಗಿ ಕೇವಲ 0.20 ಲಕ್ಷ ಹೆಕ್ಟೇರ್ ನೀರಾವರಿಯಾಗಿರುತ್ತದೆ. ಹಿಂದುಳಿದ ಪ್ರದೇಶವಾದ ಇದರ ಅಭಿವೃದ್ಧಿಯಾಗಬೇಕಾದರೆ ಮಾಂಜರಾ ನದಿಯ ನೀರಿನ ಬಳಕೆಯಿಂದ ಮಾತ್ರ. ಇದರಲ್ಲಿ 1.45 ಶತಕೋಟಿ ಮೀಟರ್ ನೀರು ಒದಗುವುದು ಎಂದು ಅಂದಾಜು ಮಾಡಲ್ಪಟ್ಟಿದೆ. ಅಂತಾರರಾಜ್ಯ ನದಿಯಾದ ಗೋದಾವರಿಯ ನೀರಿನ ಹಂಚಿಕೆ ವಿವಾದದಲ್ಲಿದ್ದು, ಆಂಧ್ರ ಮತ್ತು ಕರ್ನಾಟಕಗಳ ನಡುವೆ ಆಗಿರುವ ಒಂದು ತಾತ್ಕಾಲಿಕ ಒಪ್ಪಂದದಂತೆ 0.348 ಶತಕೋಟಿ ಘನ ಮೀಟರ್ ಬಳಸಿ 0.42 ಲಕ್ಷ ಹೆಕ್ಟೇರ್ ಜಮೀನಿಗೆ ನೀರೊದಗಿಸಬಲ್ಲ ಕಾರಂಜ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಜಲಾನಯನ ಪ್ರದೇಶದಲ್ಲಿ 2000ದ ಮಾರ್ಚ್‌ರರೆಗೆ 22.37 ಟಿ.ಎಂ.ಸಿ. ನೀರನ್ನು ನೀರಾವರಿಗಾಗಿ ಬಳಸಲಾಗಿದೆ. ಮಂಜ್ರಾ ಮತ್ತು ಕಾರಂಜ ಯೋಜನೆಗಳು ಪ್ರಮುಖವಾದವು.

5. ಪಾಲಾರ್ ಮತ್ತು ಪೆನ್ನಾರ್‌ಗಳ ಜಲಾನಯನ ರಾಜ್ಯ ವಿಸ್ತೀರ್ಣದ ಸೇ. 7.09 ರಷ್ಟು ಎಂದರೆ 13,610 ಚಕಿಮೀ ಪ್ರದೇಶ ಈ ಮೂರು ನದಿಗಳ ಜಲಾನಯನದಲ್ಲಿದೆ. ಇಡೀ ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆಯ ಸೇ. 32.7 ಭಾಗ, ತುಮಕೂರಿನ ಸೇ. 27.5 ಭಾಗ ಇದರಲ್ಲಿ ಸೇರಿದೆ. ವ್ಯವಸಾಯ ಯೋಗ್ಯವಾದ 10 ಲಕ್ಷ ಹೆಕ್ಟೇರುಗಳಲ್ಲಿ 5 ಲಕ್ಷ ಸಾಗುವಳಿಯಾಗುತ್ತಿದ್ದು ಕೆರೆ ಮತ್ತು ಬಾವಿಗಳ ಆಶ್ರಯದಿಂದಲೇ 1.50 ಲಕ್ಷ ಹೆಕ್ಟೇರ್ ಭೂಮಿ ನೀರಾವರಿಗೊಳಪಟ್ಟಿದೆ. ಕಡಿಮೆ ಮಳೆ ಬೀಳುವ ಈ ಜಲಾನಯನದಲ್ಲಿ ಒದಗುವ ನೀರಿನ ಅಂದಾಜು 0.98 ಶತಕೋಟಿ ಘನ ಮೀಟರ್. ಯಾವ ಮಧ್ಯಮ ಅಥವಾ ಭಾರಿ ನೀರಾವರಿ ಯೋಜನೆಗೂ ಇಲ್ಲಿ ಅವಕಾಶವಿಲ್ಲವಾಗಿರುತ್ತದೆ.

**ಅಂತರ್ಜಲ ಸಂಪತ್ತು :** ಜಲಾನಯನ ಪ್ರದೇಶಗಳಲ್ಲಿ ಮಳೆಯಿಂದ ಬರುವ ನೀರೇ ಈ ಜಲಸಂಪತ್ತಿಗೆ ಆಧಾರ. ಆ ಮಳೆಯ ನೀರೆಲ್ಲ ಬಾಹ್ಯ ಜಲಸಂಪತ್ತಿಗೇ ಪೂರ್ಣವಾಗಿ ವಿನಿಯೋಗವಾಗದೆ, ಅದರ ಕೊಂಚ ಭಾಗವಾದರೂ ಭೂಮಿಯ ಅಂತರ್ಜಲ ಸಂಪತ್ತನ್ನು ಹೆಚ್ಚಿಸುತ್ತದೆ. ಶಿಲಾ ವರ್ಗ, ಭೂ-ಮೇಲ್ಮೈ ರಚನೆ, ವಾಯುಗುಣವನ್ನಲಂಬಿಸಿ ಕರ್ನಾಟಕದ ಭೂ ರಚನೆಯಲ್ಲಿ ಮಣ್ಣಿನ ಮೇಲು ಹೊದಿಕೆಯ ದಪ್ಪ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುವುದಿದ್ದು ಕೆಲವು ಕಡೆ 30 ಮೀಟರ್‌ಗಳಷ್ಟು ಇರುವುದೂ ಉಂಟು. ಇದು ಅಗಲವಾದ ಕಣಿವೆಗಳಲ್ಲಿ ಹೆಚ್ಚು, ಇಳಿಜಾರುಗಳಲ್ಲಿ ತೆಳುವು, ಎತ್ತರ ಪ್ರದೇಶಗಳಲ್ಲಿ ತೀರ ಕಡಿಮೆ ಇರುತ್ತದೆ. ಈ ಮೇಲು ಹೊದಿಕೆ ಮರಳು, ಗ್ರಾವೆಲ್ ಅಥ್‌ವಾ ಗರಸು, ಎರೆ ಹಾಗೂ ಹ್ಯೂಮಸ್‌ಗಳಿಂದ ಕೂಡಿರುತ್ತದೆ. ಈ ಮಣ್ಣಿಗೂ ಕೆಳಗಿರುವ ಗಟ್ಟಿಯಾದ ಶಿಲೆಗೂ ಮಧ್ಯವರ್ತಿ ವಲಯದಲ್ಲಿರುವ ಕೆಳಮಣ್ಣು ಅಂತರ್ಜಲ ಸಂಪತ್ತಿನ ಆಧಾರವಾಗಿರುತ್ತದೆ.

ಕರ್ನಾಟಕದ ಹೆಚ್ಚಿನ ಭೂ-ಭಾಗವು ಗಟ್ಟಿಯಾದ ಶಿಲೆಗಳಿಂದಾದುದರಿಂದ ಅಗಾಧ ಪ್ರಮಾಣದ ಅಂತರ್ಜಲ ಸಂಗ್ರಹಣೆಗೆ ಇದು ವಿಶೇಷ ಯೋಗ್ಯವಾಗೇನೂ ಇಲ್ಲ. ಆದರೂ ಬಹುಕಾಲದಿಂದ ಸತತವಾದ ಭೂ-ವ್ಯಾಪಾರಕ್ರಿಯೆಯಿಂದಾಗಿ ಶಿಲಾಪದರದ ಮೇಲೆ ಹೊದಿಕೆಯಾಗಿರುವ ಛಿದ್ರಿತ ಬಂಡೆಗಳು ಮತ್ತು ಅಳಕವಾದ ಮಣ್ಣು ಸಾಕಷ್ಟು ಸರಂಧ್ರವಾಗಿರವುದರಿಂದ ಸುಮಾರು ಪ್ರಮಾಣದ ಅಂತರ್ಜಲವನ್ನು ಇವು ಹಿಡಿದಿಟ್ಟುಕೊಳ್ಳಬಲ್ಲವು. ಪುರಾತನ ಕಾಲದಿಂದಲೂ ಈ ಕಡಿಮೆ ಆಳದಲ್ಲಿ ಕೊರೆಯುವ ಅಂತರ್ಜಲವನ್ನು ಅಷ್ಟೇ ಆಳಕ್ಕೆ ತೋಡಿದ ಬಾವಿಗಳಿಂದ ಉಪಯೋಗಿಸಿಕೊಳ್ಳಲಾಗುತ್ತಿದೆ. 1974ರ ಅಂತ್ಯದಲ್ಲಿನ ಗಣತಿಯ ಪ್ರಕಾರ ರಾಜ್ಯದಲ್ಲಿ ಇಂಥ ಸುಮಾರು 3.5 ಲಕ್ಷ ನೀರಾವರಿ ಬಾವಿಗಳಿದ್ದುವು.

ಶಿಲೆಯ ಶಿಥಿಲತೆಯಿಂದಾಗಿರುವ ಹೊದಿಕೆ ಸರಾಸರಿ 15 ಮೀ ಆಳವಿದೆಯೆಂದು ತಿಳಿಯಲಾಗಿದೆ. ಈ ವಲಯದ ಕೆಳಪದರವೂ ಮಳೆಯ ನೀರು ಕೆಳಕ್ಕೆ ಇಳಿಯುವುದರಿಂದ ಆಯಾ ಕಾಲದಲ್ಲಿ ಅಂತರ್ಜಲಭರಿತವಾಗುವುದು. ಹಾಗೇಯೇ ನೀರನ್ನು ಪಕ್ಕಕ್ಕೆ ಹರಿಯಗೊಟ್ಟು ಖಾಲಿಯಾಗುವುದು. ಇದನ್ನು ವಿಚ್ಛಿನ್ನ ಸಂಪೂರಣವಲಯ ಎನ್ನಬಹುದು. ಈ ಪದರದ ದಪ್ಪ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗಬಹುದಾದರೂ ಸರಾಸರಿ 3 ಮೀ ಇರುತ್ತದೆಂದು ತಿಳಿಯಬಹುದು. ಇದರ ಸರಂಧ್ರತೆ ಸೇ. 15 ಕ್ಕೆ ಕಡಿಮೆಯಿಲ್ಲದಿರುವುದಿರಂದ ಇದರ ಸಂಪೂರ್ಣ ಸಾಮರ್ಥ್ಯ ಸುಮಾರು 0.5 ಮೀ. ದಪ್ಪ ಪದರದ ನೀರನ್ನು ಹಿಡಿದಿಡುವುದಾಗಿರುತ್ತದೆ. ಈ ಪ್ರಮಾಣದ ನೀರು ಪಂಪು, ಏತ ಮುಂತಾದುವುಗಳಿಂದ ಮೇಲೆತ್ತುವುದರಿಂದಾಗಲೀ ಅಥ್‌ವಾ ಪಕ್ಕದ ಹರಿವಿನಿಂದ ಕೆಳಮಟ್ಟದ ಕಣಿವೆಗಳಿಗೆ ಬಸಿಯುವುದರಿಂದಾಗಲೀ ಖಾಲಿಯಾಗುತ್ತದೆ. ಅಲ್ಲದೆ ವರ್ಷವರ್ಷವೂ ಭರ್ತಿಯಾಗುತ್ತಿದ್ದು ಉಪಯೋಗಿಸಲು ಬರುತ್ತದೆ.

ಈ ವಿಚ್ಛಿನ್ನ ಸಂಪೂರಣ ವಲಯದ ಕೆಳಗಡೆಗೆ, ಗಟ್ಟಿಬಂಡೆಗಳ ಸಂದು ಮತ್ತು ಸೀಳುಗಳಲ್ಲಿ ನೀರು ಸಂಗ್ರಹಿತವಾಗಿರುವ, ಸುಮಾರು 90 ಮೀ ವರೆಗೂ ಆಳವಿರಬಹುದಾದ ಸ್ಥಾಯೀ ಸಂಪೂರಣ ವಲಯವಿರುತ್ತದೆ. ಇದಕ್ಕೂ ಕೆಳಗಡೆಗೆ, ಗಣಿಗಳಲ್ಲಿ ಕಾಣಬಹುದಾದಂತೆ ಬಂಡೆಗಳು ಶುಷ್ಕವಾಗಿರುತ್ತವೆ. ಈ ವಲಯದಲ್ಲಿ ಮೇಲಿನಿಂದ 45 ಮೀ ಆಳದವರೆಗೆ ಹೆಚ್ಚಿನ ಸಂದುಗಳು ಹಾಗೂ ಸೀಳುಗಳು ಇರಬಹುದಾದ್ದರಿಂದ ಇದು ಹೆಚ್ಚಿನ ನೀರು ಶೇಖರಣೆ ಮತ್ತು ಹರಿವಿಗೆ ತಕ್ಕುದಾಗಿರುತ್ತದೆ. ಇದರ ಸರಂಧ್ರತೆ ಮತ್ತು ಆಳಗಳನ್ನು ಪರಿಗಣಿಸಿ, ಸುಮಾರು 1.5 ಮೀ ದಪ್ಪ ಪದರದ ನೀರು ಸಂಗ್ರಹವಾಗಿರುತ್ತದೆಂದು ಅಂದಾಜು ಮಾಡಲಾಗಿದೆ. ಈ ಆಳದಲ್ಲಿನ ನೀರು ಪಡೆಯಬೇಕಾದರೆ ಕೊಳವೆಬಾವಿಗಳಿಂದ ಮಾತ್ರ ಸಾಧ್ಯವಾಗುತ್ತದೆ.

ಕರ್ನಾಟಕದಲ್ಲಿ ಅಂತರ್ಜಲ ಕಾಣಿಸಿಕೊಳ್ಳುವುದು ಸರಂಧ್ರಿತ ಮೇಲಿನ ಮಣ್ಣು, ಭೂಸವೆತದ ಕೆಳಹೊದಿಕೆ, ಸಂದು ಮತ್ತು ಸೀಳುಗಳುಳ್ಳ ತಳದ ಶಿಲೆ - ಇವುಗಳಲ್ಲಿನ ಭೂ ಒಳಗಿನ ಜಲಮಟ್ಟದ ರೂಪದಲ್ಲಿ, ವರ್ಷವರ್ಷಕ್ಕೂ ಇದಕ್ಕೆ ಪುನಃ ಪೂರಣ ಎಷ್ಟು ದೊರೆಯುತ್ತದೆ ಎಂಬ ಅಂದಾಜು ಬೇಕಾಗುತ್ತದೆ. ಮುಖ್ಯವಾಗಿ ಮಳೆಯ ನೀರು ಕೆಳಕ್ಕೆ

ಇಳಿಯುವುದರಿಂದ ಮತ್ತು ಇನ್ನು ಸ್ವಲ್ಪ ಭಾಗ ಹೊಳೆಗಳು, ಕೆರೆಗಳು, ಜಲಾಶಯಗಳು ಮತ್ತು ನೀರಾವರಿಗೆ ಉಪಯೋಗಿಸಿದ ನೀರು - ಇವುಗಳ ಇಂಗುವಿಕೆಯಿಂದ ಇದು ದೊರೆಯುತ್ತದೆ. ಬೇಸಿಗೆ ಮತ್ತು ಮಳೆಗಾಲಗಳಲ್ಲಿನ ಜಲಮಟ್ಟದ ವ್ಯತ್ಯಾಸದಿಂದ ಮತ್ತು ಭೂಸವೆತದಿಂದ ಮೇಲುಹೊದಿಕೆ ಮತ್ತು ಸಂದುಗಳುಳ್ಳ ತಳದ ಬಂಡೆಗಳು ಒಳ್ಳೆಯ ಪುನಃ ಪೂರಣ ಸಾಮರ್ಥ್ಯ ಹೊಂದಿವೆಯೋ ಎಂಬುದು ಗೊತ್ತಾಗುತ್ತದೆ. ರಾಜ್ಯದಾದ್ಯಂತ ಇರುವ ಅನೇಕ ಬಾವಿಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಿದಾಗ ಮಲೆನಾಡು ಪ್ರದೇಶಗಳಲ್ಲಿ ಈ ವ್ಯತ್ಯಾಸ 4 ರಿಂದ 9 ಮೀಗಳೂ ಮೈದಾನ ಪ್ರದೇಶದಲ್ಲಿ 1.5ರಿಂದ 4 ಮೀ ವರೆಗೂ ಇರುವುದೆಂದು ಗೊತ್ತಾಗಿದೆ. ತುಂಬ ತಗ್ಗಿನ ಪ್ರದೇಶಗಳಲ್ಲಿ ಇದು 1ರಿಂದ 1.5 ಮೀ ಮಾತ್ರ ಇರುತ್ತದೆ. ಈ ಬಾವಿಗಳಿಂದ ಪ್ರತಿದಿನ 45 ರಿಂದ 70 ಘನ ಮೀಟರ್ ನೀರು ದೊರೆಯುತ್ತದೆ. ಸರಾಸರಿಯಾಗಿ ಒಂದೊಂದು ಬಾವಿಯೂ 1ರಿಂದ 1.5 ಹೆಕ್ಟೇರ್ ಜಮೀನಿಗೆ ನೀರಾವರಿಯೊದಗಿಸುತ್ತದೆ. ನೀರು ಧರಿಸುವ ವಿವಿಧ ರೀತಿಯ ರಚನೆಗಳಲ್ಲಿ ನೀರು ಒದಗಿಸುವ ಲಕ್ಷಣಗಳನ್ನು ಅಂದಾಜುಮಾಡಲು ಬೇರೆ ಬೇರೆ ರೀತಿಯ ಭೂಗರ್ಭ ರಚನಾ ಲಕ್ಷಣಗಳುಳ್ಳ 1,500ಕ್ಕೂ ಹೆಚ್ಚಿನ ಪಂಪ್-ಪರೀಕ್ಷಣಗಳನ್ನು ನಡೆಸಲಾಗಿದೆ. ಸರಾಸರಿಯಾಗಿ ಬಾವಿಗಳಲ್ಲಿನ ಪುನಃ ಕೂಡಿಕೊಳ್ಳುವಿಕೆಯ ವೇಗ ಪ್ರತಿ ನಿಮಿಷಕ್ಕೆ 25ರಿಂದ 75 ಲೀಟರ್ ವರೆಗೆ ಇರುತ್ತದೆ.

ಮಳೆ ಸ್ವಲ್ಪವೇ ಪ್ರಮಾಣದಲ್ಲಿ ಅಲ್ಪಕಾಲ ಮಾತ್ರ. ಎಲ್ಲೋ ಒಂದೊಂದು ಸಾರಿ ಆಗುತ್ತಿದ್ದರೆ ಮೇಲು ನೆಲವನ್ನು ಮಾತ್ರ ಅದು ಒದ್ದೆಯಾಗಿಸಿ ಬಾಷ್ಪೀಕರಣ ಮತ್ತು (ಸಸ್ಯಗಳ) ಬಾಷ್ಪೋತ್ಸರ್ಜನಗಳಿಂದಾಗಿ ವಾಯುಮಂಡಲಕ್ಕೇ ಮತ್ತೆ ಅದು ಹಿಂತಿರುಗುತ್ತದೆ. ಮಲೆನಾಡಿನ ಇಳಿಜಾರು ಪ್ರದೇಶಗಳಲ್ಲಿ ಮಳೆಯನೀರಿನ ಹೆಚ್ಚು ಭಾಗ ಹರಿದುಹೋಗುವುದರಿಂದ ಇಂಗುವಿಕೆಯ ಪ್ರಮಾಣ ಕಡಿಮೆಯಾಗಿರುತ್ತದೆ. ಕರಿಯ ಮಣ್ಣಿನ ಹೊದಿಕೆಯಿರುವ ಉತ್ತರದ ಮೈದಾನ ಪ್ರದೇಶಗಳಲ್ಲಿ, ಮಳೆಯ ನೀರಿನಿಂದ ಒದ್ದೆಯಾದ ಎರೆಮಣ್ಣು ಹಿಗ್ಗಿ ನೀರು ಕೆಳಕ್ಕೆ ಇಂಗುವುದನ್ನು ಸಾಕಷ್ಟು ತಡೆದುಬಿಡುತ್ತದೆ. ಈ ಎಲ್ಲ ಅಂಶಗಳ ಬಗ್ಗೆ ಖಚಿತವಾದ ವೈಜ್ಞಾನಿಕ ಅಂಕಿ-ಅಂಶಗಳು ಲಭ್ಯವಿಲ್ಲದ ಕಾರಣ ಅಂತರ್ಜಲ ಸಂಗ್ರಹಕ್ಕೆ ಆಗುವ ಪುನಃ ಪೂರಣ ಪ್ರಮಾಣ ಕಂಡುಹಿಡಿಯುವುದು ಕಷ್ಟವಾದರೂ ಈ ದಿಶೆಯಲ್ಲಿ ವಿಶೇಷ ಪ್ರಯತ್ನವೂ ನಡೆದಿದೆ.

ಮಳೆಯಿಂದ ದೊರೆಯುವ ನೀರಿನಲ್ಲಿ ಬಹು ಅಂಶ ಬಾಷ್ಪೀಕರಣ-ಉತ್ಸರ್ಜನಗಳಿಂದಾಗಿ ನಷ್ಟವಾಗುತ್ತದೆ. ನೇರವಾಗಿ ಇದನ್ನು ಕಂಡುಹಿಡಿಯಲಾಗದಿದ್ದರೂ ಹವಾಮಾನ ಸ್ಥಿತಿಯ ಎಂದರೆ, ಬಿಸಿಲಿನ ಅವಧಿ, ತೀಕ್ಷ್ಣತೆ, ವಾಯುವಿನಲ್ಲಿನ ತೇವ, ಬೀಸುವ ವೇಗ ಮುಂತಾದ ವಿವರಗಳ ಆಧಾರದ ಮೇಲೆ ಗರಿಷ್ಠ ಸಾಧ್ಯ ಬಾಷ್ಪೀಕರಣ ಉತ್ಸರ್ಜನದ ಪ್ರಮಾಣವನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೂ ಲೆಕ್ಕಾಚಾರ ಮಾಡಿ ಒದಗಿಸಲಾಗಿದೆ. ಸಾಕಷ್ಟು ನೀರು ಸದಾ ದೊರೆಯುವಂತಿದ್ದರೆ, ಸಸ್ಯಾವೃತವಾದ ಒಂದು ಭೂಕ್ಷೇತ್ರದಿಂದ ಬಾಷ್ಪೀಕರಣದಿಂದಾಗಿ ನಷ್ಟವಾಗುವ ನೀರಿನ ಗರಿಷ್ಠ ಪ್ರಮಾಣವನ್ನು ಸೂಚಿಸುತ್ತದೆ. ಈ ಬೆಲೆಗಳ ಆಧಾರದ ಮೇಲೆ ಮಳೆಯಿಂದ ದೊರೆಯುವ ನೀರಿನಲ್ಲಿ ನಷ್ಟವನ್ನು ಮೊದಲು ಕಳೆಯಲಾಗುತ್ತದೆ. ಎಷ್ಟೋ ತಿಂಗಳುಗಳಲ್ಲಿ ಬರುವ ಅಲ್ಪ ಪ್ರಮಾಣದ ಮಳೆಯೆಲ್ಲ ಈ ನಷ್ಟವನ್ನು ತುಂಬುವುದಕ್ಕೆ ತೀರಿಹೋಗುತ್ತದೆ. ಸತತವಾಗಿ ಹಾಗೂ ಭಾರಿಯ ಮಳೆ ಬೀಳುವ ತಿಂಗಳುಗಳಲ್ಲಿ ಮಾತ್ರ ನಿಜವಾದ ಹೆಚ್ಚುವರಿಯಿದ್ದು, ಅಂತರ್ಜಲ ಸಂಗ್ರಹಕ್ಕೆ ಪುನಃಪೂರಣ ದೊರೆಯುತ್ತದೆ. ವಾರ್ಷಿಕ ಸರಾಸರಿ ಮಳೆ 700 ಮಿಮೀಗೂ ಕಡಿಮೆ ಇರುವ ಜಿಲ್ಲೆಗಳಲ್ಲಿ ಅಂತರ್ಜಲ ಸಂಪತ್ತನ್ನು ಪುನಃ ಪೂರೈಸಲು ಇರುವ ಹೆಚ್ಚುವರಿ ನೀರು ಬಹಳ ಕಡಿಮೆಯೆಂಬುದನ್ನು ಗಮನಿಸಬಹುದು. ಹೆಚ್ಚು ಅಭಾವವನ್ನೆದುರಿಸುವ ಜಿಲ್ಲೆಗಳು ಇವೇ ಆಗಿದ್ದು, ನೀರಾವರಿಗೆ ಅಂತರ್ಜಲದ ಅವಲಂಬನೆ ಹೆಚ್ಚು ಹೆಚ್ಚಿದ್ದು ನೀರು ದೊರೆಯಬೇಕಾದ್ದೂ ಈ ಪ್ರದೇಶಗಳಲ್ಲೇ, ಹವಾಮಾನ ಆಧಾರಿತ ಗಣತಿಯಲ್ಲಿ ಹೀಗೆನ್ನಿಸಿದರೂ ಬೇರೆ ಕೆಲವು ಅಂಶಗಳು ಇಲ್ಲಿ ಸಹಾಯಕ್ಕೆ ಒದಗುತ್ತವೆ. ಮೇಲಿನ ಈ ಕಡಿಮೆ ಮಳೆ ಪ್ರದೇಶಗಳು ಹೆಚ್ಚಾಗಿ ಸಮತಟ್ಟಾದ ಮೈದಾನಗಳಾಗಿದ್ದು ನೆಲದ ನೀರಿನ ಹರಿಯುವಿಕೆ ಕನಿಷ್ಠ ಪ್ರಮಾಣದ್ದಾಗಿರುತ್ತದೆ. ಮಣ್ಣಿನ ಪದರವೂ ತೆಳುವಾಗಿದ್ದು ಬಂಡೆಗಳೂ ಭೂ-ವ್ಯಾಪಾರ ಕ್ರಿಯೆಯಿಂದ ಛಿದ್ರಿತವಾಗಿ, ಸಂದುಗಳು ಎರೆಯಿಂದ ಮುಚ್ಚಲ್ಪಡದೆ ತೆರವಾಗಿಯೇ ಇದ್ದು ಮೇಲ್ಮಟ್ಟದಲ್ಲೇ ಇರುವುದರಿಂದ ಆದ ಅಲ್ಪಸ್ವಲ್ಪ ಮಳೆಯೆಲ್ಲ ಆದಷ್ಟು ಕೂಡಲೇ ಭೂ ಅಂತರ್ಗತವಾಗುತ್ತದೆ. ಸಸ್ಯಾವರಣವೂ ಕಡಿಮೆಯಾದ್ದರಿಂದ ಬಾಷ್ಪೀಕರಣ ನಷ್ಟವೂ ಅಷ್ಟಾಗಿಲ್ಲದೆ, ಅಂತರ್ಜಲ ಸಂಗ್ರಹಣಕ್ಕೆ ದೊರೆಯುವ ಕೊಡುಗೆ ಹೆಚ್ಚಿನ ಪ್ರಮಾಣದಲ್ಲೇ ಇರುವುದೆಂದು ನಿರೀಕ್ಷಿಸಲಾಗುತ್ತದೆ.

ಪರಿವೀಕ್ಷಣವಾಗಿ ಆರಿಸಿರುವ ಬಾವಿಗಳಲ್ಲಿ, ಮಳೆಗಳ ಅನಂತರ ಆಗುವ ಜಲಮಟ್ಟದ ವಾಸ್ತವ ವ್ಯತ್ಯಾಸವನ್ನು ಪರಿಗಣಿಸಿಯೂ ವಾರ್ಷಿಕ ಪುನಃಪೂರೈಕೆಯನ್ನು ಅಂದಾಜು ಮಾಡಬಹುದು. ಇಲ್ಲಿಯೂ ಶಿಲೆಯ ವರ್ಗೀಕರಣ, ರಚನೆ ಮತ್ತು ಭೂ-ವ್ಯಾಪಾರ ಕ್ರಿಯೆಗೆ ಒಳಗಾಗಿರುವ ಪರಿಮಾಣಗಳಿಂದ ವ್ಯತ್ಯಾಸಗಳುಂಟಾಗಬಹುದು.

ಈ ಮುಂದಿನ ಪಟ್ಟಿಯಲ್ಲಿ ಜಿಲ್ಲಾವಾರು ವಾಡಿಕೆ ಮಳೆ (1901-70) ಮತ್ತು ವಾಸ್ತವಿಕ ಮಳೆಯ (2000) ಪ್ರಮಾಣವನ್ನು ತೋರಿಸಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ವಾಡಿಕೆ 1901-70 | ವಾಸ್ತವಿಕ 2000 |
|---|---|---|---|
| **I** | **ಬೆಂಗಳೂರು ವಿಭಾಗ** | 67 | 68 |
| 1 | ಬೆಂಗಳೂರು | 867 | 1,060 |
| 2 | ಬೆಂಗಳೂರು (ಗ್ರಾ) | 817 | 1,143 |
| 3 | ಚಿತ್ರದುರ್ಗ | 573 | 753 |
| 4 | ದಾವಣಗೆರೆ | 649 | 738 |
| 5 | ಕೋಲಾರ | 744 | 852 |
| 6 | ಶಿವಮೊಗ್ಗ | 1,664 | 1,957 |
| 7 | ತುಮಕೂರು | 688 | 923 |
| **II** | **ಬೆಳಗಾಂವಿ ವಿಭಾಗ** | | |
| 8 | ಬೆಳಗಾಂವಿ | 808 | 762 |
| 9 | ಬಿಜಾಪುರ | 578 | 607 |
| 10 | ಬಾಗಲಕೋಟೆ | 562 | 593 |
| 11 | ಧಾರವಾಡ | 772 | 726 |
| 12 | ಗದಗ | 612 | 698 |
| 13 | ಹಾವೇರಿ | 753 | 848 |
| 14 | ಉತ್ತರ ಕನ್ನಡ | 2,835 | 3,085 |
| **III** | **ಗುಲ್ಬರ್ಗ ವಿಭಾಗ** | | |
| 15 | ಬಳ್ಳಾರಿ | 636 | 622 |
| 16 | ಬೀದರ್ | 847 | 959 |
| 17 | ಗುಲ್ಬರ್ಗ | 777 | 805 |
| 18 | ರಾಯಚೂರು | 631 | 640 |
| 19 | ಕೊಪ್ಪಳ | 572 | 701 |

| | | | |
|---|---|---|---|
| VI | **ಮೈಸೂರು ವಿಭಾಗ** | | |
| 20 | ಚಿಕ್ಕಮಗಳೂರು | 1,925 | 1,831 |
| 21 | ದಕ್ಷಿಣ ಕನ್ನಡ | 3,975 | 3,303 |
| 22 | ಉಡುಪಿ | 4,119 | 3,805 |
| 23 | ಹಾಸನ | 1,031 | 1,100 |
| 24 | ಕೊಡಗು | 2,718 | 2,641 |
| 25 | ಮಂಡ್ಯ | 700 | 967 |
| 26 | ಮೈಸೂರು | 782 | 960 |
| 27 | ಚಾಮರಾಜನಗರ | 751 | 1,016 |
| | ರಾಜ್ಯ | 1,139 | 1,216 |

ಇಡೀ ರಾಜ್ಯವನ್ನು ಪರಿಗಣಿಸಿದಾಗ ಮಳೆಯ ನೀರಿನಿಂದ ಅಂತರ್ಜಲ ಸಂಗ್ರಹಕ್ಕೆ ದೊರೆಯುವ ಕೊಡುಗೆ ಸುಮಾರು ಸೇ. 3 ರಿಂದ 10ರ ವರೆಗೆ ಇದೆ. ಅಂದರೆ ವಾರ್ಷಿಕವಾಗಿ ಒಟ್ಟು 11,173 ದಶಲಕ್ಷ ಘನ ಮೀಗಳು. (ಕೆ.ವಿ.ಎಸ್‌ಯು)

**ನಯಸೇನ:** ಸು. 1112. ಜೈನಕವಿ. ಧರ್ಮಾಮೃತ ಎಂಬ ಕಾವ್ಯದ ಕರ್ತೃ. ಧಾರವಾಡ ಜಿಲ್ಲೆಯ ಮುಳಗುಂದ ಇವನ ಜನ್ಮಸ್ಥಳ. ಈತ ಅಲ್ಲಿ ಜೈನ ಸಂನ್ಯಾಸಿಯಾಗಿದ್ದು ರಾಜಪೂಜಿತನೂ ಜನಾನುರಾಗಿಯೂ ಆಗಿದ್ದಂತೆ ಕಂಡುಬರುತ್ತದೆ. ನರೇಂದ್ರ ಸೇನಮುನಿಪ ಇವನ ಗುರು. ಕವಿಗೆ ಸುಕವಿನಿಕರ ಪಿಕಮಾಕಂದ, ಸುಕವಿಜನಮನಃ ಪದ್ಮಿನೀರಾಜಹಂಸ, ನೂತನಕವಿತಾವಿಲಾಸ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ. ಈತ ತನ್ನನ್ನು ನಯಸೇನ, ನಯಸೇನದೇವ, ನಯಸೇನ ಮುನೀಂದ್ರ ಮೊದಲಾಗಿ ಕರೆದುಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಅಸಗ, ಪೊನ್ನ, ಪಂಪ, ಗಜಾಂಕುಶ, ಗುಣವರ್ಮ, ರನ್ನ ಮೊದಲಾದವರನ್ನು ಸ್ತುತಿಸಿದ್ದಾನೆ. ತನ್ನನ್ನು ಮಾನಿತಶೀಲನಿಧಾನನನೂನಗುಣಂ ಸಕಳಭವ್ಯಜನಬುಧ ಜನಚಿತ್ತಾನಂದಕರಂ ಎಂದು ಹೊಗಳಿಕೊಂಡಿದ್ದಾನೆ. ಈತ ಕನ್ನಡ ಕವಿಗಳ ಭಾಷಾ ಬಳಕೆಯ ಬಗ್ಗೆ ಆಡಿರುವ ಮಾತುಗಳು ಗಮನಾರ್ಹವಾದವು. ಅದುವರೆವಿಗೂ ರಾಜಾಶ್ರಯದಲ್ಲಿಯೇ ಬೆಳೆದು ಯಾರೋ ನಾಲ್ಕು ಜನರಿಗಾಗಿ ಸಂಸ್ಕೃತ ಭೂಯಿಷ್ಠವಾದ ಭಾಷೆಯಲ್ಲಿ ಕಾವ್ಯರಚನೆ ಮಾಡುತ್ತಿದ್ದ ಕವಿಗಳನ್ನು ಕುರಿತು ಈತ ಮೊದಲ ಬಾರಿಗೆ ಪ್ರತಿಭಟಿಸಿದ. ಹೊಸಗನ್ನಡದಲ್ಲಿ ಕಾವ್ಯ ಬರೆಯುತ್ತೇವೆಂದು ಹೇಳಿಕೊಂಡು ಹೊರಟು ಕನ್ನಡದೊಂದಿಗೆ ಸರಿಬೆಸುಗೆ ಹೊಂದದ ಸಂಸ್ಕೃತ ಬಳಸುವವರೂ ಕವಿಗಳೇ ಎಂದು ಅಂಥವರನ್ನು ಕೆಚ್ಚೆದೆಯಿಂದ ಖಂಡಿಸಿದ. ಸಕ್ಕದಮಂ ಪೇೞ್ವೊಡೆ ನೆಱ ಸಕ್ಕದಮಂ ಪೇೞ್ಗೆ ಶುದ್ಧ ಕನ್ನಡದೊಳ್ ತಂದಿಕ್ಕುವುದೆ ಸಕ್ಕದಂಗಳ ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ಎಂದು ಕನ್ನಡ ಸಂಸ್ಕೃತಗಳ ಸರಿದೂಗದ ಬೆರಕೆಯನ್ನು ವಿರೋಧಿಸಿದ. ಆಡುಭಾಷೆಯೇ ಜೀವಂತ ಭಾಷೆ, ಆ ಭಾಷೆಯಲ್ಲಿ ಜನರಿಗೆ ಮುಟ್ಟುವಂತೆ ಕಾವ್ಯವನ್ನು ರಚಿಸಬೇಕೆಂದು ಕವಿಗಳಿಗೆ ಮಾರ್ಗದರ್ಶನ ನೀಡಿದ; ಆ ದಾರಿಯಲ್ಲಿ ನಡೆದ.

ಧರ್ಮಾಮೃತ 14 ಆಶ್ವಾಸಗಳ ಚಂಪೂ ಗ್ರಂಥ. ಧರ್ಮವನ್ನು ತಿಳಿಸುವುದೇ ಈ ಗ್ರಂಥದ ಉದ್ದೇಶವಾಗಿದ್ದು ಕವಿ ಇದನ್ನು ಸುಂದರವಾದ ಕಥೆಗಳ ಮೂಲಕ ಸಾಧಿಸಿದ್ದಾನೆ. ಜಿನದರ್ಶನ ಮಾಹಾತ್ಮ್ಯ, ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ, ಧರ್ಮಪ್ರಭಾವನೆ, ಅಹಿಂಸೆ, ಅಸ್ತೇಯ, ಸತ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಈ ವಿಷಯಗಳನ್ನು ಹದಿನಾಲ್ಕು ಆಶ್ವಾಸಗಳಲ್ಲಿ ಪ್ರತಿಪಾದಿಸಲಾಗಿದೆ. ಶ್ರೇಣಿಕ ಮಹಾರಾಜನಿಗೆ - ಈ ವಿಷಯಗಳನ್ನು ಗೌತಮ ಗಣಧರರು ಬೋಧಿಸಿದ ರೀತಿಯಲ್ಲಿ ಕಥೆಗಳ ನಿರೂಪಣೆ ಇದೆ. ಕವಿ ತನ್ನ ಗ್ರಂಥವನ್ನು ಕಾವ್ಯರತ್ನವೆಂದು ಕರೆದುಕೊಂಡಿದ್ದಾನೆ.

ನಯಸೇನನ ಲೋಕಾನುಭವ ವ್ಯಾಪಕವಾದುದು. ಕಥೆ ಹೇಳುವಾಗ ರಾಮಾಯಣ, ಮಹಾಭಾರತ ಮತ್ತು ಭಾಗವತಗಳಲ್ಲಿ ಬರುವ ಅನೇಕ ಕಥೆಗಳನ್ನೂ ರೂಢಿಯಲ್ಲಿರುವ ಚಂದ್ರಹಾಸನ ಕಥೆಯಂಥ ಕಥೆಗಳನ್ನೂ ವಿಪುಲವಾಗಿ ಬಳಸಿಕೊಂಡಿದ್ದಾನೆ. ಇದೊಂದು ಕಥೆಗಳ ಉಗ್ರಾಣ. ಮಾಲೆಮಾಲೆಯಾಗಿ ಹೋಲಿಕೆಗಳನ್ನು ಕೊಡುವುದು ಇವನ ವೈಶಿಷ್ಟ್ಯ. ಇದರಿಂದ ಅಲ್ಲಲ್ಲಿ ಕಥೆಯ ಓಟಕ್ಕೆ ಸ್ವಲ್ಪ ಭಂಗ ಬಂದಂತಾಗಿದೆ. ಗಾದೆಮಾತುಗಳನ್ನು ಕವಿ ಧಾರಾಳವಾಗಿ ಬಳಸಿಕೊಂಡಿದ್ದಾನೆ. ಕಥನವಿಧಾನ, ತಂತ್ರ, ಭಾಷೆ, ಗಾದೆಮಾತುಗಳ ಬಳಕೆ ಇವುಗಳ ದೃಷ್ಟಿಯಿಂದ ಈ ಕೃತಿ ಜಾನಪದ ಸತ್ವದಿಂದ ಕೂಡಿದೆ. ಈ ಕೃತಿಯಿಂದ ಆ ಕಾಲದ ಸಾಮಾಜಿಕ ಜೀವನದ ಅನೇಕ ಆಚಾರವಿಚಾರಗಳ ಕ್ವಚಿದ್ದರ್ಶನ ನಮಗೆ ಖಂಡಿತ ದೊರೆಯುತ್ತದೆ. ಈ ದೃಷ್ಟಿಯಿಂದ ಧರ್ಮಾಮೃತ ಸಾಹಿತ್ಯದ ವಿದ್ಯಾರ್ಥಿಗಳಿಗಲ್ಲದೆ ಸಮಾಜಶಾಸ್ತ್ರದ ಅಭ್ಯಾಸಿಗಳಿಗೂ ಗಮನಾರ್ಹವಾದ ಕೃತಿಯಾಗಿದೆ. (ಎನ್.ಬಿ.ಎಲ್., ಜಿ.ಎಸ್.ಎನ್.ಐ.)

**ನರಗುಂದ :** ಗದಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪಶ್ಚಿಮ ಮತ್ತು ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯೂ ಈಶಾನ್ಯದಲ್ಲಿ ಬಾಗಲಕೋಟೆ ಜಿಲ್ಲೆಯೂ ದಕ್ಷಿಣದಲ್ಲಿ ಧಾರವಾಡ ಜಿಲ್ಲೆಯೂ ಮತ್ತು ಪೂರ್ವದಲ್ಲಿ ರೋಣ ತಾಲ್ಲೂಕೂ ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 436 ಚಕಿಮೀ ಜನಸಂಖ್ಯೆ 92644. ತಾಲ್ಲೂಕಿನಲ್ಲಿ 35 ಗ್ರಾಮಗಳು ಮತ್ತು ಒಂದು ಪಟ್ಟಣ ಇವೆ. ಕೊಣ್ಣೂರು ಮತ್ತು ನರಗುಂದ ಹೋಬಳಿಗಳು.

ಈ ತಾಲ್ಲೂಕಿನ ನರಗುಂದಬೆಟ್ಟ ಪ್ರದೇಶ ಮತ್ತು ಚಿಕ್ಕನರಗುಂದದ ಬೆಟ್ಟ ಪ್ರದೇಶ ಬಿಟ್ಟು ಉಳಿದ ಭಾಗವೆಲ್ಲ ಕಪ್ಪು ಮಣ್ಣಿನ, ಬೆಣಚುಗಲ್ಲು, ಸಣ್ಣ ನರುಜುಗಲ್ಲು ಮತ್ತು ಮರಳು ಕಲ್ಲಿರುವ ಭೂಮಿ, ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಬಿಜಾಪುರ ಧಾರವಾಡ ಜಿಲ್ಲೆಗಳ ಗಡಿಯಾಗಿ ಮಲಪ್ರಭಾ ನದಿ ಹರಿಯುತ್ತದೆ. ಇದನ್ನು ಬಿಟ್ಟರೆ ತಾಲ್ಲೂಕಿನಲ್ಲಿ ಕೆಲವು ಸಣ್ಣ ಹಳ್ಳಗಳು ಮಾತ್ರ ಇವೆ. ತಾಲ್ಲೂಕಿನಲ್ಲಿ ಸರಾಸರಿ ವಾರ್ಷಿಕ ಮಳೆ ಸು. 560 ಮಿಮೀ. ಈ ತಾಲ್ಲೂಕಿನಲ್ಲಿ ಜೋಳ, ಹತ್ತಿ, ಗೋಧಿ, ಎಣ್ಣೆಬೀಜಗಳು ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಮಲಪ್ರಭಾ ನದಿಯ ದಕ್ಷಿಣ ದಂಡೆಯ ಮೇಲಿನ ಮೆಕ್ಕಲು ಮಣ್ಣಿನ ಪ್ರದೇಶದಲ್ಲಿ ತರಕಾರಿಗಳನ್ನೂ ಇತರ ತೋಟದ ಬೆಳೆಗಳನ್ನೂ ಬೆಳೆಯುತ್ತಾರೆ. ನರಗುಂದ ತಾಲ್ಲೂಕು ಸೇಂಗಾ ಮತ್ತು ಹತ್ತಿಯ ಮಾರುಕಟ್ಟೆಗೆ ಪ್ರಸಿದ್ಧಸ್ಸತೆ.

ನರಗುಂದ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಧಾರವಾಡ ನಗರಕ್ಕೆ ಈಶಾನ್ಯದಲ್ಲಿ ನವಲಗುಂದದ ಉತ್ತರಕ್ಕೆ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 32548. ಇದೊಂದು ವ್ಯಾಪಾರ ಕೇಂದ್ರ. ಪುರಸಭಾಡಳಿತವಿದೆ. ಪಟ್ಟಣದಲ್ಲಿ ಹತ್ತಿ ಎಕ್ಕುವ ಮತ್ತು ಎಣ್ಣೆ ತಯಾರಿಕೆಯ ಕಾರ್ಖಾನೆಗಳಿವೆ.

ನರಗುಂದದಲ್ಲಿ ಶಂಕರಲಿಂಗ, ಮಹಾಬಲೇಶ್ವರ, ಹನುಮಂತ ದೇವರ ದೇವಾಲಯಗಳಿವೆ. ಇಲ್ಲಿಯ ಮುಖ್ಯ ಆಕರ್ಷಣೆ ನರಗುಂದದ ಬೆಟ್ಟ ಮತ್ತು ಕೋಟೆ, ಇಲ್ಲಿಯ ಕೋಟೆಯನ್ನು ಕರ್ನಾಟಕದ ಬಲವಾದ ಕೋಟೆಗಳಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಈಗ ಕೋಟೆಯ ಅವಶೇಷಗಳು ಮಾತ್ರ ಇವೆ. ನರಗುಂದದಲ್ಲಿ 1720ರಲ್ಲಿ ಕಟ್ಟಿದ ವೆಂಕಟೇಶ ದೇವಾಲಯವಿದೆ. ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ರಥೋತ್ಸವ ಜರುಗುತ್ತದೆ.

ನರಗುಂದದಲ್ಲಿ ಚಾಳುಕ್ಯ ಮನೆತನದ ಮೂರನೆಯ ಸೋಮೇಶ್ವರ, ಎರಡನೆಯ ಜಗದೇಕಮಲ್ಲ ಮತ್ತು ಮೂರನೆಯ ತೈಲ ಇವರಿಗೆ ಸೇರಿದ ಮೂರು ಶಾಸನಗಳಿವೆ. ಆ ಕಾಲದಲ್ಲಿ ನರಗುಂದ ಒಂದು ಅಗ್ರಹಾರವಾಗಿದ್ದು 220 ಮಹಾ ಜನರು ಇದರ ಆಡಳಿತ ನೋಡಿಕೊಳ್ಳುತ್ತಿದ್ದರೆಂದು ತಿಳಿದುಬರುವುದು.

1674ರಲ್ಲಿ ಶಿವಾಜಿ ಇಲ್ಲಿಯ ಕೋಟೆಯನ್ನು ಕಟ್ಟಿಸಿದ. 1778ರಲ್ಲಿ ನರಗುಂದ ಹೈದರನಿಗೆ ಕಪ್ಪ ಕೊಡುತ್ತಿತ್ತು. 1785ರಲ್ಲಿ ಟಿಪ್ಪು

ನರಗುಂದ ಕೋಟೆಯನ್ನು ವಶಪಡಿಸಿಕೊಂಡ. 1818ರಲ್ಲಿ ಮರಾಠ ಪೇಶವೆಗಳು ದಾದಾಜಿರಾವ್ ಅಪ್ಪ ಎಂಬಾತನಿಗೆ ನರಗುಂದವನ್ನು ವಹಿಸಿಕೊಟ್ಟರು. ಈ ವಂಶದ ನರಗುಂದದ ಭಾಸ್ಕರರಾವ್ ಅಪ್ಪಾಸಾಹೇಬ್ ಅಥವಾ ಬಾಬಾಸಾಹೇಬ (ನೋಡಿ) ಹೆಚ್ಚು ಜನಪ್ರಿಯನಾಗಿದ್ದ. 1857ರಲ್ಲಿ ಬ್ರಿಟಿಷರು ಈತನಿಗೆ ದತ್ತುಪುತ್ರ ಸ್ವೀಕಾರಕ್ಕೆ ಅಂಗೀಕಾರವನ್ನೀಯದೆ, ನರಗುಂದ ರಾಜ್ಯವನ್ನು ನಿಶ್ಶಸ್ತ್ರೀಕರಣಗೊಳಿಸಿ ಅಪಮಾನಿಸಿದರು. ಬಾಬಾಸಾಹೇಬ ಈ ಕ್ರಮವನ್ನು ಎದುರಿಸಿ ಯುದ್ಧ ಸಾರಿದ. ಆದರೆ ಇವನನ್ನು ಹತ್ತಿಕ್ಕಿದ ಇಂಗ್ಲಿಷರು 1858ರ ಜೂನ್ ತಿಂಗಳಲ್ಲಿ ಕೋಟೆಯನ್ನೂ ಹಾಳುಗೆಡವಿದರು. (ಜಿ.ಎಸ್.ಎಚ್.)

**ನರಸನಾಯಕ :** ವಿಜನಗರದ ಸಾಳುವ ನರಸಿಂಹನ (149101505) ದಂಡನಾಯಕ ಮತ್ತು ಮಂತ್ರಿ. ಕೆಲವು ಕಾಲ ಸಾಮ್ರಾಜ್ಯದ ವಸ್ತುತಃ ಪ್ರಭು (1492-1503). ತುಳುವ ವಂಶದ ಈಶ್ವರನಾಯಕನ ಮಗ. ಈ ತಂದೆ ಮಕ್ಕಳಿಬ್ಬರು ಎರಡನೆಯ ದೇವರಾಯನ (1424-46) ತರುವಾಯ ವಿಜಯನಗರ ಸಾಮ್ರಾಜ್ಯ ದುರ್ಬಲ ಸ್ಥಿತಿಗೆ ಬಂದಾಗ ಸಾಳುವ ಒಂದನೆಯ ನರಸಿಂಹನೊಂದಿಗೆ ಕೂಡಿಕೊಂಡು ಅದರ ಪುನಶ್ಚೇತನಕ್ಕಾಗಿ ಸಾಹಸಪಟ್ಟರು. ಉತ್ತರದಲ್ಲಿ ಬಹಮನಿಸುಲ್ತಾನರನ್ನು ಹಿಮ್ಮೆಟ್ಟಿಸಿದ್ದಲ್ಲದೆ ದಕ್ಷಿಣದಲ್ಲಿ ಬಂಡಾಯವೆದ್ದಂಥ ಸಾಮಂತರನ್ನೂ ಅಡಗಿಸಿದರು. ಇದರಿಂದ ಇವರ ಪ್ರತಿಷ್ಠೆ ಮತ್ತು ಪರಾಕ್ರಮಗಳು ಸಾಮ್ರಾಜ್ಯದ ರಾಜಕೀಯ ರಂಗದಲ್ಲಿ ದೃಢವಾಗಿ ಮೇಲೇರಿದವು.

ಸಂಗಮವಂಶದ ದುರ್ಬಲ ರಾಜ ಪ್ರೌಢದೇವರಾಯನನ್ನು ಸಿಂಹಾಸನದಿಂದ ಕೆಳಗಿಳಿಸಲು ಸಾಳುವ ವಂಶದ ಒಂದನೆಯ ನರಸಿಂಹ ನರಸನಾಯಕನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದ (1485). ನೂನಿಜ್ ವಿವರಿಸುವಂತೆ ನರಸನಾಯಕನ ಮುತ್ತಿಗೆಯನ್ನು ತಡೆಯಲು ರಾಜಧಾನಿಯಲ್ಲಿ ಒಂದು ಪಿಳ್ಳೆಯೂ ಮುಂದಾಗಲಿಲ್ಲ. ಇದರ ಫಲವಾಗಿ ಸಂಗಮ ವಂಶದ ಆಳ್ವಿಕೆ ಕೊನೆಗೊಂಡು ಸಾಳು ವಂಶ ಅಧಿಕಾರಕ್ಕೆ ಬಂದಿತು.

ಒಂದನೆಯ ನರಸಿಂಹ 1491ರಲ್ಲಿ ತೀರಿಕೊಂಡಾಗ ಅವನ ಮಕ್ಕಳು ಇನ್ನೂ ಎಳೆಯವರಾಗಿದ್ದರು. ಆಗ ಅವನು ಸಾಯುವ ಕಾಲದಲ್ಲಿ ರಾಜ್ಯಭಾರದ ಹೊಣೆಯನ್ನು ಸ್ವಾಮಿನಿಷ್ಠೆಯುಳ್ಳವನೂ ಹಾಗೂ ದಕ್ಷನೂ ಆಗಿದ್ದ ದಂಡನಾಯಕ ಮತ್ತು ಮಂತ್ರಿ ತುಳುವ ನರಸನಾಯಕನಿಗೆ ಒಪ್ಪಿಸಿದ. ರಾಜಕುಮಾರರು ಪ್ರಾಪ್ತವಯಸ್ಸಿಗೆ ಬರುವವರೆಗೂ ರಾಜ್ಯಭಾರವನ್ನು ನಿರ್ವಹಿಸುವುದು ಇವನ ಜವಾಬ್ದಾರಿಯಾಗಿತ್ತು.

ನರಸನಾಯಕ ನರಸಿಂಹನ ಹಿರಿಯ ಮಗ ತಿಮ್ಮಭೂಪನಿಗೆ ಪಟ್ಟಕಟ್ಟಿದ. ಆದರೆ ಆಡಳಿತದ ಸಂಪೂರ್ಣ ಅಧಿಕಾರವೆಲ್ಲ ಇವನ ಕೈಯಲ್ಲಿತ್ತು. ಇದನ್ನು ಸಹಿಸದೆ ತಿಮ್ಮರಸನೆಂಬ ಮಂತ್ರಿಯಿಂದ ರಾಜ ಕೊಲೆಗೀಡಾದ. ಆಗ ನರಸನಾಯಕ ಪುನಃ 1491ರಲ್ಲಿ ನರಸಿಂಹನ ಎರಡನೆಯ ಮಗ ಇಮ್ಮಡಿ ನರಸಿಂಹನನ್ನು ಸಿಂಹಾಸನದ ಮೇಲೆ ಕೂರಿಸಿದನಾದರೂ ನರಸನಾಯಕನೇ ರಾಜಬಿರುದುಗಳನ್ನು ಧರಿಸಿಕೊಂಡು ಆಡಳಿತ ಸೂತ್ರವನ್ನು ಹಿಡಿದಿದ್ದ. ಇದರಿಂದ ಕ್ರಮೇಣ ಇವನ ಮತ್ತು ರಾಜನ ನಡುವೆ ಒಡಕು ಪ್ರಾರಂಭವಾಯಿತು. 1492ರಲ್ಲಿ ನರಸನಾಯಕ ಪೆನುಗೊಂಡೆಯಿಂದ ಸೈನ್ಯದೊಡನೆ ಸಾಗಿ ವಿಜಯನರವನ್ನು ಮುತ್ತಿ, ಇಮ್ಮಡಿ ನರಸಿಂಹನನ್ನು ಪೆನುಗೊಂಡೆಯಲ್ಲಿ ನಿರ್ಬಂಧದಲ್ಲಿಟ್ಟ.

ನರಸನಾಯಕ ಸಿಂಹಾನವನ್ನೇರದಿದ್ದರೂ ಇನ್ನೆಲ್ಲ ದೃಷ್ಟಿಯಿಂದಲೂ ತಾನೇ ಸರ್ವಾಧಿಕಾರಿಯಾಗಿ 1492ರಿಂದ 1503ರ ವರೆಗೆ ವಿಜಯನಗರವನ್ನು ಆಳಿದ. ಇವನು ದೀರ್ಘಕಾಲ ಅಧಿಕಾರದಲ್ಲಿರದಿದ್ದರೂ ಇವನ ಸೇವೆ ಸಾಮ್ರಾಜ್ಯಕ್ಕೆ ತುಂಬಾ ಉಪಯುಕ್ತವಾಯಿತು. ಸಾಮ್ರಾಜ್ಯದ ವಿರುದ್ಧ ಬಂಡೆದ್ದ ಅನೇಕ ಸಾಮಂತರನ್ನು ಅಡಗಿಸಿದ. 1496ರಲ್ಲಿ ದಕ್ಷಿಣದ ಕಡೆ ದಂಡೆತ್ತಿಹೋಗಿ ತಂಜಾವೂರು ಮತ್ತು ತಿರುಚನಾಪಳ್ಳಿಯಲ್ಲಿದ್ದ ಸಾಮ್ರಾಜ್ಯ ಪ್ರತಿನಿಧಿಗಳ ದಬ್ಬಾಳಿಕೆಯನ್ನು ನಿಯಂತ್ರಿಸಿದ. ಕನ್ಯಾಕುಮಾರಿಯ ವರೆಗಿನ ಸಾಮ್ರಾಜ್ಯದ ಭಾಗವನ್ನು ತಹಬಂದಿಗೆ ತಂದಿದ್ದಲ್ಲದೆ ಸ್ಥಳೀಯ ಚೋಳ ಮತ್ತು ಚೇರ ರಾಜರುಗಳನ್ನು ಹಾಗೂ ಮಧುರೆಯ ಮಾನಭೂಷ ಮೊದಲಾದವರನ್ನು ಸಾಮ್ರಾಜ್ಯದ ಪರಮಾಧಿಕಾರವನ್ನು ಅಂಗೀಕರಿಸುವಂತೆ ಮಾಡಿದ. ಶ್ರೀರಂಗಪಟ್ಟಣವನ್ನು ಗೆದ್ದು ಉಮ್ಮತ್ತೂರು ಪಾಳೆಯಗಾರರನ್ನು ಸದೆಬಡಿದ.

ಉತ್ತರದ ಕಡೆ ಬಹಮನೀ ಸುಲ್ತಾನರನ್ನು ಯಶಸ್ವಿಯಾಗಿ ಎದುರಿಸಿದುದಲ್ಲದೆ ರಾಯಚೂರು ಮತ್ತು ಮುದ್ಗಲ್‌ಗಳನ್ನು 1493ರಲ್ಲಿ ಸಾಮ್ರಾಜ್ಯಕ್ಕೆ ದಕ್ಕುವಂತೆ ಮಾಡಿದ. 1499ರಲ್ಲಿ ಒರಿಸ್ಸದ ಗಜಪತಿ ಪ್ರತಾಪರುದ್ರ ಎಸಗಿದ ಆಕ್ರಮಣವನ್ನು ಹಿಮ್ಮೆಟ್ಟಿಸಿದ. ಈ ಹಲವು ಕಾರ್ಯಗಳಿಂದ ವಿಜಯನಗರದ ಸಾಮ್ರಾಜ್ಯದ ದೃಢತೆಯನ್ನು ಕಾಪಾಡುವಲ್ಲಿ ಗಣನೀಯ ಸೇವೆ ಸಲ್ಲಿಸಿದ. ನರಸನಾಯಕ 1503ರಲ್ಲಿ ತೀರಿಕೊಂಡ.

ಆಗ ಅಧಿಕಾರಕ್ಕೆ ಬಂದ ಇವನ ಮಗ ವೀರನರಸಿಂಹ ನಿರ್ಬಂಧದಲ್ಲಿದ್ದ ಸಾಳುವ ವಂಶದ ರಾಜನನ್ನು 1505ರಲ್ಲಿ ಕೊಲ್ಲಿಸಿ ತಾನೇ ರಾಜನಾಗಿ ವಿಜಯನಗರದಲ್ಲಿ ತುಳುವ ವಂಶದ ಪ್ರಭುತ್ವವನ್ನು ಸ್ಥಾಪಿಸಿದ. (ಡಿ.ಎಸ್.ಜೆ.)

**ನರಸಪ್ಪ ಪೇಟಕರ :** ಬಾದಾಮಿಯಲ್ಲಿ ನಡೆದ (1841) ಬ್ರಿಟಿಷ್ ವಿರೋಧಿ ಬಂಡಾಯದ ಮುಂದಾಳು. ಶಿವಾಜಿಯ ವಂಶಜರಾದ ಸಾತಾರಾದ ಛತ್ರಪತಿಗಳಲ್ಲಿ ಅಧಿಕಾರಿಯಾಗಿದ್ದ ಬ್ರಾಹ್ಮಣ ಕುಟುಂಬದ ದತ್ತಾತ್ರೇಯ ಪೇಟಕರ ಎಂಬವನ ಮಗ. ಈತನನ್ನು ನರಸಿಂಗರಾವ್ ಮತ್ತು ನಿಂಬಾಜಿ ಪೇಟಕರ ಎಂದೂ ಕರೆಯುತ್ತಿದ್ದರು. ನರಸಪ್ಪ ನಡೆಸಿದ ಬಂಡಾಯದ ವಿಚಾರ ಬ್ರಿಟಿಷ್ ಸರ್ಕಾರದ ಕಾಗದಪತ್ರಗಳಿಂದ ತಿಳಿದುಬರುತ್ತದೆ. ಬಾಲ್ಯದಲ್ಲಿ ಸಿಡುಬಿನಿಂದ ಒಂದು ಕಣ್ಣನ್ನು ಕಳೆದುಕೊಂಡಿದ್ದ ಈತ 1839ರಲ್ಲಿ ಸಾತಾರಾದ ಛತ್ರಪತಿ ಪ್ರತಾಪಸಿಂಹನನ್ನು ಪದಚ್ಯುತಗೊಳಿಸಿದ. ಬಗ್ಗೆ ತೀವ್ರ ಅಸಮಾಧಾನ ತಳೆದು, ಬ್ರಿಟಿಷರ ವಿರುದ್ಧ ಹೋರಾಟ ನಡೆಸುವ ಸಂಕಲ್ಪ ಮಾಡಿ, ಪುಣೆ, ನಾಸಿಕ, ಅಹಮದ್‌ನಗರ ಜಿಲ್ಲೆಗಳಲ್ಲಿ ಸಂಚರಿಸಿದ. ಸುರಪುರದಲ್ಲಿ ಜಮಾದಾರನಾಗಿದ್ದ ಸಲೀಮ್ ಅಥವಾ ಕೊಹೆರನ್ ಎಂಬಾತನ ನೆರವಿನಿಂದ ದೇವದುರ್ಗದಲ್ಲಿ ಸುಮಾರು 1000 ಅರಬ್ಬರ ಸೈನ್ಯವನ್ನು ಕೂಡಿಸಿದ. ಸುರಪುರ ರಾಜವಂಶದ ಪೆದನಾಯಕನೂ ಈತನಿಗೆ ನೆರವಾದ. ಹೈದರಾಬಾದಿನ ಬ್ರಿಟಿಷ್ ರೆಸಿಡೆಂಟ್ ಈ ಬಂಡಾಯವನ್ನು ಹತ್ತಿಕ್ಕುವಂತೆ ಸೂಚನೆ ನೀಡಿದಾಗ, ಹೈದರಾಬಾದಿನ ಸೇನೆಯಲ್ಲಿದ್ದ ಅನೇಕ ಅರಬ್ಬರು, ಬಂಡಾಯಗಾರರನ್ನು ಹತ್ತಿಕ್ಕುವ ಬದಲು, ಅವರ ಜೊತೆ ಸೇರಿಕೊಂಡರು. ಆಗ ನರಸಪ್ಪನ ಅನುಯಾಯಿಗಳ ಸಂಖ್ಯೆ 500ರಿಂದ 5000ದ ವರೆಗೆ ಇರಬಹುದು ಎಂದು ಬ್ರಿಟಿಷ್ ಅಧಿಕಾರಿಗಳ ಅಂದಾಜು. ಮೇ 27, 1841ರಂದು ಈ ಸೇನೆ ಬಾದಾಮಿಯನ್ನು ಪ್ರವೇಶಿಸಿ ಅಲ್ಲಿಯ ಕೋಟೆ ಕಚೇರಿಗಳನ್ನು ವಶಪಡಿಸಿಕೊಂಡಿತಲ್ಲದೆ, ಸಮೀಪದ ಬನಶಂಕರಿ ದೇವಾಲಯದಲ್ಲಿನ ನಗನಾಣ್ಯಗಳನ್ನು ಕೊಳ್ಳೆಹೊಡೆಯಿತು. ಆದರೆ 2-6-1841ರಂದು ಧಾರವಾಡ, ಬೆಳಗಾಂವಿಗಳಿಂದ ಬಂದ ಬ್ರಿಟಿಷ್ ಸೇನೆ ಬಂಡಾಯವನ್ನು ಹತ್ತಿಕ್ಕಿ ಬಾದಾಮಿ ಕೋಟೆಯನ್ನು ವಶಪಡಿಸಿಕೊಂಡಿತು. ನರಸಪ್ಪ ಮತ್ತು ಇತರ ನಾಯಕರು ಸೆರೆಸಿಕ್ಕಿದರು. ಅನೇಕರು ಸಾವಿಗೀಡಾದರು. ನರಸಪ್ಪನಿಗೆ ವಿಚಾರಣೆಯಲ್ಲಿ ಗಲ್ಲು ಶಿಕ್ಷೆವಿಧಿಸಿದರೂ ಮುಂದೆ ಆತ ಒಕ್ಕಣ್ಣ ಎಂಬ ಕಾರಣಕ್ಕಾಗಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು. 1862ರಲ್ಲಿ ಈತ ಅಹಮದಾಬಾದ್ ಸೆರೆಮನೆಯಲ್ಲಿ ಅಸುನೀಗಿದ. ಬಾದಾಮಿಯ ದಂಗೆಯ ವಿಷಯದಲ್ಲಿ, "ವಿದೇಶೀಯರ ವಿರುದ್ಧ ತಾವೆಲ್ಲ ಒಂದುಗೂಡಬೇಕೆಂಬ ಭಾವನೆಯಿಂದ ಉತ್ತೇಜಿತರಾಗಿ, ಆಗ ಕಂಪನಿಯ ಸೇವೆಯಲ್ಲಿದ್ದವರೂ ತಮ್ಮ ಹುದ್ದೆಗಳನ್ನು ತ್ಯಜಿಸಿ ಸ್ವಾತಂತ್ರ್ಯ ಯೋಧರನ್ನು ಸೇರಿಕೊಂಡರು. ಬಾದಾಮಿಯ ಕೆಚ್ಚಿನ ಹೋರಾಟ ಬ್ರಿಟಿಷರ ನೀತಿಯಿಂದ ಭಾರತೀಯರಲ್ಲಿ ಕಾಣಿಸಿದ ಪ್ರತಿಕ್ರಿಯೆಗೆ ಒಂದು ಉದಾಹರಣೆ. ಭದ್ರತೆಗಿಂತ ಸ್ವಾತಂತ್ರ್ಯವು ಹೆಚ್ಚು ಅಮೂಲ್ಯವಾದುದೆಂದು ಭಾರತೀಯರಿಗೆ ತೋರುತ್ತಿತ್ತು" ಎಂದು ಆಗ ಮುಂಬಯಿಯ ಗವರ್ನರನೂ ಖ್ಯಾತ ಇತಿಹಾಸಕಾರನೂ ಆದ ಎಲ್‌ಫಿನ್‌ಸ್ಟನ್ ಹೇಳಿದ್ದಾನೆ. (ಎಸ್.ಕೆ.)

**ನರಸಮಂಗಲ :** ಚಾಮರಾಜನಗರ ಜಿಲ್ಲೆಯ ಅದೇ ತಾಲ್ಲೂಕಿನ

ಒಂದು ಗ್ರಾಮ. ಚಾಮರಾಜನಗರದ ಆಗ್ನೇಯಕ್ಕೆ ಸು. 24 ಕಿಮೀ ದೂರದಲ್ಲಿದೆ. ಇಲ್ಲಿನ ಪ್ರಾಚೀನ ರಾಮಲಿಂಗೇಶ್ವರ ದೇವಾಲಯದಿಂದ ಪ್ರಸಿದ್ಧವಾಗಿದೆ. ಇದು ಗಂಗರ ಶೈಲಿಯ ದೇವಾಲಯ. ಸು. 8ನೆಯ ಶತಮಾನದ್ದು. ಈ ದೇವಾಲಯ ಶೈಲಿಯ ದೃಷ್ಟಿಯಿಂದ ತಲಕಾಡು ಗಂಗರ ಕಾಲದ್ದೆಂದು ಹೇಳಬಹುದು. ದೇವಾಲಯದಲ್ಲಿ ವಿಶಾಲವಾದ ಗರ್ಭಗೃಹ. ಕಿರಿದಾದ ಸುಕನಾಸಿ, ಒಂಬತ್ತು ಅಂಕಣಗಳ ನವರಂಗಗಳು ಇವೆ. ಗರ್ಭಗೃಹದ ಮೇಲಿರುವ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ವಿಮಾನ ಮಹಾಬಲಿಪುರದ ವಿಮಾನವನ್ನು ವಿಶೇಷವಾಗಿ ಹೋಲುತ್ತದೆ. ಅಡಿಪಾಯದ ಪಟ್ಟಿಕೆಗಳು ಗುಂಡಗಿದ್ದು ಮೇಲಿನದರಲ್ಲಿ ಮಕರಶಿರದ ಮೀನು, ನೀರು ಕುದುರೆ, ಸಿಂಹ ಮುಂತಾದ ಪ್ರಾಣಿಗಳ ಚಿತ್ರಗಳಿವೆ. ಅಡಿಪಾಯದ ಮೇಲಿನ ಭಿತ್ತಿಯ ಭಾಗದ ಗೂಡುಗಳಲ್ಲಿ ಅಲಂಕೃತ ಯಕ್ಷ ಮತ್ತು ಅಪ್ಸರೆಯರ ವಿಗ್ರಹಗಳಿವೆ. ಈ ದೇವಾಲಯದ ಶಿಲ್ಪಗಳು ಬಹುಸುಂದರ ಕೃತಿಗಳು. ದೇವಾಲಯದಲ್ಲಿರುವ ಅಂಧಕಾಸುರಮರ್ದನ ತಾಂಡವೇಶ್ವರ, ದಕ್ಷಿಣಾಮೂರ್ತಿ, ವಿಷ್ಣು, ಉಗ್ರನರಸಿಂಹ, ಬ್ರಹ್ಮ, ಎದೆ, ಕೃಶವಾದ ಕಟಿಭಾಗ, ನೀಳವಾದ ಕೈಕಾಲುಗಳು ಮುಂತಾದ ಲಕ್ಷಣಗಳಿಂದ ಬಹು ಶ್ರೇಷ್ಠ ಶಿಲ್ಪಗಳಾಗಿವೆ. ರಾಮಾಯಣದ ಕಥೆಗೆ ಸಂಬಂಧಪಟ್ಟ ಹಲವಾರು ಸನ್ನಿವೇಶಗಳನ್ನು ಗೋಡೆಗಳ ಮೇಲೆ ಕೆತ್ತಲಾಗಿದೆ. ನವರಂಗದಲ್ಲಿರುವ ಭುವನೇಶ್ವರಿ ಬಹು ಸುಂದರವಾಗಿದೆ. ಅಂಧಕಾಸುರನ ಮೇಲೆ ನರ್ತಿಸುತ್ತಿರುವ ಅಷ್ಟಭುಜ ಶಿವನ ಸುತ್ತಲೂ ಅಷ್ಟದಿಕ್ಪಾಲಕರನ್ನು ಕೆತ್ತಿರುವ ಈ ಭುವನೇಶ್ವರಿ ಬಹಳ ಗಮನಾರ್ಹವಾದುದು. ನದರಂಗದ ಉತ್ತರದಲ್ಲಿರುವ ಪರಶುರಾಮ ಮತ್ತು ಗಣೇಶ ವಿಗ್ರಹಗಳು ಸುಂದರವಾದುವು.

ಈ ದೇವಾಲಯದ ಆಗ್ನೇಯಕ್ಕೆ ಇರುವ ಸಣ್ಣ ದೇವಾಲಯದಲ್ಲಿ ಸುಂದರವಾದ ಸಪ್ತಮಾತೃಕೆಯರ ವಿಗ್ರಹಗಳಿವೆ. ಇವುಗಳ ಜೊತೆಯಲ್ಲಿಯೇ ವೀರಭದ್ರ, ಗಣೇಶ, ದಕ್ಷಬ್ರಹ್ಮ, ಭೈರವ, ಕುಮಾರ, ಮಹಿಷಾಸುರಮರ್ದಿನಿ, ಜನಾರ್ದನ, ವಾರಾಹಿ ವಿಗ್ರಹಗಳಿವೆ. ಇವುಗಳೂ ಗಂಗರ ಕಾಲದವೆಂದು ಶಿಲ್ಪಶೈಲಿಯಿಂದ ಹೇಳಬಹುದು. ದೇವಾಲಯದ ದಕ್ಷಿಣಕ್ಕೆ ಇರುವ ಶಾಸನಗಳಲ್ಲಿ ಹೊಯ್ಸಳ ವೀರಬಲ್ಲಾಳ ದೇವಾಸ್ಥಾನಕ್ಕೆ ದತ್ತಿಬಿಟ್ಟ ವಿಷಯ ನಿರೂಪಿತವಾಗಿದೆ. ಈ ದೇವಾಲಯದಲ್ಲಿ ತಮಿಳು ಶಾಸನಗಳೂ ದೊರಕಿವೆ.

ನರಸಮಂಗಲ-ಅರಕಲವಾಡಿ ಮಾರ್ಗದಲ್ಲಿ ಅನೇಕ ಬೃಹತ್ ಶಿಲಾಸಮಾಧಿಗಳು ಇವೆ. (ಎ.ವಿ.ಎಸ್.)

**ನರಸಿಂಗರಾವ್, ಮಾನ್ವಿ :** 1911-69. ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಇಲಾಖೆಯ ಮುಖ್ಯಸ್ಥರಾಗಿದ್ದ ಭಾಷಾಸೇವಕರು. ರಾಯಚೂರು ಜಿಲ್ಲೆಯ ಮಾನ್ವಿಯವರು 1911 ಏಪ್ರಿಲ್ 2ರಂದು ಜನಿಸಿದರು. ತಂದೆ ಪೇಷಕಾರ್ ರಾಘವೇಂದ್ರರಾವ್ ಮಾನ್ವಿ. ತಾಯಿ ಚಂದ್ರಮ್ಮ. ಆರಂಭದ ವ್ಯಾಸಂಗವನ್ನು ರಾಯಚೂರಿನಲ್ಲಿ ಮುಗಿಸಿದ ಇವರು ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಓದಿ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಿ.ಎ. (1932) ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು. ಅನಂತರ ನಿಜಾಮ ಸರ್ಕಾರದ ವಿದ್ಯಾರ್ಥಿವೇತನವನ್ನು ಪಡೆದು, ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. (1936) ಪದವಿಯನ್ನು ಉಪಕುಲಪತಿಗಳ ಸುವರ್ಣ ಪದಕದೊಂದಿಗೆ ಪಡೆದರು. ಇವರು ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ಇಲಾಖೆಯ ಸಂಶೋಧನ ವಿಭಾಗದಲ್ಲಿ ಕೆಲಸ ಮಾಡಿ, ನಡುಗನ್ನಡ ಎಂಬ ಪ್ರೌಢ ಪ್ರಬಂಧವನ್ನು ಬರೆದರು. ಅನಂತರ ಹೈದರಾಬಾದಿನಲ್ಲಿ ನಿಜಾಮ ಸರ್ಕಾರದ ಸುದ್ದಿ ಖಾತೆಯಲ್ಲಿ ಕನ್ನಡ ಭಾಷಾಂತರಕಾರರಾಗಿಯೂ ಹೈದರಾಬಾದ್ ಸಮಾಚಾರ್ ಎಂಬ ಮಾಸಪತ್ರಿಕೆಯ ಸಂಪಾದಕರಾಗಿಯೂ ಹೈದರಾಬಾದಿನ ವಿಧಾನ ಸಭೆಯಲ್ಲಿ ಚರ್ಚಾಸಂಪಾದಕರಾಗಿಯೂ ಸೇವೆ ಸಲ್ಲಿಸಿದ ಇವರು ಸುದ್ದಿ ಖಾತೆಯ ಉಪನಿರ್ದೇಶಕರಾಗಿ ಅನಂತರ ಆ ಇಲಾಖೆಯ ನಿರ್ದೇಶಕರಾಗಿ ಕೆಲಸ ಮಾಡಿ ನಿವೃತ್ತರಾದರು (1966). ಅನಂತರ ಇವರಿಗೆ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಕನ್ನಡ ಶಾಖೆಗೆ ಮುಖ್ಯಸ್ಥರಾಗಿ ಬರಬೇಕೆಂದು ಆಹ್ವಾನ ಬಂದುದರಿಂದ ಅನಂತರ ಆ ಹುದ್ದೆಯನ್ನು ವಹಿಸಿಕೊಂಡರು. ಕನ್ನಡ ಇಲಾಖೆಯನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ಇವರು ತೊಡಗಿದ್ದಾಗಲೇ 1969 ಸೆಪ್ಟಂಬರ್ 9ರಂದು ಹೃದಯಾಘಾತದಿಂದ ನಿಧನರಾದರು.

ನರಸಿಂಗರಾಯರು ಪ್ರತಿಭಾವಂತ ಪಂಡಿತರೂ ಒಳ್ಳೆಯ ವಾಗ್ಮಿಗಳೂ ಆಗಿದ್ದರು. ಇವರು ಬರೆದಿರುವ ಕನ್ನಡ ಯಾತ್ರೆ ಒಂದು ಉತ್ತಮ ಪ್ರವಾಸ ಗ್ರಂಥ. ಸರಸ್ವತೀ ತತ್ತ್ವ ಎಂಬುದು ಕಾವ್ಯಮೀಮಾಂಸೆಗೆ ಸಂಬಂಧಿಸಿದ ಕೃತಿ. ಕನ್ನಡ ಸಾಹಿತ್ಯ ಪರಿಚಯ ಎಂಬುದು ಹಿಂದಿಯಲ್ಲಿ ಇರುವ ಪ್ರಕಟಿಸಿರುವ ಗ್ರಂಥ. ಇವರು ಪ್ರಕಟಿಸಿರುವ ಲೇಖನಗಳ ಸಂಖ್ಯೆ ಅಪಾರವಾಗಿದೆ. (ಪಿ.ವಿ.)

**ನರಸಿಂಹ I** (ವಿಜಯನಗರ) : ಸಾಳುವ ವಂಶದ ರಾಜ. ಸಾಳುವ (1485-91) ರಾಜಮನೆತನದ ಸಂಸ್ಥಾಪಕ. ಗುಂಡ ಎಂಬುವನ ಮಗ. ನರಸಿಂಹನ ಪೂರ್ವಿಕರು ಸಂಗಮ ಸಂತತಿಯ ಅರಸರ ಕೈಕೆಳಗೆ ಸೇವೆಸಲ್ಲಿಸುತ್ತ ಬಂದಿದ್ದರು. ನರಸಿಂಹ ಮೊದಲು ಇಮ್ಮಡಿ ವಿರೂಪಾಕ್ಷನ ಕಾಲದಲ್ಲಿ ಚಂದ್ರಗಿರಿ ಪ್ರಾಂತ್ಯದ ಮಹಾಮಂಡಲೇಶ್ವರನಾಗಿ ಕೆಲಸ ನಿರ್ವಹಿಸುತ್ತಿದ್ದ. ಆದರೆ ಆಗ ಕೇಂದ್ರ ಸರ್ಕಾರ ದುರ್ಬಲವಾಗಿದ್ದುದರಿಂದ ಸುತ್ತಮುತ್ತಣ ಪ್ರದೇಶಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದ. ಅಲ್ಲದೆ ಆ ಕಾಲದಲ್ಲಿ ನಡೆದ ಅನೇಕ ಘಟನೆಗಳಿಂದ ನರಸಿಂಹನ ಶೌರ್ಯ ಪ್ರಕಟನೆಗೆ ಅವಕಾಶವಾಗಿ, ತತ್ಕಾಲದ ರಾಜಕೀಯದಲ್ಲಿ ಈತ ಪ್ರಭಾವಿಯಾಗಿ ಬೆಳೆದ. 1463ರಲ್ಲಿ ಒರಿಸ್ಸಾದ ಗಜಪತಿ ವಿಜಯನಗರದ ಮೇಲೆ ದಾಳಿ ಮಾಡಿದುದರಿಂದ ನರಸಿಂಹ ಆಳುತ್ತಿದ್ದ ಪ್ರಾಂತ್ಯಗಳಿಗೆ ಅಪಾರ ನಷ್ಟ ಉಂಟಾಯಿತು. ನರಸಿಂಹ ಒರಿಸ್ಸಾದ ರಾಜನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಹವಣಿಸುತ್ತಿದ್ದ. ಈ ಅವಕಾಶ 1470ರಲ್ಲಿ ಒದಗಿ ಬಂದಿತು. ಕಪಿಲೇಂದ್ರನ ಮರಣಾ ನಂತರ ಆಂತರಿಕ ಕಲಹಗಳುಂಟಾದುದರಿಂದ ನರಸಿಂಹ ಒರಿಸ್ಸಾದ ರಾಜ್ಯವನ್ನು ಆಕ್ರಮಿಸಿ ಉದಯಗಿರಿ ಕೋಟೆಯನ್ನು ಗೆದ್ದುಕೊಂಡ. ಆದರೆ ಇದೇ ಸಮಯದಲ್ಲಿ ತಮಿಳು ಜಿಲ್ಲೆಗಳಲ್ಲಿ ದಂಗೆ ಕಾಣಿಸಿಕೊಂಡಿದ್ದುದರಿಂದ ನರಸಿಂಹ ಅಲ್ಲಿಗೆ ಧಾವಿಸಬೇಕಾಯಿತು. ಆದರೆ ಈ ದಂಗೆಯನ್ನಡಗಿಸಿ ಹಿಂದಿರುಗುವಷ್ಟರಲ್ಲಿ ಬಹಮನೀ ಸುಲ್ತಾನ ಮುಮ್ಮಡಿ ಮಹಮ್ಮದ್ ಷಾ ತೆಲಂಗಾಣ ಮತ್ತು ಆಂಧ್ರದ ತೀರಪ್ರದೇಶಗಳನ್ನು ಗೆದ್ದುಕೊಂಡಿದ್ದ. ಆದರೂ ನರಸಿಂಹ ಧೈರ್ಯಗುಂದದೆ ಯುಕ್ತಿಯಿಂದ ಮಸುಲಿಪಟ್ಟಣ ಬಂದರು ಮತ್ತು ಕೊಂಡವೀಡು ಪ್ರದೇಶಗಳನ್ನು 1480ರಲ್ಲಿ ಗೆದ್ದುಕೊಂಡ. 1481ರಲ್ಲಿ ಮುಮ್ಮಡಿ ಮಹಮ್ಮದ್ ಷಾನ ದಂಡನಾಯಕರು ಕಂಚಿಯ ಮೇಲೆ ದಾಳಿ ಮಾಡಿ ಅಪಾರ ಐಶ್ವರ್ಯದಿಂದ ಹಿಂದಿರುಗುತ್ತಿದ್ದಾಗ ನರಸಿಂಹನ ದಂಡನಾಯಕರು ಅವರ ಮೇಲೆರಗಿ ಅವರನ್ನು ಸೋಲಿಸಿ ಅಪಾರ ಸಂಪತ್ತನ್ನು ವಶಪಡಿಸಿಕೊಂಡರು. ಈ ಎಲ್ಲ ಕಾರ್ಯಾಚರಣೆಗಳಿಂದಾಗಿ 1482ರ ವೇಳೆಗೆ ನರಸಿಂಹ ವಿಜಯನಗರದ ರಾಜ್ಯದಲ್ಲಿ ಪ್ರಬಲ ವ್ಯಕ್ತಿಯಾದ. ಇವನು ಒರಿಸ್ಸಾ ಮತ್ತು ಬಹಮನೀ ರಾಜ್ಯಗಳ ದಾಳಿಗಳನ್ನು ಹಿಮ್ಮೆಟ್ಟಿಸಿ ವಿಜಯನಗರ ರಾಜ್ಯವನ್ನು ರಕ್ಷಿಸಿದನಲ್ಲದೆ ವಿಜಯನಗರ ರಾಜ್ಯದ ಪೂರ್ವಭಾಗದ ಪ್ರಾಂತ್ಯಗಳಿಗೆಲ್ಲ, ಅಂದರೆ ರಾಜಮಹೇಂದ್ರಿಯಿಂದ ರಾಮೇಶ್ವರದವರೆಗೂ ಅಧಿಪತಿಯಾಗಿ ಪ್ರಸಿದ್ಧಿಗೆ ಬಂದ.

ಈ ಮಧ್ಯೆ ಸಮ್ರಾಟ ಇಮ್ಮಡಿ ವಿರೂಪಾಕ್ಷ ಕೊಲೆಯಾಗಿ ಅವನ ಮಗ ಪ್ರೌಢದೇವರಾಯ ರಾಜನಾದ. ಆದರೆ ಅವನ ಕಾಲದಲ್ಲೂ ರಾಜ್ಯದಲ್ಲಿ ಅರಾಜಕತೆ ಮುಂದುವರೆಯಿತು. ಅವನು ರಾಜ್ಯದ ಹಿತಚಿಂತನೆಗೆ ಎಳ್ಳಷ್ಟೂ ಗಮನ ಕೊಡಲಿಲ್ಲ. ಆದ್ದರಿಂದ ವಿಜಯನಗರ ರಾಜ್ಯವನ್ನು ರಕ್ಷಿಸಬೇಕಾದರೆ ಹಳೆಯ ರಾಜವಂಶವನ್ನು ಬದಿಗೊತ್ತಬೇಕೆಂದು ನರಸಿಂಹ ನಿರ್ಧರಿಸಿದ. ಈ ಅಭಿಪ್ರಾಯವನ್ನು ಕೆಲವು ಪ್ರಾಂತ್ಯಾಧಿಕಾರಿಗಳು, ದಂಡನಾಯಕರುಗಳು ಎತ್ತಿಹಿಡಿದರು. ಅವರಲ್ಲಿ ಸಾಳುವ ನರಸಿಂಹನ ಜೊತೆಯಲ್ಲಿ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸಿದ್ದ ಈಶ್ವರನಾಯಕ ಮತ್ತು ಅವನ ಮಗ ನರಸನಾಯಕ ಪ್ರಮುಖರು. ಸಾಳುವ ನರಸಿಂಹನ ಆಜ್ಞೆಯಂತೆ ನರಸನಾಯಕ ವಿಜಯನಗರ ರಾಜಧಾನಿಯನ್ನು ವಶಪಡಿಸಿಕೊಂಡ. ಪ್ರೌಢದೇವರಾಯ ಪಲಾಯನ ಮಾಡಿದ. ನರಸನಾಯಕ

ಸಾಳುವ ನರಸಿಂಹನೇ ವಿಜಯನಗರದ ರಾಜನೆಂದು ಘೋಷಿಸಿದ. ಹೀಗೆ 1485ರಲ್ಲಿ ಸಂಗಮ ಮನೆತನದ ಆಳ್ವಿಕೆ ಅಂತ್ಯಗೊಂಡು ಸಾಳುವ ಮನೆತನದ ಅಧಿಕಾರ ಸ್ಥಾಪಿತವಾಯಿತು. ನರಸಿಂಹ ಅಧಿಕಾರದಾಸೆಯಿಂದ ಸಿಂಹಾಸನವನ್ನು ಅಪಹರಿಸಿದನೆಂದು ಹೇಳಿದರೆ ತಪ್ಪಾಗುತ್ತದೆ. ಸಂಗಮ ಸಂತತಿಯ ಕೊನೆಯ ಅರಸುಗಳು ತಮ್ಮ ಕರ್ತವ್ಯವನ್ನು ಮರೆತುದರಿಂದ ನರಸಿಂಹ ಈ ಕಾರ್ಯವನ್ನು ಮಾಡಬೇಕಾಯಿತು. ಇದರಿಂದ ವಿಜಯನಗರ ರಾಜ್ಯವು ಸಂಪೂರ್ಣವಾಗಿ ನಾಶವಾಗುವುದನ್ನು ತಡೆದಂತಾಯಿತು.

ನರಸಿಂಹ ಅನಂತರ ಕೇವಲ ಆರು ವರ್ಷಗಳ ಕಾಲ ಮಾತ್ರ ರಾಜ್ಯಭಾರ ಮಾಡಿದ. ಇವನು ಅಧಿಕಾರಕ್ಕೆ ಬಂದ ತರುಣದಲ್ಲಿ ಮುಖ್ಯವಾಗಿ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಗಮನ ಕೊಡಬೇಕಾಯಿತು. ಆದರೆ ಈ ದಿಶೆಯಲ್ಲಿ ಇವನು ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಕೆಲವು ಪ್ರಾಂತ್ಯಾಧಿಕಾರಿಗಳು ಇವನ ಅಧಿಕಾರವನ್ನು ವಿರೋಧಿಸಿದರು. ಅವರಲ್ಲಿ ಮುಖ್ಯರಾದವರು ಉಮ್ಮತ್ತೂರಿನ ಪಾಳೆಯಗಾರರು ಮತ್ತು ಶ್ರೀರಂಗಪಟ್ಟಣದ ಅರಸರು. ಆದ್ದರಿಂದ ಅವರ ವಿರುದ್ಧವಾಗಿ ಸತತವಾಗಿ ಹೋರಾಡಬೇಕಾಯಿತು. ಆಂತರಿಕ ವ್ಯವಹಾರಗಳನ್ನು ಸರಿಪಡಿಸುತ್ತಿರುವಾಗಲೇ ನರಸಿಂಹ ವಿದೇಶೀ ದಾಳಿಗಳನ್ನೂ ಎದುರಿಸಬೇಕಾಯಿತು. ಗಜಪತಿ ಪುರುಷೋತ್ತಮ ಸು. 1489ರಲ್ಲಿ ಉದಯಗಿರಿಗೆ ಮುತ್ತಿಗೆ ಹಾಕಿದ. ಈ ಯುದ್ಧದಲ್ಲಿ ನರಸಿಂಹ ಸೋತು ಬಂಧಿಸಲ್ಪಟ್ಟು, ಅನಂತರ ಬಿಡುಗಡೆಹೊಂದಿದ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯ ಸ್ಪಷ್ಟವಿಲ್ಲ. ಆದರೆ ಒಟ್ಟಿನಲ್ಲಿ ಈ ಯುದ್ಧದಿಂದಾಗಿ ಉದಯಗಿರಿ ಮತ್ತು ಸುತ್ತಮುತ್ತಣ ಪ್ರದೇಶಗಳನ್ನು ಪುರುಷೋತ್ತಮನಿಗೆ ಬಿಟ್ಟುಕೊಡಬೇಕಾಯಿತು. ಅನಂತರ 1491ರಲ್ಲಿ ನರಸಿಂಹ ಮೃತನಾದ. ಆಗ ಇನ್ನೂ ಚಿಕ್ಕವರಾಗಿದ್ದ ತನ್ನ ಇಬ್ಬರು ಪುತ್ರರ ಪೋಷಕನಾಗಿ ಮಂತ್ರಿ ತುಳುವ ನರಸಾನಾಯಕನನ್ನು ನೇಮಿಸಿದ.ಆದರೆ ಈ ವ್ಯವಸ್ಥೆ ಸಾಳುವ ಸಂತತಿಯ ನಿರ್ಮೂಲನಕ್ಕೆ ಕಾರಣವಾಯಿತು. (ನೋಡಿ: ನರಸನಾಯಕ). (ಎಸ್.)

**ನರಸಿಂಹ II (ವಿಜಯನಗರ) :** ಸಾಳುವ ವಂಶದ ರಾಜ (1491-1505). ಸಾಳುವ ವಂಶದ ಆಳ್ವಿಕೆಯ ಸ್ಥಾಪಕನಾದ ಒಂದನೆಯ ನರಸಿಂಹನ ಕಿರಿಯ ಮಗ. ಒಂದನೆಯ ನರಸಿಂಹ ಮೃತನಾಗಿದಾಗ ಅವನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದುದರಿಂದ ಮಂತ್ರಿಯಾಗಿದ್ದ ತುಳುವ ವಂಶದ ನರಸನಾಯಕ ರಾಜಕುಮಾರರ ಪೋಷಕನಾಗಿಯೂ ರಾಜಪ್ರತಿನಿಧಿಯಾಗಿಯೂ ನೇಮಕ ಗೊಂಡ. ಹಿರಿಯ ಮಗನಾದ ತಿಮ್ಮಭೂಪನಿಗೆ ನರಸನಾಯಕ ಪಟ್ಟಕಟ್ಟಿದ. ಆದರೆ ನರಸನಾಯಕನ ವಿರೋಧಿಯಾಗಿದ್ದ ತಿಮ್ಮರಸ ಎಂಬುವನು ತಿಮ್ಮಭೂಪನನ್ನು ಕೊಲೆ ಮಾಡಿಸಿದ. ಅನಂತರ ಕಿರಿಯನಾದ ಈ ಎರಡನೆಯ ನರಸಿಂಹನಿಗೆ ಪಟ್ಟಾಭಿಷೇಕವಾಯಿತು. ಆದರೆ ರಾಜಪ್ರತಿನಿಧಿಯಾದ ನರಸನಾಯಕ ಅಧಿಕಾರವನ್ನು ತನ್ನಲ್ಲೇ ಕೇಂದ್ರೀಕರಿಸಿಕೊಂಡು ಅನೇಕ ಬಿರುದುಗಳನ್ನು ಧರಿಸಿ ಸಾರ್ವಭೌಮನಂತೆ ಆಳತೊಡಗಿದ. ಇದರಿಂದ ರಾಜ ಇಮ್ಮಡಿ ನರಸಿಂಹನಿಗೂ ರಾಜಪ್ರತಿನಿಧಿ ನರಸನಾಯಕನಿಗೂ ಮನಸ್ತಾಪವೇರ್ಪಟ್ಟಿತು. ತಿಮ್ಮಭೂಪನನ್ನು ಕೊಲ್ಲಿಸಿದ ತಿಮ್ಮರಸನನ್ನು ಶಿಕ್ಷಿಸಬೇಕೆಂದು ನರಸನಾಯಕ ರಾಜನಿಗೆ ಸೂಚಿಸಿದ. ಆದರೆ ರಾಜ ಆ ಸೂಚನೆಯನ್ನು ತಿರಸ್ಕರಿಸಿದ. ಅಲ್ಲದೆ ತಿಮ್ಮರಸನಿಗೆ ಆಶ್ರಯವನ್ನಿತ್ತ. ಇದರಿಂದ ಬೇಸತ್ತ ನರಸನಾಯಕ ರಾಜಧಾನಿಯನ್ನು ಬಿಟ್ಟು ಪೆನುಕೊಂಡಕ್ಕೆ ಹೋಗಿ ನೆಲಸಿದ. ಆದರೂ ಕೂಡ ಇಮ್ಮಡಿ ನರಸಿಂಹ ಮತ್ತು ನರಸನಾಯಕರ ನಡುವೆ ಸೌಹಾರ್ದತೆ ಏರ್ಪಡಲೇ ಇಲ್ಲ. ವೈರತ್ವ ಬೆಳೆಯತೊಡಗಿತು. ಕೋಪಗೊಂಡ ನರಸನಾಯಕ ಪೆನುಕೊಂಡದಿಂದ ಒಂದು ದೊಡ್ಡ ಸೈನ್ಯದೊಡನೆ ವಿಜಯನಗರವನ್ನು ಮುತ್ತಿ ತಿಮ್ಮರಸನನ್ನು ಕೊಲ್ಲಿಸಿದ. ಇಮ್ಮಡಿ ನರಸಿಂಹನನ್ನು ಸೋಲಿಸಿದ. ಅವನನ್ನು ಪೆನುಕೊಂಡಕ್ಕೆ ಕಳುಹಿಸಿ ಸೆರೆಯಲ್ಲಿಟ್ಟ. ನರಸನಾಯಕ ತಾನೇ ರಾಜನಂತೆ ಆಳ್ವಿಕೆ ನಡೆಸಿದ. ನರಸನಾಯಕನ ಮರಣಾನಂತರ (1503) ಅಧಿಕಾರ ವಹಿಸಿದ ಅವನ ಮಗ ವೀರನರಸಿಂಹ ಅಭಿಷಿಕ್ತ ದೊರೆ ಇಮ್ಮಡಿ ನರಸಿಂಹನನ್ನು 1505ರಲ್ಲಿ ಕೊಲೆ ಮಾಡಿಸಿ ತಾನೇ ರಾಜ್ಯವನ್ನು ವಹಿಸಿಕೊಂಡ. ಇಮ್ಮಡಿ ನರಸಿಂಹನೊಂದಿಗೆ ಸಾಳುವ ಮನೆತನದ ಆಳ್ವಿಕೆಯೂ ಅಂತ್ಯಗೊಂಡಿತು. (ಎಸ್.ಕೆ.ಎಸ್.ಎಸ್.)

**ನರಸಿಂಹ I (ಹೊಯ್ಸಳ) :** ವಿಷ್ಣುವರ್ಧನನ ಮಗ ಮತ್ತು ಅವನ ಉತ್ತರಾಧಿಕಾರಿ (1142-73). ಇವನಿಗೆ ವಿಜಯನರಸಿಂಹ ಮತ್ತು ಪ್ರತಾಪ ನರಸಿಂಹ ಎಂಬ ಹೆಸರುಗಳೂ ಇದ್ದವು. ತಾಯಿ ಲಕ್ಷ್ಮೀದೇವಿ. ಹುಟ್ಟಿದ್ದು 1133ರಲ್ಲಿ. ಜನಿಸಿದ ಸ್ವಲ್ಪ ಕಾಲದಲ್ಲೇ ವಿಷ್ಣುವರ್ಧನ ಇವನಿಗೆ ಯುವರಾಜ ಪಟ್ಟವನ್ನು ಕಟ್ಟಿದ. 1142ರಲ್ಲಿ ತಂದೆ ಮರಣ ಹೊಂದಿದಾಗ ಯುವರಾಜ ನರಸಿಂಹ ಇನ್ನೂ ಎಂಟು ವರ್ಷದ ಬಾಲಕನಾಗಿದ್ದರಿಂದ ಸಚಿವರು ನರಸಿಂಹನ ಪಟ್ಟಾಭಿಷೇಕವನ್ನು ನೆರವೇರಿಸಿ, ಇವನು ಪ್ರಾಪ್ತವಯಸ್ಕನಾಗುವವರೆಗೂ ಆಡಳಿತ ನಡೆಸಿದರು. ನರಸಿಂಹ ಅಶಕ್ತ ದೊರೆ. ಈತ ಪಟ್ಟವೇರಿದೊಡನೆಯೇ ವಿಷ್ಣುವರ್ಧನನ ಕಾಲದಲ್ಲಿ ಸೋಲನ್ನನುಭವಿಸಿದ್ದ ಚಾಳುಕ್ಯ ಮಾಂಡಲಿಕರಾದ ಹಾನಗಲ್ಲಿನ ಕದಂಬರು ಪೊಂಬುಚ್ಚದ ಸಾಂತರರು ಮತ್ತು ಉಚ್ಚಂಗಿಯ ಪಾಂಡ್ಯರು ಹೊಯ್ಸಳ ರಾಜ್ಯದ ಗಡಿಗಳನ್ನು ಆಕ್ರಮಿಸಿದರು. ನರಸಿಂಹನ ಸೇನಾಧಿಕಾರಿಗಳು ನಿಷ್ಠೆಯಿಂದ ಹೋರಾಡಿದರೂ ಬಂಕಾಪುರವನ್ನು ಒಳಗೊಂಡು ಹರಿಹರದಿಂದ ಉತ್ತರಕ್ಕಿಂದ್ದ ಗಳಿಕೆಯೆಲ್ಲಾ ಹೊಯ್ಸಳರ ಕೈಬಿಟ್ಟಿತಲ್ಲದೆ, ನರಸಿಂಹ ಚಾಳುಕ್ಯ ಸಾರ್ವಭೌಮತ್ವವನ್ನು ಪುನಃ ಒಪ್ಪಬೇಕಾಯಿತು. ಅಲ್ಲದೆ ಚೋಳರೂ ಕೋಲಾರ ಜಿಲ್ಲೆಯ ಸ್ವಲ್ಪ ಭಾಗಗಳನ್ನು ಕೆಲಕಾಲ ಆಕ್ರಮಿಸಿಕೊಂಡರು. ಅತ್ತ ಚಂಗಾಳ್ವರೂ ಸ್ವತಂತ್ರರಾಗಲು ಪ್ರಯತ್ನಿಸಿದರು. ಆದರೆ ಇದು ಸಾಗಲಿಲ್ಲ. ಗಡಿಗಳನ್ನು ಆಕ್ರಮಿಸಲು ಪ್ರಯತ್ನಿಸಿದ ಚಂಗಾಳ್ವರನ್ನು ನರಸಿಂಹನ ದಂಡನಾಯಕರು ಸೋಲಿಸಿದರು. ನರಸಿಂಹ ಪ್ರಾಪ್ತವಯಸ್ಕನಾದ ಮೇಲೂ ಆಡಳಿತಕ್ಕೆ ಗಮನ ನೀಡಲಿಲ್ಲ. ದುರ್ಬಲನೂ ಸ್ತ್ರೀಲೋಲುಪನೂ ಆಗಿದ್ದ. 1156ರಲ್ಲಿ ಬಿಜ್ಜಳ ಚಾಳುಕ್ಯರನ್ನು ತುಳಿದು ಕಲ್ಯಾಣದ ಸಿಂಹಾಸನವನ್ನು ಆಕ್ರಮಿಸಿದ ಸಂದರ್ಭದಲ್ಲಿ ಹೊಯ್ಸಳರ ಪ್ರಭಾವವನ್ನು ವಿಸ್ತರಿಸುವ ಅವಕಾಶಗಳಿದ್ದರೂ ನರಸಿಂಹ ಪ್ರಯತ್ನ ಪಡಲಿಲ್ಲ. ತನ್ನ ಆಳ್ವಿಕೆಯ ಕೊನೆಗಾಲದಲ್ಲಿ ನರಸಿಂಹ ತನ್ನ ಪಟ್ಟದ ರಾಣಿಯಾದ ಏಚಲ ಮಹಾದೇವಿಯನ್ನೂ ಯುವರಾಜನಾದ ಕುಮಾರ ವೀರಬಲ್ಲಾಳನನ್ನೂ ಆಡಳಿತಕ್ಕೆ ಸಹಭಾಗಿಯಾಗಿ ನೇಮಿಸಿಕೊಂಡ. ರಾಜ್ಯದಲ್ಲುಂಟಾದ ದುಃಸ್ಥಿತಿಯಿಂದ ಮನನೊಂದ ಯುವರಾಜ ವೀರಬಲ್ಲಾಳ 1173ರ ಪ್ರಾರಂಭದಲ್ಲಿ ತಂದೆಯ ಮೇಲೆ ದಂಗೆಯೆದ್ದು ಸಿಂಹಾಸನವನ್ನು ಹಿಡಿದ. ಈ ಘಟನೆ ನಡೆದ ಸ್ವಲ್ಪ ಕಾಲದಲ್ಲೇ ನರಸಿಂಹ ಮರಣಹೊಂದಿದ.

ವಿಷ್ಣುವರ್ಧನ ಸ್ಥಾಪಿಸಿದ ಭದ್ರವಾದ ಆಡಳಿತ ಮತ್ತು ನರಸಿಂಹನ ಮಂತ್ರಿಗಳೂ ದಂಡನಾಯಕರೂ ಆದ ಹುಳ್ಳ, ಜೋಕಿಮಯ್ಯ, ಬಿಟ್ಟಿಮಯ್ಯ, ಮಾಚಿಮಯ್ಯ ಮೊದಲಾದವರ ನಿಃಸ್ಪೃಹಸೇವೆಯಿಂದ ರಾಜ ಬಲಹೀನನಾಗಿದ್ದರೂ ಹೊಯ್ಸಳ ರಾಜ್ಯ ಛಿದ್ರವಾಗದೆ ಉಳಿದುಬಂದಿತು. ನರಸಿಂಹ ಉದಾರಮತೀಯ ನೀತಿಯನ್ನನುಸರಿಸಿದ. ಇವನ ಕಾಲದಲ್ಲಿ ವೈಷ್ಣವ ಪಂಥ'ದ ಚಟುವಟಿಕೆ ವ್ಯಾಪಕವಾಗಿ ಬೆಳೆಯಿತು. ರಾಮಾನುಜಾಚಾರ್ಯರ ಅನುಯಾಯಿಗಳಲ್ಲೊಬ್ಬರಾದ ತಿರುವ ರಂಗದಾಸ ಎಂಬುವರು ವೈಷ್ಣವ ಪಂಥವನ್ನು ಪ್ರಚಾರ ಮಾಡುತ್ತಾ ತೊಣ್ಣೂರಿನಲ್ಲಿ ವಾಸಿಸುತ್ತಿದ್ದರು. ತೊಣ್ಣೂರು, ಮೇಲುಕೋಟೆಗಳು ಆ ಪಂಥದ ಮುಖ್ಯ ಕೇಂದ್ರಗಳಾಗಿದ್ದವು. ನರಸಿಂಹ ವೈಷ್ಣವ ಪಂಥ'ದ ಆಚಾರ್ಯರಿಗೂ ದೇವಾಲಯಗಳಿಗೂ ವಿಶೇಷ ದಾನದತ್ತಿಗಳನ್ನು ನೀಡಿದ. ಜೈನಮತಾವಲಂಬಿಗಳಿಗೂ ಪ್ರೋತ್ಸಾಹ ನೀಡಿದ. 1159ರಲ್ಲಿ ಶ್ರವಣಬೆಳಗೊಳಕ್ಕೆ ಭೇಟಿನೀಡಿ ದಾನಧರ್ಮಗಳನ್ನು ಮಾಡಿದ. ಜೈನಧರ್ಮಾವಲಂಬಿಗಳನ್ನು ಸಚಿವ ಮತ್ತು ದಂಡನಾಯಕ ಹುದ್ದೆಗಳಿಗೆ ಅವನು ನೇಮಿಸಿಕೊಂಡಿದ್ದ.

ಇವನ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಅವುಗಳಲ್ಲಿ ಹೊನ್ನಾವರದ ಕೇಶವ, ಧರ್ಮಪುರದ ಕೇಶವ, ಹುಲ್ಲೇಕೆರೆಯ ಕೇಶವ, ನಾಗಮಂಗಲದ ಕೇಶವ, ಕಿಕ್ಕೇರಿಯ ಬ್ರಹ್ಮೇಶ್ವರ, ಕೋರಮಂಗಲದ ಬೂಚ್ಚೇಶ್ವರ, ತೆಂಗಿನ ಘಟ್ಟದ ಹೊಯ್ಸಳೇಶ್ವರ

ದೇವಾಲಯಗಳು ಮುಖ್ಯವಾದವು.

ಒಂದನೆಯ ನರಸಿಂಹನಿಗೆ ಪಟ್ಟದ ರಾಣಿಯಾದ ಏಚಲ ಮಹಾದೇವಿಯಲ್ಲದೆ ಚಂಗಲದೇವಿ, ಗುಜ್ಜಲದೇವಿ, ಮೈಳಲದೇವಿ ಎಂಬ ಇತರ ರಾಣಿಯರೂ ಇದ್ದರು. ಇವನ ಅಂತಃಪುರದಲ್ಲಿ ಮುನ್ನೂರಕ್ಕೂ ಮಿಗಿಲಾದ ಆಂಧ್ರ, ಚೋಳ, ಗೌಳ, ಬಂಗಾಲ, ಮಾಳವ, ಸಿಂಹಳ ಮತ್ತು ಇತರ ಪ್ರದೇಶಗಳ ಸುಂದರ ಸ್ತ್ರೀಯರಿದ್ದರೆಂದು ಶಾಸನವೊಂದರಲ್ಲಿ ವರ್ಣಿಸಲಾಗಿದೆ. (ಜಿ.ಆರ್.ಆರ್.)

**ನರಸಿಂಹ II (ಹೊಯ್ಸಳ) :** ಪ್ರಸಿದ್ಧ ಅರಸ (1220-35). ಇಮ್ಮಡಿ ವೀರಬಲ್ಲಾಳ ಮತ್ತು ಅವನ ಪಟ್ಟದ ರಾಣಿ ಪದ್ಮಲದೇವಿಯ ಮಗ. ಜನನ 1184. ಯುವರಾಜ ನರಸಿಂಹನಿಗೆ ಬಲ್ಲಾಳ ಒಳ್ಳೆಯ ಶಿಕ್ಷಣದ ವ್ಯವಸ್ಥೆ ಮಾಡಿದ. ತನ್ನ ತಂದೆಯಿಂದ ಪ್ರಾಂತ್ಯಾಧಿಕಾರಿ ಹಾಗೂ ದಳಪತಿಯಾಗಿ ನೇಮಿತನಾಗಿದ್ದನಾಗಿ ಆಡಳಿತ ನಿರ್ವಹಣೆ ಯುದ್ಧತಂತ್ರಗಳಲ್ಲಿ ನುರಿತ. ಆ ಸಂದರ್ಭದಲ್ಲೇ ಪಾಂಡ್ಯರಾಜನನ್ನು ಸೋಲಿಸಿ ಚೋಳಕುಲೋತ್ತುಂಗನಿಗೆ ಪುನಃ ಸಿಂಹಾಸನ ದೊರಕಿಸಿಕೊಡುವುದರಲ್ಲಿ ಯಶಸ್ವಿಯಾದ. ವೀರಬಲ್ಲಾಳನ ಮರಣಾನಂತರ 1220ರಲ್ಲಿ ಅಭಿಷಿಕ್ತನಾದ. ಎರಡನೆಯ ನರಿಸಂಹನಿಗೆ ವೀರನರಸಿಂಹ, ಪ್ರತಾಪ ನರಸಿಂಹ ಎಂಬ ಹೆಸರುಗಳ ಜೊತೆಗೆ ಸಮಸ್ತಭುವನಾಶ್ರಯ, ಶ್ರೀ ಪೃಥ್ವೀವಲ್ಲಭ ಚೋಳರಾಜ ಪ್ರತಿಷ್ಠಾಪನಾಚಾರ್ಯ, ಪಾಂಡ್ಯರಾಜಗಜಕೇಸರಿ, ನಿಶ್ಶಂಕಪ್ರತಾಪಚಕ್ರವರ್ತಿ ಮೊದಲಾದ ಬಿರುದುಗಳಿದ್ದವು.

ದೇವಗಿರಿಯ ಸೇವುಣರ ಪರಾಜಯ ಮತ್ತು ತಮಿಳುನಾಡಿನಲ್ಲಿ ಹೊಯ್ಸಳರ ರಾಜಕೀಯ ಪ್ರಭಾವದ ಸ್ಥಾಪನೆ - ಇವುಗಳು ನರಸಿಂಹನ ಆಳ್ವಿಕೆಯ ಮುಖ್ಯ ರಾಜಕೀಯ ಘಟನೆಗಳು. ಎರಡನೆಯ ನರಸಿಂಹ ಪಟ್ಟಕ್ಕೆ ಬಂದ ಸ್ವಲ್ಪ ಕಾಲದಲ್ಲೇ ಮಗಧ ರಾಜ್ಯವನ್ನು ನಿರ್ಮೂಲ ಮಾಡಿದ. ಅದೇ ತರುಣದಲ್ಲಿ ತಮಿಳುನಾಡಿನ ರಾಜಕೀಯದಲ್ಲಿ ಗೊಂದಲವುಂಟಾಗಿ ಮೂರನೆಯ ರಾಜರಾಜಚೋಳ ಹೊಯ್ಸಳ ಚಕ್ರವರ್ತಿಯ ಸಹಾಯವನ್ನು ಬೇಡಿದ. ಚೋಳರಾಜ ನರಸಿಂಹನ ಸಹೋದರಿಯಾದ ಸೋಮಲದೇವಿಯನ್ನು ವರಿಸಿದ್ದುದರಿಂದಲೂ ಹಾಗೂ ಹೊಯ್ಸಳರ ಪ್ರಾಬಲ್ಯವನ್ನು ವಿಸ್ತರಿಸಲೋಸುಗವಾಗಿಯೂ ನರಸಿಂಹ ತಮಿಳುನಾಡಿನತ್ತ ಹೆಚ್ಚು ಗಮನ ಹರಿಸಿದ. ಕೊಡಲೇ ತಮಿಳುನಾಡಿಗೆ ಸೈನ್ಯ ಸಮೇತನಾಗಿ ಧಾವಿಸಿ ರಾಜರಾಜನಿಗೆ ಉಪದ್ರವ ಕೊಡುತ್ತಿದ್ದ ಪಾಂಡ್ಯರನ್ನೂ ಮತ್ತು ಇತರ ಸಾಮಂತರನ್ನೂ ಸೋಲಿಸಿ ಚೋಳರಾಜನನ್ನು ಸಂತೈಸಿದ (1222-23). ಇತ್ತ ಸೇವುಣರು 1223ರಲ್ಲಿ ಹೊಯ್ಸಳ ಸಾಮ್ರಾಜ್ಯದ ಉತ್ತರದ ಗಡಿಗಳ ಮೇಲೆ ಆಕ್ರಮಣ ನಡೆಸಿದರು. ನರಸಿಂಹ ಕೂಡಲೇ ತನ್ನ ರಾಜ್ಯದ ಉತ್ತರ ಗಡಿಯನ್ನು ತಲುಪಿ ಶತ್ರುಗಳನ್ನು ಸದೆಬಡಿದ. ಸೇವುಣ ಸಿಂಘಣನ ದಂಡನಾಯಕರಾದ ವಿಕ್ರಮಪಾಲ ಮತ್ತು ಪಾವುಸ ಎಂಬುವರು ರಣರಂಗದಲ್ಲಿ ಮಡಿದರು. ಸೇವುಣ ಸೈನ್ಯ ಸಂಪೂರ್ಣವಾಗಿ ಸೋತು ಚೆಲ್ಲಾಪಿಲ್ಲಿಯಾಗಿ ಹಿಂದಿರುಗಿತು. ಪುನಃ 1228 ಮತ್ತು 1230ರಲ್ಲೂ ಸೇವುಣರಿಗೂ ಹೊಯ್ಸಳರಿಗೂ ಕದನಗಳಾದವು. ಸೋತ ಸೇವುಣರು ಪ್ರತಾಪ ನರಸಿಂಹನ ಜೀವಿತ ಕಾಲದಲ್ಲಿ ಪುನಃ ಹೊಯ್ಸಳರ ಗಡಿಗಳನ್ನು ಆಕ್ರಮಿಸುವ ಸಾಹಸ ಮಾಡಲಿಲ್ಲ. ತುಂಗಭದ್ರಾನದಿ ಹೊಯ್ಸಳ ಸೇವುಣ ರಾಜ್ಯಗಳ ಗಡಿಯಾಯಿತು.

ಚೋಳ ಮೂರನೆಯ ರಾಜರಾಜನಿಗೆ ನರಸಿಂಹ ಬೆಂಬಲ ಕೊಟ್ಟಿದ್ದರೂ ಆತನೇ ದುರ್ಬಲನಾಗಿದ್ದರಿಂದ ಆಗಾಗ್ಗೆ ಸಾಮಂತರಾದ ಪಾಂಡ್ಯರಿಂದ ಕಿರುಕುಳ ಸಂಭವಿಸುತ್ತಿತ್ತು. ಇದರಿಂದಾಗಿ ನರಸಿಂಹ ಅನೇಕ ವೇಳೆ ರಾಜರಾಜನ ಸಹಾಯಕ್ಕಾಗಿ ಸೈನ್ಯ ಸಮೇತನಾಗಿ ತಮಿಳುನಾಡಿಗೆ ತೆರಳಬೇಕಾಯಿತು. ಸು. 1230ರಲ್ಲಿ ಚೋಳರಾಜ ತನ್ನ ಶತ್ರುಗಳಿಗೆ ಸೆರೆಯಾಗಿದ್ದನಾಗಿ ಚೋಳ ವೈರಿಗಳ ಮೇಲೆ ದೊಡ್ಡ ಪ್ರಮಾಣದ ಯುದ್ಧವನ್ನೇ ಮಾಡಬೇಕಾಯಿತು. ನರಸಿಂಹನು ಪಾಂಡ್ಯರು ಮತ್ತು ಅವರ ಮಿತ್ರರಾದ ಕಾಡವ ಮತ್ತು ತೆಲುಗು ಚೋಡರನ್ನು ಸೋಲಿಸಿ ರಾಜರಾಜನಿಗೆ ಪುನಃ ಸಿಂಹಾಸವನ್ನು ದೊರಕಿಸಿ ಕೊಟ್ಟ. ಅನಂತರ ಕಂಚಿಯಲ್ಲಿ ಸ್ವಲ್ಪಕಾಲ ತಂಗಿದ್ದು ರಾಮೇಶ್ವರದವರೆಗೂ ವಿಜಯಯಾತ್ರೆ ಕೈಗೊಂಡು ಅಲ್ಲಿ ವಿಜಯಸ್ತಂಭವೊಂದನ್ನು ನೆಟ್ಟ. ರಾಜರಾಜನ ಸಹಾಯಕ್ಕಾಗಿ ಹೊಯ್ಸಳ ಸೈನ್ಯದ ತುಕಡಿಯೊಂದನ್ನು ತಮಿಳುನಾಡಿನಲ್ಲಿ ನೆಲೆಗೊಳಿಸಿದ. ಇದರ ವೆಚ್ಚವನ್ನು ಭರಿಸಲು ರಾಜರಾಜ ತನ್ನ ರಾಜ್ಯದ ಶ್ರೀರಂಗಂ ಕಣ್ಣಾನೂರು ಭಾಗಗಳನ್ನು ನರಸಿಂಹನಿಗೊಪ್ಪಿಸಿದ್ದ. ನರಸಿಂಹನ ಪುತ್ರನಾದ ವೀರಸೋಮೇಶ್ವರ ಮಾತೃವಿಹೀನನಾಗಿದ್ದು ಬಾಲ್ಯದಿಂದಲೂ ತನ್ನ ಸೋದರತ್ತೆಯ ಪೋಷಣೆಯಲ್ಲಿ ತಮಿಳುನಾಡಿನಲ್ಲೇ ಬೆಳೆದ. ನರಸಿಂಹ ಅವನಿಗೆ ಯುವರಾಜಪಟ್ಟ ಕಟ್ಟಿದ್ದಮೇಲೆ ಅವನು ಶ್ರೀರಂಗದ ಬಳಿಯಲ್ಲಿ ವಿಕ್ರಮಪುರ ಎಂಬ ಹೊಸ ಪಟ್ಟಣವನ್ನು ಕಟ್ಟಿಸಿ ರಾಜಧಾನಿಯಾಗಿ ಮಾಡಿಕೊಂಡು ಹೊಯ್ಸಳ ಸಾಮ್ರಾಜ್ಯದ ತಮಿಳು ಪ್ರದೇಶಗಳ ಮೇಲೆ ಆಳ್ವಿಕೆ ನಡೆಸುತ್ತಿದ್ದ. ಈ ಹಲವು ಘಟನೆಗಳಿಂದಾಗಿ ಇಮ್ಮಡಿ ನರಸಿಂಹನ ಕಾಲದಲ್ಲಿ ತಮಿಳುನಾಡಿನಲ್ಲಿ ಹೊಯ್ಸಳರ ಪ್ರಭಾವ ಬಹುವಾಗಿ ವಿಸ್ತರಿಸಿತು. ನರಸಿಂಹ 1235ರಲ್ಲಿ ಮೃತನಾದ.

ನರಸಿಂಹನಿಗೆ ಕಾಳಲದೇವಿ, ಲೋಕಾಂಬಿಕಾ, ಗೌರಲದೇವಿ ಎಂಬ ಪತ್ನಿಯರಿದ್ದರು. ಮುಂದೆ ರಾಜನಾದ ಸೋಮೇಶ್ವರ ಕಾಳಲ ದೇವಿಯ ಮಗ. ನರಸಿಂಹನಿಗೆ ಗೌರಲದೇವಿಯಲ್ಲಿ ಹುಟ್ಟಿದ ಎರೆಯಂಗನೆಂಬ ಮಗನೂ ಇದ್ದ.

ಪೋಳಾಳ್ವ, ಅಮಿತಯ್ಯ, ಅಪ್ಪಣ್ಣ, ಸಮುದ್ರಗೋಪಯ್ಯ, ಅಡ್ಡಾಯುದ ಹರಿಹರ, ನೀರ್ಗುಂದದ ಚಲ್ಲೆಯನಾಯಕ, ಹುಳಿಯೇರ ಕಪ್ಪಯನಾಯಕ ಅವನ ತಮ್ಮ ನರಸಿಂಹ ಮುಂತಾದವರು ನರಸಿಂಹನ ಮಂತ್ರಿ-ದಂಡನಾಯಕರಲ್ಲಿ ಮುಖ್ಯರು.

ಎರಡನೆಯ ನರಸಿಂಹನ ಕಾಲದಲ್ಲಿ ಹಾರ್ನಹಳ್ಳಿಯ ಸೋಮೇಶ್ವರ ಮತ್ತು ಕೇಶವ, ಬೆಳ್ಳೂರಿನ ಮೂಲ ಸಿಂಗೇಶ್ವರ, ಬಸರಾಳಿನ ಮಲ್ಲಿಕಾರ್ಜುನ, ಹೆಗ್ಗೆರೆಯ ಕಲ್ಲೇಶ್ವರ ಮತ್ತು ಗಳಗೇಶ್ವರ, ಹರಿಹರದ ಹರಿಹರೇಶ್ವರ ಮೊದಲಾದ ಪ್ರಸಿದ್ಧ ದೇವಾಲಯಗಳು ನಿರ್ಮಾಣವಾದವು. (ಜಿ.ಆರ್.ಆರ್.)

**ನರಸಿಂಹ III (ಹೊಯ್ಸಳ) :** ಹೊಯ್ಸಳ ಸಾಮ್ರಾಜ್ಯದ ಕನ್ನಡ ಪ್ರದೇಶವನ್ನು ದೋರಸಮುದ್ರದಿಂದ ಆಳಿದ ಅರಸ (1253-92). ವೀರ ಸೋಮೇಶ್ವರ ಮತ್ತು ಅವನ ರಾಣಿ ಬಿಜ್ಜಳದೇವಿಯ ಮಗ. ಜನನ 1240. ಸೇವುಣರು ಮತ್ತು ಮಲತಮ್ಮನಾದ ರಾಮನಾಥನೊಡನೆ ನಡೆದ ಯುದ್ಧಗಳು ನರಸಿಂಹನ ಕಾಲದ ಮುಖ್ಯ ರಾಜಕೀಯ ಘಟನೆಗಳು.

ನರಸಿಂಹನ ಮಲಸಹೋದರನಾದ ರಾಮನಾಥ ಮಧುರೆಯ ಪಾಂಡ್ಯರ ಪ್ರಾಬಲ್ಯದಿಂದ ತನ್ನ ರಾಜ್ಯದ ಬಹುಭಾಗವನ್ನು ಹಾಗೂ ರಾಜಧಾನಿಯನ್ನೂ ಕಳೆದುಕೊಂಡು ನರಸಿಂಹನ ರಾಜ್ಯದ ಮೇಲೆ ನಿರಂತರವಾದ ಆಕ್ರಮಣದಲ್ಲಿ ತೊಡಗಿದ. ರಾಮನಾಥ ಸುಮಾರು ಆರು ಬಾರಿ ನರಸಿಂಹನ ರಾಜ್ಯವನ್ನು ಆಕ್ರಮಿಸಲು ಯತ್ನಿಸಿ ವಿಫಲನಾದ. ಒಂದು ಬಾರಿ ಬೆಂಗಳೂರು ಮತ್ತು ಕುಣಿಗಲು ವರೆಗೆ ರಾಮನಾಥನ ದಾಳಿ ಮುಂದುವರಿಯಿತು. ಆದರೆ ಮೂರನೆಯ ನರಸಿಂಹ ಮತ್ತು ಅವನ ದಕ್ಷ ದಳಪತಿಗಳು ರಾಮನಾಥನ ದಾಳಿಯನ್ನು ಪ್ರತಿಬಾರಿಯೂ ಯಶಸ್ವಿಯಾಗಿ ಹಿಮ್ಮೆಟ್ಟಿಸಿದರು. ಮೂರನೆಯ ನರಸಿಂಹನೂ ರಾಮನಾಥನೂ ದಾಯಾದ ಕಲಹದಲ್ಲಿ ತೊಡಗಿದ್ದ ಪರಿಸ್ಥಿತಿಯನ್ನು ಗಮನಿಸಿದ ದೇವಗಿರಿಯ ಸೇವುಣರು ಹೊಯ್ಸಳ ರಾಜ್ಯವನ್ನು ಆಕ್ರಮಿಸಲು ಸಂಚು ನಡೆಸಿದರು. 1271ರಲ್ಲಿ ಸೇವುಣ ಮಹಾದೇವನ ದಳಪತಿಯಾದ ರತ್ನಪಾಲ ಚಿತ್ರದುರ್ಗ ಜಿಲ್ಲೆಯ ಹಲವು ಪ್ರದೇಶಗಳನ್ನು ವಶಪಡಿಸಿಕೊಂಡ. ನರಸಿಂಹನ ದಂಡನಾಯಕನಾದ ಪೆರುಮಾಳೆ ದಂಡನಾಯಕ ಶತ್ರುಸೈನ್ಯದ ಮೇಲೆ ಬಿದ್ದು ರತ್ನಪಾಲನನ್ನು ಕೊಂದು ಕೈಬಿಟ್ಟಿದ್ದ ಪ್ರಾಂತ್ಯಗಳನ್ನು ವಶಪಡಿಸಿಕೊಂಡ. ಅನಂತರ ಮೂರನೆಯ ನರಸಿಂಹನು ರಾಮನಾಥನ ಆಕ್ರಮಣವನ್ನು ಹಿಮ್ಮೆಟ್ಟಿಸುವ ಕಾರ್ಯದಲ್ಲಿ ಮಗ್ನನಾಗಿದ್ದಾಗ ಸೇವುಣ ಮಹಾದೇವನ ಉತ್ತರಾಧಿಕಾರಿಯಾದ ರಾಮಚಂದ್ರ 1276ರಲ್ಲಿ ಹೊಯ್ಸಳ ರಾಜಧಾನಿಯನ್ನು ಮುತ್ತಲು ಹವಣಿಸಿ ಬೆಳವಾಡಿಯವರೆಗೂ ದಾಳಿ ಮಾಡಿದ. ಈ ಕದನದಲ್ಲಿ ನಿಡುಗಲ್ಲಿನ ಇರುಂಗೋಳಚೋಳ ರಾಮಚಂದ್ರನಿಗೆ ಸಹಾಯ ಮಾಡಿದ. ಹೊಯ್ಸಳ

ಸೈನ್ಯ ಶತ್ರು ಸೈನ್ಯವನ್ನು ಚಿತ್ರದುರ್ಗದ ವರೆಗೂ ಬೆನ್ನಟ್ಟಿ ಓಡಿಸಿತು. 1285ರಲ್ಲಿ ಮೂರನೆಯ ನರಸಿಂಹ ತನ್ನ ಶತ್ರುವಿಗೆ ಸಹಾಯ ನೀಡಿದ ನಿಡುಗಲ್ಲು ಚೋಳನನ್ನು ಸೋಲಿಸಿದ. ನರಸಿಂಹನ ಕಾಲದಲ್ಲಿ ಹೊಯ್ಸಳ ರಾಜ್ಯವು ಅನೇಕ ದಾಳಿಗಳಿಗೊಳಗಾದರೂ ಇವನು ಪರಾಕ್ರಮದಿಂದ ಹೋರಾಡಿ ರಾಜ್ಯವನ್ನು ಸಂರಕ್ಷಿಸಿದ.

ನರಸಿಂಹ ಶೈವ ವೈಷ್ಣವ ಮತ್ತು ಜೈನಪಂಥಗಳಿಗೆ ಪ್ರೋತ್ಸಾಹ ನೀಡಿದ. ಇವನ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಸೋಮದಂಡನಾಯಕನಿಂದ 1268ರಲ್ಲಿ ಕಟ್ಟಿಸಲ್ಪಟ್ಟ ಸೋಮನಾಥಪುರದ ಕೇಶವ ದೇವಾಲಯ ಹೊಯ್ಸಳ ಶೈಲಿಯ ಅತ್ಯಂತ ಶ್ರೇಷ್ಠ ದೇವಾಲಯಗಳಲ್ಲೊಂದಾಗಿದೆ. ತುರುವೇಕೆರೆಯ ಕೇಶವ, ಸೆಟ್ಟಿಕೆರೆಯ ಯೋಗಮಾಧವ, ಹೊಳೆನರಸೀಪುರದ ಲಕ್ಷ್ಮೀನರಸಿಂಹ ಮೊದಲಾದವು ಮೂರನೆಯ ನರಸಿಂಹನ ಕಾಲದಲ್ಲಿ ನಿರ್ಮಾಣವಾದ ಇತರ ಮುಖ್ಯ ದೇವಾಲಯಗಳು. ನರಸಿಂಹನ ಮರಣಾನಂತರ (1292ರಲ್ಲಿ) ಇವನ ಮಗನಾದ ಮೂರನೆಯ ವೀರಬಲ್ಲಾಳ ರಾಜನಾದ.

ಪೆರುಮಾಳೆ, ಸೋಮೆಯ, ಕುಮಾರ ಚಿಕ್ಕ ಕೇತಯನರಸಿಂಹನ ಕಾಲದಲ್ಲಿದ್ದ ಮುಖ್ಯ ದಂಡನಾಯಕರು. (ಜಿ.ಆರ್.ಆರ್.)

**ನರಸಿಂಹಮೂರ್ತಿ, ಕೆ. :** 1919 99 ಕನ್ನಡದ ಅಗ್ರಮಾನ್ಯ ವಿಮರ್ಶಕರು. ನವ್ಯ ಸಾಹಿತ್ಯದ ಪ್ರವರ್ತಕರೆಂದು ಹೆಸರಾಗಿದ್ದವರು ಇವರು ಕೋಲಾರ ಜಿಲ್ಲೆಯ ಮಂಚನಹಳ್ಳಿಯಲ್ಲಿ 1919 ಮೇ 12 ರಂದು ಜನಿಸಿದರು. ತಂದೆ ಕೃಷ್ಣಮೂರ್ತಿ, ತಾಯಿ ಸಾವಿತ್ರಮ್ಮ. ವಿದ್ಯಾರ್ಥಿದೆಸೆಯಲ್ಲಿಯೇ ಪ್ರತಿಭಾವಂತರೆಂದು ಗುರುತಿಸಲ್ಪಟ್ಟಿದ್ದ ನರಸಿಂಹಮೂರ್ತಿಯವರು ಬೆಂಗಳೂರಿನ ಕೋಟೆ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 2 ನೆಯ ರ್‍ಯಾಂಕ್ ಪಡೆದ ಕೀರ್ತಿ ಇವರದ್ದು. ವಿದ್ಯಾರ್ಥಿ ದಿಸೆಯಲ್ಲಿಯೇ ಇವರು ಆರ್. ಕಲ್ಯಾಣಮ್ಮನವರ 'ಸರಸ್ವತಿ' ಪತ್ರಿಕೆಯಲ್ಲಿ ಬರೆಯತೊಡಗಿದ್ದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿಯಾಗಿ ಸೇರಿ, 1940 ರಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದರು. ಆಗ ಪ್ರಿನ್ಸಿಪಾಲರಾಗಿದ್ದವರು ಜೆ.ಸಿ. ರಾಲೋ, ನರಸಿಂಹಮೂರ್ತಿಯವರು ಅವರ ಮೆಚ್ಚುಗೆಗೆ ಪಾತ್ರರಾಗಿದ್ದರು. ನಿರೀಕ್ಷೆಯಂತೆಯೇ ಪರೀಕ್ಷೆ ಮುಗಿದೊಡನೆಯೇ ಇವರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಅರ್ಹರಾದ ವಿದ್ಯಾರ್ಥಿಗಳಿಲ್ಲವೆಂಬ ಕಾರಣದಿಂದ ಹಿಂದಿನ ವರ್ಷಗಳಲ್ಲಿ ಇಂಗ್ಲಿಷ್ ಎಂ.ಎ. ತರಗತಿಗಳನ್ನು ತೆರೆದಿರಲಿಲ್ಲ. ಆ ವರ್ಷ ನರಸಿಂಹಮೂರ್ತಿಯವರಿಗಾಗಿಯೇ ಎಂಬಂತೆ ಎಂ.ಎ. ತರಗತಿಗಳು ಆರಂಭಗೊಂಡವು. ಎಂ.ಎ. ಪರೀಕ್ಷೆಯಲ್ಲಿಯೂ ಇವರು ಮೊದಲ ದರ್ಜೆಯಲ್ಲಿ ತೇರ್ಗಡೆ ಹೊಂದಿದರು.

ಅನಂತರ ಇವರು ಐ.ಎ.ಎಸ್. ಪರೀಕ್ಷೆಯನ್ನು ಪಾಸುಮಾಡಿ (1956) ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕಗೊಂಡರು. ಮುಂದೆ ಬಳ್ಳಾರಿ ಮತ್ತು ಕೊಡಗು ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಿ ಗುಲ್ಬರ್ಗದಲ್ಲಿ ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸಿದರು. 1977 ರಲ್ಲಿ ನಿವೃತ್ತಿ ಹೊಂದಿದರು. ನಿವೃತ್ತಿಯ ಅನಂತರ ಕೆಲವು ಕಾಲ ಅಂದಿನ ಗೌರ್ನರ್ ಆಗಿದ್ದ ಗೋವಿಂದ ನಾರಾಯಣ ಅವರಿಗೆ ವಿಶೇಷಾಧಿಕಾರಿಯಾಗಿದ್ದರು. ಮೈಸೂರಿನ ಆಡಳಿತ ತರಬೇತಿ ಕೇಂದ್ರದಲ್ಲಿಯೂ (ಎ.ಟಿ.ಐ) ಇವರು ಸ್ವಲ್ಪಕಾಲ ಕೆಲಸ ಮಾಡಿದರು. ಆ ದಿನಗಳಲ್ಲಿ ಸಂಸ್ಥೆಯ ಪುಸ್ತಕ ಭಂಡಾರವನ್ನು ಬಹುವಾಗಿ ಬೆಳೆಸಿದರು.

ನಿವೃತ್ತಿಯ ಅನಂತರ ಇವರು 'ಕನ್ನಡಪ್ರಭ' ಪತ್ರಿಕೆಗೆ ಪಾಶ್ಚಾತ್ಯ ಲೇಖಕರನ್ನೂ ಅವರ ಕೃತಿಗಳನ್ನೂ ಕುರಿತು ಒಂದು ಲೇಖನ ಮಾಲೆಯನ್ನೇ ಬರೆದರು. ಹೀಗೆ ಅಲ್ಲಲ್ಲಿ ಇವರು ಬರೆದ ಬಿಡಿ ಲೇಖನಗಳ ಸಂಖ್ಯೆ ತುಂಬ ದೊಡ್ಡದು. ಸಾಹಿತ್ಯದ ಬಗೆಗೆ ಇವರಿಗಿದ್ದ ಸೂಕ್ಷ್ಮ ಸಂವೇದನಾಶಕ್ತಿ ಅದ್ವಿತೀಯವಾದದ್ದು, ಅನನ್ಯವಾದದ್ದು. ಇವರ ಹಾಗೆ ಬಹುಶ್ರುತರಾದ ವಿಮರ್ಶಕರ ಸಂಖ್ಯೆ ಬಹಳ ಕಡಿಮೆ.

ಆನರ್ಸ್ ತರಗತಿಗಳಲ್ಲಿದ್ದಾಗಲೆ ಇವರು ಬರೆದ ಅಶೋಕನ ವಿಜಯ ಎಂಬ ನೀಳ್ಗತೆಗಾಗಿ ಬಿ.ಎಂ.ಶ್ರೀ. ರಜತೋತ್ಸವ ಸುವರ್ಣ ಪದಕವನ್ನು ಗಳಿಸಿದ್ದರು. ಕಳಿಂಗ ಯುದ್ಧಕ್ಕೆ ತಾನೇ ಕಾರಣನಾದ ಅಶೋಕ ಚಕ್ರವರ್ತಿ ಅನಂತರ ಪಶ್ಚಾತ್ತಾಪ ಪಟ್ಟು ಬದುಕಿನಲ್ಲಿ ಸಾರ್ಥಕ್ಯ ಪಡೆದ ಕಥೆಯನ್ನು ಈ ಕವನದಲ್ಲಿ ಹೇಳಲಾಗಿದೆ. ಇದೇ ಸುಮಾರಿನಲ್ಲಿ ಇವರು ಪ್ರಬಂಧ ಸ್ಪರ್ಧೆಯೊಂದರಲ್ಲಿ ಭಾಗವಹಿಸಿ ಬಹುಮಾನ ಪಡೆದರು. ಅಶೋಕನ ವಿಜಯ ಎಂಬ ಕವನ, ಕನ್ನಡ ಸಣ್ಣಕತೆಗಳು ಎಂಬ ಪ್ರಬಂಧ ಇವು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಗೊಂಡು ಓದುಗರ ಗಮನ ಸೆಳೆದಿದ್ದವು. ಆಗ ಉದಯೋನ್ಮುಖ ಲೇಖಕರೊಬ್ಬರ ಬರಹವನ್ನು ಕನ್ನಡ ಸಾಹಿತ್ಯ ಪ್ರಪಂಚ ಸಂತೋಷದಿಂದ ಸ್ವಾಗತಿಸಿತು.

21 ನೆಯ ಶತಮಾನದ ಐದನೆಯ ದಶಕ ಕನ್ನಡಕ್ಕೆ ನವ್ಯಕಾವ್ಯ ಪ್ರವೇಶಿಸಿದ ಕಾಲ. ಗೋಕಾಕರು ಈ ಹೊಸ ಕಾವ್ಯದ ಪ್ರವರ್ತಕರಾದರೂ ಅದಕ್ಕೆ ಬಲ ತಂದ ಅಡಿಗರ 'ಚಂಡೆ ಮದ್ದಳೆ' ಪ್ರಕಟವಾದದ್ದು. 1954 ರಲ್ಲಿ ಅದಕ್ಕೆ ಸುದೀರ್ಘವಾದ ಹಿನ್ನುಡಿ ಬರೆದು ಹೊಸ ಕಾವ್ಯದ ಲಕ್ಷಣವನ್ನು ಕುರಿತು ಚಿಂತಿಸಿದವರು ನರಸಿಂಹಮೂರ್ತಿ ಇವರ ನವ್ಯಕಾವ್ಯ ಪ್ರತಿಪಾದನೆ ಅಡಿಗರಿಗೆ ಹೆಚ್ಚಿನ ಬಲ ತಂದುಕೊಟ್ಟಿತು. ನವ್ಯಕಾವ್ಯವನ್ನು ನೋಡುವವರ ದೃಷ್ಟಿಯನ್ನು ಬದಲಾಯಿಸಿತು. ಈ ಹಿನ್ನುಡಿ ಸುಮಾರು 15 ಪುಟಗಳಷ್ಟು ದೀರ್ಘವಾಗಿದ್ದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ದೀರ್ಘ ಹಿನ್ನುಡಿ-ಮುನ್ನುಡಿಗಳ ಒಂದು ಪರಂಪರೆಯನ್ನೇ ಆರಂಭಿಸಿತು. ಬಿ.ಸಿ. ರಾಮಚಂದ್ರಶರ್ಮರ ಏಳು ಸುತ್ತಿನ ಕೋಟೆ, ನರಹಳ್ಳಿ ಬಾಲಸುಬ್ರಾಹ್ಮಣ್ಯರ ಸಿಂಗರ್ ಕತೆಗಳು, ಬಿ.ಎ.ಸನದಿ ಅವರ ಲಿಂಕನ್ ಕವಿತೆಗಳು ಮುಂತಾದ ನಾನಾ ಬಗೆಯ ಪುಸ್ತಕಗಳಿಗೆ ಬರೆದ ಮುನ್ನುಡಿಗಳಲ್ಲಿ ಈ ಪರಂಪರೆಯನ್ನು ಇವರು ಮುಂದುವರಿಸಿಕೊಂಡು ಬಂದರು. ಈ ಮುನ್ನುಡಿಗಳಲ್ಲಿ ಪುಸ್ತಕದ, ಪ್ರಕಾರದ ಸಮಗ್ರ ಪರಿಚಯವಿರುತ್ತದೆ. ಪ್ರತಿಬರಹವೂ ಇವರ ವ್ಯಾಪಕ ವಿದ್ವತ್ತನ್ನು ಸೂಚಿಸುತ್ತದೆ.

1968ರಷ್ಟು ಹಿಂದೆಯೇ ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಇವರು "ಅತ್ಯುತ್ತಮ ಸಣ್ಣಕತೆಗಳು' ಎಂಬ ಒಂದು ಸಂಗ್ರಹವನ್ನು ಸಿದ್ಧಪಡಿಸಿಕೊಟ್ಟಿದ್ದರು. ಈ ಸಂಗ್ರಹವನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಬೇಕೆಂದು ತೀರ್ಮಾನಿಸಿ, ಪರಿಷತ್ತು ಮೂರನೆಯ ಸಂಪುಟವನ್ನು ಮಾತ್ರ ಪ್ರಕಟಿಸಿದೆ. ಅ.ನ.ಕೃಷ್ಣರಾಯರು ಸಂಪಾದಿಸಿದ 'ಕಾಮನಬಿಲ್ಲು' ಸಂಕಲನದ ಅನಂತರ ಬಂದ ಅಧಿಕೃತ ಕಥಾ ಸಂಕಲನ ಇದೆಂದು ಹೇಳಬಹುದು. ಇದರ ಪ್ರಸ್ತಾವನೆಯಲ್ಲಿ ನರಸಿಂಹಮೂರ್ತಿ ಹೀಗೆ ಹೇಳಿದ್ದಾರೆ. "ಈಚಿನ ಹತ್ತು ವರ್ಷಗಳಲ್ಲಿ ಬಂದಿರುವ ಕಥೆಗಳಲ್ಲಿ ಆದಷ್ಟು ಮಟ್ಟಿಗೆ ಎಲ್ಲವನ್ನೂ ಓದಿ ಈ ದೃಷ್ಟಿಯಿಂದ ನನಗೆ ಉತ್ತಮ ಸಾಹಿತ್ಯವೆಂದೂ ಸಂಕಲನ ಯೋಗ್ಯವೆಂದೂ ಕಂಡುಬಂದ ನಲವತ್ತನ್ನು ಈ ಸಂಪುಟಕ್ಕೆ ಆರಿಸಿದ್ದೇನೆ. ಈ ನಲವತ್ತು ಕಥೆಗಳಲ್ಲಿ ಕಥಾಂಶಕ್ಕಿಂತ ರಚನಾ ವಿಧಾನಕ್ಕಿಂತ, ಭಾಷಾ ಶೈಲಿಗಿಂತ, ಇವುಗಳೆಲ್ಲ ಯಾವುದಕ್ಕೆ ಸಾಧಕಗಳು ಮಾತ್ರವೋ ಆ ಧ್ವನಿಗೇ ರಸಕ್ಕೇ ಪ್ರಾಶಸ್ತ್ಯ: ಇವುಗಳ ಕರ್ತೃಗಳು ಕಟ್ಟುಕಥೆಗಾರರಲ್ಲ, ಜೀವನ ದ್ರಷ್ಟಾರರು, ಜೀವನದ ಮೂಲ ಸಮಸ್ಯೆಗಳನ್ನು ಕುರಿತು, ಸಮಾಜದ ವ್ಯವಸ್ಥೆ ವ್ಯವಹಾರಗಳ ಕುರಿತು ಈ ಕತೆಗಳಲ್ಲಿ ಗಂಭೀರವಾದ ನಿಲುವನ್ನು ಕಾಣುತ್ತೇವೆ. ಇಂದಿನ ಬದುಕಿನ ವಿಮರ್ಶೆ, ವಿವರಣೆ ಒಮ್ಮೆಗೇ ಇಲ್ಲಿ ಸಿಗುತ್ತವೆ. ಅಲ್ಲದೆ ಎಲ್ಲ ಬಗೆಯ ವಿಷಯ, ಭಾವ, ಚಿಂತನೆಗಳನ್ನೂ ಚಿತ್ರಿಸಬಲ್ಲ ಶಕ್ತಿ ಕನ್ನಡ ಗದ್ಯಕ್ಕೆ ಎಷ್ಟಿದೆ, ಎಂಥ ಉತ್ತಮ ಕನ್ನಡಗದ್ಯ ಸೃಷ್ಟಿಯಾಗುತ್ತಿದೆ ಎಂದೂ ಈ ಸಂಪುಟದಲ್ಲಿ ಕಾಣಬಹುದು".

ಇವರು ಅನೇಕ ಸಂಪುಟಗಳಿಗಾಗುವಷ್ಟು ಸಾಹಿತ್ಯ ವಿಮರ್ಶೆಯ ಲೇಖನಗಳನ್ನು ಬರೆದಿದ್ದಾರೆ. ಆದರೆ ಒಂದೂ ಸಂಪುಟ ಪ್ರಕಟವಾಗಿಲ್ಲ.

ಪ್ರಿಯದರ್ಶಿ ಮತ್ತು ಇತರ ಕವನಗಳು (1995) ಒಂದು ಇವರ ಕೃತಿ. ಇದರಲ್ಲಿ ರೋಮಾಂಟಿಕ್ ಸಂಪ್ರದಾಯಕ್ಕೇ ಹತ್ತಿರವಾದವೆಂದು ಹೇಳಬಹುದಾದ 35 ಕವಿತೆಗಳು ಸೇರಿವೆ. 'ಮಾಡರ್ನ್ ಕನ್ನಡ ಲಿಟರೇಚರ್' (1992) ಇವರ ಇನ್ನೊಂದು ಪುಸ್ತಕ, ಇದು ಕೇಂದ್ರ ಸಾಹಿತ್ಯ ಅಕಾಡೆಮಿಗೆ ಸಿದ್ಧಪಡಿಸಿದ ಬರೆಹದ ಸಂಕ್ಷಿಪ್ತ ರೂಪ. ಇವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಕನ್ನಡದಿಂದ ಇಂಗ್ಲಿಷ್‌ಗೆ ಅನೇಕ ಅನುವಾದಗಳನ್ನೂ ಮಾಡಿದ್ದಾರೆ. ಕನ್ನಡ,ಇಂಗ್ಲಿಷ್ ಎರಡೂ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದ ಇವರ ಅನುವಾದಗಳಲ್ಲಿ ಈ ನೆಲದ ಮಣ್ಣಿನ ವಾಸನೆ ನಿಚ್ಚಳವಾಗಿದೆ. ಇವರು 1999 ಜೂನ್ 12 ರಂದು ತಮ್ಮ ಮನೆಯ ಬಳಿಯೇ ಅಪಘಾತಕ್ಕೀಡಾಗಿ ನಿಧನಹೊಂದಿದರು. (ಎಚ್.ಎಂ.ಎನ್.ಎ.)

**ನರಸಿಂಹಯ್ಯ, ಆರ್.ಎಲ್. :** 1902-1969. ಕನ್ನಡ ವಿಜ್ಞಾನ ವಾಙ್ಮಯ ನಿರ್ಮಾಣಕ್ಕೆ ಮಹತ್ತರ ಕೊಡುಗೆಗಳನ್ನು ನೀಡಿದ್ದ ಇವರ ಪೂರ್ಣ ಹೆಸರು ರೊದ್ದಂ ಲಕ್ಷ್ಮೀನರಸಿಂಹಯ್ಯ. ಭೌತವಿಜ್ಞಾನ ಪ್ರಾಧ್ಯಾಪಕ ಮತ್ತು ಸಂಶೋಧಕ. ಜನಪ್ರಿಯ ವಿಜ್ಞಾನ ವಾಙ್ಮಯ ಪ್ರಸಾರಕರು. ಕನ್ನಡದಲ್ಲಿ ಪ್ರೌಢವಿಜ್ಞಾನ ವಿಷಯಗಳ ವಿವರಣೆಗೆ ಅಗತ್ಯವಾದ ಪಾರಿಭಾಷಿಕ ಪದಗಳನ್ನು ಆಯುವಲ್ಲಿ ಹಾಗೂ ಟಂಕಿಸುವಲ್ಲಿ, ಯುಕ್ತವಾದ ಶೈಲಿಯನ್ನು ರೂಪಿಸುವಲ್ಲಿ ಹಾಗೂ ನಿರೂಪಿಸುವಲ್ಲಿ ವಿಶೇಷವಾಗಿ ಶ್ರಮಿಸಿದರು. ಸ್ವತಂತ್ರ ರಚನೆ ಹಾಗೂ ಭಾಷಾಂತರ ಕೃತಿ ಎರಡರಲ್ಲೂ ಉದ್ದಾಮ ವಿಜ್ಞಾನ ಗ್ರಂಥಗಳನ್ನು ರಚಿಸಿ ಕನ್ನಡದಲ್ಲಿ ಉತ್ತಮ ವಿಜ್ಞಾನವಾಙ್ಮಯ ಹೇಗಿರಬೇಕು ಎನ್ನುವುದಕ್ಕೆ ಶಿಷ್ಟ ನಿದರ್ಶನಗಳನ್ನು ಒದಗಿಸಿದರು. ಜನಪ್ರಿಯ ವಿಜ್ಞಾನ ವಿಷಯಗಳ ಮೇಲೆ ಕನ್ನಡದಲ್ಲಿ ಭಾಷಮ ಮಾಡಿ ಜನತೆಯಲ್ಲಿ ವಿಜ್ಞಾನ ಪ್ರಸಾರಕ್ಕೆ ವಿಶೇಷವಾಗಿ ನೆರದರು. ಕನ್ನಡವನ್ನು ವಿಜ್ಞಾನ ಮಾಧ್ಯಮವಾಗಿ ಪಳಗಿಸುವಲ್ಲಿ ಇವರು ನೀಡಿದ ದಿಗ್ದರ್ಶನ ನಿಜಕ್ಕೂ ಅದ್ವಿತೀಯವಾದುದು.

ಇವರು ಬರೆದು ಪ್ರಕಟಿಸಿದ ಶ್ರೇಷ್ಠ ಜನಪ್ರಿಯ ವಿಜ್ಞಾನ ಗ್ರಂಥಗಳ ಪೈಕಿ ಜಗತ್ತುಗಳ ಹುಟ್ಟು, ಸಾವು (1952), ಶಕ್ತಿ (1950) ನಕ್ಷತ್ರ ದರ್ಶನ (1954) ಇವನ್ನು ಹೆಸರಿಸಬೇಕು. ಇವರು ಅನುವಾದ ಮಾಡಿರುವ ಗ್ರಂಥಗಳ ಪೈಕಿ ರಿಖ್ಟ್ ಮೆಯರ್ ಮತ್ತು ಕೆನಾರ್ಡ್ ರಚಿತ ಇಂಟ್ರಡಕ್ಷನ್ ಟು ಮೋಡರ್ನ್ ಫಿಸಿಕ್ಸ್ (ಆಧುನಿಕ ಭೌತವಿಜ್ಞಾನ ಪರಿಚಯ). ರಿಚೀ ಕಾಲ್ಡರ್ ರಚಿತ ಸೈನ್ಸ್ ಮೇಕ್ಸ್ ಸೆನ್ಸ್ (ವಿಜ್ಞಾನ ಬುದ್ಧಿಗಮ್ಯ) ಸೇರಿವೆ. ಇವರ ಒಟ್ಟು ಪ್ರಕಟಿತ ಗ್ರಂಥಗಳು ಹತ್ತು. ಪ್ರಕಟಿತ ಲೇಖನಗಳು ಮೂವತ್ತೈದು. ಇವರು ಸ್ವಂತವಾಗಿ ಹಾಗೂ ಇತರರೊಡನೆ ಸೇರಿ ಬರೆದ ಸಂಶೋಧನ ಪ್ರಬಂಧಗಳು ಹನ್ನೊಂದು. ಇವು ಭೌತವಿಜ್ಞಾನದ ವಿವಿಧ ಪ್ರಕಾರಗಳ ಮೇಲೆ ಇಂಗ್ಲಿಷಿನಲ್ಲಿ ಬರೆದಂಥವು.

ಸಂಶೋಧನ ಕ್ಷೇತ್ರದಲ್ಲಿ ಇವರಿಗೆ ಅಪಾರಾಸಕ್ತಿ ಇತ್ತು. ರೇಡಿಯೊ ಎಂಜಿನಿಯರಿಂಗ್, ನಿಸ್ತಂತುಶಾಸ್ತ್ರ, ಜೀವಭೌತವಿಜ್ಞಾನದ ಕೆಲವು ಶಾಖೆಗಳು ಈ ಕ್ಷೇತ್ರಗಳಲ್ಲಿ ಇವರು ಉತ್ತಮ ಸಂಶೋಧಕರ ಒಂದು ಸಂಕುಲವನ್ನೇ ಕಟ್ಟಿ ಬೆಳೆಸಿದ್ದಾರೆ. ವಿದ್ಯಾರ್ಥಿಗಳಿಗೆ ಇವರು ಪ್ರೀತಿಯ ಆರ್‌ಎಲ್.ಎನ್. ಎಂದೇ ಪರಿಚಿತರು.

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಜನಿಸಿದ ಇವರು ಪ್ರೌಢ ಶಾಲಾ ಶಿಕ್ಷಣವನ್ನು ತುಮಕೂರಿನಲ್ಲಿ ಪಡೆದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎಸ್.ಸಿ. ಪದವಿ ಗಳಿಸಿದರು 1923. ಮೂರು ವರ್ಷಕಾಲ ಶಾಲಾಧ್ಯಾಪಕರಾಗಿ ಅಂದಿನ ಮೈಸೂರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ದುಡಿದರು. ಭೌತವಿಜ್ಞಾನದಲ್ಲಿ ಉನ್ನತಾಧ್ಯಯನ ಮಾಡುವ ಉದ್ದೇಶದಿಂದ ಅಲಹಾಬಾದಿಗೆ ತೆರಳಿ ವಿಖ್ಯಾತ ವಿಜ್ಞಾನಿ ಮೇಘನಾದ ಸಹಾ ಅವರ ಶಿಷ್ಯತ್ವದಲ್ಲಿ ಎಂ.ಎಸ್‌ಸಿ. ಪದವೀಧರರಾದರು (1927). ಮುಂದಿನ ಸುಮಾರು ಎರಡು ವರ್ಷಗಳ ಕಾಲ ಪ್ರೌಢಶಾಲಾಧ್ಯಾಪಕರಾಗಿ ದುಡಿದು 1929ರಲ್ಲಿ ಸೆಂಟ್ರಲ್ ಕಾಲೇಜಿನ ಭೌತವಿಜ್ಞಾನ ವಿಭಾಗದಲ್ಲಿ ಅಧ್ಯಾಪಕರಾಗಿ ನೇಮಕಗೊಂಡು 1958ರಲ್ಲಿ ಆ ಹುದ್ದೆಯಿಂದ ನಿವೃತ್ತರಾಗುವ ತನಕವೂ ಅಲ್ಲಿಯೇ ಇದ್ದು ಸೆಂಟ್ರಲ್ ಕಾಲೇಜ್ ಭೌತವಿಜ್ಞಾನ ವಿಭಾಗವೆಂದರೆ ಆರ್‌ಎಲ್‌ಎನ್ ಎನ್ನುವಷ್ಟರ ಮಟ್ಟಿಗೆ ಕೀರ್ತಿಭಾಜನರಾದರು. ಅದರೆ ಇವರ ವಿದ್ವತ್ತು, ಸೇವೆ, ಬೋಧನ ಹಾಗೂ ಸಂಶೋಧನ ಸಾಮರ್ಥ್ಯ ಮುಂತಾದ ಗುಣಗಳಿಗೆ ಅನುಗುಣವಾದ ಬಡ್ತಿ ಉತ್ಕರ್ಷಗಳು ವೃತ್ತಿಜೀವನದಲ್ಲಿ ಇವರಿಗೆ ದೊರೆಯಲಿಲ್ಲ.

ಇವರು ನಿವೃತ್ತಿಯ ಅನಂತರ ಅನೇಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು. ಆಗತಾನೇ ರೂಪುಗೊಳ್ಳುತ್ತಿದ್ದ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕ, ವಿಶ್ವೇಶ್ವರಯ್ಯ ಔದ್ಯಮಿಕ ಮತ್ತು ತಾಂತ್ರಿಕ ಸಂಗ್ರಹಾಲಯದಿ್ಲ ವಿಶೇಷ ಸಲಹೆಗಾರ, ಬೆಂಗಳೂರಿನ ನ್ಯಾಶನಲ್ ಹಾಗೂ ಆಚಾರ್ಯ ಪಾಠಶಾಲಾ ಕಾಲೇಜುಗಳಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟಿನ ಪರಿಷ್ಕರಣ ಸಮಿತಿಯ ಸದಸ್ಯರಾಗಿ ದುಡಿದರು.

ಎಂ.ಎಸ್‌ಸಿ. ಅಧ್ಯಯನದ ವೇಳೆ ಇವರು ನಿಸ್ತಂತುಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ಪಡೆದಿದ್ದರು. ಈ ಶಾಸ್ತ್ರವನ್ನು ಇವರು ವಿದ್ಯಾರ್ಥಿಗಳಿಗೆ ಪಾಂಡಿತ್ಯಪೂರ್ಣವಾಗಿ ವಿವರಿಸಿ ಕುತೂಹಲ ಮೊಳೆಸುತ್ತಿದ್ದರು. ಬೆಂಗಳೂರಿನ ಜಯಚಾಮರಾಜೇಂದ್ರ ವೃತ್ತಿಶಿಕ್ಷಣಶಾಲೆಯಲ್ಲಿ ಹದಿನೈದು ವರ್ಷಗಳ ಕಾಲ (1945-60) ಇವರು ರೇಡಿಯೊ ಎಂಜಿನಿಯರಿಂಗ್ ಶಾಸ್ತ್ರವನ್ನು ಪಾಠಮಾಡಿದರು. 1954ರಲ್ಲಿ ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಆಗ ಇವರು ಈ ಸಂಸ್ಥೆಯ ಜೀವಭೌತವಿಜ್ಞಾನ ವಿಭಾಗದಲ್ಲಿ ಬೋಧಕರಾಗಿಯೂ ಎಲೆಕ್ಟ್ರೊಎನ್ಸೆಫಲೊಗ್ರಾಫ್ ಯಂತ್ರದ ಮೇಲ್ವಿಚಾರಕರಾಗಿಯೂ ಸೇವೆಸಲ್ಲಿಸಿದರು.

ಇವರದು ಅನನುಕರಣೀಯ ಜೀವನ. ತೀಕ್ಷ್ಣಬುದ್ಧಿಶಕ್ತಿ. ಆಳವಾದ ಪಾಂಡಿತ್ಯ. ಸಿದ್ಧಲೇಖನ, ಕಲೆ, ಉತ್ತಮ ಕಲಾಭಿಜ್ಞತೆ, ವೈಯಕ್ತಿಕ ಜೀವನದಲ್ಲಿ ಚಾರಿತ್ರ್ಯ, ಪ್ರಾಮಾಣಿಕತೆ, ವ್ಯವಹಾರದಲ್ಲಿ ಸ್ನೇಹಪರತೆ ಇವೆಲ್ಲವನ್ನೂ ಒಬ್ಬ ವ್ಯಕ್ತಿಯಲ್ಲಿ ಕಾಣುವುದು ದುರ್ಲಭ. ನರಸಿಂಹಯ್ಯನವರು ಅಂಥ ವ್ಯಕ್ತಿ ಆಗಿದ್ದರು.

**ನರಸಿಂಹಯ್ಯ, ಎಚ್. :** 1920- . ಸುಪ್ರಸಿದ್ಧ ಶಿಕ್ಷಣ ತಜ್ಞ, ವಿಚಾರವಾದಿ, ಸ್ವಾತಂತ್ರ್ಯಹೋರಾಟಗಾರ ಮತ್ತು ಅಪ್ಪಟ ಗಾಂಧೀವಾದಿ. ಡಾ.ಎಚ್.ಎನ್. ಎಂದೇ ಚಿರಪರಿಚಿತರು. ಕೋಲಾರ ಜಿಲ್ಲೆ ಗೌರೀಬಿದನೂರು ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 1920 ಜೂನ್ 6 ರಂದು ಜನಿಸಿದರು. ತಂದೆ ಹನುಮಂತಪ್ಪ, ತಾಯಿ ವೆಂಕಟಮ್ಮ.

ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಹೊಸೂರಿನಲ್ಲಿ ಮುಗಿಸಿ ಪ್ರೌಢಶಾಲಾ ಶಿಕ್ಷಣಕ್ಕೆಂದು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಸೇರಿದರು (1935). 1942 ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರ ಪರಿಣಾಮವಾಗಿ ಬೆಂಗಳೂರು, ಮೈಸೂರು ಮತ್ತು ಪುಣೆಯ ಯರವಾಡ ಜೈಲಿನಲ್ಲಿ ಒಟ್ಟು ಸುಮಾರು 9 ತಿಂಗಳ ಕಾರಾಗೃಹವಾಸ ಅನುಭವಿಸಿದರು. ಇದರಿಂದಾಗಿ ಎರಡು ವರ್ಷಗಳ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ. ಅನಂತರ ವಿದ್ಯಾಭ್ಯಾಸ ಮುಂದುವರಿಸಿ ಭೌತಶಾಸ್ತ್ರದ ಬಿ.ಎಸ್ಸಿ ಆನರ್ಸ್ ಮತ್ತು ಎಂ.ಎಸ್ಸಿ. ಪದವಿಗಳನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಪಡೆದರು. 1946 ರಲ್ಲಿ ಬೆಂಗಳೂರು ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿ ಸೇರಿ, ಪ್ರಾಧ್ಯಾಪಕರಾಗಿ ಹನ್ನೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅನಂತರ ಅದೇ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅಮೆರಿಕದ ಓಹಿಯೊ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ನ್ಯೂಕ್ಲಿಯರ್ ಫಿಸಿಕ್ಸ್‌ನಲ್ಲಿ ಡಾಕ್ಟರೇಟ್ ಪದವಿ ಗಳಿಸಿದ (1957 - 60) ಇವರು ಸದರನ್ ಇಲಿನಾಯ್ಸ್ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷಕಾಲ (1967 - 68) ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನೇಮಕಗೊಂಡು ವಿಶ್ವವಿದ್ಯಾಲಯದ ಪುರೋಭಿವೃದ್ಧಿಗೆ

ಶ್ರಮಿಸಿದ್ದಾರೆ (1972 - 77). 1975 ರಿಂದ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷರಾಗಿದ್ದಾರೆ. ತಮ್ಮ ಜೀವನದ ಬಹುಭಾಗವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟ ಇವರು ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಕಾರಣರಾಗಿದ್ದಾರೆ. ಗೌರೀಬಿದನೂರು ಮತ್ತು ಬಾಗೇಪಲ್ಲಿಯಲ್ಲಿ ನ್ಯಾಷನಲ್ ಕಾಲೇಜುಗಳು, ಹೊಸೂರು, ಯಲ್ದೂರು, ಮುಡಿಯನೂರು, ಸುಬ್ರಹ್ಮಣ್ಯಪುರಗಳಲ್ಲಿ ನ್ಯಾಷನಲ್ ಹೈಸ್ಕೂಲುಗಳ ಸ್ಥಾಪನೆಯಿಂದಾಗಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ದೊರಕುವಂತೆ ಮಾಡಿದ್ದಾರೆ.

ಇವರಿಗೆ ವಿಜ್ಞಾನದಲ್ಲಿ ಅಚಲವಾದ ನಂಬಿಕೆ. ಶೂನ್ಯದಿಂದ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ: ಮೌಢ್ಯದ ವಿರುದ್ಧ ಸತತ ಹೋರಾಟ ಅಗತ್ಯ. ಜನರ ಅಜ್ಞಾನವನ್ನು ಬಂಡವಾಳವನ್ನಾಗಿಸಿಕೊಂಡು ಶೋಷಣೆ ಮಾಡುವವರ ವಿರುದ್ಧ ಹೋರಾಟ ಮಾತ್ರವಲ್ಲ ಅಂಥವರ ಪೊಳ್ಳುತನವನ್ನು ಬಯಲಿಗೆಳೆಯಬೇಕು ಹಾಗೂ ಅವರ ಹಿಡಿತದಿಂದ ಮುಗ್ಧ ಜನತೆಯನ್ನು ರಕ್ಷಿಸಬೇಕೆಂದು ಇವರ ನಿಲವು. ಬೆಂಗಳೂರು ಸೈನ್ಸ್ ಫೋರಂ ಎಂಬುದು ವಿಜ್ಞಾನದ ಮಹತ್ವವನ್ನು ಪರಿಚಯಿಸಲೆಂದು ಹುಟ್ಟಿಕೊಂಡ ಇವರ ಮತ್ತೊಂದು ಸಂಸ್ಥೆ. ಎಚ್.ಎನ್. ಇದರ ಸಂಸ್ಥಾಪಕ ಅಧ್ಯಕ್ಷರು (1962 ರಿಂದ). ಬುದ್ಧ, ಐನ್‌ಸ್ಟೈನ್, ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧೀ, ನೆಹರು ಇವರ ತತ್ತ್ವಗಳಿಂದ ಪ್ರಭಾವಿತರಾಗಿರುವ ಇವರು ಕೆಲಕಾಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು (1995). ಸಂಗೀತ, ನಾಟಕ, ನೃತ್ಯ ಮುಂತಾದ ಲಲಿತಕಲೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಬೆಂಗಳೂರಿನ ಲಲಿತಕಲಾಪರಿಷತ್ತನ್ನು ಸ್ಥಾಪಿಸಿದರಲ್ಲದೆ (1962) ಅದರ ಅಧ್ಯಕ್ಷರಾಗಿಯೂ ಮುಂದುವರಿದಿದ್ದಾರೆ.

ತೆರೆದಮನ ಮತ್ತು ಹೋರಾಟದ ಹಾದಿಯಲ್ಲಿ - ಇವು ಇವರ ಪ್ರಮುಖ ಬರೆಹಗಳು. ಇವಲ್ಲದೆ ಅನೇಕ ವಿಚಾರಪೂರಿತ ಹಾಗೂ ಹಾಸ್ಯಭರಿತ ಬಿಡಿಲೇಖನಗಳು ಕನ್ನಡ ಹಾಗೂ ಇಂಗ್ಲಿಷಿನಲ್ಲಿ ಪ್ರಕಟಗೊಂಡಿವೆ. 'ತೆರೆದಮನ' ವಿಚಾರ, ನೆನಪುಗಳ ಹಾಗೂ ಲಲಿತ ಪ್ರಬಂಧಗಳ ಸಂಕಲನವಾಗಿದ್ದು ಕನ್ನಡ ವಿಚಾರ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆಯಾಗಿದೆ. ಇದನ್ನು ವಿಚಾರವಾದಿಗಳ ಬೈಬಲ್ ಎಂದೂ ಕರೆಯಲಾಗಿದೆ. 'ಹೋರಾಟದ ಹಾದಿಯಲ್ಲಿ' ಇವರ ಆತ್ಮಕಥೆ.

ಇವರು ಕರ್ನಾಟಕ ವಿಧಾನ ಪರಿಷತ್ತಿನ ನಾಮಕರಣ ಸದಸ್ಯರಾಗಿದ್ದರು (1980 - 86). ಇವರಿಗೆ ಹಲವು ಪ್ರಶಸ್ತಿ ಗೌರವಗಳು ಸಂದಿವೆ. ಪದ್ಮಭೂಷಣ (1984), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1968), ಸ್ವಾತಂತ್ರ್ಯ ಚಳವಳಿಯಲ್ಲಿ ಬಾಗವಹಿಸಿದ್ದಕ್ಕೆ ನೀಡಿದ ತಾಮ್ರಪತ್ರ (1973), ಗುಲ್ಬರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (1988), ದೇವರಾಜ್ ಅರಸು ಪ್ರಶಸ್ತಿ (1994), ಅಮೆರಿಕದಲ್ಲಿ ಇರುವ ಪ್ರಕೃತ್ಯತೀತ ಘಟನೆಗಳ ಸಮಿತಿಯ ಫೆಲೋ (ಕಮಿಟಿ ಫಾರ್ ದಿ ಸೈಂಟಿಫಿಕ್ ಇನ್ವೆಸ್ಟಿಗೇಶನ್ ಕ್ಲೈಮ್ಸ್ ಆಫ್ ದಿ ಪಾರಾನಾರ್ಮಲ್) ಇವು ಮುಖ್ಯವಾದವು. 2004ರ ದಸರಾ ಮಹೋತ್ಸವದ ಉದ್ಘಾಟನೆ ಮಾಡುವ ಗೌರವಕ್ಕೆ ಶ್ರೀಯುತರು ಪಾತ್ರರಾಗಿದ್ದಾರೆ. (ಎಸ್.ಎನ್.ಜಿ.)

**ನರಸಿಂಹಯ್ಯ, ಎನ್. :** 1925 . ಕನ್ನಡದ ಪತ್ತೇದಾರಿ ಕಾದಂಬರಿಗಳ ಜನಪ್ರಿಯ ಲೇಖಕ. 1925 ಸೆಪ್ಟಂಬರ್ 18 ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಜಿ.ನಂಜಪ್ಪ, ತಾಯಿ ಎಲ್ಲಮ್ಮ. ಇವರ ಮನೆತನ ಮೂಲತಃ ಚಿತ್ರದುರ್ಗ, ಇವರ ತಂದೆ ಲೇಖನಸಾಮಗ್ರಿ ಅಂಗಡಿ ನಡೆಸುತ್ತಿದ್ದರು. ನರಸಿಂಹಯ್ಯನವರು ನಾಲ್ಕನೆಯ ಇಯತ್ತೆಯಲ್ಲಿದ್ದಾಗ ತಂದೆ ತೀರಿಕೊಂಡರು. ಇವರು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಇವರು ಸುಲ್ತಾನಪೇಟೆಯ ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದಾಗ ಚಿಕ್ಕಪ್ಪನೂ ತೀರಿಕೊಂಡರು. ಬೇರೆ ದಾರಿಯಿಲ್ಲದೆ ತಾಯಿಯ ತೌರುಮನೆಯಾದ ಚಿಕ್ಕಮಗಳೂರಿಗೆ ಹೋಗಬೇಕಾಯಿತು. ಬಡತನದಿಂದಾಗಿ ಇವರು ದರ್ಜಿಯ ಕೆಲಸಕ್ಕೆ ಸೇರಿಕೊಂಡರು. ಅದೇ ಸಮಯದಲ್ಲಿ ಇಂಡಸ್ಟ್ರೀಯಲ್ ಶಾಲೆಯಲ್ಲಿ ಓದಿದರು. ತಾಯಿಯ ಜೊತೆಗೆ ಇವರೂ ಕೂಲಿಕೆಲಸಕ್ಕೆ ಹೋಗುತ್ತಿದ್ದರು. ಮುಂದೆ ಇವರು ಹಲವಾರು ಖಾಸಗಿ ಸಾರಿಗೆ ಸಂಸ್ಥೆಗಳಲ್ಲಿ ಮೋಟರ್ ಒರಸುವುದು ಮುಂತಾದ ಕೆಲಸ ಮಾಡಿ, ಪ್ರಥಮ ಚಿಕಿತ್ಸೆಯ ತರಬೇತಿ ಪಡೆದು ಬಸ್ ನಿರ್ವಾಹಕರಾದರು.

ಚಿಕ್ಕಮಗಳೂರಿನಲ್ಲಿ ಹಾವೇರಿಯ ನಾಗರತ್ನಮ್ಮ ಅವರೊಂದಿಗೆ ಇವರ ಮದುವೆಯಾದ ಅನಂತರ (1947). 1948 ರ ಡಿಸೆಂಬರ್‌ನಲ್ಲಿ ಸಂಸಾರ ಸಮೇತ ಬೆಂಗಳೂರಿನಲ್ಲಿ ನೆಲಸಿದರು. ಮೊದಲಿನಿಂದಲೂ ಓದುವ ಹವ್ಯಾಸ ಬೆಳೆಸಿಕೊಂಡಿದ್ದ ಇವರು ಟಿ.ನಾರಾಯಣ ಅಯ್ಯಂಗಾರ್ ಎಂಬ ಹಿತೈಷಿಗಳನ್ನು ಕಂಡು ಪುಸ್ತಕ ಬರೆಯುವ ಆಸೆ ವ್ಯಕ್ತಪಡಿಸಿದರು. ನರಸಿಂಹಯ್ಯನವರ ತಂದೆಯೂ ಗ್ರಂಥ ರಚಿಸುತ್ತಿದ್ದರು. ಅವರ ಕೆಲವು ಗ್ರಂಥಗಳು ಪ್ರಕಟವಾಗಿವೆ. ನರಸಿಂಹಯ್ಯನವರ ಅಜ್ಜ ಆಶುಕವಿಗಳಾಗಿದ್ದರು. ನರಸಿಂಹಯ್ಯನವರು ಮೊದಲಿಗೆ ಯಾವ ಪ್ರತಿಫಲವೂ ಇಲ್ಲದೆ ಒಂಬತ್ತು ಪುಸ್ತಕಗಳನ್ನು ಬರೆದುಕೊಟ್ಟರು. ಇವು ನರಸಿಂಹಯ್ಯನವರಿಗೆ ಜನಪ್ರಿಯತೆ ದೊರಕಿಸಿಕೊಟ್ಟವು.

1952 ರಲ್ಲಿ ಬರೆಯಲು ಪ್ರಾರಂಭಿಸಿದ ನರಸಿಂಹಯ್ಯನವರು 1981 ರ ವರೆಗೆ 520 ಕೃತಿಗಳನ್ನು ರಚಿಸಿದರು. ಅದರಲ್ಲಿ ಪತ್ತೇದಾರಿ ಕಾದಂಬರಿಗಳು 450. ಇವಲ್ಲದೆ ಸಾಮಾಜಿಕ ಕಾದಂಬರಿಗಳು, ಹರಟೆಗಳು, ಐತಿಹಾಸಿಕ ಕಾದಂಬರಿಗಳೂ ಇವೆ. ಇವರು ಬರೆದ ಭಯಂಕರ ಭೈರಾಗಿ ಎಂಬ ಕೃತಿ ಎಂಟು ಮುದ್ರಣಗಳನ್ನು ಕಂಡಿದೆ. ಅದರ 35,000 ಪ್ರತಿಗಳು ಮಾರಾಟವಾಗಿವೆ. ಇವರ ಪತ್ತೇದಾರರು ಮೂವರು: ಪುರುಷೋತ್ತಮ, ಮಧುಸೂದನ ಮತ್ತು ಅರಿಂಜಯ. ನರಸಿಂಹಯ್ಯನವರ ಎಲ್ಲ ಪತ್ತೇದಾರಿ ಕಾದಂಬರಿಗಳಲ್ಲಿ ಇವರೇ ಕಾಣಿಸಿಕೊಳ್ಳುತ್ತಾರೆ. ಅಪರಾಧ ಪತ್ತೆ ಕಾರ್ಯದಲ್ಲಿ ತೊಡಗುತ್ತಾರೆ.

ಚೋರ ಚಕ್ರವರ್ತಿ, ಪಂಚರಂಗಿ ಪದ್ಮಿನಿ, ಪತ್ತೇದಾರನ ಪರಾಜಯ, ಮಾಯಾವಿ ಮಧುಸೂದನ, ಮಾಯವಾದ ಮಹಾರಾಣಿ, ಕಾಳರಾತ್ರಿಯ ಖದೀಮ, ಮೋಜಿನ ಮೋಹನಾಂಗಿ, ಭಯಂಕರ ಭೂತ, ಮಳೆಯಾಳಿ ಮಾಂತ್ರಿಕ, ಮುಂಬಯಿ ದಗಾಕೋರ, ಪಂಜರದ ಪಿಶಾಚಿ, ಮಾಟಗಾತಿಯ ಮಗಳು, ಭಯಂಕರ ಭವಾನಿ, ಮಾಂತ್ರಿಕನ ಕೈಗೊಂಬೆ, ಪಂಜುಳ್ಳಿ ಪಿಶಾಚಿ, ಭಯಂಕರ ಪಿಶಾಚಿ ಮೊದಲಾದ ಇವರ ಅನೇಕ ಪತ್ತೇದಾರಿ ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿವೆ.

ಇವಲ್ಲದೆ ಗಿಳಿ ಕಚ್ಚಿದ ಹಣ್ಣು, ಅತ್ತೆ ಮನೆಯ ಅಳಿಯ, ಪುರೋಹಿತನ ಮಗಳು, ತುಪ್ಪದ ಬಿಂದಿಗೆ, ಗರತಿಯಾದ ಸೂಳೆ, ಬಂಜೆಯ ಮಗಳು, ಹುಳು ಕೊರೆದ ಹೂ, ವೇದ ಓದಿದ ಕೋಣ, ರಾಜ ಮೆಚ್ಚಿದ ರಂಬೆ ಮುಂತಾದ ಐವತ್ತು ಸಾಮಾಜಿಕ ಕಾದಂಬರಿಗಳನ್ನೂ ವೀರದಳವಾಯಿ ಎಂಬ ಐತಿಹಾಸಿಕ ಕಾದಂಬರಿಯನ್ನೂ ಬರೆದಿದ್ದಾರೆ. ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗದ ಮಾದರಿಯಲ್ಲಿ ಇವರು ಬರೆದಿರುವ ಚತುಷ್ಪದಿಗಳ ಸಂಗ್ರಹ 'ಬೊಮ್ಮನ ಬುರುಡೆ'. ನರಸಿಂಹಯ್ಯನವರು ಸಾಮಾನ್ಯ ಜ್ಞಾನಾರ್ಜನೆಗೆ ಬೇಕಾದ ಪುಸ್ತಕಗಳನ್ನೂ ಹಾಸ್ಯ ಚಟಾಕಿಗಳ ಸಂಗ್ರಹವನ್ನೂ ಬರೆದಿದ್ದಾರೆ. ಇವರ ಆತ್ಮಕಥೆಯ ಹೆಸರು 'ನೋವು ನಲಿವು'.

ಇವರ ಅಂತರಿಕ್ಷದಲ್ಲಿ ಅರಿಂಜಯ ಎಂಬ ಕಾದಂಬರಿಗೆ ವೀರೇಂದ್ರಹೆಗಡೆ ಚಿನ್ನದ ಪದಕ ದೊರೆತಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1997), ಕರ್ನಾಟಕ ಪತ್ರಿಕಾ ಅಕಾಡೆಮಿ ಮತ್ತು ಸಾಹಿತ್ಯ ಮಿತ್ರವೃಂದದ ಸಾಹಿತ್ಯರತ್ನ ಪ್ರಶಸ್ತಿಗಳು ಇವರಿಗೆ ಸಂದಿವೆ. ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರಿಗೆ ಪತ್ತೇದಾರಿ ಕಾದಂಬರಿಕಾರ ಪ್ರಶಸ್ತಿ ನೀಡಿ ಗೌರವಿಸಲಾಯಿತು (1992). ಅನೇಕ ಸಂಘ ಸಂಸ್ಥೆಗಳು ಇವರ ಕನ್ನಡ ಸೇವೆಯನ್ನು ಗುರುತಿಸಿ ಗೌರವಿಸಿವೆ. (ಎಸ್.ಎಂ.ಕೆ.)

**ನರಸಿಂಹಯ್ಯ, ಸಿ.ಡಿ. :** 1921- . ಭಾರತೀಯ ಇಂಗ್ಲಿಷ್‌ನ ಪ್ರಸಿದ್ಧ ಲೇಖಕರು. ಇಂಗ್ಲಿಷ್ ಸಾಹಿತ್ಯ ಬೋಧನೆ ಹಾಗೂ ಖಚಿತ ವಿಮರ್ಶಾ ನಿಲವುಗಳಿಂದ ಭಾರತೀಯ ಸಾಹಿತ್ಯ ವಲಯದಲ್ಲಿ ಸಿಡಿಎನ್

ಎಂದೇ ಖ್ಯಾತರಾದ ಇವರು ಬೆಂಗಳೂರಿನ ಸಮೀಪದ ರಾಮನಗರದಲ್ಲಿ (ಹಿಂದಿನ ಕ್ಲೋಸ್‌ಪೇಟೆ) 1921 ಮೇ ತಿಂಗಳಿನಲ್ಲಿ ಜನಿಸಿದರು. ಮೈಸೂರು ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ವ್ಯಾಸಂಗ ಮುಗಿಸಿ ಅನಂತರದಲ್ಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಯಲದಲ್ಲಿ ರಾಕ್‌ಫೆಲ್ಲರ್ ಶಿಷ್ಯವೇತನ ಪಡೆದುಕೊಂಡರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿ 1950 - 79 ರವರೆಗೆ ಸೇವೆ ಸಲ್ಲಿಸಿದರು. 1957 - 62 ರ ವರೆಗೂ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ನಿವೃತ್ತಿಯಾದ ಬಳಿಕ ಇಂಗ್ಲಿಷ್ ಸಾಹಿತ್ಯ ಹಾಗೂ ಸಂಸ್ಕೃತಿ, ಕಲೆಯ ಅಧ್ಯಯನ ಕೇಂದ್ರ ಸಂಸ್ಥೆಯಾದ ತಾವೇ ಸ್ಥಾಪಿಸಿದ ಧ್ವನ್ಯಾಲೋಕದ ನಿರ್ದೇಶಕರಾಗಿದ್ದಾರೆ.

ಇಂಗ್ಲಿಷ್ ಸಾಹಿತ್ಯದ ಅಧ್ಯಯನಕ್ಕೆ ಸಿಡಿಎನ್ ಅವರ ಕೊಡುಗೆ ಅಪಾರ. ಜೊತೆಗೇ ಇವರ ಪ್ರಭಾವಯುತ ಸಾಹಿತ್ಯ ಗರಡಿಯಲ್ಲಿ ಪಳಗಿದ ಅನೇಕ ಸಾಹಿತಿಗಳು ಕನ್ನಡ ಸಾಹಿತ್ಯದಲ್ಲಿ 'ನವ್ಯ' ಕ್ರಾಂತಿಯನ್ನು ತಂದವರೆಂದರೆ ಅತಿಶಯೋಕ್ತಿಯಾಗಲಾರದು. ಎ.ಕೆ.ರಾಮಾನುಜನ್, ಯು.ಆರ್. ಅನಂತಮೂರ್ತಿ, ಪಿ.ಲಂಕೇಶ್ ಮೊದಲಾದವರು ಸಿಡಿಎನ್ ಅವರ ಪ್ರಭಾವಕ್ಕೆ ಒಳಗಾದವರೇ. ಸಿಡಿಎನ್ ಅವರು ತಮ್ಮ ವ್ಯಕ್ತಿತ್ವ ವಿಕಾಸ ಹೊಂದಲು ಪುಟವಿಟ್ಟಿದ್ದು ಕೇಂಬ್ರಿಡ್ಜ್‌ನಲ್ಲಿ ಹೆಸರಾಂತ ವಿಮರ್ಶಕ ಎಫ್.ಆರ್. ಲೀವಿಸ್‌ನ ಕೈಕೆಳಗಿನ ಶಿಷ್ಯವೃತ್ತಿ, "ಸಾಹಿತ್ಯವೆಂದರೆ ಜೀವನದ ಬಿಂಬಮಾತ್ರವಷ್ಟೇ ಅಲ್ಲ, ಅದು ಜೀವನವೇ - ಸಾಹಿತ್ಯದ ಏಕೈಕ ಮಾನದಂಡವೆಂದರೆ ಜೀವನವೇ - ಹಾಗಾಗಿ ಕಠೋರವೆನಿಸಿದರೂ ವಸ್ತುನಿಷ್ಠ ಹಾಗೂ ಸತ್ಯನಿಷ್ಠ ಮಾನದಂಡಗಳನ್ನು ವೃತ್ತಿ ಜೀನದಲ್ಲಿ ಅಳವಡಿಸುತ್ತ ಸಾಗಬೇಕು. ಮಾನವ, ಶಾಶ್ವತ ಮೌಲ್ಯಗಳು ಸರ್ವಕಾಲಿಕವಾಗಿರುತ್ತವೆ. ಅವನ್ನು ಅರ್ಥೈಸಿಕೊಳ್ಳುವುದು, ಅಳವಡಿಸುವುದು ನಮ್ಮ ಜವಾಬ್ದಾರಿ" - ಇವು ಲೀವಿಸ್‌ನ ನಿಲುವು. ಅವೆಲ್ಲವನ್ನೂ ಜೀರ್ಣಿಸಿಕೊಂಡು ಸಿಡಿಎನ್ ಅದೇ ರೀತಿ ಜೀವನ ನಡೆಸಿದವರು. ಸಂದೇಹ, ಪೂರ್ವಾಗ್ರಹ ಪೀಡಿತ ಓದುಗನನ್ನೂ ಕೂಡ ಕೃತಿಯನ್ನು ಕೂಲಂಕುಶವಾಗಿ ನೋಡುವಂತೆ ಮಾಡುವ ಕರ್ತವ್ಯ ವಿಮರ್ಶಕನದ್ದು - ಇದು ಸಿಡಿಎನ್ ಅವರ ನಿಲುವು.

ಅಮೆರಿಕದ ಹಾಗೂ ಕಾಮನ್‌ವೆಲ್ತ್ ಸಾಹಿತ್ಯದಂತಹ, ಹೆಚ್ಚು ಮರೆಯಲ್ಲಿಯೇ ಉಳಿದುಬಿಟ್ಟಂತಹ ಸಾಹಿತ್ಯಗಳತ್ತ ಸಿಡಿಎನ್ ಗಮನ ಹರಿಸಿ ಭಾರತದ ವಿದ್ವಾಂಸರ ಗಮನ ಸೆಳೆಯುವಲ್ಲಿ ಸಫಲರಾದರೂ ಅವರ ಬಹುಪಾಲು ಕಾರ್ಯಕ್ಷೇತ್ರ ಭಾರತದ ಇಂಗ್ಲಿಷ್ ಸಾಹಿತ್ಯದ ಮೇಲೆಯೇ. ಈ ನಿಟ್ಟಿನಲ್ಲಿ ಇವರ ಮೇರು ಕೃತಿ 'ದಿ ಸ್ವಾನ್ ಅಂಡ್ ದಿ ಈಗಲ್' (1969). ಗರುಡದಂತಹ ದೂರದೃಷ್ಟಿ ಹಾಗೂ ಹಂಸದಂತಹ ಕ್ಷೀರ ನ್ಯಾಯದಂತಿರಬೇಕು. ವಿಮರ್ಶೆಯೆಂಬುದು ಸಿಡಿಎನ್ ಅವರ ಕೃತಿಯ ಶೀರ್ಷಿಕೆಯಲ್ಲೇ ಎದ್ದು ಕಾಣುತ್ತದೆ. ಇದರಲ್ಲೂ ಹಾಗೂ ಇನ್ನಿತರ ಕೃತಿಯಲ್ಲೂ ಸಿಡಿಎನ್ ಅವರಿಗೆ ಪಂಡಿತ್ ನೆಹರೂರವರ ಬರೆವಣಿಗೆಯ ಮೇಲಿನ ಅಭಿಮಾನ ಅಪಾರ. ಇದೇ ಕೃತಿಯಲ್ಲಿ ಭಾರತೀಯ ಇಂಗ್ಲಿಷ್ ಕಾದಂಬರಿಲೋಕದ ದಿಗ್ಗಜರಾದ ರಾಜಾರಾವ್, ಮುಲ್ಕ್‌ರಾಜ್ ಆನಂದ್ ಹಾಗೂ ಆರ್.ಕೆ.ನಾರಾಯಣ್‌ರವರ ವೈಯಕ್ತಿಕ ಸಾಧನೆಗಳತ್ತ ಲೇಖನಿ ಹರಿಸಿ, ಅವರ ಮೌಲ್ಯಮಾಪನ ಮಾಡುವುದರಲ್ಲಿ ಯಶಸ್ವಿಯಾದರು.

ರಾಜಾರಾವ್ ಅವರ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವಲ್ಲಿ ಸಿಡಿಎನ್ ಅವರ ಕೃಷಿ ಅಪರೂಪವಾದದ್ದು. ರಾಜಾರಾವ್‌ರ ಮೊದಲ ಕಾದಂಬರಿ ಕಾಂತಪುರದಿಂದ ಹಿಡಿದು ದಿ ಸರ್‌ಪೆಂಟ್ ಅಂಡ್ ದಿ ರೋಪ್, ದಿ ಕ್ಯಾಟ್ ಅಂಡ್ ಶೇಕ್ಸ್‌ಪಿಯರ್ ಅಂತಹ ಅತ್ಯಂತ ಕ್ಲಿಷ್ಟವಾದ ತಾತ್ವಿಕ ದೃಷ್ಟಿಯುಳ್ಳ ಕಾದಂಬರಿಯನ್ನೂ ಸಿಡಿಎನ್ ಎಳೆಎಳೆಯಾಗಿ ಬಿಡಿಸಿ ಬೆಳಕು ಚೆಲ್ಲುತ್ತಾರೆ. ಸುಲಭದಲ್ಲಿ ಓದುಗನ ಕೈಗೆ ಸಿಗದ ಈ ಕಾದಂಬರಿಗಳ ವೈಶಿಷ್ಟ್ಯವನ್ನು ಓದುಗನಿಗೆ ತೋರುತ್ತಲೇ ಮೂಲ ಕೃತಿಯನ್ನು ಮತ್ತೆ ಮತ್ತೆ ಓದಲು ಪ್ರಚೋದಿಸುತ್ತಾರೆ.

ರಾಷ್ಟ್ರ ಸಾಹಿತ್ಯದ ಕಲ್ಪನೆ ಸಿಡಿಎನ್ ರವರಿಗೆ ಪ್ರಿಯವಾದದ್ದು. ಈ ಪರಿಕಲ್ಪನೆ ಹೇಗೆ ಭಾರತದ ವಿವಿಧ ಭಾಷಾ ಸಾಹಿತ್ಯದಲ್ಲಿ ಬೇರ್ಪಡಿಸಲಾಗದಂತೆ ಅಂತರ್ಗತವಾಗಿ ಹೋಗಿರುವುದನ್ನು ಪ್ರಸ್ತಾಪಿಸುತ್ತ ಈ ವೈಶಿಷ್ಟ್ಯ ಇಂಗ್ಲಿಷ್ ಸಾಹಿತ್ಯದ ಮೂಲ ನೆಲೆ ಎಂದು ಇವರು ಗುರ್ತಿಸುತ್ತಾರೆ. ಈ ಭಾರತೀಯ ಸಂವೇದನೆಯೇ ಭಾರತೀಯ ಸಾಹಿತ್ಯದ ವಿಶಿಷ್ಟತೆ ಎಂದವರು ಗುರುತಿಸುತ್ತಾ ಅಖಂಡ ಭಾರತೀಯ ಸಂಪ್ರದಾಯವನ್ನು ಜೀವಂತವಾಗಿ ಉಳಿಸಿರುವುದು ಇದೇ ಎಂದು ನುಡಿಯುತ್ತಾರೆ. ಆದರೆ ಪ್ರಸ್ತುತ ಕಾಲದಲ್ಲಿ ಈ ಎದೆ ತೆಗೆದುಕೊಳ್ಳುವಿಕೆ ಒಣ ಪ್ರತಿಷ್ಠೆಯ ಪ್ರತಿಬಿಂಬವಷ್ಟೇ ಆಗಿ ಅನುಕರಣೆ ಅಷ್ಟೇ ಆಗಿದೆ ಎಂದು ವಿಷಾದಿಸುತ್ತಾರೆ.

ಸಿಡಿಎನ್ ಅವರ ಜೀವನ, ಸಾಹಿತ್ಯ ದೃಷ್ಟಿಯ ಮೇಲೆ ಇವರ ಗುರುಗಳಾದ ಲೀವಿಸ್‌ರ ಛಾಪು ಗಾಢವಾಗಿ ಮೂಡಿದೆ. ಅಂದಪಕ್ಷಕ್ಕೆ ಸಿಡಿಎನ್ ಲೀವಿಸ್‌ರ ಸಾಹಿತ್ಯ ದೃಷ್ಟಿಯನ್ನು ಸಾರಾಸಗಟಾಗಿ ಸ್ವೀಕರಿಸಿ ಅದನ್ನು ಭಾರತೀಯ ಸಾಹಿತ್ಯ, ಸಂಸ್ಕೃತಿಯ ಮೇಲೆ ಹೇರಿದವರಲ್ಲ. ನಿರ್ದಾಕ್ಷಿಣ್ಯ ಸಾಹಿತ್ಯ ನಿಲುವುಗಳನ್ನು ಅದು ಬೇರೂರಿರುವ ಸಾಂಸ್ಕೃತಿಕ ಹಾಗೂ ತಾತ್ತ್ವಿಕ ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸುತ್ತ ಸಾಗಿ ಹೇಗೆ ಅದು ಓದುಗನ ಸೂಕ್ಷ್ಮತೆಗೆ, ಸಂವೇದನೆಗೆ ಕಾರಣೀಭೂತವಾಗುತ್ತದೆಂಬುದನ್ನು ತಿಳಿ ಹೇಳುವ ಪ್ರಕ್ರಿಯೆ. ಅದು ಈ ಆದರ್ಶಗಳನ್ನು ಬರೆದರೆ ಸಾಲದು, ಜೀವನದಲ್ಲೂ ಅಳವಡಿಸಬೇಕು ಎಂಬುದನ್ನು ಸಿಡಿಎನ್ ತೋರಿಸುತ್ತಾರೆ ಎಂದು ಸಿಡಿಎನ್ ನೆಚ್ಚಿನ ಶಿಷ್ಯರೂ ಸಹೋದ್ಯೋಗಿಯೂ ಆಗಿದ್ದ ಬೆಳ್ಳಿಯಪ್ಪ ತಮ್ಮ ಲೇಖನದಲ್ಲಿ ಹೀಗೆ ಬರೆಯುತ್ತಾರೆ. "ಅವರ ವಿಮರ್ಶೆಯ ಬೇರುಗಳು ಇರುವುದು ಅವರ ಭಾರತೀಯತೆಯಲ್ಲಿ ಹಾಗೂ ಅದನ್ನು ಪೋಷಿಸುವದು ಅದೇ".

ಸಿಡಿಎನ್ ಧ್ವನ್ಯಾಲೋಕವನ್ನು 1979 ರಲ್ಲಿ ಸ್ಥಾಪಿಸಿದರು. ಅದರ ಉದ್ದೇಶಗಳಿವು: ನಮ್ಮ ಸಂಪ್ರದಾಯದೊಡನೆ ನೇರ ಸಂಪರ್ಕವನ್ನು ಇಟ್ಟುಕೊಂಡೇ ಪಾಶ್ಚಾತ್ಯ ವಿಮರ್ಶೆಯಲ್ಲಿನ ಒಳಿತಾದ ಅಂಶಗಳನ್ನು ಸಮಿಶ್ರಗೊಳಿಸುವುದು ಹಾಗೂ ಸಾಹಿತ್ಯ ಕೃತಿಗೆ ಸಂಪೂರ್ಣವಾದ ಪ್ರತಿಕ್ರಿಯೆಯ ಚೇತನವನ್ನು ಪರಿಷ್ಕರಿಸುವದು.

ಹಲವು ಬಾರಿ ಸಿಡಿಎನ್‌ರವರ ಬರೆವಣಿಗೆ, ಮಾತುಗಳು ಲಘುಗ್ರಂಥ' ಲೇಖಕನೋಪಾದಿಯಲ್ಲಿರುತ್ತವೆ ಎಂದೆನಿಸಬಹುದೇನೋ (ಪಾಂಪ್ಲೇಟೀರ್), ಈ ರೀತಿಯ ಚಿಂತಕನಲ್ಲಿ ಆದಿಪರಿಶೋಧಕನ (ಪಯನೀರ್) ಉತ್ಸಾಹ, ಚೈತನ್ಯಗಳು ಕಾಣಸಿಗುವುದಾದರೆ ಆ ಹಣೆಪಟ್ಟಿಯನ್ನು ಸಿಡಿಎನ್ ಎದೆಗುಂದದೆ ಧರಿಸಬಲ್ಲರು. ಇತರ ವಿಮರ್ಶಕರು ಹೆಜ್ಜೆ ಇಡಲೂ ಹಿಂಜ್ಞೆಯುತ್ತಿದ್ದಂತಹ ಕಾಲದಲ್ಲಿ ತಮ್ಮ ದಿಟ್ಟ ಹೆಜ್ಜೆಯನ್ನಿಟ್ಟು ಅರಬಿಂದೋ ರಂತಹ ಚಿಂತಕರನ್ನೂ ಭಾರತೀಯ ಇಂಗ್ಲಿಷ್ ಸಾಹಿತ್ಯವನ್ನೂ ಮನೆಮಾತಾಗಿ ಮಾಡಿದ ಸಿಡಿಎನ್‌ರವರ ಸಾಧನೆ ಅವಿಸ್ಮರಣೀಯ.

ಸಿಡಿಎನ್ ಪ್ರಪಂಚದ ಎಂಟಕ್ಕೂ ಹೆಚ್ಚು ವಿಶ್ವವಿದ್ಯಾನಿಯಗಳಲ್ಲಿ ಪ್ರಾಧ್ಯಾಪಕರಾಗಿ ಉಪನ್ಯಾಸ ನೀಡಿದ್ದಾರೆ. ದತ್ತಿ ಉಪನ್ಯಾಸಗಳನ್ನು ಹದಿನಾಲ್ಕಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ನೀಡಿದ್ದಾರೆ. ರಾಕ್‌ಫೆಲ್ಲರ್ ವಿದ್ಯಾರ್ಥಿವೇತನವನ್ನೂ ಫುಲಬ್ರೈಟ್ ನೆನಪಿನ ಉಪನ್ಯಾಸವನ್ನೂ ನೀಡಿದ ಹಿರಿಮೆ ಇವರದ್ದು. ಹತ್ತಕ್ಕೂ ಮಿಗಿಲಾಗಿ ಗ್ರಂಥ ರಚಿಸಿ, ಹನ್ನೆರಡಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿದ್ದಾರೆ.

1974-77 ರವರೆಗೂ ಇವರು ಅಂತಾರಾಷ್ಟ್ರೀಯ ಕಾಮನ್‌ವೆಲ್ತ್ ಸಾಹಿತ್ಯ ಹಾಗೂ ಭಾಷಾ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ಕರ್ನಾಟಕ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟು ಗೌರವಿಸಿದೆ (1987); ಪ್ರಕಾಶಕರ ಸಂಸ್ಥೆ 1989 ರಲ್ಲಿ ಗೌರವ ಸಲ್ಲಿಸಿದೆ. ಇವರು ಅಖಿಲ ಭಾರತ ಇಂಗ್ಲಿಷ್ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿದ್ದರು (1989). ಇವರಿಗೆ ಭಾರತ ಸರ್ಕಾರ ಪದ್ಮ ಭೂಷಣ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ (1990). ಮೈಸೂರು ವಿಶ್ವವಿದ್ಯಾನಿಲಯ ಗೌರವ

ಡಿ.ಲಿಟ್ ಪದವಿಯನ್ನೂ ನೀಡಿ ಗೌರವಿಸಿದೆ. (ಕೆ.ಸಿ.)

**ನರಸಿಂಹರಾಜಪುರ :** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಪಶ್ಚಿಮದಲ್ಲಿ ಕೊಪ್ಪ, ಪೂರ್ವಕ್ಕೆ ಚಿಕ್ಕಮಗಳೂರು ಮತ್ತು ತರೀಕೆರೆ ತಾಲ್ಲೂಕುಗಳು, ಉತ್ತರಕ್ಕೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಇವೆ. ಈ ತಾಲ್ಲೂಕಿನ ದಕ್ಷಿಣ ಭಾಗ ಕಿರಿದಾಗುತ್ತ ಹೋಗಿ ಕೊಪ್ಪ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳ ಮಧ್ಯೆ ಚಾಚಿಕೊಂಡಿದೆ. ತಾಲ್ಲೂಕಿನ ವಿಸ್ತೀರ್ಣ 805 ಚಕಿಮೀ. ಬಾಳೆಹೊನ್ನೂರು ಮತ್ತು ನರಸಿಂಹರಾಜಪುರ ಹೋಬಳಿಗಳು. ಈ ತಾಲ್ಲೂಕಿನಲ್ಲಿ 59 ಗ್ರಾಮಗಳು ಇವೆ. ಜನಸಂಖ್ಯೆ 65,624.

ಈ ತಾಲ್ಲೂಕು ಮಲೆನಾಡು ಪ್ರದೇಶ. ಪಶ್ಚಿಮಘಟ್ಟಶ್ರೇಣಿಗೆ ಸೇರಿದ ಅರಣ್ಯ ಭರಿತ ಬೆಟ್ಟಗಳು ಮಧ್ಯೆ ಮಧ್ಯೆ ಕಣಿವೆಗಳು, ಅನೇಕ ನದಿಝರಿಗಳು, ಇಲ್ಲಿನ ಸಾಮಾನ್ಯ ದೃಶ್ಯ. ತುಂಗಾನದಿ ತಾಲ್ಲೂಕಿನ ವಾಯುವ್ಯದಲ್ಲಿ ಸ್ವಲ್ಪ ದೂರ ಗಡಿಯಾಗಿ ಹರಿಯುತ್ತದೆ. ಭದ್ರಾನದಿ ಬಾಳೆಹೊನ್ನೂರಿನ ಹತ್ತಿರ ತಾಲ್ಲೂಕನ್ನು ಪ್ರವೇಶಿಸಿ ಮೊದಲು ಉತ್ತರಾಭಿಮುಖವಾಗಿ ನರಸಿಂಹರಾಜಪುರದವರೆಗೆ ಪ್ರವಹಿಸಿ ಈಶಾನ್ಯಕ್ಕೆ ತಿರುಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಭದ್ರಾ ಜಲಾಶಯದ ಹಿನ್ನೀರು ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಹರಡುತ್ತದೆ. ತಾಲ್ಲೂಕಿನಲ್ಲಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ ಸು. 1703ಮಿಮೀ.

ತಾಲ್ಲೂಕಿನಲ್ಲಿ ರಕ್ಷಿತ ಅರಣ್ಯಪ್ರದೇಶಗಳನ್ನೂ ಸೇರಿಸಿದಂತೆ ಸಾಕಷ್ಟು ಅರಣ್ಯ ಪ್ರದೇಶವಿದ್ದು ಅವುಗಳಲ್ಲಿ ಬಿದಿರು ಅಳಲೆ ಸೀಗೆ ಗೇರು ಮೆಣಸು ತಂಗಡಿ ಇತ್ಯಾದಿ ಗಿಡಮರಗಳು, ಕಾಡುಕೋಣ ಚಿರತೆ ಪುನುಗುಬೆಕ್ಕು ಕಾಡುಹಂದಿ ಮುಳ್ಳುಹಂದಿ ಜಿಂಕೆ ಕಾಡುಕೋಳಿ, ನವಿಲು, ಜೀವಂಜೀವ ಕೋಗಿಲೆ ಮೊದಲಾದ ಪಕ್ಷಿಮೃಗಗಳು; ತೊರೆನದಿಗಳಲ್ಲಿ ಕುಚ್ಚನಮರಳು, ಬಿಳಿಕೊರವ, ಹಾವುಮೀನು, ಅವಲಮೀನು, ಹೆಮ್ಮೀನು ಇತ್ಯಾದಿ ಮೀನುಗಳೂ ಹಾಗೂ ಮೊಸಳೆಗಳೂ ಕಾಣಬಹುದು.

ಈ ತಾಲ್ಲೂಕು ಮಲೆನಾಡ ಕಪ್ಪುಮಣ್ಣಿನ ಮತ್ತು ಸ್ವಲ್ಪಭಾಗ ಎರೆಮಣ್ಣಿನ ಭೂಮಿಯಿಂದ ಕೂಡಿದ ಫಲವತ್ತಾದ ಪ್ರದೇಶ. ನದಿ ತೊರೆಗಳ ದಂಡೆಗಳಲ್ಲಿ ಮೆದು ಜೇಡಿಮಣ್ಣಿನ ಪ್ರದೇಶವನ್ನು ಕಾಣಬಹುದು. ಈ ತಾಲ್ಲೂಕಿನ ಮುಖ್ಯ ಬೆಳೆಗಳು ಬತ್ತ ರಾಗಿ ಜೋಳ ಏಲಕ್ಕಿ ತೆಂಗು ಅಡಕೆ ಮತ್ತು ಮೆಣಸು.

ಈ ತಾಲ್ಲೂಕಿನಲ್ಲಿ ಶಾಲೆಗಳೂ ಅಂಚೆ ವಿದ್ಯುತ್ ದೂರವಾಣಿ ಸೌಲಭ್ಯಗಳೂ ವೈದ್ಯಕೀಯ ಕೇಂದ್ರಗಳೂ ಇವೆ. ಈ ತಾಲ್ಲೂಕಿನ ಮುಖಾಂತರ ಸುತ್ತಲ ಜಿಲ್ಲೆ ಮತ್ತು ಪಟ್ಟಣಗಳಿಗೆ ಮಾರ್ಗಗಳಿವೆ. ಚಿಕ್ಕಮಗಳೂರು, ತರೀಕೆರೆ, ಭದ್ರಾವತಿ, ಶಿವಮೊಗ್ಗ, ತೀರ್ಥಹಳ್ಳಿ ಮೊದಲಾದ ಕಡೆಗೆ ಇಲ್ಲಿಂದ ಮಾರ್ಗಸಂಪರ್ಕವಿದೆ.

ಈ ತಾಲ್ಲೂಕಿಗೆ ಸೇರಿದ ಬಾಳೆಹೊನ್ನೂರು (ನೋಡಿ) ಭದ್ರಾನದಿಯ ಪಶ್ಚಿಮ ದಂಡೆಯ ಮೇಲಿದೆ. ಬಾಳೆಹೊನ್ನೂರಿನಿಂದ ಉತ್ತರಕ್ಕೆ ಒಂದು ಮೈಲಿ ದೂರದಲ್ಲಿ ಬಾಳೆಹಳ್ಳಿಯಲ್ಲಿರುವ ಲಿಂಗಾಯಿತ ಮಠವು ಪಂಚವೀರಶೈವಾಚಾರ್ಯರಲ್ಲಿ ಪ್ರಥಮರಾದ ರೇಣುಕಾಚಾರ್ಯರಿಂದ ಸ್ಥಾಪಿತವಾಯಿತೆಂದು ಹೇಳಲಾಗಿದೆ. ಮಠಕ್ಕೆ ಸೇರಿದ ವೀರಭದ್ರಸ್ವಾಮಿಯ ಗುಡಿ ದ್ರಾವಿಡಶಿಲ್ಪ ಶೈಲಿಯದು. ಬಾಳೆಹೊನ್ನೂರಿಗೆ 8 ಕಿಮೀ ದೂರದಲ್ಲಿ ಭದ್ರಾನದಿಯ ಬಲದಂಡೆಯ ಮೇಲೆ ಇರುವ ಖಾಂಡ್ಯ (ನೋಡಿ) ಗ್ರಾಮದಲ್ಲಿ ಮಾರ್ಕಂಡೇಯ ದೇವಾಲಯವಿದೆ.

ನರಸಿಂಹರಾಜಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ. ಚಿಕ್ಕಮಗಳೂರಿನ ವಾಯುವ್ಯಕ್ಕೆ 84 ಕಿಮೀ ದೂರದಲ್ಲಿದೆ. ಜನಸಂಖ್ಯೆ 7441. ಕೋಟೆ ಮತ್ತು ಪೇಟೆ ಎಂಬ ಎರಡು ಭಾಗಗಳು ಈ ಊರಿನಲ್ಲಿ ಇದೆ. ಮಲೆನಾಡಿನ ಪಟ್ಟಣಗಳಂತೆ ಊರಿನ ಮುಖ್ಯ ರಸ್ತೆಯ ಅಕ್ಕಪಕ್ಕಗಳಲ್ಲಿ ಸುಮಾರು ಒಂದು ಮೈಲಿ ದೂರ ಮನೆಗಳು ಹಾಗೂ ಅಂಗಡಿಗಳು ರಸ್ತೆಯ ಎರಡು ಪಕ್ಕಗಳಲ್ಲೂ ಹರಡಿಕೊಂಡಿವೆ. ಊರು ಇತ್ತೀಚಿನ ವ್ಯಾಪಾರಾಭಿವೃದ್ಧಿಯಿಂದ ವಿಸ್ತರಿಸಿ ಹೊಸ ರೂಪ ತಳೆಯುತ್ತಿದೆ. ಸುತ್ತಲ ಊರುಗಳಿಗೆ ಇದೊಂದು ವ್ಯಾಪಾರಕೇಂದ್ರ. ಇಲ್ಲಿ ನಗರಸಭಾಡಳಿತವಿದೆ.

ಹಿಂದೆ ಇಲ್ಲಿನ ಶಿವಾಚಾರ ಮಠದಲ್ಲಿ ಯಾತ್ರಿಕರಿಗೆ ದಿನವಹಿ ಎಡೆಹಾಕಿ ಭೋಜನ ಮಾಡಿಸುತ್ತಿದ್ದುದರಿಂದ ಈ ಊರಿಗೆ ಎಡೆಹಳ್ಳಿ ಎಂಬ ಹೆಸರಿತ್ತು. ಇದು 16ನೆಯ ಶತಮಾನದ ಕೊನೆಯಲ್ಲಿ ತರೀಕೆರೆಯ ಪಾಳೆಯಗಾರರಿಗೆ ಸೇರಿದ್ದು ತರುವಾಯ ಇಕ್ಕೇರಿ ನಾಯಕರಿಗೆ ಸೇರಿತು. ಮೈಸೂರು ಅರಸರ ಆಳ್ವಿಕೆಯಲ್ಲಿ 1882ರ ವರೆಗೆ ಇದು ಲಕ್ಕವಳ್ಳಿ ತಾಲ್ಲೂಕಿನ ಕೇಂದ್ರವಾಗಿತ್ತು. ಆ ತರುವಾಯ 1897ರ ವರೆಗೆ ಕೊಪ್ಪ ತಾಲ್ಲೂಕಿಗೆ ಸೇರಿದ ಎಡೆಹಳ್ಳಿ ಸಬ್ ತಾಲ್ಲೂಕಿನ ಕಸಬೆಯಾಗಿತ್ತು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಸಹೋದರ ಯುವರಾಜ ನರಸಿಂಹರಾಜ ಒಡೆಯರು ಇಲ್ಲಿಗೆ ಭೇಟಿ ಕೊಟ್ಟ ನೆನಪಿಗಾಗಿ ಇದಕ್ಕೆ ನರಸಿಂಹರಾಜಪುರ ಎಂದು ಹೆಸರಿಡಲಾಯಿತು. ಇಲ್ಲಿನ ಶ್ರೀವೈಷ್ಣವ ಮಠವೂ ಪ್ರಾಚೀನ ಪರಂಪರೆ ಹೊಂದಿದೆ.

ಊರಿನ ರಸ್ತೆಯ ತುದಿಯಲ್ಲಿ ಸಿಂಗನಗದ್ದೆಯ ಬಳಿ ಮೂರು ಜೈನ ಬಸದಿಗಳು ಹಾಗೂ ಒಂದು ಜೈನಮಠ ಇವೆ. ಚಂದ್ರನಾಥ ಬಸದಿಯಲ್ಲಿ 21/2' ಎತ್ತರದ ಆಸೀನ ಚಂದ್ರನಾಥನ ಶಿಲಾವಿಗ್ರಹವಿದೆ. ಇದೇ ಬಸದಿಯಲ್ಲಿ ಸರಸ್ವತಿ, ಗಂಧರಪಾದ ಮತ್ತು ಶ್ರುತ-ಈ ಲೋಹ ವಿಗ್ರಹಗಳಿವೆ. ಶಾಂತೇಶ್ವರ ಬಸದಿಯಲ್ಲಿ ಎತ್ತರದ ಶಾಂತೇಶ್ವರ ನಿಂತ ಭಂಗಿಯ ವಿಗ್ರಹವಿದೆ. ಉದ್ದರೆಯ ಚಿಯರಿಯಬ್ಬೆಯ ಶಿಷ್ಯೆ ಚಂಡಿ ಎಂಬಾಕೆಯಿಂದ ಈ ವಿಗ್ರಹ ಪ್ರತಿಷ್ಠಾಪಿತವಾಯಿತೆಂಬ ಬರೆಹ ವಿಗ್ರಹದ ಪ್ರಭಾವಳಿಯ ಮೇಲಿದೆ. ವಿಗ್ರಹ ಸು.1300ರಲ್ಲಿ ಪ್ರತಿಷ್ಠಾಪಿತವಾಗಿರಬಹುದು. ಮೂರನೆಯ ಬಸದಿ ಜ್ವಾಲಾಮಾಲಿನಿಯ ಬಸದಿ.

ಇಕ್ಕೇರಿಯ ಚೆನ್ನಮ್ಮಾಜಿ ಮತ್ತು ವೀರಮ್ಮಾಜಿ ಈ ಊರನ್ನು ಅಭಿವೃದ್ಧಿಗೊಳಿಸಿದರು. ಊರಿನ ಪಶ್ಚಿಮಭಾಗಕ್ಕೆ ಬಹುಕಾಲ ಚೆನ್ನಮ್ಮಾಜಿ ಪೇಟೆ ಎಂಬ ಹೆಸರಿತ್ತು. ಅಲ್ಲಿಗೆ ಸಮೀಪದ ಕೆರೆಗೆ ವೀರಮ್ಮಾಜಿ ಕೆರೆ ಎಂಬ ಹೆಸರು ಇದೆ. ಇಕ್ಕೇರಿ ನಾಯಕರ ಸೇವೆಯಲ್ಲಿ ಅಧಿಕಾರಿ ಸುಗ್ಗಪ್ಪ ಈ ಊರಿನಲ್ಲಿ 7 ಬಾವಿಗಳನ್ನು ತೋಡಿಸಿದ. ಈಗಲೂ ಆ ಬಾವಿಗಳಿಗೆ ಅವನ ಹೆಸರಿದೆ. ತನ್ನ ಗುರು ಶಾಂತಸ್ವಾಮಿಗಾಗಿ ಅವನು ಕಟ್ಟಿಸಿದಮಠ ಈಗಿನ ಪ್ರವಾಸಿ ಮಂದಿರದ ಹಿಂಭಾಗದಲ್ಲಿದೆ.
(ಎ.ಜಿ.ಕೆ.)

**ನರಸಿಂಹರಾಜು, ಟಿ.ಆರ್. :** 1926-1979. ಕನ್ನಡ ರಂಗಭೂಮಿ ಹಾಗೂ ಚಲನಚಿತ್ರರಂಗದ ಪ್ರಸಿದ್ಧ ಹಾಸ್ಯನಟ. ತಿಪಟೂರು ರಾಮರಾಜು ನರಸಿಂಹರಾಜು ಇವರ ಪೂರ್ಣ ಹೆಸರು. 1926ರಲ್ಲಿ ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಜನಿಸಿದರು. ಇವರ ತಾಯಿ ವೆಂಕಟಲಕ್ಷ್ಮಮ್ಮ. ತಂದೆ ರಾಮರಾಜು. ಚಿಕ್ಕಪ್ಪ ಲಕ್ಷ್ಮೀಪತಿರಾಜು.

ನರಸಿಂಹರಾಜು ಅವರು ತಮ್ಮ ಚಿಕ್ಕಪ್ಪನವರ ಪ್ರೋತ್ಸಾಹದಿಂದ ಕನ್ನಡ ರಂಗಭೂಮಿಯ ಪ್ರತಿಷ್ಠಿತ ನಾಟಕ ಮಂಡಳಿಗಳಲ್ಲೊಂದಾಗಿದ್ದ ಸಿ.ಬಿ. ಮಲ್ಲಪ್ಪನವರ ಶ್ರೀ ಚಂದ್ರಮೌಳೀಶ್ವರ ನಾಟಕ ಮಂಡಲಿಯಲ್ಲಿ ಬಾಲಪಾತ್ರಗಳನ್ನು ವಹಿಸುವುದರ ಮೂಲಕ ರಂಗಭೂಮಿಯನ್ನು ಪ್ರವೇಶಿಸಿದರು. ಕಂಪನಿಯ ಪ್ರಮುಖ ನಟರಲ್ಲೊಬ್ಬರಾಗಿದ್ದ ಎಚ್.ಕೃಷ್ಣಶಾಸ್ತ್ರಿ ಅವರು ನರಸಿಂಹರಾಜು ಅವರನ್ನು ಬಾಲಪಾತ್ರಗಳಿಗೆ ತಯಾರು ಮಾಡುವಲ್ಲಿ ಹೆಚ್ಚಿನ ಆಸ್ಥೆವಹಿಸಿದರು. ಕಂಪನಿಯಲ್ಲಿದ್ದ ಮುದ್ದಪ್ಪ ಎಂಬುವರು ಇವರಿಗೆ ಅಕ್ಷರಾಭ್ಯಾಸ ಮಾಡಿಸಿ ಬಹು ಶಿಸ್ತಿನಿಂದ ಬೆಳೆಸಿದರು. ನರಸಿಂಹರಾಜು ಅವರು 1942ರಲ್ಲಿ ಕೆಲವು ಸಹೋದ್ಯೋಗಿಗಳೊಡನೆ ಸ್ವಂತ ಕಂಪನಿ ಕಟ್ಟಿದರು. ಗೋರಕುಂಬಾರ, ಹರಿಶ್ಚಂದ್ರ ಮುಂತಾದ ಅನೇಕ ಪೌರಾಣಿಕ ನಾಟಕಗಳನ್ನು ಅರಸೀಕೆರೆ ತಾಲ್ಲೂಕಿನಾದ್ಯಂತ ಪ್ರದರ್ಶಿಸಿದರು. ಮೂರು ವರ್ಷಗಳ ಅನಂತರ ಹಲವಾರು ಕಂಪನಿಗಳಲ್ಲಿ ಕಲಾಸೇವೆಗೈದು 1946ರಲ್ಲಿ ಕೃಷ್ಣರಾಜನಗರದ

ಎಡತೊರೆ ಕಂಪನಿಗೆ ಸೇರಿದರು. ಈ ಕಂಪನಿ ಅಂದು ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿತ್ತು. ವಿಶ್ವಾಮಿತ್ರ, ರಾಮ ರಾವಣ, ಬೇಡರ ಕಣ್ಣಪ್ಪ ಮತ್ತು ಭಾರತಲಕ್ಷ್ಮಿ ಮೊದಲಾದ ನಾಟಕಗಳು ಕಂಪನಿಯ ಮುಖ್ಯ ನಾಟಕಗಳೆನಿಸಿದ್ದವು. ಈ ನಾಟಕಗಳಲ್ಲಿ ಇವರು ನಿರ್ವಹಿಸುತ್ತಿದ್ದ ವಿಶ್ವಾನಂದ, ಕಾಶಿ, ಕಾಂಪೌಂಡರ್ ಮೊದಲಾದ ಪಾತ್ರಗಳು ಇವರಿಗೆ ಅಪಾರ ಜನಪ್ರಿಯತೆ ಗಳಿಸಿಕೊಟ್ಟವು. ಬೇಡರಕಣ್ಣಪ್ಪನ ಕಾಶಿ ಪಾತ್ರವಂತೂ ಇವರಿಗೆ ರಂಗಭೂಮಿಯಲ್ಲಿ ಸುಭದ್ರಸ್ಥಾನ ಗಳಿಸಿಕೊಟ್ಟಿತು. ಕೆಲದಿನಗಳ ಅನಂತರ ಹಿರಣ್ಣಯ್ಯ ಮಿತ್ರ ಮಂಡಳಿಗೆ ಪ್ರವೇಶಿಸಿದರು. ಈ ಮಂಡಳಿಯಲ್ಲಿ ಅಲ್ಪಕಾಲವಿದ್ದು ಭಾರತ ಲಲಿತ ಕಲಾಸಂಘಕ್ಕೆ ಬಂದರು. 1949ರ ಅಂತ್ಯದಲ್ಲಿ ಈ ಮಂಡಳಿಯನ್ನೂ ಬಿಟ್ಟು 1950ರಲ್ಲಿ ಬೇಲೂರು ಗುಂಡಾಜೋಯಿಸರ ಕಂಪನಿಯನ್ನು ಸೇರಿದರು. ನಟ ಸಾಹಿತಿ ಹುಣಸೂರು ಕೃಷ್ಣಮೂರ್ತಿ ಅವರಿಂದ ರಚಿತವಾದ ಅಂದಿನ ಪ್ರಚಲಿತ ಸಮಸ್ಯೆಯ ಕಥಾವಸ್ತುವನ್ನೊಳಗೊಂಡ ಧರ್ಮರತ್ನಾಕರ ಈ ಕಂಪನಿಯ ಹೆಸರಾಂತ ನಾಟಕವಾಗಿದ್ದು ಇದರಲ್ಲಿ ನಾಣಿ ಪಾತ್ರ ಇವರ ಪಾಲಿನದಾಯಿತು.

ಈ ಪಾತ್ರದ ಕೀರ್ತಿ ನಾಟಕರತ್ನ ಗುಬ್ಬಿ ವೀರಣ್ಣನವರ ಕಿವಿಗೂ ಬಿತ್ತು. ಆಗ ವೀರಣ್ಣನವರು ಗೌತಮಬುದ್ಧ ನಾಟಕದ ಪ್ರದರ್ಶನದ ಸಿದ್ಧತೆಗೆ ತೊಡಗಿದ್ದರು. ಈ ನಾಟಕದ ಪ್ರದರ್ಶನಕ್ಕೆ ಮುಂಚೆ ಶಿವರಾತ್ರಿ ಪ್ರಯುಕ್ತ ಬೇಡರಕಣ್ಣಪ್ಪ ನಾಟಕದ ಒಂದೇ ಒಂದು ಪ್ರದರ್ಶನಕ್ಕೆ ವ್ಯವಸ್ಥೆಯಾಗಿತ್ತು. ಕಾಶಿ ಪಾತ್ರಕ್ಕೆ ಇವರಿಗೆ ಆಹ್ವಾನ ಹೋಯಿತು. ಕಾಶಿಪಾತ್ರ ಕಲಾರಸಿಕರ ಪೂರ್ಣ ಮೆಚ್ಚುಗೆಗೆ ಪಾತ್ರವಾಯಿತು. ಗುಬ್ಬಿ ಕಂಪನಿಯ ಖಾಯಂ ನಟರಾಗಿರಲು ಇವರಿಗೆ ವೀರಣ್ಣನವರಿಂದ ಆಹ್ವಾನ ಬಂತು. ಕೆಲವೇ ದಿನಗಳಲ್ಲಿ ಗುಂಡಾ ಜೋಯಿಸರ ಕಂಪನಿ ಬಿಟ್ಟು ಗುಬ್ಬಿ ಕಂಪನಿ ಸೇರಿದರು. ಗುಬ್ಬಿ ಕಂಪನಿ ಆಗ ಪ್ರದರ್ಶಿಸುತ್ತಿದ್ದ (ಸಾಹುಕಾರ) ಆಚಾರಿ, ಕೃಷ್ಣರಾಯ, ಅಡ್ಡದಾರಿ ನಾಟಕಗಳಲ್ಲಿ ಹಾಸ್ಯಪಾತ್ರಗಳನ್ನು ನಿರ್ವಹಿಸಿ ಪ್ರಶಂಸೆಗೆ ಪಾತ್ರರಾದರು.

1953ರಲ್ಲಿ ವೀರಣ್ಣನವರು ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್ ಲಾಂಛನದ ಅಡಿ ಬೇಡರಕಣ್ಣಪ್ಪ ನಾಟಕವನ್ನು ಚಲನಚಿತ್ರವನ್ನಾಗಿ ತಯಾರಿಸಲು ಮದರಾಸಿನ ಎ.ವಿ.ಎಂ. ಅವರೊಡಗೂಡಿದರು. ಚಿತ್ರದ ಸೂತ್ರಧಾರರಾದ ಎಚ್.ಎಲ್.ಎನ್.ಸಿಂಹ ಅವರು ಕಾಶಿ ಪಾತ್ರಕ್ಕೆ ನರಸಿಂಹರಾಜು ಅವರನ್ನೇ ಆಯ್ಕೆಮಾಡಿದರು. ಬೇಡರಕಣ್ಣಪ್ಪ ಇವರ ಅಭಿನಯದ ಮೊದಲ ಕನ್ನಡ ಚಿತ್ರ. ತೆರೆಕಂಡಾಗ ಅಪಾರ ಯಶಸ್ಸುಗಳಿಸಿತಲ್ಲದೆ ನರಸಿಂಹರಾಜು ಅವರಿಗೂ ಒಳ್ಳೆಯ ಹೆಸರು ತಂದಿತು.

ನರಸಿಂಹರಾಜು ಅವರು ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನಕ್ಕರದೇ ಸ್ವರ್ಗ ಇವರ ಅಭಿನಯದ ನೂರನೆಯ ಚಿತ್ರ. ತಮ್ಮ ದಿವಂಗತ ಪುತ್ರ ಶ್ರೀಕಾಂತನ ನೆನಪಿಗಾಗಿ ಪ್ರೊಫೆಸರ್ ಹುಚ್ಚೂರಾಯ ಎಂಬ ಕನ್ನಡ ಚಿತ್ರವನ್ನು ತಯಾರಿಸಿ ಇವರು ನಿರ್ಮಾಪಕರ ಸಾಲಿಗೂ ಸೇರಿದರು. ಇವರು 1979 ಜುಲೈ 21ರಂದು ನಿಧನರಾದರು.
(ಎಸ್.ಎಚ್.ಎ.)

**ನರಸಿಂಹಸ್ವಾಮಿ, ಎಸ್. :** ಭಾವಚಿತ್ರ ರಚನೆಯಿಂದಲೇ ಪ್ರಖ್ಯಾತರಾದ ಮೈಸೂರಿನ ಕಲಾವಿದರು.

ಸ್ವರ್ಣಕಲಾ ನಿಪುಣರೆಂಬ ಬಿರುದು ಪಡೆದಿದ್ದ ಶಿಲ್ಪಕಲಾ ಪಿತಾಮಹ ಸಿಂಗಣ್ಣಾಚಾರ್ಯ ಇವರ ತಂದೆ. ಮೈಸೂರಿನಲ್ಲಿ ನರಸಿಂಹಸ್ವಾಮಿಯವರು ಜನಿಸಿದರು. ಬಾಲ್ಯದಿಂದಲೂ ಕಲೆಯ ಒಂದು ಮಧುರ ಸನ್ನಿವೇಶದಲ್ಲಿ ಬೆಳೆದು ಬಂದ ಇವರಿಗೆ ಕಲೆಯಲ್ಲಿ ಒಳ್ಳೆಯ ಆಸಕ್ತಿ ಮೂಡಿತು. ತಂದೆ ಕಡೆಯುತ್ತಿದ್ದ ಮೂರ್ತಿಗಳನ್ನು ನೋಡಿ ನೋಡಿ ಒಬ್ಬ ಕಲೆಗಾರರಾಗಬೇಕೆಂಬ ಮಹದಾಸೆ ಅಂಕುರಿಸಿತು. ರೇಖಾಚಿತ್ರಗಳನ್ನು ತಾವೂ ಅಭ್ಯಸಿಸುತ್ತ ಬಂದರು. ಮೈಸೂರಿನ ಪೌರಸಭೆ ಏರ್ಪಡಿಸಿದ ವಸ್ತುಪ್ರದರ್ಶನದಲ್ಲಿ ಇವರು ತಮ್ಮ ಹದಿನೈದನೆಯ ವಯಸ್ಸಿನಲ್ಲೇ ರಜತ ಪಾರಿತೋಷಕ ಪಡೆದು ಒಪ್ಪೊತ್ತಿನ ವಿದ್ಯಾರ್ಥಿಯಾಗಿ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕೇಶವಯ್ಯನವರಂಥ ಪ್ರಸಿದ್ಧ ಕಲಾವಿದರ ಕೈಕೆಳಗೆ ವ್ಯಾಸಂಗ ಮಾಡತೊಡಗಿದರು.

ತಮ್ಮ ಮಗ ಒಬ್ಬ ಪದವೀಧರನಾಗಬೇಕೆಂಬುದಾಗಿ ಸಿಂಗಣ್ಣಾಚಾರ್ಯರ ಬಯಕೆ. ಆದರೆ ಸ್ವಾಮಿಯವರ ಅತೀವವಾದ ಕಲಾಭಿರುಚಿ ವಿದ್ಯಾಭ್ಯಾಸಕ್ಕೆ ಅಡ್ಡಿಯನ್ನು ತಂದೊಡ್ಡಿತು. ಮೈಸೂರಿನ ಮಿಷನ್ ಹೈಸ್ಕೂಲಿನಲ್ಲಿ ಮೆಟ್ರಿಕ್ ಪರೀಕ್ಷೆಯ ವರೆಗೂ ಓದಿ, ವ್ಯಾಸಂಗವನ್ನು ಕೈಬಿಟ್ಟರು. ಅನಂತರ ಮದರಾಸಿನ ಕಲಾಪರೀಕ್ಷೆಗಳಿಗೆ ಖಾಸಗಿಯಾಗಿ ಕೂಡುತ್ತ ಬಂದರು. ಈ ಮಧ್ಯೆ ತಂದೆಯವರ ಜೊತೆಯಲ್ಲಿ ಅರಮನೆಗೆ ಹೋಗಿಬರುವ ಒಂದು ಸುಯೋಗವೂ ಆ ಮೂಲಕ ಆಗಿನ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ದೃಷ್ಟಿಗೆ ಬೀಳುವ ಸೌಭಾಗ್ಯವೂ ಇವರ ಪಾಲಿಗೆ ದೊರಕಿತು. ಮಹಾರಾಜರ ಪ್ರೋತ್ಸಾಹದಿಂದಾಗಿ ಸ್ವಾಮಿಯವರು ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಶಾಲೆಯಲ್ಲಿ ತಮ್ಮ ಕಲಾ ವ್ಯಾಸಂಗವನ್ನು ಪ್ರಾರಂಭಿಸಿದರು (1930). ಅಲ್ಲಿ ಅನೇಕ ಹಿರಿಯ ಕಲಾವಿದರ ಸಹವಾಸ, ಸಂಪರ್ಕ ದೊರೆತು ಭಾವಚಿತ್ರ ರಚನೆಯಲ್ಲಿ ಇವರ ಕೈ ಚೆನ್ನಾಗಿ ಪಳಗಿತು. ಇವರ ಇಜ್ಜಲಿನಿಂದ ಬಿಡಿಸಿದ ಮಹಾರಾಷ್ಟ್ರ ವನಿತೆಯೊಬ್ಬಳ ಮೈ ಮಾಡೆಲ್ ಎಂಬ ಭಾವಚಿತ್ರಕ್ಕೆ ಸಿಮ್ಲಾ ಕಲಾಪ್ರದರ್ಶನದಲ್ಲಿ ಸುವರ್ಣಪದಕ ಬಂತು. ಮೈಸೂರಿನ ದಸರಾ ಕಲಾಪ್ರದರ್ಶನದಲ್ಲೂ ಅದಕ್ಕೆ ಎಸ್.ಜಿ.ಶಾಸ್ತ್ರಿಗಳ ಬಹುಮಾನವೂ ದೊರೆಯಿತು.

ಮುಂಬಯಿಯ ಚೋರ್‌ಬಜಾರಿಗೆ ನಿತ್ಯವೂ ಹೋಗಿಬರುತ್ತ ಸ್ವಾಮಿಗಳು ಅನೇಕ ಶೀಘ್ರರೇಖಾಚಿತ್ರಗಳನ್ನು ಬರೆದರು. ಮದರಾಸಿನ ಕಲಾಪ್ರದರ್ಶನದಲ್ಲಿ ಇಂಥ ಇವರ ಕೃತಿಗೆ ಬಹುಮಾನ ಬಂತು. ಕಲಾವಿದ ಸರ್‌ದೇಸಾಯಿಯವರು ಇವರನ್ನು ಮನೆಯಲ್ಲೇ ಇಟ್ಟುಕೊಂಡು ಪ್ರೀತಿವಿಶ್ವಾಸವನ್ನು ತೋರಿಸಿ ಪ್ರೋತ್ಸಾಹಿಸಿದರು. ಮುಂಬಯಿ ಭಾವಚಿತ್ರ ರಚನಾ ಸಾಮರ್ಥ್ಯದಲ್ಲಿ ಕೀರ್ತಿಶಿಖರವನ್ನೇರಿದ್ದ ಅಗಸ್ಕರ್ ಎಂಬ ಕಲಾವಿದರಿಂದ ಸ್ವಾಮಿಯವರು ರೇಖಾವಿನ್ಯಾಸಕ್ಕೆ ಅದೆಷ್ಟು ಮಹತ್ತ್ವವಿದೆಯೆಂಬುದನ್ನು ಅರಿತರು.

ಮುಂಬಯಿಯಲ್ಲಿ ವ್ಯಾಸಂಗವನ್ನು ಮುಗಿಸಿ ಮರಳಿದ ಅನಂತರ ಇವರು 1934ರಲ್ಲಿ ವಿಶ್ವಕವಿ ರವೀಂದ್ರರ ಭಾವಚಿತ್ರವನ್ನು ಛಾಯಾಚಿತ್ರ ಒಂದರ ಆಧಾರದಿಂದ ರಚಿಸಿ, ರವೀಂದ್ರರಿಂದಲೇ ಪ್ರಶಂಸೆ ಪಡೆದರು. ಅಲ್ಲಿಂದೀಚೆಗೆ ಸಾಮ್ರಾಟ ಸಾಮ್ರಾಜ್ಞಿಯವರನ್ನು, ರಾಜಕೀಯ ಧುರೀಣರನ್ನು, ತತ್ತ್ವಜ್ಞಾನಿಗಳನ್ನು, ಕವಿಕುಲತಿಲಕರನ್ನು, ನಾಟಕಲೇಖರನ್ನು, ಮಹಾವಿಜ್ಞಾನಿಗಳನ್ನು, ಸುಪ್ರಸಿದ್ಧ ನಟನಟಿಯರನ್ನು ಭಾವಚಿತ್ರಗಳ ವಸ್ತುವಾಗಿ ಬಳಸಿಕೊಂಡು ಚಿತ್ರರಚನೆಯಲ್ಲಿ ಯಶಸ್ಸನ್ನು ಪಡೆದರು. ಇವರು ರಚಿಸಿದ ಪ್ರಸಿದ್ಧ ಭಾವಚಿತ್ರಗಳಲ್ಲಿ ಹಿಟ್ಲರ್, ಚೇಂಬರ್‌ಲಿನ್, ಮುಸಲೋನಿ, ಅಂತೋನಿ ಈಡನ್, ಚರ್ಚಿಲ್, ಲೆನಿನ್, ಷಾ, ಸರ್ ಆಲಿವರ್ ಲಾಡ್ಜ್, ಬರ್ಟ್ರಂಡ್ ರಸೆಲ್, ಹ್ಯಾವ್‌ಲಾಕ್ ಎಲ್ಲಿಸ್, ರೋಮಾ ರೋಲಾ ಮುಂತಾದವರ ಚಿತ್ರಗಳು ಮುಖ್ಯವಾದುವುಗಳು.

1941ರಲ್ಲಿ ಸ್ವಾಮಿಯವರು ವಾರ್ಧಾಕ್ಕೆ ಹೋಗಿ, ಬಾಪೂಜಿಯವರ ದರ್ಶನ ಪಡೆದು ಅವರ ಭಾವಚಿತ್ರವನ್ನು ವರ್ಣಗಳಲ್ಲಿ ಬಿಡಿಸಿ ಅವರ ಮೆಚ್ಚುಗೆ ಪಡೆದರು. ಒಮ್ಮೆ ಮೈಸೂರಿಗೆ ಭೇಟಿ ನೀಡಿದ ಮೌಂಟ್ ಬ್ಯಾಟನ್ ಇವರನ್ನು ದೆಹಲಿಗೆ ಕರೆಸಿಕೊಂಡು ತಮ್ಮ ಭಾವಚಿತ್ರವನ್ನು ಬಿಡಿಸಲು ಅವಕಾಶ ಇತ್ತರು. ಗಾಂಧೀಜಿಯವರ ಚಿತ್ರವನ್ನಂತೂ ಪ್ರಧಾನಿ ನೆಹರೂ ಕೊಂಡು ತಮ್ಮ ಅತಿಥಿಗೃಹದಲ್ಲಿ ಇರಿಸಿಕೊಂಡಿದ್ದರು. ಅದು ಈಗ ತೀನ್ ಮೂರ್ತಿ ಭವನದ ನೆಹರು ವಸ್ತುಸಂಗ್ರಹಾಲಯದಲ್ಲಿದೆ.

ಕಸ್ತೂರಬಾ, ನೆಹರು, ರಾಜೇಂದ್ರ ಪ್ರಸಾದ್, ರಾಜಗೋಪಾಲಾಚಾರಿ, ವಿಶ್ವೇಶ್ವರಯ್ಯ, ರಾಧಾಕೃಷ್ಣನ್, ಮಿರ್ಜಾ ಇಸ್ಮಾಯಿಲ್ ಮೊದಲಾದ ಭಾವಚಿತ್ರಗಳನ್ನೂ ಇವರು ಬಿಡಿಸಿದ್ದಾರೆ.

ನೃತ್ಯಕಲೆಯಲ್ಲಿ ಅಭಿರುಚಿಯಿದ್ದ ಸ್ವಾಮಿಯವರು ನಾಟ್ಯಸರಸ್ವತಿ ಜಟ್ಟಿ ತಾಯಮ್ಮನವರ ಶಿಷ್ಯರಾಗಿ ನೃತ್ಯಾಭ್ಯಾಸಕ್ಕೆ ತೊಡಗಿ (1940), ಆ ಕಲೆಯಲ್ಲೂ ಖ್ಯಾತಿಪಡೆದರು.

ಇವರು ತಮ್ಮ ಚಿತ್ರಗಳಲ್ಲ ಚಿತ್ರಿಸಿರುವುದು ಸಾಮಾನ್ಯವಾಗಿ ಅಂತಾರಾಷ್ಟ್ರೀಯ ಪ್ರಭಾವಿ ವ್ಯಕ್ತಿಗಳನ್ನೇ; ವಿಶ್ವದ ಅನೇಕ ಕಡೆಗಳಲ್ಲಿ ಇವರ ಕೃತಿಗಳು ಶೋಭಿಸುತ್ತಿವೆ. ಸುಪ್ರಸಿದ್ಧ ಆಂಗ್ಲ ಸಾಹಿತ್ಯ ಬರ್ನಾಡ್ ಷಾ ಅವರ ಭಾವಚಿತ್ರ ಈಗ ಲಂಡನ್ನಿನ ಇಂಡಿಯನ್ ಎಂಬಸಿಯಲ್ಲಿ ರಂಜಿಸುತ್ತಿದೆ. ಗಾಂಧೀಜಿ ರಾಟೆ ನೂಲುತ್ತಿರುವಂತಿರುವ ಇವರ ಮತ್ತೊಂದು ಚಿತ್ರ ಪ್ಯಾರಿಸ್‌ನ ಯುನೆಸ್ಕೋ ಭವನದಲ್ಲಿದೆ. ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನರ ಭಾವಚಿತ್ರ ಅಮೆರಿಕದಲ್ಲಿದೆ. ರೂಸ್‌ವೆಲ್ಟ್‌ರ ಚಿತ್ರ ಶ್ವೇತಭವನದಲ್ಲಿದೆ. ಭಾರತದ ಪ್ರಥಮ ದಂಡನಾಯಕ ಜನರಲ್ ಕಾರ್ಯಪ್ಪನವರ ತೈಲ ಭಾವಚಿತ್ರ ಮಡಿಕೇರಿಯ ಕಾಲೇಜಿನಲ್ಲಿದೆ. ಮೈಸೂರು ನಗರದ ನಾನಾ ಸಂಘ ಸಂಸ್ಥೆಗಳ ಭವನಗಳಲ್ಲಿ ಇವರು ಅನೇಕ ತೈಲಚಿತ್ರಗಳು ನೋಡಸಿಗುತ್ತವೆ. ಕನ್ನಡ ಕುಲಪಿತಾಮಹಾ ಆಲೂರು ವೆಂಕಟರಾಯರ ಹಾಗೂ ಇಂದಿರಾ ಗಾಂಧಿಯವರ ರೇಖಾಚಿತ್ರಗಳನ್ನೂ ಇವರು ರಚಿಸಿದರು.

ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟು ಗೌರವಿಸಿದೆ.

**ನರಸಿಂಹಸ್ವಾಮಿ, ಕೆ.ಎಸ್. :** 1915-2003. ಆಧುನಿಕ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬರು. ಕನ್ನಡ ಸಾಹಿತ್ಯದ ನವೋದಯ ಕಾಲದಿಂದ ನವ್ಯಕಾವ್ಯ ಸೃಷ್ಟಿಯ ಕಾಲದವರೆಗೂ ತಮ್ಮ ಕಾವ್ಯ ಸೃಷ್ಟಿಯನ್ನು ನಡೆಸುತ್ತ ಬಂದವರು. ಈ ಅವಧಿಯಲ್ಲಿ ಆಗುತ್ತಿರುವ ಬದಲಾವಣೆಗಳನ್ನೆಲ್ಲ ತಮ್ಮ ಕಾವ್ಯ ಶೈಲಿಯಲ್ಲೂ ಬಳಸಿಕೊಂಡಿದ್ದರು. ಆದರೆ ತಮ್ಮ ಮೊದಲ ಕವನ ಸಂಗ್ರಹವಾದ ಮೈಸೂರು ಮಲ್ಲಿಗೆಯಿಂದ ಗಳಿಸಿದ ಕೀರ್ತಿ ಮತ್ತು ಜನಪ್ರಿಯತೆ ಇವರಿಗೆ ಅವರ ಇತರ ಕವನ ಸಂಗ್ರಹಗಳಿಂದ ಹೆಚ್ಚಾಗಲಿಲ್ಲ ಎನಿಸುತ್ತದೆ. ಮೊದಲು ಸಂಪಾದಿಸಿದ ಕೀರ್ತಿ ಅಳಿಸಲಿಲ್ಲ ಎಂಬ ಮಾತೂ ನಿಜ. ಅದು ಗಟ್ಟಿಯಾಗಿ ನಿಂತಿತು. ಪ್ರತಿಭೆಯಲ್ಲಾಗಲಿ, ಕಾವ್ಯ ರಚನಾಶಕ್ತಿಯಲ್ಲಾಗಲಿ, ವಸ್ತುವಿನ ಆಯ್ಕೆಯಲ್ಲಾಗಲಿ, ನಿರೂಪಣೆಯಲ್ಲಾಗಲಿ ಮೊದಲ ಕಾವ್ಯದಲ್ಲಿ ಕಾಣಿಸಿಕೊಂಡ ಇವರ ಪ್ರತಿಭೆ, ಶಕ್ತಿ, ವಿವೇಚನೆ ಕಡಿಮೆ ಆಗಲಿಲ್ಲ. ಇವರ ಅನುಭವ ಬೆಳೆದಂತೆ ಅವೂ ಬೆಳೆದವು. ಆದರೆ ಮೈಸೂರು ಮಲ್ಲಿಗೆ ತಂದುಕೊಟ್ಟ ಕೀರ್ತಿ ಮಸುಕಿಲ್ಲದೆ ಹಾಗೆಯೇ ನಿಂತಿತು. ಅದಕ್ಕೆ ಚ್ಯುತಿ ಇಲ್ಲ.

ಇವರು 1915 ಜನವರಿ 25ರಂದು ಮಂಡ್ಯ ಜಿಲ್ಲೆ ಕಿಕ್ಕೇರಿಯಲ್ಲಿ ಹುಟ್ಟಿದರು. ತಂದೆ ಕಿಕ್ಕೇರಿ ಸುಬ್ಬರಾಯರು. ತಾಯಿ ಹೊಸಹೊಳಲು ನಾಗಮ್ಮ. ತಂದೆ ಮೈಸೂರಿನಲ್ಲಿ ಒಂದು ಅಂಗಡಿಯ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರು. ಅದೇ ಅವರ ಉದ್ಯೋಗವಾದರೂ ಅವರ ಒಲವು ಪಿಟೀಲು ವಾದನದಲ್ಲಿತ್ತು. ಈ ಕಲೆಯ ಅಂಶ ಸ್ವಾಮಿಯವರಲ್ಲಿ ಮತ್ತೊಂದು ರೂಪದಲ್ಲಿ ಹೊರಹೊಮ್ಮಿತ್ತು. ಸ್ವಾಮಿಯವರ ವಿದ್ಯಾಭ್ಯಾಸ, ಮೈಸೂರಿನ ಮಹಾರಾಜ ಹೈಸ್ಕೂಲು, ಇಂಟರ್ಮೀಡಿಯೆಟ್ ಕಾಲೇಜ್ ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಾಯಿತು. ಪಠ್ಯವಿಷಯ - ಐ.ಎಸ್.ಸಿ. ಇಂಜಿನಿಯರಿಂಗ್, ಇಂಗ್ಲಿಷ್, ಗಣಿತ, ಭೌತವಿಜ್ಞಾನ, ಕಾಲೇಜು ವಿದ್ಯಾಭ್ಯಾಸ ಆರ್ಥಿಕ ತೊಂದರೆಗಳಿಂದಾಗಿ ಮೊಟಕಾಯಿತು. ಪದವಿ ವ್ಯಾಸಂಗ ಪೂರ್ಣವಾಗಲಿಲ್ಲ. ಕನ್ನಡದ ಮೇಲೆ ಹೆಚ್ಚು ಒಲವು ಇದ್ದುದರಿಂದ ತಮ್ಮ ಓದಿನ ವಿಷಯ ಅಲ್ಲದಿದ್ದರೂ ಕನ್ನಡದ ತರಗತಿಗಳಿಗೆ ಹೋಗಿ ಆ ಪಾಠಗಳನ್ನು ಕೇಳುತ್ತಿದ್ದರು. 19ನೆಯ ವಯಸ್ಸಿಗೆ ಓದು ನಿಂತುಹೋಯಿತು. 22ನೆಯ ವಯಸ್ಸಿನಲ್ಲಿ ಕೆಲಸಕ್ಕೆ ಸೇರಿಕೊಂಡರು (1937). ಅದರ ಹಿಂದಿನ ವರ್ಷವೇ ವಿವಾಹವಾಗಿತ್ತು. ಕೈಹಿಡಿದ ಹೆಂಡತಿ ಶಿವಮೊಗ್ಗದ ವೆಂಕಮ್ಮ, ಆ ವಯಸ್ಸಿನ ಇವರ ಪ್ರೇಮಮಯ ಜೀವನ ಪ್ರೇಮಗೀತೆಗಳ ರಚನೆಗೆ ಸ್ಫೂರ್ತಿ ನೀಡಿತು. ಇವರ ಮೊದಲ ಕವನ ಕಬ್ಬಿನ ಕೂಗು (1931), ಕವಿಯ ಹೃದಯದ ಧ್ವನಿಯಾದರೂ ಮುಂದೆ ಅದು ಪ್ರಣಯದ ವಿವಿಧ ಅನುಭವಗಳ ಅಮೃತವಾಣಿಗಳಾಗಿ ಹೊಮ್ಮಿತು.

ಇವರ ಮೊದಲ ಕವನ ಸಂಕಲನ ಮೈಸೂರು ಮಲ್ಲಿಗೆ 1942ರಲ್ಲಿ ಪ್ರಕಟವಾಯಿತು. ಸಂಕೋಚ ಪ್ರಕೃತಿಯ ಇವರು ತಮ್ಮ ಕವನಗಳನ್ನು ಪ್ರಕಟಿಸುವುದಕ್ಕೆ ನಾಚಿಕೆಪಡುತ್ತಿದ್ದ ಆ ಕಾಲದಲ್ಲಿ ಅವನ್ನು ಬೆಳಕಿಗೆ ತಂದವರು ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ ಮತ್ತು ತೀ.ನಂ.ಶ್ರೀ. ಅವರು. ಮೈಸೂರು ಮಲ್ಲಿಗೆಯ ಕವಿತಾ ಸೌರಭ ಕ್ಷಿಪ್ರದಲ್ಲಿಯೇ ನಾಡಿನಾದ್ಯಂತ ಪಸರಿಸಿತು.

ನವೋದಯ ಕಾವ್ಯ ಮಾರ್ಗವನ್ನು ಹಿಡಿದು ಮುಂದುವರಿದ ಇವರಿಗೆ ಬಿ.ಎಂ.ಶ್ರೀ. ಅವರ ಇಂಗ್ಲಿಷ್ ಗೀತೆಗಳು ಪ್ರಭಾವ ಪುಷ್ಟಿ ಕೊಟ್ಟಿತು. ಹಳ್ಳಿಯಿಂದ ಪಟ್ಟಣಕ್ಕೆ, ಪಟ್ಟಣದಿಂದ ನಗರಕ್ಕೆ ವೃತ್ತಿಯ ದೆಸೆಯಿಂದ ಬಂದು ಸಂಸಾರ ನಿರ್ವಹಿಸಬೇಕಾದಾಗ ಬದುಕಿನ ವಾತಾರವಣ ಬದಲಾಗುತ್ತ, ವಿಶಾಲವಾಗುತ್ತ ನಡೆದಂತೆ ಅದನ್ನು ಅನುಸರಿಸಿ ಇವರ ಕಾವ್ಯ ರಚನೆಯೂ ಸಂಕೀರ್ಣವೂ ಸಂಪುದ್ಧವೂ ಆಗುತ್ತಾ ಬಂತು. ಐರಾವತ, ದೀಪದಮಲ್ಲಿ (1947), ಉಂಗುರ (1949), ಇರುವಂತಿಗೆ (1952), ಶಿಲಾಲತೆ (1958), ಮನೆಯಿಂದ ಮನೆಗೆ (1960), ತೆರೆದ ಬಾಗಿಲು (1977), ನವಪಲ್ಲವ (1983), ಮಲ್ಲಿಗೆಯ ಮಾಲೆ, (ಸಮಗ್ರ ಕವಿತೆಗಳು 1986), ದುಂಡುಮಲ್ಲಿಗೆ (1993), ರಾಬರ್ಟ್ಸ್ ಕವಿಯ ಕೆಲವು ಪ್ರೇಮ ಗೀತೆಗಳು (1997), ಕೆಲವು ಚೀನೀ ಕವನಗಳು (1997), ನೆಲದನಿ (1999), ಸಂಜೆಹಾಡು (2000) - ಇವು ಇವರ ಇತರ ಕವನ ಸಂಗ್ರಹಗಳು. ಈ ಕಾವ್ಯ ಕೃತಿಗಳನ್ನಲ್ಲದೆ ಮಾದರಿಯ ಕಲ್ಲು (1942), ಉಪವನ (1958), ದಮಯಂತಿ (1970) ಎಂಬ ಗದ್ಯ ಕೃತಿಗಳನ್ನೂ ಇವರು ಬರೆದಿದ್ದಾರೆ. ಅಲ್ಲದೆ ಇಂಗ್ಲಿಷ್‌ನಿಂದ ಗಾಂಧೀಜಿಯವರ ಹಲವು ಉಕ್ತಿಗಳನ್ನೂ ಯೂರಿಪಿಡೀಸನ ಮೀಡಿಯಾ (1966) ನಾಟಕವನ್ನೂ ಮಾರ್ಕ್‌ಟ್ವೇನನ ಹಕಲ್‌ಬರಿಫಿನ್ನನ ಸಾಹಸಗಳು (1969) ಎಂಬ ಕಾದಂಬರಿಯನ್ನೂ ಹರೀಂದ್ರನಾಥ ಚಟ್ಟೋಪಾಧ್ಯಾಯರ ಕೆಲವು ಮಕ್ಕಳ ಗೀತೆಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಸುಬ್ರಹ್ಮಣ್ಯ ಭಾರತಿ (1971), ಮಾಯಾಶಂಖ ಮತ್ತು ಇತರ ಕತೆಗಳು (1972), ರಾಣಿಯ ಗಿಳಿ ಮತ್ತು ರಾಜನ ಮಂಗ (1972) - ಇವು ಇವರ ಇತರ ಅನುವಾದ ಕೃತಿಗಳು.

ಮೈಸೂರು ಮಲ್ಲಿಗೆ ಕೃತಿ ದೇವರಾಜ ಬಹದ್ದೂರ್ ಬಹುಮಾನವನ್ನೂ (1943) ಶಿಲಾಲತೆ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಶಾಖೆಯ ಬಹುಮಾನವನ್ನೂ (1957), ತೆರೆದ ಬಾಗಿಲು ಕವನ ಸಂಗ್ರಹ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ (1977) ಪಡೆದಿವೆ. ಬೆಂಗಳೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್., ನೀಡಿದೆ (1992). ದುಂಡುಮಲ್ಲಿಗೆ ಕವನ ಸಂಗ್ರಹಕ್ಕೆ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ (1995). ಇದಲ್ಲದೆ ಇವರಿಗೆ ಮಾಸ್ತಿ ಸಾಹಿತ್ಯ ಪ್ರಶಸ್ತಿ (1996), ಕೇರಳದ ಕವಿ ಕುಮಾರನ್ ಆಶಾನ್ ಪ್ರಶಸ್ತಿ (1987) ಲಭಿಸಿವೆ.

ಇವರು ದೆಹಲಿ ರೇಡಿಯೋ ಕವಿ ಸಮ್ಮೇಳನದಲ್ಲಿ, ಸರ್ವಭಾಷಾ ಕವಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಇವರನ್ನು ಸನ್ಮಾನಿಸಿದೆ. ಇವರು ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ 49ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿಯ ಅಧ್ಯಕ್ಷರಾಗಿದ್ದರು (1976). ಇವರ ಅಭಿಮಾನಿಗಳು ಚಂದನ ಎಂಬ ಅಭಿನಂದನ ಗ್ರಂಥವೊಂದನ್ನು ಅರ್ಪಿಸಿದ್ದಾರೆ (1972).

ಇವರ ಆರಂಭದ ಸಂಕಲನಗಳಲ್ಲಿ ಕಂಡುಬರುವ ಕವಿತೆಗಳು ಬಹುತೇಕ ಪ್ರಣಯದ ಮಧುರ ಸುಕುಮಾರ ಅನುಭವದ ಚಿತ್ರಗಳನ್ನು ಕೊಡುತ್ತವೆ. ಒಲುಮೆಯ ಗೀತೆಗಳಲ್ಲಿ ಪ್ರೇಮದ ಗಂಗೆ ತುಂಬಿ ಹರಿದಿದೆ. ಜೊತೆಗೆ ವಾತ್ಸಲ್ಯಭಾವದ ಚಿತ್ರಗಳೂ ಒಡಮೂಡಿವೆ. ಅವು ಹಾಡುಗಬ್ಬಗಳಾಗಿ, ತರುಣ ವಯಸ್ಸಿನವರ ಅಮರ ಗೀತೆಗಳಾಗಿ, ರಸಕೃತಿಗಳಾಗಿ ಜನಪ್ರಿಯವೂ ಆಗಿವೆ. ಮೈಸೂರು ಮಲ್ಲಿಗೆ ಕಸ್ತೂರಿಯ ನೆಲದಲ್ಲಿ ಕಾಮನಬಿಲ್ಲನ್ನು ಬಿತ್ತಿ ಬೆಳೆಸಿದ ಹೂದೋಟ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲೆಲ್ಲ ಅದು ತನ್ನ ಸುವಾಸನೆಯನ್ನು ಬೀರಿ ಮರುಳುಗೊಳಿಸಿತು. ಅದು ಅರೆಬಿರಿದ ಮೊಗ್ಗಲ್ಲ ಪ್ರಫುಲ ಪುಷ್ಪ, ಎಂದು ಮೊದಲಾಗಿ ವಿಮರ್ಶಕರು ಮೆಚ್ಚು ನುಡಿಗಳನ್ನಾಡಿದ್ದಾರೆ.

ರಚನೆಯಲ್ಲಿ ಎರಡನೆಯ ಘಟ್ಟ ಶಿಲಾಲತೆ ಮತ್ತು ಮನೆಯಿಂದ ಮನೆಗೆ ಎಂಬ ಸಂಗ್ರಹಗಳಲ್ಲಿ ಕಂಡುಬರುತ್ತದೆ. ಇಲ್ಲಿ ನವೋದಯದಿಂದ ಕವಿ ನವ್ಯ ಕಾವ್ಯದ ಕಡೆಗೆ ಹೊರಟ ಸಂಕ್ರಮಣ ಘಟ್ಟದ ರಚನೆಗಳಿವೆ. ಇಂಗ್ಲಿಷ್ ನವ್ಯಕಾವ್ಯಗಳು ಕನ್ನಡದಲ್ಲಿ ಅಂಕುರಿಸುತ್ತಿದ್ದ ನವ್ಯ ಕಾವ್ಯೋದಯದ ಅರುಣಕಾಂತಿ ಇವರ ಕಾವ್ಯಶಕ್ತಿಯನ್ನು ತಟ್ಟಿ ಎಚ್ಚರಿಸಿತು. ಶಿಲ್ಪ, ಪ್ರತಿಮೆ, ಭಾಷೆ, ವಸ್ತು, ತಂತ್ರ ಜೀವನದರ್ಶನ ಇವರ ರಚನೆಗಳನ್ನು ರೂಪಿಸಿದುವು. ಮಧುರ ಸನ್ನಿವೇಶಗಳು ಜೀವನದ ಜಂಜಡದಿಂದ ಸಾಮಾಜಿಕ ಪ್ರಭಾವಗಳಿಂದ ಪರಿವರ್ತನೆಯಾದವು. ಜೀವನ ಮೌಲ್ಯಗಳು ವ್ಯತ್ಯಾಸವಾದುವು. ಹೊಸ ಭಾವನೆಗಳು ಹೊಸ ಕಾವ್ಯ ಮಾರ್ಗದಲ್ಲಿ ಮೂಡಿಬಂದುವು. ಭಾಷೆಯಲ್ಲಿ ಸ್ಪಷ್ಟತೆ, ವಿಡಂಬನೆಯ ಮೊನಚು, ಹಾಸ್ಯದ ಹೊಳಪು ಹೆಣೆದುಕೊಂಡುವು. ಬರಿಗೊಡಗಳಿಗೆ ಸಮಾಧಾನ ಎನ್ನುವ ಕವಿತೆಯಲ್ಲಿ ಬರುವ 'ಬಾಂದಳದ ವಿಮಾನ ಅದೆಷ್ಟು ನಿಧಾನ', ದಾರವಿಲ್ಲದ ಸೂಜಿ ನಾಟಿದ ನೀಲಿ ಬಟ್ಟೆಯಲಿ ಎಂಬ ಚಿತ್ರ ನಯವಂಚನೆಯ ಭರವಸೆಗಳನ್ನು ಮನದಟ್ಟು ಮಾಡಿಸುತ್ತದೆ.

ತೆರೆದ ಬಾಗಿಲು ಸಂಕಲನ ಇವರ ಕಾವ್ಯ ರಚನೆಯ ಮೂರನೆಯ ಘಟ್ಟ. ರೂಪಕಗಳಾಗಲಿ, ಪ್ರತಿಮೆಗಳಾಗಲಿ ಉದಾಹರಣೆಗಾಗಿ ಕವಿತೆಗಳಲ್ಲಿ ಬರುತ್ತಿದ್ದು ಈಗ ಇಡೀ ಕವನ ಒಂದು ಪ್ರತಿಮೆಯಾಗಿ ಒಂದು ರೂಪಕವಾಗಿ ಮಹಾಪ್ರತಿಮೆಯಾಗುತ್ತದೆ. ಇವರ ಕೆಲವು ಕವಿತೆಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಗೆ ಭಾಷಾಂತರವಾಗಿವೆ.

ನರಸಿಂಹಸ್ವಾಮಿಯವರು ಮೈಸೂರು, ನಂಜನಗೂಡು, ಬೆಂಗಳೂರುಗಳಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ತಮ್ಮ ಸರ್ಕಾರಿ ಉದ್ಯೋಗದಿಂದ 1970 ಜನವರಿ 26ರಂದು ನಿವೃತ್ತರಾದರು. ಇವರಿಗೆ 4 ಗಂಡು ಮಕ್ಕಳು 4 ಹೆಣ್ಣುಮಕ್ಕಳು.

ಇವರು ಡಿಸೆಂಬರ್ 28, 2003ರಂದು ಬೆಂಗಳೂರಿನಲ್ಲಿ ನಿಧನರಾದರು.

**ನರಸಿಂಹಾಚಾರ್, ಎಂ.ಎ. :** 1924-2004. ಕರ್ನಾಟಕ ಸಂಗೀತದ ಹೆಸರಾಂತ ಗಾಯಕ. 1924 ಆಗಸ್ಟ್ 12ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಎಂ.ಎ.ಕೃಷ್ಣಸ್ವಾಮಿ ಐಯ್ಯಂಗಾರ್, ತಾಯಿ ರಾಜಮ್ಮ. ಇವರದು ಸಂಗೀತದ ಬಗ್ಗೆ ಆಸಕ್ತಿ ಇದ್ದ ಸಂಪ್ರದಾಯಸ್ಥ ಕುಟುಂಬ. ಇವರ ತಾಯಿ ಕೀರ್ತನೆಗಳು, ಸಂಪ್ರದಾಯದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು.ಇವರ ತಂದೆ ಬಿಡಾರಂ ಕೃಷ್ಣಪ್ಪನವರ ರಾಮಮಂದಿರಕ್ಕೆ ಸತತವಾಗಿ ಸಂಗೀತ ಕಛೇರಿಗಳನ್ನು ಕೇಳಲು ಹೋಗುತ್ತಿದ್ದರು. ಇದರಿಂದ ಇವರಿಗೆ ತಮಿಳುನಾಡಿನ ಅನೇಕ ಸಂಗೀತಗಾರರ ಪರಿಚಯವಾಯಿತು. ಸಂಗೀತದೊಂದಿಗೆ ಕ್ರಿಕೆಟ್‌ನಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ಮೈಸೂರಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ ತಂದೆಯ ಆಶಯದಂತೆ ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದ ಸಂಗೀತ ಕಾಲೇಜು ಸೇರಿದರು. ಅಲ್ಲಿ ಇವರನ್ನು ಮೊದಲು ಕೆಲವು ಪರೀಕ್ಷೆಗಳಿಗೆ ಒಳಪಡಿಸಿದರು. ಬಹಳ ಸಣ್ಣವಾಗಿದ್ದ ಇವರಿಗೆ ಕಪೋತವೃಕ್ಷ (ಪಿಜನ್ ಚೆಸ್ಟ್) ಇದೆಯೆಂದು ವೈದ್ಯರು ಅಭಿಪ್ರಾಯ ಪಟ್ಟರು. ಆದರೂ ಛಲದಿಂದ ಇವರು ಸಂಗೀತ ಪ್ರವೇಶ ಪರೀಕ್ಷೆಯಲ್ಲಿ ಕಾಮವರ್ಧಿ ರಾಗದಲ್ಲಿ ಹಾಡಿ ಎಲ್ಲರ ಮೆಚ್ಚುಗೆ ಪಡೆದು ಪ್ರವೇಶ ಪಡೆಯುವಲ್ಲಿ ಸಫಲರಾದರು.

ಗುರುಗಳಾದ ಸುಭೇಷಯ್ಯರ್‌ರವರ ಪ್ರೋತ್ಸಾಹದಿಂದ ತಮಿಳು ಭಾಷೆಯನ್ನು ಓದಲು ಬರೆಯಲು ಕಲಿತು ತಮಿಳಿನಲ್ಲಿಯೇ ಸಂಗೀತಶಾಸ್ತ್ರದ ಪ್ರಶ್ನೆಪತ್ರಿಕೆಗೆ ಉತ್ತರಿಸಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು. ಇವರ ವ್ಯಾಸಂಗದ ದಿನಗಳಲ್ಲಿ ಸುಪ್ರಸಿದ್ಧ ಸಂಗೀತಗಾರರಾದ ಟೈಗರ್ ವರದಾಚಾರ್ಯರು ಪ್ರಾತಃಕಾಲ 5 ಗಂಟೆಗೆ ಶಿಷ್ಯರನ್ನೆಲ್ಲ ಎಬ್ಬಿಸಿ ಅಕಾರ ಸಾಧನೆ ಮಾಡಿಸುತ್ತಿದ್ದಾಗ ಅದರಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಇದಲ್ಲದೇ ಪ್ರತಿ ರಾತ್ರಿ ಊಟವಾದ ಬಳಿಕ ಕೆ.ಎಸ್.ನಾರಾಯಣ ಸ್ವಾಮಿಯವರ ಮನೆಗೆ ತೆರಳಿ ವೀಣಾವಾದನವನ್ನು ಕೇಳುತ್ತಿದ್ದರು. ಇದರಿಂದ ಅನೇಕ ಗಮಕಗಳ ಪರಿಚಯವಾಗಿ ಅದನ್ನು ತಮ್ಮ ಹಾಡುಗಾರಿಕೆಯಲ್ಲಿ ಅಳವಡಿಸಿಕೊಳ್ಳುವುದು ಇವರಿಗೆ ಸಾಧ್ಯವಾಯಿತು.

ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳು ವ್ಯಾಸಂಗಮಾಡಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರು. ತಂದೆಯವರ ಆಶಯದಂತೆ ಮೈಸೂರಿನಲ್ಲಿ ಗಾನಕಲಾಮಂದಿರ ಎಂಬ ಸಂಗೀತ ಶಾಲೆಯನ್ನು ಪ್ರಾರಂಭಿಸಿ (1943) ಅನೇಕ ಶಿಷ್ಯರಿಗೆ ತರಬೇತಿ ನೀಡಿದರು. ಇಲ್ಲಿಗೆ ಚೆನ್ನೈನಿಂದ ಪ್ರಖ್ಯಾತ ಸಂಗೀತಗಾರರನ್ನು ಕರೆಯಿಸಿ ಕಛೇರಿಗಳನ್ನು ನಡೆಸಿದರು. ಅನಂತರ ಇವರು ಬೆಂಗಳೂರಿನ ಆಚಾರ್ಯ ಪಾಠಶಾಲೆ ಕಾಲೇಜಿನಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು (1980). ಇವರು ಇರುವಯ್ಯಾರಿನಲ್ಲಿ ಗುರುಕುಲ ಪದ್ಧತಿಯಲ್ಲೂ ಕೆಲವು ಸಮಯ ಶಿಕ್ಷಕರಾಗಿದ್ದರು.

ಇವರು ಆಕಾಶವಾಣಿಯಲ್ಲಿ ನಿಲಯ ಕಲಾವಿದರಾಗಿಯೂ ಸೇವೆ ಸಲ್ಲಿಸಿದರು (1941). ಇದಲ್ಲದೇ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿಯೂ ಸಂಗೀತ ಕಲಿಸಿದರು. ಇಲ್ಲಿ ಸೇವೆಯಲ್ಲಿರುವಾಗ ಇಂಡಿಯನ್ ಫಿಲಾಸಫಿಕಲ್ ಕಾಂಗ್ರೆಸ್ ಪ್ರತಿ ವರ್ಷ ನಡೆಸುತ್ತಿದ್ದ ಕಾರ್ಯಾಗಾರದಲ್ಲಿ ಶ್ರೀಲಂಕದಲ್ಲಿ ಪ್ರತಿನಿಧಿಯಾಗಿ ಭಾಗವಹಿಸುವ ಅವಕಾಶ ಪಡೆದರು. ಶ್ರೀಲಂಕದಲ್ಲಿ ಅನೇಕ ಕಛೇರಿಗಳನ್ನು ನೀಡಿದ್ದಲ್ಲದೇ ರೇಡಿಯೋ ಸಿಲೋನ್‌ನಲ್ಲಿ ಕರ್ನಾಟಕ ಸಂಗೀತ ಕಾರ್ಯಕ್ರಮವನ್ನು ನೀಡಿದರು. ಇದಾದನಂತರ ಇದೇ ಸಂಸ್ಥೆಯವರು ಶ್ರೀನಗರದಲ್ಲಿ ನಡೆಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೆಚ್ಚುಗೆ ಪಡೆದುದಲ್ಲದೇ ಸ್ವಾಮಿ ಶಿವಾನಂದ ಸರಸ್ವತಿಯವರಿಂದ ಸಂಗೀತ ಜ್ಯೋತಿ ಎಂಬ ಬಿರುದನ್ನೂ ಪಡೆದರು. ತ್ಯಾಗರಾಜರ ಉತ್ಸವ ಪ್ರಬಂಧ ಕೀರ್ತನೆಗಳು, ಪಂಚರತ್ನ ಕೃತಿಗಳು, ನೌಕಾ ಚರಿತ್ರಮು, ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೀರ್ತನೆಗಳು ಇವರ ಸಂಗೀತ ರೂಪಕಗಳಾಗಿವೆ.

ಸಂಗೀತಕ್ಕೆ ಸಂಬಂಧಿಸಿದಂತೆ ಇವರು ಅಪಾರ ಪುಸ್ತಕಗಳನ್ನು ಸಂಗ್ರಹಿಸಿದ್ದರು. ಸಂಗೀತ ವಿಚಾರದಲ್ಲಿ ಅಧಿಕೃತ ಜ್ಞಾನವುಳ್ಳವರಾಗಿದ್ದ ಇವರು ಯಾವುದೇ ಸಂಗೀತ ಸಂಬಂಧಿ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲವರಾಗಿದ್ದರು. ಸಂಗೀತಕ್ಕೆ ಸಂಬಂಧಿಸಿದಂತೆ ಕನ್ನಡಇಂಗ್ಲಿಷ್ ಭಾಷೆಗಳೆರಡರಲ್ಲೂ ಅನೇಕ ವಿದ್ವತ್‌ಪೂರ್ಣ ಲೇಖನಗಳನ್ನೂ ಬರೆದರು.

ಇವರ ಸಿದ್ಧಿಸಾಧನೆಗಳಿಗಾಗಿ ಹಲವಾರು ಗೌರವದ ಪ್ರಶಸ್ತಿಗಳು ದೊರಕಿವೆ. ಇವುಗಳಲ್ಲಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಬಿರುದು ಕರ್ನಾಟಕ ಕಲಾತಿಲಕ, ರಾಜ್ಯ ಸಂಗೀತ ವಿದ್ವಾನ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಟಿ. ಚೌಡಯ್ಯ ಸ್ಮಾರಕ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (2004) ಪ್ರಮುಖವಾದವು. ಕರ್ನಾಟಕ ಗಾನಕಲಾ ಪರಿಷತ್ತಿನವರು ಗಾನಕಲಾ ಭೂಷಣ ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ. ಇವರು 2004 ಜುಲೈನಲ್ಲಿ ನಿಧನರಾದರು. (ಎಸ್‌ಯು.ಎಂ.)

**ನರಸಿಂಹಾಚಾರ್, ಡಿ.ಎಲ್. :** 1906-71. ಪ್ರಸಿದ್ಧ ವಿದ್ವಾಂಸರು. ಕನ್ನಡ ಸಾಹಿತ್ಯ, ಭಾಷೆ, ಗ್ರಂಥ' ಸಂಪಾದನೆ - ಹೀಗೆ ಹಲವು ಕ್ಷೇತ್ರಗಳಲ್ಲಿ ಮೌಲಿಕ ಕೆಲಸ ಮಾಡಿದ್ದಾರೆ. ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ ಇವರ ಪೂರ್ಣ ಹೆಸರು. ಇವರು 1906 ಅಕ್ಟೋಬರ್ 27ರಂದು ಚಿಕ್ಕನಾಯಕನಹಳ್ಳಿಯಲ್ಲಿ ತಮ್ಮ ಮಾತಾಮಹ ಅಣ್ಣಾಸ್ವಾಮಿ ಅಯ್ಯಂಗಾರ್ಯರ ಮನೆಯಲ್ಲಿ ಹುಟ್ಟಿದರು. ಮನೆಯ ಸುಸಂಸ್ಕೃತ ವಿದ್ಯಾವಂತ ವಾತಾವರಣ ಇವರ ವ್ಯಕ್ತಿತ್ವದ ವಿಕಾಸಕ್ಕೆ ತುಂಬ ಪೋಷಣೆ ನೀಡಿತು. ಎಂಟ್ರೆನ್ಸ್ ಪರೀಕ್ಷೆಯನ್ನು ತುಮಕೂರಿನಲ್ಲಿ ಮುಗಿಸಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದರು (1924). ಭೌತಶಾಸ್ತ್ರ ರಸಾಯನಶಾಸ್ತ್ರಗಳನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡು ಆರ್ಟ್ಸ್ ವಿಭಾಗದಲ್ಲಿ ವ್ಯಾಸಂಗ ಮಾಡಿ, ಬಿ.ಎ. ಪರೀಕ್ಷೆಯನ್ನು ಮುಗಿಸಿದರು (1927). ಆ ಪರೀಕ್ಷೆಯಲ್ಲಿ, ಕನ್ನಡದಲ್ಲಿ ಹೆಚ್ಚು ಅಂಕಗಳನ್ನು ಪಡೆದದ್ದರಿಂದ ಚಿನ್ನದ ಪದಕ ಮತ್ತು

ಬಹುಮಾನಗಳನ್ನು ಗಳಿಸಿದರು. ಅದೇ ವರ್ಷ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಆರಂಭವಾಗಿದ್ದ ಕನ್ನಡ ಎಂ.ಎ. ತರಗತಿಗೆ ಸೇರಿ ಎರಡು ವರ್ಷಗಳ ವ್ಯಾಸಂಗದ ಬಳಿಕ ಪ್ರಥಮದರ್ಜೆ ಪ್ರಥಮ ಸ್ಥಾನಗಳೊಡನೆ ಎಂ.ಎ. ಪದವೀಧರರಾದರು (1929). ಆ ಸಂದರ್ಭದಲ್ಲಿ ಕುವೆಂಪು ಅವರು ಇವರ ಸಹಪಾಠಿಯಾಗಿದ್ದರು. ಅದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯದಿಂದ ಅದೇ ತಾನೇ ಏರ್ಪಾಡಾಗಿದ್ದ ಸಂಶೋಧನ ವಿದ್ಯಾರ್ಥಿವೇತನ ಪಡೆದುಕೊಂಡು ವೀರಶೈವ ಸಾಹಿತ್ಯದ ಆರಂಭಕಾಲವನ್ನು ಕುರಿತು ಸಂಶೋಧನೆ ನಡೆಸಿದರು.

ಮೈಸೂರಿನ ಪ್ರಾಚ್ಯವಿದ್ಯಾಸಂಶೋಧನ ಸಂಸ್ಥೆಯಲ್ಲಿ ರೆಸಿಡೆಂಟ್ ಕನ್ನಡ ಪಂಡಿತರಾಗಿ 1930ರಲ್ಲಿ ಕೆಲಸಕ್ಕೆ ಸೇರಿದ ಇವರು ಅಲ್ಲಿದ್ದ ಎರಡು ವರ್ಷಗಳಲ್ಲಿ ಎರಡು ಪ್ರಾಚೀನ ಗ್ರಂಥಗಳ ಸಕಲ ವೈದ್ಯಸಂಹಿತಾಸಾರಾರ್ಣವ ಮತ್ತು ಕುಮಾರವ್ಯಾಸಭಾರತದ ಭೀಷ್ಮಪರ್ವ ಸಂಪಾದನಾಕಾರ್ಯವನ್ನು ಸಮರ್ಪಕಾಗಿ ನಿರ್ವಹಿಸಿದರು. ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವಾಗಲೇ ಮಹಾರಾಜ ಕಾಲೇಜಿನಲ್ಲಿಯೂ ಒಪ್ಪೊತ್ತಿನ ಕನ್ನಡ ಪಂಡಿತರಾಗಿ ಪಾಠ ಹೇಳುತ್ತಿದ್ದರು. 1932ರಲ್ಲಿ ಪೂರ್ಣಕಾಲದ ಪಂಡಿತರಾಗಿ ಮಹಾರಾಜ ಕಾಲೇಜಿಗೆ ಬಂದರು. ಅನಂತರ 1939ರಲ್ಲಿ ಮೈಸೂರಿನ ಇಂಟರ್‌ಮೀಡಿಯೆಟ್ ಕಾಲೇಜಿಗೆ ಅಂದರೆ ಈಗಿನ ಯುವರಾಜ ಕಾಲೇಜಿಗೆ ಬಂದು, ಬಳಿಕ 1945ರಲ್ಲಿ ಉಪಪ್ರಾಧ್ಯಾಪಕ ಸ್ಥಾನಕ್ಕೆ ಬಡ್ತಿ ಪಡೆದು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಹೋದರು. ಮೂರು ವರ್ಷಗಳ ಅನಂತರ ಮತ್ತೆ ಮಹಾರಾಜ ಕಾಲೇಜಿಗೆ ಹಿಂದಿರುಗಿ, 1954ರ ವರೆಗೆ ಅಲ್ಲಿದ್ದು, ಆ ವರ್ಷ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿಗೆ ಪ್ರಧಾನ ಸಂಪಾದಕರಾಗಿ ಅಧಿಕಾರವಹಿಸಿಕೊಂಡು ಬೆಂಗಳೂರಿಗೆ ತೆರಳಿದರು. 1956ರಲ್ಲಿ ಪ್ರಾಧ್ಯಾಪಕ ಪದವಿಗೆ ಬಡ್ತಿ ಪಡೆದು, ಅಲ್ಲಿಂದ ಮಹಾರಾಜ ಕಾಲೇಜಿಗೆ ಮರಳಿದರು. ಅಧ್ಯಾಪನ ವೃತ್ತಿಯಿಂದ ನಿವೃತ್ತರಾದ ಮೇಲೆ (1962 ಮಾರ್ಚ್ 31) ಅಧ್ಯಯನ, ಸಂಶೋಧನ ಕಾರ್ಯಗಳು ಇನ್ನೂ ವ್ಯಾಪಕಗೊಂಡವು. 1963ರಿಂದ ಸುಮಾರು ಆರು ವರ್ಷಗಳ ಕಾಲ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಸಂಶೋಧನ ವಿದ್ವಾಂಸರಾಗಿದ್ದರು. ಆಗಲೇ ತೀ.ನಂ. ಶ್ರೀಕಂಠಯ್ಯನವರ ನಿಧನದಿಂದ ತೆರವಾದ ಕನ್ನಡ-ಕನ್ನಡ ನಿಘಂಟಿನ ಅಧ್ಯಕ್ಷಪದವಿಯನ್ನೂ ಪ್ರಧಾನ ಸಂಪಾದಕತ್ವವನ್ನೂ ವಹಿಸಿಕೊಂಡರು.

ಇವರು ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾ ಇಲಾಖೆಯಗಳಲ್ಲಿಯೂ ಉಸ್ಮಾನಿಯ ಮತ್ತಿತರ ವಿಶ್ವವಿದ್ಯಾನಿಲಯಗಳಲ್ಲಿಯೂ ಬೇರೆ ಬೇರೆ ವಿದ್ಯಾಸಮಿತಿಗಳಲ್ಲಿಯೂ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ-ಕನ್ನಡ ನಿಘಂಟು ಯೋಜನೆಗೆ ಎ.ಆರ್.ಕೃಷ್ಣಶಾಸ್ತ್ರಿಗಳೂ ತೀ.ನಂ. ಶ್ರೀಕಂಠಯ್ಯನವರೂ ಅಧ್ಯಕ್ಷರಾಗಿದ್ದಾಗಲೂ ಅವರ ಅನಂತರದಲ್ಲಿಯೂ ಪ್ರಬಲವಾದ ಒತ್ತಾಸೆಯಾಗಿದ್ದು, ಶಕ್ತಿಯಾಗಿದ್ದು ಆ ಯೋಜನೆ ಸುವ್ಯವಸ್ಥಿತವಾಗಿಯೂ ಸುಭದ್ರವಾಗಿಯೂ ಮುನ್ನಡೆಯಲು ಬಹುವಾಗಿ ಶ್ರಮಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸಮಯದಲ್ಲಿ (1970) ಇವರ ಸಮಕ್ಷಮದಲ್ಲಿಯೇ ನಿಘಂಟಿನ ಮೊದಲನೆಯ ಸಂಪುಟ ಬಿಡುಗಡೆಯಾಯಿತು. ಇವರು 1959-62ರ ಅವಧಿಯಲ್ಲಿ ಪ್ರಬುದ್ಧ ಕರ್ನಾಟಕದ ಪ್ರಧಾನ ಸಂಪಾದಕರಾಗಿದ್ದು, ಆ ಪತ್ರಿಕೆಯ ಬೆಳವಣಿಗೆಗೆ ಕೂಡ ಶ್ರಮವಹಿಸಿದರು.

ಇವರು ಸಮರ್ಥ ಹಾಗೂ ಶ್ರದ್ಧಾವಂತ ಅಧ್ಯಾಪಕರು: ಶ್ರೇಷ್ಠದರ್ಜೆಯ ಹಾಗೂ ಬಹುಮುಖ ವ್ಯಾಸಂಗದ ವಿದ್ವಾಂಸರು, ಸು. 40 ವರ್ಷಗಳಿಗೆ ಮೇಲ್ಪಟ್ಟಷ್ಟು ಕಾಲ ಕನ್ನಡ ಭಾಷೆ ಸಾಹಿತ್ಯಗಳ ಏಳಿಗೆಗೆ ಇವರು ತಮ್ಮ ಶಕ್ತಿಸರ್ವಸ್ವವನ್ನೂ ವಿನಿಯೋಗಿಸಿದರು. ಕನ್ನಡ ಭಾಷೆ ಸಾಹಿತ್ಯಗಳ ಏಳಿಗೆಯನ್ನು ತಮ್ಮ ಬದುಕಿನ ದೀಕ್ಷೆಯನ್ನಾಗಿ ಗ್ರಹಿಸಿ, ಅವುಗಳಲ್ಲಿ ತಕ್ಕ ಪ್ರೌಢಿಮೆಯನ್ನು ಮೊದಲು ತಾವು ಗಳಿಸಿಕೊಂಡು ಅನಂತರ ಚಿಂತನ ವಿಚಾರವಿಮರ್ಶೆ ಸಿದ್ಧಾಂತಗಳ ಫಲವನ್ನು ಹಲವು ವರ್ಷಗಳವರೆಗೆ ತಮ್ಮ ಹಲವಾರು ವಿದ್ಯಾರ್ಥಿಗಳಿಗೆ ಅಧ್ಯಾಪನದ ಮೂಲಕವಾಗಿ ಕೈಗೂಡಿಸಿದರು. ಇದರಜೊತೆಗೆ ಆಗಿಂದಾಗ್ಗೆ ಲೇಖನಗಳ ಮೂಲಕವೂ ಕೃತಿಗಳ ಮೂಲಕವೂ ಅವುಗಳಿಗೆ ನಿಷ್ಪೃಷ್ಟ ರೂಪವನ್ನು ಕೊಟ್ಟು ಕನ್ನಡ ಸಾಹಿತ್ಯದ ಶಕ್ತಿಯನ್ನೂ ಸಂಪತ್ತನ್ನೂ ಬೆಳೆಸಿದರು. ಭಾಷೆ, ವ್ಯಾಕರಣ, ನಿಘಂಟು, ಗ್ರಂಥಸಂಪಾದನೆ, ಛಂದಸ್ಸು, ಶಾಸನ, ಪ್ರಾಚೀನ ಸಾಹಿತ್ಯ - ಇವನ್ನು ತಮ್ಮ ಕಾರ್ಯಕ್ಷೇತ್ರದ ವಿಷಯಗಳನ್ನಾಗಿ ಹಿಡಿದು ಆ ಒಂದೊಂದು ವಿಷಯದಲ್ಲೂ ವಿರಾಮಶೀಲವಾದ ಗಾಢವಾದ ಸಂಶೋಧನಗಳ ಮೂಲಕ ಕನ್ನಡ ವಿದ್ವತ್ತನ್ನು ಬಲಪಡಿಸಿದರು. ಕನ್ನಡ ಸಾಹಿತ್ಯದ ಮೂಲಾಧಾರಗಳನ್ನು ಕಟ್ಟಿದರು. ಇವರ ಬೆಲೆಯುಳ್ಳ ಮೌಲಿಕ ರಚನೆಗಳು ನಿರಂತರ ಅಧ್ಯಯನ ಅಧ್ಯಾಪನಗಳ ವೈಜ್ಞಾನಿಕ ದೃಷ್ಟಿಯ ಅನುಸಂಧಾನ ಸಂಯೋಜನೆಗಳ ಫಲವಾಗಿ ಮೂಡಿಬಂದವು. ಜ್ಞಾನೋಪಾಸನೆಯೇ ಜೀವಿತಸಾರ್ಥಕ್ಯವೆಂದೂ ಸಾಹಿತ್ಯೋಜ್ಜೀವನವೇ ಜೀವನಧ್ಯೇಯವೆಂದೂ ನಂಬಿ ಇವರು ಕೃತಿರಚನೆ ಮಾಡುತ್ತಿದ್ದುದರಿಂದ ಇವರ ರಚನೆಗಳಲ್ಲಿ ಇವರ ಶುದ್ಧವಾದ ಅಭಿರುಚಿ, ಗಾಢವಾದ ಸಾಮರ್ಥ್ಯ, ನಿಷ್ಪೃಷ್ಟವಾದ ವಿಚಾರಧಾರೆ, ಪ್ರಖರವಾದ ವಿಶ್ಲೇಷಕಪಟುತ್ವ, ವಸ್ತು ನಿಷ್ಠೆಯ ಛಲಗಾರಿಕೆ, ಚಿರಕಾಲಿಕ ಸತ್ತ್ವ, ಅನಂತಕಾಂತಿ - ಈ ಗುಣಗಳೆಲ್ಲ ಮೇಲಾಗಿ ಪ್ರತಿಫಲಿಸಿ ತೋರುತ್ತಿದ್ದವು.

ಇವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸು. 70-80 ಸಂಶೋಧನ ಲೇಖನಗಳನ್ನು ಬರೆದು ನಾಡಿನ ಬೇರೆ ಬೇರೆ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಇವುಗಳಲ್ಲಿ ಬಹುಪಾಲು ಕನ್ನಡ ಭಾಷೆ ಸಾಹಿತ್ಯಗಳ ಮುಖ್ಯವೂ ಜಟಿಲವೂ ಆದ ಸಮಸ್ಯೆಗಳನ್ನೂ ವಿಷಯಗಳನ್ನೂ ಕುರಿತವಾಗಿವೆ. ಪ್ರಾಚೀನ ಸಾಹಿತ್ಯ, ಆ ಸಾಹಿತ್ಯದ ವಿಮರ್ಶೆ ಮತ್ತು ಚರಿತ್ರೆ, ಗ್ರಂಥಸಂಪಾದನೆ, ಶಬ್ದಾರ್ಥ ವಿಚಾರ ಇವು ಇವರಿಗೆ ಬಹು ಮೆಚ್ಚಿಗೆಯ ವಿಷಯಗಳು. ಸಕಲವೈದ್ಯಸಂಹಿತಾ ಸಾರಾರ್ಣವ, ಭೀಷ್ಮಪರ್ವ, ಪಂಪರಾಮಾಯಣ ಸಂಗ್ರಹ, ವಡ್ಡಾರಾಧನೆ, ಸಿದ್ಧರಾಮಚರಿತೆಯ ಸಂಗ್ರಹ, ಶಬ್ದಮಣಿದರ್ಪಣ, ಗೋವಿನ ಹಾಡು ಇವು ಇವರಿಂದ ಸಂಪಾದಿತವಾದ ಗ್ರಂಥಗಳು. ಇವುಗಳಲ್ಲದೆ ಇತರರೊಡನೆ ಸೇರಿ ಸಿದ್ಧರಾಮಚಾರಿತ್ರ, ಸುಕುಮಾರಚರಿತ್ರೆ ಎಂಬ ಕೃತಿಗಳನ್ನು ಸಂಪಾದಿಸಿದ್ದಾರೆ. ಇವೆಲ್ಲ ಬಹುಮಟ್ಟಿಗೆ ಶಾಸ್ತ್ರೀಯವಾದ ಗ್ರಂಥಸಂಪಾದನೆಯ ನಿಯಮಗಳಿಗೆ ಅನುಸಾರವಾಗಿ ಸಂಪಾದಿತವಾಗಿವೆಯಲ್ಲದೆ, ವಿದ್ವತ್ ಪೂರ್ಣವಾದ ಉಪೋದ್ಘಾತ, ಟಿಪ್ಪಣಿಗಳು, ಶಬ್ದಕೋಶ ಮೊದಲಾದ ಸಹಾಯಕ ಸಾಮಗ್ರಿಗಳನ್ನೂ ಒಳಗೊಂಡಿವೆ. 'ಶಬ್ದವಿಹಾರ' ಪ್ರಾಚೀನ ಸಾಹಿತ್ಯದ ಶಬ್ದಾರ್ಥವಿಚಾರವನ್ನು ಕುರಿತ ಇವರ ಗ್ರಂಥ ಕನ್ನಡ ಗ್ರಂಥಸಂಪಾದನೆ ಗ್ರಂಥಸಂಪಾದನಶಾಸ್ತ್ರವನ್ನೂ ಕನ್ನಡ ಗ್ರಂಥಸಂಪಾದನೆಯ ನಾನಾ ಮುಖಗಳನ್ನೂ ಒಳಗೊಂಡಿರುವ ಅತ್ಯುಪಯುಕ್ತವಾದ ಶಾಸ್ತ್ರಗ್ರಂಥ. ಪಂಪಭಾರತದೀಪಿಕೆ ಆ ಗ್ರಂಥಕ್ಕೆ ಸವಿವರವಾದ ಹಾಗೂ ಬೆಲೆಯುಳ್ಳ ಟಿಪ್ಪಣಿಗಳನ್ನು ಕೊಟ್ಟಿರುವ ಸಹಾಯಕ ಗ್ರಂಥ. ಪೀಠಿಕೆಗಳು, ಲೇಖನಗಳು ಎಂಬ ಬೃಹದ್‌ಗ್ರಂಥ ಆಚಾರ್ಯರ ಸಂಶೋಧನ ಮತ್ತು ಇತರ ಲೇಖನಗಳ ಸಮುಚ್ಚಯ.

ಕನ್ನಡ ಭಾಷಾಸಾಹಿತ್ಯಗಳಿಗೆ, ಮುಖ್ಯವಾಗಿ ಸಂಶೋಧನೆ ಸಂಪಾದನೆ ಶಾಖೆಗಳಿಗೆ ಸಲ್ಲಿಸಿದ ವಿಶೇಷ ಸೇವೆಯಿಂದಾಗಿ ಇವರು 1960ರಲ್ಲಿ ಬಿದರೆಯಲ್ಲಿ ನಡೆದ 41ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಆ ಸಂದರ್ಭದ ಸವಿನೆನಪಿಗಾಗಿ ಇವರ ವ್ಯಕ್ತಿತ್ವ ವಿದ್ವತ್ತುಗಳನ್ನು ಕುರಿತ ಜ್ಞಾನೋಪಾಸಕ ಎಂಬ ಅಭಿನಂದನ ಗ್ರಂಥವನ್ನು ಇವರಿಗೆ ಅರ್ಪಿಸಲಾಯಿತು. ಹೀಗೆಯೇ 1967ರಲ್ಲಿ ಉಪಾಯನ ಎಂಬ ಇನ್ನೊಂದು ಬೃಹತ್ ಅಭಿನಂದನಾ ಗ್ರಂಥವನ್ನು ಅರ್ಪಿಸಲಾಯಿತು. 1967ರಲ್ಲಿ ಮೈಸೂರು ಸರ್ಕಾರ ಇವರಿಗೆ ರಾಜ್ಯ ಪ್ರಶಸ್ತಿಯನ್ನಿತ್ತು ಗೌರವಿಸಿತು. 1969ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇವರ ಅಪಾರವಾದ ವಿದ್ವತ್ತನ್ನು ಮನ್ನಿಸಿ ಗೌರವ ಡಿ ಲಿಟ್ ಪದವಿಯನ್ನು ನೀಡಿತು. 1971 ಮೇ 8ರಂದು ನಿಧನರಾದರು. *

**ನರಸಿಂಹಾಚಾರ್, ಪು. ತಿ. :** 1905-1998. ಕನ್ನಡದ ನವೋದಯ ಕಾಲದ ಪ್ರಮುಖ ಕವಿಗಳಲ್ಲೊಬ್ಬರು. ಪ್ರಬಂಧಕಾರರು, ನಾಟಕಕಾರರು. ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ ಎಂಬುದು

ಇವರ ಪೂರ್ಣ ಹೆಸರು. ಪು.ತಿ.ನ. ಇವರ ಕಾವ್ಯನಾಮ. ಇವರು ಮೇಲುಕೋಟೆಯಲ್ಲಿ 1905 ಮಾರ್ಚ್ 17ರಂದು ಜನಿಸಿದರು. ಚಲುವ ನಾರಾಯಣಸ್ವಾಮಿಯ ವೈರಮುಡಿ ಉತ್ಸವದಂದು. ಯದುಗಿರಿಯ ಪ್ರಕೃತಿರಮಣೀಯತೆ, ಚಲುವನಾರಾಯಣ ಸ್ವಾಮಿಯ ದೇಗುಲದ ಸುತ್ತಲೂ ಇರುವ ಉತ್ಸವಸಂಭ್ರಮಗಳು ಹಾಗೂ ಆಸ್ತಿಕ ವಾತಾವರಣ, ಅಲ್ಲದೆ ಪ್ರಸಿದ್ಧ ಪುಣ್ಯಕ್ಷೇತ್ರದಲ್ಲಿ ಜರುಗುತ್ತಿದ್ದ ಸಂಗೀತ ನಾಟಕಾದಿಗಳ ವೈಭವ ಇವೆಲ್ಲ ಇವರ ಬೆಳೆಯುತ್ತಿದ್ದ ಮನಸ್ಸನ್ನು ಸಂಸ್ಕರಿಸಿದ ಶಕ್ತಿಗಳು. ತಮ್ಮ ಹದಿಮೂರನೆಯ ವರ್ಷದವರೆಗೂ ಮೇಲುಕೋಟೆಯಲ್ಲಿ ಮಾಧ್ಯಮಿಕ ಶಾಲೆ ವ್ಯಾಸಂಗದೊಂದಿಗೆ ವೇದ ಹಾಗೂ ಸಂಸ್ಕೃತಗಳನ್ನು ಕಲಿತರು. ಮುಂದೆ ಮೈಸೂರಿನ ಮಹಾರಾಜ ಕೊಲಿಜಿಯೇಟ್ ಹೈಸ್ಕೂಲಿನಲ್ಲಿ ಮತ್ತು ಮಹಾರಾಜ ಕಾಲೇಜುಗಳಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರಿಸಿ, ಸಂಸ್ಕೃತ ದರ್ಶನದೊಂದಿಗೆ ಇಂಗ್ಲಿಷ್ ಹಾಗೂ ಫ್ರೆಂಚ್ ಭಾಷೆ ಸಾಹಿತ್ಯಗಳನ್ನು ಅಧ್ಯಯನ ಮಾಡಿ ಬಿ.ಎ. ಪದವಿ ಪಡೆದರು (1926).

ಇನ್ಸ್‌ಪೆಕ್ಟರ್ ಆಫ್ ಆಫೀಸ್ ಸಿಸ್ಟವ್ ಅಂಡ್ ಕೌ ಪ್ರೊಟಕ್ಷನ್ ಎಂಬ ಹುದ್ದೆಗೆ ಆಯ್ಕೆಯಾಗಿ (1926) ಚೀಫ್ ಕಮಾಂಡೆಂಟರ ಕಚೇರಿಯಲ್ಲಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಇವರು ಅನಂತರ ಮೈಸೂರ್ ಸ್ಟೇಟ್ ಟ್ರೂಪ್ಸ್‌ನಲ್ಲಿ ಸೂಪರಿಂಟೆಂಡೆಂಟ್ ಆಫ್ ಮಿಲಿಟರಿ ಸ್ಟೋರ್ಸ್ ಆಗಿ 1952ರ ವರೆಗೆ ಕೆಲಸ ಮಾಡಿದರು. 1952-61ರ ವರೆಗೂ ಮೈಸೂರು ಶಾಸನಸಭೆಯಲ್ಲಿ ಸಂಪಾದಕರಾಗಿದ್ದರು. 1963-1966ರ ವರೆಗೆ ಆಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿದ್ದ ಕನ್ನಡ ವಿಶ್ವಕೋಶದ ಕಚೇರಿಯಲ್ಲಿ ಭಾಷಾಂತರಕಾರರಾಗಿಯೂ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ-ನಿಘಂಟು ಕಚೇರಿಯಲ್ಲಿ ಸಂಪಾದಕರಾಗಿಯೂ (1966-71) ಸೇವೆ ಸಲ್ಲಿಸಿದರು .

ಭಾವಗೀತೆ, ಗೀತನಾಟಕ, ಸಂಗೀತರೂಪಕ, ಭಾವನಾಚಿತ್ರ, ರಸಚಿತ್ರ, ಪ್ರಬಂಧ, ವಿಚಾರಸಾಹಿತ್ಯ, ಸಣ್ಣಕಥೆ, ಗದ್ಯನಾಟಕ - ಹೀಗೆ ಅನೇಕ ಪ್ರಕಾರಗಳಲ್ಲಿ ನರಸಿಂಹಾಚಾರ್ಯರು ಕೃತಿಗಳನ್ನು ರಚಿಸಿದ್ದಾರೆ. ಗೀತನಾಟಕಗಳು ಇವರ ಪ್ರಾತಿನಿಧಿಕ ಪ್ರಕಾರ, ಇವರ ಗೀತನಾಟಕಗಳನ್ನು ಸ್ಥೂಲವಾಗಿ ಸಾಹಿತ್ಯ ಪ್ರಮುಖವಾದುವು, ಸಂಗೀತ ಪ್ರಮುಖವಾದುವು ಎಂದು ವಿಂಗಡಿಸಬಹುದು. ಅಹಲ್ಯೆ, ಶಬರಿ, ವಿಕಟಕವಿ ವಿಜಯ, ಸತ್ಯಾಯನ ಹರಿಶ್ಚಂದ್ರ - ಇವು ಮೊದಲನೆಯ ವರ್ಗಕ್ಕೆ,, ಹಂಸದಮಯಂತಿ ಮತ್ತು ಇತರ ರೂಪಕಗಳು. ರಾಮಪಟ್ಟಾಭಿಷೇಕ - ಇವು ಎರಡನೆಯ ವರ್ಗಕ್ಕೆ ಸೇರುತ್ತವೆ. ಗೋಕುಲ ನಿರ್ಗಮನ, ದೋಣಿಯ ಬಿನದ ಮತ್ತು ಕವಿ - ಈ ನಾಟಕಗಳಲ್ಲಿ ಸಾಹಿತ್ಯ ಮತ್ತು ಸಂಗೀತದ ಸಮ್ಮೇಳನವನ್ನು ಗುರುತಿಸಬಹುದು.

ಅಹಲ್ಯೆ (1941) ಶಬರಿ (1946) ಮತ್ತು ಸತ್ಯಾಯನ ಹರಿಶ್ಚಂದ್ರ - ಈ ನಾಟಕಗಳು ವಸ್ತುವಿನ ದೃಷ್ಟಿಯಿಂದ ಪುರಾಣ ವ್ಯಕ್ತಿಗಳನ್ನು ಕುರಿತ, ಬಹುಶಃ ಅವರು ತಮ್ಮ ಜೀವನದಲ್ಲಿ ಕಂಡುಕೊಂಡ ತತ್ತ್ವದ ಅಭಿವ್ಯಕ್ತಿ. ಬಾಳಿನ ಹಂಬಲ ತೀರಿದ ಕೂಡಲೇ ಬಾಳು ಅರ್ಥಹೀನವಾಗುತ್ತದೆ. ಕೃತಕೃತ್ಯ ಚೇತನ ಮುಕ್ತಿಗೆ ಪ್ರಯತ್ನಿಸುತ್ತದೆ. ಎಂಬುದು ಶಬರಿ ನಾಟಕದ ಸಂದೇಶ. ಅಹಲ್ಯೆ ಕನ್ನಡ ಗೀತನಾಟಕ ಪ್ರಪಂಚದಲ್ಲೇ ಅನುಪಮವಾದುದು. ದೋಣಿಯ ಬಿನದ ಮತ್ತು ಕವಿ ಕನ್ನಡಕ್ಕೆ ಹೊಸ ಬಗೆಯ ಕೊಡುಗೆಗಳು. ಪ್ರಕೃತಿ ವಸ್ತುಗಳಿಗೆ ವ್ಯಕ್ತಿರೂಪ ನೀಡಿರುವುದು ಈ ಎರಡು ನಾಟಕಗಳಲ್ಲಿನ ವಿಶೇಷ. ವಸ್ತುವಿನ ದೃಷ್ಟಿಯಿಂದ ವಿಕಟಕವಿ ವಿಜಯ ಮಹತ್ವಪೂರ್ಣವಾದ ಕೃತಿ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಬ್ರಿಟಿಷ್ ಕೃಪಾಪೋಷಿತರಾಗಿದ್ದ ದೇಶೀ ಸಂಸ್ಥಾನಾಧೀಶರು ತಮ್ಮ ಎಲ್ಲ ಅಧಿಕಾರಗಳನ್ನೂ ಕಾಂಗ್ರೆಸ್ಸಿಗೆ ವಹಿಸಬೇಕಾದ ಪರಿಸ್ಥಿತಿ ಭಾರತದ ಇತಿಹಾಸದಲ್ಲಿ ಬಹಳ ನಾಜೂಕಾದ ಸಂದರ್ಭ. ಇಂಥ ಸಮಕಾಲೀನ ರಾಜಕೀಯ ಘಟನೆಯನ್ನು ತುಂಬ ನಾಜೂಕಾಗಿ ಈ ನಾಟಕದಲ್ಲಿ ಪು.ತಿ.ನ. ಚಿತ್ರಿಸಿದ್ದಾರೆ.

ಹಣತೆ (1939), ಮಾಂದಳಿರು (1936), ಶಾರದಯಾಮಿನಿ (1944); ಗಣೇಶದರ್ಶನ, ರಸಸರಸ್ವತಿ (1954), ಮಲೆದೇಗುಲ, ಹೃದಯ ವಿಹಾರಿ (1960), ಇರುಳ ಮೆರಗು (1974), ಹಳೆಬೇರು ಹೊಸ ಚಿಗುರು (1981), ಹಣತೆಯ ಹಾಡು (1998), ಪು.ತಿ.ನ. ಸಮಗ್ರ ಕವನಗಳು (1988), ಇದವು ಕವನ ಸಂಕಲನಗಳು. ಇವೇ ಮುಂತಾದ ಭಾವಗೀತ ಸಂಕಲಗಳನ್ನು ನರಸಿಂಹಾಚಾರ್ಯರು ಪ್ರಕಟಿಸಿದ್ದಾರೆ. ನವೋದಯ ಯುಗದಲ್ಲಿ ಸಾಮಾನ್ಯವಾಗಿ ಕಾಣುವ ಪ್ರಕೃತಿ, ಪ್ರೇಮ, ಭಕ್ತಿ, ಆಧ್ಯಾತ್ಮಗಳೇ ಇವರ ಕವನಗಳ ವಸ್ತುಗಳು. ಜೊತೆಗೆ ಅಂದಿನ ರಾಷ್ಟ್ರೀಯ ಎಚ್ಚರ ಇವರ ಕವನಗಳಲ್ಲಿ ಸ್ಥಾನ ಪಡೆದಿವೆ. ಸಂಗೀತ ಪ್ರಿಯವಾದ ಇವರ ಮನಸ್ಸು ಹಾಡುಗಳನ್ನು ರಚಿಸಿದೆ. ಹಾಗೆಯೇ ಗೀತನಾಟಕಗಳಲ್ಲಿನ ಶೈಲಿ ಭಾವಗೀತೆಗಳಲ್ಲೂ ಛಾಯೆದೋರಿ ಎಷ್ಟೋ ಕವನಗಳಲ್ಲಿ ಸಂಭಾಷಣೆಗಳನ್ನು ತಂದಿದೆ. ಶರದೃತುವಿನ ನೀಲ ನಿರಾಳ ಆಕಾಶ, ಇರುಳು, ಪರ್ವದಿನಗಳಲ್ಲಿನ ವಿಶೇಷ ವಾತಾವರಣ ಹಾಗೂ ಮೌನ - ಇವು ಇವರು ವಿಶೇಷ ಒಲವು ತೋರಿರುವ ವಸ್ತುಗಳು. ಮೌನದ ಬಗೆಗಿನ ಇವರ ಅನುಭವ ಯದುಗಿರಿಯ ಮೌನವಿಕಾಸ ಎಂಬ ಕವನದಲ್ಲಿ ಸುಂದರವಾಗಿ ಚಿತ್ರಿತವಾಗಿದೆ. ಮಲೆದೇಗುಲ ಇವರ ಭಾವಗೀತ ಪ್ರಪಂಚದಲ್ಲಿ ಪಡೆದ ಸಿದ್ಧಿಯನ್ನು ಪ್ರತಿನಿಧಿಸುವ ಕೃತಿ. ಅತಿಥಿ ಎಂಬುದು ಇವರ ಪ್ರಾತಿನಿಧಿಕ ಕವನಗಳ ಸಂಕಲನ.

ಗದ್ಯಪ್ರಾಚುರ್ಯದ ಕಾಲದಲ್ಲಿ ಗೀತಕ್ಕೆ ಒಲಿದು ತಮ್ಮ ಪ್ರತಿಭೆಯನ್ನು ಮೆರೆಸಿರುವ ನರಸಿಂಹಾಚಾರ್ಯರು, ಗದ್ಯದಲ್ಲಿ ಭಾವನಾಚಿತ್ರ, ಸಣ್ಣಕಥೆ, ಪ್ರಬಂಧ ಹಾಗೂ ಕಾವ್ಯಮೀಮಾಂಸೆಗಳನ್ನು ಕೊಟ್ಟಿದ್ದಾರೆ. ಗದ್ಯನಾಟಕವನ್ನೂ ರಚಿಸಿದ್ದಾರೆ.

ರಾಮಾಚಾರಿಯ ನೆನಪು ಹೆಸರಿಗೆ ತಕ್ಕಂತೆ ನೆನಪುಗಳ ಸಂಕಲನ, ಆದರೆ ಇಲ್ಲಿನ ಚಿತ್ರಣಗಳು ಅಥವಾ ವಿಚಾರಲಹರಿಯನ್ನು ಓದುಗರಿಗೆ ತಲುಪಿಸುವ ಮುನ್ನ ಒಂದು ಸನ್ನಿವೇಶದ ಪರಿವೇಷವನ್ನು ನೀಡುತ್ತಾರೆ; ಪಾತ್ರಗಳನ್ನು ತಂದು ಸಂಭಾಷಣೆಗೆ ತೊಡಗಿಸುತ್ತಾರೆ. ಅಂತೆಯೇ ಅದರ ಸ್ವರೂಪಕ್ಕೆ ಭಾವನಾಚಿತ್ರ ಎಂದು ಹೆಸರಿಟ್ಟಿದ್ದಾರೆ. ಆದರೆ ರಥಸಪ್ತಮಿಯಲ್ಲಿ (1949) ಈ ಪರಿವೇಷ ಹೋಗಿ ಶುದ್ಧ ಚಿತ್ರಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಧ್ವಜರಕ್ಷಣೆ ಎಂಟು ಕಥೆಗಳ ಸಂಕಲನ (1949), ವಿಧೇಯನಾಗಿ ಬಾಳುತ್ತಿದ್ದ ಸರ್ಕಾರಿ ನೌಕರ ಒಮ್ಮೆಲೇ ಸನ್ನಿವೇಶ ವಶದಿಂದ ಕಿಡಿಯಂತೆ ಸಿಡಿದು ಹುತಾತ್ಮನಾಗುವುದು ಧ್ವಜರಕ್ಷಣೆಯ ಕಥೆ. ಕೊಳಂದೆಯಂಥ ವಿಚಿತ್ರ ಪಾತ್ರಗಳು, ರಾಗಿಣಿ ಎಂಬ ಕಥೆಯಲ್ಲಿ ಸಂದಿರುವ ಸಾಮಾಜಿಕ ನ್ಯಾಯ, ಪ್ರಧಾನವೆಂಬ ಕಥೆಯಲ್ಲಿ ಬರುವ ದಾನದ ಮನೋಭಾವದ ಹಿನ್ನೆಲೆ - ಎಲ್ಲವೂ ಮನಸೆಳೆಯುವಂಥವು.

ರಾಮಾಚಾರಿಯ ನೆನಪು; ರಥಸಪ್ತಮಿಗಳಲ್ಲಿನ ಶೈಲಿ, ವಿಚಾರಶಕ್ತಿ ಹಾಗೂ ಸಂಸ್ಕೃತ ಸಾಹಿತ್ಯ ಮತ್ತು ಶಾಸ್ತ್ರಗಳ ಸಂಸ್ಕಾರದಿಂದ ಬಂದಿರುವ ತಾರ್ಕಿಕ ಶಕ್ತಿ, ತಿಳಿಹಾಸ್ಯ, ಲಘುವಿಡಂಬನೆ - ಎಲ್ಲವೂ ಇವರ ಎರಡು ಪ್ರಬಂಧ ಸಂಕಲನಗಳಾದ ಈಚಲುಮರದ ಕೆಳಗೆ (1949) ಹಾಗೂ ಧೇನುಕ ಪುರಾಣಗಳಲ್ಲಿ (1967) ಎದ್ದು ಕಾಣುವ ಅಂಶಗಳು. ಈ ಎರಡೂ ಪ್ರಬಂಧ ಸಂಕಲನಗಳಲ್ಲಿ ದಿನನಿತ್ಯದ ವಸ್ತುಗಳೂ ಸಾಮಾನ್ಯ ಸಂಗತಿಗಳೂ ಇವರ ಕಣ್ಣುಗಳಲ್ಲಿ, ವಿಚಾರದ ಓಟದಲ್ಲಿ ಪಡೆಯುವ ವಿಶೇಷತೆಗಳನ್ನೇ ಅಲ್ಲದೆ ವಿವಿಧ ಪ್ರಕ್ರಿಯೆಗಳ ಬಗ್ಗೆ ತರ್ಕಸ್ಫುರಿತವಾದ ವಿಶೇಷ ಸತ್ಯಗಳನ್ನು ಇವರು ಹೊರಗೆಡಹಿದ್ದಾರೆ.

ಕಾವ್ಯಕುತೂಹಲದಲ್ಲಿ ಕಾವ್ಯಮೀಮಾಂಸೆಗೆ ಕೆಲವು ಸ್ವೋಪಜ್ಞ ವಿಚಾರಗಳನ್ನು ಇವರು ನೀಡಿದ್ದಾರೆ. ಇತ್ತೀಚೆಗೆ ಹರಿಚರಿತಮನನ ಎಂಬ ಮಹಾಕಾವ್ಯವನ್ನೂ ಕಾರಿಕೆ ಎಂಬ ರೂಪಗಳಲ್ಲಿ ರಸಸಮೀಕ್ಷೆ ಎಂಬ ಕಾವ್ಯಮೀಮಾಂಸೆಯನ್ನೂ ಇವರು ರಚಿಸಿದ್ದಾರೆ. ಇವುಗಳಲ್ಲದೆ ಕನ್ನಡ ಭಗವದ್ಗೀತೆ (1957), ಗಯಟೆಯ ಫೌಸ್ಟ್ ಹಾಗೂ ತಿರುವಾಯ್‌ಮೊಳಿಯ ನೂರು ಪದ್ಯಗಳ ಅನುವಾದವನ್ನು ಪದ್ಯಗಳಲ್ಲಿ ಮಾಡಿದ್ದಾರೆ. ಇದಲ್ಲದೆ ಯದುಗಿರಿಯಲ್ಲಿ ಗೆಳೆಯರು (1981) ಎಂಬ ಪುಸ್ತಕವನ್ನು ಪ್ರಕಟಿಸಿರುವರು.

ಕನನಡದ ಹಿರಿಯ ಕವಿಗಳಾದ ನರಸಿಂಹಾಚಾರ್ಯರಿಗೆ ಹಲವು

ಬಗೆಯ ಬಹುಮಾನಗಳು ಬಂದಿವೆ. ಇವರ ಹಂಸದಮಯಂತಿ ಮತ್ತು ಇತರ ರೂಪಕಗಳು ಎಂಬ ಕೃತಿಗೆ ಸಾಹಿತ್ಯ ಅಕಾಡೆಮಿ 1966ರಲ್ಲಿ ಇವರನ್ನು ಸನ್ಮಾನಿಸಿತು. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್. ಪ್ರಶಸ್ತಿ ನೀಡಿ ಗೌರವಿಸಿತು. ಕರ್ನಾಟಕ ಸರ್ಕಾರ ಇವರ ಶ್ರೀಹರಿಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ ನೀಡಿ ಗೌರವಿಸಿದೆ (1991). ಚಿಕ್ಕಮಗಳೂರಿನಲ್ಲಿ ಜರುಗಿದ 53ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು (1981). 1998 ರಂದು ಅಕ್ಟೋಬರ್ ಬೆಂಗಳೂರಿನಲ್ಲಿ ನಿಧನರಾದರು. ಕನ್ನಡ ಕವಿಗಳು ಇವರನ್ನು ಕುರಿತು ಬರೆದಿರುವ ಪದ್ಯಗಳ ಸಂಕಲನ ಯದುಗಿರಿಯ ವೀಣೆ ಇವರಿಗೆ ಸಮರ್ಪಿತವಾಗಿದೆ. 'ಯದುಗಿರಿ' ಇವರ ಅಭಿನಂದಾನ ಗ್ರಂಥ (1981). ಸು.ರಂ. ಎಕ್ಕುಂಡಿಯವರು ಪು.ತಿ.ನ. ಕುರಿತ ...................... ರಚಿಸಿದ್ದಾರೆ. ಶೇಷಮ್ಮ ಇವರ ಪತ್ನಿ. ಇವರಿಗೆ ಏಳು ಜನ ಹೆಣ್ಣು ಮಕ್ಕಳು ಒಬ್ಬ ಮಗ. (ಎಂ.ಕೆ).

**ನರಸಿಂಹಾಚಾರ್ಯ, ಆರ್. :** 1860-1936, ಕನ್ನಡಕ್ಕೆ ಪುರಸ್ಕಾರವೇ ಇಲ್ಲದಿದ್ದ ಕಾಲದಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ದುಡಿದ ಮಹನೀಯರಲ್ಲೊಬ್ಬರು. ಕರ್ನಾಟಕ ಕವಿಚರಿತ್ರೆಕಾರರು, ಸಂಶೋಧನೆ, ಗ್ರಂಥಸಂಪಾದನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಮೌಲಿಕ ಕೆಲಸ ಮಾಡಿದವರು. ಇವರದು ಪಾಂಡಿತ್ಯ ಮನೆತನ. ಶ್ರೀರಂಗಪಟ್ಟಣದ ಮಂಡ್ಯದ ಕೊಪ್ಪಲಿನಲ್ಲಿ 9-4-1860ರಲ್ಲಿ ಹುಟ್ಟಿದರು. ತಂದೆ ತಿರುನಾರಾಯಣ ಪೆರುಮಾಳ್, ತಾಯಿ ಶಿಂಗಮ್ಮಾಳ್, ತಂದೆಯಿಂದಲೇ ಇವರಿಗೆ ಸಂಸ್ಕೃತದ ಅಭ್ಯಾಸವಾಯಿತು. ತಮಿಳು, ಸಂಸ್ಕೃತ, ಕನ್ನಡ ಭಾಷೆಗಳ ಜೊತೆಗೆ ಶಾಲೆಯಲ್ಲಿ ಇಂಗ್ಲಿಷ್ ಭಾಷೆಯ ಪರಿಚಯವೂ ಆಯಿತು. ಅನಂತರ ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪರೀಕ್ಷೆಯಲ್ಲಿ (1882) ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣರಾಗಿ ಅನೇಕ ಪಾರಿತೋಷಕಗಳನ್ನು ಪಡೆದರು. ಪದವಿ ಪಡೆದ ತರುಣದಲ್ಲಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಗಳಲ್ಲಿ ಪ್ರೌಢಶಾಲೆಯ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು ಅನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು. ಇಲ್ಲಿ ಇವರ ಬಹುಮುಖ ಪ್ರತಿಭೆಯ ವಿಕಾಸಕ್ಕೆ ಹೆಚ್ಚು ಅವಕಾಶ ದೊರೆಯಿತು. ಇವರು ಕನ್ನಡ ಮತ್ತು ತಮಿಳು ಭಾಷೆಗಳನ್ನು ಓದಿ 1893ರಲ್ಲಿ ಮದರಾಸು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೊಟ್ಟಮೊದಲನೆಯ ಕನ್ನಡ ಎಂ.ಎ. ಪದವೀಧರರಾದರು. ಕನ್ನಡ ಸಾಹಿತ್ಯ ಸಂಶೋಧನೆಗಳ ಕಡೆಗೆ ಮನಸ್ಸು ಒಲಿದುದರಿಂದ ಇವರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ವಿದ್ಯಾ ಇಲಾಖೆಯಲ್ಲಿ ಐದು ವರ್ಷಗಳ ಕಾಲ ಕನ್ನಡ ಭಾಷಾಂತರಕಾರರಾಗಿದ್ದು, 1899ರಲ್ಲಿ ಮೈಸೂರಿನ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯಲ್ಲಿ ಲೂಯಿರೈಸ್‌ರವರಿಗೆ ಸಹಾಯಕರಾಗಿ ನೇಮಕಗೊಂಡರು. ಲೂಯಿರೈಸರ ಅನಂತರ 1906ರಲ್ಲಿ ಇವರೇ ನಿರ್ದೇಶಕರಾಗಿ ನೇಮಕವಾಗಿ 1922ರ ವರೆಗೆ ದುಡಿದು ಈ ಹುದ್ದೆಯಿಂದ ನಿವೃತ್ತರಾದರು.

ಇವರು ಸು. 16 ವರ್ಷಗಳ ಕಾಲ ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿ ಮಾಡಿದ ಕೆಲಸ ದೊಡ್ಡ ಮಟ್ಟದ್ದು. ಆಗಿನ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ಸಂಚರಿಸಿ ಸು. 5,000 ಹೊಸ ಶಾಸನಗಳನ್ನು ಸಂಗ್ರಹಿಸಿದರು. ಹಿಂದು, ಜೈನ ಮತ್ತು ಮಹಮ್ಮದೀಯರಿಗೆ ಸಂಬಂಧಪಟ್ಟ 1,000 ಕಟ್ಟಡಗಳನ್ನು ಪರೀಕ್ಷಿಸಿದರು. 4,100 ನಾಣ್ಯಗಳ ಸಂಶೋಧನೆ, 1,250 ಛಾಯಾಚಿತ್ರಗಳು ಮತ್ತು 120 ನಕ್ಷೆಗಳ ರಚನೆಗಳೂ ಆದುವು. ಅಪರೂಪವಾದ ಸು. 125 ಪ್ರಾಚೀನ ಕನ್ನಡ ಸಂಸ್ಕೃತ ಗ್ರಂಥಗಳನ್ನು ಅವಲೋಕಿಸಿ ಅವುಗಳನ್ನು 100 ಸಂಪುಟಗಳಲ್ಲಿ ಪ್ರತಿ ಮಾಡಿಸಿ ಪ್ರಾಚ್ಯ ಕೋಶಾಗಾರದಲ್ಲಿರಿಸದರು. ಎಪಿಗ್ರಾಫಿಯ ಕರ್ನಾಟಿಕದ ವಿಸ್ತಾರವಾದ ಅಕಾರಾದಿ, ಇಲಾಖಾ ವರದಿಗಳ ಅಕಾರಾದಿಗಳನ್ನು ಐತಿಹಾಸಿಕ ಮತ್ತು ಸಾಮಾಜಿಕ ಪ್ರಾಮುಖ್ಯವುಳ್ಳ ಶಾಸನ ಸಂಗ್ರಹಗಳನ್ನೂ ಸಿದ್ಧಪಡಿಸಿದರು. ರೈಸರು ಪ್ರಕಟಿಸಿದ್ದ ಶ್ರವಣಬೆಳಗೊಳದ ಶಾಸನಗಳನ್ನೊಳಗೊಂಡ ಎಪಿಗ್ರಾಫಿಯ ಕರ್ನಾಟಿಕದ ಎರಡನೆಯ ಸಂಪುಟವನ್ನು ಇವರು ಸಂಪೂರ್ಣವಾಗಿ ಪರಿಷ್ಕರಿಸಿದರು. ಮೊದಲು 144 ಇದ್ದ ಶಾಸನಗಳ ಸಂಖ್ಯೆ ಪರಿಷ್ಕೃತ ಆವೃತ್ತಿಯಲ್ಲಿ 500 ಆಯಿತು. ಶ್ರವಣಬೆಳಗೊಳದ ಬಸದಿಗಳ ವಿವರಗಳನ್ನು ಒಳಗೊಂಡ ವಿಸ್ತಾರವಾದ ಮುನ್ನುಡಿಯನ್ನು ಈ ಸಂಪುಟಕ್ಕೆ ಬರೆದರು. ಸೋಮನಾಥಪುರದ ಕೇಶವ, ಬೇಲೂರಿನ ಚೆನ್ನಕೇಶವ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯಗಳ ಶಿಲ್ಪಗಳನ್ನು ಪರಿಚಯಿಸುವ ಕೈಪಿಡಿಗಳನ್ನು ಪ್ರಕಟಿಸಿದರು. ಚಂದ್ರವಳ್ಳಿ, ತಲಕಾಡು ಮತ್ತು ಹಳೆಬೀಡುಗಳಲ್ಲಿ ಭೂಶೋಧನೆಗಳನ್ನು ನಡೆಸಿ ರೋಮನ್ನರ ಮತ್ತು ಚೀನಿಯರ ಅನೇಕ ಬಗೆಯ ನಾಣ್ಯಗಳನ್ನು ಸಂಗ್ರಹಿಸಿದರು. ಇವುಗಳ ಜೊತೆಗೆ ಮೈಸೂರು ಸಂಸ್ಥಾನದ ಅನೇಕ ದೇವಾಲಯಗಳು ಮತ್ತು ಪ್ರಾಚೀನ ಶಿಲ್ಪಗಳ ಬಗ್ಗೆ ಸಂಶೋಧನಾತ್ಮಕ ಟಿಪ್ಪಣಿಗಳನ್ನು ಬರೆದಿರುವುದೂ ಇವರ ಬಹುಮುಖ್ಯ ಸಾಧನೆ. ಚಾಳುಕ್ಯ ಶಿಲ್ಪದ ಭಾಗವೆಂದೇ ಅದುವರೆಗೂ ಪರಿಗಣಿಸಲ್ಪಟ್ಟಿದ್ದ ಹೊಯ್ಸಳ ಕಟ್ಟಡಗಳಲ್ಲಿ ಕಂಡುಬರುವ ಶೈಲಿಯ ವಿಶಿಷ್ಟತೆಯನ್ನು ಗುರುತಿಸಿ, ಅದಕ್ಕೆ ಹೊಯ್ಸಳ ಶೈಲಿ ಎಂಬ ಪ್ರತ್ಯೇಕವಾದ ಹೆಸರು ಕೊಟ್ಟ ಕೀರ್ತಿ ಇವರದು. ವಾಸ್ತು, ಶಿಲ್ಪ, ಶಾಸನ ಮತ್ತು ನಾಣ್ಯಗಳನ್ನು ಕುರಿತ ಅನೇಕ ಸಂಶೋಧನ ಲೇಖನಗಳನ್ನು ಮಿಥಿಕ್ ಸೊಸೈಟಿಯ ತ್ರೈಮಾಸಿಕ ಮತ್ತು ಇಂಡಿಯನ್ ಆ್ಯಂಟಿಕ್ವರಿ ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಇವರು ಪ್ರಕಟಿಸಿರುವ ಕರ್ನಾಟಕ ಕವಿಚರಿತ್ರೆಯ ಮೂರು ಸಂಪುಟಗಳು ಇವರ ಪಾಂಡಿತ್ಯಪರಿಶ್ರಮಗಳಿಗೆ ಸಾಕ್ಷಿಯಾಗಿವೆ. ಸುಮಾರು ಎಂಟನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ಅವಧಿಯಲ್ಲಿ ಬಾಳಿದ 1,100ಕ್ಕೂ ಮಿಕ್ಕ ಕನ್ನಡ ಕವಿಗಳು ಮತ್ತು ಅವರ ಕೃತಿಗಳನ್ನು ಕುರಿತ ವಿವರಗಳು ಈ ಸಂಪುಟಗಳಲ್ಲಿವೆ. ಕಾವ್ಯಾವಲೋಕನ, ಭಾಷಾಭೂಷಣ ಮತ್ತು ಶಬ್ದಾನುಶಾಸನಗಳನ್ನು ಸಂಪಾದಿಸಿದ್ದಾರೆ. ನೀತಿಮಂಜರಿ (1911), ನಗೆಗಡಲು (1898), ಶಾಸನಪದ್ಯಮಂಜರಿ (1923) - ಇವು ಇವರ ಇತರ ಕೃತಿಗಳು. ಹಿಸ್ಟರಿ ಆಫ್ ಕನ್ನಡ ಲಿಟರೇಚರ್, ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್ - ಇವು ಇವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಎರಡು ಗ್ರಂಥಗಳು.

ಭಾರತ ಸರ್ಕಾರದ ಪ್ರಾಚ್ಯ ವಿದ್ಯಾ ಇಲಾಖೆ, ಏಷ್ಯಾಟಿಕ್ ಸೊಸೈಟಿ, ಹೈದರಾಬಾದಿನ ಪ್ರಾಚ್ಯ ವಿದ್ಯಾ ಸಮಿತಿ, ಪ್ಯಾರಿಸ್ಸಿನ ಪ್ರಾಚ್ಯ ವಿದ್ಯಾಸಂಸ್ಥೆ, ಬೆಂಗಳೂರಿನ ಮಿಥಿಕ್ ಸೊಸೈಟಿ ಮುಂತಾದ ಹತ್ತಾರು ದೇಶವಿದೇಶಗಳ ಸಂಘಸಂಸ್ಥೆಗಳೊಂದಿಗೆ ಇವರು ನಿಕಟಸಂಪರ್ಕ ಹೊಂದಿದ್ದರು.

ಇವರು ಸಲ್ಲಿಸಿದ ನಾಡುನುಡಿಗಳ ಸೇವೆಗೆ ಮನ್ನಣೆ ಎಂಬಂತೆ ಹಲವು ಬಗೆಯ ಪ್ರಶಸ್ತಿಗಳೂ ಬಹುಮಾನಗಳೂ ಬಂದುವು. 1907ರಲ್ಲಿ ಇವರಿಗೆ ರಾಯಲ್ ಏಷ್ಯಾಟಿಕ್ ಸೊಸೈಟಿಯ ಗೌರವ ಸದಸ್ಯತ್ವ ದೊರೆಯಿತು. 1913ರಲ್ಲಿ ಆಗಿನ ಮೈಸೂರು ಮಹಾರಾಜರು ಪ್ರಾಕ್ತನ ವಿಮರ್ಶವಿಚಕ್ಷಣ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದರು. 1916ರಲ್ಲಿ ಬ್ರಿಟಿಷ್ ಸರ್ಕಾರದಿಂದ ರಾವ್‌ಬಹದ್ದೂರ್ ಪ್ರಶಸ್ತಿ ಬಂತು. ಕಲ್ಕತ್ತದ ಅಖಿಲಭಾರತ ಸಾಹಿತ್ಯ ಸಂಘ 1924ರಲ್ಲಿ ಇವರಿಗೆ ಪ್ರಾಚ್ಯ ವಿದ್ಯಾವೈಭವ ಎಂಬ ಬಿರುದನ್ನಿತ್ತು ಸನ್ಮಾನಿಸಿತು. 1934ರಲ್ಲಿ ಕೇಂದ್ರ ಸರ್ಕಾರ ಮಹಾಮಹೋಪಾಧ್ಯಾಯ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಧಾರವಾಡದಲ್ಲಿ 1918ರಲ್ಲಿ ನಡೆದ 4ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಕುರಿತು ಒಂದು ಜೀವನ ಚರಿತ್ರೆಯನ್ನು ಪ್ರಕಟಿಸಿದೆ. 1936 ಡಿಸೆಂಬರ್ 6ರಂದು ನಿಧನಹೊಂದಿದರು. (ಎಸ್.ಎ.ಆರ್.)

**ನರಸಿಂಹಾಚಾರ್ಯ, ಎಸ್.ಜಿ. :** 1862-1907. ಹೊಸಗನ್ನಡ ಅರುಣೋದಯ ಕಾಲದ ಪ್ರಸಿದ್ಧ ವಿದ್ವಾಂಸರು. ಸಂಸ್ಕೃತ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದ ಇವರು ಅನೇಕ ಪ್ರಾಚೀನ ಹಸ್ತಪ್ರತಿಗಳನ್ನು ಸಂಪಾದಿಸಿ ಪರಿಷ್ಕರಿಸಿ ಪ್ರಕಟಿಸಿದರು. ಜನ್ಮಸ್ಥಳವಾದ ಶ್ರೀರಂಗಪಟ್ಟಣದಲ್ಲಿ ಅನಂತರ ಮೈಸೂರಿನಲ್ಲಿ ವ್ಯಾಸಂಗ

ಮಾಡಿ, ಶ್ರೀರಂಗಪಟ್ಟಣದಲ್ಲಿ ಕೆಲವು ವರ್ಷಗಳ ಕಾಲ ಉಪಾಧ್ಯಾಯರಾಗಿದ್ದರು. ಅನಂತರ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರ ಕಾರರಾಗಿಯೂ ಮೈಸೂರು ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಪಂಡಿತರಾಗಿಯೂ ಕೆಲಸ ಮಾಡಿದರು.

1892ರಲ್ಲಿ ಎಂ.ಎ. ರಾಮನುಜಯ್ಯಂಗಾರ್ಯರ ಜೊತೆಯಲ್ಲಿ ಇವರು ಕರ್ನಾಟಕ ಕಾವ್ಯಮಂಜರಿ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿ ಅನೇಕ ಹಳಗನ್ನಡ ಮತ್ತು ನಡುಗನ್ನಡ ಗ್ರಂಥಗಳನ್ನು ಭಾಗಶಃ ಪ್ರಕಟಿಸಿದರು. ನಶಿಸಿಹೋಗುತ್ತಿದ್ದ ಅನೇಕ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸಲು ಇವರು ಪಟ್ಟ ಶ್ರಮ ಸ್ಮರಣೀಯ. ಕಾವ್ಯಮಂಜರಿ ಕಾರಣಾಂತರಗಳಿಂದ ನಿಂತುಹೋದ ಮೇಲೆ ಇವರು ಮತ್ತೆ ರಾಮಾನುಜಯ್ಯಂಗಾರ್ಯರೊಡನೆ ಕರ್ನಾಟಕ ಕಾವ್ಯ ಕಲಾನಿಧಿ ಎಂಬ ಹೊಸ ಮಾಸಪತ್ರಿಕೆಯನ್ನು 1899ರಲ್ಲಿ ಪ್ರಾರಂಭಿಸಿದರು. ಈ ಕಾವ್ಯಮಾಲೆಯಲ್ಲಿ ಆದಿಕಾಲದಿಂದ 20ನೆಯ ಶತಮಾನದ ವರೆಗಿನ ಅನೇಕ ಕನ್ನಡ ಕವಿಗಳ ಚೊಂಪೂ, ಗದ್ಯ, ಪದ್ಯ, ನಾಟಕ, ಕೀರ್ತನೆ, ಶತಕ, ನಿಘಂಟು, ಛಂದಸ್ಸು, ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳನ್ನೊಳಗೊಂಡ ಸುಮಾರು 75 ಉದ್ಗ್ರಂಥಗಳು ಪ್ರಕಟವಾದವು. ಈ ಪ್ರೌಢ ಗ್ರಂಥಗಳನ್ನು ಪರಿಷ್ಕರಿಸುವುದರಲ್ಲಿಯೂ ವಿಮರ್ಶಿಸುವುದರಲ್ಲಿಯೂ ಇವರ ಪ್ರತಿಭಾ ಪಾಂಡಿತ್ಯಗಳು ಪ್ರದರ್ಶಿತವಾಗಿವೆ. ಕರ್ನಾಟಕ ಕವಿಚರಿತೆಯ ಪ್ರಥಮ ಸಂಪುಟದ ರಚನೆಯಲ್ಲಿ ಆರ್. ನರಸಿಂಹಾಚಾರ್ಯರಿಗೆ ಇವರು ಸಹಾಯಕರಾಗಿದ್ದರು.

ನರಸಿಂಹಾಚಾರ್ಯರು ಸಂಸ್ಕೃತ ಮತ್ತು ಇಂಗ್ಲಿಷಿನಿಂದ ಅನೇಕ ಕಾವ್ಯಗಳನ್ನೂ ಗ್ರಂಥಗಳನ್ನೂ ಕನ್ನಡಕ್ಕೆ ಸರಳವಾಗಿಯೂ ಸುಂದರವಾಗಿಯೂ ಭಾಷಾಂತರಿಸಿದ್ದಾರೆ. ಕಾಳಿದಾಸನ ರಘುವಂಶದ ಕೆಲವು ಸರ್ಗಗಳ ಪದ್ಯಾನುವಾದವಾಗಿರುವ ಅಜನೃಪಚರಿತೆ ಮತ್ತು ದಿಲೀಪಚರಿತೆಗಳು ಇವರ ಉತ್ತಮ ಅನುವಾದಕಲೆಗೆ ಸಾಕ್ಷಿಯಾಗಿವೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಮನರಂಜಕವೂ ಬೋಧಪ್ರದವೂ ಆದ ಅನೇಕ ಪಠ್ಯಪುಸ್ತಕಗಳನ್ನು ಇವರು ಸಿದ್ಧಪಡಿಸಿದರು. ಆ ಪಠ್ಯಪುಸ್ತಕಗಳಿಗಾಗಿ ಇಂಗ್ಲಿಷಿನ ಸರಳ ರಗಳೆಯ ಅನೇಕ ಪದ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿದರಲ್ಲದೆ ಸ್ವತಃ ಹೊಸ ಮಾದರಿಯ ಅನೇಕ ಕವನಗಳನ್ನೂ ರಚಿಸಿದರು. ಅಂಥವುಗಳಲ್ಲಿ ನಕ್ಷತ್ರ (ಮಿರುಮಿರುಗುತಿ ಹಾಕಿರುತಾರಣಿಯೆ), ಬಿಡುವು (ಬಾರೋ ನಾವಾಡುವ ಬಾರೊ), ಗೋವಿನ ಬಾಳು (ಇಟ್ಟರೆ ಸಗಣಿಯಾದೆ), ಕಾವೇರಿಯ ಮಹಿಮೆ (ನೋಡು ಕಾವೇರಿಯು), ನೇಗಿಲು ಮಕ್ಕಳು ಮಲಗುವ ಹೊತ್ತು, ಹೊಗೆಯ ಗಾಡಿ ಮುಂತಾದವು ಜನಪ್ರಿಯವಾಗಿವೆ. ಇವರ ಪಾಂಡಿತ್ಯಕ್ಕೆ ಮೆಚ್ಚಿ ಆಗಿನ ಮದರಾಸು ಸರ್ಕಾರದ ಶಿಕ್ಷಣ ಇಲಾಖೆಯ ಇನ್‌ಸ್ಪೆಕ್ಟರಾಗಿದ್ದ ಮಾರ್ಸಡನ್ ಎಂಬುವರು ಇಂಗ್ಲಿಷಿನಲ್ಲಿ ತಾವು ರಚಿಸಿದ ಬುಕ್ಸ್‌ಫಾರ್ ದಿ ಬ್ರೇನ್ಸ್ ಎಂಬ ಕೃತಿಗಳನ್ನು ಇವರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಿದರಂತೆ. ಇವರ ಇತರ ಕೃತಿಗಳಲ್ಲಿ ಹಿಂದೂ ದೇಶದ ಚರಿತ್ರೆ, ಅಲ್ಲಾವುದ್ದೀನನ ಅದ್ಭುತ ದೀಪ, ಈಸೋಪನ ಕಥೆಗಳು, ಗಲಿವರನ ದೇಶಸಂಚಾರ, ಭಾರತವೀರ ಚರಿತೆ ಮೊದಲಾದವು ಮುಖ್ಯವಾದುವು. ಪದ್ಯಸಾರದ ಎರಡು ಭಾಗಗಳನ್ನು ಇವರು ಸಂಗ್ರಹಿಸಿದ್ದಾರೆ. ಉತ್ತರರಾಮಚರಿತೆಯ ಮೂರು ಅಂಕಗಳನ್ನೂ ಭಾಷಾಂತರಿಸಿದ್ದರೆಂದು ಪ್ರತೀತಿ. ಇವರು ರಚಿಸಿದ್ದರೆನ್ನಲಾಗಿರುವ ಅನೇಕ ಕೃತಿಗಳು ಇನ್ನೂ ಸಿಕ್ಕಿಲ್ಲ.

ಧಾರವಾಡದಲ್ಲಿ 1907ರಲ್ಲಿ ನಡೆದ ಅಖಿಲ ಕರ್ನಾಟಕ ಗ್ರಂಥಕರ್ತರ ಪ್ರಥಮ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು.

ಇದು ಕರ್ನಾಟಕದಲ್ಲಿ ಜರುಗಿದ ಮೊದಲ ಸಾಹಿತ್ಯ ಸಮ್ಮೇಳನವೆನ್ನಬಹುದು. (ಎನ್.ಎ.ಆರ್.)

**ನರಹರಿತೀರ್ಥ** : ಸು. 1280. ಪ್ರಸಿದ್ಧ ಹರಿದಾಸರು. ಮಧ್ವಾಚಾರ್ಯರ ಶಿಷ್ಯರಲ್ಲಿ ಪ್ರಮುಖರು. ಇವರ ಪೂರ್ವಾಶ್ರಮದ ಹೆಸರು ಶ್ಯಾಮಶಾಸ್ತ್ರೀ. ಮೊದಲಿಗೆ ಈ ಹೆಸರಿನಿಂದ ಇವರು ಒರಿಸ್ಸಾದ ಗಜಪತಿ ರಾಜನಲ್ಲಿ ಅಧಿಕಾರಿಯಾಗಿದ್ದರೆಂದು ತಿಳಿದುಬರುತ್ತದೆ. ಮಧ್ವಾಚಾರ್ಯರು ಬದರಿಯ ಯಾತ್ರೆ ಮುಗಿಸಿ ಒರಿಸ್ಸಾಕ್ಕೆ ಬಂದಾಗ ಇವರು ಅವರ ಪಾಂಡಿತ್ಯ ಉಪದೇಶಗಳಿಗೆ ಮನಸೋತು ಶಿಷ್ಯರಾಗಿ ಸಂನ್ಯಾಸ ಸ್ವೀಕರಿಸಿ ನರಹರಿತೀರ್ಥರಾದರು. ಅನಂತರ ತಮ್ಮ ಗುರುವಿನ ಅಪ್ಪಣೆಯಂತೆ ಒರಿಸ್ಸಾದ ರಾಜಧಾನಿಯಲ್ಲೇ ನಿಂತರು. ಕೆಲಕಾಲಾನಂತರ ಗಜಪತಿರಾಜ ಗರ್ಭಿಣಿಯಾಗಿದ್ದ ಹೆಂಡತಿಯನ್ನು ಬಿಟ್ಟು ನಿಧನನಾಗಲು ಇವರು ಅರಸುಕುಮಾರ ಹುಟ್ಟಿ ಪ್ರಾಪ್ತವಯಸ್ಕನಾಗುವವರೆಗೆ ಅಲ್ಲಿಯೇ ರಾಜ್ಯವಾಳುತ್ತಿದ್ದರು. ಅನಂತರ ರಾಜ್ಯವನ್ನು ಹಕ್ಕುದಾರನಿಗೆ ವಹಿಸಿಕೊಟ್ಟು ಮಧ್ವಾಚಾರ್ಯರ ಅಪೇಕ್ಷೆಯಂತೆ ರಾಜನ ಬೊಕ್ಕಸದಲ್ಲಿದ್ದ ರಾಮಸೀತೆಯರ ಮೂಲ ವಿಗ್ರಹಗಳನ್ನು ರಾಜನಿಂದ ಪಡೆದು, ಅವನ್ನು ಗುರುಗಳಿಗೆ ಒಪ್ಪಿಸಿದರಂತೆ. ಮಧ್ವಾಚಾರ್ಯರ ತರುವಾಯ ಮಠಾಧಿಪತಿಗಳಾಗಿ ಬಂದ ಪದ್ಮನಾಭತೀರ್ಥರು ವೃಂದಾವನಸ್ಥರಾದ ಮೇಲೆ ಇವರು ಸು. 1324ರಿಂದ 1333ರ ವರೆಗೆ ಪೀಠಾಧಿಪತ್ಯವನ್ನು ವಹಿಸಿಕೊಂಡುದಾಗಿ ತಿಳಿದುಬರುತ್ತದೆ. ಆಂಧ್ರಪ್ರದೇಶದ ಶ್ರೀಕೂರ್ಮಂನಲ್ಲಿ ಇವರಿಗೆ ಸಂಬಂಧಿಸಿದ ಕೆಲವು ಶಾಸನಗಳು ದೊರಕಿವೆ. ಇವರು ಸಂಸ್ಕೃತದಲ್ಲಿ ಉದ್ದಾಮಪಂಡಿತರೆನಿಸಿದ್ದು, ಹದಿನೈದು ಗ್ರಂಥಗಳನ್ನು ರಚಿಸಿದುದಾಗಿ ತಿಳಿದುಬರುತ್ತದೆ.

ಸಂಸ್ಕೃತದಲ್ಲೇ ಅಲ್ಲದೆ ಕನ್ನಡದಲ್ಲೂ ಹರಿಕೀರ್ತನೆಗಳನ್ನು ರಚಿಸಿ, ಆ ಮೂಲಕ ಜನರಲ್ಲಿ ದ್ವೈತಮತವನ್ನು ಪ್ರಚಾರಮಾಡುತ್ತ ಅನೇಕ ಕ್ಷೇತ್ರಯಾತ್ರೆಗಳನ್ನು ಮಾಡಿದಂತೆ ಕಂಡುಬರುತ್ತದೆ. ಹರಿದಾಸ ಸಾಹಿತ್ಯಕ್ಕೆ ಮಧ್ವಾಚಾರ್ಯರ ದ್ವಾದಶಸ್ತೋತ್ರ ಒಂದು ಪ್ರೇರಣಾಸ್ತೋತ್ರವಾದರೆ ನರಹರಿತೀರ್ಥರ ಕನ್ನಡ ಕೀರ್ತನೆಗಳು ಹರಿಕೀರ್ತನೆಗಳಿಗೆ ಮೂಲಪ್ರೇರಕ ಶಕ್ತಿಗಳಾದವು. ಇವರ ಕಾಲದಿಂದ ಮುಂದೆ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಹರಿದಾಸರ ಕೀರ್ತನೆಗಳು ಕಂಡುಬರದಿರುವುದರಿಂದಲೂ ನರಹರಿತೀರ್ಥರ ಎರಡು ಕೀರ್ತನೆಗಳು ಮಾತ್ರ ಈಗ ಉಪಲಬ್ಧವಾಗಿರುವುದರಿಂದಲೂ ಹರಿದಾಸರಲ್ಲಿ ಇವರು ಆದ್ಯರೆಂಬುದನ್ನು ಒಪ್ಪದೆ ಹದಿನೈದನೆಯ ಶತಮಾನದಲ್ಲಿ ಕಂಡಬರುವ ಶ್ರೀಪಾದರಾಯರು ಹರಿದಾಸಪಂಥದ ಮೂಲಪುರುಷರೆಂದು ಕೆಲವರು ಭಾವಿಸುತ್ತಾರೆ. ಕೀರ್ತನೆಗಳ ರಚನೆ ಕನ್ನಡದಲ್ಲಿ ಆ ಕಾಲಕ್ಕೆ ಇನ್ನೂ ಹೊಸದಾದ್ದರಿಂದ, ಈ ಹೊಸ ಪ್ರಕಾರಕ್ಕೆ ಇನ್ನೂ ನಿಶ್ಚಿತವಾದ ನೆಲೆಬೆಲೆಗಳಾವುವೂ ಕಂಡುಬರದೆ ಇದ್ದುದರಿಂದ, ಮುಂದಿನವರು ವಾದಿನಿಗ್ರಹ ಕಾರ್ಯಗಳಲ್ಲಿ ತೊಡಗಬೇಕಾದುದರಿಂದ, ಮಠಾಧಿಪತಿಗಳ ಕಾರ್ಯ ಸಾಂಪ್ರದಾಯಿಕವಾಗಿ ಸಂಸ್ಕೃತದಲ್ಲಿ ನಡೆಯುತ್ತಿದ್ದುದರಿಂದ ಹರಿದಾಸ ಕೀರ್ತನೆಗಳ ಗಾನವಾಹಿನಿ ಅನೇಕ ದಿನ ಗುಪ್ತಗಾಮಿನಿಯಾಗಿಯೇ ಉಳಿಯಬೇಕಾಯಿತು. ಆದರೆ ಜನರ ಆಡುಮಾತಿನಲ್ಲಿಯೇ, ಕನ್ನಡದಲ್ಲಿಯೇ ತಮ್ಮ ಹೃದಯಾನುಭವಗಳನ್ನು ಪರಮಾತ್ಮನಲ್ಲಿ ನಿವೇದಿಸಿಕೊಂಡು ಕೃತಾರ್ಥರಾಗಬಹುದು ಎಂದು ಸೂಕ್ತ ಪ್ರಜ್ಞೆ ಮೊದಲಿಗೆ ಉದಿಸಿದ್ದು ನರಹರಿತೀರ್ಥರಲ್ಲಿ.

ಸದ್ಯದಲ್ಲಿ ದೊರಕಿರುವ ಇವರ ಎರಡು (ಕೆಲವರು ಹೇಳುವಂತೆ ಮೂರು) ಕೀರ್ತನೆಗಳ ತಿರುಳನ್ನು ಗಮನಿಸಿದರೆ ದಾಸಸಾಹಿತ್ಯದ ಮುಖ್ಯಲಕ್ಷಣಗಳು ವಿದಿತವಾಗುತ್ತವೆ. ಭಗವಂತನ ಸಾನ್ನಿಧ್ಯದಲ್ಲಿ ಚಿಂತನಪರರಾದ ದಾಸರು ತಮ್ಮನ್ನು ತಾವೇ ಶೋಧಿಸಿಕೊಂಡು, ತಮ್ಮ ಮನಃಸ್ಥಿತಿಯನ್ನು ಎಂತು ಮರುಳಾದೆ ನಾನು ಎಂತು ಮರುಳಾದೆ ಎಂಬ ಕೀರ್ತನೆಯಲ್ಲಿ ಪರಮಾತ್ಮನಲ್ಲಿ ಬಿನ್ನವಿಸಿಕೊಳ್ಳುತ್ತಾರೆ. ಹರಿಯೇ ಇದು ಸರಿಯೆ ಎಂಬ ಕೀರ್ತನೆಯಲ್ಲಿ ಭಕ್ತನೊಬ್ಬನ ಮನಸ್ಸಿನಹೊಯ್ದಾಟ ಎದ್ದುಕಾಣುತ್ತದೆ. ಆತ್ಮಪರಿಪಾಕಕ್ಕಾಗಿ ಸಂತತವೂ ಪರಿತಪಿಸುವ ಈ ಚಿತ್ತವೃತ್ತಿ ದೈವಭಕ್ತನ ವಾಣಿಗೆ ಪ್ರೇರಣೆ ನೀಡುತ್ತದೆ. ಇಷ್ಟದೇವತೆಯ ಅನುಗ್ರಹ ವಿಳಂಬವಾಗಲು ಅದರ ಮೊರೆ ಮಿಗಿಲಾಗುತ್ತದೆ. ಈ ಹಂಬಲ ವ್ಯಾಕುಲಗಳು ಹಾಡಾಗಿ ಮೂರ್ತಗೊಂಡಿವೆ. ಈ ಕೀರ್ತನೆಗಳು ಹರಿದಾಸ ಸಾಹಿತ್ಯದ ಅರುಣೋದಯದ ಕಿರಣಗಳಂತಿವೆ. (ಪಿ.ವಿ.ಪಿ.)

**ನರೇಗಲ್ಲ** : ಗದಗ ಜಿಲ್ಲೆ ರೋಣ ತಾಲ್ಲೂಕಿನ ಒಂದು ಪಟ್ಟಣ. ಗದಗ-ಗಜೇಂದ್ರ ಗಡ ಹೆದ್ದಾರಿ ಮಧ್ಯದಲ್ಲಿರುವ ಈ ಪಟ್ಟಣ ರೋಣಕ್ಕೆ ಆಗ್ನೇಯ ದಿಕ್ಕಿನಲ್ಲಿ 18 ಕಿಮೀ ಮತ್ತು ಗದಗ ಪಟ್ಟಣಕ್ಕೆ ಈಶಾನ್ಯದಲ್ಲಿ

27 ಕಿಮೀ ದೂರದಲ್ಲಿದೆ. ಜನಸಂಖ್ಯೆ 16,652.

ನರೇಗಲ್ಲ ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ. ಪಟ್ಟಣದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿದ್ದು ಕಲಾ ಮತ್ತು ವಿಜ್ಞಾನ ಕಾಲೇಜು ಸಹ ಇದೆ. ಪ್ರವಾಸಿಮಂದಿರ, ಬ್ಯಾಂಕುಗಳು, ವಾಚನಾಲಯಗಳು, ಕೃಷಿಪತ್ತಿನ ಸಂಘಗಳು, ಮರ ಕೊಯ್ಯುವ ಕಾರ್ಖಾನೆ, ಎಣ್ಣೆ ಮತ್ತು ಹತ್ತಿ ಗಿರಣಿಗಳು ಇವೆ. ಪಶುವೈದ್ಯಾಲಯ, ಆರೋಗ್ಯ ಕೇಂದ್ರ, ಅಂಚೆ ಮತ್ತು ದೂರವಾಣಿ, ವಿದ್ಯುತ್ ಮುಂತಾದ ಸೌಕರ್ಯಗಳಿವೆ.

ನರೇಗಲ್ಲದಲ್ಲಿ 10-14ನೆಯ ಅವಧಿಗೆ ಸೇರುವ ಹತ್ತು ಶಿಲಾಶಾಸನಗಳಿವೆ. ಆ ಕಾಲದಲ್ಲಿ ನರೇಗಲ್ಲ - 12 ಎಂಬ ವಿಭಾಗದ ಮುಖ್ಯ ಪಟ್ಟಣವಾಗಿತ್ತು. ಈ ಪ್ರದೇಶ ಹನ್ನೆರಡನೆಯ ಶತಮಾನದಲ್ಲಿ ಯಲಬುರ್ಗಿಯ ಸಿಂಧರ ಅಧೀನದಲ್ಲಿತ್ತೆಂದು ತಿಳಿದುಬರುತ್ತದೆ.

ನರೇಗಲ್ಲದಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯ ತ್ರಿಪುರಾಂತಕೇಶ್ವರ, ಸೋಮೇಶ್ವರ, ಕಲ್ಮೇಶ್ವರ, ಚಂದ್ರಮೌಳೀಶ್ವರ ಮತ್ತು ಹತ್ತಿರದ ಕೋಡಿಕೊಪ್ಪದಲ್ಲಿ ಮಲ್ಲಬ್ರಹ್ಮದೇವ ಎಂಬ ದೇವಾಲಯಗಳಿವೆ. ಅವುಗಳಲ್ಲಿ ಸೋಮೇಶ್ವರ ದೇವಾಲಯ ಅತ್ಯಂತ ಸುಂದರವೂ ಮತ್ತು ದೊಡ್ಡದೂ ಆಗಿದೆ. ಅದರಲ್ಲಿ ಎರಡು ಭಾಗಗಳಿವೆ. ಅಲ್ಲಿ ಬುಡದಿಂದ ತುದಿಯ ವರೆಗೆ ನಕ್ಷತ್ರಾಕಾರವಾಗಿ ಕೆತ್ತಿ ಮಾಡಿದ ಅನೇಕ ಸುಂದರವಾದ ಕಲ್ಲಿನ ಕಂಬಗಳಿವೆ. ಹಿಂದೆ ಈಶ್ವರಲಿಂಗದ ಗದ್ದುಗೆ ಇದೆ. ಮೊದಲನೆಯ ಭಾಗದ ಎರಡೂ ಬದಿಗಳಲ್ಲಿ ಗೋಡೆಯಷ್ಟು ಉದ್ದವಾದ ಎರಡು ಕಟ್ಟೆಗಳಿವೆ. ಆ ಕಟ್ಟೆಗಳ ಮೇಲ್ಪದಿಯಲ್ಲಿರುವ ಚೌಕು ಕುಳಿಗಳಲ್ಲಿ ಕೂಡಿರುವ ಅನೇಕ ಪ್ರತಿಮೆಗಳ ಸಾಲುಗಳಿವೆ. ಪಶ್ಚಿಮ ಬದಿಯ ಕಟ್ಟೆಯ ಮಧ್ಯದಲ್ಲಿ ವಿವಿಧ ಭಂಗಿಯಲ್ಲಿಯ ನಾರಾಯಣನ ಎರಡು ಮೂರ್ತಿಗಳಿವೆ. ಅದರಂತೆ ಪೂರ್ವ ಬದಿಯ ಕಟ್ಟೆಯ ಮಧ್ಯದಲ್ಲಿ ಈಶ್ವರ ಲಿಂಗವಿದೆ. ಉಳಿದ ನಾಲ್ಕು ದೇವಾಲಯಗಳ ಪೈಕಿ ಚಂದ್ರಮೌಳೀಶ್ವರ ದೇವಾಲಯ ಹಾಳು ಸ್ಥಿತಿಯಲ್ಲಿದೆ. ಈ ದೇವಾಲಯಗಳ ಹೊರತಾಗಿ ದೊಡ್ಡ ಪ್ರಮಾಣದಲ್ಲಿ ಅಂದವಾಗಿ ಕಟ್ಟಿಸಿದ ವೀರಭದ್ರ, ದುರ್ಗಾದೇವಿ, ದತ್ತಾತ್ರೇಯ, ಆಂಜನೇಯ ಮತ್ತು ಮಲ್ಲಿಕಾರ್ಜುನ ದೇವಾಲಯಗಳಿವೆ. ಬಿಜಾಪುರದ ಗೋಳಗುಮ್ಮಟವನ್ನು ನೆನಪಿಗೆ ತರುವ ಭವ್ಯವೂ ಸುಂದರವೂ ಆದ ಒಂದು ದರ್ಗಾ ಇದೆ. ಇದನ್ನು ಒಬ್ಬ ಸುಣ್ಣಗಾರ ಮುದುಕಿ ಕಟ್ಟಿಸಿದ್ದಳೆಂದು ಹೇಳಲಾಗುತ್ತದೆ. ಇವುಗಳಲ್ಲದೆ ವಿರಕ್ತ ಮಠ, ವೀರಪ್ಪಜ್ಜನ ಮಠ, ಅನ್ನದಾನೇಶ್ವರ ಮಠ, ಹಿರೇಮಠ ಎಂಬ ಹಲವಾರು ಮಠಗಳಿವೆ. ಪ್ರತಿವರ್ಷ ಮಾಘಮಾಸದಲ್ಲಿ ಶಿವರಾತ್ರಿ ದಿನ ಕೋಡಿಕೊಪ್ಪದ ವೀರಪ್ಪಜ್ಜನ ಜಾತ್ರೆಯಾಗುತ್ತದೆ. ಆ ದಿನ ದನಗಳ ಪ್ರದರ್ಶನವೂ ನಡೆಯುತ್ತದೆ. (ಎಸ್.ಎಸ್.ಎಸ್.)

**ನರ್ಮದಾ :** 1943- . ಪ್ರಸಿದ್ಧ ನೃತ್ಯ ಕಲಾವಿದೆ. 1943 ರಲ್ಲಿ ಜನಿಸಿದರು.ತಂದೆ ಕೆ.ರಾಮರಾವ್, ತಾಯಿ ಶಕುಂತಲಾಬಾಯಿ. ಬಾಲ್ಯದಿಂದಲೆ ನೃತ್ಯದಲ್ಲಿ ವಿಶೇಷ ಒಲವು ಬೆಳೆಸಿಕೊಂಡ ಇವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದವರು ಸ್ವತಃ ಸಂಗೀತ ವಿದುಷಿ, ವೀಣಾವಾದಕಿಯಾಗಿದ್ದ ತಾಯಿ ಶಕುಂತಲಾಬಾಯಿ. ಸನಾತನ ನೃತ್ಯಾಲಯದ ಕೌಶಿಕ್‌ರಲ್ಲಿ ಭರತನಾಟ್ಯ ಕಲಿಕೆ ಪ್ರಾರಂಭಿಸಿದರು. ಅನಂತರ ತಂಜಾವೂರಿನ ವಿದ್ವಾನ್ ಕಿಟ್ಟಪ್ಪಪಿಳ್ಳೆಯವರಲ್ಲಿ ಹೆಚ್ಚಿನ ಪರಿಣತಿ ಗಳಿಸಿದರು. 10 ವರ್ಷದ ಬಾಲಕಿಯಾಗಿದ್ದಾಗಲೆ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ರಂಗಪ್ರವೇಶ ಮಾಡಿದರು (1953). ದೇಶದಾದ್ಯಂತ ನೂರಾರು ನೃತ್ಯ ಪ್ರದರ್ಶನಗಳನ್ನು ನೀಡಿರುವ ಇವರ ನೃತ್ಯವನ್ನು ಮೆಚ್ಚಿ ಮೈಸೂರು ಮಹಾರಾಜ ಜಯಚಾಮರಾಜ ಒಡೆಯರು ಚಿನ್ನದ ಪದಕ ನೀಡಿ ಗೌರವಿಸಿದ್ದರು.

ಇವರು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎಸ್ಸಿ. ಪದವೀಧರರಾದರು. ಅನಂತರ ಎಂಜಿನಿಯರ್ ಆಗಿದ್ದ ರಾಮರಾವ್ ಎಂಬುವರನ್ನು ವಿವಾಹವಾದರು. ಇವರು ಹೈದರಾಬಾದಿನಲ್ಲಿರುವಾಗ ದುರಾದೃಷ್ಟವಶಾತ್ ಇವರ ಪತಿ ಅಪಘಾತದಲ್ಲಿ ನಿಧನರಾದರು. ಚಿಕ್ಕವಯಸ್ಸಿನಲ್ಲೇ ವೈಧವ್ಯಕ್ಕೆ ತುತ್ತಾದ ಇವರು ಬೆಂಗಳೂರಿಗೆ ಮರಳಿದರು. ಮನೆಯವರ ಹಾಗೂ ಗುರು ಕಿಟ್ಟಪ್ಪನವರ ಸಲಹೆಯಂತೆ ಬೆಂಗಳೂರಿನ ಶಂಕರಪುರಂನಲ್ಲಿ ಶಕುಂತಲಾ ನೃತ್ಯಾಲಯ ಪ್ರಾರಂಭಿಸಿದರು. ಅಂದಿನಿಂದ ಭರತನಾಟ್ಯ ಕಲೆಯಲ್ಲಿ ತಮ್ಮದೇ ಆದ ವಿಶೇಷ ಛಾಪನ್ನು ಒತ್ತಿರುವ ಇವರು ಅನೇಕ ಕಲಾವಿದರು ಕೀರ್ತಿಗಳಿಸಲು ಮಾರ್ಗದರ್ಶಿಯಾಗಿದ್ದಾರೆ. ಮಂಜು ಭಾರ್ಗವಿ, ಸಾವಿತ್ರಿ ರಾಮಯ್ಯ, ಶ್ರೀಧರ್, ಪೂರ್ಣಿಮಾ ಗುರುರಾಜ್, ಇಂದಿರಾ ಕಾಡಂಬಿ ಮೊದಲಾದವರು ಇವರ ನೃತ್ಯ ಶಾಲೆಯಲ್ಲಿ ಅರಳಿದ ಕಲಾ ಕುಸುಮಗಳು.

ನೃತ್ಯ ಕ್ಷೇತ್ರದಲ್ಲಿ ಇವರ ಅಪಾರ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಸೇರಿದಂತೆ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾ ತಿಲಕ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಚೆನ್ನೈನ ಮ್ಯೂಸಿಕ್ ಅಕಾಡೆಮಿಯ ಬೆಸ್ಟ್ ಡ್ಯಾನ್ಸ್ ಟೀಚರ್, ಕ್ಯಾಲಿಫೋರ್ನಿಯ ಕನ್ನಡ ಕೂಟ ನೀಡಿದ ಬೆಸ್ಟ್ ಡ್ಯಾನ್ಸ್ ಟೀಚರ್ ಪ್ರಶಸ್ತಿ, ಉದಯ ಕಲಾನಿಕೇತನದ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ - ಇವು ಮುಖ್ಯವಾದವು. ಕರ್ನಾಟಕ ಸರ್ಕಾರ ನೃತ್ಯ ಕ್ಷೇತ್ರದ ಅತ್ಯುನ್ನತ ಶಾಂತಲಾ ಪ್ರಶಸ್ತಿಯನ್ನು ಇವರಿಗೆ ನೀಡಿ ಗೌರವಿಸಿದೆ (2002).

ಶಿಸ್ತು, ಸಂಯಮ, ನೇರ ನುಡಿಗಳನ್ನು ರೂಢಿಸಿಕೊಂಡಿರುವ ನರ್ಮದಾ ಸರಳಜೀವಿ. ಶಿಷ್ಯರ ಏಳಿಗೆಗೆ ಸಂತೋಷಿಸುವ, ಪ್ರೋತ್ಸಾಹಿಸುವ ವಿಶಾಲಹೃದಯಿ. ತಮ್ಮ ಶಿಷ್ಯರ ನೃತ್ಯ ಪ್ರದರ್ಶನಕ್ಕಾಗಿ ಇಂಗ್ಲೆಂಡ್, ಅಮೆರಿಕ, ದುಬೈ, ಅಬುದಾಬಿ ದೇಶಗಳಿಗೆ ಹಲವಾರು ಬಾರಿ ಪ್ರವಾಸ ಮಾಡಿದ್ದಾರೆ. ಇವರ ಅನೇಕ ಶಿಷ್ಯರು ಅಮೇರಿಕದಲ್ಲಿ ಭರತನಾಟ್ಯ ಶಾಲೆಯನ್ನು ನಡೆಸುತ್ತಿದ್ದಾರೆ. ಶಾಸ್ತ್ರೀಯ ನೃತ್ಯದ ಬಗ್ಗೆ ಅಪಾರ ಶ್ರದ್ಧೆ, ನಂಬಿಕೆ, ಗೌರವವನ್ನಿರಿಸಿಕೊಂಡಿರುವ ಇವರು ಸಮಕಾಲೀನ ನೃತ್ಯದ ಬಗ್ಗೆಯೂ ಆಸಕ್ತರು. ಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾದರೂ ತಮ್ಮ ನಾಟ್ಯಶಾಲೆಯಲ್ಲಿ ನಿರಂತರ ನೃತ್ಯ ತಾಲೀಮು ನೀಡುತ್ತಾ ಕಲಾ ಸೇವೆಯನ್ನು ಮುಂದುವರಿಸಿದ್ದಾರೆ. (ಎಸ್‌ಯು.ಎ.)

**ನಲ್ಲೂರು :** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಐತಿಹಾಸಿಕ ಸ್ಥಳ. ವಿಜಯಪುರ ಎಂಬ ಗ್ರಾಮದಿಂದ 12 ಕಿಮೀ ದೂರದಲ್ಲಿದೆ. ಈಗ ಇದು ಸಂಪೂರ್ಣವಾಗಿ ಪಾಳುಬಿದ್ದಿದೆ. ಚೌಡರಾಯನೆಂಬ ಕೊನೆಯ ಪಾಳೆಯಗಾರನ ಕಾಲದಲ್ಲಿ ಶತ್ರುಗಳು ಎರಡು ಬಾರಿ ಈ ಊರನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲರಾಗಿದ್ದರು. ಅಂತಿಮವಾಗಿ ಇದು ಶತ್ರುಗಳ ವಶವಾಯಿತು. ಹೀಗೆ ಶತ್ರುಗಳ ವಶವಾಗಲು ಆ ಪಾಳೆಯಗಾರನ ಮಗಳ ಕುತಂತ್ರವೆ ಮುಖ್ಯ ಕಾರಣವಾಗಿತ್ತಂತೆ. ಆಕೆ ಹೊಸಕೋಟೆ ತಾಲ್ಲೂಕಿನ ಗುಬ್ಬಿಯ ಅರಸನನ್ನು ಮದುವೆಯಾಗಿದ್ದು ಆತನೊಂದಿಗೆ ಯುದ್ಧಕ್ಕೆ ಬಂದು ನಲ್ಲೂರಿಗಿದ್ದ ಸುರಂಗಮಾರ್ಗವನ್ನು ತೋರಿಸಿದ್ದಳಂತೆ. ಶತ್ರುಗಳು ಕೋಟೆಯನ್ನು ಆಕ್ರಮಿಸಲು ಪ್ರಾರಂಭಿಸಿದಾಗ ಚೌಡರಾಯ ತನ್ನ ಕುಟುಂಬದ ಸದಸ್ಯರನ್ನೂ ಬೊಕ್ಕಸವನ್ನೂ ಅರಮನೆಯಲ್ಲಿಯೇ ಬಿಟ್ಟು ಅರಮನೆಗೆ ಬೆಂಕಿ ಹಾಕಿ ಅದನ್ನು ಧ್ವಂಸಮಾಡಲು ಮುಂದಾದನೆಂದು ಹೇಳಲಾಗಿದೆ. ಆತ ಅವಿತಿಟ್ಟಿದ್ದ ಎನ್ನಲಾದ ಗುಪ್ತ ನಿಧಿಯ ಶೋಧನೆಗೆ ಇಂದಿಗೂ ಪ್ರಯತ್ನಗಳು ನಡೆಯುತ್ತಿವೆ.

ಊರಿನ ಹೊರವಲಯದಲ್ಲಿನ ಹುಣಿಸೇಮರದ ತೋಪಿನ ಮಧ್ಯಭಾಗದಲ್ಲಿ ಇತ್ತೀಚಿನ ವಿಜಯನಗರ ಶೈಲಿಯ, ಈಗ ಹಾಳಾಗಿರುವ ಸುಂದರವಾದ ಚನ್ನರಾಯಸ್ವಾಮಿ ದೇವಾಲಯವಿದೆ. ಇದರ ಹೊರಗೋಡೆಗಳಲ್ಲಿ ಹಾಗೂ ಗೂಡುಗಳಲ್ಲಿ ಕಾಳಿಂಗಮರ್ದನ, ಗೋಪಿಕಾ ವಸ್ತ್ರಾಪಹರಣ, ಗೋಪಾಲಕೃಷ್ಣ ಮುಂತಾದ ಸುಂದರ ಶಿಲ್ಪಗಳಿವೆ. ಇದರ ಒಳಮಾಳಿಗೆ ಬಿದ್ದುಹೋಗಿದ್ದು ಗರ್ಭಗೃಹದಲ್ಲಿ ಮೂರ್ತಿ ಇಲ್ಲ. ಈ ದೇವಾಲಯದ ಸಮೀಪವಿರುವ ಎರಡು ಶಾಸನಗಳಿಂದ ಇಲ್ಲಿಯ ದೇವರನ್ನು ತಿರುಮಲನಾಥ (ವೆಂಕಟೇಶ) ಎಂದು ಗುರುತಿಸಬಹುದು. ಇದರಲ್ಲಿ 1386

ರ ಶಾಸನದಲ್ಲಿ ಮಹಾ ಸಾಮಂತಾಧಿಪತಿ ಸೊಣ್ಣಯನಾಯಕನ ಮಗ ಚಿಕ್ಕ ಅಂಕಯನಾಯಕನು ತಿರುಮಲನಾಥ ದೇವರ ಮುಂದೆ ದೀಪಮಾಲೆಯ ಕಂಬವನ್ನು ನಿಲ್ಲಿಸಿದನೆಂದೂ ಸೊನ್ನಪಿಳ್ಳೆಯಮಗ ಒಡೆಯಪ್ಪನೆಂಬ ಆಚಾರಿ ಇದನ್ನು ಮಾಡಿದನೆಂದೂ ಹೇಳಿದೆ. 1401 ರ ಶಾಸನದಲ್ಲಿ ಪೆರಮಾಳ ಸೆಟ್ಟಿಯ ಮಗ ಮಾರಪ್ಪನು ತಿರುಮಲನಾಥ ದೇವಾಲಯದ ಮುಂದಿರುವ ಗರುಡಗಂಬವನ್ನು ಮಾಡಿಸಿದನೆಂದೂ ಆಚಾರಿ ಅಂಕನಾಯಕನ ಮಗ ಪತಿಓಜ ಇದನ್ನು ಮಾಡಿದನೆಂದೂ ಹೇಳಿದೆ. ಇದರ ಸಮೀಪದಲ್ಲಿ ಗಂಗಮ್ಮ ದೇವಾಲಯವಿದೆ. ಗಣಪತಿ ಹಾಗೂ ಹಾಳಾದ ಭೈರವಮೂರ್ತಿಗಳು ಇದರ ಹೊರಗಡೆ ಇವೆ. ಚನ್ನರಾಯಸ್ವಾಮಿ ದೇವಾಲಯದ ಸಮೀಪದಲ್ಲಿ ಬಹಳಷ್ಟು ಪ್ರಾಚೀನ ಅವಶೇಷಗಳಿವೆ. ಮುಖ್ಯ ರಸ್ತೆಯ ಪಕ್ಕದ ಮಾವಿನ ತೋಪಿನಲ್ಲಿ ಪಾಳುಬಿದ್ದ ಸುಂದರವಾದ ಬಸವಣ್ಣ ದೇವಾಲಯವಿದೆ. ಇದರ ಗರ್ಭಗೃಹ ಮತ್ತು ಮುಖಮಂಟಪಗಳ ಗೋಡೆಗಳು ಚೆನ್ನಾಗಿದ್ದು ಇವು ಸುಂದರವಾದ ಚಚ್ಚೌಕವಾದ ಸ್ತಂಭಗಳಿಂದ ಕೂಡಿವೆ. (ಕೆ.ಎಂ. ಎಸ್.)

**ನವಭಾರತ :** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಿಂದ ಪ್ರಕಟವಾದ ಮೊತ್ತಮೊದಲ ದಿನ ಪತ್ರಿಕೆ, ವಿ.ಎಸ್.ಕುಡ್ವರವರು 1941 ಜೂನ್ ತಿಂಗಳಲ್ಲಿ ಪತ್ರಿಕೆಯನ್ನು ಪ್ರಾರಂಭಿಸಿದರು. ಮೊದಲ ಒಂದು ವರ್ಷ ಕುಡ್ಪಿ ವಾಸುದೇವ ಶೆಣೈ ಸಂಪಾದಕರಾಗಿದ್ದು ಅನಂತರ ವಿ.ಎಸ್. ಕುಡ್ವ ಅವರೇ 1969ರ ವರೆಗೆ ಸಂಪಾದಕರಾಗಿದ್ದರು. ಇವರ ನಿಧನಾನಂತರ 1969ರಿಂದ ಇವರ ಪುತ್ರ ಸಂಜೀವ ಎಸ್. ಕುಡ್ವ ಸಂಪಾದಕರಾಗಿದ್ದಾರೆ. ಪ್ರಥಮದಲ್ಲಿ ಎರಡು ಪುಟಗಳ ದೈನಿಕವಾಗಿದ್ದು 1959ರಲ್ಲಿ ರೋಟರಿ ಮುದ್ರಣ ಯಂತ್ರವನ್ನು ಬಳಸಿಕೊಂಡು ಆರು ಪುಟಗಳ ಪತ್ರಿಕೆಯಾಯಿತು. 1952ರಿಂದಲೇ ಪಿ.ಟಿ.ಐ. ಸಂಸ್ಥೆಯಿಂದಲೂ ದೇಶದ ತನ್ನ ಪತ್ರಿನಿಧಿಗಳ ಮೂಲಕವೂ ಸುದ್ದಿ ಸಂಗ್ರಹಿಸಿ ಪ್ರಕಟಿಸುತ್ತಿತ್ತು. ದಿನನಿತ್ಯದಲ್ಲಿ ವಾರ್ತೆಗಳು, ಸಂಪಾದಕೀಯ, ವ್ಯಂಗ್ಯಬರೆಹ, ವಿಚಾರವೇದಿಕೆ ಮತ್ತು ದೈನಿಕ ಧಾರಾವಾಹಿ ಕಾದಂಬರಿ ಇದ್ದು 6 ಪುಟಗಳಿರುತ್ತಿದ್ದವು. ಭಾನುವಾರದ ಸಂಚಿಕೆ 8 ಪುಟಗಳಿಂದ ಕೂಡಿದ್ದು ವಾರದ ಕಥೆ, ವನಿತಾ ವಾಣಿ, ಚಿತ್ರರಂಗ, ಕವನ, ವಾರ ಭವಿಷ್ಯ, ಪುಟಾಣಿ ಪ್ರಪಂಚ ಮತ್ತು ರವಿವಾರದ ಧಾರವಾಹಿ ಕಾದಂಬರಿ ಮೊದಲಾದ ಶೀರ್ಷಿಕೆಗಳನ್ನೊಳಗೊಂಡಿರುತ್ತಿತ್ತು. (ಪಿ.ಕೆ.ಎಸ್.)

**ನವರತ್ನ ರಾಮರಾವ್ :** 1879-1960. ಬ್ರಿಟಿಷ್ ಸಾರ್ವಭೌಮತ್ವದ ಕಾಲದಲ್ಲೂ ಭಾರತೀಯನ ಸ್ವಾಭಿಮಾನವನ್ನುಳಿಸಿಕೊಂಡು, ನಿರ್ಭಯವಾಗಿ ಅಧಿಕಾರವನ್ನು ನಡೆಸಿದ ಮೈಸೂರಿನ ದಕ್ಷ ಅಧಿಕಾರಿಗಳಲ್ಲೊಬ್ಬರು. ಇವರು ಜನಿಸಿದ್ದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ. ನವರತ್ನ ಇವರ ವಂಶಕ್ಕೆ ಬಂದ ಬಿರುದು. ರಾಮರಾಯರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿಯನ್ನು, ಮದರಾಸಿನಲ್ಲಿ ಬಿ.ಎಲ್.ಪದವಿಯನ್ನು ಪಡೆದ ಅನಂತರ, ಎಂ.ಸಿ.ಎಸ್. ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿ ಮೈಸೂರು ಸರ್ಕಾರದಲ್ಲಿ ಪ್ರೊಬೇಶನರಿ ಅಮಲ್ದಾರರಾಗಿ ಕೆಲಸಕ್ಕೆ ಸೇರಿ, ಕರ್ನಾಟಕದಲ್ಲಿ ರೇಷ್ಮೆ ಇಲಾಖೆಯ ಜನನಕ್ಕೆ ಕಾರಣರಾಗಿ ಆ ಇಲಾಖೆಯ ಪ್ರಥ'ಮ ಮುಖ್ಯಾಧಿಕಾರಿಗಳಾದರು. ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯದರ್ಶಿಗಳಾಗಿ ಸ್ವಲ್ಪ ಕಾಲವಿದ್ದು ಅನಂತರ ರಾಜ್ಯದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಮುಖ್ಯಾಧಿಕಾರಿಗಳಾಗಿ 1934ರಲ್ಲಿ ನಿವೃತ್ತರಾದರು. ಆಗಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರೊಡನೆ ಇವರು ಲಂಡನ್‌ನಲ್ಲಿ ಜರುಗಿದ (1931) ರೌಂಡ್ ಟೇಬಲ್ ಕಾನ್‌ಫರೆನ್ಸ್‌ನಲ್ಲಿ ಭಾಗವಹಿಸಿದ್ದರು. ಇವರ ಕರ್ತವ್ಯನಿಷ್ಠೆ, ದಕ್ಷತೆಗಳನ್ನು ಮೆಚ್ಚಿ ಜಯಚಾಮರಾಜ ಒಡೆಯರ್ ಅವರು ರಾಜಸೇವಾಪ್ರಸಕ್ತ ಎನ್ನುವ ಬಿರುದನ್ನು ಕೊಟ್ಟು ಗೌರವಿಸಿದರು (1943).

ಇವರು ಸಾಹಿತ್ಯ, ಸಂಗೀತಪ್ರಿಯರೂ ಸೌಂದರ್ಯೋಪಾಸಕರೂ ಅಪೂರ್ವ ಹಾಸ್ಯಾಭಿರುಚಿಯನ್ನುಳ್ಳವರೂ ಆಗಿದ್ದರು. ಇವರು ಸ್ವತಃ ಪಿಟೀಲನ್ನು ಸೊಗಸಾಗಿ ನುಡಿಸುತ್ತಿದ್ದರಲ್ಲದೆ ಅನೇಕ ಕಥೆ, ಲೇಖನಗಳನ್ನು ಬರೆದಿದ್ದಾರೆ. ನಿವೃತ್ತಿಯ ಅನಂತರ ಇವರು ಬರೆದ "ಕೆಲವು ನೆನಪುಗಳು ಕನ್ನಡ ಸಾಹಿತ್ಯ ಭಂಡಾರಕ್ಕೊಂದು ಅಮೂಲ್ಯ ಕೊಡುಗೆಯಾಗಿದೆ. ಮಾಸ್ತಿಯವರ ಚನ್ನಬಸವನಾಯಕ ಕಾದಂಬರಿ ಇವರಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ. (ಎಸ್.ಆರ್.)

**ನವಲಗುಂದ :** ಧಾರವಾಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಈ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕಿನ ಪೂರ್ವಕ್ಕೆ ಗದಗ, ಪಶ್ಚಿಮಕ್ಕೆ ಧಾರವಾಡ, ದಕ್ಷಿಣಕ್ಕೆ ಹುಬ್ಬಳ್ಳಿ ಮತ್ತು ಕುಂದಗೋಳ, ಉತ್ತರಕ್ಕೆ ನರಗುಂದ, ಈಶಾನ್ಯಕ್ಕೆ ರೋಣ ತಾಲ್ಲೂಕುಗಳೂ ವಾಯವ್ಯಕ್ಕೆ ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲ್ಲೂಕೂ ಇವೆ. ಧಾರವಾಡದ ಪೂರ್ವಕ್ಕಿರುವ ಈ ತಾಲ್ಲೂಕಿನಲ್ಲಿ ಅಣ್ಣಿಗೇರಿ ಮತ್ತು ಮೊರಬ ಹೋಬಳಿಗಳೂ 58 ಗ್ರಾಮಗಳೂ ಇವೆ. ವಿಸ್ತೀರ್ಣ 1082 ಚಕಿಮೀ ಜನಸಂಖ್ಯೆ 1,76,641.

ಈ ತಾಲ್ಲೂಕು ಈಶಾನ್ಯದೆಡೆಗೆ ಇಳಿಜಾರಾಗಿರುವ ಸುಮಾರು ಮಟ್ಟಸಪ್ರದೇಶ. ದೊಡ್ಡ ನದಿಗಳು ಇಲ್ಲ. ಈ ತಾಲ್ಲೂಕಿನಲ್ಲಿ ಹರಿಯುವ ಮುಖ್ಯ ಹಳ್ಳಗಳಲ್ಲಿ ಬೆಣ್ಣೆಹಳ್ಳ ಒಂದು. ಇದು ತಾಲ್ಲೂಕಿನ ದಕ್ಷಿಣಭಾಗದಿಂದ ಬಲ್ಲರವಾಡದ ಹತ್ತಿರ ಪ್ರವೇಶಿಸಿ ಉತ್ತರಾಭಿಮುಖವಾಗಿ ಹರಿದು ಯಮನೂರಿನ ಉತ್ತರದಲ್ಲಿ ಈಶಾನ್ಯಾಭಿಮುಖವಾಗಿ ಹರಿದು ಮೂಗನೂರಿನ ಬಳಿ ನರಗುಂದ ತಾಲ್ಲೂಕನ್ನು ಪ್ರವೇಶಿಸಿ ಸ್ವಲ್ಪ ದೂರ ನವಲಗುಂದ ಮತ್ತು ನರಗುಂದ ತಾಲ್ಲೂಕುಗಳ ಗಡಿಯಾಗಿ ಹರಿದು ಮುಂದೆ ಮಲಪ್ರಭಾ ನದಿಯನ್ನು ಸೇರಿಕೊಳ್ಳುವುದು. ತುಪರಿಹಳ್ಳ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಮೊರಬದ ಹತ್ತಿರ ಪಶ್ಚಿಮದೆಡೆಯಿಂದ ಪ್ರವೇಶಿಸಿ ಸುಮಾರು ಪೂರ್ವಾಭಿಮುಖವಾಗಿ ಹರಿದು ಅಳಗವಾಡಿಯ ಬಳಿ ದಕ್ಷಿಣಕ್ಕೆ ತಿರುಗಿ ಆಗ್ನೇಯಾಭಿಮುಖವಾಗಿ ಹರಿದು ನವಲಗುಂದದ ವಾಯವ್ಯದಲ್ಲಿ ಬೆಣ್ಣೆಹಳ್ಳವನ್ನು ಕೂಡುವುದು. ಹಂದಿಗನಹಳ್ಳ ತಾಲ್ಲೂಕಿನ ಆಗ್ನೇಯದಲ್ಲಿ ಕಿತ್ತೂರಿನ ಹತ್ತಿರ ಪ್ರವೇಶಿಸಿ ತಾಲ್ಲೂಕಿನ ಪೂರ್ವಭಾಗದಲ್ಲಿ ಉತ್ತರಾಭಿಮುಖವಾಗಿ ಹರಿದು ತಡಹಾಳ ಗ್ರಾಮದ ಹತ್ತಿರ ಬೆಣ್ಣೆಹಳ್ಳವನ್ನು ಸೇರಿಕೊಳ್ಳುತ್ತದೆ. ಹಂದಿಗನ ಹಳ್ಳಕ್ಕೆ ಪಿಂಜರಹಳ್ಳವು ತುಪ್ಪದ ಕುರಹಟ್ಟಿ ಬಳಿ ಸೇರಿಕೊಳ್ಳುವುದು.ಈ ಹಳ್ಳಗಳಿಗೆ ಮಳೆಗಾಲದಲ್ಲಿ ಸುತ್ತಲಿನಿಂದ ಅನೇಕ ತೊರೆಗಳು ಬಂದು ಸೇರುತ್ತವೆ. ಇವನ್ನು ಹಳ್ಳಗಳೆಂದು ಕರೆದರೂ ನದಿಗಳಷ್ಟೇ ಇವು ಉಪಯುಕ್ತವಾಗಿವೆಯೆನ್ನಬಹುದು. ಇವಲ್ಲದೆ ಕೆಲವು ಬಾವಿಗಳೂ ಕೆರೆಗಳೂ ತಾಲ್ಲೂಕಿನಲ್ಲಿವೆ. ಈ ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ ಸು. 660 ಮಿಮೀ.

ತಾಲ್ಲೂಕಿನಲ್ಲಿ ಕಪ್ಪು ಎರೆಭೂಮಿ ಪದೇಶ ಹೆಚ್ಚು. ಜೊತೆಗೆ ಹಳ್ಳಗಳು ಮತ್ತು ಅವುಗಳಿಗೆ ಸೇರುವ ಕೆಲವು ತೊರೆಗಳ ಸುತ್ತಲ ಪ್ರದೇಶ ವ್ಯವಸಾಯ ಯೋಗ್ಯವಾದದ್ದು. ಈ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವಿಲ್ಲವೆನ್ನಬಹುದು. ಬತ್ತ, ಗೋದಿ, ಜೋಳ, ಸೇಂಗಾ, ಎಣ್ಣೆಬೀಜಗಳು, ಹತ್ತಿ ಕೆಲವೊಂದು ದ್ವಿದಳಧಾನ್ಯಗಳನ್ನು ಬೆಳೆಯುತ್ತಾರೆ. ಈ ತಾಲ್ಲೂಕಿನ ಆಕಳುಗಳು ಒಳ್ಳೆಯ ಜಾತಿಯವೆಂಬ ಹೆಸರು ಪಡೆದಿದೆ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಈ ತಾಲ್ಲೂಕಿನಲ್ಲಿ ಇದೆ.

ತಾಲ್ಲೂಕಿನಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗಳಿಲ್ಲ. ಗೃಹ ಮತ್ತು ಗ್ರಾಮೋದ್ಯೋಗಗಳಲ್ಲಿ ಕೈಮಗ್ಗದ ಬಟ್ಟೆ ತಯಾರಿಕೆ, ಚರ್ಮ ಹದಮಾಡುವುದು ಮತ್ತು ಚರ್ಮವಸ್ತುಗಳ ತಯಾರಿಕೆ, ಗುಡಾರಗಳು, ಮರದ ತೊಟ್ಟಿಲುಗಳು ಮತ್ತು ಆಟದ ಸಾಮಾನುಗಳ ತಯಾರಿಕೆಯುಂಟು.

ತಾಲ್ಲೂಕಿನಲ್ಲಿ ದಕ್ಷಿಣ ಭಾಗದಲ್ಲಿ ಗದಗ-ಹುಬ್ಬಳ್ಳಿ ರೈಲ್ವೆ ಹಾದಿ ಇದ್ದು ಅಣ್ಣಿಗೇರಿ, ಹೆಬಸೂರು ರೈಲ್ವೆ ನಿಲ್ದಾಣಗಳಿವೆ. ಹುಬ್ಬಳ್ಳಿ-ಬಿಜಾಪುರ ರಸ್ತೆ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತದೆ. ನವಲಗುಂದ ರೋಣ, ನವಲಗುಂದ-ಸವದತ್ತಿ ರಸ್ತೆಗಳೂ ಮುಖ್ಯ ಮಾರ್ಗಗಳು.

ಈ ತಾಲ್ಲೂಕು ಬಹಮನೀ ಸುಲ್ತಾನರ ಆಳ್ವಿಕೆಗೆ ಸೇರಿತ್ತು. ಕೆಲವು ಕಾಲ ಅಲಾವುದ್ದೀನನ (1436-1458) ಸೋದರಳಿಯ ಜಲಾಲ್‌ಖಾನ್ ಈ

ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. 1690ರ ಹೊತ್ತಿಗೆ ಔರಂಗಜೇಬನ ಆಡಳಿತಕ್ಕೆ ಈ ಭಾಗವೆಲ್ಲ ಸೇರಿದ್ದು ಕಂದಾಯದ ಹೊಣೆ ನವಲಗುಂದಾದ ದೇವಾಲಯ ಮನೆತನಕ್ಕೆ ಸೇರಿತ್ತು. 1747ರಲ್ಲಿ ಮರಾಠ ಪೇಶ್ವೆಗಳು ಅನಂತರ 1778ರಲ್ಲಿ ಹೈದರ್ ಅಲಿ ಒಡೆತನಕ್ಕೆ ಬಂತು. 1795 ಮತ್ತು 1800ರಲ್ಲಿ ಧೋಂಡೋಪಂತ ಗೋಖಲೆ ನವಲಗುಂದ ಮತ್ತು ಗದಗನ್ನು ವಶಪಡಿಸಿಕೊಂಡ. 1817ರಲ್ಲಿ ಜನರಲ್ ಮನ್ರೋ, ರಾಮರಾವ್ ಎಂಬುವನನ್ನು ಈ ಭಾಗದ ಆಡಳಿತ ಮತ್ತು ಸೈನ್ಯಾಧಿಕಾರಿಯಾಗಿ ನೇಮಿಸಿದ್ದ. ಗೋಖಲೆಯನ್ನು ರಾಮರಾವ್ ಸೋಲಿಸಿ ಈ ಭಾಗವನ್ನು ವಶಪಡಿಸಿಕೊಂಡನೆಂದೂ ತಿಳಿದುಬರುತ್ತದೆ.

ಈ ತಾಲ್ಲೂಕಿನ ಅಣ್ಣಿಗೇರಿ (ನೋಡಿ) ಒಂದು ರೈಲ್ವೆನಿಲ್ದಾಣ. ಇಲ್ಲಿ ಅಮೃತೇಶ್ವರ ದೇವಾಲಯವಿದೆ. ನವಲಗುಂದದ ನೈಋತ್ಯಕ್ಕೆ ಸುಮಾರು 5 ಕಿಮೀ ದೂರದಲ್ಲಿರುವ ಯಮನೂರು ಹೆಬಸೂರು ರೈಲ್ವೆ ನಿಲ್ದಾಣದಿಂದ 15 ಕಿಮೀ ದೂರದಲ್ಲಿದೆ. ಹಿಂದುಗಳು ಮತ್ತು ಮುಸಲ್ಮಾನರು ಭಾಗವಹಿಸುವ ಇಲ್ಲಿನ ರಾಜಾಬಾಗ್ ಸವಾರ್ ಉರುಸ್ ಪ್ರಸಿದ್ಧ.

ನವಲಗುಂದ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಧಾರವಾಡದ ಪೂರ್ವಕ್ಕೆ 47 ಕಿಮೀ ಅಂತರದಲ್ಲಿ ಬೆಣ್ಣಿಹಳ್ಳದ ಬಲದಂಡೆಯ ಮೇಲೆ ಇದೆ. ಜನಸಂಖ್ಯೆ 22,200. ಈ ಊರು ಸುತ್ತಲ ಪ್ರದೇಶಗಳಿಗೆ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿಂದ ನರಗುಂದ, ಹುಬ್ಬಳ್ಳಿ, ಧಾರವಾಡ, ರೋಣ, ಗದಗ ಮುಂತಾದ ಪಟ್ಟಣಗಳಿಗೆ ಮಾರ್ಗಗಳಿವೆ. ಮಂಗಳವಾರ ಸಂತೆ ಸೇರುವುದು. ಕಾಳುಕಡ್ಡಿ, ಎಣ್ಣೆ, ಹತ್ತಿಗಳ ವ್ಯಾಪಾರ ನಡೆಯುತ್ತದೆ. ದನಗಳ ಮಾರಾಟವೂ ಆಗುವುದು. ಉತ್ತಮ ಗುಣಮಟ್ಟದ ಗುಡಾರಗಳು ಇಲ್ಲಿ ತಯಾರಾಗಿ ನೆರೆಯ ಜಿಲ್ಲೆಗಳಿಗೆ ರವಾನೆಯಾಗುತ್ತವೆ. ತೊಟ್ಟಿಲುಗಳ ಹಾಗೂ ಆಟಿಕೆ ಸಾಮಾನುಗಳ ತಯಾರಿಕೆಗೂ ಈ ಊರು ಪ್ರಸಿದ್ಧ.

ಇಲ್ಲಿ ಪುರಸಭಾಡಳಿತವಿದೆ. ಊರಿಗೆ ನೀಲವ್ವನ ಕೆರೆ ಎಂಬ ಜಲಾಶಯದಿಂದ ನೀರನ್ನು ಒದಗಿಸುವರು. ಈ ಊರನ್ನಾಳಿದ ದೇಸಾಯರ ಮನೆತನಕ್ಕೆ ಸೇರಿದ್ದ ಪ್ರಸಿದ್ಧ ತ್ಯಾಗವೀರ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರು ತಮ್ಮ ಅಪಾರ ಆಸ್ತಿಯನ್ನು ನಾಡಿನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದಾನಮಾಡಿದ್ದಾರೆ. ಇವರ ಸಮಾಧಿ ಊರಲ್ಲಿದೆ. ಈ ಊರಿನ ಗವಿಮಠದಲ್ಲಿ ಪ್ರತಿವರ್ಷ ಎಡೆಯೂರು ಸಿದ್ಧಲಿಂಗೇಶ್ವರರ ಜಾತ್ರೆ ನಡೆಯುತ್ತದೆ. (ಡಿ.ಕೆ.,ಎಸ್.ಜಿ.ಕೆ.)

**ನವಿಲ್ಗುಂದದ ಮಾದಿರಾಜ :** ಸು. 1300. ಶ್ರೇಷ್ಠ ಪಂಡಿತ ಹಾಗೂ ಲಿಪಿಕಾರ. ಇವನ ತಂದೆ ಚಾಮ, ಹೆಂಡತಿ ಮಹಾದೇವಿ. ಮಕ್ಕಳು ಬಂಕರಸ ಮತ್ತು ಮಾಚಿ. ಧಾರವಾಡ ಜಿಲ್ಲೆಯ ನವಲಗುಂದ ಈತನ ಜನ್ಮಸ್ಥಳ. ಇವನಿಗೆ ಬುಧಮಾಧವ ಎಂಬ ಬಿರುದಿದ್ದಂತೆ ತೋರುತ್ತದೆ.

ಈತ ಕಾವ್ಯ ಪ್ರೇಮಿಯೂ ಸ್ವತಃ ಕಾವ್ಯರಚನೆ ಮಾಡಬಲ್ಲ ಸಾಮರ್ಥ್ಯವುಳ್ಳವನೂ ಆಗಿದ್ದ. ಎರಡನೆಯ ಗುಣವರ್ಮನ (ಸು. 1215) ಪುಷ್ಪದಂತಪುರಾಣದ ಒಂದು ಪ್ರತಿಯ ಕೊನೆಯಲ್ಲಿ ಆ ಗ್ರಂಥವನ್ನು ಈತ ಪ್ರತಿಮಾಡಿದಂತೆ ಹೇಳುವ ಎರಡು ವೃತ್ತಗಳಿದ್ದು ಅವುಗಳ ಶೈಲಿ ಸುಂದರವೂ ಬಂಧುಬಂಧುರವೂ ಆಗಿರುವುದನ್ನು ನೋಡಿದರೆ ಈತ ಉತ್ತಮ ಮಟ್ಟದ ಕವಿಯಾಗಿದ್ದಂತೆ ತಿಳಿಯುತ್ತದೆ. ಸುಂದರಪ್ರತಿ ಬರೆದರೆ, ಅದು ಚದುರರ ವಿಶೇಷ ವರ್ಣನೆಗೆ ಪಾತ್ರವಾಗಿರಬೇಕು. ಬರೆಯುವವನು ಬಿಂದುವಿನ ಶೋಭೆ, ತಲೆಕಟ್ಟಿನ ಹೊಕ್ಕುಳ ಚೆಲುವು, ಮಾತ್ರೆಯಲ್ಲಿ ನಿಲ್ಲುವ ಬೆಡಗು, ಬಳ್ಳಿಯಲ್ಲಿ ಹೊಂದಿರುವ ನಯ, ವಿಸರ್ಗದಲ್ಲಿ ಹೊಂದಿಕೆ, ಅಕ್ಷರಕ್ಷರದ ಜೋಡಣೆ - ಈ ಮೊದಲಾದ ಲಿಪಿಕಲಾತ್ಮಕ ಅಂಶಗಳನ್ನು ಗಮನದಲ್ಲಿಡಬೇಕು ಎಂದು ಹೇಳವ ಈತನ ಮಾತುಗಳು ’ಲಿಪಿಕಾರರಿಗೆ ಮಾರ್ಗದರ್ಶಕವೂ ಈತನ ಲಿಪಿಕಾರತನದ ವೈಶಿಷ್ಟ್ಯಕ್ಕೆ ನಿದರ್ಶನವೂ ಆಗಿವೆ. (ಡಿ.ಎಸ್.ಎಚ್.)

**ನಾಗಚಂದ್ರ :** ಸುಪ್ರಸಿದ್ಧ ಜೈನಕವಿ. ಮಲ್ಲಿನಾಥ ಪುರಾಣ, ರಾಮಚಂದ್ರಚರಿತಪುರಾಣ, (ಪಂಪರಾಮಾಯಣ) ಎಂಬ ಗ್ರಂಥಗಳ ಕರ್ತೃ. ಜಿನಾಕ್ಷರಮಾಲೆ, ಯೋಗಾಮೃತ, ಕಾಮನಕಾಳಗ - ಇವೂ ಇವನ ಹೆಸರಿನಲ್ಲಿವೆ. ಅಭಿನವಪಂಪ ಎಂಬುದು ಇವನ ಬಿರುದುಗಳಲ್ಲಿ ಮುಖ್ಯವಾದುದು. ತನ್ನ ಗುರುಪರಂಪರೆಯ ವಿನಾ ಮತ್ತಾವುದೇ ವೈಯಕ್ತಿಕ ಸಂಗತಿಯನ್ನು ತನ್ನ ಕೃತಿಗಳಲ್ಲಿ ಹೇಳಿಕೊಂಡಿಲ್ಲವಾದ್ದರಿಂದ, ಇವನ ಕಾಲದೇಶಗಳನ್ನು ನಿರ್ಧರಿಸುವುದು ಕಷ್ಟವಾಗಿದೆ. ಇವನ ಕಾಲ 1040, 1100, 1140 ಎಂದು ಮೂರು ಅಭಿಪ್ರಾಯಗಳಿವೆ. ಇವನು 12ನೆಯ ಶತಮಾನದ ಕವಿಯೆಂದೂ ವಚನಕಾರರ ಸಮಕಾಲೀನ ಅಥವಾ ಅವರಾದಮೇಲೆ ಬಂದವನು ಎಂದೂ ತೋರುತ್ತದೆ. ವಿಜಯಪುರದಲ್ಲಿ ತಾನು ಮಲ್ಲಿಜಿನನ ಭವನವನ್ನು ಕಟ್ಟಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ; ಈ ವಿಜಯಪುರ ಬಹುಶಃ ಈಗಿನ ಬಿಜಾಪುರ, ಆದ್ದರಿಂದ ಇವನು ಆ ಪ್ರಾಂತದವನು ಎಂದು ಹೇಳಬಹುದು. ಇವನು ರಾಜಾಶ್ರಯದಲ್ಲಿದ್ದಂತೆ ತೋರುವುದಿಲ್ಲ. ಜಿನಭಕ್ತಿಪ್ರಧಾನವಾದ ಧಾರ್ಮಿಕ ವ್ಯಕ್ತಿತ್ವವೊಂದು ಇವನ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಶಾಂತ ರಸದಲ್ಲಿ ಇವನಿಗೆ ವಿಶೇಷವಾದ ಆಸಕ್ತಿ ಮತ್ತು ಅಭಿರುಚಿ.

ಮಲ್ಲಿನಾಥಪುರಾಣ 19ನೆಯ ತೀರ್ಥಂಕರನಾದ ಮಲ್ಲಿನಾಥನ ಕಥೆಯನ್ನು ನಿರೂಪಿಸುವ 14 ಆಶ್ವಾಸಗಳ ಕೃತಿ. ಇದರಲ್ಲಿ ಜೀವಕ್ಕೆ ಶರಣ್ಯವೊಂದೇ ನಿರ್ಮಳ ಧರ್ಮಂ ಎಂಬ ಸಂದೇಶವನ್ನು ಮೊಳಗಿಸುವುದು ಕವಿಯ ವಿವಕ್ಷೆ. ಈ ಕಾವ್ಯಕ್ಕೆ ಆಕರ ಗುಣಭದ್ರಾಚಾರ್ಯರ ಉತ್ತರಪುರಾಣ, ಮಲ್ಲಿನಾಥನ ಕಥೆ ವಾಸ್ತವವಾಗಿ ಕಿರಿದು; ಮೂಲದಲ್ಲಿ ಅದು ಕೇವಲ 66 ಶ್ಲೋಕಗಳಲ್ಲಿ ಉಕ್ತವಾಗಿದೆ. ನಾಗಚಂದ್ರ ಅದನ್ನು ಬಹಳ ಹಿಗ್ಗಲಿಸಿದ್ದಾನೆ; ವರ್ಣನೆಗಳಿಂದ ತುಂಬಿದ್ದಾನೆ. ಮೂಲದಲ್ಲಿ ಮಲ್ಲಿನಾಥನ ಕಥೆಯೊಡನೆ ಸೇರಿಕೊಂಡಿರುವ ಬಲದೇವ ವಾಸುದೇವ ಪ್ರತಿವಾಸುದೇವರ ವೃತ್ತಾಂತವನ್ನು ಇವನು ಬಿಟ್ಟಿದ್ದಾನೆ. ಹೀಗಾಗಿ ಮಲ್ಲಿನಾಥ ಪುರಾಣ ಬಹುಮಟ್ಟಿಗೆ ವರ್ಣನಾತ್ಮಕವಾದ ಕೃತಿಯಾಗಿದೆ. ಪ್ರಾಯಶಃ ಇದು ಕವಿಯ ಪ್ರಥಮ ರಚನೆಯಾದುದರಿಂದ, ಪುರಾಣತ್ವಪ್ರಧಾನವಾದ ಸಾಂಪ್ರದಾಯಿಕ ಬರೆವಣಿಗೆಯಾಗಿ ಪರಿಣಮಿಸಿವೆ. ಆದರೆ ಕವಿಯ ಪ್ರತಿಭೆಯನ್ನು ಬಿಂಬಿಸುವ ಸುಂದರವಾದ ಭಾವಗೀತಾತ್ಮಕ ಭಾಗಗಳಿಗೆ ಮಲ್ಲಿನಾಥಪುರಾಣದಲ್ಲಿ ಕೊರತೆಯಿಲ್ಲ. ಈ ಕೃತಿಯ ಪೂರ್ವಾರ್ಧಕ್ಕಿಂತ ಉತ್ತರಾರ್ಧ ಹೆಚ್ಚು ಪರಿಣತವಾಗಿದೆ. ಇದರಲ್ಲಿ ಬರುವ ಜಿನಸ್ತುತಿ ನಾಗಚಂದ್ರನ ಆತ್ಮಸಾರಾವೆನಿಸಿಕೊಂಡಿದೆ. ಲಕ್ಷ್ಮೀದೇವಿಯ ಪುತ್ರದೋಹದ ವರ್ಣನೆ, ಶರತ್ಕಾಲ ವರ್ಣನೆ, ಪ್ರಭಾತವರ್ಣನೆ ಕಾಮದಹನಪ್ರಸಂಗ - ಇವು ಮಲ್ಲಿನಾಥಪುರಾಣದ ಕೆಲವು ಹೃದಯಂಗಮವಾದ ಸ್ಥಾನಗಳು. ಇದೊಂದು ಸತ್ಕಾವ್ಯವೆಂದು ಧಾರಾಳವಾಗಿ ಹೇಳಬಹುದು.

ನಾಗಚಂದ್ರನ ಕೀರ್ತಿ ನಿಂತಿರುವುದು ಮುಖ್ಯವಾಗಿ ರಾಮಚಂದ್ರಚರಿತಪುರಾಣದ ಮೇಲೆ. ಇದು 16 ಆಶ್ವಾಸಗಳನ್ನುಳ್ಳ ಉದಾತ್ತರಾಘವನ ಆಖ್ಯಾನ. ಇದು ಜೈನಪರಂಪರೆಯ ರಾಮಾಯಣ. ಇದರಲ್ಲಿ ಬರುವ ಪಾತ್ರಗಳೆಲ್ಲ ಜೈನರು; ಇಡೀ ಕೃತಿಯಲ್ಲಿ ಜೈನ ವಾತಾವರಣ ಹರಡಿದೆ. ಇಲ್ಲಿ ರಾಮ ಲಕ್ಷ್ಮಣ ರಾವಣರು ಜೈನ ಶಲಾಕಾಪುರುಷರು, ಆದ್ದರಿಂದ ಇದು ಅಪೂರ್ವವಾದ ರಾಮಕಥೆ. ಆದರೆ ಇದು ನಾಗಚಂದ್ರನ ಸ್ವಂತ ಸೃಷ್ಟಿಯಲ್ಲ. ವಿಮಲಸೂರಿ ಎಂಬ ಕವಿ ಪ್ರಾಕೃತದಲ್ಲಿ ಬರೆದ ಪಉಮಚರಿಯ (ಪದ್ಮಚರಿತ) ಇವನ ರಾಮಯಣಕ್ಕೆ ಮೂಲ; ಸಂಸ್ಕೃತದಲ್ಲಿ ರವಿಷೇಣ ಬರೆದ ಮಹಾ ರಾಮಾಯಣಕ್ಕೂ (ಪದ್ಮಪುರಾಣ) ಇವನು ಋಣಿ.

ವಾಲ್ಮೀಕಿ ರಾಮಾಯಣಕ್ಕೂ ಈ ಜೈನ ರಾಮಾಯಣಕ್ಕೂ ಹಲವಾರು ವ್ಯತ್ಯಾಸಗಳಿವೆ. ಉದಾಹರಣೆಗೆ ಇಲ್ಲಿ ಲಕ್ಷ್ಮಣನಿಗೆ ಪ್ರಾಧಾನ್ಯ. ಕಡೆಗೆ ರಾವಣನನ್ನು ಕೊಲ್ಲುವವನೂ ಅವನೇ. ದಶರಥನಿಗೆ ನಾಲ್ವರು ರಾಣಿಯರು, ರಾಮಲಕ್ಷ್ಮಣರು ಏಕಪತ್ನೀವ್ರತಸ್ಥರಲ್ಲ. ಆಂಜನೇಯ ಕೂಡ ವಿವಾಹಿತ, ಮಾರೀಚ ಮಂಥರೆಯರ ಮತ್ತು ಸೇತುಬಂಧನದ ಪ್ರಕರಣಗಳು

ಇಲ್ಲಿಲ್ಲ. ಇಂಥ ಅಸಂಖ್ಯಾತ ಮಾರ್ಪಾಟುಗಳಲ್ಲಿ ಬಹುಮುಖ್ಯವಾದ ಮಾರ್ಪಾಟಿರುವುದು ರಾವಣನ ಪಾತ್ರನಿರ್ಮಾಣದಲ್ಲಿ, ಜೈನ ರಾಮಾಯಣದ ರಾವಣ ಸಾಹಿತ್ಯ ಪ್ರಪಂಚದ ಒಂದು ಅವಿಸ್ಮರಣೀಯವಾದ ಪಾತ್ರ. ಅವನು ವೈದಿಕ ರಾಮಾಯಣದ ರಾವಣನಂತೆ ದುಷ್ಟನಲ್ಲ. ಕಾಮುಕನಲ್ಲ, ಅವನು ಸದ್ಗುಣಸಂಪನ್ನನಾದ ಮಹಾಪುರುಷ. ಆದರೆ ವಿಧಿಯ ಕೈವಾಡದಿಂದ ಆಕಸ್ಮಿಕವಾದ ಅಲ್ಪ ದೌರ್ಬಲ್ಯಕ್ಕೆ ವಶನಾಗಿ ಪತನಗೊಳ್ಳುತ್ತಾನೆ. ಅವನು ಸೀತೆಯನ್ನು ಅಪಹರಿಸಿದರೂ ಕಡೆಗೆ ಪಶ್ಚಾತ್ತಾಪದಿಂದ ಪರಿವರ್ತಿತನಾಗಿ ಪುನೀತನಾಗುತ್ತಾನೆ. ಸೀತೆಯನ್ನೂ ರಾಮನಿಗೊಪ್ಪಿಸಬೇಕೆಂದು ಬಗೆದು, ಯುದ್ಧದಲ್ಲಿ ರಾಮಲಕ್ಷ್ಮಣರನ್ನು ಸೆರೆಹಿಡಿದು ತರಲು ಹೋಗಿ ಹತನಾಗುವ ಈ ರಾವಣನ ದುರದೃಷ್ಟ ಅನುಕಂಪ ಹುಟ್ಟಿಸುತ್ತದೆ. ನಾಗಚಂದ್ರನ ರಾವಣನನ್ನು ದುರಂತ ರಾವಣನೆಂದು ಕರೆಯಲಾಗಿದೆ.; ಆದರೆ ಅವನದು ನಿಜವಾಗಿಯೂ ದುರಂತವೇ ಎಂಬುದು ಚರ್ಚಾಸ್ಪದ.

ಮಲ್ಲಿನಾಥ'ಪುರಾಣದಲ್ಲಿ ಮೂಲವನ್ನು ವಿಸ್ತರಿಸುವ ಅಗತ್ಯ ನಾಗಚಂದ್ರನಿಗೆ ಉಂಟಾದರೆ, ಪಂಪರಾಮಾಯಣದಲ್ಲಿ ಮೂಲವನ್ನು ಸಂಗ್ರಹಿಸುವ ಸಮಸ್ಯೆ ಎದುರಾಗಿದೆ. ಅದನ್ನು ಕವಿ ಯಶಸ್ವಿಯಾಗಿ ದಾಟಿದ್ದಾನೆ. ಇವನ ಸಂಗ್ರಹದ ಜಾಣ್ಮೆ ಪ್ರಶಂಸನೀಯವಾದುದು. ಆದರೂ ಪಂಪರಾಮಾಯಣದಲ್ಲಿ ಪುರಾಣದ ಅಂಶಗಳು ಅನಿವಾರ್ಯವಾಗಿ ಉಳಿದಿವೆ. ಉಪರಂಭೆಯ ಪ್ರಸಂಗ, ಸೀತಾಪರಹಣದ ಮತ್ತು ರಾಮನ ವಿಲಾಪದ ಸನ್ನಿವೇಶ, ರಾವಣನ ಪರಿವರ್ತನೆಯ ಪ್ರಕರಣ ಇವು ರಾಮಚಂದ್ರಚರಿತಪುರಾಣದ ರಮ್ಯ ರಸೋತ್ಕಟ ಭಾಗಗಳಲ್ಲಿ ಕೆಲವು. - ಇದು ಮಹಾಕಾವ್ಯವಲ್ಲದಿದ್ದರೂ ಒಂದು ಶ್ರೇಷ್ಠವಾದ ಕಾವ್ಯವೆಂಬುದರಲ್ಲಿ ಸಂಶಯವಿಲ್ಲ.

ನಾಗಚಂದ್ರನ ಶೈಲಿ ವೈಶಿಷ್ಟ್ಯಪೂರ್ಣವಾದುದು॥ ಸರಳತೆ, ಮಾಧುರ್ಯ, ಗೇಯತೆ ಅದರ ಪ್ರಮುಖ ಲಕ್ಷಣಗಳು. ಕವಿಯ ಚಿತ್ತವೃತ್ತಿಯಲ್ಲಿ ಪ್ರಧಾನವಾಗಿರುವ ನಯ, ಸೌಕುಮಾರ್ಯ, ಲಾಲಿತ್ಯಗಳು ಇವನ ಶೈಲಿಯಲ್ಲೂ ಕಂಡು ಬರುತ್ತವೆ. ಅವು ಇವನ ಶೈಲಿಯ ಪರಿಮಿತಿಯೂ ಹೌದು. ಶೃಂಗಾರ ಶಾಂತ ಕರುಣ ರಸಗಳ ಚಿತ್ರಣಕ್ಕೆ ಅನುಕೂಲಿಸುವಂತೆ ನಾಗಚಂದ್ರನ ಶೈಲಿ ವೀರ, ರೌದ್ರ, ಭಯಾನಕ ರಸಗಳ ಆವಿಷ್ಕಾರಕ್ಕೆ ಅನುಕೂಲಿಸುವುದಿಲ್ಲ. ಪಂಪ, ರನ್ನರ ಶೈಲಿಯ ಆವೇಶ ಮೊರೆತಗಳು ಇವನ ಶೈಲಿಯಲ್ಲಿಲ್ಲ. ಅರ್ಥಾಂತರ ನ್ಯಾಸಾಲಂಕಾರ ನಾಗಚಂದ್ರನಿಗೆ ಬಹುಪ್ರಿಯವಾದುದು; ಅದನ್ನು ಇವನು ಉದ್ದಕ್ಕೂ ಎರಚುತ್ತಾ ಹೋಗುತ್ತಾನೆ. ಇವನ ಅರ್ಥಾಂತರನ್ಯಾಸಗಳಲ್ಲಿ ಕೆಲವು ಅತ್ಯಂತ ಸಾರ್ಥಕವಾಗಿವೆ.

ಪಾಂಡಿತ್ಯಪ್ರದರ್ಶನದ ಸಾಫಲ್ಯ ನಾಗಚಂದ್ರನಿಗಿಲ್ಲ. ಕಾವ್ಯ ಎಲ್ಲರಿಗೂ ಗ್ರಾಹ್ಯವಾಗಬೇಕು. ಆದರಿಂದ ಬದುಕಿಗೆ ಒಳಿತಾಗಬೇಕು ಎಂಬ ನಿಲುವು. ಜನತಾಂತರ್ದೃಷ್ಟಿ ಇವನದು. ಇವನ ಪ್ರಕಾರ, ಕಾವ್ಯ ಕೇವಲ ಮನರಂಜನೆಯ ಮಾಧ್ಯಮವಾಗಬಾರದು. ಆತ್ಮೋನ್ನತಿಕಾರಕವಾಗಬೇಕು. ಕಾವ್ಯದಲ್ಲಿ ರೀತಿಗಿಂತ ವಸ್ತು ಮುಖ್ಯವೆಂದು ಇವನ ಅಭಿಪ್ರಾಯ; ಕಲೆಗಾಗಿ ಕಲೆ ಎಂಬ ಪಂಥ'ಕ್ಕೆ ಇದು ವಿರುದ್ಧ, ಕವಿ ರಾಗದ್ವೇಷರಹಿತನಾಗಿರಬೇಕು ಹಾಗಿಲ್ಲದಿದ್ದರೆ ಅವನ ಕೃತಿ ವಿಷೋದ್ಯಾನವನ್ನು ಬಿತ್ತಿ ಬೆಳೆದಂತಾಗುತ್ತದೆ ಎಂಬ ನಾಗಚಂದ್ರನ ಹೇಳಿಕೆ ಗಮನಾರ್ಹವಾದುದು. ಇವನು ತನ್ನ ಈ ಸಮಷ್ಟಿಕಲ್ಯಾಣನಿಷ್ಠಾವಾದ ನಿಲುವಿನಿಂದಾಗಿ ಕನ್ನಡ ಚಂಪೂ ಕವಿಗಳಲ್ಲಿ ಒಂದು ಅನನ್ಯವಾದ ಸ್ಥಾನವನ್ನು ಪಡೆದುಕೊಳ್ಳುತ್ತಾನೆ.

ತನ್ನ ಕಾಲಕ್ಕೆ ಜನಪ್ರಿಯತೆಯನ್ನು ಕಳೆದುಕೊಂಡು ಅಧೋಮುಖವಾಗಿದ್ದ ಜೈನ ಧರ್ಮವನ್ನು ಮತ್ತೆ ಜನಪ್ರಿಯವಾಗಿಸಬೇಕು. ಮೇಲೆತ್ತಬೇಕು ಎಂಬ ಘನೋದ್ದೇಶದಿಂದ ತನ್ನ ಎರಡೂ ಕೃತಿಗಳಿಗೂ ಧಾರ್ಮಿಕ ವಸ್ತುವನ್ನು ಆರಿಸಿಕೊಂಡು ಕಾವ್ಯ ರಚಿಸಿದ ನಾಗಚಂದ್ರ ಮಹಾಕವಿಯಲ್ಲದಿದ್ದರೂ ದ್ವಿತೀಯ ಶ್ರೇಣಿಯ ಕವಿಗಳಲ್ಲಿ ಅಗ್ರಗಣ್ಯನಾಗಿ ನಿಲ್ಲುವ ಯೋಗ್ಯತೆಯುಳ್ಳವನಾಗಿದ್ದಾನೆ. (ಪಿ.ಪಿ.ಕೆ.)

**ನಾಗತಿಹಳ್ಳಿ ಚಂದ್ರಶೇಖರ :** 1958- . ಚಲನಚಿತ್ರ ನಿರ್ದೇಶಕ, ಲೇಖಕ, ಹಾಗೂ ಪರಿಸರವಾದಿ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿ ಗ್ರಾಮದಲ್ಲಿ 1958 ಆಗಸ್ಟ್ 15ರಂದು ಜನಿಸಿದರು. ತಂದೆ ತಿಮ್ಮಶೆಟ್ಟಿಗೌಡ, ತಾಯಿ ಪಾರ್ವತಮ್ಮ. ಬಾಲ್ಯದಿಂದಲೇ ಸಾಹಿತ್ಯಾಸಕ್ತಿ ಹೊಂದಿದ್ದ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಹತ್ತು ಚಿನ್ನದ ಪದಕಗಳನ್ನು ಪಡೆಯುವುದರೊಂದಿಗೆ ಪೂರೈಸಿದರು (1985). ಗ್ರಾಮೀಣ ಪ್ರದೇಶದಿಂದ ಬಂದ ಇವರು ವಿದ್ಯಾರ್ಥಿ ಜೀವನದಲ್ಲಿ ಮೈಲಿಗಲ್ಲುಗಳಿಗೆ ಬಣ್ಣ ಬಳಿಯುವುದು, ರಾಜ್ಯ ಹಾಲು ಒಕ್ಕೂಟದಲ್ಲಿ ದಿನಗೂಲಿಯ ನೌಕರಿ ಮಾಡುವುದು ಮೊದಲಾದ ಕೆಲಸಗಳ ಮೂಲಕ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದರು.

ಇವರು ಹದ್ದುಗಳು, ನನ್ನ ಪ್ರೀತಿಯ ಹುಡುಗನಿಗೆ, ಮಲೆನಾಡಿನ ಹುಡುಗಿ - ಬಯಲು ಸೀಮೆಯ ಹುಡುಗ, ಸನ್ನಿಧಿ, ಅಕಾಲ ಮೊದಲಾದ ಆರು ಕಥಾಸಂಕಲನಗಳನ್ನೂ ಎರಡು ಪ್ರವಾಸ ಕಥನಗಳನ್ನೂ ಮೂರು ಕಾದಂಬರಿಗಳನ್ನೂ ರಚಿಸಿದ್ದಾರೆ.

ಕಾಡಿನಬೆಂಕಿ ಚಲನಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ ಮತ್ತು ಗೀತರಚನೆ ಮಾಡುವುದರ ಮೂಲಕ ಚಿತ್ರರಂಗ ಪ್ರವೇಶಿಸಿದರು (1987). ಸಂಕ್ರಾಂತಿ ಚಲನಚಿತ್ರದ ಮೂಲಕ ಕಥೆಗಾರರಾದರು (1988). ಉಂಡೂ ಹೋದ ಕೊಂಡೂಹೋದ ಎಂಬ ಚಿತ್ರ ನಿರ್ದೇಶಿಸಿ (1992) ಯಶಸ್ವಿ ಚಿತ್ರ ನಿರ್ದೇಶಕರೆನಿಸಿದರು. ಕೊಟ್ರೇಶಿ ಕನಸು, ಬಾ ನಲ್ಲೆ ಮಧುಚಂದ್ರಕ್ಕೆ, ಅಮೆರಿಕಾ ಅಮೆರಿಕಾ, ಹೂಮಳೆ, ನನ್ನ ಪ್ರೀತಿಯ ಹುಡುಗಿ, ಪ್ಯಾರಿಸ್ ಪ್ರಣಯ ಮುಂತಾದ ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಪ್ರತಿಬಿಂಬ, ವಠಾರ - ಈ ಧಾರವಾಹಿಗಳ ಮೂಲಕ ಕಿರುತೆರೆಯಲ್ಲಿಯೂ ಇವರು ಅಪಾರ ಯಶಸ್ಸು ಗಳಿಸಿದರು.

ಅಮೆರಿಕಾ ಮತ್ತು ಯೂರೋಪ್ ರಾಷ್ಟ್ರಗಳಲ್ಲಿ ವ್ಯಾಪಕ ಪ್ರವಾಸ ಮಾಡಿರುವ ಇವರು ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಚಿತ್ರವನ್ನು ಅಮೆರಿಕದ ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದ ಕೀರ್ತಿ ಇವರದು.

ಇವರು ನಿರ್ದೇಶಿಸಿರುವ ಸಂಕ್ರಾಂತಿ ಚಿತ್ರಕ್ಕೆ ಅತ್ಯುತ್ತಮ ಕಥಾಲೇಖನ ರಾಜ್ಯ ಪ್ರಶಸ್ತಿ (1988-89) ಉಂಡೂಹೋದ ಕೊಂಡೂಹೋದ ಚಿತ್ರಕ್ಕೆ ಅತ್ಯುತ್ತಮ ಕಥಾಲೇಖಕ ಪ್ರಶಸ್ತಿ (1992), ಕೊಟ್ರೇಶಿ ಕನಸು ಚಿತ್ರಕ್ಕೆ ಅತ್ಯುತ್ತಮ ಸಾಮಾಜಿಕ ಪರಿಣಾಮ ಬೀರುವ ಚಿತ್ರವೆಂದು ರಾಜ್ಯ ಪ್ರಶಸ್ತಿ (1993-94), ನಿರ್ದೇಶಕರ ಸಂಘದ ಪ್ರಶಸ್ತಿ, ಸನ್ಮಾನ ಹಾಗೂ ಇದೇ ಚಿತ್ರಕ್ಕೆ 1994ರ ಅತ್ಯುತ್ತಮ ಪ್ರಾದೇಶಿಕ ಚಿತ್ರವೆಂದು ರಾಷ್ಟ್ರ ಪ್ರಶಸ್ತಿ ಲಭಿಸಿದೆ. ಅಮೆರಿಕಾ ಅಮೆರಿಕಾ ಚಿತ್ರ ಅತ್ಯುತ್ತಮ ಚಿತ್ರವೆಂದು ರಾಜ್ಯ ಪ್ರಶಸ್ತಿ ಹಾಗೂ ಅತ್ಯುತ್ತಮ ಕಥಾ ಪ್ರಶಸ್ತಿ ಪಡೆದುಕೊಂಡಿದೆ (1996-97). ವಿಭಿನ್ನ ಕಥಾಹಂದರದ ಹೂಮಳೆ ದ್ವಿತೀಯ ಅತ್ಯುತ್ತಮ ಚಿತ್ರಪ್ರಶಸ್ತಿ ಗಳಿಸಿದರೆ (1998-99) ನನ್ನ ಪ್ರೀತಿಯ ಹುಡುಗಿ 2001ರ ಅತ್ಯಂತ ಯಶಸ್ವೀ ಚಿತ್ರವೆಂದು ಪ್ರಶಸ್ತಿ ಪಡೆದಿದೆ.

(ಎಸ್‌ಯು.ಎಂ.)

**ನಾಗದೇವ :** ಸು.11 ನೆಯ ಶತಮಾನದಲ್ಲಿ ಆರಂಭದಲ್ಲಿದ್ದ ಜೈನ ಕವಿ. ಈತನನ್ನು ಎರಡನೆಯ ನಾಗವರ್ಮ ತನ್ನ ವರ್ಧಮಾನಪುರಾಣದಲ್ಲಿ ಸುಲೋಚನಾಚರಿತಮನಿಂ ಪೊದವಿರೆ ಪೇೞ್ದಂ ಕವಿತಾವಿದಗ್ಧಮತಿಯೆನಿಪ ನಾಗದೇವಕವೀಂದ್ರಂ ಎಂದು ಹೇಳುವುದರಿಂದ ಈತ ಸುಲೋಚನಾಚರಿತ ಎಂಬ ಕಾವ್ಯವನ್ನು ರಚಿಸಿದಂತೆ ತಿಳಿದುಬರುತ್ತದೆ. ನಾಗವರ್ಮ ಸ್ತುತಿಸಿರುವ ಎಲ್ಲ ಕವಿಗಳ ಕೃತಿಗಳೂ ಚಂಪೂಕೃತಿಗಳಾಗಿರುವುದರಿಂದ ಇದೂ ಚಂಪೂಕೃತಿಯಾಗಿರಬಹುದೆಂದು ಊಹಿಸಬಹುದಾಗಿದೆ. ಎರಡನೆಯ ನಾಗವರ್ಮ 1042ರಲ್ಲಿದ್ದವನಾದುದರಿಂದ ಈತ ಇದಕ್ಕೂ ಹಿಂದೆ ಇದ್ದಿರಬೇಕು.

ಕನ್ನಡ ಸಾಹಿತ್ಯದಲ್ಲಿ ಇನ್ನಿಬ್ಬರು ನಾಗವರ್ಮನ ಹೆಸರಿನ ಉಲ್ಲೇಖ

ಕಂಡುಬರುತ್ತದೆ. ಕವಿಚರಿತೆಕಾರರು ಶಕ 1129ರಲ್ಲಿ ಕಡೂರು 129ನೆಯ ಶಾಸನವನ್ನು ಬರೆದ ಒಬ್ಬ ನಾಗದೇವನನ್ನು ಹೆಸರಿಸುತ್ತಾರೆಂದರೆ ಆದರೆ ಈತನ ಕಾಲ ಸು.1217 ಆಗುತ್ತದೆ. ಈತನನ್ನು ಕವಿತಿಳಕ ಎಂದು ವಿಶ್ಲೇಷಿಸಿ ಹೇಳಿದೆ. ಈತ ಗೌತಮ ಗೋತ್ರದವ. ಈತನ ತಂದೆ ನಾಗದೇವ, ತಾಯಿ ಚಾಮವ್ವೆ ಎಂದು ತಿಳಿದುಬರುತ್ತದೆ.

ಧಾರವಾಡ ಜಿಲ್ಲೆ ಗದಗು ತಾಲ್ಲೂಕಿನ ಕುರ್ತುಕೋಟಿಯಲ್ಲಿರುವ ಶಾಸನಗಳಲ್ಲಿ ಎರಡನ್ನು ಬರೆದ, 1082ರಲ್ಲಿದ್ದ ಇನ್ನೊಬ್ಬ ನಾಗದೇವ ಕಾಣಬರುತ್ತಾನೆ. ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ (1076-1126) ಈ ಶಾಸನ ರಚಿತವಾಗಿದೆ. ಈ ಶಾಸನದಲ್ಲಿ ಬರುವ

ಅಂಬುಧಿವೇಷ್ಟಿತವಸು
ಧಾಂಬಿಕೆಗೆ ಲಲಾಮಮೆನಿಪ ವಿಪ್ರಗ್ರಾಮಂ
ಪೊಂಬಳಲ ನಾಗದೇವ ಬು
ಧುಂ ಬುಧತತಿ ಮೆಚ್ಚೆ ಕಾವ್ಯಮಂ ವಿರಚಿಸಿದಂ

ಎಂಬ ಪದ್ಯದಿಂದ ಈತ ಪ್ರಸಿದ್ಧವಾದ ವಿಪ್ರಗ್ರಾಮ ಪೊಂಬಳಲ ನಾಗದೇವನೆಂದು ತಿಳಿದುಬರುತ್ತದೆ. (ಎಸ್.ಬಿ.ಎಸ್.)

**ನಾಗಮಂಗಲ :** ಮಂಡ್ಯ ಜಿಲ್ಲೆಯ ಉತ್ತರ ಭಾಗದಲ್ಲಿರುವ ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯಸ್ಥಳ. ತಾಲ್ಲೂಕನ್ನು ಉತ್ತರ ಮತ್ತು ಪೂರ್ವದಲ್ಲಿ ತುಮಕೂರು ಜಿಲ್ಲೆ. ಪಶ್ಚಿಮದಲ್ಲಿ ಹಾಸನ ಜಿಲ್ಲೆ ಮತ್ತು ಕೃಷ್ಣರಾಜಪೇಟೆ ತಾಲ್ಲೂಕು, ದಕ್ಷಿಣದಲ್ಲಿ ಮಂಡ್ಯ ಮತ್ತು ಪಾಂಡವಪುರ ತಾಲ್ಲೂಕುಗಳು ಸುತ್ತುವರಿದಿದೆ. ಜಿಲ್ಲೆಯಲ್ಲೇ ಅತಿದೊಡ್ಡದಾದ ಈ ತಾಲ್ಲೂಕಿನ ವಿಸ್ತೀರ್ಣ 1,040 ಚಕಿಮೀ. ಜನಸಂಖ್ಯೆ 1,90,814. ಇದು ಪಾಂಡವಪುರ ಉಪಭಾಗದಲ್ಲಿದೆ. 1882ರ ವರೆಗೆ ಈ ತಾಲ್ಲೂಕು ಹಾಸನ ಜಿಲ್ಲೆಯಲ್ಲೂ ಅನಂತರ 1939ರಲ್ಲಿ ಮಂಡ್ಯ ಜಿಲ್ಲೆ ಆಗುವವರೆಗೆ ಮೈಸೂರು ಜಿಲ್ಲೆಯಲ್ಲೂ ಇತ್ತು. ಕಸಬೆ, ಬಿಂಡಿಗನವಿಲೆ, ಬೆಳ್ಳೂರು, ದೇವಲಾಪುರ ಮತ್ತು ಹೊಣಕೆರೆ ಹೋಬಳಿಗಳು ಒಟ್ಟು ಗ್ರಾಮಗಳ ಸಂಖ್ಯೆ 365.

ತಾಲ್ಲೂಕಿನ ಬಹುಭಾಗ ಹೆಚ್ಚುಕಡಿಮೆ ಮಟ್ಟಸ ಪ್ರದೇಶ. ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಸಾಧಾರಣ ಎತ್ತರದ ಗುಡ್ಡಬೆಟ್ಟಗಳಿವೆ. ಆದಿಚುಂಚನ ಗಿರಿ ಬೆಟ್ಟ ಪ್ರಸಿದ್ಧವಾದುದು. ಪಶ್ಚಿಮ ಭಾಗದ ಶಿಲೆಗಳಲ್ಲಿ ಸ್ವಲ್ಪಮಟ್ಟಿನ ಚಿನ್ನದ ನಿಕ್ಷೇಪವಿದೆ. ಆದರೆ ಇದು ಬಹು ಅಲ್ಪವಾಗಿದ್ದು ಇದರ ಉತ್ಪಾದನೆ ಆರ್ಥಿಕವಾಗಿ ಲಾಭಕರವಲ್ಲವೆನ್ನಲಾಗಿದೆ. ನಾಗಮಂಗಲದ ಪಶ್ಚಿಮಕ್ಕಿರುವ ಒಂದು ಬೆಟ್ಟದಲ್ಲಿ ಮೃದುವಾದ ಬಳಪದಕಲ್ಲು ದೊರಕುತ್ತದೆ. ತಾಲ್ಲೂಕು ಪೂರ್ವ ಮತ್ತು ದಕ್ಷಿಣಕ್ಕೆ ಇಳಿಜಾರಾಗಿದೆ. ತುಮಕೂರು ಜಿಲ್ಲೆಯಿಂದ ಹರಿದುಬರುವ ಶಿಂಷಾನದಿ ಸ್ವಲ್ಪದೂರ ತಾಲ್ಲೂಕುನ ಈಶಾನ್ಯ ಗಡಿಯಾಗಿ ಹರಿದು ಮುಂದೆ ಮದ್ದೂರಿನತ್ತ ಸಾಗುತ್ತದೆ. ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಲೋಕಪಾವನಿ ನದಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಹೆಚ್ಚು ಮಟ್ಟಿಗೆ ಬಂಜರಾಗಿರುವ ಈ ತಾಲ್ಲೂಕಿನಲ್ಲಿ ಅಲ್ಲಲ್ಲಿ ಕುರುಚಲು ಕಾಡುಗಳಿವೆ.

*

ಭೂಮಿ ಮುಖ್ಯವಾಗಿ ಮರಳುಮಿಶ್ರಿತ, ಸ್ವಲ್ಪ ಕೆಂಪು ಮಣ್ಣಿನ ಹರಹುಗಳು ಅಲ್ಲಲ್ಲಿವೆ. ಮಳೆ ಕಡಿಮೆ, ವಾರ್ಷಿಕ ಸರಾಸರಿ 598 ಮಿಮೀ. ರಾಗಿ, ಜೋಳ, ಹುರುಳಿ, ತೊಗರಿ, ಮೊದಲಾದ ಧಾನ್ಯಗಳು ಇಲ್ಲಿನ ಬೆಳೆಗಳು. ಹಿಂದಿನ ಕಾಲದಿಂದಲೂ ಅನೇಕ ಕೆರೆಗಳನ್ನು ಕಟ್ಟಲಾಗಿದ್ದು ಇಂದೂ ಕೆಲವು ಉಪಯೋಗದಲ್ಲಿವೆ. ನೀರಾವರಿ ಬಾವಿಗಳಿಂದ ಬತ್ತ ಕಬ್ಬುಗಳನ್ನು ಬೆಳೆಯುತ್ತಾರೆ. ಅಲ್ಪಪ್ರಮಾಣದಲ್ಲಿ ತೆಂಗು, ಬಾಳೆ, ಮೆಣಸಿನಕಾಯಿ, ತರಕಾರಿ ಮೊದಲಾದುವನ್ನು ಬೆಳೆಯಲಾಗುತ್ತದೆ. ತಿರುಗನಹಳ್ಳಿಯ ಸಣ್ಣ ಎಂಬ ಒಂದು ಜಾತಿಯ ಬತ್ತ ಈ ತಾಲ್ಲೂಕಿನ ವಿಶೇಷ ಬೆಳೆ. ಭೂಮಿ ಕೆಲವೆಡೆ ಫಲವತ್ತಾಗಿದ್ದರೂ ನೀರಿನ ಅಭಾವದಿಂದ ಇಲ್ಲಿನ ವ್ಯವಸಾಯ ಆರ್ಥಿಕವಾಗಿ ಲಾಭಕರವಾಗಿಲ್ಲ.

ಕುರಿಗಳನ್ನು ಅಧಿಕ ಪ್ರಮಾಣದಲ್ಲಿ ಸಾಕುವುದು ಇಲ್ಲಿನ ಒಂದು ಮುಖ್ಯ ಕಸಬು. ಇದೇ ಕಾರಣದಿಂದ ಈ ತಾಲೂಕಿನ ಹರಗಿನಹಳ್ಳಿಯಲ್ಲಿ ಹಿಂದೆ ಒಂದು ಕುರಿ ಸಾಕಣೆ ಕೇಂದ್ರವನ್ನು ಸ್ಥಾಪಿಸಲಾಗಿತ್ತು. 1863ರ ವರೆಗೂ ಅದು ಅಸ್ತಿತ್ವದಲ್ಲಿತ್ತು. ನಾಗಮಂಗಲ ಭಾಗ ಉತ್ತಮ ಹಳ್ಳಿಕಾರು ಜಾತಿಯ ರಾಸುಗಳಿಗೂ ಹೆಸರಾಗಿದೆ. ಕರಡಿಹಳ್ಳಿ ಮತ್ತು ಸುತ್ತಲ ಪ್ರದೇಶಗಳಲ್ಲಿ ಇದರ ಸಾಕಣೆ ಹೆಚ್ಚು. ತಾಲ್ಲೂಕಿನಲ್ಲಿ ಸ್ವಲ್ಪ ಮಟ್ಟಿಗೆ ರೇಷ್ಮೆ ವ್ಯವಸಾಯ ಇದೆ.

ಗಂಗರ ಕಾಲದ ವಾಸ್ತುಕೃತಿಗಳಿರುವ ಕಂಬದಹಳ್ಳಿ (ನೋಡಿ), ಹೊಯ್ಸಳರ ಕಾಲದ ದೇವಾಲಯಗಳಿರುವ ಬೆಳ್ಳೂರು, ಪ್ರಾಚೀನ ಅವಶೇಷಗಳಿರುವ ದೇವಲಾಪುರ, ಪುಣ್ಯಕ್ಷೇತ್ರಗಳಾದ ಬಿಂಡಿಗನವಿಲೆ (ನೋಡಿ), ಆದಿಚುಂಚನಗಿರಿ (ನೋಡಿ) ಸುಂದರ ಹಾಗೂ ಪವಿತ್ರ ತಾಣ ಆಲತಿಗಿರಿ (ನೋಡಿ) ತಾಲ್ಲೂಕಿನ ಪ್ರಮುಖ ಸ್ಥಳಗಳು. ನಾಗಮಂಗಲದಿಂದ ಸು. 5ಕಿಮೀ ದೂರದಲ್ಲಿ ಕೋಟೆಬೆಟ್ಟದ ಬುಡದಲ್ಲಿರುವ ಪಾಲಗ್ರಹಾರದಲ್ಲಿ ಶ್ರೀನಿವಾಸ ಮತ್ತು ನಾಚಾರಮ್ಮ (ಲಕ್ಷ್ಮಿ) ದೇವಾಲಯಗಳಿವೆ. ಇಲ್ಲಿ ಫೆಬ್ರವರಿ ತಿಂಗಳಿನಲ್ಲಿ ತೇರು ಹಾಗೂ ದನಗಳ ಜಾತ್ರೆ ಜರುಗುತ್ತವೆ. ನಾಗಮಂಗಲದ ಪಶ್ಚಿಮಕ್ಕೆ 6ಕಿಮೀ ದೂರದಲ್ಲಿರುವ ಪಡುವಲ ಪಟ್ಟಣ ಒಂದು ಕಾಲಕ್ಕೆ ಧಾರ್ಮಿಕ ಹಾಗೂ ವಿದ್ಯಾಕೇಂದ್ರವಾಗಿತ್ತು. ಇಲ್ಲಿ ರಾಮಾನುಜಾಚಾರ್ಯರು ತಪಸ್ಸು ಮಾಡಿದರೆಂದು ಒಂದು ಶಾಸನ ತಿಳಿಸುತ್ತದೆ. ಮಾಚಲಗಟ್ಟ, ಹೊಣಕೆರೆ ಹೋಬಳಿಯಲ್ಲಿರುವ ಒಂದು ಗ್ರಾಮ. ಹಿಂದೆ ಇದು ಬಿಜ್ಜಳೇಶ್ವರ ಎಂಬ ಹೆಸರಿನ ದೊಡ್ಡ ಊರಾಗಿತ್ತು. ಇಲ್ಲಿ 13ನೆಯ ಶತಮಾನದ ಮಲ್ಲೇಶ್ವರ ದೇವಾಲಯವಿದೆ. ಇಲ್ಲಿಯ ನಂದಿಯ ವಿಗ್ರಹ ಸುಂದರವಾಗಿದೆ. ಚೋಳಸಂದ್ರದಲ್ಲಿ 1145ರಲ್ಲಿ ಕಟ್ಟಿದ ಜೈನಬಸದಿ ಇದೆ. ಇದು ಹೊಯ್ಸಳ ಶೈಲಿಯ ಉತ್ತಮ ಕೃತಿಯಾದರೂ ಇಂದು ಶಿಥಿಲವಾಗಿವೆ. ಹಟ್ಣದಲ್ಲಿರುವ ವೀರಭದ್ರ ದೇವಾಲಯ ಹಿಂದೆ ಜೈನಬಸ್ತಿಯಾಗಿತ್ತು. ಹೊಯ್ಸಳ ಶೈಲಿಯಲ್ಲಿರುವ ಈ ಗುಡಿಯನ್ನು 1179ರಲ್ಲಿ ಸೋಮಿಶೆಟ್ಟಿ ಎಂಬ ವರ್ತಕ ಕಟ್ಟಿಸಿದನೆಂದು ಒಂದು ಶಾಸನ ತಿಳಿಸುತ್ತದೆ. ಚಿನಕುರಳಿಯಲ್ಲಿ ಒಂದು ಆಂಜನೇಯ ದೇವಾಲಯವೂ ಅದರ ಸಮೀಪದಲ್ಲಿ ಹಲವು ಮಾಸ್ತಿ ಗುಡಿಗಳೂ ಇವೆ. ಇಲ್ಲಿರುವ ಮಾಸ್ತಿಕಲ್ಲು ವ್ಯಾಸನ ತೋಳುಕಲ್ಲು ರೀತಿಯವು. ಹೈದರ್ ಮತ್ತು ಮರಾಠರ ನಡುವೆ 1771ರಲ್ಲಿ ನಡೆದ ಯುದ್ಧದಲ್ಲಿ ಹೈದರ್ ಪರಾಜಿತನಾದದ್ದು ಇಲ್ಲಿಯೇ, ನಲ್ಕುಂದಿ ಗ್ರಾಮದಲ್ಲಿ ಗೋಪಾಲಕೃಷ್ಣ ದೇವಾಲಯವಿದೆ. ಇದು ಭಾಗವಂತಿಕೆಮೇಳಕ್ಕೆ ಹೆಸರಾದ ಸ್ಥಳ. ಈ ತಾಲ್ಲೂಕಿನಲ್ಲಿರುವ ಹದ್ದಿನಕಲ್ಲು ಹನುಮಂತರಾಯನ ಬೆಟ್ಟ ಪವಾಡಕ್ಕೆ ಪ್ರಸಿದ್ಧ. ಈ ಬೆಟ್ಟದ ಮೇಲೆ ಸು. 10' ಎತ್ತರದ ಒಂದು ಕಂಬವಿದೆ. ಇದರಲ್ಲಿ ಇಂದ್ರಜಿತುವಿನ ಚಿತ್ರ ಕೆತ್ತಿದೆ. ಗಾಳಿ ಹಿಡಿದವರಿಗೆ ಈ ಸ್ಥಳದಲ್ಲಿ ಉಪಶಮನವಾಗುತ್ತದೆಂಬ ನಂಬಿಕೆಯಿಂದ ಅನೇಕ ಜನರು ಇಲ್ಲಿಗೆ ಬರುತ್ತಾರೆ. ಈ ಬೆಟ್ಟದ ಬುಡದಲ್ಲಿರುವ ಚೋರಸಂದ್ರ ಜನಪದ ಕಲೆಗೆ ಹೆಸರಾದ ಊರು.

ನಾಗಮಂಗಲ ಈ ತಾಲ್ಲೂಕಿನ ಆಡಳಿತ ಕೇಂದ್ರ. ಮೈಸೂರಿನಿಂದ ಸು. 65 ಕಿಮೀ ಉತ್ತರಕ್ಕೆ ಪಾಂಡವಪುರ-ಬೆಳ್ಳೂರು- ಚಿತ್ರದುರ್ಗ ರಸ್ತೆಯಲ್ಲಿದೆ. ಜನಸಂಖ್ಯೆ 16050. ಇಲ್ಲಿಂದ ಚನ್ನರಾಯಪಟ್ಟಣ, ಕೃಷ್ಣರಾಜಪೇಟೆ, ಮಂಡ್ಯ, ಮದ್ದೂರುಗಳಿಗೆ ರಸ್ತೆಗಳಿವೆ. ಉತ್ತರದಲ್ಲಿ ಬೆಳ್ಳೂರಿನ ರಸ್ತೆ ಬೆಂಗಳೂರು ಹಾಸನ ಮಾರ್ಗವನ್ನು ಕೂಡುತ್ತದೆ. ಅಲ್ಲದೆ ತುಮಕೂರು, ಸಿರಾಗಳಿಗೂ ಸಂಪರ್ಕ ರಸ್ತೆಗಳಿವೆ. ಇಲ್ಲಿ ಪುರಸಭೆ ಇದೆ. ಒಂದು ಸರ್ಕಾರಿ ಆಸ್ಪತ್ರೆ, ಪಶು ವೈದ್ಯಶಾಲೆ, ಎರಡು ಸರ್ಕಾರಿ ಪ್ರೌಢಶಾಲೆಗಳು ಹಾಗೂ ಒಂದು ಜೂನಿಯರ್ ಕಾಲೇಜು ಒಂದು ಕಸಬು ತರಬೇತಿ ಶಾಲೆ ಇವೆ. ಇಲ್ಲಿನ ಸುತ್ತಮುತ್ತ ಗ್ರಾಮಾಂತರ

ಪ್ರದೇಶಗಳಲ್ಲಿಯ ವ್ಯವಸಾಯ ಬೆಳೆಗಳಿಗೆ ಇದು ಮಾರಾಟ ಕೇಂದ್ರ. ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ. ಕಂಬಳಿ ನೇಯುವುದು, ಚಾಪೆ ಹಣೆಯುವುದು, ಎಣ್ಣೆ ತೆಗೆಯುವುದು - ಮೊದಲಾದ ಉಪಕಸಬುಗಳಿವೆ. ಒಂದು ವೃತ್ತಿಶಿಕ್ಷಣ ತರಬೇತಿ ಕೇಂದ್ರವಿದೆ. ಕೈಗಾರಿಕಾ ಘಟಕವೊಂದು ನಿರ್ಮಾಣವಾಗುತ್ತಿದೆ. ನಾಗಮಂಗಲದಲ್ಲಿ ಹಳೆಯ ಸಂಪ್ರದಾಯದ ಹಿತ್ತಾಳೆ, ಕಂಚಿನ ವಿಗ್ರಹಗಳು ಮಾಡುವ ಅನೇಕ ಕುಟುಂಬಗಳಿವೆ. ಇವರು ತಯಾರಿಸುವ ಪೂಜೋಪಕರಣಗಳು ವಿಗ್ರಹಗಳು ಮತ್ತು ಇತರ ಕಲಾವಸ್ತುಗಳಿಗೆ ದೇಶಾದ್ಯಂತ ಬೇಡಿಕೆ ಇದೆ.

ನಾಗಮಂಗಲ ಹಿಂದೆ ಒಂದು ಅಗ್ರಹಾರವಾಗಿತ್ತು. ಈ ಊರಿನ ಸುತ್ತ ರಕ್ಷಣೆಗಾಗಿ ಕೋಟೆ ಇತ್ತು.

ನಾಗಮಂಗಲ ಪ್ರದೇಶ ಹಿಂದೆ ದಂಡಕಾರಣ್ಯದ ಭಾಗವಾಗಿತ್ತು. ಲೋಹಿತವಂಶದವರು ಇಲ್ಲಿಗೆ ಮೊದಲು ವಲಸೆ ಬಂದರು. ಆ ವಂಶದ ಒಬ್ಬ ಪಾಳೆಯಗಾರ ಕನಸಿನಲ್ಲಿ ಕಂಡ ದೇವರಿರುವ ಹುತ್ತವನ್ನು ಅರಸುತ್ತ, ನಾಗವುಂಗಲವಿರುವ ಸ್ಥಳಕ್ಕೆ ಬಂದು, ಅಲ್ಲಿ ಸರ್ಪವೊಂದು ಸುತ್ತುತ್ತಿದ್ದುದನ್ನೂ ನರಸಿಂಹದೇವರು ಆವಿರ್ಭಾವವಾಗಿದ್ದುದನ್ನೂ ಕಂಡು ಅಲ್ಲಿಯ ದೇವಾಲಯ ನಿರ್ಮಿಸಿದ. ಆದ್ದರಿಂದ ಈ ಸ್ಥಳಕ್ಕೆ ನಾಗಮಂಡಲ ಎಂದು ಹೆಸರಾಯಿತು ಎಂದು ಪ್ರತೀತಿ. ಈಗ ಇದೇ ನಾಗಮಂಗಲವಾಗಿದೆ. ಇದು ಮಹಾಭಾರತ ಕಾಲದಲ್ಲಿದ್ದ ಮಣಿಪುರ, ಈ ನಗರಕ್ಕೆ ಚತುರ್ವೇದ ಭಟ್ಟಾರಕರತ್ನ ಅಗ್ರಹಾರವೆಂಬ ಹೆಸರಿದ್ದು ಹಿಂದೆ ದೊಡ್ಡ ವಿದ್ಯಾ ಮತ್ತು ವ್ಯಾಪಾರ ಕೇಂದ್ರವಾಗಿತ್ತು ಎಂಬ ಕಥೆಗಳೂ ಇವೆ. ಗಂಗರ ಕಾಲದ ಶಾಸನವೊಂದು ಇಲ್ಲಿ ದೊರಕಿದೆ. 1135ರಲ್ಲಿ ವಿಷ್ಣುವರ್ಧನನ ರಾಣಿ ಬಮ್ಮಲದೇವಿ ಇಲ್ಲಿನ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿದಳು. ಆ ಕಾಲದಲ್ಲಿ ಊರು ಪ್ರವರ್ಧಮಾನ ಸ್ಥಿತಿಯಲ್ಲಿದ್ದಂತೆ ತೋರುತ್ತದೆ. 17ನೆಯ ಶತಮಾನದವರೆಗೂ ಲೋಹಿತ ವಂಶದ ಪಾಳೆಯಗಾರರು ಇಲ್ಲಿ ಆಳುತ್ತಿದ್ದರೆನ್ನಲಾಗಿದೆ. ಇಲ್ಲಿಯ ಒಳಕೋಟೆಯನ್ನು ಆ ವಂಶದ ಜೈವಿಡನಾಯಕ 1270ರಲ್ಲಿ ಕಟ್ಟಿಸಿದನೆಂದೂ ಹೊರಕೋಟೆಯುನ್ನು ಚನ್ನಪಟ್ಟಣದ ಜಗದೇವರಾಯ ಕಟ್ಟಿಸಿದನೆಂದೂ ಹೇಳಲಾಗುತ್ತದೆ. ಈಗಲೂ ಕೋಟೆಯ ಅವಶೇಷಗಳಿವೆ. ಜಗದೇವರಾಯನ ಕಾಲದಲ್ಲಿ ಇದು ಅವನ ಮುಖ್ಯ ಪಟ್ಟಣಗಳಲ್ಲೊಂದಾಗಿತ್ತು. 1630ರಲ್ಲಿ ಇದು ಮೈಸೂರಿನ ಚಾಮರಾಜ ಒಡೆಯರ ಅಧೀನವಾಯಿತು. ಮೈಸೂರು ಮರಾಠ ಯುದ್ಧಗಳಲ್ಲಿ ಇದಕ್ಕೆ ಅನೇಕ ಬಾರಿ ಹಾನಿ ತಟ್ಟಿತು. 1792ರಲ್ಲಿ ಪರಶುರಾಮ ಭಾವು ಇದನ್ನು ಕೊಳ್ಳೆಹೊಡೆದಿದ್ದ.

ಸೌಮ್ಯಕೇಶವ ಗುಡಿ ಇಲ್ಲಿನ ದೇವಾಲಯಗಳಲ್ಲಿ ದೊಡ್ಡದು. ಹೊಯ್ಸಳರ, ಬಹುಶಃ ವಿಷ್ಣುವರ್ಧನನ ಕಾಲದ್ದು, 41/2 ಅಡಿ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲಿರುವ ತ್ರಿಕೂಟಾಚಲ, ಮಧ್ಯ ಗರ್ಭಗುಡಿಯಲ್ಲಿ ಸೌಮ್ಯಕೇಶವ, ಪಕ್ಕದವುಗಳಲ್ಲಿ ನರಸಿಂಹ ಮತ್ತು ವೇಣುಗೋಪಾಲ ದೇವರುಗಳಿವೆ. ಹೊರಭಿತ್ತಿಯ ಮೇಲೆ ಕೇವಲ ಅರೆಗಂಬಗಳ ಅಲಂಕರಣವಿದೆ. ಮುಂದುಗಡೆ ಪಾತಾಳಾಂಕಣ, ಸುತ್ತಲೂ ಪ್ರಾಕಾರ ಮತ್ತು ಮಹಾದ್ವಾರದ ಮೇಲೆ ಏಳು ಅಂತಸ್ತಿನ ದ್ರಾವಿಡ ಗೋಪುರ ಇವೆ. ಪಾತಾಳಾಂಕಣದಲ್ಲಿ ಶ್ರೀವೈಷ್ಣವ ಸಂಪ್ರದಾಯದ ದೇವರುಗಳು ಮತ್ತು ಆಳ್ವಾರರುಗಳ ಗುಡಿಗಳಿವೆ. ದೇವಾಲಯದ ಮುಂಭಾಗದಲ್ಲಿರುವ 55 ಅಡಿ ಎತ್ತರದ ಗರುಡಗಂಬ ಉತ್ತಮ ಕಲಾಕೃತಿ. ಗೋಪುರ ಮತ್ತು ಕಂಬವನ್ನು ಕೆತ್ತಿಸಿದವನು ಜಗದೇವರಾಯ ಎಂದು ಹೇಳಿಕೆ. ಈ ದೇವಾಲಯದ ಸಮೀಪದಲ್ಲಿರುವ ನರಸಿಂಹ ದೇವಾಲಯ ಸಹ ಹೊಯ್ಸಳ ಕಾಲದ್ದು. ಕಂಬಗಳನ್ನು ಬಿಟ್ಟರೆ ಹೆಚ್ಚಿನ ಕಲಾವಂತಿಕೆ ಇಲ್ಲಿಲ್ಲ. ಸ್ಥಳೀಯ ಐತಿಹ್ಯಗಳ ಪ್ರಕಾರ ಇದೇ ಈ ಊರಿನ ಅತಿ ಪ್ರಾಚೀನ ದೇವಾಲಯ. ನರಸಿಂಹ ವಿಗ್ರಹ ಸಿಕ್ಕಿದ ಭಾಗದಲ್ಲಿ ಬೆಳೆದಿದ್ದ ಹಂಗರು ಮರದ ನಲವತ್ತು ಅಡಿ ಉದ್ದದ ಒಂದು ಕೊಂಬೆ ಈ ದೇವಾಲಯದಲ್ಲಿದೆ. ಸು. 1135ರ ಭುವನೇಶ್ವರ ದೇವಾಲಯವೂ ಹೊಯ್ಸಳ ಕಾಲದ್ದಾದರೂ ಹೆಚ್ಚು ಮಟ್ಟಿಗೆ ದ್ರಾವಿಡ ಸಂಪ್ರದಾಯದಲ್ಲೇ ಇರುವ ಕಟ್ಟಡ. ವೀರಭದ್ರ ಮತ್ತು ಭದ್ರಕಾಳಿಯ ದೇವಾಲಯಗಳೂ ಇಲ್ಲಿವೆ. ಈ ಊರಿನ ಗ್ರಾಮದೇವತೆಯಾದ ಬಡಗೋಡಮ್ಮನ ದೇವಾಲಯ ಹಿರೀಕೆರೆಯ ಉತ್ತರ ಕೋಡಿಯಲ್ಲಿದೆ. ಅಕ್ಕಸಾಲಿಗರ ಕಾಳಮ್ಮನ ಗುಡಿ ನಾಗಮಂಗಲದ ಒಳ ಕೋಟೆಯ ದಿಡ್ಡಿ ಬಾಗಿಲಿನಲ್ಲಿದೆ. ಊರಿನ ನಾಲ್ಕು ದಿಕ್ಕುಗಳಲ್ಲೂ ಕೆರೆಗಳಿವೆ. ಅವು ಸೂಳೆಕೆರೆ, ಹಿರೀಕೆರೆ, ಸಿಂಗೇ ಅರಸಿನ ಕೆರೆ ಮತ್ತು ಅಮ್ಮನಕೆರೆ, ಕೋಟೆಯ ಅವಶೇಷಗಳಲ್ಲದೆ ಹಳೆಯ ವೈಭವದ ಕುರುಹಾಗಿ ಇನ್ನೂ ಕೆಲವು ಅವಶೇಷಗಳಿವೆ. ಸೌಮ್ಯಕೇಶವ ಮತ್ತು ನರಸಿಂಹ ಗುಡಿಗಳ ಮಧ್ಯದಲ್ಲಿರುವ ಜಾಗವನ್ನು ಜಗದೇವರಾಯನ ಅರಮನೆ ಇದ್ದ ತಾಣ ಎಂದು ಗುರುತಿಸುತ್ತಾರೆ. ಸಮೀಪದಲ್ಲಿ ಹಲವು ಕಂಬಗಳಿರುವ ದೊಡ್ಡ ಮಂಟಪವಿದ್ದು ಇದು ಹಿಂದಿನ ಸಭಾಮಂಟಪವಿದ್ದರೂ ಇರಬಹುದು. ಊರಿನ ಸಮೀಪದಲ್ಲಿ 60 ಅಡಿ ವ್ಯಾಸ ಮತ್ತು 3 ಅಡಿ ಮಾತ್ರ ಆಳವಿರುವ ಒಂದು ಕೊಳ ಇದೆ. ಅದರ ಮಧ್ಯೆ ಒಂದು ಮಂಟಪವೂ ಇದೆ. ಜಗದೇವರಾಯ ಜಲಕ್ರೀಡೆಗಾಗಿ ಈ ಕೊಳವನ್ನು ಕಟ್ಟಿಸಿದ್ದೆಂದು ಸ್ಥಳಪ್ರತೀತಿ. (ಎಚ್..ಎಂ.ಎನ್.)

**ನಾಗಮಂಗಲದ ಪ್ರಭುಗಳು :** 15ನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯನಗರದ ಅರಸರ ಆಶ್ರಯದಲ್ಲಿ ನಾಗಮಂಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆ ಸುತ್ತಿನ ಪ್ರದೇಶವನ್ನು ಆಳುತ್ತಿದ್ದ ಒಂದು ಸಾಮಂತ ಮನೆತನದವರು. ಶಾಸನಗಳಿಂದ ತಿಳಿದುಬರುವ ಮಾಹಿತಿಗಳ ಪ್ರಕಾರ ಇವರು ಲೋಹಿತ ವಂಶಕ್ಕೆ ಸೇರಿದವರು. ಈ ವಂಶದ ಅರಸರಲ್ಲಿ ಶಿಂಗಣ್ಣವೊಡೆಯ ಹಾಗೂ ಆತನ ಪುತ್ರ ತಿಮ್ಮಣ್ಣದಂಡನಾಯಕ ಪ್ರಸಿದ್ಧರು. ತಿಮ್ಮಣ್ಣ ವಿಜಯನಗರದ ಮಲ್ಲಿಕಾರ್ಜುನನ (1446-65) ಕಾಲದಲ್ಲಿ ಮಹಾ ಪ್ರಧಾನ ಎಂಬ ಹುದ್ದೆಯನ್ನು ಪಡೆದಿದ್ದ. ಇವನಿಗೆ ದೇವರಾಜನೆಂಬ ಒಬ್ಬ ತಮ್ಮನಿದ್ದ. ಇವರು ಪರಮಭಾಗವತರೂ ವೈಷ್ಣವರೂ ಆಗಿದ್ದರು. ಇವರು ಶಿಂಗಣ್ಣವೊಡೆಯನ ಸತಿ ಸೀತಾಂಬಿಕಾ ಹೆಸರಿನಲ್ಲಿ ಪಾಂಡವಪುರ ತಾಲ್ಲೂಕಿನ ಹರವು ಗ್ರಾಮದ ಹತ್ತಿರ ಹೊಸವೂರ ಎಂಬುದನ್ನು ಸೀತಾಪುರವೆಂದು ಮಾರ್ಪಡಿಸಿ ಅಲ್ಲಿ ರಾಮಚಂದ್ರದೇವರ ದೇವಸ್ಥಾನ ಕಟ್ಟಿಸಿ ಅನೇಕ ದಾನದತ್ತಿಗಳನ್ನು ಬಿಟ್ಟರು. ತಿಮ್ಮಣ್ಣದಂಡನಾಥ ಹಾಗೂ ಆತನ ಸತಿ ರಂಗಾಂಬಿಕಾ ಇವರು ಮೇಲುಕೋಟೆಯ ದೇವಸ್ಥಾನಕ್ಕೆ ವಿಶೇಷ ದತ್ತಿಗಳನ್ನು ಕೊಟ್ಟರು. ತಿಮ್ಮಣ್ಣನಿಗೆ ಯಾದವಗಿರಿ (ಮೇಲುಕೋಟೆ) ಜೀರ್ಣೋದ್ಧಾರ ಎಂಬ ಬಿರುದೂ ಇದ್ದಿತು. ಮೇಲುಕೋಟೆಯಲ್ಲಿನ ದೇವಸ್ಥಾನದ ಮತ್ತು ರಾಮಾನುಜಸಭೆಯ ಚಟುವಟಿಕೆಗಳು ಸಾಂಗವಾಗಿ ನಡೆಯಲೆಂದು ರಂಗಾಂಬಿಕೆಯ ಬಲ್ಲೇನಹಳ್ಳಿ ಹಾಗೂ ಯಲವದಪಲ್ಲಿ ಗ್ರಾಮಗಳನ್ನು ದತ್ತಿ ಹಾಕಿಕೊಟ್ಟಳು. ದೇವರಾಜ ಕಾವೇರಿ ನದಿಗೆ ಹೊಸದಾಗಿ ಕಟ್ಟೆಯೊಂದನ್ನು ಕಟ್ಟಿಸಿ ಸೀತಾಪುರ ಹರವು ಗ್ರಾಮಗಳ ಮುಖಾಂತರ ಕಾಲುವೆಯೊಂದನ್ನು ಒಯ್ಯುವ ಕೆಲಸವನ್ನು ಮಾಡಿದ (ತನ್ನಿಮಿತ್ತ ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕುಗಳ ಕೆಲ ಗ್ರಾಮಗಳಿಗೆ ನೀರಾವರಿ ಸೌಲಭ್ಯ ದೊರೆಯಿತು). ನಾಮಂಗಲದ ಕೋಟೆಯನ್ನು ಸು. 1270ರಲ್ಲಿ ಈ ವಂಶದ ಜೈವಿಡನಾಯಕ ಕಟ್ಟಿಸಿದನೆಂಬ ಹೇಳಿಕೆ ಇದೆ. 16ನೆಯ ಶತಮಾನದ ಅಂತ್ಯದ ಹೊತ್ತಿಗೆ ಲೋಹಿತ ವಂಶದ ಪ್ರಭುಗಳು ತಮ್ಮ ಅಧಿಕಾರವನ್ನು ಕಳೆದುಕೊಂಡರು. ಆಗ ಚನ್ನಪಟ್ಟಣದಿಂದ ಆಳುತ್ತಿದ್ದ ಸಾಳುವ ವಂಶದ ಜಗದೇವರಾಯನ ಆಳ್ವಿಕೆಗೆ ನಾಮಂಗಲವೂ ಒಳಪಟ್ಟಿತ್ತು. (ಎಸ್.ಜೆ.)

**ನಾಗರತ್ನಮ್ಮ ಆರ್:** 1926- . ಕನ್ನಡ ರಂಗಭೂಮಿ ಕಲಾವಿದೆ. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಕನ್ನಡ ರಂಗಭೂಮಿಯಲ್ಲಿ ಸ್ತ್ರೀಪಾತ್ರಗಳನ್ನೂ ಪುರುಷರೇ ನಿರ್ವಹಿಸಬೇಕಾಗಿತ್ತು. ಸ್ತ್ರೀಯರು ರಂಗವೇದಿಕೆಯನ್ನೇರುವುದಿರಲ್ಲಿ, ನಾಟಕಗಳನ್ನು ನೋಡುವುದೂ ಅಪರಾಧ ಎಂಬ ಭಾವನೆ ಇತ್ತು. ಆದರೆ ಈ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿದ ಕಲಾವಿದೆಯರಲ್ಲಿ ಮೊದಲಿಗರು ಎಲ್ಲಮ್ಮ, ರಾಜಮ್ಮ, ಎಂ.ವಿ.ರಾಜಮ್ಮ, ಪಂಡರಿಬಾಯಿ ಮೊದಲಾದವರು. ನಾಗರತ್ನಮ್ಮನವರೂ ಈ ಗುಂಪಿಗೆ ಸೇರಿದವರು. ಇವರು 1926 ಜೂನ್ 21ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಕೃಷ್ಣಭಟ್ಟ, ತಾಯಿ ರುಕ್ಮಿಣಮ್ಮ. ಎಳೆಯ ವಯಸ್ಸಿನಲ್ಲೇ ಇವರಿಗೆ ರಂಗದ ನಂಟು ಉಂಟಾಯಿತು.

ಮೈಸೂರಿನ ಆಗ್ರಹಾರದ ತೊಗರಿಬೀದಿಯಲ್ಲಿ ಬೀಡುಬಿಟ್ಟಿದ್ದ ಗುಬ್ಬಿ ಕಂಪನಿ, ಚಾಮುಂಡೇಶ್ವರಿ ಕಂಪನಿಗಳ ರಂಗತಾಲೀಮು ಇವರಲ್ಲಿ ಕುತೂಹಲವನ್ನುಂಟು ಮಾಡಿತು. ಚಾಮುಂಡೇಶ್ವರಿ ಕಂಪನಿಯ ತುಕಾರಾಂ ನಾಟಕದಲ್ಲಿ ಚಿಕ್ಕಹುಡುಗಿಯ ಪಾತ್ರದ ಮೂಲಕ ಇವರ ರಂಗಪ್ರವೇಶವಾಯಿತು. 12ನೆಯ ವಯಸ್ಸಿನಲ್ಲಿ ಎಚ್.ಎಲ್.ಎನ್.ಸಿಂಹ ಅವರ ಸಂಸಾರನೌಕೆ ನಾಟಕದಲ್ಲಿ ಸರಳೆಯ ಪಾತ್ರ ವಹಿಸಿ ಯಶಸ್ಸನ್ನು ಪಡೆದರು. ಪ್ರಾರಂಭದ ದಿನಗಳಲ್ಲಿ ಇವರು ಸಣ್ಣಪುಟ್ಟ ಪಾತ್ರಗಳನ್ನು ಮಾಡುತ್ತ ಮುಂದೆ ನಾಯಕಿ ಪಾತ್ರವಹಿಸುವ ಹಂತಕ್ಕೇರಿದರು. ಇದೇ ಸುಮಾರಿನಲ್ಲಿ ಬಿ.ಎನ್.ಚಿನ್ನಪ್ಪನವರ ಕಲಾಸೇವಾ ಮಂಡಲಿಯ ಕಬೀರದಾಸ್ ನಾಟಕದಲ್ಲಿ ಬೀಬಿಯ ಪಾತ್ರಕ್ಕೆ ಆಯ್ಕೆಯಾದರು. ಅಲ್ಲಿಂದ ಮುಂದೆ ಸಾಹುಕಾರ, ಸದಾರಮೆ, ಪೇಮಲೀಲಾ ನಾಟಕಗಳಲ್ಲಿ ಮುಖ್ಯಪಾತ್ರಗಳನ್ನು ನಿರ್ವಹಿಸಿದರು. ಎಚ್.ಎಲ್.ಎನ್.ಸಿಂಹಾಸ್ ಸೆಲೆಕ್ಟ್ ಆರ್ಟಿಸ್ಟ್‌ನಲ್ಲಿ ಹೆಚ್ಚಿನ ಅನುಭವಗಳಿಸಿದರು. ಸಿ.ಬಿ.ಮಲ್ಲಪ್ಪನವರ ಕಂಪನಿ, ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ, ಶೇಷ ಕಮಲ ಕಲಾ ಮಂಡಲಿ, ಮಾಸ್ಟರ್ ಹಿರಣ್ಣಯ್ಯ ಮಿತ್ರ ಮಂಡಲಿ, ಚಲನಚಿತ್ರ ಕಲಾವಿದರ ಸಂಘ ಹಾಗೂ ಕೆಲವು ಹವ್ಯಾಸಿ ತಂಡಗಳಲ್ಲಿ ಪಾತ್ರವಹಿಸಿ ಖ್ಯಾತರಾದರು. ಕೆಲವು ಕಂಪನಿಗಳಲ್ಲಿ ಸಂಬಳವಿಲ್ಲದೆ ದುಡಿಯುವ ಪರಿಸ್ಥಿತಿಯೂ ಎದುರಾಗುತ್ತಿತ್ತು. ಕೆಲವೊಮ್ಮೆ ಊಟ ದೊರೆಯುವುದೂ ಕಷ್ಟವಾಗುತ್ತಿತ್ತು; ಆದರೆ ಇವರ ಪಾತ್ರ ಮಾತ್ರ ರಾಣಿಯದು. ಇಂಥ ಹೊತ್ತಿನಲ್ಲಿ ಕಲಾಭಿಮಾನಿಗಳ ಪ್ರೋತ್ಸಾಹವೇ ರಸದೂಟ ಎನಿಸುತ್ತಿತ್ತು.

ಹಿರಣ್ಣಯ್ಯ ಮಿತ್ರ ಮಂಡಲಿಯ ದೇವದಾಸಿ ನಾಟಕದಲ್ಲಿ ಸುನಂದೆ, ಕೆಲವೊಮ್ಮೆ ಮಣಿಮಂಜರಿ, ಎಚ್ಚಮ ನಾಯಕ ನಾಟಕದಲ್ಲಿ ಮೋಹಿನಿ ಹಾಗೂ ಲಲಿತಾ - ಈ ಪಾತ್ರಗಳನ್ನು ವಹಿಸಿ ಅಭಿನಯದ ಅನುಭವಗಳನ್ನು ತುಂಬಿಕೊಂಡರು. ಇದೇ ಸಮಯದಲ್ಲಿ ತಮ್ಮ ಸಹ ನಟರಾಗಿದ್ದ ಎ.ಆರ್. ಪಾರ್ಥಸಾರಥಿಯವರನ್ನು ವಿವಾಹವಾದರು (1945). ಮುಂದೆ ಪಾರ್ಥಸಾರಥಿಯವರು ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡಲು ಮದರಾಸಿಗೆ ತೆರಳಿದರು. ಆದರೆ ನಾಗರತ್ನಮ್ಮನವರು ಕಂಪನಿಯಲ್ಲೇ ಉಳಿದರು.

1958ರಲ್ಲಿ ಇವರ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಸ್ತ್ರೀಯರು ಸ್ತ್ರೀಪಾತ್ರಗಳಿಗಷ್ಟೇ ಸೀಮಿತವಾಗದೆ ಪುರುಷ ಪಾತ್ರಗಳಲ್ಲಿಯೂ ಮೆರೆಯುವ ಸುಯೋಗ ಒದಗಿಬಂತು. ಶ್ರೀಕೃಷ್ಣಗಾರುಡಿ ನಾಟಕದಲ್ಲಿ ಎಲ್ಲ ಪುರುಷ ಪಾತ್ರಗಳನ್ನೂ ಸ್ತ್ರೀಯರೇ ವಹಿಸಿದರು. ಈ ನಾಟಕದಲ್ಲಿ ನಾಗರತ್ನಮ್ಮನವರದು ಭೀಮನ ಪಾತ್ರ. ಮಂಡ್ಯದಲ್ಲಿ ನಡೆದ ಮೊದಲ ಪ್ರಯೋಗವಿದು. ಯಾವ ನಟರಿಗೂ ಕಮ್ಮಿಯಿಲ್ಲದಂತೆ ಅತ್ಯುತ್ತಮವಾಗಿ ನಟಿಸಿ, ಪ್ರೇಕ್ಷಕರನ್ನು ರಂಜಿಸಿದ ಇವರು 'ಭೀಮನ ಪಾತ್ರದ ನಾಗರತ್ನಮ್ಮ' ಎಂದೇ ಪ್ರಸಿದ್ಧರಾದರು. ಈ ಪಾತ್ರ ಎಷ್ಟರಮಟ್ಟಿಗೆ ಪ್ರಭಾವ ಬೀರಿತೆಂದರೆ ಗಜಾನನ ನಾಟಕ ಮಂಡಲಿಯ ಮಾಲೀಕರಾದ ಶ್ರೀ ಪಾದರಾಯರು ಸ್ತ್ರೀ ನಾಟಕ ಮಂಡಲಿಯನ್ನು ಸ್ಥಾಪಿಸಿ (1958) ಅದರ ನಾಯಕತ್ವವನ್ನು ನಾಗರತ್ನಮ್ಮನವರಿಗೆ ವಹಿಸಿದರು. ಈ ಜವಾಬ್ದಾರಿಯನ್ನು ನಾಗರತ್ನಮ್ಮನವರು ಯಶಸ್ವಿಯಾಗಿ ನಿರ್ವಹಿಸಿದರು. ಇದು ನಾಗರತ್ನಮ್ಮನವರ ರಂಗಭೂಮಿಯ ಬದುಕಿನ ಎರಡನೆಯ ಹಂತ ಎನ್ನಬಹುದು. ನಾಗರತ್ನಮ್ಮನವರಿಗೆ ಎಚ್.ಪಿ. ಸರೋಜ, ಬಿ.ಪಿ.ರಾಜಮ್ಮ, ಬಿ.ಎಸ್.ಮಂಜುಳಮ್ಮ, ಬಿ.ಎಸ್.ಪುಟ್ಟಮ್ಮ ಮೊದಲಾದ ಕಲಾವಿದೆಯರ ನಿಕಟಸಂಪರ್ಕ ಇದ್ದುದರಿಂದ ನಾಟಕಗಳನ್ನು ಆಡಲು ಕಷ್ಟವೆನಿಸಲಿಲ್ಲ. ಜೊತೆಗೆ ತಂಗಿ ಆರ್. ಮಂಜುಳಾ ಹಾಸ್ಯ ಪಾತ್ರದಲ್ಲಿದ್ದರು. ತಮ್ಮ ಆರ್.ಪರಮಶಿವನ್ ಸಂಗೀತ ನಿರ್ದೇಶಕರಾದರು. ನಾರಗತ್ನಮ್ಮನವರ ಬಳಗದ ಎಲ್ಲ ಕಲಾವಿದರೂ ವೃತ್ತಿಪರರು, ಹಾಗಾಗಿ ನಿರಂತರವಾಗಿ ಕ್ಯಾಂಪ್ ನಡೆಯಬೇಕಿತ್ತು. ಕೆಲವು ಸಲ ಉಪವಾಸ ಅನಿವಾರ್ಯವಾಗುತ್ತಿತ್ತು. ಅಷ್ಟೇ ಅಲ್ಲದೆ ಸ್ತ್ರೀಯರೆಂಬ ಕಾರಣಕ್ಕಾಗಿ ಕಿರುಕುಳವೂ ಆಗುತ್ತಿತ್ತು. ಇದರಿಂದ ಕೆಲವೊಮ್ಮೆ ಸಂಪಾದನೆ ಕಡಿಮೆಯಾಗುತ್ತಿತ್ತು. ಆದರೂ ಬಂದ ಹಣವನ್ನೆಲ್ಲ ಮಂಡಳಿಯ ಕಲಾವಿದರಿಗೇ ಹಂಚುತ್ತಿದ್ದರು. ತಮ್ಮ ಸಂಸ್ಥೆಯ ಕಲಾವಿದರ ಮಕ್ಕಳಿಗೆ ಬಿಡುವಿನ ವೇಳೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅನುಕೂಲ ಕಲ್ಪಿಸಿ ನೆರವನ್ನು ನೀಡುತ್ತಿದ್ದರು. 'ಕಲಾ ಸೇವೆಯೇ ಪರಮೋಚ್ಚ ಗುರಿ' ಎಂದು ನಾಗರತ್ನಮ್ಮನವರು ಹಾಗೂ ಇವರ ಬಳಗದವರು ಭಾವಿಸಿದ್ದರು. ಸ್ತ್ರೀಯರೇ ಅಭಿನಯಿಸುತ್ತ, ಸ್ತ್ರೀಯರೇ ನಡೆಸುತ್ತಿದ್ದ ಸಂಸ್ಥೆ ಇದೊಂದೇ. ಗಂಡಸರಿಗೂ ಕಷ್ಟವೆನಿಸುತ್ತಿದ್ದ ನಾಟಕ ಕಂಪನಿಯನ್ನು ಸ್ತ್ರೀಯರನ್ನೇ ಕಟ್ಟಿಕೊಂಡು ನಡೆಸುತ್ತಿರುವುದಕ್ಕಾಗಿ ನಾಟಕರತ್ನ ಗುಬ್ಬಿವೀರಣ್ಣನವರು ಇವರನ್ನು ಪ್ರಶಂಸಿಸಿದ್ದರು.

ಸ್ತ್ರೀನಾಟಕ ಮಂಡಳಿ ರಜತೋತ್ಸವ ಸುವರ್ಣ ಮಹೋತ್ಸವಗಳನ್ನು ಆಚರಿಸಿತು. ಆದರೆ ಇವರ ಸಂಸ್ಥೆ ಪ್ರಕೃತಿಯ ವಿಕೋಪಕ್ಕೆ ಗುರಿಯಾದದ್ದೂ ಉಂಟು. ಒಮ್ಮೆ ಭಾರಿ ಮಳೆಯಿಂದಾಗಿ ರಂಗಮಂದಿರದ ಚಪ್ಪರವೇ ಉರುಳಿಬಿದ್ದು, ಬಹಳ ನಷ್ಟವಾಯಿತು. ಆದರೂ ಇವರು ಕೈಬಿಡದ ಛಲದಿಂದ ಕಂಪನಿಯನ್ನು ನಡೆಸಿಕೊಂಡು ಬಂದರು. ಮೈಸೂರು ಹಾಗೂ ಕರ್ನಾಟಕದ ಎಲ್ಲೆಡೆ ಸುಮಾರು 210ಕ್ಕೂ ಮಿಕ್ಕು ಊರುಗಳಲ್ಲಿ 28 ವರ್ಷಗಳ ಕಾಲ ಕಂಪೆನಿ ಬೇರೆ ಬೇರೆ ಸ್ಥಳಗಳಲ್ಲಿ ನೆಲೆಯೂರಿ ಪ್ರದರ್ಶನಗಳನ್ನು ನೀಡಿತು. ಕೃಷ್ಣಲೀಲಾ, ಸಂಪೂರ್ಣ ರಾಮಾಯಣ, ಬೇಡರಕಣ್ಣಪ್ಪ, ಸುಭದ್ರಾ ಪರಿಣಯ, ಸದಾರಮೆ, ದೇವದಾಸಿ, ಸಂಸಾರನೌಕೆ, ಮಕಮಲ್‌ಟೋಪಿ-ಇಂಥ ಪ್ರಸಿದ್ಧ ನಾಟಕಗಳನ್ನು ಆಡಿ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿತು. ತಮ್ಮ ಪತಿ ಪಾರ್ಥಸಾರಥಿಯವರ ಅಕಾಲ ಮರಣದಿಂದಾಗಿ (1967) ಇವರ ಹೆಗಲಿಗೆ ಎಲ್ಲ ಹೊಣೆಗಾರಿಕೆ ಬಿದ್ದರೂ ರಂಗಭೂಮಿಯ ಬಗ್ಗೆ ಇವರ ಆಸಕ್ತಿ ಕುಂದಲಿಲ್ಲ. ನಾಟಕಗಳ ಪ್ರದರ್ಶನವನ್ನು ಮುಂದುವರಿಸಿದರು. ಆದರೆ ಕೊನೆಗೂ ಇವರು ಕಂಪನಿಯನ್ನು ನಿಲ್ಲಿಸಲೇ ಬೇಕಾಯಿತಾದರೂ ರಂಗಭೂಮಿ ಸೇವೆಯನ್ನು ಮಾತ್ರ ಬಿಡಲಿಲ್ಲ. ಇಂದಿಗೂ ಒಮ್ಮೊಮ್ಮೆ ಕರ್ನಾಟಕದ ವಿವಿಧೆಡೆಗಳಲ್ಲಿ ಇವರ ನಾಟಕಗಳು ನಡೆಯುತ್ತಿರುತ್ತವೆ.

ಸ್ತ್ರೀ ನಾಟಕ ಮಂಡಲಿಯ ಪ್ರಮುಖ ನಾಟಕಗಳಾದ ಶ್ರೀಕೃಷ್ಣಗಾರುಡಿಯಲ್ಲಿ ಭೀಮ, ಬೇಡರ ಕಣ್ಣಪ್ಪದಲ್ಲಿ ಕಣ್ಣಪ್ಪ, ರಾಮಾಯಣದಲ್ಲಿ ದಶರಥ ಹಾಗೂ ರಾವಣ, ಸಂಸಾರನೌಕೆಯಲ್ಲಿ ಸುಂದರೇಶ, ದೇವದಾಸಿಯಲ್ಲಿ ಸಖಾರಾಮ, ಸದಾರಮೆಯಲ್ಲಿ ಕಳ್ಳ ಹಾಗೂ ಮಕಮಲ್ ಟೋಪಿಯಲ್ಲಿ ಭೂಪಾಲ್ ಈ ಪಾತ್ರಗಳಲ್ಲಿ ನಾಗರತ್ನಮ್ಮನವರ ಅಭಿನಯ ಚಿರಸ್ಮರಣೀಯವಾಗಿದೆ. ಇವರ ಕಲಾಸೇವೆಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಗುಬ್ಬಿವೀರಣ್ಣ ಪ್ರಶಸ್ತಿ ದೊರಕಿವೆ (ಎಚ್.ಕೆ.ಆರ್.)

**ನಾಗರತ್ನಮ್ಮ,ಕೆ.ಎಸ್.:** 1923-93. ಪ್ರಮುಖ ಸಂಸದೀಯ ಪಟು. ಶಾಸಕಿಯಾಗಿ, ವಿಧಾನಸಭೆಯ ಅಧ್ಯಕ್ಷರಾಗಿ ಮತ್ತು ಸಚಿವೆಯಾಗಿ ಮೂರು ದಶಕಗಳಿಗೂ ಹೆಚ್ಚುಕಾಲ ವಿವಿಧ ಜವಾಬ್ದಾರಿ ಹುದ್ದೆಗಳನ್ನು ನಿರ್ವಹಿಸಿದ ಕರ್ನಾಟಕದ ಮೊದಲ ತಲೆಮಾರಿನ ಮಹಿಳಾ ರಾಜಕಾರಿಣಿ. ಕಬ್ಬಳ್ಳಿ ಸುಬ್ಬಣ್ಣ ನಾಗರತ್ನಮ್ಮ ಇವರ ಪೂರ್ತಿ ಹೆಸರು.

ಇವರು ಜನಿಸಿದ್ದು 1923 ನವೆಂಬರ್ 23 ರಂದು. ತಂದೆ ಸಿ.ಆರ್. ಗೌಡರು. ಮೈಸೂರು ಸಂಸ್ಥಾನದಲ್ಲಿ ಎಂಜಿನಿಯರ್ ಆಗಿದ್ದರು. ತಾಯಿ ಚನ್ನಮ್ಮ. ಬೆಂಗಳೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ವಿದ್ಯಾವಂತ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದರೂ ಸಂಪ್ರದಾಯಸ್ಥ ಸಮಾಜದ ಪರಿಣಾಮವಾಗಿ ಹನ್ನೊಂದನೆಯ ವರ್ಷದಲ್ಲೇ ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪನವರ ಮಗ ಕೆ.ಸಿ.ಸುಬ್ಬಣ್ಣನವರೊಡನೆ ಇವರ ವಿವಾಹವಾಯಿತು (1934). ಸುಬ್ಬಣ್ಣನವರು ಅಂದಿನ ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದವರು. ಪತಿಯ ಅಕಾಲಿಕ ನಿಧನದ ಅನಂತರ (1947) ಬಹುದೊಡ್ಡ ಮನೆತನದ ಸಮಸ್ತ ಜವಾಬ್ದಾರಿಗಳು ಇವರ ಹೆಗಲಿಗೆ ಬಿದ್ದುವು. ಹೊಣೆಗಾರಿಕೆಗಳಿಂದ ವಿಚಲಿತರಾಗದೆ ಸಮಸ್ತ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿದರು. ಕಬ್ಬಳ್ಳಿ ಮನೆತನ ನಡೆಸಿಕೊಂಡು ಬರುತ್ತಿದ್ದ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಮುನ್ನಡೆಸಿದರು. ಕುಟುಂಬ ಹೊಂದಿದ್ದ

ವಿಸ್ತಾರವಾದ ಜಮೀನು ಮತ್ತು ಅಪಾರ ಆಸ್ತಿಯನ್ನು ಸಂರಕ್ಷಿಸಿದರು.

1957 ರ ಸಾರ್ವತ್ರಿಕ ಚುನಾವಣೆಯಲ್ಲಿ ಗುಂಡ್ಲುಪೇಟೆ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ವಿಧಾನ ಸಭೆಗೆ ಆಯ್ಕೆಯಾಗುವುದರ ಮೂಲಕ ಸಕ್ರಿಯ ರಾಜಕೀಯಕ್ಕೆ ಪ್ರವೇಶ ಮಾಡಿದರು. ಕಾಂಗ್ರೆಸ್ ಅಲೆಯ ವಿರುದ್ಧ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಹನ್ನೆರಡು ಸಾವಿರ ಮತಗಳ ಅಂತರದಿಂದ ತಮ್ಮ ಮೊದಲ ಪ್ರಯತ್ನದಲ್ಲೇ ಗೆಲವು ಸಾಧಿಸಿದ್ದು ಇವರ ಅಪೂರ್ವಸಾಧನೆ.

1960ರ ದಶಕದಲ್ಲಿ ಎಸ್.ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಇವರು ಕಾಂಗ್ರೆಸ್ ಪಕ್ಷ ಸೇರಿದರು. 1972ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅತ್ಯಧಿಕ ಬಹುಮತದಿಂದ ಅಧಿಕಾರದ ಗದ್ದುಗೆ ಏರಿತು. ಡಿ.ದೇವರಾಜ ಅರಸು ಮುಖ್ಯಮಂತ್ರಿಗಳಾದರು. ನಾಗರತ್ನಮ್ಮನವರು ವಿಧಾನ ಸಭಾಧ್ಯಕ್ಷರಾಗಿ ಆಯ್ಕೆಗೊಂಡರು. ಐದು ವರ್ಷಗಳ ಕಾಲ (1972 - 78) ಸಭಾಧ್ಯಕ್ಷರಾಗಿ ಮಹಿಳೆಯೊಬ್ಬರು ಕಾರ್ಯನಿರ್ವಹಿಸಿದ್ದು ವಿಧಾನಸಭೆ ಇತಿಹಾಸದಲ್ಲಿ ಗಮನಾರ್ಹ ಸಂಗತಿ.

ದೇವರಾಜ ಅರಸು ಕಾಂಗ್ರೆಸ್‌ನಿಂದ ದೂರವಾದರೂ ನಾಗರತ್ಮಮ್ಮ ಕಾಂಗ್ರೆಸ್ ಪಕ್ಷದಲ್ಲೇ ಉಳಿದರು. ಜನತಾ ಸರ್ಕಾರದ ಆಡಳಿತದಲ್ಲಿ ವಿರೋಧಪಕ್ಷದ ನಾಯಕರಾಗಿ (1987 - 89) ಕಾರ್ಯನಿರ್ವಹಿಸಿದರು. ತುರ್ತು ಪರಿಸ್ಥಿತಿಯ ಅನಂತರ ನಡೆದ ವಿಧಾನಸಭಾ ಚುನಾವಣೆಯೊಂದನ್ನು ಬಿಟ್ಟರೆ 1957 ರಿಂದ ಅವಿರತವಾಗಿ ಮೂರುದಶಕಗಳ ಅವಧಿಯಲ್ಲಿ ವಿಧಾನಸಭೆಗೆ ಚುನಾಯಿತರಾಗಿದ್ದರು. ಗುಂಡ್ಲುಪೇಟೆ ತಾಲ್ಲೂಕಿನ ಬಹುತೇಕ ಅಭಿವೃದ್ಧಿ ಯೋಜನೆಗಳಲ್ಲಿ ಇವರ ಪಾತ್ರ ಬಹು ಪ್ರಮುಖವಾದುದು. ಕಬ್ಬಳ್ಳಿಯಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರ ಪ್ರಾರಂಭ (1975) , ತೆರಕಣಾಂಬಿಯಲ್ಲಿ ಪ್ರೌಢಶಾಲೆಯ ಪ್ರಾರಂಭ, ಗುಂಡ್ಲುಪೇಟೆಯಲ್ಲಿ ಪಶುವೈದ್ಯಶಾಲೆ, ಇತರರೊಂದಿಗೆ ಸೇರಿ ಮೈಸೂರಿನಲ್ಲಿ ವಾಣಿವಿಲಾಸ ಮೊಹಲ್ಲಾದ ಮಾತೃಮಂಡಳಿ ವಿದ್ಯಾಸಂಸ್ಥೆಯ ಸ್ಥಾಪನೆ, ನಲ್ಲೂರು ಅಮಾನಿಕೆರೆ ಮತ್ತು ಕಲ್ಲುಕಟ್ಟೆಹಳ್ಳ ನೀರಾವರಿ ಯೋಜನೆಗಳು - ಇವು ನಾಗರತ್ನಮ್ಮ ಅವರ ಶ್ರಮದಿಂದ ಸಾಕಾರಗೊಂಡ ಕೆಲವು ಯೋಜನೆಗಳು. ಮೈಸೂರಿನ ಮರಿಮಲ್ಲಪ್ಪ ಕಾಲೇಜಿನಿಂದ ಆಡಳಿತ ಮಂಡಳಿಯ ಸದಸ್ಯರಾಗಿ, ಕಬ್ಬಳ್ಳಿ ವಿದ್ಯಾರ್ಥಿನಿಲಯದ ಪೋಷಕರಾಗಿಯೂ ಸೇವೆ ಸಲ್ಲಿಸಿದರು. 1970ರ ದಶಕದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷಿಣಿಯಾಗಿದ್ದರು. ಬೆಂಗಳೂರಿನಲ್ಲಿ ಲಲಿತಕಲಾ ವಿದ್ಯಾಲಯ ಸ್ಥಾಪನೆಗೂ ಇವರು ಕಾರಣರಾದರು. ಅಖಿಲ ಭಾರತ ಮಹಿಳಾ ಪರಿಷತ್ತಿನ ಮೈಸೂರು ವಿಭಾಗದ ಅಧ್ಯಕ್ಷೆ ಮತ್ತು ಭಾರತದ ಸ್ಕೌಟ್ ಮತ್ತು ಗೈಡ್ ವಿಭಾಗದ ಉಪಾಧ್ಯಕ್ಷೆಯೂ ಆಗಿದ್ದರು.

ಸೋವಿಯತ್ ರಷ್ಯಾ ಮತ್ತು ಪೂರ್ವ ಜರ್ಮನಿ ಸರ್ಕಾರಗಳ ಆಮಂತ್ರಣದ ಮೇರೆಗೆ ಆ ದೇಶಗಳಿಗೆ ಭೇಟಿ ನೀಡಿ ಅಭಿವೃದ್ಧಿ ಯೋಜನೆಗಳ ಬಗ್ಗೆ ನೇರಮಾಹಿತಿ ಹೊಂದಿದರಲ್ಲದೆ, ಸ್ವೀಡನ್, ಸ್ವಿಟ್ಸರ್‌ಲೆಂಡ್, ನಾರ್ವೆ, ಡೆನ್ಮಾರ್ಕ್, ಹಾಲೆಂಡ್, ಇಂಗ್ಲೆಂಡ್, ಬೆಲ್ಜಿಯಂ, ಫ್ರಾನ್ಸ್, ಇಟಲಿ ಮತ್ತು ಈಜಿಪ್ಟ್ ದೇಶಗಳಲ್ಲೂ ವ್ಯಾಪಕ ಪ್ರವಾಸ ಮಾಡಿದರು. ಸಂಸದೀಯ ಪ್ರತಿನಿಧಿಯಾಗಿ ಮಾರಿಷಸ್‌ನಲ್ಲಿ ನಡೆದ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮೆಕ್ಸಿಕೋದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ಸಂಸದೀಯ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದರು.

ರಾಜಕೀಯ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಇವರು ಭಾರತದಲ್ಲಿ ವಿಧಾನ ಸಭೆಯ ಅಧ್ಯಕ್ಷಿಣಿಯಾಗಿ ಕಾರ್ಯನಿರ್ವಹಿಸಿದ ಮೊದಲಿಗರು. ಅಂತೆಯೇ ವಿರೋಧ ಪಕ್ಷದ ಸ್ಥಾನವನ್ನು ಮಹಿಳೆಯೊಬ್ಬರು ನಿರ್ವಹಿಸಿರುವುದೂ ಅಪರೂಪದ ಸಂಗತಿ. ಎಸ್. ಬಂಗಾರಪ್ಪನವರ ಮಂತ್ರಿ ಮಂಡಲದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಸಚಿವರಾಗಿ ಕಾರ್ಯನಿರ್ವಹಿಸಿದರು. ನಾಗರತ್ನಮ್ಮನವರು ಸದನದ ಹೊರಗೆ ಮತ್ತು ಒಳಗೆ ಮಾಡಿದ ಅನೇಕ ಭಾಷಣಗಳು ಅಧ್ಯಯನ ಯೋಗ್ಯವಾಗಿವೆ. ಕೈಗಾರಿಕೆಗಳ ಸ್ಥಾಪನೆ, ಆರೋಗ್ಯ, ಶಿಕ್ಷಣ ಮತ್ತು ಆರೋಗ್ಯ, ಗ್ರಾಮೀಣ ಸಮಸ್ಯೆಗಳು, ವ್ಯವಸಾಯ, ಕೈಗಾರಿಕೆ ಮತ್ತು ಸಾಮಾನ್ಯ ಆಡಳಿತ ಇತ್ಯಾದಿ ವಿಷಯಗಳ ಬಗ್ಗೆ ಮಂಡಿಸಿದ ಇವರ ವಿಚಾರಗಳು ಮನನೀಯ. ಇವರು 1993 ರಲ್ಲಿ ನಿಧನಹೊಂದಿದರು. (ಎಸ್.ಎನ್.ಜಿ.)

**ನಾಗರತ್ನಮ್ಮ, ಬೆಂಗಳೂರು :** 1873-1952. ಪ್ರಸಿದ್ಧ ಸಂಗೀತ ವಿದುಷಿ. ಮೈಸೂರು ಜಿಲ್ಲೆಯ ನಂಜನಗೂಡಿನವರು. ತಾಯಿ ಪುಟ್ಟಲಕ್ಷ್ಮಮ್ಮ, ವಿದ್ಯಾಭ್ಯಾಸಕ್ಕಾಗಿ ಬಾಲ್ಯದಲ್ಲಿಯೇ ಮೈಸೂರಿಗೆ ಬಂದ ಇವರು, ಸಂಗೀತ ಮತ್ತು ಸಾಹಿತ್ಯಗಳಲ್ಲಿ ಗಣ್ಯ ವಿದ್ವಾಂಸರೂ ಮೈಸೂರು ಅರಮನೆ ಶಾಕುಂತಲ ನಾಟಕ ಸಭೆಯ ಶಿಕ್ಷಕರೂ ಆಗಿದ್ದ ಗಿರಿಭಟ್ಟರ ತಮ್ಮಯ್ಯನವರಲ್ಲೂ ಬಿಡಾರಂ ಕೃಷ್ಣಪ್ಪ ಮತ್ತು ವೀಣೆಶೇಷಣ್ಣನವರಲ್ಲೂ ಕೆಲವು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿ, ಸಾಹಿತ್ಯ ಸಂಗೀತ ಮತ್ತು ನೃತ್ಯಗಳಲ್ಲಿ ಶಿಕ್ಷಣ ಪಡೆದರು. ಅನಂತರ ಬೆಂಗಳೂರಿಗೆ ಹೋಗಿ ತಮ್ಮ ಸಹೋದರ ವೆಂಕಟಸ್ವಾಮಪ್ಪನವರಲ್ಲಿ ಮತ್ತು ಬೆಂಗಳೂರು ಕಿಟ್ಟಣ್ಣನವರಲ್ಲಿ ನೃತ್ಯ-ಸಂಗೀತಗಳಲ್ಲಿನ ತಮ್ಮ ವ್ಯಾಸಂಗವನ್ನು ಮುಂದುವರಿಸಿದರು. ಅನಂತರ ಮದರಾಸಿಗೆ ಹೋಗಿ ತಿರುವೆಂಕಟಾಚಾರ್ಯರು ಮತ್ತು ರಾಮನಾಡ್ ಶ್ರೀನಿವಾಸ ಅಯ್ಯಂಗಾರರಲ್ಲಿ ವ್ಯಾಸಂಗಮಾಡಿ ಸಂಗೀತ ಮತ್ತು ನೃತ್ಯದಲ್ಲಿ ಪ್ರೌಢಿಮೆಯನ್ನು ಗಳಿಸಿದರು. ಅನಂತರ ಹಲವಾರು ಕಡೆ ಕಛೇರಿಗಳನ್ನು ನಡೆಸಿ ಹೆಸರು ಪಡೆದರು.

ನಾಗರತ್ನಮ್ಮನವರಿಗೆ ಸಂಗೀತ, ನಾಟ್ಯ, ಅಭಿನಯಶಾಸ್ತ್ರಗಳಲ್ಲಿ ಒಳ್ಳೆಯ ಪರಿಶ್ರಮವಿದ್ದುದರಿಂದ ಇವರ ಸಂಗೀತ ಭಾವಪೂರ್ಣವಾಗಿತ್ತು. ಇವರ ಸಂಗೀತದಲ್ಲಿ ಸ್ವರಕಲ್ಪನೆಗಿಂತ ರಾಗಾಲಾಪನೆ ಮುಖ್ಯ ಲಕ್ಷಣವಾಗಿತ್ತು. ಯದುಕುಲ ಕಾಂಭೋಜಿ ರಾಗವೆಂದರೆ ಇವರಿಗೆ ಬಹಳ ಪ್ರೀತಿ, ದೇವರ ನಾಮಗಳು, ಶ್ಲೋಕಗಳು ಮತ್ತು ರಾಗಮಾಲಿಕೆಗಳನ್ನು ಹಾಡುವುದರಲ್ಲಿಯೂ ಹೆಸರಾಗಿದ್ದರು.

ನಾಗರತ್ಮಮ್ಮನವರು ತ್ಯಾಗರಾಜರ ಆರಾಧಕರು. ಅವರ ಕೃತಿಗಳನ್ನು ಹಾಡುವುದರಲ್ಲಿಯೂ ಹೆಸರಾಗಿದ್ದರು. ತಮ್ಮ ಜೀವನದ ಕೊನೆಯ ದಿನಗಳನ್ನು ತಿರುವಯ್ಯಾರಿನಲ್ಲಿ ಕಳೆಯಬೇಕೆಂದು ಸಂಕಲ್ಪಿಸಿದ ಇವರು ಮದರಾಸಿನಲ್ಲಿ ತಾವು ವಾಸಿಸುತ್ತಿದ್ದ ಮನೆಯನ್ನು ಮಾರಿ, ತಿರುವಯ್ಯಾರಿಗೆ ಹೋಗಿ ಅಲ್ಲಿನ ತ್ಯಾಗರಾಜರ ಸಮಾಧಿ ಬಳಿ ಸೀತಾರಾಮ ದೇವಾಲಯವೊಂದನ್ನು ಕಟ್ಟಿಸಿದರು. ಅಲ್ಲಿ ಕರ್ನಾಟಕ ಸಂಗೀತದ ಒಂದು ಪಾಠಶಾಲೆ ಮತ್ತು ಒಂದು ಮೈಸೂರು ಛತ್ರವನ್ನೂ ಕಟ್ಟಿಸಬೇಕೆಂದು ಸಂಕಲ್ಪಿಸಿದ ಇವರು ಇದಕ್ಕಾಗಿ ಕನ್ನಡ ನಾಡಿನಲ್ಲಿ ಸಂಚರಿಸಿ ಹಣ ಸಂಗ್ರಹ ಮಾಡಿದರು. ಈ ಕಟ್ಟಡಗಳ ಕೆಲಸವು ಮುಗಿಯುವ ಮುನ್ನವೇ ತಿರುವಯ್ಯಾರಿನಲ್ಲಿ ನಿಧನರಾದರು.

ನಾಗರತ್ನಮ್ಮನವರಿಗೆ ಆಗಿನ ಮೈಸೂರು ಮಹಾರಾಜರಿಂದ ಪ್ರೋತ್ಸಾಹ ಮತ್ತು ಆಶ್ರಯಗಳು ಲಭಿಸಿದ್ದವು. ತ್ಯಾಗಸೇವಾಸಕ್ತಾ, ವಿದ್ಯಾಸುಂದರಿ, ಗಾನಕಲಾವಿಶಾರದಾ ಎಂಬ ಬಿರುದುಗಳೂ ಇವರಿಗೆ ಬಂದಿದ್ದವು. (ವಿ.ಎಸ್.ಎಸ್.)

**ನಾಗರಸ:** ಸು. 1650. ಬ್ರಾಹ್ಮಣ ಕವಿ. ಕರ್ನಾಟಕ ಭಗವದ್ಗೀತೆ ಎಂಬ ಗ್ರಂಥದ ಕರ್ತೃ. ಇವನ ತಂದೆ ವಿಶ್ವೇಶ್ವರ, ಗುರು ಶಂಕರಗುರು, ಇಷ್ಟ ದೈವ ಪಂಡರಾಪುರದ ವಿಟ್ಠಲ. ಕವಿ ಬಹುಶಃ ಈ ಪಂಡಾರಾಪುರದ ಸಮೀಪದ ಪ್ರಾಂತ್ಯದಲ್ಲಿದ್ದವನಾಗಿರಬಹುದು.

ಭಗವದ್ಗೀತೆ ಭಾಮಿನೀ ಷಟ್ಪದಿಯಲ್ಲಿಇದೆ. ಇದರಲ್ಲಿ 19 ಅಧ್ಯಾಯಗಳೂ 737 ಪದ್ಯಗಳೂ ಇವೆ. ಒಂದೊಂದು ಸಂಸ್ಕೃತ ಶ್ಲೋಕವನ್ನು ಒಂದೊಂದು ಭಾಮಿನೀ ಷಟ್ಪದಿಯಾಗಿ ಕನ್ನಡಿಸಿದ್ದಾನೆ. ವಾಸುದೇವ ಕಥಾಮೃತ ಎಂದು ಕವಿಯೇ ಕರೆದಿರುವ ಈ ಕೃತಿ ಕನ್ನಡದ ತಾತ್ವಿಕ ಗ್ರಂಥಗಳ ಸರಳವೂ ಸುಂದರವೂ ಆದ ಅನುವಾದಕ್ಕೆ ಒಂದು ಉದಾಹರಣೆಯಂತಿದೆ. ಮೂಲದ ಆಶಯವನ್ನೆಲ್ಲ ಕನ್ನಡ ಜನತೆಯ ಹೃದಯಕ್ಕೆ ಮುಟ್ಟಿಸಿ ಅವರನ್ನು ಉದ್ಧಾರದ ಕಡೆಗೆ ಕೊಂಡೊಯ್ಯುವ

ಸಾಹಸದಲ್ಲಿತೊಡಗಿರುವುದು ಕಂಡುಬರುತ್ತದೆ. ಕೃತಿಯ ಭಾಷೆ, ಪದ್ಯ ರಚನಾ ರೀತಿ, ಅಲಂಕಾರಗಳ ಪ್ರಯೋಗ - ಈ ಎಲ್ಲ ಕಡೆಯೂ ಕವಿ ಸಾಮಾನ್ಯ ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಸರಳವಾಗಿ ರಚಿಸಿರುವುದು ಗಮನಾರ್ಹವಾಗಿದೆ. ಭಕ್ತಿ ಸಹಜವಾಗಿಯೇ ಈ ಕೃತಿಯ ಮೂಲ ಸ್ರೋತವಾಗಿದೆ. ಕುಮಾರವ್ಯಾಸನ ಅನಂತರ ಹರಿಭಕ್ತಿ ಪರಂಪರೆಯನ್ನು ಮುಂದುವರಿಸಿದ ಕವಿಗಳಲ್ಲಿ ಇವನಿಗೆ ಪ್ರಮುಖ ಸ್ಥಾನ ಸಲ್ಲುತ್ತದೆ. (ಎನ್.ಬಿ.ಎಲ್.)

**ನಾಗರಹೊಳೆ :** ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ವಿರಾಜಪೇಟೆಯ ಆಗ್ನೇಯಕ್ಕೆ 61 ಕಿಮೀ ದೂರದಲ್ಲಿರುವ ಒಂದು ಪ್ರಸಿದ್ಧ ಅಭಯಾರಣ್ಯ. ವಿರಾಜಪೇಟೆ ತಾಲ್ಲೂಕಿನ ಆಗ್ನೇಯದಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು ಮೈಸೂರು ಜಿಲ್ಲೆಯಲ್ಲಿ ಕಪಿಲಾ ನದಿಯನ್ನು ಸೇರುವ ನಾಗರಹೊಳೆಯ ಅಸುಪಾಸಿನ ಪ್ರದೇಶವೇ ನಾಗರಹೊಳೆ ಅಭಯಾರಣ್ಯಪ್ರದೇಶ. ದಕ್ಷಿಣ ಕೊಡಗಿನ ಮೇರೆಯಲ್ಲಿ ಹೆಗ್ಗಡದೇವನ ಕೋಟೆ ತಾಲ್ಲೂಕಿಗೆ ಸಮೀಪದಲ್ಲಿರುವ ಈ ಪ್ರದೇಶ 288 ಚ.ಕಿಮೀ ವಿಸ್ತೀರ್ಣವಿದ್ದು ಸಮುದ್ರಮಟ್ಟದಿಂದ 2,500' ಎತ್ತರದಲ್ಲಿದೆ. ಇದು ಕಲ್ಲಹಳ್ಳ, ನಾಗರಹೊಳೆ ಮತ್ತು ತಿತಿಮತಿ ಅರಣ್ಯಪ್ರದೇಶಗಳನ್ನು ಒಳಗೊಂಡಿದೆ. ಸದಾ ಹಸಿರುಹಚ್ಚಗಳಿರುವುದರಿಂದ ಪ್ರಾಣಿಗಳಿಗೆ ಎಲ್ಲಾ ಕಾಲದಲ್ಲೂ ಇಲ್ಲಿ ಆಹಾರ ದೊರಕುತ್ತದೆ. ಸುಲಭವಾಗಿ ನೀರು ಸಿಗುವ ಸ್ಥಳಗಳು ಇಲ್ಲಿ ಅನೇಕವಿದ್ದು, ಪ್ರಾಣಿಗಳಿಗೆ ಅತಿ ಪ್ರಿಯವಾದ ಉಪ್ಪುನೆಕ್ಕುವ (ಚೌಳುಮಣ್ಣು) ಸ್ಥಳಗಳು ಸುಮಾರು ಮೂವತ್ತು ಇವೆ. ಹಿಂಡು ಹಿಂಡಾಗಿ ನಿರಾತಂಕವಾಗಿ ತಿರುಗುವ ಜಿಂಕೆಗಳು, ಕಡವೆ, ಸಾರಂಗ ಮತ್ತು ಕಾಡುಕೋಣಗಳು, ನಿಂತಲ್ಲಿ ನಿಲ್ಲದೆ ಅಲೆದಾಡುವ ನರಿ, ಕೆನ್ನಾಯಿ, ಕಾಡುಹಂದಿಗಳು, ಯಾವುದೇ ಆತಂಕವಿಲ್ಲದೆ ಮಂದಗತಿಯಲ್ಲಿ ತಿರುಗುವ ಆನೆಯ ಹಿಂಡು, ಹುಲಿ, ಕರಡಿ, ಜಿಂಕೆಗಳನ್ನು ಇಲ್ಲಿ ಕಾಣಬಹುದು.

ಇವುಗಳನ್ನೆಲ್ಲ ಹತ್ತಿರದಿಂದ ನೋಡಲು ಕಾಡಿನೊಳಗೆ ಎತ್ತರವಾದ ವೀಕ್ಷಣಾಲಯಗಳನ್ನು ಕಟ್ಟಿದ್ದಾರೆ. ಅಭಯಾರಣ್ಯದ ಸುತ್ತಲು ವಾಹನ ಸೌಕರ್ಯ ಇದೆ. ಇದೇ ಅಲ್ಲದೆ ಆನೆಗಳ ಮೇಲೂ ಪ್ರವಾಸಿಗರನ್ನು ಆಭಯಾರಣ್ಯದೊಳಕ್ಕೆ ಒಯ್ದು, ಪ್ರಾಣಿಗಳ ಹಿಂಡುಗಳನ್ನು ವೀಕ್ಷಿಸಲು ಅನುಕೂಲ ಒದಗಿಸಿದ್ದಾರೆ. ಒಂದಲ್ಲ ಒಂದು ಸ್ಥಳದಲ್ಲಿ ಅತಿ ಹತ್ತಿರದಿಂದ ಪ್ರಾಣಿಗಳನ್ನು ವೀಕ್ಷಿಸಲು ಈ ಸೌಕರ್ಯ ಸಹಾಯಕವಿದ್ದು ಪ್ರವಾಸಿಗರನ್ನು ಈ ಕೇಂದ್ರ ಆಕರ್ಷಿಸುತ್ತದೆ. ಸರ್ಕಾರ ಪ್ರವಾಸಿಗರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿದೆ. ಇಲ್ಲಿ ವಿದ್ಯುಚ್ಛಕ್ತಿ, ಕೊಳವೆನೀರು, ಸುಸಜ್ಜಿತ ಪ್ರವಾಸಿಮಂದಿರ ಹಾಗೂ ಪ್ರಾಣಿಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನುಳ್ಳ ಗ್ರಂಥಾಲಯ ಇವೆ. ಅರಣ್ಯ ಪ್ರದೇಶವನ್ನು ವೀಕ್ಷಿಸಲು ಇಲ್ಲಿ ಪ್ರವಾಸಿಗಳಿಗೆ ಸಹಾಯ ಮಾಡಲು ನಿಯೋಜಿತರಾದ ಅರಣ್ಯ ಇಲಾಖೆಯ ಅಧಿಕಾರಿಗಳಿದ್ದಾರೆ.

ಈ ಪ್ರದೇಶದಲ್ಲಿ ಬೇಟೆಯಾಡುವಂತಿಲ್ಲ. ನಾಗರಹೊಳೆ ಇಂದು ಭಾರತದಲ್ಲೇ ಅತ್ಯಂತ ರಮಣೀಯ ಹಾಗೂ ಆಕರ್ಷಕ ಪ್ರಾಣಿಸಂರಕ್ಷಣಾ ಕೇಂದ್ರವೆಂದು ಹೆಸರು ಪಡೆದಿದೆ. (ಬಿ.ಡಿ.ಎಸ್.)

**ನಾಗರಾಜ :** 14ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಜೈನಕವಿ. ಪುಣ್ಯಾಸ್ರವ ಎಂಬ ಚಂಪೂಕಾವ್ಯದ ಕರ್ತೃ. ಸೇಚೆಂಬಪುರದ ಜಿನಶಾಸನ ದೀಪಕನಾದ ವಿವೇಕ ವಿಟ್ಠಲದೇವ ಇವನ ತಂದೆ, ತಾಯಿ ಭಾಗೀರಥಿ, ಸಹೋದರ ತಿಪ್ಪರಸ ಗುರು ಅನಂತವೀರ್ಯ, ಕವಿಮುಖಮುಕುರ, ಸರಸ್ವತೀಮುಖತಿಲಕ, ಭಾರತೀಭಾಳನೇತ್ರ ಎಂಬುವು ಇವನ ಬಿರುದುಗಳು. ಪೂರ್ವಕವಿಗಳಲ್ಲಿ ಗಜಾಂಕುಶ, ಪಂಪ, ಪೊನ್ನ, ಜನ್ನ, ಬಂಧುವರ್ಮ, ಗುಣವರ್ಮ, ನಾಗಚಂದ್ರ ಇವರನ್ನು ಸ್ತುತಿಸಿದ್ದಾನೆ.

ಪುಣ್ಯಾಸ್ರವವನ್ನು 12 ಅಧಿಕಾರಗಳಾಗಿ ವಿಭಾಗಿಸಲಾಗಿದೆ. ಈ ಕೃತಿಯನ್ನು ತನ್ನ ಗುರುವಿನ ಅಪ್ಪಣೆಯಂತೆ ಸಗರದ ನಗರದವರಿಗಾಗಿ 1331ರಲ್ಲಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಇದು ಸಂಸ್ಕೃತದಿಂದ ಕನ್ನಡಿಸಲಾದ ಗ್ರಂಥ, ಇದರಲ್ಲಿ ಒಟ್ಟು 52 ಕಥೆಗಳಿವೆ. ಈ ಕಥೆಗಳಲ್ಲಿ ಜೈನ ಗೃಹಸ್ಥಧರ್ಮವನ್ನು ವಿವರಿಸಿ, ಒಂದೊಂದು ಗುಣದಲ್ಲಿ ಪ್ರಸಿದ್ಧಿಪಡೆದ ಪುರಾಣಪುರುಷರ ಕಥೆಗಳನ್ನು ಹೇಳಿದೆ. ಈ ಕಥೆಗಳು ಜೈನಧರ್ಮದ ಶ್ರೇಷ್ಠತೆಯನ್ನು ಸಂಸ್ಥಾಪಿಸುತ್ತವೆ. ಈತನದು ಸರಳವಾದ ಲಲಿತವಾದ ದೇಶೀಶೈಲಿ; ಕಥಾನಿರೂಪಣೆಯಲ್ಲಿ ಕೌಶಲವಿದೆ. ವರ್ಣನೆಗಳಲ್ಲಿ ನೈಜತೆ ಕಂಡುಬರುತ್ತದೆ. ನಾಗೇಂದ್ರನ ನಿಜಕವಿತೆಯ ಕನ್ನಡದ ನುಡಿಯ ಬೆಡಗಿನ ಗಡಣಂ ಸಕ್ಕರೆಯ ಸಿರಿಯಂತೆ ಎಂದು ಕವಿ ತನ್ನ ಕವಿತಾಚಾತುರ್ಯವನ್ನು ವಿಶ್ಲೇಷಿಸಿಕೊಂಡಿದ್ದಾನೆ. ಈ ಕಾವ್ಯವನ್ನು ಆರ್ಯಸೇನ ಎಂಬುವನು ತಿದ್ದಿ ಅಂದಗೊಳಿಸಿದಂತೆ ತಿಳಿಯುತ್ತದೆ. ಪಂಪಮಹಾಕವಿಯನ್ನು ಕುರಿತು 'ಪಸರಿಪಕನ್ನಡಕ್ಕೊಡೆಯನೊರ್ವನೆ ಸತ್ಕವಿಪಂಪನಾವಗಂ' ಎಂದು ನಾಗರಾಜ ಹೇಳಿದ ಮಾತು ಕನ್ನಡ ಸಾಹಿತ್ಯದಲ್ಲಿ ಸಾರ್ವಕಾಲಿಕ ಸತ್ಯವಾಗಿ ಇಂದಿಗೂ ಉಳಿದುಬಂದಿದೆ. (ಪಿ.ವಿ.ಸಿ.)

**ನಾಗರಾಜ, ಡಿ.ಆರ್. :** 1954-98. ವಿಮರ್ಶಕರು ಹಾಗೂ ಚಿಂತಕರು. ಕನ್ನಡದ ವಿಮರ್ಶೆಗೆ ಸಾಂಸ್ಕೃತಿಕ ಆಯಾಮವನ್ನು ಒದಗಿಸಿದವರು.

ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಅನಂತರ ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ, ಅಮೆರಿಕದ ಶಿಕಾಗೊ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಹಾಗೂ ಅಕ್ಷರ ಪ್ರಕಾಶನದ ಅಕ್ಷರ ಚಿಂತನ ಮಾಲೆಯ ಸಂಪಾದಕರಾಗಿ ದುಡಿದವರು.

ಅಮೃತ ಮತ್ತು ಗರುಡ ಇವರ ಮೊದಲ ವಿಮರ್ಶಾಕೃತಿ (1983). ಇದರಲ್ಲಿ ಕುವೆಂಪು, ಶಿವರಾಮ ಕಾರಂತ, ಮಾಸ್ತಿ ಮೊದಲಾದ ಲೇಖಕರ ಕುರಿತಾದ ಮತ್ತು ರಂಗಭೂಮಿ, ಕಾವ್ಯ, ಪ್ರಾಯೋಗಿಕ ವಿಮರ್ಶೆಗೆ ಸಂಬಂಧಿಸಿದ 16 ಪ್ರೌಢ ಲೇಖನಗಳಿವೆ. ಆಧುನಿಕ ಕನ್ನಡ ಕಾವ್ಯದ ನಾಲ್ಕು ಪ್ರಮುಖ ವಸ್ತುಗಳಾದ ಭೂಮಿ, ಕಾಲ, ಕಾಮ ಮತ್ತು ಸಮಾಜಗಳನ್ನು ಮುಂದಿಟ್ಟುಕೊಂಡು ಕನ್ನಡದ ಮುಖ್ಯ ಕವಿಗಳ ಕಾವ್ಯದ ಅಧ್ಯಯನವನ್ನೊಳಗೊಂಡಿರುವ ಕೃತಿ 'ಶಕ್ತಿ ಶಾರದೆಯ ಮೇಳ ' (1987). ಇದು ಇವರ ಪಿಎಚ್.ಡಿ. ಮಹಾಪ್ರಬಂಧದ ಪರಿಷ್ಕೃತ ರೂಪ. ಜ್ಞಾನದ ಪೂರ್ವನಿಶ್ಚಿತ ಕಲ್ಪನೆಗಳನ್ನು ಮೀರಿನಿಲ್ಲುವ ರಾಜಕೀಯ, ಸಾಹಿತ್ಯಕ, ಸಾಮಾಜಿಕ ವಾಚಿಕೆಗಳನ್ನು ಹೆಣೆದುಕೊಂಡು ಸಾಮಾಜಿಕ ಕಥನವಾಗಿರುವ ಕೃತಿ 'ಸಾಹಿತ್ಯ ಕಥನ' (1996). ಅಲ್ಲಮ್ಮನನ್ನು ನಮ್ಮ ಕಾಲದ ದೃಷ್ಟಿಯಿಂದಲೂ ಸಾಹಿತ್ಯದ ದೃಷ್ಟಿಯಿಂದಲೂ ನೋಡುವ ಆಚಾರ್ಯ ಕೃತಿ 'ಅಲ್ಲಮ್ಮ ಮತ್ತು ಶೈವ ಪ್ರತಿಭೆ' (1999). ವಿಮರ್ಶೆಯ ಹೊಸ ನೆಲೆಗಳನ್ನು ತೆರೆದಿಟ್ಟ ಕೃತಿ 'ಸಂಸ್ಕೃತಿ ಕಥನ ' (2001).

ಪಾಶ್ಚಾತ್ಯ ಸಾಹಿತ್ಯ ಮಾರ್ಗದರ್ಶಿ ಸಂಪುಟ 1 - ಗ್ರೀಕ್ ಸಾಹಿತ್ಯ (1981), ವಸಂತ ಸ್ಮೃತಿ (ಪರ್ಶಿಯನ್ ಸೂಫಿ ಕವಿ ರೂಮಿಯ ಕಾವ್ಯಾನುವಾದ 1992), ಉರ್ದು ಸಾಹಿತ್ಯ ಸಂಕಲನ 1990, ದಿ ಫೇಮಿಂಗ್ ಫ್ಲೀಟ್ (1993, ದಲಿತ ಚಳವಳಿ ಕುರಿತ ಪುಸ್ತಕ) - ಇವು ಇತರ ಪ್ರಕಟಿತ ಕೃತಿಗಳು. ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಹಲವು ವಿಚಾರ ಸಂಕಿರಣಗಳಲ್ಲಿ ಇವರು ತಮ್ಮ ಪ್ರೌಢ ಚಿಂತನೆಗಳನ್ನು ಪ್ರಕಟಿಸಿದ್ದಾರೆ. ನಿರ್ಲಕ್ಷಿತ ಸಾಂಸ್ಕೃತಿಕ ವಾಚಿಕೆಗಳ ಪುನರ್ ವ್ಯಾಖ್ಯಾನದ ಕಾಳಜಿ ಹೊಂದಿದ್ದ ಇವರು ಸಮಸ್ತ ಜ್ಞಾನವೂ ಒಂದು ಬಗೆಯ ಕಥನವೇ ಮತ್ತು ಎಲ್ಲಾ ಜ್ಞಾನಗಳನ್ನು ಸಾಹಿತ್ಯ ಮೀಮಾಂಸೆಯ ಮೂಲಕ ಪ್ರವೇಶಿಸಲು ಸಾಧ್ಯ ಎಂಬ ನಿಲುವುಳ್ಳವರಾಗಿದ್ದರು. ವಿಮರ್ಶೆಯ ಸಂದರ್ಭದಲ್ಲಿ ವಸ್ತುನಿಷ್ಠ ದೃಷ್ಟಿಕೋನ ಮತ್ತು ತಟಸ್ಥ ಮನೋಭಾವ ಹೊಂದಿದ್ದ ಇವರು ವ್ಯಕ್ತಿ ವಿಶಿಷ್ಟ ಲೋಕಜ್ಞಾನ, ಮಾರ್ಕ್ಸ್ ವಾದೀ ಚಿಂತನೆ, ಫ್ರಾಯ್ಡ್ ಚಿಂತನೆ ಮತ್ತು ಭಾರತೀಯ ಚಿಂತನೆಗಳಿಂದ ಪಡೆದ ಜ್ಞಾನವನ್ನು ತಮ್ಮ ಬರೆವಣಿಗೆಯಲ್ಲಿ ಧಾರೆ ಎರೆದಿದ್ದಾರೆ.

ಕನ್ನಡದ ಮೂಲಕವೇ ಸಮಸ್ತ ವಿಶ್ವವನ್ನು ಕಂಡುಕೊಳ್ಳುವ ಮಹತ್ವಾಕಾಂಕ್ಷೆಯ ಅಕ್ಷರ ಚಿಂತನ ಮಾಲೆಯ ಸಂಪಾದಕರಾಗಿ ಸತ್ಯದ ನವದರ್ಶನ, ಆಶೀಶ್‌ನಂದಿ ವಿಚಾರಗಳು, ವಾಕ್ಯಪದೀಯ, ದಾರಾಶಿಖೊ,

ದಾವ್‌ದಜಂಗ್, ಅಭಿನವಗುಪ್ತ, ಭಾರತೀಯ ಸ್ತ್ರೀವಾದ, ಆನಂದಕುಮಾರಸ್ವಾಮಿ, ಪ್ರತಿಭೆಯ ಒಂದು ಪ್ರವಾಹ ಮೊದಲಾದ ಅನೇಕ ಅಮೂಲ್ಯ ಪುಸ್ತಿಕೆಗಳನ್ನು ಹೊರತಂದಿದ್ದಾರೆ.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರಕಿದ್ದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ ಇವು ಮುಖ್ಯವಾದವು. (ಡಿ.ಕೆ.ಯು.)

**ನಾಗಲಾಪುರ :** ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ದಕ್ಷಿಣದಲ್ಲಿ ಮಾಯಸಂದ್ರದಿಂದ ಸು. 8 ಕಿಮೀ ದೂರದಲ್ಲಿರುವ ಒಂದು ಚಿಕ್ಕ ಹಳ್ಳಿ. ಹೊಯ್ಸಳರ ಕಾಲದ ಅಗ್ರಹಾರ. ಇತರ ಹೊಯ್ಸಳ ಅಗ್ರಹಾರಗಳಲ್ಲಿರುವಂತೆ ಇಲ್ಲಿಯೂ ಊರ ನಡುವೆ ಒಂದು ವಿಷ್ಣುದೇವಾಲಯ, ಈಶಾನ್ಯಕ್ಕೆ ಒಂದು ಶಿವದೇವಾಲಯ, ಅದರ ಮುಂದೆ ಒಂದು ಕೆರೆ ಇವೆ. ಅಗ್ರಹಾರದ ನಿರ್ಮಾಣದ ಕಾಲ ದೇವಾಲಯಗಳನ್ನು ಕಟ್ಟಿಸಿದವರ ಹೆಸರು ತಿಳಿದಿಲ್ಲ. ದೇವಾಲಯಗಳ ನಿರ್ಮಾಣದ ರೀತಿ ಮತ್ತು ಅಲ್ಲಿನ ಕೆಲವು ಮೂರ್ತಿಗಳನ್ನು ಕಂಡರಿಸಿರುವ ಶಿಲ್ಪಿಯ ಹೆಸರಿನಿಂದ ಅಗ್ರಹಾರ ಮತ್ತು ದೇವಾಲಯಗಳ ನಿರ್ಮಾಣದ ಕಾಲವನ್ನು ಹದಿಮೂರನೆಯ ಶತಮಾನವೆಂದು ಗುರುತಿಸಬಹುದು.

ಇಲ್ಲಿನ ಚನ್ನಕೇಶವ ಮತ್ತು ಕೇದಾರೇಶ್ವರ ದೇವಾಲಯಗಳು ಸಂಪೂರ್ಣವಾಗಿ ವಿಕಾಸಗೊಂಡ ಹೊಯ್ಸಳ ಶೈಲಿಯಲ್ಲಿ ನಿರ್ಮಿತವಾದ ಅಲಂಕರಣಪೂರ್ಣವಾದ ಕಿರುದೇವಾಲಯಗಳು, ಈಗ ಇವು ಬಹುಮಟ್ಟಿಗೆ ಶಿಥಿಲವಾಗಿವೆ. ಒಂದೇ ವಿನ್ಯಾಸವನ್ನುಳ್ಳ ಈ ದೇವಾಲಯಗಳಲ್ಲಿ ಗರ್ಭಗೃಹ, ಸುಕನಾಸಿ ನವರಂಗಗಳಿದ್ದು ಬಹುಶಃ ಮೊದಲು ಇದ್ದಿರಬಹುದಾದ ಮುಖಭದ್ರ ಈಗ ಇಲ್ಲವಾಗಿದೆ. ಪೂರ್ವ ಮುಖವಾಗಿರುವ ಈ ದೇವಾಲಯಗಳಲ್ಲಿ ಶಿವ ದೇವಾಲಯದ ಪ್ರವೇಶದ್ವಾರ ಮಾತ್ರ ದಕ್ಷಿಣಕ್ಕಿದೆ.

ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ದೇವಾಲಯಗಳು ಜಗತಿಯ ಮೇಲೆ ನಿರ್ಮಿತವಾಗಿದ್ದು ಹೊರಗೋಡೆಗಳ ಬುಡದಲ್ಲಿ ಆನೆ, ಕುದುರೆ, ಬಳ್ಳಿ ಸುರುಳಿ, ಮಕರ, ಹಂಸಗಳ ಸಾಲುಗಳನ್ನು ಕಡೆದಿರುವ ಪಟ್ಟಿಕೆಗಳಿವೆ. ಪೌರಾಣಿಕ ಕಥೆಗಳನ್ನು ಕಂಡರಿಸಿರಬೇಕಾಗಿದ್ದ ನಡುವಣ ಪಟ್ಟಿಕೆಯ ಮೇಲೆ ಯಾವ ಕಂಡರಣೆಯೂ ಇಲ್ಲ. ಗೋಡೆಗಳ ಮೇಲೆ ನುಗ್ಗೇಹಳ್ಳಿ, ಅರಳಗುಪ್ಪೆ, ಹೊಸಹೊಳಲು, ಬಸರಾಳು ಮೊದಲಾದ ಕಡೆ ಇರುವ ದೇವಾಲಯಗಳ ಗೋಡೆಗಳ ಮೇಲಿನ ಮೂರ್ತಿಗಳನ್ನು ನೆನಪಿಗೆ ತರುವ ಲತಾವಿತಾನಗಳ ಕೆಳಗೆ ಸುಂದರವಾಗಿ ಬಿಡಿಸಿರುವ ಮೂರ್ತಿಗಳ ಸಾಲುಗಳನ್ನು ನೋಡಬಹುದು. ಆದರೆ ಇಲ್ಲಿನ ಚನ್ನಕೇಶವ ದೇವಾಲಯದ ಹೊರಗೋಡೆಗಳ ಮೂರ್ತಿಗಳನೇಕವನ್ನು ಪೂರ್ಣವಾಗಿ ಕಂಡರಿಸಿಲ್ಲ. ಕೆಲವಂತೂ ಇನ್ನೂ ಕಂಡರಣೆಯ ಆರಂಭ ಹಂತದಲ್ಲಿಯೇ ಇವೆ. ಕೇಶವ ದೇವಾಲಯದ ಗೋಡೆಗಳ ಮೂರ್ತಿಗಳಲ್ಲಿ ಪರವಾಸುದೇವ, ನರಸಿಂಹ, ವರಾಹ, ಲಕ್ಷ್ಮೀನಾರಾಯಣ, ಹಯಗ್ರೀವ, ಯೋಗನಾರಾಯಣ ಮೊದಲಾದ ವಿಷ್ಣುವಿನ ಹಲವು ರೂಪಗಳೂ ಬ್ರಹ್ಮ, ದಕ್ಷಿಣಾಮೂರ್ತಿ, ಇಂದ್ರ ಮತ್ತು ಶಚಿ, ಲಕ್ಷ್ಮಿ, ದುರ್ಗಾ, ಸರಸ್ವತಿ, ಮೋಹಿನಿ, ಮಹಿಷಾಸುರಮರ್ದಿನಿ ಮೊದಲಾದವೂ ಇವೆ. ಕೇದಾರೇಶ್ವರ ದೇವಾಲಯದ ಗೋಡೆಯ ಮೇಲೆ ಗಜಾಸುರಮರ್ದನ, ತಾಂಡವೇಶ್ವರ, ದಕ್ಷಿಣಾಮೂರ್ತಿ, ಉಮಾಮಹೇಶ್ವರ, ವೃಷಭಾರೂಢ ಮೊದಲಾದ ಶಿವನ ರೂಪಗಳೂ ಬ್ರಹ್ಮ, ವಿಷ್ಣು, ಭೈರವ, ಅರ್ಜುನ, ಮನ್ಮಥ, ದುರ್ಗಾ, ಸರಸ್ವತಿ, ಮೋಹಿನಿ ಮೊದಲಾದ ಇತರ ಮೂರ್ತಿಗಳೂ ಇವೆ. ಈಶ್ವರ ದೇವಾಲಯದ ಕೆಲವು ಮೂರ್ತಿಗಳನ್ನು ಕಡೆದವನು ಸಿಗೋಜನ ಮಗ ಬೈಚೋಜ, ಬಹುಶಃ 1246ರಲ್ಲಿ ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದ ಹಲವು ಮೂರ್ತಿಗಳನ್ನು ಕಂಡರಿಸಿದ ನಂದಿಯ ಬೈಚೋಜನೇ ಈತನಾಗಿರಬೇಕು.

ಮೂರ್ತಿಗಳ ಸಾಲಿನ ಮೇಲುಭಾಗದಲ್ಲಿರುವ ಲೋವೆಯ ಮುಂಭಾಗದಲ್ಲಿ ತೋರಣದಂತೆ ಒಂದು ಸಾಲು ಕಮಲದ ಮೊಗ್ಗುಗಳನ್ನು ಇಳಿಬಿಟ್ಟಿದೆ. ಲೋವೆಯಿಂದ ಮೇಲೆ ಗೋಡೆಯ ಮೇಲ್ಭಾಗದಲ್ಲಿ ಜೋಡಿ ಅಥವಾ ಒಂಟಿ ಅರೆಗಂಬಗಳ ಮೇಲೆ ವಿವಿಧಾಗೃತಿಗಳ ಅರೆಗೋಪುರಗಳಿವೆ. ಗೋಪುರಗಳ ಬಹುಭಾಗ ಈಗ ಬಿದ್ದು ಹೋಗಿದೆ.

ಎರಡು ದೇವಾಲಯಗಳ ಒಳಗಣ ಅಲಂಕರಣಗಳೂ ಒಂದೇ ರೀತಿಯಲ್ಲಿದ್ದರೂ ಕೇದಾರೇಶ್ವರ ದೇವಾಲಯದ ಅಲಂಕರಣ ಹೆಚ್ಚು ಆಕರ್ಷಕವಾದುದು. ತಿರುಗಣೆಯಲ್ಲಿ ಕಡೆದ ನವರಂಗದ ಕಂಬಗಳು, ಮಣಿಹಾರಗಳು, ಕೀರ್ತಿಮುಖಗಳು, ಬೋದಿಗೆಯ ಸುತ್ತಲಿನ ಮಣಿತೋರಣಗಳಿಂದ ತುಂಬಿ ಲಾವಣ್ಯಮಯವಾಗಿವೆ. ಆಳವಾದ ಭುವನೇಶ್ವರಿಗಳಿರುವ ನವರಂಗಗಳ ಒಳಚಾವಣಿಯ ಅಂಕಣಗಳು ಬಗೆ ಬಗೆಯ ಕುಸುರಿಕೆಲಸಗಳಿಂದ ತುಂಬಿವೆ. ಅದರಲ್ಲಿಯೂ ಕೇದಾರೇಶ್ವರ ದೇವಾಲಯದ ನವರಂಗದ ನಡುವಣ ದೊಡ್ಡ ಅಂಕಣದ ಆಳವಾದ ಭುವನೇಶ್ವರಿಯು ನಡುವಣ ನೀಳವಾದ ಬಾಳೆಯ ಮೋತೆ, ಸುತ್ತಣ ಬಗೆಬಗೆಯ ಶಿಲ್ಪಗಳಿಂದ ಕೂಡಿ ಅತ್ಯಂತ ಮನೋಜ್ಞವಾಗಿದೆ.

ಈ ದೇವಾಲಯಗಳು ಹೊಯ್ಸಳ ಶೈಲಿಯ ಕೊನೆಯ ಹಂತದ ಅಲಂಕಾರಮಯವಾದ ದೇವಾಲಯಗಳಲ್ಲಿ ಮೊದಲ ದರ್ಜೆಗೆ ಸೇರಿದುವೆನ್ನಬಹುದು. (ಎಂ.ಎಚ್.)

**ನಾಗವರ್ಮ I :** ಸು.990. ಶಾಸನಕವಿಗಳನ್ನು ಬಿಟ್ಟರೆ ಸದ್ಯಕ್ಕೆ ಕನ್ನಡ ಸಾಹಿತ್ಯದ ಮೊಟ್ಟಮೊದಲನೆಯ ಬ್ರಾಹ್ಮಣ ಕವಿ. ಛಂದೋಂಬುಧಿ ಕರ್ನಾಟಕ ಕಾದಂಬರಿ ಎಂಬ ಗ್ರಂಥಗಳ ಕರ್ತೃ. ಈ ಎರಡು ಕೃತಿಗಳನ್ನೂ ಒಬ್ಬನೇ ನಾಗವರ್ಮ ರಚಿಸಿದನೇ ಅಥವಾ ಬೇರೆ ಬೇರೆ ನಾಗವರ್ಮರು ರಚಿಸಿದರೇ ಎಂಬುದು ಸಾಕಷ್ಟು ಚರ್ಚೆಗೀಡಾಗಿದೆ. ಇವೆರಡೂ ಏಕಕರ್ತೃಕವೆಂದು ಸದ್ಯಕ್ಕೆ ಭಾವಿಸಬೇಕಾಗಿದೆ. ಕವಿಯ ಬಗ್ಗೆ ಛಂದೋಂಬುಧಿಯಿಂದ ತಿಳಿದುಬರುವ ಸಂಗತಿಗಳಿಗೂ ಕರ್ನಾಟಕ ಕಾದಂಬರಿಯಿಂದ ತಿಳಿದುಬರುವ ಸಂಗಿತಿಗಳಿಗೂ ಸಂಪೂರ್ಣ ಹೊಂದಾಣಿಕೆಯಿಲ್ಲ. ಚಂದ್ರನೆಂಬ ರಾಜ ಕವಿಗೆ ಆಶ್ರಯದಾತನಾಗಿದ್ದನೆಂಬುದೂ ಭೋಜರಾಜನು ಕವಿಗೆ ಕೆಲವು ಜಾತ್ಯಶ್ವಗಳನ್ನು ಕೊಟ್ಟನೆಂಬುದೂ ಕಾದಂಬರಿಯಿಂದ ತಿಳಿದುಬರುವ ಅಂಶಗಳು. ಕವಿ ವೈಯ್ಯಾಡಿಯವನೆಂಬುದು ಇವನ ಪೂರ್ವಿಕರು ವ್ಯಂಗಿಯ ವೈದಿಕ ಬ್ರಾಹ್ಮಣರೆಂಬುದು ಇವನು ಯುದ್ಧ ವೀರನಾಗಿದ್ದನೆಂಬುದು ಛಂದೋಬುಧಿಯಿಂದ ತಿಳಿದು ಬರುವ ಅಂಶಗಳು. (ಸಿ.ಪಿ.ಕೆ.)

ಛಂದೋಂಬುಧಿ ದೊರೆತಿರುವ ಕನ್ನಡ ಛಂದೋ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವೂ ಪ್ರಸಿದ್ಧವೂ ಪ್ರಾಮಾಣಿಕವೂ ಆದ ಗ್ರಂಥ. ಇದರಲ್ಲಿ ಒಟ್ಟು 6 ಅಧಿಕಾರಗಳಿವೆ. ಸಂಜ್ಞಾಪ್ರಕರಣವನ್ನು ಕುರಿತ ಪ್ರಥಮಾಧಿಕಾರದಲ್ಲಿ ಗಣಗಳು, ಗುರುಲಘುಗಳು, ಯತಿ, ಉಕ್ತಿ ಮೊದಲಾದ 26 ಛಂದಸ್ಸುಗಳು, ಅಚ್ಚ ಕನ್ನಡ ಪದ್ಯ ಜಾತಿಗಳ ಹೆಸರುಗಳು - ಇವನ್ನು ಪ್ರಸ್ತಾಪಿಸಿದೆ. ಸಮವೃತ್ತ ವಿವರಣವೆಂಬ ದ್ವಿತೀಯಾಧಿಕಾರದಲ್ಲಿ ಉಕ್ತಿಯಿಂದ ಉತ್ಕೃತಿಯ ವರೆಗಿನ 26 ಛಂದಸ್ಸುಗಳಲ್ಲಿ ಒಂದೊಂದರಲ್ಲಿಯೂ ಹುಟ್ಟುವ ಅನೇಕ ವರ್ಣವೃತ್ತಭೇದಗಳಲ್ಲಿ ಕೆಲವನ್ನು ಮಾತ್ರ ಲಕ್ಷಣ-ಲಕ್ಷ್ಯ ಸಮೀಕರಣ ವಿಧಾನದಿಂದ ವಿವರಿಸಿದೆ. ಮಾಲಾವೃತ್ತಾರ್ಧಸಮವಿಷಮಾದಿವೃತ್ತ ಪ್ರಕರಣವೆಂಬ ತೃತೀಯಾಧಿಕಾರದಲ್ಲಿ ಮಾಲಾ ಅರ್ಧಸಮವೃತ್ತ, ವಿಷಮವೃತ್ತ, ಶ್ಲೋಕ, ವೈತಾಳೀಯಾದಿಗಳು, ಜಾತಿಗಾಥೆ, ರಗಳೆ, ದಂಡಕ - ಇವನ್ನು ಭೇದಪ್ರಭೇದಗಳ ಸಹಿತವಾಗಿ ಲಕ್ಷಣ ಲಕ್ಷ್ಯವಿಧಾನದಿಂದ ಕಂದಪದ್ಯಗಳಲ್ಲಿ ವಿವರಿಸಿದೆ. ಕಂದಾದಿಮಾತ್ರಾವೃತ್ತ (ಜಾತಿ) ಪ್ರಕರಣವೆಂಬ ಚತುರ್ಥಾಧಿಕಾರದಲ್ಲಿ ಕಂದ, ಆರ್ಯೆ, ಗೀತಿಕೆ, ಸಂಕೀರ್ಣಕ ಮತ್ತು ದುವಯಿ - ಇವುಗಳ ಲಕ್ಷಣವನ್ನು ಕಂದಪದ್ಯಗಳಲ್ಲಿ ನಿರೂಪಿಸಿದೆ. ಕರ್ನಾಟಕ ವಿಷಯ ಜಾತಿ ವೃತ್ತಪ್ರಕರಣವೆಂಬ ಪಂಚಮಾಧಿಕಾರದಲ್ಲಿ ಬಹ್ಮ, ವಿಷ್ಣು, ರುದ್ರಗಣಗಳ ಸ್ವರೂಪವನ್ನೂ ಐದು ಅಕ್ಕರಗಳನ್ನೂ ತ್ರಿಪದೀ ಭೇದಗಳನ್ನೂ ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ, ಉತ್ಸಾಹ, ಷಟ್ಪದಿ - ಎಂಬಿವನ್ನೂ ಲಕ್ಷಣ-ಲಕ್ಷ್ಯಪೂರ್ವಕವಾಗಿ ವಿವರಿಸಿದೆ. ದೇಶೀಯ ಕನ್ನಡ ಛಂದಸ್ಸಿನ ಚರಿತ್ರೆಗೆ

ಈ ಪ್ರಕರಣ ತುಂಬು ಉಪಯುಕ್ತವಾದುದಾಗಿದೆ. ಷಟ್ಪ್ರತ್ಯಯವಿವರಣ ಪ್ರಕರಣವೆಂಬ ಷಷ್ಠಾಧಿಕಾರದಲ್ಲಿ ಪ್ರಸ್ತಾರ ಮುಂತಾದ 6 ಪ್ರತ್ಯಯಗಳನ್ನು (ಎಂದರೆ ಛಂದಸ್ಸಂಬಂಧಿಯಾದ ಗಣಿತಾಂಶಗಳನ್ನು) ನಿರೂಪಿಸಿದೆ. ನಾಗವರ್ಮ ಸಂಸ್ಕೃತ ಛಂದೋವಿಷಯಗಳನ್ನು ನಿರೂಪಿಸುವಲ್ಲಿ ಪಿಂಗಲ, ಜಯದೇವ ಮುಂತಾದವರ ಛಂದೋಗ್ರಂಥಗಳನ್ನು ಬಳಸಿಕೊಂಡಿದ್ದಾನೆ ಎನ್ನುವುದಕ್ಕೆ ಆಧಾರವಿದೆ. ಹೀಗೆಯೇ ಕನ್ನಡ ಛಂದಸ್ಸಿನ ವಿಷಯದಲ್ಲಿಯೂ ಮಾಡಿರಬಹುದೇ ಎನ್ನುವುದನ್ನು ತಿಳಿಯಲು ಸರಿಯಾದ ಆಧಾರಗಳಿಲ್ಲ. ಒಟ್ಟಿನಲ್ಲಿ ನಾಗವರ್ಮನು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಛಂದಸ್ಸುಗಳಲ್ಲಿ ಅಭ್ಯಾಸಿಗಳು ತಿಳಿಯಬೇಕಾಗಿರುವ ಅತ್ಯಗತ್ಯವಾದ ಎಲ್ಲ ಅಂಶಗಳನ್ನೂ ಬಹುಮಟ್ಟಿಗೆ ಸಂಗ್ರಹಿಸಿದ್ದಾನೆಂದು ಹೇಳಬಹುದು. ಈಗಂತೂ ಕನ್ನಡ ಛಂದಸ್ಸಿನ ಚರಿತ್ರೆಗೆ ಛಂದೋಂಬುಧಿಯೇ ಅಡಿಗಲ್ಲು ಮತ್ತು ಆಧಾರ ಭೂತವಾದ ಏಕೈಕ ಗ್ರಂಥ. ಸಂಸ್ಕೃತ, ಲಾಕ್ಷಣಿಕ ಜಯಕೀರ್ತಿ (ಸು. 11ನೆಯ ಶತಮಾನ), ತೆಲುಗು ಲಾಕ್ಷಣಿಕ ಭೀಮಕವಿ (ಸು. 13-14ನೆಯ ಶತಮಾನ), ಕನ್ನಡ ಲಾಕ್ಷಣಿಕ ಈಶ್ವರ ಕವಿ (ಸು. 15ನೆಯ ಶತಮಾನ) ಮೊದಲಾದವರು ಈ ಗ್ರಂಥವನ್ನು ಅಲ್ಲಲ್ಲಿ ಅನುಸರಿಸಿರುವುದಕ್ಕೆ ಸಾಕ್ಷ್ಯಗಳು ದೊರೆಯುವುದು ಈ ಗ್ರಂಥ'ದ ವ್ಯಾಪಕತೆ ಹಾಗೂ ಜನಪ್ರಿಯತೆಗಳಿಗೆ ಸಾಕ್ಷಿಯಾಗಿದೆ. (ಟಿ.ವಿ.ವಿ.)

ಕರ್ನಾಟಕ ಕಾದಂಬರಿ ಚಂಪೂಕಾವ್ಯ. ಸಂಸ್ಕೃತದಲ್ಲಿ ಬಾಣ ಮತ್ತು ಅವನ ಮಗ ಭೂಷಣನಿಂದ ರಚಿತವಾದ ಕಾದಂಬರಿ ಎಂಬ ಗದ್ಯಕಾವ್ಯದ ಅನುವಾದ. ಸಂಸ್ಕೃತ ಕಾದಂಬರಿಯದು ಲಯಾನ್ವಿತವಾದ ಗದ್ಯವಾದುದರಿಂದ ನಾಗವರ್ಮನಿಗೆ ಅದನ್ನು ಪದ್ಯರೂಪಕ್ಕೆ ತಿರುಗಿಸುವುದು ಸುಲಭವೂ ಉಚಿತವೂ ಆಯಿತು. ಶೃಂಗಾರಾದ್ಭುತ ಪ್ರಧಾನವಾದ ಕಾದಂಬರಿಯ ಕಥೆಯ ಸ್ವರೂಪಕ್ಕೆ ಶುದ್ಧಪದ್ಯವೇ ತಕ್ಕ ಮಾಧ್ಯಮವೆಂಬುದನ್ನು ಕವಿ ಮನಗಂಡದ್ದು ಸ್ತುತ್ಯ. ಇವನು ಚಂಪೂ ರೂಪವನ್ನು ಆರಿಸಿಕೊಂಡುದಕ್ಕೆ, 10ನೆಯ ಶತಮಾನ ಚಂಪೂಯುಗವಾಗಿದ್ದುದೂ ಒಂದು ಕಾರಣವೆಂದು ತೋರುತ್ತದೆ. ನಾಗವರ್ಮನ ಪದ್ಯ ಮಾಧ್ಯಮ ಮೂಲಕಾವ್ಯದ ಕೆಲವು ದೋಷಗಳನ್ನೂ ಅತಿರೇಕಗಳನ್ನೂ ನಿವಾರಿಸಿಕೊಳ್ಳಲು ಸಹಾಯಕವಾಗಿದೆ. ಬಾಣನ ವಾಗ್ವೈಪರೀತ್ಯ, ವರ್ಣನಾಬಾಹುಳ್ಯ, ಸಮಾಜ ಜಟಿಲತೆಗಳಿಗೆ ಅದರಿಂದ ಕಡಿವಾಣ ಹಾಕಿದಂತಾಗಿದೆ. ಮೂಲದ ಸೌಂದರ್ಯ ಸ್ವಾರಸ್ಯ ಜೀವಾಳಗಳಿಗೆ ಭಂಗ ಬರದಂತೆ ನಾಗವರ್ಮ ಭಾಷಾಂತರ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಮೂಲಭೂತವಾಗಿ ಇವನದು ಭಾಷಾಂತರವಾದರೂ ಮೂಲವನ್ನು ಮೀರದ ಸ್ವೋಪಜ್ಞತೆಯನ್ನು ಇವನು ಉದ್ದಕ್ಕೂ ಪ್ರಕಟಿಸಿದ್ದಾನೆ. ಮೂಲಭಾಗಗಳ ವಿಸ್ತರಣ, ಸ್ವತಂತ್ರ ವರ್ಣನಾತ್ಮಕ ಪದ್ಯಗಳ ಸೇರ್ಪಡೆ, ಕೆಲವು ಗೌಣವಾದ ಮಾರ್ಪಾಟುಗಳು ಕನ್ನಡ ಕಾದಂಬರಿಯಲ್ಲಿ ಕಂಡುಬುರುತ್ತವೆ.

ಕರ್ನಾಟಕ ಕಾದಂಬರಿ ಮುಖ್ಯವಾಗಿ ಒಂದು ಸಂಗ್ರಹಾನುವಾದ. ಮೂಲ ಕೃತಿಯ ಹೂರಣಕ್ಕೆ ಲೋಪವೊದಗದಂತೆ ಅದನ್ನು ಕವಿ ಕುಗ್ಗಿಸಿದ್ದಾನೆ. ಇವನು ಸೇರಿಸಿರುವುದಕ್ಕಿಂತ ಬಿಟ್ಟಿರುವುದು ಹೆಚ್ಚು. ಮೂಲದ ಅನೌಚಿತ್ಯಗಳನ್ನು ಇವನು ಹೋಗಲಾಡಿಸಿದ್ದಾನೆ; ಒಮ್ಮೊಮ್ಮೆ ಮೂಲದ ಒಳ್ಳೆಯ ಭಾಗಗಳನ್ನು ಕಳೆದಿರುವುದೂ ಉಂಟು. ಅಂತೂ ಇವನ ಸಂಗ್ರಹಕಾರ್ಯದಲ್ಲಿ ವೈವಿಧ್ಯವಿದೆ. ಯಥಾವತ್ತಾದ ಅನುವಾದ, ಸಂಗ್ರಹಾನುವಾದ, ವಿಸ್ತಾರಾನುವಾದ, ಭಾವಾನುವಾದ ಮುಂತಾದ ಭಾಷಾಂತರ ಪ್ರಕಾರಗಳನ್ನೆಲ್ಲ ಒಳಗೊಂಡಿರುವ ಕರ್ನಾಟಕ ಕಾದಂಬರಿ ಭಾಷಾಂತರ ಕಲೆಯ ವಿದ್ಯಾರ್ಥಿಗಳಿಗೆ ಅಧ್ಯಯನಯೋಗ್ಯವಾದ ಕೃತಿಯಾಗಿದೆ. ಅದರಲ್ಲಿ ಸೋಲಿನ ಅಂಶಗಳೂ ಇವೆ; ಆದರೆ ಅದು ಗೆಲುವನ್ನು ವಿಶೇಷವಾಗಿ ಸಾಧಿಸಿ ಅತ್ಯುತ್ತಮವಾದ ಅನುವಾದವೆನಿಸಿದೆ.

ಕಾದಂಬರಿ ತುಂಬ ತೊಡಕಾದ ಒಂದು ಪ್ರಣಯಕಥೆ'ಯನ್ನು ಹೇಳುತ್ತದೆ. ಅದು ಮಾನುಷ ಅತಿಮಾನುಷಗಳ ಸಮ್ಮಿಲನವನ್ನೊಳಗೊಂಡ ಒಂದು ಇಂದ್ರಜಾಲಸದೃಶವಾದ ಸ್ವಪ್ನಸಮಾನವಾದ ಜಗತ್ತು. ಅದರಲ್ಲಿ ಪುನರ್ಜನ್ಮ, ಶಾಪ ಮುಂತಾದ ಅಸಂಭಾವ್ಯವೆನಿಸುವ ಸಂಗತಿಗಳ ಸರಮಾಲೆಯನ್ನೇ ನೋಡುತ್ತೇವೆ. ಶೃಂಗಾರ ಅದರ ಪ್ರಮುಖ ರಸವಾದರೂ ಅದು ಉದಾತ್ತವಾದ ಶೃಂಗಾರ; ತಪಸ್ಸಿನಿಂದ ಪವಿತ್ರವೂ ಪಕ್ವವೂ ಆಗಿ ಪರಿಣಮಿಸುವಂಥ'ದು. ಈ ಕಾರಣದಿಂದ ಕಾದಂಬರಿ ವಿಶಿಷ್ಟದರ್ಶನಸಂಪನ್ನವಾಗಿ ಇತರ ಶೃಂಗಾರ ಕಾವ್ಯಗಳಿಂದ ವಿಭಿನ್ನವಾಗಿ ನಿಲ್ಲುತ್ತದೆ. ಮಹಾಶ್ವೇತೆ, ಕಾದಂಬರಿ, ಪುಂಡರೀಕ, ಚಂದ್ರಪೀಡ ಈ - ಕಾವ್ಯದ ಪ್ರಧಾನ ಪಾತ್ರಗಳು. ಕಾದಂಬರಿಯ ಹೆಸರನ್ನು ಕವಿ ಕಾವ್ಯಕ್ಕೆ ಕೊಟ್ಟಿದ್ದರೂ ಮಹಾಶ್ವೇತೆಯೇ ಕಾವ್ಯದ ನಾಯಿಕೆ. ಅವಳು ಪ್ರೇಮವನ್ನು ತಪಸ್ಸಿನ ಸ್ತರಕ್ಕೇರಿಸಿದ ಮಹಾಮಹಿಳೆ.

ಕರ್ನಾಟಕ ಕಾದಂಬರಿ ಉಪಲಬ್ಧ ಕನ್ನಡಕಾವ್ಯಗಳಲ್ಲಿ ಮೊದಲನೆಯ ಭಾಷಾಂತರವಾಗಿದೆ. ಅಂತೆಯೇ ಪ್ರಪ್ರಥಮ ಶೃಂಗಾರಕಾವ್ಯವಾಗಿದೆ. ಮುಂದೆ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸುವ ಕವಿಗಳಿಗೆ, ಪ್ರಣಯ ಕಾವ್ಯಗಳನ್ನು ರಚಿಸುವವರಿಗೆ ನಾಗವರ್ಮ ಮಾರ್ಗದರ್ಶಕನಾದುದರಲ್ಲಿ ಸಂದೇಹವಿಲ್ಲ. ಇವನ ಪ್ರಭಾವ ಮುಂದಿನ ಅನೇಕ ಕನ್ನಡ ಕವಿಗಳ ಮೇಲಾಗಿದೆ. ಬಿ.ಎಂ.ಶ್ರೀ. ಅವರು ಹೇಳುವಂತೆ ಪಂಪಾದಿಗಳು ಭಾರತ ರಾಮಾಯಣಗಳನ್ನು, ತೀರ್ಥಂಕರ ಪುರಾಣಗಳನ್ನು ಕೊಟ್ಟರೆ, ನಾಗವರ್ಮ ಬಾಣನನ್ನು ಕನ್ನಡಿಗರಿಗೆ ಪರಿಚಯಮಾಡಿಸಿ ಪ್ರೇಮ ಶೃಂಗಾರದ ರಸದೂಟವನ್ನು ಒದಗಿಸಿದ್ದಾನೆ.

ಕಾದಂಬರಿ ಮಹಾಕಾವ್ಯವಲ್ಲ; ಆದರೆ ಮಹಾಕಾವ್ಯಕ್ಕೆ ಸಮೀಪವಾಗುವ ಒಂದು ಶ್ರೇಷ್ಠ ರೊಮಾನ್ಸ್. (ಸಿ.ಪಿ.ಕೆ.)

**ನಾಗ'ವ'ರ್ಮ II:** ಸು.1042. ವರ್ಧಮಾನ ಪುರಾಣ, ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ, ಛಂದೋವಿಚಿತಿ, ಅಭಿಧಾನವಸ್ತು ಕೋಶ ಎಂಬ ಗ್ಕಂಥಗಳ ಕರ್ತೃ. ಛಂದೋವಿಚಿತಿಯ ಹೊರತು ಉಳಿದ ಎಲ್ಲ ಗ್ರಂಥಗಳೂ ದೊರೆತು ಪ್ರಕಟವಾಗಿವೆ. ಈ ರಚನೆಗಳಿಂದ ಈತ ಕವಿಯೂ ಆಲಂಕಾರಿಕನೂ ವ್ಯಾಕರಣ ಮತ್ತು ಛಂದಸ್ಸುಗಳಲ್ಲಿ ಉತ್ತಮ ಪಂಡಿತನೂ ನಿಘಂಟುಕಾರನೂ ಆಗಿರುವುದು ಕಂಡುಬರುತ್ತದೆ.

ಇತ್ತೀಚಿನವರೆಗೂ ನಾಗವರ್ಮನ ಕಾಲವನ್ನು ಸು. 1145 ಎಂದು ಕೆಲವರೂ ಇದಕ್ಕಿಂತ ಸ್ವಲ್ಪ ಹಿಂಚುಮುಂಚಿನ ಕಾಲವೆಂದು ಹಲವರೂ ಭಾವಿಸಿದ್ದರು. ಎ. ವೆಂಕಟಸುಬ್ಬಯ್ಯನವರು ಈತ 1015-42ರ ವರೆಗೆ ಆಳುತ್ತಿದ್ದ ಜಗದೇಕಮಲ್ಲನೆಂಬ (ಜಯಸಿಂಹ) ಚಾಳುಕ್ಯ ಚಕ್ರವರ್ತಿಯಲ್ಲಿ ಕಟಕೋಪಾಧ್ಯಾಯನಾಗಿದ್ದಿರಬೇಕು ಎಂದು ನಿರ್ಣಯಿಸಿದ್ದರು. ಬಹುಕಾಲದಿಂದ ಅಲಭ್ಯವಾಗಿದ್ದ ಈತನ ವರ್ಧಮಾನಪುರಾಣ ಈಗ ದೊರೆತಿದ್ದು ಇದರಲ್ಲಿ ಬರುವ ಕಾಲಸೂಚಿತ ಪದ್ಯದ ಆಧಾರದಿಂದ ಇವನ ಕಾಲ 1042 ಎಂದು ಖಚಿತವಾಗಿ ತಿಳಿಯುತ್ತದೆ.

ನಾಗವರ್ಮನ ತಂದೆ ವಿಪ್ರಕುಲಪ್ರದೀಪನಾದ ದಾಮೋದರ, ತಾಯಿ ವಿನಯಾಳಂಕೃತೆಯಾದ ವೀರಕಬ್ಬೆ, ವೀರಭಟ್ಟಾರಕರು ಇವನ ಗುರು. ಕವಿಗೆ ಸದ್ಗುಣಮಂಡನ, ಜಿನಮತವನಹಂಸ, ವಿಪ್ರವಂಶಾವತಂಸ, ಸಚ್ಚರಿತ್ರಾಭಿರಾಮ, ವಿನಯನಯನಿಧಾನ, ಸ್ವನುಗತಶುಭಶರ್ಮ, ಕವಿತಾಗುಣೋದಯ, ವಾಕ್ಯವಿನೋದ, ಸಹಜವತ್ಸಳ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ. ಕವಿ ಕರ್ಣಪೂರನಾದ ತನ್ನನ್ನು ವಸುಮತೀವಳಯವು ಪ್ರೀತಿಯಿಂದ ಸಕಳ ಕಳಾವಿದಂ ಮದವಿದೂರನುದಾರನಮತ್ಸರಂ ಗುಣಾಧಿಕನಭಿಮಾನತುಂಗನವದಾತಯಶಂ ವಿಭುಧೈಕವತ್ಸಳಂ ಸುಕವಿ ಸರಸ್ವತೀವದನಮಂಗಳದರ್ಪಣನೆಂದು ಕರೆಯುತ್ತಿತ್ತೆಂದು ಹೇಳಿಕೊಂಡಿದ್ದಾನೆ.

ಕವಿ ತಾನು ಕನ್ನಡದಲ್ಲಿ ಅಸಗ, ಗಜಗ, ಗುಣನಂದಿ, ಪೊನ್ನರಿಗೆ ಹಾಗೂ ಸಂಸ್ಕೃತದಲ್ಲಿ ಮಯೂರ, ಬಾಣ, ಕಾಳಿದಾಸಾದ್ಯರಿಗೆ ಸಮಾನನೆಂದು ಪ್ರಶಂಸಿಸಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಶ್ರೀವಿಜಯ, ನಾಗವರ್ಮ, ಪೊನ್ನ, ಪಂಪ, ರನ್ನ ಮತ್ತು ನಾಗದೇವರನ್ನು ಸ್ತುತಿಸಿದ್ದಾನೆ. ಈ ಪೂರ್ವಕವಿಸ್ತುತಿಯಲ್ಲಿ ಕಂಡುಬರುವ ನಾಗವರ್ಮನೆಂಬ ಕವಿ ವತ್ಸರಾಜಚರಿತೆಯನ್ನೂ ನಾಗದೇವನು ಸುಲೋಚನಾಚರಿತೆಯನ್ನೂ ಬರೆದಿದ್ದಾರೆಂಬುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿನೂತನ

ವಿಷಯವಾಗಿದೆ.

ವರ್ಧಮಾನ ಪುರಾಣ ಚಂಪೂಕಾವ್ಯ, ಇದರಲ್ಲಿ 16 ಆಶ್ವಾಸಗಳೂ 1134 ಪದ್ಯಗಳೂ ಇವೆ. ಕನ್ನಡ ಸಾಹಿತ್ಯದಲ್ಲಿ ದೊರೆತಿರುವ ವರ್ಧಮಾನಪುರಾಣಗಳಲ್ಲಿ ಇದೇ ಮೊದಲನೆಯದಾಗಿದೆ. ಇದಕ್ಕೆ ಮಹಾವೀರಚರಿತೆ. ಸನ್ಮತಿಚರಿತೆ, ವೀರವರ್ಧಮಾನಚರಿತೆ ಮೊದಲಾದ ಹೆಸರುಗಳೂ ಇವೆ. ಈ ಕೃತಿರಚನೆಗೆ ಜಿನಸೇನರ ಉತ್ತರಪುರಾಣ ಮತ್ತು ಅಸಗನ ವರ್ಧಮಾನಪುರಾಣ ಎಂಬ ಸಂಸ್ಕೃತ ಕೃತಿಗಳು ಆಧಾರವಾಗಿರಬಹುದು. ಅಲ್ಲದೆ ನಾಗವರ್ಮ ಕೆಲವು ಪ್ರಾಕೃತ ಕೃತಿಗಳಿಂದಲೂ ಉಪಕೃತನಾಗಿರಬಹುದು. ವಸ್ತುವಿನ್ಯಾಸದಲ್ಲಿ, ವರ್ಣನಾವೈಖರಿಯಲ್ಲಿ ಪಂಪ, ರನ್ನ ಮೊದಲಾದ ಪೂರ್ವ ಕನ್ನಡ ಕವಿಗಳಿಂದ ಬಹುಮಟ್ಟಿಗೆ ಪ್ರಭಾವಿತನಾಗಿದ್ದಾನೆ; ಹಾಗೂ ಸ್ವಪ್ರತಿಭೆಯಿಂದ ಹಲವು ರಸದಾಣಗಳನ್ನೂ ನಿರ್ಮಿಸಿ, ಸಹೃದಯರ ಮೆಚ್ಚುಗೆ ಪಡೆದಿದ್ದಾನೆ. ಕಾವ್ಯದಲ್ಲಿ ಉಪಜಾತಿ ಅನುಷ್ಟುಭ್, ಕ್ರೌಂಚಪದ, ಮಣಿಭೂಷಣ, ಮಾಲಭಾರಿಣಿ ಮೊದಲಾದ ಅತಿ ವಿರಳವಾದ ಛಂದೋಪ್ರಕಾರಗಳನ್ನು ಬಳಸಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಅಲಂಕಾರಶಾಸ್ತ್ರಗ್ರಂಥಗಳಲ್ಲಿಯೇ ಮೊದಲನೆಯದಾದ ಕಾವ್ಯಾವಲೋಕನ ನಾಗವರ್ಮನ ಬಹುಮುಖ ಪ್ರತಿಭೆಯ ರನ್ನಗನ್ನಡಿಯಾಗಿದೆ. ಸೂತ್ರಗಳು ಕಂದಪದ್ಯಗಳಲ್ಲಿ ರಚಿತವಾಗಿವೆ. ಇದರಲ್ಲಿ ಶಬ್ದಸ್ಮೃತಿ, ಕಾವ್ಯಮಲವ್ಯಾವೃತ್ತಿ, ಗುಣವಿವೇಕ, ರೀತಿ ಕ್ರಮ ರಸನಿರೂಪಣ, ಕವಿಸಮಯ ಎಂಬ ಐದು ಅಧಿಕರಣಗಳಿದ್ದು, ಇವುಗಳಲ್ಲಿ ಪ್ರಕರಣಗಳೆಂಬ ಒಳ ವಿಭಾಗಗಳೂ ಇವೆ. ಉದಾಹರಣೆಗಳನ್ನು ವಿವಿಧ ಕಾವ್ಯಗಳಿಂದ, ಶಾಸ್ತ್ರಗ್ರಂಥಗಳಿಂದ ಒದಗಿಸಲಾಗಿದೆ.

ಕರ್ನಾಟಕ ಭಾಷಾಭೂಷಣ ಕನ್ನಡ ವ್ಯಾಕರಣಗ್ರಂಥಗಳಲ್ಲಿ ಮೊದಲನೆಯದು. ಇದರಲ್ಲಿ ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ಧಿತ, ಆಖ್ಯಾತ, ಅವ್ಯಯ, ನಿಪಾತ ಎಂಬ 10 ಪರಿಚ್ಛೇದಗಳಿವೆ. ಸೂತ್ರಗಳು ಸಂಸ್ಕೃತ ಭಾಷೆಯಲ್ಲಿವೆ. ಒಟ್ಟು ಸೂತ್ರ ಸಂಖ್ಯೆ 269, ಸೂತ್ರಾರ್ಥ ವಿಶದತೆಗೆ ವೃತ್ತಿಯನ್ನು ಬರೆದು ಕನ್ನಡ ಭಾಷೆಯ ಉದಾಹರಣೆಗಳನ್ನು ಒದಗಿಸಲಾಗಿದೆ. ಗ್ರಂಥರಚನೆಯಲ್ಲಿ ಶರ್ವಶರ್ಮನ ಕಾತಂತ್ರ ವ್ಯಾಕರಣದ ಪ್ರಭಾವವಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಛಂದೋವಿಚಿತಿ ಇದುವರೆಗೆ ದೊರೆತಿಲ್ಲ. ಕಾವ್ಯಾವಲೋಕನದ 965ನೆಯ ಪದ್ಯದ ಉಲ್ಲೇಖದಿಂದ ಇದು ನಾಗವರ್ಮನ ಗ್ರಂಥವೆಂಬುದು ಸ್ಪಷ್ಟ. ಮೊದಲನೆಯ ನಾಗವರ್ಮ ಬರೆದಿರುವ ಛಂದೋಂಬುಧಿಯೇ ಈ ಗ್ರಂಥವೆಂದೂ ರತ್ನಮಂಜೂಷ ಎಂಬ ಪ್ರಾಚೀನ ಛಂದೋಗ್ರಂಥಕ್ಕೆ ಅದೇ ಭಾಷೆಯಲ್ಲಿ ಬರೆದಿರುವ ಭಾಷ್ಯವೇ ಛಂದೋವಿಚಿತಿ ಎಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಅಭಿಧಾನವಸ್ತುಕೋಶ ಕಂದವೃತ್ತಗಳ ರೂಪದಲ್ಲಿ ಕನ್ನಡದಲ್ಲಿ ರಚಿತವಾಗಿರುವ ನಿಘಂಟು. ಇದರಲ್ಲಿ ಸಂಸ್ಕೃತ ಪದಗಳಿಗೆ ಕನ್ನಡ ಅರ್ಥಗಳನ್ನು ವಿವರಿಸಲಾಗಿದೆ. ಅವಿಭಿನ್ನಾರ್ಥ (ಏಕಾರ್ಥ), ಸಾಮಾನ್ಯಾರ್ಥ, ನಾನಾರ್ಥ ಎಂಬ 3 ಕಾಂಡಗಳಿರುವ ಈ ನಿಘಂಟು ಕೆಲವು ಉಪವಿಭಾಗಗಳನ್ನು ಹೊಂದಿದೆ. ಒಂದನೆಯ ಕಾಂಡದಲ್ಲಿ ಸ್ವರ್ಗ, ಕಾಲ, ಸಂಸರಣ, ಸಲಿಲ, ಭೂ, ಕಾಲಾಯಸಾದಿ ಧಾತು, ವನ, ವೃಕ್ಷಾದಿ, ಮೃಗಪಕ್ಷಿ, ಪುರಗೃಹೋಪಕರಣಾದಿ, ಮನುಷ್ಯ, ದೇಹಾವಯವಾದಿ. ಭೂಷಣಾದಿ, ಸಮರಾದಿ, ಸಂಪ್ರಕೀರ್ಣ, ಪಶು, ಧಾನ್ಯ ಎಂಬ 16 ವರ್ಗಗಳಿವೆ. 2ನೆಯದರಲ್ಲಿ ವಿಶೇಷಣ, ವಿಶೇಷ್ಯ ಎಂಬ ಎರಡು ವರ್ಗಗಳಿವೆ. 3ನೆಯದರಲ್ಲಿ ನಾನಾರ್ಥ ಒಂದೇ ವರ್ಗವಿದೆ. ತನ್ನ ಈ ಕೋಶವನ್ನು ವರರುಚಿ, ಹಲಾಯುಧ, ಭಾಗುರಿ, ಶಾಶ್ವತ, ಅಮರಸಿಂಹ ಮೊದಲಾದ ಕೋಶಕರ್ತರು ತಂತಮ್ಮ ಕೋಶಗಳಲ್ಲಿ ಹೇಳಿರುವ ಸಂಗತಿಗಳನ್ನು ಸಂಗ್ರಹಿಸಿ ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಇದು ಸಂಸ್ಕೃತ ಮತ್ತು ಹಳಗನ್ನಡ ಕಾವ್ಯಗಳಲ್ಲಿ ಬಳಕೆಯಾಗುವ ಸಂಸ್ಕೃತ ಶಬ್ದಗಳ ಅರ್ಥಗಳನ್ನು ತಿಳಿಯಲೂ ಸಹಾಯ ಮಾಡುವ ಕೋಶವಾದರೂ ಕ್ವಚಿತ್ತಾಗಿ ದೇಶ್ಯಶಬ್ದಗಳ ಅರ್ಥಗಳನ್ನು ತಿಳಿಯಲೂ ಸಹಾಯಕವಾಗಿದೆ.

(ಬಿ.ಎಸ್.ಎಸ್.)

**ನಾಗವರ್ಮಾಚಾರ್ಯ :** ಸು. 1071. ಚಂದ್ರಚೂಡಾಮಣಿ ಶತಕ ಎಂಬ ಗ್ರಂಥದ ಕರ್ತೃ. ಈತ ಚಾಳುಕ್ಯರಾಜ ಭುವನೈಕಮಲ್ಲನ ಮಹಾಪ್ರಧಾನಿಯಾಗಿದ್ದ. ತಾನು ಉದಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದಂತೆಯೂ ತನಗೆ ಭಾಸ್ಕರನೆಂಬ (ಉದಯಾದಿತ್ಯನ ರಾಯಭಾರಿ) ಅಣ್ಣನಿದ್ದಂತೆಯೂ ಗ್ರಂಥದ ಕೊನೆಯಲ್ಲಿ ಹೇಳಿಕೊಂಡಿದ್ದಾನೆ. ಇವನು ಅದ್ವೈತಿಯೂ ದೊಡ್ಡ ಪಂಡಿತನೂ ಆಗಿದ್ದನೆಂದೂ ಬಲಿಪುರ ಮತ್ತು ಮುತ್ತೂರುಗಳಲ್ಲಿ ದೇವಾಲಯ, ಸಿದ್ಧತೀರ್ಥಗಳನ್ನು ಮಾಡಿಸಿದನೆಂದೂ ಈತನಿಗೆ ಗುಣಗಳ್ಪನೆಂಬ ಬಿರುದಿದ್ದಿತೆಂದೂ ಒಂದು ಶಾಸನ ತಿಳಿಸುತ್ತದೆ.

ಚಂದ್ರಚೂಡಾಮಣಿ ಶತಕ ಮತ್ತೇಭವಿಕ್ರೀಡಿತದಲ್ಲಿ ರಚಿತವಾಗಿದೆ. ಇದಕ್ಕೆ ಜ್ಞಾನಸಾರವೆಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಇದರಲ್ಲಿ 104 ವೃತ್ತಗಳಿದ್ದು ಪ್ರತಿಯೊಂದೂ ಚಂದ್ರಚೂಡಾಮಣಿ ಎಂಬ ಅಂಕಿತದಿಂದ ಮುಗಿಯುತ್ತದೆ. ಭಕ್ತನ ಶರಣ್ಯತೆ, ಶಿವೈಕ್ಯನಿಷ್ಠೆ ಹಾಗೂ ವೈರಾಗ್ಯ ಪ್ರತಿಪಾದನೆ ಈ ಶತಕದ ವಸ್ತು. ಶೈಲಿ ಸರಳವಾಗಿದೆ. ಈ ಶತಕದ ಪದ್ಯಗಳು ಮುಂದೆ ಸಂಕಲಿತವಾದ ಶತಕ ಸಂಕಲನಗಳಲ್ಲಿ ಉದಾಹೃತಗೊಂಡಿವೆ. ಬರೆಹದ ಗುರು ನಂಜೇದೇವರ ಶಿವಕಾರುಣ್ಯಾಹ್ವಾನಶತಕ ಮತ್ತು ಶಿವಕೀರ್ತನೆಶತಕಗಳಲ್ಲಿ ಈ ಶತಕದ ಒಂದೊಂದೂ ಪದ್ಯಗಳಿವೆ. ಅಜ್ಞಾತ ಸಂಕಲನಕಾರನ ನಿಜಾಚರಣೆಶತಕ ಎಂಬ ಸಂಕಲನದಲ್ಲಿ ಈ ಶತಕದ ವೃತ್ತವೊಂದು ಉದ್ಧೃತವಾಗಿದೆ.

ಚಂದ್ರಚೂಡಾಮಣಿಶತಕ 11ನೆಯ ಶತಮಾನದಲ್ಲಿ ರಚಿತವಾಗಿರದೆ ಹರಿಹರನ ಅನಂತರದ ಕಾಲದಲ್ಲಿ ರಚಿತವಾಗಿರುವುದೆಂದೂ ಕೆಲ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. (ಎಸ್.ಎಸ್.ಎ.)

**ನಾಗಾಭರಣ, ಟಿ.ಎಸ್. :** ಕನ್ನಡ ರಂಗಭೂಮಿ. ಹಾಗೂ ಚಲನಚಿತ್ರ ನಿರ್ದೇಶಕ. ನಟ ಪುಟ್ಟಣ್ಣ ಕಣಗಾಲ ಪ್ರಶಸ್ತಿ ವಿಜೇತ (1998 - 99) ಸಾಮಾಜಿಕ ಹೊಣೆಗಾರಿಕೆಯೇ ಒಂದು ನಿಷ್ಠೆ ಎಂಬ ಸಂದೇಶವನ್ನು ತಮ್ಮ ವಿಶಿಷ್ಟ ಜಾಡಿನ ಚಲನಚಿತ್ರಗಳ ಮೂಲಕ ಜನತೆಗೆ ಪ್ರಸ್ತುತಪಡಿಸಿದ್ದಾರೆ. ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಮೈದುಂಬಿಕೊಂಡು ಅದನ್ನು ತಮ್ಮ ಚಿತ್ರಗಳ ಮೂಲಕ ಸಮಯೋಚಿತವಾಗಿ ಇವರು ಪರಿಚಯಿಸಿದ್ದಾರೆ. ತಮ್ಮ ಶಾಲಾ-ಕಾಲೇಜು ದಿನಗಳಲ್ಲೇ ರಂಗನಾಟಕಗಳತ್ತ ಆಕರ್ಷಿತರಾಗಿ ನಟರಾಗಿ, ನಿರ್ದೇಶಕರಾಗಿ ಹಲವಾರು ಪದಕ -ಪ್ರಶಸ್ತಿಗಳನ್ನು ಬಾಚಿಕೊಂಡರು. ಇವರು ವಿಜ್ಞಾನ ಹಾಗೂ ಕಾನೂನಿನಲ್ಲಿ ಪದವೀಧರರು.

ಹೊಸ ಅಲೆಯ ಚಿತ್ರಗಳ ಮೂಲಕ ಗಮನ ಸೆಳೆಯುತ್ತಿದ್ದ ಬಿ.ವಿ. ಕಾರಂತ ಮತ್ತು ಗಿರೀಶ್ ಕಾರ್ನಾಡರೊಂದಿಗೆ ರಂಗಭೂಮಿ ಹಾಗೂ ಚಲನಚಿತ್ರ ಮಾಧ್ಯಮಗಳ ಚಟುವಟಿಕೆಗಳಲ್ಲಿ ಇವರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಶೇಷಾದ್ರಿ ಗವಾಯಿಯವರಲ್ಲಿ ಹಿಂದೂಸ್ತಾನಿ ಸಂಗೀತವನ್ನು ಕೂಡ ಇವರು ಅಭ್ಯಾಸ ಮಾಡಿದರು. ತಮ್ಮ ನಾಟಕ ಚಲನಚಿತ್ರಗಳಲ್ಲಿ ಜನಪದ ಸಂಗೀತವನ್ನು ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಚಿತ್ರರಂಗದಲ್ಲಿ ಬೇರೂರಿ ನಿಲ್ಲಬೇಕೆನ್ನುವ ಹಂಬಲಿಕೆಯಿಂದ ಪಿ. ಭಕ್ತವತ್ಸಲಂರೊಡನೆ ಸಂಕಲನ ಕಾರ್ಯದಲ್ಲಿ ತೊಡಗಿಕೊಂಡು ಸಂಕಲನದಲ್ಲೂ ಪರಿಣತಿ ಪಡೆದರು. ದೃಶ್ಯಮಾಧ್ಯಮದ ಎಲ್ಲ ಪ್ರಕಾರಗಳನ್ನೂ ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಅವುಗಳ ಮೇಲೆ ಹಿಡಿತ ಸಾಧಿಸುವ ಸಾಮರ್ಥ್ಯ ಪಡೆದುಕೊಂಡಿರುವ ಇವರು ಇಲ್ಲಿಯವರೆಗೆ 26 ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇವುಗಳಲ್ಲಿ 12 ಚಿತ್ರಗಳಿಗೆ ರಾಷ್ಟ್ರ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಕನ್ನಡದ ಖ್ಯಾತ ನಾಟಕಕಾರ ಶ್ರೀರಂಗರ ಗರಡಿಯಲ್ಲಿ ಪಳಗಿದ ಇವರು ಹಲವು ನಾಟಕಗಳನ್ನು ಪ್ರಯೋಗಿಸಿ ರಂಗಭೂಮಿಯಲ್ಲಿ ಯಶಸ್ವೀ

ನಿರ್ದೇಶಕರೆನಿಸಿದ್ದಾರೆ. ಬೆಂಗಳೂರಿನಲ್ಲಿರುವ ಆದರ್ಶ್ ಫಿಲ್ಮ್ ಇನ್ಸ್ಟಿಟ್ಯೂಟ್‌ನಲ್ಲಿ ಇವರು ಮೂರು ವರ್ಷಗಳ ಕಾಲ ಉಪನ್ಯಾಸಕರಾಗಿ ಆರು ವರ್ಷ ಪ್ರಾಂಶುಪಾಲರಾಗಿ ಅನೇಕ ಸೃಜನಶೀಲ ಪ್ರತಿಭೆಗಳನ್ನು ಬೆಳಕಿಗೆ ತಂದಿದ್ದಾರೆ. ಬೆನಕ ಎಂಬ ಮಕ್ಕಳ ನಾಟಕ ಕೇಂದ್ರದ ಸ್ಥಾಪಕ ಅಧ್ಯಕ್ಷರೂ ಇಂಟರ್ ನ್ಯಾಷನಲ್ ಸೆಂಟರ್ ಆಫ್ ಫಿಲ್ಮ್ ಫಾರ್ ಚಿಲ್ಡ್ರನ್ ಅಂಡ್ ಯಂಗ್ ಪೀಪಲ್‌ನ ಸದಸ್ಯರೂ ಆಗಿದ್ದಾರೆ. ಸಂಗ್ಯಾಬಾಳ್ಯಾ, ಕತ್ತಲೆ ಬೆಳಕು, ಶಕಾರನ ಸಾರೋಟು, ಜೋಕುಮಾರಸ್ವಾಮಿ, ಸತ್ತವರ ನೆರಳು, ಈಡಿಪಸ್, ಕೃಷ್ಣಪಾರಿಜಾತ, ಟಿಂಗರ ಬುಡ್ಡಣ್ಣ, ಮುಂದೇನ ಸಖಿ ಮುಂದೇನ, ಹಯವದನ, ನೀಗಿಕೊಂಡ ಸಂಸ, ಬಕ, ಬ್ಲಡ್‌ವೆಡಿಂಗ್ ಮೊದಲಾದವು ಇವರು ನಿರ್ದೇಶಿಸಿರುವ ನಾಟಕಗಳು. ಗ್ರಹಣ, ಅನ್ವೇಷಣೆ, ಬ್ಯಾಂಕರ್ ಮಾರ್ಗಯ್ಯ, ಆಸ್ಫೋಟ, ಸಂತ ಶಿಶುನಾಳ ಷರೀಫ, ಮೈಸೂರ ಮಲ್ಲಿಗೆ, ಚಿನ್ನಾರಿ ಮುತ್ತ, ಆಕಸ್ಮಿಕ, ನಾವಿದ್ದೇವೆ ಎಚ್ಚರಿಕೆ, ಜನುಮದ ಜೋಡಿ, ನಾಗಮಂಡಲ, ನೀಲಾ - ಇವು ಇವರು ನಿರ್ದೇಶಿಸಿದ ಚಿತ್ರಗಳು.

ಗ್ರಹಣ (1978 - 79) ನಾಗಾಭರಣ ನಿರ್ದೇಶಿಸಿದ ಚೊಚ್ಚಲ ಚಿತ್ರ. ಇದಕ್ಕೆ ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ, ಅತ್ಯುತ್ತಮ ಚಿತ್ರಕಥೆಗಾಗಿ ರಾಷ್ಟ್ರಪ್ರಶಸ್ತಿ, ಅತ್ಯುತ್ತಮ ಚಿತ್ರಕ್ಕಾಗಿ ರಾಜ್ಯ ಪ್ರಶಸ್ತಿ ಬಂದಿದೆ. ಹಿಂದೀ ಚಿತ್ರರಂಗದ ಪ್ರಬುದ್ಧ ಕಲಾವಿದೆ ಸ್ಮಿತಾ ಪಾಟೀಲ್ ಅಭಿನಯಿಸಿದ ಏಕೈಕ ಕನ್ನಡ ಚಿತ್ರ ಅನ್ವೇಷಣೆ (1982), ಇದು ತೃತೀಯ ಅತ್ಯುತ್ತಮ ಚಿತ್ರವೆಂದು ರಾಜ್ಯ ಪ್ರಶಸ್ತಿ ಪಡೆದುಕೊಂಡಿದೆ. ಖ್ಯಾತ ಆಂಗ್ಲ ಸಾಹಿತಿ ಆರ್. ಕೆ. ನಾರಾಯಣ್ ಅವರ ದಿ ಫೈನಾನ್ಶಿಯಲ್ ಎಕ್ಸ್‌ಪರ್ಟ್ ಕಾದಂಬರಿ ಆಧರಿಸಿದ ಬ್ಯಾಂಕರ್ ಮಾರ್ಗಯ್ಯ (1983 - 84), ಅತ್ಯುತ್ತಮ ಪ್ರಾದೇಶಿಕ ಭಾಷಾ ಚಿತ್ರಕ್ಕೆ ನೀಡಲಾಗುವ ರಾಷ್ಟ್ರಪ್ರಶಸ್ತಿಗೆ ಪಾತ್ರವಾಗಿದೆ. ಆಸ್ಫೋಟಕ್ಕೆ (1987 - 88) ರಾಜ್ಯಪ್ರಶಸ್ತಿ ಹಾಗೂ ಫಿಲ್ಮ್ ಫೇರ್ ಪ್ರಶಸ್ತಿಗಳು ದೊರೆತಿವೆ. ಸಂತ ಶಿಶುನಾಳ ಷರೀಫ ಚಿತ್ರಕ್ಕೆ ಪ್ರತಿಷ್ಠಿತ ನರ್ಗಿಸ್‌ದತ್ ರಾಷ್ಟ್ರೀಯ ಭಾವೈಕ್ಯತಾ ರಾಷ್ಟ್ರಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು ಪ್ರಾಪ್ತವಾಗಿವೆ (1989 - 90). ಮೈಸೂರು ಮಲ್ಲಿಗೆ ಅತ್ಯುತ್ತಮ ಪ್ರಾದೇಶಿಕ ಚಿತ್ರದ ರಾಷ್ಟ್ರಪ್ರಶಸ್ತಿ, ದ್ವಿತೀಯ ಅತ್ಯುತ್ತಮ ಚಿತ್ರವೆಂಬ ರಾಜ್ಯ ಪ್ರಶಸ್ತಿ ಪಡೆದು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿತ್ತು. ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ದಾಂಪತ್ಯ ಜೀವನದ ನೋವು ನಲಿವು ಚಿತ್ರಿಸಿದ ವಿನೂತನ ಪ್ರಯೋಗ ಈ ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಚಿತ್ರ ಎಂದು ರಾಷ್ಟ್ರಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ಬಂದಿವೆ (1991 - 92). ಚಿನ್ನಾರಿಮುತ್ತ ಅತ್ಯುತ್ತಮ ಪ್ರಾದೇಶಿಕ ಚಿತ್ರಕ್ಕೆ ನೀಡಲಾಗುವ ರಾಷ್ಟ್ರಪ್ರಶಸ್ತಿಯನ್ನು ಅತ್ಯುತ್ತಮ ಮಕ್ಕಳ ಚಿತ್ರ ರಾಜ್ಯ ಪ್ರಶಸ್ತಿಯನ್ನೂ ಗಳಿಸಿದೆ (1993 - 94). ಕೋಲ್ಕತ್ತದಲ್ಲಿ ನಡೆದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪನೋರಮಾ ವಿಭಾಗದಲ್ಲಿ ಕೂಡ ಈ ಚಿತ್ರ ಪ್ರದರ್ಶನ ಕಂಡಿತು. ಆಕಸ್ಮಿಕ ದ್ವಿತಿಯ ಅತ್ಯುತ್ತಮ ಚಿತ್ರವೆಂಬ ರಾಜ್ಯಪ್ರಶಸ್ತಿಯನ್ನೂ (1993 - 94), ನಾವಿದ್ದೇವೆ ಎಚ್ಚರಿಕೆ ಅತ್ಯುತ್ತಮ ಮಕ್ಕಳ ಚಿತ್ರಕ್ಕೆ ರಾಜ್ಯ ಪ್ರಶಸ್ತಿಯನ್ನು ಗಳಿಸಿದೆ (1995 - 96). ಜನುಮದಜೋಡಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನೂ (1996 - 97), ನಾಗಮಂಡಲ ದ್ವಿತೀಯ ಅತ್ಯುತ್ತಮ ಚಿತ್ರವೆಂಬ ರಾಜ್ಯಪ್ರಶಸ್ತಿಯನ್ನೂ ಗಳಿಸಿದೆ (1996-97). ವೈಜ್ಞಾನಿಕ ವಿಷಯವನ್ನು ಸರಳವಾಗಿ ನಿರೂಪಿಸಿರುವ ಈ ಚಿತ್ರ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪಾಲ್ಗೊಂಡಿತ್ತು. ನೀಲಾ ತೃತೀಯ ಅತ್ಯುತ್ತಮ ಚಿತ್ರದ ರಾಜ್ಯ ಪ್ರಶಸ್ತಿಯನ್ನೂ ಪಡೆದುಕೊಂಡಿದೆ. ಇವರ ನಿರ್ದೇಶನದಲ್ಲಿ ಮೂಡಿಬಂದ ಬಂಗಾರದ ಜಿಂಕೆ, ಪ್ರಾಯ ಪ್ರಾಯ ಪ್ರಾಯ, ಸೇಡಿನ ಸಂಚು, ಮಕ್ಕಳಿರಲವ್ವ ಮನೆತುಂಬ, ನೆನಪಿನದೋಣಿ, ಸುರಸುಂದರಾಂಗ, ಪ್ರೇಮಾಗ್ನಿ, ರಾವಣರಾಜ್ಯ, ವಿಮೋಚನೆ, ಜನುಮದಾತ - ಈ ಚಿತ್ರಗಳು ಅಪಾರ ಜನಮನ್ನಣೆಗೆ ಪಾತ್ರವಾಗಿವೆ. ಚಂದ್ರಶೇಖರ ಕಂಬಾರರ ಕಾದಂಬರಿ ಆಧರಿಸಿದ ಸಿಂಗಾರೆವ್ವ ಚಿತ್ರವನ್ನೂ ನಿರ್ದೇಶಿಸಿದ್ದಾರೆ (2003). ಕಿರುತೆರೆಯಲ್ಲೂ ಅತ್ಯಂತ ಜನಪ್ರಿಯ ನಿರ್ದೇಶಕರೆಂಬ ಹೆಗ್ಗಳಿಕೆಗೆ ನಾಗಾರಭರಣ ಪಾತ್ರರಾಗಿದ್ದಾರೆ. (ಬಿ.ಆರ್‌ಪಿ.)

**ನಾಗಾಯಿ :** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನಲ್ಲಿ ಚಿತ್ತಾಪುರದಿಂದ ನೈಋತ್ಯಕ್ಕೆ ವಾಡಿಗೆ ಹೋಗುವ ಮಾರ್ಗದಲ್ಲಿ 2ಕಿಮೀ ಅಂತರದಲ್ಲಿರುವ ಸ್ಥಳ. ಇಲ್ಲಿನ ಹಿಂದು ಜೈನ ಹಾಗೂ ಮುಸಲ್ಮಾನ ಸಂಸ್ಕೃತಿಗಳಿಗೆ ಸಂಬಂಧಿಸಿದ ವಾಸ್ತು ಅವಶೇಷಗಳಿಂದ ಪ್ರಸಿದ್ಧವಾಗಿದೆ. ಇದರ ಹೆಸರು ನಾಗವಾಪಿಯಿಂದ ಬಂದಿರಬಹುದು. ಶಾಸನಗಳಲ್ಲಿ ಇದು ನಾಗವಾವಿ ಎಂದೇ ಪ್ರಸಿದ್ಧ. ಶ್ರೀರಾಮ ವನವಾಸದಲ್ಲಿದ್ದ ಕಾಲದಲ್ಲಿ ಇಲ್ಲಿ ತಂಗಿದ್ದನೆಂದು ಪ್ರತೀತಿ. ನಿಜಾಮರ ಆಡಳಿತದ ಕಾಲದಲ್ಲಿ ಇದು ಪಾಯಿಗಾ ಇಲಾಖೆಗೆ ಸೇರಿದ್ದು ನವಾಬ್ ಆಸ್ಕರಿಯಾರ್ ಜಂಗ ಬಹದ್ದೂರ್ ಹಾಗೂ ನವಾಬ್ ಬಷೀರದ್ದೌಲಾ ಬಹದ್ದೂರ್ ಅವರಿಗೆ ಸಂಬಂಧಪಟ್ಟಿತ್ತು. 1947ರ ಅನಂತರ ಚಿತ್ತಾಪುರದ ಜೊತೆಗೆ ಗುಲ್ಬರ್ಗ ಜಿಲ್ಲೆಯಲ್ಲಿ ವಿಲೀನವಾಯಿತು.

ಈ ಗ್ರಾಮದಲ್ಲಿ ಪುರಾತನ ಅವಶೇಷಗಳು ಸುಮಾರು ಒಂಬ್ಬತ್ತು ಚದರ ಕಿ.ಮೀಗಳ ವರೆಗೆ ಹಬ್ಬಿವೆ. ದೇವಾಲಯಗಳು, ಮಸೀದಿಗಳು, ಮನೆಗಳು, ಕೆರೆಗಳು, ಬಾವಿಗಳು ಮುಂತಾಗಿ ಈ ಅವಶೇಷಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಮುಖ್ಯವಾದವು ಜೋಡಿಮಂಟಪಗುಡಿ, ಜೈನಬಸದಿ, ಮಸೀದಿ, ದೊಡ್ಡ ಕಮಾನಿನ ಅಗಸಿ, ಮಡಿವಾಳಪ್ಪನ ಗುಡಿ, ಮಹಾದೇವ ದೇವಸ್ಥಾನ, ಶಾಸನ ದೇವಸ್ಥಾನ, ಅರವತ್ತು ಕಂಬದ ಗುಡಿ, ಕಾಲಿ ಮಸ್‌ಜಿದ್ ದರ್ಗಾ, ಕಡಲಿ ಬಸವಣ್ಣನ ಗುಡಿ, ಹಣಮಂತ ದೇವರ ಗುಡಿ, ಮಾಲಗಂಬ, ಮಲ್ಲಯ್ಯನ ಗುಡಿ, ಎಲ್ಲಮ್ಮನ ಗುಡಿ, ಇವುಗಳಲ್ಲದೆ ಅನೇಕ ಗುಣಪತಿಯ ವಿಗ್ರಹಗಳೂ ನಾಗರಕಲ್ಲುಗಳೂ ಇವೆ. ನಾಗಾಯಿಯು ಇನ್ನೊಂದು ವಿಶೇಷವೆಂದರೆ ಇಲ್ಲಿ ಅನೇಕ ನೀರಿನ ಝರಿಗಳೂ ಬಾವಿಗಳೂ ಇವೆ. ಇವುಗಳಲ್ಲಿ ಮುಖ್ಯವಾದುದೆಂದರೆ ನಂದಿಬಾವಿ, ಕಾಲಿಮಸ್‌ಜಿದ್ ಬಾವಲಿ, ಸಿದ್ದಬಾವಿ ಮತ್ತು ಎಲ್ಲಮ್ಮನ ಬಾವಿ, ಇವು ಸರ್ವಕಾಲದಲ್ಲೂ ತುಂಬಿ ಹರಿಯುತ್ತವೆ.

ನಾಗಾಯಿಯು ಅವಶೇಷಗಳ ಪೈಕಿಯು ದೇವಸ್ಥಾನಗಳು ಮತ್ತು ಬಸದಿಗಳು ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದವು. ಮಸೀದಿಗಳಲ್ಲಿ ಕೂಡ ಕೆಲವು ಹಳೆಯ ದೇವಸ್ಥಾನಗಳೇ ಆಗಿದ್ದರೆ ಕೆಲವು ಆ ಹಳೆಯ ದೇವಸ್ಥಾನಗಳ ಅವಶೇಷಗಳಿಂದ ಪುನಃ ನಿರ್ಮಾಣ ಮಾಡಿದುವಾಗಿವೆ. ಈ ದೇವಸ್ಥಾನಗಳಲ್ಲಿ ಅರವತ್ತು ಕಂಬದ ಗುಡಿ ಬಹು ಸುಂದರವಾಗಿದೆ. ಇಲ್ಲಿನ ಕಂಬಗಳಲ್ಲಿನ ಚಿತ್ರದ ಕೆಲಸ ಹಾಗೂ ಸುಂದರ ಶಿಲ್ಪಗಳು ಮನಸೂರೆಗೊಳ್ಳುವಂತಿವೆ. ಮಸೀದಿಗಳಲ್ಲಿನ ಕಂಬಗಳೂ ಹೊಳಪು ಮಾಡಿದ, ಚಿತ್ರದಿಂದ ಕೂಡಿದ ಕಂಬಗಳೇ ಆಗಿವೆ. ಸಹಸ್ರ ದೀಪದ ಮಾಲಗಂಬ ತನ್ನಷ್ಟಕ್ಕೆ ವಿಶಿಷ್ಟವೂ ಸುಂದರವೂ ಆಗಿದೆ. ಹಣಮಂತ ದೇವರ ದೇವಾಲಯದಲ್ಲಿನ ಗೋಡೆಗಳಲ್ಲಿ ರಾಮಾಯಣದ ಚಿತ್ರಗಳನ್ನು ಕೆತ್ತಿದೆ; ಇವು ಸುಂದರವಾಗಿವೆ.

ಹನ್ನೆರಡನೆಯ ಶತಮಾನದಲ್ಲಿ ನಾಗವಾವಿಯ ಭೂಭಾಗವನ್ನು ಕಲ್ಯಾಣದ ಚಾಳುಕ್ಯರ ಸಾಮಂತರೂ ಮಾಂಡಲಿಕರೂ ಆದ ಹೈಹಯ ವಂಶದ ರಾಜರು ಆಳುತ್ತಿದ್ದರು. ಅದು ಅವರ ಪ್ರಾಂತ ಅರಲು 300ರಲ್ಲಿ ಇದ್ದಿತು. ಇಲ್ಲಿನ ಶಾಸನವೊಂದರಲ್ಲಿ ನಾಗವಾವಿಯನ್ನು ಕುನ್ತಳ ಮಹೀತಳಕ್ಕೆ ಮುಖಮಿದೆಂಬನ್ತಿರ್ದ್ದ ಅಱಲು ಮುನ್ನೂರ್ಕ್ಕೆ ತಿಲಕಮಪ್ಪನ್ತಿರ್ದ್ದ ಮಹಾಗ್ರಹಾರ ಎಂದು ವರ್ಣಿಸಿದೆ. ನಾಗಾಯಿಯಲ್ಲಿ ಒಂದು ದೊಡ್ಡ ಘುಟಿಕಾಸ್ಥಾನವಿದ್ದು ಅದು ವಿದ್ಯಾಕೇಂದ್ರವಾಗಿದ್ದಿತು. ಮಧುಸೂದನ ದೇವಾಲಯ ಹಾಗೂ ತ್ರೈಪುರುಷದೇವರ ಶಾಲೆ ಈ ಘುಟಿಕಾಸ್ಥಾನದ ಕೇಂದ್ರವಾಗಿದ್ದುವು. ಈ ಮಧುಸೂದನ ದೇವಾಲಯ, ತ್ರೈಪುರಷ ಶಾಲೆ, ರಾಮೇಶ್ವರ ದೇವಸ್ಥಾನ ಮತ್ತು ರಾಮತೀರ್ಥ ಮುಂತಾದವುಗಳನ್ನು ಚಾಳುಕ್ಯ ದೊರೆ ಅಹವಮಲ್ಲ ಸೋಮೇಶ್ವರನ ಮಂತ್ರಿ ಕಾಳಿದಾಸ ದಂಡನಾಯಕ ಮಾಡಿಸಿದ. ಈ ಮಹಾಮಾಣಿಕ ಮಧುಸೂದನ ದೇವಾಲಯದ ಕಳಸ ಸುವರ್ಣದ್ದಾಗಿದ್ದು ಅದು ಆಕಾಶವನ್ನು ತಟ್ಟುತ್ತಿದೆಯೊ ಏನೋ ಎನ್ನುವಷ್ಟು ಎತ್ತರವಾಗಿತ್ತು. ಅದರ ಒಳಗೆ ಅನೇಕ ಸುಂದರ ಸಾಲಭಂಜಿಕೆಗಳು ರಾರಾಜಿಸುತ್ತಿದ್ದವು. ಅಲ್ಲಿ ಒಂದು ನಾಟ್ಯಶಾಲೆಯೂ ಇತ್ತು. ದೇವಸ್ಥಾನದ ಎದುರಿನಲ್ಲಿ ಒಂದು

ಗರುಡಗಂಬವಿದ್ದಿತು. ದೇವಸ್ಥಾನದಲ್ಲಿ ಏಕದಂಡಿ, ತ್ರಿದಂಡಿ, ಸ್ನಾತಕ, ಬ್ರಹ್ಮಚಾರಿ, ಹಂಸ, ಪರಮಹಂಸ ಮುಂತಾದವರಿಗೆ ಅನುಷ್ಠಾನಭವನಗಳಿದ್ದವು. ಚತುರ್ವೇದಗಳ ಮತ್ತು ಅದರ ಶಾಖೆಗಳ, ಭಟ್ಟ, ನ್ಯಾಸ, ಪ್ರಭಾಕರ ಮೊದಲಾದ ದರ್ಶನಗಳು, ಸಾಹಿತ್ಯ, ಶುಕ್ರನೀತಿ, ಮನುಸ್ಮೃತಿ ಮುಂತಾದುವುಗಳ ಅಧ್ಯಯನಕ್ಕೆ ಅಲ್ಲಿ ಆಶ್ರಯವಿದ್ದಿತು. ಈ ವಿಷಯಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳ ಊಟ ಬಟ್ಟೆಗೆ, ಘಟಿಕಾಪ್ರಹಾರಿಗೆ, ಪುರಾಣದ ಭಟ್ಟರಿಗೆ, ನೈವೇದ್ಯಮನುಡುವ ಬಾಣಸಗೆ, ಕಾಪಿನ ಘುಟೆಯರರಿಗೆ, ಮದ್ದಳಿಕಾರರಿಗೆ ಹಾಡುವವರಿಗೆ ಪಾತ್ರದವರಿಗೆ, ಕಂಬದ ಸೂಳೆಯರಿರ್ಗೆ, ದೇವಾಲಯಕ್ಕೆ ಸುಣ್ಣ ಹಾಕುವ ಸುಣ್ಣವೆಸದವನಿಗೆ, ಕಲ್ಕುಟಿಗ, ಕಳಾಸೂತ್ರಧಾರಿ ಮೋಜರುಗಳಿಗೆ ಜೀವನೋಪಾಯಕ್ಕೆ ಭೂಮಿಯನ್ನು ದಾನಕೊಟ್ಟುದಾಗಿ ಕೆಲವರಿಗೆ ಇರಲು ನಿವೇಶಗಳನ್ನು ದತ್ತಿವಿಟ್ಟುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಈ ಎಲ್ಲರಿಂದ ಆ ಘುಟಿಕಾಸ್ಥಾನ ತುಂಬಿ ನಾಲ್ನೂರ್ವರ್ ವಿಪ್ರರಿಂದ ಕೂಡಿ ಅಗ್ರಹಾರ ನಾಗವಾವಿ ಅಭಿನವ ಬ್ರಹ್ಮಲೋಕದಂತಿದ್ದಿತಂತೆ. (ಎಸ್‌ಜೆ.ಎ.)

**ನಾಗಾರಾಧ'ನೆ :** ಮಾನವ ಜನಾಂಗದಲ್ಲಿ ಆದಿಕಾಲದಿಂದಲೇ ನಾಗಪೂಜೆ ನಡೆದುಬರುತ್ತಿದೆ. ಋಗ್ವೇದದ ಪ್ರಧಾನ ದೈವತ ಸರ್ಪ ಎನ್ನಲಾಗಿದೆ. ಸಿಂಧೂ ಸಂಸ್ಕೃತಿಯ ಅವಶೇಷಗಳಲ್ಲಿ ನಾಗಮಿಥುನವಿದೆ. ಅಶ್ವತ್ಥವೃಕ್ಷದ ಕೆಳಗೆ ಎಡಬಲಗಳಲ್ಲಿ ಹೆಡೆಯೆತ್ತಿರುವ ನಾಗಗಳ ಬಳಿ ಪೂಜೆ ಮಾಡುವ ವ್ಯಕ್ತಿಗಳ ಚಿತ್ರವಿದೆ. ಅಶ್ವತ್ಥೋ ದೇವಸದನಃ ಎಂಬುದು ಅಥರ್ವವೇದದ ಮಾತು. ನಾಗನ ಕಲ್ಲುಗಳನ್ನು ನೆಟ್ಟಿರುವುದು ಹೆಚ್ಚಾಗಿ ಅಶ್ವತ್ಥವೃಕ್ಷದ ಕೆಳಗೆ. ಭಾರತೀಯರಿಗೆ ಮಾತ್ರವಲ್ಲ ಈಜಿಪ್ಟ್, ಗ್ರೀಸ್, ಅಸೀರಿಯ - ಮುಂತಾದ ಪುರಾತನ ಸಂಸ್ಕೃತಿಗಳ ಜನತೆಗೂ ನಾಗನೇ ಆದಿದೈವತ. ಈಜಿಪ್ಟಿನ ಆದಿದೇವ ಮಿಡಿನಾಗ. ಭರತ ಖಂಡದಲ್ಲಿ ಶೈವ, ಶಾಕ್ತ, ವೈಷ್ಣವ, ಬೌದ್ಧ, ಜೈನ ಮುಂತಾದ ಎಲ್ಲ ಮತಸಂಪ್ರದಾಯದವರಲ್ಲಿಯೂ ನಾಗಪ್ರತಿಮೆಯ ಪೂಜೆ ಪ್ರಚಲಿತವಿದೆ.

ನಾಗಾರಾಧನೆಯಿಂದ ಗೋವು ಧನ, ಧಾನ್ಯ, ಆಯುಷ್ಯ, ಸಂತಾನ ಸಮೃದ್ಧಿ ಯಾಗುವುದೆಂದು ನಂಬಿಕೆಯಿದೆ. ಹುಟ್ಟಿದ ಮಗು ಬಾಳಲೆಂದು ಮಗುವಿಗೆ ನಾಗರತ್ನ, ನಾಗಮಣಿ, ನಾಗರಾಜ, ಶೇಷ, ಭುಜಂಗ ಇತ್ಯಾದಿ ಹೆಸರನ್ನಿಡುವುದಿದೆ. ಸಂತಾನಾಪೇಕ್ಷೆಯಿಂದ ನಾಗಪೂಜೆ, ನಾಗಬಲಿಗಳನ್ನು ಆಚರಿಸುತ್ತಾರೆ. ವಡ್ಡಾರಾಧನೆ ಎಂಬ ಕನ್ನಡ ಗದ್ಯ ಗ್ರಂಥ'ದ ಸುಕುಮಾರಸ್ವಾಮಿಯ ಕಥೆ'ಯಲ್ಲಿ ಚಂಪಾನಗರದ ರಾಜಪುರೋಹಿತ ಸೋಮಶರ್ಮ ಮತ್ತು ಅವನ ಮಡದಿ ತ್ರಿವೇದಿ ಎಂಬ ದಂಪತಿಗಳು ಆನಗರದ ಉದ್ಯಾನದ ನಾಗರನ್ನು ಪೂಜಿಸಿ, ಹರಕೆ ಸಲ್ಲಿಸಿ, ಮಗಳನ್ನು ಪಡೆದುದಾಗಿಯೂ ಆ ಮಗಳಿಗೆ ನಾಗಶ್ರೀ ಎಂದು ಹೆಸರಿಟ್ಟುದಾಗಿಯೂ ಆ ಉದ್ಯಾನದಲ್ಲಿ ಕಂಬಳನಾಗ, ಶಂಬರನಾಗ, ಪಾಂಡುಕನಾಗ ಎಂಬ ನಾಗಪ್ರತಿಮೆಗಳಿದ್ದುದಾಗಿಯೂ ಹೇಳಿದೆ.

ನಾಗರಾಧನೆ ಸುಬ್ರಹ್ಮಣ್ಯದೇವರ ಆರಾಧನೆಯಾಗಿರುವುದಕ್ಕೆ ಪೂರಾಣಕಥೆಯೊಂದಿದೆ. ಹಿಂದೆ ಗರುಡನ ಭೀತಿಯಿಂದ ಗುಹೆಯಲ್ಲಿ ಅಡಗಿದ್ದ ವಾಸುಕಿ ಶಿವನನ್ನು ಕುರಿತು ತಪಸ್ಸುಮಾಡಿದ. ಶಿವ ಮೆಚ್ಚಿ ಬಂದು ಮುಂದೆ ನನ್ನ ಮಗ ಸುಬ್ರಹ್ಮಣ್ಯ ರಾಕ್ಷಸರನ್ನು ಕೊಂದು ನಿನ್ನ ಬಳಿಗೆ ಬರುತ್ತಾನೆ. ನಿನ್ನನ್ನು ತನ್ನ ಅಂಶದಿಂದ ಸ್ಥಾಪಿಸಿ ಪೂಜಾರ್ಹನನ್ನಾಗಿ ಮಾಡುತ್ತಾನೆ. ನಿನ್ನನ್ನು ಭಜಿಸುವವರಿಗೆ ನಾನು ಇಷ್ಟಪ್ರದನಾಗುವೆ ಎಂದು ವರವಿತ್ತುದಾಗಿ ಸ್ಕಂದಪುರಾಣದ ಸಹ್ಯಾದ್ರಿ ಖಂಡದಲ್ಲಿ ಹೇಲಿದೆ. ಯಕ್ಷಗಾನ ಬಯಲಾಟದ ಸಭಾಲಕ್ಷಣದ ಪ್ರಕಾರ ಮಂಡಲನಾಯಕನಾದ ಸುಬ್ರರಾಯನಿಗೆ ಸರ್ಪನಿಗೆ ರಂಗಸ್ಥಳದಲ್ಲಿ ಪೂಜೆ ಸಲ್ಲುತ್ತದೆ.

ಈಗಿನ ಕರ್ನಾಟಕದ ಗೋಕರ್ಣದಿಂದ ಕೇರಳದ ಕನ್ಯಾಕುಮಾರಿ ವರೆಗಿನ ಪರಶುರಾಮ ಕ್ಷೇತ್ರಕ್ಕೆ ಪ್ರಾಚೀನ ಕಾಲದಲ್ಲಿ ನಾಗಖಂಡ ಎಂದು ಹೆಸರಿತ್ತು. (ಶಿಕಾರಿಪುರ ಶಾಸನಾಧಾರ). ಈ ಭಾಗದಲ್ಲಿ ಅಲ್ಲಲ್ಲಿ ನಾಗವನಗಳಿವೆ. ನಾಗವನದಲ್ಲಿ ನಾಗಪ್ರತಿಮೆಗಳ ಕಲ್ಲುಗಳೂ ಇರುತ್ತವೆ. ಸ್ಥಳಿಕರು ವರ್ಷಕ್ಕೊಮ್ಮೆ ಅಥ'ವಾ ಹರಕೆ ಹೇಳಿದ್ದ ಸಂದರ್ಭದಲ್ಲಿ. ನಾಗವನಕ್ಕೆ ತಂಬುಲ ಎಂಬ ಹೆಸರಿನಲ್ಲಿ ಅರ್ಚನೆ ಸಲ್ಲಿಸುತ್ತಾರೆ. ಪೂಜೆಯ ದಿನ ಕುಲಕುಟುಂಬದವರು ಸೇರಿ ನಾಗವನವನ್ನು ಶುದ್ಧಮಾಡಿ, ಓಕುಳಿ ನೀರನ್ನು ಕುರುದಿಯನ್ನು ಚೆಲ್ಲಿ, ಅರಳು ಎಳನೀರು ತೆಂಗಿನಕಾಯಿ ಬೆಲ್ಲ ಹೂಹಣ್ಣು ತಾಂಬೂಲಗಳನ್ನು ನಿವೇದಿಸುತ್ತಾರೆ. ಪ್ರದಕ್ಷಿಣೆ ನಮಸ್ಕಾರಗಳನ್ನು ಸಲ್ಲಿಸಿ ಮನುಷ್ಯರಿಗೂ ದನಕರುಗಳಿಗೂ ಬೆಳೆಗೂ ಕ್ಷೇಮವಾಗುವಂತೆ ಪ್ರಾರ್ಥನೆ ಸಲ್ಲಿಸುತ್ತಾರೆ. ಬ್ರಾಹ್ಮಣೇತರರು ಅರ್ಚಿಸುವ ನಾಗವನದಲ್ಲಿ ಕೋಳಿಯನ್ನು ಬಲಿಕೊಡುವುದೂ ಇದೆ.

ಉಡುಪಿ ಜಿಲ್ಲೆಯ ಕುಂದಾಪುರ ಉಡುಪಿ ತಾಲ್ಲೂಕುಗಳಲ್ಲಿ ವೈದ್ಯರು ಎಂಬ ಬ್ರಾಹ್ಮಣ ಕುಲದವರು ನಾಗಮಂಡಲ ಎಂಬ ನೃತ್ಯಾತ್ಮಕ ಪೂಜಾ ಸಮಾರಂಭವನ್ನು ಆಚರಿಸುತ್ತಾರೆ. ಢಕ್ಕೆಯನ್ನು ಬಾರಿಸುತ್ತ ಅದರ ತಾಳದ ಗತಿಗೆ ಸರಿಯಾಗಿ ಕುಣಿದುಕೊಂಡು ನಾಗಮಂಡಲದ ನಾಗನಿಗೂ (ಸುಬ್ರಹ್ಮಣ್ಯ) ಇತರ ದೆವ್ವದೆವತೆಗಳಿಗೂ ಪೂಜೆ ಸಲ್ಲಿಸುತ್ತಾರೆ. ಅರ್ಚಕನಾದ ವೈದ್ಯ ಅರ್ಧನಾರಿ, ಅರ್ಧಪುರುಷ ವೇಷದಲ್ಲಿರುತ್ತಾನೆ. ನಾಗರಾಧನೆಯ ಪ್ರತೀಕವಾಗಿ ನಾಗರ ಪಂಚಮಿ ಹಬ್ಬವನ್ನು ಶ್ರಾವಣ ಮಾಸದ ಶುದ್ಧ ಪಂಚಮಿಯಂದು ಆಚರಿಸಲಾಗುತ್ತದೆ. ನಾಗರಪಂಚಮಿ ಕುರಿತು ಜನಪದ ಕಥೆಗಳೂ ಗೀತಗಳೂ ಕನ್ನಡದಲ್ಲಿ ಪ್ರಚಲಿತವಾಗಿವೆ. ಇವು ಈ ನಾಗಾರಾಧನೆಯ ಹಿನ್ನೆಲೆ ಮತ್ತು ಮಹತ್ತ್ವದ ಬಗೆಗೆ ಬೆಳಕನ್ನು ಚೆಲ್ಲುತ್ತವೆ. (ನೋಡಿ) ಹಬ್ಬಗಳು. ಆದರೆ ಹಿಂದಿನ ದಿನ ನಾಗರಚೌತಿ ಎಂದು ಆಚರಿಸುವ ಕ್ರಮವೂ ಇದೆ.ಇದಲ್ಲದೆ ಶುದ್ಧ ಷಷ್ಠಿದಿನವೂ ನಾಗರಾಧನೆ ಮಾಡುವುದುಂಟು. ಈ ಶ್ರಾವಣ ಮಾಸದಲ್ಲಿ ಎಲ್ಲೆಲ್ಲೂ ಹಸುರು ಬೆಳೆದು ನಿಂತಿರುತ್ತದೆ. ಈ ಕಾಲದಲ್ಲೇ ಹಾವುಗೋಳ ಕಾಟವೂ ಹೆಚ್ಚು. ಆಪತ್ಕಾರಿ ವಿಪತ್ತುಗಳ ಸಾಕ್ಷಾದ್ರೂಪಗಳೇ ಹಾವುಗಳು. ಆದುದರಿಂದ ದೇವರೇ ಸುಬ್ರಹ್ಮಣ್ಯನೇ, ಸರ್ಪಭೀತಿಯಿಂದ ಪಾರುಮಾಡು, ನಾಗನೇ, ತೊಂದರೆ ಕೊಡಬೇಡ, ನಿನ್ನನ್ನು ಇಗೋ ತೃಪ್ತಿಪಡಿಸುತ್ತೇವೆ. ಎಂಬ ಭಾವನೆಯಿಂದ ನಾಗರಾಧನೆ ರೂಢಿಗೆ ಬಂದಿರಬೇಕು. ನಾಗನನ್ನು ಕ್ಷೇತ್ರಪಾಲಕನೆಂದೂ ಕರೆಯುತ್ತಾರೆ. ನಾಗಗಳಿದ್ದ ಹೊಲದಲ್ಲಿ ಇತರ ಕೀಟಗಳಿಂದ,ಕಳ್ಳರಿಂದ ತೊಂದರೆ ಬರುವುದಿಲ್ಲ. ಈ ಕಾರಣದಿಂದಲೂ ನಾಗಪೂಜೆಗೆ ಔಚಿತ್ಯವಿದೆ.

ನಾಗರಪಂಚಮಿ ಹೆಣ್ಣುಮಕ್ಕಳ ಹಬ್ಬ. ಅವರಿಗೆ ಅದು ಮಾಂಗಲ್ಯ ಪುತ್ರ ಸಂಪತ್ಪ್ರದವೆಂದು ಭಾವಿಸಲಾಗಿದೆ. ಈ ಹಬ್ಬದಂದು ಬೆಳಗ್ಗೆ ಎದ್ದು ಸ್ನಾನಮಾಡಿ ಮಡಿಯುಟ್ಟು ಕಲ್ಲನಾಗನಿಗೆ ಅಥವಾ ಮಣ್ಣಿನ ನಾಗನಿಗೆ ಅಥವಾ ಹುತ್ತಕ್ಕೆ ಪೂಜೆ ನೈವೇದ್ಯ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ. ಅರಳಹಿಟ್ಟು, ತಂಬಿಟ್ಟು, ಉಂಡೆ, ಉಸಳಿಗಳನ್ನು ನೈವೇದ್ಯಮಾಡಿ ಒಬ್ಬೊಬ್ಬರಾಗಿ ಹಾಲೆರೆದು ವಂದಿಸುತ್ತಾರೆ. ರಂಗೋಲಿಯಲ್ಲಿ ನಾಗನನ್ನು ಬಿಡಿಸಿ ಹುತ್ತದ ಮಣ್ಣು, ಗೋದಿಹಿಟ್ಟು, ಇವನ್ನು ಕಲಸಿ ಹಾವಿನ ಆಕೃತಿಗಳನ್ನು ರಚಿಸಿ ತಟ್ಟೆಯಲ್ಲಿಟ್ಟು ಅದನ್ನು ರಂಗೋಲಿಯ ನಾಗನ ಮೇಲಿಟ್ಟು ಹಾಲು, ತುಪ್ಪ, ಅರಳು ಮುಂತಾದುವನ್ನು ನೈವೇದ್ಯ ಮಾಡಿ ಪೂಜಿಸುವುದೂ ಪದ್ಧತಿ. ನಾಗಪೂಜೆಯ ಅನಂತರ ಉಪಾಹಾರ ಅಥವಾ ಊಡ ಮಾಡಿ ಉಯ್ಯಾಲೆಮಾಡಲು ಹೊರಡುತ್ತಾರೆ. ಈ ಹಬ್ಬಕ್ಕೆ ಹೆಣ್ಣು ಮಕ್ಕಳು ತವರುಮನೆಗೆ ಬಂದು ಇರುವುದು ವಾಡಿಕೆ.

**ನಾಗಾರ್ಜುನ :** ಸು. 6ನೆಯ ಶತಮಾನ. ಕರ್ನಾಟಕದಲ್ಲಿ ಹುಟ್ಟಿ ವಿಖ್ಯಾತನಾದ ಆಯುರ್ವೇದಾಚಾರ್ಯ. ಸಿದ್ಧರ ಪರಂಪರೆಗೆ ಸೇರಿದವ. ಜೈನಸಾಹಿತ್ಯದಲ್ಲಿ ಖ್ಯಾತನಾದ ವೇದಾಂತಿ. ವೈದ್ಯಶಾಸ್ತ್ರಜ್ಞನಾದ ಪೂಜ್ಯಪಾದನ ಸೋದರಳಿಯ, ಪಾದಲಿಪ್ತಸೂರಿಯ ಮಗ. ಪೂಜ್ಯಪಾಜನಿಂದ ವಿದ್ಯೆ ಕಲಿತ, ಜನ್ಮತಃ ಜೈನನಾದರೂ ಬೌದ್ಧಮತದ ತತ್ತ್ವಗಳಲ್ಲಿ ಅಭಿರುಚಿ ಹೊಂದಿ ಬೌದ್ಧ ಮತಾವಲಂಬಿಯಾದ. ಭಾರತದ ನಾನಾ ಭಾಗಗಳಲ್ಲಿ ಹಾಗೂ ನೇಪಾಳ, ಟಿಬೆಟ್‌ಗಳಲ್ಲಿ ಸಂಚರಿಸಿ ಬೌದ್ಧಮತ ಪ್ರಚಾರ ಮಾಡಿದ. ಟಿಬೆಟಿನಲ್ಲಿ ಒಂದು ಮಠದ ಅಧಿಪತಿಯಾಗಿ ಬಹುಕಾಲ ಇದ್ದು ಅನೇಕ ಗ್ರಂಥ'ಗಳನ್ನು ರಚಿಸಿದ. ಅನಂತರ ಶ್ರೀಶೈಲದಲ್ಲಿ ನೆಲಸಿ ರಸಸಿದ್ಧಿಯನ್ನು ಪಡೆದದರಿಂದ ಈತನನ್ನು ಸಿದ್ಧನಾಗಾರ್ಜುನನೆಂದು ಕರೆಯುವುದು ವಾಡಿಕೆಯಾಗಿದೆ. ಭಾರತೀಯ ರಸಶಾಸ್ತ್ರವನ್ನು ಕುರಿತ

ರಸಕಚ್ಛಪುಟ, ಕಕ್ಷಪುಟತಂತ್ರ ಅಥವಾ ಸಿದ್ಧಚಾಮುಂಡ ಮುಂತಾದ ಗ್ರಂಥಗಳು ಈತನಿಂದ ರಚಿತವಾಗಿವೆ. (ಕೆ.ಪಿ.ಎಸ್.ಎ.)

**ನಾಗೇಂದ್ರರಾವ್, ಆರ್. :** 1896-1977. ಕನ್ನಡ ರಂಗಭೂಮಿ ಹಾಗೂ ಚಲನಚಿತ್ರರಂಗದ ಉತ್ಕರ್ಷಕ್ಕಾಗಿ ಶ್ರಮಿಸಿದ ಪ್ರಸಿದ್ಧ ನಟ, ನಿರ್ದೇಶಕ, ನಿರ್ಮಾಪಕ, ರಟ್ಟೀಹಳ್ಳಿ ನಾಗೇಂದ್ರರಾವ್ ಎಂಬುದು ಇವರ ಪೂರ್ಣ ಹೆಸರು. 1896 ಜೂನ್ 23ರಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ಜನಿಸಿದರು. ಇವರ ತಂದೆ ರಟ್ಟೀಹಳ್ಳಿ ಕೃಷ್ಣರಾವ್, ತಾಯಿ ರುಕ್ಮಿಣಿದೇವಿ. ನಾಗೇಂದ್ರರಾಯರು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ಅನಂತರ ಅತಿ ಪ್ರಯಾಸದಿಂದ ಪ್ರೌಢಶಾಲೆಯ ವ್ಯಾಸಂಗ ಮುಗಿಸಿದರು. ಆಗ ಶಾಲೆಯ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದು ಉತ್ತಮ ನಟನೆಂಬ ಹೆಸರುಗಳಿಸಿದ್ದರು. ತಂದೆಯ ಮರಣಾನಂತರ ಶಿರಹಟ್ಟಿ ವೆಂಕೋಬರಾಯರ ನಾಟಕಮಂಡಲಿಯಲ್ಲಿ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಒಮ್ಮೆ ಚಂದ್ರಹಾಸ ನಾಟಕದಲ್ಲಿ ವಿಷಯೆಯ ಪಾತ್ರವನ್ನು ನಿರ್ವಹಿಸುತ್ತಿದ್ದಾಗ ವರದಾಚಾರ್ಯರ ರತ್ನಾವಳಿ ಥಿಯೆಟ್ರಿಕಲ್ ಕಂಪನಿಯ ಪ್ರಮುಖ ನಟರಲ್ಲೊಬ್ಬರಾಗಿದ್ದ ಡಿ.ಜಯರಾಯರ ದೃಷ್ಟಿಗೆ ಬಿದ್ದು ಮೆಚ್ಚುಗೆಗಳಿಸಿ ಅವರ ಪ್ರೋತ್ಸಾಹದಿಂದ ವರದಾಚಾರ್ಯರ ಕಂಪನಿಯನ್ನು, ಆ ಮೂಲಕ ರಂಗಭೂಮಿಯನ್ನು ಖಾಯಂ ಆಗಿ ಪ್ರವೇಶಿಸಿದರು.

ವರದಾಚಾರ್ಯರ ಕಂಪನಿ ಸೇರಿದ ಮೇಲೆ ಸ್ತ್ರೀಪಾತ್ರಗಳ ನಿರ್ವಹಣೆ ಇವರ ಪಾಲಿನದಾಯಿತು. ರಾಯರಿಗಿದ್ದ ರೂಪ, ಕಂಠಮಾಧುರ್ಯದಿಂದಾಗಿ, ಸ್ತ್ರೀ ಪಾತ್ರಗಳು ಇವರಿಗೆ ಚೆನ್ನಾಗಿ ಒಪ್ಪುತ್ತಿದ್ದವು. ಪರಿಣಾಮವಾಗಿ ಪ್ರಹ್ಲಾದಚರಿತ್ರೆಯಲ್ಲಿ ಭೂದೇವಿ, ಸುಗ್ರೀವಸಖ್ಯ, ಲಂಕಾದಹನ, ಸಂಪೂರ್ಣ ರಾಮಾಯಣ ನಾಟಕಗಳಲ್ಲಿ ಸೀತೆ, ಶಾಕುಂತಲದಲ್ಲಿ ಶಾಕುಂತಲ, ರಾಮವರ್ಮ-ಲೀಲಾವತಿಯಲ್ಲಿ ಲೀಲಾವತಿ, ಹರಿಶ್ಚಂದ್ರದಲ್ಲಿ ಚಂದ್ರಮತಿ ಮೊದಲಾದ ಪಾತ್ರಗಳು, ಲಭ್ಯವಾದವು. ಸ್ತ್ರೀಪಾತ್ರಗಳಲ್ಲಿನ ಇವರ ಅಭಿನಯ ರಂಗಭೂಮಿಯ ಅಭಿಮಾನಗಳ ಮೆಚ್ಚುಗೆಗೆ ಪಾತ್ರವಾಯಿತು.

ವರದಾಚಾರ್ಯರ ನಿಧನಾನಂತರ ಕಂಪನಿ ನಿಂತಿತು. ಆಗ ರಾಯರು ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾಕ್ಕೆ ಸೇರಿ ಪ್ರಮುಖ ನಟರಾಗಿ, ವ್ಯವಸ್ಥಾಪಕರಾಗಿ ಕಂಪನಿಯ ಏಳ್ಗೆಗಾಗಿ ಶ್ರಮಿಸಿದರು. ಇಲ್ಲಿರುವಾಗ ಕಂಪನಿಗಾಗಿ ತುಕಾರಾಮ್, ದಾನಶೂರ ಕರ್ಣ, ವೀರ ಅಭಿಮನ್ಯು ನಾಟಕಗಳನ್ನು ಬರೆದು ಪ್ರದರ್ಶಿಸಿದರು. ಕಂಪನಿಯ ಪ್ರಮುಖ ನಾಟಕವಾದ ತುಕಾರಾಮ್‌ನಲ್ಲಿ ಇವರು ನಿರ್ವಹಿಸುತ್ತಿದ್ದ ಜೀಜಾಬಾಯಿ ಪಾತ್ರ ರಂಗಭೂಮಿಯಲ್ಲಿ ಸಾಕಷ್ಟು ಹೆಸರುಗಳಿಸಿತು. ನಿರಂತರವಾಗಿ ಸ್ತ್ರೀಪಾತ್ರಗಳನ್ನೇ ನಿರ್ವಹಿಸುತ್ತ ಬಂದ ರಾಯರು ಪುರುಷ ಪಾತ್ರಗಳನ್ನೂ ವಹಿಸತೊಡಗಿದರು. ರಾಜಸೂಯಯಾಗದಲ್ಲಿ ಅರ್ಜುನ, ವೀರ ಅಭಿಮನ್ಯುವಿನಲ್ಲಿ ಅಭಿಮನ್ಯು ಪಾತ್ರಗಳನ್ನು ನಿರ್ವಹಿಸಿ ಪುರುಷಪಾತ್ರಗಳಲ್ಲಿಯೂ ತಮ್ಮ ಕಲಾವಂತಿಕೆಯನ್ನು ಪ್ರದರ್ಶಿಸಿದರು. ಈ ವೇಳೆಗಾಗಲೇ ಮೂಕ ಚಿತ್ರಗಳ ಕಾಲ ಮಾಯವಾಗಿ ಟಾಕಿ ಚಿತ್ರಗಳ ಪ್ರಾದುರ್ಭಾವವಾಗಿತ್ತು. ಚಲನಚಿತ್ರರಂಗದ ಆಕರ್ಷಣೆಗೆ ಸಿಕ್ಕ ರಾಯರು ನಾಟಕ ಕಂಪನಿಯನ್ನು ಬಿಟ್ಟು ಮುಂಬಯಿಗೆ ಹೋದರು. ಅಲ್ಲಿ ತಮಿಳು ನಟ ನಿರ್ದೇಶಕ ರಾಜಾ ಸ್ಯಾಂಡೋ ಅವರ ಪರಿಚಯವಾಗಿ ಅವರ ಪ್ರೋತ್ಸಾಹದಿಂದ ಇಂಪೀರಿಯಲ್ ಫಿಲಮ್ಸ್ ಅವರ ತಮಿಳು ಚಿತ್ರಗಳಲ್ಲಿ ನಟಿಸುವ ಅವಕಾಶ ಲಭಿಸಿತು. ಪಾರಿಜಾತಪುಷ್ಪಹರಣಂ ಇವರ ಅಭಿನಯದ ಮೊದಲ ತಮಿಳು ಚಿತ್ರ. ಈ ಚಿತ್ರದ ಮೂಲಕ ರಾಯರು ಚಲನಚಿತ್ರರಂಗಕ್ಕೆ ಪದಾರ್ಪಣ ಮಾಡಿದರು. ಅನಂತರ ಕೋವಲಂ, ಭಕ್ತ ರಾಮದಾಸ್ ಮುಂತಾದ ತಮಿಳು ಚಿತ್ರಗಳಲ್ಲಿ ಅಭಿನಯಿಸಿದರು. ಈ ನಡುವೆ ಪ್ರಸಿದ್ಧ ರಂಗಭೂಮಿ ನಟ ಸುಬ್ಬಯ್ಯನಾಯ್ಡು ಅವರ ಸ್ನೇಹ ಪರಿಚಯವಾಗಿ ಇಬ್ಬರೂ ಸೇರಿ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯನ್ನು ಸ್ಥಾಪಿಸಿ ಕನ್ನಡ ರಂಗಭೂಮಿಯಲ್ಲಿ ಕ್ರಾಂತಿಯನ್ನುಂಟುಮಾಡಿದರು. ಆ ಕಾಲದಲ್ಲಿ ಕನ್ನಡ ರಂಗಭೂಮಿಯಲ್ಲಿ ಗಣನೀಯ ಪ್ರಗತಿಯುಂಟಾಯಿತು. ಬೆಳಕಿನ ಸಂಯೋಜನೆ, ರಂಗಸಜ್ಜಿಕೆಗಳನ್ನು ಅದ್ಭುತ ರೀತಿಯಲ್ಲಿ ರಂಗಕ್ಕೆ ಅಳವಡಿಸಿದರು. ರಾಯರ ದಕ್ಷ ನಿರ್ದೇಶನದಲ್ಲಿ ಭೂಕೈಲಾಸ ನಾಟಕ ಕರ್ನಾಟಕದಲ್ಲಿ ಪ್ರಚಂಡ, ಯಶಸ್ಸು ಗಳಿಸಿತು. ಇದೇ ನಾಟಕದ ತಮಿಳು ಅವತರಣಿಕೆ ತಮಿಳುನಾಡು, ಹೈದರಾಬಾದ್ ಪ್ರಾಂತ್ಯಗಳಲ್ಲೂ ಜಯಭೇರಿ ಹೊಡೆಯಿತು.

1934ರಲ್ಲಿ ನಿರ್ಮಾಣವಾದ ಪ್ರಥಮ ಕನ್ನಡ ವಾಕ್ಚಿತ್ರ ಸತೀ ಸುಲೋಚನರಾಯರು ಅಭಿನಯಿಸಿದ ಮೊದಲ ಕನ್ನಡ ಚಿತ್ರ. ಇದರಲ್ಲಿ ಇವರು ರಾವಣನಾಗಿ ಅಭಿನಯಿಸಿದರು. 1939ರಲ್ಲಿ ವೇಲ್ ಪಿಕ್ಚರ್ಸ್ ಪಾಲುಗಾರಿಕೆಯೊಂದಿಗೆ ಭೂಕೈಲಾಸ ಚಿತ್ರವನ್ನು ತೆಲುಗಿನಲ್ಲಿ ತಯಾರಿಸಿದರು. ಈ ಚಿತ್ರ ಪ್ರಚಂಡ ಯಶಸ್ಸು ಗಳಿಸಿತು. ಅನಂತರ ಪ್ರಗತಿ ಪಿಕ್ಚರ್ಸ್ ಪಾಲುಗಾರಿಕೆಯೊಂದಿಗೆ ವಸಂತ ಸೇನಾ (1941), ಹರಿಶ್ಚಂದ್ರ, ಮಹಾತ್ಮ ಕಬೀರ್ ಚಿತ್ರಗಳನ್ನು ನಿರ್ಮಿಸಿದರು. ಇವೂ ಶ್ರೇಷ್ಠ ಚಿತ್ರಗಳೆಂದು ಪ್ರಶಂಸೆ ಪಡೆದವು. ವಸಂತಸೇನಾ ಚಿತ್ರಕ್ಕೆ ಚಿತ್ರ ಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಬರೆದವರು ರಾಯರೇ. ಈ ಚಿತ್ರದಲ್ಲಿ ಇವರು ಶಕಾರನ ಪಾತ್ರವಹಿಸಿದ್ದರು. ಈ ಪಾತ್ರ ರಾಯರ ಹೆಸರನ್ನು ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಚಿರಸ್ಥಾಯಿಯನ್ನಾಗಿ ಮಾಡಿತು.

ಸುಬ್ಬಯ್ಯ ನಾಯ್ಡು ಅವರೊಂದಿಗಿದ್ದ ದೀರ್ಘ ಸ್ನೇಹಬಾಂಧವ್ಯ ಕಡಿದುಬಿದ್ದ ಅನಂತರ ರಾಯರು 1947ರಲ್ಲಿ ಜೆಮಿನಿ ಚಿತ್ರಸಂಸ್ಥೆಗೆ ಸೇರಿದರು. ಅಲ್ಲಿ ಜೆಮಿನಿ ಚಿತ್ರ ಸಂಸ್ಥೆಗಾಗಿ ಮೂವರು ತನಯರು ಎಂಬ ಚಿತ್ರವನ್ನು ತಾವೇ ನಿರ್ದೇಶಿಸಿದರು. ಅನಂತರ ತಮಿಳು, ತೆಲುಗು ಹಾಗೂ ಹಿಂದಿಯಲ್ಲಿ ತಯಾರಾದ ಸ್ಟ್ರೇಂಜ್ ಬ್ರದರ್ಸ್ ಚಿತ್ರದಲ್ಲಿ ಖಳನಾಯಕನಾಗಿ ಪಾತ್ರವಹಿಸಿದರು. ಆ ಚಿತ್ರದಲ್ಲಿ ರಾಯರ ಪಾತ್ರ ಶ್ರೇಷ್ಠಮಟ್ಟದ್ದಾಗಿತ್ತು. ಇವರ ಕೀರ್ತಿ ಭಾರತದಾದ್ಯಂತ ಪ್ರಸರಿಸಿತು. 1952ರಲ್ಲಿ ರಾಯರು ಆರೆನ್ನಾರ್ ಪಿಕ್ಚರ್ಸ್ ಎಂಬ ಸ್ವಂತ ಚಿತ್ರ ಸಂಸ್ಥೆಯನ್ನು ಪ್ರಾರಂಭಿಸಿದರು. ಜಾತಕಫಲ ಈ ಸಂಸ್ಥೆಯ ಪ್ರಥಮ ಕನ್ನಡ ಚಿತ್ರ. ಚಿತ್ರದ ಪ್ರಮುಖ ಪಾತ್ರದ ಜತೆಗೆ ರಾಯರು ನಿರ್ದೇಶನದ ಭಾರವನ್ನೂ ತಾವೇ ಹೊತ್ತರು. ಈ ಚಿತ್ರ ತಮಿಳಿನಲ್ಲಿಯೂ ತಯಾರಾಯಿತು. ಹಿನ್ನೆಲೆ ಗಾಯಕ ಪಿ.ಬಿ. ಶ್ರೀನಿವಾಸ್ ಚಿತ್ರರಂಗಕ್ಕೆ ಪದಾರ್ಪಣಗೈದದ್ದು ಈ ಚಿತ್ರದ ಮೂಲಕವೇ. ಅನಂತರ ತಯಾರಾದ ಪ್ರೇಮದ ಪುತ್ರಿ (1957) ರಾಷ್ಟ್ರಪತಿ ರಜತ ಪದಕ ಪಡೆದ ಮೊದಲ ಕನ್ನಡ ಚಿತ್ರವಾಯಿತು. ವಿಜಯನಗರದ ವೀರಪುತ್ರ, ಆನಂದಬಾಷ್ಪ, ಪತಿಯೇ ದೈವ ಇವು ರಾಯರು ತಯಾರಿಸಿದ ಇತರ ಚಿತ್ರಗಳು.

ರಾಯರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಗಾಳಿಗೋಪುರ ಚಿತ್ರದಲ್ಲಿನ ಅಭಿನಯಕ್ಕಾಗಿ 1963ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಶ್ರೇಷ್ಠ ಪೋಷಕನಟ ಎಂಬ ಪ್ರಶಸ್ತಿ ನೀಡಿ ಗೌರವಿಸಿತು. 1969ರಲ್ಲಿ ತೆರೆ ಕಂಡ ಹಣ್ಣೆಲೆ ಚಿಗುರಿದಾಗ ಚಿತ್ರದಲ್ಲಿ ಇವರಿಗೆ ಆ ವರ್ಷದ ಶ್ರೇಷ್ಠನಟರೆಂಬ ಪ್ರಶಸ್ತಿ ಲಭಿಸಿತು. ಅದೇ ವರ್ಷ ತೆರೆ ಕಂಡ ನಮ್ಮ ಮಕ್ಕಳು ಚಿತ್ರದ ಉತ್ತಮ ನಿರ್ದೇಶನಕ್ಕಾಗಿ ಇವರಿಗೆ ರಜತಪದಕ ದೊರೆಯಿತು. 1961ರಲ್ಲಿ ಇವರು ದಕ್ಷಿಣ ಭಾರತ ಕಲಾವಿದರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ದಕ್ಷಿಣ ಭಾರತ ಫಿಲಂ ಚೇಂಬರ್ ಕಾರ್ಯಕಾರಿ ಸಮಿತಿ ಸದಸ್ಯರೂ ಆಗಿದ್ದರು.

ಕರ್ನಾಟಕ ಸಂಗೀತದಲ್ಲೂ ರಾಯರು ಸಾಕಷ್ಟು ಪರಿಣತರಾಗಿದ್ದರು. ಕೆ. ವಾಸುದೇವಾಚಾರ್ಯರಲ್ಲೂ ಚಿಕ್ಕರಾಮರಾಯರಲ್ಲೂ ಕರಿಗಿರಿರಾಯರಲ್ಲೂ ಕೆಲವು ದಿನಗಳ ಕಾಲ ಸಂಗೀತವನ್ನು ಅಭ್ಯಾಸ ಮಾಡಿದ್ದರು.

ಚಲನಚಿತ್ರಗಳಲ್ಲಿ ಅಭಿನಯಿಸುವುದನ್ನು ಕಡಿಮೆ ಮಾಡಿದ ಅನಂತರ ರಾಯರು ಬೆಂಗಳೂರಿನಲ್ಲಿ ಆದರ್ಶ ಫಿಲಂ ಇನ್ಸ್‌ಟಿಟ್ಯೂಟ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಅದರ ಪ್ರಿನ್ಸಿಪಾಲರಾದರು. ಅದರ ಅಭ್ಯುದಯಕ್ಕಾಗಿ ಶ್ರಮಿಸಿದರು. ಈ ಸಂಸ್ಥೆಯಿಂದ ಅನೇಕ ಪ್ರತಿಭಾವಂತ ನಟರು ಚಿತ್ರರಂಗ ಪ್ರವೇಶಿಸಿದ್ದಾರೆ.

ರಾಯರದು ತುಂಬು ಬಾಳು. ತಮ್ಮ ಮೂವರು ಮಕ್ಕಳನ್ನೂ ಕಲಾ ಪ್ರಪಂಚಕ್ಕೆ ತಂದಿದ್ದಾರೆ. ಆರ್.ಎನ್.ಕೃಷ್ಣಪ್ರಸಾದ್ ಛಾಯಾಗ್ರಾಹಕರು

ಆರ್.ಎನ್.ಜಯಗೋಪಾಲ್ ಚಿತ್ರಸಾಹಿತಿ, ಆರ್.ಎನ್.ಸುದರ್ಶನ್ ನಟರು.

ಸುಮಾರು ಮೂರು ದಶಕಗಳ ಕಾಲ ಕನ್ನಡ ಚಿತ್ರರಂಗದ ಹಾಗೂ ರಂಗಭೂಮಿಯ ಏಳಿಗೆಗಾಗಿ ಶ್ರಮಿಸಿ ಕನ್ನಡಿಗರಿಂದ ಕನ್ನಡ ಚಿತ್ರರಂಗದ ಭೀಷ್ಮಾಚಾರ್ಯ ಎಂಬ ಅಭಿದಾನಕ್ಕೆ ಪಾತ್ರರಾದ ರಾಯರು 1977ರ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ನಿಧನರಾದರು. 'ಇದು ನನ್ನ ಕಥೆ ಎಂಬ ಹೆಸರಿನಲ್ಲಿ ಇವರ ಆತ್ಮಕಥೆ'ನ ಪ್ರಕಟವಾಗಿದೆ (1974).

(ಎಸ್.ಎಚ್.ವಿ)

**ನಾಗೇಂದ್ರ ಸ್ಥಪತಿ :** 1913- ಕರ್ನಾಟಕ ಹೆಸರಾಂತ ಶಿಲ್ಪಿ. ಹುಟ್ಟಿದ್ದು ಮೈಸೂರಿನಲ್ಲಿ. ತಂದೆ ಹೆಸರಾಂತ ಶಿಲ್ಪಿ. ಸಿದ್ಧಲಿಂಗಸ್ವಾಮಿ. ಇವರ ನಾಮಕರಣಕ್ಕೆ ಮುಂಚೆ ತೊಟ್ಟಿಲಿನಲ್ಲಿ ಸರ್ಪವೊಂದು ಕಾಣಿಸಿಕೊಂಡದ್ದರಿಂದ ಇವರಿಗೆ ನಾಗೇಂದ್ರ ಸ್ಥಪತಿ ಎಂಬ ಹೆಸರು ಇಡಲಾಯಿತಂತೆ. ತಂದೆಯಿಂದ ಈ ಕಲೆಯಲ್ಲಿ ಆಸಕ್ತರಾಗಿ ಚಾಮರಾಜೇಂದ್ರ ಕಲಾಶಾಲೆಯ ವಿದ್ಯಾರ್ಥಿಯಾಗಿ ಸೇರಿದರು. ಕೆ. ಕೇಶವಯ್ಯ ಇವರ ಕಲಾಗುರು. ಶಿಲ್ಪ ಜ್ಯೋತಿಷ್ಯ, ಚಿತ್ರ ಮುಂತಾದುವುಗಳ ಕಡೆ ಇವರ ಒಲವು ಹೆಚ್ಚಾಗಿ ಪಾಠ ಶಾಲೆಯ ಓದು ಅಷ್ಟಾಗಿ ಮುಂದುವರಿಯಲಿಲ್ಲ. ಸಂಗೀತದಲ್ಲೂ ಅಭಿರುಚಿ ಇತ್ತಾಗಿ ಮೃದಂಗ ವಾದನದಲ್ಲಿ ವಿಶೇಷ ಪರಿಶ್ರಮ ಸಾಧಿಸಿದರು. ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರ ಹಾಗೂ ಸಂಗೀತಶಾಸ್ತ್ರರತ್ನವೆಂದು ಖ್ಯಾತರಾಗಿದ್ದ ವಾಸುದೇವಾಚಾರ್ಯರ ಕಚೇರಿಗಳಲ್ಲಿ ಮೃದಂಗ ಬಾರಿಸಿ ಖ್ಯಾತಿಪಡೆದರು. ಹೀಗೆ ಕಲೆಯ ನಾನಾ ಪ್ರಕಾರಗಳಲ್ಲಿ ಪಳಗಿ ಕೊನೆಗೆ ಪರಂಪರೆಯಿಂದ ಬಂದ ಶಿಲ್ಪವೃತ್ತಿಯೊಂದನ್ನೇ ಕೈಗೂಡಿಸಿಕೊಂಡು ಒಳ್ಳೆಯ ಕೆಲಸ ಮಾಡಿದರು.

ಚಾಮರಾಜೇಂದ್ರ ಕಲಾಶಾಲೆಯಲ್ಲಿ ಪಾಶ್ಚಾತ್ಯ ಸಂಪ್ರದಾಯದಲ್ಲಿ ಚಿತ್ರಕಲಾ ಶಿಕ್ಷಣ ಪಡೆದು ಅನೇಕ ಶಾಸ್ತ್ರೀಯ ವರ್ಣಚಿತ್ರಗಳನ್ನು ಆ ಸಂಪ್ರದಾಯದಲ್ಲಿ ಇವರು ರಚಿಸಿದ್ದಾರೆ. ಇವರ ಅನೇಕ ದೇವದೇವತಾ ಚಿತ್ರಪಟಗಳನ್ನು ನಾನಾ ಕಡೆಗಳಲ್ಲಿ ಕಾಣಬಹುದು. ಮೈಸೂರಿನ ಅರಮನೆಯ ಸಭಾಮಂಟಪದ ಒಳ ಚಾವಣಿ ವಿನ್ಯಾಸದಲ್ಲಿ ಬರುವ ಶಾಸ್ತ್ರೀಯ ಚಿತ್ರಗಳಲ್ಲಿ ತಂದೆಯ ಮಾರ್ಗದರ್ಶನದಲ್ಲಿಯೇ ಕೆಲಸ ಮಾಡುತ್ತ ಇವರು ಉತ್ತಮ ವರ್ಣ ಮೋಡಿಯನ್ನು ಮೆರೆದಿದ್ದಾರೆ. ಇವರು ಉತ್ತಮ ಶಿಲ್ಪಿಗಳು ಎಂಬುದಕ್ಕೆ ಇವರು ಕಡೆದ ನೈಜ ಶಿಲಾಮೂರ್ತಿಗಳೇ ನಿದರ್ಶನ. ಬಸವಕಲ್ಯಾಣದ ಗುಹೆಗೆ ರಚಿಸಿಕೊಟ್ಟ ಅಕ್ಕಮಹಾದೇವಿ, 5 ಅಡಿ ಎತ್ತರವಿರುವ ಮೈಸೂರು ಅರಮನೆಯ ಭುವನೇಶ್ವರಿ, ಮೈಸೂರಿನ ಕಾಮಕಾಮೇಶ್ವರಿ ದೇವಾಲದ ಶಿಲಾಮೂರ್ತಿಗಳು, ಬೆಂಗಳೂರಿನ ಸುಬ್ರಹ್ಮಣ್ಯಪುರದ ದೇವಾಲಯುದ ವಲ್ಲಿದೇವಸೇನ ಸುಬ್ರಹ್ಮಣ್ಯಸ್ವಾಮಿ, ಚಿಕ್ಕಮಗಳೂರಿನ ಸತಿ ಸೋದರ ಸಮೇತನಾದ ಶ್ರೀರಾಮ ವಿಗ್ರಹ, ಗುಲ್ಬರ್ಗಕ್ಕೆ ಮಾಡಿಕೊಟ್ಟ 4 ಅಡಿ ಎತ್ತರದ ಮಹಾಕಾಳಿಕಾ, ದಾವಣಗೆರೆಯ ಪಾರ್ಶ್ವನಾಥ ದೇವಾಲಯಕ್ಕೆ ಮಾಡಿಕೊಟ್ಟ ಪಾರ್ಶ್ವನಾಥ. ಇವುಗಳನ್ನು ಉಲ್ಲೇಖಿಸಬಹುದು.

ಮೈಸೂರಿನ ಕಾಮಕಾಮೇಶ್ವರಿ ದೇವಾಲಚದ ಮುಂದೆ ಬೃಹತ್ ನಂದಿ ವಿಗ್ರಹವೊಂದನ್ನು ಕಡೆಯಬೇಕೆಂಬ ತಂದೆಯ ಆಸೆಯನ್ನು ಇವರು ಈಡೇರಿಸಿದರು (1954).

**ನಾಗೇಗೌಡ, ಎಚ್.ಎಲ್. :** 1915- . ಪ್ರಸಿದ್ಧ ಲೇಖಕ, ಜಾನಪದ ಸಂಗ್ರಹಕಾರ, ವಿದ್ವಾಂಸ, ಅನುವಾದಕ, ಜಾನಪದ ಲೋಕ ಎಂಬ ವಸ್ತುಸಂಗ್ರಹಾಲಯ ಹಾಗೂ ಸಂಶೋಧನ ಕೇಂದ್ರದ ನಿರ್ಮಾತೃ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹೆರಗನಹಳ್ಳಿ ಇವರ ಹುಟ್ಟೂರು. ತಂದೆ ಲಿಂಗೇಗೌಡ, ತಾಯಿ ಹುಚ್ಚಮ್ಮದೇವಿ. ಹೆರಗನಹಳ್ಳಿ, ಅಳೀಸಂದ್ರ, ನಾಗತಿಹಳ್ಳಿ, ಚನ್ನರಾಯಪಟ್ಟಣ, ಚನ್ನಪಟ್ಟಣ, ಬೆಂಗಳೂರು, ಮೈಸೂರು, ಪುಣೆ ಮುಂತಾದ ಕಡೆಗಳಲ್ಲಿ ಶಿಕ್ಷಣ ಪಡೆದರು. ಇವರು ಕಲಿತದ್ದು ವಿಜ್ಞಾನ ಮತ್ತು ನ್ಯಾಯಶಾಸ್ತ್ರಗಳನ್ನು.

ಇವರು ಬಿ.ಎಸ್‌ಸಿ. ಮತ್ತು ಎಲ್.ಎಲ್.ಬಿ. ಪದವಿಗಳನ್ನು ಪಡೆದ ಅನಂತರ 1939 ರಲ್ಲಿ ನರಸಿಂಹರಾಜಪುರ ಕೋರ್ಟ್ ಹೆಡ್ ಮುನ್ಷಿಯಾಗಿ ಸರ್ಕಾರಿ ಸೇವೆಗೆ ಸೇರಿದರು. ಅನಂತರ ಮೈಸೂರು ಸಿವಿಲ್ ಸರ್ವಿಸ್ (ಎಂ. ಸಿ.ಎಸ್.) ಸ್ಪರ್ಧಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ರೆವಿನ್ಯೂ ಇಲಾಖೆಯಲ್ಲಿ ನೇಮಕಗೊಂಡರು. ಅಮಲ್ದಾರ್ (ತಹಸೀಲ್‌ದಾರ್) ಆಗಿ, ಅಸಿಸ್ಟೆಂಟ್ ಕಮಿಷನರ್ ಆಗಿ ಭಾರತ ಸರ್ಕಾರದಲ್ಲಿ ಅನೇಕ ಆಡಳಿತಾತ್ಮಕ ಹುದ್ದೆಗಳನ್ನು ನಿರ್ವಹಿಸಿ 1961 ರಲ್ಲಿ ಐ.ಎ.ಎಸ್. ಶ್ರೇಣಿಗೆ ಸೇರ್ಪಡೆಯಾದರು. ಅನಂತರ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿದ್ದರು (1961 - 69). ಅಲ್ಲಿಂದ ಮುಂದೆ ರಾಜ್ಯದ ಲೇಬರ್ ಕಮಿಷನರ್ ಆಗಿ,ಸರ್ವೆ ಇಲಾಖೆಯ ಮುಖ್ಯಾಧಿಕಾರಿಯಾಗಿ, ಮುಂಬಯಿ ಇಲಾಖೆಯ ಕಮಿಷನರ್ ಆಗಿ ಸೇವೆ ಸಲ್ಲಿಸಿದರು. ಆರು ವರ್ಷಗಳ ಕಾಲ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿದ್ದರು (1973 - 79). ಇವರು ಕರ್ನಾಟಕ ಸರ್ಕಾರದ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಒಮ್ಮೆ ಲೋಕಸಭಾ ಸದಸ್ಯ ಸ್ಥಾನಕ್ಕೆ ಮಂಡ್ಯ ಜಿಲ್ಲೆಯಿಂದ ಸ್ಪರ್ಧಿಸಿದ್ದರು.

ಉದ್ಯೋಗ ಆಡಳಿತ ಕ್ಷೇತ್ರದಲ್ಲಾದರೂ ಇವರ ಆಸಕ್ತಿ ಮೂಡಿದ್ದು ಕನ್ನಡ ಸಾಹಿತ್ಯ ಮತ್ತು ಜಾನಪದದಲ್ಲಿ. ಕಥೆ, ಕವನ, ಕಾದಂಬರಿ, ಪ್ರವಾಸಸಾಹಿತ್ಯ, ಜೀವನ ಚರಿತ್ರೆ, ಜನಪದ ಸಾಹಿತ್ಯ, ಆತ್ಮಚರಿತ್ರೆ, ಸಂಕೀರ್ಣ - ಹೀಗೆ ವಿವಿಧ ಬಗೆಯ ಸು. 50 ಕೃತಿಗಳನ್ನು ಇವರು ರಚಿಸಿದ್ದಾರೆ. ಕಂಡು ಕೇಳಿದ ಕಥೆಗಳು, ಖೈದಿಗಳ ಕಥೆಗಳು - ಇವು ಕಥಾಸಂಕಲನಗಳು. ಕಂಡು ಕೇಳಿದ ಆಗಿಹೋದ ಘಟನೆಗಳನ್ನು ಆಧರಿಸಿ ರಚಿಸಿದ ಎಂಟು ಕಥೆಗಳ ಗುಚ್ಛವೇ ಮೊದಲನೆಯ ಸಂಕಲನ. ಇಲ್ಲಿ ಗ್ರಾಮ್ಯ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲಾಗಿದೆ. ಸಮಾಜದಲ್ಲಿ ಕಂಡುಬರುವ ಅನ್ಯಾಯಗಳ ಚಿತ್ರಣ ಹಾಗೂ ಸುಧಾರಣಾ ಕ್ರಮಗಳನ್ನು ಈ ಕಥೆಗಳಲ್ಲಿ ಕಾಣಬಹುದು. ಖೈದಿಗಳನ್ನು ಸಂದರ್ಶಿಸಿ, ಅವರ ಬದುಕನ್ನು ಅವರ ಮಾತುಗಳಲ್ಲೇ ಧ್ವನಿಮುದ್ರಿಸಿಕೊಂಡು, ಅವಕ್ಕೆ ಕಥಾರೂಪ ನೀಡಿರುವ ಈ ಪ್ರಯತ್ನ ಕನ್ನಡ ಸಾಹಿತ್ಯದಲ್ಲಿ ಒಂದು ವಿನೂತನ ಪ್ರಥಮ ಪ್ರಯೋಗ. ಸಂದರ್ಭದ ಸೆಳೆತ, ಸನ್ನಿವೇಶದ ಒತ್ತಡ, ವಿಚಿತ್ರ ಪ್ರವೃತ್ತಿ, ಚಿತ್ತವಿಕಾರ, ಕ್ಷೋಭೆ, ವಕ್ರತೆ, ವಿಕೃತಿ ಮುಂತಾದುವುಗಳಿಂದ ಖೈದಿಗಳಾಗಿ ಮಾರ್ಪಟ್ಟ ಕ್ಷುದ್ರವೂ ಭೀಭತ್ಸವೂ ಆದ ಚಿತ್ರಣಗಳನ್ನು ಈ ಸಂಕಲನದಲ್ಲಿ ಕಾಣಬಹುದು.

'ನಾನಾಗುವೆ ಗೀಜಗನ ಹಕ್ಕಿ', ಇವರ ಕವನ ಸಂಕಲನಗಳಲ್ಲಿ ಮೊದಲನೆಯದು. ನೇಗಿಲಯೋಗಿ ಎಂಬುದು ಇವರ ಕಾವ್ಯನಾಮ. ಸ್ವತಂತ್ರ ಹಾಗೂ ಅನುವಾದಿತ ಕವನಗಳು ಇದರಲ್ಲಿವೆ. ಗ್ರಾಂಥಿಕ ಭಾಷೆಯೊಡನೆ ಜನಪದ ಭಾಷೆಯನ್ನು ಬಳಸಿ ಹಳ್ಳಿಗರ ಹಾಗೂ ಬೇಸಾಯಗಾರರ ಬವಣೆ ಬೇಸರ ಕಷ್ಟಕಾರ್ಪಣ್ಯ ಚೆಲುವು ಗೆಲುವು ಸಂತೋಷ ಸಂಭ್ರಮಗಳನ್ನು ಈ ಕವಿತೆಗಳಲ್ಲಿ ಚಿತ್ರಿಸಲಾಗಿದೆ. ಕಥೆ-ವ್ಯಥೆ ಎಂಟು ನೀಳ್ಗವನಗಳ ಎರಡನೆಯ ಕವನ ಸಂಕಲನ. ಒಂದೆರಡು ಕಥೆ'ನ ಕವನಗಳೂ ಕೆಲವು ಭಾವಗೀತಾತ್ಮಕವಾದವೂ ಇವೆ. ಎಲ್ಲವೂ ಕವಿಯ ಆಂತರಿಕ ಮನೋಭಾವನೆಯ ಪ್ರತೀಕಗಳೆನಿಸುವಂತಿವೆ. ಈ ಸಂಕಲನದಲ್ಲಿಯೂ ಸ್ವತಂತ್ರ ರಚನೆಗಳೊಂದಿಗೆ ಅನುವಾದಗಳೂ ಇವೆ. ಅನುವಾದಗಳಲ್ಲಿ ಕಾವ್ಯ ಸ್ಫೂರ್ತಿಕೆಯಿದೆ.

ಇವರು ದೊಡ್ಡಮನೆ, ಸೊನ್ನೆಯಿಂದ ಸೊನ್ನೆಗೆ, ಭೂಮಿಗೆ ಬಂದ ಗಂಧರ್ವ ಎಂಬ ಮೂರು ಕಾದಂಬರಿಗಳನ್ನು ಬರೆದಿದ್ದಾರೆ. 'ಕೆನಿಲ್‌ವರ್ತ್' ಸರ್‌ವಾಲ್ಟರ್ ಸ್ಕಾಟ್ ಬರೆದ ಐತಿಹಾಸಿಕ ಕಾದಂಬರಿಯ ಸಂಗ್ರಹಾನುವಾದ.

ದೊಡ್ಡಮನೆ ಬಯಲು ಸೀಮೆಯ ಹಳ್ಳಿಗಳ ಬದುಕನ್ನು ಕುರಿತ ಕಾದಂಬರಿ. ಅವಿಭಕ್ತ ಕುಟುಂಬವೊಂದು ಒಡೆದು ಛಿದ್ರವಾಗುವುದು ಇಲ್ಲಿನ ವಸ್ತು. ಮೂರು ತಲೆಮಾರುಗಳ ಬದುಕನ್ನು ಇದು ಚಿತ್ರಿಸುತ್ತದೆ. ಭಾಷೆಯ ದೃಷ್ಟಿಯಿಂದ ಈ ಕಾದಂಬರಿ ಒಂದು ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಬಯಲು ಸೀಮೆಯ ಒಕ್ಕಲು ಮಕ್ಕಳ ಭಾಷೆ ಇಲ್ಲಿ ಸಹಜ ರೀತಿಯಲ್ಲಿ

ಬಳಕೆಯಾಗಿದೆ. ಹಾಸ್ಯೋಕ್ತಿಗಳು, ನುಡಿಗಟ್ಟುಗಳು, ಗಾದೆಗಳು ಮುಂತಾದುವೆಲ್ಲ ಹಾಸುಹೊಕ್ಕಾಗಿ ಬಳಕೆಯಾಗಿವೆ. ಸೊನ್ನೆಯಿಂದ ಸೊನ್ನೆಗೆ ಪ್ರಾದೇಶಿಕ ಸತ್ತ್ವವುಳ್ಳ ಕಾದಂಬರಿ, ನೂರು ವರ್ಷಗಳಷ್ಟು ಹಿಂದಿನ ಕಥಾವಸ್ತುವನ್ನು ಉಳ್ಳ ಈ ಕಾದಂಬರಿಯಲ್ಲಿ ಅಂದಿನ ಪರಿಸರವನ್ನು ಸಹಜ ರೂಪದಲ್ಲಿ ಕಾಣಬಹುದು. ಸಂಗೀತ ಲೋಕದ ಮಹಾನ್ ಸಾಧಕ ಭೈರವಿ ಕೆಂಪೇಗೌಡರ ಜೀವನವನ್ನು ಕುರಿತ ಕಾದಂಬರಿ ಭೂಮಿಗೆ ಬಂದ ಗಂಧರ್ವ. ಇಲ್ಲಿನ ಕಥಾನಾಯಕನಾದ ಕೆಂಪೇಗೌಡ ಬೇಗಡೆ, ಸಾರಂಗ, ಖರಹರಪ್ರಿಯ, ಶಂಕರಾಭರಣ, ಕಲ್ಯಾಣಿ, ಕೇದಾರಗೌಳ, ಆನಂದಭೈರವಿ ಮುಂತಾದ ರಾಗಗಳಲ್ಲಿ ನಿಷ್ಣಾತರಾಗಿದ್ದರೂ ಅವರ ಅಚ್ಚುಮೆಚ್ಚಿನ ರಾಗ ಭೈರವಿಯಾಗಿತ್ತು. ಈ ರಾಗದ ಹಾಡುಗಾರಿಕೆಯ ಸಿದ್ಧಿಯಿಂದಾಗಿ ಅವರಿಗೆ ಭೈರವಿ ಕೆಂಪೇಗೌಡರೆಂಬ ಕೀರ್ತಿ ಲಭಿಸಿತ್ತು. ಈ ಕಾದಂಬರಿಯಲ್ಲಿ ಗೌಡರ ಕೌಟುಂಬಿಕ ಚಿತ್ರಣವೂ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. 19 ಮತ್ತು 20 ನೆಯ ಶತಮಾನದ ಹಲವಾರು ಸಂಗೀತಸಾಧಕರ ವ್ಯಕ್ತಿ ಚಿತ್ರಣಗಳು ಇಲ್ಲಿ ಸಾಂದರ್ಭಿಕವಾಗಿ ಪ್ರವೇಶ ಪಡೆದಿದೆ. ವಸ್ತುವಿಗೆ ತಕ್ಕ ಭಾಷೆ ಪ್ರಯೋಗವಾಗಿದೆ. ಆಸ್ಪತ್ರೆಯ ರೋಗಿಗಳು ಕ್ಷಣಕಾಲ ನೋವನ್ನೆಲ್ಲ ಮರೆಯಲಿ ಎಂಬ ಉದ್ದೇಶದಿಂದ ಭೈರವಿಯನ್ನು ಹಾಡುತ್ತ ಹಾಡುತ್ತಲೇ ಕೆಂಪೇಗೌಡರು ಕೊನೆಯುಸಿರೆಳೆದರೆಂಬ ಸಂಗತಿ ಮನಮಿಡಿಯುವಂಥದ್ದು.

ಎಚ್.ಎಲ್.ನಾಗೇಗೌಡರ ಸಾಧನೆಗಳಲ್ಲಿ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳ ಸಿದ್ಧತೆ ಹಾಗೂ ಪ್ರಕಟಣೆ ಮತ್ತು ಜಾನಪದ ಕ್ಷೇತ್ರದ ವ್ಯವಸಾಯ - ಇವು ಅತ್ಯಂತ ಮಹತ್ವದವು. ಗ್ರೀಸ್ ರೋಮ್ ಚೀನಾ ಅರಬ್ ಫ್ರಾನ್ಸ್ ಪೋರ್ಚುಗೀಸ್ ಇಟಲಿ ಪರ್ಷಿಯ, ಇಂಗ್ಲೆಂಡ್, ಯುರೋಪ್, ಡಚ್ ಮುಂತಾದ ದೇಶಗಳಿಂದ ವಿವಿಧ ಉದ್ದೇಶಗಳೊಡನೆ ಭಾರತಕ್ಕೆ ಬಂದುಹೋದ ಇನ್ನೂರಕ್ಕೂ ಹೆಚ್ಚು ವಿದೇಶೀ ಪ್ರವಾಸಿಗರು ಎರಡೂವರೆ ಸಾವಿರ ವರ್ಷಗಳ ಅವಧಿಯಲ್ಲಿ ಬರೆದಿಟ್ಟ ದಾಖಲೆಗಳ ಅಮೂಲ್ಯ ಸಂಗ್ರಹವೇ ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು. ಒಟ್ಟು ಹತ್ತು ಸಂಪುಟಗಳಲ್ಲಿ ಪ್ರಕಟವಾಗಿರುವ ಬೃಹತ್ ಪ್ರವಾಸ ಕಥನವಿದು. ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಅದ್ವಿತೀಯ ಕೊಡುಗೆಯಾಗಿದೆ ಎಂಬುದಾಗಿ ಕುವೆಂಪು ಅವರು ಈ ಸಂಪುಟಗಳನ್ನು ಪ್ರಶಂಸಿಸಿದ್ದಾರೆ. ಇತಿಹಾಸ, ಸಂಸ್ಕೃತಿ, ಜಾನಪದ, ಸಮಾಜಗಳು, ಜನಾಂಗಗಳು, ಪುರಾತತ್ತ್ವ ಅಂಶಗಳು, ಆಚರಣೆಗಳು ಇತ್ಯಾದಿ ಬಹುಮುಖ ವಿವರಗಳನ್ನು ಈ ಸಂಪುಟಗಳು ಒಳಗೊಂಡಿವೆ. ಭಾರತದ ಇತಿಹಾಸವನ್ನು ರೂಪಿಸುವಲ್ಲಿ ಈ ಸಂಪುಟಗಳಿಂದ ದೊರೆಯುವ ನೆರವು ಅಪಾರ. ಪ್ರತಿಯೊಂದು ದಾಖಲೆಯ ಪ್ರಾರಂಭದಲ್ಲಿ, ಅದರ ಮಹತ್ವ, ಅದರ ಸತ್ಯಾಸತ್ಯತೆ ಮುಂತಾದುವುಗಳನ್ನು ತಿಳಿಸುವ ಪ್ರಾಸ್ತಾವಿಕ ಟಿಪ್ಪಣಿಗಳಿವೆ. ಭಾಷೆ ಸರಳವೂ ಸುಲಲಿತವೂ ಆಗಿದ್ದು ನಿರೂಪಣೆ ಸರಾಗವಾಗಿದೆ. ಕನ್ನಡದಲ್ಲಿ ಇಂಥ ಅಪರೂಪದ ಅನುವಾದ ಇದೊಂದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸ್ಥಾಪನೆಗಾಗಿಯೂ ಹೋರಾಡಿದ (1980) ಗೌಡರು ಯಶಸ್ವಿಯಾಗಿ ಅದರ ಪ್ರಥಮ ಅಧ್ಯಕ್ಷರಾಗಿಯೂ ನೇಮಕಗೊಂಡರು. ಒಟ್ಟು ಆರು ವರ್ಷಗಳ ಕಾಲ ಅಧ್ಯಕ್ಷರಾಗಿದ್ದ ಗೌಡರು ಅಕಾಡೆಮಿ ಹಮ್ಮಿಕೊಳ್ಳಬೇಕಿದ್ದ ಕಾರ್ಯಕ್ರಮಗಳ ಬಗ್ಗೆ ಭದ್ರ ಬುನಾದಿ ಹಾಕಿದರು.

ಜಾನಪದ ಕ್ಷೇತ್ರದಲ್ಲಿ ನಾಗೇಗೌಡರದು ಅದ್ವಿತೀಯ ಸಾಧನೆ. ಈ ಕ್ಷೇತ್ರದಲ್ಲಿ ಅಪಾರವಾಗಿ ದುಡಿದಿರುವ ಇವರು ಅನೇಕ ಸಂಗ್ರಹಗಳನ್ನೂ ಬರೆಹಗಳನ್ನೂ ಪ್ರಕಟಿಸಿದ್ದಾರೆ. ಸೋಬಾನೆ ಚಿಕ್ಕಮ್ಮನ ಪದಗಳು ಒಂದು ವಿಶಿಷ್ಟ ಸಂಕಲನ. ಇದರಲ್ಲಿರುವ ಹಾಡುಗಳನ್ನು ಸೋಬಾನೆ ಪದಗಳು, ಒಸಗೆಯ ಪದಗಳು, ರಾಗಿ ಬೀಸುವ ಪದಗಳು, ತಿಂಗಳು ಮಾವನ ಪದಗಳು, ದೇವರ ಪದಗಳು, ನಂಜುಂಡ ಲಿಂಗ, ಮೇಲುಕೋಟೆ ಚೆಲುವಯ್ಯ, ಈರೋಬಿ, ಗಂಗೆಗೌರಿ, ನಾಗರಗನ್ನೆ, ಜವರಾಯ, ರವಿಕಣ್ಣ ಮತ್ತು ಮಾದೇವಿ - ಎಂದು ವಿಭಾಗಿಸಲಾಗಿದೆ. ಹಾಡುಗಳಿಗೆ ಸ್ವರಪ್ರಸ್ತಾರ ಹಾಕಲಾಗಿದೆ.

ಕನ್ನಡ ಜನಪದ ಕಥೆಗಳ ವೈವಿಧ್ಯ ವ್ಯಾಪ್ತಿಗಳನ್ನು ಪರಿಚಯಿಸುವ ಸಂಕಲನ 'ಕರ್ನಾಟಕ ಜನಪದ ಕಥೆಗಳು', ಕರ್ನಾಟಕದ ಎಲ್ಲ ಜಿಲ್ಲೆಗಳನ್ನು ಪ್ರತಿನಿಧಿಸುವ ನೂರು ಕಥೆಗಳ ಗುಚ್ಛವಿದು. ವಿಶ್ವ ಜನಪದ ಕಥಾ ಶ್ರೇಣಿಯಲ್ಲಿ ಶ್ರೇಷ್ಠ ಕಾಣಿಕೆಗಳನ್ನೊಳಗೊಂಡ ಮಹತ್ವದ ಕೃತಿ.

'ಪದವವೆ ನಮ್ಮ ಎದೆಯಲ್ಲಿ' ಗಾತ್ರದಲ್ಲಿ ಹಾಗೂ ಗುಣದಲ್ಲಿ ಬೃಹತ್ತಾದ ಕೃತಿ. ಸಂಸ್ಕೃತಿಯ ಅಧ್ಯಯನದ ಹಾದಿಯಲ್ಲಿ ವಿಪುಲ ಸಾಮಗ್ರಿ ಒದಗಿಸಿದೆ. ವೃತ್ತಿಗಾಯಕರ ಹಾಡುಗಳನ್ನೂ ಇದು ಒಳಗೊಂಡಿದೆ. ಸೋಬಾನೆ ಪದಗಳು, ಒಸಗೆ ಪದಗಳು, ಲಾಲಿ ಪದಗಳು, ಬಾಂಧವ್ಯದ ಹಾಡುಗಳು, ದೇವಿ ಮತ್ತು ದೇವರು, ಹಾಡ್ಗತೆಗಳು, ಹೊಲೆಯರು ಹೊಗಳುವ ಪದಗಳು, ಕೋಲಾಟದ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು, ಪದವವೆ ನಮ್ಮ ಎದೆಯಲ್ಲಿ - ಎಂಬ ಹನ್ನೊಂದು ಭಾಗಗಳಲ್ಲಿ ಈ ಸಂಕಲನ ರೂಪುಗೊಂಡಿದೆ. ಪದವವೆ ನಮ್ಮ ಎದೆಯಲ್ಲಿ ಎಂಬ ಕೊನೆಯ ಭಾಗದಲ್ಲಿ ಬುಡುಬುಡಿಕೆಯವರು, ಹಕ್ಕಿಪಿಕ್ಕರು, ಗೊಲ್ಲರು, ಹೆಳವರು, ಚೌಡಿಕೆಯವರು, ಮಲೆಕುಡಿಯರು, ಲಂಬಾಣಿಗಳು ಮುಂತಾದ ಜನಾಂಗಗಳವರು ಹಾಡಿದ ಹಾಡುಗಳಿವೆ. ಆಯಾ ಹಾಡುಗಳ ಪ್ರಾರಂಭದಲ್ಲಿ ಆಯಾ ಜನಾಂಗದ ಪರಿಚಯವಿದೆ. ಜನಾಂಗಗಳ ಹಾಗೂ ಅವರ ಸಂಸ್ಕೃತಿಯ ಅಧ್ಯಯನಕ್ಕೆ ಇಲ್ಲಿ ಸಾಕಷ್ಟು ಸಾಮಗ್ರಿ ಇದೆ.

ಮೈಲಾರಲಿಂಗನ ಕಾವ್ಯ, ಹಾಡಾನ ಬನ್ನಿ ದನಿಯೆತ್ತಿ, ಹಾವು ತುಳಿದೇನೆ, ಗ್ರಾಮ ದೇವತೆ ಮಾರಮ್ಮ, ಆರಂಬದೆತ್ತು, ಐನೂರು, ಆನೆ ಬಂತೊಂದಾನೆ, ಗಾದೆಗಳು, ದುಂಡುಮಲ್ಲಿಗಿ ಹೂವು ಬುಟ್ಟೀಲಿ ಬಂದಾವ, ಪ್ರಶಸ್ತಿ ಪಡೆದ ಮಹನೀಯರು - ಇವು ಜಾನಪದಕ್ಕೆ ಸಂಬಂಧಿಸಿದ ಸಂಗ್ರಹಗಳು. ಸರೋಜಿನಿದೇವಿ ಎಂಬ ಜೀವನ ಚರಿತ್ರೆ, ಪೆರಿಯರ್ ಎಲ್ವಿನರ ಗಿರಿಜನ ಪ್ರಪಂಚ ಎಂಬ ಅನುವಾದ ಗ್ರಂಥವಲ್ಲದೆ, ನನ್ನೂರು, ಬೆಟ್ಟದಿಂದ ಬಟ್ಟಲಿಗೆ ಎಂಬ ಗ್ರಂಥಗಳನ್ನೂ ಇವರು ಪ್ರಕಟಿಸಿದ್ದಾರೆ. 'ನಾಗಸಿರಿ' ಇವರ ಆತ್ಮಕತೆ - ಜೀವನಯಾತ್ರೆ, ವಿದೇಶಯಾತ್ರೆ, ಚುನಾವಣಾ ಯಾತ್ರೆ, ಜಾನಪದ ಯಾತ್ರೆ ಎಂಬ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿದೆ. ಎಚ್.ಎ. ರಾಮಕೃಷ್ಣ ಎಂಬ ವಿದ್ವಾಂಸರೊಂದಿಗೆ ಇವರು ಎಸೆನ್ಶಿಯಲ್ಸ್ ಆಫ್ ಕರ್ನಾಟಕ ಫೋಕ್‌ಲೋರ್ ಎಂಬ ಇಂಗ್ಲಿಷ್ ಗ್ರಂಥವನ್ನು ಪ್ರಕಟಿಸಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಎ ಕ್ಯಾಟಲಾಗ್; ಜಾನಪದ ಲೋಕ ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. 'ಕರ್ನಾಟಕ ಜಾನಪದ - ಚಿತ್ರಗಳಲ್ಲಿ' ಎಂಬ ಗ್ರಂಥವೂ ಪ್ರಕಟವಾಗಿದೆ.

ಎಲ್ಲಕ್ಕೂ ಕಲಶಪ್ರಾಯವಾದ ಇವರ ಸಾಧನೆ ಎಂದರೆ ರಾಮನಗರದ ಬಳಿ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಸ್ಥಾಪನೆಯಾಗಿರುವ ಜಾನಪದ ಲೋಕ (ನೋಡಿ). ಜಾನಪದ ಜಗತ್ತು ಎಂಬ ತ್ರೈಮಾಸಿಕ 1979 ರಿಂದ ಇವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದೆ. 'ಕನ್ನಡ ಜಾನಪದ ಕೋಶ'ಕ್ಕೂ ಇವರೇ ಸಂಪಾದಕರು. ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಇಲ್ಲಿ ಜನಪದ ಕಲಾಪ್ರದರ್ಶನಗಳು ನಡೆಯುತ್ತವೆ.

ಇವರಿಗೆ ಅನೇಕ ಬಹುಮಾನ, ಪ್ರಶಸ್ತಿ, ಗೌರವಗಳು ದೊರಕಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1974), ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1988), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1990), ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್ (1992) - ಇವು ಇವರಿಗೆ ಸಂದಿರುವ ಗೌರವಗಳು. ಇವರ ಗೌರವಾರ್ಥ ನಾಗವಲ್ಲಿ ಎಂಬ ಸಂಭಾವನಾ ಗ್ರಂಥವೂ (1979), ಇವರ ಜೀವನ ಸಾಧನೆಗಳ ಒಟ್ಟು ನೋಟವನ್ನು ಒಳಗೊಂಡ 'ನಾಗಸಂಪದ' ಎಂಬ ಕೃತಿಯೂ (2001) ಪ್ರಕಟವಾಗಿವೆ. (ಕೆ.ಆರ್.)

**ನಾಗೇಶ ಭಟ್ಟ :** 1741-82. ಹಿರಿಯ ಉತ್ತರ ಕನ್ನಡ ಜಿಲ್ಲೆಯಲ್ಲಿನ ಹಳದೀ ಪುರದಲ್ಲಿ ಹುಟ್ಟಿದರು. ಸಂಸ್ಕೃತ ವಿದ್ವಾಂಸ. ಇವನನ್ನು ಮಹಾಬಲ ಭಟ್ಟ ಎಂದೂ ಕರೆಯುತ್ತಿದ್ದರು. ತಂದೆ ವೇಂಕಟೇಶ ಭಟ್ಟ. ತಂದೆಯ ಬಳಿಯಲ್ಲೇ ಓದಿ ಧರ್ಮಶಾಸ್ತ್ರ,

ಜ್ಯೋತಿಷ್ಯ, ಯಾಜ್ಞಿಕ ಇತ್ಯಾದಿಗಳಲ್ಲಿ ನಿಷ್ಣಾತನಾದ. ಇವನದು ವೈಷ್ಣವ ಪಂಥ. ಕರ್ನಾಟಕದಲ್ಲಿ ಶ್ರೌತ, ಸ್ಮಾರ್ತಕರ್ಮಗಳ ವಿಷಯಗಳನ್ನು ತಿಳಿದುಕೊಂಡವರಲ್ಲಿ ಈತನಿಗೆ ಅಗ್ರಸ್ಥಾನ. ಇಂದಿಗೂ ಆ ಮರ್ಯಾದೆ ಈತನ ವಂಶಜರಿಗೆ ಸಲ್ಲುತ್ತಿದೆ.

ಸ್ಮೃತ್ಯರ್ಥಮುಕ್ತಾವಲೀ, ತಾಂತ್ರಿಕಮುಕ್ತಾವಲೀ ಮತ್ತು ಆಗಮಗ್ರಂಥ - ಇವು ಮೂರು ಧರ್ಮಶಾಸ್ತ್ರಕ್ಕೆ ಸಂಬಂಧಪಟ್ಟ ಈತನ ಗ್ರಂಥಗಳು. ಆರ್ಯತಂತ್ರ, ಆರ್ಯಕೌತುಕ ಮತ್ತು ಮಹಾಬಲಸಿದ್ಧಾಂತ - ಇವು ಮೂರು ಜ್ಯೋತಿಷಶಾಸ್ತ್ರದಲ್ಲಿನ ಗಣಿತ ವಿಷಯಗಳಿಗೆ ಸಂಬಂಧಪಟ್ಟವು. ಇವನ ಸಂಸ್ಕೃತ ಶೈಲಿ ಸರಳವೂ ಸುಬೋಧವೂ ಆಗಿದೆ.

**ನಾಗೇಶರಾವ್, ಜಿ. :** 1886-1960. ಕನ್ನಡ ರಂಗಭೂಮಿಯ ಪ್ರಸಿದ್ಧ ನಟ ಹಾಗೂ ಗಾಯಕರು. ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಬಾಣಾವರಕ್ಕೆ ಸು. 11 ಕಿಮೀ ದೂರದಲ್ಲಿರುವ ಗರುಡನಗಿರಿ ಇವರ ಪೂರ್ವಜರು ವಾಸಿಸುತ್ತಿದ್ದ ಸ್ಥಳ. ನಾಗೇಶರಾಯರು ಶ್ರೀರಂಗಪಟ್ಟಣದಲ್ಲಿ 1986 ಡಿಸೆಂಬರ್ 2ರಂದು ಜನಿಸಿದರು. ಇವರ ತಂದೆ ಶ್ರೀಕಂಠಯ್ಯನವರು ಶ್ರೀರಂಗಪಟ್ಟಣದಲ್ಲಿ ಖ್ಯಾತ ವಕೀಲರಾಗಿದ್ದರು. ನಾಗೇಶರಾಯರಿಗೆ ಮೂವರು ಸೋದರಿಯರೂ ಒಬ್ಬ ಸೋದರನೂ ಇದ್ದರು. ತೆರಕಣಾಂಬಿಯ ಲಕ್ಷ್ಮೀನಾರಾಯಣ ಜೋಯಿಸರ ಮಗಳು ಗೌರಮ್ಮ ಇವರ ಧರ್ಮಪತ್ನಿ. ರಾಯರಿಗೆ ಮಕ್ಕಳಿರಲಿಲ್ಲ.

ನಾಗೇಶರಾಯರು ತಮ್ಮ ಪ್ರಾಥಮಿಕ ಹಾಗೂ ಸ್ವಲ್ಪಕಾಲ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಶ್ರೀರಂಗಪಟ್ಟಣದಲ್ಲಿ ನಡೆಸಿದರು. ಮುಂದಿನ ಶಿಕ್ಷಣಕ್ಕಾಗಿ ಮಂಡ್ಯಕ್ಕೆ ಬಂದಾಗ ಇವರಿಗೆ 12 ವರ್ಷ ವಯಸ್ಸು. ಈ ವಯಸ್ಸಿಗೇ ಇವರಿಗೆ ಸಂಗೀತದ ಗೀಳು ಹಿಡಿಯಿತು. ಮಂಡ್ಯದಲ್ಲಿ ಓದುತ್ತಿದ್ದಾಗ ನಾಟಕಶಿರೋಮಣಿ ಎ.ವಿ.ವರದಾಚಾರ್ಯರ ರತ್ನಾವಳಿ ಥಿಯೆಟ್ರಿಕಲ್ ಕಂಪನಿ ಅಲ್ಲಿ ಮೊಕ್ಕಾಂ ಪ್ರಾರಂಭಿಸಿ ನಾಟಕವಾಡತೊಡಗಿದಾಗ ಸಂಗೀತದ ಗೀಳಿನ ಇವರಿಗೆ ನಾಟಕದಲ್ಲಿ ಗೀಳೂ ಹತ್ತಿತ್ತು. ಅದನ್ನು ಬಿಡಿಸಲು ಮಗನ ಗೀಳನ್ನು ಸೂಕ್ಷ್ಮವಾಗಿ ತಿಳಿದಿದ್ದ ಇವರ ತಂದೆಯವರು ಹೆಚ್ಚಿನ ಓದಿಗಾಗಿ ಬೆಂಗಳೂರಿಗೆ ಕಳುಹಿಸಿದರು. ಅಲ್ಲಿರುವಾಗ ಓದಿನ ಕಡೆ ಗಮನ ಹರಿಸದೆ ಅಂದು ಉಚ್ಛ್ರಾಯಸ್ಥಿತಿಯಲ್ಲಿದ್ದ ಬೆಂಗಳೂರು ಯೂನಿಯನ್ ಎಂಬ ಕಲಾವಿಲಾಸಿ ಸಂಸ್ಥೆಯೊಡನೆ ನಿಕಟ ಸಂಪರ್ಕವಿರಿಸಿಕೊಂಡರು. ಅಲ್ಲಿಗೆ ವಿದ್ಯಾಭ್ಯಾಸವೂ ನಿಂತುಹೋಯಿತು. ಈ ಮಧ್ಯೆ ಇವರ ಹಿರಿಯ ಭಾವಂದಿರೊಬ್ಬರು ಮೈಸೂರಿನಲ್ಲಿ ದೈವಾಧೀನರಾದುದರಿಂದ ಮೈಸೂರಿಗೆ ಧಾವಿಸಿದರು. ಅನಂತರ ಮೈಸೂರಿನಲ್ಲಿ ಮರಿಮಲ್ಲಪ್ಪ ಶಾಲೆಗೆ ಸೇರಿದರಾದರೂ ವಿದ್ಯಾಭ್ಯಾಸ ಹೆಚ್ಚು ಮುಂದುವರಿಯಲಿಲ್ಲ. ಇಲ್ಲಿರುವಾಗ ಅರಮನೆ ಕಂಪನಿ ಹಾಗೂ ವರದಾಚಾರ್ಯರ ಕಂಪನಿ ನಾಟಕಗಳು ಇವರನ್ನು ಆಕರ್ಷಿಸಿದವು.

ಮೊದಲಿನಿಂದಲೂ ರಂಗಭೂಮಿಯ ಬಗ್ಗೆ ಕುತೂಹಲ. ಆಸಕ್ತಿ ಹೊಂದಿದ್ದ ನಾಗೇಶರಾಯರು ಸ್ವಯಂದತ್ತವಾದ ಪ್ರತಿಭೆಯಿಂದಲೂ ವರದಾಚಾರ್ಯರ ಆಶೀರ್ವಾದಬಲದಿಂದಲೂ ಕನ್ನಡ ನಾಟಕರಂಗದ ನಿಸ್ಸೀಮ ಕಲಾವಿದರೆನಿಸಿದರು. ಮುಂದೆ ವರದಾಚಾರ್ಯರ ಕಂಪನಿ, ಶ್ರೀ ಸಾಮ್ರಾಜ್ಯಲಕ್ಷ್ಮೀ ನಾಟಕ ಸಭಾ, ಶ್ರೀ ಚಾಮುಂಡೇಶ್ವರಿ ನಾಟಕ ಸಭಾ ಮತ್ತು ಗುಬ್ಬಿ ಕಂಪನಿ ಮೊದಲಾದ ವೃತ್ತಿನಾಟಕ ಕಂಪನಿಗಳಲ್ಲಿ ಇವರ ಕಲಾಸೇವೆ ಅವ್ಯಾಹತವಾಗಿ ಸಾಗಿ ನಾಯಕ ನಟರಾಗಿ ಪ್ರಖ್ಯಾತರಾದರು.

ಶಾಕುಂತಲ ನಾಟಕದಲ್ಲಿ ದುಷ್ಯಂತನಾಗಿ, ಹರಿಶ್ಚಂದ್ರ ನಾಟಕದಲ್ಲಿ ಹರಿಶ್ಚಂದ್ರನಾಗಿ ಇವರ ಅಭಿನಯ ಮತ್ತು ಹಾಡುಗಾರಿಕೆ ಅದ್ವಿತೀಯವಾಗಿರುತ್ತಿದ್ದಿತು. ನಾಗೇಶರಾಯರೊಂದಿಗೆ ಹಲವಾರು ವರ್ಷಕಾಲ ಶ್ರೀ ಸಾಮ್ರಾಜ್ಯಲಕ್ಷ್ಮೀ ನಾಟಕ ಸಭಾ, ಚಾಮುಂಡೇಶ್ವರಿ ನಾಟಕ ಸಭಾಗಳಲ್ಲಿ ನಾಯಕಿಯಾಗಿ ನಟಿಸಿದ ರಂಗ ಭೂಮಿಯ ಪ್ರಸಿದ್ಧ ಅಭಿನೇತ್ರಿ ಹಾಗೂ ಸಂಗೀತ ವಿದುಷಿ ಮಳವಳ್ಳಿ ಸುಂದರಮ್ಮನವರು ಇವರ ಅಭಿನಯಸಾಮರ್ಥ್ಯವನ್ನು ಪ್ರಶಂಸಿಸಿದ್ದಾರೆ.

ನಾಗೇಶರಾಯರು ಅಭಿನಯಿಸುತ್ತಿದ್ದ ಅರ್ಜುನ, ಕೀಚಕ, ಉತ್ತಾನಪಾದ, ಮನ್ಮಥ, ಕಾಳಿದಾಸ, ವತ್ಸರಾಜ - ಈ ಮೊದಲಾದ ಪಾತ್ರಗಳು ಜೀವಂತವಾಗಿರುತ್ತಿದ್ದುವು.

ನಾಗೇಶರಾಯರು ಜೀವಾನಂದರತ್ನಾವಳೀ ನಾಟಕ ಮಂಡಳಿ, ಆರ್ಯ ರತ್ನಾವಳೀ ನಾಟಕ ಸಭಾ ಎಂಬ ಎರಡು ಸ್ವಂತ ಸಂಸ್ಥೆಗಳನ್ನು ನಡೆಸಿದರಾದರೂ ಆರ್ಥಿಕ ಪ್ರೋತ್ಸಾಹವಿಲ್ಲದೆ ಅವು ಹೆಚ್ಚು ಕಾಲ ಮುಂದುವರಿಯಲಿಲ್ಲ. ಇವರ ಅಭಿನಯ ಹಾಗೂ ಸಂಗೀತಜ್ಞಾನವನ್ನು ಚಂಬೈ ವೈದ್ಯನಾಥ ಭಾಗವತರು, ಸ್ಥಾನಂ ನರಸಿಂಹರಾವ್, ಉಸ್ತಾದ್ ಕರೀಂಖಾನ್ ಮೊದಲಾದ ಗಣ್ಯ ವಿದ್ವಾಂಸರು ಪ್ರಶಂಸಿಸಿದ್ದಾರೆ.

ಓಡಿಯನ್ ಕಂಪನಿ ಎಂಬ ಹೆಸರಾಂತ ಧ್ವನಿಮುದ್ರಿಕೆ ಸಂಸ್ಥೆ ನಾಗೇಶರಾಯರು ಹಾಡಿದ ಭೀಷಣತಪೋಮಹಾಗ್ನಿ (ಮನ್ಮಥವಿಜಯ), ಅಡಿಗಡಿಗಂಗುಳಿ (ಶಾಕುಂತಲಾ), ಚೇತೋಜನ ಬಾಣ (ಕಬೀರ್), ಏಕೆ ಕೋಪಿಪೆ (ವಿರಾಟಪರ್ವ), ಪೋಗುವೆ ಎಲ್ಲಿಗೆ (ವಿರಾಟಪರ್ವ) ಮೊದಲಾದ ಹಾಡುಗಳನ್ನು ಧ್ವನಿ ಮುದ್ರಿಸಿಕೊಂಡಿದೆ (1924). ಈ ಧ್ವನಿಮುದ್ರಿಕೆಗಳು ಅಂದು ಕನ್ನಡನಾಡಿನಲ್ಲೂ ನಾಡಿನ ಹೊರಗೂ ಪ್ರಸಿದ್ಧವಾಗಿದ್ದುವು.

ಇವರು 1960 ಜನವರಿ 21ರಂದು ನಿಧನರಾದರು. (ಎಸ್.ಎಚ್.ವಿ.)

**ನಾಗೇಶ ಶಾಸ್ತ್ರಿ, ವೈ. :** 1893-1974. ಕನ್ನಡ ಭಾಷಾಸೇವಕರು ಬಳ್ಳಾರಿ ಜಿಲ್ಲೆಯ ಏಳುಬೆಂಚೆ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ನಯನಸ್ವಾಮಿ, ತಾಯಿ ನೀಲಮ್ಮ. ಬಡತನದಿಂದಾಗಿ ಶಾಲೆಯಲ್ಲಿ ಹೆಚ್ಚಿನ ವ್ಯಾಸಂಗ ಮಾಡಲಾಗಲಿಲ್ಲವಾದರೂ ಸ್ವತಂತ್ರವಾಗಿ ಕನ್ನಡ, ಸಂಸ್ಕೃತ, ತೆಲುಗು, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಪರಿಶ್ರಮವನ್ನು ಸಂಪಾದಿಸಿಕೊಂಡರು. ಕೊಪ್ಪಳ ಗವಿಮಠದ ಕೊಂಗೋಡು ವೀರಭದ್ರ ಶಾಸ್ತ್ರಿಗಳಲ್ಲಿ ಮೂರು ವರ್ಷಕಾಲ ಸಂಸ್ಕೃತ ಸಾಹಿತ್ಯವನ್ನು ವ್ಯಾಸಂಗ ಮಾಡಿದರು. ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲು, ವೀರಶೈವ ಕಾಲೇಜು, ಬೆಳಗಾಂವಿಯ ಲಿಂಗರಾಜ ಕಾಲೇಜು ಮತ್ತು ಮದನಪಲ್ಲಿಯ ಥಿಯೋಸಾಫಿಕಲ್ ಕಾಲೇಜುಗಳಲ್ಲಿ ಕನ್ನಡ ಪಂಡಿತರಾಗಿ ಕೆಲಸಮಾಡಿದರು. ಕರ್ನಾಟಕ ಬಂಧು ಎಂಬ ವಾರಪತ್ರಿಕೆಯನ್ನು 1925ರಲ್ಲಿ ಪ್ರಾರಂಭಿಸಿ ಬಳ್ಳಾರಿಯಿಂದ ಕೆಲವು ವರ್ಷಗಳ ಕಾಲ ನಡೆಸಿದರು.

ಇವರ ಸಾಹಿತ್ಯಸೇವೆ ಗಣ್ಯವಾದುದು. ಮರಿಯೋಗೀಶ್ವರ ಪುರಾಣ (1932) ಗವಿಸಿದ್ದೇಶ್ವರ ಪುರಾಣ (1950) ಮೊದಲಾದ ಪುರಾಣ ಕಥೆಗಳನ್ನು ಪದ್ಯದಲ್ಲಿ ಬರೆದಿದ್ದಾರೆ. ಹಳಗನ್ನಡ ಮತ್ತು ಪ್ರಾಚೀನ ಸಂಸ್ಕೃತ ಕಾವ್ಯಗಳಲ್ಲಿ ಆಸಕ್ತಿ ವಹಿಸಿದ್ದ ಇವರು, ಕಾಳಿದಾಸನ ರಘುವಂಶ ಮತ್ತು ಕುಮಾರ ಸಂಭವಗಳನ್ನು ಷಟ್ಪದಿ ಚಂಪೂ ಶೈಲಿಯಲ್ಲೂ ಭಗವದ್ಗೀತೆ ಮತ್ತು ಚಂದ್ರಾಲೋಕ ಗ್ರಂಥಗಳನ್ನು ಚಂಪೂಶೈಲಿಯಲ್ಲೂ ಕನ್ನಡಕ್ಕೆ ತಂದಿದ್ದಾರೆ. ಮಲುಹಣ ಚರಿತ್ರೆ, ಪಂಪಾಂಬಿಕಾಪರಿಣಯ, ವಜ್ರಾಂಗುಳೀಯ, ಮೈರಾವಣಚರಿತ್ರೆ, ವಿಜಯನಗರಾಭ್ಯುದಯ - ಇವು ಇವರು ರಚಿಸಿರುವ ನಾಟಕಗಳು. ನೀತಿ ಚಿಂತಾಮಣಿ, ಜಯಚಾಮರಾಜ ಪಟ್ಟಾಭಿಷೇಕ - ಇವು ಇವರ ಕಾವ್ಯಗಳು. ಅಭಿನವ ಸೀತೆ ಮತ್ತು ವಿದ್ಯಾವಿನೋದಿನಿ ಎಂಬ ಎರಡು ಕಾದಂಬರಿಗಳನ್ನು ಇವರು ಬರೆದಿದ್ದಾರೆ. ವೀರಶೈವಧರ್ಮಬೋಧಿನಿ, ಅಷ್ಟಾವರಣವಿವೇಕ, ಇಷ್ಟಲಿಂಗೋಪಾಸನಕ್ರಮ, ಸರ್ವಧರ್ಮಸಮನ್ವಯಸಿದ್ಧಾಂತ, ಶಕ್ತಿವಿಶಿಷ್ಟಾದ್ವೈತ, ಬಸವಣ್ಣನವರ ವೀರಶೈವ ಸಮಾಜ - ಇವು ಇವರು ರಚಿಸಿರುವ ತಾತ್ತ್ವಿಕ ಗ್ರಂಥಗಳು. ಮಗ್ಗೆಯ ಮಾಯಿದೇವನ ಶಿವಾನುಭವಸೂತ್ರಸಾರ, ವಿಶೇಷಾರ್ಥ ಪ್ರಕಾಶಿಕೆ, ಶತಕತ್ರಯಗಳು, ಸರ್ಪಭೂಷಣ ಶಿವಯೋಗಿಗಳ ಶ್ರೀಕೈವಲ್ಯ ಕಲ್ಪವಲ್ಲರಿ ಮತ್ತು ರಾಘವಾಂಕನ ಹರಿಶ್ಚಂದ್ರಕಾವ್ಯ - ಇವನ್ನು ಇವರು ಸಂಪಾದಿಸಿದ್ದಾರೆ.

ಇವರ ಪಾಂಡಿತ್ಯ ಪ್ರತಿಭೆಗಳನ್ನು ಗುರುತಿಸಿ ಕಲ್ಕತ್ತ ವಿಶ್ವವಿದ್ಯಾಲಯ 1925ರಲ್ಲಿ ಇವರಿಗೆ ಸರ್ವದರ್ಶನತೀರ್ಥ ಎಂಬ ಪ್ರಶಸ್ತಿ

ನೀಡಿ ಗೌರವಿಸಿದೆ. ಮದರಾಸು ವಿಶ್ವವಿದ್ಯಾಲಯ 1927ರಲ್ಲಿ ಕನ್ನಡ-ಸಂಸ್ಕೃತ ವಿದ್ವಾನ್ ಎಂಬ ಪ್ರಶಸ್ತಿ ನೀಡಿತು. ಮೈಸೂರು ಮಹಾರಾಜರು 1932ರಲ್ಲಿ ಇವರನ್ನು ಆಸ್ಥಾನವಿದ್ವಾಂಸರೆಂದು ಪರಿಗಣಿಸಿ ಸನ್ಮಾನಿಸಿದರು. ಹುಬ್ಬಳ್ಳಿಯಲ್ಲಿ 1933ರಲ್ಲಿ ನಡೆದ 19ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಯಿತು. (ಸಿ.ಪಿ.ಕೆ.)

**ನಾಚಿರಾಜ** : ಸು.1300 ಜೈನಕವಿ. ನಾಚಿರಾಜೀಯ ನೆಂಬ ಗ್ರಂಥದ ಕರ್ತೃ. ಅಮರಸಿಂಹನ ಅಮರಕೋಶಕ್ಕೆ ಕನ್ನಡದಲ್ಲಿ ಬರೆದ ವ್ಯಾಖ್ಯಾನವಿದು. ಈಗ ದೊರೆತಿರುವ ಕನ್ನಡ ವ್ಯಾಖ್ಯಾನಗಳಲ್ಲಿ ಈ ಗ್ರಂಥವೇ ಅತ್ಯಂತ ಪ್ರಾಚೀನವಾದುದು. ಅಷ್ಟೇ ಅಲ್ಲ, ಅಮರಕೋಶಕ್ಕೆ ಸಂಬಂಧಿಸಿದಂತೆ ಭಾರತೀಯ ಭಾಷೆಗಳಲ್ಲಿ ಬರೆದ ಪ್ರಥಮ ವ್ಯಾಖ್ಯಾನವಿದು. ಈತನ ವ್ಯಾಖ್ಯಾನ ಸರಳವಾಗಿದೆ. ಸಂಸ್ಕೃತಕ್ಕೆ ಪ್ರತಿಯಾಗಿ ಕನ್ನಡ ಶಬ್ದಗಳನ್ನು ಬಳಸುವಲ್ಲಿ ಈತ ಸಾಕಷ್ಟು ಶ್ರಮಿಸಿದ್ದಾನೆ. ಗಿಡ ಮರಗಳ ಹೆಸರಿನ ಪಟ್ಟಿಯಲ್ಲಿ ಇದನ್ನು ಗುರುತಿಸಬಹುದು. ಕೆಲವು ಅನುಕ್ತ ಶಬ್ದಗಳು ಈತನ ವ್ಯಾಖ್ಯಾನದಲ್ಲುಂಟು. ಪ್ರಾಯಶಃ ಮೂಲಶಬ್ದಗಳೊಂದಿಗೆ ಕೆಲವನ್ನು ಹೊಸದಾಗಿ ಈತಸೇರಿಸಿರಬೇಕು. ಧನಂಜಯ, ರಭಸ ಇವರುಗಳ ಗ್ರಂಥ'ಗಳನ್ನೂ ನಾಚಿರಾಜ ಉಪಯೋಗಿಸಿದಂತೆ ತಿಳಿದುಬರುತ್ತದೆ. ಮೂಡಬಿದರೆಯಲ್ಲಿ ಈ ಗ್ರಂಥದ ಕೃತಿಗಳಿವೆ. (ಎಸ್.ಆರ್.ಬಿ.)

**ನಾಣಿ** : 1929 - 2003. ಮೇಕಪ್ ನಾಣಿ ಎಂದೇ ಪ್ರಸಿದ್ಧರಾಗಿದ್ದ ಪ್ರಸಾಧನ ಕಲಾವಿದ, ಚಲನಚಿತ್ರ ನಟ. ಇವರ ಪೂರ್ತಿ ಹೆಸರು ಬಿ.ಎಸ್. ಸೂರ್ಯನಾರಾಯಣ. 1929 ನವೆಂಬರ್ 3 ರಂದು ತುಮಕೂರಿನಲ್ಲಿ ಜನಿಸಿದರು. ತಂದೆ ನಂಜುಂಡಯ್ಯ, ತಾಯಿ ಶಾರದಮ್ಮ. ಮಲೆನಾಡು ಮೂಲದ ನಂಜುಂಡಯ್ಯನವರು ತುಮಕೂರಿನಲ್ಲಿ ವೈದ್ಯರಾಗಿದ್ದರು. ಮಲೆನಾಡು ಹಾಗೂ ಬಯಲುಸೀಮೆಯ ಪ್ರಕೃತಿಯ ದೃಶ್ಯಗಳು ಬಾಲ್ಯದಲ್ಲೇ ನಾಣಿಯವರ ಮೇಲೆ ಪ್ರಭಾವ ಬೀರಿದವು. ತಂದೆಯವರೊಂದಿಗೆ ಕಂಪನಿ ನಾಟಕಗಳ ಪ್ರದರ್ಶನಕ್ಕೆ ತೆರಳುತ್ತಿದ್ದರು. ಸಾಂಪ್ರದಾಯಿಕ ರಂಗ ಭೂಮಿಯ ಈ ನಾಟಕಗಳು ಬಾಲ್ಯದಲ್ಲಿ ಇವರ ಮೇಲೆ ಆಗಾಧ ಪ್ರಭಾವ ಬೀರಿದವು.

ವಿದ್ಯಾಭ್ಯಾಸಕೆಂದು ಬೆಂಗಳೂರಿನಲ್ಲಿದ್ದ ತಮ್ಮ ತಾತನ ಮನೆಗೆ ಬಂದರು. ಆಗ ನ್ಯಾಷನಲ್ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ನಾಟಕದ ಗೀಳನ್ನು ಬೆಳೆಸಿಕೊಂಡರು. ಕಾಲೇಜು ಶಿಕ್ಷಣ ಮುಗಿದ ಬಳಿಕ ಸ್ನೇಹಿತರೊಂದಿಗೆ ನಾಟ್ಯ ಸಂಘ ಆರಂಭಿಸಿ ಅಭಿನಯ, ರಂಗಸಜ್ಜಿಕೆ, ಪ್ರಸಾಧನ ಮೊದಲಾದ ರಂಗಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪ್ರಸಾಧ'ನ ಕಲೆಯ ಬಗ್ಗೆ ಇವರಿಗೆ ವಿಶೇಷ ಆಸಕ್ತಿ ಬೆಳೆಯಿತು. ವರದಾಚಾರ್ ನಾಟಕ ಕಂಪನಿಯಲ್ಲಿ ಮೇಕಪ್‌ಮನ್ ಆಗಿದ್ದ ಡಿ.ಎನ್. ಮೂರ್ತಿರಾವ್ ಅವರಿಂದ ತರಬೇತು ಪಡೆದರು. ಅನಂತರ ಬೆಂಗಳೂರಿನಲ್ಲಿ ಎಲ್ಲೇ ನಾಟಕ ನಡೆದರೂ ಅಲ್ಲಿಗೆ ಹೋಗಿ ಬಣ್ಣ ಹಚ್ಚುತ್ತಿದ್ದರು.

ಇಂಗ್ಲಿಷ್ ನಾಟಕಗಳ ರಂಗಸಜ್ಜಿಕೆ, ಪ್ರಸಾಧ'ನ, ಬೆಳಕಿನ ವಿನ್ಯಾಸಗಳನ್ನು ಕಲಿತ ಇವರು ಹಿಂದಿ ಚಲನಚಿತ್ರನಟ ಶಶಿಕಪೂರರ ಮಾವ ಜೆಫ್ರಿ ಕೆಂಡಾಲ್‌ರ ಷೇಕ್ಸ್‌ಪೀರಿಯಾನಾ ಇಂಟರ್ ನ್ಯಾಷನಲ್ ಕಂಪನಿಯ ರಂಗಸಜ್ಜಿಕೆಗೆ ಸಹಾಯಕರಾದರು. ಜೀವನ ನಿರ್ವಹಣೆಗಾಗಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದರು. ಇಂಗ್ಲೆಡ್‌ನಿಂದ ಬಂದ ಇಂಗ್ಲಿಷ್ ಕಮಿಡಿಯನ್ಸ್ ಕಂಪನಿಯ ನಟ, ನಿರ್ದೇಶಕ, ಮೇರಿಯಸ್ ಗೊಂಗ್ ಅವರ ಶಿಫಾರಸ್ಸಿನಿಂದ ಲಂಡನ್ನಿಗೆ ತೆರಳಿದರು. ಅಲ್ಲಿ ವಿಶೇಷವಾಗಿ ಪ್ರಸಾಧನ ಕಲೆಯಲ್ಲಿ ತರಬೇತಿ ಪಡೆದರು. ಟಿ.ಪಿ. ಕೈಲಾಸಂ ಅವರ ಗಂಡಸ್ಕತ್ರಿ ನಾಟಕವನ್ನು ಇಂಗ್ಲಿಷ್‌ನಲ್ಲಿ ನಿರ್ದೇಶಿಸಿದರು. ಇಂಗ್ಲೆಂಡಿನ ಡ್ರಾಮಾ ಬೋರ್ಡಿನವರು ನಡೆಸಿದ ಪರೀಕ್ಷೆಯಲ್ಲಿ ಪಾಸಾಗಿ ಪದವೀಧರರಾದರು. ಭಾರತಕ್ಕೆ ಹಿಂದಿರುಗಿದ ಬಳಿಕ ಟಿ.ಟಿ.ಕೆ. ಕಂಪನಿಯಲ್ಲಿ ಕೆಲಸಕ್ಕೆ ಸೇರಿದರು. ಈ ಕಂಪನಿ ತಯಾರಿಸುತ್ತಿದ್ದ ಪ್ರೆಸ್ಟೀಜ್ ಪ್ರೆಷರ್ ಕುಕ್ಕರ್‌ನ ರೂಪದರ್ಶಿಯಾದರು. ಕಲಾಜ್ಯೋತಿ, ಛಾಯಾ ಚಿತ್ರಕಲಾವಿದರು ಅಭಿನಯಿಸುತ್ತಿದ್ದ ನಾಟಕಗಳ ನೇಪಥ್ಯದಲ್ಲಿ ದುಡಿದರು. ಸುಚಿತ್ರ ಫಿಲಂ ಸೊಸೈಟಿ, ಸಿನಿಮಾ ಅಕಾಡೆಮಿ ಮತ್ತು ಪೀರ್ ರಂಗಮಂದಿರ ಮುಂತಾದ ಅನೇಕ ಸಂಘ ಸಂಸ್ಥೆಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಗೆಳೆಯರೊಂದಿಗೆ ಸೇರಿ ಉಲ್ಲಾಳ್ ಷೀಲ್ಡ್ ನಾಟಕ ಸ್ಪರ್ಧೆ ಪ್ರಾರಂಭಿಸಿದರು (1959). ಇದರಿಂದ ಹಲವು ಹತ್ತು ಯುವ ಪ್ರತಿಭೆಗಳು ಬೆಳಕಿಗೆ ಬಂದುವು.

ಇವರ ಪ್ರತಿಭೆಗೆ ಅನೇಕ ಪ್ರಶಸ್ತಿ ಗೌರವಗಳು ಸಂದಿವೆ. ಇವರು ಅನೇಕ ಚಲನಚಿತ್ರಗಳಲ್ಲಿ ನಟರಾಗಿ ಕಲಾನಿರ್ದೇಶಕರಾಗಿ ದುಡಿದಿದ್ದಾರೆ. ಅಬಚೂರಿನ ಪೋಸ್ಟಾಫೀಸು, ಪ್ರೊಫೆಸರ್ ಹುಚ್ಚುರಾಯ ಚಿತ್ರಗಳ ಅಭಿನಯಕ್ಕೆ ಇವರಿಗೆ ರಾಷ್ಟ್ರ ಪ್ರಶಸ್ತಿ ದೊರಕಿದೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮತ್ತು ಸಂದೇಶ ಪ್ರತಿಷ್ಠಾನ ಪ್ರಶಸ್ತಿ - ಇವು ಇವರಿಗೆ ಸಂದ ಗೌರವಗಳು. ಇವರದು ರಂಗಭೂಮಿಗೆ ಮೀಸಲಾದ ಕುಟುಂಬ. ಪತ್ನಿ ಭಾರ್ಗವಿ ನಾರಾಯಣ್ ಹೆಸರಾಂತ ನಟಿ. ಮಕ್ಕಳಾದ ಪ್ರಕಾಶ್ ಬೆಳವಾಡಿ, ಸುಧಾ ಬೆಳವಾಡಿ ಇವರು ರಂಗಭೂಮಿ ಚಲನಚಿತ್ರ ಕಿರುತೆರೆಗಳಲ್ಲಿ ಹೆಸರಾಗಿದ್ದಾರೆ. ಸುಜಾತ ಬೆಳವಾಡಿ ಮತ್ತು ಪ್ರದೀಪ್ ಬೆಳವಾಡಿ ಇವರ ಇನ್ನಿಬ್ಬರು ಮಕ್ಕಳು.

ಕನ್ನಡ ರಂಗಭೂಮಿಗೆ ಅನುಪಮ ಸೇವೆ ಸಲ್ಲಿಸಿದ ನಾಣಿಯವರು 2003 ಡಿಸೆಂಬರ್ 4 ರಂದು ಬೆಂಗಳೂರಿನಲ್ಲಿ ನಿಧನರಾದರು.

*

**ನಾಣ್ಯಗಳು** : ಕನ್ನಡ ನಾಡಿನಲ್ಲಿ ಯಾವಾಗ ಹೇಗೆ ಬಳಕೆಗೆ ಬಂದವು ಎಂದು ಹೇಳುವುದು ಕಷ್ಟ. ಬಹು ಪ್ರಾಚೀನ ಕಾಲದಲ್ಲಿ, ನಾಣ್ಯಗಳ ಪದ್ಧತಿ ಪ್ರಾರಂಭವಾಗುವುದಕ್ಕೆ ಮುಂಚೆ ಕವಡೆ, ಹಸು ಮುಂತಾದವು ವಿನಿಮಯ ಮಾಧ್ಯಮವಾಗುತ್ತಿದ್ದವು. ಇವುಗಳಿಗಿದ್ದ ನ್ಯೂನತೆಯನ್ನು ಮತ್ತು ತೊಂದರೆಯನ್ನು ತಪ್ಪಿಸುವುದಕ್ಕಾಗಿ ಚಿನ್ನದ ಚೂರುಗಳನ್ನು ಒಂದು ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಿ ಬಳಸುವ ಪದ್ಧತಿ ಪ್ರಾರಂಭವಾಯಿತು. ಇದೇ ವ್ಯವಸ್ಥಿತ ನಾಣ್ಯಪದ್ಧತಿಗೆ ನಾಂದಿಯಾಯಿತು. ಭಾರತದಲ್ಲಿ ಬಳಕೆಗೆ ಬಂದ ನಾಣ್ಯಗಳಲ್ಲಿ ಅತ್ಯಂತ ಪ್ರಾಚೀನವಾದವನ್ನು ಒತ್ತುಮುದ್ರೆಯ (ಪಂಚ್‌ಮಾರ್ಕ್) ನಾಣ್ಯಗಳೆಂದು ಕರೆಯುತ್ತಾರೆ. ಇವುಗಳ ಬಳಕೆ ಉತ್ತರ ಭಾರತದಲ್ಲಿ ವಿಶೇಷವಾಗಿ ಇದ್ದು ಅಲ್ಲಿಂದ ದಕ್ಷಿಣದ ಕಡೆಗೆ ಬಂದಿತು. ಮೌರ್ಯರ ಕಾಲದಲ್ಲಿ ವಿಶೇಷವಾಗಿ ಚಲಾವಣೆಯಲ್ಲಿದ್ದ ಈ ನಾಣ್ಯಗಳು ಕರ್ನಾಟಕದಲ್ಲಿ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಇಲ್ಲಿಗೆ ಬಂದಿತೆಂದು ತಿಳಿಯಬಹುದು. ಬನವಾಸಿ ಮತ್ತು ವಡಗಾಂವ-ಮಾಧವಪುರಗಳಲ್ಲಿ ಒತ್ತುಮುದ್ರೆಯ ನಾಣ್ಯಗಳು ಸುಮಾರು ಕ್ರಿಸ್ತಶಕದ ಆಸುಪಾಸಿನ ಶತಮಾನಗಳಿಗೆ ಸೇರುವ ಪದರಗಳಲ್ಲಿ ದೊರಕಿವೆ. ಇದರಿಂದ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಪ್ರಾಚೀನತಮ ನಾಣ್ಯಗಳು ಇವೆಂದು ಗೊತ್ತಾಗುತ್ತದೆ. ಅಂದಿನಿಂದ ನಾಣ್ಯಗಳ ಬಳಕೆ ಮುಂದುವರಿದುಕೊಂಡು ಬಂದಿದೆ.

ಕರ್ನಾಟಕದಲ್ಲಿ ದೊರಕಿರುವ ನಾಣ್ಯಗಳು ಚಿನ್ನ, ಬೆಳ್ಳಿ, ಚಿನ್ನ-ಬೆಳ್ಳಿ ಮಿಶ್ರ ಲೋಹ, ತಾಮ್ರ, ಸೀಸದಿಂದ ತಯಾರಾದವು. ಚಿನ್ನದ ನಾಣ್ಯಗಳು ವಿಶೇಷವಾಗಿ ಚಾಳುಕ್ಯ, ವಿಜಯನಗರ ಮತ್ತು ಟಿಪ್ಪುಸುಲ್ತಾನನ ಕಾಲಗಳಲ್ಲಿ ಬಳಕೆಯಲ್ಲಿದ್ದವು. ಕರ್ನಾಟಕದಲ್ಲಿ ಬೆಳ್ಳಿ ಮತ್ತು ತಾಮ್ರದ ಒತ್ತುಮುದ್ರೆಯ ನಾಣ್ಯಗಳು ಮಾತ್ರ ದೊರಕಿವೆ. ಸಾತವಾಹನರು ಚುಟುಗಳು ಮತ್ತು ಮಹಾರಠಿಗಳ ನಾಣ್ಯಗಳು ಸೀಸದಿಂದ ಮಾಡಿದವು. ಇಲ್ಲವೇ ಪೊಟಿನ್ ಎಂಬ ಮಿಶ್ರ ಲೋಹದಿಂದ ತಯಾರಾದವು. ಬನವಾಸಿಯ ಕದಂಬರ ನಾಣ್ಯಗಳು ಚಿನ್ನದವು. ಬಾದಾಮಿಯ ಚಳುಕ್ಯರ ನಾಣ್ಯಗಳು ಚಿನ್ನ ಮತ್ತು ಬೆಳ್ಳಿಯಲ್ಲಿ ದೊರಕಿವೆ. ಹೊಯ್ಸಳರ ನಾಣ್ಯಗಳು ಚಿನ್ನ ಮತ್ತು ತಾಮ್ರಗಳಲ್ಲಿವೆ. ಸೇವುಣರ ನಾಣ್ಯಗಳು ಚಿನ್ನದಲ್ಲಿ ಮಾತ್ರ ದೊರಕಿವೆ. ವಿಜಯನಗರದ ನಾಣ್ಯಗಳಲ್ಲಿ ಚಿನ್ನ ಮತ್ತು ತಾಮ್ರದವು ವಿಶೇಷವಾಗಿದ್ದು ಬೆಳ್ಳಿಯವು ವಿರಳ, ಬಹುಮನೀ ನಾಣ್ಯಗಳು ವಿಶೇಷವಾಗಿ ಬೆಳ್ಳಿ ಮತ್ತು ತಾಮ್ರಗಳಲ್ಲಿದ್ದರೂ ಚಿನ್ನದ ನಾಣ್ಯಗಳೂ ದೊರಕಿವೆ. ಆದಿಲ್‌ಶಾಹೀ ಸುಲ್ತಾನರ ನಾಣ್ಯಗಳು ತಾಮ್ರದಲ್ಲಿ ವಿಶೇಷವಾಗಿದ್ದರೂ ಬೆಳ್ಳಿ ಮತ್ತು ಚಿನ್ನದ ನಾಣ್ಯಗಳೂ ಸಿಕ್ಕಿವೆ. ಆದರೆ ಬರೀದ್ ಶಾಹೀ ಸುಲ್ತಾನರು

ತಾಮ್ರನಾಣ್ಯಗಳನ್ನು ಬಿಟ್ಟು ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸಿದಂತೆ ಕಾಣುವುದಿಲ್ಲ. ಹೈದರ್, ಟಿಪ್ಪು ಮತ್ತು ಮೈಸೂರು ದೊರೆಗಳ ಕಾಲದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಬಳಕೆಯಲ್ಲಿದ್ದವು.

ಕರ್ನಾಟಕದ ನಾಣ್ಯಗಳ ರೂಪಗಳಲ್ಲೂ ವೈವಿಧ್ಯವಿದೆ. ಭಾರತದ ಎಲ್ಲೆಡೆಯಲ್ಲಿಯೂ ಪ್ರಚಾರದಲ್ಲಿದ್ದ ಒತ್ತು ಮುದ್ರೆ ನಾಣ್ಯಗಳು ವೃತ್ತಾಕಾರ, ಚೌಕಾಕಾರ, ಆಯತಾಕಾರ, ಪಂಚಕೋನ ಮತ್ತು ಇತರ ರೂಪಗಳಲ್ಲಿ ದೊರಕಿವೆ. ಅಂದರೆ ಈ ಕಾಲದಲ್ಲಿ ರೂಪಕ್ಕಿಂತ ತೂಕಕ್ಕೆ ಹೆಚ್ಚು ಮಹತ್ವವಿದ್ದಂತೆ ತೋರುತ್ತದೆ. ಒತ್ತುಮುದ್ರೆಯ ನಾಣ್ಯಗಳಲ್ಲಿ ಕೆಲವದರಲ್ಲಿ ಚಿಹ್ನೆಗಳು ಒಂದೇ ಮುಖದಲ್ಲೂ ಮತ್ತೆ ಕೆಲವದರಲ್ಲಿ ಎರಡು ಮುಖಗಳಲ್ಲೂ ಇರುವುದುಂಟು. ಸಾತವಾಹನರ ನಾಣ್ಯಗಳು ವೃತ್ತಾಕಾರದ ನಾಣ್ಯಗಳಾಗಿದ್ದು ಎರಡು ಮುಖಗಳಲ್ಲೂ ಚಿಹ್ನೆ ಮತ್ತು (ಅಥವಾ) ಬರೆಹಗಳಿರುತ್ತವೆ. ಬನವಾಸಿ ಕದಂಬರ ನಾಣ್ಯಗಳ ವಿಷಯದಲ್ಲಿ ಖಚಿತತೆ ಇಲ್ಲದಿದ್ದರೂ ಪದ್ಮಟಂಕವೆಂಬ ನಾಣ್ಯವನ್ನು ಬಳಕೆಗೆ ತಂದವರು ಅವರೆಂದು ಎಲ್ಲರೂ ಒಪ್ಪುತ್ತಾರೆ. ಈ ನಾಣ್ಯಗಳು ಸಣ್ಣ ಬಟ್ಟಲಿನ ಆಕಾರದಲ್ಲಿದೆ. ತೆಳ್ಳಗಿನ ಚಿನ್ನದ ತಗಡಿನ ಚೂರನ್ನು ತೆಗೆದುಕೊಂಡು ಅದರ ಮಧ್ಯದಲ್ಲಿ ಪದ್ಮದ ಚಿಹ್ನೆಯನ್ನು ಆಳವಾಗಿ ಒತ್ತುವುದರಿಂದ ತಗಡು ಬಗ್ಗಿ ಆ ಆಕಾರವನ್ನು ಪಡೆಯುತ್ತದೆ. ಆ ಪದ್ಮದ ಸುತ್ತಲೂ ಇತರ ಒತ್ತುಮುದ್ರೆಗಳಿರುತ್ತವೆ. ಅನಂತರ ಬಂದ ಬಾದಾಮಿಯ ಚಳುಕ್ಯರು ಈ ತಂತ್ರವನ್ನು ಅನುಸರಿಸಲಿಲ್ಲ. ಅವರು ಸಾತವಾಹನರಂತೆ ವೃತ್ತಾಕಾರದ ಎರಡು ಮುಖಗಳುಳ್ಳ ನಾಣ್ಯಗಳನ್ನು ಅಚ್ಚುಹಾಕಿಸಿದರು. ಇದೇ ತಂತ್ರವನ್ನು ಮುಂದಿನ ಎಲ್ಲ ರಾಜಮನೆತನಗಳೂ ಅನುಸರಿಸಿದವು. ಆದರೆ ಕಲ್ಯಾಣದ ಚಾಳುಕ್ಯರು ಮತ್ತು ದೇವಗಿರಿಯ ಸೇವುಣರು ಪದ್ಮಟಂಕದ ನಾಣ್ಯಗಳನ್ನೇ ಬಳಕೆಗೆ ತಂದರು. ವೃತ್ತಾಕಾರದ ನಾಣ್ಯಗಳೇ ವಿಶೇಷವಾದರೂ ಚೌಕನೆಯ ಮತ್ತು ತಂತಿಯ ರೀತಿಯ ನಾಣ್ಯಗಳನ್ನು ಆದಿಲ್‌ಶಾಹೀ ರಾಜರು ಉಪಯೋಗಿಸಿದರು. ಎರಡನೆಯ ಇಬ್ರಾಹೀಂ ಆದಿಲ್ ಷಾನ ನಾಣ್ಯಗಳು ಚೌಕಾಕಾರದಲ್ಲಿವೆ. ಎರಡನೆಯ ಆದಿಲ್‌ಷಾನ ಬೆಳ್ಳಿಯ ಲಾರಿನ್‌ಗಳು ಮಡಚಿದ ತಂತಿಯ ಆಕಾರದಲ್ಲಿರುವುದು ಗಮನಾರ್ಹ.

ತೂಕ ಮತ್ತು ಆಳತೆಯಲ್ಲಿಯೂ ಕರ್ನಾಟಕದ ನಾಣ್ಯಗಳು ವೈವಿಧ್ಯತೆಯನ್ನು ಪ್ರದರ್ಶಿಸುತ್ತವೆ. ಸಾಮಾನ್ಯವಾಗಿ 52 ಗ್ರೇನ್ ತೂಕದ ಚಿನ್ನದ ನಾಣ್ಯಗಳು ವಿಶೇಷವಾದವು. ಆದರೆ ಇದಕ್ಕೂ ಹೆಚ್ಚು ತೂಕದ ನಾಣ್ಯಗಳನ್ನು ಕೆಲವು ರಾಜರು ಅಚ್ಚು ಹಾಕಿಸಿದರು. ಬಾದಾಮಿಯ ಚಳುಕ್ಯ ದೊರೆವಿಕ್ರಮಾದಿತ್ಯ 117 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಟಂಕಿಸಿದ. ಇದೇ ತೂಕದ ಚಿನ್ನದ ನಾಣ್ಯವನ್ನು ವಿಜಯನಗರದ ಕೃಷ್ಣದೇವರಾಯ ಅಚ್ಚುಹಾಕಿಸಿದ. ಬಹಮನೀ ಸುಲ್ತಾನರನೇಕರು 195 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದರು. ಟಿಪ್ಪುಸುಲ್ತಾನನ ಚಿನ್ನದ ನಾಣ್ಯಗಳು 210 ರಿಂದ 215 ಗ್ರೇನ್ ತೂಗುತ್ತವೆ. ಇವೇ ಕರ್ನಾಟಕದಲ್ಲಿ ದೊರಕಿರುವ ಅತ್ಯಂತ ತೂಕದ ಚಿನ್ನದ ನಾಣ್ಯಗಳು. ಇತರ ಚಿನ್ನದ ನಾಣ್ಯಗಳು 26, 12, 6, 3, 1.5 ಗ್ರೇನ್ ತೂಕದಲ್ಲಿವೆ. 1.5 ಗ್ರೇನ್ ತೂಕದ ನಾಣ್ಯವೇ ಅತ್ಯಂತ ಸಣ್ಣ ಚಿನ್ನದ ನಾಣ್ಯ. ಇದನ್ನು ಪಣವೆಂದು ಕರೆಯಬಹುದು. ಹೈದರ್, ಟಿಪ್ಪು ಮತ್ತು ಮೈಸೂರಿನ ಅರಸರು ಈ ನಾಣ್ಯವನ್ನು ಅಚ್ಚು ಹಾಕಿಸಿದರು. ಟಿಪ್ಪುಸುಲ್ತಾನನ ಬೆಳ್ಳಿಯ ನಾಣ್ಯ ಹೈದರಿ ಎನ್ನುವುದರ ವ್ಯಾಸ 1.4". ಇದೇ ಕರ್ನಾಟಕದಲ್ಲಿ ದೊರಕಿರುವ ಅತ್ಯಂತ ಅಗಲವಾದ ನಾಣ್ಯ. ಇವನ ಚಿನ್ನದ ಪಣ ಕೇವಲ 0.28" ವ್ಯಾಸದ್ದು. ಇದೇ ಅತ್ಯಂತ ಚಿಕ್ಕದಿರಬಹುದು.

ನಾಣ್ಯಗಳ ಮೇಲಿನ ಬರೆವಣಿಗೆಯನ್ನು ಗಮನಿಸಿದರೆ ಒಂದು ವಿಧವಾದ ಬೆಳವಣಿಗೆ ಕಾಣಬರುತ್ತದೆ. ಒತ್ತುಮುದ್ರೆಯ ನಾಣ್ಯಗಳಲ್ಲಿ ಚಿಹ್ನೆಗಳು ಇವೆಯೇ ಹೊರತು ಯಾವ ಬರೆವಣಿಗೆಯೂ ಇಲ್ಲ. ಸಾತವಾಹನ, ಚುಟು, ಮಹಾರಠಿಗಳ ನಾಣ್ಯಗಳಲ್ಲಿ ಒಂದು ಕಡೆ ರಾಜನ ಹೆಸರು ಮತ್ತೊಂದು ಕಡೆ ಪ್ರಾಣಿಗಳು, ಬೆಟ್ಟ, ನದಿ ಮುಂತಾದ ಚಿಹ್ನೆಗಳು ಕಾಣಬರುತ್ತವೆ. ಈ ನಾಣ್ಯಗಳೇ ಕರ್ನಾಟಕದ ಮೊತ್ತಮೊದಲನೆಯ ಬರೆವಣಿಗೆಯನ್ನುಳ್ಳ ನಾಣ್ಯಗಳು. ಈ ಬರೆವಣಿಗೆಯಲ್ಲಿ ಸರಳತೆಯನ್ನು ಕಾಣುತ್ತೇವೆ. ರಾಜನ ಹೆಸರು ಮಾತ್ರವಿರುತ್ತದೆ. ಅವನ ಬಿರುದುಗಳು, ಅವನ ತಂದೆಯ ಹೆಸರು ಮುಂತಾದವು ವಿರಳ. ಇವು ಹೀಗೇ ಮುಂದುವರಿಯುತ್ತವೆ. ಹೊಯ್ಸಳ ಕಾಲಕ್ಕೆ ಬಂದಾಗ ರಾಜನ ಹೆಸರಿನ ಬದಲು ವಿಷ್ಣುವರ್ಧನ ತನ್ನ ಬಿರುದುಗಳನ್ನು ನಾಣ್ಯಗಳ ಮೇಲೆ ಹಾಕಿಸಿದ. ತಲಕಾಡುಗೊಂಡ, ನೊಳಂಬವಾಡಿಗೊಂಡ, ಮಲಪರೊಳುಗಂಡ ಎಂಬ ಅವನ ಬಿರುದುಗಳನ್ನು ಅವನ ನಾಣ್ಯಗಳಲ್ಲಿ ಕಾಣುತ್ತೇವೆ. ಗೋವೆಯ ಕದಂಬರ ನಾಣ್ಯಗಳು ಬರೆಹದ ದೃಷ್ಟಿಯಿಂದ ಗಮನಾರ್ಹವಾದವು. ಅವರು ತಮ್ಮ ಹೆಸರಿನ ಜೊತೆಗೆ ತಮ್ಮ ಪ್ರಶಸ್ತಿಯ ಭಾಗವನ್ನೂ ನಾಣ್ಯದ ಮೇಲೆ ಹಾಕಿಸಿದ್ದಾರೆ. ಶ್ರೀಸಪ್ತಕೋಟೀಶಲಬ್ಧವರ ಎನ್ನುವುದು ಎಲ್ಲ ನಾಣ್ಯಗಳ ಮೇಲೂ ಕಾಣಬರುತ್ತವೆ. ಅದೇ ರೀತಿ ಮಲವರಮಾರಿ ಎನ್ನುವ ಬಿರುದನ್ನೂ ನಾಣ್ಯಗಳ ಮೇಲೆ ಕಾಣುತ್ತೇವೆ. ವಿಜಯನಗರದ ರಾಜರು, ವೀರ, ಪ್ರತಾಪ ಎನ್ನುವ ಪದಗಳನ್ನು ಬಿಟ್ಟರೆ ಇನ್ನಾವ ಪ್ರಶಸ್ತಿಯನ್ನೂ ತಮ್ಮ ನಾಣ್ಯಗಳ ಮೇಲೆ ಹಾಕಿಸಲಿಲ್ಲ. ಬಹಮನೀ ನಾಣ್ಯಗಳಲ್ಲಿ ಬರೆಹ ವಿಶೇಷವಾಗಿರುತ್ತದೆ. ರಾಜನ ಹೆಸರು, ತಂದೆಯ ಹೆಸರು, ಕೊರಾನಿನ ವಾಕ್ಯಗಳು, ತೇದಿ ಮತ್ತು ಟಂಕಸಾಲೆಯ ಹೆಸರು ಇವರ ನಾಣ್ಯಗಳ ಮೇಲೆ ಕಾಣಬರುತ್ತವೆ. ಕೆಲವು ಸಾರಿ ಸಣ್ಣ ಪದ್ಯಗಳಿರುವುದೂ ಉಂಟು. ಆದಿಲ್‌ಶಾಹೀ, ಬರೀದ್ ಶಾಹೀ ಮತ್ತು ಟಿಪ್ಪುವಿನ ನಾಣ್ಯಗಳು ಈ ರೀತಿಯಲ್ಲೇ ಇರುತ್ತವೆ. ಆದಿಲ್‌ಶಾಹೀ ರಾಜ ಮಹಮ್ಮದ್‌ನ ಚಿನ್ನದ ನಾಣ್ಯವನ್ನು ಗಮನಿಸಬಹುದು. ಇದರ ಮೇಲೆ ಪಾರಸೀ ಪದ್ಯ ಒಂದಿದೆ. ಇದರಲ್ಲಿ ಎರಡರ್ಥ ಬರುವಂತೆ ಕವಿ ರಚಿಸಿದ್ದಾನೆ. ಈ ಪ್ರಪಂಚ ಸೌಂದರ್ಯ ಮತ್ತು ಘನತೆಯನ್ನು ಇಬ್ಬರು ಮಹಮ್ಮದರಿಂದ ಪಡೆಯಿತು. ಒಬ್ಬ ಪ್ರವಾದಿ ಮಹಮ್ಮದ್; ಮತ್ತೊಬ್ಬ ಸುಲ್ತಾನನಾದ ಮಹಮ್ಮದ್ ಇದು ಮೊದಲನೆಯ ಅರ್ಥ. ಎರಡನೆಯ ಅರ್ಥದಲ್ಲಿ ಇದು ಇವನ ಹೆಂಡತಿ ತಾಜ್ ಜಹಾನ್‌ಳನ್ನು ಕುರಿತದ್ದು. ಈ ಪ್ರಪಂಚ ಜಹಾನ್ ಸೌಂದರ್ಯ ಮತ್ತು ಘನತೆಯನ್ನು ಪ್ರವಾದಿ ಮಹಮ್ಮದ್‌ನಿಂದ ಪಡೆಯಿತು. ರಾಣಿ (ಜಹಾನ್) ಇದನ್ನು ಸುಲ್ತಾನನಾದ ಮಹಮ್ಮದ್‌ನಿಂದ ಪಡೆದಳು. ಈ ರೀತಿ ಚಮತ್ಕಾರವಾದ ಪದ್ಯಗಳನ್ನು ಕಾಣಬಹುದು.

ಕರ್ನಾಟಕದ ನಾಣ್ಯಗಳಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ, ತೆಲುಗು ಮತ್ತು ಪಾರಸೀ ಭಾಷೆಗಳ ಬರೆಹವನ್ನು ಕಾಣುತ್ತೇವೆ. ಸಾತವಾಹನ ನಾಣ್ಯಗಳು ವಿಶೇಷವಾಗಿ ಪ್ರಾಕೃತ ಭಾಷೆಯ ಬರೆಹವನ್ನು ಹೊಂದಿರುತ್ತವೆ. ಉದಾಹರಣೆಗೆ ರಞೋಸಿವಸಿರಿಸ ಪುಳುಮಾವಿಸ, ವಿಜಯನಗರದ ನಾಣ್ಯಗಳು ಇಮ್ಮಡಿ ದೇವರಾಯರು, ಸದಾಶಿವರಾಯರು, ಮಲ್ಲಿಕಾರ್ಜುನರಾಯರು ಎಂಬ ಕನ್ನಡ ಬರೆಹವನ್ನು ಹೊಂದಿವೆ. ಅದೇ ರೀತಿ ಚಿಕರಾಯಲು, ತಿರುಮಲರಾಯಲು ಎಂಬ ತೆಲುಗು ಬರೆಹವನ್ನೂ ಹೊಂದಿವೆ. ಬಹಮನೀ, ಆದಿಲ್‌ಶಾಹೀ, ಬರೀದ್ ಶಾಹೀ ಮತ್ತು ಟಿಪ್ಪು ಸುಲ್ತಾನರ ನಾಣ್ಯಗಳು ಪಾರಸೀ ಭಾಷೆಯ ಬರೆಹವನ್ನು ಹೊಂದಿವೆ. ಮೈಸೂರು ಅರಸರ ಕೆಲವು ನಾಣ್ಯಗಳಲ್ಲಿ ಮಾತ್ರ ಪಾರಸೀ ಬರೆಹವಿದೆ.

ಇದೇ ರೀತಿಯಲ್ಲಿ ಲಿಪಿಯಲ್ಲಿಯೂ ವೈವಿಧ್ಯತೆ ಕಂಡುಬರುತ್ತದೆ. ಸಾತವಾಹನ, ಚುಟು ಮತ್ತು ಮಹಾರಠಿ ನಾಣ್ಯಗಳು ಬ್ರಾಹ್ಮೀ ಲಿಪಿಯಲ್ಲಿವೆ. ಬಾದಾಮಿಯ ಚಳುಕ್ಯರು, ಕಲ್ಯಾಣದ ಚಾಳುಕ್ಯರು ಮತ್ತು ಹೊಯ್ಸಳರ ಬರೆಹಗಳು ಕನ್ನಡ ಲಿಪಿಯಲ್ಲಿವೆ. ಸೇವುಣರ ನಾಣ್ಯಗಳ ಮೇಲೆ ನಾಗರೀ ಲಿಪಿಯ ಬರೆಹವಿದೆ. ಆಳುಪರ ನಾಣ್ಯಗಳಲ್ಲಿ ಕನ್ನಡ ಮತ್ತು ನಾಗರೀ ಲಿಪಿಯ ಬರೆಹಗಳಿವೆ. ಗೋವೆಯ ಕದಂಬರ ನಾಣ್ಯಗಳ ಮೇಲೆ ವಿಶೇಷವಾಗಿ ನಾಗರೀ ಲಿಪಿಯ ಬರೆಹವಿದೆ. ಆದರೆ ಶಿವಚಿತ್ತನ ನಾಣ್ಯವೊಂದರಲ್ಲಿ ಶಿವಚಿತ್ತ ಎನ್ನುವ ಬರೆಹ ಐದು ಸಾರಿ ಬರೆಯಲ್ಪಟ್ಟಿದೆ. ಒಂದು, ಮೂರು ಮತ್ತು ಐದನೆಯ ಸಾಲುಗಳು ನಾಗರೀಯಲ್ಲೂ ಎರಡು ಮತ್ತು ನಾಲ್ಕನೆಯ ಸಾಲುಗಳು ಕನ್ನಡ ಲಿಪಿಯಲ್ಲಿಯೂ ಇರುವುದು ಗಮನಾರ್ಹ. ವಿಜಯನಗರದ ಅರಸುಗಳ ನಾಣ್ಯಗಳಲ್ಲಿ ಹತ್ತು ರಾಜರು ಕನ್ನಡ ಲಿಪಿಯ ಬರೆಹವನ್ನು, ಹದಿಮೂರು ಜನ ರಾಜರು ನಾಗರೀ

ಲಿಪಿಯ ಬರೆಹವನ್ನು, ಕೇವಲ (ಕೊನೆಗಾಲದ) ಇಬ್ಬರು ರಾಜರು ತೆಲುಗು ಲಿಪಿಯ ಬರೆಹವನ್ನು ನಾಣ್ಯಗಳ ಮೇಲೆ ಹಾಕಿಸಿದರು. ನಾಣ್ಯಗಳನ್ನು ಮೊದಲು ಅಚ್ಚುಹಾಕಿಸಿದ ಒಂದನೆಯ ಹರಿಹರ ಮತ್ತು ಒಂದನೆಯ ಬುಕ್ಕ ಇವರ ನಾಣ್ಯಗಳ ಮೇಲೆ ಕನ್ನಡ ಮತ್ತು ನಾಗರೀ ಬರೆಹವಿದೆ. ಮುಸ್ಲಿಂ ರಾಜರ ನಾಣ್ಯಗಳಲ್ಲಿ ಪಾರಸೀ ಲಿಪಿಯ ಬರೆಹವಿರುತ್ತದೆ. ಮೈಸೂರು ಒಡೆಯರ ನಾಣ್ಯಗಳು ಈ ದೃಷ್ಟಿಯಿಂದ ಗಮನಾರ್ಹ. ಇವರ ನಾಣ್ಯಗಳಲ್ಲಿ ನಾಗರೀ ಕನ್ನಡ ಪಾರಸೀ ಮತ್ತು ರೋಮನ್ ಲಿಪಿಗಳನ್ನು ಕಾಣಬಹುದು. ಒಂದೇ ನಾಣ್ಯದಲ್ಲಿ ಎರಡು ಮತ್ತು ಮೂರು ವಿಭಿನ್ನ ಲಿಪಿಗಳಿರುವುದು ಗಮನಾರ್ಹ. ಮುಮ್ಮಡಿ ಕೃಷ್ಣರಾಜ ಒಡೆಯರ ಇಪ್ಪತ್ತು ಕಾಸಿನ ನಾಣ್ಯದಲ್ಲಿ ಮೊದಲ ಮೂರು ಸಾಲುಗಳಲ್ಲಿ ಕೃಷ್ಣ, ಮಯಿಲಿಕಾಸು ಯಿಪತು ಎಂಬ ಕನ್ನಡ ಲಿಪಿಯೂ ನಾಲ್ಕನೆಯ ಸಾಲಿನಲ್ಲಿ XX CASH ಎಂಬ ರೋಮನ್ ಬರೆಹವೂ ಇದೆ. ಇದೇ ರಾಜರ ಮತ್ತೊಂದು ನಾಣ್ಯದಲ್ಲಿ ಮೂರು ಲಿಪಿಗಳಿವೆ. ಮೈಲಿಕಾಸು ೨೫ (ಕನ್ನಡ), XXV CASH (ರೋಮನ್), ಜರ್ಬ್-ಇ-ಮಹಿಷೂರ್ (ಪಾರಸೀ) ಬರೆಹಗಳನ್ನು ಕಾಣುತ್ತೇವೆ.

ಪ್ರಾಚೀನ ನಾಣ್ಯಗಳ ಮೇಲೆ ಕಾಲದ ಉಲ್ಲೇಖವಿರುವುದು ಬಹು ವಿರಳ. ಮೊಟ್ಟಮೊದಲನೆಯ ಬಾರಿಗೆ ಕಾಲದ ಉಲ್ಲೇಖವನ್ನು ಕಾಣುವುದು ಗೋವೆಯ ಕದಂಬರ ನಾಣ್ಯಗಳ ಮೇಲೆ, ಇವರ ಕೆಲವು ನಾಣ್ಯಗಳ ಮೇಲೆ ಪ್ಲವ, ವಿಜಯ, ಹೇವಿಳಂಬಿ, ದುರ್ಮತಿ, ಜಯ ಮುಂತಾದ ಸಂವತ್ಸರಗಳ ಹೆಸರುಗಳನ್ನು ಕಾಣುತ್ತೇವೆ. ಇವು ಆ ನಾಣ್ಯಗಳು ಅಚ್ಚಾದ ವರ್ಷಗಳೆಂದು ಭಾವಿಸಲಾಗಿದೆ. ಮೊದಲನೆಯ, ಎರಡನೆಯ ಮತ್ತು ಮೂರನೆಯ ಜಯಕೇಶಿಯ ನಾಣ್ಯಗಳು ಒಂದೇ ರೀತಿ ಇರುವುದರಿಂದ, ಅವನ್ನು ಬೇರ್ಪಡಿಸಲು ಈ ಸಂವತ್ಸರದ ಹೆಸರುಗಳು ಸಹಕಾರಿಯಾಗಿವೆ. ವಿಜಯನಗರದ ಯಾವ ನಾಣ್ಯದ ಮೇಲೆಯೂ ಕಾಲದ ಉಲ್ಲೇಖವಿಲ್ಲ. ಮುಸ್ಲಿಂ ರಾಜರ ನಾಣ್ಯಗಳ ಮೇಲೆ ಹಿಜಿರ ವರ್ಷ ನಮೂದಾಗಿರುತ್ತದೆ. ಕೆಲವು ಸಾರಿ ರಾಜನ ಆಳ್ವಿಕೆಯ ವರ್ಷವೂ ಉಲ್ಲೇಖಿತವಾಗಿರುತ್ತದೆ. ಟಿಪ್ಪು ಸುಲ್ತಾನನ ಮೊದಲ ನಾಲ್ಕು ವರ್ಷದ ನಾಣ್ಯಗಳು ಹಿಜಿರ ಕಾಲಮಾನವನ್ನು ಉಲ್ಲೇಖಿಸುತ್ತವೆ. ಐದನೆಯ ವರ್ಷದಿಂದ ಅವನು ಮೌಲೂದಿ ಕಾಲಮಾನವನ್ನು ಬಳಕೆಗೆ ತಂದ. ಅವನ ಐದನೆಯ ಆಳ್ವಿಕೆಯ ವರ್ಷದಿಂದ 1215 ಮೌಲೂದಿ ಕಾಲಮಾನ ಬಳಕೆಗೆ ಬಂದು ಅವನ ಕೊನೆ ವರ್ಷ 1227 ಎಂದು ನಮೂದಿತವಾಗಿದೆ. ಮೌಲೂದಿ ಕಾಲಮಾನದಲ್ಲಿ ಟಿಪ್ಪು ಹಿಂದು ಪಂಚಾಂಗವನ್ನೇ ಅನುಸರಿಸಿ ಪ್ರಭವಾದಿ ಸಂವತ್ಸರಗಳನ್ನು ಉಪಯೋಗಿಸಿಕೊಂಡ. ಅವುಗಳಿಗೆ ಬದಲಾಗಿ ತಾನೇ ಹೊಸ ಹೆಸರುಗಳನ್ನು ಕೊಟ್ಟ. ಇದರಲ್ಲಿ ಅಬ್ಜದ್ ಮತ್ತು ಅಬ್ತತ್ ಎಂಬ ಎರಡು ವಿಧಗಳನ್ನು ಅನುಸರಿಸಿದ. ಅದೇ ರೀತಿ ತಿಂಗಳಿಗೂ ಹೊಸ ಹೆಸರನ್ನು ಕೊಟ್ಟು ಅವುಗಳನ್ನು ನಾಣ್ಯಗಳ ಮೇಲೆ ಹಾಕಿಸಿದ. ಮುಮ್ಮಡಿ ಕೃಷ್ಣರಾಜ ಒಡೆಯರ ಕೆಲವು ನಾಣ್ಯಗಳ ಮೇಲೆ ಅವರ ಆಳ್ವಿಕೆಯ ವರ್ಷವಿದೆ; ಮತ್ತೆ ಕೆಲವದರ ಮೇಲೆ ಕ್ರಿಸ್ತಶಕೆಯ ವರ್ಷಗಳಿವೆ.

ಟಂಕಸಾಲೆಗಳ ಹೆಸರುಗಳು ಪ್ರಾಚೀನ ನಾಣ್ಯಗಳ ಮೇಲೆ ಕಾಣಬರುವುದಿಲ್ಲ. ಆದರೆ ಶಾಸನಗಳಿಂದ ಚಾಳುಕ್ಯರ ಕಾಲದಲ್ಲಿ ಲೊಕ್ಕಿಗುಂಡಿ, ಸೂಡಿ ಮುಂತಾದ ಕಡೆಗಳಲ್ಲಿ ಟಂಕಸಾಲೆಗಳಿದ್ದವೆಂದು ತಿಳಿದುಬರುತ್ತದೆ. ಇದೇ ರೀತಿ ಬಾರಕೂರು ಮತ್ತು ಮಂಗಳೂರಿನಲ್ಲಿ ಅಚ್ಚಾದ ಗದ್ಯಾಣಗಳನ್ನು ಬಾರಕೂರು ಗದ್ಯಾಣ, ಮಂಗಳೂರು ಗದ್ಯಾಣವೆಂದು ಕರೆಯುತ್ತಿದ್ದುದು ತಿಳಿದುಬರುತ್ತದೆ. ಆದರೆ ದೊರಕಿರುವ ಗದ್ಯಾಣಗಳ ಮೇಲೆ ಈ ಹೆಸರುಗಳಿಲ್ಲ. ನಾಣ್ಯಗಳ ಮೇಲೆ ಟಂಕಸಾಲೆಯ ಹೆಸರನ್ನು ತೋರಿಸುವುದು ಮಹಮ್ಮದೀಯರ ಕಾಲದಿಂದ ಪ್ರಾರಂಭವಾಯಿತೆಂದು ತೋರುತ್ತದೆ. ಬಹುಮನೀ ನಾಣ್ಯಗಳ ಮೇಲೆ ಇರುವ ಹೆಸರುಗಳಿಂದ ಅಹಸನಾಬಾದ್ (ಗುಲ್ಬರ್ಗ), ಮಹಮ್ಮದಾಬಾದ್ (ಬಿದರೆ) ಮತ್ತು ಫತಾಬಾದ್ (ದೌಲತಾಬಾದ್) ಗಳಲ್ಲಿಬಹಮನೀ ನಾಣ್ಯಗಳು ಅಚ್ಚಾಗುತ್ತಿದ್ದವೆಂದು ತಿಳಿದುಬುರುತ್ತದೆ. ಕೆಳದಿ ನಾಯಕರ ಕಾಲದಲ್ಲಿ ನಗರದಲ್ಲಿ ಒಂದು ಟಂಕಸಾಲೆಯಿದ್ದಿತೆಂದು ಅಲ್ಲಿ ದೊರಕಿರುವ ಒಂದು ಯಂತ್ರದಿಂದ ತಿಳಿಯುತ್ತದೆ. ಅದರ ಮೇಲೆ ಟಂಕಸಾಲೆಕಲ್ಲು ಎನ್ನುವ ಬರೆಹವಿದೆ. ಇದು ಆರು ಪಾರ್ಶ್ವಗಳುಳ್ಳ ಒಂದು ಲೋಹದ ಯಂತ್ರ. ಇದರಲ್ಲಿ ಆರು ವಿವಿಧ ಆಳತೆಯ ತೂತುಗಳಿವೆ. ಇವುಗಳಲ್ಲಿ ಲೋಹವನ್ನು ಹಾಕಿ ಇಂತಹದೇ ಯಂತ್ರದಿಂದ ಬಲವಾಗಿ ಅದುಮಿ ನಾಣ್ಯಗಳನ್ನು ತಯಾರುಮಾಡುತ್ತಿದ್ದರೆಂದು ಹೇಳಬಹುದು. ಟಿಪ್ಪುಸುಲ್ತಾನನ ಕಾಲಕ್ಕೆ ಬಂದರೆ ನಮಗೆ ನಾಣ್ಯಗಳಲ್ಲಿ ಟಂಕಸಾಲೆಯ ಹೆಸರುಗಳು ಕಾಣಬರುತ್ತವೆ. ಇವನ ಕಾಲದಲ್ಲಿ ಹದಿಮೂರು ಟಂಕಸಾಲೆಗಳಿದ್ದವು. ಇವುಗಳಲ್ಲಿ ಕೆಲವಕ್ಕೆ ಟಿಪ್ಪು ಹೊಸ ಹೆಸರುಗಳನ್ನು ಕೊಟ್ಟಿದ್ದ. ಮೈಸೂರು ಒಡೆಯರಲ್ಲಿ ಟಂಕಸಾಲೆಯನ್ನು ಮೊದಲು ಸ್ಥಾಪಿಸಿದವರು ಕಂಠೀರವ ನರಸರಾಜ ಒಡೆಯರು. ಇವರ ಟಂಕಸಾಲೆ ಶ್ರೀರಂಗಪಟ್ಟಣದಲ್ಲಿದ್ದಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದರು. ಇದು 1833ರ ವರೆಗೂ ಕೆಲಸ ಮಾಡುತ್ತಿದ್ದಿತು. ಆ ವರ್ಷ ಟಂಕಸಾಲೆಯನ್ನು ಬೆಂಗಳೂರಿಗೆ ಬದಲಾಯಿಸಲಾಯಿತು. 1843ರಲ್ಲಿ ಬೆಂಗಳೂರಿನ ಟಂಕಸಾಲೆ ಕಾರ್ಯವನ್ನು ನಿಲ್ಲಿಸಿತು. ಅಲ್ಲಿಂದ ಮುಂದೆ ಮೈಸೂರು ಅರಸರ ನಾಣ್ಯಗಳು ಅಚ್ಚಾಗಲಿಲ್ಲ.

ಶಾಸನಗಳಿಂದ, ದೇಶೀಯ ಮತ್ತು ವಿದೇಶೀಯರ ಬರೆವಣಿಗೆಗಳಿಂದ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಅನೇಕ ನಾಣ್ಯಗಳ ಹೆಸರುಗಳು ತಿಳಿದುಬರುತ್ತವೆ. ಗದ್ಯಾಣವೆಂಬ ನಾಣ್ಯ ಬಾದಾಮಿಯ ಚಳುಕ್ಯರ ಕಾಲದಿಂದ ಕಾಣಬರುತ್ತದೆ. ವರಹ ಮತ್ತು ಹಣಗಳು ಗಂಗರ ಶಾಸನಗಳಲ್ಲಿಯೂ ದ್ರಮ್ಮ, ಸುವರ್ಣ, ಗದ್ಯಾಣ, ಕಳಂಜು, ಕಾಸು, ಮಂಜಾಡಿ, ಅಕ್ಕಂ - ಇವು ರಾಷ್ಟ್ರಕೂಟರ ಶಾಸನಗಳಲ್ಲಿಯೂ ಕಾಣಬರುತ್ತವೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಇನ್ನೂ ಹೆಚ್ಚಿನ ಮಾಹಿತಿ ದೊರಕಿದ್ದು ಪಣ, ಹೊನ್ನು, ಹಾಗ, ಕಾಗಿನಿ, ವೀಸ, ಗುಳಿಕೆ ಮತ್ತು ಬೇಳೆ ಎಂಬ ಹೊಸ ನಾಣ್ಯಗಳು ಸಿಗುತ್ತವೆ. ಈ ಕಾಲದ ಶಾಸನಗಳಿಂದ 1 ಗದ್ಯಾಣ = 10 ಪಣ, 1 ಪಣ =4 ಹಾಗ =4 ಕಾಗಿನಿ,1 ಹಾಗ =4 ಅಥವಾ 5 ವೀಸ ಎಂದೂ ಗೊತ್ತಾಗುತ್ತದೆ. ಸುಮಾರು ಇದೇ ರೀತಿಯ ನಾಣ್ಯಪದ್ಧತಿ ಹೊಯ್ಸಳ-ಸೇವುಣ ಕಾಲದಲ್ಲಿಯೂ ಇದ್ದಿತೆಂದು ಊಹಿಸಬಹುದು. ವಿಜಯನಗರದ ಕಾಲದಲ್ಲಿ ಗದ್ಯಾಣ, ವರಹ, ಪೊನ್, ಪಗೋಡ, ಪ್ರತಾಪ, ಕಾಟಿ, ಪಣ, ಹಾಗ, ವೀಸ, ತಾರ, ಜಿಟಲ್, ಕಾಸು ಎಂಬ ನಾಣ್ಯಗಳೂ ಅವುಗಳ ಪ್ರಭೇದಗಳೂ ಕಾಣಬರುತ್ತವೆ. ಆ ಕಾಲದಲ್ಲಿದ್ದ ನಾಣ್ಯಗಳ ವಿವರ ಹೀಗಿವೆ: 1 ವರಹ= 2 ಪ್ರತಾಪ, 1 ಪ್ರತಾಪ=2 ಕಾಟಿ, 1 ವರಹ=10 ಪಣ=8 ಚಿನ್ನಂ, 1 ಪಣ=4 ಹಾಗ, 1 ಹಾಗ=2 ಬೇಳೆ, ಕೆಳದಿ ನಾಯಕರ ಶಾಸನಗಳ ಪ್ರಕಾರ 1 ವರಹ=2 ಹೊನ್ನು, 1 ಹೊನ್ನು =2 ಧರಣ, 1 ಧರಣ=5 ಹಣ, 1 ಹಣ=2 ಅಡ್ಡ, 1 ಅಡ್ಡ=2 ಹಾಗ, 1 ಹಾಗ=2 ಬೇಳೆ, 1 ಹಾಗ=4 ವೀಸ, 1 ವೀಸ=2 ಅರೆವೀಸ=16 ಕಾಸು. ಟಿಪ್ಪುಸುಲ್ತಾನ ಅನೇಕ ಹೊಸ ನಾಣ್ಯಗಳನ್ನು ರೂಢಿಗೆ ತಂದು ಅವುಗಳಿಗೆ ಹೊಸ ಹೆಸರುಗಳನ್ನು ಕೊಟ್ಟಿದ್ದ.

ನಾಣ್ಯಗಳ ಮೇಲಿರುವ ಚಿಹ್ನೆಗಳು ಅಥವಾ ಪ್ರಾಣಿಗಳು ಅಥವಾ ದೇವತೆಯ ಚಿತ್ರಗಳು ಗಮನಾರ್ಹವಾದವು. ಸಾತವಾಹನರ ನಾಣ್ಯಗಳ ಮೇಲೆ ಆನೆ, ಕುದುರೆ ಮುಂತಾದ ಪ್ರಾಣಿಗಳು ಇಲ್ಲವೆ ಬೆಟ್ಟ, ಬೇಲಿಯೊಳಗಿನ ವೃಕ್ಷ, ಬಿಲ್ಲು ಬಾಣ ಮುಂತಾದವುಗಳಿವೆ. ಕದಂಬರ ನಾಣ್ಯಗಳಲ್ಲಿ ಪದ್ಮದ ಚಿಹ್ನೆ ಶಂಖಚಕ್ರಗಳಿವೆ. ಆನೆ ಗಂಗರ ಲಾಂಛನವಾದುದರಿಂದ, ಅದನ್ನು ಅವರ ನಾಣ್ಯಗಳ ಮೇಲೆ ಕಾಣುತ್ತೇವೆ. ಕಲ್ಯಾಣದ ಚಾಳುಕ್ಯರ ನಾಣ್ಯಗಳ ಮೇಲೆ ಗೋಪುರ ವಿಶೇಷವಾಗಿ ಕಾಣುತ್ತದೆ. ಹೊಯ್ಸಳರ ನಾಣ್ಯಗಳಲ್ಲಿ ಅವರ ಲಾಂಛನವಾದ ಸಿಂಹವಿದೆ. ಆಳುಪರ ನಾಣ್ಯಗಳಲ್ಲಿ ಅವರ ಲಾಂಛನ ಮೀನನ್ನು ಕಾಣುತ್ತೇವೆ. ವಿಜಯನಗರದ ಅರಸರು ಹಿಂದು ದೇವತೆಗಳ ಚಿತ್ರಗಳನ್ನು ಹಾಕಿಸಿದರು. ಉಮಾಮಹೇಶ್ವರ, ಲಕ್ಷ್ಮೀನರಸಿಂಹ, ಬಾಲಕೃಷ್ಣ, ವೆಂಕಟೇಶ್ವರ, ಲಕ್ಷ್ಮೀನಾರಾಯಣ, ಶ್ರೀರಾಮ, ಗರುಡ, ಹನುಮಂತ, ವರಾಹ, ದುರ್ಗ ಮುಂತಾದ ದೇವತೆಗಳ ಚಿತ್ರಗಳನ್ನು ನಾಣ್ಯಗಳ ಒಂದು ಮುಖದಲ್ಲಿ ಹಾಕಿಸಿದರು. ಟಿಪ್ಪುಸುಲ್ತಾನನ ನಾಣ್ಯಗಳ ಮೇಲೆ ಆನೆಯ ಚಿತ್ರವಿದೆ. ಮೈಸೂರು ಒಡೆಯರು ಆನೆ ಅಥವಾ ಸಿಂಹದ ಚಿತ್ರ ಅದರ

ಮೇಲೆ ಚಾಮುಂಡಿ ಎಂಬ ಬರೆಹವನ್ನು ಹಾಕಿಸಿದರು.

ಹೊರನಾಡುಗಳಲ್ಲಿ ಅಚ್ಚಾದ ಕೆಲವು ನಾಣ್ಯಗಳು ಸಹ ಕರ್ನಾಟಕದಲ್ಲಿ ದೊರಕಿವೆ. 1891ರಲ್ಲಿ ಲೂಯಿ ರೈಸರು ಮೊಟ್ಟಮೊದಲಿಗೆ ಕರ್ನಾಟಕದಲ್ಲಿ ರೋಮನ್ ನಾಣ್ಯವನ್ನು ಪತ್ತೆಮಾಡಿದರು. ಬೆಂಗಳೂರಿಗೆ ಸಮೀಪದಲ್ಲಿರುವ ಯಶವಂತಪುರದಲ್ಲಿ ರೈಲ್ವೆ ಹಳಿಯನ್ನು ಹಾಕುವ ಸಲುವಾಗಿ ಅಗೆಯುತ್ತಿರುವಾಗ ಮಡಕೆಯೊಂದರಲ್ಲಿ 163 ರೋಮನ್ ಬೆಳ್ಳಿ ನಾಣ್ಯಗಳು ಕಂಡುಬಂದವು. ಈ ನಾಣ್ಯಗಳು ಕ್ರಿ.ಪೂ. 21ರಿಂದ ಕ್ರಿ.ಶ. 51ರ ವರೆಗಿನ ನಾಣ್ಯಗಳು. ಇವುಗಳು ರೋಮನ್ ಚಕ್ರವರ್ತಿ ಆಗಸ್ಟಸ್, ಟೈಬೀರಿಯಸ್, ಕ್ಯಾಲಿಗುಲ ಮತ್ತು ಕ್ಲಾಡಿಯಿಸ್ ಅವರಿಗೆ ಸೇರಿದ ನಾಣ್ಯಗಳು. ಒಂದೇ ಒಂದು ನಾಣ್ಯ ಮಾತ್ರ ನೀರೋವಿನ ಹೆಂಡತಿ ಆಂಟೋನಿಯೊ ಅಗಸ್ಟಳಿಗೆ ಸೇರಿದ್ದು. 1947ರಲ್ಲಿ ಚಂದ್ರವಳ್ಳಿಯಲ್ಲಿ ನಡೆಸಿದ ಉತ್ಖನನದಲ್ಲಿ ಒಂದು ರೋಮನ್ ದೀನಾರ ನಾಣ್ಯ ದೊರೆಯಿತು. ಇದು ಚಕ್ರವರ್ತಿ ಟೈಬೀರಿಯಸ್‍ನ ಕಾಲದ್ದು. ಇದರ ವ್ಯಾಸ 0.7" ಮತ್ತು ತೂಕ 2.89 ಗ್ರಾಂಗಳು. ಇದರ ಮುಮ್ಮುಖದಲ್ಲಿ ಟೈಬೀರಿಯಸ್‍ನ ಚಿತ್ರ ಮತ್ತು T1 CAESAR DIVI AVGF AVGVSTVS ಎಂಬ ಬರೆಹವಿದೆ. ಹಿಮ್ಮುಖದಲ್ಲಿ ಕುರ್ಚಿಯ ಮೇಲೆ ಕುಳಿತಿರುವ ಸ್ತ್ರೀಚಿತ್ರವಿದೆ. ಆಕೆಯ ಕಾಲುಗಳು ಚಿಕ್ಕ ಸ್ಟೂಲಿನ ಮೇಲಿದೆ. ಕೆಳಭಾಗದಲ್ಲಿ PONTIF MAXIM ಎಂಬ ಬರೆಹವಿದೆ. ಇದಕ್ಕೂ ಮುಂಚೆ ಮೈಸೂರು ಪುರಾತತ್ತ್ವ ಇಲಾಖೆಯವರು ಚಂದ್ರವಳ್ಳಿಯಲ್ಲಿ ನಡೆಸಿದ ಅಗೆತಗಳಲ್ಲಿಯೂ ಕೆಲವು ರೋಮನ್ ನಾಣ್ಯಗಳು ಬೆಳಕಿಗೆ ಬಂದವು. ಅವುಗಳಲ್ಲಿ ಒಂದು ಅಗಸ್ಟಸ್ ಸೀಸರನ ಕಾಲದ್ದು. 1965ರಲ್ಲಿ ಬೆಂಗಳೂರಿನ ಎಚ್.ಎ.ಎಲ್. ನಿಲ್ದಾಣದಲ್ಲಿ ಕೆಲಸವನ್ನು ಮಾಡುತ್ತಿದ್ದಾಗ 226 ರೋಮನ್ ಬೆಳ್ಳಿಯ ನಾಣ್ಯಗಳು ಸಿಕ್ಕಿದವು. ಇಲ್ಲಿ ದೊರಕಿರುವ ಬೆಳ್ಳಿನಾಣ್ಯಗಳು ಅಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳಿಗೆ ಸೇರಿದವುಗಳು.

ಚೋಳ ಅರಸರಾದ ರಾಜರಾಜ ಮೊದಲಾದವರ ನಾಣ್ಯಗಳು, ಮುಗಲರ ಅಕ್ಬರ್, ಔರಂಗಜೇಬ್, ಸಿಕಂದರ್, ಬಹಾದುರ್ ಷಾ ಮೊದಲಾದವರ ನಾಣ್ಯಗಳು ತಿರುವಾಂಕೂರಿನ ಚಕ್ರಂಗಳು ಸಹ ಕರ್ನಾಟಕದಲ್ಲಿ ಕಂಡುಬಂದಿವೆ. ಈಸ್ಟ್ ಇಂಡಿಯಾ ಕಂಪನಿಯವರು ಕರ್ನಾಟಕದಲ್ಲಿ ಆಡಳಿತವನ್ನು ನಡೆಸುವಾಗ್ಗೆ ಅವರೇ ಛಾಪಿಸುತ್ತಿದ್ದ ರೂಪಾಯಿ ಆಣೆ ಕಾಸು ಮೊದಲಾದ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಬಳಕೆಯಲ್ಲಿದ್ದವು. 1857ರ ಅನಂತರ ಬ್ರಿಟಿಷ್ ಅರಸರ ಹೆಸರಿನಲ್ಲಿ ಅಚ್ಚಾಗುತ್ತಿದ್ದ ಭಾರತೀಯ ನಾಣ್ಯಗಳೂ ಅನಂತರ ಸ್ವತಂತ್ರ ಭಾರತ ಸರ್ಕಾರದ ನಾಣ್ಯಗಳೂ ಚಲಾವಣೆಗೆ ಬಂದುವು.

ಈ ರೀತಿ ವೈವಿಧ್ಯಪೂರ್ಣವಾದ ಕರ್ನಾಟಕದ ನಾಣ್ಯಗಳ ಅಧ್ಯಯನಕಾರ್ಯ ವ್ಯವಸ್ಥಿತವಾಗಿ ನಡೆದಿಲ್ಲ. ಮೈಸೂರು, ಬೆಂಗಳೂರು, ಶಿವಮೊಗ್ಗ, ಮದರಾಸು, ಮುಂಬಯಿ ಮುಂತಾದ ಕಡೆಗಳಲ್ಲಿರುವ ವಸ್ತುಸಂಗ್ರಹಾಲಯಗಳಲ್ಲಿ ಕರ್ನಾಟಕ ನಾಣ್ಯಗಳ ಸಂಗ್ರಹಗಳು ಇವೆ.

ಕರ್ನಾಟಕದಲ್ಲಿ ನಾಣ್ಯಶಾಸ್ತ್ರ ವಿಷಯದಲ್ಲಿ ಪ್ರಕಟವಾದ ಗ್ರಂಥಗಳು ಮತ್ತು ಲೇಖನಗಳು ವಿರಳ. ಹಾಕ್ಸ್ ಅವರು 1856ರಲ್ಲಿ ಪ್ರಕಟಿಸಿದ ಎ ಬ್ರೀಫ್ ಸ್ಕೆಚ್ ಆಫ್ ಗೋಲ್ಡ್, ಸಿಲ್ವರ್ ಅಂಡ್ ಕಾಪರ್ ಕಾಇನೇಜ್ ಆಫ್ ಮೈಸೂರ್ ಎನ್ನುವುದು ಪ್ರಾಚೀನ ಗ್ರಂಥಗಳಲ್ಲೊಂದು. ಅನಂತರ ಎಲಿಯಟ್‍ರವರು ತಮ್ಮ ಕಾಇನ್ಸ್ ಆಫ್ ಸದರ್ನ್ ಇಂಡಿಯ ಎನ್ನುವ ಗ್ರಂಥದಲ್ಲಿ ಕರ್ನಾಟಕದಲ್ಲಿ ಆಳಿದ ಕೆಲವು ರಾಜಮನೆತನಗಳ ನಾಣ್ಯಗಳ ಬಗೆಗೆ ವಿಚಾರ ಮಾಡಿದರು. 1883ರಲ್ಲಿ ಜಿ.ಬಿಡೀ ಎನ್ನುವವವರು ಚಾಳುಕ್ಯ, ವಿಜಯನಗರದ ಮತ್ತು ಮೈಸುರರಸರ ನಾಣ್ಯಗಳನ್ನು ಕುರಿತು ಬರೆದರು. ಇದಾದ ಐದು ವರ್ಷಗಳ ಅನಂತರ ಥರ್ಸ್ಟನ್ ಅವರು ಮದರಾಸು ವಸ್ತುಸಂಗ್ರಹಾಲಯದಲ್ಲಿರುವ ಮೈಸೂರು ನಾಣ್ಯಗಳನ್ನು ಕುರಿತು ಬರೆದರು. 1889ರಲ್ಲಿ ಟಿಫ್ನೆಲ್‍ರವರು ಬೆಂಗಳೂರು ವಸ್ತುಸಂಗ್ರಹಾಲದಲ್ಲಿರುವ ಮೈಸೂರು ನಾಣ್ಯಗಳನ್ನು ವಿಮರ್ಶಿಸಿ ಸೂಚಿಯನ್ನು ಪ್ರಕಟಿಸಿದರು. 1891ರಲ್ಲಿ ಬೆಂಗಳೂರಿನಲ್ಲಿ ಸಿಕ್ಕಿದ ರೋಮನ್ ನಾಣ್ಯಗಳನ್ನು ಕುರಿತು ರೈಸ್‍ರವರು ಒಂದು ಸಣ್ಣ ಲೇಖನವನ್ನು ಬರೆದರು. ಬ್ರಿಟಿಷ್ ನಾಣ್ಯಶಾಸ್ತ್ರಜ್ಞರು ಹೈದರ್ ಮತ್ತು ಟಿಪ್ಪುಸುಲ್ತಾನರ ನಾಣ್ಯಗಳ ಬಗೆಗೆ ವಿಶೇಷ ಆಸಕ್ತಿ ವಹಿಸಿದರು. 1909ರಲ್ಲಿ ಪ್ರಕಟವಾದ ಜಾಕ್‍ಸನ್‍ರ ಕಾಇನ್ ಕಲೆಕ್ಟಿಂಗ್ ಇನ್ ಮೈಸೂರ್, ಕಾಇನ್ ಕಲೆಕ್ಟಿಂಗ್ ಇನ್ ಡೆಕ್ಕನ್, ಟೇಲರ್‍ರವರ ಕಾಇನ್ಸ್ ಆಫ್ ಟಿಪ್ಪುಸುಲ್ತಾನ್ (1914), ಹೆಂಡರ್‍ಸನ್ ಅವರ ಕಾಇನ್ಸ್ ಆಫ್ ಹೈದರ್ ಅಲಿ ಅಂಡ್ ಟಿಪ್ಪುಸುಲ್ತಾನ್ (1921) - ಇವು ಮುಖ್ಯವಾದವು. ಆರ್. ನರಸಿಂಹಾಚಾರ್ ಅವರು ತಮಗೆ ದೊರಕಿರುವ ಚುಟು, ಸಾತವಾಹನ, ವಿಜಯನಗರ, ಹೈದರ್, ಟಿಪ್ಪು ಮತ್ತು ಮೈಸೂರರಸರ ನಾಣ್ಯಗಳನ್ನು ಪುರಾತತ್ತ್ವ ವಾರ್ಷಿಕ ವರದಿಗಳಲ್ಲಿ ಸೇರಿಸಿದ್ದಾರೆ. ಎಂ.ಎಚ್.ಕೃಷ್ಣ ಅವರು ಡೆಕ್ಕನ್ ನ್ಯೂಮಿಸ್ಮ್ಯಾಟಿಕ್ಸ್ ಎನ್ನುವ ತಮ್ಮ ಡಾಕ್ಟೊರಲ್ ನಿಬಂಧದ ಕೆಲವು ಭಾಗಗಳನ್ನು ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಅಚ್ಚುಮಾಡಿದರು. ಇವು ಕರ್ನಾಟಕ ನಾಣ್ಯಶಾಸ್ತ್ರ ಅಧ್ಯಯನಕ್ಕೆ ಮಹತ್ತರ ಕೊಡುಗೆ. ಆಂಧ್ರಪ್ರದೇಶ ಸರ್ಕಾರದ ಪುರಾತತ್ವ ಇಲಾಖೆ ಇತ್ತೀಚೆಗೆ ನಾಣ್ಯಶಾಸ್ತ್ರದಲ್ಲಿ ಕೆಲವು ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಕೆಲವು ಕರ್ನಾಟಕಕ್ಕೆ ಸಂಬಂಧಿಸಿವೆ. ರ್ಯಾಪ್ಸನ್ ಆಲನ್, ಸ್ಮಿತ್ ಮೊದಲಾದವರು ಪ್ರಕಟಿಸಿದ ನಾಣ್ಯಸೂಚಿಗಳಲ್ಲಿ ಕೆಲವು ಕರ್ನಾಟಕಕ್ಕೆ ಸಂಬಂಧಿಸಿವೆ. ಎ.ವಿ.ನರಸಿಂಹಮೂರ್ತಿಯವರು ಕಾಇನ್ಸ್ ಆಫ್ ಕರ್ನಾಟಕ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಹೆಚ್. ಖಂಡೋಬರಾವ್ ಅವರ ನಾಣ್ಯ ಕರ್ನಾಟಕ ನಾಣ್ಯಶಾಸ್ತ್ರವನ್ನು ಕುರಿತ ಇತ್ತೀಚಿನ ಗ್ರಂಥ ಇವುಗಳಲ್ಲಿ ರಾಜವಂಶವಾರು ಮಾಹಿತಿಗಳು ದೊರೆಯುತ್ತವೆ. (ಎ.ವಿ.ಎನ್.)

**ನಾಮಕರಣ :** ಮಗುವಿಗೆ ಹೆಸರಿಡುವ ಸಮಾರಂಭ. ಅನೇಕ ನಂಬಿಕೆ ಹಾಗೂ ಧಾರ್ಮಿಕ ವಿಧಿಗಳಿಂದ ಕೂಡಿರುವ ಈ ಪದ್ಧತಿ ಕರ್ನಾಟಕದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಮತದಿಂದ ಮತಕ್ಕೆ ಆಚರಣೆಯ ವಿಧಾನಗಳಲ್ಲಿ ಬಹಳಷ್ಟು ವ್ಯತ್ಯಾಸ ಕಂಡುಬರುತ್ತದೆ. ಕೆಲವರಲ್ಲಿ ಮಗು ಹುಟ್ಟಿದ 10, 11 ಅಥವಾ 12ನೆಯ ದಿನದಲ್ಲಿ ನಾಮಕರಣ ಸಮಾರಂಭವಿರುತ್ತದೆ. ಕ್ಷತ್ರಿಯರು 16ನೆಯ ದಿನ, ವೈಶ್ಯರು 19ನೆಯ ದಿನ, ಶೂದ್ರರು 9, 11, 20, 22 ಅಥವಾ 32ನೆಯ ದಿನ ನಾಮಕರಣ ಮಾಡಿದರೆ ಕೆಲವು ಕಡೆ ಮುಸಲ್ಮಾನರು ಮಗು ಹುಟ್ಟಿದ ದಿನವೇ ಆಚರಿಸುತ್ತಾರೆ. ಗಂಡು ಮಗುವಿಗೆ ಸರಿಸಂಖ್ಯೆ ಅಕ್ಷರವುಳ್ಳ ಹೆಸರಿಟ್ಟರೆ ಒಳ್ಳೆಯದು ಎಂಬ ನಂಬಿಕೆ ಇದೆ. ಬ್ರಾಹ್ಮಣರಲ್ಲಿ ನಾಮಕರಣದ ದಿನ ವಿನಾಯಕ ಪೂಜೆ, ಪುಣ್ಯಾಹ, ನಾಂದಿ ಕಾರ್ಯಗಳು ಮುಗಿದ ಅನಂತರ ತಂದೆ ತಾಯಿಗಳು ಮಗುವಿನೊಡನೆ ಪೂರ್ವಾಭಿಮುಖವಾಗಿ ಕುಳಿತು ಸಂಕಲ್ಪ ಪಠಿಸುತ್ತಾರೆ. ಮಗುವಿನ ನಾಮಕರಣಕ್ಕಿಂತ ಮುಂಚೆ ಒಂದು ರಹಸ್ಯ ಹೆಸರನ್ನಿಟ್ಟಿರುತ್ತಾರೆ. ತಂದೆ ತಾಯಿಗೆ ಮಾತ್ರ ಈ ಹೆಸರು ತಿಳಿದಿರುತ್ತದೆ. ನಾಮಕರಣದ ದಿನ ಇಡುವ ಹೆಸರಿಗೆ ಸಾರ್ವಜನಿಕ ಹೆಸರು ಎನ್ನುತ್ತಾರೆ. ಒಂದು ತಟ್ಟೆಯಲ್ಲಿ ಅಕ್ಕಿ ತುಂಬಿ ಅದರಲ್ಲಿ ಕುಲದೇವತೆಯ ಹೆಸರು, ಮಗು ಹುಟ್ಟಿದ ತಿಂಗಳು, ನಕ್ಷತ್ರ ಮತ್ತು ಇಡಬೇಕೆಂದಿರುವ ಹೆಸರು ಬರೆದು ಹೆಸರಿಗೆ ಸಂಬಂಧಿಸಿದ ದೇವತೆಗಳಿಗೆ ಹದಿನಾರು ಔಪಚಾರಿಕ ಪೂಜೆಗಳನ್ನು ಅರ್ಪಿಸಿ ಅನಂತರ ಮಗುವಿನ ತಂದೆ ಮಗುವಿನ ಹೆಸರನ್ನು ಬಲಕಿವಿಯಲ್ಲಿ ಹೇಳಿ ಮಂತ್ರವನ್ನು ಪಠಿಸುತ್ತಾನೆ. ಅನಂತರ ಸಮಾರಂಭದಲ್ಲಿ ಭಾಗವಹಿಸಿದ ಹಿರಿಯರು ಮಗುವಿಗೆ ಆಶೀರ್ವದಿಸುತ್ತಾರೆ. ಭೋಜನ ಹಾಗೂ ಫಲತಾಂಬೂಲ ವಿತರಣೆಯೊಂದಿಗೆ ಸಮಾರಂಭ ಮುಕ್ತಾಯವಾಗುತ್ತದೆ.

ಶೈವರಲ್ಲಿ 11 ಅಥವಾ 12ನೆಯ ದಿನ ನಾಮಕರಣವಿರುತ್ತದೆ. ಜಂಗಮನ ಪಾದೋದಕದಿಂದ ಸೂತಕ ಕಳೆದುಕೊಳ್ಳುತ್ತಾರೆ. ಮೊದಲು ಕಳಸಪೂಜೆ, ಪಂಚಾಮೃತದಿಂದ ಲಿಂಗಪೂಜೆ - ಇವು ನಡೆಯುತ್ತವೆ. ಪಂಚಾಕ್ಷರೀ ಮಂತ್ರವನ್ನು ಮಗುವಿನ ಕಿವಿಯಲ್ಲಿ ಪಠಿಸುವ ಕಾರ್ಯ ಕರ್ಣಬೋಧೆ ಮುಗಿದ ಅನಂತರ ಮನೆಯವರ ಒಪ್ಪಿಗೆ ಮೇರೆಗೆ ಪೂಜಾರಿ ನಾಮಕರಣ ಮಾಡುತ್ತಾನೆ. ಸಾಮಾನ್ಯವಾಗಿ ಶಿವಪಾರ್ವತಿಯರ ಹೆಸರುಗಳು, ವೀರಶೈವ ಸಂತರ ಹೆಸರುಗಳು ಇವರಲ್ಲಿ ಹೆಚ್ಚಾಗಿವೆ.

ಕೆಲವು ಕಡೆ ಒಕ್ಕಲಿಗರಲ್ಲಿ ನಾಮಕರಣ ಮಾಡುವವನು ದಾಸಪ್ಪ. ಮಗುವಿಗೆ ಆಯ್ಕೆ ಮಾಡಿದ ಹೆಸರನ್ನು ಇಡುವಾಗ ಜೋರಾಗಿ ಮೂರು ಸಾರಿ ಕೂಗಿ ಶಂಖ ಊದುತ್ತಾನೆ. ಆದರೆ ಮೈಸೂರಿನ ಸುತ್ತಮುತ್ತಲಿನ ಕೆಲವು ಒಕ್ಕಲಿಗರಲ್ಲಿ (ಪಿರಿಯಾಪಟ್ಟಣ, ಕೃಷ್ಣರಾಜನಗರ) ನಾಮಕರಣ ಪದ್ಧತಿ ವಿಶಿಷ್ಟವಾಗಿರುತ್ತದೆ. ಮಗು ಹುಟ್ಟಿದ 12ನೆಯ ದಿನ ಮುತ್ತೈದೆಯರು ಸೇರಿ ಮಗು ಬಾಣಂತಿಯರಿಗೆ ಸ್ನಾನಮಾಡಿಸುತ್ತಾರೆ. ಒಂದು ಜಿರಳೆಯನ್ನು ತಂದು ಮನೆಯ ಯಾವ ಸ್ಥಳದಲ್ಲಿ ಹೆರಿಗೆಯಾಯಿತೋ ಅಲ್ಲಿ ಒಂದು ಸಣ್ಣ ಕುಳಿ ತೋಡಿ, ಎಡೆಹಾಕಿ, ಆ ಜಿರಳೆಯನ್ನು ಕುಳಿಯಲ್ಲಿಟ್ಟು ಪ್ರಾಣಕ್ಕೆ ಪ್ರಾಣ ಎಂಬ ಉದ್ಗಾರದೊಂದಿಗೆ ಮಣ್ಣು ಮುಚ್ಚಿ ಆ ಸ್ಥಳಕ್ಕೆ ಮಗುವನ್ನು ತಂದು ಮೂರು ಸುತ್ತು ಪ್ರದಕ್ಷಿಣೆ ಹಾಕಿಸಿ ಮೂರು ಸಲ ಅಡ್ಡಬೀಳಿಸಿ ತೊಟ್ಟಿಲಿಗೆ ಹಾಕುತ್ತಾರೆ. ಇದಕ್ಕೆ ಗುಣಿಶಾಸ್ತ್ರ ಎನ್ನುವರು. ಮಧ್ಯಾಹ್ನ ನೆಂಟರಿಷ್ಟರಿಗೆಲ್ಲ ಊಟವಿರುತ್ತದೆ. ಊಟದ ಪಂಕ್ತಿಯಲ್ಲಿ ಮನೆಯ ಅಥ'ವಾ ಸಂಬಂಧಿಗಳ ಹಿರಿಯ ಹೆಂಗಸೊಬ್ಬಳು ಮಗುವಿಗೆ ಇಡಬೇಕೆಂದಿರುವ ಹೆಸರನ್ನು ಜೋರಾಗಿ ಕೂಗಿ ಹೇಳುತ್ತಾಳೆ. (ಉದಾ: ತಿಮ್ಮೇಗೌಡ ಕಣ್ರಪ್ಪೋ ಹೆಸರು). ಊಟ ಮುಗಿದ ಅನಂತರ ನೆಂಟರಿಷ್ಟರು ಮಗುವಿನ ತೊಟ್ಟಿಲ ಹತ್ತಿರ ಹೋಗಿ ಹೆಸರು ಕರೆದು ತೇಯ್ದಿಟ್ಟಿರುವ ಬಜೆ ಹಾಗೂ ಬೆಣ್ಣೆಯನ್ನು ಮಗುವಿನ ಬಾಯಿಗೆ ಸ್ವಲ್ಪ ಹಾಕಿ ಉಡುಗೊರೆಯನ್ನು ನೀಡುವರು.

ಮಗು ಹುಟ್ಟಿದ 12 ಅಥವಾ 14ನೆಯ ದಿನ ಜೈನರು ಮೈಲಿಗೆ ಕಳೆಯುವ ವಿಧಿಗಳನ್ನು ಮುಗಿಸಿ ಪುಣ್ಯಾಹ, ಹೋಮಗಳನ್ನು ಮಾಡುತ್ತಾರೆ. ಮಗುವಿನ ತಂದೆ ಸ್ನಾನ ಮುಗಿಸಿ ಹೊಸ ಉಡುಪು ತೊಟ್ಟು ತಟ್ಟೆಯಲ್ಲಿರುವ ಅಕ್ಕಿಯ ಮೇಲೆ ಅರಿಸಿನದ ಕೊನೆಯಿಂದ ಮಗುವಿಗೆ ಇಡಬೇಕಾಗಿರುವ ಹೆಸರು ಬರೆಯುತ್ತಾನೆ. ಹಾಲು ಬೆಣ್ಣೆಗಳಿಂದ ಒಂದು ಪಾತ್ರೆಯಲ್ಲಿ ಮಗುವಿನ ವಿವಿಧ ಆಭರಣಗಳನ್ನು ಮುಳುಗಿಸಿರುತ್ತಾರೆ. ದರ್ಭೆಯಿಂದ ತೀರ್ಥಪ್ರೋಕ್ಷಣೆಯಾದ ಅನಂತರ ಮಗುವಿಗೆ ಆಭರಣ ತೊಡಿಸಿ ಅರ್ಹಂತನ 108 ಹೆಸರುಗಳನ್ನು ಪಠಿಸಿ ಮಗುವಿಗೆ ಒಳ್ಳೆಯದು ಮಾಡುವಂತೆ ಕೇಳಿಕೊಳ್ಳುತ್ತಾರೆ. ಪುರೋಹಿತ ಮಗುವಿನ ಹೆಸರನ್ನು ಜೋರಾಗಿ ಕೂಗಿ ಹೇಳಿದ ಅನಂತರ ತಂದೆ ಮಗುವಿನ ಬಲಕಿವಿಯಲ್ಲಿ ಹೆಸರನ್ನು ಉಚ್ಚರಿಸುತ್ತಾನೆ. ಆ ದಿನ ಅಗ್ನಿಗೆ ಅರ್ಘ್ಯ ಕೊಡುವುದು, ಬ್ರಾಹ್ಮಣರಿಗೆ ದಾನಕೊಡುವುದು ಇವೇ ಮೊದಲಾದ ಕಾರ್ಯಕ್ರಮಗಳಿರುತ್ತವೆ.

ಕೊಡವರಲ್ಲಿ ನಾಮಕರಣದ ದಿನ ಮಗುವಿನ ತಾಯಿಯನ್ನು ವಧುವಿನ ರೀತಿಯಲ್ಲಿ ಶೃಂಗರಿಸುತ್ತಾರೆ. ಮಗುವಿಗೆ ಬಿಳಿ ಉಡುಪು ತೊಡಿಸಿ ಆ ಮಗುವಿನ ಅಜ್ಜಿ ಎತ್ತಿಕೊಂಡು ಬರುತ್ತಾಳೆ. ಮಜ್ಜಿಗೆಯನ್ನು ಸೋಸಿ ಅದರ ಗಸಿಯಲ್ಲಿ ಅನ್ನ ಕಲಸಿ ಮಗುವಿಗೆ ಸ್ವಲ್ಪ ಕೊಟ್ಟು ಉಳಿದುದನ್ನು ಅಲ್ಲಿದ್ದ ಮಕ್ಕಳಿಗೆ ಕೊಡುತ್ತಾರೆ. ಕಲ್ಲೊಂದಕ್ಕೆ ಬಿಳಿ ವಸ್ತ್ರವನ್ನು ಸುತ್ತಿ ಮಗುವಿಗೆ ಇಡಬೇಕೆಂದಿರುವ ಹೆಸರಿಟ್ಟು, ತಾಯಿ ಮತ್ತು ಅಜ್ಜಿ ಕಲ್ಲನ್ನು ಒಮ್ಮೆ ಮಗುವನ್ನು ಒಮ್ಮೆ ತೊಟ್ಟಿಲಿಗೆ, ಅನಂತರ ನೆಲಕ್ಕೆ ಸರತಿಯಂತೆ ಇಡುತ್ತಾರೆ. ಕಲ್ಲಿನಷ್ಟೇ ಆಯುಷ್ಯ ಮಗುವಿಗೂ ಬರಲಿ ಎಂಬುದೇ ಕಲ್ಲನ್ನು ಬಳಸುವುದರ ಸಂಕೇತ. ಪಾಲು ಕುಳುಂಬಾಕು ಬಾ ಹೇಳುತ್ತ ನಾಮಕರಣವಾಗುತ್ತದೆ (ತಾಯಿಯ ಹಿರಿಯ ಅಣ್ಣನಿಂದ), ಅನಂತರ ನೀರಿಗೆ ಹೋಗುವ ಶಾಸ್ತ್ರ ನಡೆಯುತ್ತದೆ. ಶುಭಸಂಕೇತವಾಗಿ ಕುಶಾಲುತೋಪು ಹಾರಿಸುವುದು, ವಾದ್ಯಗಾನ ಮುಂತಾದವುಗಳಿರುತ್ತವೆ.

ಕರ್ನಾಟಕದ ಗುಡ್ಡಗಾಡಿನ ಜನರಲ್ಲಿ ನಾಮಕರಣ ಸಮಾರಂಭ ತುಂಬ ಸರಳವಾಗಿರುತ್ತದೆ. ಗೊಲ್ಲರಲ್ಲಿ ಕಣಿಗಾರನನ್ನೋ ಅಥವಾ ಹಟ್ಟಿಯ ಮುಖ್ಯಸ್ಥನನ್ನೋ ಕಂಡು ಅವನಿಂದ ಹೆಸರು ತಿಳಿದು ನಾಮಕರಣ ಮಾಡುತ್ತಾರೆ. ಅಗಸರಲ್ಲಿ ಸೂಲಗಿತ್ತಿಯೇ ಮಗುವಿಗೆ ನಾಮಕರಣ ಮಾಡುತ್ತಾಳೆ. ದೊಂಬರಲ್ಲಿ ಕಣಿಗಾರನನ್ನು ಕರೆಸಿ ನಾಮಕರಣ ಮಾಡಿಸುತ್ತಾರೆ. ಕರ್ನಾಟಕದಲ್ಲಿ ಕ್ರೈಸ್ತರು ಮಗುವಿಗೆ ಜ್ಞಾನಸ್ನಾನ (ಬ್ಯಾಪ್ಟಿಸಮ್) ಮಾಡಿಸುವಾಗಲೇ ಪಾದ್ರಿ ನಾಮಕರಣವನ್ನೂ ನೆರವೇರಿಸುತ್ತಾನೆ.

ಕರ್ನಾಟಕದಲ್ಲಿ ಸಾಮಾನ್ಯವಾಗಿ ಮಗುವಿಗೆ ಮನೆದೇವರ ಅಥವಾ ಕುಲದೇವತೆಯ ಹೆಸರಲ್ಲದೆ, ಪೂರ್ವಿಕರ ಹೆಸರುಗಳನ್ನು ಇಡುವುದು ವಾಡಿಕೆ. ಈಚಿನ ದಿನಗಳಲ್ಲಿ ಈ ಕ್ರಮಗಳು ಬಹುಮಟ್ಟಿಗೆ ಬದಲಾಗುತ್ತಿವೆ. ಹಿಂದಿನ ಶುದ್ಧ ಕನ್ನಡ ಪದಗಳಿಂದ ಕೂಡಿದ ಹೆಸರುಗಳ ಸ್ಥಾನವನ್ನು ಸಂಸ್ಕೃತ ಪದಗಳು ಅಲಂಕರಿಸಿವೆ. ದೀರ್ಘ ಹೆಸರುಗಳಿಗೆ ಪ್ರತಿಯಾಗಿ ಸಂಕ್ಷಿಪ್ತ ಹೆಸರುಗಳನ್ನು ಇಡಲಾಗುತ್ತಿದೆ. ಅದರಲ್ಲಿ ಎರಡು ಅಥವಾ ಮೂರಕ್ಷರಗಳ ಹೆಸರುಗಳು ಜನಪ್ರಿಯವಾಗುತ್ತಿದೆ. ಅರ್ಥಕ್ಕಿಂತಲೂ ಉಚ್ಚಾರಕ್ಕೆ ಒತ್ತು ಸಿಗುತ್ತಿದೆ.

(ಎಸ್.ಎಸ್.ಜಿ.)

**ನಾಯಕನ ಹಟ್ಟಿ :** ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಒಂದು ಪಟ್ಟಣ ಮತ್ತು ಪುಣ್ಯಕ್ಷೇತ್ರ. ಚಳ್ಳಕೆರೆಗೆ ವಾಯವ್ಯದಲ್ಲಿ 22 ಕಿಮೀ ದೂರದಲ್ಲಿ ಚಳ್ಳಕೆರೆ-ಜಗಳೂರು ಮಾರ್ಗಮಧ್ಯದಲ್ಲಿದೆ. ನಾಯಕನಹಟ್ಟಿ 47 ಗ್ರಾಮಗಳನ್ನೊಳಗೊಂಡ ಹೋಬಳಿ ಕೇಂದ್ರ. ಇಲ್ಲಿ ನಗರಸಭಾಡಳಿತವಿದೆ. ಊರಿನ ಸುತ್ತ ಹಸಿರು ಚೆಲ್ಲಿ ನಿಂತಿರುವ ತೆಂಗು ಮತ್ತು ಇತರ ಗಿಡಮರಗಳು ಇದ್ದು ಮನಸ್ಸಿಗೆ ಆನಂದವನ್ನುಂಟುಮಾಡುತ್ತವೆ. ಇಲ್ಲಿ ಸುಮಾರು 250 ವರ್ಷಗಳ ಹಿಂದೆ ಜೀವಿಸಿದ್ದು ಅನೇಕ ಪವಾಡಗಳನ್ನು ಮೆರೆದು ಲೋಕೋಪಯುಕ್ತ ಕಾರ್ಯವೆಸಗಿದ ತಿಪ್ಪೇರುದ್ರಯ್ಯ ಎಂಬ ಪ್ರಸಿದ್ಧ ಶಿವಶರಣನ ದೇವಾಲಯವಿದೆ. ಈ ದೇವಾಲಯದ ಗೋಪುರ ಸುಮಾರು 24 ಮೀ ಎತ್ತರವಿದೆ. ಈ ಗೋಪುರವನ್ನು ಬಸೆಟ್ಟಪ್ಪನೆಂಬ ಭಕ್ತನೊಬ್ಬ ಕಟ್ಟಿಸಿದನೆಂದು ತಿಳಿದುಬರುತ್ತದೆ. ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿರುವ ಈ ಗೋಪುರ ಹಲವು ಪೌರಾಣಿಕ ಚಿತ್ರಗಳನ್ನೊಳಗೊಂಡಿದ್ದು, ಪ್ರೇಕ್ಷಕರ ಕುತೂಹಲವನ್ನು ಕೆರಳಿಸುತ್ತದೆ. ಗೋಪುರದ ಮಹಾದ್ವಾರವನ್ನು ದಾಟಿ ಮುಂದೆ ನಡೆದರೆ ಪ್ರಶಾಂತ ವಾತಾವರಣದಲ್ಲಿ ಮಹಂತೇಶ್ವರಲಿಂಗದ ದರ್ಶನವಾಗುತ್ತವೆ.

ಈ ಊರಿನ ಮತ್ತೊಂದು ಪ್ರೇಕ್ಷಣೀಯ ಸ್ಥಳವೆಂದರೆ ಗ್ರಾಮಕ್ಕೆ ಸುಮಾರು ಒಂದೂವರೆ ಕಿಮೀ ದೂರದಲ್ಲಿರುವ ಚಿಕ್ಕಕೆರೆಯೆಂಬ ರಮಣೀಯವಾದ ತಟಾಕ ಮತ್ತು ಈ ಕೆರೆಯ ಹಿಂದೆ ಇರುವ ತಿಪ್ಪೇರುದ್ರಯ್ಯನ ಸಮಾಧಿ. ಇದನ್ನು ಹೊರಮಠವೆಂದು ಕರೆಯುತ್ತಾರೆ. ದುಂಡುಗೋಪುರದ ಮಹಾದ್ವಾರವನ್ನು ಹಾಯ್ದು ಒಳಗೆ ಅಡಿಯಿಟ್ಟರೆ ಸಮಾಧಿಯ ಸುತ್ತ ವಿಶಾಲವಾದ ಅಂಗಳವಿದ್ದು ಎತ್ತರವಾದ ಪ್ರಾಕಾರವಿದೆ ಮತ್ತು ಇತ್ತೀಚೆಗೆ ಭಕ್ತಾದಿಗಳು ಕಟ್ಟಿಸಿರುವ ಕೆಲವು ಮಂಟಪಗಳು ಪೌಳಿಗಳು ಜಾತ್ರೆಯ ಸಮಯದಲ್ಲಿ ಭಕ್ತರು ತಂಗಲು ಅನುಕೂಲವಾಗಿವೆ.

ಕಲ್ಯಾಣದಲ್ಲಿ ಜನಿಸಿದ ಪಂಚಗಣಾಧೀಶ್ವರರಲ್ಲೊಬ್ಬರಾದ ತಿಪ್ಪೇರುದ್ರಸ್ವಾಮಿ ಕನ್ನಡ ನಾಡಿನ ಹಲವು ಭಾಗಗಳಲ್ಲಿ ಸಂಚರಿಸಿ ಕೊನೆಗೆ ನಾಯಕನಹಟ್ಟಿಗೆ ಬಂದು ನೆಲಸಿದನೆಂದೂ ಹನುಮಯ್ಯನ ಹಟ್ಟಿಯ ಬಳಿ ಇರುವ ಏಕಾಂತಮಠದಲ್ಲಿ ಹಲವು ವರ್ಷಗಳ ಕಾಲ ತಪೋನಿರತನಾಗಿದ್ದು ಅದ್ಭುತ ಪವಾಡಗಳಿಂದ ಮೆರೆದು, ಜನರನ್ನು ಸನ್ಮಾರ್ಗದತ್ತ ಕರೆದೊಯ್ಯುವ ಪುಣ್ಯ ಕಾರ್ಯದಲ್ಲಿ ತೊಡಗಿದ್ದನೆಂದೂ ಈ ಸಂತ ಹಿರೇಕೆರೆ, ಚಿಕ್ಕಕೆರೆ ಮೊದಲಾದ ಐದು ಕೆರೆಗಳನ್ನೂ ಹಲವು ಹಳ್ಳಿಗಳನ್ನೂ ಕಟ್ಟಿಸಿದನೆಂದೂ ಪ್ರತೀತಿ.

ಈ ಊರಿನ ಇತಿಹಾಸಕ್ಕೆ ಸಂಬಂಧಪಟ್ಟಂತೆ 1620-1625ರ ಎರಡು ಶಾಸನಗಳು ದೊರಕಿವೆ. ಇವುಗಳಲ್ಲಿ ಮಲ್ಲಪ್ಪನಾಯಕನೆಂಬುವನ ಉಲ್ಲೇಖವಿದೆ. ಆತ ಹಟ್ಟಿ ಎಂಬ ಹಳ್ಳಿಗೆ ಬಂದು ನೆಲಸಿದಂತೆಯೂ ವಿಜಯನಗರದ ಅರಸರು ಈತನನ್ನೇ ಆ ಪ್ರಾಂತ್ಯಕ್ಕೆ ಒಡೆಯನನ್ನಾಗಿ ನೇಮಿಸಿದ್ದರಿಂದ ಹಟ್ಟಿ ಎಂದಿದ್ದ ಆ ಗ್ರಾಮ ನಾಯಕನಹಟ್ಟಿ ಎಂಬ ಹೆಸರನ್ನು ಪಡೆಯಿತೆಂದೂ ಹೇಳುವರು. ಅನಂತರ ಬಂದ ಈ ನಾಯಕನ ವಂಶಸ್ಥನಾದ ಬೂದಿಮಲ್ಲನಾಯಕ ರಾಜ್ಯವನ್ನು ಮೊಳಕಾಲ್ಮೂರುವರೆಗೂ ವಿಸ್ತರಿಸಿದ. ಚಿತ್ರದುರ್ಗದ ಹಿರೇ ಮದಕರಿನಾಯಕ ತನ್ನ ಆಳ್ವಿಕೆಯಲ್ಲಿ ಈ ಪ್ರದೇಶವನ್ನು ವಶಪಡಿಸಿಕೊಂಡು ತನ್ನ ಸಂಸ್ಥಾನಕ್ಕೆ ಸೇರಿಕೊಂಡ.

ಈ ನಾಡಿನ ಭಾಗದ ಜನರ ಆರಾಧ್ಯದೈವವಾಗಿ ಬೆಳಗುತ್ತಿರುವ

ತಿಪ್ಪೇರುದ್ರಯ್ಯನ ಜಾತ್ರೆ ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಬಹಳ ವೈಭವದಿಂದ ಜರುಗುತ್ತದೆ. (ಎಸ್.ಎಂ.ಪಿ.)

**ನಾಯಕ ಸ್ವಾಮಿ :** ಉತ್ತರ ಕನ್ನಡ ಜಿಲ್ಲೆಯಲ್ಲಿದ್ದ ಒಬ್ಬ ಸಂತಕವಿ. ಪೂರ್ಣ ಹೆಸರು ಶಕರ ಮಂಗೇಶ ನಾಯಕ ಕರಂಡೇದೇಸಾಯಿ. ಹುಟ್ಟಿದ್ದು ಕುಮಟ ತಾಲ್ಲೂಕಿನಲ್ಲಿಯ ಅಂತರವಳ್ಳಿ ಗ್ರಾಮದಲ್ಲಿ. ಒಮ್ಮೆ ತಮ್ಮ ಕುಲದೇವತೆಯಾದ ಗೋವೆಯ ಪ್ರದೇಶದಲ್ಲಿನ ಶ್ರೀಕ್ಷೇತ್ರ ಮಂಗೇಶಕ್ಕೆ ತಮ್ಮ ಕುಲದೇವತೆಯಾದ ಗೋವೆಯ ಪ್ರದೇಶದಲ್ಲಿನ ಶ್ರೀ ಕ್ಷೇತ್ರ ಮಂಗೇಶಕ್ಕೆ ಹೋದಾಗ ಆಕಸ್ಮಾತ್ ಕುಟುಂಬದವರೆಲ್ಲ ರಸ್ತೆಯ ಕಾಡಿನಲ್ಲಿ ಬೇರೆ ಬೇರೆಯಾಗಿ ದಾರಿ ತಪ್ಪಿಸಿಕೊಂಡರಾಗಿ ಹಿಂದಕ್ಕೆ ಹೋಗದೆ ಮಂಗೇಶದಲ್ಲಿಯೇ ಉಳಿದ. ಅಲ್ಲಿರುವಾಗ ಸಂನ್ಯಾಸಿಯೊಬ್ಬನಿಂದ ವೈರಾಗ್ಯವನ್ನು ಪಡೆದ. ಅನಂತರದಲ್ಲಿ ಕಳೆದುಹೋದ ತಂದೆ ತಾಯಿಗಳ ಭೇಟಿಯಾಗಲಾಗಿ ಅವರೊಂದಿಗೆ ಮಂಗೇಶದಲ್ಲಿಯೇ ನೆಲೆಯೊಂದಿದ.

ಮಂಗೇಶವೇ ಕಾಶಿ ಎಂದು ಅರಿತ ಈತ ಅಲ್ಲಿಯೇ ನಿಂತು ಧಾರ್ಮಿಕ ಜೀವನ ನಡೆಸಿದ. ಅಲ್ಲಿ ಈತನ ಸಮಾಧಿ ಇದೆ. ಪ್ರತಿವರ್ಷ ವೈಶಾಖ ಬಹುಳ ದ್ವಾದಶಿಯಂದು ಈ ಸಂತನ ಪುಣ್ಯ ತಿಥಿಯನ್ನು ಮಾಡಲಾಗುತ್ತಿದೆ. ಅಂದು ಅಲ್ಲಿ ಒಂದು ಜಾತ್ರೆಯೂ ಸೇರುತ್ತದೆ.

ಪ್ರಾಸಾದಿಕ ಕವಿಯಾಗಿದ್ದ ಈತ ಶಿವಗೀತೆಯ ಮೇಲೆ ಒಂದು ಟೀಕೆಯನ್ನು ಬರೆದಿದ್ದಾನೆ. ಅನೇಕ ಶಿವಸ್ತುತಿಗಳನ್ನು ಬರೆದಿದ್ದಾನೆ. ಶ್ರೀಮಂಗೇಶನ ಶಿಬಿಕೋತ್ಸವ (ಪಲ್ಲಕ್ಕಿ ಸೇವೆ) ಸಮಯದಲ್ಲಿ ಈತನಿಂದ ರಚಿತವಾದ ಝುಲಪೆಗಳನ್ನು ಗೀತೆಗಳನ್ನು ಹೇಳುತ್ತಾರೆ. *

**ನಾಯಕ, ಹಾ.ಮಾ. :** 1931 - 2000. ಕನ್ನಡ ಅಂಕಣ ಪ್ರಕಾರಕ್ಕೆ ಘನತೆ, ಗೌರವ, ಕೀರ್ತಿ, ಸಾಹಿತ್ಯಕ ಮೌಲ್ಯ ತಂದುಕೊಟ್ಟ ಪ್ರಸಿದ್ಧ ಸಾಹಿತಿ. 'ಕನ್ನಡ ನನ್ನ ಮೊದಲ ಪ್ರೀತಿ, ಎರಡನೆಯ ಪ್ರೀತಿಯೂ ಅದೇ' ಎಂದು ಹೇಳುತ್ತ ಕನ್ನಡವನ್ನು ಕಟ್ಟುವ ಕೆಲಸದಲ್ಲಿ ಬದುಕು ಸವೆಸಿದ ಹೋರಾಟಗಾರ. ಹಾರೋಗದ್ದೆ ಮಾನಪ್ಪ ನಾಯಕ ಎಂಬುದು ಇವರ ಪೂರ್ಣ ಹೆಸರು. ಕನ್ನಡ ನಾಡಿನ ಉದ್ದಗಲಕ್ಕೆ ಹಾಮಾನಾ ಎಂದೇ ಚಿರಪರಿಚಿತರಾಗಿದ್ದರು. ಇವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯಲ್ಲಿ 1931 ನವೆಂಬರ್ 12 ರಂದು ಜನಿಸಿದರು. ತಂದೆ ಶ್ರೀನಿವಾಸ ನಾಯಕ, ತಾಯಿ ರುಕ್ಮಿಣಿಯಮ್ಮ. ಎಂಟು ಮಕ್ಕಳ ದೊಡ್ಡ ಕುಟುಂಬದಲ್ಲಿ ಇವರೇ ಹಿರಿಯ ಮಗ. ಬಡತನದಲ್ಲಿ ಬಾಲ್ಯವನ್ನು ಕಳೆದ ಇವರು ಓದಿ ವಿದ್ಯಾವಂತರಾಗಲು ಪಟ್ಟ ಪಾಡು ಅಷ್ಟಿಷ್ಟಲ್ಲ. ಪ್ರೌಢಶಾಲೆಯವರೆಗಿನ ವಿದ್ಯಾಭ್ಯಾಸವನ್ನು ಶಿವಮೊಗ್ಗೆಯಲ್ಲೂ ಕಾಲೇಜು ವಿದ್ಯಾಭ್ಯಾಸವನ್ನು ಮೈಸೂರಿನಲ್ಲೂ ಸ್ನಾತಕೋತ್ತರ ಶಿಕ್ಷಣವನ್ನು ಕಲ್ಕತ್ತೆಯಲ್ಲೂ ನಡೆಸಿದರು. ಇವರು ಬಿ.ಎ.ಆನರ್ಸ್ ಮಾಡಿದ ಮೇಲೆ, (1955) ಭಾಷಾವಿಜ್ಞಾನದಲ್ಲಿ ಎಂ.ಎ. ಪಡೆದರು (1958). ಅನಂತರ ಅಮೆರಿಕದ ಇಂಡಿಯಾನಾ ವಿಶ್ವವಿದ್ಯಾನಿಲಯ ದಿಂದ ಪಿಎಚ್.ಡಿ. ಪಡೆದರು (1964).

ಆನರ್ಸ್ ಪದವಿ ಪಡೆದ ಮೇಲೆ ಇವರು ತುಮಕೂರಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು (1955). ಅನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಭಾಷಾವಿಜ್ಞಾನದ ರೀಡರ್ ಆದರು (1959). 1961ರಲ್ಲಿ ಸ್ನಾತಕೋತ್ತರ ಕನ್ನಡ ವಿಭಾಗಕ್ಕೆ ಬಂದ ಇವರು ಕಾಲಕ್ರಮೇಣ ಪ್ರವಾಚಕರಾಗಿ, 1968 ರಲ್ಲಿ ಕನ್ನಡ ಪ್ರಾಧ್ಯಾಪಕರಾದರು. ದೇ.ಜವರೇಗೌಡರ ಅನಂತರ 1969 ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದರು. 1984 ರಲ್ಲಿ ಗುಲಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡ ಇವರು ಎರಡು ವರ್ಷಗಳ ಅನಂತರ ತಾತ್ವಿಕ ಕಾರಣಗಳಿಗಾಗಿ ರಾಜೀನಾಮೆ ನೀಡಿ ಕನ್ನಡ ಅಧ್ಯಯನ ಸಂಸ್ಥೆಗೆ ಪ್ರಾಧ್ಯಾಪಕರಾಗಿ ಮರಳಿದರು. 1991 ಫೆಬ್ರವರಿ ರಂದು ನಿವೃತ್ತರಾದರು. ಅನಂತರ ಮೈಸೂರಿನಲ್ಲಿಯೇ ನೆಲೆಸಿದ್ದ ಇವರು 2000 ನವೆಂಬರ್ 10 ರಂದು ನಿಧನ ಹೊಂದಿದರು.

ಹಾ.ಮಾ. ನಾಯಕರು ಹದಿನೈದು ವರ್ಷಗಳ ಕಾಲ (1969 - 84) ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು. ದೇ.ಜವರೇಗೌಡರು ಆರಂಭಿಸಿದ ಕನ್ನಡ ವಿಶ್ವಕೋಶ, ಎಪಿಗ್ರಾಫಿಯಾ ಕರ್ನಾಟಿಕ, ಹರಿದಾಸ ಸಾಹಿತ್ಯ ಸಂಪಾದನೆ, ಜಾನಪದ ಗ್ರಂಥಗಳ ಪ್ರಕಟಣೆಯ ಯೋಜನೆಗಳನ್ನು ಮುನ್ನಡೆಸಿದರು. ಜತೆಗೆ ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಛಂದಸ್ಸಿನ ಚರಿತ್ರೆ, ಕನ್ನಡ ರೈಟರ್ಸ್ ಅಂಡ್ ದೇರ್ ವರ್ಕ್ಸ್, ಧರ್ಮಶಾಸ್ತ್ರದ ಇತಿಹಾಸ ಹಾಗೂ ಮಹಾಭಾರತ ಸಂಪುಟಗಳನ್ನು ಪ್ರಕಟಿಸಿದರು. ಎಂ.ಆರ್. ಶ್ರೀ. ಅವರ ಲೇಖನಗಳು, ಎಸ್.ಶ್ರೀಕಂಠಶಾಸ್ತ್ರಿಗಳ ಲೇಖನಗಳು, 'ಶ್ರೀ' ಅವರ ರಚನೆಗಳ ಸಮಗ್ರ ಸಂಪುಟಗಳನ್ನು ಹೊರತಂದರು. ತಮ್ಮ ನಿರ್ದೇಶಕತ್ವದ ಅವಧಿಯಲ್ಲಿ 350 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದರು. ಕನ್ನಡದ ಅತಿ ಮಹತ್ವದ ಯೋಜನೆಗಳಲ್ಲಿ ಅಧ್ಯಯನ ಸಂಸ್ಥೆ ಪಾಲ್ಗೊಳ್ಳುವಂತಾಗಿಸಿದರು. ರಚನಾತ್ಮಕ ಹಾಗೂ ಮಹತ್ತ್ವಪೂರ್ಣ ಕೆಲಸಗಳಿಂದ ಕನ್ನಡ ಕಟ್ಟುವ ಕೆಲಸವನ್ನು ನಿರಂತರವಾಗಿಸಿದರು.

ನಾಯಕರು 80ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಹದಿನೆಂಟರ ಹರೆಯದಲ್ಲಿ ಪ್ರಕಟಿಸಿದ 'ಬಾಳ್ನೋಟಗಳು' ಇವರ ಮೊದಲ ಕೃತಿ. ಇದು ಸಾಹಿತಿಗಳ ಮೆಚ್ಚುಗೆಗೂ ಊರವರ ವಿವಾದಕ್ಕೂ ಪಾತ್ರವಾಗಿದ್ದುಂಟು. ಪ್ರಬಂಧ, ಜೀವನಚರಿತ್ರೆ, ವಿಮರ್ಶೆ, ಅನುವಾದ, ಸೂಚಿಸಾಹಿತ್ಯ, ಅಂಕಣ ಪ್ರಕಾರ - ಇವು ನಾಯಕರು ಕೃಷಿ ಮಾಡಿದ ಮುಖ್ಯ ಕ್ಷೇತ್ರಗಳು. 'ನಮ್ಮ ಮನೆಯ ದೀಪ' ವಿವಿಧ ಭಾಷೆಗಳಿಗೆ ಅನುವಾದಗೊಂಡು ಮನೆಮಾತಾಗಿರುವ ಲಲಿತ ಪ್ರಬಂಧ ಕೃತಿ. 'ಜಾನಪದ ಸ್ವರೂಪ' ಜಾನಪದದ ವೈಜ್ಞಾನಿಕ ಅಧ್ಯಯನವನ್ನು ಉದ್ಘಾಟಿಸಿದ ಕಿರುಕೃತಿ. ಹಲವಾರು ಮುದ್ರಣ ಕಂಡಿರುವ ಹೊತ್ತಗೆ, 'ರವೀಂದ್ರನಾಥಠಾಕೂರ್' ಒಪ್ಪವಾದ ಒಂದು ಜೀವನಚರಿತ್ರೆ, 'ಪ್ರಣಯ ಪದಾವಳಿ', ಮೈಥಿಲಿಯ ವಿದ್ಯಾಪತಿಯ ಹಾಡುಗಳ ಅನುವಾದವಾದರೆ 'ಸುನೇರಿ', ಅಮೃತಾಪ್ರೀತಮ್ ಅವರ ಪಂಜಾಬಿ ಕವನಗಳ ಕನ್ನಡ ರೂಪ. ಜಾನಪದ ಗ್ರಂಥಗಳು, ಗೋಕಾಕರ ಗ್ರಂಥಗಳು, ಮಾಸ್ತಿಯವರ ಕೃತಿಗಳನ್ನು ಕುರಿತಂತೆ ಇವರು ಸೂಚಿಗಳನ್ನು ತಯಾರಿಸಿದ್ದಾರೆ. ಈ ಎಲ್ಲವೂ ಹಾ ಮಾ ನಾಯಕರ ಆಸಕ್ತಿಯ ವೈವಿಧ್ಯ, ಬಹುಶ್ರುತತೆಗೆ ಸಾಕ್ಷಿ.

ಸಂಕೀರ್ಣ, ಸಮೀಕ್ಷೆ, ಸಂದರ್ಭ, ಸಂಗ್ರಹ, ಸಂಚಯ, ಸೃಜನ ಮುಂತಾದವು ನಾಯಕರ ಲೇಖನ ಸಂಗ್ರಹಗಳು. ಇವುಗಳಲ್ಲಿ ಆಧುನಿಕ ಕನ್ನಡ ಕೃತಿಗಳ ಬಗ್ಗೆ ಆಧುನಿಕ ಕನ್ನಡ ಸಾಹಿತಿಗಳ ಬಗ್ಗೆ ಬರೆದ ಬರೆಹಗಳಿವೆ. ಇವರಿಗೆ ಸಮಕಾಲೀನ ಭಾರತೀಯ ಸಾಹಿತ್ಯದ ವ್ಯಾಪಕವಾದ ಪರಿಚಯವಿತ್ತು. ಸ್ತವನ, ಸ್ಮರಣ, ಸೊಡರು ಮುಂತಾದ ಸಂಗ್ರಹಗಳಲ್ಲಿ ಇಂಥ ದೃಷ್ಟಿಯ ಹಾಗೂ ಭಾರತೀಯ ಲೇಖಕರನ್ನು ಕುರಿತ ಪರಿಚಯಾತ್ಮಕ ಬರೆಹಗಳಿವೆ. ಗೊರೂರು, ಪರಮೇಶ್ವರಭಟ್ಟ, ಕಾವ್ಯಾನಂದ ಮೊದಲಾದ ಹಿರಿಯರ ಹಾಗೂ ಹಲವಾರು ಕಿರಿಯರ ಪುಸ್ತಕಗಳಿಗೆ ಬರೆದ ಮುನ್ನುಡಿಗಳ ಸಂಕಲನಗಳು ಸಿಂಗಾರ, ಸಂಭ್ರಮ, ಸನಾದಿ, ಸನ್ನುಡಿ, ಸೋಗಿಲು. ಇವು ನಮ್ಮ ಸಾಹಿತಿಗಳನ್ನು ಉತ್ತೇಜಿಸುವ, ಅವರ ಕೃತಿಗಳನ್ನು ಏರು ಬೆಳಕಿನಲ್ಲಿಟ್ಟು ಮುಂದುಮಾಡುವಲ್ಲಿ ಅವರದು ನಿರಂತರ ಪ್ರಯತ್ನ.

ನಾಯಕರ ಸಾಹಿತ್ಯ ಸಾಧನೆಯ ಪ್ರಧಾನವಾದ ಕೃಷಿ ಇವರ ಅಂಕಣ ಸಾಹಿತ್ಯ. ಶಿವಮೊಗ್ಗೆಯ 'ನಂದಿನಿ' ಮಾಸಪತ್ರಿಕೆಗೆ ತಮ್ಮ ಹತ್ತೊಂಬತ್ತರ ಹರಯದಲ್ಲೇ ಇವರು ಪೂರ್ಣಿಮೆಗೆ ಪತ್ರಗಳು ಎಂಬ ಶೀರ್ಷಿಕೆಯಲ್ಲಿ ಅಂಕಣ ಬರೆಯುತ್ತಿದ್ದರು. ಅನಂತರ 'ಕನ್ನಡಪ್ರಭ', ದಿನಪತ್ರಿಕೆಯ ಸಾಹಿತ್ಯ ಸಲ್ಲಾಪ ಅಂಕಣ ಇವರಿಗೆ ಪ್ರಸಿದ್ಧಿ, ಗೌರವ ತಂದುಕೊಟ್ಟಿತು. ಪ್ರಜಾಮತದ ಹಾಮಾ ನಾಯಕ ಬರೆಯುತ್ತಾರೆ. ಪ್ರಜಾವಾಣಿಯ 'ಸಂಪ್ರತಿ', ಗ್ರಂಥಲೋಕದ 'ತಿಂಗಳ ಪುಸ್ತಕ' ಇವರಿಗೆ ವಿಪುಲ ಖ್ಯಾತಿ ತಂದುಕೊಟ್ಟಿತು. ತರಂಗ, ಇಂಚರ, ಸಂಕೇತ, ಕರ್ಮವೀರ, ಸುಧಾ ನಿಯತಕಾಲಿಕೆಗಳಲ್ಲೂ ಇವರು ಬರೆದರು. ಸಾಹಿತಿಯೊಬ್ಬರು ಇಷ್ಟೊಂದು ಪತ್ರಿಕೆಗಳಿಗೆ ಹಲವು ವರ್ಷ ಅಂಕಣ ಬರೆದ ನಿದರ್ಶನ ಮತ್ತೊಂದು ಭಾಷೆಯಲ್ಲಿಲ್ಲ. ನಾಯಕರ ಅಂಕಣಗಳು ಬಹುಶ್ರುತತೆಯ, ವ್ಯಾಪಕ ವ್ಯಾಸಂಗದ ತೀಕ್ಷ್ಣ ಚಿಂತನೆಯ, ತೀವ್ರ

ಭಾಷಾಭಿಮಾನದ ಬಲದಿಂದ ಸತ್ತ್ವಯುತವಾಗಿದ್ದವು. ಮೋಹಕವಾದ ಶೈಲಿ, ಆಕರ್ಷಕವಾದ ನಿರೂಪಣೆ, ವಿಚಾರ ಸಮೃದ್ಧಿಗಳಿಂದ ಅವು ತುಂಬಿಕೊಂಡಿರುತ್ತಿದ್ದವು. ಜಗತ್ತಿನ-ಭಾರತದ-ಕರ್ನಾಟಕದ ಲೇಖಕರು ಕಲಾವಿದರು ಕೃತಿಗಳು ಸಾಂಸ್ಕೃತಿಕ ಸಂಘಸಂಸ್ಥೆಗಳು ಮಾತ್ರವಲ್ಲದೆ ವಾರದ ಆಗುಹೋಗುಗಳು ಸಾಮಾನ್ಯ ಓದುಗನಿಗೆ ಇದರ ಮೂಲಕ ಪರಿಚಯವಾಗುತ್ತಿತ್ತು. ಲಲಿತ ಪ್ರಬಂಧದ ಚೌಕಟ್ಟು, ವ್ಯಕ್ತಿ ಚಿತ್ರದ ರೇಖೆಗಳು, ಆತ್ಮಕಥೆಯ ಭಿತ್ತಿ ಅಲ್ಲಿ ಮೇಳವಿಸಿದ್ದುವು. ಸಾಂಸ್ಕೃತಿಕ ವಾರಚರಿ, ಸಮೂಹ ಮಾಧ್ಯಮ ಶಿಕ್ಷಣ ಲೇಖನ ಎಂದೂ ಈ ಬರೆಹಗಳನ್ನು ವಿಮರ್ಶಕರು ಹೊಗಳಿದ್ದಾರೆ. ಸಾಹಿತ್ಯ ಸಲ್ಲಾಪ, ಸಲ್ಲಾಪ, ಸಮೂಹ, ಸಂಪರ್ಕ, ಸಾಂಪ್ರತ, ಸಂವಹನ, ಸಂಪ್ರತಿ - ಇವು ಇವರ ಕೆಲವು ಮುಖ್ಯ ಅಂಕಣ ಬರೆಹ ಸಂಪುಟಗಳು. ಇವರ 'ಸಂಪ್ರತಿ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ (1989). ಅಖಿಲ ಭಾರತ ಮಟ್ಟದಲ್ಲಿ ಅಂಕಣ ಬರೆಹಗಳನ್ನೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪರಿಗಣಿಸಿದ್ದು ಕನ್ನಡಕ್ಕೆ ಸಂದ ಗೌರವವಾಗಿದೆ.

ಆಕಾಶವಾಣಿಯ ಚಿಂತನ-ಚಿನ್ನುಡಿಗಳನ್ನು ಪ್ರಸಾರ ಮಾಡಿ ಆ ಚಿಂತನ ಪ್ರಬಂಧಗಳನ್ನು ಜನಪ್ರಿಯಗೊಳಿಸಿ ಒಂದು ಪ್ರಕಾರವಾಗಿ ಸ್ಥಾಪಿಸಿದ ಕೀರ್ತಿಯಲ್ಲಿ ಅಗ್ರಪಾಲು ನಾಯಕರಿಗೆ ಸಲ್ಲುತ್ತದೆ. ಸೌಜನ್ಯ, ಆತ್ಮವಿಶ್ವಾಸ, ಕರ್ತವ್ಯ, ಮಹತ್ತ್ವಾಕಾಂಕ್ಷೆ, ಪ್ರೀತಿ, ಅಧಿಕಾರ, ಸ್ನೇಹ, ಓದುಗಾರಿಕೆ, ಸ್ಥಿತಪ್ರಜ್ಞತೆ, ಭ್ರಷ್ಟಾಚಾರ, ಸಂಸ್ಕೃತಿ ಕುರಿತ ಇವರ ಬಾನುಲಿ ಭಾಷಣಗಳು ಅಡಕವೂ ಅನನ್ಯವೂ ಆಗಿವೆ. ಹಲವೆಡೆ ತಾವು ಓದಿದ, ಕೇಳಿದ, ಕಂಡು ಅನುಭವಿಸಿದ ಸಂಗತಿಗಳ ಚಿಂತನೆಗಳ ಎಳೆಗಳನ್ನೂ ಇವರು ಇಲ್ಲಿ ನೇಯ್ದಿದ್ದಾರೆ. ಸೂಲಂಗಿ, ಸಂಗತಿ, ಸಂಪಣ, ಸುರಗಿ - ಇವು ಮನನೀಯ ಸಂಕಲನಗಳು. ಕರ್ನಾಟಕದಲ್ಲಿ ಕನ್ನಡವೇ ಪ್ರಥಮ, ಪ್ರಧಾನ, ರಾಜ, ರಾಣಿ, ರಾಜಕುಮಾರ ಎಲ್ಲ; ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು ಎಂದು ಹೇಳಿದ ನಾಯಕರು ಕನ್ನಡದ ಸ್ಥಾನಮಾನ ಕುರಿತಂತೆ ರಾಜ್ಯ ಮತ್ತು ರಾಷ್ಟ್ರ ಮಟ್ಟಗಳಲ್ಲಿ ಹೋರಾಡಿದವರು. ಇಂಗ್ಲಿಷ್ ಮೋಹ, ಹಿಂದಿಯ ಹೇರಿಕೆ, ಸಂಸ್ಕೃತಕ್ಕಿದ್ದ ಸವಲತ್ತುಗಳಿಂದ ಕನ್ನಡಕ್ಕೆ ಆಗುತ್ತಿದ್ದ ಅನ್ಯಾಯವನ್ನು ಇವರು ಯೋಚಿಸಿ, ತರ್ಕಿಸಿ ವಾದಿಸುತ್ತಿದ್ದರು. ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನದಲ್ಲಿ ಇವರು ಮಂಡಿಸಿದ ಒಂದು ನಿರ್ಣಯ ಗೋಕಾಕ್ ಚಳವಳಿಗೆ ಕಾರಣವಾಯಿತು. ಕನ್ನಡದ ಕಾರ್ಯ-ಪ್ರಸಾರಗಳಿಗೆ, ಏಳಿಗೆ -ಬೆಳವಣಿಗೆಗಳಿಗೆ ಬಿ.ಎಂ. ಶ್ರೀ., ಅ.ನ.ಕೃ., ಅವರ ಅನಂತರ ಕರ್ನಾಟಕದಾದ್ಯಂತ ಸುತ್ತಾಡಿದವರು ಹಾ.ಮಾ.ನಾಯಕರು. ಕೆಲವು ಸಂದರ್ಭದಲ್ಲಿ ನಾಯಕರು ಕನ್ನಡಕ್ಕೆ ಏಕವ್ಯಕ್ತಿ ಕಾವಲು ಸಮಿತಿಯಂತೆಯೂ ಇದ್ದರು.

ನಾಯಕರು ಹಲವು ಬಗೆಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ - ಇವು ಕೆಲವು ಮುಖ್ಯ ಪ್ರಶಸ್ತಿಗಳು. ಇವರ 'ಸಲ್ಲಾಪ'ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ, 'ಸಂಪ್ರತಿ'ಗೆ ಐಬಿಎಚ್. ಎಜುಕೇಷನ್ ಟ್ರಸ್ಟ್ ಪ್ರಶಸ್ತಿ ಲಭಿಸಿದ್ದವು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಇವರು ನ್ಯಾಷನಲ್ ಬುಕ್ ಟ್ರಸ್ಟ್ , ಕೇಂದ್ರ ಸಾಹಿತ್ಯ ಅಕಾಡೆಮಿ, ಭಾರತೀಯ ಜ್ಞಾನಪೀಠ, ಬಿ.ಡಿ. ಗೋಯೆಂಕಾ ಬಹುಮಾನ ಮುಂತಾದ ಸಮಿತಿಗಳಲ್ಲಿದ್ದರು. ದೇಶ-ವಿದೇಶಗಳ ಸಂಕಿರಣಗಳಲ್ಲಿ ಭಾಗವಹಿಸಿದ್ದ ಇವರು ಬೀದರ್‌ನಲ್ಲಿ ನಡೆದ 57 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ ಶಿಷ್ಯರು, ಮಿತ್ರರು, ಅಭಿಮಾನಿಗಳು ಇವರಿಗೆ 60 ವರ್ಷಗಳು ತುಂಬಿದಾಗ ಮಾನ ಎಂಬ ಅಭಿನಂದನ ಗ್ರಂಥ' ಸಮರ್ಪಿಸಿದರು (1992). (ಎಸ್.ಎಸ್.ಟಿ.)

**ನಾಯ್ಡು, ಆರ್.ಎಸ್. :** ಪ್ರಸಿದ್ಧ ಚಿತ್ರಕಾರ, ಶಿಲ್ಪಿ, ಹುಟ್ಟಿದ್ದು ಬೆಂಗಳೂರಿನಲ್ಲಿ. ತಂದೆ ರಂಗಸ್ವಾಮಿ, ತಾಯಿ ರಂಗನಾಯಕಮ್ಮ, ಸಹೋದರ ಭೂವಿಜ್ಞಾನಿ ಪ್ರಾಧ್ಯಾಪಕರಾಗಿದ್ದ ಜಗಪತಿ ನಾಯ್ಡು.

ಇವರ ಬಾಲ್ಯದ ವಿದ್ಯಾಭ್ಯಾಸ ಕೆಲಕಾಲ ತಿರುಚಿರಾಪಳ್ಳಿಯಲ್ಲಿಯೂ ಅನಂತರ ಧಾರವಾಡದಲ್ಲಿಯೂ ನಡೆಯಿತು. ಆಟಪಾಟಗಳೊಂದಿಗೆ ಚರ್ಚಾಕೂಟಗಳಲ್ಲೂ ಭಾಗವಹಿಸುತ್ತಿದ್ದರು. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದಾಗ ಯುವಕ ಕಾಂಗ್ರೆಸ್ ಸಂಸ್ಥೆಯೊಂದನ್ನು ಕಟ್ಟಿದರು. ಕಾಂಗ್ರೆಸ್ ಚಟುವಟಿಕೆಯಲ್ಲಿ ಓಡಾಡತೊಡಗಿ ಮೊದಲ ಬಾರಿಗೆ ಆರು ತಿಂಗಳ ಸಾದಾ ಸಜೆಯನ್ನು ಜೈಲಿನಲ್ಲಿ ಅನುಭವಿಸಿದರು 1933. ಎರಡನೆಯ ಬಾರಿ ಕಠಿಣ ಶಿಕ್ಷೇಗೊಳಗಾದವರು 1934. ಇವರಿದ್ದ ಯರವಾಡಾ ಜೈಲಿನಲ್ಲಿ ಗಾಂಧೀಜಿ, ಮಹದೇವ ದೇಸಾಯಿ, ಜಮನಾಲಾಲ್ ಬಜಾಜ್ ಮುಂತಾದ ಗಣ್ಯ ರಾಷ್ಟ್ರಭಕ್ತರೂ ಇದ್ದರು. ಆ ಜೈಲಿನಲ್ಲಿ ಎದ್ದು ಕಾಣುತ್ತಿದ್ದ ಪ್ರಾಂತೀಯ ಪಕ್ಷಪಾತವನ್ನು ಇವರು ಪ್ರತಿಭಟಿಸಿದರು. ಇದನ್ನು ಸಹಿಸಲಾರದ ಸರ್ಕಾರ ಇದರ ಜೈಲು ಶಿಕ್ಷೆಯ ಅವಧಿಯನ್ನು ಹೆಚ್ಚಿಸಿತು. ಅದೇ ಕಾಲಕ್ಕೆ ಜರ್ಮನ್ ದಿನಪತ್ರಿಕೆಯ ಸಂಪಾದಕರೊಬ್ಬರ ಸ್ನೇಹದಿಂದ ಮಾರ್ಕ್ಸ್‌ವಾದವನ್ನು ಸ್ವೀಕರಿಸಿದರು. ಕಾಂಗ್ರೆಸ್ ದಿನಾಚರಣೆಯಂದು ಜೈಲಿನಲ್ಲಿದ್ದ ತಮ್ಮ ಮಿತ್ರರ ಸಹಾಯದಿಂದ ಜೇಡಿಮಣ್ಣನ್ನು ತರಿಸಿ ರಾತ್ರಿಯೆಲ್ಲ ನಿದ್ದೆಗೆಟ್ಟು ನಾಲ್ಕಡಿ ಗಾತ್ರದ ಕ್ರಾಂತಿವೀರ ಲೆನಿನ್ ಮೂರ್ತಿಯನ್ನು ಸೃಜಿಸಿದರು. ಸೆರೆಮನೆಯಿಂದ ಹೊರಬಂದಮೇಲೆ ಇವರ ಮನಃಸ್ವಾಸ್ಥ್ಯ ಕೆಟ್ಟಿತು. ಕಿರಿಕಿರಿ ವಾತಾವರಣದಲ್ಲಿ ಬಾಳತೊಡಗಿದರು. ಜೀವನದಲ್ಲಿ ಜುಗುಪ್ಸೆಗೊಂಡು, ಮುಂಬಯಿಯಲ್ಲಿ ತಾವು ವಾಸಿಸುತ್ತಿದ್ದ ಮಹಡಿಯಿಂದ ಕೆಳಕ್ಕೆ ದುಮುಕಿ ಸಾಯಲು ಪ್ರಯತ್ನಿಸಿ ವಿಫಲರಾದರು. ಚಿಂತೆ ಮರೆಯಲು ಪುಸ್ತಕಗಳ ಮೊರೆ ಹೊಕ್ಕರು. ಯುವಕರನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಹುರಿದುಂಬಿಸುವ ಸಲುವಾಗಿ ಒಂದು ಯುವಜನ ಸಂಸ್ಥೆ ಕಟ್ಟಿಕೊಂಡರು. ಅದರ ವತಿಯಿಂದ ಒಂದು ಕ್ರಾಂತಿಕಾರಿ ಪತ್ರಿಕೆಯೂ ಹೊರಬಂತು.ಪೊಲೀಸ್ ಚಿತ್ರಗುಪ್ತರ ವಕ್ರದೃಷ್ಟಿ ಇವರ ಮೇಲೆ ಬಿತ್ತು. ಆಗ ಇವರು ಭೂಗತರಾಗಬೇಕಾಯಿತು.ಇವರ ಉಪಟಳ ಹೆಚ್ಚಾದಾಗ ಗುಪ್ತಚಾರರು ಇವರನ್ನು ಬಂಧಿಸಿದರು. ಮತ್ತೆ ಕೆಲವು ತಿಂಗಳ ಶಿಕ್ಷೆ ಅನುಭವಿಸಬೇಕಾಯಿತು. ಅನಂತರ ರಾಜಕೀಯ ಬುದ್ಧಿಜೀವಿಗಳಾದ ಮೆಹರಾಲಿ, ಮೀನೂ ಮಸಾನಿ, ಅಶೋಕ ಮೆಹ್ತ ಮುಂತಾದವರ ಜೊತೆ ಸೇರಿ ಸಮಾಜವಾದಿ ಪಕ್ಷ ಕಟ್ಟಿದ್ದರು. ಅದರ ವತಿಯಿಂದ ಭಾರತದ ಆರ್ಥಿಕತೆ ಬಗ್ಗೆ ಪಿಕ್ಟೋರಿಯಲಂ ಎಕನಾಮಿಕ್ಸ್ ಎಂಬ ಸಚಿತ್ರ ವಾರಪತ್ರಿಕೆಯನ್ನು ಪ್ರತಿವಾರವೂ ಪ್ರಕಟಿಸುತ್ತಿದ್ದರು. ನ್ಯಾಷನಲ್ ಫ್ರಂಟ್ ಪತ್ರಿಕೆಯಲ್ಲಿ ಆಗಾಗ ಇವರ ಕ್ರಾಂತಿಕಾರಿ ವ್ಯಂಗ್ಯ ಚಿತ್ರಗಳು ಪ್ರಕಟವಾಗುತ್ತಿದ್ದವು.

ಲಂಡನ್ನಿಗೆ ಹೋಗಿ ಅಲ್ಲಿ ಇದ್ದಷ್ಟು ಕಾಲವನ್ನು ಕಾರ್ಮಿಕರೊಂದಿಗೆ ಕಳೆದರು. ಅಲ್ಲಿಂದ ಮಾಸ್ಕೋಗೆ ಹೋಗಬೇಕೆಂಬ ಆಸೆ ಎರಡನೆಯ ಮಹಾಯುದ್ಧದಿಂದಾಗಿ ನೆರವೇರಲಿಲ್ಲ. ತಪ್ಪಿಸಿಕೊಂಡಾದರೂ ಮಾಸ್ಕೋ ಮುಟ್ಟಬೇಕೆಂದಿದ್ದರೂ ಗುಪ್ತ ಚಾರರಿಂದಾಗಿ ಸಾಧ್ಯವಾಗಲಿಲ್ಲ. ಅದೇ ವೇಳೆಗೆ ಭಾರತದಿಂದ ಕರೆ ಬಂತು. ವಾಪಸು ಬರಲು ಹಡಗಿನಲ್ಲಿ ಅವಕಾಶ ದೊರೆಯಲಿಲ್ಲ. ಒಬ್ಬ ಭಾರತೀಯ ವಿದ್ಯಾರ್ಥಿಯ ನೆರವಿನಿಂದಾಗಿ ತಾಯಿನಾಡು ತಲಪಿದರು.

ಮುಂಬಯಿಗೆ ಮರಳಿ ಕೆಲವು ವರ್ಷ ಅಲ್ಲಿ ಕಳೆದರು. ಒಮ್ಮೆ ಗುಜರಾತಿನ ಸ್ವಾರ್ಥಲಂಪಟರ ವ್ಯಂಗ್ಯಚಿತ್ರವನ್ನು ಶೀಸೆಯ ಆಕೃತಿಯಲ್ಲಿ ರಚಿಸಿ ಪ್ರಕಟಿಸಿದರು. ಆ ಚಿತ್ರದ ಬಗ್ಗೆ ಎಲ್ಲ ಕಡೆಯೂ ಗುಲ್ಲೆದ್ದಿತು. ಎಲ್ಲರ ಗಮನವನ್ನೂ ಅದು ಶೀಘ್ರವಾಗಿ ಸೆಳೆಯಿತು. ಕೊನೆಗೆ ಬೆಂಕಿಪೊಟ್ಟಣದ ಮೇಲೆಯೂ ಅದು ಕಾಣಿಸಕೊಂಡಿತು. ಮುಂಬಯಿಂದ ಕಲ್ಕತ್ತದವರೆಗೂ ಅದರ ಕೀರ್ತಿ ಹರಡಿತು.

ಮುಂಬಯಿ ಬೇಸರ ಬಂದಾಗ ಬೆಂಗಳೂರಿಗೆ ಬಂದು ಸೇರಿದರು. ಅಲ್ಲಿಂದ 1957ರಲ್ಲಿ ಮೈಸೂರಿಗೆ ಬಂದು ನೆಲಸಿದ್ದರು. ಇವರ ಕುಂಚ ವಿಡಂಬನಾತ್ಮಕ ರೇಖಾಚಿತ್ರದಿಂದ ವರ್ಣ ಚಿತ್ರಗಳ ವರೆಗೆ ಕೆಲಸ ಮಾಡಿದೆ. ಇವರು ಮೊದಲಿಂದಲೂ ಸಾಂಪ್ರದಾಯಿಕ ಕಲೆಯನ್ನು ಒಪ್ಪಿದವರಾದರೂ ಅಂದಚಂದಗಳ ಅಂಧಾನುಕರಣೆಗೆ ಮಾರು ಹೋದವರಲ್ಲ. ಇವರ ಕಲೆ ಬರೀ ತಾಂತ್ರಿಕವಾಗಿ ಉಳಿಯಲಿಲ್ಲ. ಯಾರೊಬ್ಬರ

ಯಾವೊಂದರ ಪ್ರಭಾವಕ್ಕೂ ಇವರು ಬಲಿ ಬೀಳಲಿಲ್ಲ. ಜೀವನದ ಸಿಹಿಕಹಿಗಳ ತೂಗಾಟದಲ್ಲಿ ಬೆಳೆದು ಬಂದ ಈ ಹಿರಿಯ ಜೀವಿಗೆ ಸಾಮಾನ್ಯ ಮಾನವನ ಬಗ್ಗೆ ಆಳವಾದ ಅನುಕಂಪ, ಸಹಾನುಭೂತಿ ಮೈಗೂಡಿ ಬಂದಿದ್ದವು.

ಇವರು ರಚಿಸುವ ಚಿತ್ರಗಳಲ್ಲಿ ಜೀವಂತಿಕೆ, ಸಾದೃಶ್ಯ ತುಂಬಿ ತುಳುಕುತ್ತವೆ. ರೇಖೆಗಳಲ್ಲಿ ಅದ್ಭುತನಿರೂಪಣೆ, ಗತಿವಿನ್ಯಾಸಗಳನ್ನು ಸೂಚಿಸುವ ಮಿತ್ರವ್ಯಯದ ನೂತನ ಶೈಲಿಯಿಂದಾಗಿ ಸಾಮರಸ್ಯವನ್ನು ಕಾಣುತ್ತೇವೆ. ಇವರು ಎಳೆಯುವ ಪ್ರತಿಯೊಂದು ಗೆರೆಯೂ ಇವರ ಹೃದಯದ ಅಂತರಾಳದಿಂದ ನೇರ ಚಿಮ್ಮಿದಂತಿರುತ್ತದೆ. ಇವರ ರೇಖಾಚಿತ್ರಗಳ ವಸ್ತುವಿಶೇಷ. ಕಲ್ಪನಾಶಕ್ತಿ ಅಸಾಧಾರಣವಾದುದಾಗಿತ್ತು. ಇವರು .................... ರಲ್ಲಿ ನಿಧನರಾದರು. ಮೈಸೂರಿನಲ್ಲಿ ಇವರ ಗೌರವಾರ್ಥ ಬಡಾವಣೆಯೊಂದರ ಇವರ ಹೆಸರನ್ನು ಇಡಲಾಗಿದೆ. *

**ನಾರಾಯಣ್, ಆರ್.ಕೆ. :** 1906-2001. ಇಂಗ್ಲಿಷ್ ಭಾಷೆಯಲ್ಲಿ ಬರೆಯುತ್ತಿದ್ದ ಅಗ್ರಗಣ್ಯ ಭಾರತೀಯ ಲೇಖಕರಲ್ಲೊಬ್ಬರು. ಮೈಸೂರಿನಲ್ಲಿ ನೆಲೆಸಿದ್ದರು. ಇವರ ಪೂರ್ವಿಕರ ಸ್ಥಳ ತಮಿಳುನಾಡಿನ ಸೇಲಂ ಜಿಲ್ಲೆಯ ರಾಶಿಪುರಂ, ತಂದೆ ಕೃಷ್ಣಸ್ವಾಮಿ ಅಯ್ಯರ್ ತಾಯಿ ಜ್ಞಾನಾಂಬಾಳ್ ಆರು ಗಂಡು ಎರಡು ಹೆಣ್ಣು ಮಕ್ಕಳಲ್ಲಿ ನಾರಾಯಣ್ ಎರಡನೆಯವರು. ಇವರ ಸಹೋದರ ಆರ್.ಕೆ.ಲಕ್ಷ್ಮಣ ವಿಶ್ವವಿಖ್ಯಾತ ವ್ಯಂಗ್ಯ ಚಿತ್ರಗಾರ. ಮದರಾಸಿನಲ್ಲಿ ನೆಲೆಸಿದ್ದ ತಂದೆ ಕೃಷ್ಣಸ್ವಾಮಿ ಅಯ್ಯರ್‌ರವರಿಗೆ ಮೈಸೂರು ಸಂಸ್ಥಾನದಲ್ಲಿ ಉದ್ಯೋಗ ದೊರಕಿದ್ದರಿಂದ ಇಲ್ಲಿಗೆ ವಲಸೆ ಬಂದರು. ಆದರೆ ನಾರಾಯಣ್ ಅವರು ಅಜ್ಜಿಯ ಪೋಷಣೆಯಲ್ಲಿ ಕೆಲಕಾಲ ಮದರಾಸಿನಲ್ಲೇ ಉಳಿದರು. ಇವರ ತಂದೆಯವರು ಮೊದಲು ಚನ್ನಪಟ್ಟಣದಲ್ಲಿ ಅನಂತರ ಹಾಸನದಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಮೈಸೂರಿಗೆ ವರ್ಗವಾದಾಗ ಮಗನನ್ನು ತಮ್ಮ ಬಳಿಗೇ ಕರೆಸಿಕೊಂಡರು. ನಾರಾಯಣ್ ಅವರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾದರು. ಓದಿನಲ್ಲಿ ಅಷ್ಟಾಗಿ ಆಸಕ್ತಿ ತೋರದ ಇವರು ಬಿ.ಎ. ಮುಗಿಸಿದಾಗ 24 ವರ್ಷ. ಆದರೆ ಓದುತ್ತಿರುವಾಗಲೇ ಇವರಿಗೆ ಬರೆಯುವ ಆಸಕ್ತಿ. ಬಿ.ಎ. ಮುಗಿದಮೇಲೆ ಸ್ವಲ್ಪಕಾಲ ಸೆಕ್ರೆಟೇರಿಯೇಟ್‌ನಲ್ಲೂ ಐದು ದಿನ ಮಾತ್ರ ಚನ್ನಪಟ್ಟಣದಲ್ಲಿ ಅಧ್ಯಾಪಕ ವೃತ್ತಿಯಲ್ಲೂ ಇದ್ದು ಒಗ್ಗದೆ, ಬರಹವನ್ನೇ ವೃತ್ತಿಯಾಗಿ ಆಯ್ಕೆ ಮಾಡಿಕೊಂಡರು. ಪತ್ರಿಕೆಗಳಿಗೆ ಲೇಖನ ಮತ್ತು ಸುದ್ದಿ ಸಂಗ್ರಹಗಳನ್ನು ಬರೆಯತೊಡಗಿದರಲ್ಲದೆ ಸ್ವಲ್ಪ ಕಾಲ ದಿ ಇಂಡಿಯನ್ ಥಾಟ್ ಎಂಬ ನಿಯತಕಾಲಿಕವನ್ನೂ ನಡೆಸಿದರು.

ಇವರ ಪ್ರಥಮ ಕಾದಂಬರಿ ಸ್ವಾಮಿ ಅಂಡ್ ಫ್ರೆಂಡ್ಸ್ 1935ರಲ್ಲಿ ಇಂಗ್ಲೆಂಡಿನಲ್ಲಿ ಪ್ರಕಟವಾಯಿತು. ಅನಂತರ ದಿ ಗೈಡ್, ಮಿ. ಸಂಪತ್, ಫೆನಾನ್ಸಿಯಲ್ ಎಕ್ಸ್‌ಪರ್ಟ್ ಮುಂತಾದ 10 ಕಾದಂಬರಿಗಳೂ 7 ಕಥಾಸಂಕಲನಗಳೂ ಪ್ರಕಟವಾದವು. ಅಲ್ಲದೆ ಪ್ರವಾಸ ಕಥನ, ಹರಟೆ, ಜೀವನಸ್ಮೃತಿ, ಪೌರಾಣಿಕ ಕಥಾಸಂಗ್ರಹ ಮತ್ತು ರಾಮಾಯಣದ ಇಂಗ್ಲಿಷ್ ರೂಪಾಂತರವನ್ನೂ ಇವರು ಕೊಟ್ಟಿದ್ದಾರೆ.

ನಾರಾಯಣ್ ಅವರ ಕೃತಿಗಳ ಅನುಭವ, ಪ್ರೇರಣೆ ಮುಖ್ಯವಾಗಿ ಭಾರತೀಯ ಪರಂಪರೆಗೆ ಸೇರಿದ್ದು. ಇವರ ಒಟ್ಟು ದೃಷ್ಟಿಯಲ್ಲಿಯೇ ಪರಂಪರೆಯ ಮೌಲ್ಯಗಳಿಗೆ ಮನ್ನಣೆಯಿದೆ. ಆದ್ದರಿಂದಲೇ ಇವರು ತಾವು ಆರಿಸಿರುವ ವ್ಯಕ್ತಿಗಳನ್ನು ಸಾಂಪ್ರದಾಯಿಕ ಕಟ್ಟುಪಾಡಿನಲ್ಲಿ ಜೀವನ ಸಂಗ್ರಾಮವನ್ನು ನಡೆಸುತ್ತಿರುವಂತೆ ಚಿತ್ರಿಸುತ್ತಾರೆ. ಒಳ್ಳೆಯ ಬರಹಗಾರ ಧರ್ಮ ಮತ್ತು ಕುಟುಂಬ ಜೀವನದಲ್ಲಿ ಬೇರುಗಳನ್ನು ಬಿಟ್ಟಿರಬೇಕು ಎನ್ನುವ ಇವರು ಆರಿಸುವುದೂ ಮಧ್ಯಮ ವರ್ಗದ ಜನಜೀವನ ಮತ್ತು ಅವರ ಕೌಟುಂಬಿಕ ಸಮಸ್ಯೆಗಳನ್ನೇ. ಇವರ ಮತ್ತೊಂದು ವೈಶಿಷ್ಟ್ಯವೆಂದರೆ ವ್ಯಕ್ತಿ ಸಂಗತಿಗಳನ್ನು ನೋಡುವ ದೃಷ್ಟಿ, ಜೀವನದ ಸಂದರ್ಭಗಳನ್ನು ವಿನೋದದ ದೃಷ್ಟಿಯಿಂದ ನೋಡಿದರೂ ಆಳಗಳನ್ನಿವರು ಕೆದಕುತ್ತಾರೆ. ವೈಚಿತ್ರ್ಯಪೂರ್ಣ ವ್ಯಕ್ತಿಗಳಲ್ಲಿ ಇವರಿಗೆ ಬಲು ಆಸಕ್ತಿ. ಸಾಮಾನ್ಯವಾಗಿ ಇತರರಿಗೆ ಗೋಚರಿಸದೆ ಹೋಗುವ ಸಾಧಾರಣ ವ್ಯಕ್ತಿ-ಸಂಗತಿಗಳು ಇವರ ದೃಷ್ಟಿಗೆ ಬೀಳುತ್ತವೆ. ಸಾಮಾನ್ಯತೆಯಿಂದ ಅಸಾಮಾನ್ಯತೆಗೇರಲು ವ್ಯಕ್ತಿಗಳು ಯತ್ನಿಸುವುದನ್ನು ಲವಲವಿಕೆಯಿಂದ ಇವರು ವಿಶ್ಲೇಷಿಸುತ್ತಾರೆ.

ಇವರ ಕಾದಂಬರಿಗಳ ಕಾರ್ಯಕ್ಷೇತ್ರವೆಲ್ಲ ಮಾಲ್ಗುಡಿ ಎಂಬ ಕಾಲ್ಪನಿಕ ಪಟ್ಟಣದಲ್ಲಿ ನಡೆಯುತ್ತದೆ. ಒಂದು ಪರಿಮಿತ ವ್ಯಾಪ್ತಿಯಲ್ಲಿ ವ್ಯಕ್ತಿಗಳ ವಿಚಿತ್ರ ನಡೆಯನ್ನೂ ಸಾಮಾನ್ಯತೆಯಿಂದ ಅಸಾಮಾನ್ಯತೆಗೆ ಏರಿ ಅಲ್ಲಿಂದ ಮೊದಲಿನ ಸ್ಥಿತಿಗೇ ಬರುವ ಜೀವನ ವೈವಿಧ್ಯವನ್ನೂ ಗುರುತಿಸಲು ಮಾಲ್ಗುಡಿ ಸಮಾಜ ಇವರಿಗೆ ತುಂಬ ಸಹಕಾರಿಯೆನಿಸಿದೆ. ಅಲ್ಲಿನ ಭೌಗೋಳಿಕ ವಿನ್ಯಾಸ - ತೋಪು, ಬೆಟ್ಟ, ಗುಹೆ, ರಸ್ತೆ, ಓಣಿ, ವಿಸ್ತರಣೆ, ಶಾಲೆ, ಬ್ಯಾಂಕು, ಸ್ಟುಡಿಯೋ, ರೈಲು ನಿಲ್ದಾಣ, ಸರಯೂನದಿ ಮಾಲ್ಗುಡಿಯ - ವೈವಿಧ್ಯಪೂರ್ಣ ನಿಬಿಡಜನ ಪ್ರಪಂಚದಷ್ಟೇ ಬಲುಬೇಗ ಓದುಗರಿಗೆ ಪ್ರಿಯವಾಗುತ್ತದೆ.

ಇವರ ಮೊದಲ ಕಾದಂಬರಿ ಸ್ವಾಮಿ ಅಂಡ್ ಫ್ರೆಂಡ್ಸ್ ಬಾಲಕರ ಪ್ರಪಂಚದ ವಿವಿಧ ನಡೆನುಡಿಗಳನ್ನೂ ಬಿರುಸು ಬಿನ್ನಾಣಗಳನ್ನೂ ಮನೋಜ್ಞವಾಗಿ ಚಿತ್ರಿಸುತ್ತದೆ. ಯೌವನೋದಯದ ರೊಮ್ಯಾಂಟಿಕ್ ಪ್ರವೃತ್ತಿ ಮತ್ತು ಪರಿಚಿತ ಕುಟುಂಬ ಜೀವನದ ಸೌಖ್ಯದ ವಿರೋಧ ಚಿತ್ರಗಳನ್ನು ದಿ ಬ್ಯಾಚಲರ್ ಆಫ್ ಆರ್ಟ್ಸ್ (1937) ಕೊಡುತ್ತದೆ. ಸಂಸಾರದ ವಿರಸದಲ್ಲಿ ನೊಂದ ಹೆಣ್ಣು ಪ್ರತಿಭಟಿಸಿ ಮನೆಯಿಂದ ಹೊರಗೆ ಹೋದರೂ ಕೌಟುಂಬಿಕ ಸೆಳೆತಕ್ಕೆ ಸಿಕ್ಕಿ ಗಂಡನ ಬಳಿಗೆ ಹಿಂದಿರುಗುವುದು ದಿ ಡಾರ್ಕ್ ರೂಮ್‌ನ (1938) ವಸ್ತು. ದಿ ಇಂಗ್ಲಿಷ್ ಟೀಚರ್‌ನಲ್ಲಿ (1945) ನಾರಾಯಣರ ಸ್ವಂತ ಅನುಭವದ ಚಿತ್ರಣ ಅದಕ್ಕೆ ಒಂದು ತೀವ್ರತೆಯನ್ನು ತಂದುಕೊಟ್ಟಿದೆ.

ಇಲ್ಲಿಂದ ಮುಂದಿನ ಇವರ ಕೃತಿಗಳಲ್ಲಿ ಮಾಲ್ಗುಡಿಯ ಪ್ರಪಂಚ ಸ್ವಲ್ಪ ವಿಸ್ತಾರವಾಗಿ, ವಿಚಿತ್ರ ಪ್ರಕೃತಿಯ, ವ್ಯಕ್ತಿಗಳ ಪರಿಚಯವಾಗುತ್ತದೆ. ಮುಖ್ಯವಾಗಿ ಚುರುಕು ನಡೆಯ, ಸಾಹಸಪ್ರಿಯರೆನಿಸುವ, ಆದರೂ ವಿಚಿತ್ರಪ್ರವೃತ್ತಿಯಿಂದ ಆಗಹೋಗದ ವ್ಯವಹಾರಗಳಲ್ಲಿ ತೊಡಗಿ, ಕೊನೆಗೆ ಸಾಮಾನ್ಯಸ್ಥಿತಿಗೆ ಇಳಿಯುವ ಪಾತ್ರಸಮೂಹವನ್ನು ಈ ಕೃತಿಗಳಲ್ಲಿ ಕಾಣಬಹುದು. ಮಿ. ಸಂಪತ್‌ನಲ್ಲಿ (1949) ಮುದ್ರಣಕಾರ ಸಂಪತ್ ಚಲನಚಿತ್ರ ತಯಾರಿಸುವ ಹುಚ್ಚಿಗೆ ಬಿದ್ದು ಕೈಸುಟ್ಟುಕೊಂಡು ಒಂಟಿಯಾಗಿ ರೈಲುನಿಲ್ದಾಣದತ್ತ ಸಾಗುತ್ತಿರುವುದನ್ನು ನೋಡುತ್ತೇವೆ. ದಿ ಫೈನಾನ್ಸಿಯಲ್ ಎಕ್ಸ್‌ಪರ್ಟ್‌ನ (1952) ಮಾರ್ಗಯ್ಯ, ಹಣಸಂಚಯದ ವಿಪರೀತಮತಿಯಾಗಿ ದೊಡ್ಡ ದೊಡ್ಡ ಲೇವಾದೇವಿಯಲ್ಲಿ ತೊಡಗಿ ದಿವಾಳಿಯಾಗುತ್ತಾನೆ. ಮಾತು ಕೇಳದ ಮಗನ ಮೇಲಿನ ಪ್ರೇಮ ಅವನ ಜೀವನದಲ್ಲಿ ಸಂಕಟ ತಂದರೂ ಅವನ ಮಾನವೀಯತೆಯನ್ನೂ ತೋರಿಸುತ್ತದೆ. ವೇಯ್ಟಿಂಗ್ ಫಾರ್ ದಿ ಮಹಾತ್ಮಾ (1955) ಗಾಂಧೀ ಚಳವಳಿಯ ಹಿನ್ನೆಲೆಯಲ್ಲಿ ಇಬ್ಬರ ಪ್ರೇಮ ಬೆಳೆದ ರೀತಿಯನ್ನು ಸೊಗಸಾಗಿ ಅನಾವರಣಗೊಳಿಸಿದೆ. ದಿ ಗೈಡ್ (1958) ಅನೇಕ ಕಾರಣಗಳಿಂದ ನಾರಾಯಣರ ಅತ್ಯುತ್ತಮ ಕೃತಿ. ವಸ್ತು, ತಂತ್ರನಾವೀನ್ಯತೆ, ಜೀವನಸಂಧಿಗ್ದತೆ ಎಲ್ಲವೂ ಈ ಕಾದಂಬರಿಯ ಸಂಕೀರ್ಣತೆಗೆ ಸಹಕಾರಿ. ಇಲ್ಲಿ ಎರಡು ನಡೆಯ ಸಂಕೀರ್ಣತೆಯಿದೆ. ತೀರ ಸಾಮಾನ್ಯ ಸ್ಥಿತಿಯಿಂದ ಅಸಾಧಾರಣ ಸ್ಥಿತಿಗೆ ಏರುವ ನಡೆ ಒಂದು ಕಡೆ ಅಸಾಧಾರಣ ಸ್ಥಿತಿಯನ್ನು ನಿರಾಕರಿಸುವಲ್ಲಿ ಬರುವ ಮಿಶ್ರಫಲ ಮತ್ತೊಂದು ಕಡೆ. ಮಾಲ್ಗುಡಿಯ ಪ್ರವಾಸಿಗರ ಗೈಡ್ ಮಾರ್ಗದರ್ಶಿ ಆದ ರಾಜು, ನರ್ತಕಿ ರೋಸಿಯ ಜೀವನದಲ್ಲಿ ಗೈಡ್ ಆಗುವ ಸ್ಥಿತಿಗೇರುತ್ತಾನೆ. ಆದರೆ ಪ್ರಬಲ ಆಕಾಂಕ್ಷೆಗೆ ಈಡಾಗಿ, ಮಾಡಿದ ಅಪರಾಧಕ್ಕಾಗಿ ಸೆರೆಮನೆಯ ವಾಸ ಅನುಭವಿಸಬೇಕಾಗುತ್ತದೆ. ಅದು ಮುಗಿದಮೇಲೆ ಹೊರಗೆ ಬಂದಾಗ ಅಪರಿಚಿತ ಜನ ಅವನನ್ನು ಮಹಾತ್ಮ ಪಟ್ಟಕ್ಕೇರಿಸಿ ಜೀವನದ ಇನ್ನೊಂದು ನಡೆಯ ಗೈಡ್ ಆಗಿ ಮಾಡಿಕೊಳ್ಳುತ್ತದೆ. ಜೀವನದ ವಿರೋಧಾಭಾಸದಲ್ಲಿ ರಾಜುವಿನ ಅನುಭವ ದಿಙ್ಮೂಢಗೊಳಿಸುವಂಥದು.

ಪುರಾಣ ಕಥೆಗಳ ಮೌಲ್ಯಗಳನ್ನು ಗುರುತಿಸುವ ನಾರಾಯಣ್ ಅವರ ಕೊನೆಯ ನಾಲ್ಕು ಕೃತಿಗಳಲ್ಲಿ ಅವನ್ನು ಸಾಂಕೇತಿಕವಾಗಿಯೂ ನೇರವಾಗಿಯೂ

ಬಳಸಿದ್ದಾರೆ. ದಿ ಮ್ಯಾನ್ ಈಟರ್ ಆಫ್ ಮಾಲ್ಗುಡಿ ಎಂಬುದು ಮೋಹಿನಿ-ಭಸ್ಮಾಸುರರ ಕಥೆಯ ಆಧುನಿಕ ರೂಪ. ರಾಕ್ಷಸೀ ಸ್ವಭಾವದ ಒಬ್ಬ ವ್ಯಕ್ತಿ, ತನ್ನ ಪಶುಬಲದಿಂದ ಎಲ್ಲರಲ್ಲೂ ಭೀತಿ ಹುಟ್ಟಿಸಿ, ದುರ್ಮಾರ್ಗಪ್ರವರ್ತಕನಾದಾಗ ಅವನ ಬಲವೇ ಅವನಿಗೆ ಮುಳುವಾಗುತ್ತದೆ. ಕೊನೆಯ ಕಾದಂಬರಿ ದಿ ವೆಂಡರ್ ಆಫ್ ಸ್ವೀಟ್ಸ್‌ನಲ್ಲಿ ಪ್ರಾಪಂಚಿಕತೆಯನ್ನು ಬಿಟ್ಟು ಪಾರಮಾರ್ಥಿಕದತ್ತ ವ್ಯಕ್ತಿ ಸರಿಯುವ ಚಿತ್ರಣವಿದೆ. ಈ ಎರಡು ಕಾದಂಬರಿಗಳ ನಡುವೆ ಬಂದ ಗಾಡ್ಸ್, ಡೆಮನ್ಸ್ ಅಂಡ್ ಅದರ್ಸ್ (1965) ಎಂಬ ಸಣ್ಣ ಕಥಾಸಂಕಲನದಲ್ಲಿ ಪುರಾಣಕಾವ್ಯಗಳಿಂದ ಆಯ್ದ 14 ಕಥೆಗಳಿವೆ. ಇವರ ರಾಮಾಯಣ (1972) ಕಂಬ ರಾಮಾಯಣವನ್ನು ಅನುಸರಿಸಿ ರಚಿತವಾದುದು.

ಇವರ ಪ್ರಕಟಿತ ಸಣ್ಣ ಕಥೆಗಳು ಸುಮಾರು 80. ವಿಷಯವೈವಿಧ್ಯ, ತಿಳಿಹಾಸ್ಯ ಮತ್ತು ಆಕರ್ಷಕ ನಿರೂಪಣೆಗಳಿಂದಾಗಿ ಇವರ ಹರಟೆಗಳೂ ಪ್ರವಾಸ ಕಾಲದ ದಿನಚರಿ ಮೈ ಡೇಟ್‌ಲೆಸ್ ಡೈರಿ (1960) ಮತ್ತು ಜೀವನಸ್ಮೃತಿಗಳನ್ನೊಳಗೊಂಡ ಮೈ ಡೇಸ್ (1975) ಇವೂ ಓದುಗರಿಗೆ ಬಹಳ ಕಾಲ ನೆನಪಿನಲ್ಲಿ ಉಳಿಯುವ ಇತರ ಗದ್ಯಕೃತಿಗಳು.

ಪಾಶ್ಚಾತ್ಯ ದೇಶಗಳಲ್ಲಿ ಆರಂಭವಾದ ನಾರಾಯಣರ ಕೃತಿ ಪ್ರಕಟಣೆ ಮತ್ತು ಪ್ರಶಂಸೆ ದೇಶವಿದೇಶಗಳಲ್ಲಿ ಇವರಿಗೆ ಅನೇಕ ಪ್ರಶಸ್ತಿಗಳನ್ನು ದೊರಕಿಸಿದೆ. 1960ರಲ್ಲಿ ಇವರ ಕಾದಂಬರಿ ದಿ ಗೈಡ್ ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. 1964ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ದೊರೆಯಿತು. ಲೀಡ್ಸ್ ವಿಶ್ವವಿದ್ಯಾನಿಲಯದಿಂದ 1967ರಲ್ಲಿ ಡಿ.ಲಿಟ್.ಪದವಿ, 1975ರಲ್ಲಿ ಮೈ ಡೇಸ್ ಎನ್ನುವ ಜೀವನಸ್ಮೃತಿಗಾಗಿ ಅಮೆರಿಕ ಭಾಷಾಸಂಸ್ಥೆಯೊಂದರಿಂದ 2000 ಡಾಲರುಗಳ ನಗದು ಬಹುಮಾನಗಳು ಬಂದಿವೆ. ಇವರ ಅನೇಕ ಕೃತಿಗಳು ಪ್ರಮುಖ ಐರೋಪ್ಯ ಮತ್ತು ಭಾರತೀಯ ಭಾಷೆಗಳಲ್ಲಿ ಅನುವಾದವಾಗಿವೆ. ಡಿ ಗೈಡ್ ಇಂಗ್ಲಿಷಿನಲ್ಲೂ ಹಿಂದಿಯಲ್ಲೂ ಚಲನಚಿತ್ರವಾಗಿರುವುದೇ ಅಲ್ಲದೆ ಅದರ ನಾಟಕದ ರೂಪವೂ ಬ್ರಾಡ್‌ವೇ ರಂಗಭೂಮಿಯ ಮೇಲೆ ಪ್ರದರ್ಶಿತವಾಗಿವೆ. ಚಲನಚಿತ್ರವಾಗಿ ಬಂದಿರುವ ಇವರ ಇನ್ನೊಂದು ಕೃತಿ ಮಿ. ಸಂಪತ್. ದೂರದರ್ಶನದಲ್ಲಿ ಪ್ರಸಾರವಾದ ಇವರ ಸ್ವಾಮಿ ಮತ್ತು ಮಾಲ್ಗುಡಿ ಡೇಸ್ ಧಾರಾವಾಹಿ ಜನಪ್ರಿಯವಾಯಿತು. ಇವರ ಹೆಸರು ಮನೆಮಾತಾಯಿತು. 1989ರಲ್ಲಿ ನಾರಾಯಣ ರಾಜ್ಯಸಭೆಗೆ ನಾಮಕರಣಗೊಂಡರು. ಪದ್ಮಭೂಷಣ ಪದ್ಮವಿಭೂಷಣ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್‌ಗಳಿಂದ ಇವರು ಸನ್ಮಾನಿತರಾದರು. ಇವರ ಪತ್ನಿ ರಾಜಮ್ಮ (1949)ರಲ್ಲಿ ನಿಧಿ ಹೊಂದಿದರು. ಹೇಮಾ ಒಬ್ಬಳೇ ಮಗಳು. ಹೊಂದಿದರು 2001ರಲ್ಲಿ ನಿಧನ ಹೊಂದಿದರು. (ಜಿ.ಎ.ಆರ್.)

**ನಾರಾಯಣ :** ಸು.1600 ಬ್ರಾಹ್ಮಣ ಕವಿ. ಉತ್ತರರಾಮಚರಿತೆಯ ಕರ್ತೃ. ತಂದೆ ತಾತಧೀಮಣಿ, ಗುರು ತಿಮ್ಮಣಾರ್ಯ.

ಉತ್ತರ ರಾಮಾಯಣವನ್ನು ಕುರಿತು ಇವನೂ ಸೇರಿದಂತೆ ತಿರುಮಲೆ ವೈದ್ಯ, ಯೋಗೀಂದ್ರ, ನರಸ ಮೊದಲಾದ ಕನ್ನಡ ಕವಿಗಳು ಗ್ರಂಥ'ರಚನೆ ಮಾಡಿದ್ದಾರೆ. ಆದರೆ ಗಾತ್ರ ಹಾಗೂ ವಿಷಯ ನಿರೂಪಣೆಗಳಲ್ಲಿ ಈತನ ಕೃತಿಗೆ ಮಹತ್ತ್ವದ ಸ್ಥಾನವಿದೆ. ಈ ಕಾವ್ಯ ಭಾಮಿನೀಷಟ್ಪದಿಯಲ್ಲಿದ್ದು 46 ಸಂಧಿ 2138 ಪದ್ಯಗಳನ್ನೊಳಗೊಂಡಿದೆ. ಇದಕ್ಕೆ ಆಧಾರಗ್ರಂಥ ವಾಲ್ಮೀಕಿ ರಾಮಾಯಣದಲ್ಲಿ ಸೇರ್ಪಡೆಯಾಗಿರುವ ಉತ್ತರ ಕಾಂಡ. *

**ನಾರಾಯಣ, ಎಚ್.ಕೆ. :** 1934 . ಸುಗಮ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತ ಕಲಾವಿದ. ಹಾಸನ ಜಿಲ್ಲೆ ಹೊಳೆನರಸೀಪುರದಲ್ಲಿ 1934 ಮಾರ್ಚ್ 14 ರಂದು ಜನಿಸಿದರು. ತಂದೆ ಕೇಶವಯ್ಯ, ತಾಯಿ ಸಣ್ಣಮ್ಮ. ಇವರದು ಸಂಗೀತಗಾರರ ಮನೆತನ. ತಂದೆ ಕೇಶವಯ್ಯ ಶಾರದಾ ಸಂಗೀತ ಪಾಠಶಾಲೆಯನ್ನು ತೆರೆದಿದ್ದರು. ಅದರ ಆಶ್ರಯದಲ್ಲಿ ಪಿಟೀಲು ಹಾಗೂ ಹಾಡುಗಾರಿಕೆಯನನು ಕಲಿಸುತ್ತಿದ್ದರು. ಈ ಸಂಗೀತದ ಪರಿಸರ ನಾರಾಯಣರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿತು. ತಂದೆ ಮಗನಿಗೆ ಆರನೆಯ ವಯಸ್ಸಿನಿಂದಲೇ ಪಿಟೀಲು ಕಲಿಸಲು ಪ್ರಾರಂಭಿಸಿದರು. ಯಾವುದೋ ಒಂದು ಸಂದರ್ಭದಲ್ಲಿ ದುರಸ್ತಿಗೆ ಕೊಟ್ಟಿದ ಮುರಿದು ಹೋದ ಪಿಟೀಲು ವಾಪಸ್ಸು ಬರದಿದ್ದಾಗ ಇವರು ವಾದ್ಯಗಾರಿಕೆ ಬಿಟ್ಟು ಹಾಡುಗಾರಿಕೆಯನ್ನು ಕಲಿಯುವಂತಾಯಿತು. ಸಂಗೀತದಲ್ಲಿ ಸೀನಿಯರ್ ಪರೀಕ್ಷೆ ಮುಗಿಸಿದರು. ಅನಂತರ ಮೈಸೂರಿಗೆ ಬಂದು ಆರ್.ಕೆ. ಶ್ರೀಕಂಠನ್ ಅವರಲ್ಲಿ ಸಂಗೀತಾಭ್ಯಾಸ ಮುಂದುವರಿಸಿದರು. ವಿದ್ವತ್ ಪರೀಕ್ಷೆಯಲ್ಲಿ ಚಿನ್ನದ ಪದಕ ಗಳಿಸಿದರು. ಎಸ್.ಎಸ್.ಎಲ್.ಸಿ. ಯವರಿಗೆ ಓದಿದರು. ಮೈಸೂರವು ಆಕಾಶವಾಣಿಯಲ್ಲಿ ಸ್ಕ್ರಿಪ್ಟ್ ರೈಟರ್ ಆಗಿ ಸೇರಿದರು (1954). ಸಂಗೀತ ಕಾರ್ಯ ಕ್ರಮಗಳಿಗೆ ಸ್ವರ ಪ್ರಸ್ತಾರ ಬರೆದುಕೊಡುತ್ತಿದ್ದರು. ಹಿಂದೂಸ್ಥಾನಿ ಸಂಗೀತದಲ್ಲೂ ಆಸಕ್ತಿಯನ್ನು ಬೆಳೆಸಿಕೊಂಡರು. ಆಕಾಶವಾಣಿ ನಿಲಯ ಮೈಸೂರಿನಿಂದ ಬೆಂಗಳೂರಿಗೆ ವರ್ಗಾವಣೆಯಾಯಿತು (1955). ಬೆಂಗಳೂರು ಆಕಾಶವಾಣಿಯ್ಲಲಿ ಜೂನಿಯರ್ ಮ್ಯೂಸಿಕ್ ಕಂಪೋಸಿರ್ ಹುದ್ದೆಗೆ ಆಯ್ಕೆಯಾದರು (1974). ಅನಂತರ 1982 ರಲ್ಲಿ ಮ್ಯೂಸಿಕ್ ಪ್ರೊಡ್ಯೂಸರಂ ಆಗಿ ಆಯ್ಕೆಯಾದರು. ಅನಂತರ ಮೊದಲ ದರ್ಜೆಯ ಆಕಾಶವಾಣಿಯ ಸಂಗೀತ ಸಂಯೋಜಕರಾಗಿ 36 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದರು.

ಆಕಾಶವಾಣಿ ಇವರ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸಿದೆ. ಕಲಾವಿದರಾಗಿ ಜನಮನವನ್ನು ಮುಟ್ಟಲು ಈ ಜಾಗ ಬಹಳ ಸಹಕಾರಿಯಾಯಿತು. ನಾರಾಯಣ ಅವರು ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಎರಡರಲ್ಲೂ ಪರಿಣತಿ ಸಾಧಿಸಿದ್ದಾರೆ. ಇವರು ಹಲವು ಕವನಸಗಳಿಗೆ ರಾಗಸಂಯೋಜಿಸಿ ಹಾಡಿದ್ದಾರೆ ; ಅನೇಕ ಕಲಾವಿದರಿಂದ ಹಾಡಿಸಿದ್ದಾರೆ. ಹಲವು ಸಂಗೀತ ರೂಪಕಗಳಿಗೆ ಸಂಗೀತ ಸಂಯೋಜನೆ ಮಾಡಿ ಯಶಸ್ವಿಯಾಗಿದ್ದಾರೆ. ಇವರು ರಜನೀಕಾತಂರಾದ ಅವರೊಂದಿಗೆ ಸಂಗೀತ ನೀಡಿದ ಮೇಘಸಂದೇಶ ರೂಪಕಕ್ಕೆ ಆಕಾಶವಾಣಿಯ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ.

ಸುಗಮ ಸಂಗೀತ, ಶಾಸ್ತ್ರೀಯ ಸಂಗೀತದ ಜೊತೆಗೆ ಭರತನಾಟ್ಯಕ್ಕೆ ಹಿನ್ನೆಲೆಗಾಯನವನ್ನು ಒದಗಿಸಿ ಯಶಸ್ವಿಯಾದುದು ಇವರ ಹೆಗ್ಗಳಿಕೆ. ಇದಲ್ಲದೆ ರಮಣಾಂಜಲಿ ತಂಡದ ಸದಸ್ಯರಾಗಿ ಕಳೆದ ವರ್ಷಗಳಿಂದ ರಾಜಕುಮಾರಂ ಭಾರತಿಯವರೊಂಗಿದೆ ಹಲವು ಭಾಷೆಗಳ 150 ಧ್ವನಿಸುರುಳಿಗಳಲ್ಲಿ ಹಾಡಿದ್ದಾರೆ. ಭಾರತದ ಮೂಲೆ ಮೂಲೆಗಳಲ್ಲಿ ಹಾಡುವುದರ ಜೊತೆಗೆ ಅಮೆರಿಕ, ಇಂಗ್ಲೆಂಡ್, ಸಿಂಗಪುರ, ಹಾಂಕಾಂಗ್, ಶ್ರೀಲಂಕ, ಮಂಗೋಲಿಯ, ರಷ್ಯ, ಮನಿಲಾ ಮೊದಲಾದ ದೇಶಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಇವರು ಹಾಡಿದ ಧ್ವನಿಸುರಳಿಗಳಲ್ಲಿ ಶಾಸ್ತ್ರೀಯ ಸಂಗೀತ, ವಚನಗಳು, ದಾಸರ ಪದಗಳು, ಭಕ್ತಿ ಗೀತೆಗಳು ಎಲ್ಲವೂ ಸೇರಿವೆ.

ಇವರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಇವರನ್ನು ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ. ಕರ್ನಾಟಕ ಸಂಗೀತ ನೃತ್ಯ ಆಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ (1984 - 85), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1988), ಆರ್ಯಭಟ ಪ್ರಶಸ್ತಿ (1997), ಕರ್ನಾಟಕ ಸರ್ಕಾರ ಸುಗಮ ಸಂಗೀತದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡುವ ಪ್ರತಿಷ್ಠಿತ ಸಂತ ಶಿಶುನಾಳ ಷರೀಫ ಪ್ರಶಸ್ತಿ ಇವರೆಗೆ ಲಭಿಸಿದೆ (2000).

ಅಪಾರ ಶಿಷ್ಯ ವರ್ಗವನ್ನು ಹೊಂದಿರುವ ಇವರು ನಿವೃತ್ತಿಯ ಬಳಿಕ ತರಳಬಾಳು ಕೇಂದ್ರ ಹಾಗೂ ಭಾರತೀಯ ವಿದ್ಯಾಭವನದಲ್ಲಿ ಸುಗಮ ಸ'ಂಗೀತ' ಹಾಗ'ೂ ಶಾಸ್ತ್ರೀಯ ಸ'ಂಗೀತ'ವ'ನ್ನು ಕಲಿಸುತ್ತಿದ್ದಾರೆ.

(ಎಚ್.ಆರ್.ಎಲ್.)

**ನಾರಾಯಣ ಕವಿ :** ಸು.1450 ಬ್ರಾಹ್ಮಣ ಕವಿ. ಭಾಗವತ ಸಂಹಿತಾರ್ಥ' ಎಂಬ ಗದ್ಯ ಗ್ರಂಥ'ದ ಕರ್ತೃ. ಗ್ರಂಥಾಂತ್ಯದಲ್ಲಿ

ಉಲ್ಲೇಖಿತವಾಗಿರುವ ವಿದ್ಯಾರಣ್ಯಯೋಗಿ 1368ರಲ್ಲಿ ಗತಿಸಿದ ಶೃಂಗೇರಿ ಮಠದ ಸ್ವಾಮಿಯಾಗಿದ್ದ ಪಕ್ಷದಲ್ಲಿ ಇವನ ಕಾಲ ಸು.1450 ಆಗಬಹುದು ಎಂಬು ಆರ್. ನರಸಿಂಹಾಚಾರ್ಯರು ತಿಳಿಸಿದ್ದಾರೆ. ಈಗ ಉಪಲಬ್ಧವಿರುವ ಹಸ್ತಪ್ರತಿಗಳು ಚತುರ್ಥಸ್ಕಾಂಧ ಒಂಬತ್ತನೆಯ ಅಧ್ಯಯಕ್ಕೇ ಮುಗಿದಿರುವುದರಿಂದ ಇನ್ನುಳಿದ ಸ್ಕಂದಗಳನ್ನು ಬರದನ್ನೋ ಇಲ್ಲವೋ ಎಂಬ ವಿಷಯ ಸಂದಿಗ್ದವಾಗಿದೆ. ಈ ಗ್ರಂಥ'ಕ್ಕೆ ಸಂಸ್ಕೃತ ಶ್ರೀಮದ್ಭಾಗವತವೇ ಆಧಾರ. ಗದ್ಯದಲ್ಲಿ ಭಾಗವತದ ಭಾವಾನುವಾದಕ್ಕೆ ತೊಡಗಿದವರಲ್ಲಿ ಈತನೇ ಮೊದಲಿಗ.

ಈ ಭಾಗವತದಲ್ಲಿ ಶ್ರೀಹರಿಯ ಗುಣಚಾರಿತ್ರ ಮಹಿಮೆಗಳನ್ನು ವಿವರವಾಗಿ ಹೇಳಿದೆ.ಹಾಗೆಯೇ ತಮಸ್ಸು, ರಜಸ್ಸು, ಸಾತ್ತ್ವಿಕ ಗುಣತ್ರಯಗಳನ್ನೂ ಆಯಾ ಸಂದರ್ಭಕ್ಕನುಸಾರವಾಗಿ ಅನ್ವಯಿಸಿ ಹೇಳುವುದಲ್ಲದೆ ಅವುಗಳಿಂದೊದಗೂವ ಫಲಾಫಲಗಳನ್ನು ತಿಳಿಸಿದೆ. ಗ್ರಂಥ'ದಲ್ಲಿಸನಕಾದಿಯೋಗಿಗಳು, ವರಾಹ, ನಾರದ, ನಾರಾಯಣ, ಕಪಿಲಮುನೀಂದ್ರ ಅತ್ರಿಮುನಿಯ ಮಗ ದತ್ತಾತ್ರೇಯ, ಯಜ್ಞ ವೃಷಭ, ಪೃಥುರಾಯ, ಮತ್ಸ್ಯ, ಕೂರ್ಮ, ಧನ್ವಂತರಿ, ಜಗನ್ಮೋಹಿನಿ, ನರಸಿಂಹ, ವಾಮನ, ಪರಶುರಾಮ, ವ್ಯಾಸ, ರಾಮ, ಬಲರಾಮಕೃಷ್ಣ ಈ ಹತ್ತೊಂಬತ್ತು ಅವತಾರಗಳ ಸ್ಥೂಲ ಪರಿಚಯವಿದೆ. ಆದರೆ ಮುಖ್ಯವಾಗಿ ಪಾಂಡವರ ಕಥೆಯನ್ನು ರಚಿಸಬೇಕೆಂಬ ಆಶಯ ಕವಿಗಿರುವುದರಿಂದ ಕವಿ ಅದನ್ನೇ ವಿಸ್ತಾರವಾಗಿ ನಿರೂಪಿಸಿದ್ದಾನೆ. ಅಲ್ಲದೆ ಶ್ರೀ ಕೃಷ್ಣನ ಮಹಿಮೆ, ಲೀಲೆಗಳಿಗೂ ಪ್ರಾಶಸ್ತ್ಯ ನೀಡಿದ್ದಾನೆ. ತನ್ನ ಗ್ರಂಥವನ್ನು ಜನಸಾಮಾನ್ಯರು ಓದಲೆಂದೇ ತಿಳಿಯಾದ ನಡುಗನ್ನಡ ಭಾಷೆಯಲ್ಲಿ ಹೆಚ್ಚಾಗಿ ಚಿಕ್ಕ ಚಿಕ್ಕ, ವಾಕ್ಯಗ'ಳ'ಲ್ಲಿ ರ'ಚಿಸಿದ್ದಾನೆ.
*

**ನಾರಾಯಣ, ಜಿ. :** 1923- . ಸ್ವಾತಂತ್ರ್ಯಯೋಧ'. ಸಾಹಿತ್ಯ ಪ್ರೇಮಿ. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ, ಆಡಳಿತ ತಜ್ಞ, ಪ್ರತಿಕೋದ್ಯಮಿ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ದೇಶಹಳ್ಳಿಯಲ್ಲಿ 1923 ಸೆಪ್ಟೆಂಬರ್ 2ರಂದು ಜನಿಸಿದರು. ತಂದೆ ಗಿರಿಗೌಡ, ತಾಯಿ ಸಣ್ಣಮ್ಮ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಗಳನ್ನು ಮಂಡ್ಯ ಜಿಲ್ಲೆಯಲ್ಲಿ ಪೂರೈಸಿ ವಾರ್ಧಾ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿ ಪಡೆದು ಸ್ವಾತಂತ್ರ್ಯ ಸಮರ ಹಾಗೂ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟಗಳಲ್ಲಿ ಸ್ವಯಂ ಸೇವಕರಾಗಿ ದುಡಿದರು. ಜವಾಬ್ದಾರಿ ಸರ್ಕಾರದ ಹೋರಾಟದ ಮುಖಪತ್ರಿಕೆಯಾಗಿದ್ದ 'ವಾರ್ತಾ'ದ ವ್ಯವಸ್ಥಾಪಕರಾಗಿ ಪತ್ರಿಕಾ ವ್ಯವಸಾಯ ಆರಂಭಿಸಿದರು. ಅಕ್ಷರ ಪ್ರಚಾರ ಸಮಿತಿಗಾಗಿ ಗೋವಿನ ಹಾಡಿನ ಧಾಟಿಯಲ್ಲಿ ರಚಿಸಿಕೊಟ್ಟ 00 ಪದ್ಯಗಳನ್ನುಳ್ಳ 'ಅಕ್ಷರವ ನೀವ್ ಕಲಿಯಿರಿ' ಎಂಬ ಕಾವ್ಯಕ್ಕೆ ಸಿದ್ಧವನ ಹಳ್ಳಿ ಕೃಷ್ಣಶರ್ಮರು ಮುನ್ನುಡಿ ಬರೆದಿದ್ದು ಅದು 'ಬೆಳಕು' ಎಂಬ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಯಿತು. ಮಂಡ್ಯ ಜಿಲ್ಲೆಯಲ್ಲಿ ಉಂಟಾದ ಮಲೇರಿಯಾ ಹಾವಳಿಯನ್ನು ಕುರಿತು 'ಮಲೇರಿಯಾ ಹಾವಳಿ' ಎಂಬ ಲಾವಣಿ, ಸಕ್ಕರೆ ಕಂಪನಿಯ ಆಡಳಿತದ ಅವ್ಯವಸ್ಥೆಯಿಂದ ರೈತರಿಗೆ ಉಂಟಾದ ತೊಂದರೆ ಕುರಿತು ಕಬ್ಬಿನ ಲಾವಣಿ ಹಾಗೂ ಕಬ್ಬಿನ ಕಥಾಂತರ ಎಂಬ ಕೃತಿ ಬರೆದು ಅಚ್ಚು ಹಾಕಿಸಿದ್ದಲ್ಲದೆ, ಜಾತ್ರೆಗಳಲ್ಲಿ ಖುದ್ದಾಗಿ ಹಾಡುವ ಮೂಲಕ ಜನಜಾಗೃತಿ ಮೂಡಿಸಿದರು. 1950ರಲ್ಲಿ ಸ್ವತಂತ್ರ ಮುದ್ರಣಾಲಯವನ್ನು ಸ್ಥಾಪಿಸಿ 1951 ಜನವರಿ 26ರಂದು 'ವಿನೋದ' ಎಂಬ ಹಾಸ್ಯ ಮಾಸಿಕವನ್ನು ಆರಂಭಿಸಿದರು. ಪ್ರತಿವರ್ಷ ಆಗಸ್ಟ್ 15ರಂದು ವಿನೋದದ ವಿಶೇಷ ಸಂಚಿಕೆ ಪ್ರಕಟವಾಗುತ್ತಿದೆ. 1975ರಲ್ಲಿ ರಜತ ಮಹೋತ್ಸವ ಆಚರಿಸಿದ ಈ ಪತ್ರಿಕೆ 2002 ಆಗಸ್ಟ್ 15ರಂದು ಸುವರ್ಣ ಮಹೋತ್ಸವ ಆಚರಿಸಿತು. ಇಷ್ಟು ದೀರ್ಘ ಕಾಲದಿಂದ ಸತತವಾಗಿ ಪ್ರಕಟವಾಗುತ್ತಿರುವ ಏಕೈಕ ಹಾಸ್ಯ ಮಾಸಿಕ ಎಂಬ ಹೆಗ್ಗಳಿಕೆ ವಿನೋದಕ್ಕೆ ಸಲ್ಲುತ್ತದೆ.

ಚಾಮರಾಜಪೇಟೆ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ಕೇಂದ್ರ ವಯಸ್ಕರ ಶಿಕ್ಷಣ ಸಮಿತಿ ಕಾರ್ಯಸಮಿತಿ ಸದಸ್ಯರಾಗಿ, ಮೈಸೂರು ಹಿಂದಿ ಪರಿಷತ್ತಿನ ಕಾರ್ಯದರ್ಶಿಯಾಗಿ ಒಂದು ವರ್ಷ ಕಾರ್ಯ ನಿರ್ವಹಿಸಿದ ಇವರು 1957ರಲ್ಲಿ ಬೆಂಗಳೂರು ನಗರ ಪಾಲಿಕೆಗೆ ಚುನಾಯಿತರಾಗಿ 7 ವರ್ಷಗಳ ಕಾಲ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. 1964ರಲ್ಲಿ ಬೆಂಗಳೂರು ನಗರದ ಮೇಯರ್ ಆಗಿ ಆಯ್ಕೆಯಾದರು. ಬೆಂಗಳೂರು ನಗರಕ್ಕೆ ಕಾವೇರಿ ನೀರಿನ ಸರಬರಾಜಿಗಾಗಿ ಕಾವೇರಿ ಯೋಜನೆಯ ಶಂಕುಸ್ಥಾಪನೆ, ನಗರಪಾಲಿಕೆಯಲ್ಲಿ ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನ, ಬೆಂಗಳೂರು ನಗರದ ಸಂಸ್ಥಾಪಕ ಕೆಂಪೇಗೌಡರ ಪ್ರತಿಮೆಯ ಸ್ಥಾಪನೆ ಇವು ಇವರ ಅವಧಿಯ ಮುಖ್ಯ ಸಾಧನೆಗಳು.

ಇವರು 1969ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿ ಒಟ್ಟು 9 ವರ್ಷಗಳ ಕಾಲ ಆ ಸ್ಥಾನದಲ್ಲಿದ್ದರು. ಕನ್ನಡದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದು ಪರಿಷತ್ತಿನ ನೂತನ ಶಕಪುರುಷ ಎಂದು ಹೆಸರಾದರು. ಪರಿಷತ್ತಿನ ಕಾರ್ಯ ಚಟುವಟಿಕೆಗಳ ವಿಸ್ತರಣೆಗಾಗಿ ತ್ರೈವಾರ್ಷಿಕ ಯೋಜನೆ, ಕನ್ನಡ ರಾಜ್ಯೋತ್ಸವದಲ್ಲಿ ಮನೆಯಿಂದ ಮನೆಗೆ ಪುಸ್ತಕ ಮಾರಾಟದ ಯೋಜನೆ, ಜನಪದ ಕಲೆಗಳ ರಕ್ಷಣೆಗೆ ಮತ್ತು ಅಭಿವೃದ್ಧಿಗಾಗಿ ಬೃಹತ್ ಯೋಜನೆ, ಗಮಕ ಕಲೆಯನ್ನು ಉಳಿಸಲು ಗಮಕಕಲಾ ತರಗತಿಗಳ ಆರಂಭ, ಕನ್ನಡದಲ್ಲಿ ಆಡಳಿತಕ್ಕೆ ನೆರವಾಗಲು ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ತರಗತಿಗಳು, ಜಿಲ್ಲಾ ಸಾಹಿತ್ಯ ಸಮ್ಮೇಳನಗಳು, ಪುಸ್ತಕಗಳ ಪ್ರಕಟಣ ಮಾಲಿಕೆಗಳು, ಗಡಿನಾಡು ಕನ್ನಡಿಗರ ಸಮ್ಮೇಳನ, ಹೊರನಾಡ ಕನ್ನಡಿಗರೊಂದಿಗೆ ಸಂಪರ್ಕದ ದಿಸೆಯಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟನೆ ಮೊದಲಾದವನ್ನು ಯಶಸ್ವಿಯಾಗಿ ಕಾರ್ಯರೂಪಗೊಳಿಸಿದರು. ಇವರ ಕಾಲಾವಧಿಯಲ್ಲಿ ರೂಪುಗೊಂಡ ಕನ್ನಡ-ಕನ್ನಡ ಸಂಕ್ಷಿಪ್ತ ನಿಘಂಟು ಹಾಗೂ ಕನ್ನಡ ರತ್ನಕೋಶದ ಪ್ರಕಟಣೆಗಳು ಕನ್ನಡ ಪುಸ್ತಕ ಮಾರಾಟದ ಇತಿಹಾಸದಲ್ಲಿ ದಾಖಲೆ ಸ್ಥಾಪಿಸಿದವು.

ಯಾವುದೇ ಕೆಲಸಕಾರ್ಯವಾಗಲಿ ಯೋಜನಾಬದ್ಧವಾಗಿ ಕಾರ್ಯರೂಪಕ್ಕೆ ತರುವವರೆಗೆ ನಿಷ್ಠೆಯಿಂದ ದುಡಿಯುವ ವ್ಯಕ್ತಿ ಎಂದು ಹೆಸರಾದ ಜಿ.ನಾರಾಯಣ ಅವರಿಗೆ ಪತ್ರಿಕಾ ಅಕಾಡಮಿಯ ಅಧ್ಯಕ್ಷ ಪದವಿ, ಕರ್ನಾಟಕ ಗಮಕಕಲಾ ಪರಿಷತ್ತಿನ ಅಧ್ಯಕ್ಷ ಪದವಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೊದಲ ಅಧ್ಯಕ್ಷ ಪದವಿ ಮೊದಲಾದ ಸ್ಥಾನಗೌರವಗಳು ಲಭಿಸಿದ್ದವು. ಹಲವಾರು ಸನ್ಮಾನ ಹಾಗೂ ಪ್ರಶಸ್ತಿ ಗೌರವಗಳಿಗೆ ಪಾತ್ರರಾದ ಇವರಿಗೆ ರಾಜ್ಯ ಸರ್ಕಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. (ಕೆ.ಆರ್.ಎಸ್.)

**ನಾರಾಯಣದಾಸ :** 1823-70. ಕೀರ್ತನಕಾರ, ವಾಗ್ಗೇಯಕಾರ ಹಾಗೂ ಕವಿ. ತಿಮ್ಮಪ್ಪದಾಸರ ಜೇಷ್ಠಪುತ್ರ. ಜನನ 1823, ಫೆಬ್ರವರಿ 11ರಂದು. ತಿಮ್ಮಪ್ಪದಾಸರ ಪೂಜಾವಿಧಾನ ಕೀರ್ತನೆಗಳು ಲಿಖಿತವಾಗಿರುವ ಕಾಗದದ ಹಸ್ತಪ್ರತಿಯಲ್ಲಿ ನಾರಾಯಣದಾಸ ಎಂದು ಸ್ವನಾಮಮುದ್ರಿಕೆಯಿರುವ 39 ಕೀರ್ತನೆಗಳು ಲಿಖಿತವಾಗಿವೆ. ಈ ಕೀರ್ತನೆಗಳೆಲ್ಲವೂ ಪ್ರಾಯಿಕವಾಗಿ ಕುಲದೈವ ವೆಂಕಟರಮಣ, ರಾಮಚಂದ್ರಮೂರ್ತಿ, ಶಿವ, ಚಾಮುಂಡೇಶ್ವರಿ ಮುಂತಾಗಿ ದೇವತಾ ಸ್ತೋತ್ರರೂಪದಲ್ಲಿವೆ. ಒಂದು ಕೀರ್ತನೆ ಶೃಂಗೇರಿ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳನ್ನು (1866-1913) ಕುರಿತಿದೆ. ಚಾಮರಾಜ ಒಡೆಯರ ಪಟ್ಟಾಭಿಷೇಕವನ್ನು ಹಾರೈಸುವ, ಅವರು ಪಟ್ಟಾಭಿಷಿಕ್ತರಾದದ್ದಕ್ಕೆ (1868) ಸಂತೋಷವನ್ನು ಸೂಚಿಸುವ ಕೀರ್ತನೆಗಳು ಎರಡಿವೆ. ಇವರ ಕೀರ್ತನೆಗಳಲ್ಲಿ ತಂದೆ ತಿಮ್ಮಪ್ಪದಾಸರ ಕೀರ್ತನೆಗಳಲ್ಲಿರುವಂತೆ ತತ್ತ್ವವಿಚಾರವಾಗಲಿ, ಭಕ್ತಿಭಾವದ ಹೃದಯಂಗಮ ಅಭಿವ್ಯಕ್ತಿಯಾಗಲಿ ಕಂಡುಬರುವುದಿಲ್ಲ. ಆದರೆ ಕೆಲವು ಕೀರ್ತನೆಗಳು ಬಿಕ್ಕಟ್ಟಾಗಿ ರಚಿತವಾಗಿದ್ದು, ಸಮಕಾಲೀನ ವಾಗ್ಗೇಯಕಾರರ ಕೃತಿಗಳ ಬಂಧಗೌರವದ ಪ್ರಭಾವವನ್ನು ಪ್ರತಿಬಿಂಬಿಸುತ್ತವೆ. (ಎಂ.ವಿ.ಎಸ್.)

**ನಾರಾಯಣಮೂರ್ತಿ, ಎನ್.ಆರ್. :** 1946- . ಬೆಂಗಳೂರಿನ ಇನ್‌ಫೋಸಿಸ್ ಸಂಸ್ಥೆಯ ಅಧ್ಯಕ್ಷ. ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ 1946 ಆಗಸ್ಟ್ 20ರಂದು ಜನಿಸಿದರು. ತಂದೆ ಎನ್. ರಾಮರಾವ್ ಶಿಕ್ಷಕರಾಗಿದ್ದರು. ತಾಯಿ ಪದ್ಮಾವತಮ್ಮ. ಇವರ ಮೊದಲ ಓದು

ಮೈಸೂರಿನ ಶಾರದಾವಿಲಾಸ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ರ‍್ಯಾಂಕ್ ವಿಜೇತರು. ಕಾನ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಓದುವ ಅವಕಾಶ ಒದಗಿ ಬಂದರೂ ಮನೆಯ ಆರ್ಥಿಕ ಸ್ಥಿತಿಯಿಂದಾಗಿ ಅಲ್ಲಿಗೆ ಹೋಗಲಾಗಲಿಲ್ಲ. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ) ಕಾಲೇಜಿನಲ್ಲಿ ಓದಿ ವಿದ್ಯುತ್ ಎಂಜನಿಯರಿಂಗ್‌ನಲ್ಲಿ ರ‍್ಯಾಂಕ್‌ನೊಂದಿಗೆ ಬಿ.ಇ. ಪದವಿ ಪಡೆದರು (1967). ಮುಂದೆ ಓದಲು ಶಿಷ್ಯವೇತನ ಸಿಕ್ಕಿದ್ದರಿಂದ ಕಾನ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಐಐಟಿ) ಓದಿ ಸ್ನಾತಕೋತ್ತರ ಪದವಿ (ಎಂ.ಟೆಕ್) ಪಡೆದರು (1969).

ಇದೇ ಸಮಯದಲ್ಲಿ ಕಂಪ್ಯೂಟರ್ ಮಾಹಿತಿ ತಂತ್ರಜ್ಞಾನ ಕುರಿತ ಅಲೆ ಪ್ರಾರಂಭವಾಯಿತು. ಇವರು ಕಂಪ್ಯೂಟರ್ ಕ್ಷೇತ್ರದತ್ತ ಆಸಕ್ತರಾಗಿ ಅಧ್ಯಯನದಲ್ಲಿ ತೊಡಗಿದರು. ಅಹಮ್ಮದಾಬಾದಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲಸಕ್ಕೆ ಸೇರಿಕೊಂಡರು. ಮುಂದೆ ಸೆಸ್ಮಾ ಪ್ಯಾರಿಸ್, ಸಿಸ್ಟಮ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಪುಣೆ), ಕಂಪ್ಯೂಟರ್ ಸಿಸ್ಟಮ್ಸ್ (ಮುಂಬಯಿ) ಗಳಲ್ಲಿ ಕೆಲಸ ಮಾಡುತ್ತ ಕಂಪ್ಯೂಟರ್‌ನ ಸಾಧ್ಯತೆಗಳನ್ನು ಕಂಡುಕೊಂಡರು. ಇವರು ಮಾದರಿ ತಯಾರಿಸಿ ಅಭಿವೃದ್ಧಿಪಡಿಸಿದ ಭಾರತದ ಮೊಟ್ಟಮೊದಲ ಬೇಸಿಕ್ ಇಂಟರ್‌ಪ್ರಿಟರ್ ಮತ್ತು ದೇಶದ ಪ್ರಥಮ ಷೇರಿಂಗ್ ಆಪರೇಟಿಂಗ್ ಸಿಸ್ಟಮ್ ಯಶಸ್ವಿಯಾದವು. ಪ್ಯಾರಿಸ್‌ನ ಡಿಗಾಲೆ ಏರ್‌ಪೋರ್ಟ್‌ನಲ್ಲಿ ಸರಕು ಸಾಗಾಟಕ್ಕಾಗಿ ರಿಯಲ್ ಆಪರೇಟಿಂಗ್ ಸಿಸ್ಟಮ್ ತಯಾರಿಸಿ 400 ಟರ್ಮಿನಲ್ ಮಾದರಿ ರಚನೆಗಾಗಿ ದುಡಿದ ತಂಡದಲ್ಲಿ ನಾರಾಯಣಮೂರ್ತಿಯವರೂ ಇದ್ದರು.

ಇವರ ಪತ್ನಿ ಸುಧಾ ಕುಲಕರ್ಣಿ ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್ ಓದಿ, ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಕಂಪ್ಯೂಟರ್ ವಿಜ್ಞಾನ ಶಿಕ್ಷಣ ಪಡೆದು ಎಂ.ಟೆಕ್, ಮುಗಿಸಿ ಪುಣೆಯ ಟೆಲ್ಕೋ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಾರಾಯಣಮೂರ್ತಿಯವರ ಪರಿಚಯ ಬೆಳೆದು ಇಬ್ಬರೂ ಮದುವೆಯಾದರು.

70ರ ದಶಕದಲ್ಲಿ ಭಾರತದಲ್ಲಿ ಕಂಪ್ಯೂಟರ್ ಕ್ರಾಂತಿ ಪ್ರಾರಂಭವಾದಾಗ ಎಲ್ಲ ರಾಜ್ಯ ಸರಕಾರಗಳು, ಖಾಸಗಿ ಸಂಸ್ಥೆಗಳು ಕಂಪ್ಯೂಟರ್ ಪ್ರಯೋಜನ ಪಡೆಯಲು ಸಂಕಲ್ಪಿಸಿದ ಸಂದರ್ಭದಲ್ಲಿ ನಾರಾಣಯಮೂರ್ತಿಯವರು ಈ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಬೇಕೆಂಬ ಹೆಬ್ಬಯಕೆಯಿಂದ ಸಾಫ್ಟ್‌ವೇರ್ ಉದ್ಯಮಕ್ಕೆ ಕೈಹಾಕಿದರು (1981). ಪುಣೆಯಲ್ಲಿ ತಮ್ಮ ಆರುಜನ ಸಹೋದ್ಯೋಗಿ ಮಿತ್ರರೊಡಗೂಡಿ ಮನೆಯಲ್ಲಿಯೇ ಇನ್‌ಫರ್ಮೇಶನ್ ಸಿಸ್ಟಮ್ಸ್ ಎಂಬ ಸಂಸ್ಥೆ ಆರಂಭಿಸಿದರು (1981). ಮುಂದೆ ಇದೇ ಸಂಸ್ಥೆ ಇನ್‌ಫೋಸಿಸ್ ಟೆಕ್ನಾಲಜಿ ಲಿಮಿಟೆಡ್ ಎಂಬ ಹೆಸರಿನಿಂದ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆಯಿತು. ಮೊದಲ ಎರಡು ಮೂರು ವರ್ಷ ಪುಣೆಯಲ್ಲಿ ಕಾರ್ಯನಿರ್ವಹಿಸಿದ ಈ ಸಂಸ್ಥೆ 1984ರಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡು ಅಲ್ಲಿ ಮುಖ್ಯ ಕಾರ್ಯಾಲಯವನ್ನಾರಂಭಿಸಿತು. ಈ ಸಂಸ್ಥೆ ಸಾಫ್ಟ್‌ವೇರ್ ಅಭಿವೃದ್ಧಿ, ಮರುಜೋಡಣೆ ಮತ್ತು ನಿರ್ವಹಣೆಯ ಕಾರ್ಯದೊಂದಿಗೆ ಸಾಫ್ಟ್‌ವೇರ್ ತಂತ್ರಜ್ಞಾನ ಕ್ಷೇತ್ರದಲ್ಲಿ ಸಮಗ್ರ ಸೇವೆ ನೀಡುತ್ತಿದೆ. ಕರ್ನಾಟಕ. ಮಹಾರಾಷ್ಟ್ರ, ಒರಿಸ್ಸ, ತಮಿಳುನಾಡು ರಾಜ್ಯಗಳಲ್ಲಿ ಹನ್ನೊಂದು ಮತ್ತು ವಿದೇಶಗಳಲ್ಲಿ ಹದಿಮೂರು ಶಾಖೆಗಳನ್ನು ಹೊಂದಿದೆ. ಜಗತ್ತಿನ ಪ್ರಸಿದ್ಧ ಕಂಪನಿಗಳಾದ ರಿಬೋಕ್, ಸಿಟಿಗ್ರೂಪ್, ಗ್ಯಾಪ್, ಬೋಯಿಂಗ್, ನೆಸ್ಲೆ, ನಾರ್ಡ್‌ಸ್ಟ್ರಾರ್ಮ ಜನರಲ್ ಇಲೆಕ್ಟ್ರಿಕ್, ವೀಸಾ, ಆಪಲ್, ನಾರ್ಟೆಲ ಮೊದಲಾದ 130 ಕಂಪನಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಸಾಫ್ಟ್‌ವೇರ್ ಸೇವೆ ಒದಗಿಸುತ್ತಿದೆ.

ನಾರಾಯಣಮೂರ್ತಿಯವರು ಭಾರತ ಸರಕಾರದ ರಿಸರ್ವ್ ಬ್ಯಾಂಕ್‌ನ ಕೇಂದ್ರ ಮಂಡಳಿಯಲ್ಲಿ ನಿರ್ದೇಶಕರಾಗಿ, ಇಂಡೋ ಬ್ರಿಟಿಷ್ ಪಾರ್ಟನರ್‌ಶಿಪ್ ಸಂಸ್ಥೆಯ ಸಹ ಅಧ್ಯಕ್ಷರಾಗಿ ಪ್ರಧಾನ ಮಂತ್ರಿಯ ವ್ಯಾಪಾರ ಮತ್ತು ಕೈಗಾರಿಕ ಮಂಡಳಿಯಲ್ಲಿ ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಏಷ್ಯದ ಅನೇಕ ದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಸಲಹೆಗಾರರಾಗಿದ್ದಾರೆ. ನವೆಂಬರ್ 2002ರಲ್ಲಿ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಜೇಂಜ್ ಬೋರ್ಡ್ ಆಫ್ ಇಂಡಿಯಾ (SEBI) ಸಂಸ್ಥೆ (ಭಾರತದ ಸೆಕ್ಯೂರಿಟಿ ಮತ್ತು ವಿನಿಮಯ ಮಂಡಳಿ) ಇವರನ್ನು ಕಾರ್ಪೊರೇಟ್ ಗವರ್ನೆನ್ಸ್ ಕಮಿಟಿಯ ಮುಖ್ಯಸ್ಥರನ್ನಾಗಿ ನೇಮಿಸಿತು. ಇವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಮತ್ತು ಇಂಡಿಯನ್ ಇಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಅಹಮ್ಮದಾಬಾದ್ ಈ ಸಂಸ್ಥೆಗಳ ಆಡಳಿತ ಮಂಡಳಿಯ (ಗವರ್ನಿಂಗ್ ಬಾಡಿ) ಅಧ್ಯಕ್ಷರಾಗಿದ್ದಾರೆ. ಇದಲ್ಲದೆ ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ವಿವಿಧ ಮಟ್ಟದ ಸದಸ್ಯರಾಗಿದ್ದಾರೆ.

ಇನ್‌ಫೋಸಿಸ್ ಯಶಸ್ಸಿಗೆ ನಾರಾಯಣಮೂರ್ತಿಯವರ ದೂರದೃಷ್ಟಿ, ನಿರಂತರ ದುಡಿಮೆ, ಶಿಸ್ತು, ಪ್ರಾಮಾಣಿಕತೆ ಕಾರಣವಾಗಿವೆ. ಇವರು ಈ ಸಂಸ್ಥೆಯ ಅಧ್ಯಕ್ಷರೂ ಸಲಹೆಗಾರರೂ ಆಗಿದ್ದಾರೆ. ಈಗ ತಮ್ಮ ಸಹೋದ್ಯೋಗಿ, ಸಂಸ್ಥಾಪಕರೊಬ್ಬರಿಗೆ ಈ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದಾರೆ.

ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಫಾರ್ಜೂನ್ ಪತ್ರಿಕೆ 2003ರ ಏಷ್ಯದ ಇಬ್ಬರು ಉದ್ಯಮಿಗಳಲ್ಲಿ ನಾರಾಯಣಮೂರ್ತಿಯವರೂ ಒಬ್ಬರು ಎಂದು ಆಯ್ಕೆ ಮಾಡಿದೆ. 2002ರಲ್ಲಿ ಅರ್ನ್ಸ್ಟ್ ಅಂಡ್ ಯಂಗ್ 'ಭಾರತದ ವರ್ಷದ ಸಾಹಸಿ ಉದ್ಯಮಿ' ಎಂದು ಘೋಷಿಸಿದೆ. 2001ರಲ್ಲಿ ಟೈಮ್ಸ್, ಸಿ.ಎನ್.ಎನ್. ಮಾಧ್ಯಮಗಳು ಜಗತ್ತಿನಲ್ಲಿ ಹೊಸ ಉದ್ಯಮ ಸೃಷ್ಟಿ ಮತ್ತು ಮಾರುಕಟ್ಟೆಗಳ ಸಾಧ್ಯತೆಗಳಿಗೆ ಹೊಸರೂಪ ಕೊಟ್ಟ ಇಪ್ಪತ್ತೈದು ಪ್ರಭಾವಶಾಲಿ ಜಾಗತಿಕ ಕಾರ್ಯನಿರ್ವಹಕರಲ್ಲಿ ನಾರಾಯಣಮೂರ್ತಿಯವರೂ ಒಬ್ಬರು ಎಂದು ಇವರನ್ನು ಆಯ್ಕೆ ಮಾಡಿದೆ. ಸ್ವಿಟ್ಸರ್‌ಲೆಂಡಿನ ಮಾಕ್ಸ ಸ್ಮಿದೇನಿ ಲಿಬರ್ಟಿ 2001 ಪ್ರಶಸ್ತಿ ದೊರಕಿದೆ. 1996-97ರಲ್ಲಿ ಜೆಆರ್‌ಡಿ ಟಾಟಾ ಅವರ ಕಾರ್ಪೋರೇಟ್ ಲೀಡರ್‌ಶೀಪ್ ಅವಾರ್ಡ್ ಇವರಿಗೆ ಬಂದಿದೆ. 1998ರಲ್ಲಿ ಕಾನ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇವರಿಗೆ ಪ್ರಶಸ್ತಿ ನೀಡಿದೆ. ಇವಲ್ಲದೆ ಇನ್ನು ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳ ಪ್ರಶಸ್ತಿ, ಗೌರವಗಳು ಇವರಿಗೆ ಸಂದಿವೆ. ಇವರಿಗೆ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನೂ (1998) ಭಾರತ ಸರ್ಕಾರ ಪದ್ಮಶ್ರೀ (2000) ಪ್ರಶಶಸ್ತಿಯನ್ನೂ ನೀಡಿ ಗೌರವಿಸಿದೆ. (ಎಸ್.ಎಂ.ಕೆ.)

**ನಾರಾಯಣಶಾಸ್ತ್ರಿ, ಎನ್.ಎಸ್. :** 1902-55. ಪ್ರಸಿದ್ಧ ಮನೋವಿಜ್ಞಾನ ಪರಿಣತರು, ನಾಟಕಕಾರರು, ಶ್ರೇಷ್ಠ ನಟರು, ಇವರು ನರಸಿಂಹರಾಜಪುರದಲ್ಲಿ 1902 ಜೂನ್ 12ರಂದು ಜನಿಸಿದರು. ವೈದಿಕ ವಿದ್ವಾಂಸರಾಗಿದ್ದ ಸುಬ್ರಹ್ಮಣ್ಯಶಾಸ್ತ್ರೀ ಇವರ ತಂದೆ. ಇವರ ಮನೆತನಗಳೇ ಪುರ ಮನೆತನ ಎಂದು ಸುತ್ತಮುತ್ತ ಹೆಸರುಗೊಂಡಿತು.

ನಾರಾಯಣಶಾಸ್ತ್ರಿಗಳ ಪದವಿಪೂರ್ವದ ವಿದ್ಯಾಭ್ಯಾಸ ಹುಟ್ಟೂರಿನಲ್ಲೂ ತುಮಕೂರಿನಲ್ಲೂ ನಡೆಯಿತು. ಅನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗಮಾಡಿ ನಾರಾಯಣ್ ಅವರು ಬಿ.ಎ.ಪದವಿಯನ್ನೂ (1925) ಎಂ.ಎ. ಪದವಿಯನ್ನೂ (1927) ಪಡೆದರು. ಪ್ರಾಯೋಗಿಕ ಮನೋವಿಜ್ಞಾನ ಇವರ ಎಂ.ಎ. ಪದವಿ ವ್ಯಾಸಂಗದ ಪ್ರಧಾನ ವಿಷಯ. ಆ ವಿಷಯದ ಪ್ರಾಧ್ಯಾಪಕರಾಗಿದ್ದ ಎಂ.ವಿ. ಗೋಪಾಲಸ್ವಾಮಿಯವರ ಪ್ರಿಯ ಶಿಷ್ಯರಾಗಿದ್ದ ಇವರು ವ್ಯಾಸಂಗ ಮಾಡಿದ ಕಾಲೇಜಿನಲ್ಲಿಯೇ ಅಧ್ಯಾಪಕರಾಗಿ ನೇಮಕಗೊಂಡು, ಹಲವು ವರ್ಷಕಾಲ ಸೇವೆ ಸಲ್ಲಿಸಿದರು. ಅಧ್ಯಾಪನದೊಂದಿಗೆ ಸಂಶೋಧನೆಯನ್ನೂ ಮಾಡುತ್ತಿದ್ದ ಶಾಸ್ತ್ರಿಗಳು 1940ರಲ್ಲಿ ಸೌಂದರ್ಯಾನುಭೂತಿಯ ಮನೋವೈಜ್ಞಾನಿಕ ವಿವರಣೆ ಎಂಬ ಪ್ರೌಢ ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಡಿ.ಲಿಟ್,

ಪದವಿಯನ್ನು ಪಡೆದರು. ಕೆಲವು ವರ್ಷಗಳ ತರುವಾಯ ಮಹಾರಾಜ ಕಾಲೇಜಿನ ಉದ್ಯೋಗವನ್ನು ಬಿಟ್ಟು ಬೆಂಗಳೂರಿನ ಟಾಟಾ ವಿಜ್ಞಾನ ಸಂಸ್ಥೆಯ ಮನೋವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾದರು. 1945-1951ರ ವರೆಗೆ ಭಾರತೀಯ ವಿಜ್ಞಾನ ಮಹಾಸಭೆಯ ಮನೋವಿಜ್ಞಾನ ಶಾಖೆಯ ಅಧ್ಯಕ್ಷರಾಗಿದ್ದರು. 1953ರಲ್ಲಿ ಇವರು ಇಂಗ್ಲೆಂಡಿನಲ್ಲಿ ಅಧ್ಯಯನ ಪ್ರವಾಸ ಮಾಡಿ ಹಿಂತಿರುಗಿದರು. ಅದೇ ವರ್ಷ ಬ್ರಿಟನ್ನಿನ ಮನೋವಿಜ್ಞಾನ ಸಂಘದ ಗೌರವ ಸದಸ್ಯರಾಗಿ ಆಯ್ಕೆಯಾದರು. ಈ ಗೌರವವನ್ನು ಪಡೆದ ಭಾರತೀಯರಲ್ಲಿ ಇವರೇ ಮೊದಲಿಗರು.

ನಾಟಕದ ಬಗ್ಗೆ ವಿಶೇಷ ಒಲವನ್ನು ಬೆಳೆಸಿಕೊಂಡಿದ್ದ ಶಾಸ್ತ್ರಿಗಳು ಮಹಾರಾಜ ಕಾಲೇಜಿನಲ್ಲಿ ಇದ್ದಷ್ಟು ಕಾಲವೂ ಕಾಲೇಜು ಸಂಘ ಮತ್ತು ಕರ್ನಾಟಕ ಸಂಘಗಳ ಆಶ್ರಯದಲ್ಲಿ ಪ್ರತಿವರ್ಷವೂ ನಡೆಯುತ್ತಿದ್ದ ನಾಟಕ ಪ್ರದರ್ಶನಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತಿದ್ದರು. ಕೆ.ವಿ. ಪುಟ್ಟಪ್ಪನವರ ಯಮನಸೋಲು (ಯಮನ ಪಾತ್ರ) ಮತ್ತು ಬಿರುಗಾಳಿ (ಭೈರವ ನಾಯಕ), ಬಿ.ಎಂ. ಶ್ರೀಕಂಠಯ್ಯನವರ ರನ್ನನ ಗದಾಯುದ್ಧ ನಾಟಕ (ಭೀಮ) ಮತ್ತು ಅಶ್ವತ್ಥಾಮನ್ (ಅಶ್ವತ್ಥಾಮನ್) ಎ.ಎನ್. ಮೂರ್ತಿರಾಯರ ಅಷಾಢಭೂತಿ (ಶಂಕರಪ್ಪ), ವೆಂಬಾರ್ ವೆಂಕಟಾಚಾರ್ಯರ ಸಾವಿನ ಸಮಸ್ಯೆ (ತೆನಾಲಿ ರಾಮಕೃಷ್ಣ) ಮುಂತಾದ ನಾಟಕಗಳಲ್ಲಿ ಹಾಸ್ಯಮಯ ಪಾತ್ರವಾಗಲಿ, ಗಂಭೀರ ಪಾತ್ರವಾಗಲಿ, ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಪಾತ್ರಪೋಷಣೆ ಮಾಡಿ, ಪ್ರೇಕ್ಷಕವರ್ಗಕ್ಕೆ ಅಪೂರ್ವವಾದ ರಸದೌತಣವನ್ನು ಒದಗಿಸುತ್ತಿದ್ದರು. ಮೈಸೂರಿನ ಸಾಹಿತ್ಯ ನಾಟಕ ಕಲಾ ಸಂಸ್ಥೆಯವರು ಪ್ರದರ್ಶಿಸುತ್ತಿದ್ದ ಕನ್ನಡ ಮತ್ತು ಇಂಗ್ಲಿಷ್ ನಾಟಕಗಳಲ್ಲೂ ಇವರು ಅಭಿನಯಿಸುತ್ತಿದ್ದರು. ವಸಂತಸೇನಾ (ಮೃಚ್ಛಕಟಿಕದ ರೂಪಾಂತರ) ಎಂಬ ಮೂಕ ಚಲನಚಿತ್ರದಲ್ಲಿ ಪಾಲಕ ಮಹಾರಾಜನ ಪಾತ್ರವಹಿಸಿದ್ದರು. ಕಲಾ ವಿಲಾಸಿ ರಂಗಭೂಮಿಯ ವಿನೂತನ ವಾಸ್ತವ ಶೈಲಿಯ ಅಭಿನಯ ಸಂಪ್ರದಾಯದ ಬೆಳೆವಣಿಗೆಗೆ ಶಾಸ್ತ್ರಿಗಳ ಕೊಡುಗೆ ಬೆಲೆಯುಳ್ಳದ್ದು.

ಇವರಿಗೆ ರಂಗಭೂಮಿಯ ಪ್ರತ್ಯಕ್ಷ ಅನುಭವವಿದ್ದುದರಿಂದ, ಭಾಸನ ಪಂಚರಾತ್ರ ನಾಟಕವನ್ನು ಪ್ರಯೋಗದೃಷ್ಟಿಯಿಂದ ಕನ್ನಡಕ್ಕೆ ರೂಪಾಂತರ ಮಾಡಿದ್ದಾರೆ. ಈ ಮೂಲಕ, ಲಕ್ಷಣಬದ್ಧ ಪ್ರಾಚೀನ ನಾಟಕಗಳನ್ನು ಆಧುನಿಕ ರಂಗಪ್ರಯೋಗದ ಅಗತ್ಯಗಳಿಗೆ ತಕ್ಕಂತೆ ಅಳವಡಿಸುವ ಕ್ರಮಕ್ಕೆ ಒಂದು ಒಳ್ಳೆಯ ಮಾದರಿಯನ್ನು ಒದಗಿಸಿದ್ದಾರೆ. ಆಧುನಿಕ ವೈಜ್ಞಾನಿಕ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಭಾಷಣ ಮಾಡುವುದು ಕಷ್ಟಸಾಧ್ಯ ಎಂಬ ಭಾವನೆಯ ಜೊತೆಗೆ, ವಿಶ್ವವಿದ್ಯಾನಿಲಯದ ವಲಯದಲ್ಲಿಯೇ ಕನ್ನಡದ ಬಗೆಗೆ ತಿರಸ್ಕಾರ ಪ್ರಬಲವಾಗಿದ್ದ ಆ ಕಾಲದಲ್ಲಿ, ನಮ್ಮ ದೇಶಕ್ಕೆ ಹೊಸತಾದ ಮನೋವೈಜ್ಞಾನಿಕ ವಿಚಾರಗಳನ್ನು ಕುರಿತು ಮನೆಮಾತಿನ ಕನ್ನಡದಲ್ಲಿ ಆಕರ್ಷಕವಾಗಿ ಭಾಷಣ ಮಾಡುತ್ತಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆಯಲ್ಲಿ ಕನಸುಗಳು ಎಂಬ ವಿಷಯವಾಗಿ ಮಾಡಿದ ಭಾಷಣ ಅದೇ ಹೆಸರಿನಲ್ಲಿ ಅಚ್ಚಾಗಿದೆ (1933). ಮಹಾಪುರುಷ ಎಂಬ ಇವರ ಕಾದಂಬರಿ ವಿಕ್ಟರ್ ಹ್ಯೂಗೋನ ಲೆ ಮಿಸರೆಬ್ಲ್ ಎಂಬ ಫ್ರೆಂಚ್ ಭಾಷೆಯ ಪ್ರಸಿದ್ಧ ಕಾದಂಬರಿಯ ರೂಪಾಂತರ, ಮನೋರೋಗಗಳು ಮತ್ತು ಪ್ರಾಯೋಗಿಕ ಮನಶ್ಶಾಸ್ತ್ರಪ್ರವೇಶಿಕೆ - ಇವು ಇವರ ಇಂಗ್ಲಿಷ್ ಕೃತಿಗಳು. ಮನೋವಿಜ್ಞಾನ ಕ್ಷೇತ್ರದಲ್ಲಿ ಇವರ ಪ್ರೌಢಿಮೆಯನ್ನು ಗುರುತಿಸಿ ಸಂಯುಕ್ತ ರಾಷ್ಟ್ರ ಸಂಘದ ಯುನೆಸ್ಕೊ ಶಾಖೆ ಕೈರೊ ನಗರದ ಸಮಾವೇಶದಲ್ಲಿ ಇವರನ್ನು ಒಬ್ಬ ಪ್ರಧಾನಾಧಿಕಾರಿಯಾಗಿ ನೇಮಿಸಿಕೊಂಡಿತ್ತು.

ಇವರು ದೆಹಲಿಯ ಮನೋವೈಜ್ಞಾನಿಕ ಕೇಂದ್ರ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾಗ 1955 ಸೆಪ್ಟೆಂಬರ್ 5ರಂದು ತಮ್ಮ 54ನೆಯ ವಯಸ್ಸಿನಲ್ಲಿ ನಿಧನರಾದರು. (ಎಂ.ವಿ.ಎಸ್.)

**ನಾರಾಯಣಶೆಟ್ಟಿ, ಎಸ್. :** 1930- . ಕನ್ನಡದಲ್ಲಿ ಸುಜನಾ ಎಂಬ ಕಾವ್ಯನಾಮದಿಂದ ಹೆಸರಾದ ಕವಿ, ವಿಮರ್ಶಕ. ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲಿನಲ್ಲಿ 1930 ಏಪ್ರಿಲ್ 13ರಂದು ಜನಿಸಿದರು. ತಂದೆ ಸುಬ್ಬಶೆಟ್ಟಿ, ಹೊಸಹೊಳಲು, ಹೊಳೆನರಸೀಪುರಗಳಲ್ಲಿ ಶಾಲಾ ವ್ಯಾಸಂಗ ಮಾಡಿದರು. ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ವಿಜ್ಞಾನದಲ್ಲಿ ಇಂಟರ್‌ಮಿಡಿಯಟ್ ಓದಿದರು. ಅನಂತರ ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿ ಕನ್ನಡದಲ್ಲಿ ಎಂ.ಎ. ಪಡೆಯಬೇಕೆಂದು ಬಯಸಿದರಾದರೂ ಇವರು ವಿಜ್ಞಾನದ ವಿದ್ಯಾರ್ಥಿಯಾದ್ದರಿಂದ ಪ್ರವೇಶ ಸಿಗುವುದಕ್ಕೆ ನಿಯಮ ಅಡ್ಡಿಬಂತು. ಪ್ರವೇಶ ದೊರಕದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವದೆಂದು ಮನಸ್ಸು ಮಾಡಿದ್ದರು. ಕೊನೆಗೂ ಇವರು ಕನ್ನಡ ಬಿ.ಎ. (ಆನರ್ಸ್)ಗೆ ಪ್ರವೇಶ ಪಡೆದರು. ಅನಂತರ ಕನ್ನಡ ಎಂ.ಎ. ಪದವಿ ಪಡೆದು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಮುಂದೆ ಪ್ರವಾಚಕರೂ ಪ್ರಾಧ್ಯಾಪಕರೂ ಸ್ವಲ್ಪಕಾಲ ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸಿದರು (1985-87) ಮತ್ತು ಯುವರಾಜ ಕಾಲೇಜಿನ ಪ್ರಾಚಾರ್ಯರಾಗಿ (1988) ನಿವೃತ್ತಿಹೊಂದಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದರು (1959-65).

ಸುಜನಾ ಅವರ ಮೊದಲನೆಯ ಕವನ ಸಂಕಲನ ಮಂಗಳಾರತಿ (1956) ನಾಣ್ಯಯಾತ್ರೆ 1965ರಲ್ಲಿ ಪ್ರಕಟವಾಯಿತು. 1982ರವರೆಗಿನ ಇವರ ಕವನಗಳು ಒಂದೇ ಸೂರಡಿಯಲ್ಲಿ ಎಂಬ ಶೀರ್ಷಿಕೆಯಡಿ ಪ್ರಕಟವಾಗಿವೆ. ಸೊನ್ನೆ ಎರಡರ ನಡುವೆ (1982), ಉಡಿದಾರ (1982) - ಇವು ಇವರ ಇತರ ಕವನ ಸಂಕಲನಗಳು. ಹೃದಯ ಸಂವಾದ (1965), ಪರಂಪರೆ (1982), ಕುವೆಂಪು ಮತ್ತು ಪರಂಪರೆ (1984) - ಇವು ವಿಮರ್ಶಾ ಸಂಕಲನಗಳು. ಕಣಗಳು (1983) ಎಂಬುದು ಕಿರುಕವಿತೆಗಳ ಸಂಕಲನ.

ಸುಜನಾ ಅವರ ಮಹಾಕಾವ್ಯ 'ಯುಗಸಂಧ್ಯಾ' (1999). ಹತ್ತು ವರ್ಷಗಳ ಕಾಲಾವಧಿಯಲ್ಲಿ ಇವರು ಇದನ್ನು ರಚಿಸಿದರು. ತಮ್ಮ ಕಾವ್ಯರಚನೆಯ ಪ್ರಾರಂಭದ ದಿನಗಳಿಂದಲೂ ಗುಪ್ತವಾಗಿ, ಬಿಡದೆ ನಡೆದುಬಂದಿರಬಹುದಾದ ಸರಳ ರಗಳೆಯ ಛಂದಸ್ಸನ್ನು ಕೊಂಚ ಸ್ವಾತಂತ್ರ್ಯ ವಹಿಸಿ ಬಳಸಿಕೊಂಡಿರುವುದಾಗಿ ಇವರು ಹೇಳಿಕೊಂಡಿದ್ದಾರೆ. ಇದು ಮಹಾಭಾರತದ ಪಾಂಡವ ವಿಜಯದ ಅನಂತರದ ಕಥೆ. "ವ್ಯಾಸರು ಮಹಾಭಾರತದಲ್ಲಿ ಆ ಭಾಗವನ್ನು ವಿಶೇಷವಾಗಿ ಬೆಳೆಸಿದ್ದಾರೆ. ಆದರೆ ಕನ್ನಡದಲ್ಲಿ ಭಾರತವನ್ನು ಬರೆದ ಪಂಪನಾಗಲಿ, ಕುಮಾರವ್ಯಾಸನಾಗಲಿ ಆ ಜಾಡಿನಲ್ಲಿ ಮುನ್ನಡೆಯಲಿಲ್ಲ. ಪಾಂಡವರು ಗೆದ್ದ ಮೇಲೆ, ಧರ್ಮಾಧರ್ಮ, ಯುದ್ಧದಲ್ಲಿ ಧರ್ಮಕ್ಕೆ ಜಯ ದೊರಕಿದ ಮೇಲೆ ಮುಂದೆ ಏನು ಸ್ವಾರಸ್ಯವಿದ್ದೀತು ಎಂದೋ ಏನೋ" ಎಂಬುದು ಸುಜನಾ ಅವರ ಅನಿಸಿಕೆ. ಇವರು ವ್ಯಾಸಹೃದಯವನ್ನು ಅರಿತು ಮುನ್ನಡೆದರು. ಮಹಾಭಾರತ ಯುದ್ಧವಾದ ಮೇಲೆ ಕೊನೆಯಲ್ಲಿ ಕೃಷ್ಣ ಬೇಡನೊಬ್ಬನ ಬಾಣಕ್ಕೆ ದೇಹತ್ಯಾಗ ಮಾಡಿದ. ಇದರ ಅರ್ಥವೇನು? ಎಲ್ಲವೂ ಸಪ್ಪೆಯಾಗಿ ಪರಿಣಮಿಸಬೇಕೆ? ಮಹಾಭಾರತ ಯುದ್ಧಾನಂತರವೂ ಉಳಿದಿದ್ದ ಲೋಕಕಂಟಕರೆಲ್ಲರ ನಿರ್ನಾಮ ದೈವಸಂಕಲ್ಪವಾಗಿತ್ತು. ಬೇಡನ ಬಾಣಕ್ಕೆ ಕೃಷ್ಣ ದೇಹತ್ಯಾಗ ಮಾಡಿದ್ದು ಅರ್ಥವತ್ತಾದದ್ದು. ಮುಳ್ಳನ್ನು ಮುಳ್ಳಿನಿಂದ ತೆಗೆದು ಎರಡನ್ನೂ ಎಸೆದುಬಿಡುವಂತೆ, ಲೋಕಕಾರ್ಯವನ್ನು ನಿರ್ಮೂಲ ಮಾಡಿದ ಶ್ರೀಕೃಷ್ಣ ತನ್ನ ದೇಹವನ್ನು ಕಳಚಿ ಒಗೆದ ದರ್ಶನ ಸುಜನಾ ಅವರಿಗೆ ಆಯಿತು. ಇವರ ದೃಷ್ಟಿಯಲ್ಲಿ ಇದೊಂದು ಅದ್ಭುತ. ಮುಂದಿನ ಕಥೆಯನ್ನು ಇವರು ಇಲ್ಲಿ ವರ್ಣಿಸಿದ್ದಾರೆ.

ಕುಮಾರವ್ಯಾಸ ಭಾರತವನ್ನು ಜನಪ್ರಿಯ ಆವೃತ್ತಿಗಾಗಿ ಸಿದ್ಧಪಡಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ಇವರು ಆಗಿನಿಂದಲೇ ಈ ಕಥಾಭಾಗದ ಅಭಿವ್ಯಕ್ತಿಗೆ ಮಾನಸಿಕವಾಗಿ ತೊಡಗಿದ್ದರು. 'ಯುಗಸಂಧ್ಯಾ' ಮಹಾಕಾವ್ಯವನ್ನು ರಚಿಸತೊಡಗಿದಾಗ ಇವರ ದೇಹಸ್ಥಿತಿ ಕೆಟ್ಟಿತು. ಲೇಖನಿ ಹಿಡಿದು ಬರೆಯಲಾಗದವರಾದರು. ಮಕ್ಕಳ ಸಹಕಾರದಿಂದ ಇದು ಪೂರೈಸಿತು. ಭಾರತೋತ್ತರ ಕಥಾ ವಿಷಯ ಪ್ರಸಂಗದೊಳಗೇನುಂಟು? ರಸಪೂರ್ಣ ಕಥೆಯೆ? ಕ್ರಿಯೆಯೆ? ದರ್ಶನವೆ? ಮನುಜಮನದರ್ಥಗಳೆ ಎಂಬ ಪ್ರಶ್ನೆಗೆ ನಾನೂರಿಪ್ಪತ್ತೈದು ಪುಟಗಳ ಈ ಮಹಾಕಾವ್ಯ ಉತ್ತರವಾಗಿದೆ. ಈ

ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ (2002).

ಇವರಿಗೆ ದೊರಕಿರುವ ಇತರ ಪ್ರಶಸ್ತಿಗಳು ಇವು ವರ್ಧಮಾನ ಪ್ರಶಸ್ತಿ (1982), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1989), ರಾಜ್ಯೋತ್ಸವ ಪ್ರಶಸ್ತಿ (1994), ದೇವರಾಜ ಬಹದ್ದೂರ್ ಪ್ರಶಸ್ತಿ (1997). (ಎಚ್.ಎಸ್.ಕೆ.)

**ನಾಲ್ಕುನಾಡು :** ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕಿನಲ್ಲಿ ನಾಪೊಕ್ಲುನಾಡಿನಲ್ಲಿರುವ ಒಂದು ಪ್ರಾಚೀನ ಸ್ಥಳ. ನಾಪೊಕ್ಲುವಿನಿಂದ 10ಕಿಮೀ ದೂರದಲ್ಲಿರುವ ಈ ಸ್ಥಳವನ್ನು ಕಕ್ಕಬೆಯ ಮೂಲಕ ತಲುಪಬಹುದು. ಕೊಡಗಿನ ಪಶ್ಚಿಮಭಾಗದಲ್ಲಿ ಉನ್ನತವಾಗಿ ಎದ್ದ ಬೆಟ್ಟಸಾಲು, ದಟ್ಟವಾಗಿ ಬೆಳೆದ ಕಾಡುಗಳಿಂದ ಸ್ವಾಭಾವಿಕವಾದ ರಕ್ಷಣೆಯನ್ನು ಪಡೆದಿದ್ದು ಕೊಡಗಿನ ಅರಸರಿಗೆ ಇದು ಭದ್ರ ನೆಲೆಯಾಗಿತ್ತು. ಸ್ವಾಭಾವಿಕವಾದ ರಕ್ಷಣೆಯ ಜೊತೆಗೆ ಈ ಗಿರಿದುರ್ಗಕ್ಕೆ ಕೊಡಗಿನ ಅರಸರು ಆಳವಾದ ಕಡಂಗುಗಳನ್ನು ತೋಡಿಸಿ ಮತ್ತಷ್ಟು ಭದ್ರಪಡಿಸಿದ್ದುದರಿಂದ ಶತ್ರುಗಳ ದಾಳಿಗೆ ಅಭೇದ್ಯವೆನಿಸಿತ್ತು. ಇದಕ್ಕೆ ಸೇರಿದಂತೆಯೇ ಕೊಡಗಿನಲ್ಲಿಯೇ ಅತ್ಯುನ್ನತವಾದ ತಡಿಯಂಡಮೋಳ್ ಎಂಬ ಶಿಖರವುಳ್ಳ ಬೆಟ್ಟವಿರುವುದು. ಹಾಲೇರಿ ಮಡಿಕೇರಿಗಳ ಜೊತೆಗೆ ಕೊಡಗಿನ ಅರಸರಿಗೆ ಇದು ಮೂರನೆಯ ರಾಜಧಾನಿ. ಈಗ ಯವಕಪಾಡಿ ಎಂದು ಕರೆಯುವ ಹಳ್ಳಿಯಲ್ಲಿ ದೊಡ್ಡ ವೀರರಾಜೇಂದ್ರ 1792ರಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ. ಈ ಅರಮನೆಗಾಗಿಯೇ ಈ ಸ್ಥಳ ಈಗಲೂ ಪ್ರಸಿದ್ಧವಾಗಿದೆ. ಮಡಿಕೇರಿ ಅರಮನೆಯಷ್ಟು ದೊಡ್ಡದಲ್ಲದಿದ್ದರೂ ಇದು ಇನ್ನಷ್ಟು ಭದ್ರವಾದ ಮತ್ತು ಸ್ಥೂಲವಾದ ಕಟ್ಟಡ. ಎರಡು ಅಂತಸ್ತುಗಳಲ್ಲಿ ಕಟ್ಟಲಾಗಿರುವ ಈ ಅರಮನೆಗೆ ಇಟ್ಟಿಗೆ ಗಾರೆಗಳ ದಪ್ಪ ಗೋಡೆಗಳಿದ್ದು ಉಳಿದಂತೆ ಹೆಚ್ಚು ಮರದ ಸಾಮಾನುಗಳನ್ನೇ ಉಪಯೋಗಿಸಿದೆ. ಕೆಳಗಿನ ಅಂತಸ್ತಿನಲ್ಲಿ ದಪ್ಪಮರದ ಕಂಬಗಳಿದ್ದು, ಅವು ಬುಡ ದಪ್ಪನಾಗಿದ್ದು ಮೇಲೆ ಹೋಗುತ್ತ ಸಣ್ಣಗಾಗುವಂತೆ ಇವೆ. ಮೇಲಿನ ಅಂತಸ್ತಿನಲ್ಲಿ ಸುಂದರವಾದ ಕಂಡರಣೆಯನ್ನು ಕಾಣಬಹುದು. ಮೇಲಿನ ದೊಡ್ಡ ಹಜಾರ ಅರಸನ ಒಡ್ಡೋಲಗ ಶಾಲೆಯಾಗಿತ್ತು. ಅದರ ಕಂಬಗಳೂ ಬುಡದಪ್ಪನಾದ ಮೇಲೇರುತ್ತ ಸಣ್ಣಗಾಗುವಂತಿದ್ದು ಅಂದವಾಗಿ ಕಂಡರಿಸಲಾಗಿವೆ. ಮರದ ತೊಲೆಗಳು ಮತ್ತು ಹಲಗೆಗಳಿಂದ ನಿರ್ಮಿಸಿರುವ ಚಾವಣಿಯ ಒಳಭಾಗದಲ್ಲಿ ಕೆತ್ತನೆಯ ಕೆಲಸವಿದೆ. ಮತ್ತು ಚಾವಣಿಯಲ್ಲಿ ಹೂ, ಬಳ್ಳಿ, ಸುರುಳಿ ಮುಂತಾದ ಅಲಂಕರಣಗಳನ್ನು ಬಣ್ಣದಿಂದ ಚಿತ್ರಿಸಿದೆ. ಮಡಿಕೇರಿಯ ಅರಮನೆಯ ಕೆಲವು ಭಾಗಗಳಲ್ಲಿ ಉಳಿದುಬಂದಿರುವಂತೆ ಇಲ್ಲಿಯೂ ಗೋಡೆಯ ಮೇಲೆ ಒಂದು ಕಾಲದಲ್ಲಿ ವ್ಯಕ್ತಿಚಿತ್ರಗಳು, ದೇವರ ಮೂರ್ತಿಗಳ ಚಿತ್ರಗಳು ತುಂಬಿದ್ದಂತೆ ತೋರುತ್ತದೆ. ಆದರೆ ಈಗ ಅವು ಬಹುಮಟ್ಟಿಗೆ ಈಚೆಗೆ ಬಳಿದಿರುವ ಸುಣ್ಣದಿಂದ ಮುಚ್ಚಿಹೋಗಿದ್ದು ಚಿತ್ರಗಳ ಕುರುಹು ಮಾತ್ರ ಅಲ್ಲಲ್ಲಿ ಗೋಚರಿಸುತ್ತದೆ. ಒಂದು ಕಡೆ ಜಗತಿಯಂತೆ ಉನ್ನತ ಸ್ಥಾನವೊಂದಿದ್ದು ಅಲ್ಲಿ ರಾಜನ ಸಿಂಹಾಸನವಿರುತ್ತಿತ್ತು. ಒಟ್ಟಿನಲ್ಲಿ ಕಟ್ಟಡದ ಉಳಿದ ಭಾಗಗಳು ಸರಳವಾಗಿದ್ದರೂ ಈ ಓಲಗಶಾಲೆಯನ್ನು ಸುಂದರವಾಗಿ ಅಲಂಕರಿಸಿದೆ.

ಇಲ್ಲಿನ ಮತ್ತೊಂದು ಆಕರ್ಷಕವಾದ ಕಟ್ಟಡವೆಂದರೆ ಅರಮನೆಯ ಮುಂದೆ ಬಲಭಾಗದ ಮೂಲೆಯಲ್ಲಿ ನಿಂತಿರುವ ಪುಟ್ಟದಾದ ಒಂದು ಮಂಟಪ. ಇದನ್ನು ಧಾರೆಯಮಂಟಪ ಎನ್ನುತ್ತಾರೆ. ದೊಡ್ಡವೀರರಾಜೇಂದ್ರ 1796ರಲ್ಲಿ ಮಹದೇವಮ್ಮನನ್ನು ಮದುವೆಯಾದಾಗ ಆ ಮದುವೆಯ ಸಮಾರಂಭಕ್ಕಾಗಿ ಈ ಪುಟ್ಟ ಮಂಟಪವನ್ನು ನಿರ್ಮಿಸಲಾಯಿತು. ಚೌಕವಿನ್ಯಾಸದ ಒಂದಂಕಣದ ಈ ಮಂಟಪದ ನಾಲ್ಕು ಕಡೆಯೂ ಮುಸ್ಲಿಂ ರೀತಿಯ ವೃತ್ತಭಾಗಗಳನ್ನುಳ್ಳ ಕಮಾನುಗಳಿದ್ದು ನಾಲ್ಕು ಮೂಲೆಗಳಲ್ಲಿಯೂ ಅರೆಗಂಬಗಳು, ಮೂರ್ತಿಗಳಿಂದ ಅಲಂಕೃತವಾದ ಗೂಡುಗಳು, ಗೂಡುಗಳ ಪಕ್ಕಗಳಲ್ಲಿ ಬಗೆಬಗೆಯ ಅಲಂಕರಣಗಳಿಂದ ತುಂಬಿದ ಪಟ್ಟಿಕೆಗಳು ಇವೆ. ಇವೆಲ್ಲ ತುಂಬ ನವುರಾಗಿ ನಿರ್ಮಿತವಾಗಿವೆ. ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿದ್ದು ಗಚ್ಚಿನಲ್ಲಿ ಅಲಂಕರಣಗಳನ್ನು ಮೂರ್ತಿಗಳನ್ನೂ ಬಿಡಿಸಿರುವ ಈ ಮಂಟಪ ಬಹುಶಃ ಕೊಡಗಿನಲ್ಲಿಯೇ ಅತಿ ಸುಂದರವಾದ ಮಂಟಪವೆನ್ನಬಹುದು.

ಈ ಊರಿನಲ್ಲಿ ಪನ್ನಂಗಲತಮ್ಮೆಯ ದೇವಾಲಯವಿದೆ. ಇದಕ್ಕೆ ನಡೆದುಕೊಳ್ಳುವವರು ಹೆಚ್ಚಾಗಿ ಹರಿಜನರು. ಏಪ್ರಿಲ್ ತಿಂಗಳಿನಲ್ಲಿ ಇಲ್ಲಿ ನಡೆಯುವ ಜಾತ್ರೆಗೆ ಅಧಿಕಸಂಖ್ಯೆಯಲ್ಲಿ ಜನರು ಸೇರುತ್ತಾರೆ.

ಅರಮನೆಯ ಕೆಳಭಾಗದಲ್ಲಿ ಒಂದು ಕಾಲಕ್ಕೆ ನಾಡಿನ ಕಚೇರಿಯಿತ್ತು. ಮೇಲಿನ ಅಂತಸ್ತನ್ನು ಉನ್ನತ ಅಧಿಕಾರಿಗಳು ಬಂದಾಗ ಉಳಿದುಕೊಳ್ಳಲು ಉಪಯೋಗಿಸುತ್ತಿದ್ದರು. ಈಗ ಇಲ್ಲಿ ಜೇನುಸಾಕಣೆ ಕೇಂದ್ರವೊಂದಿದೆ.

(ಎಂ.ಎಚ್.)

**ನಿಂಬಾಳ :** ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಒಂದು ಗ್ರಾಮ. ಇಂಡಿಯ ನೈಋತ್ಯಕ್ಕೆ 22ಕಿಮೀ ಬಿಜಾಪುರದ ಈಶಾನ್ಯಕ್ಕೆ 36 ಕಿಮೀ ಮತ್ತು ಬಿಜಾಪುರ ಸೊಲ್ಲಾಪುರ ರಸ್ತೆಯ ಹೊರ್ತಿ ಗ್ರಾಮದ ಬಲಕ್ಕೆ 8 ಕಿಮೀ ಅಂತರದಲ್ಲಿದೆ. ಇದು ಗದಗ-ಸೊಲ್ಲಾಪುರ ರೈಲು ಮಾರ್ಗದಲ್ಲಿ ಬಿಜಾಪುರ-ಇಂಡಿರೋಡ್ ಮಧ್ಯದಲ್ಲಿರುವ ಒಂದು ನಿಲ್ದಾಣ. ಈ ಗ್ರಾಮದಿಂದ ಸುತ್ತಿನ ತಡವಲಗ, ಹೊರ್ತಿ ಮತ್ತು ಇಂಡಿಗೆ ಮಾರ್ಗ ಸಂಪರ್ಕವುಂಟು.

ಇದು ತತ್ತ್ವಜ್ಞಾನಿ ಮತ್ತು ಯೋಗಿ ಆರ್.ಡಿ.ರಾನಡೆ ಅವರ ಧಾರ್ಮಿಕ ಕೇಂದ್ರವಾಗಿತ್ತು. ಅವರು ಸಮಾಧಿಸ್ಥರಾದದ್ದೂ ಇಲ್ಲಿಯೇ. ಪ್ರತಿವರ್ಷ ಇಲ್ಲಿ ಇವರ ಶಿಷ್ಯರು ಸೇರಿ ಸಪ್ತಾಹವನ್ನಾಚರಿಸುತ್ತಾರೆ. ನಿಂಬಾಳದಲ್ಲಿ ಪ್ರಸಿದ್ಧ ಹೊಯ್ಸಳ ಶಿಲ್ಪಿ ಜಕ್ಕಣಾಚಾರ್ಯ ಇದ್ದನೆಂದು ಪ್ರತೀತಿ. (ಎಸ್.ಎಸ್.ಎನ್.)

**ನಿಕ್ಕಂ, ಎನ್.ಎ. :** 1903-1974. ನಿಕ್ಕಂ ನಾರಾಯಣರಾವ್ ಅಪ್ಪೂರಾವ್ ಇವರ ಪೂರ್ಣ್ಯರಾದಗಿದರು. ಪ್ರಸಿದ್ಧ ತತ್ತ್ವಶಾಸ್ತ್ರ ಪ್ರಾಧ್ಯಾಪಕರು. 1903 ಮೇ 5ರಂದು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೆಸ್ತೂರು ಗ್ರಾಮದಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿ ತತ್ತ್ವಶಾಸ್ತ್ರದಲ್ಲಿ ಬಿ.ಎ. ಪದವೀಧರರಾದರು. ವಿವಾಹವಾದ್ದು 1929ರಲ್ಲಿ ತತ್ತ್ವಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದರು. ಬಾಬಾ ಸ್ಮಾರಕ ಸುವರ್ಣ ಪದಕ ಪಡೆದರು (1930). ಅದೇ ವರ್ಷ ಮೈಸೂರು ಸಂಸ್ಥಾನದ ದಾಮೋದರಂ ದಾಸ್ ವಿದೇಶಿ ವಿದ್ಯಾರ್ಥಿ ವೇತನ ಪಡೆದು ಉಚ್ಚಶಿಕ್ಷಣ ಪಡೆಯಲು (ಕೇಂಬ್ರಿಜ್ಜಿನ ಸೇಂಟ್ ಜಾನ್ ಕಾಲೇಜಿನಲ್ಲಿ) ಇಂಗ್ಲೆಂಡಿಗೆ ತೆರಳಿ ತತ್ತ್ವಶಾಸ್ತ್ರದ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಇವರ ಶಿಕ್ಷಣವೃತ್ತಿ ಚಾಮರಾಜನಗರದಲ್ಲಿ ಶಾಲಾ ಮಕ್ಕಳಿಗೆ ಬೋಧಿಸುವುದರೊಂದಿಗೆ ಆರಂಭವಾಯಿತು.ತರುವಾಯ ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಅನಂತರ ಕೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ಅಧ್ಯಾಪಕರಾದರು. ಆರುವರ್ಷಗಳ ಅನಂತರ ಬೆಂಗಳೂರು ಮಹಾರಾಣಿ ಕಾಲೇಜಿನ ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡರು 1944-55. ಆ ವೇಳೆಯಲ್ಲಿ ಫುಲ್‌ಬ್ರೈಟ್ ಮತ್ತು ಫೋರ್ಡ್ ಫೌಂಡೇಷನ್ ವ್ಯಾಸಂಗವೇತನ ಪಡೆದು 1952-53ರಲ್ಲಿ ಅಮೆರಿಕದ ಯೇಲ್ ವಿಶ್ವ ವಿದ್ಯಾನಿಲಯದ ಸೆಲಿಮನ್ ಕಾಲೇಜಿನ ಪಂಡಿತಸಭೆಯ ಸಹಸದಸ್ಯರಾಗಿದ್ದರು. 1955ರಲ್ಲಿ ಮಹಾರಾಜ ಕಾಲೇಜಿನಲ್ಲಿ ತತ್ತ್ವಶಾಸ್ತ್ರ ಹಾಗೂ ಸಮಾಜ ಶಾಸ್ತ್ರ ವಿಭಾಗದ ಮುಖ್ಯಸ್ಥರೂ ಪ್ರಾಧ್ಯಾಪರಕೂ ಆದರು. ಭಾರತೀಯ ಧರ್ಮಶಾಸ್ತ್ರ ಹಾಗೂ ದರ್ಶನಿಗಳ ಬಗ್ಗೆ ಇವರ ಪಾಂಡಿತ್ಯ ಪಾಶ್ಚಾತ್ಯ ದಾರ್ಶನಿಕರ ಗಮನವನ್ನು ಸೆಳೆಯಿತು. ಇವರು 12 ವರ್ಷಗಳ ಕಾಲ 1949-61 ಭಾರತೀಯ ದಾರ್ಶನಿಕ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಯುನೆಸ್ಕೊ ಸಂಸ್ಥೆಯ ಯೋಜನೆಯ ಪ್ರಕಾರ ಎರಡು ಚಕ್ರಗೋಷ್ಠಿಗಳನ್ನು ಏರ್ಪಡಿಸಿದರು. ಈ ಪರಿಷತ್ತಿನ ದೆಹಲಿ ಅಧಿವೇಶನಕ್ಕೆ 1965 ಇವರು ಈ ಅವಧಿಯಲ್ಲಿ ಅಧ್ಯಕ್ಷರಾಗಿ ನೇಮಕವಾದರು.

ಅಂತಾರಾಷ್ಟ್ರೀಯ ದಾರ್ಶನಿಕ ಸಂಸ್ಥೆಯ ಚುನಾಯಿತ ಸದಸ್ಯರಾಗಿ

ಅಥೆನ್ಸ್ ವಾರ್ಸಾ, ಪ್ಯಾರಿಸ್, ಜೆರೂಸಲೆಂ, ಸಾಂತಾ ಬಾರ್‍ಬರಾ, ಮೈಸೂರು ಆ್ಯಮ್‌ಸ್ಟರ್‌ಡ್ಯಾಂ, ಹೈಡೆಲ್‌ಬರ್ಗ್, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಈ ಸ್ಥಳಗಳಲ್ಲಿ ನಡೆದ ಸಮ್ಮೇಳನದಲ್ಲಿ ಭಾಗವಹಿಸಿದರು. 1958ರಲ್ಲಿ ವೆನಿಸ್‌ನಲ್ಲಿ ನಡೆದ ಎಂಟನೆಯ ಅಂತಾರಾಷ್ಟ್ರೀಯ ದಾರ್ಶನಿಕ ಪರಿಷತ್ತಿನ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಅಧ್ಯಕ್ಷತೆವಹಿಸಿದರು. ಯುನೆಸ್ಕೊ ಸಂಸ್ಥೆ ವ್ಯವಸ್ಥೆಗೊಳಿಸಿದ ದಾರ್ಶನಿಕ ಸಂಘಗಳ ಅಂತಾರಾಷ್ಟ್ರೀಯ ಒಕ್ಕೂಟದ ಆಡಳಿತ ಸಮಿತಿಯ ಸದಸ್ಯರಾಗಿ ಎರಡು ಬಾರಿ ಚುನಾಯಿತರಾದರು. ಯುನೆಸ್ಕೊ ಸದಸ್ಯರಾಷ್ಟ್ರಗಳಲ್ಲಿ ತತ್ತ್ವಶಾಸ್ತ್ರ, ಶಿಕ್ಷಣದ ಪರಿಶೀಲನೆ ಮತ್ತು ಮಾನವ ಹಕ್ಕುಗಳ ಸಂಬಂಧವಾದ ಪತ್ರಗಳ ಆಧಾರ ಗ್ರಂಥ ತಯಾರಿಕೆ - ಇವುಗಳ ಬಗ್ಗೆ ಯುನೆಸ್ಕೊ ಸಂಸ್ಥೆ ಏರ್ಪಡಿಸಿದ ಉಪ ಆಯೋಗಗಳಲ್ಲಿ ಸದಸ್ಯರಾಗಿದ್ದರು. ಅಮೆರಿಕದ ದಾರ್ಶನಿಕ ಸಂಘ, ಇಂಗ್ಲೆಂಡಿನ ಅರಿಸ್ಟಾಟಲ್ ಪಂಥದಸಂಘ, ನ್ಯೂಯಾರ್ಕಿನ ನೀತಿಶಾಸ್ತ್ರ, ಸಂಸ್ಥೆ, ಭಾರತದ ಪಿ.ಇ.ಎನ್. ಸಂಘ,ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಅಮೆರಿಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ - ಇವುಗಳ ಸದಸ್ಯರಾಗಿದ್ದರು. ಇವರು 1960ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕವಾದರು.

ನಿಕ್ಕಂ ಉತ್ತಮ ಚಿಂತಕರಾಗಿದ್ದರು. ಭಾರತ ಸಂಸ್ಕೃತಿಯ ಕೆಲವು ಕಲ್ಪನೆಗಳು, ಶುದ್ಧ ಪ್ರಜ್ಞೆಯ ಬಗ್ಗೆ ಕಾಂಟನ ವಿಮರ್ಶೆಗೆ ಒಂದು ಪ್ರಸ್ತಾವನೆ, ಬುದ್ಧಿ ಅರಿವು ಮತ್ತು ಸಹಜ ಪ್ರಜ್ಞೆ, ಉಪನಿಷತ್ತಿನ ಬೋಧಕರು, ರಮಣ ಮಹರ್ಷಿ ಆಧ್ಯಾತ್ಮ ಯೋಗದ ಒಂದು ಅಧ್ಯಯನ, ಹತ್ತು ಪ್ರಧಾನ ಉಪನಿಷತ್ತುಗಳು ಗಾಂಧಿಯವರ ಧರ್ಮ ಸಾಕ್ಷಾತ್ಕಾರ ಇವು ಇವರ ಕೆಲವು ಗ್ರಂಥಗಳು. ಇವರು ಪತಂಜಲಿಯ ಯೋಗಸೂತ್ರಗಳ ಬಗ್ಗೆ ಮೂರು ಅಧ್ಯಾಯನಗಳನ್ನು ರಚಿಸಿದರು ಹಲವಾರು ದಾರ್ಶನಿಕ ಸಂಸ್ಥೆಗಳ ಹಾಗೂ ದಾರ್ಶನಿಕ ಸಮ್ಮೇಳನಗಳ ಪ್ರಕಟಣೆಗಳಿಗೆ ಇವರು ಸಂಪಾದಕರಾಗಿದ್ದರು. ಶಾಂತಿಸಾಧನೆಗೆ ಮಾನವ ಕುಲದ ಮೇಲೆ ಪ್ರಭಾವ ಬೀರಿದ ಗ್ರಂಥಗಳು ಎಂಬ ಮಾಲಿಕೆಯಲ್ಲಿ ಅಂತರಾಷ್ಟ್ರೀಯ ದಾರ್ಶನಿಕ ಸಂಸ್ಥೆ ಪ್ರಕಟಿಸಿದ ಅಶೋಕನ ಧರ್ಮ ಶಾಸನಗಳು (ಶಿಕಾಗೋ ವಿಶ್ವವಿದ್ಯಾನಿಲಯ 1959), ಎಂಬ ಗ್ರಂಥಕ್ಕೆ ಇವರು ಸಂಪಾದಕರಾಗಿದ್ದರು. *

**ನಿಜಗಲ್ಲು :** ತುಮಕೂರು ಜಿಲ್ಲೆಯ ತುಮಕೂರು ತಾಲ್ಲೂಕಿನ ಒಂದು ಬೆಟ್ಟ. ತುಮಕೂರಿಗೆ 16 ಕಿಮೀ ದೂರದಲ್ಲಿ ಬೆಂಗಳೂರು ತುಮಕೂರು ರಸ್ತೆಯಲ್ಲಿದೆ. ಈ ಬೆಟ್ಟವನ್ನು ಶೂರಗಿರಿ ಎಂದೂ ರಸಸಿದ್ಧರಬೆಟ್ಟ ಮತ್ತು ಉದ್ದಂಡಯ್ಯನಬೆಟ್ಟವೆಂತಲೂ ಕರೆಯುತ್ತಾರೆ. ಎತ್ತರ 1,085ಮೀ ಉತ್ತರ ಮತ್ತು ಪೂರ್ವಭಾಗಗಳಿಂದ ಮಾತ್ರ ಹತ್ತಬಹುದು.

ನಿಜಗಲ್ಲು ಬೆಟ್ಟದ ಮೇಲೆ ವೀರಭದ್ರಸ್ವಾಮಿಗುಡಿ (ನಿಜಗಲ್ಲು ಮಠ) ಇದೆ. ಗುಡಿಯಲ್ಲಿ 12' ಎತ್ತರದ ವೀರಭದ್ರನ ವಿಗ್ರಹದ ಎಡಕ್ಕೆ ದಕ್ಷನ ವಿಗ್ರಹ, ಬಲಕ್ಕೆ ಭದ್ರಕಾಳಿ ವಿಗ್ರಹಗಳಿವೆ. ವೀರಭದ್ರನ ಬಲಕ್ಕೆ ಇರುವ 1.5' ಎತ್ತರದ ಆಸೀನ ವಿಗ್ರಹ ಕೇಕೆ ಹೊಡೆದು ನಗುತ್ತಿದ್ದ ಕೇಕೆಸ್ವಾಮಿಯದು. ಆತ ಸಶರೀರವಾಗಿ ಕೈಲಾಸಕ್ಕೆ ಹೋದನೆಂಬ ಪ್ರತೀತಿ ಇದೆ. ಈ ಗುಡಿಯನ್ನು ಕಟ್ಟಿಸಿದ ಹಾಲಿನ ಹಂಪಣ್ಣನ ವಿಗ್ರಹ ಗುಡಿಯ ಹೊರಗಿನ ದೀಪಸ್ತಂಭದ ಬಳಿ ಇದೆ. ಅವನನ್ನು ಕೋಡಿಯಪ್ಪನೆಂದು ಪೂಜಿಸುತ್ತಾರೆ. ಬೆಟ್ಟದ ಮೇಲೆ ಹಿಂದಿನ ಪಾಳೆಯಗಾರರು ಕಟ್ಟಿಸಿದ ಕೋಟೆಯ ಅವಶೇಷಗಳು, ಫಿರಂಗಿ ಮದ್ದುಗುಂಡುಗಳನ್ನಿಟ್ಟಿದ್ದ ಸ್ಥಳ ಹಾಗೂ ರಾಗಿ ಕಣಜಗಳಿವೆ. ಕಂಚಿನ ದೋಣೆ, ಆನೆ ದೋಣೆ, ಸಿದ್ಧರ ದೋಣೆ, ಅಕ್ಕ ತಂಗಿಯರ ದೋಣೆ ಮೊದಲಾದ ನೀರಿನ ದೋಣೆಗಳಿವೆ. ಸಿದ್ಧರ ದೋಣೆಯ ಪೂಜೆಗೆ ಒಬ್ಬ ಫಕೀರ ಇದ್ದು ಹಿಂದುಗಳು ಸಹ ಅವನ ಪೂಜೆ ಸಲ್ಲಿಸುತ್ತಾರೆ. ರಸಸಿದ್ಧರ ಗುಡಿಯಲ್ಲಿನ ರಸಸಿದ್ಧ ಋಷಿಯ ವಿಗ್ರಹವನ್ನು ಹಿಂದುಗಳು ಪೂಜಿಸುತ್ತಾರೆ. ಹಿಂದೆ ಬೆಟ್ಟದ ಮೇಲೆ ಹಲವು ಮಂದಿ ಸಿದ್ಧರು ಸಾಮಾನ್ಯ ಲೋಹಗಳನ್ನು ಚಿನ್ನಕ್ಕೆ ಮಾರ್ಪಡಿಸುವ ರಸವನ್ನು ತಯಾರಿಸಿದ ಕಾರಣ ಬೆಟ್ಟಕ್ಕೆ ರಸಸಿದ್ಧರ ಬೆಟ್ಟ ಎಂಬ ಹೆಸರಾಯಿತೆಂದು ಪ್ರತೀತಿ. ಅಕ್ಕತಂಗಿಯರ ದೋಣೆಯ ಬಳಿ ಇರುವ ನರಸಿಂಹಸ್ವಾಮಿ ದೇವಾಲಯ ಶಿಥಿಲಾವಸ್ಥೆಯಲ್ಲಿದೆ. ಹಿಂದು ಮುಸಲ್ಮಾನರು ಈ ಬೆಟ್ಟವನ್ನು ಪವಿತ್ರವೆಂದು ಭಾವಿಸಿರುವುದು ಅದರ ವೈಶಿಷ್ಟ್ಯ. ಬೆಟ್ಟದ ಇಳುಕಲಿನಲ್ಲಿರುವ ಗವಿಯಲ್ಲಿ ಶಿವನ ಗುಡಿ ಇದೆ. ಅದರ ಹೊರಬಂಡೆಗಳ ಮೇಲೆ ಗಣಪತಿ, ವೀರಭದ್ರ ಮತ್ತು ಸುಬ್ರಹ್ಮಣ್ಯ ವಿಗ್ರಹಗಳನ್ನು ಕೆತ್ತಿದ್ದಾರೆ. (ವಿ.ಜಿ.ಕೆ.)

**ನಿಜಗುಣದೇವ :** ಸು.1150 ವಚನಕಾರ. ಬಸವಣ್ಣನಿಗಿಂತ ಸ್ವಲ್ಪ ಹಿಂದೆ ಇದ್ದವನು ಎಂದು ವಿದ್ವಾಂಸರ ಅಭಿಪ್ರಾಯ. ಬಿಜಾಪುರ ಜಿಲ್ಲೆಯ ಚಿಮ್ಮಲಿಗೆ ಎಂಬ ಊರಿನವ. ಚಿಮ್ಮಲಿಗೆಯಲ್ಲೇ ಐಕ್ಯನಾದನೆಂಬ ಪ್ರತೀತಿ. ಚಿಮ್ಮಲಿಗೆಯಲ್ಲಿ ನಿಜಗುಣೇಶ್ವರ ಲಿಂಗ ಎಂಬ ಹೆಸರಿನ ದೇವಸ್ಥಾನ ಇಂದಿಗೂ ಕಂಡುಬರುತ್ತದೆ. ಕೆಂಭಾವಿಯ ಚಂದಿಮರಸ ಇವನ ಶಿಷ್ಯನಾಗಿದ್ದಂತೆ ತಿಳಿದುಬರುತ್ತದೆ.

ಇವನಿಗೆ ನಿಜಗುಣಯೋಗಿ ಎಂಬ ಪರ್ಯಾಯ ನಾಮವೂ ಕಂಡು ಬರುತ್ತದೆ. ಈತನ ಹೆಸರು ಗಣಸಹಸ್ರನಾಮದಲ್ಲಿ ಉಕ್ತವಾಗಿದೆ. ಸದ್ಯದಲ್ಲಿ ಈತನ ಎಂಟು ವಚನಗಳು ಮಾತ್ರ ಸಿಕ್ಕಿವೆ. ನಿಜಗುಣಯೋಗಿಯ ಯೋಗ ಎಂಬುದು ಈತನ ವಯನಗಳ ಅಂಕಿತ. ಈತ ಬೇರಾವ ವಚನಕಾರರ ಹೆಸರನ್ನೂ ಉಲ್ಲೇಖಿಸಿಲ್ಲ. ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಮನ ಆರೋಢಸ್ಥಲ, ಸಿದ್ಧರಾಮಯ್ಯನ ಸಮಾಧಿ ಸ್ಥಲ ಇಂತಿವರ ಕರುಣಾಪ್ರಸಾದವೆನಗಾಯಿತ್ತು ಚೆನ್ನಮಲ್ಲಿಕಾರ್ಜುನಯ್ಯ ಎಂಬಲ್ಲಿ ಈತನನ್ನು ಸ್ಮರಿಸಿದ್ದಾಳೆ. ಇದರಿಂದ ಈತ ಶಿವಯೋಗದ ಸ್ವರೂಪವನ್ನು ಚೆನ್ನಾಗಿ ಬಲ್ಲವನಾಗಿದ್ದನೆಂದು ವಿದಿತವಾಗುತ್ತದೆ. ಈತನ ವಚನಗಳಲ್ಲಿ ಪರಮಾತ್ಮನ ಅರಿವು ಯೋಗ್ಯ ಅಂತರ್ಜ್ಞಾನ ಮೊದಲಾದ ವಿಷಯಗಳು ಹೃದಯಂಗಮವಾಗಿ ವರ್ಣಿತವಾಗಿದೆ.

ಪಾತಂಜಲ ಯೋಗದಲ್ಲಿ ಹೇಳಿದಂತೆ ಯೋಗವೆಂದರೆ ಚಿತ್ತವೃತ್ತಿ ನಿರೋಧವೆಂದು ಈತ ಹೇಳಿಲ್ಲ.ಹಠಯೋಗಿಗಳಂತೆ ಇವನು ದೇಹವನ್ನುಕ್ಲೇಶಗೊಳಿಸುವ ಸಾಧನಗಳನ್ನು ಸಮರ್ಥಿಸಿಲ್ಲ. ಅಂಗಲಿಂಗಗಳಲ್ಲಿಯ ಭಿನ್ನತ್ವವಳಿಯುವುದೇ ಯೋಗ ಎಂದು ಹೇಳಿದ್ದಾನೆ.

ಇವನ ಒಂದು ವಚನ ಹೀಗಿದೆ ಸರ್ವಮಯವಾತ್ಮನೆಂದಲ್ಲಿ ರಕ್ಷಿಸಿ ಶಿಕ್ಷಿಸಿಹೆನೆಂಬದೆನೋ. ಅಣೋರಣೀಯಾನ್ ಮಹತೋ ಮಹೀಯಾನ್ ಎಂದಲ್ಲಿ ಬೇರೊಂದರಿದು ಕುರಿತು ಕಾಬುದೇನೋ ಇದಿರಿಗೆ ತಾನಿಲ್ಲ ತನಗಿರಿವಿಲ್ಲವೆಂದಲ್ಲಿ ಗಜಬಜೆಯಲ್ಲಿ ಕುಜನವೇತಕ್ಕೆ ಬೇರಿಗೆ ನೀರನೆರೆದಲ್ಲಿ ಶಾಖೆಗೆ ಸಂದುಂಟೆ ಅಂಗಪ್ರಾಣ ಲಿಂಗವೊಂದೆಂದಲ್ಲಿ ಅರ್ಪಿತಕ್ಕೆ ಹಿಂದುಮುಂದಿಲ್ಲ ನಿಜಗುಣಯೋಗಿಯ ಯೋಗಕ್ಕೆ ಮುನ್ನವೇ ಇಲ್ಲ.

**ನಿಜಗುಣ ಶಿವಯೋಗಿ :** ಸು. 1500. ವೀರಶೈವಕವಿ. ಷಟ್ ಶಾಸ್ತ್ರಗಳೆಂದು ಪ್ರಸಿದ್ಧವಾದ ಅನುಭವಸಾರ, ಕೈವಲ್ಯಪದ್ಧತಿ, ಪರಮಾರ್ಥಗೀತೆ, ಪರಮಾನುಭವಬೋಧೆ, ಪರಮಾರ್ಥ ಪ್ರಕಾಶಿಕೆ, ವಿವೇಕಚಿಂತಾಮಣಿ ಎಂಬ ಗ್ರಂಥಗಳ ಕರ್ತೃ. ಇವನಿಗೆ ನಿಜಗುಣಾರಾಧ್ಯ ಎಂಬ ಹೆಸರೂ ಇದೆ. ಈತ ಮೊದಲಿಗೆ ಕೊಳ್ಳೇಗಾಲ ತಾಲ್ಲೂಕಿನ ಶಂಭುಲಿಂಗಬೆಟ್ಟದ ಸುತ್ತಮುತ್ತಲ ನಾಡಿಗೆ ಅರಸನಾಗಿದ್ದು ಅನಂತರ ವಿರಕ್ತನಾಗಿ ಶಂಭುಲಿಂಗನ ಬೆಟ್ಟದಲ್ಲಿ (ಚಿಲಕವಾಡಿ) ಹಲವು ವರ್ಷ ತಪಸ್ಸುಮಾಡಿ ಶಿವಯೋಗಿಯಾಗಿ ಹೆಸರು ಪಡೆದನೆಂಬ ಪ್ರತೀತಿ ಇದೆ. ಶಂಭುಲಿಗಸ್ವಾಮಿಗಳೆಂಬ ಸನ್ಯಾಸಿ ಈತನ ಗುರು. ಅರವತ್ತು ಮೂವರ ತ್ರಿಪದಿ ಇವನ ಇನ್ನೊಂದು ಗ್ರಂಥ'. ಇವನ ಎಲ್ಲ ಗ್ರಂಥಗಳಲ್ಲಿ ಶಂಭುಲಿಂಗನ ಅಂಕಿತ ದೊರೆಯುತ್ತದೆ.

ಅನುಭವಸಾರ ಗುರುಶಿಷ್ಯಸಂವಾದರೂಪವಾಗಿದ್ದು ತ್ರಿಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 8 ಸಂಧಿ, 46 ಸೂತ್ರ, 535 ಪದ್ಯ ಇವೆ. ಸಕಲ ವೇದಾಂತಸಾರವನ್ನು ಸಾಧಕರಿಗೆ ತಿಳಿಯುವಂತೆ ಹೇಳುತ್ತೇನೆಂದು ಕವಿ ಹೇಳಿಕೊಂಡಿದ್ದಾನೆ.

ಕೈವಲ್ಯ ಪದ್ಧತಿ ಅನುಭಾವಗೀತೆಗಳ ಸಂಕಲನ. ಇದರಲ್ಲಿ 5 ಸ್ಥಲಗಳೂ 174 ವಚನಗಳ ಜೋಡೂ 648 ಪದ್ಯಗಳೂ ಇವೆ. ಕವಿ ಇದನ್ನು ಅಬಾಲಯುವ್ವನ ವೃದ್ಧರಿಗಾಯಾಸವಿನಿತಿಲ್ಲದಂತೆ ಸಮ್ಯಗ್‌ಜ್ಞಾನಿಗಳೊಡಂಬಡುವಂತೆ ಸಕಲ ವೇದಾಂತಗಮ ಸ್ಮೃತಿಪುರಾಣೇತಿಹಾಸ ಸೂತ್ರಾದಿಶಾಸ್ತ್ರಸಮ್ಮತದಿಂ ಪುರಾತನ ಗೀತಾನುಗುಣ್ಯವೆನಿಸಿ ಮೃದುಮಧುರ ಲಕ್ಷಣಯುಕ್ತವಾಗಿ ರಚಿಸಿರುವಂತೆ ಹೇಳಿಕೊಂಡಿದ್ದಾನೆ. ಭಾವನೆಗಳಿಗೆ ಅನುಗುಣವಾದ ಬಗೆಬಗೆಯ ರಾಗಗಳು ಇಲ್ಲಿ ಮೂಡಿಬಂದಿವೆ. ಈ ದೃಷ್ಟಿಯಿಂದ ಇದು ಕರ್ನಾಟಕ ಸಂಗೀತಶಾಸ್ತ್ರಜ್ಞರಿಗೆ ಮಹತ್ವಪೂರ್ಣವಾದ ಗ್ರಂಥವಾಗಿದೆ. ಇಲ್ಲಿ ಕಂಡುಬರುವ ನಾದಮಾಧುರ್ಯ, ಮಾತಿನ ಸೊಗಸು ಕೃತಿಯ ಮಹತ್ವದ ಅಂಶಗಳಾಗಿವೆ.

ಪರಮಾರ್ಥಗೀತೆ ಹೆಚ್ಚಾಗಿ ಲಲಿತ ರಗಳೆಯಲ್ಲಿದ್ದು ಅಲ್ಲಲ್ಲಿ ಕೆಲವು ಕಂದಗಳೂ ಕಂಡುಬರುತ್ತವೆ. ಗ್ರಂಥ ಗುರುಶಿಷ್ಯ ಸಂವಾದ ರೂಪವಾಗಿದೆ. ಇದರಲ್ಲಿ 11 ಗತಿ, 32 ಕಂದ, 121 ನಿರೂಪಣೆ, 1496 ಚರಣ ಇವೆ. ಶ್ರುತಿ ಪುರಾಣೇತಿಹಾಸಸ್ಮೃತಿಯರ್ಥವನ್ನು ಕನ್ನಡಿಸಿದಂತೆ ಕವಿ ಹೇಳಿಕೊಂಡಿದ್ದಾನೆ. ಪ್ರತಿಪಾದಿತವಾದ ತತ್ತ್ವಗಹನವಾಗಿದ್ದು ಸಾಮಾನ್ಯರಿಗೂ ಸುಲಭವಾಗಿ ಎಟಕುವಂತಿದೆ.

ಪರಮಾನುಭವಬೋಧೆ ಯಾಜ್ಞಾವಲ್ಕ್ಯ ಮೈತ್ರೇಯಿ ಸಂವಾದರೂಪವಾಗಿದ್ದು ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 6 ಸಂಧಿಗಳೂ 122 ಸೂತ್ರಗಳೂ 985 ಪದ್ಯಗಳೂ ಇವೆ. ಅದ್ವೈತ ತತ್ತ್ವವನ್ನು ಪ್ರಕಟಿಸುವೆನು ಬೋಧಗತಿಯಿಂದ ಎಂದು ಕವಿ ಹೇಳಿಕೊಂಡಿದ್ದಾನೆ.

ಪರಮಾರ್ಥಪ್ರಕಾಶಿಕೆ ಚೆನ್ನಸದಾಶಿವಯೋಗಿಕೃತ ಶಿವಯೋಗಪ್ರದೀಪಿಕೆಗೆ ಕನ್ನಡ ವ್ಯಾಖ್ಯಾನ. ಇದರಲ್ಲಿ ಪರಿಚ್ಛೇದಗಳಿವೆ. ಸಂಸ್ಕೃತ ಜ್ಞಾನವಿಲ್ಲದ ಮೋಕ್ಷಾಪೇಕ್ಷಿಗಳಿಗೆ ಸುಲಭವಾಗಿ ತಿಳಿಯುವಂತೆ ಈ ವ್ಯಾಖ್ಯಾನವನ್ನು ಬರೆದುದಾಗಿ ಕವಿ ಹೇಳಿಕೊಂಡಿದ್ದಾನೆ.

ವಿವೇಕಚಿಂತಾಮಣಿ ಗದ್ಯಗ್ರಂಥ'. ಇದರಲ್ಲಿ ಒಟ್ಟು ಹತ್ತು ಪ್ರಕರಣಗಳಿದ್ದು 765 ವಿಷಯಗಳು ಸಂಗ್ರಹಿತವಾಗಿವೆ. ಕನ್ನಡದ ಮೊದಲ ವಿಶ್ವಕೋಶ ಎಂಬ ದೃಷ್ಟಿಯಿಂದ ಸಂಗೀತಶಾಸ್ತ್ರದ ವಿಷಯ ವಿವೇಚನೆಯ ದೃಷ್ಟಿಯಿಂದ ಈ ಗ್ರಂಥಕ್ಕೆ ಮಹತ್ತ್ವದ ಸ್ಥಾನ ದೊರಕಿದೆ.

ಅರವತ್ತುಮೂವರ ತ್ರಿಪದಿಗೆ ಪುರಾತನರ ತ್ರಿವಿಧಿ ಎಂಬ ಹೆಸರಿದ್ದು ಇದರಲ್ಲಿ 77 ತ್ರಿಪದಿಗಳಿವೆ. ಕೃತಿ 63 ಜನ ಶಿವಭಕ್ತರ ಸ್ತುತಿರೂಪವಾಗಿದೆ.

ನಿಜಗುಣಶಿವಯೋಗಿ ಕನ್ನಡದಲ್ಲೇ ಅಲ್ಲದೆ ಸಂಸ್ಕೃತದಲ್ಲೂ ಗ್ರಂಥಗಳನ್ನು ರಚಿಸಿದ್ದಾನೆ. ಸಾರಭೂತವಾದ ಚಿಂತಾಮಣಿ, ದರ್ಶನಸಾರಂ, ಆತ್ಮಕರ್ತ ಎಂಬ ಪ್ರೌಢಗ್ರಂಥಗಳು ಸಂಸ್ಕೃತದಲ್ಲಿವೆ. ಈತನ ಸಾಧನೆ ಸಿದ್ಧಿ ಕರ್ನಾಟಕದ ಆಧ್ಯಾತ್ಮಿಕ ಚರಿತ್ರೆಯಲ್ಲಿ ಒಂದು ಉಜ್ವಲವಾದ ಘಟ್ಟವನ್ನು ನಿರ್ಮಿಸಿದೆ. (ಎಚ್.ಎ.ಕೆ., ವಿ.ಎಸ್.ಎಸ್.)

**ನಿಜಗುಣಾರ್ಯ :** ಸು.1650. ವೀರಶೈವ ಕವಿ. ಅದ್ವೈತರಾಮಾಯಣ ಎಂಬ ಕೃತಿಯ ಕರ್ತೃ. ಈತ ತನ್ನ ಕೃತಿಯಲ್ಲಿ ನಿಜಗುಣಾರ್ಯ ವಚನದಮೃತ ಎಂದು ಹೇಳಿಕೊಂಡಿದ್ದಾನೆ ನಿಜಗುಣ ಶಿವಯೋಗಿಯೇ ಈ ಹೆಸರಿನಿಂದ ಈ ಕೃತಿಯನ್ನು ರಚಿಸಿರಬಹುದೆ ಎಂಬ ಸಂಶಯಕ್ಕೆ ಎಡೆಯಿದೆ. ಆದರೆ ನಿಜಗುಣ ಶಿವಯೋಗಿಯ ಕೃತಿಗಳಲ್ಲಿ ಕಂಡುಬರುವ ಶಂಭು ಲಿಂಗನ ಅಂಕಿತ ಈತನ ಕೃತಿಯಲ್ಲಿಲ್ಲವಾದುದರಿಂದ ಇಬ್ಬರೂ ಭಿನ್ನರೆನ್ನಬಹುದು.

ಅದ್ವೈತರಾಮಾಯಣ ವಚನಗಳಲ್ಲಿದೆ ಈತನ ಕೃತಿಯಿದೆ. ದೊರೆತಿರುವ ಅಸಮಗ್ರ ಕೃತಿಯಲ್ಲಿ 24 ಸಂಧಿಗಳು 933 ವಚನಗಳಿರುವುದಾಗಿ ಕವಿಚರಿತೆಕಾರರು ಹೇಳಿದ್ದಾರೆ. ಅದ್ವೈತದಲ್ಲಿ ರಾಮರಾವಣರ ನಿಜಪಥವನು ಪಾದವೈಭವವನ್ನು ಮಂಡೋದರಿಯ ರಾವಣನ ಪಾದವನು ಉಸಿರುವೆನು ಎಂದು ಕವಿ ಹೇಳಿಕೊಂಡಿದ್ದಾನೆ. ಈಕೃತಿಗೆ ಆಧಾರ ಯಾವುದೆಂದು ತಿಳಿಯದು. ಕೆಲವೆಡೆ ಎಂದನಾಮುನಿಪ್ಪ ಕೇಳ್ಕೆ ಶಾಂತಾರಾಮನ ಎಂದಿರುವುದರಿಂದ ಶಾಂತಾರಾಮ ಎಂಬಾತನಿಗೆ ಮುನೀಶ್ವರನೊಬ್ಬ ರಾಮಾಯಣವನ್ನು ಕಥಿಸಿರಬಹುದು. ಇವನ ಒಂದು ವಚನ ಹೀಗಿದೆ.

ದಶಶಿರೋತ್ತಮನು ದಶರಥೋತ್ತಮನು ಎರಡು ಕಲೆತಂದೆ ರಾಮಗುಣ. ಭಕ್ತಿ ಭಾವವು ಎರಡು ಕಲೆತುದೆ ಲಕ್ಷ್ಮಣಗುಣ. ಕಮಲ ಸೂರ್ಯನ ಕಲೆತುದೆ ಸೀತಾಗುಣ. ಮನಧನವ ಕಲೆತಂದೆ ಭರತಗುಣ. ಜೀವ ಭೂವಿಜಯ ಕಲೆತಂದು ಶತ್ರುಘ್ನ ಗುಣ. ಐದು ಗುಣ ಕಲೆತಂದೇ ದೇಹಗುಣವೆಂದಾ. ಇವನ ಬೆಡಗಿನ ವಚನಗಳಂತೆ ವಚನಗಳಲ್ಲೂ ಗೂಢಾರ್ಥ ತುಂಬಿರುವಂತೆ ತೋರುತ್ತದೆ.

**ನಿಜಲಿಂಗಪ್ಪ, ಎಸ್. :** 1902-2000. ವಿಶಾಲ ಕರ್ನಾಟಕದ ಪ್ರಥಮ ಮುಖ್ಯ ಮಂತ್ರಿ. ಭಾರತದ ಹಿರಿಯ ರಾಜಕಾರಣಿ, ಬಳ್ಳಾರಿ ಜಿಲ್ಲೆಯ ಹಲುಗಾವಲು ಗ್ರಾಮದ ಅಬ್ಬಲೂರು ಅಡಿವೆಪ್ಪ ಮತ್ತು ನೀಲಮ್ಮ ದಂಪತಿಗಳ ಪುತ್ರರಾಗಿ 1902 ಡಿಸೆಂಬರ್ 10ರಂದು ಜನಿಸಿದರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಚಿತ್ರದುರ್ಗ ಜಿಲ್ಲೆಯ ಸಿದ್ಧವನಹಳ್ಳಿಯಲ್ಲಿದ್ದ ತಮ್ಮ ಚಿಕ್ಕಪ್ಪ ರುದ್ರಪ್ಪನವರ ಆಶ್ರಯದಲ್ಲಿ ಬೆಳೆದರು. ಅಂದಿನಿಂದ ಇವರು ಸಿದ್ಧವನಹಳ್ಳಿ ನಿಜಲಿಂಗಪ್ಪನವರೆನಿಸಿಕೊಂಡರು. ಚಿಕ್ಕಪ್ಪನ ಸಹಾಯ ಸಹಕಾರಗಳಿಂದ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸಿದ್ಧವನಹಳ್ಳಿಯಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ದಾವಣಗೆರೆಯಲ್ಲಿ ಮತ್ತು ಪದವಿ ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿ ಬಿ.ಎ. ಪದವಿ ಪಡೆದರು. ಅನಂತರ ಪುಣೆ ವಿಶ್ವವಿದ್ಯಾಲಯದಿಂದ ಎಲ್‌ಎಲ್.ಬಿ. ಪದವಿ ಗಳಿಸಿದ (1926) ಇವರು ಬೆಂಗಳೂರು ಹೈಕೋರ್ಟಿನಲ್ಲಿ ವಕೀಲಿ ವೃತ್ತಿಯನ್ನು ಕೈಗೊಂಡು ಸಾರ್ವಜನಿಕ ಸೇವಾಕ್ಷೇತ್ರವನ್ನು ಪ್ರವೇಶಿಸಿದರು.

ಬೆಂಗಳೂರಿನಲ್ಲಿ ಅಧ್ಯಯನ ಮಾಡುತ್ತಿದ್ದಾಗಲೇ 1924ರಲ್ಲಿ ಮಹಾತ್ಮಾಗಾಂಧೀಯವರ ಅಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಮಹಾಸಭೆಯ ಅಧಿವೇಶನಕ್ಕೆ ಸ್ವಯಂಸೇವಕರಾಗಿ ಹೋಗಿದ್ದರು. ಗಾಂಧೀಜಿಯವರ ದಂಡೀಯಾತ್ರೆಯಿಂದ ಪ್ರಭಾವಿತರಾಗಿ ಸಕ್ರಿಯ ರಾಜಕಾರಣಕ್ಕಿಳಿದು 1931 ರಿಂದಲೂ ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿಯ ವಿರೋಧಿ ಪಕ್ಷಗಳನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಿದ್ದಲ್ಲದೆ ಅಖಿಲ ಭಾರತ ಕಾಂಗ್ರೆಸ್ ಪಕ್ಷದಲ್ಲಿ ಸಂಸ್ಥಾನದ ಕಾಂಗ್ರೆಸ್ ಪಕ್ಷವನ್ನು ವಿಲೀನಗೊಳಿಸಿ, ಕಾಂಗ್ರೆಸ್ಸಿನ ಧ್ಯೇಯವಾದ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಕಂಕಣಬದ್ಧರಾದರು. ಅರಣ್ಯಸತ್ಯಾಗ್ರಹ ನಿಮಿತ್ತವಾಗಿ ಆಗಿನ ಸರ್ಕಾರ ಇವರನ್ನು ಬಂಧಿಸಿ ಒಂದೂವರೆ ವರ್ಷ ಸಶ್ರಮ ಕಾರಾಗೃಹ ವಾಸವನ್ನು ವಿಧಿಸಿತಲ್ಲದೆ, ಜೀವನಾಧಾರವಾಗಿದ್ದ ವಕೀಲಿ ವೃತ್ತಿಯ ಸನದನ್ನೂ ಹಿಂತೆಗೆದುಕೊಂಡಿತು. ಮತ್ತೆ 1942ರ ಚಲೇಜಾವ್ ಚಳವಳಿಯ ಸಂಬಂಧದಲ್ಲೂ ಸರ್ಕಾರ ಇವರನ್ನು ಬಂಧಿಸಿತ್ತು.

ನಿಜಲಿಂಗಪ್ಪನವರು (1945-46) ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ (1948-54) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಘಟನಾ ಸಭೆಯ ಸದಸ್ಯರಾಗಿಯೂ (1946 - 47) ಲೋಕಸಭೆಯ ಸದಸ್ಯರಾಗಿಯೂ (1952-56) ಸೇವೆ ಸಲ್ಲಿಸಿದ್ದಾರೆ.

ಸ್ವಾತಂತ್ರ್ಯಾನಂತರ ಕರ್ನಾಟಕ ಏಕೀಕರಣಕ್ಕಾಗಿ ಅವಿಶ್ರಾಂತವಾಗಿ ಹೋರಾಡಿದ ಇವರು 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ವಿಶಾಲ ಕರ್ನಾಟಕದ ಪ್ರಪ್ರಥಮ ಮುಖ್ಯಮಂತ್ರಿಯಾದರು. 1958ರಲ್ಲಿ ಮುಖ್ಯಮಂತ್ರಿ ಪದವಿಯಿಂದ ನಿವೃತ್ತರಾದ ಮೇಲೆ ಸಹಕಾರಿ ಕೃಷಿ ಪದ್ಧತಿಯ ಅಧ್ಯಯನ ತಂಡದ ಮುಖ್ಯಸ್ಥರಾಗಿ ಮತ್ತು ದಿ ಇಂಡಿಯನ್ ಆಯಿಲ್ ಕಂಪೆನಿಯ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 1961ರಲ್ಲಿ

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸದಸ್ಯರಾಗಿ ಆಯ್ಕೆಯಾದರು.

1962-1968ರ ವರೆಗೆ ಮತ್ತೆ ಮೈಸೂರು ರಾಜ್ಯದ ಮುಖ್ಯಮಂತ್ರಿಯಾದರು. ಈ ಅವಧಿಯಲ್ಲಿ ನಿಜಲಿಂಗಪ್ಪನವರು ಭಾರತದ ಪ್ರಭಾವಶಾಲಿ ರಾಜಕಾರಣಿಗಳಲ್ಲಿ ಒಬ್ಬರೆನಿಸಿದರು. ಅವರ ಮುಖ್ಯ ಮಂತ್ರಿ ಅವಧಿಯಲ್ಲಿ ಕಡಿದಾಳ್ ಮಂಜಪ್ಪನವರು ಕಂದಾಯ ಸಚಿವರಾಗಿ ಭೂಗೇಣಿದಾರರಿಗೆ ಸಂಬಂಧಿಸಿದ ಮಹತ್ವದ ಭೂಸುಧಾರಣಾ ಕಾಯಿದೆ ಜಾರಿಗೆ ಬಂದಿತು. ಅವರು ಕಾಂಗ್ರೆಸ್ ಸಿಂಡಿಕೇಟ್ ಸದಸ್ಯರಲ್ಲಿ ಒಬ್ಬರೆನಿಸದ ರಾಷ್ಟ್ರರಾಜಕೀಯದಲ್ಲಿ ಪ್ರಭಾವಶಾಲಿಯಾಗಿದ್ದರು. 1967ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾದರು. ಇವರ ಅಧಿಕಾರ ಅವಧಿಯಲ್ಲಿ ಕಾಂಗ್ರೆಸ್ಸಿನ ವಿಭಜನೆಯಾಯಿತು (1970). ಅನಂತರ ಇವರು ಸುಮಾರು ಒಂದು ವರ್ಷ ಕಾಲ ಸಂಸ್ಥಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು.

ನಿಜಲಿಂಗಪ್ಪನವರಿಗೆ 1968ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಎಲ್.ಎಲ್.ಡಿ. ಪದವಿಯನ್ನಿತ್ತು ಗೌರವಿಸಿತು. 1997ರಲ್ಲಿ ಕರ್ನಾಟಕ ಸರ್ಕಾರದ ಕರ್ನಾಟಕ ರತ್ನ ಪ್ರಶಸ್ತಿಗೂ ಭಾಜನರಾದರು. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಅಧಿಕಾರಾವಧಿಯಲ್ಲಿ ಕೃಷಿ, ನೀರಾವರಿ, ವಿದ್ಯುತ್ ಉತ್ಪಾದನೆಗಳ ಕಡೆ ವಿಶಿಷ್ಟ ಗಮನ ಹರಿಸಿದರು. ತಮ್ಮ ಬದುಕಿನುದ್ದಕ್ಕೂ ಆದರ್ಶ ಮೌಲ್ಯಗಳ ಪ್ರತಿಪಾದಕರಾಗಿದ್ದರು. ಅವರು ತಮ್ಮ ಜೀನಿತದ ಕೊನೆಯವರಾಗಿ ಸಾರ್ವಜನಿಕ ಜೀವನದ ಆಗುಹೋಗುಗಳ ಬಗ್ಗೆ ಆಸಕ್ತಿ ಹೊಂದಿದ್ದ ಅಶಾಜೀವಿ. ನಿಜಲಿಂಗಪ್ಪನವರು ಒಬ್ಬ ನಿರ್ಭೀತ, ನಿಷ್ಕಳಂಕ ಚಾರಿತ್ರ್ಯದ ವ್ಯಕ್ತಿಯಾಗಿದ್ದರು. ಅವರನ್ನು ಕುರಿತು ಕೆಲವು ಜೀವನ ಚರಿತ್ರೆಗಳೂ ರಚಿತವಾಗಿವೆ. ಅವುಗಳಲ್ಲಿ ದೇ.ಜವರೇಗೌಡರು ಬರೆದಿರುವ ಕಾಯಕಯೋಗಿ ರಾಷ್ಟ್ರ ನಾಯಕ (1992) ಪ್ರಮುಖವಾದುದು. 2000 ಆಗಸ್ಟ್ 8ರಂದು ನಿಜಲಿಂಗಪ್ಪನವರು ನಿಧನರಾದರು.

**ನಿಜಲಿಂಗಾರಾಧ್ಯ :** ಸು.1800 ವೀರಶೈವಕವಿ. ನಿಂಜಲಿಂಗ ಶತಕ ಎಂಬ ಕೃತಿಯ ಕರ್ತೃ. ಈತನ್ನು ತುಂಗಭದ್ರಾತೀರದಲ್ಲಿರುವ ಖಾದ್ರಿಪುರದವನೆಂದು ಕವಿಚರಿತೆಕಾರರು ಹೇಳವುದು ಸರಿಯಲ್ಲವೆಂದೂ ತಮಗೆ ದೊರೆತ ಎಲ್ಲ ಹಸ್ತಪ್ರತಿಗಳಲ್ಲೂ ತುಂಗಭದ್ರಾ ತೀರದೊಳೆಸೆವ ಕುದ್ರುಪುರನಿವಾಸ ನಿಜಲಿಂಗಭವಭಂಗ ಶರಣಜನವರದ ಜಯತು ಎಂದಿರುವುದರಿಂದ, ಈತ ತುಂಗಭದ್ರಾತೀರಕ್ಕೆ ಸಮೀಪವಾಗಿರುವ ಹಾವನೂರು, ಗುತ್ತಲ ಗ್ರಾಮಗಳಿಗೆ ಸೇರಿದವನಿರಬೇಕೆಂದೂ ಸುಂಕಾಪುರ ಅವರು ಅಭಿಪ್ರಾಯಪಟ್ಟಿದ್ದಾರೆ.

ನಿಜಲಿಂಗ ಶತಕ ವಾರ್ಧಿಕ ಷಟ್ಪದಿಯಲ್ಲಿದೆ. ಇದರಲ್ಲಿ 100 ಪದ್ಯಗಳಿವೆ. ಶತಕದ ಪ್ರತಿಪದ್ಯದ ಅಂತ್ಯವೂ ನಿಜಲಿಂಗ ಭವಭಂಗ ಶರಣ ಜನವರದ ಜಯತು ಎಂದು ಕೊನೆಗೊಳ್ಳುತ್ತದೆ. ಹಲವು ಪ್ರತಿಗಳಲ್ಲಿ ನಿಜಲಿಂಗಭವ ಭಂಗ ಶರಣಜನವರದ ಭಕ್ತಿಸಂಗ, ನಿಜಲಿಂಗಭವಭಂಗ ಶರಣುಜನವರದ ದೇವ ಎಂದಿದೆ.

ಕನ್ನಡದ ಎಲ್ಲ ಶತಕಕಾರರಂತೆ ಈತನೂ ಭಕ್ತಿಜ್ಞಾನವೈರಾಗ್ಯಗಳನ್ನು ಬೋಧಿಸುತ್ತ ನೀತಿಯನ್ನು ಹೇಳಿದ್ದಾನೆ. ಶಿವಸ್ತುತಿ ಈ ಶತಕದ ಬಹುಭಾಗವನ್ನೇ ಆಕ್ರಮಿಸಿದೆ. ದೇವರ ದೇವನಾದ ನಿಜಲಿಂಗನ ಕೃಪೆಯಿದ್ದವನಿಗೆ ಏತರ ಕೊರತೆಯೂ ಆಗಲಾರದೆಂಬ ಭರವಸೆ ಬಹುತೇಕ ಎಲ್ಲ ಪದ್ಯಗಳಲ್ಲೂ ಬಂದಿದೆ.

ಜಾಣಪದ್ಧತಿ, ಮೂರ್ಖಪದ್ಧತಿಗಳೆರಡನ್ನೂ ಕವಿ ಬಹು ಸರಸವಾಗಿ ಹೇಳಿದ್ದಾನೆ. ಈ ಎರಡೂ ಪದ್ಧತಿಗಳ ವಿಷಯನಿರೂಪಣೆಯಲ್ಲಿ ನಿಷ್ಠುರವಾದ ಸಮಾಜ ವಿಡಂಬನೆಯನ್ನು ಮಾಡಿದ್ದಾನೆ. ಎಂಬತ್ತುನಾಲ್ಕು ಲಕ್ಷ ಯೋನಿಗಳಲ್ಲಿ ತೊಳತೊಳಲಿ ಬಂದ ಮಾನುಷ ಜನ್ಮವು ಸಕಲರಲ್ಲೂ ಅಧಿಕ. ಆದರೆ ಸಂಸಾರವೋ ಚಾಡಿಕೋರರು, ಚೋರುಗಳು, ಸಿರಿವಂತರಡಿ ನೋಡಿ ಬಳಲುವ ದುರಾಚಾರಿಗಳು, ಪಾಪಿಗಳು, ದುರ್ಜನರು, ದಯಾಹೀನರು, ಕೂಡಿ ನಡೆದಲ್ಲಿ ಭೇದವನ್ನಿಕ್ಕುವವರು, ಪೆರರ್ಗೆ ಕೇಡೆಣಿಸುವರು, ಕುಟಿಲರು, ಕುಹಕಿಗಳು ಮುಂತಾದವರಿಂದ ತುಂಬಿ ಹೋಗಿದೆ. ಇಂಥವರ ಮಧ್ಯದಲ್ಲಿ ಹೇಗೆ ಜೀವಿಸಬೇಕೆಂದು ಕವಿ ತನ್ನ ಇಷ್ಟದೈವದ ಮೊರೆಹೋಗಿದ್ದಾನೆ.

**ನಿಟ್ಟೂರು**[1]**:** ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಒಂದು ಹಳ್ಳಿ. ಗುಬ್ಬಿಗೆ 10 ಕಿಮೀ ದೂರದಲ್ಲಿದೆ. 1226 ಸೇರುವ ಶಾಸನವೊಂದರಲ್ಲಿ ಈ ಸ್ಥಳವನ್ನು ಹೆರುಡೆನಾಡಿನ ಶಿರೋಮಣಿ, ಗಂಗವಾಡಿ ತೊಂಬತ್ತಾರು ಸಾವಿರಕ್ಕೆ ನಾಭಿಯ ಮನೆ ಹಾಗೂ ತೆಂಕಣದ ಅಯ್ಯಾವಳೆ (ಐಹೊಳೆ) ಎಂದು ವರ್ಣಿಸಲಾಗಿದೆ.

ಇಲ್ಲಿರುವ ಶಾಂತೀಶ್ವರಬಸದಿಯು ಗರ್ಭಗೃಹ ಸುಕನಾಸಿ ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದ್ದು 12ನೆಯ ಶತಮಾನದ ಹೊಯ್ಸಳರ ಕಾಲದ ರಚನೆಯಾಗಿದೆ. ನವರಂಗದ ದ್ವಾರ ಸುಂದರವಾಗಿ ಕೆತ್ತಿದ್ದು, ಅದರ ಮೇಲಿರುವ ಶಾಸನ ಅದನ್ನು ಕೆತ್ತಿದವನ ಹೆಸರನ್ನು ಉಲ್ಲೇಖಿಸುತ್ತದೆ. ಈ ಬಸದಿಯ ಈಶಾನ್ಯದಲ್ಲಿ ಪದ್ಮಾವತಿ, ದಕ್ಷಿಣದಲ್ಲಿ ಬ್ರಹ್ಮದೇವರ ಗುಡಿಗಳಿವೆ. ಬಸದಿಯ ಹೊರಗೋಡೆ ಅಲ್ಲಲ್ಲಿ ಒಂದು ಅಥ್‍ವಾ ಎರಡು ಅರೆಗಂಬಗಳು ಮತ್ತು ಸೊಗಸಾಗಿ ಕೆತ್ತಲಾದ ಕಿರುಗೋಪುರಗಳಿಂದ ಅಲಂಕೃತವಾಗಿದೆ. ಮಧ್ಯೆ ಮಧ್ಯೆ ಕುಳಿತ ಹಾಗೂ ನಿಂತ ಜಿನಮೂರ್ತಿಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಕೆಲವು ಭಿನ್ನವಾಗಿವೆ. ಕೆಲವು ಅಪೂರ್ಣಸ್ಥಿತಿಯಲ್ಲಿವೆ. ನವರಂಗದ ಉತ್ತರ ಮತ್ತು ದಕ್ಷಿಣ ಭಾಗದ ಹೊರಗೋಡೆಗಳಲ್ಲಿ ಸೊಗಸಾಗಿ ಕೆತ್ತಿದ ಎರಡು ಗೂಡುಗಳಿವೆ. ಇವುಗಳಲ್ಲಿ ವಿಗ್ರಹಗಳಿಲ್ಲ. ನವರಂಗದ ಕಂಬಗಳು ಎಂಟು, ಹದಿನಾರು ಮತ್ತು ಮೂವತ್ತೆರಡು ಕೋಣಗಳುಳ್ಳವಾಗಿ ನಕ್ಷತ್ರಕಮಲಗಳಂತೆ ವಿವಿಧ ರೀತಿಯಲ್ಲಿ ಕೆತ್ತಲಾಗಿವೆ. ಭುವನೇಶ್ವರಿಗಳು 2.5 ಅಡಿ ಆಳವಿದ್ದು, ಅವುಗಳಲ್ಲಿ ಸುಂದರ ಅಷ್ಟದಿಕ್ಪಾಲಕ ಮೂರ್ತಿಗಳಿವೆ. ಗರ್ಭಗೃಹದಲ್ಲಿ ಶಾಂತಿನಾಥ ಜಿನಬಿಂಬವಿದೆ. ಬಸದಿಯ ಸುತ್ತಲೂ ಅನೇಕ ನಿಸಿಧಿಗಳಿವೆ.

ಇಲ್ಲಿ ಗ್ರಾಮದೇವತೆ ಮಾರಿಯಮ್ಮನ ಒಂದು ದೇವಾಲಯವಿದೆ. ಪ್ರತಿ ವರ್ಷ ಜಾತ್ರೆ ನಡೆಯುತ್ತದೆ. (ಎಚ್.ಎಂ.ಎನ್.ಆರ್.)

**ನಿಟ್ಟೂರು**[2]**:** ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನಲ್ಲಿ ತುಂಗಭದ್ರಾ ನದಿ ದಂಡೆಯ ಮೇಲಿರುವ ಒಂದು ಪ್ರಮುಖ ಶಿಲಾಯುಗ ನೆಲೆ. ಇಲ್ಲಿ ಪೂರ್ವಶಿಲಾಯುಗ ಮತ್ತು ಮಧ್ಯಶಿಲಾಯುಗ ಕಾಲಗಳ ಸಂಸ್ಕೃತಿಗಳ ಅವಶೇಷಗಳು ಮತ್ತು ಆ ಕಾಲದ ಪ್ರಾಣಿಗಳ ಪಳೆಯುಳಿಕೆಗಳು ನದಿದಂಡೆಯ ಪದರಗಳಲ್ಲಿ ಸಿಕ್ಕಿವೆ. ನದಿದಂಡೆಯ 15 ಅಡಿಗಳೆತ್ತರದ ಪದರಗಳಲ್ಲಿ ಕೆಳಭಾಗದಲ್ಲಿ ಉಂಡೆಕಲ್ಲುಗಳ ಗಟ್ಟಿಪದರ ಅದರ ಮೇಲೆ ಹಿಂದಿನ ಕಾಲದ ಕೆಂಪು ಮೆಕ್ಕಲು ಮಣ್ಣಿನ ಪದರ, ಮತ್ತು ಎಲ್ಲಕ್ಕೂ ಮೇಲೆ ಈಚಿನ ಕಪ್ಪು ಎರೆಮಣ್ಣಿನ ಪದರಗಳಿವೆ. ಕೆಳಗಿನ ಉಂಡೆಕಲ್ಲುಗಳ ಪದರದಲ್ಲಿ ಕಲ್ಲಿನ ಆಯುಧಗಳು ಮತ್ತು ಈಗ ನಷ್ಟವಾಗಿರುವ ತಳಿಗೆ ಸೇರಿದ ದನದ ಪಳೆಯುಳಿಕೆಗಳು ಕಂಡು ಬಂದಿವೆ. ಇಲ್ಲಿರುವ ಪಳೆಯುಳಿಕೆಗಳ ಆಧಾರದಿಂದ ಇಲ್ಲಿನ ಶಿಲಾಯುಧಗಳನ್ನು ಮಧ್ಯ ಪ್ಲೈಸ್ಟೋಸೀನ್ ಯುಗದವೆಂದು ನಿರ್ದೇಶಿಸಲು ಸಾಧ್ಯವಾಗುತ್ತದೆ.

ಬಸಾಲ್ಟ್ ಅಥವಾ ಅಗ್ನಿಶಿಲೆಯ ಉಂಡೆಕಲ್ಲುಗಳಲ್ಲಿ ಏಮ್ಮುಖವಾಗಿ ಮತ್ತು ದ್ವಿಮುಖವಾಗಿ ಚಕ್ಕೆಗಳನ್ನು ತೆಗೆದು ತಯಾರಿಸಿದ ಮಚ್ಚುಗಳು (ಚಾಪರ್) ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಮೊನೆಯಾದ, ಅಗಲವಾದ, ಉಬ್ಬಿಕೊಂಡಿರುವ ಅಥವಾ ಕಮಾನಿನಂತೆ ಒಳಸರಿದ ಅಲಗುಳ್ಳ ಏಮ್ಮುಖ ಮಚ್ಚುಗಳು ಮತ್ತು ಆಯುಧದ ಸುತ್ತಲೂ ಅಲಗುಳ್ಳ ಅಥ್‍ವಾ ಉಬ್ಬಿಕೊಂಡಿರುವ ಅಲಗುಳ್ಳ ದ್ವಿಮುಖ ಮಚ್ಚುಗಳು ಅಲ್ಲಿಯ ಪೂರ್ವಶಿಲಾಯುಗದ ಆಯುಧ ರೀತಿಗಳು.

ಮಧ್ಯಶಿಲಾಯುಗದ ಆಯುಧಗಳಲ್ಲಿ ಚಕ್ಕೆಕಲ್ಲುಗಳ ಮೇಲೆ ಮಾಡಿದ ಹೆರೆಯುವ ಆಯುಧಗಳು, ಮೊನೆಗಳು ಲೆವಲ್ವಾ ವಿಧಾನದ ತಿರುಳ್ಗಲ್ಲುಗಳ ಮತ್ತು ಚಕ್ಕೆ ಕಲ್ಲುಗಳು ಮುಖ್ಯವಾದವು. ಸುಧಾರಿತ ತಯಾರಿಕಾ

ತಂತ್ರವನ್ನು ಪ್ರತಿಬಿಂಬಿಸುವ ಮಧ್ಯಶಿಲಾಯುಗದ ಈ ಅವಶೇಷಗಳು ಇತರ ಪ್ರದೇಶಗಳ ಆ ಸಂಸ್ಕೃತಿಯನ್ನು ಹೋಲುತ್ತವೆ.

ನಿಟ್ಟೂರು ಬಳಿಯ ನೆಲೆಯ ಮಹತ್ತ್ವ ವಿಶಿಷ್ಟವಾದುದು. ದಕ್ಷಿಣ ಭಾರತದಲ್ಲಿ ಆ ಕಾಲದ ಸಂಸ್ಕೃತಿಯ ಅವಶೇಷಗಳು ಬಹುಮಟ್ಟಿಗೆ ಕೈಗೊಡಲಿ, ಸೀಳುಗ (ಕ್ಲೀವರ್) ಮತ್ತು ಚಕ್ಕೆ ಕಲ್ಲಿನಾಯುಧ ಪದ್ಧತಿಗೆ ಸೇರಿದವು. ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಕೆಲವೆಡೆಗಳಲ್ಲಿ ಮಾತ್ರ ವಾಯವ್ಯ ಭಾರತದ ಪೂರ್ವಶಿಲಾಯುಗ ಪದ್ಧತಿಗೆ ಸೇರಿದ ಉಂಡೆಕಲ್ಲುಗಳಿಂದ ತಯಾರಿಸಿದ ಮಚ್ಚುಗ (ಚಾಪರ್) ನೂರಕ್ಕೆ 40ರ ಪ್ರಮಾಣದಲ್ಲಿ ಕಂಡುಬಂದಿದೆ. ಈವರೆಗೂ ಭಾರತೀಯ ಪುರಾತತ್ತ್ವಜ್ಞರು ವಾಯವ್ಯ ಭಾರತದಲ್ಲಿ ತುಂಡುಕೊಡಲಿ ಸಂಸ್ಕೃತಿ ಮತ್ತು ಭಾರತದ ಉಳಿದೆಡೆಗಳಲ್ಲಿ ಕೈಗೊಡಲಿ ಸಂಸ್ಕೃತಿ ಪ್ರಧಾನವಾಗಿದೆಯೆಂದು ಹೇಳುತ್ತಿದ್ದರು. ಆದರೆ ನಿಟ್ಟೂರಿನ ಉಂಡೆಕಲ್ಲಿನಾಯುಧಗಳು ಕೈಗೊಡಲಿ ಸಂಸ್ಕೃತಿಯ ಸೋಂಕಿಲ್ಲದೆ ಅಸ್ತಿತ್ವದಲ್ಲಿರುವುದು ಮತ್ತು ಕರ್ನೂಲಿನ ಸಾಕ್ಷ್ಯ ಈ ನಂಬಿಕೆಗೆ ಧಕ್ಕೆ ತರುವುದಲ್ಲದೆ ಶಿಲಾಯುಗ ಸಂಸ್ಕೃತಿಯ ಮೂಲ ಸ್ವರೂಪಕ್ಕೆ ಹೊಸ ತಿರುವನ್ನು ಕೊಡುವಂತಾಗಿದೆ. (ಬಿ.ಕೆ.ಜ.)

**ನಿಟ್ಟೂರು ನಂಜಯ್ಯ :** ಸು. 1725. ಪ್ರಸಿದ್ಧ ವ್ಯಾಖ್ಯಾನಕಾರ. ಕೇಶಿರಾಜನ ಶಬ್ದಮಣಿದರ್ಪಣ ಎಂಬ ವ್ಯಾಕರಣ ಗ್ರಂಥಕ್ಕೆ ಟೀಕೆಯನ್ನೂ ಸಂಸ್ಕೃತದಲ್ಲಿ ವೇದಾಂತಸಾರ ವೀರಶೈವಚಿಂತಾಮಣಿ ಎಂಬ ಗ್ರಂಥವನ್ನೂ ಬರೆದಿದ್ದಾನೆ. ನಿಟ್ಟೂರು ಈತನ ಸ್ಥಳ. ವೇದಾಂತಸಾರ ವೀರಶೈವಚಿಂತಾಮಣಿ ಗ್ರಂಥ'ದ ಉತ್ತರ ಖಂಡದ ಮೂರು ಹಸ್ತಪ್ರತಿಗಳು ಬಳ್ಳಾರಿಯ ಸುತ್ತಮುತ್ತ ದೊರೆತಿರುವುದರಿಂದಲೂ ಈತ ಉತ್ತರ ಕರ್ನಾಟಕ ಪ್ರದೇಶವನಾಗಿರಬೇಕೆಂದೂ ಇವನ ಹುಟ್ಟೂರಾದ ನಿಟ್ಟೂರು ಬಳ್ಳಾರಿಯ ಸಮೀಪದ್ದು ಇರಬೇಕೆಂದೂ ಊಹಿಸಬಹುದಾಗಿದೆ. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಇವನ ಹುಟ್ಟೂರಾಗಿರಬೇಕೆಂದೂ ಕೆಲವರ ಅಭಿಪ್ರಾಯ.

ಶಬ್ದಮಣಿದರ್ಪಣದ ಟೀಕೆಯಲ್ಲಿ ಪ್ರತಿಸೂತ್ರಕ್ಕೂ ಪದಚ್ಛೇದ, ಅನ್ವಯ, ಟೀಕು - ಎಂದು ಮೂರು ಭಾಗಮಾಡಿಕೊಂಡು ಅರ್ಥ ವಿವರಿಸಿದ್ದಾನೆ. ಸಂದಿಗ್ಧವಾದೆಡೆಯಲ್ಲಿ ಭಟ್ಟಾಕಳಂಕನ ಶಬ್ದಾನುಶಾಸನದ (ಸು.1604) ಸೂತ್ರಗಳನ್ನು ಉದ್ಧರಿಸಿ ವಿಚಾರ ಎಂಬ ಭಾಗದಲ್ಲಿ ವಿಸ್ತೃತ ವಿವರಣೆ ನೀಡಿದ್ದಾನೆ. ಉದಾಹರಣೆಗೆ ಒಂದು ಸೂತ್ರವನ್ನು ಉದ್ಧರಿಸಲಾಗಿದೆ.

ಅವತರಿಸಿರ್ಕುಮುವರ್ಣದ

ಋವರ್ಣದೋತೌತ್ವದಗ್ರದೊಳ್ ಸ್ವರಮಿರೆ ವ

ತ್ವ ವಿಧಾನಂ ಬಹುಳತೆಯ

ತ್ವವತ್ವದೊಳ್ ಸಂಸ್ಕೃತಕ್ಕೆ ತಾನಿಲ್ಲೆಂದುಂ

ಪದಚ್ಛೇದ - ಅವತರಿಸಿ ಇರ್ಕುಂ, ಉವರ್ಣದ ಋವರ್ಣದ ಓತ್ವೌತ್ವದ ಅಗ್ರದೊಳ್ ಸ್ವರಂ ಇರೆ, ವತ್ವ ವಿಧಾನಂ ; ಬಹುಳತೆ ಯತ್ವವತ್ವದೊಳ್ ಸಂಸ್ಕೃತಕ್ಕೆ ತಾಂ ಇಲ್ಲ ಎಂದುಂ.

ಅನ್ವಯ - ಉವರ್ಣದ ಋವರ್ಣದ ಓತ್ವೌತ್ವದ ಅಗ್ರದೊಳ್ ಸ್ವರಂ ಇರೆ, ವತ್ವ ವಿಧಾನಂ ಅವತರಿಸಿ ಇರ್ಕುಂ; ಸಂಸ್ಕೃತಕ್ಕೆ ಯುತ್ವವತ್ವದೊಳ್ ಬಹುಳತೆ ತಾಂ ಎಂದುಂ ಇಲ್ಲ.

ಟೀಕು - ಉವರ್ಣದ=ಉ ಊ ಎಂಬ ಸವರ್ಣದ: ಋವರ್ಣದ =ಋ ೠ ಎಂಬ ಸವರ್ಣದ; ಓತ್ವೌತ್ವದ=ಓಕಾರ ಔಕಾರದ; ಅಗ್ರದೊಳ್=ಮುಂದೆ; ಸ್ವರಂ=ಸ್ವರಾಕ್ಷರಂ; ಇರೆ=ಇರೆ; ವತ್ವವಿಧಾನಂ =ವಕಾರದವಿಧಾನಂ; ಅವತರಿಸಿರ್ಕುಂ=ಹುಟ್ಟಿರ್ಪುದು; ಸಂಸ್ಕೃತಕ್ಕೆ=ಸಂಸ್ಕೃತ ಶಬ್ದಕ್ಕೆ; ಯತ್ವವತ್ವದೊಳ್=ಯತ್ವಸಂಧಿ ವತ್ವಸಂಧಿಯಲ್ಲಿ; ಬಹುಳತೆ =ಬಹುಳತ್ವ; ತಾಂ=ತಾಂ; ಎಂದುಂ=ಆವಾಗಲುಂ; ಇಲ್ಲ=ಉಂಟಾಗದು

ವಿಚಾರಂ - ಕನ್ನಡದ ಶಬ್ದದಲ್ಲಿ ಯತ್ವವತ್ವ ಸಂಧಿಗಳಲ್ಲಿ ಬಹುಳ ಮುಂಟೆಬುದರ್ಥ. ಅತ್ವದಿನಿವರ್ಣದಿಂ ಮತ್ತೋತ್ವದಿನೈತ್ವ ದಿನವರ್ಣದಿಂ ಮುಂದಕ್ಕುಂ ಯತ್ವಂ, ಉವರ್ಣದ ಋವರ್ಣದೋ ತೌತ್ವದಗ್ರದೊಳ್ ಸ್ವರಮಿರೆ ವತ್ವವಿಧಾನವೆಂಬ ಈ ಯತ್ವ ಸಂಧಿವತ್ವ ಸಂಧಿಗಳಲ್ಲಿ ವಿಚಾರಮುಂಟು; ಅತ್ವಮದೆಂತೆಂದೊಡೆ ಶಬ್ದಾನುಶಾಸನದಲ್ಲಿ (ಸೂತ್ರಂ 1ನೆಯ ಪಾದದ 38ನೆಯ ಸೂತ್ರಂ) ಅತ ಓಷ್ಠ್ಯೇ ಸ್ವರೇ ಪರೇ ಅಕಾರ ಸ್ವವಗ್ಸವತಿ ಎಂಬುದಾಗಿ ಅಕಾರಕ್ಕೆ ಓಷ್ಠ್ಯಸ್ವರಂ ಪರಮಾಗೆ ವತ್ವಸಂಧಿಯಾಗುವುದು. ಆ+ಉದಕಂ=ಆವುದಕಂ; ಆ+ಊರ್=ಆವೂರ್; ಆ+ಊಟಂ=ಆವೂಟಂ ಎಂಬಂತೆ ಓಷ್ಠ್ಯ ಗ್ರಹಣದಿಂ ಕಂಠೋಷ್ಠ್ಯ ಮಂ ಸಂಗ್ರಹಿಸಲ್ಪಟ್ಟುದು.

ಈ ಟೀಕು ಶಬ್ದಮಣಿದರ್ಪಣಾಭ್ಯಾಸಿಗಳಿಗೆ ಒಂದು ಕೈಗನ್ನಡಿಯಂತಿದೆ.

ವೇದಾಂತಸಾರ ವೀರಶೈವಚಿಂತಾಮಣಿ ಪೂರ್ವಖಂಡ ಮತ್ತು ಉತ್ತರ ಖಂಡ ಎಂಬ ಎರಡು ಭಾಗಗಳನ್ನೊಳಗೊಂಡಿದೆ. ಪೂರ್ವಖಂಡ ಅಲಭ್ಯವಾಗಿದ್ದು ಇದರಲ್ಲಿ ವೀರಶೈವ ಶುದ್ಧಶೈವ ಮಿಶ್ರಶೈವ ಮುಂತಾದ ಶೈವರು ಆಚರಿಸಬೇಕಾದ ಸಾಮಾನ್ಯ ಧರ್ಮ ನಿರೂಪಿತವಾಗಿರುವಂತೆ ತಿಳಿಯುತ್ತದೆ. ಉತ್ತರ ಖಂಡದಲ್ಲಿ 21 ಪ್ರಕರಣಗಳಿದ್ದು ಅವುಗಳಲ್ಲಿ ವೀರಶೈವರ ವಿಶೇಷ ಧರ್ಮಗಳು ನಿರೂಪಿತವಾಗಿವೆ. ಲಿಂಗಾಂಗಸಂಯೋಗ ಮತ್ತು ಶಿವಜೀವೈಕ್ಯರೂಪಗಳನ್ನು ತಿಳಿಸುವುದು ಈ ಗ್ರಂಥದ ಗುರಿ ಎಂದು ಹೇಳಿ, ಇವುಗಳ ಅರಿವಿನಿಂದಲೇ ಮುಕ್ತಿ ಎಂಬುದಾಗಿ ಹೇಳಿದ್ದಾನೆ. ಈತನಿಗೆ ಕಾಮಿಕಾಗಮ, ವೀರಾಗಮ ಮುಂತಾದ ಆಗಮಗಳೂ ಶಂಕರಸಂಹಿತೆ, ಸೂತಸಂಹಿತೆ ಮುಂತಾದ ಸಂಹಿತೆಗಳೂ ಶೈವಪುರಾಣ, ಆದಿತ್ಯಪುರಾಣ, ಮಾನವಪುರಾಣ ಮೊದಲಾದ ಪುರಾಣಗಳೂ ಸಿದ್ಧಾಂತ ಶಿಖಾಮಣಿ, ವಿಶೇಷಾರ್ಥಪ್ರಕಾಶಿಕೆ, ಆರಣ್ಯಕಗಳು, ಉಪನಿಷತ್ತುಗಳು - ಇವುಗಳ ಪೂರ್ಣಪರಿಚಯವಿದ್ದು ಅವುಗಳಲ್ಲಿ ಹೇಳಲಾಗಿರುವ ವೀರಶೈವಧರ್ಮ ಮತ್ತು ಆಚಾರಗಳ ಲಕ್ಷಣಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಅವುಗಳಿಗೆ ವಿವರಣೆ ನೀಡಿದ್ದಾನೆ.

ಭಸ್ಮಧಾರಣೆ, ಲಿಂಗಧಾರಣೆ, ರುದ್ರಾಕ್ಷಿಧಾರಣೆ, ಲಿಂಗಪೂಜೆ - ಇವುಗಳ ವಿಧಾನಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾನೆ. ಶಿವಸಂಸ್ಕಾರವಿಲ್ಲದವನನ್ನು ಶ್ವಪಚನೆಂದು ಕರೆದಿದ್ದಾನೆ. ಶಿವಸಂಸ್ಕಾರವನ್ನು ಪಡೆದಮೇಲೆ ಅವನಲ್ಲಿ ಜಾತಿಭೇದವನ್ನೆಣಿಸಬಾರದು; ಹಾಗೆ ಭೇದವನ್ನೆಣಿಸಿದರೆ ಅವರಿಗೆ ರೌರವನರಕ ಪ್ರಾಪ್ತವಾಗುತ್ತದೆಂದು ಹೇಳಿದ್ದಾನೆ. ಶೈವರನ್ನು ಬ್ರಾಹ್ಮಣರೆಂದು ಗಣಿಸಿದ್ದಾನೆ. ಬ್ರಹ್ಮಜ್ಞಾನವುಳ್ಳವನು ಬ್ರಾಹ್ಮಣನೆಂದು ಮಹಾಭಾರತದಲ್ಲಿ ಹೇಳಿರುವುದರಿಂದ ಶೈವನು ಬ್ರಹ್ಮಜ್ಞಾನವುಳ್ಳವನಾದುದರಿಂದ ಅವನೂ ಬ್ರಾಹ್ಮಣನೆನಿಸುತ್ತಾನೆಂದು ವಾದಿಸಿದ್ದಾನೆ.

ಅವತಾನ ಮಂತ್ರದಲ್ಲಿ - ಕಲಿಯುಗದಲ್ಲಿ ನಂದೀಶ್ವರನೇ ಮುಂತಾದ ಗಣಧರರು ಬಸವಣ್ಣ, ಪ್ರಭುದೇವ, ರೇವಣಸಿದ್ಧರಾಗಿ ಜನಿಸುತ್ತಾರೆ. ಅವರ ಜೀವನ ಚರಿತ್ರೆಯೂ ಸೋಮನಾಥ'ಭಾಷ್ಯ, ಬಸವಪುರಾಣ, ಆರಾಧ್ಯಚಾರಿತ್ರ್ಯದಲ್ಲಿ ಪ್ರಸಿದ್ಧವಾಗುತ್ತದೆ ಎಂದು ಹೇಳುವುದರ ಮೂಲಕ ಬಸವಾದಿಗಳನ್ನು ಸ್ಮರಿಸಿಕೊಂಡಿದ್ದಾನೆ. ವೀರಶೈವಧ'ರ್ಮಾಭ್ಯಾಸಿಗಳಿಗೆ ಇದೊಂದು ಆಕರಗ್ರಂಥ'ವಾಗಿದೆ. ಈ ಗ್ರಂಥ'ವನ್ನು ಮಣೂರು ಮಠಾಧ್ಯಕ್ಷ ವೇದಮೂರ್ತಿ ಮಲ್ಲಿಕಾರ್ಜುನ ಶಾಸ್ತ್ರಿಯವರು ಸಂಪಾದಿಸಿ ಪ್ರಕಟಿಸಿದ್ದಾರೆ (1908). ರಂಗಾಚಾರ್ಯ

ಶಾಸ್ತ್ರೀಮುದೋಳಕರ್ ಎಂಬುವವರು ಇದನ್ನು ಮರಾಠಿ ಭಾಷೆಗೆ ಭಾಷಾಂತರಿಸಿದ್ದಾರೆ.

**ನಿಟೂರು ಶ್ರೀನಿವಾಸರಾವ್ :** 1903-2004. ಕರ್ನಾಟಕ (ಮೈಸೂರು) ರಾಜ್ಯದ ನಿವೃತ್ತ ಮುಖ್ಯ ನ್ಯಾಯಾಧೀಶರು. ತಾಯಿ ಸೀತಮ್ಮ, ತಂದೆ ಶಾಮಣ್ಣ ಎ.ವಿ. ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಸೋದರಮಾವ ಸರ್‌ಎಂ.ಎನ್.ಕೃಷ್ಣರಾವ್. ಶ್ರೀನಿವಾಸರಾಯರು 1903 ಆಗಸ್ಟ್ 24ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರು ಮೂರು ವರ್ಷದವರಾಗಿದ್ದಾಗ ತಾಯಿಯನ್ನು ಕಳೆದುಕೊಂಡರು.

ಇವರು ಪ್ರಾಥಮಿಕ ಶಿಕ್ಷಣ ಪಡೆದದ್ದು ಹೊಸದುರ್ಗದಲ್ಲಿ, ಅನಂತರ ಚಳ್ಳಕೆರೆ, ಶಿವಮೊಗ್ಗದಲ್ಲಿ ಇವರ ಓದು ಸಾಗಿತು. ಜೊತೆಗೆ ಇವರು ಹಿಂದಿ ಮತ್ತು ಸಂಸ್ಕೃತದಲ್ಲೂ ಪ್ರಾವೀಣ್ಯ ಪಡೆದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್‌ಸಿ. ಪದವಿ ಗಳಿಸಿದರು. ಅನಂತರ ಮದರಾಸು ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಗಳಿಸಿ ವಕೀಲರಾಗಿದ್ದರು (1927). 1953ರಲ್ಲಿ ಇವರು ಅಡ್ವೋಕೇಟ್ ಜನರಲ್‌ರಾಗಿ ನಿಯುಕ್ತರಾದರು. 1955ರಲ್ಲಿ ಮೈಸೂರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕವಾದರು. 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದ ಬಳಿಕ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿ ಮುಂದುವರಿದರು. 1961ರಲ್ಲಿ ಮುಖ್ಯ ನ್ಯಾಯಾಧೀಶರಾಗಿ 1963ರಲ್ಲಿ ನಿವೃತ್ತರಾದರು. 1964ರಲ್ಲಿ ಕೇಂದ್ರ ಸರಕಾರದ ಜಾಗೃತ ಆಯೋಗದ ಪ್ರಥಮ ಆಯುಕ್ತರಾಗಿ ನೇಮಕಗೊಂಡರು. ಆಡಳಿತದಲ್ಲಿನ ಭ್ರಷ್ಟಾಚಾರವನ್ನು ತೊಡೆದು ಹಾಕಲು ಸಂತಾನಂ ಆಯೋಗದ ಶಿಫಾರಸನ್ನು ಕಾರ್ಯಗತಗೊಳಿಸಲು ಪ್ರಯತ್ನಿಸಿದರು. ಇವರು 1968ರ ವರೆಗೆ ಈ ಹುದ್ದೆಯಲ್ಲಿದ್ದರು. ಇವರಿಗೆ ಮೊದಲಿನಿಂದಲೂ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ಅತೀವ ಆಸಕ್ತಿಯಿತ್ತು. ಇವರು ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಇವರು ಸಕ್ರಿಯರಾಗಿ ದುಡಿದರು. ಜವಾಬ್ದಾರಿ ಸರಕಾರದ ರಚನೆಯ ಹೋರಾಟದಲ್ಲೂ ಇವರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಶಾಖೆ ತೆರೆದು ಹಿಂದಿ ಪ್ರಚಾರಕರಿಗೆಲ್ಲ ಮಾರ್ಗದರ್ಶನ ಮಾಡುತ್ತ ಹದಿನೈದು ವರ್ಷ ಅದರ ಗೌರವಕಾರ್ಯದರ್ಶಿಯಾಗಿ ದುಡಿದರು.

ಮಹಾತ್ಮಾಗಾಂಧೀಜಿಯವರು ಮೂರು ತಿಂಗಳು ಬೆಂಗಳೂರಿನಲ್ಲೂ ಒಂದೂವರೆ ತಿಂಗಳು ನಂದಿಬೆಟ್ಟದಲ್ಲೂ ಇದ್ದಾಗ, ಇವರು ಗಾಂಧೀಜಿಯವರ ಒಡನಾಟ ಬೆಳೆಸಿಕೊಂಡು, ಅವರು ಹಮ್ಮಿಕೊಂಡ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಖಾದಿ ಪ್ರಚಾರದಲ್ಲಿ ತೊಡಗಿದರಲ್ಲದೆ ಸ್ವತಃ ಖಾದಿಧಾರಿಯಾದರು.

ಸ್ವಾತಂತ್ರ್ಯ ಚಳವಳಿಯ ಸಂದೇಶವನ್ನು ಜನತೆಗೆ ತಲುಪಿಸಬೇಕು, ಗಾಂಧೀಸಾಹಿತ್ಯವನ್ನು ಪ್ರಚಾರ ಮಾಡಬೇಕು. ಕನ್ನಡ ಲೇಖಕರನ್ನು ಪ್ರೋತ್ಸಾಹಿಸಬೇಕು ಎಂಬ ಉದ್ದೇಶದಿಂದ ಇವರು ಸತ್ಯಶೋಧನ ಪ್ರಕಟಣಾಮಂದಿರವನ್ನು ಆರಂಭಿಸಿ (1928) 1967ರ ವರೆಗೆ ಅದನ್ನು ತಮ್ಮ ಮಗ ಚಂದ್ರಶೇಖರರ ಸಹಾಯದಿಂದ ನಡೆಸಿದರು. ಇವರಿಬ್ಬರ ಪರಿಶ್ರಮದಿಂದ ಸತ್ಯಶೋಧನ ಪ್ರಕಟಣಾಮಂದಿರ ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆಯಿತು. ಈ ಪ್ರಕಟಣಾಲಯದಿಂದ ಅನೇಕ ಸಾಹಿತಿಗಳ ಉತ್ತಮ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ಇವರು ಸಕ್ರಿಯರಾಗಿ ಐವತ್ತಕ್ಕೂ ಹೆಚ್ಚು ವರ್ಷ ದುಡಿದರು.

ಇವರು ಸರ್.ಎಂ.ಎನ್. ಕೃಷ್ಣರಾವ್ ಅವರ ಮಗಳು ಪದ್ಮಮ್ಮನವರನ್ನು 1921ರಲ್ಲಿ ಮದುವೆಯಾದರು. ಮೊದಲಿನಿಂದಲೂ ರಾಷ್ಟ್ರೀಯ ಭಾವನೆ ಬೆಳೆಸಿಕೊಂಡ ಈ ದಂಪತಿಗಳು ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆ ಮತ್ತು ಗಾಂಧೀಜಿಯವರ ಅನಾಸಕ್ತಿಯೋಗವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಅದರ ಪ್ರತಿಗಳು ಸುಲಭ ಬೆಲೆಯಲ್ಲಿ ಮನೆಮನೆಗೂ ತಲುಪುವಂತೆ ಯತ್ನಿಸಿದರು. ಇವರು ಇಂಗ್ಲಿಷಿನ ಕೆಲವು ಕಥೆಗಳನ್ನೂ ಕನ್ನಡಕ್ಕೆ ತಂದಿದ್ದಾರೆ. ಸ್ತ್ರೀಯರಿಗಾಗಿ ಒಂದು ಗ್ರಂಥ ಬರೆದಿದ್ದಾರೆ. ಇವರು ಬರೋಡದಲ್ಲಿ ಸೇರಿದ್ದ ಹೊರನಾಡು ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನ್ಯಾಷನಲ್ ಕಾಲೇಜಿನಲ್ಲಿದ್ದಾಗ ಸೇವಾದಲದ ಚಟುವಟಿಕೆಗಳಲ್ಲೂ ತೊಡಗಿಕೊಂಡಿದ್ದರು. ಡಿ.ವಿ.ಗುಂಡಪ್ಪನವರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಆರಂಭಿಸಿದಂದಿನಿಂದಲೂ ನಿಟ್ಟೂರರು ಆ ಸಂಸ್ಥೆಯನ್ನು ಬೆಳೆಸಲು ಹಲವು ಕ್ರಮ ಕೈಗೊಂಡರು. ಈ ಸಂಸ್ಥೆಯ ಕಾರ್ಯದರ್ಶಿಯಾಗಿ (1945-64) ಮತ್ತು (1975-2003) ಸಂಸ್ಥೆಯ ಪೋಷಕರಾಗಿ ದುಡಿದರು. ನಿರಾಡಂಬರ ವ್ಯಕ್ತಿಯಾಗಿದ್ದ ನಿಟ್ಟೂರರು ಬೆಂಗಳೂರಿನ ಸಭೆ ಸಮಾರಂಭಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು.

ಇವರು ಬೆಂಗಳೂರಿನ ಗಾಂಧಿ ಸ್ಮಾರಕನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಪ್ರಕೃತಿ ಚಿಕಿತ್ಸಾ ಪರಿಷತ್, ಇಂಡಿಯನ್ ನ್ಯಾಷನಲ್ ಸೆಂಟರ್ ಆಫ್ ದಿ ವರ್ಲ್ಡ್ ಯೂನಿಯನ್ ಇಂಟರ್ ನ್ಯಾಷನಲ್ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 1954ರ ಡಿಸೆಂಬರ್‌ನಲ್ಲಿ ಬೆಳಗಾಂವಿಯಲ್ಲಿ ನಡೆದ ಬಾರ್ ಕೌನ್ಸಿಲ್‌ನ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಚಿತ್ತೂರು ಜಿಲ್ಲೆಯ ಲಾ ಕಾನ್‌ಫರೆನ್ಸ್ ಅಧ್ಯಕ್ಷರಾಗಿ 1965ರಲ್ಲಿ ನಿಯುಕ್ತರಾದರು. ಮೊದಲಿನಿಂದಲೂ ಅರವಿಂದಾಶ್ರಮದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಇವರು ಸುಮಾರು 10 ವರ್ಷ ಅದರ ಅಧ್ಯಕ್ಷರಾಗಿದ್ದರು. ಇವರು ಸಂಯುಕ್ತ ಕರ್ನಾಟಕದ ಆರಂಭದ ದಿನಗಳಿಂದಲೂ ಲೋಕಶಿಕ್ಷಣ ಟ್ರಸ್ಟಿನ ಸಂಪರ್ಕವಿಟ್ಟುಕೊಂಡಿದ್ದರು. ಅನೇಕ ಬಾರಿ ಇವರು ಟ್ರಸ್ಟಿನ ಅಧ್ಯಕ್ಷರಾಗಿದ್ದರು.

ಇವರಿಗೆ ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯು ಗೌರವ ಡಾಕ್ಟರೇಟ್ ಬಂದಿದೆ (1996). ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದವರಿಗೆ ಕೊಡುವ ಅತ್ಯುನ್ನತ ಗೌರವ ಡಾಕ್ಟೋರೇಟ್ ಪದವಿ (ಎಲ್‌ಎಲ್.ಡಿ) ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ (1997).

ಇವರು ಅಮೆರಿಕ, ಯುರೋಪ್, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. 2001ರಲ್ಲಿ ಮಾಂಚೆಸ್ಟರ್‌ನಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ ಇವರು ಭಾಗವಹಿಸಿದ್ದರು. ಬೆಂಗಳೂರಿನ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು 2004 ಆಗಸ್ಟ್ 12ರಂದು ನಿಧನರಾದರು. (ಎಸ್.ಎಂ.ಕೆ.)

**ನಿಡುಗಲ್ಲು :** ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಕಸಬಾದಿಂದ ಪಶ್ಚಿಮಕ್ಕೆ ಸು. 29 ಕಿಮೀ ದೂರದಲ್ಲಿರುವ ಒಂದು ಸಣ್ಣ ಹಳ್ಳಿ. ಇದೇ ಹೆಸರಿನ ಹೋಬಳಿಯ ಕೇಂದ್ರ. ಸಮುದ್ರಮಟ್ಟದಿಂದ 1221 ಮೀ ಎತ್ತರಕ್ಕೆ ಮೊನಚಾಗಿ ಚಾಚಿಕೊಂಡು ಸುತ್ತಲಿನ ಪ್ರದೇಶಕ್ಕೆ ಎದ್ದುಕಾಣುವಂತಿರುವ ಈ ಗ್ರಾಮದ ಸಮೀಪದ ಬೆಟ್ಟವೊಂದರಿಂದ ಈ ಸ್ಥಳಕ್ಕೆ ನಿಡುಗಲ್ಲು ಎಂದು ಹೆಸರು ಬಂದಿದೆ.

ಬೆಟ್ಟದ ಪಾದದಲ್ಲಿ ಪೂರ್ವ ಮತ್ತು ದಕ್ಷಿಣಕ್ಕೆ ಗ್ರಾಮವಿದೆ. ಹಿಂದೆ ವೈಭವದಿಂದ ಮೆರೆದ ಈ ಸ್ಥಳ 9-10ನೆಯ ಶತಮಾನದಲ್ಲಿ ಹೆಂಜೇರಿನಿಂದ (ಈಗಿನ ಹೇಮಾವತಿ) ಆಳುತ್ತಿದ್ದ ನೊಳಂಬ ರಾಜರ ವಶದಲ್ಲಿತ್ತು. ಅನಂತರ ಸ್ಥಳೀಯ ಚೋಳವಂಶವೊಂದರ ಒಡೆತನದಲ್ಲಿತ್ತು (ನೋಡಿ: ನಿಡುಗಲ್ಲು ಚೋಳರು), ವಿಜಯನಗರ ಅರಸುಗಳ ಕಾಲದಲ್ಲಿ ತಿಪ್ಪನಾಯಕನ ವಂಶಕ್ಕೆ ಸೇರಿದ ಪಾಳೆಯಗಾರರು ಇಲ್ಲಿ ಆಳುತ್ತಿದ್ದರು (ನೋಡಿ: ಹರತಿಯ ಪಾಳೆಯಗಾರರು). ಗ್ರಾಮದ ಸಮೀಪದಲ್ಲಿರುವ ಬೆಟ್ಟ (ನಿಡುಗಲ್ಲು ದುರ್ಗ) ಎರಡು ಮೂರು ಘಟ್ಟಗಳಲ್ಲಿ ಮೇಲೆ ಹಬ್ಬಿದೆ. ಏರು ಕಡಿದು, ಅದರ ಮೇಲೇರಿದರೆ ಅನೇಕ ಗಿರಿಪಂಕ್ತಿಗಳು ಮತ್ತು

ಸರೋವರಗಳ ಹರಿವಿನ ಭವ್ಯದೃಶ್ಯವನ್ನು ಕಾಣಬಹುದು. ಬೆಟ್ಟ ಅನೇಕ ಕೋಟೆಗಳಿಂದ ಆವೃತ್ತವಾಗಿದೆ. ಈ ಕೋಟೆಗಳಿಗೆ ಕಲ್ಲೇಶ್ವರಕೋಟೆ, ಭೈರವನ ಕೋಟೆ, ಅರೆಕೋಟೆ, ನಾಗೇಶ್ವರಕೋಟೆ ಮುಂತಾಗಿ ಕರೆಯುತ್ತಾರೆ. ಅಂತೆಯೇ ಅಲ್ಲಿನ ಅನೇಕ ಹೆಬ್ಬಾಗಿಲುಗಳಿಗೆ ಮತನೂರುಬಾಗಿಲು, ಸಿಂಗಾರದ ಬಾಗಿಲು, ಶಿವಲಯ್ಯನ ದಿಡ್ಡಿ ಮೊದಲಾದ ಹೆಸರುಗಳಿವೆ. ಅನೇಕ ದೋಣೆಗಳೂ ಹಿಂದಿನ ಕಾಲದ ಉಗ್ರಾಣಗಳು, ಮದ್ದಿನ ಮನೆಗಳು, ಫಿರಂಗಿಯ ತುಂಡುಗಳು ಮತ್ತು ಅರಮನೆಯ ಅವಶೇಷಗಳೂ ಕೋಟೆಗಳೊಳಗಿವೆ. ಬೆಟ್ಟದ ತುದಿಯಲ್ಲಿ ಹರತಿಯ ಪೊಟ್ಟಣ್ಣನಾಯಕ ಕಟ್ಟಿದ (1653) ಬಸವನಗುಡಿ, ಸ್ವಲ್ಪ ಕೆಳಗೆ ತಿಮ್ಮಣ್ಣನಾಯಕ ಜೀರ್ಣೋದ್ಧಾರಮಾಡಿದ (1670) ಹಳೆಯ ಕಾಳಹಸ್ತೇಶ್ವರ ಗುಡಿ ಇವೆ. ಸಮೀಪದಲ್ಲೇ 1150ರಲ್ಲಿ ಕಟ್ಟಿದ ಅನೇಕ ಸುಂದರ ಶಿಲ್ಪಗಳಿರುವ ಈಗ ಶಿಥಿಲವಾಗಿರುವ ನಾಗೇಶ್ವರ ದೇವಾಲಯವಿದೆ. ಇದರಿಂದ ಆನತಿ ದೂರದಲ್ಲಿ ಹಿಂದೆ ಪಟ್ಟಣದ ನೀರು ಸರಬರಾಜಿಗಾಗಿ ಇದ್ದ ಭೂಗತ ನಾಲೆ ಇದೆ. ಹರತಿಯ ಚಿಕ್ಕತಿಪ್ಪನಾಯಕ ತನ್ನ ಹೆಂಡತಿ ಲಕ್ಷ್ಮೀದೇವಿಯ ನೆನಪಿಗಾಗಿ ಕಟ್ಟಿದ (1487) ಲಕ್ಷ್ಮಣೇಶ್ವರ ದೇವಾಲಯ ಮತನೂರು ಬಾಗಿಲ ಬಳಿ ಇದೆ.

ಬೆಟ್ಟದ ಮೊದಲ ಏರಿನಲ್ಲಿ ತಳದ ಗ್ರಾಮಕ್ಕೆ ಸೇರಿದಂತೆ ರಂಗಧಾಮನ ಮಂಟಪವೆಂಬ ಶಿಖರವಿರುವ ಒಂದು ಚಿಕ್ಕ ದೇವಾಲಯವಿದೆ. ಗ್ರಾಮದ ಸುತ್ತಮುತ್ತ ಅನತಿದೂರದಲ್ಲಿ ವೀರಭದ್ರ, ಪಾರ್ಶ್ವನಾಥ, ಆದಿನಾರಾಯಣ, ಲಕ್ಷ್ಮೀನರಸಿಂಹ, ನಗರೇಶ್ವರ, ಮಲೆಮಲ್ಲಿಕಾರ್ಜುನ ಮತ್ತು ಸೋಮೇಶ್ವರ ದೇವಾಲಯಗಳಿವೆ. ಇವುಗಳಲ್ಲಿ ಸುಂದರವಾದ ಕೆಲವು ವಿಗ್ರಹಗಳಿರುವ ಪಾರ್ಶ್ವನಾಥ ಬಸದಿ ಶಾಸನವೊಂದರಲ್ಲಿ ಜೋಗುವಟ್ಟಿಗೆಯ ಬಸದಿ ಎಂದು ಕರೆಯಲಾಗಿರುವ 1232ರಲ್ಲಿ ರಚಿತವಾದ ದೇವಾಲಯ. ನಗರೇಶ್ವರ ಮತ್ತು ಸೋಮೇಶ್ವರ ದೇವಾಲಯಗಳು ಕ್ರಮವಾಗಿ 1248 ಮತ್ತು 1292ರಲ್ಲಿ ರಚಿತವಾದ ದ್ರಾವಿಡ ರೀತಿಯ ಕಟ್ಟಡಗಳು.

ಇವಲ್ಲದೆ ದುರ್ಗದ ಅಡಿಯಲ್ಲಿ ಹೊಟ್ಟೇಶ್ವರ (ರಚನೆ 1681), ರಾಮ, ಕಾಶಿವಿಶ್ವೇಶ್ವರ ದೇವಾಲಯಗಳು ಮತ್ತು ಮಿರ್ಜಾ ಹುಸೇನ್ ವಿಲಯ ಸಮಾಧಿ ಸಹ ಇವೆ. (ಎಚ್.ವಿ.ಎಸ್.)

**ನಿಡುಗಲ್ಲು ಚೋಳರು :** 12-13ನೆಯ ಶತಮಾನಗಳಲ್ಲಿ ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳ ಕೆಲವು ಭಾಗಗಳನ್ನು ಆಳುತ್ತಿದ್ದ ಮಹಾಮಂಡಲೇಶ್ವರ ಮನೆತನದ ಅರಸರು. ಇವರ ರಾಜಧಾನಿ ಮೊದಲು ಹೆಂಜೇರು (ಅನಂತಪುರ ಜಿಲ್ಲೆ, ಹಿಂದೂಪುರ ತಾಲ್ಲೂಕಿನಲ್ಲಿರುವ ಈಗಿನ ಹೇಮಾವತಿ), ಅನಂತರ ನಿಡಗಲ್ಲು (ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು), ಇವರು ಸೂರ್ಯವಂಶದವರು. ಕರಿಕಾಲನ ವಂಶೋದ್ಭವರು,ಇವರಿಗೆ ಒಱೆ ಯೂರುಪುರವರಾಧೀಶ್ವರ, ರೊದ್ದರಗೋವ, ಅಱುವತ್ತರು ಮಂಡಳಿಕರ ಗಂಡ, ಗಂಡಭೇರುಂಡ, ಚೋಳಮಹಾರಾಜ ಇತ್ಯಾದಿ ಬಿರುದುಗಳಿದ್ದುವು.

ಇವರಿಗೂ ಮೂಲಚೋಳ ವಂಶದವರಿಗೂ ಇದ್ದ ಸಂಬಂಧ ತಿಳಿಯದು. ಇವರು ಚೋಳರೆಂದು ಪ್ರಸಿದ್ಧರಾಗಿದ್ದರೂ ಇವರ ಶಾಸನಗಳೆಲ್ಲಾ ಕನ್ನಡದಲ್ಲಿವೆ. ಅಲ್ಲದೆ ಚೋಳಧನಂಜಯ, ಚೋಳಿಕ, ಮುತ್ತರಸ ಮುಂತಾದ ಚೋಳನಾಮವುಳ್ಳ ವ್ಯಕ್ತಿಗಳು 8ನೆಯ ಶತಮಾನದಲ್ಲಿಯೇ ಈ ಪ್ರದೇಶದಲ್ಲಿ ಆಳುತ್ತಿದ್ದರೆಂಬುದೂ ಗಮನಾರ್ಹ ವಿಷಯ.

ಸದ್ಯದ ನಿಡುಗಲ್ಲು ಚೋಳರ ಶಾಸನಗಳಲ್ಲಿ ಬ್ರಹ್ಮಭೋಗೇಂದ್ರ, ಮಂಗಿ, ಬೀಚಿದೇವ (ಬಬ್ಬೆದೇವ), ಗೋವಿಂದ ಎಂಬ ಪೂರ್ವಿಕರ ಪುತ್ರಾನುಕ್ರಮ ದೊರಕುತ್ತದೆ. ಗೋವಿಂದನ ಮಗ ವೀರಪಾಂಡ್ಯ ಇರುಂಗೊಳದೇವ ಪ್ರಥಮ ಮಹಾಮಂಡಲೇಶ್ವರ, ಇವನ ಆಳ್ವಿಕೆ 1106ರ ಹೊತ್ತಿಗೇ ಪ್ರಾರಂಭವಾಗಿತ್ತು. 1128ರ ಒಂದು ಶಾಸನದಲ್ಲಿ ಇವನು ರೊದ್ದ-300, ಶಿರೆ-300, ಹೆಱುವೆ-300, ಸಿಂದವಾಡಿ-1000 ಪ್ರಾಂತ್ಯವನ್ನು ಚಾಳುಕ್ಯತ್ರೈಲೋಕ್ಯಮಲ್ಲನ ಆಶ್ರಯದಲ್ಲಿ ಆಳುತ್ತಿದ್ದನೆಂದು ಹೇಳಿದೆ. ವಿಷ್ಣುವರ್ಧನ ಇವನ ಮೇಲೆ ದಂಡೆತ್ತಿಬಂದಿದ್ದನೆಂದು ಹೊಯ್ಸಳ ಶಾಸನಗಳು ತಿಳಿಸುತ್ತವೆ. ಇರುಂಗೋಳನಿಗೆ ಆಳ್ವದೇವಿ ಎಂಬ ಪತ್ನಿಯೂ ಮಲ್ಲಿದೇವ ಎಂಬ ಮಗನೂ ಇದ್ದರು. ಮಲ್ಲಿದೇವ ತನ್ನ ತಂದೆಯ ಜೊತೆಯಲ್ಲಿಯೇ 1108ರಲ್ಲಿ ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿ ಕೆಲವು ಪ್ರದೇಶಗಳನ್ನು ಆಳುತ್ತಿದ್ದ. 1147ರ ಹೊತ್ತಿಗೆ ಇಮ್ಮಡಿ ಜಗದೇಕಮಲ್ಲನ ಆಶ್ರಯದಲ್ಲಿ ತನ್ನ ತಂದೆಯ ರಾಜ್ಯದ ಮೇಲೆ ಒಡೆತನವನ್ನು ಪಡೆದಿದ್ದ. ಇವನ ರಾಜಧಾನಿ ಹೆಂಜೇರು. ಹೊಯ್ಸಳ ಒಂದನೆಯ ನರಸಿಂಹ ಇವನ ಮೇಲೆ ಅಸಫಲ ದಾಳಿ ಮಾಡಿದ್ದ. ಇವನ ಮಂತ್ರಿ ತಂತ್ರಪಾಲ 1167ರಲ್ಲಿ ಹೆಂಜೇರಿನ ಘಟಿಕಾಸ್ಥಾನಕ್ಕೆ ದಾನವಿತ್ತನೆಂದು ಒಂದು ಶಾಸನದಿಂದ ತಿಳಿಯುತ್ತದೆ. ಇವನ ಆಳ್ವಿಕೆಯ ಬಗ್ಗೆ ತಿಳಿದಿರುವ ಕಡೆಯ ವರ್ಷ 1179. ಇವನಿಗೆ ಲಕ್ಮಾದೇವಿ ಮತ್ತು ಸೀತಾದೇವಿ ಎಂಬ ಇಬ್ಬರು ಪತ್ನಿಯರೂ ಬಮ್ಮ ಎಂಬ ಮಗನೂ ಇದ್ದರು. ಬಮ್ಮನ ಹೆಂಡತಿ ಬೀಚಲದೇವಿ. ಇವನ ಇನ್ನೊಬ್ಬ ಮಗನಿರಬಹುದಾದ ಗೋವಿಂದ ಎಂಬುವನ ಉಲ್ಲೇಖ 1207ರ ಒಂದು ಶಾಸನದಲ್ಲಿ ದೊರಕುತ್ತದೆ. 1208ರ ಸುಮಾರಿನಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳ ನಿಡುಗಲ್ಲನ್ನು ಆಕ್ರಮಿದ್ದ. ಪುನಃ 1232ರ ಹೊತ್ತಿಗೆ ಬಮ್ಮನ ಮಗ ಇರುಂಗೊಳ, 11 ಪ್ರಾಯಶಃ ಸ್ವತಂತ್ರನಾಗಿ ನಿಡುಗಲ್ಲು ರಾಜಧಾನಿಯಿಂದ ಆಳುತ್ತಿದ್ದ. 1267ರಲ್ಲಿ ಇರುಂಗೋಳನು ಹೊಯ್ಸಳ ರಾಜ್ಯಕ್ಕೆ ಸೇರಿದ್ದ ಆನೆಬಿದ್ದಸರಿಯ (ದೇವರಾಯನದುರ್ಗ) ಮೇಲೆ ಆಕ್ರಮಣ ಮಾಡಿದ್ದನಲ್ಲದೆ, 1276ರಲ್ಲಿ ಸೇವುಣರ ಜೊತೆ ಸೇರಿ, ದೋರಸಮುದ್ರದ ದಾಳಿಯಲ್ಲೂ ಭಾಗವಹಿಸಿದ್ದ. 1278ರ ಒಂದು ಶಾಸನದಿಂದ ಹೆದ್ದೊರೆ ಇವನ ರಾಜ್ಯದ ಗಡಿಯಾಗಿದ್ದಿತೆಂದು ತಿಳಿಯುತ್ತದೆ. ಇಮ್ಮಡಿ ಗೋವಿಂದ, ಮುಮ್ಮಡಿ ಇರುಂಗೊಳ, ಭೋಗ, ಬೊಮ್ಮ ಇತ್ಯಾದಿ ರಾಜರು ನಿಡಗಲ್ಲು ರಾಜ್ಯವನ್ನು ಆಳಿದರೆಂದು ಕೆಲವರ ಹೇಳಿಕೆ. ಆದರೆ ಇದು ಅಸ್ಪಷ್ಟ ವಿಷಯ.

ನಿಡುಗಲ್ಲು ಚೋಳರ ಕಿರುಕುಳವನ್ನು ಸಹಿಸದ ಹೊಯ್ಸಳ ಇಮ್ಮಡಿ ನರಸಿಂಹ 1285ರಲ್ಲಿ ನಿಡಗಲ್ಲನ್ನು ನೆಲಸಮ ಮಾಡಿದ. ಇದರೊಂದಿಗೆ ಈ ಚೋಳವಂಶದ ಆಳ್ವಿಕೆ ಕೊನೆಗೊಂಡಂತೆ ತೋರುತ್ತದೆ.

ಅನಂತರ 14-15ನೆಯ ಶತಮಾನಗಳ ಶಾಸನಗಳಲ್ಲಿ ಪ್ರಾಯಶಃ ಈ ಕುಲದ ಕೆಲವು ತುಂಡಧಿಕಾರಿಗಳ ಹೆಸರುಗಳು ಮಾತ್ರ ಕೇಳಿಬರುತ್ತವೆ. (ಎಚ್.ವಿ.ಎಸ್.)

**ನಿಪ್ಪಾಣಿ :** ಬೆಳಗಾಂವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಒಂದು ಪಟ್ಟಣ. ಹೋಬಳಿ ಕೇಂದ್ರ. ಬೆಳಗಾಂವಿ-ಕೊಲ್ಲಾಪುರ ಮಾರ್ಗದಲ್ಲಿ ಮಹಾರಾಷ್ಟ್ರ-ಬೆಳಗಾಂವಿಯ ಗಡಿಯಂಚಿನಲ್ಲಿ ಬೆಳಗಾಂವಿಯ ಉತ್ತರಕ್ಕೆ 72 ಕಿಮೀ ದೂರದಲ್ಲೂ ಚಿಕ್ಕೋಡಿಯ ಪಶ್ಚಿಮಕ್ಕೆ 24ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 58,061.

ನಿಪ್ಪಾಣಿ ಪ್ರಸಿದ್ಧಿಗೆ ಬರಲು ದೇಸಾಯಿ ಸಿದ್ದೋಜಿರಾವ್ ಅಪ್ಪಾಸಾಹೇಬ ನಿಂಬಾಳಕರ ಎಂಬಾತ ಕಾರಣನೆಂದು ಹೇಳುವರು. 1812ರಲ್ಲಿ ಎಲ್‌ಫಿನ್‌ಸ್ಟನ್‌ನ ಮಧ್ಯಸ್ಥಿಕೆಯಿಂದ ಕೊಲ್ಲಾಪುರದ ಅರಸ ಮನಗೋಳಿ ಮತ್ತು ಚಿಕ್ಕೋಡಿ ಪರಗಣೆಗಳನ್ನು ನಿಪ್ಪಾಣಿಕರನಿಗೆ ಕೊಟ್ಟನೆಂದು ತಿಳಿದುಬರುತ್ತದೆ. ಮುಂದೆ ನಿಪ್ಪಾಣಿಕರ ಪೇಶವೆಗಳ ಪಕ್ಷ ವಹಿಸಿದ್ದಕ್ಕಾಗಿ ಬ್ರಿಟಿಷರು ಮನಗೋಳಿ ಮತ್ತು ಚಿಕ್ಕೋಡಿ ಪರಗಣೆಗಳನ್ನು ವಾಪಸ್ಸು ಪಡೆದು ಕೊಲ್ಲಾಪುರದ ಅರಸನಿಗೇ ಕೊಟ್ಟರು. 1839ರಲ್ಲಿ ಅಪ್ಪಾಸಾಹೇಬ ಮೃತನಾದುದರಿಂದ ಇಂಗ್ಲಿಷ್ ಸರ್ಕಾರ ಅವನ ಮೊದಲಿನ 15000 ದ ದೇಸಗತಿಯನ್ನು ಬಿಟ್ಟು ಉಳಿದ ಸೀಮೆಯನ್ನೆಲ್ಲಾ ತನ್ನ ವಶಕ್ಕೆ ತೆಗೆದುಕೊಂಡಿತು.

ಇಂದು ನಿಪ್ಪಾಣಿ ಒಂದು ಪ್ರಮುಖ ವ್ಯಾಪಾರ ವಾಣಿಜ್ಯ ಕೇಂದ್ರವಾಗಿದೆ. ಅಕ್ಕಿ, ಅಡಕೆ, ಏಲಕ್ಕಿ, ಸಕ್ಕರೆ, ಕಾಳು, ವಸ್ತ್ರ ಮತ್ತು ಪಾತ್ರೆಗಳ ವ್ಯಾಪಾರ ದಿನೇ ದಿನೇ ಬೆಳೆಯುತ್ತಿದೆ. ನಿಪ್ಪಾಣಿ ತಂಬಾಕಿನ ವ್ಯಾಪಾರಕ್ಕೆ ಇಡೀ ಜಿಲ್ಲೆಯಲ್ಲೇ ಪ್ರಸಿದ್ಧ. ರೈಲುಮಾರ್ಗವಿಲ್ಲದಿದ್ದರೂ

ಉತ್ತಮವಾದ ರಸ್ತೆಗಳಿರುವುದರಿಂದ ಜಿಲ್ಲೆಯ ಎಲ್ಲಾ ಕಡೆಗೂ ಮಾರ್ಗಸಂಪರ್ಕವಿದೆ. ನಿಪ್ಪಾಣಿ ಪೌರಾಡಳಿತಕ್ಕೆ ಒಳಪಟ್ಟಿದೆ. 1956ರ ವರೆಗೂ ಇಡೀ ಬೆಳಗಾಂವಿ ಜಿಲ್ಲೆಯಲ್ಲೇ ಕುಡಿಯಲು ಕೊಳಾಯಿ ನೀರನ್ನು ಪಡೆಯುತ್ತಿದ್ದ ನಗರ ನಿಪ್ಪಾಣಿ ಒಂದೇ. ರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ. ಪ್ರವಾಸಿಮಂದಿರ, ಧರ್ಮಶಾಲೆ, ಗ್ರಂಥಭಂಡಾರ ಪ್ರೌಢಶಾಲೆ ಮತ್ತು ಕಾಲೇಜುಗಳು ಇವೆ. (ಎಸ್.ಪಿ.ವಿ., ಪಿ.ಕೆ.)

**ನಿರಂಜನ:** 1924-92. ಪ್ರಸಿದ್ಧ ಸಾಹಿತಿ, ಪತ್ರಕರ್ತ, ಅಂಕಣಕಾರ. ಪ್ರಗತಿಶೀಲ ಮನೋಭಾವದ ವಿಚಾರವಂತರು. ಕುಳಕುಂದ ಶಿವರಾಯ ಎಂಬುದು ಇವರ ನಿಜನಾಮ. ಬಾಲ್ಯದಲ್ಲಿ ಗಾಂಧೀವಾದಕ್ಕೆ ಮನಸೋತು, ಅನಂತರ ಸಮಾಜವಾದದತ್ತ ಒಲವು ಬೆಳೆಸಿಕೊಂಡರು. ಹರೆಯದಲ್ಲಿ ಸಮತಾವಾದದ ಸಿದ್ಧಾಂತಗಳಿಂದ ಪ್ರಭಾವಿತರಾಗಿ ಮಾರ್ಕ್ಸ್‌ವಾದಿಯಾಗಿ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಸದಸ್ಯರಾದರು (1943). ಹಲವಾರು ವರ್ಷಗಳ ಅನಂತರ ನಾನಾ ಕಾರಣಗಳಿಂದಾಗಿ ಪಕ್ಷದಿಂದ ಹೊರಬಂದು (1953) ತಮ್ಮ ದಾರಿ ತಾವೇ ಕಂಡು ಕೊಂಡರು.

ಇವರು 1924 ಜೂನ್ 15ರಂದು ಈಗಿನ ಮಂಗಳೂರು ಜಿಲ್ಲೆ ಪುತ್ತೂರು ತಾಲ್ಲೂಕಿನ ಕುಳಕುಂದ ಎಂಬ ಹಳ್ಳಿಯಲ್ಲಿ ಜನಿಸಿದರು. ತಾಯಿ ಚಿನ್ನಮ್ಮ. ತಾಯಿಯ ಹೋರಾಟದ ಮನೋಭಾವವೇ ಮಗನಿಗೂ ಮೈ-ಮನಗೂಡಿ ಬಂದಿತು. ತಾಯಿ ಅಕ್ಕರೆಯಿಂದ ಇವರನ್ನು ಶಿವರಾಯ ಎಂದು ಕರೆಯುತ್ತಿದ್ದರು. ಕಾಪುವಿನಲ್ಲಿ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು (1930-33) ಸುಳ್ಯದಲ್ಲಿ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸವನ್ನು (1934-38) ಪೂರೈಸಿದರು. ಆ ಅವಧಿಯಲ್ಲಿ ಮಡಕೇರಿಯಿಂದ ಸುಳ್ಯ ಮಾರ್ಗವಾಗಿ ಬಂದ ಗಾಂಧಿಜೀಯನ್ನು ಕಂಡರು. 1935ರಲ್ಲಿ ಶಿವರಾಮ ಕಾರಂತರ ನೇತೃತ್ವದಲ್ಲಿ ಸುಳ್ಯದಲ್ಲಿ ನಡೆದ ಮಕ್ಕಳ ಕೂಟದಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. 1937ರ ಮೊದಲ ಭಾಗದಲ್ಲಿ ಪುತ್ತೂರಿಗೆ ಹೋಗಿ ಜವಾಹರಲಾಲ್ ನೆಹರೂರವರ ಭಾಷಣವನ್ನು ಕೇಳಿದರು. ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿ (1938-41) ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತು ತೇರ್ಗಡೆಯಾದರು. ಆದರೆ ಆಳುವ ಪರಕೀಯರ ಹಂಗು ಬೇಡವೆಂದು ಉತ್ತೀರ್ಣತಾ ಪತ್ರವನ್ನು ನಿರಾಕರಿಸಿ, ಉದ್ಯೋಗವನ್ನರಸುತ್ತ ಮಂಗಳೂರಿಗೆ ಬಂದರು. ರಾಷ್ಟ್ರಬಂಧು ಪತ್ರಿಕಾಲಯದಲ್ಲಿ ಕಾರ್ಯನಿರ್ವಹಿಸುತ್ತಲೇ (1942) ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಪತ್ರಿಕೆಯ ಸುದ್ದಿಗಾರರಾಗಿ ಕೆಲಸ ಮಾಡಿದರು.

ಪತ್ರಿಕಾ ರಂಗದಲ್ಲಿ ಹೆಚ್ಚಿನ ಅವಕಾಶಕ್ಕಾಗಿ ಮಂಗಳೂರನ್ನು ತೊರೆದು ಬೆಂಗಳೂರಿಗೆ ಬಂದರು. ಪ್ರಜಾಮತ ಪತ್ರಿಕೆಯ ಸಹಸಂಪಾದಕರಾದರು (1945). ಅನಂತರ 1947 ಮೇ 1ರಂದು ಆರಂಭವಾದ ಜನಶಕ್ತಿ ಪತ್ರಿಕೆಯ ಸಂಪಾದಕರಾದರು. 1948ರಲ್ಲಿ ಕಮ್ಯೂನಿಸ್ಟ್ ಪಕ್ಷದ ವಿರುದ್ಧ ಸರ್ಕಾರ ಅಸ್ತ್ರಹಿರಿದಾಗ ಭೂಗತ ಜೀವನ ನಡೆಸಿದರು. ಜನಶಕ್ತಿ ಪತ್ರಿಕೆಯ ಮೇಲೆ ಸರ್ಕಾರ ನಿಷೇಧಾಜ್ಞೆ ಹೇರುವವರೆಗೂ ಹುಬ್ಬಳ್ಳಿ-ಧಾರವಾಡಗಳಲ್ಲಿ ತಲೆಮರೆಸಿಕೊಂಡು ಪತ್ರಿಕೆಗೆ ಸುದ್ದಿಯನ್ನು ಮುಟ್ಟಿಸುತ್ತಿದ್ದರು. ಆ ದಿನಗಳಲ್ಲಿಯೇ ಕುಳಕುಂದ ಶಿವರಾಯರು ನಿರಂಜನರಾದದ್ದು. ಜನಶಕ್ತಿ ಪತ್ರಿಕೆಯಲ್ಲಿ ಮೂರು ವರ್ಷದ ಹಿಂದೆ ಬರೆದ ಲೇಖನಗಳಿಗೆ ಸಂಬಂಧಿಸಿದಂತೆ ಇದೇ ಅವಧಿಯಲ್ಲಿ ಇವರನ್ನು ಬೆಂಗಳೂರಿನಲ್ಲಿ ಬಂಧಿಸಲಾಯಿತು (1951). ತರುವಾಯ ಕಾರವಾರಕ್ಕೆ ಕರೆದೊಯ್ದು ದೀರ್ಘ ವಿಚಾರಣೆಯ ಅನಂತರ ದಂಡ ವಿಧಿಸಿ ಖುಲಾಸೆ ಮಾಡಲಾಯ್ತು.

ಕನ್ನಡ ಅಂಕಣ ಬರೆಹಗಾರರಲ್ಲಿ ಇವರದು ದೊಡ್ಡ ಹೆಸರು. ಇವರು ಬರೆದ ಅಂಕಣ ಶೀರ್ಷಿಕೆಗಳು ಹೀಗಿವೆ. ಸರೂ, ಕೇಳಿದೆಯಾ? (ಪ್ರಜಾಮತ, 1945), ಸರೋಜ ಸಂಚಯ (ಉಷಾ, 1946), ಸಂಗಾತಿಯ ಸಂಚಯ (ಜನಶಕ್ತಿ, 1947), ಓದುಗರೊಡನೆ ಐದು ನಿಮಿಷ (ಚಿತ್ರಗುಪ್ತ). ಬಿಸಿಲು ಬೆಳದಿಂಗಳು (ನವಶಕ್ತಿ, 1952), ಮಧುಸಂಚಯ (ಸಾಧನಾ, 1956), ಬೇವು-ಬೆಲ್ಲ (ಪ್ರಜಾವಾಣಿ, 1962), ದಿನಚರಿಯಿಂದ (ಕರ್ಮವೀರ). ಇವರು 1964 ರಿಂದ 67ರ ವರೆಗೆ ಇನ್ಫಾ (ಇಂಡಿಯನ್ ನ್ಯೂಸ್ ಅಂಡ್ ಫೀಚರ್ ಅಲೆಯನ್ಸ್) ಸಂಸ್ಥೆಗೆ ಬೆಂಗಳೂರಿನ ಬಾತ್ಮೀದಾರರಾಗಿ ನೇಮಕಗೊಂಡು ಕಾರ್ಯನಿರ್ವಹಿಸಿದ್ದರು. 1943ರಲ್ಲಿ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿಯಾಗಿ (1943), ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿಯಾಗಿ (1944) ಸಮರ್ಥವಾಗಿ ದುಡಿದರು.

ಇವರು ವಿದ್ಯಾರ್ಥಿ ದೆಸೆಯಲ್ಲಿ ಕಿಶೋರ, ಕತೆಗಾರ, ಕು.ಶಿ.ರಾ. ಶೀರಾ, ಕುಳಕುಂದ ಮೊದಲಾದ ಹೆಸರಿನ ಹತ್ತಾರು ಕಥೆಗಳನ್ನು ಬರೆದಿದ್ದು, ಅವು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಇವರು ಮೊದಲು ಕವಿತೆಗಳನ್ನು ಬರೆದರು. 'ಕರ್ನಾಟಕದ ಕೊಡಗೂಸು' ಕವಿತೆಯನ್ನು ಕು.ಶಿ.ರಾ. ಎಂಬ ಹೆಸರಿನಲ್ಲಿ ಬರೆದಿದ್ದಾರೆ. ಅಲ್ಲದೆ ರಷ್ಯನ್ ಕವಿ ಕಾನ್‌ಸ್ಟಾಂಟಿನ್ ಸಿಮೊನೊವ ಯುದ್ಧ ರಂಗದಿಂದ ಯೋಧನೊಬ್ಬ ನಲ್ಲೆಗೆ ಬರೆದಂತೆ ಬರೆದಿರುವ ಕವಿತೆಯೊಂದನ್ನು ಕನ್ನಡಕ್ಕೆ ಕಾದಿರೆನಗಾಗಿ ಎಂದು ಅನುವಾದಿಸಿದ್ದಾರೆ. ಆ ದಿನಗಳಲ್ಲಿಯೆ ಇವರು ಬರೆದ ಎಣ್ಣೆ; ಚಿಮಣಿ ಎಣ್ಣೆ; ಎಂಬ ಕಥೆ ರಾಷ್ಟ್ರಬಂಧುವಿನಲ್ಲಿ ಪ್ರಕಟವಾಯಿತು. ಈ ಕಥೆಯನ್ನು ಪ್ರಕಟಿಸಿ ಪತ್ರಿಕೆಯ ಸಂಪಾದಕರಾಗಿದ್ದ ಕಡೆಂಗೋಡ್ಲು ಶಂಕರಭಟ್ಟರು ಬ್ರಿಟಿಷ್ ಸರ್ಕಾರದ ವಿಚಾರಣೆಗೊಳಗಾಗಿದ್ದರು. ಈ ಕಥೆಯ ಮಹತ್ತ್ವ ಎಷ್ಟೆಂದರೆ, ಭಾರತದಲ್ಲಿ ತುರ್ತು ಪರಿಸ್ಥಿತಿಯಿದ್ದಾಗ (1975-76) ಅರುಣ ಪತ್ರಿಕೆಯ ಸಂಪಾದಕರು ಮರುಮುದ್ರಿಸಲು ಸರ್ಕಾರದ ಅನುಮತಿ ಕೋರಿದರೂ ಒಪ್ಪಿಗೆ ದೊರಕಲಿಲ್ಲ.

ಇವರು ರಕ್ತಸರೋವರ, ಅನ್ನಪೂರ್ಣ, ಕೊನೆಯ ಗಿರಾಕಿ, ವಾರದ ಹುಡುಗ, ಕಾತ್ಯಾಯಿನಿ, ಒಂಟಿ ನಕ್ಷತ್ರ ನಕ್ಕಿತು, ಮೊದಲಾದ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲ ಕಥೆಗಳನ್ನು ಐ.ಬಿ.ಎಚ್.ಪ್ರಕಾಶನ ಧ್ವನಿ-1, ಧ್ವನಿ-2 ಎಂಬ ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ. ಕಥೆಗಳ ಆರಂಭದಲ್ಲಿ ಆಯಾ ಕಥೆಯ ಹುಟ್ಟು, ಸಂದರ್ಭ, ಬೆಳವಣಿಗೆಯನ್ನು ಕೂಡ ಲೇಖಕರು ನೀಡಿದ್ದಾರೆ. ಬಾಲ್ಯದಲ್ಲಿ ತನ್ನ ಸುತ್ತಮುತ್ತ ನಡೆದ ಘಟನೆಗಳನ್ನು ಅಂದರೆ, ತಂದೆಯಿಲ್ಲದ ಕೊರತೆಯಿಂದಾಗಿ ಬಾಲಕನೊಬ್ಬ ಅನುಭವಿಸುವ ವೇದನೆ, ಬಡವಿಧವೆ ತಾಯಿಯ ದೈನಂದಿನ ಬದುಕಿನ ಯಾತನೆ, ತೊಳಲಾಟಗಳನ್ನು ವಸ್ತುವಾಗಿಸಿಕೊಂಡು ಹಲವಾರು ಕಥೆಗಳನ್ನು ಬರೆದಿದ್ದಾರೆ. ಒಂದು ಹಿಡಿಹುಲ್ಲು, ಬಹಿಷ್ಕೃತೆ, ಮೂರುದುಡ್ಡು ಮೊದಲಾದ ಕಥೆಗಳಲ್ಲಿ ಇಂಥ ಬದುಕಿನ ಚಿತ್ರಣವನ್ನು ಕಾಣಬಹುದು. ರಕ್ತ ಸರೋವರ ಕಥೆಯಲ್ಲಿ ಕ್ಷಿಪ್ರಬದಲಾವಣೆ ತರಬಯಸುವ ಕ್ರಾಂತಿ ಮತ್ತು ದುರಂತಗಳ ಚಿತ್ರಣವಿದೆ. ಕೊನೆಯ ಗಿರಾಕಿ ಕಥೆಯಲ್ಲಿ ಹೆಣ್ಣಿನ ಅಸಹಾಯಕತೆಯನ್ನು ದುರ್ಬಲ ಮನಸ್ಸಿನ ಪುರುಷರು ದುರುಪಯೋಗಪಡಿಸಿಕೊಳ್ಳುವ ಚಿತ್ರಣವಿದೆ. ಈ ಕಥೆಯಲ್ಲಿ ಬರುವ ಕಾಣಿಯಂತಹ ಹೆಣ್ಣುಗಳು ನಿರಂತರ ಶೋಷಣೆಗೊಳಗಾಗುತ್ತ ಸಾಮಾಜಿಕ ಸಮಸ್ಯೆಯ ಪ್ರತಿನಿಧಿಗಳಾಗಿದ್ದಾರೆ. ಒಂಟಿ ನಕ್ಷತ್ರ ನಕ್ಕಿತು ಕಥೆಯಲ್ಲಿ ಎರಡು ತಲೆಮಾರುಗಳ ನಡುವಿನ ಅಭಿಪ್ರಾಯ ಭೇದಗಳನ್ನು ಅಣೆಕಟ್ಟಿನ ವಿವಾದದಲ್ಲಿ ವ್ಯಕ್ತಗೊಳಿಸಿದ್ದಾರೆ. ಕಣ್ಣಾರೆ ಕಂಡವರು ಕಥೆಯಲ್ಲಿ ಬಲಪ್ರಯೋಗದಿಂದ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ನಿರ್ಲಜ್ಜ ರಾಜಕಾರಣಿಗಳ ಚಿತ್ರಣವಿದ್ದು, ಸಮಕಾಲೀನ ವ್ಯವಸ್ಥೆಯ ಮುಖಕ್ಕೆ ಕನ್ನಡಿ ಹಿಡಿದಂತಿದೆ. ಇವರ ಕಥೆಗಳು ಹಿಂದಿ, ತೆಲುಗು, ಮಲಯಾಳಂ ಇಂಗ್ಲಿಷ್, ರಷ್ಯನ್ ಮತ್ತಿತರ ಭಾಷೆಗಳಿಗೆ ಅನುವಾದಿತವಾಗಿವೆ.

ನಿರಂಜನರು ಇಪ್ಪತ್ತೈದು ಕಾದಂಬರಿಗಳನ್ನು ಬರೆದಿದ್ದಾರೆ. ಮೊದಲನೆಯ ಕಾದಂಬರಿ ವಿಮೋಚನೆ. ಕೊನೆಯ ಕಾದಂಬರಿ ಮೃತ್ಯುಂಜಯ. ಬನಶಂಕರಿ, ರಂಗಮ್ಮನ ವಠಾರ, ದೂರದ ನಕ್ಷತ್ರ, ನವೋದಯ, ಚಿರಸ್ಮರಣೆ, ಕಲ್ಯಾಣ ಸ್ವಾಮಿ, ಸ್ವಾಮಿ ಅಪರಂಪಾರ - ಕೆಲವು ಪ್ರಮುಖ ಕಾದಂಬರಿಗಳು. ಇವರ ಕಾದಂಬರಿಗಳನ್ನು ಐತಿಹಾಸಿಕ ವಸ್ತುವುಳ್ಳವು, ಹೋರಾಟ ಪ್ರಧಾನವಾದವು ಮತ್ತು ಸಾಮಾಜಿಕ ವಸ್ತುವುಳ್ಳವು ಎಂದು ಸ್ಥೂಲವಾಗಿ ಮೂರು ಗುಂಪಾಗಿ ವಿಂಗಡಿಸಬಹುದು. ಚಿರಸ್ಮರಣೆ, ಮೃತ್ಯುಂಜಯ, ಕಲ್ಯಾಣಸ್ವಾಮಿ, ಸ್ವಾಮಿ ಅಪರಂಪಾರ ಕಾದಂಬರಿಗಳಲ್ಲಿ

ಐತಿಹಾಸಿಕ ಘಟನೆಗಳ ಕಥಾವಸ್ತು ಇದೆ. ಆದರೆ ಇಲ್ಲಿಯೂ ಹೋರಾಟದ ಚಿತ್ರಣ ಬರುತ್ತದೆ. ಚಿರಸ್ಮರಣೆ ಕಾದಂಬರಿಯ ಮೊದಲರ್ಧದಲ್ಲಿ ಕಯ್ಯೂರು ಎಂಬ ಹಳ್ಳಿಯ ಶಿಕ್ಷಕರೊಬ್ಬರು ತನ್ನ ಶಿಷ್ಯರಾದ ಅಪ್ಪು ಮತ್ತು ಚಿರಕುಂಡರ ಮುಖಾಂತರ ಇಡೀ ಹಳ್ಳಿಯನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿ, ರೈತ ಚಳುವಳಿ ನಡೆಸುವುದು ಕಂಡುಬಂದರೆ ಉತ್ತರಾರ್ಧದಲ್ಲಿ ಜಮೀನ್ದಾರರ ಒಳಸಂಚು, ಬ್ರಿಟಿಷರ ದಬ್ಬಾಳಿಕೆ, ರೈತರ ಮುಂದಾಳುಗಳಾದ ಅಪ್ಪು, ಚಿರಕುಂಡ, ಕುಞಂಬು, ಅಬೂಬಕರ್ ಅವರು ಗಲ್ಲು ಶಿಕ್ಷೆಗೊಳಗಾಗುವ ಚಿತ್ರಣವಿದೆ. ಮೃತ್ಯುಂಜಯ ಕಾದಂಬರಿಯಲ್ಲಿ ನಾಲ್ಕುವರೆ ಸಾವಿರ ವರ್ಷಗಳ ಹಿಂದೆ ಈಜಿಪ್ಟ್ ದೇಶದಲ್ಲಿ ನಡೆದ ಗುಲಾಮರ ಮತ್ತು ಅವರನ್ನು ತಮ್ಮ ಬಲವಾದ ಹಿಡಿತದಲ್ಲಿರಿಸಿಕೊಂಡು ದೌರ್ಜನ್ಯ, ದಬ್ಬಾಳಿಕೆಯಿಂದ ಆಳುವವರ ನಡುವೆ ನಡೆದ ಬಿಡುಗಡೆಯ ಹೋರಾಟದ ಚಿತ್ರಣವಿದೆ. ಕಲ್ಯಾಣಸ್ವಾಮಿ ಕಾದಂಬರಿಯಲ್ಲಿ ಕೊಡಗಿನ ಅರಸು ಚಿಕ್ಕವೀರ ರಾಜೇಂದ್ರ ಅಧಿಕಾರ ಕಳೆದುಕೊಂಡ ಅನಂತರ ಆತನ ದಳಪತಿಯಾಗಿದ್ದ ಪುಟ್ಟಬಸವನೇ ಕಲ್ಯಾಣ ಸ್ವಾಮಿಯಾಗಿ ಬ್ರಿಟಿಷರ ಎದುರಾಗಿ ಜನತೆಯನ್ನು ಒಗ್ಗೂಡಿಸಿ ನಡೆಸಿದ ಹೋರಾಟದ ಕಥೆಯಿದೆ. ಸ್ವಾಮಿ ಅಪರಂಪಾರ ಕಾದಂಬರಿಯಲ್ಲಿ ಚಿಕ್ಕವೀರ ರಾಜೇಂದ್ರನ ದೊಡ್ಡಪ್ಪನ ಮಗ ವೀರಪ್ಪಸ್ವಾಮಿ ಅಪರಂಪಾರನಾಗಿ ವೇಷ ಬದಲಿಸಿಕೊಂಡು ಕೊಡಗು ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಪ್ರಯತ್ನ ಕಂಡುಬರುತ್ತದೆ. ಹೋರಾಟ ಪ್ರಧಾನವಾದ ವಿಮೋಚನೆ ಕಾದಂಬರಿಯಲ್ಲಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಕಂಡುಬರುವ ಜನಸಾಮಾನ್ಯರ ಜೀವನ ಚಿತ್ರಗಳಲ್ಲಿ ಶೋಷಣೆ ಎಡಬಿಡದೆ ಮುಂದುವರೆದಿರುವುದನ್ನು ಕಾಣಬಹುದು. ಸಾಮಾಜಿಕ ಕಾದಂಬರಿಯಾದ ಏಕಾಂಗಿನಿಯ ಕಥಾನಾಯಕಿ ಸುನಂದ ತನ್ನ ಗಂಡ ಪುಟ್ಟಣ್ಣನಿಂದ ದೈಹಿಕ ಮತ್ತು ಮಾನಸಿಕ ಹಿಂಸೆಗೊಳಗಾಗುತ್ತಾಳೆ. ಅನಂತರದಲ್ಲಿ ಗಂಡನಿಂದ ವಿವಾಹವಿಚ್ಛೇದನ ಪಡೆದು ಛಲದಿಂದ ಏಕಾಂಗಿಯಾಗಿ ಬದುಕುವ ನಿರ್ಧಾರ ತೆಗೆದುಕೊಳ್ಳುತ್ತಾಳೆ. ರಂಗಮ್ಮನ ವಠಾರ ಕಾದಂಬರಿ ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ಮಧ್ಯಮ ವರ್ಗದವರ ಒಳಬದುಕಿನ ಹೊರಗನ್ನು ಬಯಲು ಮಾಡುತ್ತದೆ. ವಿಮೋಚನೆ (ರಷ್ಯನ್, ಪೋಲಿಷ್, ಇಂಗ್ಲಿಷ್, ಮಲಯಾಳಂ, ತೆಲುಗು), ಅಭಯ (ತೆಲುಗು), ಚಿರಸ್ಮರಣೆ (ಮಲಯಾಳಂ, ತೆಲುಗು, ತಮಿಳು, ಮರಾಠಿ, ಬಂಗಾಲಿ, ತುಳು, ಇಂಗ್ಲಿಷ್), ಸ್ವಾಮಿ ಅಪರಂಪಾರ (ಮಲಯಾಳಂ), ಮೃತ್ಯುಂಜಯ (ಮಲಯಾಳಂ, ತೆಲುಗು, ಹಿಂದಿ, ಅರಬ್ಬಿ) ಕಾದಂಬರಿಗಳು ಇತರ ಭಾಷೆಗೆ ಭಾಷಾಂತರಗೊಂಡಿವೆ.

ಇವರು ಗಾರ್ಕಿಯ ಮದರ್ ಕಾದಂಬರಿಯನ್ನು ತಾಯಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಸಮತಾವಾದ, ಜನತೆಯ ನಡುವೆ, ಚೀಣಾ ದೇಶದ ನೀತಿ ಕಥೆಗಳು, ಮಾನವನ ಪಾಡು, ಸಂಗಮ್ ರಾಜಕೀಯ ವ್ಯವಸ್ಥೆ ಮೊದಲಾದವು ಇವರ ಅನುವಾದಿತ ಕೃತಿಗಳು. ಇವರು ನಾಟಕಗಳನ್ನೂ ಬರೆದಿದ್ದಾರೆ. ಸಂಗಮ ಸ್ನಾನ, ಆಹ್ವಾನ, ನಾವೂ ಮನುಷ್ಯರು ಮೊದಲಾದವು ಇವರ ನಾಟಕಗಳು. 1969ರಲ್ಲಿ ಕರ್ನಾಟಕ ಸಹಕಾರಿ ಪ್ರಕಾಶನ ಎಂಬ ಸಂಸ್ಥೆಯವರು ಮಕ್ಕಳಿಗಾಗಿ ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯನ್ನು ತರಲು ಯೋಜಿಸಿದಾಗ ಅದರ ಜವಾಬ್ದಾರಿಯನ್ನು ವಹಿಸಿಕೊಂಡ ನಿರಂಜನರು ಏಳು ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟರು. 1979-82ರ ಅವಧಿಯಲ್ಲಿ ನವಕರ್ನಾಟಕ ಪ್ರಕಾಶನ ಸಂಸ್ಥೆಗಾಗಿ ಪ್ರಪಂಚದ ಹಲವಾರು ದೇಶ, ಭಾಷೆಯ ಕಥೆಗಳನ್ನು ಕನ್ನಡಕ್ಕೆ ತಂದುಕೊಡುವ ಹೊಣೆಗಾರಿಕೆಯನ್ನು ಹೊತ್ತು ವಿಶ್ವಕಥಾಕೋಶ ಮಾಲಿಕೆಯಲ್ಲಿ 25 ಸಂಪುಟಗಳನ್ನು ಸಂಪಾದಿಸಿ ಕೊಟ್ಟರು. ಭಾರತದ ಇನ್ನಾವುದೇ ಭಾಷೆಯಲ್ಲೂ ಇಂಥ ಯೋಜನೆ ನಡೆದಿಲ್ಲ. ಈ ಎರಡೂ ಯೋಜನೆಯ ಕೆಲಸಗಳು ನಿರಂಜನರ ವಿದ್ವತ್ತಿಗೆ ಸಾಕ್ಷಿಯಾಗಿವೆ.

ಇವರು ಸಲ್ಲಿಸಿದ ಸಾಹಿತ್ಯಕ ಸೇವೆಗಾಗಿ ಅನೇಕ ಗೌರವ ಪ್ರಶಸ್ತಿಗಳು ಇವರಿಗೆ ಲಭ್ಯವಾಗಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1962), ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ (1974), ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ (1985), ಇವುಗಳನ್ನು ಹೆಸರಿಸಬಹುದು. ಇವರು ರಾಯಚೂರಿನಲ್ಲಿ ಜರುಗಿದ 38ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿದ್ದರು. 1976ರಲ್ಲಿ ದಾವಣಗೆರೆಯಲ್ಲಿ ಸಮಾವೇಶಗೊಂಡ ಪ್ರಗತಿಪಂಥ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1986ರಲ್ಲಿ ಪುತ್ತೂರಿನಲ್ಲಿ ಇವರಿಗೆ ನಿರಂಜನ ಅಭಿನಂದನ ಗ್ರಂಥವನ್ನು ಸಮರ್ಪಣೆ ಮಾಡಲಾಯಿತು.

ಪ್ರಸಿದ್ಧ ಲೇಖಕಿ ಅನುಪಮಾ ನಿರಂಜನ (ನೋಡಿ) ಇವರ ಪತ್ನಿ. ಇವರದು ಅಂತರ್ಜಾತೀಯ ವಿವಾಹ (1956). ಇವರಿಗೆ ತೇಜಸ್ವಿನಿ, ಸೀಮಂತಿನಿ - ಇಬ್ಬರು ಹೆಣ್ಣು ಮಕ್ಕಳು. ತೇಜಸ್ವಿನಿ ಕೂಡ ಉತ್ತಮ ಲೇಖಕಿ. ನಿರಂಜನ ಅವರು ಪಾರ್ಶ್ವವಾಯು ಪೀಡಿತರಾಗಿ 1992 ಮಾರ್ಚ್ 13ರಂದು ಹೈದರಾಬಾದಿನಲ್ಲಿ ನಿಧನ ಹೊಂದಿದರು. (ಎಂ.ಎಲ್.ಎನ್.)

**ನಿರಂಜನಮೂರ್ತಿ:** ಲಿಂಗವಂತರಲ್ಲಿ ಸರ್ವಸಂಗ ಪರಿತ್ಯಾಗ ಮಾಡಿದ ಬ್ರಹ್ಮಚರ್ಯ ಮತ್ತು ವೈರಾಗ್ಯ ಜೀವನವುಳ್ಳ ವಿರಕ್ತರನ್ನು ಈ ಹೆಸರಿನಿಂದ ಕರೆಯುತ್ತಾರೆ. ವೀರಶೈವ ಸಿದ್ಧಾಂತ ಗ್ರಂಥಗಳಲ್ಲೂ ಶರಣರ ವಚನಗಳಲ್ಲೂ ಬರುವ ಹೆಸರುಗಳಲ್ಲಿದು ಪ್ರಮುಖವಾದ್ದು. ನಿರಂಜನಮೂರ್ತಿಗಳ ಮೂಲಪುರುಷ ಬಳ್ಳಿಗಾವಿಯ ಅಲ್ಲಮಪ್ರಭು. ಆತನ ಗುರು ಅನಿಮಿಷದೇವರು, ಆತನ ಪರಮಗುರು ನಂದಿಕೇಶ್ವರ, ಅನಂತರ ಬರುವವರು ಹರದನಹಳ್ಳಿಯ ಅನಾದಿಗಣೇಶ್ವರರು, ನಿರಂಜನಮೂರ್ತಿಗಳ ಪರಂಪರೆಯಲ್ಲಿ ಮೂರು ಸಾವಿರ ಭಕ್ತರು, ಏಳು ಸಾವಿರ ಚರಮೂರ್ತಿಗಳು, ನೂರೊಂದುಮಂದಿ ವಿರತಿಗಳು, ಏಳುನೂರ ಎಪ್ಪತ್ತು ಮಂದಿ ಅಮರಗಣಂಗಳು ಆಗಿಹೋಗಿದ್ದಾರೆ. ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಕಲ್ಯಾಣದ ಶೂನ್ಯಸಿಂಹಾಸನದ ಪರಂಪರೆಯಲ್ಲಿ ಚಿತ್ರದುರ್ಗದ ಮುರುಘಾಮಠ, ಹುಬ್ಬಳ್ಳಿಯ ಮೂರು ಸಾವಿರ ಮಠ, ಗದುಗಿನ ತೋಂಟದಾರ್ಯ ಮಠ, ಉರುವಕೊಂಡದ ಕರಿಬಸವಸ್ವಾಮಿ ಮಠ - ಈ ನಾಲ್ಕು ಗುರುಮಠಗಳನ್ನು ನಿರಂಜನಮೂರ್ತಿಗಳ ಮೂಲ ಸ್ಥಾನವೆಂದು ಹೇಳಲಾಗಿದೆ.

ಹೆಣ್ಣು, ಹೊನ್ನು, ಮಣ್ಣುಗಳನ್ನು ಗೆದ್ದವನು, ಜನನಮರಣಗಳಿಗೆ ಅತೀತನಾದವನು ಅನಾದಿ ನಿರಂಜನಮೂರ್ತಿ ಎನಿಸುತ್ತಾನೆ. *

**ನಿರಂಜನವಂಶ ರತ್ನಾಕರ :** ವೀರಶೈವ ಮತೀಯ ಗ್ರಂಥ. ಇದರ ಶೂನ್ಯ ಸಿಂಹಾಸನ ಗುರುಗಳಾದ ಅಲ್ಲಮಪ್ರಭು, ಚನ್ನಬಸವೇಶ್ವರ, ಅನಾದಿ ಗಣನಾಥ, ಆದಿಗಣನಾಥ, ನಿರ್ಮಾಯ ಗಣೇಶ್ವರ, ನಿರಂಜನಸ್ವಾಮಿ, ಜ್ಞಾನಾನಂದ ಸ್ವಾಮಿ, ಆತ್ಮಗಣವರ, ಆಧ್ಯಾತ್ಮ ಗಣನಾಥ, ರುದ್ರಮುನಿಸ್ವಾಮಿ, ಬಸವಪ್ರಭು, ಆದಿಲಿಂಗಸ್ವಾಮಿ ಇತ್ಯಾದಿ ಗುರುಪರಂಪರೆ ಚರಿತ್ರೆಯನ್ನು ಹೇಳಲಾಗಿದೆ. ಈ ಗ್ರಂಥ ಐತಿಹಾಸಿಕ ಮಹತ್ತ್ವವನ್ನು ಪಡೆದಿದೆ. ಗ್ರಂಥಕರ್ತೃ ಅದ್ಭುತ ಸಂಗತಿಗಳನ್ನು ವರ್ಣಿಸುವುದನ್ನು ಬಿಟ್ಟು ಐತಿಹಾಸಿಕ ಸಂಗತಿಗಳನ್ನು ಸಂಗ್ರಹಿಸಲು ವಿಶೇಷವಾಗಿ ಪ್ರಯತ್ನಿಸಿದಂತೆ ಕಾಣುತ್ತದೆ. ಈ ಗ್ರಂಥದ ಪ್ರಕಾರ ಮಠಾಧಿಪತಿಗಳು ವೀರಶೈವ ಮತಪ್ರಸಾರದ ಸಲುವಾಗಿ ಎಷ್ಟು ಮಹತ್ತ್ವದ ಪಾತ್ರ ವಹಿಸಿದರೆಂಬುದನ್ನು ತಿಳಿಯಬಹುದು. ವೀರಶೈವರಲ್ಲಿ ಶೂನ್ಯ ಸಿಂಹಾಸನದ ಮಠಾಧಿಪತಿಗಳ ಪರಂಪರೆಯನ್ನು ನಿರಂಜನ ವಂಶವೆಂದು ಕರೆಯುತ್ತಾರೆ.

1932ರಲ್ಲಿ ಫ.ಗು. ಹಳಕಟ್ಟಿಯವರು ತಮಗೆ ದೊರೆತ ಅಪೂರ್ಣ ಹಸ್ತಲಿಖಿತ ಪ್ರತಿಯ ಸಹಾಯದಿಂದ ತಮ್ಮ ಶಿವಾನುಭವ ಗ್ರಂಥಮಾಲೆಯಲ್ಲಿ ಇದನ್ನು ಪ್ರಕಟಿಸಿದ್ದಾರೆ. ಗ್ರಂಥದಲ್ಲಿ ಗ್ರಂಥಕರ್ತೃವಿನ ಹೆಸರು ಉಕ್ತವಾಗಿಲ್ಲ. ದೊರೆತಿರುವ ಗ್ರಂಥ ಅಪೂರ್ಣವಿದೆ. *

**ನಿರಂಜನಾರ್ಯ :** ಸು. 1750. ಕವಿ ನಂಜುಂಡ ಶತಕ, ನಿಷ್ಕಾಮ ವಚನ ಮತ್ತು ಗಗನಾರ್ಯರ ತತ್ತ್ವಗಳು ಎಂಬುವು ಈತನ ಹೆಸರಿನಲ್ಲಿ ಲಭ್ಯವಿರುವ ಕೃತಿಗಳು. ನಿರಂಜನಾರ್ಯ ಎಂಬುದು ಕವಿಯ ನಿಜನಾಮವೋ ಅಲ್ಲವೋ ಎಂಬುದು ಸ್ಪಷ್ಟವಿಲ್ಲ. ನಂಜುಂಡ ಶತಕದ ಮುಕ್ತಾಯದಲ್ಲಿ ತಾನು ಗಗನಾನಂದ ಗುರುವರ್ಯನ ಶಿಷ್ಯನೆಂದು ಕವಿ ಹೇಳಿಕೊಂಡಿದ್ದಾನೆ.

ಈತ ಬ್ರಾಹ್ಮಣನೆಂದು ತೋರುತ್ತದೆ.

ನಂಜುಂಡ ಶತಕ ಕಂದ ಪದ್ಯಗಳಲ್ಲಿದ್ದು ಪ್ರತಿ ಪದ್ಯವೂ ಗುರುನಂಜುಂಡಾ ಎಂದು ಮುಗಿಯುತ್ತದೆ. ಇದಕ್ಕೆ ನೀತಿಶಾಸ್ತ್ರ ಎಂಬ ಹೆಸರೂ ಉಂಟು. ಅನುಭಾವ, ನೀತಿ ಈ ಪದ್ಯಗಳ ವಸ್ತು.

ನಿಷ್ಕಾಮ ವಚನ ಹಾಡುಗಳ ಸಂಕಲನ. ಇದರಲ್ಲಿ 129 ಹಾಡುಗಳಿರುವುದಾಗಿ ಕವಿಚರಿತೆಕಾರರು ತಿಳಿಸಿದ್ದಾರೆ. ಗಗನಾರ್ಯರ ತತ್ತ್ವಗಳು ಎಂಬುದು ಇನ್ನೊಂದು ಹಾಡಿನ ಸಂಕಲನ. ಈ ಹಾಡುಗಳಲ್ಲಿ ವೇದಾಂತವನ್ನು ಬೋಧಿಸಿದೆ. ಕೆಲವು ಹಾಡುಗಳಲ್ಲಿ ಗುರು ಗಗನಾರ್ಯರನ್ನೇ ಸ್ತುತಿಸಿದೆ. ಗಗನಾರ್ಯ ಎಂಬುದು ಹಾಡುಗಳ ಅಂಕಿತ. ಜೀವನದಲ್ಲಿ ಕಷ್ಟವನ್ನು ಅನುಭವಿಸಿ ಸಾಕಾಗಿ, ಸೋತು ಬಹು ಕಷ್ಟಪಟ್ಟೆನಾಭವದಿ ಸಾಕಿನ್ನಹಹ ನಾನೈಕ್ಯವಾಗೂವೆ ನಿಮ್ಮ ಪದದಿ ಎಂದು ಕವಿ ಹಾಡಿದ್ದಾನೆ. *

**ನಿರಾಲಂಬದೇವ :** 1639-1711. ವಚನಕಾರ್ಯ ಶಿವಯೋಗಿ. ಈತನನ್ನು ನಿರಾಲಂಬಶರಣ ಷಣ್ಮುಖ ಶಿವಯೋಗಿ ಎಂದೂ ಕರೆಯುತ್ತಾರೆ.

ಅಖಂಡೇಶ್ವರ ಇವನ ವಚನಗಳ ಅಂಕಿತ. ಈತನನ್ನು ಕೊನೆಯ ಶ್ರೇಷ್ಠ ವಚನಕಾರನೆಂದು ಕರೆಯುವ ವಾಡಿಕೆಯಿದೆ. ಈತನ ತಂದೆ ತಾಯಿಗಳು ಮಲ್ಲಶೆಟ್ಟಪ್ಪ ಮತ್ತು ದೊಡ್ಡಮಾಂಬೆಯರು. ಗುರು ಅಖಂಡೇಶ್ವರ, ಗುಲ್ಬರ್ಗ ಜಿಲ್ಲೆಯಲ್ಲಿರುವ ಜೇವರಗಿ ಎಂಬ ಸ್ಥಳದಲ್ಲಿ ಈತ ಅಧಿಪತಿಯಾಗಿದ್ದ ಮಠವಿದೆ. ಈತನ ಹಾಗೂ ಈತನ ಗುರು ಅಖಂಡೇಶ್ವರರ ಗದ್ದುಗೆಗಳೆರಡೂ ಅಲ್ಲಿವೆ. ಆ ಊರಿನಲ್ಲಿ ಇಂದಿಗೂ ಈತನ ಹೆಸರಿನಲ್ಲಿ ರಥೋತ್ಸವ ನಡೆಯುತ್ತದೆ. ಜೇವರಿಗಿಗೆ ಸು. 10ಕಿಮೀ.ದೂರದ ಕೊಳಕೂರ ಎಂಬ ಗ್ರಾಮದ ನಿಸರ್ಗ ಸುಂದರ ತಾಣದಲ್ಲಿ ಈ ಶಿವಯೋಗಿ ತನ್ನ ಸಾರವತ್ತಾದ ಜೀವನದ ಸ್ವಲ್ಪಭಾಗವನ್ನು ಕಳೆದಿದ್ದನೆನ್ನಲು ಆಧಾರವಿದೆ. ಮುಂದೆ ಈತ ಅಖಂಡೇಶ್ವರರ ಉತ್ತರಾಧಿಕಾರಿಯಾಗಿ, ಜೇವರಿಗಿ ವಿರಕ್ತ ಮಠಕ್ಕೆ ಸ್ವಾಮಿಯಾದ. ಅಖಂಡೇಶ್ವರ ಮತ್ತು ಷಣ್ಮುಖ ಶಿವಯೋಗಿಗಳಿಂದ ಇಂದಿನವರೆಗೆ ಈ ಮಠದ ಪರಂಪರೆ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಈಗಿರುವ ಸ್ವಾಮಿಗಳು ಪರಂಪರೆಯಲ್ಲಿ ಹನ್ನೊಂದನೆಯವರು.

ಈತನನ್ನು ಆ ಕಾಲದ ಸಾಮಾಜಿಕ ಅಂತರದ ವಿರುದ್ಧ ಹೋರಾಡಿದ ಕ್ರಾಂತಿಕಾರಿ ಎನ್ನಲಾಗಿದೆ. ಅಸ್ಪೃಶ್ಯರ ಉದ್ಧಾರಕ್ಕಾಗಿ ಈತ ಶ್ರಮಿಸಿದ ಸಂಕೇತವಾಗಿ ಇಂದಿಗೂ ಜೇವರಗಿಯ ಹರಿಜನ ಕೇರಿಯಲ್ಲಿ ಶಿವಯೋಗಿಯ ಮಠವೊಂದಿದೆ. ಹರಿಜನರೊಡನೆ ಸಹಪಂಕ್ತಿಭೋಜನ ಮತ್ತು ಸಮಾನತೆಗಳನ್ನು ಕೇವಲ ಬೋಧಿಸದೆ ನಡೆದು ತೋರಿದ ಶಿವಯೋಗಿ ಈತ. ಅನೇಕರಿಗೆ ಸಿವದೀಕ್ಷೆಯನ್ನೂ ಕೊಟ್ಟನೆನ್ನಲಾಗಿದೆ. ಆದರೆ ಇದನ್ನು ಅಂದಿನ ಪ್ರತಿಷ್ಠಿತ ವೀರಶೈವರು ಒಪ್ಪಿದಂತೆ ಕಾಣುವುದಿಲ್ಲ. ಅಸ್ಪೃಶ್ಯರನ್ನು ಒಪ್ಪಿಕೊಳ್ಳದವರನ್ನು ಒಡಂಬಡಿಸುವಂತಿರುವ ಈತನ ಒಂದು ವಚನ ಹೀಗಿದೆ.

ಈತ ಒಟ್ಟು 717 ವಚನಗಳನ್ನೂ 41 ಜೋಗುಳ ಪದಗಳನ್ನೂ ರಚಿಸಿದ್ದಾನೆ.ವಚನ ಹಾಗೂ ಪದಗಳು ಅನುಭಾವಪೂರ್ಣವಾಗಿ, ಭಾವೋದ್ದೀಪಕವಾಗಿ ಅಂತರಾತ್ಮತೇಜೋಯುಕ್ತವಾಗಿದೆ. ಅಸ್ಪೃಶ್ಯರನ್ನು ಒಪ್ಪಿಕೊಳ್ಳದವರನ್ನು ಒಡಂಬಡಿಸುವಂತಿರುವ ಈತನ ಒಂದು ವಚನ ಹೀಗಿದೆ.

ನಾನಾವರ್ಣದ ಕಾಷ್ಟವ ಸುಟ್ಟಲ್ಲಿ ಏಕವರ್ಣದ ಬೂದಿಯಪ್ಪುದಲ್ಲದೆ

ಆ ಕಾಷ್ಠದ ಕುಲ ಉಂಟೇ ಅಯ್ಯ?

ತೊಟ್ಟು ಬಿಟ್ಟ ಹಣ್ಣು ಮರಳಿ ತೊಟ್ಟು ಹತ್ತಬಲ್ಲುದೇ ಅಯ್ಯ?

ಕಷ್ಟ ಜನ್ಮದಲ್ಲಿ ಹುಟ್ಟಿದಾತನಾದಡಾಗಲಿ

ನೆಟ್ಟನೆ ಶ್ರೀ ಗುರು ಕಾರುಣ್ಯದ ಪಡೆದು, ಇಷ್ಟಲಿಂಗ

ಸಂಬಂಧಿಯಾಗಿ,

ಆಚಾರ ಕ್ರಿಯಾ ಸಂಪನ್ನನಾದ ಶರಣನ

ಜಾತಿ ಪೂರ್ವವ ಎತ್ತಿ ದೂಷಿಸುವ ಪಾತಕರ ಬಾಯಲ್ಲಿ

ಬಾಲ ಹುಳುಗಳು ಸುರಿಯದೆ ಮಾಣ್ಬವೆ ಹೇಳಾ ಅಖಂಡೇಶ್ವರಾ *

**ನಿಸಾರ್ ಅಹಮದ್, ಕೆ.ಎಸ್. :** 1936- . ಪ್ರಸಿದ್ಧ ಕವಿ ಹಾಗೂ ವಿಮರ್ಶಕ. ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ 1936 ಫೆಬ್ರವರಿ 5ರಂದು ಹುಟ್ಟಿದರು. ಸೆಂಟ್ರಲ್ ಕಾಲೇಜಿನಲ್ಲಿ ಓದಿ ಭೂ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು (1959). ಅನಂತರ ಅಧ್ಯಾಪಕರಾಗಿ ಕರ್ನಾಟಕದ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕೆಲಸಮಾಡಿ, ಪ್ರಾಧ್ಯಾಪಕರಾಗಿ ನಿವೃತ್ತರಾದರು (1994). ವಿದ್ಯಾರ್ಥಿ ದೆಸೆಯಲ್ಲಿ ಸೆಂಟ್ರಲ್ ಕಾಲೇಜಿನ ಪ್ರತಿಷ್ಠಿತ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಕನ್ನಡ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ಈತನಕ ಒಟ್ಟು 25 ಕೃತಿಗಳನ್ನು ರಚಿಸಿ ಜನಮನ್ನಣೆಗೆ ಪಾತ್ರರಾಗಿದ್ದಾರೆ.

ಮನಸು ಗಾಂಧಿಬಜಾರು (1960), ನೆನೆದವರ ಮನದಲ್ಲಿ (1964), ಸುಮುಹೂರ್ತ (1967), ಸಂಜೆ ಐದರ ಮಳೆ (1970), ನಾನೆಂಬ ಪರಕೀಯ (1972), ನಿತ್ಯೋತ್ಸವ (1976), ಸ್ವಯಂ ಸೇವೆಯ ಗಿಳಿಗಳು (1977), ಅನಾಮಿಕ ಆಂಗ್ಲರು (1982), ಬಹಿರಂತರ (1990), ನವೋಲ್ಲಾಸ (1994), ಆಕಾಶಕ್ಕೆ ಸರಹದ್ದುಗಳಿಲ್ಲ (1998), ಅರವತ್ತೈದರ ಐಸಿರಿ (2001) - ಇವು ಇವರ ಕವನ ಸಂಕಲನಗಳು. ತಮ್ಮ ಆಯ್ದ ಕವಿತೆಗಳನ್ನು ನಿಸಾರ್ ಅಹಮದ್ ಆಯ್ದಕವಿತೆಗಳು (1974). ಸಮಗ್ರ ಕವಿತೆಗಳು (1991), ನಿಸಾರರ ಪ್ರಾತಿನಿಧಿಕ ಕವನಗಳು (2001), ಸಮಗ್ರ ಭಾವಗೀತೆಗಳು (2001) ಎಂಬ ಸಂಕಲನಗಳಲ್ಲಿ ಪ್ರಕಟಿಸಿದ್ದಾರೆ.

ಇವರು ಕನ್ನಡದ ಅತ್ಯುತ್ತಮ ಹಾಗೂ ಸಮರ್ಥ ಕವಿಗಳಲ್ಲೊಬ್ಬರು. ಇವರ ಕಾವ್ಯದಲ್ಲಿ ನಿಸರ್ಗಪ್ರೀತಿ, ರಾಷ್ಟ್ರಾಭಿಮಾನ, ಸಂಸ್ಕೃತಿಯನ್ನು ಒಪ್ಪಿಕೊಳ್ಳುವ ಮನೋಭಾವ ಮೊದಲಾದ ನವೋದಯದ ಆಶಯಗಳನ್ನು ವಿಶೇಷವಾಗಿ ಕಾಣುತ್ತೇವೆ. ಜೊತೆಗೆ ವಿಡಂಬನೆ, ತಿಳಿಹಾಸ್ಯ, ವ್ಯಂಗ್ಯ, ಅಂತರ್ಮುಖತೆ - ಇವರ ಹಲವಾರು ಕವಿತೆಗಳಿಗೆ ಆಕಾರ ನೀಡಿವೆ. ಪರಿಕೀಯಪ್ರಜ್ಞೆ ನಿಸಾರರ ಕಾವ್ಯದಲ್ಲಿ ಕೆಲವೊಮ್ಮೆ ಮೂಲಸ್ಥಾಯಿಯಾಗಿರುವುದನ್ನು ಗಮನಿಸಬಹುದು. ಜೊತೆಗೆ ಸುತ್ತಣ ಬದುಕಿನ ರೀತಿನೀತಿಗಳ ಬಗ್ಗೆ ಅತ್ಯಂತ ಸೂಕ್ಷ್ಮವಾಗಿ ಚಿಂತಿಸುವ, ವಿಶಾಲ ಮನೋಭಾವ ವ್ಯಕ್ತಪಡಿಸುವ ಗುಣವನ್ನು ಇವರ ಕಾವ್ಯ ನಾಯಕನಲ್ಲಿ ಗುರುತಿಸಬಹುದಾಗಿದೆ. ಸಂಘರ್ಷಕ್ಕಿಂತ ಸಂಧಾನ-ಸಮನ್ವಯಗಳಲ್ಲಿ ನಂಬಿಕೆಯುಳ್ಳ ಕವಿ ಇವರು. ಬಹುಸಂಖ್ಯಾತರ ನಡುವೆ ಬದುಕುತ್ತಿರುವ ವಿದ್ಯಾವಂತ ಮುಸ್ಲಿಂ ಯುವಕನ ಆತಂಕಭರಿತ ಚಿತ್ರವನ್ನು ಇವರ ಕವಿತೆಗಳಲ್ಲಿ ಕಾಣುತ್ತೇವೆ. ನಿಮ್ಮೊಡನಿದ್ದೂ ನಿಮ್ಮಂತಾಗದೆ, ಉಭಯಕಷ್ಟ ಈ ಕವಿತೆಗಳ ನೆಲೆ ಈ ರೀತಿಯದು. ಅಮ್ಮ ಆಚಾರ ನಾನು, ರಂಗೋಲಿ ಮತ್ತು ಮಗ, ಕುರಿಗಳು ಸಾರ್ ಕುರಿಗಳು ಮುಂತಾದ ಹಲವಾರು ಶ್ರೇಷ್ಠ ಕವಿತೆಗಳನ್ನು ನೀಡಿದ ನಿಸಾರರು ಸೌಂದರ್ಯ ಮತ್ತು ಕಲೆಯ ವ್ಯಾಪ್ತಿಯನ್ನು ಹಿಗ್ಗಿಸುವ ಕಾವ್ಯವನ್ನು ನೀಡುವಲ್ಲಿ ಅತ್ಯಂತ ಯಶಸ್ವಿ ಕವಿ ಎನಿಸಿದರು. ಇವರ ಕವಿತೆಗಳಲ್ಲಿ ಮುಸ್ಲಿಂ ಸಂವೇದನೆ ವ್ಯಾಪಕವಾಗಿ ಶೋಧನಾತ್ಮಕವಾಗಿ ಬಾರದೇ ಇದ್ದರೂ ಭಾಷಾದೃಷ್ಟಿಯಿಂದ ತಮ್ಮ ಕಾವ್ಯದಲ್ಲಿ ಉರ್ದು ಪದಗಳನ್ನು ಸಹಜವೆಂಬಂತೆ ಬಳಸಿ ಯಶಸ್ವಿಯಾಗಿದ್ದಾರೆ. ನಿಸಾರರ ಕವಿತೆಗಳು ಇಂಗ್ಲಿಷ್, ಹಿಂದಿ, ಉರ್ದು, ಮಲೆಯಾಳಂ, ತೆಲುಗು, ಮರಾಠಿ ಹಾಗೂ ಚೀನಿ ಭಾಷೆಗಳಿಗೆ ತರ್ಜುಮೆಯಾಗಿವೆ.

ಕಾವ್ಯ ಕ್ಷೇತ್ರದಲ್ಲಿ ಸ್ವೋಪಜ್ಞತೆಯನ್ನೂ ಸ್ವತಂತ್ರತೆಯನ್ನೂ ಉಳಿಸಿಕೊಂಡೇ ಬಂದ ಇವರು ವೈಚಾರಿಕ ಕ್ಷೇತ್ರದಲ್ಲೂ ಚಿಂತನ ಮಂಥನ ನಡೆಸಿದ್ದಾರೆ. ಇದು ಬರಿ ಬೆಡಗಲ್ಲೋ ಅಣ್ಣ (1960) ಸಂಕಲನದ ಮೂಲಕ ಸಮರ್ಥ ವಿಮರ್ಶಕರು ಎನಿಸಿದ್ದಾರೆ. ಮನದೊಂದಿಗೆ ಮಾತುಕತೆ

(1991), ಹಿರಿಯರು ಹರಸಿದ ಹೆದ್ದಾರಿ (1992), ಅಚ್ಚುಮೆಚ್ಚು (1996), ವಿಚಾರ ವಿಹಾರ (1998), ಸಮಗ್ರ ಗದ್ಯ ಬರಹಗಳು (2002) - ಮುಂತಾದ ಕೃತಿಗಳಲ್ಲಿ ಇವರ ವೈಚಾರಿಕ ಚಿಂತನೆ ಪ್ರಕಟವಾಗಿದೆ.

ಅನುವಾದದ ಕ್ಷೇತ್ರದಲ್ಲಿಯೂ ನಿಸಾರರು ಗಮನ ಸೆಳೆದಿದ್ದಾರೆ. ಷೇಕ್ಸ್ಪಿಯರ್ ಮಹಾಕವಿಯ ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ, ಒಥೆಲೊ ನಾಟಕಗಳನ್ನು ಸಮಕಾಲೀನ ಭಾಷೆಯಲ್ಲಿ ಅನುವಾದಿಸಿ ಮೊಟ್ಟ ಮೊದಲನೆಯ ಸಲ ರಂಗಸ್ಥಳದ ಮೇಲೆ ಅವುಗಳನ್ನು ಅತ್ಯಂತ ಯಶಸ್ವಿಗೊಳಿಸಲು ಕಾರಣರಾಗಿದ್ದಾರೆ. ನಾಟಕಾನುವಾದದ ಕ್ಷೇತ್ರದ ಕ್ರಾಂತಿಕಾರಕ ಪರಿವರ್ತನೆಗೆ ನಾಂದಿ ಹಾಡಿದ್ದಾರೆ. ಇವರ ಈ ನಾಟಕ ತರ್ಜುಮೆಗಳಿಂದ ಪ್ರೇರಿತರಾಗಿ ಅನೇಕರು ಷೇಕ್ಸ್‌ಪಿಯರ್ ಹಾಗೂ ಆಧುನಿಕ ಪಾಶ್ಚಾತ್ಯ ನಾಟಕಕಾರರ ಕೃತಿಗಳನ್ನು ಕನ್ನಡಿಸಿದ್ದಾರೆ. ಕನ್ನಡದಲ್ಲಿ ನಿಸಾರರ ಅನುವಾದಗಳಿಗೆ ಐತಿಹಾಸಿಕ ಮಹತ್ವವಿದೆ.

1978ರಲ್ಲಿ ಭಾರತೀಯ ಭಾಷೆಗಳಲ್ಲೇ ಮೊಟ್ಟಮೊದಲನೆಯ ಭಾವಗೀತೆಗಳ 'ಕ್ಯಾಸೆಟ್ ನಿತ್ಯೋತ್ಸವ'ವನ್ನು ಹೊರತಂದು ಆ ನಿಟ್ಟಿನಲ್ಲಿ ಹೊಸಹಾದಿಯನ್ನು ನಿರ್ಮಿಸಿದ ಕೀರ್ತಿ ನಿಸಾರರಿಗೆ ಸಲ್ಲುತ್ತದೆ. ಇಲ್ಲಿನ ಕವಿತೆಗಳಿಗೆ ಸಂಗೀತ ನೀಡಿ, ಭಾವ ತುಂಬಿ ಹಾಡಿದವರು ಮೈಸೂರು ಅನಂತಸ್ವಾಮಿಯವರು. ದೇಶ ವಿದೇಶಗಳಲ್ಲಿಯೂ ನಿತ್ಯೋತ್ಸವ ಜನಪ್ರಿಯ ಕನ್ನಡ ಕ್ಯಾಸೆಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಸುಶ್ರಾವ್ಯ, ನವೋಲ್ಲಾಸ ಮತ್ತು ಅಪೂರ್ವ, ಅಭಿಷೇಕ ಎಂಬ ಕ್ಯಾಸೆಟ್‌ಗಳು ಈಚೆಗೆ ಬಿಡುಗಡೆಯಾಗಿವೆ. 1994ರಲ್ಲಿ ಇವರ ಸುಮಧುರ ಎಂಬ ಕ್ಯಾಸೆಟ್ ವಿದೇಶದ ದುಬೈ ಮತ್ತು ಅಬುಧಾಬಿ ಪಟ್ಟಣಗಳಲ್ಲಿ ಬಿಡುಗಡೆಯಾದ ಕನ್ನಡ ಸುಗಮ ಸಂಗೀತದ ಪ್ರಥಮ ಕ್ಯಾಸೆಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದಲ್ಲದೆ ನಿತ್ಯೋತ್ಸವ, ಸುಮಧುರ, ನವೋಲ್ಲಾಸ ಕ್ಯಾಸೆಟ್‌ಗಳು ಸಿ.ಡಿ. ರೂಪದಲ್ಲಿ ಕೂಡ ಹೊರಬಂದಿವೆ.

ಹಕ್ಕಿಗಳು (1978), ಶಿಲೆಗಳು ಖನಿಜಗಳು (1978), ಬರ್ಡ್ಸ್ (1978), ರಾಕ್ಸ್ ಅಂಡ್ ಮಿನರಲ್ಸ್ (1978), ಪುಟ್ಟ ಸಂತರು ಮತ್ತು ಕಲೆಗಳು (1978) - ಇವು ಇವರ ಇತರ ಕೃತಿಗಳು. ದಶವಾರ್ಷಿಕ ಕವಿತೆಗಳು (1974-83), ದಶವಾರ್ಷಿಕ ವಿಮರ್ಶೆ (1974-83), ದಶವಾರ್ಷಿಕ ಸಣ್ಣ ಕತೆಗಳು (1974-83), ಟೆನ್ ಇಯರ್ಸ್ ಆಫ್ ಕನ್ನಡ ಪೊಯೆಟ್ರಿ, ಮಾಸ್ತಿಯವರ ಚಿಕವೀರ ರಾಜೇಂದ್ರ; ಒಂದು ವಿವೇಚನೆ ಮೊದಲಾದ ಗ್ರಂಥಗಳಿಗೆ ಸಂಪಾದಕರಾಗಿಯೂ ಇವರು ಕಾರ್ಯ ನಿರ್ವಹಿಸಿದ್ದಾರೆ.

ಇವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರ, ಗೌರವಗಳು ದೊರಕಿವೆ. ದೆಹಲಿಯಲ್ಲಿ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಏರ್ಪಾಡಾಗುವ ರಾಷ್ಟ್ರೀಯ ಕವಿಸಮ್ಮೇಳನದಲ್ಲಿ ಇವರು ಎರಡು ಬಾರಿ ಭಾಗವಹಿಸಿದ್ದರು. (1967, 1985). 1978ರಲ್ಲಿ ಅಂತಾರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಇವರ ಹಕ್ಕಿಗಳು ಎಂಬ ಪುಸ್ತಕಕ್ಕೆ ಎನ್.ಸಿ.ಇ.ಆರ್.ಟಿ. ರಾಷ್ಟ್ರೀಯ ಬಹುಮಾನ ದೊರಕಿತು. 1981ರಲ್ಲಿ ಇವರ ಹೆಜ್ಜೆಗುರುತು ಎಂಬ ಕೃತಿಗೆ ಸೋವಿಯತ್ ಲ್ಯಾಂಡ್-ಹೆಸರು ಅಂತಾರಾಷ್ಟ್ರೀಯ ಪುರಸ್ಕಾರ ದೊರಕಿದೆ. ಕರ್ನಾಟಕ ರಾಜ್ಯೋತ್ಸವದ ಬೆಳ್ಳಿಹಬ್ಬದ ಪ್ರಯುಕ್ತ ರಾಜ್ಯ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ (1981). ಕೊಲ್ಲಿ ರಾಷ್ಟ್ರದ ದುಬೈ ಮತ್ತು ಅಭುಧಾಬಿ ಪಟ್ಟಣಗಳಲ್ಲಿ ಇವರನ್ನು ಅಲ್ಲಿನ ಕರ್ನಾಟಕ ಸಂಘಗಳು ಸನ್ಮಾನಿಸಿವೆ (1994). ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, (1981, 1982, 1991) ಕೆಂಪೇಗೌಡ ಪ್ರಶಸ್ತಿ (1990), ವಿಶ್ವಮಾನವ ಪ್ರಶಸ್ತಿ (1995), ಸದ್ಭಾವನಾ ಪ್ರಶಸ್ತಿ (1998), ಅನಕೃ ನಿರ್ಮಾಣ ಪ್ರಶಸ್ತಿ (2001), ವೈ.ಬಿ.ತಾತಾಚಾರಿ ಹೆಸರಿನ ಕನ್ನಡ ಸಾಹಿತ್ಯ ಪುರಸ್ಕಾರ (2002) ಮೊದಲಾದ ಹಲವಾರು ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ (1984-87). ಇವರ ಕಾಲದಲ್ಲಿ ಅಕಾಡೆಮಿಯ ಕಾರ್ಯಕ್ಷೇತ್ರ ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಿತು. (ಜಿ.ಆರ್.ಟಿ.)

**ನೀತಿಮಾರ್ಗ :** ತಲಕಾಡು ಗಂಗರಸರ ಒಂದು ಬಿರುದು. ಇದನ್ನೂ ಸತ್ಯವಾಕ್ಯ ಎಂಬುದನ್ನೂ ಇಮ್ಮಡಿ ಶಿವಮಾರನ ಅನಂತರದ ಗಂಗ ಅರಸರು ಏಕಾಂತರ ವರಸೆಯಾಗಿ ಉಪಯೋಗಿಸುತ್ತಿದ್ದರೆಂದು ಹೇಳಲಾಗಿದೆ. ಅಂದರೆ ಒಬ್ಬ ರಾಜ ಸತ್ಯವಾಕ್ಯನಾದರೆ ಮುಂದಿನವನು ನೀತಿಮಾರ್ಗ, ಅವನ ಮುಂದಿನವನು ಪುನಃ ಸತ್ಯವಾಕ್ಯ ಈ ರೀತಿ. ಇದು ಸಾಮಾನ್ಯವಾಗಿ ಸರಿಯಾಗಿದ್ದರೂ ಪೂರ್ಣ ಖಚಿತವಾಗಿಲ್ಲ. ಗಂಗರಾಜರುಗಳಲ್ಲಿ ಎಱೆಗಂಗ I (843-70), ಎಱೆಗಂಗ II (886-920), ರಾಚಮಲ್ಲ III (933-36), ಮರುಳ (961-63) ಮತ್ತು ಗೋವಿಂದರಸ ಇವರು ನೀತಿಮಾರ್ಗ ಬಿರುದನ್ನು ಧರಿಸಿದ್ದರು. ಇವರಲ್ಲಿ ಕೆಲವರ ಬಗ್ಗೆ ಅವರ ಹೆಸರಿನ ಶೀರ್ಷಿಕೆಯಡಿಯಲ್ಲಿ ಲೇಖನಗಳನ್ನು ಕೊಡಲಾಗಿದೆ.

**ನೀನಾಸಮ್ ರಂಗ ಶಿಕ್ಷಣ ಕೇಂದ್ರ :** ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕಕ್ಕೆ ಹೆಸರು ತಂದ ರಂಗತಂಡ. ನೀಲಕಂಠೇಶ್ವರ ನಾಟ್ಯಸೇವಾ ಸಂಘ ಇದರ ಪೂರ್ತಿ ಹೆಸರು. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಹೆಗ್ಗೋಡು ಇದರ ಕೇಂದ್ರ ಸ್ಥಾನ. ಇದು ಸ್ಥಳೀಯ ಯುವಕರ ಹವ್ಯಾಸೀ ನಾಟಕ ತಂಡವಾಗಿ ಸ್ಥಾಪನೆಗೊಂಡಿತ್ತು (1949). ಇಲ್ಲಿಯವರೆಗೆ 40 ಕ್ಕೂ ಹೆಚ್ಚು ನಾಟಕಗಳನ್ನಾಡಿದೆ. ಅವುಗಳಲ್ಲಿ ಮುಖ್ಯವಾದವು: ಶಹಜಹಾನ್ (1953), ರಂಗಭಾರತ (1973), ಸಂಗ್ಯಾ ಬಾಳ್ಯಾ (1974), ಬಕ (1975), ಘಾಶಿರಾಂಕೊತ್ವಾಲ್ (1976), ಒಂದು ಲೋಕ ಕಥೆ (1977), ಸಾಹೇಬರು ಬರುತ್ತಾರೆ (1983), ಹ್ಯಾಮ್ಲೆಟ್ (1984), ಬೆಪ್ಪುತಕಡಿ ಭೋಳೇ ಶಂಕರ (1987), ಜೋಕುಮಾರ ಸ್ವಾಮಿ (1989), ಈ ನಾಟಕಗಳನ್ನು ಕೆ.ವಿ. ಸುಬ್ಬಣ್ಣ, ಬಿ.ವಿ.ಕಾರಂತ, ಪ್ರಸನ್ನ, ಕೆ.ವಿ.ಅಕ್ಷರ, ಚಿದಂಬರರಾವ್ ಜಂಬೆ, ಚಂದ್ರಶೇಖರ ಕಂಬಾರ ಮೊದಲಾದವರು ನಿರ್ದೇಶಿಸಿದ್ದಾರೆ.

1970 ರ ದಶಕದಲ್ಲಿ ನೀನಾಸಮ್ ತನ್ನ ಚಟುವಟಿಕೆಗಳನ್ನು ವಿಸ್ತರಿಸಿತು. ನೀನಾಸಮ್ ಚಿತ್ರ ಸಮಾಜದ ಸ್ಥಾಪನೆಯಾದದ್ದು 1973 ರಲ್ಲಿ. ಇದು ಚಿತ್ರೋತ್ಸವ, ಚಿತ್ರವಿಮರ್ಶಾ ಕಾರ್ಯಾಗಾರ ಮತ್ತು ಚಲನಚಿತ್ರಕ್ಕೆ ಸಂಬಂಧಿಸಿದ ಕನ್ನಡ ಪುಸ್ತಕ ಪ್ರಕಟಣೆಯನ್ನು ಆರಂಭಿಸಿತು. ಪ್ರಥಮ ಚಲನಚಿತ್ರೋತ್ಸವ ಸಂಘಟಿಸಿ ಗ್ರಾಮೀಣ ಜನರಿಗೆ ಜಾಗತಿಕ ಮಟ್ಟದ ನಿರ್ದೇಶಕರ ಚಿತ್ರಗಳನ್ನು ಪ್ರದರ್ಶಿಸಿತು (1977). ಇದಲ್ಲದೆ ರಾಜ್ಯದ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಜನಸ್ಪಂದನ ಕಾರ್ಯಕ್ರಮ ಏರ್ಪಡಿಸಿತ್ತು (1983 - 85). ಈ ಕಾರ್ಯಕ್ರಮದ ಅಡಿಯಲ್ಲಿ ಹೆಗ್ಗೋಡಿನಲ್ಲಿ 16 ಚಿತ್ರೋತ್ಸವಗಳು, 10 ಚಿತ್ರ ಸಂವೇದನಾ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಇದೇ ವೇಳೆ ಹೆಗ್ಗೋಡಿನಿಂದ ಹೊರಗಡೆ 55 ಚಿತ್ರಸಹೃದಯತಾ ಶಿಬಿರಗಳನ್ನೂ 93 ಚಿತ್ರೋತ್ಸವಗಳನ್ನೂ ಸಂಸ್ಥೆ ಸಂಘಟಿಸಿತು. ಪ್ರತಿವರ್ಷ 10 ದಿನಗಳ ಕಾಲ ಚಲನಚಿತ್ರ ಸಹೃದಯತಾ ಶಿಬಿರಗಳನ್ನು 1979 ರಿಂದ 88 ರ ವರೆಗೆ ನಡೆಸಿಕೊಂಡು ಬರಲಾಯಿತು. ಅದೀಗ ನೀನಾಸಮ್ ಸಂಸ್ಕೃತಿ ಶಿಬಿರವಾಗಿ ಮುಂದುವರಿದಿದೆ.

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ (ಎನ್‌ಎಸ್‌ಡಿ.) ಮಾದರಿಯಲ್ಲಿ ನೀನಾಸಮ್ ರಂಗ ಶಿಕ್ಷಣ ಕೇಂದ್ರ ಸ್ಥಾಪಗೊಂಡಿತು (1980). ಕನ್ನಡದ ಉತ್ಸಾಹೀ ಯುವಕರಿಗೆ ರಂಗಕಲೆಗಳಲ್ಲಿ ಶಾಸ್ತ್ರೀಯವಾದ ತರಬೇತಿ ಕೊಡುವ ಮುಖ್ಯ ಉದ್ದೇಶದಿಂದ ಆರಂಭವಾದ ಈ ಕೇಂದ್ರ ರಂಗಶಿಕ್ಷಣವನ್ನು ದೇಶೀಯ ಅಗತ್ಯಕ್ಕೆ ಅನುಗುಣವಾಗಿ ರೂಪಿಸಿಕೊಂಡಿದ್ದು ಮಹತ್ತ್ವದ ಸಾಧನೆ. ರಂಗಶಿಕ್ಷಣಕ್ಕೆ ಅಗತ್ಯವಾದ ಮಾಹಿತಿ ಹಾಗೂ ಪಠ್ಯಗಳನ್ನು ಕನ್ನಡದಲ್ಲಿ ತಯಾರಿಸಿರುವುದು ಹಾಗೂ ರಂಗಶಿಕ್ಷಣಕ್ಕೆ ಸಂಬಂಧಿಸಿದ ಸಮೃದ್ಧ ಗ್ರಂಥಭಂಡಾರ ಹೊಂದಿರುವುದು ಈ ಕೇಂದ್ರದ ವಿಶೇಷ. ರಂಗಶಿಕ್ಷಣ ಕೇಂದ್ರ 89 ನಾಟಕಗಳನ್ನೂ 155 ಅಭ್ಯಾಸಿ ಪ್ರಯೋಗಗಳನ್ನೂ ರಂಗದ ಮೇಲೆ ತಂದಿದೆ (2001).

ನೀನಾಸಮ್ ರಂಗಶಿಕ್ಷಣ ಕೇಂದ್ರ ರಂಗಕಲೆಯ ಒಂದು ವರ್ಷದ ಡಿಪ್ಲೊಮಾ ನಡೆಸುತ್ತಿದೆ. ಇದು ರಂಗಭೂಮಿಯ ತಾತ್ತ್ವಿಕ ಮತ್ತು ಪ್ರಾಯೋಗಿಕ ತರಬೇತಿಯನ್ನು ಒಳಗೊಂಡಿದೆ. ರಂಗಸಿದ್ಧಾಂತ, ನಾಟಕ

ಇತಿಹಾಸ, ರಂಗಭೂಮಿ ಇತಿಹಾಸ, ರಂಗಾಭಿನಯ, ರಂಗಸಿದ್ಧತೆ ಮತ್ತು ರಂಗಪ್ರಯೋಗಗಳು ಪಠ್ಯ ಕ್ರಮದ ಅವಿಭಾಜ್ಯ ಅಂಗಗಳು. ಪ್ರತಿವರ್ಷ ತರಬೇತಿಗಾಗಿ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ 20 ಜನರನ್ನು ಆಯ್ಕೆಮಾಡಲಾಗುತ್ತದೆ.

ತಿರುಗಾಟ ನೀನಾಸಮ್‍ನ ಒಂದು ವಿಶಿಷ್ಟ ಕಾರ್ಯಕ್ರಮ. ಇಲ್ಲಿನ ರಂಗತಂಡ ನಾಟಕವನ್ನು ರಾಜ್ಯದ ಮೂಲೆಮೂಲೆಗಳಿಗೆ ತಲಪಿಸುತ್ತದೆ. ಇಂಥ ಒಂದು ಕಾರ್ಯಕ್ರಮ ಆರಂಭಗೊಂಡಿದ್ದು 1985 ರಲ್ಲಿ. ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ಅವಕಾಶವನ್ನು ಇದು ಕಲ್ಪಿಸುತ್ತದೆ. ಜೊತೆಗೆ ಕನ್ನಡದಲ್ಲಿ ಕ್ಷೀಣಿಸಿದ್ದ ವೃತ್ತಿ ರಂಗ ಭೂಮಿಗೆ ಕಾಯಕಲ್ಪ ನೀಡುವ ಉದ್ದೇಶವನ್ನು ಒಳಗೊಂಡಿದೆ. ತಿರುಗಾಟದ ಉದ್ದೇಶಕ್ಕಾಗಿ ಪ್ರತಿವರ್ಷ ಮೂರು ನಾಟಕಗಳ ಜೊತೆಗೆ ಒಂದು ಮಕ್ಕಳ ನಾಟಕವನ್ನು ಆಯ್ದುಕೊಳ್ಳಲಾಗುತ್ತದೆ. ಮೂರು ತಿಂಗಳ ರಂಗತಾಲೀಮಿನ ಅನಂತರ ನಾಲ್ಕು ತಿಂಗಳು, ರಾಜ್ಯದ ಬಹುಪಾಲು ಹಳ್ಳಿ ಪಟ್ಟಣಗಳಿಗೆ ಭೇಟಿ ನೀಡಿ ನಾಟಕ ಪ್ರದರ್ಶಿಸಲಾಗುವುದು.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ನೆರವಿನೊಂದಿಗೆ ನೀನಾಸಮ್ ಶಾಲಾರಂಗ ಎಂಬ ಶಿಕ್ಷಣದಲ್ಲಿ ರಂಗಭೂಮಿ ಯೋಜನೆಯನ್ನು ನಡೆಸಿತು (1991 - 93). ರಂಗಶಿಕ್ಷಣ ಕೇಂದ್ರದಲ್ಲಿ ಕಲಿತ ಕಲಾವಿದರ ಗುಂಪೊಂದಕ್ಕೆ ವಿಶೇಷ ತರಬೇತಿ ನೀಡಿ ಶಾಲೆಗಳಲ್ಲಿ ರಂಗಭೂಮಿ ಅಥವಾ ಸಾಂಸ್ಕೃತಿಕ ಕಾರ್ಯಾಗಾರಗಳನ್ನು ನಡೆಸಲಾಯಿತು. ಕಾರ್ಯಾಗಾರದ ಅಂತ್ಯದಲ್ಲಿ ರಂಗ ಪ್ರಯೋಗಗಳಿರುತ್ತಿದ್ದವು. ರಾಜ್ಯದಲ್ಲಿ ಇದುವರೆಗೆ ಇಂಥ 13 ಕಾರ್ಯಾಗಾರಗಳು ನಡೆದಿವೆ.

ಕೆ.ವಿ.ಸುಬ್ಬಣ್ಣನವರು (ನೋಡಿ) ನೀನಾಸಮ್ ಚಟುವಟಿಕೆಗಳ ರೂವಾರಿ. ಇವರು ತಮಗೆ ಸಂದ ಮ್ಯಾಗ್‍ಸೆಸೆ ಪುರಸ್ಕಾರದೊಂದಿಗೆ ಬಂದ ಹಣವನ್ನು ಮೂಲಧನವನ್ನಾಗಿ ಇರಿಸಿ ನೀನಾಸಮ್ ಪ್ರತಿಷ್ಠಾನವನ್ನು ಸ್ಥಾಪಿಸಿದ್ದಾರೆ (1992). ಠೇವಣಿಯಿಂದ ಬರುವ ಆದಾಯದಿಂದ ನೀನಾಸಮ್ ಚಟುವಟಿಕೆಗಳನ್ನು ಹೆಗ್ಗೋಡಿನ ಹೊರಕ್ಕೂ ವಿಸ್ತರಿಸಲಾಗಿದೆ. ಒಂದರಿಂದ ಮೂರು ದಿನಗಳ ಅವಧಿಯ ಸಾಹಿತ್ಯ ಅಧ್ಯಯನ ಶಿಬಿರಗಳನ್ನು ರಾಜ್ಯದ ವಿವಿಧೆಡೆ ಏರ್ಪಡಿಸಲಾಗಿದೆ. ಈವರೆಗೆ ಅಂಥ 40ಕ್ಕೂ ಹೆಚ್ಚು ಶಿಬಿರಗಳು ನಡೆದಿವೆ.

ಆಧುನಿಕ ರಂಗಭೂಮಿಯ ಎಲ್ಲ ಸೌಲಭ್ಯಗಳನ್ನು ಹೊಂದಿರುವ ಶಿವರಾಮ ಕಾರಂತ ರಂಗಮಂದಿರ, ನೀನಾಸಮ್ ನಿರ್ಮಾಣಗಳಲ್ಲೊಂದು. ನೀನಾಸಮ್ ಮಾತುಕತೆ ಎಂಬುದು ಸಂಸ್ಥೆ ತನ್ನ ಚಟುವಟಿಕೆಗಳನ್ನು ದಾಖಲಿಸಲು ಹೊರತರುತ್ತಿರುವ ಖಾಸಗೀ ಪ್ರಸಾರದ ತ್ರೈಮಾಸಿಕ ಪತ್ರಿಕೆ, ಈ ಪತ್ರಿಕೆಯ ಸಂಪಾದಕರು ಯಶವಂತ ಜಾಧವ್. (ಎನ್‍ಐ.ಪಿ.)

**ನೀರಾವರಿ :** ಕೃಷಿಗೆ ಅತ್ಯಾವಶ್ಯಕವಾದ ನೀರನ್ನು ಕೃತಕ ರೀತಿಯಲ್ಲಿ ಸರಬರಾಜು ಮಾಡುವ ವಿಧಾನವೇ ನೀರಾವರಿ. ಕರ್ನಾಟಕದಲ್ಲಿ ವರ್ಷದ ಕೆಲವೇ ತಿಂಗಳುಗಳಲ್ಲಿ ಮಾತ್ರ ಹೆಚ್ಚು ಮಳೆ ಬೀಳುತ್ತದೆಯಾದ್ದರಿಂದ ಇಲ್ಲಿ ದೊರೆಯುವ ನೀರು ಸಾಕಷ್ಟಿದ್ದರೂ ಅದು ವ್ಯರ್ಥವಾಗಿ ಹರಿದುಹೋಗುವುದು. ವಿವಿಧ ಭಾಗಗಳಲ್ಲಿ ಬೀಳುವ ಮಳೆಯ ಪರಿಮಾಣ ಆವಶ್ಯಕತೆಗಿಂತ ವ್ಯತ್ಯಾಸವಾಗಿರುವುದು. ಕೆಲವೆಡೆ ಅನಿಶ್ಚಿತವಾಗಿರುವುದು ಮುಂತಾದ ಕಾರಣಗಳಿಂದ ಉತ್ತಮ ನೀರಾವರಿ ವ್ಯವಸ್ಥೆಯನ್ನು ರೂಢಿಸುವುದು ಆವಶ್ಯಕವಾಗಿದೆ. ಈ ಅಂಶವನ್ನು ನಾಡಿನ ಜನ ಹಿಂದಿನಿಂದಲೇ ಮನಗಂಡಿದ್ದು ನೀರಾವರಿ ಕೆಲಸಗಳನ್ನು ಕೈಗೊಂಡಿದ್ದರು. ಇಂದು ಆಧುನಿಕ ವಿಜ್ಞಾನದ ಬೆಳೆವಣಿಗೆಯೊಡನೆ ಇನ್ನೂ ಹೆಚ್ಚು ವ್ಯಾಪಕವಾಗಿ ವ್ಯವಸ್ಥಿತವಾಗಿ ನೀರಾವರಿಯನ್ನು ರೂಢಿಸಲಾಗುತ್ತಿದೆ.

### ಪ್ರಾಚೀನ

ಪ್ರಾಚೀನ ಕರ್ನಾಟಕದಲ್ಲಿ ನೀರಾವರಿಯ ಬಗ್ಗೆ ಸ್ಪಷ್ಟ ಕಲ್ಪನೆ ಇತ್ತು. ಕೃಷಿ ಭೂಮಿಗಳನ್ನು ದೇವಮಾತೃಕ ಮತ್ತು ನದೀಮಾತೃಕಗಳೆಂಬ ಎರಡು ಬಗೆಗಳಲ್ಲಿ ವಿಂಗಡಿಸುತ್ತಿದ್ದರು. ಕೇವಲ ಮಳೆ ನೀರನ್ನವಲಂಬಿಸಿದ್ದ ಭೂಮಿಗಳೇ ದೇವಮಾತೃಕಗಳು. ನದಿಯ ನೀರನ್ನು ನೀರಾವರಿ ವಿಧಾನದಲ್ಲಿ ಕಾಲುವೆಗಳ ಮೂಲಕ ಹಾಯಿಸಿದ್ದನ್ನು ಆಶ್ರಯಿಸಿರುವ ಭೂಮಿಗಳು ನದೀಮಾತೃಕಗಳು.

ನೀರಾವರಿ ಪ್ರಧಾನವಾಗಿ ನದಿ, ಕೆರೆ ಮತ್ತು ಬಾವಿಗಳನ್ನು ಅವಲಂಬಿಸಿತ್ತು. ನೀರಾವರಿ ಸಾಧನಗಳೆನಿಸಿದ್ದ ಕಾಲುವೆ, ಕೆರೆಕಟ್ಟೆ ಹಾಗೂ ಬಾವಿಗಳನ್ನು ಕಟ್ಟಿಸುವುದು ಅತಿ ಪುಣ್ಯದ ಕೆಲಸ. ಇದರಿಂದ ಜನತೆಗೆ ಶ್ರೇಯಸ್ಕರವಾಗುವುದು ಮಾತ್ರವಲ್ಲದೆ, ದೇವತೆಗಳೂ ಸುಪ್ರೀತರಾಗುತ್ತಾರೆಂಬ ನಂಬಿಕೆ ಜನಮನದಲ್ಲಿ ಆಳವಾಗಿ ಬೇರೂರಿದ್ದಿತು. ಅಂತೆಯೇ ರಾಜರು, ರಾಜ್ಯಾಧಿಕಾರಿಗಳು, ಶ್ರೀಮಂತರು ಅಷ್ಟೇಕೆ ಸ್ತ್ರೀಯರು ಹಾಗೂ ಸಂನ್ಯಾಸಿಗಳೂ ಈ ಪುಣ್ಯಕಾರ್ಯದಲ್ಲಿ ಭಾಗಿಗಳಾಗಿದ್ದಾರೆ. ಹಾಗೆಯೇ, ಗ್ರಾಮಸಭೆ, ವರ್ತಕಶ್ರೇಣಿ, ದೇವಸ್ಥಾನಗಳಂಥ ಸಂಸ್ಥೆಗಳೂ ಈ ದಿಶೆಯಲ್ಲಿ ಹಿಂದೆ ಬಿದ್ದಿಲ್ಲ. ಅಂದಿನ ಸಮಾಜ ನೀರಾವರಿ ಕಾರ್ಯಕ್ಕೆ ಕೊಟ್ಟಿದ್ದ ಮಹತ್ತ್ವ ಹಾಗೂ ಆದ್ಯತೆ ಗಮನಾರ್ಹವಾದುದು. "ಹರಿಯುತ್ತಿರುವ ನೀರಿಗೆ ಅಡ್ಡಲಾಗಿ ಕಟ್ಟುವ ಕಟ್ಟೆಯೇ ಸೇತು (ಸೇತು ಜಲಪ್ರವಾಹ ಬಂಧ), ಇಂಥ ಸೇತುಕಾರ್ಯವನ್ನು ಯಾರೇ ಆಗಲಿ, ತಮ್ಮ ಭೂಮಿಗಳಿಗೆ ಇದರಿಂದ ನಷ್ಟವೇ ಆದರೂ ಅಡ್ಡಿ ಬಂದು ನಿಲ್ಲಿಸಕೂಡದು. ಏಕೆಂದರೆ ಇದರಿಂದ ಆಗುವ ನಷ್ಟ ಅಲ್ಪ. ಆದರೆ ಪ್ರಯೋಜನ ಮಾತ್ರ ಅತ್ಯಧಿಕ. ಅಸಂಖ್ಯಾತ ಜನರಿಗೆ ಉಪಕಾರಿ. ಬಾವಿ, ಕೊಳ ಮುಂತಾದವುಗಳ ನಿರ್ಮಾಣಕಾರ್ಯಗಳನ್ನು ಎಂದಿಗೂ ನಿಲ್ಲಿಸಬಾರದು; ಇವುಗಳಿಗೆ ಬೇಕಾಗುವ ಸ್ಥಳಾವಕಾಶವಾದರೊ ಅಲ್ಪ ಮಾತ್ರ, ಆದರೆ ತಮ್ಮಲ್ಲಿನ ವಿಪುಲವಾದ ನೀರಿನಿಂದ ಅತ್ಯುಪಯುಕ್ತ" - ಇದು ಪ್ರಸಿದ್ಧ ಧರ್ಮಶಾಸ್ತ್ರಕಾರನಾದ ವಿಜ್ಞಾನೇಶ್ವರನ ಹೇಳಿಕೆ. ಈ ಮಾತುಗಳಲ್ಲಿ ನೀರಾವರಿ ಕಾರ್ಯಗಳ ಬಗ್ಗೆ ಅಂದಿನ ಸಮಾಜದ ಸ್ಪಷ್ಟ ಧೋರಣೆಯನ್ನು ಕಾಣಬಹುದು.

ಸೇತುಬಂಧಗಳ ಪ್ರಸ್ತಾಪ ಹಲವಾರು ಶಾಸನಗಳಲ್ಲಿವೆ. ವರದಾನದಿಗೆ ಒಂದು ಮಹಾ ಸೇತುವಿತ್ತಂತೆ. ಕಾವೇರಿಗೆ ತೂಬುಗಳು ಹಾಗೂ ಕಾಲುವೆಗಳಿದ್ದ ಸಂಗತಿಯೂ ಶಾಸನೋಕ್ತವೇ. ತುಂಗಭದ್ರೆಯ ನೀರು ಕಾಲುವೆಯ ಮೂಲಕ ಹರಿದು ಹೊಲಗದ್ದೆ ತಲುಪಿದ್ದನ್ನು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ 13ನೆಯ ವರ್ಷದಲ್ಲಿ ಬರೆಸಿರುವ ಮುನಿರಾಬಾದ್ ಶಾಸನ ವರ್ಣಿಸುತ್ತದೆ. ತ್ರೈಲೋಕ್ಯಮಲ್ಲ ಸೋಮೇಶ್ವರನ ಕಾಲದಲ್ಲಿದ್ದ ಆದಿತ್ಯಭಟ್ಟನೆಂಬಾತ ತುಂಗಭದ್ರಾ ನದಿಯ ದಂಡೆಗಳನ್ನು ಸಮೀಕ್ಷಿಸಿ ಒಂದು ದೊಡ್ಡ ಕಾಲುವೆಯನ್ನು ತೋಡಿಸಿದ. ಇದರಿಂದ ಹೊರಟ ಸಣ್ಣ ಸಣ್ಣ ನಾಲೆಗಳು ಹಲವಾರು. ಅಲ್ಲದೆ ಮೇಲ್ದಂಡೆಯ (ಉದ್ದಿಯ ಕಾಲು) ಮತ್ತು ಕೆಳದಂಡೆಯ (ಪಳ್ಳವಾಯ್ಕಾಲು) ಕಾಲುವೆಗಳನ್ನೂ ಮಾಡಿಸಿ ಇವೆಲ್ಲವನ್ನೂ ಅಲ್ಲಿನ ಪ್ರಜೆಗಳಿಗೆ ಅರ್ಪಿಸಿದ. ಈ ನೀರಾವರಿಯಿಂದ ಬಾಳೆಯೇ ಮುಂತಾದ ಬೆಳೆಗಳು ಸಮೃದ್ಧವಾಗಿ ಬೆಳೆಯಿತು ಎಂದು ಒಂದು ಶಾಸನ ತಿಳಿಸುತ್ತದೆ. ಮತ್ತೊಂದು ನಿದರ್ಶನವನ್ನು ಹಳೇ ಬೀಡಿನ ಸು. 1300ರ ಶಾಸನವೊಂದರಲ್ಲಿ ನೋಡಬಹುದು; ಯಗಚಿ ನದಿಯ ನೀರನ್ನು ರಾಜಧಾನಿಯಾದ ದ್ವಾರಸಮುದ್ರಕ್ಕೆ (ಇಂದಿನ ಹಳೇಬೀಡಿಗೆ) ತರಲು ಮಾಡಿದ ಪ್ರಯತ್ನದ ಪ್ರಸ್ತಾಪ ಇಲ್ಲಿದೆ. ಇದರ ಬಗ್ಗೆ ಕ್ಯಾಪ್ಟನ್ ಮೆಕೆಂಜಿಯವರ ಅಭಿಪ್ರಾಯವನ್ನು ಇಲ್ಲಿ ಗಮನಿಸಬಹುದು. 'ರಾಜಧಾನಿಗೆ ಅಗತ್ಯವಿರುವ ನೀರು, ಮತ್ತು ಸುತ್ತಮುತ್ತಲ ಕೃಷಿಭೂಮಿಗಳಿಗೆ ಬೇಕಾದ ನೀರನ್ನು ಸರಬರಾಜು ಮಾಡುವ ಸಲುವಾಗಿ, ಬೇಲೂರಿನ ಸಮೀಪದಲ್ಲಿ ಹರಿಯುತ್ತಿದ್ದ ಯಗಚಿಯ ನೀರನ್ನು ಕಾಲುವೆ ಮೂಲಕ ಹಳೆಬೀಡಿಗೆ ತರಲಾಯಿತು. ಹಾಸನ-ಬೇಲೂರು ಮಾರ್ಗದ 25ನೆಯ ಕಿ.ಮೀ. ಕಲ್ಲಿನ ಹತ್ತಿರ ಕಾಣುವ, ಆಳವಾಗಿ ತೋಡಿರುವ ಕಾಲುವೆಯ ಕೆಲಸ ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಅಂದು ತೋಡಿರುವ ಕಾಲುವೆಯ ಗಾತ್ರ ಆಳಗಳನ್ನು ವೀಕ್ಷಿಸಿದರೆ, ಇದೇನು ಸಾಧಾರಣ ಕಾರ್ಯವಲ್ಲವೆನಿಸುತ್ತದೆ. ಈ ಇಡೀ ಯೋಜನೆ ಅಂದಿನ ಶಿಲ್ಪಿಗಳ ಕೌಶಲ್ಯಕ್ಕೆ ಕೀರ್ತಿ ತರುವಂತಿದೆ' ಎಂದಿದ್ದಾನೆ. ಕೋಲಾರ ಜಿಲ್ಲೆಯ 1388ರ ಶಾಸನವೊಂದು ತಿಳಿಸುವಂತೆ ಎರಡನೆಯ

ಬುಕ್ಕರಾಯನ ಅಪ್ಪಣೆಯ ಮೇರೆಗೆ, ಸಿಂಗಾಯಭಟ್ಟ ಎಂಬ ಜಲಸೂತ್ರನು ಹೆನ್ನೆ ನದಿಯ ನೀರನ್ನು ಒಂದು ಕಾಲುವೆಯ ಮೂಲಕ ಸಿರುವೆರ ಕೆರೆಗೆ ಹರಿಸಿದ. ಇದರಿಂದ ಆಗ ನೀರಾವರಿ ತಜ್ಞರಿದ್ದ ಬಗ್ಗೆ ಸುಳಿವು ದೊರೆಯುತ್ತದೆ.

ಬೆಟ್ಟಗುಡ್ಡಗಳಿಂದ ಹರಿದು ಬರುವ ಸಣ್ಣ ಸಣ್ಣ ನದಿಗಳ ನೀರನ್ನೂ ಕಾಲುವೆಗಳ ಮೂಲಕ ಹಾಯಿಸಿ, ಬೆಳೆಗಳನ್ನು ಮಾಡುತ್ತಿದ್ದಂತೆ ಕಾಣುತ್ತದೆ. ಇಂಥ ನೀರಾವರಿಯಿಂದ ಕಬ್ಬು, ಬತ್ತ ಮುಂತಾದವುಗಳನ್ನೂ ಬೆಳೆಯುತ್ತಿದ್ದಂತೆ ಶಾಸನವೊಂದು ತಿಳಿಸುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ, ಕಣಿವೆಯ ಕೆಳಭಾಗಗಳಲ್ಲಿನ ಬತ್ತದ ಗದ್ದೆಗಳಿಗೆ ಸಣ್ಣ ಸಣ್ಣ ನದಿಗಳಿಂದ ನೀರು ಹಾಯಿಸಿ ವರ್ಷಕ್ಕೆ ಎರಡು ಬೆಳೆಗಳನ್ನೂ ತೆಗೆಯುತ್ತಿದ್ದರಂತೆ; ಇಂಥ ಗದ್ದೆಗಳನ್ನು ಪುಲ್ಲೆಯ ಬಯಲು ಎಂದು ಕರೆಯಲಾಗಿದೆ. ಪುಲ್ಲೆಯ ಬಯಲಿನ ಪ್ರಸ್ತಾಪ ಕೆಲವು ಶಾಸನಗಳಲ್ಲೂ ಇದೆ. (ಎಸ್.ಜಿ.)

ಕೆರೆಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತಿ ಪ್ರಮುಖವೆನಿಸಿದ್ದುವು. ಈ ವಿಷಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನೊದಗಿಸುವ ಬಹುಪಾಲು ಶಾಸನಗಳು ಕೆರೆಗಳ ಬಗ್ಗೆ ಪ್ರಸ್ತಾಪ ಮಾಡುವಂತಹುವೇ ಆಗಿವೆ. ಆದರೆ ಕರ್ನಾಟಕದಲ್ಲಿ ಎಂದಿನಿಂದ ಕೆರೆಗಳ ನಿರ್ಮಾಣ ಪ್ರಾರಂಭವಾಯಿತೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಹಲವು ಪ್ರಾಗಿತಿಹಾಸಕಾರರ ಮೇರೆಗೆ ಕ್ರಿ.ಪೂ. ಒಂದು ಸಾವಿರದ ಸುಮಾರಿಗೆ ಕರ್ನಾಟಕಕ್ಕೆ ವಲಸೆ ಬಂದ ಬೃಹತ್ ಶಿಲಾಸಮಾಧಿಗಳನ್ನು ಕಟ್ಟುತ್ತಿದ್ದ ಹಾಗೂ ಕಬ್ಬಿಣದ ಉಪಯೋಗವನ್ನು ತಿಳಿದಿದ್ದ ಜನರಿಂದ ಕೆರೆಗಳ ನಿರ್ಮಾಣಕಾರ್ಯ ಆರಂಭವಾಗಿರಬಹುದೆಂದು ಊಹೆ. ಏಕೆಂದರೆ ಈ ಜನರ ನೆಲೆಗಳು ಮತ್ತು ಸ್ಮಶಾನ ಪ್ರದೇಶಗಳು ಪ್ರಾಚೀನ ಕೆರೆಗಳ ಸಮೀಪದಲ್ಲಿ ಕಂಡುಬಂದಿವೆ. ಅಲ್ಲದೆ ಕೆಲವು ಬೃಹತ್ ಶಿಲಾಸಮಾಧಿಗಳಲ್ಲಿ ಬತ್ತ ಅಥವಾ ಬತ್ತದ ಹೊಟ್ಟು ದೊರಕಿರುವುದು ಆ ಕಾಲದಲ್ಲಿ ನೀರಾವರಿ ವ್ಯವಸಾಯ ಇದ್ದುದಕ್ಕೆ ಸೂಚಕವಾಗಿದೆ.

ಕೆರೆಗಳ ನಿರ್ಮಾಣ ಮಾನವನ ಆರ್ಥಿಕ ಜೀವನದಲ್ಲಿ ಒಂದು ಮೈಲಿಗಲ್ಲು. ಕೆರೆಗಳ ನಿರ್ಮಾಣದಿಂದ ಮಾನವ ನದಿದಂಡೆಯನ್ನೇ ತನ್ನ ವಾಸಕ್ಕಾಗಿ ಅವಲಂಬಿಸಬೇಕಾದ ಆವಶ್ಯಕತೆ ಇಲ್ಲದಂತಾಗಿ ತನ್ನ ಜೀವನದ ಪ್ರಗತಿಗೆ ಅನುಕೂಲವಾಗುವಂಥ ಸ್ಥಳಗಳಿಗೆ ವಲಸೆ ಹೋಗಬಲ್ಲವನಾದ. ಕೆರೆಕಟ್ಟುವುದು ಸಾಮೂಹಿಕ ಕೆಲಸವಾದ್ದರಿಂದ ಮತ್ತು ಜನಬಲವನ್ನು ಸಂಘಟಿಸಲು ಮುಂದಾಳು ಅಥವಾ ಮುಖಂಡನ ಆವಶ್ಯಕತೆಯಿಂದಾಗಿ ಮಾನವನ ಸಂಘಜೀವನದಲ್ಲಿ ಪ್ರಗತಿಯ ಸಾಧನೆ ಕಂಡುಬರುವುದು ಸಹಜ. ಬಹುಶಃ ಕೆರೆಗಳನ್ನು ಕಟ್ಟುವ ರೂಢಿ ಬೆಳೆದಂತೆ ಕರ್ನಾಟಕದ ಎಲ್ಲೆಡೆಗಳಲ್ಲೂ ಹೊಸ ಹಳ್ಳಿಗಳು ಹುಟ್ಟಿಕೊಂಡುವು. ಅನಾವೃಷ್ಟಿಯ ಭಯವಿಲ್ಲದೆ ಎರಡು ಮೂರು ಬೆಳೆಗಳನ್ನು ಬೆಳೆಯುವುದರಿಂದಾದ ಆರ್ಥಿಕ ಸುಧಾರಣೆ ಮತ್ತು ಸಂತೃಪ್ತಿಯಿಂದಾಗಿ ಮತ್ತು ಕಾಲದ ಉಳಿತಾಯದಿಂದಾಗಿ ಆಧ್ಯಾತ್ಮಿಕ ಹಾಗೂ ಹೊಸ ಅನ್ವೇಷಣೆಗಳ ಕಡೆ ಮನಗೊಡುವಂತಾಗಿ ಮಾನವನ ಪ್ರಗತಿಯಲ್ಲಿ ತೀವ್ರಗತಿ ಕಂಡುಬರುವ ಸಾಧ್ಯತೆಯುಂಟಾಯಿತು. ಈ ಉಪಯೋಗಗಳೇ ನೀರಾವರಿಯನ್ನು ಮತ್ತಷ್ಟು ರೂಢಿಸಲು ಪ್ರೋತ್ಸಾಹ ದಾಯಕವಾದುವು. ಬಹುಶಃ ಪ್ರತಿ ಗ್ರಾಮದಲ್ಲಿ ಒಂದೊಂದು ಅಥವಾ ಇನ್ನೂ ಹೆಚ್ಚು ಕೆರೆಯಿರುತ್ತಿತ್ತೆನ್ನಬಹುದು. ಕೆರೆಗಳಿಗೆ ಅವುಗಳ ಮಹತ್ತ್ವವನ್ನು ತಿಳಿದು ಪೂಜ್ಯ ಸ್ಥಾನ ಕೊಡಲಾಯಿತು ಹಾಗೂ ಕೆರೆಗಳನ್ನು ನಿರ್ಮಿಸಿದವರಿಗೂ ಪೂಜ್ಯಸ್ಥಾನ ಲಭಿಸಿತು. ಆದ್ದರಿಂದ ರಾಜರು, ರಾಜಮನೆತನದವರು ಹಾಗೂ ಶ್ರೀಮಂತರು ಕೆರೆಗಳನ್ನು ನಿರ್ಮಿಸಿ ಜನಪ್ರಿಯರಾದುದಲ್ಲದೆ ತಮ್ಮ ಹೆಸರನ್ನು ಅಮರಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಸ್ತ್ರೀಯರು ಹಾಗೂ ಸಂನ್ಯಾಸಿಗಳೂ ಕೆರೆಗಳನ್ನು ಕಟ್ಟಿಸಿದ ನಿದರ್ಶನಗಳು ಹಲವಾರು. ವೇಶ್ಯೆಯರೂ ತಮ್ಮ ಸಂಪಾದನೆಯಿಂದ ಸಮಾಜ ಹಿತದ ದೃಷ್ಟಿಯಿಂದ ಕೆರೆಗಳನ್ನು ಕಟ್ಟಿಸಿದ ನಿದರ್ಶನಗಳು ಶಾಸನಗಳಿಂದ ತಿಳಿದು ಬರುತ್ತವೆ. ಮಾತ್ರವಲ್ಲದೆ, ಗ್ರಾಮಸಭೆ, ವರ್ತಕಶ್ರೇಣಿ ಮತ್ತು ದೇವಾಲಯಗಳಂಥ ಸಂಘಸಂಸ್ಥೆಗಳೂ ಈ ಸಾಧನೆಯಲ್ಲಿ ಹಿಂದೆ ಬಿದ್ದಿರಲಿಲ್ಲ.

ಕದಂಬ ಮಯೂರಶರ್ಮ (ಸು. 340) ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯಲ್ಲಿ ಕೆರೆಯನ್ನು ಕಟ್ಟಿಸಿದ ವಿಷಯವನ್ನು ತಿಳಿಸುವ ಅಲ್ಲಿನ ಶಾಸನ ಕೆರೆಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ದೊರೆಯುವ ಅತಿ ಪ್ರಾಚೀನ ಶಾಸನೋಲ್ಲೇಖ. ಹಾಗೆಯೇ ಕಾಕುಸ್ಥವರ್ಮ ಕಟ್ಟಿಸಿದ ತಟಾಕದ ಪ್ರಸ್ತಾಪ ತಾಳಗುಂದ ಶಾಸನದಲ್ಲಿದೆ. ಹೊಯ್ಸಳ 2ನೆಯ ವೀರಬಲ್ಲಾಳನ ಮಂತ್ರಿಯೆನಿಸಿದ್ದ ವೀರದಂಡನಾಯಕ ತಾನೇ ಹೊಸದಾಗಿ ಕಟ್ಟಿಸಿದ ವೀರಬಲ್ಲಾಳಪುರದಲ್ಲಿ ಒಂದು ಯೋಜನೆಯ ಮೇರೆಗೆ ನಾಲ್ಕು ದೊಡ್ಡ ಕೆರೆಗಳನ್ನು ಮಾಡಿಸಿ ಅವನ್ನು ರುದ್ರಸಮುದ್ರ, ಗಂಗಾಸಮುದ್ರ, ಅಚ್ಯುತಸಮುದ್ರ ಮತ್ತು ಭೀಮಸಮುದ್ರ ಎಂದು ಕರೆದ.

ಕೃಷ್ಣದೇವರಾಯ ತಾನೇ ಹೊಸದಾಗಿ ಕಟ್ಟಿಸಿದ ನಾಗಲಾಪುರ ಪಟ್ಟಣಕ್ಕೆ ನೀರನ್ನೊದಗಿಸುವುದಕ್ಕಾಗಿ ಮತ್ತು ಕೃಷಿಭೂಮಿಗಳಿಗೆ ನೀರನ್ನು ಸರಬರಾಜು ಮಾಡುವ ಸಲುವಾಗಿ, ರಾಜಧಾನಿಯ ಬಳಿ ಒಂದು ಬೃಹತ್ ಕೆರೆಯನ್ನು ಕಟ್ಟಿಸಿದ. ಪಯೆಸ್‍ನ ವರ್ಣನೆಯ ಪ್ರಕಾರ ಈ ವಿಶಾಲವಾದ ಕೆರೆ ಎರಡು ಬೆಟ್ಟಗಳ ನಡುವಣ ಪ್ರದೇಶದಲ್ಲಿದ್ದು, ಎಲ್ಲ ಕಡೆಯಿಂದಲೂ ಹರಿದು ಬರುವ ನೀರು ಅಲ್ಲಿ ಸಂಗ್ರಹವಾಗುವಂತಿತ್ತು. ಅಲ್ಲದೆ, ಒಂದು ಸರೋವರದ ನೀರನ್ನು ಹಲವು ಮೈಲಿಗಳ ದೂರದಿಂದ ಕೊಳವೆಗಳ ಮೂಲಕ ತಂದು ಈ ಕೆರೆಗೆ ಬಿಡಲಾಗುತ್ತಿತ್ತು. ಈ ಕೆರೆಯಲ್ಲಿ ಅಂದವಾಗಿ ಕೆತ್ತಿರುವ ಶಿಲ್ಪಗಳನ್ನು ಹೊಂದಿರುವ ಮೂರು ದೊಡ್ಡ ಕಂಬಗಳಿದ್ದು, ಇವುಗಳ ಮೇಲ್ಭಾಗದಲ್ಲಿ ಕೊಳವೆಗಳು ಹಾದುಹೋಗಿದ್ದುವು. ಅಗತ್ಯವಿದ್ದಾಗ, ಈ ಕೊಳವೆಗಳ ಮೂಲಕ ಗದ್ದೆ ತೋಟಗಳಿಗೆ ನೀರನ್ನು ಹಾಯಿಸುತ್ತಿದ್ದರು. ಈ ಕೆರೆಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಕೆಲಸಗಾರರ ಸಂಖ್ಯೆ ಏನಿಲ್ಲದಿದ್ದರೂ 15-20 ಸಾವಿರಕ್ಕೇನೂ ಕಡಿಮೆಯಿರಲಾರದೆಂಬುದು ಪಯೆಸ್‍ನ ಅಂದಾಜು. ಇರುವೆಗಳ ಸಾಲಿನಂತೆ ಕಾಣಿಸುತ್ತಿದ್ದ ಈ ಅಸಂಖ್ಯಾತ ಕಾರ್ಮಿಕ-ಜನಸ್ತೋಮ ಓಡಾಡುತ್ತಿದ್ದ ನೆಲವೇ ಕಾಣಿಸುತ್ತಿರಲಿಲ್ಲ ಎನ್ನುತ್ತಾನೆ ಪಯೆಸ್. ಅಲ್ಲದೆ, ಈ ನಿರ್ಮಾಣ ಕಾರ್ಯದ ಮೇಲ್ವಿಚಾರಣೆಯನ್ನು ಚಕ್ರವರ್ತಿ ತನ್ನ ಹಲವಾರು ಅಧಿಕಾರಿಗಳಿಗೆ ವಹಿಸಿದ್ದ. ಕೆರೆಗಳ ಬಗ್ಗೆ ಇಂಥ ಅಸಂಖ್ಯಾತ ವಿವರಗಳು ಶಾಸನಗಳಲ್ಲಿ ದೊರಕುತ್ತವೆ.

ಕೆರೆಯನ್ನು ಯಾರೇ ಕಟ್ಟಿಸಿರಲಿ ಅದನ್ನು ಕಾಪಾಡಿಕೊಂಡು ಬರುವ ಹೊಣೆ ಆ ಊರಿನ ಜನರದ್ದಾಗಿತ್ತು. ಆ ಊರಿನ ವಿವಾಹ, ಉಪನಯನ ಕಾಲಗಳಲ್ಲಿ ಎತ್ತಿದ ತೆರಿಗೆಗಳು ಹಾಗೂ ಪ್ರಾಯಶ್ಚಿತ್ತ, ದಂಡ ಮುಂತಾದವುಗಳ ಮೂಲಕ ಬರುವ ಹಣವನ್ನು ಆ ಊರಿನ ಕೆರೆಗೆ ಸಂಬಂಧಿಸಿದ ದುರಸ್ತಿ ಕೆಲಸಕ್ಕೆ ಬಿಟ್ಟು ಕೊಡುತ್ತಿದ್ದರು. ರಾಜರು, ರಾಜವಂಶದವರು ಹಾಗೂ ಶ್ರೀಮಂತರು ಕೆರೆಯನ್ನು ಸುಸ್ಥಿತಿಯಲ್ಲಿಡಲು, ಭೂಮಿಯನ್ನು ಬಿಟ್ಟುಕೊಡುತ್ತಿದ್ದರು. ಅಂಥ ಭೂಮಿಗೆ ಬಿತ್ತುವಾಟ ಎನ್ನುತ್ತಿದ್ದರು. ಒಂದು ಊರಿನ ಕೆರೆಯ ನೀರನ್ನು ಇನ್ನೊಂದು ಊರಿನ ಗದ್ದೆಗಳಿಗೆ ಹರಿಸಬೇಕಾದರೆ ನಾಡಿನ ಎಲ್ಲಾ ಪ್ರಭುಗಾವುಂಡಗಳ ಒಪ್ಪಿಗೆ ಪಡೆಯಬೇಕಾಗಿದ್ದಿತು. ಕೆರೆಗಳಿಗೆ ಪುರಾತನತ್ವ ಮತ್ತು ಪಾವಿತ್ರ್ಯವನ್ನು ಕೊಡಲು ಪುರಾಣಪ್ರಸಿದ್ಧ ಪುರುಷನೊಡನೆ ಸಂಬಂಧ ಕಲ್ಪಿಸುತ್ತಿದ್ದರು. ಹಾವೇರಿಯ ಹೆಗ್ಗೆರೆಯನ್ನು ನಳಚಕ್ರವರ್ತಿ ಕಟ್ಟಿಸಿದ್ದೆಂದು ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಇಲ್ಲಿ ಉದಾಹರಿಸಬಹುದು. ಕೆರೆಗಳ ಬಗ್ಗೆ ಜನಗಳಿಗಿದ್ದ ಪೂಜ್ಯಭಾವನೆ ಮತ್ತು ಕೆರೆಗಾಗಿ ಸರ್ವಸ್ವವನ್ನೂ ತ್ಯಾಗಮಾಡುವ ಮನೋಭಾವ ಆ ಕಾಲದಲ್ಲಿತ್ತು ಎಂಬುದನ್ನು ಕೆರೆ ನಿರ್ಮಿಸುತ್ತಿರುವಾಗ ಎಷ್ಟೆ ಆಳ ಅಗೆದರೂ ನೀರು ಬಾರದಿದ್ದಾಗ ಊರ ಪ್ರಮುಖನ ಪ್ರೀತಿಯ ವ್ಯಕ್ತಿಯನ್ನು ಬಲಿಕೊಡಬೇಕಾಗಿ ಬರುವುದನ್ನು ವಸ್ತುವಾಗುಳ್ಳ ಹಲವು ಕಥೆಗಳು ಸೂಚಿಸುತ್ತವೆ. (ಎಸ್.ಜಿ., ಬಿ.ಎಸ್.)

ನೀರಾವರಿ ಸಾಧನೆಗಳೆನಿಸಿದ ಕೆರೆ-ಕಾಲುವೆ ಮುಂತಾದವುಗಳನ್ನು ಖಾಸಗಿ ವ್ಯಕ್ತಿಗಳು ನಿರ್ಮಿಸಿದಲ್ಲಿ, ಅಂತಹವರಿಗೆ ಭೂಮಿ ಕೊಡುಗೆ, ತೆರಿಗೆ ರಿಯಾಯಿತಿ (ಅಥವಾ ಮನ್ನಣೆ) ಮುಂತಾದ ರೂಪಗಳಲ್ಲಿ ಅಂದಿನ

ಸರ್ಕಾರ ಪುರಸ್ಕರಿಸಿ, ಉತ್ತೇಜನ ಕೊಡುತ್ತಿತ್ತು. ಹಾಗೆಯೇ ಪ್ರಜೆಗಳೂ ಅಂಥ ಸಂದರ್ಭಗಳಲ್ಲಿ ತಮ್ಮ ಭೂಮಿಗಳಿಗೆ ನಷ್ಟವಾದಲ್ಲಿ ಆ ಭೂಮಿಗಳನ್ನು ತ್ಯಾಗಮಾಡಿ, ಬದಲು ಬೇರೆ ಭೂಮಿಗಳನ್ನು ಪಡೆಯಲು ಹಿಂಜರಿಯುತ್ತಿರಲಿಲ್ಲ.

ಪ್ರಾಚೀನ ಶಾಸನಗಳು ಆಗಿನ ಕಾಲದಲ್ಲಿದ್ದ ನೀರಾವರಿ ವ್ಯವಸ್ಥೆಯ ಬಗ್ಗೆ ಇನ್ನೂ ಅನೇಕ ವಿವರಗಳನ್ನು ಒದಗಿಸುತ್ತವೆ. 1087ರ ಶಾಸನವೊಂದು ತಿಳಿಸುವಂತೆ ಬೆಳ್ಕೆಯರ ಏಚಿಗನೆಂಬುವನು ಸಿರಿಗುಪ್ಪೆಯಲ್ಲಿ ಮುರುಕಟ್ಟಿನ ಪಿಡಿಯ ಬಾವಿಯನ್ನು ಕಟ್ಟಿಸಿದ. ಇಂಥ ನಿದರ್ಶನಗಳು ಶಾಸನಗಳಲ್ಲಿ ಅನೇಕ. ಕೆರೆಗಳ ತೂಬಿನಿಂದ ಹೊರಟ ನೀರು ಕಾಲುವೆಗಳ (ಬಾಯ್ಕಾಲ್, ಕಾಲ್) ಮೂಲಕ ಹರಿದು, ಕೃಷಿ ಭೂಮಿಗಳನ್ನು ತಲುಪುತ್ತಿತ್ತು. ಬಾವಿಗಳಿಂದ ಏತಗಳ ಸಹಾಯದಿಂದ ನೀರೆತ್ತುವ ವ್ಯವಸ್ಥೆಯೂ ರೂಢಿಯಲ್ಲಿತ್ತು. ಇಂಥದೇ ಮತ್ತೊಂದು ನೀರೆತ್ತುವ ಯಂತ್ರವೆಂದರೆ ಘಟೀಯಂತ್ರ ಅಥವಾ ಅರಘಟ್ಟ ಘಟೀಯಂತ್ರ. ಹಾಸನ ಜಿಲ್ಲೆಯ 1147ರ ಶಾಸನವೊಂದರಲ್ಲಿ ಬರುವ ವರ್ಣನೆಯಂತೆ 'ಈ ಯಂತ್ರಕ್ಕೆ ಎತ್ತುಗಳನ್ನು ಹೂಡಿರುತ್ತಾರೆ. ಯಂತ್ರದ ಚಕ್ರ ಮೇಲುಗಡೆ (ಎತ್ತುಗಳು ಚಲಿಸಿದಂತೆ) ತಿರುಗುತ್ತಿರುತ್ತದೆ. ಇದಕ್ಕೆ ಕಟ್ಟಿರುವ ಕುಂಭಗಳ ಒಂದು ಸಾಲು ನೀರನ್ನು ಹೊತ್ತು ಮೇಲಕ್ಕೆ ಬರುತ್ತಿದ್ದರೆ, ನೀರನ್ನು ಸುರಿದು ಬರಿದಾದ ಕುಂಭಗಳ ಒಂದು ಸಾಲು ಕೆಳಕ್ಕೆ ಇಳಿಯುತ್ತಿರುತ್ತದೆ'. ಈ ವರ್ಣನೆ ಪ್ರಾಚೀನ ಕಾಲದಲ್ಲಿ ಕರ್ನಾಟಕದಲ್ಲಿ 'ಪರ್ಷಿಯನ್ ವೀಲ್' ಸಹ ಬಳಕೆಯಲ್ಲಿತ್ತೆಂಬುದನ್ನು ಸೂಚಿಸುತ್ತದೆ. (ಎಸ್.ಜಿ.)

ಕೆರೆಕಟ್ಟೆಗಳನ್ನು ಧರ್ಮಕಾರ್ಯಗಳೆಂದೂ ಸಮಾಜದ ಆರ್ಥಿಕ ವ್ಯವಸ್ಥೆಯ ಉನ್ನತಿಗೆ ಸಾಧನವೆಂದೂ ಪರಿಗಣಿಸಿ ಶ್ರೀಮಂತರೂ ರಾಜರೂ ರಾಜ್ಯಾಧಿಕಾರಿಗಳೂ ಕಟ್ಟಿಸುತ್ತಿದ್ದ ಪ್ರವೃತ್ತಿ ಇತ್ತೀಚಿನವರೆಗೂ ನಡೆದುಬಂದಿತ್ತು. ವಿಜಯನಗರ ಕಾಲದಲ್ಲಿ ತುಂಗಭದ್ರಾ ನದಿಗೆ ಕಟ್ಟಿದ್ದ ಸುಮಾರು 8 ಅಣೆಕಟ್ಟೆಗಳೂ (ಈಗ 11,000 ಹೆಕ್ಟೇರಿಗೆ ನೀರುಣಿಸುತ್ತಿವೆ) ಮೈಸೂರು ಅರಸರ ಕಾಲದಲ್ಲಿ ಕಾವೇರಿ ನದಿಗೆ ಕಟ್ಟಿದ 6 ಅಣೆಕಟ್ಟುಗಳೂ ಇವೆ. ಟಿಪ್ಪುಸುಲ್ತಾನ ಸಹ ಕಾವೇರಿಗೆ ಇಂದಿನ ಕೃಷ್ಣರಾಜಸಾಗರ ಇರುವ ಬಳಿ ಒಂದು ಕಟ್ಟೆಯನ್ನು ಕಟ್ಟಲು ಉದ್ದೇಶಿಸಿದ್ದಕ್ಕೆ ಶಾಸನ ದಾಖಲೆ ಇದೆ. ಇದೇ ರೀತಿ ಆದಿಲ್‍ಶಾಹೀ ಅರಸರೂ ಅನೇಕ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಹೀಗೆ ಕಾಲಾನುಕಾಲದಿಂದ ಬೆಳೆದುಬಂದ ನೀರಾವರಿ ಕಾರ್ಯಗಳಿಂದ ಇಂದು ನಾಡಿನ ನೀರಾವರಿ ಸೌಕರ್ಯ ಸಾಕಷ್ಟುಮಟ್ಟಿಗೆ ಹರಡಿದೆ. ಇವೆಲ್ಲಾ ಇಂದಿನ ಬೃಹತ್ ಕಟ್ಟೆಗಳಿಗೆ ಹೋಲಿಸಿದರೆ ಬಹುತೇಕ ಚಿಕ್ಕ ನೀರಾವರಿ ಕಾರ್ಯಗಳು. ಆದರೂ ಈ ಪ್ರಾಚೀನಕಾಲದ ಕೆರೆಕಟ್ಟೆಗಳು ನಾಡಿನಲ್ಲಿ ಇಂದಿನ ನೀರಾವರಿಯಾಗುವ ಕೃಷಿಭೂಮಿಯಲ್ಲಿ ಸುಮಾರು ಕಾಲು ಭಾಗಕ್ಕಷ್ಟಾದರೂ ನೀರೊದಗಿಸುತ್ತಿವೆ. ಶಿಥಿಲವಾಗಿರುವ ಅಥವಾ ಪೂರ್ಣವಾಗಿಯೋ ಅಥವಾ ಭಾಗಶಃವಾಗಿಯೋ ಹೂತುಬಿದ್ದಿರುವ ಅನೇಕ ಕೆರೆಗಳ ದುರಸ್ತಿಯಿಂದ ಇನ್ನೂ ಹೆಚ್ಚು ಉಪಯೋಗ ಪಡೆಯಬಹುದಾಗಿದೆ.

ಸು.19ನೆಯ ಶತಮಾನದಾರಭ್ಯ ಬ್ರಿಟಿಷರ ಆಡಳಿತ ವ್ಯವಸ್ಥೆ ರೂಢಿಗೆ ಬಂದ ಕಾಲದಿಂದಲೂ ನೀರಾವರಿ ಕಾರ್ಯಗಳ ಬಗ್ಗೆ ಹೊಸ ರೂಢಿಗಳು ಬೆಳೆಯುತ್ತಿವೆ. ನಾಡಿನ ಜಲಸಂಪತ್ತು ಸಾರ್ವಜನಿಕ ಸಂಪತ್ತೆಂಬ ಭಾವನೆ ಮತ್ತು ಬದಲಾದ ಆರ್ಥಿಕ ಸ್ಥಿತಿಗಳಿಂದಾಗಿ ಎಲ್ಲೋ ಕೆಲವು ಬಾವಿಕುಂಟೆಗಳನ್ನು ಬಿಟ್ಟು ನೀರಾವರಿಗೆ ಉಪಯುಕ್ತವಾದ ಕೆರೆಕಟ್ಟೆಗಳನ್ನು ಕಟ್ಟುವ ಕಾರ್ಯ ಸರ್ಕಾರದ ಹೊಣೆಯಾಗಿದೆ. ಇತ್ತೀಚಿನ ತಾಂತ್ರಿಕ ಮುನ್ನಡೆ ಹೊಸ ಹೊಸ ವಿಧಾನಗಳನ್ನು ರೂಢಿಸುತ್ತಿದೆ. ನಾಡಿನ ಜಲಸಂಪತ್ತು ಮತ್ತು ಆವಶ್ಯಕತೆಯನ್ನು ಸರಿಯಾಗಿ ಎಣಿಸಿ ಯೋಜಿತವಾದ ರೀತಿಯಲ್ಲಿ ನೀರಾವರಿಯನ್ನು ವ್ಯವಸ್ಥೆಗೊಳಿಸುವ ಕಾರ್ಯ ನಡೆಯುತ್ತಿದೆ. ಬೃಹತ್ ನೀರಾವರಿ ಯೋಜನೆಗಳು ಕಾರ್ಯಗತವಾಗುತ್ತಿವೆ.

ಸ್ವಾತಂತ್ರ್ಯಪೂರ್ವದಲ್ಲಿ ನೀರಾವರಿಯ ಪ್ರಗತಿ ಮಂದಗತಿಯಲ್ಲೇ ಇತ್ತೆನ್ನಬಹುದು. ಹಿರಿಯೂರಿನ ಬಳಿಯ ವಾಣಿವಿಲಾಸಸಾಗರ (1907ರಲ್ಲಿ ಪೂರ್ಣಗೊಂಡ ವೇದಾವತಿ ನದಿಗೆ ಅಡ್ಡಲಾಗಿ 408 ಮೀ ಉದ್ದ 43 ಮೀ ಎತ್ತರದ ಕಟ್ಟೆಯನ್ನು ಕಟ್ಟಿ ಚಿತ್ರದುರ್ಗ ಜಿಲ್ಲೆಯ 2,621 ಮೀ ಹೆಕ್ಟೇರುಗಳಿಗೆ ನೀರಾವರಿ ಒದಗಿಸಿದ್ದು-ವೆಚ್ಚ 45 ಲಕ್ಷ ರೂ.) ಮೈಸೂರಿನ ಬಳಿಯ ಕೃಷ್ಣರಾಜಸಾಗರ (1932ರಲ್ಲಿ ಪೂರ್ಣಗೊಂಡ ಕಾವೇರಿಗೆ ಅಡ್ಡಲಾಗಿ 2,621 ಮೀ ಉದ್ದ 41 ಮೀ ಎತ್ತರದ ಕನ್ನಂಬಾಡಿ ಕಟ್ಟೆಯಿಂದ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ 59,580 ಹೆಕ್ಟೇರುಗಳಿಗೆ ನೀರಾವರಿ ವೆಚ್ಚ 5.5 ಕೋಟಿ ರೂ.) ಈ ದಿಶೆಯಲ್ಲಿ ಪ್ರಮುಖವಾದ ಮೈಲಿಗಲ್ಲುಗಳು. ಇನ್ನೂ ಇಂತಹವೆಂದರೆ ಭದ್ರಾ ಅಣೆಕಟ್ಟು (1927ರಲ್ಲಿ ಭದ್ರಾ ನದಿಗೆ 250 ಮೀ ಉದ್ದ 3.7 ಮೀ ಎತ್ತರ, ಶಿವಮೊಗ್ಗ ಜಿಲ್ಲೆಯ 4,250 ಹೆಕ್ಟೇರುಗಳು), ಕುಮುದ್ವತಿ ನದಿಯ ಅಂಜನಾಪುರ ಜಲಾಶಯ (1936ರಲ್ಲಿ 1,585 ಮೀ ಉದ್ದ, 20.7 ಮೀ ಎತ್ತರದ ಮಣ್ಣಿನ ಏರಿ - ಶಿವಮೊಗ್ಗ ಜಿಲ್ಲೆಯ 6,263 ಹೆಕ್ಟೇರುಗಳು), ಮಾರ್ಕೋನಹಳ್ಳಿ ಜಲಾಶಯ (1939ರಲ್ಲಿ, ಶಿಂಷಾ ನದಿಗೆ 1,609 ಮೀ ಉದ್ದ 22.2 ಮೀ ಎತ್ತರ, ತುಮಕೂರು ಜಿಲ್ಲೆಯ 6,073 ಹೆಕ್ಟೇರುಗಳು), ಕಣ್ವ ಜಲಾಶಯ (1946 ರಲ್ಲಿ ಕಣ್ವ ನದಿಗೆ 1,431 ಮೀ ಉದ್ದ 18 ಮೀ ಎತ್ತರ, ಬೆಂಗಳೂರು ಜಿಲ್ಲೆಯ 2,025 ಹೆಕ್ಟೇರುಗಳು, ಬೈರಮಂಗಲ ಜಲಾಶಯ) 1945ರಲ್ಲಿ 1,619 ಹೆಕ್ಟೇರುಗಳು) ಹಾಗೆಯೇ ಗೋಕಾಕ (5,749 ಹೆಕ್ಟೇರುಗಳು) ಮತ್ತು ಧರ್ಮಾ (3,956 ಹೆಕ್ಟೇರು) ನಾಲಾಜಾಲಗಳು.

ಪಂಚವಾರ್ಷಿಕ ಯೋಜನೆಗಳ ಆರಂಭದಿಂದ ನೀರಾವರಿ ಕಾಮಗಾರಿಗಳನ್ನು ಹೆಚ್ಚು ಉತ್ಸಾಹದಿಂದ ಕಾರ್ಯಗತಗೊಳಿಸಲಾಯಿತು. ಹಲವಾರು ಸಣ್ಣ, ಮಧ್ಯಮ ಹಾಗೂ ಭಾರಿ ಪ್ರಮಾಣದ ಕಾರ್ಯಗಳು ಪ್ರಾರಂಭಿಸಲ್ಪಟ್ಟವು.

ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕಾರ್ಯಗತವಾದ ಮುಖ್ಯ ನೀರಾವರಿ ಕಾಮಗಾರಿಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

**ಭದ್ರಾ ಜಲಾಶಯ:** 1947ರಲ್ಲೇ ಪ್ರಾರಂಭವಾಗಿ ಪೂರ್ಣಗೊಂಡಿರುವ ಈ ಜಲಾಶಯ ಲಕ್ಕವಳ್ಳಿಯ ಬಳಿ ಭದ್ರಾ ನದಿಗೆ ಅಡ್ಡಲಾಗಿ 440 ಮೀ ಉದ್ದ ಹಾಗೂ 59 ಮೀ ಎತ್ತರದ ಕಲ್ಲುಗಾರೆ ಕೆಲಸ ಮತ್ತು 1,115 ಮೀ ಉದ್ದದ ಮಣ್ಣಿನ ಏರಿಗಳಿಂದ ನಿರ್ಮಿತವಾಗಿದೆ. ಅದರ ಎಡ, ಬಲ ಎರಡೂ ಕಾಲುವೆಗಳಿಂದ ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ಸುಮಾರು 1 ಲಕ್ಷ ಹೆಕ್ಟೇರುಗಳನ್ನು ನೀರಾವರಿಗೆ ತಂದಿರುವುದರೊಡನೆ 25,000 ಕಿವಾ ವಿದ್ಯುತ್ತನ್ನೂ ಉತ್ಪತ್ತಿಮಾಡುತ್ತದೆ. ಇದಕ್ಕೆ ತಗುಲಿರುವ ವೆಚ್ಚ ಸುಮಾರು 40 ಕೋಟಿ ರೂ.

**ತುಂಗಾ ಅಣೆಕಟ್ಟು:** ಶಿವಮೊಗ್ಗಕ್ಕೆ ಸುಮಾರು 11 ಕಿಮೀ ದೂರದಲ್ಲಿ ತುಂಗಾನದಿಗೆ ಅಡ್ಡಲಾಗಿ ಕಟ್ಟಿರುವ 542.5 ಮೀ ಉದ್ದ 18 ಮೀ ಎತ್ತರವಿರುವ ಅಣೆಕಟ್ಟು ಶಿವಮೊಗ್ಗ ಜಿಲ್ಲೆಯ 8,700 ಹೆಕ್ಟೇರುಗಳು ನೀರಾವರಿಯಾಗುತ್ತಿದೆ. ಇದರ ಒಟ್ಟು ವೆಚ್ಚ 3.56 ಕೋಟಿ ರೂ.

**ನುಗು ಜಲಾಶಯ:** ಕಾವೇರಿಯ ಉಪನದಿ ಕಪಿಲಾಗೆ ಬಂದು ಸೇರುವ ನುಗು ಹೊಳೆಗೆ ಹೆಗ್ಗಡದೇವನಕೋಟೆ ತಾಲ್ಲೂಕು ಬೀರವಾಳದ ಬಳಿ 616 ಮೀ ಉದ್ದ 41 ಮೀ ಎತ್ತರದ ಕಲ್ಲುಗಾರೆಯ ಕಟ್ಟೆಯನ್ನು ಕಟ್ಟಿ ಮೈಸೂರು ಜಿಲ್ಲೆಯ 8,000 ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ತರಲಾಗಿದೆ. ಇದಕ್ಕೆ ಆಗಿರುವ ವೆಚ್ಚ 3.11 ಕೋಟಿ ರೂ.

**ತುಂಗಾಭದ್ರಾ ಜಲಾಶಯ:** ಇದು ಹಿಂದಿನ ಹೈದರಾಬಾದ್ ಮತ್ತು ಮದರಾಸು ರಾಜ್ಯಗಳು ಒಟ್ಟಾಗಿ ಕೈಗೊಂಡ ಒಂದು ಬೃಹತ್ ಯೋಜನೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ 2440 ಮೀ ಉದ್ದ 49.4 ಮೀ ಎತ್ತರ ಉಳ್ಳ ಅಡ್ಡಗಟ್ಟೆ. ಇದರ ಕೆಲಸವನ್ನು 1945ರಲ್ಲೇ ಪ್ರಾರಂಭಿಸಲಾಗಿದ್ದು 1962ರಲ್ಲಿ ಮುಗಿಯಿತು.

ಇದರ ಎಡದಂಡೆ ನಾಲೆ ರಾಯಚೂರು ಜಿಲ್ಲೆಯಲ್ಲಿನ 2,32,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಬಲ ಒದಗಿಸಿದರೆ, ದಂಡೆಯ ಕೆಳಮಟ್ಟದ ನಾಲೆ ಬಳ್ಳಾರಿ ಜಿಲ್ಲೆಯಲ್ಲಿ 37,000 ಹೆಕ್ಟೇರ್‌ಗಳನ್ನೂ ಮೇಲುಮಟ್ಟದ ನಾಲೆ ಸುಮಾರು 80,000 ಹೆಕ್ಟೇರ್‌ಗಳನ್ನೂ ನೀರಾವರಿಗೆ ತರುತ್ತದೆ. ಬಲದಂಡೆಯ ಈ ಎರಡೂ ನಾಲೆಗಳು ಕರ್ನಾಟಕದ ಗಡಿಯನ್ನು ದಾಟಿ ಆಂಧ್ರ ಪ್ರದೇಶದಲ್ಲೂ ಸೇವಾನಿರತವಾಗಿರುತ್ತವೆ ಎಂಬುದು ಇಲ್ಲಿನ ವಿಶೇಷ. ನೀರಾವರಿಯೊಡನೆ ವಿದ್ಯುದುತ್ಪಾದನೆಯೂ ಸೇರಿರುವ ಈ ಯೋಜನೆಯ ಒಟ್ಟು ವೆಚ್ಚ 158 ಕೋಟಿ ರೂ.

**ರಾಜುಲಬಂಡ ಅಣೆಕಟ್ಟು:** ತುಂಗಭದ್ರಾ ಜಲಾಶಯಕ್ಕೆ 128 ಕಿಮೀ ಕೆಳಗೆ ಅದೇ ನದಿಗೆ ಅಡ್ಡಲಾಗಿ ರಾಜುಲಬಂಡ ಎಂಬಲ್ಲಿ 820 ಮೀ ಉದ್ದ ಹಾಗೂ 9.5 ಮೀ ಎತ್ತರವಿರುವ ಒಂದು ಅಣೆಕಟ್ಟೆಯನ್ನು ಕಟ್ಟಿ ಎಡದಂಡೆಯಲ್ಲಿ 117 ಕಿಮೀ ಉದ್ದದ ನಾಲೆಯನ್ನು ತೆಗೆಯಲಾಗಿದೆ. ಇದರ ಮೊದಲಿನ 48 ಕಿಮೀ ಕರ್ನಾಟಕದ ರಾಯಚೂರು ಜಿಲ್ಲೆಯಲ್ಲಿದ್ದು ಮುಂದಿನದು ಆಂಧ್ರದಲ್ಲಿದೆ. 2.51 ಕೋಟಿ ರೂ. ವೆಚ್ಚದ ಈ ಯೋಜನೆಯಿಂದ ನಮ್ಮಲ್ಲಿ 2,970 ಹೆಕ್ಟೇರ್ ಪ್ರದೇಶ ನೀರಾವರಿಗೆ ಬಂದಿದೆ. ಇದು ಸಹ ಹಿಂದಿನ ಹೈದರಾಬಾದ್ ಸರ್ಕಾರದಿಂದ 1947ರಲ್ಲಿ ಪ್ರಾರಂಭಿಸಲ್ಪಟ್ಟಿದ್ದುದು (4.33 ಕೋಟಿ ರೂ. ಒಟ್ಟು ವೆಚ್ಚ).

**ಚಿಕ್ಕಹಗರಿ ಕಟ್ಟೆ:** ತುಂಗಭದ್ರಾಕ್ಕೆ ಒಂದು ಉಪನದಿಯಾದ ಚಿಕ್ಕಹಗರಿ ಹೊಳೆಗೆ ಮಾನ್ವಿ ಗ್ರಾಮದ ಬಳಿ 1,783 ಮೀ ಉದ್ದವೂ 15.2 ಮೀ ಎತ್ತರವೂ ಉಳ್ಳ ಮಣ್ಣಿನ ಏರಿಯನ್ನು ಕಟ್ಟಿ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 2,950 ಹೆಕ್ಟೇರ್ ಪ್ರದೇಶವನ್ನು 2.96 ಕೋಟಿ ರೂ. ವೆಚ್ಚದಲ್ಲಿ ನೀರಾವರಿಗೆ ತರಲಾಗಿದೆ.

**ಕನಕನಾಲೆ ಕಟ್ಟೆ:** ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕು ಕಳ್ಳರ ಹಟ್ಟಿಯ ಬಳಿ ಕನಕನಾಲೆ ಹೊಳೆಗೆ 781 ಮೀ ಉದ್ದ 17.7 ಮೀ ಎತ್ತರದ ಮಣ್ಣು ಏರಿಯನ್ನು ಹಾಕಿ ಸಿಂಧನೂರು ತಾಲ್ಲೂಕಿನ 2,040 ಹೆಕ್ಟೇರ್ ನೀರಾವರಿಗೆ ತರಲು 97 ಲಕ್ಷ ರೂ. ಖರ್ಚು ಮಾಡಿದೆ.

**ಜಂಬದಹಳ್ಳ ಕಟ್ಟೆ:** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ದುಗ್ಗಲಾಪುರದ ಬಳಿ ಜಂಬದ ಹಳ್ಳಕ್ಕೆ ಅಡ್ಡಲಾಗಿ ಕಟ್ಟಿದೆ. ಇಲ್ಲಿನ ಮಣ್ಣಿನ ಏರಿ ಅತ್ಯಂತ ಆಳದ ತಳಪಾಯದಿಂದ 31.7 ಮೀ ಎತ್ತರವಿರುವುದು ಉಲ್ಲೇಖನೀಯ. 838 ಮೀ ಉದ್ದವಿದ್ದು 1.18 ಕೋಟಿ ರೂ ಖರ್ಚಿನಲ್ಲಿ ಮಾಡಿರುವ ಈ ಯೋಜನೆಯಿಂದ 1,520 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲ್ಪಟ್ಟಿದೆ.

ಈ ಕೆಳಗಿನವು ಕೆಲವು ಮಧ್ಯಮ ಪ್ರಮಾಣದ ಪ್ರಮುಖ ಕಾಮಗಾರಿಗಳು.

**ಚಿಕ್ಕಹೊಳೆ ಕಟ್ಟೆ:** ಚಾಮರಾಜನಗರ ತಾಲ್ಲೂಕಿನಲ್ಲಿ ಸುವರ್ಣಾವತಿಯ ಉಪನದಿಯಾದ ಚಿಕ್ಕಹೊಳೆಗೆ 674.5 ಮೀ ಉದ್ದ 25 ಮೀ ಎತ್ತರದ ಕಟ್ಟೆಯಿಂದ ಸುಮಾರು 90 ಲಕ್ಷ ರೂ. ವೆಚ್ಚದಲ್ಲಿ 1,300 ಹೆಕ್ಟೇರ್‌ಗೆ ನೀರಾವರಿ ಒದಗಿಸಿದೆ.

**ಹೆಬ್ಬಳ್ಳ ಕಟ್ಟೆ:** ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ತಾರಕಾನದಿಯ ಉಪ ನದಿಯಾದ ಹೆಬ್ಬಳ್ಳಕ್ಕೆ ಕಟ್ಟಲಾಗಿದೆ. 863 ಮೀ ಉದ್ದ 19.5 ಮೀ ಎತ್ತರದ ಏರಿ ಇದೆ. 58 ಲಕ್ಷ ರೂ. ವೆಚ್ಚ, 1,200 ಹೆಕ್ಟೇರ್‌ಗೆ ನೀರಾವರಿ ಒದಗುತ್ತದೆ.

**ಮಂಗಳಾ ಜಲಾಶಯ:** ಕುಣಿಗಲು ತಾಲ್ಲೂಕಿನಲ್ಲೂ ಶಿಂಷಾಕ್ಕೆ ಉಪನದಿಯಾದ ನಾಗಿನಿಗೆ ಅಡ್ಡಲಾಗಿ 701 ಮೀ ಉದ್ದ 13.7 ಮೀ ಎತ್ತರದ ಏರಿಯಿಂದ ನಿರ್ಮಿಸಿದೆ. 39 ಲಕ್ಷ ರೂ. ವೆಚ್ಚ 800 ಹೆಕ್ಟೇರ್‌ಗೆ ನೀರಿನ ಸೌಲಭ್ಯ.

**ಸಾಲೂರುಹಳ್ಳ ಕಟ್ಟೆ:** ಶಿವಮೊಗ್ಗ ಜಿಲ್ಲೆಯಲ್ಲಿ ಕುಮುದ್ವತಿಗೆ ಸೇರುವ ಸಾಲೂರು ಹಳ್ಳಕ್ಕೆ ಅಂಬಿಗೋಳ ಬಳಿಯಲ್ಲಿ ಇದೆ. 683 ಮೀ ಉದ್ದ 20.7 ಮೀ ಎತ್ತರ 1.1 ಕೋಟಿ ರೂ. ವೆಚ್ಚ 2,920 ಹೆಕ್ಟೇರ್ ಜಮೀನಿಗೆ ನೀರಾವರಿ.

**ಹತ್ತಿಕೋಣಿ ಕಟ್ಟೆ:** ಯಾದಗಿರಿ ತಾಲ್ಲೂಕಿನಲ್ಲಿ ಭೀಮಾದ ಉಪನದಿಯಾದ ಹತ್ತಿಕೋಣಿ ಹೊಳೆಗೆ 923 ಮೀ ಉದ್ದ 22 ಮೀ ಎತ್ತರದ ಏರಿ. 58 ಲಕ್ಷ ರೂ. ವೆಚ್ಚ. 1920 ಹೆಕ್ಟೇರಿಗೆ ನೀರಾವರಿ.

**ಅರೆಶಂಕರ ಕಟ್ಟೆ:** ಬಿಜಾಪುರ ಜಿಲ್ಲೆಯ ಅರೆಶಂಕರ ಹೊಳೆಗೆ ಒಟ್ಟು 1,189 ಮೀ ಉದ್ದ 4.3 ಮೀ ಎತ್ತರವುಳ್ಳ ಕಟ್ಟೆಯನ್ನು ಕಟ್ಟಿ 22 ಲಕ್ಷ ರೂ. ವೆಚ್ಚದಲ್ಲಿ 1,230 ಹೆಕ್ಟೇರ್‌ಗೆ ನೀರಾವರಿ ಒದಗಿಸಿದೆ.

**ಚಿತವಾಡಿಗಿ ಯೋಜನೆ:** ಹುನಗುಂದ ತಾಲ್ಲೂಕಿನಲ್ಲಿ ಕದ್ದಪ್ಪನ ಹೊಳೆಗೆ ಅಡ್ಡಲಾಗಿ 1,533 ಮೀ ಉದ್ದ 11.9 ಮೀ ಎತ್ತರದ ಏರಿಯಿಂದ ನಿರ್ಮಿಸಿದ ಚಿತವಾಡಿಗಿ ನೀರಾವರಿ ಯೋಜನೆಯಿಂದ 36 ಲಕ್ಷ ರೂ. ವೆಚ್ಚದಲ್ಲಿ 900 ಹೆಕ್ಟೇರ್‌ಗೆ ನೀರು ಒದಗುತ್ತದೆ.

**ರಾಮನಹಳ್ಳಿ ಕೆರೆ:** ಸಿಂದಗಿ ತಾಲ್ಲೂಕಿನಲ್ಲಿ ನವಲಿ ಹೊಳೆಗೆ ಅಡ್ಡಲಾಗಿ 1637 ಮೀ ಉದ್ದ 11.9 ಮೀ ಎತ್ತರದ ಏರಿಯಿಂದ ರಾಮನಹಳ್ಳಿ ಕೆರೆಯನ್ನು ನಿರ್ಮಿಸಿ 41 ಲಕ್ಷ ರೂ. ಗಳ ವೆಚ್ಚದಲ್ಲಿ 1920 ಹೆಕ್ಟೇರ್‌ಗೆ ನೀರಾವರಿ ಒದಗಿಸುತ್ತದೆ.

**ಕಳಸಕೊಪ್ಪ ಕೆರೆ:** ಬಾಗಲಕೋಟೆ ತಾಲ್ಲೂಕಿನಲ್ಲಿ 279 ಮೀ ಉದ್ದ 15.9 ಮೀ ಎತ್ತರದ ಏರಿ 21.5 ಲಕ್ಷ ರೂ. ಖರ್ಚು. 1130 ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ.

**ಕೊಳಚಿ (ಮಲಪ್ರಭಾ) ಕಟ್ಟೆ:** ರಾಮದುರ್ಗ ತಾಲ್ಲೂಕಿನ ಕೊಳಚಿ ಬಳಿ ಮಲಪ್ರಭಾ ನದಿಗೆ 211.8 ಮೀ ಉದ್ದ 5.8 ಮೀ ಎತ್ತರದ ಅಣೆ, ಬೆಳಗಾಂವಿ, ಧಾರವಾಡ, ಜಿಲ್ಲೆಗಳ 1260 ಹೆಕ್ಟೇರ್‌ಗೆ ನೀರಾವರಿ, 47 ಲಕ್ಷ ರೂ.ಖರ್ಚು.

**ಹರಿನಾಲಾ ಕಟ್ಟೆ:** ಬೈಲಹೊಂಗಲ ತಾಲ್ಲೂಕಿನಲ್ಲಿ ಮಲಪ್ರಭಾದ ಉಪನದಿಯಾದ ಹರಿನಾಲಾಕ್ಕೆ 2,.271 ಮೀ ಉದ್ದ 20.8 ಮೀ ಎತ್ತರದ ಕಟ್ಟೆ; 83 ಲಕ್ಷ ರೂ. ವೆಚ್ಚ 4,300 ಹೆಕ್ಟೇರ್‌ಗೆ ನೀರಾವರಿ.

**ಧರ್ಮಾ ಜಲಾಶಯ:** ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲ್ಲೂಕಿನಲ್ಲಿ 4,300' ಉದ್ದ 66' ಎತ್ತರದ ಮಣ್ಣಿನ ಏರಿ, ಧಾರವಾಡ ಜಿಲ್ಲೆಯ 1600 ಹೆಕ್ಟೇರ್ ಹೊಸ ಅಚ್ಚುಕಟ್ಟಿಗೆ ನೀರು ಒದಗಿಸುವುದಲ್ಲದೆ, ಹಳೆಯ ಧರ್ಮಾ ನಾಲೆಗಳ 4,750 ಹೆಕ್ಟೇರ್‌ಗೆ ನೀರಾವರಿಯನ್ನು ಸುಭದ್ರವಾಗಿಸುತ್ತದೆ. 1.41 ಕೋಟಿ ರೂ. ವೆಚ್ಚ.

**ಕ್ಯಾದಗಿ ಕಟ್ಟೆ:** ಬಿಜಾಪುರ ಜಿಲ್ಲೆಯ ನಾಗಠಾಣ ಹಳ್ಳಿಯ ಬಳಿ ಕ್ಯಾದಗಿ, ಹೊಳೆಗೆ ಅಡ್ಡಲಾಗಿ 3700' ಉದ್ದ 35' ಎತ್ತರದ ಏರಿ. 17.8 ಲಕ್ಷ ರೂ. ವೆಚ್ಚ. 600 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ. ಹೇಮಾವತಿಗೆ ಉಪನದಿಯಾದ ಯಗಚಿ ನದಿಗೆ ಬೇಲೂರು ಬಳಿ ಅಣೆಕಟ್ಟೆ ನಿರ್ಮಿತವಾಗಿದೆ.

ಗುಂಡಾಲು ಯೋಜನೆ: ಕೊಳ್ಳೇಗಾಲ ತಾಲ್ಲೂಕಿನಲ್ಲಿ ಗುಂಡಾಲು ಹೊಳೆಗ 3.985' ಉದ್ದ 101' ಎತ್ತರದ ಮಣ್ಣಿನ ಏರಿಯನ್ನು ಕಟ್ಟಿ 3 ಕೋಟಿ ರೂ ವೆಚ್ಚದಲ್ಲಿ 6,040 ಹೆಕ್ಟೇರಿಗೆ ನೀರಾವರಿ ಒದಗಿಸುವುದು.

ನಾರಿಹಳ್ಳ ಯೋಜನೆ: ಬಳ್ಳಾರಿ ಜಿಲ್ಲೆಯ ನಾರಿಹಳ್ಳಕ್ಕೆ 908' ಉದ್ದದ ಏರಿಯನ್ನು ಹಾಕಿ 2 ಕೋಟಿ ರೂ ವೆಚ್ಚದಲ್ಲಿ 1400 ಹೆಕ್ಟೇರಿಗೆ ನೀರೊದಗಿಸುವುದು.

ಚಂದ್ರಂಪಳ್ಳಿ ಯೋಜನೆ: ಚಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿಯಲ್ಲಿ ಭೀಮಾನಪನದಿಯಾದ ಸರನಾಲಾಕ್ಕೆ 2250' ಉದ್ದ 90' ಎತ್ತರದ ಮಣ್ಣಿನ ಏರು ಅಂದಾಜು 1.2 ಕೋಟಿ ರೂ ವೆಚ್ಚದಲ್ಲಿ 4,200 ಹೆಕ್ಟೇರಿಗೆ ನೀರಾವರಿ.

ತರುವಾಯ ಕೈಗೊಂಡ ಇನ್ನು ಕೆಲವು ಯೋಜನೆಗಳಿದ್ದು ಅವನ್ನು ಮುಂದೆ ಪರಿಶಿಷ್ಟದಲ್ಲಿ ಕೊಡಲಾಗಿದೆ. ಕೆಲವು ಭಾರಿ ಪ್ರಮಾಣದ ನೀರಾವರಿ ಯೋಜನೆಯನ್ನು ಸ್ವಾತಂತ್ರ್ಯಾನಂತರ ಕೈಗೊಂಡು ಪೂರ್ಣಗೊಳಿಸಲಾಗಿದೆ. ಅವುಗಳಲ್ಲಿ ಕಾವೇರಿ ಜಲಾನಯನ ಪ್ರದೇಶದ ಕಪಿಲಾ, ಹಾರಂಗಿ, ಹೇಮಾವತಿ ಜಲಾಶಯಗಳು ಸೇರಿವೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಘಟಪ್ರಭಾ, ಮಲಪ್ರಭಾ ಯೋಜನೆಗಳು ಸೇರಿವೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಒಂದರ ಕೆಳಗೆ ಒಂದರಂತೆ ಬಿಜಾಪುರ ಜಿಲ್ಲೆಯ ಆಲಮಟ್ಟಿ ಮತ್ತು ಗುಲ್ಬರ್ಗ ಜಿಲ್ಲೆಯ ನಾರಾಯಣಪುರ ಎಂಬಲ್ಲಿ ಎರಡು ಜಲಾಶಯಗಳನ್ನು ನಿರ್ಮಿಸಲಾಗಿದೆ. ಮೊದಲನೆಯದು 519 ಮೀ ಎತ್ತರವಿದ್ದು ಪೂರ್ಣಪ್ರಮಾಣದ ಜಲಾಶಯ ನಿರ್ಮಾಣವಾಗಿದೆ. ಬಿದರೆ ಜಿಲ್ಲೆಯಲ್ಲಿ ಮಾಂಜರಾ ನದಿಯ ಉಪನದಿಯಾದ ಕಾರಂಜಿ ಹೊಳೆಗೆ ಜಲಾಶಯ ನಿರ್ಮಿಸಿರುವುದಲ್ಲದೆ ಚುಲ್ಕಿ ನಾಲಾ ಯೋಜನೆ ಹಮ್ಮಿಕೊಳ್ಳಲಾಗಿದೆ.

ಪಶ್ಚಿಮದತ್ತ ಹರಿಯುವ ವರಾಹಿ ಮತ್ತು ಮಹದಾಯಿ ನದಿಗಳಿಗೆ ಜಲಾಶಯ ನಿರ್ಮಿಸಲಾಗುತ್ತಿದೆ. ಶರಾವತಿ ನದಿಗೆ ನಿರ್ಮಿಸಿರುವ ಲಿಂಗನಮಕ್ಕಿ ಜಲಾಶಯವು ವಿದ್ಯುತ್ ಉತ್ಪಾದನೆಗೆ ವರದಾನವಾಗಿದ್ದು ನೀರಾವರಿಗೂ ಸಹಕಾರಿಯಾಗಿದೆ.

**ಜಲಸಂಪತ್ತು:** ಕರ್ನಾಟಕ ರಾಜ್ಯವು ಭಾರತದ ಇತರ ಅನೇಕ ರಾಜ್ಯಗಳಂತೆ ಮಳೆಗಾಲದಲ್ಲಿ ನದಿ, ಹೊಳೆ, ಹಳ್ಳ, ತೊರೆಗಳಲ್ಲಿ ಹರಿಯುವ ನೀರನ್ನು ಸಂಗ್ರಹಿಸಿ ನೀರಾವರಿಗೆ ಅನುಕೂಲ ಕಲ್ಪಿಸಿಕೊಳ್ಳಬೇಕಾಗಿದೆ. ಬೇಸಿಗೆಯಲ್ಲಿ ಇವುಗಳಲ್ಲಿ ಹರಿಯುವ ನೀರಿನ ಪ್ರಮಾಣ ಅತ್ಯಲ್ಪವಾಗಿರುವುದರಿಂದ ಜಲಾಶಯ, ಅಣೆಕಟ್ಟು, ಒಡ್ಡು ಮತ್ತು ಬ್ಯಾರೇಜ್‌ಗಳು ಹಾಗೂ ಕೆರೆಗಳು ಇವುಗಳಲ್ಲಿ ಸಂಗ್ರಹಿಸುವ ನೀರೇ ಇಲ್ಲಿನ ನೀರಾವರಿಗೆ ಆಧಾರ. ಆದ್ದರಿಂದ ರಾಜ್ಯ ಸರ್ಕಾರವು ನೀರಾವರಿಗೆ ವಿಶೇಷ ಆದ್ಯತೆ ನೀಡಿದ್ದು ನಾನಾ ಬಗೆಯ ನೀರಾವರಿ ಯೋಜನೆಗಳನ್ನು ಹಮ್ಮಿಕೊಂಡಿದೆ.

ಒಂದು ಅಂದಾಜಿನ ಪ್ರಕಾರ ರಾಜ್ಯದಲ್ಲಿ ನೀರಾವರಿಗೆ ಅಂತಿಮವಾಗಿ ಒಳಪಡಿಸಬಹುದಾದ ಪ್ರದೇಶ 55 ಲಕ್ಷ ಹೆಕ್ಟೇರ್‌ಗಳು. ಇದು ನಿವ್ವಳ ಬಿತ್ತನೆ ಪ್ರದೇಶದ ಶೇ. 51.4 ಭಾಗವಾಗುತ್ತದೆ. ಇದರಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ 35 ಲಕ್ಷ ಹೆಕ್ಟೇರ್‌ಗಳು, ಭೂಮೇಲ್ಮೈಯ ನೀರನ್ನು ಬಳಸುವುದರಿಂದ 10 ಲಕ್ಷ ಹೆಕ್ಟೇರ್‌ಗಳು ಮತ್ತು ಭೂಮಿಯ ಒಳಗಿನ ನೀರನ್ನು ಬಳಸುವುದರಿಂದ 10 ಲಕ್ಷ ಹೆಕ್ಟೇರ್‌ಗಳ ಪ್ರದೇಶವನ್ನು ನೀರಾವರಿಗೆ ಒಳಪಡಿಸುವ ಉದ್ದೇಶವಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಕೃಷ್ಣಜಲಾನಯನ ಪ್ರದೇಶದಿಂದ 1,156 ಟಿ.ಎಂ.ಸಿ. ನೀರನ್ನು, ಕಾವೇರಿ ಜಲಾನಯನ ಪ್ರದೇಶದಿಂದ 408.62 ಟಿ.ಎಂ.ಸಿ. ನೀರನ್ನು ಮತ್ತು ಗೋದಾವರಿ ಜಲಾನಯನ ಪ್ರದೇಶದಿಂದ 22.37 ಟಿ.ಎಂ.ಸಿ. ನೀರನ್ನು ನೀರಾವರಿಗೆ ಬಳಸಿಕೊಳ್ಳುವ ಮಾಸ್ಟರ್ ಯೋಜನೆ ಸಿದ್ಧವಾಗಿದೆ. ಪಾಲಾರ್, ಪೆನ್ನಾರ್ ಮತ್ತು ಪಶ್ಚಿಮದತ್ತ ಹರಿಯುವ ನದಿಗಳಿಂದ 103.31 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವ ಯೋಜನೆಗಳು ರೂಪುಗೊಳ್ಳುತ್ತಿವೆ. ಹಾಲಿ 2000ದ ಮಾರ್ಚ್‌ವರೆಗೆ 1179.47 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳಲು ಸಾಧ್ಯವಾಗಿದೆ. ಕಿರಿಯ, ಮಧ್ಯಮ ಮತ್ತು ಭಾರಿ ನೀರಾವರಿ ಯೋಜನೆಗಳಿಂದ 29.36 ಲಕ್ಷ ಹೆಕ್ಟೇರ್‌ಗಳನ್ನು ನೀರಾವರಿಗೆ ಒಳಪಡಿಸಲು ಸಾಧ್ಯವಾಗಿದೆ (2000-2001).

ಈ ಮೇಲೆ ಹೆಸರಿಸಿದ ಯೋಜನೆಗಳಲ್ಲದೆ ರಾಜ್ಯ ಸರ್ಕಾರವು ಇನ್ನೂ ಹತ್ತಾರು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ರಾಜ್ಯ ಸರ್ಕಾರವು ಕರ್ನಾಟಕ ನೀರಾವರಿ ನಿಗಮವನ್ನು ಸ್ಥಾಪಿಸಿದ್ದು ಅದು ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ತುಂಗಾ ಮೇಲ್ದಂಡೆ ಯೋಜನೆ, ಹಿಪ್ಪರಗಿ ಯೋಜನೆ (ಬಾಗಲಕೋಟೆ ಜಿಲ್ಲೆ), ಹರಿನಾಲ ಯೋಜನೆ, ಗಂಡೋರಿನಾಲ ಯೋಜನೆ (ಗುಲ್ಬರ್ಗ ಜಿಲ್ಲೆ) ಘಟಪ್ರಭಾ ಯೋಜನೆಗಳು ಪ್ರಗತಿಯಲ್ಲಿವೆ. ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಂಡಿದ್ದು ಆಲಮಟ್ಟಿ ಜಲಾಶಯದಲ್ಲಿ 519 ಮೀ.ಗೆ ನೀರು ಸಂಗ್ರಹವಾಗಿದೆ. 2002-03ರಲ್ಲಿ ರಾಜ್ಯವು ನೀರಾವರಿಗಾಗಿ 2790 ಕೋಟಿ ರೂ.ಗಳನ್ನು ನಿಗದಿಗೊಳಿಸಿದೆ. ಇದು ರಾಜ್ಯ ಬಜೆಟ್‌ನ ಯೋಜನಾ ವೆಚ್ಚದ ಶೇ. 32 ರಷ್ಟು ನೀರಾವರಿ ಸೌಲಭ್ಯಕ್ಕಾಗಿ ವಿಶ್ವಬ್ಯಾಂಕಿನಿಂದ 690 ಕೋಟಿ ರೂ.ಗಳ ನೆರವು ಪಡೆಯಲಾಗಿದೆ. 2000 ಕ್ಕೂ ಹೆಚ್ಚು ನೀರು ಬಳಕೆದಾರರ ಸಂಘಗಳು ಸ್ಥಾಪನೆಗೊಂಡಿವೆ. ಜಲಸಂಪನ್ಮೂಲ ಇಲಾಖೆಯು ಕಳೆದ ಮೂರು ವರ್ಷಗಳಲ್ಲಿ (1999-02) ನೀರಾವರಿಗಾಗಿ 6040 ಕೋಟಿ ರೂ.ಗಳನ್ನು ಖರ್ಚು ಮಾಡಿ ಒಟ್ಟು 6.64 ಲಕ್ಷ ಎಕರೆಗಳಿಗೆ ಹೊಸದಾಗಿ ನೀರಾವರಿ ಸೌಲಭ್ಯ ಕಲ್ಪಿಸಿದೆ. ಸಮಗ್ರ ನೀರಾವರಿ ವ್ಯವಸ್ಥೆಯನ್ನು ಪುನರ್‌ರೂಪಿಸುವ ಕಾರ್ಯ ನಡೆದಿದೆ. ಈ ಯೋಜನೆಯಂತೆ ಹಳೆಯ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಕಾಲುವೆಗಳ ವಿಸ್ತರಣೆ, ದುರಸ್ತಿ ಮತ್ತು ಆಧುನೀಕರಣ ಕಾರ್ಯಗಳು ಸೇರಿವೆ. ಕೆರೆಗಳ ಹೂಳೆತ್ತುವುದು, ಕೃಷಿ ಹೊಂಡಗಳನ್ನು ತೋಡುವುದು, ಹೊಸ ಕೆರೆಗಳನ್ನು ನಿರ್ಮಿಸುವುದು, ಎತ್ತು ನೀರಾವರಿ ಕಲ್ಪಿಸುವುದು ಸಣ್ಣ ನೀರಾವರಿಯ ಪ್ರಮುಖ ಕಾಮಗಾರಿಗಳಾಗಿವೆ.

**ಅಂತರ ಜಲಬಳಕೆ:** ದಿನೇ ದಿನೇ ನೀರಿನ ಅಗತ್ಯ ಹೆಚ್ಚುತ್ತಿದ್ದು ಅದಕ್ಕಾಗಿ ಅಂತರಜಲ ಮೂಲಗಳಿಂದ ನೀರನ್ನು ಸಂಗ್ರಹಿಸುವ ಅಗತ್ಯ ಬಿದ್ದಿದೆ. ಬಾವಿಗಳು ಕೊಳವೆ ಬಾವಿಗಳು ಈ ಅಂತರ ಜಲವನ್ನು ಹೊರತೆಗೆಯುವಲ್ಲಿ ಪ್ರಮುಖ ಸಾಧನಗಳಾಗಿವೆ. ನೀರಾವರಿಗಾಗಿ ಸಾಮಾನ್ಯವಾಗಿ ತೆಗೆದ ಬಾವಿಗಳು 10 ಮೀ ಅಗಲವಿದ್ದು (ಚೌಕ ಅಥವಾ ವೃತ್ತಾಕಾರ) 10 ಮೀ ಆಳಕ್ಕೆ ಹೋಗಿರುತ್ತವೆ. ಕೇವಲ ಅಗೆತದಿಂದ ಅಥವಾ ಕೆಲವು ವೇಳೆ ಮಾತ್ರ ಬಂಡೆಯನ್ನು ತೆಗೆಯಲು ಸಿಡಿಮದ್ದನ್ನು ಉಪಯೋಗಿಸಿ, ಇವನ್ನು ತೆಗೆಯಲಾಗುತ್ತದೆ. ಹೆಚ್ಚಿನ ಬಾವಿಗಳಿಗೆ ಅಸ್ತರಿ ಕಟ್ಟಡವೇನೂ ಇರುವುದಿಲ್ಲ. ತೆಗೆದ ಮಣ್ಣನ್ನು ಅಲ್ಲೇ ಸುತ್ತಲೂ ಹಾಕಿ ವ್ಯವಸಾಯದ ಭೂಮಿ ಅನುಪಯುಕ್ತವಾಗುತ್ತದೆ. ಇವನ್ನು ತೋಡಲು ಸುಮಾರು ದಿನ ಹಿಡಿಯುತ್ತದೆ. ಆದರೆ ವಿಶೇಷ ಸಲಕರಣೆಗಳ ಅಗತ್ಯವಿರುವುದಿಲ್ಲ. ಸಾಕಷ್ಟು ನೀರಿನ ಸಂಗ್ರಹವಿದ್ದು, ಎತ್ತಿಗೆ ಹೆಚ್ಚಾಗಿರುವ ಕಾರಣ ಸರಳವಾಗಿದ್ದ ಪಂಪುಗಳಿಂದ ನೀರನ್ನು ಎತ್ತಬಹುದು. ಆಳವಾದ ವಲಯದಲ್ಲಿನ ಸ್ಥಾಯಿ ಜಲಸಂಪತ್ತಿನ ಆಶ್ರಯವಿಲ್ಲದುದರಿಂದ ಅಭಾವ ಕಾಲದಲ್ಲಿ ಸಾಕಷ್ಟು ರಕ್ಷಣೆ ದೊರಕುವುದಿಲ್ಲ.

ನೀರಿನ ಸಂಗ್ರಹಣೆಗಾಗಿ ತೆಗೆದ ಬಾವಿಗಳನ್ನು ತೋಡಿ ಅದರೊಳಗೆ ಕೊಳವೆ ಬಾವಿಗಳನ್ನು ತೋಡುವ, ಹಾಗೂ ಹಾಲಿ ಇರುವ ತೆಗೆದ ಬಾವಿಗಳ ನೀರಿನ ಆಶ್ರಯವನ್ನು ಹೆಚ್ಚಿಸಲು ಅವುಗಳೊಳಗೇ ಕೊಳವೆ ಬಾವಿಗಳನ್ನು ಕೊರೆಯುವ ಕ್ರಮವೂ ಈಗೀಗ ಅಭ್ಯಾಸಕ್ಕೆ ಬರುತ್ತಿದೆ. ಕಾಲಕ್ರಮೇಣ ಅಗಲವಾದ ತೆರೆದ ಬಾವಿಗಳಿಗೆ ಬದಲಾಗಿ ಸಮೂಹದ ಕೊಳವೆ ಬಾವಿಗಳು ಹೆಚ್ಚು ಬಳಕೆಗೆ ಬರುವುವೆಂದು ನಿರೀಕ್ಷಿಸಬಹುದು.

ಕೊಳವೆ ಬಾವಿಗಳಿಗೆ ಹೆಚ್ಚಿನ ಜಾಗ ಬೇಕಿಲ್ಲ. ಕೆಲವೇ ದಿನಗಳಲ್ಲಿ ಅವನ್ನು ಮಾಡಿ ಮುಗಿಸಿಬಿಡಬಹುದು. ಆಳದಲ್ಲಿರುವ ಜನಲಸಂಗ್ರಹವನ್ನು ತೆಗೆಯುವುದರಿಂದ ನೀರಿನ ಮಟ್ಟ ಋತುಮಾನದ ವ್ಯತ್ಯಾಸಗಳಿಗೆ ಒಳಗಾಗುವುದಿಲ್ಲ. ಮಳೆ ಅಭಾವದ ವರ್ಷಗಳಲ್ಲೂ ತೊಂದರೆಯಿರುವುದಿಲ್ಲ. ಇವು ಸಾಮಾನ್ಯವಾಗಿ 150 ಮಿಮೀ (6 ಅಂಗುಲ) ವ್ಯಾಸವಿದ್ದು 30 ರಿಂದ 50 ಮೀ ಆಳಕ್ಕೆ ಕೊರೆಯಲ್ಪಟ್ಟಿರುತ್ತವೆ. ಅಂತರಜಲದ ಮಟ್ಟ ಕುಸಿದಿರುವೆಡೆ ಈ ಆಳ ಇನ್ನೂ ಹೆಚ್ಚಾಗಿರುತ್ತದೆ. ಸರಾಸರಿ ಪ್ರತಿ ನಿಮಿಷಕ್ಕೆ 60 ರಿಂದ 80 ಲೀಟರ್ ನೀರನ್ನು ಇವು ಒದಗಿಸುತ್ತವೆ. ವಿದ್ಯುತ್ ಪಂಪ್‌ಗಳನ್ನು ಅಥವಾ ಇಂಧನ ಪಂಪ್‌ಗಳನ್ನು ಬಳಸಿ ನೀರನ್ನು ಎತ್ತಲಾಗುತ್ತದೆ. ಅಂತರಜಲದ ಕೊರತೆಯಿಂದಾಗಿ ಈ ಕೊಳವೆ ಬಾವಿಗಳು ಇಂಗಿ ಹೋಗುವ ಪ್ರಕರಣಗಳು ಹೆಚ್ಚುತ್ತಿವೆ.

ಈಗ ಹನಿ ನೀರಾವರಿ ವಿಧಾನವೂ ನೀರಿನ ಮಿತವ್ಯಯಕ್ಕಾಗಿ ಜಾರಿಗೆ ಬಂದಿದೆ. ಜೊತೆಗೆ ಮಳೆಯ ನೀರನ್ನು ಹೇಗೆ ಭೂಮಿಯ ಒಳಗೆ ಸೇರಿಸಿ ಅಗತ್ಯ ಬಿದ್ದಾಗ ಬಳಸಿಕೊಳ್ಳಬೇಕೆಂಬ ಬಗ್ಗೆ ಒಂದು ವಿಜ್ಞಾನವೇ ಬೆಳೆಯುತ್ತಿದೆ. ಇದು 'ಜಲ ಸಾಕ್ಷರತೆ' ಎಂಬ ಹೊಸ ಘೋಷಣೆಗೂ

ಕಾರಣವಾಗಿದೆ.

**ಸಮಸ್ಯೆಗಳ ಮುನ್ನೋಟ:** ವ್ಯವಸಾಯದ ಕೆಲಸಕಾರ್ಯಗಳಿಗೆ ಪ್ರಥಮ ಅಗತ್ಯ ನೀರು. ಕ್ಲುಪ್ತವಾದ ಮಾರುತಗಳಲ್ಲಿ ಬರುವ ಮಳೆಯನ್ನೇ ಹೆಚ್ಚಾಗಿ ಅವಲಂಬಿಸಿರುವ ನಮ್ಮ ರಾಜ್ಯ ವರುಣ ದೇವನ ಕೃಪೆಯ ಅಸ್ಥಿರ ವರ್ತನೆಗೆ ಪಕ್ಕಾಗಿ ಅನಿಶ್ಚಯತೆಯ ತೊಳಲಾಟದಲ್ಲೇ ಇರುತ್ತದೆ. ಇದರಿಂದಾಗಿ ರಾಜ್ಯದ ಒಂದಲ್ಲ ಒಂದು ಭಾಗ ಆಗಾಗ್ಗೆ ಕ್ಷಾಮ ಇಲ್ಲವೆ ಅಭಾವ ಪರಿಸ್ಥಿತಿಗೆ ತುತ್ತಾಗಿರುತ್ತದೆ. ಕೇಂದ್ರ ಸರ್ಕಾರ ನೇಮಿಸಿದ್ದ 1972ರ ನೀರಾವರಿ ಆಯೋಗವು ರಾಜ್ಯದ ಸೇ. 75 ಭಾಗವು ವಾರ್ಷಿಕ ಮಳೆ ಬೀಳುವ ಪ್ರಮಾಣದಲ್ಲಿ ಸೇ. 30 ಕ್ಕಿಂತ ಹೆಚ್ಚು ವ್ಯತ್ಯಾಸವನ್ನು ಅನುಭವಿಸುತ್ತಿರುವುದನ್ನು ಗುರುತಿಸಿ, ಕರ್ನಾಟಕ ಅಧಿಕಾಂಶ ಅಭಾವ ಮತ್ತು ಕ್ಷಾಮಗಳಿಗೆ ಆಸ್ಪದ ಹೊಂದಿರುವ ರಾಜ್ಯವೆಂದು ಸ್ಪಷ್ಟವಾಗಿ ತೀರ್ಮಾನಿಸಿದೆ. ಈ ಸಂದರ್ಭಕ್ಕೆ ಅನುಗುಣವಾಗಿಯೇ ಭೂಮಿಯ ಮೇಲಿನ ಹಾಗೂ ಒಳಗಿರುವ ನೀರಿನ ಅತ್ಯಧಿಕ ಪ್ರಯೋಜನ ಪಡೆದು, ಆದಷ್ಟು ಹೆಚ್ಚು ಪ್ರದೇಶಕ್ಕೆ ನಿಶ್ಚಿತ ನೀರಾವರಿಯ ಸೌಕರ್ಯ ಒದಗಿಸಲು ಗರಿಷ್ಠ ಪ್ರಮಾಣದ ಪ್ರಯತ್ನ ಅಗತ್ಯವಾಗಿರುವುದು.

ಕರ್ನಾಟಕದ ಜಲಸಂಪತ್ತು ಯಥೇಚ್ಛವಾಗಿಯೇ ಇದೆ (ನೋಡಿ: ನದೀ ವ್ಯವಸ್ಥೆ ಮತ್ತು ಜಲಸಂಪತ್ತು). ಎಲ್ಲ ನದಿಗಳಲ್ಲಿ ವಾರ್ಷಿಕವಾಗಿ ದೊರಕುವ ಒಟ್ಟು ಅಂದಾಜು ಸು. 4000 ಶತಕೋಟಿ ಘನ ಅಡಿಗಳು. ಆದರೆ ಇದಿಷ್ಟೂ ಉಪಯುಕ್ತ ಬಳಕೆಗೆ ಸಿಗುವುದಿಲ್ಲ. ನೀರು ಆವಿಯಾಗಿ ಹೋಗುವುದು, ನೆಲದಲ್ಲಿ ಇಂಗುವುದು, ಪ್ರವಾಹದಲ್ಲಿ ಕೊಚ್ಚಿಹೋಗುವುದು, ಇವಲ್ಲದೆ ಸಮುದ್ರಕ್ಕೆ ಅಥವಾ ರಾಜ್ಯದ ಗಡಿಗೆ ಅತಿ ಸನಿಹದಲ್ಲಿ ಬೀಳುವ ಮಳೆಯಿಂದ ಒದಗುವ ನೀರನ್ನು ಸಂಗ್ರಹಿಸಿ ಇನ್ನೂ ಕೆಳಗಿನ ನಮ್ಮ ಭೂಮಿಯಲ್ಲೇ ಉಪಯೋಗಿಸಲಾಗದಿರುವುದು ಇವೆಲ್ಲವನ್ನೂ ಕಳೆದರೆ, ನಾವು ಪ್ರಯೋಜನ ಪಡೆಯಬಹುದು ಎನ್ನುವ ಜಲ ಸಂಪತ್ತು ಸು. 2000 ಶತಕೋಟಿ ಘನ ಅಡಿಗಳು ಎಂದು ಅಂದಾಜು. ಪಶ್ಚಿಮಕ್ಕೆ ಹರಿಯುವ ನದಿಗಳಿಗೆ ಸೂಕ್ತವಾದ ಕಡೆ ಒಡ್ಡು ಕಟ್ಟಿ ಪೂರ್ವದ ಬಯಲಿಗೆ ಕೊಂಚವಾದರೂ ತಿರುಗಿಸಿಕೊಳ್ಳಬಹುದಾದ್ದು ಹಾಗೂ ಎತ್ತು ನೀರಾವರಿ ಇವನ್ನೂ ಸೇರಿಸಿ ಅಂದಾಜು ಮಾಡಿದರೆ 2000 ಶತಕೋಟಿ ಘನ ಅಡಿಗಳೆಂದು ಪರಿಗಣಿಸಬಹುದು. ನಮ್ಮ ಜಲಸಂಪತ್ತಿನ ಪ್ರಧಾನ ಆಗರಗಳಾದ ಕೃಷ್ಣಾ ಮತ್ತು ಕಾವೇರಿಗಳೆರಡೂ ಅಂತರರಾಜ್ಯ ನದಿಗಳಾದ್ದರಿಂದ ಅವುಗಳಲ್ಲಿ ನಮ್ಮ ಭಾಗವೆಷ್ಟು ಎಂಬುದು ಇತರರ ಮರ್ಜಿಗೂ ಒಳಪಟ್ಟಿದ್ದು ಒಡಂಬಡಿಕೆ ಹಾಗೂ ಆಯೋಗಗಳ ತೀರ್ಪಿಗೆ ಬದ್ಧವಾಗಿದೆ.

ಸಂಪತ್ತಿನ ಅಂದಾಜು ಅಷ್ಟಿದ್ದರೂ ಪ್ರಾರಂಭದಿಂದ ಯೋಜನಾಪೂರ್ವ 1951ರ ವರೆಗೆ ನಾವು ರೂಢಿಸಿಕೊಂಡಿದ್ದುದು ಕೇವಲ 48 ಶತಕೋಟಿ ಘನ ಅಡಿಗಳು. ನಾಲ್ಕು ಪಂಚವಾರ್ಷಿಕ ಯೋಜನೆಗಳ ತರುವಾಯವೂ ಬಳಸಿಕೊಳ್ಳಲು ಆಗಿದ್ದುದು 600 ಟಿ.ಎಂ.ಸಿ. 2000 ದ ಮಾರ್ಚ್‌ವರೆಗೆ 1,179.47 ಟಿ.ಎಂ.ಸಿ. ನೀರನ್ನು ನೀರಾವರಿಗೆ ಬಳಸಿಕೊಳ್ಳುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಅಂಶಗಳನ್ನು ನೀರಾವರಿ ಮಾಡಬಹುದಾದ ವಿಸ್ತಾರದ ಪರಿಗಣನೆಯಿಂದಲೂ ತಿಳಿಯಬಹುದಾಗಿದೆ. ಕರ್ನಾಟಕದ ಭೌಗೋಳಿಕಾ ವಿಸ್ತಾರ ಸುಮಾರು 1.9 ಕೋಟಿ ಹೆಕ್ಟೇರುಗಳು. ಇದರಲ್ಲಿ ಬಂಡೆ, ಕಾಡು, ಮೇಡು, ಊರುಗಳನ್ನು ಬಿಟ್ಟು ವ್ಯವಸಾಯ ಯೋಗ್ಯವಾದ್ದು ಸು. 1.4 ಕೋಟಿ. ಸರಾಸರಿ ಉಳುಮೆಯಾಗುತ್ತಿರುವ ಭೂಮಿ ಸು. 1 ಕೋಟಿ ಹೆಕ್ಟೇರ್. 1997-98ನೇ ಸಾಲಿನಲ್ಲಿ ನೀರಾವರಿಯಾದ ಒಟ್ಟು ಜಮೀನಿನ ಪ್ರಮಾಣ 23.63 ಲಕ್ಷ ಹೆಕ್ಟೇರುಗಳು. ಅದರಲ್ಲಿ ನಾಲೆಗಳ ಪಾಲು ಶೇಕಡ 38.24; ಬಾವಿಗಳು (19.05), ಕೆರೆಗಳು (10.14), ಕೊಳವೆ ಬಾವಿಗಳು (17.39) ಇತರ ಮೂಲಗಳು (10.51) ಏತನೀರಾವರಿ (4.7). ಸುಮಾರು ಆರು ಲಕ್ಷ ಹೆಕ್ಟೇರ್‌ಗಳ ಭೂಮಿಯಲ್ಲಿ ವಾರ್ಷಿಕವಾಗಿ ಒಂದಕ್ಕಿಂತ ಹೆಚ್ಚು ನೀರಾವರಿ ಬೆಳೆ ತೆಗೆಯಲಾಗುತ್ತಿದೆ. ಇದರಿಂದಾಗಿ ನೀರಾವರಿಗೆ ಒಳಗಾದ ಪ್ರದೇಶ 28 ಲಕ್ಷ ಹೆಕ್ಟೇರ್‌ಗಳಾಗಿದೆ. ದೇಶದ ಒಟ್ಟು ಬಿತ್ತನೆ ಪ್ರದೇಶದಲ್ಲಿ ನೀರಾವರಿ ಪ್ರದೇಶ ಶೇಕಡ 32 ರಷ್ಟಿದ್ದರೆ. ಕರ್ನಾಟಕದಲ್ಲಿ ಅದು 23.5 ರಷ್ಟಿದೆ. ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಅದು ಅನುಕ್ರಮವಾಗಿ 48 ಮತ್ತು 38 ಆಗಿದೆ(1989-90). ಇದು ಕರ್ನಾಟಕ ಇನ್ನೂ ಸಾಧಿಸಬೇಕಾದ ಪ್ರಗತಿಯ ಬಗ್ಗೆ ಬೆಳಕು ಬೀರುತ್ತದೆ.

ರಾಜ್ಯದ ಮುಖ್ಯ ನದಿಗಳಾದ ಕಾವೇರಿ, ತುಂಗಭದ್ರಾ ಮತ್ತು ಕೃಷ್ಣಾ ಅಂತರರಾಜ್ಯ ನದಿಗಳಾಗಿರುವುದು, ಕರ್ನಾಟಕ ಒಂದಾಗುವ ಮುನ್ನ ಅದರ ಸುಮಾರು ಅರ್ಧದಷ್ಟು ಪ್ರದೇಶವಾದ ಮೈಸೂರು ಒಂದು ಆಶ್ರಿತ ಸಂಸ್ಥಾನವಾಗಿದ್ದು, ನೆರೆಯ ರಾಜ್ಯಗಳಾದ ಆಗಿನ ಬ್ರಿಟಿಷ್ ಪ್ರಾಂತ್ಯಗಳ ಯಾವುದೇ ಕೋರಿಕೆಯು ಸಂಸ್ಥಾನದ ಬೇಡಿಕೆಗಿಂತ ಹೆಚ್ಚಿನ ಆದ್ಯತೆ ಪಡೆಯುತ್ತಿದ್ದುದು ಈ ಹಿಂದುಳಿಯುವಿಕೆಗೆ ಒಂದು ಕಾರಣವೆನ್ನಬಹುದು. ಉದಾಹರಣೆಯಾಗಿ ತುಂಗಭದ್ರಾ ಬಗ್ಗೆ ಹೇಳುವುದಾದರೆ 1892ರಲ್ಲಿ ಮೈಸೂರು-ಮದರಾಸುಗಳ ನಡುವೆ ಆದ ಒಪ್ಪಂದದಂತೆ ಇದರ ಮುಖ್ಯ ಉಪನದಿಗಳಾದ ತುಂಗಾ, ಭದ್ರಾ ಮತ್ತು ಹಗರಿಗಳಿಂದ ಮದರಾಸಿನ ಅಪ್ಪಣೆಯಿಲ್ಲದೆ (ಕಾವೇರಿಗೂ ಇದು ಅನ್ವಯಿಸಿತ್ತು) ಯಾವ ನೀರಾವರಿ ಅಭಿವೃದ್ಧಿ ಕಾರ್ಯವನ್ನೂ ಮೈಸೂರು ಕೈಗೊಳ್ಳುವಂತಿರಲಿಲ್ಲ. ಮೈಸೂರಿನಂತೆಯೇ ಇದೇ ನದಿಯ ಮೇಲಿನ ಬ್ರಿಟಿಷ್ ಆಡಳಿತದಲ್ಲಿದ್ದ ಮುಂಬಯಿ ಪ್ರಾಂತ್ಯಕ್ಕೇ ಆಗಲಿ ಅಥವಾ ಇನ್ನೊಂದು ಆಶ್ರಿತ ಸಂಸ್ಥಾನವಾದ ಹೈದರಾಬಾದಿಗೇ ಆಗಲಿ ಇಂಥ ನಿಷೇಧವಿರಲಿಲ್ಲ. ಲಕ್ಕವಳ್ಳಿ ಜಲಾಶಯದ ಬಗ್ಗೆ 1936ರಲ್ಲಿ ಮತ್ತೆ 1944ರಲ್ಲಿ ಬೇರೆಯ ಒಪ್ಪಂದಗಳಾಗುವತನಕ ಇದೇ ಚಾಲತಿಯಲ್ಲಿತ್ತೆಂಬುದನ್ನು ಮನಗಾಣಬೇಕು. ಅದೇ ರೀತಿ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿ ಕಟ್ಟೆ ಕಟ್ಟುವ ಬಗ್ಗೆ ಒಪ್ಪಂದಕ್ಕೆ ಬರಲು ಎದುರಿಸಿದ ತೊಡಕುಗಳು ಸಹ ರಾಜ್ಯದ ಅಸಹಾಯಕ ಅಥವಾ ದುರ್ಬಲ ಸ್ಥಿತಿಯನ್ನು ಸೂಚಿಸುತ್ತದೆ. ನದಿಯ ಮೇಲ್ಪ್ರದೇಶಗಳಲ್ಲಿ ಹೀಗೆ ಉಪಯೋಗಿಸಲಾಗದೆ ಬಿಟ್ಟ ನೀರೆಲ್ಲ ಅದರ ಮುಖಭೂಮಿಯಲ್ಲಿ ಹೆಚ್ಚಿನ ನೀರಾವರಿಗೆ ಅನುಕೂಲ ಮಾಡಿಕೊಟ್ಟದ್ದು ಕಾಲಕ್ರಮೇಣ ಇವುಗಳ ಹಕ್ಕು ಸ್ಥಾಪನೆಗೆ ಎಡೆಮಾಡಿಕೊಟ್ಟಿತೆನ್ನಬಹುದು. ಕರ್ನಾಟಕದ ಏಕೀಕರಣವಾಗುವ ಮುನ್ನ ಇದರ ಭಾಗಗಳು ಹಲವು ರಾಜ್ಯಗಳಲ್ಲಿ ಹಂಚಿಹೋಗಿದ್ದು ಯಾವುದೇ ದೊಡ್ಡ ಯೋಜನೆಗಳನ್ನು ಕೈಗೊಳ್ಳಲು ಒಂದು ಸಮಗ್ರ ದೃಷ್ಟಿಯ ಕೊರತೆ ಇದ್ದುದೂ ಇಂಥ ಮುನ್ನಡೆಗೆ ಆತಂಕವಾಗಿದ್ದಿತು. ಕಾವೇರಿ ನೀರಿನ ಹಂಚಿಕೆ ವಿವಾದ ಮುಂದುವರಿದೇ ಇದೆ. ಕೃಷ್ಣಾನದಿಗೆ ನೀರಿನ ಹಂಚಿಕೆಗೆ ಬಚಾವತ್ ಆಯೋಗ ಕೆಲವೊಂದು ಮಾರ್ಗದರ್ಶನಗಳನ್ನೂ ನಿಗದಿಪಡಿಸಿದೆ. ರಾಜ್ಯದ ಒಟ್ಟು ಜಲಸಂಪತ್ತಿನ ಮೂರನೆಯ ಒಂದು ಭಾಗ ಪಶ್ಚಿಮಕ್ಕೆ ಹರಿಯುವ ನದಿಗಳ ಕೊಡುಗೆಯಾಗಿದ್ದು ಅದನ್ನು ಉಪಯುಕ್ತವಾಗಿ ಬಳಸುವುದು ಒಂದು ಸಮಸ್ಯೆಯಾಗಿದೆ. ಇಷ್ಟೊಂದು ನೀರನ್ನು ನಾವು ವೃಥಾ ಸಮುದ್ರಕ್ಕೆ ಬಿಟ್ಟುಬಿಡುತ್ತಿದ್ದೇವೆಂಬ ಆಪಾದನೆಗೆ ಇದು ಗುರಿಮಾಡಿದೆ. ನೀರಾವರಿಗಿಂತ ವಿದ್ಯುತ್ ಉತ್ಪಾದನೆಗೆ ಇವು ಹೆಚ್ಚು ಅನುವಾಗಿದ್ದು ಶರಾವತಿ, ನದಿಯಿಂದ ಅಂಥ ಪ್ರಯೋಜನ ಈಗಾಗಲೇ ಪಡೆಯಲಾಗುತ್ತಿದೆ. ಇತರ ಕೆಲವು ಮಳೆಗಾಲದಲ್ಲಿ ತುಂಬಿ ಹರಿಯುವ ಈ ನದಿಗಳ ಪ್ರವಾಹವನ್ನು ತಡೆಹಿಡಿದು ಕೂಡಿಡಲು ಭಾರಿ ಜಲಾಶಯಗಳ ನಿರ್ಮಾಣಕ್ಕೆ ಸೂಕ್ತ ನಿವೇಶನಗಳಿರಬೇಕು. ತಡೆಹಿಡಿದ ನೀರನ್ನು ಕಾಲುವೆಗಳ ಮೂಲಕ ಹರಿಸಿ ಉಪಯೋಗಿಸಲು ಮುಂದೆ ವಿಶಾಲವಾದ ಬಯಲಿರಬೇಕು. ಕರಾವಳಿಯಲ್ಲಿ ಅಂಥ ಅವಕಾಶವಿಲ್ಲ. ಇರುವುದಕ್ಕೂ ಒಂದು ಬೆಳೆಗೆ ಸಾಕಷ್ಟು ಮಳೆಯ ನೀರೇ ಆಧಾರ ಆಗುವುದರಿಂದ ಅದರ ಅಗತ್ಯವೂ ಇಲ್ಲ. ಹೀಗಾಗಿ ಈ ನೀರಿನ ಪರಮ ಪ್ರಯೋಜನ ಪಡೆಯಬೇಕಾದರೆ ಅವುಗಳಲ್ಲಿ ಆದಷ್ಟನ್ನು ಪೂರ್ವಕ್ಕೆ ತಿರುಗಿಸುವುದೊಂದೇ ಮಾರ್ಗ. ಇದಕ್ಕೆ ಭೂ ರಚನೆಯ ಇತಿಮಿತಿಗಳಿವೆ. ಪಂಪುಗಳಿಂದ ನೀರನ್ನೆತ್ತಿ ಘಟ್ಟದ ಆಚೆಗೆ ಬಿಡುವುದನ್ನೂ ಸಹ ಮುಂದೆ ಯೋಚಿಸಬೇಕಾಗಬಹುದು. ಅಗತ್ಯತೆಯ ಒತ್ತಡದಲ್ಲಿ ಅದಕ್ಕಾಗುವ ವೆಚ್ಚ ಗೌಣವಾಗುತ್ತದೆ. (ಕೆ.ವಿ.ಎಸ್‌ಯು.)

**ನೀಲಕಂಠ ಬಸವರಾಜ :** ಸು. 14ನೆಯ ಶತಮಾನ. ಬಸವರಾಜೀಯ ಎಂಬ ಸಂಸ್ಕೃತ ಆಯುರ್ವೇದಶಾಸ್ತ್ರದ ಕರ್ತೃ. ತಂದೆ ನಮ್ಮಶ್ರೀವಾಯ, ಹುಟ್ಟಿದ್ದು ಧಾರವಾಡ ಜಿಲ್ಲೆ ಕೊಟ್ಟೂರು ಗ್ರಾಮದಲ್ಲಿ. ನಿಡುಮಾಮಡಿ ಬಗೆಯ ಸತ್ಸಂಪ್ರದಾಯಕ್ಕೆ ಸೇರಿದ ರಾಮದೇಶಿಕ ಈತನ ಶಿಷ್ಯ. ತನನ ಕೃತಿಯಲ್ಲಿ ಕಷ್ಟವಾದ ಭಾಗಗಳಿಗೆ ತೆಲುಗಿನಲ್ಲಿ ವ್ಯಾಖ್ಯಾನ ಮಾಡಿದ್ದಾನೆ. ಇದರ ಮೊದಲ ಮೂರು ಅಧ್ಯಾಯಗಳಲ್ಲಿ ವೈದ್ಯಕೀಯ ಪರೀಕ್ಷೆಯಲ್ಲಿ ಅನುಸರಿಸಬೇಕಾದ ಮಾರ್ಗ ವಿಧಾನಗಳನ್ನು ಸೂಚಿಸಿದ್ದಾನೆ. ಉಳಿದ ಇಪ್ಪತ್ತು ಅಧ್ಯಾಯಗಳಲ್ಲಿ ನಾನಾ ಕಾಯಿಲೆಗಳ ಪರೀಕ್ಷೆ ಹಾಗೂ ನಿವಾರಣಾ ಕ್ರಮಗಳನ್ನೂ ಕೊನೆಯ ಅಧ್ಯಾಯದಲ್ಲಿ ರಸೌಷಧಿಗಳ ತಯಾರಿಕಾವಿಧಾನವನ್ನೂ ಹೇಳಲಾಗಿದೆ. ಈಗಲೂ ಈ ಗ್ರಂಥ ಆಂಧ್ರ ಪ್ರದೇಶ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ.

*

**ನೀಲಕಂಠ ಶಿವಾಚಾರ್ಯ[1]:** ವೀರಶೈವ ಆಚಾರ್ಯರು. ಇವರು ಶಂಕರಾಚಾರ್ಯರ ಸಮಕಾಲೀನರಿದ್ದಂತೆ ತೋರುತ್ತದೆ. ಇವರನ್ನು ಆನಂದಗಿರಿಯ ಶಂಕರವಿಜಯದಲ್ಲಿ ಶಿರೋಲಿಗಂಧಾರಿ ಜಂಗಮಾಚಾರ್ಯರೆಂದೂ ವಿದ್ಯಾರಣ್ಯಕೃತ ಸಂಕರದಿಗ್ವಿಜಯದಲ್ಲಿ ಗೋಕರ್ಣದಲ್ಲಿ ಶಂಕರರೊಡನೆ ಶಾಸ್ತ್ರ ವಾಕ್ಯಾರ್ಥ ನಡೆಯಿಸಿದ ಹರದತ್ತಾಚಾರ್ಯರ ಗುರುವೆಂದೂ ಹೇಳಿದೆ. ಇವರು ಶಿವಸೂತ್ರ ಮತ್ತು ಬ್ರಹ್ಮಸೂತ್ರಗಳ ಮೇಲೆ ಭಾಷ್ಯಾದಿಗಳನ್ನೂ ಅನೇಕ ನಿಬಂಧಗಳನ್ನೂ ರಚಿಸಿದ್ದರೆಂದು ಇವರ ಬ್ರಹ್ಮಸೂತ್ರ ಭಾಷ್ಯದ ಆಧಾರದ ಮೇಲೆ ಕ್ರಿಯಾಸಾರವೆಂಬ ಕಾರಿಕೆಯನ್ನು ಬರೆದಿರುವ ನೀಲಕಂಠ ಶಿವಾಚಾರ್ಯರ (ಸು. 1400) ಹೇಳಿಕೆಗಳಿಂದ ತಿಳಿಯುತ್ತದೆ. (ಎಂ.ಜಿ.ಎನ್.)

**ನೀಲಕಂಠ ಶಿವಾಚಾರ್ಯ[2]:** ಸು. 1400. ವೀರಶೈವ ಆಚಾರ್ಯ. ಕ್ರಿಯಾಸಾರ ಎಂಬ ಗ್ರಂಥದ ಕರ್ತೃ. ಇವರು ಕನ್ನಡದಲ್ಲಿ ಸಕಲಾಗಮಾರ್ಥವಿವರಣ ಎಂಬ ಮತ್ತೊಂದು ಗ್ರಂಥವನ್ನು ಬರೆದಿದ್ದಂತೆ ಕ್ರಿಯಾಸಾರದಲ್ಲಿ ಬರುವ ಕೆಲವು ಉಲ್ಲೇಖಗಳಿಂದ ತಿಳಿಯುತ್ತದೆ. ಆದರೆ ಇದು ಉಪಲಬ್ಧವಾಗಿಲ್ಲ. ಇವರ ತಂದೆ ಮಲ್ಲಯ್ಯ, ತಾಯಿ ಚನ್ನಮ್ಮ.

ಕ್ರಿಯಾಸಾರ ಮೊದಲನೆಯ ನೀಲಕಂಠ ಶಿವಾಚಾರ್ಯರ ಬ್ರಹ್ಮಸೂತ್ರ ಭಾಷ್ಯಕ್ಕೆ ಕಾರಿಕಾ ರೂಪವಾಗಿದೆ; ಸಂಸ್ಕೃತದಲ್ಲಿದೆ. ಇದರ ಮೊದಲ ನಾಲ್ಕು ಉಪದೇಶಗಳು ಬ್ರಹ್ಮಸೂತ್ರಭಾಷ್ಯದ ನಾಲ್ಕು ಅಧ್ಯಾಯಗಳ ಸಾರ. ಈ ಗ್ರಂಥವನ್ನು ಶಾರದಾತಿಲಕ ಮತ್ತು ಪುರಶ್ಚರ್ಯಾರ್ಣವ (ನೇಪಾಳ ಪ್ರತಾಪಸಿಂಹ ಮಹಾರಾಜ ಬಹದ್ದೂರ್ ವಿರಚಿತ) ಗ್ರಂಥಗಳಿಗೆ ಪ್ರಮಾಣವಾಗಿ ಸ್ವೀಕರಿಸಿರುವುದರಿಂದ ಇದು ಭಾರತದ ದಕ್ಷಿಣೋತ್ತರ ಭಾಗಗಳೆರಡರಲ್ಲಿಯೂ ಪ್ರಸಿದ್ಧಿ ಪಡೆದಿದ್ದಂತೆ ಕಂಡುಬರುತ್ತದೆ. ಗುಬ್ಬಿಯ ಮಲ್ಲಣ್ಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ ಕ್ರಿಯಾಸಾರದ ಅನೇಕ ಭಾಗಗಳು ಅನುವಾದವಾಗಿವೆ. (ಎಂ.ಜಿ.ಎನ್.,ಎಚ್.ಸಿ.ಎಸ್.)

**ನೀಲಕಂಠಾಚಾರ್, ಎನ್.ಜಿ. :** 1924. ಹೆಸರಾಂತ ಲೋಹಶಿಲ್ಪಿ ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಜನಿಸಿದರು (1924). ಶಿಲ್ಪಕಲೆಯನ್ನೇ ವಂಶಪಾರಂಪರ್ಯವಾಗಿ ರೂಢಿಸಿಕೊಂಡು ಬಂದಿದ್ದ ಉತ್ತಮ ಶಿಲ್ಪಿಗಳ ಕುಟುಂಬ ಇವರದು. ಎಳೆಯ ವಯಸ್ಸಿನಿಂದಲೂ ಹಿತ್ತಾಳೆ, ಕಂಚು, ಪಂಚಲೋಹ ಕಲೆಗಳಿಗೆ ಮನಸೋತರು. ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯನ್ನು ಸೇರಿದ (1942) ಇವರು ಅಲ್ಲಿ ಶಿಕ್ಷಕರಾಗಿದ್ದ ಪ್ರಸಿದ್ಧ ಶಿಲ್ಪಿ ಎನ್.ವಿ. ಸೂರ್ಯನಾರಾಯಣಾಚಾರ್ಯರಲ್ಲಿ ಐದು ವರ್ಷ ಕಾಲ ಶಿಷ್ಯವೃತ್ತಿ ಮಾಡಿದರು. ಲೋಹಶಿಲ್ಪಕಲೆಯಲ್ಲಿ ನಕಾಸೆ ಕೆಲಸ ಅತ್ಯಂತ ನಾಜೂಕಿನ ಹಾಗೂ ಸೂಕ್ಷ್ಮ ರೀತಿಯದು. ಈ ಕೆಲಸದಲ್ಲಿ ಪರಿಣಿತಿ ಸಾಧಿಸಿದರು. ಇವರು ನಿರ್ಮಿಸಿದ ಶಿವಶಂಕರ ಲೀಲಾ ನೃತ್ಯ, ಕಂಚಿನ ಮದನಿಕೆ, ಪಂಚಲೋಹದ , ಚೆನ್ನಕೇಶವಮೂರ್ತಿ, ನಾಟ್ಯ ಸರಸ್ವತಿ, ವೇಣುಗೋಪಾಲ - ಇವು ಇವರ ಕಲಾನೈಪುಣ್ಯತೆಗೆ ಸಾಕ್ಷಿ.

ಹೊಯ್ಸಳ ಶೈಲಿಯ ವೈಭವಪೂರ್ಣ ಪಂಚಲೋಹದ ವೇಣುಗೋಪಾಲ ಮೂರ್ತಿಯ ಕಲಾಕೌಶಲ್ಯವನ್ನು ಮೆಚ್ಚಿ ಅಖಿಲ ಭಾರತ ಹಸ್ತಶಿಲ್ಪ ಮಂಡಲಿ ಇವರಿಗೆ ರಾಷ್ಟ್ರಮಟ್ಟದ ಪುರಸ್ಕಾರವನ್ನು ನೀಡಿ ಗೌರವಿಸಿತು (1978). ಬೆರಗುಮೂಡಿಸುವ ಕುಸುರಿ ಕೆಲಸದಿಂದ ಸಾಕಾರಗೊಂಡಿರುವ ಮೂರು ಅಡಿ ಎತ್ತರದ ವೇಣುಗೋಪಾಲ ಮೂರ್ತಿ ಇವರ ಕಲಾಪ್ರೌಢಿಮೆಗೊಂದು ಭವ್ಯ ಸಾಕ್ಷಿ. ಇವರ ಲೋಹಕಲಾ ಮೂರ್ತಿಗಳು ದೇಶವಿದೇಶಗಳಲ್ಲಿಯೂ ವಸ್ತುಸಂಗ್ರಹಾಲಯಗಳಲ್ಲಿಯೂ ವಿಶೇಷ ಪ್ರದರ್ಶನಗಳಲ್ಲಿಯೂ ಪಾಲ್ಗೊಂಡು ಹಸ್ತಶಿಲ್ಪ ಕ್ಷೇತ್ರದಲ್ಲಿ ಇವರಿಗೆ ವಿಶಿಷ್ಟಸ್ಥಾನ ಗಳಿಸಿಕೊಟ್ಟಿವೆ.

ಇವರ ಸಾಧನೆಗಾಗಿ ಇವರಿಗೆ ಅನೇಕ ಗೌರವ-ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದವು : ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1995), ರಾಮಸನ್ ಕಲಾ ಪ್ರತಿಷ್ಠಾನದ ಶಿಲ್ಪಶ್ರೀ ಸನ್ಮಾನ. ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ಪುರಸ್ಕಾರ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರ್ಕಾರದ ಜಕಣಾಚಾರಿಪ್ರಶಸ್ತಿ (1996), ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿದ್ದ ಇವರು ಈಗ ಅದರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ (2002-04).
(ಎನ್.ಎಂ.)

**ನೀಲಕಂಠಾಚಾರ್ಯ :** ಸು.1485. ವೀರಶೈವಕವಿ. ಆರಾಧ್ಯಚಾರಿತ್ರ ಎಂಬ ಗ್ರಂಥದ ಕರ್ತೃ. ಇದು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಚರಿತ್ರೆಯನ್ನೊಳಗೊಂಡಿದೆ. ಶಿವಲೆಂಕಮಂಚಣ್ಣ ಪಂಡಿತ, ಉರಿಲಿಂಗಪೆದ್ದಿಗಳ ವಂಶಸ್ಥನಾದ ಈತ ತನ್ನ ವಂಶ ಪರಂಪರೆಯನನು ಸುದೀರ್ಘವಾಗಿ ಹೇಳಿಕೊಂಡಿದ್ದಾನೆ. ವಿತತಕರ್ಣಾಟಲಕ್ಷಣ ಕಮಲಭವನೆನಿಪ ಚತುರವರ ತಾನೆಂದು ತನ್ನನ್ನು ವಿಶ್ಲೇಷಿಸಿ ಕೊಂಡಿದ್ದಾನೆ. ವಾರ್ಧಕ ಷಟ್ಪದಿಯಲ್ಲಿರುವ ಈ ಕೃತಿಯಲ್ಲಿ 5 ಪ್ರಕರಣ, 65 ಸಂಧಿ, 3,069 ಪದ್ಯಗಳಿವೆ. ಪಾಲ್ಕುರಿಕ ಸೋಮನಾಥ ಆಂಧ್ರ ಭಾಷೆಯಲ್ಲಿ ಹೇಳಿದುದನ್ನು ಈತ ಕನ್ನಡದಲ್ಲಿ ರಚಿಸಿದ್ದಾನೆ.

ಬಸವಾದಿ ಪ್ರಮಥರು ಭೂಲೋಕದಲ್ಲಿ ಕೈಗೊಂಡ ಕಾರ್ಯವನ್ನು ಮುಂದುವರಿಸಲು ಪರಮೇಶ್ವರ ಮಲ್ಲಿಕಾರ್ಜುನ ಪಂಡಿತಾರಾಧ್ಯನನ್ನು ಧರೆಗೆ ಕಳಿಸಿದ. ಭೃಂಗಿಯ ನಿಷ್ಠೆ, ದೂರ್ವಾಸನ ಶಾಪಶಕ್ತಿ, ಗೌತಮನ ವೈಖರಿ, ರುದ್ರಪ್ರಮಥರ ಪ್ರಸಾದೈಕರತಿ, ಉಪಮನ್ಯುಮುನಿಯ ಗುರುತ್ವ, ವೀರಭದ್ರನ ಶೌರ್ಯ ಇವನು ಒಟ್ಟುಗೂಡಿಸಿಕೊಂಡ ಬಿಂಬವೊಂದು ದ್ರಾಕ್ಷಾರಾಮ ಪಟ್ಟಣದ ಭೀಮಪಂಡಿತನ ಸತಿ ಗೌರಾಂಬಿಕೆಯ ಉದರದಲ್ಲಿ ಮೂರ್ತಗೊಂಡಿತು. ಹೀಗೆ ಜನಿಸಿದ ಮಲ್ಲಿಕಾರ್ಜುನ ಪಂಡಿತಾರಾಧ್ಯ ಸಕಲಾಗಮಪಂಡಿತನಾಗಿ ಧರ್ಮಬೋಧೆ ಮಾಡಿದ. ಇದೇ ಇಲ್ಲಿನ ಕಥಾವಸ್ತು.

ದೀಕ್ಷಾಪ್ರಕರಣದಲ್ಲಿ ಅಷ್ಟಾವರಣಗಳ ಮಹಿಮೆಯನನೂ ಪುರಾತನ ಪ್ರಕರಣದಲ್ಲಿ ಗುರುಭಕ್ತಾಂಡಾರ, ಮಲ್ಹಣ ಮೊದಲಾದ ಶಿವಭಕ್ತರ ಕಥಾನಕಗಳನ್ನೂ ವಾದ ಪ್ರಕರಣದಲ್ಲಿ ಬೌದ್ಧ, ಜೈನ, ಚಾರ್ವಾಕ, ವೈದಿಕ ಮತಗಳನ್ನು ಖಂಡಿಸಿರುವುದನ್ನೂ ಮಹಿಮಾ ಪ್ರಕರಣದಲ್ಲಿ ಚೋಳರಾಜ, ನಂಬಿಯಣ್ಣ, ದೋಣಪಾರ್ಯ ಮೊದಲಾದ ಶರಣರ ಮಹಿಮೆಯನ್ನೂ ಕಡೆಯದಾದ ಪರ್ವತ ಪ್ರಕರಣದಲ್ಲಿ ಶ್ರೀಶೈಲಗಿರಿಯ ಮಹಿಮೆಯನ್ನೂ ಕಾಣಬಹುದು.

ಸಂದರ್ಭಕ್ಕೆ ತಕ್ಕಂತೆ ಕಾವ್ಯದುದ್ದಕ್ಕೂ ಶಿವ, ಅಗ್ನಿ, ವಾಯು, ಸ್ಕಂದ ಪುರಾಣಗಳಿಂದ ಆಯ್ದು ಉದ್ಧೃತ ವಾಕ್ಯಗಳಿವೆ. ಕಾವ್ಯ ಬಂಧ ಲಲಿತವಾಗಿದೆ.

*

**ನೀಲಕಂಠಾರಾಧ್ಯ :** ಸು. 1500. ವೀರಶೈವ ಕವಿ. ಪರವಾದಿಗಜಾಂಕುಶ ತಾರಾವಳಿ ಎಂಬ ಗ್ರಂಥದ ಕರ್ತೃ. ಈತನಿಗೆ ಪರಮತವೇಶ್ಯಾಭುಜಂಗ ಎಂಬ ಬಿರುದಿದ್ದಂತೆ ತಿಳಿಯುತ್ತದೆ.

ಪರವಾದಿಗಜಾಂಕುಶತಾರಾವಳಿ ಗದ್ಯ ಮತ್ತು ರಗಳೆ (ಪದ್ಯ)ಯಲ್ಲಿ ರಚಿತವಾಗಿದೆ. ಇದರಲ್ಲಿ ಒಟ್ಟು ಇಪ್ಪತ್ತೇಳು ರಗಳೆಯ ಭಾಗಗಳೂ ಇಪ್ಪತ್ತೇಳು ಗದ್ಯಭಾಗಗಳೂ ಆದ್ಯಂತ್ಯದಲ್ಲಿ ಒಂದೊಂದು ಕಂದ ಪದ್ಯವೂ

ಸಮಾವೇಶಗೊಂಡಿವೆ. ತಾನು ಈ ಗ್ರಂಥವನ್ನು ಸಕಲವೇದಶಾಸ್ತ್ರೋಪನಿಷದರ್ಥಮಂ ಗರ್ಭೀಕರಿಸಿ ಜೈನ ಚಾರ್ವಾಕ ಮಾಯಾವಾದಿ ವೈಷ್ಣವರೆಂಬ ಮದಗಜಕ್ಕೆ ಅಂಕುಶವಾಗಿ ರಚಿಸಿರುವಂತೆ ಹೇಳಿಕೊಂಡಿದ್ದಾನೆ. ಇವನ ಕೃತಿಯಲ್ಲಿ ಸ್ವಮತಮಂಡನೆ, ಪರಮತಖಂಡನೆ ಕಂಡುಬರುತ್ತದೆ. ಈತನ ರಗಳೆ ಲಲಿತ ರಗಳೆಯಂತೆ ರಚಿತವಾಗಿದ್ದರೂ ಆದಿಪ್ರಾಸವನ್ನು ದ್ವಿಪದ ಘಟಕಕ್ಕೆ ಮಾತ್ರ ಬಳಸಿಕೊಳ್ಳದೆ ಅಖಂಡ ಕಾವ್ಯಭಾಗಕ್ಕೂ ಅನ್ವಯಿಸಿಕೊಂಡಿದ್ದಾನೆ. ಅಲ್ಲದೆ ಅಂತ್ಯಪ್ರಾಸವನ್ನು ಪೂರ್ಣವಾಗಿ ಉಲ್ಲಂಘಿಸಿರುವುದೂ ಒಂದು ಗಮನಾರ್ಹ ಅಂಶ. ಯಾಂತ್ರಿಕ ಗಣವಿಭಜನೆಯಾಗಲಿ ಮಾತ್ರೆಗಳ ಲೆಕ್ಕಾಚಾರವಾಗಲಿ ಇವನಲ್ಲಿ ಸಾಂಪ್ರದಾಯಿಕವಾಗಿ ಉಳಿದಂತಿಲ್ಲ. ರಗಳೆ ಛಂದಸ್ಸಿನ ನಿಯಮದಂತೆ ಎರಡನೆಯ ಪಾದದ ಕೊನೆಯಲ್ಲಿ ಯತಿ ನಿರ್ದೇಶನವಿಲ್ಲ. ಅದರ ಬದಲು ಪದ ಮತ್ತು ಭಾವಗಳೆರಡೂ ಮುರಿವನ್ನು ಪಡೆದು ಮುಂದಿನ ಸಾಲುಗಳಿಗೂ ಹರಿದು ಒಂದು ಬಗೆಯ ಸರಳ ರಗಳೆಯಂತೆ ಬಳಕೆಯಾಗಿರುವುದು ಈ ಕವಿಯ ಒಂದು ವೈಶಿಷ್ಟ್ಯವಾಗಿದೆ. ಈ ದೃಷ್ಟಿಯಿಂದ ನೀಲಕಂಠಾರಾಧ್ಯನು ಪಾಂಡಿತ್ಯ ಹಾಗೂ ಪ್ರಯೋಗಶೀಲತೆಗಳೆರಡನ್ನೂ ಮೈಗೂಡಿಸಿಕೊಂಡ ಗಮನಾರ್ಹ ವ್ಯಕ್ತಿಯಾಗಿದ್ದಾನೆ. (ಎನ್.ಬಿ.ಎಲ್.)

**ನೀಲಗಾರರು :** ದಕ್ಷಿಣ ಕರ್ನಾಟಕದ ದಕ್ಷಿಣ ಭಾಗದಲ್ಲಿ ಪ್ರಮುಖವಾಗಿ ಕಂಡುಬರುವ ಧಾರ್ಮಿಕ ವೃತ್ತಿಗಾಯಕರು, ಮಂಟೇಸ್ವಾಮಿಯನ್ನು ಶಿಷ್ಯರಾದ ಚಿಕ್ಕಲ್ಲೂರು ಸಿದ್ದಪ್ಪಾಜಿ, ಕಪ್ಪಡಿ ರಾಚಪ್ಪಾಜಿ ಮತ್ತು ಮಳವಳ್ಳಿ ಹಾಗೂ ಬೊಪ್ಪಗೌಡನಪುರದ ಅರಸುಮನೆತನದ ಸ್ವಾಮಿಗಳ ಮಹಿಮೆಯ ಪ್ರಸಾರಕ್ಕೆ ಮೀಸಲಾದ ವಿಶಿಷ್ಟ ಭಕ್ತರು. ಇವರನ್ನು ಲೀಲೆಗಾರರು ಎಂದೂ ಕರೆಯಲಾಗುತ್ತದೆ. ತಮ್ಮನ್ನು ಇವರು ಮಂಟೇದವರು, ಮಂಟೇ ಸ್ವಾಮಿಗಳು ಎಂದು ಕರೆದುಕೊಳ್ಳುತ್ತಾರೆ.

ಇವರ ವೇಷಭೂಷಣಗಳು ವಿಶಿಷ್ಟವಾದುವು. ತಲೆಯಲ್ಲಿ ಕೆಂಪು ರುಮಾಲು, ಮೈಮೇಲೆ ಕರಿಯ ಮೇಲಂಗಿ, ಮಂಡಿಯಿಂದ ತುಸು ಕೆಳಗೆ ಚಾಚಿರುವ ಕಚ್ಚೆಯ ಪಂಚೆ, ಕೈಯಲ್ಲಿ ಅಷ್ಟೇನೂ ಉದ್ದವಲ್ಲದ ನಾಗರ ಹೆಡೆಯ ಅಥವಾ ಸಿಂಹಮುಖದ ಕರಿಯ ತಂಬೂರಿ, ಜೊತೆಗೆ ಚಿಟಗಿ ಅಥವಾ ಹೆಬ್ಬೆರಳಿನಲ್ಲಿ ಎರಡು ಗಗ್ಗರಗಳು, ಹಣೆಯಲ್ಲಿ ಭಸ್ಮ ಜೊತೆಗೆ ಕುಂಕುಮದ ತಿಲಕ, ಕೊರಳಲ್ಲಿ ಮೂರು ರುದ್ರಾಕ್ಷಿ ಧರಿಸಿರುತ್ತಾರೆ.

ಧರೆಗೆ ದೊಡ್ಡವರು, ಮಂಟೇದ ಒಡೆಯ, ಹಲಗೂರು ಪವಾಡ - ಇವು ಇವರು ಹಾಡುವ ಮುಖ್ಯ ಧಾರ್ಮಿಕ ಕಥೆಗಳು. ಈ ಕಥೆಗಳ ಜೊತೆಗೆ ಅನೇಕ ಲೌಕಿಕ ಕಥೆಗಳನ್ನು ಹಾಡುತ್ತಾರೆ. ಅವುಗಳಲ್ಲಿ ಚೆಲುವ ಚೆನ್ನಿಗರಾಮ, ಮೈದಾಳು ರಾಮಣ್ಣ, ನಂಜಯ್ಯ-ಚಾಮುಂಡಿ, ಸಾರಂಗಧರ, ಪಿರಿಯಾಪಟ್ಟಣದ ಲಾವಣಿ, ಅರ್ಜುನ ಜೋಗಿ ಹಾಡು, ಗಜಪತಿರಾಜ, ಬಂಜೆ ಹೊನ್ನಮ್ಮ, ಚೆಲುವರಾಯ, ಬಾಲನಾಗಮ್ಮ ಮುಖ್ಯವಾದುವು.

ಧಾರ್ಮಿಕ ಕಥೆಗಳನ್ನು ಹಾಡುವಾಗ ಸಿದ್ದಯ್ಯ ಶಿವನೇ ಬನ್ನಿ ಪರಂಜ್ಯೋತಿ ನೀವೆ ಬನ್ನಿ; ಮಂಟೇದ ಲಿಂಗಯ್ಯ ನೀವೆ ಬನ್ನಿ ಎಂದು ಸೊಲ್ಲುಸೊಲ್ಲಿಗೂ ಗುರು ಸಿದ್ದಪ್ಪಾಜಿಯವರನ್ನು ನೆನೆಯುತ್ತ ತಂಬೂರಿಯನ್ನು ನುಡಿಸುತ್ತ ಕಥೆಯನ್ನು ಮುಖ್ಯ ಕಥೆಗಾರ ಹಾಡಿದರೆ ಹಿಮ್ಮೇಳದವರು ಚಿಟಗಿ, ಏಕತಾರಿಗಳನ್ನು ನುಡಿಸುತ್ತಾರೆ. (ಟಿ.ಎಸ್.ಆರ್.)

**ನೀಲಮ್ಮ :** (ನೀಲಾಂಬಿಕೆ) 12ನೆಯ ಶತಮಾನದಲ್ಲಿ ಬಾಳಿದ ಪ್ರಸಿದ್ಧ ಶಿವಶರಣೆ ಹಾಗೂ ವಚನಕಾರ್ತಿ, ಬಸವಣ್ಣನವರ ಧರ್ಮಪತ್ನಿ. ಈಕೆ ಬಿಜ್ಜಳನಲ್ಲಿ ಮಂತ್ರಿಯಾಗಿದ್ದ ಬಲದೇವನ ತಮ್ಮ ಸಿದ್ಧರಸ ಮಂತ್ರಿಯ ಮಗಳು ಎಂದು ಸಿಂಗಿರಾಜಪುರಾಣದಲ್ಲಿ ಹೇಳಿದೆ. ಬಸವಣ್ಣನವರ ಕಿರಿಯ ಧರ್ಮಪತ್ನಿಯಾಗಿ ಅವರ ಎಲ್ಲ ಧಾರ್ಮಿಕ ಸಾಮಾಜಿಕ ಕಾರ್ಯಗಳಲ್ಲಿ ಮಹತ್ತ್ವದ ಪಾತ್ರವಹಿಸಿ ಅವರ ಲೌಕಿಕ, ಆಧ್ಯಾತ್ಮಿಕ ಜಗತ್ತಿಗೆ ಬೆನ್ನೆಲುಬಾಗಿ ಅವರ ಜೀವನಕ್ಕೆ ಹೊಸ ಚೈತನ್ಯ ತಂದ ಇವಳನ್ನು ಬಸವಣ್ಣನವರು ನೀಲಾಂಬಿಕೆ, ನೀಲಲೋಚನೆ ಎಂದೂ ಕರೆದಿದ್ದಾರೆ. ಈಕೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪಡೆದ ಸಿದ್ಧಿ ಅತ್ಯದ್ಭುತವೂ ಅಸ್ವಾದೃಶವೂ ಆದುದು. ಈಕೆಗೆ ತನ್ನ ಸಿದ್ಧಿಯಲ್ಲಿ ಎಷ್ಟು ಪರಿಪೂರ್ಣವಾದ ವಿಶ್ವಾಸವಿತ್ತೆಂಬುದು ಇವಳ ಜೀವನದ ಕೊನೆಯ ಘಟನೆಯೊಂದರಿಂದ ವ್ಯಕ್ತವಾಗುತ್ತದೆ. ಕಲ್ಯಾಣದ ಅನ್ಯಾಯವನ್ನು ಕಂಡು ಬಸವಣ್ಣನವರು ಕೂಡಲ ಸಂಗಮದಲ್ಲಿ ಐಕ್ಯವಾಗಲು ಆ ಕ್ಷೇತ್ರದ ಕಡೆಗೆ ಹೊರಟಾಗ ತನ್ನ ಜೊತೆ ಹೊರಡುವಂತೆ ಹೆಂಡತಿಗೆ ಹೇಳಲು ಹಡಪದ ಅಪ್ಪಣ್ಣನನ್ನು ಕಳುಹಿಸಿದರು. ಆಗ ಆತನಿಗೆ ಹೇಳಿದ 'ಪರಿಣಾಮ ಮೂರ್ತಿ ಬಸವನ ಮೂರ್ತಿ ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇಕೆ ಅಪ್ಪಣ್ಣ? ಅಲ್ಲಿರ್ಪ ಸಂಗಯ್ಯ ಇಲ್ಲಿಲ್ಲವೆ? ಅಲ್ಲಿ ಇಲ್ಲಿ ಎಂಬ ಉಭಯಭಾವವೇಕೆ? ಅಂಗಯ್ಯಲ್ಲಿರುವ ಲಿಂಗ ತಂದೆ ಸರ್ವವ್ಯಾಪಿಯಾಗಿರಲು ಅಲ್ಲೆ ಇಲ್ಲೆ ಎಂಬ ಉಭಯಕ್ಕೆ ಎಡೆಯಿಲ್ಲ' ಎಂಬ ಮಾತುಗಳು ಈಕೆಯ ವ್ಯಕ್ತಿತ್ವಕ್ಕೆ, ಅನುಭಾವದೃಷ್ಟಿಗೆ ನಿದರ್ಶನಗಳಾಗಿವೆ. ಈಕೆಗೆ ಬಾಲಸಂಗಯ್ಯನೆಂಬ ಮಗ ಹುಟ್ಟಿ ಆತ ಬಹುಬೇಗನೆ ಮರಣಹೊಂದಿದನೆಂದು ತಿಳಿದುಬರುತ್ತದೆ.

ಈಕೆ ಸಂಗಯ್ಯ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾಳೆ. ಇದುವರೆಗೆ 125 ವಚನಗಳು ದೊರಕಿವೆ. ಇವಳ ವಚನಗಳಲ್ಲಿ ಶಿವಾನುಭವ, ತಾತ್ತ್ವಿಕ ದೃಷ್ಟಿ, ಭಕ್ತಿಭಾವ ಎದ್ದುಕಾಣುತ್ತವೆ. ಅಲ್ಲದೆ ಇವಳ ಮನಸ್ಸಿನ ಅನೇಕ ಭಾವನೆಗಳ ಹೋರಾಟ, ಶಾಂತಿ, ಸಾಮರಸ್ಯ ಮುಂತಾದುವುಗಳನ್ನು ಇವು ಸ್ಪಷ್ಟಪಡಿಸುತ್ತವೆ. ಈಕೆಯ ವಚನಗಳು ಆಧ್ಯಾತ್ಮಿಕ ಸಾಹಿತ್ಯದಲ್ಲಿ ಉನ್ನತ ಮಟ್ಟವನ್ನು ಪಡೆದಿವೆ.

ಈಕೆ ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತಿಳಿಯುತ್ತದೆ. ಇವಳ ಸ್ತುತಿರೂಪವಾಗಿ ನೀಲಮ್ಮನ ಸ್ತೋತ್ರ. ನೀಲಾಂಬಿಕಾ ಪಂಚವಿಂಶತಿ, ನೀಲಮ್ಮನ ತ್ರಿವಿಧಿ ಮೊದಲಾದ ಗ್ರಂಥಗಳು ರಚಿತವಾಗಿವೆ. (ಟಿ.ಜಿ.ಎಸ್.)

**ನುಗು :** ಕಪಿಲಾ ನದಿಯ ಒಂದು ಉಪನದಿ. ಭೃಗು ಎಂದೂ ಹೆಸರಿರುವ ಈ ನದಿ ಕೇರಳದ ವೈನಾಡಿನ ನೆಲ್ಲಂಬೂರು ಬೆಟ್ಟಗಳಲ್ಲಿ ಹುಟ್ಟಿ, ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಮೂಲಕ ಉತ್ತರಕ್ಕೆ ಹರಿದು ಹಂಪಾಪುರ ಎಂಬಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ಸಾಧಾರಣ ಕಾಡು ಪ್ರದೇಶದ ಮೂಲಕ ಹರಿಯುವ ಈ ನದಿಯ ಪಾತ್ರದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಚಿನ್ನದ ಹುಡಿ ದೊರಕುತ್ತದೆ. ಲಕ್ಷ್ಮಣಾಪುರ ಎಂಬಲ್ಲಿ ಈ ನದಿಗೆ ಒಂದು ಚಿಕ್ಕ ಅಣೆಕಟ್ಟು ಇದೆ. ಬೀರವಾಳು ಗ್ರಾಮದ ಹತ್ತಿರ ಮಧ್ಯದ ಪ್ರಮಾಣದ ಅಣೆಕಟ್ಟನ್ನು ನಿರ್ಮಿಸಲಾಗಿದೆ. 1959ರಲ್ಲಿ ಈ ಜಲಾಶಯದ ನಿರ್ಮಾಣ ಕಾರ್ಯ ಮುಗಿಯಿತು. ಈ ಜಲಾಶಯದ ಕಟ್ಟೆಯ ಎತ್ತರ 44 ಮೀ. ಗಳು ಮತ್ತು ಉದ್ದ 637 ಮೀ. ಸುಮಾರು 10,500 ಹೆಕ್ಟೇರ್ ಭೂಮಿ ಇದರಿಂದ ನೀರಾವರಿ ಒಳಪಟ್ಟಿದೆ. ಈ ನೀರಾವರಿ ಪ್ರದೇಶದ ಬಹು ಭಾಗ ನಂಜನಗೂಡು ತಾಲ್ಲೂಕಿಗೆ ಸೇರಿದೆ.

(ಎ.ಕೆ.)

**ನುಗ್ಗೇಹಳ್ಳಿ :** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಚನ್ನರಾಯಪಟ್ಟಣದ ಈಶಾನ್ಯಕ್ಕೆ 19 ಕಿಮೀ ದೂರದಲ್ಲಿದೆ.

ಸುಂದರವಾದ ಹೊಯ್ಸಳ ದೇವಾಲಯಗಳಿಗಾಗಿ ಈ ಊರು ಪ್ರಸಿದ್ಧವಾಗಿದೆ. ಈಗ ಲಕ್ಷ್ಮೀನರಸಿಂಹ ದೇವಾಲಯ ಎಂದು ಕರೆಯುವ ವಿಷ್ಣು ದೇವಾಲಯ (ರಚನೆ 1246) ತ್ರಿಕೂಟಾಚಲ, ಮಧ್ಯದ ಗರ್ಭಗುಡಿಯಲ್ಲಿ ಪ್ರಸನ್ನಕೇಶವ ವಿಗ್ರಹ ಇದೆ. ಉಳಿದ ಗರ್ಭಗುಡಿಗಳಲ್ಲಿ ಒಂದು ಕಡೆ ಲಕ್ಷ್ಮೀನರಸಿಂಹ ಮತ್ತು ಇನ್ನೊಂದು ಕಡೆ ವೇಣುಗೋಪಾಲ ಮೂರ್ತಿಗಳು ಇವೆ. ಮಧ್ಯದ ಗರ್ಭಗುಡಿಗೆ ಮಾತ್ರ ಹೊಯ್ಸಳರ ಕಾಲದ ಸುಂದರ ಗೋಪುರವಿದೆ. ಸೋಮನಾಥಪುರ, ಹೊಸಹೊಳಲು, ಅರಳಗುಪ್ಪೆ ಮುಂತಾದ ಕಡೆ ಇರುವ ಹೊಯ್ಸಳ ದೇವಾಲಯಗಳ ಮಾದರಿಯಲ್ಲಿಯೇ ಇರುವ ಈ ದೇವಾಲಯ ಜಗತಿಯ ಮೇಲೆ ಬಳಪದ ಕಲ್ಲಿನಿಂದ ನಿರ್ಮಿತವಾಗಿದ್ದು ಹೊರಗೋಡೆಗಳ ಬುಡದಲ್ಲಿ ಆನೆ, ಕುದುರೆ ಪೌರಾಣಿಕ ಕಥೆ, ಮಕರ ಮತ್ತು ಹಂಸಗಳ ಸಾಲುಗಳನ್ನೊಳಗೊಂಡ ಪಟ್ಟಿಕೆಗಳಿವೆ. ಪೌರಾಣಿಕ ಕಥೆಗಳಲ್ಲಿ ಭಾಗವತದ ಕಥೆಯನ್ನು ಮಾತ್ರ ಶಿಲ್ಪಿಸಿರುವುದೊಂದು

ಈ ದೇವಾಲಯದ ವೈಶಿಷ್ಟ್ಯ. ಗೋಡೆಗಳ ಮೇಲಿನ ಮೂರ್ತಿಗಳು ಬಹುಮಟ್ಟಿಗೆ ಹೊಸಹೊಳಲು ಮತ್ತು ಸೋಮನಾಥಪುರದ ದೇವಾಲಯಗಳ ಮೇಲಿನ ಮೂರ್ತಿಗಳಂತೆಯೇ ಇದ್ದು ಬಳ್ಳಿವಿ ತಾನಗಳ ಕೆಳಗೆ ಹಲವು ಭಂಗಿಗಳಲ್ಲಿ ನಿಂತಿರುವ ಬಗೆಬಗೆಯ ದೇವತಾ ಮೂರ್ತಿಗಳು. ಅವುಗಳ ಎತ್ತರಕ್ಕೆ ಸ್ವಲ್ಪ ಸ್ಥೂಲವೆನಿಸಿದರೂ ರಮಣೀಯವಾಗಿದ್ದು ಹೊಯ್ಸಳ ಶಿಲ್ಪದ ಮಾದರಿಯೆನಿಸಿದೆ. ಸುಂದರವಾದ ನವರಂಗದ ದ್ವಾರದ ಮೇಲೆ ವೀಣೆ ನುಡಿಸುತ್ತಿರುವ ಸರಸ್ವತಿಯ ಮೂರ್ತಿಯಿದೆ. ನವರಂಗದ ಒಳ ಚಾವಣಿಗಳಲ್ಲಿ ಆಳವಾದ ಭುವನೇಶ್ವರಿಗಳಿದ್ದು ಒಂದೊಂದೂ ಬೇರೆ ಬೇರೆ ಬಗೆಯ ಆಕೃತಿಗಳನ್ನು ಹೊಂದಿವೆ. ಈ ದೇವಾಲಯದ ಅನೇಕ ಮೂರ್ತಿಗಳನ್ನು ಕಡೆದಿರುವವನು ಪ್ರಸಿದ್ಧ ಶಿಲ್ಪಿ ಮಲ್ಲಿತಮ್ಮ. ಇವನು ದೇವಾಲಯದ ಉತ್ತರಭಾಗದಲ್ಲಿ ತನ್ನ ನೈಪುಣ್ಯವನ್ನು ತೋರಿದ್ದರೆ ದಕ್ಷಿಣಭಾಗದಲ್ಲಿ ಅಷ್ಟೇ ಉತ್ತಮವಾಗಿ ಕಂಡರಿಸಿರುವವನು ಅರಿಬಿರಿದ ರೂವಾರಿ ಗಿರಿವಜ್ರದಂಡ, ಬಿರಿದ ಪ್ರಸಾದಿ ಮಸ್ತಕಶೂಲ ಎಂಬ ಬಿರುದುಗಳಿದ್ದ ನಂದಿಯ ಬೈಚೋಜ. ಈ ದೇವಾಲಯದ ಪಾತಾಳಾಂಕಣ, ಹಜಾರ, ಹೊರನವರಂಗ ಮತ್ತು ಉಳಿದೆರಡು ಗರ್ಭಗುಡಿಗಳ ಗೋಪುರಗಳು ಇಲ್ಲಿ ಆಳುತ್ತಿದ್ದ ಪಾಳೆಯಗಾರರ ಕಾಲದಲ್ಲಿ ನಿರ್ಮಿತವಾದುವು.

ಇಲ್ಲಿರುವ ಸದಾಶಿವದೇವಾಲಯ 1249ರ ರಚನೆ. ಆದರೆ ಈಗ ಸುತ್ತಲೂ ಅನೇಕ ಈಚಿನ ಕಟ್ಟಡಗಳು ತುಂಬಿವೆ. ಮೂಲ ಹೊಯ್ಸಳ ದೇವಾಲಯದ ಹೊರಗೋಡೆಗಳ ಮೇಲೆ ಮೂರ್ತಿಶಿಲ್ಪವಿಲ್ಲದಿದ್ದರೂ ಇದರ ಗೋಪುರ ವಿಶಿಷ್ಟವಾಗಿದೆ. ನವರಂಗದ ಭುವನೇಶ್ವರಿಗಳು ಸುಂದರವಾಗಿವೆ.

13ನೆಯ ಶತಮಾನದಲ್ಲಿ ನುಗ್ಗೇಹಳ್ಳಿ ಒಂದು ಅಗ್ರಹಾರವಾಗಿತ್ತು. ಹೊಯ್ಸಳ ಸೋಮೇಶ್ವರನ ಕಾಲದಲ್ಲಿ 1246ರಲ್ಲಿ ಬೊಮ್ಮಣ್ಣ ದಂಡನಾಯಕ ಇದನ್ನು ಅಗ್ರಹಾರವಾಗಿ ಮಾಡಿದನೆಂದೂ ಊರಿನ ಮಧ್ಯದಲ್ಲಿ ವಿಷ್ಣುದೇವಾಲಯ ಮತ್ತು ಈಶಾನ್ಯಕ್ಕೆ ಶಿವದೇವಾಲಯವನ್ನು ಕಟ್ಟಿಸಿದನೆಂದೂ ಶಾಸನಗಳು ತಿಳಿಸುತ್ತವೆ. ಈತನ ಅಕ್ಕ ಲಕ್ಕವ್ವೆ ಮತ್ತು ಬಲುಮನುಷ್ಯ ಕಮ್ಮಟದ ಬಸವಣ್ಣ ಇವರಿಬ್ಬರೂ ಇಲ್ಲಿ ಛತ್ರಗಳನ್ನು ಕಟ್ಟಿಸಿ ದತ್ತಿ ಬಿಟ್ಟರು. ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಇದು ಒಂದು ನಾಡಿನ ರಾಜಧಾನಿಯಾಗಿದ್ದು ಕಟ್ಟಿಗೆ ಗುಂಡಪ್ಪನಾಯಕ ಆಳುತ್ತಿದ್ದಾಗ ಇಲ್ಲಿನ ದೇವಾಲಯಗಳ ಜೀರ್ಣೋದ್ಧಾರ ನಡೆಯಿತು. (ಎಂ.ಎಚ್.)

16ನೆಯ ಶತಮಾನದಲ್ಲಿ ನುಗ್ಗೇಹಳ್ಳಿ ಒಂದು ಪಾಳೆಯಪಟ್ಟಾಗಿತ್ತು. ಇದನ್ನು ಆಳಿದ ನುಗ್ಗೇಹಳ್ಳಿ ಪಾಳೆಯಗಾರರು ಪೂಡೂರ ವಂಶಕ್ಕೆ ಸೇರಿದವರು. ಒಂದು ಬಿರುದಿನ ಪ್ರಕಾರ ಇವರು ಹದಿಮೂರು ರಾಜರನ್ನು ಮೀರಿಸಿದವರು. ಸು. 1573ರ ಒಂದು ಶಾಸನದ ಪ್ರಕಾರ ಇವರ ವಂಶಾವಳಿ ವಿಜಯನಗರದ ಪ್ರೌಢದೇವರಾಯನ ಆಳಿಯ ತಿರುಮಲರಾಯನ ವರೆಗೂ ಹೋಗುತ್ತದೆ. ತಿರುಮಲರಾಯನಿಗೆ ರಾಯ ಒಡೆಯ ಎಂಬ ಮಗನಿದ್ದ. ಈತ ತಿರುವೇಂಗಳನಾಥ ದೇವರ ಪ್ರತಿಮೆಯನ್ನು ಪ್ರತಿಷ್ಠಿಸಿ ಕಟ್ಟಿಗೆಯಹಳ್ಳಿಯನ್ನು ದಾನವಾಗಿ ಕೊಟ್ಟ. ಕಬ್ಬಿಗರ ಕೈಪಿಡಿ ಎಂಬ ಗ್ರಂಥದ ಕರ್ತೃ ಲಿಂಗಮಂತ್ರಿ ಎಂಬುವನು ಈತನ ಮಂತ್ರಿಯಾಗಿದ್ದ. ರಾಯ ಒಡೆಯನ ಮಗ ಇಂದುಶೇಖರ, ಇವನ ಮಗ ಬಸವರಾಜಯ್ಯ ದೇವ ಮಹಾಅರಸು. 1531ರ ಒಂದು ಶಾಸನ ನುಗ್ಗೇಹಳ್ಳಿಯ ವಿರೂಪರಾಜ ಮಹಾ ಅರಸುವಿನ ಮಗನಾದ ಮಲರಾಜನು ಸೀಗೆಯ ಹನುಮಂತ ದೇವಾಲಯಕ್ಕೆ ಭೂಮಿಯನ್ನು ದಾನಮಾಡಿದನೆಂದು ತಿಳಿಸುತ್ತದೆ. ಮಲರಾಜನಿಗೆ ಭುವನೈಕ ವೀರ ಮತ್ತು ಗಜಬೇಟೆರಾಜ ಎಂಬ ಬಿರುದುಗಳಿದ್ದವು. ವಿರೂಪರಾಜ ಅರಸುವಿನ ಕಾಲದಲ್ಲಿ ರಾಮನಾಥಪುರದ ರಾಮೇಶ್ವರ ದೇವಾಲಯಕ್ಕೆ ಒಂದು ದಾನವನ್ನು ಕೊಡಲಾಯಿತು. ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದ ಉತ್ಸವವಿಗ್ರಹ ಮತ್ತು ಹಲವು ಇತರ ಲೋಹದ ಪ್ರತಿಮೆಗಳ ಹೆಸರುಪಟ್ಟಿಯ ಪ್ರಕಾರ ಈ ವಿಗ್ರಹಗಳನ್ನು ನುಗ್ಗೇಹಳ್ಳಿಯ ಪಾಳೆಯಗಾರನಾಗಿದ್ದ ಗೋಪಾಲನೆಂಬಾತ ಮಾಡಿಸಿದನೆಂದು ತಿಳಿಯುತ್ತದೆ. (ಎ.ವಿ.ವಿ.)

**ನುಲಿಯ ಚಂದಯ್ಯ:** ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಕಲ್ಯಾಣದಲ್ಲಿ ಹುಲ್ಲಿನ ಹಗ್ಗ ಮಾಡಿ ಮಾರುವ ಕಾಯಕ ಕೈಕೊಂಡು ಜೀವಿಸುತ್ತಿದ್ದ. ಈತ ಬಿಜಾಪುರ ಜಿಲ್ಲೆಯ ಶಿವಣಗಿ ಗ್ರಾಮದವನೆಂಬ ಹೇಳಿಕೆ ಇದೆ. ಇವನು ನಿಃಸ್ಪೃಹಿಯೂ ತತ್ತ್ವಾಚರಣೆಯಲ್ಲಿ ನಿಷ್ಠುರನೂ ಆಗಿದ್ದ. ಇಷ್ಟ ಲಿಂಗ ಹೆಚ್ಚೋ ಜಂಗಮ ಹೆಚ್ಚೋ ಎಂಬ ವೀರಶೈವ ಧರ್ಮದ ಸೂಕ್ಷ್ಮ ಚರ್ಚೆಯ ವಿಷಯದಲ್ಲಿ ಈತನ ಹೆಸರು ಪ್ರಸಿದ್ಧಿಪಡೆದಿದೆ. ಒಮ್ಮೆ ಸಜ್ಜೆಯಿಂದ ಈತನ ಇಷ್ಟಲಿಂಗ ಜಾರಿ ನೀರಿಗೆ ಬಿದ್ದಾಗ ಆ ಲಿಂಗ ತಾನಾಗಿಯೇ ಇವನನ್ನು ಅನುಸರಿಸಿ ಬರುವಂತೆ ಮಾಡಿದನೆಂಬ ಕಥೆಯಿದೆ.

ಈತ ಚಂಡೇಶ್ವರಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ 49 ವಚನಗಳು ದೊರೆತಿವೆ. ಕೈದಹಿಡಿದಾಡುವರೆಲ್ಲರೂ ಇಟುಯ ಬಲ್ಲರೆ ಸಾಧನೆಯ ಮಾಡುವ ಬಾಲರೆಲ್ಲರು ಕಾದಬಲ್ಲರೆ? ಅರ್ಥಿಗೆ ಮಾಡುವ ಕೃತ್ಯವಂತರೆಲ್ಲರು ಸದ್ಭಕ್ತರಪ್ಪರೆ? ಅದು ಚಂಡೇಶ್ವರಲಿಂಗಕ್ಕೆ ಸಲ್ಲದ ಮಾಟ - ಎಂಬ ವಚನ ಇವನ ಶೈಲಿಗೆ, ಅನುಭಾವಶ್ರೀಮಂತಿಕೆಗೆ ನಿದರ್ಶನವಾಗಿದೆ. ಈತನ ವಿಷಯವನ್ನು ಕುರಿತು 'ನುಲಿಯ ಚಂದಯ್ಯನ ಶರದ' ಎಂಬ ಗ್ರಂಥ ರಚಿತವಾಗಿದೆ. (ಎಸ್.ಎಸ್.ಎಂಎ.)

**ನೂರೊಂದ :** ಸು. 1740. ವೀರಶೈವ ಕವಿ. ಸೌಂದರ್ಯಕಾವ್ಯದ ಕರ್ತೃ. ಮೈಸೂರು ದೊರೆ ಇಮ್ಮಡಿ ಕೃಷ್ಣರಾಜನ (1734-1766) ಸಮಕಾಲೀನ. ಕಳಲೆ ನಂಜರಾಜನ ಆಶ್ರಿತನಾಗಿದ್ದಂತೆ ಕಾಣುತ್ತದೆ. ಈ ಕೃತಿ ಸಾಂಗತ್ಯದಲ್ಲಿದ್ದು 13 ಸಂಧಿ 1395 ಪದ್ಯಗಳನ್ನೊಳಗೊಂಡಿದೆ. ನಂಜುಂಡಲಿಂಗನ ಕೃಪೆಯಿಂದ ಕೃತಿಯನ್ನು ರಚಿಸಿರುವುದಾಗಿ ಕವಿ ತಿಳಿಸಿದ್ದಾನೆ. ಪ್ರತಿ ಸಂಧಿಯ ಕೊನೆಯಲ್ಲಿ ಪಶ್ಚಿಮರಂಗೇಶನ ಸ್ತುತಿ ಇದೆ.

ಸೌಂದರಕಾವ್ಯ ಐತಿಹಾಸಿಕ ಕಾವ್ಯಪರಂಪರೆಗೆ ಸಂಬಂಧಿಸಿದ ಕೃತಿ. ಇದರಲ್ಲಿ ಮೈಸೂರು ಅರಸು ಇಮ್ಮಡಿ ಕೃಷ್ಣರಾಜನ ದಳಪತಿಗಳಾದ ಕಳಲೆ ದೇವರಾಜ, ನಂಜರಾಜರು ಶ್ರೀರಂಗಪಟ್ಟಣವನ್ನು ಆಕ್ರಮಿಸಲು ತೊಡಗಿದ ಮೊಗಲರ ಬಾರಮಲ್ಲ ಮತ್ತು ಬಾದುರರೊಡನೆ ನಡೆಸಿದ ಹೋರಾಟ ಹಾಗೂ ಗಳಿಸಿದ ವಿಜಯದ ವಿವರಗಳಿವೆ. ಕಾವ್ಯದಲ್ಲಿ ಬರುವ ಅಂದಿನ ರಾಜರ ಬಗೆಗಿನ ಉಲ್ಲೇಖಗಳು, ಯುದ್ಧ ವರ್ಣನೆಗಳು, ಮಹಾನವಮಿ ಉತ್ಸವ, ಚಂಡಿಕಾಪೂಜೆ, ಮಲ್ಲರ ಕಾಳಗ, ವಿಜೇತರ ಸನ್ಮಾನಾದಿಗಳ ಪರಿಶೀಲನೆಯಿಂದ ಅಂದಿನ ಕಾಲದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಚಿತ್ರವನ್ನು ಕಂಡುಕೊಳ್ಳಬಹುದಾಗಿದೆ. ಈ ದೃಷ್ಟಿಯಿಂದ ಈ ಕೃತಿ ಅಂದಿನ ಕಾಲದಲ್ಲಿನ ರಾಜಕೀಯದ ಪರಿಸ್ಥಿತಿಯನ್ನು ಅಭ್ಯಸಿಸುವವರಿಗೆ ಮೂಲ ಸಾಮಗ್ರಿಯನ್ನೊದಗಿಸುವ ತವನಿಧಿಯಾಗಿದೆ. *

**ನೃತ್ಯ:** ಮಾನವನ ಕಲಾಭಿವ್ಯಕ್ತಿ ಮಾಧ್ಯಮಗಳಲ್ಲಿ ನೃತ್ಯ ಬಹು ಪ್ರಾಚೀನದ್ದಾಗಿರಬೇಕೆಂಬುದು ಇತಿಹಾಸಕಾರರ ಅಭಿಪ್ರಾಯ. ಆದರೆ ಈ ಕಲೆಯ ಪ್ರಾಚೀನತೆ ಹಾಗೂ ಹಿಂದೆ ಪ್ರಚಲಿತವಿದ್ದ ರೀತಿಗಳ ಸ್ವರೂಪವನ್ನು ನಿರ್ಧರಿಸಲು ಸಾಕಷ್ಟು ಆಧಾರಗಳು ದೊರಕುವುದಿಲ್ಲ. ಕರ್ನಾಟಕದಲ್ಲಿ ರಾಯಚೂರು, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳ ಕೆಲವು ಪ್ರಾಗೈತಿಹಾಸಿಕ ನೆಲೆಗಳ ಬಳಿಯ ಕೆಲವು ಬಂಡೆಗಳ ಮೇಲೆ, ಸಾಮೂಹಿಕ ನೃತ್ಯದಲ್ಲಿ ನಿರತರಾಗಿರುವ ವ್ಯಕ್ತಿಗಳ ಚಿತ್ರಗಳು ಇವೆ. ಆ ಕಾಲದ ಸ್ಥಳೀಯ ಜನಾಂಗಗಳಲ್ಲಿ ರೂಢಿತವಾಗಿದ್ದ ನೃತ್ಯ ಪದ್ಧತಿಗೆ ಇಂಥ ಚಿತ್ರಗಳೇ ಸಾಕ್ಷ್ಯ. ಆದರೆ ಈ ಚಿತ್ರಗಳ ಕಾಲವನ್ನು ತೀರ್ಮಾನಿಸುವುದು ಸುಲಭವಲ್ಲ. ಹೆಚ್ಚಿನವು ನವಶಿಲಾಯುಗ ಮತ್ತು ತಾಮ್ರಶಿಲಾಯುಗದ ಕಾಲದವಿರಬೇಕೆಂದು ಕೆಲವು ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಲಾಗಿದೆ. ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ (ನೋಡಿ) ಬಳಿ ಇರುವ ಇಂಥ ಒಂದು ಚಿತ್ರದಲ್ಲಿ ಹಲವು ವ್ಯಕ್ತಿಗಳು ಸಾಲಾಗಿ ಕೈಕೈ ಹಿಡಿದು ನರ್ತಿಸುತ್ತಿದ್ದಂತೆ ತೋರಿಸಲಾಗಿದೆ. ಆ ಚಿತ್ರದ ಸನ್ನಿವೇಶ, ರೂಪಣಾವಿಧಾನ - ಇವುಗಳನ್ನು ಅಭ್ಯಸಿಸಿದ ಪ್ರಾಗಿತಿಹಾಸಕಾರರೊಬ್ಬರು ಇದನನು ನವಶಿಲಾಯುಗದ

ಕಾಲದ್ದೆಂದು ನಿರ್ದೇಶಿಸಿರುವುದಲ್ಲದೆ, ಇದೇ ರೀತಿಯ ನೃತ್ಯ ಸಂಪ್ರದಾಯ ಈಗಲೂ ಆ ಪರಿಸರದ ಬೋಯ ಜನಾಂಗದಲ್ಲಿ ರೂಢಿತವಾಗಿರುವುದನ್ನು ಗುರುತಿಸಿದ್ದಾರೆ. ಬೋಯಗಳು ಸಂಕ್ರಾಂತಿ ಹಬ್ಬದ ಕಾಲದಲ್ಲಿ ಬೇಟೆಯಾಡುವ ಮೊದಲು ಬೇಟೆ ಫಲಯುತವಾಗಲು ಈ ರೀತಿಯ ನೃತ್ಯವನ್ನು ಮಾಡುತ್ತಾರೆ. ಈ ವಿಷಯ ಕರ್ನಾಟಕದಲ್ಲಿ ಪ್ರಾಗಿತಿಹಾಸ ಕಾಲದಲ್ಲಿ ರೂಢಿತವಾಗಿದ್ದ ಒಂದು ನೃತ್ಯ ಸಂಪ್ರದಾಯದ ಬಗ್ಗೆ ಕಿರುಕಿಂಡಿಯನ್ನು ಒದಗಿಸುವುದಲ್ಲದೆ, ಬಹುಶಃ ಅಂದಿನ ಬಹುತೇಕ ನೃತ್ಯಗಳು ಇತರ ಪ್ರಾಚೀನ ಜನಾಂಗಗಳಲ್ಲಿದ್ದಂತೆ ಇಲ್ಲಿಯೂ ಧಾರ್ಮಿಕ ಮಾಂತ್ರಿಕ ಸ್ವರೂಪದ್ದಾಗಿರಬಹುದಾದುದನ್ನು ಸೂಚಿಸುತ್ತದೆ.

ಇಂದು ಕರ್ನಾಟಕದಲ್ಲಿ ಪ್ರಚಲಿತವಾಗಿರುವ ನೃತ್ಯ ಸಂಪ್ರದಾಯಗಳಲ್ಲಿ ಜನಪದ, ಶಿಷ್ಟ ಎಂಬ ಎರಡು ಭಿನ್ನ ಸಂಪ್ರದಾಯಗಳನ್ನು ಗಮನಿಸಬಹುದು. ಇವುಗಳಲ್ಲಿ ಕಂಡುಬರುವ ತಂತ್ರ ಮತ್ತು ಅಭಿವ್ಯಕ್ತಿ ರೀತಿಗಳು ಈ ಸಂಪ್ರದಾಯಗಳ ವಿಶಿಷ್ಟತೆಯನ್ನು ಸೂಚಿಸುವುದಲ್ಲದೆ, ಜನಪದ ಸಂಪ್ರದಾಯ ಬಹುತೇಕ ಪರಂಪರಾತ್ಮಕವಾಗಿ ಉಳಿದು ಬಂದಿದ್ದು ಸರಳ ರೀತಿಯದಾಗಿದ್ದರೆ, ಶಿಷ್ಟ ಸಂಪ್ರದಾಯ ಶಾಸ್ತ್ರೀಯ ಚೌಕಟ್ಟಿನೊಳಗೆ ಬೆಳೆದು ಬಂದಿರುವುದನ್ನು ಗಮನಿಸಬಹುದು. ಅಲ್ಲದೆ ಜನಪದ ನೃತ್ಯ ಸಂಪ್ರದಾಯಗಳು ಬಹುಮಟ್ಟಿಗೆ ಸ್ಥಳೀಯವೇ ಆಗಿದ್ದರೆ, ಶಿಷ್ಟ ಸಂಪ್ರದಾಯ ಕರ್ನಾಟಕದ ಹೊರಗೂ ಪ್ರಚಲಿತವಾಗಿ ವ್ಯಾಪಕವಾಗಿದೆ. ಮೇಲೆ ಉದಾಹರಿಸಿದ ಪ್ರಾಗೈತಿಹಾಸಿಕ ಚಿತ್ರಗಳು ಮತ್ತು ಬೋಯಗಳ ನೃತ್ಯಗಳ ಮಾಹಿತಿ ಜನಪದ ಸಂಪ್ರದಾಯದ ಮೂಲವನ್ನೂ ಸೂಚಿಸುವಂತಿವೆ. ಈ ಜನಪದ ನೃತ್ಯಗಳು ಸಹ ಕಾಲಕಾಲಕ್ಕೆ ಪರಿಸರ ಪ್ರಭಾವದಿಂದ ಪ್ರಾಚೀನ ಕಾಲದಿಂದ ಇಲ್ಲಿನವರೆಗೆ ನಡೆದುಬಂದ ಗತಿಯಲ್ಲಿ ಬದಲಾವಣೆಗಳನ್ನು ಸ್ವಲ್ಪಮಟ್ಟಿಗೆ ಹೊಂದಿರಬಹುದಾದರೂ ತನ್ನ ಮೂಲ ಆಶಯಗಳನ್ನು ಹೆಚ್ಚುಕಡಿಮೆ ಉಳಿಸಿಕೊಂಡು ಬಂದಿರುವಂತೆ ತೋರುತ್ತದೆ. ಆದರೆ ಈ ಸಂಪ್ರದಾಯದ ಇತಿಹಾಸ ರಚನೆಗೆ ದೊರಕುವ ಸಾಮಗ್ರಿಗಳು ಬಹು ಅಲ್ಪ. ಕರ್ನಾಟಕದಲ್ಲಿ ಇಂದು ಸುಮಾರು 40ಕ್ಕೂ ಹೆಚ್ಚು ಜನಪದ ನೃತ್ಯರೂಪಗಳನ್ನು ಗುರುತಿಸಲಾಗಿದೆ (ನೋಡಿ: ಜನಪದ ನೃತ್ಯಗಳು).

ಕರ್ನಾಟಕದಲ್ಲಿ ಶಿಷ್ಟವೆನ್ನಬಹುದಾದ ನೃತ್ಯ ಪರಂಪರೆ ಎಂದು ಪ್ರಾರಂಭವಾಯಿತು; ಅದಕ್ಕೂ ಸ್ಥಳೀಯ ಜನಪದ ನೃತ್ಯಗಳಿಗೂ ಇರುವ ಅಥವಾ ಇದ್ದ ಸಂಬಂಧವೇನು ಎಂಬ ಅಂಶಗಳು ಅಸ್ಪಷ್ಟವಾಗಿವೆ. ಇಂದಿನ ಶಿಷ್ಟ ನೃತ್ಯ ಸಂಪ್ರದಾಯದ ಪ್ರಚಾರ ಮತ್ತು ಪರಿಸರವನ್ನು ಗಮನಿಸಿದರೆ ಇದು ನಾಗರಿಕ ವರ್ಗಗಳಲ್ಲಿ ವಿಶಿಷ್ಟವಾಗಿ ಕಂಡುಬರುವಂಥದಾಗಿರುವುದರಿಂದ ಬಹುಶಃ ನಾಗರಿಕ ವ್ಯವಸ್ಥೆ ಕರ್ನಾಟಕದಲ್ಲಿ ರೂಢಿಗೆ ಬಂದ ಕಾಲದಿಂದ ಇಂಥ ಸಂಪ್ರದಾಯವೂ ಬೆಳೆದಿರಬಹುದು ಎನ್ನಬಹುದಾದರೂ ಇದಕ್ಕೆ ಸ್ಪಷ್ಟ ಮಾಹಿತಿಗಳಿಲ್ಲ. ಕರ್ನಾಟಕದಲ್ಲಿ ಸನ್ನತಿ ಮೊದಲಾದೆಡೆ ದೊರಕುವ ಸಾತವಾಹನರ ಕಾಲದ ಶಿಲ್ಪ ಫಲಕಗಳಲ್ಲಿ ಕೆಲವೆಡೆ ನರ್ತಕರ ಶಿಲ್ಪಗಳು ಇವೆ. ಹಾಗೆಯೇ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮುಂದೆ ಎಲ್ಲೋರ, ಹಳೇಬೀಡು, ಬೇಲೂರು, ಹಂಪೆ ಮೊದಲಾದ ಹಲವಾರು ವಾಸ್ತುಶಿಲ್ಪ ಕಲಾಕೇಂದ್ರಗಳಲ್ಲಿ ನರ್ತಿಸುತ್ತಿರುವ ದೇವಶಿಲ್ಪಗಳೂ ಮಾನವಶಿಲ್ಪಗಳೂ ಇವೆ. ಇವುಗಳಲ್ಲಿ ನಿರೂಪಿತವಾಗಿರುವ ನೃತ್ಯಭಂಗಿಗಳು, ಪೋಷಕ ವಾದ್ಯಗಳು ಇವುಗಳನ್ನು ಪರಿಶೀಲಿಸಿ ಬೇರೆ ಬೇರೆ ಗ್ರಾಂಥಿಕ ಆಧಾರಗಳು ಮತ್ತು ಪ್ರಚಲಿತವಾಗಿರುವ ಶಿಷ್ಟ ನೃತ್ಯಸಂಪ್ರದಾಯದೊಡನೆ ಹೋಲಿಸಿ ಕರ್ನಾಟಕದ ಶಿಷ್ಟ ನೃತ್ಯಸಂಪ್ರದಾಯದ ಬೆಳವಣಿಗೆಯನ್ನು ಸ್ಥೂಲವಾಗಿ ನಿರ್ದೇಶಿಸಬಹುದಾದರೂ ಅಂಥ ಅಧ್ಯಯನ ಇನ್ನೂ ನಡೆದಿಲ್ಲ. ಆದರೆ ಈ ಶಿಲ್ಪಗಳ ನಿರೂಪಣೆಯ ಪರಿಸರ ಮತ್ತು ಅನೇಕ ಸಾಂದರ್ಭಿಕ ಅಂಶಗಳು ಇವುಗಳಲ್ಲಿ ಬಹುಮಟ್ಟಿಗೆ ಶಿಷ್ಟ ನೃತ್ಯ ಸಂಪ್ರದಾಯರ ನಿರೂಪಣೆ ಕಂಡುಬರುತ್ತದೆ ಎನ್ನಬಹುದು. ಬೇಲೂರಿನ ಕೇಶವ ದೇವಾಲಯದಲ್ಲಿರುವ ಮದನಿಕೆ ವಿಗ್ರಹಗಳಲ್ಲಿ ಕಂಡುಬರುವ ನೃತ್ಯ ಭಂಗಿಗಳು, ರಸಭಾವ ನಿರೂಪಣೆ, ಚೆಲುವು ಲೋಕಪ್ರಸಿದ್ಧವಾಗಿವೆ (ಪಟ್ಟದಕಲ್ಲು, ಹಂಪೆ ಮೊದಲಾದೆಡೆಗಳಲ್ಲಿ ಕೋಲಾಟ ಮೊದಲಾದ ಜನಪದ ನೃತ್ಯಗಳೂ ಅಪರೂಪವಾಗಿ ಶಿಲ್ಪಿತವಾಗಿವೆ).

ಶಿಷ್ಟ ನೃತ್ಯಸಂಪ್ರದಾಯದ ಬೆಳವಣಿಗೆಗೆ ರಾಜಾಸ್ಥಾನಗಳು, ಶ್ರೀಮಂತವರ್ಗ ಮತ್ತು ದೇವಾಲಯಗಳು ಆವಶ್ಯಕ ಪೋಷಣೆಯನ್ನು ಒದಗಿಸಿರುವುವು. ಕರ್ನಾಟಕದ ಅನೇಕ ಶಾಸನ ಮತ್ತು ಸಾಹಿತ್ಯ ಕೃತಿಗಳು ಈ ವಿಷಯದ ಬಗ್ಗೆಯೂ ಅಂದಿನ ನೃತ್ಯದ ಸ್ವರೂಪದ ಬಗ್ಗೆಯೂ ಹಲವು ಮಾಹಿತಿಗಳನ್ನು ಒದಗಿಸುತ್ತವೆ. ಕ್ರಿ.ಶ. 9ನೆಯ ಶತಮಾನದ ಪಟ್ಟದಕಲ್ಲಿನ ಒಂದು ಶಾಸನದಲ್ಲಿ ಭರತ ನಾಟ್ಯ ಶಾಸ್ತ್ರದಲ್ಲಿ ಸಂಪೂರ್ಣ ಪರಿಣತಿಯನ್ನು ಪಡೆದಿದ್ದ ಒಬ್ಬ ನಟನ ಪ್ರಶಂಸೆಯಿದೆ. ದೇವಾಲಯದಲ್ಲಿ ದೇವರಿಗೆ ಸಂಗೀತ ನೃತ್ಯಸೇವೆಗಳನ್ನು ಅರ್ಪಿಸುವುದು ರೂಢಿಯಲ್ಲಿದ್ದ ಮತ್ತು ಈ ಉದ್ದಿಶ್ಯಕ್ಕಾಗಿ ದೇವದಾಸಿಯರನ್ನು (ಪಾತ್ರ) ನಿಯಮಿಸುತ್ತಿದ್ದ ವಿಷಯವನ್ನು ಕರ್ನಾಟಕದ ನೂರಾರು ಶಾಸನಗಳು ತಿಳಿಸುತ್ತವೆ. ಪಟ್ಟದಕಲ್ಲಿನ 778-79ರ ಒಂದು ಶಾಸನ ಈ ಪದ್ಧತಿಯ ಬಗ್ಗೆ ಕರ್ನಾಟಕದಲ್ಲಿ ದೊರಕುವ ಪ್ರಾಚೀನ ಉಲ್ಲೇಖವೆಂದು ತೋರುತ್ತದೆ. ಜಿನ ಭವನದಲ್ಲಿ ನಡೆಯುವ ವಾರವಿಲಾಸಿನೀವಿರಚಿತ ನೃತ್ಯಗೀತವಾದ್ಯಗಳಿಗೆ ದಾನ ಕೊಟ್ಟ ಪ್ರಸ್ತಾಪ 802ರ ಶಾಸನವೊಂದರಲ್ಲಿದೆ. ದೇವಾಲಯಗಳಿಗೆ ಪೋಷಣೆ ಬೆಳೆದು ಅವುಗಳ ಸಂಪತ್ತು ವರ್ಧಿಸಿದಂತೆಲ್ಲಾ ಅವು ಶಿಷ್ಟ ನೃತ್ಯಕಲೆಯನ್ನು ಪೋಷಿಸುವ ಸ್ಥಾನಗಳಾಗಿಯೂ ಬೆಳೆದಂತೆ ತೋರುತ್ತದೆ. ಈ ವ್ಯವಸ್ಥೆ ಇತ್ತೀಚೆಗೆ 20ನೆಯ ಶತಮಾನದ ಹತ್ತಿರದವರೆಗೂ ರೂಢಿಯಲ್ಲಿತ್ತು.

ರಾಜರು, ಮಾಂಡಲಿಕರು ನೃತ್ಯ ಸಂಗೀತಾದಿ ಕಲಾಪೋಷಕರಾಗಿದ್ದುದು ಬಹುಶ್ರುತ ವಿಷಯ. ಅಲ್ಲದೆ ರಾಜಕುಲದ ಅನೇಕ ಸ್ತ್ರೀಯರೂ ನೃತ್ಯಕಲೆಯಲ್ಲಿ ಪರಿಣತಿಯನ್ನು ಪಡೆದವರಾಗಿರುತ್ತಿದ್ದರೆಂಬ ವಿಷಯ ಸಹ ಶಾಸನೋಲ್ಲೇಖಗಳಿಂದ ತಿಳಿಯುತ್ತದೆ. ಉದಾಹರಣೆಗೆ ವಿಷ್ಣುವರ್ಧನನ ರಾಣಿ ಶಾಂತಲದೇವಿ ನೃತ್ಯವಿದ್ಯಾಶಾರದೆಯಾಗಿದ್ದಳೆಂಬುದನ್ನು ಅನೇಕ ಶಾಸನಗಳು ಬಹುವಾಗಿ ಹೊಗಳಿವೆ. ಸುಮಾರು 1174ರಲ್ಲಿ ಕಳಚುರಿ ಸೋವಿದೇವನ ರಾಣಿಯಾದ ಸೋವಲದೇವಿ ತನ್ನ ದೇಶದ ಹಾಗೂ ಪರದೇಶದ ಲಲಿತಕಲಾ ನಿಪುಣರಾದ ರಸಿಕರ ಮುಂದೆ ತನ್ನ ನೃತ್ಯಪಾಂಡಿತ್ಯವನ್ನು ಪ್ರದರ್ಶಿಸುತ್ತಿದ್ದಳಂತೆ. ಹಾಗೆಯೇ ತ್ರಿಭುವನಮಲ್ಲ ಮಲ್ಲಿದೇವ ಚೋಳ ಮಹಾರಾಜನ ರಾಣಿಯಾದ ಲಕ್ಷ್ಮಾದೇವಿಯು ಸಾಹಿತ್ಯ, ಹಾಡುಗಾರಿಕೆ ಹಾಗೂ ವಾದ್ಯಸಂಗೀತ, ನೃತ್ಯಕಲೆಗಳಲ್ಲಿ ಪ್ರವೀಣಳಾಗಿದ್ದಳಂತೆ.

ರಾಜಸ್ಥಾನಗಳಲ್ಲಿ ನೃತ್ಯದ ಕಲಿಕೆ ಮತ್ತು ಪ್ರಸಾರಕ್ಕೆ ವಿಶೇಷ ವ್ಯವಸ್ಥೆ ಇದ್ದಿರಬೇಕು. ಸು. 1520ರಲ್ಲಿ ರಚಿತವಾದ ಸಂಗೀತ ಸರ್ವೋದಯ ಎಂಬ ಗ್ರಂಥದ ಕರ್ತೃ ಬಂಧಂ ಲಕ್ಷ್ಮೀನಾರಾಯಣನು ಕೃಷ್ಣದೇವರಾಯನಿಗೆ ಮತ್ತು ಅವನ ರಾಣಿವಾಸಕ್ಕೆ ಸಂಗೀತ ಮತ್ತು ನರ್ತನಾಚಾರ್ಯನಾಗಿದ್ದನೆಂದು ಹೇಳಲಾಗಿದೆ. ಕೃಷ್ಣದೇವರಾಯನ ಅರಮನೆಗೆ ಸಂಬಂಧಿಸಿದ ನೃತ್ಯ ಸಭಾಗೃಹವೊಂದನ್ನು ಪಯೆಸ್ ಎಂಬ ಪೋರ್ಚುಗೀಸನು ವರ್ಣಿಸಿ, ಅಲ್ಲಿನ ಗೋಡೆಗಳಲ್ಲೂ ಕಂಬಗಳಲ್ಲೂ ನೃತ್ಯಭಂಗಿಗಳನ್ನು ಬರೆದಿರುವುದನ್ನು ತಿಳಿಸಿದ್ದಾನೆ. ಈ ಸಭಾಗೃಹವೂ ವಿಸ್ತಾರವಾಗಿತ್ತು. ರಾಣಿಯರು ನರ್ತನವನ್ನು ಕಲಿಯುವುದಕ್ಕಾಗಿ ಅಲ್ಲಿಗೆ ಬರುತ್ತಿದ್ದರು. ನೃತ್ಯಕಲಾವಿದೆಯರು ತಮ್ಮ ಅಭ್ಯಾಸ ನಡೆಸಲು ಎಲ್ಲ ರೀತಿಯ ಅನುಕೂಲ ಅಲ್ಲಿ ಇತ್ತು. ಗೋಡೆ, ಕಂಬದ ಮೇಲೆ ಅನೇಕ ಭಂಗಿಗಳಿಂದ ಕೂಡಿದ ಮೂರ್ತಿಚಿತ್ರಗಳನ್ನು ಬಿಡಿಸಲಾಗಿತ್ತು. ನೃತ್ಯಕಲಾವಿದೆಯರು ತಮ್ಮ ನೃತ್ಯಕಲೆಯನ್ನು ತಿದ್ದಿಕೊಳ್ಳುವುದಕ್ಕೆ ಇವು ಸಹಾಯಕವಾಗಿದ್ದುವು. ಈ ಸಭಾಗೃಹದ ಒಂದು ಕೊನೆಯಲ್ಲಿ ಸ್ತ್ರೀಯರು ಮೈಚಾಚಿ ಕೈಕಾಲುಗಳನ್ನು ಸಡಿಲಿಸಿಕೊಳ್ಳುವ ವಿಧಾನಗಳು ಬರೆದಿರುವ ಚಿತ್ರಗಳ ಸಹಾಯದಿಂದ, ಕಲಾವಿದೆಯರು ತಮ್ಮ ನೃತ್ಯಗಳನ್ನು ಲಾಲಿತ್ಯಪೂರ್ಣವಾಗಿ ಮಾಡುವ ಬಗೆ ತಿಳಿದಿದ್ದರು ಎಂದೂ ಪಯೆಸ್ ವರ್ಣಿಸಿದ್ದಾನೆ. ಆದರೆ ದುರ್ದೈವವಶಾತ್ ಆ ಸಭಾಗೃಹ ಇಂದು ಮರೆಯಾಗಿದೆ. ಅಲ್ಲಿ ಭರತನಾಟ್ಯ ಶಾಸ್ತ್ರದ 108 ಕರಣಗಳು ಚಿತ್ರಿಸಲ್ಪಟ್ಟಿದ್ದ ವಿಷಯವನ್ನು ಖಂಡಿತವಾಗಿ ಊಹಿಸಬಹುದು.

(ಬಿ.ಡಿ.)

ಅನೇಕ ಕನ್ನಡ ಕಾವ್ಯಗಳಲ್ಲಿ ಕಂಡುಬರುವ ನೃತ್ಯಪ್ರಸಂಗಗಳ ವರ್ಣನೆಗಳು ಸಹ ಗಮನಾರ್ಹವಾದುವು. ಪಂಪ, ಹರಿಹರ, ರತ್ನಾಕರವರ್ಣಿ ಮುಂತಾದ ಕವಿಗಳು ನೃತ್ಯವನ್ನು ಸವಿಸ್ತಾರವಾಗಿ ರಸೋಪೇತವಾಗಿ ವರ್ಣಿಸಿರುವುದುಂಟು. ಪಂಪನ ಆದಿಪುರಾಣದಲ್ಲಿ ಬರುವ ನೀಲಾಂಜನೆಯ ನೃತ್ಯಪ್ರಸಂಗ ಒಳ್ಳೆಯ ಉದಾಹರಣೆ. ಮಧುರವಾದ ಗೀತವಾದ್ಯಗಳ ಹಿನ್ನೆಲೆಯಲ್ಲಿ ಗಣಿಕಾ ತಿಲಕ ಎಂಬ ಖ್ಯಾತಿಪಡೆದಿದ್ದ ನೀಲಾಂಜನೆಯು ಕರ್ವಿನಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಂಕಿತ್ತೆನಿಸುವ ಹಾಗೆ ರಂಗಪ್ರವೇಶ ಮಾಡುತ್ತಾಳೆ. ರಂಗ ಪ್ರವೇಶದ ಜೊತೆ ಜೊತೆಗೆ ಆಕೆ ಜನಾಂತರಂಗವನ್ನೂ ಪ್ರವೇಶಿಸುತ್ತಾಳೆ. ಅನುಪಮ ಸುಂದರಿಯಾಗಿದ್ದ ನೀಲಾಂಜನೆ ಜವನಿಕೆಯ ಮರೆಯಲ್ಲಿ ಮುಗಿಲ ಮರೆಯ ವಿದ್ಯುಲ್ಲತೆಯಂತೆ ಗೋಚರಿಸುತ್ತಾಳೆ. ಜವನಿಕೆಯನ್ನು ಸರಿಸಿ ರಸಿಕ ವೃಂದದ ಮುಂದೆ ಬಂದು ಪುಷ್ಪಾಂಜಲಿಯನ್ನು ಸೂಸಿ ನರ್ತಿಸತೊಡಗಿದ ನೀಲಾಂಜನೆಯ ನೃತ್ಯವೈಖರಿ ವಿನೂತನವಾದದ್ದು. ಅದನ್ನು ಪಂಪ ಹೀಗೆ ವಿವರಿಸುತ್ತಾನೆ; ತಾಳದ ಲಯಮಂ ನಿಟು ನೀಳಾಳಕಮಾರದ ಪೊದಳ್ದಿ ಮುತ್ತೆಂಬಿವು ಮುಂಮೋಳಿಸಿ ಕಯ್ಕೊಂಡುವು ಲುಳಿತಾಳಕಿ ಕಯ್ಕೊಂಡಳೆಂಬುದೊಂದಚ್ಚರಿಯೋ, ನೀಲಾಂಜನೆಯು ಲಯಬದ್ಧವಾಗಿ ನರ್ತಿಸುವುದಿರಲಿ, ಆಕೆ ಉಟ್ಟ ಸೀರೆಯ ನಿರಿಗೆ, ತೊಟ್ಟ ಹೊಸ ಹಾರದ ಮುತ್ತುಗಳು ಹಾಗೂ ಆಕೆಯ ನೀಲವರ್ಣದಸುಂದರ ಮುಂಗುರುಳು ಅವಳಿಗಿಂತ ಮುನ್ನವೇ ನರ್ತಿಸಿದುವು. ಎನ್ನುವಲ್ಲಿ ಅಪೂರ್ವ ಸೊಗಸಿದೆ; ನರ್ತನದ ಪರಿಪೂರ್ಣತೆಯನ್ನು ಸೂಚಿಸುವ ಅಂಶವೂ ಇಲ್ಲಿ ವ್ಯಕ್ತವಾಗುತ್ತದೆ. ರಸಭಾವಾಭಿನಯಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆನೆ ಪೊಸಿಯಿಸಿದಳಾಕೆ ನಾಟ್ಯಾಂಗಮಂ, ಎಂದು ಆಕೆ ನರ್ತಿಸುತ್ತಿದ್ದಂತೆಯೇ ನರ್ತನದ ಎಲ್ಲ ಅಂಶಗಳೂ ಹೊಸ ಜೀವ ಪಡೆದುಕೊಂಡವೆಂಬುದು ಪಂಪನ ಮಾತು. ಭಾರತಿಸಾತ್ವತಿ ಕೈಶಿಕಿ ಆರಭಟಿ ಎಂಬ ವೃತ್ತಿಯಲ್ಲಿ ರಸವನ್ನು ಸಂಚಾರಿಸುವಲ್ಲಿ, ಭಾವವನ್ನು ವಿಸ್ತಾರಿಸುವಲ್ಲಿ ನೀಲಾಂಜನೆಯದೇ ಹೊಸ ಬೆಡಗು ಎನ್ನುವಂತಿತ್ತು. ಹೀಗೆ ನರ್ತಿಸುತ್ತಿದ್ದಾಗ ನಡುವೆ ಕುಡುಪನ್ನು ಬಾರಿಸುತ್ತಿದ್ದ ವಾದ್ಯಗಾರ ತಡವರಿಸಿದ. ಆಗ ನೀಲಾಂಜನೆಯು ತನ್ನ ಹುಬ್ಬಿನ ಸನ್ನೆಯಿಂದ ಆತನಿಗೆ ಕುಡುಪನ್ನು ಸರಿಯಾಗಿ ಬಾರಿಸುವ ನಿರ್ದೇಶನ ನೀಡಿದಳಂತೆ. ಆ ವರ್ಣನೆ ಹೀಗಿದೆ: ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವಿದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್ - ಈ ಮಾತುಗಳು ನೀಲಾಂಜನೆಯ ಕುಡಿಹುಬ್ಬಿನ ಲಾಸ್ಯವನ್ನೂ ಆಕೆಗೆ ವಾದ್ಯಗಳ ಲಯದ ಬಗ್ಗೆ ಇದ್ದ ನಿಖರ ಹಾಗೂ ಸ್ಪಷ್ಟ ಜ್ಞಾನವನ್ನೂ ಮನಗಾಣಿಸುತ್ತವೆ. ಆಕೆಯ ತುಂಬುಯೌವನದ ಮೈಮಾಟ, ನಗುಮುಖ, ಬಟ್ಟಲುಗಣ್ಗಳ ಕುಡಿಮಿಂಚಿನ ನೋಟ, ನರ್ತಿಸುವಾಗ ಆಕೆ ಹಾರವನ್ನು ಅಳವಡಿಸುವ, ವಸ್ತ್ರಗಳನ್ನು ಸರಿಪಡಿಸಿ ಕೊಳ್ಳುವ ಬಗೆ, ಒನಪು ಒಯ್ಯಾರ ನೋಡುಗರನ್ನು ಹುಚ್ಚೆಬ್ಬಿಸುವಷ್ಟರ ಮಟ್ಟಿಗೆ ಶೃಂಗಾರಪೂರಿತವಾಗಿರುತ್ತದೆ. ಭರತಾಗಮದಲ್ಲಿ ಹೇಳುವ ಮೂವತ್ತೆರಡು ಅಂಗಹಾರವನ್ನೂ ನೂರೆಂಟು ಕರಣಗಳನ್ನೂ ಚಾಚೂ ತಪ್ಪದೆ ಅನುಸರಿಸಿ ನೀಲಾಂಜನೆ ನರ್ತಿಸಿದ್ದಳಂತೆ.

ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಕೂಡ ನರ್ತನದ ಬಗ್ಗೆ ಹೆಚ್ಚಿನ ಮಾಹಿತಿ ದೊರಕುತ್ತದೆ. ಈ ಕಾವ್ಯದಲ್ಲಿ ಬರುವ ಪೂರ್ವನಾಟಕ ಸಂಧಿ ಉತ್ತರನಾಟಕ ಸಂಧಿ ಎಂಬ ಭಾಗಗಳಲ್ಲಿ ನಾಟ್ಯಶಾಲೆಯ ಅಲಂಕಾರಕ್ಕೆ ಸಂಬಂಧಿಸಿದಂತೆ, ನಾಟ್ಯಾಭಿನಯಕ್ಕೆ ಸಂಬಂಧಿಸಿದಂತೆ ಅನೇಕ ಸಂಗತಿಗಳು ಉಲ್ಲೇಖಗೊಂಡಿವೆ. ಭರತನ ನಾಟ್ಯಶಾಲೆಯನ್ನು ಪನ್ನೀರು, ಕುಂಕುಮ, ಸಾದು, ಕಸ್ತೂರಿಯಲ್ಲಿ ಸಾರಣೆಗೊಳಿಸಿ, ಪುಷ್ಪಮಾಲೆಗಳನ್ನೂ ಮುತ್ತಿನ ಕುಚ್ಚುಗಳನ್ನೂ ತೂಗುಬಿಟ್ಟು, ರನ್ನಗನ್ನಡಿಗಳನ್ನು ಅಳವಡಿಸಿ, ಕಂಬಗಳಲ್ಲಿ, ಲೋವೆಗಳಲ್ಲಿ ಗಿಳಿಯನೋದಿಸುವಂತೆ, ವೀಣೆಯ ನುಡಿಸುವಂತೆ, ಒಲೆದು ಪಾತ್ರವನಾಡುವಂತೆ ಕೆತ್ತಿದ ಸುಂದರ ಲಲನಾಮಣಿಯರ ಪ್ರತಿಮೆಗಳನ್ನೂ ಸುರರ ಖೇಚರರ ಪೆಣ್ಗಂಡು ರೂಪವನ್ನು ಅಲ್ಲಲ್ಲಿ ಬರೆದು ಅಲಂಕರಿಸಲಾಗಿತ್ತೆಂದು ವರ್ಣಿಸಿದೆ. ನೃತ್ಯದ ಪ್ರಾರಂಭಕ್ಕೆ ಮೊದಲು ಭರತೇಶನ ಮುಂದೆ ನಾಟ್ಯವಿದ್ಯಾಧರನೆಂಬ ನಟ್ಟುವನೊಬ್ಬ ಬಂದು ತಾನು ಎರಡು ಪಾತ್ರಗಳನ್ನು ತಿದ್ದಿರುವುದಾಗಿ ಅವರ ನರ್ತನವನ್ನು ಚಿತ್ತೈಸಬೇಕೆಂದು ಬಿನ್ನವಿಸಿಕೊಂಡು ರಂಗದ ಹಿಂದೆ ಹೋಗಿ ನರ್ತಕಿಯರಿಗೆ ನರ್ತನ ಪ್ರಾರಂಭಿಸಲು ಸೂಚನೆ ನೀಡುತ್ತಾನೆ. ಆಗ ನೇತ್ರ ಮೋಹಿನಿ, ಚಿತ್ತಮೋಹಿನಿ ಎಂಬ ಇಬ್ಬರು ನರ್ತಕಿಯರು ರಂಗಪ್ರವೇಶಿಸಿ ಪುಷ್ಪಾಂಜಲಿಯನ್ನು ಸೂಸಿ ಮದ್ದಳೆ ತಾಳಮೇಳ ಶ್ರುತಿಯ ಹಿನ್ನೆಲೆಯಲ್ಲಿ ನರ್ತಿಸುತ್ತಾರೆ. ಪಚ್ಚೆಯ ಚಲ್ಲಣ ಪಂಚವರ್ಣದ ಕಾಸೆ ಬೆಚ್ಚಮುತ್ತಿನ ಮೊಲೆಗಟ್ಟು ಅಚ್ಚಜವ್ವನೆಯರಿದ್ದರು ನೋಡುವರ ಮನ ಹುಚ್ಚೆದ್ದು ಧರೆಗೆ ಬೀಳ್ವಂತೆ - ಎಂಬ ಮಾತುಗಳಲ್ಲಿ ನರ್ತಕಿಯರ ಉಡುಪು, ಅವರ ಅನುಪಮಸೌಂದರ್ಯ ನಿರೂಪಿತವಾಗಿದೆ.

ನೇತ್ರಮೋಹಿನಿಯು ತಾಳಲಯಗಳನ್ನು ಅರಿತು ಹೀಗೆ ನರ್ತಿಸುತ್ತಾಳೆ: ನೂರೆಂಟು ಕರಣ ನೂರೆಂಟು ನಿಲವು ಹದಿಮೂರು ಶಿರೋಭೇದವರಿದು ಬೇರೆ ಬೇರೆರುವತ್ತನಾಲ್ಕು ಭೇದದ ಹಸ್ತದೋರಿ ನರ್ತಿಸಿದಳಾ ಗಣಿಕೆ ಚಾರಿ ಮೂವತ್ತೆರಡನುಚರಿಸಲಂಗಹಾರ ಮೂವತ್ತೆರಡನೆಯ ಸೇರಿ ಮೂವತ್ತಾರು ನೋಟ ರಂಜಿಸೆ ನಾಟ್ಯಸಾರಗಾಣಿಸಿ ನಟಿಸಿದಳು. ಅನಂತರ ಚಿತ್ತಮೋಹಿನಿ ಎಂಬುವಳು ರಂಗ ಪ್ರವೇಶಿಸಿ ನರ್ತಿಸುತ್ತಾಳೆ. ಆ ವರ್ಣನೆ ಹೀಗಿದೆ; ಮರ್ದಲತಾಳಾನುಗತಿಯೊಳು ನಡೆದಳಾ ಪೆರ್ದೆರೆಯಂತೆ ಮುಂದೊತ್ತಿ ಸಾರ್ದಳು ಹಿಂದಕೆ ಕಡಲಭರತ ವೊಳಸಾರ್ದಿಳಿವಂತೆ ಜೋಕೆಯೊಳು ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ ಜಲಧಿಯ ಸುಳಿಯೊಯೆಂಬಂತೆ ಬಲಕೆಡಕೊಲೆದು ಹರಿವಳೆಳೆವಿಸಿಲಲ್ಲಿಯೆಳೆ ನಾಗ ಹರಿವಂತೆ ಮುರಿದು ನಟಿಸಿ ರಂಗದೊಳು ಮೇಲುಪ್ಪರಿಸುವಳಾಗಪುಟವೇರಿ ಪೊಯ್ಚೆಂಡಿನಂತೆ ಬೊಗರಿಯಂತೊಲೆದಾಡುವಳು ನಿಲುವಳು ಹೊನ್ನಬೊಗರಿವೊಲೆಯ ಮೋಹನಾಂಗಿ ಮೋರೆಯೊಲೆದು ನೋಡಿ ನೃಪಸುತರಿಗೆ ಹುಬ್ಬು ಹಾರಿಸುವಳು ನಸುನಗುತ.

*

ಈ ರೀತಿಯ ವರ್ಣನೆಗಳಿಂದ ಪ್ರಾಚೀನ ಕಾಲದಲ್ಲಿದ್ದ ಶಿಷ್ಟ ನೃತ್ಯ ಸಂಪ್ರದಾಯದ ಸ್ವರೂಪವನ್ನು ತಿಳಿಯಬಹುದಾಗಿದೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಕಾವ್ಯಗಳಲ್ಲಿ ಬರುವ ವರ್ಣನೆಗಳಲ್ಲಿ ಭರತನ ನಾಟ್ಯಶಾಸ್ತ್ರದ, ಪಾರಿಭಾಷಿಕ ಪದಗಳು ಬಹುವಾಗಿ ಬಳಕೆಗೊಂಡಿರುವುದು. ಅಂದಿನ ನೃತ್ಯಕಲೆ ನಾಟ್ಯಧರ್ಮ ಎಂದೆನಿಸಲ್ಪಟ್ಟು ಆಂಗಿಕಾಭಿನಯದೊಳಗೂಡಿ ಮೈ ಕೈ ಚಲನೆಗಳಿಗೆ ಅರ್ಥಭಾವಗಳಿದ್ದು ಸಂಗೀತಮಯವಾಗಿತ್ತು. ಅಂದಿನ ಅನೇಕ ಗ್ರಂಥಗಳಲ್ಲಿ ಸೂಚಿಸಿದ್ದ ನೃತ್ಯರೂಪಗಳು ಇಂದಿನ ಭರತನಾಟ್ಯ ಪ್ರದರ್ಶನದ ಕಾರ್ಯಕ್ರಮಕ್ಕೆ ತಳಹದಿಯನ್ನು ಹಾಕಿದಂತಿದೆ.

ವಿಜಯನಗರದ ಅವನತಿಯ ಅನಂತರ ಶಾಸ್ತ್ರೀಯ ನೃತ್ಯಕಲೆ ತಮಿಳುನಾಡು ಮತ್ತಿತರ ಭಾಗಗಳಲ್ಲಿ ವಿಶೇಷವಾಗಿ ಬೆಳೆಯಿತಾದರೂ ಕರ್ನಾಟಕದ ಕಾಣಿಕೆ ಸಹ ಅದಕ್ಕಿದೆ. 17ನೆಯ ಶತಮಾನದಲ್ಲಿ ಸಿಂಹಭೂಪಾಲ ಎಂಬ ಅರಸ ಲಾಸ್ಯರಂಜನ ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದು ನೃತ್ಯಕಲೆಯ ಶಾಸ್ತ್ರ, ವಿನಿಯೋಗ, ಆಚರಣೆ, ಕಟ್ಟುನಿಟ್ಟುಗಳನ್ನೆಲ್ಲ ಕೂಲಂಕಷವಾಗಿ ತಿಳಿಸಿರುವನು. 1908ರಲ್ಲಿ ವೆಂಕಟಸುಂದರಸಾನಿ ಎಂಬುವರು ರಸಿಕಜನಮನೋಲ್ಲಾಸಿನಿ ಸಾರಸಂಗ್ರಹ ಭರತಶಾಸ್ತ್ರಂ ಎಂಬ ಸ್ವಾರಸ್ಯವಾದ ವಿಷಯವನ್ನು ಬರೆದುದನ್ನು ತಿಳಿಯುತ್ತೇವೆ. ಈ ರಚನೆಯ ಮೂರನೆಯ ಭಾಗವೆಲ್ಲ ಸಂಗೀತ-ನೃತ್ಯಕಲೆಗೆ ಮೀಸಲಾಗಿದೆ.

ಮೈಸೂರಿನ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ನೃತ್ಯಕಲೆಗೆ ಒಳ್ಳೆಯ ಪ್ರೋತ್ಸಾಹ ದೊರಕಿತು. 19ನೆಯ ಶತಮಾನದ ಮಧ್ಯದಲ್ಲಿ ನೃತ್ಯಕಲೆಯಲ್ಲಿ ತಮಿಳುನಾಡಿನಲ್ಲಿ ಹೆಸರುವಾಸಿಯಾದ ಪಂದನಲ್ಲೂರು ಸಹೋದರರಲ್ಲಿ ಹಿರಿಯವರರಾದ ಚಿನ್ನಯ್ಯಪಿಳ್ಳೆಯವರನ್ನು ಕೃಷ್ಣರಾಜ ಒಡೆಯರವರು ತಮ್ಮ ಆಸ್ಥಾನಕ್ಕೆ ಬರಮಾಡಿಸಿ, ಅವರಿಂದ ಅನೇಕ ಗುರುಗಳಿಗೂ ಶಿಷ್ಯಂದಿರಿಗೂ ನೃತ್ಯಾಭ್ಯಾಸ ಮಾಡಿಸಿದರು. 1860 ರಿಂದ 1881ರ ವರೆಗೆ ಕಲೆಗೆ ಪ್ರೋತ್ಸಾಹ ಕಡಿಮೆಯಾದರೂ ಚಾಮರಾಜ ಒಡೆಯರು ಪಟ್ಟಕ್ಕೆ ಬಂದಮೇಲೆ ಪುನಃ ಸಂಗೀತ ನೃತ್ಯಕಲೆಗೆ

ರಾಜದರಬಾರುಗಳಲ್ಲಿ ಒಳ್ಳೆಯ ಸ್ಥಾನ ದೊರಕಿತು. ಕಳೆದ ಶತಮಾನದಲ್ಲಿ ಮೈಸೂರು ರಾಜ್ಯದಲ್ಲಿ ಭರತನಾಟ್ಯ ಸಂಪ್ರದಾಯ ಅಕಳಂಕವಾಗಿತ್ತು. ಮೈಸೂರು, ಬೆಂಗಳೂರು, ಮುಳಬಾಗಿಲು, ಕುಡೂರು ಟಿ.ನರಸೀಪುರ ಮುಂತಾದ ಸ್ಥಳಗಳಲ್ಲಿ ಭರತನಾಟ್ಯವಿದ್ಯೆಯಲ್ಲಿ ಹೆಸರುವಾಸಿಯಾದ ದೇವದಾಸಿ ಪಂಗಡದವರು ದೇವಸ್ಥಾನದ ಆಶ್ರಯ ಪಡೆದು ಜೀವಿಸುತ್ತಿದ್ದರು. ಈ ದೇವದಾಸಿ ಪಂಗಡದವರಿಗೆ ಸ್ಥಳೀಯ ಶ್ರೀಮಂತರಿಂದಲೊ ಅಥ‌ವಾ ಜಮೀನುದಾರರಿಂದಲೊ ಅಥವಾ ಕಲೋಪಾಸಕರಿಂದಲೋ ಪ್ರೋತ್ಸಾಹ ಸಿಗುತ್ತಿತ್ತು. ಅವರಿಗೆ ಭರತ ನಾಟ್ಯಕಲೆಯ ಸಾಂಪ್ರದಾಯಿಕ ಕಲಾರಾಧನೆಗೆ ತಕ್ಕ ಶಾಸ್ತ್ರೋಕ್ತ ವಿದ್ಯಾಭ್ಯಾಸವೇ ಅಲ್ಲದೆ ಸಂಗೀತ ಕಲೆಯ ಪಾಠವೂ ಆಗುತ್ತಿದ್ದ ಕಾರಣ, ಈ ಕಲಾವಿದರು ಪ್ರಜ್ಞಾಶಾಲಿ ಪಂಗಡಕ್ಕೆ ಸೇರಿದವರೆಂದೆನಿಸಿಕೊಳ್ಳುತ್ತಿದ್ದರು. ನಿತ್ಯಸುಮಂಗಲಿಯರಾದ ಈ ದೇವದಾಸಿಯರು ಬಾರದೆ ಯಾವ ಮದುವೆ ಸಮಾರಂಭವೂ ಜರಗುತ್ತಿರಲಿಲ್ಲ. ಮಂಗಳಸೂತ್ರ ಕಟ್ಟುವ ಶಾಸ್ತ್ರ ಈ ನಿತ್ಯಸುಮಂಗಲಿಯರಿಂದ ಆಗುತ್ತಿದ್ದುದರಿಂದ ಅವರ ಬರುವಿಕೆಗೆ ಸಂಭ್ರಮದ ಆಹ್ವಾನವಿತ್ತು. ಈ ದೇವದಾಸಿ ಪಂಗಡದ ಪ್ರಭಾವ ಸುಮಾರಾಗಿ ಎಲ್ಲರ ಮೇಲೆಯೂ ಇತ್ತು. ಈ ಕಾರಣದಿಂದ ಕ್ರಮೇಣ ಭರತನಾಟ್ಯಕಲೆ ದೈವಿಕ ಭಾವನೆ ಕಳೆದುಕೊಂಡು ಮಾನವೀಯ ಷಡ್ವೈರಗಳಿಗೆ ತುತ್ತಾಯಿತು. ಆದರೂ ದೇವಾಲಯಕ್ಕೆ ಸೇರಿದ್ದ ಅಥವಾ ಅರಮನೆಗಳಿಗೆ ಸೇರಿದ್ದ ಕೆಲವು ಕಲಾವಿದರು ಈ ಕಲೆಯನ್ನು ಕಾಪಾಡಿಕೊಂಡು ಬಂದಂತೆ ಕಲೋಪಾಸಕರು ಕಲೆಯಿಂದ ವೈಭವಯುಕ್ತ ಅನುಭವವನ್ನು ಪಡೆಯುವಂತಾಯಿತು. ಮದುವೆ ಸಮಾರಂಭಗಳಲ್ಲೂ ದೇವಸ್ಥಾನದ ಉತ್ಸವಗಳಲ್ಲಿಯೂ ಭರತನಾಟ್ಯಕಲೆ ಪ್ರದರ್ಶಿತವಾಗುತ್ತಿತ್ತು.

19ನೆಯ ಶತಮಾನದ ಅಂತ್ಯದ ವರೆಗೆ ಮೈಸೂರು ಸಂಸ್ಥಾನದ ಮುಖ್ಯ ಪಟ್ಟಣಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅನೇಕ ದೇವದಾಸಿಯರು ಈ ಕಲೆಯನ್ನು ಕಾಪಾಡಿಕೊಂಡು ಬಂದಿದ್ದರು. ದೇವಾಲಯಗಳೇ ಅಂದಿನ ಜನರ ಸಾಮಾಜಿಕ ಜೀವನದ ಕೇಂದ್ರವಾಗಿತ್ತು ಎನ್ನಬಹುದು. ತಿರುಮಕೂಡಲು ನರಸೀಪುರ, ಮುಳಬಾಗಲು, ಚಿಂತಾಮಣಿ ಹತ್ತಿರದ ಹೂವಡಿ ಮುಂತಾದ ಸ್ಥಳಗಳಲ್ಲಿ ಸುಮಾರು 200 ಕಸಬುದಾರ ದೇವದಾಸಿಗಳೂ ಅವರಿಗೆ ಸೇರಿದ ನಟವನಾರ್‌ಗಳೂ ಸಂಗೀತ ಪಂಗಡದವರೂ ವಾಸಿಸುತ್ತಿದ್ದರು. ಮುಳಬಾಗಿಲಿನ ದೇವಸ್ಥಾನದಲ್ಲಿ 14 ದೇವದಾಸಿಯರು ಇದ್ದು ವಾರಕ್ಕೊಮ್ಮೆ ದೇವಾಲಯದ ಪೂಜಾಕ್ರಮದಲ್ಲಿ ಭಾಗವಹಿಸುತ್ತಿದ್ದರು. ನಟುವನಾರ್‌ಗಳಲ್ಲದೆ ಸಂಸ್ಕೃತ ಪಂಡಿತರಾದ ಕೆಲವು ಬ್ರಾಹ್ಮಣರು ಈ ಕಲೆಯ ಅಭಿನಯವನ್ನು ಶಾಸ್ತ್ರೋಕ್ತವಾಗಿ ಈ ದೇವದಾಸಿಯರಿಗೆ ಹೇಳಿಕೊಡುವ ಪದ್ಧತಿಯಿತ್ತು. ಈ ಸಾಲಿಗೆ ಸೇರಿದ ಒಬ್ಬ ಮಹನೀಯರು ಮುಳಬಾಗಲಿನ ಪನಸೇಕರಿ ವೆಂಕಟಸುಬ್ಬ ಭಟ್ಟರು. ಅವರು 19ನೆಯ ಶತಮಾನದ ಅಂತ್ಯದಲ್ಲಿ ನೃತ್ಯಗುರುಗಳೆಂದೆನಿಸಿ ವಿಶೇಷ ಗೌರವ ಪಡೆದಿದ್ದರು. ಅವರ ಶಿಷ್ಯಂದಿರು ಅವರ ತರಬೇತಿನಿಂದ ಕಾಲು ಹೆಜ್ಜೆ ವಿನ್ಯಾಸಗಳಲ್ಲಿ ಒಳ್ಳೆಯ ಅಭ್ಯಾಸ ಪಡೆದು ತುಂಬಾ ಖ್ಯಾತಿ ಪಡೆದಿದ್ದರು. ಇವರಲ್ಲಿ ಬೈರತೂರ್ ವೆಂಕಟಲಕ್ಷ್ಮಿ ಅಭಿನಯ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದರು. ಈ ಶತಮಾನದ ಆದಿಯಲ್ಲೂ ಭರತನಾಟ್ಯಕ್ಕೆ ಇದ್ದ ಕಳಂಕ ಮಾಸಿಹೋಗಲಿಲ್ಲ. ಆದರೂ ಕಾಲ ಚಕ್ರ ಉರುಳಿದಂತೆ ಕಲೆಯ ಪುನರುತ್ಥಾನವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರೋತ್ಸಾಹ ವಿಶೇಷವಾಗಿತ್ತು. ಕಲೆಗಳು ಮೆರೆದುವು. ಅವರು ಸ್ವತಃ ಲಲಿತಕಲಾಜ್ಞಾನಿಯಾದ ಕಾರಣ ಕಲೆಗಳಿಗೆ ಅತ್ಯಂತ ಉತ್ತಮ ಸ್ಥಾನವನ್ನು ಕಲ್ಪಿಸಿ ಕಲೋಪಾಸಕರು ಕಲೆಗಳನ್ನು ಪಡೆಯಲು ಸಹಾಯವನ್ನು ಇತ್ತರು. ಟಿ.ನರಸೀಪುರದ ತಿರುಮಕೂಡಲು ಸುಂದರಮ್ಮನವರು ಅಷ್ಟಪದಿಗಳನ್ನು ಹೃದಯಂಗಮವಾಗಿ ಅಭಿನಯಿಸುತ್ತಿದ್ದರು. ಚಂದ್ರವದನಮ್ಮ, ಪುಟ್ಟದೇವಮ್ಮ, ನಾಗರತ್ನ ಮತ್ತು ಬೆಂಗಳೂರಿನ ವರಾಲು - ಇವರು ಮೈಸೂರು ರಾಜ್ಯದ ಹೆಸರಾಂತ ನರ್ತಕಿಯರು. ರಮಾಮಣಿ, ಕೊನಮಾರ ದೇವಿಯಮ್ಮ ಹಾಗೂ ದೇವಾಲಯವೊಂದನ್ನು ಅರ್ಪಿಸಿದ್ದ ಮೂಗೂರು ತ್ರಿಪುರಸುಂದರಮ್ಮನವರೂ ಹೆಸರುವಾಸಿ ದೇವದಾಸಿಯರು, ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಅರಮನೆಯಲ್ಲಿದ್ದ ಅಂಬಲ್ ನರಸಿಂಹ ಅಯ್ಯಂಗಾರ್‌ರವರು ಲಲಿತ ಕಲೆಗಳಿಗೆ ಪ್ರೋತ್ಸಾಹವನ್ನೀಡುತ್ತಿರುವಾಗಲೇ ಕಲೆಯ ಒಳ್ಳೆಯ ಅಂತಸ್ತನ್ನು ಕಾಣಬಯಸುತ್ತಿದ್ದರು.

ಅರಮನೆಯ ಪ್ರೋತ್ಸಾಹ ಹಾಗೂ ದೇವಾಲಯಕ್ಕೆ ಸಂಬಂಧಪಟ್ಟ ದೇವದಾಸಿಯರು ಮತ್ತು ಅವರ ನಟುವನಾರ್ ಪಂಗಡಕ್ಕೆ ಸೇರಿದ ಕಲಾವಿದರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಸುಮಾರು 200 ವರ್ಷಗಳಿಂದ ಭರತನಾಟ್ಯ ಒಂದು ವಿಶಿಷ್ಟ ರೂಪವನ್ನು ತಾಳಿ ಅಭಿವೃದ್ಧಿಪಡೆಯಿತು. ಕವೀಶ್ವರ ಗಿರಿಯಪ್ಪ ಮತ್ತು ಕಾಶಿಗುರು ಎಂಬುವರು ಅಭಿನಯ ಕಲೆಯಲ್ಲಿ ಧುರೀಣರಾಗಿದ್ದರು. ಅನಂತರ ಅಮೃತಪ್ಪ, ಅಪ್ಪಯ್ಯ, ದಾಸಪ್ಪ, ಕಿಟ್ಟಪ್ಪ ಮತ್ತು ಜಟ್ಟಿತಾಯಮ್ಮನವರು ನಾಟ್ಯರಂಗದಲ್ಲಿ ಮೆರೆದ ಪ್ರಖ್ಯಾತ ನೃತ್ಯಕಲಾವಿದರು. ಈ ನೃತ್ಯಗುರುಗಳ ಶಿಷ್ಯಂದಿರು ಪರಂಪರೆಯಾಗಿ ಇಂದಿಗೂ ನಾಟ್ಯಕಲೆಯನ್ನು ಅಭ್ಯಾಸ ಮಾಡುತ್ತಲಿದ್ದಾರೆ. 1947ರಲ್ಲಿ ನಿಧನರಾದ ಮೈಸೂರಿನ ಜಟ್ಟಿತಾಯಮ್ಮ ಹಾಗೂ ಕೋಲಾರ ಕಿಟ್ಟಪ್ಪ ಮತ್ತು ಅವರ ಶಿಷ್ಯಂದಿರಾದ ಕೋಲಾರ ಪುಟ್ಟಪ್ಪ ಇವರು ಇಂದಿಗೂ ಜನಮನದಲ್ಲಿದ್ದಾರೆ. ಕೋಲಾರ ಕಿಟ್ಟಪ್ಪನವರ ಶಿಷ್ಯಂದಿರಾದ ಗುಂಡಪ್ಪನವರು 12 ವರ್ಷಗಳ ಕಾಲ ತರಬೇತು ಪಡೆದು ಪ್ರಖ್ಯಾತ ನರ್ತಕರ ಮನೆತನಕ್ಕೆ ಸೇರಿದ ನಟುವನಾರ್ ಆಗಿದ್ದರು. ಅವರ ಮುತ್ತಜ್ಜಿ ರಂಗನಾಯಕಮ್ಮನವರೂ ಅಜ್ಜಿ ರಂಗಮ್ಮನವರೂ ನಾಟ್ಯ ನಿಪುಣತೆಯನ್ನೂ ಪಡೆದಿದ್ದರು. ಅವರ ವಂಶಕರ್ನಾಟಕ ನೃತ್ಯಕಲೆಗೆ ನಿರತ ಸೇವೆ ಸಲ್ಲಿಸಿದೆ. ಅವರ ಶಿಷ್ಯಂದಿರು ಇಂದಿಗೂ ಕಲಾಸೇವೆಯನ್ನು ಮಾಡುತ್ತಲಿದ್ದಾರೆ. ಇವರೆಲ್ಲರ ಕಾರ್ಯಸಾಧನದಿಂದ ಭರತ ನಾಟ್ಯದಲ್ಲಿ ಮೈಸೂರು ಶೈಲಿ ಎಂಬುದೂ ಬೆಳೆದಿದೆ.

ನಾಟ್ಯ ರಂಗದ ಪ್ರಮುಖರಲ್ಲಿ ಕೆಲವರ ವಿಷಯ ಸ್ವಲ್ಪಮಟ್ಟಿಗೆ ತಿಳಿದಿದೆ. ದಾಸಪ್ಪನವರು ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿದ್ದರು. ಅವರಿಗೆ ನಾಟ್ಯಕಲೆಗೆ ಶಾಸ್ತ್ರೋಕ್ತ ತಿಳುವಳಿಕೆಯಿತ್ತು. ಅವರ ಮಗಳಾದ ಜಟ್ಟಿತಾಯಮ್ಮ (ನೋಡಿ) ಅತ್ಯಂತ ಹೆಸರುವಾಸಿಯಾದವರು. ಅವರಿಗೆ ನೃತ್ಯಕಲೆ ಒಂದು ಕಲೆ ಮಾತ್ರವಲ್ಲ. ದೈವಸಾಕ್ಷಾತ್ಕಾರವನ್ನು ಪಡೆಯುವ ಸಾಧನೆಯಾಗಿತ್ತು. ಜಟ್ಟಿ ತಾಯಮ್ಮನವರ ಶಿಷ್ಯರಾದ ವೆಂಕಟಲಕ್ಷ್ಮಮ್ಮ (ನೋಡಿ) ಸುಮಾರು ಎರಡು ದಶಕಗಳ ಕಾಲ ಶಿಕ್ಷಣ ಪಡೆದು ಇಂದಿಗೂ ಕಲಾಸೇವೆ ಮಾಡುತ್ತಲಿದ್ದಾರೆ. ರಾಜಾಶ್ರಯವನ್ನು ಪಡೆದ ಇನ್ನೊಬ್ಬ ಕಲಾವಿದೆ ಚಂದ್ರವದನಮ್ಮನವರು ಭಾವಾಭಿನಯಕ್ಕೆ ಹೆಸರು ವಾಸಿಯಾಗಿದ್ದರಲ್ಲದೆ ಸಂಗೀತ ಕಲೆಯಲ್ಲೂ ನಿಪುಣೆಯಾಗಿದ್ದರು. ವಿಖ್ಯಾತನಾಟ್ಯ ಗುರುಗಳಾದ ಅಮೃತಪ್ಪ ಮತ್ತು ಅಪ್ಪಯ್ಯನವರಿಂದ ಪಾಠವನ್ನು ಕಲಿತ ಪುಟ್ಟದೇವಮ್ಮ ಮತ್ತು ಆಕೆಯ ಮಗಳು ಚಿಕ್ಕದೇವಮ್ಮ ಇವರೂ ಅರಮನೆಯ ಪ್ರೋತ್ಸಾಹ ಪಡೆದ ಕಲಾವಿದೆಯರು.

ಬೆಂಗಳೂರು ನಗರದಲ್ಲಿ ವಿದ್ವಾನ್ ಕೋಲಾರ ಪುಟ್ಟಪ್ಪನವರು ಪ್ರಖ್ಯಾತ ನಾಟ್ಯಗುರುಗಳಾಗಿ ನಾಗರತ್ನ ಮತ್ತು ವರಾಲು ಇವರನ್ನು ತರಬೇತು ಮಾಡಿ ಶ್ರೇಷ್ಠ ಅಭಿನಯಕಲಾವಿದೆಯರನ್ನಾಗಿ ಮಾಡಿದರು. ಕೋಲಾರ ಪುಟ್ಟಪ್ಪನವರು ನಾಟ್ಯಕಲೆಯ ಪಾರಂಪರ್ಯ ಕುಟುಂಬದಲ್ಲಿ ಜನಿಸಿದವರು. ಪಂದನಲ್ಲೂರಿನಿಂದ ಬಂದ ಕಂಚಿ ಸದಾಶಿವಯ್ಯ ಇವರ ಗುರುಗಳು. ಇವರು ಬೆಂಗಳೂರಿನಲ್ಲಿ 1945ರ ವರೆಗೆ ಪಾಠ ಹೇಳಿಕೊಡುತ್ತಿದ್ದರು. ಜಗತ್ಪ್ರಖ್ಯಾತ ರಾಮಗೋಪಾಲ್ ಮತ್ತು ಯು.ಎಸ್.ಕೃಷ್ಣರಾಯರು ಇವರ ಶಿಷ್ಯರು.

1910 ರಿಂದ 1930ರ ವರೆಗೆ ಭರತನಾಟ್ಯಕಲೆಯು ಕಳಂಕಪೂರಿತವಾಗಿ ಕಸಬುದಾರ ಕಲಾವಿದರೂ ತಮಗೆ ಸಲ್ಲತಕ್ಕ ಮರ್ಯಾದೆ ಕಳೆದುಕೊಂಡರು. ದೇವಾಲಯಗಳಲ್ಲಿ ನೃತ್ಯಸೇವೆಯನ್ನು ನಿರ್ಬಂಧಿಸಲಾಯಿತು. ದೇವದಾಸಿಯರ ಜೀವನವೂ ತುಂಬಾ ಕಷ್ಟಕರವಾಯಿತು. ಆದರೂ ಕಲಾಸಕ್ತಿಯುಳ್ಳ ಶಿಷ್ಯಂದಿರೂ ನಾಟ್ಯಗುರುಗಳೂ ಕಲೋಪಾಸಕರೂ ಕಲೆಯನ್ನು ಅರಸಿ ಕಾಪಾಡಿದರು.

ಮದರಾಸಿನ ಕಲಾಕ್ಷೇತ್ರದ ರುಕ್ಮಿಣಿದೇವಿ ಮತ್ತು ಕೃಷ್ಣ ಅಯ್ಯರ್

ಅವರ ನಿರಂತರ ಪರಿಶ್ರಮದ ಫಲವಾಗಿ ನೃತ್ಯಕಲೆಯ ಪುನರುತ್ಥಾನವಾಯಿತು. ಕ್ರಮೇಣ ಸುಶಿಕ್ಷಿತರೂ ಕಲೆಗಾಗಿ ಮತ್ತು ಅದರ ಅಭಿವೃದ್ಧಿಗಾಗಿ ಕೆಲಸ ಮಾಡುವಂತಾಯಿತು. ಬೆಂಗಳೂರಿನಲ್ಲಿ ರಾಮಗೋಪಾಲರವರು ನಾಟ್ಯಸಂಸ್ಥೆಯನ್ನು ಸ್ಥಾಪಿಸಿ ಕಲೆಗಾಗಿ ತನುಮನ ಧನವನ್ನು ನೀಡಿದರು. ಅವರ ಶ್ರಮದಿಂದಾಗಿ ಶಿಕ್ಷಿತ ಜನತೆಯು ಕಲೆಯ ಶ್ರೇಷ್ಠತೆಯನ್ನು ಅರಿತು ಬೆರಗಾದರು. ಯು.ಎಸ್.ಕೃಷ್ಣರಾಯರೂ ಈ ಪಂಗಡಕ್ಕೆ ಸೇರಿ ಮೈಸೂರು ಸಂಸ್ಥಾನದಲ್ಲೆಲ್ಲ ಭರತನಾಟ್ಯ ಕಲೆಯ ಪ್ರಸಾರ ಮಾಡಿದರು. ಅವರೂ ಅವರ ಪತ್ನಿ ಚಂದ್ರಭಾಗಾದೇವಿಯವರೂ ಸುಶಿಕ್ಷಿತರೂ ಕುಲೀನ ಮನೆತನದವರೂ ಎಂದೆನಿಸಿ ನರ್ತಿಸಿ, ಉಪನ್ಯಾಸಗಳನ್ನು ಕೊಟ್ಟು ಸಂಸ್ಥಾನಾದ್ಯಂತ ಪ್ರಯಾಣ ಮಾಡಿ ವಿವಿಧ ಜನತೆಗೆ ಕಲೆಯ ತಿರುಳನ್ನೂ ಅಂದವನ್ನೂ ತಿಳಿಸಿ ಕಲೆಯ ಪ್ರಸಾರ ಮಾಡಿದರು. ಮೈಸೂರು ಭರತನಾಟ್ಯ ಸಂಪ್ರದಾಯಕ್ಕೆ ಒಂದು ವಿಶೇಷ ಗೌರವ, ಸ್ಥಾನಮಾನವನ್ನು ರಚಿಸಿ ಅಭಿವೃದ್ಧಿ ಮಾಡಿದರು. ಇವರು ಶಾಸ್ತ್ರೋಕ್ತ ಭರತನಾಟ್ಯವಿದ್ಯೆಯ ತಳಹದಿಯ ಮೇಲೆ ಹೊಸ ಪ್ರಯೋಗಗಳನ್ನೂ ಮಾಡಿದ್ದಾರೆ. ಇವರು ಕನ್ನಡ ಭಾಷೆಯಲ್ಲಿ ಪದಗಳನ್ನು ಭರತನಾಟ್ಯಕ್ಕೆ ಅಳವಡಿಸಿಕೊಂಡವರಲ್ಲಿ ಅಗ್ರಗಣ್ಯರು.

ಮೀನಾಕ್ಷಿ ಸುಂದರಂ ಪಿಳ್ಳೆಯವರ ಪುತ್ರರಾದ ವಿದ್ವಾನ್ ಮುತ್ತಯ್ಯ ಪಿಳ್ಳೆ ಮತ್ತು ಮೊಮ್ಮಕ್ಕಳಾದ ವಿದ್ವಾನ್ ಕಿಟ್ಟಪ್ಪನವರು ಪಂದನಲ್ಲೂರು ಸಂಪ್ರದಾಯವನ್ನು ಕನ್ನಡಿಗರಿಗೆ ಹೇಳಿಕೊಡುವ ಸಲುವಾಗಿ ಬೆಂಗಳೂರಿನಲ್ಲೇ ಬಂದು ವಾಸವಾಗಿದ್ದಾರೆ. ಅವರ ವಂಶವೆಲ್ಲ ಈಗ 1965ರಿಂದ ಕರ್ನಾಟಕದ ಕಲಾವಿದರಿಗೆ ಭರತನಾಟ್ಯ ಹೇಳಿಕೊಡುತ್ತಿದೆ. ಇತ್ತೀಚೆಗೆ ಸುಮಾರು 1972ರಲ್ಲಿ ಬೆಂಗಳೂರಿನಲ್ಲಿ ಮೀನಾಕ್ಷಿಸುಂದರಂ ಪಿಳ್ಳೆಯವರ ಹೆಸರಿನಲ್ಲಿ ಶ್ರೀಮತಿ ಲೀಲಾ ರಾಮನಾಥನ್‌ರವರ ನೇತೃತ್ವದಲ್ಲಿ ಒಂದು ಭರತನಾಟ್ಯಶಾಲೆ ಸ್ಥಾಪಿತವಾಗಿದೆ. ಈ ಪಂದನಲ್ಲೂರು ನೃತ್ಯಪೀಠ ಬೆಂಗಳೂರಿನಲ್ಲಿ ಹೆಸರುವಾಸಿಯಾಗಿದೆ. ಇಲ್ಲಿ ತಯಾರಾದ ಕುಮಾರಿಯರಾದ ಆಶಾ, ರೇವತಿ ವಿಶ್ವವಿಖ್ಯಾತಿ ಪಡೆದಿದ್ದಾರೆ.

ಬೆಂಗಳೂರಿನಲ್ಲಿಯೇ ಇನ್ನೂ ಇತರ ಹೆಸರುವಾಸಿ ನೃತ್ಯಪೀಠಗಳಿವೆ. ಅವುಗಳಲ್ಲಿ ಶ್ರೀ ಮತ್ತು ಶ್ರೀಮತಿ ಯು.ಎಸ್.ಕೃಷ್ಣರಾಯರು ನಡೆಸುತ್ತಿರುವ ನೃತ್ಯಪೀಠ (ಸ್ಥಾಪನೆ 1942). ಮಹಾಮಾಯಾ ನೃತ್ಯಪೀಠ (1973) ಪ್ರತಿಭಾನ್ವಿತ ಕಲಾವಿದರನ್ನು ತಯಾರಿಸಿವೆ. ಇಂದ್ರಾಣಿ ರಹಮಾನ್, ಸೋನಾಲ್ ಮಾನಸಿಂಗ್, ಸುಧಾರಾಣಿ, ಜಿಲ್ ರೋಸೆನ್ ಬ್ಲೂಂ ಮೊದಲಾದವರು ಕೃಷ್ಣರಾವ್ ದಂಪತಿಗಳಿಂದ ತರಬೇತಿ ಪಡೆದವರು. ಭಾರತೀಯ ವಿದ್ಯಾಭವನದ ನೃತ್ಯ ಕೇಂದ್ರ (1969), ನಟುವನಾರ್ ಗುಂಡಪ್ಪನವರ ಶಿಷ್ಯ ಎಚ್.ಆರ್.ಕೇಶವಮೂರ್ತಿಯವರ ಕೇಶವನೃತ್ಯಶಾಲಾ 1949, ವಿ.ಎಸ್.ಕೌಶಿಕ್ ನಡೆಸುತ್ತಿರವ ಸನಾತನ ಕಲಾಕ್ಷೇತ್ರ (1946), ಮಾಣಿಕ್ಯಂ ಅವರ ಭರತನಾಟ್ಯ ಕಲಾಶಾಲೆ, ಲಲಿತಾ ದೊರೆ ಅವರ ಗಣೇಶ ನೃತ್ಯಶಾಲೆ, ಟಿ.ಎಸ್.ಭಟ್ಟರ ಮೇನಕ ನೃತ್ಯ ಶಾಲೆ (1957), ಶೇಖರ್‌ರವರ ಸರಸ್ವತೀ ನಾಟ್ಯಶಾಲಾ, ಬೆಂಗಳೂರಿನ ಪ್ರಮುಖ ನೃತ್ಯಪೀಠಗಳು, ಬೆಂಗಳೂರಿನಲ್ಲಿ ಇನ್ನೂ ಅನೇಕ ನೃತ್ಯಗುರುಗಳಿದ್ದಾರೆ.

ಮಂಗಳೂರಿನಲ್ಲಿ ಯು.ಎಸ್.ಕೃಷ್ಣರಾಯರ ನೃತ್ಯ ವಿದ್ಯಾನಿಲಯದಲ್ಲಿ ಭರತ ನಾಟ್ಯ ಹಾಗೂ ಕಥಕಳಿ ಶಾಸ್ತ್ರೀಯ ನೃತ್ಯಕಲೆಯನ್ನು ಉಚಿತವಾಗಿ ಹೇಳಿಕೊಡುತ್ತಲಿದ್ದಾರೆ. ಉತ್ತರ ಕರ್ನಾಟಕದಲ್ಲಿ ಹಲವಾರು ನೃತ್ಯ ಸಂಸ್ಥೆಗಳಿದ್ದರೂ ಗಮನಕ್ಕೆ ಬರುವ ನೃತ್ಯಪೀಠ ಶ್ರೀನಿವಾಸ ಕುಲಕರ್ಣಿಯವರು ಹಂಸಭಾವಿಯಲ್ಲಿ ಸ್ಥಾಪಿಸಿರುವ ನೃತ್ಯಭಾರತಿ ಎಂಬ ನೃತ್ಯಶಾಲೆ. ಅವರು ಸುಮಾರು 30-35 ವರ್ಷಗಳಿಂದ ನೃತ್ಯರಂಗದಲ್ಲಿ ವಿರಾಮವಿಲ್ಲದೆ ಕೆಲಸ ಮಾಡಿ ಪಳಗಿದ ಕಲಾವಿದರು. ಅಲ್ಲದೆ ಕರ್ನಾಟಕದ ಸಣ್ಣಪುಟ್ಟ ಊರು ಹಳ್ಳಿಗಳಲ್ಲಿ ಸುಮಾರು 100ಕ್ಕೂ ಮೇಲ್ಪಟ್ಟು ನೃತ್ಯಗುರುಗಳಿದ್ದು ಭರತನಾಟ್ಯ, ಕಥಕ್, ಕಥಕಳಿ ಮತ್ತು ಇತರ ನೃತ್ಯಗಳನ್ನು ಹೇಳಿಕೊಡುತ್ತಲಿದ್ದಾರೆ. ಈಗ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಲಲಿತಕಲೆಗಳ ಕಾಲೇಜುಗಳಲ್ಲಿ ಪದವಿ ಮಟ್ಟದಲ್ಲಿ ನೃತ್ಯ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಕರ್ನಾಟಕದಲ್ಲಿ ಇಂದು ಕಥಕ್, ಕಥಕಳಿ, ಮಣಿಪುರಿ ಮೊದಲಾದ ನೃತ್ಯ ಸಂಪ್ರದಾಯಗಳು ಅಲ್ಲಲ್ಲಿ ಕಂಡುಬುರತ್ತವೆ. ಆದರೆ ಶಿಷ್ಟ ನೃತ್ಯರೂಪಗಳಲ್ಲಿ ಭರತನಾಟ್ಯ ಅದರಲ್ಲೂ ಮೈಸೂರು ಸಂಪ್ರದಾಯದ ಭರತನಾಟ್ಯ ಈ ನಾಡಿನ ವೈಶಿಷ್ಟ್ಯವೆನ್ನಬಹುದು. (ಪಿ.ಡಿ)

**ನೃಪಕಾಮ:** ಹಾಸನ-ಚಿಕ್ಕಮಗಳೂರು ಜಿಲ್ಲೆಗಳ ಪ್ರದೇಶದಲ್ಲಿ ಆಳಿದ ಹೊಯ್ಸಳ ದೊರೆ (ಸು. 1000-45). ಮೊದಲಿಗೆ ಇವನೇ ಹೊಯ್ಸಳ ಮನೆತನದ ಮೊದಲ ರಾಜನಿರಬಹುದೆಂದು ತಿಳಿಯಲಾಗಿತ್ತು. ಆದರೆ ಇತ್ತೀಚೆಗೆ ಪತ್ತೆಯಾದ ಚಿಕ್ಕಮಗಳೂರು ತಾಲ್ಲೂಕಿನ ಉಪ್ಪಳ್ಳಿ ಶಾಸನದಿಂದ ಹೊಯ್ಸಳ ವಂಶದ ಮೊದಲ ರಾಜರ ವಿವರಗಳು ದೊರೆತಿವೆ (ನೋಡಿ) ಹೊಯ್ಸಳರು. ಇವನನ್ನು ಕಾಮನೃಪ, ರಾಚಮಲ್ಲ ಪೆರ್ಮಾನಡಿ ಎಂದೂ ಕೆಲವು ಶಾಸನಗಳಲ್ಲಿ ಹೆಸರಿಸಲಾಗಿದೆ. ಈ ಎರಡನೆಯ ಹೆಸರಿನಿಂದಾಗಿ ನೃಪಕಾಮ ತಲಕಾಡಿನ ಗಂಗಸಂತತಿಯೊಡನೆ ಸಂಬಂಧ ಹೊಂದಿದ್ದನೆಂದು ಹಲವು ವಿದ್ವಾಂಸರೂ ಇವನು ಮೊದಲಲ್ಲಿ ಗಂಗರ ಸಾಮಂತನಾಗಿರಬೇಕಂದು ಮತ್ತೆ ಕೆಲವು ವಿದ್ವಾಂಸರೂ ಅಭಿಪ್ರಾಯಪಟ್ಟಿದ್ದಾರೆ. ಅನೇಕ ಶಾಸನಗಳಲ್ಲಿ ಬರುವ ಹೊಯ್ಸಳ ವಂಶಾವಳಿಯಲ್ಲಿ ನೃಪಕಾಮನ ಹೆಸರು ಕಂಡುಬರದೆ ಸಾಮಾನ್ಯವಾಗಿ ಆದ್ಯ ಸಳನಾದ ಅನಂತರ ಅವನ ವಂಶದಲ್ಲಿ ವಿನಯಾದಿತ್ಯನೆಂಬುವನು ರಾಜನಾದನು ಎಂಬ ಹೇಳಿಕೆಯಿರುತ್ತದೆ. ಒಂದೆರಡು ಶಾಸನಗಳಲ್ಲಿ ಮಾತ್ರ ನೃಪಕಾಮ ವಿನಯಾದಿತ್ಯನ ತಂದೆ ಎಂಬ ಉಲ್ಲೇಖವಿದೆ. ಇವನ ಶಾಸನಗಳಾದರೋ ಇವನನ್ನು ಹೊಯ್ಸಳ ಎಂದು ಸ್ಪಷ್ಟವಾಗಿ ನಿರ್ದೇಶಿಸುತ್ತವೆ. ಕೊಂಗಾಳ್ವ ಶಾಸನವೊಂದರಲ್ಲಿ ನೃಪಕಾಮನನ್ನು ಮುಂಡಹೊಯ್ಸಳ ಎಂದು ಸಂಬೋಧಿಸಲಾಗಿರುವುದರಿಂದ ನೃಪಕಾಮ ಜೈನಮತಾವಲಂಬಿಯಾಗಿರಬೇಕೆಂದು ಒಂದು ಊಹೆ.

1022 ರಿಂದ 1027ರ ವರೆಗೆ ನೃಪಕಾಮನ ಅನೇಕ ಶಾಸನಗಳು ದೊರೆತಿವೆ. ಇವನು 1022ರಲ್ಲಿ ಕೊಂಗಾಳ್ವರ ಮೇಲೆ ದಂಡೆತ್ತಿಹೋಗಿದ್ದನಲ್ಲದೆ, 1026ರಲ್ಲಿ ಮಣ್ಣೆ ಎಂಬಲ್ಲಿ ಅವರನ್ನು ಮತ್ತೆ ಎದುರಿಸಿದ. 1027ರಲ್ಲಿ ಬನವಾಸಿಯಲ್ಲಿ ಪ್ರಾಯಶಃ ಕದಂಬರ ಮೇಲೆ ನಡೆದ ಯುದ್ಧವೊಂದರಲ್ಲಿ ಅವರ ಸಹಾಯಕನಾಗಿದ್ದ. ವಿಷ್ಣುವರ್ಧನ ಹೊಯ್ಸಳನ ಪ್ರಧಾನಾಮಾತ್ಯನಾದ ಗಂಗರಾಜನ ತಂದೆ ಏಚರಾಜ ಬಾಲ್ಯದಲ್ಲಿ ನೃಪಕಾಮನ ಆಸ್ಥಾನದಲ್ಲಿದ್ದನೆಂದು ಶ್ರವಣಬೆಳಗೊಳದ ಶಾಸನವೊಂದರಿಂದ ತಿಳಿದುಬರುತ್ತದೆ. (ಜಿ.ಆರ್.ಆರ್.)

**ನೆಲಮಂಗಲ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು. ಜಿಲ್ಲೆಯ ವಾಯುವ್ಯಭಾಗದಲ್ಲಿ ಆಗ್ನೇಯ-ವಾಯುವ್ಯಾಭಿಮುಖವಾಗಿ ಹರಡಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ತುಮಕೂರು, ಕೊರಟಗೆರೆ ತಾಲ್ಲೂಕುಗಳೂ ಪೂರ್ವದಲ್ಲಿ ದೊಡ್ಡಬಳ್ಳಾಪುರ ಮತ್ತು ಉತ್ತರ ಬೆಂಗಳೂರು ತಾಲ್ಲೂಕುಗಳೂ ಪಶ್ಚಿಮ ಮತ್ತು ನೈಋತ್ಯದಲ್ಲಿ ಮಾಗಡಿ ತಾಲ್ಲೂಕು ಸುತ್ತುವರೆದಿವೆ. ದಾಸನಪುರ, ನೆಲಮಂಗಲ, ಸೋಮಪುರ ಮತ್ತು ತ್ಯಾಮಗೊಂಡ್ಲು ಹೋಬಳಿಗಳಿದ್ದು 314 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 653.1 ಚಕಿಮೀ. ಜನಸಂಖ್ಯೆ 1,74,445.

ಶಿವಗಂಗೆ (4559') ಮತ್ತು ನಿಜಗಲ್ಲು ಈ ತಾಲ್ಲೂಕಿನ ಮುಖ್ಯ ಬೆಟ್ಟಗಳು. ಈ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶ ಇಲ್ಲವೆಂದೇ ಹೇಳಬಹುದು. ದೊಡ್ಡ ಬೆಲೆ ಮತ್ತು ಬೊಮ್ಮನಹಳ್ಳಿಯ ಬಳಿ ಸರ್ಕಾರದಿಂದ ಪೋಷಕವಾದ ಸಾಮಾನ್ಯ ಅರಣ್ಯಗಳನ್ನು ಬೆಳೆಸಲಾಗುತ್ತಿದೆ. ಈ ತಾಲ್ಲೂಕಿನ ಮಣ್ಣು ನಸುಗೆಂಪು ಮಿಶ್ರಿತವಾಗಿದ್ದು ಹಲವು ಭಾಗಗಳಲ್ಲಿ ಫಲವತ್ತಾಗಿದೆ. ವಾರ್ಷಿಕ ಸರಾಸರಿ ಮಳೆ 1140 ಮಿಮೀ. ಬೇಸಾಯ ಜನರ ಮುಖ್ಯ ಕಸಬು. ಅರ್ಕಾವತಿ ಮತ್ತು ಅದರ ಉಪನದಿಯಾದ ಕುಮುದ್ವತಿ ಈ ತಾಲ್ಲೂಕಿನ ಮುಖ್ಯ ನದಿಗಳು. ಈ ತಾಲ್ಲೂಕಿನಲ್ಲಿ ದೊಡ್ಡ ನೀರಾವರಿ ಅಣೆಕಟ್ಟುಗಳಾಗಲಿ, ಜಲಾಶಯಗಳಾಗಲಿ ಇಲ್ಲ. ಸಣ್ಣ ಪುಟ್ಟ ಕೆರೆಗಳಿದ್ದು ಅವುಗಳ ನೀರನ್ನು ಬತ್ತ ಮತ್ತು ಬಾಗಾಯ್ತು ಬೆಳೆಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಅಂತಹ ಕೆರೆಗಳಲ್ಲಿ ಚಿಕ್ಕಣ್ಣನ ಅಣೆ,

ತ್ಯಾಮಗೊಂಡ್ಲುವಿನ ಅಮಾನಿಕೆರೆ, ಕೆರೆಗತ್ತಿಗನೂರಿನ ಕೆರೆ, ಸೊಂಡೆಕೊಪ್ಪದ ಕೆರೆ, ಮಣ್ಣೆ ಕೆರೆ ಮೊದಲಾದವುಗಳನ್ನು ಹೆಸರಿಸಬಹುದಾಗಿದೆ. ರಾಗಿ ಈ ತಾಲ್ಲೂಕಿನ ಮುಖ್ಯವಾದ ಬೆಳೆ. ಅವರೆ, ತೊಗರಿ, ಹುರುಳಿ ಮತ್ತು ಎಣ್ಣೆಬೀಜಗಳನ್ನೂ ಮುಸುಕಿನ ಜೋಳ ಮತ್ತು ಕೆಲವು ಹಣ್ಣುಗಳನ್ನೂ ಬೆಳೆಯುತ್ತಾರೆ. ಸಣ್ಣ ಪುಟ್ಟ ಕೆರೆಗಳ ಅಚ್ಚುಕಟ್ಟಿನಲ್ಲಿ ಬತ್ತ ಮತ್ತು ಕಬ್ಬನ್ನೂ ಬೆಳೆಯುವರು. ಇತ್ತೀಚೆಗೆ ನೀರಾವರಿ ಬಾವಿಗಳನ್ನು ತೋಡಿ ವಿದ್ಯುತ್ ಪಂಪುಗಳ ಸಹಾಯದಿಂದ ನೀರೆತ್ತಿ ಬೆಳೆ ಬೆಳೆಯಲಾಗುತ್ತಿದೆ.

ಈ ತಾಲೂಕಿನ ನಿಡವಂದ ಒಂದು ರೈಲ್ವೆ ನಿಲ್ದಾಣ ಮತ್ತು ವ್ಯಾಪಾರಕೇಂದ್ರ. ಶಿವಗಂಗೆ (ನೋಡಿ) ಒಂದು ಪವಿತ್ರ ಕ್ಷೇತ್ರ. ಈ ತಾಲ್ಲೂಕಿನ ತೋಟಗೆರೆ ಗ್ರಾಮದಲ್ಲಿ ಅರ್ಜುನ ದೇವಾಲಯ ಇದ್ದು ಅದು ಈಗ ಹಾಳುಬಿದ್ದಿದೆ. ತ್ಯಾಮಗೊಂಡ್ಲು ಹೋಬಳಿ ಕೇಂದ್ರವಾಗಿರುವುದಲ್ಲದೆ ದೊಡ್ಡ ವ್ಯಾಪಾರ ಕೇಂದ್ರ. ಎಲೆಕ್ಯಾತನ ಹಳ್ಳಿ ಜೈನಧರ್ಮೀಯರ ಮುಖ್ಯಸ್ಥಳ. ನಿಜಗಲ್ಲು ಮತ್ತು ಇತರ ಕಡೆಗಳಲ್ಲಿ ಸಣ್ಣ ಪುಟ್ಟ ಪಾಳೆಗಾಯರರು ಆಳುತ್ತಿದ್ದರು. ಮಹಿಮಾಪುರ ಗ್ರಾಮದ ಬಳಿಯಿರುವ ಗುಡ್ಡಕ್ಕೆ ಮಹಿಮೆರಂಗನ ಬೆಟ್ಟ ಎಂಬ ಹೆಸರಿದ್ದು ಅದರ ಮೇಲೆ ರಂಗನಾಥ ಸ್ವಾಮಿಯ ದೇವಾಲಯವಿದೆ. ಇಲ್ಲಿ ವರ್ಷಕ್ಕೊಂದು ಭಾರಿ ಜಾತ್ರೆ ನಡೆಯುತ್ತದೆ. ಬರದಿ ಗ್ರಾಮದ ಬಳಿ ಇರುವ ರಾಮದೇವರ ಗುಡ್ಡದ ಮೇಲೆ ಶ್ರೀರಾಮ ದೇವಾಲಯವಿದೆ. ಸುತ್ತಮುತ್ತಿನ ಜನ ಇಲ್ಲಿ ವಿವಾಹಗಳನ್ನು ಜರುಗಿಸುವರು, ಬಿನ್ನಮಂಗಲದ ಮುಕ್ತಿನಾಥ ದೇವಾಲಯ ಒಂದನೆಯ ರಾಜೇಂದ್ರ ಚೋಳನ ಆಳ್ವಿಕೆಯಲ್ಲಿ ನಿರ್ಮಾಣವಾದ್ದು. ಹೆಗ್ಗುಂದ ಬೆಟ್ಟದ ಪಾದದಲ್ಲಿ ವೀರಭದ್ರ ಮತ್ತು ಮಲ್ಲಿಕಾರ್ಜುನ ಎಂಬ ಎರಡು ಗುಹಾಲಯಗಳಿವೆ. ಇಲ್ಲಿನ ಶ್ರೀರಾಮ ದೇವಾಲಯದ ಬಳಿ ಇರುವ ಸ್ತಂಭಕ್ಕೆ ಶ್ರೀರಾಮನ ಹಯವನ್ನು ಕಟ್ಟಲಾಗಿತ್ತೆಂದು ಪೌರಾಣಿಕ ಕಥೆ. ಮಣ್ಣೆ (ಮಾನ್ಯಪುರ) ಗಂಗರ ಶ್ರೀಪುರುಷನ (725-788) ಮತ್ತು ಅನಂತರ ರಾಷ್ಟ್ರಕೂಟರ ಕಾಲದಲ್ಲಿ ಮುಖ್ಯಸ್ಥಳವಾಗಿತ್ತು.

ನೆಲಮಂಗಲ ಈ ತಾಲ್ಲೂಕು ಮತ್ತು ಹೋಬಳಿಯ ಆಡಳಿತ ಕೇಂದ್ರ. ಬೆಂಗಳೂರು-ತುಮಕೂರು ಮಾರ್ಗದಲ್ಲಿ ಬೆಂಗಳೂರಿನ ವಾಯವ್ಯಕ್ಕೆ ಸು. 27 ಕಿಮೀ ದೂರದಲ್ಲಿದೆ. ಈ ಪಟ್ಟಣದ ಜನಸಂಖ್ಯೆ 25206.

ಈ ಪಟ್ಟಣ ವ್ಯಾಪಾರಕೇಂದ್ರಗಳಾದ ಮಾಗಡಿ, ಬೆಂಗಳೂರು, ದೊಡ್ಡಬಳ್ಳಾಪುರ ಮತ್ತು ತುಮಕೂರುಗಳ ಮಧ್ಯದಲ್ಲಿದ್ದು ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿದೆ. ಈ ಪಟ್ಟಣದಲ್ಲಿ ಆಸ್ಪತ್ರೆ, ಅಂಚೆ, ತಂತಿ, ದೂರವಾಣಿ, ವಿದ್ಯುತ್, ಶಾಲೆಗಳು ಮುಂತಾದ ಸೌಲಭ್ಯಗಳು ಇವೆ.

ಇಂದಿನ ನೆಲಮಂಗಲದ ಬಳಿಯಲ್ಲೇ ಹಿಂದೆ ಭೂಮಂಗಲ ಎಂಬ ದೊಡ್ಡ ಊರಿದ್ದು ಅದು ಯುದ್ಧವೊಂದರಲ್ಲಿ ಹಾಳಾಯಿತೆಂದೂ ಅನಂತರ ಇಂದಿನ ಪಟ್ಟಣ ಆಸ್ತಿತ್ವಕ್ಕೆ ಬಂತೆಂದೂ ಐತಿಹ್ಯ. (ಜಿ.ಆರ್.ಆರ್.)

**ನೇತ್ರಾಣಿ ದ್ವೀಪಗಳು :** ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕಿನ ಪ್ರವಾಸಿ ಸ್ಥಳ. ಇದಕ್ಕೆ ಪಿಜನ್ ಐಲೆಂಡ್ ಅಥವಾ ಪಾರಿವಾಳ ದ್ವೀಪವೆಂಬ ಹೆಸರೂ ಇದೆ. ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲೊಂದಾದ ಮುರ್ಡೇಶ್ವರದಿಂದ ದಕ್ಷಿಣಕ್ಕೆ ಭಟ್ಕಳದಿಂದ 18 ಕಿಮೀ ದೂರದಲ್ಲಿದೆ. ನೇತ್ರಾಣಿ ನಡುಗಡ್ಡೆಯು ಕಣ್ಣಿನ ಗುಡ್ಡೆಯಾಕಾರವನ್ನು ಹೋಲುವುದರಿಂದ ಜನಪದರ ಬಾಯಲ್ಲಿ ನೇತ್ರಾಣಿಯಾಗಿದೆ. ರೋಮಿನ ಪ್ರವಾಸಿ ಬುಕಾನನ್ ಈ ದ್ವೀಪಕ್ಕೆ 1801 ರಲ್ಲಿ ಭೇಟಿ ಕೊಟ್ಟಾಗ ಅಲ್ಲಿ ಕಲ್ಲಿನ ಕಂಬಕ್ಕೆ ಪೂಜೆ ಸಲ್ಲಿಸುತ್ತಿದ್ದುದನ್ನು ಕಂಡು ಅದನ್ನು ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸಿದ್ದಾನೆ. ಈ ಕಲ್ಲಿನ ಕಂಬವನ್ನು ಭಕ್ತರು ಜಟ್ಟಿಗದೇವರೆಂದು ಹೇಳುತ್ತಾರೆ ಎಂದು 1975ರಲ್ಲಿ ಈ ದ್ವೀಪಕ್ಕೆ ಭೇಟಿ ಕೊಟ್ಟ ಹೂಮ್ ತನ್ನ ಪ್ರವಾಸ ಸಾಹಿತ್ಯದಲ್ಲಿ ತಿಳಿಸಿದ್ದಾನೆ. ಹಿಂದೆ ಎಲ್ಲ ಧರ್ಮದವರೂ ಇಲ್ಲಿ ಹರಕೆ ಒಪ್ಪಿಸುತ್ತಿದ್ದರು. ಇಂದಿಗೂ ಇಲ್ಲಿ ಜಟ್ಟಿಗನ ಗುಡಿ, ಮಸೀದಿ, ಚರ್ಚು ಇವೆ. ಹರಕೆ ಹೊತ್ತು ಭಕ್ತಾದಿಗಳು ಕೆಲವೊಮ್ಮೆ ಕೋಳಿ ಮತ್ತು ಕುರಿಗಳನ್ನು ಇಲ್ಲಿಗೆ ತಂದು ದೇವರಿಗೆ ಬಿಡುತ್ತಾರೆ. ಅಂಥ ಪ್ರಾಣಿ ಪಕ್ಷಿಗಳು ಈ ದ್ವೀಪದಲ್ಲಿ ಸಾಕಷ್ಟಿವೆ.

ನೇತ್ರಾಣಿ ಗುಡ್ಡೆ ಕಡಿದಾಗಿರುವುದರಿಂದ ಅದರ ಸಮೀಪಕ್ಕೆ ಯಾಂತ್ರಿಕ ದೋಣಿ ಹೋಗುವುದಿಲ್ಲ. 100 ಮೀ ದೂರದಲ್ಲಿ ಲಂಗರು ಹಾಕಿದ ದೋಣಿಯಿಂದ ಅಲ್ಲಿಗೆ ಪಾತಿ ದೋಣಿಯಲ್ಲಿ ಹೋಗಬೇಕು. ಗುಡ್ಡೆಯ ಮರಕ್ಕೆ ಕಟ್ಟಿದ ಹಗ್ಗದ ನೆರವಿನಿಂದ ಗುಡ್ಡೆಯನ್ನು ಜನ ಹತ್ತುವುದುಂಟು. ಗೊಂಡರು, ಮೊಗವೀರರು, ಖಾರ್ವಿಗಳು, ನೇತ್ರಾಣಿ ಜಟ್ಟಿಗನ ಭಕ್ತವರ್ಗಕ್ಕೆ ಸೇರಿದವರಾಗಿದ್ದಾರೆ. ಇಲ್ಲಿನ ಎತ್ತರದ ಅಂಕುಡೊಂಕಾದ ಬಂಡೆಗಳ ರಚನೆ ಪಾರಿವಾಳಗಳ ವಾಸಕ್ಕೆ ಅನುಕೂಲಕರವಾಗಿದೆ. ಇಲ್ಲಿ ಪಾರಿವಾಳಸಂಖ್ಯೆ ಅಧಿಕವಿರುವುದರಿಂದ ಪಾಶ್ಚಾತ್ಯರು ಈ ದ್ವೀಪವನ್ನು ಪಿಜನ್ ಐಲೆಂಡ್ ಎಂದು ಕರೆದರು. ಹಿಂದೆ ಅಂಜದೀವ್‌ನಿಂದ ಜನರು ಇಲ್ಲಿಗೆ ಬಂದು ಗೂಡುಗಳನ್ನು ಸಂಗ್ರಹಿಸಿ ಮುಂಬಯಿಗೆ ಕಳುಹಿಸುತ್ತಿದ್ದರು. ಈ ದ್ವೀಪದಲ್ಲಿ ಪಾರಿವಾಳಗಳಲ್ಲದೆ ಇನ್ನಿತರ ಪಕ್ಷಿ ಸಂಕುಲವೂ ಇದೆ. ಪಕ್ಷಿವೀಕ್ಷಣೆಗೆ ಇದೊಂದು ಉತ್ತಮ ತಾಣ. ಇಲ್ಲಿಗೆ ವಿಹಾರಕ್ಕೆ ಹೋಗಿಬರಲು ನವೆಂಬರ್-ಮಾರ್ಚ್ ಅವಧಿ ಸೂಕ್ತಕಾಲ. (ಎಸ್.ಜಿ.ಬಿ.)

**ನೇತ್ರಾವತಿ :** ದಕ್ಷಿಣ ಕನ್ನಡ ಜಿಲ್ಲೆಯ ಒಂದು ನದಿ. ಪಶ್ಚಿಮ ಘಟ್ಟದ ಕುದುರೆಮುಖ ಪರ್ವತದಲ್ಲಿ ಹುಟ್ಟಿ, ಬಂಗಾಡಿ ಕಣಿವೆಯ ಮುಖಾಂತರ ಹರಿದು ಉಜಿರೆ, ಧರ್ಮಸ್ಥಳ ಬೆಳ್ತಂಗಡಿಗಳನ್ನು ದಾಟಿ ಬಂಟ್ವಾಳದ ಮುಖಾಂತರ ಮಂಗಳೂರೆಡೆಗೆ ಸಾಗಿ, ಕೋಡಿಯಾಲದ ಬಳಿ ಅರಬ್ಬೀಸಮುದ್ರವನ್ನು ಸೇರುತ್ತದೆ. ನದಿಯ ಹರಿವಿನ ಒಟ್ಟು ಉದ್ದ 96 ಕಿಮೀ. ಕುಮಾರಧಾರಾ ಮತ್ತು ಗುರುಪುರ ಹೊಳೆಗಳು ಇದರ ಮುಖ್ಯ ಉಪನದಿಗಳು. ಕುಮಾರಧಾರಾ ನೇತ್ರಾವತಿಯ ದಕ್ಷಿಣದಿಂದ ಬಂದು ಉಪ್ಪಿನಂಗಡಿ ಬಳಿ ಸೇರುತ್ತದೆ. ಗುರುಪುರ ಹೊಳೆ ಉತ್ತರದಿಂದ ಬಂದು ಮಂಗಳೂರಿನ ಬಳಿ ಸಂಗಮವಾಗುತ್ತದೆ. ಮುಂಗಾರು ಮಳೆಯ ದಿನಗಳಲ್ಲಿ ನೇತ್ರಾವತಿಯಲ್ಲಿ ಅಧಿಕ ಪ್ರವಾಹವಿರುತ್ತದೆ. ನದಿಯ ಮಧ್ಯೆ ಕಲ್ಲುಬಂಡೆಗಳೂ ಮಡುವುಗಳೂ ಇವೆ. ಬಂಟ್ವಾಳದಿಂದ ಮುಂದಕ್ಕೆ ದೋಣಿಗಳ ಸಂಚಾರಕ್ಕೆ ಅನುಕೂಲವಾಗಿವೆ. ಮಂಗಳೂರಿನ ಬಳಿ ನದಿಯ ಪಾತ್ರ ವಿಶಾಲವಾಗಿದ್ದು ಮಧ್ಯೆ ಸಣ್ಣ ದ್ವೀಪಗಳಿವೆ. ಫಲವತ್ತಾಗಿರುವ ಈ ಭಾಗಗಳು ಬತ್ತ ಕಬ್ಬು ಬೆಳೆಗೆ ಉಪಯುಕ್ತವಾಗಿವೆ. ಉಲ್ಲಾಳದ ಬಳಿ ನೇತ್ರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ರೈಲು ಸೇತುವೆ ದಕ್ಷಿಣ ಭಾರತದ ಬಹು ಉದ್ದವಾದ ರೈಲು ಸೇತುವೆಗಳಲ್ಲಿ ಒಂದು.
(ಕೆ.ಬಿ.ಸಿ.)

**ನೇಮಿಚಂದ್ರ[1]:** ಹತ್ತನೆಯ ಶತಮಾನದಲ್ಲಿದ್ದ ಪ್ರಸಿದ್ಧ ಜೈನ ಆಚಾರ್ಯರು. ಗೊಮ್ಮಟಸಾರ, ತ್ರಿಲೋಕಸಾರ, ಲಬ್ಧಿಸಾರ ಎಂಬ ಗ್ರಂಥಗಳನ್ನು ಪ್ರಾಕೃತದಲ್ಲಿ ಬರೆದಿದ್ದಾರೆ. ಇವರಿಗೆ ಸಿದ್ಧಾಂತಚಕ್ರವರ್ತಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಅಭಯನಂದಿ ಇವರ ಗುರು.

ಗೊಮ್ಮಟಸಾರ ಷಟ್ಖಂಡಾಗಮದ ಸಾರವನ್ನೊಳಗೊಂಡಿದ್ದು ಕರ್ಮಸಿದ್ಧಾಂತವನ್ನು ಕುರಿತ ಮಹತ್ತ್ವಪೂರ್ಣ ಗ್ರಂಥವಾಗಿದೆ. ಇದನ್ನು ಚಾವುಂಡರಾಯನಿಗಾಗಿ ಬರೆದಂತೆ ತಿಳಿಯುತ್ತದೆ. ಈ ಗ್ರಂಥದ ರಚನೆಯಲ್ಲಿ ಕನಕನಂದಿಯ ಸಹಾಯ ಇವರಿಗೆ ದೊರೆತಂತೆ ತೋರುತ್ತದೆ. ಚಾವುಂಡರಾಯನನ್ನು ಕುರಿತು ಹಲವು ಸಂಗತಿಗಳು ಇದರಿಂದ ಲಭ್ಯವಾಗುತ್ತವೆ. ಅವುಗಳಲ್ಲಿ ಚಾವುಂಡರಾಯ ಗೊಮ್ಮಟೇಶ್ವರ ವಿಗ್ರಹ ಪ್ರತಿಷ್ಠಾಪಿಸಿದ ಸಂಗತಿ ಮುಖ್ಯವಾದುದು. ಈ ಕೃತಿಯನ್ನು ಕುರಿತು ಸಂಸ್ಕೃತದಲ್ಲಿ ಅಭಯಚಂದ್ರ ಮತ್ತು ನೇಮಿಚಂದ್ರ (ಕನ್ನಡ ಟೀಕೆಯ ಆಧಾರದಿಂದ ಬರೆದದ್ದು). ಕನ್ನಡದಲ್ಲಿ ಕೇಶವವರ್ಣಿ - ಇವರು ವಿಸ್ತೃತ ಟೀಕೆಗಳನ್ನು ಬರೆದಿದ್ದಾರೆ. (ಎ.ಎಸ್.ಯು.)

**ನೇಮಿಚಂದ್ರ[2]:** ಸು. 12ನೆಯ ಶತಮಾನದ ಜೈನಕವಿ. ಲೀಲಾವತೀ ಮಹಾಪ್ರಬಂಧಂ ಮತ್ತು ನೇಮಿನಾಥ ಪುರಾಣಂ ಎಂಬ ಚಂಪೂಕಾವ್ಯಗಳನ್ನು ರಚಿಸಿ ಪ್ರಸಿದ್ಧನಾಗಿದ್ದಾನೆ. ಈತ ಲೀಲಾವತೀಕಾವ್ಯದಲ್ಲಿ ಲಕ್ಷ್ಮಣರಾಜ (ಸೌಂದತ್ತಿಯ ರಟ್ಟವಂಶದ ರಾಜ ಸು. 1190) ಮತ್ತು ಚಂದಲದೇವಿಯರನ್ನು ಕೊಂಡಾಡಿದ್ದಾನೆ. ನೇಮಿನಾಥ ಪುರಾಣದಲ್ಲಿ

ವೀರಬಲ್ಲಾಳನ (1173-1220) ಮಂತ್ರಿ ಸೆಜ್ಜೆವಳ ಪದ್ಮನಾಭನನ್ನು ಹೊಗಳಿ ಅವನ ಹಾಗೆಯೇ ಹೊಯ್ಸಳ ಆಶ್ರಯದಲ್ಲಿದ್ದಂತೆ ಹೇಳಿಕೊಂಡಿದ್ದಾನೆ. ಲಕ್ಷ್ಮಣರಾಜನ ಆಶ್ರಿತನಾಗಿದ್ದುಕೊಂಡು ತನ್ನ ಪ್ರೌಢಕಾವ್ಯವಾದ ಲೀಲಾವತೀಮಹಾಪ್ರಬಂಧವನ್ನೂ ಹೊಯ್ಸಳ ರಾಜ್ಯ ಪದ್ಮನಾಭನ ಆಶ್ರಯದಲ್ಲಿದ್ದುಕೊಂಡು ನೇಮಿನಾಥಪುರಾಣವನ್ನೂ ರಚಿಸಿದನೆಂದು ತಿಳಿಯಬಹುದು. ನೇಮಿಚಂದ್ರ ತನಗಿಂತ ಮುಂಚೆ ಕೃತಿರಚನೆ ಮಾಡಿದ ಯಾವ ಕನ್ನಡ ಕವಿಯನ್ನೂ ಸ್ಮರಿಸಿಲ್ಲ. ಮಧುರಕವಿ ನೇಮಿಚಂದ್ರನನ್ನು ಹೊಗಳುತ್ತ ನೇಮಿಜನ್ನಮರೀರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ ಎಂದು ನುಡಿದಿದ್ದಾರೆ.

ನೇಮಿಚಂದ್ರ ಬಹಳ ಆತ್ಮಾಭಿಮಾನವುಳ್ಳ ಕವಿ. ಇವನು ಧರಿಸಿದ ಬಿರುದುಗಳಿಗೆ ಲೆಕ್ಕವಿಲ್ಲ. ಭಾರತೀಚಿತ್ರಚೋರ, ಸಾಹಿತ್ಯ ವಿದ್ಯಾಧರ, ಚತುರ್ಭಾಷಾ ಚಕ್ರವರ್ತಿ, ಕವಿರಾಜಕುಂಜರ, ಸುಕರಕವಿಶೇಖರ ಎಂಬೀ ಹೆಸರುಗಳೇ ಕವಿಗೆ ಪಾಂಡಿತ್ಯದ ಪ್ರತಿಭೆಯ ಹೆಮ್ಮೆ ವಿಶೇಷವಾಗಿದ್ದಿತೆಂಬುದನ್ನು ಸೂಚಿಸುತ್ತವೆ. ಇವನು ತನ್ನ ಕವಿತೆಯ ಮೇಲ್ಮೆಯನ್ನೂ ಪಾಂಡಿತ್ಯಪ್ರತಾಪವನ್ನೂ ಯಾವ ಬಗೆಯ ಸಂಕೋಚವೂ ಇಲ್ಲದೆ ಹೊಗಳಿಕೊಂಡಿದ್ದಾನೆ.

ಲೀಲಾವತೀಪ್ರಬಂಧ ಹದಿನಾಲ್ಕು ಆಶ್ವಾಸಗಳುಳ್ಳ ಪ್ರೌಢಕಾವ್ಯ. ತಾನು ಈ ಕಾವ್ಯದಲ್ಲಿ ಶೃಂಗಾರವನ್ನು ಸೆರೆಹಿಡಿದಿಟ್ಟಿರುವಂತೆ ಹೇಳಿಕೊಂಡಿದ್ದಾನೆ. ಆದ್ದರಿಂದಲೇ ಇವನಿಗೆ ಶೃಂಗಾರಕಾರಾಗೃಹ ಎಂಬ ಬಿರುದು ಬಂತೆಂದು ತೋರುತ್ತದೆ. ಈ ದೊಡ್ಡ ಕಾವ್ಯವನ್ನು ಒಂದೇ ವರ್ಷದಲ್ಲಿ ಬರೆದು ಮುಗಿಸಿದನಂತೆ. ಕಾವ್ಯದಲ್ಲಿರುವ ಕಥೆ ಸ್ವಲ್ಪ; ವರ್ಣನೆಯೇ ಅಪಾರವಾಗಿ ಬೆಳೆದಿದೆ. ಕಂದರ್ಪದೇವನೆಂಬ ಒಬ್ಬ ರಾಜಕುಮಾರ ಒಂದು ರಾತ್ರಿ ಕನಸಿನಲ್ಲಿ ಮಹಾಸುಂದರಿಯಾದ ತರುಣಿಯೊಬ್ಬಳನ್ನು ಕಂಡು ಅವಳನ್ನು ಮೆಚ್ಚಿ ಮೋಹಿಸಿದ. ಮಾರನೆಯ ದಿನ ಬೆಳಗ್ಗೆ ತನ್ನ ಕನಸಿನ ಸುಂದರಿ ಎಲ್ಲಿರುವಳೋ ಎಂದು ಹುಡುಕಲು ನಿರ್ಧರಿಸಿ ತನ್ನ ಸ್ನೇಹಿತನಾದ ಮಂತ್ರಿಪುತ್ರ ಮಕರಂದವನ್ನೂ ಜತೆಯಲ್ಲಿ ಕರೆದುಕೊಂಡು ಪ್ರಯಾಣ ಹೊರಟ. ಕುಸುಮಪುರದ ಅರಸು ಶೃಂಗಾರಶೇಖರನ ಮಗಳು ಲೀಲಾವತಿ ಕನಸಿನಲ್ಲಿ ಸುಂದರ ಪುರುಷನೊಬ್ಬನನ್ನು ಕಂಡು ಮೋಹಿಸಿ ಅವನನ್ನು ಹುಡುಕಲು ಜನರನ್ನು ಅಟ್ಟಿದಳು. ಕೊನೆಗೆ ಇವರಿಬ್ಬರೂ ಸಂಧಿಸಿ ಪರಸ್ಪರ ಒಲಿದು ಮದುವೆಯಾದರು. ಕಂದರ್ಪದೇವ ಲೀಲಾವತೀ ಸಮೇತನಾಗಿ ಬನವಾಸಿಗೆ ಬಂದು ಸುಖವಾಗಿ ರಾಜ್ಯವಾಳಿದ್ದ. ಈ ಚಿಕ್ಕ ಕಥೆಯ ಹಂದರದ ಮೇಲೆ ನೇಮಿಚಂದ್ರ ಅನೇಕ ಸನ್ನಿವೇಶಗಳನ್ನು ಸೃಷ್ಟಿಸಿ ಶೃಂಗಾರರಸಪ್ರತಿಪಾದನೆಗೆ ಬೇಕಾದಷ್ಟು ಅವಕಾಶವನ್ನು ಕಲ್ಪಿಸಿಕೊಂಡಿದ್ದಾನೆ. ಸ್ವಪ್ನಸಂದರ್ಶನದಿಂದಲೇ ಮನಸ್ಸಿನಲ್ಲಿ ಮೊಳೆತ ಮೆಚ್ಚಿಗೆಯ ಮೋಹ ಬಲಿತು ಪ್ರೇಮಿಗಳು ಪರಸ್ಪರ ಸಂದರ್ಶನಕ್ಕೆ ಹಂಬಲಿಸಿ ಕಾತರರಾಗಿ ಅನ್ವೇಷಣೆ ನಡೆಸಿದ ವೃತ್ತಾಂತ, ನಾಯಕನಾಯಕಿಯರ ಪರಸ್ಪರ ಸಂದರ್ಶನ, ಸಮ್ಮೋಹಸಮಾಗಮಗಳ ಕಥೆ ಶೃಂಗಾರರಸಪ್ರತಿಪಾದನೆಗೆ ಹಲವು ಸಂದರ್ಭಗಳನ್ನು ಒದಗಿಸಿವೆ. ಆದರೆ ನೇಮಿಚಂದ್ರ ಪ್ರೇಮಿಗಳ ಮನೋವೃತ್ತಿಯ ನಾನಾ ಅವಸ್ಥೆಗಳನ್ನು ಬಣ್ಣಿಸುವ ಭರದಲ್ಲಿ ಅನೇಕ ಕಡೆ ಲಜ್ಜೆ, ಸಂಕೋಚ ಮತ್ತು ಗಾಂಭೀರ್ಯಗಳನ್ನು ಮರೆತಿದ್ದಾನೆ. ಇವನ ಒಲವು ಹೆಚ್ಚಾಗಿ ಆಂಗಿಕಶೃಂಗಾರ ನಿರೂಪಣೆಯ ಕಡೆಗೇ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಹಲವು ಸಂದರ್ಭಗಳಲ್ಲಿ ಇವನ ಶೃಂಗಾರ ನಿರೂಪಣೆ ಸುಸಂಸ್ಕೃತರಾದ ವಾಚಕರಿಗೆ ಬೇಸರವನ್ನೇ ತರಿಸುವಂತಿದೆ.

ಈ ಕಾವ್ಯ ಬಾಣಭಟ್ಟನ ಕಾದಂಬರಿಯನ್ನೂ ಮೀರಿಸಿದೆಯೆಂದು ಕೆಲವರು ಹೇಳುವುದುಂಟು. ಕಾದಂಬರೀಕಾವ್ಯವನ್ನು ಸುಟ್ಟು ಲೀಲಾವತಿಗೆ ತಿಲಕವಿಟ್ಟು ಆನೆಯ ಮೇಲೆ ಮೆರವಣಿಗೆ ಮಾಡಲಾಯಿತೆಂಬ ಕಥೆ ಆಮೇಲಿನ ಕೆಲವು ಕನ್ನಡ ಕೃತಿಗಳಲ್ಲಿ ಪ್ರಸ್ತಾಪಿತವಾಗಿದೆಯಾದರೂ ಇದು ದಂತಕಥೆಯೆನ್ನಬಹುದು. ಆದರೆ ಕಾದಂಬರಿಯ ಔನ್ನತ್ಯಗಾಂಭೀರ್ಯಗಳು ಇಲ್ಲಿ ಕಾಣಿಸುವುದಿಲ್ಲ. ನೇಮಿಚಂದ್ರ ಮಹಾಪಂಡಿತ, ಇವನಿಗೆ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡಗಳಲ್ಲಿ ಆಳವಾದ ಪಾಂಡಿತ್ಯವಿದೆ. ಕನ್ನಡ ಭಾಷೆ ಇವನಿಗೆ ವಶವಾಗಿದೆ. ಇವನ ಭಾಷಾಪ್ರಭುತ್ವ ಯಾರನ್ನಾದರೂ ಬೆರಗುಗೊಳಿಸುತ್ತದೆ. ಇವನ ಶಬ್ದಭಂಡಾರ ವಿಪುಲವಾದದ್ದು. ನಿಘಂಟುಗಳಲ್ಲಿ ದೊರೆಯದ ಅನೇಕ ಅಪರೂಪ ಶಬ್ದಗಳು ಕೃತಿಯಲ್ಲಿ ಹೇರಳವಾಗಿ ಸಿಕ್ಕುತ್ತವೆ. ಕವಿಯ ವರ್ಣನಾವೈಭವದಲ್ಲಿ ಹಲವು ಸಲ ವಾಚಕರು ಕತೆಯ ಸನ್ನಿವೇಶವನ್ನೇ ಮರೆತುಹೋಗುವ ಸಂದರ್ಭಗಳೂ ಉಂಟು. ಆದರೆ ಆ ವರ್ಣನೆಗಳಲ್ಲಿಯೂ ಸಹಜತೆ ಕಡಿಮೆ. ಕೃತಕವೂ ಚಮತ್ಕಾರಯುಕ್ತವೂ ಆದ ಉಪಮಾರೂಪಕಾದಿ ಅಲಂಕಾರಗಳು ಈತನ ಕೃತಿಯಲ್ಲಿ ಹೇರಳವಾಗಿ ಸಿಕ್ಕುತ್ತವೆ.

ಲೀಲಾವತೀಪ್ರಬಂಧ ಬಹಳ ಮಟ್ಟಿಗೆ ಸುಬಂಧು ಕವಿಯ ವಾಸವದತ್ತಾ ಕೃತಿಯ ಕಥೆಯನ್ನು ಹೋಲುತ್ತದೆ. ಅದರ ಆಧಾರದ ಮೇಲೆಯೇ ನೇಮಿಚಂದ್ರ ಈ ಕೃತಿಯನ್ನು ಕಟ್ಟಿರುವಂತೆ ತೋರುತ್ತದೆ. ಆದರೆ ಕಥೆಯಲ್ಲಿ ಒಂದೆರಡು ಮಾರ್ಪಾಟುಗಳನ್ನು ಮಾಡಿದ್ದಾನೆ. ಪಾತ್ರಗಳ ಹೆಸರುಗಳನ್ನೂ ಕೆಲವು ಕಡೆ ವ್ಯತ್ಯಾಸ ಮಾಡಿದ್ದಾನೆ. ಅಲ್ಲದೆ ಸುಬಂಧುವಿನ ಕೃತಿಯಲ್ಲಿ ಇಲ್ಲದ ಜೈನಮತದ ಆವರಣವನ್ನು ಇಲ್ಲಿ ಕವಿ ಕಲ್ಪಿಸಿದ್ದಾನೆ. ಆದರೆ ಈ ಕೃತಿಯಲ್ಲಿ ನೈಜವಾದ ಪಾತ್ರಚಿತ್ರಣವಾಗಲಿ ಹೃದಯಾಹ್ಲಾದಕಾರಿಯಾದ ಸನ್ನಿವೇಶ ವರ್ಣನೆಯಾಗಲಿ ವಿಶೇಷವಾಗಿ ಕಾಣಿಸುವುದಿಲ್ಲ. ನೇಮಿಚಂದ್ರ ಲೀಲಾವತಿಯಂಥ ಪ್ರಣಯ ವೃತ್ತಾಂತವನ್ನು ತನ್ನ ಕಾವ್ಯವಸ್ತುವಾಗಿ ಆರಿಸಿಕೊಳ್ಳದೆ ಯಾವುದಾದರೊಂದು ಇತಿಹಾಸ ಕಥೆಯನ್ನೋ ಒಂದು ಜಿನೇಂದ್ರಚರಿತ್ರೆಯನ್ನೋ ವಸ್ತುವಾಗಿ ತೆಗೆದುಕೊಂಡಿದ್ದರೆ ಇವನ ಪಾಂಡಿತ್ಯಪ್ರತಿಭೆಗಳಿಗೆ ಹೆಚ್ಚಿನ ಶೋಭೆ ಬರುತ್ತಿದ್ದಿತೆಂದು ಹೇಳಬಹುದು.

ನೇಮಿನಾಥಪುರಾಣ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿಜಿನೇಶ್ವರನ ಪುಣ್ಯಚರಿತ್ರೆ. ಇದರಲ್ಲಿ ಎಂಟು ಆಶ್ವಾಸಗಳಿವೆ. ಈ ಕಾವ್ಯದಲ್ಲಿ ಕೌರವ ಪಾಂಡವರ ಕಥೆ, ಶ್ರೀಕೃಷ್ಣಚರಿತ್ರೆ ಮತ್ತು ನೇಮಿಜಿನೇಶ್ವರನ ಕಥೆ - ಈ ಮೂರನ್ನೂ ಸೇರಿಸಿ ಹೇಳಲು ಹೊರಟು ಕೃಷ್ಣ ಕಂಸನನ್ನು ಕೊಂದ ವೃತ್ತಾಂತವನ್ನು ಹೇಳಿ ಮುಗಿಸುವ ವೇಳೆಗೆ ಕಾವ್ಯ ನಿಂತುಹೋಗಿದೆ. ಇದರಲ್ಲಿ ಇವನು ಹೇಳಬಯಸಿದ ಮೂರು ಕಥೆಗಳಲ್ಲಿ ಯಾವುದೂ ಪೂರ್ಣವಾಗದೆ ಅರ್ಧದಲ್ಲಿಯೇ ನಿಂತುಹೋಗಿದೆ. ಆ ಕಾರಣದಿಂದಲೇ ಈ ಕೃತಿಗೆ ಅರ್ಧನೇಮಿಪುರಾಣವೆಂಬ ಹೆಸರು ಪ್ರಚಾರದಲ್ಲಿದೆ. ಆದ್ದರಿಂದ ಬಹುಶಃ ನೇಮಿಚಂದ್ರ ಈ ಕೃತಿಯನ್ನು ಪೂರ್ಣ ಮಾಡದೆಯೇ ಮರಣಹೊಂದಿರಬಹುದೆಂದು ತೋರುತ್ತದೆ. ಸೂಕ್ತಿ ಸುಧಾರ್ಣವ, ಕಾವ್ಯಸಾರ ಎಂಬ ಸಂಕಲನ ಗ್ರಂಥಗಳಲ್ಲಿ ನೇಮಿನಾಥಪುರಾಣದ ಪದ್ಯಗಳು ಉದ್ಧೃತವಾಗಿವೆ.

ಸಾಧಾರಣವಾಗಿ ಜೈನಪುರಾಣಗಳಲ್ಲಿ ದೀರ್ಘವಾಗಿರುವ ಕಥಾನಾಯಕನ ಭವಾವಳಿಯ ಕಥನ ಅರ್ಧನೇಮಿಯ ಪುರಾಣದಲ್ಲಿ ಬಹಳ ಸಂಕ್ಷೇಪವೂ ರಮ್ಯವೂ ಆಗಿದೆ. ವಿಂಧ್ಯಕವಾಗುರೆಯರ ವೃತ್ತಾಂತ, ಇಭ್ಯಕೇತುವಿನ ಕಥೆ - ಇವು ನೇಮಿಚಂದ್ರನಿಗೆ ಆಧಾರವಾದ ಜಿನಸೇನ ಗುಣಭದ್ರರ ಕೃತಿಗಳಲ್ಲಿಯೂ ಕಾಣಿಸುವುದಿಲ್ಲ. ನೇಮಿಚಂದ್ರ ಮೂಲಕಥೆಯನ್ನು ಸಂಗ್ರಹಿಸಿ ಹೇಳುತ್ತಾ ಕೆಲವು ಹೊಸ ಕಥೆಗಳನ್ನು ಸೇರಿಸಿದ್ದಾನೆ. ಇವುಗಳನ್ನು ಕವಿ ಬೇರೆ ಯಾವ ಗ್ರಂಥದಿಂದ ಆರಿಸಿಕೊಂಡನೋ ತಿಳಿಯದು.

ನೇಮಿನಾಥಪುರಾಣದಲ್ಲಿ ಹಲವಾರು ಕಥೆಗಳನ್ನು ಜೋಡಿಸಿರುವುದರಿಂದ ಇಲ್ಲಿ ವಸ್ತ್ವೈಕ್ಯವಿಲ್ಲ ; ಕಥಾರಚನೆಯಲ್ಲಿ ಏಕಸೂತ್ರತೆ ಇಲ್ಲ. ಆದರೆ ಹೇಳಿರುವ ಬಿಡಿ ಕಥೆಗಳು, ವರ್ಣಿಸಿರುವ ಹಲವು ಸನ್ನಿವೇಶಗಳು ಬಹಳ ಸುಂದರವಾಗಿವೆ. ಈ ಕಥೆಗಳನ್ನು ಜೋಡಿಸಿರುವುದರಲ್ಲಿ ಕವಿ ತನ್ನ ಕಲಾವಂತಿಕೆಯನ್ನು ಚೆನ್ನಾಗಿ ತೋರಿಸಿಕೊಂಡಿದ್ದಾನೆ. ಇವನ ಕವಿತ್ವವೈಭವ ಲೀಲಾವತಿಗಿಂತ ಈ ಕೃತಿಯಲ್ಲಿ ಚೆನ್ನಾಗಿ ಪ್ರಕಾಶವಾಗಿದೆ. ವಾಮನಾವತಾರದ ಕಥೆಯನ್ನು ಕವಿ ಬಹಳ ರಸವತ್ತಾಗಿ, ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ್ದಾನೆ. ಚಾಣೂರ ಕೃಷ್ಣರ ಮಲ್ಲಯುದ್ಧವನ್ನು ಮನದುಂಬುವಂತೆ ವರ್ಣಿಸಿದ್ದಾನೆ. ಈ ಸನ್ನಿವೇಶಗಳನ್ನು ಚಿತ್ರಿಸುವಾಗ ಪಂಪನಿಂದ ಪ್ರಭಾವಿತನಾಗಿರುವಂತೆ ತೋರುತ್ತದೆ. ಶ್ರೀಕೃಷ್ಣನ ವಿಶ್ವರೂಪದರ್ಶನ ವೃತ್ತಾಂತವನ್ನು ಪಂಪ ಬಹಳ

ಸೂಕ್ಷ್ಮವಾಗಿ ಹೇಳಿ ಮುಗಿಸಿದ್ದರೆ ನೇಮಿಚಂದ್ರ ಅದನ್ನು ವಾಮನಾವತಾರ ಕಥೆಯಲ್ಲಿ ವಿಸ್ತಾರವಾಗಿ ಹೇಳಿದ್ದಾನೆ. ಭೀಮ-ಜರಾಸಂಧರ ಯುದ್ಧ, ಭೀಮ-ಕೀಚಕರ ಮಲ್ಲಯುದ್ಧದ ವರ್ಣನೆ, ನೇಮಿಚಂದ್ರಕವಿಯು ಮನೋನೇತ್ರದೆದುರಿಗಿದ್ದಂತೆ ತೋರುತ್ತದೆ. ಚಾಣೂರ-ಕೃಷ್ಣರ ಮಲ್ಲಯುದ್ಧವನ್ನು ಬಣ್ಣಿಸುವಾಗ, ಈ ಸನ್ನಿವೇಶ ನಿರೂಪಣೆಗೆ ತೊಡಗಿದಾಗ ನೇಮಿಚಂದ್ರ ತನ್ನ ಪಾಂಡಿತ್ಯವನ್ನು ಮರೆತು ಕವಿತಾಪ್ರತಿಭೆಯನ್ನೇ ಮೆರೆಸಿದ್ದಾನೆ. ಈ ಸನ್ನಿವೇಶ ಮಾತಿನಲ್ಲಿ ಮೂಡಿಬಂದ ಉತ್ತಮ ವರ್ಣಚಿತ್ರದಂತೆ ಶೋಭಿಸುತ್ತದೆ. ಇಲ್ಲಿ ಕವಿಯ ಮಾತುಗಾರಿಕೆ ಮತ್ತು ಸಹಜವರ್ಣನೆಗಳು ಯಾರಾದರೂ ಮೆಚ್ಚಿ ಕೊಳ್ಳುವಂತಿವೆ. ಕನ್ನಡ ಕವಿಗಳು ನೇಮಿನಾಥಪುರಾಣವನ್ನು ಹಾರ್ದಿಕವಾಗಿ ಮೆಚ್ಚಿಕೊಂಡು ರಸೋರಸಾಯನವೋ ಕೃತಿವಸಂತವೋ ಕಿವಿಗಳಮೃತವೋ ಎಂದು ಬಹುವಾಗಿ ಹೊಗಳಿದ್ದಾರೆ. ಪಾಂಡಿತ್ಯ ಪ್ರತಿಭೆಶೈಲಿ ವರ್ಣನಾನೈಪುಣ್ಯ ಅಭಿರುಚಿ ಕಥನಕೌಶಲ - ಈ ಎಲ್ಲವನ್ನೂ ಗಮನಿಸಿದರೆ ನೇಮಿಚಂದ್ರನನ್ನು ಪಂಪ, ಕುಮಾರವ್ಯಾಸರ ಅಗ್ರಪಂಕ್ತಿಗೆ ಸೇರಿಸಲಾಗಿದಿದ್ದರೂ ದ್ವಿತೀಯ ಸ್ತರದ ಕವಿಗಳ ಸಾಲಿನಲ್ಲಿ ಮಾನ್ಯ ಸ್ಥಾನವನ್ನು ನೀಡಬಹುದಾಗಿದೆ. (ಕಿ.ವಿ.ಇ.)

**ನೊಣವಿನಕೆರೆ:** ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿ ತಿಪಟೂರಿನಿಂದ ಆಗ್ನೇಯಕ್ಕೆ ಸುಮಾರು 13 ಕಿಮೀ ದೂರದಲ್ಲಿರುವ ಗ್ರಾಮ. ಶಾಸನಗಳಲ್ಲಿ ನೊಣಬನಕೆರೆ ಎಂದು ಉಲ್ಲೇಖಗೊಂಡಿರುವ ಈ ಊರಿನ ಬಳಿ ವಿಶಾಲವಾದ ದೊಡ್ಡ ಕೆರೆಯೊಂದು ಇದೆ. ಕೆರೆ ಬಹಶಃ ನೊಳಂಬ ರಾಜನೊಬ್ಬನಿಂದ ನಿರ್ಮಿತವಾಗಿದ್ದು ಅದೇ ಊರಿನ ಹೆಸರಿಗೆ ಕಾರಣವಾಗಿರಬಹುದು.

ವಾಸ್ತುಶಿಲ್ಪ ಹಾಗೂ ಕಲೆಯ ದೃಷ್ಟಿಯಿಂದ ಪ್ರಮುಖವೆನಿಸಿದ ಕೆಲವು ಶೈವ ಹಾಗೂ ವೈಷ್ಣವ ದೇವಾಲಯಗಳು ಈ ಊರಿನಲ್ಲಿವೆ. ಸುಮಾರು ಹತ್ತನೆಯ ಶತಮಾನದ ನೊಳಂಬರ ಕಾಲದ ನೊಣಬೇಶ್ವರ, ಶಾಂತೇಶ್ವರ, ಗರಿಗೇಶ್ವರ, ಚೋಳೇಶ್ವರ ಹಾಗೂ ಕಲ್ಲೇಶ್ವರ ಎಂಬ ಐದು ಶಿವದೇವಾಲಯಗಳವೆ. ಆದರೆ ಹೆಚ್ಚು ಪ್ರಸಿದ್ಧವಾದ ದೇವಾಲಯಗಳೆಂದರೆ ಹೊಯ್ಸಳ ಕಾಲದ ವೇಣುಗೋಪಾಲ ಅಥವಾ ಗೋಪಾಲಸ್ವಾಮಿ ದೇವಾಲಯ ಹಾಗೂ ವಿಜಯನಗರ ಕಾಲಕ್ಕೆ ಸೇರುವ ಬ್ಯಾಟರಾಯ ದೇವಾಲಯ.

ನೊಣಬೇಶ್ವರ ಹಾಗೂ ಗರಿಗೇಶ್ವರ ದೇವಾಲಯಗಳು ತುರುವೇಕೆರೆಗೆ ಹೋಗುವಮಾರ್ಗದ ಪಕ್ಕದಲ್ಲಿ ದಿಬ್ಬದ ಮೇಲಿವೆ. ನೊಣಬೇಶ್ವರನ ಗುಡಿ ಒಂದು ಚಿಕ್ಕಕಟ್ಟಡ. ಮೂಲತಃ ಕಗ್ಗಲ್ಲಿನಿಂದ ನಿರ್ಮಿತವಾಗಿದ್ದು ಹತ್ತೊಂಬತ್ತನೆಯ ಶತಮಾನದಲ್ಲಿ ಜೀರ್ಣೋದ್ಧಾರ ಮಾಡಿದಾಗ ಇಟ್ಟಿಗೆಯ ಗೋಡೆಗಳನ್ನು ನಿರ್ಮಿಸಲಾಗಿದೆ. ಚಿಕ್ಕ ಗರ್ಭಗೃಹ, ತೆರೆದ ಸುಕನಾಸಿ ಹಾಗೂ ನವರಂಗಗಳಿವೆ. ಇಲ್ಲಿನ ಲಿಂಗ ಮಧ್ಯಮ ಗಾತ್ರದ್ದಾಗಿದ್ದು ಮೇಲ್ಭಾಗ ಚಪ್ಪಟೆಯಾಗಿದೆ. ಸುಕನಾಸಿ ಹಾಗೂ ನವರಂಗದ ಕಂಬಗಳು ಚತುರಸ್ರ ಮತ್ತು ಅಷ್ಟಕೋನಗಳಿಂದ ಕೂಡಿದ್ದು ಗಂಟೆಯಾಕಾರದ ಕಂಠದ ಮೇಲೆ ಚಿತ್ರಗಳನ್ನು ಹೊಂದಿವೆ. ನವರಂಗದ ಭುವನೇಶ್ವರಿಯಲ್ಲಿ ಒಂಬತ್ತು ಫಲಕಗಳಿದ್ದು ಮಧ್ಯದಲ್ಲಿ ಪದ್ಮವನ್ನು ಬಿಡಿಸಿದೆ. ನವರಂಗದ್ವಾರದ ಎರಡೂ ಪಾರ್ಶ್ವಗಳಲ್ಲಿ ಅಷ್ಟಕೋನದ ಅರೆಗಂಬ, ಲಾಳಾಕೃತಿಯ ಕೀರ್ತಿ ಮುಖ ಹಾಗೂ ಲತಾಪಟ್ಟಿಕೆಗಳಿವೆ. ಕಪೋತದ ಮೇಲೂ ಇದೇ ಬಗೆಯ ಕೀರ್ತಿ ಮುಖಗಳಿವೆ. ನೊಣಬೇಶ್ವರ ದೇವಾಲಯಕ್ಕೆ ಉತ್ತರದಲ್ಲಿರುವ ಗರಿಗೇಶ್ವರ ಅದೇ ಬಗೆಯ ದ್ವಾರ ಹಾಗೂ ಕಂಬಗಳಿಂದ ಕೂಡಿದೆ. ಮೂಲತಃ ಇವೆರಡೂ ಅವಳಿ ದೇವಾಲಯಗಳಾಗಿದ್ದವೆಂದು ಹೇಳಬಹುದು. ಇವೆರಡೂ ದೇವಾಲಯಗಳ ನಡುವೆ ಚಿಕ್ಕ ವೇದಿಕೆಯೊಂದರ ಬಳಿ ಸಪ್ತಮಾತೃಕೆ ವಿಗ್ರಹಗಳಿದ್ದುವು (ಈಗ ಇವನ್ನು ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿಡಲಾಗಿದೆ).

ಗರಿಗೇಶ್ವರ ದೇವಾಲಯದ ಹಿಂದೆ ಅನತಿದೂರದಲ್ಲೇ ಶಾಂತೇಶ್ವರ ದೇವಾಲಯವಿದೆ. ಇದು ಮೇಲಿನ ಎರಡು ದೇವಾಲಯಗಳಂತಿದ್ದರೂ ತೆರೆದ ಸುಕನಾಸಿ ಹಾಗೂ ಹೆಚ್ಚು ಅಲಂಕೃತ ಕಂಬಗಳಿಂದ ಕೂಡಿದೆ. ನವರಂಗದಲ್ಲಿ ವಿಶಿಷ್ಟ ರೀತಿಯಲ್ಲಿ ಅಲಂಕೃತವಾದ ಪ್ರಾಚೀನ ನಂದಿ ವಿಗ್ರಹವಿದೆ. ಕೆರೆಯ ಉತ್ತರ ತೂಬಿನ ಪೂರ್ವಕ್ಕಿರುವ ಕಲ್ಲೇಶ್ವರ ದೇವಾಲಯ ಚಿಕ್ಕ ಗರ್ಭಗೃಹ ತೆರೆದ ಸುಕನಾಸಿ ಹಾಗೂ ನವರಂಗಗಳನ್ನು ಹೊಂದಿದೆ. ಸು. 11ನೆಯ ಶತಮಾನಕ್ಕೆ ಸೇರುವ ಈ ದೇವಾಲಯದ ಮೂಲಗೋಡೆಗಳು ಚೋಳಕಾಲದಲ್ಲಿ ಇಟ್ಟಿಗೆಗಳಿಂದ ರಚಿತವಾಗಿದ್ದಿರಬೇಕು. ಹೆಚ್ಚು ಕಡಿಮೆ ಮೇಲೆ ಹೇಳಿದ ಇತರ ದೇವಾಲಯಗಳಂತೆಯೇ ನಿರ್ಮಿತವಾಗಿರುವ ಚೋಳೇಶ್ವರ ದೇವಾಲಯ ಊರ ಮಧ್ಯದಲ್ಲಿ ವೇಣುಗೋಪಾಲ ದೇವಾಲಯಕ್ಕೆ ದಕ್ಷಿಣದಲ್ಲಿ ನಿಂತಿದೆ.

ಹೊಯ್ಸಳರ ಕಾಲದ ವೇಣುಗೋಪಾಲ ಅಥವಾ ಗೋಪಾಲಸ್ವಾಮಿ ದೇವಾಲಯ ತ್ರಿಕೂಟಾಚಲ. ಒಳಗಿನ ನವರಂಗ, ಪಶ್ಚಿಮದ ಸುಕನಾಸಿ, ಮೂರು ಗರ್ಭಗೃಹಗಳು ಹಾಗೂ ಗೋಪುರವಿಲ್ಲದ ಮಹಾದ್ವಾರ - ಇವು ಹೊಯ್ಸಳ ಕಾಲದ ರಚನೆಗಳು. ಮುಖಮಂಟಪ, ಹದಿನಾರು ಕೋನದ ಅರೆಗೋಳವಿಯಾಕಾರದ ದಿಂಡಿನ ಆರು ಕಂಬಗಳಿಂದ ಕೂಡಿದ ಹೊರನವರಂಗಗಳು, ಅನಂತರ ಕಾಲಕ್ಕೆ ಅಂದರೆ ಬಹುಶಃ ವಿಜಯನಗರ ಕಾಲಕ್ಕೆ ಸೇರುತ್ತವೆ. ದಕ್ಷಿಣ ಗರ್ಭಗೃಹದಲ್ಲಿ ವೇಣುಗೋಪಾಲ, ಉತ್ತರದಲ್ಲಿ ಯೋಗಾನರಸಿಂಹ ಹಾಗೂ ಪಶ್ಚಿಮದಲ್ಲಿ ಜನಾರ್ದನ ವಿಗ್ರಹಗಳು ಇವೆ. ಇವು ಹೊಯ್ಸಳ ಶಿಲ್ಪಗಳು. ಜನಾರ್ದನ ವಿಗ್ರಹ ಸ್ವಲ್ಪ ಭಿನ್ನವಾಗಿವೆ. ವಿಜಯನಗರದ ಕಾಲಕ್ಕೆ ಸೇರುವ ವಿಶ್ವಕ್ಸೇನ ಹಾಗೂ ವೈಷ್ಣವ ವಿಗ್ರಹಗಳು ಈ ದೇವಾಲಯದಲ್ಲಿವೆ. ಲೋಹದ ಜನಾರ್ದನ ಮೂರ್ತಿಗಳು ತುಂಬ ಸುಂದರವಾಗಿದ್ದು ಇವು ವಿಜಯನಗರ ಕಾಲದ ರಚನೆಗಳಾಗಿವೆ.

ಬ್ಯಾಟರಾಯ ದೇವಾಲಯ ಸು. 16ನೆಯ ಶತಮಾನದಲ್ಲಿ ಕೋನೇರಿ ಅಯ್ಯಂಗಾರ್ ಎಂಬುವರಿಂದ ನಿರ್ಮಿತವಾಯಿತೆಂದು ತಿಳಿದುಬರುತ್ತದೆ. ಈ ದೇವಸ್ಥಾನದ ನವರಂಗದ ಕಂಬವೊಂದರ ಮೇಲೆ ಗಡ್ಡಬಿಟ್ಟು ಟೋಪಿಯನ್ನು ಹಾಕಿಕೊಂಡು ಕೈಮುಗಿದುಕೊಂಡಿರುವ ಪುರುಷವಿಗ್ರಹವೇ ಕೋನೇರಿ ಅಯ್ಯಂಗಾರ್ಯರ ಚಿತ್ರವೆಂದು ಹೇಳುತ್ತಾರೆ. ದೇವಾಲಯದಲ್ಲಿ ಗೋಪುರವಿಲ್ಲದ ಮಹಾದ್ವಾರ, ಗರ್ಭಗೃಹ, ಸುಕನಾಸಿ ಮತ್ತು ನವರಂಗಮಂಟಪ ಇವೆ. ಇಲ್ಲಿನ ಕಂಬಗಳ ಮೇಲೆ ವಿಜಯನಗರದ ಕೃಷ್ಣದೇವರಾಯ, ಅವನ ರಾಣಿಯರು ಹಾಗೂ ಇತರ ಪ್ರಮುಖರ ಮೂರ್ತಿಗಳನ್ನು ಕೆತ್ತಿದೆ. ಅಲಮೇಲುದೇವಿ, ಗಣೇಶ, ಸುದರ್ಶನ ಮತ್ತು ವೈಷ್ಣವ ಆಳ್ವಾರರುಗಳ ವಿಗ್ರಹಗಳೂ ಈ ದೇವಾಲಯದಲ್ಲಿವೆ. ಗರ್ಭಗೃಹದಲ್ಲಿ ಪ್ರಭಾವಳಿಸಹಿತವಾದ ಕಪ್ಪು ಶಿಲೆಯ ಸುಂದರ ವೆಂಕಟೇಶಮೂರ್ತಿ ಇದೆ. ಈ ವಿಗ್ರಹ ಹೊಯ್ಸಳ ಶೈಲಿಯ ಪ್ರಭಾವಕ್ಕೆ ಒಳಗಾದ ವಿಜಯನಗರ ಕಾಲದ ಶಿಲ್ಪಕ್ಕೆ ಒಂದು ಒಳ್ಳೆಯ ನಿದರ್ಶನ.

ಉಡಸಲಮ್ಮ ಎಂಬ ಗ್ರಾಮದೇವತೆಯ ದೇವಸ್ಥಾನ ಈ ಊರಿನಲ್ಲಿದೆ. ಕೆರೆಯ ಏರಿಯ ಮೇಲೆ ಗೊಲ್ಲಮ್ಮನ ವಿಗ್ರಹವಿದ್ದು, ಅದು ಸು. 3' ಎತ್ತರ ಹಾಗೂ ನಾಲ್ಕು ಕೈಗಳನ್ನು ಹೊಂದಿದೆ. ಕೆರೆಯ ಏರಿ ಭದ್ರವಾಗಿ ನಿಲ್ಲಲು ಹಾಲು ಮೊಸರು ಮಾರುವುದಕ್ಕೆ ನಿತ್ಯ ಆ ಮಾರ್ಗವಾಗಿ ಬರುತ್ತಿದ್ದ ಗೊಲ್ಲರ ಹೆಂಗಸೊಬ್ಬಳನ್ನು ಬಲಿಕೊಟ್ಟರಂತೆ. ಅವಳು ನೀರಗಂಟಿಯ ಕನಸಿನಲ್ಲಿ ಕಾಣಿಸಿಕೊಂಡು ತನ್ನ ವಿಗ್ರಹವನ್ನು ಕೆರೆಯ ಏರಿಯ ಮೇಲೆ ಸ್ಥಾಪಿಸಲು ಕೇಳಿಕೊಂಡಳಂತೆ. ಅದರಂತೆ ನೀರಗಂಟಿ ನಡೆದುಕೊಂಡನೆಂದು ಇಲ್ಲಿಯ ಐತಿಹ್ಯವೊಂದು ತಿಳಿಸುತ್ತದೆ. ಈ ಊರಿನ ಕೆರೆಯ ಏರಿಯ ಕೆಳಗಿರುವ ಕೋಡಿಬಸವಣ್ಣನ ದೇವಸ್ಥಾನದ ಹತ್ತಿರವಿರುವ ಹೊಂಡವನ್ನು (ನಾಯಿಗುಡಿಯ ಹಳ್ಳ) ಶಿಂಷಾನದಿಯ ಉಗಮಸ್ಥಾನ ಎಂದು ಗುರುತಿಸುತ್ತಾರೆ.

ಪ್ರತಿ ವರ್ಷ ಮೇ ತಿಂಗಳಲ್ಲಿ ಬ್ಯಾಟರಾಯಸ್ವಾಮಿ ರಥೋತ್ಸವ ಜರುಗುತ್ತದೆ. ಪ್ರತಿ ಬುಧವಾರ ಈ ಊರಿನಲ್ಲಿ ಸಂತೆ ಸೇರುತ್ತದೆ.

ನೊಣವಿನಕೆರೆ ಹಿಂದೆ ಹೆಬ್ಬಾರು ಶ್ರೀವೈಷ್ಣವರ ಪಂಚಗ್ರಾಮಗಳಲ್ಲೊಂದಾಗಿತ್ತು. ಉಳಿದ ನಾಲ್ಕು

ಗ್ರಾಮಗಳೆಂದರೆ ಕಡಬ, ಮಾಯಸಂದ್ರ, ಸುಗ್ಗೇಹಳ್ಳಿ ಮತ್ತು ಬಿಂಡಿಗನವಿಲೆ. (ಎಚ್.ಎಂ.ಎಸ್.ಆರ್., ಎಸ್.ಎನ್.ಜಿ.)

**ನೊಳಂಬವಂಶ:** 8-11ನೆಯ ಶತಮಾನಗಳ ಅವಧಿಯಲ್ಲಿ ಮೊದಲಿಗೆ ನೊಳಂಬಳಿಗೆ ಸಾಸಿರ (ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಲಿನ ಪ್ರದೇಶ) ಎಂಬ ಚಿಕ್ಕ ಪ್ರಾಂತ್ಯದ ಅಧಿಪತಿಗಳಾಗಿ ಆಳ್ವಿಕೆಯನ್ನು ಪ್ರಾರಂಭಿಸಿ, 9-10ನೆಯ ಶತಮಾನಗಳಲ್ಲಿ ಪ್ರಬಲರಾಗಿ ಈಗಿನ ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಬಳ್ಳಾರಿ, ಅನಂತಪುರ, ಚಿತ್ತೂರು, ಧರ್ಮಪುರಿ ಜಿಲ್ಲೆಗಳ ಭಾಗಗಳನ್ನೊಳಗೊಂಡಿದ್ದ ನೊಳಂಬವಾಡಿ 32000 ಎಂಬ ವಿಸ್ತಾರವಾದ ಪ್ರಾಂತ್ಯವನ್ನು ಆಳಿದ ಸಾಮಂತರ ರಾಜಮನೆತನ. ಈ ಮನೆತನದ ಅರಸರು ಕಾಲಕಾಲದಲ್ಲಿ ತಲಕಾಡಿನ ಗಂಗರು, ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು ಈ ರಾಜವಂಶಗಳವರ ಅಧೀನರಾಗಿದ್ದರು. ಇವರು ಕದಂಬ, ಗಂಗ, ಕಲ್ಯಾಣದ ಚಾಳುಕ್ಯ ವಂಶಗಳೊಡನೆ ವಿವಾಹಸಂಬಂಧವನ್ನೂ ಮತ್ತು ಬಾಣರು, ವೈಡುಂಬರು, ಚೋಳರು ಮುಂತಾದವರೊಡನೆ ರಾಜಕೀಯ ಸಂಪರ್ಕವನ್ನೂ ಹೊಂದಿದ್ದರು. ಇವರ ರಾಜಧಾನಿ ಪೆಂಜೇರು ಅಥವಾ ಹೆಂಜೇರು (ಅನಂತಪುರ ಜಿಲ್ಲೆ ಮಡಕಶಿರಾ ತಾಲ್ಲೂಕಿನಲ್ಲಿರುವ ಹೇಮಾವತಿ). ಇವರ ಲಾಂಛನ ನಂದಿ.

ನೊಳಂಬ ಪದದ ವ್ಯುತ್ಪತ್ತಿ ಅನಿರ್ದಿಷ್ಟ. ಇವರು ಈಶ್ವರ ವಂಶಜರೆಂದು ಒಂದು ಶಾಸನದಲ್ಲಿ ಹೇಳಿದೆ. ಮತ್ತೊಂದು ಶಾಸನದಲ್ಲಿ ರಾಜಕುಮಾರಿಯೊಬ್ಬಳು ನೊಳಂಬ ವಂಶ ಮತ್ತು ಪಲ್ಲವ ಕುಲದವಳೆಂದೂ ವರ್ಣಿತಳಾಗಿದ್ದಾಳೆ. ಆದರೆ ನೊಳಂಬರಿಗೂ ಕಂಚಿಯ ಪಲ್ಲವರಿಗೂ ಇದ್ದ ಸಂಬಂಧವೇನೆಂಬುದು ಸರಿಯಾಗಿ ತಿಳಿದಿಲ್ಲ.

ನೊಳಂಬರ ಮೂಲಪುರುಷ ತ್ರಿಣಯನ ಪಲ್ಲವ. ಇವನನ್ನು ಈಶ್ವರ ವಂಶಜ, ಕಂಚೀಪತಿ ಎಂದು ಒಂದು ಶಾಸನ ವರ್ಣಿಸುತ್ತದೆ. ಇವನ ವಂಶದಲ್ಲಿ ಹುಟ್ಟಿದವನು ಮಂಗಳ ನೊಂಬಾಧಿರಾಜ (ಸು. 730-75). ಈತ ಕಿರಾತ ನೃಪತಿಯನ್ನು ಜಯಿಸಿದನೆಂದೂ ಕರ್ನಾಟರಿಂದ ಸ್ತುತಿಸಲ್ಪಟ್ಟವನೆಂದೂ ಹೇಮಾವತಿ ಶಾಸನದಲ್ಲಿ ಹೇಳಿದೆ. ಅನಂತರ ಇವನ ಮಗನಾದ ಸಿಂಹಪೋತ (ಸು. 775-805) ಪಟ್ಟಕ್ಕೆ ಬಂದ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಒಂದು ಶಾಸನದಿಂದ ಸಿಂಹಪೋತನು (ಕಲಿ ನೊಳಂಬಾಧಿರಾಜ) ಪೆರ್ಮಾನಡಿಯ ಆಜ್ಞೆಯ ಮೇರೆಗೆ ದುಗ್ಗಮಾರನ ಮೇಲೆ ದಂಡೆತ್ತಿಹೋದನೆಂದು ತಿಳಿಯುತ್ತದೆ. ಇಲ್ಲಿಯ ದುಗ್ಗಮಾರ ಗಂಗರಾಜ ಶ್ರೀಪುರುಷನ ಮಗ ಹಾಗೂ ಶಿವಮಾರನ ಸಹೋದರ; ಪ್ರಾಯಶಃ ಶ್ರೀಪುರುಷನ ಮರಣಾನಂತರ ಸಿಂಹಾಸನಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಸಿಂಹಪೋತನು ಶಿವಮಾರನ ಪಕ್ಷ ವಹಿಸಿ, ದುಗ್ಗ ಮಾರನ ಮೇಲೆ ದಂಡೆತ್ತಿ ಹೋಗಿರಬಹುದು. ರಾಷ್ಟ್ರಕೂಟ ಧ್ರುವನಿಂದ ಎರಡನೆಯ ಶಿವಕುಮಾರ ಪರಾಜಿತನಾದ ಮೇಲೆ ಗಂಗರ ಸಾಮಂತರಾಗಿದ್ದ ನೊಳಂಬರು ರಾಷ್ಟ್ರಕೂಟರ ಆಶ್ರಿತರಾದರು. ಸಿಂಹಾಪೋತನ ಮಗ ಚಾರುಪೊನ್ನೇರ ಪರಮೇಶ್ವರ ಪಲ್ಲವಾಧಿರಾಜ (ಸು. 805-830) ರಾಷ್ಟ್ರಕೂಟ 3 ನೆಯ ಗೋವಿಂದನ ಕೈಕೆಳಗೆ ನೊಳಂಬಳಿಗೆ ಸಾಸಿರ ಮುಂತಾದ ಪ್ರಾಂತ್ಯಗಳನ್ನಾಳುತ್ತಿದ್ದ.

ಪುನಃ ಸು. 820ರ ಹೊತ್ತಿಗೆ ನೊಳಂಬರು ತಮ್ಮ ನಿಷ್ಠೆಯನ್ನು ಪಶ್ಚಿಮದ ಗಂಗರಿಗೆ ಬದಲಾಯಿಸಿದಂತೆ ತೋರುತ್ತದೆ. ಗಂಗರಾಜನಾದ 1ನೆಯ ರಾಚಮಲ್ಲ ತನ್ನ ಮಗಳು (ನೀತಿಮಾರ್ಗನ ತಂಗಿ) ಜಾಯಬ್ಬೆಯನ್ನು ಚಾರುಪೊನ್ನೇರನ ಮಗನಾದ ಪೊಳಲ್ಚೋರನಿಗೆ ವಿವಾಹ ಮಾಡಿಕೊಟ್ಟಿದ್ದ. ಚಾರುಪೊನ್ನೇರನ ಅನಂತರ ಅವನ ಮಗ ಒಂದನೆಯ ಪೊಳಲ್ಚೋರ (ನೊಳಂಬಾಧಿರಾಜ, ಸು.830-875) ಗಂಗರುಸಾಸಿರ ಪ್ರಾಂತ್ಯವನ್ನು (ಕೋಲಾರ, ಬೆಂಗಳೂರು ಮತ್ತು ಚಿತ್ತೂರು ಜಿಲ್ಲೆಯ ಭಾಗಗಳು) ಗಂಗ ನೀತಿಮಾರ್ಗನ ಕೈಕೆಳಗೆ ಆಳುತ್ತಿದ್ದನೆಂದು ಕೋಲಾರದ ಶಾಸನದಲ್ಲಿ ಹೇಳಿದೆ. ಈ ಪ್ರಾಂತ್ಯ 810ರಲ್ಲಿ ಮಹಾಬಲಿ ಬಾಣರ ವಶದಲ್ಲಿದ್ದು ಒಂದನೆಯ ರಾಚಮಲ್ಲನ ಕಾಲದಲ್ಲಿ ನೊಳಂಬರ ವಶವಾಯಿತು. ಪೊಳಲ್ಚೋರ ಬಲಶಾಲಿ ದೊರೆ. ಈತನ ಕಾಲದಲ್ಲಿ ನೊಳಂಬರ ರಾಜ್ಯ ನೊಳಂಬಳಿಗೆಸಾಸಿರ, ಗಂಗರುಸಾಸಿರ ಅಷ್ಟೇ ಅಲ್ಲದೆ ಇನ್ನೂ ಇತರ ಪ್ರಾಂತ್ಯಗಳನ್ನೂ ಒಳಗೊಂಡಿತ್ತು. ಒಂದನೆಯ ನೀತಿಮಾರ್ಗನ ಹಿಂದೂಪುರ ಶಾಸನದಲ್ಲಿ (853) ಕಂಚಿಯ ವರೆಗೆ ರಾಜ್ಯವಾಳುತ್ತಿದ್ದನೆಂದು ಹೇಳಿರುವ ನೊಳಂಬರಾಜನು ಪೊಳಲ್ಚೋರನೇ ಇರಬಹುದೆಂಬುದಕ್ಕೆ ಸಾಂದರ್ಭಿಕ ಸಾಕ್ಷ್ಯಗಳಿವೆ. ಇವನ ಕಾಲದಲ್ಲಿ ನಂದಿಯ ಭೋಗನಂದೀಶ್ವರ ದೇವಾಲಯದ ಗೋಪುರದ ಜೀರ್ಣೋದ್ಧಾರ ಕಾರ್ಯಗಳು ನಡೆದವು. ಈತ ಅನಂತಪುರ ಜಿಲ್ಲೆಯ ಕಂಬದೂರಿನಲ್ಲಿ ಬೆಳ್ದುಗೊಂಡೆಯ ಕೆರೆಯನ್ನು ಸಹ ಕಟ್ಟಿಸಿದ.

ನೊಳಂಬಾಧಿರಾಜ ಪೊಳಲ್ಚೋರನಿಗೆ ಗಂಗವಂಶದ ಜಾಯಬ್ಬೆಯಿಂದ ಜನಿಸಿದ್ದ ಮಹೇಂದ್ರ (ನೊಳಂಬಾಧಿರಾಜ, ತ್ರಿಭುವನಧೀರ; ಸು. 875-897) ಮೊದಲು 2ನೆಯ ರಾಜಮಲ್ಲನ ಕೈಕೆಳಗೆ ಗಂಗರು ಸಾಸಿರ ಪ್ರಾಂತ್ಯದ ಅಧಿಪತಿಯಾಗಿ ರಾಜ್ಯಭಾರವನ್ನು ಪ್ರಾರಂಭಿಸಿದ. ಗಂಗವಂಶದ ಗಾಮಬ್ಬೆ ಈತನ ಪತ್ನಿ. ಈತ ವಿಸ್ತರಣಾವಾದಿ. ಗಂಗರುಸಾಸಿರ ಪ್ರಾಂತ್ಯಕ್ಕಾಗಿ ನೊಳಂಬರ ಜೊತೆ ಬಾಣರ ಕಲಹ ಇವನ ಕಾಲದಲ್ಲಿ ಮುಂದುವರಿಯಿತು. ಆದರೆ ಇವನು ಗಂಗ ರಾಚಮಲ್ಲ ಮತ್ತು ತೆಲುಗು ಚೋಳ ರಾಜನಾದ ಮಹೇಂದ್ರ ವಿಕ್ರಮರ ಸಹಾಯದಿಂದ ಬಾಣ ದೊರೆ ವಿದ್ಯಾಧರನನ್ನು ಸೋರೆಮಟಿ ಮತ್ತಿತರ ಕಡೆಗಳಲ್ಲಿ ನಡೆದ ಕಾಳಗಗಳಲ್ಲಿ ಸೋಲಿಸಿ, ಮಹಾಬಲಿಕುಲವಿಧ್ವಂಸಕ ಎಂಬ ಬಿರುದನ್ನು ಧರಿಸಿ ತನ್ನ ಆಡಳಿತವನ್ನು ಪುಲಿನಾಡಿನ ಮೇಲೂ ವಿಸ್ತರಿಸಿದ. ಈ ಸಾಧನೆಯಿಂದ ಮತ್ತನಾದ ಮಹೇಂದ್ರ ಮೇಲ್ದೊರೆಗಳಾದ ಗಂಗರ ಮೇಲೆಯೆ ಯುದ್ಧಮಾಡಿ ಅವರ ರಾಜ್ಯದ ಅನೇಕ ಭಾಗಗಳನ್ನು ವಶಪಡಿಸಿಕೊಂಡಿರಬೇಕೆಂದು ತಲಕಾಡಿಗೆ ಕೇವಲ 40 ಕಿಮೀ ದೂರದ ತಾಯಲೂರಿನಲ್ಲಿ (ಮಂಡ್ಯ ಜಿಲ್ಲೆ) ಇರುವ ಇವನ ಶಾಸನದಿಂದ (895) ಊಹಿಸಬಹುದಾಗಿದೆ. ಅಲ್ಲದೆ ಮತ್ತೊಂದು ಶಾಸನ ಮಹೇಂದ್ರನನ್ನು ಗಂಗಮಂಡಲ 96,000ದ ಅಧಿಪತಿ ಎಂದು ವರ್ಣಿಸಿದೆ. ಮಹೇಂದ್ರ ಎಷ್ಟು ಶೀಘ್ರವಾಗಿ ಉಚ್ಛ್ರಾಯಸ್ಥಿತಿಗೇರಿದನೋ ಅಷ್ಟೇ ಬೇಗ ಅವನಿಗೆ ಅಧಃ ಪತನವೂ ಕಾದಿತ್ತು. ಅನತಿಕಾಲದಲ್ಲಿ ಗಂಗರು ಹೂಡಿದ ಮರುಯುದ್ಧದಲ್ಲಿ ಹತನಾದ. ಕೂಡಲೂರಿನ ತಾಮ್ರಶಾಸನದಲ್ಲಿ ರಾಜಮಲ್ಲನ ತಮ್ಮನ ಮಗನಾದ ಎರೆಯಪ್ಪ ಅನೇಕ ಕಾಳಗಗಳಲ್ಲಿ ಮಹೇಂದ್ರನನ್ನು ಸೋಲಿಸಿ ಅವನ ರಾಜ್ಯವನ್ನು ಆಕ್ರಮಿಸಿಕೊಂಡನೆಂದು ಹೇಳಿದರೆ, ಶಿವಮೊಗ್ಗ ಜಿಲ್ಲೆಯ ಹುಮಚ ಶಾಸನದಲ್ಲಿ ಎರೆಯಪ್ಪನು ಮಹೇಂದ್ರನನ್ನು ಕೊಂದು ಮಹೇಂದ್ರಾಂತಕನೆಂಬ ಬಿರುದನ್ನು ಪಡೆದ ಎಂದು ತಿಳಿಸುತ್ತದೆ. ಏನೇ ಆದರೂ ಮಹತ್ವಾಕಾಂಕ್ಷಿಯೂ ಶೂರನೂ ಆದ ಮಹೇಂದ್ರನ ಕಾಲದಲ್ಲಿ ನೊಳಂಬರಾಜ್ಯ ಅದರ ವಿಸ್ತೀರ್ಣದ ಪರಮಾವಧಿಯನ್ನು ಮುಟ್ಟಿತ್ತು.

ಮಹೇಂದ್ರನ ತರುವಾಯ ಗಂಗರಾಜಕುಮಾರಿ ಗಾಮಬ್ಬೆಯಿಂದ ಜನಿಸಿದ ಅವನ ಮಗ ಅಯ್ಯಪ್ಪದೇವ (ಸು. 897-934) ಪಟ್ಟಕ್ಕೆ ಬಂದ. ಮಹೇಂದ್ರನ ಇನ್ನೊಬ್ಬ ಮಗನೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿರುವ ಮಧುಗಿರಿ ಶಾಸನದ (897) ನೊಳಂಬಾಧಿರಾಜ ನೊಳಿಪಯ್ಯ ಈ ಅಯ್ಯಪದೇವನಿಗೆ ಇದ್ದ ಇನ್ನೊಂದು ಹೆಸರು. ಪಟ್ಟಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೇ ಅಯ್ಯಪನು 2ನೆಯ ರಾಚಮಲ್ಲನೊಂದಿಗೆ ಯುದ್ಧಕ್ಕೆ ಹೋದ. ಅರಸೀಕೆರೆಯ ಒಂದು ಶಾಸನದ ಪ್ರಕಾರ ಇವನು ಆಸಂದಿನಾಡ ಮೇಲೆ ಯುದ್ಧ ಮಾಡಲು ತನ್ನ ಸಮಸ್ತ ಬಲದೊಂದಿಗೆ ಬಂದು ಕಲಿಕಟ್ಟೆಯಲ್ಲಿ (ಅರಸೀಕೆರೆ ತಾಲ್ಲೂಕು ಕಣಕಟ್ಟೆ) ತಂಗಿದ್ದ; ಮತ್ತು ಅಲ್ಲಿ ನಡೆದ ಯುದ್ಧದಲ್ಲಿ ಮಡಿದ ಒಬ್ಬನಿಗೆ ರಾಚಮಲ್ಲ ಹಾಗೂ ಎರೆಯಪ್ಪ ಕಲ್ನಾಡನ್ನು ಕೊಟ್ಟರು. ಈ ಯುದ್ಧದ ಫಲಿತಾಂಶ ತಿಳಿಯದು. ಆದರೆ ಅನಂತರ ಅಯ್ಯಪದೇವ ಪ್ರಾಯಶಃ ಗಂಗ ಸಾಮಂತನಾಗಿ ನೊಳಂಬವಾಡಿ 32,000 ಎಂಬ ವಿಸ್ತಾರವಾದ ಪ್ರಾಂತ್ಯವನ್ನು ಆಳಿದ. ಈತ ಪೂರ್ವ ಚಾಳುಕ್ಯ ಕುಲದ ಒಂದನೆಯ ಅಮ್ಮಣರಾಯನನ್ನು (ಸು. 918-25) ಯುದ್ಧದಲ್ಲಿ ಸೋಲಿಸಿದನೆಂದು ಧರ್ಮಪುರಿಯ ಒಂದು ಶಾಸನ ತಿಳಿಸುತ್ತದೆ. 931ರಲ್ಲಿ ಈತ ರಾಷ್ಟ್ರಕೂಟ 4ನೆಯ ಗೋವಿಂದನ

ಕೈಕೆಳಗೆ ಮಾಸವಾಡಿ ಮತ್ತು ಕೋಗಳಿ ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ಬಳ್ಳಾರಿ ಜಿಲ್ಲೆಯ ಶಿರಸ್ತಹಳ್ಳಿ ಶಾಸನದಿಂದ ತಿಳಿದುಬರುತ್ತದೆ. ಕೊನೆಗೆ ಅಯ್ಯಪದೇವ ಪೂರ್ವ ಚಾಳುಕ್ಯ ವಂಶದ ಬೀರ ಮಹೇಂದ್ರ (ಎರಡನೆಯ ಭೀಮ)ನೊಂದಿಗೆ ಗಂಗ ಎರೆಯಪ್ಪನ ಪರವಾಗಿ ತುಂಬೆಪಾಡಿಯಲ್ಲಿ ಕಾದಿ ಮಡಿದ. ಈತನಿಗೆ ಗಂಗ ವಂಶಜಳಾದ ಪೊಲ್ಲಬ್ಬರಸಿ ಮತ್ತು ನಾಗಿಯಬ್ಬೆ, ಹಳೆಯಬ್ಬೆ ಎಂಬ ಮೂವರು ಪತ್ನಿಯರೂ ಅಣ್ಣಿಗ, ದಿಲೀಪ, ಅಂಕಯ್ಯ ಮತ್ತು ನೊಳಿಪ ಎಂಬ ನಾಲ್ವರು ಗಂಡು ಮಕ್ಕಳೂ ಇದ್ದರು. ಇವನ ರಾಜ್ಯ ಕಾಲದಲ್ಲಿ ಮಕ್ಕಳಾದ ಅಣ್ಣಿಗ (920) ನೊಳಿಪ ಮತ್ತು ಅಣ್ಣಿಗನ ಮಗ ಇರುಳಚೋರ (928) ಆಡಳಿತದ ನಿರ್ವಹಣೆಯಲ್ಲಿ ಭಾಗಿಗಳಾಗಿದ್ದರು.

ಅಯ್ಯಪದೇವನ ಅನಂತರ ಗಂಗವಂಶದ ಪೊಲ್ಲಬ್ಬರಸಿಯಿಂದ ಹುಟ್ಟಿದ ಅವನ ಮಗ ಅಣ್ಣಿಗ (ಬೀರ ನೊಳಂಬ ಅಣ್ಣಯ್ಯ ಸು. 932-40) ಪಟ್ಟಕ್ಕೆ ಬಂದ. ಚಾಳುಕ್ಯ ವಂಶದ ಅತ್ತಿಯಬ್ಬರಸಿ ಈತನ ಪತ್ನಿ. ಇವನ ಕಾಲದಲ್ಲಿ ನೊಳಂಬರ ಮತ್ತು ಪಶ್ಚಿಮಗಂಗರ ಮೈತ್ರಿ ಒಡೆಯಿತು. ಗಂಗ 3ನೆಯ ರಾಚಮಲ್ಲನ ಮೇಲೆ ಈತ ಕೊತ್ತಮಂಗಲ ಎಂಬಲ್ಲಿ ಯುದ್ಧ ಹೂಡಿ ಸೋತ. ಸ್ವಲ್ಪ ಕಾಲದಲ್ಲಿಯೇ ರಾಷ್ಟ್ರಕೂಟ ಮೂರನೆಯ ಕೃಷ್ಣ ತನ್ನ ಭಾವಮೈದುನ ಬೂತುಗನಿಗೆ ರಾಜ್ಯವನ್ನು ಕೊಡಿಸಲು ಗಂಗವಾಡಿಯ ಮೇಲೆ ಆಕ್ರಮಣ ಮಾಡಿದಾಗ ಅಣ್ಣಿಗನನ್ನು ಸಹ ಸೋಲಿಸಿದ.

ಅಣ್ಣಿಗನ ತರುವಾಯ ಆತನ ತಮ್ಮ ಇರಿವನೊಳಂಬ ದಿಲೀಪ (ಸು. 940-968) ರಾಷ್ಟ್ರಕೂಟ ಸಾಮಂತನಾಗಿ ಪಟ್ಟಕ್ಕೆ ಬಂದ. ಇವನಿಗೆ ನೊಳಿಪಯ್ಯ ಎಂಬ ಇನ್ನೊಂದು ಹೆಸರೂ ಪಲ್ಲವರಾಮ. ಪಲ್ಲವರೊಡೆಗಂಡ, ತ್ರಿಭುವನ ಧೀರ, ಏಕವಾಕ್ಯ ಎಂಬ ಬಿರುದುಗಳೂ ಇದ್ದುವು. ರಾಷ್ಟ್ರಕೂಟ 3ನೆಯ ಕೃಷ್ಣ 949ರಲ್ಲಿ ಚೋಳರಾಜ್ಯದ ಮೇಲೆ ಕೈಕೊಂಡ ಈ ದಂಡಯಾತ್ರೆಯಲ್ಲಿ ಇರಿವನೊಳಂಬನೂ ಪಾಲ್ಗೊಂಡಿದ್ದ. ಇಪಿಲಿ ಎಂಬ ಸ್ಥಳದಲ್ಲಿ ನಡೆದ ಘೋರ ಕಾಳಗದಲ್ಲಿ ಗಜಾಂಕುಶ ಚೋಳನನ್ನು ಇರಿವನೊಳಂಬ ಎದುರಿಸಿದ ಎಂದು ಮಡಕ ಶಿರಾದ ಒಂದು ಶಾಸನದಲ್ಲಿ ಹೇಳಿದೆ. ದಿಲೀಪನ ಕೈಕೆಳಗೆ ಮಹಾಬಲಿ ಕುಲದ ಸಾಂಬಯ್ಯ ಕೋಲಾರ ಜಿಲ್ಲೆಯಲ್ಲಿಯೂ ವೈದುಂಬ ಶಿಖಾಮಣಿ ವಿಕ್ರಮಾದಿತ್ಯ ತಿರುವಯ್ಯ ಗಂಗರು ಸಾಸಿರ ಪ್ರಾಂತ್ಯವನ್ನೂ ಆಳುತ್ತಿದ್ದರು. 3ನೆಯ ಕೃಷ್ಣನ 26ನೆಯ ವರ್ಷದ ವೇಲೂರಿನ ಶಾಸನದಲ್ಲಿ ನೊಳಂಬ ತ್ರಿಭುವನಧೀರ (ದಿಲೀಪ) ವೇಲೂರ್‌ಪಾಟೆ ಗ್ರಾಮವನ್ನು ದತ್ತಿಯನ್ನಾಗಿ ಕೊಟ್ಟನೆಂದು ಹೇಳಿದೆ. ಆದರೆ ಇರಿವ ನೊಳಂಬನ ರಾಜ್ಯದ ಎಲ್ಲೆಯು ಅಲ್ಲಿಯ ವರೆಗೆ ವಿಸ್ತರಿಸಿತ್ತೆಂದು ಹೇಳುವುದು ಕಷ್ಟ. ದಿಲೀಪನಿಗೆ ಪಿರಿಯಬ್ಬರಸಿ ಎಂಬ ಪತ್ನಿಯೂ ನನ್ನಿನೊಳಂಬ, ಅಯ್ಯಪ ದೇವ ಎಂಬ ಮಕ್ಕಳೂ ಇದ್ದರು. 949ರಲ್ಲಿ ಅಯ್ಯಪದೇವ ಇರಿವನೊಳಂಬನ ಕೈಕೆಳಗೆ ರಾಜ್ಯವಾಳುತ್ತಿದ್ದ. ಈತನಿಗೆ ಕಂಚೀಪುರವರೇಶ್ವರ, ದಕ್ಷಿಣ ದಂಡಾಧಿಪತಿ ಮುಂತಾದ ಬಿರುದುಗಳಿದ್ದುವು.

ಇರಿವನೊಳಂಬ ದಿಲೀಪನ ಅನಂತರ ಆತನ ಜ್ಯೇಷ್ಠಪುತ್ರ ಛಲದಂಕಕಾರ ನನ್ನಿನೊಳಂಬ (ಸು. 968-70) ಪಟ್ಟಕ್ಕೆ ಬಂದ. ಇವನಿಗೆ ನನ್ನಿಪೊಳಲ್ಚೋರ (II) ಎಂಬ ಮಗನಿದ್ದ. ಈತ 965ರಲ್ಲಿ ಇರಿವನೊಳಂಬನ ಕೈಕೆಳಗೆ ರಾಜ್ಯವಾಳುತ್ತಿದ್ದ ಎಂದು ಕಂಬದೂರಿನ ಒಂದು ಶಾಸನ ಹೇಳುತ್ತದೆ. ಇದೇ ಶಾಸನದಿಂದ ಈತನಿಗೆ ರಾಜಮನೋಜ ಮುಂತಾದ ಬಿರುದುಗಳಿದ್ದವೆಂದೂ ಮತ್ತು ಈತನ ಮುಖ್ಯಮಂತ್ರಿ ಶ್ರೀವತ್ಸಗೋತ್ರದ ಚಾವುಂಡಯ್ಯನೆಂದೂ ತಿಳಿದುಬರುತ್ತದೆ. 2ನೆಯ ಪೊಳಲ್ಚೋರನಿಗೆ ಕದಂಬ ವಂಶದ ದೀವಾಂಬಿಕೆ ಅಥವಾ ದೀವಬ್ಬರಸಿ ಎಂಬ ಪತ್ನಿ ಹಾಗೂ ಇವಳಿಂದ ಜನಿಸಿದ ಮಹೇಂದ್ರ ಮತ್ತು ಇರಿವನೊಳಂಬ ಎಂಬ ಇಬ್ಬರು ಮಕ್ಕಳು ಇದ್ದರು. ಪೊಳಲ್ಚೋರ ಸ್ವತಂತ್ರವಾಗಿ ರಾಜ್ಯವಾಳಿರಲಾರ. ರಾಜಮನೋಜ ಪೊಳಲ್ಚೋರನ ಪತ್ನಿ ದೀವಬ್ಬರಸಿ ತನ್ನ ಪತಿಯ ಮರಣಾನಂತರ ಆತನ ಹೆಸರಿನಲ್ಲಿ ಪೊಳಲ್ಚೋರಮಂಗಲ ಎಂಬ ಒಂದು ಅಗ್ರಹಾರವನ್ನು ಕಟ್ಟಿಸಿದಳು. ಅನಂತರ ಮಹೇಂದ್ರನ ಪರೋಕ್ಷದಲ್ಲಿ ಪೊಳಲ್ಚೋರಮಂಗಲದಲ್ಲಿ ದೀವಬ್ಬಾಸಮುದ್ರವನ್ನು ಮಾಡಿಸಿ ಅಲ್ಲಿ ಒಂದು ವಿಷ್ಣುವಿಗ್ರಹವನ್ನು ಕಟ್ಟಿಸಿದಳೆಂದು ಅವನಿಯ ಶಾಸನವೊಂದು ತಿಳಿಸುತ್ತದೆ. ಪೊಳಲ್ಚೋರ ಅಕಾಲ ಮೃತ್ಯುವಿಗೆ ಈಡಾಗಿರಬಹುದು. ಶ್ರವಣಬೆಳಗೊಳದ ಶಾಸನದಲ್ಲಿ ನೊಳಂಬ ಕುಲಾಂತಕನೆಂದು ವರ್ಣಿತನಾಗಿರುವ 2ನೆಯ ಮಾರಸಿಂಹನಿಗೂ ನೊಳಂಬರಿಗೂ 970ರಲ್ಲಿ ನಡೆದ ಘೋರ ಯುದ್ಧದಲ್ಲಿ ಪೊಳಲ್ಚೋರನೇ ಮೊದಲಾಗಿ ಅನೇಕ ವೀರರು ಮಡಿದಿರಬೇಕು. ಮಾರಸಿಂಹ ನೊಳಂಬರನ್ನು ಸೋಲಿಸಿ ಅವರನ್ನು ಅವರ ರಾಜ್ಯದಿಂದ ಹೊರ ಅಟ್ಟಿದ್ದಂತೆ ತೋರುತ್ತದೆ. ಕಲಗೋಡು (ಬಳ್ಳಾರಿ ಜಿಲ್ಲೆ) ಶಾಸನದ ಪ್ರಕಾರ (977) ನೊಳಂಬ ಪಲ್ಲವರ ಬಿರುದುಗಳನ್ನು ಹೊಂದಿರುವ ಮಯ್ದುಮ್ಮರಸನೆಂಬ ರಾಜ ಆ ಪ್ರದೇಶದಲ್ಲಿ ಆಗ ರಾಜ್ಯವಾಳುತ್ತಿದ್ದ. ಈತ ಪೊಳಲ್ಚೋರನ ಮಗ (2ನೆಯ) ಮಹೇಂದ್ರ (ಸು. 977-81) ಇರಬೇಕು. ಚಿತ್ತೂರು ಜಿಲ್ಲೆಯ ಕರ್ಷನಪಲ್ಲಿ ಶಾಸನದಲ್ಲಿ ಮಹೇಂದ್ರ ಚೋಳನಾಡಿನಿಂದ ಬರುವಾಗ ನೊಳಂಬವಾಡಿಯನ್ನು ಹೊಕ್ಕು ಗಂಗರು ಸಾಸಿರದ ಕೋಲಾರದಲ್ಲಿಳಿದು ಕೀರ್ತಿಗಾಮುಂಡನ ಮಗನಿಗೆ ಪಟ್ಟವನ್ನು ಕಟ್ಟಿದನೆಂದು ಉಲ್ಲೇಖವಿದೆ. ಪ್ರಾಯಶಃ ಗಂಗರಿಂದ ಸೋಲನ್ನನುಭವಿಸಿದಮೇಲೆ ನೊಳಂಬರು ತಮ್ಮ ರಾಜ್ಯವನ್ನು ಪುನರ್ವಶಪಡಿಸಿಕೊಳ್ಳಲು ಕಲ್ಯಾಣದ ಚಾಳುಕ್ಯ ರಾಜ 2ನೆಯ ತೈಲಪನ ಸ್ನೇಹವನ್ನು ಬಯಸಿರಬೇಕು. ಮಹೇಂದ್ರನು ಚೋಳನಾಡಿನಿಂದ ಹಿಂತಿರುಗಿದ್ದು ಎರಡನೆಯ ತೈಲಪ ಚೋಳರಾಜ್ಯದ ಮೇಲೆ ಕೈಕೊಂಡ ದಂಡಯಾತ್ರೆಯ (ಸು. 980) ಸಂದರ್ಭದಲ್ಲಿರಬೇಕೆಂದು ಊಹಿಸಬಹುದು. 981ರ ಬೆಳಗಲ್ಲು (ಬಳ್ಳಾರಿ ಜಿಲ್ಲೆ) ಶಾಸನದಲ್ಲಿ ಅಹವಮಲ್ಲ (ತೈಲಪ) ರಾಜ್ಯವಾಳುತ್ತಿದ್ದಾಗ ವೀರ ನೊಳಂಬ ಪೆಮ್ಮಾನಡಿಯ ಮಹಾದೇವಿ ರೇವಲದೇವಿ ಕೆಲವು ದಾನಗಳನ್ನು ಮಾಡಿದಳೆಂದು ಹೇಳಿದೆ. ಪ್ರಾಯಶಃ ಈ ಶಾಸನದ ವೀರನೊಳಂಬ ವೀರ ಮಹೇಂದ್ರನಾಗಿರಲೂ ಸಾಧ್ಯ.

991ರಲ್ಲಿ ರಾಜರಾಜ ಚೋಳ ನೊಳಂಬವಾಡಿ ಮತ್ತು ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡ. ದಿಲೀಪನ ಮೊಮ್ಮಗನೂ ಅಯ್ಯಪದೇವನ ಮಗನೂ ಆದ ಗನ್ನರಸ ಎಂಬುವನು ರಾಜರಾಜನ ಸಾಮಂತನಾಗಿ ಆಳುತ್ತಿದ್ದನೆಂದು ಹೊಸಕೋಟೆಯ (ಬೆಂಗಳೂರು ಜಿಲ್ಲೆ) 997ರ ಒಂದು ಶಾಸನದಿಂದ ತಿಳಿಯುತ್ತದೆ. 1010ರ ಆಲೂರು ಶಾಸನದಲ್ಲಿ ಚಾಳುಕ್ಯ 5ನೆಯ ವಿಕ್ರಮಾದಿತ್ಯನ ಕೈಕೆಳಗೆ ಇರಿವನೊಳಂಬಾಧಿರಾಜ ಘಟೆಯಂಕಕಾರ ಎಂಬುವನು ನೊಳಂಬವಾಡಿ 32,000 ಕೋಗಳಿ, ಬಲ್ಲುಕುಂದೆ 300, ಕುಕ್ಕನೂರು 30 ಮತ್ತು ಮಾಸೆಯವಾಡಿಯ ಐದು ಗ್ರಾಮಗಳನ್ನು ಆಳುತ್ತಿದ್ದನೆಂದು ಹೇಳಿರುವುದರಿಂದ ಈ ಕಾಲದಲ್ಲಿ ನೊಳಂಬರು ಕಲ್ಯಾಣ ಚಾಳುಕ್ಯರ ಅನುಗ್ರಹದಿಂದ ನೊಳಂಬವಾಡಿಯನ್ನು ಪುನಃ ಸಾಧಿಸಿ ಕೊಂಡಿದ್ದಲ್ಲದೆ, ದೇಶದ ಇನ್ನೂ ಇತರ ಪ್ರದೇಶಗಳನ್ನೂ ಆಧಿಪತ್ಯವನ್ನೂ ಆಗುಮಾಡಿಕೊಂಡರೆಂದು ಊಹಿಸಬಹುದು. ಈ ಶಾಸನದ ಇರಿವನೊಳಂಬ ಘಟೆಯಂಕಕಾರ ಎರನಡೆಯ ಮಹೇಂದ್ರನ ತಮ್ಮನಾದ ಇರಿವನೊಳಂಬನೆಂದೇ ತೋರುತ್ತದೆ. ಇರಿವನೊಳಂಬ ಎರಡನೆಯ ತೈಲಪನ ಮೊಮ್ಮಗಳನ್ನು (ವಿಕ್ರಮಾದಿತ್ಯನ ತಂಗಿ) ಮದುವೆಯಾಗಿದ್ದ. ಹೀಗೆ ನೊಳಂಬರು ಚಾಳುಕ್ಯರೊಂದಿಗೆ ರಾಜಕೀಯ ಮತ್ತು ವಿವಾಹಸಂಬಂಧಗಳಿಂದ ಅವರ ಪ್ರೀತ್ಯಾದರಗಳನ್ನು ಗಳಿಸಿ ಕಡೆಯವರೆಗೂ ಮಾಂಡಲಿಕರಾಗಿ ಅವರ ಕೈಕೆಳಗೆ ಆಳತೊಡಗಿದರು. ಎರಡನೆಯ ಮಹೇಂದ್ರನ ತರುವಾಯ ಆಳಿದ ಎಲ್ಲ ನೊಳಂಬರಾಜರೂ ತಮ್ಮ ಹೆಸರಿನ ಜೊತೆಗೆ ತತ್ಕಾಲದ ಚಾಳುಕ್ಯಾಧಿಪತಿಗಳ ಬಿರುದುಗಳನ್ನು ಸಹ ಸೇರಿಸಿಕೊಳ್ಳುವುದು ವಾಡಿಕೆಯಾಯಿತು. ಇರಿವನೊಳಂಬ ಘಟೆಯಂಕಕಾರ 1024ರ ವರೆಗೆ ಆಳಿದ. ಅನಂತರ ಈತನ ಮಗ ಜಗದೇಕಮಲ್ಲ ನೊಳಂಬ ಪಲ್ಲವ ಪೆಮ್ಮಾನಡಿ ಉದಯಾದಿತ್ಯದೇವ (ಸು. 1024--37) ಪಟ್ಟಕ್ಕೆ ಬಂದ. ಇದಕ್ಕೂ ಮುಂಚೆ ಇವನು ಗಂಗವಾಡಿ 96,000 ಕದಂಬಳಿಗೆ 1,000, ಕೋಗಳಿ 500, ಮಾಸವಾಡಿ 140ರ ಸ್ವಲ್ಪಭಾಗ, ಬಲ್ಲುಕುಂದೆ 300 ಮತ್ತು ಕುಪಿಹಾರ 70ನ್ನೊಳಗೊಂಡಿದ್ದ ಎಡತೊರೆ 2,000 ಮುಂತಾದ ಪ್ರಾಂತ್ಯಗಳನ್ನು ಜಗದೇಕಮಲ್ಲ 2ನೆಯ ಜಯಸಿಂಹನ ಕೈಕೆಳಗೆ 1018ರಲ್ಲೇ ತನ್ನ ತಂದೆಯ ಜೊತೆ ಆಳುತ್ತಿದ್ದ.

ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾನದಿಯ ತೀರದಲ್ಲಿದ್ದ ಕಂಪಿಲಿ ಇವನ ರಾಜಧಾನಿ. 1032ರ ಒಂದು ಶಾಸನದಲ್ಲಿ ಇವನು ನೊಳಂಬವಾಡಿ 32000 ಮತ್ತು ಕದಂಬಳಿಗೆ 1,000 ಮುಂತಾದ ಪ್ರಾಂತ್ಯಗಳನ್ನಾಳುತ್ತಿದ್ದನೆಂದು ಹೇಳಿರುವುದರಿಂದ ತಂದೆಯ ಮರಣಾನಂತರ ನೊಳಂಬವಾಡಿಗೆ ಅಧಿಪತಿಯಾದನೆಂದು ಹೇಳಬಹುದು.

ಜಗದೇಕಮಲ್ಲ ನೊಳಂಬ ಉದಯಾದಿತ್ಯದೇವನಿಗೆ ಜಗದೇಕಮಲ್ಲ ಈರ್ಮಡಿ ನೊಳಂಬ ಮತ್ತು ತ್ರೈಲೋಕ್ಯಮಲ್ಲ ನನ್ನಿನೊಳಂಬ ಎಂಬಿಬ್ಬರು ಮಕ್ಕಳಿದ್ದರು. ಇವನ ಅನಂತರ ಜಗದೇಕಮಲ್ಲ ಈರ್ಮಡಿ ನೊಳಂಬ ಪಲ್ಲವ ಪೆರ್ಮಾನಡಿ (ಸು. 1037-1044) ಕದಂಬಳಿಗೆ 1,000, ಕೋಗಳಿ 500, ಬಲ್ಲಕುಂದೆ 300, ಕರಿವಿಡಿ 30 ಮುಂತಾದ ಪ್ರಾಂತ್ಯಗಳನ್ನು ಆಳಿದ. ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿ 1039ರಲ್ಲಿ ತನ್ನ ಅಣ್ಣನ ಜೊತೆಗೆ ರಾಜ್ಯವಾಳುತ್ತಿದ್ದ. ಈ ವಿಷಯವನ್ನು ತಿಳಿಸುವ ಬಳ್ಳಾರಿ ಜಿಲ್ಲೆಯ ಕಂಚಿಕೆರೆ ಶಾಸನದಲ್ಲಿ ಈತ ಜಗದೇಕಮಲ್ಲ ನನ್ನಿನೊಳಂಬನೆಂದು ಉಕ್ತವಾಗಿದ್ದಾನೆ. ಈತನ ಪಟ್ಟಾಭಿಷೇಕ 1044ರ ಏಪ್ರಿಲ್ 5ರಂದು ನಡೆಯಿತು. ಭೋಗವತೀಪುರವರೇಶ್ವರನ ಸಿಂದರಸ ಉದಯಾದಿತ್ಯ ಈತನ ಕೈಕೆಳಗೆ ಆಳುತ್ತಿದ್ದ. 1046ರಲ್ಲಿ ನೊಳಂಬವಾಡಿ 32,000 ಕದಂಬಳಿಗೆ 1,000 ಕೋಗಳಿ 500, ಬಲ್ಲಕುಂದೆ 300 ಮುಂತಾದುವು ಈತನ ಆಧಿಪತ್ಯದಲ್ಲಿದ್ದುವು. 1054ರಲ್ಲಿ ಕೊಪ್ಪಂ ಎಂಬಲ್ಲಿ ನಡೆದ ಚಾಳುಕ್ಯ-ಚೋಳ ಯುದ್ಧದಲ್ಲಿ ತ್ರೈಲೋಕ್ಯಮಲ್ಲ ನನ್ನಿನೊಳಂಬ ಚಾಳುಕ್ಯರ ಪರವಾಗಿ ಹೋರಾಡಿ ಮಡಿದಂತೆ ತೋರುತ್ತದೆ. ಮೂಲ ನೊಳಂಬ ರಾಜವಂಶ ಇವನೊಂದಿಗೇ ಮುಕ್ತಾಯವಾಯಿತು. 1057ರ ಹೊತ್ತಿಗೆ ನೊಳಂಬವಾಡಿ ಪ್ರಾಂತ್ಯ ಚಾಳುಕ್ಯ ರಾಜಕುಮಾರ 6ನೆಯ ವಿಕ್ರಮಾದಿತ್ಯನ ನೇರ ಆಡಳಿತಕ್ಕೆ ಒಳಪಟ್ಟಿತ್ತು; ಅಷ್ಟೇ ಅಲ್ಲದೆ ನೊಳಂಬ ವಂಶದ ಬಿರುದುಗಳನ್ನು ಇವನ ತಮ್ಮ ತನಗೇ ಅಳವಡಿಸಿಕೊಂಡ.

**ವಾಸ್ತು-ಶಿಲ್ಪ:** 8-11ನೆಯ ಶತಮಾನಗಳ ನಡುವೆ ನೊಳಂಬ, ಪಲ್ಲವರ ಪ್ರೋತ್ಸಾಹದಿಂದ ಇವರ ರಾಜ್ಯದಲ್ಲಿ ಬೆಳೆದ ವಾಸ್ತುಶಿಲ್ಪ ಶೈಲಿ ದಕ್ಷಿಣ ಭಾರತೀಯ ವಾಸ್ತುಶಿಲ್ಪ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ನೊಳಂಬರು ಮೂಲತಃ ಪಲ್ಲವರಾಗಿದ್ದರೂ ಕರ್ನಾಟಕದಲ್ಲಿ ಆಳುತ್ತಿದ್ದುದರಿಂದ ಮತ್ತು ಇವರ ರಾಜ್ಯ ಕನ್ನಡ ಮತ್ತು ತಮಿಳುರಾಜ್ಯಗಳ ನಡುವೆ ಇದ್ದುದರಿಂದ ಇವರ ವಾಸ್ತು-ಶಿಲ್ಪ ಸಂಪ್ರದಾಯದಲ್ಲಿ ಕರ್ನಾಟಕ-ತಮಿಳು ಶೈಲಿಗಳ, ಅಂದರೆ ಬಾದಾಮಿ ಚಳುಕ್ಯ, ಗಂಗ, ಪಲ್ಲವ ಸಂಪ್ರದಾಯಗಳ ಸಮ್ಮಿಳನ ಕಾಣುತ್ತದೆ. ನೊಳಂಬ ಶಿಲ್ಪಿಗಳು ಇವುಗಳ ಗುಣಗಳನ್ನು ತಮ್ಮ ಕಲೆಯಲ್ಲಿ ಅಳವಡಿಸಿಕೊಂಡಿದ್ದಲ್ಲದೆ ಅವುಗಳನ್ನು ತಮ್ಮದೇ ಆದ ರೀತಿಯಲ್ಲಿ ಸಂಯೋಜಿಸಿ, ಉತ್ತಮಪಡಿಸಿ, ಸ್ವಶೈಲಿಯನ್ನು ರೂಪಿಸಿಕೊಂಡಿರುವುದು ಈ ವಾಸ್ತು ಶಿಲ್ಪ ಸಂಪ್ರದಾಯದ ವೈಶಿಷ್ಟ್ಯ.

ಈಗ ಗುರುತಿಸಿರುವ ಇವರ ಎಲ್ಲಾ ದೇವಸ್ಥಾನಗಳು 9-10ನೆಯ ಶತಮಾನಗಳವು. ಈ ದೇವಾಲಯಗಳ ತಳವಿನ್ಯಾಸದಲ್ಲಿ ಸಾಮಾನ್ಯವಾಗಿ ಒಂದು ಚೌಕಟ್ಟಾದ ಗರ್ಭಗೃಹ. ಅದರ ಮುಂದೆ 2 ಅಥವಾ 4 ಕಂಬಗಳಿರುವ ಆಯಾಕಾರದ ಅರ್ಧಮಂಟಪ ಮತ್ತು ಅದರ ಮುಂದೆ ಒಂದು ಹಜಾರ ಇರುತ್ತವೆ. ಹಜಾರದ ಮುಂಭಾಗದಲ್ಲಿ ಮುಖಮಂಟಪವಿರುವುದಿಲ್ಲ. ಅದರ ಬದಲು ದೇವಾಲಯದ ಮುಂದೆ ಪ್ರತ್ಯೇಕವಾದ ಒಂದು ನಂದಿಮಂಟಪವಿರುತ್ತದೆ. ಹೊರಮೈಯಲ್ಲಿ, ಅಧಿಷ್ಠಾನ ಸಾಮಾನ್ಯವಾಗಿ ನಾಲ್ಕು ಸಮಾನಾಂತರ ಅಡ್ಡಪಟ್ಟಿಕೆಗಳಿಂದ ಕೂಡಿರುತ್ತದೆ. ಇವುಗಳಲ್ಲಿ ಮೂರನೆಯ ಪಟ್ಟಿ ಬಹಳ ಮಟ್ಟಿಗೆ ಭಿತ್ತಿಯ ಮೇಲಿನ ಕಪೋತದಂತಿದ್ದು, ಅದರ ಮೇಲೆ ಕೂಡು ಮತ್ತು ವಿವಿಧ ಪ್ರಾಣಿಗಳ ಶಿಲ್ಪಗಳಿರುತ್ತವೆ. ಭಿತ್ತಿ ಮಟ್ಟವಾಗಿದ್ದರೂ ನೀಳವಾದ ತೆಳು ಅರೆಕಂಬಗಳು, ಕೋಷ್ಠಗಳು ಮತ್ತು ಜಾಲಂಧ್ರಗಳಿಂದ ಕೂಡಿದ್ದು ಸರಳವಾಗಿ ಅಲಂಕೃತವಾಗಿರುತ್ತದೆ. ಭಿತ್ತಿಯ ಮೇಲೆ ಕೂಡುಗಳಿಂದ ಅಲಂಕೃತವಾದ ಕಪೋತವೂ ಅದರ ಮೇಲೆ ಶಾಲಾ, ಕೂಟ, ಪಂಜರಗಳಿಂದೊಡಗೂಡಿದ ಹಾರವೂ ಇರುತ್ತದೆ. ಶಿಖರ ಸಾಮಾನ್ಯವಾಗಿ ಘಟ್ಟಘಟ್ಟವಾಗಿ ಮೇಲೇಳುವ ದಾಕ್ಷಿಣಾತ್ಯ ಶೈಲಿಯದು (ಇದುವರೆಗೆ ಉಳಿದುಬಂದಿರುವ ನೊಳಂಬರ ಕಾಲದ ಶಿಖರಗಳೆಂದರೆ ನಂದಿಯಲ್ಲಿರುವ ಅರುಣಾಚಲೇಶ್ವರ ಮತ್ತು ಭೋಗನಂದೀಶ್ವರ ದೇವಾಲಯದಲ್ಲಿರುವವು). ದೇವಾಲಯದ ಒಳಭಾಗದ ಭಿತ್ತಿಗಳು, ಮಟ್ಟಸವಾಗಿ ಸರಳವಾಗಿರುತ್ತದೆಯಾದರೆ ಇದಕ್ಕೆ ವಿರುದ್ಧವಾಗಿ ಕಂಬಗಳು ಮತ್ತು ಬಾಗಿಲುವಾಡಗಳು ಬಹಳಮಟ್ಟಿನ ಸೂಕ್ಷ್ಮ ಅಲಂಕರಣವನ್ನು ಹೊಂದಿರುತ್ತವೆ. ಹಜಾರದ ಚಾವಣಿ ಸಾಮಾನ್ಯವಾಗಿ ನಾಲ್ಕು ಕಂಬಗಳಿಂದ ಎತ್ತಿದ ತೊಲೆಗಳಿಂದ ಒಂಬತ್ತು ಅಂಕಣಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ. ಮಧ್ಯದ ಅಂಕಣದಛತ್ತು ಒಂಬತ್ತು ಅಂಕಣಗಳಾಗಿ ವಿಂಗಡಿಸಲ್ಪಟ್ಟು, ಅಷ್ಟದಿಕ್ಪಾಲಕರುಗಳಿಂದ ಸುತ್ತುವರಿಯಲ್ಪಟ್ಟ ಶಿವನ ಶಿಲ್ಪವನ್ನು ಹೊಂದಿರುತ್ತದೆ. ನೊಳಂಬರ ಬಹುಪಾಲು ದೇವಾಲಯಗಳಲ್ಲಿ ಕಂಡುಬರುವ ಈ ರೀತಿಯ ಶಿಲ್ಪ ಸುಂದರವೂ ಸೂಕ್ಷ್ಮವೂ ಆಗಿರುತ್ತದೆ.

ನೊಳಂಬರ ದೇವಾಲಯಗಳು ಹೇಮಾವತಿ (ಆಂಧ್ರ ಪ್ರದೇಶ). ನಂದಿ, ಆವನಿ (ಕೋಲಾರ ಜಿಲ್ಲೆ) ಮತ್ತು ಧರ್ಮಪುರಿ (ತಮಿಳುನಾಡು) ಈ ಸ್ಥಳಗಳಲ್ಲಿ ಕಂಡು ಬಂದಿವೆ. ನೊಳಂಬರ ರಾಜಧಾನಿಯಾಗಿದ್ದ ಹೇಮಾವತಿಯಲ್ಲೇ ಇವರ ಐದು ದೇವಾಲಯಗಳನ್ನು ಕಾಣಬಹುದು. ದೊಡ್ಡೇಶ್ವರ ದೇವಾಲಯ ಇವುಗಳೆಲ್ಲದರಲ್ಲಿ ಮುಖ್ಯವಾದುದು. ಇಲ್ಲಿಯ ವೈಶಿಷ್ಟ್ಯವೆಂದರೆ ಹದಿನಾರು ಕಂಬಗಳಿರುವ ಹಜಾರ ಮತ್ತು ಗಂಗೆ, ವಿಷ್ಣು, ಬ್ರಹ್ಮ, ಕಾರ್ತಿಕೇಯ, ಮಿಥುನ ಮುಂತಾದ ವಿಗ್ರಹಗಳನ್ನು ಹೊಂದಿರುವ ಜಾಲಂಧ್ರಗಳು, ಚಾಳುಕ್ಯರ, ಕಲಾಶೈಲಿಯ ಪ್ರಭಾವವನ್ನು ಹೊಂದಿರುವ ಈ ಜಾಲಂಧ್ರಗಳು ನೊಳಂಬರ ಕಲೆಯಲ್ಲೆ ಅದ್ವಿತೀಯವಾದುವು. ಹೇಮಾವತಿಯ ಅಕ್ಕ-ತಂಗಿ ಗುಡಿಗಳಲ್ಲಿ ಮುಂಚಿನ ಚೋಳರ ಕಲೆಯ ಪ್ರಭಾವವನ್ನು ಕಾಣಬಹುದು. ವಿರೂಪಾಕ್ಷ, ಮಲ್ಲೇಶ ಮತ್ತು ಸಿದ್ದೇಶ್ವರ ದೇವಾಲಯಗಳು, ಸುಂದರವಾದ ಬಾಗಿಲುವಾಡಗಳು ಮತ್ತು ಕಂಬಗಳನ್ನು ಹೊಂದಿವೆ.

ಆವನಿಯಲ್ಲಿರುವ ನೊಳಂಬರ ದೇವಾಲಯಗಳಲ್ಲಿ ಮುಖ್ಯವಾದುದೆಂದರೆ ಲಕ್ಷ್ಮಣೇಶ್ವರ. ಈ ದೇವಾಲಯದ ಆಕರ್ಷಕ ಅಧಿಷ್ಠಾನ ನೊಳಂಬರ ದೇವಾಲಯ ಅಧಿಷ್ಠಾನಗಳಲ್ಲೆಲ್ಲಾ ಅತ್ಯುತ್ತಮವಾದುದು. ಇಲ್ಲಿಯ ಜಾಲಂಧ್ರಗಳು ಮತ್ತು ಸಣ್ಣ ಭಿತ್ತಿಕೋಷ್ಠಗಳು, ಕಂಬಗಳು, ಹಜಾರ ಚಾವಣಿಯ ಅಷ್ಟದಿಕ್ಪಾಲಕ ಶಿಲ್ಪ ಮುಂತಾದವುಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ. ಲಕ್ಷ್ಮಣೇಶ್ವರ ದೇವಾಲಯದ ಆವರಣದಲ್ಲಿರುವ ಭರತೇಶ್ವರ, ಆಂಜನೇಶ್ವರ, ಶತ್ರುಘ್ನೇಶ್ವರ ದೇವಾಲಯಗಳು ಬಹಳಮಟ್ಟಿಗೆ ದುರಸ್ತಿಯಾಗಿದ್ದರೂ ಇವುಗಳ ಅಧಿಷ್ಠಾನ. ಕಂಬ, ಬಾಗಿಲುವಾಡ ಮುಂತಾದವುಗಳು ನೊಳಂಬರ ವಾಸ್ತುಶಿಲ್ಪದ ಪ್ರತೀಕವಾಗಿ ಉಳಿದಿವೆ.

ನಂದಿಯಲ್ಲಿರುವ ಒಂದೇ ಮಾದರಿಯ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳು ನೊಳಂಬರ ಕಾಲದ ಉತ್ತಮ ಕೃತಿಗಳು. ಅರುಣಾಚಲೇಶ್ವರ ದೇವಾಲಯದಲ್ಲಿರುವ ನಟರಾಜ ವಿಗ್ರಹ ಮತ್ತು ಬಳ್ಳಿಯ ಸುರುಳಿಗಳ ಅಲಂಕರಣವನ್ನು ಹೊಂದಿರುವ ಜಾಲಂಧ್ರಗಳ ಕಲಾವಂತಿಕೆ ಅಸಮ. ನೊಳಂಬ ಶೈಲಿಯ ಕಂಬಗಳು ಮತ್ತು ಹಜಾರ ಚಾವಣಿಯಲ್ಲಿರುವ ಅಷ್ಟದಿಕ್ಪಾಲಕರ ಶಿಲ್ಪಗಳು ಭೋಗನಂದೀಶ್ವರ ದೇವಾಲಯದ ಮುಖ್ಯ ಆಕರ್ಷಣೆ. ಈ ಎರಡು ದೇವಾಲಯಗಳ ಹಾರ ಮತ್ತು ಶಿಖರ ದ್ರಾವಿಡ ಶೈಲಿಯಲ್ಲಿದ್ದು ಉತ್ತಮ ಶಿಲ್ಪಗಳನ್ನು ಹೊಂದಿವೆ. ಈ ದೇವಾಲಯಗಳ ಮುಂದಿರುವ ನಂದಿಮಂಟಪಗಳು ಪ್ರಾಯಶಃ ಇದೇ ಕಾಲದವು.

ಧರ್ಮಪುರಿಯಲ್ಲಿರುವ ಎರಡು ದೇವಾಲಯಗಳು-ಕಾಮಾಕ್ಷಿಯಮ್ಮ ಮತ್ತು ಮಲ್ಲಿಕಾರ್ಜುನ - 9-10ನೆಯ ಶತಮಾನಕ್ಕೆ ಸೇರಿದವು. ಕಾಮಾಕ್ಷಿಯಮ್ಮ ದೇವಾಲಯದ ಉನ್ನತವಾದ ಅಧಿಷ್ಠಾನ ತಳಭಾಗದಲ್ಲಿ ಕಡೆಯಲ್ಪಟ್ಟಿರುವ ರಾಮಾಯಣ ಶಿಲ್ಪಕತೆ, ತಳಪಾದಿಯನ್ನು ಎತ್ತಿ ಹಿಡಿದಿರುವ ದಿಗ್ಗಜಗಳು ಮುಂತಾದ ಅಲಂಕರಣದಿಂದ ಕೂಡಿದ್ದು ಇಡೀ ನೊಳಂಬ ವಾಸ್ತು ಶಿಲ್ಪದಲ್ಲಿ ವಿಶಿಷ್ಟರೀತಿಯದಾಗಿದೆ. ಪೌರಾಣಿಕ ಮತ್ತು

ಧಾರ್ಮಿಕ ಶಿಲ್ಪಗಳನ್ನು ಒಳಗೊಂಡಿರುವ ಕಂಬಗಳು ಮತ್ತು ಅಷ್ಟದಿಕ್ಪಾಲಕರ ಶಿಲ್ಪವುಳ್ಳ ಚಾವಣಿ ಹಜಾರದ ಸೌಂದರ್ಯವನ್ನು ವರ್ಧಿಸಿವೆ. ನಾನಾ ರೀತಿಯ, ಸುಂದರವೂ ಸೂಕ್ಷ್ಮವೂ ಆದ ಉಬ್ಬುಶಿಲ್ಪಗಳುಳ್ಳ ಕಂಬಗಳು ಮತ್ತು ಅಷ್ಟದಿಕ್ಪಾಲಕರ ಶಿಲ್ಪವುಳ್ಳ ಹಜಾರದ ಚಾವಣಿ - ಮಲ್ಲಿಕಾರ್ಜುನ ದೇವಾಲಯದ ಮುಖ್ಯ ಆಕರ್ಷಣೆ. (ಎಂ.ಎಸ್.ಕೆ.)

ನೊಳಂಬರು ಮೂಲತಃ ಶೈವರಾಗಿದ್ದುದರಿಂದ ಇವರ ಹೆಚ್ಚಿನ ಶಿಲ್ಪಗಳು ಶೈವಧರ್ಮಕ್ಕೆ ಸಂಬಂಧಪಟ್ಟವು. ಆದರೆ ಇವರ ಸಮನ್ವಯ ದೃಷ್ಟಿಯನ್ನು ಸೂಚಿಸುವಂತೆ ಕಂಬಗಳ ಮೇಲಿನ ಅಲಂಕರಣದಲ್ಲಿ ವೈಷ್ಣವ ಶಿಲ್ಪಗಳೂ ಇರುವುದುಂಟು. ಈ ಕಾಲದವುಗಳಲ್ಲಿ ಹೆಚ್ಚಿನವು ದೇವಾಲಯಗಳಲ್ಲಿ ಸ್ಥಾಪಿಸಲು ಮಾಡಿದ್ದ ದೇವಮೂರ್ತಿಗಳು ಮತ್ತು ವಾಸ್ತುಭಾಗವಾಗಿ ಬರುವ ಉಬ್ಬುಶಿಲ್ಪಗಳು, ಶೈಲಿಯ ದೃಷ್ಟಿಯಿಂದ ನೋಡಿದರೆ, ನೊಳಂಬ ವಾಸ್ತು ಕೃತಿಗಳಂತೆ ಶಿಲ್ಪಗಳಲ್ಲೂ ಕರ್ನಾಟಕ ಮತ್ತು ತಮಿಳುನಾಡಿನ ಶಿಲ್ಪಸಂಪ್ರದಾಯಗಳ ಸಂಗಮ ಕಂಡುಬರುತ್ತದೆ. ಅಲ್ಲದೆ ನೊಳಂಬರ ಕಾಲ ಕರ್ನಾಟಕ ಶಿಲ್ಪ ಪರಂಪರೆಯಲ್ಲಿ ಪ್ರಾಚೀನ ನೈಸರ್ಗಿಕ ನಿರೂಪಣಾ ಪದ್ಧತಿಯಿಂದ ನಡುಗಾಲದ ಅತ್ಯಲಂಕರಣಾತ್ಮಕ ನಿರೂಪಣಾ ಪದ್ಧತಿಗೆ ಪರಿವರ್ತನೆಯನ್ನು ಹೊಂದುತ್ತಿದ್ದ ಕಾಲವಾದ್ದರಿಂದ, ಈ ಕಾಲದ  ಶಿಲ್ಪಗಳಲ್ಲಿ ಈ ಪರಿವರ್ತನೆಯ ಛಾಪು ಎದ್ದುಕಾಣುತ್ತದೆ. ದೇವಮೂರ್ತಿಗಳಲ್ಲಿ ಕೆಲವು ಸಲ ಆಯುಧಗಳನ್ನು ಸ್ವಾಭಾವಿಕ ರೀತಿಯಲ್ಲೂ ಕೆಲವು ಸಲ ಕೃತಕೀಯವಾಗಿ ಆದರೆ ಕಲಾತ್ಮಕವಾಗಿ ಹಿಡಿದಿರುವಂತೆ ನಿರೂಪಿಸಿರುವುದು ಈ ಅಂಶಕ್ಕೆ ಒಳ್ಳೆಯ ಉದಾಹರಣೆ. ಹಾಗೆಯೇ ಈ ಕಾಲದ ಶಿಲ್ಪಗಳು ಅಲಂಕೃತವಾಗಿದ್ದರೂ ಅಲಂಕರಣದ ಪರಿಮಾಣ ಪ್ರಾಚೀನ ಪಲ್ಲವ-ಚಳುಕ್ಯಾದಿ ಶಿಲ್ಪಗಳಿಗಿಂತ ಹೆಚ್ಚಾಗಿಯೂ ಮುಂದಿನ ಹೊಯ್ಸಳ ಶಿಲ್ಪಗಳಿಗಿಂತ ಕಡಿಮೆಯಾಗಿಯೂ ಇರುತ್ತದೆ. ಈ ಹಲವು ಕಾರಣಗಳಿಂದ ನೊಳಂಬ ಶಿಲ್ಪಗಳ ನಿರೂಪಣೆ ಮತ್ತು ಅಲಂಕರಣದಲ್ಲಿ ಒಂದು ರೀತಿಯ ನಾವೀನ್ಯತೆ, ರಮ್ಯತೆ ಲಾಲಿತ್ಯ, ಚೆಲುನಿಲುವು ಮತ್ತು ಮುಖಭಂಗಿ ಪ್ರಮುಖವಾಗಿ ಕಾಣುತ್ತವೆ. *

ಈಗ ಮದರಾಸು ವಸ್ತುಸಂಗ್ರಹಾಲಯದಲ್ಲಿರುವ, ಪೆನುಗೊಂಡೆಯ ಶಿವ ಪಾರ್ವತಿಯರ ಕುಳಿತಿರುವ ವಿಗ್ರಹ ಇವರ ಶಿಲ್ಪಕಲೆಯ ಮೇರುಕೃತಿ. ಇದು 9ನೆಯ ಶತಮಾನದ್ದು.ಈ ವಿಗ್ರಹದ ಮುಖಭಂಗಿ ಮತ್ತು ಸುಂದರ ಅಲಂಕರಣ ತುಂಬಾ ಆಕರ್ಷಕವಾಗಿವೆ. ಇದೇ ಸಂಗ್ರಹಾಲಯದಲ್ಲಿರುವ ನೊಳಂಬ ಕಾಲದ ವೀಣಾಧರ ದಕ್ಷಿಣಮೂರ್ತಿ ಮತ್ತು ಸೂರ್ಯ ಭವ್ಯವಾದುವು. ದಕ್ಷಿಣಾ ಮೂರ್ತಿಯ ಜಟಾವಿನ್ಯಾಸ ಸ್ವಲ್ಪಮಟ್ಟಿಗೆ ಚೋಳರೀತಿಯಲ್ಲಿದೆ. ಭವ್ಯವಾದ ಸಮಭಂಗಿಯಲ್ಲಿ  ನಿಂತಿರುವ ಸೂರ್ಯವಿಗ್ರಹ ದೃಢತೆಯನ್ನೂ ಅಚಲತೆಯನ್ನೂ ಸಾರುತ್ತದೆ. ಅಧಿಕವಾಗಿ ಅಲಂಕೃತವಾದ, ಕೈಯಲ್ಲಿ ಕಮಲಗಳನ್ನು ಹಿಡಿದಿರುವ ಈ ವಿಗ್ರಹದ ಮುಖಮುದ್ರೆ ಗಂಭೀರವಾಗಿದೆ. ಇದೇ ರೀತಿಯ ಅನೇಕ ಸೂರ್ಯ ವಿಗ್ರಹಗಳು.

ನೊಳಂಬರ ಶೈಲಿಯ ಕಾಳಿಯ ವಿಗ್ರಹಗಳು ವಿಭಿನ್ನವಾದುವು. ದೃಢವಾದ ಮೈಕಟ್ಟು, ಸೌಮ್ಯವೆಂದೇ ಹೇಳಬಹುದಾದ ಮುಖಮುದ್ರೆ, ಜಟಾಮುಕುಟ, ಕಪಾಲಮಾಲೆ, ನಾಗಕುಚಬಂಧ, ತೋಳ್ಬಂದಿ ಮುಂತಾದವುಗಳನ್ನು ಹೊಂದಿರುವ ಈ ವಿಗ್ರಹಗಳು ಅತ್ಯಂತ ಆಕರ್ಷಕವಾಗಿವೆ.

ಈ ಶೈಲಿಯ ಸಪ್ತಮಾತೃಕೆಯರ ಶಿಲ್ಪಗಳನ್ನು ಈ ಕಾಲದ ಪ್ರತಿಯೊಂದು ದೇವಾಲಯದಲ್ಲಿಯೂ ಕಾಣಬಹುದು. ಒಂದೇ ಕಲ್ಲಿನಲ್ಲಿ ಸಾಲಾಗಿ ಕೆತ್ತಿರುವ ಮತ್ತು ಬೇರೆ ಬೇರೆಯಾಗಿ ಇರುವ ಈ ವಿಗ್ರಹಗಳು ಅನೇಕ. ಇವುಗಳ ಪೈಕಿ ಹೇಮಾವತಿಯ ದೊಡ್ಡೇಶ್ವರ ದೇವಾಲಯದಲ್ಲಿರುವ ಸಹಜಾಕಾರದಲ್ಲಿರುವ ನಾಲ್ಕು ಮಾತೃಕೆಯರ ವಿಗ್ರಹಗಳು ಮುಖ್ಯವಾದುವು. ಎತ್ತರವಾದ ಪೀಠದ ಮೇಲೆ ಕುಳಿತಿರುವ ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ ಮತ್ತು ವಾರಾಹೀ (?) ವಿಗ್ರಹಗಳು ಮೋಹಕವಾಗಿವೆ. ಇವುಗಳಲ್ಲಿ ನೈಜ ದೈಹಿಕ ಸೌಂದರ್ಯವನ್ನು ಮೂಡಿಸುವಲ್ಲಿ ಶಿಲ್ಪಿ ಸಫಲನಾಗಿದ್ದಾನೆ.

ನೊಳಂಬರ ಶಿಲ್ಪದ ಮತ್ತೊಂದು ಮೇರುಕೃತಿಯೆಂದರೆ ಹೇಮಾವತಿಯಲ್ಲಿರುವ, ಬಾದಾಮಿ ಚಳುಕ್ಯರ ಶೈಲಿಯನ್ನನುಸರಿಸಿ ಮಾಡಿರುವ ಮಹಿಷಾಸುರ ಮರ್ದಿನಿ, ಚಿಕ್ಕದಾದರೂ ಚೊಕ್ಕವಾಗಿರುವ ದೇವಿಯ ಈ ಸುಂದರ ವಿಗ್ರಹಕ್ಕೆ ಸರಿಸಾಟಿಯಾದುದು ಇಡೀ ದಕ್ಷಿಣ ಭಾರತದಲ್ಲೇ ದುರ್ಲಭ. ತ್ರಿಶೂಲ, ಚಕ್ರಧಾರಿಯಾಗಿ ಮಹಿಷಾಸುರನನ್ನು ಅನಾಯಾಸವಾಗಿ ಸಂಹರಿಸುತ್ತಿರುವ ದೇವಿಯ ಈ ವಿಗ್ರಹ ತ್ರಿಪರಿಮಾಣದ ಶಿಲ್ಪಕ್ಕೆ ಒಂದು ಉತ್ತಮ ನಿದರ್ಶನ. ನೊಳಂಬರ ಶಿಲ್ಪದಲ್ಲಿ ಮಹಿಷಾಸುರಮರ್ದಿನಿಗೆ ವಿಶಿಷ್ಟವಾದ ಸ್ಥಾನವಿದೆ. ಅನೇಕ ರೀತಿಯ ಮತ್ತು ವಿವಿಧ ಭಂಗಿಯ ದೇವಿಯ ಶಿಲ್ಪಗಳು ಬಾಗಿಲುವಾಡಗಳಲ್ಲಿ, ಜಾಲಂಧ್ರಗಳಲ್ಲಿ, ಕಂಬಗಳಲ್ಲಿ ಹಾಗೂ ಬಿಡಿಯಾಗಿ ಸಿಕ್ಕುತ್ತವೆ.

ನೊಳಂಬರ ಕಾಲದ ನಂದಿಯ ಶಿಲ್ಪಗಳು ಬಹಳ ರಮಣೀಯವಾದವುಗಳು. ಬಹಳಮಟ್ಟಿಗೆ ವೆಂಗಿ ಚಾಳುಕ್ಯರ ನಂದಿಗಳನ್ನು ಇವು ಹೋಲುತ್ತವೆ. ತರಂಗಾ ಕೃತಿಯ ಗಂಗೆದೊಗಲು ಉನ್ನತವಾದ ಹಿಣಿಲು ಮತ್ತು ಬಲಿಷ್ಟ ದೇಹವನ್ನು ಹೊಂದಿದ್ದು ಮೋಹಕವಾದ ಭಂಗಿಯಲ್ಲಿ ಕುಳಿತಿರುವ ಈ ನಂದಿ ವಿಗ್ರಹಗಳು ಕತ್ತಿನಿಂದ ಇಳಿಬಿದ್ದು ಮುಂಭಾಗದ ನೆಲದ ಮೇಲೆ ಹರಡಿಕೊಂಡಿರುವ ಘಂಟಾಹಾರ, ಗೆಜ್ಜೆಯ  ಹಾರ ಮತ್ತು ಶಿರಪಟ್ಟಿಗಳನ್ನು ಹೊಂದಿರುತ್ತವೆ.

ಈ ಕಾಲದ ಜಾಲಂಧ್ರಗಳು ವಾಸ್ತುಶಿಲ್ಪದ ಅಂಗಗಳೆಂದು ಪರಿಗಣಿಸಲ್ಪಡಬೇಕಾದರೂ ಅವುಗಳ ತಯಾರಿಕೆಯಲ್ಲಿ ಕಂಡುಬರುವ ಕೌಶಲ್ಯ ಮತ್ತು ಅವುಗಳೊಳಗೆ ನಿರೂಪಿತವಾಗಿರುವ ಸುಂದರ ಮೂರ್ತಿಶಿಲ್ಪಗಳಿಂದ ಅವನ್ನು ಶಿಲ್ಪಗಳ ಸಾಲಿಗೇ ಸೇರಿಸಬಹುದು. ಬಾದಾಮಿ ಚಳುಕ್ಯರ ದೇವಾಲಯಗಳಲ್ಲಿ ವಾಸ್ತು ಆವಶ್ಯಕತೆಗೆ ಪೂರಕವಾಗಷ್ಟೇ ಇದ್ದ ಜ್ಯಾಮಿತಿಕ ವಿನ್ಯಾಸಗಳೊಡನಿದ್ದ ಈ ಜಾಲಂಧ್ರಗಳು ನೊಳಂಬ ಶಿಲ್ಪಿಗಳ ಕೈಯಲ್ಲಿ ಮೂರ್ತಿಶಿಲ್ಪದ ಮಾಧ್ಯಮವಾಗಿಯೂ ಬೆಳೆಯಿತು. ಈ ಜಾಲಂಧ್ರಗಳು ಒಂದೇ ಕಲ್ಲಿನಿಂದ ಮಾಡಲ್ಪಟ್ಟಿದ್ದು ದೇವಕೋಷ್ಠ ಅಥವಾ ದ್ವಾರದ ಎಲ್ಲಾ ಅಂಗಗಳನ್ನು, ಅಂದರೆ ಎರಡೂ ಪಕ್ಕಗಳಲ್ಲಿ ನಿಧಿಗಳು, ಗೋಡೆಗಂಬಗಳು, ಹಾಸುಗಲ್ಲು, ಕಪೋತ ಮುಂತಾದವುಗಳನ್ನು ಹೊಂದಿದ್ದು ಮಧ್ಯ ಭಾಗದಲ್ಲಿ ಸುಂದರವಾದ ಮೂರ್ತಿಶಿಲ್ಪವನ್ನೋ ಅಥವಾ ಬಳ್ಳಿಯ ಸುರುಳಿಯನ್ನೊ ಹೊಂದಿರುತ್ತವೆ. ವಿಗ್ರಹಗಳ ಅಕ್ಕಪಕ್ಕಗಳಲ್ಲಿ ಸಣ್ಣದಾದ ರಂಧ್ರಗಳಿದ್ದು ದೇವಾಲಯದ ಒಳಭಾಗಕ್ಕೆ ಆವಶ್ಯಕವಾದ ಗಾಳಿ ಬೆಳಕು ಬರುತ್ತದೆ. ಕೆಲವು ಸಲ ಈ ಜಾಲಂಧ್ರಗಳಿಗೆ ವಾಸ್ತುಶಿಲ್ಪದ ಅಲಂಕರಣಗಳ ಬದಲು ಕೇವಲ ಒಂದು ಚಪ್ಪಟೆಯಾದ ಅಂಚು ಮಾತ್ರ ಇರುವ ನಿದರ್ಶನಗಳೂ ಉಂಟು. ನೊಳಂಬರ ಜಾಲಂಧ್ರಗಳಿಗೆ ಉತ್ತಮ ನಿದರ್ಶನವೆಂದರೆ ಹೇಮಾವತಿಯ ದೊಡ್ಡೇಶ್ವರ ದೇವಾಲಯದಲ್ಲಿರುವವು. ಇವು ಗಂಗಾ, ಮಿಥುನ, ಬ್ರಹ್ಮ, ವಿಷ್ಣು, ಕಾರ್ತಿಕೇಯ ಮುಂತಾದ ವಿಗ್ರಹಗಳನ್ನು ಹೊಂದಿವೆ. ಇವಲ್ಲದೆ ಒಂದು ಸುಂದರವಾದ ಜಾಲಂಧ್ರದಲ್ಲಿ ಸರ್ಪಗತಿಯಲ್ಲಿ ಮೇಲೇರುವ ಲತೆ ಮತ್ತು ಇದರ ಅರ್ಧ ಸುರುಳಿಗಳ ನಡುವೆ ಸೂಕ್ಷ್ಮವಾಗಿ ಕೊರೆದಿರುವ, ನರ್ತಿಸುತ್ತಿರುವ ಹೆಂಗಸರು, ಗಂಡಸರು ಮತ್ತಿತರ ವಾದ್ಯವೃಂದದವರ ಶಿಲ್ಪಗಳಿವೆ. ಇದರಲ್ಲಿ ಕಂಡುಬರುವ ಪ್ರಕೃತಿಯ ಮತ್ತು ಮಾನವ ವಸ್ತುಗಳ ಸಮ್ಮಿಳನ ಊಹೆಗೂ ನಿಲುಕದಷ್ಟು ಸುಂದರವಾಗಿದೆ. ರಾಜೇಂದ್ರಚೋಳ ತನ್ನ ವಿಜಯದ ಸಂಕೇತವಾಗಿ ನೊಳಂಬವಾಡಿಯಿಂದ ತೆಗೆದುಕೊಂಡು ಹೋಗಿ ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ ಸ್ಥಾಪಿಸಿರುವ ಹಸಿರು ಕಲ್ಲಿನ ಜಾಲಂಧ್ರ - ಇನ್ನೊಂದು ಉತ್ಕೃಷ್ಟ ಕೃತಿ. ನೊಳಂಬರ ಎಲ್ಲಾ ದೇವಾಲಯದಲ್ಲಿಯೂ ಈ ರೀತಿಯ ಜಾಲಂಧ್ರಗಳನ್ನು ಕಾಣಬಹುದು.

ನೊಳಂಬರ ಕಾಲದ ಕಂಬಗಳು ವಾಸ್ತು ಅಂಗಕ್ಕಿಂತ ಹೆಚ್ಚಾಗಿ ಶಿಲ್ಪಕೃತಿಗಳೇ ಆಗಿವೆ. ಸ್ಪಷ್ಟವಾಗಿ ಮತ್ತು ನಾಜೂಕಾಗಿ ಕಡೆಯಲ್ಪಟ್ಟ ಸಂಪೂರ್ಣವಾಗಿ ನೊಳಂಬರ ಶೈಲಿಯದೆಂದೇ ಹೇಳಬಹುದಾದ ಸ್ತಂಭಗಳು ಸಣ್ಣದಾದ ಒಂದು ಅಧಿಷ್ಠಾನ. ಚಚ್ಚೌಕವಾದ ಒಂದೇ ಕಲ್ಲಿನ ಕಂಬ.

ಶಿರ ಮತ್ತು ಬೋದಿಗೆಗಳನ್ನು ಹೊಂದಿರುತ್ತವೆ. ಕಂಬದ ಮಧ್ಯಭಾಗ ನಾಲ್ಕೂ ಮೂಲೆಗಳಲ್ಲಿ ಕಚ್ಚು ಮಾಡಲ್ಪಟ್ಟು ಮಧ್ಯಭಾಗದ ನಾಲ್ಕು ಮುಖಗಳಲ್ಲಿ ಒಂದೊಂದು ಲಂಬಪಟ್ಟಿಯಿರುತ್ತದೆ. ಕಂಬದ ಕೆಳಭಾಗ ಅಲಂಕಾರರಹಿತ. ಮೇಲ್ಭಾಗ ನಾಲ್ಕೂ ಕಡೆಗಳಲ್ಲಿ ಸುಂದರವಾದ ಮತ್ತು ನವಿರಾದ ಉಬ್ಬುಶಿಲ್ಪವನ್ನು ಹೊಂದಿರುತ್ತದೆ. ಪ್ರತಿಯೊಂದು ಮುಖದಲ್ಲಿಯೂ ಅರ್ಧವೃತ್ತಾಕಾರದ ತಿರುಚಿದ ಎರಡೆರಡು ಮುತ್ತಿನ ಮಾಲೆಗಳಿದ್ದು ಇವುಗಳ ಮಧ್ಯಭಾಗದಲ್ಲಿ ಧಾರ್ಮಿಕ, ಲೌಕಿಕ ಮತ್ತು ನೈಸರ್ಗಿಕ ವಿಷಯಗಳು ಶಿಲ್ಪಿತವಾಗಿರುತ್ತವೆ. ಇದರ ಮೇಲ್ಭಾಗದಲ್ಲಿ ಸುಂದರವಾದ ಎಳೆಯ ಬಳ್ಳಿಗಳೂ ಕೀರ್ತಿಮುಖದ ಸಾಲೂ ಇರುತ್ತವೆ. ಅವುಗಳ ಮೇಲ್ಭಾಗದಲ್ಲಿ ಕಂಬವು ದುಂಡಾಗಿದ್ದು ನಾಲ್ಕೂ ಮೂಲೆಗಳಲ್ಲಿ ಒಂದೊಂದು ಸಣ್ಣದಾದ ಕುಳಿತಿರುವ ಸಿಂಹಗಳನ್ನು ಹೊಂದಿರುತ್ತವೆ. ಕಂಬದ ಬೋದಿಗೆಯು ದುಂಡಾಗಿ ಮೆತ್ತೆಯಾಕಾರವಾಗಿದ್ದು, ಕೆಲವು ಸಲ ಬಹಳ ನುಣುಪಾಗಿರುತ್ತದೆ. ರಾಜರಾಜ ಚೋಳನು ನೊಳಂಬವಾಡಿಯಿಂದ ಸಾಗಿಸಿ ತಂಜಾವೂರಿನ ಬಳಿ ಇರುವ ತಿರುವಾಯೂರಿನ ದೇವಾಲಯದಲ್ಲಿ ಸ್ಥಾಪಿಸಿರುವ ನೊಳಂಬರ ಐವತ್ತು ಕಂಬಗಳು ಅವರ ಶೈಲಿಯ ಕಂಬಗಳ ಕಲಾಸೌಂದರ್ಯಕ್ಕೆ ಸಾಕ್ಷಿ.

ನೊಳಂಬರ ಸೂಕ್ಷ್ಮ ಶಿಲ್ಪಕ್ಕೆ ಮತ್ತೊಂದು ನಿದರ್ಶನ ಅವರ ದೇವಾಲಯದ ಬಾಗಿಲುವಾಡಗಳು. ಹೆಚ್ಚಿನಮಟ್ಟಿಗೆ ಬಾದಾಮಿ ಚಳುಕ್ಯರ ದೇವಾಲಯದ ಬಾಗಿಲುಗಳ ಮಾದರಿಯನ್ನು ಹೊಂದಿರುವ ಇವುಗಳು ಚಳುಕ್ಯರ ಮಾದರಿಯವುಗಳಿಗಿಂತ ಸುಂದರವಾಗಿವೆ. ನೊಳಂಬರ ಬಾಗಿಲುವಾಡಗಳ ವಿಶೇಷವೆಂದರೆ ಬಳ್ಳಿಸುರುಳಿಗಳು, ಮುತ್ತಿನ ಹಗ್ಗಗಳು, ನೀಳವಾಗಿರುವ ಅರೆಗಂಬಗಳು, ಯಾಳಿಗಳು, ಚಿತ್ರಪಟ್ಟಿಗಳು ಮತ್ತು ಇವುಗಳನ್ನು ಬೇರ್ಪಡಿಸುವ ಆಳವಾದ ಗಾಡಿಗಳು ಮುಂತಾದವುಗಳ ಅಲಂಕರಣ. ಬಾಗಿಲಿನ ಎರಡೂ ಕಡೆಗಳಲ್ಲಿ ಗಜಾರೂಢರಾದ ಶ್ರೀನಿಧಿ-ಪದ್ಮನಿಧಿಗಳು, ಗಂಗಾ-ಯಮುನಾ ಮತ್ತು ದ್ವಾರಪಾಲಕರು ಇದ್ದು ಬಾಗಿಲುವಾಡದ ಮೇಲ್ಭಾಗದಲ್ಲಿ ಕುಳಿತಿರುವ ಗಜಲಕ್ಷ್ಮಿ ಮತ್ತು ಮಂಗಳ ಚಿಹ್ನೆಗಳು ಇರುತ್ತವೆ. ಬಾಗಿಲಿನ ಮೇಲ್ಭಾಗದಲ್ಲಿ ಇಳಿಜಾರಾದ ಕೂಡುಗಳಿಂದ ಕೂಡಿದ ಕಪೋತ ಮತ್ತು ಅದರ ಮೇಲೆ ಸಣ್ಣ ಸಣ್ಣ ಮಂಟಪಗಳ ಸಾಲಿನಿಂದ ಮಾಡಿದ ಕೈಪಿಡಿಗೋಡೆಗಳಿದ್ದು ಇಡೀ ಬಾಗಿಲುವಾಡವು ಆಕರ್ಷಣೀಯ ಶಿಲ್ಪ ಸಂಯೋಜನೆಯಾಗಿರುತ್ತದೆ. ನುಣುಪಾದ ಮತ್ತು ಮೃದುವಾದ ಕಲ್ಲಿನಿಂದ ಮಾಡಲ್ಪಟ್ಟಿರುವ ಇವು ನೊಳಂಬರ ಸೂಕ್ಷ್ಮಶಿಲ್ಪಕ್ಕೆ ಒಂದು ಉತ್ತಮ ನಿದರ್ಶನವಾಗಿರುವುದೇ ಅಲ್ಲದೆ ದೇವಾಲಯದ ಸೌಂದರ್ಯವನ್ನು ವರ್ಧಿಸುವ ಮುಖ್ಯ ಸಾಧನವಾಗಿವೆ. (ಎಂ.ಎಸ್.ಕೆ.)

**ನೊಳಂಬವಾಡಿ:** ಕರ್ನಾಟಕದ ಪೂರ್ವಭಾಗದಲ್ಲಿದ್ದ ಒಂದು ಪ್ರಾಚೀನ ಪ್ರಾಂತ್ಯ. ಎಂಟನೆಯ ಶತಮಾನದಿಂದ ಸುಮಾರು ಹನ್ನೊಂದನೆಯ ಶತಮಾನದವರೆಗೆ ಈ ಪ್ರಾಂತ್ಯದಲ್ಲಿ ಆಳಿದ ನೊಳಂಬರಿಂದ ನೊಳಂಬವಾಡಿ ಎಂದು ಹೆಸರು ಬಂತು. ಚಿತ್ರದುರ್ಗ ಜಿಲ್ಲೆಯನ್ನು ಕೇಂದ್ರಸ್ಥಾನವಾಗಿ ಹೊಂದಿದ್ದ ನೊಳಂಬಳಿಗೆ ಸಾಸಿರವೆಂಬ ಪ್ರಾಂತ್ಯ ಕಾಲಕ್ರಮೇಣ ವಿಸ್ತರಿಸಲ್ಪಟ್ಟು ಒಂಬತ್ತನೆಯ ಶತಮಾನದ ಆದಿಭಾಗದಲ್ಲಿ ನೊಳಂಬವಾಡಿ 32,000 ಎಂಬ ವಿಸ್ತಾರಪ್ರಾಂತ್ಯವಾಯಿತು. ಇದು ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಆಂಧ್ರ ಪ್ರದೇಶದ ಅನಂತಪುರ ಈ - ಜಿಲ್ಲೆಗಳನ್ನು ಮತ್ತು ಇದಕ್ಕೆ ಸೇರಿಕೊಂಡಂತಿರುವ ಚಿತ್ತೂರು, ಧರ್ಮಪುರಿ, ಬೆಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳನ್ನು ಒಳಗೊಂಡಿದ್ದಿತು. ಈ ವಿಶಾಲ ಪ್ರಾಂತ್ಯದ ರಾಜಧಾನಿ, ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೆಂಜೇರು ಅಥವಾ ಹೇಮಾವತಿ. ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯದಲ್ಲಿದ್ದ ಈ ಪ್ರಾಂತ್ಯದಲ್ಲಿ ಅನೇಕಾನೇಕ ಕದನಗಳು ನಡೆದವು. ನೊಳಂಬರು, ತಲಕಾಡಿನ, ಗಂಗರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ಸೇವುಣರು ಮುಂತಾದ ವಿವಿಧ ರಾಜಮನೆತನಗಳು ಈ ಪ್ರಾಂತ್ಯದ ಮೇಲೆ ಇಲ್ಲವೇ ಇದರ ವಿವಿಧ ಭಾಗಗಳ ಮೇಲೆ ಆಳ್ವಿಕೆ ನಡೆಸಿದವು. ಹತ್ತನೆಯ ಶತಮಾನದ ಅಂತ್ಯದಲ್ಲಿ ಮೊದಲನೆಯ ರಾಜರಾಜ ಚೋಳ ನೊಳಂಬವಾಡಿಯ ದಕ್ಷಿಣಭಾಗಗಳನ್ನು ಆಕ್ರಮಿಸಿಕೊಂಡ. ಅನಂತರ ಹೊಯ್ಸಳ ವಿಷ್ಣುವರ್ಧನ ನೊಳಂಬವಾಡಿಯನ್ನು ಆಕ್ರಮಿಸಿಕೊಂಡು ನೊಳಂಬವಾಡಿಗೊಂಡ ಎಂಬ ಬಿರುದನ್ನು ಧರಿಸಿದ.

ತಮಿಳುರಾಜ್ಯಗಳ ಮೇಲೆ ದಂಡಯಾತ್ರೆ ಮಾಡುವುದಕ್ಕೆ ಇದು ಮುಖ್ಯ ದಾರಿಯಾಗಿ ಉತ್ತಮ ಆಯಕಟ್ಟಿನ ಪ್ರದೇಶವಾಗಿದ್ದುದರಿಂದ ಇದರ ಪ್ರಾಮುಖ್ಯ ಹೆಚ್ಚಿತ್ತು. ಅನೇಕ ಅಭೇದ್ಯವಾದ ದುರ್ಗಗಳಿಂದ ಕೂಡಿದ್ದು ಈ ಪ್ರಾಂತ್ಯದ ಹೆಚ್ಚಳಕ್ಕೆ ಕಾರಣವಾಯಿತು. ನಂದಿ, ಮಿಡಿಗೇಶಿ,ಮಡಕಶಿರಾ, ಉಚ್ಚಂಗಿ ಮುಂತಾದ ದುರ್ಗಗಳು ಈ ಪ್ರಾಂತ್ಯದ ಮುಖ್ಯ ಸ್ಥಳಗಳು. ಹೊಯ್ಸಳರು ಮತ್ತು ಸೇವುಣರ ಪತನಾನಂತರ ಈ ಪ್ರಾಂತ್ಯ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಅನಂತರದ ಶಾಸನಗಳಲ್ಲಿ ನೊಳಂಬವಾಡಿಯ ಹೆಸರು ಕಾಣಬರುವುದಿಲ್ಲ. (ಎ.ವಿ.ಎನ್.)

**ನ್ಯಾಮತಿ :** ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಒಂದು ಗ್ರಾಮ. ಹೊನ್ನಾಳಿ-ಆಯನೂರು ರಸ್ತೆಯಲ್ಲಿ ಹೊನ್ನಾಳಿ ಪಟ್ಟಣದ ನೈಋತ್ಯದಲ್ಲಿ ಸು. 13 ಕಿಮೀ ದೂರದಲ್ಲಿ ತುಂಗಭದ್ರಾನದಿಯ ಎಡದಂಡೆಯ ಮೇಲಿದೆ. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಇದು ಪೇಟೆ ಸ್ಥಳವಾಗಿ ಅಭಿವೃದ್ಧಿಯಾಯಿತು. 1869-82ರ ವರೆಗೆ ಇದೇ ಹೊನ್ನಾಳಿ ತಾಲ್ಲೂಕಿನ ಮುಖ್ಯಸ್ಥಳವಾಗಿತ್ತು. ಈ ಊರು ಮಲೆನಾಡು ಮತ್ತು ಮೈದಾನ ಪ್ರದೇಶಗಳ ಮಧ್ಯಭಾಗದಲ್ಲಿರುವುದರಿಂದ ಒಳ್ಳೆಯ ವ್ಯಾಪಾರಸ್ಥಳವಾಗಿದೆ. ನಗರ ಮತ್ತು ಕೊಪ್ಪದಿಂದ ಬರುವ ಅಡಕೆ ಮತ್ತು ಮಲೆನಾಡು ಪ್ರದೇಶದಿಂದ ಬರುವ ಧಾನ್ಯ, ಬೆಲ್ಲ - ಇವನ್ನು ಶೇಖರಿಸಿ ಇಲ್ಲಿಂದ ಬಳ್ಳಾರಿ, ಧಾರವಾಡ ಮುಂತಾದ ಪಟ್ಟಣಗಳಿಗೆ ಕಳುಹಿಸಲಾಗುತ್ತದೆ. ಅವುಗಳಿಗೆ ಬದಲಾಗಿ ಬಟ್ಟೆ ಮತ್ತಿತರ ವಸ್ತುಗಳನ್ನು ಮಲೆನಾಡು ಪ್ರದೇಶಗಳಿಗೆ ಒದಗಿಸಲಾಗುತ್ತದೆ. ಹತ್ತಿಯ ವ್ಯಾಪಾರ ಉಂಟು. ಶಿವಮೊಗ್ಗ ಹೊನ್ನಾಳಿ ಮಧ್ಯದಲ್ಲಿ ಬರುವ ನ್ಯಾಮತಿಗೆ ಉತ್ತಮ ಮಾರ್ಗಗಳಿದ್ದು ವಾಹನಸೌಲಭ್ಯವಿದೆ. ನ್ಯಾಮತಿಯಲ್ಲಿ ಒಂದು ಜೂನಿಯರ್ ಕಾಲೇಜು ಮತ್ತು ಆರೋಗ್ಯ ಕೇಂದ್ರ ಇವೆ.

ನ್ಯಾಮತಿಯ ಬಳಿಯಲ್ಲಿ ಹಳೆಯ ಶಿಲಾಯುಗದ ಆದಿಭಾಗಕ್ಕೆ ಸೇರಿದ ನೆಲೆಯೊಂದನ್ನು ಗುರುತಿಸಲಾಗಿದೆ. (ಕೆ.ಪಿ.)

**ನ್ಯಾಮತಿ ಪ್ರಭಣ್ಣ:** 20ನೆಯ ಶತಮಾನದ ಆದಿಭಾಗದಲ್ಲಿದ್ದ ಕನ್ನಡ ವಿದ್ವಾಂಸರು. ದಾವಣಗೆರೆ ಜಿಲ್ಲೆಯ ನ್ಯಾಮತಿ ಇವರ ಜನ್ಮಸ್ಥಳ. ಇವರ ಜನನ, ಬಾಲ್ಯ, ವಿದ್ಯಾಭ್ಯಾಸಗಳ ಬಗ್ಗೆ ಹೆಚ್ಚಿನ ವಿಷಯ ತಿಳಿದುಬಂದಿಲ್ಲ. ಇವರು ಪಂಡಿತ ಪರೀಕ್ಷೆ ಪಾಸು ಮಾಡಿ ಮೊದಲಿಗೆ ನ್ಯಾಮತಿಯ ಪ್ರೌಢ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರಾಗಿದ್ದರು. ಕೆಲವು ಕಾಲ ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಕೆಲಸ ಮಾಡಿದರು. ಇವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಘನವಿದ್ವಾಂಸರಾಗಿದ್ದರು. ಇವರ ವಿದ್ವತ್ತನ್ನು ಗಮನಿಸಿದ ಅಂದಿನ ಸರ್ಕಾರ ಇವರನ್ನು ಮೈಸೂರು ಸರ್ಕಾರದ ಭಾಷಾಂತರ ಕಚೇರಿಗೆ ವರ್ಗಾಯಿಸಿತು. ಅನಂತರ ಇವರು ಬೆಂಗಳೂರಿಗೆ ಬಂದು ನೆಲೆಸಿದರು. ಈ ನಡುವೆ ಇವರು ಕನ್ನಡ-ಕನ್ನಡ ನಿಘಂಟೊಂದನ್ನು ರಚಿಸುವ ಯೋಜನೆ ಹಾಕಿಕೊಂಡಿದ್ದು ಅದರ ಮಹತ್ತ್ವವನ್ನು ಆಗಿನ ವಿದ್ಯಾಧಿಕಾರಿಗಳಾಗಿದ್ದ ಸಿ.ಆರ್.ರೆಡ್ಡಿಯವರಿಗೆ ತಿಳಿಸಿದಾಗ ಅವರು ಪ್ರಭಣ್ಣನವರಿಗೆ ನಿಘಂಟಿನ ರಚನೆಗಾಗಿ ಸರ್ಕಾರದ ವತಿಯಿಂದ ಎಲ್ಲ ನೆರವನ್ನೂ ಕೊಡಿಸಿದರಂತೆ. ಆದರೆ ಈ ನಿಘಂಟು ಪೂರ್ಣಗೊಳ್ಳುವ ಮೊದಲೇ ಪ್ರಭಣ್ಣನವರು ಶಿವೈಕ್ಯರಾದಂತೆಯೂ ನಿಘಂಟಿನ ಉಳಿದ ಭಾಗವನ್ನು ಇವರ ಅಣ್ಣ ಶಾಂತವೀರಪ್ಪನವರು ಮುಗಿಸಿದಂತೆಯೂ ತಿಳಿದುಬರುತ್ತದೆ. ಈ ನಿಘಂಟು ಅಚ್ಚಾಗಿಲ್ಲ. ಪ್ರಭಣ್ಣನವರು ರುಕ್ಮಿಣೀಕಲ್ಯಾಣ ಎಂಬ ನಾಟಕವನ್ನು ಬರೆದಿದ್ದರಂತೆ.

ಪ್ರಭಣ್ಣನವರ ಕನ್ನಡ-ಕನ್ನಡ ನಿಘಂಟು ಕನ್ನಡ ಭಾಷೆಗೊಂದು ಅಪೂರ್ವ ಕೊಡುಗೆ. ಕಿಟ್ಟೆಲ್ ಅವರ ನಿಘಂಟನ್ನುಳಿದರೆ ಮಹತ್ತು ಬೃಹತ್ತುಗಳಲ್ಲಿ ಇದು ಎರಡನೆಯದು. ನಿಘಂಟಿನ ರಚನೆಯನ್ನು ನೋಡಿದರೆ ಪ್ರಭಣ್ಣನವರಿಗಿದ್ದ ಪ್ರತಿಭೆ, ಶಾಸ್ತ್ರೀಯ ದೃಷ್ಟಿ, ಕನ್ನಡ-ಸಂಸ್ಕೃತ ಭಾಷೆಗಳ

ಮೇಲಿನ ಪಾಂಡಿತ್ಯ ವ್ಯಕ್ತವಾಗುತ್ತದೆ. ಈ ನಿಘಂಟಿನಲ್ಲಿ ಕನ್ನಡ ಶಬ್ದಗಳಿಗೆ ಮಾತ್ರ ಅರ್ಥವನ್ನು ಕೊಡಲಾಗಿದೆ. ಆಡುಮಾತುಗಳನ್ನು ಆಯ್ದು ಅವುಗಳ ರೂಪನಿಷ್ಪತ್ತಿಯನ್ನೂ ಕೊಟ್ಟಿದೆ. ಹಲವಾರು ಹಳಗನ್ನಡ ಕಾವ್ಯಗಳಿಂದ ಶಬ್ದಗಳನ್ನು ಸಂಗ್ರಹಿಸಿ, ಅವುಗಳನ್ನು ಅಕಾರಾದಿಯಾಗಿ ವಿಂಗಡಿಸಿ, ಪ್ರತಿಯೊಂದು ಶಬ್ದದ ಅರ್ಥ್ಚ್ಛಾಯೆಯನ್ನು ವಿವರಿಸಿ ಅವುಗಳ ಸಮರ್ಥನೆಗಾಗಿ ಪ್ರಯೋಗಗಳನ್ನು ಕೊಟ್ಟಿದೆ. ಒಂದು ಶಬ್ದದ ಅರ್ಥಚ್ಛಾಯೆಗಳನ್ನು ನಿಷ್ಕರ್ಷಿಸಿರುವಲ್ಲಿ ಮೊದಲು ಶಬ್ದವನ್ನು ಅನಂತರ ಆ ಶಬ್ದದ ವಾಚಕವನ್ನು ತರುವಾಯ ಅದರ ಅರ್ಥಚ್ಛಾಯಗಳನ್ನು ಕ್ರಮವಾಗಿ ಕೊಟ್ಟು ಅನಂತರ ಪ್ರತಿಯೊಂದು ಅರ್ಥಕ್ಕೂ ಪ್ರಾಚೀನ ಕಾವ್ಯಗಳಿಂದ ಪ್ರಯೋಗಗಳನ್ನು ಉದ್ಧರಿಸಿದೆ. ಉದಾಹರಣೆಗಾಗಿ ನಿಘಂಟಿನ ಒಂದು ಪ್ರಯೋಗವನ್ನು ನೋಡಬಹುದು:

ಅಚ್ಚಿಗ. (ನಾ), 1 ದಡ್ಡತನ: ಕಾವ್ಯಜ್ಞರಿಂ, ಕಲ್ಲದಚ್ಚಿಗದಿಂ ಕಟ್ಟಿದ ಕನ್ನಡದ ಪಾಟ್ಗಿಬ್ಬ (ಅರ್ಧನೇಮಿಪುರಾಣ, 1-35) 2 ಭ್ರಾಂತಿ; ಮಾಯೆ; ಮೋಹ. ಏನೊಂದುಮಿಲ್ಲದಚ್ಚಿಗವೊಂದುಂಟು ತೊಡರ್ವವೆ (ಆದಿಪುರಾಣ, 6-26). 3. ಚೌತ್ಸುಕ; ಕುತೂಹಲ; ಸಂತೋಷ, ಅಚ್ಚಿಗಂ ಪೊಗಟ್ಟಿದ್ದೆ (ರಾಜಶೇಖರ ವಿಲಾಸ (14-94), 4. ಸಂತಾಪ; ಮನೋವ್ಯಾಕುಲ, ಸುಯ್ದು ಬೆಂಕಿಯೊಳೆ ಬೆಂದವುದೆಂಬಿನಂ ಆಗಳಾಕೆಗಾದಚ್ಚಿಗಮಂತೆನಲ್(ಲೀಲಾವತಿ, 10-67) 5. ನೆವ, ವ್ಯಾಜ. ಪೂದಿಱಿವಚ್ಚಿಗದಿಂ ಸ್ಮರಕೇಳಿಗೆಳಸಿದರ್ (ಲೀಲಾವತಿ, 13-107), 6. ಕಷ್ಟದೆಸೆ ದುರವಸ್ಥೆ. ಹೆಚ್ಚಿದಡವಿಯೊಳೊರ್ಬನೇ ಶಿವನಚ್ಚಿಗದೊಳಿರ್ದಪನಕಟಕಟ (ಬಸವಪುರಾಣ, 16-2), 7. ಆಯಾಸ, ನಿಚ್ಚವಗಣದಿಂದಚ್ಚಿಗಂ ಸಮನಿಸಿದಂತೆ (ಶಾಂತಿಪುರಾಣ, 12-12) 8. ಕೇಡು; ಸಂಕಟ. ಬಂದದೆತ್ತಣಚ್ಚಿಗವೆಮಗೆಂದು ಬಾಯಟಿವಭೀರುಗಳ (ಚಂದ್ರಪ್ರಭಪುರಾಣ, 9-85) 9. ಕ್ರೋಧ; ಈರ್ಷೆ; ಮತ್ಸರ ಏನಗಾಱುಗಮಂಮಮಱಿಪೊಡೊತ್ತಿಮುಱಿಜಾಣಾ (ಅರ್ಧನೇಮಿಪುರಾಣ, 8-57) 10. ಒತ್ತುವಣೆ; ಬಲಾತ್ಕಾರ, ತಾನೇ ತೊಲಗಿಸಿದಪುದೆಮ್ಮಚ್ಚಿಗಮದೇಕೆ (ಅರ್ಧನೇಮಿಪುರಾಣ, 8-821) 11. ದಿಗ್ಭ್ರಮೆ; ಸೋಜಿಗ; ವಿಸ್ಮಯ, ನಿಚ್ಚಗಾಳೆಗದೊಳಚ್ಚಿಗಂಗೊಳಿಸಿ (ಅಜಿತ ಪುರಾಣ,9-34) 12. ಭಯ; ಗಾಬರಿ, ಅಚ್ಚಿಗದೊಳೆ ಪುಯ್ಯಲಿಪಂತೆ (ಆದಿಪುರಾಣ, 12-76) 13. ಸೌಂದರ್ಯ; ಒಪ್ಪಿಡಿನಡುವಿನಚ್ಚಿಗದ, ಬಾಲೆಯರ್ ಸೊಬಗು (ಜೈಮಿನಿಭಾರತ,20-2) 14. ರೂಪ; ಆಕಾರ, ಅಚ್ಚಿಯೊಳಚ್ಚಿಗ ಮೊಂದಿರಲಚ್ಚೊತ್ತಿದಂತೆ ಅದೆ (ಚಿಕ್ಕದೇವರಾಜವಿಜಯ 6-182) 15. ಅರ್ಚಕ (ತದ್ಭವ) (ಆರ್.ಎಸ್.ವಿ.)

**ನ್ಯಾಮತಿಲಕ್ಷ್ಮೀನರಸಿಂಹ :** 19ನೆಯ ಶತಮಾನದ (ಸು. 1860) ಒಬ್ಬ ಕವಿ. ವೈಷ್ಣವ ಬ್ರಾಹ್ಮಣ, ಕೌಂಡಿಣ್ಯ ಗೋತ್ರದವ, ಸ್ಥಳ ನ್ಯಾಮತಿ. ತಲ್ಪಗಿರಿರಂಗ ವಿಠಲನ ಪರಮ ಭಕ್ತ. ತಂದೆ ತಾಯಿಯರು ಸುಬ್ಬಣ್ಣ, ಲಕ್ಷ್ಮೀವಾಂಬೆ, ರಾಮಕಥಾರಂಜನವೆಂಬುದು ಈತನ ಏಕೈಕ ಕೃತಿ. ವೃತ್ತ, ಗೀತಿಕೆ, ಸೀಸಪದ್ಯ., ಕಂದ - ಹೀಗೆ ವಿವಿಧ ಛಂದಸ್ಸಿನಲ್ಲಿರುವ ಈ ಗ್ರಂಥದಲ್ಲಿ 68 ಸರ್ಗಗಳಿವೆ. ಹನುಮಂತನ ಸೀತಾನ್ವೇಷಣ ಕಾರ್ಯ ಕೃತಿಯ ವಸ್ತು. ಹನುಮಂತನ ಶ್ರೀರಾಮ ಭಕ್ತಿಯನ್ನು ಹೆಚ್ಚು ರಸವತ್ತಾಗಿ ಚಿತ್ರಿಸಲಾಗಿದೆ. ಕನ್ನಡ ಕವಿತೆಯಾದರೂ ತೆಲುಗಿನ ವಾಸನೆ ಛಾಯೆ ಕಾಣುತ್ತದೆ ಎಂದು ಗ್ರಂಥ'ದ ಬಗ್ಗೆ ಕರ್ನಾಟಕ ಕವಿಚರಿತಕಾರರು ಅಭಿಪ್ರಾಯಪಟ್ಟಿದ್ದಾರೆ.

*

**ನ್ಯಾಯಾಲಯಗಳು:** ಸಂಸದೀಯ ಪ್ರಜಾಸತ್ತೆಗೆ ಅನುಗುಣವಾಗಿ ರಾಜ್ಯಾಂಗದ 214ನೆಯ ಅನುಚ್ಛೇದದ ಪ್ರಕಾರ ಕರ್ನಾಟಕದಲ್ಲಿ ಇತರ ರಾಜ್ಯಗಳಂತೆಯೇ ನ್ಯಾಯವ್ಯವಸ್ಥೆ ಇದೆ. ಇಡೀ ರಾಜ್ಯವ್ಯಾಪ್ತಿಯುಳ್ಳ ಉಚ್ಚನ್ಯಾಯಾಲಯ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿದೆ. ಇದು ಭಾರತ ಒಕ್ಕೂಟದ ಏಕಾತ್ಮಕ ನ್ಯಾಯಾಂಗ ವ್ಯವಸ್ಥೆಗೆ ಒಳಪಟ್ಟಿರುವುದರಿಂದ ಭಾರತದ ಅಧ್ಯಕ್ಷರ ಮತ್ತು ಉಚ್ಚತಮ ನ್ಯಾಯಾಲಯದ ಹತೋಟಿಗೆ ಸೇರಿದೆ. ರಾಜ್ಯಪಾಲರೊಡನೆ ಸಮಾಲೋಚಿಸಿ ರಾಷ್ಟ್ರಾಧ್ಯಕ್ಷರು ಈ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆಯನ್ನು ನಿರ್ಧರಿಸಿ ಅದರಂತೆ ನೇಮಕ ಮಾಡುತ್ತಾರೆ. ಹೀಗೆ ಒಮ್ಮೆ ನೇಮಿಸಿದ ನ್ಯಾಯಾಧೀಶರು ತಮ್ಮ 62ನೆಯ ವಯಸ್ಸಿನ ವರೆಗೆ ಸೇವೆ ಸಲ್ಲಿಸುವರು. ಇವರನ್ನು ಸಂಸತ್ತಿನ ಎರಡೂ ಸದನಗಳ ಒಪ್ಪಿಗೆ ಇಲ್ಲದೆ ಕೆಲಸದಿಂದ ತೆಗೆಯುವಂತಿಲ್ಲ. ಈ ನ್ಯಾಯಾಲಯ ತನ್ನ ನಿಯಮಗಳಿಗೆ ಅನುಸಾರವಾಗಿ ಬರುವ ಮತ್ತು ಕೆಳನ್ಯಾಯಾಲಯಗಳ ಮೂಲಕ ಬಂದ ಮೊಕದ್ದಮೆಗಳೆರಡನ್ನೂ ವಿಚಾರಮಾಡಿ ತೀರ್ಪುನೀಡುತ್ತದೆ. ರಾಜ್ಯದ ಇತರ ಎಲ್ಲಾ ನ್ಯಾಯಾಲಯಗಳ ಮೇಲ್ವಿಚಾರಣೆ, ಕೋರ್ಟಿನ ಅಧಿಕಾರಗಳನ್ನೂ ಸೇವಕರನ್ನೂ ನೇಮಿಸುವುದು ಮತ್ತು ನಿಯಂತ್ರಿಸುವುದು ಮತ್ತು ಕೆಳನ್ಯಾಯಾಲಯಗಳಿಂದ ಮೊಕದ್ದಮೆಗಳನ್ನು ತನ್ನ ವಿಚಾರಣೆಗೆ ತೆಗೆದುಕೊಳ್ಳುವುದು ಈ ಹಕ್ಕುಗಳನ್ನು ಪಡೆದಿದೆ. ಜಿಲ್ಲಾ, ತಾಲ್ಲೂಕು ಮತ್ತು ಎಲ್ಲಾ ಕೆಳದರ್ಜೆ ನ್ಯಾಯಾಲಯಗಳಿಗೆ ರಾಜ್ಯಪಾಲರು ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಿ ನೇಮಕ ಮಾಡುತ್ತಾರೆ. ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಿವೆ. ಎಲ್ಲಾ ನ್ಯಾಯಾಲಯಗಳು ಪ್ರಾದೇಶಿಕ ವ್ಯಾಪ್ತಿ ರೆವೆನ್ಯೂ ಆಡಳಿತ ಘಟಕಗಳಿಗೆ ಹೊಂದಿಕೊಂಡಂತೆ ಇರುತ್ತದೆ. ಜಿಲ್ಲಾ ನ್ಯಾಯಾಧೀಶರನ್ನೂ ಮತ್ತು ಸಿವಿಲ್ ಜಡ್ಜರನ್ನೂ ಬಿಟ್ಟು ಇತರ ಎಲ್ಲಾ ಕೆಳದರ್ಜೆ ನ್ಯಾಯಾಲಯಗಳ ನ್ಯಾಯಾಧೀಶರನ್ನು ಲೋಕಸೇವಾ ಆಯೋಗ ಉಚ್ಚ ನ್ಯಾಯಾಲಯದ ಆದೇಶದ ಮೇಲೆ ನೇಮಿಸುತ್ತದೆ. ಕೆಳನ್ಯಾಯಾಲಯಗಳ ಕಾರ್ಯವ್ಯಾಪ್ತಿಯನ್ನು ಉಚ್ಚ ನ್ಯಾಯಾಲಯ ನಿರ್ಧರಿಸುವುದು. ಇತರ ಮೊಕದ್ದಮೆಗಳ ಜೊತೆಗೆ ರಾಜ್ಯದ ಅನೇಕ ಕಾಯಿದೆಗಳು ಈ ನ್ಯಾಯಾಲಯ ವ್ಯಾಪ್ತಿಗೆ ನ್ಯಾಯ ವಿತರಣೆಗೆ ಒಳಪಟ್ಟಿರುತ್ತವೆ. ನ್ಯಾಯಪರಿಪಾಲನೆಯ ಹೊಣೆಯನ್ನು ನಿರ್ವಹಿಸುತ್ತಿರುವ ಅಧೀನ ನ್ಯಾಯಾಲಯಗಳು ಈ ರೀತಿ ಇವೆ:

1. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯಗಳು (ಜಿಲ್ಲೆಗೆ ಒಂದು). 2. ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟರ್ ನ್ಯಾಯಾಲಯಗಳು (ಜಿಲ್ಲೆಗೆ ಒಂದು). 3. ಬೆಂಗಳೂರು ನಗರದಲ್ಲಿ ಮೆಟ್ರೊಪಾಲಿಟನ್ ಮತ್ತು ಚೀಫ್ ಮೆಟ್ರೊಪಾಲಿಟನ್ ನ್ಯಾಯಾಲಯಗಳು, 4. ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು (ಜಿಲ್ಲೆಗೆ ಒಂದು). 5. ಲಘುವಾದ ನ್ಯಾಯಾಲಯಗಳು, 6. ಮುನ್ಸೀಫರ ನ್ಯಾಯಾಲಯಗಳು 7. ಮುನ್ಸೀಫರ ಮತ್ತು ಜುಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು (ತಾಲ್ಲೂಕು ಮಟ್ಟದಲ್ಲಿ) 8. ಜುಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು. ಇದಲ್ಲದೆ, ವ್ಯಾಜ್ಯ ಸಂಖ್ಯೆಯನ್ನು ಗಮನಿಸಿ ಅಲ್ಲಲ್ಲಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳನ್ನು ಸ್ಥಾಪಿಸುವ ಏರ್ಪಾಡೂ ಇದೆ. ಈ ರೀತಿ ಬೆಂಗಳೂರು ನಗರದಲ್ಲಿ ಉದ್ಭವವಾಗುವ ಅಧಿಕ ಸಿವಿಲ್ ವ್ಯಾಜ್ಯಗಳನ್ನು ಗಮನಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಇದೇ ರೀತಿ ಹೆಚ್ಚುವರಿ ಸೆಷನ್ಸ್ ನ್ಯಾಯಧೀಶರ ನ್ಯಾಯಾಲಯಗಳು ವಿವಿಧ ಜಿಲ್ಲೆಗಳಲ್ಲಿವೆ.

ಬೆಂಗಳೂರು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರುಗಳ ನ್ಯಾಯಾಲಯಗಳು ಕ್ರಿಮಿನಲ್ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯಗಳಾಗಿವೆ.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮುಖ್ಯತಃ ಅಪೀಲು ನ್ಯಾಯಾಲಯವಾಗಿದೆ. ಆದರೆ ಮರಣದಂಡನೆ ಮೊದಲಾದ ಘೋರಶಿಕ್ಷೆಗಳನ್ನು ವಿಧಿಸಬೇಕಾಗುವ ಪ್ರಕರಣದಲ್ಲಿ ಅದಕ್ಕೆ ಮೂಲ ಅಧಿಕಾರ ವ್ಯಾಪ್ತಿಯುಂಟು. ಇದಕ್ಕಿಂತ ಕೆಳಗಿನ ನ್ಯಾಯಾಲಯಗಳಿಗೆ ಅಪೀಲು ಅಧಿಕಾರವ್ಯಾಪ್ತಿಯಿಲ್ಲ. ಅಪರಾಧಸಂಜ್ಞಾನ ಮತ್ತು ದಾವೆಯ ಆರ್ಥಿಕ ಮೌಲ್ಯ ಇವುಗಳ ವೈವಿಧ್ಯಕ್ಕನುಗುಣವಾಗಿ ಅಧಿಕಾರವ್ಯಾಪ್ತಿಯಲ್ಲಿಯೂ ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ಎಲ್ಲ ನ್ಯಾಯಾಲಯಗಳಲ್ಲಿ ನಾಜರ್, ಶಿರಸ್ತೇದಾರ, ಬೇಲಿಫ್ ಮೊದಲಾದ ಸಹಾಯಕ ಅಧಿಕಾರಿಗಳು ಇರುವರು. ಅಭಿಯೋಗ ನಡೆಸಲು ಮತ್ತು ಆರೋಪ ಪತ್ರಗಳನ್ನು ತಯಾರಿಸಲು ಆವಶ್ಯಕ ಸಹಾಯ ನೀಡುವುದಕ್ಕಾಗಿ ಅಭಿಯೋಗ ನಿರ್ದೇಶನಾಲಯವನ್ನೂ ರಚಿಸಲಾಗಿದೆ. ಉತ್ತರ ಕರ್ನಾಟಕ ಭಾಗಕ್ಕೆ ಒಂದು ಪ್ರತ್ಯೇಕ ಉಚ್ಚನ್ಯಾಯಾಲಯ ಪೀಠವನ್ನು ಸ್ಥಾಪಿಸುವ ಬಗ್ಗೆ ಪ್ರಗತಿ ಸಾಧಿಸಿದ್ದು ಶೀಘ್ರವೇ ಅದು ಈಡೇರುವ ಹಂತದಲ್ಲಿದೆ.

ಈ ಸಾಂಪ್ರದಾಯಿಕ ನ್ಯಾಯ ವಿತರಣ ವ್ಯವಸ್ಥೆಯ ಜೊತೆಗೆ

ಇತರ ನ್ಯಾಯಾಧಿಕಾರ ಪಡೆದ ಅಂಗಗಳೂ ನ್ಯಾಯವಿತರಣೆಯಲ್ಲಿ ನಿರತವಾಗಿವೆ. ಭೂಸುಧಾರಣೆ ಸಂಬಂಧವಾದ ವಿವಾದಗಳು ಮತ್ತು ತಕರಾರುಗಳನ್ನು ಪರಿಶೀಲಿಸಲು ಭೂನ್ಯಾಯಾಧಿಕರಣವಿದೆ. ಕಾರ್ಮಿಕರ ಕುಂದುಕೊರತೆಗಳು ಅಥವಾ ವಿವಾದಗಳನ್ನು ಬಗೆಹರಿಸಲು ಕಾರ್ಮಿಕ ನ್ಯಾಯಾಲಯಗಳಿವೆ. ಶ್ರೀಸಾಮಾನ್ಯರಿಗೆ ನ್ಯಾಯಾವಾದಿಗಳು ಸುಲಭವಾಗಿ ಲಭ್ಯವಾಗಲು ಉಚಿತ ಕಾನೂನು ಸೇವೆಯನ್ನು ಸರ್ಕಾರ ಒದಗಿಸಿದೆ. 1986ರಲ್ಲಿ ಲೋಕಾಯುಕ್ತ ಎಂಬ ಜಾಗೃತ ಆಯೋಗವನ್ನು ಸ್ಥಾಪಿಸಲಾಯಿತು. ಸರ್ಕಾರಿ ನೌಕರರ ಭ್ರಷ್ಟಾಚಾರಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಮುಂದಿನ ಕ್ರಮಕೈಗೊಳ್ಳಲು ಶಿಫಾರಸು ಮಾಡಿ ವರದಿ ನೀಡುವ ಅಧಿಕಾರವನ್ನು ಇದು ಹೊಂದಿದೆ.

1974ರ ನವೆಂಬರ್ 1ರಿಂದ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ ಮಟ್ಟದಲ್ಲಿ ಕನ್ನಡವೂ ನ್ಯಾಯಾಲಯದ ಅಧಿಕೃತ ಭಾಷೆಯೆಂಬುದಾಗಿ ಸರ್ಕಾರ ಘೋಷಿಸಿದೆ. ಇದಲ್ಲದೆ, ರಾಜ್ಯದಲ್ಲಿ ಕಾರ್ಮಿಕ ನ್ಯಾಯಾಲಯಗಳೂ ಮಾರಾಟಕರ ಮತ್ತು ರಾಜಸ್ವ ಅಪೀಲು ನ್ಯಾಯಾಧಿಕರಣಗಳೂ ತಮ್ಮ ತಮ್ಮ ಕ್ಷೇತ್ರದಲ್ಲಿ ನ್ಯಾಯಾಂಗದ ಕಾರ್ಯವನ್ನು ನಿರ್ವಹಿಸುತ್ತವೆ.

ಕರ್ನಾಟಕದ ನ್ಯಾಯ ಪರಿಪಾಲನೆಯ ಇತಿಹಾಸ ಪ್ರಾಚೀನವಾದುದು. ರಾಜರು, ಮಹಾಮಂಡಲೇಶ್ವರರು, ಪಾಳೆಯಗಾರರು, ಊರ ಗೌಡ ಮೊದಲಾದವರು ಅನೂಚಾನವಾದ ನ್ಯಾಯವ್ಯವಸ್ಥೆಯನ್ನು ಧರ್ಮದ ಚೌಕಟ್ಟಿನೊಳಗೇ ಅನುಸರಿಸಿಕೊಂಡು ಬಂದರು ಎನ್ನಬಹುದು. ಪಂಚಾಯತಿ ಮಾಡುವವರು ಭಟ್ಟರು, ನ್ಯಾಯನಿರ್ಣಯ ಮಾಡುವವರು ಪಂಡಿತರು, ರಕ್ಷೆ ಶಿಕ್ಷೆ ನೋಡಿಕೊಳ್ಳುವವರು ಪಕ್ಷನಾಥರು ಎಂಬ ಕದಂಬರ ಕಾಲದ ತೌಳವನಾಡಿನ ಪ್ರಾಚೀನ ಗ್ರಾಮಪದ್ಧತಿಯ ಮಾತು ಗಮನಾರ್ಹವಾಗಿದೆ. ಕದಂಬರ ಕಾಲದ ಧರ್ಮಕರಣಿಕರು, ಗಂಗರಕಾಲದ ರಾಜಾಧ್ಯಕ್ಷರು ಮತ್ತು ಧರ್ಮಾಧ್ಯಕ್ಷರು ನ್ಯಾಯಶುದ್ಧಿಯನ್ನು ಕಾಪಾಡುತ್ತಿದ್ದರು. ಮಹಾದಂಡನಾಯಕರೂ ನಾಡೊಡೆಯರೂ ದ್ರೋಹಘರಟ್ಟಗಳೆಂದು ಪ್ರಸಿದ್ಧರಾಗಿದ್ದಾರೆ. ಪಂಚನಿರ್ಣಯ ಪದ್ಧತಿಯೂ ಪ್ರಾಚುರ್ಯ ಪಡೆದಿತ್ತು. ಈ ಕಾಲದಲ್ಲಿ ಸಮತೋಲದಿವ್ಯ, ಅಗ್ನಿದಿವ್ಯ, ಜಲದಿವ್ಯ, ವಿಷದಿವ್ಯ ಮತ್ತು ತಂಡುಲದಿವ್ಯಗಳು ನ್ಯಾಯಾಸ್ಥಾನದ ಪ್ರಮಾಣಸಾಧನಗಳಾಗಿದ್ದುವು.

ಬೆಳೆದುಬಂದ ರೂಢಿಸಂಪ್ರದಾಯಗಳನ್ನು ಸಮರ್ಥಿಸುತ್ತ ಪ್ರಾಚೀನ ಧರ್ಮಶಾಸ್ತ್ರಗಳಿಗೆ ಅಪೂರ್ವ ವ್ಯಾಖ್ಯಾನ ರೂಪವಾಗಿ ವಿಜ್ಞಾನೇಶ್ವರನ 'ಮಿತಾಕ್ಷರ' ನ್ಯಾಯಾಸ್ಥಾನಗಳ ಕೈಪಿಡಿಯಂತಿತ್ತು.

ಚಾಳುಕ್ಯ ಮತ್ತು ಹೊಯ್ಸಳರಸರ ಕಾಲದಲ್ಲಿ ವ್ಯಾವಹಾರಿಕ ಮತ್ತು ಅಪರಾಧಿಕ ಎಂಬ ವಿಭಜನೆಯಾಗಿ ನ್ಯಾಯತೀರ್ಮಾನದ ವ್ಯವಸ್ಥೆ ಉತ್ತಮಗೊಂಡಿತ್ತು. ಸಮಸ್ತ ಸಾಮ್ರಾಜ್ಯದ ಸಮಗ್ರ ದಂಡಾಚರಣೆಗೆ ಮಂಡಲಾಧಿಪತಿಗಳೂ ಹೆಗ್ಗಡೆಗಳೂ ನಿಯುಕ್ತರಾಗಿದ್ದರು. ವಿಜಯನಗರದ ಕಾಲದಲ್ಲಿ ವಿವೇಕಿಗಳೂ ಸಭ್ಯರೂ ಇರುವ ವರಿಷ್ಠ ನ್ಯಾಯಾಲಯಗಳು ರೂಪತಾಳಿದವು. ರಾಜರುಗಳೂ ನ್ಯಾಯದಾನ ಮಾಡುತ್ತಿದ್ದ ನಿದರ್ಶನಗಳು ಶಾಸನೋಕ್ತವಾಗಿವೆ.

ಮೈಸೂರು ಒಡೆಯರ ರಾಜ್ಯಭಾರದ ಕಾಲದಲ್ಲಿಯೂ ಶಾಸ್ತ್ರಸಮ್ಮತವಾಗಿಯೇ ನ್ಯಾಯಪರಿಪಾಲನೆ ನಡೆಯಿತು. ದೂರುಗಳು ಬಂದಾಗ ಒಡೆಯರೇ ಸ್ವತಃ ಪ್ರವಾಸ ಮಾಡಿ ಆಯಾ ಸ್ಥಳದಲ್ಲಿಯೇ ನ್ಯಾಯ ತೀರ್ಮಾನ ಮಾಡಿದ್ದುಂಟು. ಗ್ರಾಮಗಳಲ್ಲಿ ಗ್ರಾಮಪಂಚಾಯತಿಗಳು ನ್ಯಾಯ ತೀರ್ಮಾನ ಮಾಡುತ್ತಿದ್ದು ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಅಲ್ಲೇ ದೊರಕುತ್ತಿತ್ತು. ಸುಮಾರು ನಾನೂರು ವರ್ಷಗಳು ಇಸ್ಲಾಮೀಯ ಆಳ್ವಿಕೆಯ ಕಾಲದಲ್ಲಿ ಮುಗಲ ರೀತಿಯ ಅದಾಲತ್ತು ಪದ್ಧತಿಯೂ ಪ್ರಚಲಿತವಾಗಿತ್ತು. ಮುಂದೆ ನ್ಯಾಯಪಾರಮ್ಯದ ತತ್ತ್ವಕ್ಕೆ ದಿನೇ ದಿನೇ ಮಹತ್ತ್ವ ಹೆಚ್ಚಿ. ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗದಿಂದ ಬೇರ್ಪಡುವ ಏರ್ಪಾಡುಗಳೂ ಜಾರಿಗೆ ಬಂದುವು.

ಮೈಸೂರು ಸಂಸ್ಥಾನ ಕೆಲವು ಕಾಲ ಕಮಿಷನರ ಆಳ್ವಿಕೆಗೆ ಒಳಪಟ್ಟಾಗ ಇಲ್ಲಿಯೂ ನ್ಯಾಯವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾದುವು. 85 ತಾಲ್ಲೂಕು ಕೋರ್ಟುಗಳು, 8 ಮುಖ್ಯ ಸದರ್ ಮುನ್ಸೀಫ್ ಕೋರ್ಟುಗಳು, 4 ಸೂಪರಿಂಟೆಂಡೆಂಟ್ ಕೋರ್ಟುಗಳು ಮತ್ತು ಮೂವರು ನ್ಯಾಯಾಧೀಶರಿಂದ ಕೂಡಿದ ಒಂದು ಹುಜೂರ್ ಅದಾಲತ್ತು ಸ್ಥಾಪಿತವಾದುವು. ಒಂದು ಕಮಿಷನರ ಕೋರ್ಟೂ ರಚಿತವಾಯಿತು.

1855-56ರಲ್ಲಿ ಲಾರ್ಡ್ ಡಾಲ್‌ಹೌಸಿಯ ಭೇಟಿಯ ಪರಿಣಾಮವಾಗಿ ಮೈಸೂರು ಪ್ರದೇಶದಲ್ಲಿ ಒಬ್ಬ ಚೀಫ್ ಜುಡಿಷಿಯಲ್ ಕಮಿಷನರ್ ನಿಯುಕ್ತನಾದ. ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳಲ್ಲಿ ಪಂಚಾಯತಿಯ ಸಹಾಯ ಪಡೆದುಕೊಳ್ಳಲಾಗುತ್ತಿತ್ತು. ಕ್ರಮೇಣ ಪ್ರತಿ ಜಿಲ್ಲೆಗೊಬ್ಬರಂತೆ ನ್ಯಾಯಾಂಗ ಸಹಾಯಕರೂ ನಿಯುಕ್ತರಾದರು. 1884ರಲ್ಲಿ ಮೈಸೂರು ರಾಜ್ಯದಲ್ಲಿ ಒಂದು ಚೀಫ್ ಕೋರ್ಟು ಸ್ಥಾಪಿತವಾಗಿತ್ತು. ಅದನ್ನೇ ಮಹಾರಾಜರ ಆಡಳಿತ ಕಾಲದಲ್ಲಿ 1930ರಲ್ಲಿ ಮೈಸೂರಿನ ಉಚ್ಚನ್ಯಾಯಾಲಯವೆಂದು ಹೆಸರಿಸಲಾಯಿತು. ಕೊಡಗಿನ ಮೇಲಿದ್ದ ಮದರಾಸು ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಕೊನೆಗೊಂಡು, ಕೊಡಗು ಪ್ರದೇಶವು 1953ರಿಂದ ಮೈಸೂರು ಉಚ್ಚನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಟ್ಟಿತು. ಹೈದರಾಬಾದು, ಮುಂಬಯಿ, ಮದರಾಸು ಕನ್ನಡ ಪ್ರದೇಶಗಳಲ್ಲಿ ಮುನ್ಸೀಫ್, ಜುಡಿಷಿಯಲ್ ಮ್ಯಾಜಿಸ್ಟ್ರೇಟ್, ಸಿವಿಲ್ ಹಾಗೂ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಅಧೀನ ನ್ಯಾಯಾಲಯಗಳಿದ್ದುವು. 1950ರಲ್ಲಿ ಸಂವಿಧಾನವು ಜಾರಿಗೆ ಬಂದು ಇಡೀ ಭಾರತಕ್ಕೊಂದು ಸರ್ವೋಚ್ಚ ನ್ಯಾಯಾಲಯವೂ ಪ್ರತಿ ರಾಜ್ಯದಲ್ಲೂ ಈಗ ಇರುವ ನ್ಯಾಯಾಂಗ ವ್ಯವಸ್ಥೆಯೂ ರೂಢಿಗೆ ಬಂದುವು. (ಕೆ.ಡಿ.)

**ಪಂಕಜನ ಹಳ್ಳಿ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಕಸಬೆಗೆ 13 ಕಿಮೀ ದೂರದಲ್ಲಿ ತಿಪಟೂರು ತಾಲ್ಲೂಕಿನ ಕಿಬ್ಬನಹಳ್ಳಿಗೆ ಹತ್ತಿರದಲ್ಲಿದೆ.

ಇಲ್ಲಿಯ ಮಲ್ಲಿಕಾರ್ಜುನ ದೇವಾಲಯ ದ್ರಾವಿಡಶೈಲಿಯ ದೊಡ್ಡ ದೇವಾಲಯ. ಇದರಲ್ಲಿ ಒಂದು ಗರ್ಭಗೃಹ. ಸುಕನಾಸಿ, ಪ್ರದಕ್ಷಿಣಾಪಥ, ನವರಂಗ, ಅರ್ಧಮಂಟಪ, ಪಾತಾಳಾಂಕಣ, ನಂದಿಮಂಟಪ, ಗೋಪುರಯುತವಾದ ಮಹಾದ್ವಾರ ಮತ್ತು ಪ್ರಾಕಾರಗಳಿವೆ. ದೇವಾಲಯ ಪೂರ್ವಾಭಿಮುಖವಾಗಿದೆ. ನೂರೊಂದು ಲಿಂಗಗಳನ್ನು ಪ್ರತಿನಿಧಿಸುತ್ತವೆನ್ನುವ ಗುಂಡುಕಲ್ಲುಗಳಿಂದ ಇಲ್ಲಿನ ಲಿಂಗ ರಚಿತವಾಗಿದೆ. ನಾಲ್ಕು ಮೀಟರ್ ಎತ್ತರವಿರುವ ಮಹಾದ್ವಾರ ಸುಂದರ ರಚನೆ, ಅದರಂತೆ ಕಂಬಗಳೂ ಬಾಗಿಲುವಾಡವೂ ಉತ್ತಮ ಕೆತ್ತನೆಗಳಿಂದ ಕೂಡಿದೆ. ದೇವಾಲಯದ ಕಂಬಗಳ ಮೇಲೆ ಗಣಪತಿ, ಶಕ್ತಿ ಮೊದಲಾದ ಅನೇಕ ಶಿಲ್ಪಗಳಿವೆ. ಮುಂದುಗಡೆಯಿರುವ ದೀಪಸ್ತಂಭ ಶಿಲ್ಪಿಗಳ ನೈಪುಣ್ಯತೆಯನ್ನು ಸಾರುವ ಮತ್ತೊಂದು ಅಂಶ. ಇದು ಸು. 13 ಮೀ ಎತ್ತರವಿದ್ದು ಮೇಲೆ ಒಂದು ಸಣ್ಣ ಮಂಟಪವಿದೆ.

ದೇವಾಲಯದ ಎಡಭಾಗದಲ್ಲಿ ಪಾರ್ವತಿ ಗುಡಿ ಇದೆ. ದಕ್ಷಿಣದಲ್ಲಿ ವೀರಭದ್ರ ಗುಡಿ ಇದೆ. ದೇವಾಲಯದ ಉತ್ತರದಲ್ಲಿ ಒಂದು ದೊಡ್ಡ ಕೊಳ ಮತ್ತು ಅದರ ಮಧ್ಯೆ ಒಂದು ಮಂಟಪ ಇದೆ.

ಈ ಊರಿನಲ್ಲಿ ರಂಗನಾಥ ದೇವಾಲಯ ಇಲ್ಲಿನ ಇನ್ನೊಂದು ಗುಡಿ. (ಎಸ್.ಎಂ.ವಿ.)

**ಪಂಚ ಸಿಂಹಾಸನಗಳು :** ವೀರಶೈವರಿಗೆ ಬಹು ಪ್ರಮುಖ ಎನಿಸಿರುವ ಐದು ಪೀಠಗಳು, ಚಿಕ್ಕಮಗಳೂರು ಜಿಲ್ಲೆಯ ಭದ್ರಾನದಿಯ ತೀರದಲ್ಲಿರುವ ಬಾಳೇಹಳ್ಳಿವೀರ ಸಿಂಹಾಸನ ಮಠ, ಉಜ್ಜಯಿನಿಯ ಧರ್ಮಸಿಂಹಾಸನಮಠ, ಶ್ರೀ ಶೈಲದ ಸೂರ್ಯ ಸಿಂಹಾಸನ ಮಠ, ಕಾಶಿಯ ಜ್ಞಾನಸಿಂಹಾಸನ ಮಠ, ಕೇದಾರದ ವೈರಾಗ್ಯ ಸಿಂಹಾಸನ ಮಠ. ಇವಲ್ಲದೆ ಚಿತ್ರದುರ್ಗ, ಗದಗ, ಹುಬ್ಬಳ್ಳಿ, ಉರವಕೊಂಡ ಮತ್ತು ಕಲ್ಯಾಣಗಳಲ್ಲಿ ಶೂನ್ಯಸಿಂಹಾಸನ ಮಠಗಳೂ ಶಿವಗಂಗೆ, ಸುತ್ತೂರು, ರಾಜಪುರ, ಕುಂಭಕೋಣ, ನಾಗಲಾಪುರ,

ದೇವನೂರುಗಳಲ್ಲಿ ವೀರಸಿಂಹಾಸನ ಮಠಗಳೂ ಸಾಕಷ್ಟು ಪ್ರಸಿದ್ಧವೆನಿಸಿವೆ.

*

**ಪಂಚಾಕ್ಷರಿ ಗವಾಯ್ :** 1892-1944. ಪ್ರಸಿದ್ಧ ಸಂಗೀತಗಾರರು, ಹಾವೇರಿ ಜಿಲ್ಲೆ ಹಾನಗಲ್ಲು ತಾಲ್ಲೂಕಿನ ಕಾಡಶೆಟ್ಟಿಹಳ್ಳಿಯಲ್ಲಿ 1892 ಫೆಬ್ರವರಿ 2ರಂದು ಜನಿಸಿದರು. ಚರಂತಿಮಠದ ಗುರುಪಾದಯ್ಯ ಮತ್ತು ನೀಲಮ್ಮ ಇವರ ತಂದೆ ತಾಯಿಗಳು.

ಗದಿಗೆಯ್ಯ ಇವರ ಬಾಲ್ಯದ ಹೆಸರು. ಇವರ ಅಣ್ಣ ಗುರುಪಾದಯ್ಯ, ಇಬ್ಬರೂ ಹುಟ್ಟುಕುರುಡರಾಗಿದ್ದರು. ಇಬ್ಬರೂ ಬಾಲ್ಯದಿಂದಲೇ ಗಾಯನ ಕಲೆಯಲ್ಲಿ ಆಸಕ್ತಿ ತೋರಿ ತಾವು ಕೇಳಿದ ಪದಪದ್ಯಗಳನ್ನು ಇಂಪಾಗಿ ಹಾಡುತ್ತಿದ್ದರು. ಒಮ್ಮೆ ಇವರು ಹಾಡುವುದನ್ನು ಕೇಳಿದ ಹಾನಗಲ್ಲು ಮಠದ ಕುಮಾರಸ್ವಾಮಿಗಳು, ಶಿರಾಳಕೊಪ್ಪದ ಗದಿಗೆಪ್ಪ ಗವಾಯಿಗಳಿಂದ ಕರ್ನಾಟಕ ಸಂಗೀತವನ್ನು ಶಾಸ್ತ್ರೀಯವಾಗಿ ಪಾಠ ಹೇಳಿಸಿದರು. ಮುಂದೆ ಇಬ್ಬರನ್ನೂ ಮೈಸೂರಿಗೆ ಕಳಿಸಿ ಕೆಲವು ಪಂಡಿತರಲ್ಲಿ ವಿದ್ಯಾಧ್ಯಯನ ಮಾಡಿಸಿದರು. ಈ ಮಧ್ಯೆ ಅಣ್ಣ ಗುರುಪಾದಯ್ಯ ಅಕಾಲ ಮರಣಕ್ಕೆ ತುತ್ತಾದರು. ಗದಿಗೆಯ್ಯ ಮುಂಬಯಿಗೆ ಹಿಂದುಸ್ಥಾನೀ ಸಂಗೀತ ಕಲಿಯಲು ಹೋಗಿ ಪ್ರಯೋಜನವಾಗದೆ ಹಾನಗಲ್ಲಿಗೆ ಮರಳಿ ಬಂದು ಕುಮಾರಸ್ವಾಮಿಗಳ ಅನುಮತಿಯಂತೆ ಮಿರಜದ ನೀಲಕಂಠ ಬುವಾ ಅವರಲ್ಲಿ ಹಿಂದುಸ್ಥಾನೀ ಸಂಗೀತವನ್ನು (ಗ್ವಾಲಿಯರ್ ಶೈಲಿ) ಪರಿಪೂರ್ಣವಾಗಿ ಅಭ್ಯಾಸಮಾಡಿದರು. ಮುಂದೆ ಆಜನ್ಮ ಬ್ರಹ್ಮಚಾರಿಗಳಾಗಿ, ಕುಮಾರಸ್ವಾಮಿಗಳು ಆಶೀರ್ವದಿಸಿ ಕೊಟ್ಟ ಪಂಚಾಕ್ಷರ ಗವಾಯ್ ಎಂಬ ಹೆಸರಿನ ಮುಖಾಂತರ ಸಂಗೀತ ಪ್ರಪಂಚಕ್ಕೆ ಸೇವೆ ಸಲ್ಲಿಸಿದರು.

ಗವಾಯಿಗಳು ಸಾವಿರಾರು ಜನ ಬಡಬಗ್ಗರಿಗೆ, ಅಂಗಹೀನರಿಗೆ ಅನ್ನವಸ್ತ್ರ ವಸತಿಗಳನ್ನು ಕೊಟ್ಟು ಕರ್ನಾಟಕ ಮತ್ತು ಹಿಂದುಸ್ಥಾನೀ ಸಂಗೀತವನ್ನು ಹೇಳಿಕೊಟ್ಟರು. ಇವರು 1914ರಲ್ಲಿ ಸ್ಥಾಪಿಸಿದ ಶ್ರೀ ಕುಮಾರೇಶ್ವರ ಕೃಪಾಪೋಷಿತ ಸಂಗೀತ ಸಾಹಿತ್ಯ ಮಹಾವಿದ್ಯಾಲಯ ಇಂದಿಗೂ ಗದಗಿನಲ್ಲಿ ಪುಟ್ಟರಾಜ ಗವಾಯಿಗಳ ನೇತೃತ್ವದಲ್ಲಿ ನಡೆಯುತ್ತಿದೆ. ಪಂಚಾಕ್ಷರ ಗವಾಯಿಗಳ ಮುಖ್ಯ ಶಿಷ್ಯರಲ್ಲಿ ಪುಟ್ಟರಾಜ ಗವಾಯ್, ಗುರುಬಸವಯ್ಯ ಗವಾಯ್ ಬ್ಯಾಡಗಿ, ಮೃತ್ಯುಂಜಯ ಗವಾಯ್ ಪುರಾಣಿಕಮಠ, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ಆರ್.ವಿ.ಶೇಷಾದ್ರಿ ಗವಾಯ್, ಅರ್ಜುನಸಾ ನಾಕೋಡ ಮೊದಲಾದವರನ್ನು ಹೆಸರಿಸಬಹುದು.

ಪಂಚಾಕ್ಷರ ಗವಾಯಿಗಳು 1944 ಜೂನ್ 10ರಂದು ಗದಗಿನಲ್ಲಿ ತೀರಿಕೊಂಡರು. ಪ್ರತಿವರ್ಷ ಇವರ ಪುಣ್ಯತಿಥಿ ಗದಗಿನಲ್ಲಿ ನಡೆಯುತ್ತದೆ. ಆಗ ಇವರ ಶಿಷ್ಯ ಪ್ರಶಿಷ್ಯರು ಮತ್ತು ಅಭಿಮಾನಿಗಳಿಂದ ಗಾಯನ, ಕೀರ್ತನ, ಭಾಷಣ ಇತ್ಯಾದಿಗಳು ನಡೆಯುತ್ತವೆ. (ಆರ್.ವಿ.ಎಸ್.)

**ಪಂಚಾಕ್ಷರಿ :** ನಮಃ ಶಿವಾಯ ಎಂಬ ಮಂತ್ರ. ಇವನ್ನು ಶೈವರೂ ವೀರಶೈವರೂ ಬಹಳ ಪವಿತ್ರವೆಂದು ಭಾವಿಸಿದ್ದಾರೆ. ಇದಕ್ಕೆ ಓಂಕಾರ ಸೇರಿಸಿದರೆ ಷಡಕ್ಷರಿ ಮಂತ್ರ ಅಥವಾ ಪ್ರಣವಪಂಚಾಕ್ಷರಿಯಾಗುತ್ತದೆ. ಅಷ್ಟಾವರಣದಲ್ಲಿ ಈ ಮಂತ್ರ ಒಂದು ಸ್ಥಳವನ್ನು ಆಕ್ರಮಿಸಿದೆ. ಕೊಂಡಗುಳಿ ಕೇಶಿರಾಜ (1160) ಈ ಮಂತ್ರದ ಮಹಿಮೆಯನ್ನು ತಿಳಿಸುವುದಕ್ಕಾಗಿಯೇ ಷಡಕ್ಷರಿ ಮಂತ್ರದ ಮಹಿಮೆ ಎಂಬ ಗ್ರಂಥವನ್ನು ಬರೆದಿದ್ದಾನೆ. ವೇದದ ಶ್ರೀರುದ್ರ ಮಂತ್ರದಲ್ಲಿ ನಮಃ ಶಿವಾಯಚ, ಶಿವತರಾಯಚ ಎಂಬ ಪಂಕ್ತಿಯಿದೆ. ಬಸವಣ್ಣ ತನ್ನ ವಚನದಲ್ಲಿ 'ಭವಬಂಧನ ದುರಿತಂಗಳಗೆಲ್ವೊಡೆ ಓನಮಃಶಿವಾಯ ಶರಣೆಂದೆಡೆ ಸಾಲದೆ' ಎಂದು ಹೇಳಿದ್ದಾನೆ. ದಿನಂಪ್ರತಿ ಬೆಳಗು ಸಂಜೆಸ್ನಾನ ಮಾಡಿಯಿಂದ ಪರಿಶುದ್ಧರಾಗಿ 108ಕ್ಕೆ ಕಡಿಮೆಯಿಲ್ಲದೆ ಈ ಮಂತ್ರವನ್ನು ಜಪಿಸಿದರೆ ಅಥವಾ ಲಿಖಿಸಿದರೆ ಮುಕ್ತಿ ಸುಲಭವಾಗಿ ದೊರಕುತ್ತದೆ ಎಂಬ ನಂಬಿಕೆ ವೀರಶೈವರಲ್ಲಿದೆ. ಸೂಕ್ಷ್ಮಾಗಮದಲ್ಲಿ ಓಂಕಾರ ಯುಕ್ತವಾದ ಪಂಚಾಕ್ಷರಿಯನ್ನು ಮಂತ್ರರಾಜ ಎಂದು ಕರೆಯಲಾಗಿದೆ. ಶಿವಗೀತೆಯಲ್ಲಿ ಪಂಚಾಕ್ಷರೀ ಜಪಪರಃ ಸಮಭಕ್ತಃ ಸಮೇಪ್ರಿಯಃ ಎಂದು ಹೇಳಿದೆ. ಸಿದ್ಧಾಂತ ಶಿಖಾಮಣಿಯಲ್ಲಿ ಪಂಚಾಕ್ಷರೀಂರ್ವದ್ವಿಮಾವ್ ವಿದ್ಯಾವ್ ಪ್ರಣವೇನ ಷಡಕ್ಷರೀಮ್ ಜಪೇ ಸಮಾಹಿತ್ರ್ಶೋ ಭೂತ್ವ ಶಿವಪೂಜಾ ಪರಾಯಣಃ ಎಂಬ ಮಾತಿಗೆ ಪಂಚಾಕ್ಷರಿ ಮಂತ್ರದ ಮಹಿಮೆಯನ್ನು ತಿಳಿದರೆ ಸಾಕು ಉಳಿದ ಮಂತ್ರಗಳಿಂದ ಏನು ಪ್ರಯೋಜನ ಎಂದು ಅರ್ಥ. *

**ಪಂಚಾಚಾರ್ಯರು:** ವೀರಶೈವ ಮತಗ್ರಂಥಗಳಲ್ಲಿ ರೇವಣ್ಣಸಿದ್ಧ ಮರುಳ ಸಿದ್ಧ, ಏಕೋರಾಮ, ವಿಶ್ವಾರಾಧ್ಯ ಮತ್ತು ಪಂಡಿತಾರಾಧ್ಯ ಎಂಬ ಐದು ಮಂದಿ ಶಿವಾಚಾರ್ಯರ ಹೆಸರುಗಳನ್ನು ಬಹಳವಾಗಿ ಹೇಳಿದೆ.ಇವರು ವೀರಶೈವ ಮತಾಚಾರ್ಯರು ಎಂದು ಕೂಡ ಕೆಲವು ಗ್ರಂಥಕಾರರು ಹೇಳಿದ್ದಾರೆ. ಈ ವಿಚಾರ ಶಿವಾಗಮಗಳಲ್ಲಿ ಮೊಟ್ಟಮೊದಲು ಉಕ್ತವಾಗಿದೆ. ಇವರು ಪರಶಿವನ ಸದ್ಯೋಜಾತ, ಅಘೋರ, ವಾಮದೇವ, ಈಶಾನ್ಯ, ತತ್ಪುರುಷ ಎಂಬ ಪಂಚಮುಖಗಳಲ್ಲಿ ಜನಿಸಿದರೆಂದೂ ಅಂತರ ಕೊಲ್ಲಿಪಾಕಿ, ಶ್ರೀಶೈಲ, ಉಜ್ಜಯಿನಿ, ಕಾಶಿ ಮತ್ತು ಕೇದಾರ ಲಿಂಗಗಳಲ್ಲಿ ಅವತರಿಸಿದರೆಂದೂ ಇವರು ಅಯೋನಿಜರೆಂದೂ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಎಂಬ ಪಂಚಗೋತ್ರಗಳ ಅಧಿಪತಿಗಳೆಂದೂ ವೀರಶೈವ ಮತಾಚಾರ್ಯರೆಂದೂ ಸ್ವಯಂಭು ಮೊದಲಾದ ಆಗಮಗಳಲ್ಲಿ ಹೇಳಿದೆ. ವೀರಶೈವ ಪುರಾಣಾದಿಗಳು ಈ ವಿಷಯಗಳನ್ನು ಎತ್ತಿ ಹೇಳಿವೆ. ಮೇಲಿನ ಈ ಐವರು ಆಚಾರ್ಯರ ಹೆಸರಿನಲ್ಲಿ ಕ್ರಮವಾಗಿ ಬಾಳೇಹಳ್ಳಿ (ಚಿಕ್ಕಮಗಳೂರು ಜಿಲ್ಲೆ), ಉಜ್ಜಯಿನಿ (ಬಳ್ಳಾರಿ), ಶ್ರೀ ಶೈಲ, (ಕರ್ನೂಲು ಜಿಲ್ಲೆ), ಕಾಶೀಕ್ಷೇತ್ರ ಮತ್ತು ಕೇದಾರ (ಉತ್ತರ ಪ್ರದೇಶ) - ಈ ಐದು ಕ್ಷೇತ್ರಗಳಲ್ಲಿ ಈ ಆಚಾರ್ಯ ಪಂಚಕದ ಮಠಪೀಠಗಳು ಪ್ರಸಿದ್ಧವಾಗಿವೆ.

ಷಡಕ್ಷರಿ ತನ್ನ ವೃಷಭೇಂದ್ರ ವಿಜಯದಲ್ಲಿ ಪೂರ್ವಾಚಾರ್ಯರನ್ನು ಸ್ಮರಿಸುವಾಗ ಶ್ರೀಗಳಾಚತುರಾಚಾರ್ಯ ಪದಾಂಬುಜಂಗಳೆಮಗೀಗಾವೋದ ಸಂದೋಹಮಂ ಎಂದೂ ರಾಜಶೇಖರ ವಿಳಾಸದಲ್ಲಿ ರೇಣುಕ ರಾಮ ಪಂಡಿತ ಮಹಾ ಮರುಳಾರ್ಯರ ಮಾಣದೆ ಬಣ್ಣಿಸುತ್ತೆಱಗಿಮೇಣ್ಪಡೆವಂ ಪರಮಾರ್ಥ ಸಿದ್ಧಿಯು ಎಂದೂ ಹೇಳಿದ್ದಾನೆ. ಗೂಲೂರಿನಲ್ಲಿ ವಾಸವಾಗಿದ್ದ ಸಂಪಾದನೆಯ ಪರ್ವತೇಶ (1698) ಚತುರಾಚಾರ್ಯ ಪುರಾಣವನ್ನು ಬರೆದಿದ್ದಾನೆ. ಇದರಲ್ಲಿ ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ ಎಂಬ ಈ ನಾಲ್ವರು ಅಚಾರ್ಯರ ಚರಿತ್ರೆಯನ್ನು ಮುಖ್ಯವಾಗಿ ಹೇಳಿ, ಕಡೆಯಲ್ಲಿ ವಿಶ್ವೇಶ್ವರಾಚಾರ್ಯರನ್ನು ಸೇರಿಸಿ, ಪಂಚಕಲಶದ ಆಚಾರ್ಯಚರಿತ ಎಂದಿದ್ದಾನೆ. ಈ ವಿಷಯಗಳನ್ನು ನೋಡಿದರೆ ಮೊದಲಿಗೆ ನಾಲ್ಕೇಜನ ಆಚಾರ್ಯರಿದ್ದು ಆ ಪಟ್ಟಿಗೆ ಅನಂತರ ವಿಶ್ವಾರಾಧ್ಯ ಸೇರಿ ಆಚಾರ್ಯರ ಸಂಖ್ಯೆ ಐದು ಆಗಿರಬೇಕೆಂದು ತೋರುತ್ತದೆ.

ಕಾಶಿಯಲ್ಲಿರುವ ಜಂಗಮವಾಡಿ ಮಠ ವಿಶ್ವಾರಾಧ್ಯರ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಮಠಕ್ಕೆ ಕಾಶಿಯ ಹಾಗೂ ಮೈಸೂರು ಮಹಾರಾಜರು ಬರೆಸಿಕೊಟ್ಟ ಶಾಸನಗಳಿವೆ. ಜಹಾಂಗೀರ್, ಔರಂಗಜೇಬ್, ಷಹಜಹಾನ್ ಮೊದಲಾದವರು ಕೊಟ್ಟ ಶಾಸನಗಳಿವೆ. ಕೆಳದಿ ರಾಜ ದೊಡ್ಡಸಂಕಣನಾಯಕ ಈ ಮಠಕ್ಕೆ ಹೆಚ್ಚು ಸೇವೆ ಸಲ್ಲಿಸಿದ್ದಾನೆ. ಪ್ರಯಾಗದ ತ್ರಿವೇಣಿ ಸಂಗಮದ ಹತ್ತಿರ ಈ ಮಠದ ಶಾಖೆ ಇದೆ. ವೀರಶೈವರಲ್ಲಿ ನಡೆಯುವ ಶಿವದೀಕ್ಷಾ ಕರ್ಮಗಳು ಈ ಐವರು ಆಚಾರ್ಯರ ಹೆಸರಿನ ಪಂಚಕಳಸದ ಸನ್ನಿಧಿಯಲ್ಲಿ ನಡೆಯುತ್ತವೆ. *

**ಪಂಚಾಮೃತ :** ಇಂದಿನ ಗದಗ ಜಿಲ್ಲೆ ಗದಗ್‌ನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. 1961 ಏಪ್ರಿಲ್‌ನಲ್ಲಿ ಆರಂಭವಾಯಿತು. ಡೆಮಿ ಅಷ್ಟದಳ ಆಕಾರದ ಸು. 120 ಪುಟಗಳಿಂದ ಕೂಡಿದ್ದ ಈ ಪತ್ರಿಕೆಯ ಸಂಪಾದಕರು ಪಂಢರೀನಾಥಾಚಾರ್ಯ ಗಲಗಲಿ. ವಿವಿಧ ಅಭಿರುಚಿಗಳ ವಾಚಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಲೇಖನಗಳನ್ನು ಪ್ರಕಟಿಸಲಾಗುತ್ತಿತ್ತು. ಮನರಂಜಕ ಹಾಗೂ ನೀತಿಬೋಧಕ ವಿಷಯಗಳಿಗೆ ಹೆಚ್ಚು ಗಮನ ಸಲ್ಲುತ್ತಿತ್ತು. ಹಾಸ್ಯ ಲೇಖನಗಳು, ವಿಚಾರಪೂರ್ಣ ಬರಹಗಳು, ಸಾಮಾಜಿಕ ಐತಿಹಾಸಿಕ ಹಾಗೂ ಪತ್ತೇದಾರಿ ಕಥೆಗಳು ಆಕರ್ಷಕವಾಗಿ ಬರುತ್ತಿದ್ದುವು. ಪತ್ರಿಕೆಯ ಕೆಲವು ಪ್ರಧಾನ ವಿಭಾಗಗಳಿವು;

ವೇದ ಬೋಧ, ಸಂಸ್ಕೃತ ಕವಿ ಕೃತಿ ಪರಿಚಯ, ಸುಭಾಷಿತಗಳು, ದೊಡ್ಡವರ ಸಣ್ಣ ಕಥೆಗಳು ಮತ್ತು ಪುಸ್ತಕ ವಿಭಾಗ, ಪುಸ್ತಕ ವಿಭಾಗದಲ್ಲಿ ಹೆಚ್ಚಾಗಿ ಬರುತ್ತಿದ್ದುದು ಮರಾಠಿ, ತೆಲುಗು, ಹಿಂದಿ ಇತ್ಯಾದಿ ಭಾಷೆಗಳಲ್ಲಿಯ ಕಾದಂಬರಿಗಳ ಭಾಷಾಂತರಗಳು.

ಪಂಚಾಮೃತ ಸುಂದರವಾಗಿ ಪ್ರಕಟವಾಗುತ್ತಿತ್ತು. ಹೊದಿಕೆಯ ಮೇಲೆ ವರ್ಣರಂಜಿತ ಚಿತ್ರವಿರುತ್ತಿತ್ತು. 1937ರ ನವೆಂಬರ್ ದೀಪಾವಳಿ ಸಂಚಿಕೆಯೊಂದಿಗೆ ಪತ್ರಿಕೆ ಡೆಮಿ ಅಷ್ಟದಳ ಆಕಾರ ತಾಳಿತು. ಆ ವೇಳೆಗೆ ಪತ್ರಿಕೆ ಆರ್ಥಿಕ ಮುಗ್ಗಟ್ಟಿಗೊಳಗಾಗಿದ್ದಿತೆಂಬುದು ವ್ಯಕ್ತವಾಗುವುದು. ಸಂಪಾದಕ ಗಲಗಲಿಯವರೆ ಪತ್ರಿಕೆಯ ಎಲ್ಲ ಹೊಣೆಯನ್ನೂ ಹೊತ್ತಿದ್ದುದರಿಂದ ಪ್ರಕಟಣೆಯನ್ನು ನಿರ್ವಹಿಸುವುದು ಕೊನೆಕೊನೆಗೆ ಬಹಳ ಕಷ್ಟಕರವಾಗಿ ಪರಿಣಮಿಸಿತು. 1972ರ ಹೊತ್ತಿಗೆ ಪತ್ರಿಕೆ ನಿಂತುಹೋಯಿತು.

ಪಂಚಾಮೃತ ಜೀವಂತವಾಗಿದ್ದ ಕಾಲದಲ್ಲಿ ಪಂಢರಿನಾಥಾಚಾರ್ಯ ಗಲಗಲಿಯವರು ಕನ್ನಡ ಪತ್ರಿಕೋದ್ಯಮದಲ್ಲಿ ತಮ್ಮ ಸಾಮರ್ಥ್ಯವನ್ನು ಅದರ ಮೂಲಕ ಪ್ರಕಟಿಸಿದರು. ಈ ಅಲ್ಪಾವಧಿಯಲ್ಲಿ ಪತ್ರಿಕೆ ಕನ್ನಡ ಓದುಗರ ಮನವನ್ನು ಸೆಳೆದು ಜನಾದರಣೀಯ ಸಾಹಿತ್ಯವನ್ನು ಹಂಚಿತು. ಪತ್ರಿಕೆ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಪ್ರತಿ ತಿಂಗಳೂ ಹಂಚಿಕೆಯಾಗುತ್ತಿದ್ದ ಪ್ರತಿಗಳ ಸಂಖ್ಯೆ ಸು. 11,000. ಪತ್ರಿಕೆ ಗದಗ್‍ನ ನ್ಯೂ ಗದಗ ಪ್ರಿಂಟರಿಯಲ್ಲಿ ಮುದ್ರಣವಾಗುತ್ತಿತ್ತು.

**ಪಂಚಾಚಾರ:** ವೀರಶೈವರಲ್ಲಿ ಪಂಚಾಚಾರ್ಯರು ನೀತಿ ಪ್ರಧಾನವಾದ ಸದಾಚಾರ, ಶಿವಚಾರ, ಲಿಂಗಾಚಾರ, ಭೃತ್ಯಾಚಾರ, ಗಣಾಚಾರ ಎಂಬ ಐದು ಆಚಾರಗಳನ್ನು ಹೇಳಿರುತ್ತಾರೆ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು ಎಂಬ ಬಸವಣ್ಣನವರ ವಚನದಂತೆ ಸಮಾಜದಲ್ಲಿ ವ್ಯಕ್ತಿಯೋಗ್ಯವಾಗಿ ನಡೆಯಲು ಈ ಆಚಾರಗಳು ನೆರವಾಗುತ್ತವೆ.

**ಸದಾಚಾರ:** ಪರಸ್ತ್ರೀ, ಪರದ್ರವ್ಯ, ಪರವಸ್ತುಗಳನ್ನು ಮುಟ್ಟದಿರುವುದು, ಪರನಿಂದೆಯನ್ನು ಮಾಡದಿರುವುದು, ಪರಹಿಂಸೆಯನ್ನು ಆಚರಿಸದಿರುವುದು, ಸದಾಶಾಸ್ತ್ರೋಕ್ತ ಮಾರ್ಗದಲ್ಲಿ ನಡೆಯುವುದು, ಗುರುಹಿರಿಯಲ್ಲಿ ಶ್ರದ್ಧಾನಿಷ್ಠನಾಗಿರುವುದು ದೈವಭಕ್ತಿ ಸಂಪನ್ನನಾಗಿರುವುದು ಇತ್ಯಾದಿ.

**ಶಿವಾಚಾರ:** ಶಿವಭಕ್ತಿ ಸಂಪನ್ನವಾಗಿ ಅನ್ಯದೈವಗಳನ್ನು ಸ್ಮರಿಸದಿರುವವನು ಏಕೋದೇವೋ ಪಾಸಕನಾಗಿ, ಶಿವೈಕ್ಯ ವ್ರತವುಳ್ಳವನಾಗಿರುವುದು, ಶಿವಾಗಮಗಳಲ್ಲಿ ಲುಪ್ತವಾಗಿರುವುದು, ಶಿವಕ್ಷೇತ್ರಗಳನ್ನು ಸಂದರ್ಶಿಸುವುದು, ಶಿವಭಕ್ತರನ್ನು ಸಂರಕ್ಷಿಸುವುದು ಇತ್ಯಾದಿ.

**ಲಿಂಗಾಚಾರ:** ಇಷ್ಟ ಪ್ರಾಣ, ಭಾವಲಿಂಗಗಳ ಅನುಸಂಧಾನ ಮಾಡಿ ಸ್ಥೂಲ, ಸೂಕ್ಷ್ಮ ಕಾರಣವೆಂಬ ತ್ಯಾಗಾಂಗ, ಯೋಗಾಂಗ, ಭೋಗಾಂಗಗಳನ್ನು ತ್ರಿವಿಧ ಲಿಂಗಪೂಡೆಯಲ್ಲಿ ನಡೆಯುವುದು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಲಿಂಗವೇ ಕಾರಣವೆಂದೂ ಜಗತ್ತೆಲ್ಲವೂ ಲಿಂಗಮಯವೆಂದೂ ತಿಳಿಯುವದು.

**ಭೃತ್ಯಾಚಾರ:** ಎನಗಿಂತ ಕಿರಿಯರಿಲ್ಲ. ಶಿವಶರಣರಿಗಿಂತ ಹಿರಿಯರಿಲ್ಲ ಎಂಬ ಬಸವಣ್ಣನವರ ವಚನದಂತೆ, ದಾಸೋಹಂ ಭಾವದಿಂದ ನಡೆಯುವುದು, ಶರಣರನ್ನು ಗುರುಜಂಗಮರನ್ನು ಕಂಡರೆ ಶರಣಾರ್ಥಿ ಎಂದು ಕೈಂಕರ್ಯಭಾವದಿಂದ ವರ್ತಿಸುವುದು.

**ಗಣಾಚಾರ:** ಶಿವಾಗಮೋಕ್ತ ರೀತಿಯಿಂದ ನಡೆನುಡಿಗಳನ್ನು ಶಿವಧರ್ಮಕ್ಕೆ ಅನುಗುಣವಾಗಿ ವರ್ತಿಸುವುದು. ಶಿವಕ್ಷೇತ್ರ, ಶಿವಶರಣರನ್ನು ರಕ್ಷಿಸುವುದು ಇತ್ಯಾದಿ.

(ಬಿ.ಎಸ್.)

**ಪಂಚಾಯಿತಿಕೆ :** ವ್ಯಾಜ್ಯಗಳು ಹುಟ್ಟಿಕೊಂಡಾಗ, ವಿಷಯವನ್ನು ತಿಳಿದ ಸ್ಥಳದವರಿಂದಲೇ ಚಾವಡಿಯಲ್ಲಿ ಅಥವಾ ದೇವಸ್ಥಾನದಲ್ಲಿ ಕುಳಿತು, ಎರಡು ಪಕ್ಷಗಳವರ ವಾದಗಳನ್ನೂ ಕೇಳಿ, ತೀರ್ಮಾನಕೊಡುವ ಜನಪದ ವಿಧಾನ.ಈ ತೀರ್ಮಾನದಂತೆ ವ್ಯಾಜ್ಯದ ಉಭಯತ್ರರೂ ನಡೆಯುವುದು ವಾಡಿಕೆ. ಇಂದಿನ ಕಾಲದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿ, ಕೋರ್ಟು ಕಚೇರಿ ವ್ಯವಹಾರ ಎಲ್ಲರಿಗೂ ತಿಳಿದಿರುವುದರಿಂದ ಸ್ಥಳದ ಪಂಚಾಯಿತಿಕೆಗಳಿಗೆ ಹಿಂದಿನಷ್ಟು ಪ್ರಾಮುಖ್ಯತೆ ಇಲ್ಲವೆಂಬುದು ನಿಶ್ಚಯ. ಆದರೂ ಕೋರ್ಟುಗಳಲ್ಲಿ ಉಂಟಾಗುವ ವಿಳಂಬ, ಒದಗಿಸಬೇಕಾದ ಪುರಾವೆಯ ಅಸಂಖ್ಯಾತ ಕಾಗದಪತ್ರಗಳು, ಕ್ಷಣ ಕ್ಷಣವೂ ಪಕ್ಷಗಳನ್ನು ಬದಲಾಯಿಸುತ್ತಿರುವ ಸಾಕ್ಷಿಗಳ ಮನಸ್ಸನ್ನು ಒಲೈಸುವ ಕಷ್ಟ, ವಕೀಲರು ಪದೇಪದೇ ಕೇಳುವ ಶುಲ್ಕ ಈ ಎಲ್ಲ ಕಾರಣಗಳಿಂದ ಇಂದೂ ಹಳ್ಳಿಗರು ತಮ್ಮ ನಿತ್ಯವ್ಯವಹಾರಕ್ಕೆ ಸಂಬಂಧಿಸಿದ ಬಹುಪಾಲು ವ್ಯಾಜ್ಯಗಳನ್ನು ಸ್ಥಳದ ಪಂಚಾಯಿತಿಕೆಯಲ್ಲಿಯೇ ತೀರ್ಮಾನ ಮಾಡಿಕೊಳ್ಳುತ್ತಾರೆ. ಎಲ್ಲ ದೃಷ್ಟಿಯಿಂದಲೂ ಇದು ಕ್ಷೇಮವೆಂಬುದು ಅವರಿಗೂ ಮನದಟ್ಟಾಗಿದೆ.

ಹಿಂದೆ ಹಳ್ಳಿಗಳಲ್ಲಿ ಪಂಚಾಯಿತಿಕೆಗಳಿಗೆ ಪ್ರಾಮುಖ್ಯತೆ ಬಹಳವಾಗಿತ್ತು. ಆಗಿನ ಕಾಲದ ತಪ್ಪುಗಳು, ತಕ್ಸೀರುಗಳು, ವ್ಯಾಜ್ಯ ಕಾರಣಗಳು ತಕ್ಕಮಟ್ಟಿಗೆ ಸರಳವಾಗಿದ್ದವು. ಭೂಮಿ, ಹಣಕಾಸು, ಸಣ್ಣಪುಟ್ಟ ಕಳವು, ಸ್ತ್ರೀಪುರುಷರ ಲೈಂಗಿಕ ಪ್ರವೃತ್ತಿ ಪ್ರೇರಿತ ಅಪರಾಧಗಳು, ಹೊಡೆದಾಟ - ಇವು ಅಂದಿನ ಸಾಮಾನ್ಯ ವ್ಯಾಜ್ಯಕಾರಣವಾಗಿರುತ್ತಿದ್ದವು. ಅಂದಿನವರು ಇವುಗಳನ್ನೆಲ್ಲ ಸ್ಥಳದ ಪಂಚಾಯಿತಿಕೆಗಳಲ್ಲಿಯೇ ತೀರ್ಮಾನಿಸುತ್ತಿದ್ದರು. ಇಬ್ಬರು ವ್ಯಾಜ್ಯಕಾರರಲ್ಲಿ ಯಾರಾದರೂ ಒಬ್ಬ ಗ್ರಾಮದ ಮುಖಂಡನೆನಿಸಿಕೊಳ್ಳುವವನಲ್ಲಿ, ಮತ್ತೊಬ್ಬನ ಮೇಲೆ ಒಂದು ಫಿರ್ಯಾದನ್ನು ಕೊಟ್ಟರೆ ಗ್ರಾಮದ ಮುಖಂಡ, ಉಳಿದ ಗ್ರಾಮಸ್ತರೊಂದಿಗೆ ಮಾತುಕತೆಯಾಡಿ ವಿಚಾರಣೆಗಾಗಿ ಒಂದು ದಿನವನ್ನು ಗೊತ್ತುಮಾಡುತ್ತಿದ್ದ. ವಿಚಾರಣೆ ಸಾಧಾರಣವಾಗಿ ನಡೆಯುತ್ತಿದ್ದುದು ಸಂಧ್ಯಾಕಾಲದ ಅನಂತರ ದೇವಸ್ಥಾನದಲ್ಲಿ. ಕೆಲವರು ಪಂಚಾಯಿತಿದಾರರಾಗಿ ಜಗಲಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಪಂಚಾಯಿತಿದಾರರಲ್ಲಿ ಬಡವಬಲ್ಲಿದವೆಂಬ ಭೇದವಿರಲಿಲ್ಲ. ಆದರೆ ಅವರು ನಿಷ್ಪಕ್ಷಪಾತಿಗಳೂ ಒಳ್ಳೆಯ ನಡತೆಯುಳ್ಳವರೂ ಪ್ರಾಮಾಣಿಕರೆಂಬ ನಂಬಿಕೆಯನ್ನೂ ಜನರಲ್ಲಿ ಉಂಟುಮಾಡಿದವರೂ ಆಗಿರಬೇಕಾಗಿತ್ತು. ಪಂಚಾಯಿತಿಯಲ್ಲಿರುವಾಗ ಗಟ್ಟಿಯಾಗಿ ಮಾತನಾಡುವುದಾಗಲಿ, ಪೊಳ್ಳು ಅಥವಾ ಹಗುರವಾದ ಮಾತನಾಡುವುದಕ್ಕಾಗಲಿ, ಕೊನೆಗೆ ಬೀಡಿ ನಶ್ಯ ಉಪಯೋಗಿಸುವುದಕ್ಕಾಗಲಿ ಅವಕಾಶವಿರುತ್ತಿರಲಿಲ್ಲ. ಸನ್ನಿವೇಶದಲ್ಲಿ ತುಂಬ ಗಾಂಭೀರ್ಯವಿರುತ್ತಿತ್ತು. ಎರಡು ಪಕ್ಷಗಳವರೂ ಅಲ್ಲಿಗೆ ತಮ್ಮ ತಮ್ಮ ಸಾಕ್ಷಿಗಳನ್ನು ಕರೆತರುತ್ತಿದ್ದರು. ವಿಚಾರಣೆ ಗಂಭೀರವಾಗಿ ಆತುರ ಕಾತುರವಿಲ್ಲದೆ ಮುಚ್ಚುಮರೆಯಿಲ್ಲದ ಕೂಲಂಕಷವಾಗಿ ನಡೆಯುತ್ತಿತ್ತು. ಎಲ್ಲರೂ ಗ್ರಾಮಸ್ಥರೇ ಆದುದರಿಂದಲೂ ಜಮೀನು ಮುಂತಾದುವುಗಳಲ್ಲಿ ಅವರೆಲ್ಲರಿಗೂ ಅನುಭವವಿದ್ದುದರಿಂದಲೂ ಸತ್ಯವನ್ನು ನಿಖರವಾಗಿ ಕಂಡುಹಿಡಿಯುತ್ತಿದ್ದರು. ಕೆಲವು ವೇಳೆ ಪಂಚಾಯ್ತಿದಾರರೇ ತಪ್ಪು ಯಾರದೆಂದು ಕಂಡುಹಿಡಿಯಲು ಒಂದು ಉಪಸಮಿತಿಯನ್ನು ನಿಯಮಿಸುತ್ತಿದ್ದರು. ಅವರು ತಮ್ಮ ತೀರ್ಪನ್ನು ಹೇಳಿದ ಮೇಲೆ ಎಲ್ಲರೂ ಒಟ್ಟಾಗಿ ಸೇರಿ ನಿರ್ಣಯಿಸಿ ತೀರ್ಮಾನ ಮಾಡುತ್ತಿದ್ದರು. ಜಮೀನಿನ ವ್ಯಾಜ್ಯವಾಗಿದ್ದರೆ ಜಮೀನು ಯಾರಿಗೆ ಸೇರಬೇಕು, ಅದಕ್ಕೆ ಹಣ ಕೊಡಬೇಕಾದರೆ ಯಾರು ಎಷ್ಟು ಕೊಡಬೇಕು ಎಂಬುದನ್ನು ತೀರ್ಮಾನಿಸಿ ನಿರ್ಧರಿಸುತ್ತಿದ್ದರು. ಹಣಕಾಸು ಲೇವಾದೇವಿ ವ್ಯಾಜ್ಯವಾದರೆ ಅದಕ್ಕೆ ತಕ್ಕ ತೀರ್ಮಾನವನ್ನು ಕೊಡುತ್ತಿದ್ದರು. ಹೊಡೆದಾಟವಾಗಿದ್ದರೆ ತಪ್ಪು ಯಾರದೆಂದು ಕಂಡು ಹಿಡಿದು ದಂಡವನ್ನು ವಿಧಿಸಿ ಆ ಹಣವನ್ನು ಊರೊಟ್ಟಿನ ನಿಧಿಗೆ ಸೇರಿಸುತ್ತಿದ್ದರು. ದಂಡದಲ್ಲಿ ಸ್ವಲ್ಪ ಭಾಗವನ್ನು ಗಾಯಗೊಂಡವರ ಉಪಚಾರಕ್ಕಾಗಿ ಕೊಡಿಸುತ್ತಿದ್ದರು. ಲೈಂಗಿಕ ಅಪರಾಧಗಳ ಸಂದರ್ಭದಲ್ಲಿ, ಹುಡುಗ ಹುಡುಗಿ ಮದುವೆಯಾಗದವರಾಗಿದ್ದರೆ ಇಬ್ಬರಿಗೂ (ಅವರು ಜಾತಿ ಮತ್ತು ಇತರ ದೃಷ್ಟಿಗಳಿಂದ ಒಪ್ಪಿದರೆ) ವಿವಾಹವನ್ನು ವಿಧಿಸುತ್ತಿದ್ದರು. ಬೇರೆ ಬೇರೆ ಜಾತಿಯವರಾಗಿದ್ದರೆ ದಂಡವನ್ನು ವಿಧಿಸುತ್ತಿದ್ದರು.

ಇಂಥ ಸಣ್ಣ ಪುಟ್ಟ ವ್ಯವಹಾರಗಳಿಗೆ ಮಾತ್ರ ಪಂಚಾಯಿತಿಕೆ ಸೀಮಿತವಾಗಿರದೆ ಖೂನಿ ಹೊರತು (ಕೆಲವು ವೇಳೆ ಖೂನಿಗೆ ಸಹ) ದೊಡ್ಡ ದೊಡ್ಡ ಆಸ್ತಿ ವಿಭಾಗಕ್ಕೆ ಸಂಬಂಧಪಟ್ಟ ವ್ಯಾಜ್ಯಗಳನ್ನೂ ಒಳಗೊಂಡಿದ್ದು ನೂರಕ್ಕೆ ತೊಂಬತ್ತೈದಕ್ಕಿಂತ ಹೆಚ್ಚು ಭಾಗ, ಇಂಥ

ಸಮಸ್ಯೆಗಳು ಪಂಚಾಯಿತಿಗಳಲ್ಲಿ ತೀರ್ಮಾನವಾಗುತ್ತಿದ್ದವು. ಇಂಥ' ಪಂಚಾಯಿತಿಕೆಗಳಿಗೆ ನ್ಯಾಯ ಎಂದು ಕರೆಯುತ್ತಿದ್ದರು. ನ್ಯಾಯಕ್ಕೆ ಕುಂತವ್ರು, ನ್ಯಾಯ ಬಿದ್ದಯ್ತೆ, ನ್ಯಾಯ ಹೂಡುಸ್ತೀನಿ, ನ್ಯಾಯ ಇಟ್ಕೊಂಡವ್ರೆ ಎಂಬ ಮಾತುಗಳು ಹಳ್ಳಿಗಳಲ್ಲಿ ಕೆಲವೆಡೆ ಈಗಲೂ ಪ್ರಚಾರದಲ್ಲಿವೆ. ಪಂಚಾಯಿತಸ್ಥರ ತೀರ್ಮಾನವನ್ನು ಉಭಯ ಪಕ್ಷಗಳವರೂ ಒಪ್ಪುತ್ತಿದ್ದರು. ಒಪ್ಪದಿದ್ದವನನ್ನು ಊರಿಗೆ ಒಂಟಿಯಾಗಿ ಮಾಡಿ ಅವನಿಗೆ ಬೆಂಕಿ ನೀರು ಕೊಡಕೂಡದು, ಅವನೊಂದಿಗೆ ಯಾರೂ ಸೇರಕೂಡದು, ಸೇರಿದರೆ ಅವನು ಕೊಡಬೇಕಾದ ದಂಡವನ್ನು ಸೇರಿದವರೂ ಕೊಡಬೇಕಾಗುತ್ತದೆ ಎಂದು ನಿರ್ಬಂಧಿಸುತ್ತಿದ್ದರು. ರೈತ ಸಮಾಜ ಜೀವಿಯಾದುದರಿಂದ ಒಂಟಿಯಾಗಿರಲು ಹೆದರಿ ತನಗೆ ವಿಧಿಸಿದ ದಂಡವನ್ನು ಕೊಟ್ಟುಬಿಡುತ್ತಿದ್ದ. ಸಕಾಲಕ್ಕೆ ಕೊಡದ ತಪ್ಪಿಗಾಗಿ ವಿಧಿಸಿದ ಹೆಚ್ಚು ದಂಡವನ್ನೂ ಕೊಡುತ್ತಿದ್ದ. ಅವನ ಅವಿಧೇಯತೆಗೆ ಯಾರಾದರೂ ಕುಮ್ಮಕ್ಕು ಕೊಟ್ಟಿದ್ದರೆ ಗ್ರಾಮಸ್ಥರು ಅವರಿಗೂ ದಂಡ ವಿಧಿಸುತ್ತಿದ್ದರು.

ನ್ಯಾಯ ತೀರ್ಮಾನಕ್ಕೆ ಹಳ್ಳಿಯ ಪಂಚಾಯಿತಿಕೆಗಳೇ ಅಲ್ಲದೆ ಅದಕ್ಕೂ ಮೇಲುಪಟ್ಟ ನ್ಯಾಯಾಸ್ಥಾನಗಳೂ ಇದ್ದವು. ಎರಡು ಪಕ್ಷದವರಲ್ಲಿ ಯಾರಿಗೆ ಹಳ್ಳಿಯ ಪಂಚಾಯಿತಿಕೆಯ ತೀರ್ಪು ಪೂರ್ಣ ಸಮಾಧಾನವನ್ನು ನೀಡಲಿಲ್ಲವೋ ಅವರು ನಾಡಗೌಡರೆಂಬುವರಲ್ಲಿ ಹೋಗಿ ತಮ್ಮ ಮೊಕದ್ದಮೆಯನ್ನು ದಾಖಲು ಮಾಡುತ್ತಿದ್ದರು. ನಾಡಗೌಡರೆಂದರೆ ಆ ಪ್ರಾಂತದ ಇಂತಿಷ್ಟು ಹಳ್ಳಿಗಳಿಗೆ ಯಜಮಾನರೆಂದು ಜನ ಔಪಚಾರಿಕವಾಗಿ ಒಪ್ಪಿಕೊಂಡವರು. ಈತ ಹಣಕಾಸು ಲೇವಾದೇವಿ, ಜಮೀನ್ದಾರಿ, ದನಕರು ವಹಿವಾಟು ಎಲ್ಲ ದೃಷ್ಟಿಯಿಂದಲೂ ಅನುಕೂಲವಾಗಿದ್ದವನಾಗಿರುತ್ತಿದ್ದ. ಇವನ ಮಾತನ್ನು ಇವನ ಆಳ್ವಿಕೆಗೆ ಸೇರಿದ ಜನರೆಲ್ಲ ಅಂಗೀಕರಿಸುತ್ತಿದ್ದರು. ಈತ ಇಂಥ ವ್ಯಾಜ್ಯಗಳನ್ನು ತೀರ್ಮಾನ ಮಾಡಲು ಒಂದು ದಿನವನ್ನು ಗೊತ್ತುಮಾಡಿ, ಒಂದು ಸ್ಥಳವನ್ನು ನಿಗದಿ ಮಾಡಿ ಸ್ವಂತ ಖರ್ಚಿನಲ್ಲಿ ಅಲ್ಲಿ ಬಂದು ಬೀಡು ಬಿಡುತ್ತಿದ್ದ. ಒಂದೊಂದು ವೇಳೆ ಜಾತ್ರೆ ಕಾಲದಲ್ಲಿ ಜಾತ್ರೆ ಮೈದಾನದಲ್ಲಿಯೂ ಬೀಡು ಬಿಟ್ಟು ನಾಲ್ಕು ಐದು ದಿನ ವಿಚಾರಣೆ ಮಾಡಿ ನ್ಯಾಯವನ್ನು ಹಿಡಿದು ತೀರ್ಪು ಕೊಟ್ಟು ಹೋಗುತ್ತಿದ್ದ. ಫಿರ್ಯಾದಿಗಾಗಲಿ ಅಪರಾಧಿಗಾಗಲಿ ಆ ತೀರ್ಮಾನವೂ ಸಮಾಧಾನವಾಗದಿದ್ದಲ್ಲಿ, ಆಗ ಅವರು ಮೇಲುನಾಡಗೌಡ ಎಂಬುವನಲ್ಲಿ ಹೋಗಿ ಪುನರ್‌ವಿಚಾರಣೆಗೆ ಬೇಡುತ್ತಿದ್ದರು. ಮೇಲುನಾಡಗೌಡನೆಂಬುವನು ವರ್ಷಕ್ಕೆ ಒಂದು ಗೊತ್ತಾದ ದಿನ, ನದಿಯ ತೀರ, ಹೊಳೆಯ ದಡ, ತೋಪು, ಬೆಟ್ಟದ ತಪ್ಪಲು ಮುಂತಾದ ವಿಶಾಲ ಪ್ರದೇಶದಲ್ಲಿ ತನ್ನ ದರ್ಬಾರು ನಡೆಸುತ್ತಿದ್ದ. ಇವನ ಜೊತೆಯಲ್ಲಿ ಅನೇಕ ಜನರಿರುತ್ತಿದ್ದರು. ಇವರೆಲ್ಲರ ಊಟ ಎಲೆ ಅಡಿಕೆ ಹೊಗೆಸೊಪ್ಪು, ಖರ್ಚನ್ನೂ ಫಿರ್ಯಾದಿಯೇ ಕೊಡಬೇಕಾಗುತ್ತಿತ್ತು. ಮೇಲುನಾಡಗೌಡ, ನಾಲ್ಕು ಐದು ದಿನ ಸಾಂಗವಾಗಿ ವ್ಯಾಜ್ಯ ಸ್ವರೂಪವನ್ನು ವಿಚಾರಿಸಿ ಬುದ್ಧಿವಂತಿಕೆಯ ಪ್ರಶ್ನೆಗಳನ್ನು ಹಾಕಿ ಬಹುಮಟ್ಟಿಗೆ ನಿಜಾಂಶವನ್ನು ಕಂಡುಹಿಡಿದು ಸಮರ್ಪಕವಾಗಿ ತೀರ್ಪನ್ನು ಕೊಡುತ್ತಿದ್ದ. ಮೇಲುನಾಡಗೌಡನೂ ತುಂಬ ಧನಿಕನೇ ಆಗಿರುತ್ತಿದ್ದುದರಿಂದ ಬಂದಿದ್ದವರಿಗೆಲ್ಲ ಪಾನಕ ಫಲಾಹಾರ ಪಂಚಾಮೃತ ಮುಂತಾದುವನ್ನು ತನ್ನ ಖರ್ಚಿನಿಂದಲೇ ಹಂಚಿಸುತ್ತಿದ್ದ. ಮೇಲುನಾಡಗೌಡನ ಸಭೆ ರಾಜ ದರ್ಬಾರಿನಂತೆಯೇ ಇರುತ್ತಿತ್ತು. ಇಂಥ ನ್ಯಾಯ ತೀರ್ಮಾನದ ಕಾಲದಲ್ಲಿ ಹಳ್ಳಿಯ ಕುಸ್ತಿಗಳು, ಕತ್ತಿಪಟ್ಟಾವರಸೆಗಳು, ಯಕ್ಷಗಾನ, ಕೋಲಾಟ, ಬಸವನ ಆಟ ಮುಂತಾದ ಜನಪದ ವಿನೋದಗಳೂ ನಡೆಯುತ್ತಿದ್ದವು. ವಾದಿಯಾಗಲಿ ಪ್ರತಿಪಕ್ಷದವರಾಗಲಿ ಮೇಲುನಾಡಗೌಡನ ತೀರ್ಮಾನವನ್ನು ಒಪ್ಪದಿದ್ದಲ್ಲಿ, ಅವರಿಗೆ ಸರ್ಕಾರದ ಕೋರ್ಟಿಗೆ ಹೋಗುವುದೊಂದೇ ಉಳಿದ ದಾರಿಯಾಗಿತ್ತು.

ಈಚೆಗೆ ನಾಡಗೌಡ, ಮೇಲುನಾಡಗೌಡ ಇವರ ವಿಚಾರಣೆ ತುಂಬ ವಿರಳ. ಆದರೆ ಈಗಲೂ ಸ್ಥಳದಪಂಚಾಯಿತಿಕೆಗಳಿಂದಲೇ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವ ಮಂದಿ ಹಳ್ಳಿಗಳಲ್ಲಿದ್ದಾರೆ. (ಜಿ.ಆರ್.ಐ.)

**ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ :** 1927- . ಅಖಿಲ ಭಾರತ ಖ್ಯಾತಿಯ ಸಂಗೀತ ಕಲಾವಿದ. 1927 ಅಕ್ಟೋಬರ್ 12ರಂದು ಧಾರವಾಡ ಜಿಲ್ಲೆ ಶಿಶುನಾಳದಲ್ಲಿ ಜನಿಸಿದರು. ತಾಯಿ ಸಾಕವ್ವ, ತಂದೆ ಚನ್ನಬಸವಯ್ಯ. ಇವರದು ಸಂಗೀತದ ವಾತಾವರಣವಿದ್ದ ಮನೆತನ. ಚೆನ್ನಬಸವಯ್ಯನವರ ಅಣ್ಣ ಬಸವಲಿಂಗಯ್ಯ ಪುರಾಣ ಹಾಗೂ ಕೀರ್ತನ ಕಲೆಯಲ್ಲಿ ನಿಷ್ಣಾತರಾಗಿದ್ದರು. ದಾಸರ ಪದ ಮತ್ತು ಶಿಶುನಾಳ ಶರೀಫರ ಪದಗಳನ್ನು ಅವರು ಸದಾ ಹಾಡುತ್ತಿದ್ದರು. ಮನೆಯಲ್ಲಿ ಶಾಸ್ತ್ರೀಯವಾಗಿ ಸಂಗೀತ ಅಭ್ಯಾಸ ನಡೆಸದಿದ್ದರೂ ಆ ಕಡೆಗೆ ತುಂಬ ಒಲವಿತ್ತು. ಊರು ಹಾಗೂ ಕುಟುಂಬದ ಸಂಗೀತ ಪರಿಸರ ಬಾಲಕ ಪಂಚಾಕ್ಷರಿ ಸ್ವಾಮಿಯ ಮೇಲೆ ಪ್ರಭಾವ ಬೀರಿದುವು. ತಮ್ಮ ಎಳೆಯ ವಯಸ್ಸಿನಲ್ಲೇ ಸಂಗೀತ ಕಲಿಯಲು ಗುರುಕುಲವನ್ನು ಸೇರಿದರು. ಗದಗಿನ ವೀರೇಶ್ವರ ಪುಣ್ಯಾಶ್ರಮದ ಉಭಯಗಾನ ವಿಶಾರದ ಪಂಚಾಕ್ಷರಿ ಬುವಾ ಇವರ ಗುರುಗಳಾಗಿದ್ದರು. ಅವರಲ್ಲಿ ಹತ್ತು ವರ್ಷ ಗ್ವಾಲಿಯರ್ ಶೈಲಿಯ ಸಂಗೀತಾಭ್ಯಾಸ ನಡೆಸಿದರು. ಅನಂತರ ಮಲ್ಲಿಕಾರ್ಜುನ ಮನ್ಸೂರರ ಬಳಿ ಜಯಪುರ್-ಅತ್ರೌಲಿ ಘರಾನ ಶೈಲಿಯನ್ನು ಅಭ್ಯಾಸ ಮಾಡಿದರು. ಇದರಿಂದ ಇವರು ಗ್ವಾಲಿಯರ್ ಹಾಗೂ ಜಯಪುರ್-ಅತ್ರೌಲಿ ಘರಾನದ ಸಮ್ಮಿಶ್ರಣದ ಮಧುರ ಗಾಯನದ ಶೈಲಿಯಲ್ಲಿ ನಿಷ್ಣಾತರಾದರು. ಮಲ್ಲಿಕಾರ್ಜುನ ಮನ್ಸೂರ್ ಅವರೊಂದಿಗೆ ಇವರು ಭಾರತದ ಎಲ್ಲೆಡೆ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇದಲ್ಲದೆ ಆಕಾಶವಾಣಿ ಹಾಗೂ ದೂರದರ್ಶನಗಳ ಮೊದಲ ದರ್ಜೆಯ ಕಲಾವಿದರಾಗಿಯೂ ಸೇವೆ ಸಲ್ಲಿಸಿದ್ದಾರೆ. ಜಯಪುರ್-ಅತ್ರೌಲಿ ಘರಾನದಲ್ಲಿ ಇನ್ನೂ ಹೆಚ್ಚಿನ ಅಧ್ಯಯನ ಕೈಗೊಳ್ಳಲು ಮೂರು ವರ್ಷಗಳ ಕಾಲ ಕೊಲ್ಹಾಪುರದಲ್ಲಿ ನೆಲಸಿ ಬುವಾ ಸರನಾಯ್ಕರವರಲ್ಲಿ ಶಿಷ್ಯವೃತ್ತಿಯನ್ನು ಕೈಗೊಂಡರು.

ಇವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದಲ್ಲಿ ಸಂಗೀತದ ಉಪನ್ಯಾಸಕರಾಗಿಯೂ ದುಡಿದಿದ್ದಾರೆ. ಆಕಾಶವಾಣಿಯ ಸಂಗೀತ ಸಮ್ಮೇಳನಗಳು, ರಾಷ್ಟ್ರೀಯ ಕಾರ್ಯಕ್ರಮಗಳು, ಪ್ರತಿ ಮಂಗಳವಾರ ಪ್ರಸಾರವಾಗುವ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಹಲವಾರು ಬಾರಿ ಹಾಡಿದ್ದಾರೆ. ಯುರೋಪ್, ಅಮೆರಿಕ ದೇಶಗಳಿಗೆ ಹಲವು ಬಾರಿ ಭೇಟಿ ನೀಡಿ ಸಂಗೀತ ಕಛೇರಿಯ ಜೊತೆಗೆ ಸಂಗೀತ ಪಾಠವನ್ನೂ ಹೇಳಿಕೊಟ್ಟಿದ್ದಾರೆ.

ಇವರು ಜಯಪುರ್-ಅತ್ರೌಲಿ ಘರಾನ ಶೈಲಿಯಲ್ಲಿ ಅನೇಕ ಶಿಷ್ಯರನ್ನು ಬೆಳೆಸಿದ್ದಾರೆ. ಬನಾರಸ್ ಹಿಂದು ವಿಶ್ವವಿದ್ಯಾಲಯದ ಸರಯೂ ಆರ್. ಸೊನ್ನಿ, ಮುಂಬಯಿಯ ಗೀತಾ ಜಾವಡೇಕರ್, ಅಮೆರಿಕದ ನಿರ್ಮಲ ಜಯನಂದಯ್ಯ, ಹೊಸ್ನಾವರದ ಪಂ. ಷಡಕ್ಷರಿ ಬುವಾ ಯತ್ನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದ ಎ.ಯು.ಪಾಟೀಲ್, ಮುಕ್ತಾ, ಮಜುಮದಾರ್, ಶಶಿಕಲಾ, ವಿ. ಜಾವಡಿ, ಮೃತ್ಯುಂಜಯ, ಅಗಡಿ ಹಾಗೂ ಬೆಂಗಳೂರಿನ ನಾಗರಾಜರಾವ್ ಹವಾಲ್ದಾರ್ ಮೊದಲಾದವರನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದು.

ಇವರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ್ದ ಸೇವೆಯನ್ನು ಗುರುತಿಸಿ ಅನೇಕ ಸಂಘಸಂಸ್ಥೆಗಳು ಹಾಗೂ ಸರ್ಕಾರ ಇವರನ್ನು ಗೌರವಿಸಿದೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ (1988-89), ಕರ್ನಾಟಕ ರಾಜ್ಯ ಪ್ರಶಸ್ತಿ (1994) ಇವರಿಗೆ ಲಭಿಸಿವೆ. ನಾದಬ್ರಹ್ಮ ಸಂಗೀತಕಲಾನಿಧಿ, ಲಯಬ್ರಹ್ಮ - ಇವು ಇವರಿಗೆ ಸಂದಿರುವ ಕೆಲವು ಬಿರುದುಗಳು. ಪುಟ್ಟರಾಜ ಸಮ್ಮಾನ (2002) ಹಾಗೂ ಕನಕ-ಪುರಂದರ ಪ್ರಶಸ್ತಿಗಳೂ ಇವರಿಗೆ ದೊರತಿವೆ.

ಇವರು ಬಸವಣ್ಣ ಹಾಗೂ ಅಕ್ಕಮಹಾದೇವಿಯ ವಚನಗಳನ್ನು ಹಾಡಿ ಅಕ್ಕಕೇಳವ್ವ ಎಂಬ ಧ್ವನಿಸುರುಳಿಯನ್ನು ತಂದಿದ್ದಾರೆ. ಚೆನ್ನೈನ ಶ್ರುತಿ ಪ್ರತಿಷ್ಠಾನ ತನ್ನ ಸಂಗ್ರಹಾಲಯಕ್ಕಾಗಿ ಇವರಿಂದ ಇನ್ನೂರು ರಾಗಗಳನ್ನು ಹಾಡಿಸಿ ಕಾಯ್ದಿರಿಸಿದೆ. (ಎಚ್.ಆರ್.ಎಲ್.)

**ಪಂಜೆ ಮಂಗೇಶರಾವ್:** 1874-1937. ಕನ್ನಡ ಮಕ್ಕಳ ಸಾಹಿತ್ಯದ ಪಿತಾಮಹರು. ಸಣ್ಣಕಥೆ, ಕಥನಕವನ, ಹರಟೆ - ಈ ಮುಂತಾದ ಕ್ಷೇತ್ರಗಳಲ್ಲಿ ಹಿರಿಯ ಕೆಲಸ ಮಾಡಿದ್ದಾರೆ. ಜನಿಸಿದ್ದು ಬಂಟ್ವಾಳದಲ್ಲಿ 22-

2-1874ರಂದು. ತಂದೆ ರಾಮಪ್ಪಯ್ಯ, ತಾಯಿ ಸೀತಾ. ಇವರ ಹೆಸರಿನ ಜೊತೆಗಿರುವ ಪಂಜೆ ಇವರ ಪೂರ್ವಿಕರಿದ್ದ ಸ್ಥಳ. ಮುಂದೆ ಇದು ಇವರ ಮನೆತನದ ಹೆಸರೇ ಆಯಿತು. ಇವರ ತಂದೆ ಊರಿನ ಶಾನುಭೋಗರಾಗಿದ್ದರು. ತಂದೆಯವರ ಸದಾಚಾರ, ದೈವಿಭಕ್ತಿ, ಸರಳತೆಗಳೂ ತಾಯಿಯ ಧಾರ್ಮಿಕತೆ, ಪರೋಪಕಾರ ಬುದ್ಧಿಗಳೂ ಇವರ ಎಳೆಯ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರಿದುವು. ಮನೆಯಲ್ಲಿ ನಡೆಯುತ್ತಿದ್ದ ಭಜನೆ, ಕೀರ್ತನೆ, ಪ್ರವಚನ ಮುಂತಾದವುಗಳ ವಾತಾವರಣ ಇವರಿಗೆ ವಾಚನಾಭಿರುಚಿಯನ್ನೂ ಪದ್ಯ ಹಾಡುವುದನ್ನೂ ಮೈಗೂಡಿಸಿತು. ತಾಯಿ ಹೇಳುತ್ತಿದ್ದ ಕಥೆಗಳು ಇವರಿಗೆ ಮುಂದೆ ಕಥೆ ಹೇಳುವ ಕಲೆಗೆ ಬೀಜ ಹಾಕಿದುವು.

ಬಂಟ್ವಾಳದ ಶಾಲೆಯಲ್ಲಿ ಪಂಜೆಯುವರ ಆರಂಭದ ವ್ಯಾಸಂಗ ನಡೆಯಿತು. ಓದಿನ ಜತೆಗೆ ಬಗೆಬಗೆಯ ಆಟಗಳಲ್ಲೂ ಬರೆವಣಿಗೆಯಲ್ಲೂ ಆಸಕ್ತಿವಹಿಸಿದರು. ಈ ಸಮಯದಲ್ಲಿಯೇ ಇವರಲ್ಲಿ ನಾದಪ್ರಿಯತೆ ಪ್ರಾಸಪ್ರಿಯತೆ ಚಮತ್ಕಾರಪ್ರಿಯತೆ ವಿನೋದಪ್ರಿಯತೆ ಈ ಗುಣಗಳೂ ಬೆಳೆದುವು.

ಪ್ರೌಢವ್ಯಾಸಂಗಕ್ಕೆಂದು ಪಂಜೆಯವರು ಮಂಗಳೂರಿಗೆ ಹೋದರು. ಆ ಅವಧಿಯಲ್ಲಿ ತಂದೆಯ ತೀವ್ರ ಅನಾರೋಗ್ಯದ ವಾರ್ತೆ ಬಂದು ಬಂಟ್ವಾಳವನ್ನು ಕಾಲುನಡಗೆಯಲ್ಲೇ ತಲಪಿದರು.ತಂದೆ ಕುಡಿಯಬೇಡ, ನೀತಿಯನ್ನು ಬಿಡಬೇಡ, ಎಷ್ಟೇ ಕಷ್ಟಬಂದರೂ ತಂಗಿತಮ್ಮಂದಿರನ್ನು ತೊರೆಯಬೇಡ ಎಂದು ಕೊನೆಯ ಉಪದೇಶವನ್ನು ಕೊಟ್ಟು ಮಗನನ್ನು ಬೀಳ್ಕೊಂಡರು. ತಂದೆಯವರ ಈ ಉಪದೇಶ ಮುಂದೆ ಇವರಿಗೆ ದಾರಿದಾಪವಾಯಿತು. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಸಂಸಾರದ ಹೊರೆಯನ್ನು ಹೊತ್ತು ಪಂಜೆಯವರು ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಸಂಸಾರ ನಿರ್ವಹಿಸಿ, ತಾವೂ ಕಲಿತು ಬೆಳೆದರು. 1894ರಲ್ಲಿ ಬೆನಗಲ್ ರಾಮರಾಯರ ಸಹೋದರಿ ಗಿರಿಜಾಬಾಯಿಯನ್ನು ಇವರು ಮದುವೆಯಾದರು.

ಮಂಗಳೂರು ಸರ್ಕಾರಿ ಕಲಾಶಾಲೆಯಲ್ಲಿ 1896ರಲ್ಲಿ ಇವರಿಗೆ ಸಹಾಯಕ ಕನ್ನಡ ಪಂಡಿತರ ಕೆಲಸ ದೊರೆಯಿತು (ಈ ಹುದ್ದೆಗೆ ನಂದಳಿಕೆ ಲಕ್ಷ್ಮೀನಾರಾಯಣಯ್ಯನವರು (ಮುದ್ದಣ್ಣ) ಅರ್ಜಿ ಹಾಕಿದ್ದರೂ ಆಂಗ್ಲಭಾಷೆ ಬಲ್ಲವರೆಂಬ ಕಾರಣದಿಂದ ಪಂಜೆಯವರೇ ನೇಮಕಗೊಂಡರು) ಶಾಲೆಯಲ್ಲಿ ಪಾಠ ಮಾಡುವಾಗ ಪದ್ಯಗಳನ್ನು ಅರ್ಥವತ್ತಾಗಿಯೂ ಭಾವಪ್ರಚೋದಕವಾಗಿಯೂ ಸಾಭಿನಯವಾಗಿಯೂ ಹಾಡಿ ಕಲಿಸುತ್ತಿದ್ದರು. ಗದ್ಯವನ್ನೂ ರಸವತ್ತಾಗಿ ಹೇಳಿಕೊಡುತ್ತಿದ್ದ ಇವರು ವಿದ್ಯಾರ್ಥಿಗಳಲ್ಲಿ ಬಹುಬೇಗ ಜನಪ್ರಿಯರಾದರು. ಅನಂತರ ಮದರಾಸಿಗೆ ಹೋಗಿ ಎಲ್.ಟಿ.ಪದವಿ ಪಡೆದ ಪಂಜೆಯವರು ಮಂಗಳೂರು ಶಿಕ್ಷಕರ ತರಬೇತು ಕಾಲೇಜು ಹಾಗೂ ಮಡಿಕೇರಿ ಸರ್ಕಾರಿ ಕಾಲೇಜುಗಳಲ್ಲಿ ಉಪಾಧ್ಯಾಯರಾಗಿ, ಮುಖ್ಯೋಪಾಧ್ಯಾಯರಾಗಿ, ಮಂಗಳೂರು ರೇಂಜಿನಲ್ಲಿ ಡೆಪ್ಯುಟಿ ಎಜ್ಯುಕೇಷನಲ್ ಇನ್ಸ್‌ಪೆಕ್ಟರಾಗಿಯೂ ಸೇವೆ ಸಲ್ಲಿಸಿ, ಶೈಕ್ಷಣಿಕ ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳನ್ನು ತಂದರು.

ಪಂಜೆಯವರು ತಮ್ಮ ಉಪಾಧ್ಯಾಯ ವೃತ್ತಿಯ ಜೊತೆಗೆ ಬರೆವಣಿಗೆಯನ್ನೂ ನಡೆಸಿಕೊಂಡು ಬಂದರು. 1900ರಲ್ಲಿ ಮಂಗಳೂರಿನಲ್ಲಿ ಬೋಳಾರ ವಿಠಲರಾಯರು ಪ್ರಾರಂಭಿಸಿದ ಸುವಾಸಿನಿ ಎಂಬ ಪತ್ರಿಕೆ ಇವರ ಸಾಹಿತ್ಯಕ್ಷೇತ್ರದ ದುಡಿಮೆಗೆ ಒಳ್ಳೆಯ ನೆರವಿತ್ತಿತ್ತು. ಸಂಪಾದಕರಾಗಿ ಬೆನಗಲ್ ರಾಮರಾಯರಿದ್ದರೂ ಎಲ್ಲ ಕಾರ್ಯವನ್ನೂ ಇವರೇ ನಿರ್ವಹಿಸುತ್ತಿದ್ದರು. ಆ ಪತ್ರಿಕೆಯಲ್ಲಿ ಇವರು ಬರೆದ ನನ್ನ ಚಿಕ್ಕತಂದೆ, ನನ್ನ ಚಿಕ್ಕತಂದೆಯ ಉಯಿಲು, ಕಮಲಪುರದ ಹೋಟ್ಲಿನಲ್ಲಿ ಮುಂತಾದ ಸರಸವಿನೋದದ ಕಥೆಗಳೂ ಪೃಥುಲಾ, ದುರ್ಗಾವತಿ ಮುಂತಾದ ಐತಿಹಾಸಿಕ ಕಥೆಗಳೂ ಪ್ರಕಟವಾದುವು. ಈ ಲೇಖನವ್ಯವಸಾಯದಲ್ಲಿ ಇವರು ವಸ್ತುನಿರೂಪಣೆಗೆ ಉಚಿತವಾದ ಶೈಲಿಯನ್ನು ರೂಪಿಸಿದರು. ಮಣ್ಣಿನ ವಾಸನೆಯ ನುಡಿಗಟ್ಟುಗಳನ್ನು ಬಳಸಿ, ಸರಳತೆಯ ತಳಹದಿಯಲ್ಲಿ ಕನ್ನಡಕ್ಕೆ ಹೊಸ ಚೇತನವನ್ನುಂಟುಮಾಡಿದರು. ಮಂಗಳೂರಿನ ಬಾಸೆಲ್ ಮಿಶನ್ನಿನ ಸತ್ಯದೀಪಿಕೆಯಲ್ಲಿ ಪಂಜೆಯವರು ಆಗಾಗ ಲಘುಪ್ರಬಂಧಗಳನ್ನೂ ಹರಟೆಯ ಮಲ್ಲ ಎಂಬ ಹೆಸರಿನಿಂದ ಪ್ರಚಲಿತ ವಿಷಯಗಳ ವಿಮರ್ಶೆ ವಿಡಂಬನೆಗಳನ್ನೂ ಪ್ರಕಟಿಸಿದರು.

ಪಂಜೆಯವರು ಮಡಿಕೇರಿಯ ಸೆಂಟ್ರಲ್ ಪ್ರೌಢಶಾಲೆಯ ಮುಖ್ಯೋಪಾಧ್ಯಯರಾಗಿದ್ದಾಗ ಕೊಡಗಿನ ಚೆಲುವು ಮತ್ತು ಆ ನಾಡವರ ಜೀವನವನ್ನು ಕುರಿತು ಬರೆದ ಹುತ್ತರಿ ಹಾಡು ಕೊಡಗಿನ ರಾಷ್ಟ್ರಗೀತದಂತಿದೆ. ಹಾಗೆಯೇ ಇವರು ತುಳು ಜನಪದ ಸಾಹಿತ್ಯದಿಂದ ಆಯ್ದುಕೊಂಡು ಬರೆದ ಕೋಟಿ ಚೆನ್ನಯ್ಯ ಎಂಬುದೂ ಅತ್ಯುತ್ತಮ ಕೃತಿ. ಇವರು ಕಾಲಕಾಲಕ್ಕೆ ಬರೆದು ಪ್ರಕಟಿಸಿದ ಕವನಗಳನ್ನು ಸಂಗ್ರಹಿಸಿ ಬಾಸೆಲ್ ಮಿಶನ್ ಕನ್ನಡ ಮೊದಲನೆಯ ಪುಸ್ತಕ ಎಂಬ ಹೆಸರಿನಿಂದ ಪ್ರಕಟಿಸಿತು (1912). ಅನಂತರ 1919ರಲ್ಲಿ ಇದೇ ಸಂಸ್ಥೆಯಿಂದ ಇವರ ಕನ್ನಡ ಎರಡನೆಯ ಪುಸ್ತಕವೂ ಪ್ರಕಟವಾಯಿತು. ಪಂಜೆಯವರು ಅಜ್ಜಿ ಸಾಕಿದ ಮಗು. ಇಲಿಗಳ ಥ'ಕ್ಕಥೈ, ಕೊಕ್ಕೋಕೋ ಕೋಳಿ, ಗುಡುಗುಡು ಗುಮ್ಮಟದೇವ, ಬೊಕ್ಕಬಾಯಿ ಕೊಕ್ಕೆರಾಜ, ಮಾತಾಡೋ ರಾಮಪ್ಪ, ಮೂರು ಕರಡಿಗಳು ಮುಂತಾದವನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಪಂಜೆಯವರು ಮಕ್ಕಳ ಸಾಹಿತ್ಯದ ಪ್ರಕಟಣೆ ಪ್ರಚಾರಗಳಿಗೆಂದೇ ಮಂಗಳೂರಿನಲ್ಲಿ 1921ರಲ್ಲಿ ಬಾಲಸಾಹಿತ್ಯ ಮಂಡಲ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಮಕ್ಕಳಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸುವುದರಲ್ಲಿ ಈ ಸಂಸ್ಥೆ ವಹಿಸಿದ ಪಾತ್ರ ಸ್ಮರಣೀಯ. ಮೂಡಬಿದಿರೆಯ ಹೊಸ ಬಸದಿಯ ಶಿಲಾಶಾಸನಗಳು, ಬಿಳಗಿ ಅರಸರ ವಂಶಾವಳಿ ಮುಂತಾದ ಪಂಜೆಯವರ ಹಲವು ಸಂಶೋಧನಾ ಲೇಖನಗಳು ಪಂಚಕಜ್ಜಾಯ ಎಂಬ ಹೆಸರಿನಲ್ಲಿ 1927ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಪಂಜೆಯವರು ನಿಕಟ ಸಂಪರ್ಕ ಹೊಂದಿದ್ದರು. ಮದರಾಸು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗದ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದಾರೆ. ಪಂಜೆಯವರ ನಾಡುನುಡಿಗಳ ಸೇವೆಯನ್ನು ಗಮನಿಸಿ ಕನ್ನಡದ ಜನತೆ ಇವರನ್ನು ರಾಯಚೂರಿನಲ್ಲಿ 1934ರಲ್ಲಿ ನಡೆದ 20ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು.

ಪಂಜೆ ಮಂಗೇಶರಾಯರು ತಮ್ಮ ಕೊನೆಯ ದಿನಗಳನ್ನು ಹೈದರಾಬಾದಿನಲ್ಲಿ ತಮ್ಮ ಮಕ್ಕಳ ಮನೆಯಲ್ಲಿದ್ದುಕೊಂಡು ಕಳೆದರು. ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಕುಮಾರವ್ಯಾಸ ಭಾರತವನ್ನು ಸಂಪಾದಿಸುವ ಕೆಲಸದಲ್ಲಿ ತೊಡಗಿದ್ದರು. ಆದರೆ ನ್ಯುಮೋನಿಯ ಜ್ವರಕ್ಕೆ ತುತ್ತಾಗಿ 1937 ಸಪ್ಟೆಂಬರ್ 25ರಂದು ತೀರಿಕೊಂಡರು.

1974ರಲ್ಲಿ ಪಂಜೆಯವರ ಜನ್ಮಶತಾಬ್ಧಿ ವರ್ಷವನ್ನು ನಾಡಿನಾದ್ಯಂತ ಆಚರಿಸಲಾಯಿತು. ಆ ಸಂದರ್ಭದಲ್ಲಿಇವರ ಬರೆಹಗಳನ್ನು ಮೂರು ಸಂಪುಟಗಳಲ್ಲಿ ಓರಿಯಂಟ್ ಲಾಂಗಮನ್ ಸಂಸ್ಥೆಯವರು ಪ್ರಕಟಿಸಿದ್ದಾರೆ.

(ಟಿ.ಜಿ.ಕೆ.ಬಿ.)

**ಪಂಡರೀಬಾಯಿ, ಎಂ. :** 1928-2003. ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಕಲಾವಿದೆ; ಚಿತ್ರನಿರ್ಮಾಪಕಿ. ಜನಿಸಿದ್ದು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ. ತಂದೆ ರಂಗರಾಯರು ಪ್ರಸಿದ್ಧ ಕೀರ್ತನ ಕಾರರಾಗಿದ್ದರು. ತಾಯಿ ಶಿಕ್ಷಕಿ. ಬಡತನ ಮತ್ತು ಊರಿಂದೂರಿಗೆ ಸಂಚಾರ ಇವುಗಳಿಂದಾಗಿ ಇವರ ಓದು ಪ್ರಾಥಮಿಕ ಶಿಕ್ಷಣಕ್ಕೆ ಕೊನೆಗೊಂಡಿತು. ಒಳ್ಳೆಯ ಕಂಠಶ್ರೀ ಪಡೆದಿದ್ದ ಇವರು ತಂದೆಯಿಂದ ಕೀರ್ತನಕಲೆಯನ್ನು ಕಲಿತು. ನಾಡಿನ ನಾನಾ ಭಾಗಗಳಲ್ಲಿ ಅನೇಕ ಕೀರ್ತನೆಗಳನ್ನು ಮಾಡಿ ಒಳ್ಳೆಯ ಹೆಸರನ್ನು ಗಳಿಸಿದರು. ನಾಟಕ ಕಲೆಯ ಬಗ್ಗೆಯೂ ಅಭಿರುಚಿ ಬೆಳೆಸಿಕೊಂಡ ಇವರು ತಮ್ಮ ಸಹೋದರ ವಿಮಲಾನಂದದಾಸರು ನಡೆಸುತ್ತಿದ್ದ ಆದರ್ಶ ನಾಟಕ ಸಂಘದಲ್ಲಿ ಚಿಕ್ಕ ಪಾತ್ರಗಳನ್ನು ಅಭಿನಯಿಸಿದರು. ಅನಂತರ ಟಿ.ಚೌಡಯ್ಯನವರ ಮೂಲಕ ಚಿತ್ರರಂಗವನ್ನು ಪ್ರವೇಶಿಸಿ ವಾಣಿ ಎಂಬ ಚಿತ್ರದಲ್ಲಿ ಪ್ರಥಮ ಬಾರಿಗೆ ಅಭಿನಯಿಸಿದರು.

ಎಚ್.ಎಲ್.ಎನ್.ಸಿಂಹ ಅವರು ನಿರ್ದೇಶಿಸಿದ ಬೇಡರ ಕಣ್ಣಪ್ಪ ಚಿತ್ರದಲ್ಲಿ ಅಭಿನಯಿಸಿ, ಚಿತ್ರರಂಗದಲ್ಲಿ ಜನಪ್ರಿಯತೆಯನ್ನು ಗಳಿಸಿ, ಗುಣಸಾಗರಿ, ಭಕ್ತಗೋರ ಕುಂಬಾರ, ರಾಜಾವಿಕ್ರಮ ಚಿತ್ರಗಳ ನಾಯಕಿಯಾಗಿ ಅಭಿನಯಿಸಿದರು. ಹರಿಶ್ಚಂದ್ರ ಚಿತ್ರದ ಮೂಲಕ ಸುಪ್ರಸಿದ್ಧ ತಾರೆಯಾಗಿ, ಅನೇಕ ಪ್ರಶಸ್ತಿಗಳನ್ನು ಪಡೆದರು. ಕನ್ನಡ ಚಿತ್ರಗಳಲ್ಲದೆ, ತಮಿಳು ಹಿಂದಿ ಮಲೆಯಾಳಂ ತೆಲುಗು ಮರಾಠಿ ಮತ್ತು ತುಳು ಚಿತ್ರಗಳಲ್ಲೂ ಇವರು ಅಭಿನಯಿಸಿದ್ದಾರೆ. ತಮಿಳಿನ ಪರಾಶಕ್ತಿ, ಹಿಂದಿಯ ಬಾಬಿ ಈ ಚಿತ್ರಗಳು ಇವರಿಗೆ ಒಳ್ಳೆಯ ಯಶಸ್ಸನ್ನು ತಂದುಕೊಟ್ಟವು. ಕನ್ನಡದಲ್ಲಿ ಅಬ್ಬಾ ಆ ಹುಡುಗಿ, ತೇಜಸ್ವಿನಿ - ಮುಂತಾದ ಚಿತ್ರಗಳನ್ನೂ ಇವರು ನಿರ್ಮಿಸಿದರು.

ಸಂತಸಖು, ರೇಣುಕಾಮಹತ್ಮೆ, ಭದ್ರವಿಜಯ, ಅನ್ನಪೂರ್ಣ, ಮುರಿಯದ ಮನೆ, ಮಹಾಸತಿ ಅನಸೂಯ, ಚಂದ್ರಹಾಸ, ಬೆಳ್ಳಿಮೋಡ, ಒಡಹುಟ್ಟಿದವಳು, ಮಧುರ ಮಿಲನ, ನಮ್ಮ ಮಕ್ಕಳು, ನಮ್ಮ ಮನೆ, ಗೆಜ್ಜೆ ಪೂಜೆ, ಜೇನುಗೂಡು, ಅನೇಕ ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ನಟಿಸಿದರು. ತಮಗೆ ಜೋಡಿಯಾಗಿ ನಟಿಸಿದ ರಾಜಕುಮಾರ, ಶಿವಾಜಿಗಣೇಶನ್ ಹಲವು ಚಿತ್ರಗಳಲ್ಲಿ ತಾಯಿಯಾಗಿ ಅಭಿನಯಿಸಿದರು. ಇದಲ್ಲದೇ ದಕ್ಷಿಣದ ಪ್ರಸಿದ್ಧ ನಟರಾದ ಎಂ.ಜಿ. ರಾಮಚಂದ್ರನ್, ರಜನೀಕಾಂತ್, ವಿಷ್ಣುವರ್ಧನ್, ಅಂಬರೀಶ, ಮೊದಲಾದವರ ತಾಯಿಯಾಗಿ ನಟಿಸಿದರು. ಸುಮಾರು ಆರು ದಶಕಗಳ ಕಾಲ ದಕ್ಷಿಣ ಭಾರತದ ವಿವಿಧ ಭಾಷೆಗಳಲ್ಲಿ 1200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದರು.

ಪಂಡರೀಬಾಯಿಯವರಿಗಿದ್ದ ರಂಗಭೂಮಿಯ ಆಸಕ್ತಿಯ ಫಲವಾಗಿ ಶ್ರೀಕೃಷ್ಣ ಚೈತನ್ಯ ನಾಟಕ ಸಭಾ ಎಂಬ ಸಂಸ್ಥೆ ಜನ್ಮತಾಳಿತು. ಈ ನಾಟಕ ಸಭಾದ ಭಕ್ತಮೀರಾ, ಶಾಂತಿನಿವಾಸಂ ನಾಟಕಗಳು ಜನಪ್ರಿಯವಾಗಿವೆ.

ಇವರ ತಾರಾ ಬದುಕಿನ ಸಾಧನೆ ಗಮನಿಸಿ ಡಾ. ರಾಜಕುಮಾರ ಪ್ರಶಸ್ತಿ ನೀಡಲಾಗಿದೆ (1994-95).

ಪಂಡರೀಬಾಯಿಯವರು ತಮ್ಮ ಜೀವನದ ಐದನೆಯ ದಶಕದಲ್ಲಿ, ಮಂಡ್ಯದ ಕಲಾರಾಧಕ ಪಿ.ಎಚ್. ರಾಮರಾವ್ ಎಂಬುವರನ್ನು ವಿವಾಹವಾದರು. ಪಂಢರಾಪುರದ ಶ್ರೀ ಪಾಂಡುರಂಗಸ್ವಾಮಿ ಇವರ ಆರಾಧ್ಯದೈವ. ಇದರ ಪ್ರತೀಕವಾಗಿ ಚೆನ್ನೈನ ತಮ್ಮ ನಿವಾಸದ ಬಳಿ ಶ್ರೀಪಾಂಡುರಂಗ ದೇವಸ್ಥಾನವೊಂದನ್ನು ನಿರ್ಮಿಸಿದ್ದಾರೆ. ಪರಮ ಸಾತ್ವಿಕರಾದ ಇವರಿಗೆ ಕರ್ನಾಟಕದ ಕಲೆ, ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ತುಂಬ ಅಭಿಮಾನವಿತ್ತು. ಚೆನ್ನೈನಲ್ಲಿ 2003 ರಲ್ಲಿ ನಿಧನರಾದರು.

(ಬಿ.ಎಸ್.ಎಸ್.ಆರ್.)

**ಪಂಡಿತ ತಾರಾನಾಥ:** 1891-1942. ಸುಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದ ಇವರು, ಯೋಗಶಾಸ್ತ್ರ, ಸಂಗೀತ, ತತ್ತ್ವಜ್ಞಾನ, ಶಿಕ್ಷಣ, ಸಾಹಿತ್ಯ ಮತ್ತು ರಾಜಕಾರಣ - ಈ ಮುಂತಾದ ರಂಗಗಳಲ್ಲೂ ದುಡಿದವರು. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಲ್ಲಿ ಜನಿಸಿದ ತಾರಾನಾಥರು ತಂದೆ ರಂಗರಾಯರಿಂದ ಸಂಸ್ಕೃತ ಮತ್ತು ಸಂಗೀತವನ್ನು ಕಲಿತರು. ಆಧ್ಯಾತ್ಮಿಕ ಜ್ಞಾನಾರ್ಜನೆಯ ಹುಚ್ಚಿನಿಂದ ಬಾಲ್ಯದಲ್ಲಿಯೇ ಸಂನ್ಯಾಸಿಗಳ ಹಿಂದೆ ಕೆಲವು ಕಾಲ ಅಲೆದಾಡಿದರು. ಅನಂತರ ಹೈದರಾಬಾದಿನ ವೈದ್ಯಕೀಯ ಕಾಲೇಜಿನಲ್ಲಿ ಸೇರಿದರಾದರೂ ವ್ಯಾಸಂಗವನ್ನು ಮಧ್ಯೆ ಬಿಟ್ಟು ಬಿದರೆಯ ಸರ್ಕಾರಿ ಶಾಲೆಯೊಂದರಲ್ಲಿ 1912ರಲ್ಲಿ ಕೆಲಸಕ್ಕೆ ಸೇರಿದರು. ಆಗ ಅಲ್ಲಿಗೆ ಆಗಮಿಸಿದ್ದ ನೇಪಾಳದ ಯೋಗಿ ಉತ್ತಮದಾಸ ಪರಮಹಂಸರು ಮತ್ತು ಯೋಗೀಶ್ವರಾನಂದರಿಂದ ಯೋಗ ಮತ್ತು ಆಯುರ್ವೇದ ದೀಕ್ಷೆಯನ್ನು ಪಡೆದರು. ನಿಜಾಮ ಸರ್ಕಾರದ ಆಡಳಿತದ ಅವ್ಯವಸ್ಥೆಯಿಂದ ನೊಂದು, ಸ್ವಾತಂತ್ರ್ಯದ ಸ್ಫೂರ್ತಿಯಿಂದ ತಾರಾನಾಥರು ತಳಮಳಿಸುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಇವರು ಅದೇ ತಳಮಳವನ್ನು ಉಂಟು ಮಾಡುತ್ತಿದ್ದಾರೆಂದು ಭಾವಿಸಿದ ಆಗಿನ ನಿಜಾಮ ಸರ್ಕಾರ ತಾರಾನಾಥರನ್ನು ಬಿದರೆಯಿಂದ ರಾಯಚೂರಿಗೂ ಅನಂತರ ನಿರ್ಮಲಿಗೂ ವರ್ಗ ಮಾಡಿತು. ಇದರಿಂದ ಸಿಡಿದೆದ್ದ ತಾರಾನಾಥರು ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ರಾಯಚೂರಿನಲ್ಲಿ ಹಮ್‍ದರ್ದ್ ಹೈಸ್ಕೂಲ್ ಎಂಬ ಖಾಸಗಿ ಶಾಲೆಯನ್ನು 1920ರ ಯುಗಾದಿಯಂದು ಪ್ರಾರಂಭಿಸಿದರು. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ ಆದರ್ಶ ನಾಯಕರೆನಿಸಿಕೊಂಡ ಇವರನ್ನು ನಿಜಾಮ ಸರ್ಕಾರ ರಾಜ್ಯದಿಂದ ಗಡೀಪಾರು ಮಾಡಿತು. ತಾರಾನಾಥರು ಇದರಿಂದ ಧೃತಿಗೆಡದೆ, ತುಂಗಭದ್ರೆಯ ದಡದಲ್ಲಿ ತುಂಗಭದ್ರಾ ಸ್ಟೇಷನ್ ಬಳಿ ಪ್ರೇಮಾಯತನ ಎಂಬ ಆಶ್ರಮವನ್ನು ಸ್ಥಾಪಿಸಿ, ಅದನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಅಲ್ಲಿ ಆಯುರ್ವೇದ, ಸಾಹಿತ್ಯ, ಯೋಗ, ಸಮಾಜಶಾಸ್ತ್ರ ಮತ್ತು ಪತ್ರಿಕೋದ್ಯಮಗಳಲ್ಲಿ ಶಿಕ್ಷಣಕ್ಕೆ ಏರ್ಪಾಡು ಮಾಡಿದರು. ಪ್ರೇಮ ಎಂಬ ಇಂಗ್ಲಿಷ್ ಮತ್ತು ಕನ್ನಡ ನಿಯತಕಾಲಿಕ ಪತ್ರಿಕೆಯನ್ನು ಆರಂಭಿಸಿದರು. ಆಧ್ಯಾತ್ಮಜ್ಞಾನ, ಪಂಚಭೂತಜ್ಞಾನ, ತಂತ್ರವಿದ್ಯೆ ಮತ್ತು ರಸಶಾಸ್ತ್ರಗಳಲ್ಲಿ ಪಾಂಡಿತ್ಯಪಡೆದಿದ್ದ ತಾರಾನಾಥ'ರ ಬಳಿ ನೂರಾರು ದೇಶೀಯ ವಿದ್ಯಾರ್ಥಿಗಳಿರುತ್ತಿದ್ದರು.

ತಾರಾನಾಥರು ಧರ್ಮಸಂಭವ ಅಥವಾ ಧರ್ಮದ ಮೂಲತತ್ತ್ವಗಳು (1931) ಎಂಬ ಸಾಮಾಜಿಕ ಸುಧಾರಣೆಯ ಗ್ರಂಥ, ಪ್ರಸಿದ್ಧ ರಸೌಷಧಿಗಳು, ಸುಲಭ ಚಿಕಿತ್ಸೆ ಎಂಬ ವೈದ್ಯ ಗ್ರಂಥಗಳನ್ನು ಬರೆದಿದ್ದಾರೆ. ತಾಯಂದಿರಿಗೆ ಮತ್ತು ಪತ್ರಗಳು ಎಂಬುವು ಇವರ ಇತರ ಗ್ರಂಥಗಳು.

ರಾಯಚೂರಿನಲ್ಲಿ 1937ರಲ್ಲಿ ನಡೆದ ಅಖಿಲ ಭಾರತ ಆಯುರ್ವೇದ ಮತ್ತು ಯುನಾನಿ ಆನುವಂಶಿಕ ವೈದ್ಯರ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. (ಜಿ.ಆರ್.ಪಿ.)

**ಪಂಡಿತಾರಾಧ್ಯ :** ವೀರಶೈವ ಆಚಾರ್ಯರು. ಇವರು ಶಿವದೀಕ್ಷಾದಿ ಧರ್ಮಕಾರ್ಯಗಳಲ್ಲಿ ಎಸಗುವ ಪಂಚಕಲಶಾರಾಧನೆಯಲ್ಲಿ ಉಪಾಸ್ಯರಾಗಿರುವ ಚತುರಕ್ಷರ, ಚತುರ್ವಕ್ತ್ರ, ಧೇನುಕರ್ಣ ಮತ್ತು ಪಂಡಿತಾರಾಧ್ಯ ಎಂಬ ಹೆಸರುಗಳಿಂದ ಕ್ರಮವಾಗಿ ಶ್ರೀಶೈಲದಲ್ಲಿ ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳ ಆದಿಯಲ್ಲಿ ಅವತರಿಸಿ ವೀರಶೈವ ಮತಸಿದ್ಧಾಂತವನ್ನು ಪ್ರಬೋಧಗೊಳಿಸಿದಂತೆ ಉಲ್ಲೇಖಗಳಿವೆ. ಪಾಲ್ಕುರಿಕೆ ಸೋಮನಾಥ'ನ ಗಣಸಹಸ್ರನಾಮದಲ್ಲಿಯೂ ಈ ಹೆಸರುಗಳ ಉಲ್ಲೇಖವಿದೆ.

ಆಗಮೋಕ್ತರಾದ ಇವರ ದೇಶಕಾಲಾದಿ ವಿವರಗಳು ತಿಳಿದುಬಂದಿಲ್ಲ. ವೇದೋಪನಿಷತ್ತುಗಳಿಗೆ ಭಾಷ್ಯಾದಿಗಳನ್ನು ಬರೆದಂತೆ ಲಿಂಗಧಾರಣಚಂದ್ರಿಕಾ (ನಂದಿಕೇಶ್ವರ ಕೃತ), ತೈತ್ತಿರೀಯೋಪನಿಷತ್ ಭಾಷ್ಯಂ (ವೃಷಭಪಂಡಿತಾರಾಧ್ಯ) ಎಂಬ ಗ್ರಂಥಗಳಲ್ಲಿ ಉಕ್ತವಾಗಿದೆ. ಆದರೆ ಈ ರಚನೆಗಳು ಉಪಲಬ್ಧವಿಲ್ಲ.

(ಎಂ.ಜಿ.ಎನ್.)

**ಪಂತುಲು, ಬಿ.ಆರ್. :** 1911-1974. ಕನ್ನಡ ಚಿತ್ರಗಳ ಉತ್ಕರ್ಷಕ್ಕೆ ಶ್ರಮಿಸಿದ ನಿರ್ಮಾಪಕ, ನಿರ್ದೇಶಕ ಹಾಗೂ ನಟ. ಬುಡುಗೂರು ರಾಮಕೃಷ್ಣ ಪಂತುಲು ಇವರ ಪೂರ್ಣ ಹೆಸರು. ಬಂಗಾರಪೇಟೆ ಸಮೀಪದ ಕೋಲಾರ ಜಿಲ್ಲೆ ಕುಪ್ಪಂಗೆ 11 ಕಿಮೀ ದೂರದಲ್ಲಿರುವ ಬುಡುಗೂರಿನಲ್ಲಿ 1911 ಜುಲೈ 26 ರಂದು ಜನಿಸಿದರು. ಇವರ ತಂದೆ ವೆಂಕಟಾಚಲಯ್ಯನವರು ಸ್ವಭಾವತಃ ಕಲಾ ಪ್ರೇಮಿ. ಸಂಗೀತ ಸಾಹಿತ್ಯ ನೃತ್ಯ ಮತ್ತು ನಾಟಕ ಕಲೆಯಲ್ಲಿ ಒಳ್ಳೆಯ ಅಭಿರುಚಿ ಹೊಂದಿದ್ದರು. ಇವರಿಗೆ ಐದು ಮಂದಿ ಮಕ್ಕಳು, ಮೂರು ಗಂಡು, ಎರಡು ಹೆಣ್ಣು. ಪಂತುಲು ಕಿರಿಯ ಮಗ. ಇವರ ಮಾತೃಭಾಷೆ ತೆಲುಗು. ಇವರ ಗ್ರಾಮ ಕನ್ನಡ ಮತ್ತು ತಮಿಳು ಭಾಷೆಗಳ ಕೂಡು ಪ್ರದೇಶದಲ್ಲೇ ಇದ್ದುದರಿಂದ ಬಾಲ್ಯದಿಂದಲೇ ಈ ಮೂರು ಭಾಷೆಗಳನ್ನು ಕಲಿತರು. ಇವರ ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲಿಯೇ ನಡೆಯಿತು. ಮುಂದಣ ವಿದ್ಯಾಭ್ಯಾಸಕ್ಕಾಗಿ ಮದರಾಸಿಗೆ ತೆರಳಿದರು. ಮದರಾಸಿನ ತೆಲುಗು ಶಾಲೆಯಲ್ಲಿ ಇವರ ವಿದ್ಯಾಭ್ಯಾಸ ಮುಂದುವರಿಯಿತು. ಮೊದಲಿನಿಂದಲೂ ನಾಟಕ ಮತ್ತು ಅಭಿನಯ ಕಲೆಯ ಬಗ್ಗೆ ಅಪಾರ ಅಭಿರುಚಿಯಿದ್ದ ಪಂತುಲು ಅವರಿಗೆ ಇಲ್ಲಿ ಅವುಗಳ ಸಮಗ್ರದರ್ಶನವಾಯಿತು. ಶಾಲಾ ಸಮಾರಂಭಗಳಲ್ಲಿ ಪ್ರಹ್ಲಾದ, ಚಂದ್ರಹಾಸ ನಾಟಕಗಳಲ್ಲಿ ಪಾತ್ರವಹಿಸಿ ಮೆಚ್ಚುಗೆ ಪಡೆದರು. ಈ ಅವಧಿಯಲ್ಲೇ ಇವರಿಗೆ ಮದರಾಸಿನಲ್ಲಿ ಬೀಡುಬಿಟ್ಟಿದ್ದ ಹಲವಾರು ತಮಿಳು, ತೆಲುಗು ನಾಟಕ ಕಂಪನಿಗಳ ಸಹವಾಸವೂ ಲಭಿಸಿತು.

ಮದರಾಸಿನಲ್ಲಿ ಇದ್ದುಕೊಂಡು ಇವರು ಹೆಚ್ಚಿನ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ. ಸ್ವಲ್ಪ ದಿನಗಳಲ್ಲಿಯೇ ತಮ್ಮ ತಾತನವರ ಮನೆಗೆ ಹಿಂತಿರುಗಬೇಕಾಯಿತು. ಅನಂತರ ಕೆಲವೇ ದಿನಗಳಲ್ಲಿ ಇವರಿಗೆ ಶಾಲಾ ಉಪಾಧ್ಯಾಯನ ವೃತ್ತಿ ದೊರೆಯಿತು.

ಹುಟ್ಟುಕಲಾವಿದರಾಗಿದ್ದ ಪಂತುಲು ಅವರು ಶಾಲೆಯ ಹುಡುಗರಿಗೆ ಕಲಿಸಿದ್ದು ಪಾಠ ಪ್ರವಚನಗಳನ್ನಲ್ಲ; ನಾಟಕಗಳನ್ನು. ಒಂದು ದಿನ ಶಾಲಾ ಇನ್ಸ್‌ಪೆಕ್ಟರ್ ಹಠಾತ್ತಾಗಿ ಶಾಲೆಗೆ ಭೇಟಿಕೊಟ್ಟಾಗ ಈ ಉಪಾಧ್ಯಾಯರ ಗುಟ್ಟು ರಟ್ಟಾಯಿತು. ಪರಿಣಾಮವಾಗಿ ಉದ್ಯೋಗವನ್ನು ಕಳೆದುಕೊಳ್ಳಬೇಕಾಯಿತು. ಅನಂತರ ಕಲಾಸೇವೆಯ ಉದ್ದೇಶದಿಂದ ಬೆಂಗಳೂರಿಗೆ ಬಂದರು. ಅಲ್ಲಿ ತಮ್ಮ ಸಂಬಂಧಿಕ ಹಿರಿಯರೊಬ್ಬರಾದ ಪಾಪಯ್ಯ ಎಂಬುವರ ಸಹಾಯದಿಂದ ಹೆಸರಾಂತ ಚಂದ್ರಕಲಾ ನಾಟಕ ಮಂಡಲಿಗೆ ಪದಾರ್ಪಣ ಮಾಡಿದರು. ಪ್ರಬುದ್ಧ ಕಲಾವಿದರುಗಳ ಸಂಗಮಸ್ಥಾನವಾಗಿದ್ದ ಈ ಸಂಸ್ಥೆಯ ಮಾಲಿಕರು ಮಹಮದ್ ಪೀರ್. ಈ ಕಂಪನಿಯಲ್ಲಿ ಪಂತುಲು ಅವರು ನಿರ್ವಹಿಸುತ್ತಿದ್ದ ಪಾತ್ರಗಳು ಸ್ಮರಣೀಯ. ಸಂಸಾರನೌಕ ನಾಟಕದ ಸುಂದರನ ಪಾತ್ರ ಇವರಿಗೆ ಒಳ್ಳೆಯ ಕೀರ್ತಿಯನ್ನು ತಂದುಕೊಟ್ಟಿತು. ಹಲವಾರು ವರ್ಷಗಳ ಕಾಲ ಈ ಮಂಡಲಿಯಲ್ಲಿ ಕಲಾಸೇವೆಗೈದು ಕಾರಣಾಂತರಗಳಿಂದ ಪೀರ್ ಸಾಹೇಬರ ಕಂಪನಿಯನ್ನು ಬಿಟ್ಟು ಗುಬ್ಬಿ ಕಂಪನಿ ಸೇರಿದರು. ಅಂದು ಗುಬ್ಬಿ ಕಂಪನಿಯವರು ಪ್ರಯೋಗಿಸುತ್ತಿದ್ದ ಆಶಾ ಪಾಶ ಮತ್ತು ಕೃಷ್ಣಗಾರುಡಿ ನಾಟಕಗಳಲ್ಲಿ ವಸಂತಶೇಖರ ಮತ್ತು ಧರ್ಮರಾಯನ ಪಾತ್ರವನ್ನು ವಹಿಸತೊಡಗಿದರು. ಗುಬ್ಬಿ ಕಂಪನಿಯಲ್ಲಿ ಹಲವಾರು ತಿಂಗಳ ಪರ್ಯಂತ ಪಾತ್ರವಹಿಸಿ ಹುಬ್ಬಳ್ಳಿ ಮೊಕ್ಕಾಂನಲ್ಲಿ ಕಂಪನಿಯಿಂದ ಹೊರ ಬಂದರು. ಅನಂತರ ಸ್ವತಃ ಕಂಪನಿಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಬೆಂಗಳೂರಿಗೆ ಬಂದು ಪೈಲ್ವಾನ್ ಅಣ್ಣಯ್ಯಪ್ಪ ಎಂಬುವರ ಅಭಯಹಸ್ತವನ್ನು ಕೋರಿ ಬೆಂಗಳೂರಿನ ತುಳಸಿತೋಟ ಥಿಯೇಟರಿನಲ್ಲಿ ಕಲಾಸೇವಾ ಮಂಡಲಿ ಲಾಂಛನದಲ್ಲಿ ಸ್ವಂತ ಕಂಪನಿ ಆರಂಭಿಸಿದರು. ಎಚ್.ಎಲ್.ಎನ್.ಸಿಂಹ, ಎಂ.ಎಸ್. ಮಾಧವರಾವ್, ಎಂ. (ಡಿಕ್ಕಿ) ಮಾಧವರಾವ್, ಹೊಳಲ ಸುಬ್ರಹ್ಮಣ್ಯ ಶಾಸ್ತ್ರಿ ಮೊದಲಾದ ಅನೇಕ ಕಲಾವಿದರ ಒಡನಾಟ ಇಲ್ಲಿ ಕೂಡಿಬಂತು. ಸಿಂಹ ಅವರ ಸಂಸಾರನೌಕ ಕಲಾಸೇವಾಮಂಡಲಿಯ ಮುಖ್ಯನಾಟಕವಾಯಿತು. ಸುಂದರನ ಪಾತ್ರ ಪಂತುಲು ಅವರದಾಯಿತು. ಈ ಪಾತ್ರದ ಜೊತೆಗೆ ಪುರೋಹಿತ (ಸದಾರಮೆ), ರಾವಣ (ರಾಮಾಯಣ,) ನಾಯಕ (ಗುಲೇಬಕಾವಲಿ) ಮೊದಲಾದ ಪಾತ್ರಗಳನ್ನು ಅಭಿನಯಿಸಿ ಜನಪ್ರಿಯರಾದರು.

ಕನ್ನಡನಾಡಿನ ಪ್ರಮುಖ ಕೇಂದ್ರಗಳಲ್ಲದೆ ಮದರಾಸಿನ ಮೊಕ್ಕಾಂ ಅನ್ನೂ ಕಂಪನಿ ಆರಂಭಿಸಿತು. ಮದರಾಸಿನ ಸೌಂದರ್ಯಮಹಲ್‌ನಲ್ಲಿ ಸಂಸಾರನೌಕ ಪ್ರದರ್ಶನಗೊಂಡಾಗ ಅದನ್ನು ನೋಡಿ, ಮೆಚ್ಚಿ ಮದರಾಸಿನ ದೇವಿ ಫಿಲಂಸ್ ಅವರು ಆ ನಾಟಕವನ್ನು ಕನ್ನಡ ಚಲನಚಿತ್ರವಾಗಿ ತಯಾರಿಸಲು ಮುಂದೆ ಬಂದರು. ಸಿಂಹ ಅವರ ನಿರ್ದೇಶನದಲ್ಲಿ ಸಂಸಾರನೌಕ ಚಿತ್ರ ಸಿದ್ಧವಾಯಿತು. 1936ರಲ್ಲಿ ತಯಾರಾದ ಈ ಚಿತ್ರ ಕನ್ನಡದಲ್ಲೇ ಅಲ್ಲದೆ ಇಡೀ ದಕ್ಷಿಣ ಭಾರತದಲ್ಲೆ ಪ್ರಥಮ ಸಾಮಾಜಿಕ ಚಿತ್ರವೆನಿಸಿತು. ಈ ಚಿತ್ರದಲ್ಲೂ ಪಂತುಲು ಅವರು ಸುಂದರನ ಪಾತ್ರವನ್ನೇ ವಹಿಸಿದ್ದರು. ಚಿತ್ರ ಪ್ರಮುಖ ಕೇಂದ್ರಗಳಲ್ಲೆಲ್ಲ ತೆರೆಕಂಡು ಯಶಸ್ವಿಯಾಯಿತು. ಪಂತುಲು ಅವರ ಕೀರ್ತಿಯೂ ಹರಡಿತು. ಈ ಚಿತ್ರದ ಅನಂತರ ರಾಜಭಕ್ತಿ ಎಂಬ ತಮಿಳು ಚಿತ್ರದಲ್ಲಿ ದುರ್ಜಯನ ಪಾತ್ರ ವಹಿಸಿದರು. ಇದು ಪಂತುಲು ಅವರು ಅಭಿನಯಿಸಿದ ಪ್ರಥಮ ತಮಿಳು ಚಿತ್ರ. ಈ ಚಿತ್ರದ ಅಭಿನಯದಿಂದಾಗಿ ತಮಿಳುನಾಡಿನಲ್ಲಿ ಇವರ ಕೀರ್ತಿ ಹೆಚ್ಚಿತು. ಆದರೆ ಕೆಲವೇ ದಿನಗಳಲ್ಲಿ ನಾಟಕ ಕಂಪನಿಗೆ ಕ್ಷೀಣದೆಸೆ ಪ್ರಾರಂಭವಾಯಿತು. ಅನಂತರ ಪಂತುಲು ಅವರು ಮದರಾಸಿನಲ್ಲೇ ನೆಲಸಲು ಮನಸ್ಸು ಮಾಡಿದರು. ಸ್ವಲ್ಪ ದಿನಗಳಲ್ಲೇ ತ್ರಿಭಾಷಾತಾರೆ ಕನ್ನಡಿತಿ ಎಂ.ವಿ. ರಾಜಮ್ಮನವರು ನಿರ್ಮಿಸಿದ ರಾಧಾರಮಣ ಕನ್ನಡ ಚಿತ್ರಕ್ಕೆ ನಾಯಕನ ಪಾತ್ರಕ್ಕೆ ಆಯ್ಕೆಯಾದರು. ಈ ಚಿತ್ರ ಬಿಡುಗಡೆಯಾದ ಅನಂತರ ಟಿ.ಆರ್. ಮಹಾಲಿಂಗಂ ಅವರ ನಾಟಕ ಕಂಪನಿಯಲ್ಲಿ ಮ್ಯಾನೇಜರ್ ಹಾಗೂ ನಟರಾಗಿ ಶ್ರಮಿಸತೊಡಗಿದರು. ಮುಂದೆ ಲವಂಗಿ, ವಿಜಯಲಕ್ಷ್ಮೀ, ವೀಟು ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದರು. ಎ.ವಿ.ಎಂ. ಅವರಿಂದ ತಯಾರಾದ ವೀಟು ದಕ್ಷಿಣ ಭಾರತದಲ್ಲೆಲ್ಲ ಅಪಾರ ಜನಮನ್ನಣೆ ಗಳಿಸಿ ತಮಿಳುನಾಡಿನಾದ್ಯಂತ ಪಂತುಲು ಅವರ ಹೆಸರು ಚಿರಪರಿಚಿತವಾಯಿತು.

ಈ ಚಿತ್ರದ ಅನಂತರ ಟಿ.ಆರ್. ಮಹಾಲಿಂಗಂ ಅವರೊಡನೆ ಕೂಡಿಕೊಂಡು ಸುಕುಮಾರ ಪ್ರೊಡಕ್ಷನ್ಸ್ ಚಿತ್ರ ತಯಾರಿಕಾ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೊದಲ ಚಿತ್ರ ಮಚ್ಚರೇಖಾ, ಅಲ್ಪಕಾಲದಲ್ಲೇ ಇವರಿಬ್ಬರ ಸಂಯುಕ್ತ ಉದ್ಯಮ ಬೇರೆಗೊಂಡಿತು. ಅನಂತರ ಪ.ನೀಲಕಂಠನ್ ಅವರ ಸಹಕಾರದೊಡನೆ ಪದ್ಮಿನಿ ಪಿಕ್ಚರ್ (ಮಗಳು ಪದ್ಮಿನಿಯ ಹೆಸರನ್ನೆ ಚಿತ್ರಸಂಸ್ಥೆಗಿಟ್ಟರು) ಸ್ಥಾಪಿಸಿದರು. 1954ರಲ್ಲಿ ಸಂಸ್ಥೆಯ ವತಿಯಿಂದ ಕಲ್ಯಾಣಂ ಪಣ್ಣಿಯುಂ ಬ್ರಹ್ಮಚಾರಿ ಚಿತ್ರ ನಿರ್ಮಾಣವಾಯಿತು. ಮೊದಲ ತೇದಿ ಸಂಸ್ಥೆಯ ದ್ವಿತೀಯ ಕಾಣಿಕೆ. ಮೂರನೆಯ ಚಿತ್ರ ಶಿವಶರಣೆ ನಂಬಿಯಕ್ಕನನ್ನು ಕುರಿತದ್ದು. ನಾಲ್ಕನೆಯ ಚಿತ್ರ ರತ್ನಗಿರಿ ರಹಸ್ಯ. ಈ ಚಿತ್ರದ ತಯಾರಿಕೆಯ ಮೊದಲು ಪ. ನೀಲಕಂಠನ್ ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯಿಂದ ನಿರ್ಗಮಿಸಿದರು. 1956ರಲ್ಲಿ ತಯಾರಾದ ಈ ಕನ್ನಡ ಚಿತ್ರ ಅದ್ಭುತ ಯಶಸ್ಸು ಗಳಿಸಿ ತಂಗಮಲ್ಲೈ ರಹಸ್ಯ ಎಂಬ ಹೆಸರಿನಿಂದ ತಮಿಳಿನಲ್ಲೂ ನಿರ್ಮಾಣಗೊಂಡಿತು. ಅನಂತರ ಸ್ಕೂಲ್ ಮಾಸ್ಟರ್ ಚಿತ್ರ ತಯಾರಾಯಿತು (1958). ಇದಕ್ಕೆ ಕನ್ನಡ ಚಿತ್ರಪ್ರಿಯರ ಉದಾರವಾದ ಉತ್ತೇಜನ ದೊರೆಯಿತು. ಸ್ಕೂಲ್ ಮಾಸ್ಟರ್ ಅಖಿಲ ಭಾರತ ಮಟ್ಟದಲ್ಲಿ ಪ್ರಶಸ್ತಿಪಡೆದ ಮೊದಲ ಕನ್ನಡ ಚಿತ್ರ. ಈ ಚಿತ್ರ ತೆಲುಗು ಮತ್ತು ಹಿಂದಿಯಲ್ಲೂ ತಯಾರಾಗಿ ಯಶಸ್ಸುಗಳಿಸಿತು. ಸ್ಕೂಲ್ ಮಾಸ್ಟರ್ ತೆಗೆದ ತರುಣದಲ್ಲಿಯೇ ಸುಹಾಗ್ ಹಿಂದಿ ಚಿತ್ರವನ್ನು ನಿರ್ಮಿಸಿದರು. ಇದು ಕನ್ನಡ ರತ್ನಗಿರಿ ರಹಸ್ಯದ ಹಿಂದೀ ಅವತರಣಿಕೆ. 'ಅನಂತರ ಶಬಾಷ್ ಮೀನಾ ನಿರ್ಮಿಸಿದರು. ಈ ಚಿತ್ರದ ಮೂಲಕ ಬಿ. ಸರೋಜಾದೇವಿ ತಮಿಳು ಚಿತ್ರರಂಗ ಪ್ರವೇಶಿಸಿದರು. ದಿಲ್ ತೇರಾ ದಿವಾನ ಹೆಸರಿನಲ್ಲಿ ಹಿಂದಿಯಲ್ಲಿ ಈ ಚಿತ್ರವನ್ನು ತಯಾರಿಸಿ ಅಖಿಲಾಭಾರತ ವ್ಯಾಪ್ತಿಯನ್ನು ಪಡೆದುಕೊಂಡರು.

ಈ ಚಿತ್ರದ ಅನಂತರ ಮಹಾಸಾಹಸಕ್ಕೆ ಕೈಹಾಕಿದರು. ತಮಿಳುನಾಡಿನ ಆರಾಧ್ಯ ದೇವತೆಯ ಸ್ಥಾನದಲ್ಲಿ ಮಂಡಿಸಿರುವ ವೀರಪಾಂಡ್ಯ ಕಟ್ಟಬೊಮ್ಮನ್‌ನ ಜೀವಿತೇತಿಹಾಸವನ್ನು ವರ್ಣಚಿತ್ರವಾಗಿ ತೆಗೆಯಲು ಸಂಕಲ್ಪಿಸಿ ಒಂದು ವರ್ಷದ ಕಾಲ ಶ್ರಮಿಸಿ ಚಿತ್ರವನ್ನು ಪೂರ್ಣಗೊಳಿಸಿದರು. ದಕ್ಷಿಣ ಭಾರತದ ಅನೇಕ ಪ್ರಮುಖ ಕೇಂದ್ರಗಳಲ್ಲಿ ಈ ಚಿತ್ರ ಏಕಕಾಲಕ್ಕೆ ತೆರೆಕಂಡು ಪ್ರದರ್ಶಿತವಾದೆಡೆಯಲ್ಲೆಲ್ಲ ಜಯಭೇರಿ ಬಾರಿಸಿ ಶತದಿನೋತ್ಸವವನ್ನೂ ಕಂಡಿತು. ಈ ಚಿತ್ರವನ್ನು 1959ರಲ್ಲಿ ಭಾರತದಲ್ಲಿ ತಯಾರಾದ ಅತ್ಯುತ್ತಮ ಚಿತ್ರವೆಂದು ಕೇಂದ್ರ ಸರ್ಕಾರ ಪರಿಗಣಿಸಿ ಕೈರೋದಲ್ಲಿ ನಡೆದ ಆಫ್ರೋಷ್ಯಾ ಚಲನಚಿತ್ರ ಮಹೋತ್ಸವಕ್ಕೆ ಆಯ್ಕೆಮಾಡಿತು. ಈ ಚಿತ್ರದ ಅನಂತರ ಎಂ.ವಿ. ರಾಜಮ್ಮ ಮತ್ತು ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯ ಸಂಯುಕ್ತ ಉದ್ಯಮವಾಗಿ ಮಕ್ಕಳ ರಾಜ್ಯ ನಿರ್ಮಾಣಗೊಂಡಿತು. ಇಂದಿನ ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಈ ಚಿತ್ರದ ಮೂಲಕ ಚಿತ್ರರಂಗವನ್ನು ಪ್ರವೇಶಿಸಿದರು. ಅನಂತರ ತಯಾರಾದ ಕಿತ್ತೂರು ರಾಣಿ ಚೆನ್ನಮ್ಮನ ಜೀವಿತೇತಿಹಾಸವನ್ನೊಳಗೊಂಡ ಕಿತ್ತೂರ ಚೆನ್ನಮ್ಮ ಎಂಬ ಚಿತ್ರ ಕನ್ನಡನಾಡಿನಲ್ಲಿ ಸಾಕಷ್ಟು ಹೆಸರು ಮಾಡಿತಲ್ಲದೆ ಪ್ರಾದೇಶಿಕ ಮಟ್ಟದಲ್ಲಿ ರಾಷ್ಟ್ರ ಪ್ರಶಸ್ತಿಯನ್ನೂ ಗಳಿಸಿತು.

ಪದ್ಮಿನಿ ಚಿತ್ರಸಂಸ್ಥೆಯ ವತಿಯಿಂದ ಮೇಲಿನ ಚಿತ್ರಗಳ ಜೊತೆಗೆ ಗಾಳಿ ಗೋಪುರ, ಸಾಕುಮಗಳು, ಎಮ್ಮೆ ತಮ್ಮಣ್ಣ, ದುಡ್ಡೇ ದೊಡ್ಡಪ್ಪ, ಗಂಗೆ-ಗೌರಿ, ಚಿನ್ನದ ಗೊಂಬೆ, ಆಯಿರತ್ತಿಲ್ ಒರವನ್, ನಾಡೋಡಿ ಮನ್ನನ್, ರಹಸ್ಯ ಪೋಲೀಸ್ 115, ಕೃಷ್ಣದೇವರಾಯ ಮೊದಲಾದ ಕನ್ನಡ ತಮಿಳು ಚಿತ್ರಗಳೂ ನಿರ್ಮಾಣಗೊಂಡವು. ಎಂ.ಜಿ.ಆರ್. ನಟಿಸುತ್ತಿದ್ದ ತಮಿಳು ಚಿತ್ರ ಮಧುರೈ ಮೀಟ್ಟಿಯ ಸುಂದರಪಾಂಡಿಯನ್ ಮತ್ತು ಬಿ.ಜಿ.ಎಲ್. ಸ್ವಾಮಿ ಅವರ ಕಾಲೇಜುರಂಗ ಎಂಬ ಕಾದಂಬರಿ ಯಾಧಾರಿತ ಕನ್ನಡ ಚಿತ್ರ ಇವುಗಳ ನಿರ್ಮಾಣ ಕಾರ್ಯದಲ್ಲಿದ್ದಾಗ

ಪಂತುಲು ಅವರು 1974ರಲ್ಲಿ ನಿಧನರಾದರು. (ಎಸ್.ಎಚ್.ವಿ.)

**ಪಂಪ :** ಸು. 941 ಕನ್ನಡದ ಆದಿಕವಿ. ಮಹಾಕವಿ, ವಿಕ್ರಮಾರ್ಜುನ ವಿಜಯ (ಪಂಪಭಾರತ), ಆದಿಪುರಾಣ ಎಂಬ ಕಾವ್ಯಗಳ ಕರ್ತೃ.

ಪಂಪ ತನ್ನ ಎರಡೂ ಕೃತಿಗಳಲ್ಲಿ ಸ್ವವಿಷಯವನ್ನು ತಕ್ಕಮಟ್ಟಿಗೆ ವಿವರಪೂರ್ಣವಾಗಿಯೇ ಹೇಳಿಕೊಂಡಿದ್ದಾನೆ. ಇವನ ಹೇಳಿಕೆಗಳು ಹಲವು ಚಾರಿತ್ರಿಕಾಂಶಗಳಿಂದಲೂ ಶಾಸನಗಳಿಂದಲೂ ಸಮರ್ಥನೆಗೊಂಡಿವೆ. ಆದಿಪುರಾಣದಲ್ಲಿ ತಾನು ದುಂದುಭಿ ಸಂವತ್ಸರೋದ್ಭವಂ ಎಂದು ಹೇಳಿಕೊಂಡಿದ್ದಾನೆ. ಅಲ್ಲದೆ ಶಕವರುಷ ಮೆಂಟುನೂಱಕ್ಕೆ ಕಡೆಯೊಳಱ ವತ್ತುಮೂರು ಸಂದಂದು ಜಗತ್ಪ್ರಕಟ ಪ್ಲವಸಂವತ್ಸರದಲ್ಲಿ (ಶಾ.ಶ. 863ರಲ್ಲಿ) ಎಂದರೆ 941ರಲ್ಲಿ (ಅಥವಾ ಕೆಲವು ವಿದ್ವಾಂಸರು ಅಭಿಪ್ರಾಯಪಡುವಂತೆ 942ರಲ್ಲಿ) ಈ ಕೃತಿ ರಚಿತವಾಯಿತೆಂದು ಅದರಿಂದಲೇ ತಿಳಿದುಬರುತ್ತದೆ. ಈ ಪ್ಲವಸಂವತ್ಸರಕ್ಕೆ ಹಿಂದೆ ಬರುವ ದುಂದುಭಿ ಸಂವತ್ಸರ 902ಕ್ಕೆ (ಅಥವಾ 903ಕ್ಕೆ) ಸರಿಹೊಂದುತ್ತದೆಯಾದ್ದರಿಂದ ಪಂಪನ ಜನ್ಮವರ್ಷವನ್ನು 902 (ಅಥವಾ 903) ಎಂದು ಹೇಳಬಹುದು. ಎಂದ ಮೇಲೆ ಪಂಪನ 39-40ನೆಯ ವರ್ಷದಲ್ಲಿ ಆದಿಪುರಾಣ ರಚಿತವಾದಂತಾಯಿತು. ಈ ವೇಳೆಗೆ ಇವನು ಚಾಳುಕ್ಯ ಎರಡನೆಯ ಅರಿಕೇಸರಿಯ ಆಶ್ರಯವನ್ನು ಪಡೆದಿದ್ದನೆಂದು ಕೆಲವರ ಊಹೆ. ಗುಣಾರ್ಣವನೆಂಬುದು ಅರಿಕೇಸರಿಯ ಪ್ರಸಿದ್ಧವಾದ ಬಿರುದು; ವಿತಾಗುಣಾರ್ಣವನೆಂಬುದು ಪಂಪನ ಮೆಚ್ಚಿನ ಬಿರುದುಗಳಲ್ಲೊಂದು. ಎರಡು ಕಾವ್ಯಗಳಲ್ಲಿಯೂ ಈ ಬಿರುದು ಉಕ್ತವಾಗಿದೆ. ಆದ್ದರಿಂದ ಆದಿಪುರಾಣದ ರಚನೆಯ ಕಾಲದಲ್ಲಿಯೇ ಪಂಪನು ಅರಿಕೇಸರಿಯ ಮನ್ನಣೆಗೆ ಪಾತ್ರನಾಗಿದ್ದನೆಂದೂ ತನ್ನ ಕವಿತಾಸಾಮರ್ಥ್ಯನಿಮಿತ್ತದಿಂದ ಕವಿತಾಗುಣಾರ್ಣವನೆಂಬ ಬಿರುದನ್ನು ಪಡೆದಿದ್ದನೆಂದೂ ಊಹಿಸಲವಕಾಶವಾಗಿದೆ. ಆದರೆ ಆದಿಪುರಾಣದಲ್ಲಿ ಕಾವ್ಯದ ಪ್ರಯೋಜನಗಳನ್ನು ತಿಳಿಸುವ ಪದ್ಯವೊಂದರಲ್ಲಿ ಕವಿತೆಯಿಂದ ಕವಿಗೆ ದೊರೆಯುವ ಫಲಗಳು ಪೂಜೆ (ರಾಜಮರ್ಯಾದೆ), ನೆಗೞ್ತೆ (ಕೀರ್ತಿ), ಲಾಭ (ದ್ರವ್ಯಸಂಪಾದನೆ); ಜಿನೇಂದ್ರಗುಣಸ್ತುತಿಯಿಂದಲಾದರೋ ಇಂದ್ರಪೂಜೆ, ಲೋಕಮಾನ್ಯತೆ, ಮುಕ್ತಿಲಾಭ-ಇವು ತಾವಾಗಿಯೇ ಲಭಿಸುತ್ತವೆ. ಆದ್ದರಿಂದ ಪೆಱರೀವುದೇಂ ಪೆಱಜ್ ಮಾಡುವುದೇಂ ಪೆಱಱಿಂದಮಪ್ಪುದೇಂ ಎಂಬ ಪಂಪನ ಮಾತು ರಾಜಮನ್ನಣೆಯ ಬಗೆಗೆ ಇವನ ತಿರಸ್ಕಾರಭಾವ ವ್ಯಕ್ತವಾಗುತ್ತದೆ. ಅಲ್ಲದೆ, ಬುಧಸಮೂಹಮಿದಂ ಪೇಟಿನೆಂದೊಡೆ ಪೇೞಲ್ಕಂ ಬಗೆದಂದೆಂ ಎಂದೂ ಸ್ಪಷ್ಟವಾಗಿ ಹೇಳಿದ್ದಾನೆ. ಈ ಬುಧಸಮೂಹ ಪಂಪನನ್ನು ಕೊಂಡಾಡಿರುವಂತೆ ಬರೆದಿರುವ ಪದ್ಯಗಳಲ್ಲಿ ಪಂಪನ ಬಿರುದುಗಳಾದ ಸುಕವಿಜನಮನೋಮಾನ ಸೋತ್ತಂಸಹಂಸ, ಕವಿತಾಗುಣಾರ್ಣವ, ಸಂಸಾರಸಾರೋದಯ, ಸರಸ್ವತೀಮಣಿಹಾರ ಎಂಬಿವು ಹೇಗೆ ಅರ್ಥಾನುಗುಣ್ಯವಾಗಿ ಪಂಪನಿಗೆ ಒಪ್ಪುತ್ತವೆ ಎಂದು ಒಕ್ಕಣಿಸುವ ಸಂದರ್ಭದಲ್ಲಿ - ಇದು ನಿಚ್ಚಂ ಪೊಸತರ್ಣವಂಬೊಲ್ ಎಂಬುದಾಗಿ ಆ ಬಿರುದು ಸಲ್ಲುವುದರ ಔಚಿತ್ಯವನ್ನು ತಿಳಿಸಿದೆ. ಇದರಿಂದಾಗಿ ಈ ಬಿರುದು ಅರಿಕೇಸರಿಯಿಂದ ಪಡೆದುದಲ್ಲ ಎನ್ನಬೇಕಾಗುತ್ತದೆ. ಈ ಕಾಲದಲ್ಲಿ ಪಂಪನಿಗೂ ಅರಿಕೇಸರಿಗೂ ಆಶ್ರಿತ - ಆಶ್ರಯದಾತ ಸಂಬಂಧ ಇನ್ನೂ ಸಂಘಟಿಸಿರಲಿಲ್ಲ ಎನ್ನಬಹುದಾಗಿದೆ. ಆದಿಪುರಾಣ ರಚಿತವಾದಮೇಲೆ ವಿಕ್ರಮಾರ್ಜುನವಿಜಯ ರಚಿತವಾಯಿತೆಂಬ ಬಗೆಗೆ ಸಂದೇಹವಿಲ್ಲ. ಆದಿಪುರಾಣದ ರಚನೆಯಿಂದ ಸಮರ್ಥ ಕವಿಯೆಂದು ಬಹುಬೇಗನೆ ಪ್ರಸಿದ್ಧಿಗೆ ಬಂದ ಪಂಪನನ್ನು ಅರಿಕೇಸರಿ ಬಳಿಯಟ್ಟಿ ಕರೆಸಿಕೊಂಡು, ಪಿರಿದನ್ನಿತ್ತು ಗೌರವಿಸಿ, ಈ ತೆಱದಿತಿಹಾಸಕಥೆಯನೊಪ್ಪಿಸೆ ಕುಱಿತು, ಬರಿಸದೊಳಗೆ ಸಮೆವಿನಗಂ ಆದೇಶವಿತ್ತ. ಪಂಪನಿಗೆ ವರ್ಷವೂ ಬೇಕಾಗಲಿಲ್ಲ. ಆತ ಭಾರತವನ್ನು ಆರು ತಿಂಗಳಿನಲ್ಲಿಯೇ ಬರೆದು ಮುಗಿಸಿಬಿಟ್ಟ, 'ಪೂಣ್ದುತೆಱದೆ ಒಂದಱುದಿಂಗಳೊಳ್ ಒಂದು ಮೂರು ತಿಂಗಳೊಳ್ ಸಮಾಪ್ತಿಯಾದುದು' ಎಂಬ ಮಾತಿನ ಆಧಾರದ ಮೇಲೆ ಒಂದೇ ವರ್ಷದಲ್ಲಿ (ಎಂದರೆ, ಆದಿಪುರಾಣ ರಚಿತವಾದ ವರ್ಷದಲ್ಲಿಯೆ) ಎರಡೂ ರಚಿತವಾದುವು ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇದು ವಸ್ತುಸ್ಥಿತಿಗೆ ದೂರವಾದ ಮಾತು. ಈ ಎರಡು ಗ್ರಂಥಗಳ ಶೈಲಿಯನ್ನು ಹೋಲಿಸಿದರೆ ಎರಡಕ್ಕೂ ನಡುವೆ ತಕ್ಕ ಮಟ್ಟಿನ ಕಾಲ ಕಳೆದಿರಬೇಕೆಂದು ಚೆನ್ನಾಗಿ ಗೊತ್ತಾಗುತ್ತದೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ನಡುವಣ ಅಂತರ ಎಷ್ಟು ಎಂದು ನಿಖರವಾಗಿ ಹೇಳುವುದು ಕಷ್ಟ. ಅರಿಕೇಸರಿಯ ಮಗ ಬದ್ದೆಗನ ಆಸ್ಥಾನದಲ್ಲಿ (ಅಥವಾ ಆಳ್ವಿಕೆಯಲ್ಲಿ) 959ರಲ್ಲಿ ಸೋಮದೇವ ಯಶಸ್ತಿಲಕಚಂಪೂವನ್ನು ರಚಿಸಿದ. ಆಗ ಅರಿಕೇಸರಿ ಅತೀತನಾಗಿ ವರ್ಷಗಳೆಷ್ಟಾಗಿದ್ದುವು ಎಂಬುದಿನ್ನೂ ಗೊತ್ತಾಗಿಲ್ಲ. ಅಂತೂ ಆದಿಪುರಾಣವನ್ನು ಬರೆದ ಕಾಲ ಶಾ.ಶ. 863 (941). ಯಶಸ್ತಿಲಕ ರಚನೆಯ ಕಾಲ ಶಾ.ಶ. 881 (959). ಈ ನಡುವಿನ 18 ವರ್ಷಗಳ ಅವಧಿಯಲ್ಲಿ ಸಮಸ್ತ ಭಾರತದ ನಿರ್ಮಾಣವಾಗಿರಬೇಕು ಎಂಬುದಾಗಿ ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಈ ಗ್ರಹಿಕೆ ಪರಮಾವಧಿಯ ಅಂತರವನ್ನು (ಸು. 7-8 ವರ್ಷಗಳನ್ನು) ಸೂಚಿಸಿದೆ.

ಪಂಪ ವಿಕ್ರಮಾರ್ಜುನ ವಿಜಯವನ್ನು ಅರಿಕೇಸರಿಯ ರಾಜಧಾನಿಯಲ್ಲಿ ಬಹುಶಃ ಬೋಧನದಲ್ಲಿ ಬರೆದ, ಆದಿಪುರಾಣವನ್ನು ರಾಷ್ಟ್ರಕೂಟ ರಾಜ್ಯದಲ್ಲಿ ಬರೆದನೆಂದು ಧರಣಿಗೆ ನೆಗೞ್ದರ್ ಸಲೆರಟ್ಟ ರಾಜ್ಯದೊಳ್ ಮುನ್ನೆ ಪಂಪನುಂ ಪೊನ್ನಿಗನುಂ ಎಂಬ ರನ್ನನ ಹೇಳಿಕೆಯಿಂದ ತಿಳಿದುಬರುತ್ತದೆ. ಆದಿಪುರಾಣದಲ್ಲಿ ಪೆಱರೀವುದೇಂ ಎಂದು ಮುಂತಾಗಿ ಪಂಪ ಹೇಳುವಲ್ಲಿ ರಾಷ್ಟ್ರಕೂಟ ದೊರೆಯನ್ನೇ ಅವನು ಕುರಿತಿರಬಹುದೆಂದು ತೋರುತ್ತದೆ.

ಪಂಪ ಹುಟ್ಟಿನಿಂದ ಜೈನನಾದರೂ ವೈದಿಕಮತಾವಲಂಬಿಗಳಾಗಿದ್ದ ತನ್ನ ಪೂರ್ವಜನರನ್ನು ಹೆಮ್ಮೆಯಿಂದಲೇ ನೆನೆದಿದ್ದಾನೆ. ಪಂಪನ ಪೂರ್ವಜರ ಸ್ಥಳ ವೆಂಗಿಮಂಡಲದ (ಕೃಷ್ಣಾ-ಗೋದಾವರೀ ನದಿಗಳ ನಡುವೆ ಪೂರ್ವಸಮುದ್ರ ಪರ್ಯಂತ ಹಬ್ಬಿದ ಪ್ರದೇಶ) ವೆಂಗಿಪಳು ಎಂಬ ಅಗ್ರಹಾರ. ವಂಶದ ಮೂಲ ಪುರುಷ ಮಾಧವ ಸೋಮಯಾಜಿ. ಅಗ್ರಹಾರದ ಒಡೆಯನಾಗಿದ್ದ ಈತ ಅನೇಕ ಯಜ್ಞಯಾಗಾದಿಗಳನ್ನು ಮಾಡಿದಂತೆ ತಿಳಿದುಬರುತ್ತದೆ. ಇವನ ಮಗ ಅಭಿಮಾನಚಂದ್ರ. ಈತ ಮಹಾದಾನಿ, ಇವನ ಮಗ ಕೊಮರಯ್ಯ (ಕುಮಾರಯ್ಯ), ಇವನ ಮಗ ಭೀಮ ಅಥವಾ ಭೀಮಪಯ್ಯ (ಭೀಮಪಾರ್ಯ), ವಿಕ್ರಮಾರ್ಜುನವಿಜಯದ ಮುದ್ರಿತ ಪ್ರತಿಗಳಲ್ಲಿ ಅಭಿರಾಮದೇವರಾಯಂ ಎಂಬ ಪಾಠವೇ ಅಂಗೀಕೃತವಾಗಿದ್ದು (ಭೀಮನಾಮಧೇಯಂ ಎಂಬ ಪಾಠಾಂತರವೂ ಇತ್ತು) ಇದೇ ಪಂಪನ ತಂದೆಯ ಹೆಸರು ಎಂದು ಈವರೆಗೆ ತಿಳಿಯಲಾಗಿತ್ತು. ಇತ್ತೀಚೆಗೆ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಅದೇ ತಾಲ್ಲೂಕಿನ ಕುರ್ಕ್ಯಾಲ ಗ್ರಾಮದಲ್ಲಿ ದೊರೆತ ಜಿನವಲ್ಲಭನ ಶಾಸನದಿಂದ ಭೀಮಪಯ್ಯ ಪಂಪನ ತಂದೆ ಎಂಬ ಅಂಶ ಸ್ಪಷ್ಟವಾಗಿದೆ.

ವಿಕ್ರಮಾರ್ಜುನವಿಜಯದಲ್ಲಿಯಾಗಲಿ, ಆದಿಪುರಾಣದಲ್ಲಿಯಾಗಲಿ ಪಂಪನ ತಾಯಿಯ ಮತ್ತು ತಮ್ಮನ ಹೆಸರನ್ನು ಹೇಳಿಲ್ಲ. ಜಿನವಲ್ಲಭನ ಶಾಸನದಿಂದ ಪಂಪನ ತಮ್ಮ ಜಿನವಲ್ಲಭನೆಂದೂ ತಾಯಿ ಅಬ್ಬಣಬ್ಬೆಯೆಂದೂ ತಿಳಿದುಬಂದಿದೆ. ಈ ಅಬ್ಬಣಬ್ಬೆ ಜೋಯಿಸನಾದ ಸಿಂಘನ ಮೊಮ್ಮಗಳು, ಆಕೆಯ ತವರೂರು ಬೆಳ್ವೊಲದ ಅಣ್ಣಿಗೆಱೆ (ಈಗಿನ ನವಲಗುಂದ ತಾಲ್ಲೂಕಿನ ಅಣ್ಣಿಗೇರಿ), ಹೀಗೆ ಪಂಪನ ತಾಯಿಯ ತವರೂರಿನ ಸಂಗತಿ ತಿಳಿದುಬಂದಿರುವುದು ಪಂಪನ ಜೀವನ ವೃತ್ತಾಂತದ ಮೇಲೆ ಹೊಸ ಬೆಳಕನ್ನು ಚೆಲ್ಲುವುದಾಗಿದೆ. ಪಂಪ ವಿಕ್ರಮಾರ್ಜುನ ವಿಜಯವನ್ನು ಬರೆದದ್ದು ಅರಿಕೇಸರಿಯ ರಾಜಧಾನಿಯಲ್ಲಿ (ಅರಿಕೇಸರಿಯ ರಾಜಧಾನಿ ಬೋಧನವೇ ವೇಮುಲವಾಡವೇ ಎಂಬ ಬಗೆಗೆ ಭಿನ್ನಾಭಿಪ್ರಾಯವಿದೆ). ಅದು ಇದ್ದದ್ದು ಕನ್ನಡ ತೆಲುಗುಗಳೆರಡೂ ಪ್ರಚಾರದಲ್ಲಿದ್ದ ಸೀಮೆ (ಜಿನವಲ್ಲಭನ ಶಾಸನದಲ್ಲಿ ಮೂರು ತೆಲುಗು ಕಂದಪದ್ಯಗಳಿರು) ಅಂಶವನ್ನು ಇಲ್ಲಿ ಗಮನಿಸಬಹುದು. ಪಂಪನ ಪೂರ್ವಜರು ಬಹುಶಃ ಕನ್ನಡ ತೆಲುಗುಗಳೆರಡನ್ನೂ ಬಲ್ಲವರಾಗಿದ್ದಿರಬೇಕು. ಆದರೆ ಪಂಪ ತನ್ನ ಭಾರತದಲ್ಲಿ ರಾಜದ್ರಾಜಕಮೆನಿಸಿದ ಸಾಜದ ಪುಲಿಗೆಱೆಯ ತಿರುಳಕನ್ನಡದೊಳ್ ನಿರ್ವ್ಯಾಜದೆಸಕದೊಳೆ ಪುದಿದೊಂದೋಜೆಯ

ಬಲದಿನಿಯ ಕವಿತೆ ಪಂಪನ ಕವಿತೆ ಎಂದು ಹೇಳಿಕೊಂಡಿದ್ದಾನೆ. ಈ ತಿರುಳಗನ್ನಡ ಅವನ ನಾಲಗೆಯಲ್ಲಿ ಊರಿದ್ದು ಹೇಗೆ ಎಂಬ ಪ್ರಶ್ನೆಗೆ ಜಿನವಲ್ಲಭನ ಶಾಸನದಲ್ಲಿ ಉತ್ತರ ಸಿಕ್ಕುತ್ತದೆ. ಪಂಪನ ತಾಯಿಯ ಊರು ಬೆಳ್ವೊಲ ಪ್ರಾಂತ ಕವಿರಾಜಮಾರ್ಗಕಾರನೂ ಪಂಪನೂ ಹೊಗಳುವ ತಿರುಳ್ಗನ್ನಡದ ಪುಲಿಗೆರೆಯು ನೆರೆಯ ನಾಡು. ಪಂಪ ತನ್ನ ಶೈಶವಬಾಲ್ಯಗಳನ್ನು ಇಲ್ಲಿಯೇ ಕಳೆದಿರಬೇಕು. ಭೀಮಪಯ್ಯನೂ ವೆಂಗಿಪಳುವನ್ನು ಬಿಟ್ಟು ಈ ಪ್ರಾಂತ್ಯಕ್ಕೆ ಬಂದು ನೆಲೆಸಿದ್ದಿರಬಹುದು.

ಜಾತಿಯೊಳೆಲ್ಲಂ ಉತ್ತಮ ಜಾತಿಯ ವಿಪ್ರಕುಲಂಗೆ ನಂಬಲೇಮಾತೊ ಜಿನೇಂದ್ರಧರ್ಮಮೆ ವಲಂ ದೊರೆಧರ್ಮದೊಳೆಂದು ನಂಬಿ ಜೈನಧರ್ಮಕ್ಕೆ ಮತಾಂತರಹೊಂದಿದ ಭೀಮಪಯ್ಯನಮಗ ತಾನು ಎಂದು ಹೇಳಿಕೊಳ್ಳುವುದರಲ್ಲಿ ಪಂಪನಿಗೆ ಅತಿಶಯವಾದ ಹೆಮ್ಮೆ. ಪಂಪನ ಈ ಮಾತನ್ನೂ ಅಭಿಮಾನದಿಂದ ಮಾಡಿರುವ ಪೂರ್ವಜರ ವರ್ಣನೆಯನ್ನೂ ಒಟ್ಟಿನಲ್ಲಿ ಪರಿಶೀಲಿಸಿದರೆ ಪಂಪನಿಗೆ ಜೈನಧರ್ಮದಲ್ಲಿ ಎಷ್ಟು ಅಭಿಮಾನವೋ ತನ್ನ ಪೂರ್ವಿಕರ ವೈದಿಕ ಪರಂಪರೆಯಲ್ಲಿ ವಿಪ್ರಕುಲದಲ್ಲಿ ಅಷ್ಟೇ ಅಭಿಮಾನವಿತ್ತೆಂದು ಹೇಳಬಹುದು.

ಸ್ವಾಭಿಮಾನಿಯಾದ ಪಂಪನಿಗೆ ತನ್ನ ರೂಪಿನಲ್ಲಿ, ವ್ಯಕ್ತಿತ್ವದಲ್ಲಿ ಮಿಗಿಲಾದ ಹೆಮ್ಮೆ. ಕದಳೀಗರ್ಭಶ್ಯಾಮಂ ಮೃದುಕುಟಿಲಶಿರೋರುಹಂ ಸರೋರುಹವದನಂ, ಮೃದುಮಧ್ಯಮತನು ಹಿತಮಿತಮೃದುವಚನಂ ಲಲಿತಮಧುರ ಸುಂದರವೇಷಂ ಎಂದು ತನ್ನನ್ನು ಬಣ್ಣಿಸಿಕೊಂಡಿದ್ದಾನೆ. ಅಷ್ಟೇ ಅಲ್ಲ ತನ್ನ ಲಲನಾಲೋಲುಪ್ತಿಯನ್ನೂ ಸಂಕೋಚವಿಲ್ಲದೆ ಕೇರಳ ವಿಟೀಕಟಿ ಸೂತ್ರಾರುಣಮಣಿ ಮಲಯಯುವತಿದರ್ಪಣನಾಂಧ್ರೀನೀರಂಧ್ರಬಂಧುರಸ್ತನಹಾರಂ ಎಂದು ತಿಳಿಸಿದ್ದಾನೆ. ಪಂಪ ಕವಿಯಷ್ಟೇ ಅಲ್ಲ, ಕಲಿಯೂ ಆಗಿದ್ದ. ಆದಿಪುರಾಣದಲ್ಲಿ ಒಂದೆಡೆ ಆತ ತನ್ನ ವ್ಯಕ್ತಿಚಿತ್ರವನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಸಂದರ್ಭದಲ್ಲಿ ಬಂದಿರುವ ಪಂಪಂ ಧಾತ್ರಿವಳಯಂ ನಿಳಿಂಪಂ ಚತುರಂಗಬಲಭಯಂಕರಣಂ ಲಲಿತಾಲಂಕರಣಂ ಪಂಚಶರೈಕರೂಪನಪಗತಪಾಪಂ - ಎಂಬ ಈ ಮಾತುಗಳು ಪಂಪ ಕಲಿಯೂ ಆಗಿದ್ದನೆಂಬುದನ್ನು ಸಮರ್ಥಿಸುವಂತಿವೆ.

> ಕವಿತೆ ನೆಗೞ್ತೆಯಂ ನಿಱುಸೆ ಜೋಳದ ಪಾಟಿ ನಿಜಾಧಿನಾಥನಾ
>
> ಹವದೊಳರಾತಿನಾಯಕರ ಪಟ್ಟನೆ ಪಾಱುಸೆ ಸಂದ ಪೆಂಪು ಭೂ
>
> ಭುವನೊದೊಳಾಗಳುಂ ಬೆಳಗೆ ಮಿಕ್ಕಭಿಮಾನದ ಮಾತು ಕೀರ್ತಿಯಂ
>
> ವಿವರಿಸೆ ಸಂದನೇಂ ಕಲಿಯೋ ಸತ್ಯಕವಿಯೋ ಕವಿತಾಗುಣಾರ್ಣವಂ
>
> (ವಿ.ವಿ. 14-50)

ಈ ಪದ್ಯದ ಆಧಾರದ ಮೇಲೆ ಪಂಪನು ಅರಿಕೇಸರಿಯ ಪರವಾಗಿ ಅನೇಕ ಯುದ್ಧಗಳಲ್ಲಿ ಹೋರಾಡಿದನೆಂದು ಸಾಮಾನ್ಯವಾಗಿ ಎಲ್ಲ ವಿದ್ವಾಂಸರೂ ಅಭಿಪ್ರಾಯಪಟ್ಟಿದ್ದಾರೆ.

ವಿಕ್ರಮಾರ್ಜುನವಿಜಯದಲ್ಲಿ ಅರ್ಜುನನ ಮೂಲಕ ಮಾಡಿಸಿರುವ ಬನವಾಸಿಯ ವರ್ಣನೆ ಪಂಪನ ಬನವಾಸಿ ಪ್ರೇಮಕ್ಕೂ ನಿದರ್ಶನವಾಗಿದೆ.

> ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
>
> ಯಂ ಕಿವಿವೊಕ್ಕೊಡಂ, ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
>
> ಪಂಗೆಡೆಗೊಂಡೊಡಂ, ಮಧುಮಹೋತ್ಸವಮಾದೊಡೇನನೆಂಬೆನಾ
>
> ರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ವನವಾಸಿದೇಶಮಂ

ಎಂಬ ಈ ಮಾತುಗಳನ್ನು ಗಮನಿಸಿ ಪಂಪ ತನ್ನ ಜೀವನದ ಸಾರವತ್ತಾದ ಕೆಲವು ಕಾಲವನ್ನು ಬನವಾಸಿ ಪ್ರಾಂತ್ಯದಲ್ಲಿ ಕಳೆದಿರಬೇಕು ಎಂಬುದಾಗಿ ವಿಮರ್ಶಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಬನವಾಸಿಯ ವರ್ಣನೆ ಪಂಪನಿಗೆ ಎಷ್ಟರಮಟ್ಟಿಗೆ ಸಂಬಂಧಪಟ್ಟುದೋ ಅರಿಕೇಸರಿಗೂ ಅಷ್ಟರಮಟ್ಟಿಗೆ ಸಂಬಂಧಪಟ್ಟದ್ದು ಎಂಬುದು ಪಂಪನ ಸಂಬಂಧವಾಗಿ ಮಾಡಬಹುದಾದ ಸಂಭಾವ್ಯ ಊಹೆಗಳಲ್ಲೊಂದು. ತವರುನಾಡಿನ ಬಗೆಗಿನ ಈ ಅದಮ್ಯವಾದ ತೊಳಲಿಕೆ ಪಂಪನ ಹೃದಯದಿಂದ ಚಿಮ್ಮಿರುವುದು ಎಷ್ಟು ಸತ್ಯವೋ ಅರಿಕೇಸರಿಯ ಹೃದಯವನ್ನು ತಟ್ಟಿರುವುದೂ ಅಷ್ಟೇ ಸತ್ಯ ಎನ್ನಬಹುದು.

ಪಂಪ ತನ್ನ ಗುರುಪರಂಪರೆಯನ್ನೂ ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ. ಕೊಂಡಕುಂದಾನ್ವಯದ ದೇವೇಂದ್ರಮುನಿಯು ಈತನ ಮೆಚ್ಚಿನ ಗುರು. ಈ ಮುನಿ ಬಹಳ ಪ್ರಖ್ಯಾತನಾಗಿದ್ದನೆಂದು ಶ್ರವಣಬೆಳಗೊಳದ ಶಾಸನವೊಂದರಿಂದ ತಿಳಿದುಬರುತ್ತದೆ. ಈ ಆಧಾರದಿಂದ ದೇವೇಂದ್ರಮುನಿಯ ಸ್ಥಳ ಶ್ರವಣ ಬೆಳಗೊಳವೆಂದೂ ಪಂಪನ ವಿದ್ಯಾಭ್ಯಾಸ ಅಲ್ಲಿಯೇ ಸಾಗಿದ್ದಿರಬೇಕೆಂದೂ ವಿದ್ವಾಂಸರೊಬ್ಬರೂ ಊಹಿಸಿದ್ದಾರೆ. ಪಂಪ ತನ್ನ ಗುರುಗಳನ್ನು ಸ್ಮರಿಸುವಾಗ ಜಯನಂದಿ ಮುನಿಯನ್ನೂ ಸ್ಮರಿಸಿದ್ದಾನೆ. ಜಿನವಲ್ಲಭ ತನ್ನ ಶಾಸನದಲ್ಲಿ ಕೊಣ್ಣಕುನ್ದೆಯ ದೇಸಿಗ ಗಣದ ಪೊತ್ತಗೆಯ ಬಚಿಯ ಪಣ್ದರಂಗವಲ್ಲಿಯ ಜಯಣನ್ದಿಸಿದ್ಧಾನ್ತ ಭಟಾರರ ಗುಡ್ಡಂ ಜಿನವಲ್ಲಭಂ ಎಂದು ಹೇಳಿಕೊಂಡಿದ್ದಾನೆ. ಪಂಪ ಆದಿಪುರಾಣದಲ್ಲಿ ಸ್ಮರಿಸಿದ ಜಯನಂದಿಯೂ ಶಾಸನೋಕ್ತ ಜಯನಂದಿಯೂ ಏಕವ್ಯಕ್ತಿಯಾಗಿದ್ದು ಅಣ್ಣ ತಮ್ಮಂದಿರಿಬ್ಬರೂ ಜಯನಂದಿಯ ಶಿಷ್ಯರಾಗಿದ್ದರೆಂದು ಕೆಲವರು ಊಹಿಸಿದ್ದಾರೆ.

ಆದಿಪುರಾಣ ಚಂಪೂವಿನಲ್ಲಿ ರಚಿತವಾಗಿದೆ. ಇದರಲ್ಲಿ 16 ಆಶ್ವಾಸಗಳೂ 1555 ಪದ್ಯಗಳೂ ಇವೆ. ಆದಿಪುರಾಣ ಧಾರ್ಮಿಕ ಗ್ರಂಥ; ಲೋಕಕಲ್ಯಾಣಕ್ಕಾಗಿ ಧರ್ಮಾಮೃತವನ್ನು ವರ್ಷಿಸಿದ ಆದಿ ತೀರ್ಥೇಶ್ವರಚರಿತ. ಕರ್ಣಾಮೃತಸ್ಯಂದಿಯಕ್ಕಿದು ಭವ್ಯಾವಳಿಗೆ ಎಂದು ಪಂಡಿತರು ಪ್ರೇರೇಪಿಸಿದರೂ ಮುಖ್ಯವಾಗಿ ತನಗೆ ಪುಣ್ಯದೊರಕಲೆಂದೂ ಕರ್ಮನಿರ್ಜರೆಯಾಗಲೆಂದೂ ಬಯಸಿ, ಅನಂತರಸುಖಾಭಿಲಾಷಿಯಾಗಿ ಷೋಡರಭಾವನೆಯಿಂದ ಬರೆದ ಷೋಡಶ ಆಶ್ವಾಸಗಳುಳ್ಳ ಪವಿತ್ರ ಗ್ರಂಥ. ಈ ಕಾವ್ಯ ರಚನೆಯಿಂದ ಪಂಪ ಆತ್ಮಸಂತುಷ್ಟಿಯನ್ನೂ ಪಂಡಿತಪ್ರಶಂಸೆಯನ್ನೂ ಗಳಿಸಿ, ಪುರಾಣಕವಿಯೆಂದೂ ಮಹಾಕವಿಯೆಂದೂ ಪ್ರಸಿದ್ಧನಾದ.

ಪಂಪನ ಆದಿಪುರಾಣ ಜಿನಸೇನಾಚಾರ್ಯರ ಪೂರ್ವಪುರಾಣಕ್ಕೆ ಅನೇಕ ವಿಧಗಳಲ್ಲಿ ಋಣಿಯಾಗಿದೆ. ವಿಶ್ರುತವೀರಸೇನಜಿನಸೇನಾಚಾರ್ಯಪರ್ಯಂತ ಮಾಗಿರೆ ಬಂದೀಕಥೆ ಗುಣ್ಪುವೆತ್ತುದವರುಂ ಜ್ಞಾನರ್ಧಿಸಂಪನ್ನರೆಂದಿರದಾಂ ಧೃಷ್ಟನೆನೀಕಥಾಬ್ಧಿಯುಮನೇನೀಸಲ್ಕನಂದಂದೆನೋ ಎಂದು ತನ್ನ ಋಣವನ್ನೊಪ್ಪಿಕೊಂಡು ವಿನಯವನ್ನು ಮೆರೆದಿದ್ದಾನೆ. ಪಂಪ ಕಥಾವಸ್ತುವಿಷಯದಲ್ಲಿ ಜಿನಸೇನಾಚಾರ್ಯರಿಗೆ ಕಡ ಹೊತ್ತಿದ್ದರೂ ಅವನ ಅಸ್ವಾದೃಶ ಪ್ರತಿಭೆ ಮೂಲಕಥೆಯನ್ನು ಕುಗ್ಗಿಸುವಲ್ಲಿ ಕುಗ್ಗಿಸಿ, ಹಿಗ್ಗಿಸಬೇಕಾದಲ್ಲಿ ಹಿಗ್ಗಿಸಿ, ಆದಿಪುರಾಣದಲ್ಲಿ ಕಾವ್ಯಧರ್ಮ-ಧರ್ಮಗಳ ಸಮನ್ವಯವನ್ನು ಬಹುಮಟ್ಟಿಗೆ ಸಾಧಿಸಿದ್ದಾನೆ. ಈ ಕಾವ್ಯದಲ್ಲಿ ಜೈನಧರ್ಮದ ಶಾಸ್ತ್ರಪ್ರಕ್ರಿಯೆಯ ವಿವರಗಳನ್ನು ಬಿತ್ತರಿಸಿರುವ ಭಾಗಗಳು ಕಾವ್ಯದ ಉತ್ತಮಿಕೆಯನ್ನು ತಗ್ಗಿಸಿವೆ. ಈ ದೋಷಸಂಭವಕ್ಕೆ ವಸ್ತುವಿನ ಸ್ವರೂಪವೇ ಕಾರಣವೆಂದು ಕೆಲವು ವಿಮರ್ಶಕರ ಅಭಿಪ್ರಾಯ. ಕಾವ್ಯನಿರೂಪಣೆಯಲ್ಲಿ ಕೈಬಿಡಬಹುದಾಗಿದ್ದ ಈ ನೀರಸ ಭಾಗಗಳನ್ನು ಹಾಗೆ ಮಾಡದಿರಲು ಕವಿಯ ಧರ್ಮಶ್ರದ್ಧೆಯೇ ಕಾರಣ ಎಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಸಾಮಾನ್ಯವಾಗಿ ಜೈನ ಧಾರ್ಮಿಕ ಗ್ರಂಥಗಳಲ್ಲಿ ಒಬ್ಬ ತೀರ್ಥಂಕರನ ಭವಾವಳಿ ಇದ್ದಂತೆ ಇನ್ನೊಬ್ಬನದು ಇರುವುದಿಲ್ಲ. ಈ ಭವಾವಳಿಯ ಸ್ವರೂಪವನ್ನು ಕಲಾತ್ಮಕವಾಗಿ ಆವಿಷ್ಕಾರ ಮಾಡುವುದರಲ್ಲಿ ಕವಿಪ್ರತಿಭೆಗೆ ಅವಕಾಶವಿದ್ದರೂ ಕೆಲವೊಮ್ಮೆ ಚರ್ವಿತಚರ್ವಣದಿಂದ ನೀರಸವಾಗಿಬಿಡಬಹುದು. ಆದರೆ ಈ ಕಲಾಕರ್ಮವನ್ನು ಪಂಪ ಅಮೋಘವಾಗಿ ನಿರ್ವಹಿಸಿದ್ದಾನೆ. ಆದಿತೀರ್ಥಂಕರನ ಭವಾವಳಿಯ ಅನುಕ್ರಮವನ್ನು ಪಂಪನ ಒಂದು ಅಕ್ಕರವೃತ್ತ ಹೀಗೆ ನಿರೂಪಿಸಿದೆ:

> ಭೋಗಾಕಾಂಕ್ಷೆಯೊಳ್ ಜಯವರ್ಮಂ ಬೞಿಕೀಮಹಾಬಲಂ

ಲಲಿತಾಂಗಂ ವಜ್ರಜಂಘಂ

ಭೋಗಭೂಮಿಜಂ ಶ್ರೀಧರದೇವಂ ಸುವಿಧಿನರಾಧಿಪನಚ್ಯುತೇಂದ್ರಂ

ಸಾಗರಾಂತಂ ನೆಲನನಿತುಮಂ ಚಕ್ರದಿಂ ಬೆಸಕೈಸಿದ ವಜ್ರನಾಭಿ

ಯಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಬಂದಿಲ್ಲಿ ತಾನಾದಿದೇವನಾದಂ

(ಆ.ಪು. 16-58)

ಭವದಿಂದ ಭವದೊಳ್ ತಗುಳ್ದು ಪರಮಸ್ನೇಹಂಗಳು ಜೀವಗಳನ್ನು ಮೋಹಸಂಕೋಲೆಯಿಂದ ಹೇಗೆ ಬಂಧಿಸುತ್ತವೆ. ಅದರಿಂದ ಬಿಡಿಸಿಕೊಂಡು ಸದ್ಗತಿ ಪಡೆಯಲು ಜೀವ ಹೇಗೆ ಹೆಣಗುತ್ತದೆ ಎಂಬ ಜಿನಧರ್ಮತತ್ತ್ವವನ್ನು ವೃಷಭ ದೇವನ ಪೂರ್ವಜನ್ಮಾವಳಿಕಥನದಲ್ಲಿ ಪಂಪ ಮನೋಹರವಾಗಿ ಪ್ರತಿಪಾದಿಸಿದ್ದಾನೆ. ವಿಶೇಷವಾಗಿ ಲಲಿತಾಂಗ-ಸ್ವಯಂಪ್ರಭೆ, ವಜ್ರಜಂಘ-ಶ್ರೀಮತಿ ಇವರು ಪ್ರಣಯಿಗಳಾಗಿ ಹುಟ್ಟಿ ಭೋಗಜೀವನದ ಪರಾಕಾಷ್ಠೆಯನ್ನು ಮುಟ್ಟಿಯೂ ಕೊನೆಗೊಮ್ಮೆ ಮರಣವನ್ನು ಅಪ್ಪಲೇಬೇಕಾಗಿ ಬಂದ ಸನ್ನಿವೇಶಗಳ ಚಿತ್ರಣ ಹೃದಯಸ್ಪರ್ಶಿಯಾಗಿದೆ. ಈ ಸಂದರ್ಭಗಳು ಕಾವ್ಯದೃಷ್ಟಿಯಿಂದ ಗಮನಾರ್ಹವಾದವುಗಳು. ಕೊನೆಯ ಜನ್ಮದಲ್ಲಿ ಆದಿನಾಥ ಭೂಲೋಕದಲ್ಲಿ 14ನೆಯ ಮನುವಾದ ನಾಭಿರಾಜನಿಗೆ ವೃಷಭಸ್ವಾಮಿ (ಪುರುದೇವ) ಎಂಬ ಹೆಸರಿನ ಪುತ್ರನಾಗಿ ಜನ್ಮವೆತ್ತಿ ಸಂಸಾರದಲ್ಲಿ ಭೋಗಾಸಕ್ತನಾದರೂ ನಿರ್ಲಿಪ್ತನಾಗಿ ಬಾಳಿ, ಪರಿನಿಷ್ಕ್ರಮಣ ಕಾಲ ಬಂದಾಗ ನೀಲಾಂಜನೆಯೆಂಬವಳ ಅಮೋಘನೃತ್ಯವನ್ನು ನೋಡುತ್ತಿರುವಾಗಲೇ ಗತಾಯುವಾಗಿದ್ದ, ಅವಳು ಹಠಾತ್ತನೆ ಕಣ್ಮರೆಯಾದ ಘಟನೆಯಿಂದ ತೀವ್ರವೈರಾಗ್ಯಪರನಾಗಿ ಮುಕ್ತಿ ಸಾಧಿಸಲು ತೆರಳುತ್ತಾನೆ. ಪುರುದೇವಭವದಲ್ಲಿ ವರ್ಣಿತವಾದ ಪಂಚಕಲ್ಯಾಣಗಳಲ್ಲಿ ತೀರ್ಥಂಕರ ಜನ್ಮಾಭಿಷೇಕ ಕಲ್ಯಾಣವೂ ಕಡೆಯದಾದ ಪರಿನಿಷ್ಕ್ರಮಣ ಕಲ್ಯಾಣವೂ ಪಂಪನ ಪ್ರತಿಭಾವಿಲಾಸದಲ್ಲಿ ದಿವ್ಯಭವ್ಯವಾಗಿ ಮೂಡಿ ಮೆರೆದಿವೆ. ಪುರುದೇವನ ಜನ್ಮಕಥೆಗೆ ಪೂರಕವಾಗಿ ಭರತ ಚಕ್ರವರ್ತಿ ಬಾಹುಬಲಿಗಳ ಕಥೆಯೂ ಉಜ್ಜ್ವಲವಾಗಿ ಚಿತ್ರಿತವಾಗಿದೆ. ಆದಿದೇವನ ಕಥೆಯಲ್ಲಿ ಭೋಗನಿರಾಸವೂ ಭರತನ ಕಥೆಯಲ್ಲಿ ವೈಭವಮದದ ನಿರರ್ಥಕತೆಯೂ ಕಾವ್ಯಧರ್ಮಕ್ಕೆ ಅಧೀನವಾಗಿ ನಿರೂಪಿತವಾಗಿವೆ. ಕಾವ್ಯಶಿಲ್ಪದ ದೃಷ್ಟಿಯಿಂದ ಇಡಿಯಾಗಿ ಪರಿಶೀಲಿಸಿದಾಗ, ಪಂಪನ ಧರ್ಮಶ್ರದ್ಧೆಯಿಂದಲೂ ಭಕ್ತಿಜ್ಞಾನವೈರಾಗ್ಯಭಾವನೆಗಳಿಂದಲೂ ಕವಿತಾ ದೇಶದ ಪ್ರಥಮ ಸ್ಫೂರ್ತಿಯಿಂದಲೂ ಪ್ರಜ್ವಲಿಸುವ ಕಾವ್ಯ ಕಡೆಗೆ ಆತನ ಭಾರತಕ್ಕೆ ಒಂದು ಕೈಮೇಲೆಂದು ಹೇಳಿದರೂ ಹೇಳಬಹುದಾಗಿದೆ ಎಂದು ಬಿ.ಎಂ.ಶ್ರೀಯವರು ಆದಿಪುರಾಣವನ್ನು ಕುರಿತು ಅಭಿಪ್ರಾಯಪಟ್ಟಿದ್ದಾರೆ. ಭಾರತ ಆದಿಪುರಾಣಗಳಲ್ಲಿ ಆದಿಪುರಾಣಕ್ಕೇ ಹೆಚ್ಚಿನ ಗೌರವದ ಸ್ಥಾನ ಸಲ್ಲುವುದು ನ್ಯಾಯವಾಗಿದೆ. ಲೌಕಿಕವನ್ನು ಭಾರತದಲ್ಲಿಯೂ ಆಗಮವನ್ನು ಆದಿಪುರಾಣದಲ್ಲಿಯೂ ಪಂಪನು ಬೆಳಗಿರುವುದೇ ಇದಕ್ಕೆ ಕಾರಣವೆನ್ನಬೇಕು. ಅಲ್ಲದೆ ಪಂಪನ ಆದಿಪುರಾಣದ ದರ್ಶನಪೂರ್ವಕವಾದ ಕಲೆ ಆತನ ಕಲಾಪೂರ್ಣವಾದ ವಿಕ್ರಮಾರ್ಜುನವಿಜಯದ ದರ್ಶನಕ್ಕಿಂತಲೂ ಶಾಶ್ವತತರವಾದ ಪರಮಪುರುಷಾರ್ಥಪರವಾಗಿರುವುದರಿಂದಲೂ ಅದು ಸುಪಕ್ವಚೇತನರಿಗೆ ಮೆಚ್ಚಾಗುವ ಸಂಭವವುಂಟು ಎಂಬ ಕುವೆಂಪು ಅವರ ವಿಮರ್ಶಾಪೂರ್ವಕವಾದ ಅಭಿಪ್ರಾಯವೂ ಇದನ್ನೇ ಸಮರ್ಥಿಸುತ್ತದೆ.

ವಿಕ್ರಮಾರ್ಜುನವಿಜಯ 14 ಆಶ್ವಾಸ ಹಾಗೂ 1,609 ಪದ್ಯಗಳುಳ್ಳ ಚಂಪೂ ಕಾವ್ಯ. ಪಂಪಭಾರತ ಎಂದೂ ಪ್ರಸಿದ್ಧವಾಗಿದೆ. ಕಾವ್ಯದ ಆರಂಭದಲ್ಲಿ ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸುವೆನ್ ಕವಿ ವ್ಯಾಸನೆನ್ ಎಂಬ ಗರ್ವಮೆನಗಿಲ್ಲ ಎಂಬ ವಿನಮ್ರತೆಯಿಂದ ವ್ಯಾಸರನ್ನು ನೆನೆದಿದ್ದಾನೆ. 'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತಭಾರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗೆಂ' ಎಂದು ಪಂಡಿತರೇ ಹೊಗಳಲು ಈ ಕೃತಿಯನ್ನು ರಚಿಸಲು ಮನಸ್ಸಾಯಿತೆಂದು ಹೇಳಿದ್ದಾನೆ. ಅಲ್ಲದೆ ಅರಿಕೇಸರಿ, ಪಂಪನಿಗೆ ಪಿರಿದನಿತ್ತು ಗೌರವಿಸಿ ಇತಿಹಾಸ ಕತೆಯನ್ನು ಬರೆಯಲೊಪ್ಪಿಸಿದ. ಗುಣಾರ್ಣವನ ಬಲ್ಪು ತನ್ನ ಮನಸ್ಸನ್ನು ಸೆರೆಹಿಡಿಯಲು ತಾನು ಅರಿಕೇಸರಿಯನ್ನು ಅರ್ಜುನನೊದಿಗೆ ಹೋಲಿಸಿ ಕಾವ್ಯ ಬರೆದುದಾಗಿಯೂ ಹೇಳಿಕೊಂಡಿದ್ದಾನೆ.

ವಿಕ್ರಮಾರ್ಜುನವಿಜಯ ಪ್ರಸಿದ್ಧವಾದ ಮಹಾಭಾರತ ಕಥೆಯನ್ನು ವಸ್ತುವಾಗುಳ್ಳದ್ದು. ಕವಿ ಇದನ್ನು ಸಮಸ್ತಭಾರತ ಎಂದು ಅನೇಕ ಕಡೆ ನಿರ್ದೇಶಿಸಿದ್ದಾನೆ. ಅರಿಕೇಸರಿಯ ವೃತ್ತಾಂತವನ್ನು ಅರ್ಜುನನ ಕಥೆಯೊಂದಿಗೆ ಸಮಾನ ಮಾಡಿರುವುದರಿಂದ (ಎಂದರೆ, ಕೂಡಿಸಿರುವುದರಿಂದ) ಸಮಸ್ತಭಾರತ ಎಂಬ ಹೆಸರು ಇದಕ್ಕೆ ಅನ್ವರ್ಥಕ ಎಂದು ವಿದ್ವಾಂಸರು ವ್ಯಾಖ್ಯಾನಿಸಿದ್ದಾರೆ. ಈ ಆಶಯ ಕವಿಗೆ ಇದ್ದಿರಬಹುದು. ಆದರೆ ಇನ್ನೂ ಮುಂದೆ ಹೋಗಿ, ಅರಿಕೇಸರಿಯ ಸಂಬಂಧವುಳ್ಳ ಕೆಲವು ಸಮಕಾಲೀನ ಚಾರಿತ್ರಿಕ ವ್ಯಕ್ತಿಗಳ ವೃತ್ತಾಂತವನ್ನು ಭಾರತಕಥೆಯ ಪ್ರಮುಖ ವ್ಯಕ್ತಿಗಳ ವೃತ್ತಾಂತಗಳೊಂದಿಗೆ ಸಮಸ್ತ ಮಾಡಿದ್ದಾನೆ ಎಂಬ ವಿಚಾರಧಾರೆಯೂ ಹೆಚ್ಚಿನ ಸಂಶೋಧನೆಯಿಂದ ಸ್ಥಿರಪಡಬೇಕಾಗಿದೆ. ಇದು ಹೇಗಿದ್ದರೂ ಪಂಪನ ದೃಷ್ಟಿಯಲ್ಲಿ ಭಾರತ ಕೇವಲ ವಿಕ್ರಮಾರ್ಜುನ ವಿಜಯವಲ್ಲ; ಅನೇಕ ಮಹಾಪುರುಷರ ಕಥೆ ಹಾಗೂ ಅವರ ನಡವಳಿಕೆಗಳ ಮೂಲಕ ಲೌಕಿಕವನ್ನು ಎಂದರೆ ಲೋಕಧರ್ಮವನ್ನು ಬೆಳೆಗುವ ಕೃತಿ. ಈ ಆಶಯವು ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ, ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ, ಚಾಪವಿದ್ಯಾಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಲಿವರ್ಗಳಿನೀ ಭಾರತಂ ಲೋಕ ಪೂಜ್ಯಂ ಎಂಬ ಪಂಪನ ಉಪಸಂಹಾರವಾಕ್ಯದಲ್ಲಿ ಸುವ್ಯಕ್ತವಾಗಿದೆ. (ಎಂ.ವಿ.ಎಸ್.)

ಆದಿ ವಂಶಾವತಾರ, ರಂಗಪ್ರವೇಶ, ಜತುಗೃಹದಾಹ, ಹಿಡಿಂಬವಧೆ, ಬಕಾಸುರ ವಧೆ, ದ್ರೌಪದೀಸ್ವಯಂವರ, ಯುಧಿಷ್ಠಿರಪಟ್ಟಬಂಧನ, ಇಂದ್ರಪ್ರಸ್ಥಪ್ರವೇಶ, ಅರ್ಜುನನದಿಗ್ವಿಜಯ, ಸುಭದ್ರಾಹರಣ, ಖಾಂಡವವನದಹನ, ಮಯದರ್ಶನ, ರಾಜಸೂಯಯಾಗ, ಜರಾಸಂಧಶಿಶುಪಾಲಾದಿಗಳ ವಧೆ, ದ್ಯೂತಪ್ರಂಗ, ಅರಣ್ಯಪರ್ವದ ವಿವರ, ವಿರಾಟಪರ್ವದ ವಿವರ, ಕೀಚಕವಧೆ, ದೂತಕಾರ್ಯ, ಕುರುಕ್ಷೇತ್ರಪ್ರಯಾಣ, ಭೀಷ್ಮಕರ್ಣವಿವಾದ, ಭೀಷ್ಮಶರಶಯನ, ದ್ರೋಣಾಭಿಷೇಕ, ಅಭಿಮನ್ಯುವಧೆ, ದ್ರೋಣವಧೆ, ಅಶ್ವತ್ಥಾಮಕರ್ಣವಿವಾದ, ಕರ್ಣಾಭಿಷೇಕ, ಸಂಸಪ್ತಕರ ವಧೆ, ದುಶ್ಶಾಸನವಧೆ, ವೇಣೀಸಂಹನನ, ಕರ್ಣಾರ್ಜುನಯುದ್ಧ, ಕರ್ಣನ ಮರಣ, ಶಲ್ಯಾಭಿಷೇಕ, ಶಲ್ಯನ ಪತನ, ಭೀಮದುರ್ಯೋಧನರ ಗದಾಯುದ್ಧ, ದುರ್ಯೋಧನನ ವಧೆ, ಪಂಚಪಾಂಡವರ ಶಿರಶ್ಛೇದನ ಇತ್ಯಾದಿಗಳನ್ನು ಒಂದೂ ಕುಂದದಂತೆ ಹೇಳುವುದು (ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ) ಪಂಪನ ಉದ್ದೇಶವಾಗಿದ್ದು ಈ ಎಲ್ಲ ವಿಷಯಗಳಲ್ಲಿಯೂ ಕವಿಯಶಸ್ವಿಯಾಗಿದ್ದಾನೆಂದು ಹೇಳಬಹುದು. ಪಂಚಪತೀತ್ವದ ಮಾರ್ಪಾಟು, ಸುಭದ್ರೆಗೆ ಅರ್ಜುನನ ಅಗ್ರಮಹಿಷಿಪಟ್ಟ, ಅರ್ಜುನನ ಪಟ್ಟಾಭೀಷೇಕ - ಹೀಗೆ ಎಡೆತಪ್ಪಿಬಂದ ಈ ಒಂದೆರಡು ದೋಷಗಳನ್ನು ಬಿಟ್ಟರೆ ವಿಕ್ರಮಾರ್ಜುನವಿಜಯ, ಒಂದು ಅತ್ಯುತ್ತಮ ಕಾವ್ಯ. 'ಅದರ ಕಟ್ಟಣಗಳಲ್ಲಿ ಒಂದು ಅಪೂರ್ವತೆಯಿದೆ, ಉಜ್ವಲತೆಯಿದೆ'. ಮೂಲ ಮಹಾಭಾರತವನ್ನು ಸಂಗ್ರಹಗೊಳಿಸುವಲ್ಲಿ ಮಹಾಕವಿಗೆ ಮಾತ್ರ ಸಾಧ್ಯವೆಂಬ ಕೌಶಲವನ್ನು ಪಂಪ ಮೆರೆದಿದ್ದಾನೆ. ಹಲವಾರು ಪದ್ಯಗಳಲ್ಲಿ ವಿಸ್ತರಿಸಬಹುದಾದುದನ್ನು ಕೆಲಪದ್ಯಗಳಲ್ಲಿ, ಒಂದೆರಡು ಮಾತುಗಳಲ್ಲಿ ಹೇಳಿ ಮುಗಿಸಿದ್ದಾನೆ. ಶಂತನು-ಸತ್ಯವತಿಯರ ಪ್ರಣಯಕಥೆಗಳನ್ನು ಇದಕ್ಕೆ ಉದಾಹರಿಸಬಹುದು:

ಮೃಗಯಾವ್ಯಾಜದಿನೊರ್ಮೆ ಶಂತನು ತೊಟಲ್ತರ್ಪಂ ಪಳಂಚಲ್ಕೆ ತ

ನ್ಮೃಗಶಾಬಾಕ್ಷಿಯ ಕಂಪುತಟ್ಟಿ ಮಧುಪಂಬೋಲ್ ಸೋಲ್ತು
ಕಂಡೊಲ್ದು ನ

ಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀಂ ಬಾ
ಪೋಪಮೆಂದಂಗೆ ಮೆ

ಲ್ಲಗೆ ತತ್ಕನ್ಯಕೆ ನಾಣ್ಚೆ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ

- ಇಲ್ಲಿನ ಪ್ರಣಯಿಗಳ ಈ ಸಂಕ್ಷಿಪ್ತ ಸಂಭಾಷಣೆ ಧ್ವನಿರಮ್ಯವಾಗಿದೆ. (ಎಸ್.ಜೆ.ಎ.)

ಯಾವುದೇ ಸನ್ನಿವೇಶವನ್ನು ಕಣ್ಣಿಗೆಕಟ್ಟುವಂತೆ ಹಿತಮಿತವಾಗಿ ವರ್ಣಿಸುವುದು ಪಂಪನ ವೈಶಿಷ್ಟ್ಯ. ಶಿಶುಪಾಲವಧೆಯ ಸಂದರ್ಭ, ಭೀಷ್ಮರ ಪಟ್ಟಾಭಿಷೇಕ ಸಂದರ್ಭ, ಕರ್ಣಕುಂತಿಯರ ಸಂವಾದಸಂದರ್ಭ - ಇವು ಮೇಲಿನ ಮಾತಿಗೆ ಸಾಕ್ಷಿಯನ್ನೊದಗಿಸುತ್ತವೆ. ಪಾತ್ರಚಿತ್ರಣದಲ್ಲಿಯೂ ಪಂಪನದು ಎತ್ತಿದ ಕೈ. ದುರ್ಯೋಧನ, ಕರ್ಣ, ಭೀಮ, ದ್ರೌಪದಿ, ಅರ್ಜುನ, ಭೀಷ್ಮ, ದ್ರೋಣ, ಯುಧಿಷ್ಠಿರ, ಕೃಷ್ಣ - ಈ ಮೊದಲಾದ ಪಾತ್ರಗಳು ಸಜೀವತೆಯಿಂದ ಕೂಡಿವೆ. ಮಾನವಸ್ವಭಾವವನ್ನು ಪಂಪನಂತೆ ಸೂಕ್ಷ್ಮವಾಗಿ ಚಿತ್ರಿಸಿದ ಕವಿಗಳು ಕನ್ನಡದಲ್ಲಿ ವಿರಳ. ಕರ್ಣದುರ್ಯೋಧನರ ಸ್ನೇಹವನ್ನಂತೂ ಕವಿ ಅನನ್ಯರೀತಿಯಲ್ಲಿ ಚಿತ್ರಿಸಿದ್ದಾನೆ. ಕರ್ಣಧುರ್ಯೋಧನರ ಪಾತ್ರಗಳು ಪಂಪನ ಮನಸೆಳೆದಿರುವಂತೆ ಹೃದಯವನ್ನು ಕಲಕಿರುವಂತೆ ಇನ್ನಾವ ಪಾತ್ರಗಳೂ ಅಷ್ಟೊಂದು ಪ್ರಭಾವ ಬೀರಿಲ್ಲ. ಆದ್ದರಿಂದಲೇ ಕವಿ ರಣರಂಗದಲ್ಲಿ ಕರ್ಣ ಮರಣಹೊಂದಿದ ಸಮಯದಲ್ಲಿ ಚರಮಗೀತೆಯನ್ನು ಬರೆಯುತ್ತ 'ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ' ಎಂದು ಕಂಬನಿ ದುಂಬಿ ನುಡಿದಿರುವುದು.

ಪಂಪನದು ಔಚಿತ್ಯಮೀರದ ಶೈಲಿ; ಅದರಲ್ಲಿ ದೇಸಿ ಹಾಗೂ ಮಾರ್ಗಪದ್ಧತಿ ಬಂಧಗಳ ಸುಂದರ ಸಮನ್ವಯವಿದೆ. ರಸಧ್ವನಿ ಪ್ರಣವತೆಯಿದೆ. ಪ್ರಸನ್ನ ಗಂಭೀರತೆಯಿದೆ. ಅಕ್ಷರಶಕ್ತಿ ಶಬ್ದಶಕ್ತಿ ಅರ್ಥಶಕ್ತಿ ಛಂದೋಲಯ ಇವುಗಳನ್ನು ಧ್ವನಿಸಿದ್ಧಿಗಾಗಿ ಬಳಸಿಕೊಳ್ಳುವ ಕಾವ್ಯಕೌಶಲ, ನಾಟಕೀಯಪ್ರಜ್ಞೆ, ಶಬ್ದಚಿತ್ರ ನಿರ್ಮಾಣಶಕ್ತಿ ಇವೇ ಮುಂತಾದ ಕಾವ್ಯಗುಣಗಳನ್ನು ಹೊಮ್ಮಿಸಬಲ್ಲ ಪಂಪನ ಪ್ರತಿಭೆ ಆತನನ್ನು ಕವಿಗಳ ಕವಿಯಾಗಿ ಮಾಡಿ, ಸುಕವಿಜನಮನೋಮಾನಸೋತ್ತಂಸಹಂಸಂ ಎಂಬ ಅವನ ಬಿರುದನ್ನು ಸಾರ್ಥಕಪಡಿಸಿದೆ.

ವಿಕ್ರಮಾರ್ಜುನವಿಜಯ ಲೌಕಿಕ ಕಾವ್ಯವಾದುದರಿಂದ ವೀರಕಾವ್ಯವಾದುದರಿಂದ ಕಾವ್ಯದುದ್ದಕ್ಕೂ ವೀರರಸ ನೊರೆಗಟ್ಟಿ ಹರಿಯುತ್ತದೆ. ಯುದ್ಧವರ್ಣನೆಗಳು ಸಹಜತೆಯಿಂದ ಕೂಡಿದ್ದು ಕವಿಯ ದಟ್ಟವಾದ ಲೋಕಾನುಭವಕ್ಕೆ ದ್ಯೋತಕವಾಗಿವೆ.

ಆದಿಪುರಾಣ ವಿಕ್ರಮಾರ್ಜುನವಿಜಯಗಳೆರಡೂ ಕನ್ನಡದ ಅಗ್ರಮಾನ್ಯ ಆದಿ ಮಹಾಕಾವ್ಯಗಳು, ಚಂಪೂಕಾವ್ಯ ಪ್ರಕಾರದ ಶ್ರೇಷ್ಠತಮ ಮಾದರಿಗಳು, ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿದುವು ಸಮಸ್ತಭಾರತಮುಂ ಆದಿಪುರಾಣ ಮಹಾಪ್ರಬಂಧಮುಂ ಎಂಬ ಪಂಪನ ಹೇಳಿಕೆಯಿಂದ ಈ ಎರಡು ಕೃತಿಗಳು ಪಂಪಪೂರ್ವಯುಗದ ಗಣ್ಯಕೃತಿಗಳೆಲ್ಲವನ್ನೂ ಮೀರಿಸಿದ್ದುವು ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಎರಡು ಕೃತಿಗಳೂ ಪಂಪನ ಪ್ರತಿಭೆಯನ್ನು ಶಾಶ್ವತವಾಗಿ ವಿಶ್ವವ್ಯಾಪಿಯಾಗಿ ಬೆಳಗುವ ಕೃತಿಗಳೆಂಬುದರಲ್ಲಿ ಸಂದೇಹವಿಲ್ಲ. ಆಧುನಿಕ ವಿಮರ್ಶೆಯ ಪುನರ್ಮೌಲ್ಯಮಾಪನದ ಅಗ್ನಿಪರೀಕ್ಷೆಯಲ್ಲಿ ಎಂದೂ ತೇರ್ಗಡೆಯಾಗಬಲ್ಲ ಸತ್ತ್ವವನ್ನು ಹೊಂದಿರುವ ಉದ್ಘಕೃತಿಗಳಿವು.

ಜಿನಸೇನಾಚಾರ್ಯ ಹಾಗೂ ವ್ಯಾಸಮುನೀಂದ್ರರಿಂದ ಕಥಾವಸ್ತುಗಳನ್ನು ಪಡೆದ ಋಣವನ್ನು ಒಪ್ಪಿಕೊಂಡಿರುವ ಪಂಪ ತನಗಿಂತ ಹಿಂದಿನ ಸಂಸ್ಕೃತ ಮಹಾಕವಿಗಳಿಂದ ಪ್ರಭಾವಿತನಾಗಿದ್ದರೂ ಅವರನ್ನು ಸ್ಮರಿಸದಿರುವುದು ಅಚ್ಚರಿಯನ್ನುಂಟುಮಾಡುತ್ತದೆ. ಭಾಸ, ಕಾಳಿದಾಸ, ಹರ್ಷ, ಬಾಣ, ಮಾಘ, ಭಾರವಿ - ಈ ಸಂಸ್ಕೃತ ಮಹಾಕವಿಗಳ ಪ್ರಭಾವವನ್ನು ಪಂಪನ ಕೃತಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಅನೇಕ ಕನ್ನಡ ಕವಿಗಳು ಪಂಪನ ನೇರ ಪ್ರಭಾವಕ್ಕೆ ಒಳಗಾಗಿದ್ದಾರೆ. ರನ್ನನಂತೂ (ಸು. 993) ಪಂಪನಿಗೆ ಬಹುವಿಧಗಳಲ್ಲಿ ಋಣಿಯಾಗಿದ್ದಾನೆ. ಪಂಪನ ಭಾರತ ವಿಕ್ರಮಾರ್ಜುನವಿಜಯವಾದರೆ ರನ್ನನ ಗದಾಯುದ್ಧ ಸಾಹಸಭೀಮವಿಜಯ; ಆಶ್ರಯದಾತನನ್ನು ಕಥಾನಾಯಕನಿಗೆ ಹೋಲಿಸಿ ಕಥೆಯನ್ನು ಹೇಳುವ ರೀತಿಯಲ್ಲಿಯೂ ಪಂಪನ ಅನುಕರಣವಿದೆ. ಇಷ್ಟೇ ಅಲ್ಲ, ಈ ಗದಾಯುದ್ಧದ ಕಥೆಗೆ ವಿಕ್ರಮಾರ್ಜುನವಿಜಯದ ಹದಿಮೂರನೆಯ ಆಶ್ವಾಸದ ಕಥೆಯೇ ಮೂಲ; ವರ್ಣನಾದಿಗಳೂ ಕೆಲವೆಡೆಗಳಲ್ಲಿ ಪಂಪಭಾರತವನ್ನೇ ಅನುಸರಿಸಿರುವುವು; ಕೆಲವು ಪದ್ಯಗಳೂ ಪದ್ಯಭಾಗಗಳೂ ಪಂಪಭಾರತದ ಈ ಭಾಗದ ಪಡಿನೆಳಲಿನಂತಿವೆ. ರಾಮಚಂದ್ರಚರಿತಪುರಾಣದ ಕರ್ತೃವಾದ ನಾಗಚಂದ್ರ (ಸು.1100) ತಾನು ಮಹಾಕವಿ ಪಂಪನಿಗೆ ಸಮನಾದವನು ಎಂಬ ಅರ್ಥದಲ್ಲಿ ತನ್ನನ್ನು ಅಭಿನವ ಪಂಪನೆಂದು ಕರೆದುಕೊಂಡಿದ್ದಾನೆ. ಅವನ ಕೃತಿ ಪಂಪರಾಮಾಯಣವೆಂದು ಪ್ರಸಿದ್ಧವಾಗಿದೆ. ದುರ್ಗಸಿಂಹ, ಎರಡನೆಯ ನಾಗವರ್ಮ, ನಯಸೇನ, ರುದ್ರಭಟ್ಟ, ಬ್ರಹ್ಮಶಿವ, ಎರಡನೆಯ ಗುಣವರ್ಮ ಮೊದಲಾದ ಅನೇಕ ಕವಿಗಳು ಪಂಪನ ಗೀರ್ಗುಂಫದ ಪೆಂಪು, ಅಸದೃಶಮಪ್ಪಪೂರ್ವರಸಂ, ಸನ್ನುತಕವಿತಾಗುಣ, ಹಂಪದೇವೋಕ್ತಪ್ರಯೋಗ, ರಸಿಕಾಗ್ರಣಿ ಪಂಪನ ನುಣ್ಪುವೆತ್ತ ನುಡಿ, ಪಂಪ ನಿಂಪು, ಪಂಪನೋಜೆ ಎಂದು ಮುಂತಾಗಿ ಪಂಪನ ಕವಿತೆಯ ಗುಣಗಳನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಕುಮಾರವ್ಯಾಸಭಾರತದಲ್ಲಿಯೂ ಪಂಪ ಭಾರತದ ಪ್ರಭಾವವನ್ನು ಗುರುತಿಸಲಾಗಿದೆ. ತೆಲುಗಿನಲ್ಲಿ ಭಾರತವನ್ನು ಬರೆದ ನನ್ನಯಭಟ್ಟನ ಕೃತಿಯಲ್ಲೂ ಪಂಪಭಾರತದ ಪ್ರಭಾವವನ್ನು ವಿದ್ವಾಂಸರು ಗುರುತಿಸಿದ್ದಾರೆ. ಪಂಪನ ಪ್ರಭಾವಮುದ್ರೆಯ ವ್ಯಾಪಕತ್ವಕ್ಕೆ ಇದು ಗಮನಾರ್ಹ ನಿದರ್ಶನವಾಗಿದೆ. ಈ ಹಿನ್ನೆಲೆಯಲ್ಲಿ ಪಂಪ ಕನ್ನಡ ಕವಿಕುಲಗುರು ಎಂಬ ಪ್ರಶಸ್ತಿಗೆ ಅರ್ಹನಾಗಿದ್ದಾನೆ. ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ ಎಂಬ ಕವಿ ನಾಗರಾಜನ (ಸು. 1331) ಉಕ್ತಿ ಎಂದಿಗೂ ಸಲ್ಲುವ ಮಾತಾಗಿದೆ. (ಎಂ.ವಿ.ಎಸ್.)

**ಪಟ್ಟಣಗಳು:** ಗ್ರಾಮಗಳಿಗಿಂತ ದೊಡ್ಡದಾದ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಅವುಗಳಿಗಿಂತ ಭಿನ್ನಸ್ವರೂಪದ ವಸತಿಘಟಕಗಳು ಪಟ್ಟಣಗಳು. 1971ರ ಜನಗಣತಿಯ ಸಂದರ್ಭದಲ್ಲಿ ಉಪಯೋಗಿಸಲಾದ ನಿರ್ಣಾಯಕ ಅಂಶಗಳ ಪ್ರಕಾರ ಎಲ್ಲ ದಂಡುಗಳು ಮತ್ತು ಪೌರಸಭೆಗಳಿರುವ ಊರುಗಳು, ಹಾಗೂ ಜನಸಂಖ್ಯೆ 5000 ಕ್ಕಿಂತ ಮತ್ತು ಜನಸಾಂದ್ರತೆ ಚ.ಕಿಮೀಗೆ 400 ಕ್ಕಿಂತ ಕಡಿಮೆ ಇಲ್ಲದ ಮತ್ತು ಕನಿಷ್ಠಪಕ್ಷ ಮುಕ್ಕಾಲುಪಾಲು ಪ್ರಾಯಸ್ಥ ಗಂಡಸರು ಕೃಷೀಕರ ಉದ್ಯಮಗಳಲ್ಲಿ ತೊಡಗಿರುವ ಊರುಗಳನ್ನು ಪಟ್ಟಣಗಳೆಂದು ಪರಿಗಣಿಸಲಾಗಿದೆ. ಈ ನಿರ್ಣಾಯಕಗಳೇ ಪಟ್ಟಣದ ಸ್ವರೂಪವನ್ನು ಸೂಚಿಸುತ್ತವೆ.

**ಇತಿಹಾಸ:** ಕರ್ನಾಟಕದಲ್ಲಿ ನವಶಿಲಾಯುಗ ಕಾಲದಲ್ಲಿ ಆರಂಭವಾದ ಗ್ರಾಮ ವ್ಯವಸ್ಥೆಯಿಂದ ನಗರೀಕರಣದತ್ತಣ (ಅರ್ಬನೈಸೇಷನ್) ನಡೆಯು ಬಹುಶಃ ಕ್ರಿಸ್ತಪೂರ್ವ ನೆಯ ಶತಮಾನಗಳಲ್ಲಿ ಪ್ರಾರಂಭವಾಗಿರಬೇಕೆಂಬುದಕ್ಕೆ ಚಾರಿತ್ರಿಕ ಆಧಾರಗಳು ದೊರಕುತ್ತವೆ. ಈ ನಾಡು ಮೌರ್ಯ ಸಾಮ್ರಾಜ್ಯದ ಕಕ್ಷೆಗೆ ಒಳಪಟ್ಟ ಕಾಲದಿಂದಲಾದರೂ ಈ ಪ್ರದೇಶದ ಆಡಳಿತ ಸೌಕರ್ಯಕ್ಕಾಗಿ ರಾಜ್ಯದ ಅಧಿಕಾರಿಗಳು, ಸೈನಿಕರು ಕೆಲವೆಡೆಗಳಲ್ಲಿ ನೆಲೆನಿಂತಿರಬೇಕು. ಆ ಕಾಲದಲ್ಲಿ ಹಾಗೂ ಮುಂದೆ ಕರ್ನಾಟಕ ಭಾರತ ಮತ್ತು ಇತರ ಹೊಸನಾಡುಗಳೊಡನೆ ಸಂಪರ್ಕವನ್ನು ಬೆಳೆಸಿದ್ದರಿಂದ ಕೆಲವು ಸ್ಥಳಗಳಲ್ಲಿ ವ್ಯಾಪಾರಾದಿ ಮೊದಲಾದ ಕೃಷೀತರ ಉದ್ಯೋಗಗಳಲ್ಲಿ ನಿರತರಾಗಿದ್ದ ಸ್ಥಿತಿವಂತ ಜನರು ಹಾಗೂ ಅವರ ಜೀವನ ವಿಧಾನಕ್ಕೆ ಅನುವಾಗುವಂತೆ ಇತರ ಸಹಚರ ಮತ್ತು ಅನುಚರ ವರ್ಗಗಳಿಗೆ ಸೇರಿದವರಿಂದ ಕೂಡಿದ. ಗ್ರಾಮಗಳಿಗಿಂತ ಉತ್ತಮ ನಾಗರಿಕ ಸೌಲಭ್ಯಗಳನ್ನು ಹೊಂದಿದ್ದ. ಜನವಸತಿ ಘಟಕಗಳು ಬೆಳೆದಿದ್ದರಿಂದ ಪಟ್ಟಣಗಳ ಸ್ಥಾಪನೆಯಾಯಿತು. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಮತ್ತು ರಾಯಚೂರು ಜಿಲ್ಲೆಯ ಮಸ್ಕಿ - ಇವು ಕರ್ನಾಟಕದಲ್ಲಿ ಸ್ಥಾಪಿತವಾದ ಅತ್ಯಂತ ಪ್ರಾಚೀನ ಪಟ್ಟಣಗಳೆಂದು ತೋರುತ್ತದೆ. ಇವೇ ಬಹುಶಃ ಅಶೋಕನ ಶಾಸನಗಳಲ್ಲಿ ಉಕ್ತವಾಗಿರುವ ಇಸಿಲ ಮತ್ತು ಸುವರ್ಣಗಿರಿ. ಸುವರ್ಣಗಿರಿ ಮತ್ತು ಇಸಿಲ ಪ್ರಾಂತೀಯ ಆಡಳಿತ ಕೇಂದ್ರಗಳಾಗಿದ್ದಂತೆಯೂ

ತೋರುತ್ತದೆ. ಆ ಕಾಲದಲ್ಲಿಯೇ ರಾಯಚೂರು ಜಿಲ್ಲೆಯ ಕೊಪ್ಪಳ ಮತ್ತು ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಸಹ ಪಟ್ಟಣಗಳಾಗಿ ರೂಪುಗೊಂಡಿದ್ದಂತೆ ತೋರುತ್ತದೆ. ಮುಂದೆ ಸಹಾತವಾಹನರ ಕಾಲದಲ್ಲಿ ಈ ಮೇಲಿನ ಸ್ಥಳಗಳಲ್ಲದೆ ಬೆಳಗಾಂವಿ ಜಿಲ್ಲೆಯ ವಡಗಾಂವ ಮಾಧವಪುರ, ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಗುಲ್ಬರ್ಗ ಜಿಲ್ಲೆಯ ಸನ್ನತಿ - ಈ ಸ್ಥಳಗಳು ಪಟ್ಟಣಗಳಾಗಿ ಅಭಿವೃದ್ಧಿ ಹೊಂದಿದವು. ಕಾಲಕ್ರಮೇಣ ಕನ್ನಡ ನಾಡಿನಲ್ಲಿ ಸಾಮ್ರಾಜ್ಯಗಳ ಸ್ಥಾಪನೆ, ಜನಸಂಖ್ಯೆಯ ಏರಿಕೆ, ಕೃಷಿ ವ್ಯಾಪಾರ ಉದ್ಯಮಗಳಿಂದ ಆರ್ಥಿಕ ಮುನ್ನಡೆ - ಇವು ಸಾಧಿತವಾದ್ದರಿಂದ ಅನೇಕ ರಾಜಧಾನಿಗಳೂ ಪ್ರಾಂತ್ಯ ವಿಭಾಗಗಳ ಆಡಳಿತ ಕೆದ್ರಗಳೂ ವ್ಯಾಪಾರ ಕೇಂದ್ರಗಳೂ ಬೆಳೆದುವು. ಕೆಲವು ಧಾರ್ಮಿಕ ಮತ್ತು ವಿದ್ಯಾಕೇಂದ್ರಗಳೂ ಅಭಿವೃದ್ಧಿಗಳಿಸಿದವು. ಈ ವಿವಿಧ ಕಾರಣಗಳಿಂದ ಉದ್ಭವವಾದ ಅನೇಕ ಪಟ್ಟಣಗಳ ಬಗ್ಗೆ ಶಾಸನಗಳಲ್ಲಿ ಮಾಹಿತಿ ದೊರಕುತ್ತವೆ. ಹಲಶಿ, ಉಚ್ಚಂಗಿ, ಬನವಾಸಿ, ಬಾದಾಮಿ, ಐಹೊಳೆ, ಕಿಸುವೊಳಲ್, ಪುರಿಗೆರೆ, ಮುಳಗುಂದ, ಮಳಖೇಡ, ಮಣ್ಣೆ, ತಲಕಾಡು, ಕೋಲಾರ, ಗದಗ, ಕಲ್ಯಾಣ, ದ್ವಾರಸಮುದ್ರ, ಬೆಳಗಾಂವಿ, ಕಂಪಿಲಿ, ಬೇಲೂರು, ಆರಗ, ಆಸಂದಿ, ಮಂಗಳೂರು, ಬಾರಕೂರು, ವಿಜಯನಗರ, ಕೆಳದಿ, ಬಿದನೂರು, ಶ್ರೀರಂಗಪಟ್ಟಣ, ಮೈಸೂರು, ಚಿತ್ರದುರ್ಗ, ಬೆಂಗಳೂರು, ನರಗುಂದ, ಬಳ್ಳಾರಿ, ಚಿಕ್ಕಬಳ್ಳಾಪುರ ಮೊದಲಾದವು ಹೆಸರಿಸಬಹುದುದಾದ ಐತಿಹಾಸಿಕ ಕಾಲದ ಪಟ್ಟಣಗಳಲ್ಲಿ ಕೆಲವು.

**ಇಂದಿನ ಸ್ಥಿತಿ:** ಕೈಗಾರಿಕಾ ಕ್ರಾಂತಿ ಆಧುನಿಕ ಪಟ್ಟಣಗಳ ಬೆಳವಣಿಗೆಗೆ ಪೂರಕವಾಯಿತು. ಇಪ್ಪತ್ತನೆಯ ಶತಮಾನದಲ್ಲಿ ಮೋಟಾರು ವಾಹನ, ವಿಮಾನ ಮುಂತಾದ ಹೊಸ ಸಂಚಾರಸೌಲಭ್ಯಗಳು ಕಂಡುಹಿಡಿಯಲ್ಪಟ್ಟಮೇಲಂತೂ ಪಟ್ಟಣಗಳ ಬೆಳವಣಿಗೆಗೆ ಹೊಸ ರೂಪ ಬಂತು. ವೃತ್ತಿಸಂಬಂಧವಾಗಿ ವ್ಯವಸಾಯ ಕ್ಷೇತ್ರದ ಬದಲು ವ್ಯವಸಾಯೇತರ ಕ್ಷೇತ್ರಕ್ಕೆ ದೊರಕುವ ಪ್ರಾಮುಖ್ಯತೆ ಹಾಗೂ ಸಾರಿಗೆಸಾಧನೆಗಳಲ್ಲಾದ ಸುಧಾರಣೆಯೇ ದೊಡ್ಡ ದೊಡ್ಡ ಪಟ್ಟಣಗಳ ಉದ್ಭವಕ್ಕೆ ಕಾರಣವಾಯಿತು.

ಇಪ್ಪತ್ತನೆ ಶತಮಾನದ ಆರಂಭದಲ್ಲಿ ಕರ್ನಾಟಕ ರಾಜ್ಯದ ನಗರವಾಸಿಗಳ ಸಂಖ್ಯೆ ರಾಜ್ಯ ಜನಸಂಖ್ಯೆಯ 12.6 ಶತಾಂಶದಷ್ಟಿತ್ತು. ಆದರೆ 1941 ರಿಂದೀಚೆಗೆ ರಾಜ್ಯದಲ್ಲಿ ನಗರೀಕರಣ ಗಮನಾರ್ಹವಾಗಿದೆ. 1941 ರಲ್ಲಿ ನಗರವಾಸಿಗಳ ಸಂಖ್ಯೆ 27.54 ಲಕ್ಷ ಇದ್ದದ್ದು 1951ರಲ್ಲಿ ಅದು 44.53 ಲಕ್ಷಕ್ಕೆ ಏರಿತು. ಈ ಅವಧಿಯಲ್ಲಿ ಒಟ್ಟು ಜನಸಂಖ್ಯೆ ಶೇಕಡಾ 19.36 ರಷ್ಟು ಹೆಚ್ಚಿದರೆ ನಗರವಾಸಿಗಳ ಸಂಖ್ಯೆ ಶೇಕಡಾ 61.31 ರಷ್ಟು ಹೆಚ್ಚಾಯಿತು. ಬೆಂಗಳೂರು, ಮೈಸೂರು, ಮಂಗಳೂರು, ದಾವಣಗೆರೆ, ಶಿವಮೊಗ್ಗ, ಭದ್ರಾವತಿ ಮುಂತಾದ ನಗರಗಳು ತೀವ್ರಗತಿಯಿಂದ ಬೆಳೆದವು.

1971ನೆಯ ಜನಗಣತಿಯ ಪ್ರಕಾರ ರಾಜ್ಯದ 293 ಲಕ್ಷ ಜನಸಂಖ್ಯೆಯಲ್ಲಿ ನಗರವಾಸಿಗಳ ಸಂಖ್ಯೆ 71 ಲಕ್ಷದಷ್ಟಿತ್ತು. ಅಂದರೆ ಒಟ್ಟು ಜನಸಂಖ್ಯೆಯ 24.3 ಶತಾಂಶ. ಮುಂದಿನ ಇಪ್ಪತ್ತು ವರ್ಷಗಳಲ್ಲಿ ಅಂದರೆ 2001ರಲ್ಲಿ ರಾಜ್ಯದ ಒಟ್ಟು 527 ಲಕ್ಷ ಜನಸಂಖ್ಯೆಯಲ್ಲಿ 179 ಲಕ್ಷ ಜನಸಂಖ್ಯೆ ನಗರ ವಾಸಿಗಳಾಗಿದ್ದಾಗಿದೆ. ಅಂದರೆ ಒಟ್ಟು ಜನಸಂಖ್ಯೆ ಶೇಕಡ 33.98 ರಷ್ಟು ನಗರವಾಸಿಗಳಿದ್ದಾರೆ.

2001ರ ಜನ ಗಣತಿಯ ಮೇರೆಗೆ ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಪಟ್ಟಣಗಳು 237, ಬೆಂಗಳೂರು ನಗರ ಮತ್ತು ಅದರ ನಗರ ಸಮೂಹದ ಜನಸಂಖ್ಯೆ 5,686, 844. ಈ ಜನಸಾಗರದ ಸಮೀಪಕ್ಕೂ ಬರುವ ಇತರ ಯಾವುದೇ ನಗರ ಕರ್ನಾಟಕದಲಿಲ್ಲ. 5 ಲಕ್ಷ ಜನಸಂಖ್ಯೆಗೆ ಹೆಚ್ಚಿದ್ದು 10 ಲಕ್ಷಕ್ಕೆ ಕಡಿಮೆ ಇರುವ ನಗರಗಳ ಸಂಖ್ಯೆ 3, ಅವೆಂದರೆ ಮೈಸೂರು, ಹುಬ್ಬಳ್ಳಿ, ಧಾರವಾಡ ಮತ್ತು ಮಂಗಳೂರು ಒಂದು ಲಕ್ಷದ ಮೆಲೆ ಐದು ಲಕ್ಷಗಳಿಗೆ ಒಳಪಟ್ಟಿರುವ ನಗರಗಳ ಸಂಖ್ಯೆ 20, ಒಟ್ಟು ಪಟ್ಟಣಗಳನ್ನೂ ಜನಸಂಖ್ಯೆಗೆ ಅನುಸಾರವಾಗಿ ಆರು ವರ್ಗಗಳಾಗಿ ವಿಂಗಡಿಸಲಾಗಿದೆ. ಆ ವರ್ಗಗಳಲ್ಲಿರುವ ಪಟ್ಟಣಗಳ ಸಂಖ್ಯೆ ಮತ್ತು ಪಟ್ಟಣವಾಸಿಗಳ ಸಂಖ್ಯೆಯನ್ನು (2001) ಈ ಕೆಳಗೆ ಸೂಚಿಸಲಾಗಿದೆ.

ವರ್ಗಗಳಲ್ಲಿರುವ ಪಟ್ಟಣಗಳ ಸಂಖ್ಯೆ, ಪಟ್ಟಣಾಸಿಗಳ ಸಂಖ್ಯೆಯನ್ನು ಈ ಕೆಳಗೆ ಸೂಚಿಸಲಾಗಿದೆ.

| ವರ್ಗ | ಪಟ್ಟಣಗಳು (ಜನಸಂಖ್ಯೆ ಮಿತಿ) | | ಪಟ್ಟಣವಾಸಿಗಳ ಸಂಖ್ಯೆ | ಒಟ್ಟು ಪಟ್ಟಣವಾಸಿಗಳ ಸಂಖ್ಯೆ | ಸೇಕಡ ಪ್ರಮಾಣ |
|---|---|---|---|---|---|
| 1 | 1,00,000ಕ್ಕೂ ಹೆಚ್ಚು | | 24 | 12,043,036 | -- |
| 2 | 50,000ದಿಂದ | 99,999 | 27 | 17,26,134 | |
| 3 | 20,000ದಿಂದ | 49,999 | 19 | 30,91,525 | |
| 4 | 10,000ದಿಂದ | 19,999 | 53 | 8,39,021 | |
| 5 | 50,000ದಿಂದ | 9,999 | 27 | 1,92,477 | |
| 6 | 5,000ಕ್ಕೂ ಕಡಿಮೆ | | 5 | 22,605 | |
| | ಒಟ್ಟು | | 237 | 1,79,19,858 | |

ಪಟ್ಟಣಗಳಲ್ಲಿ ನಡೆಯುವ ವಿವಿಧ ಚಟುವಟಿಕೆಗಳ ಸ್ವರೂಪವನ್ನು ಗಮನಿಸಿ ಅವನ್ನು ಸಂಸ್ಥಾ ಕೇಂದ್ರಗಳು, ವಾಣಿಜ್ಯ ಕೇಂದ್ರಗಳು, ವಿಹಾರ ಮತ್ತು ಜಾತ್ರಾಕೇಂದ್ರಗಳು, ಮಹಾನಗರಗಳು ಎಂದು ವಿಂಗಡಿಸಬಹುದು. ಯಾತ್ರಾಸ್ಥಳಗಳು, ಬಂದರುಗಳು, ದುರ್ಗಗಳು, ಯೋಜನಾ ಕೇಂದ್ರಗಳು, ಹಾಗೂ ಸೈನ್ಯಶಿಭಿರಗಳೂ ಈ ವಿಂಗಡಣೆಯಲ್ಲೇ ಸೇರುತ್ತವೆ.

ಸಂಸ್ಥಾ ಕೇಂದ್ರಗಳು ಹಿಂದೆ ದೇವಸ್ಥಾನ, ಚರ್ಚು ಮುಂತಾದ ಸಂಸ್ಥೆಗಳ ಸುತ್ತಲೂ ಗ್ರಾಮಗಳು ಮತ್ತು ಪಟ್ಟಣಗಳು ಬೆಳೆಯುತ್ತಿದ್ದುವು. ಇವುಗಳೊಂದಿಗೆ ಅರಮನೆಗಳ ಹಾಗೂ ಸರ್ಕಾರಿ ಕಚೇರಿಗಳ ಕೇಂದ್ರವಾದ ರಾಜಾಧಾನಿಯಂಥ ನಗರಗಳೂ ಬೆಳೆಯಲು ಪ್ರಾರಂಭಿಸಿದವು. ಹಾಗೆಯೇ ರೈಲ್ವೆ ಕೇಂದ್ರ, ವಿಶ್ವವಿದ್ಯಾನಿಲಯ ಮತ್ತು ವಿದ್ಯಾಸಂಸ್ಥೆಗಳು ಸಹ ಬೆಳೆದವು. ಇವುಗಳಲ್ಲಿ ಮೈಸೂರು ನಗರದ ಉದಾಹರಣೆಯನ್ನು ನಾವು ತೆಗೆದುಕೊಳ್ಳಬಹುದು. ಅರಮನೆಯ ಕೇಂದ್ರ ಮತ್ತು ರಾಜಧಾನಿಯಾಗಿ ಬೆಳೆದು, ಮುಂದಕ್ಕೆ ಈ ನಗರ ರೈಲ್ವೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಕೇಂದ್ರವಾಯಿತು. ನಗರದ ಪಶ್ಚಿಮ ಬಡಾವಣೆಗಳು ತೀವ್ರವಾಗಿ ಬೆಳೆದು ಜನಪ್ರಿಯವಾಗಲೂ ಮಾನಸಗಂಗೋತ್ರಿಯ ವಿದ್ಯಾಕೇಂದ್ರವೇ ಮೂಲಕಾರಣ. ಮತ್ತೊಂದು ಇಂಥ ಸಂಸ್ಥಾನಗರ ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದ ಕೇಂದ್ರವಲ್ಲದೆ ಜಿಲ್ಲಾ ಕೇಂದ್ರವೂ ಆಗಿರುವ ಧಾರವಾಡದ ಬೆಳವಣಿಗೆ ಈ ಸಂಸ್ಥೆಗಳನ್ನೇ ಅವಲಂಬಿಸಿದೆ. ಇದೇ ರೀತಿ ನಂಜನಗೂಡು, ಉಡುಪಿ, ಮಣಿಪಾಲ ಮುಂತಾದ ಸ್ಥಳಗಳಲ್ಲೂ ಇಂಥ ಸಂಸ್ಥೆಗಳಿಂದ ಆ ನಗರಗಳ ಬೆಳವಣಿಗೆ ಆಗುತ್ತಿರುವುದನ್ನೂ ಗಮನಿಸಬಹುದು.

ಹಲವಾರು ಕಲಾ ಮತ್ತು ಧಾರ್ಮಿಕ ಕೇಂದ್ರಗಳು ಈ ಶತಮಾನದ ಮೊದಲ ಭಾಗದಲ್ಲೇ ಪಟ್ಟಣಗಳಾಗಿ ಪರಿಗಣಿತವಾಗಿದ್ದರೂ ಅವುಗಳ ಜನಸಂಖ್ಯೆಯಲ್ಲಿ ಇಂದಿಗೂ ಗಮನಾರ್ಹ ಹೆಚ್ಚಳವಾಗಿಲ್ಲ. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯ ಜನಸಂಖ್ಯೆ 1901ರಲ್ಲಿ 2,430 ಇದ್ದಿತು. 2001ರಲ್ಲಿ ಅದರ ಜನಸಂಖ್ಯೆ 4,253 ಹೀಗಾಗಲು ಕಾರಣ ಅದಕ್ಕೆ ಪಟ್ಟಣವಾಗಿ ಬೆಳೆಯಲು ಇತರ ಅನುಕೂಲಕರ ಅಂಶಗಳಲ್ಲಿದಿರುವುದು ಇನ್ನೊಂದು ಉದಾಹರಣೆ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ.

**ವಾಣಿಜ್ಯಕೇಂದ್ರಗಳು:** ಪಟ್ಟಣಗಳ ಬೆಳವಣಿಗೆಗೆ ಹೆಚ್ಚು ಪ್ರೇರಕವಾದದ್ದು ವಾಣಿಜ್ಯ. ಜನರು ವ್ಯವಸಾಯವನ್ನೇ ಅವಲಂಬಿಸಿದ್ದ ಕಾಲದಲ್ಲಿ ಹತ್ತಾರು ಹಳ್ಳಿಗಳ ಮಧ್ಯೆ ವಾರಕ್ಕೊಮ್ಮೆ ಸಂತೆ ನಡೆಯುತ್ತಿದ್ದ ಗ್ರಾಮಗಳೂ ಮತ್ತು ಸುತ್ತಮುತ್ತಲ ನೂರಾರು ಗ್ರಾಮಗಳಿಗೂ ಪಟ್ಟಣಗಳಿಗೂ ಸಂಬಂಧ ಕಲ್ಪಿಸಿ ಸಾಮಾನುಗಳ ಪೂರೈಕೆಗೆ

ಅನುಕೂಲವಾಗುವಂಥ ಮಂಡಿ ಪಟ್ಟಣಗಳು ಬೆಳೆದವು. ಇವಲ್ಲದೆ ಕೆಲವು ಭಾರೀ ನಗರಗಳೂ ಪ್ರಾಂತಮಟ್ಟದಲ್ಲಿ ಬೆಳೆದು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತ್ಯಕ್ಕೆ ಸಾಮಾನುಗಳನ್ನು ಒದಗಿಸುವ ವಾಣಿಜ್ಯ ಸಂಸ್ಥೆಗಳಿಂದ ಕೂಡಿದ್ದುವು. ಇವುಗಳಲ್ಲಿ ಬಂದರೂಗಳೂ ಭಾರೀ ಸಂತೇಪೇಟೆಗಳನ್ನೊಳಗೊಂಡ ಪಟ್ಟಣಗಳೂ ಮುಖ್ಯವಾದವು. ಸಂಪರ್ಕ ಮಾರ್ಗಗಳು ಸಂಧಿಸುವ ಮತ್ತು ವ್ಯವಸಾಯ ಪ್ರಾಧಾನ್ಯತೆಯ ಸ್ಥಳಗಳಲ್ಲಿ ವಾಣಿಜ್ಯ ಕೇಂದ್ರಗಳು ಬೆಳೆದವು. ಬೆಂಗಳೂರು, ದಾವಣಗೆರೆ, ಗದಗ, ಹುಬ್ಬಳ್ಳಿ, ರಾಯಚೂರು, ಗಂಗಾವತಿ, ತಿಪಟೂರು, ಅರಸೀಕೆರೆ, ಚಿಂತಾಮಣಿ ಮುಂತಾದವು ಇಂಥ ಕೇಂದ್ರಗಳಿಗೆ ಉದಾಹರಣೆಗಳು. ಸಾಮಾನ್ಯವಾಗಿ ಎಲ್ಲ ಪಟ್ಟಣಗಳಲ್ಲಿ ವಾಣಿಜ್ಯವೇ ಪ್ರಧಾನವಾಗಿರುವುದಿರಂದ ಅಂಥವನ್ನು ವಾಣಿಜ್ಯ ಕೇಂದ್ರಗಳೆಂದು ಕರೆಯುಬಹುದು.

**ಕೈಗಾರಿಕಾಕೇಂದ್ರಗಳು:** ಕೈಗಾರಿಕಾ ಕ್ರಾಂತಿಯಾದ ಮೇಲೆ ದೊಡ್ಡ ದೊಡ್ಡ ಉದ್ದಿಮೆಗಳು ಸ್ಥಾಪನೆಯಾಗುತ್ತ ಬಂದವು. ಕೈಗಾರಿಕೆಗಳು ಸ್ಥಾಪನೆಯಾದಂತೆಲ್ಲ ಪಟ್ಟಣಗಳು ರಭಸದಿಂದ ಬೆಳೆಯಲು ಪೂರಕವಾಯಿತು. ಮೊದಲಮೊದಲು ವಾಣಿಜ್ಯ ಕೇಂದ್ರಗಳಲ್ಲಿ ಕೈಗಾರಿಕೆಗಳು ಸ್ಥಾಪಿತವಾಗಲಾರಂಭಿಸಿ, ಕ್ರಮೇಣ ಅವು ಕೈಗಾರಿಕಾ ನಗರಗಳಾಗಿ ಪರಿವರ್ತನೆಗೊಳ್ಳುವುದು ಸಾಮಾಯ ಪ್ರವೃತ್ತಿ. ಮಂಗಳೂರು, ಹುಬ್ಬಳ್ಳಿ, ದಾವಣಗೆರೆ, ಬಾಗಲಕೋಟೆ, ಹಾಸನ ಮುಂತಾದ ನಗರಗಳು ಕೈಗಾರಿಕಾ ಕೇಂದ್ರ ಸ್ವರೂಪವನ್ನು ಪಡೆಯುತ್ತಿರುವುದನ್ನು ಗಮನಿಸಬಹುದು. ಕೆಲವು ಕಡೆ ಕಚ್ಚಾಪದಾರ್ಥಗಳು ಸಿಗುವುದರಿಂದ ಕೈಗಾರಿಕೆಗಳು ನೆಲಸಿ ಹೊಸ ಪಟ್ಟಣ ಹುಟ್ಟಿಕೊಂಡವು. ಸಿಮೆಂಟ್ ಮತ್ತು ಕಾಗದ ಕಾರ್ಖಾನೆಗಳಿಂದಾಗಿ ಭದ್ರಾವತಿ ಕೈಗಾರಿಕಾ ನಗರವಾಗಿ ಬೆಳೆದಿದೆ. ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಚಿನ್ನದ ಗಣಿ ಕೆಲಸಕ್ಕಾಗಿಯೇ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯ ನಗರ ಬೆಳೆಯಿತು. ಇತ್ತೀಚೆಗೆ ದಾಂಡೇಲಿ ಕೂಡ ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ.

**ವಿಹಾರ ಮತ್ತು ಜಾತ್ರಾ ಕೇಂದ್ರಗಳು:** ಇಂಥ ಕೇಂದ್ರಗಳೂ ಪಟ್ಟಣಗಳಾಗಿ ಬೆಳೆಯುವುದುಂಟು. ಸವದತ್ತಿಯ ಎಲ್ಲಮ್ಮನ ಗುಡ್ಡ, ನಾಯಕನ ಹಟ್ಟಿ - ಇವು ಉದಾಹರಣೆಗಳು, ತೀರ್ಥಹಳ್ಳಿ, ಉಡುಪಿ, ಗುಲ್ಬರ್ಗ ಮುಂತಾದವು ಮೂಲತಃ ಜಾತ್ರಾಕೇಂದ್ರಗಳೇ. ಮಹದೇಶ್ವರ ಬೆಟ್ಟ, ಚುಂಚನ ಕಟ್ಟೆ, ಗೋಕರ್ಣ, ಸುಬ್ರಹ್ಮಣ್ಯ, ಬೃಂದಾವನ, ಜೋಗ, ಕೆಮ್ಮಣ್ಣುಗುಂಡಿ ಗಿರಿಧಾಮ ಮೊದಲಾದ ಜಾತ್ರಾ ಮತ್ತು ವಿಹಾರಕೇಂದ್ರಗಳೂ ಪಟ್ಟಣಗಳಾಗಿ ಬೆಲೆಯುವ ಸೂಚನೆಗಳನ್ನು ತೋರುತ್ತಿವೆ.

**ಮಹಾನಗರ:** ಹತ್ತು ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರಗಳನ್ನು ಮಹಾನಗರ ಎಂದು ಕರೆಯುವುದು ವಾಡಿಕೆ. ಬೆಂಗಳೂರು ನಮ್ಮ ರಾಜ್ಯದ ಏಕಮೇವ ಮಹಾನಗರ. 1971ರ 16.54 ಲಕ್ಷ ಜನವಸತಿಯಿಂದ ಬೆಂಗಳೂರು ಈಗ 56,86,844 (2001) ಜನಸಂಖ್ಯೆ ಹೊಂದಿದ್ದು ಈ ಮಹಾನಗರದ ಭಾರತ ಮಹಾನಗರಗಳಲ್ಲಿ ನೆಯ ಸ್ಥಾನ ಹೊಂದಿದೆ. ಇದು ಪ್ರಪಂಚದ ತ್ವರಿತವಾಗಿ ಬೆಳೆಯುತ್ತಿರುವ ನಗರಗಳಲ್ಲೊಂದು.

**ನಗರಯೋಜನೆ:** ಜನಸಂಖ್ಯೆ ಹೆಚ್ಚಿದಂತೆ ನಗರಗಳಲ್ಲಿ ಮನೆಗಳ ಅಭಾವ, ಕುಡಿಯುವ ನೀರಿನ ಕೊರತೆ, ಸಾರಿಗೆ ಸಂಪರ್ಕದಲ್ಲಿ ಅವ್ಯವಸ್ಥೆ ಮತ್ತು ಕೊಳಚೆ ಪ್ರದೇಶಗಳು ಕಂಡುಬರುವುದು ಸ್ವಾಭಾವಿಕ. ರಸ್ತೆಗಳ ಉದ್ದಕ್ಕೂ ಕೈಗಾರಿಕೆಗಳ ಸ್ಥಾಪನೆ, ಅವುಗಳ ಸುತ್ತಲೂ ಮನೆ ಕಟ್ಟುವುದು, ವಾಸದ ಮನೆಗಳ ಮಧ್ಯೆ ಕೈಗಾರಿಕಾ - ವಾಣಿಜ್ಯ ಚಟುವಟಿಕೆಗಳ ಸ್ಥಾಪನೆ ಮೊದಲಾವದು ಹೆಚ್ಚಿ ನಗರಗಳ ನೈರ್ಮಲ್ಯ ಹಾಗೂ ವಾತಾವರಣ ಕೆಡುತ್ತದೆ. ಹೀಗೆ ನಗರಗಳ ನೈರ್ಮಲ್ಯ ಮತ್ತು ವಾತಾವರಣವು ಕೆಡದಂತೆ ಸೂಕ್ತ ಕ್ರಮಗಳನ್ನು ಕೈಗೊಂಡು ನಗರಗಳ ಬೆಳವಣಿಗೆಯನ್ನು ರೂಪಿಸಿ ನಿರ್ದೇಶಿಸುವ ವಿಧಾನವನ್ನು ನಗರ ಯೋಜನೆ ಎಂದು ಕರೆಯುತ್ತಾರೆ. ನಗರಗಳ ಸ್ಥೂಲ ರೂಪವನ್ನು ಸೂಚಿಸುವ ರಸ್ತೆಗಲು, ಕಟ್ಟಡಗಳು, ಸಾರ್ವಜನಿಕ ಸೌಲಭ್ಯಗಳು ಮುಂತಾದವುಗಳನ್ನು ಒದಗಿಸುವದಕ್ಕಷ್ಟೇ ಇಂಥ ಯೋಜನೆ ಸೀಮಿತಗೊಂಡಿಲ್ಲ. ನಾಗರಿಕರ ಆಸೆ ಆಕಾಂಕ್ಷೆಗಳನ್ನು ನೆರವೇರಿಸುವ ಮತ್ತು ಅವರ ಆರ್ಥಿಕ ಪ್ರಗತಿಗೆ ಬೇಕಾಗುವ ಕೈಗಾರಿಕೆ, ವಾಣಿಜ್ಯ ಇತ್ಯಾದಿಗಳ ಬೆಳವಣಿಗೆಗೆ ಸಹಾಯಕವಾಗುವ ಚಟುವಟಿಕೆಗಳಿಗೂ ನಗರ ಯೋಜನೆ ಗಮನಕೊಡುತ್ತದೆ. ಜನರು ತುಂಬು ಜೀವನ ನಡೆಸಿ ಸುಖ ಸಂತೋಷದಿಂದ ವಾಸಿಸಲು ಒಳ್ಳೆಯ ವಾತಾವರಣವನ್ನು ಕಲ್ಪಿಸುವುದೇ ನಗರ ಯೋಜನೆಯ ಮುಖ್ಯ ಗುರಿ.

ನಗರ ಯೋಜನೆಯನ್ನು ಕೈಗೊಳ್ಳುವ ಮೊದಲು ಅನೇಕ ವಿಷಯಗಳನನು ಸಂಗ್ರಹಿಸಬೇಕಾಗುವುದು. ಮುಖ್ಯವಾಗಿ ಮೇಲ್ಮೈ ಲಕ್ಷಣ, ಪ್ರಚಲಿತ ಭೂ ಉಪಯೋಗ, ಕಟ್ಟಡಗಳು ಇರುವ ಸ್ಥಿತಿ. ಜನಗಣತಿ ಮತ್ತು ಜನಸಾಂದ್ರತೆ, ಸಾಮಾಜಿಕ ಆರ್ಥಿಕ ಸ್ಥಿತಿ. ಸಂಚಾರಸೌಲಭ್ಯಗಳು ಸಾರ್ವಜನಿಕ ಅವಶ್ಯಕತೆಗಳು, ವಸತಿ ಸಮಸ್ಯೆ, ಕ್ರೀಡಾ ಮತ್ತು ವಿಹಾರ ಸೌಲಭ್ಯ, ವ್ಯಾಪಾರ ಮತ್ತು ವಾಣಿಜ್ಯ, ಕೈಗಾರಿಕೆ, ಸಾರ್ವಜನಿಕ ಉಪಯುಕ್ತ ಕಟ್ಟಡಗಳು ಇತ್ಯಾದಿಗಳ ಬಗ್ಗೆ ಸಮೀಕ್ಷೆ ನಡೆಸಬೇಕಾಗುತ್ತದೆ. ಈ ಸಮೀಕ್ಷೆಗಳಿಂದ ವಿವಿರಗಳನ್ನೆಲ್ಲ ಕ್ರೋಢೀಕರಿಸಿ ಇಂದಿನ ಸಮಸ್ಯೆಗಳನ್ನೂ ಮುಂದಿನ ಆವಶ್ಯಕತೆಗಳನ್ನೂ ಕಂಡುಹಿಡಿಯಬೇಕು. ಮುಂಬರುವ 20 30 ವರ್ಷಗಳಲ್ಲಿ ನಗರದ ಜನಸಂಖ್ಯೆ ಮತ್ತು ಭವಿಷ್ಯತ್ತಿನ ಈ ಜನಸಂಖ್ಯೆಗೆ ಬೇಕಾಗುವ ಜಮೀನಿನ ವಿಸ್ತರಣೆಯ ಲೆಕ್ಕಹಾಕಬೇಕು. ವಾಸಸ್ಥಳ, ಕೈಗಾರಿಕಾ ಪ್ರದೇಶ, ವಾಣಿಜ್ಯ ಪ್ರದೇಶ, ಸಾರ್ವಜನಿಕ ಉಪಯೋಗ, ಉದ್ಯಾನ, ಕ್ರೀಡಾಂಗಣ ಇತ್ಯಾದಿ ವಿವಿದ ಉದ್ದೇಶಗಳಿಗೆ ಬೇಕಾಗಬಹುದಾದ ಭೂ ಉಪಯೋಗದ ವಲಯಗಳನ್ನು ಸೂಕ್ತಸ್ಥಳದಲ್ಲಿ ಸೂಚಿಸಬೇಕು. ಯೋಗ್ಯವಾದ ಸಂಚಾರ ವ್ಯವಸ್ಥೆಯನ್ನೂ ರೂಪಿಸಬೇಕಾಗುತ್ತದೆ. ನಗರ ಬೆಳವಣಿಗೆಗಾಗಿ ತಯಾರಿಸುವ ಬೃಹತ್ ಯೋಜನೆಯಲ್ಲಿ ಮುಂದೆ ಕೈಕೊಳ್ಳಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಶಿಫಾರಸುಗಳನ್ನು ನಮೂದಿಸಿರಬೇಕು. ಅಲ್ಲದೆ ಭೂ ಉಪಯೋಗದ ಆಯಾ ವಲಯಗಳಲ್ಲಿ ಅಭಿವೃದ್ಧಿಯನ್ನು ನಿಯಂತ್ರಿಸಲು ವಲಯ ನಿಯಂತ್ರಣ ಅಧಿನಿಯಮಗಳನ್ನು ರಚಿಸಬೇಕು.

ಕರ್ನಾಟಕ ರಾಜ್ಯದಲ್ಲಿ ಈ ಹಿಂದೆ ನಗರಯೋಜನೆಯನ್ನು ವಾಸ್ತುಶಿಲ್ಪಿಗಳು ನೋಡಿಕೊಳ್ಳುತ್ತಿದ್ದರು. 1959ರಲ್ಲಿ ಪ್ರತ್ಯೇಕ ನಗರಯೋಜನಾ ಇಲಾಖೆ ಅಸ್ತಿತ್ವಕ್ಕೆ ಬಂದು 3ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಲಾಖೆಯ 10 ಘಟಕಗಳು, 4ನೆಯ ಪಂಚಾವಾರ್ಷಿಕ ಯೋಜನೆಯಲ್ಲಿ 5 ಘಟಗಳು ಹೀಗೆ ಎಲ್ಲ ಜಿಲ್ಲೆಗಳಲ್ಲೂ ಸ್ಥಾಪಿತವಾದವು. ಪ್ರಸ್ತುತ ಇಲಾಖೆಯ ಕೇಂದ್ರ ಬೆಂಗಳೂರಿನಲ್ಲಿದ್ದು ಪ್ರತಿ ಜಿಲ್ಲೆಯಲ್ಲಿ ಇಲಾಖೆಯ ಶಾಖೆಗಳಿವೆ. ಇವು ನಗರಯೋಜನಾ ಘಟಕಗಳಾಗಿರುವುದಲ್ಲದೆ ಪ್ರಾದೇಶಿಕ ಯೋಜನಾ ಘಟಕಗಳೂ ಆಗಿವೆ.

ನಾಗರಿಕ ಹಿತಸಾಧನೆ ನಗರ ಯೋಜನೆಗಳ ಅಂತಿಮ ಗುರಿಯಾದ್ದರಿಂದ ಈ ಯೋಜನೆಗಳಿಗೆ ಅನುಗುಣವಾಗಿ ವ್ಯಕ್ತಿಯು ತನನ ಜಮೀನನು ಉಪಯೋಗಿಸುವ ಹಕ್ಕಿನ ಮೇಲೆ ಕೆಲಮಟ್ಟಿಗೆ ನಿರ್ಬಂಧ ವಿಧಿಸಬೇಕಾಗುತ್ತದೆ. ಆದಕಾರಣ ಯೋಜನಾ ಸಂಸ್ಥೆಗಳಿಗೆ ಶಾಸನ ಮುಖೇನ ಸಾಕಷ್ಟು ಅಧಿಕಾರಗಳನ್ನು ವಹಿಸಿಕೊಡುವುದು ಅವಶ್ಯ. 1961ರಲ್ಲಿ ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ವ್ಯಾಪಕ ಶಾಸನವೊಂದನ್ನು ಸಿದ್ಧಗೊಳಿಸಿದ ಕರ್ನಾಟಕ ಈ ದಿಶೆಯಲ್ಲಿ ಪ್ರಥಮ ಹೆಜ್ಜೆಯಿಟ್ಟು ರಾಜ್ಯ. ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ಕಾನೂನು ಎಂಬ ಈ ಅಧಿನಿಯಮ 1965ನೆಯ ಜನವರಿ 15ರಿಂದ ಜಾರಿಗೆ ಬಂತು. ಈ ಕಾಯಿದೆಯ ರೀತ್ಯಾ 'ರಾಜ್ಯ ನಗರಯೋಜನಾ ಮಂಡಲಿ'ಯನ್ನೂ ಮತ್ತು ಅನೇಕ ಪ್ರದೇಶಗಳಿಗೆ ಯೋಜನಾ ಪ್ರಾಥಿಕಾರ ವ್ಯವಸ್ಥೆಗಳನ್ನೂ ನಿರ್ಮಿಸಲಾಗಿದೆ. ರಾಜ್ಯ ನಗರಯೋಜನಾ ಮಂಡಲಿಯು ಯೋಜನೆ ಮತ್ತು ಅಭಿವೃದ್ಧಿಯನ್ನು ಕುರಿತು ಮತ್ತು ಇದಕ್ಕೆ ಸಂಬಂಧಪಟ್ಟ ಕಾರ್ಯನೀತಿ ಮತ್ತು ಸೂತ್ರಗಳ ವಿಚಾರವಾಗಿ ಸರ್ಕಾರಕ್ಕೂ ಯೋಜನಾ ಪ್ರಾಧೀಕಾರ ವ್ಯವಸ್ಥೆಗಳಿಗೂ ಸಲಹೆ ನೀಡುವ ರಾಜ್ಯಮಟ್ಟದ ಸಂಸ್ಥೆಯಾಗಿದೆ. ಯೋಜನಾ ಪ್ರಾಧಿಕಾರ ವ್ಯವಸ್ಥೆಗಳು ಆಯಾ ಪ್ರದೇಶಕ್ಕೆ ಸಂಬಂಧಪಟ್ಟ ಯಾವುದೇ ಅಭಿವೃದ್ಧಿ ಯೋಜನೆಯನ್ನು ಮತ್ತು

ಕಾರ್ಯಕ್ರಮಗಳನ್ನು ಪರಿಶೀಲಿಸಿ ಅಂತಿಮ ರೂಪರೇಖೆ ತಯಾರಿಸಲು ರಚಿಸಲ್ಪಟ್ಟ ಸ್ವತಂತ್ರ ಸಂಸ್ಥೆಗಳು.

ಸಂಬಂಧಪಟ್ಟ ನಗರ, ಪಟ್ಟಣ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನೊಳಗೊಂಡು ಅಭಿವೃದ್ದಿಗೊಳಿಸಬೇಕಾಗಿರುವ ಸ್ಥಳೀಯ ಯೋಜನಾ ಪ್ರದೇಶವನ್ನು ಶಾಸನಬದ್ದವಾಗಿ ನಿರ್ಧರಿಸಿ ಯೋಜನಾ ಪ್ರಾಧಿಕಾರ ವ್ಯವಸ್ಥೆಯನ್ನು ನೇಣಿಸಬೇಕಾಗುತ್ತದೆ. ಶೀಘ್ರುವಾಗಿ ಬೆಳೆಯುತ್ತಿರುವ ಕೆಳಕಂಡ ಪ್ರದೇಶಗಳಿಗೆ ಇಂಥ ಪ್ರಾಧಿಕಾರ ವ್ಯವಸ್ಥೆಗಳನ್ನು ರಚಿಸಲಾಗಿದೆ. (1) ಬೆಂಗಳೂರು ಮಹಾನಗರ, (2) ಮೈಸೂರು, (3) ಮಂಗಳೂರು, (4) ಹುಬ್ಬಳ್ಳಿ-ಧಾರವಾಡ, (5) ಬೆಳಗಾಂವಿ, (6) ಗುಲ್ಬರ್ಗ, (7) ದಾಂಡೇಲಿ ಪ್ರದೇಶ, (8) ಶಿವಮೊಗ್ಗ-ಭದ್ರಾವತಿ ಪ್ರದೇಶ, (9) ದಾವಣಗೆರೆ, (10) ಕೋಲಾರ ಚಿನ್ನದ ಗಣಿ ಪ್ರದೇಶ, (11) ವಿಜಯನಗರ ಉಕ್ಕು ಕಾರ್ಖಾನೆ ಪ್ರದೇಶ.

ಇವುಗಳಲ್ಲದೆ ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆ ಇರುವ ಪ್ರತಿಯೊಂದು ನಗರಕ್ಕೂ ನಗರಾಭಿವದ್ಧಿ ಸಮಿತಿ ರಚಿಸಿವ ಕಾರ್ಯನೀತಿಯನ್ನು ಸರ್ಕಾರ ಕೈಗೊಂಡಿದೆ. ಇದರ ಪರಿಣಾಮವಾಗಿ ರಾಜ್ಯದ ಇನ್ನುಳಿದ ಜಿಲ್ಲಾ ಕೇಂದ್ರಗಳಿಗೂ ಹಾಗೂ 50 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಿರುವ ನಗರ ಪ್ರದೇಶಗಳಿಗೂ ಯೋಜನಾಪ್ರಾಧಿಕಾರಗಳನ್ನು ಹಂತ ಹಂತವಾಗಿ ರಚಿಸಲಾಗುತ್ತದೆ. ನಗರಯೋಜನೆ ಇಲಾಖೆಯು ಯೋಜನಾ ಪ್ರಾಧಿಕಾರ ವ್ಯವಸ್ಥೆಗಳಿಗೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವ ಹಾಗೂ ಮುಂದಿನ ಕಾರ್ಯಕ್ರಮಗಳನ್ನು ನಿರ್ವಹಿಸುವ ಕೆಲಸದಲ್ಲಿ ನೆರವು ನೀಡುತ್ತದೆ.

ಯಾವುದೆ ಪ್ರದೇಶಕ್ಕೆ ಸಂಬಂಧಪಟ್ಟ ಸಮಗ್ರ ಸವಿವರ ಅಭಿವೃದ್ಧಿ ಯೋಜನೆಯನ್ನು ಮೂರು ಹಂತಗಳಲ್ಲಿ ತಯಾರಿಸಲಾಗುತ್ತದೆ. ಯೋಜನಾ ಪ್ರದೇಶಕ್ಕೊಳಪಟ್ಟ ಭೂಮಿಯ ಉಪಯೋಗವನ್ನು ಪೂರ್ವಭಾವಿಯಾಗಿ ನಿಯಂತ್ರಿಸುವ ಮತ್ತು ಕ್ರಮಬದ್ಧಗೊಳಿಸುವ ಪ್ರಾರಂಭಿಕ ಅಥವಾ ಸ್ಥೂಲ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದೇ ಪ್ರಥಮ ಹಂತ. ಆ ಬಳಿಕ ಸನಿಸ್ತಾರ ಭೂ ಬಳಕೆಯನ್ನು ಸೂಚಿಸುವ ಹಾಗೂ ಮುಂದಕ್ಕೆ ಕೈಗೊಳ್ಳಬೇಕಾಗಾದ ಅಭಿವೃದ್ಧಿಗಳ, ಸುಧಾರಣೆಗಳ ವಿವರಣೆಗಳನ್ನೊಳಗೊಂಡ ವ್ಯಾಪಕ ಅಭಿವೃದ್ಧಿ ಯೋಜನೆ ತಯಾರಿಸುವುದು ಎರಡನೆಯ ಹಂತ. ವ್ಯಾಪಕ ಅಭಿವೃದ್ಧಿ ಯೋಜನೆಯಲ್ಲಿ ಒಳಗೊಂಡಿರುವ ವಿವಿಧ ಅಭಿವೃದ್ಧಿ ಸೂಚನೆಗಳನ್ನು ಕಾರ್ಯಗತಗೊಳಿಸುವ ಉದ್ದೇಶದ ಸಲುವಾಗಿ ನಗರದ ಬೇರೆ ಬೇರೆ ಭಾಗಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ತಯಾರಿಸುವದೇ ಕೊನೆಯ ಹಂತ.

ಈಗಾಗಲೇ ಬೆಂಗಳೂರು ಮಹಾನಗರ, ಮೈಸೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ, ಬೆಳಗಾಂವಿ, ದಾಂಡೇಲಿ ಪ್ರದೇಶ, ಗುಲ್ಬರ್ಗ, ಶಿವಮೊಗ್ಗ ಭದ್ರವಾತಿ ಪ್ರದೇಶಗಳ ಸ್ಥೂಲ ಅಭಿವೃದ್ಧಿ ಯೋಜನೆಗಳೂ ಸಾಸನಾನುಬದ್ಧವಾಗಿ ಸರ್ಕಾರದ ಮನ್ನಣೆ ಪಡೆದಿದ್ದು ಅವುಗಳನ್ನು ಜಾರಿಯಲ್ಲಿ ತರಲಾಗಿದೆ. ದಾವಣಗೆರೆ ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳಿಗೆ ಸ್ಥೂಲಾಭಿವೃದ್ಧಿ ಯೋಜನೆಗಳು ಸಿದ್ಧವಾಗಿವೆ. ಅಲ್ಲದೆ ಇವೆಲ್ಲ ಪ್ರದೆಶಗಳ ವ್ಯಾಪಾಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದರ ಪ್ರಗತಿ ವಿವಿಧ ಘಟ್ಟಗಳಲ್ಲಿವೆ.

ಯೋಜನಾ ಪ್ರಾಧಿಕಾರ ವ್ಯವಸ್ಥೆಗಳನ್ನು ನಿಯಮಿಸದ ಇನ್ನುಳಿದ ನಗರಗಳ ಯೊಜನೆ ಅಭಿವೃದ್ಧಿಯನ್ನೂ ಸಾಧಿಸಲು ಬೇರೆ ಬೇರೆ ನಗರ ಪ್ರದೇಶಗಳ, ಪ್ರವಾಸಿ ಕೇಂದ್ರಗಳ, ಯಾತ್ರಾಕ್ಷೇತ್ರಗಳ, ಗಿರಿಧಾಮಗಳ, ಉಪನಗುಗಳ ಸಮೀಕ್ಷೆಯನ್ನು ಕೈಕೊಂಡು ಅವಶ್ಯವಿರುವ ಅಭಿವೃದ್ಧಿ ಯೋಜನೆಗಳನ್ನೂ ನಗರ ಬಡಾವಣೆ ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನೂ ಸಿದ್ಧಪಡಿಸಲಾಗುತ್ತಿದೆ. ಈಗಾಗಲೇ ರಾಜ್ಯದ 30 ನಗರಗಳಿಗೆ ಇಂಥ ಕರಡು ಅಭಿವೃದ್ಧಿ ಯೋಜನೆಗಳು ಸಿದ್ಧವಾಗಿವೆ. ನಗರ ಯೋಜನಾ ಸಮಿತಿಗಳು ರಚಿನೆಯಾಗಿವೆ. ಅಲ್ಲದೆ ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಮಂಡಳಿಗಳು, ರಾಜ್ಯಗೃಹನಿರ್ಮಾಣಮಂಡಳಿ, ಗೃಹನಿರ್ಮಾಮ ಸಹಕಾರ ಸಂಸ್ಥೆಗಳು ಮತ್ತು ಇತರ ಅಭಿವೃದ್ಧಿ ಸಂಸ್ಥೆಗಳು ಸಿದ್ಧಗೊಳಿಸುವ ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆ.

ಪಟ್ಟಣ ಪ್ರದೇಶದಲ್ಲಿ ಮುಖ್ಯವಾಗಿ ಮಹಾನಗರದಲ್ಲಿ ಸಂಚಾರ ಸಾರಿಗೆಯ ಪ್ರಾಧಾನ್ಯತೆಯು ಹೆಚ್ಚಿರುತ್ತವೆ. ಬೆಂಗಳೂರು ಮಹಾನಗರದಲ್ಲಿ ಅನೇಕ ಸಂಚಾರ ಸಮಸ್ಯೆಗಳನ್ನುದುರಿಸಬೇಕಾಗುತ್ತದೆ. ಈ ಸಮಸ್ಯೆಗಲನ್ನು ಅರಿತು ಕೊಂಡು ಅವುಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ವ್ಯಾಪಕವಾದ ಸಂಚಾರ ಸಾರಿಗೆ ಅಧ್ಯಯನವನ್ನು ಕೈಕೊಂಡು ವಿವರವಾದ ವರದಿಗಳನ್ನು ತಯಾರಿಸಲಾಗಿದೆ. ಇದರ ಫಲವಾಗಿ ಮಹಾನಗರದ ಅನೇಕ ಕಡೆ ಫ್ಲೈಓವರ್‌ಗಳು, ವರ್ತುಲ ರಸ್ತೆಗಳು ರಚನೆಯಾಗಿವೆ. ಮೈಸೂರು ನಗರದಲ್ಲೂ ವರ್ತುಲ ರಸ್ತೆ ನಿರ್ಮಾಣವಾಗುತ್ತಿದೆ. ದಾಂಡೇಲಿ ಸಂಪನ್ಮೂಲ ಪ್ರದೇಶ ಮತ್ತು ತುಂಗಭದ್ರಾ ನದೀಕಮಿವೆ ಪ್ರದೇಶಕ್ಕೂ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಗೊಲಿಸಲಾಗಿದೆ. (ಕೆ.ಎಸ್.ಆರ್.ಎ.)

**ಪಟ್ಟದಕಲ್ಲು:** ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಪೂರ್ವಕ್ಕೆ 22 ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಎಡದಡದಲ್ಲಿರುವ ಗ್ರಾಮ. ಹಿಂದೆ ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಪ್ರಸಿದ್ಧವಾಗಿದ್ದ ಐತಿಹಾಸಿಕ ಸ್ಥಳ. ಇಲ್ಲಿರುವ ಬಾದಾಮಿಯ ಚಳುಕ್ಯರ ಕಾಲದ ದೇವಾಲಯಗಳಿಂದ ಈಗ ಪ್ರಾಮುಖ್ಯತೆ ಪಡೆದಿದ್ದು ಪ್ರವಾಸೀಕೇಂದ್ರವಾಗಿ ಬೆಳೆಯುತ್ತಿದೆ. ಯುನೆಸ್ಕೊ ಇದನ್ನು ಐತಿಹಾಸಿಕ ಸ್ಮಾರಕವೆಂದು ಘೋಷಿಸಿದೆ. ಇಲ್ಲಿಗೆ ಬಾದಾಮಿ ಮತ್ತು ಐಹೊಳೆಗಳಿಂದ ಉತ್ತಮ ಮಾರ್ಗ ಸಂಪರ್ಕವಿದೆ. (ಡಿ.ಎಸ್.ಜೆ.)

ಪಟ್ಟದಕಲ್ಲಿನ ಪ್ರದೇಶ ಪ್ರಾಗಿತಿಹಾಸದ ಕಾಲದಿಂದಲೂ ಜನವಸತಿಯುಳ್ಳದ್ದಾಗಿತ್ತು. ಇಲ್ಲಿನ ಮಲಪ್ರಭಾನದಿಯ ದಂಡೆಯಲ್ಲಿ ಹಳೆಯ ಶಿಲಾಯುಗದ ಶಿಲಾಯುಧಗಳು ದೊರಕುವುದುಂಟು. ಈ ಗ್ರಾಮಕ್ಕೆ ಒಂದು ಕಿಮೀ. ಪಶ್ಚಿಮದಲ್ಲಿ ಬಾಚನಗುಡ್ಡ ಗ್ರಾಮದ ಬಳಿ ಬೃಹತ್ ಶಿಲಾಸಮಾಧಿಗಳೂ ಅಲ್ಲಿಂದ ಸ್ವಲ್ಪ ದೂರದಲ್ಲಿ ಆದಿಚಾರಿತ್ರಿಕ ಕಾಲದ ಒಂದು ನೆಲೆಯೂ ಬೆಳಕಿಗೆ ಬಂದಿವೆ. ಚಳುಕ್ಯ ಪೂರ್ವ (ಬಹುಶಃ ಸಾತವಾಹನ) ಕಾಲಕ್ಕೆ ಸಂಬಂಧಿಸಿದ ಕೆಲವು ಇಟ್ಟಿಗೆಯ ಕಟ್ಟಡಗಳ ಅವಶೇಷಗಳೂ ಪಟ್ಟದಕಲ್ಲಿನಲ್ಲಿ ದೊರಕಿವೆ. ಸಂಗಮೇಶ್ವರ ದೇವಾಲಯ ಮತ್ತು ಜೈನದೇವಾಲಯದ ಬಳಿಯಲ್ಲಿ ಇತ್ತೀಚೆಗೆ ನಡೆಸಿದ ಅಗೆತಗಳಿಂದ ಈ ಕಟ್ಟಡಗಳು ಬೆಳಕಿಗೆ ಬಂದುವು. ಕ್ರಿಶ. 2ನೆಯ ಶತಮಾನದಲ್ಲಿದ್ದ ಗ್ರೀಕ್ ಭೂಗೋಳಕಾರ ಟಾಲೆಮಿ ವ್ಯಾಪಾರ ಸ್ಥಳಗಳಲ್ಲಿ ಒಂದೊಂದು ಹೆಸರಿಸಿರುವ ಪೆತರ್ಗಲ್ ಈ ಪಟ್ಟದ ಕಲ್ಲು ಎಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ.

ಪಟ್ಟದಕಲ್ಲು ವಿಶೇಷ ಪ್ರಾಮುಖ್ಯತೆಯನ್ನು ಪಡೆದದ್ದು ಬಾದಾಮಿಯ ಚಳುಕ್ಯರ ಕಾಲದಲ್ಲಿ; ಅದರಲ್ಲೂ 7-8ನೆಯ ಶತಮಾನಗಳಲ್ಲಿ, ಚಳುಕ್ಯ ವಿನಯಾದಿತ್ಯನ ಒಂದು ಶಾಸನ ಇದನ್ನು ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಕರೆದಿದೆ. ಈ ಪ್ರದೇಶದ ಸುತ್ತ ನಸುಗೆಂಪು ಬಣ್ಣದ ಕಲ್ಲುಗುಡ್ಡಗಳು ಇರುವುದರಿಂದ ಕಿಸುವೊಳಲ್ ಎಂದೂ ಚಳುಕ್ಯ ಸಾಮ್ರಾಟರು ಇಲ್ಲಿ ತಮ್ಮ ಪಟ್ಟ ಬಂಧ ಮಹೋತ್ಸವವನ್ನು ನೆರವೇರಿಸಿಕೊಳ್ಳುತ್ತಿದ್ದರಿಂದ ಪಟ್ಟದ ಕಿಸುವೊಳಲ್ ಎಂದೂ ಹೆಸರಾಗಿದ್ದಂತೆ ತೋರುತ್ತದೆ. ಇಲ್ಲಿ ರಾಜರು ಪಟ್ಟಾಭಿಷಿಕ್ತರಾಗುತ್ತಿದ್ದ ವಿಷಯ 11-12ನೆಯ ಶತಮಾನದ ಶಾಸನಗಳಲ್ಲಿ ಹಾಗೂ ಸಿಂಗರಾಜಪುರಾಣ (ಸು. 1500) ಮತ್ತು ಹಮ್ಮೀರ ಕಾವ್ಯ (ಸು. 1540) ಈ ಗ್ರಂಥಗಳಲ್ಲಿ ವರ್ಣಿತವಾಗಿದೆ. ನದಿಯ ದಂಡೆಯ ಒಂದು ಎತ್ತರವಾದ ಬಯಲಿನಲ್ಲಿ ಚಳುಕ್ಯರ ಕಾಲದ್ದೆಂದು ಊಹಿಸಲಾಗಿರುವ ಮಣ್ಣಿನ ಪಾತ್ರೆಗಳೂ ಕಲ್ಲಿನ ಕಂಬಗಳೂ ದೊರಕಿದ್ದು, ಆ ಬಯಲೇ ಪಟ್ಟಬಂಧದ ಸಭಾಮಂಟಪವಾಗಿರಬಹುದೆಂದು ತರ್ಕಿಸಲಾಗಿದೆ. ಇಲ್ಲಿ ಮಲಪ್ರಭಾನದಿ ಉತ್ತರಗಾಮಿಯಾಗಿರುವುದರಿಂದ ಈ ಸ್ಥಳ ತೀರ್ಥಕ್ಷೇತ್ರವೆಂದು ಪರಿಗಣಿತವಾಗಿದ್ದು, ಸಮೀಪದ ರಾಜಧಾನಿ ಬಾದಾಮಿಯಲ್ಲಿದ್ದ ಅರಸರು ಇಲ್ಲಿ ಪಟ್ಟಬಂಧೋತ್ಸವವನ್ನು

ಮಾಡಿಕೊಳ್ಳುತ್ತಿದ್ದರೆ ಆಶ್ಚರ್ಯವಿಲ್ಲ. 1162ರ ಶಾಸನವೊಂದು ಕಿಸುವೊಳಲನ್ನು ದಕ್ಷಿಣದ ಕಾಶಿಯೆಂದು ಹೇಳಿದೆ. ಈ ಊರು ಕೆಲವು ಚಳುಕ್ಯ ಅರಸರ ಕಾಲದಲ್ಲಿ ರಕ್ತಪುರ (ಕಿಸುವೊಳಲ್‌ನ ಸಂಸ್ಕೃತ ರೂಪ) ಎಂಬ ಅಭಿಧಾನದಿಂದ ಒಂದು ರಾಜಧಾನಿಯಾಗಿತ್ತೆಂದೂ ಕೆಲವು ಕಾಲ ನೆಲೆವೀಡಾಗಿತ್ತೆಂದೂ ಅನೇಕ ಚಳುಕ್ಯ ಶಾಸನಗಳಿಂದ ತಿಳಿದುಬರುತ್ತದೆ. ಇದೇ ಕಾರಣದಿಂದಾಗಿ ಈ ಊರಿನಲ್ಲಿ ತತ್ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಿತವಾದುವು.

ಅನಂತರ ರಾಷ್ಟ್ರಕೂಟರ ಕಾಲದಲ್ಲೂ ಈ ಊರು ಪ್ರಸಿದ್ಧ ಸ್ಥಳವಾಗಿರಬೇಕೆಂಬುದು ಕವಿರಾಜಮಾರ್ಗದಲ್ಲಿ ತಿರುಳ್ಗನ್ನಡ ಸೀಮೆಯನ್ನು ವರ್ಣಿಸುವ ಪಟ್ಟಿಯಲ್ಲಿ ಬರುವ ಕಿಸುವೊಳಲ ಹೆಸರಿನಿಂದ ಊಹಿಸಬಹುದಾಗಿದೆ. ರಾಷ್ಟ್ರಕೂಟ ಕಲಿವಲ್ಲಭನ ಕಾಲದ ಶಾಸನವೊಂದು ವಿರೂಪಾಕ್ಷ ದೇವಾಲಯದ ಉತ್ತರ ದಿಶೆಯ ಮುಖಮಂಟಪದಲ್ಲಿ ಇನ್ನೂ ಇದ್ದು. ಈ ಹೇಳಿಕೆಗೆ ಋಜುತೆಯನ್ನೊದಗಿಸುತ್ತದೆ. ಮುಂದೆ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಊರು ಕಿಸುಕಾಡು 70 ಎಂಬ ಚಿಕ ಪ್ರಾಂತ್ಯದ ಮುಖ್ಯಸ್ಥಳವಾಗಿತ್ತು. ಆ ಕಾಲದ ಕೆಲವು ಶಾಸನಗಳಲ್ಲಿ ಅಂದಿನ ರಾಜ ಮಾಂಡಳಿಕರು ಇಲ್ಲಿನ ದೇವಾಲಯಗಳಿಗೆ ದತ್ತಿ ಕೊಟ್ಟ ವಿವರಗಳು ದೊರಕುತ್ತವೆ. 2ನೆಯ ಸೋಮೇಶ್ವರನ (ಭುವನೈಕಮಲ್ಲ) 1070ರ ಶಾಸನವೊಂದರಲ್ಲಿ ಆತನು ಕಿಸುವೊಳಲಿನ ಮೂಲಸ್ಥಾನ ದೇವರಿಗೆ 12 ಮತ್ತರು ಭೂಮಿಯನ್ನು ದತ್ತಿ ಬಿಟ್ಟ ವಿಷಯ ಬರೆದಿದೆ. ಪಟ್ಟದಕಲ್ಲಿನಲ್ಲಿ ಪಟ್ಟಾಭಿಷೇಕೋತ್ಸವವು ನಡೆಯುತ್ತಿದ್ದುದನ್ನು ತಿಳಿಸಿದೆ. 1162ರ ಶಾಸನವೊಂದರಿಂದ ಈ ಭೂಭಾಗ ಎರಂಬರಗೆಯ ಸಿಂದರ ಆಡಳಿತಕ್ಕೊಳಪಟ್ಟುದು ಸ್ಪಷ್ಟವಿದೆ. ಆ ಮರದ ಮಹಾಮಂಡಲೇಶ್ವರ 2ನೆಯ ಚಾವುಂಡರ ಪತ್ನಿ ದೇಮಲದೇವಿಯ ಪುತ್ರ ಆಚುಗಿ ಪಟ್ಟದ ಕಿಸುವೊಳಲನ್ನು ಕಲಿಮಾರವೃತ್ತಿಯಿಂದ ವಿಶ್ವೇಶ್ವರನಿಗೆ ಸಮನೆನಿಸಿದ ವಿಜಯೇಶ್ವರ ದೇವರಿಗೆ 300 ಮತ್ತರ ಭೂಮಿಯನ್ನು ದತ್ತಿ ಬಿಟ್ಟಳು. ಕಲ್ಯಾಣದ ಚಾಳುಕ್ಯರ ಕಾಲದ ಅನಂತರ ಪಟ್ಟದಕಲ್ಲು ತನ್ನ ಉತ್ತಮಸ್ಥಿತಿಯನ್ನು ಕಳೆದುಕೊಳ್ಳಲಾರಂಭಿಸಿ ಕ್ರಮೇಣ ಈಗಿನ ಚಿಕ ಗ್ರಾಮವಾಗಿ ಪರಿಣಮಿಸಿತು.

ಸದ್ಯ ಪಟ್ಟದಕಲ್ಲಿನ ಹಿರಿಮೆಗರಿಮೆಗಳಿಗೆ ಕಾರಣ ಇಲ್ಲಿನ ದೇವಾಲಯಗಳು. ಈ ದೇವಾಲಯಗಳು ಕರ್ನಾಟಕದ ವಾಸ್ತುಶಿಲ್ಪ ಬೆಳೆವಣಿಗೆಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಭಾರತದಲ್ಲಿ ಕಂಡುಬರುವ ಎರಡು ಪ್ರಮುಖ ವಾಸ್ತು ಪ್ರಕಾರಗಳಾದ ದ್ರಾವಿಡ ಮತ್ತು ನಾಗರ ರೀತಿಯ ದೇವಾಲಯಗಳು ಒಟ್ಟಿಗೆ ಈ ಸ್ಥಳದಲ್ಲಿ ಕಂಡುಬರುವುದು ಇಲ್ಲಿಯ ವಿಶೇಷ. ಸೌಂದರ್ಯ ದೃಷ್ಟಿಯಿಂದಲೂ ಈ ದೇವಾಲಯಗಳು ಉನ್ನತಮಟ್ಟದವು. ಹಿಂದೆ ಪಟ್ಟದಕಲ್ಲು ತೀರ್ಥಕ್ಷೇತ್ರವೆಂದೂ ಹೆಸರುಗಳಿಸಿತ್ತಾಗಿ ಈ ದೇವಾಲಯಗಳು ಬಹುಜನರನ್ನು ಆಕರ್ಷಿಸುತ್ತಿದ್ದಿರಬೇಕು. ಇಲ್ಲಿ ಈಗ ಸುಮಾರು ಹತ್ತು ದೇವಾಲಯಗಳು ಬಹುಪ್ರಸಿದ್ಧ. ಅವುಗಳಲ್ಲಿ ಒಂಬತ್ತು ಶೈವ, ಒಂದು ಜೈನ, ಜಿನಾಲಯ ಊರ ಹೊರಗೆ ಬಾದಾಮಿಯ ದಾರಿಯಲ್ಲಿದೆ. ಉಳಿದ ಒಂಬತ್ತು ದೇವಾಲಯಗಳೂ ನದಿಯ ದಂಡೆಗುಂಟ ದಕ್ಷಿಣದಿಂದ ಉತ್ತರಕ್ಕೆ ಹಬ್ಬಿಕೊಂಡಿವೆ.

ಪಟ್ಟದಕಲ್ಲಿನ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯದ ಬಹು ಸುಂದರವೂ ದೊಡ್ಡದೂ ಆದ ಕೃತಿ. ಚಳುಕ್ಯ ಇಮ್ಮಡಿ ವಿಕ್ರಮಾದಿತ್ಯ (733-745) ಮೂರು ಸಲ ಪಲ್ಲವರನ್ನು ಸೋಲಿಸಿ ಕಂಚಿಯನ್ನು ಆಕ್ರಮಿಸಿಕೊಂಡಿದ್ದರ ಜ್ಞಾಪಕಾರ್ಥವಾಗಿ ಅವನ ಒಬ್ಬ ರಾಣಿ ಲೋಕಮಹಾದೇವಿ ಈ ದೇವಾಲಯವನ್ನೂ ಇನ್ನೊಬ್ಬ ರಾಣಿ ಈ ದೇವಾಲಯದ ಸಮೀಪದಲ್ಲಿರುವ ಮಲ್ಲಿಕಾರ್ಜುನ ದೇವಾಲಯವನ್ನೂ ಕಟ್ಟಿಸಿದರೆಂದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಈಗಿನ ವಿರೂಪಾಕ್ಷ ದೇವಾಲಯದ ಪೂರ್ವದ ಹೆಸರು ಲೋಕೇಶ್ವರ ಅಥವಾ ಲೋಕಪಾಲೇಶ್ವರ, ಮೀ ಉದ್ದ ಮತ್ತು ಮೀ ಅಗಲವಾಗಿ ಸುಮಾರು ಆಯತಾಕಾರವಾದ ಪ್ರಾಕಾರದಿಂದ ಆವೃತವಾದ ಅಂಗಳದ ಮಧ್ಯದಲ್ಲಿ ದೇವಾಲಯದ ಮೂಲ ಘಟಕವಿದೆ. ಪ್ರಾಕಾರದ ಗೋಡೆಗೆ ಸೇರಿದಂತೆ ಒಳಗೆ ಚಿಕ್ಕ ಗುಡಿಗಳೂ ಪೂರ್ವ ಮತ್ತು ಪಶ್ಚಿಮದಲ್ಲಿ ಪ್ರವೇಶದ್ವಾರಗಳೂ ಇವೆ. ಪೂರ್ವದ ದ್ವಾರ ಮಂಟಪದಂತಿದ್ದು ನದಿಯೆಡೆಗೆ ತೆರೆದಂತಿದೆ. ಈ ದ್ವಾರದ ಮೇಲೆ ಕುಳ್ಳಾದ ಶಿಲಾಶಿಖರವಿದ್ದು, ಇದು ಮುಂದೆ ದಕ್ಷಿಣಭಾರತದಲ್ಲಿ ಬೆಳೆದ ಮಹಾದ್ವಾರಗೋಪುರಗಳ ಮೊಳಕೆಯೋವಾದಿಯಲ್ಲಿದೆ. ಈ ದ್ವಾರದ ಕಂಬಗಳ ಮೇಲೆ ದಂಪತಿಗಳ ಸುಂದರ ಉಬ್ಬುಶಿಲ್ಪಗಳಿವೆ.

ಇಲ್ಲಿಂದ ಒಳಗೆ ನಡೆಯುತ್ತಿದ್ದಂತೆಯೇ ಒಂದು ನಂದಿ ಮಂಟಪವಿದೆ. 7.5ಮೀ. ಉದ್ದಗಲವಾಗಿ ಸಮಚತುರ್ಭುಜಾಕಾರದ ತಳವಿನ್ಯಾಸವಿರುವ ಈ ಮಂಟಪದಲ್ಲಿ 2.5ಮೀ ಎತ್ತರದ ಜಗುಲಿಯ ಮೇಲೆ ನಾಲ್ಕು ದೊಡ್ಡ ದುಂಡಗಿನ ಕಂಬಗಳು ಚಾವಣಿಯನ್ನು ಹೊತ್ತು ನಿಂತಿವೆ. ಜಗುಲಿಯ ಬದಿಯಲ್ಲಿ ಸುತ್ತಲೂ ಆನೆಗಳ ಮತ್ತು ಕಂಬ್ಬರ ಉಬ್ಬುಶಿಲ್ಪಗಳಿವೆ. ಅಲ್ಲಲ್ಲಿ ಸುಂದರ ಮಿಥುನಗಳನ್ನು ಮತ್ತು ಕಿನ್ನರ ಜೊತೆಗಳನ್ನು ಕೆತ್ತಿದ್ದಾರೆ. ಕಮಲವನ್ನು ಕೈಯಲ್ಲಿ ಹಿಡಿದ ಓರ್ವ ಸ್ತ್ರೀ, ಅಂಕುಶವನ್ನು ಹಿಡಿದ ಇಂದ್ರಾಣಿ, ಶುಕಭಾಷಿಣಿ - ಇವರುಗಳ ಶಿಲ್ಪಗಳೂ ಬಹು ಸುಂದರವಾಗಿದ್ದು ಉಲ್ಲೇಖಾರ್ಹವಾಗಿವೆ.

ನಂದಿ ಮಂಟಪದಿಂದ 5ಮೀ ಅಂತರದಲ್ಲಿ ದೇವಾಲಯದ ಮೂಲಘಟಕವಿದೆ. ಇದರಲ್ಲಿ ಪ್ರದಕ್ಷಿಣಾಪಥದಿಂದ ಆವೃತವಾದ ಗರ್ಭಗುಡಿ ಮತ್ತು ಅಂತರಾಳ, ದೊಡ ಸಭಾಮಂಟಪ ಮತ್ತು ಈ ಮಂಟಪದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಶೆಗಳಲ್ಲಿ ಮುಖಮಂಟಪಗಳು ಎತ್ತಿಹಿಡಿದಂತಿರುವ ಆನೆ ಸಿಂಹಗಳ ಶಿಲ್ಪಗಳಿರುವ ಎತ್ತರದ ಅಧಿಷ್ಠಾನ, ಮಂಟಪವನ್ನು ಏರಲು ಮುಂದೆ ಪಾವಟಿಗೆ, ಮೇಲೆ ವಿಸ್ತಾರವಾದ ಮಂಟಪ ಭಾಗವೂ ಇಕ್ಕೆಲಗಳಲ್ಲಿ ಕಕ್ಷಾಸನ ಮುಂದೆ ಎತ್ತರವಾದ ಸಹಜ ಸುಂದರವಾದ ದಂಪತಿ ಶಿಲ್ಪಗಳಿಂದ ಕೂಡಿದ ಎರಡು ಕಂಬಗಳು ಮತ್ತು ಹಿಂದೆ ಗೋಡೆ ಇವುಗಳ ಮೇಲೆ ನಿಂತ ಮಟ್ಟಪ ಚಾವಣಿ - ಇವುಗಳಿಂದ ಕೂಡಿದೆ. ಪೂರ್ವದ ಮುಖಮಂಟಪದಲ್ಲಿ ಅವು ವಿಜಯಾದಿತ್ಯ, ಲೋಕಮಹಾದೇವಿ ಮೊದಲಾದವರು ಬಿಟ್ಟದತ್ತಿಗಳನ್ನು ತಿಳಿಸುವ ಕೆಲವು ಶಾಸನಗಳಿವೆ. ಕಂಬಗಳು ಸುಂದರ ಕೆತ್ತನೆಗಳನ್ನು ಹೊಂದಿವೆ. ದ್ವಾರಪಾಲಕರು, ಪದ್ಮನಿಧಿ, ಶಂಖನಿಧಿ ಮೊದಲಾದ ಶಿಲ್ಪಗಳು, ಸೂರ್ಯ ಮತ್ತು ಆತನ ಇಬ್ಬರು ಸತಿಯರನ್ನು (ಉಷಾ ಮತ್ತು ಪ್ರತ್ಯುಷಾ) ಕೆತ್ತಿರುವ ಚಾವಣಿ ಇವು ಆಕರ್ಷಣೀಯವಾಗಿವೆ. ಮೋಡದಲ್ಲಿ ಚಲಿಸುತ್ತಿರುವ ಸೂರ್ಯನ ರಥದ ಚಿತ್ರ ವಿಶೇಷ ರಮಣೀಯವಾಗಿದೆ. ದಕ್ಷಿಣ ಹಾಗೂ ಉತ್ತರ ಮುಖಮಂಟಪದಳಲ್ಲಿಯೂ ಕೆಲವು ಸುಂದರವಾದ ಶಿಲ್ಗಳನ್ನು ಕೆತ್ತಿದ್ದಾರೆ. ದಕ್ಷಿಣ ಮುಖಮಂಟಪದ ನೃಸಿಂಹ-ಹಿರಣ್ಯಕಶಿಪು ಇವರ ದ್ವಂದ್ವ ಯುದ್ಧ. ರಾವಣಕೈಲಾಸಪರ್ವತವನ್ನು ಎತ್ತಿರುವ ಶಿಲ್ಪ ಉಲ್ಲೇಖನಾರ್ಹವಾಗಿವೆ. ಅದರಂತೆ ಉತ್ತರ ಮಂಟಪದಲ್ಲಿನ ಗಜೇಂದ್ರಮೋಕ್ಷ ಕಥಾನಕ ಚಿತ್ರಗಳು ಸೊಗಸಾಗಿವೆ. ಪ್ರತಿ ಮುಖಮಂಟಪದಿಂದ ಸಭಾಮಂಟಪಕ್ಕೆ ಪ್ರವೇಶಿಸುವ ದ್ವಾರಗಳು ಕುಸರಿಕೆಲಸದಿಂದ ಪಂಚಶಾಖಾ ದ್ವಾರಬಂಧಗಳು, ದ್ವಾರತೋಳುಗಳ ಕೆಳಗೆ ಗಂಗಾ-ಯಮುನೆಯರ ಶಿಲ್ಪಗಳು, ಮೇಲಿನ ಜಂತಿಯಲ್ಲಿ ನಾಗಬಾಲಗಳನ್ನು ಹಿಡಿದು ಹಾರುತ್ತಿರುವ ಗರುಡಶಿಲ್ಪ, ಪಕ್ಕಗಳಲ್ಲಿ ದ್ವಾರಪಾಲಕರು - ಇವುಗಳಿಂದ ಕೂಡಿವೆ.

ಸಭಾಮಂಟಪವು ಉತ್ತರ-ದಕ್ಷಿಣ 15.2 ಮೀ ಮತ್ತು ಪೂರ್ವ-ಪಶ್ಚಿಮ 14.4 ಮೀ ಉದ್ದಗಲಗಳನ್ನು ಹೊಂದಿದೆ. 2.23 ಮೀ ಎತ್ತರದ ಚಚ್ಚೌಕದ ಹದಿನೆಂಟು ಕಂಬಗಳು ನಾಲ್ಕು ಸಾಲುಗಳಲಿದ್ದು ಚಾವಣಿಯನ್ನು ಹೊತ್ತು ನಿಂತಿವೆ. ಅವುಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ ಕಥಾನಕಗಳನ್ನು ನಿರೂಪಿಸುವ ಚಿತ್ರಗಳನ್ನು ಕೆತ್ತಲಾಗಿದೆ. ಮಂಟಪದ ಮಧ್ಯದಲ್ಲಿನ ಚಾವಣಿಯಲ್ಲಿ ಸುರುಳಿ ಸುತ್ತಿದ ನಾಗನನ್ನೂ ಮತ್ತು ಗಜಲಕ್ಷ್ಮಿಯನ್ನೂ ಕೆತ್ತಿದ್ದಾರೆ. ಅನೇಕ ಕಂಬಗಳಲ್ಲಿ ಬಳ್ಳಿಗಳನ್ನೂ ಸಿಂಹಲತೆ ಅಥವಾ ಕೀರ್ತಿಮುಖಗಳನ್ನೂ ಬಿಡಿಸಿದ್ದಾರೆ. ಕಂಬಗಳಲ್ಲಿ, ಸ್ತಂಭಿಕೆಗಳಲ್ಲಿ ಪೌರಾಣಿಕ ಕಥಾನಕಗಳ ಜೊತೆಗೆ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ

ಸೊಗಸಾದ ಚಿತ್ರಗಳನ್ನೂ ನವುರಾಗಿ ಬಿಡಿಸಿದ್ದಾರೆ. ಅವುಗಳು ಅಂದಿನ ಸಂಸ್ಕೃತಿಯನ್ನು ವಿವರಿಸುತ್ತವೆ. (ಎಸ್.ಜೆ.ಆರ್.)

ಸಭಾಮಂಟಪದಿಂದ ಸುಕನಾಸಿಯ ಭಾಗಕ್ಕೆ ಪ್ರವೇಶಿಸುವ ದ್ವಾರವೂ ಸಭಾಮಂಟಪದ ದ್ವಾರದಂತೆಯೇ ಸುಂದರವಾಗಿ ಅಲಂಕೃತಿತವಾಗಿದ್ದು ಇಲ್ಲೂ ಗಂಗಾ ಯಮುನಾ ವಿಗ್ರಹಗಳಿವೆ. ಗರ್ಭಗೃಹ ಚೌಕಾಕಾರದ್ದು. ಮಧ್ಯದಲ್ಲಿ ಚೌಕನೆಯ ಪಾಣಿಪೀಠದ ಮೇಲೆ ಹೊಳಪಿನ ಕರಿಕಲ್ಲಿನ ಲಿಂಗವಿದೆ. ಗರ್ಭಗೃಹ ಮತ್ತು ಸುಕನಾಸಿಯನ್ನೂ ಸುತ್ತುವರಿದಂತೆ ಪ್ರದಕ್ಷಿಣಾಪಥವಿದೆ. ಇದರ ಮುಂತುದಿಗಳಲ್ಲಿ ಹೊರಗೋಡೆಗೆ ಸೇರಿದಂತೆ ಇಕ್ಕೆಲಗಳಲ್ಲಿ ಒಂದೊಂದು ಚಿಕ್ಕ ಗರ್ಭಗೃಹಗಳಿದ್ದು ಇವುಗಳಲ್ಲಿ ಎಡಗಡೆಯದರಲ್ಲಿ ಮಹಿಷಮರ್ದಿನಿಯ ವಿಗ್ರಹವಿದೆ. ಇನ್ನೊಂದರಲ್ಲಿ ಗಣಪತಿ ಇದ್ದಿರಬಹುದು.; ಅದು ಈಗ ಉಳಿದಿಲ್ಲ. ಪ್ರದಕ್ಷಿಣಾಪಥ' ಹಾಗೂ ಸಭಾಮಂಟಪದ ಗೋಡೆಗಳಲ್ಲಿ ಅಳವಡಿಸಲಾಗಿರುವ ಅನೇಕ ವಿನ್ಯಾಸಗಳಲ್ಲಿರುವ ಜಾಲಂಧ್ರಗಳಿಂದ ನಸುಬೆಳಕು ಒಳಗೆ ಬೀಳುವಂತಿದ್ದು ಒಳಗಿನ ಶಿಲ್ಪಗಳ ಅವಲೋಕನಕ್ಕೆ ಇವು ಅನುಕೂಲಮಾಡಿ ಕೊಡುತ್ತವೆ. ದೇವಾಲಯದ ಹೊರಗೆ ಏರು ವಿನ್ಯಾಯಸದಲ್ಲಿ ತಳಭಾಗದಲ್ಲಿ ಅನೇಕಪಟ್ಟಿಕೆಗಳಿರುವ ಎತ್ತರ ಅಧಿಷ್ಠಾನವೂ ಮೇಲೆ ಅರೆಗಂಬಗಳೂ ಮತ್ತು ಕೋಷ್ಠಗಳಿರುವ ಭಿತ್ತಿಯೂ ಅದರ ಮೇಲೆ ದಿಂಡಿನ ಕಪೋತ ಮತ್ತು ಅದರ ಮೇಲೆ ಕಾಲಾಕೂಟಗಳಿರುವ ಹಾರ ಇವೆ. ಭಿತ್ತಿ ಭಾಗದಲ್ಲಿ ಮಟ್ಟ ಪ್ರದೇಶದಲಲ್ಲಿ ಹಾಗೂ ಕೋಷ್ಠಗಳಲ್ಲಿ ಲಿಂಗೋದ್ಭವ ಶಿವ, ಅಷ್ಟಭುಜ ಶಿವ, ನಟರಾಜ, ನರಸಿಂಹ, ಸೀತಾಪಹರಣ, ಜನಾರ್ದನ, ಹರಿಹರ, ದಂಪತಿಗಳು ಮೊದಲಾದ ಅನೇಕ ಉಬ್ಬು ಶಿಲ್ಪಗಳು ಎದ್ದುಕಾಣುವ ರೀತಿಯಲ್ಲಿ ರೂಪಿತವಾಗಿವೆ. ಈ ಶಿಲ್ಪಗಳ ಸೌಂದರ್ಯ ಅನುಪಮವಾದುದು.

ಗರ್ಭಗುಡಿಯ ಮೇಲೆ ದ್ರಾವಿಡ ಮಾದರಿಯ ತ್ರಿತಳ ಶಿಖರವಿದೆ. ಪ್ರತಿ ತಳದಲ್ಲೂ ಗರ್ಭಗುಡಿಯ ಹೊರಮೈಯಲ್ಲಿರುವ ವಾಸ್ತು ಅಂಶಗಳನ್ನು ಮೇಲೆ ಹೋದಂತೆ ಚಿಕ್ಕದಾಗಿರುವಂತೆ ಒಟ್ಟಿನಲ್ಲಿ ಮೆಟ್ಟಲುಮೆಟ್ಟಲಾಗಿ ಕಾಣುವಂತೆ ರೂಪಿಸಲಾಗಿದ್ದು, ಅದರ ಮೇಲೆ ಚೌಕಾಕಾರದ ದಪ್ಪ ಸ್ತೂಪಿ ಮತ್ತು ಮೇಲೆ ಕಳಶವನ್ನು ಆಳವಡಿಸಲಾಗಿದೆ. ಈ ಶಿಖರದ ಮುಂಭಾಗ ಸುಕನಾಸಿಯ ಮೇಲೂ ಮುಂದುವರಿಯುವಂತೆ ರೂಪಿಸಲಾಗಿದೆ.

ಕರ್ನಾಟಕ ವಾಸ್ತುಶಿಲ್ಪ ಇತಿಹಾಸದಲ್ಲಿ ಪಟ್ಟದಕಲ್ಲಿನ ಈ ವಿರೂಪಾಕ್ಷ ದೇವಾಲಯ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಬಾದಾಮಿಯ ಚಳುಕ್ಯರ ಕಾಲದ ದೇವಾಲಯಗಳಲ್ಲೆಲ್ಲಾ ಇದೇ ಅತಿ ದೊಡ್ಡದು. ಹಾಗೂ ಸಕಲಾಂಗ ಪರಿಪೂರ್ಣವಾದುದು. ಈ ದೇವಾಲಯದ ಮೂಲ ಮಾದರಿ ಕಂಚಿಯ ಕೈಲಾಸನಾಥ ದೇವಾಲಯದಿಂದ ಸ್ಫುರಿತವಾಗಿರಬಹುದೆಂದು ಹಲವು ವಿದ್ವಾಂಸರ ಅಭಿಪ್ರಾಯ ಮುಂದೆ ಎಲ್ಲೋರದಲ್ಲಿ ಕಡೆಯಲಾಗಿರುವ ಕೈಲಾಸ ದೇವಾಲಯದಲ್ಲಿ ಹೆಚ್ಚು ಕಡಿಮೆ ಇದೇ ವಿನ್ಯಾಸವನ್ನು ಆಳವಡಿಸಿಕೊಳ್ಳಲಾಗಿದೆ. ಈ ದೇವಾಲಯವನ್ನು ರೂಪಿಸಿದ ಸರ್ವಸಿದ್ಧಿ ಆಚಾರಿ, ಚೆಂಗಮ್ಮ, ಬಲದೇವ ಮುಂತಾದ ಶಿಲ್ಪಿಗಳ ಹೆಸರುಗಳು ಇಲ್ಲಿನ ಶಾಸನಗಳಿಂದ ದೊರಕುತ್ತದೆ.

ವಿರೂಪಾಕ್ಷ ದೇವಾಲಯದ ರಚನೆಯ ಕಾಲದಲ್ಲೇ ಇಮ್ಮಡಿ ವಿಕ್ರಮಾದಿತ್ಯನ ಇನ್ನೊಬ್ಬ ರಾಣಿ ತ್ರೈಲೋಕ್ಯ ಮಹಾದೇವಿಯಿಂದ ರಚಿತವಾದ ಮಲ್ಲಿಕಾರ್ಜುನ ದೇವಾಲಯ ತ್ರೈಲೋಕ್ಯೇಶ್ವರ ವಿರೂಪಾಕ್ಷ ಗುಡಿಯ ಸಮೀಪದಲ್ಲೇ ಈ ಗುಡಿಯ ವಾಯುವ್ಯಕ್ಕಿದೆ. ಇದು ವಿನ್ಯಾಸದಲ್ಲಿ ವಿರೂಪಾಕ್ಷ ದೇವಾಲಯದ ಪ್ರತಿರೂಪವೇ. ಆದರೆ ಅದಕ್ಕಿಂತ ಸ್ವಲ್ಪ ಚಿಕ್ಕದು. ನಂದಿಮಂಟಪ ಶಿಥಿಲವಾಗಿದೆ. ಸುತ್ತುಪ್ರಾಕಾರ ಬಹುಮಟ್ಟಿಗೆ ಹಾಳಾಗಿದೆ. ಗರ್ಭಗೃಹದ ಮೇಲಿನ ಶಿಖರದ ಸ್ತೂಪಭಾಗ ವಿರೂಪಾಕ್ಷದಂತೆ ಚೌಕೋನವಾಗಿರದೆ ವೃತ್ತಾಕಾರವಾಗಿದೆ. ದೇವಾಲಯದ ಮುಖಮಂಟಪದ ಕಂಬಗಳ ಮೇಲೆ ಸುಂದರ ಸ್ತ್ರೀವಿಗ್ರಹಗಳಿವೆ. ಗರ್ಭಗೃಹದ ಒಳಗೆ ಚಳುಕ್ಯಕಾಲೀನ ಲಿಂಗವಿದ್ದರೂ ಸಭಾಮಂಟಪಕ್ಕೆ ಹೋಗುವ ದ್ವಾರದ ಲಲಾಟಬಿಂಬದಲ್ಲಿ ಗರುಡವಾಹನ ವಿಷ್ಣುವಿನ ಶಿಲ್ಪವಿದೆ. ಸಭಾಮಂಟಪದ ಕಂಬಗಳ ಮೇಲೆ ರಾಮಾಯಣ, ಮಹಾಭಾರತ, ಹರಿವಂಶ, ಪಂಚತಂತ್ರಗಳ ಕಥಾ ಸನ್ನಿವೇಶಗಳು ಮತ್ತು ಕೆಲವು ಸಾಮಾಜಿಕ ದೃಶ್ಯಗಳನ್ನು ಬಿಡಿಸಲಾಗಿದೆ. ಇಲ್ಲಿನ ಭಕ್ತನಲ್ಲಿ ನಂದಿಸಮೇತ ಪಾರ್ವತೀಪರಮೇಶ್ವರ ಶಿಲ್ಪವಿದೆ. ದೇವಾಲಯದ ಗೋಡೆಗಳಲ್ಲಿ ಅನೇಕ ದೇವ ಮತ್ತು ಸ್ತ್ರೀರಮೂರ್ತಿಗಳು ಸುಂದರವಾಗಿ ನಿರೂಪಿತವಾಗಿವೆ.

ಸಂಗಮೇಶ್ವರ ದೇವಾಲಯ ದ್ರಾವಿಡ ಶೈಲಿಯಿಲ್ಲಿರುವ ಇನ್ನೊಂದು ಕೃತಿ ವಿರೂಪಾಕ್ಷನ ಗುಡಿಯಿಂದ ಸ್ವಲ್ಪ ದೂರಕ್ಕಿರುವ ಈ ದೇವಾಲಯ ಮೇಲಿನ ಎರಡು ದೇವಾಲಯಗಳಿಗಿಂತಲೂ ಹಳೆಯದು. ಇದನ್ನು ಚಲುಕ್ಯ ವಿಜಯಾದಿತ್ಯ 696 733 ಕಟ್ಟಿಸಿದನೆಂದೂ ಇದಕ್ಕೆ ವಿಜಯೇಶ್ವರ ಎಂಬ ಹೆಸರಿತ್ತೆಂದೂ ಇಲ್ಲಿನ ಶಾಸನಗಳಿಂದ ತಿಳಿಯುತ್ತದೆ. ದೇವಾಲಯ ಸ್ವಲ್ಪಮಟ್ಟಿಗೆ ಶಿಥಿಲವಾಗಿದ್ದು ಈಗ ಗರ್ಭಗುಡಿ, ಅಂತರಾಳ ಮತ್ತು ಸಭಾಮಂಟಗಳಿವೆ. ಅಂತರಾಳ ಮತ್ತು ಗರ್ಭಗುಡಿಯ ಸುತ್ತ ಪ್ರದಕ್ಷಿಣಾಪಥವಿದೆ. ಗರ್ಭಗೃಹದಲ್ಲಿ ಕರಿಶಿಲೆಯ ಲಿಂಗವಿದೆ. ಗರ್ಭಗುಡಿ ಸರಳವಾಗಿದ್ದು ಇದರ ತ್ರಿಶಾಖಾದ್ವಾರಬಂಧ ಶಿಲ್ಪರಹಿತವಾಗಿರುವುದು ವಿಶೇಷ. ದ್ವಾರ ತೋಳುಗಳ ಕೆಳಗೆ ಯಮುನಾ ಗಂಗಾ ವಿಗ್ರಹಗಳಿವೆ. ಚೌಕಟ್ಟಿನ ಇಬ್ಬದಿಯಲ್ಲಿ ನಂದಿ ಮತ್ತು ವೀರಭದ್ರ ಈ ದ್ವಾರಪಾಲ ಶಿಲ್ಪಗಳಿವೆ. ಗರ್ಭಗುಡಿಯ ಹೊರಗೋಡೆಯ ಮೇಲೆ ಪಶ್ಚಿಮ ಮತ್ತು ಉತ್ತರ ಬದಿಯಲ್ಲಿ ಕ್ರಮವಾಗಿ ನಟರಾಜ ಮತ್ತು ಗಜಾಸುರಮರ್ದನ ಈ ಉಬ್ಬುಶಿಲ್ಪಗಳಿವೆ. ದಕ್ಷಿಣ ಗೋಡೆಯ ಮೇಲೆ ಪೂರ್ಣ ಕೆತ್ತದಿರುವ ಉಗ್ರನರಸಿಂಹನ ಚಿತ್ರ ರೇಖಾಮಾತ್ರವಾಗಿದೆ. ಪ್ರದಕ್ಷಿಣಾಪಥದ ಸುತ್ತಲಿನ ಗೋಡೆಗಳಲ್ಲಿ ಪ್ರತಿ ಗೋಡೆಗೆ ಮೂರರಂತೆ ಅನೇಕ ವಿನ್ಯಾಸಗಳ ಜಾಲಂಧ್ರಗಳಿವೆ. ಪ್ರದಕ್ಷಿಣಾಪಥದ ಮುನ್ನಂಚಿನಲ್ಲಿ ಒಂದೊಂದು ಚಿಕ್ಕ ಗರ್ಭಗೃಹಗಳಿವೆ. ಇವುಗಳಲ್ಲಿದ್ದ ಮೂಲ ಮೂರ್ತಿಗಳು ಉಳಿದಿಲ್ಲ. ಸಭಾಮಂಟಪ ವಿಶಾಲವಾಗಿದ್ದು ಇದರಲ್ಲಿ 20 ಕಂಬಗಳುಳ್ಳ ನಾಲ್ಕು ಸಾಲುಗಳು ಛತ್ತನ್ನು ಎತ್ತಿಹಿಡಿದಿದೆ. ಕಂಬಗಳು ಸರಳ ಚೌಕೋನ ಭೇದ ವಿನ್ಯಾಸದವು. ಸಭಾಮಂಟಪದ ಮೂರು ಕಡೆಗಳಲ್ಲಿದ್ದ ಮುಖಮಂಟಪಗಳು ಬಿದ್ದುಹೋಗಿವೆ. ದೇವಾಲಯದ ಹೊರಮೈ ನೋಟದಲ್ಲಿ ಬುಡದಲ್ಲಿ ಅಧಿಷ್ಠಾನ ಪಟ್ಟಿಕೆಗಳು, ಮೇಲೆ ಅನೇಕ ಶಿಲ್ಪಗಳಿಂದ ಅಲಂಕೃತವಾಗಿರುವ ಭಿತ್ತಿ ಅದರ ಮೇಲೆ ಸ್ವಲ್ಪ ಬಾಗಿರುವ ಕಪೋತ, ಕೂಟ ಶಾಲಾಗಳು ಮತ್ತು ಕೆಲವು ಶಿಲ್ಪಗಳಿರುವ ಹಾಸ ಇವೆ. ಗರ್ಭಗೃಹದ ಮೇಲಿನ ದ್ರಾವಿಡ ಮಾದರಿಯ ಶಿಖರ ಎರಡು ತಳಗಳಲ್ಲಿವೆ. ಮೇಲೆ ಚೌಕೋನ ಸ್ತೂಪಿ ಮತ್ತು ಕಲಶ ಇವೆ. ಶಿಖರ ಸುಕನಾಸಿಯ ಮೇಲೆ ಚಾಚಿಲ್ಲ. ದೇವಾಲಯದ ಭಿತ್ತಿಯಲ್ಲಿ ಅರ್ಧನಾರೀಶ್ವರ ಭೃಂಗಿ, ವಿಷ್ಣು, ಭೂವರಾಹ, ಅಂಧಕಾಸುರ ಮೊದಲಾದ ಶಿಲ್ಪಗಳೂ ಶಿಖರದ ಮೇಲೆ ಲಕುಲೀಶ, ಗಜಾಸುರ ಮರ್ದನ ಮತ್ತು ವಿಷ್ಣು ಮೊದಲಾದವೂ ಇವೆ.

ಮೇಲಿನ ಚಳುಕ್ಯ ಕಾಲದ ದ್ರಾವಿಡ ಸಂಪ್ರದಾಯ ವಿನ್ಯಾಸದ ದೇವಾಲಯಗಳ ಜೊತೆಗೆ ಪಟ್ಟದಕಲ್ಲಿನ ಗಳಗನಾಥ, ಕಾಶಿವಿಶ್ವನಾಥ, ಜಂಬುಲಿಂಗ, ಕಾಡಸಿದ್ದೇಶ್ವರ ಈ ನಾಗರ ಸಂಪ್ರದಾಯದ ದೇವಾಲಯಗಳೂ ಇವೆ.

ವಿರೂಪಾಕ್ಷ ಗುಡಿಇಯಂದ ಸ್ವಲ್ಪ ಉತ್ತರಕ್ಕಿರುವ ಗಳಗನಾಥ ದೇವಾಲಯ ಪೂರ್ವಾಭಿಮುಖವಾಗಿದ್ದು ವಿಶಾಲವಾದ ಸಭಾಮಂಟಪ 129 ಮೀ ವಿಸ್ತೀರ್ಣ ಅಂತರಾಳ ಮತ್ತು ಗರ್ಭಗುಡಿಯಿಂದ ಕೂಡಿದೆ. ಇದರ ಶಿಖರ ರೇಖಾನಾಗರ ಪ್ರಾಸಾದ ಪದ್ಧತಿಯಂತೆ ಅತಿ ಚಂದವಾಗಿ ಪ್ರಮಾಣಬದ್ಧವಾಗಿದೆ. ಸಭಾಮಂಟಪದಿಂದ ಅಂತರಾಳ ಮತ್ತು ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣೆ ಹಾಕಲು.

# ಮೈಸೂರು ವಿಶ್ವವಿದ್ಯಾನಿಲಯ

# ಕನ್ನಡ ವಿಷಯ ವಿಶ್ವಕೋಶ

## ಕರ್ನಾಟಕ

**ದಾಂಡೇಲಿ**: ಉತ್ತರಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ಹಳಿಯಾಳದ ನೈಋತ್ಯಕ್ಕೆ 22ಕಿಮೀ ದೂರದಲ್ಲಿ ಕಾಳಿನದಿಯ ಎಡದಂಡೆಯ ಮೇಲಿರುವ ಒಂದು ಊರು. ಉದ್ಯಮ ಕೇಂದ್ರ. ಜನಸಂಖ್ಯೆ 53,290. ಧಾರವಾಡದಿಂದ ದಾಂಡೇಲಿಗೆ ಅಳಣಾವರ ಮೂಲಕ ರೈಲು ಸಂಪರ್ಕವಿದೆ. ತಾಲ್ಲೂಕಿನ ಪ್ರಮುಖ ಊರುಗಳೊಂದಿಗೆ ಉತ್ತಮ ರಸ್ತೆಗಳಿದ್ದು ವಾಹನ ಸಂಪರ್ಕವಿದೆ.

ಅರಣ್ಯದಲ್ಲಿ ವಸತಿ ಗೃಹ, ದಾಂಡೇಲಿ

ದಾಂಡೇಲಿ ಸಾಕಷ್ಟು ನಿಸರ್ಗ ಸಂಪತ್ತನ್ನೊಳಗೊಂಡಿದೆ; ಅರಣ್ಯ ಮೂಲ ಉದ್ಯಮಗಳಿಗೆ ಅನುಕೂಲವಿದೆ. ಇಲ್ಲಿನ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ಲಿಮಿಟೆಡ್ ಕಾಗದ ಕಾರ್ಖಾನೆ 1955ರಲ್ಲಿ ಸ್ಥಾಪಿತವಾಯಿತು. ಇದರ ಸ್ಥಳೀಯ ಕಚೇರಿ ದಾಂಡೇಲಿಯ ಬಾಂಗೂರ್ ನಗರದಲ್ಲಿದ್ದು ಆಡಳಿತ ಕಚೇರಿ ಮುಂಬಯಿಯಲ್ಲಿದೆ. ಇಲ್ಲಿರುವ ಇಂಡಿಯನ್ ಪ್ಲೈವುಡ್ ಕಾರ್ಖಾನೆ 1944ರಲ್ಲಿ ಸ್ಥಾಪಿತವಾದದ್ದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಯುಕ್ತ ಸಹಾಯದಿಂದ ಪ್ರಾರಂಭವಾಯಿತು. ಇಂದು ಈ ಕಾರ್ಖಾನೆಯ ಶಾಖೆಗಳು ಧಾರವಾಡ, ತಾಳಗುಪ್ಪ, ಸುಬ್ರಹ್ಮಣ್ಯ (ದ.ಕ.) ಹಂಗಾರಕಟ್ಟೆ, ಅಹಮದಾಬಾದ್, ಇಟಾರ್ಸಿ (ಮಧ್ಯಪ್ರದೇಶ), ಮುಂಬಯಿಗಳಲ್ಲಿವೆ. ಈ ಕಾರ್ಖಾನೆ ಎಲ್ಲ ವಿಧವಾದ ಪ್ಲೈವುಡ್ ಉತ್ಪಾದಿಸುತ್ತಿದ್ದು ಚಿಪ್‌ಬೋರ್ಡ್ ಕಾರ್ಖಾನೆಯನ್ನೂ ಸ್ಥಾಪಿಸಲಾಗಿದೆ. ಈ ಕಾರ್ಖಾನೆಯ ಮುಖ್ಯ ಕಚೇರಿ ಮುಂಬಯಿಯಲ್ಲಿದೆ. ಇಲ್ಲಿನ ಫೆರೊ ಮ್ಯಾಂಗನೀಸ್ ಕಾರ್ಖಾನೆ ಭಾರತದಲ್ಲಿ 1956ರಲ್ಲಿ ಸ್ಥಾಪಿಸಲ್ಪಟ್ಟ ಪ್ರಥಮ ಫೆರೊ ಮ್ಯಾಂಗನೀಸ್ ಕಾರ್ಖಾನೆ. ಇಲ್ಲಿ ತಯಾರಾಗುವ ಫೆರೊ ಮ್ಯಾಂಗನೀಸ್ ಪ್ರಪಂಚದಲ್ಲೇ ಅತ್ಯುತ್ತಮವೆಂದು ಪರಿಗಣಿಸಲಾಗಿದೆ. ಇಲ್ಲಿ ಸರ್ಕಾರಿ ಕಟ್ಟಿಗೆ ಕೊರೆಯುವ ಕಾರ್ಖಾನೆ ಸಹ ಇದೆ. ಈ ಕಾರ್ಖಾನೆಗೆ ಬೇಕಾದ ಕಚ್ಚಾ ಸರಕುಗಳನ್ನು ದಾಂಡೇಲಿಯ ಕಟ್ಟಿಗೆ ಡಿಪೋ ಒದಗಿಸುತ್ತಿದ್ದು ಈಗ ಇಲ್ಲಿ ರೈಲ್ವೆ ಸ್ಲೀಪರ್ಸ್ ಸಹ ತಯಾರಿಸಲಾಗುತ್ತಿದೆ.

ಕಾಳಿ ಜಲವಿದ್ಯುತ್ ಯೋಜನೆಯ ಕೇಂದ್ರವಾದ ಅಂಬಿಕಾನಗರ **(ನೋಡಿ)** 22 ಕಿಮೀ ದೂರದಲ್ಲಿದ್ದು ದಾಂಡೇಲಿಯದೇ ಇನ್ನೊಂದು ಭಾಗವೆಂದು ಪರಿಗಣಿಸಲ್ಪಡುತ್ತಿದೆ.

ದಾಂಡೇಲಿಯ ಸುತ್ತಲಿರುವ ಕಾಳಿನದಿಯ ನಿಸರ್ಗ ಸೌಂದರ್ಯವಲ್ಲದೆ ಇತರ ಕೆಲವು ಆಕರ್ಷಣೆಗಳಲ್ಲಿ ಕವಳೆ ಗುಹೆಗಳು, ವಿಂಚೋಲಿ ಧಬಧಬೆ, ನಾಗಝರಿ ಕಣಿವೆ, ಸಿಂಥರಿರಾಕ್ಸ್, ಹೌರಾ ಮಾದರಿಯ ಗುಂದದ ಪ್ರಾಚೀನ ತೂಗುಸೇತುವೆ ಮತ್ತು ಕಾಳಿ ಬೃಹತ್ ಜಲವಿದ್ಯುತ್ ಯೋಜನೆಯ ಸೈಕ್ಸ್ ಪಾಯಿಂಟ್‌ನ ವಿಹಂಗಮ ನೋಟ- ಇವನ್ನು ಹೆಸರಿಸಬಹುದು. ದಾಂಡೇಲಿ ಅರಣ್ಯ ವನ್ಯಮೃಗ ರಕ್ಷಣಾಕೇಂದ್ರದಲ್ಲಿ ಆನೆ, ಕಾಡುಕೋಣ, ಹುಲಿ, ಚಿರತೆ, ಸಾಂಬಾರ್ ಜಿಂಕೆ ಮೊದಲಾದವುಗಳನ್ನು ನೋಡಬಹುದು.

ಪಾಂಡವರು ತಮ್ಮ ವನವಾಸ ಮತ್ತು ಅಜ್ಞಾತವಾಸಗಳಲ್ಲಿ ವಾಸಿಸಿದ ದಂಡಕ ಅರಣ್ಯ ದಾಂಡೇಲಿಯಾಗಿದೆ ಎಂದು ಪುರಾಣಗಳ ಹೇಳಿಕೆ. ಇದು ಕದಂಬರ ರಾಜ್ಯಕ್ಕೆ ಸೇರಿದ್ದು, ಮಹಾರಾಣಿಯ ಕೋರಿಕೆಯಂತೆ

ಕಟ್ಟಲಾದುದೆನ್ನುವ ಕೋಟೆಯೊಂದು ಇಲ್ಲಿತ್ತು. ಈ ಕೋಟೆ ಇಂದು ಕಾಳಿನದಿಯ ಗರ್ಭ ಸೇರಿದೆ. (ವಿ.ಎಸ್.ಬಿ.)

**ದಾವಣಗೆರೆ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ. 1997ರಲ್ಲಿ ಜಿಲ್ಲಾ ಪುನರ್ವಿಂಗಡಣೆಯಾದಾಗ ಈ ಜಿಲ್ಲೆ ಅಸ್ತಿತ್ವಕ್ಕೆ ಬಂತು. ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲ್ಲೂಕುಗಳನ್ನು ಹಿಂದಿನ ಚಿತ್ರದುರ್ಗ ಜಿಲ್ಲೆಯಿಂದಲೂ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳನ್ನು ಶಿವಮೊಗ್ಗ ಜಿಲ್ಲೆಯಿಂದಲೂ ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಯಿಂದಲೂ ತೆಗೆದುಕೊಂಡು ಆರು ತಾಲ್ಲೂಕುಗಳಿರುವ ಈ ಹೊಸ ಜಿಲ್ಲೆಯನ್ನು ರಚಿಸಲಾಗಿದೆ. ಈ ಜಿಲ್ಲೆಯನ್ನು ಉತ್ತರದಲ್ಲಿ ಬಳ್ಳಾರಿ, ಪೂರ್ವದಲ್ಲಿ ಚಿತ್ರದುರ್ಗ, ದಕ್ಷಿಣದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು, ಪಶ್ಚಿಮದಲ್ಲಿ ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳು ಸುತ್ತುವರಿದಿವೆ. ಜಿಲ್ಲೆಯ ವಿಸ್ತೀರ್ಣ 6,018ಚ.ಕಿಮೀ. ಹೋಬಳಿಗಳು 24, ಗ್ರಾಮಗಳು 786. ಜನಸಂಖ್ಯೆ 17,90,952.

**ಭೌತಿಕ ಲಕ್ಷಣಗಳು :** ಪೂರ್ವ ಮತ್ತು ಪಶ್ಚಿಮ ಬೆಟ್ಟಶ್ರೇಣಿಗಳ ನಡುವಿರುವ ಈ ಜಿಲ್ಲೆ ಹೆಚ್ಚು ಎತ್ತರವಲ್ಲದ ಗುಡ್ಡಬೆಟ್ಟಗಳಿಂದ ಮತ್ತು ಸಮತಟ್ಟಾದ ಬಯಲುಗಳಿಂದ ಕೂಡಿದೆ. ಉತ್ತರಕ್ಕೆ ಮತ್ತು ಈಶಾನ್ಯಕ್ಕೆ ಇಳಿಜಾರಾಗಿರುವ ದಖನ್ ಪ್ರಸ್ಥಭೂಮಿಯಲ್ಲಿರುವ ಈ ಜಿಲ್ಲೆ ಒಣ ಪ್ರದೇಶದ ವಲಯದೊಳಗೆ ಬರುತ್ತದೆ. ಇಲ್ಲಿನ ಬಯಲುಗಳ ನಡುವೆ ಸು.30ಕಿಮೀ ಅಂತರದಲ್ಲಿ ಕಡಿಮೆ ಎತ್ತರದ ಸಮಾನಾಂತರವಾಗಿ ವಾಯವ್ಯ ಆಗ್ನೇಯಾಭಿಮುಖವಾಗಿ ಹಬ್ಬಿದ ಬೆಟ್ಟಸಾಲುಗಳಿವೆ. ಈ ಬೆಟ್ಟಸಾಲುಗಳ ನಡುವೆ ನದಿ ಕಣಿವೆಗಳು ಕಂಡುಬರುತ್ತವೆ. ಚನ್ನಗಿರಿ ಪಟ್ಟಣ 671ಮೀ ಎತ್ತರವಿರುವ ಒಂದು ಬೆಟ್ಟ ಸಮೂಹದ ಮೇಲಿದೆ. ಹೊನ್ನಾಳಿ 549ಮೀ ಎತ್ತರದಲ್ಲಿದೆ. ಚನ್ನಗಿರಿ ತಾಲ್ಲೂಕಿನ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಗುಡ್ಡ ಸಾಲುಗಳು ಹಬ್ಬಿವೆ. ಹೊನ್ನಾಳಿ ತಾಲ್ಲೂಕಿನ ಕಲ್ವರಂಗನಗಿರಿ 1,031ಮೀ ಎತ್ತರವಿದೆ. ಇದು ಜಿಲ್ಲೆಯ ಹೆಚ್ಚು ಎತ್ತರದ ಶಿಖರ. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ದಕ್ಷಿಣದಿಂದ ಉತ್ತರಕ್ಕೆ ತುಂಗಭದ್ರಾ ನದಿ ಹರಿದರೆ, ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಯಲ್ಲಿ ವೇದಾವತಿ ನದಿ ಹರಿಯುತ್ತದೆ. ಮಧ್ಯದಲ್ಲಿ ಜನಗಹಳ್ಳ ಅಥವಾ ಚಿಕ್ಕಹಗರಿಹಳ್ಳ ಹರಿಯುತ್ತದೆ. ಇಲ್ಲಿ ಭೂಮಿಯ ಏರುತಗ್ಗುಗಳು ಈ ನದಿ ಕಣಿವೆಗಳ ಜಾಡಿನಲ್ಲೇ ರೂಪುಗೊಂಡಿವೆ.

ಹೊಸದುರ್ಗದಿಂದ ಪ್ರಾರಂಭವಾಗುವ ಬೆಟ್ಟಸಾಲು ಮಾಯಕೊಂಡದ ಮೂಲಕ ದಾವಣಗೆರೆ ತಾಲ್ಲೂಕಿನಲ್ಲಿ ಅಣಜಿ ವರೆಗೆ ಹಬ್ಬಿದೆ. ದಾವಣಗೆರೆ ತಾಲ್ಲೂಕಿನ ಮಾಯಾಕೊಂಡದ ಬಳಿ ಮತ್ತು ಹರಪನಹಳ್ಳಿಯ ದಕ್ಷಿಣ ಭಾಗದಲ್ಲಿ ಬೆಟ್ಟ ಸಮೂಹಗಳಿವೆ. ಇಲ್ಲಿನ ಬೆಟ್ಟಗುಡ್ಡಗಳು ಹೆಚ್ಚಾಗಿ ಕಲ್ಲುಬಂಡೆಗಳಿಂದ ಕೂಡಿವೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಮಲ್ಲಪ್ಪನಗುಡ್ಡ ಶ್ರೇಣಿ ಮತ್ತು ಉತ್ತರಕ್ಕೆ ಕಲ್ಲಹಳ್ಳಗುಡ್ಡ ಶ್ರೇಣಿ ಇವೆ. ಕಲ್ಲಹಳ್ಳಗುಡ್ಡ ಸು.845ಮೀ ಎತ್ತರವಿದೆ. ಚಿಕ್ಕಹಗರಿ ನದಿಕಣಿವೆಯಲ್ಲಿರುವ ಶಿಖರ 853ಮೀ ಎತ್ತರವಿದೆ. ಈ ಶ್ರೇಣಿಯಲ್ಲೇ ತೆಲಿಗಿಗುಡ್ಡವಿದೆ. ಹರಪನಹಳ್ಳಿ ಪಟ್ಟಣದ ದಕ್ಷಿಣಕ್ಕೆ ನರಸಿಂಹದೇವರಗುಡ್ಡ (820ಮೀ), ಐತಿಹಾಸಿಕ ಉಚ್ಚಂಗಿದುರ್ಗ (861ಮೀ) ಇವೆ. ಈ ಜಿಲ್ಲೆಯಲ್ಲಿ ಹೆಚ್ಚಾಗಿ ಕುರುಚಲು ಕಾಡುಗಳಿವೆ. ನೀರಾವರಿ ಹೊಂದಿದ ಗದ್ದೆ ಬಯಲುಗಳಿವೆ. ಯಥೇಚ್ಛ ಹುಲ್ಲುಗಾವಲುಗಳು ಕಂಡುಬರುತ್ತವೆ.

**ಖನಿಜ ಸಂಪತ್ತು :** ಧಾರವಾಡ ಶಿಲಾವರ್ಗ ಮತ್ತು ಗ್ರಾನೈಟ್ ಗುಡ್ಡಗಳು ಇಲ್ಲಿ ಹಾಸುಹೊಕ್ಕಾಗಿವೆ. ಭೂಗರ್ಭ ಕ್ರಿಸ್ಟಲೀನ್ ಶಿಲಾವರ್ಗ ಮತ್ತು ಗ್ರಾನೈಟ್ ಬೆಣಚುಕಲ್ಲಿನಿಂದ ಕೂಡಿದೆ. ಕಣಶಿಲೆಗಳು, ಧಾರವಾಡ ಶ್ರೇಣಿ ಕಲ್ಲುಗಳು ಹೆಚ್ಚಾಗಿವೆ. ಈ ಶಿಲಾ ಹಂದರ ಭಾರತದ ಅತ್ಯಂತ ಪ್ರಾಚೀನ ಶಿಲಾ ರಚನೆಗೆ ಸೇರಿದೆ. ಈ ವಲಯ ಚಿತ್ರದುರ್ಗ ಶಿಲಾವಲಯವೆಂದೇ ಪರಿಗಣಿತವಾಗಿದೆ. ಜ್ವಾಲಾಮುಖಿಯ ಲಾವಾ ರಚನೆಗಳೂ ಅಲ್ಲಲ್ಲಿ ಕಂಡುಬರುತ್ತವೆ. ಇಲ್ಲಿನ ಗ್ರಾನೈಟ್ ಶಿಲಾವಲಯ ಹೆಚ್ಚಾಗಿ ನಸು ನೇರಳೆ ಮತ್ತು ಬೂದು ಬಣ್ಣದ್ದು.


ಪುಷ್ಕರಣಿ, ಸಂತೆಬೆನ್ನೂರು

ಜಿಲ್ಲೆ ಅಮೂಲ್ಯವಾದ ಖನಿಜ ಸಂಪತ್ತಿನಿಂದ ಕೂಡಿದೆ. ಕಾರ್ಡಿಯರೆಟ್, ಸಿಲಿನಮೈಟ್ ಅಥವಾ ಕಯೊನೈಟ್ ಖನಿಜಗಳಿವೆ. ಮಾಯಾಕೊಂಡದ ಬಳಿ ಕಲ್ನಾರು ದೊರೆಯುತ್ತದೆ. ಆಂಟಿಮನಿ, ತಾಮ್ರ, ಕ್ರೋಮೈಟ್ ಮತ್ತು ಚಿನ್ನದ ಅದಿರು ಕಂಡುಬರುತ್ತವೆ. ಕೆಲವು ಝರಿಗಳಲ್ಲಿ ಹಿಂದೆ ಚಿನ್ನದ ಅದಿರನ್ನು ಆರಿಸಿ ತೆಗೆಯುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ದಾವಣಗೆರೆ ತಾಲ್ಲೂಕಿನ ಹಳೆಕಲ್ಲು, ಜಗಳೂರು ತಾಲ್ಲೂಕಿನ ಹೊನ್ನೆಮರಡಿಗಳು ಚಿನ್ನದ ನಿಕ್ಷೇಪವನ್ನು ಹೊಂದಿವೆ. ಕೆಲವೆಡೆ ಕಬ್ಬಿಣದ ಅದಿರಿದೆ. ಜಗಳೂರು ತಾಲ್ಲೂಕಿನ ಹೊಸಕೆರೆ ಮತ್ತು ದಾವಣಗೆರೆ ತಾಲ್ಲೂಕಿನ ದೇವರಬಿಳಿಕೆರೆಗಳಲ್ಲಿ ಸುಣ್ಣಕಲ್ಲು ಅಗಾಧ ಪ್ರಮಾಣದಲ್ಲಿದೆ. ಪೂರ್ವೋಕ್ತ ಉಭಯ ತಾಲ್ಲೂಕುಗಳಲ್ಲೂ ಅಲ್ಲಲ್ಲಿ ಮ್ಯಾಂಗನೀಸ್ ಅದಿರು ಕಂಡುಬರುತ್ತದೆ. ಮಲೆಬೆನ್ನೂರು ಬಳಿ ಜೇಡಿಮಣ್ಣು ಸಿಗುತ್ತದೆ. ಅನೇಕ ಸ್ಥಳಗಳಲ್ಲಿ ಕಲ್ಲುಚಪ್ಪಡಿಗಳನ್ನು ತೆಗೆಯಲು ಅನುಕೂಲಕರವಾದ ಅರೆಗಳಿವೆ. ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಸುಣ್ಣದಕಲ್ಲು ಹಾಗೂ ಸಾಬೂನುಕಲ್ಲುಗಳಿವೆ. ಈ ಜಿಲ್ಲೆಯಲ್ಲಿ ಅನೇಕ ಕಲ್ಲುಗಣಿಗಳಿವೆ.

**ನದಿಗಳು :** ಈ ಜಿಲ್ಲೆಯಲ್ಲಿ ಬೀಳುವ ಮಳೆ ಪ್ರಮಾಣ ಕಡಿಮೆ ಇರುವುದರಿಂದ ಇಲ್ಲಿ ಹುಟ್ಟಿ ಹರಿಯುವ ದೊಡ್ಡ ನದಿಗಳು ಇಲ್ಲ. ಜಲಸಂಪನ್ಮೂಲವೂ ಕಡಿಮೆ. ಜಿಲ್ಲೆಯ ಸರಾಸರಿ ಮಳೆ 629.10 ಮಿಮೀ. ಆದರೆ ಈ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ರಾಜ್ಯದ ಪ್ರಮುಖ ನದಿಗಳಲ್ಲೊಂದಾದ ತುಂಗಭದ್ರಾ ನದಿ ಹರಿಯುತ್ತದೆ. ಶಿವಮೊಗ್ಗ ಜಿಲ್ಲೆಯಿಂದ ಹೊನ್ನಾಳಿ ತಾಲ್ಲೂಕನ್ನು ಪ್ರವೇಶಿಸುವ ಈ ನದಿ ಮುಂದೆ ಹಾವೇರಿ ಜಿಲ್ಲೆ ಮತ್ತು ದಾವಣಗೆರೆ ಜಿಲ್ಲೆಯ ಗಡಿಯಾಗಿ ಪರಿಣಮಿಸುತ್ತದೆ. ಜಗಳೂರು ತಾಲ್ಲೂಕಿನಲ್ಲಿ ಹುಟ್ಟುವ ಜನಗಹಳ್ಳ ಮುಂದೆ ಚಿಕ್ಕಹಗರಿ ಎನಿಸಿಕೊಂಡು ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿದು ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿ ತುಂಗಭದ್ರಾ ಜಲಾಶಯದ ಬಳಿ ಹಿನ್ನೀರನ್ನು ಕೂಡಿಕೊಳ್ಳುತ್ತದೆ. ಹೊಳಲ್ಕೆರೆ ತಾಲ್ಲೂಕಿನ ಪಶ್ಚಿಮದ ಬೆಟ್ಟದಲ್ಲಿ ಹುಟ್ಟುವ ಸ್ಯಾಗಲಹಳ್ಳ ದಾವಣಗೆರೆ ತಾಲ್ಲೂಕಿನ ಮುಖಾಂತರ ಹರಿದು ತುಂಗಭದ್ರಾ ನದಿಯನ್ನು

ಹರಿಹರ ಪಟ್ಟಣದ ಹತ್ತಿರ ಸೇರುತ್ತದೆ. ಇದನ್ನು ಹರಿದ್ರಾ ಅಥವಾ ಸೂಳೆಕೆರೆಹಳ್ಳ ಎಂದೂ ಕರೆಯುತ್ತಾರೆ. ಚನ್ನಗಿರಿ ತಾಲ್ಲೂಕಿನಲ್ಲಿ ಹಿರಿಹಳ್ಳಿ ಮತ್ತು ಸೊಪ್ಪಿನಹಳ್ಳಿಗಳೆಂಬ ಕಿರುತೊರೆಗಳಿಗೆ ಅಡ್ಡಲಾಗಿ ಸೂಳೆಕೆರೆಯನ್ನು ನಿರ್ಮಿಸಲಾಗಿದೆ. ಜಗಳೂರು ತಾಲ್ಲೂಕಿನಲ್ಲಿ ಅನೇಕ ಕಿರುತೊರೆಗಳು ಹುಟ್ಟಿ ಹರಿಯುತ್ತವೆ.

**ಸಸ್ಯವರ್ಗ:** ಜಿಲ್ಲೆ ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿರುವುದು, ಭೂಮಿ ಅಲೆಯೋಪಾದಿಯ ಬಯಲಿನಿಂದ ಕೂಡಿರುವುದು, ಅಲ್ಲಲ್ಲಿ ಚಿಕ್ಕಪುಟ್ಟ ಬೆಟ್ಟಸಾಲುಗಳಿರುವುದು ಹೆಚ್ಚಿನ ಸಸ್ಯವರ್ಗದ ಬೆಳವಣಿಗೆಗೆ ಅನುಕೂಲಕರವಾಗಿಲ್ಲ. ಒಂದು ಕಾಲದಲ್ಲಿ ಫಲವತ್ತಾದ ಮಣ್ಣು ಮತ್ತು ತೇವಾಂಶವಿರುವ ಕಣಿವೆಗಳಲ್ಲಿ ಮಧ್ಯಮ ಪ್ರಮಾಣದ ಕಾಡು ಬೆಳೆದಿದ್ದ ಎಲ್ಲ ಸಾಧ್ಯತೆಗಳಿವೆ. ಈಗ ಭೂಮಿ ವ್ಯಾಪಕ ಸಾಗುವಳಿಗೊಳಗಾಗಿರುವುದ ರಿಂದ ಸಸ್ಯವರ್ಗ ಕ್ಷೀಣಿಸಿದೆ. ಕಲ್ಲುಬೆಟ್ಟಗಳ ಮಧ್ಯೆ ಬೆಳೆಯುವ ಹುಣಿಸೆ, ಜಾಲಿ, ಹಿಪ್ಪೆ ಮರಗಳು ಹೆಚ್ಚಾಗಿ ಕಂಡುಬರುತ್ತವೆ. ಕಂದಾಯ ಇಲಾಖೆಯ ದಾಖಲೆಗಳು ಒಂದು ಕಾಲದಲ್ಲಿ ಉತ್ತಮವಾದ ನಾಟ ಮರಗಳು ಇದ್ದುದಕ್ಕೆ ಪುರಾವೆ ಒದಗಿಸುತ್ತವೆ. ಉರುವಲಿಗೆ, ಮರಮುಟ್ಟುಗಳಿಗೆ ಅವ್ಯಾಹತವಾಗಿ ಗಿಡಮರಗಳನ್ನು ಕಡಿದಿದ್ದರಿಂದ ಅವುಗಳಿದ್ದ ಜಾಗ ಈಗ ಬಟಾಬಯಲಾಗಿದೆ. ಇತ್ತೀಚೆಗೆ ಅಲ್ಲಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ. ಅಲ್ಲಿ ಹಲಸು, ಬೇವು, ಹುಣಿಸೆ, ಸುಜ್ಜಲು ಮರಗಳು ಕಂಡುಬರುತ್ತವೆ. ದಿಂಡಿಗ, ತರದ (ಕೆಂಪುಕೈರ), ಹೊಂಗೆ, ಕಕ್ಕೆ ಮರಗಳು ಹಳ್ಳ ಕಣಿವೆಗಳಲ್ಲಿ ಕಂಡುಬರುತ್ತವೆ.

ಅರಣ್ಯ ಇಲಾಖೆ ಸಾಲು ಮರಗಳನ್ನು, ಸಾಮಾಜಿಕ ಅರಣ್ಯಗಳನ್ನು ಬೆಳೆಸುವ ಯೋಜನೆಯನ್ನು ಕೈಗೊಂಡಿದೆ. ತೇಗದ ಮರ ಬೆಳೆಸುವ ಪ್ರಯತ್ನ ಸಾಗಿದೆ. ಆಗಾಗ ಸಂಭವಿಸುವ ಬರಗಾಲ ಅರಣ್ಯ ಅಭಿವೃದ್ಧಿಗೆ ತಡೆಯಾಗಿದೆ. ಹರಪನಹಳ್ಳಿ, ಜಗಳೂರು ತಾಲ್ಲೂಕುಗಳಲ್ಲಿ ವಿಶೇಷವಾಗಿ ಕುರುಚಲು ಕಾಡು ಹಬ್ಬಿದೆ. ಬಂಜರುಭೂಮಿಯಲ್ಲಿ ಬೆಳೆಯುವ ಹುಲ್ಲು ಜಾನುವಾರುಗಳಿಗೆ, ಕುರಿಗಳಿಗೆ ಮೇವು ಒದಗಿಸುತ್ತದೆ. ಜಿಲ್ಲೆಯಲ್ಲಿ ವೃಕ್ಷ ಮತ್ತು ತೋಪುಗಳಿರುವ ಪ್ರದೇಶದ ವಿಸ್ತೀರ್ಣ 5,048 ಹೆಕ್ಟೇರ್. ಬಂಜರು ಮತ್ತು ಗೋಮಾಳ ಅನುಕ್ರಮವಾಗಿ 9,231 ಹೆಕ್ಟೇರ್ ಮತ್ತು 19,598 ಹೆಕ್ಟೇರ್ (1998– 99).

**ಪ್ರಾಣಿವರ್ಗ:** ಕಾಡು ಹೆಚ್ಚಿಲ್ಲದಿರುವುದರಿಂದ ಪ್ರಾಣಿ ವೈವಿಧ್ಯವೂ ಕಡಿಮೆ. ಆದರೆ ಜಿಲ್ಲೆಯ ಕೆಲವು ಗುಡ್ಡಗಳಲ್ಲಿ ಚಿರತೆ, ಕಿರುಬ, ತೋಳ, ಕರಡಿ, ಕಾಡುಹಂದಿಗಳಿವೆ. ಅಲ್ಲೊಂದು ಇಲ್ಲೊಂದು ಹುಲಿ ಕಂಡುಬರುವುದುಂಟು. ಚುಕ್ಕಿ ಜಿಂಕೆಗಳು, ಮುಂಗಸಿ, ಮೊಲ, ಮಂಗಗಳಿವೆ. ಉರಗಗಳಲ್ಲಿ ಮಂಡಲ ಹಾವುಗಳಿವೆ. ಕಾಡುಕೋಳಿ, ಮರಕುಟಿಗ, ಪಾರಿವಾಳ, ಗೌಜಗ, ನೀರುಕೋಳಿ, ಗಿಡುಗ, ಹದ್ದು, ಕಾಜಾಣ ಮೊದಲಾದ ಪಕ್ಷಿ ವರ್ಗವಿದೆ.

**ವ್ಯವಸಾಯ :** ದಾವಣಗೆರೆ ಜಿಲ್ಲೆ ವ್ಯವಸಾಯ ಪ್ರಧಾನವಾದುದು. ಇಲ್ಲಿನ ಜನಸಂಖ್ಯೆಯ ಮೂರನೆಯ ಎರಡರಷ್ಟು ಭಾಗ ಗ್ರಾಮೀಣ ಪ್ರದೇಶದಲ್ಲಿದೆ. ಇಲ್ಲಿನ ಮಣ್ಣು ವ್ಯವಸಾಯಕ್ಕೆ ಅನುಕೂಲಕರವಾಗಿದೆ. ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರದ ವಾಯವ್ಯ ಭಾಗದಲ್ಲಿ ಫಲವತ್ತಾದ ಕಪ್ಪುಮಣ್ಣು ಕಂಡುಬರುತ್ತದೆ. ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಮರಳುಮಿಶ್ರಿತ ಮಣ್ಣಿದೆ. ಹೊನ್ನಾಳಿ ತಾಲ್ಲೂಕಿನ ಬಹುಭಾಗ ಮರಳುಮಿಶ್ರಿತ ಕೆಂಪುಮಣ್ಣು. ಇಲ್ಲಿ ಸಾರಜನಕ ಮತ್ತು ರಂಜಕದ ಕೊರತೆ ಕಂಡುಬರುತ್ತದೆ. ಕಪ್ಪುಮಣ್ಣಿನ ಭೂಮಿ ದಾವಣಗೆರೆ ಮತ್ತು ಹರಪನಹಳ್ಳಿಗಳಲ್ಲಿ ಹೆಚ್ಚು. ಒಟ್ಟು ಜಿಲ್ಲೆಯಲ್ಲಿ ಕಪ್ಪು, ಕೆಂಪು ಮತ್ತು ಮಧ್ಯಮ ಕಪ್ಪು ಮಣ್ಣಿದೆ. ಹತ್ತಿ, ನೆಲಗಡಲೆ, ಜೋಳ, ತೊಗರಿ ಮತ್ತು ರಾಗಿ ಬೆಳೆಯಲು ಜಿಲ್ಲೆಯ ನೆಲ ಪ್ರಶಸ್ತವಾಗಿದೆ. ಭದ್ರಾ ಅಣೆಕಟ್ಟು ಮತ್ತು ಶಾಂತಿಸಾಗರದಿಂದಾಗಿ ಸಾಕಷ್ಟು ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಈ ಅಚ್ಚುಕಟ್ಟು ಪ್ರದೇಶದಲ್ಲಿ ಜೇಡಿಮಣ್ಣು ಅಧಿಕವಿದ್ದು ಹೆಚ್ಚಿನ ಮಣ್ಣು ಪೋಷಣೆಗೆ ಗೊಬ್ಬರ ಹಾಗೂ ಹೊಸಮಣ್ಣು ಹಾಕುವ ಅಗತ್ಯವಿದೆ. ಜಗಳೂರು ತಾಲ್ಲೂಕಿನ ಸಂಗೇನಹಳ್ಳಿ ಮತ್ತು ತುಪ್ಪದಹಳ್ಳ ಕೆರೆಗಳು ಹಾಗೂ ದಾವಣಗೆರೆ ತಾಲ್ಲೂಕಿನ ಅಣಜಿ ಮತ್ತು ಕೊಡಗನೂರು ಕೆರೆಗಳು ಜಿಲ್ಲೆಯ ದೊಡ್ಡಕೆರೆಗಳು. ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಮಳೆ ಆಧಾರಿತ ಭೂಮಿಯೇ ಹೆಚ್ಚು. ಅಲ್ಲಲ್ಲಿ ಕೊಳವೆ ಬಾವಿಗಳನ್ನು ಕೊರೆಸಿ ನೀರಾವರಿಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಹರಿಹರ–ಮೂಲವಿಗ್ರಹ, ಹರಿಹರ

ಭದ್ರಾ ಜಲಾಶಯದಿಂದ ಬರುವ ನಾಲೆಗಳು ದಾವಣಗೆರೆ ಮತ್ತು ಹರಿಹರ ತಾಲ್ಲೂಕಿನ ಕೆಲವು ಭಾಗಗಳಿಗೆ ನೀರೊದಗಿಸುತ್ತವೆ. ಕಾಲುವೆಗ ಳಿಂದ ಜಿಲ್ಲೆಯಲ್ಲಿ 74,377 ಹೆಕ್ಟೇರ್ ನೀರೊದಗುತ್ತದೆ. ಕೆರೆಯಿಂದ 4,281 ಹೆಕ್ಟೇರ್, ಬಾವಿಗಳಿಂದ 4,835 ಹೆಕ್ಟೇರ್, ಕೊಳವೆ ಬಾವಿಗಳಿಂದ 32,569 ಹೆಕ್ಟೇರ್, ಏತನೀರಾವರಿಯಿಂದ 11,077 ಹೆಕ್ಟೇರ್ ನೀರಾವರಿ ಸೌಲಭ್ಯ ಒದಗಿದೆ.

ಜಿಲ್ಲೆಯಲ್ಲಿ ಬತ್ತ (118,178ಹೆ.), ರಾಗಿ (35,741ಹೆ.), ಜೋಳ (56,587ಹೆ.), ಸಜ್ಜೆ (914ಹೆ.), ಮುಸುಕಿನ ಜೋಳ (103,680 ಹೆ.), ಗೋದಿ (601ಹೆ.), ಇತರೆ ಏಕದಳ ಧಾನ್ಯ ಮತ್ತು ಉಪತೃಣ ಬೆಳೆಗಳು (3,383ಹೆ.), ಕಡಲೆ (2151ಹೆ.), ತೊಗರಿ (6,657ಹೆ.), ದ್ವಿದಳ ಧಾನ್ಯಗಳು (19,713ಹೆ.), ನೆಲಗಡಲೆ (37,712ಹೆ.), ಕಬ್ಬು (12,519ಹೆ.), ಹತ್ತಿ (26,284ಹೆ.) ಬೆಳೆಯಲಾಗುತ್ತದೆ (1998– 99).


ದಾವಣಗೆರೆ ಜಿಲ್ಲೆ

ಬರಗಾಲದ ಬವಣೆ, ಮಾರುಕಟ್ಟೆಯಲ್ಲಿ ಬೆಲೆಗಳ ಕುಸಿತ, ಸಣ್ಣ ಹಿಡುವಳಿಗಳು ರೈತನ ಋಣಭಾರ ಹೆಚ್ಚಿಸಲು ಕಾರಣವಾಗಿರುವ ಸಂಗತಿಗಳಾಗಿವೆ. ಜಾನುವಾರುಗಳ ಪೋಷಣೆ ಮತ್ತು ಅಭಿವೃದ್ಧಿಗಾಗಿ ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ 7 ಪಶುವೈದ್ಯ ಶಾಲೆಗಳು, 44 ಚಿಕಿತ್ಸಾಲಯಗಳು, 85 ಪಶುವೈದ್ಯ ಕೇಂದ್ರಗಳು, 6 ಸಂಚಾರಿ ಚಿಕಿತ್ಸಾಲಯಗಳು, 21 ಕೃತಕ ಗರ್ಭಧಾರಣಾ ಕೇಂದ್ರಗಳಿವೆ. ಮೀನು ಸಾಕಣೆ ಒಂದು ಕೃಷಿ ಉದ್ಯಮವಾಗಿ ಬೆಳೆದಿದ್ದು ವಾರ್ಷಿಕವಾಗಿ 4,080ಮೆ.ಟನ್ ಮೀನನ್ನು ಹಿಡಿಯಲಾಗುತ್ತದೆ.

**ಕೈಗಾರಿಕೆ:** ಕೈಗಾರಿಕೆ ಮತ್ತು ವ್ಯಾಪಾರೋದ್ಯಮಗಳಿಗೆ ದಾವಣಗೆರೆ ಮೊದಲಿನಿಂದಲೂ ಮಹತ್ತ್ವ ಪಡೆದಿರುವ ಸ್ಥಳ. ಇಲ್ಲಿನ 11– 12ನೆಯ ಶತಮಾನದ ಶಾಸನಗಳಲ್ಲಿ ಈ ಊರಿನಲ್ಲಿ ವರ್ತಕರು ಮತ್ತು ವಿವಿಧ ಉಪಕಸಬುಗಳ ಜನ ನೆಲಸಿ ದೇವಾಲಯಗಳನ್ನು ಕಟ್ಟಿಸಿದ, ವಿವಿಧ ದಾನಧರ್ಮಗಳನ್ನು ಮಾಡಿದ ವಿಚಾರಗಳು ತಿಳಿದುಬರುತ್ತವೆ. ಪ್ರಾಚೀನ ಕಾಲದಿಂದಲೂ ಈ ಊರು ರಾಜ್ಯದ ಮತ್ತು ಅಂತಾರಾಜ್ಯದ ಹೆದ್ದಾರಿಯ ಮುಖ್ಯಸ್ಥಳವಾಗಿದ್ದದ್ದು ಸಹ ಕಂಡುಬರುತ್ತದೆ. 19ನೆಯ ಶತಮಾನದ ಪ್ರಾರಂಭದ ವರ್ಷದಲ್ಲಿ (1801) ಫ್ರಾನ್ಸಿಸ್ ಬುಕನನ್ ಎಂಬ ಪ್ರವಾಸಿ ದಾವಣಗೆರೆಗೆ ಭೇಟಿ ನೀಡಿ ಇದು ವಾಣಿಜ್ಯ ಮತ್ತು ಕೈ ಕಸಬುಗಳ ಕೇಂದ್ರವಾಗಿದ್ದುದನ್ನು ದಾಖಲಿಸಿದ್ದಾನೆ. ಆಗ ಇಲ್ಲಿ 500 ಮನೆಗಳಿದ್ದುದನ್ನೂ ಒಂದು ಹೊಸ ಬಜಾರನ್ನು ಕಟ್ಟುತ್ತಿದ್ದುದನ್ನೂ ಪ್ರಸ್ತಾಪಿಸಿದ್ದಾನೆ. ಅಡಕೆ, ಮೆಣಸು, ಹತ್ತಿ, ಕಂಬಳಿ– ಇವೆಲ್ಲ ಇಲ್ಲಿಂದ ಮದರಾಸು ಪಟ್ಟಣದ ಮೂಲಕ ವಿದೇಶಗಳಿಗೆ ರಫ್ತಾಗುತ್ತಿದ್ದ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ಹತ್ತಿಬಟ್ಟೆ ಮತ್ತು ಕಂಬಳಿ ನೇಯ್ಗೆಗೆ ಇದು ಪ್ರಸಿದ್ಧವಾಗಿತ್ತು. ಇಂತಹ ಪ್ರಮುಖ ಕೇಂದ್ರವಾದ ದಾವಣಗೆರೆ ಜಿಲ್ಲಾ ಕೇಂದ್ರವಾದದ್ದು ಇತ್ತೀಚೆಗೆ. ಆದರೆ ಅದರ ಕೈಗಾರಿಕೋದ್ಯಮ 20ನೆಯ ಶತಮಾನದ ಪ್ರಾರಂಭದಿಂದಲೂ ಅಭಿವೃದ್ಧಿ ಹೊಂದುತ್ತ ಬಂದಿತ್ತು. ಬೆಂಗಳೂರಿನಿಂದ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳನ್ನು ಸಂಪರ್ಕಿಸುವ ರಸ್ತೆ ಮತ್ತು ರೈಲು ಮಾರ್ಗಗಳು ದಾವಣಗೆರೆ ಮೂಲಕ ಹಾದುಹೋಗುತ್ತಿದ್ದವು. ಆಗ ದಾವಣಗೆರೆ ಎಲ್ಲ ದಿಕ್ಕುಗಳ ವ್ಯಾಪಾರ ವ್ಯವಹಾರಗಳ ಸ್ಥಳಗಳಿಗೆ ಸಂಪರ್ಕಿಸುವ ಕೂಡುಸ್ಥಳ ವಾಯಿತು. ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ, ಮುಂಬಯಿ–ಮೀರಜ್–ಬೆಂಗಳೂರು ಬ್ರಾಡ್‌ಗೇಜ್ ರೈಲುಮಾರ್ಗ ಇಲ್ಲಿ ಹಾದು ಹೋಗುತ್ತದೆ. 19ನೆಯ ಶತಮಾನದ ಪ್ರಾರಂಭದಲ್ಲೇ ಬಟ್ಟೆ ನೇಯ್ಗೆ, ನೂಲು ತೆಗೆಯುವುದು ಮತ್ತು ಎಣ್ಣೆ ತೆಗೆಯುವ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದವು.

1903ರಲ್ಲಿ ಚಿಗಟೇರಿ ಮಿಲ್ಸ್ ಲಿಮಿಟೆಡ್ ಕಂಪನಿ ಸ್ಥಾಪಿತವಾಯಿತು. ಇದನ್ನು ಜಿಲ್ಲೆಯ ಪ್ರಥಮ ಯಾಂತ್ರೀಕೃತ ಹತ್ತಿಗಿರಣಿ ಎನ್ನಬಹುದು. 1905ರಲ್ಲಿ ಬ್ರಹ್ಮಪ್ಪ ತವನಪ್ಪನವರು ಜಿನ್ನಿಂಗ್ ಕಾರ್ಖಾನೆ ತೆರೆದರು. ಅವರದೇ ಕಂಪನಿಯ ಅಡಿಯಲ್ಲಿ 1918ರಲ್ಲಿ ವನಸ್ಪತಿ ಮತ್ತು ಕಡಲೆಕಾಯಿ ಎಣ್ಣೆ ತಯಾರಿಸುವ ಘಟಕ ಕಾರ್ಯರೂಪಕ್ಕೆ ಬಂತು. ಬಿ.ಟಿ.ಬಾರ್ ಸೋಪ್ ತಯಾರಿಸುವ ಸೋಪಿನ ಉದ್ಯಮವೂ ಇವರಿಂದಲೇ ಪ್ರಾರಂಭವಾಯಿತು. ಕೊಟ್ಟೂರ ಬಸವೇಶ್ವರ ಜಿನ್ನಿಂಗ್ ಕಾರ್ಖಾನೆ, ರವಿ ವೆಜಿಟಬಲ್ ಆಯಿಲ್ ಮಿಲ್ಸ್ ಇದೇ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದವು. 1939ರಲ್ಲಿ ದಾವಣಗೆರೆ ಕಾಟನ್ ಮಿಲ್ಸ್ (ಡಿ.ಸಿ.ಎಂ.) ತೆರೆಯಲಾಯಿತು. 1954ರಲ್ಲಿ ಶ್ರೀಶಂಕರ ಟೆಕ್ಸ್‌ಟೈಲ್ಸ್ ಮಿಲ್ಸ್, 1946ರಲ್ಲಿ ಶ್ರೀ ಗಣೇಶ್ ಟೆಕ್ಸ್‌ಟೈಲ್ಸ್ ಮಿಲ್ಸ್ ಪ್ರಾರಂಭವಾದವು. ಸ್ವಾತಂತ್ರ್ಯ ಬರುವ ಹೊತ್ತಿಗೆ ಬೆಂಗಳೂರನ್ನು ಬಿಟ್ಟರೆ ದಾವಣಗೆರೆ ಮೈಸೂರು ಸಂಸ್ಥಾನದ ಪ್ರಮುಖ ಕೈಗಾರಿಕಾ ನಗರವೆಂಬ ಕೀರ್ತಿಗೆ ಪಾತ್ರವಾಯಿತು. ಭದ್ರಾ ಜಲಾಶಯ ನಿರ್ಮಾಣದಿಂದ ನೀರಾವರಿ ಪ್ರದೇಶ ವಿಸ್ತರಿಸಿದಂತೆಲ್ಲ ಸಕ್ಕರೆ ಕಾರ್ಖಾನೆಗಳು ಸ್ಥಾಪಿತವಾದವು. ಕಾರ್ಮಿಕರ ಸಂಖ್ಯೆ ಗಣನೀಯ ವಾಗಿ ಬೆಳೆಯಿತು. ಹೊರಗಿನಿಂದ ವ್ಯವಹಾರಸ್ಥರು, ಉದ್ಯೋಗಾಕಾಂಕ್ಷಿಗಳು ಬಂದು ಇಲ್ಲಿ ನೆಲಸಿದರು. ಆಟದ ವಸ್ತುಗಳು, ಆಹಾರ, ಮುದ್ರಣ, ಚರ್ಮ ಮತ್ತು ಮರದ ವಸ್ತುಗಳಿಗೆ ಸಂಬಂಧಿಸಿದ ನೂರಾರು ಕೈಗಾರಿಕಾ ಘಟಕಗಳು ತಲೆಎತ್ತಿದವು. ವಿದ್ಯುಚ್ಛಕ್ತಿ, ಡಿಸ್ಟಿಲರಿ ಘಟಕಗಳು, ಜೈವಿಕ ಗೊಬ್ಬರ ತಯಾರಿಕೆ ಮುಂತಾದ ಕ್ಷೇತ್ರಗಳಲ್ಲೂ ಉದ್ಯಮಗಳು ತಲೆಯೆತ್ತಿದವು. ಈ ಎಲ್ಲ ಕಾರಣಗಳಿಗಾಗಿ ದಾವಣಗೆರೆ ನಗರ ಕರ್ನಾಟಕದ ಮಾಂಚೆಸ್ಟರ್ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ದಾವಣಗೆರೆಯ ಅನಂತರ ಹೆಚ್ಚು ಕಾರ್ಖಾನೆಗಳಿರುವ ಸ್ಥಳ ಹರಿಹರ. ಇಲ್ಲಿನ ಕೈಗಾರಿಕಾ ಪ್ರದೇಶ 1964ರಿಂದ ಅಸ್ತಿತ್ವದಲ್ಲಿದೆ. ಇಲ್ಲಿ ಎಂಜಿನಿಯರಿಂಗ್ ಕಾರ್ಯಾಗಾರಗಳು, ಕಾರ್ಖಾನೆಗಳು ನೆಲೆಗೊಂಡಿವೆ. ಹತ್ತಿ ಗಿರಣಿಗಳಿವೆ. ಹರಿಹರದ ಪಾಲಿಫೈಬರ್ ಕಾರ್ಖಾನೆ ಪ್ರಸಿದ್ಧವಾದುದು. 1900ರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಮೈಸೂರ್ ಕಿರ್ಲೋಸ್ಕರ್ ಕಂಪನಿ ಹರಿಹರದ ಯಂತ್ರಪುರದಲ್ಲಿ ತನ್ನ ಉದ್ಯಮವನ್ನು ಪ್ರಾರಂಭಿಸಿತು. ಸಣ್ಣ ಕಾರ್ಯಾಗಾರಗಳಿಗೆ ಮತ್ತು ದುರಸ್ತಿ ಕೇಂದ್ರಗಳಿಗೆ ಸೂಕ್ತವೆನಿಸಿದ ಹರಿಹರ ಲೇಥ್‌ಗಳು ಪ್ರಸಿದ್ಧವಾಗಿವೆ. ಜಿಲ್ಲೆಯ ಇತರ ತಾಲ್ಲೂಕು ಕೇಂದ್ರಗಳಲ್ಲೂ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಸ್ಥಾಪಿತವಾಗಿವೆ. ಈಚೆಗೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಖಾಸಗಿ ವಲಯದಲ್ಲಿ ಶಾಮನೂರ್ ಕಂಪನಿಯಿಂದ ಸಕ್ಕರೆ ಕಾರ್ಖಾನೆ ಮತ್ತು ವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಗಿದೆ. ಜಗಳೂರು ಕಂಬಳಿ ನೇಯ್ಗೆಗೆ ಪ್ರಸಿದ್ಧ. ಜಾಗತೀಕರಣದ ಪ್ರಭಾವದಿಂದಾಗಿ ದಾವಣಗೆರೆಯ ಕೈಗಾರಿಕೆಗಳು ಸಂಕಷ್ಟದಲ್ಲಿವೆ. ರಾಜ್ಯದಲ್ಲಿ ಅತಿ ಹೆಚ್ಚು ಕಾರ್ಖಾನೆಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಇದು ಆರನೆಯ ಸ್ಥಾನದಲ್ಲಿದೆ.

ಜಿಲ್ಲೆಯಲ್ಲಿ ಒಟ್ಟು 410 ಉದ್ಯಮಗಳಿವೆ. 2 ಕೈಗಾರಿಕಾ ಪ್ರದೇಶಗಳು, 108 ಕೈಗಾರಿಕಾ ಷೆಡ್ಡುಗಳು, 3 ಸಕ್ಕರೆ ಕಾರ್ಖಾನೆಗಳು, 34 ಹತ್ತಿ ಗಿರಣಿಗಳು, 1 ರಾಸಾಯನಿಕ ಕಾರ್ಖಾನೆ, 12 ಎಂಜಿನಿಯರಿಂಗ್ ಕಾರ್ಖಾನೆಗಳು ಇವೆ. ಜಿಲ್ಲೆಯ ವಿವಿಧೆಡೆ ಮ್ಯಾಂಗನೀಸ್, ಕಬ್ಬಿಣ ಮತ್ತು ತಾಮ್ರದ ಗಣಿಗಳು ಉದ್ಯೋಗ ನಿರ್ಮಾಣಕ್ಕೆ ಕೊಡುಗೆ ನೀಡಿವೆ.

ಜಿಲ್ಲೆಯಲ್ಲಿ 85 ವಾಣಿಜ್ಯ ಬ್ಯಾಂಕುಗಳು ಮತ್ತು 44 ಗ್ರಾಮೀಣ ಬ್ಯಾಂಕುಗಳು ಕಾರ್ಯನಿರತವಾಗಿವೆ. 212 ವ್ಯವಸಾಯ ಸಹಕಾರ ಸಂಘಗಳೂ 97 ವ್ಯವಸಾಯೇತರ ಸಹಕಾರ ಸಂಘಗಳೂ ಅಸ್ತಿತ್ವದಲ್ಲಿವೆ. ನಿಯಂತ್ರಿತಮಾರುಕಟ್ಟೆಗಳ ಸಂಖ್ಯೆ 5, ಉಪಮಾರುಕಟ್ಟೆಗಳು 9.

**ಶಿಕ್ಷಣ:** ಜಿಲ್ಲೆಯ ಹೆಚ್ಚಿನ ತಾಲ್ಲೂಕುಗಳು ಮೊದಲಿಗೆ ಚಿತ್ರದುರ್ಗ ಜಿಲ್ಲೆಗೆ ಸೇರಿದ್ದವು. ಆದರೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ನಗರಕ್ಕಿಂತ ದಾವಣಗೆರೆ ನಗರವೇ ಹೆಚ್ಚಿನ ಪ್ರಗತಿ ಕಂಡಿತ್ತು. ಇದಕ್ಕೆ ಮುಖ್ಯ ಕಾರಣ ಈ ನಗರದ ಕೈಗಾರಿಕೀಕರಣ. 1900ರಲ್ಲಿ ದಾವಣಗೆರೆ ಯಲ್ಲಿ ಒಂದು ಆಂಗ್ಲೋವರ್ನಾಕ್ಯುಲರ್ ಶಾಲೆ ಪ್ರಾರಂಭವಾಯಿತು. 1913ರಿಂದ ಮೈಸೂರು ಸರ್ಕಾರ ಅನುದಾನ ಯೋಜನೆಯನ್ನು ಜಾರಿಗೆ ತಂದಿದ್ದರಿಂದ ಗ್ರಾಮಗಳ ಹಂತದಲ್ಲೂ ಪ್ರಾಥಮಿಕ ಶಾಲೆಗಳು ಕಾರ್ಯಾರಂಭ ಮಾಡಿದವು. ದಾವಣಗೆರೆಗೆ 1922ರಲ್ಲಿ ಪ್ರೌಢಶಾಲೆ ಬಂತು. ಇಂಟರ್ ಮೀಡಿಯಟ್ ಕಾಲೇಜಿನ ಪ್ರಾರಂಭ (1947), ದಾವಣಗೆರೆ ಶಿಕ್ಷಣ ಕೇಂದ್ರವಾಗಿ ಬೆಳೆಯಲು ಅಂಕುರವಾಯಿತು. ಚಿತ್ರದುರ್ಗದಲ್ಲಿ

ಸ್ಥಾಪನೆಯಾದ ಪ್ರಥಮ ದರ್ಜೆ ಕಾಲೇಜು (1948) ಇಲ್ಲಿನ ವಿದ್ಯಾರ್ಥಿಗಳಿಗೆ ಪದವಿ ಶಿಕ್ಷಣಕ್ಕೆ ದಾರಿ ಮಾಡಿತು.

ಸ್ವಾತಂತ್ರ್ಯಾನಂತರ ದಾವಣಗೆರೆ ನಗರ ಶಿಕ್ಷಣ ಕ್ಷೇತ್ರದಲ್ಲಿ ದಾಪುಗಾಲು ಹಾಕಿ ಮುನ್ನಡೆಯಿತು. ಅನೇಕ ಖಾಸಗಿ ಸಂಘ ಸಂಸ್ಥೆಗಳು, ಮಠಗಳು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಮುಂದೆ ಬಂದವು. 1950ರಲ್ಲಿ ಬಾಲಕಿಯರ ಪ್ರೌಢಶಾಲೆ ಅಸ್ತಿತ್ವಕ್ಕೆ ಬಂತು. 1951ರಲ್ಲಿ ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪನವರ ಹೆಸರಿನಲ್ಲಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿತವಾಯಿತು. ಬಾಪೂಜಿ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ 1957ರಲ್ಲಿ ಪದವಿ ಕಾಲೇಜಿಗೆ ಅಸ್ತಿಭಾರ ಹಾಕಲಾಯಿತು. ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು 1960ರಲ್ಲಿ ಶಿಕ್ಷಕರ ತರಬೇತಿ ಸಂಸ್ಥೆಗಳು ತಲೆ ಎತ್ತಿದವು. 1964–65ರಲ್ಲಿ ಸರ್ಕಾರಿ ಆರ್ಟ್ಸ್ ಮತ್ತು ಕ್ರಾಫ್ಟ್ಸ್ ಶಾಲೆ ಜನ್ಮತಳೆಯಿತು. 1965ರಲ್ಲಿ ಬಿ.ಇಡಿ. ಕಾಲೇಜು ಆರಂಭವಾಯಿತು. 1966ರಲ್ಲಿ ಮಹಿಳಾ ಕಾಲೇಜು ಅಸ್ತಿತ್ವಕ್ಕೆ ಬಂದಿತು. 1991ರಲ್ಲಿ ಮತ್ತೊಂದು ಮಹಿಳಾ ಕಾಲೇಜು ಜನ್ಮತಳೆದಿರುವುದು ಇಲ್ಲಿ ಹೆಚ್ಚಿನ ಮಹಿಳಾ ವಿದ್ಯಾಭ್ಯಾಸದ ಬೆಳವಣಿಗೆಗೆ ಸಾಕ್ಷಿಯಾಗಿದೆ. ಜಯದೇವ ಜಗದ್ಗುರು ಮುರುಗರಾಜೇಂದ್ರ ವೈದ್ಯಕೀಯ ಕಾಲೇಜು 1965ರಲ್ಲಿ ಸ್ಥಾಪನೆಯಾಯಿತು. ನರ್ಸಿಂಗ್ ಶಾಲೆ (1970), ಅನಂತರ ಬಾಪೂಜಿ ಸಂಸ್ಥೆಯ ದಂತ ವಿಜ್ಞಾನ ಕಾಲೇಜು (1979), ಶುಶ್ರೂಷೆ ಕಾಲೇಜು (1991), ಔಷಧೀಯಶಾಸ್ತ್ರ (1992) ನೆಲೆಗೊಂಡವು.

ಕುವೆಂಪು ವಿಶ್ವವಿದ್ಯಾಲಯ ಇಲ್ಲಿನ ಲಲಿತಕಲೆ ಮತ್ತು ಕರಕುಶಲ ಶಾಲೆಯನ್ನು ಅಳವಡಿಸಿಕೊಂಡು ಲಲಿತಕಲೆ ಮತ್ತು ವಾಣಿಜ್ಯ (ಆನ್ವಯಿಕ) ಕಲಾ ವಿಷಯಗಳಲ್ಲಿ ಐದು ವರ್ಷದ ಶಿಕ್ಷಣಗಳನ್ನು ತೆರೆದಿದೆ. ದಾವಣಗೆರೆಗೆ ಹೊಂದಿಕೊಂಡಂತೆ 10ಕಿಮೀ ದೂರದ ತೋಳಹುಣಸೆ ಯಲ್ಲಿರುವ ಶಿವಗಂಗೋತ್ರಿ ಸ್ನಾತಕೋತ್ತರ ಕೇಂದ್ರ ಕುವೆಂಪು ವಿಶ್ವವಿದ್ಯಾಲ ಯಕ್ಕೆ ಸೇರಿದೆ. ಸಾರ್ವಜನಿಕ ಗ್ರಂಥಭಂಡಾರ, ವಸತಿ ಶಾಲೆಗಳು ಇಲ್ಲಿನ ಶೈಕ್ಷಣಿಕ ಪರಿಸರಕ್ಕೆ ಪೂರಕವಾಗಿವೆ. ಜಿಲ್ಲೆಯ ಇತರ ತಾಲ್ಲೂಕು ಕೇಂದ್ರಗಳಲ್ಲೂ ವಿವಿಧ ಶಾಲಾ ಕಾಲೇಜುಗಳಿವೆ.

ಜಿಲ್ಲೆಯ ಸಾಕ್ಷರತೆ ಸೇ.67.67ರಷ್ಟಿದೆ. ಪುರುಷ ಸಾಕ್ಷರತೆ ಸೇ.76.44, ಮಹಿಳಾ ಸಾಕ್ಷರತೆ ಸೇ.58.45 (2001). ಜಿಲ್ಲೆಯಲ್ಲಿ 638 ಪ್ರಾಥಮಿಕ ಶಾಲೆಗಳು, 266 ಪ್ರೌಢಶಾಲೆಗಳೂ 86 ಪದವಿಪೂರ್ವ ಕಾಲೇಜುಗಳೂ ಇವೆ. ಸಾಮಾನ್ಯ ಶಿಕ್ಷಣ ಕಾಲೇಜುಗಳೂ 3 ಪಾಲಿಟೆಕ್ನಿಕ್, 2 ಎಂಜಿನಿಯ ರಿಂಗ್ ಕಾಲೇಜುಗಳು, 1 ವೈದ್ಯಕೀಯ ಕಾಲೇಜು, 1 ಭಾರತೀಯ ವೈದ್ಯ ಪದ್ಧತಿ, 2 ದಂತ ವಿಜ್ಞಾನ ಕಾಲೇಜು ಇವೆ (1999–2000).

ದಾವಣಗೆರೆ ಜಿಲ್ಲೆ ಆರೋಗ್ಯ ಸೌಲಭ್ಯದ ದೃಷ್ಟಿಯಿಂದ ಇತರ ಕೆಲವು ಜಿಲ್ಲೆಗಳಿಗಿಂತ ಮುಂದಿದೆ. ಇದಕ್ಕೆ ಇಲ್ಲಿನ ಕೈಗಾರಿಕಾ ನಗರ ದಾವಣಗೆರೆ ಮತ್ತು ಇಲ್ಲಿನ ವೈದ್ಯಕೀಯ ಕಾಲೇಜು ಕಾರಣ. ಜಿಲ್ಲೆಯಲ್ಲಿ 5 ಸರ್ಕಾರಿ ಆಸ್ಪತ್ರೆಗಳಿವೆ, 1,130 ಹಾಸಿಗೆಗಳಿವೆ. ಒಂದು ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆ ಇದೆ. ಖಾಸಗಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳು ಸಾಕಷ್ಟಿವೆ. 2 ರಕ್ತ ಬ್ಯಾಂಕುಗಳಿವೆ. 70 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 33 ಪ್ರಾಥಮಿಕ ಆರೋಗ್ಯ ಘಟಕಗಳೂ ಇವೆ (2000).

**ಸಾರಿಗೆ ಸಂಪರ್ಕ :** ದಾವಣಗೆರೆ ಸಾರಿಗೆ ದೃಷ್ಟಿಯಿಂದ ಆಯಕಟ್ಟಿನ ಸ್ಥಳದಲ್ಲಿದೆ. ರಾಷ್ಟ್ರೀಯ ಹೆದ್ದಾರಿಗಳು ಈ ಸ್ಥಳದ ಮೂಲಕ ಹಾದು ಹೋಗುತ್ತವೆ. ಜೊತೆಗೆ ಕರಾವಳಿ ತೀರದಿಂದ ಬಳ್ಳಾರಿ, ಆಂಧ್ರಪ್ರದೇಶ ತಲುಪಲು ಇರುವ ಹೆದ್ದಾರಿ ಈ ಊರಿನ ಮೂಲಕವೇ ಹೋಗಬೇಕು. ಉತ್ತರ ಕರ್ನಾಟಕದ ಎಲ್ಲ ಜಿಲ್ಲಾಕೇಂದ್ರಗಳಿಗೂ ಇಲ್ಲಿಂದ ಉತ್ತಮ ರಸ್ತೆ ಸಂಪರ್ಕವಿದೆ. ಈ ಜಿಲ್ಲೆಯಲ್ಲಿ ಸಮತಟ್ಟಾದ ಪ್ರದೇಶ ಹೆಚ್ಚಿರುವುದ ರಿಂದ ರಸ್ತೆಗಳ ನಿರ್ಮಾಣಕ್ಕೆ ಇರುವ ಅಡೆ ತಡೆಗಳು ಕಡಿಮೆ. ಗ್ರಾಮೀಣ ರಸ್ತೆಗಳಿಗೆ ಇನ್ನೂ ಹೆಚ್ಚಿನ ಆದ್ಯತೆ ದೊರೆಯಬೇಕಾಗಿದೆ.

ಜಿಲ್ಲೆಯಲ್ಲಿ ಬೆಂಗಳೂರು–ಪುಣೆ ಹೆದ್ದಾರಿ ದಾವಣಗೆರೆ, ಹರಿಹರದ ಮೂಲಕ ಹಾದು ಹೋಗುತ್ತದೆ. ಇನ್ನೊಂದು ರಾಷ್ಟ್ರೀಯ ಹೆದ್ದಾರಿ ಚಿತ್ರದುರ್ಗದಿಂದ ಜಿಲ್ಲೆಯ ಜಗಳೂರು ಮೂಲಕ ಮಹಾರಾಷ್ಟ್ರ ರಾಜ್ಯದ ಸೋಲಾಪುರವನ್ನು ತಲುಪುತ್ತದೆ. ಜಿಲ್ಲೆಯಲ್ಲಿ ಈ ಎರಡು ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ 85ಕಿಮೀ, ರಾಜ್ಯ ಹೆದ್ದಾರಿಗಳ ಉದ್ದ 263ಕಿಮೀ, ಮುಖ್ಯ ಜಿಲ್ಲಾ ರಸ್ತೆಗಳು 86ಕಿಮೀ, ಗ್ರಾಮೀಣ ರಸ್ತೆಗಳು 1,172ಕಿಮೀ, ತಾಲ್ಲೂಕು ಮಂಡಳಿ ರಸ್ತೆಗಳು 761ಕಿಮೀ. ಸೇತುವೆಗಳಿವೆ. ಜಿಲ್ಲೆಯಲ್ಲಿರುವ ಪಕ್ಕಾ ರಸ್ತೆಗಳ ಉದ್ದ 3,465ಕಿಮೀ. ಬೆಂಗಳೂರು–ಮೀರಜ್ ರೈಲುಮಾರ್ಗ ಈ ಜಿಲ್ಲೆಯ ಮೂಲಕ ಹಾದುಹೋಗುತ್ತದೆ. ಜಿಲ್ಲೆಯಲ್ಲಿ 43ಕಿಮೀ ಬ್ರಾಡ್‌ಗೇಜ್ ರೈಲು ಮಾರ್ಗವಿದೆ. ಹರಿಹರ ಮತ್ತು ದಾವಣಗೆರೆ ಮುಖ್ಯ ರೈಲು ನಿಲ್ದಾಣಗಳು ಹಾಗೂ ಜಂಕ್ಷನ್. ಜಿಲ್ಲೆಯಲ್ಲಿ 258 ಅಂಚೆ ಕಚೇರಿಗಳೂ 44 ದೂರವಾಣಿ ಕೇಂದ್ರಗಳೂ ಇವೆ (2000).

**ಸಂಸ್ಕೃತಿ:** ದಾವಣಗೆರೆ ಜಿಲ್ಲೆಯದು ಮುಖ್ಯವಾಗಿ ಗ್ರಾಮೀಣ ಸಂಸ್ಕೃತಿ. ವ್ಯವಸಾಯ ಸಂಬಂಧವಾದ ವಿಶಿಷ್ಟ ಹಬ್ಬಗಳನ್ನು ಆಚರಿಸಲಾಗುತ್ತದೆ. ಅವುಗಳಲ್ಲಿ ಸಂಕ್ರಾಂತಿ ಪ್ರಮುಖವಾದುದು. ಈ ಜಿಲ್ಲೆ ವೀರಶೈವ ಸಮುದಾಯದ ಜನಸಂಖ್ಯೆಯನ್ನು ಗಣನೀಯ ಪ್ರಮಾಣದಲ್ಲಿ ಹೊಂದಿರುವುದರಿಂದ ಬಸವಣ್ಣನವರ ಜಯಂತಿ ವಿಜೃಂಭಣೆಯಿಂದ ನಡೆಯುತ್ತದೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಹೆಚ್ಚು ಜನಪ್ರಿಯವಾದ ಹೋಳಿ ಅಥವಾ ಕಾಮನಹಬ್ಬ ಇಲ್ಲಿ ಸಡಗರದಿಂದ ಆಚರಿಸಲ್ಪಡುತ್ತದೆ. ಜನಪದ ರಂಗಭೂಮಿಯ ಬಯಲಾಟ ಅಥವಾ ಬಯಲನಾಟಕಗಳು, ಲಾವಣಿ ಇನ್ನೂ ಸಕ್ರಿಯವಾಗಿ ಉಳಿದಿವೆ. ಜಿಲ್ಲೆಯಲ್ಲಿ ಅನೇಕ ಜಾತ್ರೆ, ಉತ್ಸವಗಳು ನಡೆಯುತ್ತವೆ.

ದಾವಣಗೆರೆಯಲ್ಲಿ ದುರ್ಗಮ್ಮನ ಜಾತ್ರೆ ಫಾಲ್ಗುಣ ಮಾಸದಲ್ಲಿ ಎರಡು ವರ್ಷಕ್ಕೊಮ್ಮೆ ನಡೆಯುತ್ತದೆ. ಹರಿಹರದಲ್ಲಿ ಯುಗಾದಿ ಆಚೆಚೆ ಸಂಗಮೇಶ್ವರ ಜಾತ್ರೆ ಏರ್ಪಡುತ್ತದೆ. ಜಗಳೂರು ತಾಲ್ಲೂಕಿನ ಗುರುಸಿದ್ಧಪುರ ದಲ್ಲಿ ಮಾರ್ಚ್ ತಿಂಗಳಲ್ಲಿ ಚೌಡೇಶ್ವರಿ ಜಾತ್ರೆ ಅದ್ದೂರಿಯಿಂದ ನಡೆಯುತ್ತದೆ. ಜಗಳೂರು ತಾಲ್ಲೂಕಿನ ಕಲ್ಲೇದೇವರಪುರದಲ್ಲಿ ಏಪ್ರಿಲ್ ನಲ್ಲಿ ನಡೆಯುವ ಮೇಳ ಪ್ರಸಿದ್ಧವಾಗಿದೆ. ಅದೇ ತಾಲ್ಲೂಕಿನ ಕೋಟೆಗುಡ್ಡೆ ಯಲ್ಲಿ ವೀರಭದ್ರ ದೇವರ ಬೃಹತ್ ಜಾತ್ರೆ ಜರುಗುತ್ತದೆ. ಹೊನ್ನಾಳಿ ತಾಲ್ಲೂಕಿನ ಮಾರಿಕೊಪ್ಪದಲ್ಲಿ ನಡೆಯುವ ಹಾಲದಮ್ಮನ ಜಾತ್ರೆ ವಿಶೇಷವಾದುದು. ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿಯ ರಂಗನಾಥ ರಥೋತ್ಸವ ಜನಪ್ರಿಯವಾಗಿದೆ. ಜಗಳೂರು ತಾಲ್ಲೂಕಿನ ಬಿಸ್ತುಹಳ್ಳಿ ಇನ್ನೊಂದು ಜಾತ್ರಾಸ್ಥಳ.

ಅನಗೋಡು, ಅಣಜಿ, ಆನೆಕೊಂಡ, ಅಸಗೂಡು, ಹಾಲುವನ, ಹರಿಹರ, ನಂದಿತಾವರೆ, ಶಂಕರನಹಳ್ಳಿ, ಬಾಡ, ಜಗಳೂರು ಕಬ್ಬೂರು, ಕೊಡಗನೂರು, ಕೊಗ್ಗನೂರು, ಲೊಕ್ಕಿಕೆರೆ, ಮಳಲಕೆರೆ ಬಲ್ಲೇಶ್ವರ, ನ್ಯಾಮತಿ, ಬೆಳಗುತ್ತಿ, ಹಾಲವಾಗಲು, ನೀಲಗುಂದ– ಇವು ಈ ಜಿಲ್ಲೆಯ ಪ್ರೇಕ್ಷಣೀಯ ಹಾಗೂ ಐತಿಹಾಸಿಕ ಸ್ಥಳಗಳು. ಹರಪನಹಳ್ಳಿ ತಾಲ್ಲೂಕಿನಲ್ಲಿ ರುವ ಉಚ್ಚಂಗಿದುರ್ಗ **(ನೋಡಿ)** ಪಾಂಡ್ಯರ ಪ್ರಾಚೀನ ರಾಜಧಾನಿಯಾಗಿದ್ದು ದುರ್ಗಮವಾದ ದುರ್ಗಕ್ಕೆ ಮಾದರಿಯಾಗಿದೆ. ಹರಪನಹಳ್ಳಿ ತಾಲ್ಲೂಕಿನ

ಚಿಗಟೇರಿಯಲ್ಲಿ ತೊರೆಗಳಲ್ಲಿ ತೇಲಿ ಬರುತ್ತಿದ್ದ ಚಿನ್ನದ ಅದಿರನ್ನು ಸಂಗ್ರಹಿಸಲಾಗುತ್ತಿತ್ತೆಂದು ಹೇಳಲಾಗಿದೆ. ಸಂತೆಬೆನ್ನೂರಿನಲ್ಲಿ ಬಸವಾಪಟ್ಟಣದ ಪಾಳೆಯಗಾರರ ಅರಮನೆಯಿದೆ. ಚೆನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಅಲ್ಲಿನ ಪಾಳೆಯಗಾರರ ರಾಜಧಾನಿಯಾಗಿತ್ತು. ಹೊನ್ನಾಳಿ ತಾಲ್ಲೂಕಿನ ಬಿಳಗುತ್ತಿ ಪ್ರಾಚೀನ ಸಿಂದರ ರಾಜಧಾನಿಯಾಗಿತ್ತು. ಹರಪನಹಳ್ಳಿಯಲ್ಲಿ ಪಾಳೆಗಾರರು ಆಳುತ್ತಿದ್ದರು.

**ಇತಿಹಾಸ :** ಜಿಲ್ಲೆಯು ಅನೇಕ ಪೌರಾಣಿಕ ಕಥನಗಳಿಂದ ಕೂಡಿದ ಸ್ಥಳಗಳನ್ನು ಹೊಂದಿದೆ. ಅದರಲ್ಲಿ ಹರಿಹರ ಮುಖ್ಯವಾದುದು. ಹರಿಹರದಲ್ಲಿ ಗುಹಾಸುರನೆಂಬ ರಾಕ್ಷಸನಿದ್ದನೆಂದೂ ಅವನು ತನ್ನ ತಪಸ್ಸಿನಿಂದ ಹರಿಹರ ದೇವತೆಗಳ ಅನುಗ್ರಹಕ್ಕೆ ಪಾತ್ರವಾಗಿ ಯಾರಿಂದಲೂ ತನಗೆ ಮರಣ ಬರದಂತೆ ವರ ಕೇಳಿ ಪಡೆದನೆಂದು ಪೌರಾಣಿಕ ಕತೆ ಇದೆ. ಆಗ ಇವನ ಉಪಟಳದಿಂದ ಜನರನ್ನು ಪಾರು ಮಾಡಲು ಹರಿಹರರಿಬ್ಬರೂ ಹರಿಹರ ಎಂಬ ಏಕರೂಪ ಧರಿಸಿ ಗುಹಾಸುರನನ್ನು ಸಂಹರಿಸಿದರೆಂದೂ ಸ್ಥಳಪುರಾಣ. ಧರ್ಮರಾಯ ತಂಗಿದ್ದ ಹರಿಹರದಲ್ಲಿ ಆತನ ಮರಿಮಗ ಜನಮೇಜಯರಾಯ ಹರಿಹರ ದೇವರಿಗೆ ದಾನ ನೀಡಿದನೆಂದು ಪ್ರತೀತಿ. ಹೊನ್ನಾಳಿ ತಾಲ್ಲೂಕಿನ ಕಮ್ಮಾರಗಟ್ಟೆಯಲ್ಲಿ ಪರಶುರಾಮನು ದಿಗ್ವಿಜಯದ ಅನಂತರ ತನ್ನ ಕತ್ತಿಯನ್ನು ತೊಳೆದನೆಂದೂ ಇದು ಕರ್ಮಹಾರ ಕ್ಷೇತ್ರವೆಂದು ಹೆಸರಾಗಿದ್ದಿತೆಂದೂ ಸ್ಥಳ ಪುರಾಣವಿದೆ.

ನೆರೆಯ ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ ಮತ್ತು ಬ್ರಹ್ಮಗಿರಿಗಳಲ್ಲಿ ದೊರೆತಿರುವ ಅಶೋಕನ ಶಾಸನಗಳು ಈ ಪ್ರದೇಶದಲ್ಲಿ ಪ್ರ.ಶ.ಪೂ. 3ನೆಯ ಶತಮಾನದಲ್ಲಿ ರಾಜಕೀಯ ವ್ಯವಸ್ಥೆ ಬೇರೂರಿದ್ದಕ್ಕೆ ಸಾಕ್ಷಿಯಾಗಿದೆ. ನಂದರು ಮತ್ತು ಮೌರ್ಯರು ಈ ಪ್ರದೇಶದಲ್ಲಿ ಆಳಿದರೆಂದು ತಿಳಿದುಬರುತ್ತದೆ. ಪ್ರಾಚೀನ ಕುಂತಲ ದೇಶದಲ್ಲಿ ನಂದರು ಆಳುತ್ತಿದ್ದರೆಂದು ಪ್ರತೀತಿ. ಅಶೋಕನ ಶಾಸನದಲ್ಲಿ ಉಕ್ತವಾಗಿರುವ 'ಇಸಿಲ' ಎಂಬ ಸ್ಥಳ ಈ ಜಿಲ್ಲೆಯ ಈಗಿನ ಬ್ರಹ್ಮಗಿರಿ ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಮೌರ್ಯರ ಉತ್ತರಾಧಿಕಾರಿಗಳಾದ ಸಾತವಾಹನರು ದಖನ್‌ನ ಬಹುಭಾಗವನ್ನು ಶತಮಾನಗಳ ಕಾಲ ಆಳಿದರು. ಚಂದ್ರವಳ್ಳಿ, ಬ್ರಹ್ಮಗಿರಿ ಮೊದಲಾದೆಡೆಗಳಲ್ಲಿ ದೊರೆತಿರುವ ಆ ಕಾಲದ ನಾಣ್ಯಗಳು ಮತ್ತು ಇತರ ಅವಶೇಷಗಳು ಸಾತವಾಹನರು ಇಲ್ಲಿ ಆಳುತ್ತಿದ್ದುದನ್ನು ದೃಢಪಡಿಸುತ್ತವೆ.

ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ರಾಜ್ಯ ಸ್ಥಾಪಿಸಿದ ಕದಂಬರ ರಾಜ್ಯಕ್ಕೆ ಈ ಜಿಲ್ಲೆ ಸೇರಿದ್ದಿತು. ಚಂದ್ರವಳ್ಳಿ ಕಣಿವೆಯಲ್ಲಿ ಈ ಮನೆತನದ ಸ್ಥಾಪಕ ಮಯೂರಶರ್ಮನ ಪ್ರಾಕೃತ ಶಾಸನ ದೊರೆತಿದೆ. ಕದಂಬರು 4 ರಿಂದ 6ನೆಯ ಶತಮಾನದವರೆಗೂ ಈ ಪ್ರದೇಶವನ್ನು ಆಳಿದರು. 6ನೆಯ ಶತಮಾನದ ಕೊನೆಯ ಹೊತ್ತಿಗೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ ಚಳುಕ್ಯರು ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಪ್ರಬಲ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದರು. ಎರಡನೆಯ ಪುಲಕೇಶಿಯ ಕಾಲದಲ್ಲಿ (610–42) ಈ ಸಾಮ್ರಾಜ್ಯ ಅತ್ಯುನ್ನತ ವೈಭವವನ್ನು ಕಂಡಿತು. 753ರಲ್ಲಿ ರಾಷ್ಟ್ರಕೂಟರ ದಂತಿದುರ್ಗ ಚಾಳುಕ್ಯರ ಆಳ್ವಿಕೆಯನ್ನು ಕೊನೆಗಾಣಿಸಿದ. 973 ರವರೆಗೂ ಆಳಿದ ರಾಷ್ಟ್ರಕೂಟರು ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಎರಡು ಶತಮಾನಗಳ ಕಾಲ ಭಾರತದ ಪ್ರಮುಖ ರಾಜಕೀಯ ಶಕ್ತಿಯಾಗಿ ಆಳಿದರು. ಈ ಅವಧಿಯಲ್ಲಿ ತಲಕಾಡಿನ ಗಂಗರು, ನೊಳಂಬರು– ಈ ಜಿಲ್ಲೆಯ ಕೆಲವು ಭಾಗಗಳನ್ನು ರಾಷ್ಟ್ರಕೂಟರ ಸಾಮಂತರಾಗಿ ಆಳುತ್ತಿದ್ದುದು ತಿಳಿದುಬರುತ್ತದೆ.

ಕಲ್ಯಾಣಿಚಾಳುಕ್ಯ ವಂಶಸ್ಥನಾದ ಎರಡನೆಯ ತೈಲಪ 973ರಲ್ಲಿ ರಾಷ್ಟ್ರಕೂಟರನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ. ಬಿದರೆ ಜಿಲ್ಲೆಯ ಕಲ್ಯಾಣದಿಂದ ಆಳಿದ ಇವರು ಹಿಂದಿನ ಸಾಮ್ರಾಜ್ಯ ವ್ಯವಸ್ಥೆಯನ್ನು ಮುಂದುವರಿಸಿದರು. ಆದರೆ ಇವರ ಕಾಲದಲ್ಲಿ ಹೊಯ್ಸಳ ವಿಷ್ಣುವರ್ಧನ (1108– 42) ಬನವಾಸಿ, ಹಾನಗಲ್ಲು ಮತ್ತು ಉಚ್ಚಂಗಿ ಪ್ರದೇಶಗಳನ್ನು ವಶಪಡಿಸಿಕೊಂಡ. ಮುಂದೆ ಹೊಯ್ಸಳರು ಚಾಳುಕ್ಯರ ಸಾಮಂತರಾಗಿ ಮತ್ತು ಸ್ವತಂತ್ರವಾಗಿ ಈ ಜಿಲ್ಲೆಯ ಮೇಲೆ ಹಿಡಿತ ಹೊಂದಿದ್ದರು. ಚಾಳುಕ್ಯರು 12ನೆಯ ಶತಮಾನದ ಕೊನೆಯ ಹೊತ್ತಿಗೆ ನಿರ್ಗಮಿಸಿದರು. ಮುಂದೆ ಈ ಪ್ರದೇಶ ಹೊಯ್ಸಳರು ಮತ್ತು ದೇವಗಿರಿಯ ಸೇವುಣರ ನಡುವಿನ ಸಂಘರ್ಷದ ವಲಯಕ್ಕೆ ಸೇರಿತು. ರಾಜಕೀಯ ಅಸ್ಥಿರತೆ ಇದ್ದ 12ನೆಯ ಶತಮಾನದ ಉತ್ತರಾರ್ಧ ಭಾಗದಲ್ಲಿ ಉಚ್ಚಂಗಿಯಿಂದ ಪಾಂಡ್ಯ ಮನೆತನದ ಸ್ಥಳೀಯ ಅರಸರು ಆಳುತ್ತಿದ್ದು, ಅವರಿಗೆ ಈ ಜಿಲ್ಲೆಯ ಕೆಲವು ಪ್ರದೇಶಗಳು ಸೇರಿದ್ದವು. ಕದಂಬ ಮನೆತನದ ಸಾಮಂತರು ಇಲ್ಲಿ ಆಳಿದ್ದು ಕಂಡುಬರುತ್ತದೆ. ಸಿಂದರು ಹೊಯ್ಸಳರಿಗೆ ಮತ್ತು ಸೇವುಣರಿಗೆ ಸಾಮಂತರಾಗಿ ಆಳುತ್ತಿದ್ದರು. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಿಂದ ಆಳುತ್ತಿದ್ದ ನಿಡಗಲ್ಲು ಚೋಳರಿಗೆ ಈ ಜಿಲ್ಲೆಯ ಕೆಲವು ಭಾಗಗಳು ಸೇರಿದ್ದವು. ಇವರನ್ನು 1285ರಲ್ಲಿ ಹೊಯ್ಸಳ ಎರಡನೆಯ ನರಸಿಂಹ ಮೂಲೋತ್ಪಾಟನೆ ಮಾಡಿದ. ಹೊಯ್ಸಳರು ಮತ್ತು ಸೇವುಣರ ಅಧೀನದಲ್ಲಿ ಬೇರೆ ಬೇರೆ ಕಾಲಕ್ಕೆ ಸಾಮಂತರಾಗಿದ್ದ ಕುಮ್ಮಟದ ಕಂಪಿಲ ಅರಸರು ಕೆಲವು ಕಾಲ ಇಲ್ಲಿನ ಪ್ರದೇಶಗಳ ಮೇಲೆ ನಿಯಂತ್ರಣ ಹೊಂದಿದ್ದರು.

ಹೊಯ್ಸಳರು ಮತ್ತು ಸೇವುಣರು ಅವನತಿ ಹೊಂದಲು 14ನೆಯ ಶತಮಾನದ ಮಧ್ಯಭಾಗದಲ್ಲಿ ದೆಹಲಿಯ ಸುಲ್ತಾನರು ನಡೆಸಿದ ದಾಳಿಗಳು ಪ್ರಮುಖ ಕಾರಣಗಳಾದವು. 1336ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯಕ್ಕೆ ತುಂಗಭದ್ರಾ ತಟದ ಹಂಪೆ ರಾಜಧಾನಿಯಾಯಿತು. ಆಗಿನಿಂದ ಶತಮಾನಗಳ ಕಾಲ ಈ ಜಿಲ್ಲೆಯೇ ವಿಜಯನಗರದ ಸಾಮ್ರಾಜ್ಯದ ಭಾಗವಾಗಿತ್ತು. ಆಗ ಇಲ್ಲಿ ಕಟ್ಟಿಸಿದ ದೇವಾಲಯಗಳ ಬಗ್ಗೆ, ನೀಡಿದ ದಾನಗಳ ಬಗ್ಗೆ, ಸ್ಥಾಪಿಸಿದ ಅಗ್ರಹಾರಗಳ ಬಗ್ಗೆ ಹಲವಾರು ಶಾಸನಗಳು ಸಾಕ್ಷಿಯಾಗಿವೆ. ಆಗ ಜಗಳೂರು ಸೀಮೆ, ಹರಿಹರಸೀಮೆ, ಮಲೆಯಬೆನ್ನೂರು ಮೊದಲಾದುವು ಸಾಮ್ರಾಜ್ಯದ ಜಹಗೀರುಗಳಾಗಿದ್ದು ಅವನ್ನು ತಮ್ಮ ಪ್ರೀತಿಪಾತ್ರ ಅಧಿಕಾರಿಗಳಿಗೆ ನೀಡಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಿ ಸಾಮಂತರು ಮತ್ತು ನಾಯಕತನ ಮಾಡಿಕೊಂಡಿದ್ದ ಹಲವಾರು ಅಧೀನ ಆಳ್ವಿಕೆಗಾರರು ಆ ಸಾಮ್ರಾಜ್ಯದ ಪತನದ ಅನಂತರ ತುಂಡರಸರಾಗಿ ಸ್ವತಂತ್ರವಾಗಿ ಆಳತೊಡಗಿದರು. ಅಂತಹ ಕೆಲವು ಪಾಳೆಯಗಾರರ ಮನೆತನಗಳು ಜಿಲ್ಲೆಯ ವಿವಿಧ ಭಾಗಗಳನ್ನು ಬೇರೆ ಬೇರೆ ಕಾಲದಲ್ಲಿ ತಮ್ಮ ಅಧೀನಕ್ಕೊಳಪಡಿಸಿಕೊಂಡಿದ್ದವು. ಅವುಗಳಲ್ಲಿ ಚಿತ್ರದುರ್ಗದ ನಾಯಕ ಮನೆತನ, ನಿಡುಗಲ್, ಹಾರತಿ, ನಾಯಕನಹಟ್ಟಿ, ಮಾಥೋಡು ಹಾಗೂ ಸಂತೆಬೆನ್ನೂರಿನ ಪಾಳೆಯಗಾರರು ಮುಖ್ಯವಾದವರು. ಬಿದನೂರು ರಾಜ್ಯಕ್ಕೆ ಈ ಜಿಲ್ಲೆ ಪೂರ್ವದ ಸರಹದ್ದು ಪ್ರದೇಶವಾಗಿತ್ತು. ರಾಣಿ ಚನ್ನಮಾಜಿ ಚನ್ನಗಿರಿಯಲ್ಲಿ ಕೋಟೆ ಕಟ್ಟಿಸಿದಳು. ಆಕೆಯ ಹೆಸರನ್ನೇ ಈ ಊರಿಗೆ ಇಡಲಾಯಿತು. ಚಿತ್ರದುರ್ಗ ನಾಯಕರ ಬಂಧುಗಳಾಗಿದ್ದ ನಾಯಕ ಮನೆತನವೊಂದು ಹರಪನಹಳ್ಳಿಯಿಂದ ಆಳುತ್ತಿತ್ತು. ಇವರಿಗೆ 460 ಗ್ರಾಮಗಳು ಸೇರಿದ್ದವು. ಹೈದರ್ ಮತ್ತು ಟಿಪ್ಪುಸುಲ್ತಾನರು ಚಿತ್ರದುರ್ಗ ಮತ್ತು ಹರಪನಹಳ್ಳಿ

ಮನೆತನಗಳ ಅಂತ್ಯಕ್ಕೆ ಕಾರಣರಾದರು. ಮರಾಠರು ಮತ್ತು ಬಿಜಾಪುರದ ಸುಲ್ತಾನರು ಆಗಾಗ ಈ ಪ್ರದೇಶಗಳ ಮೇಲೆ ದಾಳಿ ಮಾಡುತ್ತಿದ್ದು ಅವರ ರಾಜಕೀಯ ಹಸ್ತಕ್ಷೇಪ ನಿರಂತರವಾಗಿದ್ದಿತು.

ದಾವಣಗೆರೆ ಜಿಲ್ಲೆ ಸ್ವಾತಂತ್ರ್ಯ ಹೋರಾಟಕ್ಕೆ ಹೆಚ್ಚಿನ ಕೊಡುಗೆ ನೀಡಿದೆ. ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸುಧಾರಕ ಹರ್ಡೇಕರ ಮಂಜಪ್ಪನವರು 1924ರಲ್ಲಿ ಹರಿಹರದಲ್ಲಿ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿದರು. 1931ರಲ್ಲಿ ಚಿತ್ರದುರ್ಗದಲ್ಲಿ ಇವರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ದೊಡ್ಡ ಸಮಾವೇಶ ಜರುಗಿತು. ದಾವಣಗೆರೆಯಲ್ಲಿ 1932ರಲ್ಲಿ ವಿದೇಶಿ ಬಟ್ಟೆಗಳಿಗೆ ಬೆಂಕಿ ಹಚ್ಚಲಾಯಿತು. ಎಸ್. ನಿಜಲಿಂಗಪ್ಪ, ಚಂದುರ್, ಎಸ್. ವಾಸುದೇವರಾವ್, ಬಳ್ಳಾರಿ ಸಿದ್ದಮ್ಮ, ನಾಗರತ್ನಮ್ಮ, ಎಂ. ಗೋವಿಂದರೆಡ್ಡಿ ಮೊದಲಾದವರ ನೇತೃತ್ವ ದಲ್ಲಿ ಸ್ವಾತಂತ್ರ್ಯ ಚಳವಳಿ ಮುನ್ನಡೆಯಿತು. 1934ರಲ್ಲಿ ದಾವಣಗೆರೆಗೆ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ್ದು ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ನವಚೈತನ್ಯ ತುಂಬಿದ್ದಿತು. ಜಿಲ್ಲೆಯಲ್ಲಿ ಚಳವಳಿಯನ್ನು ಸಿದ್ಧಗೊಳಿಸಿ ನಡೆಸುವ ಕಾರ್ಯದಲ್ಲಿ ತೊಡಗಿದ್ದವರಲ್ಲಿ ಅ.ಹಿ. ಶಿವಾನಂದಸ್ವಾಮಿ, ಕೊಟಿಗಿ ಸಿದ್ಧಲಿಂಗಪ್ಪ, 'ಪುಢಾರಿ' ಪತ್ರಿಕೆಯ ಮರಗಯ್ಯ, 'ಪ್ರಜಾಶಕ್ತಿ', ಪತ್ರಿಕೆಯ ಡಿ.ಎಂ. ರೇವಣಸಿದ್ಧಯ್ಯ, ಖಾದಿ ಸಿದ್ದಪ್ಪ, ಎಂ. ಜಿ. ಬಸಪ್ಪ, ಎಚ್.ಎಸ್. ಕೊಟ್ರೂರಪ್ಪ, ಕೊಟ್ರೆನಂಜಪ್ಪ, ದೊಡ್ಡ ಹನುಮಂತಪ್ಪ, ಕಾಸಲ ಶ್ರೀನಿವಾಸಶೆಟ್ಟಿ, ಇಬ್ರಾಹಿಂ ಸಾಬ್, ಗುರುಶಾಂತಪ್ಪ, ಆಲೂರು ಬಸವರಾಜು, ಎಚ್.ಷಣ್ಮುಖಪ್ಪ ಮೊದಲಾದವರ ಹೆಸರುಗಳು ದಾಖಲಾಗಿವೆ.

ಸ್ವಾತಂತ್ರ್ಯ ಹೋರಾಟಕ್ಕೂ ಜನರ ಜ್ಞಾನ ವಿಸ್ತರಣೆಗೂ ಉತ್ತೇಜನ ನೀಡಿದ ಪ್ರಮುಖ ಮಾಧ್ಯಮವೆಂದರೆ ಪತ್ರಿಕೋದ್ಯಮ. 1906ರಲ್ಲಿ ದಾವಣಗೆರೆಯಲ್ಲಿ ಧನುರ್ಧಾರಿ ಎಂಬ ಪತ್ರಿಕೆಯನ್ನು ಹರ್ಡೇಕರ ಮಂಜಪ್ಪನವರು ಪ್ರಾರಂಭಿಸಿ ಜಿಲ್ಲೆಯ ಪತ್ರಿಕೋದ್ಯಮ ರಂಗಕ್ಕೆ ನಾಂದಿ ಹಾಡಿದರು. ಈ ಪತ್ರಿಕೆಯಲ್ಲಿ ಬಾಲಗಂಗಾಧರ ಟಿಳಕರ 'ಕೇಸರಿ' ಪತ್ರಿಕೆಯ ಸುದ್ದಿಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುತ್ತಿದ್ದರು. ಇದರಿಂದ ಅನೇಕ ರಾಷ್ಟ್ರೀಯ ವಿಷಯಗಳು ಜನರಿಗೆ ತಿಳಿಯುತ್ತಿದ್ದವು. ಮಂಜಪ್ಪನವರು ಶರಣ ಸಂದೇಶ ಎಂಬ ಇನ್ನೊಂದು ಪತ್ರಿಕೆಯನ್ನು ಹೊರತಂದು ಮಾನವ ಧರ್ಮದ ಬಗ್ಗೆ ಜನರಿಗೆ ತಿಳಿಯಪಡಿಸುತ್ತಿದ್ದರು. ಖಾದಿವಿಜಯ, ಉದ್ಯೋಗ- ಇವು ಇವರು ಆಲಮಟ್ಟಿಯಲ್ಲಿ ನೆಲೆಸಿದಾಗ ಹೊರತಂದ ಪತ್ರಿಕೆಗಳು. ಕಣಕುಪ್ಪಿ ಗುರುಪಾದಪ್ಪನವರು 1924ರಲ್ಲಿ ದಾವಣಗೆರೆ ಜನಸೇವಕ ಎಂಬ ಪತ್ರಿಕೆ ಆರಂಭಿಸಿದರು. ಅಂದಾನಯ್ಯ ನವರು ಸನ್ಮಾರ್ಗದರ್ಶನ ಎಂಬ ಕನ್ನಡ ವಾರಪತ್ರಿಕೆ ಹೊರತಂದರು. 1944ರಲ್ಲಿ ಕಡ್ಲೆಬಾಳು ಶಾಮರಾಯರು ಸಂಜಯ ಎಂಬ ಪತ್ರಿಕೆ ಆರಂಭಿಸಿದರು. ಮುಂದೆ ಇವರು ಸಂಯುಕ್ತ ಕರ್ನಾಟಕದ ಪ್ರಸಿದ್ಧ ಸಂಪಾದಕರಾದರು. ಬಸವರಾಜ ಕಟ್ಟೀಮನಿಯವರು ಸ್ವಾತಂತ್ರ್ಯ ಬಂದ ಹೊಸತರಲ್ಲಿ 'ಸ್ವತಂತ್ರ' ವಾರಪತ್ರಿಕೆ ಮತ್ತು 'ಉಷಾ' ಮಾಸಪತ್ರಿಕೆಯನ್ನು ಇಲ್ಲಿಂದ ಪ್ರಕಟಿಸಿದರು. ಕರ್ನಾಟಕ ಏಕೀಕರಣದ ಪ್ರತಿಪಾದಕ ಇಟಗಿ ವೇದಮೂರ್ತಿಯವರು 'ನೇತಾಜಿ' ಪತ್ರಿಕೆ ಆರಂಭಿಸಿದರು (1948).

ಜಿಲ್ಲೆಯ ಪ್ರಥಮ ದೈನಿಕ 'ಸಮಾಚಾರ'ವನ್ನು ನರಸಿಂಹ ಐಯ್ಯಂಗಾರರು ದಾವಣಗೆರೆಯಿಂದ ಪ್ರಕಟಿಸಿದರು. ಮಹದೇವ ಬಣಕಾರರು ಕೆಲಕಾಲ ಜಾಗೃತಿ ಎಂಬ ಮಾಸಪತ್ರಿಕೆ ನಡೆಸಿದರು. ಅನಂತರ ವಿಚಾರವಾಣಿ, ಬಹಿರಂಗ, ಎಚ್ಚರಿಕೆ, ಛಲದಂಕಮಲ್ಲ, ವಿಚಾರಕ್ರಾಂತಿ, ನಗರವಾಣಿ, ಜನತಾವಾಣಿ, ದಾವಣಗೆರೆ ಟೈಮ್ಸ್, ಮಲ್ನಾಡುವಾಣಿ, ಜನಮಿಡಿತ ಮುಂತಾದ ವಾರ ಹಾಗೂ ದಿನಪತ್ರಿಕೆಗಳು ದಾವಣಗೆರೆ ಜಿಲ್ಲೆಯ ಪತ್ರಿಕೋದ್ಯಮ ರಂಗವನ್ನು ಶ್ರೀಮಂತಗೊಳಿಸಿದವು. (ಡಿ.ಎಸ್.ಜೆ.)

**ದಾವಣಗೆರೆ ತಾಲ್ಲೂಕು :** ಈ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ತಾಲ್ಲೂಕನ್ನು ಪೂರ್ವದಲ್ಲಿ ಚಿತ್ರದುರ್ಗ, ಈಶಾನ್ಯದಲ್ಲಿ ಜಗಳೂರು, ಆಗ್ನೇಯದಲ್ಲಿ ಹೊಳಲ್ಕೆರೆ, ಪಶ್ಚಿಮದಲ್ಲಿ ಹರಿಹರ ತಾಲ್ಲೂಕುಗಳೂ ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆ ಸುತ್ತುವರಿದಿವೆ. ದಾವಣಗೆರೆ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನಲ್ಲಿ ಆನಗೋಡು, ದಾವಣಗೆರೆ ಮತ್ತು ಮಾಯಕೊಂಡ ಹೋಬಳಿಗಳೂ ಒಟ್ಟು 174 ಗ್ರಾಮಗಳೂ 2 ಪಟ್ಟಣಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 956.6 ಚ.ಕಿಮೀ. ಜನಸಂಖ್ಯೆ 6,02,523.

ತಾಲ್ಲೂಕಿನಲ್ಲಿ ಹೆಚ್ಚು ಒಣಭೂಮಿ ಇದೆ. ಮಾಯಕೊಂಡದಿಂದ ಅಣಜಿ ವರೆಗೆ ತಾಲ್ಲೂಕಿನ ಪೂರ್ವಭಾಗದಲ್ಲಿ ಬೆಟ್ಟದ ಸಾಲಿದ್ದರೂ ಇದು ಎತ್ತರವಿಲ್ಲದ ಗುಡ್ಡಗಳ ಮಾದರಿ. ಈ ತಾಲ್ಲೂಕಿನ ಮಾಯಕೊಂಡ ಗ್ರಾಮದ ಹತ್ತಿರ ಗಟ್ಟಿ ಎಳೆಯ ಕಲ್ನಾರು ಮತ್ತು ದೇವರಬೆಳ್ಳಿಕೆರೆಯ ಹತ್ತಿರ ಸುಣ್ಣ ಸಿಗುತ್ತವೆ. ತಾಲ್ಲೂಕಿನ ನೈಋತ್ಯದ ಸ್ವಲ್ಪ ಭಾಗದಲ್ಲಿ ಕೆಂಪುಮಣ್ಣು ಇದೆ. ಉಳಿದ ಭಾಗ ಕಪ್ಪು ಎರೆಮಣ್ಣಿನಿಂದ ಕೂಡಿದೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 639.9ಮಿಮೀ.

ಈ ತಾಲ್ಲೂಕಿನ ಪಶ್ಚಿಮದಲ್ಲಿ ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಯ ಗಡಿಯಾಗಿ ಹರಿಯುವ ತುಂಗಭದ್ರಾ ನದಿಯೇ ದಾವಣಗೆರೆ ತಾಲ್ಲೂಕಿಗೆ ಸಮೀಪವಿರುವ ನದಿಯೆನ್ನಬಹುದು. ಲಕ್ಕವಳ್ಳಿಯ ಭದ್ರಾ ಜಲಾಶಯದಿಂದ ತೆಗೆದಿರುವ ಮಲೆಬೆನ್ನೂರು ಮತ್ತು ದಾವಣಗೆರೆ ಶಾಖೆಯ ಎರಡು ನಾಲೆಗಳು ದಾವಣಗೆರೆಯನ್ನು ಹಾದುಹೋಗುತ್ತವೆ. ಹೊಳಲ್ಕೆರೆ ತಾಲ್ಲೂಕಿನ ಪಶ್ಚಿಮದ ಬೆಟ್ಟದಲ್ಲಿ ಹುಟ್ಟುವ ಸ್ಯಾಗಲಹಳ್ಳ ದಾವಣಗೆರೆ ತಾಲ್ಲೂಕಿನ ಮುಖಾಂತರ ಹರಿದು ತುಂಗಭದ್ರಾ ನದಿಯನ್ನು ಹರಿಹರ ನಗರದ ಹತ್ತಿರ ಸೇರುತ್ತದೆ. ಈ ತಾಲ್ಲೂಕಿನಲ್ಲಿ ಹೆಚ್ಚಿನ ವ್ಯವಸಾಯವೆಲ್ಲ ಮಳೆ ಮತ್ತು ಕೆರೆ-ಬಾವಿಗಳ ನೀರನ್ನು ಅವಲಂಬಿಸಿದೆ. ದಾವಣಗೆರೆ ನಾಲೆಯ ಆಶ್ರಯದಲ್ಲಿ ಈ ತಾಲ್ಲೂಕಿನ 56,000 ಎಕರೆಗೆ ನೀರು ಒದಗುತ್ತದೆ. ನೀರನ್ನು ಹೆಚ್ಚು ಹಿಡಿದಿಟ್ಟುಕೊಳ್ಳುವ ಗುಣವುಳ್ಳ ಫಲವತ್ತಾದ ಕರಿಮಣ್ಣಿನ ಭೂಮಿ ಇದ್ದು ಮಳೆಗಾಲದಲ್ಲಿ 50-63 ಮಿಮೀ ಮಳೆ ಬೀಳುವುದರಿಂದ ತಾಲ್ಲೂಕಿನಲ್ಲಿ ವ್ಯವಸಾಯ ಚೆನ್ನಾಗಿದೆ. ಜೋಳ, ಹತ್ತಿ, ನೆಲಗಡಲೆ, ದ್ವಿದಳ ಧಾನ್ಯಗಳು, ರಾಗಿ, ಕಬ್ಬು, ಬತ್ತ- ಇವನ್ನು ಬೆಳೆಯುತ್ತಾರೆ.

ದಾವಣಗೆರೆ ತಾಲ್ಲೂಕು ಇಂದು ಕೈಗಾರಿಕೆಗೆ ಪ್ರಸಿದ್ಧವಾಗಿದೆ. ಇಲ್ಲಿ ಅನೇಕ ಹತ್ತಿ ಮತ್ತು ತೈಲೋತ್ಪಾದನ ಕಾರ್ಖಾನೆಗಳಿವೆ. ಉತ್ತಮ ರೈಲು ಮತ್ತು ವಾಹನ ಸಂಪರ್ಕವುಳ್ಳ ಮಾರ್ಗಗಳಿದ್ದು ತಾಲ್ಲೂಕಿನಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥಿತವಾಗಿದ್ದು ವ್ಯಾಪಾರ ವಾಣಿಜ್ಯಾಭಿವೃದ್ಧಿಗೆ ನೆರವಾಗಿವೆ.

ಪ್ರೌಢಶಾಲೆಗಳೂ ವೈದ್ಯಕೀಯ, ತಾಂತ್ರಿಕ ತರಬೇತಿ, ಕುಶಲ ಕೈಗಾರಿಕಾ ತರಬೇತಿ ಶಾಲೆ, ಉಪಾಧ್ಯಾಯ ತರಬೇತಿ ಶಾಲೆಗಳೂ ಇದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಕುವೆಂಪು ವಿಶ್ವವಿದ್ಯಾಲಯವು ಇಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆದಿದೆ. ಮಾಯಾಕೊಂಡ, ಹೊನ್ನೂರು, ಕೊಂಡಗಾಲ ಗ್ರಾಮಗಳಲ್ಲಿ ವೈದ್ಯಕೀಯ ಸೌಲಭ್ಯವಿರುವುದರ ಜೊತೆಗೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಇದೆ.

ದಾವಣಗೆರೆಗೆ 16ಕಿಮೀ ಆಗ್ನೇಯದಲ್ಲಿರುವ ಹನ್ನೊಂದನೆಯ ಶತಮಾನದ ಸಿದ್ಧೇಶ್ವರ ದೇವಾಲಯವಿರುವ ಆನಗೋಡು, ಸು. 450ರ ಕಾಲದ ಕದಂಬರ ಶಾಸನವಿರುವ ದಾವಣಗೆರೆಯಿಂದ ಪೂರ್ವಕ್ಕೆ 19

ಕಿಮೀ ದೂರದಲ್ಲಿ ಜಗಳೂರು-ದಾವಣಗೆರೆ ಮಾರ್ಗಮಧ್ಯದಲ್ಲಿರುವ ಅಣಜಿ, ದಾವಣಗೆರೆಗೆ ಸಮೀಪದಲ್ಲಿರುವ ಆನೇಕೊಂಡ ಈ ತಾಲ್ಲೂಕಿನ ಪ್ರಮುಖ ಸ್ಥಳಗಳಲ್ಲಿ ಕೆಲವು. ಬಾಡ 11- 12ನೆಯ ಶತಮಾನದಲ್ಲಿ ಅಭಿವೃದ್ಧಿಹೊಂದಿದ್ದ ಒಂದು ಅಗ್ರಹಾರ ನಗರವಾಗಿತ್ತು. ಹಿಂದಿನ ದೇವಾಲಯಗಳ ಅವಶೇಷಗಳನ್ನು ಇಲ್ಲಿ ಕಾಣಬಹುದು. ಹದಡಿಯಲ್ಲಿ ಪಾಳೆಯಗಾರರರ ಕಾಲದ ಹನುಮಾನ್ ದೇವಾಲಯವಿದೆ. ಕಬ್ಬೂರು ಮಾಯಕೊಂಡಕ್ಕೆ 6 ಕಿಮೀ ದೂರದಲ್ಲಿದೆ. 12ನೆಯ ಶತಮಾನದಲ್ಲಿ ಇದೂ ಒಂದು ಅಗ್ರಹಾರವಾಗಿತ್ತು. ಇಲ್ಲಿ ಪ್ರಾಚೀನ ಕಲ್ಲೇಶ್ವರ ದೇವಾಲಯ ಇದೆ. ಹಿಂದೆ ಅಗ್ರಹಾರವಾಗಿದ್ದ ಕೊಡಗನೂರಿನಲ್ಲೂ ಅನೇಕ ಪಾಳು ದೇವಾಲಯಗಳನ್ನು ನೋಡಬಹುದು. ದಾವಣಗೆರೆಯ ಆಗ್ನೇಯಕ್ಕೆ 13 ಕಿಮೀ ದೂರದಲ್ಲಿರುವ ಕೊಗ್ಗನೂರಿನಲ್ಲಿ 11ನೆಯ ಶತಮಾನದ ಈಶ್ವರ ದೇವಾಲಯ ಮತ್ತು ಒಂದು ಹನುಮಂತ ದೇವಾಲಯ ಇದೆ.

ದಾವಣಗೆರೆಯ ದಕ್ಷಿಣಕ್ಕಿರುವ ಲೊಕ್ಕಿಕೆರೆ **(ನೋಡಿ)** ಚಾಳುಕ್ಯರ ಕಾಲದಲ್ಲಿ ಅಗ್ರಹಾರವಾಗಿತ್ತು. ಮಳಲಕೆರೆ ಗ್ರಾಮದಲ್ಲಿ 1701ರ ಈಶ್ವರ ದೇವಾಲಯವಿದೆ. ವೀರಗಲ್ಲುಗಳೂ ಮತ್ತು ಮಾಸ್ತಿಕಲ್ಲುಗಳೂ ಇಲ್ಲಿವೆ. ಬೆಂಗಳೂರು-ಪುಣೆ ರೈಲುಮಾರ್ಗದಲ್ಲಿರುವ ಮಾಯಕೊಂಡದಲ್ಲಿ ಕೇಶವ ಮತ್ತು ಓಬಳನರಸಿಂಹ ದೇವಾಲಯಗಳಿವೆ. ಶಂಕರನಹಳ್ಳಿಯಲ್ಲಿ ರಂಗನಾಥಸ್ವಾಮಿ ದೇವಾಲಯವಿದೆ. ಈ ತಾಲ್ಲೂಕಿನ ಆವರಗೊಳದಲ್ಲಿ ಪ್ರತಿ ಮಾಘಮಾಸದಲ್ಲಿ ಜಾತ್ರೆ ನಡೆಯುತ್ತದೆ.

ದಾವಣಗೆರೆ ಈ ತಾಲ್ಲೂಕಿನ ಮುಖ್ಯ ಪಟ್ಟಣ ಮತ್ತು ಆಡಳಿತ ಕೇಂದ್ರ. ಚಿತ್ರದುರ್ಗದ ವಾಯವ್ಯಕ್ಕೆ ಸು. 61 ಕಿಮೀ ದೂರದಲ್ಲಿದೆ. ಈಗ ನಗರ ಕೆಲವು ಬಡಾವಣೆಗಳೊಂದಿಗೆ ವಿಸ್ತಾರಗೊಂಡಿದೆ. ಪುಣೆ-ಬೆಂಗಳೂರು ಹೆದ್ದಾರಿಯಲ್ಲಿದ್ದು ಇದೊಂದು ಪ್ರಮುಖ ರೈಲು ನಿಲ್ದಾಣವಾಗಿ ಸುತ್ತಲ ಅನೇಕ ಊರುಗಳೊಡನೆ ಉತ್ತಮ ರಸ್ತೆ ಸೌಲಭ್ಯವಿದ್ದು ಈ ನಗರ ಕರ್ನಾಟಕದ ಪ್ರಮುಖ ವ್ಯಾಪಾರ ವಾಣಿಜ್ಯ ಕೇಂದ್ರಗಳಲ್ಲೊಂದಾಗಿದೆ. ಜನಸಂಖ್ಯೆ 5,42,998.

ಹಳೆ ದಾವಣಗೆರೆ ಪೂರ್ವಕ್ಕೂ ಹೊಸ ಬಡಾವಣೆ ಪಶ್ಚಿಮಕ್ಕೂ ಮಧ್ಯೆ ರೈಲು ಹಾದಿ ಹಾದುಹೋಗಿದೆ. ಇಡೀ ನಗರ ಒಂದು ಕೈಗಾರಿಕಾ ಕೇಂದ್ರದಂತೆ ಕಾಣುತ್ತದೆ. ಹತ್ತಿ ಕಾರ್ಖಾನೆ ಮತ್ತು ಎಣ್ಣೆ ಉತ್ಪಾದನೆ ಕಾರ್ಖಾನೆಗಳು ಇಲ್ಲಿ ಇದ್ದು ದಾವಣಗೆರೆ ಹತ್ತಿ ಉತ್ಪಾದಿತ ವಸ್ತುಗಳಿಗೆ, ಬಟ್ಟೆಗಳಿಗೆ, ಕಂಬಳಿಗಳಿಗೆ ಮತ್ತು ವನಸ್ಪತಿಗೆ ಪ್ರಸಿದ್ಧವಾಗಿದೆ. ಸರ್ಕಾರ, ನಗರಸಭೆ ಹಾಗೂ ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳೂ ಕೈಗಾರಿಕಾ ಮತ್ತು ಶಿಕ್ಷಣ ತರಬೇತಿ ಶಾಲಾ ಕಾಲೇಜುಗಳೂ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಮತ್ತು ಇತರ ಕಾಲೇಜುಗಳೂ ಇವೆ. ಕುಡಿಯಲು ತುಂಗಭದ್ರಾ ನದಿ ನೀರನ್ನು ಬಳಸಿಕೊಳ್ಳುತ್ತಿದ್ದಾರೆ. ಇಲ್ಲಿ ಸುಂದರ ಉದ್ಯಾನವನಗಳಿವೆ. ದಾವಣಗೆರೆ ನಗರಸಭಾಡಳಿತಕ್ಕೆ ಒಳಪಟ್ಟಿದೆ. ಈ ಊರಿನಲ್ಲಿ ವೀರಭದ್ರ ದೇವಾಲಯ, ಮಹಲಿಂಗರಂಗರ ಸಮಾಧಿ, ಶಿವಶರಣ ಬರಕ್ಕೇಶ್ವರ ಸಮಾಧಿ ಮತ್ತು ದೇವಾಲಯ, ನಗರದೇವತೆ ದುರ್ಗಾಂಬೆಯ (ದುಗ್ಗಮ್ಮ) ದೇವಾಲಯ ಇವೆ. ಪ್ರತಿ ಫಾಲ್ಗುಣ ಮಾಸದಲ್ಲಿ ಇಲ್ಲಿ ನಡೆಯುವ ಜಾತ್ರೆ ವೈಭವದಿಂದ ಜರುಗುತ್ತದೆ. **(ಸಿ.ಕೆ.ವೈ.ಡಿ.)**

**ದಾಸಪ್ಪ, ಎಚ್.ಸಿ.:** 1894- 1964. ಸ್ವಾತಂತ್ರ್ಯಹೋರಾಟಗಾರರು. 1894 ಡಿಸೆಂಬರ್ 5ರಂದು ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಜನಿಸಿದರು. ಇವರ ತಂದೆ ಚೆನ್ನಯ್ಯ, ತಾಯಿ ತಿಮ್ಮಮ್ಮ. ಇವರ ಪೂರ್ವಿಕರ ಸ್ಥಳ ಹಳೆಯ ಮೈಸೂರು ಸಂಸ್ಥಾನದ ಹಿರಳ್ಳಿ. ಚೆನ್ನಯ್ಯನವರು ಮಡಿಕೇರಿಯಲ್ಲಿ ನ್ಯಾಯಾಧೀಶರಾಗಿ ಖ್ಯಾತಿ ಪಡೆದಿದ್ದರು. ಅವರಿಗೆ ಅಂದಿನ ಸರ್ಕಾರ ರಾವ್‌ಸಾಹೇಬ್ ಎಂಬ ಬಿರುದನ್ನು ನೀಡಿತ್ತು. ತಮ್ಮ ಕೆಲಸದಿಂದ ನಿವೃತ್ತರಾದ ಮೇಲೆ ಅವರು ಬೆಂಗಳೂರಿಗೆ ಬಂದು ನೆಲಸಿದರು. ಅವರು ಸಂಸ್ಥಾನದಲ್ಲಿ ಹಿಂದುಳಿದ ವರ್ಗದವರ ಏಳಿಗೆಗೆ ಆರಂಭವಾದ ಜಸ್ಟಿಸ್ ಚಳವಳಿಯ ಸ್ಥಾಪಕರಲ್ಲೊಬ್ಬರಾಗಿದ್ದರು.

ದಾಸಪ್ಪನವರು ಮಹಾರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಪರೀಕ್ಷೆ ಮುಗಿಸಿ ಮದರಾಸಿನಲ್ಲಿ ಬಿ.ಎ. ಪದವಿ ಪಡೆದರು. ಅನಂತರ ಮುಂಬಯಿಗೆ ತೆರಳಿ ಅಲ್ಲಿ ನ್ಯಾಯಶಾಸ್ತ್ರದ ವ್ಯಾಸಂಗಮಾಡಿದರು. 1919ರಲ್ಲಿ ಬೆಂಗಳೂರಿನಲ್ಲಿ ವಕೀಲರಾಗಿ ಉದ್ಯೋಗವನ್ನು ಆರಂಭಿಸಿದ ಇವರು 1921ರಲ್ಲಿ ಮೈಸೂರಿಗೆ ಬಂದು ನೆಲಸಿ ವಕೀಲ ವೃತ್ತಿಯನ್ನೂ ಸಾರ್ವಜನಿಕ ಸೇವಾಕಾರ್ಯವನ್ನೂ ಮುಂದುವರಿಸಿದರು. 1926ರಲ್ಲಿ ಸುಪ್ರಸಿದ್ಧ ಸಮಾಜಸುಧಾರಕ ಕೆ.ಎಚ್.ರಾಮಯ್ಯನವರ ಮಗಳು ಯಶೋಧರಮ್ಮನವರನ್ನು ವಿವಾಹವಾದರು.

1937ರ ವರೆಗೆ ಸಂಯುಕ್ತ ಪ್ರಜಾಪಕ್ಷದ ಮುಖಂಡರಾಗಿ ಮೈಸೂರು ಪುರಸಭೆ ಹಾಗೂ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಿಂದುಳಿದ ವರ್ಗಗಳ ಮುನ್ನಡೆಗೆ ನಡೆದ ಚಳವಳಿಯಲ್ಲಿ ಅಗ್ರನಾಯಕರಾಗಿದ್ದರು. 1937ರಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷ ಸೇರಿದರು. 1939ರಲ್ಲಿ ಅದರ ಅಧ್ಯಕ್ಷರಾದರು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ರಚನೆಗಾಗಿ ನಡೆದ ಸತ್ಯಾಗ್ರಹ ಹೋರಾಟಗಳಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಮನೆಗೆ ಹೋಗಿ ಬಂದರು. ಇವರ ಚಟುವಟಿಕೆಗಳಿಂದ ಕೆರಳಿದ ಅಂದಿನ ಸರ್ಕಾರ ಇವರ ವಕೀಲಿ ಸನ್ನದನ್ನು ರದ್ದು ಮಾಡಿತು. ಆ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಯವರು 1940 ಜುಲೈ 13ರ ಹರಿಜನ ಪತ್ರಿಕೆಯಲ್ಲಿ ದಾಸಪ್ಪನವರ ಬಗ್ಗೆ ಈ ರೀತಿ ಬರೆದಿದ್ದಾರೆ: "ಶ್ರೀ ದಾಸಪ್ಪನವರು ಮೈಸೂರಿನ ಅತ್ಯಂತ ಗೌರವಾನ್ವಿತ ವ್ಯಕ್ತಿ. ಇಪ್ಪತ್ತು ವರ್ಷಗಳ ವಕೀಲಿ ಕೆಲಸದ ಅನುಭವವುಳ್ಳವರು. ಮೈಸೂರಿನ ಒಂದು ಭಾಗದಲ್ಲಿ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದ ಕೆಚ್ಚು ಅವರದು. ಜಸ್ಟಿಸ್ ನಾಗೇಶ್ವರ ಐಯರ್ ಅವರಿಂದ ನಡೆಯಲಿದ್ದ ಅಧಿಕೃತ ವಿಚಾರಣೆಯನ್ನು ಬಹಿಷ್ಕರಿಸಬೇಕೆಂದು ರಾಜಕೀಯ ಕೈದಿಗಳಿಗೆ ತಿಳಿಸಿ ಹೇಳುವ ಸಾಹಸ ಮಾಡಿದ್ದರು. ಆ ಕೆಲಸವನ್ನು ಅವರು ನನ್ನ ಸೂಚನೆಯ ಮೇರೆಗೆ ಮಾಡಿದ್ದರು. ಈ ಗುರುತರ ಅಪರಾಧಗಳಿಗಾಗಿ ದಾಸಪ್ಪನವರು ಎಂದೆಂದಿಗೂ ವಕೀಲ ವೃತ್ತಿಯನ್ನು ಕೈಗೊಳ್ಳದಂತೆ ಮಾಡಲಾಗಿದೆ. ದಾಸಪ್ಪನವರನ್ನು ನಾನು ಚೆನ್ನಾಗಿ ಬಲ್ಲೆ. ಅವರು ನಿಷ್ಕಳಂಕ ಚಾರಿತ್ರ್ಯವುಳ್ಳವರು; ಅತ್ಯಂತ ಪ್ರಾಮಾಣಿಕರು; ಅವರು ತಮ್ಮ ಕೈಲಾದಮಟ್ಟಿಗೂ ಅಹಿಂಸೆಯನ್ನು ಅನುಸರಿಸಲು ಸ್ಥೈರ್ಯದಿಂದ ಯತ್ನಿಸುತ್ತಿದ್ದಾರೆ. ಬ್ರಿಟಿಷ್ ಇಂಡಿಯಾದ ದೇಶಭಕ್ತ ವಕೀಲರು ಏನು ಮಾಡಿದ್ದಾರೋ ಅಥವಾ ಇತರ ವಕೀಲರು ಏನು ಮಾಡಲಿಲ್ಲವೋ ಅದನ್ನು ದಾಸಪ್ಪನವರು ಮಾಡಿದ್ದಾರೆ."

ಭಾರತ ಸ್ವಾತಂತ್ರ್ಯ ಪಡೆದ ಅನಂತರ ದಾಸಪ್ಪನವರು ರಾಜಕೀಯ ಹಾಗೂ ವಿಧಾಯಕ ಸೇವಾಕ್ಷೇತ್ರಗಳಲ್ಲಿ ಬಹುವಾಗಿ ದುಡಿದರು. ಶ್ರೀ ರಾಮಕೃಷ್ಣಾಶ್ರಮ, ಕಸ್ತೂರಬಾ ಗಾಂಧೀ ಸ್ಮಾರಕ ಸಂಸ್ಥೆ, ಗಾಂಧೀ ಸ್ಮಾರಕ ನಿಧಿ ಹಾಗೂ ಹಿಂದಿ ಪ್ರಚಾರ ಸಭೆ ಮುಂತಾದ ಸಂಸ್ಥೆಗಳ ಮೂಲಕ ಜನಸೇವೆ ಸಲ್ಲಿಸಿದರು. ಹಿಂದಿನ ಮೈಸೂರು ಸಂಸ್ಥಾನದಲ್ಲಿ 1947ನೆಯ ಅಕ್ಟೋಬರ್‌ನಿಂದ 1952ರ ವರೆಗೆ ಕೈಗಾರಿಕೆ ಮತ್ತು ಹಣಕಾಸಿನ ಮಂತ್ರಿಯಾಗಿದ್ದರು. 1954ರಲ್ಲಿ ರಾಜ್ಯ ಸಭೆಯ ಸದಸ್ಯರಾದರು. ಅನಂತರ 1957 ಮತ್ತು 1962ರ ಮಹಾ ಚುನಾವಣೆಗಳಲ್ಲಿ ಲೋಕಸಭೆಗೆ ಚುನಾಯಿತರಾದರು. ಸಂಸತ್ತಿನ ಅಂದಾಜು ಸಮಿತಿ ಅಧ್ಯಕ್ಷರಾಗಿ ಮಹತ್ತರ ಸೇವೆ ಸಲ್ಲಿಸಿದರು. 1963ರಲ್ಲಿ ಕೇಂದ್ರ ಮಂತ್ರಿ ಮಂಡಲದ ರೈಲ್ವೆ ಸಚಿವರಾದರು. ಅನಂತರ ಕೈಗಾರಿಕಾ ಸಚಿವರಾದರು. ಆ ಪದವಿಯಲ್ಲಿರುವಾಗಲೇ 1964 ಅಕ್ಟೋಬರ್ 29ರಂದು ದೆಹಲಿಯಲ್ಲಿ ನಿಧನರಾದರು. **(ಬಿ.ಆರ್.ಪಿ.)**

**ದಾಸಯ್ಯ:** ಕರ್ನಾಟಕದ ಜನಪದ ಸಂಪ್ರದಾಯದಲ್ಲಿ ವೈಷ್ಣವ ಪಂಥಕ್ಕೆ ಸೇರಿದ ಧಾರ್ಮಿಕ ವ್ಯಕ್ತಿ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಶುಭಾಶುಭ ಸಂದರ್ಭಗಳಲ್ಲಿ ಜೋಯಿಸನಂತೆ ಕೆಲಸ ನಿರ್ವಹಿಸುವ ವೃತ್ತಿಯನ್ನು ಕೈಗೊಂಡವ. ಇವನ ಉಡುಗೆತೊಡುಗೆ, ಪರಿಕರಗಳದು ಒಂದು ವೈಶಿಷ್ಟ್ಯ. ತಲೆಗೆ ಹಳದಿ ರುಮಾಲು ಹಾಗೂ ನೂಲಿನ ದಂಡೀಸರ, ಮೈಗೆ ನಿಲುವಂಗಿ, ಕೊರಳಿಗೆ ತುಳಸೀಹಾರ ಹಾಗೂ ಹನುಮಂತ ವಿಗ್ರಹವಿರುವ ದೊಡ್ಡ ಕಂಚಿನ ಪದಕ, ಬಲಗೈಯಲ್ಲಿ ಜಾಗಟೆ, ಎಡಗೈಯಲ್ಲಿ ಶಂಖ, ಹಣೆಯ ಮೇಲೆ ಮೂರು ನಾಮ,ಬಗಲಿಗೆ ಬನವಾಸಿ (ಭಿಕ್ಷೆಯ ಬಿದಿರ ಬುಟ್ಟಿ), ವಿಶೇಷ ಸಂದರ್ಭಗಳಲ್ಲಿ ಹರೆಗು (ವರ್ತುಳಾಕಾರದ ಬಣ್ಣದ ತಲೆ), ಹನ್ನೆರಡಕ್ಕಿಂತ ಹೆಚ್ಚು ಗಂಟೆಗಳುಳ್ಳ ಬೆಳ್ಳಿ ಬಾಣ ಇವುಗಳನ್ನು ಉಪಯೋಗಿಸುವುದು ಕಂಡುಬರುತ್ತದೆ. ಇವನು ಉಪಯೋಗಿಸುವ ಹರೆಗು ಘಟೋತ್ಕಚನ ತಲೆಯೆಂಬ ನಂಬಿಕೆಯಿದೆ. ಈಗ ದಾಸಯ್ಯಗಳು ಬಾಣವೆಂದು ಹೇಳುವ ಒನಕೆ ಲಕ್ಷ್ಮಣನ ಮೇಲೆ ರಾವಣ ಪ್ರಯೋಗಿಸಿದ ಶಕ್ತ್ಯಾಯುಧವಂತೆ. ಉತ್ಸವಾದಿ ಸಂದರ್ಭಗಳಲ್ಲಿ ಇವರು ಒಡ್ಡುವ ಬಾಣದ ರೀತಿಯನ್ನು ನೋಡಿದರೆ ಹಿಂದೆ ಯುದ್ಧ ಸಮಯದಲ್ಲಿ ಇವರು ಆಯುಧವಾಹಕರಾಗಿಯೋ ರಕ್ಷಕರಾಗಿಯೋ ಇದ್ದಂತೆ ತೋರುತ್ತದೆ. ನೇಕಾರರು ಮತ್ತು ಬೋಯಿಗಳಲ್ಲಿ ದಾಸಯ್ಯಗಳಾಗುವುದು ಹೆಚ್ಚು. ದಾಸ ಒಕ್ಕಲಿಗರಲ್ಲೂ ಗಂಗಡಿಕಾರ ಒಕ್ಕಲಿಗರಲ್ಲೂ ದಾಸಯ್ಯಗಳಾಗುವುದು ಕೆಲವು ಕಡೆ ಕಂಡುಬರುತ್ತದೆ. ದಾಸಯ್ಯನಾಗಬೇಕಾದರೆ ಗುರುವಿನಿಂದ ವಿಧಿವತ್ತಾಗಿ ದೀಕ್ಷೆ ಪಡೆಯಬೇಕು. ಜೊತೆಗೆ ಅಷ್ಟಾಕ್ಷರೀ ಮಂತ್ರವನ್ನೂ ರಾಮಗದ್ಯ, ನರಸಿಂಹಗದ್ಯ, ವಿಷ್ಣುಪಾರಮ್ಯ ಮುಂತಾದ ಸ್ತೋತ್ರ ಪಾಠಗಳ ಉಪದೇಶವನ್ನೂ ಗುರುವಿನಿಂದ ಪಡೆಯಬೇಕು. ಹೀಗೆ ದೀಕ್ಷೆ ವಹಿಸಿ ಅನ್ನದಾನ ಮಾಡಿದಮೇಲೆ ಆತ ದಾಸಯ್ಯನಾಗುತ್ತಾನೆ. ದಾಸಯ್ಯಗಳು ತಮ್ಮನ್ನು ಗರುಡಗೋತ್ರದವರೆಂದು ಕರೆದುಕೊಳ್ಳುತ್ತಾರೆ. ಇವರು ಮೂಲತಃ ವಿಷ್ಣುಭಕ್ತರು.

ರಾಮಾನುಜಾಚಾರ್ಯರು ಸ್ಥಾಪಿಸಿದ ಶ್ರೀವೈಷ್ಣವಪಂಥವು ವೈದಿಕೇತರ ವರ್ಗಗಳಲ್ಲಿ ದಾಸಪಂಥ ಹೆಚ್ಚು ಜನಪ್ರಿಯವಾಗಲು ಕಾರಣವಾಯಿತೆಂದು ತಿಳಿದುಬರುತ್ತದೆ. ವಿಶೇಷವಾಗಿ ಪರಿಶಿಷ್ಟ ಜಾತಿಗಳಲ್ಲಿ 'ದಾಸಯ್ಯ'ಗಳು ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಮುಖ್ಯವಾಗಿ ಹಬ್ಬಗಳಲ್ಲಿ, ಮದುವೆಗಳಲ್ಲಿ, ಹುಟ್ಟು-ಸಾವುಗಳಲ್ಲಿ ವಿಶೇಷ ವೇಷಭೂಷಣಗಳನ್ನು ಧರಿಸಿದ ದಾಸಯ್ಯನು, ಶಂಖ ಜಾಗಟೆ ಹಿಡಿದು ಕಾಣಿಸಿಕೊಳ್ಳುತ್ತಾನೆ. ಆತನಿಗೆ ವಸ್ತ್ರದಾನ ಮಾಡುವುದು ಮತ್ತು ಪಡಿ ಕೊಡುವುದು ಶ್ರೇಯಸ್ಕರವೆಂದು ಜನ ಭಾವಿಸುತ್ತಾರೆ. ಹೀಗೆ ಆತನು ನಿರ್ವಹಿಸಬೇಕಾದ ನಿರ್ದಿಷ್ಟ ಕಾರ್ಯಗಳಿದ್ದವು. ಈಗ ಈ ರೀತಿ ರಿವಾಜುಗಳು ಕಡಿಮೆಯಾಗುತ್ತಿವೆ.

ದಾಸ ಒಕ್ಕಲಿಗರಲ್ಲಿ ಮನೆಯ ಮಕ್ಕಳಲ್ಲಿ ಯಾರನ್ನಾದರೂ ಒಬ್ಬನನ್ನು ದಾಸಯ್ಯನನ್ನಾಗಿ ಬಿಡುವ ಸಂಪ್ರದಾಯವಿದ್ದು ಇದನ್ನು ದಾಸನ್ನ ಬಿಡುವುದು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇದು ಮದುವೆಯ ಸಂದರ್ಭದಲ್ಲಿ ನಡೆಯುತ್ತದೆ. ಹೀಗೆ ದಾಸಯ್ಯನಾದವನಿಗೆ ಕೈಗೆ ಕಪ್ಪ ತೊಡಿಸಿ, ಶಂಖ ಜಾಗಟೆ ನೀಡುತ್ತಾರೆ. ಆತ ಯಾವಾಗಲೂ ಭಿಕ್ಷೆ ಬೇಡಬೇಕೆಂದೇನೂ ಕಟ್ಟು ಕಟ್ಟಳೆಗಳಿರುವುದಿಲ್ಲ. ಆದರೆ ವರ್ಷಕ್ಕೊಮ್ಮೆ ಶ್ರಾವಣ ಶನಿವಾರಗಳಲ್ಲಿ ಒಂದು ದಿನವಾದರೂ ಭಿಕ್ಷೆ ಬೇಡಬೇಕು. ದಾಸಯ್ಯ ಸಂಸಾರಿಯೂ ಆಗಿರಬಹುದು.

ವೈಷ್ಣವ ಸಂಪ್ರದಾಯದವರಲ್ಲಿ ತಿರುಪತಿ ತಿಮ್ಮಪ್ಪನ ಒಕ್ಕಲು ಮದುವೆಯಾದರೆ ಶನಿವಾರ ಹರಿಸೇವೆ ಎಂಬ ಸಮಾರಂಭ ನಡೆಯುತ್ತದೆ. ಇದು ಹರಿ ಸೇವೆಗಳಲ್ಲೆಲ್ಲ ಬಹುದೊಡ್ಡದು. ಇದಕ್ಕಾಗಿ ಸುತ್ತ ಮುತ್ತಲ ದಾಸಪ್ಪಗಳೆಲ್ಲ ಬಂದು ಸೇರಿ ಹತ್ತಾರು ಹರೆಗು ಕಟ್ಟಿ ಉತ್ಸವ ಮಾಡುತ್ತಾರೆ. ಆ ದಿನ ಸಂಜೆ ದಾಸಪ್ಪನು ಬಸವನ ಮೇಲೆ ಕುಳಿತು ಶಂಖ ಜಾಗಟೆ ಬಾರಿಸುತ್ತ ಬರುವನು. ಬರುವ ಬೀದಿಯಲ್ಲಿ ಮಣೇವು ಹಾಕುವುದು **(ನೋಡಿ)** ವಾಡಿಕೆ. ಹೀಗೆ ಬಂದು ಮನೆಯ ಒಳಗೆ ಪ್ರವೇಶಿಸಿ ಅನಂತರ ಬಾಳೆ ಎಲೆಯ ಮೇಲೆ ಅಕ್ಕಿ ಹಾಕಿ ಬನವಾಸಿ, ಬಾಣ ಇತ್ಯಾದಿಗಳನ್ನು ಇಟ್ಟು ಧೂಪದೀಪಗಳಿಂದ ಪೂಜಿಸಿ, ಶಂಖ ಊದಿ ಜಾಗಟೆ ಬಾರಿಸುತ್ತಾನೆ. ಹೀಗೆ ಮನೆಯಲ್ಲಿ ಶಂಖ ಊದಿದರೆ ದುಷ್ಟ ಗ್ರಹಗಳ ಕಾಟ ತಪ್ಪಿ ಮಂಗಳ ಉಂಟಾಗುತ್ತದೆ ಎಂಬ ನಂಬಿಕೆಯಿದೆ. ಶ್ರಾವಣಶನಿವಾರಗಳು ಹಾಗೂ ಸುಗ್ಗಿ ದಾಸಯ್ಯನಿಗೆ ಹೆಚ್ಚು ವರಮಾನ ತಂದುಕೊಡುವ ಕಾಲಗಳು. ಈ ಕಾಲದಲ್ಲಿ ಇವನಿಗೆ ಎಲ್ಲರೂ ದವಸಧಾನ್ಯಗಳನ್ನೊ ಬಟ್ಟೆಬರೆಯನ್ನೊ ನೀಡುತ್ತಾರೆ. ಹಿಂದೆ ತಿರುಪತಿ ಯಾತ್ರೆಯನ್ನು ಮಾಡತಕ್ಕವರು ದಾಸಯ್ಯನ ಮೂಲಕವೇ ಹೋಗಿ ಬರುತ್ತಿದ್ದರು. ಹಾಗಾಗಿ ಹಳ್ಳಿಯಲ್ಲಿ ಧಾರ್ಮಿಕ ಸಂಪ್ರದಾಯಗಳ ಆಚರಣೆಗೆ ಈತ ಮೂಲ ಆಧಾರವಾಗಿದ್ದ. ಆದರೆ ಇತ್ತೀಚೆಗೆ ದಾಸಯ್ಯಗಳು ಕಡಿಮೆಯಾಗುತ್ತಿದ್ದು ಇವರ ಪ್ರಭಾವವೂ ಕುಂಠಿತಗೊಂಡಿದೆ. ಜಾಗಟೆಯ ಶ್ರುತಿಯೊಂದಿಗೆ ಈತ ಹೇಳುವ ಕೆಲವು ಸ್ತೋತ್ರಗಳು ಕೇಳಲು ಇಂಪಾಗಿರುತ್ತವೆ. **(ಎ.ಬಿ.ಆರ್.)**

**ದಿಂಡಗೂರು:** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ ಸು.6ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 1,450. ಇಮ್ಮಡಿ ಹೊಯ್ಸಳ ವೀರಬಲ್ಲಾಳದೇವನ ಮಂತ್ರಿಗಳಲ್ಲೊಬ್ಬನಾದ ಪಂಡಿತ ದಂಡನಾಥ ಈ ಗ್ರಾಮವನ್ನು ರಾಜನಿಂದ ಬೇಡಿ ಪಡೆದು, ಇಲ್ಲಿ ಅಗ್ರಹಾರವನ್ನು ಸ್ಥಾಪಿಸಿ ಮಲ್ಲಿಕಾರ್ಜುನಪುರವೆಂದು ಹೆಸರಿಟ್ಟು ಕೇಶವ ಮತ್ತು ಮಲ್ಲೇಶ್ವರ ದೇವಾಲಯಗಳನ್ನು ಕಟ್ಟಿಸಿದನೆಂದು 1209ರ ಒಂದು ತಾಮ್ರಶಾಸನ ತಿಳಿಸುತ್ತದೆ.

ಕೇಶವ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖ ಮಂಟಪಗಳಿವೆ. ಗೋಡೆಯ ಮೇಲ್ಮೈ, ಚಜ್ಜದ ಮೇಲಿನ ಅಂಕಣ ಮತ್ತು ಗೋಪುರದ ಕೋನ ಶ್ರೇಣಿಗಳು ಅಲಂಕಾರ ರಹಿತವಾಗಿವೆ. ಮಾಳಿಗೆಯ ಒಳಮೈಗಳನ್ನು ಚೆನ್ನಾಗಿ ರೂಪಿಸಲಾಗಿದೆ. ಮಧ್ಯಮಾಳಿಗೆ ಗುಮ್ಮಟಾಕಾರದಲ್ಲಿದೆ. ಕೇಶವ ವಿಗ್ರಹ ಆರು ಅಡಿ ಎತ್ತರವಿದ್ದು ನಾಲ್ಕು ಹಸ್ತಗಳಲ್ಲಿ ಪದ್ಮ, ಶಂಖ, ಚಕ್ರ ಮತ್ತು ಗದೆಗಳಿವೆ. ನವರಂಗದ ಬಾಗಿಲುವಾಡದ ಹಾಸುಗಲ್ಲಿನ ಮೇಲೆ ವೇಣುಗೋಪಾಲ ವಿಗ್ರಹವನ್ನೂ ಗರ್ಭಗೃಹದ ಬಾಗಿಲುವಾಡದ ಮೇಲೆ ಗಜಲಕ್ಷ್ಮೀ ವಿಗ್ರಹವನ್ನೂ ಕೆತ್ತಲಾಗಿದೆ.

ಮಲ್ಲೇಶ್ವರ ದೇವಾಲಯ ರಚನೆಯಲ್ಲಿ ಕೇಶವ ದೇವಾಲಯವನ್ನೇ ಹೋಲುತ್ತದೆ. ಮಾಳಿಗೆಯಲ್ಲಿ ಸುಂದರವಾದ ಕೆತ್ತನೆಗಳಿವೆ. ದೊಡ್ಡಯ್ಯ ನೆಂಬುವವನು ಇಲ್ಲಿನ ಮಂಟಪವೊಂದನ್ನು ಕಟ್ಟಿಸಿದನೆಂದು ಹೊರ ಅಂಕಣದಲ್ಲಿರುವ 1651ರ ಶಾಸನ ತಿಳಿಸುತ್ತದೆ. **(ಎಚ್.ವಿ.ಎಸ್.)**

**ದಿನಕರ ದೇಸಾಯಿ:** 1909–82. ಚುಟುಕು ಬ್ರಹ್ಮ ಎಂದೇ ಹೆಸರು ಗಳಿಸಿದ್ದ ಕವಿ, ಪತ್ರಿಕೋದ್ಯಮಿ, ಶಿಕ್ಷಣತಜ್ಞ, ರಾಜಕಾರಣಿ, ಸಮಾಜ ಸೇವಕ, ಕಾರ್ಮಿಕ ಸಂಘಟಕ. ಉತ್ತರ ಕನ್ನಡ ಜಿಲ್ಲೆ ಅಂಕೋಲದ ಹೊನ್ನೆಕೇರಿಯಲ್ಲಿ 1909 ಸೆಪ್ಟೆಂಬರ್ 10ರಂದು ಜನಿಸಿದರು. ಇವರ ಮೂಲ ಮನೆ ಕುಮಟ ತಾಲ್ಲೂಕಿನ ಅಂಡರುಹಳ್ಳಿ ಗ್ರಾಮದ ಹೊಂಡದ ಹೊಕ್ಕಲು. ಇವರ ತಂದೆ ದತ್ತಾತ್ರೇಯ ದೇಸಾಯಿ, ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಿದ್ದರು. ತಾಯಿ ಅಂಬಿಕಾ ದೇಸಾಯಿ. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡು ಇವರು ತಂದೆಯ ಪ್ರೀತಿಯ ಆರೈಕೆಯಲ್ಲಿ ಬೆಳೆದರು.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಅಂಕೋಲದ ಆಲಗೇರಿ ಯಲ್ಲಿ ಪೂರೈಸಿದರು. ಅನಂತರ ಅಂಕೋಲ ಮತ್ತು ಕಾರವಾರಗಳಲ್ಲಿ ಹೈಸ್ಕೂಲು ಶಿಕ್ಷಣ ಮುಗಿಸಿದರು. ಬೆಂಗಳೂರಿನಲ್ಲಿ ಪದವಿ ಪಡೆದ ಬಳಿಕ ಮುಂಬಯಿಯಲ್ಲಿ ಸ್ನಾತಕೋತ್ತರ ಪದವಿ ಹಾಗೂ ಎಲ್.ಎಲ್.ಬಿ. ವ್ಯಾಸಂಗಗಳನ್ನು ಏಕಕಾಲದಲ್ಲಿ ಮಾಡಿದರು. ಕಲ್ಯಾಣಿ ಚಾಳುಕ್ಯರ ಆಡಳಿತದಲ್ಲಿಯ ಮಹಾಮಂಡಲೇಶ್ವರರು ಎಂಬ ಸಂಶೋಧನ ಪ್ರಬಂಧ ವನ್ನು ಸ್ನಾತಕೋತ್ತರ ಪದವಿಗಾಗಿ ಮಂಡಿಸಿದರು. ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಸೇಂಟ್ ಜ಼ೇವಿಯರ ರಜತ ಪದಕ ಪಡೆದರು. ಬಿ.ಎ. ಪದವಿಯಲ್ಲೂ ಇತಿಹಾಸ ವಿಷಯದಲ್ಲಿ ಗರಿಷ್ಠ ಅಂಕ ಗಳಿಸಿದ್ದಕ್ಕಾಗಿ ಕ್ಯಾಂಡಿ ಪಾರಿತೋಷಕ ಪಡೆದಿದ್ದರು.

ಸ್ನಾತಕೋತ್ತರ ಹಾಗೂ ಕಾನೂನು ಪದವಿ ಪಡೆದ ಇವರಿಗೆ ಹಲವು ಉದ್ಯೋಗಗಳು ಸುಲಭವಾಗಿ ದೊರೆಯಬಹುದಾಗಿತ್ತು. ಆದರೆ ಸಮಾಜ ಸೇವಾಸಕ್ತರಾಗಿದ್ದುದರಿಂದ ಇವನ್ನೆಲ್ಲಾ ಬದಿಗೊತ್ತಿ ಗೋಪಾಲಕೃಷ್ಣ ಗೋಖಲೆಯವರ ಗವರ್ನರ್ ಆಫ್ ಇಂಡಿಯಾ ಸೊಸೈಟಿ (ಭಾರತ ಸೇವಕ್ ಸಮಾಜ)ಯನ್ನು ಸೇರಿದರು. ದಿನಕರರು ಸಮಾಜ ಸೇವೆಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಮುಂಬಯಿ ಪ್ರಾಂತದ ಟ್ರೇಡ್ ಯೂನಿಯನ್ ಕಾರ್ಯದರ್ಶಿ, ಕಡಲ ಕಾರ್ಮಿಕರ ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು. ಕಾರ್ಮಿಕ ನಾಯಕ ರಾಗಿ ಡೆನ್ಮಾರ್ಕ್ ಮತ್ತು ಅಮೆರಿಕಗಳಲ್ಲಿ ನಡೆದ ಮಹಾಧಿವೇಶನದಲ್ಲಿ ಪಾಲ್ಗೊಂಡರು (1946). ಮುಂಬಯಿ ನಗರಪಾಲಿಕೆ ಸದಸ್ಯರಾಗಿಯೂ ಗಣನೀಯ ಸೇವೆ ಸಲ್ಲಿಸಿದರು (1948–61). ಅಂಕೋಲದಲ್ಲಿ ರೈತಕೂಟ ಮತ್ತು ಕೆನರಾ ವೆಲ್‌ಫೇರ್ ಟ್ರಸ್ಟ್ ಸ್ಥಾಪಿಸಿದರು. ಮುಂಬಯಿಯಲ್ಲಿದ್ದರೂ ಇವರ ಹೃದಯ ಸದಾ ಹಂಬಲಿಸುತ್ತಿದ್ದುದು ಉತ್ತರ ಕನ್ನಡ ಜಿಲ್ಲೆಯನ್ನು. ರೈತರನ್ನು ಸಂಘಟಿಸಿ ಗೇಣಿ ಪದ್ಧತಿಯಲ್ಲಿದ್ದ ಸಾಮಾಜಿಕ ಅನ್ಯಾಯಗಳನ್ನು ಪ್ರತಿಭಟಿಸಿದರು. ಒಡೆಯನನ್ನು ಘಟ್ಟ ಹತ್ತಿಸಿ ಎಂದು ಘೋಷಿಸಿದರು. ಅಂದಿನ ಮುಂಬಯಿ ಸರ್ಕಾರ ಐದು ವರ್ಷಗಳ ಕಾಲ ದಿನಕರರು



ಉತ್ತರ ಕನ್ನಡ ಜಿಲ್ಲೆ ಪ್ರವೇಶಿ ಸುವುದನ್ನು ನಿಷೇಧಿಸಿತ್ತು. ಇವರು ನಡೆಸುತ್ತಿದ್ದ ರೈತ ಚಳವಳಿ ಹೋರಾಟದಿಂದ ಜಮೀನ್ದಾರರು ಇವರನ್ನು ಹಾವಳಿ ಮಂಜ ಎಂದು ಕರೆದರು. ಲೋಕಸಭಾ ಸದಸ್ಯರಾಗಿ (1967) ಸಂಸತ್ತಿ ನಲ್ಲಿ ತಮ್ಮ ವಾದ ವೈಖರಿಯ ಮೂಲಕ ಜನರ ಹಿತಾಸಕ್ತಿ ಕಾಪಾಡಲು ತೀವ್ರ ಯತ್ನ ನಡೆಸಿದರು. ಜನಸೇವಕ (ನೋಡಿ) ಎಂಬ ವಾರಪತ್ರಿಕೆ ಯನ್ನು ಹದಿನೇಳು ವರ್ಷಗಳ ಕಾಲ ಪ್ರಕಟಿಸಿ, ಜನಜಾಗೃತಿಯನ್ನುಂಟು ಮಾಡಿದರು. ಜನಸೇವಕ ಪತ್ರಿಕೆ ಪ್ರಜಾಸತ್ತೆಯ ಕಾವಲುಗಾರ ಎಂಬ ಬಿರುದಿಗೆ ಪಾತ್ರವಾಯಿತು. ಇವರು ತಮ್ಮ ವಿಚಾರಗಳನ್ನೂ ಜನಪರ ಕಾಳಜಿಯನ್ನೂ ಪುಸ್ತಕಗಳ ಮೂಲಕ ಪ್ರಕಟಿಸಿದ್ದಾರೆ. ಪ್ರಪಂಚದ ಕೆಲಸಗಾರರು (1953), ಪ್ರೈಮರಿ ಎಜ್ಯುಕೇಶನ್ ಇನ್ ಇಂಡಿಯಾ, ಟುವರ್ಡ್ಸ್ ಲಿಟರೇಟ್ ಬೊಂಬೇ, ಲ್ಯಾಂಡ್ಸ್ ರೆಂಟ್ಸ್ ಇನ್ ನಾರ್ತ್ ಕೆನರಾ, ಮೆರಿಟಾಯಮ್ ಲೇಬರ್ ಇನ್ ಇಂಡಿಯಾ, ಎಮಂಗ್ ಇಂಡಿಯನ್ ಸೇಮನ್ ಇನ್ ಗ್ರೇಟ್ ಬ್ರಿಟನ್, ರೈತರ ಹಾಡುಗಳು ಮುಂತಾದ ಪುಸ್ತಕ, ಕಿರುವರದಿ ಹಾಗೂ ರೈತ ಸಂಘಟನೆಗೆ ಸ್ಫೂರ್ತಿ ನೀಡುವ ಹಾಡುಗಳನ್ನು ಬರೆದಿದ್ದಾರೆ.

ಇವರೊಬ್ಬ ಕ್ರಾಂತದರ್ಶಿ ಕವಿ. ಸಮಾಜವಾದಿ ದೃಷ್ಟಿಕೋನದಿಂದ ರಚನೆಗೊಂಡ ಇವರ ಕವನಗಳು ಜನಪರವಾಗಿವೆ. ಕವನ ಸಂಗ್ರಹ (1951), ಹೂಗೊಂಚಲು (1958), ದಾಸಾಳ ಮೊದಲಾದ ಸಂಕಲನಗಳಲ್ಲಿ ಜನಜೀವನಕ್ಕೆ ಹತ್ತಿರವಾದ ವಿಚಾರ ಪ್ರಚೋದಕ ಸಾಮಾಜಿಕ ಕಳಕಳಿಯುಳ್ಳ ಸರಳವಾದ ಕವನಗಳನ್ನು ಕಾಣಬಹುದಾಗಿದೆ. ದೀನಗಿಂತ ದೇವ ಬಡವ, ನನ್ನ ದೇಹದ ಬೂದಿ, ಕೆಂಪು ದಾಸಾಳ, ಆತ್ಮ ವಿಶ್ವಾಸ, ಬಿರುಗಾಳಿ ಮುಂತಾದ ಕವನಗಳಲ್ಲಿ ಕವಿಯ ಆಶಯ, ಆದರ್ಶ ಒಡಮೂಡಿವೆ. ಅಂಕೋಲ, ಗೋಕರ್ಣ ಸೀಮೆಯ ಹಾಲಕ್ಕಿ ಒಕ್ಕಲಿಗರು ಇವರ ಹಾಡುಗಳನ್ನು ಗುಮಟೆ ಪಾಂಗಿನಲ್ಲಿ ಹಾಡುತ್ತಿದ್ದುದು ಹಾಡಿನ ಜನಪ್ರಿಯತೆಗೆ ಸಾಕ್ಷಿ. ಮಕ್ಕಳಿಗಾಗಿ ಇವರು ಮಕ್ಕಳ ಗೀತೆಗಳು (1951), ಮಕ್ಕಳ ಪದ್ಯ (1976) ಎಂಬ ಸಂಕಲನವನ್ನು ಪ್ರಕಟಿಸಿದ್ದಾರೆ. ಇಲ್ಲಿಯ ಹಾಡುಗಳು ಮಕ್ಕಳ ಅರಿವಿನ ಕ್ಷಿತಿಜವನ್ನು ವಿಸ್ತರಿಸುವುದರೊಂದಿಗೆ ವೈಜ್ಞಾನಿಕ ಮನೋಭಾವನೆಯನ್ನು ಪೋಷಿಸುವ ಗುಣವನ್ನು ಹೊಂದಿವೆ.

ಈ ಹಾಡುಗಳಲ್ಲಿ ವಿಡಂಬನೆ, ಸಾಮಾಜಿಕ ಕಳಕಳಿ, ಸಮಾನತೆಯ ಮನೋಭಾವವನ್ನು ಕವಿ ಬಿತ್ತರಿಸಿದ್ದಾರೆ. ನಾ ಕಂಡ ಪಡುವಣ (1951) ಎಂಬ ಇವರ ಪ್ರವಾಸ ಕಥನ ಇವರ ಉತ್ತಮ ಗದ್ಯಶೈಲಿ ಹಾಗೂ ರಸವತ್ತಾದ ನಿರೂಪಣೆಯಿಂದ, ಕುತೂಹಲಕಾರಿಯಾದ ವಿಷಯ ಸಂಗ್ರಹದಿಂದ ಗಮನಾರ್ಹವಾಗಿದೆ.

ಚುಟುಕ ಬ್ರಹ್ಮ ಎಂದೇ ಪ್ರಸಿದ್ಧರಾಗಿರುವ ಇವರು ಐದು ಸಾವಿರಕ್ಕೂ ಹೆಚ್ಚು ಚೌಪದಿಗಳನ್ನು ರಚಿಸಿದ್ದಾರೆ. ಇವರು ಬರೆದುದೆಲ್ಲ ಚುರುಕು ಮುಟ್ಟಿಸುವ ಚುಟುಕುಗಳಾಗಿವೆ. ವ್ಯಂಗ್ಯ, ವಿಡಂಬನೆ ಇವರ ಚುಟುಕದ ಜೀವನಾಡಿ. ಆದರ್ಶವನ್ನು ತಮ್ಮ ಕವಿತೆ ಚುಟುಕಗಳಲ್ಲಿ ಬರೆದ ದಿನಕರರು ಅದರಂತೆ ಬದುಕಿದವರು. ಜನಸೇವಕ ಪತ್ರಿಕೆಯಲ್ಲಿ ಇವರು ಬರೆದ ಮುಖಪುಟದ ಲೇಖನ, ಸಂಪಾದಕೀಯ ಹಾಗೂ ಬತ್ತದತೆನೆ ಇಂದಿಗೂ ಪ್ರಸ್ತುತ.

ಉತ್ತರ ಕನ್ನಡದ ಹಳ್ಳಿಗಾಡಿನ ನಿರುತ್ತೇಜನಕ ಪರಿಸರದಲ್ಲಿ ಜನತಾ ವಿದ್ಯಾಲಯಗಳನ್ನು ಸ್ಥಾಪಿಸಿ ಶಿಕ್ಷಣ ಪ್ರಚಾರ ಕೈಗೊಂಡರು. ಇವರು ರಚಿಸಿದ ಮಕ್ಕಳ ಗೀತೆಗಳು ಮತ್ತು ಕವನ ಸಂಗ್ರಹ ಪುಸ್ತಕಗಳಿಗೆ ಮುಂಬಯಿ ಸರ್ಕಾರದ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರ ದಿನಕರ ಚೌಪದಿ ಕೃತಿಗೆ ಪ್ರಶಸ್ತಿ ನೀಡಿದೆ (1980). ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಿದೆ (1975). ಗೋಕರ್ಣದ ಪರ್ತಗಾಳಿ ಮಠದ ವಿದ್ಯಾಧಿರಾಜ ಪುರಸ್ಕಾರ, ಜನ್ಮಭೂಮಿ ಟ್ರಸ್ಟಿನ ಪತ್ರಿಕೋದ್ಯಮ ಪ್ರಶಸ್ತಿ ಇವರಿಗೆ ಸಂದಾಯವಾಗಿವೆ (1976). ಇವರು 1982 ನವೆಂಬರ್ 6 ರಂದು ಮುಂಬಯಿಯಲ್ಲಿ ನಿಧನರಾದರು. ಆಗ ವಿ.ಕೃ. ಗೋಕಾಕರು "ದಿನಕರರ ಜೀವನಲತೆಯಲ್ಲಿ ಅರಳಿದ ಎರಡು ಮಂದಾರಗಳು; ಒಂದು ಅವರ ಕಾವ್ಯ, ಇನ್ನೊಂದು ಅವರ ದೇಶಸೇವೆ" ಎಂದು ಪ್ರಶಂಸಿಸಿ ಬರೆದಿದ್ದಾರೆ. (ಎಸ್.ಎಸ್‌ಎಚ್‌ಇ.)

**ದಿವಾಕರ, ಆರ್.ಆರ್.:** 1894– 1990. ಸ್ವಾತಂತ್ರ್ಯ ಹೋರಾಟಗಾರ. ಕರ್ನಾಟಕ ಏಕೀಕರಣದ ಅಧ್ವರ್ಯು, ಚಿಂತಕ, ಲೇಖಕ, ಪತ್ರಕರ್ತ, ಆಡಳಿತಗಾರ. ದಿವಾಕರ ರಂಗರಾವ್ ರಾಮಚಂದ್ರ ಎಂಬುದು ಇವರ ಪೂರ್ಣ ಹೆಸರು. 1894 ಸೆಪ್ಟೆಂಬರ್ 30ರಂದು ಧಾರವಾಡದ ಮಧ್ಯಮವರ್ಗದ ಕುಟುಂಬವೊಂದರಲ್ಲಿ ಜನಿಸಿದರು. ತಂದೆ ರಾಮಚಂದ್ರ, ತಾಯಿ ಸೀತಾ. ಧಾರವಾಡ, ಬೆಳಗಾಂವಿ, ಪುಣೆ ಹಾಗೂ ಮುಂಬಯಿಗಳಲ್ಲಿ ಶಿಕ್ಷಣ ಪಡೆದು ಎಂ.ಎ. ಪದವೀಧರರಾದರು. ಅನಂತರ ಇಂಗ್ಲಿಷ್ ಅಧ್ಯಾಪಕರಾಗಿ ನೇಮಿತರಾದರು. ಮೊದಲಿನಿಂದಲೂ ಟಿಳಕ, ಅರವಿಂದ ಇವರಿಂದ ಪ್ರಭಾವಿತರಾಗಿದ್ದ ದಿವಾಕರರು ಆ ಕೆಲಸವನ್ನೂ ಬಿಟ್ಟು ಎಲ್.ಎಲ್.ಬಿ. ಪರೀಕ್ಷೆಯಲ್ಲಿ ತೇರ್ಗಡೆಯಾದರೂ (1919) ಪದವಿಯನ್ನು ನಿರಾಕರಿಸಿ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರವೇಶಿಸಿದರು (1920). ಗಾಂಧೀಜೀಯವರ ಕರೆಯ ಮೇರೆಗೆ ಅಸಹಕಾರ ಆಂದೋಲನದಲ್ಲಿ ಧುಮುಕಿದರು (1920– 21). ಹಲವಾರು ಸಲ ಸೆರೆಮನೆ ವಾಸವನ್ನು ಅನುಭವಿಸಿದರು. 1921ರಲ್ಲಿಯೇ 'ಕರ್ಮವೀರ' ವಾರಪತ್ರಿಕೆಯನ್ನು ಪ್ರಾರಂಭಿಸಿ ತೀಕ್ಷ್ಣವಾದ ಲೇಖನಗಳನ್ನು ಬರೆದು ಜನಜಾಗೃತಿಗಾಗಿ ಶ್ರಮಿಸಿದರು. ಗಾಂಧೀಜಿಯವರು ಕಾಂಗ್ರೆಸ್ಸಿನ ಸುಗಮ ವ್ಯವಸ್ಥೆಗೆ ಭಾಷಾವಿಭಾಗ ಘಟಕಗಳನ್ನು ರೂಢಿಸಿದಾಗ ಇವರು ಕರ್ನಾಟಕಕ್ಕೂ ಒಂದು ಘಟಕವಿರುವಂತೆ ಮಾಡಿದರು. ಕರ್ನಾಟಕ ಏಕೀಕರಣದ ಬಗ್ಗೆ 1928ರಲ್ಲಿ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದರು. 1930– 31ರಲ್ಲಿ ಶಿರಸಿ, ಸಿದ್ದಾಪುರ, ಅಂಕೋಲ ಮತ್ತು ಹಿರೇಕೆರೂರು ತಾಲ್ಲೂಕುಗಳಲ್ಲಿ ಕರನಿರಾಕರಣ ಆಂದೋಲನ ನಡೆಸಿದರು. ಮುಂದೆ ವೈಯಕ್ತಿಕ ಸತ್ಯಾಗ್ರಹದ ಸಮಯದಲ್ಲಿ, ಅನಂತರ ಚಲೇಜಾವ್ ಚಳವಳಿಯಲ್ಲಿ (1942) ಅದ್ವಿತೀಯವಾದ ಪಾತ್ರ ವಹಿಸಿದರು. ಕರ್ನಾಟಕದಲ್ಲಿ ಈ ಆಂದೋಲನದ ಸೂತ್ರಧಾರರೆನಿಸಿದರು. ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದರು. ಘಟನಾಸಮಿತಿ ಸದಸ್ಯರಾಗಿ ಭಾರತದ ಸಂವಿಧಾನದ ರೂಪಕರಾದರು. ಸ್ವಾತಂತ್ರ್ಯ ದೊರಕಿದ ಮೇಲೆ ಕೇಂದ್ರ ಸರ್ಕಾರದ ಸುದ್ದಿಶಾಖೆ ಮಂತ್ರಿಗಳಾಗಿ ಸೇವೆ ಸಲ್ಲಿಸಿದರು (1948– 52). ಅನಂತರ ಬಿಹಾರದ ರಾಜ್ಯಪಾಲರಾದರು (1952– 57). 1962– 68ರವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದರು.

ದಿವಾಕರರು ಗಾಂಧೀವಾದಿಗಳು. ಮಹಾತ್ಮಾ ಗಾಂಧೀಜಿಯವರ ಪ್ರಭಾವಕ್ಕೆ ಚಿಕ್ಕಂದಿನಲ್ಲಿಯೇ ಸಿಲುಕಿದ ಇವರು ಗಾಂಧೀಜಿ ಹಾಗೂ ಸತ್ಯಾಗ್ರಹದ ಬಗ್ಗೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಹಲವು ಗಾಂಧೀ ಸಂಬಂಧ ಸಂಸ್ಥೆಗಳೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದ ಇವರು ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದರು.



ಪತ್ರಿಕಾ ರಂಗದಲ್ಲಿ ಹಿರಿಯ ವ್ಯಕ್ತಿಗಳಾಗಿದ್ದ ಇವರು ಕರ್ಮವೀರ, ಸಂಯುಕ್ತ ಕರ್ನಾಟಕ, ಕಸ್ತೂರಿ– ಈ ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾಗಿದ್ದರು. ಇವರ ಲೇಖನ ವ್ಯವಸಾಯ ಬಹುಮುಖವಾದುದು. ಗಾಂಧೀ ಕೃತಿಗಳು ಮತ್ತು ತತ್ತ್ವ, ಕರ್ನಾಟಕ ಏಕೀಕರಣ, ಧರ್ಮ, ತತ್ತ್ವಶಾಸ್ತ್ರ, ಸಾಹಿತ್ಯ, ಇತಿಹಾಸ ಈ ಮುಂತಾದ ಹಲವು ವಿಷಯಗಳನ್ನು ಕುರಿತು ಕನ್ನಡ, ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಸೆರೆಮನೆಯಲ್ಲಿದ್ದಾಗ ಇವರು ಪೌರಸ್ತ್ಯ ಪಾಶ್ಚಾತ್ಯ ತತ್ತ್ವಜ್ಞಾನ ಹಾಗೂ ಆಧ್ಯಾತ್ಮಿಕ ಅನುಭಾವ, ಆಗಮ ಮತ್ತು ತಾಂತ್ರಿಕ ಪರಂಪರೆಗಳನ್ನು ಅಭ್ಯಸಿಸಿ ಭಗವದ್ಗೀತೆ, ಉಪನಿಷತ್ತುಗಳನ್ನು ಕುರಿತು ಅನೇಕ ಅನುವಾದ ಮತ್ತು ಸ್ವತಂತ್ರ ಕೃತಿಗಳನ್ನು ರಚಿಸಿದರು. ಕನ್ನಡದ ಶಿವಶರಣರ ವಚನಗಳನ್ನು ಕುರಿತು ಇವರು ಬರೆದಿರುವ ವಚನಶಾಸ್ತ್ರರಹಸ್ಯ ಎಂಬ ಬೃಹತ್ ಕೃತಿ. ಆ ವಿಷಯದಲ್ಲಿ ರಚಿತವಾದ ಬಹುಶಃ ಪ್ರಥಮ ತೌಲನಿಕ ಮತ್ತು ವಸ್ತುನಿಷ್ಠ ಗ್ರಂಥವಾಗಿದೆ. ರಾಮಕೃಷ್ಣ ಪರಮಹಂಸರ ಬಗ್ಗೆ ಕನ್ನಡದಲ್ಲಿ, ಅರವಿಂದರ ಬಗ್ಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಗ್ರಂಥರಚನೆ ಮಾಡಿದ್ದಾರೆ. ಇವರು ತಮ್ಮ ಜೀವನ ದರ್ಶನವನ್ನು ಅಂತರಾತ್ಮನಿಗೆ ಮತ್ತು ವಿಶ್ವಾತ್ಮನಿಗೆ ಎಂಬ ಎರಡು ಗ್ರಂಥಗಳಲ್ಲಿ ಕಾಣಿಸಿದ್ದಾರೆ. ಸೆರೆಯ ಮರೆಯಲ್ಲಿ ಎಂಬ ಗ್ರಂಥದಲ್ಲಿ ಸೆರೆಮನೆಯಲ್ಲಿ ತಮಗಾದ ಅನುಭವಗಳನ್ನು ಹೇಳಿದ್ದಾರೆ. ಎಂ.ಆರ್. ಶ್ರೀನಿವಾಸಮೂರ್ತಿಯವರ ನಾಗರಿಕ ಎಂಬ ಗ್ರಂಥವನ್ನು ಇವರು ಹಿಂದೀಗೆ ಅನುವಾದಿಸಿದ್ದಾರೆ. ಉಪನಿಷತ್ ಪ್ರಕಾಶ, ಉಪನಿಷತ್ ಕಥಾವಲಿ, ಗೀತೆಯ ಗುಟ್ಟು, ಕರ್ಮಯೋಗ, ಹರಿಭಕ್ತಸುಧೆ, ಮಹಾತ್ಮರ ಮನೋರಂಗ– ಇವು ಇವರ ಇತರ ಮುಖ್ಯ ಕೃತಿಗಳು. ಸತ್ಯಾಗ್ರಹ, ಗ್ಲಿಂಪ್ಸಸ್ ಆಫ್ ಗಾಂಧೀಜಿ, ಉಪನಿಷದ್ಸ್ ಇನ್ ಸ್ಟೋರಿ ಅಂಡ್ ಡಯಲಾಗ್, ಭಗವಾನ್ ಬುದ್ಧ– ಇವು ಇವರು ಇಂಗ್ಲಿಷಿನಲ್ಲಿ ಬರೆದಿರುವ ಗ್ರಂಥಗಳು. ಬಿಹಾರ್ ಥ್ರೂ ದಿ ಏಜಸ್, ಕರ್ನಾಟಕ ಥ್ರೂ ದಿ ಏಜಸ್– ಇವು ಇವರ ಸಂಪಾದಿತ ಗ್ರಂಥಗಳು.

ಇವರ ಸಾಹಿತ್ಯ ಕಾರ್ಯವನ್ನು ಮೆಚ್ಚಿ ಕನ್ನಡ ನಾಡು 1938ರಲ್ಲಿ ಬಳ್ಳಾರಿಯಲ್ಲಿ ಸೇರಿದ್ದ 23ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು. ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಿ ಸನ್ಮಾನಿಸಿದೆ. ಇವರು 1990ರಲ್ಲಿ ನಿಧನರಾದರು. (ಎಸ್.ವಿ.ಪಿ.)

**ದಿವಾಕರ ನಂದಿ:** ಒಬ್ಬ ಜೈನಮುನಿ; ಕನ್ನಡ ವ್ಯಾಖ್ಯಾನಕಾರ. ಇವನ ಗುರುಪರಂಪರೆಯ ಆಧಾರದ ಮೇಲೆ ಹೇಳುವುದಾದರೆ ಈತ ಕೊಂಡಕುಂದಾನ್ವಯ ಮೂಲ ಸಂಘ ದೇಶಿಗಗಣದ ಪುಸ್ತಕಗಚ್ಛಕ್ಕೆ ಸೇರಿದಾತ. ಗೃಧ್ರ ಪಿಂಛಾಚಾರ್ಯ ಎಂಬ ಹೆಸರಿದ್ದ ಉಮಾಸ್ವಾಮಿ ಅಥವಾ ಉಮಾಸ್ವಾತಿ ಸಂಸ್ಕೃತದಲ್ಲಿ ರಚಿಸಿರುವ ತತ್ತ್ವಾರ್ಥಸೂತ್ರವೆಂಬ ಜೈನಾಗಮ ಗ್ರಂಥಕ್ಕೆ ಈತ ಕನ್ನಡದಲ್ಲಿ ವ್ಯಾಖ್ಯಾನ ಬರೆದಿದ್ದಾನೆ. ಈ ವ್ಯಾಖ್ಯಾನದ ಸಮಾಪ್ತಿಭಾಗದಲ್ಲಿ ಇದು ಸಕಲಾಗಮ ಸಂಪನ್ನ ಶ್ರೀಮಚ್ಚಂದ್ರಕೀರ್ತಿ ಭಟ್ಟಾರಕ ಪದ್ಮನಂದಿ ಸಿದ್ಧಾಂತದೇವ ಶ್ರೀಪಾದ ಪ್ರಸಾದಾಸಾದಿತ ಸಮಸ್ತ ಸಿದ್ಧಾಂತಾಮೃತ ಪಾರಾವಾರಗ ಶ್ರೀಮದ್ದಿವಾಕರ (ಣಂದಿ) ಭಟ್ಟಾರಕಮುನೀಂದ್ರ ವಿರಚಿತ ತತ್ತ್ವಾರ್ಥಸೂತ್ರಾನುಗತ ಕರ್ನಾಟಕ ಲಘುವೃತ್ತಿಯೋಳ್– ಎಂದು ಹೇಳಿದ್ದಾನೆ. ಜಡರೂ ಬಾಲಕರೂ ಬಂಧರೂ ತತ್ತ್ವಾರ್ಥವನ್ನು ತಿಳಿದು ಪಾಪವನ್ನು ಕಳೆದುಕೊಂಡು ಸಮ್ಯಕ್ತ್ವವನ್ನು ಹೊಂದಿ ಪರಮಸ್ಥಾನವನ್ನು ಪಡೆಯಲೆಂದು ಸಿದ್ಧಾಂತ ರತ್ನಾಕರರು ತತ್ತ್ವಾರ್ಥಸೂತ್ರಕ್ಕೆ ಕನ್ನಡದಲ್ಲಿ ವೃತ್ತಿಯನ್ನು ರಚಿಸಿದರೆಂದು ನಗರದ 57ನೆಯ ಶಾಸನದಿಂದ ತಿಳಿದುಬರುತ್ತದೆ. ದಿವಾಕರ ನಂದಿಗೆ ಉಭಯ ಸಿದ್ಧಾಂತ ರತ್ನಾಕರ ಎಂಬ ಬಿರುದಿರುವಂತೆ ತಿಳಿದುಬರುತ್ತದೆ. ಶಕ 984ರ ಒಂದು ಶಾಸನದಿಂದ ಈತ ಚಂದ್ರಕೀರ್ತಿ ಭಟ್ಟಾರಕರ ಅಗ್ರ ಶಿಷ್ಯನೆಂದೂ ಅರ್ಹತ್ ತತ್ತ್ವವಸ್ತುವಿಸ್ತಾರಕನೆಂದು ವರ್ಣಿತನಾಗಿದ್ದಾನೆ. 1068ರಲ್ಲಿದ್ದ ಶಾಂತಿನಾಥ ಕವಿಯ ಸುಕುಮಾರ ಚರಿತದಿಂದ ತಿಳಿದುಬರುವಂತೆ ಈತ ವ್ಯಾಕರಣ ತರ್ಕ ಸಿದ್ಧಾಂತ ಈ ಮೂರೂ ವಿದ್ಯೆಗಳಲ್ಲಿ ಪ್ರವೀಣನಾಗಿದ್ದ. ಶ್ರವಣಬೆಳಗೊಳದ ಒಂದು ಶಾಸನ ಕೂಡ ಈತನನ್ನು ಹೀಗೆಯೇ ಕೀರ್ತಿಸಿದೆ. ತತ್ತ್ವಾರ್ಥಸೂತ್ರ ಜೈನಧರ್ಮದಲ್ಲಿ ದಿಗಂಬರ ಶ್ವೇತಾಂಬರ ಎರಡೂ ಪರಂಪರೆಗಳಲ್ಲಿ ಮಾನ್ಯತೆಯನ್ನು ಪಡೆದಿರುವ ಪೂಜ್ಯಗ್ರಂಥ. ದ್ರವ್ಯಾನುಯೋಗಕ್ಕೆ ಸಂಬಂಧಿಸಿದಂತೆ ಸಂಸ್ಕೃತದಲ್ಲಿ ಇದೇ ಮೊದಲ ಗ್ರಂಥ. ಈ ಗ್ರಂಥದ ಮೇಲೆ ಎರಡೂ ಪರಂಪರೆಗಳಲ್ಲಿ ವಿವಿಧ ವ್ಯಾಖ್ಯಾನಗಳು ರಚನೆಯಾಗಿರುವುದು ಇದರ ಪ್ರಾಮುಖ್ಯವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಂಥ ಒಂದು ಶ್ರೇಷ್ಠ ಗ್ರಂಥಕ್ಕೆ ದಿವಾಕರ ನಂದಿ ಕನ್ನಡ ವ್ಯಾಖ್ಯಾನವನ್ನು ರಚಿಸಿದ್ದಾನೆ. ಮೂಲದಲ್ಲಿರುವಂತೆಯೆ ಇದರಲ್ಲೂ 10 ಅಧ್ಯಾಯಗಳಿವೆ. ದಿವಾಕರನಂದಿ ಇಲ್ಲಿ ಮೂಲಸೂತ್ರಗಳನ್ನು ವ್ಯಾಖ್ಯಾನಿಸಿರುವುದೇ ಅಲ್ಲದೆ ಅವುಗಳ ವಿವರಣೆಗೆಂದು ಗೊಮ್ಮಟಸಾರ, ತ್ರಿಲೋಕಸಾರ ಗ್ರಂಥಗಳಿಂದ ಪ್ರಾಕೃತ ಗಾಹೆಗಳನ್ನು ಉದ್ಧರಿಸಿ ಅವನ್ನೂ ಪದಶಃ ಅರ್ಥೈಸಿದ್ದಾನೆ. *

**ದೀಕ್ಷಿತ್,ಉಮಾಶಂಕರ:** 1901– . ಕರ್ನಾಟಕದ ಮಾಜಿ ರಾಜ್ಯಪಾಲರು (1976 –77). ಉತ್ತರ ಪ್ರದೇಶದ ಉನ್ನಾವ್ ಜಿಲ್ಲೆಯ ಉಗೂ ಗ್ರಾಮದಲ್ಲಿ 1901 ಜನವರಿ 12ರಂದು ಜನಿಸಿದರು. ತಂದೆ ರಾಮಸ್ವರೂಪ್, ತಾಯಿ ಶಿವ್‌ಪ್ಯಾರಿ. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜೈಲುವಾಸ ಅನುಭವಿಸಿದರು. ನವದೆಹಲಿಯ ಇವಾಕ್ಯೂ ಪ್ರಾಪರ್ಟಿಯ ಧರ್ಮದರ್ಶಿ (1948– 52), ರಾಷ್ಟ್ರೀಯ ಕೈಗಾರಿಕೆಗಳ ಕಾರ್ಪೋರೇಷನ್ ಗೌರವ ಸಲಹೆಗಾರ (1956), ಬ್ರಿಟಿಷ್ ಇಂಡಿಯನ್ ಕಾರ್ಪೋರೇಷನ್ನಿನ ಅಧ್ಯಕ್ಷ (1971) ಹೀಗೆ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಇವರು ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ವಸತಿ ಹಾಗೂ ಕಾಮಗಾರಿ (1971– 72), ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗೃಹಖಾತೆ (1973– 74), ನೌಕಾಯಾನ ಮತ್ತು ಸಾರಿಗೆ

(1975) ಮೊದಲಾದ ಹಲವು ಹುದ್ದೆಗಳನ್ನು ನಿರ್ವಹಿಸಿದರು. ಇವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಖಜಾಂಚಿಯಾಗಿಯೂ ದುಡಿದಿದ್ದಾರೆ (1970– 75). ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸ್ವಾಮಿ ರಾಮತೀರ್ಥ ಸ್ಮಾರಕ ಸಂಸ್ಥೆ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. 1976 ಜನವರಿ 10 ರಿಂದ 1977 ಆಗಸ್ಟ್ 2ರವರೆಗೆ ಇವರು ಕರ್ನಾಟಕದ ರಾಜ್ಯಪಾಲರಾಗಿದ್ದರು. ಅನಂತರ ಇವರು ಪಶ್ಚಿಮ ಬಂಗಾಲದ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದರು (1984– 86). (ಟಿ.ಜಿ.)

**ದೀಕ್ಷಿತ್,ಜಿ.ಎಸ್.:** 1911– 2004. ಹೆಸರಾಂತ ಇತಿಹಾಸಕಾರ ಮತ್ತು ಸಂಶೋಧಕ. ಇಂದಿನ ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ 1911 ಜನವರಿ 10ರಂದು ಜನಿಸಿದರು. ಇವರ ಪೂರ್ತಿ ಹೆಸರು ಗಿರಿರಾಮ ಶ್ರೀಧರ ದೀಕ್ಷಿತ್. ತಂದೆ ಗಿರಿರಾಮ ದೀಕ್ಷಿತರು ಹರಿಹರೇಶ್ವರ ದೇವಾಲಯದ ಅರ್ಚಕರಾಗಿದ್ದರು. ಇವರು ಹರಿಹರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿ, ದಾವಣಗೆರೆಯಲ್ಲಿ ಪ್ರೌಢಶಾಲಾ ವ್ಯಾಸಂಗವನ್ನು ಮಾಡಿದರು. ಮುಂದೆ ಶಿವಮೊಗ್ಗ ಮತ್ತು ಮೈಸೂರುಗಳಲ್ಲಿ ಕಾಲೇಜು ವಿದ್ಯಾಭ್ಯಾಸ ನಡೆಸಿ ಮೈಸೂರು ವಿಶ್ವವಿದ್ಯಾಲಯದಿಂದ ಇತಿಹಾಸವನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಚಿನ್ನದ ಪದಕ ಮತ್ತು ಮೊದಲ ರ್‍ಯಾಂಕ್ ಸಹಿತ ಪದವಿ ಪಡೆದರು (1932). ಮುಂಬಯಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಗಳಿಸಿದರು.

ಇವರ ವೃತ್ತಿಜೀವನ ಆರಂಭಗೊಂಡದ್ದು ಅಂದಿನ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಮತ್ತು ಈಗ ಒರಿಸ್ಸ ರಾಜ್ಯದಲ್ಲಿರುವ ಪಾರ್ಲಕಿಮೇಡಿನ ಮಹಾರಾಜ ಕಾಲೇಜಿನಲ್ಲಿ ಇತಿಹಾಸದ ಅಧ್ಯಾಪಕನಾಗುವುದರ ಮೂಲಕ. ಅಲ್ಲಿನ ಮಹಾರಾಜರ ಕುಟುಂಬಕ್ಕೆ ಇವರು ಆಪ್ತರಾಗಿದ್ದು ಅವರೊಂದಿಗೆ ಟೆನಿಸ್ ಆಡುತ್ತಿದ್ದುದೂ ಉಂಟು. ದೀಕ್ಷಿತರು 1939ರಲ್ಲಿ ಮೈಸೂರಿನ ಪುರಾತತ್ತ್ವ ಇಲಾಖೆಗೆ ಉತ್ಖನನ ಸಹಾಯಕರಾಗಿ ಸೇರಿದರು. ಪ್ರಸಿದ್ಧ ಪುರಾತತ್ತ್ವಜ್ಞ ಎಂ.ಎಚ್.ಕೃಷ್ಣ ಅವರು ನಡೆಸಿದ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ ಉತ್ಖನನಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಅನಂತರ ಈ ಹುದ್ದೆಯನ್ನು ಬಿಟ್ಟು ಸಾಂಗ್ಲಿಯ ವಿಲಿಂಗ್ಡನ್ ಕಾಲೇಜನ್ನು ಸೇರಿದರು. ಅಲ್ಲಿ ಇವರಿಗೆ ಖ್ಯಾತ ಇತಿಹಾಸ ಸಂಶೋಧಕ ಎಸ್.ಆರ್. ಶರ್ಮರ ಮಾರ್ಗದರ್ಶನ ದೊರೆಯಿತು. ಆ ಕಾಲೇಜಿನ ಪ್ರಾಂಶುಪಾಲರಾಗಿದ್ದ ವಿ.ಕೃ.ಗೋಕಾಕ್ ಮತ್ತು ಅಧ್ಯಾಪಕರಾಗಿದ್ದ ರಂ.ಶ್ರೀ. ಮುಗಳಿಯವರ ಒಡನಾಟದಿಂದ ಇವರು ಪ್ರಭಾವಿತರಾದರು. ಅನಂತರ ಪುಣೆಯ ಫರ್ಗ್ಯುಸನ್ ಕಾಲೇಜಿಗೆ ವರ್ಗವಾಗಿ ಆರು ವರ್ಷಗಳ ಕಾಲ ಅಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಪುಣೆ ವಿಶ್ವವಿದ್ಯಾಲಯ ಪ್ರಾರಂಭವಾದಾಗ (1949) ಇತಿಹಾಸ ಪಠ್ಯದ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1955ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸೇರಿ

ನಿವೃತ್ತರಾಗುವವರೆಗೂ (1971) ಧಾರವಾಡವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. 1961–62ರಲ್ಲಿ ಇವರಿಗೆ ಅಮೆರಿಕದ ಸೀನಿಯರ್ ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ದೊರೆಯಿತು. ಮುಂದೆ 1971ರಲ್ಲಿ ಟೊರಾಂಟೋ ವಿಶ್ವವಿದ್ಯಾನಿಲಯದಲ್ಲಿ ಭಾರತೀಯ ಇತಿಹಾಸ ಬೋಧಿಸಲು ಅಮೆರಿಕಕ್ಕೆ ತೆರಳಿದರು. ಪ್ರಾಧ್ಯಾಪಕರಾದ ಬಿ.ಎ.ಸಾಲೆತ್ತೂರ್‌ರ ಮಾರ್ಗದರ್ಶನದಲ್ಲಿ ಮಧ್ಯಕಾಲೀನ ಕರ್ನಾಟಕದ ಸ್ಥಳೀಯ ಆಡಳಿತಗಳ ಬಗ್ಗೆ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿ ಪಡೆದರು (1962).

ಇವರಿಗೆ ಇತಿಹಾಸ ಸಂಶೋಧನೆಗೆ ಸಂಬಂಧಿಸಿದ ಹಲವು ಸಂಘ ಸಂಸ್ಥೆಗಳ ಸಂಪರ್ಕವಿತ್ತು. ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್, ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್, ಮಿಥಿಕ್ ಸೊಸೈಟಿ ಮುಂತಾದವು. 1986 ರಿಂದ 1996ರ ವರೆಗೆ ಇವರು ಕರ್ನಾಟಕ ಇತಿಹಾಸ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ನಿಧನರಾಗುವವರೆಗೂ ಅದರ ಆಜೀವ ಗೌರವಾಧ್ಯಕ್ಷರಾಗಿ ಮುಂದುವರಿದಿದ್ದರು. ಇವರನ್ನು ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ. ಇವರು ಅನೇಕ ಗೋಷ್ಠಿ ಸಮ್ಮೇಳನಗಳ ಅಧ್ಯಕ್ಷರಾಗಿದ್ದರು. 1963ರ ಜನವರಿಯಲ್ಲಿ ಈರೋಡ್‌ನಲ್ಲಿ ನಡೆದ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸಿನ 21ನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅದೇ ವರ್ಷ ಆಂಧ್ರ ಹಿಸ್ಟರಿ ಕಾಂಗ್ರೆಸ್ಸಿನ, ಹಾಗೆಯೇ ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಸಮ್ಮೇಳನಾಧ್ಯಕ್ಷರಾಗಿದ್ದರು. ಮಿಥಿಕ್ ಸೊಸೈಟಿ ಇವರನ್ನು ಸನ್ಮಾನಿಸಿದೆ (1979). ಇವರ ಅಭಿಮಾನಿಗಳು ಗಿರಿದರ್ಶಿನಿ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿ ಗೌರವಿಸಿದ್ದಾರೆ (1987).

ಕನ್ನಡ ನಾಡಿನ ಇತಿಹಾಸ ಸಂಶೋಧನೆಯ ಬೆಳವಣಿಗೆಯಲ್ಲಿ ಮಹತ್ತ್ವದ ಪಾತ್ರ ವಹಿಸಿದ ಅಗ್ರಗಣ್ಯ ವ್ಯಕ್ತಿಗಳಲ್ಲಿ ಒಬ್ಬರಾದ ಇವರು ಎಳೆಯರಿಗೆ ಇತಿಹಾಸ ಸಂಶೋಧನೆಯ ಪ್ರೇರಣೆ, ಮಾಗದರ್ಶನ ನೀಡಿದವರು. ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಬಸವೇಶ್ವರರನ್ನು ಕುರಿತಂತೆ ಸಂಶೋಧನೆ ನಡೆಸುತ್ತಿದ್ದರು. ಇವರಿಗೆ ಕೃಷ್ಣದೇವರಾಯನ ಇತಿಹಾಸವೆಂದರೆ ಅಚ್ಚುಮೆಚ್ಚು. ಹಾಗೆಯೇ ಚೀನದಲ್ಲಿ ಬೌದ್ಧಧರ್ಮ ಬೆಳವಣಿಗೆ ಕುರಿತು ಆಸಕ್ತಿ. ಆನ್ವಯಿಕ ಸಂಶೋಧನೆಯತ್ತ ಒಲವು ಹೊಂದಿದ್ದ ಇವರು ಹಲವು ಕೃತಿಗಳನ್ನು ರಚಿಸಿದ್ದಾರೆ ಹಾಗೂ ಸಂಪಾದಿಸಿದ್ದಾರೆ; ವಿದ್ವದ್ಗೋಷ್ಠಿಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ 40ಕ್ಕೂ ಹೆಚ್ಚು ಸಂಪ್ರಬಂಧಗಳನ್ನು ಮಂಡಿಸಿದ್ದರು. ಹಲವು ಕೃತಿಗಳಿಗೆ ಮುನ್ನುಡಿ ಇಲ್ಲವೇ ವಿಮರ್ಶೆ ಬರೆದರು. ವಿಶೇಷ ಉಪನ್ಯಾಸಗಳನ್ನು ನೀಡಿದ್ದುಂಟು. ಇವರು ಬರೆದ ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್ ಮಿಡೀವಲ್ ಕರ್ನಾಟಕ (1964), ಕೆಳದಿ ನಾಯಕರು ಹಾಗೂ ಇವರು ಸಂಪಾದಿಸಿದ ಅಮೆರಿಕನ್ ಹಿಸ್ಟರಿ ಬೈ ಇಂಡಿಯನ್ ಹಿಸ್ಟೋರಿಯನ್ಸ್ (1969) ಮತ್ತು ಸ್ಟಡೀಸ್ ಇನ್ ಕೆಳದಿ ಹಿಸ್ಟರಿ (1981)– ಇವು ಮುಖ್ಯವಾದವು. ಇವರೊಬ್ಬ ಒಳ್ಳೆಯ ಭಾಷಾಂತರಕಾರರೂ ಆಗಿದ್ದರು. ಎರಡು ಸಂಪುಟಗಳಲ್ಲಿ ತಾರಾಚಂದರ ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಇಂಡಿಯಾ ಗ್ರಂಥವನ್ನು ಅನುವಾದಿಸಿದ್ದಾರೆ. ಇವರು 2004 ಜೂನ್ 26ರಂದು ಧಾರವಾಡದಲ್ಲಿ ನಿಧನರಾದರು. **(ಎಚ್.ಎಂ.ಎನ್.ಆರ್.)**

**ದೀಕ್ಷಿತ್,ದಾಶರಥಿ:** ಕನ್ನಡದ ಪ್ರಸಿದ್ಧ ಹಾಸ್ಯ ಲೇಖಕ, ನಾಟಕಕಾರ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ 1921 ಫೆಬ್ರವರಿ 2ರಂದು ಜನಿಸಿದರು. ತಂದೆ ಬಾಳ ದೀಕ್ಷಿತ್, ತಾಯಿ ರಂಗೂಬಾಯಿ. ತಂದೆ ಸರ್ಕಾರದಲ್ಲಿ ಶಿರಸ್ತೇದಾರರಾಗಿದ್ದರು. ಮೊಳಕಾಲ್ಮೂರು, ಹಿರಿಯೂರು, ಚಳ್ಳಕೆರೆಗಳಲ್ಲಿ ದೀಕ್ಷಿತರ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಮಾಧ್ಯಮಿಕ ಶಿಕ್ಷಣ ಹೊಸದುರ್ಗ, ತುರುವನೂರು, ಹೊಳಲ್ಕೆರೆಗಳಲ್ಲಿ. ಇವರ ಪ್ರೌಢ ವಿದ್ಯಾಭ್ಯಾಸ ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ನಗರಗಳಲ್ಲಿ ಆಯಿತು. ತಂದೆಯವರಿಗೆ ಪದೇ ಪದೇ ಊರಿಂದೂರಿಗೆ ವರ್ಗವಾಗುತ್ತಿದ್ದುದರಿಂದ ಮಗನ ವಿದ್ಯಾಭ್ಯಾಸ ಹೀಗೆ ಹಲವು ಎಡೆಗಳಲ್ಲಿ ಮುಂದುವರಿಯುವುದು ಅನಿವಾರ್ಯವಾಗಿತ್ತು. ಅನಂತರ ಇವರು ಕೆಲಸಕ್ಕಾಗಿ ಹುಡುಕಾಟ ನಡೆಸಿದರು. ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ಸ್ವಲ್ಪಕಾಲ ಉದ್ಯೋಗಿಯಾಗಿದ್ದು ಅನಂತರ ಹಿಂದುಸ್ತಾನ್ ವಿಮಾನ ಕಾರ್ಖಾನೆಯನ್ನು ಸೇರಿ ಅಲ್ಲಿ ಮೂವತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ತಂದೆಯವರು ಶಿರಸ್ತೇದಾರರಾಗಿದ್ದುದ್ದರಿಂದ ಅವರು ಅಧಿಕಾರ ನಡೆಸುತ್ತಿದ್ದ ಊರಿಗೆ ಯಾವುದೇ ನಾಟಕ ಕಂಪನಿ ಬಂದರೂ ಪ್ರದರ್ಶನಕ್ಕೆ ಅವರ ಅನುಮತಿ ಪಡೆಯಬೇಕಾಗುತ್ತಿತ್ತು. ಇದರಿಂದ ದೀಕ್ಷಿತರಿಗೆ ನಾಟಕಗಳನ್ನು ಉಚಿತವಾಗಿ ನೋಡುವ ಅವಕಾಶ ದೊರೆಕಿತು. ಇದರಿಂದಾಗಿ ಸಹಜವಾಗಿಯೇ ಇವರಿಗೆ ಅಭಿನಯದಲ್ಲಿ ಅಭಿರುಚಿ ಮೂಡಿತು. ನಾಟಕಾಭಿನಯದೊಂದಿಗೆ ಇವರು ಸಂಗೀತದಲ್ಲೂ ಪ್ರವೀಣರಾದರು. ಇವರು ಹಾಡುಗಾರಿಕೆ ಮತ್ತು ಹಾರ್ಮೋನಿಯಂ ವಾದನ ಎರಡನ್ನೂ ಕಲಿತರು. ಹರಿಕಥೆಯೊಂದಿಗೂ ಇವರ ಸಂಬಂಧ ಬೆಳೆಯಿತು. ಕೀರ್ತನ ಕಾರ್ಯಕ್ರಮಗಳಲ್ಲಿ ಪಕ್ಕವಾದ್ಯಗಾರರು ದೊರಕದಿದ್ದಾಗ ಇವರೇ ಪಕ್ಕವಾದ್ಯ ಸಹಕಾರ ನೀಡತೊಡಗಿದರು.

ಬೆಂಗಳೂರಿನಲ್ಲಿ ಶಾಶ್ವತವಾಗಿ ನೆಲೆಯೂರಿ ನಿಂತಾಗ ಇವರ ಮನಸ್ಸು ವಿಶೇಷವಾಗಿ ನಾಟಕ ಕಲೆಯ ಕಡೆಗೆ ಹರಿಯಿತು. ಗೆಳೆಯರೊಂದಿಗೆ ಕೂಡಿ ಇವರು ನಾಟಕ ತಂಡ ಕಟ್ಟಿ ನಾಟಕ ಆಡಲೂ ಆಡಿಸಲೂ ಆರಂಭಿಸಿದರು. ಇವರ ನಾಟಕ ತಂಡದ ಹೆಸರು ಗಾಂಪರ ಗುಂಪು. ಇವರು ಸ್ವತಃ ನಾಟಕಗಳನ್ನೂ ಬರೆಯತೊಡಗಿದರು. ಅಜ್ಜಿ ಆಸ್ತಿ ಎಂಬುದು ಇವರು ಬರೆದ ಮೊದಲನೆಯ ನಾಟಕ. ಅಳಿಯ ದೇವರು ಎರಡನೆಯದು. ಇದು ತುಂಬ ಜನಪ್ರಿಯವಾಯಿತು. ಪ್ರೇತ ಸಂಹಾರ, ವೈದ್ಯನ ವಿವಾಹ ಎಂಬುವು ಪ್ರಹಸನಗಳು. ಲಂಬೋದರ, ಗಾಂಪರ ಗುಂಪು ಮುಂತಾದವು ಓದಲೂ ಆಡಲೂ ಅನುವಾಗಿ ಒದಗಿಬಂದವು.

ನಾಟಕಗಳಲ್ಲದೆ ಇವರು ಕಾದಂಬರಿಗಳನ್ನೂ ಇತರ ಕೃತಿಗಳನ್ನೂ ರಚಿಸಿದ್ದಾರೆ. ಬಾಲ ಬಂಧನ, ಮಾವನ ಮನೆ– ಇವು ಕಾದಂಬರಿಗಳು. ಇವರು ಲೇಖನಗಳನ್ನೂ ಕಥೆಗಳನ್ನೂ ಬರೆಯತೊಡಗಿದರು. ಗೆಳೆಯರ ಅಪೇಕ್ಷೆಯಂತೆ ಗಂಭೀರ ಸಾಹಿತ್ಯವನ್ನು ಬಿಟ್ಟು ನಗೆ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದರು. ರಾಶಿ ಅವರ ಕೊರವಂಜಿ ಪತ್ರಿಕೆಗೂ ದೀಕ್ಷಿತರಿಗೂ ಸಂಬಂಧ ಬೆಳೆಯಿತು. ಆ ಪತ್ರಿಕೆ ಪ್ರಕಟವಾಗುತ್ತಿದ್ದ ವರೆಗೂ ಅದಕ್ಕಾಗಿ ಇವರು ಬರೆದರು. ನಗೆ ಚೆಲ್ಲಾಡಿದರು. ಪೋಡಪ್ರಿಯ ದಫೇದಾರ್ ದೇರಣ್ಣ, ಗಾಂಪರು ಇತ್ಯಾದಿ ಪಾತ್ರಗಳನ್ನು ಸೃಷ್ಟಿಸಿದ್ದರು. ಅಪ್ಪಟ ಹಾಸ್ಯಕ್ಕೆ, ಒಂದಿಷ್ಟು ವ್ಯಂಗ್ಯಕ್ಕೆ ಹೆಸರಾದ ಲೇಖನಗಳು ದೀಕ್ಷಿತರವು. ಪ್ರೇತಸಂಹಾರ ಎಂಬುದು ಇಂಥ ಲೇಖನಗಳ ಸಂಕಲನ. ಇದು ರಾಶಿ ಅವರ ಮೆಚ್ಚುಗೆ ಗಳಿಸಿತ್ತು.

ನಗೆ ಲೇಖನಗಳ ನಡುವೆಯೇ ಇವರಿಗೆ ಒಮ್ಮೊಮ್ಮೆ ಗಂಭೀರ ಸಾಹಿತ್ಯದ ಕಡೆಗೆ ಮನಸ್ಸು ಹರಿಯುತ್ತಿತ್ತು. ಒಂದು ಗಂಭೀರ ಕಾದಂಬರಿಯನ್ನೂ ಇವರು ಬರೆದಿದ್ದಾರೆ. ಹೆಚ್ಚಾಗಿ ಹಾಸ್ಯ ಕಾದಂಬರಿಗಳನ್ನೇ ರಚಿಸತೊಡಗಿದರು. ಮಾವನ ಮನೆ ಒಂದು ಉತ್ತಮ ಹಾಸ್ಯ ಕಾದಂಬರಿ. 'ಗಂಡಾಗಿ ಕಾದಿದ್ದ ಗುಂಡು' ಇನ್ನೊಂದು. ಮರಳಿಮಠಕ್ಕೆ ಎಂಬುದು ಗಾಂಪರ ಗುಂಪಿನ ಪ್ರತಾಪ. ಹೀಗೆ ಇವರು ಒಟ್ಟು ಎಂಟು ನಾಟಕಗಳನ್ನೂ ಎಂಟು ಕಾದಂಬರಿಗಳನ್ನೂ ಹನ್ನೆರಡು ನಗೆ ಲೇಖನ ಸಂಕಲನಗಳನ್ನೂ ಪ್ರಕಟಿಸಿದ್ದರು.

ಇವರಿಗೆ ಸೂತ್ರದಗೊಂಬೆ ಆಟದಲ್ಲೂ ಆಸಕ್ತಿಯಿತ್ತು. ಇದಕ್ಕಾಗಿ ಗೆಳೆಯರೊಂದಿಗೆ ಒಂದು ಸಂಸ್ಥೆ ಕಟ್ಟಿ ಹಲವಾರು ಹಾಸ್ಯ ಪ್ರದರ್ಶನಗಳನ್ನು ನೀಡಿದರು. ಈ ಸಂಸ್ಥೆ ಕರ್ನಾಟಕದ ಹೊರಗೂ ಮೆಚ್ಚುಗೆ ಗಳಿಸಿತು. ಇವರು ಚಲನಚಿತ್ರ ಕ್ಷೇತ್ರವನ್ನು ಪ್ರವೇಶಿಸಿ ಅನೇಕ ಚಿತ್ರಗಳಲ್ಲಿ ನಟಿಸಿದ್ದರು. ಇವರ ಕಾದಂಬರಿಗಳು ದೂರದರ್ಶನದಲ್ಲೂ ಬಂದುವು. ಇವರ ಗಾಂಪರ ಗುಂಪು ಕೃತಿ ಧಾರಾವಾಹಿಯಾಗಿ ಪ್ರಸಾರವಾಯಿತು.

ದೀಕ್ಷಿತ್ ಅವರ ಹಾಸ್ಯದ ಒಂದು ಮುಖ್ಯ ಲಕ್ಷಣವೆಂದರೆ ಅವು ಕನ್ನಡದ ನೆಲೆಯಲ್ಲೇ, ಕನ್ನಡ ಜನರ ನಡುವಿನಿಂದಲೇ ಮೂಡಿ ಬಂದಂಥವು. ಇವರ ವ್ಯಕ್ತಿ ಚಿತ್ರಗಳಲ್ಲಂತೂ ಈ ಗುಣ ಎದ್ದು ಕಾಣುತ್ತದೆ. ದಫೇದಾರ್ ದೇರಣ್ಣ, ಗಾಂಪರ ಗುರು ಈ ಪಾತ್ರಗಳು ತಕ್ಕ ಸಹಜತೆಯಿಂದಲೂ ಸನ್ನಿವೇಶದಿಂದಲೇ ಹೊಮ್ಮುವ ಹಾಸ್ಯದಿಂದಲೂ ಬಹಳ ಜೀವಂತವಾಗಿ ಕಂಗೊಳಿಸುತ್ತವೆ. ಕನ್ನಡದ ಹಾಸ್ಯ ಸಾಹಿತ್ಯದ ಇತಿಹಾಸದಲ್ಲಿ ಇವರ ಹೆಸರು ಶಾಶ್ವತವಾಗಿ ಉಳಿಯುವಂಥದ್ದು. **(ಎಚ್.ಎಸ್.ಕೆ.)**

**ದುಗ್ಗಳೆ:** ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಶಿವಶರಣೆ. ದೇವರ ದಾಸಿಮಯ್ಯನ ಹೆಂಡತಿ. ಅಫಜಲಪುರ ತಾಲ್ಲೂಕಿನ ಗೊಬ್ಬೂರು ಈಕೆಯ ಜನ್ಮಸ್ಥಳ. ಭಕ್ತಿ, ಕಾಯಕ, ದಾಸೋಹ, ಅನುಭಾವ ಮುಂತಾದುವುಗಳ ಆಚರಣೆಯಲ್ಲಿ ಈಕೆ ದೇವರ ದಾಸಿಮಯ್ಯನಷ್ಟೇ ಎತ್ತರಕ್ಕೆ ಏರಿದ್ದಳು. ಧಾರ್ಮಿಕ ಸಾಮಾಜಿಕ ವೈಚಾರಿಕ ಮುಂತಾದ ಎಲ್ಲ ಬಗೆಯ ಸ್ವಾತಂತ್ರ್ಯ ಪಡೆದಿದ್ದಳು. ನೀರಿಲ್ಲದೆ ಅನ್ನ ಮಾಡಿ ನೀಡುವ ಹೆಣ್ಣನ್ನು ಮದುವೆಯಾಗುವೆನೆಂದು ದೇವರ ದಾಸಿಮಯ್ಯ ದಿಬ್ಯವೊಂದನ್ನು ಒಡ್ಡಿದ್ದ. ಜಂಗಮ ಪಾದೋದಕದಿಂದ ಅನ್ನ ಮಾಡಿ ನೀಡಿ ದಾಸಿಮಯ್ಯನನ್ನೊಲಿಸಿ ಕೈಹಿಡಿದು, ಆತ ಕೈಕೊಂಡ ಶರಣಧರ್ಮದ ಪ್ರಸಾದರಲ್ಲಿ ಎಲ್ಲಂದದಿಂದ ನೆರವಿತ್ತು ತನ್ನ ಮುಂದಿನ ಶಿವಶರಣೆಯರಿಗೆ ಆದರ್ಶ ಪ್ರಾಯಳಾದಳು. ಈಕೆಯ ಪತಿಭಕ್ತಿ ಅನುಪಮವಾದುದು.

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ದೇವರ ದಾಸಿಮಯ್ಯನ ವಚನದಿಂದ, ನೆರೆ ನಂಬೋ ನೆರೆ ನಂಬೋ ದಾಸದುಗ್ಗಳೆಯರಂತೆ ಎಂಬ ಬಸವಣ್ಣನವರ ವಚನದಿಂದ ಇವಳ ಸಾಂಸಾರಿಕ ಜೀವನ ಬಹು ತೃಪ್ತಿಕರವಾಗಿದ್ದು, ಈಕೆಯ ಉನ್ನತಿಗೆ ಕಾರಣವಾಯಿತೆಂದು ಹೇಳಬಹುದು. ಇವಳು ವಚನಗಳನ್ನು ಬರೆದಿರುವಳೋ ಇಲ್ಲವೋ ತಿಳಿಯದು. ಇದುವರೆಗೆ ಯಾವುದೇ ವಚನ ದೊರೆತಿಲ್ಲ. **(ಎಸ್‌ಎ.ಆರ್.)**

**ದುಮ್‌ದುಮೆ ಪದಗಳು:** ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವ ಜನಪದ ಕಥನಕಾವ್ಯ ಪ್ರಕಾರ. ಈ ಕಾವ್ಯಗಳನ್ನು ಹಾಡುವಾಗ ದಿಮ್ಮು ಎಂಬ ಚರ್ಮವಾದ್ಯವನ್ನು ಬಳಸುತ್ತಾರೆ. ಆ ವಾದ್ಯದ ದುಮ್ ದುಮ್ಮಿ ಅಥವಾ ದಿಮ್ ದಿಮ್ಮಿ ಎಂಬ ಶಬ್ದದಿಂದ ದುಮ್ ದುಮಿ ಅಥವಾ ದಿಮ್ ದಿಮಿ ಎಂಬ ಪದ ಹುಟ್ಟಿಕೊಂಡಿರಬೇಕು. ದಿಮ್ಮು ವಾದ್ಯವನ್ನು ಈಗಲೂ ಕರಡೆ ಮಜಲುಗಳಲ್ಲಿ ಹಾಗೂ ಮೋಜು ಮಜಲುಗಳಲ್ಲಿ ಕಾಣಬಹುದಾಗಿದೆ. ದುಮ್ ದಿಮ್ ಎಂಬ ಅನುಕರಣವಾಚಕ ಶಬ್ದದಿಂದಲೆ ದಿಮ್ಮು ಎಂಬ ಹೆಸರು ಆ ವಾದ್ಯಕ್ಕೆ ಬಂದಿದೆ. ದಿಮ್ಮು ಬಳಸಿಕೊಂಡು ಹಾಡುವ ಕಾವ್ಯಗಳೇ ದುಮ್‌ದುಮೆ ಪದಗಳು. ಈ ಪದಗಳ ವೈಶಿಷ್ಟ್ಯ ಆಗಾಗ ತನ್ನ ಗತಿಯನ್ನು ಬದಲಾಯಿಸುವ ದಿಮ್ಮು ವಾದ್ಯದ ತಾಳತಾನಗಳಿಗೆ ಹೊಂದಿಕೊಂಡು ಒಡನುಡಿಯು ವುದರಲ್ಲಿ ಅಡಗಿದೆ. ಈ ವಾದ್ಯದ ನೆರವಿಲ್ಲದೆ ಈ ಪದಗಳನ್ನು ಹಾಡುವಂತಿಲ್ಲ. ಹಾಗೆ ಹಾಡಿದರೆ ಅವು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಕಾಣಸಿಗುವ ಹೋಳಿಪದಗಳೆನಿಸಿಕೊಳ್ಳುತ್ತವೆ. ಏಕೆಂದರೆ ದುಮ್‌ದುಮೆ ಪದಗಳಿಗೂ ಹೋಳಿಪದಗಳಿಗೂ ಇರುವ ಮುಖ್ಯ ವ್ಯತ್ಯಾಸ ಬಳಸುವ ವಾದ್ಯಗಳನ್ನು ಅವಲಂಬಿಸಿದ್ದು. ಅವುಗಳ ಭಾಷೆ, ಶೈಲಿ, ರಚನೆ, ತಂತ್ರ ಮುಂತಾದವುಗಳಲ್ಲಿ ಏಕರೀತಿಯನ್ನು ಕಾಣಬಹುದು. ಆದರೆ ಹೋಳಿಪದಗಳು ಶೃಂಗಾರರಸ ಪ್ರಧಾನವಾಗಿರುತ್ತವೆ. ದುಮ್ ದುಮೆ ಪದಗಳಲ್ಲಿ ವೀರರಸ ಪ್ರಧಾನವಾದರೂ ಉಳಿದ ರಸಗಳೂ ಉಂಟು.

ಬಿ.ಎಸ್. ಗದ್ದಗೀಮಠ ಅವರು ದುಮ್‌ದುಮೆ ಹಾಗೂ ದುಂದುಭಿ ಎಂಬ ಎರಡು ಕಾವ್ಯ ಪ್ರಕಾರಗಳನ್ನು ಹೇಳುತ್ತಾರೆ. ಇವೆರಡನ್ನೂ ಬಾಜನಗಬ್ಬವೆಂದು ಹೇಳುವ ಅವರು ಪರಸೆ ಕೂಡಿದಾಗ ಎಲ್ಲೆಂದರಲ್ಲಿ ದುಂ ದುಂ ಶಬ್ದಮಾಡುತ್ತ ತಾಳ, ಲಯ, ಗತಿ, ರಾಗಗಳಿಗೆ ಅನುಸಾರ ಹಾಡುವಂಥವು ದುಮ್‌ದುಮೆ ಪದಗಳು. ಅರಸಂಗಳದಲ್ಲಿ ರಾಜ ದಿಗ್ವಿಜಯಕ್ಕೆ ಹೊರಟಂದು ದುಂದುಭಿ ವಾದ್ಯಗಳನ್ನು ಮೊಳಗಿಸುತ್ತ ಹಾಡಲಾಗುತ್ತಿದ್ದಂಥವು. ದುಂದುಭಿ ಪದಗಳು, ಆದರೆ ಇಲ್ಲಿ ದುಂದುಭಿ ಶಬ್ದ ದುಮ್‌ದುಮೆಗೆ ಸಮೀಕರಿಸಲು ಪ್ರಯತ್ನಿಸಿದ ಸಂಸ್ಕೃತ ಶಬ್ದವೆಂದು ಕಾಣುತ್ತದೆ. ದುಮ್‌ದುಮೆ ಪದಗಳಿಗೆ ಕರಡೆ, ಸಂಬಾಳ, ಮದ್ದಲೆ ಮೊದಲಾದ ವಾದ್ಯಗಳನ್ನು ಬಳಸಿಕೊಂಡು ಹಾಡುತ್ತಿದ್ದರೆಂದು ಅಭಿಪ್ರಾಯವೂ ಬಂದಿದೆ. ಈಗಂತೂ ದಿಮ್ಮ ದಮ್ಮಡಿಗಳು ಬಳಕೆಯಲ್ಲಿವೆ.

ದುಮ್‌ದುಮೆ ಪದಗಳು 12ನೆಯ ಶತಮಾನಕ್ಕೂ ಹಿಂದಿನವೆಂಬುದು ಅಭಿಮಾನದ ಮಾತಾದೀತು. ವೀರಶೈವ ಸಮಾಜದಲ್ಲಿ ಕರಡೆಯವರು, ಸಂಬಾಳದವರು ಎಂಬ ಪಂಗಡಗಳಿರುವುದರಿಂದ ಇವರೆಲ್ಲ ದುಮ್‌ದುಮೆ ಪದಗಳ ಗಾಯನ ಸಂಪ್ರದಾಯದವರಿರಬೇಕೆಂಬುದು ಗದ್ದಗೀಮಠರ ಅಭಿಪ್ರಾಯ. ಶಿವಶರಣರು ತಮ್ಮ ಧರ್ಮಪ್ರಸಾರಕ್ಕಾಗಿ 12ನೆಯ ಶತಮಾನದಲ್ಲೇ ಈ ಪದಗಳನ್ನು ಬಳಸಿಕೊಂಡರೆಂಬುದಾಗಿ ಹೇಳುವ ಎಂ.ಎಸ್. ಸುಂಕಾಪುರ ಅವರು ಅದರ ಸಮರ್ಥನೆಗಾಗಿ ಕಲಿಕಾಲ ಹೋಳಿ ಎಂಬ ಪದದ ಪಲ್ಲವಿಯನ್ನು ಉದಾಹರಿಸುತ್ತಾರೆ. ಅದರಲ್ಲಿ ಬಂದಿರುವ ದುಮ್‌ದುಮೆ ಬಸವಂತನ ಹಬ್ಬ ಎಂಬುದರಲ್ಲಿರುವ ಬಸವಂತ ಪದದ ಆಧಾರದ ಮೇಲೆ ಇದು ಬಸವಣ್ಣನವರ ಕಾಲದ್ದೆಂದು ಹೇಳುವುದು ಸರಿಯಲ್ಲವೆಂದು ಸಮಂಜಸವೆಂದು ತೋರುವುದಿಲ್ಲ. ಬಹುಶಃ ಇವು 15ನೆಯ ಶತಮಾನದಿಂದೀಚಿನವೆಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ವಿಜಯನಗರದ ದೊರೆ ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮದ ಪ್ರಚಾರ ಕಾರ್ಯಕ್ಕೆ ಹೊಸಹುರುಪು ದೊರೆತಿತು. ನೂರೊಂದು ವಿರಕ್ತರು ಅವತರಿಸಿ, ಧರ್ಮ, ತತ್ತ್ವ, ಸಂಸ್ಕೃತಿಗಳ ಸಂವರ್ಧನೆಗೆ ಮನ ಮುಟ್ಟ ದುಡಿದರು. ಅವರಲ್ಲೊಬ್ಬನಾದ ಕರಸ್ಥಳದ ನಾಗಿದೇವ ಈ ಕ್ಷೇತ್ರದಲ್ಲಿ ಬಹುವಾಗಿ ಶ್ರಮಿಸಿದವ. ಅವನ ಸಾಹಿತ್ಯ ಸೇವೆಯೂ ಸ್ಮರಣೀಯವಾದುದು. ಅವನು ಅನೇಕ ಕಾಲಜ್ಞಾನದ ಹಾಡುಗಳನ್ನು ರಚಿಸಿದ್ದಾನೆ. ಆ ಹಾಡುಗಳೆಲ್ಲ ದುಮ್‌ದುಮೆಯ ಪದಗಳಾಗಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಅವನ ಹಾಡಿನ ಒಂದು ಪಲ್ಲವಿ ಹೀಗಿದೆ.

ದಿಮ್ಮಿಸಲೆನ್ನಿರೊ ನಮ್ಮವರೆಲ್ಲ ದಿಮ್ಮಿಸಲೆನ್ನಿರೊ
ದಿಮ್ಮಿಸಲೆಂದು ಬಂದೀವಿ ಸತ್ಯವುಳ್ಳ ಶರಣರೆಲ್ಲ

ಇಲ್ಲಿ ಬಂದಿರುವ ದಿಮ್ಮಿಸು ಎನ್ನುವ ಪದವನ್ನು ಗಮನಿಸಿದರೆ (ದಿಮ್ಮು+ಇಸು=ದಿಮ್ಮಿಸು) ಡಂಗುರ ಸಾರು ಎಂದರ್ಥವಾಗುತ್ತದೆ. ಇಂದಿನ ದಿನಗಳಲ್ಲೂ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಸಾರ್ವಜನಿಕ ಹೇಳಿಕೆ ನೀಡುವಾಗ ದಿಮ್ಮು ಬಳಸುತ್ತಾರೆ. ಇಂಥ ದಿಮ್ಮು ವಾದ್ಯದ ಜೊತೆಗೆ ಕೇಳಿಸುವ ಹಾಡೇ ದುಮ್‌ದುಮೆ ಪದ. ಈ ಬಗೆಯ ಸಾಹಿತ್ಯ ಕಿತ್ತೂರು ಅರಸರ ಆಳ್ವಿಕೆಯ ಕಾಲದಲ್ಲಿ ಅಪಾರವಾಗಿ ಬೆಳೆಯಿತು.

ದುಮ್‌ದುಮೆ ಪದಗಳ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು: ಕಥೆ, ಸನ್ನಿವೇಶಗಳು ವರ್ಣನೆಗಳಿಂದ ಕೂಡಿರುತ್ತವೆ. ವರ್ಣನೆಗಳು ಸಂದರ್ಭೋಚಿತವಾಗಿರುತ್ತವೆಯೇ ಹೊರತು ದೀರ್ಘವಾಗಿ ಅಲ್ಲ. ಕಥನಕ್ರಿಯೆ ತೀವ್ರಗತಿಯಲ್ಲಿ ಮುನ್ನಡೆಯುತ್ತದೆ. ವೀರರಸಕ್ಕೆ ಪ್ರಾಧಾನ್ಯವಿದ್ದರೂ ಉಳಿದ ರಸಗಳೂ ಬರಬಲ್ಲವು. ನೀತಿ ಪ್ರಸಾರ ಕಾರ್ಯವೂ ಇದರ ಮತ್ತೊಂದು ಅಂಗ. ಓಟ, ರಭಸ, ಉತ್ಸಾಹವೇ ಇದರ ಜೀವಾಳ. ಪದಗಳು ಅಂಶಗಣದ ಮಟ್ಟಿನಲ್ಲಿರುತ್ತದೆ. ಶಿಥಿಲತೆ ಇದರ ಒಳಗುಟ್ಟು. ತಾಳಬದ್ಧವಾಗಿ ವಿವಿಧ ರಾಗಗಳಿಗೆ ಹೊಂದಿಕೊಳ್ಳುವುದರ ವೈಶಿಷ್ಟ್ಯ ಶಿಥಿಲತೆಗೆ ಹೆಸರಾದ ಅದರ ಅಂಶಗಣದಲ್ಲಿಯೇ ಅಡಗಿದೆ. ಹಾಡಲು ಬಲ್ಲವರಿಗೆ ಇದರ ಮರ್ಮ ಸ್ಪಷ್ಟವಾಗಿ ಗೋಚರಿಸುತ್ತದೆ. ಇಂತಿಷ್ಟೆ ಪಾದಗಳಿರಬೇಕೆಂಬ ನಿಯಮವಿಲ್ಲದಿದ್ದರೂ ಹತ್ತುಪಾದಗಳಿಗೆ ಮೀರಿ ಬೆಳೆಯುವುದಿಲ್ಲ. ಕೆಲಮೊಮ್ಮೆ ಚೌಪದಿಯಲ್ಲೂ ಇರಬಹುದು. ಇಲ್ಲಿನದು ಶುದ್ಧ ಜನಪದ ಭಾಷೆಯಲ್ಲಿಲ್ಲ. ಇವು ಅಕ್ಷರ ಬಲ್ಲವರ ರಚನೆಗಳೆಂಬುದರಲ್ಲಿ ಅನುಮಾನವಿಲ್ಲ. ಇವನ್ನು ಬರೆದ ಕವಿಗಳು ಅಂತ್ಯದಲ್ಲಿ ತಮ್ಮ ನಾಮಾಂಕಿತವನ್ನು ಮುದ್ರಿಸುವುದನ್ನೂ ಮರೆತಿಲ್ಲ. ಈ ಕಾರಣದಿಂದ ಇವನ್ನು ಸಮಷ್ಟಿ ಸೃಷ್ಟಿಯೆಂದು ಹೇಳುವುದಕ್ಕಾಗುವುದಿಲ್ಲ. ಇವು ಜನಪದ ಸಮುದಾಯಕ್ಕೆ ಸಮೀಪದಲ್ಲಿವೆ. ನಾಗರಿಕ ಸಮುದಾಯಕ್ಕೆ ದೂರವಾಗಿವೆ. ಶಿಷ್ಟ ಭಾಷೆ ಹಾಗೂ ಪ್ರಾಸದ ವೈಭವಕ್ಕೆ ಈ ಉದಾಹರಣೆ ನೋಡಿ:

ಈಶ ಮಾಹೇಶ ಗೌರೀಶ ಗಜಾಂತಕ
ನಾಶಮುಕ್ತೀಶ ಮಲ್ಲೇಶ್ವರನೇ। ಪುರ
ನಾಶ ಭೂತೇಶ ಸರ್ವೇಶ್ವರನೇ। ಜಗ
ದೀಶ ಗಂಗಾಂಬೆಯ ತೋಷ ಭೂಷ ಅಘ
ನಾಶ ರಹಿತ ಆಶ ಸಲಹು ಸೋಮೇಶ

ಮೇಲಿನ ಉದಾಹರಣೆಯಲ್ಲಿ ಆದಿಪ್ರಾಸವನ್ನು ಮಾತ್ರ ಕಾಣುತ್ತೇವೆ. ಉತ್ತರ ಕರ್ನಾಟಕದ ಆಡುನುಡಿಯ ಸೊಗಸಾಗಲಿ ಬನಿಯಾಗಲಿ ಇಲ್ಲಿ ಎಳ್ಳಷ್ಟೂ ಕಂಡುಬರುವುದಿಲ್ಲ.

ಚೌಪದ ರೂಪದ ದುಮ್‌ದುಮೆಗಳಲ್ಲಿ ಆದಿ ಅಂತ್ಯ ಪ್ರಾಸಗಳೆರಡನ್ನೂ ಕಾಣಬಹುದು:

ಕರೆಯಬಂದವರೆಲ್ಲ ಬೆರಗಾಗಿ ನೋಡಿ
ಶರೀರದ ನಾಡಿಯ ಹಿಡಿದು ಮಾತಾಡಿ
ಭರದಿಂದ ಬಂದಾರೊ ಅರಮನಿಗೋಡಿ
ದೊರೆ ಮಲ್ಲಸರ್ಜನ ಕಳುಹೊ ದಯಮಾಡಿ

ಈ ಕಾವ್ಯಗಳ ಮೇಲೆ ಶಿಷ್ಟಸಂಪ್ರದಾಯದ ಪ್ರಭಾವ ಹೆಚ್ಚಾಗಿದೆ. ಒಬ್ಬ ದುಮ್‌ದುಮೆ ಕವಿ ಕಾವ್ಯದ ಅಂತ್ಯದಲ್ಲಿ ಒಂದು ಕಂದಪದ್ಯವನ್ನು ಬರೆದಿದ್ದಾನೆ:

ಗುರು ಲಘು ಗಣನೇಮಂಗಳ್
ವರ ಪ್ರಾಸ ಲಕ್ಷಣ ವಡಿಗಳ್ ತಪ್ಪಾಗಿರಲಿ
ನೆರೆಜಾಣರು ತಿದ್ದೆ ನಿಮಗೆ
ಸುರಲೋಕದ ಪದವಿಯನೀವ ತುರುವಿ ಗಿರೀಶಂ

ಕಥೆಯನ್ನು ತೀವ್ರಗತಿಯಲ್ಲಿ ಆದರೂ ಶಕ್ತಿಯುತವಾಗಿ ರೂಪಿಸುವ ಕೌಶಲಕ್ಕೆ ಅಭಿಮನ್ಯುವಿನ ಕಾಳಗದ ಈ ಸಾಲುಗಳನ್ನು ನೋಡಬಹುದು:

ಕ್ಷಿತಿಪತಿ ಕೇಳ್ ಚಕ್ರವ್ಯೂಹದೊಳಭಿಮನ್ಯು
ಅತಿರಮ್ಯ ಯುದ್ಧವು ಮಾಡಿದನು ಬಹು
ಖತಿಯಿಂದ ಶಿರವ ಚಂಡಾಡಿದನು ಅಲ್ಲೆ
ಹತವಾಗಿ ಮುಕ್ತಿಯ ಕೂಡಿದನು ಜಯ
ದ್ರತ ಮಸ್ತಕ ನರಹರಿಯು ಎಚ್ಚನುಯೆಂದು
ಯತಿರಾಯ ಪೇಳಿದ ಹಿತವ ಭೂವರಗೆ

ಸುಭದ್ರೆ ಹಸುಮಗುವನ್ನು ಯುದ್ಧಕ್ಕೆ ಕಳಿಸುವುದೆ ಎಂದಾಗ ಅಭಿಮನ್ಯುವಿನ ಪರಾಕ್ರಮದ ಮಾತುಗಳಿವು:

ಹಡೆದವ್ವ ನೀ ಎನ್ನ ತಡೆವುದುಚಿತವೇನ
ಕೊಡು ಗೆದ್ದು ಬಾ ಎಂದು ಹರಕೆಯನ್ನು ಶೋಕ
ನುಡಿ ಸಲ್ಲ ಬಿಡು ಬಿಡು ಚಿಂತೆಯನು ನಿನ್ನ
ನುಡಿ ಗೇಳಿ ಬಿಡೆನು ನಾನು ಕೇಳಿದೆನು ಎಂದು
ಒಡಗೊಂಡು ಸಾರಥಿ ವೀರ ಬೊಬ್ಬೆಗಳಿಂದ
ಪೊಡಮಟ್ಟು ಬರುವೆನೆಂದನು

ವರ್ಣನೆಗಳಲ್ಲಿ ದುಮ್‌ದುಮೆ ಕವಿ ಹಿತಮಿತ ಚತುರತೆಯನ್ನು ಮೆರೆಯಬಲ್ಲನೆಂಬುದಕ್ಕೆ ಕೀಚಕ ದ್ರೌಪದಿಯನ್ನು ಕಂಡು ಹೇಳುವ ಮಾತುಗಳಿವು:

ಒಬ್ಬ ದೂತನ ವಾರಿಯೊಳು ನಿಂತು ತನ್ನಯ
ಹುಬ್ಬೀಗೆ ಕೈ ಹಚ್ಚಿ ನೋಡಿದನು ಇಂಥ
ಹೆಣ್ಣೀನ ಸಮನಿಲ್ಲ ನೋಡೆಂದನು ಬಣ್ಣ
ನಿಂಬೀಯ ಹಣ್ಣು ಕಾಣೆಂದನು ಇಂಥ
ಹೆಣ್ಣೀನ ರೂಪವ ಕಂಡು ಸೈರಿಸಲಾರೆ
ಇನ್ನೇನು ಗತಿಯೆಂದು ಅಂದ ಕೀಚಕನು
ಬಡನಡು ಬಳುಕುವ ಹೆಣ್ಣೀನ ನಡಿಗೆಯು
ನಡೆದರೆ ಮದ್ದಾನೆಯಂದದಲಿ ಬಲು
ನುಡಿದಳು ಸ್ವರ ಕೋಕಿಲೆಯಂದದಲಿ ತಾನು
ಕಡೆಗಣ್ಣ ನೋಟದಿ ನೋಡುತಲಿಹಳು ಇಂಥ
ಸುಂದರಿ ಸುಗುಣಿ ಇಂದಾಗದಿರೆ ಎನಗೆ
ಇನ್ನೆಂದಿಗೆ ಆಗೋದು ಎಂದ ಕೀಚಕನು

ದುಮ್‌ದುಮೇ ಪದಗಳನ್ನು ಅನೇಕ ಕವಿಗಳು ರಚಿಸಿದ್ದಾರೆ. ಈವರೆಗೆ ಪ್ರಕಟವಾಗಿರುವ ಕೃತಿಗಳ ವಚನಕಾರರಲ್ಲಿ ಮಲ್ಲಸರ್ಜ ದೊರೆಯ

ಆಸ್ಥಾನದಲ್ಲಿದ್ದ ರುದ್ರಕವಿ, ಕುಂದಗೋಳದ ಬಸವಲಿಂಗ, ಚನ್ನಬಸವ, ನವಿಲುಗುಂದದ ಬಸವಲಿಂಗ, ಗುರುಶಾಂತವೀರಣ್ಣ, ಮಾಗಡಿ ಬಸವ, ಮುನಿಪುರದ ಪ್ರಭುವಿನ ಶಿಷ್ಯ, ಉಜ್ಜಯಿನಿ ಮರುಳಸಿದ್ಧನ ಬಾಲಕ, ಗೋಕಾವಿ, ಸಿದ್ಧಸೇವಕ ಮೊದಲಾದವರು ಪ್ರಸಿದ್ದರು. ಕೆಲವು ದುಮ್ ದುಮೆ ಪದಗಳು ಲಾವಣಿ ಎಂಬ ಹೆಸರಿನಿಂದಲೂ ಕೆಲವು ಲಾವಣಿಗಳು ದುಮ್‌ದುಮೆ ಪದಗಳು ಎಂಬ ಹೆಸರಿನಿಂದಲೂ ಪ್ರಕಟವಾಗಿರುವ ಸಾಧ್ಯತೆ ಎದ್ದುಕಾಣುತ್ತವೆ. ಕಿತ್ತೂರಿನ ಐತಿಹಾಸಿಕ ಘಟನೆಗಳನ್ನು ಕುರಿತ ಕಾವ್ಯಗಳಲ್ಲಿ ಈ ಬಗೆಯ ಗೊಂದಲವೇರ್ಪಟ್ಟಿವೆ. ಪ್ರಕಟಿತ ಕೃತಿಗಳಲ್ಲಿ ದೊಡ್ಡ ಭಾವೆಪ್ಪ ಮೂಗಿ ಅವರ ದೊರೆಮಲ್ಲಸರ್ಜನ ದುಮ್‌ದುಮೆ (1951) ಮೊದಲನೆಯದೆಂದು ಕಾಣುತ್ತದೆ. ಅನಂತರ ಗದ್ದಗೀ ಮಠ ಅವರಿಂದ ಕುಮಾರರಾಮನ ದುಮ್‌ದುಮೆ ಪ್ರಕಟವಾಗಿದೆ (1959). ಫ್ಲೀಟ್ ಪ್ರಕಟಿಸಿದ್ದ ಕಿತ್ತೂರಿಗೆ ಸಂಬಂಧಿಸಿದ ಐತಿಹಾಸಿಕ ಕಾವ್ಯಗಳು ಲಾವಣಿಗಳೇ ಅಥವಾ ದುಮ್‌ದುಮೆ ಪದಗಳೇ ಎಂಬ ಚರ್ಚೆಯೂ ಇದೆ. ಸುಪ್ರಸಿದ್ಧ ಜನಪದ ಕವಿ ಬಾಳಗೋಪಾಳನ ಕೃತಿಗಳಲ್ಲಿ ಯಾವುವು ದುಮ್‌ದುಮೆ ಪದಗಳೆಂಬುದನ್ನು ಸಂಪಾದಕರು ಗುರುತಿಸಿದಂತೆ ಕಾಣುವುದಿಲ್ಲ. ಸುಂಕಾಪುರ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಜೀವನ ಜೋಕಾಲಿ 4 ಮತ್ತು 5ನೆಯ ಸಂಪುಟಗಳು ಕ್ರಮವಾಗಿ ಹೋಳಿಪದ ಹಾಗೂ ದುಮ್‌ದುಮೆಪದ ಎಂಬ ಶೀರ್ಷಿಕೆಯನ್ನು ಹೊತ್ತಿದ್ದರೂ ಅವುಗಳನ್ನು ಕರಾರುವಾಕ್ಕಾಗಿ ವಿಂಗಡಿಸಿ ಪ್ರಕಟಿಸುವಾಗ ಸಂಪಾದಕರು ಗೊಂದಲಕ್ಕೀಡಾಗಿದ್ದಾರೆ. ತಾಡಪತ್ರಗಳಲ್ಲಿ ಹಾಗೂ ಜನತೆಯ ಬಾಯಲ್ಲಿ ಉಳಿದಿರುವ ಈ ಸಂಪ್ರದಾಯದ ಕಾವ್ಯಗಳನ್ನು ಭಾಷಾಂತರಗಳೊಡನೆ ಪರಿಷ್ಕರಿಸಿ ಪ್ರಕಟಿಸುವ ಕಾರ್ಯ ಜರೂರಾಗಿ ಆಗಬೇಕಾಗಿದೆ. *

**ದುರ್ಗಸಿಂಹ:** ಸು. 1031. ಪಂಚತಂತ್ರ ಎಂಬ ಗ್ರಂಥದ ಕರ್ತೃ. ಕಲ್ಯಾಣಿ ಚಾಳುಕ್ಯ ಒಂದನೆಯ ಜಗದೇಕಮಲ್ಲನಲ್ಲಿ (1015–44) ಈತ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದ. ಕಿಸುಕಾಡು ನಾಡಿನ ಸಯ್ಯಡಿ ಯೆಂಬ ಅಗ್ರಹಾರ ಇವನ ಜನ್ಮಸ್ಥಳ. ಇವನ ಅಜ್ಜ ಧರಾಮರಾಗ್ರಗಣ್ಯನಾದ ದುರ್ಗಮಯ್ಯ, ತಂದೆ ದೇವದ್ವಿಜಗುರುಜನಪದ ಸೇವಾನಿರತನಾದ ಈಶ್ವರಾರ್ಯ, ತಾಯಿ ದೇವಕಬ್ಬೆ, ಗುರು ಮಹಾಯೋಗಿ ಶಂಕರಭಟ್ಟ. ಕವಿ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ಕಟ್ಟಿಸಿದಂತೆ ತಿಳಿಯುತ್ತದೆ. ಪೂರ್ವ ಕವಿಗಳಲ್ಲಿ ವಿಷ್ಣುಗುಪ್ತ, ಗುಣಾಢ್ಯ, ವರರುಚಿ, ಕಾಳಿದಾಸ, ಮಯೂರ, ಬಾಣ, ಧನಂಜಯ, ಉದ್ಭಟ, ಭವಭೂತಿ, ಭಾರವಿ, ಮಾಘ, ದಂಡಿ, ರಾಜಶೇಖರ ಮೊದಲಾದ ಸಂಸ್ಕೃತ ಕವಿಗಳನ್ನೂ ಶ್ರೀವಿಜಯ, ಕನ್ನಮಯ್ಯ, ಅಸಗ, ಮನಸಿಜ, ಚಂದ್ರ(ಭಟ್ಟ), ಪಂಪ, ಪೊನ್ನ, ಗಜಾಂಕುಶ ಮೊದಲಾದ ಕನ್ನಡ ಕವಿಗಳನ್ನೂ ಸ್ತುತಿಸಿದ್ದಾನೆ. ತನ್ನ ಗ್ರಂಥವನ್ನು ಕವಿಗಮಕಿವಾಗ್ಮಿಪ್ರವರನಾದ ಶ್ರೀ ಮಾದಿರಾಜ ಮುನಿಪುಂಗವ ತಿದ್ದಿದಂತೆ ಹೇಳಿಕೊಂಡಿದ್ದಾನೆ. ತನ್ನ ಗುಣಾದಿಗಳನ್ನು ದಾನಶೂರನಪವಾದಭೀರು ವಿಜ್ಞಾನಮೂರ್ತಿ ಭುವನೈಕವತ್ಸಲಂ ಮಾನನೀಯ ಗುಣನ್, ನಿಜೇಶ ಕಾರ್ಯಧುರೀಣಂ ವಿನಯಾಂಭೋನಿಧಿ ಸತ್ಯವ್ರತಂ ಉದಯೋತ್ತುಂಗನಗ ಸ್ವಭಾವದಿನಪಂ ಪ್ರೋದ್ದಾಮಧರ್ಮ ಕ್ಷಮಾಜದ ಬೇರ್ ಸ್ವಾಮಿಹಿತೌಘ ನಿರ್ಮಲ ಮಹಾರತ್ನಾಕರಂ ನೀತಿಶಾಸ್ತ್ರದ ಮಂತ್ರಕ್ಕಧಿದೈವತಂ ದ್ವಿಜಕುಲಶ್ರೀಕೇಳಿಸಂವಾಸಮೆಂಬುದು ಸರ್ವೋರ್ವರೆಧರ್ಮನಿರ್ಮಳಯ ಶಸ್ಸದ್ದರ್ಗನ್ ಎಂದು ಮೊದಲಾಗಿ ವಿಶೇಷಿಸಿಕೊಂಡಿದ್ದಾನೆ.

ಪಂಚತಂತ್ರ ಚಂಪೂವಿನಲ್ಲಿ ರಚಿತವಾಗಿದೆ. ಬಿಹಾರ ಪ್ರಾಂತ್ಯದ ಆರಾ ಎಂಬಲ್ಲಿಯ ಜೈನಸಿದ್ಧಾಂತ ಭವನದಲ್ಲಿರುವ ಒಂದು ಹಸ್ತಪ್ರತಿಯ ಅಂತ್ಯದಲ್ಲಿ ಬರುವ ಅತಿಸಂಪನ್ನತೆವೆತ್ತ ಸದ್ಗುಹನಿವಾಸಸ್ಥಾನಮಾದಾ ಪ್ರಜಾಪತಿಸಂವತ್ಸರ ಚೈತ್ರಮಾಸಸಿತಪಕ್ಷ ದ್ವಾದಶೀ ತಾರಾಕಾಪತಿವಾರಂ ಬರೆ ಪಂಚತಂತ್ರ ಮೆಸದತ್ತೀ ಧಾತ್ರಿಯೋಳ್ ದುರ್ಗನಿರ್ಮಿತಮುದ್ಯತ್ಕ [ವಿಶೇಖರಪ್ರ] ಮದಲೀಲಾಪುಷ್ಪಿತಾಮ್ರದ್ರುಮಂ –ಎಂಬ ಪದ್ಯದಿಂದ ಈತ ಈ ಕೃತಿಯನ್ನು 1031ರಲ್ಲಿ ಬರೆದಂತೆ ತಿಳಿಯುತ್ತದೆ. ಇದರಲ್ಲಿ ಭೇದಪ್ರಕರಣ ವರ್ಣನಂ, ಪರೀಕ್ಷಾ ವ್ಯಾವರ್ಣನಂ, ವಿಶ್ವಾಸ ಪ್ರಕರಣ ವರ್ಣನಂ, ವಂಚನಾ ಪ್ರಕರಣ ವರ್ಣನಂ, ಮಿತ್ರಕಾರ್ಯಪ್ರಕರಣಂ ಎಂಬ ಐದು ತಂತ್ರಗಳಿದ್ದು 457 ಪದ್ಯಗಳೂ 230 ಶ್ಲೋಕಗಳೂ 48 ಉಪಕಥೆಗಳೂ ಇವೆ.

ಗುಣಾಢ್ಯನಿಂದ ಪೈಶಾಚಿ ಭಾಷೆಯಲ್ಲಿ ರಚಿತವಾದ ಬೃಹತ್ಕಥೆ ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರಕ್ಕೆ ಆಕರ. ತಾನು ಈ ಸಂಸ್ಕೃತ ಕೃತಿಯನ್ನಾಧರಿಸಿ ಕನ್ನಡ ಪಂಚತಂತ್ರವನ್ನು ಬರೆದಿರುವುದಾಗಿ 'ವಸುಭಾಗಭಟ್ಟ ಕೃತಿಯಂ ವಸುಧಾಧಿಪ ಹಿತಮನಖಿಲವಿಬುಧಸ್ತುತಮಂ ಪೊಸತಾಗಿರೆ ವಿರಚಿಸುವೆಂ ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ' ಎಂಬ ಪದ್ಯದಲ್ಲಿ ಕವಿ ಹೇಳಿಕೊಂಡಿದ್ದಾನೆ. ಈ ಹೇಳಿಕೆಯಿಂದ ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರ ಗ್ರಂಥವೊಂದಿತ್ತು ಎಂಬುದಾಗಿ ತಿಳಿದುಬರುತ್ತದೆ. ಇದು ಕವಿಯ ಕಾಲಕ್ಕೆ ಕನ್ನಡನಾಡಿನಲ್ಲಿ ಜನಪ್ರಿಯವಾಗಿದ್ದಿರಬಹುದು. ಇದರಲ್ಲಿ ಇದ್ದುದು ಅಮರಶಕ್ತಿ ಎಂಬ ಅರಸನ ಮೂವರು ಗಂಡುಮಕ್ಕಳು ಮುದ್ದಿನಿಂದ ಬೆಳೆದು ದಾರಿತಪ್ಪಿ ದುಷ್ಟರಾದಾಗ ಅವರನ್ನು ಉಪಾಯವಾಗಿ ತಿದ್ದಿ ವಿವೇಕದ ದಾರಿ ಹಿಡಿಸುವ ಸಲುವಾಗಿ ಅರಸನ ಪ್ರಾರ್ಥನೆಯಂತೆ ಅವನ ಆಸ್ಥಾನಪಂಡಿತ ವಸುಭಾಗಭಟ್ಟ ಕಟ್ಟಿದ ಕಥೆಗಳು. ಈಗ ಈ ಗ್ರಂಥ ಉಪಲಬ್ಧವಿಲ್ಲ. ಆದ್ದರಿಂದ ಕನ್ನಡ ಪಂಚತಂತ್ರ ಅದರ ಕೇವಲ ಅನುವಾದವೇ ಸಾರಸಂಗ್ರಹವೇ ಎಂಬ ವಿವರ ತಿಳಿಯದು. ಸಂಸ್ಕೃತದಲ್ಲಿ ವಿಷ್ಣುಶರ್ಮನ ಪಂಚತಂತ್ರವೆಂಬ ಇನ್ನೊಂದು ಗ್ರಂಥ ಹೆಸರಾಗಿದೆ. ಈ ಗ್ರಂಥದಲ್ಲಿ ದೊರೆಯದ ಕೆಲವು ಕಥೆಗಳೂ ಜೈನಮತ ತತ್ತ್ವಗಳೂ ಪಾರಿಭಾಷಿಕ ಪದಗಳೂ ಕನ್ನಡ ಪಂಚತಂತ್ರದಲ್ಲಿ ದೊರೆಯುತ್ತವೆ. ಇದರಿಂದ ಈತ ಹೆಚ್ಚಾಗಿ ವಸುಭಾಗಭಟ್ಟನನ್ನು ಅನುಸರಿಸಿದಂತೆ ಊಹಿಸಬಹುದಾಗಿದೆ.

ಪಂಚತಂತ್ರ ಒಂದು ಕಥನಕಾವ್ಯ. ಒಂದೊಂದು ತಂತ್ರದಲ್ಲೂ ಕಥೆಯೊಳಗೆ ಕಥೆ ಬಂದು ಕೃತಿ ಹಲವು ಚಿಕ್ಕ ದೊಡ್ಡ ಕಥೆಗಳ ಗಣಿಯಾಗಿದೆ. ಇಲ್ಲಿ ಬರುವ ಪಿಂಗಳಕ, ಸಂಜೀವಕ, ಕರಟಕ, ದಮನಕ– ಇವೇ ಮೊದಲಾದ ಹಲವು ಪಾತ್ರಗಳು ಓದುಗರ ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಂತುಬಿಡುತ್ತವೆ. ನರಿ, ಸಿಂಹ, ಎತ್ತು, ಕಾಗೆ ಮೊದಲಾದ ಪ್ರಾಣಿಗಳ ಕಥೆಗಳಲ್ಲಿ ಮನುಷ್ಯರು ಬೇರೆ ಬೇರೆ ಸಮಯಗಳಲ್ಲಿ ಅನುಸರಿಸಬೇಕಾದ ನೀತಿನಿಯಮಗಳನ್ನು ಕವಿ ಇಲ್ಲಿ ಮಾರ್ಮಿಕವಾಗಿ ನಿರೂಪಿಸಿದ್ದಾನೆ. ಈತನ ಕಥನಕೌಶಲ ಮೆಚ್ಚತಕ್ಕದ್ದು. ಶೈಲಿಯಲ್ಲಿ ಸಂಸ್ಕೃತದ ಪ್ರೌಢಿಮೆ ತೋರಿಬಂದರೂ ಅನೇಕ ಭಾಗಗಳಲ್ಲಿ ಸರಳವಾದ ಕನ್ನಡದಲ್ಲಿ ಗದ್ಯಪದ್ಯರಚನೆ ಕಂಡುಬರುತ್ತದೆ. ಚಂಪೂ ಶೈಲಿ ನವೀನವಾಗಿದ್ದು ಗದ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಂದಿದೆ. ಐದು ಪ್ರಕರಣಗಳಲ್ಲಿ ಮೊದಲನೆಯ ಭೇದಪ್ರಕರಣ ಹೆಚ್ಚು ವಿಸ್ತಾರವಾಗಿದೆ. ಇಲ್ಲಿ ಬರುವ ಕಥೆ ಬಹಳ ರಮಣೀಯವಾಗಿದೆ. ನೀತಿನಿರೂಪಣೆ ಕವಿಯ ಮುಖ್ಯ ಉದ್ದೇಶ. ಕೆಲವೊಮ್ಮೆ ಕೆಲವು ವಸ್ತುಗಳಿಗೆ ಸುಲಭವಾದ ಕನ್ನಡ ಪದ್ಯಕ್ಕೆ ಬದಲಾಗಿ ದೊಡ್ಡ ಸಂಸ್ಕೃತ ಪದಗಳನ್ನು ಬಳಸುವಲ್ಲಿ ಆ ವಸ್ತುವನ್ನು ಕುರಿತು ಒಂದು ರೀತಿಯ ಹಾಸ್ಯವೂ ವಿಡಂಬನೆಯ ದೃಷ್ಟಿಯೂ ಕಂಡುಬರುತ್ತದೆ. ಒಟ್ಟಿನಲ್ಲಿ ಜೈನಧರ್ಮಪರವಾಗಿದ್ದು ಉತ್ತಮ ನಿರೂಪಣೆಯಿಂದ ಕೂಡಿರುವ ಈ ಕಾವ್ಯಕ್ಕೆ ಕನ್ನಡ ಗದ್ಯ ಸಾಹಿತ್ಯದಲ್ಲಿ ಗೌರವದ ಸ್ಥಾನ ದೊರಕಿದೆ. (ಬಿ.ಎಸ್.ಎಸ್.;ಕೆ.ವಿ.ಇ.)

**ದುರ್ವಿನೀತ:** ತಲಕಾಡು ಗಂಗವಂಶದ ರಾಜ ಸು. (529–79). ಅವನೀತನ ಮಗ. ನಿರ್ವಿನೀತ ಎಂಬುದು ಇವನ ಇನ್ನೊಂದು ಹೆಸರು. ಪುನ್ನಾಟ ದೊರೆ ಸ್ಕಂಧವರ್ಮನ ಮಗಳು ಜ್ಯೇಷ್ಠಾದೇವಿ ಇವನ ತಾಯಿ.

ಇವನ ಕಾಲವನ್ನು 5ನೆಯ ಶತಮಾನದ ಉತ್ತರಭಾಗದಿಂದ 7ನೆಯ ಶತಮಾನದ ಉತ್ತರಭಾಗದವರೆಗೂ ಜಗ್ಗುವ ಪ್ರಯತ್ನವನ್ನೂ ಅನೇಕ ವಿದ್ವಾಂಸರು ಮಾಡಿದ್ದಾರೆ. ಒಂದು ಹೇಳಿಕೆಯ ಪ್ರಕಾರ ಚಳುಕ್ಯ ಒಂದನೆಯ ಪುಲಕೇಶಿಯ ತಾತ ಜಯಸಿಂಹನು ದುರ್ವಿನೀತನ ಮೊಮ್ಮಗನಾದರೆ, ಇತರರ ಪ್ರಕಾರ ಒಂದನೆಯ ವಿಕ್ರಮಾದಿತ್ಯ (ಅಥವಾ ವಿಜಯಾದಿತ್ಯ) ಈತನ ದೌಹಿತ್ರ. ದುರ್ವಿನೀತನು ಪಲ್ಲವಸಿಂಹವಿಷ್ಣು ಮತ್ತು ಪೂರ್ವ ಚಾಳುಕ್ಯ ವಂಶದ ಒಂದನೆಯ ವಿಷ್ಣುವರ್ಧನರ ಸಮಕಾಲೀನನೆಂದೂ ಭಾರವಿ ಇವನ ಆಸ್ಥಾನದಲ್ಲಿದ್ದನೆಂದೂ ಹೇಳಿಕೆಗಳಿವೆ. ದುರ್ವಿನೀತ ಅಂದರಿ, ಆಲತೂರಿ, ಪೆರುಟಿರೆ, ಪೆರ್ನಗರ ಮುಂತಾದೆಡೆಯಲ್ಲಿ ನಡೆದ ಯುದ್ಧಗಳಲ್ಲಿ ಶತ್ರುಗಳನ್ನು ನಿಗ್ರಹಿಸಿದನೆಂದು ಶಾಸನಗಳು ತಿಳಿಸುತ್ತವೆ. ವಿವರಗಳು ದೊರಕುವುದಿಲ್ಲ. (ಸಿ.ಕೆ.ಎನ್.)

ಜೈನ ವೈಯ್ಯಾಕರಣಿ ಪೂಜ್ಯಪಾದ ದುರ್ವಿನೀತನ ಗುರು ಎಂದು ಊಹೆ ಇದೆ. ದುರ್ವಿನೀತ ಶಬ್ದಾವತಾರ (ಪ್ರಾಯಶಃ ಪಾಣಿನೀಯ ಮೇಲಿನ ನ್ಯಾಸ ಗ್ರಂಥ), ಬೃಹತ್ಕಥೆ (ವಡ್ಡಕಥೆಯ ಸಂಸ್ಕೃತರೂಪ) ಇವುಗಳನ್ನಲ್ಲದೆ ಭಾರವಿಯ ಕಿರಾತಾರ್ಜುನೀಯದ ಹದಿನೈದು (ಅಥವಾ ಹದಿನೈದನೆಯ) ಸರ್ಗಗಳ ಟೀಕಾಕಾರನೆಂದು ಶಾಸನಗಳು ತಿಳಿಸುತ್ತವೆ. ಶಾಸನಗಳಲ್ಲಿ ಈತನನ್ನು ಅನೇಕ ಕಾವ್ಯ ಕಥಾ ನಾಟಕ ಪ್ರಣಯನ ಪ್ರರೂಢ ಪಾಟವ ಎಂದು ಕರೆಯಲಾಗಿದೆ. ವಡ್ಡಕಥಾ ಕೃತಿಯನ್ನು ವಡ್ಡಕಥೆ ಎಂಬ ಹೆಸರಿನಲ್ಲಿ ಈತ ಕನ್ನಡದಲ್ಲಿ ಬರೆದಿರಬಹುದು ಎಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಕವಿರಾಜಮಾರ್ಗಕಾರ ತನಗಿಂತ ಹಿಂದೆ ಇದ್ದ ಕನ್ನಡ ಗದ್ಯಕವಿಗಳ ಸಾಲಿನಲ್ಲಿ ಈತನನ್ನು ಹೆಸರಿಸಿರುವುದರಿಂದ ಈತ ಗದ್ಯ ಸಾಹಿತ್ಯಕ್ಷೇತ್ರದಲ್ಲಿ ಪ್ರತಿಭಾವಂತನಾಗಿರಬೇಕು. ಹಳಗನ್ನಡ ಚಂಪೂಕಾವ್ಯಗಳ ಮೇಲೆ ಕಿರಾತಾರ್ಜುನೀಯದ ಪ್ರಭಾವ ಬಿದ್ದಿರುವುದಕ್ಕೆ ಈತನೇ ಕಾರಣನೆಂದೂ ಕನ್ನಡ ವ್ಯಾಕರಣಮಾರ್ಗಕ್ಕೂ ಇವನೇ ಕಾರಣನೆಂದೂ ಊಹಿಸಬಹುದಾಗಿದೆ. ಒಟ್ಟಿನಲ್ಲಿ ಕನ್ನಡ ಸಾಹಿತ್ಯದ ತಳಪಾಯವನ್ನು ರಚಿಸಿದವರಲ್ಲಿ ಈತನ ಹೆಸರು ಶಾಶ್ವತವಾಗಿ ನಿಲ್ಲುತ್ತದೆ. (ಕೆ.ವಿ.ಆರ್.ಜಿ.)

**ದೃಷ್ಟಿತೆಗೆಯುವುದು:** ಜನಪದ ನಂಬಿಕೆಗಳಲ್ಲಿ ಒಂದು. ಜನರ ಕೆಟ್ಟ ಕಣ್ಣಿನಿಂದ ಉಂಟಾಗುವ ಹಾನಿಗಳಿಗೆ ಪರಿಹಾರಗಳನ್ನು ಮಾಡುವುದಕ್ಕೆ ಈ ಹೆಸರಿದೆ. ಕೆಲವು ಜನರಿಗೆ ಹುಟ್ಟಿನಿಂದಲೇ ಕೆಟ್ಟಕಣ್ಣು ಇರುತ್ತದೆ. ಮತ್ತೆ ಕೆಲವರಿಗೆ ಅತಿಯಾದ ಅಸೂಯೆ ಮತ್ತು ಕೋಪದಿಂದ ಕೆಟ್ಟಕಣ್ಣಿನ ಶಕ್ತಿ ಉಂಟಾಗುತ್ತದೆ. ವಿಕಾರವಾಗಿರುವವರು, ಅಂಗಹೀನರಾಗಿರುವವರು ಮೊದಲಾದ ಜನಗಳಲ್ಲಿ ಕೆಟ್ಟ ಕಣ್ಣಿನ ಶಕ್ತಿ ಉಂಟು; ಅಂಥವರ ನೋಟ ಹಾನಿಕಾರಕವಾದುದು. ಆ ಜನಗಳ ದೃಷ್ಟಿ ಬಿದ್ದರೆ ಊಟ ಮಾಡುತ್ತಿರುವ ವ್ಯಕ್ತಿಗಳಿಗೆ, ಎಳೆಯ ಮಕ್ಕಳಿಗೆ, ಬಸುರಿಯರಿಗೆ, ಬಾಣಂತಿಯರಿಗೆ ವಾಂತಿಯಾಗುತ್ತದೆ, ಊಟ ಸೇರುವುದಿಲ್ಲ, ಹೊಟ್ಟೆನೋವು ಬರುತ್ತದೆ. ಹಾಲು ಕೊಡುತ್ತಿರುವ ಹಸುಗಳ, ಎಮ್ಮೆಗಳ ಕೆಚ್ಚಲಿನ ಮೇಲೆ ದೃಷ್ಟಿ ಬಿದ್ದರೆ ಹಾಲಿನ ಬದಲು ರಕ್ತವನ್ನು ಕರೆಯಬೇಕಾದ ಪರಿಸ್ಥಿತಿ ಬರುತ್ತದೆ. ಹಾಲು ಕಾಸಿದರೆ ದುರ್ವಾಸನೆ ಉಂಟಾಗುತ್ತದೆ. ಕೆಟ್ಟಕಣ್ಣಿನ ಪ್ರಭಾವ ಜೀವಂತ ವಸ್ತುಗಳ ಮೇಲೆ ಮಾತ್ರವಲ್ಲದೆ ನಿರ್ಜೀವವಾದ ವಸ್ತುಗಳ ಮೇಲೆಯೂ ಉಂಟಾಗುತ್ತದೆ. ಮನುಷ್ಯರಲ್ಲಿ ಮಾತ್ರವಲ್ಲದೆ ಕೆಲವು ಪ್ರಾಣಿಗಳಲ್ಲಿಯೂ ಕೆಟ್ಟಕಣ್ಣಿನ ಪ್ರಭಾವ ಇರುತ್ತದೆ ಎಂಬ ನಂಬಿಕೆಯೂ ಇದೆ. ಈ ರೀತಿಯ ಅನೇಕ ನಂಬಿಕೆಗಳಿಂದ ಕೆಟ್ಟ ಕಣ್ಣಿನಿಂದ ಉಂಟಾಗುವ ದೃಷ್ಟಿದೋಷಕ್ಕೆ ಜನ ವಿಶೇಷವಾಗಿ ಹೆದರುತ್ತಾರೆ.

ದೃಷ್ಟಿದೋಷವಾದಾಗ ಉರಿಯುತ್ತಿರುವ ಹಂಚಿಕಡ್ಡಿಗಳನ್ನು ನಿವಾಳಿಸಿ ಅದರ ಕಪ್ಪನ್ನು ಹಣೆಗೆ ಇಡುವುದು; ಕೆಟ್ಟಕಣ್ಣು ಹಾಕಿದವರು ಹಾಳಾಗಲಿ ಎಂದು ಲಟಿಗೆ ಮುರಿಯುವುದು; ಉಪ್ಪು ಮೆಣಸಿನಕಾಯಿ ಎರಡನ್ನೂ ನಿವಾಳಿಸಿ ಒಲೆಗೆ ಹಾಕುವುದು; ಸಕ್ಕರೆಯನ್ನು ಮಂತ್ರಿಸಿ ತಿನ್ನಲು ಕೊಡುವುದು; ಕೆಟ್ಟ ಕಣ್ಣುಳ್ಳವರು ಹೋದ ಜಾಗದಲ್ಲಿ ಮೂರು ಸಲ ಉಗುಳುವುದು; ಕಾಲುರಂಜು ಹಾಕುವುದು; ಕೆಂಡದ ರಂಜು ಹಾಕುವುದು – ಈ ರೀತಿಯ ಪರಿಹಾರಗಳು ಬಳಕೆಯಲ್ಲಿವೆ. ಹಂಚಿಕಡ್ಡಿಗಳನ್ನು ಉರಿಸುವಾಗ ಅವು ಹೆಚ್ಚು ಚಟಚಟ ಎಂದು ಸದ್ದುಮಾಡುವುದು; ಉಪ್ಪು ಮೆಣಸಿನಕಾಯನ್ನು ಒಲೆಗೆ ಹಾಕಿದಾಗ ಮೆಣಸಿನಕಾಯಿಯ ಘಾಟು ಕಾಣದೆ ಇರುವುದು; ಕಾಲುರಂಜು ಕೆಂಡದ ರಂಜು ಅತಿ ಕೆಂಪಾಗಿ ಕಾಣುವುದು – ಇವೆಲ್ಲ ದೃಷ್ಟಿ ದೋಷ ಆಗಿದೆ ಎಂಬುವುದಕ್ಕೆ ರುಜುವಾತು ಎಂದು ಭಾವಿಸುತ್ತಾರೆ. ಮನೆಗಳಿಗೆ, ಬೆಳೆಗಳಿಗೆ ದೃಷ್ಟಿ ದೋಷ ತಾಗದಿರಲೆಂಬ ಉದ್ದೇಶದಿಂದ ತೆಂಗಿನಕಾಯಿ ಕಟ್ಟುವುದು, ಕುಂಬಳಕಾಯಿ ಕಟ್ಟುವುದು, ಬೆಚ್ಚು ಕಟ್ಟುವುದು, ಒಂದು ಕೋಲಿಗೆ ಮನುಷ್ಯನ ಬಟ್ಟೆಗಳನ್ನು ತಗುಲು ಹಾಕಿ ಮೇಲ್ಭಾಗದಲ್ಲಿ ಸುಣ್ಣ ಬಳಿದ ಮಡಕೆಯನ್ನು ನೇತುಹಾಕಿ ಅದನ್ನು ಮನೆಯ ಮೇಲುಭಾಗಕ್ಕೆ ಕಟ್ಟುವುದು ಮೊದಲಾದ ಕ್ರಮಗಳೂ ಉಂಟು.

ದೃಷ್ಟಿದೋಷಕ್ಕೆ ಸಂಬಂಧಿಸಿದ ಈ ರೀತಿಯ ನಂಬಿಕೆಗಳು ಮತ್ತು ದೃಷ್ಟಿತೆಗೆಯುವ ಪರಿಹಾರಗಳು ಕರ್ನಾಟಕ ಹಾಗೂ ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಬಹಳ ಹಿಂದಿನಿಂದಲೂ ಬಳಕೆಯಲ್ಲಿವೆ. ಪ್ರದೇಶದಿಂದ ಪ್ರದೇಶಕ್ಕೆ ಇವುಗಳಲ್ಲಿ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕಾಣಬಹುದೇ ಹೊರತು ಮೂಲತಃ ಕೆಟ್ಟಕಣ್ಣಿನಿಂದ ದೃಷ್ಟಿದೋಷ ಉಂಟಾಗುತ್ತದೆಂಬ ನಂಬಿಕೆ ಮಾತ್ರ ಸಾರ್ವತ್ರಿಕ.

ಮನುಷ್ಯನ ಮನಸ್ಸು ಇಂದ್ರಿಯಗಳ ಸಹಾಯವಿಲ್ಲದೆ ವಸ್ತುಗಳ ಮೇಲೆ ತನ್ನ ಪ್ರಭಾವ ಬೀರುತ್ತದೆ ಎಂಬ ಅಂಶವೇ ದೃಷ್ಟಿದೋಷಕ್ಕೆ ಆಧಾರವಾಗಿರುವ ನಂಬಿಕೆ. ಇದನ್ನು ವಿಜ್ಞಾನಿಗಳು ಈವರೆಗೆ ಒಪ್ಪುತ್ತಿರಲಿಲ್ಲ. ಆದರೆ ಇತ್ತೀಚೆಗೆ ಪಾರಾಮನೋವಿಜ್ಞಾನದ ಪ್ರಕಾರ ಮಾನವನಲ್ಲಿ ಅತೀಂದ್ರಿಯ ದರ್ಶನ ಶಕ್ತಿ ಮತ್ತು ಮನಃಚಲನಶಕ್ತಿ ಎಂಬ ಶಕ್ತಿಗಳಿವೆಯೆಂದು ತಿಳಿದುಬಂದಿದೆ. ಕೆಟ್ಟಕಣ್ಣಿನ ಪ್ರಭಾವ ಮನಃಚಲನಶಕ್ತಿಯ ಒಂದು ಬಗೆ. ಆದ್ದರಿಂದ ದೃಷ್ಟಿದೋಷ ಸಂಪೂರ್ಣವಾಗಿ ಮೂಢನಂಬಿಕೆ ಅಲ್ಲ ಎನಿಸುತ್ತದೆ.

ದೃಷ್ಟಿದೋಷಕ್ಕೆ ಸಂಬಂಧಿಸಿದ ಪರಿಹಾರಗಳಿಂದ ಮಾನಸಿಕವಾಗಿ ಒಂದು ಬಗೆಯ ಸಮಾಧಾನ ದೊರೆತು ಆ ಮೂಲಕ ಸ್ವಲ್ಪಮಟ್ಟಿಗೆ ಕೆಟ್ಟಕಣ್ಣಿನ ಪ್ರಭಾವ ಕಡಿಮೆಯಾಗಬಹುದು. ಈ ದೃಷ್ಟಿಯಿಂದ ಮಾಟ ಮಂತ್ರ ಗಳಿಸಿರುವ ಪ್ರಾಮುಖ್ಯ ಇದಕ್ಕೂ ಇದೆ. *

**ದೆವ್ವ:** ಮಾನವ ದೇವರ ಅಸ್ತಿತ್ವದಲ್ಲಿ ನಂಬಿಕೆಯಿಟ್ಟಿರುವಂತೆ ಕೆಲವು ಅತಿಮಾನುಷ ಶಕ್ತಿಗಳ ಅಸ್ತಿತ್ವದಲ್ಲಿಯೂ ಬಲವಾದ ನಂಬಿಕೆಯನ್ನಿಟ್ಟು ಕೊಂಡು ಬಂದಿದ್ದಾನೆ. ಭೂತ, ಪ್ರೇತ, ಪೀಡೆ, ಪಿಶಾಚಿ, ಜಟಿಗಾ, ರಣ, ಮುನಿ, ಮೋಹಿನಿ, ರಾಕ್ಷಸ ಮುಂತಾದುವುಗಳು ಅವನ ಬದುಕಿನ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ. ಇಂಥ ಅತಿಮಾನುಷ ಶಕ್ತಿಗಳ ಕಲ್ಪನೆಗೆ ಹಲವು ಕಾರಣಗಳಿರಬಹುದಾದರೂ ಅವುಗಳಲ್ಲಿ ಮುಖ್ಯವಾದದ್ದು

ಆತ್ಮದ ಕಲ್ಪನೆ. ಮಾನವ ಹುಟ್ಟುವುದಕ್ಕೆ ಮುಂಚೆ ಎಲ್ಲಿದ್ದ, ಹೇಗಿದ್ದ, ಅವನು ಸತ್ತ ಮೇಲಿನ ವೃತ್ತಾಂತಗಳೇನು ಎಂಬ ಹುಟ್ಟಿನ ಹಿಂದಿನ, ಸಾವಿನ ಮುಂದಿನ ರಹಸ್ಯಗಳನ್ನು ಕಂಡುಕೊಳ್ಳುವ ಪ್ರಯತ್ನದಿಂದಾಗಿ ಆತ್ಮದ ಕಲ್ಪನೆ ಹುಟ್ಟಿಕೊಂಡಿರಬೇಕು. ಈ ಆತ್ಮ ದೇಹವನ್ನು ತೊರೆದಮೇಲೇನಾಗುತ್ತದೆ, ಎಲ್ಲಿಗೆ ಹೋಗುತ್ತದೆ ಎನ್ನುವ ಒಗಟುಗಳೇ ಸ್ವರ್ಗನರಕಗಳ ಕಲ್ಪನೆಗೂ ಕಾರಣವಾಗಿರಬೇಕು. ಆಯುಸ್ಸು ತುಂಬಿ ಸತ್ತವರು ಸ್ವರ್ಗಕ್ಕೋ ನರಕಕ್ಕೋ ಹೋಗುತ್ತಾರೆಂದು ನಂಬಿಕೊಂಡಿದ್ದರಿಂದ ಇಲ್ಲಿ ಸಮಸ್ಯೆ ಗಹನವಾಗಲಿಲ್ಲ. ಆದರೆ ರುದ್ರ ಭೀಕರವಾಗಿ ಅಮಾನುಷ ರೀತಿಯಲ್ಲಿ ಅಕಾಲ ಮರಣಕ್ಕೆ ತುತ್ತಾದವರ ಆತ್ಮದ ಬಗ್ಗೆ ಸಾಮಾನ್ಯರು ವಿಶೇಷವನ್ನು ತಲೆಗೆ ಹಚ್ಚಿಕೊಂಡಂತೆ ಕಾಣುತ್ತದೆ. ಇಂಥ ಕಾರಣವೊಂದಾದರೆ ಪ್ರಕೃತಿಯಲ್ಲಿ ಜರುಗುವ ಭಯಾನಕ ಘಟನೆಗಳಿಗೆಲ್ಲ ಆದಿ ಮಾನವ ಉತ್ತರ ಕಂಡುಕೊಳ್ಳಲು ವಿಫಲವಾದಾಗ ಅವೆಲ್ಲವೂ ಅಮಾನುಷ ಶಕ್ತಿಗಳ ಕೈವಾಡವೆಂದು ಭಾವಿಸಿದ್ದು ಇನ್ನೊಂದು ಕಾರಣ. ತನ್ನವರೊಡನೆ ದಟ್ಟ ಕಾಡಿನಲ್ಲಿ ಬರುತ್ತಿರುವಾಗ ದಾರಿ ತಪ್ಪಿಸಿಕೊಂಡ ಆದಿವಾಸಿ ಕೋಡಗಲ್ಲುಗಳ ಮೇಲೆ ನಿಂತು ತನ್ನವರನ್ನು ಕೂಗಿ ಕರೆದಾಗ ಗಿರಿಗಹ್ವರಗಳಿಂದ ಬಂದ ಪ್ರತಿಧ್ವನಿಗಳು ಅವನ ಎದೆ ನಡುಗುವಂತೆ ಮಾಡಿರಬಹುದು. ದೈತ್ಯಾಕಾರದಲ್ಲಿ ಬೆಳೆದ ಹೆಮ್ಮರಗಳ ಕೆಳಗೆ ನಿಂತು ಅವನು ಆಲಿಸಿರಬಹುದಾದ ವಿಚಿತ್ರ ಸದ್ದುಗಳು ಅವನನ್ನು ಭಯಗೊಳಿಸಿರಬಹುದು. ಗಂವ್ ಎನ್ನುವ ಕತ್ತಲೆಯಲ್ಲಿ ಬರುವಾಗ ಅವನ ಮಾನಸಿಕ ಶೈಶವಸ್ಥಿತಿ ಚಿತ್ರವಿಚಿತ್ರವಾದ ಆಕಾರಗಳನ್ನು ಸೃಷ್ಟಿಸಿಕೊಂಡು ತತ್ತರಿಸಿ ಹೋಗಿರಬಹುದು. ಕಗ್ಗಾಡಿನ ನಡುವೆ ಯಾವುದೋ ಅಪರಿಚಿತ ಪ್ರಾಣಿಯ ಕೂಗು ಭಯವಿಹ್ವಲನಾಗುವಂತೆ ಮಾಡಿರಬಹುದು. ಕಗ್ಗತ್ತಲಿನಲ್ಲಿ ಕೋರೈಸುವ ಕಣ್ಣುಗಳ ಪ್ರಾಣಿಗಳು ಮರದಿಂದ ಮರಕ್ಕೆ ಜಿಗಿಯುತ್ತ ಮರೆಯಾದುದನ್ನು ಕಂಡು ಆತ ಬೆದರಿ ಹೋಗಿರಬಹುದು. ಅಮಾನುಷ ರೀತಿಯಲ್ಲಿ ಕೊಲೆಗೀಡಾದ ವ್ಯಕ್ತಿಯ ರೂಪವೇ ಭ್ರಮೆಯಿಂದ ಅವನ ಕನಸು ಮನಸುಗಳಲ್ಲಿ ಮತ್ತೆ ಮತ್ತೆ ಗೋಚರಿಸಿ ದಿಗ್ಭ್ರಮೆಗೊಳಿಸಿರಬಹುದು. ಇಂಥ ಹಲವಾರು ಘಟನೆಗಳು ಆದಿವಾಸಿಯನ್ನು ದಿಕ್ಕುತಪ್ಪಿಸಿ ಹೃದಯವನ್ನು ಅತಿಕ್ರಮಿಸಿ ಪೀಡಿಸಿರಬಹುದು. ಹಾಗೆಯೇ ಅತಿಮಾನುಷ ಶಕ್ತಿಗಳ ಕಲ್ಪನೆಗೆ ದಾರಿ ಮಾಡಿಕೊಟ್ಟಿರಬಹುದು.

ವೈಜ್ಞಾನಿಕವಾಗಿ ಈ ಅತಿಮಾನುಷ ಶಕ್ತಿಗಳನ್ನು ಕುರಿತು ವಿಚಾರ ಮಾಡಿದರೆ ಇಂಥ ಕಲ್ಪನೆಗಳು ಬಾಲಿಶವಾದದೆಂದು ತೋರುತ್ತವೆ. ಇಂಥ ಶಕ್ತಿಗಳನ್ನು ಬಲವಾಗಿ ನಂಬಿ ಅತಿಯಾಗಿ ತಲೆಹಚ್ಚಿಕೊಂಡಿರುವವರ ಬಗೆಗೆ ನಗೆ ಬರಬಹುದು, ಇಲ್ಲವೆ ಮರುಕ ಹುಟ್ಟಬಹುದು. ಆದರೆ ವಿಜ್ಞಾನ ಬಹಳಷ್ಟು ಅಗೋಚರ ಶಕ್ತಿಗಳಿಂದ ಸಂಭವಿಸಿದ ಘಟನೆಗಳಿಗೆ ವಿವರಣೆ ಕೊಡುವಲ್ಲಿ ಕೆಲವೊಮ್ಮೆ ಸೋತಿರುವುದರಿಂದ ನಾಗರಿಕ ಜನಾಂಗಗಳಲ್ಲೂ ದಟ್ಟವಾಗಿಯಲ್ಲದಿದ್ದರೂ ದೆವ್ವ ಮುಂತಾದ ಅತಿಮಾನುಷ ಶಕ್ತಿಗಳ ಬಗ್ಗೆ ನಂಬಿಕೆ ಉಳಿದಿದೆ. ಅಷ್ಟು ಮಾತ್ರವೇಕೆ ಪರಾಮನೋವಿಜ್ಞಾನ ಅತಿಮಾನುಷ ಶಕ್ತಿಗಳನ್ನು ಒಪ್ಪಿಕೊಂಡಿದೆ. ಹೀಗಾಗಿ ಜಗತ್ತಿನ ಎಲ್ಲ ಜನಾಂಗಗಳಲ್ಲೂ ದೆವ್ವಗಳ ಅಸ್ತಿತ್ವದ ಬಗ್ಗೆ ನಂಬಿಕೆ ಉಳಿದುಬಂದಿದೆ.

ದೆವ್ವಗಳಾಗಲು ಕಾರಣಗಳು ಮನುಷ್ಯನಿಗೆ ಮೂರು ಜೀವಗಳಿವೆಯೆಂದು ನಂಬಲಾಗಿದೆ. ಮೇವುಜೀವ, ಬೆದರುಜೀವ, ರಕ್ತಜೀವ. ಮೇವುಜೀವ ಇಹಪರಗಳೆರಡರ ನಂಟನ್ನೂ ಪೂರ್ಣವಾಗಿ ಪಡೆದಿರುವಂಥದು. ಇದಕ್ಕೆ ತಾನು ಮಾಡಿದ ಧರ್ಮಕರ್ಮ ಪಾಪಪುಣ್ಯಗಳೆಲ್ಲಕ್ಕೂ ಯಮಲೋಕದಲ್ಲಿ ವಿಚಾರಣೆ ನಡೆದು ಸ್ವರ್ಗ ನರಕ ಅಥವಾ ಪುನರ್ಜನ್ಮ ಪ್ರಾಪ್ತಿಯಾಗುತ್ತದೆ. ಬೆದರುಜೀವ ಸುಖದುಃಖ ನೋವು ನಲಿವು ಆಶೆಆಕಾಂಕ್ಷೆ, ಹೆದರಿಕೆ ಬೆದರಿಕೆಗಳೆಲ್ಲಕ್ಕೂ ಕಾರಣವಾದದ್ದು. ಮಾನವನ ಎಲ್ಲ ಕ್ರಿಯೆಗಳಿಗೂ ಇದೇ ಕಾರಣ. ಇದರ ಪ್ರೇರಣೆಯಿಂದಾದ ಎಲ್ಲ ಕರ್ಮಗಳೂ ಮೇವುಜೀವಕ್ಕೆ ಅಂಟುತ್ತವೆ. ರಕ್ತಜೀವ ಸಂಪೂರ್ಣವಾಗಿ ಇಹಲೋಹಕ್ಕೆ ಸಂಬಂಧಿಸಿದ್ದು. ಮೇವುಜೀವ ಬೆದರುಜೀವಗಳು ಪರಲೋಕಕ್ಕೆ ಹೋಗಬೇಕಾದರೆ ರಕ್ತಜೀವ ಆಯುಸ್ಸು ಮುಗಿದಿರಬೇಕು. ಇಲ್ಲದಿದ್ದರೆ ಅವಕ್ಕೆ ಶಕ್ತಿಯೇ ಇಲ್ಲ. ಇದರ ಆಯುಸ್ಸು ವಿಧಿಬರಹವನ್ನು ಅವಲಂಬಿಸಿರುತ್ತವೆ. ಆಯುಸ್ಸು ಮುಗಿಯದಿದ್ದರೆ, ದೇಹ ಯಾವುದಾದರೂ ಕಾರಣದಿಂದ ನಾಶವಾದರೆ, ಅಶರೀರಿಯಾದ ಇದು ಉಳಿಯಲು ಆಶ್ರಯವಿಲ್ಲದೆ ಪರಲೋಕಕ್ಕೆ ದಾರಿಯಿಲ್ಲದೆ ಗಾಳಿ ಅಥವಾ ದೆವ್ವವಾಗುತ್ತದೆ. ರಕ್ತಜೀವ ನಾನಾಕಾರಣಗಳಿಂದ ಪರಲೋಕದ ಪರವಾನಗಿಯನ್ನು ಕಳೆದುಕೊಂಡು ಇಹದಲ್ಲೇ ಉಳಿಯಬೇಕಾದ ಸಂದರ್ಭಗಳು ಒದಗಿಬರುತ್ತವೆ. ಸಾಯುವಾಗ ಬಾಯಿಗೆ ನೀರು ಬಿಡದಿದ್ದರೆ, ನೀರಿಗೆ ಬಿದ್ದು, ನೇಣುಹಾಕಿಕೊಂಡು, ವಿಷಕುಡಿದು, ಕೊಲೆಯಾಗಿ, ಬೆಂಕಿಯಲ್ಲಿ ಸುಟ್ಟು, ಅಪಘಾತಗಳಿಗೆ ಸಿಕ್ಕಿ ಅಥವಾ ಯಾವುದೇ ವಿಧವಾದ ಅಕಾಲ ಮರಣಕ್ಕೆ ತುತ್ತಾದರೂ ಅಂಥವರು ದೆವ್ವಗಳಾಗುತ್ತಾರೆ. ಅಲ್ಲದೆ ದುರಾಶೆಯುಳ್ಳವರು, ಕಳ್ಳರು, ಕೊಲೆಗಡುಕರು, ಕ್ರೂರಿಗಳು, ಕಾಮಿಗಳು, ಜಿಪುಣರು, ಅಸೂಯಾಪರರು, ಅಸಾತ್ವಿಕರು, ಸ್ತ್ರೀಹತ್ಯೆ, ಭ್ರೂಣಹತ್ಯೆ ಮಾಡಿದವರು, ದ್ರೋಹಿಗಳು ಮುಂತಾದವರೆಲ್ಲರೂ ದೆವ್ವವಾಗುವುದಾಗಿ ನಂಬಿಕೆ.

ಸತ್ತವರು ದೆವ್ವವಾಗಿದ್ದಾರೆಯೇ ಇಲ್ಲವೆ ಎಂಬುದನ್ನು ಅವರ ಸಮಾಧಿ ಪರೀಕ್ಷೆಯಿಂದ ಕಂಡುಕೊಳ್ಳುತ್ತಾರೆ. ಬಹಳ ದಿನಗಳಾದರೂ ಗುದ್ದು ತಗ್ಗದೆ ಉಬ್ಬಿಕೊಂಡೇ ಇದ್ದರೆ ಅವರು ದೆವ್ವವಾಗಿದ್ದಾರೆಂದು ಭಾವಿಸುತ್ತಾರೆ. ಸತ್ತವರು ದೆವ್ವಗಳಾಗಿ ತಮ್ಮ ಬಂಧುಬಳಗವನ್ನು ತೊರೆದು ಇರಲಾರದೆ ಶ್ಮಶಾನದಿಂದ ಹಿಂದಕ್ಕೆ ಬಂದುಬಿಡುತ್ತವೆ. ಆದ್ದರಿಂದ ಶವವನ್ನು ಶ್ಮಶಾನಕ್ಕೊಯ್ಯುವಾಗ ಅದರ ಹಿಂದೆ ಎಳ್ಳು, ಸಾಸಿವೆ, ರಾಗಿ, ಹುಚ್ಚೆಳ್ಳು ಮುಂತಾದ ಧಾನ್ಯಗಳನ್ನು ಎರಚಿಕೊಂಡು ಹೋಗಬೇಕು. ಹೀಗೆ ಮಾಡುವುದರಿಂದ ಸತ್ತವನ ದೆವ್ವ ಆ ರಾತ್ರಿಯೇ ತನ್ನ ಮನೆಯನ್ನು ಸೇರಲು ಹೊರಟು ದಾರಿಯಲ್ಲಿ ಅಡ್ಡಲಾಗಿ ಸುರಿದಿರುವ ಧಾನ್ಯಗಳನ್ನು ತುಳಿಯದೆ ಆರಿಸಿಕೊಂಡು ಬರಬೇಕಾಗುತ್ತದೆ. ಆ ಧಾನ್ಯಗಳನ್ನೆಲ್ಲ ಆರಿಸುವ ಹೊತ್ತಿಗೆ ಬೆಳಕಾಗಿ ಅದಕ್ಕೆ ದಾರಿತಪ್ಪಿ ಹೋಗುತ್ತದೆ. ಶವಸಂಸ್ಕಾರ ಮಾಡಿ ಹಿಂದಿರುಗಿದ ಮೇಲೆ ಮನೆಯ ಒಂದು ಮೂಲೆಯಲ್ಲಿ ಅಷ್ಟಗಲ ಸಾರಿಸಿ ಒಂದು ಕೈಯೆಣ್ಣೆ ದೀಪ ಹಚ್ಚಿ ಒಂದು ಪಡಿ ಅಕ್ಕಿಯನ್ನು ತಲೆಸವರಿ ಮಡಗಿ ಒಂದು ಚೊಂಬು ನೀರಿಟ್ಟು ಗಂಧದಕಡ್ಡಿ ಬೆಳಗಿ ಅವುಗಳ ಮೇಲೆ ಒಂದು ಹೆಡಿಗೆ ಬೋರಲಿಡಬೇಕು. ಮಾರನೆಯ ದಿನ ಬೆಳಗ್ಗೆ ಹೆಡಿಗೆ ತೆಗೆದುನೋಡಿದಾಗ ಅಕ್ಕಿ ಹಾಗೂ ನೀರು ಕಡಿಮೆಯಾಗಿದ್ದರೆ ಸತ್ತವನಿಗೆ ಇನ್ನೂ ಆಯುಷ್ಯವಿತ್ತೆಂದು ಅವನು ದೆವ್ವವಾಗುವ ಸಂಭವ ಉಂಟೆಂದು ಅರ್ಥ.

**ದೆವ್ವದ ಬಗೆಗಳು:** ಹೆರಿಗೆ ಸಮಯದಲ್ಲೋ ಮೂರು ವರ್ಷ ತುಂಬುವುದಕ್ಕೆ ಮೊದಲೊ ಮಕ್ಕಳು ಸತ್ತರೆ ಪೀಡೆ ಎಂಬ ದೆವ್ವಗಳಾಗುತ್ತವೆ. ಕೊಲೆಯಿಂದ ಸತ್ತವರು ಕಾತ ಎಂಬ ದೆವ್ವವಾಗುತ್ತಾರೆ. ಬೆಂಕಿಯಲ್ಲಿ ಸುಟ್ಟು ಹೋದವರು ಭೂತ ಎಂಬ ದೆವ್ವವಾಗುತ್ತಾರೆ. ನೀರಿನಲ್ಲಿ ಸತ್ತವರು ಪ್ರೇತ ಎಂಬ ದೆವ್ವವಾಗುತ್ತಾರೆ. ಹಣದ ವಿಚಾರದಲ್ಲಿ ದುರಾಶೆಯಿಟ್ಟುಕೊಂಡು ಸತ್ತವರು ರಣ ಎಂಬ ದೆವ್ವವಾಗುತ್ತಾರೆ. ಹೋರಾಟದಲ್ಲಿ ಸತ್ತ ವೀರರು ಜಟಿಯಾಗಾ ಎಂಬ ದೆವ್ವವಾಗುತ್ತಾರೆ. ಸತ್ತ ಗರ್ಭಿಣಿಯರು ಗಾಳಿ ಎಂಬ ದೆವ್ವವಾಗುತ್ತಾರೆ. ನೇಣು ಹಾಕಿಕೊಂಡು ಸತ್ತವರು ಗರಾವು ಎಂಬ ದೆವ್ವವಾಗುತ್ತಾರೆ. ಅಕಾಲ ಮರಣಕ್ಕೆ ತುತ್ತಾದ ಬಾಣಂತಿ ಬನ್ನಿ ಎಂಬ ದೆವ್ವವಾಗುತ್ತಾಳೆ. ಪ್ರಾಯದ ಹುಡುಗಿ ಅಕಾಲ

ಮರಣಕ್ಕೆ ತುತ್ತಾದರೆ ಮೋಹಿನಿ ಎಂಬ ದೆವ್ವವಾಗುತ್ತಾಳೆ. ಬ್ರಾಹ್ಮಣರ ದೆವ್ವಗಳನ್ನು ಪಿಶಾಚಿ ಅಥವಾ ಬ್ರಹ್ಮ ಪಿಶಾಚಿ ಎಂದು ಕರೆಯುತ್ತಾರೆ. ಶಾಪಗ್ರಸ್ತ ದೇವತೆಗಳು ಭೂಲೋಕದಲ್ಲಿ ಬೇತಾಳಗಳಾಗಿ ಜನ್ಮವೆತ್ತುತ್ತಾರೆ. ಹೀಗಿರುವ ನಾನಾ ಬಗೆಯ ದೆವ್ವಗಳಿಗೆ ಅಧಿಪತಿ ಮುನೀಶ್ವರ. ಮುನೀಶ್ವರ ನನ್ನು ಕೆಲವು ಕಡೆ ಬೇತಾಳ, ಭೂತನಾಥ ಎಂದೂ ಕರೆಯುತ್ತಾರೆ.

**ದೆವ್ವಗಳ ಅಧಿಪತಿ:** ದೆವ್ವಗಳ ಅಧಿಪತಿಯಾದ ಮುನೀಶ್ವರರನ್ನು ಈಶ್ವರನ ಅಂಶವೆಂದು ಹೇಳುತ್ತಾರೆ. ಅವನ ಆಕಾರ ರುದ್ರ ಭೀಕರವಾಗಿರುತ್ತದೆ. ಅವನಿಗೆ ಮೂರು ಕಣ್ಣುಗಳಿವೆ. ನೀಳವಾದ ಜಟೆಯಿದೆ. ಎಡದ ಕಾಲಿಗೆ ಏಳವಾದಿ ಜಂಗು, ಬಲದ ಕಾಲಿಗೆ ಭಾಪುರಿ ಜಂಗುಗಳನ್ನು ಆತ ಧರಿಸಿರುತ್ತಾನೆ. ಕೈಯಲ್ಲಿ ತ್ರಿಶೂಲವಿರುತ್ತದೆ. ಅಮವಾಸ್ಯೆಯ ರಾತ್ರಿಯಲ್ಲಿ ಅವನು ತಾನು ವಾಸವಿದ್ದ ಮರದಿಂದ ಮತ್ತೊಂದು ಮರಕ್ಕೆ ಪ್ರಯಾಣ ಮಾಡುತ್ತಾನೆ. ಅವನನ್ನು ಎಲ್ಲ ದೆವ್ವಗಳು ಪಲ್ಲಕ್ಕಿಯಲ್ಲಿ ಹೊತ್ತು ಕೊಳ್ಳಿಗಳನ್ನು ಹಿಡಿದು ಕುಣಿಯುತ್ತಾ ಸಾಗಿಸುತ್ತವೆ. ಮುನಿದೆವ್ವ ಹಗಲಿನಲ್ಲಿ ಸುಂಟರಗಾಳಿ ರೂಪದಲ್ಲಿ ಪ್ರಯಾಣ ಮಾಡುತ್ತಾನೆ. ಈ ಮುನಿ ರಾತ್ರಿಯಲ್ಲಿ ಉರಿಯುವ ಪತ್ತು ಮದ್ದಳೆ ತಾಳಮೇಳಗಳಿಂದ ವೈಭವದ ಮೆರವಣಿಗೆ ಹೊರಡುವುದನ್ನು ಕೆಲವರು ಕಂಡಿರುವೆವೆಂದು ಹೇಳುತ್ತಾರೆ. ಮುನಿಯ ಹೆಂಡತಿ ಚೌಡಿ. ಪ್ರತಿವರ್ಷವೂ ಹೊಲ ಗದ್ದೆಗಳ ಬಳಿಯಲ್ಲಿ ಇವರಿಬ್ಬರಿಗೂ ಶಾಂತಿ ಮಾಡುವ ಸಂಪ್ರದಾಯ ಉಳಿದು ಬಂದಿದೆ.

**ದೆವ್ವಗಳ ಆಕಾರ:** ದೆವ್ವಗಳು ಅಶರೀರಗಳಾದ್ದರಿಂದ ಅವನ್ನು ಸಾಮಾನ್ಯವಾಗಿ ಗಾಳಿಗಳೆಂದು ಕರೆಯುತ್ತಾರೆ. ಅಲ್ಲದೆ ಅವು ನೆರಳುಗಳ ರೂಪದಲ್ಲಿ ಸಂಚರಿಸುತ್ತವೆಯೆಂದೂ ಹೇಳುತ್ತಾರೆ. ಆದರೆ ಅವು ಇಷ್ಟಬಂದ ರೂಪಗಳಲ್ಲಿ ಕಾಣಿಸಿಕೊಳ್ಳಬಲ್ಲವು. ಹೀಗಾಗಿ ದೆವ್ವಗಳ ಆಕಾರ ಇದೇ ಸರಿ ಎಂದು ಹೇಳಲಾಗದಿದ್ದರೂ ಸಾಮಾನ್ಯವಾಗಿ ದೆವ್ವ ಎಂದರೆ ಹೇಗಿರುತ್ತದೆ ಎಂಬ ಒಂದು ಕಲ್ಪನೆಯಿದೆ. ದೆವ್ವಗಳು ಕಗ್ಗರಿರುತ್ತವೆ. ತಲೆಯನ್ನು ಕೆದರಿಕೊಂಡಿರುತ್ತವೆ. ನೆರಳುಗಳಂತೆ ಓಡಾಡುತ್ತವೆ. ನೆಲದ ಮೇಲೆ ಕಾಲೂರಿರುವುದಿಲ್ಲ. ಕಾಲಿನ ಹಿಮ್ಮಡಿ ಮುಂದಾಗಿಯೂ ಬೆರಳುಗಳು ಬೆನ್ನಕಡೆಗೂ ಇರುತ್ತವೆ. ಯಾವಾಗಲೂ ಕಣ್ಣುಗಳನ್ನು ಮೆಡ್ಡರಿಸಿಕೊಂಡಿರುತ್ತವೆ. ಅವಕ್ಕೆ ಕೋರೆಹಲ್ಲುಗಳುಂಟು. ವಿವಿಧ ಪ್ರಾಣಿಗಳ ರೂಪದಲ್ಲೂ ಅವು ಕಾಣಿಸಿಕೊಳ್ಳುತ್ತವೆ. ನಡೆಯುವಾಗ ಕಟ್ ಕಟ್ ಎಂಬ ಶಬ್ದವಾಗುತ್ತದೆ– ಈ ಮುಂತಾಗಿ ದೆವ್ವಗಳ ಆಕಾರ ವನ್ನು ಕಲ್ಪಿಸಲಾಗಿದೆ.

**ಆಹಾರ ವಿಹಾರಗಳು :** ದೆವ್ವಗಳ ಆಹಾರಗಳೆಲ್ಲ ಸಾಮಾನ್ಯವಾಗಿ ಹೊಲಸು, ಅವು ಮಲಮೂತ್ರವನ್ನು ಸೇವಿಸುವುದಾಗಿ ಹೇಳುತ್ತಾರೆ. ಕೋಳಿ, ಕುರಿ, ದನ, ಕರು, ಕೋಣ, ಮನುಷ್ಯ ಮುಂತಾದವುಗಳ ರಕ್ತಮಾಂಸಗಳಿಂದ ಅವು ತೃಪ್ತಿಗೊಳ್ಳುತ್ತವೆ. ಹಂದಿಯ ಮಾಂಸವೆಂದರೆ ಅವಕ್ಕೆ ಆಪ್ಯಾಯಮಾನವಂತೆ. ಇವಲ್ಲದೆ ಉಳಿದ ತಿಂಡಿತಿನಿಸುಗಳೂ ಅವಕ್ಕೆ ಒಗ್ಗುತ್ತವೆ. ಆದರೆ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಯಾವುದೇ ಪವಿತ್ರ ವಸ್ತುವೂ ಅವಕ್ಕೆ ಸೇರುವುದಿಲ್ಲ. ಅದನ್ನು ಕಂಡರೆ ಅವಕ್ಕೆ ಭಯ. ಕೊಳಚೆನೀರು, ರಕ್ತ, ಹೆಂಡ ಹಾಗೂ ಮೂತ್ರಗಳೇ ಅವುಗಳ ಪಾನೀಯಗಳು. ಸಿಹಿಪದಾರ್ಥಗಳಲ್ಲಿ ಬೆಲ್ಲವೆಂದರೆ ಅವಕ್ಕೆ ಅಚ್ಚುಮೆಚ್ಚು. ಆದ್ದರಿಂದ ಅವು ಆಲೆಮನೆಯನ್ನು ಸೇರಿಬಿಡುತ್ತವೆ. ಅವುಗಳು ಬೆಲ್ಲ ಹದವಾಗದಂತೆ ಕೆಡಿಸುತ್ತವೆ. ಆದ್ದರಿಂದ ಅವು ಆಲೆಮನೆಯನ್ನು ಪ್ರವೇಶಿಸದಂತೆ ಮೊದಲೇ ಪ್ರಾಣಿ ಬಲಿಕೊಡುವ ರೂಢಿಯುಂಟು.

ಹಗಲು ದೆವ್ವಗಳ ಪಾಲಿಗೆ ಶತ್ರು. ಬೆಳಕೆಂದರೆ ಅವು ತತ್ತರಿಸಿ ಹೋಗುತ್ತವೆ. ಆದರೂ ಮಧ್ಯಾಹ್ನ ಹಾಗೂ ನಡುರಾತ್ರಿಗಳಲ್ಲಿ ಅವುಗಳಿಗೆ ವಿಶೇಷವಾದ ಶಕ್ತಿ ಬರುತ್ತದೆ. ಸಾಮಾನ್ಯವಾಗಿ ಅವು ನಿರ್ಭಯವಾಗಿ ಸಂಚರಿಸುವುದು ರಾತ್ರಿಯ ವೇಳೆಯಲ್ಲಿಯೇ. ಅವು ಯಾವಾಗಲೂ ಕತ್ತಲನ್ನೇ ಬಯಸುವುದರಿಂದ ದಟ್ಟವಾಗಿ ಬೆಳೆದ ಮರಗಳಲ್ಲಿ ಹಳೆಯ ಬಾವಿಗಳಲ್ಲಿ ಹಳೆಯ ಮನೆಗಳಲ್ಲಿ ಆಯವಿಲ್ಲದ ಮನೆಗಳಲ್ಲಿ ಏಕ್ಕದ ಗಿಡದ ಬುಡದಲ್ಲಿ ಬಿಳಲುಬಿಟ್ಟ ಆಲದಮರ ಹಾಗೂ ಹುಣಿಸೇ ಮರಗಳಲ್ಲಿ ಕೆರೆ ಕೊಳ ಬಂಡೆ ಗವಿ ಮುಂತಾದ ಕಗ್ಗತ್ತಲ ಸ್ಥಳಗಳಲ್ಲಿ ವಾಸಿಸುತ್ತವೆ. ಸ್ಮಶಾನಗಳಲ್ಲಿ ದೆವ್ವಗಳಿರುವುದಿಲ್ಲ ಎಂಬ ನಂಬಿಕೆ ಕೆಲವರಲ್ಲಿದ್ದರೆ ಮತ್ತೆ ಕೆಲವರು ಇರುತ್ತವೆ ಎಂದು ನಂಬುತ್ತಾರೆ.

ಮೋಹಿನಿ ಎಂಬ ದೆವ್ವಕ್ಕೆ ಹುಣ್ಣಿಮೆಯ ದಿನ ಅತ್ಯಂತ ಪ್ರಿಯವಾದರೆ ಉಳಿದ ದೆವ್ವಗಳಿಗೆ ಅಮಾವಾಸ್ಯೆ ಎಂದರೆ ಸಡಗರವೋ ಸಡಗರ. ಕತ್ತಲ ವೇಳೆಯಲ್ಲಿ ಅವುಗಳ ಚಟುವಟಿಕೆ ನಿರಂತರವಾಗಿ ಸಾಗುತ್ತದೆ. ಹಗಲಲ್ಲಿ ಅವು ನಿದ್ರಿಸುತ್ತವೆ.

**ಗುಣ ಸ್ವಭಾವಗಳು :** ದೆವ್ವಗಳು ಎಲ್ಲರ ಕಣ್ಣಿಗೂ ಕಾಣಿಸುವುದಿಲ್ಲ. ಅವು ದೆವ್ವಗಣ್ಣಿನವರಿಗೆ ಮಾತ್ರ ಕಾಣಿಸಿಕೊಳ್ಳುತ್ತವೆ. ಅಲ್ಲದೆ ನಾಯಿಗಳಿಗೆ ದೆವ್ವಗಳು ಕಾಣಿಸಿಕೊಳ್ಳುತ್ತವೆ. ದೇವಗಣದವರ ಕಣ್ಣಿಗೆ ದೆವ್ವಗಳು ಗೋಚರಿಸುವುದಿಲ್ಲ. ದೆವ್ವಗಳು ಮನುಷ್ಯರನ್ನು ಶತ್ರುಗಳೆಂದೇ ಭಾವಿಸುತ್ತವೆ. ಮನುಷ್ಯರಿಗೆ ಕಿರುಕುಳ ಕೊಡುವುದೆಂದರೆ ಅವಕ್ಕೆ ಎಲ್ಲಿಲ್ಲದ ಉತ್ಸಾಹ ಹಾಗೂ ಆನಂದ. ಹೆಣ್ಣುದೆವ್ವಗಳು ಗಂಡಸರನ್ನು ಗಂಡುದೆವ್ವಗಳು ಹೆಂಗಸರನ್ನು ಹಿಡಿದುಕೊಳ್ಳುವುದು ಸಾಮಾನ್ಯವಾದರೂ ಇದಕ್ಕೆ ಅಪವಾದ ಇಲ್ಲದೆ ಇಲ್ಲ.

ಸ್ವೇಚ್ಛೆಯಾಗಿ ವಿಹರಿಸುವ ದೆವ್ವಗಳು ಮಾನವರನ್ನು ಕಂಡರೆ ಬಗೆಬಗೆ ಯಾಗಿ ಚೇಷ್ಟೆ ಮಾಡುತ್ತವೆ. ಅವು ಮನುಷ್ಯರನ್ನು ಹಿಡಿದುಕೊಳ್ಳ ಬೇಕೆಂದು ಬಯಸಿದಾಗ ಮೊದಲು ಅವನ ಹಿಮ್ಮಡಿಯನ್ನು ಮುಟ್ಟುತ್ತವೆ. ಇದರಿಂದಲೇ ಅವನು ಶಕ್ತನೋ ದುರ್ಬಲನೋ ಎಂಬುದು ಅವಕ್ಕೆ ತಿಳಿಯುತ್ತದೆ. ಆಗ ಅವು ಗಾಳಿಯ ರೂಪದಲ್ಲಿ ಗುದದ್ವಾರದ ಮೂಲಕ ಪ್ರವೇಶ ಮಾಡುತ್ತವೆ. ಮಲಗಿದ್ದ ವ್ಯಕ್ತಿಯನ್ನು ಬಾಯಿಯ ಮೂಲಕ ಪ್ರವೇಶಿಸುತ್ತವೆ. ಎಷ್ಟೋ ದೆವ್ವಗಳು ಮಾನವನ ದೇಹವನ್ನು ತಮ್ಮ ಮನೆಯನ್ನಾಗಿ ಮಾಡಿಕೊಂಡಿದ್ದರೂ ಅದು ಯಾರಿಗೂ ತಿಳಿದಿರುವುದೇ ಇಲ್ಲ. ಬಾಣಂತಿ, ಋತುವಾಗಿರುವ ಹೆಣ್ಣುಮಕ್ಕಳು, ಮದುಮಕ್ಕಳು ಮುಂತಾದ ಹಸಿ ಮೈಯವರನ್ನು ದೆವ್ವಗಳು ಸುಲಭವಾಗಿ ಮೆಟ್ಟುತ್ತವೆ. ದಾರಿಯಲ್ಲಿ ಹೋಗುತ್ತಿರುವವರನ್ನು ಅವು ಅವರ ಪರಿಚಿತ ವ್ಯಕ್ತಿಗಳ ಧ್ವನಿಯನ್ನು ಅನುಕರಿಸಿ ಕೂಗುತ್ತವೆ. ಉತ್ತರಿಸಿದರೆ ಮೆಟ್ಟಿಕೊಳ್ಳುತ್ತವೆ. ದೆವ್ವಗಳ ಅದ್ಭುತ ಶಕ್ತಿಯೆಂದರೆ ಪ್ರಪಂಚದ ಯಾವ ಮೂಲೆಯಲ್ಲಿ ಯಾವ ವಸ್ತುವಿದೆ, ಎಲ್ಲಿ ಏನಾಗುತ್ತಿದೆ ಎಂಬುದನ್ನು ಇದ್ದಲ್ಲಿ ತಿಳಿದು ಕೊಳ್ಳುವುದು. ದೆವ್ವಗಳು ಮನುಷ್ಯರ ಮೇಲೆ ತುಂಬಿ ಬಂದಾಗ ಅವರು ಮೂರ್ಛೆ ಹೋಗುತ್ತಾರೆ. ಕಟಕಟನೆ ಹಲ್ಲು ಕಡಿಯುತ್ತಾರೆ. ಕಣ್ಣುಗುಡ್ಡೆ ಗಳನ್ನು ಭಯಂಕರವಾಗಿ ತೇಲಿಸುತ್ತಾರೆ. ತಲೆಯನ್ನು ಕೆದರಿಕೊಂಡು ಓಲಾಡುತ್ತಾರೆ. ಕೆಟ್ಟದಾಗಿ ಕಿರುಚುತ್ತಾರೆ. ಹೊಟ್ಟೆ ನುಲಿದಂತಾಗಿ ಹೊರಳುತ್ತಾರೆ. ವಿಕಾರವಾಗಿ ನಗುತ್ತಾರೆ. ಭಯಂಕರವಾಗಿ ಅಳುತ್ತಾರೆ. ಕೆಲವು ದೆವ್ವಗಳು ಮೈದುಂಬಿ ಬಂದಾಗ ಹರ್ಷಚಿತ್ತದಿಂದ ತಮ್ಮ ವೃತ್ತಾಂತವನ್ನೆಲ್ಲ ಹೇಳಿಕೊಳ್ಳುವುದೂ ಉಂಟು. ಹೇಳಿಕೊಳ್ಳುವಾಗ ತಾವು ದೆವ್ವವಾಗುವ ಮುನ್ನ ಮನುಷ್ಯರಾಗಿದ್ದಾಗ ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದವೋ ಅದೇ ಭಾಷೆಯಲ್ಲಿ ದೆವ್ವವಾದಾಗಲೂ

ಮಾತನಾಡುತ್ತವೆ. ಕೆಲವು ದೆವ್ವಗಳು ಜ್ಯೋತಿಷ್ಯ ಹೇಳುವುದು ಕಳುವಾಗಿದ್ದ ವಸ್ತುಗಳನ್ನು ಪತ್ತೆ ಮಾಡುವುದು ಮುಂತಾದ ಕಾರ್ಯಗಳನ್ನು ಮಾಡಿಕೊಟ್ಟಿವೆ. ಕೆಲವು ದೆವ್ವಗಳು ಮೈದುಂಬಿ ಬಂದಾಗ ತಾವು ದೇವರುಗಳೆಂದು ಸುಳ್ಳುಹೇಳಿಕೊಂಡು ಜನರ ಕಷ್ಟಸುಖಾದಿಗಳನ್ನು ವಿಚಾರಿಸಿ ಶಾಸ್ತ್ರ ಮುಂತಾದವುಗಳಿಂದ ಪರಿಹಾರ ಸೂಚಿಸಿರುವ ಘಟನೆಗಳೂ ಇವೆ. ದೆವ್ವಗಳಲ್ಲಿ ಹೆಚ್ಚಿನವು ತುಂಟ ದೆವ್ವಗಳೆ. ಅವು ದೂರದಲ್ಲಿ ನಿಂತು ಮನೆ ಮೇಲೆ ಕಲ್ಲೆಸೆಯುತ್ತವೆ. ಸಿಳ್ಳುಹಾಕಿ ಕರೆಯುತ್ತವೆ. ಮಲಗಿದ್ದವರನ್ನು ಅದುಕಿಕೊಂಡು ಉಸಿರಾಡಲು ತೊಂದರೆ ಕೊಡುತ್ತವೆ. ಮೈಮೇಲೆ ಬಂಡೆ ಬಿದ್ದಂತೆ ಭಾರ ಹಾಕಿ ಕಾಡುತ್ತವೆ. ಗಾಡಿ ಬರುತ್ತಿದ್ದರೆ ಎತ್ತುಗಳನ್ನು ಅಡ್ಡಹಾಕಿ ಚಕ್ರ ಕದಲದಂತೆ ಹಿಡಿದು ನಿಲ್ಲಿಸುತ್ತವೆ. ಹಾಸಿಗೆಯಲ್ಲಿ ಮಲಗಿರುವವರನ್ನು ಹಾಸಿಗೆ ಸಮೇತ ಬೇರೆಡೆಗೆ ಕೊಂಡೊಯ್ದು ಮಲಗಿಸುತ್ತವೆ. ಕಾಡಿನಲ್ಲಿ ವಾಸವಿರುವವರ ಗುಡಿಸಲುಗಳಿಗೆ ಬೆಂಕಿಹಾಕಿ ಕುಣಿಯುವುದೂ ಅವುಗಳ ಒಂದು ಚೇಷ್ಟೆ. ರಾತ್ರಿಯ ವೇಳೆಯಲ್ಲಿ ಅವು ಎಳೆಯ ಮಕ್ಕಳಂತೆ ಅತ್ತು ಮನುಷ್ಯರ ಅನುಕಂಪೆಯನ್ನು ಗಳಿಸಿಕೊಂಡು ಅವರು ಮಗುವನ್ನು ಎತ್ತಿಕೊಳ್ಳ ಹೋದಾಗ ವಿಚಿತ್ರಾಕಾರವಾಗಿ ಬೆಳೆದು ಬೆದರಿಸುತ್ತವೆ. ಅವರು ಹೆದರುವ ಸ್ವಭಾವದವರಾಗಿದ್ದರೆ ಅವರ ಜೀವವನ್ನೂ ಮೆಟ್ಟಿಕೊಲ್ಲುತ್ತವೆ. ಹೀಗೆ ದೆವ್ವ ಮೆಟ್ಟಿದವರು ರಕ್ತ ಕಾರಿ ಸತ್ತು ತಾವೂ ದೆವ್ವಗಳಾಗುತ್ತಾರೆ.

**ದೆವ್ವ ಕಾಡಿದ ಪ್ರಸಂಗಗಳು:** ದೆವ್ವಗಳು ಕಾಡಿದ ಅಸಂಖ್ಯಾತ ಘಟನೆಗಳನ್ನು ಹಳ್ಳಿಗರು ರಸವತ್ತಾಗಿ ವರ್ಣಿಸುತ್ತಾರೆ. ಕೆಲವರು ತಾವು ದೆವ್ವಗಳೊಡನೆ ಹೋರಾಡಿ ಜಯಶೀಲರಾಗಿ ಬಂದೆವೆಂಬ ಕಥೆಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅವರ ಈ ಸಾಹಸದ ಕಥೆಗಳು ಅವರ ಧೈರ್ಯಶೌರ್ಯಗಳ ಸಂಕೇತವಾಗಿವೆ. ಆದರೆ ಅವುಗಳ ಸತ್ಯಾಂಶ ಅವರಿಗೆ ಮಾತ್ರ ಗೊತ್ತು. ಏಕೆಂದರೆ ದೆವ್ವಗಳಿವೆ ಎಂದು ನಂಬುವ ಬಹಳಷ್ಟು ಮಂದಿ ಅವನ್ನು ನೋಡಿಲ್ಲ. ನೋಡಿಲ್ಲವೆಂದ ಮಾತ್ರಕ್ಕೆ ಅವರು ನಿರ್ಭಯರಾಗಿದ್ದಾರೆ ಎಂದರ್ಥವಲ್ಲ. ದೆವ್ವ ಅಗೋಚರ ಶಕ್ತಿಯಾದ್ದರಿಂದ ಎಂಥ ಗಂಡುಗಲಿಗಳಿಗೂ ಅವುಗಳ ಬಗೆಗೆ ಕೊಂಚ ಅಳುಕು ಇದ್ದೇ ಇರುತ್ತದೆ. ಹಳ್ಳಿಗರು ಗಾಳಿ ಕಾಟವನ್ನು ಅನುಭವಿಸಿದ, ಎದುರಿಸಿದ ಅಥವಾ ಅವಕ್ಕೆ ತುತ್ತಾದ ಪ್ರಸಂಗಗಳು ಬೇಕಾದಷ್ಟಿವೆ. ಒಂದೆರಡು ಪ್ರಸಂಗಗಳನ್ನು ಇಲ್ಲಿ ಉದಾಹರಿಸಲಾಗಿದೆ.

ಕೆಲವು ದೆವ್ವಗಳು ಮನೆಯ ಒಳಭಾಗದಲ್ಲೇ ವಾಸವಿದ್ದರೂ ಯಾರಿಗೂ ಗೊತ್ತಿರುವುದಿಲ್ಲ. ಅವು ಅಮಾವಾಸ್ಯೆಯ ರಾತ್ರಿಗಳಲ್ಲಿ ಧಡಧಡನೆ ಮನೆ ಬಾಗಿಲು ತಟ್ಟುವುದು, ದನಕರುಗಳನ್ನು ಬಲಿ ತೆಗೆದುಕೊಳ್ಳುವುದು, ಮನೆಯಲ್ಲಿ ಕಷ್ಟನಷ್ಟಗಳನ್ನುಂಟುಮಾಡುವುದು ಮುಂತಾದ ಕಾರ್ಯದಲ್ಲಿ ತೊಡಗುತ್ತವೆ ಎಂದು ನಂಬಲಾಗುತ್ತದೆ. ಇಂಥ ವಿಷಯಕ್ಕೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಪಟೇಲ್ ಕಾಳೇಗೌಡರ ಮನೆಯಲ್ಲಿ ನಡೆದ ಒಂದು ಘಟನೆ ಒಳ್ಳೆಯ ನಿದರ್ಶನ. ಸಣ್ಣಯ್ಯನವರ ಬೀದಿಯಲ್ಲಿ ವಾಸವಿದ್ದ ಗೌಡರು ಬೆಂಗಳೂರು ಮಂಗಳೂರು ರಸ್ತೆ ಬದಿಯಲ್ಲಿದ್ದ ತಮ್ಮ ಹೊಲದಲ್ಲಿ ಒಂದು ಮನೆಯನ್ನು ಕಟ್ಟಿ ವಾಸಕ್ಕೆ ಹೊರಟರು. ಅವರು ಆ ಮನೆಗೆ ಹೋದ ಕೆಲವೇ ದಿನಗಳಲ್ಲಿ ಅವರ ಬೆಲೆ ಬಾಳುವ ಎತ್ತುಗಳಲ್ಲಿ ಒಂದು ಇದ್ದಕ್ಕಿದ್ದಂತೆ ಅಸುನೀಗಿತು. ಇದಕ್ಕೆ ಕಾರಣವೇ ತಿಳಿಯಲಿಲ್ಲ. ಮತ್ತೆರಡು ವರ್ಷಗಳ ತರುವಾಯ ಮತ್ತೊಂದು ಹೋರಿ ಪ್ರಾಣಬಿಟ್ಟಿತು. ಅಲ್ಲದೆ ಅಮಾವಾಸ್ಯೆ ಮುಂದಾರದಲ್ಲಿ ಮನೆಯ ಸುತ್ತ ಯಾರೋ ಗುಡುಗುಡನೆ ಓಡಾಡಿದಂತಾಗುತ್ತಿತ್ತು. ಕಳ್ಳರಿರಬಹು ದೆಂದು ಆಳುಕಾಳುಗಳನ್ನೆಲ್ಲ ಎಚ್ಚರಿಸಿ ಹುಡುಕಿದರೆ ಯಾರ ಸುಳಿವೂ ಇರುತ್ತಿರಲಿಲ್ಲ. ಕಳ್ಳತನವೂ ಆಗುತ್ತಿರಲಿಲ್ಲ. ಕೆಲವೊಮ್ಮೆ ನಡುರಾತ್ರಿಯಲ್ಲಿ ಬಾಗಿಲನ್ನು ಧಡಧಡನೆ ತಟ್ಟಿದಂತಾಗುತ್ತಿತ್ತು. ಬಾಗಿಲು ತೆರೆದರೆ ಯಾರೂ ಇರುತ್ತಿರಲಿಲ್ಲ. ಇದು ಭೂತಚೇಷ್ಟೆಯೆಂದು ನಿರ್ಧರಿಸಿದ ಪಟೇಲರು ಮಲೆಯಾಳ ದೇಶದಿಂದ ಮಂತ್ರವಾದಿಯೊಬ್ಬನನ್ನು ಕರೆಸಿ ಮನೆಗೆ ದಿಗ್ಬಂದನ ಮಾಡಿಸಿದರು. ಇದರಿಂದ ಏನೂ ಪ್ರಯೋಜನವಾದಂತೆ ಕಾಣಲಿಲ್ಲ. ಅವರ ಮಗ ಪಿ.ಕೆ. ಶಿವಪ್ಪನವರು ಕೆ.ಆರ್. ನಗರ ತಾಲ್ಲೂಕಿನ ಹೆಬ್ಬಾಳು ಗ್ರಾಮದ ತಮ್ಮ ಹೆಂಡತಿಯ ಮನೆಗೆ ಹೋಗಿದ್ದಾಗ ಅಲ್ಲಿ ಒಬ್ಬ ಮುದುಕಿಯ ಮೈಮೇಲೆ ವೆಂಕಟೇಶ್ವರ ದೇವರು ಮೈತುಂಬಿ ಬಂದು ಯಂತ್ರಮಂತ್ರ ಶಾಸ್ತ್ರಾದಿಗಳನ್ನು ಮಾಡುತ್ತಿರುವುದನ್ನು ಕಂಡು ಕುತೂಹಲಕ್ಕಾಗಿ ತಾವೂ ಶಾಸ್ತ್ರ ಕೇಳಿದರು. ಆಗ ಆ ದೇವರು ನಿಮ್ಮ ಮನೆಯಲ್ಲೊಂದು ಗಾಳಿ ಸೇರಿಕೊಂಡಿದೆ. ನೀವು ಮನೆ ಕಟ್ಟಿಸುವಾಗ ನೆಲ ಸೋಸಿಲ್ಲ. ಹಿಂದೆ ಯಾರೋ ಒಬ್ಬ ಹೆಂಗಸು ಕದ್ದುಬಸುರಿಯಾಗಿ ಹೆತ್ತ ಮಗುವನ್ನು ತಂದು ಆ ಸ್ಥಳದಲ್ಲಿ ಹೂತಿದ್ದಳು. ಅದು ದೆವ್ವವಾಗಿ ಈಗಲೂ ಬೆಳೆಯುತ್ತಿದೆ. ನಿಮಗೆ ಕಷ್ಟ ನಷ್ಟಗಳನ್ನು ಉಂಟುಮಾಡುತ್ತಿದೆ ಎಂದಿತು. ವಿಷಯವನ್ನು ಕೇಳಿದ ಶಿವಪ್ಪನವರು ಕುತೂಹಲಭರಿತರೂ ಭಯಚಕಿತರೂ ಆಗಿ ಆ ದೆವ್ವವನ್ನು ಮನೆಯಿಂದ ಹೊರಗಟ್ಟಲು ನೆರವು ಕೇಳಿದರು. ದೇವರು ಅದಕ್ಕೊಪ್ಪಿತು. ಹೆಂಗಸನ್ನು ಹೆಬ್ಬಾಳಿನಿಂದ ಪಿರಿಯಾಪಟ್ಟಣಕ್ಕೆ ಕರೆದುತಂದರು. ಅವಳು ಕೋಳಿಕೂಗುವ ಹೊತ್ತಿಗೆ ಎದ್ದು ಸ್ನಾನ ಮಡಿ ಮುಗಿಸಿ ಪೂಜೆಗೆ ಕುಳಿತಳು. ಮೈಮೇಲೆ ವೆಂಕಟೇಶ್ವರ ಸ್ವಾಮಿ ಆವೇಶ ಬಂದಾಗ ಧಿಗ್ಗನೆ ಮೇಲೆದ್ದಳು. ಮನೆಯ ನೆಲದಲ್ಲಿ ಮೂರು ಸ್ಥಳಗಳನ್ನು ತಟ್ಟಿ ಶಬ್ದಮಾಡಿ, ಕಣಜದ ಮನೆಯ ಮೂಲೆಯೊಂ ದನ್ನು ಅಗೆಯಲು ಸೂಚಿಸಿದಳು. ಆಳುಗಳು ಒಂದಾಳುದ್ದದವರೆಗೂ ಗುಂಡಿ ತೋಡಿದರು. ಆಗ ಮುದುಕಿ ಅಗೆಯುವುದನ್ನು ನಿಲ್ಲಿಸುವಂತೆ ಹೇಳಿ ತಾನೇ ಹಳ್ಳಕ್ಕಿಳಿದು ಅಗೆಯತೊಡಗಿದಳು. ಮನೆಯ ತುಂಬ ಕೆಟ್ಟವಾಸನೆ ಹರಡಿಕೊಂಡಿತು. ಆ ಮುದುಕಿ ಹಳ್ಳದೊಳಗಿಂದ ಅಸ್ಥಿ ಪಂಜರವೊಂದನ್ನು ಮೇಲೆತ್ತಿ ತಂದಳು. ಅದನ್ನು ಯಾರೂ ಮುಟ್ಟ ಬೇಡಿರೆಂದು ಹೇಳಿ ಮಂಕರಿಗೆ ತುಂಬಿ ತಾನೇ ಶ್ಮಶಾನಕಟ್ಟೆಗೊಯ್ದು ವಿಧಿಪೂರ್ವಕವಾಗಿ ಸಂಸ್ಕಾರ ಮಾಡಿಸಿದಳು. ಒಂಬತ್ತನೆಯ ದಿನದಲ್ಲಿ ಆರಾಧನೆ ಮಾಡಿ ಅನ್ನ ಹಾಕಲು ಹೇಳಿದಳು. ಆ ಒಂಬತ್ತು ದಿನಗಳ ರಾತ್ರಿಯೂ ದೆವ್ವ ಬಂದು ಬಾಗಿಲನ್ನು ಧಡಧಡನೆ ಬಡಿಯುತ್ತಿತ್ತು. ಸತ್ತವರಿಗೆ ಗಣಾರಾಧನೆ ಮಾಡುವಂತೆ, ಆ ದೆವ್ವದ ಹೆಸರಿನಲ್ಲಿ ಅನ್ನ ಹಾಕಿದರು. ಆಗ ಆ ಮನೆಯಲ್ಲಿ ದೆವ್ವದ ಕಾಟ ಕಾಣೆಯಾಯಿತಂತೆ.

**ಭೂತ ವಶೀಕರಣ:** ಬಸುರಿ ಅಥವಾ ಬಾಣಂತಿ ಸತ್ತರೆ ಅವಳನ್ನು ಹೂಳಬಾರದು, ಹೂತರೆ ಮಳೆ ಬರುವುದಿಲ್ಲ ಎಂಬ ನಂಬಿಕೆ ಕೆಲವು ಕಡೆ ಇದೆ. ಆದರೆ ಇದಕ್ಕೂ ಹೆಚ್ಚಿನ ಕಾರಣ ಮಂತ್ರವಾದಿಗಳ ಕಾಟ ಎಂದು ಹೇಳುತ್ತಾರೆ. ಅದಕ್ಕಾಗಿ ಅವಳನ್ನು ಸುಟ್ಟು ಬರುವ ಪದ್ಧತಿ ಯಿದೆ. ಸುಡದೆ ಹೂತು ಬಂದ ಪಕ್ಷದಲ್ಲಿ ಇದನ್ನು ನೋಡಿಕೊಂಡಿದ್ದ ಮಂತ್ರವಾದಿ ಹುಣ್ಣಿಮೆಯ ಮಧ್ಯರಾತ್ರಿಯಲ್ಲಿ ಕಾಳಿಕಾದೇವಿಯ ಮಂತ್ರವನ್ನು ಜಪಿಸುತ್ತ ಕರೀಕುರಿಯೊಡನೆ ಶ್ಮಶಾನಕ್ಕೆ ಬಂದು ಗುದ್ದಕ್ಕೆ ನೇರವಾಗಿ ಇಪ್ಪತ್ತುಗಜ ದೂರದಲ್ಲಿ ಏಳು ಬಣ್ಣಗಳ ರಂಗೋಲಿಯಲ್ಲಿ ಮಂಡಲ ಬರೆದು, ಅದರ ಮಧ್ಯೆ ಒಂದು ಕಬ್ಬಿಣದ ಗೂಟ ನೆಟ್ಟು ಅದಕ್ಕೆ ಬಲಿಕಟ್ಟಿ ಮಂತ್ರ ಹೇಳುತ್ತ ಪೂಜೆಮಾಡುತ್ತಾನೆ. ಆ ಗೂಟದಿಂದ ಒಂದು ಹಸಿ ನೂಲಿನ ಹುರಿಯನ್ನು ಎಳೆದುತಂದು ಗುದ್ದದ ತುದಿಗೊಂದು ಗೂಟನೆಟ್ಟು ಅದಕ್ಕೆ ಕಟ್ಟುತ್ತಾನೆ. ಗುದ್ದದ ಹಿಂಭಾಗದಲ್ಲಿ ಮತ್ತೊಂದು ಕಬ್ಬಿಣದ ಗೂಟ ಹೊಡೆದು ಅದನ್ನು ಹಿಡಿದುಕೊಂಡು ಕುಳಿತುಕೊಳ್ಳುತ್ತಾನೆ. ಈಗ ಮಣ್ಣಿನ ಗೊಂಬೆಗಳೆರಡಕ್ಕೆ ಪೂಜೆಮಾಡಿ ಜೀವತುಂಬಿ ಅವುಗಳ ಕೈಗೆ ಕತ್ತಿ ಕೊಡುತ್ತಾನೆ. ಅವು ನೂಲಿನ ಮೇಲೆ ಹೆಜ್ಜೆಯಿಡುತ್ತ

ಮಂಡಲ ಬಳಿಗೆ ಬರುತ್ತವೆ. ಮಂತ್ರವಾದಿ ಒಂದೇ ಸಮನೆ ಮಂತ್ರ ಹೇಳತೊಡಗುತ್ತಾನೆ. ಈಗ ಗುದ್ದು ಇಬ್ಭಾಗವಾಗಿ ಅದರಿಂದ ಹೆಣ ಮೇಲೆದ್ದು ತಕತಕನೆ ಕುಣಿಯಲಾರಂಭಿಸುತ್ತದೆ. ಕುಣಿಕುಣಿದಾಡುತ್ತ ಹುರಿಯ ನೇರಕ್ಕೆ ನಡೆದು ಮಂಡಲವನ್ನು ತಲಪಿ ಅಲ್ಲಿ ಕಟ್ಟಿದ್ದ ಕರಿಕುರಿಯ ಗೋಮಾಳೆಯನ್ನು ಕಚ್ಚಿ ರಕ್ತ ಹೀರುತ್ತದೆ. ಆಗ ಮಂತ್ರದ ಗೊಂಬೆಗಳು ಕೈ ಕೊಡ್ತಿಯಾ. ಕಾಲ್ ಕೊಡ್ತೀಯಾ ಎಂದು ಹೇಳುತ್ತ ಕುಣಿಯುತ್ತಿರುತ್ತವೆ. ಆಗ ಹೆಣ ಎಡದ ಕೈಯನ್ನು ನೀಡುತ್ತದೆ. ಗೊಂಬೆಗಳು ಹಸ್ತವನ್ನು ಕತ್ತರಿಸಿಕೊಳ್ಳುತ್ತವೆ. ತಕ್ಷಣವೆ ಹೆಣ ದೊಪ್ಪನೆ ಕೆಳಗುರುಳುತ್ತದೆ. ಬಿದ್ದ ಹೆಣಕ್ಕೆ ಮೋಡಿಹಾಕಿ ಅದು ಮತ್ತೆ ಗುದ್ದಿಗೆ ಬೀಳುವಂತೆ ಮಾಡುತ್ತಾನೆ. ಗೊಂಬೆಗಳು ಕುಣಿದಾಡುತ್ತ ಬಂದು ಕತ್ತರಿಸಿ ತಂದ ಕೈಯನ್ನು ಮಂತ್ರವಾದಿಗೆ ಒಪ್ಪಿಸುತ್ತವೆ. ಆ ಕೈಯನ್ನು ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ಹೊಳೆ ದಡಕ್ಕೆ ತೆಗೆದುಕೊಂಡು ಹೋಗಿ ಕಾಳಿಕಾದೇವಿ ಪೂಜೆ ಮಾಡಿ ಅವಳಿಗೂ ಒಂದು ಕುರಿತಲೆ ಬಲಿಕೊಟ್ಟು ಅವಳ ಹೆಸರಿನಲ್ಲಿ ತಾನು ಮಾಯಮಂತ್ರ ಮುಂತಾದವನ್ನು ಮಾಡುವುದಾಗಿ ಹೇಳುತ್ತಾನೆ. ಆಗ ಕಾಳಿ ಶ್ಮಶಾನದಲ್ಲಿ ಸುಟ್ಟಿರುವ ಹೆಣಗಳ ಬೂದಿಯನ್ನು ಅವನಿಗೆ ಕೊಡುತ್ತಾಳೆ. ಇದರಿಂದ ಭೂತ ಅವನಿಗೆ ವಶವಾಗುತ್ತದೆ. ಈ ಭೂತದ ಸಹಾಯದಿಂದ ಮಂತ್ರವಾದಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಕೆಲವು ಮಂತ್ರವಾದಿಗಳು ಕಾಳಿಕಾದೇವಿಗೆ ಬದಲಾಗಿ ಬೇತಾಳಗಳನ್ನು ಆಶ್ರಯಿಸುತ್ತಾರೆ.

**ದೆವ್ವ ಬಿಡಿಸುವುದು:** ಅವು ಮೈ ತುಂಬಿ ಬಂದಾಗ ದೆವ್ವಗಳು ಹಿಡಿದುಕೊಂಡಿವೆ ಎಂದು ಸುಲಭವಾಗಿ ಗೊತ್ತಾಗುತ್ತದೆ. ಇಲ್ಲದೆಹೋದರೆ ಅವು ಮಾನವ ಶರೀರವನ್ನು ಮನೆಮಾಡಿಕೊಂಡಿದ್ದರೂ ತಿಳಿಯುವುದು ಕಷ್ಟ. ಮಕ್ಕಳಿಗೆ ದೆವ್ವದ ಕಾಟವಿದೆಯೆಂಬುದನ್ನು ಅವು ಮಲಗಿರುವಾಗ ಬೆಚ್ಚುವುದರಿಂದ, ಚಿಟ್ಟನೆ ಚೀರುವುದರಿಂದ, ರಚ್ಚೆ ಹಿಡಿಯುವುದರಿಂದ ಗುರುತಿಸಿ ತಕ್ಷಣವೆ ಯಂತ್ರ ಮಂತ್ರಗಳನ್ನು ಹಾಕಿಸುತ್ತಾರೆ. ಇಲ್ಲವೆ ರಚ್ಚೆತಾಳಿಯನ್ನು ಮಾಡಿಸಿ ಕಟ್ಟಿಸುತ್ತಾರೆ.

ಮೈಮೇಲೆ ಆವೇಶ ಬರುವ ದೆವ್ವಗಳನ್ನು ಬಿಡಿಸಲು ಹಲವಾರು ಕ್ರಮಗಳನ್ನು ಪ್ರಪಂಚಾದ್ಯಂತ ಕಾಣಬಹುದಾಗಿದೆ. ಕೆಲವು ಕ್ರಮಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

ದೆವ್ವ ಹಿಡಿದವರನ್ನು ದೇವಾಲಯಗಳಿಗೆ ಕರೆತಂದರೆ ಅರ್ಚಕ ದೆವ್ವವನ್ನು ಬಿಡಿಸುತ್ತಾನೆ. ಬೊಪ್ಪಗೌಡನಪುರದ ಮಂಟೇಸ್ವಾಮಿ ಮಠದ ತಮ್ಮಡಿಗಳು ದೆವ್ವ ಬಿಡಿಸುತ್ತಾರೆ. ಮಂಟೇಸ್ವಾಮಿಗೆ ಪೂಜೆ ಮಾಡಿದ ಮೇಲೆ, ದೆವ್ವ ಹಿಡಿದವರನ್ನು ತಲೆಮೇಲೆ ಕೈಜೋಡಿಸಿಕೊಂಡು ಕುಳಿತು ಕೊಳ್ಳಲು ಹೇಳುತ್ತಾರೆ. ಜಾಗಟೆ, ನಗಾರಿ, ಗಂಟೆಗಳನ್ನು ಕಿವಿಹರಿಯುವಂತೆ ಬಾರಿಸುತ್ತಾರೆ. ಈ ಸದ್ದುಗಳಿಗೆ ದೆವ್ವ ಮೈತುಂಬಿ ಬರುತ್ತದೆ. ತಮ್ಮಡಿ ತಕ್ಷಣವೆ ಒಂದು ಬತ್ತಿ ತಲೆಗೂದಲನ್ನು ಹಿಡಿದು ಗಂಟು ಹಾಕುತ್ತಾನೆ. ಅನಂತರ ದೆವ್ವ ಎಲ್ಲಿಂದ, ಏಕೆ, ಹೇಗೆ ಬಂದಿತೆಂಬುದರ ವಿಚಾರಣೆ ನಡೆಯುತ್ತದೆ. ದೆವ್ವ ಮಾತಾಡದಿದ್ದರೆ ಬೆತ್ತದಿಂದ ರಪರಪನೆ ಬಾರಿಸುತ್ತಾನೆ. ಬೆದರಿದ ದೆವ್ವ ಬಾಯಿ ಬಿಡುತ್ತದೆ. ಅದರ ಬಯಕೆ ಏನೆಂದು ಕೇಳುತ್ತಾನೆ. ಅದು ಬಯಸಿದ ಊಟ ತಿಂಡಿಯನ್ನು ಮುಂದಿನ ವಾರ ಕೊಡಿಸುವುದಾಗಿ ಹೇಳುತ್ತಾನೆ. ಮಂಟೇಸ್ವಾಮಿ, ಸಿದ್ಧಪ್ಪಾಜಿ, ರಾಚಪ್ಪಾಜಿ, ದೊಡ್ಡಮ್ಮ ತಾಯಿಯರ ಪಾದದಾಣೆಗೂ ಹೋಗುವುದಾಗಿ ಅದು ಹೇಳುತ್ತದೆ. ಹೋಗುವುದು ನಿಶ್ಚಯವಾದರೆ ನಿನ್ನ ತಲೆಯಿಂದ ಮೂರು ಬತ್ತಿ ಕೂದಲನ್ನು ಕಿತ್ತುಕೊಡು ಎಂದು ಕೇಳುತ್ತಾನೆ. ದೆವ್ವ ತಲೆಗೂದಲನ್ನು ಕಿತ್ತುಕೊಡುತ್ತದೆ. ಮುಂದಿನ ವಾರ ಆ ಜನ ಉಪವಾಸ ದಿಂದಿದ್ದು ಸ್ನಾನ ಮಡಿಯಿಂದ ದೇವಾಲಯಕ್ಕೆ ಬರುತ್ತಾರೆ. ಹಿಂದಿನ ವಾರದ ರೀತಿಯಲ್ಲಿಯೇ ದೆವ್ವ ಮೈ ಮೇಲೆ ಬರುವಂತೆ ಮಾಡಲಾಗುತ್ತದೆ. ಅದು ಪ್ರೀತಿ ಪಟ್ಟು ಕೇಳಿದ ಬೇಕಿನಿಸಿದ್ದನ್ನು ಅದಕ್ಕೆ ಕೊಡುತ್ತಾರೆ. ಇದಾದ ಮೇಲೆ ದೇವರಿಗೆ ನಮಸ್ಕಾರ ಮಾಡುವಂತೆ ಹೇಳುತ್ತಾರೆ. ಅದು ನಮಸ್ಕರಿಸಿ ತಾನು ಸತ್ಯವಾಗಿಯೂ ಬಿಟ್ಟು ಹೋಗುವುದಾಗಿ ಆಣೆಮಾಡಿ ಹೇಳುತ್ತದೆ. ಅಲ್ಲಿಂದ ಹೊರಕ್ಕೆ ಕರೆತಂದು, ಹೊರಲಾರದ್ದು ಒಂದು ಕಲ್ಲುಗುಂಡಿಗೆ ತೀರ್ಥ ಸಿಂಪಡಿಸಿ ಪೂಜೆ ಮಾಡಿ ಅದನ್ನು ಹೊತ್ತುಕೊಳ್ಳಲು ದೆವ್ವಕ್ಕೆ ಹೇಳುತ್ತಾರೆ. ಹತ್ತು ಜನ ಹೊರಲಾರದ ಆ ಗುಂಡನ್ನು ದೆವ್ವ ಹಿಡಿದಿರುವವರು ಸರಾಗವಾಗಿ ಹೊತ್ತುಕೊಂಡು ಮುಂದೆ ಮುಂದೆ ಸಾಗುತ್ತಾರೆ. ಅಲ್ಲಿಂದ ಎಲ್ಲರೂ ಅವರನ್ನು ದೊಡ್ಡಮ್ಮ ತಾಯಿಯ ಕೆರೆಗೆ ಕರೆದುತಂದು ನಡುಮಟ್ಟ ನೀರಿನಲ್ಲಿ ಐದುವಾರಗಳಲ್ಲಿ ಮೂರು ಸಾರಿ ಮುಳುಗಿಸಿ ಮೇಲೆತ್ತುತ್ತಾರೆ. ದೆವ್ವ ಹಿಡಿದಿದ್ದವರು ಈಗ ಅದರಿಂದ ಮುಕ್ತರಾಗುತ್ತಾರೆ. ಇದಾದಮೇಲೆ ದೇವಾಲಯಕ್ಕೆ ಬಂದು ಪೂಜೆ ಮಾಡಿಸಿ ಐದು ಹೆಣಗಾಳಿಗಾಣ್ಕೆ ಒಪ್ಪಿಸುತ್ತಾರೆ.

ಕಾಡುಕುರುಬರು ದೆವ್ವ ಬಿಡಿಸುವುದರಲ್ಲಿ ಸಿದ್ಧಹಸ್ತರು. ಅವರು ದೆವ್ವ ಹಿಡಿದಿದ್ದವರ ಮುಂದೆ ಮಂತ್ರವನ್ನೂದುತ್ತ ಗುಲಗಂಜಿ ತುಂಬಿದ ಸೋರೆ ಬುರುಡೆಯನ್ನು ಅಲ್ಲಾಡಿಸುತ್ತಿರುತ್ತಾನೆ. ದೆವ್ವ ಬಂದವರು ಅದರ ಶಬ್ದಕ್ಕೆ ತಕ್ಕಂತೆ ಕೆದರಿದ ತಲೆಯನ್ನು ಓಲಾಡಿಸುತ್ತಿರುತ್ತಾರೆ. ಅವನು ಮಂತ್ರವನ್ನೂದುತ್ತಿದ್ದಂತೆ ಬುರುಡೆಯೊಳಗಿನ ಗುಲಗಂಜಿಗಳ ಶಬ್ದ ಥಟ್ಟನೆ ನಿಲ್ಲುತ್ತದೆ. ಆಗ ದೆವ್ವ ಬುರುಡೆಯೊಳಕ್ಕೆ ಬಂತೆಂದು ಹೇಳಿ ಅದನ್ನು ಶ್ಮಶಾನಕ್ಕೆ ತೆಗೆದುಕೊಂಡು ಹೋಗಿ ಬಲಿಕೊಟ್ಟು ಸುಟ್ಟುಹಾಕುತ್ತಾರೆ.

ಕಲ್ಲು ಹುಯ್ಯಿಸುತ್ತೇವೆಂದು ಹೇಳಿದರೆ ದೆವ್ವಗಳು ನಡುಗುತ್ತವೆ. ಕಲ್ಲು ಹುಯ್ಯಿಸುವುದೆಂದರೆ ದೆವ್ವಗಳನ್ನು ಸೆರೆಮಾಡುವುದು ಎಂದರ್ಥ. ಮೈಮೇಲೆ ಬಂದು ಕಿರುಕುಳ ಕೊಡುವ ದೆವ್ವಗಳನ್ನು ಗ್ರಾಮದೇವತೆಗಳ ಹೆಸರಿನಲ್ಲಿ ಒಂದು ಚಪ್ಪಡಿಯಲ್ಲಿ ಮುಖ ಕೈ ಕಾಲುಗಳು ಹಿಂದಕ್ಕಿರುವಂತೆ ಕೆತ್ತಿಸಿ, ದೇವಸ್ಥಾನದ ಮುಂದೆ ನೆಟ್ಟು, ಅದಕ್ಕೆ ಅನ್ನ ಹಾಕಿ ಗುಡಿಗೆ ಹೋಗುವ ಜನರೆಲ್ಲ ತುಳಿಯುವಂತೆ ಮಾಡುತ್ತಾರೆ. ಹೀಗೆ ದೇವರ ಸನ್ನಿಧಿಯಲ್ಲಿ ಬಂಧಿಯಾದ ದೆವ್ವ ಯಾರನ್ನೂ ಹಿಡಿದುಕೊಳ್ಳಲಾರದು.

ಮನೆಗಳಿಗೆ ದೆವ್ವ ಸೇರಿಕೊಂಡಿದ್ದರೆ ಬೇವಿನ ಎಲೆ ಜಜ್ಜಿ ನವಿಲುಗರಿ ಹಾವಿನ ಪೊರೆ ನವಣೆನೆಲ್ಲು ಮತ್ತು ಇಂಗು ಇವುಗಳನ್ನೆಲ್ಲ ಸೇರಿಸಿ ಧೂಪ ಹಾಕಿದರೆ ಅದರ ವಾಸನೆ ಎಷ್ಟು ದೂರ ತಟ್ಟುತ್ತದೋ ಅಲ್ಲಿಯವರೆಗೂ ದೆವ್ವಗಳು ಸುಳಿಯುವುದಿಲ್ಲವೆಂದು ನಂಬಿಕೆ.

ಪ್ರೇತಬಾಧಾ ನಿವಾರಕ ಯಂತ್ರವನ್ನು ಕಟ್ಟುವುದರಿಂದ ದೆವ್ವಗಳು ಆ ಚೀಟಿ ಇದ್ದವರನ್ನು ಸ್ಪರ್ಶಿಸಲು ಹೆದರುತ್ತವೆಯಂತೆ. ಇದು ಚೀಟಿಯ ಒಂದರ ಮಾದರಿ:

| | | | |
|---|---|---|---|
| ಓಂ | ಹ್ರೀಂ | ಸ್ವ | ಮ; |
| ಕ್ರೀಂ | ಕ್ರೀಂ | ಲಂ | ಜಂ; |
| ತಂ | ಪಂ | ಸಂ | ತಂ; |
| ಠಂ | ಠಂ | ಠಂ | ಠಂ. |

ಭೋಜಪತ್ರದ ಮೇಲೆ ಈ ಯಂತ್ರವನ್ನು ಬರೆದು ವಿಧ್ಯುಕ್ತವಾಗಿ ಪೂಜಿಸಿ ಕೊರಳಿಗೆ ಕಟ್ಟಿದರೆ ಪ್ರೇತಬಾಧೆ ನಿವಾರಣೆಯಾಗುತ್ತದೆ. ಇಷ್ಟೇ ಅಲ್ಲದೆ ದೆವ್ವ ಬಿಡಿಸುವ ಇನ್ನೂ ಹಲವಾರು ಕ್ರಮಗಳನ್ನು ನಾಡಿನಾದ್ಯಂತ ಕಾಣಬಹುದಾಗಿದೆ.

ಭೂತಗಳಿಗೆ ಹೆದರಿ ಅವನ್ನು ಆರಾಧಿಸುವ ಪದ್ಧತಿ ಪ್ರಪಂಚದ ಬಹಳಷ್ಟು ಕಡೆಗಳಲ್ಲಿ ಕಂಡುಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆ ಇಂಥ ಒಂದು ವಿಶಿಷ್ಟ ಸಂಪ್ರದಾಯ. ತುಮಕೂರು, ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲಿ ಭೂತಗಳನ್ನು ಚೋಮಗಳು ಎಂದು ಕರೆಯುತ್ತಾರೆ. ಅವು ಗ್ರಾಮದೇವತೆಗಳ ಸಿಬ್ಬಂದಿ ವರ್ಗದಂತಿವೆ. ಅವನ್ನು ತೃಪ್ತಿಪಡಿಸಲು ಬಲಿ ಮುಂತಾದವನ್ನು ಕೊಡುತ್ತಾರೆ. ಬೇತಾಳೇಶ್ವರನ ಗುಡಿಗಳು ಬಹಳ ಕಡೆ ಇವೆ. ದೊಡ್ಡಗದ್ದವಳ್ಳಿಯ ಬೇತಾಳದ ವಿಗ್ರಹವನ್ನು ಇಲ್ಲಿ ನೆನೆಯಬಹುದು. ತಮಿಳುನಾಡು ಹಾಗೂ ಕೇರಳಗಳಲ್ಲೂ ಭೂತರಾಧನೆಯ ಪದ್ಧತಿ ಉಳಿದುಬಂದಿದೆ. ಪ್ರತಿಯೊಂದು ನೈಸರ್ಗಿಕ ಘಟನೆಗಳೂ ಭೂತಶಕ್ತಿಯ ಅಭಿವ್ಯಕ್ತಿಯೆಂದು ಭಾವಿಸುವ ಆದಿವಾಸಿಗಳು ಬಹಳಷ್ಟು ಬಗೆಯ ಮನೋರೋಗಗಳನ್ನು ದೆವ್ವಗಳ ಕುತ್ತಿಗೆಗೆ ಕಟ್ಟಿಬಿಡುತ್ತಾರೆ. ಅಲ್ಲದೆ ವೈಚಾರಿಕ ಚಿಂತನೆಯೂ ಸಂಪೂರ್ಣವಾಗಿ ದೆವ್ವಗಳ ರಹಸ್ಯವನ್ನು ಬಯಲು ಮಾಡಲು ಸಾಧ್ಯವಾಗಿಲ್ಲ. *

**ದೆಹಲಿಯ ಸುಲ್ತಾನರು:** ಹದಿಮೂರನೆಯ ಶತಮಾನದ ಕೊನೆಯ ಹೊತ್ತಿಗೆ ದೆಹಲಿಯ ಸುಲ್ತಾನರ ಆಳ್ವಿಕೆ ಉತ್ತರ ಭಾರತದಲ್ಲಿ ಸಂಘಟನೆಗೊಂಡು, ಖಿಲ್ಜಿ ಸಂತತಿಯವರು ಆಡಳಿತವನ್ನು ಆರಂಭಿಸಿದ ಮೇಲೆ ಅದರ ಪ್ರಾಬಲ್ಯ ವಿಂಧ್ಯಪರ್ವತಗಳನ್ನು ಹಾದು ದಕ್ಷಿಣದತ್ತ ಹಬ್ಬಲು ಪ್ರಾರಂಭವಾಯಿತು. ದಕ್ಷಿಣದ ಕೊಳೆತ ರಾಜಕೀಯ ಪರಿಸ್ಥಿತಿಗಳು ಇದಕ್ಕೆ ಅನುಕೂಲವಾಗಿದ್ದವು. ದೇವಗಿರಿಯ ಯಾದವರಿಗೂ ಹೊಯ್ಸಳರಿಗೂ ತಿಕ್ಕಾಟ ನಡೆಯುತ್ತಿದ್ದು, ಅವರ ಮಧ್ಯೆ ದ್ವೇಷ, ಅಸೂಯೆಗಳು ತುಂಬಿತುಳುಕಾಡುತ್ತಿದ್ದವು. ಸಹಜವಾಗಿ ಈ ಆಕ್ರಮಣಶಾಲಿಗಳು ಇದನ್ನೇ ತಮ್ಮ ಬಂಡವಾಳವಾಗಿ ಉಪಯೋಗಿಸಿಕೊಂಡರು.

ದೆಹಲಿಯ ಸುಲ್ತಾನರಲ್ಲಿ ಕರ್ನಾಟಕದತ್ತ ಗಮನ ಹರಿಸಿದವರಲ್ಲಿ ಮೊದಲಿಗ ಅಲ್ಲಾಉದ್ದೀನ್ ಖಿಲ್ಜಿ. ಅವನು ಭಿಲ್ಸಾವನನ್ನು ಆಕ್ರಮಿಸಿದ್ದ ಸಂದರ್ಭದಲ್ಲಿ ಕರ್ನಾಟಕದ ರಾಜರ ಬಳಿ ಹೇರಳವಾದ ಐಶ್ವರ್ಯವಿದೆ ಎಂಬ ವಿಷಯವನ್ನು ಕೇಳಿದ್ದ. ಆಗ ದೆಹಲಿಯ ಸುಲ್ತಾನನಾಗಿದ್ದ ಜಲಾಲುದ್ದೀನ್ ಖಿಲ್ಜಿ ತನ್ನ ಅಳಿಯ ಅಲಾಉದ್ದೀನನಿಗೆ ಮಾಳ್ವದವರೆಗೆ ಮಾತ್ರ ದಂಡೆತ್ತಿಹೋಗಲು ಅಪ್ಪಣೆ ಕೊಟ್ಟಿದ್ದರೂ ಅದಕ್ಕೆ ವಿರುದ್ಧವಾಗಿ ಅಲ್ಲಾಉದ್ದೀನ್ ಇನ್ನೂ ಮುಂದೆ ಹೋಗಿ ಯಾದವರ ರಾಜಧಾನಿ ದೇವಗಿರಿಗೆ ಮುತ್ತಿಗೆ ಹಾಕಿದ (1296ರ ಫೆಬ್ರವರಿ). ಅಲ್ಲಿನ ರಾಜ ರಾಮಚಂದ್ರನಿಗೆ ಅಲ್ಲಾಉದ್ದೀನನ ಈ ದಂಡಯಾತ್ರೆ ಆಕಸ್ಮಿಕ ಘಟನೆಯಾಗಿತ್ತು. ಆಗ ದೇವಗಿರಿಯ ಸೈನ್ಯ ದೂರದ ಮತ್ತೊಂದು ಪ್ರದೇಶದಲ್ಲಿ ಕಾರ್ಯಾಚರಣೆ ಮಾಡುತ್ತಿತ್ತು. ಒಂದು ವಾರದವರೆಗೆ ಅಲ್ಲಾಉದ್ದೀನ್ ದೇವಗಿರಿಯ ಕೋಟೆಗೆ ಮುತ್ತಿಗೆ ಹಾಕಿದ ಮೇಲೆ ರಾಮಚಂದ್ರ ಶಾಂತಿ ಒಪ್ಪಂದಕ್ಕೆ ಒಪ್ಪಿಕೊಳ್ಳಬೇಕಾಯಿತು. ಅಪಾರ ಐಶ್ವರ್ಯ, ಕುದುರೆಗಳು, ಆನೆಗಳು ಅಲ್ಲಾಉದ್ದೀನನ ವಶವಾದವು. ರಾಮಚಂದ್ರ ತನ್ನ ಮಗಳನ್ನು ಅಲ್ಲಾಉದ್ದೀನನಿಗೆ ಮದುವೆ ಮಾಡಿಕೊಟ್ಟ. ರಾಮಚಂದ್ರನ ಮಗ 3ನೆಯ ಸಿಂಘಣನಿಗೆ ಅಲ್ಲಾಉದ್ದೀನ್ ದೇವಗಿರಿಯನ್ನು ಮುತ್ತಿದ ವಿಷಯ ತಿಳಿದು ಅವನು ತನ್ನ ಸೈನ್ಯದೊಡನೆ ಬಂದಾಗ, ಅವನ ತಂದೆ ಶತ್ರುವಿನ ಕೈಯಲ್ಲಿದ್ದುದನ್ನು ಕಂಡ. ಸಿಂಘಣ ಸಹ ಅಲ್ಲಾಉದ್ದೀನನಿಗೆ ಮಣಿಯಬೇಕಾಯಿತು. ಅನಂತರ ಅಲ್ಲಾಉದ್ದೀನ್ ರಾಮಚಂದ್ರನಿಗೆ ರಾಜ್ಯವನ್ನು ಹಿಂತಿರುಗಿಸಿದ. ಇಬ್ಬರೂ ಆಜೀವಪರ್ಯಂತ ಸ್ನೇಹಿತರಾಗಿ ಉಳಿಯುವ ಒಪ್ಪಂದಕ್ಕೆ ಬಂದರು.

ದೇವಗಿರಿಯಿಂದ ಲೂಟಿ ಹೊಡೆದುಕೊಂಡು ಹೋದ ಐಶ್ವರ್ಯವನ್ನು ಉಪಯೋಗಿಸಿಕೊಂಡು ಜಲಾಲುದ್ದೀನನನ್ನು ಕೊಲೆ ಮಾಡಿ ಅಲ್ಲಾಉದ್ದೀನನೇ ಮುಂದೆ ದೆಹಲಿಯ ಸುಲ್ತಾನನಾದ. ಆದರೂ ಅವನ ಹಣದ ದಾಹ ಹಿಂಗಲಿಲ್ಲ. ಮತ್ತೆ ದಾಳಿ ಮಾಡಲು ಸನ್ನಾಹ ನಡೆಸಿದ.

1303– 04ರಲ್ಲಿ ಬಂಗಾಲದ ಮಾರ್ಗವಾಗಿ ವಾರಂಗಲ್ಲಿನ ವಿರುದ್ಧ, ಮಲಿಕ್ ಫಕ್ರುದ್ದೀನ್ ಎಂಬ ದಂಡನಾಯಕನ ನೇತೃತ್ವದಲ್ಲಿ ಕಳುಹಿಸಿಕೊಟ್ಟ ಅಲ್ಲಾಉದ್ದೀನನ ಸೈನ್ಯಕ್ಕೆ ತೆಲುಗರಿಂದ ಅಪಾರವಾದ ನಷ್ಟವಾದ ಸಂದರ್ಭದಲ್ಲಿ, ಕರ್ನಾಟಕದ ದೊರೆಗಳಿಗೆ ಸುಲ್ತಾನನ ಬಗ್ಗೆ ಇದ್ದ ಭೀತಿ ಸ್ವಲ್ಪ ಕಡಿಮೆಯಾಗುವಂತಾಯಿತು. ಈ ಘಟನೆಯಿಂದ ಸ್ಫೂರ್ತಿ ಪಡೆದ ದೇವಗಿರಿಯ ರಾಮಚಂದ್ರದೇವನ ಮಗ ಸಿಂಘಣ ತನ್ನ ತಂದೆ ಅಲ್ಲಾಉದ್ದೀನನಿಗೆ ಕೊಡುವುದಾಗಿ ಒಪ್ಪಿದ್ದ ಕಪ್ಪಕಾಣಿಕೆಯನ್ನು ಕೊಡಲು ನಿರಾಕರಿಸಿದುದೇ ಅಲ್ಲದೆ, ಗುಜರಾತಿನ ರಾಜ ಮತ್ತು ಆತನ ಮಗಳಿಗೆ ಆಶ್ರಯ ಕೊಡುವ ದಿಟ್ಟತನವನ್ನು ತೋರಿಸಿದ. ಆದರೆ ರಾಮಚಂದ್ರದೇವ ಈ ಕ್ರಮಕ್ಕೆ ಬೆಂಬಲಕೊಡಲಿಲ್ಲ. 1307ರಲ್ಲಿ ಅಲ್ಲಾಉದ್ದೀನ್ ತನ್ನ ಅಪ್ತಸೇವಕ ಹಾಗೂ ಗುಲಾಮನಾದ ಮಲಿಕ್ ಕಾಫೂರ್‌ನನ್ನು ದೇವಗಿರಿಗೆ ಕಳುಹಿಸಿಕೊಟ್ಟ. ದೇವಗಿರಿಯ ಹತ್ತಿರ ನಡೆದ ಯುದ್ಧದಲ್ಲಿ ಸಿಂಘಣ ಸೋತು ಓಡಿಹೋದ. ಮಲಿಕ್ ಕಾಫೂರ್ ದೇವಗಿರಿಯನ್ನು ಲೂಟಿಮಾಡಿದ. ತನ್ನ ಸ್ವಾಮಿಯ ಹೆಸರಿನಲ್ಲಿ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡು ರಾಮಚಂದ್ರನನ್ನು ಅವನ ಕುಟುಂಬ ಸಮೇತ ದೆಹಲಿಗೆ ಖೈದಿಯಾಗಿ ಕರೆದುಕೊಂಡು ಹೋದ. ಅಲ್ಲಾಉದ್ದೀನ್ ಖಿಲ್ಜಿ ರಾಮಚಂದ್ರನನ್ನು ಮರ್ಯಾದೆಯಿಂದ ನೋಡಿಕೊಂಡ. ಸುಮಾರು ಆರು ತಿಂಗಳುಗಳ ಕಾಲ ದೆಹಲಿಯಲ್ಲಿ ಅವನನ್ನು ಅತಿಥಿಯಾಗಿ ಇಟ್ಟುಕೊಂಡು ಅನಂತರ ಪುರಸ್ಕರಿಸಿ ವಾಪಸ್ಸು ದೇವಗಿರಿಗೆ ಕಳುಹಿಸಿಕೊಟ್ಟ. ರಾಮಚಂದ್ರ ಧನಕನಕ ವಸ್ತು ವಾಹನಾದಿಗಳನ್ನು ಅಲ್ಲಾಉದ್ದೀನನಿಂದ ಸ್ವೀಕರಿಸಿದುದೇ ಅಲ್ಲದೆ, ತನ್ನ ರಾಜ್ಯವನ್ನೂ ಮರಳಿ ಪಡೆದ. ಅಲ್ಲಾಉದ್ದೀನ್ ಗುಜರಾತಿನ ಕೆಲವು ಪ್ರದೇಶಗಳನ್ನೂ ಇವನಿಗೆ ಬಿಟ್ಟುಕೊಟ್ಟ. ಅಲ್ಲಾಉದ್ದೀನನ ಈ ಔದಾರ್ಯದ ನೀತಿ ಅವನಿಗೆ ಫಲ ತಂದುಕೊಟ್ಟಿತು. ತನ್ನ ಅವಸಾನದವರೆಗೂ ರಾಮಚಂದ್ರ ಅಲ್ಲಾಉದ್ದೀನನಿಗೆ ಬೆಂಬಲಿಗನಾಗಿ ನಿಂತ. ದಕ್ಷಿಣದ ದಂಡಯಾತ್ರೆಗಳಲ್ಲಿ ರಾಮಚಂದ್ರನ ಸಹಾಯ ಅಲ್ಲಾಉದ್ದೀನನಿಗೆ ಬಹಳ ಅವಶ್ಯವಾಗಿದ್ದಿತು. ಅದರಲ್ಲೂ ಕರ್ನಾಟಕದ ಹೊಯ್ಸಳರ ವಿರುದ್ಧ ದಂಡೆತ್ತಿಬಂದ ಸಂದರ್ಭದಲ್ಲಿ ಈ ಸ್ನೇಹ ಅಲ್ಲಾಉದ್ದೀನನಿಗೆ ವರವಾಗಿ ಬಂತು.

1309ರಲ್ಲಿ ವಾರಂಗಲ್ಲಿನ ವಿರುದ್ಧ ಮತ್ತೊಂದು ದಂಡಯಾತ್ರೆ ನಡೆಸಿ ಜಯಶೀಲನಾದ ಮೇಲೆ ಅಲ್ಲಾಉದ್ದೀನನ ಕಣ್ಣು ಹೊಯ್ಸಳರ ಮತ್ತು ಪಾಂಡ್ಯರ ಮೇಲೆ ಬಿತ್ತು. 1310ರಲ್ಲಿ ಮಲಿಕ್ ಕಾಫೂರ್ ಮತ್ತು ಖ್ವಾಜಾ ಹಾಜಿ ಇವರ ನಾಯಕತ್ವದಲ್ಲಿ ಒಂದು ದೊಡ್ಡ ಸೇನೆಯನ್ನು ಕಳುಹಿಸಿಕೊಡಲಾಯಿತು. ಹೊಯ್ಸಳರ ವಿರುದ್ಧ ನಡೆದ ಈ ದಂಡಯಾತ್ರೆಗೆ ದೇವಗಿರಿಯೇ ಕೇಂದ್ರವಾಯಿತು. ಅಲ್ಲಾಉದ್ದೀನನಿಗೆ ನಿಷ್ಠೆಯಿಂದಿದ್ದ ರಾಮಚಂದ್ರ ಸಂತೋಷದಿಂದಲೇ ಈ ದಂಡಯಾತ್ರೆಗೆ ಸಹಾಯ ಮಾಡಿದ. ಮೂರನೆಯ ಬಲ್ಲಾಳ ಪಾಂಡ್ಯರಾಜ್ಯಕ್ಕೆ ಹೋದ ಸಂದರ್ಭವನ್ನು ಉಪಯೋಗಿಸಿಕೊಂಡು ಮಲಿಕ್ ಕಾಫೂರ್ ದೋರಸಮುದ್ರದ ಕಡೆ ಹೊರಟ. ದೇವಗಿರಿಯಿಂದ ದೋರಸಮುದ್ರದವರೆಗೂ ಸಿಕ್ಕಿದ ಸ್ಥಳಗಳನ್ನೆಲ್ಲಾ ಲೂಟಿ ಮಾಡುತ್ತ, ನಾಶ ಮಾಡುತ್ತ ನಡೆದ. 1311 ಫೆಬ್ರವರಿ 16ರಂದು ದೋರಸಮುದ್ರವನ್ನು ಮುತ್ತಿದ. ಅಲ್ಲಿನ ಐಶ್ವರ್ಯವನ್ನು ಸೂರೆ ಮಾಡಿದ. ತನ್ನ ರಾಜಧಾನಿ ಮುಸ್ಲಿಮರ ದಾಳಿಗೆ ತುತ್ತಾದ ವಿಷಯ ತಿಳಿದು ತಕ್ಷಣ ಪಾಂಡ್ಯದೇಶದಿಂದ ಬಲ್ಲಾಳ ಓಡಿಬಂದ. ಮುಸಲ್ಮಾನರ ಸೈನ್ಯದ ಮುಂದೆ ತನ್ನವರ ಪಾಡು ನೆಟ್ಟಗಾಗದೆಂದು ಯೋಚಿಸಿ ಮೂರನೆಯ ಬಲ್ಲಾಳ ಒಪ್ಪಂದ ಮಾಡಿಕೊಳ್ಳಲು ಯೋಚಿಸಿದ.

ಆದರೆ ಅವನ ಮಂತ್ರಿಗಳು, ದಂಡನಾಯಕರು ಅಲ್ಲಾಉದ್ದೀನನ ಸೈನ್ಯದ ವಿರುದ್ಧ ಹೋರಾಟ ನಡೆಸಬೇಕೆಂದು ಅಭಿಪ್ರಾಯಪಟ್ಟರು. ಸಾಕಷ್ಟು ಸಿದ್ಧತೆ ನಡೆಸದೆ ಇದ್ದುದರಿಂದಲೂ ಹಾಗೂ ಮುಸ್ಲಿಮರ ಸೈನ್ಯಬಲ ಹೆಚ್ಚಿದ್ದರಿಂದಲೂ ಯುದ್ಧಮಾಡುವುದು ಮೂರ್ಖತನವೆಂದು ಗ್ರಹಿಸಿ ಬಲ್ಲಾಳ ಶಾಂತಿ ಒಪ್ಪಂದ ಮಾಡಿಕೊಳ್ಳಲು ನಿಶ್ಚಯಿಸಿದ. ಇದರಿಂದ ಬಂದಿದ್ದ ಗಂಡಾಂತರ ಪರಿಹಾರವಾದಂತಾಯಿತು ಹಾಗೂ ಹೆಚ್ಚಿನ ನಷ್ಟ ಸಾವುನೋವುಗಳನ್ನು ತಪ್ಪಿಸಿದಂತಾಯಿತು. ಮೂರನೆಯ ಬಲ್ಲಾಳ ಅಲ್ಲಾಉದ್ದೀನನಿಗೆ ಕಪ್ಪಕಾಣಿಕೆಗಳನ್ನು ಅರ್ಪಿಸಿ ಸಾಮಂತನಾಗಿ ಇರಲು ಒಪ್ಪಿದ. ತನ್ನ ಐಶ್ವರ್ಯ ಆನೆ ಕುದುರೆಗಳನ್ನು ಸುಲ್ತಾನನಿಗೆ ಕೊಟ್ಟ. ಸುಮಾರು ಹದಿನೈದು ದಿವಸಗಳ ಕಾಲ ಮಲಿಕ್ ಕಾಫೂರ್ ದೋರ ಸಮುದ್ರದಲ್ಲಿ ತಂಗಿದ್ದ. ಅನಂತರ ಅವನು ಪಾಂಡ್ಯ ರಾಜ್ಯದ ಮೇಲೆ ದಂಡೆತ್ತಿಹೋದ. ಮೂರನೆಯ ಬಲ್ಲಾಳನೂ ಅವನಿಗೆ ಸಹಾಯಕನಾಗಿ ನಡೆದ. ಅಕ್ಟೋಬರ್ 1311ರಲ್ಲಿ ದೆಹಲಿಗೆ ವಾಪಸ್ಸು ಹೋಗುವಾಗ ಮಲಿಕ್ ಕಾಫೂರ್ ತನ್ನೊಡನೆ ಮೂರನೆಯ ಬಲ್ಲಾಳನ ಮಗನನ್ನು ಕರೆದುಕೊಂಡು ಹೋಗಿದ್ದ. ಮೂರನೆಯ ಬಲ್ಲಾಳನ ಮಗನನ್ನು ಅಲ್ಲಾಉದ್ದೀನನಿಗೆ ಪರಿಚಯ ಮಾಡಿಕೊಡುತ್ತ, ಅವನ ತಂದೆಯಿಂದ ತನ್ನ ದಂಡಯಾತ್ರೆಯ ಕಾಲದಲ್ಲಾದ ಸಹಾಯವನ್ನು ವಿವರಿಸಿದ. ಬಲ್ಲಾಳನ ಮಗನನ್ನು ಗೌರವದಿಂದ ನೋಡಿಕೊಂಡ ಅಲ್ಲಾಉದ್ದೀನ್ ಅವನನ್ನು ದೋರಸಮುದ್ರಕ್ಕೆ ವಾಪಸ್ಸು ಕಳುಹಿಸಿಕೊಟ್ಟ. ಬಲ್ಲಾಳನಿಗೆ ಅವನ ರಾಜ್ಯವನ್ನು ಹಿಂತಿರುಗಿಸಿದ.

1312ರಲ್ಲಿ ರಾಮಚಂದ್ರ ಮರಣಹೊಂದಿದ ಮೇಲೆ ಅವನ ಮಗ ಸಿಂಘಣ ಸಿಂಹಾಸನವನ್ನೇರಿದ. ದೆಹಲಿಗೆ ತಲೆಬಾಗಿ ನಡೆಯಲು ಅಸಮ್ಮತಿಸಿದಾಗ, ಅವನನ್ನು ಶಿಕ್ಷಿಸಿ ಹದಕ್ಕೆ ತರಲು ಮಲಿಕ್ ಕಾಫೂರನನ್ನು ಮತ್ತೆ ಕಳುಹಿಸಿಕೊಡಲಾಯಿತು. ಅವನು ಬರುತ್ತಿದ್ದ ಹಾಗೆ ಸಿಂಘಣ ಓಡಿಹೋದ. ಮಲಿಕ್ ಕಾಫೂರ್ ಅಲ್ಲಿಯೇ ನಿಂತು ರಾಜ್ಯಾಡಳಿತವನ್ನು ಪುನಃ ಸಂಘಟಿಸಿದ. ದೇವಗಿರಿಯ ಸರದಾರರ ಸಲಹೆ ತೆಗೆದುಕೊಂಡ. ಆದರೆ ಯಾದವರ ಸಾಮಂತನಾಗಿದ್ದ ಸಿಂಗೆಯನಾಯಕ ಈ ಹೊಸ ಆಡಳಿತವನ್ನು ಒಪ್ಪಿಕೊಳ್ಳಲಿಲ್ಲ. ಕರ್ನಾಟಕದ ಇಂದಿನ ಬಳ್ಳಾರಿ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳನ್ನೊಳಗೊಂಡಂತೆ ಇರುವ ಭಾಗದಲ್ಲಿ ತನ್ನದೇ ಸ್ವತಂತ್ರ ರಾಜ್ಯವನ್ನು ಅವನು ಸ್ಥಾಪಿಸಿದ. ಕಂಪಿಲಿ, ಕುಮ್ಮಟ ಮತ್ತು ಹೊಸದುರ್ಗ (ಆನೆಗೊಂದಿ) ಎಂಬಲ್ಲಿ ಕೋಟೆಗಳನ್ನು ಕಟ್ಟಿದ. ಮಲಿಕ್ ಕಾಫೂರ್ ಕಂಪಿಲಿಯ ವಿರುದ್ಧ ದಾಳಿ ನಡೆಸಲು ಯತ್ನಿಸಿದ. ಅದು ಕೈಗೂಡುವ ಮೊದಲೇ ದೆಹಲಿಯಿಂದ ಕರೆ ಬಂದಿದ್ದ ರಿಂದ ವಾಪಸ್ಸು ಹೋಗಬೇಕಾಯಿತು.

ಐಶ್ವರ್ಯವನ್ನು ಕೊಳ್ಳೆಹೊಡೆಯುವುದೇ ಅಲ್ಲಾಉದ್ದೀನನ ದಕ್ಷಿಣ ದಂಡಯಾತ್ರೆಗಳ ಉದ್ದೇಶವಾಗಿತ್ತು. ಅವನ ಈ ಯತ್ನ ಕರ್ನಾಟಕದಲ್ಲಿ ಸಫಲವಾಯಿತು. ಮುಸ್ಲಿಂ ಇತಿಹಾಸಕಾರರಾದ ಬರಾನಿ, ಇಸಾಮಿ ಮತ್ತು ಫೆರಿಸ್ತ ಈ ದಂಡಯಾತ್ರೆಗಳ ವಿಷಯವನ್ನು ಬಹು ವಿಸ್ತಾರವಾಗಿ ವಿವರಿಸಿದ್ದಾರೆ. ಕರ್ನಾಟಕವೂ ಸೇರಿದಂತೆ, ದಕ್ಷಿಣದಲ್ಲಿ ಅಲ್ಲಾಉದ್ದೀನನು ತನ್ನ ದಂಡಯಾತ್ರೆಗಳಿಂದ 600 ಮಣ ಚಿನ್ನ, 7 ಮಣ ಮುತ್ತು, 2 ಮಣ ವಜ್ರವೈಡೂರ್ಯಗಳು, 1,000 ಮಣ ಬೆಳ್ಳಿ, 4,000 ರೇಷ್ಮೆ ಮೊದಲಾದ ವಸ್ತ್ರಗಳನ್ನು ಕೊಳ್ಳೆಹೊಡೆದನೆಂದು ಫೆರಿಸ್ತ ಹೇಳುತ್ತಾನೆ.

(ಬಿ.ಎಸ್.ಪಿ.;ಕೆ.ಎಸ್.ಎಸ್.)

ಅಲ್ಲಾಉದ್ದೀನ್ ಖಿಲ್ಜಿಯ ಮರಣಾನಂತರ ಸಂಭವಿಸಿದ ರಾಜಕೀಯ ಅಲ್ಲೋಲ್ಲ ಕಲ್ಲೋಲದಲ್ಲಿ ದೇವಗಿರಿ ದೆಹಲಿಯಿಂದ ಬೇರ್ಪಟ್ಟು ಸ್ವತಂತ್ರವಾಯಿತು. ಆದರೆ ತಕ್ಷಣವೇ ಮುಬಾರಕ್ ಷಾ ಖಿಲ್ಜಿ ಶಾಂತಿಯನ್ನು ಏರ್ಪಡಿಸಿ, ದಕ್ಷಿಣದತ್ತ ನುಗ್ಗಿ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಯತ್ನಿಸಿದ. ಆ ಹೊತ್ತಿಗೆ ದೇವಗಿರಿಯಲ್ಲಿ ಪ್ರಬಲನಾಗಿದ್ದ ಹರಪಾಲದೇವ ನನ್ನು ಅವನು ಸೋಲಿಸಿ ಕೊಂದು, ಯಾದವ ಮನೆತನದ ಆಳ್ವಿಕೆಯನ್ನು ಕೊನೆಗಾಣಿಸಿ, ದೆಹಲಿ ಸಾಮ್ರಾಜ್ಯಕ್ಕೆ ದೇವಗಿರಿಯನ್ನು ಸೇರಿಸಿದ. ಆಡಳಿತವನ್ನು ಪುನರ್ ರಚಿಸಿದ. ಮಲಿಕ್ ಮಾನ್‌ಲಖಿ ಎಂಬುವನನ್ನು ಪ್ರತಿನಿಧಿಯಾಗಿ ನೇಮಿಸಿದ. ಕೋಟೆಗಳನ್ನು ಕಟ್ಟಿ ಭದ್ರತೆ ಶಿಸ್ತುಗಳನ್ನು ಏರ್ಪಡಿಸಿದ. ಹೊಯ್ಸಳರ ರಾಜಧಾನಿಯಲ್ಲೂ ಒಂದು ಸೈನ್ಯವನ್ನು ಇಡುವ ಅವನ ಪ್ರಯತ್ನ ಸಫಲವಾಗಲಿಲ್ಲ. ಒಟ್ಟಿನಲ್ಲಿ ಇದು ಅಲ್ಲಾಉದ್ದೀನ್ ಅನುಸರಿಸಿದ ನೀತಿಗಿಂತಲೂ ಭಿನ್ನವಾಗಿತ್ತು.

1320ರಲ್ಲಿ ಅಧಿಕಾರಕ್ಕೆ ಬಂದ ತುಗಲಕರು ಈ ನೀತಿಯನ್ನು ಮತ್ತಷ್ಟು ದೂರ ಕೊಂಡೊಯ್ದರು. ದೆಹಲಿಯ ಪ್ರಾಬಲ್ಯವನ್ನು ಬಲಪಡಿಸುವ ಸಲುವಾಗಿ, ರಾಜಕುಮಾರ ಉಲುಗ್‌ಖಾನ್‌ನನ್ನು 1323ರಲ್ಲಿ ದಖನ್ನಿಗೆ ಕಳುಹಿಸಿಕೊಂಡಲಾಯಿತು. ಅವನು ಕಾಕತೀಯರನ್ನು ಸದೆಬಡಿದು, ಅವರ ರಾಜ್ಯವನ್ನು ವಶಪಡಿಸಿಕೊಂಡ. ಈ ಮಧ್ಯದಲ್ಲೇ ಬಿದರೆಯನ್ನೂ ಅವನು ವಶಪಡಿಸಿಕೊಂಡ. ಮಾಬರ್ ಪ್ರಾಂತ್ಯದ ಮೇಲೆ ದೆಹಲಿಯ ಪ್ರಾಬಲ್ಯವನ್ನು ಸ್ಥಾಪಿಸಲು ಒಬ್ಬ ರಾಜ್ಯಪಾಲನನ್ನು ನೇಮಿಸಲಾಯಿತು. ಆ ಕಾಲಕ್ಕಾಗಲೇ ದಕ್ಷಿಣ ಭಾರತದ ಹೆಚ್ಚಿನ ಪ್ರದೇಶ ದೆಹಲಿ ಸಾಮ್ರಾಜ್ಯಕ್ಕೆ ಸೇರಿಹೋಗಿತ್ತು. ಆದರೆ ಕರ್ನಾಟಕದಲ್ಲಿ ಕಂಪಿಲಿ ಮತ್ತು ದೋರಸಮುದ್ರ ಗಳು ಸ್ವತಂತ್ರವಾಗಿದ್ದವು. ಕಂಪಿಲದೇವ ಕರ್ನಾಟಕದಲ್ಲಿ ಮುಸಲ್ಮಾನರ ವಿರೋಧಿಯಾಗಿದ್ದ. ಹೊಯ್ಸಳರೊಡನೆ ಅವನು ನಡೆಸುತ್ತಿದ್ದ ಕದನಗಳಿಂದ ಅವನಿಗೆ ತೊಂದರೆಯಾಗುತ್ತಿತ್ತಾದರೂ ಬಳ್ಳಾರಿಯ ಸುತ್ತಮುತ್ತಣ ಪ್ರದೇಶದಲ್ಲಿ ತನ್ನ ಚಿಕ್ಕದಾದ ಹಾಗೂ ಪ್ರಬಲವಾದ ರಾಜ್ಯವನ್ನು ಅವನು ಕಟ್ಟಿದ. ದೆಹಲಿಯ ಸುಲ್ತಾನನಿಗೆ ಕಪ್ಪ ಕೊಡಲು ನಿರಾಕರಿಸಿ, ಬಹಾಉದ್ದೀನ್ ಗುರ್ಷಾಸ್ಪ್‌ನೊಡನೆ ಸ್ನೇಹಸಂಬಂಧಗಳನ್ನು ಏರ್ಪಡಿಸಲು ಪ್ರಯತ್ನಿಸಿದ. ಭಾರತದಲ್ಲಿ ಆಡಳಿತ ಏಕತೆಯನ್ನುಂಟು ಮಾಡುವ ಆಲೋಚನೆಯಲ್ಲಿದ್ದ ಮಹಮ್ಮದ್ ಬಿನ್ ತುಗಲಕ್ ಕರ್ನಾಟಕದ ವ್ಯವಹಾರಗಳಲ್ಲಿ ಹೆಚ್ಚು ಹೆಚ್ಚಾಗಿ ಪ್ರವೇಶಿಸುವಂತಾಯಿತು. ತನ್ನ ಸಂಬಂಧಿಯೂ ಸಾಗರದ ಗೌರ್ನರ್‌ನೂ ಆಗಿದ್ದ ಬಹಾಉದ್ದೀನ್ ಗುರ್ಷಾಸ್ಪ್‌ನನ್ನು ಗುಲ್ಬರ್ಗದ ಸುತ್ತಮುತ್ತಲಿನ ಪ್ರದೇಶಕ್ಕೆ ರಾಜ್ಯಪಾಲನನ್ನಾಗಿ ನೇಮಕ ಮಾಡಿದ್ದರ ಅವನ ಉದ್ದೇಶವೆಂದರೆ, ದೆಹಲಿ ಸಾಮ್ರಾಜ್ಯದ ನೇರವಾದ ಹತೋಟಿಗೆ ಕರ್ನಾಟಕವನ್ನು ಒಳಪಡಿಸಬೇಕೆಂಬುದೇ ಆಗಿತ್ತು. ಆದರೆ ಅವನು ಕಂಪಿಲದೇವನೊಡಗೂಡಿ ದಂಗೆ ಎದ್ದ. ಇದರಿಂದ ಸುಲ್ತಾನ ದಕ್ಷಿಣದ ಕಡೆ ಸೈನ್ಯಸಮೇತನಾಗಿ ನುಗ್ಗಿ ದೇವಗಿರಿಯ ಬಳಿ ಬೀಡುಬಿಟ್ಟ. ಗುರ್ಷಾಸ್ಪ್ ವೀರಾವೇಶದಿಂದ ದೆಹಲಿ ಸೈನ್ಯದ ವಿರುದ್ಧ ಹೋರಾಡಿದರೂ ತನ್ನ ಕಡೆಯವನೊಬ್ಬ ದೆಹಲಿ ಕಡೆ ಸೇರಿಕೊಂಡಿದ್ದ ರಿಂದ, ಅವನ ಹೋರಾಟ ವಿಫಲವಾಯಿತು. ಅವನು ತನ್ನ ಕುಟುಂಬದೊಡನೆ ಕಂಪಿಲದೇವನ ಆಶ್ರಯವನ್ನು ಪಡೆದ. ಧೀಮಂತನಾಯಕ ನಾಗಿದ್ದ ಕಂಪಿಲ ಅವನಿಗೆ ಬೇಕಾದ ಆಶ್ರಯವನ್ನು ನೀಡಿದ. ಇದರಿಂದ ಅವನೇ ಅವನ ನಾಶಕ್ಕೆ ಅಡಿಪಾಯ ಹಾಕಿಕೊಂಡಂತಾಯಿತು. ಇವರ ವಿರುದ್ಧವಾಗಿ ಮಹಮ್ಮದ್ ಬಿನ್ ತುಗಲಕ್ ಮೂರು ಬಾರಿ ಸೈನ್ಯವನ್ನು ಕಳುಹಿಸಿಕೊಟ್ಟ. ಈ ದಾಳಿಗಳನ್ನು ತಡೆಯಲಾರದೆ ಅವರು ಕುಮ್ಮಟಕ್ಕೆ ಓಡಿಹೋದರು. ಸುಲ್ತಾನನ ಸೇನೆ ಅದನ್ನೂ ಮುತ್ತಿತು. ಗುರ್ಷಾಸ್ಪ್ ಅಲ್ಲಿಂದ ಹೊಸದುರ್ಗಕ್ಕೆ (ಆನೆಗೊಂದಿ) ಓಡಿಹೋದಾಗಲೂ ಸುಲ್ತಾನನ ಸೇನೆ ಅವನನ್ನು ಬೆನ್ನಟ್ಟಿ ಬಂತು. ಒಂದು ತಿಂಗಳು ಕಾಲ ಹೊಸದುರ್ಗ ಕೋಟೆಯನ್ನು ರಕ್ಷಿಸಲು ಹೋರಾಟ ನಡೆಸಿದರೂ ಸಫಲವಾಗದೆ

ಕೈಬಿಟ್ಟ. ಕಂಪಿಲದೇವ ಗುರ್ಷಾಸ್ಪ್‌ನನ್ನು ಮೂರನೆಯ ಬಲ್ಲಾಳನ ಆಶ್ರಯಕ್ಕೆ ಕಳುಹಿಸಿಕೊಟ್ಟು, ತನ್ನ ಎಲ್ಲಾ ಐಶ್ವರ್ಯವನ್ನೂ ಹೆಂಡತಿಯರನ್ನೂ ಹೆಣ್ಣುಮಕ್ಕಳನ್ನೂ ಬೆಂಕಿಗೆ ತಳ್ಳಿ, ತಾನು ಮಾತ್ರ ಕೊನೆಯವರೆಗೂ ರಣರಂಗದಲ್ಲಿ ಹೋರಾಡುತ್ತ ಮಡಿದ. ಅವನ ಹನ್ನೊಂದು ಮಂದಿ ಗಂಡು ಮಕ್ಕಳನ್ನು ಸೆರೆಹಿಡಿದು ಸುಲ್ತಾನನ ಬಳಿ ಕರೆದುಕೊಂಡು ಹೋದಾಗ, ಅವನು ಅವರ ವಂಶವನ್ನು ಗಣನೆಗೆ ತಂದುಕೊಂಡು, ಅವರನ್ನು ಒಳ್ಳೆಯ ಮರ್ಯಾದೆಯಲ್ಲಿ ನಡೆಸಿಕೊಂಡ. ಅವರ ರಾಜ್ಯವನ್ನು ವಶಪಡಿಸಿಕೊಂಡು, ಮಲಿಕ್ ನಾಯಿಬ್ ಎಂಬುವನನ್ನು ಅದರ ಆಡಳಿತಾಧಿಕಾರಿಯಾಗಿ ನೇಮಿಸಿದ.

ದೆಹಲಿ ಸೇನೆ ಹೊಯ್ಸಳರ ರಾಜಧಾನಿ ದೋರಸಮುದ್ರವನ್ನು ಮುತ್ತಿದಾಗ, ಈ ಹಿಂದೆಯೇ ಕಠಿಣ ಅನುಭವದ ರುಚಿಯನ್ನು ಅನುಭವಿಸಿದ ಮೂರನೆಯ ಬಲ್ಲಾಳ, ತನ್ನ ಆಶ್ರಯದಲ್ಲಿದ್ದ ಗುರ್ಷಾಸ್ಪ್‌ನನ್ನು ಸುಲ್ತಾನನಿಗೆ ಒಪ್ಪಿಸಿದ. ಗುರ್ಷಾಸ್ಪ್‌ನನ್ನು ಬಿಟ್ಟುಕೊಟ್ಟರೂ ಬಲ್ಲಾಳ ತನ್ನ ರಾಜ್ಯದ ಅನೇಕ ಭಾಗಗಳನ್ನು ಕಳೆದುಕೊಳ್ಳಬೇಕಾಯಿತು.

ಗುರ್ಷಾಸ್ಪ್‌ನ ಪ್ರಕರಣದಿಂದ ಸುಲ್ತಾನನು ಸಾಮ್ರಾಜ್ಯದ ರಾಜಧಾನಿ ಕೇಂದ್ರ ಭಾಗದಲ್ಲಿರಬೇಕಾದ ಆವಶ್ಯಕತೆಯನ್ನು ಮನಗಂಡು ದೇವಗಿರಿಗೆ ಅದನ್ನು ಬದಲಾಯಿಸಿದ. ದೇವಗಿರಿ, ತೆಲಂಗಾಣ, ಕಂಪಿಲಿ, ದೋರಸಮುದ್ರ ಮತ್ತು ಮಾಬರ್‌ಗಳೆಂಬ ಐದು ಪ್ರಾಂತ್ಯಗಳನ್ನು ದಕ್ಷಿಣದಲ್ಲಿ ರಚಿಸಿ, ಅವುಗಳ ಆಡಳಿತವನ್ನು ಸಾದಾ ಅಮೀರ್‌ರೆಂಬ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ. ನಾಯಿಬ್ ಎಂಬ ಗೌರ್ನರ್‌ಗಳನ್ನು ಪ್ರತಿ ಪ್ರಾಂತ್ಯದ ಮೇಲೂ ನೇಮಿಸಿದ. ಕೊತ್ವಾಲನೆಂಬ ಅಧಿಕಾರಿಯೂ ಇದ್ದ.

ದೆಹಲಿ ಸುಲ್ತಾನರ ಕರ್ನಾಟಕದ ಮೇಲಿನ ದಾಳಿ ಅಷ್ಟೇನೂ ಮಹತ್ವಪೂರ್ಣವಾಗಿರಲಿಲ್ಲ. 30 ವರ್ಷಗಳ ಕಾಲದ ಅವಧಿಯಲ್ಲಿ ಅವರು ಬಿಟ್ಟು ಬಿಟ್ಟು ದಾಳಿ ನಡೆಸಿದರು. ಮಹಮ್ಮದ್ ಬಿನ್ ತುಗಲಕ್ ಮಾತ್ರ ಒಂದು ದಶಕದಷ್ಟು ಕಾಲ (1324– 35) ಕರ್ನಾಟಕದ ಕೆಲವು ಭಾಗಗಳನ್ನು ತನ್ನ ಬಿಗಿಯಾದ ಹತೋಟಿಯಲ್ಲಿಟ್ಟುಕೊಂಡ. ಆದರೆ ಅವನು ಉತ್ತರದ ಕಡೆ ಹೊರಟ ತಕ್ಷಣ ದಕ್ಷಿಣದಲ್ಲಿ ದಂಗೆಗಳು ನಡೆದವು. ಹರಿಹರ ಮತ್ತು ಬುಕ್ಕ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಒಂದು ದಶಕದ ಅನಂತರ ಬಹಮನೀ ರಾಜ್ಯ ತಲೆ ಎತ್ತಿತು. ಕರ್ನಾಟಕವನ್ನು ಉತ್ತರದೊಡನೆ ಸಂಪರ್ಕಿಸಿದ್ದು ಈ ದಾಳಿಗಳ ಒಂದು ಒಳ್ಳೆಯ ಪರಿಣಾಮವೆನ್ನಬಹುದು. ರಾಜಕೀಯವಾಗಿ ಕರ್ನಾಟಕವನ್ನು ನಿಯಂತ್ರಿಸುವ ಯತ್ನ ಒಂದು ತಾತ್ಕಾಲಿಕ ಘಟ್ಟವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ಈ ದಾಳಿಗಳು ಪರಸ್ಪರ ವಿನಿಮಯಕ್ಕೆ ಅವಕಾಶವನ್ನುಂಟುಮಾಡಿದವು. ಭಾಷೆ ಸಂಪ್ರದಾಯ ಆಚಾರ ವಿಚಾರ ಕಲೆ ಸಾಹಿತ್ಯ ಕ್ಷೇತ್ರಗಳಲ್ಲಿ ಪರಸ್ಪರ ಗೌರವದ ಭಾವನೆಗಳು, ಬೆಳೆದು ಬಂದವು. ಅಮೀರ್ ಖುಸ್ರು ಇದಕ್ಕೆ ಒಳ್ಳೆಯ ಉದಾಹರಣೆ. ಅವನೊಬ್ಬ ಕವಿಯೂ ಸಂಗೀತಗಾರನೂ ಆಗಿದ್ದು, ದೇವಗಿರಿಯಲ್ಲಿ ಕರ್ನಾಟಕ ಸಂಗೀತವನ್ನು ಕೇಳಿ ಆನಂದಿಸಿ, ಅದರ ಕೆಲವು ರಾಗಗಳನ್ನು ಹಿಂದುಸ್ಥಾನೀ ಸಂಗೀತಕ್ಕೆ ಅಳವಡಿಸಿದ. ವಾಸ್ತುಶಿಲ್ಪದಲ್ಲಿ ಬಹಮನೀ ಸುಲ್ತಾನರು ತುಗಲಕ್ ಸಂಪ್ರದಾಯವನ್ನು ಅನುಸರಿಸಿದರು. ಇದನ್ನು ಅವರ ಗೋರಿ ಮೊದಲಾದ ಕಟ್ಟಡಗಳಲ್ಲಿ ನೋಡಬಹುದು. ಪಂಡಿತರು, ಕಲಾಭಿಮಾನಿಗಳು, ಆಡಳಿತಪಟುಗಳು, ಸಂತರು ದೆಹಲಿಯಿಂದ ಕರ್ನಾಟಕಕ್ಕೆ ಬಂದರು. ಇವರೆಲ್ಲ ಕರ್ನಾಟಕದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಪರಿಣಾಮ ಬೀರಿದರು. ಚಿಸ್ತಿ ಮತ್ತು ಸುಹರ್‌ವಾದಿ ಪಂಥದ ಸೂಫಿ ಸಂತರು ತಮ್ಮ ಶಿಸ್ತಿನ ಜೀವನದಿಂದ ಕರ್ನಾಟಕದ ಜನತೆಯನ್ನು ಆಕರ್ಷಿಸಿದರು. ಹಜರತ್ ಖ್ವಾಜಾ ಬಂದೇ ನವಾಜ್ ಗೆಸು ದರಾಜ್ ಎಂಬ ಜನಪ್ರಿಯ ಕರ್ನಾಟಕದ ಸಂತ ಆಳರಸರ ಮತ್ತು ಪ್ರಜೆಗಳ ಸಾಂಸ್ಕೃತಿಕ ಸಮ್ಮೇಳನದ ಸಂಕೇತವಾಗಿದ್ದ. ಅವನ ಬಳಿ ಹಿಂದು ಶಿಷ್ಯರಿದ್ದರು. ಸಿದ್ದಪ್ಪ ಮತ್ತು ಚನ್ನಬಸವೇಶ್ವರ ಎಂಬುವರು ಅವರಲ್ಲಿ ಮುಖ್ಯರಾದವರು. ಇವನಂಥ ಇನ್ನೂ ಅನೇಕ ಸಾಧುಸಂತರು ಹಿಂದು ಮುಸ್ಲಿಂ ಐಕ್ಯತೆಗೆ, ಸಾಮರಸ್ಯಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿ, ಸಾಮಾಜಿಕ, ಧಾರ್ಮಿಕ ಹಾಗೂ ಭಾವನಾತ್ಮಕ ಕ್ಷೇತ್ರಗಳಲ್ಲಿ ಕರ್ನಾಟಕದ ವೈವಿಧ್ಯಮಯ ಜನರ ಮಧ್ಯೆ ಸಾಮರಸ್ಯವನ್ನುಂಟುಮಾಡಲು ಪ್ರಯತ್ನಿಸಿದರು. **(ಬಿ.ಎಸ್.ಎ.)**

**ದೇಗಾಂವಿ:** ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಒಂದು ಗ್ರಾಮ. ಬೈಲಹೊಂಗಲದ ದಕ್ಷಿಣಕ್ಕೆ 34 ಕಿಮೀ ಅಂತರದಲ್ಲೂ ಕಿತ್ತೂರಿನ ನೈಋತ್ಯಕ್ಕೆ 5 ಕಿಮೀ ದೂರದಲ್ಲೂ ಇದೆ.

ಗ್ರಾಮದ ಮಧ್ಯದಲ್ಲಿರುವ ಕಲ್ಲಗುಡಿ (ಬಸ್ತಿ) ಸುಂದರ ವಾಸ್ತುಕೃತಿ. ಈ ದೇವಾಲಯವನ್ನು ಗೋವೆಯ ಕದಂಬರ ದೊರೆ ಶಿವಚಿತ್ತ ಪೆರ್ಮಾಡಿಯ (1147– 92) ಹೆಂಡತಿಯಾದ ಕಮಲಾದೇವಿ ಕಟ್ಟಿಸಿದಂತೆ ತೋರುತ್ತದೆ. ಗುಡಿಯಲ್ಲಿ ಕನ್ನಡ ಹಾಗೂ ದೇವನಾಗರಿಯಲ್ಲಿ ಬರೆದ ಶಿಲಾಶಾಸನಗಳಿವೆ. ದೇಗಾಂವಿ ಅಗ್ರಹಾರದಲ್ಲಿ ಕಮಲಾನಾರಾಯಣ ಮತ್ತು ಮಹಾಲಕ್ಷ್ಮೀ ಗುಡಿಗಳನ್ನು ಹೂವಿನ ಬಾಗೆಯ ಹೋನೋಜನ ಮಗ ತಿಪ್ಪೋಜ ಎಂಬ ಸೂತ್ರಧಾರಿ ರಚಿಸಿದನೆಂದು ಒಂದು ಶಾಸನ ತಿಳಿಸುತ್ತದೆ. ಇನ್ನೊಂದು ಶಾಸನದಲ್ಲಿ (1175) ಕಮಲಾದೇವಿ ಬ್ರಾಹ್ಮಣರಿಗೆ ದಾನಕೊಟ್ಟ ವಿಷಯವಿದೆ. **(ಎಸ್‌ಎ.ಎನ್.)**

ಕಲ್ಲಗುಡಿಯ ವಿನ್ಯಾಸ ವಿಚಿತ್ರ ರೀತಿಯಲ್ಲಿದೆ. ಇದರಲ್ಲಿ ಎಂಟೆಂಟು ಕಂಬಗಳ ಎರಡು ಸಾಲುಗಳುಳ್ಳ ಉತ್ತರ ದಕ್ಷಿಣವಾಗಿ ಹಬ್ಬಿದ ದೊಡ್ಡ ಹಜಾರವಿದ್ದು, ಇದಕ್ಕೆ ಸೇರಿದಂತೆ ಪಶ್ಚಿಮಕ್ಕೆ ಮೂರು ಗರ್ಭಗುಡಿಗಳಿವೆ. ಮಧ್ಯದ ಗರ್ಭಗುಡಿ ಪಕ್ಕದವುಗಳಿಗಿಂತ ಸ್ವಲ್ಪ ಮುಂದೆ ಹಜಾರದೊಳಕ್ಕೆ ಬಂದಿದೆ. ಹಿಂದೆ ಸರಿದಂತಿರುವ ಪಕ್ಕದ ಗರ್ಭಗೃಹಗಳು ಸುಕನಾಸಿಯುತವಾಗಿವೆ. ಹಜಾರಕ್ಕೆ ತೆರೆಯುವಂತೆ ಪಕ್ಕಗಳ ಗರ್ಭಗುಡಿಗಳ ನೇರ ಎದುರಿನಲ್ಲಿ ದ್ವಾರಗಳಿವೆ. ಇನ್ನೊಂದು ದ್ವಾರ ಉತ್ತರದ ಕಡೆ ಇದೆ. ಈ ದ್ವಾರ ಸುರುಳಿಗಳ ಶಾಖೆಗಳಿಂದ ಅಲಂಕೃತವಾದ ನಾಜೂಕಿನ ವಿನ್ಯಾಸದ ಕೃತಿ. ಇದರ ಎದುರಿಗೆ ದಕ್ಷಿಣದ ಗೋಡೆಯಲ್ಲಿ ನಾಗರಕಲ್ಲಿರುವ ಒಂದು ಕೋಷ್ಠವಿದೆ. ಹಜಾರದ ಪೂರ್ವಭಾಗದಲ್ಲಿ ಕಕ್ಷಾಸನವಿದ್ದು ಮೇಲೆ ತೆರೆದಂತಿದೆ. ಈ ಭಾಗದ ಮೇಲಿನ ಚಾವಣಿ ಇಳಿಜಾರಾಗಿದೆ. ಹಜಾರದ ಕಂಬಗಳು ಸಮಕಾಲೀನ ಚಾಳುಕ್ಯ ವಾಸ್ತುರೀತಿಯವುಗಳಿಗಿಂತ ವ್ಯತ್ಯಸ್ತವಾಗಿವೆ. ಇವುಗಳಲ್ಲಿ ತಿರುಗಣೆಯ ಕೆಲಸ ಕಡಿಮೆ ಇರುವುದು ಇಲ್ಲಿಯ ವೈಶಿಷ್ಟ್ಯ. ಆದರೂ ಇವುಗಳ ವಿನ್ಯಾಸ ಸುಂದರವಾಗಿದೆ. ಹಜಾರದ ಚಾವಣಿಯಲ್ಲಿ ಪಕ್ಕದ ಗರ್ಭಗುಡಿಗಳ ಮುಂದೆ ಇರುವ ಭುವನೇಶ್ವರಿಗಳು ಆಳವಾಗಿದ್ದು ಹಲವು ಅಲಂಕೃತ ಏಕಕೇಂದ್ರ ವೃತ್ತಗಳಿಂದ ಕೂಡಿದೆ. ಅವುಗಳ ಮಧ್ಯೆ ತೂಗಾಡುವ ಕಮಲಗಳ ಅಲಂಕರಣವಿದೆ. ಇವುಗಳ ಸುತ್ತಲೂ ಸುಮಾರು ಇದೇ ರೀತಿಯ ಚಿಕ್ಕ ಭುವನೇಶ್ವರಿಗಳಿವೆ. ಇವೆಲ್ಲಾ ಅಬು ಬೆಟ್ಟದ ವಿಮಲ ಷಾ ದೇವಾಲಯದ ಭುವನೇಶ್ವರಿಗಳನ್ನು ನೆನಪಿಗೆ ತರುತ್ತವೆ. ಹೊರಗೋಡೆಗಳ ಮೇಲೆ ಅರೆಗಂಬಗಳು ಇತ್ಯಾದಿ ಅಲಂಕರಣಗಳಿವೆ. ಈಗ ಉತ್ತರದ ಗರ್ಭಗುಡಿಯಲ್ಲಿ ಮಹಾಕಾಳಿ, ಮಧ್ಯದರಲ್ಲಿ ಲಕ್ಷ್ಮೀನಾರಾಯಣ ಮತ್ತು ದಕ್ಷಿಣದರಲ್ಲಿ ಸರಸ್ವತಿ – ಈ ವಿಗ್ರಹಗಳಿವೆ. ಆದರೆ ಈ ಗರ್ಭಗುಡಿಗಳ

ದಾಲವಂದಗಳ ಮೇಲೆ ಕ್ರಮವಾಗಿ ಮಹಾಕಾಳಿ, ಸರಸ್ವತಿ ಮತ್ತು ವಿಷ್ಣುವಿಗ್ರಹಗಳಿರುವುದರಿಂದ ದಕ್ಷಿಣ ಮತ್ತು ಮಧ್ಯದ ಗರ್ಭಗುಡಿಯ ವಿಗ್ರಹಗಳು ಅದಲುಬದಲಾಗಿರುವಂತೆ ತೋರುತ್ತದೆ. ಈ ವಿಗ್ರಹಗಳೆಲ್ಲ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿವೆ. ಕಲ್ಲಗುಡಿ ಗೋವೆಯ ಕದಂಬರ ಕಾಲದ ಉತ್ತಮ ವಾಸ್ತುರಚನೆಗಳಲ್ಲೊಂದು. *

**ದೇವಂಗಿ, ಆರ್. ಪ್ರಫುಲ್ಲಚಂದ್ರ**: 1934–. ಅಂತಾರಾಷ್ಟ್ರೀಯ ಖ್ಯಾತಿಯ ಸಾವಯವ ಕೃಷಿತಜ್ಞ. ಕಬ್ಬಿನ ಬೇಸಾಯದಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ದಾಖಲೆ ಸ್ಥಾಪಿಸಿದವರು. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ದೇವಂಗಿಯ ರಾಮಣ್ಣಗೌಡ ಹಾಗೂ ಸೀತಮ್ಮ ದಂಪತಿಗಳ ಮಗನಾಗಿ 1934 ಆಕ್ಟೋಬರ್ 13ರಂದು ಜನಿಸಿದರು. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ವಿದ್ಯಾಭ್ಯಾಸ ಮಾಡಿದರು. ಇಂಟರ್ ಮಿಡಿಯಟ್‌ವರೆಗೆ ವ್ಯಾಸಂಗ ಸಾಗಿ ಅಲ್ಲಿಗೇ ನಿಂತಿತು. ತಂದೆ ದೇವಂಗಿ ರಾಮಣ್ಣಗೌಡರು ಪ್ರಗತಿಪರ ಕೃಷಿಕರಾಗಿದ್ದದ್ದು ಮಗನ ಮೇಲೆ ಪರಿಣಾಮ ಬೀರಿತು. ತಮ್ಮ ಎಳೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ (1949) ಇವರು ಚಿಕ್ಕವಯಸ್ಸಿಗೇ ಕುಟುಂಬ ಹೊಣೆ ಹೊತ್ತರು.

ಕೃಷಿಯನ್ನು ಆಧರಿಸಿ ಬದುಕುವ ಕನಸು ಕಂಡ ಇವರು ಮುಂದೆ ಶಿವಮೊಗ್ಗ ಸಮೀಪದ ಹೊಸಹಳ್ಳಿಯಲ್ಲಿ 46 ಎಕರೆ ಜಮೀನು ಖರೀದಿಸಿದರು (1959). ಆ ಸಮಯದಲ್ಲಿ ಇವರಿಗೆ ಕೃಷಿಯ ಔಪಚಾರಿಕ ಶಿಕ್ಷಣವಾಗಲೀ ಅಥವಾ ಆಧುನಿಕ ಬೇಸಾಯ ಪದ್ಧತಿಯ ಪರಿಚಯವಾಗಲೀ ಇರಲಿಲ್ಲ. ಪ್ರಾರಂಭದಲ್ಲಿ ಅನುಭವಿಸಿದ ಬಾರಿ ಕಷ್ಟ ಇವರ ಆಸೆಯ ಕುಡಿಯನ್ನೇ ಚಿವುಟಿಹಾಕಿತ್ತು. ಪದೇ ಪದೇ ವಿಫಲವಾದ ಬೆಲೆಗಳು ಹಣಕಾಸಿನ ಸ್ಥಿತಿಯನ್ನು ಹದಗೆಡಿಸಿದ್ದವು. ಇಂಥ ನಿರಾಸೆಯ ಬೇಗುದಿಯಲ್ಲಿದ್ದಾಗ ಇವರು ಒಮ್ಮೆ ಆಕಾಶವಾಣಿಯ ಪ್ರಸಾರದಲ್ಲಿ ಮಂಡ್ಯಜಿಲ್ಲೆ ರೈತನೊಬ್ಬ ಕಬ್ಬು ಬೆಳೆಯಲ್ಲಿ ಅಧಿಕ ಫಸಲು ಪಡೆದ ಸಂಗತಿ ತಿಳಿದರು. ಕೃಷಿಯ ಬಗ್ಗೆ ತಮ್ಮ ನಂಬಿಕೆಯನ್ನು ದೃಢಪಡಿಸಿ ಕೊಂಡು ಮರಳಿಯತ್ನವ ಮಾಡಲು ಸಿದ್ಧರಾದರು.

ಕೃಷಿಭೂಮಿಗೆ ಜೀವ ತುಂಬಲು ನೀರು ಗೊಬ್ಬರದ ಜೊತೆಗೆ ಸತತ ಪರಿಶ್ರಮದಿಂದ ಹೊಸಹಳ್ಳಿಯ 40 ಎಕರೆ ಒಣಭೂಮಿಯಲ್ಲಿ ಬತ್ತ, ಕಬ್ಬು, ಅಡಕೆ ಹಾಗೂ ತೆಂಗು ಮುಂತಾದವುಗಳನ್ನು ಬೆಳೆಯಲಾರಂಭಿಸಿದರು. ಒಂದೆಡೆ ಬೇಸಾಯ ಮಾಡುತ್ತಲೇ ಮತ್ತೊಂದೆಡೆ ಆಧುನಿಕ ಸಾವಯವ ಬೇಸಾಯದಲ್ಲಿ ಪ್ರಯೋಗಗಳನ್ನು ಮಾಡತೊಡಗಿದರು. ಇವರು ತಮ್ಮ ಕೃಷಿಪ್ರಯೋಗಗಳನ್ನು ಕಬ್ಬು ಬೆಳೆಯಿಂದ ಪ್ರಾರಂಭಿಸಿದರು. 1968ರಲ್ಲಿ ಕ–149 ಮತ್ತು ಕ–740 ಕಬ್ಬು ತಳಿಗಳನ್ನು ಬಿತ್ತಿದ ಇವರು ಸತತವಾಗಿ ಒಂದೇ ಕೂಳೆಯಿಂದ ಬೆಳೆತೆಗೆದು ಪ್ರಪಂಚದ ಗಮನಸೆಳೆದರು. ಯಾವುದೇ ಪುನರಾವರ್ತಿತ ಕೃಷಿ ಶ್ರಮವಿಲ್ಲದ ಈ ಲಾಭದಾಯಕ ವಿಧಾನ ಉತ್ಪಾದನಾ ವೆಚ್ಚವನ್ನೂ ಸಾಕಷ್ಟು ಕಡಿಮೆ ಮಾಡಿತು. ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡಿದ ಕಾರಣ ಭೂಮಿಯಲ್ಲಿ ರೈತ ಸ್ನೇಹಿ ಎರೆಹುಳುಗಳ ಸಾಂದ್ರತೆ ಹೆಚ್ಚಿ ಭೂಮಿಗೆ ಜೀವಂತಿಕೆ ಮರಳಿ ಬಂದು ಪರಿಸರ ಸಂರಕ್ಷಣೆಯೂ ಸಾಧ್ಯವಾಯಿತು. ಇವರ ಹೊಸ ರೀತಿಯಬೇಸಾಯ ಕ್ರಮ 'ಶೂನ್ಯಕೃಷಿ' (ಜೀರೊ ಕಲ್ಟಿವೇಷನ್) ಎಂದೇ ಹೆಸರಾಯಿತು.

ಇವರು ಕಬ್ಬುಬೆಳೆಗೆ ಕೈಹಾಕಿದ ಕಾಲದಲ್ಲಿ (1975–76) ಕರ್ನಾಟಕದ ಸರಾಸರಿ ಕಬ್ಬು ಇಳುವರಿ ಹೆಕ್ಟೇರ್‌ಗೆ 75ಟನ್, ರಾಷ್ಟ್ರೀಯ ಸರಾಸರಿ 65ಟನ್ ಇತ್ತು. ಆದರೆ ಇವರ ಜಮೀನಿನಲ್ಲಿ ಹೆಕ್ಟೇರ್‌ಗೆ 140ಟನ್ ಇಳುವರಿ ಬಂತು. ಕಬ್ಬಿನ ಬೆಳೆಯಿಂದ ಪ್ರೇರಿತರಾದ ಪ್ರಫುಲ್ಲಚಂದ್ರರು ಮುಂದೆ ಬತ್ತ ಹಾಗೂ ಅಡಕೆ ಬೆಳೆಗಳಲ್ಲಿಯೂ ಪ್ರಯೋಗ ನಡೆಸಿದರು. ಉತ್ತಮ ನೀರು ನಿರ್ವಹಣೆ ಮಾಡಿ ಅತ್ಯಾಧುನಿಕ ವಿಧಾನದಿಂದ ಬೆಳೆದ ಬತ್ತ ಹೆಕ್ಟೇರ್‌ಗೆ 16,103 ಕೆ.ಜಿ. ಇಳುವರಿ ನೀಡಿತ್ತು. 1972ರಿಂದ 1976ರ ವರೆಗೆ ಸತತವಾಗಿ ನಾಲ್ಕು ವರ್ಷ ಇವರೇ ರಾಷ್ಟ್ರೀಯ ಬೆಳೆ ಸ್ಪರ್ಧೆಯ ವಿಜೇತರಾದರು.

ಅಡಕೆ ಸಂಸ್ಕರಣೆಗೆ ಬೇಕಾಗುವ ಉರುವಲಿಗಾಗಿ ಮಲೆನಾಡಿನ ವೃಕ್ಷ ಸಂಪತ್ತು ಆಹುತಿಯಾಗುತ್ತಿದ್ದ ಸಂಗತಿ ಇವರ ಗಮನ ಸೆಳೆದಿತ್ತು.

ಸಾಂಪ್ರದಾಯಿಕ ವಿಧಾನದಲ್ಲಿ ಮೂರು ಟನ್ ಅಡಕೆ ಸಂಸ್ಕರಿಸಲು ಐದು ಟನ್ ಉರುವಲುಬೇಕಿತ್ತು. ಆಗ ಕೋನಾಕೃತಿಯ ಬಾಯ್ಲರ್‌ನ ಕಲ್ಪನೆಯನ್ನು ಸಾಕಾರಗೊಳಿಸಿದ ಇವರು ಅದರ ತಳ ಚಪ್ಪಟೆಯಾಗಿರುವಂತೆ, ಮಧ್ಯದಲ್ಲಿ ಒಂದು ಕೊಳವೆ ಹಾಗೂ ಮೇಲೆ ಮುಚ್ಚಳ ಇರುವಂತೆ ಉಪಕರಣ ತಯಾರಿಸಿ ಅಡಕೆಗರಿಯಿಂದಲೆ ಅಡಕೆ ಬೇಯಿಸುವ ವಿಧಾನ ಅಳವಡಿಸಿದರು. ಬೇಯಿಸಿದ ಅಡಕೆ ಒಣಗಿಸಲು ಹತ್ತು ತಟ್ಟೆಗಳ ಸರಳ ಡ್ರೈಯರ್ ಯಂತ್ರವನ್ನು ಅಭಿವೃದ್ಧಿಪಡಿಸಿದರು. ಹಲವು ವ್ಯವಸಾಯ ಉಪಕರಣಗಳಾದ ಡಂಪರ್, ಸ್ಟಾಂಪ್‌ಕಲೆಕ್ಟರ್, ಡಿಸ್ಟಿಲಿಂಗ್ ಉಪಕರಣ, ತೆಂಗಿನಕಾಯಿ ಕೀಳುವ ಸರಳಯಂತ್ರ, ಹೊಸರೀತಿಯ ಎತ್ತಿನಗಾಡಿ ಮುಂತಾದವುಗಳನ್ನು ಆವಿಷ್ಕರಿಸಿದರು.

ಕೃಷಿ ತ್ಯಾಜ್ಯಗಳನ್ನು ಲಾಭದಾಯಕವಾಗಿ ಪುನರ್ ಬಳಸಿಕೊಳ್ಳಬಲ್ಲ ಸೇಂದ್ರೀಯ ಗೊಬ್ಬರ ತಯಾರಿಸುವ ವಿಧಾನ ಕಂಡುಹಿಡಿದರು. ಗೋಬರ್ ಗ್ಯಾಸ್ ಸ್ಲರಿ ಮುಂತಾದವುಗಳನ್ನು ಉತ್ತಮ ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಿ ಭೂಸಾರ ಹೆಚ್ಚಿಸಿದರು. ಹಸುರು ಸಸ್ಯಗಳ ತ್ಯಾಜ್ಯವನ್ನು ಕೊಳೆಯಿಸಿ ದ್ರವರೂಪದ ಗೊಬ್ಬರ ತಯಾರಿಸಿ ಸ್ಪ್ರಿಂಕಲರ್ ಮೂಲಕ ಗಿಡಗಳಿಗೆ ಸಿಂಪಡಿಸುವ ವಿಧಾನವೂ ಇವರದೇ ಕೊಡುಗೆ. ಅರಣ್ಯ ಸಂರಕ್ಷಣೆ, ಕೃಷಿಅರಣ್ಯದ ಅಭಿವೃದ್ಧಿ, ಪರಿಸರ ಸಂರಕ್ಷಣೆ ಮತ್ತು ಶಕ್ತಿ ಮಿತವ್ಯಯಕ್ಕಾಗಿ ಪ್ರಯತ್ನಿಸಿ, ಶ್ರಮಿಸಿ ತೋಟದ ಬೆಳೆಗಳೊಂದಿಗೆ ಅರಣ್ಯ ಉತ್ಪನ್ನಗಳನ್ನು ಬೆಳೆಯುವ ಕ್ರಮದಲ್ಲಿ ಯಶಸ್ಸು ಪಡೆದರು.

ಇವರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ನೂರಾರು ಕೃಷಿ ಅಭಿವೃದ್ಧಿಯ ಬಗೆಗಿನ ಚರ್ಚೆ, ವಿಚಾರಸಂಕಿರಣ ಹಾಗೂ ಸಮ್ಮೇಳನಗಳಲ್ಲಿ ಸಕ್ರಿಯ ಪಾತ್ರವಹಿಸಿದ್ದಾರೆ. 1981ರಲ್ಲಿ ಮೆಕ್ಸಿಕೊದಲ್ಲಿ ನಡೆದ ಪ್ರಥಮ ಪ್ರಪಂಚಸಕ್ಕರೆ ಸಮ್ಮೇಳನದಲ್ಲಿ ವಿಶೇಷನಕೂಳೆ ಕಬ್ಬು ಬೆಳೆಯ ಬಗ್ಗೆ ಪ್ರಬಂಧ ಮಂಡಿಸಿದರು. ಥೈಲೆಂಡಿನ ಬ್ಯಾಂಕಾಕ್‌ನಲ್ಲಿ ಪ್ರಪಂಚಕೃಷಿ ತಜ್ಞರು ಸಮ್ಮುಖದಲ್ಲಿ ಕೃಷಿ ಸಾಧನೆಗಳ ಪ್ರದರ್ಶನ ಹಾಗೂ ಮಾಹಿತಿ ಮಂಡಿಸಿದರು. ಕೇಂದ್ರ ಯೋಜನಾ ಆಯೋಗದ ಆಹ್ವಾನದಂತೆ 8ನೆಯ ಪಂಚವಾರ್ಷಿಕ ಯೋಜನೆಯ ಅಂಗವಾಗಿ ವ್ಯವಸಾಯ ಕ್ಷೇತ್ರದಲ್ಲಿ ಅಳವಡಿಸಬೇಕಾದ ಅಂಶಗಳ ಚರ್ಚೆಯಲ್ಲಿ ಭಾಗವಹಿಸಿ ಮಾಹಿತಿ ಸಲ್ಲಿಸಿದರು. ಕೃಷಿ ಅರಣ್ಯ(ಆಗ್ರೋ ಫಾರೆಸ್ಟ್ರಿ), ಅನುಪಯುಕ್ತ ಹಾಗೂ ಒಣಭೂಮಿಯಲ್ಲಿ ಕೃಷಿ ಉತ್ಪನ್ನಗಳ ಬೆಳೆಯುವಿಕೆ ಬಗ್ಗೆ ಇವರು

ಕೈಗೊಂಡ ವಿಧಾನಗಳ ವಿವರಗಳನ್ನು ಬ್ರಿಟನ್ನಿನ ಅರಣ್ಯ ಸಂಶೋಧನೆ ಸಂಸ್ಥೆ ಪ್ರಕಟಿಸಿದೆ. ಕೃಷಿ ಪ್ರಯತ್ನಗಳ ಬಗ್ಗೆ ತಿಳಿವಳಿಕೆಯ ಬಗ್ಗೆ ನೂರಾರು ಲೇಖನಗಳ ಪ್ರಕಟಣೆ, ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಕೃಷಿ ಬಗೆಗಿನ ಚರ್ಚೆಗಳಲ್ಲಿ ಪಾಲ್ಗೊಂಡಿದ್ದಾರೆ. ಕೃಷಿಗೆ ಸಂಬಂಧಿಸಿದ ಅಧ್ಯಯನಕ್ಕಾಗಿ ಡೆನ್ಮಾರ್ಕ್ ಮೆಕ್ಸಿಕೊ, ಥೈಲೆಂಡ್ ಮತ್ತು ಅಮೆರಿಕ ಮೊದಲಾದ ದೇಶಗಳಿಗೆ ಭೇಟಿನೀಡಿದ್ದಾರೆ.

ಇವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೋರ್ಡ್ ಆಫ್ ರಿಜೆಂಟ್ ಆಗಿ, ಕುವೆಂಪು ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ, ಕೃಷಿ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ನೇಮಿಸಿದ್ದ ವಿಶೇಷ ತಜ್ಞರ ಸಮಿತಿಯ ಸದಸ್ಯರಾಗಿ, ಆಕಾಶವಾಣಿ ಕಾರ್ಯಕ್ರಮಗಳ ಸಲಹಾ ಮಂಡಳಿಯ ಸದಸ್ಯರಾಗಿ, ಭಾರತದ ಬತ್ತ ಸಂಶೋಧನ ಮಂಡಳಿಯ ಸದಸ್ಯರಾಗಿ, ಭಾರತ ಕೃಷಿಕ ಸಮಾಜ ಹಾಗೂ ಲಯನ್ಸ್ ಕ್ಲಬ್‌ಗಳ ಆಜೀವ ಸದಸ್ಯರಾಗಿ, ಭಾರತೀಯ ಕಬ್ಬು ಅಭಿವೃದ್ಧಿಮಂಡಳಿಯ ಸದಸ್ಯರಾಗಿ, ರಾಜ್ಯಕಾನೂನು ನೆರವು ಮಂಡಳಿಯ ಸದಸ್ಯರಾಗಿ, ಭಾರತೀಯ ತೆಂಗು ಅಭಿವೃದ್ಧಿಮಂಡಳಿಯ ಸದಸ್ಯರಾಗಿ– ಹೀಗೆ ಅನೇಕ ಸಂಘ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದ್ದಾರೆ.

ಇವರ ಕೃಷಿ ಸಾಧನೆಗಾಗಿ ಅನೇಕ ಗೌರವ, ಪ್ರಶಸ್ತಿಗಳು ದೊರೆತಿವೆ. ಕರ್ನಾಟಕ ಸರ್ಕಾರದ ರಾಜ್ಯಪ್ರಶಸ್ತಿ (1970), ಕೃಷಿ ತಂತ್ರಜ್ಞರ ಸಂಘದ ಶ್ರೇಷ್ಠಕೃಷಿಕ ಪ್ರಶಸ್ತಿ (1972), ಜುವಾರಿ ಆಗ್ರೋ ಕೆಮಿಕಲ್ಸ್‌ನ ಕೃಷಿ ಸಾಮ್ರಾಟ್ ಪ್ರಶಸ್ತಿ (1987), ವಿಶ್ವಆಹಾರ ಸಂಸ್ಥೆಯ ವಿಶ್ವಆಹಾರ ಪ್ರಶಸ್ತಿ (1988), ರಾಷ್ಟ್ರೀಯ ಏಕತಾ ಕೃಷಿಮಿತ್ರ ಪ್ರಶಸ್ತಿ (1995), ಧಾರವಾಡ ಕೃಷಿ ವಿಶ್ವವಿದ್ಯಾಲಯದ ಗೌರವ ಡಾಕ್ಟರ್ ಆಫ್ ಸೈನ್ಸ್ ಪದವಿ (1995), 69ನೆಯ ಕನ್ನಡಸಾಹಿತ್ಯ ಸಮ್ಮೇಳನದಲ್ಲಿ ಗೌರವ ಪುರಸ್ಕಾರ (1996), ರಾಜ್ಯ ಪರಿಸರ ಪ್ರಶಸ್ತಿ (1996), ಆಸ್ಪೀ ವರ್ಷದ ಕೃಷಿಕ ಪ್ರಶಸ್ತಿ (199), ಅಮೆರಿಕದ ರೈತ ಮಿತ್ರರಗೌರವ ಪ್ರಶಸ್ತಿ (2000)–ಇವು ಕೆಲವು ಮುಖ್ಯ ಪ್ರಶಸ್ತಿಗಳು.

ಇವರು ಕೃಷಿ ತಜ್ಞತೆಯ ಒಂದು ದಂತಕಥೆಯೇ ಆಗಿದ್ದಾರೆ. ವ್ಯವಸಾಯದಲ್ಲಿ ತೊಡಗಿರುವವರಿಗೆ, ಸಂಶೋಧಕರಿಗೆ ಮತ್ತು ಆಡಳಿತಗಾರರಿಗೆ ಇವರ ಕೃಷಿಕ್ಷೇತ್ರ 'ಕೃಷಿಕಾಶಿ'ಆಗಿದೆ. ಭಾರತ ಸರ್ಕಾರದ ಕೃಷಿಸಚಿವರಿಂದ ಹಿಡಿದು ವಿವಿಧ ಕ್ಷೇತ್ರಗಳ ಗಣ್ಯಾತಿಗಣ್ಯರು, ವಿಜ್ಞಾನಿಗಳು ಇವರ ಪ್ರಯೋಗಗಳನ್ನು ಮನಸಾರೆ ಕೊಂಡಾಡಿದ್ದಾರೆ. ಇವರ ಮಕ್ಕಳಾದ ಡಿ.ಪಿ. ಸವ್ಯಸಾಚಿ ಹಾಗೂ ಡಿ.ಪಿ. ಇಕ್ಷುಧನ್ವ ಇಬ್ಬರೂ ವ್ಯವಸಾಯ ವಿಜ್ಞಾನದಲ್ಲಿ ಪದವೀಧರರಾಗಿದ್ದು, ಕೃಷಿ ಸಂಶೋಧನೆಯಲ್ಲಿ ತಮ್ಮನ್ನು ತಂದೆಯೊಡನೆ ತೊಡಗಿಸಿಕೊಂಡಿದ್ದಾರೆ.

*

**ದೇಪರಾಜ:** ಸು. 1410. ಕನ್ನಡದ ಮೊಟ್ಟಮೊದಲ ಸಾಂಗತ್ಯಕವಿ. ಸೊಬಗಿನ ಸೋನೆ ಎಂಬ ಕಾವ್ಯದ ಕರ್ತೃ. ಸಂಗಮೇಂದ್ರನ ಕುಲದಿಂಗಡಲಿಗೆ ನೆಱದಿಂಗಳೆನಿಪ ಕಂಪಸುತ ಕೇಳ ಕಂಗೊಳಿಸುವ ದೇಪನೃಪ ಮುನ್ನಱಿಯದ ಮಂಗಳವಪ್ಪೊಂದು ಕಥೆವೇಳ ಎಂಬ ಪದ್ಯದಿಂದ ಈತ ಸಂಗಮವಂಶದ ಕಂಪರಾಜನ ಮಗನೆಂದು ತಿಳಿದುಬರುತ್ತದೆ. ಈ ಸಂಗಮ ವಂಶ ವಿಜಯನಗರ ಸಾಮ್ರಾಜ್ಯವನ್ನು ಆಳಿದ ಮನೆತನಗಳಲ್ಲಿ ಒಂದಾಗಿರುವುದರಿಂದ ಇಲ್ಲಿ ಬರುವ ಒಂದನೆಯ ದೇವರಾಯ ಅಥವಾ ಪ್ರತಾಪದೇವರಾಯನೇ (1406– 22) ಈ ದೇಪರಾಜನಿರಬಹುದೆಂದು ಊಹಿಸಲಾಗಿದೆ. ಕವಿ ವೀರಶೈವನಹುದೋ ಅಲ್ಲವೋ ತಿಳಿಯದು. ಶೈವನೆಂಬುದಕ್ಕೆ ಸಾಕಷ್ಟು ಆಧಾರ ಇವನ ಕಾವ್ಯಗಳಲ್ಲಿ ದೊರೆಯುತ್ತದೆ. ಅಮರುಕ ಈತನ ಇನ್ನೊಂದು ಕೃತಿ. ತನ್ನ ಎರಡೂ ಕೃತಿಗಳಲ್ಲಿ ಕವಿ ಪಂಪಾಪತಿ ವಿರೂಪಾಕ್ಷನನ್ನು ಸ್ತುತಿಸಿರುವುದರಿಂದ ವಿರೂಪಾಕ್ಷ ಈತನ ಇಷ್ಟದೈವವೆಂದು ತೋರುತ್ತದೆ. ಪೂರ್ವಕವಿಗಳಲ್ಲಿ ವಾಲ್ಮೀಕಿ, ಬಾಣ, ಕಾಳಿದಾಸ –ಇವರನ್ನು ಸ್ಮರಿಸಿದ್ದಾನೆ. ತನ್ನ ಕಾವ್ಯವನ್ನು ಜಾಣರ ಮೆಚ್ಚು ರಸಿಕರ ರಸಾಯನ ವಾಣಿಯ ಸಿರಿ ಭಾವುಕರಿಗೆ ಮಾಣಿಕಗನ್ನಡಿ ಕೇಳ್ವಕೋವಿದರಿಗೆ ಪ್ರಾಣ ಎಂದು ಪ್ರಶಂಸಿಸಿಕೊಂಡಿದ್ದಾನೆ.

ಸೊಬಗಿನ ಸೋನೆ ಕನ್ನಡದಲ್ಲಿ ದೊರೆತ ಮೊದಲ ಸಾಂಗತ್ಯಕೃತಿ. ಶೃಂಗಾರ ಪೂರ್ಣ ಕತೆಗಳನ್ನೊಳಗೊಂಡಿದೆ. ಇದರಲ್ಲಿ 7 ಕಥೆಗಳೂ 26 ಸಂಧಿಗಳೂ 1216 ಪದ್ಯಗಳೂ ಇವೆ. ಕಾವ್ಯದಲ್ಲಿ ಬಳಸಿರುವ ಛಂದಸ್ಸು ಸಾಂಗತ್ಯವಾದರೂ ಸಾಂಗತ್ಯದ ಲಕ್ಷಣದಂತೆ ಪದ್ಯದ ಎರಡು ಮತ್ತು ನಾಲ್ಕನೆಯ ಪಾದಗಳ ಕೊನೆಯಲ್ಲಿ ಬರಬೇಕಾದ ಬ್ರಹ್ಮಕ್ಕೆ ಬದಲಾಗಿ ವಿಷ್ಣುವಿನಿಂದ ಕೂಡಿವೆ. ಆದ್ದರಿಂದ ಇದನ್ನು ಸಾಂಗತ್ಯಕ್ಕೆ ಬದಲಾಗಿ ಸೊಬಗಿನ ಸೋನೆವರ್ಣ ಎಂದು ಕರೆಯುವುದೂ ಉಂಟು. ವರ್ಣನೆಗಳೇ ಕೃತಿಯ ಜೀವಾಳ. ಅತಿಯಾದ ವರ್ಣನೆಗಳಿದ್ದರೂ ಅಲ್ಲಲ್ಲಿ ಬರುವ ಉತ್ತಮ ಭಾಗಗಳು ಕವಿಯ ಪ್ರತಿಭಾಶಕ್ತಿಯ ದ್ಯೋತಕವಾಗಿವೆ. ಕಥೆಯ ಓಟ, ಒಂದು ಕಥೆಗೂ ಇನ್ನೊಂದು ಕಥೆಗೂ ನಡುವೆ ಇರುವ ಸಂಬಂಧ ಬೆಸುಗೆ– ಇವು ಸಂಸ್ಕೃತದ ಕಥಾಸರಿತ್ಸಾಗರ, ದಶಕುಮಾರಚರಿತೆ ಮೊದಲಾದ ಕೃತಿಗಳನ್ನು ನೆನಪಿಗೆ ತರುತ್ತದೆ. ಶೈಲಿ ಸರಳವಾಗಿದೆ. ಸಾಂಗತ್ಯ ಗ್ರಂಥಗಳ ಸಾಲಿನಲ್ಲಿ ಇದಕ್ಕೆ ಐತಿಹಾಸಿಕ ಮಹತ್ವವಿದೆ.

ಅಮರುಕ ವಾರ್ಧಕ ಷಟ್ಪದಿಯಲ್ಲಿದೆ. ಇದು ಸಂಸ್ಕೃತ ಅಮರು ಶತಕದ ಅನುವಾದ. (ಬಿ.ಎಸ್.ಎಸ್.)

**ದೇವಕವಿ:** ಸು. 1200. ಬ್ರಾಹ್ಮಣ ಕವಿ. ಕುಸುಮಾವಳಿ ಎಂಬ ಚಂಪೂಕಾವ್ಯದ ಕರ್ತೃ. ಕವಿ ತನ್ನ ಹೆಸರನ್ನು ವಾಚ್ಯವಾಗಿ ಕಾವ್ಯದಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಕವಿಕಮಳಜ ಸೂಕ್ತಿ ಸುಧಾರ್ಣವ ಸೋಮಂ ದೇವಕವಿ ದಲೆಂದಿನಿತಂ ಸಾಱುವವೋಲ್ ಭೇರೀಭಾಂಕೃತಿ ರವಮೊಗೆದತ್ತುತ್ತ ರಾಸೆಯೊಳ್ ಮತ್ತಾಗಳ್ ಎಂದು ಹೇಳುವಲ್ಲಿ ದೇವಕವಿ ಎಂದು ಸೂಚ್ಯವಾಗಿ ಹೇಳಿರುವಂತೆ ತೋರುತ್ತದೆ. ಕವಿಕ ಮಳಜಸೂಕ್ತಿಸುಧಾರ್ಣವಸೋಮಂ ಎಂಬುದರಿಂದ ಈತ ಶಾಂತೀಶ್ವರ ಪುರಾಣವನ್ನು ಬರೆದ ಕಮಲಭವನಿಗೆ ಗ್ರಂಥರಚನೆಯನ್ನು ಸಮರ್ಪಣೆ ಮಾಡಿದಂತೆ ಊಹಿಸಬಹುದಾಗಿದೆ. ಈ ಊಹೆಗೆ ಸಹಕಾರಿಯಾಗಿ ಋತು, ಸೂರ್ಯಾಸ್ತ ಮೊದಲಾದ ವರ್ಣನಾ ಭಾಗಗಳ ಪದ್ಯಗಳಲ್ಲಿ ಹಲವನ್ನು ಇದೇ ಸಂದರ್ಭಗಳಲ್ಲಿ ಶಾಂತೀಶ್ವರಪುರಾಣದಲ್ಲಿಯೂ ಕಾಣಬಹುದಾಗಿದೆ. ಈತನಿಗೆ ಕವೀಂದ್ರೋತ್ತಂಸ, ಕೃತಿರತಿರಮಣ, ಭಾರತೀಭೂಷಣ ಎಂಬ ಬಿರುದುಗಳಿದ್ದಂತೆ ತಿಳಿದುಬರುತ್ತದೆ. ಪೂರ್ವಕವಿಗಳಲ್ಲಿ ರನ್ನ, ರುದ್ರಭಟ್ಟ, ಅಗ್ಗಳ – ಇವರನ್ನು ಸ್ತುತಿಸಿದ್ದಾನೆ.

ಕುಸುಮಾವಳಿ ಕಾವ್ಯ ಒಂದು ಕಲ್ಪಿತ ರಮ್ಯ ಪ್ರಣಯ ಕಥೆ. ದೊರೆತಿರುವ ಅಸಮಗ್ರ ಪ್ರತಿಯಲ್ಲಿ 15 ಆಶ್ವಾಸಗಳಿವೆ. ಒಟ್ಟು 18 ಆಶ್ವಾಸಗಳಿರಬಹುದೆಂದು ತೋರುತ್ತದೆ ಎಂದು ಕವಿಚರಿತೆಕಾರರು ಹೇಳುತ್ತಾರೆ. ಕಾವ್ಯದಲ್ಲಿ ಕವಿ ತಾನು ಚಿಕ್ಕರಾಜ ಚಮೂಪನನ್ನು ಕಥಾನಾಯಕನನ್ನಾಗಿ ಮಾಡಿಕೊಂಡಿದ್ದೇನೆಂದು ಹೇಳಿದ್ದಾನೆ. ಆದರೆ ಈತ ಯಾರೆಂಬುದು ತಿಳಿಯುವುದಿಲ್ಲ. ಈ ಕಾವ್ಯವನ್ನು ಬರೆಯುವಲ್ಲಿ ದೇವಕವಿಯು ನೇಮಿಚಂದ್ರನಿಂದ ಪ್ರಭಾವಿತನಾಗಿರುವಂತೆ ತೋರುತ್ತದೆ. ಈತನ ಕವಿತಾ ಬಂಧ ಪ್ರೌಢವಾಗಿಯೂ ಗಂಭೀರವಾಗಿಯೂ ನಿರರ್ಗಳವಾಗಿಯೂ ಇದೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ಈ ಕಾವ್ಯದ ಕೆಲವು ಪದ್ಯಗಳು ಉದ್ಧರಿತವಾಗಿವೆ. (ಬಿ.ಎಸ್.ಎಸ್.)

**ದೇವಚಂದ್ರ:** 1770– 1841. ಜೈನಕವಿ. ರಾಜಾವಳೀಕಥೆ, ರಾಮಕಥಾವತಾರ ಎಂಬ ಗ್ರಂಥಗಳ ಕರ್ತೃ. ಈಗಿನ ಚಾಮರಾಜನಗರ ಜಿಲ್ಲೆಯ ಮಲೆಯೂರು ಕನಕಗಿರಿ ಈತನ ಜನ್ಮಸ್ಥಳ. ಇವನ ತಂದೆ ದೇವಯ್ಯ, ತಾಯಿ ಕುಸುಮಾಜಮ್ಮ, ಚಂದಪಾರ್ಯ ಮತ್ತು ಪದ್ಮರಾಜ ಅಣ್ಣಂದಿರು. ಮಲೆಯೂರ ಪಾರ್ಶ್ವನಾಥ ಈ ಕವಿಯ ಇಷ್ಟದೈವ. ಈತ ತನ್ನ 14ನೆಯ ವಯಸ್ಸಿನಿಂದಲೇ ಕಾವ್ಯರಚನೆಗೆ ತೊಡಗಿದ. ಪೂಜ್ಯಪಾದಚರಿತೆ, ಸುಮೇರುಶತಕ, ಪದ್ಮಾವತಿ ಯಕ್ಷಗಾನ, ಭಕ್ತಿಸಾರಶತಕತ್ರಯ, ಶಾಸ್ತ್ರಸಾರ ಲಘುವೃತ್ತಿ, ಪ್ರವಚನ ಸಿದ್ಧಾಂತ ದ್ರವ್ಯ ಸಂಗ್ರಹ, ದ್ವಾದಶಾನುಪ್ರೇಕ್ಷೆಕಥೆ, ಧ್ಯಾನಸಾಮ್ರಾಜ್ಯ, ಅಧ್ಯಾತ್ಮವಿಚಾರ ಮೊದಲಾದ ಗ್ರಂಥಗಳನ್ನೂ ಈತ ಬರೆದಂತೆ ರಾಜಾವಳೀ ಕಥೆಯಿಂದ ತಿಳಿದುಬರುತ್ತದೆ. ಆದರೆ ಇವಾವೂ ಉಪಲಬ್ಧವಿಲ್ಲ. ತನ್ನ ಮೊದಲ ಕೃತಿ ಪೂಜ್ಯಪಾದಚರಿತೆ ಎಂಬ ಸಾಂಗತ್ಯ ಕಾವ್ಯವನ್ನು ಅಣ್ಣ ಪದ್ಮರಾಜನೊಡನೆ 1792ರಲ್ಲಿ ಬರೆದಂತೆ ತಿಳಿಯುತ್ತದೆ.

ರಾಜಾವಳೀ ಕಥೆ ಪ್ರಾಯಿಕವಾಗಿ ಗದ್ಯರೂಪವಾಗಿದೆ. ಅಲ್ಲಲ್ಲಿ ಕೆಲವು ಶ್ಲೋಕಗಳೂ ಪದ್ಯಗಳೂ ಇವೆ. ಇದನ್ನು 1804ರಲ್ಲಿ ತನಗೆ ಪರಿಚಯವಾದ ಮೆಕೆಂಜಿ ಎಂಬ ವಿದೇಶೀಯ ಸರದಾರನ ಸೂಚನೆಯ ಮೇರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ವೈದ್ಯಸೂರಿ ಪಂಡಿತನ ಪ್ರೋತ್ಸಾಹದಿಂದ 1838ರಲ್ಲಿ ಬರೆದಂತೆ ತಿಳಿಯುತ್ತದೆ. ಇದರಲ್ಲಿ 11 ಅಧಿಕಾರಗಳಿವೆ. ಜೈನಧರ್ಮ ಪರವಾದ ಚರಿತ್ರೆ, ಪುರಾಣ ಇವಲ್ಲದೆ ಅನೇಕ ರಾಜರು ಮತ್ತು ಮೈಸೂರು ಅರಸರ ಇತಿಹಾಸ, ಕೆಲವು ಕವಿಗಳ ವಿಷಯಗಳೂ ನಿರೂಪಿತಗೊಂಡಿದ್ದು ಚಾರಿತ್ರಿಕ ದೃಷ್ಟಿಯಿಂದ ಈ ಗ್ರಂಥಕ್ಕೆ ಮಹತ್ವ ಲಭಿಸಿದೆ. ಹೊಸಗನ್ನಡ ಗದ್ಯದ ಕುರುಹುಗಳು ಈ ಕೃತಿಯಲ್ಲಿ ಕಾಣದೊರೆಯುತ್ತವೆ.

ರಾಮಕಥಾವತಾರ 16 ಆಶ್ವಾಸಗಳುಳ್ಳ ಚಂಪೂ ಗ್ರಂಥ. ನಾಗಚಂದ್ರನ ರಾಮಚಂದ್ರಚರಿತಪುರಾಣದ ಕಥೆಯೇ ಇಲ್ಲಿ ಸ್ವಲ್ಪ ವಿಸ್ತಾರವಾಗಿ ವರ್ಣಿತವಾಗಿದೆ. ಆ ಕಾವ್ಯದ ಅನೇಕ ಪದ್ಯಗಳೂ ಇದರಲ್ಲಿ ಅನುವಾದ ಗೊಂಡಿವೆ. **(ಕೆ.ಎಚ್.)**

**ದೇವದುರ್ಗ:** ರಾಯಚೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ಈ ತಾಲ್ಲೂಕನ್ನು ಪೂರ್ವದಲ್ಲಿ ರಾಯಚೂರು, ದಕ್ಷಿಣದಲ್ಲಿ ಮಾನ್ವಿ ಮತ್ತು ಪಶ್ಚಿಮದಲ್ಲಿ ಲಿಂಗಸುಗೂರು ತಾಲ್ಲೂಕುಗಳು ಸುತ್ತುವರಿದಿವೆ. ಉತ್ತರದಲ್ಲಿ ಕೃಷ್ಣಾನದಿ ಗಡಿಯಾಗಿ ಹರಿದು ಗುಲ್ಬರ್ಗ ಜಿಲ್ಲೆಯಿಂದ ಬೇರ್ಪಡಿಸಿದೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 1,541ಚ.ಕಿಮೀ. ಈ ತಾಲ್ಲೂಕಿನಲ್ಲಿ ದೇವದುರ್ಗ, ಗಬ್ಬೂರು, ಜಾಲಹಳ್ಳಿ ಮತ್ತು ಅರಕೆರೆ ನಾಲ್ಕು ಹೋಬಳಿಗಳಿದ್ದು 188 ಗ್ರಾಮಗಳಿವೆ. ಜನಸಂಖ್ಯೆ 2,22,457.

ಈ ತಾಲ್ಲೂಕಿನಲ್ಲಿರುವ ಕೆಲವು ಸಣ್ಣ ಬೆಟ್ಟಗಳನ್ನು ಕರಡೀಗುಡ್ಡ ಹಾಗೂ ಮಸರಕಲ್ಲು ಬೆಟ್ಟ ಶ್ರೇಣಿಗಳೆಂದು ಕರೆಯುತ್ತಾರೆ. ಅವು ಸು. 1500' ಗಳಿಂದ 1774'ಗಳ ವರೆಗೆ ಇದ್ದು ಕರ್ಗಲ್ ಜಿನ್ನಣ್ಣನಪುರ, ಹುನಗುಂದಾಬಾದ, ರಾಮದುರ್ಗ, ದೇವದುರ್ಗ, ಕರಡಿಗುಡ್ಡ, ಗಬ್ಬೂರು ಹಾಗೂ ಗಣೇಕಲ್ಲು ಮೊದಲಾದೆಡೆಗಳಲ್ಲಿ ಹರಡಿಕೊಂಡಿವೆ. ಕೃಷ್ಣಾ ನದಿಯ ಸ್ವಲ್ಪ ಭಾಗವೂ ಗುಡ್ಡಗಳ ನಡುವೆ ಹರಿದಿದೆ. ಈ ಬೆಟ್ಟಗಳು ಗಣೇಕಲ್ಲು ವಿಭಾಗದಲ್ಲಿ ಧಾರವಾಡ ಗಚ್ಚಿಯ ಶಿಲಾ ಜಾತಿಯನ್ನೂ ಕಾಚಾಪುರ ವಿಭಾಗದಲ್ಲಿ ಕಲಾದಗಿ ಜಾತಿ ಶ್ರೇಣಿಯನ್ನೂ ಹೊಂದಿವೆ. ಇಲ್ಲಿನ ಭೂಮಿಯ ಸ್ವಲ್ಪಭಾಗ ಕೆಂಪು ಮರಳು ಮಿಶ್ರಿತ ಬೆಣಚುಕಲ್ಲು ಬೆರೆತ ಕೆಂಪು ಬಣ್ಣದ್ದಾಗಿದ್ದರೆ ಜಾಲಹಳ್ಳಿ ಹಾಗೂ ದೇವದುರ್ಗ, ಇತರ ಭಾಗಗಳಲ್ಲಿ ಕಪ್ಪು ಅಥವಾ ಎರೆಭೂಮಿ ಇದೆ. ಧಾರವಾಡ ಶಿಲಾಶ್ರೇಣಿ ವಿಶೇಷ ಖನಿಜ ಸಂಪತ್ತಿನಿಂದ ಕೂಡಿದೆ. ಡೆಕ್ಕನ್ ಮೈನಿಂಗ್ ಕಂಪನಿಯವರು ಕೆಲಕಾಲ ವಂಡಳ್ಳಿ, ದೇವದುರ್ಗ ಮುಂತಾದ ಸ್ಥಳಗಳ ಗಣಿಗಳಲ್ಲಿ ಬಂಗಾರವನ್ನು ತೆಗೆದರು; ಆದರೆ ಅದರ ಉತ್ಪತ್ತಿಗಿಂತ ವೆಚ್ಚ ಹೆಚ್ಚಾದುದರಿಂದ ಗಣಿಕೆಲಸ ನಿಂತಿತು.

ತಾಲ್ಲೂಕಿನಲ್ಲಿ ಕೃಷ್ಣಾನದಿಯ ದಂಡೆಯುದ್ದಕ್ಕೂ ತೆಳು ಅರಣ್ಯವಿದೆ. ಈ ಕಾಡಿನಲ್ಲಿ ತರೆ, ತುಮರಿ (ಬೀಡಿ ಎಲೆಯ ಮರ), ಕಕ್ಕೆ, ಜಾಲಿ, ಬೆಟ್ಟಲ, ಹೊಂಗೆ, ಹುಣಿಸೆ, ಇಪ್ಪೆ, ಮುತ್ತುಗ, ತಿರುಮನ್, ದಿಂಡಿಗ, ಚುಜ್ಜಲು, ಬಿಜಸಾರ, ಹೊನ್ನೆ, ಮತ್ತಿ, ಬಾರಿ ಮುಂತಾದವೂ ಇಲ್ಲಿನ ಬೆಟ್ಟಗಳಲ್ಲಿ ಸೀತಾಫಲ ಹಣ್ಣಿನ ಗಿಡಗಳೂ ಸಾಕಷ್ಟಿವೆ. ಇಲ್ಲಿನ ಅಡವಿಗಳಲ್ಲಿ ಗಣಜಲು ಹುಲ್ಲೂ ಅಲ್ಲಲ್ಲಿ ವಿಶೇಷವಾಗಿ ಬೆಳೆಯುತ್ತದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 645 ಮಿಮೀ. ಕೃಷ್ಣಾನದಿ ಗುಡ್ಡಪ್ರದೇಶದಲ್ಲೇ ಹರಿಯುವುದರಿಂದ ನೀರಾವರಿಯ ಸೌಲಭ್ಯ ಅದರಿಂದ ಅಷ್ಟು ಆಗಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಗಳ ಅನ್ವಯ ನಿರ್ಮಿಸಲಾಗಿರುವ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ಈ ತಾಲ್ಲೂಕಿನ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯ ಒದಗಿದೆ. ಇಲ್ಲಿನ ಹೆಚ್ಚು ನೀರಾವರಿಯೆಲ್ಲ ಕೆರೆಗಳ ಮೂಲಕವೆ ನಡೆಯುತ್ತದೆ. ಜೋಳ, ಹತ್ತಿ, ಗೋದಿ, ಬತ್ತ – ಈ ತಾಲ್ಲೂಕಿನ ಮುಖ್ಯ ಬೆಳೆಗಳು. ಈ ತಾಲ್ಲೂಕಿನಲ್ಲಿ ಮುಖ್ಯ ಕೈಗಾರಿಕೆ ಕೈಮಗ್ಗವಾಗಿದ್ದು ದೇವದುರ್ಗದ ಬಟ್ಟೆಗಳು ಪ್ರಸಿದ್ಧ.

ಗಬ್ಬೂರು, ಜಾಲಹಳ್ಳಿ, ಅರಕೆರೆ, ರಾಮದುರ್ಗ, ಮೊಸರಕಲ್ಲು, ಗಣೇಕಲ್ಲು, ವಂಡಳ್ಳಿ ಮತ್ತು ಕೊಪ್ಪರ– ಇವು ಈ ತಾಲ್ಲೂಕಿನ ಇತರ ಮುಖ್ಯಸ್ಥಳಗಳು. ಗಬ್ಬೂರು **(ನೋಡಿ)** ಒಂದು ಸಣ್ಣ ಊರಾದರೂ ಹಿಂದೊಮ್ಮೆ ವಿದ್ಯಾಕೇಂದ್ರವಾಗಿ ಮೆರೆದು ಪ್ರಸಿದ್ಧ ಸ್ಥಳವಾಗಿತ್ತು.

ಮೊಸರಕಲ್ಲು ಮೊಸಳಿಕಲ್ (ಮಸಳಿಕಲ್) ಎಂಬ ಪ್ರಾಂತ್ಯ ವಿಭಾಗದ ಮುಖ್ಯ ಸ್ಥಳವಾಗಿತ್ತು. ಇದು ಶಿವಶರಣೆ ಮುಕ್ತಾಯಕ್ಕನ ಗಂಡನ ಊರು ಎಂದು ಹೇಳಲಾಗುತ್ತದೆ. ಪ್ರಸಿದ್ಧ ಹರಿದಾಸರಾದ ಗೋಪಾಲ ದಾಸರು ಜನಿಸಿದ್ದು ಇಲ್ಲಿ ಎಂಬ ಅಭಿಪ್ರಾಯವೂ ಇದೆ. ಕುಮಾರವಿಜಯ, ಬಸವಶತಕ, ಪಂಪಾಶತಕ, ಭುವನೈಕನಾಯಕೀಶತಕ ಮುಂತಾದ ಗ್ರಂಥಗಳನ್ನು ರಚಿಸಿದ ಸಂಗವಿಭು ಗಣೇಕಲ್ಲಿನವನು. ರಾಮದುರ್ಗದಲ್ಲಿ ಒಂದು ಪುರಾತನ ಕೋಟೆಯಿದೆ. ಜಾಲಹಳ್ಳಿ ಒಂದು ವ್ಯಾಪಾರ ಕೇಂದ್ರ. ಇಲ್ಲಿನ ನಿಂಬೆಹಣ್ಣು ಪ್ರಸಿದ್ಧ. ವಂಡಳ್ಳಿ ಭಾಗದಲ್ಲಿ ಪುರಾತನ ಕಾಲದಲ್ಲಿ ಅದಿರು ಕರಗಿಸುವ ಕಾರ್ಖಾನೆಗಳಿದ್ದವೆಂದು ತಿಳಿದುಬಂದಿದೆ. ಇಲ್ಲಿ ಚಿನ್ನದ ಗಣಿ ಇದ್ದು ಕೆಲಕಾಲ ಚಿನ್ನವನ್ನು ತೆಗೆದಿದ್ದರು. ಕೊಪ್ಪರ ಕೃಷ್ಣಾ ನದಿಯ ದಂಡೆಯಲ್ಲಿರುವ ಒಂದು ಯಾತ್ರಾಕ್ಷೇತ್ರ. ನೃಸಿಂಹಸ್ವಾಮಿ ಇಲ್ಲಿನ ಅಧಿದೈವ. ಇದು ಬಹಮನೀ ಹಾಗೂ ವಿಜಯನಗರದ ರಾಜರ ರಾಯಚೂರು ದೋಆಬ್ ಯುದ್ಧಗಳಲ್ಲಿ ರಹದಾರಿಯಲ್ಲಿನ ಒಂದು ಮುಖ್ಯ ಗ್ರಾಮವಾಗಿತ್ತು.

ದೇವದುರ್ಗ ಈ ತಾಲ್ಲೂಕಿನ ಆಡಳಿತ ಕೇಂದ್ರ. ರಾಯಚೂರಿನಿಂದ 60 ಕಿಮೀ ದೂರದಲ್ಲಿದೆ. ಜನಸಂಖ್ಯೆ 21,994. ಈ ಊರಿನಲ್ಲಿ ಅನೇಕ ಕೈಮಗ್ಗಗಳಿದ್ದು ಕೈಮಗ್ಗದ ಬಟ್ಟೆಗಳ ತಯಾರಿಕೆ ಮತ್ತು ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ. ಸರ್ಕಾರಿ ಆಡಳಿತ ಕಚೇರಿಗಳೂ ಪ್ರಾಥಮಿಕ ಮಾಧ್ಯಮಿಕ ಪ್ರೌಢಶಾಲೆಗಳೂ ಅಂಚೆ ತಂತಿ ಮತ್ತು ವೈದ್ಯಕೀಯ ಸೌಲಭ್ಯಗಳೂ ಇಲ್ಲಿವೆ. ಇಲ್ಲಿ ಬೇಡರ ದೊರೆಗಳಿಂದ ಕಟ್ಟಲ್ಪಟ್ಟು ಅವರ ಬಲವಾದ ಸ್ಥಾನವಾಗಿದ್ದ ಒಂದು ಪುರಾತನ ಗಿರಿದುರ್ಗವಿದೆ. ಒಂದನೆಯ ಆಸಫ್ ಜಾನ ಕಾಲಕ್ಕೆ ದೇವದುರ್ಗ ಕಿಲ್ಲೆ ಬೇಡರ ದೊರೆಯೊಬ್ಬನ

ಆಡಳಿತಕ್ಕೊಳಪಟ್ಟಿತ್ತು. ಆಸಫ್ ಜಾ ಆ ದೊರೆಯ ಸಹಾಯ ಕೋರಿದ್ದನೆಂದು ತಿಳಿದುಬರುತ್ತದೆ. ಕೊಹರನ್ ಎಂಬ ಅರಬ್ ದಳವಾಯಿ ಕೆಲಕಾಲ ಈ ನಾಡನ್ನು ಆಳಿದ. ಆತ ನಿಜಾಮನ ಸೈನ್ಯದೊಂದಿಗೆ ಹೋರಾಡದೆ ಫ್ರೇಜರಂ ಎಂಬವನಿಗೆ ಶರಣಾದ. ಆ ಮುಂದೆ ಅದು ನಿಜಾಮ ದೊರೆಗಳ ಅಧೀನದಲ್ಲಿಯೇ ಆ ರಾಜ್ಯ ವಿಲೀನವಾಗುವವರೆಗೆ ಇದ್ದಿತು. ಸ್ವಾತಂತ್ರ್ಯ ಸಮರದಲ್ಲಿ ದೇವದುರ್ಗವೂ ಒಂದು ಸಣ್ಣ ಪಾತ್ರವನ್ನು ವಹಿಸಿತು. ಅದು ಬಾದಾಮಿಯನ್ನು 150 ಅರಬರ ಜೊತೆಗೆ ಮುತ್ತಿದ ನರಸಿಂಗರಾವ್ ಎಂಬ ನಾಯಕನಿಗೆ ಯೋಜನೆ ಹಾಕಿಕೊಳ್ಳಲು, ಕೆಲಕಾಲ ಚಟುವಟಿಕೆಗಳನ್ನು ನಡೆಸಲು ಕಾರ್ಯರಂಗವಾಗಿದ್ದಿತು. ಕರುಣೇಶ್ವರಪುರಾಣದ ಕರ್ತೃ ಚೆನ್ನಮಲ್ಲಕವಿ ಈ ಊರಿನವನು. **(ಎಸ್.ಜಿ.ಎ.)**

**ದೇವನಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಈ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರು ಜಿಲ್ಲೆಯ ಈಶಾನ್ಯಕ್ಕಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು, ಈಶಾನ್ಯಕ್ಕೆ ಶಿಡ್ಲಘಟ್ಟ ತಾಲ್ಲೂಕು, ಪೂರ್ವ ಮತ್ತು ಆಗ್ನೇಯಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕು, ದಕ್ಷಿಣಕ್ಕೆ ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕು ಮತ್ತು ಹೊಸಕೋಟೆ ತಾಲ್ಲೂಕುಗಳು, ಪಶ್ಚಿಮ ಮತ್ತು ವಾಯವ್ಯಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕುಗಳು ಸುತ್ತುವರೆದಿವೆ. ಆವತಿ, ದೇವನಹಳ್ಳಿ, ವಿಜಯಪುರ, ಬಾಗಲೂರು, ಕುಂದಾಣ ಮತ್ತು ಬೂದಿಗೆರೆ ಹೋಬಳಿಗಳಿದ್ದು, 277 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 597.2 ಚ.ಕಿಮೀ. ಜನಸಂಖ್ಯೆ 1,85,326.

ದೇವನಹಳ್ಳಿ ತಾಲ್ಲೂಕು ಹೆಚ್ಚು ಮೈದಾನ ಪ್ರದೇಶದಿಂದ ಕೂಡಿದೆ. ಅಲೆಅಲೆಯಾಗಿ ಏರಿಳಿಯುವ ಇದರ ಸಾಮಾನ್ಯ ಮೇಲ್ಮೈ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದ್ದು ಫಲವತ್ತಾದ ಕಣಿವೆ ಪ್ರದೇಶಗಳನ್ನೊಳಗೊಂಡಿದೆ. ಉತ್ತರ ಮತ್ತು ಪಶ್ಚಿಮದಲ್ಲಿ ಕೆಲವು ಸಣ್ಣ ಬೆಟ್ಟಗಳುಂಟು. ವಾಯವ್ಯ ಮೂಲೆಯಲ್ಲಿರುವ ದಿಬ್ಬಗೆರೆಬೆಟ್ಟ ತಾಲ್ಲೂಕಿನ ಅತ್ಯಂತ ಎತ್ತರದ ಬೆಟ್ಟ (1173 ಮೀ.). ಬೆಟ್ಟಹಲಸೂರಿನ ದಕ್ಷಿಣದಲ್ಲಿರುವ ಬೆಟ್ಟ ಮತ್ತೊಂದು ಮುಖ್ಯವಾದದ್ದು.

ವಿನ್ಯಾಸ ಮತ್ತು ರೂಪಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುವ ಗ್ರಾನೈಟಿಕ್ ನೈಸ್‌ಶಿಲೆ ಈ ತಾಲ್ಲೂಕಿನ ಎಲ್ಲ ಭಾಗಗಳಲ್ಲೂ ಕಂಡುಬರುತ್ತದೆ. ಬೆಟ್ಟ ಹಲಸೂರಿನ ಚಪ್ಪಡಿ ಕಲ್ಲುಗಳನ್ನು ಬೆಂಗಳೂರಿನ ವಿಧಾನಸೌಧದ ನಿರ್ಮಾಣದಲ್ಲಿ ಬಳಸಲಾಗಿದೆ. ಕೊಯಿರಬೆಟ್ಟ ಚಪ್ಪಡಿಕಲ್ಲುಗಳಿಗೆ ಪ್ರಸಿದ್ಧ. ಹೊರದೇಶಗಳಿಗೂ ಇಲ್ಲಿಂದ ಚಪ್ಪಡಿಕಲ್ಲುಗಳನ್ನು ರಫ್ತು ಮಾಡುತ್ತಾರೆ. ತಾಲ್ಲೂಕಿನಲ್ಲಿ ಕೆಂಪು ಲ್ಯಾಟರೈಟ್ ಮತ್ತು ಫಲವತ್ತಾದ ಜೇಡಿ ಮಿಶ್ರಿತ ಮರಳುಮಣ್ಣು ಇದೆ. ಈ ತಾಲ್ಲೂಕು ಹಿಂದೆ ದಂಡಕಾರಣ್ಯದ ಕುಂದಾರಣ್ಯದ ಭಾಗವಾಗಿತ್ತೆಂದು ಹೇಳುತ್ತಾರೆ. ತಾಲ್ಲೂಕಿನ ಎತ್ತರ ಪ್ರದೇಶಗಳಲ್ಲಿ ಕುರುಚಲು ಗಿಡಗಳ ಕಾಡುಗಳು ಇವೆ. ಕೆಲವು ರಾಜ್ಯ ಕಾಡುಗಳು ಮತ್ತು ರಕ್ಷಿತ ಕಾಡುಗಳು. ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಹರಿಯುವ ದಕ್ಷಿಣ ಪಿನಾಕಿನಿ ಸ್ವಲ್ಪದೂರ ಹೊಸಕೋಟೆ ತಾಲ್ಲೂಕನ್ನು ಬೇರ್ಪಡಿಸಿ ದಕ್ಷಿಣಾಭಿಮುಖ ವಾಗಿ ಹರಿಯುವುದು. ವಿಜಯಪುರದ ದಕ್ಷಿಣದಲ್ಲಿ ಈ ನದಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ತಾಲ್ಲೂಕಿನಲ್ಲಿರುವ ನದಿಯ ಬಲ ದಂಡೆಯ ಭೂಭಾಗಕ್ಕೆ ಇದರ ಜಲಾಶ್ರಯವಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಈ ನದಿಯ ಪ್ರದೇಶದಲ್ಲಿ ಅನೇಕ ಕೆರೆ ಮತ್ತು ಬಾವಿಗಳಿವೆ. ಈ ತಾಲ್ಲೂಕಿನ ಅತಿ ದೊಡ್ಡಕೆರೆ ಅಣ್ಣೇಶ್ವರದ ಹತ್ತಿರವಿದ್ದು ಮತ್ತೊಂದು ದೊಡ್ಡ ಕೆರೆ ವಿಜಯಪುರದ ಪಶ್ಚಿಮಕ್ಕೆ ಇದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 701 ಮಿಮೀ. ರಾಗಿ ಈ ತಾಲ್ಲೂಕಿನ ಪ್ರಮುಖ ಆಹಾರ ಬೆಳೆ. ಜೋಳ, ಅವರೆ, ಕಡಲೆ, ಎಣ್ಣೆಕಾಳು ಉಳಿದ ಬೆಳೆಗಳು. ಬಾವಿಗಳಿಂದ ಕೆರೆಗಳಿಂದ ಭೂಮಿ ನೀರಾವರಿಗೆ ಒಳಪಟ್ಟಿದೆ. ಆಲೂಗೆಡ್ಡೆ, ಮೆಣಸಿನಕಾಯಿ, ಹೂಕೋಸು, ಎಲೆಕೋಸು, ಬಟಾಣಿ, ಈರುಳ್ಳಿ, ಗಜ್ಜರಿ, ಕೆಂಪು ಮೂಲಂಗಿ ಇಲ್ಲಿಯ ಪ್ರಮುಖ ತರಕಾರಿ ವ್ಯಾಪಾರಿ ಬೆಳೆಗಳು. ಕಬ್ಬು, ಬಾಳೆ ಮತ್ತು ಗೋವಿನ ಜೋಳ ಸಹ ಬೆಳೆಯುತ್ತಾರೆ. ಬತ್ತ, ಹಿಪ್ಪುನೇರಳೆ, ದ್ರಾಕ್ಷಿ ಇತರ ಬೆಳೆಗಳು. ಆವತಿ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ದ್ರಾಕ್ಷಿಯನ್ನು ಹೆಚ್ಚು ಬೆಳೆಯುತ್ತಾರೆ. ದೇವನಹಳ್ಳಿಯ ಚಕ್ಕೋತ ಪ್ರಸಿದ್ಧವಾದುದು.



ಟಿಪ್ಪುಸುಲ್ತಾನನ ಜನ್ಮಸ್ಥಳ, ದೇವನಹಳ್ಳಿ

ಈ ತಾಲ್ಲೂಕಿನಲ್ಲಿ ದೇವನಹಳ್ಳಿ ಮತ್ತು ವಿಜಯಪುರ ಎಂಬ ಎರಡು ಪಟ್ಟಣಗಳಿವೆ. ಬಾಗಲೂರು, ಮಾರೇನಹಳ್ಳಿ, ಬೂದಿಗೆರೆ, ಹುಣಸಮಾರನಹಳ್ಳಿ, ಕೊಡಿಗೆನಹಳ್ಳಿ, ಚಿಕ್ಕಜಾಲ, ಉತ್ತನಹಳ್ಳಿ, ಗಂಗಾವರ, ಚೌಡಪ್ಪನಹಳ್ಳಿ, ಮೈಲನಹಳ್ಳಿ, ಎಲಿಯೂರು, ಕೋರಮಂಗಲ, ಆವತಿ, ಹಾರೋಹಳ್ಳಿ, ಬಿಜ್ಜವಾರ, ಕಾರಹಳ್ಳಿ, ಕೊಯಿರ, ವಿಶ್ವನಾಥಪುರ, ನವರತ್ನ, ಅರದೇಶನಹಳ್ಳಿ ಮತ್ತು ಬೆಟ್ಟಹಲಸೂರು ಇಲ್ಲಿನ ಮುಖ್ಯ ಗ್ರಾಮುಗಳು. ಕಲ್ಲುಚಪ್ಪಡಿಗೆ ಕೊಯಿರ ಗ್ರಾಮವೂ ರೇಷ್ಮೆ ಕೈಗಾರಿಕೆಗೆ ವಿಜಯಪುರ ಮತ್ತು ಬಾಗಲೂರುಗಳೂ ಪ್ರಸಿದ್ಧ. ತಾಲ್ಲೂಕಿನ ಪೂರ್ವಭಾಗದಲ್ಲಿರುವ ನಲ್ಲೂರು ಇತಿಹಾಸ ಪ್ರಸಿದ್ಧ ಸ್ಥಳ. ಕುಂದಾಣ **(ನೋಡಿ)** ಎಂಬಲ್ಲಿ ಹೊಯ್ಸಳ ದೊರೆ ರಾಮನಾಥ 14ನೆಯ ಶತಮಾನದಲ್ಲಿ ಆಳುತ್ತಿದ್ದ.

ತಾಲ್ಲೂಕಿನ ಮಧ್ಯದಲ್ಲೇ ಬೆಂಗಳೂರು–ಚಿಕ್ಕಬಳ್ಳಾಪುರ ರೈಲುಮಾರ್ಗ ಹಾದು ಹೋಗಿದ್ದು ಬೆಟ್ಟಹಲಸೂರು, ದೊಡ್ಡಜಾಲ, ದೇವನಹಳ್ಳಿ ಮತ್ತು ಆವತಿಯಲ್ಲಿ ರೈಲ್ವೆ ನಿಲ್ದಾಣಗಳಿವೆ. ದೊಡ್ಡಬಳ್ಳಾಪುರ–ದೇವನಹಳ್ಳಿ–ಶಿಡ್ಲಘಟ್ಟ, ಬೆಂಗಳೂರು–ದೇವನಹಳ್ಳಿ–ನಂದೀದುರ್ಗ, ಬೆಂಗಳೂರು –ದೇವನಹಳ್ಳಿ–ಚಿಕ್ಕಬಳ್ಳಾಪುರ, ನಂದೀದುರ್ಗ–

ವಿಜಯಪುರ –ಶಿಡ್ಲಘಟ್ಟ, ಕೊಡಿಗೇನಹಳ್ಳಿ – ಬೂದಿಗೆರೆ – ಬೆಂಗಳೂರು ಮತ್ತು ದೇವನಹಳ್ಳಿ– ಚನ್ನರಾಯಪಟ್ಟಣ ರಸ್ತೆಗಳು ಈ ತಾಲ್ಲೂಕಿನ ಮುಖ್ಯ ರಸ್ತೆಗಳಾದ್ದು ಇವು ತಾಲ್ಲೂಕಿನ ವ್ಯಾಪಾರವಾಣಿಜ್ಯಾಭಿವೃದ್ಧಿಗೆ ಸಹಕಾರಿಯಾಗಿವೆ. ಈ ತಾಲ್ಲೂಕಿನ ವಿಜಯಪುರದಲ್ಲಿ ಪುರಸಭೆ ಮತ್ತು ದೇವನಹಳ್ಳಿಯಲ್ಲಿ ನಗರಸಭೆ ಇದೆ.

ದೇವನಹಳ್ಳಿ ಈ ತಾಲ್ಲೂಕು ಮತ್ತು ಹೋಬಳಿಯ ಆಡಳಿತ ಕೇಂದ್ರ. ಬೆಂಗಳೂರು– ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಂಗಳೂರು ನಗರಕ್ಕೆ 39 ಕಿಮೀ ದೂರದಲ್ಲಿದೆ. ಬೆಂಗಳೂರು– ಚಿಕ್ಕಬಳ್ಳಾಪುರದ ರೈಲುಮಾರ್ಗ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. ಜನಸಂಖ್ಯೆ 52,946.

ದೇವನಹಳ್ಳಿಯಲ್ಲಿ ನಗರಸಭಾಡಳಿತವಿದೆ. ಉತ್ತಮ ಮಾರ್ಗಸಂಪರ್ಕ ಮತ್ತು ರೈಲ್ವೆ ನಿಲ್ದಾಣವಿದ್ದು ವ್ಯಾಪಾರಕೇಂದ್ರವಾಗಿದೆ. ದೇವನಹಳ್ಳಿ ಬಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಯೋಜನೆ ಕಾರ್ಯಗತವಾಗುವ ಹಂತದಲ್ಲಿದೆ. ಇಲ್ಲಿ ರೇಷ್ಮೆ ಕಾರ್ಖಾನೆ ಇದೆ. ಪ್ರತಿ ಬುಧವಾರ ಇಲ್ಲಿ ಸಂತೆ ಸೇರುತ್ತದೆ.

ದೇವನಹಳ್ಳಿ ಮೂಲ ಹೆಸರು ದೇವನದೊಡ್ಡಿ. ಕಂಚಿಯಿಂದ ವಲಸೆ ಬಂದ ಆವತಿ ರಾಜವಂಶದ ಮಲ್ಲಭೈರೇಗೌಡ ಈ ಸ್ಥಳದಲ್ಲಿ ಕೋಟೆಯೊಂದನ್ನು ಕಟ್ಟಿದ (1501). ಇಲ್ಲಿ ಈತನ ವಂಶದವರು ಆಳಿದರು. 1749ರಲ್ಲಿ ದಳವಾಯಿ ನಂಜರಾಜಯ್ಯ ಇದನ್ನು ವಶಪಡಿಸಿಕೊಂಡು ಮೈಸೂರು ಸಂಸ್ಥಾನಕ್ಕೆ ಸೇರಿಸಿದ. ಹೈದರನ ಶೌರ್ಯ ಮೊದಲು ಬೆಳಕಿಗೆ ಬಂದಿದ್ದು ಈ ಸಂದರ್ಭದಲ್ಲಿ ನಡೆದ ಯುದ್ಧದಲ್ಲಿಯೇ. 1753ರಲ್ಲಿ ಟಿಪ್ಪು ಈ ಊರಿನಲ್ಲಿ ಜನಿಸಿದ. ಕೋಟೆಯ ಪಶ್ಚಿಮಕ್ಕೆ ಹೈದರನ ಮನೆಯಿದ್ದ ಸ್ಥಳವನ್ನೂ ಟಿಪ್ಪು ಹುಟ್ಟಿದ ಎಡೆಯನ್ನೂ ಇಲ್ಲಿನ ಜನರು ತೋರಿಸುತ್ತಾರೆ. ಹಾಳಾಗಿದ್ದ ಇಲ್ಲಿನ ಕೋಟೆಯನ್ನು ಹೈದರ್ ಅಧಿಕಾರಕ್ಕೆ ಬಂದಾಗ ಮತ್ತೆ ಕಟ್ಟಿಸಿದ್ದ. ದೇವನಹಳ್ಳಿಗೆ ಟಿಪ್ಪು ಯೂಸಫಾಬಾದ್ (ಸುಂದರ ನೆಲೆ) ಎಂದು ಹೆಸರಿಟ್ಟ. ಆದರೆ ಅದು ರೂಢಿಗೆ ಬರಲಿಲ್ಲ. ಹೈದರ್ ಮತ್ತು ಟಿಪ್ಪು ಇವರ ಕಾಲದಲ್ಲಿ ದೇವನಹಳ್ಳಿ ಪ್ರಮುಖ ಪಟ್ಟಣವಾಗಿತ್ತು. 1791ರಲ್ಲಿ ಕಾರ್ನ್‌ವಾಲಿಸ್ ಇದನ್ನು ವಶಪಡಿಸಿಕೊಂಡ.

ದೇವನಹಳ್ಳಿಯಲ್ಲಿ ಆಗಿನ ಕೋಟೆಕೊತ್ತಲಗಳು, ಸುಲ್ತಾನ್‌ಪೇಟೆ, ಬತೇರಿ, ಪೂರ್ಣಯ್ಯನ ಸರೋವರ ಮೊದಲಾದವುಗಳ ಅವಶೇಷಗಳಿವೆ. ಟಿಪ್ಪು ಹುಟ್ಟಿದ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವಾಗಿ ರಕ್ಷಿಸಲಾಗಿದೆ. ಹಳೆಯದಾದ ನಂಜುಂಡೇಶ್ವರ ದೇವಾಲಯ, ವೇಣುಗೋಪಾಲಸ್ವಾಮಿ ಗುಡಿ, ಸಿದ್ಧೇಶ್ವರ ಗುಡಿ, ಆಂಜನೇಯ ಮತ್ತು ಗಂಗಮ್ಮ ಗುಡಿಗಳಿವೆ. ವೇಣುಗೋಪಾಲ ಮತ್ತು ನಂಜುಂಡೇಶ್ವರ ಗುಡಿಗಳು ಪಾಳೆಯಗಾರರ ಕಾಲದ ಕೃತಿಗಳು. ಆ ಕಾಲದ ಅನೇಕ ಪೌರಾಣಿಕ ಶಿಲ್ಪಗಳು ಈ ದೇವಾಲಯಗಳಲ್ಲಿವೆ. ಪ್ರತಿ ಚೈತ್ರ ಹುಣ್ಣಿಮೆಯಂದು ವೇಣುಗೋಪಾಲ ಸ್ವಾಮಿ ಜಾತ್ರೆ ನಡೆಯುತ್ತದೆ. **(*;ಆರ್.ಎಸ್.ಆರ್.)**

**ದೇವನಹಳ್ಳಿ ಪಾಳೆಯಗಾರರು:** 16ನೆಯ ಶತಮಾನದಾರಭ್ಯ 18ನೆಯ ಶತಮಾನದ ಮಧ್ಯಭಾಗದವರೆಗೆ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಿಂದ ಆ ಸುತ್ತಣ ಪ್ರಾಂತ್ಯವನ್ನು ಆಳುತ್ತಿದ್ದ ಪಾಳೆಯಗಾರರು. ದೇವನಹಳ್ಳಿಗೆ ಮೊದಲು ದೇವ ಎಂಬುವನು ಮುಖ್ಯಸ್ಥನಾಗಿದ್ದುದರಿಂದ ಅದಕ್ಕೆ ದೇವನದೊಡ್ಡಿ ಎಂಬ ಹೆಸರಿದ್ದು ಒಂದು ಚಿಕ್ಕ ಹಳ್ಳಿಯಾಗಿತ್ತಂತೆ. ಕಂಚಿಯಿಂದ ನಿರಾಶ್ರಿತನಾಗಿ ಬಂದು ಆವತಿಯಲ್ಲಿ ನೆಲೆಸಿದ್ದವನೊಬ್ಬನ ಮಗ ಮಲ್ಲಭೈರೇಗೌಡ 1501ರಲ್ಲಿ ದೇವನದೊಡ್ಡಿಯಲ್ಲಿ ಕೋಟೆಯನ್ನು ಕಟ್ಟಿ ಅದಕ್ಕೆ ದೇವನಹಳ್ಳಿ ಅಥವಾ ದೇವಂಡಹಳ್ಳಿ ಎಂದು ಹೆಸರಿಟ್ಟು, ಅದರ ಆಡಳಿತವನ್ನು ಆತನ ಸಹೋದರ ಸಣ್ಣಭೈರೇಗೌಡನಿಗೆ ವಹಿಸಿದ. ಸಣ್ಣಭೈರೇಗೌಡ ನಲವತ್ತು ವರ್ಷಗಳ ಕಾಲ ಆಳಿ ಆ ಪ್ರದೇಶವನ್ನು ಅಭಿವೃದ್ಧಿಗೆ ತಂದ. ಅವನ ಮಗ ಬೈರೇಗೌಡ ಇಪ್ಪತ್ತೈದು ವರ್ಷಗಳ ಕಾಲ ಆಳಿದ. ಅನಂತರ ಪುತ್ರಾನುಕ್ರಮವಾಗಿ ದಯಾಳು ಬೈಚೇಗೌಡ ಮೂವತ್ತೇಳು ವರ್ಷ, ಮುದ್ದಭೈರೇಗೌಡ ಇಪ್ಪತ್ತು ವರ್ಷ, ಇಮ್ಮಡಿ ಭೈರೇಗೌಡ ಮೂವತ್ತೇಳು ವರ್ಷ, ಗೋಪಾಲಗೌಡ ಮೂವತ್ತೈದು ವರ್ಷ, ದೊಡ್ಡಭೈರೇಗೌಡ ಐವತ್ತನಾಲ್ಕು ವರ್ಷ ಪಾಳೆಯಗಾರರಾಗಿದ್ದರು. ದೊಡ್ಡಭೈರೇಗೌಡನ ಮಗ ತಂಗಪ್ಪಗೌಡ ಹತ್ತು ತಿಂಗಳು ಆಳಿ ಮಕ್ಕಳಿಲ್ಲದೆ ಮಡಿದ. ಅನಂತರ ಅವನ ಬಂಧು ಚಿಕ್ಕಬಳ್ಳಾಪುರದ ಚಿಕ್ಕಪ್ಪಗೌಡ ಪಾಳೆಯಗಾರನಾದ. ಇವನ ಕಾಲದಲ್ಲಿ ಮೈಸೂರಿನ ದಳವಾಯಿ ನಂಜರಾಜಯ್ಯ ದೇವನಹಳ್ಳಿಗೆ ಮುತ್ತಿಗೆ ಹಾಕಿದ (1749). ಈ ಮುತ್ತಿಗೆ ಎಂಟು ತಿಂಗಳುಗಳ ಕಾಲ ಮುಂದುವರಿದು ಕೊನೆಗೆ ಪಾಳೆಯಗಾರ ಸೋತ. ದೇವನಹಳ್ಳಿ ಮೈಸೂರಿನ ಪ್ರಭುತ್ವವನ್ನು ಒಪ್ಪಿಕೊಂಡಿತು. ಹೈದರ್ ಅಲಿಯ ಯುದ್ಧ ಪರಾಕ್ರಮ ಮೊದಲ ಬಾರಿಗೆ ಬೆಳಕಿಗೆ ಬಂದುದು ಈ ಯುದ್ಧದಲ್ಲಿ. ಹೈದರ್ ದೇವನಹಳ್ಳಿಗೆ ತೆರಳಿದಾಗ, ಚಿಕ್ಕಪ್ಪಗೌಡ, ಗುತ್ತಿಯ ನಾಯಕ ಮುರಾರಿ ನಾಯಕನ ಸ್ನೇಹವನ್ನು ಸಂಪಾದಿಸಿ, ಆತನ ಸೈನ್ಯವನ್ನು ಚಿಕ್ಕಬಳ್ಳಾಪುರದ ಕೋಟೆಯ ರಕ್ಷಣೆಗೆ ನೇಮಿಸಿ, ತಾನು ನಂದಿದುರ್ಗಕ್ಕೆ ಪಲಾಯನ ಮಾಡಿದ. ಆದರೆ ಹೈದರ್ ಚಿಕ್ಕಪ್ಪಗೌಡನನ್ನು ಸೆರೆಹಿಡಿದು ಅವನನ್ನು ಮತ್ತು ಅವನ ಕುಟುಂಬದವರನ್ನು ಬೆಂಗಳೂರಿನಲ್ಲಿ ಸೆರೆಯಲ್ಲಿಟ್ಟ. ಅಲ್ಲಿ ಚಿಕ್ಕಪ್ಪಗೌಡ ಮೃತನಾದ. ದೇವನಹಳ್ಳಿ ಮೈಸೂರು ರಾಜ್ಯಕ್ಕೆ ಸೇರಿಹೋಯಿತು. **(ಎ.ವಿ.ವಿ.,; ಎಂ.ಕೆ.ಬಿ.)**

**ದೇವನೂರು:** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿ ಕಡೂರಿನಿಂದ ಆಗ್ನೇಯಕ್ಕೆ 21 ಕಿಮೀ ದೂರದಲ್ಲಿರುವ ಗ್ರಾಮ ಜನಸಂಖ್ಯೆ 2,373. ಇದು ಜನಪ್ರಿಯ ಜೈಮಿನಿ ಭಾರತವನ್ನು ಬರೆದ ಕವಿ ಲಕ್ಷ್ಮೀಶನ ಜನ್ಮಸ್ಥಳ (ಸುರಪುರ ತಾಲ್ಲೂಕಿನ ದೇವನೂರು ಎಂಬ ಅಭಿಪ್ರಾಯವೂ ಇದೆ) ಹಾಗೂ ಪುರಾಣ ಪ್ರಸಿದ್ಧವಾದ ಸ್ಥಳವೆಂದು ಪ್ರತೀತಿ. ನವಸಿದ್ಧರು ನಿಂತು ತಪಸ್ಸು ಮಾಡಿದ ಕ್ಷೇತ್ರವೆಂದೂ ಅಮರಪುರ, ಗೀರ್ವಾಣಪುರ, ಸುರಪುರ, ದೇವಪುರವೆಂಬ ಹೆಸರುಗಳಿಂದ ಸಂಸ್ಕೃತಿಯ ಕೇಂದ್ರವಾಗಿತ್ತೆಂದೂ ಉಲ್ಲೇಖಗಳಿವೆ.

ದೇವನೂರು 13ನೆಯ ಶತಮಾನದಿಂದಲೂ ಪ್ರಸಿದ್ಧವಾಗಿತ್ತು. 1234ರ ಇಲ್ಲಿನ ಒಂದು ಶಾಸನ ಈ ಊರಿಗೆ ಲಕ್ಷ್ಮೀನಾರಾಯಣಪುರವೆಂದು ಪ್ರತಿನಾಮವಿತ್ತೆಂದು ತಿಳಿಸುತ್ತದೆ. ಕೆರೆಯ ಬಳಿ ಹಲವು ಹೊಯ್ಸಳ ಕೃತಿಗಳ ಅವಶೇಷಗಳು ದೊರಕಿವೆ. ಇಲ್ಲಿ ರಾಮೇಶ್ವರ ದೇವಾಲಯ, ಒಂದು ಜೈನಬಸದಿ ಇತ್ತೆಂದು ಹೇಳಲಾಗುತ್ತದೆ.

ಈಗಿರುವ ಲಕ್ಷ್ಮೀಕಾಂತ ಅಥವಾ ಲಕ್ಷ್ಮೀನಾರಾಯಣ ದೇವಾಲಯ ಸು. 17ನೆಯ ಶತಮಾನದಲ್ಲಿ ಕಣಶಿಲೆಯಲ್ಲಿ ಕಟ್ಟಿದ ಸಾಮಾನ್ಯ ಕಟ್ಟಡ. ಅದರ ಒಳಗಿರುವ ವಿಗ್ರಹ ಹೊಯ್ಸಳ ಶೈಲಿಯದು. ಇದರಲ್ಲಿ ಗರ್ಭಗೃಹ, ಅಂತರಾಳ, ಒಳನವರಂಗ ಮತ್ತು ಹೊರನವರಂಗ ಇವೆ. ಒಳನವರಂಗದಲ್ಲಿ ಆಳ್ವಾರುಗಳು ಮೊದಲಾದ ವಿಗ್ರಹಗಳಿವೆ. ಅವುಗಳಲ್ಲಿ ಒಂದು ಲಕ್ಷ್ಮೀಶನದು (ಸ್ಥಳೀಯ ಹೆಸರು ಲಕ್ಷ್ಮೀಕಾಂತ ಹೆಬ್ಬಾರ). ಹೊರನವರಂಗದಲ್ಲಿ ವಿಶ್ವಕ್ಸೇನ, ಭೂದೇವಿ ಮೊದಲಾದ ದೇವವಿಗ್ರಹಗಳಿವೆ. ದೇವಾಲಯ ಪ್ರಾಕಾರದ ಹಿಂಗೋಡೆಯ ಬಳಿಯ ಮಂಟಪವೊಂದನ್ನು ಲಕ್ಷ್ಮೀಶನ ಜನ್ಮಸ್ಥಳವೆಂದು ತೋರಿಸಲಾಗುತ್ತದೆ. ಲಕ್ಷ್ಮೀಶನ ಮನೆಯ ನಿವೇಶನದ ಬಳಿ ಇರುವ ಒಂದು ಮಂಟಪ ಕವಿಯೇ ಕಟ್ಟಿಸಿದ್ದೆಂದು ಪ್ರತೀತಿ.

ಈ ಊರಿನಲ್ಲಿ ಸಿದ್ಧೇಶ್ವರ ದೇವಾಲಯವೂ ಇದೆ. ಇದು ಹೊಯ್ಸಳ ಕಾಲದ ಸರಳ ಶೈಲಿಯಲ್ಲಿರುವ ಕಟ್ಟಡ. ದೇವಾಲಯದ ಬಳಿ ಸೂರ್ಯ, ಸಪ್ತಮಾತೃಕೆಯರು, ಗಣೇಶ ಮೊದಲಾದ ಶಿಲ್ಪಗಳಿವೆ. ಈ ದೇವಾಲಯದಲ್ಲಿರುವ ಲಿಂಗವನ್ನು ಜಗನ್ನಾಥ ವಿಜಯವನ್ನು ಬರೆದ ಕವಿ ರುದ್ರಭಟ್ಟ ನರ್ಮದೆಯಿಂದ ತಂದು ಸ್ಥಾಪಿಸಿದನೆಂದು ಪ್ರತೀತಿ.

(ಕೆ.ಟಿ.ಆರ್.)

**ದೇವನೂರು ಮಹಾದೇವ:** 1948– . ಕನ್ನಡದ ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ದಲಿತ ಸಂವೇದನೆಗಳನ್ನು ಅತ್ಯಂತ ಸೃಜನಶೀಲವಾಗಿ ಪ್ರಕಟಿಸಿದ ಪ್ರಸಿದ್ಧ ಕಥೆಗಾರ, ಕಾದಂಬರಿಕಾರ ಹಾಗೂ ಸಾಮಾಜಿಕ ಹೋರಾಟಗಾರರು. ಇವರ ನಿಜವಾದ ಹೆಸರು ಎನ್. ಮಹಾದೇವಯ್ಯ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೇವನೂರಲ್ಲಿ 1948 ಜೂನ್ 10ರಂದು ಜನಿಸಿದರು. ತಂದೆ ನಂಜಯ್ಯ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದರು. ತಾಯಿ ನಂಜಮ್ಮ. ದೇವನೂರು, ನಂಜನಗೂಡು, ಮೈಸೂರುಗಳಲ್ಲಿ ಮಹಾದೇವ ಅವರ ವಿದ್ಯಾಭ್ಯಾಸ ಜರುಗಿತು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಪದವಿ ಪಡೆದರು. ಅನಂತರ ಕೆಲ ಕಾಲ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಅಧ್ಯಾಪಕ ಸಂಶೋಧಕರಾಗಿ ಕಾರ್ಯನಿರ್ವಹಿಸಿದರು (1989). ಅನಂತರದ ವರ್ಷಗಳಲ್ಲಿ ಪೂರ್ಣಾವಧಿ ವ್ಯವಸಾಯಗಾರರಾದರು.

ವಿದ್ಯಾಭ್ಯಾಸ ಮಾಡುತ್ತಿದ್ದ ದಿನಗಳಲ್ಲಿಯೇ ಮಹಾದೇವ ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು. ಆರಂಭದಲ್ಲಿ ಇವರು ಬರೆದದ್ದು ಕವನಗಳನ್ನು. ನವ್ಯಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿದ್ದ ಕಾಲದಲ್ಲಿ ಇವರು ಕಥಾ ರಚನೆಯಲ್ಲಿ ತೊಡಗಿದ್ದರು. ಅಮಾಸ, ಡಾಂಬರು ಬಂದುದು, ಮಾರಿಕೊಂಡವರು ಮೊದಲಾದ ದಲಿತ ಸಂವೇದನೆಯನ್ನೊಳಗೊಂಡ ಮೌಲಿಕ ಕಥೆಗಳನ್ನು ಪ್ರಕಟಿಸಿದರು. ಕನ್ನಡ ಸಾಹಿತ್ಯ ವಲಯದಲ್ಲಿ ಈ ಕಥೆಗಳು ಬಹುಬೇಗ ಚರ್ಚೆಗೊಳಗಾದವು. ಜೊತೆಗೆ ನವ್ಯೋತ್ತರದ ಅಗ್ರಗಣ್ಯ ಲೇಖಕನೆನಿಸುವ ಸೂಚನೆಗಳನ್ನು ನೀಡಿದವು. ಕಾಲಕ್ರಮದಲ್ಲಿ ಇವರು ದ್ಯಾವನೂರು (1973, ಕಥಾಸಂಕಲನ), ಒಡಲಾಳ (1981, ಕಾದಂಬರಿ), ಕುಸುಮಬಾಲೆ (1988, ಕಾದಂಬರಿ) ಈ ಕೃತಿಗಳನ್ನು ಹೊರ ತಂದರು. ಸಂಖ್ಯಾದೃಷ್ಟಿಯಿಂದ ಕೃತಿಗಳು ಕಡಿಮೆ ಎನಿಸಿದರೂ ಸತ್ತ್ವದ ದೃಷ್ಟಿಯಿಂದ, ಹಿರಿಮೆಯ ದೃಷ್ಟಿಯಿಂದ ಇವು ಮಹತ್ತ್ವದ ಕೃತಿಗಳು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ರೂಢಿಗೆ ಬಂದ ಶಿಕ್ಷಣ ಕ್ರಮ, ಅಂಬೇಡ್ಕರ್ ಚಳವಳಿಯ ಪ್ರಭಾವ ಮತ್ತು ಆಧುನಿಕ ವಿದ್ಯಮಾನಗಳಿಂದಾದ ದೃಷ್ಟಿಕೋನಗಳಿಂದ ದಲಿತರಲ್ಲಿ ಜಾಗೃತಿ ಮೂಡಿ ದಲಿತ ಲೇಖಕರು, ದಲಿತ ಪ್ರಪಂಚದ ಒಳ ಹೊರಗನ್ನು ಅದುವರೆಗೆ ಕಂಡರಿಯದ ರೀತಿಯಲ್ಲಿ ಅನಾವರಣ ಮಾಡತೊಡಗಿದರು. ಶತಶತಮಾನಗಳಿಂದ ದಲಿತರನ್ನು ಕಾಡುತ್ತ ಬಂದಿರುವ ಅಸ್ಪೃಶ್ಯತೆ, ಧಾರ್ಮಿಕ, ಸಾಮಾಜಿಕ ಅಮಾನುಷ ಪದ್ಧತಿಗಳು, ಅಪಮಾನದ ಸಂಗತಿಗಳು ಸಾಹಿತ್ಯದಲ್ಲಿ ಅನಾವರಣಗೊಳ್ಳತೊಡಗಿದವು. ದಲಿತನೊಬ್ಬನ ಸಂಕಷ್ಟಗಳು ಸಾಮಾಜಿಕ ಸಂಘರ್ಷವೊಂದಕ್ಕೆ ಪ್ರೇರಣೆಯಾಗಬೇಕು ಎಂಬುದು ದಲಿತ ಸಾಹಿತ್ಯದ ಮುಖ್ಯ ಲಕ್ಷಣವೆನಿಸಿತು. ಪೂರ್ಣವಾಗಿ ದಲಿತ ಲೋಕವನ್ನು, ದಲಿತ ಸಂಸ್ಕೃತಿಯ ಸೂಕ್ಷ್ಮಗಳನ್ನು ತೆರೆದಿಡುವುದೇ ಇಲ್ಲಿ ಪ್ರಮುಖ ವಿಷಯವಾಯಿತು. ಮಹಾದೇವ ಅವರ ಕಥಾ ಸಾಹಿತ್ಯ ಈ ಮಾತಿಗೆ ಉದಾಹರಣೆಯಾಗಿದೆ. ಸಾಮಾನ್ಯವಾಗಿ ಇವರ ಕಥೆಗಳಲ್ಲಿ ಬರುವ ದಲಿತರ ವಾಸಸ್ಥಾನ, ಹಟ್ಟಿ, ಹರಿದಿರುವ ಬಟ್ಟೆ, ಊರಿನ ದಾರಿಯ ವಿವರಗಳು ಕುವೆಂಪು ಅವರ ಕಾದಂಬರಿಗಳಲ್ಲಿನ ಕಾಡಿನ ವಿವರಗಳಂತೆ ದಟ್ಟವಾಗಿರುವುದನ್ನು ಕಾಣಬಹುದು. ಒಂದು ದಹನದ ಕತೆಯಲ್ಲಿ ನಾಯಕ ಕಾಣುವ ತನ್ನ ಹಟ್ಟಿಯ ವರ್ಣನೆ ಈ ಮೇಲಿನ ಮಾತಿಗೆ ಉದಾಹರಣೆ ಎಂಬಂತಿದೆ. ಇಂಥ ಬರೆವಣಿಗೆಯ ಮೂಲಕ ಪ್ರಪ್ರಥಮಬಾರಿಗೆ ದಲಿತರ ಊರು ಕೇರಿಗಳ ವಿಷಯ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಯಿತು.

ದ್ಯಾವನೂರು ಕಥಾಸಂಕಲನದ ಅನಂತರ ಬಂದ ಒಡಲಾಳ ಕಾದಂಬರಿ ದಲಿತ ಕುಟುಂಬಗಳ ಬದುಕನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ ಕೃತಿ. ದಲಿತ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುವಲ್ಲಿ ಮಹಾದೇವ ಯಶಸ್ವಿ ಬರೆಹಗಾರರಾಗಿದ್ದಾರೆ. ಸಾಕವ್ವ ಈ ಕಾದಂಬರಿಯ ಕೇಂದ್ರ ಪಾತ್ರ. ಇವಳ ಸುತ್ತ ಹಬ್ಬಿರುವ ವರ್ತಮಾನದ ಶೋಷಣೆ ಮೂಲ ಬದುಕಿನ ನಿರೂಪಣೆಯ ಈ ಬರೆವಣಿಗೆಗೆ ಲಾಲಿತ್ಯವಿದೆ, ಹಾಸ್ಯವಿದೆ, ಮೆಲುದನಿ ಇದೆ, ಅಭಿವ್ಯಕ್ತಿ ಕ್ರಮದಲ್ಲಿ ಕುವೆಂಪು ಮತ್ತು ಮಾಸ್ತಿಯವರನ್ನು ನೆನಪಿಸುವಂತಿದೆ. ಅಷ್ಟರಮಟ್ಟಿಗೆ ದಲಿತ ಸಂವೇದನೆ ಪ್ರಕಟವಾಗಿದೆ.

ಕುಸುಮಬಾಲೆ ಮಹಾದೇವ ಅವರ ಮೂರನೆಯ ಕೃತಿ. ಈ ಕಾದಂಬರಿಯ ರಚನಾ ಸ್ವರೂಪ ವಿಶಿಷ್ಟವಾದದ್ದು. ನಿರ್ದಿಷ್ಟ ಕಾಲದಲ್ಲಿ ಕತೆಯನ್ನು ಹೇಳದೆ ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಗಳಲ್ಲಿ ಹೇಳತೊಡಗಿರುವುದು ಕಂಡುಬರುತ್ತದೆ. ಹೊಲೆಯರ ಕೇರಿಯಲ್ಲಿ ಜರುಗುವ ಕಾರ್ಯಾಚರಣೆಗಳೆಲ್ಲ ವರ್ತಮಾನಕ್ಕೂ ಅಕ್ಕಮಹಾದೇವಮ್ಮ ಮತ್ತು ಯಾಡರ ವಿವರಗಳು ಭೂತಕಾಲಕ್ಕೂ ಪರ್ಸಾದ (ಕುಸುಮಳ ತಮ್ಮ), ಈರಿಯ ಮಗು ಕೆಂಪಿಯ ಗರ್ಭದಲ್ಲಿರುವ ಶಿಶು ಇವು ಭವಿಷ್ಯತ್ಕಾಲಕ್ಕೂ ಸಂಬಂಧಿಸಿದವಾಗಿವೆ. ಜೀವಾತ್ಮಕ್ಕೂ ಮಂಚಕ್ಕೂ ನಡೆಯುತ್ತಿದ್ದ ಸಂಭಾಷಣೆ, ಜೋತಮ್ಮಗಳ ನಡುವೆ ನಡೆಯುತ್ತಿದ್ದ ಚರ್ಚೆ, ಜನನ ಮರಣಗಳಿಗೆ ಸಂಬಂಧಿಸಿದ ಜಾನಪದಗಳು ಇತ್ಯಾದಿಗಳಲ್ಲೆ ಮತ್ತೊಂದು ಹಂತವನ್ನು ತಲುಪುವಂಥವು. ಅಲ್ಲಲ್ಲಿ ಕಲಸು ಮೇಲೋಗರವಾಗಿರುವ, ಎಲ್ಲೆಲ್ಲೋ ಹರಡಿಕೊಂಡಿರುವ ವಿವರಗಳನ್ನು ತುಂಬ ಎಚ್ಚರಿಕೆಯಿಂದ ಗಂಭೀರವಾಗಿ ಗಮನಿಸುತ್ತ ಕ್ರೋಢೀಕರಿಸುತ್ತ ಹೋದರೆ ಕಾದಂಬರಿಯ ಆರಂಭದಲ್ಲಿ ಲೇಖಕರು ಸಂಗ್ರಹಿಸಿಕೊಂಡಿರುವ ಕತೆಯನ್ನು ಅದರ ವಸ್ತುವನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಮಹಾದೇವ ಅವರ ಉಳಿದೆರಡು ಕೃತಿಗಳಿಗಿಂತ ಇದು ಭಿನ್ನ ಸ್ವರೂಪದ್ದಾಗಿದೆ. ಇಲ್ಲಿಯ ಭಾಷೆ ಅದುವರೆಗೆ ಕನ್ನಡ ಸಾಹಿತ್ಯದಲ್ಲಿ ದಾಖಲಾಗಿರದ ಗ್ರಾಮ್ಯ ಸೊಗಡಿನಿಂದ ಕೂಡಿದ್ದು ವಿಶಿಷ್ಟವಾಗಿದೆ. ಏನೂ ಅರಿಯದ ಪರ್ಸಾದನಂಥವರು ಪಡುವ ಸಂತೋಷ, ಕುಸುಮ ಈರಿಯಂಥವರು ಅನುಭವಿಸುವ ಯಾತನೆ, ತಮ್ಮ ಮಿತಿಯಲ್ಲಿಯೇ ಗಾರಸಿದ್ಧಮಾವ, ಯಾಡ, ಅಮಾಸ ಮೊದಲಾದವರು ಪಡುವ ಶ್ರಮ, ಸಂದಿಗ್ಧತೆಯ ಸಂದರ್ಭಗಳು ಬಂದೊದಗಿದ್ದರೂ ತಮ್ಮ ಜೀವನದಲ್ಲಿ ಸುಖ ಸಂತೋಷಗಳಿಗೆ ಧಕ್ಕೆಯನ್ನುಂಟುಮಾಡಿಕೊಳ್ಳಲಾರದ ಚೆನ್ನನ ಅಪ್ಪನಂಥವರ ಲವಲವಿಕೆಯ ಬದುಕು ಇತ್ಯಾದಿಗಳೆಲ್ಲ ಸಂವೇದನಾಶೀಲ

ಚೌಕಟ್ಟಿನೊಳಗೇ ನಡೆಯುತ್ತವೆ. ಹೀಗಾಗಿ ಇಲ್ಲಿಯ ಬದುಕಿನಲ್ಲಿ ವೈವಿಧ್ಯತೆ ಇದೆ. ಇದಕ್ಕೆ ಪ್ರೇರಕವಾಗಿರುವ ಪರಿಸರದ ಸಾಂಸ್ಕೃತಿಕ ವಿವರಗಳನ್ನು ಕೇವಲ ಚರ್ಚೆಗೆ, ಪರಿಶೀಲನೆಯ ಹಂತಕ್ಕೆ ಸೀಮಿತ ಗೊಳಿಸದೆ ಮೌಖಿಕ ಅಂಶಗಳನ್ನೆಲ್ಲಾ ಒಟ್ಟಾರೆಯಾಗಿ ಸಂಗ್ರಹಿಸಿ ಸುಂದರ ಕಥಾ ಚೌಕಟ್ಟಿನಲ್ಲಿ ಅಳವಡಿಸುವ ಕುಶಲಗಾರಿಕೆಯನ್ನು ಕಾದಂಬರಿಗಾರರು ಪ್ರದರ್ಶಿಸಿರುವುದು ಕಂಡುಬರುತ್ತದೆ.

60–70ರ ದಶಕದಲ್ಲಿನ ಲೋಹಿಯಾವಾದಿ ಸಮಾಜವಾದಿ ಪಕ್ಷ, ಸಮಾಜವಾದಿ ಯುವಜನಸಭಾದ ಚಟುವಟಿಕೆಗಳ ಪ್ರಭಾವಕ್ಕೆ ಒಳಗಾಗಿದ್ದ ಮಹಾದೇವ ಅವರ ವ್ಯಕ್ತಿತ್ವದ ಮೇಲೆ ಅನಂತಮೂರ್ತಿ, ಆಲನಹಳ್ಳಿಕೃಷ್ಣ ಮೊದಲಾದ ಲೇಖಕರ ಪ್ರಭಾವವೂ ಆಗಿತ್ತೆಂದು ಹೇಳಬಹುದು. ವಿದ್ಯಾರ್ಥಿ ದೆಸೆಯಲ್ಲಿಯೇ ನರ ಎಂಬ ಪ್ರತಿಭಟನಾ ಪತ್ರಿಕೆಯ ಸಂಪಾದಕ ಪ್ರಕಾಶಕರಾಗಿದ್ದ ಮಹಾದೇವ ಅವರು 1975ರಲ್ಲಿ ಜಯಪ್ರಕಾಶ ನಾರಾಯಣರು ಮೈಸೂರಿಗೆ ಬಂದಿದ್ದಾಗ ಸಾರ್ವಜನಿಕ ಸಭೆಯೊಂದರ ಅಧ್ಯಕ್ಷತೆ ವಹಿಸಿದ ಗೌರವಕ್ಕೆ ಪಾತ್ರರಾಗಿದ್ದರು. ಇವರು 1979ರಲ್ಲಿ ದಲಿತ ಬಂಡಾಯ ಸಾಹಿತ್ಯ ಚಳವಳಿಯ ನಿಕಟ ಸಂಬಂಧ ಹೊಂದಿದ್ದ ದಲಿತಸಂಘರ್ಷ ಸಮಿತಿಯ ಪ್ರಧಾನ ಸಂಘಟಕರಾಗಿಯೂ ಕಾರ್ಯನಿರ್ವ ಹಿಸಿದರು. 1989ರಲ್ಲಿ ಅಮೆರಿಕದ ಅಯೋವ ವಿಶ್ವವಿದ್ಯಾಲಯದಲ್ಲಿ ನಡೆದ ಇಂಟರ್‌ನ್ಯಾಷನಲ್ ರೈಟಿಂಗ್ ಪ್ರೋಗ್ರಾಮ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದರು. ಇವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಮಹಾದೇವ ಅವರ ಕಥಾ ಸಾಹಿತ್ಯದಲ್ಲಿ ಗಮನ ಸೆಳೆದ ಒಡಲಾಳ, ಕುಸುಮಬಾಲೆ ಮತ್ತು ಅಮಾಸ ಇವೆಲ್ಲ ನಾಟಕಗಳಾಗಿ ರೂಪಾಂತರ ಗೊಂಡು ರಂಗಭೂಮಿಯಲ್ಲಿ ಯಶಸ್ವಿಯಾಗಿವೆ. 1984ರಲ್ಲಿ ಕಲ್ಕತ್ತೆಯ ಭಾರತೀಯ ಭಾಷಾಪರಿಷತ್ತು ಒಡಲಾಳಕ್ಕೆ ಪ್ರಶಸ್ತಿ ನೀಡಿ ಗೌರವಿಸಿದೆ. 1991ರಲ್ಲಿ ಕುಸುಮಬಾಲೆಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. 1995ರಲ್ಲಿ ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಲಭಿಸಿವೆ. ಇವರ ಕೃತಿಗಳು ಇಂಗ್ಲಿಷ್ ಹಾಗೂ ಮತ್ತಿತರ ಭಾರತೀಯ ಭಾಷೆಗಳಿಗೆ ಅನುವಾದ ಗೊಂಡಿವೆ. ಯಾರ ಜಪ್ತಿಗೂ ಸಿಗದ ನವಿಲುಗಳು ಇವರ ಸಾಹಿತ್ಯ ಕುರಿತ ಚರ್ಚೆ ಹಾಗೂ ವಿಮರ್ಶೆಯ ವಿಶೇಷ ಬಗೆಯ ಕೃತಿಯಾಗಿದೆ.

(ಜಿ.ಆರ್.ಟಿ)

**ದೇವಪುರ:** ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಒಂದು ಐತಿಹಾಸಿಕ ಗ್ರಾಮ. ಜನಸಂಖ್ಯೆ 3,872. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಸ್ಥಳ ಪ್ರಾಮುಖ್ಯ ಪಡೆದಿತ್ತು. ಪ್ರಾಚೀನ ನಗರ ಮಂಡಲಕ್ಕೆ ಈ ಸ್ಥಳ ಸೇರಿದ್ದಾಗಿ ತಿಳಿದುಬರುತ್ತದೆ. ಕೃಷ್ಣಾ (ಪೆರ್ದೊರೆ) ನದಿಯ ಎರಡೂ ಪಕ್ಕದಲ್ಲಿ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಿಂದ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನವರೆಗೆ ಸಗರ 500, ಸಗರ 300 ಮುಂತಾಗಿ ಕರೆಯಲಾಗುತ್ತಿದ್ದ ಸಗರನಾಡು ವ್ಯಾಪಿಸಿತ್ತು. ಕೃಷ್ಣಾನದಿ ಇಲ್ಲಿಗೆ 8 ಕಿಮೀ ದೂರದಲ್ಲಿ ಹರಿಯುತ್ತದೆ. ಚಾಳುಕ್ಯ ಜಗದೇಕಮಲ್ಲ ಜಯಸಿಂಹ ನಿಂದ ಪೋಷಿತವಾದ ತಿಂಥಣಿ ಎಂಬ ಘಟಿಕಾ ಸ್ಥಾನವಿದ್ದ ಸ್ಥಳ ಇಲ್ಲಿಗೆ ಸಮೀಪದಲ್ಲಿದೆ. ವಿಜಯನಗರ ಸಾಮ್ರಾಜ್ಯ ವಿಘಟನೆಯಾದಾಗ ಪಾಳೆಯಗಾರರ ಮನೆತನವೊಂದಕ್ಕೆ ದೇವಪುರ ರಾಜಧಾನಿಯಾಯಿತು. ಸುರಪುರ ಸಂಸ್ಥಾನದ ರಾಜಮನೆತನದ ಮೂಲಪುರುಷರಲ್ಲಿ ಒಬ್ಬನಾದ ಹಣಮನಾಯಕ ಕಕ್ಕೇರಿಯಿಂದ ದೇವಪುರಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದ. ಚಕ್ರವರ್ತಿ ಔರಂಗಜೇಬನು ದಕ್ಷಿಣ ಭಾರತಕ್ಕೆ ದಂಡೆತ್ತಿ ಬಂದಾಗ ದೇವಪುರದಲ್ಲಿ ಬೀಡುಬಿಟ್ಟಿದ್ದ. ಬಿಜಾಪುರದ ಸುಲ್ತಾನರ ಆಳ್ವಿಕೆಯಲ್ಲಿ ಇದನ್ನು ಪರಗಣಿ ದೇವಪುರವೆಂದು ಪರಿಗಣಿಸಲಾಗಿತ್ತು.

ಈಗ ದೇವಪುರ ಒಂದು ಚಿಕ್ಕ ಗ್ರಾಮ ಜನಸಂಖ್ಯೆ 3,872. ಊರಿನ ನೈಋತ್ಯದಲ್ಲಿ ಒಂದು ಪ್ರಾಚೀನ ಬಾವಿಯಿದೆ. ಇದರ ಪ್ರವೇಶದ್ವಾರ, ಮೆಟ್ಟಿಲುಗಳು, ಸುತ್ತಲು ಗೋಡೆಗಳನ್ನು ಸುಂದರವಾಗಿ ನಿರ್ಮಿಸಲಾಗಿದೆ. ಬಾವಿಯಿಂದ ಊರಿನ ಕಡೆ ಬರುವ ಹಾದಿಯಲ್ಲಿ ರಾಮಲಿಂಗೇಶ್ವರ ದೇವಾಲಯವಿದೆ. ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿರುವ ಈ ದೇವಾಲಯ ವನ್ನು ಕಪ್ಪುಕಲ್ಲಿನಿಂದ ಕಟ್ಟಲಾಗಿದೆ. ಒಳಗೆ ಲಿಂಗವಿಲ್ಲ. ಇಲ್ಲಿರುವ ವೀರಭದ್ರ ದೇವಾಲಯ ಒಂದು ಚಿಕ್ಕಗುಡಿ. ಇದರ ದ್ವಾರಪಾಲಕ ವೈಷ್ಣವಮೂರ್ತಿ ಆಗಿರುವುದರಿಂದ ಇದೊಂದು ವಿಷ್ಣುದೇವಾಲಯವಾಗಿದ್ದಿರ ಬೇಕೆಂಬ ಅನುಮಾನ ಹುಟ್ಟಿಸುತ್ತದೆ.

ಊರಿನಲ್ಲಿ ಒಂದು ಹೂಡೇವು (ಕೋಟೆಯ ಬುರುಜು) ಮತ್ತು ಅದರ ಬಳಿಯಲ್ಲಿ ಲಕ್ಷ್ಮೀದೇವಾಲಯದ ಗೂಡು ಇವೆ. ಈ ಪ್ರದೇಶದಲ್ಲಿ ಲಕ್ಷ್ಮೀಕಾಂತ ದೇವಾಲಯವಿದ್ದಿರಬೇಕೆಂದೂ ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶ ಈ ಊರಿನವನೆಂದೂ ಆತನ ಕಾವ್ಯದಲ್ಲಿ ಬರುವ ಪೆರ್ದೊರೆ (ಕೃಷ್ಣಾನದಿ) ಛಾಯಾಭಗವತಿ ಮೊದಲಾದ ಆಧಾರಗಳ ಮೇಲೆ ಪ್ರತಿಪಾದನೆ ಮಾಡಲಾಗಿದೆ. ಈ ಬಗ್ಗೆ ಖಚಿತವಾಗಿ ಹೇಳಲು ಇನ್ನೂ ಹೆಚ್ಚಿನ ಆಧಾರಗಳು ದೊರೆಯಬೇಕಾಗಿದೆ.

ಊರಿನ ಮಸೀದಿಯೊಂದರ ಗೋಡೆಯಲ್ಲಿ 1114 ರ ಶಾಸನವೊಂದರ ಚಪ್ಪಡಿ ಸೇರಿಕೊಂಡಿದೆ. ಅದರಲ್ಲಿ ಅಲ್ಲಿನ ನಗರೇಶ್ವರ ದೇವಾಲಯಕ್ಕೆ ದಾನವಿತ್ತುದರ ಬಗ್ಗೆ ಉಲ್ಲೇಖವಿದೆ. ಆದರೆ ಶಾಸನದ ಮುಖ್ಯ ಭಾಗ ಗೋಡೆಯ ಒಳಗಿರುವುದರಿಂದ ಅದರ ಪೂರ್ಣ ಪಾಠವನ್ನು ತಿಳಿಯಲು ಸಾಧ್ಯವಾಗಿಲ್ಲ.

(ಎಸ್.ಜಿವಿ.)

**ದೇವಪ್ಪಕವಿ:** ಸು. 1540. ಜೈನಕವಿ. ರಾಮವಿಜಯಚರಿತೆ ಎಂಬ ಕಾವ್ಯದ ಕರ್ತೃ. ಹೊಯ್ಸಳ ದೇಶದ ಚೆಂಗನಾಡಿನ ಹುಣಸೂರು ತಾಲ್ಲೂಕಿನ ರಾವಂದೂರು (ಈಗಿನ ಪಿರಿಯಾಪಟ್ಟಣ ತಾಲ್ಲೂಕು) ಇವನ ಜನ್ಮಸ್ಥಳ. ಅಜ್ಜ ಚೆಂಗನಾಡಪೊಳಲ ಸಚಿವ ದೇವಪ್ಪ, ತಂದೆ ಬುಕ್ಕರಸ, ತಾಯಿ ಪಾಯಮ್ಮ. ಕವಿ ರಾವಂದೂರನ್ನು ತ್ಯಜಿಸಿ, ಈಗಿನ ಕೊಡಗಿನ ನಂಜರಾಯಪಟ್ಟಣಕ್ಕೆ ಬಂದು, ಅಲ್ಲಿ ವೀರಶೈವನೂ ಕರೆದೀಪ ದಾನಿಯೂ ಆಗಿದ್ದ ನಂಜುಂಡರಾಯನಿಗೆ ಹಿತವನಾಗಿ ಮಂತ್ರಿಪದವಿಯಲ್ಲಿದ್ದನೆಂದು ತಿಳಿಯುತ್ತದೆ. ಪೂರ್ವ ಕವಿಗಳಲ್ಲಿ ಗಜಗ, ಗುಣವರ್ಮ, ವಿಜಯ, ಪೊನ್ನ, ಅಗ್ಗಳ, ರನ್ನ, ಪಂಪ, ನೇಮಿಚಂದ್ರ, ನಾಗಚಂದ್ರ ಇವರನ್ನು ಸ್ತುತಿಸಿದ್ದಾನೆ. ತನ್ನ ಕಾವ್ಯ ಇಂಗಡಲಿನ ರಸದಂತೆ, ಅಂಬುಜಾಕ್ಷಿಯರ ಕಂಬುಕಂಧರದಾಲಿಂಗನದಂತೆ, ಪೊಸಜವ್ವನೆಯ ಬೇಟದ ಸುಗ್ಗಿಯಂತೆ ಸಂತಸವನ್ನುಂಟುಮಾಡುವ ಗುಣದಿಂದ ಕೂಡಿದೆ ಎಂದು ಕವಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ತನ್ನನ್ನು ಕೋವಿದರುಗಳ ಹೃತ್ಕಮಲಭಾಸ್ಕರ, ವಾಗ್ದೇವಿಯ ಮುಖಮಣಿಮುಕುರ, ಭಾವಕರುಗಳ ಸಂತಸಸಾಗರಮಿತ್ರ ಎಂದೂ ಕರೆದುಕೊಂಡಿದ್ದಾನೆ.

ರಾಮವಿಜಯಚರಿತೆ ಸಾಂಗತ್ಯದಲ್ಲಿದೆ. ಇದರಲ್ಲಿ 20 ಸಂಧಿಗಳೂ ಸು. 3000 ಪದ್ಯಗಳೂ ಇವೆ. ಗುಣಭದ್ರಾಚಾರ್ಯರ ಉತ್ತರಪುರಾಣದ ಮುನಿಸುವ್ರತಚರಿತ್ರೆಯಲ್ಲಿ ಬರುವ ರಾಮಾಯಣ ಈ ಕಾವ್ಯದ ವಸ್ತು. ಇದು ಪಂಪರಾಮಾಯಣದ ಕಥೆಗಿಂತಲೂ ಬೇರೆಯಾಗಿದೆ. ಶೈಲಿ ಸರಳವಾಗಿದೆ. ಬಂಧ ಲಲಿತವಾಗಿದೆ. ತಾನು ಕಾವ್ಯವನ್ನು ಬರೆದಿರುವುದು ಭವ್ಯರ ಮೆಚ್ಚುಗೆಗಾಗಿ ಎಂಬುದು ಕವಿಯ ಹೇಳಿಕೆ.

(ಟಿ.ಕೆ.ಬಿ.)

**ದೇವರಗುಡ್ಡ:** ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕಿಗೆ ಸೇರಿದ ಒಂದು ಪುಣ್ಯಕ್ಷೇತ್ರ. ರಾಣಿಬೆನ್ನೂರಿಗೆ ಉತ್ತರದಲ್ಲಿ ಸು.13ಕಿಮೀ ದೂರದಲ್ಲಿ, ದೇವರಗುಡ್ಡ ರೈಲು ನಿಲ್ದಾಣದಿಂದ ಸು.5ಕಿಮೀ ದೂರದಲ್ಲಿದೆ. ಈ ಊರಿನ ಮೂಲ ಹೆಸರು ಗುಡ್ಡ ಗುಡ್ಡಾಪುರ. ಊರಿಗೆ ಹೊಂದಿಕೊಂಡಂತಿರುವ ಗುಡ್ಡದ ಮೇಲೆ ಮಾರ್ತಾಂಡ, ಭೈರವ, ಮಲ್ಲಾರಿ ಮೊದಲಾದ ಹೆಸರುಗಳುಳ್ಳ ಪ್ರಸಿದ್ಧ ಮೈಲಾರಲಿಂಗ ದೇವಾಲಯವಿದೆ. ಶಿವನು ಇಲ್ಲಿ ಮಲ್ಲಾರಿಯ ಅವತಾರದಿಂದ ನಾಯಿಯ ರೂಪದಲ್ಲಿ ಏಳು ಕೋಟಿದೇವತೆಗಳನ್ನು ಕಟ್ಟಿಕೊಂಡು ಮಲ್ಲಾಸುರನನ್ನು ಕೊಂದನೆಂದೂ ಪ್ರತೀತಿ. ಈ ಆರಾಧ್ಯಮೂರ್ತಿಯನ್ನು ವಿವಿಧ ಪಂಗಡದವರು ಪೂಜಿಸುತ್ತಾರೆ. ಇವನ ಅನುಯಾಯಿಗಳಿಗೆ ಗೊರವ, ಗ್ವಾರೆಪ್ಪ, ಗೊಗ್ಗಯ್ಯನೆಂದು ಕರೆಯುವರು. ಕಂಬಳಿಯ ನಿಲುವಂಗಿ, ಕೊರಳಲ್ಲಿ ಭಂಡಾರವನ್ನಿಡಲು ಹುಲಿಯ ಚರ್ಮದ ಚೀಲ, ಕವಡೆಯ ಸರ, ಹೆಗಲಿಗೆ ನೇತುಬಿದ್ದ ಡೋಣಿ (ಭಿಕ್ಷಾಪಾತ್ರೆ) ಇವರ ವಿಶಿಷ್ಟ ವೇಷಭೂಷಣಗಳು. ಕೈಯಲ್ಲಿ ಡಮರು, ತ್ರಿಶೂಲಗಳು ಹಾಗೂ ಒಮ್ಮೊಮ್ಮೆ ದೀವಟಿಗೆ ಇರುತ್ತವೆ. ಭಿಕ್ಷಾಟನೆ ಇವರ ವೃತ್ತಿ.

ಇಲ್ಲಿ ಪ್ರತಿವರ್ಷ ದಸರ ಸಮಯದಲ್ಲಿ ಬಹುದೊಡ್ಡ ಜಾತ್ರೆ ನೆರೆಯುವುದು. ಆಗ ಇಲ್ಲಿಗೆ ನಾಡಿನ ಎಲ್ಲಾ ಕಡೆಗಳಿಂದ ಭಕ್ತಾದಿಗಳು ಬರುವರು. ಆಗ ಮೈಗೆ ಗೂಟಗಳನ್ನು ಬಡಿದುಕೊಳ್ಳುವುದು, ಆ ಗಾಯದಲ್ಲಿ ಮುಳ್ಳಿನ ದೊಣ್ಣೆಗಳನ್ನು ಹಾಯಿಸಿಕೊಳ್ಳುವುದು, ಅಂಗೈಯಲ್ಲಿ ಆರತಿಯನ್ನು ಹಚ್ಚಿಕೊಂಡು ದೇವರಿಗೆ ಬೆಳಗುವುದು, ದೇವರೆದುರು ಕಬ್ಬಿಣ ಸರಪಳಿಯನ್ನು ಹರಿಯುವುದು ಮೊದಲಾದ ಪವಾಡಗಳನ್ನೂ ಮಳೆಬೆಳೆಗೆ ಸಂಬಂಧಿಸಿದ ಭವಿಷ್ಯವನ್ನು ನುಡಿಯುವ ಕಾರಣಿಕವನ್ನೂ ನಡೆಸುತ್ತಾರೆ.

ಇಲ್ಲಿ ಮೈಲಾರನ ಉದ್ಭವಮೂರ್ತಿಯಲ್ಲದೆ ತುಪ್ಪದ ಮಾಳವ್ವ ಮಾಳಸಾ ಮತ್ತು ಹೆಗ್ಗಪ್ಪ ಇವರ ಗುಡಿಗಳೂ ಇವೆ. ಪ್ರತಿ ಹುಣ್ಣಿಮೆಗೂ ಭಕ್ತಾದಿಗಳು ಈ ದೇವರ ದರ್ಶನಕ್ಕೆ ಬರುವುದುಂಟು. ದಸರ ಜಾತ್ರೆಯ ಸಮಯದಲ್ಲಿ ದನಗಳ ಜಾತ್ರೆಯೂ ಸೇರುವುದು. ದೇವಸ್ಥಾನದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಒಂದು ಮಂಡಳಿ ಇದೆ. ಗುಡ್ಡದ ಮೇಲಿಂದ ದೂರದ ತುಂಗಭದ್ರಾನದಿಯ ಮತ್ತು ಇತರ ಪ್ರಕೃತಿದೃಶ್ಯ ನಯನಮನೋಹರವಾಗಿರುತ್ತದೆ. ಈ ಊರಿಗೆ ಉತ್ತಮ ಮಾರ್ಗ ಸಂಪರ್ಕವಿದೆ.

(ಎಸ್.ಎಸ್.ಬಿ.)

**ದೇವರಗುಡ್ಡರು:** ಜನಪದ ಧಾರ್ಮಿಕ ವೃತ್ತಿಗಾಯಕರು. ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವ ಇವರು ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಯ ಭಾಗಗಳಲ್ಲೂ ಕಾಣಬರುತ್ತಾರೆ. ಕರ್ನಾಟಕದಲ್ಲೇ ಅಲ್ಲದೆ ವಿರಳವಾಗಿ ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲೂ ಕಂಡುಬರುತ್ತಾರೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಏಳುಮಲೆ ಮಾದೇಶ್ವರನ ಪರಮಭಕ್ತರಾದ ಇವರನ್ನು ದೇವರಗುಡ್ಡರು, ಸಿರಿಯದೇವರ ಗುಡ್ಡರು ಮುಂತಾಗಿ ಕರೆಯುವುದು ರೂಢಿಯಲ್ಲಿದೆ. ಇವರು ಬಳಸುವ ಕಂಚಿನ ತಾಳಗಳಿಗೆ ಕಂಸಾಳೆ (ನೋಡಿ) ಎಂದು ಹೆಸರಿಸುವುದರಿಂದ ಇವರನ್ನು ಕಂಸಾಳೆಯವರು, ಕೈಸಾಳೆಯವರು, ಕೈತಾಳದವರು ಎಂದೂ ಗುರುತಿಸುವುದುಂಟು.

ಕಂಸಾಳೆಯನ್ನು ಹಿಡಿಯುವುದಕ್ಕೆ ಬೇಕಿರುವ ಅರ್ಹತೆ ಎಂದರೆ ದೇವರ ಗುಡ್ಡನಾಗುವುದು. ಮಲೆಯ ಮಾದೇಶ್ವರ ಕಂಚಿನ ತಾಳಗಳನ್ನು ನುಡಿಸುತ್ತ ಭಿಕ್ಷಮಾಡುತ್ತಿದ್ದದ್ದರಿಂದ ದೇವರಗುಡ್ಡರಿಗೆ ಕಂಸಾಳೆಗಳು ಮಾದೇಶ್ವರನ ಬಿರುದುಗಳು. ಆದ್ದರಿಂದ ಇವರಿಗೆ ಕಂಸಾಳೆ ಪವಿತ್ರ ಹಾಗೂ ಪೂಜನೀಯ. ಈ ಕಾರಣದಿಂದಲೇ ಇವರು ಕಂಚಿನ ತಣಿಗೆಯಲ್ಲಿ ಊಟಮಾಡುವುದಿಲ್ಲ. ಅಲ್ಲದೆ ಕಥೆ ಮಾಡುವಾಗ ಅಥವಾ ಭಿಕ್ಷಕ್ಕೆ ಹೋಗುವಾಗ ಎಕ್ಕಡಗಳನ್ನು ಮೆಟ್ಟುವುದಿಲ್ಲ.

ದೇವರಗುಡ್ಡರ ವಿಶಿಷ್ಟವಾದ ಉಡುಗೆ ತೊಡುಗೆಗಳೆಂದರೆ ಕಂಕುಳಲ್ಲಿ ಬೆಳ್ಳಿಕಟ್ಟಿನ ನಾಗಬೆತ್ತ, ಭುಜದಲ್ಲಿ ನಾಕುಪಾದದ ಜೋಳಿಗೆ, ಬೆನ್ನಿಗೆ ಹಸುಬೆ ಚೀಲ, ಕೈಯಲ್ಲಿ ಕಂಸಾಳೆ, ಹಣೆಗೆ ಮೂರು ಕಟ್ಟಿನ ವಿಭೂತಿ, ಕಣ್ಣಿನ ರಪ್ಪೆ, ಕಿವಿ, ಕುತ್ತಿಗೆಗಳಿಗೂ ವಿಭೂತಿಯ ಅಲಂಕಾರ, ಕುತ್ತಿಗೆಯಲ್ಲಿ ರುದ್ರಾಕ್ಷಿಸರ, ತಪ್ಪಿದರೆ ಒಂದೇ ಒಂದು ಅಡ್ಡಡ್ಡವಾಗಿ ಪೋಣಿಸಿರುವ ರುದ್ರಾಕ್ಷಿ ಗುರುಮಣಿ.

ದೇವರಗುಡ್ಡ ಮಾದೇಶ್ವರನ ಸಿಸುಮಗ. ಮಾದೇಶ್ವರನಿಗೆ ಗುಡ್ಡನನ್ನು ಬಿಡುವ ಸಂಪ್ರದಾಯ ದೇವರಗುಡ್ಡದ ಧಾರ್ಮಿಕ ಆಚರಣೆಗಳಲ್ಲಿ ವಿಶಿಷ್ಟವಾದುದು. ಈ ಸಂಪ್ರದಾಯ ಸು. 16ನೆಯ ಶತಮಾನದಿಂದೀಚೆಗೆ ಹುಟ್ಟಿಕೊಂಡದ್ದೆಂದು ಕಾಣುತ್ತದೆ. ವಂಶಪಾರಂಪರ್ಯವಾಗಿ ಮಾದೇಶ್ವರನ ಒಕ್ಕಲಲ್ಲಿ ಮನೆಗೊಬ್ಬ ಗುಡ್ಡನನ್ನು ಬಿಡುವ ಪದ್ಧತಿ ಇದೆ. ಕೆಲವು ವಿಶೇಷ ಕಾರಣಗಳಿಂದ ಅಂದರೆ ಕಷ್ಟಕಾರ್ಪಣ್ಯಗಳು ಒದಗಿ ಬಂದಾಗ ಅಥವಾ ಮಕ್ಕಳಾಗದೆ ಹೋದಾಗ ಹುಟ್ಟಿದ ಮೊದಲನೆಯ ಮಗನನ್ನು ಗುಡ್ಡನನ್ನು ಬಿಡುತ್ತೇವೆಂದು ಮಲೆಯ ಮಾದೇಶ್ವರನಿಗೆ ಹರಕೆ ಹೊತ್ತು ಹಾಗೆ ಹುಟ್ಟಿದ ಮಗುವಿಗೆ ಹನ್ನೆರಡು ವರ್ಷ ತುಂಬಿದ ಅನಂತರ ಗುಡ್ಡನನ್ನು ಮಾಡಿ ಬಿಡುವುದುಂಟು. ಮಗುವನ್ನು ಗುಡ್ಡನನ್ನಾಗಿ ಮಾಡುವುದಕ್ಕೆ ಅವರು ಒಂದು ವಿಶೇಷ ಸಮಾರಂಭವನ್ನೇ ಏರ್ಪಡಿಸಿಕೊಳ್ಳುತ್ತಾರೆ. ಗುಡ್ಡರ ಮುಖ್ಯಸ್ಥ ಪುರುಸಕಾರಿಯ ನೇತೃತ್ವದಲ್ಲಿ ಗುಡ್ಡನನ್ನು ಬಿಡುವ ಆಚರಣೆ ನಡೆಯುತ್ತದೆ. ಈ ದೀಕ್ಷಾಕಾರ್ಯ ಸಾಮಾನ್ಯವಾಗಿ ಸೋಮವಾರಗಳಲ್ಲಿ ಜರಗುತ್ತದೆ. ಶುಕ್ರವಾರವೂ ಇಟ್ಟುಕೊಳ್ಳಬಹುದು. ಮಾದೇಶ್ವರನ ಬೆಟ್ಟದಲ್ಲೇ ಆದರೆ ಯಾವ ದಿನವಾದರೂ ಸರಿ. ಈ ಮಂಗಳ ಕಾರ್ಯಕ್ಕೆ ಮನೆ ಮಠ ಸಾರಿಸಿ ಗುಡಿಸಿ ಮಡಿ ಮಾಡಿಕೊಳ್ಳುತ್ತಾರೆ. ಗುಡ್ಡನಾಗುವ ಹುಡುಗನ ಉಡಿದಾರವನ್ನು ಕಿತ್ತು ಮಂಡೆ ಚವುರ ಮಾಡಿಸುತ್ತಾರೆ. ಮೂಡ್ಲುಮುಖವಾಗಿ ಹುಡುಗನನ್ನು ಕುಳ್ಳಿರಿಸಿ, ಒಂದಚ್ಚು ಬೆಲ್ಲ, ಐದು ಬಾಳೆಹಣ್ಣು, ಎಲೆ ಅಡಕೆ, ಐದು ಪಾವು ಅಕ್ಕಿ, ಐದು ಪಾವಲಿ, ಒಂದು ವಲ್ಲಿ (ವಸ್ತ್ರ) ಮಡಗಿ ಪೂಜೆ ಮಾಡಿ ಈ ಪರಿಕರಗಳನ್ನು ಕಲಸಿ ಅವನ ಮಡಿಲ ತುಂಬುತ್ತಾರೆ. ಅನಂತರ ಸ್ನಾನಕ್ಕೆ ನೀರು ಕಾಯಿಸುವ ಒಲೆ ಮತ್ತು ಹಂಡೆಯನ್ನು ಪೂಜೆಮಾಡಿ ಅರಿಸಿನದ ನೀರನ್ನು ಕಾಯಿಸಿ ಸಮಾರಂಭಕ್ಕೆ ಬಂದ ಬಂಧುಬಾಂಧವರೆಲ್ಲ ಒಂದೊಂದು ಚೊಂಬು ನೀರನ್ನು ಆ ಹುಡುಗನ ತಲೆ ಮೇಲೆ ಸುರಿದು ಮಾದೇವ ನಿನ್ನೊಕ್ಲಾಯ್ತೋ ಕಂದನ ಉದ್ಧಾರ ಮಾಡಪ್ಪ ಎಂದು ಹೇಳುತ್ತಾರೆ. ನೀರೆರೆಯುವ ಸಂದರ್ಭದಲ್ಲಿ ಗುಡ್ಡರು ಕಂಸಾಳೆ ಕುಟ್ಟುತ್ತ – ಸ್ನಾನ ಜಲಕ ಮಾಡವ್ರೆ ಮಾದೇವ

ಮೀದು ಮಡಿಯ ಉಟ್ಟವರೆ

ಶಿವಪೂಜೆಗೆ ಬಂದು ನಿಂತವರೆ

– ಇತ್ಯಾದಿಯಾಗಿ ಹಾಡುತ್ತಿರುತ್ತಾರೆ.

ಮೀಯಿಸಿ ಆದಮೇಲೆ ಹೊಸ ಬಟ್ಟೆಗಳನ್ನು ಉಡಿಸಿ ದೇವರನ್ನು ತರಲು ಹೊರಡುತ್ತಾರೆ. ಐದು ಅರುಣೆ ಗಡಿಗೆಗಳನ್ನು (ಅರಿಸಿನದ ನೀರು ತುಂಬಿದ ಮಡಕೆ) ಹೊತ್ತುಕೊಂಡು ದೇವರಗುಡ್ಡರೊಡನೆ ಐದು ಜನ ಮುತ್ತೈದೆಯರು ಕೆರೆಗೋ ಕೊಳಕ್ಕೋ ಬಾವಿಗೋ ಹೋಗಿ ಗಡಿಗೆಗಳಿಗೆ ನೀರು ತುಂಬಿ ಅಡಕೆ ಹೊಂಬಾಳೆ ಶೃಂಗಾರಮಾಡಿ ಅವುಗಳ ಜೊತೆಯಲ್ಲಿ ನಾಗಬೆತ್ತ, ಉರುಗದಾರ, ಕಂಸಾಳೆ,

ರುದ್ರಾಕ್ಷಿಮಣಿ, ದಮ್ಮಡಿ, ಬಟ್ಟುತಾಳ, ವಿಭೂತಿಗಟ್ಟಿ ಇಟ್ಟು ಗುಡ್ಡ ನಾಗುವವನ ಬೋಳುತಲೆಯ ತುಂಬ ವಿಭೂತಿ ಧರಿಸಿ ಕಂಸಾಳೆಯ ಝುಣತ್ಕಾರಗಳೊಡನೆ ಪೂಜೆಮಾಡಿ ವಾದ್ಯಸಮೇತ ದೇವರನ್ನು ತಂದು ಗದ್ದುಗೆಯ ಮೇಲಿರಿಸುತ್ತಾರೆ. ಅನಂತರ ಹುಡುಗನ ತಂದೆ ತಾಯಿಗಳು, 'ಬುದ್ದಿ ಇವನು ನಮ್ಮ ಮಗನಲ್ಲ ನಿಮ್ಮ ಮಗ ಒಪ್ಪಿಸಿಕೊಳ್ಳಿ' ಎಂದು ಹೇಳಿ ಅವನ ಕೈಗಳನ್ನು ಹಿಡಿದುಕೊಂಡು ಪುರುಸಕಾರಿಗೆ ಒಪ್ಪಿಸಿಕೊಡುತ್ತಾರೆ. ಆಗ ಪುರುಸಕಾರಿ ಅವನನ್ನು ಕರಿಮರದ ಗದ್ದುಗೆ ಮೇಲೆ ಕೂರಿಸುತ್ತಾನೆ. ಅನಂತರ ಅವನ ಮುಂದೆ ತಲೆ ಹೊಡೆದಂತೆ (ಚೆಲ್ಲಿದಂತೆ) ತುಂಬಿರುವ ಅಕ್ಕಿಯ ಸೇರನ್ನು ಇಟ್ಟು ಅದರ ಮೇಲೆ ಗುಡ್ಡನ ಬಲದ ಹಸ್ತವನ್ನು ಊರಿಸಿ ಅದರ ಮೇಲೆ ಹಾಲು ಬೆಣ್ಣೆ ತುಪ್ಪಗಳನ್ನು ಸವರಿ ಹೂ ಹಾಕಿ ಕರ್ಪೂರ ಸಾಂಬ್ರಾಣಿ ಗಂಧದ ಕಡ್ಡಿ ಬೆಳಗಿ ಅದುಮಿದ್ದ ಕೈಯನ್ನು ಎತ್ತಿ ಅಂಗೈಗೆ ಅಂಟಿಕೊಂಡಿರುವ ಅಕ್ಕಿ ಕಾಳನ್ನು ಅವನ ಹಣೆಗೆ ಐದು ಬಾರಿ ಹಚ್ಚುತ್ತಾನೆ. ಈ ಅಕ್ಕಿ ಹೆಚ್ಚಾಗಿ ಹಣೆಗೆ ಅಂಟಿಕೊಂಡರೆ ಅವನು ಮಾದಪ್ಪನ ಮೆಚ್ಚಿನ ಸಿಸುಮಗ ಎಂಬ ನಂಬಿಕೆ ಇದೆ. ಅನಂತರ ಐದು ಕೊಂಬಿನ ಅರಿಸಿನದ ಕೊನೆಯನ್ನು ಚಿನ್ನ, ಬೆಳ್ಳಿ ಚೂರುಗಳೊಡನೆ ಒಂದು ಅರಿಸಿನದ ಅರಿವೆಗೆ ಸುತ್ತಿ ಅದನ್ನು ಕರಿ ದಾರದಲ್ಲಿ ಕಟ್ಟಿ ಪೂಜೆಮಾಡಿ ಎಲ್ಲರಿಂದಲೂ ಅದನ್ನು ಶರಣು ಮಾಡಿಸಿ ಆ ಕಂಕಣವನ್ನು ಪುರುಸಕಾರಿ 'ಅಪ್ಪಾ ಮಗುವೆ ಇಲ್ಲೀನಾಗ್ಗೂ (ಇಲ್ಲಿಯವರೆಗೂ) ತಾಯಿತಂದೆಗಳ ಮಗನಾಗಿದ್ದೆ. ಇಲ್ಲಿಂದೀಚ್ಕೆ ಮಾದಪ್ಪನ ಮಗನಾದಿ' ಎಂದು ಹೇಳಿ ಅವನ ಬಲ ಮುಂಗೈಗೆ ಕಟ್ಟುತ್ತಾನೆ. ಅನಂತರ 'ಮಲೆಮಾಯ್ಕಾರ' ನನ್ನಪ್ಪಾಜಿ ಮಾದೇವ ಉದ್ಧಾರ ಮಾಡಪ್ಪ ಎಂದು ಹೇಳಿ ರುದ್ರಾಕ್ಷಿಮಣಿಯನ್ನು ಕುತ್ತಿಗೆಗೆ ಧಾರಣೆ ಮಾಡುತ್ತಾನೆ. ಬಂದಿದ್ದ ಬಂಧುಬಳಗವೆಲ್ಲ 'ಅಕ್ಷಯವಾಗ್ಲಪ್ಪ' ಎಂದು ಹೇಳಿ ಅಕ್ಷತೆಯನ್ನು ಹುಡುಗನ ತಲೆ ಮೇಲೆ ಎರಚುತ್ತಾರೆ. ಅನಂತರ ಪುರುಸಕಾರಿ ಹೊಸ ಗುಡ್ಡನಿಗೆ ಸಾಂಪ್ರದಾಯಿಕವಾಗಿ ಕೆಲವು ಸಿದ್ಧ ಪ್ರಶ್ನೆಗಳನ್ನು ಹಾಕಿ ಸಿದ್ಧ ಉತ್ತರವನ್ನು ಪಡೆಯುತ್ತಾನೆ.

ನೀನು ಯಾರ ಮಗನಪ್ಪ
ನಾನು ಮಾದೇವನ ಮಗ ಸ್ವಾಮಿ
ಹಂಗಾದ್ಮೇಕೆ ತಕ್ಕೊಳಪ್ಪ ಮಾದೇವನ ಜೋಳ್ಗೆಯ

ಎಂದು ಹೇಳಿ ಹೊಸಗುಡ್ಡನ ಕಂಕುಳಿಗೆ ಜೋಳಿಗೆ, ಕೈಗೆ ನಾಗಬೆತ್ತ ಕೊಡುತ್ತಾನೆ.

ಇದೇನ್ ಮಾಡ್ತೀಯಪ್ಪ
ಸ್ವಾಮಿ ನಾಕಾರ್ ಮನೆ ಭಿಕ್ಷಾ ಮಾಡ್ಕೊಂಡು ಸ್ವಾಮಾರ
ಸುಕ್ರಾರ ಇದನ್ನ ಮಡಗಿ ಪೂಜೆ ಮಾಡ್ತೀನಿ,
ಏನಪ್ಪ ನಿಚ್ಚಯವಾಗ್ಲೂ ಮಾಡ್ತಿಯಾ
ಸ್ವಾಮಿ ನಿಚ್ಚಯವಾಗ್ಲೂ ಮಾಡ್ತಿನಿ

ಹಂಗಾದ್ಮ್ಯಾಕೆ ಈ ದುರುಸ್ನಿಣರು ಬಂದವ್ರಲ್ಲ ಅವುರ್ಗೆಲ್ಲ ಹೇಳ್ದಂಗೆ ನಡೀತೀನಿ ಅಂತ್ಹೇಳಿ ಅವುರ ಪಾದಕ್ಕೆ ಬೀಳಪ್ಪ- ಎಂದಾಗ ಹೊಸಗುಡ್ಡ ಮೊದಲು ಪುರುಸಕಾರಿಗೆ ಶರಣುಮಾಡಿ ಉಳಿದ ಹಿರಿಯರ ಪಾದಗಳಿಗೆರಗುತ್ತ ನಿಮ್ಮ ಪಾದಸಾಕ್ಷಿಯಾಗಿ ಹೇಳ್ದಂಗೆ ನಡ್ಕೋತೀನಿ ಎಂದು ಹೇಳುತ್ತಾನೆ.

ಸ್ವಾಮಾರ ಸುಕ್ರಾರ ತಪ್ದೆ ಕೋರಣ್ಯ ಮಾಡ್ತಿಯೇನಪ್ಪ

ಮಾಡ್ತೀನಿ ಸ್ವಾಮಿ ಇತ್ಯಾದಿ. ಹಿನ್ನೆಲೆಯಲ್ಲಿ ದೇವರಗುಡ್ಡರು ಸಂದರ್ಭಕ್ಕೆ ತಕ್ಕಂತೆ ಹಾಡುತ್ತಿರುತ್ತಾರೆ.

ಅನಂತರ ಗುಡ್ಡನನ್ನು ಕರೆದುಕೊಂಡು ಉಳಿದ ದೇವರಗುಡ್ಡರು ಕಂಸಾಳೆ ನಾದಮಾಡುತ್ತ ಕೋರಣ್ಯಕ್ಕೆ ಹೊರಡುತ್ತಾರೆ. ಅಂಕದ ಬಾಗಿಲಲ್ಲಿ ತಂದೆತಾಯಿಗಳು ಅಗನಿ ತಂದು ಗುಡ್ಡನಪಾದ ತೊಳೆದು ಪೂಜೆಮಾಡಿ ನಮಸ್ಕರಿಸಿ ಐದು ಸೇರು ಅಕ್ಕಿ, ಒಂದಚ್ಚು ಬೆಲ್ಲ, ಒಂದು ತೆಂಗಿನಕಾಯಿ, ಎಲೆ ಅಡ್ಕೆ ಹಣ್ಣುಗಳನ್ನು ಗುಡ್ಡನ ಜೋಳಿಗೆಗೆ ತುಂಬುತ್ತಾರೆ. ಹೀಗೆ ನಾಕಾರು ಮನೆಗಳಲ್ಲಿ ಉಪಾದಾನ ಮಾಡಿಸುತ್ತಾರೆ. ಉಪಾದಾನ ಮಾಡಲು ಹೋದಾಗ ಜೋಳಿಗೆ ತುಂಬಾ ಭಿಕ್ಷೆ ಸಿಕ್ಕದೆ ಇದ್ದರೆ ಅಥವಾ ಹಿಂದಕ್ಕೆ ಬಂದ ಹುಡುಗ ಜೋಳಿಗೆಯನ್ನು ತೆಗೆದು ಗೂಟಕ್ಕೆ ನೇತುಹಾಕಿದರೆ ಜೋಳಿಗೆ ಸೂಲುತ್ತದೆ; ಮಾತ್ರವಲ್ಲ, ಅದೇ ರೀತಿ ಅವರ ಮನೆಯೂ ಸೂಲುತ್ತದೆ ಎಂಬ ನಂಬಿಕೆಯಿದೆ.



ನೀಲಗಾರ ಸಂಪ್ರದಾಯದ ದೇವರಗುಡ್ಡ

ಕೋರಣ್ಯದಿಂದ ಹಿಂದಿರುಗಿದ ಮೇಲೆ ಗುಡ್ಡನನ್ನು ಬಾಗಿಲಲ್ಲೇ ನಿಲ್ಲಿಸಿ ಪಾದ ತೊಳೆದು ಪೂಜೆಮಾಡಿ ರತ್ನೀರನ್ನು ಹಾಕಿ ಶಾಂತಿ ಮಾಡುವುದಕ್ಕೆಂದು ಒಂದು ಕೋಳಿಯನ್ನು ಕುಯ್ದು ಅದರ ರಕ್ತವನ್ನು ಹುಡುಗನ ಹಣೆಗೆ ಹಚ್ಚುತ್ತಾರೆ. ತಂದ ಭಿಕ್ಷೆಯನ್ನು ಬಿರುದುಗಳೊಡನೆ (ಕಂಸಾಳೆಗಳೊಡನೆ) ಗದ್ದುಗೆ ಮೇಲಿರಿಸುತ್ತಾರೆ. ಆಗ ಪುರುಸಕಾರಿ ಮೊದಲಿನಂತೆ ತುಂಬಿದ ಸೇರಿನ ಮೇಲೆ ಗುಡ್ಡನ ಅಂಗೈ ಒತ್ತಿಸಿ ಕಂಕಣ ಬಿಚ್ಚುತ್ತಾನೆ. ಕಂಕಣವನ್ನು ಅರುಣೆ ಗಡಿಗೆಯಲ್ಲಿದ್ದ ಹೊಂಬಾಳೆ ಯೊಡನೆ ಮನೆಯ ಸೂರಿಗೆ ಕಟ್ಟಿ ಧೂಪ ಹಾಕುತ್ತಾರೆ. ಇದಾದಮೇಲೆ ಗದ್ದಿಗೆ ಪೂಜೆ ನಡೆದು ಕಡುಬು, ಕಜ್ಜಾಯ, ತುಪ್ಪವನ್ನು ಎಲ್ಲರಿಗೂ

ಬಡಿಸುತ್ತಾರೆ. ಊಟಕ್ಕೆ ಕುಳಿತಿದ್ದ ಗುಡ್ಡರುಗಳೆಲ್ಲ ತಮ್ಮ ತಮ್ಮ ಅಗಲಿನಿಂದ (ತಟ್ಟೆ) ಸ್ವಲ್ಪ ಸ್ವಲ್ಪ ಕಜ್ಜಾಯ ತುಪ್ಪವನ್ನು ತೆಗೆದು ಗುಡ್ಡನ ಅಗಲಿಗೆ ಬಡಿಸುತ್ತಾರೆ. ಇದನ್ನು ಪಂತಿಸೇವೆ ಎಂದು ಕರೆಯುತ್ತಾರೆ. ಊಟವಾದಮೇಲೆ ತಂದಿದ್ದ ಭಿಕ್ಷವನ್ನೆಲ್ಲ ಸುರಿದು ಗುಡ್ಡನ ಜೋಳಿಗೆಗೆ ಐದು ಬೊಗಸೆ ಅಕ್ಕಿ, ಐದು ಪಾವಲಿ ಹಾಕಿ ಅಕ್ಷಯವಾಗ್ಲಪ್ಪ ಎಂದು ಹರಸಿ ಎಲ್ಲರೂ ತೆರಳುತ್ತಾರೆ.

ಹೀಗೆ ಗುಡ್ಡನಾದವನು ಮಾದೇವನ ಕಥೆಯನ್ನು ಕಲಿತು ಕಥೆ ಮಾಡುವುದು ಮುಂದಿನ ಹೆಜ್ಜೆ. ಮನೆತುಂಬಿದ ಸೋಮವಾರ ಹುಡುಗನಿಗೆ ಕಥೆ ಕಲಿಸಲು ಪ್ರಾರಂಭಿಸುತ್ತಾರೆ. ರಾಗ ಚನ್ನಾಗಿದೆ ಎಂದು ತಿಳಿದರೆ ಕಥೆಗಳನ್ನು ಕಲಿಸುತ್ತಾರೆ. ಇಲ್ಲದಿದ್ದರೆ ಸೊಲ್ಲು ಕೊಡುವುದಕ್ಕೋ ಅಥವಾ ದಮ್ಮಡಿ ನುಡಿಸಲೋ ನೇಮಿಸಿಕೊಳ್ಳುವರು. ಇದೆಲ್ಲವನ್ನೂ ಗುಡ್ಡ ಗುರುಮುಖೇನ ಮಾಡಬೇಕು. ಅನಂತರ ಗುಡ್ಡ ಪ್ರತಿ ಸೋಮವಾರ ಮತ್ತು ಶುಕ್ರವಾರಗಳಲ್ಲಿ ಮಡಿಯಿಂದ ಮಲೆಯ ಮಾದೇಶ್ವರನನ್ನು ಪೂಜೆ ಮಾಡಿ ಕೋರಣ್ಯಕ್ಕೆ ತಪ್ಪದೆ ಹೋಗುತ್ತಾನೆ. ಈ ಸಂದರ್ಭಗಳಲ್ಲಿ ಅವನಿಗೆ ಕಥೆ ಮಾಡಲು ಬರದಿದ್ದರೆ ಬಿಡೋಲಗ ಅಥವಾ ಕಟ್ಟೋಲ ಮುಂತಾದ ಕೆಲವು ಬಿಡಿಗೀತೆಗಳನ್ನಾದರೂ ಹಾಡುತ್ತಾನೆ.

ಮಕ್ಕಳಿಲ್ಲದೆ ಮಾದೇವನ ವರದಿಂದ ಹುಟ್ಟಿದ ಈ ದೇವರಗುಡ್ಡರಿಗೆ ಮಾದಪ್ಪ, ಮಾದಯ್ಯ, ಮುದ್ದುಮಾದ, ಮಾದೇವಸ್ವಾಮಿ ಮುಂತಾಗಿ ಮಾದೇಶ್ವರನ ಹೆಸರುಗಳನ್ನೇ ಇಡುತ್ತಾರೆ. ಗುಡ್ಡನಾದವನು ಬ್ರಹ್ಮಚಾರಿಯಾಗಿರಬೇಕೆಂಬ ನಿಯಮವೇನೂ ಇಲ್ಲ. ಅವನು ಸಂಸಾರಿಯೂ ಸ್ಥಿತಿವಂತನೂ ಆಗಿರಬಹುದು. ಜೀವನ ನಿರ್ವಹಣೆಗಾಗಿ ಯಾವ ವೃತ್ತಿಯನ್ನಾದರೂ ಅವಲಂಬಿಸಬಹುದು. ಆದರೆ ಸೋಮವಾರ ಶುಕ್ರವಾರಗಳಲ್ಲಿ ತಪ್ಪದೆ ಒಂದೆರಡು ಮನೆಗಳಲ್ಲಾದರೂ ಕೋರಣ್ಯ ಮಾಡಬೇಕು. ದೇವರ ಗುಡ್ಡರು ಹರಿಜನರು, ಉಪ್ಪಲಿಗಶೆಟ್ಟರು, ಕುರುಬರು, ಕುಂಬಾರರು, ಅಗಸರು, ಪರಿವಾರದವರು, ಒಕ್ಕಲಿಗರು ಮುಂತಾದ ವರ್ಗದವರಲ್ಲಿ ಕಾಣಸಿಗುತ್ತಾರೆ.

ದೇವರಗುಡ್ಡನ ಅಂತ್ಯಸಂಸ್ಕಾರವೂ ಗುಡ್ಡರಿಂದಲೇ ನಡೆಯುತ್ತದೆ. ಗುಡ್ಡರ ಮರಣವೆಂದರೆ ಅದು ಮಹಾತ್ಮನ ಮರಣ. ಗುಡ್ಡರಲ್ಲದೆ ಬೇರೆ ಯಾರೂ ಶವವನ್ನು ಮುಟ್ಟುವಂತಿಲ್ಲ. ಶವಕ್ಕೆ ಸ್ನಾನಮಾಡಿಸಿ ವಿಭೂತಿಧರಿಸಿ ಬಿಲ್ವಪತ್ರೆ ತುಂಬೇ ಹೂವುಗಳಿಂದ ಅಲಂಕಾರಮಾಡಿ ಶವವನ್ನು ಕುಳ್ಳಿರಿಸಿ ಲಿಂಗವನ್ನು ಅಂಗೈಮೇಲೆ ಮಡಗಿ ಪೂಜೆ ಮಾಡಿ ಮಣ್ಣು ಮಾಡುತ್ತಾರೆ.

ಗುಡ್ಡರು ಮಾಡುವ ಹಬ್ಬಗಳಲ್ಲಿ ದೀಪಾವಳಿ ಹಾಗೂ ಶಿವರಾತ್ರಿಗಳು ಅತ್ಯಂತ ಪ್ರಮುಖವಾದವುಗಳು. ಈ ಹಬ್ಬಗಳಲ್ಲಿ ಮತ್ತು ಶುಕ್ರವಾರ, ಸೋಮವಾರಗಳಲ್ಲಿ ಸೀಸಪ್ಪೆ (ಸಸ್ಯಾಹಾರ) ಮಾತ್ರ ಮಾಡುತ್ತಾರೆ. ಮಾಂಸಾಹಾರ ಬಳಸುವುದಿಲ್ಲ. ಬೆಟ್ಟದಲ್ಲಿ ಮಾದೇಶ್ವರನನ್ನು ತಾವೇ ಪೂಜಿಸುವುದಿಲ್ಲ. ಮಾದೇಶ್ವರನ ಪೂಜೆಗೆಂದೇ ಮೀಸಲಾಗಿರುವ ಬೇಡರ ಕಣ್ಣಪ್ಪನ ವಂಶಜರಾದ ತಮ್ಮಡಿಗಳ ಕೈಯಲ್ಲಿ ಪೂಜೆ ಮಾಡಿಸುತ್ತಾರೆ. ಗುಡ್ಡರು ಸೋಮವಾರ, ಶುಕ್ರವಾರಗಳಲ್ಲಿ ಉಪಾದಾನ ಮಾಡುವುದಲ್ಲದೆ ಇತರ ದಿನಗಳಲ್ಲೂ ಜೀವನ ನಿರ್ವಹಣೆಗಾಗಿ ಕರೆದಲ್ಲಿಗೆ ಹೋಗಿ ಕತೆ ಮಾಡುವುದುಂಟು.

ಹೆಣ್ಣುಮಕ್ಕಳನ್ನು ಗುಡ್ಡಮ್ಮ ಅಥವಾ ಗುಡ್ಡಿ ಬಿಡುವ ಪದ್ಧತಿ ಹರಿಜನರಲ್ಲಿ ಮಾತ್ರ ತೀರ ವಿರಳವಾಗಿ ನಡೆದುಕೊಂಡು ಬರುತ್ತಿದೆ. ಗುಡ್ಡಿ ಮಲೆಯಮಾದೇಶ್ವರನಿಗೆ ಸಿಸುಮಗಳಾದ ಮೇಲೆ ಅವಳಿಗೆ ವಿವಾಹವಿಲ್ಲ. ಯಾವನಾದರೂ ಗುಡ್ಡ ಇಷ್ಟಪಟ್ಟರೆ ಅವನ ಸೇವೆಯನ್ನು ಈಕೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಗುಡ್ಡಿ ಬಿಟ್ಟ ಹೆಣ್ಣುಮಕ್ಕಳಿಗೆ ಮಾದಮ್ಮ, ಮಾದೇವಿ, ರಾಮವ್ವೆ, ಮಲ್ಲಮ್ಮ ಇತ್ಯಾದಿ ಹೆಸರುಗಳನ್ನು ಕಟ್ಟುತ್ತಾರೆ. ಇತ್ತೀಚೆಗೆ ಗುಡ್ಡಿ ಬಿಡುವ ಪದ್ಧತಿ ಮಾಯವಾಗುತ್ತಿದೆ.

(ಪಿ.ಕೆ.ಆರ್.)

**ದೇವರ ದಾಸಿಮಯ್ಯ:** 11ನೆಯ ಶತಮಾನದ ಉತ್ತರಾರ್ಧ ಹಾಗೂ 12ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಹಿರಿಯ ಶಿವಶರಣ ಹಾಗೂ ಆದ್ಯ ವಚನಕಾರ. ಶಂಕರದಾಸಿಮಯ್ಯನ ಸಮಕಾಲೀನ. ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಮುದನೂರು ಇವನ ಜನ್ಮಸ್ಥಳ. ಇವನಿಗೆ ಮುದನೂರು ದಾಸಿಮಯ್ಯ, ಜೇಡರ ದಾಸಿಮಯ್ಯ ಎಂಬ ಹೆಸರುಗಳೂ ಇವೆ. ದೇವರ ದಾಸಿಮಯ್ಯ ಹಾಗೂ ಜೇಡರ ದಾಸಿಮಯ್ಯ ಇಬ್ಬರೂ ಬೇರೆ ಬೇರೆ ವ್ಯಕ್ತಿಗಳೆಂದೂ ಇಬ್ಬರೂ ಒಬ್ಬನೇ ಎಂದೂ ವಾದವಿವಾದಗಳೂ ಇವೆ. ರಾಮನಾಥ ಇವನ ಆರಾಧ್ಯದೈವ. ಈತನ ಪತ್ನಿ ದುಗ್ಗಳೆ **(ನೋಡಿ)** ಶ್ರೇಷ್ಠ ಶಿವಭಕ್ತೆಯಾಗಿದ್ದು ಇವರಿಬ್ಬರ ದಾಂಪತ್ಯ ಸಾಮರಸ್ಯದಿಂದ ಕೂಡಿತ್ತು. ನೇಯ್ಗೆ ಈತನ ಕಾಯಕ. ಒಮ್ಮೆ ದಾಸಿಮಯ್ಯನ ಶ್ರೇಷ್ಠ ಭಕ್ತಿಗೆ ಮೆಚ್ಚಿ ಶಿವನು ಜಂಗಮ ರೂಪದಲ್ಲಿ ಬಂದು ನೇಯ್ದ ವಸ್ತ್ರವನ್ನು ಕಾಣಿಕೆಯಾಗಿ ಪಡೆದು ತವನಿಧಿಯನ್ನು ಇವನಿಗೆ ಕರುಣಿಸಿದನೆಂದು ಪ್ರತೀತಿ. ಬಸವಣ್ಣ ಇವನ ಭಕ್ತಿಯನ್ನು ಕುರಿತು ಹೇಳುವಾಗ ಭಕ್ತಿ ಎಂತಹುದಯ್ಯ ದಾಸಯ್ಯ ಮಾಡಿದಂತಹುದಯ್ಯ ಎಂದು ಹೇಳಿದ್ದಾರೆ. ಅಲ್ಲದೆ ದಾಸಿಮಯ್ಯನ ಆದರ್ಶ ದಾಂಪತ್ಯವನ್ನು ಹೊಗಳಿದ್ದಾರೆ. ದಾಸಿಮಯ್ಯ ತನ್ನ ವಚನಗಳಲ್ಲಿ ತನಗಿಂತ ಹಿಂದೆ ಇದ್ದಿರಬಹುದಾದ ಅಥವಾ ಸಮಕಾಲೀನರಾಗಿದ್ದ ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಕುಂಬಾರ ಗುಂಡಯ್ಯ, ಕೆಂಬಾವಿಯ ಭೋಗಣ್ಣ ಮೊದಲಾದ ವಚನಕಾರರನ್ನು ಸ್ಮರಿಸಿದ್ದಾನೆ. ಇವನ ವಿಷಯ ಬಸವಣ್ಣನವರ ವಚನಗಳು, ಬಸವಪುರಾಣ, ಶಿವತತ್ತ್ವಚಿಂತಾಮಣಿ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ ಮೊದಲಾದ ಗ್ರಂಥಗಳಲ್ಲಿ ಸ್ವಲ್ಪಮಟ್ಟಿಗೆ ನಿರೂಪಿತವಾಗಿವೆ. ಇವನ ಜೀವನಚರಿತ್ರೆಯನ್ನೇ ಪೂರ್ಣವಾಗಿ ಒಳಗೊಂಡು ರಚಿತವಾದ ಗ್ರಂಥಗಳಲ್ಲಿ ದೇವಕವಿಯ ದೇವಾಂಗಪುರಾಣ (ಸಂಸ್ಕೃತ), ಇದನ್ನೇ ಕನ್ನಡಕ್ಕೆ ಅನುವಾದಿಸಿದ ಅಯ್ಯಪ್ಪನ ದೇವಾಂಗಪುರಾಣ, ವಿರೂಪಾಕ್ಷದೇಶಿಕನ ದೇವರ ದಾಸಿಮಯ್ಯನ ಪುರಾಣ ಮುಖ್ಯವಾದುವು. ಈತ ಅನೇಕ ಪವಾಡಗಳನ್ನು ಮೆರೆದನೆಂದೂ ಪ್ರತೀತಿ. ಪೊಟ್ಟಲಕೆರೆಯಲ್ಲಿ ಜೈನರನ್ನು ವಾದದಲ್ಲಿ ಸೋಲಿಸಿದ್ದು, ರಾಣಿ ಸುಗ್ಗಲೆಗೆ ಶಿವದೀಕ್ಷೆ ಕೊಟ್ಟದ್ದು, ಘಟಸರ್ಪವನ್ನು ಶಿವಲಿಂಗಮಾಡಿ ಪೊಟ್ಟಲಕೆರೆಯಲ್ಲಿ ಪ್ರತಿಷ್ಠಾಪಿಸಿದ್ದು ಈತ ಮೆರೆದನೆನ್ನಲಾದ ಮುಖ್ಯ ಪವಾಡಗಳು.

ಇದುವರೆಗೆ ದಾಸಿಮಯ್ಯನ 142 ವಚನಗಳು ದೊರಕಿವೆ. ರಾಮನಾಥ ಎಂಬುದು ಇವನ ವಚನಗಳ ಅಂಕಿತ. ಇವುಗಳಲ್ಲಿ ಭಕ್ತಿಯ ಮೇಲ್ಮೆಯನ್ನೂ ತತ್ತ್ವದ ಆಳವನ್ನೂ ಅರಿಯಬಹುದಾಗಿದೆ. ಈ ವಚನಗಳಲ್ಲಿ ಕಂಡುಬರುವ ಆಳವಾದ ಅರ್ಥ, ಭಾವ, ಧ್ವನಿ, ಈತ ಒಬ್ಬ ಉತ್ತಮ ವಚನಕಾರನೆಂಬುದಕ್ಕೆ ಸಾಕ್ಷಿಯಾಗಿವೆ. ಪರಮಾತ್ಮನ ಸ್ವರೂಪ, ಪರಮಾತ್ಮ ಜೀವಾತ್ಮರಿಗಿರುವ ಸಮ್ಯಕ್ ಸಂಬಂಧ, ಮೋಕ್ಷಸ್ವರೂಪ, ಸಯೋಗ್ಯಗುರುವಿನ ಲಕ್ಷಣ, ಭಕ್ತಾಭಿಮಾನ, ದಾಸ್ಯಭಾವ, ಸಮರ್ಪಣಾಭಾವ, ಧರ್ಮ, ನೀತಿ ಮೊದಲಾದ ವಿಷಯಗಳು ಇವನ ವಚನಗಳಲ್ಲಿ ಚೆನ್ನಾಗಿ ಪ್ರತಿಪಾದಿತವಾಗಿವೆ. ತನ್ನ ಅನುಭವಕ್ಕೆ ನಿಲುಕದ ಯಾವುದೇ ಸಂಗತಿಯನ್ನು ಈತ ಹೇಳಹೋಗಿಲ್ಲ. ಯಾವುದೇ ಅನುಭವವು ಸಹೃದಯರಿಗೆ ತಲುಪುವಂತೆ ಉಪಮೆ ರೂಪಕಾದಿಗಳ ಸಹಾಯಗಳಿಂದ ಹೇಳುವ ರೀತಿ ಸ್ವೋಪಜ್ಞತೆಯಿಂದ ಕೂಡಿದೆ. ಭಾಷೆಯಲ್ಲಿ ಸರಳತೆ ಕಂಡುಬಂದರೂ ಭಾವದಲ್ಲಿ ಅರ್ಥಶ್ರೀಮಂತಿಕೆ ಎದ್ದು ಕಾಣುತ್ತದೆ.

ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ, ಕುರಿಯ ಕೊರಳನೆ ಕೊಯ್ದುಂಬ ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೇ; ಈಶನ ಶರಣರು ವೇಶಿಯ ಹೋದೆಡೆ ಮೀಸಲೋಗರವ ಹೊಱಗಿರಿಸಿದೆಡೆ ಹಂದಿ ಮೂಸಿನೋಡಿದಂತೆ; ಸತಿಯರ ಸಂಗವನು ಅತಿಶಯದ ದಾಸ್ಯವನು ಪೃಥ್ವಿಗೀಶ್ವರನ ಪೂಜೆಯನು ಅರಿವುಳ್ಳರೆ ಹೆರರ ಕೈಯಿಂದ ಮಾಡಿಸುವರೆ– ಇಂಥ ಕೆಲವು ವಚನಗಳಲ್ಲಿ ಸಮಾಜ ವಿಮರ್ಶೆ ಕಟುವಾಗಿ ವಿಡಂಬನಾತ್ಮಕವಾಗಿ ನಿರೂಪಿತವಾಗಿದೆ. ಹಸಿವಿಲ್ಲದ ಬೊಂಬೆಗೆ ತೃಷೆಯಿಲ್ಲದ ನೀರೆಱೆದು ಮಸಕವಿಲ್ಲದ ಮಾತ ಮನದಲ್ಲಿ ಹೇಳಿ ಹೆಸರಿಲ್ಲದೆ ಕರೆದರೆ ಓ ಎಂಬವ ನೀನೋ; ಎಣ್ಣೆ ಇದ್ದು ಎಳ್ಳು ನೆನೆಯದ ಭೇದವ, ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ, ಕಾಮವಿದ್ದು ಕನ್ನೆಯನನುಭವಿಸದ ಭೇದವ, ಪರವಿದ್ದೂ ಪ್ರಾಣನ ಪ್ರಕೃತಿಯರಿಯದ ಭೇದವ– ಈ ಮೊದಲಾದ ಕೆಲವು ವಚನಗಳಲ್ಲಿ ಬೆಡಗಿನ ವಚನಗಳ ಶೈಲಿ ಕಂಡುಬರುತ್ತದೆ. ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೇ; ಜಳ್ಳು ತೂರಿದಲ್ಲಿ ಬತ್ತವುಂಟೇ; ಹಂದಿ ಶ್ರೀಗಂಧವ ಪೂಸಿದರೇನು ಗಂಧರಾಜನಾಗ ಬಲ್ಲುದೇ; ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟ ನೆಗೆದಂತೆ; ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ; ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೇ; ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಂಬುದೇ– ಈ ಮೊದಲಾದ ಮಾತುಗಳಲ್ಲಿ ಆಡುನುಡಿಯ ಸೊಬಗನ್ನೂ ಕಾಣಬಹುದು.

ದಾಸಿಮಯ್ಯನ ವಚನಗಳ ಪ್ರಭಾವ ಮುಂದಿನ ಇಡೀ ವಚನ ಸಾಹಿತ್ಯದ ಮೇಲೆ ಆಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಬಸವಣ್ಣನವರು ಇವನ ಭಾವವನ್ನೂ ಅನುಭಾವವನ್ನೂ ಅನುಸರಿಸಿದ್ದಾರೆ. ಅಲ್ಲಮಪ್ರಭು, ಅಕ್ಕಮಹಾದೇವಿ, ಸರ್ವಜ್ಞ ಮೊದಲಾದ ವಚನಕಾರರು ಈತನ ಪ್ರಭಾವಕ್ಕೊಳಗಾಗಿದ್ದಾರೆ. ಹೀಗೆ ಒಂದು ಸಾಹಿತ್ಯ ಪ್ರಕಾರದ ಆದ್ಯಪ್ರವರ್ತಕನಾಗಿ ಉತ್ತಮ ವಚನಗಳನ್ನು ನೀಡಿ ಶ್ರೇಷ್ಠ ವಚನಕಾರನೆಂಬ ಬಿರುದಿಗೆ ದಾಸಿಮಯ್ಯ ಪಾತ್ರನಾಗಿದ್ದಾನೆ. **(ಬಿ.ಎಸ್.ಎಸ್.)**

**ದೇವರ ಸೇವೆಗಳು:** ಜನಪದರು ತಮಗೆ ಸಂಭವಿಸುವ ಶುಭ ಅಶುಭಗಳಿಗೆಲ್ಲ ದೇವರೇ ಕಾರಣನೆಂದೂ ಅವನ ಕೃಪೆ ಕಡಿಮೆಯಾದಾಗ ಕಷ್ಟ ನಷ್ಟ ಒದಗುವುದೆಂದೂ ಕೃಪೆ ಹೆಚ್ಚಾದಾಗ ಸುಖ ಒದಗುವುದೆಂದೂ ನಂಬಿ ಕೈಗೊಳ್ಳುವ, ಕಷ್ಟಪರಿಹಾರಾರ್ಥವಾಗಿ ನಿರ್ದಿಷ್ಟ ದೈವಕ್ಕೆ ಕಟ್ಟಿಕೊಂಡ ಹರಕೆ ತೀರಿಕೆಯ ವಿಶಿಷ್ಟ ಆಚರಣೆಗಳು. ಇಂಥ ಆಚರಣೆಗಳಲ್ಲಿ ಅನೇಕ ಪ್ರಕಾರಗಳುಂಟು. ಸೇವಾ ನಿಯಮ, ರೀತಿರಿವಾಜುಗಳನ್ನು ಕುರಿತಂತೆ ಹಲವಾರು ಕಟ್ಟುಕಟ್ಟಳೆಗಳುಂಟು. ಇವು ಪ್ರದೇಶದಿಂದ ಪ್ರದೇಶಕ್ಕೆ ಕಾಲಾಕಾಲಕ್ಕೆ ರೂಪ ಸಮಯ ಸಾಧನಗಳಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಪಡೆದುಕೊಂಡು ಬಳಕೆಯಲ್ಲಿರುತ್ತವೆ.

ಇವುಗಳಲ್ಲಿ ಒಚ್ಚಮಗ್ಗುಲು ಸೇವೆ, ದುಂಡುರುಳು ಸೇವೆ, ಮಡೆ ಹೊರಳುವುದು, ಹೆಜ್ಜೆ ನಮಸ್ಕಾರ, ಮಣೇವು ಹಾಕುವುದು, ಹರಿಸೇವೆ, ಮೆಟ್ಟಿಲು ತೆಂಗಿನ ಕಾಯಿ ಸೇವೆ, ಪಂಜಿನ ಸೇವೆ, ಹಾಸಿಗೆ ಸೇವೆ, ಹೊಳೆಕರೆ ಸೇವೆ, ಧೂಪದ ಸೇವೆ, ಫಲಾರ ಸೇವೆ, ತಾಳೆಮೆಳೆ ಸೇವೆ, ಶಿಕ್ರಕ್ಕಾಯ್ ಕಟ್ಟೋ ಸೇವೆ, ದೇವಸ್ಥಾನದ ಬಾಗಿಲಿನಲ್ಲಿ ಎಲ್ಲರೂ ತಿರುಗುವಲ್ಲಿ ತಮ್ಮ ಚಿತ್ರ ಕೆತ್ತಿಸುವುದು, ಬಾಯಿಬೀಗ ಸೇವೆ, ಕೊಂಡ ಹಾಯುವುದು, ಸಿಡಿ ಆಡುವುದು ಮುಂತಾದುವು ಮುಖ್ಯವಾದುವು.

**ಒಚ್ಚಮಗ್ಗುಲುಸೇವೆ:** ಇದನ್ನು ಸಲ್ಲಿಸುವವರು ನದಿಯಲ್ಲಿ ಅಥವಾ ಕೆರೆಯಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯುಟ್ಟು ಹರಕೆ ಹೊತ್ತ ದೈವದ ದೇವಾಲಯದ ಸುತ್ತ ಒಂದೇ ಮಗ್ಗುಲಲ್ಲಿ ಮಲಗುತ್ತ ನಮಸ್ಕಾರ ಮಾಡಿಕೊಂಡು ಬರುವರು. ಒಂದು ಸುತ್ತಿನಿಂದ ಮೂರು ಸುತ್ತಿನವರೆಗೆ ಈ ಸೇವೆ ನಡೆಯುತ್ತದೆ. ಇದರಲ್ಲಿ ಹೆಚ್ಚಾಗಿ ಹರಕೆ ಸಲ್ಲಿಸುವವರು ಪುರುಷರು. ಕೆಲವೊಮ್ಮೆ ಸ್ತ್ರೀಯರೂ ಸಲ್ಲಿಸುವುದುಂಟು.

**ದುಂಡುರುಳುಸೇವೆ,ಮಡೆಹೊರಳುವುದು:** ಸ್ವಲ್ಪ ಹೆಚ್ಚುಕಡಮೆ ಇವು ಎರಡೂ ಒಂದೇ ಬಗೆಯವು. ಇವುಗಳಲ್ಲಿಯೂ ಒದ್ದೆಬಟ್ಟೆ ಉಟ್ಟು, ದೇವಸ್ಥಾನವನ್ನು ಉರುಳುತ್ತಲೇ ಬಳಸಿ ಬರುತ್ತಾರೆ. ಕೆಲವು ವೇಳೆ ರಥೋತ್ಸವ, ಪರ್ವಗಳಂಥ ದೊಡ್ಡ ಸಮಾರಾಧನೆಗಳಲ್ಲಿ ನೂರಾರು ಜನ ಊಟ ಮಾಡಿದ ಎಂಜಲು ಎಲೆಗಳನ್ನು ಎತ್ತುವುದಕ್ಕೆ ಮುಂಚೆ ಅದರ ಮೇಲೆ ಉರುಳುವುದೂ ಉಂಟು. ಘಟ್ಟದ ಕೆಳಗಿನ ಸುಬ್ರಹ್ಮಣ್ಯ ದೇವಾಲಯದಲ್ಲಿ ಈ ಸೇವೆ ಹೆಚ್ಚು. ಹಿಂದೆ ಬಿಳಿಗಿರಿ ರಂಗನ ಬೆಟ್ಟದಲ್ಲಿಯೂ ಈ ಸೇವೆ ನಡೆಸುತ್ತಿದ್ದರಂತೆ. ಇದರಿಂದ ಕಾಯಿಲೆಗಳು ಗುಣವಾಗುವುದರ ಜೊತೆಗೆ, ಈ ಸೇವೆ ನಡೆಸುವ ಮಕ್ಕಳಾಗದ ಮಹಿಳೆಯರಿಗೆ ಮಕ್ಕಳಾಗುವುದೆಂಬ ನಂಬಿಕೆ ಇದೆ. ಹೆಂಗಸರಲ್ಲದೆ ಪುರುಷರೂ ಈ ಸೇವೆ ನಡೆಸುತ್ತಾರೆ.

**ಹೆಜ್ಜೆನಮಸ್ಕಾರ:** ದೇವಸ್ಥಾನದ ಪ್ರಾಕಾರದಲ್ಲಿ ಹೆಜ್ಜೆ ಹೆಜ್ಜೆಗೂ ನಮಸ್ಕರಿಸುತ್ತ ಹೋಗುವುದು. ಬೆಟ್ಟದ ಮೇಲೆ ದೇವರಿದ್ದರೆ ಮೆಟ್ಟಲು ಮೆಟ್ಟಲಿಗೂ ನಮಸ್ಕರಿಸುತ್ತ ಹೋಗುವುದು.

**ಮೆಟ್ಟಲುತೆಂಗಿನಕಾಯಿಸೇವೆ:** ಮಕ್ಕಳಾಗದಿರುವ ಮಹಿಳೆಯರು ಒಂದೊಂದು ಮೆಟ್ಟಲಿಗೆ, ಕೆಲವು ವೇಳೆ ಹನ್ನೆರಡು ಮೆಟ್ಟಲಿಗೆ ಒಮ್ಮೆ ತೆಂಗಿನಕಾಯಿ ಒಡೆಯುತ್ತ ನಮಸ್ಕರಿಸುತ್ತ ಹೋಗುವರು. ಹೀಗೆ ಮಾಡಿದರೆ ಮಕ್ಕಳಾಗುವುದೆಂಬ ನಂಬಿಕೆಯಿದೆ.

**ಹರಿಸೇವೆ:** ದೇವರಿಗೆ ಪೂಜೆ ಮಾಡಿಸಿ ನೈವೇದ್ಯ ಮಾಡಿಸಿ ಮಂಗಳಾರತಿ ಮಾಡಿಸುವುದು. ಹರಿಸೇವೆಯ ಅಂಗವಾಗಿ ನಡೆಯುವ ಇನ್ನೊಂದು ಸೇವೆ ಮಣೇವು ಹಾಕುವುದು. ಇದರಲ್ಲಿ ಮುಖ್ಯಪಾತ್ರ ವಹಿಸುವವರು ದಾಸಯ್ಯಗಳು.

**ಧೂಪದಸೇವೆ:** ಮಾದೇಶ್ವರನ ಭಕ್ತರು ಬೆಟ್ಟ ಹತ್ತಿ ದೇವಸ್ಥಾನದ ಮುಂದೆ ಉರಿಯುತ್ತಿರುವ ಕೊಂಡಕ್ಕೆ ಧೂಪ (ಸಾಂಬ್ರಾಣಿ, ಗಂಧದ ಚಕ್ಕೆ) ಹಾಕುವುದು. ದೇವರಿಗೆ ನೈವೇದ್ಯ ಮಾಡಿದ ಪ್ರಸಾದವನ್ನು ಇವರು ಕೈಯಲ್ಲಿ ಮುಟ್ಟದೆ ತಿನ್ನುತ್ತಾರೆ.

**ಪಂಜಿನ'ಸೇವೆ:** ಮಲೆಯ ಮಾದೇಶ್ವರನ ಬೆಟ್ಟದಲ್ಲಿ ಮಾದೇಶ್ವರನ ಭಕ್ತರು ಪಂಜಿನ ಸೇವೆ ನಡೆಸುವರು. ಎರಡೂ ಕೈಯಲ್ಲಿ ಎರಡು ಪಂಜು ಹಿಡಿದು ಒಂದು ವಿಧವಾಗಿ ನಮಸ್ಕರಿಸುವುದು ಇದರ ವೈಶಿಷ್ಟ್ಯ.

**ಫಲಾರಸೇವೆ:** ಮಾದೇಶ್ವರನ ಭಕ್ತರು ಮಾದೇಶ್ವರನ ಬೆಟ್ಟಕ್ಕೆ ಹತ್ತುವಾಗ ಊಟತಿಂಡಿ ಮಾಡದೆ ಯಾಲಕ್ಕಿಕಾಯಿಯನ್ನು ಮಾತ್ರ ತಿಂದು ಬೆಟ್ಟ ಹತ್ತುವುದು. ಇದನ್ನು ಸಾಮಾನ್ಯವಾಗಿ ಎಲ್ಲರೂ ಮಾಡುತ್ತಾರೆ.

**ಕೊಂಡಹಾಯುವುದು:** ಗ್ರಾಮದೇವತೆಯ ಜಾತ್ರೆಯಂದು ನಿಗಿನಿಗಿ ಉರಿಯುತ್ತಿರುವ ಕೆಂಡದ ಮೇಲೆ ಬರಿಗಾಲಿನಲ್ಲಿ ನಡೆದುಕೊಂಡು ಹೋಗುವುದೇ ಕೊಂಡ ಹಾಯುವುದು.

**ಬಲಿ:** ದೇವತೆಯ ಸಂತೃಪ್ತಿಗಾಗಿ ಪ್ರಾಣಿ ಕೊಲ್ಲುವಿಕೆ.

**ಸಿಡಿ:** ಆಡುವುದು **(ನೋಡಿ: ಸಿಡಿ)**

**ಬಾಯಿಬೀಗ:** ಬಾಯನ್ನು ಲೋಹದ ಕಂಬಿಯಿಂದ ಹೊಲಿದು ಕೊಳ್ಳುವುದು.

**ಮುಡಿಒಪ್ಪಿಸುವುದು:** ಮಂಡೆಯನ್ನು ಬೋಳಿಸಿಕೊಳ್ಳುವುದು

**ಶಿಕ್ರಕ್ಕಾಯ್‌ಕಟ್ಟೋಸೇವೆ:** ಎಲ್ಲಮ್ಮನ ಭಕ್ತರು ದೇವಾಲಯದ ಶಿಖರಕ್ಕೆ ತೆಂಗಿನಕಾಯಿಯನ್ನು ಕಟ್ಟಿ ಬರುತ್ತಾರೆ. ಇದು ಈ ದೇವತೆಗೆ ಮಾತ್ರ ಮೀಸಲಿರುವ ಸೇವೆ. ದೇವಸ್ಥಾನದ ಮೆಟ್ಟಲಿನ ಮೇಲೆ ತಮ್ಮ ಚಿತ್ರವನ್ನು ಬರೆಯಿಸಿ ಅಥವಾ ಕೆತ್ತಿಸಿ ಅದನ್ನು ಎಲ್ಲರೂ ತುಳಿದುಕೊಂಡು ಹೋಗುವಂತೆ ಮಾಡುತ್ತಾರೆ. ಇದರಿಂದ ತಮ್ಮ ಪಾಪ ಪರಿಹಾರವಾಗುವುದೆಂದು ನಂಬಿಕೆ.

**ಬಾಳೆಪಟ್ಟೆಪೂಜೆ:** ಶುಭ ದಿನಗಳಲ್ಲಿ ಅಂದರೆ ಶಿವರಾತ್ರಿ, ಸಂಕ್ರಾಂತಿ, ಯುಗಾದಿ, ಕಾರ್ತಿಕ ಮುಂತಾದ ದಿನಗಳಲ್ಲಿ ದೇವರಿಗೆ ಚಪ್ಪರ ಅಲಂಕಾರ ನೈವೇದ್ಯ ಮಾಡಿಸುವುದುಂಟು. ಇದಕ್ಕೆ ಪೂಜೆ ಕಟ್ಟಿಸುವುದು ಎಂದು ಹೆಸರು. ಇದರಲ್ಲಿ ಬಾಳೆಪಟ್ಟೆ ಪೂಜೆ ಹೆಚ್ಚು ಪ್ರಸಿದ್ಧ. ಬಾಳೆಯ ಮರವನ್ನು ಕಡಿದು ಅದರ ಪಟ್ಟೆಗಳನ್ನು ವಿವಿಧ ಆಕಾರಗಳಲ್ಲಿ ಕೊರೆದು, ಕತ್ತರಿಸಿ ದೇವರ ವಿಗ್ರಹದ ಸುತ್ತ ಮಂಟಪ ಕಟ್ಟುತ್ತಾರೆ. ವಿವಿಧ ರೀತಿಯಲ್ಲಿ ಬಾಳೆಯ ಪಟ್ಟೆಯಿಂದಲೇ ವಿಗ್ರಹವನ್ನೂ ಶೃಂಗರಿಸಿ ಪೂಜಿಸುತ್ತಾರೆ.

ಇವುಗಳ ಜೊತೆಗೆ ಮನೆಯಲ್ಲಿ ಏನಾದರೂ ತೊಂದರೆ, ಕಷ್ಟ ಸಂಭವಿಸಿದರೆ ಆಗಲೂ ದೇವರಿಗೆ ಸೇವೆ ನಡೆಸುತ್ತಾರೆ. ಉದಾಹರಣೆಗೆ ಹಾಲು ಕೊಡುತ್ತಿರುವ ಎಮ್ಮೆ ಇದ್ದಕ್ಕಿದ್ದಂತೆ ನಿಲ್ಲಿಸಿಬಿಟ್ಟರೆ ಅಥವಾ ಒದ್ದರೆ, ಉಚ್ಚಿದರೆ ಹಳ್ಳಿಗರು ಜೋಯಿಸರಲ್ಲಿ ಶಾಸ್ತ್ರ ಕೇಳುತ್ತಾರೆ. ಜೋಯಿಸರು ಈರನ ಕಾಟ ಎನ್ನುತ್ತಾರೆ. ಈರನ ಕಾಟವೆಂದರೆ, ಮನೆಯಲ್ಲಿ ವಯಸ್ಸಿಗೆ ಬಂದ ಗಂಡೋ ಹೆಣ್ಣೋ ಮದುವೆ ಆಗದೆ ತೀರಿಕೊಂಡಿದ್ದರೆ ಅದರ ಕಾರಣದಿಂದ ಬರುವ ತೊಂದರೆ. ಆಗ ಯಜಮಾನ ತನ್ನ ಮನೆಯಲ್ಲಿ ಮದುವೆಯಾಗದೆ ಸತ್ತಿದ್ದ ಹೆಣ್ಣನ್ನೋ ಗಂಡನ್ನೋ ಜ್ಞಾಪಿಸಿಕೊಂಡು ಈರನ ಮದುವೆ ಮಾಡಿಸುತ್ತೇನೆಂದು ಹರಕೆ ಹೊರುತ್ತಾನೆ. ತನ್ನ ಮನೆಯಲ್ಲಿರುವ ಹೆಣ್ಣು (ಕಡಸು) ಅಥವಾ ಹೋರಿ ಕರುವಿಗೆ, ಬೇರೊಂದು ಮನೆಯಿಂದ ಹೋರಿ ಅಥವಾ ಹೆಣ್ಣು ಕರುವನ್ನು ತಂದು ಎರಡಕ್ಕೂ ಮದುವೆ ಮಾಡಿಸುವುದು ಈರನ ಮದುವೆ. ಈ ಮದುವೆ ಸಾಧಾರಣವಾಗಿ ಮನೆಯಲ್ಲಿ ಆಗುವ ಮದುವೆಯ ಹಿಂದಿನ ದಿನ ನಡೆಯುತ್ತದೆ. ಹೋರಿಗರು ಅಥವಾ ಕಡಸನ್ನು ಕೊಟ್ಟವರಿಗೆ ಅಂದು ಮರ್ಯಾದೆ ಮಾಡುವರು. ಹೀಗೆ ಮದುವೆಯಾದ ಕಡಸು ಅಥವಾ ಹೋರಿಗರುಗಳನ್ನು ಮಾರುವುದಿಲ್ಲ. ಅವು ಮನೆಯಲ್ಲಿಯೇ ಮುಪ್ಪಾಗುತ್ತವೆ.

ದೇವರ ಸೇವಾಕ್ರಮಗಳಲ್ಲಿ ಮುಖ್ಯವಾಗಿ ಅನ್ನದಾನದ ಸೇವೆ ವಿಶೇಷವಾಗಿದೆ. ಜನತೆಯನ್ನು ಅನ್ನದಿಂದ ಸಂತೃಪ್ತಿಪಡಿಸಿದರೆ ದೇವರೂ ಸಂಪ್ರೀತನಾಗುತ್ತಾನೆಂಬ ನಂಬಿಕೆ ಇಂದಿಗೂ ಪ್ರಬಲವಾಗಿದೆ. ಒಂದೂರಿಗೆ ಅಷ್ಟೇ ಅಲ್ಲದೆ ಒಂದು ಪ್ರಾಂತದ ಸಮಸ್ತ ಜನಕ್ಕೂ ಅನ್ನದ ಪರ (ಹಬ್ಬ) ಮಾಡುವ ಸತ್ಸಂಪ್ರದಾಯ ವಿರಳವಾಗಿಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಕಾಣಬರುತ್ತದೆ. ಕೆಲವು ಸೇವೆಗಳಿಗೆ ಕೆಲವು ದೇವರ ದೇವಾಲಯಗಳು ಪ್ರಸಿದ್ಧವಾಗಿರುತ್ತವೆ. ಸಾಧ್ಯವಿರುವವರು ಅಂಥ ದೇವಾಲಯಗಳಿಗೇ ಹೋಗುತ್ತಾರೆ. ಉಳಿದವರು ಹತ್ತಿರದಲ್ಲಿರುವ ದೇವಾಲಯಗಳಲ್ಲಿ ಸೇವೆ ಸಲ್ಲಿಸುತ್ತಾರೆ. ಪುಣ್ಯಕ್ಷೇತ್ರದರ್ಶನ, ತೀರ್ಥಸ್ನಾನಪಾನ, ಹಲವು ದೇವರ ದರ್ಶನ, ಸ್ಪರ್ಶನ, ದೇವರ ಉತ್ಸವ, ಗುಡಿಗೋಪುರ ರಥ ನಿರ್ಮಾಣ, ಪೂಜೆ ನಡೆಯಲು ಪೋಷಕವಾಗಿ ದಾನ ದತ್ತಿಗಳ ಕೊಡುಗೆ, ಒಡವೆ ವಸ್ತ್ರ ಫಲಪತ್ರ ಪುಷ್ಪ ಸಮರ್ಪಣೆ ಇತ್ಯಾದಿ ಕ್ರಮಗಳೆಲ್ಲ ದೇವರ ಸೇವಾಕಾರ್ಯಗಳೇ ಎನ್ನಬಹುದು.

(ಜಿ.ಆರ್.ಐ.;ಎಸ್.ಟಿ)

**ದೇವರಹಳ್ಳಿ:** ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಹೋಬಳಿಗೆ ಸೇರಿದ ಒಂದು ಗ್ರಾಮ. ಚನ್ನಗಿರಿಯ ಈಶಾನ್ಯಕ್ಕೆ 13ಕಿಮೀ ದೂರದಲ್ಲಿದೆ. ಜನಸಂಖ್ಯೆ 4,140. ಸಂತೇಬೆನ್ನೂರು ಅರಸರಿಗೆ ಸೇರಿದ್ದ ಈ ಹಳ್ಳಿ ಸು. 17ನೆಯ ಶತಮಾನದ ಅಂತ್ಯದಲ್ಲಿ ಚಿತ್ರದುರ್ಗದ ಪಾಳೆಯಪಟ್ಟಿಗೂ 18ನೆಯ ಶತಮಾನದ ಆದಿಯಲ್ಲಿ ಕೆಳದಿ ಅರಸರ ಪಾಳೆಯಪಟ್ಟಿಗೂ ಸೇರಿತ್ತು.

ಇಲ್ಲಿರುವ ಉಡುಮರಡಿ ಬೆಟ್ಟದ ಮೇಲೆ ರಂಗನಾಥಸ್ವಾಮಿ ದೇವಾಲಯವಿದೆ. ಈ ಬೆಟ್ಟ ಚಿಕ್ಕದಾಗಿದ್ದರೂ ಇದರ ಮೇಲಿರುವ ದೇವಾಲಯದಿಂದಾಗಿ ಆಕರ್ಷಣೀಯವಾಗಿ ಕಾಣುತ್ತದೆ. ಹರಿದ್ರಾಮಹಾತ್ಮ್ಯವೆನ್ನುವ ಇಲ್ಲಿಯ ಸ್ಥಳಪುರಾಣ ರಂಗನಾಥನೇ ಉಡದ ರೂಪ ತಾಳಿ ಬಂದು ಈ ಬೆಟ್ಟದಲ್ಲಿ ತಂಗಿದುದರಿಂದ ಈ ಸ್ಥಳಕ್ಕೆ ಉಡುಮರಡಿ ಎಂದು ಹೆಸರಾಯಿತೆಂದು ತಿಳಿಸುತ್ತದೆ. ವಿಜಯನಗರ ಅರಸರ ಕಾಲದಲ್ಲಿ ಬೇಟೆಗಾರರ ತಂಡವೊಂದು ಧೂಪದಮರಡಿ ಎಂಬಲ್ಲಿ ಉಡವೊಂದನ್ನು ಕಂಡು ಅದನ್ನು ಹಿಂಬಾಲಿಸಿದಾಗ ಆ ಉಡವು ಬೆಳ್ಳಿಗನೂಡು ಎಂಬಲ್ಲಿ ಬೆಳ್ಳಿಯ ಬಣ್ಣದಿಂದಲೂ ಚಿನ್ನಾಪುರ ಎಂಬಲ್ಲಿ ಚಿನ್ನದ ಬಣ್ಣದಿಂದಲೂ ಚಿಕ್ಕುಡ ಎಂಬಲ್ಲಿ ಗಾತ್ರದಲ್ಲಿ ಚಿಕ್ಕದಾಗಿಯೂ ಹಿರೇಉಡು ಎಂಬಲ್ಲಿ ಗಾತ್ರದಲ್ಲಿ ದೊಡ್ಡದಾಗಿಯೂ ಕಾಣಿಸಿಕೊಂಡು ಕಗ್ಗದೂರು ಎಂಬಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸಿ, ರಾಮಗೊಂಡನಹಳ್ಳಿ ಎಂಬಲ್ಲಿ ರಾಮ ಎಂದು ಕೂಗಿ, ನಿಂತಾಪುರ ಎಂಬಲ್ಲಿ ಸ್ವಲ್ಪ ಕಾಲ ನಿಂತು ಅನಂತರ ನೀತಿಗೆರೆ ಎಂಬಲ್ಲಿಗೆ ಹೋಗಿ ಮುಂದೆ ದೇವರಹಳ್ಳಿಗೆ ತಲುಪಿದ ತಕ್ಷಣವೇ ಮಾಯವಾಯಿತೆಂದು ಈ ಸ್ಥಪುರಾಣದಲ್ಲಿ ಹೇಳಿದೆ. ಈ ಕಥೆಗೆ ಸಂಬಂಧಿಸಿದ ಹಾಗೆಯೇ ಈ ಮೇಲಿನ ಸ್ಥಳಗಳ ಹೆಸರುಗಳಲ್ಲಿ ಅವುಗಳ ಶಬ್ದರಚನೆ ಇದೆ. ಈ ಉಡವೇ ರಂಗನಾಥಸ್ವಾಮಿ ಎಂಬ ನಂಬಿಕೆ ಇಂದಿಗೂ ಇದೆ. ಈಗಲೂ ಈ ಬೆಟ್ಟದ ಮೇಲೆ ಉಡಗಳು ತುಂಬಿವೆಯಾದರೂ ಅವುಗಳನ್ನು ಯಾರೂ ಬೇಟೆಯಾಡುವುದಿಲ್ಲ.

1654ರ ಶಾಸನವೊಂದರಲ್ಲಿ ಈ ದೇವರನ್ನು ಉಡುಮರಡಿ ರಂಗನಾಥ ಸ್ವಾಮಿ ಎಂದು ಕರೆದಿದೆ. ದೇವಸ್ಥಾನದ ನವರಂಗವನ್ನು ಗಿರಿಯಮ್ಮ ಎಂಬುವಳು ಕಟ್ಟಿಸಿದಳೆಂದು ತಿಳಿದುಬರುತ್ತದೆ. ದೇವಾಲಯದಲ್ಲಿರುವ ರಂಗನಾಥ ವಿಗ್ರಹ ಶಂಖ ಮತ್ತು ಚಕ್ರಾಯುಧದ ಕೆತ್ತನೆಯಿಂದ ಕೂಡಿದ ಹಾಗೂ ಗುಂಡನೆಯ ಆಕಾರವಿರುವ ಲಿಂಗ, ಮಾವಿನಕೆರೆ ಮತ್ತು ಹರದೂರುಪುರದ ಬೆಟ್ಟಗಳ ಮೇಲಿರುವ ಲಿಂಗಗಳನ್ನು ಹೋಲುತ್ತದೆ. ಈ ಲಿಂಗದ ಹಿಂದೆ, ವಿಜಯನಗರದ ಅರಸು ಕೃಷ್ಣದೇವರಾಯನಿಂದ ಪ್ರತಿಷ್ಠೆಯಾಯಿತೆನ್ನಲಾದ ಬಾಣಾಕಾರದ ಲಿಂಗವೊಂದಿದೆ. ಈ ಲಿಂಗದ ಮೇಲೆ ಸುಮಾರು ಒಂದೂವರೆ ಅಡಿ ಎತ್ತರದ ಕೇಶವನ ಪ್ರತಿಮೆ ಇದೆ. ಈ ದೇವಸ್ಥಾನದಲ್ಲಿ ಸುಮಾರು ಒಂದು ಅಡಿ ಎತ್ತರದ ಲೋಹದ ಉತ್ಸವ ವಿಗ್ರಹವೂ ಇದೆ. ಇಲ್ಲಿ ವರ್ಷಕ್ಕೊಮ್ಮೆ ರಥೋತ್ಸವ ನಡೆಯುತ್ತದೆ. ಈ ದೇವಸ್ಥಾನದ ಪ್ರಾಕಾರದಲ್ಲಿ ಲಕ್ಷ್ಮೀಗುಡಿ ಇದೆ. ಇಲ್ಲಿಯ ವಿಗ್ರಹ ಸುಂದರವಾಗಿದೆ.

(ಕೆ.ಎಂ.ಎಸ್.)

**ದೇವರಾಜಅರಸು,ಡಿ.:** 1915– 82. ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ. ಇವರು ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ 1915 ಆಗಸ್ಟ್ 20ರಂದು ಜನಿಸಿದರು. ತಂದೆ ದೇವರಾಜ ಅರಸು, ತಾಯಿ ದೇವೀರಮ್ಮಣ್ಣಿ. ಇವರದು ಅರಸು ಮನೆತನವಾದರೂ ಮಧ್ಯಮವರ್ಗಕ್ಕೆ ಸೇರಿದ್ದ ಹಳ್ಳಿಯ ಕುಟುಂಬವಾಗಿತ್ತು. ಅರಸು ಅವರು ಹಳ್ಳಿಯ ಇತರ ಮಕ್ಕಳಂತೆ ಸಾಮಾನ್ಯ ವಾತಾವರಣದಲ್ಲಿ ಬೆಳೆದರು. ತಮ್ಮ ಎಂಟನೆಯ ವಯಸ್ಸಿಗೇ ತಂದೆಯನ್ನು ಕಳೆದುಕೊಂಡ ಇವರು

ತಾಯಿ ಮತ್ತು ಅಜ್ಜಿಯವರ ಆರೈಕೆಯಲ್ಲಿ ಬೆಳೆದರು. ನೆರೆಮನೆಯ ಗೌಡಯ್ಯನ ಜಗಲಿಯಲ್ಲಿ ಪ್ರಾರಂಭಿಸಿದ ವ್ಯಾಸಂಗವನ್ನು ಅನಂತರ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಮುಂದುವರಿಸಿ ಬಿ.ಎಸ್ಸಿ. ಪದವೀಧರರಾದರು.

ಪದವಿ ಪಡೆದ ಮೇಲೆ ಇವರು ಮರಳಿ ಕಲ್ಲಹಳ್ಳಿಯಲ್ಲಿ ನೆಲಸಿ ವ್ಯವಸಾಯದಲ್ಲಿ ನಿರತರಾದರು. ಜೊತೆಗೆ ರಾಜಕಾರಣದಲ್ಲೂ ಆಸಕ್ತಿ ವಹಿಸಿದರು. ಹಳೆಯ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಇವರು 1941–48ರವರೆಗೆ ಸದಸ್ಯರಾಗಿದ್ದರು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲೂ ಭಾರತಕ್ಕೆ ಸ್ವಾತಂತ್ರ್ಯ ದೊರೆತಮೇಲೆ 1947ರಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಮೈಸೂರು ಚಲೋ ಹೋರಾಟದಲ್ಲೂ (ಮೈ



ಸೂರು ರಾಜಮನೆತನದೊಂದಿಗೆ ಬಾಂಧವ್ಯ ವಿದ್ದರೂ) ಭಾಗವಹಿಸಿದರು. ಸ್ವತಂತ್ರ ಭಾರತದಲ್ಲಿ ನಡೆದ ಪ್ರಥಮ ಮಹಾಚುನಾವಣೆಗಳಲ್ಲಿ (1952) ಹುಣಸೂರು ಕ್ಷೇತ್ರದಿಂದ ರಾಜ್ಯ ವಿಧಾನಸಭೆಗೆ ಆಯ್ಕೆಯಾದರು. ಆಗಿನಿಂದಲೂ ಆ ಕ್ಷೇತ್ರವನ್ನು ಅವಿರತವಾಗಿ ಪ್ರತಿನಿಧಿಸಿದರು. 1962ರಲ್ಲಿ ಎಸ್. ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಸಚಿವರಾದರು. 1967ರ ಸಾರ್ವತ್ರಿಕ ಚುನಾವಣೆಯ ಅನಂತರ ರಚಿತವಾದ ಮಂತ್ರಿಮಂಡಲದಲ್ಲೂ ಸಚಿವರಾಗಿದ್ದರು. ಈ ಅವಧಿಗಳಲ್ಲಿ ಇವರು ಕಾರ್ಮಿಕ, ಸಾರಿಗೆ, ಪ್ರವಾಸೋದ್ಯಮ, ಪಶುಸಂಗೋಪನೆ, ವಾರ್ತಾ ಮತ್ತು ಪ್ರಚಾರ, ಮೀನುಗಾರಿಕೆ, ರೇಷ್ಮೆ ಮೊದಲಾದ ಖಾತೆಗಳನ್ನು ನಿರ್ವಹಿಸಿದರು. 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಅಂದಿನ ಪ್ರಧಾನಮಂತ್ರಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದ ಆಡಳಿತ ಕಾಂಗ್ರೆಸ್ಸಿನ ರಾಜ್ಯ ಸಂಘಟಕರಾಗಿ ಮುಂದುವರಿದ ಇವರು 1970ರಲ್ಲಿ ಆಡಳಿತ ಕಾಂಗ್ರೆಸ್ಸಿನ ರಾಜ್ಯ ಘಟಕದ ಸಂಚಾಲಕರಾಗಿ ಪಕ್ಷದ ಸಂಘಟನೆಯ ಜವಾಬ್ದಾರಿಯನ್ನು ವಹಿಸಿದರು. ಆ ವರ್ಷವೇ ಇವರು ಕೇಂದ್ರರೇಷ್ಮೆ ಮಂಡಲಿಯ ಅಧ್ಯಕ್ಷರಾಗಿ ನೇಮಕಗೊಂಡರು.

1971ರಲ್ಲಿ ನಡೆದ ಲೋಕಸಭಾ ಚುನಾವಣೆಗಳು ಮತ್ತು 1972ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಆಡಳಿತ ಕಾಂಗ್ರೆಸ್ ಬಹುಮತ ದಿಂದ ಗೆಲ್ಲಲು ಬಹಳವಾಗಿ ಶ್ರಮಿಸಿದ ಇವರು ತಮ್ಮ ರಾಜಕೀಯ ನಿಪುಣತೆ, ಸಂಘಟನಾಶಕ್ತಿ ಮತ್ತು ದೂರದೃಷ್ಟಿಗಳನ್ನು ಪ್ರಕಟಿಸಿ ಜನಪ್ರಿಯರಾದರು. ವಿಧಾನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆಯ್ಕೆಯಾಗಿ 1972 ಮಾರ್ಚ್ 20ರಂದು ಕರ್ನಾಟಕದ ಮುಖ್ಯಮಂತ್ರಿಯಾದರು. ಆ ವರ್ಷ ಜೂನ್‌ನಲ್ಲಿ ನಡೆದ ಉಪಚುನಾವಣೆಯಲ್ಲಿ ಇವರು ಹುಣಸೂರು ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾದರು.

ಪ್ರಗತಿಶೀಲ ಮನೋಭಾವದ ದೇವರಾಜ ಅರಸರು ದಕ್ಷ ಆಡಳಿತ ಒದಗಿಸುವುದು, ದಾರಿದ್ರ್ಯ ನಿರ್ಮೂಲನ, ಸಾಮಾಜಿಕ ನ್ಯಾಯ ದೊರಕಿಸು ವುದು, ಆರ್ಥಿಕ ಪ್ರಗತಿ ಸಾಧಿಸುವುದು ಮೊದಲಾದ ಆಶೋತ್ತರಗಳಲ್ಲಿ ಕಾರ್ಯಮಗ್ನರಾಗಿದ್ದರು. ಅತ್ಯಂತ ಪ್ರಗತಿಶೀಲ ಭೂ ಸುಧಾರಣ ಶಾಸನ ಇವರ ಸರ್ಕಾರದ ಬಹು ದೊಡ್ಡ ಸಾಧನೆ. ಶತಮಾನಗಳಿಂದ ಬೆಳಕಿಗಾಗಿ ಹಾತೊರೆಯುತ್ತಿದ್ದ ಹಿಂದುಳಿದವರ ಆರ್ಥಿಕ, ಸಾಮಾಜಿಕ, ಸುಧಾರಣೆಗಳಿ ಗಾಗಿ ಹಲವು ಹನ್ನೊಂದು ಕಾರ್ಯಕ್ರಮಗಳನ್ನೂ ಇವರು ರೂಪಿಸಿದ್ದಾರೆ. ಈ ಉದ್ದೇಶಕ್ಕೆಂದೇ ನೇಮಕವಾದ ಹಾವನೂರು ಆಯೋಗ ಮುಖ್ಯವಾದ್ದು. ಈ ಆಯೋಗ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮತ್ತು ಶೈಕ್ಷಣಿಕ ಪ್ರವೇಶಾತಿಗಳಲ್ಲಿ ಮೀಸಲಾತಿ ಕುರಿತಂತೆ ಸಲ್ಲಿಸಿದ ವರದಿಯನ್ನು ಇವರು ಕೂಡಲೇ ಜಾರಿಗೆ ತಂದರು.

ಇವರು ಅಧಿಕಾರ ವಹಿಸಿಕೊಂಡ ಸ್ವಲ್ಪ ಸಮಯದಲ್ಲೇ ಜಿಲ್ಲಾ ವ್ಯಾಪ್ತಿಗೆ ಮೀರಿದ ಎಲ್ಲ ಕಚೇರಿ ಮತ್ತು ಇಲಾಖೆಗಳಲ್ಲಿ ಅಧಿಕೃತ ವ್ಯವಹಾರಗಳಿಗೆ ಕನ್ನಡ ಬಳಸಬೇಕೆಂಬ ಆದೇಶ ಹೊರಬಿತ್ತು. 1956ರಿಂದಲೂ ನೆನೆಗುದಿಗೆ ಬಿದ್ದಿದ್ದ ರಾಜ್ಯದ ಹೆಸರು ಬದಲಾವಣೆಯ ಸಮಸ್ಯೆಯನ್ನು ಜನತೆಯ ಇಂಗಿತವರಿತು ಸುಲಭವಾಗಿ ಪರಿಹರಿಸಿದರು. ಮೈಸೂರು ರಾಜ್ಯಕ್ಕೆ 1973 ನವೆಂಬರ್ 1ರಂದು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಭಾಷಾ ಆಯೋಗವನ್ನು ರಚಿಸಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಲು ಭದ್ರಬುನಾದಿ ಹಾಕಿದರು.

1975 ಜುಲೈ 1ರಂದು ಪ್ರಧಾನಿ ಇಂದಿರಾ ಗಾಂಧಿಯವರು ಸಾರಿದ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಭೂ ಹಂಚಿಕೆ, ಬಡವರಿಗೆ ಉಚಿತ ವಸತಿ ಯೋಜನೆ, ನಿವೇಶನ ಹಂಚಿಕೆ, ಹರಿಜನ, ಗಿರಿಜನ ಮತ್ತಿತರ ಹಿಂದುಳಿದ ವರ್ಗಗಳಿಗೆ ತೀವ್ರ ಪ್ರೋತ್ಸಾಹ, ಜೀತಪದ್ಧತಿ ರದ್ದು, ಅಲ್ಪಾದಾಯ ವರ್ಗದ ಸಾಲ ರದ್ದು, ಅಕ್ರಮ ಲೇವಾದೇವಿಗಳ ನಿಷೇಧ, ಕೃಷಿ ಕಾರ್ಮಿಕರ ವೇತನ ಹೆಚ್ಚಳ, ಬಾಡಿಗೆ ಮನೆಗಳ ಮೇಲೆ ನಿಯಂತ್ರಣ ಈ ಮುಂತಾದ ಕ್ಷೇತ್ರಗಳಲ್ಲೂ ರಾಜ್ಯ ಗಮನಾರ್ಹ ಸಾಧನೆ ಮಾಡಿತು. ಆಹಾರ ಸಮಸ್ಯೆಯನ್ನು ನೀಗಲು, ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಹಲವಾರು ನೀರಾವರಿ ಯೋಜನೆಗಳು ಭರದಿಂದ ಪ್ರಾರಂಭವಾದವು. ಕಬಿನಿ, ಹಾರಂಗಿ, ಹೇಮಾವತಿ, ಘಟಪ್ರಭಾ, ಕೃಷ್ಣಾ ಮೇಲ್ದಂಡೆ ಯೋಜನೆಗಳು ಹಾಗೂ ಇತರ ನೂರಾರು ಸಣ್ಣ ನೀರಾವರಿ ಯೋಜನೆಗಳ ಕೆಲಸ ಚುರುಕಾಯಿತು. ಪ್ರಪಂಚದ ಬೃಹತ್ ಯೋಜನೆಗಳ ಸಾಲಿಗೆ ಸೇರುವ ಕಾಳಿ ವಿದ್ಯುತ್ ಯೋಜನೆ ಮತ್ತು ಕುದುರೆಮುಖ ಕಬ್ಬಿಣದ ಅದಿರು ಯೋಜನೆಗಳು ಇವರ ಅಧಿಕಾರಾವಧಿಯಲ್ಲಿ ಪ್ರಾರಂಭವಾದುವು.

ಇವರು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಖಾಯಂ ಆಹ್ವಾನಿತ ಸದಸ್ಯರಾಗಿದ್ದರಲ್ಲದೆ ರಾಜ್ಯ ಯುವ ಕಾಂಗ್ರೆಸ್ ಸಲಹಾ ಸಮಿತಿಯ ಅಧ್ಯಕ್ಷರೂ ಮೈಸೂರು ವಿಶ್ವವಿದ್ಯಾನಿಲಯದ ವಜ್ರಮಹೋತ್ಸವ ಸಮಿತಿ ಅಧ್ಯಕ್ಷರೂ ಆಗಿದ್ದರು. ಇವರು ಮುಖ್ಯಮಂತ್ರಿಗಳಾದ ಮೇಲೆ ಮಾಡಿದ ಭಾಷಣಗಳ ಎರಡು ಸಂಕಲನಗಳು ಕರ್ನಾಟಕಕ್ಕೆ ಶುಭವಾಗಲಿ ಮತ್ತು ಪ್ರಗತಿಪಥ ಎಂಬ ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿವೆ.

ಇಂದಿರಾಗಾಂಧಿಯವರು 1975ರಲ್ಲಿ ರಾಷ್ಟ್ರವ್ಯಾಪಿ ತುರ್ತು ಪರಿಸ್ಥಿತಿಯನ್ನು ಹೇರಿದಾಗ ಅದು ಜನರ ಸ್ವಾತಂತ್ರ್ಯದ ಮೇಲೆ ಬೀರುವ ಕೆಟ್ಟ ಪರಿಣಾಮವನ್ನು ತಗ್ಗಿಸಿದ್ದು ದೇವರಾಜ ಅರಸು ಅವರ ದೂರದೃಷ್ಟಿಯ ಫಲ. ಇವರು ಈ ಸಂದರ್ಭವನ್ನು ತಮ್ಮ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಬಳಸಿಕೊಂಡರು. 1977ರಲ್ಲಿ ನಡೆದ ಲೋಕಸಭಾ ಚುನಾವಣೆ ಯಲ್ಲಿ ಕಾಂಗ್ರೆಸ್ ಪಕ್ಷ ರಾಷ್ಟ್ರಮಟ್ಟದಲ್ಲಿ ಭಾರಿ ಸೋಲು ಅನುಭವಿಸಿದರೂ ಕರ್ನಾಟಕದಲ್ಲಿ ಜಯ ಸಾಧಿಸಿತು. ಅರಸು ಅವರು ತಮ್ಮ ಪಕ್ಷದ ಹಲವು ಶಾಸಕರ ಪಕ್ಷಾಂತರದಿಂದಾಗಿ ಅಧಿಕಾರ ಕಳೆದುಕೊಂಡು

ರಾಷ್ಟ್ರಪತಿ ಆಡಳಿತ ಜಾರಿಗೆ ತರಲಾಯಿತು. ಆದರೆ 1978ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಅರಸು ಅವರೇ ಮುಖ್ಯಮಂತ್ರಿಗಳಾದರು. ಅದೇ ವರ್ಷ ಸೋಲು ಕಂಡಿದ್ದ ಮಾಜಿ ಪ್ರಧಾನಿ ಇಂದಿರಾಗಾಂಧಿಯವರನ್ನು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಮಧ್ಯಂತರ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಮಾಡಿ ಅವರ ಗೆಲುವಿಗೆ ಸಹಕಾರಿಯಾದರು.

ದೇವರಾಜ ಅರಸು ಮತ್ತು ಇಂದಿರಾಗಾಂಧಿಯವರ ರಾಜಕೀಯ ಭಿನ್ನಾಭಿಪ್ರಾಯಗಳು ಉಲ್ಬಣಿಸಿ 1979ರಲ್ಲಿ ಅರಸರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಲಾಯಿತು. ಆದರೂ ಇವರು ಅಧಿಕಾರ ಉಳಿಸಿಕೊಳ್ಳುವಲ್ಲಿ ಸಫಲರಾದರು. ಕರ್ನಾಟಕ ಕಾಂಗ್ರೆಸ್ ಎಂಬ ಪ್ರಾದೇಶಿಕ ಪಕ್ಷವನ್ನು ತೇಲಿಬಿಟ್ಟರು. ತರುವಾಯ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಿ ಅದರ ರಾಷ್ಟ್ರೀಯ ಅಧ್ಯಕ್ಷರಾದರು. 1980ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಮತ್ತೆ ಇಂದಿರಾ ಕಾಂಗ್ರೆಸ್ ಪಕ್ಷಕ್ಕೆ ಅಖಂಡ ಬೆಂಬಲವನ್ನು ವ್ಯಕ್ತಪಡಿಸಿದರು. ಆಗ ಆದ ಪಕ್ಷಾಂತರದಿಂದಾಗಿ ಅರಸು ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಟ್ಟರು. ಶಾಸನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದರು. ಅದಕ್ಕೂ ಮುಳುವಾದಾಗ ಪ್ರಗತಿಪರ ದೃಷ್ಟಿಯ ಇವರು ಕರ್ನಾಟಕ ಕ್ರಾಂತಿರಂಗ ಎಂಬ ಹೊಸ ಪ್ರಾದೇಶಿಕ ಪಕ್ಷ ಕಟ್ಟಿದರು. ಈ ರಾಜಕೀಯ ತುಮುಲದಲ್ಲಿದ್ದಾಗಲೇ ಇವರು 1982 ಜೂನ್ 6ರಂದು ಹಠಾತ್ತನೆ ನಿಧನರಾದರು. ಇವರು ಹುಟ್ಟಿದ ದಿನವನ್ನು ಹಿಂದುಳಿದ ವರ್ಗಗಳ ಏಳಿಗೆಯ ದಿನವಾಗಿ ಸ್ಮರಿಸಿಕೊಳ್ಳಲಾಗುತ್ತಿದೆ. ಇವರ ಪತ್ನಿ ಚಿಕ್ಕಮ್ಮಣ್ಣಿ. ಇವರಿಗೆ ಮೂವರು ಪುತ್ರಿಯರು. ಮಗಳು ಚಂದ್ರಪ್ರಭಾ ಅರಸು ಲೋಕಸಭಾ ಸದಸ್ಯರಾಗಿದ್ದರು ಮತ್ತು ಸ್ವಲ್ಪಕಾಲ ರಾಜ್ಯ ಸಂಪುಟದಲ್ಲಿ ಸಚಿವೆಯಾಗಿದ್ದರು. (ಡಿ.ಎಸ್.ಜೆ.)

**ದೇವರಾಜ ಒಡೆಯರ್:** 1627–73. ಮೈಸೂರು ರಾಜವಂಶದ ಖ್ಯಾತ ದೊರೆ (1659– 73). 4ನೆಯ (ಬೋಳ) ಚಾಮರಾಜನ ಮೊಮ್ಮಗ. ಗುಂಡ್ಲು ಮುಪ್ಪಿನದೇವರಾಜನ ಮಗ. ಜನನ 1627.

ಈತ ಕಂಠೀರವ ನರಸರಾಜನ ಅನಂತರ ಪಟ್ಟಕ್ಕೆ ಬಂದ (1659). ದೊರೆತನ ವಹಿಸಿಕೊಳ್ಳುತ್ತಿದ್ದಂತೆಯೇ ಇವನು ಅನೇಕ ಯುದ್ಧಗಳಲ್ಲಿ ಪಾಲ್ಗೊಳ್ಳಬೇಕಾಯಿತು. ವಿಜಯನಗರದ ಆಳಿಕೆಯನ್ನು ಸ್ಥಾಪಿಸುವ ನೆಪದಿಂದ ನರಸೀಪುರದ ಲಕ್ಷ್ಮಪ್ಪನಾಯಕನ ಸಹಾಯ ಪಡೆದು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದಿದ್ದ ಕೆಳದಿ ಶಿವಪ್ಪನಾಯಕನನ್ನು ಸೋಲಿಸಿ ಹಿಮ್ಮೆಟ್ಟಿಸಿದ (1659– 60). ಕೆಲಕಾಲಾನಂತರ ಬಿದನೂರಿನಲ್ಲಿ ಶಿವಪ್ಪನಾಯಕ ಮೃತನಾದಮೇಲೆ ಮುಂದಿನ ಅರಸರಾದ ಒಂದನೆಯ ವೆಂಕಟಪ್ಪ ಮತ್ತು ಭದ್ರಪ್ಪ ಮೈಸೂರಿನೊಡನೆ ವೈರವನ್ನು ಮುಂದುವರಿಸಿದ್ದರು. ಬಿಜಾಪುರ ಮತ್ತು ಗೋಲ್ಕಂಡದ ಸುಲ್ತಾನರೂ ಸತ್ವಹೀನರಾಗುತ್ತಿದ್ದರು. ಈ ಸುಸಂದರ್ಭವನ್ನು ಉಪಯೋಗಿಸಿಕೊಂಡ ದೇವರಾಜ ಇಕ್ಕೇರಿಯ ಮೇಲಿನ ಯುದ್ಧದ ನೆಪದಲ್ಲಿ ತನ್ನ ರಾಜ್ಯದ ಉತ್ತರಕ್ಕಿದ್ದ ಇತರ ಪ್ರದೇಶಗಳ ಮೇಲೂ ದಾಳಿ ಮಾಡಿದ. ದಳವಾಯಿ ನಂಜನಾಥಯ್ಯನ ನೇತೃತ್ವದಲ್ಲಿ ನಡೆದ ಈ ದಾಳಿಗಳಿಂದಾಗಿ ಶಾಹೀ ರಾಜ್ಯಗಳ ಅಧೀನದಲ್ಲಿದ್ದ ಚೇಳೂರು, ಬಿದರೆ, ಸಂಪಿಗೆ ಮತ್ತು ಚಿಕ್ಕನಾಯಕನಹಳ್ಳಿ ಮೈಸೂರು ಸೈನ್ಯದ ವಶವಾದುವು(1663). 1664ರ ಹೊತ್ತಿಗೆ ಬಿದನೂರಿನಲ್ಲಿ ರಾಜನಾಗಿದ್ದ ಹಿರಿಯ ಸೋಮಶೇಖರನಾಯಕ ಮೈಸೂರಿನವರು ಈ ಹಿಂದೆ ವಶಪಡಿಸಿಕೊಂಡಿದ್ದ ಬಿಕ್ಕೋಡು, ಬೇಲೂರು ಮುಂತಾದ ಕೆಲವು ಪ್ರದೇಶಗಳನ್ನು ಗೆದ್ದುಕೊಂಡರೂ ನಂಜನಾಥಯ್ಯ ತನ್ನ ಸೈನ್ಯವನ್ನು ಮಲೆನಾಡಿನ ಮೂಲಕ ಇಕ್ಕೇರಿಯತ್ತ ನುಗ್ಗಿಸಿದ. ಅಲ್ಲಿಯ ರಾಜ ಸೋಮಶೇಖರನಾಯಕ ಸಂಧಿ ಮಾಡಿಕೊಂಡ. 1664ರ ಹೊತ್ತಿಗೆ ಒಡೆಯರ ರಾಜ್ಯ ಉತ್ತರದಲ್ಲಿ ಚಿಕ್ಕನಾಯಕನಹಳ್ಳಿ, ಸಕ್ಕರೆಪಟ್ಟಣ, ವಸ್ತಾರೆಯವರೆಗೂ ಹಬ್ಬಿತು. 1663ರ ಹೊತ್ತಿಗೆ ಬೇಲೂರಿನಲ್ಲಿದ್ದ ವಿಜಯ ನಗರದ ವಂಶದ ಶ್ರೀರಂಗರಾಯ ಬೆಂಬಲ ಸಿಗದೆ ತಳಕಿತ್ತಿದ್ದ. ದೇವರಾಜ ಅಂದಿನಿಂದ ಸಾರ್ವಭೌಮ ಬಿರುದುಗಳನ್ನು ಅಳವಡಿಸಿಕೊಳ್ಳಲಾರಂಭಿಸಿದ. ಮೈಸೂರು ಒಡೆಯರು ಒಪ್ಪಿಕೊಂಡಿದ್ದ ನಾಮಮಾತ್ರ ಸಾಮಂತತ್ವವೂ ಕೊನೆಗೊಂಡಿತು.

1666ರಲ್ಲಿ ಅಣ್ಣಾಜಯ್ಯನಿಂದ ಸಾರತವಳ್ಳಿಯನ್ನು ವಶಪಡಿಸಿಕೊಂಡ ಅನಂತರ ದೇವರಾಜನ ವಿಜಯದೃಷ್ಟಿ ದಕ್ಷಿಣಕ್ಕೆ ಹರಿಯಿತು. ಮಧುರೆಯ ನಾಯಕನ ಸಾಮಂತನಾಗಿದ್ದ ಸಾಂಬಳ್ಳಿಯ ಘಟ್ಟಮುದಲಿಯಾರನನ್ನು ಹತ್ತಿಕ್ಕಿದ. ಇದನ್ನು ಕೇಳಿ ಕೆರಳಿದ ಮಧುರೆಯ ಚೊಕ್ಕನಾಥನಾಯಕ ದಂಡೆತ್ತಿಬಂದು ಈರೋಡಿನಲ್ಲಿ ಕಾದ. ದೇವರಾಜನ ದಳವಾಯಿ ಕುಮಾರೈಯನ ನೇತೃತ್ವದಲ್ಲಿ ಮೈಸೂರು ಸೈನ್ಯ ಧಾವಿಸಿ, ಆ ಹೊತ್ತಿಗೆ ಚೊಕ್ಕನಾಥ ಕಾಲ್ಕಿತ್ತಿದ್ದರೂ ಈರೋಡನ್ನು ವಶಪಡಿಸಿಕೊಂಡಿತು (1667–68). ಉತ್ತರದಲ್ಲಿ ದೇವರಾಜ ಹುಲಿಯೂರುದುರ್ಗ ಮತ್ತು ಕುಣಿಗಲ್‌ಗಳನ್ನು ಮಾಗಡಿಯ ಕೆಂಪೇಗೌಡನಿಂದ ಕಿತ್ತುಕೊಂಡ.

1673ರ ಹೊತ್ತಿಗೆ ದೇವರಾಜ ಪಶ್ಚಿಮದಲ್ಲಿ ಸಕ್ಕರೆಪಟ್ಟಣದಿಂದ ಪೂರ್ವದಲ್ಲಿ ಸೇಲಂವರೆಗೂ ಉತ್ತರದಲ್ಲಿ ಚಿಕ್ಕನಾಯಕನಹಳ್ಳಿಯಿಂದ ದಕ್ಷಿಣದಲ್ಲಿ ಕೊಯಮತ್ತೂರು ಜಿಲ್ಲೆಯ ಧಾರಾಪುರದವರೆಗೂ ಹರಡಿದ್ದ ವಿಶಾಲ ರಾಜ್ಯವನ್ನು ಸಾಧಿಸಿಕೊಂಡು ರಾಜಧಾನಿ ಶ್ರೀರಂಗಪಟ್ಟಣದಿಂದ ವೈಭವದಿಂದ ಆಳಲಾರಂಭಿಸಿದ. ಈ ರಾಜನ ಆಶ್ರಯದಲ್ಲಿದ್ದ ಚಾಮಯ್ಯನೆಂಬ ಕವಿ ದೇವರಾಜೇಂದ್ರಸಾಂಗತ್ಯವೆಂಬ ಗ್ರಂಥದಲ್ಲಿ ಈ ರಾಜನ ಆಳಿಕೆಯ ವಿವರಗಳನ್ನು ಕೊಟ್ಟಿದ್ದಾನೆ.

ಚಾಮುಂಡಿಬೆಟ್ಟಕ್ಕೆ ಭಕ್ತಾದಿಗಳು ಸುಲಭವಾಗಿ ಹತ್ತಿಹೋಗುವಂತೆ ಈ ರಾಜ 1664ರಲ್ಲಿ ಆ ಬೆಟ್ಟಕ್ಕೆ ಸಾವಿರ ಸೋಪಾನಗಳನ್ನು ಕಟ್ಟಿಸಿದ್ದೇ ಅಲ್ಲದೆ ಮಧ್ಯದಲ್ಲಿ ಒಂದು ದೊಡ್ಡ ಬಸವನನ್ನು ನಿರ್ಮಿಸಿ ಪ್ರತಿಷ್ಠಾಪಿಸಿದ. ದೇವರಾಜಪುರವೆಂಬ ಅಗ್ರಹಾರವನ್ನೂ ಮೈಸೂರು ಮತ್ತು ಈ ಅಗ್ರಹಾರಗಳ ನಡುವೆ ದೇವಾಂಬುಧಿ ಕೆರೆಯನ್ನೂ ನಿರ್ಮಿಸಿದ. ದೊಡ್ಡದೇವರಾಜ ಎಂದೂ ಹೆಸರಾಗಿದ್ದ ಈತ 1673ರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ನಿಧನಹೊಂದಿದ. (ಎಂ.ಪಿ.)

**ದೇವರಾಜಯ್ಯ:** ಕಳಲೆಯ ಸಾಮಂತ ಮನೆತನದ ಅರಸನಾಗಿದ್ದು ಮೈಸೂರು ಅರಸರ ಸೇವೆಯಲ್ಲಿದ್ದ ದಳವಾಯಿ (1735– 58). ಇತಿಹಾಸದಲ್ಲಿ ಚಿಕ್ಕದೇವರಾಜ ಒಡೆಯರ ಆಳಿಕೆಯ ಅನಂತರ ಅಂದರೆ 1704–61ರ ವರೆಗಿನ ಕಾಲವನ್ನು ದಳವಾಯಿಗಳ ಕಾಲವೆಂದು ಪರಿಗಣಿಸಬಹುದು. ದಳವಾಯಿ ದೇವರಾಜಯ್ಯ ಈ ಕಾಲದ ಅತ್ಯಂತ ಪ್ರಭಾವೀ ವ್ಯಕ್ತಿ. ದೊಡ್ಡ ಕೃಷ್ಣರಾಜ (1713– 32) ಕಳಲೆಯ ದಳವಾಯಿ ವೀರರಾಜಯ್ಯನ ಅನಂತರ ಅವನ ಮಗ ದೇವರಾಜಯ್ಯನನ್ನು ದಳವಾಯಿಯಾಗಿ ನೇಮಕ ಮಾಡಿದ. ಜೊತೆಗೆ ಇವನ ಸೋದರಸಂಬಂಧಿ ಸರ್ವಾಧಿಕಾರಿ ನಂಜರಾಜಯ್ಯನೂ ಅವರ ಸೇವೆಯಲ್ಲಿದ್ದ. ರಾಜ್ಯಾಡಳಿತದ ಸೂತ್ರಾಧಿಕಾರಗಳು ಈ ಸೋದರರ ಕೈಸೇರಿದುದರಿಂದ ಮಹತ್ವಾಕಾಂಕ್ಷಿ ದೇವರಾಜಯ್ಯ ರಾಜನ ಆಡಳಿತದಲ್ಲಿದ್ದ ಅದಕ್ಷತೆಯನ್ನು ದುರುಪಯೋಗಪಡಿಸಿಕೊಂಡು ಬಲಿಷ್ಠನಾದ.

1725ರಲ್ಲಿ ಮೈಸೂರಿನ ಮೇಲೆ ದಾಳಿಯಿಟ್ಟ ಮರಾಠ ಬಾಜೀರಾಯ (ಇದು ಶ್ರೀರಂಗಪಟ್ಟಣವಲ್ಲ ಫಿರಂಗಿಪಟ್ಟಣ) ಎನ್ನುವಂತೆ ದಳವಾಯಿ

ದೇವರಾಜಯ್ಯ ಸೈನ್ಯವನ್ನು ರೂಪಿಸಿ, ತರಪೇತುಗೊಳಿಸಿದ. ಅನಂತರ ಸಾವನದುರ್ಗವನ್ನು ಲೂಟಿ ಮಾಡಿದುದಲ್ಲದೆ, ಮಾಗಡಿಯಲ್ಲಿ ಗೌಡರ ಆಳಿಕೆಯನ್ನು ಕೊನೆಗೊಳಿಸಿ, ಆ ಪ್ರದೇಶವನ್ನು ಮೈಸೂರು ರಾಜ್ಯಕ್ಕೆ ಸೇರಿಸಿದ.

ಅಧಿಕಾರ ಪ್ರಭಾವ ಹೆಚ್ಚಿದಂತೆ ದೇವರಾಜಯ್ಯ ಮುಖ್ಯ ಸ್ಥಾನಗಳಿಗೆಲ್ಲಾ ತನ್ನ ಬೆಂಬಲಿಗರನ್ನು ನೇಮಿಸಿಕೊಂಡು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ದೇವರಾಜಯ್ಯನಿಗೂ ಮತ್ತು ದೊಡ್ಡಕೃಷ್ಣರಾಜನ ಅನಂತರ ಪಟ್ಟಕ್ಕೆ ಬಂದ ಸ್ವಾಭಿಮಾನಿ ಏಳನೆಯ ಚಾಮರಾಜನಿಗೂ ಕಲಹ ಉಂಟಾಯಿತು. ಕೊನೆಗೆ ಚಾಣಾಕ್ಷತೆಯಿಂದ ಕೃಷ್ಣರಾಜನ ಪತ್ನಿ ದೇವಾಜಮ್ಮಣ್ಣಿಯ ಬೆಂಬಲ ಪಡೆದ ದೇವರಾಜಯ್ಯ 1734ರ ಜೂನ್‌ನಲ್ಲಿ ರಾಜ ಮತ್ತು ಅವನ ಮೂವರು ರಾಣಿಯರನ್ನು ಸೆರೆಹಿಡಿದು ಕಬ್ಬಾಳದುರ್ಗದಲ್ಲಿಟ್ಟ.

ಅನಂತರ ಪಟ್ಟಕ್ಕೆ ಬಂದ ಇಮ್ಮಡಿ ಕೃಷ್ಣರಾಜ ಚಿಕ್ಕವನಾಗಿದ್ದುದರಿಂದ ಎಲ್ಲಾ ಅಧಿಕಾರ ದೇವರಾಜಯ್ಯನಲ್ಲಿ ಕೇಂದ್ರೀಕೃತವಾಯಿತು. ಸರ್ವಾಧಿಕಾರಿ ನಂಜರಾಜಯ್ಯನ ಮರಣಾನಂತರ ತನ್ನ ತಮ್ಮ ಕರಾಚುರಿ ನಂಜರಾಜಯ್ಯನನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಿಕೊಂಡುದಲ್ಲದೆ (1739) ಅವನ ಮಗಳನ್ನು ಮಹಾರಾಜನಿಗೆ ಮದುವೆ ಮಾಡಿಸಿ ರಾಜಮನೆತನದ ಬಾಂಧವ್ಯವನ್ನು ಬಿಗಿಗೊಳಿಸಿದ. 1935–36ರಲ್ಲಿ ಮಲಬಾರಿನ ಮೇಲೆ ದಾಳಿ ಮಾಡಿದ. ಈ ಸಮಯದಲ್ಲಿ ಮೈಸೂರಿನ ಮೇಲೆ ದಾಳಿಯಿಟ್ಟ ಆರ್ಕಾಟಿನ ನವಾಬ ದೋಸ್ತ್ ಆಲಿಖಾನನನ್ನು ಚನ್ನಪಟ್ಟಣದ ಬಳಿ ಸಂಪೂರ್ಣವಾಗಿ ಸೋಲಿಸಿ ಮೈಸೂರಿನ ಕೀರ್ತಿಯನ್ನು ಬೆಳಗಿಸಿದ (1737). ಆದರೆ ಇಳಿವಯಸ್ಸಿನ ಪರಿಣಾಮವಾಗಿ ಉತ್ಸಾಹರಹಿತನಾಗಿದ್ದ ದೇವರಾಜಯ್ಯ 1747ರಲ್ಲಿ ದಖನ್ನಿನ ಸುಬೇದಾರ ನಾಸಿರ್‌ಜಂಗ್‌ನಿಗೆ ಸೋಲಬೇಕಾಯಿತು. ಕೊನೆಗೆ ಜನತೆಯ ಕ್ಷೇಮ ಮತ್ತು ರಾಜ್ಯದ ಹಿತದೃಷ್ಟಿಯನ್ನು ಪರಿಗಣಿಸಿ ಕರಾಚುರಿ ನಂಜರಾಜಯ್ಯನಿಗೆ ದಳವಾಯಿತನವನ್ನು ವಹಿಸಿಕೊಟ್ಟ.

ಉಳಿದ ಕಾಲದಲ್ಲಿ ದೇವರಾಜಯ್ಯ ರಾಜಧಾನಿಯಲ್ಲಿದ್ದುಕೊಂಡು ಆಡಳಿತ ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸುತ್ತಿದ್ದ. 1755ರಲ್ಲಿ ಕರಾಚುರಿ ನಂಜರಾಜಯ್ಯ ತಿರುಚ್ಚಿರಾಪಳ್ಳಿ ವಿವಾದದಲ್ಲಿ ತೊಡಗಿದ್ದಾಗ ದಖನ್ನಿನ ನವಾಬ ಸಲಾಬತಜಂಗ್‌ನ ದಾಳಿ ನಡೆಯಿತು. ಆರ್ಥಿಕ ಮುಗ್ಗಟ್ಟಿನಲ್ಲಿ ತೊಳಲಾಡುತ್ತಿದ್ದ ದೇವರಾಜಯ್ಯನಿಗೆ ಇದು ನುಂಗಲಾರದ ತುತ್ತಾಯಿತು. ಅಲ್ಲದೆ ಈ ಸಮಯದಲ್ಲಿ ನಂಜರಾಜಯ್ಯನಿಗೂ ಇಮ್ಮಡಿ ಕೃಷ್ಣರಾಜನಿಗೂ ಮನಸ್ತಾಪ ಬಂದು ಪರಿಸ್ಥಿತಿ ಕೆಟ್ಟಿತ್ತು. ನಂಜರಾಜ ತೋರಿದ ಸ್ವಾಮಿದ್ರೋಹ ಮತ್ತು ವಿಶ್ವಾಸಘಾತುಕತನಕ್ಕಾಗಿ ಮನನೊಂದು ದೇವರಾಜಯ್ಯ 1757ರಲ್ಲಿ ಸತ್ಯಮಂಗಲಕ್ಕೆ ಹೋಗಿ ನೆಲಸಿದ. ದಳವಾಯಿ ಸೋದರರ ವಿರಸದಿಂದಾಗಿ ಸೈನ್ಯದಲ್ಲಿ ಅಶಿಸ್ತು ಹೆಚ್ಚಾಗಿ ಆಡಳಿತ ಚರ್ಯೆ ಕುಂದತೊಡಗಿತು. ಕೊನೆಗೆ ಹೈದರ್ ಅಲಿ ಮತ್ತು ಖಂಡೇರಾಯನ ಪ್ರಯತ್ನದಿಂದಾಗಿ ದಳವಾಯಿ ಸೋದರರ ಮಧ್ಯೆ ವಾಸ್ತವಿಕ ಬಾಂಧವ್ಯ ಏರ್ಪಟ್ಟಿತು. ದೇವರಾಜಯ್ಯ 1758ರಲ್ಲಿ ಮೃತನಾದ.

ಇವನು ನ್ಯಾಯನಿಷ್ಠ, ಧರ್ಮಿಷ್ಠ. ಲೋಕವ್ಯವಹಾರವನ್ನು ತ್ಯಜಿಸುವ ಮುನ್ನ ಕರಾಚುರಿ ನಂಜರಾಜಯ್ಯ ಮಹಾರಾಜರಲ್ಲಿ ಕ್ಷಮೆ ಕೇಳುವಂತೆ ಮಾಡಿದ. ಇದು ದೇವರಾಜಯ್ಯನ ವ್ಯಕ್ತಿತ್ವ ಮತ್ತು ಸ್ವಾಮಿನಿಷ್ಠೆಗೆ ಸಾಕ್ಷಿಯಾಗಿದೆ. ನಂಜನಗೂಡಿನ ಬಳಿ ಕಪಿಲಾ ನದಿಗೆ ಕಟ್ಟಿರುವ ದೊಡ್ಡ ಸೇತುವೆ ಇವನು ಕಟ್ಟಿಸಿದ್ದು. ಶ್ರೀರಾಮನ ಆರಾಧಕನಾಗಿದ್ದ ಈತ ಅನೇಕ ಅಗ್ರಹಾರಗಳನ್ನೂ ಕೆರೆಗಳನ್ನೂ ನಿರ್ಮಿಸಿರುವನಲ್ಲದೆ ಶ್ರೀರಂಗಪಟ್ಟಣ, ಕೊಯಮುತ್ತೂರು ಜಿಲ್ಲೆಯ ಅವನಾಶಿ, ಭವಾನಿ ಕೂಡಲ್ ಮುಂತಾದ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದ.

(ಕೆ.ಜಿ.)

**ದೇವರಾಯ I:** ವಿಜಯನಗರದ ಸಂಗಮವಂಶದ ಅರಸ (1406–22). ಇಮ್ಮಡಿ ಹರಿಹರನ ಮೂರನೆಯ ಮಗ. ಇಮ್ಮಡಿ ಹರಿಹರ 1404ರಲ್ಲಿ ಮೃತನಾದಾಗ ರಾಜ್ಯಕ್ಕಾಗಿ ಕಲಹ ನಡೆಯಿತು. ಈ ಕಲಹದಲ್ಲಿ ಹರಿಹರನ ಜ್ಯೇಷ್ಠಪುತ್ರನಾದ ವಿರೂಪಾಕ್ಷ ತಮ್ಮಂದಿರನ್ನು ತಳ್ಳಿ ಪಟ್ಟಕ್ಕೆ ಬಂದ. 1405ರಲ್ಲಿ ಅವನ ತಮ್ಮ ಇಮ್ಮಡಿ ಬುಕ್ಕ ಅಣ್ಣನನ್ನು ಪಟ್ಟದಿಂದ ತಳ್ಳಿ ಅಧಿಕಾರಕ್ಕೆ ಬಂದ. 1406 ನವೆಂಬರ್ 5ರಂದು ಅವನ ತಮ್ಮನಾದ ಈ ದೇವರಾಯ ಅಣ್ಣನನ್ನು ಪದಚ್ಯುತಿಗೊಳಿಸಿ ಪಟ್ಟಕ್ಕೆ ಬಂದ. ಪಟ್ಟಾರೂಢನಾದೊಡನೆ ದೇವರಾಯ ಬಹಮನೀ ಸುಲ್ತಾನ ಫಿರೋಜ್‌ಷಾನೊಡನೆ ಯುದ್ಧ ಮಾಡಬೇಕಾಯಿತು. ಸ್ತ್ರೀ ಸಂಬಂಧವಾಗಿ ಈ ಯುದ್ಧ ನಡೆಯಿತೆಂದು ಫೆರಿಸ್ತನ ಹೇಳಿಕೆ. ಸುಲ್ತಾನನ ಧರ್ಮಯುದ್ಧಾಸಕ್ತಿಯೇ ಈ ಯುದ್ಧಕ್ಕೆ ಕಾರಣ ಎಂದು ಇತರರ ಹೇಳಿಕೆ. ಕಾರಣ ಏನೇ ಇದ್ದರೂ ಘೋರ ಯುದ್ಧ ನಡೆದುದೇನೋ ನಿಜ. ಯುದ್ಧದಲ್ಲಿ ಮೊದಮೊದಲು ದೇವರಾಯ ಗೆಲ್ಲುವಂತೆ ತೋರಿದರೂ ಕೊನೆಗೂ ಮಹಮ್ಮದೀಯರೇ ಗೆದ್ದರು. ಗೆದ್ದ ಫಿರೋಜ್‌ಷಾ ಸಂಧಿಪತ್ರವನ್ನು ತನ್ನ ಇಷ್ಟಾನುಸಾರ ಬರೆಯಿಸಿದ. ಆ ಸಂಧಿಯ ಪ್ರಕಾರ ದೇವರಾಯ ಬಂಕಾಪುರವನ್ನು ಕಳೆದುಕೊಂಡ. ಈ ಯುದ್ಧದಲ್ಲಿ ಕೊಂಡವೀಡು ರೆಡ್ಡಿಗಳು ಸುಲ್ತಾನನೊಡನೆ ಸೇರಿಕೊಂಡಿದ್ದರು. ಅವರು ಇದೇ ಕಾಲಕ್ಕೆ ಉದಯಗಿರಿ ರಾಜ್ಯವನ್ನು ಆಕ್ರಮಿಸಿಕೊಂಡಿದ್ದ ಭಾಗವನ್ನು ವಶಪಡಿಸಿಕೊಂಡು, 1413ರವರೆಗೆ ಅಲ್ಲಿ ನೆಲಸಿದ್ದರು. ಈ ರೆಡ್ಡಿಗಳು ಮಾತ್ರವಲ್ಲದೆ, ತೆಲುಗು ಚೋಡ ವಂಶದ ಅಣ್ಣದೇವನೂ ಬಹಮನೀ ಸುಲ್ತಾನನ ಮಿತ್ರವರ್ಗಕ್ಕೆ ಸೇರಿದ್ದ. ಅಣ್ಣದೇವನ ಪ್ರಭಾವವನ್ನು ತಗ್ಗಿಸುವ ಉದ್ದೇಶದಿಂದ ದೇವರಾಯ 1415ರಲ್ಲಿ ಅವನೊಡನೆ ಯುದ್ಧಕ್ಕಿಳಿದ. ಆದರೆ ಅಣ್ಣದೇವನಿಗೆ ಬಹಮನೀ ಸುಲ್ತಾನನ ನೆರವು ಸಿಕ್ಕಿತು. ದೇವರಾಯನಿಗೆ ರಾಜಕೊಂಡದ ವೇಲಮರ ಸಹಾಯ ಲಭಿಸಿತು. ಯುದ್ಧದಲ್ಲಿ ದೇವರಾಯನಿಗೆ ವಿಜಯ ಲಭಿಸಿತು(1419). ಆಂಧ್ರದ ಪೂರ್ವಭಾಗ ದೇವರಾಯನಿಗೆ ಸೇರಿತು.

ಬಹಮನೀ ರಾಜ್ಯದ ವಿಸ್ತರಣೆಗೆ ಅವಕಾಶ ಕೊಡದಂತೆ ರಾಜಮಹೇಂದ್ರಿಯನ್ನು ಬಲಪಡಿಸಲು ದೇವರಾಯ ಪ್ರಯತ್ನಿಸಿದ. ಇದರಿಂದಾಗಿ ಗಜಪತಿ ಅರಸ 4ನೆಯ ಭಾನುದೇವ ಕೆರಳಿದ. ಈ ವಿರಸ ಮುಂದೆ ಗಜಪತಿಗಳಿಗೂ ವಿಜಯನಗರಕ್ಕೂ ಆದ ಅನೇಕ ಯುದ್ಧಗಳಿಗೆ ದಾರಿಮಾಡಿಕೊಟ್ಟಿತು.

ಒಂದನೆಯ ದೇವರಾಯನೂ ಇಮ್ಮಡಿ ಬುಕ್ಕನಂತೆ ವಿಜಯನಗರ ರಾಜ್ಯವನ್ನು ಬಹಳವಾಗಿ ವಿಸ್ತರಿಸಿದ. ಹಲವಾರು ನೂತನ ಪ್ರಾಸಾದಗಳನ್ನು ನಿರ್ಮಿಸಿದ. ಅನೇಕ ಕೋಟೆಕೊತ್ತಳಗಳನ್ನು ಕಟ್ಟಿಸಿದ ಎಂದು ನ್ಯೂನಿಜ್ ಹೇಳುತ್ತಾನೆ. ತುಂಗಭದ್ರೆಗೆ ಹಂಪೆಯ ಬಳಿ ಒಂದು ಭಾರಿ ಅಣೆಕಟ್ಟನ್ನು ಕಟ್ಟಿಸಿ, ನದಿಯಿಂದ ನಗರದವರೆಗೆ 15 ಮೈಲಿ ಉದ್ದದ ಮೇಲ್ಗಾಲುವೆಯೊಂದನ್ನು ರಚಿಸಿ ವಿಜಯನಗರ ಪಟ್ಟಣಕ್ಕೆ ನೀರು ಸರಬರಾಜಿನ ವ್ಯವಸ್ಥೆ ಮಾಡಿದ. ಹಳೆಯ ನಗರದ ಬಹು ಭಾಗದಲ್ಲಿ ಈಗಿರುವ ಅನೇಕಾನೇಕ ಹೊಲಗಳಿಗೆ ಈ ಕಾಲುವೆಯಿಂದಲೇ ನೀರು ಪೂರೈಕೆಯಾಗುತ್ತಿದೆ. ಒಂದೊಂದು ಮೈಲಿ ದೂರಕ್ಕೆ ಬೆಟ್ಟಗಳ ಬುಡದ ಬಂಡೆಕಲ್ಲಿನಲ್ಲೇ ಇದನ್ನು ಕೊರೆದಿದೆ. ಭಾರತದಲ್ಲಿ ನಿರ್ಮಿಸಲಾಗಿರುವ ನೀರಾವರಿ ಕಾಮಗಾರಿಗಳಲ್ಲಿ ಇದು ಅತ್ಯದ್ಭುತವಾಗಿದೆ ಎಂದು ಸಿವೆಲ್ ಹೇಳುತ್ತಾರೆ.

ದೇವರಾಯನಿಗೆ ಮೂವರು ಪತ್ನಿಯರೂ ವೀರವಿಜಯ, ವೀರಮಲ್ಲಪ್ಪ, ಹರಿಹರ III ಮತ್ತು ರಾಮಚಂದ್ರ ಎಂಬ ನಾಲ್ವರು ಮಕ್ಕಳೂ ಇದ್ದರು. ರಾಮಚಂದ್ರ ಕೆಲಕಾಲ ಉದಯಗಿರಿ ರಾಜ್ಯದಲ್ಲಿ ಪ್ರಾಂತ್ಯಾಧಿಕಾರಿಯಾಗಿ ನೇಮಕವಾಗಿದ್ದ. ಲಕ್ಷ್ಮೀಧರ ದೇವರಾಯನ ಮಂತ್ರಿ. ಒಂದನೆಯ ದೇವರಾಯ 1422ರಲ್ಲಿ ಮೃತನಾದ. (ಎಂ.ಕೆ.ಬಿ.)

**ದೇವರಾಯ II:** ವಿಜಯನಗರದ ಸಂಗಮ ವಂಶದ ಅರಸ (1424- 46); ದೇವರಾಯನ ಹಿರಿಯ ಮಗ ಹಾಗೂ ಉತ್ತರಾಧಿಕಾರಿ. ಇವನಿಗೆ ಇಮ್ಮಡಿ ದೇವರಾಯ, ಅಭಿನವ ವೀರದೇವರಾಯ, ಪ್ರತಾಪದೇವರಾಯ, ಪ್ರೌಢದೇವರಾಯ ಎಂಬ ಹೆಸರುಗಳೂ ಇವೆ. ದೇವರಾಯ ತನ್ನ ತಂದೆಯ ಆಳಿಕೆಯಲ್ಲಿ ಆಡಳಿತಸೂತ್ರ ವಹಿಸಿಕೊಂಡಿದ್ದುದರಿಂದ, ಹಲವು ವಿದ್ವಾಂಸರು ಇವನ ಆಳಿಕೆ 1422ರಲ್ಲೇ ಪ್ರಾರಂಭವಾಯಿತೆಂದು ಹೇಳುತ್ತಾರೆ.

ಪ್ರೌಢದೇವರಾಯ ತನ್ನ ಆಳಿಕೆಯ ಪ್ರಾರಂಭದಲ್ಲಿ ವಿಜಯನಗರದ ಪಶ್ಚಿಮದ ಆರಗ ಪ್ರಾಂತ್ಯದಲ್ಲಿ ಒಬ್ಬ ಬೇಡನಾಯಕನ ನೇತೃತ್ವದಲ್ಲಿ ನಡೆದ ದಂಗೆಯನ್ನು ಅಡಗಿಸಿದ. ಇವನು ಮೂರು ಬಾರಿ ಬಹಮನೀ ರಾಜ್ಯದ ವಿರುದ್ಧ ಯುದ್ಧ ಮಾಡಿದ. ಒಂದನೆಯ ಬಹಮನೀ ಯುದ್ಧ 1422-23ರಲ್ಲಿ ನಡೆಯಿತು. ಬಹಮನೀ ಸುಲ್ತಾನನಾದ ಒಂದನೆಯ ಅಹ್ಮದ್ ಷಾ ತನ್ನ ಹಿಂದಿನ ಸುಲ್ತಾನನ ಕಾಲದಲ್ಲಿ ಉಂಟಾದ ಪರಾಭವದ ಸೇಡು ತೀರಿಸಿಕೊಳ್ಳಲು ವಿಜಯನಗರದ ವಿರುದ್ಧ ಯುದ್ಧ ಹೂಡಿದ. ಪ್ರಾರಂಭದಲ್ಲಿ ಎರಡು ಪಕ್ಷದವರೂ ನಷ್ಟ ಅನುಭವಿಸಿದರೂ ಅಂತ್ಯದಲ್ಲಿ ವಿಜಯನಗರಕ್ಕೆ ಯಶಸ್ಸು ಲಭಿಸಿತು. ಯುದ್ಧ ನಡೆಯುತ್ತಿದ್ದಾಗಲೇ ಬಹಮನೀ ಸುಲ್ತಾನ ರಾಜಧಾನಿಯನ್ನು ಗುಲ್ಬರ್ಗದಿಂದ ಇನ್ನೂ ಉತ್ತರಕ್ಕೆ ಬಿದರೆಗೆ ಬದಲಾಯಿಸಬೇಕಾಯಿತು. ಈ ಯುದ್ಧದ ಅನಂತರ ದೇವರಾಯ ಆಂಧ್ರಪ್ರದೇಶದತ್ತ ತನ್ನ ಗಮನ ಹರಿಸಬೇಕಾಯಿತು. ಈ ಸಂದರ್ಭದಲ್ಲಿ ಒರಿಸ್ಸಾದ ಗಜಪತಿ ವಂಶದ ರಾಜ ಭಾನುದೇವ ತನ್ನ ರಾಜ್ಯವನ್ನು ವಿಸ್ತರಿಸಲು ರಾಜಮಹೇಂದ್ರಿ ರಾಜ್ಯದ ಮೇಲೆ ನಡೆದಿದ್ದ. ಅವನಿಗೆ ವೇಲಮರು ಬೆಂಬಲ ಕೊಟ್ಟರು. ರಾಜಮಹೇಂದ್ರಿ ರಾಜ ಶರಣಾಗತನಾಗಿ ಭಾನುದೇವನ ಸಾಮಂತನಾದ. ಅನಂತರ ಭಾನುದೇವ ಕೊಂಡವೀಡು ರಾಜ್ಯವನ್ನು ಆಕ್ರಮಿಸಿಕೊಂಡ. ದೇವರಾಯ ತನ್ನ ಸಾಮಂತರ ಪರಾಭವವನ್ನು ಸಹಿಸಲಾರದೆ ಆಂಧ್ರಪ್ರದೇಶಕ್ಕೆ ನುಗ್ಗಿ ಭಾನುದೇವ ಮತ್ತು ವೇಲುಮರನ್ನು ಪರಾಭವಗೊಳಿಸಿ, ಕೊಂಡವೀಡು ಪ್ರದೇಶವನ್ನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಸಿ ರಾಜಮಹೇಂದ್ರಿಯ ರೆಡ್ಡಿ ರಾಜನಿಗೆ ಪುನಃ ಅಧಿಕಾರ ವಹಿಸಿಕೊಟ್ಟ (1428). ಭಾನುದೇವನ ಉತ್ತರಾಧಿಕಾರಿ ಕಪಿಲೇಂದ್ರ ಮತ್ತೆ ರಾಜಮಹೇಂದ್ರಿಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರೂ ವಿಜಯನಗರ ಮತ್ತು ರೆಡ್ಡಿ ಸೈನ್ಯ ಅವನನ್ನು ಹಿಮ್ಮೆಟ್ಟಿಸಿತು (1436).

ಎರಡನೆಯ ಬಹಮನೀ ಯುದ್ಧ 1435- 36ರಲ್ಲಿ ನಡೆಯಿತು. ಮುದ್ಗಲ್ ಮತ್ತು ರಾಯಚೂರು ಕೋಟೆಗಳ ಸ್ವಾಧೀನಕ್ಕೋಸ್ಕರ ಬಹಮನೀ ಸುಲ್ತಾನ ಅಲಾಉದ್ದೀನನೊಡನೆ ನಡೆದ ಈ ಯುದ್ಧದಲ್ಲಿ ದೇವರಾಯ ಜಯ ಹೊಂದಿದ. 1443 -44ರಲ್ಲಿ ಬಹಮನೀಯರೊಡನೆ ಮೂರನೆಯ ಸಲ ಯುದ್ಧವಾಯಿತು. 1443ರಲ್ಲಿ ರಾಜಮನೆತನದಲ್ಲಿ ದೇವರಾಯನನ್ನು ಕೊಲ್ಲುವ ಪಿತೂರಿಯೊಂದು ನಡೆಯಿತು. ಅದು ವಿಫಲವಾದರೂ ಅಂದಿದ್ದಿರಬಹುದಾದ ಅಸ್ತವ್ಯಸ್ಥ ಸ್ಥಿತಿಯ ಲಾಭ ಪಡೆಯುವ ಉದ್ದೇಶದಿಂದ ಬಹಮನೀ ಸುಲ್ತಾನ ದೇವರಾಯನನ್ನು ಪೂಗದಿ ಕೊಡಲು ತಗಾದೆ ಮಾಡಿದ. ದೇವರಾಯ ಒಪ್ಪದಿರಲು ಯುದ್ಧವಾಗಿ ಬಹಮನೀ ಸುಲ್ತಾನ ಪರಾಭವಗೊಂಡ.

ವಿಜಯನಗರ ರಾಜ್ಯಕ್ಕೂ ಸಿಂಹಳದ ತುಂಡರಸರಿಗೂ ಸಂಬಂಧವೇನೂ ಇರಲಿಲ್ಲ. ಆದ್ದರಿಂದ ರಾಜ್ಯದ ದಕ್ಷಿಣ ಭಾಗಗಳ ಭದ್ರತೆಗಾಗಿ ಸಿಂಹಳದ ಅರಸನನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾಗಿತ್ತು. ಇದಕ್ಕಾಗಿ ದೇವರಾಯ ತನ್ನ ದಳಪತಿ ಲಕ್ಕಣ್ಣ ದಂಡನಾಯಕನನ್ನು ಸಿಂಹಳದ ಮೇಲೆ ನುಗ್ಗಿಸಿದ. ನೌಕಾದಂಡಯಾತ್ರೆಯನ್ನು ಕೈಗೊಂಡ ಈತ ಸಿಂಹಳದ ರಾಜ ಪೊಗದಿ ಕೊಡುವ ಹಾಗೆ ಮಾಡಿದ. ಈ ವಿಜಯಕ್ಕಾಗಿ ರಾಜ ಅವನಿಗೆ ದಕ್ಷಿಣ ಸಮುದ್ರಾಧಿಪತಿ ಎಂಬ ಬಿರುದಿತ್ತ. ಇದೇ ಸಮಯದಲ್ಲಿ ಗಜಪತಿ ದೊರೆ ಕಪಿಲೇಂದ್ರ ರಾಜಮಹೇಂದ್ರಿಯ ರೆಡ್ಡಿ ನಾಯಕನ ಮೇಲೆ ಯುದ್ಧ ಹೂಡಿದ. ದೇವರಾಯ ಕಪಿಲೇಂದ್ರನನ್ನು ಸೋಲಿಸಿದ (ಸು. 1423).

ದೇವರಾಯ ಕರ್ನಾಟಕದ ಮತ್ತು ದಕ್ಷಿಣ ಭಾರತದ ಉನ್ನತ ರಾಜರುಗಳಲ್ಲಿ ಒಬ್ಬನಾಗಿದ್ದ. ಇವನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಗೋವೆ, ರಾಜ ಮಹೇಂದ್ರಿಗಳಿಂದ ಹಿಡಿದು ರಾಮೇಶ್ವರದವರೆಗೂ ಹಬ್ಬಿತ್ತು. ಕೇರಳದ ಕ್ವಿಲಾನ್, ಮದರಾಸಿನ ಬಳಿಯ ಪುಲಿಕಾಡು, ಸಿಂಹಳ, ಬರ್ಮಾದ ಪೆಗು ಮತ್ತು ತನಸ್ಸೆರಿಮ್‌ನ ರಾಜರು ಇವನಿಗೆ ಕಪ್ಪ ಒಪ್ಪಿಸುತ್ತಿದ್ದರೆಂದು ನ್ಯೂನಿಜ್ ತಿಳಿಸುತ್ತಾನೆ. ಇವನು ರಾಜನಿಪುಣನಾಗಿದ್ದುದೇ ಅಲ್ಲದೆ ಯುದ್ಧ ನಿಪುಣನೂ ಆಗಿದ್ದ. ತನ್ನ ಸೈನ್ಯದ ಕಾರ್ಯಾಚರಣೆಗಳನ್ನು ಏಕಕಾಲದಲ್ಲಿ ಹಲವು ರಣರಂಗಗಳಲ್ಲಿ ನಿರ್ವಹಿಸುತ್ತಿದ್ದ.

ದೇವರಾಯನ ಆಳಿಕೆಯಲ್ಲಿ ವಿಜಯನಗರ ಸಾಮ್ರಾಜ್ಯ ಅತ್ಯುನ್ನತ ಸ್ಥಿತಿಯಲ್ಲಿ ಇದ್ದಿತು. ಇದಕ್ಕೆ ರಾಜ್ಯದಲ್ಲಿನ ಶಾಂತಿ, ತೃಪ್ತರಾದ ಪ್ರಜೆಗಳು, ಸಾಮಾಜಿಕ ಸ್ಥಿತಿ ಕಾರಣವಾಗಿದ್ದವು. ಅಬ್ದುಲ್ ರಜಾಕ್ ವಿಜಯನಗರ ಸಾಮ್ರಾಜ್ಯದಲ್ಲಿ 300 ರೇವುಪಟ್ಟಣಗಳಿದ್ದುವೆಂದು ತಿಳಿಸಿದ್ದಾನೆ. ಸಾಮಾಜಿಕ ಸೌಹಾರ್ದ ಮತ್ತು ಒಗ್ಗಟ್ಟಿಗೆ ಧಾರ್ಮಿಕ ಕ್ಷೇತ್ರದಲ್ಲಿ ರಾಜನ ವಿಶಾಲ ಹೃದಯ ಕಾರಣವಾಗಿತ್ತು. ಮುಸ್ಲಿಮರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಗಿತ್ತು. ರಾಜಧಾನಿಯಲ್ಲಿ ದೇವರಾಯ ಒಂದು ಮಸೀದಿಯನ್ನು ಕಟ್ಟಿಸಿದ್ದಲ್ಲದೆ, ಖುರಾನಿನ ಒಂದು ಪ್ರತಿಯನ್ನು ಸಿಂಹಾಸನದ ಮೇಲೆ ಇಟ್ಟಿದ್ದನಂತೆ.

ವಿಜಯನಗರಕ್ಕೆ ಭೇಟಿಕೊಟ್ಟ ಇಟಲಿಯ ಪ್ರವಾಸಿಗ ನಿಕಾಲೊ ಕೊಂಟಿ ಮತ್ತು ವಿಜಯನಗರದಲ್ಲಿದ್ದ ಪರ್ಷಿಯ ದೇಶದ ರಾಯಭಾರಿ ಅಬ್ದುಲ್ ರಜಾಕ್ ವಿಜಯನಗರದ ವಿವರವನ್ನೂ ಮತ್ತು ವೈಭವವನ್ನೂ ತಮ್ಮ ಬರೆವಣಿಗೆಗಳಲ್ಲಿ ವರ್ಣಿಸಿದ್ದಾರೆ. ರಾಜಾಸ್ಥಾನ ಶ್ರೀಮಂತರು, ಆಸ್ಥಾನಿಕರು, ಸರ್ಕಾರಿ ಅಧಿಕಾರಿಗಳು, ವಿದ್ವಾಂಸರು, ಕಲೆಗಾರರು, ಕವಿಗಳು, ರಾಯಭಾರಿಗಳು ಮತ್ತು ನಾನಾ ದೇಶಗಳಿಂದ ಬಂದಿದ್ದ ಪ್ರಖ್ಯಾತ ವ್ಯಕ್ತಿಗಳು ನೆರೆಯುವ ಸ್ಥಳವಾಗಿತ್ತು. ದೇವರಾಯ ಸ್ವತಃ ವಿದ್ವಾಂಸನಾಗಿದ್ದುದಲ್ಲದೆ ವಿದ್ವಾಂಸರು ಮತ್ತು ಕವಿಗಳಿಗೆ ಪ್ರೋತ್ಸಾಹ ಕೊಟ್ಟ. ವೀರಶೈವ ಮತ ಮತ್ತು ತತ್ತ್ವ ಈ ಕಾಲದಲ್ಲಿ ಪ್ರೋತ್ಸಾಹಿತವಾಯಿತು. ವೀರಶೈವ, ಜೈನ ಮತ್ತು ಬ್ರಾಹ್ಮಣ ಸಾಹಿತ್ಯ ಅಭಿವೃದ್ಧಿ ಹೊಂದಿತು. ಈ ಕಾಲದ ಕನ್ನಡ ಕವಿಗಳಲ್ಲಿ ಚಾಮರಸ ಮತ್ತು ಕುಮಾರವ್ಯಾಸ ಶ್ರೇಷ್ಠರಾಗಿದ್ದರು. ದೇವರಾಯ ವಿಜಯನಗರವನ್ನೂ ಹಜಾರರಾಮಸ್ವಾಮಿ ದೇವಸ್ಥಾನ ಮುಂತಾದ ಕಟ್ಟಡಗಳನ್ನೂ ಅಂದಗೊಳಿಸಿದ.

ದೇವರಾಯನಿಗೆ ಪೊನ್ನಲದೇವಿ ಮತ್ತು ಭೀಮಾದೇವಿ ಎಂಬ ಪತ್ನಿಯರಿದ್ದರು. ಮಲ್ಲಿಕಾರ್ಜುನ ಇವನ ಮಗ. ಲಕ್ಕಣ್ಣ ಮತ್ತು ಮಾದಣ್ಣ ಇವನ ದಂಡನಾಯಕರಲ್ಲಿ ಮುಖ್ಯರು. ವೀರಶೈವ ಕವಿ ಜಕ್ಕಣ್ಣ ಇನ್ನೊಬ್ಬ ದಂಡನಾಯಕ. ಇಮ್ಮಡಿ ದೇವರಾಯ 1446 ಮೇ 26ರಂದು ಮೃತನಾದ.

(ಎ.ವಿ.ವಿ.;ಎಂ.ಕೆ.ಬಿ.)

**ದೇವರಾಯನದುರ್ಗ:** ತುಮಕೂರು ತಾಲ್ಲೂಕಿನಲ್ಲಿ ತುಮಕೂರಿನಿಂದ ಸು. 15 ಕಿಮೀ ಈಶಾನ್ಯಕ್ಕಿರುವ ಬೆಟ್ಟ, ಗಿರಿದುರ್ಗ, ಪವಿತ್ರ ಕ್ಷೇತ್ರ ಹಾಗೂ ಸುಂದರ ತಾಣ. ಬೆಟ್ಟದ ಶಿಖರ ಸಮುದ್ರಮಟ್ಟದಿಂದ 1,242 ಮೀ ಎತ್ತರವಿದೆ. ಬೆಟ್ಟ ಮೂರು ಘಟ್ಟಗಳಲ್ಲಿ ಮೇಲೆದ್ದಿದೆ. ಈ ಎಲ್ಲಾ ಘಟ್ಟಗಳನ್ನೂ ಒಳಗೊಂಡಂತೆ ಎರಡು ಕೋಟೆಗೋಡೆಗಳಿವೆ. ಮೈಲುಗಟ್ಲೆ ಹಬ್ಬಿರುವ ಈ ಕೋಟೆ ಗೋಡೆಗಳಲ್ಲಿ ಒಳಹೋಗಲು ಅನುಕೂಲವಾಗುವಂತೆ ಏಳು ಹೆಬ್ಬಾಗಿಲುಗಳಿವೆ. ಆಯಕಟ್ಟಿನ ಜಾಗದಲ್ಲಿರುವುದರಿಂದಲೂ ಬೆಟ್ಟದಲ್ಲಿರುವ ಅನೇಕ ಚಿಲುಮೆಗಳಿಂದ ಸತತವಾಗಿ ಉತ್ತಮ ನೀರಿನ ಸೌಕರ್ಯ ಇರುವುದರಿಂದಲೂ ಈ ಕೋಟೆ ಒಂದು ಕಾಲದಲ್ಲಿ ಬಹು ಅಭೇದ್ಯವೆನಿಸಿರಬೇಕು. **(ಕೆ.ವಿ.ಟಿ.)**



ಲಕ್ಷ್ಮೀನರಸಿಂಹ ದೇವಾಲಯ

ದೇವರಾಯನದುರ್ಗ ಬೆಟ್ಟದ ಏರುಗಳಲ್ಲಿ ಮೊದಲ ಅಂದರೆ ಕೆಳಗಣ ಘಟ್ಟದ ಮಟ್ಟಸ ಪ್ರದೇಶದಲ್ಲಿ ಮಲಪಟ್ಟಣ ಗ್ರಾಮ ಮತ್ತು ಲಕ್ಷ್ಮೀನರಸಿಂಹ ದೇವಾಲಯ ಇವೆ. ದ್ರಾವಿಡ ಶೈಲಿಯಲ್ಲಿರುವ ಈ ದೇವಾಲಯ ಒಂದನೆಯ ಕಂಠೀರವ ನರಸರಾಜ ಒಡೆಯ (1639–59) ಕಟ್ಟಿಸಿದ್ದು. ಮುಮ್ಮಡಿ ಕೃಷ್ಣರಾಜ ಒಡೆಯರು 1858ರಲ್ಲಿ ದೇವಾಲಯದ ಪ್ರಾಕಾರ ಮತ್ತು ಗೋಪುರಗಳನ್ನು ದುರಸ್ತಿ ಮಾಡಿಸಿದರೆಂದು ಇಲ್ಲಿನ ಒಂದು ಶಾಸನ ತಿಳಿಸುತ್ತದೆ. ಈ ಸುತ್ತಿನ ಹೆಚ್ಚಿನ ಜನರಿಗೆ ಇದು ಮನೆದೇವರು. ಪ್ರತಿ ಚೈತ್ರಮಾಸದಲ್ಲಿ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಆ ಕಾಲದಲ್ಲಿ ಸೇರುವ ಜನಗಳ ಅನುಕೂಲಕ್ಕಾಗಿ ಇಲ್ಲಿ ಅನೇಕ ಮಂಟಪಗಳಿವೆ. ಸಮೀಪದಲ್ಲಿ ಸಂಜೀವರಾಯನ (ಹನುಮಂತ) ಗುಡಿ ಇದೆ. ಇಲ್ಲಿ ಕೈಜೋಡಿಸಿ ನಿಂತಿರುವ ಹನುಮಂತನ ವಿಗ್ರಹವಿದೆ. ಈ ಗುಡಿ ನರಸಿಂಹನ ಗುಡಿಗಿಂತಲೂ ಹಳೆಯದೆಂದು ಪ್ರತೀತಿ.

ಇದೇ ಸುತ್ತಿನಲ್ಲಿ ಕೋಟೆಯ ಬಾಗಿಲುಗಳಲ್ಲಿ ಒಂದಾದ ಪೆನುಗೊಂಡೆ ಬಾಗಿಲು ಮತ್ತು ಆನೆದೋಣೆ (ಚಿಲುಮೆ) ಇವೆ. ಪೆನುಗೊಂಡೆ ಬಾಗಿಲ ಗೋಡೆಯ ಮೇಲೆ ವೀಣೆಯನ್ನು ಹಿಡಿದಿರುವ ವ್ಯಕ್ತಿಯೊಬ್ಬನ ಶಿಲ್ಪವಿದ್ದು ಅದರ ಬಳಿ ಇರುವ ಸು. 15ನೆಯ ಶತಮಾನದ ಶಾಸನ ಇದು ಸುಕುಮಾರದೇವನ ಮಗ ವಿರೂಪಣ್ಣನದು ಎಂದು ತಿಳಿಸುತ್ತದೆ. ಆನೆದೋಣೆಯ ಬಳಿ ಹಿಂದೆ ಸ್ಥಳೀಯ ಪಾಳೆಯಗಾರನೊಬ್ಬನಿಂದ ಕಟ್ಟಲಾದುದೆಂದು ಹೇಳುವ ಒಂದು ಆನೆಯ ಗೋರಿಯ ಅವಶೇಷಗಳಿವೆ. ಬೆಟ್ಟದ ಇಳಿಜಾರಿನಲ್ಲಿರುವ ಒಂದು ಕೊಳ ಮಂಗಲಿ ನದಿಯ ಉಗಮಸ್ಥಾನ. ಸ್ವಲ್ಪ ಮೇಲು ಮಟ್ಟದಲ್ಲಿ ಜಯತೀರ್ಥವಿದೆ. ಇಲ್ಲಿ ಜಯನದಿ ಹುಟ್ಟುತ್ತದೆ (ಈ ಎರಡು ನದಿಗಳೂ ಬೆಟ್ಟದ ಕೆಳಗೆ ಇರುಕಸಂದ್ರ ಗ್ರಾಮದ ಬಳಿ ಕೂಡಿ ಮುಂದೆ ಜಯಮಂಗಲಿ ಎಂದು ಒಂದೇ ನದಿಯಾಗಿ ಪ್ರವಹಿಸುತ್ತದೆ).

ಬೆಟ್ಟದಲ್ಲಿ ಮತ್ತಷ್ಟು ಮೇಲೆ ಎರಡನೆಯ ಘಟ್ಟದ ಮಟ್ಟಸ ಪ್ರದೇಶವಿದೆ. ಇಲ್ಲಿ ಸರ್ಕಾರಿ ಪ್ರವಾಸೀಮಂದಿರ ಮತ್ತು ಇತರ ಕೆಲವು ಕಟ್ಟಡಗಳಿವೆ. ಇದೇ ಭಾಗದಲ್ಲಿ ರಾಮತೀರ್ಥ ಮತ್ತು ಧನುಷ್‌ತೀರ್ಥ ಎಂಬ ಎರಡು ದೋಣೆಗಳೂ ಸಮೀಪದಲ್ಲಿ ರಾಮಲಕ್ಷ್ಮಣಸೀತೆಯರ ವಿಗ್ರಹಗಳಿರುವ ಒಂದು ಗುಹೆಯೂ ಇವೆ. ಹಿಂದೆ ಇಲ್ಲೊಂದು ಊರಿತ್ತು. ಅದರ ಅವಶೇಷಗಳನ್ನು ಈಗಲೂ ಗುರುತಿಸಬಹುದು. ಬೆಟ್ಟದ ಮೇಲುಗಡೆಯ ಮಟ್ಟದಲ್ಲಿ ಲಕ್ಷ್ಮೀನರಸಿಂಹ (ಕುಂಭಿನರಸಿಂಹ) ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪವಿದ್ದು ಸಾಮಾನ್ಯ ವಿನ್ಯಾಸದಲ್ಲಿ ಕೆಳಗಿನ ನರಸಿಂಹ ದೇವಾಲಯದಂತೆಯೆ ಇದೆ. ದೇವಾಲಯದ ಬಳಿಯಲ್ಲಿ ಒಂದು ದೋಣೆ ಮತ್ತು ಅದರ ಸಮೀಪ ಒಂದು ಗುಹೆ ಇದೆ. ಗುಹೆಯ ಮೆಟ್ಟಲುಗಳು ಪಾದತೀರ್ಥವೆಂಬ ನೀರಿನ ಹೊಂಡಕ್ಕೆ ದಾರಿತೋರುತ್ತವೆ. ಇಲ್ಲಿನ ನೀರು ದೇವರ ಪಾದದಿಂದ ಹುಟ್ಟುವುದೆನ್ನುವುದರಿಂದ ಈ ತೀರ್ಥಕ್ಕೆ ಈ ಹೆಸರಿದೆ. ನರಸಿಂಹ ದೇವಾಲಯದಿಂದ ಮತ್ತಷ್ಟು ಮೇಲೆ ಒಂದು ಚಿಕ್ಕ ಗರುಡನ ಗುಡಿ ಇದೆ. ಇದರ ಬಳಿ ದೀವಿಗೆ ಗುಂಡು ಎಂಬ ಬಂಡೆ ಇದೆ. ಈ ಬಂಡೆಯ ಮೇಲೆ ದೀಪಸ್ತಂಭವೊಂದನ್ನು ನೆಟ್ಟಿದ್ದು ಇಲ್ಲಿ ದೀಪ ಹಚ್ಚಿದಾಗ ಬಹುದೂರದ ವರೆಗೆ ಕಾಣಿಸುತ್ತದೆ. ಈ ಸುತ್ತಿನಲ್ಲಿರುವ ಕೋಟೆಯ ಗೋಡೆಯಲ್ಲಿರುವ ಒಂದು ದೊಡ್ಡ ರಂಧ್ರವನ್ನು ಪಕ್ಕದ ಪರಂಗಿಬೆಟ್ಟದಿಂದ ಹೊಡೆದ ಗುಂಡಿನಿಂದ ಆದುದೆಂದು ಜನ ತೋರಿಸುವುದುಂಟು.

ದೇವರಾಯನದುರ್ಗದಿಂದ ಸ್ವಲ್ಪದೂರದಲ್ಲಿ ತುಮಕೂರು ರಸ್ತೆಯ ಬದಿಯಲ್ಲಿ ನಾಮದ ಚಿಲುಮೆ ಇದೆ. ಇಲ್ಲಿ ಬಂಡೆಯಿಂದ ಹೊಮ್ಮುವ ನೀರು ಬಂಡೆಯಲ್ಲಿ ಕಡೆದ ಒರಳೊಂದನ್ನು ತುಂಬಿ ಮುಂದೆ ಹರಿಯುತ್ತದೆ. ಶಿಂಷಾನದಿ ಬೆಟ್ಟದ ದಕ್ಷಿಣ ಪಾರ್ಶ್ವದಲ್ಲಿ ಉಗಮಿಸುತ್ತದೆ.

ದೇವರಾಯನದುರ್ಗ ಅಂಧಕ ಅಥವಾ ಲಿಂಗಕ ಎಂಬ ಕಳ್ಳರ ನಾಯಕನೊಬ್ಬನ ಠಾಣ್ಯವಾಗಿತ್ತೆಂದೂ ಯದುಪಟ್ಟಣದಲ್ಲಿ ಆಳುತ್ತಿದ್ದ ಕರ್ನಾಟಕದ ಅರಸ ಹೇಮಚಂದ್ರನ ಮಗ ಸುಮತಿ ಎಂಬ ರಾಜಕುಮಾರ ಇವನನ್ನು ಹತ್ತಿಕ್ಕಿ ಈ ಪ್ರದೇಶವನ್ನು ಆಕ್ರಮಿಸಿಕೊಂಡ ಎಂದೂ ಸ್ಥಳಪ್ರತೀತಿ. ಅನಂತರ ಅಂಧಕ ನೆಲಮಂಗಲದ ಸಮೀಪದಲ್ಲಿ ಭೂಮಂಡನವೆಂಬ ಪಟ್ಟಣವನ್ನು ಸ್ಥಾಪಿಸಿ ಅಲ್ಲಿ ನೆಲಸಿದನಂತೆ. ಹೊಯ್ಸಳರ ಕಾಲದಲ್ಲಿ ಈ ಬೆಟ್ಟದ ಮೇಲೆ ಆನೆ ಬಿದ್ದ ಸರಿ (ಆನೆ ಬಿದ್ದ ಜರಿ) ಎಂಬ ಊರಿದ್ದಂತೆ ತೋರುತ್ತದೆ. ಬಹುಕಾಲದವರೆಗೆ ಈ ಸುತ್ತಣ ಪ್ರದೇಶ ಇದೇ ಹೆಸರಿನಿಂದ ಪ್ರಸಿದ್ಧವಾಗಿತ್ತು. ಆನೆಯೊಂದು ಜಾರಿಬಿದ್ದಿದ್ದರಿಂದ ಈ ಹೆಸರಾಯಿತೆಂದು ಐತಿಹ್ಯ. ಈ ಬೆಟ್ಟದ ಮೇಲಿನ ಕರಿಗಿರಿ ಶಿಖರದ ಬುಡದಲ್ಲಿರುವ ಆನೆಗೊಂದಿ ಎನ್ನುವ ಒಂದು ತಾಣ ಆನೆಬಿದ್ದ ಸ್ಥಳವೆಂದು ತೋರಿಸುವುದುಂಟು. ತುಡುಗು

ಆನೆಯೊಂದು (ಶಾಪಗ್ರಸ್ತ ಗಂಧರ್ವ) ಇಲ್ಲಿಗೆ ಬಂದು ಸಾಕಷ್ಟು ಹಾವಳಿಮಾಡಿ ಇಲ್ಲಿಯ ಕೆರೆಗೆ ನಷ್ಟಮಾಡಿ ಅನಂತರ ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಏರಲು ಹೋಗಿ ಜಾರಿ ಪ್ರಾಣ ಕಳೆದುಕೊಂಡಿತೆಂದು ಸ್ಥಳಪುರಾಣ. ಅದರ ಪ್ರಕಾರ ಈ ಬೆಟ್ಟದ ಹೆಸರೂ ಕರಿಗಿರಿ. ವಿಜಯ ನಗರದ ರಾಜರ ಕಾಲದಲ್ಲಿ ಈ ಬೆಟ್ಟಕ್ಕೆ ಹೆಸರೂ ಇತ್ತು. ಆ ಕಾಲದಲ್ಲಿ ಜಯಮಂಗಲಿಗೆ ಅಡ್ಡವಾಗಿ ಕಟ್ಟಿದ್ದ ಬುಕ್ಕಸಮುದ್ರ ಕಟ್ಟೆ ಮತ್ತು ಸಮೀಪದಲ್ಲಿದ್ದ ಊರಿನ ಅವಶೇಷಗಳನ್ನು ಈಗಲೂ ಕಾಣಬಹುದು. ಕೆಲವು ಕಾಲ ಜಡಕ ಎಂಬ ಪಾಳೆಯಗಾರ ಇಲ್ಲಿದ್ದು ಇದಕ್ಕೆ ಡಕನದುರ್ಗ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಮೈಸೂರಿನ ಚಿಕ್ಕದೇವರಾಜ ಒಡೆಯರು 1696ರಲ್ಲಿ ಇದನ್ನು ಅಕ್ರಮಿಸಿ ಕೊಂಡಮೇಲೆ ದೇವರಾಯ ದುರ್ಗ ಎಂಬ ಹೆಸರು ರೂಢಿಯಾಯಿತು. ದುರ್ಗದಲ್ಲಿರುವ ಕೋಟೆಕೊತ್ತಲೆಗಳೂ ಚಿಕ್ಕದೇವರಾಜ ಒಡೆಯರ ಕಾಲದ್ದು. ದೇವರಾಯನದುರ್ಗ ಈಗ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ. *

**ದೇವಲಾಪುರ:** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ನಾಗಮಂಗಲದಿಂದ ಪೂರ್ವಕ್ಕೆ 11ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 2,023. ಈ ಊರು ಹಿಂದೆ ಪ್ರಮುಖ ಸ್ಥಳವಾಗಿತ್ತು. 3ನೆಯ ಬಲ್ಲಾಳನ ಕಾಲದ 1300ರ ಒಂದು ಶಾಸನ ಇಲ್ಲಿ ದೊರಕಿದೆ. ಈ ಊರಿನ ಮುಖ್ಯ ಗುಡಿಯಾದ ಲಕ್ಷ್ಮೀನಾರಾಯಣ ದೇವಾಲಯದ ಮೂಲಭಾಗ ಮುಮ್ಮಡಿ ವೀರಬಲ್ಲಾಳನ ಕಾಲದ್ದು. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪ ಇವೆ. ಮುಂಭಾಗದಲ್ಲಿ ಪ್ರಾಕಾರದ ಮಹಾದ್ವಾರ ಮತ್ತು ದೊಡ್ಡ ದೀಪದ ಕಂಬ ಇವೆ. ಇವನ್ನು 1472ರಲ್ಲಿ ಲಕ್ಕಣ್ಣನಾಯಕನ ಮಗ ಚಿಕ್ಕ ಅಲ್ಲಪ್ಪನಾಯಕ ಎಂಬುವನು ವಿಜಯನಗರದ ಸಾಳ್ವ ನರಸಿಂಹನಿಂದ ದೇವಲಾಪುರವನ್ನು ದತ್ತಿಯಾಗಿ ಪಡೆದಾಗ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ದೇವಾಲಯದ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿರುವ ಗೋಪುರ 17ನೆಯ ಶತಮಾನದ ರಚನೆ. ದೇವಾಲಯದ ಹೊರಮೈಯಲ್ಲಿ ಅಡ್ಡ ತಳಪಟ್ಟಿಕೆಗಳು, ಅರೆಗಂಬಗಳು ಮತ್ತು ಕೋಷ್ಟಗಳಿಂದ ಅಲಂಕೃತವಾದ ಭಿತ್ತಿ, ನೇರಕಪೋತ ಇವೆ. ಮುಖಮಂಟಪ ಮೂರಂಕಣದ್ದು. ಇಲ್ಲಿನ ಕಂಬಗಳಲ್ಲಿ ಕೆಳಗೆ ಚತುರಸ್ರ ಮೇಲೆ 8 ಮತ್ತು 24 ಮುಖಗಳಿದ್ದು ಮೇಲೆ ದುಂಡು ಮತ್ತು ಚಪ್ಪಟೆ ಬೋದಿಗೆಗಳಿವೆ. ಗರ್ಭಗೃಹದ ಒಳಗಿನ ಲಕ್ಷ್ಮೀನಾರಾಯಣ (ಶಾಸನಗಳಲ್ಲಿ ಲಕ್ಷ್ಮೀಕಾಂತ) ಹೊಯ್ಸಳ ಶೈಲಿಯದು. 8' ಎತ್ತರವಿದೆ.

ಊರಿನ ಕೆರೆಯ ಉತ್ತರದಲ್ಲಿರುವ ಒಂದು ಸಣ್ಣ ಗುಡ್ಡದ ಮೇಲೆ ಕೋಡಿ ತಿರುಮಲ ದೇವಾಲಯವಿದೆ. ದಕ್ಷಿಣಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ನವರಂಗ ಹಾಗೂ ಮುಖಮಂಟಪ ಇವೆ. ಜೀರ್ಣಾವಸ್ಥೆಯಲ್ಲಿರುವ ಈ ದೇವಾಲಯ 17ನೆಯ ಶತಮಾನದ್ದು.

(ಡಿ.ಎಸ್.ಜಿ.)

**ದೇವಲಾಪುರದ ನಂಜುಂಡ:** ಸು. 1841. ವೀರಶೈವ ಕವಿ. ದೇವಲಾಪುರ ಈತನ ಜನ್ಮಸ್ಥಳ. ತಂದೆ ದೇವರಸ, ತಾಯಿ ನಂಜಮಾಂಬೆ, ಇಷ್ಟದೇವತೆ ನಂಜನಗೂಡು ನಂಜುಂಡೇಶ್ವರ. ಕವಿ ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ (1794– 1868) ಆಶ್ರಿತನಾಗಿದ್ದ. ಕೃಷ್ಣರಾಜ ಭಕ್ತಿಸಾರ, ಕೃಷ್ಣರಾಜ ಪಟ್ಟಾಭಿಷೇಕವರ್ಣನೆ, ಕೃಷ್ಣರಾಜಭೋಗಾವಳಿ, ಕೃಷ್ಣರಾಜ ಶೃಂಗಾರಶತಕ, ಕೃಷ್ಣರಾಜೇಂದ್ರವೃತ್ತರತ್ನಾವಳಿ, ಟೀಕೆ, ಕೃಷ್ಣೇಂದ್ರಗೀತೆ, ತಿಬ್ಬಾಂಬಿಕಾ ಶತಕ, ಅಪರಾಧಸ್ತೋತ್ರ, ಲಿಂಗಸ್ತುತಿ, ಶಂಕರಾಷ್ಟಕ, ಶೈಲಜಾಧವಸ್ತೋತ್ರ, ಸಮುದ್ರಮಥನ ಕಥೆ, ಸೌಗಂಧಿಕಾಪರಿಣಯ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಹೆಚ್ಚಿನವು ಮುಮ್ಮಡಿ ಕೃಷ್ಣರಾಜ ಒಡೆಯರ ಸ್ತುತಿಪೂರವಾಗಿವೆ. ಕವಿ ತಾನು ಸಂಸ್ಕೃತ ಹಾಗೂ ಕನ್ನಡದಲ್ಲಿ ಚತುರತೆಯುಳ್ಳವನೆಂದು ಹೇಳಿಕೊಂಡಿದ್ದಾನೆ.

ಕೃಷ್ಣರಾಜಭಕ್ತಿಸಾರ ಭಾಮಿನೀಷಟ್ಪದಿಯ 108 ಪದ್ಯಗಳುಳ್ಳ ಗ್ರಂಥ. ಇದಕ್ಕೆ ಕೃಷ್ಣೇಂದ್ರಭಕ್ತಿ ಸಾರಾಷ್ಟೋತ್ತರ ಶತಕ ಎಂಬ ಹೆಸರೂ ಇದೆ. ಪ್ರತಿ ಪದ್ಯವೂ ಕೃಷ್ಣೇಂದ್ರ ರಕ್ಷಿಸು ನಮ್ಮನನವರತ ಎಂದು ಮುಗಿಯುತ್ತದೆ. ಇದನ್ನು 1862ರಲ್ಲಿ ಬರೆದಂತೆ ತಿಳಿಯುತ್ತದೆ. ಕೃಷ್ಣರಾಜಪಟ್ಟಾಭಿಷೇಕವರ್ಣನೆ ಹಾಗೂ ಸೌಗಂಧಿಕಾಪರಿಣಯ ಸಾಂಗತ್ಯ ದಲ್ಲಿವೆ. ಸೌಗಂಧಿಕಾಪರಿಣಯದಲ್ಲಿ 14 ಸಂಧಿಗಳೂ 726 ಪದ್ಯಗಳೂ ಇವೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯದ ಸಂಗ್ರಹವೆಂದೂ ತಾನು ದೊರೆಯ ಆಜ್ಞಾನುಸಾರವಾಗಿ ರಚಿಸಿರುವೆನೆಂದೂ ಹೇಳಿಕೊಂಡಿದ್ದಾನೆ. ದೂರ್ವಾಸ ಋಷಿಯ ಶಾಪದಿಂದ ಇಂದ್ರ ರತ್ನಪುರಿಯ ರಾಜರಾಣಿಯರಿಗೆ ಸುಗಂಧರಾಯನೆಂಬ ಮಗನಾಗಿ ಹುಟ್ಟಿ ಸೌಗಂಧಿಕೆಯಾಗಿ ಹುಟ್ಟಿದ ಶಚಿಯನ್ನು ಮದುವೆಯಾಗಿ ಕೊನೆಗೆ ತನ್ನ ಪದವಿ ಹೊಂದಿದ. ಇದು ಕಥಾವಸ್ತು. ಕೃಷ್ಣರಾಜ ಪಟ್ಟಾಭಿಷೇಕ ವರ್ಣನೆಯಲ್ಲಿ ರಾಜರ ಪಟ್ಟಾಭಿಷೇಕ ಮಹೋತ್ಸವವನ್ನು ವರ್ಣಿಸಿದೆ. ಅಪರಾಧಸ್ತೋತ್ರ ವಾರ್ಧಕ ಷಟ್ಪದಿಯಲ್ಲಿ ರಚಿತವಾದ ಭಕ್ತಿಕಾವ್ಯ. ಇದರಲ್ಲಿ 127 ಪದ್ಯಗಳಿದ್ದು ಶಿವಸ್ತುತಿರೂಪವಾಗಿದೆ. ಇದನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಅನುಗ್ರಹ ತಪ್ಪಿದ ಮೇಲೆ ಬರೆದುದಾಗಿ ಪ್ರತೀತಿ ಇದೆ. ಕೃಷ್ಣರಾಜಶೃಂಗಾರಶತಕ 101 ಕಂದಪದ್ಯಗಳುಳ್ಳ ಪುಟ್ಟ ಶೃಂಗಾರ ಕಾವ್ಯ. ಅಲ್ಲಲ್ಲಿ ಗದ್ಯಭಾಗಗಳೂ ಇವೆ. ಇದನ್ನು 1841ರಲ್ಲಿ ಬರೆದಂತೆ ಕಾಣುತ್ತದೆ. ಕೃಷ್ಣರಾಜಭೋಗಾವಳಿ ಹಾಡಿನ ರೂಪದಲ್ಲಿದೆ. ಇದರಲ್ಲಿ 27 ಪದ್ಯಗಳಿವೆ. ಶೈಲಜಾಧವಸ್ತೋತ್ರ ಶಿವಸ್ತುತಿರೂಪವಾಗಿದ್ದು 33 ವೃತ್ತಗಳನ್ನೊಳಗೊಂಡಿದೆ. ಕೃಷ್ಣೇಂದ್ರಗೀತೆ ಹಾಡಿನ ರೂಪದಲ್ಲಿದೆ. 32 ಪದ್ಯಗಳಿವೆ. ಲಿಂಗಸ್ತುತಿಯಲ್ಲಿ 27 ಪದ್ಯಗಳೂ ಶಂಕರಾಷ್ಟಕದಲ್ಲಿ 8 ತೂಣಕ ವೃತ್ತಗಳೂ ಇವೆ. (ಕೆ.ಆರ್.ಯು.)

**ದೇವವೃಂದ:** ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಒಂದು ಗ್ರಾಮ. ಪ್ರಾಚೀನ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ. ಮೂಡಿಗೆರೆಯಿಂದ ನೈಋತ್ಯಕ್ಕೆ 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,024. ಈ ಊರಿಗೆ ಸಕಲೇಶಪುರ ಮೂಡಿಗೆರೆ ರಸ್ತೆಯಲ್ಲಿ ಹಾನುಬಾಳು ಕಡೆಯಿಂದ ಮತ್ತು ಬೆಟ್ಟದಮನೆ ಕಡೆಯಿಂದ ಹೋಗಲು ಎರಡು ಉತ್ತಮ ರಸ್ತೆ ಮಾರ್ಗಗಳಿವೆ. ಬೆಟ್ಟದಮನೆ ಮೂಲಕ ಹೋಗುವ ರಸ್ತೆ ಹೊಯ್ಸಳರ ಅಂಗಡಿ ಗ್ರಾಮದ ಮೂಲಕ ಹಾದುಹೋಗುತ್ತದೆ.

ಮಲೆನಾಡಿನ ದಟ್ಟಡವಿಯಲ್ಲಿ ಪಶ್ಚಿಮಘಟ್ಟಗಳ ತಪ್ಪಲಲ್ಲಿರುವ ಈ ಊರು ಹಿಂದೆ ಮಲವಿನ್ನಾಡು ಎಂಬ ನಾಡಿನ ಮುಖ್ಯ ಕೇಂದ್ರವಾಗಿದ್ದಿತು. ಸ್ಥಳಪುರಾಣದ ಮೇರೆಗೆ ಇಲ್ಲಿ ಕಪಿಲ ಮಹರ್ಷಿಯ ಆಶ್ರಮವಿತ್ತು. ಇಲ್ಲಿನ ಪ್ರಸಿದ್ಧ ರಾಮೇಶ್ವರ ದೇವರನ್ನು ಪರಶುರಾಮ ಸ್ಥಾಪಿಸಿದನೆಂದು ಪ್ರತೀತಿ. ತಲಕಾಡಿನ ಗಂಗರ ಕಾಲದಿಂದಲೂ ಇಲ್ಲಿ ದೇವಾಲಯವಿದ್ದುದಕ್ಕೆ ಸಾಕ್ಷ್ಯಾಧಾರಗಳಿವೆ.

ದೇವವೃಂದವೆಂದರೆ ದೇವತೆಗಳ ಬೀಡು ಎಂಬ ಅರ್ಥವಿದೆ. ಇಲ್ಲಿನ ರಾಮೇಶ್ವರ ದೇವಾಲಯ ಹೊಯ್ಸಳರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂತು. ಹೊಯ್ಸಳರ ಮೂಲ ಸ್ಥಳವಾದ ಅಂಗಡಿ ಅಥವಾ ಸೊಸವೂರು ಇಲ್ಲಿಗೆ ಸು. 5 ಕಿಮೀ ದೂರದಲ್ಲಿದೆ. ರಾಮೇಶ್ವರ ದೇವಾಲಯದ ಗರ್ಭಗೃಹ, ಸುಕನಾಸಿ, ಒಳಗಿನ ನವರಂಗ ಹಾಗೂ ಗೋಪುರಗಳು ಹೊಯ್ಸಳರ ಕಾಲದ ರಚನೆಗಳಾಗಿವೆ. ದೇವಾಲಯದ

ಮಹಾದ್ವಾರ ಮತ್ತು ಪ್ರಾಕಾರಗಳು ವಿಜಯನಗರ ಕಾಲದ ನಿರ್ಮಾಣಗಳು. ಕಂಬಗಳ ಮತ್ತು ದ್ವಾರಪಾಲಕರ ಶಿಲ್ಪಗಳು ಮನೋಜ್ಞವಾಗಿವೆ. ಈ ದೇವಾಲಯದ ಆವರಣದಲ್ಲಿ ವೀರಭದ್ರ, ಕೇಶವ, ಆಂಜನೇಯ ಮತ್ತು ದೇವಿಯ ಗುಡಿಗಳಿವೆ. ಈ ರಾಮೇಶ್ವರ ದೇವರಿಗೆ ಯುಗಾದಿಯಲ್ಲಿ ನಡೆಯುವ ರಥೋತ್ಸವ ಮತ್ತು ಜಾತ್ರೆಗಳು ಈ ಸುತ್ತಿನಲ್ಲಿ ಪ್ರಸಿದ್ಧ. ದೀಪಾವಳಿ ಮತ್ತು ಸಂಕ್ರಾಂತಿ ಹಬ್ಬಗಳಲ್ಲಿಯೂ ಚಿಕ್ಕ ರಥೋತ್ಸವಗಳು ನಡೆಯುತ್ತವೆ. ಈಗ ಇಲ್ಲಿನ ದೇವಾಲಯದ ಜೀರ್ಣೋದ್ಧಾರ ಕಾರ್ಯ ಮತ್ತು ಭಕ್ತಾದಿಗಳಿಗೆ ಅನೇಕ ಸೌಕರ್ಯಗಳನ್ನು ಮಾಡಿಕೊಡುವ ಪ್ರಯತ್ನ ನಡೆದಿದೆ. ದೇವಾಲಯದ ಆಡಳಿತ ಹಿಂದಿನ ನಾಡಪದ್ಧತಿಗೆ ಪ್ರತೀಕವಾಗಿದೆ. ನೆರೆಯ ಉಗ್ಗೇಹಳ್ಳಿ ನಾಡಗೌಡರು ಈ ದೇವಾಲಯದ ಪಾರುಪತ್ಯಗಾರರು. ಅವರು ವಿವಿಧ ಮಂದೆ ಅಥವಾ ಸಾವಿರಗಳ ಪ್ರತಿನಿಧಿಗಳೊಂದಿಗೆ ಇಲ್ಲಿನ ಸೇವೆಗಳನ್ನು ನಡೆಸುತ್ತಾರೆ. ಈಗಲೂ ಐದು ಸಾವಿರ ಸೀಮೆಯವರು ಯುಗಾದಿ ರಥೋತ್ಸವದಲ್ಲಿ ವಾದ್ಯಸಮೇತ ಬಂದು ಜಾತ್ರೆಯಲ್ಲಿ ಒಂದಾಗಿ ಸೇರುತ್ತಾರೆ. *

**ದೇವುಡು ನರಸಿಂಹಶಾಸ್ತ್ರಿ:** 1897– 1962. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಘನ ವಿದ್ವಾಂಸರಾಗಿದ್ದವರು. ಹುಟ್ಟಿದ್ದು ಮೈಸೂರಿನಲ್ಲಿ. ಇವರದು ಪಂಡಿತ ಮನೆತನ. ಇವರ ವಂಶದವರು ಮೈಸೂರು ಅರಮನೆಯಲ್ಲಿ ರಾಜಪುರೋಹಿತರಾಗಿದ್ದರು. ಚಿಕ್ಕಂದಿನಲ್ಲಿಯೇ ಪ್ರತಿಭಾವಂತರೆಂದು ಹೆಸರುಗಳಿಸಿದ್ದ ದೇವುಡು ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದು ಬೆಂಗಳೂರಿನಲ್ಲಿ ನೆಲೆಸಿದರು. ಸಾಂಪ್ರದಾಯಿಕ ರೀತಿಯಲ್ಲಿ ವೇದಾಂತ, ಪೂರ್ವಮೀಮಾಂಸಾ ಶಾಸ್ತ್ರಗಳನ್ನು ಅಭ್ಯಸಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇದ್ದುದರಿಂದ ಸ್ವಲ್ಪಕಾಲ ಆರ್ಯ ವಿದ್ಯಾಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಮಕ್ಕಳಿಗಾಗಿ ಹಲವು ಪುಸ್ತಕಗಳನ್ನು ಬರೆದು ಪ್ರಕಟಿಸಿದರಲ್ಲದೆ ನಮ್ಮ ಪುಸ್ತಕ ಎಂಬ ಪತ್ರಿಕೆಯನ್ನು ಆರಂಭಿಸಿ ಕೆಲಕಾಲ ನಡೆಸಿದರು. ಇವರು ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲೂ ಆಸಕ್ತಿ ವಹಿಸಿದರು. ವರದಾಚಾರ್ಯರ ಶಿಷ್ಯರಾಗಿ, ನಾಟಕಗಳಲ್ಲಿ ಪಾತ್ರವಹಿಸಿದರು. ಮಾರ್ಕಂಡೇಯ ಎಂಬ ಕನ್ನಡ ಚಿತ್ರದಲ್ಲೂ ಅಭಿನಯಿಸಿದರು. ಬೆಂಗಳೂರು ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್ ಸಂಸ್ಥೆಯ ಸದಸ್ಯರಾಗಿ ಆ ಸಂಸ್ಥೆಯ ರಂಗಭೂಮಿ ಎಂಬ ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದರು.

ಇವರದು ಪ್ರಚಂಡ ಧೀಶಕ್ತಿ. ವೇದ ಉಪನಿಷತ್ತುಗಳ ವಿಷಯದಲ್ಲಿ ಇವರು ಒಳ್ಳೆಯ ಪಾಂಡಿತ್ಯ ಗಳಿಸಿಕೊಂಡಿದ್ದರಲ್ಲದೆ ಆಧುನಿಕ ಜೀವನ ದೃಷ್ಟಿಯನ್ನು ಬೆಳೆಸಿಕೊಂಡಿದ್ದರು. ವೈದಿಕ ಕಾಲದ ಜನಜೀವನ, ಸಂಸ್ಕೃತಿ ಮತ್ತು ರೀತಿ ನೀತಿಗಳನ್ನು ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ ಎಂಬ ಮೂರು ಕಾದಂಬರಿಗಳಲ್ಲಿ ಇವರು ಚಿತ್ರಿಸಿದ್ದಾರೆ. 'ಮಹಾಬ್ರಾಹ್ಮಣ'ದಲ್ಲಿ ವಿಶ್ವಾಮಿತ್ರನ ತಪಸ್ಸಾಧನೆಗಳ ಕಥೆಯನ್ನೂ 'ಮಹಾಕ್ಷತ್ರಿಯ'ದಲ್ಲಿ ನಹುಷನ ಕಥೆಯನ್ನೂ 'ಮಹಾದರ್ಶನ'ದಲ್ಲಿ ಯಾಜ್ಞವಲ್ಕ್ಯರ ಕಥೆಯನ್ನೂ ಬಹು ಚೆನ್ನಾಗಿ ಹೇಳಿದ್ದಾರೆ. ಮನುಷ್ಯನ ಮನಸ್ಸಿನ ಸೂಕ್ಷ್ಮ ವ್ಯಾಪಾರಗಳನ್ನು ಅಂತರಂಗ ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಲೈಂಗಿಕ ಸಮಸ್ಯೆಗಳನ್ನು ಕುರಿತು ಎರಡನೆಯ ಜನ್ಮ ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಗೆದ್ದವರು ಯಾರು, ಮಯೂರ (ಚಲನಚಿತ್ರವಾಗಿದೆ), ಕಳ್ಳರ ಕೂಟ ಇವು ಇವರ ಇತರ ಕೃತಿಗಳು. ವಿವೇಕಾನಂದರ ಕೆಲವು ಭಾಷಣಗಳನ್ನು ಕನ್ನಡಕ್ಕೆ ತಂದಿದ್ದಾರೆ. ಕರ್ನಾಟಕ ಸಂಸ್ಕೃತಿಯ ದರ್ಶನ ಎಂಬುದು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಇವರು ಮಾಡಿದ ಭಾಷಣಗಳ ಸಂಗ್ರಹ. ಇವರ ವಿಮರ್ಶನ ಶಕ್ತಿ ಮತ್ತು ವೈಜ್ಞಾನಿಕ ದೃಷ್ಟಿಗಳನ್ನು ಈ ಕೃತಿಯಲ್ಲಿ ಗುರುತಿಸಬಹುದು. ಇವರ ಮಹಾಕ್ಷತ್ರಿಯ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ (1962). ಇವರು 1962 ಅಕ್ಟೋಬರ್ 24ರಂದು ನಿಧನರಾದರು. (ಡಿ.ಇ.ಕೆ.ಆರ್)

**ದೇವೇಂದ್ರಪ್ಪ, ಬಿ.:** 1899– . ಪ್ರಸಿದ್ಧ ಸಂಗೀತ ವಿದ್ವಾಂಸರು. ಶಿವಮೊಗ್ಗ ಜಿಲ್ಲೆಯ ಆಯನೂರು ಗ್ರಾಮದಲ್ಲಿ 1899 ಜೂನ್ 3ರಂದು ಜನಿಸಿದರು. ತಂದೆ ಬಿ.ಎಸ್.ರಾಮಯ್ಯ, ತಾಯಿ ತುಳಸಮ್ಮ.

ರಾಮಯ್ಯನವರಿಗೆ ಹಾಡುಗಾರಿಕೆ, ನಾನಾ ವಾದ್ಯವಾದನ ಮತ್ತು ಭರತನಾಟ್ಯದಲ್ಲಿ ಪಾಂಡಿತ್ಯವಿತ್ತು. ನಾಟಕ ಕಲೆಯಲ್ಲಿಯೂ ಅಭಿರುಚಿ ಇದ್ದ ಅವರು ನಾಟಕಗಳಲ್ಲಿ ರಾಜಾ ಪಾರ್ಟು ಮಾಡುತ್ತಿದ್ದರು. ಇವರಿಗೆ ಸಂಸ್ಕೃತ ಮತ್ತು ತೆಲುಗು ಭಾಷೆಗಳ ಪರಿಚಯವೂ ಇತ್ತು. ತಮ್ಮ ಮಗನಿಗೆ 5ನೆಯ ವಯಸ್ಸಿನಿಂದಲೇ ಶಿಕ್ಷಣ ಕೊಟ್ಟು ಹಾಡುಗಾರಿಕೆಯ ಜೊತೆಗೆ ತಮಗೆ ಬರುತ್ತಿದ್ದ ಎಲ್ಲ ವಾದ್ಯಗಳ ನುಡಿಸುವಿಕೆಯನ್ನು ಕಲಿಸಿದರು. ಇದರ ಫಲವಾಗಿ ದೇವೇಂದ್ರಪ್ಪನವರು ತಮ್ಮ 8ನೆಯ



ವಯಸ್ಸಿನಲ್ಲೇ ಹಾಡುಗಾರಿಕೆ ಮತ್ತು ವಾದ್ಯಗಳ ವಾದನಗಳಲ್ಲಿ ಕಚೇರಿ ಮಾಡುವಷ್ಟು ಯೋಗ್ಯತೆಯನ್ನು ಸಂಪಾದಿಸಿದರು. ಮೈಸೂರಿನಲ್ಲಿ ಆಸ್ಥಾನ ಸಂಗೀತ ವಿದ್ವಾಂಸರುಗಳಾಗಿದ್ದ ಟಿಟ್ಟೆ ನಾರಾಯಣ ಅಯ್ಯಂಗಾರ್, ಬಿಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣ ಮತ್ತು ಭಕ್ಷಿ ಸುಬ್ಬಣ್ಣನವರಲ್ಲಿ ಹೆಚ್ಚಿನ ವಿದ್ಯಾಭ್ಯಾಸ ನಡೆಯಿತು. ಇವರು ಗಾಯನದಲ್ಲಿ ಸಿದ್ಧಿ ಪಡೆದುದಲ್ಲದೆ ತಮ್ಮ ತಂದೆಯವರು ಹೇಳಿಕೊಟ್ಟಿದ್ದ ವೀಣೆ, ಹಾರ್ಮೋನಿಯಮ್, ಪಿಟೀಲು, ಗೋಟುವಾದ್ಯ, ಜಲತರಂಗ, ದಿಲ್‌ರುಬಾ ಮತ್ತು ಸಿತಾರ್ ಈ ವಾದ್ಯಗಳನ್ನು ನುಡಿಸುವುದರಲ್ಲಿಯೂ ಪಾಂಡಿತ್ಯವನ್ನು ಗಳಿಸಿದರು.

ದೇವೇಂದ್ರಪ್ಪನವರು ಹಿಂದುಸ್ಥಾನೀ ಸಂಗೀತವನ್ನೂ ಅಭ್ಯಾಸ ಮಾಡಿದ್ದುದರಿಂದ ಇವರ ಗಾಯನದಲ್ಲಿ ಕರ್ನಾಟಕ ಮತ್ತು ಹಿಂದುಸ್ಥಾನೀ ಸಂಗೀತ ಪದ್ಧತಿಗಳ ಉತ್ತಮಾಂಶವನ್ನು ಕಾಣಬಹುದು. ತ್ರಿಸ್ಥಾಯಿಯಲ್ಲಿ ಲೀಲಾಜಾಲವಾಗಿ ಹಾಡಬಲ್ಲವರಾಗಿದ್ದರು. ಇವರ ಕಂಠದಿಂದ ಹೊಮ್ಮುತ್ತಿದ್ದ ತುಂಬುನಾದ, ಶ್ರುತಿ ಶುದ್ಧತೆ ಮತ್ತು ಲಯಜ್ಞಾನ ಅಸದೃಶವಾದುವು. ಅಪರೂಪ ತಾಳಗಳ ಪರಿಚಯವಿದ್ದ ಇವರು ಅಪರೂಪ ರಾಗಗಳನ್ನೂ ವಿಸ್ತಾರವಾಗಿ ಹಾಡಬಲ್ಲವರಾಗಿದ್ದರು. ಷಟ್ಕಾಲ ಪಲ್ಲವಿಗಳನ್ನು ಹಾಡುವುದರಲ್ಲಿ ಇವರು ಪ್ರಸಿದ್ಧರು. ಮಾರ್ದವತೆ, ಓಜಸ್ಸು ಈ ಎರಡು ಗುಣಗಳೂ ಇವರ ಗಾಯನ ಶೈಲಿಯಲ್ಲಿತ್ತು. ಇವರ ಗಾಯನದಲ್ಲಿ ಸಾಹಿತ್ಯದ ಸ್ಪಷ್ಟವಾದ ಉಚ್ಚಾರಣೆ, ಅರ್ಥಶುದ್ಧತೆಗಳನ್ನು ಮನಗಾಣಬಹುದಾಗಿತ್ತು. ಸಾಹಿತ್ಯದ ಅರ್ಥಭಾಗಗಳನ್ನು ಗ್ರಹಿಸಿ, ಅದನ್ನು ರಾಗದ ರಸಭಾವಗಳೊಡನೆ ಮಿಳನ ಮಾಡಿ ಹಾಡುತ್ತಿದ್ದುದರಿಂದ ಇವರ ಸಂಗೀತ ಶ್ರೋತೃಗಳ ಮೇಲೆ ಮಹತ್ತರವಾದ ಪರಿಣಾಮವನ್ನು ಉಂಟುಮಾಡುತ್ತಿತ್ತು. ಇವರ ಸಂಗೀತವನ್ನು ಕುರಿತು ಅ.ನ. ಕೃಷ್ಣರಾಯರು ಸಿಂಹವೈಖರಿ ಎಂದು ಕರೆದರೆ ಸಾಂಬಮೂರ್ತಿಯವರು ಗಂಡು ಹಾಡುಗಾರಿಕೆ ಎಂದು ಕರೆದಿದ್ದಾರೆ.

ಇವರು ಕನ್ನಡ ಮತ್ತು ತೆಲುಗಿನಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ವಚನ ಸಾಹಿತ್ಯವನ್ನು ತ್ಯಾಗರಾಜರ ತೆಲುಗು ಕೀರ್ತನೆಗಳ ಮಾದರಿಯಲ್ಲಿ ಸಂಗೀತದ ಚೌಕಟ್ಟಿಗೆ ಅಳವಡಿಸಿ ಪ್ರಚಾರಕ್ಕೆ ತಂದರು. ಇವರ ಶ್ರೀಬಸವೇಶ್ವರ ಅಷ್ಟೋತ್ತರ ಶತವಚನ ಕೀರ್ತನಸುಧಾ ಎಂಬ ಕೃತಿ 1969ರಲ್ಲಿ ಬಿಡುಗಡೆಯಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೇವೇಂದ್ರಪ್ಪನವರ ವಿದ್ಯಾಪ್ರೌಢಿಮೆಯನ್ನು ಮೆಚ್ಚಿ 1919ರಲ್ಲಿ ಆಸ್ಥಾನ ಸಂಗೀತ ವಿದ್ವಾಂಸರನ್ನಾಗಿ ನೇಮಿಸಿಕೊಂಡರು. ಜಯಚಾಮರಾಜ ಒಡೆಯರ್ ಅವರು ತಮ್ಮ ಮೆಚ್ಚುಗೆಯ ಪ್ರತೀಕವಾಗಿ ಇವರಿಗೆ ಗಾನವಿಶಾರದ ಎಂಬ ಬಿರುದನ್ನು ಸಕಲರಾಜಮರ್ಯಾದೆಗಳೊಡನೆ ನೀಡಿದರು (1946). ಅಲ್ಲದೆ ಇವರು ಅನೇಕ ರಾಜರು, ಮಠಾಧಿಪತಿಗಳು ಮತ್ತು ಸಂಗೀತ ಸಂಸ್ಥೆಗಳಿಂದ ರಾಗಾಲಾಪನಚತುರ, ಗಾನಕೇಸರಿ, ಗಾಯಕರತ್ನ, ಗಾನಾಲಂಕಾರ, ಗಾಯಕಸಾರ್ವಭೌಮ, ಗಾಯಕಶಿಖಾಮಣಿ, ಗಾಯನವಾದನಕಲಾನಿಧಿ, ಗಾನಸಿಂಧುಸುಧಾಂಶು, ಸಂಗೀತಕಲಾರತ್ನ, ಸಂಗೀತಕಲಾರತ್ನಸಾನು ಮುಂತಾದ ಬಿರುದುಗಳನ್ನು ಗಳಿಸಿ ಸನ್ಮಾನಿತರಾಗಿದ್ದಾರೆ. 1953ರಲ್ಲಿ ಇವರು ಭಾರತೀಯ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ಚೀನಕ್ಕೆ ಹೋಗಿದ್ದರು. ಭಾರತ ಸರ್ಕಾರ ಇವರ ಬಹುಮುಖವಾದ ಪ್ರತಿಭೆಯನ್ನು ಗಮನಿಸಿ 1963ರಲ್ಲಿ ರಾಷ್ಟ್ರಪ್ರಶಸ್ತಿಯನ್ನು ನೀಡಿ ಗೌರವಿಸಿತು. ಕರ್ನಾಟಕ ರಾಜ್ಯ ಸರ್ಕಾರ 1964ರಲ್ಲಿ ರಾಜ್ಯಪ್ರಶಸ್ತಿಯನ್ನೂ ಸಂಗೀತ ನಾಟಕ ಅಕಾಡೆಮಿ 1962ರಲ್ಲಿ ತನ್ನ ಪ್ರಶಸ್ತಿಯನ್ನೂ ನೀಡಿ ಗೌರವಿಸಿವೆ. ಬೆಂಗಳೂರು ಗಾಯನ ಸಮಾಜದ ಆಶ್ರಯದಲ್ಲಿ ನಡೆದ 1972ರ ಸಂಗೀತ ಸಮ್ಮೇಳನ ದಲ್ಲಿ ಇವರು ಅಧ್ಯಕ್ಷರಾಗಿದ್ದರಲ್ಲದೆ ಈ ಸಂದರ್ಭದಲ್ಲಿ ಸಂಗೀತರತ್ನ ಎಂಬ ಬಿರುದನ್ನೂ ಪಡೆದರು. ಸಂಗೀತ ಸಾಹಿತ್ಯ ಕ್ಷೇತ್ರಗಳಲ್ಲಿ ಇವರ ಸೇವೆಯನ್ನು ಗಮನಿಸಿ ಮೈಸೂರು ವಿಶ್ವವಿದ್ಯಾನಿಲಯ 1972ರಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

ಇವರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಸಂಗೀತ ವಿಭಾಗದ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಅಕಾಡೆಮಿಯ ಸದಸ್ಯರೂ ಆಗಿದ್ದರು. ವಿಶ್ವವಿದ್ಯಾನಿಲಯದ ಸಂಗೀತ ವಿಭಾಗದ ವಿಷಯ ನಿಯಾಮಕ ಮಂಡಳಿಯ ಅಧ್ಯಕ್ಷರಾಗಿಯೂ ವಿದ್ವತ್ ಪರೀಕ್ಷಾ ಮಂಡಲಿಯ ಅಧ್ಯಕ್ಷರಾಗಿಯೂ ಇದ್ದರು. ಅಖಿಲ ಭಾರತ ಶಾಂತಿ ಸಂಘದ ಸದಸ್ಯರಾಗಿಯೂ ಕರ್ನಾಟಕ ರಾಜ್ಯದ ಚಲನಚಿತ್ರದ ಸಂಗೀತ ವಿಭಾಗದ ಸದಸ್ಯರಾಗಿಯೂ ಸೇವೆಸಲ್ಲಿಸಿದರು. (ಬಿ.ಎಸ್.ವಿ.)

**ದೇವೇಂದ್ರಮುನಿ:** ಕನ್ನಡದ ಆದಿಕವಿಯೆಂದು ಪ್ರಸಿದ್ಧನಾದ ಪಂಪನ ಗುರು. ಪಂಪ ತನ್ನ ಆದಿಪುರಾಣದ ಆರಂಭದಲ್ಲಿ ಶ್ರೀ ದೇವೇಂದ್ರ ಮುನೀಂದ್ರ ಪಂಡಿತಗುಣವ್ರಾತಂ ಜಗತ್‌ಸ್ವಾಮಿ ಎಂದು ಮುಂತಾಗಿ ತೀರ್ಥಂಕರರನ್ನು ಸ್ತೋತ್ರ ಮಾಡುವ ನೆಪದಲ್ಲಿ ತನ್ನ ಗುರುವನ್ನೂ ಸ್ಮರಿಸಿದ್ದಾನೆ. ಅದೇ ಕೃತಿಯ ಮೊದಲ ಆಶ್ವಾಸನದಲ್ಲಿ "ದೇವೇಂದ್ರಮುನಿ ಪದಾಬ್ಜಂ .............. ಈಗೆ ಬೋಧೋದಯಮಂ" ಎಂದು ಕೊಂಡಾಡಿ ದ್ದಾನೆ. ಅದೇ ಆಶ್ವಾಸದಲ್ಲಿ ಮತ್ತೆ ‘ಗುರುದೇವೇಂದ್ರ ಮುನೀಂದ್ರನ್’ ಎಂದು ತನ್ನ ಗುರುವಿನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಪ್ರತಿ ಆಶ್ವಾಸದ ಕೊನೆಯಲ್ಲಿ ‘ಇದು ದೇವೇಂದ್ರಮುನೀಂದ್ರವಂದ್ಯ ಪರಮಜಿನೇಂದ್ರ’ ಎಂದು ಆರಂಭವಾಗುವ ವಾಕ್ಯದಲ್ಲಿ ತನ್ನ ಗುರುವನ್ನು ಸ್ಮರಿಸಿಕೊಂಡು ಅಪಾರಭಕ್ತಿಯನ್ನು ಮೆರೆದಿದ್ದಾನೆ. ದೇವೇಂದ್ರಮುನಿಗಳು ಪಂಪನಿಗೆ ವಿದ್ಯಾಗುರುಗಳಾಗಿದ್ದು ಜೈನಧರ್ಮಶಾಸ್ತ್ರವನ್ನು ಬೋಧಿಸಿರಬಹುದು. ಪಂಪನ ಕೃತಿಗಳಿಂದ ಅವರ ಬಗ್ಗೆ ಇನ್ನಾವ ವಿವರಗಳೂ ದೊರಕುವುದಿಲ್ಲ.

ಶ್ರವಣಬೆಳಗೊಳದ 66ನೆಯ ಶಾಸನದಲ್ಲಿ ಒಬ್ಬ ದೇವೇಂದ್ರಮುನಿಯ ಹೆಸರು ಬಂದಿದೆ. ಇದರಲ್ಲಿ ನಯಕೀರ್ತಿ ಎಂಬ ಮುನಿ 1177ರಲ್ಲಿ ಸಮಾಧಿಮರಣವನ್ನು ಪಡೆದಂತೆ ಹೇಳಿದೆ. ಅವನಿಗಿಂತ ಹಿಂದಿನ ಗುರುಪರಂಪರೆಯಲ್ಲಿ ದೇವೇಂದ್ರಸೈದ್ಧಾಂತಿಕರು ಎಂಟನೆಯವರಾಗುವುದ ರಿಂದ ಅವರ ಕಾಲ ಸುಮಾರು ಹತ್ತನೆಯ ಶತಮಾನದ ಮಧ್ಯಭಾಗವಾಗು ತ್ತದೆ. ಆದ್ದರಿಂದ ಶಾಸನೋಕ್ತ ದೇವೇಂದ್ರ ಸೈದ್ಧಾಂತಿಕರೂ ಪಂಪನ ಗುರುಗಳೂ ಬಹುಶಃ ಅಭಿನ್ನರೆಂದು ಹೇಳಬಹುದು.

ಆ ಶಾಸನದ ಪ್ರಕಾರ ದೇವೇಂದ್ರಮುನಿಗಳು ಗುಣನಂದಿ ಪಂಡಿತರ ಶಿಷ್ಯರು. ಗುಣನಂದಿ ಪಂಡಿತರಿಗೆ ಶಾಸ್ತ್ರಾಬ್ಧಿಪಾರಂಗತರಾದ ಮುನ್ನೂರು ಜನ ಶಿಷ್ಯರಿದ್ದರು. ಅವರಲ್ಲಿ ಶಾಸ್ತ್ರಾರ್ಥವ್ಯಾಖ್ಯಾನದಲ್ಲಿ ಪಟುಗಳಾಗಿದ್ದ ಉತ್ಕೃಷ್ಟತಮ ವಿದ್ವಾಂಸರು ಎಪ್ಪತ್ತೆರಡು ಜನ. ಆ ಎಪ್ಪತ್ತೆರಡು ಜನರಲ್ಲಿ ದೇವೇಂದ್ರಮುನಿ ಅತ್ಯಂತ ಪ್ರಸಿದ್ಧರಾದವರು. ಆ ದೇವೇಂದ್ರಮುನಿಯನ್ನು ಶಾಸನ ಹೀಗೆ ಹೊಗಳಿದೆ:

ಅಜನಿಮಹಿಪಚೂಡಾರತ್ನರಾರಾಜಿತಾಂಘ್ರಿಃ
ವಿಜಿತಮಕರಕೇತೂದಂಡದೋರ್ದಂಡಗರ್ವಃ
ಕುನಯನಿಕರ ಭೂಧ್ರಾನೀಕದಂಭೋಳಿದಂಡಃ
ಸಜಯತು ವಿಬುಧೇಂದ್ರೋ ಭಾರತೀಭಾಳಪಟ್ಟಃ

ದೇವೇಂದ್ರಮುನಿಗಳು ರಾಜಗುರುಗಳೂ ಮಹಾವಿದ್ವಾಂಸರೂ ಆಗಿದ್ದರು. ಅವರ ಬಿರುದುಗಳಲ್ಲಿ ಭಾರತೀಭಾಳಪಟ್ಟ ಎಂಬುದನ್ನು ಗಮನಿಸಬೇಕು. ಅವರು ಭಾರತೀ ಭಾಳಪಟ್ಟರಾದರೆ ಅವರ ಶಿಷ್ಯ ಪಂಪ ಸರಸ್ವತೀಮಣಿ ಹಾರ, ಗುರುಗಳಿಗೆ ತಕ್ಕ ಶಿಷ್ಯ. ಕರ್ನಾಟಕಕ್ಕೆ ಮಹಾಕವಿಯೊಬ್ಬನನ್ನು ದಯಪಾಲಿಸಿದ ಅಪೂರ್ವ ಶ್ರೇಯಸ್ಸು ದೇವೇಂದ್ರಮುನಿಗಳದು. (ಎಂ.ಸಿ.)

**ದೇವೇಗೌಡ,ಎಚ್.ಡಿ.:** 1933– . ಭಾರತ ಗಣರಾಜ್ಯದ ಮಾಜಿ ಪ್ರಧಾನ ಮಂತ್ರಿ (1996 ಜೂನ್ 1ರಿಂದ 1997 ಏಪ್ರಿಲ್ 11). ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (1994–96). ಜಾತ್ಯಾತೀತ ಜನತಾದಳದ ರಾಷ್ಟ್ರೀಯ ಅಧ್ಯಕ್ಷರು.

ಹರದನಹಳ್ಳಿ ದೊಡ್ಡೇಗೌಡ ದೇವೇಗೌಡ ಇವರ ಪೂರ್ಣ ಹೆಸರು. ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಯಲ್ಲಿ 1933 ಮೇ 18ರಂದು ಜನಿಸಿದರು. ತಂದೆ ದೊಡ್ಡೇಗೌಡ, ತಾಯಿ ಲಕ್ಷ್ಮೀದೇವಮ್ಮ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಹರದನಹಳ್ಳಿಯಲ್ಲೂ ಮಾಧ್ಯಮಿಕ ಶಿಕ್ಷಣ ಸಮೀಪದ ಹಳೇಕೋಟೆಯಲ್ಲೂ ನಡೆಯಿತು. ಸಾಮಾನ್ಯ ಕೃಷಿ ಕುಟುಂಬದಲ್ಲಿ ಹುಟ್ಟಿದ ಇವರು ಬಾಲ್ಯದಿಂದಲೂ ದನ ಮೇಯಿಸುವ ಕೆಲಸದಿಂದ ಹಿಡಿದು ಬೇಸಾಯದ ಕೆಲಸದವರೆಗೆ ತಮ್ಮ ಕುಲಕಸಬಿನ ಅನುಭವ ಪಡೆದರು. ಪ್ರೌಢಶಾಲಾ ಅಭ್ಯಾಸಕ್ಕಾಗಿ ಹೊಳೆನರಸೀಪುರಕ್ಕೆ ಬಂದರು. ಆಗ ಸ್ವಾತಂತ್ರ್ಯ ಚಳವಳಿ ಬಿರುಸಾಗಿ ಸಾಗಿದ್ದ ಕಾಲ. ಮೆರವಣಿಗೆಗಳಲ್ಲಿ ಬಾವುಟವಿಡಿದು ಚಳವಳಿಯಲ್ಲಿ ಪಾಲ್ಗೊಂಡರು. ವೃತ್ತಿ ಶಿಕ್ಷಣ ಪಡೆದು ಸ್ವತಂತ್ರ ಜೀವನ ನಡೆಸಬೇಕೆಂಬ ಹಂಬಲದಿಂದ ಹಾಸನದ ಪಾಲಿಟೆಕ್ನಿಕ್‌ನಲ್ಲಿ ಸಿವಿಲ್‌ಎಂಜಿನಿಯರಿಂಗ್ ಡಿಪ್ಲೊಮಾ ಶಿಕ್ಷಣ ಮುಗಿಸಿದರು (1953). ಆ ಹೊತ್ತಿಗೆ ಇವರಿಗೆ ಸರ್ಕಾರಿ ನೌಕರಿ ದೊರಕಿಸಿಕೊಳ್ಳುವುದು ಕಷ್ಟವಾಗಿರಲಿಲ್ಲ. ಆದರೆ ಅದಕ್ಕೆ ಮನಸ್ಸು ಕೊಡದೆ ಗುತ್ತಿಗೆ ಕಾಮಗಾರಿಗಳನ್ನು ಮಾಡಿಸುತ್ತ ಸಾರ್ವಜನಿಕ ಜೀವನದ ಪರಿಚಯ ಮಾಡಿಕೊಂಡರು. ಇದೇ ಅವಧಿಯಲ್ಲಿ ಹಾಸನ ತಾಲ್ಲೂಕು ಮುತ್ತಿಗೆಹಳ್ಳಿ ಪಟೇಲ್ ದೇವೇಗೌಡರ ಮಗಳು ಚೆನ್ನಮ್ಮನವರನ್ನು ಮದುವೆಯಾದರು (1954).

ಸ್ವಾತಂತ್ರ್ಯ ಚಳವಳಿಯ ಕಾಲದಿಂದಲೂ ತಮಗೆ ಆದರ್ಶವಾಗಿದ್ದ ಎ.ಜಿ. ರಾಮಚಂದ್ರರಾಯರ ಅನುಯಾಯಿಗಳಾದರು. ಆಗ

ರಾಮಚಂದ್ರರಾಯರು ರಾಜ್ಯ ಸಚಿವ ಸಂಪುಟದ ಸದಸ್ಯರಾಗಿದ್ದು ಇವರನ್ನು ಪ್ರೋತ್ಸಾಹಿಸಿದರು. 1960ರಲ್ಲಿ ಗೌಡರು ತಾಲ್ಲೂಕು ಅಭಿವೃದ್ಧಿ ಮಂಡಳಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಜಯ ಪಡೆದರು (1960). 1962ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ರಾಮಚಂದ್ರ ರಾಯರ ಬೆಂಬಲದಿಂದ ವಿಧಾನಸಭೆಗೆ ಕಾಂಗ್ರೆಸ್ ಟಿಕೆಟ್ ಪಡೆಯಲು ಪ್ರಯತ್ನಿಸಿದರೂ ಸಫಲರಾಗಲಿಲ್ಲ. ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚುನಾಯಿತರಾದರು. 1967ರ ಚುನಾವಣೆಯಲ್ಲಿ ಸ್ವತಂತ್ರರಾಗಿ ಸ್ಪರ್ಧಿಸಿ ವಿಧಾನಸಭೆಗೆ ಮರು ಆಯ್ಕೆಯಾದರು. ನೀರಾವರಿ ಸೌಲಭ್ಯ ಒದಗಿಸಿದಾಗಲೇ ರೈತರ ಮತ್ತು ಗ್ರಾಮೀಣ ಜೀವನದ ಪ್ರಗತಿ ಸಾಧ್ಯವೆಂದು ನಂಬಿದ್ದ ಇವರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಿದರು. ಹೇಮಾವತಿ ಜಲಾಶಯ ನಿರ್ಮಾಣಕ್ಕೆ ಸರ್ಕಾರವನ್ನು ಒಡಂಬಡಿಸಿದರು. ಆಗ ಮುಖ್ಯಮಂತ್ರಿಗಳಾಗಿದ್ದ ಡಿ. ವೀರೇಂದ್ರ ಪಾಟೀಲರು ಇವರನ್ನು ಕಾಂಗ್ರೆಸ್ ಪಕ್ಷದ ತೆಕ್ಕೆಗೆ ತೆಗೆದುಕೊಂಡು ಇವರಿಗೆ ಹೊಸ ರಾಜಕೀಯ ಆಯಾಮ ನೀಡಿದರು. ವಿಧಾನಸಭೆಯ ಒಳಹೊರಗೆ ಗೌಡರು ರೈತಪರ ಮತ್ತು ಗ್ರಾಮೀಣ ಜನರ ಹೋರಾಟ ನಡೆಸಿದರು. ಕಾಂಗ್ರೆಸ್ ಪಕ್ಷ ಇಬ್ಭಾಗವಾದಾಗ ಇವರು ಎಸ್. ನಿಜಲಿಂಗಪ್ಪನವರ ನೇತೃತ್ವದ ಸಂಸ್ಥಾ ಕಾಂಗ್ರೆಸ್ಸನ್ನು ಬೆಂಬಲಿಸಿದರು.



ಇಂದಿರಾಗಾಂಧಿಯವರ ನೇತೃತ್ವದ ಆಡಳಿತ ಕಾಂಗ್ರೆಸ್ 1971ರ ಲೋಕಸಭಾ ಚುನಾವಣೆಯಲ್ಲಿ ಪ್ರಚಂಡ ಬಹುಮತ ಗಳಿಸಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. 1972ರಲ್ಲಿ ನಡೆದ ವಿಧಾನಸಭಾ ಚುನಾವಣೆಗೆ ಆಡಳಿತ ಕಾಂಗ್ರೆಸ್ ವಿರುದ್ಧ ಸ್ಪರ್ಧಿಸಲು ವಿರೋಧ ಪಕ್ಷಗಳ ರಾಜಕೀಯ ಮುಖಂಡರು ಹಿಂಜರಿಯುವ ಸ್ಥಿತಿ ನಿರ್ಮಾಣವಾಯಿತು. ಇಂಥ ರಾಜಕೀಯ ಬಿರುಗಾಳಿಯ ವಿರುದ್ಧ ಸ್ಪರ್ಧಿಸಿದ ದೇವೇಗೌಡರು ಹೊಳೇನರಸೀಪುರ ಕ್ಷೇತ್ರದಿಂದ ಚುನಾಯಿತರಾದರು. 1975ರಲ್ಲಿ ಭಾರತದಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ ಅದರ ವಿರುದ್ಧ ಪ್ರತಿಭಟಿಸಿ ಗೌಡರು ಸೆರೆವಾಸ ಅನುಭವಿಸಿದರು. ಅನಂತರ 1977ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸೋತರೂ ರಾಜ್ಯದಲ್ಲಿ ಸಾಕಷ್ಟು ಅಧಿಕ ಸ್ಥಾನಗಳಲ್ಲಿ ಗೆಲವು ಸಾಧಿಸಿತು. ಆಗ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸರ ಪ್ರಗತಿಪರ ಕಾರ್ಯಗಳು ರಾಜ್ಯದಲ್ಲಿ ಕಾಂಗ್ರೆಸ್ ಜನಪ್ರಿಯವಾಗಲು ಕಾರಣವಾಗಿದ್ದವು. 1978ರ ವಿಧಾನಸಭಾ ಚುನಾವಣೆಯ ಕಾಲಕ್ಕೆ ಅಸ್ತಿತ್ವಕ್ಕೆ ಬಂದಿದ್ದ ಜನತಾ ಪಕ್ಷದ ರಾಜ್ಯಮಟ್ಟದ ಅಧ್ಯಕ್ಷ ಸ್ಥಾನಕ್ಕೆ ದೇವೇಗೌಡರೇ ಆಯ್ಕೆಯಾದರು. ಇವರು ಚುನಾವಣೆಯನ್ನು ಎದುರಿಸಿ, ತಾವೂ ಚುನಾಯಿತರಾಗಿ ಪಕ್ಷಕ್ಕೆ 65 ಸ್ಥಾನಗಳನ್ನು ಗಳಿಸಿ ಕೊಟ್ಟರು. ಆಗ ಆಡಳಿತ ಪಕ್ಷದೊಂದಿಗೆ ತೀವ್ರ ನಿಷ್ಠುರ ಕಟ್ಟಿಕೊಳ್ಳದೆ ತಮ್ಮ ಕ್ಷೇತ್ರದ, ಜಿಲ್ಲೆಯ ಮತ್ತು ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಕಾರ್ಯನೀತಿ ಅನುಸರಿಸಿದರು.

1983ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತು ಜನತಾ ಪಕ್ಷ ಮತ್ತು ಕ್ರಾಂತಿರಂಗಗಳ ಒಕ್ಕೂಟದ ಇನ್ನಿತರರ ಬೆಂಬಲದೊಂದಿಗೆ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂತು. ಆಗ ಮುಖ್ಯಮಂತ್ರಿ ಸ್ಥಾನದಿಂದ ಸ್ವಲ್ಪದರಲ್ಲಿ ವಂಚಿತರಾದ ಗೌಡರು ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಸಚಿವರಾದರು. ಆಗ ನೀರಾವರಿ ಕಾಮಗಾರಿಗಳು ಮತ್ತು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡಿದರು. 1985ರಲ್ಲಿ ಉಪಚುನಾವಣೆ ನಡೆದು ಜನತಾ ಪಕ್ಷ ಪೂರ್ಣ ಬಹುಮತದಿಂದ ಅಧಿಕಾರಕ್ಕೆ ಬಂದಾಗಲೂ ಗೌಡರು ಇದೇ ಖಾತೆಗಳಲ್ಲಿ ಮುಂದುವರಿದರು. ಹೇಮಾವತಿ ಜಲಾಶಯದ ನಾಲೆಗಳ ನಿರ್ಮಾಣದ ಕಾರ್ಯ ಇವರ ಕಾಲದಲ್ಲಿ ತ್ವರಿತಗೊಂಡಿತು. ಜನತಾ ದಳ ಪಕ್ಷದಲ್ಲಿ ಆಂತರಿಕ ಒಡಕುಂಟಾಗಿ ಎರಡು ಬಣಗಳಾಗಿ 1989ರ ವಿಧಾನಸಭಾ ಚುನಾವಣೆಯನ್ನು ಎದುರಿಸಬೇಕಾಯಿತು. ಆಗ ಎಲ್ಲರಿಗೂ ಆಘಾತಕರವಾಗುವ ಫಲಿತಾಂಶಗಳು ಬಂದವು. ಗೌಡರೂ ಅದಕ್ಕೆ ಹೊರತಾಗಲಿಲ್ಲ. ಇವರು ಸಮಾಜವಾದಿ ಜನತಾ ದಳದ ನೇತಾರರಾಗಿ ಮುಂದುವರಿದರು. ತರುವಾಯ 1991ರಲ್ಲಿ ನಡೆದ ಹಾಸನ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎರಡೂ ಬಣಗಳ ಬೆಂಬಲದಿಂದ ಸ್ಪರ್ಧಿಸಿದ ಗೌಡರು ಲೋಕಸಭೆ ಪ್ರವೇಶಿಸಿದರು. ಲೋಕಸಭೆಯಲ್ಲಿ ಇವರು ನೀರಾವರಿ ಮತ್ತು ಗ್ರಾಮೀಣ ಸಮಸ್ಯೆಗಳ ಬಗ್ಗೆ ಸರ್ಕಾರ ಮತ್ತು ಇತರ ಸದಸ್ಯರ ಗಮನ ಸೆಳೆದರು.

1993ರಲ್ಲಿ ಮತ್ತೆ ಎರಡೂ ಬಣಗಳೂ ಒಂದಾದವು. ಆಗ ಇವರು ರಾಜ್ಯ ಜನತಾ ದಳದ ಅಧ್ಯಕ್ಷರಾದರು. ಇವರ ನೇತೃತ್ವದಲ್ಲಿ 1994ರ ವಿಧಾನಸಭಾ ಚುನಾವಣೆಯಲ್ಲಿ ಇವರ ಪಕ್ಷ 116 ಸ್ಥಾನಗಳನ್ನು ಪಡೆಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾದ ಗೌಡರು ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಮುಖ್ಯಮಂತ್ರಿಯಾಗಿ ಸಮಸ್ಯೆಗಳ ಪರಿಹಾರಕ್ಕೆ ತಾವೇ ಜನತೆಯ ಬಳಿಗೆ ಹೋದರು. ಈ ಕಾರ್ಯಕ್ರಮ ಜನತಾ ದರ್ಶನವೆಂದು ಜನಪ್ರಿಯವಾಯಿತು. ಗೌಡರು ತಮ್ಮ ಅಧಿಕಾರಾವಧಿಯಲ್ಲಿ ಅನೇಕ ಪ್ರಗತಿಪರ ಕಾರ್ಯಗಳನ್ನು ಆಗಮಾಡಿದರು. ಕಗ್ಗಂಟಾಗಿದ್ದ ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದವನ್ನು ಬಗೆಹರಿಸಿ ಕೋಮು ಸೌಹಾರ್ದ ಸಾಧಿಸಿದ ಕೀರ್ತಿಗೆ ಪಾತ್ರರಾದರು (1995). ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಮೊರಾರ್ಜಿ ವಸತಿ ಶಾಲೆಗಳ ಸ್ಥಾಪನೆಗೆ ಪ್ರಾಶಸ್ತ್ಯ ನೀಡಲಾಯಿತು. ರೈತರ ಸುಸ್ತಿ ಬಡ್ಡಿ ಮನ್ನಾಕ್ಕೆ ಕ್ರಮ ಕೈಗೊಳ್ಳಲಾಯಿತು. ಅನೇಕ ವಿದ್ಯುತ್ ಉತ್ಪಾದನಾ ಘಟಕಗಳು ಅನುಷ್ಠಾನಗೊಳ್ಳತೊಡಗಿದವು. ಹಾಸನ ನಗರದ ಕೈಗಾರಿಕಾಭಿವೃದ್ಧಿ ಪ್ರದೇಶ ಹೆಚ್ಚಿನ ಉತ್ತೇಜನ ಪಡೆಯಿತು. ವೈಟ್‌ಫೀಲ್ಡ್‌ನಲ್ಲಿ ಕಂಪ್ಯೂಟರ್ ಉದ್ಯಮ ಜಾಲ ನಿರ್ಮಿಸಲು ಯೋಜನೆ ಸಿದ್ಧವಾಯಿತು. ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರು ಆರ್ಥಿಕ ಉದಾರೀಕರಣದ

ಬಗ್ಗೆ ಹೆಚ್ಚಿನ ಒಲವು ತೋರಿದ್ದರು. ಅದಕ್ಕೆ ಪೂರಕವಾಗಿ ಗೌಡರು ದಾವೊಸ್‌ಗೆ ತೆರಳಿ ಅಂತಾರಾಷ್ಟ್ರೀಯ ಮುಕ್ತ ವಾಣಿಜ್ಯ ಸಮ್ಮೇಳನದಲ್ಲಿ ಭಾಗವಹಿಸಿ ಜಾಗತೀಕರಣ ಪ್ರಕ್ರಿಯೆಗೆ ಬೆಂಬಲ ಸೂಚಿಸಿದರು. ಕೃಷಿ ಕ್ಷೇತ್ರವೂ ಉದ್ಯಮದಂತೆ ಬೆಳೆಯಬೇಕೆಂದು ಅನೇಕ ಭೂಮಿತಿ ನಿರ್ಬಂಧಗಳನ್ನು ಸಡಿಲಗೊಳಿಸಿದರು.

ಹೀಗಿರುವಲ್ಲಿ 1996ರ ಲೋಕಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬರಲಿಲ್ಲ. ಬಿಜೆಪಿಪಕ್ಷ ಸರ್ಕಾರ ರಚಿಸಿದರೂ ಬಹುಮತ ದೊರೆಯಲಿಲ್ಲ. ಆಗ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಂದ ಹೊರತಾದ ತೃತೀಯ ರಂಗದ ಪಕ್ಷಗಳ ಸದಸ್ಯರು ಗಣನೀಯ ಸಂಖ್ಯೆಯಲ್ಲಿ ಲೋಕಸಭೆಗೆ ಆರಿಸಿ ಬಂದಿದ್ದರು. ಈ ಹದಿಮೂರು ತುಂಡು ಪಕ್ಷಗಳಿಗೆ ಒಕ್ಕೂಟದ ಒಬ್ಬ ನಾಯಕನನ್ನು ಆರಿಸುವುದು ಪ್ರಯಾಸದ ಕೆಲಸವಾಗಿತ್ತು. ಅಂತಿಮವಾಗಿ ದೇವೇಗೌಡರು ಆಯ್ಕೆಯಾದರು. 1996 ಜೂನ್ 1ರಂದು ರಾಷ್ಟ್ರದ 12ನೆಯ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಇವರಿಗೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಬೆಂಬಲ ನೀಡಿತು. ಇವರು ತಮ್ಮ ಸುಮಾರು ಹನ್ನೊಂದು ತಿಂಗಳ ಅಧಿಕಾರಾವಧಿಯಲ್ಲಿ ಜನತೆಯ ಹಿತ್ತಿರಕ್ಕೆ ಅಧಿಕಾರ ವನ್ನು ಕೊಂಡೊಯ್ಯಲು ಸಾಧ್ಯವಿದ್ದಷ್ಟು ಪ್ರಯತ್ನಿಸಿದರು. ವಿದೇಶಗಳಿಗೆ ಭೇಟಿ ನೀಡಿ ಅನೇಕ ವಿಚಾರಗಳಲ್ಲಿ ಭಾರತದ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಿದರು. ತಮ್ಮ ಪಾರಂಪರಿಕ ಉಡುಪಿನಲ್ಲೇ ಪ್ರಪಂಚಪರ್ಯಟನೆ ಮಾಡಿ ದೇಸೀಯತೆಯನ್ನು ಮೆರೆದರು. ಸಮಸ್ಯೆಗಳ ಆಗರವಾದ ಜಮ್ಮು ಕಾಶ್ಮೀರ ಮತ್ತು ವಾಯವ್ಯ ಸರಹದ್ದಿಗೆ ಭೇಟಿ ನೀಡಲೂ ಹಿಂಜರಿಯುತ್ತಿದ್ದ ಪ್ರದೇಶಗಳಿಗೆ ಭೇಟಿ ನೀಡಿ ದಾಖಲೆ ಸ್ಥಾಪಿಸಿದರು. ನೈಋತ್ಯ ರೈಲ್ವೆ ವಿಭಾಗ ರಚಿಸಿ ಕರ್ನಾಟಕದ ರೈಲು ವ್ಯವಸ್ಥೆಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿದರು. ಕೃಷ್ಣಾ ಮೇಲ್ದಂಡೆ ಯೋಜನೆಗೆ ದೊಡ್ಡ ಮೊತ್ತದ ಹಣ ಬಿಡುಗಡೆ ಮಾಡಿದರು. ಭದ್ರಾವತಿ ಉಕ್ಕಿನ ಕಾರ್ಖಾನೆಯನ್ನು ಭಾರತದ ಉಕ್ಕು ಪ್ರಾಧಿಕಾರಕ್ಕೆ ವಹಿಸಿ ಅದಕ್ಕೆ ಪುನಶ್ಚೇತನ ನೀಡಿದರು. ಆದರೆ ಕಾಂಗ್ರೆಸ್ ಪಕ್ಷ ಇವರ ನಾಯಕತ್ವಕ್ಕೆ ತನ್ನ ಬೆಂಬಲ ಹಿಂದಕ್ಕೆ ಪಡೆದದ್ದ ರಿಂದ ಇವರು ಪ್ರಧಾನಿ ಹುದ್ದೆಯನ್ನು ತೊರೆಯಬೇಕಾಯಿತು. ಲೋಕಸಭೆ ಯಲ್ಲಿ ಇವರ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಯಿತು. ಇದರ ಚರ್ಚೆಯ ಕಾಲದಲ್ಲಿ 1997 ಏಪ್ರಿಲ್ 11ರಂದು ದೇವೇಗೌಡರು ಮಾಡಿದ ಭಾಷಣ ಅತ್ಯಂತ ನಿರ್ಭೀತವೂ ಆತ್ಮವಿಶ್ವಾಸ ದಿಂದ ಕೂಡಿದುದೂ ಆಗಿತ್ತು. ಈ ಭಾಷಣ ಶ್ಲಾಘನೆಗೆ ಪಾತ್ರವಾಯಿತು.

ಅನಂತರ ಇವರು 1997ರಲ್ಲಿ ನಡೆಯ ಲೋಕಸಭೆ ಮಧ್ಯಂತರ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ ಸ್ಪರ್ಧಿಸಿ ಮರು ಆಯ್ಕೆಗೊಂಡರು. ಈ ಸಂದರ್ಭದಲ್ಲಿ ಬಿಜೆಪಿ ಪಕ್ಷ ತನ್ನ ಮಿತ್ರಪಕ್ಷಗಳ ಬೆಂಬಲದಿಂದ ಕೇಂದ್ರದಲ್ಲಿ ಸರ್ಕಾರ ರಚಿಸಿತು. ಅನಂತರ ನಡೆದ ಲೋಕಸಭಾ ಚುನಾವಣೆ ಯಲ್ಲಿ (1999) ಗೌಡರೂ ಸೇರಿದಂತೆ ಇವರ ಜಾತ್ಯಾತೀತ ಜನತಾ ದಳ ಪಕ್ಷ ಹಿಂದೆ ಬಿತ್ತು. ಆದರೆ ದೇವೇಗೌಡರು ಎದೆಗುಂದದೆ ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಮುಂದುವರಿದರು. ಕನಕಪುರ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ (2002) ಇವರು ಲೋಕಸಭೆಗೆ ಚುನಾಯಿತರಾದರು. 2004ರಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ ನಡೆದಾಗ ಇವರ ಪಕ್ಷ ಕರ್ನಾಟಕದೆರಡು ಸ್ಥಾನಗಳೂ ಸೇರಿದಂತೆ ಒಟ್ಟು ನಾಲ್ಕು ಸ್ಥಾನಗಳನ್ನು ಲೋಕಸಭೆಯಲ್ಲಿ ಪಡೆಯಿತು. ವಿಧಾನ ಸಭೆಯಲ್ಲಿ 58 ಸ್ಥಾನಗಳನ್ನು ಪಡೆಯಿತು. ಹಾಸನ ಕ್ಷೇತ್ರದಿಂದ ಗೌಡರು ಲೋಕಸಭೆಗೆ ಚುನಾಯಿತರಾದರು. ದೇವೇಗೌಡರ ನೇತೃತ್ವದ ಜಾತ್ಯಾತೀತ ಪಕ್ಷ ಕಾಂಗ್ರೆಸ್‌ನೊಂದಿಗೆ ಸೇರಿ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರವನ್ನು ರಚಿಸಿತು.

ದೇವೇಗೌಡರು ವೃತ್ತಿ ರಾಜಕಾರಣಿ. ಇವರ ಬದುಕು ರಾಜಕೀಯ ದೊಂದಿಗೆ ಬೆಸೆದುಕೊಂಡಿದೆ. ಇವರ ಇಬ್ಬರು ಪುತ್ರರಾದ ಎಚ್.ಡಿ. ರೇವಣ್ಣ ಮತ್ತು ಎಚ್.ಡಿ. ಕುಮಾರಸ್ವಾಮಿ ಶಾಸಕರಾಗಿ ವಿಧಾನ ಸಭೆ ಪ್ರವೇಶಿಸಿದ್ದಾರೆ. ಕುಮಾರಸ್ವಾಮಿಯವರು ಲೋಕಸಭಾ ಸದಸ್ಯರೂ ಆಗಿದ್ದರು. ಪ್ರಸ್ತುತ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ (2006–07). ರೇವಣ್ಣನವರು ಎರಡನೆಯ ಬಾರಿಗೆ ರಾಜ್ಯದಲ್ಲಿ ಸಚಿವರಾಗಿದ್ದಾರೆ. ದೇವೇಗೌಡರು ಈಗಲೂ ರಾಷ್ಟ್ರ ರಾಜಕಾರಣದಲ್ಲಿ ಗುರುತಿಸಬಹುದಾದ ಶಕ್ತಿಯಾಗಿದ್ದಾರೆ. ರಾಮಕೃಷ್ಣ ಹೆಗ್ಗಡೆಯವರನ್ನು ಬಿಟ್ಟರೆ ಇದುವರೆಗೂ ಇತರರಿಗೆ ಸಾಧ್ಯವಾಗಿರದ ವ್ಯಕ್ತಿಪ್ರಧಾನ ನೆಲೆಯಲ್ಲಿ ಪಕ್ಷದ ಸಂಘಟನೆ ಮಾಡಿದ ಹೆಗ್ಗಳಿಕೆ ಗೌಡರಿಗೆ ಸಲ್ಲುತ್ತದೆ. ಕರ್ನಾಟಕ ಕಂಡ ಅಪರೂಪದ ರಾಜಕಾರಣಿಗಳ ಸಾಲಿನಲ್ಲಿ ದೇವೇಗೌಡರ ಹೆಸರು ಅಗ್ರಪಂಕ್ತಿಯದು. **(ಡಿ.ಎಸ್.ಜಿ.)**

**ದೇಶಪಾಂಡೆ, ರಾಮಚಂದ್ರ ಹಣಮಂತರಾವ್:** 1861– 1931. ಶಿಕ್ಷಣವೇತ್ತ, ಗ್ರಂಥಕರ್ತ ಮತ್ತು ಕನ್ನಡ ಚಳವಳಿಯ ಸಂಘಟಕ.

ಇವರು ಧಾರವಾಡ ಜಿಲ್ಲೆ ನರೇಂದ್ರದಲ್ಲಿ 1861 ಮಾರ್ಚ್ 21ರಂದು ಜನಿಸಿದರು. ತಂದೆ ಶ್ರೀಮಂತ ಮನೆತನದ ಹಣಮಂತರಾವ್ ದೇಶಪಾಂಡೆ, ಪ್ರತಿಭಾಶಾಲಿ ವಿದ್ಯಾರ್ಥಿಯೆನಿಸಿ ಧಾರವಾಡ, ಪುಣೆಗಳಲ್ಲಿ ಓದಿ ಶ್ರೇಷ್ಠ ದರ್ಜೆಯಲ್ಲಿ ಎಂ.ಎ. ಪಾಸಾದರು. ಅಲ್ಲಿ ರಾಬರ್ಟ್‌ಸನ್ ಸುವರ್ಣ ಪದಕ ಮತ್ತು 1000 ರೂಪಾಯಿ ಬಹುಮಾನ ಪಡೆದರು. ಮುಂಬಯಿ

ಕರ್ನಾಟಕ ಭಾಗದಿಂದ ಎಂ.ಎ. ಮಾಡಿದವರಲ್ಲಿ ಮೊದಲಿಗರಾದ್ದರಿಂದ ಇವರಿಗೆ ಎಂ.ಎ. ದೇಶ ಪಾಂಡೆ ಎಂಬ ಅಡ್ಡಹೆಸರೂ ಬಿದ್ದಿತ್ತು. ಕಾನೂನು ಪದವಿಗಾಗಿ ಮುಂದೆ ಓದಬೇಕೆಂದಿದ್ದ ಇವರು ರಸೆಲ್ ಎಂಬ ಶಿಕ್ಷಣಾಧಿ ಕಾರಿಯ ಪ್ರೇರಣೆಯಿಂದ ಅದನ್ನು ಬಿಟ್ಟು, ಶಿಕ್ಷಣ ವಿಚಾರದಲ್ಲಿ ಹಿಂದೆ ಬಿದ್ದಿದ್ದ ಕನ್ನಡ ಪ್ರದೇಶದಲ್ಲಿ ಸೇವೆ ಸಲ್ಲಿಸುವ ಧ್ಯೇಯಕ್ಕಾಗಿ ಮುಂಬಯಿ ಸರ್ಕಾರದ ವಿದ್ಯಾ ಇಲಾಖೆ ಸೇರಿದರಲ್ಲದೆ ಬೆಳಗಾಂವಿ, ಕಾರವಾರ, ಧಾರವಾಡಗಳಲ್ಲಿ ಪ್ರೌಢಶಾಲೆಯ ಉಪಾಧ್ಯಾಯರಾಗಿ ಅನಂತರ ಡೆಪ್ಯುಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್, ಮುಖ್ಯೋಪಾಧ್ಯಾಯ, ಶಿಕ್ಷಣ ಕಾಲೇಜು ಅಧ್ಯಾಪಕ ಮೊದಲಾದ ಹುದ್ದೆಗಳನ್ನು ನಿರ್ವಹಿಸಿ 1914ರಲ್ಲಿ ವಿಶ್ರಾಂತರಾದರು.

ದೇಶಪಾಂಡೆಯವರು ಕನ್ನಡಾಭಿಮಾನಗಳಾಗಿದ್ದು ಉತ್ತರ ಕರ್ನಾಟಕ ಭಾಗದಲ್ಲಿ ಕನ್ನಡ ಮತ್ತು ಕನ್ನಡಿಗರ ಹಕ್ಕು ಮತ್ತು ಅಭ್ಯುದಯಕ್ಕಾಗಿ ದುಡಿದ ಮೊದಲಿಗರಲ್ಲಿ ಒಬ್ಬರು. ಮರಾಠಿ ಪ್ರಭಾವ ಪ್ರಬಲವಾಗಿದ್ದು, ಕನ್ನಡ ಅಸಡ್ಡೆಗೊಳಗಾಗಿದ್ದ ಆ ಕಾಲದಲ್ಲಿ ಕನ್ನಡಿಗರಲ್ಲಿ ಸ್ವಾಭಿಮಾನ ವನ್ನೂ ಜಾಗೃತಿಯನ್ನೂ ಉಂಟುಮಾಡಲು ಇವರು ಜೀವಮಾನವೆಲ್ಲ ಶ್ರಮಿಸಿದರು. ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಆಸ್ಥೆಯುಂಟು ಮಾಡಲು ಯತ್ನಿಸಿದರು. ಧಾರವಾಡದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಕನ್ನಡ ವಕ್ತೃತ್ವ ಸ್ಪರ್ಧೆಯನ್ನು ಪ್ರಥಮವಾಗಿ ಯೋಜಿಯಲು ಇವರು ಸ್ವತಃ ಬಹುಮಾನಗಳನ್ನು ನೀಡಿದರು. ಮುದವೀಡು ಕೃಷ್ಣರಾಯರಂಥ ವಾಗ್ಮಿಗಳು ಇವರ ನೇತೃತ್ವದಲ್ಲಿ ತರಬೇತಿ ಪಡೆದರು. ಕನ್ನಡ ಕಾದಂಬರಿ ಕಾರ ಗಳಗನಾಥರಿಗೆ ತಮ್ಮ ಮನೆಯಲ್ಲಿ ಇವರು ಅನುಕೂಲ ಮಾಡಿಕೊಟ್ಟು ಪುಸ್ತಕ ಬರೆಯಲು ನೆರವಾದರಲ್ಲದೆ, ಅವರ ಪ್ರಬುದ್ಧ ಪದ್ಮನಯನೆ ಕಾದಂಬರಿಯನ್ನು ವಾಗ್ಭೂಷಣ ಪತ್ರಿಕೆಯಲ್ಲಿ ಪ್ರಕಟಿಸಲು ಕಾರಣರಾದರು.

ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು (ನೋಡಿ) ಸ್ಥಾಪಿಸುವಲ್ಲಿ 1890 ಇವರ ಪಾತ್ರ ಪ್ರಮುಖವಾಗಿತ್ತು. ಕನ್ನಡ ಭಾಷೆಯ ದೀನಸ್ಥಿತಿಯನ್ನು ದೂರಮಾಡುವುದಕ್ಕಾಗಿ ಸ್ಥಾಪಿಸಲಾದ ಈ ಸಂಘದ ಗೌರವ ಕಾರ್ಯದರ್ಶಿಯಾಗಿ ಏಳು ವರ್ಷ (1890– 95 ಮತ್ತು 1897) ಮತ್ತು ಉಪಾಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮೂರು ಮೂರು ವರ್ಷ ಕೆಲಸ ಮಾಡಿದ ಇವರು ಅದರ ಮುಖ್ಯ ಚಾಲಕಶಕ್ತಿಯಾಗಿದ್ದರು. ಮುಂಬಯಿ ಕರ್ನಾಟಕ ಶಾಲೆಗಳಲ್ಲಿ ಮರಾಠಿಯ ಬದಲು ಕನ್ನಡಕ್ಕೆ ಸ್ಥಾನ ದೊರಕಿಸುವುದು, ಬ್ರಿಟಿಷ್ ಮತ್ತು ಸಂಸ್ಥಾನಿಕ ಕರ್ನಾಟಕ ಭಾಗಗಳ ಸಾಂಸ್ಕೃತಿಕ ಒಕ್ಕಟ್ಟು, ಲಿಖಿತ ಭಾಷೆಯ ಏಕರೂಪತೆ ಮೊದಲಾದ ಧ್ಯೇಯಗಳಿಗಾಗಿ ಸಂಘದ ಮೂಲಕ ದುಡಿದರು. ಸಂಘಕ್ಕೆ ನಾಡಿನ ಪ್ರಭಾವಶಾಲಿ ವ್ಯಕ್ತಿಗಳನ್ನು, ಆಕರ್ಷಿಸಿದರು. ಕನ್ನಡಕ್ಕಾಗಿ ದುಡಿದ ಕಿಟ್ಟೆಲ್, ಬಿ.ಎಲ್. ರೈಸ್, ಜೀಗ್ಲರ್, ಜಾರ್ಡಿನ್, ಮ್ಯೂರ್ ಮೊದಲಾದ ವಿದೇಶೀಯರ ಸಹಕಾರವನ್ನು ಸಂಘಕ್ಕೆ ದೊರಕಿಸುವಲ್ಲಿ ಯಶಸ್ವಿಯಾದರು.

ಸರ್ಕಾರಿ ಸೇವೆಯಲ್ಲಿರುವಾಗಲೇ ಇವರು ಕನ್ನಡದಲ್ಲಿ ಗ್ರಂಥರಚನೆ ಮಾಡತೊಡಗಿದ್ದರು. ನಿವೃತ್ತರಾದ ಮೇಲೆ, ಆಗ ಮೈಸೂರು ದಿವಾನರಾಗಿದ್ದ ವಿಶ್ವೇಶ್ವರಯ್ಯನವರಿಂದ ಅಲ್ಲಿನ ಶಿಕ್ಷಣಶಾಖೆ ಸೇರಲು ಕರೆ ಬಂದಿದ್ದರೂ ಅದಕ್ಕೆ ಒಪ್ಪದೆ ಕನ್ನಡ ಗ್ರಂಥ ರಚನೆಗೇ ತಮ್ಮ ಸಮಯವನ್ನು ಮೀಸಲಿರಿಸಿದರು. ಇವರು ಕನ್ನಡದಲ್ಲಿ ಬರೆದ 30 ಗ್ರಂಥಗಳಲ್ಲಿ ಇತಿಹಾಸ, ಜೀವನ ಚರಿತ್ರೆಗಳಿಗೆ ಸಂಬಂಧಿಸಿದವೇ ಹೆಚ್ಚು. ಅವುಗಳಲ್ಲಿ ಕರ್ನಾಟಕ ಸಾಮ್ರಾಜ್ಯ ಎಂಬ ಮೂರು ಭಾಗಗಳ ಇತಿಹಾಸ ಪ್ರಮುಖವಾದದ್ದು. ಅದರ ಮೊದಲಿನ ಎರಡು ಭಾಗಗಳು ಬಾದಾಮಿ ಚಳುಕ್ಯರವರೆಗಿನ ಇತಿಹಾಸವನ್ನೊಳಗೊಂಡವು 1926ರಲ್ಲಿ ಪ್ರಕಟವಾದವು. ವಿಜಯನಗರ ಕಾಲದವರೆಗಿನ ಮೂರನೆಯ ಭಾಗ ಅಪ್ರಕಟಿತವಾಗಿ ಉಳಿಯಿತು. ಛತ್ರಪತಿ ಶಿವಾಜಿ ಮಹಾರಾಜ (1923), ಅಕಬರ ಚರಿತ್ರೆ, ಚೈತನ್ಯ ಚರಿತೆ, ಟಿಪ್ಪುಸುಲ್ತಾನನ ಚರಿತೆ, ರಣಜಿತಸಿಂಗನ ಚರಿತೆ ಮೊದಲಾದ ಅನೇಕ ಜೀವನಚರಿತ್ರೆಗಳನ್ನೂ ಒಂದೆರಡು ಪಠ್ಯಗಳನ್ನೂ ಇವರು ಬರೆದಿದ್ದರು. ಇವರ ಗ್ರಂಥಗಳ ಶೈಲಿಯಲ್ಲಿ ಕನ್ನಡಿಗರನ್ನು ಹುರಿದುಂಬಿಸುವ ಭಾವನಾಪರತೆ ಎದ್ದು ಕಾಣಿಸುತ್ತದೆ.

ಇವರು ನಿರ್ಭಯ ದೇಶಾಭಿಮಾನಿಗಳೂ ಆಗಿದ್ದರು. ಸ್ವಾತಂತ್ರ್ಯ ಚಳವಳಿ ಬಗ್ಗೆ ಇವರಿಗಿದ್ದ ಒಲವಿನ ವರದಿಗಳು ಸರ್ಕಾರಕ್ಕೆ ತಲುಪಿ ಇವರಿಗೆ ಸಿಗಬೇಕಾದ ಸ್ಥಾನಮಾನಗಳು ತಪ್ಪಿದವೆಂದು ಹೇಳಲಾಗಿದೆ. ಇವರು 1931 ಜೂನ್ 25ರಂದು ನಿಧನರಾದರು. *

**ದೇಶಬಂಧು[1]:** ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ದಿನ ಹಾಗೂ ವಾರ ಪತ್ರಿಕೆಗಳು. ದಿನಪತ್ರಿಕೆ ಕಿರೀಟ ಆಕಾರದ 4 ಪುಟಗಳನ್ನೂ ವಾರಪತ್ರಿಕೆ ಕಿರೀಟ 1:2 ಆಕಾರದ 10 ಪುಟಗಳನ್ನೂ ಒಳಗೊಂಡಿತ್ತು. ಸಿ. ಹಯವದನರಾಯರ ಪ್ರಧಾನ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಮೇ 1939ರಲ್ಲಿ ಪ್ರಕಟಣೆ ಆರಂಭವಾಯಿತು. ದಿನಪತ್ರಿಕೆಯ ಬಿಡಿ ಪ್ರತಿಯ ಬೆಲೆ ಒಂದು ಅಣೆ. ವಾರ ಪತ್ರಿಕೆಯ ಸಂಚಿಕೆಯ ಬೆಲೆ 1.5 ಅಣೆ. ಪತ್ರಿಕೆಯ ಒಡೆತನ ಮೈಸೂರು ನ್ಯೂಸ್‌ಪೇಪರ್ ಕಂಪೆನಿಯದಾಗಿತ್ತು. ಆಗಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಜರುಗುತ್ತಿದ್ದ ಚಳವಳಿಯ ಬಗ್ಗೆ ಮೈಸೂರು ಸರ್ಕಾರದ ನಿಲುವು ಧೋರಣೆಗಳಿಗೆ ಪ್ರಚಾರ ನೀಡುವುದೇ ಪತ್ರಿಕೆಗಳ ಮೂಲೋದ್ದೇಶವಾಗಿತ್ತು. ರಾಯಿಟರ್ ಮತ್ತು ಅಸೋಸಿಯೇಟೆಡ್ ಪ್ರೆಸ್ ಸಂಸ್ಥೆಗಳ ಸುದ್ದಿಗಳೂ ಜಿಲ್ಲಾ ಮತ್ತು ಸ್ಥಳೀಯ ವಾರ್ತೆಗಳೂ ದಿನಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು. ಮಿರ್ಜಾ ಎಂ. ಇಸ್ಮಾಯಿಲ್‌ರ ಸಂಸ್ಥಾನದ ದಿವಾನ್ ಹುದ್ದೆಗೆ ರಾಜೀನಾಮೆ ನೀಡಿದ ಮೇಲೆ ಪತ್ರಿಕೆಗೆ ಸರ್ಕಾರದ ಪ್ರೋತ್ಸಾಹ ಕಡಿಮೆಯಾಯಿತು. ಮಾಲೀಕ ವರ್ಗಕ್ಕೂ ಸಂಪಾದಕ ವರ್ಗಕ್ಕೂ ನಡುವೆ ಭಿನ್ನಾಭಿಪ್ರಾಯಗಳು ಉಂಟಾದುವು. 1942ರಲ್ಲಿ ಎನ್.ಎಸ್. ವೆಂಕೋಬರಾಯರು ಸಂಪಾದಕರಾದರು. ಆರ್ಥಿಕ ಮುಗ್ಗಟ್ಟಿ ನಿಂದಾಗಿ ಪತ್ರಿಕೆಯನ್ನು ನಡೆಸುವುದು ಕಷ್ಟವಾಯಿತು. 1943ರ ಸೆಪ್ಟೆಂಬರ್ ನಿಂದ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಲಾಗಿದೆಯೆಂದು ನ್ಯೂಸ್‌ಪೇಪರ್ ಕಂಪನಿ ತನ್ನ ಸಿಬ್ಬಂದಿಗೆ ತಿಳಿವಳಿಕೆ ನೀಡಿತು. ಪತ್ರಿಕೆಯ ಸಂಪಾದಕ ವರ್ಗದವರಲ್ಲೊಬ್ಬರಾಗಿದ್ದ ಬಿ.ಎಸ್. ವೆಂಕಟರಾಮ್ ಅವರು 1943ರ ಅಕ್ಟೋಬರ್ 1ರಿಂದ ದೇಶಬಂಧು ದಿನ ಮತ್ತು ವಾರಪತ್ರಿಕೆಗಳ ಸಂಪೂರ್ಣ ಒಡೆತನವನ್ನು ಪಡೆದುಕೊಂಡು ಅದನ್ನು ರಾಷ್ಟ್ರಸೇವೆಗೆ ಮುಡಿಪಾಗಿಟ್ಟರು. ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮತ್ತು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮೈಸೂರು ಕಾಂಗ್ರೆಸ್ ಹೂಡಿದ್ದ ಸತ್ಯಾಗ್ರಹ ಚಳವಳಿಗೆ ಈ ಪತ್ರಿಕೆಗಳು ಪೂರ್ಣ ಬೆಂಬಲ ನೀಡಿದವು.

1947ರಲ್ಲಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ಬಿರುಸಾದಾಗ ಈ ಚಳವಳಿಗೆ ಸಂಬಂಧಪಟ್ಟ ಯಾವುದೇ ಸುದ್ದಿಗಳನ್ನಾಗಲಿ ಭಾಷಣಗಳನ್ನಾಗಲಿ ಟೀಕೆಗಳನ್ನಾಗಲಿ ಸಂಸ್ಥಾನ ಸರ್ಕಾರದ ನ್ಯಾಯಾಂಗ ಶಾಖಾ ಕಾರ್ಯದರ್ಶಿಗಳ ಪರಿಶೀಲನೆಗೆ ಒಳಪಡಿಸದೆ ಪತ್ರಿಕೆಗಳು ಪ್ರಕಟಿಸಲಾಗದೆಂಬ ಆಜ್ಞೆ ಜಾರಿಯಾಯಿತು. ಇದರ ಬಗ್ಗೆ ಅಸಮಾಧಾನ ಗೊಂಡು ದೇಶಬಂಧು ಒಂದನ್ನುಳಿದು ಎಲ್ಲ ಕನ್ನಡ ಪತ್ರಿಕೆಗಳೂ ಪ್ರಕಟಣೆ ನಿಲ್ಲಿಸಿದುವು. ದೇಶಬಂಧು ಪತ್ರಿಕೆ ಪ್ರಕಟಣೆ ನಿಲ್ಲಿಸದೆ ಸತ್ಯಾಗ್ರಹದ ಸುದ್ದಿ ಟೀಕೆಗಳನ್ನು ಪ್ರಧಾನವಾಗಿ ಪ್ರಕಟಿಸುತ್ತಿತ್ತು. ಸರಸಣ್ಣನಿಂತೆಂದ ಎಂಬ ಶಿರೋನಾಮೆಯ ಸರಸ ಸರಣಿಯ ರಾಜಕೀಯ ಮಾರ್ಮಿಕ ಟೀಕೆಗಳು ಜನಪ್ರಿಯವಾದುವು. ಆಗ ಪತ್ರಿಕೆ ಕಾಗದದ ಕೋಟಾ ಕಳೆದು ಕೊಳ್ಳಬೇಕಾಯಿತು. ಹೆಚ್ಚು ಬೆಲೆ ಕೊಟ್ಟು ಕಾಗದ ಕೊಂಡು ಪ್ರಕಟಣೆ ಮುಂದುವರಿಸಬೇಕಾಯಿತು. ಕಾಗದದ ಕ್ಷಾಮ, ಆರ್ಥಿಕ ಕಷ್ಟನಷ್ಟಗಳನ್ನು ಎದುರಿಸಬೇಕಾಗಿ ಬಂದ ಈ ಪತ್ರಿಕೆಗಳು 1950ರ ಡಿಸೆಂಬರ್ ಅಂತ್ಯದವರೆಗೂ ಮುಂದುವರಿದು ಕೊನೆಗೆ ನಿಂತುಹೋದುವು. ಅನೇಕ ತರುಣರಿಗೆ ಈ ಪತ್ರಿಕೆಗಳು ಪತ್ರಿಕೋದ್ಯಮದ ಅನುಭವ ದೊರಕಿಸಿಕೊಟ್ಟುವು. *

**ದೇಶಬಂಧು[2]:** ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. 1928ರಲ್ಲಿ ಆರಂಭವಾಯಿತು. ಇದು ಇಂಗ್ಲಿಷ್ ಭಾಷೆಯಲ್ಲಿ ಹೊರಟ ಮಂಗಳೂರಿನ ಪ್ರಥಮ ಪತ್ರಿಕೆ. ಎಸ್. ಶಾಂತರಾಮ ಪೈ ಇದರ ಸಂಪಾದಕರು, ನಿವೃತ್ತ ಖಜಾನೆ ಡೆಪ್ಯುಟಿ ಕಲೆಕ್ಟರ್ ಎಚ್. ಸುಬ್ಬರಾವ್ ಖಜಾಂಚಿ, ಎಸ್. ವೆಂಕಟರಮಣ ಪೈ ಉಪಸಂಪಾದಕರು, ಎಡ್ವರ್ಡ್ ಡೇವಿಡ್ ಮತ್ತು ಎಸ್. ಗೋಪಾಲರಾವ್ ಕಾರ್ಯದರ್ಶಿಗಳು. ಡಿಮ್ಮೆ 1/8 ಆಕಾರದ ಪತ್ರಿಕೆಯ ಬಿಡಿ ಸಂಚಿಕೆಯ ಬೆಲೆ ಮೂರು ಆಣೆಗಳು. ವಾರ್ಷಿಕ ಚಂದಾ ಎರಡು ರೂಪಾಯಿಗಳು. ಜಾತಿ ಮತಭೇದವಿಲ್ಲದೆ ಧಾರ್ಮಿಕ ಮತ್ತು ಸಾಮಾಜಿಕ ಪ್ರಗತಿಗೆ ಮೀಸಲಾಗಿರಿಸಿದ ಪತ್ರಿಕೆಯೆಂದು ಪ್ರಥಮ ಸಂಚಿಕೆಯ ಕೊನೆಯ ಪುಟದಲ್ಲಿ ವಿವರಿಸಲಾಗಿತ್ತು. ದೇಶಭಕ್ತಿಯನ್ನೂ ರಾಷ್ಟ್ರ ಚೈತನ್ಯವನ್ನೂ ಪ್ರತಿಪಾದಿಸುತ್ತಿದ್ದ ಈ ಪತ್ರಿಕೆ ಎಷ್ಟು ಕಾಲ ಬಾಳಿತು ಎಂಬುದು ತಿಳಿಯುವುದಿಲ್ಲ. *

**ದೇಶಿಕಾಚಾರ್ಯ, ಹೆಮ್ಮಿಗೆ:** 1902– 66. ಕನ್ನಡ ಹಾಗೂ ಸಂಸ್ಕೃತ ವಿದ್ವಾಂಸರು. ತಿರುಮಕೂಡಲು ನರಸೀಪುರದ ಜೋಡಿ ಹೆಮ್ಮಿಗೆ ಅಗ್ರಹಾರದಲ್ಲಿ ಜನಿಸಿದರು. ತಂದೆ ಪಂಡಿತ ವೇದಾಂತ ಕೃಷ್ಣಮಾಚಾರ್.

ತಾಯಿ ಕಲ್ಯಾಣಮ್ಮ. ವಿದ್ಯಾಭ್ಯಾಸ ತಲಕಾಡು, ಮೈಸೂರುಗಳಲ್ಲಿ ನಡೆಯಿತು. ಇಂಗ್ಲಿಷ್ ಮಾಧ್ಯಮದಲ್ಲಿ ಎನ್‌ಟ್ರೆನ್ಸ್ ಪರೀಕ್ಷೆ ಮತ್ತು ಪಂಡಿತ ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ (1932) ತೇರ್ಗಡೆಯಾದರು. ಕುದೇರು, ತಲಕಾಡು, ಅಕ್ಕಿಹೆಬ್ಬಾಳು, ಮಿಡ್ಲ್‌ಸ್ಕೂಲ್‌ನಲ್ಲಿ ಇಂಗ್ಲಿಷ್ ಉಪಾಧ್ಯಾಯರಾಗಿ, ಕೋಲಾರದ ಹೈಸ್ಕೂಲ್‌ನಲ್ಲಿ ಕನ್ನಡ ಪಂಡಿತರಾಗಿ ಕೆಲವು ವರ್ಷಗಳಿದ್ದು, ಕೊನೆಗೆ ಅಲ್ಲಿಂದ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಿದ್ದ ಕನ್ನಡ–ಕನ್ನಡ ಶಬ್ದಕೋಶಕ್ಕೆ ಪಂಡಿತರಾಗಿ ಆಯ್ಕೆಯಾಗಿ ಬಂದು ತಾವು ನಿಧನ ಹೊಂದುವವರೆಗೂ ಸೀನಿಯರ್ ಪಂಡಿತ್ ಆಗಿ ಡೆಪ್ಯುಟಿ ಎಡಿಟರ್ ಆಗಿ ಕೆಲಸಮಾಡಿದರು.

ಕನ್ನಡ–ಕನ್ನಡ ಶಬ್ದಕೋಶಕ್ಕೆ ಇವರ ಪಾಂಡಿತ್ಯದ ನೆರವು ದೊರೆಯಿತು. ಸಂಸ್ಕೃತದಲ್ಲೂ ಇವರದು ಆಳವಾದ ತಿಳಿವಳಿಕೆ. ಇಂಗ್ಲಿಷ್ ಸಾಹಿತ್ಯದ ಪರಿಚಯವೂ ಇವರಿಗೆ ಸಾಕಷ್ಟಿತ್ತು. ತಮ್ಮ ಮನೆತನದ ವಿದ್ಯೆಯಾದ ಆಯುರ್ವೇದದಲ್ಲೂ ಇವರು ಪ್ರವೀಣರಾಗಿದ್ದರು. ಇವರು ಸಾತ್ತ್ವಿಕರೂ ತತ್ತ್ವನಿಷ್ಠರೂ ಆಗಿದ್ದರು. ಕಂದ ವೃತ್ತಗಳನ್ನು ರಚಿಸುವುದರಲ್ಲಿ ಇವರ ಲೇಖನಿ ಉದಾರವಾದದ್ದು. ಯಾಮುನಾಚಾರ್ಯರ ಸ್ತೋತ್ರ ರತ್ನ, ಕುಲಶೇಖರ ಆಳ್ವಾರರ ಮುಕುಂದಮಾಲೆ, ವೇದಾಂತ ದೇಶಿಕರ ಅಚ್ಯುತ ಶತಕ ಇವನ್ನು ಪದ್ಯದಲ್ಲಿ ಭಾಷಾಂತರಿಸಿದ್ದಾರೆ. ಪ್ರಣಯ ತರಂಗಿಣಿ ಎಂಬ ಕಂದವೃತ್ತಗಳ ಪ್ರಬಂಧ ಇವರ ಸ್ವಂತಕೃತಿ. ಇವರು ವಿದ್ವತ್ ಪೂರ್ಣವಾದ ಹಲವಾರು ಪ್ರೌಢಪ್ರಬಂಧಗಳನ್ನೂ ಬರೆದಿದ್ದಾರೆ. ಸಂಸ್ಕೃತ ಭಾಗವತ ಪುರಾಣವನ್ನು ಬಹು ಹೃದಯಂಗಮವಾಗಿ ವ್ಯಾಖ್ಯಾನಿಸಿ ಪಂಡಿತಪಾಮರರನ್ನು ರಂಜಿಸುತ್ತಿದ್ದರು. ಕುಮಾರವ್ಯಾಸಭಾರತ ಮತ್ತು ಜೈಮಿನಿ ಭಾರತಗಳನ್ನು ಗಮಕಿಗಳಿಂದ ಓದಿಸಿ ತಾವು ಅರ್ಥೈಸುತ್ತ ಲೋಕಪ್ರಿಯರಾಗಿದ್ದರು. ಇವರು ತುಂಬ ಸ್ನೇಹಪರರು ಜ್ಞಾನ ಭಕ್ತಿ ವೈರಾಗ್ಯಗಳ ಜೊತೆಗೆ ರಸಿಕತೆಯನ್ನೂ ತಮ್ಮ ಸಾತ್ತ್ವಿಕ ವ್ಯಕ್ತಿತ್ವದಲ್ಲಿ ಪಡೆದುಕೊಂಡಿದ್ದ ಅಪರೂಪದ ವ್ಯಕ್ತಿಯಾಗಿದ್ದರು. ಇವರು 1966 ಡಿಸೆಂಬರ್ 10ರಂದು ನಿಧನರಾದರು. *

**ದೇಸಾಯಿ,ಎನ್.ಸಿ.:** 1924–2003. ಕುಂಚಬ್ರಹ್ಮ ಎಂದೇ ಖ್ಯಾತರಾದ ಹೆಸರಾಂತ ಕಲಾವಿದ. ನಾನಾ ಸಾಹೇಬ್ ಚಿದಂಬರ ದೇಸಾಯಿ ಇವರ ಪೂರ್ತಿ ಹೆಸರು. 1924 ಏಪ್ರಿಲ್ 4 ರಂದು ಹಾವೇರಿ ತಾಲ್ಲೂಕಿನ (ಈಗ ಜಿಲ್ಲೆ) ಅಗಡಿ ಗ್ರಾಮದಲ್ಲಿ ಜನಿಸಿದರು. ಇವರದು ಪ್ರಖ್ಯಾತ ಬಹದ್ದೂರ್ ದೇಸಾಯಿ ಕುಟುಂಬ. ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಇವರು ವೃತ್ತಿಯಲ್ಲಿ ಪ್ರೀಮಿಯರ್ ಆಟೋಮೊಬೈಲ್ ಸಂಸ್ಥೆಯ ಉದ್ಯೋಗಿಯಾಗಿ ಮೂವತ್ತೈದು ವರ್ಷ ಸುದೀರ್ಘ ಸೇವೆಸಲ್ಲಿಸಿದ ಬಳಿಕ ಅದೇ ಸಂಸ್ಥೆಯ ಜಾಹೀರಾತು ವಿಭಾಗದ ಮುಖ್ಯ ಕಲಾವಿದರಾಗಿ ನಿವೃತ್ತರಾದರು. ಮುಂಬಯಿಯಲ್ಲಿ ಉದ್ಯೋಗಿಯಾಗಿದ್ದಾಗಲೇ ಅಲ್ಲಿನ ಪ್ರಸಿದ್ಧ ಕಲಾಗುರುಗಳಾದ ದಂಡಾವತಿಮಠ ಅವರಲ್ಲಿ ಕಲಾಭ್ಯಾಸವನ್ನು ಪ್ರಾರಂಭಿಸಿ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಚಿತ್ರಕಲೆ ಮತ್ತು ಲಲಿತಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದು ಕಲಾ ಪ್ರಪಂಚಕ್ಕೆ ತಮ್ಮನ್ನು ಅರ್ಪಿಸಿಕೊಂಡರು.

ಇವರು ಪ್ರಸಿದ್ಧ ಚಿತ್ರಕಲಾವಿದರು ಮಾತ್ರವಲ್ಲದೆ ಒಬ್ಬ ಉತ್ತಮ ಛಾಯಾಚಿತ್ರಗಾರರಾಗಿಯೂ ಪತ್ರಿಕೋದ್ಯಮಿಯಾಗಿಯೂ ಹೆಸರು ಗಳಿಸಿದ್ದರು. ಇವರು ಮುಂಬಯಿಯ ಅನೇಕ ಪತ್ರಿಕೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ವಿಮರ್ಶನ ಲೇಖನಗಳನ್ನು ಬರೆಯುತ್ತಿದ್ದರು. ನಾಡಿನ ಸುಪ್ರಸಿದ್ಧ ಪತ್ರಿಕೆಗಳಿಗೆ ಮುಖಪುಟ ಕಲಾಕೃತಿಗಳನ್ನು ರೇಖಿಸುವುದರ ಮೂಲಕ ಪ್ರಸಿದ್ಧಿ ಪಡೆದಿದ್ದರು. ಅವುಗಳಲ್ಲಿ ಬೇಂದ್ರೇಯವರ ಮೇಘದೂತಕ್ಕೆ ಇವರು ಬರೆದ ಚಿತ್ರಲೇಖನ ಅತ್ಯಂತ ಜನಪ್ರಿಯತೆ ಪಡೆದಿತ್ತು. ಅತ್ಯಂತ ವಿರಳವಾಗಿರುವ ವಿಶಿಷ್ಟವಾದ ಕಲಾ ಸಂಶೋಧಕರಲ್ಲಿ ದೇಸಾಯಿಯವರೂ ಒಬ್ಬರು. ಮಹಾರಾಷ್ಟ್ರದ ವರ್ಲಿ ಬುಡಕಟ್ಟು ಜನಾಂಗದ ಜನಪದ ಕಲೆಯನ್ನು ಕುರಿತು ಇವರು ಸಂಶೋಧನೆ ಮಾಡಿದ್ದಾರೆ. ಸಂತ ಕಲಾವಿದರಾದ ಶುಭರಾಯರ ಜೀವನ ಚರಿತ್ರೆ ಹಾಗೂ ಇನ್ನಿತರ ಕೃತಿಗಳನ್ನೂ ರಚಿಸಿದ್ದಾರೆ. ಕರ್ನಾಟಕ ಜನಪದ ಕಲೆಯನ್ನು ಕುರಿತು ಸಂಶೋಧನಾತ್ಮಕ ಚಿತ್ರಲೇಖನ ಬರೆದಿದ್ದಾರೆ. ಇವರ ಪೂರ್ವೇತಿಹಾಸಕ್ಕೆ ಸಂಬಂಧಿಸಿದ ಹಾವನೂರು ಸಂಸ್ಥಾನ ಎಂಬ ಚಿತ್ರಲೇಖನವೂ ಇದೇ ಮಾಲಿಕೆಯಲ್ಲಿ ಸೇರಿದ್ದಾಗಿದೆ.

ಏಕವ್ಯಕ್ತಿ ಕಲಾಪ್ರದರ್ಶನಕ್ಕೆ ಇವರು ಹೆಸರಾಗಿದ್ದರು. ಇವರ ಬಹುರೂಪಿ ಗಣಪತಿ, ಬೇಂದ್ರೆಯವರ ಕವನಕ್ಕೆ ರಚಿಸಿದ ಯಾರಿಗೂ ಹೇಳೋಣು ಬ್ಯಾಡ, ಮೇಘದೂತ ಮುಂತಾದವು ರಾಷ್ಟ್ರದ ಅನೇಕ ಕಡೆಗಳಲ್ಲಿ ಪ್ರದರ್ಶನವಾಗಿ ಪ್ರಖ್ಯಾತವಾಗಿವೆ. ಇವರು ರೇಖಿಸಿದ ಸ್ವಾಮಿ ವಿವೇಕಾನಂದರ ಚಿತ್ರ ಕಲಾಕೃತಿಗಳು ಪ್ರದರ್ಶನವನ್ನು ಮುಂಬಯಿಯ ಕರ್ನಾಟಕ ಸಂಘ ಹಾಗೂ ಸಾಲಿಗ್ರಾಮದ ಡಿವೈನ್ ಪಾರ್ಕ್ ಟ್ರಸ್ಟ್ ಸಂಯುಕ್ತವಾಗಿ ಏರ್ಪಡಿಸಿದ್ದುವು. ಹುಬ್ಬಳ್ಳಿಯಲ್ಲಿರುವ ಬೇಂದ್ರೆ ಕುಟೀರ ಇವರಿಗೆ ಅಚ್ಚುಮೆಚ್ಚಿನ ತಾಣವಾಗಿತ್ತು. ಇಲ್ಲಿ ಇವರ 'ಕನ್ನಡ ಮೇಘದೂತ' ಕಾವ್ಯದ ಚಿತ್ರಗಳ ಸಂಗ್ರಹವಿದೆ. ಬೇಂದ್ರೆಯವರ 108 ನೆಯ ಜನ್ಮದಿನದ ಸವಿನೆನಪಿಗಾಗಿ ಅವರ ಭಾವಚಿತ್ರವನ್ನು ರಚಿಸಿ ನೆನಪಿನ ಕಾಣಿಕೆಯಾಗಿ ಬೇಂದ್ರೆ ಕುಟೀರಕ್ಕೆ ನೀಡಿದ್ದಾರೆ.

ಇವರ ವೈಯಕ್ತಿಕ ಜೀವನದಲ್ಲಿ ಬಹುಪಾಲು ನೋವೇ ತುಂಬಿತ್ತು. ತಮ್ಮ ಇಬ್ಬರು ಪುತ್ರರನ್ನೂ ಇವರು ಎಳೆವಯಸ್ಸಿನಲ್ಲೇ ಕಳೆದು ಕೊಂಡಿದ್ದರು.

ಇವರಿಗೆ ಅನೇಕ ಪ್ರಶಸ್ತಿ ಸನ್ಮಾನಗಳು ಲಭಿಸಿವೆ. ಅವುಗಳಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸರ್ಕಾರ ಮಹಾನ್ ಕಲಾವಿದರಿಗೆ ನೀಡುವ ಫೆಲೋಷಿಪ್ ಮುಂತಾದವು ಉಲ್ಲೇಖನೀಯ. ಇವರು 2003ರ ಜೂನ್‌ನಲ್ಲಿ ನಿಧನರಾದರು. (ಎಸ್‌ಯು.ಎಂ.)

**ದೇಸಾಯಿ, ಪಿ.ಬಿ.:** 1910– 76. ಕರ್ನಾಟಕ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳ ಖ್ಯಾತ ಸಂಶೋಧಕರು, ಶಾಸನತಜ್ಞರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಸಂಸ್ಕೃತಿಗಳ ಪ್ರಾಧ್ಯಾಪಕರಾಗಿದ್ದರು. ಪಾಂಡುರಂಗ ಭೀಮರಾವ್ ದೇಸಾಯಿ ಇವರ ಪೂರ್ಣಹೆಸರು. ರಾಯಚೂರು ಜಿಲ್ಲೆಯ ಕೊಪ್ಪಳದ ಬಳಿಯ ಕಿನ್ನಾಳದವರಾದ ಭೀಮರಾವ್ ಮತ್ತು ಭಾಗೀರಥೀಬಾಯಿ ದಂಪತಿಗಳ ಐದನೆಯ ಪುತ್ರರಾಗಿ 1910 ಡಿಸೆಂಬರ್ 24ರಂದು ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಸೇಡಂನಲ್ಲಿಯೂ ಸೆಕೆಂಡರಿ ಶಿಕ್ಷಣ ಗುಲ್ಬರ್ಗದಲ್ಲಿಯೂ ನಡೆಯಿತು. ಮುಂಬಯಿ ವಿಶ್ವವಿದ್ಯಾಲಯದ ಎಂಟ್ರೆನ್ಸ್ ಪರೀಕ್ಷೆಯ ಅನಂತರ ಅನಾರೋಗ್ಯದ ಕಾರಣ ಸ್ವಲ್ಪಕಾಲ ವಿದ್ಯಾಭ್ಯಾಸವನ್ನು ನಿಲ್ಲಿಸಿದರಾದರೂ ಮುಂದೆ 1935ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತದಲ್ಲಿ ಆನರ್ಸ್ ಪದವಿಯನ್ನು, 1937ರಲ್ಲಿ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಎಂ.ಎ. ಪದವಿಯನ್ನೂ ಪಡೆದರು. ಎಂ.ಎ. ಪರೀಕ್ಷೆಯಲ್ಲಿ ಲಿಪಿಶಾಸ್ತ್ರವೂ ಇವರ ಅಧ್ಯಯನ ವಿಷಯಗಳಲ್ಲಿ ಒಂದಾಗಿತ್ತು. ಅನಾರೋಗ್ಯದಿಂದಾಗಿ ಸ್ವಗ್ರಾಮದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, ಆ ಗ್ರಾಮದ ಮತ್ತು ಸುತ್ತಲಿನ ಗ್ರಾಮಗಳಲ್ಲಿದ್ದ ಶಿಲಾಶಾಸನಗಳನ್ನು ಪ್ರತಿಮಾಡಿಕೊಂಡು ಅಧ್ಯಯನ ಮಾಡುವ

ಹವ್ಯಾಸವನ್ನು ಬೆಳೆಸಿಕೊಂಡರು. ಇದಕ್ಕಾಗಿ ಇವರು ಸುಮಾರು 60 ಗ್ರಾಮಗಳಲ್ಲಿ ತಿರುಗಾಡಿ 200ಕ್ಕೂ ಹೆಚ್ಚಿನ ಶಾಸನಗಳನ್ನು ಪ್ರತಿಮಾಡಿಕೊಂಡರು. 1936ರಲ್ಲಿ ವಿಜಯನಗರದ ಆರನೆಯ ಶತಮಾನೋತ್ಸವ ಸಂದರ್ಭದಲ್ಲಿ ಇವರು ವಿಜಯನಗರದ ಸಾಮ್ರಾಜ್ಯ ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದರು. 1939ರಲ್ಲಿ ಕೇಂದ್ರ ಸರ್ಕಾರದ ಪುರಾತತ್ತ್ವ ಇಲಾಖೆಯ ಶಾಸನ ಶಾಖೆಯಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸಕ್ಕೆ ಸೇರಿದ ಇವರು 17 ವರ್ಷಗಳ ಕಾಲ ಉದಕಮಂಡಲದಲ್ಲಿದ್ದು ಶಾಸನಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿದರು. ದಕ್ಷಿಣ ಭಾರತದ ಶಾಸನ ಸಂಪುಟಗಳ ಪೈಕಿ ಹನ್ನೊಂದನೆಯ ಸಂಪುಟದ ಮೊದಲ ಭಾಗವನ್ನು ಎನ್. ಲಕ್ಷ್ಮೀನಾರಾಯಣರಾಯರೊಂದಿಗೆ ಹಾಗೂ ಹದಿನೈದನೆಯ ಸಂಪುಟವನ್ನು ತಾವೇ ಸ್ವಂತವಾಗಿ ಸಂಪಾದಿಸಿದರು. ಶಾಸನಗಳಿಗೆ ಸಂಬಂಧಿಸಿದಂತೆ 1956ರಲ್ಲಿ ಶಾಸನ ಪರಿಚಯ ಎಂಬ ಗ್ರಂಥವನ್ನು ಪ್ರಕಟಿಸಿದರು.

ಅಂದಿನ ಹೈದರಾಬಾದ್ ಸರ್ಕಾರಕ್ಕಾಗಿ ಎ ಕಾರ್ಪಸ್ ಆಫ್ ಕನ್ನಡ ಇನ್‌ಸ್ಕ್ರಿಪ್ಷನ್ಸ್ ಇನ್ ಹೈದರಾಬಾದ್ ಎಂಬ ಗ್ರಂಥವನ್ನು ಸಂಪಾದಿಸಿಕೊಟ್ಟರು. ಆಂಧ್ರ ಪ್ರದೇಶ ಸರ್ಕಾರಕ್ಕಾಗಿ ಇವರು ಕನ್ನಡ ಇನ್‌ಸ್ಕ್ರಿಪ್ಷನ್ಸ್ ಆಫ್ ಆಂಧ್ರ ಪ್ರದೇಶ್ ಮತ್ತು ಸೆಲೆಕ್ಟೆಡ್ ಇನ್‌ಸ್ಕ್ರಿಪ್ಷನ್ಸ್ ಆಫ್ ಆಂಧ್ರ ಪ್ರದೇಶ್ ಎಂಬ ಗ್ರಂಥಗಳನ್ನು ಸಂಪಾದಿಸಿದರು.

ದೇಸಾಯಿಯವರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ಹಾಗೂ ಸಂಸ್ಕೃತಿ ಇಲಾಖೆಯಲ್ಲಿ ರೀಡರ್ ಆಗಿ (1957), ಆ ಇಲಾಖೆಯ ಮುಖ್ಯಸ್ಥರಾಗಿ (1962), ಪ್ರಾಧ್ಯಾಪಕರಾಗಿ (1967) ನಿವೃತ್ತರಾದರು (1971). ಮೊದಲ ಬಾರಿಗೆ ಶಾಸನಶಾಸ್ತ್ರವನ್ನು ವೈಜ್ಞಾನಿಕವಾಗಿ ವಿದ್ಯಾರ್ಥಿಗಳಿಗೆ ಕಲಿಸಿಕೊಡಲು ಶಾಸನಶಾಸ್ತ್ರದ ಡಿಪ್ಲೊಮಾ ಶಿಕ್ಷಣವನ್ನು ಇವರು ರೂಪಿಸಿದರು.

ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿಯೂ ಸೇವೆಸಲ್ಲಿಸಿದ ಇವರು ಆ ಸಂಸ್ಥೆಯ ವಸ್ತುಸಂಗ್ರಹಾಲಯವನ್ನು ಬೆಳೆಸಿದರು. ಅನೇಕ ವಿದ್ವಾಂಸರಿಂದ ಉಪನ್ಯಾಸಗಳನ್ನು ಮಾಡಿಸಿ ಅವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದು ಇವರು ಮಾಡಿದ ಇನ್ನೊಂದು ಮುಖ್ಯ ಕೆಲಸ. ಸಂಸ್ಥೆಯ ಹಸ್ತಪ್ರತಿ ವಿಭಾಗದ ಹಸ್ತಪ್ರತಿಗಳ ವಿವರಣಾತ್ಮಕ ಪಟ್ಟಿಯನ್ನು (ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ ಆಫ್ ಮ್ಯಾನ್‌ಸ್ಕ್ರಿಪ್ಟ್ಸ್ ಇನ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಸಂಪುಟ 5– 9) ಪ್ರಕಟಿಸಿದರು.

ದೇಸಾಯಿಯವರ ಸಂಶೋಧನ ಗ್ರಂಥಗಳಲ್ಲಿ ಮುಖ್ಯವಾದದ್ದು 'ಬಸವೇಶ್ವರ ಅಂಡ್ ಹಿಸ್ ಟೈಮ್ಸ್'. ಕರ್ನಾಟಕ ಇತಿಹಾಸವನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸಬೇಕೆಂಬ ಯೋಜನೆಗನುಗುಣವಾಗಿ ಇವರು ತಮ್ಮ ಇಬ್ಬರು ಸಹೋದ್ಯೋಗಿಗಳೊಡನೆ ಎ ಹಿಸ್ಟರಿ ಆಫ್ ಕರ್ನಾಟಕ ಎಂಬ ಗ್ರಂಥವನ್ನು ಪ್ರಕಟಿಸಿದರು. ಮಿಂಚಿದ ಮಹಿಳೆಯರು, ಕುಂತಲೇಶ್ವರ, ಮದಗಜಮಲ್ಲ, ಕರ್ನಾಟಕದ ಕಲಚುರಿಗಳು, ಕನ್ನಡನಾಡಿನ ಶಾಸನಗಳು ಇವು ಇವರ ಕನ್ನಡ ಗ್ರಂಥಗಳಲ್ಲಿ ಕೆಲವು. ಶಿವಾಜಿಯ ಜೀವನಕ್ಕೆ ಸಂಬಂಧಿಸಿದ ಮೂಲಸಾಮಗ್ರಿಗಳನ್ನೊಳಗೊಂಡ ಶಿವಚರಿತ್ರ ವೃತ್ತ ಸಂಗ್ರಹ ಎಂಬ ಗ್ರಂಥವನ್ನು ಮರಾಠಿಯಲ್ಲಿ ಬರೆದಿದ್ದಾರೆ. ಇವರು ಬರೆದು ಪ್ರಕಟಿಸಿದ ಇಂಗ್ಲಿಷ್ ಲೇಖನಗಳ ಸಂಖ್ಯೆ 105, ಕನ್ನಡದವು 230 ಮತ್ತು ಮರಾಠಿಯಲ್ಲಿ 40.

ಇವರ ಶಾಸನ ಪರಿಚಯ ಗ್ರಂಥಕ್ಕೆ 1959ರಲ್ಲಿ ಮೈಸೂರು ಸರ್ಕಾರದ ಪುರಸ್ಕಾರ ದೊರೆಯಿತು. ಇವರ ಜೈನಿಸಂ ಇನ್ ಸೌತ್ ಇಂಡಿಯ ಅಂಡ್ ಸಮ್ ಜೈನ್ ಎಪಿಗ್ರಾಫ್ಸ್ ಎಂಬ ಗ್ರಂಥಕ್ಕೆ 1961ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಡಿ.ಲಿಟ್. ಪದವಿ ನೀಡಿತು. ಚಂಡೀಗಢದಲ್ಲಿ 1973ರಲ್ಲಿ ನಡೆದ ಅಖಿಲ ಭಾರತ ಇತಿಹಾಸ ಸಮ್ಮೇಳನದಲ್ಲಿ ಇವರು ಶಾಸನಶಾಸ್ತ್ರ ವಿಭಾಗದ ಅಧ್ಯಕ್ಷರಾಗಿದ್ದರು. **(ಬಿ.ಆರ್.ಜಿ.)**

**ದೈವರಾತರು:** 1891– 1975. ಚತುರ್ವೇದ ಪಂಡಿತರು. ಛಂದೋದರ್ಶನ ಎಂಬ ಮಹಾಗ್ರಂಥದ ಕರ್ತೃ. ಉತ್ತರ ಕನ್ನಡ ಜಿಲ್ಲೆ ಗೋಕರ್ಣದಲ್ಲಿ ನಾಗವೇಣಿ ಮತ್ತು ವಿಘ್ನೇಶ್ವರಭಟ್ಟರ ಮಗನಾಗಿ ಹುಟ್ಟಿದ ಇವರಿಗೆ ಗಣೇಶಶರ್ಮ ಎಂದು ನಾಮಕರಣ ಮಾಡಲಾಯಿತು. ಮುಂದೆ ಇವರು ವಾಸಿಷ್ಠ ಗಣಪತಿ ಮುನಿಗಳ ಶಿಷ್ಯರಾಗಿ ಮಂತ್ರದ್ರಷ್ಟಾರರೆನಿಸಿಕೊಂಡು ದೈವರಾತರಾದರು. ಇವರಿಗೆ ಬಾಲ್ಯ ಶಿಕ್ಷಣವೆಲ್ಲ ವೇದ ವಿದ್ಯಾಸಂಪನ್ನರಾದ ತಾಯಿ ತಂದೆಗಳಿಂದಲೇ ದೊರಕಿತು.

ಮುಂದೆ ಇವರು ಗೋಕರ್ಣಕ್ಕೆ ಆಗಮಿಸಿದ ಉಜ್ಜಯಿನಿ ರಾಮದಾಸರಿಂದ ಭಕ್ತಿ ಯೋಗವನ್ನೂ ವಾಸುದೇವಾನಂದ ಸರಸ್ವತೀ ಟೇಂಬೆ ಮಹಾರಾಜ ಅವರಿಂದ ಹಠಯೋಗ ದೀಕ್ಷೆಯನ್ನೂ ಪಡೆದರು. ಅನಂತರ ವಾಸಿಷ್ಟ ಗಣಪತಿ ಮುನಿಗಳ ಸೇವೆಯಲ್ಲಿ ನಿರತರಾಗಿ ಅವರೊಡನೆ ಭಾರತದಾದ್ಯಂತ ಪ್ರವಾಸ ಕೈಗೊಂಡು ಅನೇಕ ಪುಣ್ಯಕ್ಷೇತ್ರ ಹಾಗೂ ಪ್ರಮುಖನಗರಗಳನ್ನು ಸಂದರ್ಶಿಸಿದರು. ಅಲ್ಲಿಂದ ಮುಂದೆ ಅಮಿಣಾಚಲಕ್ಕೆ ಬಂದು ರಮಣ ಮಹರ್ಷಿಗಳ ಸೇವೆಯಲ್ಲಿ ತೊಡಗಿ ಬ್ರಹ್ಮಜ್ಞಾನದ ಉಪದೇಶ ಪಡೆದರು. ಮಹರ್ಷಿಗಳ ಆದೇಶಾನುಸಾರ ತಮ್ಮ ಗುರುವಾಸಿಷ್ಠರೊಂದಿಗೆ ಮದರಾಸಿಗೆ ಸಮೀಪದಲ್ಲಿರುವ ಪದವೇಟು ಗ್ರಾಮದ ರೇಣುಕಾಂಬ ಸನ್ನಿಧಿಯಲ್ಲಿ ಶಾರದೀ ನವರಾತ್ರಿಯ ಅನುಷ್ಠಾನದ ತಪಸ್ಸಿನಲ್ಲಿದ್ದಾಗ ಅವರ್ಣನಾಯವಾದ ಮಂತ್ರದರ್ಶನ ಪಡೆದರು. ಇವರ ಮುಖದಿಂದ ನೂತನ ವೇದಮಂತ್ರಗಳು ಅವಿರ್ಭವಿಸಿದುವು. ಅವುಗಳನ್ನು ಕೇಳಿದ ವಾಸಿಷ್ಠರು ಅವನ್ನು ಆಗಲೇ ಬರೆದುಕೊಂಡು ಅದಕ್ಕೆ ಭಾಷ್ಯವನ್ನು ರಚಿಸಿದರು. ಅದೇ ಪ್ರಸಿದ್ಧ ಛಂದೋದರ್ಶನ.

ದೈವರಾತರು ವಿದ್ವತ್‌ಸಭೆಗಳಲ್ಲಿ ನೀಡಿದ ಭಾಷಣಗಳು ಅಸಂಖ್ಯ. ದೆಹಲಿ, ಗೌಹತಿ, ನೇಪಾಲ, ಕಾಶಿ, ಮದ್ರಾಸು, ತಿರುಪತಿ ಮೊದಲಾದೆಡೆ ಜರುಗಿದ ಅಖಿಲಭಾರತ ಮಟ್ಟದ ಸಂಸ್ಕೃತಿ ಸಮ್ಮೇಳನ, ವೇದ ಸಮ್ಮೇಳನದಲ್ಲಿ ಕೆಲವಕ್ಕೆ ಅಧ್ಯಕ್ಷರಾಗಿ ಕೆಲವಕ್ಕೆ ಅತಿಥಿಗಳಾಗಿ ಆಯ್ಕೆಗೊಂಡಿದ್ದರು. 1975ರ ಮೇ ತಿಂಗಳಿನಲ್ಲಿ ಹೃಷಿಕೇಶ ಹಾಗೂ ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ವಿದ್ವತ್ಪರಿಷತ್ತುಗಳಲ್ಲಿ ಭಾಗವಹಿಸಿದ್ದರು. ಇವರ ಪಾಂಡಿತ್ಯಕ್ಕೆ ಮಾರುಹೋದ ಮಹೇಶಯೋಗಿಗಳು ಫ್ರಾನ್ಸ್, ಇಟಲಿ, ಸ್ಪೇನ್ ಅಮೆರಿಕಗಳಿಗೆ ಇವರನ್ನು ಕರೆದೊಯ್ದು ಇವರಿಂದ ಉಪನ್ಯಾಸಗಳನ್ನು ಮಾಡಿಸಿದರು.

ಸಂಸ್ಕೃತ, ಕನ್ನಡ, ಹಿಂದಿ, ನೇಪಾಲಿ, ತೆಲುಗು, ತಮಿಳು ಮಲೆಯಾಳಂ ಹೀಗೆ ಬಹುಭಾಷಾವಿಶಾರದರಾದ ಇವರಿಗೆ ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ಪಂಡಿತ ಮದನ ಮೋಹನ ಮಾಲವೀಯರಿಂದ ವೇದವಾಚಸ್ಪತಿ, ಮುಂಬಯಿಯ ಭಾರತೀಯ ವಿದ್ಯಾಭವನದಿಂದ ವಿದ್ಯಾವಾಚಸ್ಪತಿ, ನೇಪಾಲಿ ಮಹಾರಾಜರಿಂದ ರಾಜರ್ಷಿ ಎಂಬ ಬಿರುದುಗಳು ಬಂದವು.

ಇವರ ಛಂದೋದರ್ಶನವೆಂಬ ಬೃಹತ್ ಗ್ರಂಥವನ್ನು ಭಾರತೀಯ ವಿದ್ಯಾಭವನ ಪ್ರಕಟಿಸಿದೆ. ವೇದಾರ್ಥ ಕಲ್ಪಲತಾ ಮತ್ತು ವಾಕ್‌ಸುಧಾ ಗ್ರಂಥಗಳನ್ನು ಕಲ್ಕತ್ತದ ಮದನಗೋಪಾಲ ಪೋದ್ದಾರ್ ಟ್ರಸ್ಟ್ ಪ್ರಕಟಿಸಿದೆ. ಪಶುಪತಿ ಹೃದಯ ನೇಪಾಲಿ, ಹಿಂದೀ ಭಾಷೆಗಳಲ್ಲಿ ಪ್ರಕಟವಾಗಿದೆ. ಮೂಲ ಯಜುರ್ವೇದ ಸಂಹಿತಾ, ಇಂದ್ರಯಜ್ಞ, ಸಾಕ್ಷಾತ್ಕಾರ ಯೋಗ ಸುಧಾ ಇವು ಇವರ ಇತರ ಗ್ರಂಥಗಳು. ಅಪ್ರಕಟಿತ ಆದರೆ ಪೂರ್ಣ ಬರೆದು ಸಿದ್ಧವಾಗಿರುವ ಹಸ್ತಪ್ರತಿಗಳಲ್ಲಿ ಗಾಯತ್ರಿಸುಧಾ, ಪುರುಷ ಸೂಕ್ತಸುಧಾ, ವೇದವೈದಿಕ, ವೇದಹೃದಯ, ರಾಮರಸಾಯನ, ಅಹಂಪ್ರತ್ಯಯವಿಮರ್ಶೆ, ಸಪ್ತಮರ್ಯಾದಾ ಸದ್ವಿದ್ಯಾ ಇವು ಮುಖ್ಯವಾದವು.

ವೇದ ಉಪನಿಷತ್ತುಗಳನ್ನು ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲ ಈ ಪ್ರಕಾಂಡ ಪಂಡಿತರನ್ನು ಚತುರ್ವೇದಗಳ ಜೀವಂತ ಶಬ್ದಕೋಶ ಎಂದು ಬಣ್ಣಿಸಲಾಗಿದೆ.

ತಂತ್ರದಲ್ಲೂ ಅಷ್ಟೇ ನಿಪುಣರಾದ ಇವರು ಸ್ವತಃ ಹಲವು ನಕ್ಷೆಗಳನ್ನೂ ರಚಿಸಿದ್ದರು. ಋಗ್ವೇದದ ಆರಂಭ ಸುಪ್ರಸಿದ್ಧ ಗಾಯತ್ರಿ ಮಂತ್ರದಿಂದಲೇ ಹೊರತು ಸಾಂಪ್ರದಾಯಿಕವಾಗಿ ಒಪ್ಪಿಕೊಂಡಿರುವಂತೆ ಅಗ್ನಿಮೀಳೆಯಿಂದಲ್ಲ ಎಂಬುದಾಗಿ ಇವರು ಸಾಧಿಸಿದ್ದಾರೆ. ಓಂಕಾರ ಪ್ರಣವ ವೈದಿಕವಲ್ಲ. ವೇದದಲ್ಲಿ ಕಂಡುಬರುವುದು ಮೂಲತಃ ಈ ಕಾರಣವೆಂಬುದು ಇವರ ನಿಶ್ಚಿತಾಭಿಪ್ರಾಯ.

ಇಂದು ಇವರ ಗುರುಕುಲ ಬ್ರಹ್ಮಚರ್ಯಾಶ್ರಮ ಗೋಕರ್ಣದಿಂದ ಸು.3 ಕಿಮೀ ದೂರದಲ್ಲಿ ಅಶೋಕವನ ಎಂದು ಪ್ರಸಿದ್ಧಿ ಪಡೆದಿದೆ. ಅಲ್ಲಿ ಮಲ್ಲಿಕಾರ್ಜುನೇಶ್ವರ ದೇವಮಂದಿರವಿದೆ. ಇವರ ವಾಙ್ಮಯ ಪ್ರಕಾಶನಕ್ಕಾಗಿ, ಗುರುಕುಲ ಯೋಗಾಶ್ರಮದ ಸಂಘಟನೆಗಾಗಿ ಟ್ರಸ್ಟ್ ಒಂದನ್ನು ರಚಿಸಲಾಗಿದೆ.

*

**ದೈಹಿಕಶಿಕ್ಷಣ:** ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ದೈಹಿಕ ಶಿಕ್ಷಣ ಕಾರ್ಯಕ್ರಮ ಪಾಠಶಾಲೆಯ ಶಿಕ್ಷಣಕ್ಕೆ ಉಪಭಾಗವಾಗಿದ್ದು ದಿನಂಪ್ರತಿ ಶಾಲಾ ವೇಳಾ ಅವಧಿ ಕಳೆದ ಅನಂತರ ನಡೆಯುವ ಚಟುವಟಿಕೆಯಾಗಿತ್ತು. ತರಗತಿ ಕಾರ್ಯದಲ್ಲಿ ದಣಿದು ಕಂಗಾಲಾದ ವಿದ್ಯಾರ್ಥಿಗಳನ್ನು ದೈಹಿಕ ವ್ಯಾಯಾಮಕ್ಕಾಗಿ ಒತ್ತಾಯಪಡಿಸಲಾಗುತ್ತಿತ್ತು. ಅಲ್ಲದೆ ಶಾಲೆಗಳಲ್ಲಿ ಸಾಕಷ್ಟು ಉಪಕರಣಗಳಾಗಲೀ ವಿದ್ಯಾರ್ಥಿ ಸಂಖ್ಯೆಗೆ ಅನುಗುಣವಾಗಿ ತರಪೇತಿಪಡೆದ ಶಿಕ್ಷಕರಾಗಲೀ ಇರಲಿಲ್ಲ. ಹಾಗಾಗಿ ಶಾಲೆಗಳಲ್ಲಿ ದೈಹಿಕ ಶಿಕ್ಷಣ ವ್ಯವಸ್ಥೆ ಗೌಣವೂ ತೀರ ಅಸಮರ್ಪಕವೂ ಆಗಿತ್ತು.

1957ರಲ್ಲಿ ಒಂದೂಕಾಲು ಲಕ್ಷ ಸಂಖ್ಯೆಯ ವಿದ್ಯಾರ್ಥಿಗಳುಳ್ಳ ಪ್ರೌಢಶಾಲೆಗಳಲ್ಲಿ ಏಳನೂರು ದೈಹಿಕ ಶಿಕ್ಷಣ ಉಪಾಧ್ಯಾಯರಿದ್ದರು. ಹನ್ನೆರಡು ವರ್ಷಗಳ ಅನಂತರ ಒಂದು ಲಕ್ಷ ಸಂಖ್ಯೆಯ ವಿದ್ಯಾರ್ಥಿಗಳಿಗಾಗಿ 1700 ದೈಹಿಕ ಶಿಕ್ಷಣ ಪಡೆದ ಉಪಾಧ್ಯಾಯರಿದ್ದರು. ಒಬ್ಬ ಶಿಕ್ಷಕನ ಹೊರೆ ಸುಮಾರು 350 ವಿದ್ಯಾರ್ಥಿಗಳು. ಇವರಲ್ಲಿ ಸೇ. ಹತ್ತು ಭಾಗ ಡಿಪ್ಲೊಮ ದರ್ಜೆಯ ಶಿಕ್ಷಣ ಪಡೆದವರೂ ಸೇಕಡ 75 ಭಾಗ ಸರ್ಟಿಫಿಕೇಟ್ ಪಡೆದವರೂ ಉಳಿದವರು 3 ತಿಂಗಳಿಗಿಂತ ಕಡಿಮೆ ಶಿಕ್ಷಣ ಪಡೆದವರೂ ಆರು ವಾರ ಶಿಕ್ಷಣ ಪಡೆದವರೂ ಸೇವಾದಳ ಶಿಕ್ಷಣ ಪಡೆದವರೂ ಮಾಜಿ ಸೈನಿಕರೂ ಇದ್ದರು. ಕೆಲವು ಶಾಲೆಗಳಿಗೆ ಆಟದ ಅಥವಾ ಕವಾಯಿತು ಮಾಡಲು ಮೈದಾನವೇ ಇರಲಿಲ್ಲವಾದರೆ ಸೇ. 17 ಶಾಲೆಗಳಲ್ಲಿ ದೈಹಿಕ ಶಿಕ್ಷಣ ಉಪಾಧ್ಯಾಯರೇ ಇರಲಿಲ್ಲ. ದೊಡ್ಡ ಊರುಗಳಲ್ಲಿ ಮೈದಾನಗಳ ಅಭಾವವಾದರೆ ಗ್ರಾಮಾಂತರ ಶಾಲೆಗಳಲ್ಲಿ ಉಪಾಧ್ಯಾಯರ ಅಭಾವ. ಸಾವಿರಾರು ಪ್ರೈಮರಿ ಶಾಲೆಗಳಿಗೆಲ್ಲ ಈ ರೀತಿಯ ಅಚ್ಚುಕಟ್ಟು ವ್ಯವಸ್ಥೆ ಆಗಬೇಕಾದರೆ ಅನೇಕ ಸಹಸ್ರ ಕಾರ್ಯಕರ್ತರು ಬೇಕಾಗುತ್ತಾರೆ.

ಕರ್ನಾಟಕದ ಸು. 250 ಕಾಲೇಜುಗಳಲ್ಲಿ $1^{1}/_{2}$ ಲಕ್ಷ ಶಿಕ್ಷಣಾರ್ಥಿಗಳಿದ್ದಾರೆ. ದೈಹಿಕ ಶಿಕ್ಷಣ ಕಾಲೇಜುವೇಳಾಪಟ್ಟಿಯಲ್ಲಿ ಕಡ್ಡಾಯವಾಗಿಲ್ಲ. ದೈಹಿಕ ಶಿಕ್ಷಣ ಕಾಲೇಜು ವೇಳೆಯ ಅನಂತರ ನಡೆಯುತ್ತಿರುವುದರಿಂದ ಕೇವಲ ಅಲ್ಪಸಂಖ್ಯೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಾತ್ರ ಪಾತ್ರವಹಿಸುತ್ತಾರೆ.

ಇಪ್ಪತ್ತನೆಯ ಶತಮಾನದಲ್ಲಿ ದೈಹಿಕ ಶಿಕ್ಷಣವು ಶಾಲಾ ಕಾಲೇಜುಗಳಲ್ಲಿ ಪ್ರಾಶಸ್ತ್ಯ ಪಡೆಯುತ್ತಾ ಬಂದಿತು. ದೈಹಿಕ ಕವಾಯಿತಿನ ಮೂಲಕ ಮತ್ತು ಕ್ರೀಡಾ ವೇಳೆಗಳಲ್ಲಿ ತರಬೇತಿ ಕೊಡುವ ಮೂಲಕ ಈ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಯಿತು. ಕೆಲವು ದೊಡ್ಡ ವ್ಯಕ್ತಿಗಳ ಅಥವಾ ಟ್ರೋಫಿಗಳ ಹೆಸರಿನಲ್ಲಿ ಅಂತರ ಕಾಲೇಜು ಮತ್ತು ಅಂತರ ಶಾಲಾ ಕ್ರೀಡೆಗಳ ಸ್ಪರ್ಧೆ ನಡೆಯುತ್ತಿದ್ದು ಅಂಕಗಳಿಗಾಗಿ ಆ ಸಂಸ್ಥೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸಿದ್ಧ ಪಡಿಸುತ್ತಿದ್ದರು.

1957ರಿಂದ ವಿಶಾಲ ಕರ್ನಾಟಕದಲ್ಲಿ ರಾಜ್ಯಮಟ್ಟದ ದಸರ ಕ್ರೀಡೆಗಳು ಆರಂಭವಾದುವು. 1961ರಿಂದ ಕರ್ನಾಟಕ ಕ್ರೀಡಾಮಂಡಳಿ ಇದನ್ನು ನಡೆಸುವ ಜವಾಬ್ದಾರಿ ಹೊತ್ತಿದೆ. ಪಂದ್ಯಗಳು ಹಂತಹಂತವಾಗಿ ತಾಲ್ಲೂಕು, ಜಿಲ್ಲೆ, ವಿಭಾಗ, ರಾಜ್ಯಮಟ್ಟಗಳಲ್ಲಿ ನಡೆಯುತ್ತಿವೆ. ಈ ಸ್ಪರ್ಧೆಗಳಿಂದ ರಾಜ್ಯದ ಕ್ರೀಡಾ ಮಟ್ಟ ವರ್ಷಂಪ್ರತಿ ಉತ್ತಮಗೊಳ್ಳುತ್ತಿದೆ. ಇವುಗಳಲ್ಲಿ ಶಾಲಾಕಾಲೇಜು ವಿದ್ಯಾರ್ಥಿಗಳಲ್ಲದೆ ಇತರ ತರುಣರೂ ಭಾಗವಹಿಸಲು ಅವಕಾಶವಾಗಿದೆ.

ಕರ್ನಾಟಕದ ಶಿಕ್ಷಣ ಶಾಖೆ 1959ರಲ್ಲಿ, ಅನಂತರ 1969ರಲ್ಲಿ ದೈಹಿಕ ಶಿಕ್ಷಣಕ್ಕೆ ಹೊಸ ರೂಪ ಕೊಟ್ಟು ಶಿಕ್ಷಣವನ್ನು ಶಾಲಾವೇಳಾಪಟ್ಟಿಯಲ್ಲಿ ಸೇರಿಸಿದೆ. ಹೆಚ್ಚು ಕಾಲವನ್ನೂ ತರಪೇತಿಗೆ ಒದಗಿಸಿದೆ. ದೈಹಿಕ ಕವಾಯಿತು, (ಡ್ರಿಲ್) ಮತ್ತು ಕ್ರೀಡಾಂಗಣ ಆಟ, ಹೊರಾಂಗಣ ಆಟಗಳಿಗೆ ಪ್ರತ್ಯೇಕ ಅವಧಿ (ಪೀರಿಯಡ್)ಗಳನ್ನು ವಿಧಾಯಕ ಮಾಡಿದೆ. ಸಾಮೂಹಿಕ ಕವಾಯಿತು. ಹೊರಪ್ರದೇಶದಲ್ಲಿ ಶಿಬಿರ (ಕ್ಯಾಂಪು) ಹೊರಸಂಚಾರ (ಹೈಕಿಂಗ್), ಸೈಕ್ಲಿಂಗ್, ಯೋಗಾಸನಗಳಿಗೂ ಏರ್ಪಾಟು ಮಾಡಿದೆ. ದೈಹಿಕಶಿಕ್ಷಣ ದೈಹಿಕಶ್ರಮವಾಗದಂತೆ, ಮನರಂಜಕವಾಗುವಂತೆ ಮಾಡಲು ಸೂಚಿಸಲಾಗಿದೆ. ಶಾಲಾ ದೈಹಿಕ ಶಿಕ್ಷಣವನ್ನು ಹೊಸದಾಗಿ ಪ್ರಾರಂಭಿಸುವ ಕಾರ್ಯಾನುಭವ ಚಟುವಟಿಕೆಯ ಗುಂಪಿನಲ್ಲಿ ಸೇರಿಸಿ ಶಾಲಾ ವೇಳಾಪಟ್ಟಿಯಲ್ಲಿ ವಾರಕ್ಕೆ 4 ಅವಧಿಗಳನ್ನು ಕೊಡಲಾಗಿದೆ. ಇದರಲ್ಲಿ 2 ಅವಧಿ ಕವಾಯಿತು ಶಿಕ್ಷಣಕ್ಕೂ 2 ಅವಧಿ ಆಟಗಳಿಗೂ ಮೀಸಲಾಗಿದೆ. ಬಾಲಕ ಬಾಲಕಿಯರಿಗಾಗಿ ಪ್ರತ್ಯೇಕ ಚಟುವಟಿಕೆಗಳನ್ನು ಅವರ ವಯಸ್ಸಿನಗನುಗುಣವಾಗಿ ವಿಂಗಡಿಸಲಾಗಿದೆ.

ಏಕರೂಪ ಪಠ್ಯಕ್ರಮದ ವ್ಯವಸ್ಥೆಗಾಗಿ ಭಾರತ ಸರ್ಕಾರ ನಿರ್ಧರಿಸಿದ ನ್ಯಾಷನಲ್ ಫಿಟ್‌ನೆಸ್ ಕೋರ್ (ಎನ್‌ಎಫ್‌ಸಿ) ಚಟುವಟಿಕೆಗಳನ್ನು ಅನುಸರಿಸಬೇಕೆಂದು ಸೂಚಿಸಿದೆ. ಇದು ಬಹಳ ವ್ಯಾಪಕವಾಗಿದ್ದರೂ ಸ್ಥಳೀಯ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂಥ ವ್ಯವದಾನ ಪಡೆದಿದೆ. ಈ ಪದ್ಧತಿಯಲ್ಲಿ ಲೇಜಿಂ, ಜನಪದ ಗಾನ, ಸಾಮೂಹಿಕ ನೃತ್ಯ ಮುಂತಾದವು ಸೇರಿವೆ. ಇದರಿಂದ ದೈಹಿಕ ಚಟುವಟಿಕೆಗಳು ಸರ್ವತೋಮುಖವಾಗಿ ಬೆಳೆಯಲು ಅವಕಾಶವಿದೆ. ಪ್ರತಿ ಶಾಲೆಯಲ್ಲೂ ಇರಬೇಕಾದ ಕನಿಷ್ಠ ವ್ಯಾಯಾಮ ಸಾಮಗ್ರಿ ಪಟ್ಟಿಯನ್ನೂ ಗೊತ್ತುಮಾಡಿದೆ.

ರಾಷ್ಟ್ರೀಯ ದೈಹಿಕ ಯೋಗ್ಯತಾ ದಳದ (ನ್ಯಾಷನಲ್ ಎಫಿಷಿಯೆನ್ಸಿ ಟೆಸ್ಟ್) ಮಾನಕದಂತೆ ಪ್ರತಿಯೊಬ್ಬ ಅಭ್ಯರ್ಥಿಗೂ ಅವರವರ ದೈಹಿಕ

ಸ್ಪರ್ಧೆಗಳ ಯೋಗ್ಯತೆಯನ್ನು ಪರೀಕ್ಷೆಗಳ ಮೂಲಕ ನಿರ್ಧರಿಸಿ ಹಂತಹಂತವಾಗಿ ಬಂದು ಎರಡು ಮೂರು ನಕ್ಷತ್ರಗಳ ಬ್ಯಾಡ್ಜ್ ಅನ್ನೂ ಯೋಗ್ಯತಾ ಪ್ರಶಸ್ತಿಪತ್ರಗಳನ್ನೂ ಕೊಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ದೈಹಿಕ ಚಟುವಟಿಕೆಗಳನ್ನು ಉಳಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಈ ಪದ್ಧತಿ 1961ರಿಂದ ಆಚರಣೆಗೆ ಬಂದಿದೆ.

ಶಾಲೆಗಳಲ್ಲಿ ಮೇಲ್ಕಂಡ ದೈಹಿಕ ಶಿಕ್ಷಣ ಮಾರ್ಪಾಟುಗಳನ್ನು ಸುಲಭವಾಗಿ ಜಾರಿಗೆ ತರಲು ಶಾಲಾ ಶಿಕ್ಷಕರ ಸಂಸ್ಥೆಗಳಲ್ಲೂ ಬಿ.ಎಡ್. ಮತ್ತು ಬಿ.ಪಿಎಡ್. ಕಾಲೇಜುಗಳ ಅಭ್ಯಾಸ ಪತ್ರಿಕೆಗಳ ವೇಳಾಪಟ್ಟಿಯಲ್ಲೂ ಮೇಲ್ಕಂಡ ದೈಹಿಕ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಸಲಾಗುತ್ತಿದೆ.

ದೈಹಿಕ ಶಿಕ್ಷಣದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು 1970ರಿಂದ ಪ್ರತಿ ಜಿಲ್ಲೆಯ ಜಿಲ್ಲಾ ವಿಭಾಗಾಧಿಕಾರಿಯ ಕಚೇರಿಯಲ್ಲಿ ಉನ್ನತ ದರ್ಜೆಯ ದೈಹಿಕ ಶಿಕ್ಷಣದಲ್ಲಿ ಹೆಚ್ಚಿನ ತರಪೇತು ಪಡೆದ ದೈಹಿಕ ಶಿಕ್ಷಣ ಅಧಿಕಾರಿಯನ್ನು ನೇಮಕ ಮಾಡಲಾಗಿತ್ತು. ಇದಲ್ಲದೆ ಪ್ರತಿ ಶಾಲೆಗೂ ಅಲ್ಲಿಯ ವಿದ್ಯಾರ್ಥಿ ಸಂಖ್ಯೆಗೆ ಅನುಗುಣವಾಗಿ ದೈಹಿಕ ಶಿಕ್ಷಣದ ಉಪಾಧ್ಯಾಯರನ್ನು ಒದಗಿಸಲಾಗುತ್ತಿದೆ.

ದೈಹಿಕ ಶಿಕ್ಷಣಕ್ಕೆ ಪರ್ಯಾಯ ಕಾರ್ಯಕ್ರಮಗಳು: ಎಸಿಸಿ, ಎನ್‌ಸಿಸಿ, ಕ್ರೀಡಾಕೂಟಗಳು ಇವು ದೈಹಿಕ ಶಿಕ್ಷಣಕ್ಕೆ ಪರ್ಯಾಯ ಕಾರ್ಯಕ್ರಮಗಳು. ಎನ್‌ಸಿಸಿ ದಳವನ್ನು ಏರ್ಪಡಿಸಲಾಗದ ಪ್ರೌಢಶಾಲೆಗಳಲ್ಲಿ ಅದೇ ಉದ್ದೇಶಕ್ಕಾಗಿ ಸಹಾಯಕ ವಿದ್ಯಾರ್ಥಿ ದಳವನ್ನು 1952ರಲ್ಲಿ ಸ್ಥಾಪಿಸಲಾಯಿತು. ಈ ತರಬೇತು ಸ್ವಯಂಪ್ರೇರಿತವಾಗಿಯೂ ಐಚ್ಛಿಕವಾಗಿಯೂ ಇತ್ತು. ಇದನ್ನು 1964ರಲ್ಲಿ ರದ್ದುಪಡಿಸಿ ಎನ್‌ಎಫ್‌ಸಿ ದಳದ ಚಟುವಟಿಕೆಯಲ್ಲಿ ಐಕ್ಯಗೊಳಿಸಲಾಯಿತು.

1954ರಲ್ಲಿ ನ್ಯಾಷನಲ್ ಡಿಫೇನ್ಸ್ ಸ್ಕೀಂ (ಎನ್‌ಡಿಎಫ್) ಎಂಬ ಚಟುವಟಿಕೆಯನ್ನು ಪ್ರೌಢಶಾಲೆಗಳಲ್ಲಿ ಆಚರಣೆಗೆ ತರಲಾಯಿತು. ದೈಹಿಕ ಶಿಕ್ಷಣ, ಸಮಾಜ ಸೇವೆ, ವ್ಯಾಯಾಮ, ಶಿಸ್ತು, ಗುಂಪುಗಳಲ್ಲಿ ಕೆಲಸಮಾಡುವ ಅಭ್ಯಾಸ ಈ ಮುಖವಾದ ಶಿಕ್ಷಣ ನೀಡುವ ವ್ಯವಸ್ಥೆ ಆಗಿತ್ತು. 1966ರಲ್ಲಿ ಇದನ್ನು ಎನ್‌ಎಫ್‌ಸಿ ಚಟುವಟಿಕೆಯಲ್ಲಿ ಐಕ್ಯಗೊಳಿಸಲಾಯಿತು.

ರಾಷ್ಟ್ರೀಯ ರಕ್ಷಣಾ ವಿದ್ಯಾರ್ಥಿದಳ (ಎನ್‌ಸಿಸಿ) 1948ರಲ್ಲಿ ಭಾರತ ಸರ್ಕಾರದ ಆಜ್ಞೆಯಂತೆ ಶಾಲಾ ಕಾಲೇಜುಗಳಲ್ಲಿ ಪ್ರಾರಂಭಿಸಲ್ಪಟ್ಟಿತು. ನಾಯಕ ಗುಣ, ಶಿಸ್ತು, ಸೇವಾಬುದ್ಧಿಗಳನ್ನು ಬೆಳೆಸಿ ರಾಷ್ಟ್ರೀಯ ತುರ್ತು ಪರಿಸ್ಥಿತಿಗಳಲ್ಲಿ ರಕ್ಷಣಾದಳಗಳಿಗೆ ಸಹಾಯಕವಾಗುವಂಥ ಸೈನಿಕ ಶಿಕ್ಷಣ ಕೊಡುವುದೇ ಈ ದಳದ ಮುಖ್ಯ ಉದ್ದೇಶ. ಇದರಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಸೀನಿಯರ್ ಡಿವಿಜನ್, ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿನಿಯರಿಗಾಗಿ ಜೂನಿಯರ್ ಡಿವಿಜನ್ ಹೀಗೆ ವಿಭಾಗಗಳಿವೆ. ಇವುಗಳಲ್ಲಿ ನೆಲ, ಜಲ, ವಾಯುದಳಗಳೆಂಬ ಪ್ರತ್ಯೇಕ ವಿಭಾಗಗಳೂ ಇವೆ. ಸೀನಿಯರ್ ಡಿವಿಜನ್ ವಿಭಾಗದಲ್ಲಿ ಎಂಜಿನಿಯರಿಂಗ್, ಫಿರಂಗಿ, ಸಿಗ್ನಲ್, ಮೆಡಿಕಲ್ ಮುಂತಾದ ಪ್ರತ್ಯೇಕ ಉಪವಿಭಾಗಗಳಿವೆ. ಇದರ ಚಟುವಟಿಕೆಗಳು ನಾನಾಮುಖವಾಗಿ ವ್ಯಾಪಕವಾಗಿವೆ. ಪ್ರತಿ ವಿಭಾಗಕ್ಕೂ ರಕ್ಷಣಾದಳದ ಅಧಿಕಾರಿಗಳಿದ್ದು ರಕ್ಷಣಾದಳದ ಶಿಕ್ಷಣತಜ್ಞರು ಶಿಕ್ಷಣ ನೀಡುತ್ತಾರೆ.

ಈಗ ಭಾರತ ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳು ಸಮಾಜಕ್ಕೆ ಹೊಂದಿಕೊಂಡು ಗ್ರಾಮಾಂತರ ಪ್ರದೇಶಗಳ ಜನರ ಜೀವನ ಪರಿಚಯ ಮಾಡಿಕೊಂಡು ಸಮಾಜಸೇವೆ ಮಾಡಲು ನ್ಯಾಷನಲ್ ಸೋಷಿಯಲ್ ಸರ್ವೀಸ್ (ಎನ್‌ಎಸ್‌ಎಸ್) ಎಂಬ ದಳಗಳು ಕಾಲೇಜುಗಳಲ್ಲಿ ಸ್ಥಾಪಿತವಾಗಿರುತ್ತವೆ. ಪ್ರಾಯೋಗಿಕವಾಗಿ ಆರಂಭವಾಗಿರುವ ಈ ಸೇವಾ ಸಂಸ್ಥೆಯ ಶಿಕ್ಷಣವನ್ನು ಎಲ್ಲ ಕಾಲೇಜುಗಳಲ್ಲೂ ಕಡ್ಡಾಯವಾಗಿ ಆರಂಭ ಮಾಡಬೇಕೆಂಬ ವಿಷಯ ತೀವ್ರ ಪರಿಶೀಲನೆಯಲ್ಲಿದೆ.

ಎನ್‌ಸಿಸಿ, ಎಸಿಸಿ, ಎನ್‌ಡಿಎಫ್, ಎನ್‌ಎಸ್‌ಎಸ್ ದಳಗಳಲ್ಲಿ ತರಬೇತಿ ಹಿಂದಿಭಾಷೆಯಲ್ಲಿ ಜರಗುವುದಲ್ಲದೆ, ಕಾರ್ಯಭಾರ ಚಟುವಟಿಕೆಗಳ ಅಪ್ಪಣೆಗಳು ಕಮಾಂಡ್ಸ್ ಹಿಂದಿಯಲ್ಲೇ ಇರುವುದು ಒಂದು ವಿಶೇಷ. ಇದರಿಂದ ರಾಷ್ಟ್ರೀಯ ಭಾವೈಕ್ಯವಾಗಲೂ ಸಹಾಯಕವಾಗಿದೆ. ಜೊತೆಗೆ ಆಯಾ ರಾಜ್ಯ ಭಾಷೆಗಳಲ್ಲಿಯು ತರಬೇತಿ ದೊರೆಯುತ್ತಿದೆ.

ದೈಹಿಕ ಶಿಕ್ಷಕರ ತರಬೇತಿ ಸಂಸ್ಥೆಗಳು: ಬೆಂಗಳೂರಿನ ವೈಎಂಸಿಎ ಸಂಸ್ಥೆ ಬಹಳ ಕಾಲದಿಂದ ಪದವೀಧರರಿಗೆ ಅಲ್ಪಾವಧಿಯ ಶಿಕ್ಷಣವನ್ನೂ ಎಸ್‌ಎಸ್‌ಎಲ್‌ಸಿ ಮುಗಿಸಿದವರಿಗೆ ಸರ್ಟಿಫಿಕೇಟ್ ಕೋರ್ಸನ್ನೂ ಒದಗಿಸುತ್ತಿದೆ. ಇದಲ್ಲದೆ ಬೆಳಗಾಂವಿ, ಧಾರವಾಡ ಮತ್ತು ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯಲ್ಲೂ ಸರ್ಟಿಫಿಕೇಟ್ ಮಟ್ಟದ (ಸಿಪಿಎಡ್) ದೈಹಿಕ ಶಿಕ್ಷಣ ಸಂಸ್ಥೆಗಳಿವೆ.

ಪದವೀಧರ ಉಪಾಧ್ಯಾಯರಿಗೆ ಒಂಬತ್ತು ತಿಂಗಳ ಅವಧಿಯ ದೈಹಿಕ ಶಿಕ್ಷಣದ ಡಿಪ್ಲೋಮಾ ಮತ್ತು ಪದವೀಧರರಲ್ಲದವರಿಗೆ ಸರ್ಟಿಫಿಕೇಟ್ ದರ್ಜೆಯ ಶಿಕ್ಷಣ ಒದಗಿಸಲು 1959ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರ ಸುಸಜ್ಜಿತ ಕ್ರೀಡಾಂಗಣವನ್ನೂ ತರಬೇತಿ ಸಂಸ್ಥೆ, ವಿದ್ಯಾರ್ಥಿ ವಸತಿಗೃಹಗಳನ್ನೊಳಗೊಂಡ ಕಾಲೇಜನ್ನೂ ಕಂಠೀರವ ಕ್ರೀಡಾಂಗಣದಲ್ಲಿ ಸ್ಥಾಪಿಸಿತು. ಅಲ್ಲಿ ಪೂರ್ಣ ಅವಧಿಯ ಶಿಕ್ಷಣದ ಜೊತೆಗೆ ಆಟ ಓಟ ಹಾಗೂ ದೈಹಿಕ ಚಟುವಟಿಕೆಗಳ ಬಗ್ಗೆಯೂ ಅಲ್ಪಾವಧಿಯ ಶಿಕ್ಷಣಕ್ಕೂ ವ್ಯವಸ್ಥೆಯುಂಟು.

1971ರಲ್ಲಿ ಈ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟು 100 ಪದವೀಧರರಿಗೆ ಬಿ.ಪಿ.ಎಡ್ ಶಿಕ್ಷಣ ಕೊಡುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯವೂ ಬಿ.ಪಿ.ಎಡ್ ಮತ್ತು ಎಂ.ಪಿ.ಎಡ್. ಶಿಕ್ಷಣಗಳನ್ನು ಆರಂಭಿಸಿದೆ. ಈಗ ಎರಡು ವಿಶ್ವವಿದ್ಯಾನಿಲಯಗಳು ಸ್ನಾತಕೋತ್ತರ ಶಿಕ್ಷಣ (ಎಂ.ಪಿ.ಎಡ್) ಪ್ರಾರಂಭಿಸಿವೆ. ಇವಲ್ಲದೆ ಸರ್ಕಾರ ಅನೇಕ ದೈಹಿಕ ಶಿಕ್ಷಕರನ್ನೂ ಪಾಟಿಯಾಲಾದ ರಾಷ್ಟ್ರೀಯ ಕ್ರೀಡಾಸಂಸ್ಥೆಯಲ್ಲಿ ವಿಶೇಷ ತರಪೇತಿ ಪಡೆಯಲೂ ಕಳುಹಿಸುತ್ತದೆ.

ದೈಹಿಕ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ: ಸಾಧಾರಣವಾಗಿ ಇವೆರಡೂ ಪರಸ್ಪರ ಸಂಬಂಧಿಸಿದ್ದರೂ ಇತ್ತೀಚಿನವರೆಗೂ ಆರೋಗ್ಯಶಿಕ್ಷಣ ದೈಹಿಕಶಿಕ್ಷಣ ಕಾರ್ಯಕ್ರಮದಲ್ಲಿ ಬರುತ್ತಿರಲಿಲ್ಲ. ಇತ್ತೀಚಿನ ಪ್ರಗತಿಪರ ಯೋಜನೆಗಳಿಗೆ ಅನುಗುಣವಾಗಿ ಹಾಗೂ ವಿದ್ಯಾ ಇಲಾಖೆಯ ಆದೇಶ ಮತ್ತು ಉಪಾಧ್ಯಾಯ ಶಿಕ್ಷಣದ ಅಭ್ಯಾಸಪತ್ರಿಕೆಗಳಲ್ಲಿ ಇವೆರಡನ್ನೂ ಒಂದೇ ಕಾರ್ಯಕ್ರಮವೆಂದು ಪರಿಗಣಿಸಲಾಗಿದೆ. ಉಪಾಧ್ಯಾಯರಿಗೆ ಮಕ್ಕಳ ಶರೀರ ರಚನೆ, ಮಾನಸಿಕ ಬೆಳವಣಿಗೆ, ವಯಸ್ಸಿನ ಚಟುವಟಿಕೆಗಳಿಗೆ ಬೇಕಾದ ವಿಟಮಿನ್ನುಗಳ ಆವಶ್ಯಕತೆ, ಅದನ್ನು ಒದಗಿಸುವ ಪದಾರ್ಥಗಳು, ರೋಗಗಳ ಸೂಚನೆ, ರೋಗಗಳನ್ನು ಗುರುತಿಸುವ ವಿಧಾನಗಳು, ಮಕ್ಕಳ ದೈಹಿಕ ನ್ಯೂನತೆಗಳು, ಕೆಲವು ಆಹಾರಾಂಶಗಳ ಕೊರತೆ ಮತ್ತು ವಿಟಮಿನ್ನುಗಳ ಅಭಾವದಿಂದ ಆಗುವ ದೈಹಿಕ ತೊಂದರೆಗಳು ಮುಂತಾದವನ್ನು ಅಭ್ಯಾಸಪತ್ರಿಕೆಯಲ್ಲಿ ಸೇರಿಸಬೇಕಾಗಿದೆ. ಪ್ರತಿಯೊಬ್ಬ ಶಾಲಾವಿದ್ಯಾರ್ಥಿಯ ಬಗ್ಗೆ ದೈಹಿಕ ಬೆಳವಣಿಗೆ ಮತ್ತು ಕೊರತೆಗಳ ಬಗ್ಗೆ ವಿವರವಾದ ಹೆಲ್ತ್ ರಿಕಾರ್ಡುಗಳ ಮಾದರಿ ಪಟ್ಟಿಯನ್ನು ಕೊಡಲಾಗಿದೆ. ಪ್ರತಿ ವರ್ಷವೂ ವೈದ್ಯ ಇಲಾಖೆ ನಡೆಸುವ ವಿದ್ಯಾರ್ಥಿಯ ಆರೋಗ್ಯ ಪರೀಕ್ಷೆಯ ಸಮಯದಲ್ಲಿ ಶಾಲಾ ದೈಹಿಕ ಶಿಕ್ಷಣ

ಉಪಾಧ್ಯಾಯರು ಸಹಾಯಮಾಡಲು ಶಿಕ್ಷಣ ಪಡೆದಿದ್ದಾರೆ. ಶಾಲಾ ಹೆಲ್ತ್ ಕ್ಲಿನಿಕ್‌ಗಳು ಈ ಉಪಾಧ್ಯಾಯರ ಮೇಲ್ವಿಚಾರಣೆಯಲ್ಲಿ ನಡೆಯುತ್ತವೆ.

ಕರ್ನಾಟಕ ರಾಜ್ಯದಲ್ಲಿ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಅನೇಕವಿವೆ. ಇದಕ್ಕೆ ಹಣಕಾಸು ಒದಗುವುದು ಶಾಲಾ ಕಾಲೇಜು ವಿದ್ಯಾರ್ಥಿಗಳು ಕೊಡುವ ಶುಲ್ಕದಿಂದಲೇ. ಇದು ಪ್ರೌಢಶಾಲೆಗಳಲ್ಲಿ ಮೂರು ರೂಪಾಯಿಗಳು, ಕಾಲೇಜುಗಳಲ್ಲಿ ವರ್ಷಕ್ಕೆ ಆರು ರೂಪಾಯಿಗಳು,ತೀರ ಕಡಿಮೆ ಸಂಖ್ಯೆ ವಿದ್ಯಾರ್ಥಿಗಳು ಇರುವ ಕಾಲೇಜುಗಳಲ್ಲಿ ವ್ಯಾಯಾಮ ಶಿಕ್ಷಣಕ್ಕೆ ಬೇಕಾದ ಉಪಕರಣಗಳನ್ನು ಒದಗಿಸುವುದು, ಕ್ರೀಡಾಂಗಣಗಳನ್ನು ದುರಸ್ತಿಮಾಡುವುದು, ಪಂದ್ಯಗಳಿಗೆ ಸಿದ್ಧಪಡಿಸುವುದು, ಆ ಕ್ರೀಡೆಗಳಿಗೆ ಬೇಕಾದ ಆಟದ ವಸ್ತುಗಳನ್ನೂ ಬೆಲೆಬಾಳುವ ಉಪಕರಣಗಳನ್ನೂ ಕೊಳ್ಳುವುದು ಅಸಾಧ್ಯದ ವಿಷಯವಾಗಿದೆ. ಅಂಥ ಸಂಸ್ಥೆಗಳ ಚಟುವಟಿಕೆಗಳು ಸ್ವಾಭಾವಿಕವಾಗಿ ಸ್ಥಗಿತವಾಗುತ್ತವೆ. ಎಷ್ಟೋ ಸಂಸ್ಥೆಗಳಲ್ಲಿ ನುರಿತ ದೈಹಿಕಶಿಕ್ಷಣ ಉಪಾಧ್ಯಾಯರಾಗಲೀ ಬೇಕಾದಷ್ಟು ವಿಸ್ತಾರವಾದ ಆಟದ ಬಯಲುಗಳಾಗಲಿ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಇರುವ ಇಂಥ ಕೊರತೆಗಳನ್ನು ಕೂಡಲೇ ಆದ್ಯತೆಯ ಮೇರೆಗೆ ನಿವಾರಿಸಬೇಕಾಗಿದ ಅನಿವಾರ್ಯತೆಯಿದೆ. (ಎಂ.ಆರ್.ಆರ್.;ಎನ್.ಸಿ.ಪಿ.)

**ದೊಂಬರು:** ಸಾಮಾನ್ಯವಾಗಿ ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಕಾಣಬರುವ ಅಲೆಮಾರಿ ಜನಾಂಗ. ಇವರು ಊರಿಂದ ಊರಿಗೆ ತಲೆಯಮೇಲೆ ಸಾಮಾನುಗಳನ್ನು ಹೊತ್ತೋ ಇಲ್ಲವೆ ಕತ್ತೆಯ ಮೇಲೆ ಹೇರಿಕೊಂಡೋ ಇಲ್ಲವೆ ಅಡ್ಡೆಗಳಲ್ಲಿ ಇಟ್ಟುಕೊಂಡೋ ವರ್ಷವೆಲ್ಲ ತಿರುಗಿ ಆಟ ಆಡಿ ಅನಂತರ ತಮ್ಮ ಮೂಲ ಊರುಗಳಿಗೆ ಬಂದು ಅಲ್ಲಿ ಮನೆದೇವರ ಹಬ್ಬ ಆಚರಿಸುತ್ತಾರೆ. ಶಕ್ತಿ ದೇವತೆಗಳು, ಹನುಮಂತ ಇವರ ಮನೆದೇವರುಗಳು.

ಶಕ್ತಿಯುತ ವ್ಯಾಯಾಮ ಪ್ರದರ್ಶನಗಳನ್ನು ಮಾಡುವುದು ಇವರ ಒಂದು ವೈಶಿಷ್ಟ್ಯ. ಇದಕ್ಕೆ ದೊಂಬರಾಟ ಎನ್ನುತ್ತಾರೆ. ಇವರು ತಮ್ಮ ಚಾತುರ್ಯ ಹಾಗೂ ಕೈಚಳಕವನ್ನು ಪ್ರದರ್ಶಿಸಿ ತಮ್ಮ ವೃತ್ತಿಗೆ ಮಹತ್ತ್ವವನ್ನು ತಂದು ಕೊಂಡಿದ್ದಾರೆ. ಇವರು ತಮ್ಮ ಆಟಗಳನ್ನು ಮಧ್ಯಾಹ್ನದ ವೇಳೆಯಲ್ಲಿ ನಗರದ ಪ್ರಮುಖ ಬೀದಿಗಳ ಮಧ್ಯದಲ್ಲಿ ಪ್ರಮುಖರ ಅಪ್ಪಣೆ ಪಡೆದು ನಡೆಸುತ್ತಾರೆ. ಆಟವನ್ನು ಪ್ರದರ್ಶಿಸುವಾಗ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಆಕರ್ಷಣೆ ಮಾಡುವ ಉದ್ದೇಶದಿಂದ ಇವರ ತಂಡದಲ್ಲಿನ ಹೆಂಗಸೊಬ್ಬಳು ಡೋಲು ಬಡಿಯುತ್ತಿರುತ್ತಾಳೆ. ಗಂಡಸು ಶಿಳ್ಳೆ, ಕೇಕೆಗಳನ್ನು ಹಾಕುತ್ತ ಊರಿನ ಪ್ರಮುಖರನ್ನು ಹೊಗಳುತ್ತಿರುತ್ತಾನೆ. ಕೆಲವೊಮ್ಮೆ ಚಾಟಿಯನ್ನು ನೆಲಕ್ಕೆ ಬಡಿದು ಶಬ್ದಮಾಡುವುದೂ ಉಂಟು. ಆಟಗಾರ ಆಟದ ಸಮಯದಲ್ಲಿ ಬೇರೆ ಯಾವ ಬಟ್ಟೆಯನ್ನೂ ಧರಿಸದೆ ಹನುಮಂತನ ಚಡ್ಡಿಯೊಂದನ್ನು ಹಾಕಿಕೊಂಡಿರುತ್ತಾನೆ. ಈತ ಕೂದಲಿನಿಂದ ಅಥವಾ ಕಪ್ಪು ಉಣ್ಣೆಯಿಂದ ಮಾಡಿದ ಮಧ್ಯಮ ಗಾತ್ರದ ದಾರವನ್ನು ಬಲತೋಳಿಗೆ ಇಲ್ಲವೆ ಕತ್ತಿಗೆ ಕಟ್ಟಿಕೊಂಡಿರುತ್ತಾನೆ.

ಆಟದ ಪ್ರಾರಂಭದಲ್ಲಿ ದೊಂಬ ಸಗಣಿಯಿಂದ ಮಾಡಿದ ಬೆನಕನನ್ನು ಪೂಜಿಸಿ ಅನಂತರ ಗಣೆಯನ್ನು ನೆಡುತ್ತಾನೆ. ಅನಂತರ ಲಾಗ ಹಾಕುವುದು, ಹಿಂಗಣ್ಣು ಮುಂಗಣ್ಣು ಎಸೆಯುವುದು, ಅಂತರ್‌ಲಾಗ ಹಾಕುವುದು, ನಿಂತ ನಿಲವಿನಲ್ಲಿಯೇ ಪಲ್ಟಿಗಳನ್ನು ಹಾಕುವುದು, ಭಾರವಾದ ಕಬ್ಬಿಣದ ಗುಂಡುಗಳನ್ನು ಎಸೆಯುವುದು, ಮರಗಾಲು ಕಟ್ಟಿಕೊಂಡು ನಡೆಯುವುದು, ಚಕ್ರ ಬಾಣ ನಿರ್ಮಿಸುವುದು, ಮರದ ತೊಲೆಗೆ ಮಧ್ಯದಲ್ಲಿ ಹಗ್ಗ ಕಟ್ಟಿ ಅದನ್ನು ಹಲ್ಲಿನಲ್ಲಿ ಕಚ್ಚಿಕೊಂಡು ತೊಲೆಯನ್ನು ಮೇಲೆ ಎತ್ತುವುದು. ಇಲ್ಲವೆ ಅದನ್ನು ತನ್ನ ಜುಟ್ಟಿಗೆ ಕಟ್ಟಿ ಮೇಲೆಕ್ಕೆತ್ತುವುದು ಮುಂತಾದ ಶಕ್ತಿಪ್ರದರ್ಶನ ಕೆಲಸಗಳನ್ನು ಮಾಡುತ್ತಾನೆ. ಈ ಮಧ್ಯೆ ಸಣ್ಣಪುಟ್ಟ ಹುಡುಗರು ತಂತಿಯ ಮೇಲೆ ನಡೆಯುವುದು, ಕಬ್ಬಿಣದ ಬಳೆಯೊಳಗಡೆ ನುಗ್ಗುವುದು ಮುಂತಾದ ಚಮತ್ಕಾರಗಳನ್ನು ನಡೆಸುತ್ತಾರೆ. ಅನಂತರ ಆಟಗಾರ ನುರುಜು ಕಲ್ಲಿನ ಮೇಲೆ ಮಲಗಿ ಹೊಟ್ಟೆಯಮೇಲೆ ಚಪ್ಪಡಿ ಕಲ್ಲೊಂದನ್ನು ಇರಿಸಿಕೊಂಡು ದೊಡ್ಡಸುತ್ತಿಗೆಯಿಂದ

ಶಕ್ತಿಯುತ ವ್ಯಾಯಾಮ ಪ್ರದರ್ಶನ ಮಾಡುತ್ತಿರುವ ದೊಂಬರು

ಬಡಿಸಿಕೊಳ್ಳುತ್ತಾನೆ. ಜನಗಳಿಂದ ತುಂಬಿದ ಗಾಡಿಯನ್ನು ಒಬ್ಬನೇ ಸಾಕಷ್ಟು ದೂರ ಎಳೆಯುತ್ತಾನೆ. ಗಣೆಯ ಮೇಲೆ ಹತ್ತಿ ಸಮಾನಾಂತರವಾಗಿ ಮಲಗಿ ಅಲ್ಲಿಯೇ ಅನೇಕ ಸೂಕ್ಷ್ಮತರವಾದ ಚಮತ್ಕಾರದ ಪ್ರದರ್ಶನಗಳನ್ನು ಮಾಡುತ್ತಾನೆ. ಈತ ನಡೆಸುವ ಎಲ್ಲ ಆಟಗಳೂ ಕಷ್ಟಸಾಧ್ಯವಾಗಿದ್ದು ಪ್ರೇಕ್ಷಕರನ್ನು ಆಕರ್ಷಿಸುವಂಥಮಾಗಿರುತ್ತವೆ.

ಸಾಮಾನ್ಯವಾಗಿ ದೊಂಬರು ಅವಿಭಕ್ತ ಕುಟುಂಬದವರಾಗಿದ್ದು ಎಲ್ಲರೂ ಆಟದಲ್ಲಿ ನಿಷ್ಣಾತರಾಗಿರುತ್ತಾರೆ. ಪ್ರಾಯದವರು ಹಾಗೂ ಮಕ್ಕಳು ಆಟದಲ್ಲಿ ಹೆಚ್ಚಾಗಿ ಭಾಗವಹಿಸುತ್ತಾರೆ. ಕೆಲವರು ಸಣ್ಣ ಪುಟ್ಟ ಮಾಟಮಂತ್ರದ ಕೆಲಸ, ಕೈಚಳಕದ ಕೆಲಸ ಮಾಡುವುದೂ ಉಂಟು. ಆಟ ಮುಗಿದ ಅನಂತರದ ಆ ತಂಡದಲ್ಲಿನ ಸುಂದರವಾದ ಹೆಣ್ಣೊಬ್ಬಳು ತಟ್ಟೆ ಹಿಡಿದು ಪ್ರೇಕ್ಷಕರಿಂದ ಹಣ ಸಂಗ್ರಹಿಸುತ್ತಾಳೆ. ಆದಾಯ ಆಟಕ್ಕೆ ತಕ್ಕಂತಿರುತ್ತದೆ. ಕೆಲವೊಮ್ಮೆ ಆಟದ ಸಮಯದಲ್ಲಿ ಸರ್ಕಸ್ಸಿನಲ್ಲಿ ಮಾಡುವಂತೆ ನಕಲಿ ಮತ್ತು ಕೋಡಂಗಿ ಚೇಷ್ಟೆಗಳನ್ನು ಮಾಡಿ ಪ್ರೇಕ್ಷಕರನ್ನು ಸಂತೋಷಪಡಿಸಿ ಅವರಿಂದ ಹೆಚ್ಚು ಹಣವನ್ನು ಪಡೆಯುವುದೂ ಉಂಟು. ಆಟದ ಸಮಯದಲ್ಲಿ ಇವರು ಒಂದು ಕಡೆ

ಬಟ್ಟೆ ಹಾಸಿ ಅದರ ಮೇಲೆ ತಮ್ಮ ಪೂರ್ವಿಕರ ಕಠಾರಿ, ಖಡ್ಗ ಮುಂತಾದ ಕೆಲವು ಹಳೆಯಕಾಲದ ಆಯುಧಗಳನ್ನು ಪ್ರದರ್ಶಿಸುತ್ತಾರೆ.

ದೊಂಬರ ಹೆಂಗಸರು ಬಿಡುವಿನ ವೇಳೆಯಲ್ಲಿ ಮರದ ಬಾಚಣಿಗೆಗಳನ್ನು ಮಾಡಿ ಮಾರುತ್ತಾರೆ. ಮನೆ ಮನೆಗೂ ಹೋಗಿ ಕೈಯಲ್ಲಿ ಗೊಂಬೆ ಹಿಡಿದು (ಸೂತ್ರದ ಗೊಂಬೆಯಂಥದು) ಹಾಡು ಹೇಳಿಕೊಂಡು ಅದನ್ನು ಅವರ ಮುಂದೆ ಕುಣಿಸಿ ದವಸಧಾನ್ಯಗಳನ್ನು ಸಂಗ್ರಹಿಸುವುದೂ ಉಂಟು. *

**ದೊಂಬಿದಾಸರು:** ಜನಪದ ವೃತ್ತಿಗಾಯಕರು. ಇವರು ಕರ್ನಾಟಕದಾದ್ಯಂತವೂ ಕರ್ನಾಟಕದ ಹೊರಗೂ ಕಂಡುಬರುತ್ತಾರೆ. ಉತ್ತರ ಕರ್ನಾಟಕದಲ್ಲಿ ಇವರನ್ನು ದುಂಬೇದಾಸರು ಎಂದು ಕರೆಯುತ್ತಾರೆ. ಇವರ ಪೂರ್ವನೆಲೆ ಸರಿಯಾಗಿ ತಿಳಿಯದು. ಇವರಲ್ಲಿ ಹಲವು ಪಂಗಡಗಳಿದ್ದು ಒಂದೊಂದನ್ನೂ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇವರದು ಅಲೆಮಾರಿ ಸ್ವಭಾವ. ಒಂದು ನಿರ್ದಿಷ್ಟ ಕಸಬಿಗೆ ಅಂಟಿಕೊಂಡವರಲ್ಲ. ನರಸಿಂಹಸ್ವಾಮಿ, ವೆಂಕಟರಮಣಸ್ವಾಮಿ ಇವರ ಆರಾಧ್ಯದೈವ.

ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರು, ತುಮಕೂರು, ಮಂಡ್ಯ, ಕೋಲಾರ, ಮೈಸೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರ ಮನೆಮಾತು ತೆಲುಗು. ನಾಟಕ ಮಾಡುವುದು, ಕಥೆ ಹಾಡುವುದು ಕನ್ನಡದಲ್ಲಿ, ನಾಟಕ ಮಾಡುವುದನ್ನು ದಾಸಕೂಟ ಎಂದು ಕರೆಯುತ್ತಾರೆ. ನಾಟಕಗಳಲ್ಲಿ ಹೆಂಗಸರೂ ಪಾತ್ರ ವಹಿಸುತ್ತಾರೆ. ಭಕ್ತಪ್ರಹ್ಲಾದ, ಹರಿಶ್ಚಂದ್ರ, ಕೃಷ್ಣಪಾರಿಜಾತ, ಮಾರ್ಕಂಡೇಯ, ನಳಚರಿತ್ರೆ, ಪ್ರೇಮಸತ್ಯಭೋಜ, ಗಂಗೆಗೌರಿ ಜಗಳ ಇವು ಇವರು ಹೆಚ್ಚಾಗಿ ಆಡುವ ನಾಟಕಗಳು. ಇವರು ಹಾಕುವ ಸ್ತ್ರೀ ಪಾತ್ರಗಳು ಅತ್ಯಂತ ಆಕರ್ಷಕವಾಗಿರುತ್ತಿದ್ದುದರಿಂದ ಇವರಿಗೆ ಹೆಣ್ಣು ವೇಷದವರು ಎಂಬ ಹೆಸರು ಬಂದಿರುವಂತೆ ತೋರುತ್ತದೆ. ದೊಂಬಿದಾಸರು ನಾಟಕಗಳನ್ನು ಆಡಿದರೂ ಹೆಚ್ಚು ಪ್ರಸಿದ್ಧರಾಗಿರುವುದು ಹಾಡುವುದರಿಂದ, ಕಥೆ ಹಾಡಲು ಮೂವರು ಸೇರುತ್ತಾರೆ. ಮುಖ್ಯ ಕಥೆಗಾರ ಏಕತಾರಿಯನ್ನು, ಜೊತೆಯವರು ದಮ್ಮಡಿ, ಚಿಟಗಿಯನ್ನು ಹಿಡಿಯುತ್ತಾರೆ. ಲಾವಣಿಗಳು ನಾದಮಯವಾಗಿ ರಾಗಬದ್ಧವಾಗಿ ಮುಂದು ವರಿಯುತ್ತವೆ. ಬಹುಮಟ್ಟಿಗೆ ಇವರ ಎಲ್ಲ ಲಾವಣಿಗಳೂ ರಗಳೆ ರೂಪದಲ್ಲಿರುತ್ತವೆ. ಏಕತಾರಿಯ ಸಹಾಯದಿಂದ ಹಾಡುವ ಇವರ ಹಾಡುಗಳು ಕರ್ನಾಟಕದೆಲ್ಲೆಡೆಯೂ ಪ್ರಸಿದ್ಧಿಗೊಂಡಿವೆ. ಇವನ್ನು 'ತಂದನಾನಾ' ಪದಗಳು ಎನ್ನುವುದೂ ಉಂಟು. ಶಿವಕಥೆಗಳನ್ನೂ ವೈಷ್ಣವ ಕಥೆಗಳನ್ನೂ ಒಟ್ಟೊಟ್ಟಿಗೆ ಹಾಡುತ್ತಾರೆ. ಕೆಲವು ಲೌಕಿಕ ಕಥೆಗಳನ್ನೂ ಕಲಿತಿದ್ದು, ಜನ ಬಯಸಿದಾಗ ಅವನ್ನು ಸೊಗಸಾಗಿ ಹಾಡುವುದುಂಟು. ಇದರಲ್ಲಿ ಹೆಂಗಸರೂ ಪಾಲ್ಗೊಳ್ಳುತ್ತಾರೆ. ಇವರು ಹಾಡುವ ಕೆಲವು ಪ್ರಮುಖ ಕತೆಗಳೆಂದರೆ ಗಂಗೆಗೌರಿ ಕಥೆ, ಹುಟ್ಟಿದಳೆ ಗೌರಮ್ಮ ಭೂಲೋಕ ದೊಳಗೆ, ಕೃಷ್ಣಕೊರವಂಜಿ, ಬಾಲನಾಗಮ್ಮ, ಮಾಗಡಿ ಕೆಂಪೇಗೌಡ, ಕಲಿಯುಗದ ಬಾಲೆ, ಅಣ್ಣತಂಗಿ, ಬಂಜೆ ಹೊನ್ನಮ್ಮ ಮೊದಲಾದವು. ಈ ಎಲ್ಲಾ ಕಥೆಗಳೂ ಒಂದಲ್ಲ ಒಂದು ರೀತಿಯಲ್ಲಿ ಅತ್ಯಂತ ಜನಪ್ರಿಯಗೊಂಡಿವೆ. (ಡಿ.ಕೆ.ಆರ್)

**ದೊಡ್ಡವಾಡ:** ಬೆಳಗಾಂವಿ ಜಿಲ್ಲೆ ಸಂಪಗಾಂವ ತಾಲ್ಲೂಕಿನ ಒಂದು ಗ್ರಾಮ. ಐತಿಹಾಸಿಕ ಸ್ಥಳ. ಬೈಲಹೊಂಗಲ ಪಟ್ಟಣದಿಂದ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 8,516.

ಹಿಂದೆ ಈ ಊರಿನಲ್ಲಿ ದೊಡ್ಡ ಬಾವಿಗಳಿದ್ದವು. ಅವುಗಳಿಂದಾಗಿಯೇ ಊರಿಗೆ ದೊಡ್ಡವಾಡ ಎಂಬ ಹೆಸರು ಬಂತೆಂದು ಪ್ರತೀತಿ. ಪ್ರಾಚೀನ ಕಾಲದಲ್ಲಿ ದೊಡ್ಡವಾಡ ಒಂದು ಅಗ್ರಹಾರವಾಗಿತ್ತು. ಕದಂಬ ಪೆರ್ಮಾಡಿ ಇದನ್ನು ಸ್ಥಾಪಿಸಿದ. ಕೆಲಕಾಲ ಇದು ನವಲಗುಂದ ಆಡಳಿತ ಪ್ರದೇಶಕ್ಕೆ ಒಳಪಟ್ಟಿತ್ತು. ಈ ಊರಿನ ಕೋಟೆ ಸುಂದರವಾಗಿತ್ತೆಂದು ಊರು ವಿಶಾಲವೂ ಅಚ್ಚುಕಟ್ಟಾಗಿಯೂ ಇತ್ತೆಂದು ಕ್ಯಾಪ್ಟನ್ ಮೂರ್ ಎಂಬ ಅಧಿಕಾರಿಯ ದಾಖಲೆಯಿಂದ (1790) ತಿಳಿದುಬರುತ್ತದೆ. ಕೋಟೆ ಇಂದು ಹಾಳಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಈ ಊರು ಸಾಂಗಲಿ ಸಂಸ್ಥಾನಕ್ಕೆ ಸೇರಿತ್ತು. ಇಲ್ಲಿ ವೀರಭದ್ರ ದೇವಾಲಯವಿದೆ. ವೀರಭದ್ರ ದೇವರ ಪಕ್ಕದಲ್ಲಿ ಗಣಪತಿ ಮತ್ತು ನಿಂತ ಭಂಗಿಯ ಶಕ್ತಿದೇವತೆಯ ಮೂರ್ತಿಗಳಿವೆ. ಈ ದೇವಾಲಯದ ಮುಂಭಾಗದಲ್ಲಿರುವ 1081ರ ಶಾಸನದ ತುದಿಭಾಗ ದಲ್ಲಿ ತೀರ್ಥಂಕರನ ಮೂರ್ತಿಯನ್ನು ಕಂಡರಿಸಲಾಗಿದೆ. ಇದೊಂದು ದಾನ ಶಾಸನ. 1962 ರಲ್ಲಿ ಈ ದೇವಾಲಯವನ್ನು ನವೀಕರಿಸಲಾಗಿದೆ. ಇದಲ್ಲದೆ ದ್ಯಾಮವ್ವ, ಹನುಮಂತ, ರಾಮಲಿಂಗೇಶ್ವರ, ಬಸವಣ್ಣ, ಕರೆವ್ವ, ಸಂಗಮೇಶ್ವರ, ಗಣಪತಿ ಮಹಾಬಳೇಶ್ವರ ಗುಡಿಗಳು ಈ ಊರಿನಲ್ಲಿವೆ.

ರಾಮಲಿಂಗೇಶ್ವರ ಗುಡಿ ಅತ್ಯಂತ ಪ್ರಾಚೀನವಾಗಿದ್ದು ಚಾಳುಕ್ಯಪೂರ್ವ ವಾಸ್ತುವಿನ್ಯಾಸ ಒಳಗೊಂಡಿದೆ. ವಿಜಯನಗರದ ಕಾಲದಲ್ಲಿ ಇದು ನವೀಕರಣಗೊಂಡಿತೆಂದು ತಿಳಿಯುತ್ತದೆ. ನೆಲಮಾಳಿಗೆಯುಳ್ಳ ಮಹಾಬಳೇಶ್ವರ ಗುಡಿಯೂ ಇತ್ತೀಚೆಗೆ ನವೀಕರಣಗೊಂಡಿದೆ. ಸಂಗಮೇಶ್ವರ ಗುಡಿ ಮತ್ತು ಸಂಗಪ್ಪಜ್ಜನ ಮಠ ಪ್ರತ್ಯೇಕವಾಗಿವೆ. ಸಂಗಮೇಶ್ವರ ಗುಡಿಯ ಹತ್ತಿರ ಒಂದು ವೀರಗಲ್ಲಿದೆ. ಕದಂಬ ವಜ್ರದೇವನ ಸೇವಕ ರಾಯಸಹಾನಿ ಸೋದಪ್ಪನ ಮಗ ವಿಜಯಸಹಾನಿ ಯುದ್ಧದಲ್ಲಿ ಹೋರಾಡಿ ಮಡಿದ ವಿಷಯ ಅದರಲ್ಲಿದೆ. ಬಸವಣ್ಣನ ಗುಡಿಯಲ್ಲಿಯೂ ಒಂದು ವೀರಗಲ್ಲಿದ್ದು ಅದು ಜಯಕೇಶಿ ಅರಸನ ಸೇವಕ (ಡಿಂಗರಿಗ) ಲಹಾದನ ವೀರಮರಣವನ್ನು ಚಿತ್ರಿಸುತ್ತದೆ. ಸಂಗಮೇಶ್ವರ ಗುಡಿಯ ಹಿಂಭಾಗದಲ್ಲಿ ಬಸವಣ್ಣನ ಗುಡಿ ಇದೆ. ಊರ ಹೊರವಲಯದಲ್ಲಿ ಕೆರೆ ಮತ್ತು ದೊಡ್ಡ ಬಾವಿಗಳಿವೆ. ಅಲ್ಲಿಯೇ ಮಡಿವಾಳೇಶ್ವರನ ಗುಡಿ ಇದೆ. ಕಲ್ಮಠದ ಎದುರಿನಲ್ಲಿ ಭಗ್ನಾವಸ್ಥೆಯಲ್ಲಿರುವ ವೀರಸ್ಮಾರಕವಿದೆ. ಈ ಊರಿನಲ್ಲಿ ಯಮನೂರ ರಾಜಾಭಕ್ಷನ ದರ್ಗಾ ಇದೆ. ಮರಾಠ ಸಮುದಾಯದ ಜನ ಈ ದರ್ಗಾಕ್ಕೆ ನಡೆದುಕೊಳ್ಳುತ್ತಾರೆ. (ಆರ್.ಎಂ.)

**ದೊಡ್ಡಕಾನ್ಯ:** ಮೈಸೂರು ಜಿಲ್ಲೆಯಲ್ಲಿ ಮ್ಯಾಗ್ನಟೈಟ್ ಗಣಿಗಳಿರುವ ಸ್ಥಳ. ಮೈಸೂರು ನಗರದ ದಕ್ಷಿಣಕ್ಕೆ 9ಕಿಮೀ, ಕಡಕೊಳ ರೈಲ್ವೆ ನಿಲ್ದಾಣದಿಂದ ಪಶ್ಚಿಮಕ್ಕೆ ಸು. 5 ಕಿಮೀ ದೂರದಲ್ಲಿದೆ ಜನಸಂಖ್ಯೆ 2,351. ಮೈಸೂರು ಜಿಲ್ಲೆಯ ಉತ್ತಮವಾದ ಮತ್ತು ದೊಡ್ಡದಾದ ಖನಿಜ ನಿಕ್ಷೇಪಗಳಲ್ಲಿ ದೊಡ್ಡಕಾನ್ಯದ ಮ್ಯಾಗ್ನಟೈಟ್ ನಿಕ್ಷೇಪವೂ ಒಂದು. ದೊಡ್ಡಕಾನ್ಯದ ಭೂವೈಜ್ಞಾನಿಕ ವಲಯದಲ್ಲೇ ಇನ್ನೂ ಕೆಲವು ಮುಖ್ಯ ಗಣಿಗಳಿವೆ. ಅವು ದೊಡ್ಡ ಕಾಟೂರು, ಸಿಂಧುವಳ್ಳಿ, ಗುರೂರು, ತಳೂರು, ಮಾವಿನಹಳ್ಳಿ, ಹುಲ್ಲಹಳ್ಳಿ ಮತ್ತು ಚಟ್ಟನಹಳ್ಳಿ, ಇವುಗಳಲ್ಲೆಲ್ಲ ದೊಡ್ಡಕಾನ್ಯದ ಗಣಿಯೇ ಅತಿ ಮುಖ್ಯವಾದುದು ಮತ್ತು ದೊಡ್ಡದು. ಪ್ರಾರಂಭದಲ್ಲಿ ಇಲ್ಲಿಯ ಗಣಿಗಳು ಮುಖ್ಯವಾಗಿ ಕ್ರೋಮೈಟ್ ಅದಿರಿಗಾಗಿ ತೆಗೆದವು. ಈ ಖನಿಜನಿಕ್ಷೇಪದಲ್ಲಿ ಆರು ಫರ್ಲಾಂಗು ಉದ್ದ, ಎರಡು ಫರ್ಲಾಂಗು ಅಗಲವುಳ್ಳ ಮಸೂರಾಕಾರದ ಪೆರಿಡೊಟೈಟ್ ಶಿಲೆಯ ಹರವು ಇದೆ. ಇದರಲ್ಲಿ ಒಂದಕ್ಕೊಂದು ಹೆಣೆದುಕೊಂಡಿರುವ ಅನೇಕ ಮ್ಯಾಗ್ನಟೈಟ್ ಎಳೆಗಳಿವೆ. ಈ ಎಳೆಗಳು ಒಂದು ಅಥವಾ ಎರಡು

ಅಂಗುಲದಿಂದ ಎರಡು ಅಥವಾ ಮೂರು ಅಡಿಗಳಿಗಿಂತ ಹೆಚ್ಚು ಅಗಲವಾಗಿ ಇರುತ್ತವೆ. ಸರಾಸರಿ ಇಪ್ಪತ್ತು ಅಡಿ ಆಳದವರೆಗೆ ಸುಮಾರು ಐದು ಲಕ್ಷಟನ್ ಮ್ಯಾಗ್ನಟೈಟ್ ಇರುವುದಾಗಿ ಅಂದಾಜು ಮಾಡಲಾಗಿದೆ.

1917ರಿಂದ ಕಬ್ಬಿಣ ಮತ್ತು ಉಕ್ಕಿನ ಕಂಪನಿ, ಮುಂಬಯಿ– ಇದು ಇಲ್ಲಿ ಸರ್ಕಾರದಿಂದ ಗುತ್ತಿಗೆ ಪಡೆದು ಗಣಿಗಳನ್ನು ನಡೆಸುತ್ತಿದೆ. ಈ ಗಣಿಗಳಲ್ಲಿ 1920 ರಿಂದ 72ರ ವರೆಗೆ, 1,70,97,414 ಮೆಟ್ರಿಕ್ ಟನ್ ಮ್ಯಾಗ್ನಟೈಟ್ ಹೊರ ತೆಗೆಯಲಾಗಿದೆ. 1940ರವರೆಗೆ ಈ ಗಣಿಗಳ ವಾರ್ಷಿಕ ಉತ್ಪಾದನೆ ಸರಾಸರಿ 2500 ಟನ್ನುಗಳಷ್ಟಿದ್ದು, ಅನಂತರ 4,000 ದಿಂದ 5,000 ಮೆಟ್ರಿಕ್ ಟನ್ನುಗಳಿಗೆ ಏರಿತು. ಈ ಉತ್ಪಾದನೆಯೆಲ್ಲವೂ ಜೆಂಷಡ್‍ಪುರದಲ್ಲಿರುವ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿಯೇ ಉಪಯೋಗವಾಗುತ್ತಿತ್ತು. ಈಗಿರುವ ಗಣಿಗಳಲ್ಲಿ ಇನ್ನೂ ಸು. 1,40,000 ಮೆಟ್ರಿಕ್ ಟನ್‍ಗಳಿಗೂ ಹೆಚ್ಚು ಮ್ಯಾಗ್ನಟೈಟ್ ಇದೆ ಎಂದು ಅಂದಾಜು ಮಾಡಲಾಗಿದೆ. (ಎಂ.ಎನ್.ಎಂ.)

**ದೊಡ್ಡಗಂಗವಾಡಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ರಾಮನಗರದಿಂದ 15 ಕಿಮೀ ದೂರದಲ್ಲಿರುವ ಐತಿಹಾಸಿಕ ಸ್ಥಳ. ಜನಸಂಖ್ಯೆ 366. 1294ರ ಹೊಯ್ಸಳರ ಶಾಸನದಲ್ಲಿ ಇದನ್ನು ಹಿರಿಯಗಂಗವಾಡಿ ಎಂದು ಕರೆಯಲಾಗಿದೆ. ಹತ್ತಿರದಲ್ಲಿಯೇ ಚಿಕ್ಕಗಂಗವಾಡಿ ಎಂಬ ಊರಿದೆ. ಈ ಗ್ರಾಮದಲ್ಲಿ ಈಶ್ವರ, ಆಂಜನೇಯ, ಗೋಪಾಲಸ್ವಾಮಿ ಹಾಗೂ ಮಾರಮ್ಮ ದೇವಾಲಯಗಳಿವೆ. ಆಂಜನೇಯ ದೇವಾಲಯ ವಿಜಯನಗರ ಅರಸರಕಾಲದ್ದು; ಈಗ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯದಲ್ಲಿ ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಬಲಹರಿಯ ಪುತ್ರ ಕೇತಣ್ಣ ಎಂಬವನು ಬಲ್ಲಾಳನ ದಾಯಾದಿ ರಾಮನಾಥನೊಂದಿಗೆ ಮಾಡಿದ ತುರುಗಾಳಗವೊಂದರಲ್ಲಿ ಮಡಿದ ಸಂಗತಿಯನ್ನು ತಿಳಿಸುವ ಶಾಸನವಿದೆ.

ಗೋಪಾಲಸ್ವಾಮಿ ದೇವಾಲಯವೂ ವಿಜಯನಗರ ಕಾಲದ ರಚನೆ ಇದೂ ಜೀರ್ಣೋದ್ಧಾರಗೊಂಡಿದೆ. ದೇವಾಲಯದಲ್ಲಿ ಗರ್ಭಗೃಹ, ಅರ್ಧ ಮಂಟಪ ಹಾಗೂ ಮಂಟಪಗಳಿವೆ. ಮಂಟಪದಲ್ಲಿ ಅಷ್ಟಕೋನಾಕೃತಿಯ ಎರಡು ಕಂಬಗಳಿವೆ. ಗರ್ಭಗೃಹದಲ್ಲಿ ವೇಣುಗೋಪಾಲಸ್ವಾಮಿಯ ಪ್ರಾಚೀನ ಮೂರ್ತಿ ಇದೆ. ಇಲ್ಲಿನ ಶಿಖರವನ್ನು ಇಟ್ಟಿಗೆ ಹಾಗೂ ಗಾರೆಯಿಂದ ಜೀರ್ಣೋದ್ಧಾರ ಮಾಡಲಾಗಿದೆ.

ಇಲ್ಲಿಗೆ ಸಮೀಪದ ಕೂಟಗಲ್ಲು ಒಂದು ನಿಸರ್ಗ ರಮಣೀಯ ಸ್ಥಳ. ಕಗ್ಗಲ್ಲು ಮೊರಡಿಯ ಕಿರುಗುಡ್ಡದ ಮೇಲೆ ನಿಂತಿರುವ ಶಿಖರ ಜೋಡಿಯ ಶಿಲಾನ್ಯಾಸ ಅತ್ಯಂತ ಆಕರ್ಷಣೀಯವಾದುದು. ಸ್ಥಳೀಯರು ಇವನ್ನು ಅಗಸ ಹಾಗೂ ಅಗಸಗಿತ್ತಿ ಎಂದೂ ಹೇಳುತ್ತಾರೆ. ಋಷಿಯ ಶಾಪದಿಂದ ಪ್ರಣಯಿಗಳಿಬ್ಬರು ಕಲ್ಲಾದರೆಂಬುದು ಇಲ್ಲಿಯ ಸ್ಥಳಪುರಾಣ. ಬೆಟ್ಟದ ಮೇಲೆ ತಿಮ್ಮಪ್ಪನ (ವೆಂಕಟರಮಣಸ್ವಾಮಿ) ದೇವಾಲಯವಿದೆ. ಇದನ್ನು ಮೈಸೂರು ಶೈಲಿಯಲ್ಲಿ ಕಟ್ಟಲಾಗಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳಿವೆ. ಶ್ರಾವಣಮಾಸದ ಕೊನೆ ಶನಿವಾರದಂದು ಇಲ್ಲಿ ಜಾತ್ರೆ ನಡೆಯುತ್ತದೆ. ದೇವಾಲಯದ ಹತ್ತಿರದಲ್ಲಿ ಪುಷ್ಕರಣಿ ಇದೆ. ಇಲ್ಲೊಂದು ಕೋಟೆ ಇತ್ತೆಂದು ತಿಳಿಸುವ ಕೋಟೆಯ ಪಳೆಯುಳಿಕೆಗಳೂ ಇವೆ. ದೇವಾಲಯಕ್ಕೆ ಎದುರಿನಲ್ಲಿ ಇನ್ನೊಂದು ಶಿಖರದಲ್ಲಿ ಚಕ್ರತೀರ್ಥ ಎಂಬ ಕೊಳವಿದೆ. ಬೆಟ್ಟದ ಕೆಳಗೆ ಹೊಲವೊಂದ ರಲ್ಲಿ 1530ರ ಒಂದು ಶಾಸನವಿದೆ. ಸೋಮೇಶ್ವರ ದೇವಾಲಯಕ್ಕೆ ನೀಡಿದ ದತ್ತಿಯನ್ನು ಇದು ದಾಖಲಿಸಿದೆ. ಶಾನುಭೋಗನಹಳ್ಳಿಗೆ 3 ಕಿಮೀ ದೂರವಿರುವ ಕೃಷ್ಣಗಿರಿಯಲ್ಲಿ ಉಬ್ಬುಶಿಲ್ಪದ ಕೃಷ್ಣಸ್ವಾಮಿ ದೇವರ ಮೂರ್ತಿಯಿದೆ. ಕಬ್ಬಿಣದ ಸಲಾಕೆಗಳನ್ನು ಬಳಸಿ ದೇವಾಲಯದ ಆಕಾರವನ್ನು ನಿರ್ಮಿಸಲಾಗಿದೆ. ಶ್ರಾವಣಮಾಸದ ಕೊನೆಯ ಶನಿವಾರದಂದು ಜಾತ್ರೆ ನಡೆಯುತ್ತದೆ. (ಎಸ್.ಜಿ.ಎ.)

**ದೊಡ್ಡಗದ್ದವಳ್ಳಿ:** ಹಾಸನ ಜಿಲ್ಲೆ ಹಾಸನ ತಾಲ್ಲೂಕಿನಲ್ಲಿ ಹಾಸನ–ಬೇಲೂರು ಹೆದ್ದಾರಿಯ ಪಕ್ಕದಲ್ಲಿ ಹಾಸನದಿಂದ 18ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 1,159. ಇಲ್ಲಿರುವ ಲಕ್ಷ್ಮೀ ದೇವಾಲಯ ಹೊಯ್ಸಳ ವಾಸ್ತುಶಿಲ್ಪದ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಇಲ್ಲಿರುವ ಶಾಸನದ ಪ್ರಕಾರ 1113ರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದಲ್ಲಿ ವಣಿಜಶ್ರೇಷ್ಠನಾದ ಕುಲ್ಲಹಣ ರಾಹುತ ಮತ್ತು ಅವನ ಪತ್ನಿ ಸಹಜಾದೇವಿ ಈ ದೇವಾಲಯವನ್ನು ಸ್ಥಾಪಿಸಿದರು. ಈ ದೇವಾಲಯ ದಿಂದ ಈ ಸ್ಥಳಕ್ಕೆ ಅಭಿನವ ಕೊಲ್ಲಾಪುರ ಎಂಬ ಹೆಸರೂ ಇತ್ತು.

ಈ ದೇವಾಲಯ ಹೊಯ್ಸಳ ಶೈಲಿಯ ಮೊದಲ ಹೆಜ್ಜೆ ಎಂದು ಅನೇಕ ವಿದ್ವಾಂಸರ ಅಭಿಪ್ರಾಯ. ಬೇಲೂರಿನ ದೇವಾಲಯಕ್ಕಿಂತಲೂ ಪ್ರಾಚೀನವಾದ ಈ ದೇವಾಲಯದಲ್ಲಿ ಅನೇಕ ವೈಶಿಷ್ಟ್ಯಗಳಿವೆ. ಸಾಮಾನ್ಯ ವಾಗಿ ಎಲ್ಲ ಹೊಯ್ಸಳ ದೇವಾಲಯಗಳಲ್ಲಿಯೂ ಕಾಣಬರುವ ಜಗತಿ ಇಲ್ಲಿಲ್ಲ. 118' 6" ಉದ್ದ, 116' 9" ಅಗಲದ ಅಂಗಳದ ಮಧ್ಯದಲ್ಲಿರುವ ಈ ದೇವಾಲಯದ ಸುತ್ತಲೂ 7' ಎತ್ತರದ ಗೋಡೆಯಿದೆ. ಪೂರ್ವ ಮತ್ತು ಪಶ್ಚಿಮಗಳಲ್ಲಿ ಎರಡು ಮಹಾದ್ವಾರಗಳಿವೆ. ಪಶ್ಚಿಮದ ಮಹಾದ್ವಾರಕ್ಕೆ ಸೇರಿರುವಂತೆ ಇರುವ ಮಂಟಪದಲ್ಲಿ ಹದಿನಾರು ಕಂಬಗಳೂ ಏಳು ಭುವನೇಶ್ವರಿಗಳೂ ಇವೆ. ಈ ಭುವನೇಶ್ವರಿಗಳು ಉತ್ತಮ ಕೆತ್ತನೆ ಕೆಲಸದಿಂದ ಕೂಡಿದ್ದು ಅಷ್ಟದಿಕ್ಪಾಲಕರು, ತಾಂಡವೇಶ್ವರ ಮುಂತಾದ ಮೂರ್ತಿಗಳಿಂದ ಅಲಂಕೃತವಾಗಿವೆ. ಪೂರ್ವದ ಮಹಾದ್ವಾರ ಸುಂದರ ಶಿಲ್ಪಗಳಿಂದ ಅಲಂಕೃತವಾಗಿದೆ. ಮಧ್ಯದಲ್ಲಿರುವ ಲಕ್ಷ್ಮೀ ದೇವಾಲಯ ಚತುಷ್ಕೂಟಾಚಲ, ನಾಲ್ಕು ದಿಕ್ಕುಗಳಲ್ಲಿಯೂ ಒಂದೊಂದು ಗರ್ಭಗುಡಿಯಿರುವ ದೇವಾಲಯಕ್ಕೆ ಇದೊಂದು ಉತ್ತಮ ಉದಾಹರಣೆ. ಇವುಗಳ ಜೊತೆಗೆ ಅಂಗಳದ ನಾಲ್ಕು ಮೂಲೆಗಳಲ್ಲಿ ನಾಲ್ಕು ಸಣ್ಣ ಗುಡಿಗಳಿವೆ. ಇವುಗಳೂ ಹೊಯ್ಸಳ ರೀತಿಯ ಶಿಖರಗಳನ್ನು ಹೊಂದಿವೆ. ಅಂಗಳದ ಈಶಾನ್ಯದಲ್ಲಿ ಗರ್ಭಗೃಹ ಮತ್ತು ಸುಕನಾಸಿಯನ್ನುಳ್ಳ ಇನ್ನೊಂದು ಸಣ್ಣ ಗುಡಿಯಿದೆ. ಇಲ್ಲಿಯೂ ಹೊಯ್ಸಳ ಶಿಖರವನ್ನು ಕಾಣಬಹುದು. ಪ್ರಧಾನ ದೇವಾಲಯವೂ ಸೇರಿದಂತೆ ಒಟ್ಟು ಇಲ್ಲಿ ಒಂಬತ್ತು ಶಿಖರಗಳಿವೆ. ಈ ಎಲ್ಲ ಶಿಖರಗಳ ಮೇಲೂ ಹೊಯ್ಸಳ ಲಾಂಛನವಿದೆ. ಈ ರೀತಿಯ ಶಿಖರಗಳ ಸಮೂಹವಿರುವುದು ಇಲ್ಲಿಯ ವೈಶಿಷ್ಟ್ಯ. ಈ ಶಿಖರಗಳು ಹೆಚ್ಚಿನ ಅಲಂಕರಣವಿಲ್ಲದೆ ಮೆಟ್ಟಿಲು ಪಿರಮಿಡ್ಡಿನಾಕಾರದಲ್ಲಿ ಮೇಲೇಳುವ ಕದಂಬ ನಾಗರ ಶೈಲಿಯವು. ಮುಖ್ಯ ದೇವಾಲಯದಲ್ಲಿ ಪೂರ್ವದ ಗರ್ಭಗುಡಿಯಲ್ಲಿ ಲಕ್ಷ್ಮಿ, ಪಶ್ಚಿಮದಲ್ಲಿ ಭೂತನಾಥ ಲಿಂಗ, ದಕ್ಷಿಣದಲ್ಲಿ ವಿಷ್ಣು ಮತ್ತು ಉತ್ತರದಲ್ಲಿ ಕಾಳಿ ಪ್ರತಿಷ್ಠಾಪಿಸಲ್ಪಟ್ಟಿದ್ದುವು. ಲಕ್ಷ್ಮೀದೇವಿಯ ಗರ್ಭಗುಡಿಯ ದ್ವಾರದಲ್ಲಿ ತಾಂಡವೇಶ್ವರ, ವಿಷ್ಣುವಿನ ಗರ್ಭಗುಡಿಯ ದ್ವಾರದಲ್ಲಿ ಯೋಗಾನರಸಿಂಹ, ಭೂತನಾಥ ಗುಡಿಯ ದ್ವಾರದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ಪ್ರಧಾನ ದೇವತೆ ಲಕ್ಷ್ಮೀದೇವಿಯ ಮೂರ್ತಿ ಸುಂದರ ಶಿಲ್ಪ. ಮೂರೂವರೆ ಅಡಿ ಎತ್ತರದ ಈ ವಿಗ್ರಹದ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಜಪಸರ ಮತ್ತು ಗದೆಗಳಿವೆ. ಈ ದೇವಾಲಯವನ್ನು ಮಲ್ಲೋಜ ಮಣಿಯೋಜ ನೆಂಬ ಶಿಲ್ಪಿ ನಿರ್ಮಿಸಿದನೆಂದು ಶಾಸನವೊಂದರಿಂದ ತಿಳಿದುಬರುತ್ತದೆ. ಈ ದೇವಾಲಯದಲ್ಲಿ ವಿಷ್ಣುವರ್ಧನ, ಒಂದನೆಯ ನರಸಿಂಹ, ಎರಡನೆಯ ಬಲ್ಲಾಳ ಮುಂತಾದವರ ಕಾಲದ ದಾನಶಾಸನಗಳಿವೆ. (ಎ.ವಿ.ಎನ್.)

**ದೊಡ್ಡಬಳ್ಳಾಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ದೇವನಹಳ್ಳಿ, ಪಶ್ಚಿಮದಲ್ಲಿ ತುಮಕೂರು, ದಕ್ಷಿಣದಲ್ಲಿ ಬೆಂಗಳೂರು ನಗರ, ನೆಲಮಂಗಲ, ಉತ್ತರದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕುಗಳು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 790 ಚ.ಕಿಮೀ. ತಾಲ್ಲೂಕಿನಲ್ಲಿ 295 ಗ್ರಾಮಗಳಿವೆ. ದೊಡ್ಡಬಳ್ಳಾಪುರ, ದೊಡ್ಡಬೆಳಮಂಗಲ, ಮಧುರೆ, ಸಾಸಲು, ತೂಬುಗೆರೆ ಇವು ತಾಲ್ಲೂಕಿನಲ್ಲಿರುವ ಹೋಬಳಿಗಳು. ಜನಸಂಖ್ಯೆ 2,68,332.

ತಾಲ್ಲೂಕಿನ ಉತ್ತರ ಹಾಗೂ ವಾಯವ್ಯ ಪ್ರದೇಶ ಬೆಟ್ಟಗಳ ಸಾಲಿನಿಂದ ಕೂಡಿದೆ. ಇತರ ಎಲ್ಲಾ ಭಾಗ ಹಳ್ಳದಿಣ್ಣೆಗಳಿಂದ ಕೂಡಿದ ಬಯಲು ಪ್ರದೇಶ. ಅರ್ಕಾವತಿ ನದಿ ನಂದಿದುರ್ಗ ಬೆಟ್ಟಗಳ ಈಶಾನ್ಯ ಭಾಗದಲ್ಲಿ ಹುಟ್ಟಿ ಆಗ್ನೇಯ ದಿಕ್ಕಿನಲ್ಲಿ ಹರಿಯುತ್ತದೆ. ಈ ನದಿ ತನ್ನ ಪಾತ್ರದಲ್ಲಿರುವ ಅನೇಕ ಕೆರೆಗಳಿಗೆ ಹಾಗೂ ತಾಲ್ಲೂಕಿನ ಉತ್ತರ ಭಾಗವನ್ನುಳಿದು ಉಳಿದೆಲ್ಲಾ ಪ್ರದೇಶಗಳಿಗೆ ನೀರನ್ನೊದಗಿಸುತ್ತದೆ. ತಾಲ್ಲೂಕಿನ ಉತ್ತರ ಭಾಗ ಉತ್ತರ ಪೆನ್ನಾರ್ ಮತ್ತಿತರ ಉಪನದಿಗಳಿಂದ ನೀರನ್ನು ಪಡೆಯುತ್ತದೆ. ತಾಲ್ಲೂಕಿನ ಇತರ ಭಾಗಗಳು ಕೆರೆ, ಬಾವಿಯ ನೀರನ್ನು ಅವಲಂಬಿಸಿವೆ.

ತಾಲ್ಲೂಕಿನ ಹೆಚ್ಚು ಪ್ರದೇಶ ಕೆಂಪುಮಣ್ಣಿನಿಂದ ಕೂಡಿದೆ. ಕೆಲವು ಕಡೆಗಳಲ್ಲಿ ಇದು ಮರಳು ಮಿಶ್ರಿತವಾಗಿದ್ದು ರಾಗಿ ಜೋಳ ಮೊದಲಾದ ಒಣಬೆಳೆಗಳಿಗೆ ಉಪಯುಕ್ತವಾಗಿದೆ. ತಾಲ್ಲೂಕಿನ ದಕ್ಷಿಣ ಹಾಗೂ ಮಧ್ಯ ಭಾಗಗಳಲ್ಲಿ ಕಂಡು ಬರುವ ಭೂಮಿ ಅಧಿಕ ಫಲವತ್ತಾಗಿದೆ. ಇಲ್ಲಿಯ ಮಣ್ಣು ಬೂದು ಹಾಗೂ ಕೆಂಪು ಬಣ್ಣ ಮಿಶ್ರಿತವಾದುದು. ಕಪ್ಪುಮಣ್ಣು ತಾಲ್ಲೂಕಿನ ಕೆಲವೆಡೆಗಳಲ್ಲಿ ಮಾತ್ರ ಕಂಡುಬರುತ್ತದೆ. ತಾಲ್ಲೂಕಿನ ಉತ್ತರ ಹಾಗೂ ವಾಯವ್ಯ ಭಾಗಗಳಲ್ಲಿ ಭೂಮಿ ವ್ಯವಸಾಯಕ್ಕೆ ಅಷ್ಟೇನೂ ಉಪಯುಕ್ತವಾಗಿಲ್ಲ. ತಾಲ್ಲೂಕನ್ನು ವಾಯವ್ಯ ಭಾಗದಲ್ಲಿ ಹಬ್ಬಿರುವ ಕುರುಚಲು ಕಾಡೊಂದನ್ನುಳಿದರೆ ಇಲ್ಲಿ ಇನ್ನಾವುದೇ ಸ್ವಾಭಾವಿಕ ಸಸ್ಯವರ್ಗ ಕಂಡುಬರುವುದಿಲ್ಲ. ಉತ್ತರದಲ್ಲಿನ ಮಾಕಳಿದುರ್ಗದ ಬಳಿ ಕೊಂಚ ಅರಣ್ಯಪ್ರದೇಶವಿದೆ. ಈ ತಾಲ್ಲೂಕಿನ ವಾಯುಗುಣ ಬೆಂಗಳೂರು ನಗರದ ವಾಯುಗುಣವನ್ನು ಹೋಲುತ್ತದೆ. ಹವೆ ಸಾಮಾನ್ಯವಾಗಿ ತಂಪಾಗಿದ್ದು, ಆರೋಗ್ಯಕ್ಕೆ ಸಹಕಾರಿಯಾಗಿದೆ.

ರಾಗಿ ಮತ್ತು ಜೋಳ ತಾಲ್ಲೂಕಿನ ಮುಖ್ಯ ಬೆಳೆಗಳು. ಹೊಗೆಸೊಪ್ಪನ್ನು ವಿಶೇಷವಾಗಿ ಬೆಳೆಯುತ್ತಾರೆ. ಸಣ್ಣ ಪ್ರಮಾಣದಲ್ಲಿ ಆಲೂಗೆಡ್ಡೆ ಬೆಳೆಯುವುದುಂಟು. ಸ್ವಲ್ಪಮಟ್ಟಿಗೆ ರೇಷ್ಮೆ ಸಾಕಣೆಯೂ ಇದೆ.

ತಾಲ್ಲೂಕಿನ ಸಾರಿಗೆ ಸೌಲಭ್ಯ ಉತ್ತಮವಾಗಿದೆ. ಬೆಂಗಳೂರು–ಗುಂತಕಲ್ಲು ರೈಲುಮಾರ್ಗ ಈ ತಾಲ್ಲೂಕಿನ ಮಧ್ಯಭಾಗದಲ್ಲಿ ಬೆಂಗಳೂರು ಗೌರಿಬಿದನೂರು ರಸ್ತೆಯ ಪಕ್ಕದಲ್ಲಿ ಹಾದುಹೋಗುತ್ತದೆ. ರಾಜಾನಕುಂಟೆ, ದೊಡ್ಡಬಳ್ಳಾಪುರ ಹಾಗೂ ಮಾಕಳಿದುರ್ಗ ಈ ರೈಲು ಮಾರ್ಗದಲ್ಲಿರುವ ಮುಖ್ಯ ನಿಲ್ದಾಣಗಳು. ಬೆಂಗಳೂರು–ದೊಡ್ಡಬಳ್ಳಾಪುರ–ಗೌರಿಬಿದನೂರು ರಾಜ್ಯ ಹೆದ್ದಾರಿ ದಕ್ಷಿಣದಿಂದ ಉತ್ತರಕ್ಕೆ ತಾಲ್ಲೂಕಿನ ಮಧ್ಯಭಾಗದಲ್ಲಿ ಹಾದುಹೋಗುತ್ತದೆ. ಪೂರ್ವ ಪಶ್ಚಿಮವಾಗಿ ಕೋಲಾರ–ಸೋಮಾಪುರ ಜಿಲ್ಲಾ ಹೆದ್ದಾರಿ ದೊಡ್ಡಬಳ್ಳಾಪುರದ ಸಮೀಪದಲ್ಲಿ ಹಾದುಹೋಗುತ್ತದೆ. ದೊಡ್ಡಬಳ್ಳಾಪುರದಿಂದ ಗೌರಿಬಿದನೂರು, ಚಿಕ್ಕಬಳ್ಳಾಪುರ, ದೇವನಹಳ್ಳಿ, ನೆಲಮಂಗಲ, ಮಧುಗಿರಿ ಮುಂತಾದ ಸ್ಥಳಗಳಿಗೆ ಸುಗಮ ಸಾರಿಗೆ ಸಂಪರ್ಕವಿದೆ. ಘಾಟಿ ಸುಬ್ರಹ್ಮಣ್ಯ **(ನೋಡಿ)** ಈ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ.

ದೊಡ್ಡಬಳ್ಳಾಪುರ ಈ ತಾಲ್ಲೂಕಿನ ಆಡಳಿತಕೇಂದ್ರ. ಇದು ಅರ್ಕಾವತಿ ನದಿಯ ಬಲದಂಡೆಯ ಮೇಲೆ ಬೆಂಗಳೂರಿನಿಂದ ಈಶಾನ್ಯಕ್ಕೆ 39 ಕಿಮೀ ದೂರದಲ್ಲಿದೆ. ಜನಸಂಖ್ಯೆ 77,778. ಈ ಪಟ್ಟಣ ಬೆಂಗಳೂರು ನಗರಕ್ಕೆ ಹತ್ತಿರವಾಗಿರುವುದರಿಂದ ನಗರೀಕರಣ ತೀವ್ರಗತಿಯಲ್ಲುಂಟಾಗುತ್ತಿದೆ. ಇದು ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ. ಈ ಊರಿನಲ್ಲಿ ಪುರಸಭಾ ಆಡಳಿತ ಇದೆ.

ಇದು ನೇಯ್ಗೆಯ ಪ್ರಮುಖ ಕೇಂದ್ರ. 1932ರ ಅನಂತರ ಕೈಮಗ್ಗಗಳಿಗೆ ಬದಲಾಗಿ ಪವರ್‌ಲೂಂ ಅಸ್ತಿತ್ವಕ್ಕೆ ಬಂತು. ಇಲ್ಲಿ ತಯಾರಾದ ಅರಳೆ ಮತ್ತು ಧರ್ಮಾವರಂ ಮಾದರಿ ಬಟ್ಟೆಗಳಿಗೆ ದೇಶವಿದೇಶಗಳಲ್ಲಿ ಉತ್ತಮ ಬೇಡಿಕೆಯಿದೆ. ಇಲ್ಲಿ ಕಾಟನ್ ರೇಯಾನ್ ಟೆಕ್ಸ್‌ಟೈಲ್ ಕೋ ಆಪರೇಟಿವ್ ಸೊಸೈಟಿ. ಆದಿನಾರಾಯಣ ಕಾರ್ಖಾನೆ ಸಂಘ ಮೊದಲಾದ ಅನೇಕ ಕಾರ್ಮಿಕ ಸಂಘಸಂಸ್ಥೆಗಳಿವೆ. ಪ್ರತಿ ಗುರುವಾರ ಇಲ್ಲಿ ದೊಡ್ಡ ಸಂತೆ ನಡೆಯುತ್ತದೆ.

ಲೋಕಸೇವಾನಿರತ ಕೊಂಗಾಡಿಯಪ್ಪ ಸ್ಮಾರಕ ವಿದ್ಯಾಸಂಸ್ಥೆ ಇಲ್ಲಿ ಒಂದು ಪ್ರೌಢಶಾಲೆ ಹಾಗೂ ಕಾಲೇಜನ್ನು ನಡೆಸುತ್ತಿದೆ.

ಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯ

ದೊಡ್ಡಬಳ್ಳಾಪುರ ಹೊಯ್ಸಳರ ಕಾಲದಲ್ಲಿ ಒಂದು ಮುಖ್ಯ ವ್ಯಾಪಾರ ಸ್ಥಳವಾಗಿತ್ತು. ಆದರೆ ಆವತಿ ಕುಲದ ಮಲ್ಲಬೈರೇಗೌಡ ಇದನ್ನು ಸ್ಥಾಪಿಸಿದನೆಂಬ ಹೇಳಿಕೆ ಸಹ ಇದೆ. 16–17ನೆಯ ಶತಮಾನಗಳಲ್ಲಿ ಆವತಿ ಕುಲದ ಒಂದು ಶಾಖೆ ಇಲ್ಲಿ ಆಳಿಕೆ ನಡೆಸುತ್ತಿತ್ತು. 1637–38ರ ಹೊತ್ತಿಗೆ ಬಿಜಾಪುರದ ರಣದುಲ್ಲಾಖಾನ್ ಇದನ್ನು ಆಕ್ರಮಿಸಿದ್ದ. ಸುಮಾರು ನಲವತ್ತು ವರ್ಷಗಳ ಕಾಲ ಬಿಜಾಪುರದ ಸುಲ್ತಾನರ ಅಧೀನದಲ್ಲಿದ್ದು ಅನಂತರ ಮರಾಠರ ಕೈಸೇರಿ 1689ರಲ್ಲಿ ಮುಗಲರ ದಾಳಿಗೆ ತುತ್ತಾಯಿತು. ಅನಂತರ ಇದನ್ನು 54,059 ಪಗೋಡ ಆದಾಯವೀಯುವ ದೊಡ್ಡ ಜಾಗೀರಾಗಿ ಮಾಡಿ ಅಲಿ ಖುಲಿಖಾನ್ ಎಂಬ ಸರದಾರನಿಗೆ ಕೊಡಲಾಯಿತು. ಇವನು ಸ್ವಲ್ಪಕಾಲ ಅನುಭವಿಸಿ ಮೃತನಾದಮೇಲೆ ಶಿರಾದ ನವಾಬನಾಗಿದ್ದ ಅವನ ಮಗ ದುರ್ಗ ಖುಲಿ ಖಾನ್ ಮುಂದೆ ಇದರ ಜಾಗೀರದಾರನಾಗಿ ಒಂದು ವರ್ಷ ಅನುಭವಿಸಿದ. ಅನಂತರ ಸು. 49 ವರ್ಷಗಳ ಕಾಲ ಶಿರಾ ನವಾಬರ ವಶದಲ್ಲಿದ್ದು ನಿಜಾಮನ ಕೈಸೇರಿತ್ತು. ನಿಜಾಮ ಇದನ್ನು ಅಬ್ಬಾಸ್ ಖಾನ್ ಎಂಬುವವನಿಗೆ ಜಾಗೀರಾಗಿತ್ತಿದ್ದ. 1761ರಲ್ಲಿ ದೊಡ್ಡಬಳ್ಳಾಪುರ ಹೈದರ್ ಅಲಿಯ ವಶವಾಗಿ ಮೈಸೂರು ಸಂಸ್ಥಾನಕ್ಕೆ ಸೇರಿತು.

ಪ್ರಾಚೀನ ಕಾಲಕ್ಕೆ ಸಂಬಂಧಿಸಿದ ಹಲವಾರು ಅವಶೇಷಗಳು ದೊಡ್ಡಬಳ್ಳಾಪುರದಲ್ಲಿ ಉಳಿದಿವೆ. ಹಿಂದಿದ್ದ ಕೋಟೆ ಈಗ ನಾಮಾಮಾತ್ರ

ವಾಗಿದೆ. ಈ ಭಾಗದಲ್ಲಿ ಹಲವು ಕಟ್ಟೆಗಳು ಮತ್ತು ಕಟ್ಟಡಗಳ ಅವಶೇಷಗಳಿವೆ. ಇವುಗಳಲ್ಲಿ ಅಕುರ್ ಖಾನಾ ಮತ್ತು ಅದರ ಬಳಿಯ ಬಾವಿ ಮುಖ್ಯವಾದವು. ಅಬ್ಬಾಸ್ ಖುಲಿಖಾನ್ ಕಟ್ಟಿಸಿದ ಅಕುರ್ ಖಾನಾ ಈಗ ಬಹುಮಟ್ಟಿಗೆ ಹಾಳಾಗಿದೆ. ಬಾವಿ ಸುಸ್ಥಿತಿಯಲ್ಲಿದ್ದು ಮೂರು ಕಡೆ ಮೆಟ್ಟಿಲುಗಳೂ ನೀರಿನ ಮೇಲೆ ಒಂದು ಜಾಲಂಧ್ರವೂ ಇವೆ. ಊರ ಪಶ್ಚಿಮದಲ್ಲಿ 17ನೆಯ ಶತಮಾನದಲ್ಲಿದ್ದ ಮೊಹಿದ್ದೀನ್ ಚಿಷ್ಟಿ ಎಂಬ ಸಂತನ ದರ್ಗಾ ಇದೆ. ಹಲವು ಹಳೆಯ ದೇವಾಲಯಗಳ ಕಲ್ಲನ್ನು ಉಪಯೋಗಿಸಿ ಇದನ್ನು ಕಟ್ಟಲಾಗಿದೆ. ಈ ಊರಿನ ಸಾಗರ ಕೆರೆಯ ಏರಿಯಲ್ಲೂ ಹಲವು ದೇವಾಲಯಗಳ ಕಲ್ಲುಗಳು ಸೇರಿಹೋಗಿವೆ.

ಈಗ ಇಲ್ಲಿರುವ ದೇವಾಲಯಗಳೆಲ್ಲವೂ ಈಚಿನವು. ಈಗ ಪಾಳುಬಿದ್ದಿರುವ ಆದಿನಾರಾಯಣ ದೇವಾಲಯ ಹಿಂದೆ ಸುಂದರ ಕಟ್ಟಡವಾಗಿತ್ತು. ಸದ್ಯ ಉಳಿದಿರುವ ಭಾಗದ ಕೆಲವು ಕಂಬಗಳು ಮತ್ತು ಗೋಡೆಗಳ ಮೇಲೆ ಗಜೇಂದ್ರ ಮೋಕ್ಷ, ರಾಮಾಯಣ, ಭಾಗವತ ಮೊದಲಾದ ಹಲವು ಕಥೆಗಳು ಶಿಲ್ಪಿತವಾಗಿವೆ. ಇಲ್ಲಿರುವ ಚಂದ್ರಮೌಳೇಶ್ವರ ದೇವಾಲಯದ ಮುಮ್ಮಂಟಪದ ಕಂಬಗಳ ಮೇಲೂ ಭೈರವ, ವೀರಭದ್ರ, ವ್ಯಾಘ್ರಪಾದ, ಕಣ್ಣಪ್ಪ ಮೊದಲಾದ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಅರುಣಾಚಲ ಪಂತ್ ಮತ್ತು ಅವನ ಪತ್ನಿ ಶೇಷಮ್ಮ ಇವರ ಭಕ್ತವಿಗ್ರಹಗಳಿವೆ. ಅರುಣಾಚಲ ಪಂತ್ 18ನೆಯ ಶತಮಾನದ ಅಂತ್ಯಭಾಗದಲ್ಲಿ ಈ ದೇವಾಲಯವನ್ನೂ ಇಲ್ಲಿನ ವೆಂಕಟರಣಸ್ವಾಮಿ ಗುಡಿಯನ್ನೂ ಕಟ್ಟಿಸಿದನೆಂದು ಪ್ರತೀತಿ. ವೆಂಕಟರಮಣಸ್ವಾಮಿ ದೇವಾಲಯ ದೊಡ್ಡದು. ಇದರ ಸುತ್ತ ಪ್ರಾಕಾರವಿದ್ದು ಅದರ ಮೇಲೆ ಹಿಂದು ಇಸ್ಲಾಮೀ ಶೈಲಿಯ ಗಚ್ಚಿನ ಕೈಪಿಡಿ ಭಾಗ ಇದೆ. ಈ ದೇವಾಲಯದಲ್ಲೂ ಗಣಪತಿ, ದಶಾವತಾರಗಳು ಮೊದಲಾದ ದೇವಶಿಲ್ಪಗಳೂ ಅರುಣಾಚಲ ಪಂತ್ ದಂಪತಿಗಳ ಭಕ್ತವಿಗ್ರಹಗಳೂ ಇವೆ. ಪ್ರಾಕಾರದಲ್ಲಿ ಆದಿನಾರಾಯಣ ದೇವಾಲಯದಿಂದ ತಂದ ಮೂಲವಿಗ್ರಹವನ್ನಿಡಲಾಗಿದೆ. ಈ ಊರಿನಲ್ಲಿ ವಿಟ್ಠಲ ಮತ್ತು ಗೋಪಾಲಕೃಷ್ಣ ದೇವಾಲಯಗಳು ಇವೆ. (ಎಚ್.ವಿ.ಎಸ್)

**ದೊಡ್ಡಬಳ್ಳಾಪುರದ ಪಾಳೆಯಗಾರರು:** ಸು. 1539–1638. ಆವತಿ ವಂಶದ ಪಾಳೆಯಗಾರರ ಒಂದು ಶಾಖೆ. ಈ ಶಾಖೆಯವರ ಇತಿಹಾಸ ಹಲವಾರು ಅಸ್ಪಷ್ಟ ವಿವರಗಳನ್ನೊಳಗೊಂಡಿದೆ. ದೇವನಹಳ್ಳಿಯನ್ನು ಸ್ಥಾಪಿಸಿದ ಆವತಿಯ ಮಲ್ಲಭೈರೇಗೌಡ ದೊಡ್ಡಬಳ್ಳಾಪುರದ ಬಳಿ ಬೇಟೆಯಾಡುವಾಗ ಕೆಲವು ಶಕುನಗಳಾಗಿ ಆ ಬಗ್ಗೆ ಚಿಂತಿಸುತ್ತಿರುವಾಗ ಆದಿನಾರಾಯಣ ದೇವರು ಇರುವೆಯ ಗೂಡಿನಲ್ಲಿ ವಾಸಿಸುವಂತೆ ಅವನಿಗೆ ಕನಸಾಯಿತು. ಸ್ವಲ್ಪ ಕಾಲದಲ್ಲಿಯೇ ಅಲ್ಲಿ ಅವನು ಒಂದು ದೇವಾಲಯ ಮತ್ತು ದುರ್ಗವನ್ನು ಕಟ್ಟಿಸಿ ಸುತ್ತಲಿದ್ದ ಕಾಡುಗಳನ್ನು ಕಡಿಸಿ ಹೆಚ್ಚು ಭೂಮಿಯನ್ನು ವ್ಯವಸಾಯಕ್ಕೆ ಅನುಗೊಳಿಸಿದ ಎಂದು ದೊಡ್ಡಬಳ್ಳಾಪುರ ಸ್ಥಾಪನೆಯನ್ನು ಕುರಿತು ಸ್ಥಳಪ್ರತೀತಿ ಇದೆ. ಸ್ಥಳೀಯ ದಾಖಲೆಗಳು ಈ ವಂಶದ ಇತಿಹಾಸವನ್ನು ಹೀಗೆ ತಿಳಿಸುತ್ತವೆ: ಸ್ಥಿತಿವಂತನಾದ ಮಲ್ಲಭೈರೇಗೌಡ ಪೆನುಗೊಂಡದ ರಾಜನಿಂದ ನೆರೆಯ ಪಾಳೆಯಗಾರರನ್ನು ದಂಡಿಸುವ ಅಧಿಕಾರ ಪಡೆದು ಒಂದು ಲಕ್ಷ ಪಗೋಡಗಳನ್ನು ಕೊಡುವ ರಾಜ್ಯವನ್ನು ವಶಪಡಿಸಿಕೊಂಡ. ಇದರ ಆಡಳಿತ ನಿರ್ವಹಣೆಗಾಗಿ ತನ್ನ ಸೋದರ ಹಾವಳಿ ಭೈರೇಗೌಡನನ್ನು (I) ನೇಮಿಸಿದ. ಈತ 20 ವರ್ಷಗಳು ರಾಜ್ಯವಾಳಿ ತೀರಿಕೊಂಡ. ಇವನ ಅನಂತರ ದೊಡ್ಡ ಹಾವಳಿ ಭೆರೇಗೌಡ (II) 25 ವರ್ಷಗಳೂ ಅವನ ಪುತ್ರ ಹಾವಳಿ ಭೆರೇಗೌಡ (III) 40 ವರ್ಷಗಳೂ ರಾಜ್ಯವಾಳಿದರು. ಹಾವಳಿ ಭೆರೇಗೌಡ ಸತ್ತಾಗ ಅವನ ಮಗ ಚಿಕ್ಕಪ್ಪಗೌಡ ಅಪ್ರಾಪ್ತ ವಯಸ್ಕನಾದುದರಿಂದ, ಹಾವಳಿ ಭೆರೇಗೌಡನ ಸೋದರನ ಮಗ ಹಾಗೂ ದಳವಾಯಿಯಾಗಿದ್ದ ತಮ್ಮಣ್ಣಗೌಡ ಶ್ರದ್ಧೆ, ನಿಷ್ಠೆಯಿಂದ 10 ವರ್ಷ ರಾಜ್ಯವಾಳಿ ಆಗ್ಗೆ ಪ್ರಾಪ್ತ ವಯಸ್ಕನಾಗಿದ್ದ ಚಿಕ್ಕಪ್ಪಗೌಡನಿಗೆ ಅಧಿಕಾರ ವಹಿಸಿ ನಿವೃತ್ತನಾದ. ಚಿಕ್ಕಪ್ಪಗೌಡ ಅಧಿಕಾರ ಸ್ವೀಕರಿಸಿದ ಮೂರು ವರ್ಷಗಳಲ್ಲಿ ಬಿಜಾಪುರದ ಸೇನಾನಿ ರಣದುಲ್ಲಾಖಾನ್ ದೊಡ್ಡಬಳ್ಳಾಪುರವನ್ನು ವಶಪಡಿಸಿಕೊಂಡಾಗ ಪಾಳೆಯಗಾರರ ಆಳಿಕೆ ಕೊನೆಗೊಂಡಿತು (ಸು. 1637–38). (ಎಚ್.ವಿ.ಎಸ್.)

**ದೊಡ್ಡಬೆಲೆ ನಾರಾಯಣಶಾಸ್ತ್ರಿ:** 19ನೆಯ ಶತಮಾನದ ಉತ್ತರಾರ್ಧ ಮತ್ತು 20ನೆಯ ಶತಮಾನದ ಪೂರ್ವಾರ್ಧಗಳಲ್ಲಿ ಜೀವಿಸಿದ್ದ ಕನ್ನಡ ವಿದ್ವಾಂಸರು. ಬೆಂಗಳೂರಿನ ಶೀಗೇಬೇಲಿ ಇವರ ಸ್ಥಳ. ವೇದಶಾಸ್ತ್ರ ಪಾರಂಗತರಾಗಿದ್ದ ಇವರು ಅನೇಕ ಸಂಸ್ಕೃತ ಕಾವ್ಯಗಳನ್ನು ಕನ್ನಡಿಸಿದ್ದಾರೆ. ಜೊತೆಗೆ ವೇದಾಂತ ವಿಷಯದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಇವರು ಆಸ್ಥಾನ ವಿದ್ವಾಂಸರೂ ಆಗಿದ್ದರು. ವೆಸ್ಲಿಯನ್ ಮಿಷನ್ ಕೊಲಿಜಿಯೆಟ್ ಹೈಸ್ಕೂಲಿನಲ್ಲಿ ಕೆಲಕಾಲ ಪ್ರಧಾನ ಪಂಡಿತರಾಗಿ ಕೆಲಸ ಮಾಡಿದರೆಂದು ತೋರುತ್ತದೆ.

ಇವರ ಅನುವಾದಗಳಲ್ಲಿ ಕಾಳಿದಾಸನ ರಘುವಂಶ, ಕುಮಾರಸಂಭವ ಕಾವ್ಯಗಳು ಮುಖ್ಯವಾದುವು. ಪ್ರತಿಯೊಂದು ಸರ್ಗದಲ್ಲಿಯೂ ಕ್ರಮವಾಗಿ ಪದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ, ವಿಗ್ರಹ, ಧಾತುರೂಪಗಳನ್ನು ವಿವರಿಸಿರುವುದು ಇವರ ಅನುವಾದದ ವೈಶಿಷ್ಟ್ಯ. ಟೀಕಾ ತಾತ್ಪರ್ಯಸಹಿತವಾಗಿ ರಾಮಾಯಣ ಸುಂದರಕಾಂಡ, ವಿಷ್ಣುಸಹಸ್ರನಾಮರತ್ನ, ರಾಘವೇಂದ್ರ ಸ್ತೋತ್ರ, ಹರಿಸ್ತುತಿ, ಮುಕುಂದಮಾಲಾ, ಭರ್ತೃಹರಿ, ಸುಭಾಷಿತ ಶತಕಗಳು, ವಾಯುಸ್ತುತಿ, ಋಗ್ವೇದಸನ್ಧ್ಯಾರ್ಥವಿಚಾರ ಮುಂತಾದುವುಗಳನ್ನು ಇವರು ಪ್ರಕಟಿಸಿದ್ದಾರೆ. ಧರ್ಮಸಿಂಧುಸಾರದ 1– 2ನೆಯ ಪರಿಚ್ಛೇದಗಳು, ವಾಸುದೇವ ಮನನ ಇವುಗಳನ್ನು ಮೂಲಾನುಸಾರವಾಗಿ ಕನ್ನಡಕ್ಕೆ ತಂದಿದ್ದಾರೆ. ಇವರು ರಚಿಸಿದ ಶಿವಾಪರಾಧ ಕ್ಷಮಾಪಣಸ್ತೋತ್ರ ಹೃದಯಂಗಮವಾಗಿದೆ. ಚಮತ್ಕಾರ ಚಿಂತಾಮಣಿ ಒಂದು ಉತ್ತಮ ಕಥೆ. ಶಾಸ್ತ್ರಿಗಳು ಉತ್ತಮ ಸಂಪಾದಕರೂ ಆಗಿದ್ದರು. ಕಠೋಪನಿಷತ್, ಶ್ರೀಮದ್ದಶೋಪನಿಷದಃ, ಶುಕ್ರನೀತಿ ಮತ್ತು ಜೈಮಿನಿ ಭಾರತಗಳನ್ನು ಪರಿಷ್ಕರಿಸಿ ಸಂಪಾದಿಸಿದ್ದಾರೆ. ಶಾಸ್ತ್ರಿಗಳಿಂದ ಸಂಪಾದಿತವಾದ ಜೈಮಿನಿ ಭಾರತ ಒಂದು ಉತ್ತಮ ಸಂಪಾದನೆಯೆಂದು ಹೆಸರಾಗಿದೆ. (ಎಸ್.ಆರ್.ಎನ್.)

**ದೊಡ್ಡಮಳೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಸಬೆಯಿಂದ ಸು.5ಕಿಮೀ ಪಶ್ಚಿಮಕ್ಕೆ ಕಣ್ವ ನದಿಯ ಎಡದಂಡೆಯ ಮೇಲಿರುವ ಒಂದು ಗ್ರಾಮ. ಮಳೂರು ಎಂದೂ ಕರೆಯಲಾಗುತ್ತಿದೆ. ಜನಸಂಖ್ಯೆ 6,175. ಇದೊಂದು ಐತಿಹಾಸಿಕ ಸ್ಥಳ. ಸು. 1000 ದಲ್ಲಿ ಚೋಳ ಅಧಿಕಾರಿಯೊಬ್ಬ ಇದನ್ನು ಅಗ್ರಹಾರವಾಗಿ ಸ್ಥಾಪಿಸಿದ. ಪೆರಿಯ ಮಳೂರು ಅಗ್ರಹಾರ ಅಂದಿನ ಹೆಸರು. ಇಲ್ಲಿನ ಅಗ್ರಹಾರದ ಶ್ರೀವೈಷ್ಣವರ ಪ್ರಕಾರ ರಾಜೇಂದ್ರಸಿಂಹನಗರ ಎಂದೂ ಹೆಸರು ಇದ್ದಂತೆ ತಿಳಿಯುತ್ತದೆ. ಭಾರತದ ಹಿಂದು ಕಾನೂನಿಗೆ ಮೂಲಾಧಾರವೆಂದು ಪರಿಗಣಿತವಾಗಿರುವ ಮಿತಾಕ್ಷರಾ ಎಂಬ ಯಾಜ್ಞ್ಯವಲ್ಕ್ಯ ಸ್ಮೃತಿಯ ಟೀಕೆಯನ್ನು ವಿಜ್ಞಾನೇಶ್ವರ ಬರೆದಿದ್ದು ಇಲ್ಲಿಯೇ ಎಂಬ ಅಭಿಪ್ರಾಯವಿದೆ.

ಇಲ್ಲಿ ಕೈಲಾಸೇಶ್ವರ ಮತ್ತು ಅಪ್ರಮೇಯ ದೇವರುಗಳ ಎರಡು ಆಲಯಗಳಿವೆ. ಇವೆರಡೂ ಮೂಲತಃ ಅಗ್ರಹಾರದ ಭಾಗವಾಗಿ ಸು. 1000 ದಲ್ಲೇ ಕಟ್ಟಲಾದುವು. ಕೈಲಾಸೇಶ್ವರ ದೇವಾಲಯದಲ್ಲಿ ಗರ್ಭಗೃಹ ಸುಕನಾಸಿ ನವರಂಗ ಮುಖಮಂಟಪ ಇವೆ. ಗರ್ಭಗೃಹ ಮತ್ತು ಸುಕನಾಸಿ ಚೋಳಶೈಲಿಯವು. ನವರಂಗವೂ ಸೇರಿದಂತೆ ಈ ಭಾಗಗಳಲ್ಲಿ ಹೊರಗೋಡೆಯ ಮೇಲೆ ಅನೇಕ ತಮಿಳು ಶಾಸನಗಳಿವೆ. ನವರಂಗದಲ್ಲಿರುವ ನಾಲ್ಕು ಕಂಬಗಳು ಮತ್ತು ಮುಂದಿರುವ ಆರಂಕಣದ ಮುಖಮಂಟಪ

ಹೊಯ್ಸಳ 3ನೆಯ ಬಲ್ಲಾಳನ ಕಾಲದ್ದೆಂದು ತೋರುತ್ತದೆ. ನವರಂಗದ ಉತ್ತರದ್ವಾರದ ಪಕ್ಕದಲ್ಲಿ ಪಾರ್ವತಿ ಗುಡಿ ಇದೆ. ಇದರಲ್ಲಿ ಗರ್ಭಗೃಹ ಮತ್ತು ನವರಂಗಗಳಿವೆ. ಈ ಗುಡಿಗಳ ಮೇಲಿನ ಶಿಖರಗಳೂ ಸು. 17ನೆಯ ಶಮಾನದ ರಚನೆಗಳು. ಇವನ್ನು ಸುತ್ತುವರಿದಂತೆ ಪ್ರಾಕಾರ ಮತ್ತು ಮಹಾದ್ವಾರ ಇವೆ. ಇವು 3ನೆಯ ಬಲ್ಲಾಳನ ಕಾಲದ್ದಿರಬಹುದು.

ಅಪ್ರಮೇಯ ದೇವಾಲಯ ಊರಿನ ಮುಖ್ಯ ಗುಡಿ. ದೇವಾಲಯದ ಸುತ್ತ ಬೃಹತ್ ಪ್ರಾಕಾರ ಭಿತ್ತಿ, ಮುಂಭಾಗದಲ್ಲಿ ದೊಡ್ಡ ಮಹಾದ್ವಾರ, ಅದರ ಮೇಲೆ ಎತ್ತರದ ವಿಜಯನಗರ ಶೈಲಿಯ ಗೋಪುರ ಇವೆ. ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಒಳಭಾಗದಲ್ಲಿ ಸುತ್ತಲೂ ಮೂರಂಕಣ ಆಳದ ಕೈಸಾಲೆ ಇದೆ. ಕೈಸಾಲೆಯ ಹಿಂಭಾಗವನ್ನು ಕೆಲವೆಡೆ ಕೋಣೆಗಳಾಗಿ ವಿಂಗಡಿಸಿದ್ದು ಅವುಗಳಲ್ಲಿ ಜೀಯರ್, ನಮ್ಮಾಳ್ವರ್, ಮಡಪಳ್ಳಿ ನಾಚ್ಚಾರ್, ತಿರುಮಂಗೈ ಆಳ್ವಾರ್, ದೇಶಿಕ, ಕೂರತ್ತಾಳ್ವಾರ್, ಪಿಳ್ಳೈಲೋಕಾಚಾರ್ಯ, ಭಾಷ್ಯಾಕಾರ ಮತ್ತು ಬಾಲಕೃಷ್ಣ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಅಂಬೆಗಾಲಿಟ್ಟುಕೊಂಡು ಒಂದು ಕೈಯಲ್ಲಿ ಬೆಣ್ಣೆ ಹಿಡಿದಿರುವ ಇಲ್ಲಿನ ಬಾಲಕೃಷ್ಣ ಉಲ್ಲೇಖಾರ್ಹ ಕೃತಿ. ಮಹಾದ್ವಾರದಿಂದ ಒಳಹೋಗುತ್ತಿದ್ದಂತೆಯೇ ಪಾತಾಳಾಂಕಣವಿದೆ. ಎತ್ತರದ ಅಷ್ಟಮುಖ ಕಂಬಗಳಿಂದ ಎತ್ತಿದ ಈ ಭಾಗದಲ್ಲಿ ರಾಮದಾಸ ಮತ್ತು ಅವನ ಪತ್ನಿ ಮಂಚಿಲಕ್ಷ್ಮಿ ಕೈಮುಗಿದು ನಿಂತಿರುವ ವಿಗ್ರಹಗಳಿವೆ. ಈ ಭಾಗ ಚನ್ನಪಟ್ಟಣದ ಜಗದೇವರಾಯನ ಕಾಲದ ರಚನೆ. ಮಧ್ಯದಲ್ಲಿರುವ ಅಪ್ರಮೇಯ ಗುಡಿ ಮೂಲತಃ ಚೋಳ ಕಾಲದ್ದಾದರೂ ವಿಜಯನಗರದ ಕಾಲದಲ್ಲಿ ಮತ್ತು ಅನಂತರ ಬಹುವಾಗಿ ನವೀಕೃತವಾಗಿದೆ. ಗರ್ಭಗೃಹದಲ್ಲಿ ಚೋಳ ಕಾಲದ ಕೆಲವು ಉಳಿಕೆಗಳಿವೆ. ಮುಂದಿರುವ ಸುಕನಾಸಿ ಮತ್ತು ನವರಂಗಗಳಲ್ಲಿನ ಕಂಬಗಳು ಮತ್ತು ಶಿಲ್ಪಗಳು ಸ್ಪಷ್ಟವಾಗಿ ವಿಜಯನಗರ ಶೈಲಿಯವು. ಇವೆಲ್ಲಾ 16ನೆಯ ಶತಮಾನದಲ್ಲಿ ರಚಿತವಾದವು. ಗರ್ಭಗೃಹದಲ್ಲಿರುವ ಅಪ್ರಮೇಯ ವಿಗ್ರಹ (ಜನಾರ್ಧನ ಮೂರ್ತಿ) 4 1/2 ಅಡಿ ಎತ್ತರವಿದೆ. ವಿಗ್ರಹ ಶಿಲ್ಪ ರೂಪಣೆಯಲ್ಲಿ ಕೆಲವು ಹೊಯ್ಸಳ ಅಂಶಗಳಿರುವಂತೆ ಕಂಡರೂ ಇದು ಮೂಲ ಚೋಳರ ಕಾಲದ್ದೇ ಇರಬಹುದೆಂದು ಊಹೆ ಇದೆ. ಅಪ್ರಮೇಯ ದೇವಾಲಯ ಈ ಸುತ್ತಿನ ಪ್ರದೇಶದಲ್ಲೇ ದೊಡ್ಡ ಗುಡಿ. (ಕೆ.ಟಿ.ಆರ್.)

**ದೊಡ್ಡಯ್ಯ:** ಸು. 1550. ಜೈನಕವಿ. ಚಂದ್ರಪ್ರಭಚರಿತೆ ಎಂಬ ಕಾವ್ಯದ ಕರ್ತೃ. ಪಿರಿಯಾಪಟ್ಟಣದ ದೊರೆ ವಿರೂಪರಾಜೇಂದ್ರನ ಆಸ್ಥಾನದಲ್ಲಿ ಕರಣಿಕ ತಿಲಕನೂ ಜಿನಪುರಾಣ ಕಥಾಗಮ ನಿಪುಣನೂ ಆಗಿದ್ದ ದೇವಪ್ಪ ಈತನ ತಂದೆ. ಗುರು ಪಂಡಿತಮುನಿ. ಪೂರ್ವಕವಿಗಳಲ್ಲಿ ಪಂಪ, ರನ್ನ, ವಿಜಯ, ಗುಣವರ್ಮ, ಜನ್ನ, ಮಧುರ, ನಾಗಚಂದ್ರ, ಪೊನ್ನ, ನೇಮಿಚಂದ್ರ, ಬಂಧುವರ್ಮ ಮೊದಲಾದವರನ್ನು ಸ್ತುತಿಸಿದ್ದಾನೆ. ತನ್ನ ಕವಿತಾ ಚಾತುರ್ಯ ಲಲನೆಯರ ಮೊಗದ ಮೂಗುತಿಯಾಣಿಮಣಿಯಂತೆ, ಸುಲಲಿತಾಂಗಿಯರ ನುಣ್ಗೊರಲ ಕಂಠಿಕೆಯಂತೆ, ರಸದಾಳಿಯ ರಸದಂತೆ, ಮಿಸುಪ ರಸಮೊಸರ್ವ ಮಾವಿನ ಹಣ್ಣಿನಂತೆ, ಅಸಿಯಳ ನಳಿತೋಳತಕ್ಕೆಯಂತೆ ಸಹೃದಯರನ್ನು ಮೋಹಿಸುವುದಾಗಿ ಹೇಳಿಕೊಂಡಿದ್ದಾನೆ.

ಚಂದ್ರಪ್ರಭುಚರಿತೆ ಸಾಂಗತ್ಯದಲ್ಲಿದೆ. ಇದರಲ್ಲಿ 28 ಸಂಧಿಗಳೂ 4475 ಪದ್ಯಗಳೂ ಇವೆ. ನಡುನಡುವೆ ವೃತ್ತ ಷಟ್ಪದಿಗಳೂ ಬಳಕೆಯಾಗಿವೆ. 8ನೆಯ ತೀರ್ಥಂಕರ ಚಂದ್ರಪ್ರಭನ ಕಥೆ ಈ ಕಾವ್ಯದ ವಸ್ತು. ಪೂರ್ವದಲ್ಲಿ ಕವಿ ಪರಮೇಷ್ಠಿ, ಗುಣಭದ್ರ ಮೊದಲಾದವರು ಹೇಳಿರುವ ಕಥೆಯನ್ನೇ ತಾನು ಕನ್ನಡಿಸುವುದಾಗಿ ಹೇಳಿಕೊಂಡಿದ್ದಾನೆ. ಹೆಚ್ಚಾಗಿ ವಿಜಯಕವಿಯ ಚಂದ್ರಪ್ರಭ ಪುರಾಣವನ್ನು ಆದರ್ಶವಾಗಿಟ್ಟುಕೊಂಡಿರುವಂತೆ ತೋರುತ್ತದೆ. ಕಾವ್ಯರಚನೆ ಸಾಂಪ್ರದಾಯಿಕವಾಗಿದೆ. ಸಾಂಗತ್ಯದ ನಡಿಗೆಯಲ್ಲಿ ಲಾಲಿತ್ಯವಿದ್ದು ಹಿತವಾಗಿದೆ. ಕವಿಗೆ ಅಲಂಕಾರಪ್ರಿಯತೆ ಹೆಚ್ಚು. ಆದರೂ ಕೆಲವು ಸನ್ನಿವೇಶಗಳನ್ನು ಕಲ್ಪಿಸುವಾಗ ರಸಘಟ್ಟಗಳನ್ನು ರಚಿಸುವಾಗ ಗಣನೀಯ ಸಾಮರ್ಥ್ಯವನ್ನು ತೋರಿಸಿದ್ದಾನೆ. ಮಹಾಕಾವ್ಯೋಂತ ವರ್ಣನೆಗಳೂ ಇವೆ. ಸಾಂಗತ್ಯದ ಮಿತಿಯಲ್ಲಿಯೆ ಭಾಷೆಯನ್ನು ಮನೋಜ್ಞವಾಗಿ ಬಳಸಿಕೊಂಡಿರುವುದು ಮೆಚ್ಚತಕ್ಕ ಸಂಗತಿ. ಮೇಘವನ್ನು ವರ್ಣಿಸುವ ಸುಂದರ ಪದ್ಯವೊಂದು ಹೀಗಿದೆ:

ಸಿಡಿಲ್ಗಿಚ್ಚಿನ ಧೂಮವೋ ಸುರಗಂಗೆಯ
ತಡಿಯ ತಮಾಲಕಾನನವೋ
ಜಡದಲಕ್ಷ್ಮಿಯ ಪೀಲಿದಳೆಯೋ ಎಂದೆನೆ
ಕಡುರಯಮಬ್ದಸಂದೋಹ (ಎನ್.ಬಿ.ಎಲ್.)

**ದೊಡ್ಡವೀರಪ್ಪ:** ಕೊಡಗು ಸಂಸ್ಥಾನದ ಪ್ರಖ್ಯಾತ ರಾಜ (1687–1736). ಮುದ್ದುರಾಜನ ಹಿರಿಯ ಮಗ. ಕೊಡಗು ಈತನ ಕಾಲದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿತ್ತು. ಇವನ ಕಾಲದಲ್ಲಿ ಮೈಸೂರಿನ ಚಿಕ್ಕದೇವರಾಜ ಕೊಡಗನ್ನು ಗೆದ್ದುಕೊಳ್ಳಬೇಕೆಂಬ ಉದ್ದೇಶದಿಂದ ಒಂದು ಸೈನ್ಯವನ್ನು ಕಳುಹಿಸಿದ. ಆ ಸೈನ್ಯ ಬಾಳೆಲೆ ಎಂಬ ಊರಿನ ಮುಖಾಂತರ ಕೊಡಗನ್ನು ಪ್ರವೇಶಿಸಿ ಪಾಲುಪರೆಯಲ್ಲಿ ಬೀಡುಬಿಟ್ಟಿತು. ಈ ಸುದ್ದಿಯು ತಿಳಿದ ತಕ್ಷಣ ದೊಡ್ಡವೀರಪ್ಪ ರಾತ್ರಿಯೇ ಪಾಲುಪರೆಗೆ ಸೈನ್ಯದೊಂದಿಗೆ ಧಾವಿಸಿ ಬೆಳಗಾಗುವುದರೊಳಗೆ ಚಿಕ್ಕದೇವರಾಜ ಒಡೆಯನ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದ. ಈ ಯುದ್ಧದಿಂದಾಗಿ ಮೈಸೂರಿನ ಅರಸ ನಷ್ಟವನ್ನನುಭವಿಸಿದ. ಉನ್ನತ ಅಧಿಕಾರಿಗಳು ಮತ್ತು ಹೆಚ್ಚು ಸಂಖ್ಯೆಯಲ್ಲಿ ಸೈನಿಕರು ಸಾವನ್ನಪ್ಪಿದ್ದರು. ದೊಡ್ಡವೀರಪ್ಪ ಅಳಿದುಳಿದ ಮೈಸೂರಿನ ಸೈನ್ಯವನ್ನು ಹೆಗ್ಗಡದೇವನಕೋಟೆಯ ಹಂಪಾಪುರದವರೆಗೂ ಅಟ್ಟಿಸಿಕೊಂಡು ಹೋಗಿ ಅಲ್ಲಿ ತನ್ನ ವಿಜಯಸ್ತಂಭವನ್ನು ನೆಟ್ಟ. ದೊಡ್ಡವೀರಪ್ಪ ಮೈಸೂರಿನ ಚಿಕ್ಕದೇವರಾಜ ಒಡೆಯನ ಸೈನ್ಯದೊಂದಿಗೆ ಹೋರಾಡುತ್ತಿದ್ದಾಗ, ಉತ್ತರ ಮಲಬಾರಿನ ವೀರವರ್ಮರಾಜ ಎಂಬುವನು 500 ನಾಯರ್ ಸೈನಿಕರೊಡನೆ ತೋಮರ ಎಂಬ ಗ್ರಾಮದ ಹತ್ತಿರ ಠಾಣ್ಯ ಹೂಡಿದ. ದೊಡ್ಡವೀರಪ್ಪ ಧೈರ್ಯಗುಂದದೆ ಅಲ್ಲಿಗೆ 1500 ಸೈನಿಕರನ್ನು ಕಳುಹಿಸಿ ವೀರವರ್ಮನ ಸೈನ್ಯ ಮುಂದೆ ನುಗ್ಗದಂತೆ ತಡೆಗಟ್ಟಿದ. ಅನಂತರ ದೊಡ್ಡವೀರಪ್ಪ ಮೈಸೂರಿನ ಸೈನ್ಯವನ್ನು ಸೋಲಿಸಿದಮೇಲೆ ತಾನೇ ಅಲ್ಲಿಗೆ ಹೋಗಿ ಮಲಬಾರಿನ ಸೈನಿಕರನ್ನು ನಾಶಮಾಡಿದ.

ದೊಡ್ಡವೀರಪ್ಪನ ಔದಾರ್ಯ, ಪ್ರಾಮಾಣಿಕತೆ ಮತ್ತು ನಿಷ್ಠೆಗಳು ಅವನ ಕಾಲದಲ್ಲಿ ನಡೆದ ಒಂದು ಘಟನೆಯಿಂದ ವಿದಿತವಾಗುತ್ತವೆ. ಇಕ್ಕೇರಿಯ ಸೋಮಶೇಖರನಾಯಕ 1730ರಲ್ಲಿ ಚಿರಕ್ಕಲ್ಲಿನ ರಾಜನ ಪ್ರದೇಶಗಳನ್ನು ದಾಳಿ ಮಾಡಿದಾಗ ಆ ರಾಜ ಅಶಕ್ತನಾಗಿದ್ದುದರಿಂದ ದೊಡ್ಡವೀರಪ್ಪನ ಸಹಾಯವನ್ನು ಯಾಚಿಸಿದ. ದೊಡ್ಡವೀರಪ್ಪ ಮತ್ತು ಇಕ್ಕೇರಿಯ ಸೋಮಶೇಖರನಾಯಕ ಇಬ್ಬರೂ ಪರಸ್ಪರ ಸಂಬಂಧಿಕರಾಗಿದ್ದುದರಿಂದ ಚಿರಕ್ಕಲ್ ರಾಜ ತನ್ನ ರಾಜ್ಯವನ್ನು ಉಳಿಸಬೇಕೆಂದು ದೊಡ್ಡವೀರಪ್ಪನ ಮರೆಹೊಕ್ಕ. ದೊಡ್ಡವೀರಪ್ಪ, ಸೋಮಶೇಖರ ನಾಯಕನಿಗೆ ಯುದ್ಧವನ್ನು ನಿಲ್ಲಿಸುವಂತೆಯೂ ಗೆದ್ದುಕೊಂಡಿದ್ದ ಪ್ರದೇಶಗಳನ್ನು ಹಿಂತಿರುಗಿಸುವಂತೆಯೂ ಕೇಳಿಕೊಂಡ. ಮೊದಲು ನಾಯಕ ಒಪ್ಪಲಿಲ್ಲವಾದರೂ 18 ಲಕ್ಷ ರೂಪಾಯಿಗಳನ್ನು ಚಿರಕ್ಕಲ್ಲಿನ ರಾಜ ಕೊಡಲೊಪ್ಪುವುದಾದರೆ ತಾನು ಆಕ್ರಮಿಸಿದ್ದ ಪ್ರದೇಶಗಳನ್ನು ಬಿಟ್ಟುಕೊಡುವುದಾಗಿ ಹೇಳಿದ. ಚಿರಕ್ಕಲ್ಲಿನ ರಾಜ ಹಣವನ್ನು ಕೊಡಲು

ಒಪ್ಪಿಕೊಂಡ. ಈ ಹಣಕ್ಕೆ ದೊಡ್ಡವೀರಪ್ಪನೇ ಜಾಮೀನಾಗಿ ನಿಂತ. ಆದರೆ ಚಿರಕ್ಕಲ್ ರಾಜ 9 ಲಕ್ಷ ರೂಪಾಯಿಗಳನ್ನು ಮಾತ್ರ ಸಲ್ಲಿಸಿದ. ಉಳಿದ ಬಾಕಿ 9 ಲಕ್ಷ ರೂಪಾಯಿಗಳನ್ನು ಕೇಳಲು ಬಂದ ರಾಜನ ದೂತರನ್ನು ತುಚ್ಛವಾಗಿ ಕಂಡು ಬರಿಗೈಲಿ ಹಿಂದಿರುಗುವಂತೆ ಮಾಡಿದ. ಆಗ ಕೋಪಗೊಂಡ ದೊಡ್ಡವೀರಪ್ಪ ಒಂದು ಸೈನ್ಯವನ್ನು ಬೊನಿರ ಮುತ್ತಣ್ಣ ಎಂಬ ಸೇನಾಪತಿಯ ನಾಯಕತ್ವದಲ್ಲಿ ಹಣ ವಸೂಲಿಮಾಡಲು ಕಳಹಿಸಿಕೊಟ್ಟ. ಮುತ್ತಣ್ಣ ಸೈನ್ಯಸಮೇತನಾಗಿ ಹಣ ಕೇಳುವುದಕ್ಕೆ ಆಗಮಿಸಿದುದನ್ನು ನೋಡಿ ಅವನನ್ನು ಮತ್ತು ಅವನ ಸೈನ್ಯವನ್ನು ನಿರ್ನಾಮ ಮಾಡಬೇಕೆಂದು ಯೋಜನೆ ಹಾಕಿಕೊಂಡ ಚಿರಕ್ಕಲ್ ರಾಜ ಸಿದ್ಧತೆಗಳನ್ನು ಮಾಡಿಕೊಳ್ಳಲು ಪ್ರಾರಂಭಿಸಿದ. ಈ ಒಳಸಂಚನ್ನು ತಿಳಿದ ಮುತ್ತಣ್ಣ ತಲೆತಪ್ಪಿಸಿಕೊಂಡು ಕಣ್ಣಾನೂರಿಗೆ ಹೋಗಿ ಅಲ್ಲಿಂದ ಕುಂಬಳೆಯ ಮಾರ್ಗವಾಗಿ ಕೊಡಗನ್ನು ತಲುಪಿದ. ದೊಡ್ಡವೀರಪ್ಪ ನಿಷ್ಠಾವಂತ ಹಾಗೂ ಸತ್ಯಪ್ರಿಯ. ಅವನು ಚಿರಕ್ಕಲ್ ರಾಜನು ಸೋಮಶೇಖರನಾಯಕನಿಗೆ ಸಲ್ಲಿಸಬೇಕಾಗಿದ್ದ 9 ಲಕ್ಷ ರೂಪಾಯಿಗಳನ್ನು ತನ್ನ ಖಜಾನೆಯಿಂದ ಪಾವತಿ ಮಾಡಿದ. ದೊಡ್ಡವೀರಪ್ಪನ ನಿಷ್ಠೆಯಿಂದ ಸಂತಸಗೊಂಡ ನಾಯಕ ಅವನಿಗೆ ತುಳುನಾಡಿನ ಕೆಲವು ಹಳ್ಳಿಗಳನ್ನು ಉಚಿತವಾಗಿ ಕೊಟ್ಟ. ಈ ಗ್ರಾಮಗಳಿಗೆ ಅಮರ ಮಾಗಣೆ ಎಂದು ಹೆಸರಿಸಲಾಯಿತು. ಅನಂತರ ದೊಡ್ಡವೀರಪ್ಪ ಕೊಡಗಿನ ಕಾವೇರಿ ದೇವಿಯ ಅಭಿಷೇಕಕ್ಕಾಗಿ ಕೊಡಗಿನಲ್ಲಿ ತೆಂಗಿನಕಾಯಿ ಫಲ ಇಲ್ಲದೆ ಇದ್ದುದರಿಂದ ತೆಂಗಿನಕಾಯಿ ಒದಗಿಸುವುದಕ್ಕೋಸ್ಕರ ಭಾಗಮಂಡಲಕ್ಕೆ ಸಮೀಪವಾಗಿರುವ ಸುಳ್ಯ ಮಾಗಣೆಯನ್ನು ಕ್ರಯಕ್ಕೆ ಕೊಡಬೇಕೆಂದು ಸೋಮಶೇಖರನಾಯಕನನ್ನು ಕೇಳಿದ. ಅದಕ್ಕೆ ಒಪ್ಪಿ ಸೋಮಶೇಖರ ನಾಯಕ ಸುಳ್ಯ ಮಾಗಣೆಯನ್ನು ದೊಡ್ಡವೀರಪ್ಪನಿಗೆ ಮಾರಿದ. ಹೀಗೆ ಇವನ ಕಾಲದಲ್ಲಿ ಕೊಡಗು ರಾಜ್ಯಕ್ಕೆ ಅಮರ ಮತ್ತು ಸುಳ್ಯ ಮಾಗಣೆಗಳು ಸೇರಿದವು.

ದೊಡ್ಡವೀರಪ್ಪ ಸುಭದ್ರವಾದ ಆಡಳಿತ ಯಂತ್ರವನ್ನು ಸ್ಥಾಪಿಸಿದ. ಇವನ ಕಾಲದಲ್ಲೇ ಅರಮನೆ ಕಡಂಗು ಎಂಬ ಅಗಳುಗಳನ್ನು ನಾಡುಗಳ ಎಲ್ಲೆಯನ್ನು ವಿಭಾಗಿಸಲು ತೋಡಿಸಿದ. ಇವನು ಕೊಡವರಲ್ಲಿ ದೇಶತಕ್ಕರೆಂಬ ಹೆಸರಿನಿಂದ ಎಂಟು ಜನರನ್ನು ನ್ಯಾಯತೀರ್ಪಿಗಾಗಿ ನೇಮಿಸಿದ. ಈ ತಕ್ಕಾಮೆ ವಂಶಪಾರಂಪರ್ಯವಾಗಿ ಮುಂದುವರಿಯುವ ಹಾಗೆ ಆಯಿತು.

ದೊಡ್ಡವೀರಪ್ಪ 49 ವರ್ಷ ಕಾಲ ಬಹು ಸಾಮರ್ಥ್ಯದಿಂದ ರಾಜ್ಯಭಾರ ಮಾಡಿ ತನ್ನ 78ನೆಯ ವಯಸ್ಸಿನಲ್ಲಿ 1736ರಲ್ಲಿ ನಿಧನಹೊಂದಿದ. ಇವನ ಜೊತೆಯಲ್ಲೇ ಇವನ ಇಬ್ಬರು ರಾಣಿಯರೂ ಸಹಗಮನ ಮಾಡಿದರು. ಪ್ರಾಮಾಣಿಕ, ಶೂರ ಹಾಗೂ ಅತ್ಯಂತ ನೇರ ನಡವಳಿಕೆಯುಳ್ಳವನಾಗಿದ್ದ ದೊಡ್ಡವೀರಪ್ಪ ತನ್ನ ಮಗ ಅಪ್ಪಾಜಿರಾಜ ತನ್ನ ಕ್ರೂರ ನಡತೆಯಿಂದ ತನ್ನ ಹೆಂಡತಿಯ ಆತ್ಮಹತ್ಯೆಗೆ ಕಾರಣನಾಗಿದ್ದನೆಂದು ಅವನನ್ನು ಶಿಕ್ಷಿಸಿದ. ದೊಡ್ಡವೀರಪ್ಪ ಮರಣಹೊಂದಿದ ಮೇಲೆ ಅಪ್ಪಾಜಿರಾಜನ ಮಗ ಚಿಕ್ಕವೀರಪ್ಪ ಕೊಡಗಿನ ರಾಜನಾದ. (ಎಸ್.)

**ದೊಡ್ಡಸಂಕಣ್ಣನಾಯಕ:** ಕೆಳದಿಯ ರಾಜ (ಸು. 1566– 70). ಕೆಳದಿ ರಾಜರ ವಂಶಾವಳಿಯಲ್ಲಿ ಇವನ ಸ್ಥಾನ ಖಚಿತವಾಗಿಲ್ಲ. ದೊಡ್ಡಸಂಕಣ್ಣನಾಯಕ ಕೆಳದಿಯ ಎರಡನೆಯ ದೊರೆ ಸದಾಶಿವನಾಯಕನೇ ಎಂದೂ ಇವನು ಸದಾಶಿವನಾಯಕನ ಹಿರಿಯ ಮಗ ಮತ್ತು ರಾಮಾರಾಜಯ್ಯನ ಅಣ್ಣ ಎಂದೂ ರಾಮರಾಜಯ್ಯನಿಗೇ ಈ ಹೆಸರಿತ್ತೆಂದೂ ಅನೇಕ ರೀತಿಯ ಅಭಿಪ್ರಾಯಗಳಿವೆ.

ದೊಡ್ಡಸಂಕಣ್ಣನಾಯಕ ಶೂರನೂ ಧಾರ್ಮಿಕನೂ ಆಗಿದ್ದ. ಇವನ ರಾಜ್ಯಭಾರದ ಕಾಲಾವಧಿಯು ನಿಶ್ಚಿತವಾಗಿ ಹೇಳಬರುವಂತಿಲ್ಲವಾದರೂ ವಿಜಯನಗರದ ರಾಮರಾಯನ ಕಾಲದಲ್ಲಿ ಇದ್ದ. ಆ ರಾಜ್ಯದ ಮಾಂಡಲಿಕನಾಗಿದ್ದ ಜಂಬೂರಿನ ವಿರೂಪಣ್ಣ ಒಡೆಯ ಮಲೆತು ನಿಂತಾಗ ಅವನನ್ನು ಸೋಲಿಸಿ ಜಂಬೂರು ಮತ್ತು ಉಡುಗಣಿಗಳನ್ನು ವಶಪಡಿಸಿಕೊಂಡ. ಆಗ ರಾಮರಾಯ ಮಧ್ಯಸ್ಥಿಕೆ ಮಾಡಿ ವಿರೂಪಣ್ಣನ ಪ್ರದೇಶವನ್ನು ಅವನಿಗೆ ಮರಳಿ ಕೊಡಿಸಿದ ಮತ್ತು ದೊಡ್ಡ ಸಂಕಣ್ಣ ನಾಯಕನನ್ನು ರಾಜಧಾನಿಯಲ್ಲಿ ಕೆಲಕಾಲ ನಿಲ್ಲಿಸಿಕೊಂಡು ರಾಜಮರ್ಯಾದೆ ಮಾಡಿದ. ಇವನು ಮುಸಲ್ಮಾನರೊಡನೆಯ ಯುದ್ಧಗಳಲ್ಲಿ ರಾಮರಾಜನಿಗೆ ಸಹಾಯ ಮಾಡಿದ. ಅದರಂತೆ ಕಾರ್ಕಳದ ಭೈರರಸ ಒಡೆಯ ಮತ್ತು ಗೇರುಸೊಪ್ಪೆಯ ಭೈರಾದೇವಿಯೊಡನೆ ನಡೆದ ಯುದ್ಧಗಳಲ್ಲಿಯೂ ತನ್ನ ವಿಕ್ರಮವನ್ನು ಮೆರೆದ. ಗೋವೆಯ ಕೋಟೆಯನ್ನು ವಶಪಡಿಸಿಕೊಳ್ಳಲು ವಿಜಯನಗರದ ಸೇನಾನಿಯಾದ ವಿಠಲರಾಯನಿಗೆ ಸಹಾಯ ಮಾಡಿದನೆಂದೂ ಹೇಳಲಾಗುತ್ತದೆ. ಕೆಳದಿನೃಪವಿಜಯದ ಪ್ರಕಾರ, ದೊಡ್ಡಸಂಕಣ್ಣನಾಯಕ ಮಕ್ಕಳೀರ್ವರ ಮದುವೆ ಮಾಡಿ ತಮ್ಮನಿಗೆ ರಾಜ್ಯಭಾರ ವಹಿಸಿ ಜಂಗಮ ವೇಷದಿಂದ ಉತ್ತರ ದೇಶದ ಯಾತ್ರೆಯನ್ನು ಕೈಗೊಂಡ. ದಿಲ್ಲಿಯಲ್ಲಿ ಅಂಕುಶಖಾನನೆಂಬ ವಜೀರನನ್ನು ಖಡ್ಗ ಯುದ್ಧದಲ್ಲಿ ಸೋಲಿಸಿದ. ಮುಂದೆ ಕಾಶಿಗೆ ಬಂದು ಅಲ್ಲಿ ಜಂಗಮ ಘಾಟನ್ನು ಕಟ್ಟಿಸಿದ. ಗಯಾ, ಕಾಶ್ಮೀರಗಳಿಗೂ ಹೋಗಿ ಬಂದ. ತನ್ನ ಊರಿಗೆ ಹಿಂತಿರುಗುವಾಗ ಮೈಸೂರು ಸೀಮೆಯ ವಾಲವಳ್ಳಿ ಎಂಬ ಗ್ರಾಮದಲ್ಲಿದ್ದಾಗ ಸ್ವಪ್ನದಲ್ಲಿ ಕಾಣಿಸಿಕೊಂಡ ವೀರಭದ್ರನಿಗಾಗಿ ಕೆಳದಿಯಲ್ಲಿ ಗುಡಿಯನ್ನು ಕಟ್ಟಿಸಿದ್ದ. ಇವನ ಈ ಉತ್ತರ ಭಾರತ ಯಾತ್ರೆಗೆ ಬೇರೆ ಪುರಾವೆಗಳು ದೊರೆತಿಲ್ಲ. (ಎಸ್.ಎಚ್.)

**ದೊಡ್ಡಹುಲ್ಲೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಒಂದು ಗ್ರಾಮ. ಹೊಸಕೋಟೆಯಿಂದ 4 ಕಿಮೀ ದೂರದಲ್ಲಿದೆ ಜನಸಂಖ್ಯೆ 1,278. ಇಲ್ಲಿ ದೊರೆತ 1339ರ ಒಂದು ಶಾಸನದ ಪ್ರಕಾರ ಈ ಗ್ರಾಮಕ್ಕೆ ಪುಲ್ಲಿಯೂರು ಎಂಬ ಹೆಸರು ಪ್ರಚಲಿತದಲ್ಲಿತ್ತೆಂದು ತಿಳಿದುಬರುತ್ತದೆ. ಸಿಂಗನವರ ಎಂಬ ಅಧಿಕಾರಿ ಪುಲ್ಲಿಯೂರಿನ ದೇಶಿಗಳಿಗೆ ದಾನ ನೀಡಿದ ವಿವರವನ್ನು ನೀಡುತ್ತದೆ. ಗ್ರಾಮದಲ್ಲಿ ಬೀರೇದೇವರ ಗುಡಿಯಿದೆ. ಬೀರೇದೇವರನ್ನು ಹುಲ್ಲೂರಪ್ಪ ಎಂದೂ ಕರೆಯಲಾಗುತ್ತದೆ. ಈ ದೇವಸ್ಥಾನದ ಸುತ್ತ ಸು. 20 ವೀರಗಲ್ಲುಗಳಿವೆ. ಕೆರೆಯ ಹತ್ತಿರ ಪ್ರಾಚೀನ ಕಾಲದ ಈಶ್ವರ ದೇವಾಲಯವೊಂದಿದೆ. ಈ ದೇವಾಲಯ ಚೋಳ ಶೈಲಿಯ ದೇವಾಲಯದಂತೆ ಕಂಡರೂ ಇದರ ನಿರ್ಮಾಣದ ಮೇಲೆ ಸ್ಪಷ್ಟ ಬೆಳಕು ಚೆಲ್ಲುವ ದಾಖಲೆಗಳು ದೊರೆಯುವುದಿಲ್ಲ. ಶಿಥಿಲಾವಸ್ಥೆಯಲ್ಲಿರುವ ಈ ದೇವಾಲಯದ ಗೋಡೆಯಲ್ಲಿ ಕೆಲವು ಸುಂದರ ಉಬ್ಬುಶಿಲ್ಪಗಳಿವೆ. ಈ ದೇವಾಲಯದ ಅಧಿಷ್ಠಾನ ಹೊಯ್ಸಳರ ಕಾಲದ ದ್ರಾವಿಡ ದೇವಾಲಯಗಳ ಅಧಿಷ್ಠಾನವನ್ನು ಜ್ಞಾಪಕಕ್ಕೆ ತರುತ್ತದೆ. ಇಲ್ಲೊಂದು ತಮಿಳು ಶಾಸನವಿದೆ. ಗರ್ಭಗೃಹದಲ್ಲಿ ಚಪ್ಪಟೆ ಶಿರಭಾಗಹೊಂದಿರುವ ಶಿವಲಿಂಗವಿದೆ. ಈ ಗ್ರಾಮಕ್ಕೆ ಸು. 5 ಕಿಮೀ ದೂರದಲ್ಲಿ ಮುಗಬಾಳ ಗ್ರಾಮವಿದ್ದು ಇಲ್ಲಿ ಅನೇಕ ದೇವಾಲಯಗಳಿವೆ. (ಆರ್.ಎಚ್.ಕೆ.)

**ದೊಡ್ಡೇರಿ:** ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಒಂದು ಗ್ರಾಮ, ಐತಿಹಾಸಿಕ ಸ್ಥಳ. ಚಳ್ಳಕೆರೆ ಪಟ್ಟಣದಿಂದ ಪೂರ್ವಕ್ಕೆ ಸು. 7ಕಿಮೀ ದೂರದಲ್ಲಿದೆ ಜನಸಂಖ್ಯೆ 4,254. ಇದು ನಿಡಗಲ್ಲು ಅಥವಾ ಹರತಿ ನಿಡಗಲ್ಲು ಮನೆತನದ ಮೂಲಪುರುಷನಿಂದ ಸ್ಥಾಪಿತವಾಯಿತೆಂದು

ತಿಳಿದುಬರುತ್ತದೆ. ಈಚೆಗೆ ನಡೆದ ಸಂಶೋಧನೆಗಳಿಂದ ಈ ಪ್ರದೇಶ ಬಹುಪೂರ್ವದಲ್ಲೇ ನವಶಿಲಾಯುಗದ ಮಾನವ ವಸತಿಯಾಗಿತ್ತೆಂದೂ ನೊಳಂಬ ಪಲ್ಲವ ದೊರೆಗಳ ಕಾಲದಲ್ಲಿ ಒಂದು ಮುಖ್ಯಸ್ಥಳವಾಗಿತ್ತೆಂದೂ ಕಂಡುಬಂದಿದೆ. ಈ ಊರಿನಲ್ಲಿ ಹಳೆಯ ಕೋಟೆಯ ಅವಶೇಷ, ಕೆಲವು ಪ್ರಾಚೀನ ದೇವಾಲಯಗಳು ನೊಳಂಬ ಪಲ್ಲವ ಕಾಲದ ಕೆಲವು ವೀರಗಲ್ಲುಗಳು, ಈ ಊರಿಗೆ ಸಮೀಪದಲ್ಲೇ ನವಶಿಲಾಯುಗ ಕಾಲದ ಕಲ್ಲಿನ ಆಯುಧ ಇತ್ಯಾದಿಗಳು ದೊರೆತಿವೆ. ಈ ಊರಿಗೆ ಸಮೀಪದ ಹಳೆಯ ದೊಡ್ಡೇರಿ ಎಂದು ಕರೆಯುವ ಜನವಸತಿಯಿಂದ ಗ್ರಾಮದ ಬಳಿ ಕನ್ನೇಶ್ವರ ಎಂಬ ಹೆಸರಿನ ಬೃಹತ್ ಲಿಂಗದ ಪ್ರಾಚೀನ ದೇವಾಲಯ ವೊಂದಿದ್ದು, ಈಚೆಗೆ ಅದು ಜೀರ್ಣೋದ್ಧಾರಗೊಂಡಿದೆ. 16ನೆಯ ಶತಮಾನದಲ್ಲಿ ಈ ಊರು ಹರತಿ ನಿಡುಗಲ್ಲು ಮನೆತನದ ತಿಪ್ಪರಾಜ ಎಂಬುವನಿಗೆ ಸೇರಿತ್ತು. ಅವನು ತನ್ನ ರಾಜ್ಯವನ್ನು ಮಕ್ಕಳಿಗೆ ಹಂಚಿಕೊಟ್ಟಾಗ ಇದು ಅವನ ಮಗ ತಿಮ್ಮಣ್ಣನಾಯಕ ಎಂಬುವನ ಪಾಲಿಗೆ ಬಂತು. ಸ್ವಲ್ಪ ಕಾಲಾನಂತರ ಬಿಜಾಪುರದ ಸುಲ್ತಾನರು ಇತ್ತ ಕಡೆ ಬಂದು ದೊಡ್ಡೇರಿಯನ್ನು ಮುತ್ತಿದಾಗ ಆತ ತುಮಕೂರು ಜಿಲ್ಲೆಯಲ್ಲಿರುವ ನಿಡುಗಲ್ಲಿಗೆ ಓಡಿಹೋಗಿ ನೆಲೆನಿಂತ. 1698ರಲ್ಲಿ ಮರಾಠರ ಸಂತಾಜಿ ಘೋರ್ಪಡೆ ಭಾರಿ ಸೈನ್ಯದೊಂದಿಗೆ ಬಂದು ಶಿರಾದ ಮೇಲೆ ದಾಳಿ ಮಾಡಿದಾಗ, ಮುಗಲರಿಂದ ನೇಮಕವಾಗಿದ್ದ ಅಲ್ಲಿಯ ಸುಬೇದಾರ ಕಾಸಿಂಖಾನ್ (1687–98) ಆ ಸೈನ್ಯದೊಂದಿಗೆ ಹೋರಾಡುತ್ತ ದೊಡ್ಡೇರಿಯ ಕಡೆಗೆ ಓಡಿ ಬಂದು, ಕೋಟೆಯೊಳಗೆ ಸೇರಿಕೊಂಡ. ಈ ಸುದ್ದಿ ತಿಳಿದು ಚಿತ್ರದುರ್ಗದ ದೊರೆ ಬರಮಣ್ಣನಾಯಕ (1689–1721) ಒಂದು ದಂಡನ್ನು ಕಳಿಸಲು, ಆ ದಂಡಿನ ಮುಖಂಡರು ಸಂತಾಜಿ ಘೋರ್ಪಡೆ ಯನ್ನು ಭೇಟಿಮಾಡಿ, ಮಾತುಕತೆ ನಡೆಸಿ ದೊಡ್ಡೇರಿ ಕೋಟೆಯನ್ನು ಮುತ್ತಿದರು. ಆಗ ಕಾಸಿಂಖಾನ್ ಹೋರಾಟದಲ್ಲಿ ಮಡಿದ. ಸಂತಾಜಿ ಘೋರ್ಪಡೆ ದೊಡ್ಡೇರಿಯನ್ನು ಬರಮಣ್ಣನಾಯಕನಿಗೇ ಬಿಟ್ಟುಕೊಟ್ಟ. ಮುಂದೆ 1779 ರಲ್ಲಿ ಹೈದರ್ ಅಲಿಯ ವಶವಾಗುವರೆಗೂ ದೊಡ್ಡೇರಿ ಒಂದು ಮುಖ್ಯ ಗಡಿಠಾಣ್ಯವಾಗಿ ದುರ್ಗದ ನಾಯಕರ ವಶದಲ್ಲೇ ಇತ್ತು.

ಈಗಿನ ಚಳ್ಳಕೆರೆ ತಾಲ್ಲೂಕನ್ನು ಹಿಂದೆ ದೊಡ್ಡೇರಿ ತಾಲ್ಲೂಕು ಎಂದು ಕರೆಯಲಾಗುತ್ತಿದ್ದು 1882ರಲ್ಲಿ ದೊಡ್ಡೇರಿ ತಾಲ್ಲೂಕು ಕೇಂದ್ರವಾಗಿತ್ತು. ಒಂದು ಕಾಲಕ್ಕೆ ಈ ಊರು ಕಾಗದ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಆ ಕಾಗದ ದೊಡ್ಡೇರಿ ಕಾಗದ ಎಂದೂ ಕಾಗದದ ಹಾಳೆಯ ಗಾತ್ರ ಸರ್ವತ್ರ ಅಂಗೀಕೃತವಾದ ಅಳತೆಯ ಮಾಪನವಾಗಿ ದೊಡ್ಡೇರಿಗಜ ಎಂದೂ ಪ್ರಸಿದ್ಧವಾಗಿದ್ದುವು. (ಬಿ.ಆರ್‌ಎಜಿ.)

**ದೊಡ್ಡೇರಿ ವೆಂಕಟಗಿರಿರಾವ್:** 1913– 2004. ಹೆಸರಾಂತ ವೈದ್ಯ, ಸಾಹಿತಿ ಹಾಗೂ ಛಾಯಾಚಿತ್ರಕಾರ. ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನಲ್ಲಿ ದೊಡ್ಡೇರಿ ಗ್ರಾಮದಲ್ಲಿ ಬಡ ಕೃಷಿಕ ಮನೆತನದಲ್ಲಿ 1913 ಡಿಸೆಂಬರ್ 28ರಂದು ಜನಿಸಿದರು. ಆರಂಭಿಕ ಶಿಕ್ಷಣವನ್ನು ಸಾಗರದಲ್ಲಿ ತಮ್ಮ ಬಂಧುಗಳ ನೆರವಿನಿಂದ ಪೂರೈಸಿದರು. ಅನಂತರದ ಶಿಕ್ಷಣಕ್ಕಾಗಿ ಬಳ್ಳಾರಿಯ ಪಂಡಿತ ತಾರಾನಾಥರ ಆಯುರ್ವೇದ ವಿದ್ಯಾಲಯದಲ್ಲಿ ಎಲ್.ಐ.ಎಂ. ಡಿಪ್ಲೊಮಾ ಪಡೆದರು. ಅನಂತರ ಸಾಗರದಲ್ಲಿ ತಮ್ಮ ವೈದ್ಯಕೀಯ ವೃತ್ತಿ ಆರಂಭಿಸಿದರು. ಅನಂತರ ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರಕ್ಕೆ ಸ್ಥಳಾಂತರಿಸಿದರು. ಅಲ್ಲಿ 30– 35 ವರ್ಷಗಳ ಸುದೀರ್ಘ ಕಾಲ ವೈದ್ಯರಾಗಿ ಜನಪ್ರಿಯತೆ ಗಳಿಸಿದರು. ತಮ್ಮನ್ನು ಹುಡುಕಿಕೊಂಡು ಬಂದ ರೋಗಿಗಳಿಗೆ ಉಚಿತವಾಗಿ ವೈದ್ಯಕೀಯ ಸಲಹೆ ಕೊಡುತ್ತಿದ್ದರು.

1932 ರಷ್ಟು ಹಿಂದೆಯೇ ಕವಿತೆಗಳನ್ನು ಬರೆಯುವುದರ ಮೂಲಕ ಸಾಹಿತ್ಯ ಕೃಷಿಗೆ ತೊಡಗಿದರು. ಅನಂತರ ಶಿಶುಸಾಹಿತ್ಯ, ಕಾದಂಬರಿ, ಸಣ್ಣಕತೆ, ವೈದ್ಯಕೀಯ ಸಾಹಿತ್ಯ, ಲೈಂಗಿಕ ಸಾಹಿತ್ಯ, ಪ್ರವಾಸಕಥನ ಮತ್ತು ಫೋಟೊಗ್ರಫಿ ಇತ್ಯಾದಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಇವರು ಕನ್ನಡದಲ್ಲಿ 600ಕ್ಕೂ ಹೆಚ್ಚು, ಇಂಗ್ಲಿಷ್‌ನಲ್ಲಿ 150ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. 30ಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆರೋಗ್ಯ, ಲೈಂಗಿಕ ವಿಜ್ಞಾನ ವಿಷಯಗಳ ಬಗ್ಗೆ ಕನ್ನಡದಲ್ಲಿ ಯಾರೂ ಬರೆಯದ ಕಾಲದಲ್ಲಿ ಇವರು ದಾಂಪತ್ಯ ಜೀವನ ಎಂಬ ಮಾಸಪತ್ರಿಕೆಯ ಸಂಪಾದಕರಾಗಿ ಐದು ವರ್ಷಗಳ ಕಾಲ ಅದನ್ನು ಪ್ರಕಟಿಸಿದರು. ಪ್ರಸವ ವಿಜ್ಞಾನ, ಸಂತಾನ ಸಂಯಮ, ವಿಕೃತಕಾಮ, ಕಾಮ ಶಿಕ್ಷಣ ಎಂಬ ಹಲವು ಮೌಲ್ಯಯುತ ಕೃತಿಗಳನ್ನೂ ಪ್ರಕಟಿಸಿದರು. ಇವರ ಕವನ ಸಂಕಲನ ರೋಹಿಣಿ. ದಾಳಿಂಬೆ ಚೆಲುವೆ, ಕರಿಗಡುಬು ಇವು ಕಥಾಸಂಕಲನಗಳು.

ಇವರು ಬರೆದ ಸಂಪ್ರದಾನ, ಅವಧಾನ, ಸೃಷ್ಟಿದಾನ, ಅತ್ತಿಯ ಹೂವು ಮೊದಲಾದ ಕಾದಂಬರಿಗಳು ಇವರಿಗೆ ಜನಪ್ರಿಯತೆ ತಂದುಕೊಟ್ಟವು. ಕೆಲವು ಕಾದಂಬರಿಗಳು 80ರ ದಶಕದಲ್ಲಿ ಸುಧಾ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಜನಪ್ರಿಯತೆ ಗಳಿಸಿದುವು. ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲರು ಇವರ ಅವಧಾನ ಕಾದಂಬರಿ ಆಧರಿಸಿ ಅಮೃತಘಳಿಗೆ ಎಂಬ ಚಲನಚಿತ್ರ ನಿರ್ಮಿಸಿದರು.

ಹವ್ಯಾಸಿ ಛಾಯಾಚಿತ್ರಗಾರರಾಗಿಯೂ ಇವರು ಪ್ರಸಿದ್ಧರಾಗಿದ್ದಾರೆ. ಅದರಲ್ಲಿಯೂ ಕಪ್ಪು ಬಿಳುಪು ಚಿತ್ರಗಳಲ್ಲಿ, ಪಿಕ್ಟೋರಿಯಲ್ ಫೋಟೋಗ್ರಫಿ ವಿಭಾಗದಲ್ಲಿ ತುಂಬ ಪರಿಣಿತರಾಗಿದ್ದ ಇವರು ತಮ್ಮ ಚಿತ್ರಗಳನ್ನು ತಾವೇ ಸ್ವತಃ ಕಪ್ಪು ಕೋಣೆಯಲ್ಲಿ ಕುಳಿತು ಮುದ್ರಿಸಿ ಚಿತ್ರಗಳಿಗೆ ಜೀವಕಳೆ ತುಂಬುತ್ತಿದ್ದರು. ಇವರು ವಿವಿಧ ಸ್ಪರ್ಧೆಗಳಿಗಾಗಿ ಮುದ್ರಿಸಿದ 1940 –50ರ ದಶಕದ ಫೋಟೋಗಳು ಇನ್ನೂ ಹೊಚ್ಚ ಹೊಸದಾಗಿ ನಮಗೆ ಕಾಣುತ್ತವೆ. ಕೇವಲ ಒಂದು ಪುಟ್ಟ ಬಾಕ್ಸ್ ಕ್ಯಾಮರದಿಂದ ಫೋಟೋಗ್ರಫಿ ಆರಂಭಿಸಿದ ಇವರು ಉಪಕರಣಕ್ಕಿಂತ ಅದರ ಹಿಂದಿರುವ ಮನಸ್ಸು, ಭಾವ ಮುಖ್ಯ ಎಂಬುದನ್ನು ಸ್ಪಷ್ಟವಾಗಿ ಸಾಬೀತುಪಡಿಸಿದರು. 1958ರಲ್ಲಿ ಅಂತಾರಾಷ್ಟ್ರೀಯ ಮಟ್ಟದ ಎಫ್‌ಐಎಪಿ ಪ್ರಶಸ್ತಿಗೆ ಭಾಜನರಾದ ಇವರು ಕರ್ನಾಟಕಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದುಕೊಟ್ಟ ಕೆಲವೇ ಛಾಯಾಚಿತ್ರಕಾರರಲ್ಲಿ ಒಬ್ಬರು. ಅಮೆರಿಕ ಫೋಟೋಗ್ರಾಫರ್ ಸೊಸೈಟಿಯು ತ್ರೀಸ್ಟಾರ್ ಸರ್ಟಿಫಿಕೇಟ್ ನೀಡಿ ಇವರನ್ನು ಗೌರವಿಸಿದೆ (1966). ಫೆಡರೇಷನ್ ಆಫ್ ಇಂಡಿಯನ್ ಫೋಟೋಗ್ರಾಫಿಕ್ ಸೊಸೈಟಿಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಇವರು ಕಾರ್ಯನಿರ್ವಹಿಸಿದರು. ಫೋಟೋಗ್ರಫಿಯನ್ನು ಹಲವಾರು ಶಿಷ್ಯರಿಗೆ ಕಲಿಸುವಲ್ಲಿ ಯಶಸ್ವಿಯಾದರು. ಫೋಟೋಗ್ರಫಿ ಬಗ್ಗೆಯೇ ನೂರಾರು ಚಿತ್ರ ಲೇಖನಗಳನ್ನು ಪ್ರಕಟಿಸಿರುವ ಇವರು ಭಾವಭಿವ್ಯಂಜಕ ಛಾಯಾ

ಚಿತ್ರಕಲೆ ಎಂಬ ಅಪರೂಪದ ಪುಸ್ತಕಗಳನ್ನು ಕನ್ನಡದಲ್ಲಿ ಬರೆದರು. ಈ ಕೃತಿಗೆ ಸಾಹಿತ್ಯ ಅಕಾಡೆಮಿ ಹಾಗೂ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳು ದೊರಕಿವೆ (1996). 1982ರಲ್ಲಿ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭ್ಯವಾಗಿದೆ. ಇವರು 2004 ಮೇ 26ರಂದು ನಿಧನರಾದರು.

(ಎಚ್.ಎಸ್.ಎಂ.)

**ದೊಡ್ಮನೆ:** ಉತ್ತರ ಕನ್ನಡ ಜಿಲ್ಲೆ ಸಿದ್ಧಾಪುರ ತಾಲ್ಲೂಕಿನ ಒಂದು ಗ್ರಾಮ. ಸಿದ್ಧಾಪುರದಿಂದ ಕುಮಟಕ್ಕೆ ಹೋಗುವ ರಸ್ತೆಯಲ್ಲಿ 27 ಕಿಮೀ ದೂರದಲ್ಲಿದೆ. ಜನಸಂಖ್ಯೆ 487. ತುಂಬ ಹಳೆಯದಾದ ವಿಶಾಲವಾದ ಭವಂತಿ ಮನೆಯೊಂದರ ಕಾರಣದಿಂದ ದೊಡ್ಮನೆ ಎಂಬ ಹೆಸರು ಈ ಹಳ್ಳಿಗೆ ಬಂದಿತ್ತೆಂದು ಪ್ರತೀತಿ. ಸುತ್ತಲಿನ ಹಳ್ಳಿಗಳ ಜಮೀನಿನ ಒಡೆತನ ವನ್ನು ಹೊಂದಿದ ದೊಡ್ಡ ಜಮೀನ್ದಾರ ಮನೆತನವೊಂದು ಈ ಮನೆಯಲ್ಲಿ ವಾಸವಾಗಿತ್ತು. ಈ ಮನೆತನ ಸ್ವಾತಂತ್ರ್ಯ ಚಳವಳಿಗೆ ಮಹತ್ವದ ಕೊಡುಗೆ ನೀಡಿದೆ. ಇದೇ ಕುಟುಂಬದ ಮಹಾದೇವಿತಾಯಿ ಎಂಬುವವರು ಗಾಂಧೀಜಿಯ ಆಶ್ರಮ ಸೇರಿ, ಅನಂತರ ವಿನೋಬಾ ಜೊತೆ ಪವನಾರ ಆಶ್ರಮದಲ್ಲಿ ವಾಸಮಾಡಿದರು. ಈಗ ಬೆಂಗಳೂರಿನಲ್ಲಿ ವಿಶ್ರನೀಡಂ ಟ್ರಸ್ಟ್ ಸ್ಥಾಪಿಸಿ ನಡೆಸುತ್ತಿದ್ದಾರೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು **(ನೋಡಿ)** ಈ ಮನೆತನಕ್ಕೆ ಸೇರಿದವರು.

ಈ ಗ್ರಾಮ ಸಹ್ಯಾದ್ರಿ ಶ್ರೇಣಿಯ ಮನೋಹರವಾದ ದೃಶ್ಯಾವಳಿಗಳ ಕಣಿವೆಯ ನಡುವಿದೆ. ಇಲ್ಲಿ ಇತ್ತೀಚೆಗೆ ಕಟ್ಟಲಾದ ಗಣಪತಿ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳಿವೆ. ಇಲ್ಲಿ ಬುರುಡೆ ಜೋಗ ಎಂದು ಕರೆಯುವ ಒಂದು ಜಲಪಾತವಿದೆ. ಇದನ್ನು ದೊಡ್ಮನೆ ಜಲಪಾತವೆಂದೂ ಕರೆಯುತ್ತಾರೆ. ಉಂಚಳ್ಳಿ ಜಲಪಾತದಲ್ಲಿ ದುಮುಕಿ ಹರಿಯುವ ಅಘನಾಶಿನಿ ನದಿ ಇಲ್ಲಿ ಎರಡು ಕಡೆಗಳಲ್ಲಿ ಧುಮ್ಮಿಕ್ಕುತ್ತದೆ. ಮೊದಲನೆಯ ಪಾತದಲ್ಲಿ 60 ಮೀ ಆಳಕ್ಕೆ ಇಳಿದರೆ ಎರಡನೆಯ ಪಾತದಲ್ಲಿ 48 ಮೀ ಆಳಕ್ಕೆ ಇಳಿಯುತ್ತದೆ. ಈ ಸ್ಥಳವನ್ನು ತಲುಪಲು ಹೇಮನಬೈಲ್ ವರೆಗೂ ರಸ್ತೆಮಾರ್ಗವಿದೆ. ಅಲ್ಲಿಂದ ಚಪ್ಪರಮನೆವರೆಗೂ ಸು. 2 ಕಿಮೀ ದೂರ ಕ್ರಮಿಸಿದರೆ ಜಲಪಾತದ ಸ್ಥಳವನ್ನು ಮುಟ್ಟಬಹುದು.

(ಆರ್.ಪಿ.ಎಚ್.)

**ದೊರೆಸ್ವಾಮಿ ಅಯ್ಯಂಗಾರ್,ವಿ.:** 1920– 97. ಅಖಿಲ ಭಾರತ ಪ್ರಸಿದ್ಧ ವೈಣಿಕರು. 1920ರಲ್ಲಿ ಜನಿಸಿದರು. ತಂದೆ ವೆಂಕಟೇಶ ಅಯ್ಯಂಗಾರ್ ಅವರು ಸ್ವತಃ ವೀಣೆ ನುಡಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ದೊರೆಸ್ವಾಮಿ ಅಯ್ಯಂಗಾರರು ತಮ್ಮ ತಂದೆಯವರಲ್ಲಿಯೇ ಮೊದಲಿಗೆ ವೀಣಾಭ್ಯಾಸ ಮಾಡಿ, ಮುಂದಿನ ಪ್ರೌಢ ವ್ಯಾಸಂಗವನ್ನು ವೈಣಿಕಪ್ರವೀಣರೂ ಆಸ್ಥಾನ ವಿದ್ವಾಂಸರೂ ಆಗಿದ್ದ ವೆಂಕಟಗಿರಿಯಪ್ಪನವರಲ್ಲಿ ಮುಂದುವರಿಸಿ ಅವರ ಅತ್ಯಂತ ಪ್ರಿಯ ಶಿಷ್ಯರಾಗಿ, ಅನೇಕ ವರ್ಷಗಳ ಕಾಲ ವಿದ್ಯಾರ್ಜನೆಮಾಡಿ ಗುರುಕೃಪೆಗೆ ಪಾತ್ರರಾದರು. ಚಿಕ್ಕವಯಸ್ಸಿನಲ್ಲಿಯೇ ನಾಲ್ವಡಿ ಕೃಷ್ಣರಾಜೇಂದ್ರರ ಆಸ್ಥಾನದಲ್ಲಿ ವಿದ್ವಾಂಸರಾಗಿ ಗೌರವಕ್ಕೆ ಭಾಜನರಾದರು. ಟಿ. ಚೌಡಯ್ಯನವರ ಜೊತೆಯಲ್ಲಿ ಭಾರತದಾದ್ಯಂತ ಸುಮಾರು ಹತ್ತು ವರುಷಗಳಿಗೂ ಮೀರಿ ಯಶಸ್ವಿಯಾಗಿ ಸಂಗೀತ ಕಛೇರಿಗಳನ್ನು ಮಾಡಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರೂ ಹೌದು. ಹಿಮಾಲಯದ ಯೋಗವೇಂದಾತ ಆಶ್ರಮದ ಸ್ವಾಮಿ ಶಿವಾನಂದರ ಅನುಗ್ರಹಕ್ಕೆ ಪಾತ್ರರಾಗಿ ವೈಣಿಕ ವಿದ್ಯಾಪಾರಂಗತ ಎಂಬ ಪ್ರಶಸ್ತಿಯನ್ನು ಗಳಿಸಿದರು (1960). ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಮೊದಲಾದ ಭಾರತದ ಅನೇಕ ಸಂಗೀತ ಸಭೆಗಳಲ್ಲಿ ವೀಣೆ ಕಛೇರಿ ಮಾಡಿ ಕರ್ನಾಟಕಕ್ಕೆ ಕೀರ್ತಿ ತಂದುಕೊಟ್ಟರು. 1970ರಲ್ಲಿ ಶಿರಾಜ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿ ಕೀರ್ತಿಪ್ರಶಂಸೆಗಳಿಗೆ ಪಾತ್ರರಾದರು. ಮೃದು ಸ್ವಭಾವದವರೂ ನಿರಾಡಂಬರ

ವ್ಯಕ್ತಿತ್ವವುಳ್ಳವರೂ ಆದ ಇವರು ವೀಣಾವಾದನ ಕಲೆಯನ್ನು ತಪಸ್ಸಿನಂತೆ ಸಾಧಿಸಿ ಸಿದ್ಧಿಪಡೆದವರು. ಇವರು ಬೆಂಗಳೂರು ಆಕಾಶವಾಣಿ ನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇವರು ನಾಡಿನಾದ್ಯಂತ ರಸಿಕ ಜನರ ಹಾಗೂ ಖ್ಯಾತ ವಿದ್ವಾಂಸರ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ. 1971ರಲ್ಲಿ ಇವರಿಗೆ ರಾಷ್ಟ್ರಪ್ರಶಸ್ತಿ ದೊರಕಿತು. 1976ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು 1997 ಅಕ್ಟೋಬರ್ 26ರಂದು ನಿಧನರಾದರು.

(ವಿ.ಡಿ.)

**ದೊರೆಸ್ವಾಮಿ,ಆರ್.ಎನ್.:** 1916– 2002. ಕರ್ನಾಟಕ ಸಂಗೀತ ಕಲಾವಿದ. ವೀಣಾವಿದ್ವಾಂಸ, ವಾಗ್ಗೇಯಕಾರ. ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣದಲ್ಲಿ 1916 ಡಿಸೆಂಬರ್ 12ರಂದು ಜನಿಸಿದರು. ತಂದೆ ವೆಂಕಟರಾಮಯ್ಯ, ತಾಯಿ ಸಾವಿತ್ರಮ್ಮ. ಇವರ ಪೂರ್ವಜರಾರೂ ಸಂಗೀತ ವಿದ್ವಾಂಸರಾಗಿರಲಿಲ್ಲ. ತಾಯಿ ಸಾವಿತ್ರಮ್ಮ ಮಧುರವಾಗಿ ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ಬಾಲ್ಯದಲ್ಲಿ ಸಂಗೀತದಲ್ಲಿ ಆಸಕ್ತಿ ಬೆಳಸಿಕೊಂಡ ದೊರೆಸ್ವಾಮಿಯವರು ತಮ್ಮ ಊರಿನಲ್ಲಿ ನಡೆಯುತ್ತಿದ್ದ ಭಜನೆ, ಹರಿಕಥೆ, ಗಮಕ, ಸಂಗೀತ ಮುಂತಾದ ಕಾರ್ಯಕ್ರಮಗಳಿಗೆ ತಪ್ಪದೆ ಹೋಗುತ್ತಿದ್ದರು. ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರಿಂದ ಸಂಗೀತಾಭ್ಯಾಸ ಮಾಡಿ ವೀಣೆಯನ್ನೇ ತಮ್ಮ ಕಲಾಮಾಧ್ಯಮವಾಗಿ ಆಯ್ಕೆ ಮಾಡಿಕೊಂಡ ಇವರು ಚಿದಂಬರಂನಲ್ಲಿ ಗುರುಕುಲವಾಸ ಮಾಡಿ ಸಂಗೀತಾಭ್ಯಾಸ ಮಾಡಿದರು. ವೀಣೆ ವೆಂಕಟಗಿರಿಯಪ್ಪನವರ ಅಚ್ಚುಮೆಚ್ಚಿನ ಶಿಷ್ಯರಾದರು. ಸೇಲಂ ದೊರೆಸ್ವಾಮಿ ಅಯ್ಯಂಗಾರ್ ಅವರ ಶಿಷ್ಯತ್ವ ಪಡೆದು ಹಾಡುಗಾರಿಕೆಯಲ್ಲೂ ಪರಿಣತಿ ಪಡೆದರು. ವೀಣಾವಾದನ ಕಲೆಗೆ ಹೊಸ ಆಯಾಮ ನೀಡಿರುವ ಇವರು ವೀಣೆ ಶೇಷಣ್ಣನವರ ಭವ್ಯ ಮೈಸೂರು ವೀಣಾ ಪರಂಪರೆಗೆ ಸೇರಿದವರು.

ಸುಮಾರು ಎರಡು ದಶಕಗಳ ಕಾಲ ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿ, ಒಂದು ದಶಕ ಕಾಲ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಸುಮಾರು ಹನ್ನೆರಡು ವರ್ಷ ಲಲಿತ ಕಲೆಗಳ ಕಾಲೇಜಿನಲ್ಲಿ ವೀಣಾ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ನಾಲ್ಕು ದಶಕಗಳ ಕಾಲ ವೀಣಾವಾದನ ಕಛೇರಿಗಳನ್ನು ನಡೆಸಿ ಅಪಾರ ಅಭಿಮಾನಗಳನ್ನು ಸಂಪಾದಿಸಿಕೊಂಡರು. ಆಕಾಶವಾಣಿಯ ಉನ್ನತ ದರ್ಜೆಯ ಕಲಾವಿದರೂ ಆಗಿದ್ದ ಇವರು ಉತ್ತಮ ವಾಗ್ಮಿಗಳೂ ಹೌದು. ಸಂಗೀತ, ಸಾಹಿತ್ಯಗಳೆರಡರಲ್ಲೂ ಉನ್ನತ ಮಟ್ಟದ ಪ್ರೌಢಿಮೆಯಿದ್ದ ದೊರೆಸ್ವಾಮಿಯವರು ಸಂಗೀತದಲ್ಲಿ ಯಾವುದೇ ಸಂದೇಹವನ್ನಾದರೂ ಬಲ್ಲವರಾಗಿದ್ದರು.

ದೇಶದ ಹಲವಾರು ಸಂಗೀತ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಇವರು ಎಲ್ಲರೊಂದಿಗೆ ಸಹೃದಯತೆ ಮತ್ತು ಸರಳತೆಯಿಂದಿರುತ್ತಿದ್ದರು. ಯಾವುದೇ ಸಂಗೀತ ಸಂಸ್ಥೆಯ ಯಾವ ಸಂಗೀತ ಸಮ್ಮೇಳನ,

ಸಂಕೀರಣ, ಗೋಷ್ಠಿಗಳು ನಡೆದಾಗಲೂ ಅದಕ್ಕೆ ಇವರ ಮಾರ್ಗದರ್ಶನ ದೊರೆಯುತ್ತಿತ್ತು. ಇವರು ವೀಣಾವಾದಕರಾಗಿ ಮಾತ್ರವಲ್ಲದೇ ಸಂಪ್ರದಾಯ ಬದ್ಧ ಸುರಸ ವಾಗ್ಗೇಯಕಾರರಾಗಿಯೂ ಹೆಸರುವಾಸಿಯಾಗಿದ್ದರು. ಇವರು ಕರ್ನಾಟಕ ಸಂಗೀತದ ಹಲವಾರು ಗೇಯ ರಚನೆಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಜತಿಸ್ವರಗಳು, ವರ್ಣಗಳು, ತಿಲ್ಲಾನ ಮತ್ತು ಕೀರ್ತನೆಗಳನ್ನು ಇಂದಿನ ಅನೇಕ ಖ್ಯಾತ ಕಲಾವಿದರು ತಮ್ಮ ಕಛೇರಿಗಳಲ್ಲಿ ಹಾಡುತ್ತಾರೆ. ಇವರಿಂದ ತರಬೇತಿ ಪಡೆದ ಅನೇಕ ಶಿಷ್ಯರು ಖ್ಯಾತ ಕಲಾವಿದರಾಗಿ ಹೆಸರು ಪಡೆದಿದ್ದಾರೆ.

ಇವರ ಕಲಾಸಾಧನೆಯನ್ನು ಗುರುತಿಸಿ ಇವರಿಗೆ ಹಲವಾರು ಪ್ರಶಸ್ತಿ ಸನ್ಮಾನಗಳು ದೊರಕಿವೆ. ವೈಣಿಕ ಪ್ರವೀಣ, ವೀಣಾ ವಿದ್ಯಾವಾರಿಧಿ ಹಾಗೂ ಶ್ರೀದತ್ತ ಪೀಠದ ಗಣಪತಿ ಸಚ್ಚಿದಾನಂದಸ್ವಾಮಿಯವರು ನೀಡಿದ 'ವೈಣಿಕ ಕಲ್ಪತರು' ಇವು ಕೆಲವು. ಇವರಿಗೆ 1983ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾತಿಲಕ ಪ್ರಶಸ್ತಿಯೂ 1989ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ 2001ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯೂ ಲಭಿಸಿವೆ. ಇವರು ಮೈಸೂರಿನ ಸಂಗೀತ ಕಲಾಭಿವರ್ಧಿನೀ ಸಭಾ ಹಾಗೂ ಬೆಂಗಳೂರಿನ ಗಾಯನ ಸಮಾಜದ ಸಮ್ಮೇಳನಾಧ್ಯಕ್ಷರಾಗಿದ್ದರು. ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರ ಇವರಿಗೆ ವೀಣಾ ವಾಗ್ಗೇಯಭೂಷಣ ಎಂಬ ಪ್ರಶಸ್ತಿಯನ್ನೂ ಮಹತೀ ಎಂಬ ಅಭಿನಂದನ ಗ್ರಂಥವನ್ನೂ ಸಮರ್ಪಿಸಿದೆ (2000). ಇವರು 2002 ಆಗಸ್ಟ್ 17ರಂದು ನಿಧನಹೊಂದಿದರು.

(ಎಸ್‌ಯು.ಎಂ)

**ಧನಂಜಯ ಶಿಲ್ಪಿ:** 1934– . ಹೆಸರಾಂತ ಶಿಲ್ಪಿ. 1934ರಲ್ಲಿ ಜನಿಸಿದರು. ಮೆಟ್ರಿಕ್ ಪರೀಕ್ಷೆಗೆ ಬೆಳಗಾಂವಿ ಸರ್ದಾರ್ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಅಲ್ಲಿನ ಡ್ರಾಯಿಂಗ್ ಮಾಸ್ಟರ್ ಸಿ.ವಿ. ಕರದಗಿಯವರಿಂದ ಪ್ರೇರಿತರಾಗಿ, ಚಿತ್ರಕಲೆಯಲ್ಲಿ ಓನಾಮ ಕಲಿತು ಮೆಟ್ರಿಕ್‌ಗೆ ಮೊದಲೇ ಇಂಟರ್‌ಗ್ರೇಡ್ ಪರೀಕ್ಷೆಯಲ್ಲಿ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣರಾದರು (1951). ಅನಂತರ ಮೆಟ್ರಿಕ್‌ನಲ್ಲಿಯೂ ಉತ್ತೀರ್ಣರಾಗಿ (1953) ಸರಕಾರಿ ವೆಲ್‌ಫೇರ್ ಇನ್ಸ್‌ಪೆಕ್ಟರಾಗಿ ಐದು ವರ್ಷ ಸೇವೆ ಸಲ್ಲಿಸಿದರು. ಚಿತ್ರಕಲೆಯನ್ನು ಮುಂದುವರಿಸಬೇಕೆಂಬ ಉತ್ಕಟಾಕಾಂಕ್ಷೆಯಿಂದ ಆ ಕೆಲಸಕ್ಕೆ ರಾಜೀನಾಮೆ ನೀಡಿದರು. ಶಿಲ್ಪ ಮತ್ತು ಮಾಡೆಲಿಂಗ್‌ನಲ್ಲಿ ಹೆಚ್ಚಿನ ತರಬೇತಿಗಾಗಿ ಮುಂಬೈನ ಜೆ.ಜೆ. ಕಲಾಶಾಲೆ ಸೇರಿದರು. ಅಲ್ಲಿ ತಮ್ಮ ಜೀವನೋಪಾಯಕ್ಕಾಗಿ ಕಲಾವಿದ ಬಲವಂತರಾವ್ ತಾಲೀಮರಲ್ಲಿ ಸಹಾಯಕರಾಗಿ ದುಡಿಯುತ್ತಿದ್ದರು. ಮೊದಲನೆಯ ವರ್ಷದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದುದರಿಂದ ಇವರನ್ನು ನೇರವಾಗಿ ಮೂರನೆಯ ತರಗತಿಗೆ ಸೇರಿಸಿಕೊಳ್ಳಲಾಯಿತು. ತಮ್ಮ ಐದು ವರ್ಷಗಳ ವ್ಯಾಸಂಗದಲ್ಲಿ ಪ್ರತಿವರ್ಷವೂ ಉನ್ನತ ದರ್ಜೆ ಗಳಿಸಿದವರು. ವ್ಯಾಸಂಗವನ್ನು ಮುಗಿಸಿದ (1964) ಬಳಿಕ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನುರಿತ ಶಿಲ್ಪಿಗಳಾದ ನಾನಾ, ಕರ್ಮರ್‌ಕರ್, ಬಲವಂತರಾವ್ ತಾಲೀಮರಲ್ಲಿ ಕೆಲಸ ಮಾಡಿದರು. ಆ ಸಂದರ್ಭದಲ್ಲಿ ಇವರು ಭಾಗವಹಿಸಿದ ಅಂತಾರಾಷ್ಟ್ರೀಯ ಶಿಲ್ಪಿಗಳ ಶಿಬಿರದಲ್ಲಿ ನಗದು ಬಹುಮಾನ ಗಳಿಸಿದರು.

ಕೆಲವು ಕಾಲ ಶಿಲ್ಪಭಾರತಿಯಲ್ಲಿ ಕೆಲಸ ಮಾಡಿ ಬೆಂಗಾಲ್ ಪಾಟರೀಸ್‌ನ ಮಾಡೆಲರ್ ಆಗಿ ಸೇರಿದರು (1967). ಅನಂತರ ಬೊಂಬಾಯಿನ ಜೆ.ಜೆ. ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಸೇರಿ, ಆ ಶಾಲೆಯಲ್ಲಿ ಕೆತ್ತನೆ ವಿಭಾಗವನ್ನು ಸ್ಥಾಪಿಸುವುದರಲ್ಲಿ ನೆರವಾದರು. 1979 ರವರೆಗೂ ಇವರು ಜೆ.ಜೆ. ಕಲಾಶಾಲೆಯಲ್ಲಿ ಸೇವೆ ಸಲ್ಲಿಸಿದರು.

ಇವರು ರಚಿಸಿರುವ ಕೃತಿಗಳು ಭಾರತದ ನಾನಾ ಭಾಗಗಳಲ್ಲಿ ಹರಡಿವೆ. ದೇವತಾ ಮೂರ್ತಿಗಳಲ್ಲಿ ಹೆಸರಾಂತ ವ್ಯಕ್ತಿಗಳ ಶಿಲ್ಪಕೃತಿಗಳ ನಿರ್ಮಾಣದಲ್ಲಿಯೂ ಇವರು ಸೈ ಎನಿಸಿಕೊಂಡಿದ್ದಾರೆ. ಚಿತ್ರದುರ್ಗದ ಮದಕರಿನಾಯಕನ ಪ್ಲಾಸ್ಟರ್ ರೂಪ ಹಾಗೂ ಅಂಬೇಡ್ಕರ್ ಕೃತಿ ಇದಕ್ಕೆ ಸಾಕ್ಷಿ. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದರು (1980–83). ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ(1984), ಕರ್ನಾಟಕ ಸರ್ಕಾರದ ಜಕಣಾಚಾರಿ ಪ್ರಶಸ್ತಿ (2002) ಲಭಿಸಿವೆ. (ಎನ್.ಎಮ್.)

**ಧರಣಿಪಂಡಿತ :** ಸು. 1650. ಜೈನಕವಿ. ವರಾಂಗನೃಪಚರಿತೆ, ಬಿಜ್ಜಳರಾಯ ಚರಿತೆ ಎಂಬ ಕಾವ್ಯಗಳ ಕರ್ತೃ. ವಿಷ್ಣುವರ್ಧನಪುರದಲ್ಲಿ ವೈದ್ಯನಾಗಿದ್ದ ಧರಣಿಪಂಡಿತನ ಮೊಮ್ಮಗ. ಪದ್ಮಪಂಡಿತನ ಮಗ. ಪೂರ್ವಕವಿಗಳಲ್ಲಿ ರನ್ನ, ಪಂಪ, ಪೊನ್ನ, ನೇಮಿಚಂದ್ರ, ನಾಗವರ್ಮ ಇವರನ್ನು ಸ್ತುತಿಸಿದ್ದಾನೆ.

ವರಾಂಗನೃಪಚರಿತೆ ಭಾಮಿನೀಷಟ್ಪದಿಯಲ್ಲಿದೆ. ದೊರೆತ ಅಸಮಗ್ರ ಪ್ರತಿಯಲ್ಲಿ 8 ಆಶ್ವಾಸಗಳಿವೆ. ಪೂರ್ವದಲ್ಲಿ ಮುನೀಶ್ವರರು ಹೇಳಿದ ಈ ಕಥೆಯನ್ನು ಕನ್ನಡದಲ್ಲಿ ತಾನು ರಚಿಸಿದಂತೆ ಕವಿ ಹೇಳಿಕೊಂಡಿದ್ದಾನೆ.

ಬಿಜ್ಜಳರಾಯಚರಿತೆ ಮತೀಯ ವಸ್ತುವನ್ನೂ ಚಾರಿತ್ರಿಕ ವಸ್ತುವನ್ನೂ ಅವಲಂಬಿಸಿ ಕಟ್ಟಿರುವ ಕಾಲ್ಪನಿಕ ಕಾವ್ಯ. ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 12 ಸಂಧಿಗಳೂ 1239 ಪದ್ಯಗಳೂ ಇವೆ. ಇನ್ನೊಂದು ಪ್ರತಿಯಲ್ಲಿ ಪದ್ಯ ಸಂಖ್ಯೆ 1371 ಎಂದಿದೆ. ಕಲ್ಯಾಣಪುರದ ಬಿಜ್ಜಳರಾಯನ ಕಥೆ ಕಾವ್ಯವಸ್ತು. ಹಿಂದೆ ವಿಜಯಮ್ಮಿ ಎಂಬುವಳು ತನ್ನ ತಾಯಿಗೆ ಹೇಳಿದ ಕಥೆಯನ್ನು ತಾನು ವಿಸ್ತರಿಸಿ ಬರೆದಿರುವುದಾಗಿ ಹೇಳಿದ್ದಾನೆ. ಬಿಜ್ಜಳ ಬಸವಣ್ಣನ ತಂಗಿ ಪದ್ಮಿನಿಯನ್ನು ಮದುವೆಯಾಗಿ ಬಸವಣ್ಣನನ್ನು ಸೇನಾಧಿಪತಿಯಾಗಿ ಮಾಡಿದ. ಜೈನಧರ್ಮಿಯಾದ ಬಿಜ್ಜಳ ವೀರಶೈವ ಧರ್ಮಿಯಾದ ಬಸವಣ್ಣನಿಗಿಂತ ತಾನು ಮಿಗಿಲೆಂದು ವಾದಿಸಿ ಬಸವಣ್ಣನನ್ನು ಹಲವು ಸಲ ಸೋಲಿಸಿದ. ಕೊನೆಗೆ ಬಸವಣ್ಣ ವಿಷದ ಮಾವಿನ ಹಣ್ಣನ್ನು ಬಿಜ್ಜಳ ಮೂಸಿ ಸಾಯುವಂತೆ ಮಾಡಿ ತಾನೂ ಉಳಿವೆ ಎಂಬಲ್ಲಿ ಬಾವಿಗೆ ಬಿದ್ದು ಸತ್ತ. ಇದು ಇಲ್ಲಿನ ಕಥಾಸರಣಿ, ವಚನಗಳಲ್ಲಿ ಕಾಣುವ ಬಸವಣ್ಣನ ವ್ಯಕ್ತಿತ್ವಕ್ಕೂ ಇಲ್ಲಿ ಕಾಣುವ ಬಸವಣ್ಣನ ವ್ಯಕ್ತಿತ್ವಕ್ಕೂ ಏನೇನೂ ಹೋಲಿಕೆ ಕಂಡುಬರುವುದಿಲ್ಲ.

ಕೃತಿಗೆ ಐತಿಹಾಸಿಕ ದೃಷ್ಟಿಯಿಂದ ಯಾವುದೇ ಮಹತ್ತ್ವವಿಲ್ಲದಿದ್ದರೂ ಅಂದಿನ ಧಾರ್ಮಿಕ ಹಿನ್ನೆಲೆಯನ್ನು ತಿಳಿಯಲು ಸಹಾಯಕವಾಗಿದೆ. ಪರಮತವಿಡಂಬನೆ ಎದ್ದು ಕಾಣುತ್ತದೆ. ವೀರಶೈವ ಧರ್ಮವನ್ನು ಕವಿ ಕಟುವಾಗಿ ಟೀಕಿಸಿದ್ದಾನೆ. ಭಾಷೆ ಸರಳವಾಗಿದೆ. ಅಲ್ಲಲ್ಲಿ ಉರ್ದು ಶಬ್ದಗಳ ಬಳಕೆ ಕಂಡುಬರುತ್ತದೆ. (ಎಂ.ಎಲ್.ಎಲ್.)

**ಧರ್ಮಗಳು:** ಕರ್ನಾಟಕದಲ್ಲಿ ಇಂದು ಪ್ರಚಲಿತವಾಗಿರುವ ಪ್ರಧಾನ ಧರ್ಮಗಳೆಂದರೆ ಹಿಂದು, ಇಸ್ಲಾಂ, ಕ್ರೈಸ್ತ, ಜೈನ, ಬೌದ್ಧ ಮತ್ತು ಸಿಖ್.

ಐತಿಹಾಸಿಕವಾಗಿ, ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಪ್ರಚಲಿತವಾಗಿದ್ದುದು ಸ್ಥಳೀಯವಾದ ಜನಪದ ಧರ್ಮ. ಯಾವ ಶಾಸ್ತ್ರ ಅಥವಾ ಸೈದ್ಧಾಂತಿಕ ಹಿನ್ನೆಲೆಯ ಬೆಂಬಲವಿಲ್ಲದಿದ್ದರೂ ಪರಂಪರಾನುಗತ ನಂಬಿಕೆಗಳ ಬಲದ ಮೇಲೆ ಇಂದಿಗೂ ಸಾಕಷ್ಟು ಪ್ರಮಾಣದಲ್ಲಿ ಜನಪದ ಧರ್ಮೀಯ ಆಚರಣೆಗಳು ಉಳಿದುಕೊಂಡಿರುವುದನ್ನು ಗಮನಿಸಿದರೆ ಹಿಂದೆ ಇದೇ ಬಹುಸಂಖ್ಯಾತರಲ್ಲಿ ಹರಡಿದ್ದ ಧರ್ಮವಾಗಿರಬೇಕೆಂಬುದು ಸ್ಪಷ್ಟವಾಗುತ್ತದೆ. ಕ್ರಿ.ಪೂ. ಸು. 4–3ನೆಯ ಶತಮಾನಗಳ ಹೊತ್ತಿಗೆ ಬಹುಶಃ ಕರ್ನಾಟಕ ಮಗಧ ಸಾಮ್ರಾಜ್ಯಕ್ಕೆ ಸೇರಿದಂದಿನಿಂದ ಔತ್ತರೇಯ

ಧರ್ಮಗಳಾದ ಹಿಂದು, ಬೌದ್ಧ ಮತ್ತು ಜೈನ ಧರ್ಮಗಳೂ ಇಲ್ಲಿ ಹರಡಲಾರಂಭಿಸಿದುವು. ಪ್ರಾರಂಭದಲ್ಲಿ ಈ ಧರ್ಮಗಳು ನಗರ ಪರಿಸರಗಳಲ್ಲಿ ಹೆಚ್ಚು ವ್ಯಾಪಕವಾಗಿದ್ದು ಕ್ರಮೇಣ ಜನಸಾಮಾನ್ಯರಲ್ಲೂ ಹರಡಲಾರಂಭಿಸಿದಂತೆ ತೋರುತ್ತದೆ. ಬೌದ್ಧಧರ್ಮ ಮುಂದೆ ಸು. 10–12ನೆಯ ಶತಮಾನಗಳ ವರೆಗೆ ಮಾತ್ರ ಇಲ್ಲಿ ಪ್ರಚಲಿತವಾಗಿತ್ತು. ಇತ್ತೀಚೆಗೆ ನಡೆದ ಬೌದ್ಧ ಧರ್ಮದ ಪ್ರಸಾರ ಮತ್ತು ಅನೇಕ ಟಿಬೆಟ್ ಮೂಲದ ಜನ ಈಗ ಇಲ್ಲಿ ಬಂದು ನೆಲೆಸಿರುವುದರಿಂದ ಇಂದು ಪುನಃ ಬೌದ್ಧಧರ್ಮೀಯರು ಸುಮಾರು ಸಂಖ್ಯೆಯಲ್ಲಿದ್ದಾರೆ. ಹಿಂದು ಮತ್ತು ಜೈನಧರ್ಮಗಳು ಕ್ರಿಸ್ತಪೂರ್ವಕಾಲದಿಂದ ಇಂದಿನವರೆಗೂ ಅವಿಚ್ಛಿನ್ನವಾಗಿ ಬೆಳೆದು ಬಂದಿವೆ. ಅದರಲ್ಲೂ ಹಿಂದು ಧರ್ಮ ಮತ್ತು ಜನಪದ ಧರ್ಮಗಳು ಪರಸ್ಪರಾನುವರ್ತಿಗಳಾಗಿ ಸಾಕಷ್ಟು ಕೊಳುಕೊಡೆಗಳೊಡನೆ ಬೆಳೆದದ್ದರಿಂದ ಈ ಸಂಯೋಗಿತ ಹಿಂದು ಧರ್ಮವೇ ಇಂದು ಬಹು ಸಂಖ್ಯಾತ ಧರ್ಮವಾಗಿದೆ. ಸು. 8, 9ನೆಯ ಶತಮಾನದ ಹೊತ್ತಿಗೆ ಅರಬ್ಬೀ ವ್ಯಾಪಾರಸ್ಥರಿಂದ ಕರ್ನಾಟಕಕ್ಕೆ ಇಸ್ಲಾಂ ಧರ್ಮದ ಸಂಪರ್ಕ ಒದಗಿಬಂದರೂ ಅದು ಇಲ್ಲಿ ನೆಲೆಯೂರಿ ಬೆಳೆಯಲಾರಂಭಿಸಿದ್ದು 14ನೆಯ ಶತಮಾನದಾರಭ್ಯ. ಅಂದರೆ ಕರ್ನಾಟಕದಲ್ಲಿ ಇಸ್ಲಾಮೀ ರಾಜ್ಯಗಳು ಸ್ಥಾಪನೆಯಾದ ಕಾಲದಿಂದ. ಕರ್ನಾಟಕದಲ್ಲಿ ಕ್ರೈಸ್ತಧರ್ಮದ ಬಗ್ಗೆ 14–15ನೆಯ ಶತಮಾನಗಳಲ್ಲಿ ಕೆಲವು ಅಪರೂಪ ಉಲ್ಲೇಖಗಳು ದೊರಕುವುದಾದರೂ ಅದು ಇಲ್ಲಿ ಹೆಚ್ಚುಮಟ್ಟಿಗೆ ಹರಡಲಾರಂಭವಾದದ್ದು ಸು. 16ನೆಯ ಶತಮಾನದಾರಭ್ಯ. ಪೋರ್ಚುಗೀಸ್, ಫ್ರೆಂಚ್, ಜರ್ಮನ್ ಮತ್ತು ಬ್ರಿಟಿಷ್ ಪಾದ್ರಿಗಳು ಇದಕ್ಕಾಗಿ ಶ್ರಮಿಸಿದ್ದಾರೆ. ಸಿಖ್ ಧರ್ಮದ ಪ್ರವರ್ತಕನಾದ ಗುರುನಾನಕ್ ಕರ್ನಾಟಕದ ಬಿದರೆ ಬಳಿಯ ನಾನಕ್‍ಝರಾದ ಬಳಿ ಕೆಲಕಾಲ ತಂಗಿದ್ದನೆಂದು ಹೇಳಿಕೆಗಳಿವೆ. ಆದರೆ ಇಂದು ಕರ್ನಾಟಕದಲ್ಲಿ ಕಂಡುಬರುವ ಹೆಚ್ಚಿನ ಸಿಖ್ ಮತೀಯರು ವ್ಯಾಪಾರ, ಉದ್ಯೋಗಗಳಿಗಾಗಿ ಇತ್ತೀಚಿನ ವರ್ಷಗಳಲ್ಲಿ ವಲಸೆ ಬಂದವರು. ಹಾಗೆಯೇ ಜರತುಷ್ಟ್ರರ ಪ್ರಸ್ತಾಪ 9ನೆಯ ಶತಮಾನದಲ್ಲಿ ಅಮೋಘವರ್ಷನ ಕಾಲದ ಶಾಸನಗಳಲ್ಲಿ ಕಂಡುಬರುವುದಾದರೂ ಇಂದು ನೆಲೆಸಿರುವ ಜರತುಷ್ಟ್ರರು ಸಹ ಈಚಿನ ವರ್ಷಗಳಲ್ಲಿ ಮುಂಬಯಿ, ಸೂರತ್ ಮೊದಲಾದೆಡೆಗಳಿಂದ ಇಲ್ಲಿಗೆ ವಲಸೆ ಬಂದವರು. ಕರ್ನಾಟಕದಲ್ಲಿ ಕಂಡುಬರುವ ಎಲ್ಲ ಪ್ರಮುಖ ಧರ್ಮಗಳಲ್ಲೂ ಅನೇಕ ಪಂಥೋಪಪಂಥಗಳೂ ಜಾತಿಗಳೂ ಇವೆ. ಯಾಪನೀಯ ಜೈನ, ವೀರಶೈವ ಮತ್ತು ಮಾಧ್ವ ಪಂಥಗಳಿಗೆ ಕರ್ನಾಟಕವೇ ಉಗಮಸ್ಥಾನ. ಕಾಲಾನುಕಾಲದಲ್ಲೂ ಹಲವು ಧರ್ಮಪಂಥಗಳ ಆಗರವಾಗಿದ್ದು ಮತ ಸಹಿಷ್ಣುತೆಯನ್ನು ವಿಶೇಷವಾಗಿ ಬೆಳೆಸಿಕೊಂಡಿರುವುದು ಈ ನಾಡಿನ ವೈಶಿಷ್ಟ್ಯವಾಗಿದೆ. (ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ಮತ್ತು ಇರುವ ಪ್ರಮುಖ ಧರ್ಮಪಂಥಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಇದೇ ಸಂಪುಟದಲ್ಲಿ ಪ್ರತ್ಯೇಕ ಲೇಖನಗಳಲ್ಲಿ ಕೊಡಲಾಗಿದೆ). *

**ಧರ್ಮವೀರ:** ಕರ್ನಾಟಕದ ಮಾಜಿ ರಾಜ್ಯಪಾಲರು (1969–72). ಇವರು ಲಖನೌ ಅಲಹಾಬಾದ್ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ. ಲಂಡನ್ನಿನ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಶಾಲೆಗಳಲ್ಲಿ ಅಧ್ಯಯನ ನಡೆಸಿದ ಬಳಿಕ ಸಿವಿಲ್ ಸರ್ವೀಸ್ ಅಧಿಕಾರಿಯಾಗಿ ಜೀವನವನ್ನಾರಂಭಿಸಿದರು. (1929). ಭಾರತಕ್ಕೆ ಸ್ವಾತಂತ್ರ ಬಂದಾಗ ಕೇಂದ್ರ ಸಂಪುಟದ ಜಂಟಿ ಕಾರ್ಯದರ್ಶಿಯಾಗಿ ನೇಮಕಗೊಂಡರು. ಮಾಜಿ ಪ್ರಧಾನಿ ಜವಹರಲಾಲ್ ನೆಹರು ಅವರ ಆಪ್ತ ಕಾರ್ಯದರ್ಶಿಯಾಗಿದ್ದರು. ತಮ್ಮ ದಕ್ಷ ಆಡಳಿತದಿಂದ ನೆಹರು ಅವರ ಮೆಚ್ಚುಗೆಗೆ ಪಾತ್ರರಾದ ಇವರು ಮುಂದೆ ಲಂಡನ್‍ನಲ್ಲಿ ಹೈಕಮೀಷನರ್ ಆಗಿದ್ದ ವಿ.ಕೆ. ಕೃಷ್ಣಮೆನನ್‍ರವರ ಜೊತೆ ಉಪ ಹೈಕಮೀಷನರ್ ಆಗಿ ಕೆಲಸ ಮಾಡಿದರು. ಅನಂತರ ಇವರು ಚೆಕೊಸ್ಲೊವಾಕಿಯದ ರಾಯಭಾರಿಯಾಗಿ ನೇಮಕಗೊಂಡರು. ಅಲ್ಲಿಂದ ಆಸ್ಟ್ರೇಲಿಯಕ್ಕೆ ಭಾರತದ ಹೈಕಮೀಷನರ್ ಆಗಿ ನೇಮಕಗೊಂಡರಾದರೂ ಅಧಿಕಾರ ವಹಿಸಿಕೊಳ್ಳುವ ಮುನ್ನವೇ ಭಾರತ ಸರ್ಕಾರ ಇವರನ್ನು ವಾಪಸ್ಸು ಕರೆಯಿಸಿಕೊಂಡು ನಿರಾಶ್ರಿತರ ಪುನರ್ವಸತಿ ಸಚಿವಾಲಯದ ಕಾರ್ಯದರ್ಶಿಯನ್ನಾಗಿ ನೇಮಿಸಿತು. ಪಾಕಿಸ್ತಾನದಿಂದ ಭಾರತಕ್ಕೆ ಬಂದ ತೊಂಬತ್ತೈದು ಲಕ್ಷ ನಿರಾಶ್ರಿತರಿಗೆ ನೆಲೆ ಕಲ್ಪಿಸುವ ಹೊಣೆಯನ್ನು ಅತ್ಯಂತ ಯಶಸ್ವಿಯಾಗಿ ಇವರು ನಿರ್ವಹಿಸಿದರು. ಬಳಿಕ ನವದೆಹಲಿಯ ನಗರ ಆಡಳಿತ ನಿರ್ವಹಣೆ ವಹಿಸಿಕೊಂಡರು. ಅನಂತರ ಇವರನ್ನು ಪಂಜಾಬಿನ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. ರಾಜಕೀಯ ಅಶಾಂತಿಯ ನೆಲೆಯಾಗಿದ್ದ ಪಂಜಾಬಿನಲ್ಲಿ ಶಾಂತಿ ನೆಲೆಗೊಳ್ಳಲು ನಿರಂತರ ಪ್ರಯತ್ನ ನಡೆಸಿದರು. ಅನಂತರ ಇವರನ್ನು ಬಂಗಾಲದ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. ತಮ್ಮ ಆಡಳಿತ ಬಿಗಿಮುಷ್ಟಿಯ ಜೊತೆಗೆ ನೈತಿಕ ಶಕ್ತಿಯ ಸಂಧಾನ ಚಾತುರ್ಯದಿಂದ ಪಶ್ಚಿಮ ಬಂಗಾಲದಲ್ಲಿಯೂ ಸಮರ್ಥವಾಗಿ ಕರ್ತವ್ಯ ನಿರ್ವಹಿಸಿದರು. ಅನಂತರ ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡು ನಾಲ್ಕುವರ್ಷಗಳ ಕಾಲ ಸೇವೆ ಸಲ್ಲಿಸಿದರು.

(ಎಚ್.ಎಸ್.ಕೆ.)

**ಧರ್ಮಸಿಂಗ್, ಎನ್.:** 1936– . ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (2004–2006). ಹಿರಿಯ ರಾಜಕಾರಣಿ. ಗುಲ್ಬರ್ಗ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಭೀಮಾ ತೀರದ ಪುಟ್ಟ ಗ್ರಾಮ ನೆಲೋಗಿಯಲ್ಲಿ ನಾರಾಯಣಸಿಂಗ್ ದಂಪತಿಗಳ ಮಗನಾಗಿ 1936 ಡಿಸೆಂಬರ್ 25ರಂದು ಜನಿಸಿದರು. ಇವರದು ಒಂದು ಸಾಮಾನ್ಯ ಕೃಷಿ ಕುಟುಂಬ. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲೇ ಪೂರೈಸಿದರು. ಬಾಲ್ಯದಿಂದಲೂ ಜನಾನುರಾಗ ಮತ್ತು ಸಾತ್ವಿಕ ಗುಣಗಳನ್ನು ರೂಢಿಸಿಕೊಂಡಿದ್ದ ಇವರು ಹೆಚ್ಚಿನ ವಿದ್ಯಾಭ್ಯಾಸ ಮಾಡುವುದರ ಬಗ್ಗೆ ದೃಢ ನಿಶ್ಚಯವುಳ್ಳವರಾಗಿದ್ದರು. ವಿದ್ಯಾರ್ಥಿ ಜೀವನದಲ್ಲಿ ಗಳಿಕೆಗಾಗಿ ಮನೆಪಾಠ ಹೇಳಿಕೊಡುವುದರಿಂದ ಹಿಡಿದು ಶಾಲಾಮಾಸ್ತರಾಗುವ ತನಕ ಸ್ವಾವಲಂಬಿಯಾಗಲು ಪ್ರಯತ್ನಿಸಿದರು. ಅನೇಕ ಹಿತೈಷಿಗಳ ನೆರವೂ ಇವರ ಶಿಕ್ಷಣಕ್ಕೆ ಉತ್ತೇಜನ ನೀಡಿತು. ಇವರು ತಮ್ಮ ಆಸಕ್ತಿಯ ವಿಷಯವಾಗಿದ್ದ ಕಾನೂನು ವಿಷಯದಲ್ಲಿ ಹೈದರಾಬಾದ್‍ನಲ್ಲಿ ಓದಿ ಬಿ.ಎಲ್. ಪದವಿ ಗಳಿಸಿದರು.

ಕಾನೂನು ಪದವೀಧರರಾದ ಅನಂತರ ಗುಲ್ಬರ್ಗದಲ್ಲಿ ವಕೀಲ ವೃತ್ತಿ ಕೈಗೊಂಡರು. ಗುಲ್ಬರ್ಗ ನಗರ ಸಭೆಯ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಶೀಲರಾದರು. ಎಡಪಂಥದತ್ತ ಒಲವಿದ್ದ ಇವರು 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಇಂದಿರಾಗಾಂಧಿಯವರ ಆಡಳಿತ ಕಾಂಗ್ರೆಸ್ ಪಕ್ಷ ಸೇರಿದರು. ತರುವಾಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಬಾಲ್ಯದ ಬಡತನವನ್ನೂ ಮರೆಯದೆ ಎಲ್ಲರೊಂದಿಗೆ ಒಂದಾಗಿ ಸಾಗುವ

ಹೊಂದಾಣಿಕೆಯ ಗುಣವನ್ನು ರೂಢಿಸಿಕೊಂಡ ಇವರು ಬಹು ಬೇಗನೆ ಸಾರ್ವಜನಿಕ ವಲಯದಲ್ಲಿ ಜನಪ್ರಿಯರಾದರು.

1972ರಲ್ಲಿ ಡಿ. ದೇವರಾಜ ಅರಸು ಕಾಂಗ್ರೆಸ್ ಸಂಚಾಲಕರಾಗಿದ್ದಾಗ ಪಕ್ಷದಿಂದ ರಾಜ್ಯ ವಿಧಾನ ಸಭೆಗೆ ಜೇವರ್ಗಿ ಕ್ಷೇತ್ರದಿಂದ ಸ್ಪರ್ಧಿಸಿದರು. ಆಗ ಇದ್ದ ಇಂದಿರಾ ಅಲೆಯಿಂದಾಗಿ ಸುಲಭವಾಗಿ ಗೆದ್ದರು. ಅನಂತರ ಲೋಕಸಭೆಗೆ ಸ್ಪರ್ಧಿಸಿ ಆಯ್ಕೆಯಾದರು (1980). ಆದರೆ ಇಂದಿರಾಗಾಂಧಿಯವರ ಅಪೇಕ್ಷೆಯ ಮೇರೆಗೆ ಕೇರಳದ ಸ್ಟೀಫನ್‌ರವರಿಗೆ ಸ್ಥಾನ ತೆರವು ಮಾಡಿಕೊಟ್ಟರು. ತರುವಾಯ ರಾಜ್ಯ ಸಚಿವ ಸಂಪುಟ ಸೇರಿದರು. ಜನರ ಕುಂದುಕೊರತೆಗಳಿಗೆ ಸದಾ ಸ್ಪಂದಿಸುತ್ತಿದ್ದ ಇವರು ಸತತವಾಗಿ ಜೇವರ್ಗಿ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗುತ್ತ ಬಂದರು. ಇವರು ವಿವಿಧ ಸಂದರ್ಭಗಳಲ್ಲಿ ನಗರಾಭಿವೃದ್ಧಿ, ಕಂದಾಯ, ಗೃಹ, ಅಬ್ಕಾರಿ, ಸಮಾಜಕಲ್ಯಾಣ, ಲೋಕೋಪಯೋಗಿ ಮೊದಲಾದ ಖಾತೆಗಳನ್ನು ನಿರ್ವಹಿಸಿದರು. 1997–98ರಲ್ಲಿ ಇವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಇವರು ಆರ್ಥಿಕವಾಗಿ ಹಿಂದುಳಿದ ರಜಪೂತ ಸಮುದಾಯಕ್ಕೆ ಸೇರಿದವರು. ಬಹು ಪೂರ್ವದಲ್ಲಿ ಇವರ ಹಿರಿಯರು ಉತ್ತರ ಭಾರತದ ಕಡೆಯಿಂದ ಬಂದು ನೆಲೆಸಿದರೆಂದು ತಿಳಿದುಬರುತ್ತದೆ. 2004ರಲ್ಲಿ ನಡೆದ ರಾಜ್ಯವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟಬಹುಮತ ಬಾರದ ಸ್ಥಿತಿಯಲ್ಲಿ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾ ದಳ ಪಕ್ಷಗಳ ಸಮ್ಮಿಶ್ರ ಸರ್ಕಾರದ ರಚನೆಯಾಯಿತು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಧರ್ಮಸಿಂಗ್ ಅವರು 2004 ಮೇ 28ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಸಮ್ಮಿಶ್ರ ಸರ್ಕಾರದ ಭಿನ್ನಮತೀಯ ಚಟುವಟಿಕೆಯಿಂದಾಗಿ ಮುಖ್ಯಮಂತ್ರಿ ಸ್ಥಾನವನ್ನು ತ್ಯಜಿಸಬೇಕಾಗಿ ಬಂತು. ಪ್ರಭಾವತಿ ಇವರ ಪತ್ನಿ. ಇವರಿಗೆ ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. *

**ಧರ್ಮಸ್ಥಳ:** ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಪುಣ್ಯಕ್ಷೇತ್ರ. ಕೊಕ್ಕಡ ಫಿರ್ಕಾದಲ್ಲಿರುವ ಈ ಕ್ಷೇತ್ರದ ವಿಸ್ತೀರ್ಣ 2,073 ಚ.ಕಿಮೀ. ಜನಸಂಖ್ಯೆ 9,258. ಪಶ್ಚಿಮಘಟ್ಟಗಳ ಪಶ್ಚಿಮದ ಇಳಿಜಾರಿನ ಅಂಚಿನಲ್ಲಿರುವ ಧರ್ಮಸ್ಥಳ ಮಂಗಳೂರಿನ ಪೂರ್ವಕ್ಕೆ 75 ಕಿಮೀ, ಬೆಳ್ತಂಗಡಿಯ ಆಗ್ನೇಯಕ್ಕೆ ಸು. 15 ಕಿಮೀ ಮತ್ತು ಪುತ್ತೂರಿಗೆ 50 ಕಿಮೀ ದೂರದಲ್ಲಿ ಮಂಗಳೂರು ಚಾರ್ಮಾಡಿ ಮಾರ್ಗದಲ್ಲಿ ಉಜಿರೆಯಿಂದ 10 ಕಿಮೀ ಆಗ್ನೇಯದಲ್ಲಿ ಇದೆ. ಧರ್ಮಸ್ಥಳದ ಪಶ್ಚಿಮದಲ್ಲಿ ನೇತ್ರಾವತಿ ನದಿ ದಕ್ಷಿಣಾಭಿಮುಖವಾಗಿ ಹರಿಯುವುದು. ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ನೆರಿಯ ಹೊಳೆ ಧರ್ಮಸ್ಥಳದ ನೈಋತ್ಯದಲ್ಲಿ ನೇತ್ರಾವತಿಯನ್ನು ಕೂಡಿಕೊಳ್ಳುವುದು. ಇವಲ್ಲದೆ ಇದರ ಸುತ್ತಲೂ ಕೆಲ ಪುಟ್ಟ ತೊರೆಗಳೂ ಇವೆ. ಈ ಪ್ರದೇಶ ಜಯಕೀರ್ತಿ ಬೆಟ್ಟ, ಅಣ್ಣಪ್ಪನ ಬೆಟ್ಟ ಮತ್ತು ಶಾಲೆಯ ಬೆಟ್ಟಗಳಿಂದ ಸುತ್ತುವರಿದಿದೆ.

ಧರ್ಮಸ್ಥಳ ಕ್ಷೇತ್ರಕ್ಕೆ ಬದಿನೆಡೆ, ನೆಲ್ಯಾಡಿಬೀಡು, ಬಳ್ಳಾಳ್ತಿಗುಡಿ, ಚಂದ್ರನಾಥ ಬಸದಿ, ಮಂಜುನಾಥ ದೇವಾಲಯ ಮತ್ತು ಹೆಗ್ಗಡೆಯವರ ಅರಮನೆ ಸೇರಿವೆ. ಧರ್ಮಸ್ಥಳದಲ್ಲಿ ಕುಡುಮದ ದೈವಗಳ ಗುಡಿಗಳು ಚಂದ್ರನಾಥ ಬಸದಿ ಮತ್ತು ಮಂಜುನಾಥ ದೇವಾಲಯ ಇವುಗಳಿದ್ದು, ಇದು ಗ್ರಾಮ್ಯ, ಜೈನ ಮತ್ತು ವೈದಿಕ ಮತೀಯ ಶ್ರದ್ಧಾಭಕ್ತಿಗಳ ಸಂಗಮ ಕ್ಷೇತ್ರವಾಗಿದೆ. ಧರ್ಮಸ್ಥಳದಲ್ಲಿ 39' ಎತ್ತರದ ಸು. 175 ಟನ್ನುಗಳ ತೂಕದ ಗೊಮ್ಮಟ ಶಿಲಾಮೂರ್ತಿಯನ್ನು 1970ರ ದಶಕದಲ್ಲಿ ಸ್ಥಾಪಿಸಲಾಗಿದೆ. ಪ್ರತಿವರ್ಷ ಇಲ್ಲಿ ಸರ್ವಧರ್ಮ ಸಮ್ಮೇಳನ ನಡೆಯುವುದೊಂದು ವಿಶೇಷ. ಧರ್ಮಸ್ಥಳಕ್ಕೆ ನಾಡಿನ ಎಲ್ಲ ಕಡೆಯಿಂದಲೂ ಉತ್ತಮ ಮಾರ್ಗಸಂಪರ್ಕಗಳಿವೆ. ವಿದ್ಯುತ್, ಅಂಚೆ, ತಂತಿ ಮತ್ತು ದೂರವಾಣಿ ಸೌಲಭ್ಯಗಳಿವೆ. ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆ. ಉಜಿರೆಯಲ್ಲಿ ಶ್ರೀ ಮಂಜುನಾಥೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜನ್ನು ದೇವಾಲಯದ ವತಿಯಿಂದ ನಡೆಸಲಾಗುತ್ತಿದೆ.

ಮಂಜುನಾಥ ದೇವಾಲಯ

ಅರಣ್ಯಾವೃತವಾಗಿ ಪ್ರಕೃತಿ ಸೌಂದರ್ಯವೂ ಕೂಡಿರುವ ಧರ್ಮಸ್ಥಳವನ್ನು ಪ್ರವೇಶಿಸುವಲ್ಲಿ 150' ಎತ್ತರದ ಸುಂದರ ಪ್ರವೇಶದ್ವಾರವಿದೆ. ಎರಡೂ ಕಡೆಗಳಲ್ಲಿ ನಾಲ್ಕಾರು ಅಂತಸ್ತುಗಳುಳ್ಳ ಛತ್ರಗಳಿವೆ. ಸುಮಾರು ಇಪ್ಪತ್ತು ಅಡಿ ಎತ್ತರದ ಕಟ್ಟೆಯ ಮೇಲೆ ಮಣ್ಣು, ಇಟ್ಟಿಗೆ ಮತ್ತು ಮರಗಳಿಂದ ಮಂಜುನಾಥ ದೇವಾಲಯವನ್ನು ಕಟ್ಟಲಾಗಿದೆ. ಇಲ್ಲಿನ ಎರಡು ಪ್ರಾಕಾರಗಳ ಒಳಭಾಗದಲ್ಲಿ ಮಂಜುನಾಥಸ್ವಾಮಿಯ ಮೂಲ ಆಲಯವಿದೆ. ಇದರ ಎದುರಿಗೆ ಅಣ್ಣಪ್ಪ, ಹಿಂದೆ ಗಣಪತಿ ಮತ್ತು ಪಕ್ಕದಲ್ಲಿ ಅಮ್ಮನವರ ಆಲಯಗಳಿವೆ. ಆಲಯದ ಬಾಗಿಲುಗಳಿಗೆ ಮತ್ತು ಚೌಕಟ್ಟುಗಳಿಗೆ ಬೆಳ್ಳಿ ತಗಡನ್ನು ಹೊದಿಸಿದ್ದಾರೆ. ಒಳಪ್ರಾಕಾರದ ಮರದ ಕಂಬಗಳ ಮೇಲೆ ಮತ್ತು ಮೇಲ್ಛಾವಣಿಗಳಲ್ಲಿ ಸುಂದರ ಕೆತ್ತನೆ ಕೆಲಸವಿದೆ. ಮುಖಮಂಟಪದ ಬಲಗಡೆಯ ಪ್ರವೇಶದ್ವಾರದ ಎರಡೂ ಕಡೆಗಳಲ್ಲಿ ಮಾನವಾಕೃತಿಗಿಂತಲೂ ಎತ್ತರವಾಗಿರುವ ದ್ವಾರಪಾಲಕ ವಿಗ್ರಹಗಳಿವೆ. ಇಲ್ಲಿನ ಮೊದಲ ಅಂತಸ್ತಿನಲ್ಲಿ ಭಿತ್ತಿಚಿತ್ರಗಳಿವೆ. ದೇವಾಲಯದ ನಾಲ್ಕು ಮೂಲೆಗಳಲ್ಲೂ ಕಳಸವುಳ್ಳ ನಾಲ್ಕು ಗೋಪುರಗಳಿವೆ.

ದೇವಾಲಯದ ಎದುರಿಗಿರುವ ಹೆಗ್ಗಡೆಯವರ ನಿವಾಸದ ಮೂರನೆಯ ಮಹಡಿಯ ದರ್ಪಣಮಂದಿರ ಪ್ರವಾಸಿ ಆಕರ್ಷಣೆಗಳಲ್ಲಿ ಒಂದು. ಈ ನಿವಾಸದ ಹಿಂದೆ ಇರುವ ಪುಷ್ಪೋದ್ಯಾನ ಮತ್ತು ಕೊಳ ಆಕರ್ಷಕವಾಗಿವೆ. ಇಲ್ಲಿನ ಲಲಿತೋದ್ಯಾನದಲ್ಲಿ ವಿವಿಧ ಹೂಗಳ ಜೊತೆಗೆ ಆಕರ್ಷಕ ಮಾನವಾಕೃತಿ ಬೊಂಬೆಗಳಿವೆ. ವಸಂತಮಹಲ್ ಒಂದು ಪುಟ್ಟ ಕಲಾವಸ್ತು ಪ್ರದರ್ಶನ ಮಂದಿರ. ಧರ್ಮಸ್ಥಳದ ಲಕ್ಷದೀಪೋತ್ಸವ ಪ್ರಸಿದ್ಧ. ನವರಾತ್ರಿ, ಶಿವರಾತ್ರಿಗಳಲ್ಲೂ ಉತ್ಸವಗಳು ನಡೆಯುತ್ತವೆ. ಹನ್ನೆರಡು ವರ್ಷಕ್ಕೊಮ್ಮೆ ನಡಾವಳಿ ಎಂಬ ಉತ್ಸವ ನಡೆಯುತ್ತದೆ.

ಧರ್ಮಸ್ಥಳದಲ್ಲಿ ಯಾತ್ರಾರ್ಥಿಗಳ ಉಪಯೋಗಕ್ಕಾಗಿ ನೇತ್ರಾವತಿ ಮತ್ತು ವೈಶಾಲಿ ಎಂಬ ಎರಡು ದೊಡ್ಡ ನಿವಾಸ ಕೇಂದ್ರಗಳನ್ನು ಕಟ್ಟಲಾಗಿದೆ. ದೇವಾಲಯದ ಬಲಗಡೆಯಲ್ಲಿರುವ ಅನ್ನಪೂರ್ಣ ಕಟ್ಟಡದಲ್ಲಿ ಸರ್ವರಿಗೂ ಸರ್ವಕಾಲದಲ್ಲೂ ಉಚಿತ ಭೋಜನ ವ್ಯವಸ್ಥೆ

ಇದೆ. ಧರ್ಮಸ್ಥಳವನ್ನು ಮೊದಲು ಮಲರ್ಮಾಡಿ ಎಂದೂ ಅನಂತರ ಕುಡುಮ ಎಂದೂ ಕರೆಯುತ್ತಿದ್ದರು. ದೇವರಾಜ ಹೆಗ್ಗಡೆಯ ಕಾಲದಲ್ಲಿ ಉಡುಪಿಯ ಸೋದೆ ಮಠದ ವಾದಿರಾಜ ಸ್ವಾಮಿಗಳು ಧರ್ಮಸ್ಥಳಕ್ಕೆ ಭೇಟಿ ಕೊಟ್ಟು ಧರ್ಮಸ್ಥಳವೆಂದು ಕರೆದರು. ಇಲ್ಲಿನ ಐತಿಹ್ಯದ ಪ್ರಕಾರ ಸು.500 ವರ್ಷಗಳ ಹಿಂದೆ ಬಿರ್ಮಣ್ಣ ಪೆರ್ಗ್ಗಡೆ ಮತ್ತು ಆತನ ಪತ್ನಿ ಹೆಗ್ಗಡತಿ ಅಮ್ಮೊದೇವಿ ಬಲ್ಲಾಳತಿಯರ ನೆಲ್ಯಾಡಿ ಬೀಡಿನ ಮನೆಗೆ ಕುಮಾರಸ್ವಾಮಿ ಮತ್ತು ಕಾಳರಾಹು ಧರ್ಮದೇವತೆಗಳು ವೇಷ ಮರೆಸಿಕೊಂಡು ದಾರಿಕಾರರಾಗಿ ಬಂದು, ಅವರ ಮನೆಯಲ್ಲಿ ತಂಗಿ ಅವರ ಪ್ರೀತ್ಯಾದರವನ್ನು ಮೆಚ್ಚಿಕೊಂಡು, ಹೆಗ್ಗಡೆಯ ಕನಸಿನಲ್ಲಿ ನಿಜರೂಪದಲ್ಲಿ ಕಾಣಿಸಿಕೊಂಡು, ಈ ಬೀಡನ್ನು ನಮಗೆ ಉಳಿಯಲು ಕೊಟ್ಟು ನೀವು ಬೇರೆ ಮನೆ ಮಾಡಿಕೊಳ್ಳಿ. ನಮಗೆ ಪರ್ವನಡಾವಳಿ, ಬೇರೆ ಬೇರೆ ಗುಡಿ, ಒಬ್ಬ ಪಾತ್ರಿ, ಉಯ್ಯಾಲೆ ಎಲ್ಲಾ ವ್ಯವಸ್ಥೆ ಮಾಡಿ. ಈ ಎಲ್ಲಾ ಕಾರ್ಯಗಳನ್ನೂ ನಮ್ಮ ಭೂತ ಅಣ್ಣಪ್ಪ ಮಾಡುವನು. ಈ ದೇವಸ್ಥಾನದ ಮಹಿಮೆ ಎಲ್ಲ ಕಡೆ ಹರಡುವುದು. ಇಲ್ಲಿ ಸರ್ವರಿಗೂ ಸದಾ ಕಾಲವೂ ದಾನಧರ್ಮ ನಡೆಯುತ್ತಿರಲಿ ಎಂದು ಹೇಳಿ ಅಂತರ್ಧಾನರಾದರಂತೆ. ಹೆಗ್ಗಡೆ ದಂಪತಿಗಳು ದೈವಗಳ ಅಪ್ಪಣೆಯಂತೆ ನಡೆದುಕೊಂಡರು. ಹೊಸ ಬೀಡಿಗೆ ಹೋದರು. ದೈವಗಳು ತಂಗಿದ ಬದಿನೆಡೆ, ನೆಲ್ಯಾಡಿ ಬೀಡು ಅವರ ನೆಲೆಯಾಗಿ ತಮ್ಮ ಹೆಣ್ಣು ದೈವಗಳಾದ ಕನ್ಯಾಕುಮಾರಿ ಕಾಳರ್ಕಾಯಿಗಳೊಂದಿಗೆ ಬಂದು ಉಳಿದರು. ಕುಡುಮದ ದೈವಗಳು ಮತ್ತು ಅಣ್ಣಪ್ಪ ಭೂತನಿಂದ ಮಂಗಳೂರು ಸಮೀಪದ ಕದ್ರಿಯ ಮಂಜುನಾಥ ದೇವಾಲಯದ ಸ್ಥಾಪನೆಯಾಯಿತು.

ಬಾಹುಬಲಿ

ಚಂದಯ್ಯ ಹೆಗ್ಗಡೆಯ ಕಾಲದಲ್ಲಿ (1830-49) ದೇವಾಲಯದ ಒಳಭಾಗ ಸುಧಾರಣೆಯಾದವು. ಆಮೇಲೆ ಮಂಜಯ್ಯ ಹೆಗ್ಗಡೆ (1849-95) ಛತ್ರ, ಹೊರಸುತ್ತಿನ ಪ್ರಾಕಾರ, ಉನ್ನತ ಗೋಪುರ, ಉಗ್ರಾಣ, ರಥ, ಆಭರಣ, ಪಲ್ಲಕ್ಕಿ, ಬಸದಿಯ ಜೀರ್ಣೋದ್ಧಾರ ಮತ್ತು ಕ್ಷೇತ್ರಶುದ್ಧಿ ಮಾಡಿಸಿದರು. ದೈವಗಳಿಗೆ ಮೂರು ಮಹಾಧರ್ಮ ನಡಾವಳಿ, ಪೂಜೆ ಉತ್ಸವ ಹೆಚ್ಚಿಸಿ 45 ವರ್ಷ ಆಳಿದರು. ಮುಂದೆ ಬಂದ ಚಂದಯ್ಯ ಹೆಗ್ಗಡೆಯ ಕಾಲದಲ್ಲಿ ದೈವದ ಗುಡಿಗಳನ್ನು ಹೊಸತಾಗಿ ಕಟ್ಟಲಾಯಿತು. ಯಾತ್ರಿಕರಿಗೆ ಧರ್ಮಛತ್ರ, ಬಸದಿಗೆ ಪಂಚಕಲ್ಯಾಣ, ನಲ್ಲಿ ನೀರಿನ ವ್ಯವಸ್ಥೆಗಳಾದವು.

ಆ ಮೇಲೆ ಮಂಜಯ್ಯ ಹೆಗ್ಗಡೆಯವರ (1918-55) ಕಾಲದಲ್ಲಿ ಧರ್ಮಸ್ಥಳದ ಪ್ರಭಾವ ಮತ್ತು ದೇವಸ್ಥಾನದ ಶಿಸ್ತು ಬೆಳೆಯಿತು. ಧರ್ಮಾರ್ಥ ಆಸ್ಪತ್ರೆ, ಸಿದ್ಧವನದಲ್ಲಿ ಗುರುಕುಲ (1940), ಕಾರ್ತಿಕ ಲಕ್ಷ ದೀಪೋತ್ಸವದ ಕಾಲಕ್ಕೆ ಸರ್ವಧರ್ಮಸಮ್ಮೇಳನ ಇತ್ಯಾದಿ ಆರಂಭವಾದವು. ನೇತ್ರಾವತಿಗೆ ಸೇತುವೆ ಆಯಿತು. ಸುತ್ತಲಿನ ಜವಳು ನೆಲವೆಲ್ಲ ಆಬಾದಾಗಿ ಸುಂದರ ಉದ್ಯಾನವನಗಳೂ ಕಾರಂಜಿಗಳೂ ನಿರ್ಮಾಣಗೊಂಡವು. ಆರೋಗ್ಯಮಯ ವಾತಾವರಣ ಉಂಟಾಯಿತು. ನೀರು, ವಿದ್ಯುದ್ದೀಪಗಳ ಸರಬರಾಜು ವ್ಯವಸ್ಥೆಗೊಂಡಿತು. ಇವರ ಅನಂತರ ಬಂದ ರತ್ನವರ್ಮ ಹೆಗ್ಗಡೆಯವರೂ ಮತ್ತು ಅನಂತರ ಇವರ ಹಿರಿಯ ಮಗ ವೀರೇಂದ್ರ ಹೆಗ್ಗಡೆಯವರೂ ಸಾಮಾಜಿಕ ಕಾರ್ಯದ ಪರಂಪರೆಯನ್ನು ಮುಂದುವರಿಸಿದರು. ವೀರೇಂದ್ರ ಹೆಗ್ಗಡೆಯವರು ಕಾರ್ಕಳದ ಮಹಾಶಿಲ್ಪಿ ರಂಜಾಳ ಗೋಪಾಲ ಶೆಣೈ ಅವರಿಂದ ಗೊಮ್ಮಟನ ಪ್ರತಿಮೆಯನ್ನು ಕೆತ್ತಿಸಿದ್ದಾರೆ. ಧರ್ಮಸ್ಥಳ ಇಂದು ವೀರೇಂದ್ರ ಹೆಗ್ಗಡೆಯವರ (ನೋಡಿ) ಧರ್ಮಾಧಿಕಾರತ್ವದಲ್ಲಿ ವಿಸ್ತಾರವಾದ ಚಟುವಟಿಕೆಗಳನ್ನು ಹಮ್ಮಿಕೊಂಡ ದೊಡ್ಡ ಧಾರ್ಮಿಕ ಕೇಂದ್ರವಾಗಿದೆ. ಇಲ್ಲಿ 1979ರಲ್ಲಿ 51ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಧರ್ಮಸ್ಥಳದ ವತಿಯಿಂದ ಧರ್ಮಸ್ಥಳದ ಹೊರಗೆ ಕಾಲೇಜುಗಳನ್ನು ಸ್ಥಾಪಿಸಿ ನಡೆಸಲಾಗುತ್ತಿದೆ. ಮೈಸೂರಿನಲ್ಲಿಯೂ ಒಂದು ಮ್ಯಾನೇಜ್‍ಮೆಂಟ್ ಕಾಲೇಜು (ಸ್ವಾಯತ್ತ ಸಂಸ್ಥೆ) ಹಾಗೂ ಒಂದು ಮಹಿಳಾ ಕಾಲೇಜನ್ನು ಸ್ಥಾಪಿಸಲಾಗಿದೆ. ಧಾರವಾಡದಲ್ಲಿ ದಂತವಿಜ್ಞಾನ ಕಾಲೇಜು, ಹಾಸನದಲ್ಲಿ ಆಯುರ್ವೇದ ಕಾಲೇಜುಗಳನ್ನು ಶ್ರೀಕ್ಷೇತ್ರದ ವತಿಯಿಂದ ಸ್ಥಾಪಿಸಲಾಗಿದೆ. ಹಲವಾರು ಕಡೆಗಳಲ್ಲಿ ಕಲ್ಯಾಣ ಮಂಟಪಗಳನ್ನು ಕಟ್ಟಿಸಿ ರಿಯಾಯಿತಿ ದರದಲ್ಲಿ ವಿವಾಹಗಳಿಗೆ ನೀಡಲಾಗುತ್ತಿದೆ. ಧರ್ಮಸ್ಥಳದಲ್ಲಿ 'ಮಂಜೂಷ' ಎಂಬ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿದೆ. ಗ್ರಾಮೀಣ ಕಸಬುಗಳನ್ನು ಪುನರುಜ್ಜೀವಿಸಿ ಜನರಿಗೆ ಉದ್ಯೋಗ ಒದಗಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಶಿಥಿಲಗೊಂಡ ಅನೇಕ ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವೂ ಕ್ಷೇತ್ರದಿಂದ ನಡೆಯುತ್ತಿದೆ. ಮೈಸೂರು ತಾಲ್ಲೂಕಿನ ಭೋಗನಂದೀಶ್ವರ ದೇವಾಲಯ, ಮೂಡಿಗೆರೆ ತಾಲ್ಲೂಕಿನ ಭೈರಾಪುರದ ನಾಣ್ಯದ ಭೈರವೇಶ್ವರ ದೇವಾಲಯಗಳು ಇದಕ್ಕೆ ನಿದರ್ಶನಗಳು. ಉಚಿತ ಸಾಮೂಹಿಕ ವಿವಾಹಗಳ ಏರ್ಪಾಡು ಈ ಕ್ಷೇತ್ರದಲ್ಲಿ ಆಗಾಗ ನಡೆಯುತ್ತಿರುತ್ತವೆ.

(ಜಿ.ಕೆ.)

**ಧವಲದ ಹಾಡುಗಳು:** ಮಂಗಳ ಕಾರ್ಯಗಳಲ್ಲಿ ಆರತಿ ಎತ್ತುವಾಗ ಹೆಣ್ಣುಮಕ್ಕಳು ಹೇಳುವ ಹಾಡುಗಳಲ್ಲಿ ಈ ಹಾಡುಗಳನ್ನು ಸೇರಿಸುವುದು ರೂಢಿ. ವಿಶಿಷ್ಟ ಲಯದಿಂದ ಕೂಡಿ ಧವಲಾ ಎಂಬ ಪದವನ್ನೊಳಗೊಂಡ ಈ ಹಾಡುಗಳು ಆಶೀರ್ವಚನಯುಕ್ತ ಪಾದಗಳನ್ನು ಹೊಂದಿದ್ದು ಯಾವ ಛಂದಸ್ಸಿನಲ್ಲಿಯಾದರೂ ಕಳೆಗಟ್ಟುತ್ತವೆ.

ಜನಪದ ಸಾಹಿತ್ಯದಲ್ಲಿ ಹೆಂಗಳೆಯರ ಹಾಡಿನಲ್ಲಿ ಬಹುವಾಗಿ ಪ್ರಚಾರದಲ್ಲಿದ್ದ ಧವಲದ ಹಾಡುಗಳ ಲಕ್ಷಣ ಮತ್ತು ಪ್ರಭೇದಗಳನ್ನು ಸೋಮೇಶ್ವರನ ಮಾನಸೋಲ್ಲಾಸ, ಹೇಮಚಂದ್ರನ ಛಂದೋನುಶಾಸನ ಮತ್ತು ಶಾರ್ಙ್ಗದೇವನ ಸಂಗೀತರತ್ನಾಕರಗಳಲ್ಲಿ ಕಾಣಬಹುದು. 8 ಪಾದಗಳ ಶ್ರೀಧವಲ ಯಶೋಧವಲ, 6 ಪಾದಗಳ ಕೀರ್ತಿಧವಲ, 4 ಪಾದಗಳ ಗುಣಧವಲ, ಅಮರಧವಲ ಭ್ರಮಧವಲ, ಮಂಗಲ ಧವಲ- ಇವು ಧವಲದ ಪ್ರಭೇದಗಳು.

ಧವಲದ ಹಾಡುಗಳ ಬಗ್ಗೆ ರನ್ನ, ರಾಘವಾಂಕ, ರತ್ನಾಕರವರ್ಣಿ ಮುಂತಾದ ಕವಿಗಳೂ ಪ್ರಸ್ತಾಪಿಸಿದ್ದಾರೆ. ಹತ್ತನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದ ಧವಲ ಮಂಗಲ ಗೇಯವನ್ನು ರನ್ನ ಸೂಚಿಸಿದ್ದಾನೆ. 13ನೆಯ ಶತಮಾನದಲ್ಲಿಯೂ ಇವು ಸಾಕಷ್ಟು ಬಳಕೆಯಲ್ಲಿದ್ದವೆಂಬುದನ್ನು ಸಿದ್ಧರಾಮ ಮಾಡಿಸಿದ ಸಾವಿರಾರು ಮಂಗಲ ವಿವಾಹಗಳ ಸಂದರ್ಭದಲ್ಲಿ 'ಅಂಗನೆಯರು ಆರತಿಗಳು ಬೆಳಗಿ ಅಲ್ಲಲ್ಲಿ ಧವಲಗಳನ್ನು ಹಾಡುತ್ತಿದ್ದರು' ಎಂದು ರಾಘವಾಂಕ ಹೇಳಿದ್ದಾನೆ. ಭರತೇಶನ ವಿವಾಹಕಾಲದಲ್ಲಿ ಧವಲಗಳನ್ನು ಹಾಡಿದರೆಂದು ರತ್ನಾಕರವರ್ಣಿ ತನ್ನ ಭರತೇಶ ವೈಭವದಲ್ಲಿ ಉಲ್ಲೇಖಿಸಿದ್ದಾನೆ.

ಈಗ ಉಪಲಬ್ಧವಿರುವ ಸೀಮಂತ, ಜಾತಕರ್ಮ, ಉಪನಯನ, ಭರತೇಶ್ವರ ಧವಲಗಳು ವಿಶಿಷ್ಟವಾದ ಲಯಗಳಿಂದ ಕೂಡಿವೆ.

ಭರತೇಶ್ವರ ಧವಲದಿಂದ ಆಯ್ದ ಎರಡು ಪದ್ಯಗಳು ಹೀಗಿವೆ:

ಶ್ರೀ ಗುರು ಪಂಚಪದಗಳ। ಶ್ರೀಗೆ ನಿಲಯ ನಿಯಮಗಳ
ರಾಗರಸದಿ ಧವಳಾಗಮದಿಂದ
ಪೂಗಿ ಕದಳಿ ನಾರಂಗಗಳಿಂದ

ಬಾಗಿ ಶ್ರೀಚರಣಾಂಬುಜಗಳನರ್ಚಿಪೆ। ಶ್ರೀ ಗಣನಾಥಕೃಪೆದೋರು।
ಪರಮೇಶನುದರಾಬ್ಧಿ ಚಂದ್ರ। ನೆರೆಚಕ್ರಿ ಭರತರಾಜೇಂದ್ರ
ನರಸುರನಾಗಲೋಕವ ಸಾಧಿಸಿದ
ಧರೆಗಾದಿಕುವರನ ಧವಳ ಶೋಭಾನವ
ನೊರೆದು ಲಾಲಿಪುದು ರಸಿಕರು।

ಧವಲದ ಷಟ್ಕಲ ಲಯ ಬಹು ಅಪರೂಪವಾದದ್ದು. ಇದರ ರಹಸ್ಯವನ್ನೂ ಚೆಲುವನ್ನೂ ಬಿ.ಎಂ.ಶ್ರೀ., ಕುವೆಂಪು, ಪುತಿನ– ಇವರ ಕಾವ್ಯಗಳಲ್ಲಿನ ಕೆಲವು ಪದ್ಯಗಳಲ್ಲಿ ಕಾಣಬಹುದು. ಹೊಸಗನ್ನಡದ ಈ ಮಟ್ಟುಗಳನ್ನು ಧವಲದ ಪ್ರಭೇದವೆಂದಾಗಲೀ ಅಂತ್ಯಪ್ರಾಸ ಸಹಿತ ಧವಲವೆಂದಾಗಲೀ ಕರೆಯಬಹುದು. ತೆಲುಗು ಧವಲದ ಹೆಣ್ಣು ಮಕ್ಕಳ ಹಾಡುಗಳ ಲಯಕ್ಕೂ ಕನ್ನಡ ಧವಲಗಳ ಲಯಕ್ಕೂ ಅತಿ ಸಾಮೀಪ್ಯ ಕಂಡುಬರುತ್ತದೆ. **(ಕೆ.ಡಿಎಚ್.)**

**ಧಾರವಾಡ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ನಗರ. ರಾಜ್ಯದ ವಾಯವ್ಯ ಭಾಗದಲ್ಲಿರುವ ಈ ಜಿಲ್ಲೆ ಒಟ್ಟು 17 ತಾಲ್ಲೂಕುಗಳನ್ನು ಹೊಂದಿದ್ದು ರಾಜ್ಯದ ನಾಲ್ಕನೆಯ ದೊಡ್ಡ ಜಿಲ್ಲೆಯಾಗಿದ್ದಿತು. 1997ರಲ್ಲಿ ಜಿಲ್ಲಾ ಮರುವಿಂಗಡಣೆ ಯೋಜನೆಯನ್ನು ಜಾರಿ ಮಾಡಿದಾಗ ಇದು ಐದು ತಾಲ್ಲೂಕುಗಳಿಗೆ ಸೀಮಿತವಾಯಿತು. ಈ ಜಿಲ್ಲೆಯ ಉಳಿದ ತಾಲ್ಲೂಕುಗಳನ್ನು ಹೊಸದಾಗಿ ರಚಿತವಾದ ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸೇರಿಸಲಾಯಿತು. ಈ ಜಿಲ್ಲೆ ಪೂರ್ವದಲ್ಲಿ ಗದಗ, ಪಶ್ಚಿಮದಲ್ಲಿ ಉತ್ತರ ಕನ್ನಡ, ಉತ್ತರದಲ್ಲಿ ಬೆಳಗಾಂವಿ ಮತ್ತು ಗದಗ, ದಕ್ಷಿಣದಲ್ಲಿ ಹಾವೇರಿ ಜಿಲ್ಲೆಗಳಿಂದ ಆವೃತವಾಗಿದೆ. ಧಾರವಾಡ, ಹುಬ್ಬಳ್ಳಿ, ನವಲಗುಂದ, ಕಲಘಟಗಿ ಮತ್ತು ಕುಂದಗೋಳ ಇವು ಜಿಲ್ಲೆಯ ಐದು ತಾಲ್ಲೂಕುಗಳು. ಹೋಬಳಿಗಳು 114, ಗ್ರಾಮಗಳು 362. ಜಿಲ್ಲೆಯ ವಿಸ್ತೀರ್ಣ 4,076 ಚ.ಕಿಮೀ. ಜನಸಂಖ್ಯೆ 16,04,253.

ಜಿಲ್ಲೆ ಭೌಗೋಳಿಕವಾಗಿ ಪೂರ್ವ ಮತ್ತು ಈಶಾನ್ಯದತ್ತ ಇಳಿಜಾರಾಗಿದೆ. ಜಿಲ್ಲೆಯನ್ನು ಪಶ್ಚಿಮದ ಗುಡ್ಡಗಾಡು ಪ್ರದೇಶ ಮತ್ತು ಪೂರ್ವದ ಬಯಲು ಪ್ರದೇಶವೆಂದು ವಿಂಗಡಿಸಬಹುದು. ಪಶ್ಚಿಮದ ಗುಡ್ಡಗಾಡು ಪ್ರದೇಶವನ್ನು ಮಲೆನಾಡೆಂದು ಮತ್ತು ನವಲಗುಂದ ತಾಲ್ಲೂಕಿನಿಂದ ಮುಂದುವರಿಯುವ ಭಾಗವನ್ನು ಬೆಳವಲನಾಡೆಂದು ಕರೆಯಲಾಗಿದೆ. ಮಧ್ಯದಲ್ಲಿ ಗಡಿನಾಡೆಂಬ ಭಾಗ ಬರುತ್ತದೆ. ಧಾರವಾಡ ಜಿಲ್ಲೆ ತಗ್ಗಾದ ಗುಡ್ಡಬೆಟ್ಟಗಳಿಂದಲೂ ಮಟ್ಟಸವಾದ ಕಣಿವೆಗಳಿಂದಲೂ ಕೂಡಿರುವ ಪ್ರದೇಶ. ಮಲೆನಾಡು ಪ್ರದೇಶದಲ್ಲಿರುವ ಗುಡ್ಡಗಳಲ್ಲಿ ಅಳಣಾವರದ ಪೂರ್ವಕ್ಕಿರುವ ತೇಗೂರು ಗುಡ್ಡ ಮತ್ತು ದಕ್ಷಿಣದಲ್ಲಿ ಕಂಡೂರ ಗುಡ್ಡಗಳು ಮುಖ್ಯವಾದವು. ಧಾರವಾಡ ಮತ್ತು ಕಲಘಟಗಿಗಳ ನಡುವಿನ ಬೂದನ ಗುಡ್ಡ ಸುತ್ತಲ ಪ್ರದೇಶದಿಂದ 152 ಮೀ ಎತ್ತರವಾಗಿ 13 ಕಿಮೀ ಉದ್ದ ಮತ್ತು ಒಂದೂವರೆ ಕಿಮೀ ಅಗಲವಾಗಿ ದಕ್ಷಿಣೋತ್ತರವಾಗಿ ಹಬ್ಬಿದೆ. ಇದರ ಪಶ್ಚಿಮಕ್ಕೆ ಗಣೇಗುಡ್ಡವಿದೆ. ಧಾರವಾಡ ಹುಬ್ಬಳ್ಳಿ ನಡುವೆ ರಾಯಾಪುರ ಬೆಟ್ಟಗಳು ಬರುತ್ತವೆ. ಹುಬ್ಬಳ್ಳಿ ತಾಲ್ಲೂಕಿನ ಉಣಕಲ್ಲುಗುಡ್ಡ ಮುಖ್ಯವಾದದ್ದು.

ಧಾರವಾಡದ ಶಿಲಾಸ್ತರ ಧಾರವಾಡ ಶಿಲಾ ಪ್ರಕಾರವೆಂದೇ ಪ್ರಸಿದ್ಧವಾಗಿದೆ. ಹಲವು ಉತ್ಕರ್ಷಿತ ಅಗ್ನಿಶಿಲೆಗಳು ಈ ಭಾಗದ ಮೂಲ ಅರೆಗಳಾಗಿವೆ. ಇವು ಧಾರವಾಡ ಬಂಡೆಗಳಿಂದ ಕೂಡಿದ ಪಳೆಯಳಿಕೆಯ ಬೆಟ್ಟಗಳಾಗಿವೆ. ಇಲ್ಲಿ ಕಣಿವೆಗಳೂ ಕಂದರಗಳೂ ಹೆಚ್ಚು. ಎತ್ತರದ ಪ್ರದೇಶಗಳು ಬೋಳಾಗಿದ್ದು ದಟ್ಟವಾಗಿ ಹುಲ್ಲು ಬೆಳೆಯುತ್ತದೆ. ಧಾರವಾಡ ಶಿಲಾಭಾಗವನ್ನು ಭೇದಿಸಿಕೊಂಡು ಕಣಶಿಲೆ ಮತ್ತು ನೀಣಕಲ್ಲುಗಳು ಹರಡಿವೆ. ಧಾರವಾಡ ಪದರ ಶಿಲೆ, ಗ್ರಾನೈಟ್, ಬೆಣಚುಕಲ್ಲು ಮತ್ತು ಸಣ್ಣಕಲ್ಲುಗಳನ್ನೊಳಗೊಂಡು ಎಲ್ಲ ದಿಕ್ಕುಗಳಲ್ಲಿಯೂ ಡಾಲರೈಟ್ ದಿಂಡುಗಳು ಹರಡಿವೆ. ಮ್ಯಾಂಗನೀಸ್ ಅದಿರು ಇಲ್ಲಿಯ ಮುಖ್ಯ ಖನಿಜ. ತಾಮ್ರ, ಚಿನ್ನದ ಅದಿರು ಪದರಗಳಿದ್ದರೂ ಅಷ್ಟು ಲಾಭಕರವಾಗಿಲ್ಲ. ಕೆಲವೆಡೆ ಜಂಬಿಟ್ಟಿಗೆ ಶಿಲೆಗಳಿವೆ. ಈ ಜಿಲ್ಲೆಯ ಮಣ್ಣು ಫಲವತ್ತಾಗಿದೆ. ಪೂರ್ವಭಾಗದಲ್ಲಿ ಎರೆಮಣ್ಣು ಮತ್ತು ಹುಳಕೆರಿ ಮಣ್ಣಿದ್ದರೆ ಪಶ್ಚಿಮದಲ್ಲಿ ಕೆಂಪು ಮತ್ತು ಮರಳು ಮಿಶ್ರಿತ ಮಣ್ಣಿದೆ. ಧಾರವಾಡ ಮತ್ತು ಕಲಘಟಗಿ ತಾಲ್ಲೂಕುಗಳಲ್ಲಿ ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣು ಕಂಡುಬರುತ್ತದೆ. ಹುಬ್ಬಳ್ಳಿಯ ಪೂರ್ವಭಾಗ ಎರೆಮಣ್ಣಿನಿಂದ ಕೂಡಿದೆ.

ಅವಿಭಜಿತ ಧಾರವಾಡ ಜಿಲ್ಲೆಯನ್ನು ಉತ್ತರದಲ್ಲಿ ಮಲಪ್ರಭಾ ಮತ್ತು ದಕ್ಷಿಣದಲ್ಲಿ ತುಂಗಭದ್ರಾ ನದಿಗಳು ಸೋಕಿ ಹೋಗುತ್ತಿದ್ದವು. ಅನೇಕ ಉಪನದಿಗಳು ಜಿಲ್ಲೆಯಾದ್ಯಂತ ಹರಿಯುತ್ತಿದ್ದವು. ಆದರೆ ಈಗಿನ ಕಿರಿದಾದ ಜಿಲ್ಲೆಯಲ್ಲಿ ಯಾವುದೇ ಪ್ರಮುಖ ನದಿಗಳಿಲ್ಲ. ಚಿಕ್ಕಪುಟ್ಟ ಹೊಳೆಗಳು ಮತ್ತು ಹಳ್ಳಗಳು ಇವೆ. ಅವುಗಳಲ್ಲಿ ಬೇಡ್ತಿಹೊಳೆ, ಬೆಣ್ಣೆಹಳ್ಳ, ತುಪ್ಪರಿಹಳ್ಳ, ತಟ್ಟಿಹಳ್ಳ, ಹಂದಿಗನಹಳ್ಳ ಇವು ಮುಖ್ಯವಾದವು. ಬೇಡ್ತಿಹೊಳೆ ನೈರುತ್ಯಾಭಿಮುಖವಾಗಿ ಹರಿದು ಅರಬ್ಬಿ ಸಮುದ್ರ ಸೇರಿದರೆ, ಉಳಿದವು ಕೃಷ್ಣಾ ಜಲಾನಯನದತ್ತ ಉತ್ತರ ಮತ್ತು ಪೂರ್ವಾಭಿಮುಖವಾಗಿ ಸಾಗುತ್ತವೆ. ಈ ನದಿಗಳು ನೀರಾವರಿ ಸೌಲಭ್ಯ ಒದಗಿಸುವಲ್ಲಿ ಅತ್ಯಂತ ಉಪಯುಕ್ತವಾಗಿವೆ. ಬೇಡ್ತಿ ಹೊಳೆಗೆ ದುಮ್ಮವಾಡದ ಹತ್ತಿರ ಒಡ್ಡು ಹಾಕಿ ನೀರಸಾಗರವೆಂಬ ದೊಡ್ಡ ಕೆರೆ ಕಟ್ಟಲಾಗಿದೆ. ಈ ಕೆರೆಯಿಂದ ಕುಂದಗೋಳ, ಹುಬ್ಬಳ್ಳಿ, ಧಾರವಾಡ ನಗರಗಳಿಗೆ ನೀರೊದಗುತ್ತದೆ. ಬೆಣ್ಣೆಹಳ್ಳ ಹುಬ್ಬಳ್ಳಿ ನವಲಗುಂದ ತಾಲ್ಲೂಕುಗಳ ಮೂಲಕ ಹರಿದು ಮಲಪ್ರಭಾ ನದಿಯನ್ನು ಸೇರುತ್ತದೆ. ಗೂಗಿ ಹಳ್ಳ, ತುಪ್ಪರಿಹಳ್ಳ, ಹಂದಿಗನಹಳ್ಳ ಇವೆಲ್ಲ ಬೆಣ್ಣೆಹಳ್ಳವನ್ನು ಕೂಡಿಕೊಳ್ಳುತ್ತವೆ.

ಈ ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಹಿತಕರ. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಅಧಿಕ ಉಷ್ಣಾಂಶವಿರುತ್ತದೆ. ಕೆಲವು ವೇಳೆ ಉಷ್ಣಾಂಶ 40.5 ಸೆ.ಫ್ಯಾ.ಯಿಂದ 41.6 ಸೆ.ಫ್ಯಾ. ವರೆಗೂ ಇರುತ್ತದೆ. ಜೂನ್ ತಿಂಗಳಲ್ಲಿ ಮಳೆ ಪ್ರಾರಂಭವಾದೊಡನೆ ಉಷ್ಣತೆ ಕಡಿಮೆಯಾಗುವುದು. ನವೆಂಬರ್, ಡಿಸೆಂಬರ್ ಮತ್ತು ಜನವರಿ ಚಳಿಗಾಲವಾಗಿದ್ದು ಇದರ ಮತ್ತು ಬೇಸಗೆ ಕಾಲದ ಉಷ್ಣತಾ ಮಾನದ ದೈನಿಕ ವ್ಯತ್ಯಾಸ ಅಧಿಕವಾಗಿರುತ್ತದೆ. ಈ ತಿಂಗಳುಗಳಲ್ಲಿ 1.6 ಸೆ.ಫ್ಯಾ.ನಿಂದ 4ಫ್ಯಾ.ವರೆಗೆ ಉಷ್ಣತಾ ವ್ಯತ್ಯಾಸವಿರುತ್ತದೆ. ಫೆಬ್ರವರಿ ಶುಷ್ಕ ತಿಂಗಳು. ಜಿಲ್ಲೆಯಲ್ಲಿ ಮೇ ತಿಂಗಳಿಂದ ಅಕ್ಟೋಬರ್‌ವರೆಗೆ ಮಳೆ ಬೀಳುವುದು. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಗುಡುಗುಮಿಂಚು ಸಹಿತ ಮಳೆಯಾಗುವುದುಂಟು. ಜಿಲ್ಲೆಯಲ್ಲಿ 2000 ದಲ್ಲಿ ಬಿದ್ದ ಸರಾಸರಿ



ಮಳೆ 726 ಮಿಮೀ. ಜಿಲ್ಲೆಗೆ ಮುಂಗಾರು ಮಳೆ ಹೆಚ್ಚಾಗಿ ಬೀಳುತ್ತದೆ. ಪಶ್ಚಿಮ ಮೇರೆಯ ಹತ್ತಿರ ಕೆಲವು ಪ್ರದೇಶಗಳಲ್ಲಿ 965 ಮಿಮೀ ಗಿಂತಲೂ ಹೆಚ್ಚು ಮಳೆ ಬೀಳುವುದು.

ಜಿಲ್ಲೆಯಲ್ಲಿ ಒಟ್ಟು 35,235 ಹೆಕ್ಟೇರ್‌ಗಳ ವಿಸ್ತೀರ್ಣದ ಅರಣ್ಯವಿದೆ. ಪರ್ಣಪಾತಿ ವೃಕ್ಷಗಳ ಕಾಡು, ಮುಳ್ಳುಕಾಡು ಮತ್ತು ಕುರುಚಲು ಕಾಡುಗಳನ್ನು ಕಾಣಬಹುದು. ಪರ್ಣಪಾತಿ ವೃಕ್ಷಗಳ ಕಾಡು ಮಲೆನಾಡಿಗೆ ಮಾತ್ರ ಸೀಮಿತವಾಗಿದೆ. ತೇಗ ಇಲ್ಲಿನ ಮುಖ್ಯ ಮರ. ಇಲ್ಲಿನ ಮರಗಳು ಸಾಮಾನ್ಯವಾಗಿ 9 ರಿಂದ 12 ಮೀ ಎತ್ತರ ಬೆಳೆಯುತ್ತವೆ. ಕಲಘಟಗಿ, ಕುಂದಗೋಳ ಮತ್ತು ಇವುಗಳ ಸುತ್ತ ಕಾಡು ಸಾಂದ್ರವಾಗಿದ್ದು ಪೂರ್ವಕ್ಕೆ ವಿರಳವಾಗುತ್ತ ಹೋಗುವುದು. ನದೀದಂಡೆಗಳುದ್ದಕ್ಕೂ ಬಿದಿರುಮೆಳೆಗಳುಂಟು. ಜಿಲ್ಲೆಯ ಪಶ್ಚಿಮ ಭಾಗದ ಅರಣ್ಯದಲ್ಲಿ ನಾಟಾ ಮತ್ತು ಮರಮುಟ್ಟು ಬಳಕೆಗೆ ಉಪಯುಕ್ತವಾದ ಮರಗಳಿವೆ. ಧಾರವಾಡ ಮತ್ತು ನವಲಗುಂದ ತಾಲ್ಲೂಕುಗಳಲ್ಲಿ ನೂರಾರು ಎಕರೆಗಳ ಗೋಮಾಳ ಮೇಸಲು ಪ್ರದೇಶವಿದ್ದು ಇತರೆಡೆಗಳಲ್ಲೂ ಗೋಮಾಳ ಮೇಸಲು ಪ್ರದೇಶ ಗಣನೀಯವಾಗಿದೆ. ಇಲ್ಲಿನ ಕಾಡಿನಲ್ಲಿ ಗಂಧ, ತೇಗ, ಮತ್ತಿ, ಅತ್ತಿ, ಹಾರ್ಡ, ಹಲಸು, ಬಿಳಿನಂದಿ, ಬೀಟೆ, ಬಿದಿರು, ದಿಂಡಲು, ಶಿವನಿ, ಹೊನ್ನೆ, ಮುತ್ತಗ, ಮಾವು, ಬೇವು, ಹುಣಿಸೆ, ಈಚಲು, ನೇರಳೆ, ಗೇರು ಮೊದಲಾದವುಗಳು ಬೆಳೆಯುತ್ತವೆ. ದಕ್ಷಿಣ ಭಾರತದ ಕಾಡುಗಳಲ್ಲಿರುವ ವಿವಿಧ ಜಾತಿಯ ಪ್ರಾಣಿಗಳು ಇಲ್ಲಿನ ಪಶ್ಚಿಮ ಭಾಗದ ಅರಣ್ಯದಲ್ಲಿವೆ. ಅವುಗಳಲ್ಲಿ ಹುಲಿ, ಹುಲಿಬೆಕ್ಕು, ಕರಡಿ, ಕಾಡುಕೋಣ, ಕಾಡುಹಂದಿ, ಕಾಡುನಾಯಿ, ಚಿರತೆ, ಜಿಂಕೆ ಮೊದಲಾದ ಪ್ರಾಣಿಗಳು ಮುಖ್ಯವಾದವು.

ಈ ಜಿಲ್ಲೆಯ ಮುಖ್ಯ ಕಸಬು ವ್ಯವಸಾಯ. ಪಶ್ಚಿಮ ಕರಾವಳಿಯಿಂದ ಬೀಸುವ ಮುಂಗಾರು ಮಾರುತಗಳು ಇಲ್ಲಿನ ವ್ಯವಸಾಯಕ್ಕೆ ಹೆಚ್ಚು ಅನುಕೂಲಕರವಾಗಿವೆ. ಈಶಾನ್ಯ ಮಾರುತಗಳಿಂದ ಜಿಲ್ಲೆಯ ಪೂರ್ವಭಾಗಕ್ಕೆ ಹಿಂಗಾರು ಮಳೆ ಸಾಧಾರಣವಾಗಿ ಬೀಳುತ್ತದೆ. ಇಲ್ಲಿನ ವ್ಯವಸಾಯ ಜಮೀನನ್ನು ಮಳೆ ಮಾರುತಗಳನ್ನವಲಂಬಿಸಿದ ಒಣಬೆಳೆಗಳು ಬೆಳೆಯುವ ಜಿರಾಯತ್ ಜಮೀನು, ಬಾಗಾಯ್ತು ಜಮೀನು, ನೀರಾವರಿ ಬೆಳೆ ಬೆಳೆಯುವ ಬತ್ತದ ಜಮೀನು ಎಂದು ವಿಂಗಡಿಸಬಹುದು.

ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಕಟ್ಟಿದ ಅನೇಕ ಕೆರೆಗಳು ಮತ್ತು ಜಲಾಶಯಗಳು ಇಂದೂ ಉಪಯುಕ್ತವಾಗಿವೆ. ಜಿಲ್ಲೆಯ ಪಶ್ಚಿಮಭಾಗದ ಮಲೆನಾಡು ಪ್ರದೇಶದಲ್ಲಿ ಮಳೆನೀರು ವ್ಯವಸಾಯಕ್ಕೆ ಒದಗುತ್ತದೆ. ಜಿಲ್ಲೆಯ ಮಧ್ಯಭಾಗದಲ್ಲಿ ಭೂಮಿಯಲ್ಲಿ ನೀರಿನ ಒರತೆಯಿರುವುದರಿಂದ ಬಾವಿ ನಿರ್ಮಾಣ ಸುಲಭ. ಅನೇಕ ಪುರಾತನ ಕೆರೆಗಳು ಮತ್ತು ಹೊರ ಕೆರೆಗಳು ನೀರಾವರಿ ಸೌಲಭ್ಯವನ್ನು ಹೆಚ್ಚಿಸಿವೆ. ಮಲಪ್ರಭಾ ಬಲದಂಡೆ ಯೋಜನೆಯಿಂದ ನವಲಗುಂದ ಮತ್ತು ಹುಬ್ಬಳ್ಳಿ ತಾಲ್ಲೂಕುಗಳಿಗೆ ನೀರಾವರಿ ಒದಗಿದೆ. ಬತ್ತ, ಬಾಳೆ, ಅಡಕೆ, ಕಬ್ಬು, ವೀಳೆಯದೆಲೆ ಮುಂತಾದ ನೀರಾವರಿ ಬೆಳೆಗಳಿವೆ. ಜಿಲ್ಲೆಯಲ್ಲಿ ಒಟ್ಟು ನೀರಾವರಿಗೊಳಗಾದ ಪ್ರದೇಶ 39,652 ಹೆಕ್ಟೇರ್‌ಗಳು. ಅದರಲ್ಲಿ ಕಾಲುವೆಗಳಿಂದ 22,901 ಹೆಕ್ಟೇರುಗಳಿಗೆ ನೀರಾವರಿ ಒದಗುತ್ತದೆ (1998–99).

ಬತ್ತ ಮತ್ತು ಕಬ್ಬು ಈ ಜಿಲ್ಲೆಯ ಮಲೆನಾಡ ಭಾಗದ ಮುಖ್ಯ ಬೆಳೆಗಳು. ಧಾರವಾಡ ಮತ್ತು ಕಲಘಟಗಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಬತ್ತ ಮತ್ತು ಕಬ್ಬನ್ನು ಬೆಳೆಯುವರು. ಜೋಳ ವಿಶೇಷವಾಗಿ ನವಲಗುಂದ, ಹುಬ್ಬಳ್ಳಿ, ಕುಂದಗೋಳ, ಧಾರವಾಡ ತಾಲ್ಲೂಕುಗಳ ಬೆಳೆ. ಗೋದಿ, ಹೆಸರು, ಹುರುಳಿ, ಕಡಲೆ, ತೊಗರಿ ಮೊದಲಾದ ಬೆಳೆಗಳನ್ನು ಸಾಮಾನ್ಯವಾಗಿ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಬೆಳೆಯುತ್ತಾರೆ. ಕುಸುಬೆ, ಎಳ್ಳು, ಔಡಲ– ಇವು ಜಿಲ್ಲೆಯ ಪೂರ್ವ ಭಾಗದಲ್ಲಿ ಬೆಳೆಯುವ ಎಣ್ಣೆಕಾಳು ಬೆಳೆಗಳು. ಕುಂದಗೋಳ ತಾಲ್ಲೂಕು ತಂಬಾಕು ಬೆಳೆಗೆ ಪ್ರಸಿದ್ಧ. ಜಿಲ್ಲೆಯ ಕಪ್ಪು ಮಣ್ಣಿನ ಪ್ರದೇಶದಲ್ಲಿ ಹೆಚ್ಚಾಗಿ ಹತ್ತಿ ಬೆಳೆಯುವರು. ದ್ರಾಕ್ಷಿ, ಪೇರಲ, ಬೋರೆ, ಗೋಡಂಬಿ, ಮಾವು, ಬಾಳೆ, ನಿಂಬೆ ಮೊದಲಾದ ಹಣ್ಣುಗಳನ್ನೂ ಬದನೆ, ಬೆಂಡೆ, ಹೀರೆ, ಪಡುವಲ, ಬಟಾಟೆ, ಗೆಣಸು, ಈರುಳ್ಳಿ ಮುಂತಾದವನ್ನೂ ಈ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಪುಂಡಿ, ಸೆಣಬು, ಮೊದಲಾದ ನಾರಿನ ಬೆಳೆಗಳು ಈ ಜಿಲ್ಲೆಯಲ್ಲಿವೆ.

ಜಾನುವಾರುಗಳ ಅಭಿವೃದ್ಧಿಗೆ ಮತ್ತು ಹೈನುಗಾರಿಕೆಗೆ ವಿಶೇಷ ಗಮನ ನೀಡಲಾಗಿದೆ. ಉತ್ತಮ ಎಮ್ಮೆ ರಾಸುಗಳಿಗೆ ಧಾರವಾಡ ಪ್ರಸಿದ್ಧ. ಜಿಲ್ಲೆಯಲ್ಲಿ 5 ಪಶುವೈದ್ಯ ಆಸ್ಪತ್ರೆಗಳೂ 16 ಚಿಕಿತ್ಸಾಲಯಗಳೂ 38 ಪ್ರಾಥಮಿಕ ಪಶುವೈದ್ಯ ಕೇಂದ್ರಗಳೂ ಇವೆ (2000). ಮೀನುಗಾರಿಕೆಗೂ ಪ್ರೋತ್ಸಾಹವಿದ್ದು 2000–01ರಲ್ಲಿ 2,010 ಮೆಟ್ರಿಕ್ ಟನ್ ಮೀನು ಹಿಡಿಯಲಾಗಿದೆ.

**ಕೈಗಾರಿಕೆ:** 2001ರ ಜನಗಣತಿಯ ಮೇರೆಗೆ ಜಿಲ್ಲೆಯಲ್ಲಿ ಗ್ರಾಮೀಣ ಜನಸಂಖ್ಯೆಗಿಂತ ನಗರವಾಸಿ ಜನಸಂಖ್ಯೆ ಅಧಿಕವಾಗಿದೆ. ಇದರಿಂದ ಜಿಲ್ಲೆ ಕೈಗಾರಿಕೆ ಮತ್ತು ಕೈಕಸುಬುಗಳಲ್ಲಿ ಪ್ರಗತಿ ಸಾಧಿಸಿರುವುದು ತಿಳಿದುಬರುತ್ತದೆ. ಹತ್ತಿ ಸಂಸ್ಕರಿಸುವ ಮತ್ತು ಬಟ್ಟೆ ತಯಾರಿಸುವ ಕೈಗಾರಿಕೆಗಳು ಪ್ರಮುಖವಾಗಿವೆ. ಎಣ್ಣೆತೆಗೆಯುವುದು, ಮುದ್ರಣ, ಬತ್ತದ ಗಿರಣಿಗಳು, ಮರ ಕೊಯ್ಯುವುದು ಮೊದಲಾದ ಉದ್ದೇಶಗಳಿಗಾಗಿ ಯಂತ್ರಗಳನ್ನು ಸ್ಥಾಪಿಸಲಾಗಿದೆ. ರೇಷ್ಮೆ, ಕೈಮಗ್ಗ, ಕಂಬಳಿ ನೇಯುವುದು, ಬೀಡಿ ಕಟ್ಟುವುದು, ಬಿದಿರುವಸ್ತುಗಳು, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳು, ಅವಲಕ್ಕಿ ತಯಾರಿಕೆ, ಚರ್ಮಹದ ಮಾಡುವುದು ಮೊದಲಾದ ವಿವಿಧ ಉದ್ಯಮಗಳಲ್ಲಿ ಸಾವಿರಾರು ಜನರು ನಿರತರಾಗಿದ್ದಾರೆ.

ಧಾರವಾಡ ಹುಬ್ಬಳ್ಳಿ ನಗರಸಭೆ ರಚನೆ ಈ ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನಕಾರಿಯಾಗಿದೆ. ರಾಜ್ಯ ಸಣ್ಣ ಕೈಗಾರಿಕೆಗಳ ಕಾರ್ಪೋರೇಷನ್ ಮೂಲಕ ರಾಜ್ಯ ಸರ್ಕಾರ ಇವುಗಳಿಗೆ ಹಣಕಾಸಿನ ನೆರವು ನೀಡುತ್ತಿದೆ. ಹುಬ್ಬಳ್ಳಿಯಲ್ಲಿ ಪ್ರಮುಖ ರೈಲ್ವೆ ವರ್ಕ್‌ಷಾಪ್ ಮತ್ತು ವಿದ್ಯುತ್ ವಿತರಣಾ ಕೇಂದ್ರಗಳಿವೆ. ಇವೆಲ್ಲ ಈ ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಅನುಕೂಲಕರವಾಗಿವೆ.

ಹುಬ್ಬಳ್ಳಿ ಹತ್ತಿ ಉದ್ಯಮಕ್ಕೆ ಪ್ರಸಿದ್ಧ. ಇಲ್ಲಿ ಬಟ್ಟೆಯ ಕಾರ್ಖಾನೆಗಳೂ ನೂಲಿನ ಗಿರಣಿಗಳೂ ಇವೆ. ಹತ್ತಿ ಜಿನ್ನಿಂಗ್ ಕಾರ್ಖಾನೆಗಳಿವೆ. ಧಾರವಾಡ ಜಿಲ್ಲೆ ಕೈಮಗ್ಗದ ಬಟ್ಟೆಗೂ ಪ್ರಸಿದ್ಧ. ಖಾದಿ ಬಟ್ಟೆಗಳು ತಯಾರಾಗುತ್ತವೆ. ಧಾರವಾಡ, ನವಲಗುಂದಗಳು ಗುಡಾರಗಳ ತಯಾರಿಕೆಗೂ ಪ್ರಸಿದ್ಧವಾಗಿವೆ. ಕಂಬಳಿ ತಯಾರಿಕೆ ಉದ್ಯಮವಿದೆ. ನವಲಗುಂದದ ಜಮಖಾನೆಗಳು ಉತ್ತಮ ಗುಣಮಟ್ಟದವೆಂದು ಹೆಸರಾಗಿವೆ. ಹುಬ್ಬಳ್ಳಿ ಹಿತ್ತಾಳೆ ಪಾತ್ರೆಗಳ ತಯಾರಿಕೆಗೆ ಪ್ರಸಿದ್ಧ. ಗ್ರಾಮೋದ್ಯೋಗಗಳಾದ ಗಾಣದ ಎಣ್ಣೆ, ಸೋಪು, ಚರ್ಮ ಹದಮಾಡುವುದು, ಖಾದಿ ಬಟ್ಟೆ ತಯಾರಿಕೆ ಮುಂತಾದವು ಧಾರವಾಡ, ಹುಬ್ಬಳ್ಳಿಗಳಲ್ಲಿವೆ. ಕುಟ್ಟಿದ ಅಕ್ಕಿ ಮತ್ತು ಅವಲಕ್ಕಿ ತಯಾರಿಕೆ ಮಿಸ್ರಿಕೋಟೆಯಲ್ಲಿ ಹೆಚ್ಚು. ಮರಗೆಲಸ, ಮರದ ಆಟದ ಸಾಮಾನುಗಳ ತಯಾರಿಕೆ ಕೆಲವೆಡೆ ಇದೆ. ಧಾರವಾಡದಲ್ಲಿ ಪ್ಲೈವುಡ್ ಕಾರ್ಖಾನೆ ಇದೆ. ಅಳಣಾವರದಲ್ಲಿ ಬಿದಿರಿನ ವಸ್ತುಗಳ ತಯಾರಿಕೆಯುಂಟು. ಮರ ಕೊಯ್ಯುವ ಕಾರ್ಖಾನೆಗಳು ಧಾರವಾಡ, ಹುಬ್ಬಳ್ಳಿ, ಅಳಣಾವರ, ಕಲಘಟಗಿಗಳಲ್ಲಿವೆ.

ಆಧುನಿಕವಾದ ಸಾಮಾನ್ಯ ಯಂತ್ರೋಪಕರಣ ತಯಾರಿಸುವ ಮತ್ತು ದುರಸ್ತಿ ಮಾಡುವ ಕೈಗಾರಿಕಾ ಘಟಕಗಳು ಹುಬ್ಬಳ್ಳಿ, ಧಾರವಾಡಗಳಲ್ಲಿ ಹೆಚ್ಚಿವೆ. ಕಾಲುಚೀಲ ಮುಂತಾದವನ್ನು ತಯಾರಿಸುವ ಕಾರ್ಖಾನೆ ಹುಬ್ಬಳ್ಳಿಯಲ್ಲಿವೆ. ಧಾರವಾಡ, ಹುಬ್ಬಳ್ಳಿಗಳಲ್ಲಿ ಮುದ್ರಣಾಲಯಗಳಿದ್ದು ಅದಕ್ಕೆ ಸಂಬಂಧಿಸಿದ ಉದ್ದಿಮೆಗಳಿವೆ. ಸುಣ್ಣ, ಗಂಧದ ಕಡ್ಡಿ, ಹೊಗೆಸೊಪ್ಪಿನಿಂದ ನಸ್ಯ ಮತ್ತು ಬೀಡಿ ಇವುಗಳ ತಯಾರಿಕೆಯುಂಟು. ಜಿಲ್ಲೆಯಲ್ಲಿ ಪ್ರಸಿದ್ಧ ಕಿರ್ಲೋಸ್ಕರ್ ವಿದ್ಯುತ್ ಕಾರ್ಖಾನೆ, ಎ.ಕೆ. ಇಂಡಿಸ್ಟ್ರೀಸ್ ಸಿಮೆಂಟ್ ವಸ್ತು ತಯಾರಿಕಾ ಕಾರ್ಖಾನೆ, ಸುಂದತ್ತಾ ಆಹಾರ ಮತ್ತು ನೂಲಿನ ವಸ್ತುಗಳ ತಯಾರಿಕಾ ಕಾರ್ಖಾನೆ ಹುಬ್ಬಳ್ಳಿಯಲ್ಲೂ ಟೈವಾಕ್ ಗಡಿಯಾರದ ಕಾರ್ಖಾನೆ, ರಟ್ಟು ಮತ್ತು ಕ್ಯಾಲಿಕಾರ್ಟ್ ತಯಾರಿಕಾ ಕಾರ್ಖಾನೆ ಧಾರವಾಡದಲ್ಲೂ ಇವೆ. ತಿಜೋರಿ, ಕಪಾಟು, ಕುರ್ಚಿ, ಟೇಬಲ್ ಮುಂತಾದವುಗಳ ತಯಾರಿಕೆ ಹುಬ್ಬಳ್ಳಿ, ಧಾರವಾಡಗಳಲ್ಲಿ ಹೆಚ್ಚು. ಜಿಲ್ಲೆಯಲ್ಲಿ ಒಟ್ಟು 427 ಕಾರ್ಖಾನೆಗಳಿವೆ. ಒಟ್ಟು ಉದ್ಯೋಗಿಗಳ ಸಂಖ್ಯೆ 44,190; ಕೈಗಾರಿಕಾ ಪ್ರದೇಶಗಳು 5; ಕೈಗಾರಿಕಾ ಶೆಡ್ಡುಗಳು 524.

ಧಾರವಾಡ ಜಿಲ್ಲೆ ವ್ಯಾಪಾರ ವಾಣಿಜ್ಯಕ್ಕೆ ಪ್ರಸಿದ್ಧ. ಉತ್ತರ ಕರ್ನಾಟಕದ ಪ್ರಮುಖ ರೈಲ್ವೆ ಜಂಕ್ಷನ್ ಹುಬ್ಬಳ್ಳಿಯಲ್ಲಿದ್ದು ಮುಂಬಯಿ, ಪುಣೆ, ಬೆಂಗಳೂರು, ಗುಂತಕಲ್ಲು ಮೊದಲಾದ ಸ್ಥಳಗಳಿಗೆ ನೇರ ರೈಲ್ವೆ ಸಂಪರ್ಕ ಇದೆ. ಹತ್ತಿ ಕೈಮಗ್ಗದ ಬಟ್ಟೆಗಳು, ಅಡಕೆ, ನೆಲಗಡಲೆ, ಮೆಣಸಿನಕಾಯಿ, ಗೋದಿ, ನವಣೆ, ಜೋಳ, ಚರ್ಮ, ಕಚ್ಚಾ ಎಣ್ಣೆ, ನಾಟಾ, ಲೋಹದ ಪಾತ್ರೆಗಳು ಮತ್ತು ಕೆಲವು ಉಪಕರಣಗಳು ಈ ಜಿಲ್ಲೆಯ ಪ್ರಮುಖ ರಫ್ತು ವಸ್ತುಗಳಾಗಿವೆ. ಮನೆ ಕಟ್ಟುವ ಸಾಮಗ್ರಿಗಳು, ಲೋಹದ ಉಪಕರಣಗಳು, ಯಂತ್ರಗಳು, ಔಷಧಿ, ಇಂಧನ, ದಿನಬಳಕೆ ಸಾಮಗ್ರಿಗಳು, ಅಲಂಕಾರ ವಸ್ತುಗಳು, ಏಲಕ್ಕಿ, ಕಾಫಿಬೀಜ, ಹೊಗೆಸೊಪ್ಪು ಮೊದಲಾದವು ಹೆಚ್ಚಾಗಿ ಹೊರಗಡೆಯಿಂದ ಬರುತ್ತವೆ. ಧಾರವಾಡ ಹುಬ್ಬಳ್ಳಿ ನಗರಗಳು ಬೆಳೆಯುತ್ತಿರುವಂತೆಯೇ ಜಿಲ್ಲೆಯ ವಾಣಿಜ್ಯ ಚಟುವಟಿಕೆಯೂ ಹೆಚ್ಚುತ್ತಿದೆ.

ಜಿಲ್ಲೆಯಲ್ಲಿ ನಿಯಂತ್ರಿತ ಮಾರುಕಟ್ಟೆಗಳಿದ್ದು ವಾಣಿಜ್ಯ ವ್ಯಾಪಾರಗಳಿಗೆ ಸಂಬಂಧಿಸಿದಂತೆ ವಿವಿಧ ಸಂಸ್ಥೆಗಳು ಸ್ಥಾಪಿತವಾಗಿವೆ. ಹುಬ್ಬಳ್ಳಿಯಲ್ಲಿರುವ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆ ವಿವಿಧ ಚಟುವಟಿಕೆಗಳಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದೆ. ಜಿಲ್ಲೆಯಲ್ಲಿ ಹಣಕಾಸು ಮತ್ತು ಬ್ಯಾಂಕಿಂಗ್‌ಗೆ ಸಂಬಂಧಿಸಿದ ವಿವಿಧ ಸಂಸ್ಥೆಗಳಿವೆ. ಕರ್ನಾಟಕ ರಾಜ್ಯ ಹಣಕಾಸು ಕಾರ್ಪೋರೇಷನ್ನು ವಿವಿಧ ಸಂಘ ಸಂಸ್ಥೆಗಳಿಗೆ ಮತ್ತು ಕೈಗಾರಿಕೆಗಳಿಗೆ ಹಣಕಾಸಿನ ನೆರವೀಯುತ್ತದೆ. ಜಿಲ್ಲೆಯಲ್ಲಿ 144 ವಾಣಿಜ್ಯ ಬ್ಯಾಂಕುಗಳೂ 45 ಗ್ರಾಮೀಣ ಬ್ಯಾಂಕುಗಳೂ ಇವೆ. ಇವಲ್ಲದೆ ಕೃಷಿ ಸಾಲ ನೀಡಿಕೆ ಸಹಕಾರ ಸಂಘಗಳು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿವೆ. ಕೇಂದ್ರ ಸಹಕಾರಿ ಬ್ಯಾಂಕುಗಳ ಶಾಖಾ ಕಚೇರಿಗಳಿವೆ.

ಪುಣೆ– ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಈ ಜಿಲ್ಲೆಯ ಮೂಲಕ ಹಾದುಹೋಗಿದೆ. ಕಾರವಾರ– ಬಳ್ಳಾರಿ ರಾಜ್ಯ ಹೆದ್ದಾರಿ, ಕುಮಟ– ಹುಬ್ಬಳ್ಳಿ, ಸೊಲ್ಲಾಪುರ– ಹುಬ್ಬಳ್ಳಿ, ಧಾರವಾಡ–ಗೋವ ಮೊದಲಾದ ರಸ್ತೆಗಳು ಈ ಜಿಲ್ಲೆಯೊಂದಿಗೆ ಹೊರಗಿನ ಸಂಪರ್ಕ ಕಲ್ಪಿಸುವ ಕೆಲವು ಮುಖ್ಯ ಮಾರ್ಗಗಳಾಗಿವೆ. 143 ಕಿಮೀ ರಾಷ್ಟ್ರೀಯ ಹೆದ್ದಾರಿ ಹಾಗೂ 163 ಕಿಮೀ ರಾಜ್ಯ ಹೆದ್ದಾರಿ 599 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳಿವೆ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ ಮಾರ್ಗಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿವೆ. ಬೆಂಗಳೂರು ಪುಣೆ ರೈಲುಮಾರ್ಗ ಈ ಜಿಲ್ಲೆಯಲ್ಲಿ ಹಾದುಹೋಗುತ್ತವೆ. ಹುಬ್ಬಳ್ಳಿಯಿಂದ ಗುಂತಕಲ್ಲು ಸೊಲ್ಲಾಪುರ ಗೋವಾ ಕಡೆಗಳಿಗೆ ರೈಲು ಮಾರ್ಗಗಳಿವೆ. ಹುಬ್ಬಳ್ಳಿ ಕರ್ನಾಟಕದ ದೊಡ್ಡ ಜಂಕ್ಷನ್‌ಗಳಲ್ಲೊಂದಾಗಿದೆ. ಜಿಲ್ಲೆಯಲ್ಲಿ ಒಟ್ಟು 82 ಕಿಮೀ ಬ್ರಾಡ್‌ಗೇಜ್ ರೈಲು ಮಾರ್ಗವಿದೆ.



ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಧಾರವಾಡ ಜಿಲ್ಲೆ ಶಿಕ್ಷಣದಲ್ಲಿ ಮಹತ್ತರ ಪ್ರಗತಿ ಸಾಧಿಸಿದೆ. ಉತ್ತರ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ 1950ರಲ್ಲಿ ಸ್ಥಾಪನೆಯಾಯಿತು. ಧಾರವಾಡದಲ್ಲಿ ಕರ್ನಾಟಕ ಕಾಲೇಜು, ಕೃಷಿ ಶಿಕ್ಷಣ ಕಾಲೇಜು, ವಿವಿಧ ತಾಂತ್ರಿಕ ಶಿಕ್ಷಣ ಕಾಲೇಜುಗಳಿವೆ. 1986ರಲ್ಲಿ ಸ್ಥಾಪಿತವಾದ ರಾಜ್ಯದ ಎರಡನೆಯ ಕೃಷಿ ವಿಶ್ವವಿದ್ಯಾಲಯದ ಕೇಂದ್ರ ಧಾರವಾಡದಲ್ಲಿದೆ. ಹುಬ್ಬಳ್ಳಿಯಲ್ಲಿ ವೈದ್ಯಕೀಯ ಕಾಲೇಜಿದೆ. ಧರ್ಮಸ್ಥಳದ ಶಿಕ್ಷಣ ಟ್ರಸ್ಟ್ ನಡೆಸುವ ದಂತ ವೈದ್ಯ ಕಾಲೇಜಿದೆ. ಶಿಕ್ಷಣ ತರಬೇತಿಯೂ ಸೇರಿದಂತೆ ವೃತ್ತಿ ಮತ್ತು ವಿಶೇಷ ಶಿಕ್ಷಣ ಶಾಲೆಗಳಿವೆ. 2 ಪಾಲಿಟೆಕ್ನಿಕ್‌ಗಳಿವೆ. ವಿಶ್ವವಿದ್ಯಾಲಯ ಕಾಲೇಜುಗಳೂ ಸೇರಿದಂತೆ ಕಲಾ ಮತ್ತು ವಿಜ್ಞಾನ ಕಾಲೇಜುಗಳೂ ಒಂದು ಆಯುರ್ವೇದ ಕಾಲೇಜು ಮತ್ತು ಒಂದು ನ್ಯಾಯ ಶಿಕ್ಷಣ ಕಾಲೇಜು, ವಾಣಿಜ್ಯ ಕಾಲೇಜುಗಳು ಮತ್ತು ಕೈಗಾರಿಕಾ ತರಬೇತಿ ಸಂಸ್ಥೆಗಳೂ ಇವೆ. ಈ ಜಿಲ್ಲೆಯಲ್ಲಿ ಒಟ್ಟು ಸಾಕ್ಷರತೆ ಸೇಕಡ 71.87. ಪುರುಷರಲ್ಲಿ ಸೇಕಡ 81.04 ರಷ್ಟಿದ್ದರೆ ಮಹಿಳೆಯರಲ್ಲಿ ಸೇಕಡ 62.20 ಸಾಕ್ಷರಸ್ಥರಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಧಾರವಾಡ ಜಿಲ್ಲೆ ಉನ್ನತ ಶಿಕ್ಷಣಕ್ಕೆ ಕೇಂದ್ರ ಸ್ಥಾನವಾಗಿದ್ದು ಇಲ್ಲಿನ ವಿವಿಧ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ ಅನೇಕ ಸಾರ್ವಜನಿಕ ಸಂಘಗಳು ಮತ್ತು ಧಾರ್ಮಿಕ ಸಂಸ್ಥೆಗಳು ಮಹತ್ತರ ಪಾತ್ರವಹಿಸಿವೆ.

ಧಾರವಾಡ ಜಿಲ್ಲೆಯಲ್ಲಿ ಅನೇಕ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ತ್ವದ ಸ್ಥಳಗಳಿವೆ. ಅವುಗಳಲ್ಲಿ ಅಣ್ಣಿಗೇರಿ, ಅಬ್ಬಲೂರು, ಅಮ್ಮಿನಬಾವಿ, ನವಲಗುಂದ, ಕುಂದಗೋಳ, ಉಣಕಲ್ಲು, ಯಮನೂರು, ಹೆಬ್ಬಿ, ಹುಬ್ಬಳ್ಳಿ, ಕುಸುಗಲ್ಲು, ಮೂಗಡ, ಛೆಬ್ಬಿ, ಕುಂದೂರು, ಅಮರಗೋಳ ಮುಖ್ಯವಾದವು. ಈ ಕೆಲವು ಊರುಗಳಲ್ಲಿ ಪುರಾತನ ದೇವಾಲಯಗಳೂ ಇವೆ. ಧಾರವಾಡ, ಹುಬ್ಬಳ್ಳಿ, ಕುಂದಗೋಳ, ಕಲಘಟಗಿ, ನವಲಗುಂದ– ಇವು ಪ್ರಮುಖ ವ್ಯಾಪಾರ ಕೇಂದ್ರಗಳು.

ಧಾರವಾಡ ಜಿಲ್ಲೆ ಬಹು ಪ್ರಾಚೀನ ಕಾಲದಿಂದ ಜನವಸತಿಯನ್ನು ಹೊಂದಿದ್ದ ಪ್ರದೇಶ. ತುಂಗಭದ್ರಾ, ವರದಾ ಮತ್ತು ಮಲಪ್ರಭಾ ನದಿಗಳು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಗೆ ಪ್ರೋತ್ಸಾಹಕಾರಿಯಾಗಿವೆ. ಈ ಜಿಲ್ಲೆಯಲ್ಲಿನ ಧಾರವಾಡ ತಾಲ್ಲೂಕಿನ ಬೆಣಚಮಟ್ಟಿ

ಮೊದಲಾದ ಸ್ಥಳಗಳಲ್ಲಿ ಪುರಾತನ ಶಿಲಾಯುಗದ ಆದಿಭಾಗದಲ್ಲಿ ಪ್ರಚಲಿತವಾಗಿದ್ದ ಅಬೆವಿಲ್ಲಿಯನ್, ಅಶೂಲಿಯನ್ ಶಿಲಾಯುಧಗಳು ದೊರಕಿವೆ.

ನವಶಿಲಾಯುಗದ ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ನೆಲೆಗಳು ನವಲಗುಂದ ತಾಲ್ಲೂಕಿನ ಗುಡಿಸಾಗರ ಮೊದಲಾದ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ. ಇವುಗಳಲ್ಲಿ ದಕ್ಷಿಣ ಭಾರತದ ನವಶಿಲಾ ಸಂಸ್ಕೃತಿಯ ಸಾಮಾನ್ಯ ಕುರುಹುಗಳಾದ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿ ಮತ್ತು ಇತರ ಆಯುಧಗಳು, ಕಂದುಬಣ್ಣದ ಮಡಕೆಗಳು ಹಾಗೂ ಕೆಲವೆಡೆ ಚಿಕ್ಕ ಚಿಕ್ಕ ಕಲ್ಲಿನ ಚಾಕು ಮತ್ತು ಒರೆಗಳು ದೊರಕಿವೆ. ಇದೇ ಸಂಸ್ಕೃತಿಯ ಮುಂದಿನ ಘಟ್ಟದ ಶಿಲಾ ತಾಮ್ರಯುಗದ ಸಂಸ್ಕೃತಿಯ ಕೆಲವು ನೆಲೆಗಳೂ ಈ ಜಿಲ್ಲೆಯಲ್ಲಿವೆ. ಅವಿಭಜಿತ ಧಾರವಾಡ ಜಿಲ್ಲೆಯ ಉಣಚಗೇರಿ, ಹಿರೇತಾಳ, ಬುಡಪನಹಳ್ಳಿ ಮೊದಲಾದೆಡೆ ಬೃಹತ್ ಶಿಲಾಯುಗದ ಸಂಸ್ಕೃತಿ ಮತ್ತು ತಾಮ್ರ ಯುಗದ ಸಂಸ್ಕೃತಿಯ ನೆಲೆಗಳು ಕಂಡುಬಂದಿದ್ದು ಈ ಪ್ರದೇಶದ ಪುರಾತನ ನೆಲೆಸಿಕೆಗಳಿಗೆ ಸಾಕ್ಷಿಯಾಗಿವೆ.

ಆದಿಚಾರಿತ್ರಿಕ ಕಾಲದ ಹೊತ್ತಿಗೆ ಧಾರವಾಡ ಜಿಲ್ಲೆಯ ಅನೇಕ ಭಾಗಗಳಲ್ಲಿ ಗ್ರಾಮಗಳು ಬಹುಸಂಖ್ಯೆಯಲ್ಲಿ ಹುಟ್ಟಿಕೊಂಡಿದ್ದುವು. ಇವೆಲ್ಲ ಸಾತವಾಹನ ಆಳ್ವಿಕೆಯ ಕಾಲದಲ್ಲಿದ್ದು ತತ್ಕಾಲದಲ್ಲಿ ಪ್ರಚಲಿತವಾಗಿದ್ದ ಸುದ್ದೆ ಅಲಂಕರಣವಿರುವ ಕೆಂಪು ಮಡಕೆಗಳು, ಗಾಜಿನ ಮಣಿಗಳು, ರೋಮನ್ ಮೂಲದ ರೂಲೆಟೆಡ್ ಇತ್ಯಾದಿ ಮಡಕೆಗಳು ಮಂತಾದ ವಸ್ತು ದೊರಕಿರುವ ಅನೇಕ ನೆಲೆಗಳನ್ನು ಈ ಜಿಲ್ಲೆಯಲ್ಲಿ ಕಂಡುಹಿಡಿಯಲಾಗಿದೆ.

ಮೌರ್ಯರು ಮತ್ತು ಸಾತವಾಹನರ ಕಾಲದಿಂದ ಈ ಜಿಲ್ಲೆಯ ಇತಿಹಾಸ ಪ್ರಾರಂಭವಾಗುತ್ತದೆ. ಅನಂತರ ಬನವಾಸಿಯ ಕದಂಬರು, ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ಕಳಚುರಿ ಮತ್ತು ಯಾದವ ವಂಶಗಳವರ ಆಳ್ವಿಕೆಗೆ ಅನುಕ್ರಮವಾಗಿ ಒಳಪಟ್ಟಿದ್ದು ಅನಂತರ ವಿಜಯನಗರದ ಅರಸರ ಆಶ್ರಯಕ್ಕೆ ಬಂತು. ವಿಜಯನಗರ ಕಾಲದಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ಮುಂತಾದ ಪ್ರದೇಶಗಳು ಆಗಾಗ್ಗೆ ವಿಜಯನಗರಕ್ಕೂ ಬಹಮನಿ ರಾಜ್ಯಕ್ಕೂ ಕೈ ಬದಲಾಯಿಸುತ್ತಿದ್ದುವು. ಸು. 1575 ರಿಂದ ಈ ಪ್ರದೇಶ ಆದಿಲ್‍ಶಾಹೀ ಅರಸರ ಕೈಸೇರಿತು. 1686-1820ರ ಅವಧಿಯಲ್ಲಿ ಮೊಗಲರ ವಶದಲ್ಲಿತ್ತು. ಆಗ ಅಬ್ದುಲ್ ರಹೂಫ್ ಎಂಬುವನು ಈ ಪ್ರದೇಶದಲ್ಲಿ ಆಳುತ್ತಿದ್ದು ಅನಂತರ ತನ್ನ ರಾಜಧಾನಿಯನ್ನು ಸವಣೂರಿಗೆ ವರ್ಗಾಯಿಸಿದ. ಈ ಕಾಲದಲ್ಲಿ ನವಲಗುಂದ ಮೊದಲಾದೆಡೆಗಳಲ್ಲಿ ದೇಸಾಯರ ಮನೆತನಗಳು ಅಧಿಕಾರದಲ್ಲಿದ್ದುವು. 1707ರಲ್ಲಿ ಔರಂಗಜೇಬ ಮರಣಹೊಂದುತ್ತಿದ್ದಂತೆ ಕೊಲ್ಲಾಪುರ ಮತ್ತು ಸಾತಾರಾದ ಮರಾಠ ಪ್ರಭುಗಳು ತಮ್ಮ ಪ್ರಭಾವವನ್ನು ಹಬ್ಬಿಸಲು ಆರಂಭಿಸಿದರು. 1720 ರಿಂದ 1818ರ ಅವಧಿಯಲ್ಲಿ ಅನೇಕ ಮರಾಠ ಸರದಾರರು ಮರಾಠ ಪೇಶ್ವೆಗಳ ಅಧೀನದಲ್ಲಿ ಆಡಳಿತ ನಿರ್ವಹಿಸುತ್ತಿದ್ದರು. ಈ ಮಧ್ಯದಲ್ಲಿ ಜಿಲ್ಲೆಯ ಹಲವು ಭಾಗಗಳು ನಾಮತಃ ಹೈದರಾಬಾದಿನ ನಿಜಾಮರ ಅಧೀನದಲ್ಲಿದ್ದುವು. ಈ ಕಾಲದಲ್ಲಿ ಸವಣೂರು ನವಾಬರು ಒಂದು ಮುಖ್ಯ ಪ್ರಭುತ್ವಶಕ್ತಿಯಾಗಿ ತಲೆಯೆತ್ತಿದ್ದರು. ಅಲ್ಲದೆ ಇದೇ ಕಾಲದಲ್ಲಿ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನ್ ಸಹ ಧಾರವಾಡ ಪ್ರಾಂತ್ಯದ ಮೇಲೆ ಆಗಾಗ್ಗೆ ದಾಳಿ ನಡೆಸಿ ಸವಣೂರು ಮೊದಲಾದ ಕೆಲವು ಭಾಗಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದರು. 1799ರಲ್ಲಿ ಟಿಪ್ಪುವಿನ ಪತನವಾದ ಅನಂತರ ಧಾರವಾಡ ಜಿಲ್ಲೆಯ ಪ್ರದೇಶ ಮರಾಠರ ಅಧೀನಕ್ಕೆ ಬಂತು. ಅನಂತರ 1817-18ರಲ್ಲಿ ಜನರಲ್ ಮನ್ರೋನ ಕಾರ್ಯಾಚರಣೆಗಳಿಂದ ಈ ಭಾಗದಲ್ಲಿ ಮರಾಠರ ಆಳ್ವಿಕೆ ಪೂರ್ಣವಾಗಿ ಕೊನೆಗೊಂಡು ಜಿಲ್ಲೆಯ ಭಾಗವೆಲ್ಲಾ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. 1818 ರಿಂದ 1830ರ ವರೆಗೆ ಬ್ರಿಟಿಷ್ ಮಿಲಿಟರಿ ನಾಯಕರು ಇಲ್ಲಿ ಪ್ರಭುತ್ವ ನಡೆಸುತ್ತಿದ್ದು ಈ ಭಾಗದ ಆಡಳಿತ ಮದರಾಸು ಪ್ರಾಂತ್ಯಕ್ಕೆ ಅಥವಾ ಮುಂಬಯಿ ಪ್ರಾಂತಕ್ಕೆ ಸೇರಬೇಕೆ ಎಂಬ ಬಗ್ಗೆ ಚರ್ಚೆಗಳಾಗುತ್ತಿದ್ದುವು. ಧಾರವಾಡ ಪೊಲಿಟಿಕಲ್ ಏಜೆಂಟ್ ಮತ್ತು ಕಲೆಕ್ಟರ್ ಆಗಿದ್ದ ಥ್ಯಾಕರೆ 1824ರಲ್ಲಿ ಕಿತ್ತೂರು ರಾಜ್ಯವನ್ನು ವಶಪಡಿಸಿಕೊಳ್ಳಲು ಕಿತ್ತೂರಿಗೆ ದಾಳಿ ಇಟ್ಟಾಗ ಗುಂಡಿಗೆ ಬಲಿಯಾದ.

1830ರಲ್ಲಿ ಧಾರವಾಡ ಜಿಲ್ಲೆ ರಚನೆಯಾಗಿ ಈಸ್ಟ್ ಇಂಡಿಯ ಕಂಪನಿಯ ಡೈರೆಕ್ಟರುಗಳ ತೀರ್ಮಾನದಂತೆ ಇದನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲಾಯಿತು. ಅಂದಿನ ಧಾರವಾಡ ಜಿಲ್ಲೆ ಈಗಿನ ಜಿಲ್ಲಾ ಪ್ರದೇಶವಲ್ಲದೆ ಇಂದಿನ ಬೆಳಗಾಂವಿ, ಬಿಜಾಪುರ, ಸೊಲ್ಲಾಪುರ ಜಿಲ್ಲೆಗಳ ಹಲವು ಪ್ರದೇಶಗಳನ್ನೂ ಒಳಗೊಂಡಿತ್ತು. 1836ರಲ್ಲಿ ಬೆಳಗಾಂವಿ ಪ್ರತ್ಯೇಕ ಜಿಲ್ಲೆಯಾಯಿತು. 1857-58ರಲ್ಲಿ ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾವ್ ಇವರುಗಳ ನೇತೃತ್ವದಲ್ಲಿ ನಡೆದ ಕ್ರಾಂತಿ ಈ ಕಾಲದ ಬಹು ಮುಖ್ಯ ಘಟನೆ. ಅನಂತರ ಜಿಲ್ಲೆಯಲ್ಲಿ ಬ್ರಿಟಿಷರ ಆಳ್ವಿಕೆ ಸ್ಥಿರವಾಗಿ ನೆಲೆಸಿ, ಬ್ರಿಟಿಷ್ ರೀತಿಯ ಆಡಳಿತಕ್ರಮ, ಇಂಗ್ಲಿಷ್ ವಿದ್ಯಾಭ್ಯಾಸ ಮೊದಲಾದ ಹಲವು ಚಟುವಟಿಕೆಗಳು ಬೆಳೆದುವು. ಜಿಲ್ಲೆ ಪೂರ್ಣವಾಗಿ ಮುಂಬಯಿ ಪ್ರಾಂತ್ಯದ ಭಾಗವಾಗಿದ್ದ ಆಡಳಿತ ಘಟಕವಾಗಿದ್ದರೂ ರಾಮದುರ್ಗ ಮೊದಲಾದ ಚಿಕ್ಕ ಸಂಸ್ಥಾನಗಳೂ ಇಲ್ಲಿ ಆಸ್ತಿತ್ವದಲ್ಲಿದ್ದು, 1949 ಆಗಸ್ಟ್ 1ರಂದು ಹಿಂದಿನ ಹಿರಿಯ ಮಿರಜ ಸಂಸ್ಥಾನದ 15 ಗ್ರಾಮ ಮತ್ತು 2 ಪಟ್ಟಣಗಳೂ ಜಮಖಂಡಿ ರಾಜ್ಯದ 17 ಗ್ರಾಮ ಮತ್ತು 3 ಪಟ್ಟಣಗಳೂ ಕಿರಿಯ ಮಿರಜ ಸಂಸ್ಥಾನದ 72 ಗ್ರಾಮಗಳು ಮತ್ತು ಒಂದು ಪಟ್ಟಣವೂ ರಾಮದುರ್ಗ ರಾಜ್ಯದ 7 ಗ್ರಾಮಗಳೂ ಧಾರವಾಡ ಜಿಲ್ಲೆಗೆ ಸೇರಿದವು. ಅದೇ ಕಾಲದಲ್ಲಿ ರಾಮದುರ್ಗ ತಾಲ್ಲೂಕಿಗೆ ಧಾರವಾಡ ಜಿಲ್ಲೆಯ 3 ಗ್ರಾಮಗಳನ್ನೂ ಹೈದರಾಬಾದು ರಾಜ್ಯಕ್ಕೆ 4 ಗ್ರಾಮಗಳನ್ನೂ ವರ್ಗಾಯಿಸಲಾಯಿತು. ಹೈದರಾಬಾದು ರಾಜ್ಯದಿಂದ 10 ಗ್ರಾಮಗಳನ್ನು ಧಾರವಾಡ ಜಿಲ್ಲೆಗೆ ಸೇರಿಸಲಾಯಿತು. 1962ರಲ್ಲಿ ಧಾರವಾಡ ಹುಬ್ಬಳ್ಳಿ ಪಟ್ಟಣಗಳನ್ನು ಸೇರಿಸಿ ಮಹಾನಗರ ವೆಂದು ಪರಿಗಣಿಸಲಾಯಿತು. 1969ರಲ್ಲಿ ಹಾವೇರಿ ತಾಲ್ಲೂಕಿನ 21 ಗ್ರಾಮಗಳನ್ನೂ ಮತ್ತು ಶಿಗ್ಗಾಂವಿ ತಾಲ್ಲೂಕಿನ 37 ಗ್ರಾಮಗಳನ್ನೂ ಸೇರಿಸಿ ಸವಣೂರು ತಾಲ್ಲೂಕನ್ನು ರಚಿಸಲಾಯಿತು. 1971ರಲ್ಲಿ ಅಳಣಾವರ ಮತ್ತು ಶಿಗ್ಗಾಂವಿಗಳನ್ನು ಪಟ್ಟಣಗಳೆಂದು ಪರಿಗಣಿಸಲಾಗಿ ಧಾರವಾಡ ಜಿಲ್ಲೆ ಮೊದಲಿನ ಸ್ವರೂಪ ಪಡೆಯಿತು. 1997ರಲ್ಲಿ ಜಿಲ್ಲಾ ಪುನರ್ವಿಂಗಡನೆಯಾದಾಗ ವಿಸ್ತೀರ್ಣದಲ್ಲಿ ಚಿಕ್ಕದಾಯಿತು.

**ತಾಲ್ಲೂಕು:** ಜಿಲ್ಲೆಯ ವಾಯುವ್ಯ ಭಾಗದಲ್ಲಿರುವ ಈ ತಾಲ್ಲೂಕಿನ ಪೂರ್ವದಲ್ಲಿ ನವಲಗುಂದ ಮತ್ತು ಹುಬ್ಬಳ್ಳಿ, ದಕ್ಷಿಣದಲ್ಲಿ ಕಲಘಟಗಿ, ಈ ತಾಲ್ಲೂಕುಗಳೂ ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯೂ ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕು ಮತ್ತು ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕುಗಳೂ ಇವೆ. ಅಳಣಾವರ, ಗರಗ, ಅಮ್ಮಿನಭಾವಿ ಮತ್ತು ಧಾರವಾಡ ಹೋಬಳಿಗಳು. 110 ಗ್ರಾಮಗಳೂ 2 ಪಟ್ಟಣಗಳೂ ಇವೆ. ವಿಸ್ತೀರ್ಣ 1008 ಚ.ಕಿಮೀ. ಜನಸಂಖ್ಯೆ 2,18,961.

ಈ ತಾಲ್ಲೂಕು ಜಿಲ್ಲೆಯ ಪಶ್ಚಿಮಭಾಗದಲ್ಲಿದ್ದು ಮಲೆನಾಡ ಅಂಚಿನಲ್ಲಿದೆ. ಸಣ್ಣ ಪುಟ್ಟ ಗುಡ್ಡಗಳು ಅಲ್ಲಲ್ಲಿ ಹರಡಿವೆ. ಧಾರವಾಡ ಶಿಲಾಶ್ರೇಣಿಗೆ ಸೇರಿದ ಶಿಲಾರಚನೆ ಇದೆ. ತಾಲ್ಲೂಕಿನ ಪೂರ್ವಭಾಗ

ಹುಳಕೆರಿ ಭೂಮಿಯಿಂದ ಮತ್ತು ಉಳಿದೆಡೆ ಕಪ್ಪು ಕೆಂಪು ಮಣ್ಣಿನ ಪ್ರದೇಶಗಳಿಂದ ಕೂಡಿದೆ. ಈ ತಾಲ್ಲೂಕಿನ ಹವಾಗುಣ ಹಿತಕರವಾಗಿದ್ದು ಸರಾಸರಿ ಉಷ್ಣತಾಮಾನ 23.6ಸೇ. ಇರುತ್ತದೆ. ವಾರ್ಷಿಕ ಸರಾಸರಿ ಮಳೆ 833 ಮಿಮೀ. ಈ ತಾಲ್ಲೂಕಿನಲ್ಲಿ ಸು. 141 ಚ.ಕಿಮೀ ರಕ್ಷಿತ ಅರಣ್ಯಪ್ರದೇಶ ಇದೆ. ಇದರಲ್ಲಿ ಸು.115 ಚ.ಕಿಮೀ ಅರಣ್ಯಪ್ರದೇಶದಲ್ಲಿ ಪಶ್ಚಿಮಭಾಗ ಹೆಚ್ಚು ದಟ್ಟವಾಗಿದ್ದು ತೇಗ ಇತ್ಯಾದಿ ಮರಗಳಿಂದ ಕೂಡಿದೆ. ಪೂರ್ವಭಾಗ ವಿರಳ ಕಾಡಾಗಿದ್ದು ಶ್ರೀಗಂಧ ಇತ್ಯಾದಿ ಮರಗಳನ್ನು ಒಳಗೊಂಡಿದೆ. ತಾಲ್ಲೂಕು ವ್ಯವಸಾಯ ಪ್ರಧಾನವಾಗಿದ್ದು ಜೋಳ, ಗೋದಿ, ಬತ್ತ, ನವಣೆ, ಸೇಂಗ, ರಾಗಿ, ಎಣ್ಣೆಬೀಜಗಳು, ದ್ವಿದಳಧಾನ್ಯಗಳು, ಕಬ್ಬು, ಹತ್ತಿ ಮುಂತಾದುವುಗಳ ಜೊತೆಗೆ ವಿವಿಧ ತರಕಾರಿಗಳನ್ನು ಕೆಲವು ಫಲಗಳನ್ನು ಬೆಳೆಯುತ್ತಾರೆ.

ಈ ತಾಲ್ಲೂಕು ಇಂದು ವಾಣಿಜ್ಯ ಉದ್ಯಮಗಳ ಮತ್ತು ವಿದ್ಯಾಲಯಗಳ ಕೇಂದ್ರವಾಗಿದೆ. ಗುಡಾರಗಳಿಗೆ, ಖಾದಿಗ್ರಾಮೋದ್ಯೋಗಗಳಿಗೆ, ಕೈಮಗ್ಗದ ಬಟ್ಟೆಗಳಿಗೆ ಈ ತಾಲ್ಲೂಕು ಪ್ರಸಿದ್ಧ. ಪ್ಲೈವುಡ್ ಮತ್ತು ಮರಕೊಯ್ಯುವ ಕಾರ್ಖಾನೆಗಳಿವೆ. ಬೀಡಿ ತಯಾರಿಕೆ, ಚರ್ಮ ಹದ ಮಾಡುವುದು, ಕಬ್ಬಿಣದ ತಿಜೋರಿ, ಕಪಾಟು, ಕುರ್ಚಿ ಮೊದಲಾದ ತಯಾರಿಕೆಯುಂಟು. ಗಡಿಯಾರ ತಯಾರಿಕಾ ಕಾರ್ಖಾನೆ, ರಟ್ಟು ತಯಾರಿಸುವ ಕಾರ್ಖಾನೆ ಮುಂತಾದವುಗಳಿವೆ.

ಈ ತಾಲ್ಲೂಕಿನ ಮುಖಾಂತರ ಬೆಂಗಳೂರು-ಬೆಳಗಾಂವಿ-ಪುಣೆ ರೈಲುಮಾರ್ಗ ಹಾದುಹೋಗಿದ್ದು ಧಾರವಾಡ ಪ್ರಮುಖ ರೈಲ್ವೆ ನಿಲ್ದಾಣವಾಗಿದೆ. ಜಿಲ್ಲೆಯ ಎಲ್ಲ ಕಡೆಗೂ ಇಲ್ಲಿಂದ ಉತ್ತಮ ಮಾರ್ಗಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುಚ್ಛಕ್ತಿ ಮತ್ತು ಕೆಲವು ಕಡೆ ರಕ್ಷಿತ ಕುಡಿಯುವ ನೀರಿನ ಸೌಕರ್ಯಗಳಿವೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳೂ ಖಾಸಗಿ ಕಾಲೇಜುಗಳೂ ಕರ್ನಾಟಕ ವಿಶ್ವವಿದ್ಯಾಲಯ ಕಾಲೇಜುಗಳೂ ಇವೆ. ಸರ್ಕಾರಿ ಆಸ್ಪತ್ರೆ, ಸಾರ್ವಜನಿಕ ಗ್ರಂಥಾಲಯ, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ನಿಯಂತ್ರಿತ ಮಾರುಕಟ್ಟೆ ಮುಂತಾದವುಗಳೂ ಇವೆ.

ಈ ತಾಲ್ಲೂಕಿನಲ್ಲಿ ಧಾರವಾಡಕ್ಕೆ ಈಶಾನ್ಯದಲ್ಲಿರುವ ಅಮ್ಮಿನಭಾವಿ ಒಂದು ದೊಡ್ಡ ಗ್ರಾಮ. ಪೇಶ್ವೆಗಳ ಕಾಲದಲ್ಲಿ ಇದೊಂದು ಅಷ್ಟಗ್ರಾಮಗಳ ಕೇಂದ್ರವಾಗಿತ್ತೆಂದು ತಿಳಿದುಬರುವುದು. ಊರಿನ ಉತ್ತರದಲ್ಲಿ ನೇಮಿನಾಥ ಜೈನದೇವಾಲಯವಿದೆ. ಕಲಮೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳೂ ಆರನೆಯ ಚಾಳುಕ್ಯ ವಿಕ್ರಮಾದಿತ್ಯ, ಕದಂಬ, ಶಿವಚಿತ್ತ ಪೆರ್ಮಾಡಿ ಮತ್ತು ವಿಜಯನಗರ ಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ ಆರು ಶಾಸನಗಳಿವೆ. ಇದೊಂದು ಅಗ್ರಹಾರವಾಗಿದ್ದು ನೂರು ಮಹಾಜನರ ಆಳ್ವಿಕೆಗೆ ಸೇರಿದ್ದ ಒಂದು ವಿದ್ಯಾಕೇಂದ್ರವಾಗಿತ್ತು. ಅಳಣಾವರ ಹೋಬಳಿ ಕೇಂದ್ರ ಮತ್ತು ವ್ಯಾಪಾರಸ್ಥಳವಾಗಿದೆ. ಗರಗ ಹೋಬಳಿ ಕೇಂದ್ರ. ಇಡೀ ಭಾರತದಲ್ಲೆ ಬಾವುಟ ತಯಾರಿಸುವ ಬಟ್ಟೆಯನ್ನು ತಯಾರಿಸುವುದು ಇಲ್ಲಿಯೆ ಎಂಬುದು ವಿಶೇಷ ಧಾರವಾಡ ನಗರಕ್ಕೆ ವಾಯವ್ಯದಲ್ಲಿದ್ದು ಸುತ್ತಲ ಗ್ರಾಮಗಳಿಗೆ ಒಂದು ವ್ಯಾಪಾರ ಕೇಂದ್ರವಾಗಿದೆ. ಹೆಬ್ಬಳ್ಳಿ ಗ್ರಾಮದಲ್ಲಿ ಯಾದವರ ಕಾಲದ ಎರಡು ಶಾಸನಗಳಿವೆ ಮತ್ತು ಶಂಭುಲಿಂಗ ದೇವಾಲಯವಿದೆ. ಧಾರವಾಡದ ಈಶಾನ್ಯಕ್ಕೆ ನರೇಂದ್ರ ಗ್ರಾಮವಿದೆ. ಇಲ್ಲಿ ಶಂಕರಲಿಂಗ ದೇವಾಲಯವಿದೆ. ಆರನೆಯ ವಿಕ್ರಮಾದಿತ್ಯನ 1125-26ರ ಎರಡು ಶಾಸನಗಳಿವೆ. ಗೋವ ಕದಂಬ ಮನೆತನದ ಎರಡನೆಯ ಜಯಕೇಶಿಯನ್ನು ಮದುವೆಯಾಗಿದ್ದ ವಿಕ್ರಮಾದಿತ್ಯನ ಮಗಳಾದ ಮೈಳಲದೇವಿ ಈ ಪ್ರಾಂತ್ಯವನ್ನಾಳುತ್ತಿದ್ದಳೆಂದು ತಿಳಿದುಬರುವುದು.

**ನಗರ:** ಧಾರವಾಡ ಈ ಜಿಲ್ಲೆಯ ಆಡಳಿತಕೇಂದ್ರ. ಧಾರವಾಡ ಮತ್ತು ಹುಬ್ಬಳ್ಳಿ ನಗರಗಳನ್ನು ಒಂದುಗೂಡಿಸಿ ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ರಚಿಸಲಾಗಿದೆ. **(ನೋಡಿ: ಹುಬ್ಬಳ್ಳಿ - ಧಾರವಾಡ)**

**(ಡಿ.ಎಸ್.ಜೆ.;ಎಸ್.ಎಸ್.ಬಿ.)**

**ಧಾರವಾಡಕರ,ರಾ.ಯ.:** 1919-91. ಪ್ರಸಿದ್ಧ ಪ್ರಬಂಧಕಾರರು. ರಾಜೇಂದ್ರ ಯಲದುರ್ಗರಾವ್ ಧಾರವಾಡಕರ ಇವರ ಪೂರ್ಣ ಹೆಸರು. 1919 ಜುಲೈ 15 ರಂದು ಜನಿಸಿದರು. ಬಾಗಲಕೋಟೆ, ಸಾಂಗ್ಲಿ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿ, ಮುಂಬಯಿ ಸೆಕ್ರೆಟೇರಿಯಟ್‌ನಲ್ಲಿ ಸರಕಾರಿ ಸೇವೆಗೆ ಸೇರಿದರು (1942). ಅನಂತರ ಧಾರವಾಡದಲ್ಲಿ ಬಿ.ಎಂ.ಶ್ರೀ. ಅವರ ಕೆ.ಇ.ಬೋರ್ಡ್ (ಇಂದಿನ ಜೆ.ಎಸ್.ಎಸ್. ಕಾಲೇಜು) ಕಾಲೇಜಿನಲ್ಲಿ ಕನ್ನಡ ಇಂಗ್ಲಿಷ್ ಪ್ರಾಧ್ಯಾಪಕರಾದರು. ಅನಂತರ ಕಾಲೇಜಿನ ಪ್ರಾಂಶುಪಾಲರಾಗಿ (1946) ಸುದೀರ್ಘವಾದ ಸೇವೆ ಸಲ್ಲಿಸಿ ನಿವೃತ್ತರಾದರು (1975). ಭಾನುಮತಿ ಇವರ ಪತ್ನಿ. ಇವರಿಗೆ ಐವರು ಗಂಡು ಮಕ್ಕಳು.

ಧಾರವಾಡಕರರು ಅದ್ಭುತ ವಾಗ್ಮಿಗಳು. ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯ ಬೋಧನೆ ಮಾಡುತ್ತಿದ್ದ ಇವರಿಗೆ ಶಬ್ದಮಣಿದರ್ಪಣ ಪ್ರಿಯವಾಗಿತ್ತು. ಪ್ರಬಂಧ ರಚನೆ ಇವರ ಪ್ರಿಯವಾದ ಬರೆವಣಿಗೆಯಾಗಿತ್ತು. ಧೂಮ್ರವಲಯಗಳು, ತೂರಿದ ಚಿಂತನಗಳು, ನವಿಲಗರಿ, ಸೂರ್ಯಪಾನ ಎಂಬ ನಾಲ್ಕು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಲಲಿತ ಪ್ರಬಂಧಗಳಲ್ಲಿ ಜೀವನ ರಸಿಕತೆಯಿದೆ, ತಿಳಿಯಾದ ಹಾಸ್ಯ ಹರಟೆಯ ಗುಣಗಳಿಂದ ಕೂಡಿದ ಈ ಪ್ರಬಂಧಗಳು ಆಕರ್ಷಣೀಯವಾಗಿವೆ. ಹೊಸಗನ್ನಡ ಸಾಹಿತ್ಯದ ಉದಯಕಾಲ ಎಂಬ ಕೃತಿ ಇವರ ಮಹಾಪ್ರಬಂಧವಾಗಿದ್ದು ಅದರಲ್ಲಿ ಹೊಸಗನ್ನಡ ಅರುಣೋದಯ ಕಾಲದ ಸಾಹಿತ್ಯ ಚಟುವಟಿಕೆಗಳನ್ನು ವಿಪುಲ ಆಕರ ಸಾಮಗ್ರಿಯ ಮೂಲಕ ವಿವೇಚಿಸಿದ್ದಾರೆ. ಕನ್ನಡ ಭಾಷಾಶಾಸ್ತ್ರ ಎಂಬ ಕೃತಿ ಕನ್ನಡ ಭಾಷಾವಿಜ್ಞಾನವನ್ನು ಕುರಿತದ್ದು. ನಾನು ಕಂಡ ಅಮೇರಿಕೆ ಎಂಬುದು ಸುಂದರ ಪ್ರವಾಸ ಕಥನ. ಇವರು ಅನೇಕ ಕತೆಗಳನ್ನು ಬರೆದಿದ್ದಾರೆ, ಅನುವಾದಗಳನ್ನು ಮಾಡಿದ್ದಾರೆ. ತೆರೆಯ ಹಿಂದೆ ಎಂಬುದು ಇವರ ಒಂದು ಕಥಾಸಂಕಲನ. ಅಮೆರಿಕನ್ ನಿಗ್ರೋ ಕಥೆಗಳು ಇವರ ಅನುವಾದಿತ ಕತೆಗಳ ಸಂಕಲನ. ಬಿ.ಎಂ. ಶ್ರೀಕಂಠಯ್ಯ, ವೆಂಕಟರಂಗೋಕಟ್ಟಿ, ಎಸ್.ಸಿ. ನಂದೀಮಠ ಮೊದಲಾದವರ ಜೀವನ ಸಾಧನೆ ಕುರಿತು ಗ್ರಂಥಗಳನ್ನು ಬರೆದಿದ್ದಾರೆ. 'ಕನ್ನಡದಲ್ಲಿ ಕಾನೂನು ಸಾಹಿತ್ಯ' ಕಾನೂನು ಸಾಹಿತ್ಯ ಕುರಿತಂತೆ ಕನ್ನಡದಲ್ಲಿ ಬರೆದ ಒಂದು ಆಕರ ಗ್ರಂಥವಾಗಿದೆ. ಪತ್ರಿಕಾ ವ್ಯವಸಾಯ, ಕನ್ನಡದಲ್ಲಿ ವೃತ್ತ ಪತ್ರಿಕೆಗಳು- ಇವು ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಗ್ರಂಥಗಳು. 'ನಮ್ಮ ದೇಶದ ಯೋಜನೆಗಳು' ಆರ್ಥಿಕಾಭಿವೃದ್ಧಿ ಕುರಿತು ಬರೆದ ಕೃತಿ. ಸಾಹಿತ್ಯ ಸಮೀಕ್ಷೆ ಮತ್ತು ಆರು ಪ್ರಬಂಧಗಳು. ಸಾಹಿತ್ಯ ವಿಮರ್ಶೆ ಸಂಸ್ಕೃತಿಗೆ ಸಂಬಂಧಿಸಿದ ಗ್ರಂಥಗಳು. ನಂದೀಮಠ ನೆನಪು, ರೊದ್ದ ಶ್ರೀನಿವಾಸರಾಯರು, ಕಾವ್ಯಾನಂದ ಪುಣೇಕರ, ಸಾಗರೋತ್ತರ ಕಥೆಗಳು ಇವರ ಇತರ ಕೃತಿಗಳು. ಕನ್ನಡದಲ್ಲಿ ಗಾಂಧಿಸಾಹಿತ್ಯ, ಭೀಷ್ಮ ಪರ್ವಸಂಗ್ರಹ ಮೊದಲಾದ ಕೃತಿಗಳನ್ನೂ ಇವರು ಸಂಪಾದಿಸಿದ್ದಾರೆ.

ಶಿಕ್ಷಣತಜ್ಞರಾಗಿ, ದಕ್ಷ ಆಡಳಿತಗಾರರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಮಂಡಳಿಗಳ ಸಿಂಡಿಕೇಟ್, ಸೆನೆಟ್ ಸದಸ್ಯರಾಗಿ ಇವರು ಕಾರ್ಯನಿರ್ವಹಿಸಿದ್ದಾರೆ. ಇವರಿಗೆ 71 ತುಂಬಿದಾಗ ಪ್ರಬಂಧ ಪ್ರಪಂಚ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. ತೂರಿದ ಚಿಂತನಗಳು, ನಾನು ಕಂಡ ಅಮೇರಿಕೆ ಗ್ರಂಥಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಇವರು 1991 ಏಪ್ರಿಲ್ 12ರಂದು ಧಾರವಾಡದಲ್ಲಿ ನಿಧನರಾದರು.

**(ಜಿ.ಎಂ.ಎಚ್.)**

**ಧಾರವಾಡ ಶಿಲಾವರ್ಗ:** ಧಾರವಾಡದ ಬಳಿ ಇರುವ ಸ್ಫಟಿಕಾತ್ಮಕ ಪದರುಶಿಲೆಗಳ (ಕ್ರಿಸ್ಟಲೈನ್ ಶಿಲ್ಟ್) ಭೂವೈಜ್ಞಾನಿಕ ನಾಮಧೇಯ (ಧಾರ್ವಾರ್ ಸಿಸ್ಟಮ್). ಆರ್.ಬಿ.ಫುಟೆ ಎಂಬಾತ ನೀಡಿದ ಹೆಸರಿದು (1886). ಧಾರವಾಡ ಪದರುಶಿಲೆಗಳು ಅಥವಾ ಧಾರವಾಡಗಳು ಎಂಬುದಾಗಿ ಕೂಡ ಈ ವರ್ಗವನ್ನು ಉಲ್ಲೇಖಿಸುವುದುಂಟು. ಇದು ಶಿಲಾರಸ, ಶಿಲಾಧೂಳು ಮುಂತಾದ ಜ್ವಾಲಾಮುಖಿ ವಸ್ತುವಿಶೇಷಗಳಿಂದ ಮಿಶ್ರಿತವಾದ ಪ್ರಸ್ತರೀ (ಪದರು) ಶಿಲಾ ಸಮುದಾಯ ಎಂದೂ ಈ ಪದರು ಶಿಲಾವರ್ಗ ಗ್ರಾನಿಟಾಯ್ಡ್ ನೈಸ್‌ಗಳು ಭೂಸಂಮರ್ದದಿಂದ ಮಡಚಿ ಆರ್ದ್ರಗೊಂಡು ನಗ್ನೀಕೃತವಾದ ಬಳಿಕ ಅವುಗಳ ಮೇಲೆ ಸ್ತರಭಂಗವಾಗಿ ಉತ್ಪನ್ನವಾದ ಜಲಜಶಿಲೆಗಳ ರೂಪಾಂತರಗಳೆಂದೂ ಭಾವಿಸಲಾಗಿತ್ತು. ಮುಂದೆ ಈ ವಿಚಾರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದು ಧಾರವಾಡ ಶಿಲಾವರ್ಗದ ಕೆಲವು ಶಿಲೆಗಳಲ್ಲಿ ಜಲಜಶಿಲೆಗಳ ಸ್ವಾಭಾವಿಕವಾದ ರಚನಾಕೃತಿಗಳ ಸಂದೇಹಾತೀತ ಕುರುಹುಗಳು ಸಾಕಷ್ಟು ಇರುವುದು ದೃಢಪಟ್ಟಿತು. ಆದ್ದರಿಂದ ಇಲ್ಲಿನ ಪೆಂಟೆಕಲ್ಲು (ಕಾಂಗ್ಲೊಮರೇಟ್), ಸಿಕತಶಿಲೆ (ಮರಳ್ಗಲ್ಲು – ಸ್ಯಾಂಡ್ ಸ್ಟೋನ್), ಗೋಡುಕಲ್ಲು, ಸುಣ್ಣಕಲ್ಲು ಮತ್ತು ಕೆಲವು ವಿಧವಾದ ಪದರು ಶಿಲೆಗಳು ನಿರ್ದಿಷ್ಟವಾಗಿ ಜಲಜಶಿಲೆಗಳ ರೂಪಾಂತರಗಳೆಂದು ನಿರ್ಧರಿತವಾಯಿತು (1905).

ಘಟಕ ಶಿಲಾವಿಭಾಗಗಳು ಧಾರವಾಡ ಶಿಲಾವರ್ಗದಲ್ಲಿ ಮುಖ್ಯವಾಗಿ ಈ ಕೆಳಗಿನ ನಾಲ್ಕು ಬಗೆಯ ಶಿಲಾಪಂಗಡಗಳಿವೆ. ಜ್ವಾಲಾಮುಖಿ ಶಿಲೆಗಳು, ಸ್ಫಟಿಕಾಕೃತಿಯ ಪದರು ಶಿಲೆಗಳು, ರೂಪಗೆಟ್ಟ ಪ್ರಸ್ತರೀ ಶಿಲೆಗಳು, ಅಂತಸ್ಸರಿತ ಅಥವಾ ಒಳನುಗ್ಗಿದ ಅಗ್ನಿಶಿಲೆಗಳು.

ಜ್ವಾಲಾಮುಖಿ ಶಿಲೆಗಳ ಗುಂಪು ಮುಖ್ಯವಾಗಿ ರಾಸಾಯನಿಕ ವ್ಯತ್ಯಾಸದಿಂದ ಒಡಗೂಡಿದ ಘನೀಭೂತ ವಿವಿಧ ಶಿಲಾರಸಗಳು. ಡೈಕ್‌ಗಳು, ಶಿಲಾಧೂಳು ಮುಂತಾದ ಶಿಲಾವಸ್ತುಗಳಿಂದ ಕೂಡಿರುತ್ತದೆ.

ಸ್ಫಟಿಕಾಕೃತಿಯ ಪದರು ಶಿಲೆಗಳ ಸಮುದಾಯದಲ್ಲಿ ಕಪ್ಪು ಹಾರ್ನ್‌ಬ್ಲೆಂಡ್ ಪದರುಶಿಲೆ, ಕ್ಲೋರೈಟ್ ಪದರುಶಿಲೆ, ಅಭ್ರಕ ಪದರುಶಿಲೆ, ಕರಿ ಅಭ್ರಕ, ಕಯನೈಟ್, ಸಿಲ್ಲಿಮನೈಟಂ, ಕಾರ್ಡಿಯರೈಟ್ ಮುಂತಾದ ರೂಪಾಂತರ ಶಿಲೆಗಳಲ್ಲಿ ಸ್ವಾಭಾವಿಕವಾಗಿ ಕಂಡುಬರುವ ಸ್ಫಟಿಕೀಕೃತವಾದ ಖನಿಜಗಳನ್ನು ವಿವಿಧ ಪ್ರಮಾಣಗಳಲ್ಲಿ ಒಳಗೊಂಡ ಪದರುಶಿಲೆಗಳು ಇವೆ. ಈ ಪದರುಶಿಲೆಗಳಲ್ಲಿ ಮೊದಲಿನ ಮೂರು ವಿಧಗಳ ವಿನಾ ಉಳಿದವುಗಳೆಲ್ಲವೂ ಅಧಿಕ ರೂಪಾಂತರಿಸಿದ ಅಶುಭ್ರ ಜಲಜಶಿಲೆಗಳೆಂದು ಕಂಡುಬಂದಿದೆ.

ರೂಪಗೆಟ್ಟ ಅಥವಾ ವಿರೂಪಿಸಿದ ಜಲಜಶಿಲಾಶ್ರೇಣಿಯಲ್ಲಿ ಪೆಂಟೆಕಲ್ಲು, ಮರಳ್ಗಲ್ಲು ಸಿಕತಶಿಲೆ, ಗೋಡುಕಲ್ಲು, ಕಬ್ಬಿಣಸಿಕತ ಮಿಶ್ರಿತ ಪಟ್ಟೆಗಲ್ಲು ಸ್ಫಟಿಕೀಕರಿಸಿದ ಸುಣ್ಣಕಲ್ಲು ಅಥವಾ ಅಮೃತ ಶಿಲೆಗಳು ಮುಖ್ಯವಾದವು. ಇವೆಲ್ಲವೂ ನಿಸ್ಸಂದೇಹವಾಗಿ ಜಲಜಶಿಲೆಗಳ ರೂಪಾಂತರಗಳೆಂದು ಈಗ ಖಚಿತವಾಗಿ ನಿರ್ಣಯಿಸಲಾಗಿದೆ.

ಅಗ್ನಿಶಿಲಾ ಅಂತಸ್ಸರಣಗಳಲ್ಲಿ ಕ್ಷಾರ ಮತ್ತು ಅತಿಕ್ಷಾರ ಶಿಲೆಗಳೂ ಮತ್ತೆ ಕೆಲವು ಗ್ರಾನೈಟಂ ಪಾರ್ಫಿರಿಗೆ ಕ್ರಮವಾಗಿ ಹೊಂದಿಕೊಳ್ಳುವ ಸೂಕ್ಷ್ಮಕಣ ಶಿಲೆಗಳೂ ಇರುವುದಾಗಿ ಕಂಡುಬಂದಿದೆ.

**ವರ್ಗೀಕರಣ ಮತ್ತು ಕಾಲ:** ಮೈಸೂರಿನಲ್ಲಿ ಧಾರವಾಡ ಶಿಲಾವರ್ಗ ತಳಭಾಗ, ಮಧ್ಯಭಾಗ ಮತ್ತು ಮೇಲುಭಾಗವೆಂದು ಮೂರು ಭಾಗಗಳಾಗಿ ವಿಭಾಗಗೊಂಡಿದೆ. ತಳಭಾಗ ಮುಖ್ಯವಾಗಿ ಸಣ್ಣಸಣ್ಣ ಆಪ್ಪಿಟಗಳಂತಿರುವ ಆದಿಜನಿತ ಅದಿಮ ಗೋಡುಶಿಲೆಗಳಿಂದ ಬೆರೆತಿರುವ ವಿವಿಧ ಜ್ವಾಲಾಮುಖಿಜ ಶಿಲೆಗಳಿಂದಲೂ ಮಧ್ಯಭಾಗ ಜ್ವಾಲಾಮುಖಿಜ ಶಿಲಾಮಿಶ್ರಿತ ಮತ್ತು ಅಂತಸ್ಸರಿತ ಅಗ್ನಿಶಿಲೆಗಳಿಂದ ಕೂಡಿದ ಪ್ರಸ್ತರೀ ಶಿಲೆಗಳಿಂದಲೂ ಮೇಲುಭಾಗ ಮಧ್ಯಭಾಗದ ಪ್ರಸ್ತರೀ ಶಿಲೆಗಳಿಗೆ ರೂಪು ರಚನೆಗಳಲ್ಲಿ ಕೊಂಚ ವ್ಯತ್ಯಾಸವಿರುವ ಪ್ರಸ್ತರೀ ಶಿಲೆಗಳಿಂದಲೂ ಕೂಡಿವೆ. ಈ ಮೂರು ವಿಭಾಗಗಳು ಅಥವಾ ವಿಂಗಡಣೆಗಳನ್ನು ಮೊದಲಿನ ಮೈಸೂರು ಸಂಸ್ಥಾನದ ಉತ್ತರ ಭಾಗದಲ್ಲಿ ಖಚಿತವಾಗಿ ಕಾಣಬಹುದೇ ವಿನಾ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ, ಒತ್ತಡ ಸ್ತರಪಲ್ಲಟ ಮತ್ತು ಅಧಿಕ ರೂಪಾಂತರ ಮುಂತಾದ ಕಾರಣಗಳಿಂದ ಗುರ್ತಿಸಲಾಗುವುದಿಲ್ಲ.

ಧಾರವಾಡದ ಶಿಲಾವರ್ಗ ಉತ್ಪತ್ತಿಯಾದ ಕಾಲ ಜ್ವಾಲಾಮುಖಿಯ ಶಿಲಾರಸಗಳು ಧಾರಾಳವಾಗಿ ಹೊರಹೊಮ್ಮಿ ಹರಿದ್ದು ಘನೀಭೂತವಾದ ಪ್ರಕರಣದಿಂದ ಆರಂಭವಾಯಿತೆಂದು ತಿಳಿದುಬರುತ್ತದೆ. ಈ ಶಿಲಾರಸಗಳು ಅನೇಕ ಸ್ಥಳಗಳಲ್ಲಿ ಮತ್ತು ಜಲಪ್ರದೇಶಗಳಲ್ಲಿ ಹರಿದು ಘನೀಭವಿಸಿರುವುದೂ ಕಂಡುಬಂದಿದೆ. ಅನಂತರ ಬಹುಕಾಲದ ಮೇಲೆ ಕ್ರಮೇಣ ಆಳದಲ್ಲಿ ಹೆಚ್ಚುತ್ತಲಿದ್ದ ಕಡಲು ಪ್ರದೇಶಗಳಲ್ಲಿ ಪ್ರಸ್ತರೀ ಶಿಲೆಗಳ ಉತ್ಪತ್ತಿ ರೂಪುರಚನೆಗಳು ಆರಂಭವಾದದೆಂದು ಕಂಡುಬರುತ್ತದೆ.

ಧಾರವಾಡ ಶಿಲಾವರ್ಗದ ಕೆಲವು ಶಿಲೆಗಳ ಶುದ್ಧವಯಸ್ಸನ್ನು ವಿಕಿರಣ ಮಾಪಕ ಸಲಕರಣೆಗಳಿಂದ ಅಳೆಯಲಾಗಿದೆ. ಆ ಪ್ರಕಾರ ಶಿಲಾವರ್ಗದ ಮೇಲು ಭಾಗ ಪ್ರಾಯಶಃ 100 ಕೋಟಿಯಿಂದ 200 ಕೋಟಿ ವರ್ಷಗಳ ಹಿಂದೆ ಉತ್ಪನ್ನವಾಯಿತೆಂದೂ ಮಧ್ಯಭಾಗದ ಶಿಲೆಗಳು ಸು.220 ಕೋಟಿಯಿಂದ 240 ಕೋಟಿ ವರ್ಷಗಳ ಹಿಂದೆ ಉತ್ಪನ್ನವಾದುವೆಂದೂ ತಳಭಾಗ 250 ಕೋಟಿ ವರ್ಷಗಳಿಗಿಂತಲೂ ಹಿಂದೆ ರೂಪುಗೊಂಡಿತೆಂದೂ ಕಂಡುಬಂದಿದೆ. ಅಂದರೆ ಧಾರವಾಡ ಶಿಲಾವರ್ಗ ಸೂಚಿಸುವ ಅತ್ಯಂತ ಕಾಲ ಒಟ್ಟು ಸು.100 ಕೋಟಿ ವರ್ಷ ಮೀರಿರುವುದಾಗಿ ತೋರುತ್ತದೆ.

**ವಿಸ್ತಾರ ಮತ್ತು ಹಂಚಿಕೆ :** ಧಾರವಾಡ ಶಿಲಾವರ್ಗ ಕರ್ನಾಟಕ ರಾಜ್ಯದಲ್ಲಿ ಸು.12,800 ಚದರ ಕಿಲೋ ಮೀಟರ್ ಪ್ರದೇಶವನ್ನು ಆಕ್ರಮಿಸಿದೆ. ಇದು ಅನೇಕ ನೀಳವಾದ ಇಕ್ಕಟ್ಟು ಪದರು ಶಿಲಾಪಟ್ಟಿಗಳಂತೆ ಗ್ರ್ಯಾನಿಟಿಕ್ ನೈಸ್ ಪ್ರದೇಶಗಳಲ್ಲಿ ಬೇರೆ ಬೇರೆ ಪಟ್ಟಿಗಳಾಗಿ ಹಂಚಿಕೊಂಡಿದೆ. ಇವು ಉದ್ದದಲ್ಲಿ ಸು.52 ಕಿಮೀ. ಸು. 400ಕಿಮೀ ಮೇಲ್ಪಟ್ಟು ಅಗಲದಲ್ಲಿ ಕೇವಲ 800 ಕಿಮೀನಿಂದ ಬಲು ಅಗಲವಾದ ಭಾಗಗಳಲ್ಲಿ 32 ಕಿಮೀ ವರೆಗೂ ಇರುತ್ತವೆ. ಇವನ್ನು ಪದರು ಶಿಲಾ ಪಟ್ಟಿಗಳೆಂದು ಕರೆಯುವುದು ರೂಢಿ. ವರ್ಣನೆಯ ಸಲುವಾಗಿ ಇವನ್ನು ಪಶ್ಚಿಮ, ಮಧ್ಯಪಶ್ಚಿಮ, ಮಧ್ಯ, ಪೂರ್ವ ಮತ್ತು ಪೂರ್ವವಲಯಗಳೆಂದು ಐದು ವಲಯಗಳಾಗಿ ವಿಂಗಡಿಸಿದೆ. ಸಾಧಾರಣವಾಗಿ ಕಪ್ಪು ಹಾರ್ನ್‌ಬ್ಲೆಂಡ್ ಪದರುಶಿಲೆಗಳು ರಾಜ್ಯದ ಪೂರ್ವ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿಯೂ ಕ್ಲೋರೈಟ್ ಮತ್ತು ಅಭ್ರಕ ಪದರು ಶಿಲೆಗಳು ಉತ್ತರ ಮತ್ತು ಮಧ್ಯ ಉತ್ತರ ಪ್ರದೇಶಗಳಲ್ಲಿಯೂ ಇತರ ಸಿಲ್ಲಿಮನೈಟ್ ಕಾರ್ಡಿಯರೈಟ್ ಮುಂತಾದ ಖನಿಜಗಳನ್ನು ಒಳಗೊಂಡ ಪದರುಶಿಲೆಗಳು ದಕ್ಷಿಣ ಮತ್ತು ಮಧ್ಯದಕ್ಷಿಣ ಭಾಗಗಳಲ್ಲಿಯೂ ಹರಡಿರುತ್ತವೆ. ಧಾರವಾಡ ಶಿಲಾವರ್ಗದ ವಿವಿಧ ಶಿಲಾಭೇದಗಳೆಲ್ಲವೂ ಪ್ರತಿಯೊಂದು ವಲಯದ ಪ್ರತಿಯೊಂದು ಪದರುಶಿಲಾ ಪಟ್ಟಿಯಲ್ಲಿಯೂ ಇರುವುದಿಲ್ಲ.

**ಶಿಲಾವರ್ಗ ಪರಸ್ಪರ ಸಂಬಂಧ :** ಧಾರವಾಡ ಶಿಲಾವರ್ಗವನ್ನು ಹೋಲುವ ಅಧಿಕ ರೂಪಾಂತರಗೊಂಡ ಸ್ಫಟಿಕಾಕೃತಿಯ ಪದರುಶಿಲೆಗಳು ಮತ್ತು ಇತರ ಶಿಲಾ ವಿಭೇದಗಳು ಭಾರತದ ಇತರ ಭಾಗಗಳಲ್ಲಿವೆ. ಅವುಗಳಲ್ಲಿ ಮುಖ್ಯವಾದವು ರಾಜಸ್ಥಾನದ ಇರಾವತಿ ಶಿಲಾವರ್ಗ, ಗುಜರಾತಿನ ಚಂಪಾನೇರ್ ವರ್ಗ, ಮಧ್ಯಪ್ರದೇಶದ ಸಾಸರನ್ ಸಕೋಲಿ ವರ್ಗಗಳು, ಬಿಹಾರ್, ಒರಿಸ್ಸಗಳ ಕೊಲ್ಹಾನ ಮುಂತಾದ ಶಿಲಾವರ್ಗಗಳು,

ಪೂರ್ವಘಟ್ಟಗಳ ಖಾಂಡಲೈಟ್ ಶಿಲಾವರ್ಗ. ಇವುಗಳ ಪೈಕಿ ಅನೇಕವನ್ನು ಸಾಮಾನ್ಯವಾಗಿ ಧಾರವಾಡ ಶಿಲಾವರ್ಗಕ್ಕೆ ಹೋಲಿಸಲಾಗಿದೆ. ಆದರೆ ಅವುಗಳಲ್ಲಿ ಯಾವುವು ಧಾರವಾಡ ಶಿಲಾವರ್ಗದ ಯಾವ ವಿಭಾಗಕ್ಕೆ ಪರಸ್ಪರ ಸಂಬಂಧಪಟ್ಟವು ಎಂಬುದನ್ನು ಖಚಿತವಾಗಿ ತಿಳಿಯಲು ಹೆಚ್ಚಿನ ಪರಿಶೋಧನೆಗಳು ನಡೆಯಬೇಕಾಗಿವೆ.

**ಆರ್ಥಿಕ ಖನಿಜಗಳು :** ಧಾರವಾಡ ಶಿಲಾವರ್ಗ ಕರ್ನಾಟಕದಲ್ಲಿ ದೊರೆಯುವ ಚಿನ್ನ, ಕಬ್ಬಿಣ, ಕ್ರೋಮಿಯಮ್, ಮ್ಯಾಂಗನೀಸ್, ಸೀಸ ಮತ್ತು ಸುರಮ ಲೋಹ ಖನಿಜಗಳ ಅದಿರುಗಳನ್ನೂ ಕಲ್ನಾರು, ಕುರುಡ, ಗಾರ್ನೆಟ್, ಗ್ರಾಫೈಟ್, ವಿವಿಧ ಸುಣ್ಣಕಲ್ಲುಗಳು, ಮ್ಯಾಗ್ನಸೈಟ್, ಕಯನೈಟ್, ಸಿಲ್ಲಿಮನೈಟ್ ಮುಂತಾದ ಅನೇಕ ಲೋಹೇತರ ಉಪಯುಕ್ತ ಖನಿಜಗಳನ್ನೂ ಒಳಗೊಂಡಿದೆ.

*

**ಧಾರೇಶ್ವರ:** ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ ಒಂದು ಗ್ರಾಮ. ಪ್ರಾಚೀನ ಧಾರ್ಮಿಕ ಕ್ಷೇತ್ರ. ಗೋಕರ್ಣ ಸಂಬಂಧವಾದ ಪಂಚಕ್ಷೇತ್ರಗಳಲ್ಲೊಂದು. ಕುಮಟದಿಂದ 5ಕಿಮೀ ದೂರದಲ್ಲಿದೆ.

ಈ ಸ್ಥಳ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ರಾವಣ ಗೋಕರ್ಣದಲ್ಲಿ ನೆಲಕಂಡ ಶಿವನ ಆತ್ಮಲಿಂಗವನ್ನು ಕೀಳಲು ಪ್ರಯತ್ನಿಸಿದಾಗ ಆ ಲಿಂಗಕ್ಕೆ ಕಟ್ಟಿದ್ದ ಗಟ್ಟಿಯಾದ ದಾರ ಕಿತ್ತುಬಂತೆಂದೂ ಅದನ್ನು ದೂರಕ್ಕೆ ಎಸೆದಾಗ ಅದು ಬಿದ್ದ ಸ್ಥಳವೇ ಧಾರೇಶ್ವರವೆಂದು ಹೆಸರಾಯಿತೆಂದೂ ಪ್ರತೀತಿ. ಇಲ್ಲಿನ ಧಾರೇಶ್ವರ ದೇವಾಲಯ ತರುವಾಯದ ಕಲ್ಯಾಣ ಚಾಳುಕ್ಯರ ಕಾಲದ ಬೃಹತ್ ರಚನೆಯಾಗಿದೆ. ಇದರಲ್ಲಿ ಗರ್ಭಗೃಹ, ಅರ್ಧ ಮಂಟಪ, ಎರಡು ನವರಂಗಗಳು ಮತ್ತು ಒಂದು ಮುಖಮಂಟಪವಿದೆ. ಗರ್ಭಗೃಹ ನಕ್ಷತ್ರಾಕಾರದಲ್ಲಿದ್ದು ವೇಸರ ಶೈಲಿಯ ಶಿಖರವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದ ಎಡಭಾಗದಲ್ಲಿ ಗೋಪಾಲಕೃಷ್ಣನ ವಿಗ್ರಹವಿದ್ದರೆ, ಗರ್ಭಗೃಹದ ಪ್ರವೇಶ ದ್ವಾರದಲ್ಲಿ ದುರ್ಗಾ ಮತ್ತು ಗಣಪತಿ ವಿಗ್ರಹಗಳಿವೆ. ಗರ್ಭಗೃಹದ ಮೇಲೆ ನಾಲ್ಕು ಹಂತಗಳಾಗಿ ನಿರ್ಮಿಸಿರುವ ಶಿಖರದಲ್ಲಿ ಭೈರವ, ಶಿವ ಮತ್ತು ನೃತ್ಯಕಾಳಿಯ ಭವ್ಯ ವಿಗ್ರಹಗಳಿವೆ. ದೇವಾಲಯದ ಬಲಮೂಲೆಯಲ್ಲಿ ಕಾಲಭೈರವನ ಸಣ್ಣ ಗುಡಿಯಿದೆ.

1083ರ ಶಾಸನವೊಂದು ದೇವಾಲಯದ ಬಳಿ ದೊರೆತಿದ್ದು ಹೈವನರಸನ ರಾಣಿ ಪಟ್ಟಮಹಾದೇವಿ ಛದ್ದಬ್ಬರಸಿಯು ದೇವಾಲಯಕ್ಕೆ ನೀಡಿದ ದಾನವನ್ನು ದಾಖಲಿಸಲಾಗಿದೆ. ಇನ್ನೊಂದು ಶಾಸನ ವಿಜಯನಗರದ ಎರಡನೆಯ ದೇವರಾಯನ ಕಾಲಕ್ಕೆ ಸೇರಿದ್ದು ಹಾಳಾಗಿದೆ. ಸಮೀಪದ ಕೆರೆಯ ಬಳಿ ಕೆಲವು ವೀರಗಲ್ಲುಗಳು ಕಂಡುಬರುತ್ತವೆ. ಪ್ರವಾಸಿ ಬುಕ್‌ನಾನ್ 1801 ರಲ್ಲಿ ಈ ಸ್ಥಳಕ್ಕೆ ಭೇಟಿ ನೀಡಿದ್ದ. ಎರಡನೆಯ ದೇವರಾಯ ಮತ್ತು ಸಾಳ್ವ ಕೃಷ್ಣದೇವರಾಯ ಈ ದೇವಾಲಯಕ್ಕೆ ದಾನ ನೀಡಿ ಹೊರಡಿಸಿದ ಎರಡು ತಾಮ್ರ ಶಾಸನಗಳ ಬಗ್ಗೆ ಈತ ಪ್ರಸ್ತಾಪಿಸಿದ್ದಾನೆ. ಸಂಕ್ರಾಂತಿಯಲ್ಲಿ ಇಲ್ಲಿ ದೊಡ್ಡ ರಥೋತ್ಸವ ಜರುಗುತ್ತದೆ. ಶಿವರಾತ್ರಿಯಂದು ವಿಶೇಷ ಪೂಜೆ ನಡೆಯುತ್ತದೆ. ದೇವಾಲಯದ ಮುಂದೆ ವಿಶಾಲವಾದ ರಥಬೀದಿ ಇದ್ದು ಇಲ್ಲಿ ಒಂದು ಭಿನ್ನ ಯೋಗಾನರಸಿಂಹ ಮೂರ್ತಿ ಇದೆ. ರಥ ಮರದಿಂದ ರಚಿತವಾಗಿದ್ದು ಸುಂದರ ಕೆತ್ತನೆ ಕೆಲಸದಿಂದ ಕೂಡಿದೆ. ಧಾರೇಶ್ವರದ ಬಳಿಯ ಗುಡ್ಡದಲ್ಲಿ ರಾವಣಖಂಡವೆಂಬ ಸ್ಥಳವಿದ್ದು ಅಲ್ಲಿ ಬೂದಿಗುಡ್ಡೆಗಳಿವೆ. ರಾವಣ ಇಲ್ಲಿ ಯಜ್ಞಗಳನ್ನು ಮಾಡಿದನೆಂದು ಪ್ರತೀತಿ. ಈ ಸ್ಥಳದ ಸಮೀಪದಲ್ಲಿ ಕುಮಟ ರಸ್ತೆಯಲ್ಲಿ ನಾಗಶೃಂಗ ಪರ್ವತವಿದೆ. ಸ್ಥಳೀಯವಾಗಿ ಇದನ್ನು ಸುಬ್ರಹ್ಮಣ್ಯ ಗುಹೆ ಎಂದು ಕರೆಯುತ್ತಾರೆ. ಇಲ್ಲಿನ ಚಿಕ್ಕಕೊಳ ನಾಗತೀರ್ಥ ಎಂದು ಹೆಸರಾಗಿದ್ದು ಇಲ್ಲಿ ಅಸಂಖ್ಯ ನಾಗರಕಲ್ಲುಗಳಿವೆ. ಅಗಸ್ತ್ಯ ಗುಹೆ, ಗೋಪಾಲಕೃಷ್ಣ ಮತ್ತು ಯೋಗಾನರಸಿಂಹ ಗುಡಿಗಳಿವೆ. ಯಕ್ಷಗಾನ ಕೋಗಿಲೆ ಎಂದು ಪ್ರಸಿದ್ಧರಾದ ಸುಬ್ರಹ್ಮಣ್ಯ ಧಾರೇಶ್ವರ ಈ ಊರಿನವರು. (ಎಸ್.ಎಚ್.ಇ.)

**ಧುತ್ತರಗಿ, ಪಿ.ಬಿ.:** 1929– . ವೃತ್ತಿ ರಂಗಭೂಮಿಯ ನಟ, ನಾಟಕಕಾರ. ಪುಂಡಲೀಕಗೌಡ ಬಸವನಗೌಡ ಧುತ್ತರಗಿ ಇವರ ಪೂರ್ಣ ಹೆಸರು. ಇಂದಿನ ಬಾಗಲಕೋಟೆ ಜಿಲ್ಲೆಯ ಸೂಳೇಭಾವಿಯಲ್ಲಿ 1929 ಜೂನ್ 15 ರಂದು ಜನಿಸಿದರು. ಇವರ ತಂದೆ ಬಸವನಗೌಡ, ತಾಯಿ ಸಂಕಮ್ಮ. ಇವರ ಪೂರ್ವಜರು ಗುಲ್ಬರ್ಗ ಜಿಲ್ಲೆಯ ಧುತ್ತರಗಿಯಿಂದ ವಲಸೆ ಬಂದುದರಿಂದ ಅದೇ ಹೆಸರು ಮನೆತನಕ್ಕೆ ಉಳಿಯಿತು. ನೇಕಾರಿಕೆ ಮತ್ತು ಬಟ್ಟೆ ವ್ಯಾಪಾರ ಇವರ ಮನೆತನದ ಮೂಲವೃತ್ತಿ.

ಬಡತನದ ದೆಸೆಯಿಂದಾಗಿ ಬಸವನಗೌಡರಿಗೆ ಮಗನನ್ನು ಓದಿಸುವುದು ಸಾಧ್ಯವಾಗಲಿಲ್ಲ. ನಟನೆಯ ಬಗ್ಗೆ ಒಲವಿದ್ದ ಬಸವನಗೌಡರು ಹಂದಿಗನೂರು ಸಿದ್ದರಾಮಪ್ಪನವರ ಕಂಪನಿಗೆ ಸೇರಿ ನಟರಾದರು. ಇದರಿಂದ ಮಗ ಖ್ಯಾತ ನಾಟಕಕಾರನಾಗಲು ಸಾಧ್ಯವಾಯಿತು. ಹಂದಿಗನೂರು ಸಿದ್ದರಾಮಪ್ಪನವರ ನಾಟಕ ಮಂಡಳಿಯಲ್ಲಿ ತಮ್ಮ ಅಂತರಂಗದ ಪ್ರತಿಭೆಯನ್ನು ಗುರುತಿಸಿಕೊಳ್ಳುವ ಸದವಕಾಶ ಧುತ್ತರಗಿಯವರಿಗೆ ದೊರೆಯಿತು. ಹೀಗಾಗಿಯೇ ಎಲ್ಲರ ಅಚ್ಚುಮೆಚ್ಚಿನವರಾದರು. ಕಂಪನಿ ಸಹವಾಸ ಬಹುದಿನ ಅಲ್ಲವೆಂಬ ವ್ಯವಹಾರಜ್ಞಾನ ಬಾಲಕ ಪುಂಡಲೀಕನಿಗೆ ಗೊತ್ತಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಹೀಗಾಗಿ ಉದರ ಪೋಷಣೆಗಾಗಿ ನೇಕಾರಿಕೆಯನ್ನು ಮುಂದುವರಿಸಿ ನಾಟಕದ ಗೀಳಿಗೆ ಓದುವ ಗೀಳನ್ನು ಬೆಳೆಸಿಕೊಂಡು ಬಡತನದಲ್ಲೂ ಅವರು ತೃಪ್ತಿಯನ್ನು ಕಂಡುಕೊಂಡರು. ಓದುವ ಗೀಳನ್ನು ಹಿಂಗಿಸುವ ಸಲುವಾಗಿ ಮಿತ್ರರ ಜೊತೆ ಸೇರಿ ರವೀಂದ್ರ ಗ್ರಂಥಾಲಯವನ್ನು ಹುಟ್ಟುಹಾಕಿದರು.

ನಾಟಕದ ಮೂಲಕ ಕಲಾಮೌಲ್ಯ ಮತ್ತು ಜೀವನ ಮೌಲ್ಯಗಳನ್ನು ಬೆಳೆಯಿಸುವ ಕಾಯಕಕ್ಕೆ ಪಾವಿತ್ರ್ಯವನ್ನು ತಂದುಕೊಡುವಲ್ಲಿ ಇವರು ನಿಷ್ಠೆಯಿಂದ ಸೇವೆಸಲ್ಲಿಸಿದ್ದಾರೆ. ಚಿತ್ತರಗಿಯ ಶ್ರೀ ಕುಮಾರವಿಜಯ ನಾಟ್ಯಸಂಘಕ್ಕೆ ನ್ಯಾಯಾಧೀಶ ಎಂಬ ನಾಟಕ ರಚಿಸಿಕೊಟ್ಟರು. ಈ ನಾಟಕ ಪ್ರದರ್ಶಿಸಿದ ಕಂಪನಿಗೂ ನಾಟಕಕಾರರಿಗೂ ಒಳ್ಳೆಯ ಹೆಸರು ಬಂತು. ಸಂಸಾರದ ನಿರ್ವಹಣೆ ಬಹುದೊಡ್ಡ ಸಮಸ್ಯೆಯಾಗಿ ತಮ್ಮ ನಾಟಕದ ಹಸ್ತಪ್ರತಿಗಳನ್ನು ಇಲಕಲ್ ಮತ್ತು ಗೋಕಾಕದ ಕಂಪನಿಗೆ ಮಾರಿದರು. ಹಣ ತರುವಷ್ಟರಲ್ಲಿಯೇ ಇವರ ಪತ್ನಿ ನಿಧನರಾದದ್ದು ಇವರ ಬದುಕಿನ ದೊಡ್ಡ ದುರಂತ.

ಇವರು ರಚಿಸಿದ ಮಲಮಗಳು ನಾಟಕ ಗುಬ್ಬಿಕಂಪನಿಯೂ ಸೇರಿದಂತೆ ಕರ್ನಾಟಕದ ಎಲ್ಲ ಕಂಪನಿಗಳಲ್ಲೂ ಜಯಭೇರಿ ಬಾರಿಸಿ ಲಕ್ಷಕ್ಕೂ ಮೀರಿದ ಪ್ರಯೋಗ ಕಂಡು ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ದಾಖಲೆ ಸ್ಥಾಪಿಸಿತು. ಇದರೊಂದಿಗೆ ಇವರಿಗೆ ಹೆಸರು ತಂದಿದ್ದು ಸಂಪತ್ತಿಗೆ ಸವಾಲ್ ಎಂಬ ನಾಟಕ. ನಾಡಿನಾದ್ಯಂತ ಅಪಾರ ಜನಮನ್ನಣೆ ಪಡೆದು ಚಲನಚಿತ್ರವಾಗಿ ನಟ ರಾಜಕುಮಾರರನ್ನು ಮೇರು ನಟನನ್ನಾಗಿಸಿತು. ಈ ಚಲನಚಿತ್ರ ತೆಲಗು, ತಮಿಳು ಹಾಗೂ ಮಲೆಯಾಳಂ ಭಾಷೆಗಳಲ್ಲಿ ಮಿಂಚಿದ್ದು ಒಂದು ಇತಿಹಾಸವೆನಿಸಿದೆ.

ಮನೆ ಎರಡು ಮನ ಒಂದು ಎಂಬ ನಾಟಕ ಬರೆದು ಬನಶಂಕರಿಯಲ್ಲಿ ತಾಲೀಮು ನಡೆಸುತ್ತಿದ್ದಾಗ (1968) ಖ್ಯಾತನಟಿ ಸರೋಜಮ್ಮ ಅವರೊಂದಿಗೆ ಪ್ರಣಯಾಂಕುರವಾಗಿ ಅವರನ್ನು ವಿವಾಹವಾದರು. ಅನಂತರ ತ್ರಿಪುರಸುಂದರಿ ನಾಟ್ಯ ಸಂಘವನ್ನು ಕಟ್ಟಿಕೊಂಡು ತಾವೇ ಬರೆದ ನಾಟಕಗಳನ್ನು ರಂಗದ ಮೇಲೆ ತರುವ ಹೊಸ ಅಭಿಯಾನ ಆರಂಭಿಸಿದರು. ಇದರಿಂದಾಗಿ

ಆರ್ಥಿಕ ಭದ್ರತೆ ದೊರೆಯಿತು. ಮತ್ತೆ ಅದೇ ವರ್ಷ ಕಂಪನಿಯ ಹೆಸರನ್ನು ಶ್ರೀ ವಿಜಯ ಕಲಾ ನಾಟ್ಯ ಸಂಘ, ಇಲಕಲ್ಲ ಎಂದು ಬದಲಾಯಿಸಿ ಹೆಸರಾಂತ ಗೋಕಾಕದ ಕಂಪನಿಗೂ ಸವಾಲೊಡ್ಡಿದರು.

ಜೀವನಾನುಭವವನ್ನು ನಾಟಕವನ್ನಾಗಿಸುವ ಚತುರತೆ ಇವರಿಗೆ ಕರಗತವಾಗಿತ್ತು. ಇವರು 31 ಸಾಮಾಜಿಕ, 9 ಐತಿಹಾಸಿಕ, 5 ಪೌರಾಣಿಕ ಹಾಗೂ 7 ಭಕ್ತಿ ಪ್ರಧಾನ ನಾಟಕಗಳನ್ನು ರಚಿಸಿ ರಂಗಸಾಹಿತ್ಯಕ್ಕೆ ಹೊಸ ಮೆರುಗು ನೀಡಿದರು. ಇದರೊಂದಿಗೆ ರಂಗಭೂಮಿಯಲ್ಲಿ ಯಶಸ್ವಿಯಾದ ಸಂಪತ್ತಿಗೆ ಸವಾಲ್, ಸೊಸೆ ತಂದ ಸೌಭಾಗ್ಯ (ಮೂಲ: ಚಿಕ್ಕ ಸೊಸೆ) ಎಂಬ ನಾಟಕಗಳು ಬೆಳ್ಳಿ ಪರದೆಯ ಮೇಲೆ ಮೂಡಿಬಂದದ್ದೂ ಇನ್ನೊಂದು ವಿಶೇಷ.

ನಾಡಿನ ಹೆಸರಾಂತ 35 ಕಂಪನಿಗಳು ಇವರ ನಾಟಕಗಳನ್ನು ಆಡಿ ಪ್ರೇಕ್ಷಕರ ಮನ ತಣಿಸಿವೆ. ಇವರ ನಾಟಕದ ಸವಿಯನ್ನುಂಡ ಅಭಿಮಾನಿಗಳು ಇವರಿಗೆ ನಾಟಕಸಾಹಿತ್ಯ ರತ್ನ, ನಾಟ್ಯಕವಿಪ್ರಕಾಶ, ನಾಟ್ಯಕವಿಪುಂಗವ, ಕವಿಶ್ರೇಷ್ಠ ರವಿಕೀರ್ತಿ ಇತ್ಯಾದಿ ಬಿರುದುಗಳನ್ನಿತ್ತು ಸನ್ಮಾನಿಸಿದ್ದಾರೆ. ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ವೃತ್ತಿ ರಂಗಭೂಮಿಯಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವ ಪ್ರತಿಷ್ಠಿತ ಡಾ. ಗುಬ್ಬಿವೀರಣ್ಣ ಪ್ರಶಸ್ತಿಯನ್ನೂ ಇವರಿಗೆ ನೀಡಲಾಗಿದೆ (1999). **(ಕೆ.ಪಿ.ಜಿ.)**

**ಧೋಂಡೊ ನರಸಿಂಹ ಮುಳಬಾಗಿಲ:** 1848–96. ಹೊಸಗನ್ನಡದ ಅರುಣೋದಯ ಕಾಲದ ಲೇಖಕರು. ನೂರಾರು ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆಯನ್ನು ಕೊಟ್ಟವರು. ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಣ ಪಡೆದ ಇವರು ಮೂರು ದಶಕಗಳ ಕಾಲ ಅಧ್ಯಾಪನ ವೃತ್ತಿಯಲ್ಲಿದ್ದರು. ಇವರ ಕನ್ನಡ ಭಾಷಾಪರಿಣತಿಯನ್ನು ಕಂಡು ಆಗಿನ ಮುಂಬಯಿ ಸರ್ಕಾರದ ಶಿಕ್ಷಣ ಖಾತೆ 1882ರಲ್ಲಿ ಇವರನ್ನು ಟ್ರೇನಿಂಗ್ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ನೇಮಕ ಮಾಡಿತು. ಆಗ ಉತ್ತರ ಕರ್ನಾಟಕದ ಸಾಂಸ್ಕೃತಿಕ ವಾತಾವರಣದಲ್ಲಿ ಮರಾಠಿಯ ಗಾಳಿ ಭರದಿಂದ ಬೀಸುತ್ತಿತ್ತು. ಇವರು ನೂರಾರು ಶಿಕ್ಷಕ ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆಯನ್ನಿತ್ತು ಗ್ರಾಮಾಂತರದಲ್ಲಿಯೂ ಕನ್ನಡಾಭಿಮಾನ ನೆಲೆಗೊಳ್ಳುವುದಕ್ಕೆ ಕಾರಣರಾದರು. ತಮ್ಮ ವೈದುಷ್ಯ ಹಾಗೂ ಸಾತ್ವಿಕ ಸ್ವಭಾವದಿಂದಾಗಿ ಇವರು ವಿದ್ಯಾರ್ಥಿಗಳಿಗೆ ಅಚ್ಚು ಮೆಚ್ಚಿನ ಗುರುಗಳಾಗಿದ್ದರು.

ಇವರ ಒಲವು ಪದ್ಯರಚನೆಯ ಕಡೆಗೆ ಹೆಚ್ಚಾಗಿತ್ತು. ತೇಜೋನೃಸಿಂಹ ಎಂಬುದು ಇವರ ಕಾವ್ಯನಾಮ. ಹಿತೋಪದೇಶವನ್ನು ಕಾವ್ಯರೂಪದಲ್ಲಿ ರಚಿಸಿದ್ದಾರೆ. ಬಹುಶಃ ಇದು ಇವರ ಮೊದಲ ಕೃತಿ. ಸಾಮಾನ್ಯ ಜನರ ಮನರಂಜನಾರ್ಥವಾಗಿ ಕನ್ನಡದಲ್ಲಿ ಗ್ರಂಥಗಳಿಲ್ಲ ಎಂಬುದನ್ನು ಮನಗಂಡು ಸಂಸ್ಕೃತ ನಾಟಕಗಳನ್ನು ಅನುವಾದಿಸ ಬಯಸಿದರು. ಭವಭೂತಿಯ ಉತ್ತರರಾಮ ಚರಿತ್ರೆಯನ್ನು ಅನುವಾದಿಸಿದರು. ಹದಿನಾಲ್ಕು ವರ್ಷಗಳ ಕಾಲ ಹಸ್ತಪ್ರತಿಯಾಗಿಯೇ ಉಳಿಯಿತು. ಇದಕ್ಕೆ ಸರ್ಕಾರದಿಂದ ರೂ. 200 ಬಹುಮಾನ ದೊರೆತದ್ದರಿಂದ ಅನಂತರ ಇದು ಪ್ರಕಟವಾಯಿತು. ಆಗ ಸ್ಥಾಪನೆ ಗೊಂಡಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘ ಈ ಕೃತಿಯನ್ನೂ ಬೇರೆ ಕೆಲವನ್ನೂ ಪ್ರಕಟಿಸಿ ಇವರ ಗ್ರಂಥರಚನೆಗೆ ಪ್ರೋತ್ಸಾಹವನ್ನಿತ್ತಿತ್ತು. ಅನಂತರದಲ್ಲಿ ಇವರು ವೇಣೀಸಂಹಾರ (1883), ಮೃಚ್ಛಕಟಿಕ ಹಾಗೂ ಮಾಳವಿಕಾಗ್ನಿಮಿತ್ರ ಕೃತಿಗಳನ್ನು ಅನುವಾದಿಸಿದ್ದರು.

ವ್ಯಾಕರಣ, ಛಂದಸ್ಸುಗಳ ಮೇಲೆ ಅಚ್ಚುಕಟ್ಟಾದ ಹಾಗೂ ವ್ಯವಸ್ಥಿತವಾದ ನಿರೂಪಣೆಯುಳ್ಳ ಗ್ರಂಥಗಳನ್ನೂ ಇವರು ಬರೆದಿದ್ದಾರೆ. ಇವರ ಕನ್ನಡ ಕೈಪಿಡಿ (1890) ಕನ್ನಡ ವ್ಯಾಕರಣವನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತದೆ. ಹಳೆಯ ವ್ಯಾಕರಣ ಪ್ರಕ್ರಿಯೆಗಳನ್ನು ಹೊಸಕಾಲದ ಭಾಷೆಗೆ ಸಮನ್ವಯಗೊಳಿಸಿದುದು ಈ ಕೃತಿಯ ವೈಶಿಷ್ಟ್ಯ. ಇದರಲ್ಲಿ ಅನೇಕ ಕಡೆ ಇವರ ಸ್ವತಂತ್ರ ವಿಚಾರಸರಣಿ ಎದ್ದು ಕಾಣುತ್ತದೆ. ವ್ಯಾಕರಣ ಕ್ಷೇತ್ರದಲ್ಲಿ ಇದೊಂದು ಹಿರಿಯ ಕೃತಿ. ವಿದ್ಯಾರ್ಥಿಗಳಿಗಾಗಿ ಸುಲಭ ಮತ್ತು ಸಂಕ್ಷಿಪ್ತರೂಪದಲ್ಲಿ ಬರೆಯಲಾದ ನುಡಿಗಟ್ಟು (1892) ಇವರ ಇನ್ನೊಂದು ಕೃತಿ. ಮೈಸೂರು ಕಡೆಯಲ್ಲಿ ಬಿ. ಮಲ್ಲಪ್ಪನವರ ಶಬ್ದಾದರ್ಶಕ್ಕೆ ಇದ್ದ ಮಹತ್ವ ಉತ್ತರ ಕರ್ನಾಟಕದಲ್ಲಿ ಇದಕ್ಕೆ ಇತ್ತು. ಇವರು ಇನ್ನೂ ನೌಕರಿಯಲ್ಲಿರುವಾಗಲೇ ತಮ್ಮ 48ನೆಯ ವಯಸ್ಸಿನಲ್ಲಿ ನಿಧನರಾದರು. *

**ಧ್ರುವ:** ರಾಷ್ಟ್ರಕೂಟ ವಂಶದ ಶೂರ ದೊರೆ (ಸು.780–93). 1ನೆಯ ಕೃಷ್ಣನ ಕಿರಿಯ ಮಗ. ಇವನಿಗೆ ನಿರುಪಮ, ಶ್ರೀ ವಲ್ಲಭ ಮತ್ತು ಕಲಿವಲ್ಲಭ ಎಂಬ ಬಿರುದುಗಳಿದ್ದುವು. ಇವನ ಅಣ್ಣನಾದ 2ನೆಯ ಗೋವಿಂದ ಅಸಮರ್ಥನೂ ವಿಷಯಲೋಲುಪನೂ ಆಗಿದ್ದರಿಂದ ನಾಸಿಕ ಪ್ರಾಂತ್ಯದಲ್ಲಿ ಅಧಿಕಾರ ವಹಿಸಿದ್ದ ಈತ ಮೊದಲು ಆತನನ್ನು ಧಿಕ್ಕರಿಸಿ, ಅನಂತರ ದಂಗೆಯೆದ್ದು ಅವನಿಂದ ರಾಜ್ಯವನ್ನು ಕಸಿದು ತನ್ನ ಪ್ರಭುತ್ವವನ್ನು 780ರಲ್ಲಿ ಆರಂಭಿಸಿದ. ದೊರೆಯಾದ ಅನಂತರ ಹಿಂದಿನ ಅಂತರ್ಯುದ್ಧಕಾಲದಲ್ಲಿ ತನ್ನ ಸೋದರ ಇಮ್ಮಡಿ ಗೋವಿಂದನ ಪಕ್ಷ ವಹಿಸಿದ್ದ ರಾಜರಿಗೆ ಬುದ್ಧಿ ಕಲಿಸಬೇಕೆಂಬ ಉದ್ದೇಶದಿಂದ ಮೊದಲು ಗಂಗ ಶ್ರೀಪುರುಷನನ್ನು ಸೋಲಿಸಿ ಆತನ ಮಗ ಯುವರಾಜನಾಗಿದ್ದ ಶಿವಮಾರನನ್ನು ಸೆರೆಯಲ್ಲಿಟ್ಟ. ಗಂಗವಾಡಿಯನ್ನು ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಅಲ್ಲಿ ತನ್ನ ಮಗ ರಣಾವಲೋಕ ಸ್ತಂಭನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಇವನ ರಾಜ್ಯಕ್ಕೆ ದಕ್ಷಿಣದಲ್ಲಿ ಕಾವೇರಿ ನದಿ ಎಲ್ಲೆಯಾಯಿತು. ಅಲ್ಲಿಂದ ಮುನ್ನಡೆದು ಪಲ್ಲವ ದಂತಿವರ್ಮನನ್ನು ಸೋಲಿಸಿ ಕಪ್ಪವನ್ನು ಪಡೆದ (ಈ ಯುದ್ಧಗಳಲ್ಲಿ ವೆಂಗಿಯ 4ನೆಯ ವಿಷ್ಣುವರ್ಧನ ಈತನಿಗೆ ಸಹಾಯಕನಾಗಿದ್ದಂತೆ ತೋರುತ್ತದೆ).

ಗಂಗರು ಮತ್ತು ಪಲ್ಲವರನ್ನು ಸೋಲಿಸಿ, ವೆಂಗಿಯ ಚಾಳುಕ್ಯರನ್ನು ಸಾಮಂತರ ಮಟ್ಟದಲ್ಲಿಟ್ಟುಕೊಂಡಿದ್ದರಿಂದಾಗಿ ಧ್ರುವ ದಕ್ಷಿಣಾಪಥದ ಅದ್ವಿತೀಯ ನಾಯಕನಾದ. ಈ ಕಾಲದಲ್ಲಿ ಉತ್ತರ ಭಾರತದಲ್ಲಿ ಗೂರ್ಜರ ಪ್ರತೀಹಾರ ವತ್ಸರಾಜ ಕನೂಜಿನ ಇಂದ್ರಾಯುಧನನ್ನು ಸೋಲಿಸಿದ್ದ (ಸು.784). ಇದರಿಂದ ವತ್ಸರಾಜನ ವಿರೋಧಿಯಾದ ಬಂಗಾಲದ ಧರ್ಮಪಾಲ ಅಸೂಯೆಗೊಂಡು ವತ್ಸರಾಜನ ಮೇಲೆ ದಂಡೆತ್ತಿ ಬಂದ. ಈ ಯುದ್ಧದಲ್ಲಿ ಧರ್ಮಪಾಲ ಸೋತರೂ ತನ್ನ ಛಲವನ್ನು ಬಿಡದೆ ಪುನಃ ದಾಳಿಮಾಡುವ ಸನ್ನಾಹದಲ್ಲಿದ್ದ. ಹಿಂದೆ ವತ್ಸರಾಜ ಅಂತರ್ಯುದ್ಧದಲ್ಲಿ ಅಣ್ಣ ಗೋವಿಂದನಿಗೆ ಸಹಾಯ ಮಾಡಿದ್ದರಿಂದ ಅವನ ಮೇಲೆ ಛಲ ಸಾಧಿಸಲು ಇದೇ ಸುಸಂದರ್ಭವೆಂದರಿತ ಧ್ರುವ ತನ್ನ ಮಗ ಗೋವಿಂದನನ್ನು ಜೊತೆಗಿಟ್ಟುಕೊಂಡು ಉತ್ತರ ಭಾರತಕ್ಕೆ ನುಗ್ಗಿದ. ವತ್ಸರಾಜ ಗಂಗಾ ಯಮುನಾ ಬಯಲಿನಲ್ಲಿ ಕಾರ್ಯನಿರತನಾಗಿದ್ದುದರಿಂದ ಮಾಳವದೇಶ ಸುಲಭವಾಗಿ ಧ್ರುವನ ಕೈವಶವಾಯಿತು. ಅನಂತರ ಮುಂದೆ ನಡೆದು ಪ್ರಾಯಶಃ ಝೂನ್ಸಿ ಬಳಿ ನಡೆದ ಕದನದಲ್ಲಿ ವತ್ಸರಾಜನ ಸೈನ್ಯವನ್ನು ಧೂಳೀಪಟ ಮಾಡಿದ. ವತ್ಸರಾಜ ರಾಜಸ್ತಾನದ ಮರಳುಗಾಡಿನಲ್ಲಿ ತಲೆಮರೆಸಿಕೊಂಡ. ಅತ್ತ ಧರ್ಮಪಾಲ ಗಂಗಾ ಬಯಲಿನೆಡೆಗೆ ಮುಂಬರಿಯುತ್ತಿದ್ದ. ಧ್ರುವ ಆತನನ್ನೂ ಸಂಧಿಸಿ ಅವನ ಬಲವನ್ನು ಪುಡಿಮಾಡಿ ಓಡಿಸಿ ಅಪಾರ ಐಶ್ವರ್ಯವನ್ನು ದೋಚಿದ. ಧ್ರುವ ತನ್ನ ಸೈನ್ಯ ಕಾರ್ಯಚರಣೆಗಳನ್ನು ನಿಲ್ಲಿಸಿ ಹಿಂದಿರುಗಿದ.

ಇವುಗಳಿಂದ ಹೆಚ್ಚಿನ ಪ್ರದೇಶಗಳೇನೂ ದಕ್ಷಿಣಾಪಥದ ರಾಷ್ಟ್ರಕೂಟ ರಾಜ್ಯಕ್ಕೆ ಸೇರಲಿಲ್ಲವಾದರೂ ಅದ್ವಿತೀಯ ಸಾಮ್ರಾಟನಾಗಿದ್ದ ಧ್ರುವ ಉತ್ತರ ಭಾರತದ ಪ್ರಬಲ ಶಕ್ತಿಗಳಾಗಿದ್ದ ಗೂರ್ಜರ ಪ್ರತೀಹಾರ ಮತ್ತು ದೊರೆಗಳನ್ನು ಬಗ್ಗಿಸಿ ಇಡೀ ಭರತ ಖಂಡದ ಅಜೇಯಪ್ರಭುವಾಗಿ ಸ್ಥಿರಗೊಂಡ.

ವೆಂಗಿಯ ಚಾಳುಕ್ಯ ಮನೆತನದ ಶೀಲಭಟ್ಟಾರಿಕಾ ಧ್ರುವನ ಪಟ್ಟದರಿಸಿ, ಇವನಿಗೆ ಕರ್ಕ, ಸ್ತಂಭ, ಗೋವಿಂದ ಮತ್ತು ಇಂದ್ರ ಎಂಬ ಮಕ್ಕಳಿದ್ದರು. ರಾಷ್ಟ್ರಕೂಟ ರಾಜ್ಯದ ಉತ್ತರಾಧಿಕಾರಿಯನ್ನು ನೇಮಿಸುವುದು ಧ್ರುವನ ಜೀವಿತದ ಕೊನೆಗಾಲದ ಮುಖ್ಯ ಕೆಲಸವಾಯಿತು. ಹಿರಿಯ ಮಗ ಕರ್ಕ ತಂದೆಗಿಂತಲೂ ಮುಂಚೆಯೇ ಸತ್ತಿದ್ದನಾದ್ದರಿಂದ ರಾಜ್ಯ ಸ್ತಂಭನಿಗೆ ಸೇರಬೇಕಾಗಿತ್ತು. ಆದರೆ ಉತ್ತರ ಭಾರತದ ದಿಗ್ವಿಜಯಗಳಲ್ಲಿ ಪಾಲ್ಗೊಂಡು ಅಸೀಮಶೌರ್ಯ ಮತ್ತು ಮುತ್ಸದ್ದಿತನವನ್ನು ಪ್ರದರ್ಶಿಸಿದ್ದ ಮೂರನೆಯ ಮಗ 3ನೆಯ ಗೋವಿಂದ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಸಮರ್ಥ ಉತ್ತರಾಧಿಕಾರಿಯಾಗಬಲ್ಲನೆಂದು ಧ್ರುವ ತೀರ್ಮಾನಿಸಿದ. ಸ್ಥಂಭನಿಗೆ ಗಂಗವಾಡಿಯ ಅಧಿಕಾರವನ್ನು ಇತ್ತು ಗೋವಿಂದನಿಗೆ ಯುವರಾಜ ಪಟ್ಟಕಟ್ಟಿದ (ಸು.791– 92). ಗೋವಿಂದನಿಗೆ ಸಹಕಾರಿಯಾಗಿದ್ದ 4ನೆಯ ಮಗ ಇಂದ್ರನಿಗೆ ಮಾಳವ ಮತ್ತು ಗುಜರಾತ್ ಪ್ರಾಂತ್ಯಗಳ ಅಧಿಕಾರವನ್ನು ವಹಿಸಿದ. ಸು. 793ರಲ್ಲಿ ಧ್ರುವ ಮೃತನಾದ. **(ಎಚ್.ಆರ್.ಆರ್.)**

# ನ

**ನಂಗಪುರಂ ವೆಂಕಟೇಶ ಅಯ್ಯಂಗಾರ್:** ಇಪ್ಪತ್ತನೆಯ ಶತಮಾನದ ಆರಂಭ ಕಾಲದ ಹಿರಿಯ ಭಾಷಾಸೇವಕರು. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿದ ಮೊದಲಿಗರಲ್ಲೊಬ್ಬರು. ಆಗಿನ ಮೈಸೂರು ಸರ್ಕಾರದ ಪವನಶಾಸ್ತ್ರ ವೀಕ್ಷಣಾಲಯದ ಮುಖ್ಯಸ್ಥರಾಗಿದ್ದರು. ಸಮಾಜಸೇವೆ ಮತ್ತು ಸಾರ್ವಜನಿಕ ಕಾರ್ಯಗಳಲ್ಲೂ ಆಸಕ್ತಿಯುಳ್ಳವರಾಗಿದ್ದ ಇವರು ಬೆಂಗಳೂರಿನ ದೇಶೀಯ ವಿದ್ಯಾಶಾಲೆ, ಅಮೆಚೂರ್ ನಾಟಕ ಸಂಘ, ಶ್ರೀ ರಾಮಕೃಷ್ಣಾಶ್ರಮ ಮುಂತಾದ ಹತ್ತಾರು ಸಂಘಸಂಸ್ಥೆಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಭಿವೃದ್ಧಿಯಲ್ಲಿ ತುಂಬ ಆಸಕ್ತಿ ವಹಿಸಿ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ (1919– 21) ಮತ್ತು ಕೋಶಾಧಿಕಾರಿಯಾಗಿ (1921– 26) ಸೇವೆಸಲ್ಲಿಸಿದರು.

ಹೊಸಗನ್ನಡ ಭಾಷಾಭಿವೃದ್ಧಿಯ ಕಾರ್ಯಗಳು ಆರಂಭವಾದಾಗ ಇವರು ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಬೆಳೆವಣಿಗೆಗಾಗಿ ಬೆಳ್ಳಾವೆ ವೆಂಕಟನಾರಣಪ್ಪನವರೊಂದಿಗೆ ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿ ಎಂಬ ಸಂಸ್ಥೆಯನ್ನು ಕಟ್ಟಿದರಲ್ಲದೆ ಅವರು ಆರಂಭಿಸಿದ ವಿಜ್ಞಾನ ಎಂಬ ಮಾಸಪತ್ರಿಕೆಗೆ ಕೆಲಕಾಲ ಸಂಪಾದಕರಾಗಿಯೂ ಕೆಲಸ ಮಾಡಿದರು. ವಿಜ್ಞಾನಕ್ಕೆ ಸಂಬಂಧಿಸಿದ ಹಲವು ಲೇಖನಗಳನ್ನು ಇವರು ಬರೆದಿದ್ದಾರೆ. ಇವರು ಬರೆದ ಜ್ಯೋತಿರ್ವಿನೋದಿನಿ ಎಂಬ ಪುಸ್ತಕ 1931ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಯಿತು. ಇವರು ಬಂಗಾಲಿ ಭಾಷೆಯಿಂದ ಕನ್ನಡಕ್ಕೆ ಕೆಲವು ಗ್ರಂಥಗಳನ್ನು ಅನುವಾದಿಸಿದ್ದಾರೆ. ಅವುಗಳಲ್ಲಿ ಕೆಲವು: ನಟರಾಜಭಕ್ತ, ನಾಳೆ ಹೋಗುವ ನಂದ ಮತ್ತು ಮೀರಾಬಾಯಿ, ರಾಮಕೃಷ್ಣ ಪರಮಹಂಸರ ಉಪದೇಶ ವಾಕ್ಯಾವಳಿ, ರಾಮಕೃಷ್ಣ ಪರಮಹಂಸರ ವಚನಾಮೃತ (ಮೂರು ಭಾಗಗಳಲ್ಲಿ) ಮತ್ತು ಸ್ವಾಮಿ ವಿವೇಕಾನಂದರ ಪತ್ರಗಳು. **(ವಿ.ಎಸ್.)**

**ನಂಜ:** ಸು.1725. ಕಪೋತವಾಕ್ಯ ಎಂಬ ಸಾಂಗತ್ಯ ಗ್ರಂಥದ ಕರ್ತೃ. ಈ ಕೃತಿಗೆ ಕಪೋತಚರಿತೆ ಎಂಬ ಹೆಸರೂ ಉಂಟು. ಕರ್ತೃವಿನ ಹೆಸರು ಕೃತಿಯ ಆದ್ಯಂತ್ಯಗಳಲ್ಲೆಲ್ಲೂ ಉಲ್ಲೇಖವಾಗಿಲ್ಲ. ಆದರೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಗ್ರಹದಲ್ಲಿ ದೊರೆಯುವ ಕೈಬರೆಹದ ಪ್ರತಿಯ ಕೆ.ಬಿ. ರಕ್ಷಾಪತ್ರದಲ್ಲಿ ನಂಜಕವಿ ಎಂದಿದೆ. ಇದರ ಆಧಾರದಿಂದ ಆರ್. ನರಸಿಂಹಾಚಾರ್ಯರು ಕರ್ನಾಟಕ ಕವಿಚರಿತೆಯಲ್ಲಿ ಕಪೋತವಾಕ್ಯದ ಕರ್ತೃ ನಂಜಕವಿ ಎಂದು ಹೆಸರಿಸಿದಂತೆ ಕಾಣುತ್ತದೆ. ಇತ್ತೀಚೆಗೆ ಭೋಜರಾಜ ಪಾಟೀಲರು ಕೃತಿಕಾರನ ಬಗೆಗೆ ವಿವೇಚಿಸಿ ಕೆಂಪುನಂಜಯ್ಯ ಇದರ ಕರ್ತೃವಾಗಿರಬಹುದೆಂಬ ನಿಲವಿಗೆ ಬಂದರೂ ಈ ವಿಷಯ ಇನ್ನೂ ಖಚಿತವಲ್ಲ ಎಂದಿದ್ದಾರೆ.

ಕನ್ನಡದಲ್ಲಿ ಹನ್ನೆರಡನೆಯ ಶತಮಾನದ ಶಿವಶರಣ ಅಂಬಿಗರ ಚೌಡಯ್ಯನ ವಚನವೊಂದರಲ್ಲಿ ಕಪೋತವಾಕ್ಯದ ಕಥೆಗೆ ಸಂಬಂಧಿಸಿದ ವಾಕ್ಯವೊಂದು ಹೀಗಿದೆ: ಪರಪುರುಷಾರ್ಥಿಯಾದರೆ ಬಸವಕುಮಾರನಂತಾಗಬೇಕು, ಪರಪುರುಷಾರ್ಥಿಯಾದರೆ ಕಪೋತಪಕ್ಷಿಯಂ ತಾಗಬೇಕು, ಇಂತೀ ಪರಪುರುಷಾರ್ಥಕ್ಕೆ ಪ್ರಾಣವ ಕೊಟ್ಟವರುಂಟು. ನಿತ್ಯಾತ್ಮಾಂಕಿತ ಭಾಮಿನಿ ಷಟ್ಪದಿಯಲ್ಲಿ ವಿರಚಿತವಾದ ಶಾಂತಿಪರ್ವದ 22 ನೆಯ ಸಂಧಿಯಲ್ಲಿ ಕಪೋತಾಖ್ಯಾನ 73 ಷಟ್ಪದಿಗಳಲ್ಲಿದೆ.

ಕಪೋತವಾಕ್ಯ ಕಾವ್ಯದ ಆದಿಯಲ್ಲಿ ಶಿವ, ಗುರುಸಿದ್ಧವೀರ, ಕೋರಣ್ಯದೈಯ್ಯ (ಕೋರಾನ್ನದೈಯ್ಯ) ಬಸವರಾಜ, ಮಡಿವಾಳ, ಸಪ್ಪಣ್ಣ, ಪ್ರಭುರಾಯ, ಕೊಟ್ಟೂರ ವಿರೂಪಾಕ್ಷ, ಕಲ್ಯಾಣದೈಯ್ಯ, ಎರೆಮಲೆ ಸಿದ್ಧಮುನಿಗಳನ್ನು ಸ್ತುತಿಸಿ, ಅಂತ್ಯದಲ್ಲಿ ಚಿನ್ಮೂಲಗಿರಿವಾಸ, ಕಾಶಿ ವಿಶ್ವೇಶ್ವರ, ಚಂಪಕ ಸಿದ್ಧಲಿಂಗೇಶರಿಗೆ ಎರಗಿದ್ದಾನೆ. ಕಾವ್ಯದಲ್ಲಿ ಕೃತಿರಚನೆಯ ಕಾಲನಿರ್ದೇಶವಿಲ್ಲ. ಭೋಜರಾಜ ಪಾಟೀಲರು ಕಪೋತ ಚಾರಿತ್ರದ ಕರ್ತೃವಾಗಿರಬಹುದಾದ ಕೆಂಪುನಂಜಯ್ಯ ಮುರಿಗೆಯ ಶಾಂತವೀರಸ್ವಾಮಿಗಳ ಸಮಕಾಲೀನ ಹಾಗೂ ಶಿಷ್ಯನಾದುದರಿಂದ ಆತನ ಕಾಲವನ್ನು 1530 ಎಂದು ನಿಶ್ಚಯಿಸಬೇಕಾಗುತ್ತದೆ ಎಂದಿದ್ದಾರೆ. ಭೋಜರಾಜ ಪಾಟೀಲರ ವಾದವೆಲ್ಲ ಮುರಿಗೆಯ ಶಾಂತವೀರನ ಕಾಲದ ಮೇಲೆ ನಿಂತಿದೆ. ಇತ್ತೀಚಿನ ಸಂಶೋಧನೆಗಳಿಂದ ಮುರಿಗೆಯ ಶಾಂತವೀರನ ಕಾಲ ಸು.1700 ಎಂಬುದು ಖಚಿತವಾಗಿದೆ. ಹೀಗಾಗಿ ಅವನ ಶಿಷ್ಯನ ಕಾಲ ಸು.1700 ಆಗಬೇಕಾಗುತ್ತದೆ. ಈ ಅಂಶಗಳನ್ನು ಗಮನಿಸಿದಾಗ ಹುಲ್ಲೂರು ಶ್ರೀನಿವಾಸ ಜೋಯಿಸರು ಹೇಳುವ ಹದಿನೆಂಟನೆಯ ಶತಮಾನದ ಪ್ರಥಮಪಾದವನ್ನೆ ಕಪೋತವಾಕ್ಯದ ರಚನಾಕಾರನ ಕಾಲವನ್ನಾಗಿ ಸ್ವೀಕರಿಸಬಹುದು.

ಕಪೋತವಾಕ್ಯದ ಉಪಲಬ್ಧಪ್ರತಿಗಳಲ್ಲಿ ಸಂಧಿಸಂಖ್ಯೆ ಹಾಗೂ ಪದ್ಯಸಂಖ್ಯೆಗಳಲ್ಲಿ ಏಕರೂಪತೆ ಇಲ್ಲ. ಇದುವರೆಗೆ ಪರಿಶೀಲಿಸಲಾದ ಪ್ರತಿಗಳಲ್ಲಿ ಸಂಧಿಸಂಖ್ಯೆ 105 ಪದ್ಯಗಳಿಂದ 398 ಪದ್ಯಗಳವರೆಗೂ ಹಿಗ್ಗಿದೆ. ಹೀಗಾಗಿ ಕಪೋತವಾಕ್ಯದ ಪ್ರತಿಗಳು ಹಲವಾರು ಪ್ರಕ್ಷಿಪ್ತಗಳಿಗೆ ಆಡುಂಬೊಲವಾಗಿ ಪರಿಣಮಿಸಿದೆ. ಈ ಗ್ರಂಥದ ಮೂಲವಸ್ತು ವಾಲ್ಮೀಕಿರಾಮಾಯಣ ಮತ್ತು ವ್ಯಾಸಮಹಾಭಾರತಗಳಲ್ಲಿ ಕಂಡುಬರುತ್ತದೆ.

ಕಪೋತ ದಂಪತಿಗಳು ತಮ್ಮನ್ನು ಮಕ್ಕಳುಮರಿಗಳಿಂದ ಬೇರ್ಪಡಿಸಿ ಸೆರೆಹಿಡಿದ ಬೇಡನಿಗೆ, ಆತ ಚಳಿಯೆಂದಾಗ ಬೆಂಕಿಯನ್ನೂ ಹಸಿವೆ ಎಂದಾಗ ಆಹಾರವನ್ನೂ ಒದಗಿಸಲೋಸುಗ ಅದೇ ಬೆಂಕಿಗೆ ಬಿದ್ದ ಪಕ್ಷಿಗಳ ಕಥೆ ಇದರ ವಸ್ತು. ಇಲ್ಲಿ ಪತಿಪತ್ನಿಯರ ಅನುರಾಗ, ಕರ್ತವ್ಯಗಳು ಸುಂದರವಾಗಿ ನಿರೂಪಿತವಾಗಿವೆ. ಹೀಗೆ ಪರಹಿತದಿಂದಲಿ ನಡೆದ ಸತ್ಪುರುಷರ ಕರೆದುಯ್ವನು ಕೈಲಾಸಕ್ಕೆ ಎಂಬ ಸಂದೇಶವನ್ನೂ ಕವಿ ಇಲ್ಲಿ ಸಾರಿದ್ದಾನೆ. ಜನಪ್ರಿಯ ವಸ್ತುವಿನ ಕಾರಣವಾಗಿ ಕನ್ನಡದಲ್ಲಿ ಷಟ್ಪದಿ, ಯಕ್ಷಗಾನ ಮೊದಲಾದ ಇತರ ಪ್ರಕಾರಗಳಲ್ಲೂ ಈ ಕಥೆ ರೂಪುದಾಳಿದೆ. *

**ನಂಜಣಾರ್ಯ:** ಸು.1650. ವೀರಶೈವ ಕವಿ. ಏಕೋರಾಮೇಶ್ವರ ಪುರಾಣ ಮತ್ತು ನೀತಿರತ್ನಾಭರಣ ಆಭರಣಗಳ ಕರ್ತೃ. ಸ್ಥಳ ಹರವಿಹಳ್ಳಿ. ಏಕೋರಾಮೇಶ್ವರ ಪುರಾಣದಲ್ಲಿ ತನ್ನ ವಂಶಪರಂಪರೆಯ ಬಗೆಗೆ ವಿಸ್ತಾರವಾಗಿ ತಿಳಿಸಿದ್ದಾನೆ. ಅದರಂತೆ ಈತನ ತಂದೆ ಏಕೋತ್ತರಶತಸ್ಥಲ ವಿಶಾರದ ವೀರಣಾಚಾರ್ಯ. ಕವಿ ತನ್ನನ್ನು ಕುರಿತು ಪರಮಾವಬೋಧ ಪ್ರಸಂಗಿ, ತ್ರಿಲಿಂಗಸಂಯೋಗಿ, ಸರಸಲಕ್ಷಣಕಾವ್ಯರಚಿತನವಭಾವಕಂ, ಹರಕವೀಶ್ವರಣುಗ, ಭೋಗಮಲ್ಲೇಶನ ಲೆಂಕಂ ಇತ್ಯಾದಿಯಾಗಿ ವಿಶೇಷಿಸಿ ಕೊಂಡಿದ್ದಾನೆ. ಏಕೋರಾಮೇಶ್ವರ ಪುರಾಣದ ಕಥೆಯನ್ನು ಸಿದ್ಧರಾಮ ಗುರುವರನು ತನಗೆ ಮೊದಲು ಉಪದೇಶಿಸಿದನೆಂದೂ ಅನಂತರ ಅದನ್ನು ತಾನು ಪುರಾಣವಾಗಿ ಬರೆದಿರುವೆನೆಂದೂ ತಿಳಿಸಿದ್ದಾನೆ. ಕೃತಿಯ ಮೊದಲಲ್ಲಿ ಏಕೋರಾಮ, ಸಿದ್ಧರಾಮೇಶ, ಮುದ್ರಾಪುರಾಧೀಶ, ರಾಮಲಿಂಗ, ಶಿವ, ಭೃಂಗಿ, ಪಾರ್ವತಿ, ವೃಷಭೇಂದ್ರ, ವೀರಭದ್ರ, ವಿಘ್ನರಾಜ, ಷಣ್ಮುಖ, ರುದ್ರ ಮೊದಲಾದವರ ಪ್ರಾರ್ಥನೆಯಿದೆ. ಅನಂತರ ಉದ್ಭಟ, ಮಯೂರ, ಬಿಲ್ಹಣ, ಕಾಳಿದಾಸ, ರಾಘವಾಂಕ ಪಂಡಿತ, ಬಾಣ, ಪುಷ್ಪದಂತ, ಮಲಯರಾಜ, ಹಲಾಯುಧ, ಭೋಜ, ಸೌಂದರಗಣೇಶ್ವರ, ಕೇಶಿರಾಜಗೆ ನಮಸ್ಕರಿಸಿದ್ದಾನೆ.

ಏಕೋರಾಮೇಶ್ವರ ಪುರಾಣ ವಾರ್ಧಕಷಟ್ಪದಿಯಲ್ಲಿದ್ದು 16 ಕಾಂಡಗಳು, 16 ಸಂಧಿಗಳು ಮತ್ತು 1463 ಪದ್ಯಗಳನ್ನು ಹೊಂದಿದೆ. ಇದರ ಕಥೆ ಇಷ್ಟು: ಈಶ್ವರನ ಆಜ್ಞೆಯಂತೆ ಘಂಟಾಕರ್ಣ ಗಣೇಶ್ವರ ಏಕೋರಾಮನೆಂಬ ಹೆಸರಿನಿಂದ ಮುದ್ದಪುರದ ರಾಮರುದ್ರ ಶಿವಾಚಾರ್ಯನಿಗೆ ಸುತನಾಗಿ ಹುಟ್ಟಿ ರಾಮನಾಥನಿಂದ ದೀಕ್ಷಿತನಾದ. ಮುಂದೆ ಆ ಪುರದ ಅರಸ ವೀರಭಾಸ್ಕರರಾಯನ ಸಮಕ್ಷಮದಲ್ಲಿ ವೈಷ್ಣವರೊಡನೆ ವಾದಿಸಿ ಶಿವಾಧಿಕ್ಯ ಮತ್ತು ಶಿವಭಕ್ತರ ಶ್ರೇಷ್ಠತೆಯನ್ನು ಸ್ಥಿರೀಕರಿಸಿದ. ಅನಂತರ ರಾಮಲಿಂಗ ನಿಂದ ಗುರುಪದವನ್ನು ಹೊಂದಿ, ವೈಷ್ಣವರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟ. ಮುಂದೆ ಅಯೋಧ್ಯಾನಗರಿಯ ವ್ಯಾಸದೀಕ್ಷಿತನೊಡನೆ ವಾದಿಸಿ ಕೊನೆಯಲ್ಲಿ ಆತನನ್ನು ಮತಾಂತರಗೊಳಿಸಿದ. ಕಡೆಗೆ ಶಂಕುಕರ್ಣನೆಂಬ ತನ್ನ ಶಿಷ್ಯನಿಗೆ ಗುರುಪಟ್ಟವನ್ನು ಕಟ್ಟಿ ರಾಮನಾಥನ ದೇವಾಲಯವನ್ನು ಹೊಗಲು ಅಲ್ಲಿ ಶಿವ ಪ್ರತ್ಯಕ್ಷನಾಗಿ ದರ್ಶನಕೊಟ್ಟು ಕೈಲಾಸಕ್ಕೆ ಒಯ್ದ. ಪುರಾಣೋಕ್ತ ಮುದ್ರಾಪುರ ಇಂದಿನ ಕಲ್ಬುರ್ಗಿ ಜಿಲ್ಲೆಯ ಮುದನೂರು ಆಗಿದ್ದು ಇಂದೂ ಅಲ್ಲಿನ ರಾಮನಾಥ ದೇವಾಲಯ ಪ್ರಸಿದ್ಧಿ ಹೊಂದಿದೆ. ಈ ಪುರಾಣದ ಕಥಾನಾಯಕನಾದ ಏಕೋರಾಮರಾಧ್ಯ ವೀರಶೈವ ಪಂಚಾಚಾರ್ಯರಲ್ಲಿ ಒಬ್ಬನಾಗಿದ್ದು ಸಂಸ್ಕೃತದಲ್ಲಿ ಸಮನ್ವಯ ಸೂತ್ರವೆಂಬ ಕೃತಿಯನ್ನು ಬರೆದಂತೆ ಶ್ರೀಕರಭಾಷ್ಯದಿಂದ ತಿಳಿದುಬರುತ್ತದೆ. ಅಲ್ಲದೆ ಈತ ಕನ್ನಡದಲ್ಲಿ ವಚನಗಳನ್ನು ರಚಿಸಿರುವುದರ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಪುರಾಣದ ಕೆಲವು ಪದ್ಯಗಳು ಸಂಪಾದನೆ ಸಿದ್ಧವೀರಣಾಚಾರ್ಯ ಸಂಕಲಿತ ಕೃತಿ ಲಿಂಗಸೂತ್ರ ಷಟ್ಪದಿಯಲ್ಲಿ ಉಲ್ಲೇಖಗೊಂಡಿವೆ. ನೀತಿರತ್ನಾಭರಣವನ್ನು ಈತ ಪರಮ ಗುರುಸಿದ್ಧ ಶಾಂತೇಶ್ವರನ ಪ್ರೇರಣೆಯಿಂದ ರಚಿಸಿದ್ದುದಾಗಿ ಹೇಳಿಕೊಂಡಿದ್ದಾನೆ. ಇದರಲ್ಲಿ 169 ಕಂದಗಳಿವೆ. *

**ನಂಜನಗೂಡು:** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಸ್ಥಳ. ತಾಲ್ಲೂಕಿನ ಉತ್ತರದಲ್ಲಿ ಮೈಸೂರು, ಪೂರ್ವದಲ್ಲಿ ತಿರುಮಕೂಡಲ ನರಸೀಪುರ, ಆಗ್ನೇಯದಲ್ಲಿ ಚಾಮರಾಜನಗರ ದಕ್ಷಿಣದಲ್ಲಿ ಗುಂಡ್ಲುಪೇಟೆ, ಪಶ್ಚಿಮ ಮತ್ತು ವಾಯವ್ಯದಲ್ಲಿ ಹೆಗ್ಗಡದೇವನ ಕೋಟೆ– ಈ ತಾಲ್ಲೂಕಿನಿಂದ ಸುತ್ತುವರಿದಿದೆ. ತಾಲ್ಲೂಕಿನ ವಿಸ್ತೀರ್ಣ 982 ಚ.ಕಿಮೀ. ಕಸಬ, ಚಿಕ್ಕಯ್ಯನ ಛತ್ರ, ಬಿಳಿಗೆರೆ, ದೊಡ್ಡ ಕವಲಂದೆ ಮತ್ತು ಹುಲ್ಲಹಳ್ಳಿ ಈ ಐದು ಹೋಬಳಿಗಳು. ಒಟ್ಟು ಗ್ರಾಮಗಳು 188. ಜನಸಂಖ್ಯೆ 3,60,223.

ಅಲ್ಲಲ್ಲಿ ಇರುವ ಸಣ್ಣ ಗುಡ್ಡಗಳನ್ನು ಬಿಟ್ಟರೆ ತಾಲ್ಲೂಕಿನ ಬಹುಭಾಗ ಮಟ್ಟಸ ಪ್ರದೇಶ. ಭೂಮಿ ಸುಮಾರು ಈಶಾನ್ಯದೆಡೆಗೆ ಇಳಿಜಾರಾಗಿದೆ. ಕಪಿಲಾ ಈ ತಾಲ್ಲೂಕಿನಲ್ಲಿ ಹರಿಯುವ ಮುಖ್ಯ ನದಿ. ಇದು ವಾಯವ್ಯ ಭಾಗದಲ್ಲಿ ಸ್ವಲ್ಪ ದೂರ ಹೆಗ್ಗಡದೇವನಕೋಟೆ ಮತ್ತು ತಾಲ್ಲೂಕಿನ ಗಡಿಯಾಗಿ ಹರಿದು ಮುಂದೆ ತಾಲ್ಲೂಕಿನ ಒಳಗೆ ಉತ್ತರ ಭಾಗದಲ್ಲಿ ನಂಜನಗೂಡು ಪಟ್ಟಣದ ವರೆಗೆ ಪೂರ್ವಾಭಿಮುಖವಾಗಿ ಹರಿದು ಅನಂತರ ಈಶಾನ್ಯಾಭಿಮುಖವಾಗಿ ಮುಂದುವರಿದು ತಿರುಮಕೂಡಲು ನರಸೀಪುರ ತಾಲ್ಲೂಕನ್ನು ಪ್ರವೇಶಿಸುತ್ತದೆ. ಗುಂಡ್ಲುಹೊಳೆ ಇನ್ನೊಂದು ಹೆಸರಿಸಬಹುದಾದ ನದಿ. ಇದು ಗುಂಡ್ಲುಪೇಟೆ ತಾಲ್ಲೂಕಿನಿಂದ ಬಂದು ತಾಲ್ಲೂಕಿನ ಮಧ್ಯಭಾಗದಲ್ಲಿ ಸುಮಾರು ಉತ್ತರಾಭಿಮುಖವಾಗಿ ಹರಿದು ನಂಜನಗೂಡಿನಲ್ಲಿ ಕಪಿಲಾ ನದಿಗೆ ಸೇರುತ್ತದೆ. ಕಣಶಿಲೆ ಮತ್ತು ಫೆಲ್ಸ್‌ಪಾರ್ ತಾಲ್ಲೂಕಿನ ಬಹುಭಾಗದಲ್ಲಿ ಕಂಡುಬರುವ ತಳ ಶಿಲೆಗಳು. ಹೆಚ್ಚುಮಟ್ಟಿಗೆ ಎಲ್ಲೆಡೆಯೂ ಕೆಂಪು ನುರುಜು ಭೂಮಿ ಇದೆ. ಕೆಲವೆಡೆ ಕರಿ ಎರೆ ಇದೆ. ನದಿಯ ದಡಗಳಲ್ಲಿ ವಿಶಾಲವಾದ ಮೆಕ್ಕಲು ಹರಹು ಉಂಟು. ಈ ತಾಲ್ಲೂಕಿನ ಕೋಣೂರಿನ ಬಳಿ ಕಲ್ನಾರಿನ ನಿಕ್ಷೇಪವಿದೆ. ಅಂಬಳೆ, ಒಳಗೆರೆ ಎಂಬ ಸ್ಥಳಗಳಲ್ಲಿ ಹಿಂದೆ ಚಿನ್ನವನ್ನು ತೆಗೆಯಲಾಗುತ್ತಿತ್ತು. ಗುಂಡ್ಲುಹೊಳೆಯ ದಡಗಳಲ್ಲಿ ಸುಣ್ಣಕಲ್ಲಿನ ನಿಕ್ಷೇಪವಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಕೆಲವೆಡೆ ಮ್ಯಾಗ್ನಸೈಟ್ ಮತ್ತು ಕ್ರೋಮೈಟ್ ದೊರೆಯುವ ಸಾಧ್ಯತೆ ಇದೆ. ತಗಡೂರು ಮತ್ತು ಚಿನ್ನಂಬಳ್ಳಿ ಗ್ರಾಮಗಳ ಬಳಿಯಲ್ಲಿ 1918 ರವರೆಗೆ ಕಾಗೆ ಬಂಗಾರವನ್ನು ತೆಗೆಯಲಾಗುತ್ತಿತ್ತು. ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಬಳಪದ ಕಲ್ಲು ದೊರೆಯುತ್ತದೆ.

(ಎಸ್.ಎನ್.;ಐ.ಕೆ.)

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ ಸು. 591 ಮಿಮೀ. ಮಳೆ ಕಡಿಮೆಯಾದರೂ ವ್ಯವಸಾಯ ವ್ಯಾಪಕವಾಗಿದೆ. ಕಪಿಲಾ ನದಿಯ ಎಡದಂಡೆಯಲ್ಲಿ ರಾಮಪುರ ನಾಲೆ ಮತ್ತು ಬಲದಂಡೆಯ ಹುಲ್ಲಹಳ್ಳಿ ನಾಲೆ ತಾಲ್ಲೂಕಿನ ಉತ್ತರ ಭಾಗದಲ್ಲಿ ಉದ್ದಕ್ಕೂ ಸಾಗಿ ವಿಶಾಲವಾದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಿವೆ. ಈಚೆಗೆ ನಿರ್ಮಿಸಲಾದ ನುಗು ಅಣೆಕಟ್ಟಿನಿಂದ ಬರುವ ನಾಲೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಭಾಗಕ್ಕೆ ನೀರೊದಗಿಸುತ್ತದೆ. ಕೆರೆಗಳ ಸಂಖ್ಯೆ ಕಡಿಮೆ. ಉತ್ತಮ ನೀರಾವರಿ ಸೌಲಭ್ಯವಿರುವುದರಿಂದ ಬತ್ತ ತಾಲ್ಲೂಕಿನ ಮುಖ್ಯ ಬೆಳೆ. ಸ್ವಲ್ಪ ಮಟ್ಟಿಗೆ ಕಬ್ಬು, ಕಡಲೆಕಾಯಿ ಮತ್ತು ದ್ವಿದಳ ಧಾನ್ಯಗಳ ಬೆಳೆಯೂ ಉಂಟು. ಮಳೆಯನ್ನು ಅವಲಂಬಿಸಿರುವ ಪ್ರದೇಶಗಳಲ್ಲಿ ಜೋಳ ಮತ್ತು ರಾಗಿ ಮುಖ್ಯ ಬೆಳೆಗಳು. ಕಡಲೆಕಾಯಿ, ದ್ವಿದಳಧಾನ್ಯಗಳು, ಹತ್ತಿ ಇವೂ ಬೆಳೆಯುತ್ತವೆ. ತಾಲ್ಲೂಕಿನ ದಕ್ಷಿಣದೆಡೆಯಲ್ಲಿ ತೆಂಗಿನ

ವ್ಯವಸಾಯವೂ ಸಾಕಷ್ಟಿದೆ. ನಂಜನಗೂಡಿನ ಸುತ್ತಿನಲ್ಲಿ ಬೆಳೆಯುವ ರಸಬಾಳೆ ಉತ್ತಮ ದರ್ಜೆಯದೆಂದು ಪ್ರಸಿದ್ಧವಾಗಿದೆ.

ವ್ಯವಸಾಯ ಪ್ರಧಾನವಾದ ಈ ತಾಲ್ಲೂಕಿನಲ್ಲಿ ಕೈಗಾರಿಕೆಗಳು ಕಡಿಮೆ. ಆದರೆ ನೇಯ್ಗೆ ಮತ್ತು ರೇಷ್ಮೆ ಉದ್ಯಮಗಳು ಸಣ್ಣ ಪ್ರಮಾಣದಲ್ಲಿ ಪ್ರಚಲಿತವಾಗಿವೆ. ಮೈಸೂರು ನಗರದಲ್ಲಿ ಕೈಗಾರಿಕೆಗಳು ವಿಸ್ತರಿಸಿದಂತೆ ಈ ತಾಲ್ಲೂಕಿನ ಭಾಗದಲ್ಲಿ ಕೆಲವು ಕೈಗಾರಿಕೆಗಳು ತಲೆ ಎತ್ತಿವೆ. ನಂಜನಗೂಡು ಪಟ್ಟಣದಲ್ಲಿ ಕೆಲವು ಉದ್ಯಮಗಳಿವೆ. ಮೈಸೂರು–ಚಾಮರಾಜನಗರ ರೈಲುಮಾರ್ಗ ಮತ್ತು ಮೈಸೂರು–ಗುಂಡ್ಲುಪೇಟೆ ಉದಕಮಂಡಲ ಹೆದ್ದಾರಿ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತವೆ. ಮೈಸೂರು ಚಾಮರಾಜನಗರ ತಿರುಚ್ಚಿರಾಪಲ್ಲಿ ರಸ್ತೆ ನಂಜನಗೂಡಿನ ಬಳಿ ಕವಲೊಡೆದು ಸ್ವಲ್ಪ ದೂರ ತಾಲ್ಲೂಕಿನಲ್ಲಿ ಸಾಗುತ್ತದೆ. ನಂಜನಗೂಡು–ತಿರುಮಕೂಡಲು ನರಸೀಪುರ, ನಂಜನಗೂಡು–ಹುಲ್ಲಹಳ್ಳಿ, ಕವಲಂದೆ–ಕೊಳ್ಳೇಗಾಲ ರಸ್ತೆಗಳು ಇತರ ಮುಖ್ಯ ಹಾದಿಗಳು. ತಾಲ್ಲೂಕಿನಲ್ಲಿ ವಿದ್ಯುತ್ ಸೌಕರ್ಯ ಸಾಕಷ್ಟಿದೆ. ಗ್ರಾಮೀಣ ವಿದ್ಯುತ್ ಸೌಲಭ್ಯ ವ್ಯಾಪಕವಾಗಿರುವುದಲ್ಲದೆ ಅನೇಕ ಕಡೆಗಳಲ್ಲಿ ವಿದ್ಯುತ್ ಚಾಲಿತ ಪಂಪುಗಳು ಉಪಯೋಗದಲ್ಲಿವೆ. ಹಲವು ಗ್ರಾಮಗಳಲ್ಲಿ ಅಂಚೆ, ದೂರವಾಣಿ ಮತ್ತು ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇವೆ.

ಈ ತಾಲ್ಲೂಕಿನ ಹದಿನಾರು, ಕಳಲೆ **(ನೋಡಿ)** ಹಿಂದೆ ಪಾಳೆಯ ಪಟ್ಟಿನ ಕೇಂದ್ರಗಳಾಗಿದ್ದುವು. ಕಳಲೆ, ಹೆಡತಲೆ **(ನೋಡಿ)**, ಸುತ್ತೂರು **(ನೋಡಿ)** ಈ ಸ್ಥಳಗಳಲ್ಲಿ ಪ್ರಾಚೀನ ದೇವಾಲಯಗಳಿವೆ. ದೇವನೂರು ಮತ್ತು ಸುತ್ತೂರಿನ ವೀರಶೈವ ಮಠಗಳು ಪ್ರಸಿದ್ಧವಾದವು. ಗಂಗರ ಕಾಲದ ಪ್ರಾಚೀನತೆಯುಳ್ಳ ಇಮ್ಮಾವು ಗ್ರಾಮದಲ್ಲಿ ರಾಮದೇವಾಲಯವಿದೆ. ಇಲ್ಲಿರುವ ಚತುರ್ಭುಜ ಲಕ್ಷ್ಮಣ ಕುತೂಹಲಕಾರೀ ವಿಗ್ರಹ. ನಂಜನಗೂಡಿನಿಂದ ಸು. 15 ಕಿಮೀ ಆಗ್ನೇಯದಲ್ಲಿರುವ ನಗರ್ಲೆ ಚೋಳರ ಕಾಲದಿಂದಲೂ ಪ್ರಸಿದ್ಧವಾಗಿದ್ದ ಊರು. ಇಲ್ಲಿ ಪ್ರಾಚೀನ ದುರ್ಗಾಪರಮೇಶ್ವರಿ ದೇವಾಲಯ ಮತ್ತು ಜೀರ್ಣವಾದ ಪಾರ್ಶ್ವನಾಥ ಬಸದಿ ಇವೆ. ನೇರಳೆಯಲ್ಲಿ ವೀರಭದ್ರ ದೇವಾಲಯುವಿದೆ. ಹೆಮ್ಮರಗಾಲದಲ್ಲಿ ಹೊಯ್ಸಳ ಕಾಲದ ಗೋಪಾಲಕೃಷ್ಣ ಗುಡಿ ಇದೆ. ಕಳಲೆ, ಹೆಮ್ಮರಗಾಲ ಈ ಸ್ಥಳಗಳಲ್ಲಿ ವಾರ್ಷಿಕ ಜಾತ್ರೆ ಜರುಗುತ್ತದೆ. ನಂಜನಗೂಡಿನ ಸಮೀಪದ ಗೋಳೂರಿನ ಬಳಿಯಲ್ಲಿ ಒಂದು ಮೂಲ ಶಿಕ್ಷಣ ಕೇಂದ್ರ (ವಿದ್ಯಾಪೀಠ) ಇದೆ.

ನಂಜನಗೂಡು ಈ ತಾಲ್ಲೂಕಿನ ಆಡಳಿತ ಕೇಂದ್ರ. ಮೈಸೂರಿನಿಂದ ದಕ್ಷಿಣ ಆಗ್ನೇಯಕ್ಕೆ 24 ಕಿಮೀ ದೂರದಲ್ಲಿ ಕಪಿಲಾ ನದಿಯ ಬಲದಂಡೆಯ ಮೇಲಿದೆ. ಇದು ಕರ್ನಾಟಕದ ಮುಖ್ಯಯಾತ್ರಾ ಸ್ಥಳಗಳಲ್ಲೊಂದು. ಜನಸಂಖ್ಯೆ 48,232. ಮೈಸೂರು–ಚಾಮರಾಜನಗರ ರೈಲುಮಾರ್ಗದ ನಿಲ್ದಾಣವಾಗಿಯೂ ಮೈಸೂರು–ಉದಕಮಂಡಲ ಹೆದ್ದಾರಿಯ ಪಕ್ಕದಲ್ಲೂ ಇದ್ದು, ಸುತ್ತಲ ಅನೇಕ ಊರುಗಳೊಡನೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿರುವ ಈ ಊರು ಈ ಸುತ್ತಲ ಪ್ರದೇಶಕ್ಕೆ ಮುಖ್ಯ ವ್ಯಾಪಾರ ಕೇಂದ್ರವಾಗಿದೆ. ಇಲ್ಲಿ ಬಟ್ಟೆ ಗಿರಣಿ, ಕಾಗದದ ಕಾರ್ಖಾನೆ ಮತ್ತು ಔಷಧ ಮತ್ತು ಸುಗಂಧ ದ್ರವ್ಯಗಳ ಕಾರ್ಖಾನೆ, ಕೆಲವು ಬತ್ತದ ಗಿರಣಿಗಳು, ಮರ ಕೊಯ್ಯುವ ಕಾರ್ಖಾನೆಗಳೂ ಇವೆ. ಸ್ವಲ್ಪ ಮಟ್ಟಿಗೆ ರೇಷ್ಮೆ ವ್ಯಾಪಾರ ಮತ್ತು ರೇಷ್ಮೆ ನೂಲುವ ಉದ್ಯಮವಿದೆ. ತಾಲ್ಲೂಕು ಮಟ್ಟದ ಆಸ್ಪತ್ರೆ ಮತ್ತು ಪಶುವೈದ್ಯಶಾಲೆ ಇವೆ. ಹಲವು ಶಾಲೆಗಳು ಮತ್ತು ಒಂದು ಪ್ರಥಮ ದರ್ಜೆ ಕಾಲೇಜು ಇವೆ. ಊರು ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ. ಪ್ರತಿ ಶುಕ್ರವಾರ ಸಂತೆ ಜರುಗುತ್ತದೆ.

ಪ್ರಾಚೀನ ಕಾಲದಿಂದಲೂ ತೀರ್ಥಕ್ಷೇತ್ರವಾಗಿದ್ದ ಈ ಊರು ಉಮ್ಮತ್ತೂರು ಪಾಳೆಯಗಾರರು ಮತ್ತು ಕಳಲೆಯ ಅರಸರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೇರಿತು. ಸುಮಾರು ಈ ಕಾಲಕ್ಕೆ ಸೇರಿದ ಕೋಟೆಯ ಅವಶೇಷಗಳನ್ನು ಊರಿನ ದಕ್ಷಿಣ ಭಾಗದಲ್ಲಿ ಕೆಲವೆಡೆ ಗುಂಡ್ಲುಹೊಳೆಯ ದಡದಲ್ಲಿ ಗುರುತಿಸಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ವಿಶೇಷ ಪ್ರೋತ್ಸಾಹದಿಂದ ನಂಜನಗೂಡು ವೈಭವಯುತವಾಗಿ ಬೆಳೆಯಿತು.

ಶ್ರೀಕಂಠೇಶ್ವರ ದೇವಾಲಯ, ನಂಜನಗೂಡು

ನಂಜನಗೂಡು ಪ್ರಸಿದ್ಧವಾಗಿರುವುದು ಇಲ್ಲಿನ ಶ್ರೀಕಂಠೇಶ್ವರ (ನಂಜುಂಡೇಶ್ವರ) ದೇವಾಲಯದಿಂದ. ಪವಿತ್ರತೆಯಲ್ಲೂ ಪರಿಮಾಣದಲ್ಲೂ ಬೃಹತ್ ಸ್ಥಾನವನ್ನು ಗಳಿಸಿರುವ ಈ ದೇವಾಲಯ ಕರ್ನಾಟಕದ ಸಿರಿವಂತ ದೇವಾಲಯಗಳಲ್ಲಿ ಒಂದು. ದೇವಾಲಯ ಊರಿನ ಪೂರ್ವದಂಚಿನಲ್ಲಿ ಕಪಿಲಾ ಮತ್ತು ಗುಂಡ್ಲುಹೊಳೆ (ಕೌಂಡಿಣ್ಯ ನದಿ) ಇವುಗಳ ಸಂಗಮ ಸ್ಥಾನದಿಂದ ಅನತಿದೂರದಲ್ಲಿದೆ. ನದಿಗಳಲ್ಲಿ ಪ್ರವಾಹ ಬಂದಾಗ ಸಂಗಮಸ್ಥಾನ ದೇವಾಲಯದಿಂದ ಕೇವಲ ನೂರು ಗಜ ದೂರದಲ್ಲಿರುತ್ತದೆ. ಶ್ರೀಕಂಠೇಶ್ವರ ದೇವಾಲಯ ದ್ರಾವಿಡ ಶೈಲಿಯ ಕಟ್ಟಡ. 385' ಉದ್ದ 160' ಅಗಲವಾಗಿದ್ದು ಕರ್ನಾಟಕದ ಬೃಹತ್ ದೇವಾಲಯಗಳಲ್ಲೊಂದಾಗಿದೆ. ಇದರಲ್ಲಿ 147 ಕಂಬಗಳಿದ್ದು ಒಟ್ಟು ಆಚ್ಛಾದಿತ ಪ್ರದೇಶ 52,000 ಚದರ ಅಡಿಗಳಷ್ಟಿದೆ. ಈ ದೃಷ್ಟಿಯಿಂದ ಇದು ಕರ್ನಾಟಕದಲ್ಲೇ ಅತಿ ದೊಡ್ಡ ದೇವಾಲಯ. ದೇವಾಲಯ ಪೂರ್ವಾಭಿಮುಖವಾಗಿದೆ. ಹೊರಗೋಡೆಗಳು ಸು. 12' ಎತ್ತರವಾಗಿದ್ದು ಸುತ್ತಲೂ ದಕ್ಷಿಣ, ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಅಧಿಷ್ಠಾನದ ಮೇಲೆ ಹಿಂಭಾಗಕ್ಕೆ ಗೋಡೆ ಮತ್ತು ಮುಂದೆ ಕಂಬಸಾಲು ಇರುವ ಕೈಸಾಲೆ ಇದೆ (ಈಗ ದಕ್ಷಿಣದ ಕೈಸಾಲೆಯನ್ನು ಪೂರ್ಣವಾಗಿಯೂ ಉತ್ತರದ್ದನ್ನು ಸ್ವಲ್ಪ ಭಾಗಗಳಲ್ಲಿಯೂ ಮುಚ್ಚಲಾಗಿದೆ). ಮೇಲೆ ಸುತ್ತಲೂ ದೇವ ಮತ್ತು

ಇತರ ಶಿಲ್ಪಗಳಿರುವ ಗಚ್ಚಿನಲ್ಲಿ ಮಾಡಿದ ಕೋಷ್ಠಗಳ ಹಾರ ಇದೆ. ಪೂರ್ವಭಾಗದಲ್ಲಿನ ಮಹಾದ್ವಾರದ ಮುಂದೆ ಇಕ್ಕಡೆ ಕೈಸಾಲೆಯಿರುವ ಒಂದು ಮುಖಮಂಟಪವಿದೆ. ಮಹಾದ್ವಾರ ಬೃಹತ್ ರಚನೆ. ಒಳಚಾವಣಿ ಎತ್ತರ ಸು. 18' ವಿಶಾಲ ಮಂಟಪದಂತಿರುವ ಈ ಭಾಗದಲ್ಲಿನ ದಪ್ಪ ಎತ್ತರದ ಬಾಗಿಲ ತೋಳುಗಳ ಮೇಲೆ ಮೋಹಿನಿ, ದ್ವಾರಪಾಲಕ ಮೊದಲಾದ ಶಿಲ್ಪಾಲಂಕರಣವಿದೆ. ಮಹಾದ್ವಾರದ ಮೇಲೆ ಏಳು ಅಂತಸ್ತಿನಲ್ಲಿ ಎದ್ದಿರುವ ಸು. 120' ಎತ್ತರವಿರುವ ಬೃಹತ್ ಗೋಪುರವಿದೆ. ಗೋಪುರದ ಮೇಲ್ತುದಿಯಲ್ಲಿ ಚಿನ್ನ ಗಿಲೀಟಿನ 10'ಗೂ ಎತ್ತರವಾಗಿರುವ ಏಳು ಕಳಶಗಳನ್ನು ಅಷ್ಟೇ ಎತ್ತರದ ಎರಡು ಕೊಂಬುಗಳ ಮಧ್ಯೆ ಸಾಲಾಗಿ ಜೋಡಿಸಲಾಗಿದೆ.

ಮಹಾದ್ವಾರದಿಂದ ಒಳಗೆ ಪ್ರವೇಶಿಸುತ್ತಿದ್ದಂತೆಯೇ ದೊಡ್ಡ ತೆರೆದ ಅಂಗಳವಿದೆ. ಇದರ ಮಧ್ಯಭಾಗದಲ್ಲಿ ಸುಂದರವಾದ ಒಂದು ವಸಂತ ಮಂಟಪವಿದೆ. ಈ ಅಂಗಳದ ಆಗ್ನೇಯದಲ್ಲಿ ಪಾಕಶಾಲೆ ಮತ್ತು ಈಶಾನ್ಯದಲ್ಲಿ ಉಗ್ರಾಣ ಇವೆ. ದಕ್ಷಿಣ ಭಾಗದಲ್ಲಿ ಒಂದು ಪ್ರವೇಶದ್ವಾರವಿದೆ. ಅಂಗಳದ ಇಕ್ಕೆಲದಲ್ಲೂ ಎತ್ತರದ ಎರಡು ಕಂಬಸಾಲುಗಳು ಉದ್ದುದ್ದವಾಗಿ ಹಬ್ಬಿದ್ದು ಒಳಸಾಲಿನ ಹಿಂದಿನ ಅಂಕಣಗಳಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಂಗಳದ ಹಿಂದೆ ದೇವಾಲಯದ ಹಿಂಗೋಡೆಯ ವರೆಗೂ ಇರುವ ಈ ಭಾಗ ಪೂರ್ಣವಾಗಿ ಆಚ್ಛಾದಿತವಾಗಿರುವುದಲ್ಲದೆ ಅಂಗಳಕ್ಕಿಂತ ಸ್ವಲ್ಪ ಎತ್ತರದಲ್ಲಿದೆ. ಇಲ್ಲಿ ಮಧ್ಯದಲ್ಲಿರುವ ಗುಡಿಗಳನ್ನು ಬಿಟ್ಟು ಉಳಿದ ಭಾಗವನ್ನೆಲ್ಲ ಉದ್ದುದ್ದವಾಗಿ ಹಬ್ಬಿರುವ ಕಂಬಸಾಲುಗಳಿಂದ ವಿಂಗಡಿಸಲಾಗಿದೆ. ಅಂಗಳದಿಂದ ಮುಂದಕ್ಕೆ ಹೋಗುತ್ತಿದ್ದಂತೆಯೇ ಮೊದಲು ಸಿಗುವುದು ಬಸವನಕಟ್ಟೆ. ಇದು ವಸಂತಮಂಟಪದ ಎದುರಿಗೆ ಇರುವ ವಿಶಾಲವಾದ ಜಗತಿ. ಇದರ ಮೇಲೆ ಮಧ್ಯಸ್ಥಳದಲ್ಲಿ ಚಾವಣಿಯನ್ನೂ ಮೀರಿ ಮೇಲೆ ಎದ್ದಿರುವ ಅಷ್ಟಮುಖದ ಶಿಲಾದೀಪ ಸ್ತಂಭವಿದೆ. ಇದರ ಈಶಾನ್ಯಭಾಗದಲ್ಲಿ ಬೃಹನ್ನಂದಿಯ ಗುಡಿ ಇದೆ. ಕಟ್ಟೆಯ ವಾಯವ್ಯದಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ನಿಂತಿರುವ ತಾಂಡವೇಶ್ವರ ಗುಡಿ ಇದೆ. ಕಟ್ಟೆಯ ಪಶ್ಚಿಮಕ್ಕೆ ಮತ್ತೊಂದು ಮಹಾದ್ವಾರವಿದೆ. ಈಗ ಇದು ಕಟ್ಟಡದ ಒಳಗೆ ಸೇರಿಹೋಗಿದ್ದರೂ ಹಿಂದೆ ಇದೇ ದೇವಾಲಯದ ಮುಖ್ಯ ಪ್ರವೇಶದ್ವಾರವಾಗಿತ್ತು. ಇದರ ಕೆಳಭಾಗ ಕಲ್ಲಿನ ಕಟ್ಟಡವಾಗಿದ್ದು, ಇದರ ಚಾವಣಿಯ ಮೇಲೆ ಐದು ಅಂತಸ್ತು ಮತ್ತು ಗಿಲೀಟಿನ ಐದು ಕಲಶಗಳಿರುವ ಸು. 60' ಎತ್ತರದ ಇಟ್ಟಿಗೆ ಮತ್ತು ಗಾರೆಯ ಶಿಖರವಿದೆ. ಈ ಮಹಾದ್ವಾರಕ್ಕೆ ಸೇರಿದಂತೆಯೇ ಬಲಪಾರ್ಶ್ವ ಮತ್ತು ಮುಂಭಾಗದಲ್ಲಿ ಕೆಲವು ಚಿಕ್ಕ ಗುಡಿಗಳಿವೆ. ಎಡಪಾರ್ಶ್ವದಲ್ಲಿ ನವಗ್ರಹಗಳಿರುವ ಒಂದು ಆವರಣವೂ ಅದರ ಹಿಂದೆ ಯಜ್ಞಶಾಲೆಯೂ ಇವೆ. ಈ ಮಹಾದ್ವಾರದ ಪಶ್ಚಿಮಕ್ಕಿರುವುದೇ ಶ್ರೀಕಂಠೇಶ್ವರ ಲಿಂಗವಿರುವ ಮೂಲಗುಡಿ. ಮೂಲಗುಡಿ ಮತ್ತು ಮಹಾದ್ವಾರದ ಮಧ್ಯೆ ಒಂದು ಕಲ್ಲಿನ ಬಲಿಪೀಠ ಮತ್ತು ಕಲ್ಲಿನ ಪೀಠದ ಮೇಲೆ ಹಿತ್ತಾಳೆಯ ಹೊದಿಕೆಯಿರುವ ಸು. 25' ಎತ್ತರದ ಮರದಯಷ್ಟಿ ಇರುವ ಧ್ವಜಸ್ತಂಭ ಇವೆ.

ಮೂಲ ದೇವಾಲಯದಲ್ಲಿ ಗರ್ಭಗುಡಿ, ಸುತ್ತಲೂ ಪ್ರದಕ್ಷಿಣಾಪಥ ಮತ್ತು ಮುಂದೆ ಎರಡು ಕಂಬಗಳಿರುವ ಒಂದು ಒಳಮಂಟಪ ಇದೆ. ಇದರ ಮುಂದೆ 9 ಕಂಬಗಳ ಸಭಾಮಂಟಪವಿದೆ. ಇದು ಹಿಂದೆ 16 ಕಂಬಗಳಿದ್ದ ಮಂಟಪ. ಕೆಲವು ಕಂಬಗಳ ಮಧ್ಯೆ ಗೋಡೆಗಳನ್ನೆತ್ತಿ ದಕ್ಷಿಣಾಭಿಮುಖವಾಗಿರುವ ಉತ್ಸವ ವಿಗ್ರಹವಿರುವ ಒಂದು ಗುಡಿಯನ್ನೂ ಮುಂದೆ ಎರಡು ಪಕ್ಕಗಳಲ್ಲಿ ಮೂರು ಮೂರು ಲಿಂಗಸ್ಥಾಪಿತ ಕೋಣೆಗಳನ್ನೂ ಅಳವಡಿಸಲಾಗಿದೆ. ಮಂಟಪದ ಪೂರ್ವ ಮತ್ತು ದಕ್ಷಿಣದೆಡೆಗೆ ದ್ವಾರಗಳಿವೆ. ದಕ್ಷಿಣದ್ವಾರದ ಬಲಗಡೆ ಸುಬ್ರಹ್ಮಣ್ಯ, ಎಡಪಕ್ಕಗಳಲ್ಲಿ ಲಿಂಗಗಳನ್ನು ಸ್ಥಾಪಿಸಲಾಗಿದೆ. ಗರ್ಭಗುಡಿಯ ಬಲಭಾಗದಲ್ಲೂ ಹೊರಗಡೆ ಕೆಲವು ಲಿಂಗಗಳನ್ನು ಸ್ಥಾಪಿಸಲಾಗಿದೆ. ಮೂಲ ದೇವಾಲಯಕ್ಕೆ ಸೇರಿದಂತೆ ಎಡಗಡೆ ಒಂದು ವಿಷ್ಣು ಗುಡಿ, ಅದರ ಹಿಂದೆ ಚಂಡಿಕೇಶ್ವರ ಗುಡಿ ಇವೆ. ಈ ಘಟಕದ ವಾಯವ್ಯದಲ್ಲಿ, ಗರ್ಭಗುಡಿ ಮತ್ತು ಸಭಾಮಂಟಪವಿರುವ ಪಾರ್ವತಿ ಗುಡಿ ಇದೆ. ದೇವಾಲಯದ ಬಲಭಾಗದಲ್ಲಿ ಸುತ್ತಲೂ ಪ್ರಾಕಾರದ ಗೋಡೆಗೂ ಅದರ ಸದ್ಯ ಮುಂದಿನ ಕಂಬಸಾಲಿಗೂ ಮಧ್ಯೆ ಇರುವ ಅಂಕಣಗಳಲ್ಲಿ ಅನೇಕ ದೇವರುಗಳನ್ನು ಪ್ರತಿಷ್ಠಾಪಿಸಲಾಗಿದೆ. ಇವುಗಳಲ್ಲಿ ದಕ್ಷಿಣದ ಗೋಡೆಗೆ ಸೇರಿದಂತೆ ಅಂಗಳದ ನೇರದಿಂದ ಪ್ರಾರಂಭವಾಗುವ ಸಾಲಿನಲ್ಲಿ ಶೈವಪುರಾತನ ವಿಗ್ರಹಗಳು ಮುಂದೆ ಲಿಂಗಗಳೂ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಅವರ ಪತ್ನಿ ಪುತ್ರರ ವಿಗ್ರಹಗಳಿರುವ ಒಂದು ಕೋಣೆಯೂ ಪಶ್ಚಿಮದ ಸಾಲಿನಲ್ಲಿ ಲಿಂಗಗಳೂ ಮತ್ತು ಇತರ ಕೆಲವು ವಿಗ್ರಹಗಳೂ ಇವೆ. ಉತ್ತರದ ಗೋಡೆಗೆ ಸೇರಿದಂತೆ ಉಗ್ರಾಣದ ಬಳಿಯಿಂದ ಸಾಲಾಗಿ ಲೀಲಾಮೂರ್ತಿಗಳಿವೆ. ಪಾರ್ವತಿ, ಚಂಡಿಕೇಶ್ವರ ಮತ್ತು ತಾಂಡವೇಶ್ವರ ದೇವರುಗಳ ಗರ್ಭಗುಡಿಗಳ ಮೇಲೆ ಚಿಕ್ಕದಾದ ಗಾರೆಯ ಶಿಖರಗಳಿವೆ.

ಇಡೀ ದೇವಾಲಯ ಒಂದು ಕಾಲದ ರಚನೆಯಲ್ಲ. ದೇವಾಲಯದ ಬೆಳವಣಿಗೆಯಲ್ಲಿ ನಾಲ್ಕು ಘಟ್ಟಗಳನ್ನಾದರೂ ಸ್ಪಷ್ಟವಾಗಿ ಗುರುತಿಸಬಹುದು. ಶ್ರೀಕಂಠೇಶ್ವರ ಲಿಂಗ, ಗರ್ಭಗುಡಿ, ಪ್ರದಕ್ಷಿಣಾಪಥ ಮತ್ತು ಬಹುಶಃ ಒಳಮಂಟಪ ಬಹು ಪ್ರಾಚೀನವಾದುವು. ಈ ಭಾಗ ಕುಳ್ಳಾದ ಚಿಕ್ಕ ಕಟ್ಟಡ. ಗೋಡೆ ಸರಳವಾಗಿ ಚಪ್ಪಡಿಗಳಿಂದ ಕಟ್ಟಲಾಗಿದೆ. ಹೊರಮೈಯಲ್ಲಿ ಅಧಿಷ್ಠಾನ, ಭಿತ್ತಿ ಭಾಗದಲ್ಲಿ ಅರೆಗಂಬಗಳು, ಮೇಲೆ ಬಳುಕಿದ ಕಪೋತ ಇವೆ. ಇದರ ಮೇಲೆ ಚಿಕ್ಕ ಯಾಳಿ ಸಾಲಿದ್ದಂತೆ ತೋರುತ್ತದೆ. ಉತ್ತರ, ಪಶ್ಚಿಮ ಮತ್ತು ದಕ್ಷಿಣದ ಗೋಡೆಗಳಲ್ಲಿ ಕಿರಿದಾದ ಜಾಲಂಧ್ರಗಳಿವೆ. ಒಳ ಮಂಟಪದ ಕಂಬಗಳು ದುಂಡು ರೀತಿಯವು. ಬಹು ಕುಳ್ಳು. ಈ ವಾಸ್ತು ಅಂಶಗಳಿಂದ ಈ ಭಾಗ ಗಂಗರ ಅಥವಾ ಚೋಳರ ಕಾಲದಲ್ಲಿ 10–11ನೆಯ ಶತಮಾನಗಳಲ್ಲಿ ಕಟ್ಟಲಾಗಿರಬಹುದೆಂದು ಹೇಳಬಹುದು. ಇದರ ಮುಂಭಾಗದಲ್ಲಿರುವ ಮಂಟಪದಲ್ಲಿ ವಿವಿಧ ಮಾದರಿಯ ಕಂಬಗಳಿವೆ. ಕಂಬರೀತಿಗಳಿಂದ ಮಂಟಪ ಹೊಯ್ಸಳರ ಕಾಲದಲ್ಲಿ ಸು. 13ನೆಯ ಶತಮಾನದಲ್ಲಿ ರಚಿತವಾದ್ದೆಂದು ಊಹಿಸಬಹುದು (ಮೂಲಗುಡಿಯ ಮುಂಭಾಗದ ಕೋಣೆಗಳಲ್ಲಿ ಇರುವ ಲಿಂಗಗಳು 19ನೆಯ ಶತಮಾನದಲ್ಲಿ ಪ್ರತಿಷ್ಠಿತವಾದವು). ಈ ಭಾಗದ ಮುಂದಿರುವ ಬಲಿಪೀಠ ಸಹ ಬಹುಶಃ ಈ ಕಾಲದ್ದು. ಒಳಗಿನ ಮಹಾದ್ವಾರದ ಕಲ್ಲಿನ ಭಾಗದಲ್ಲಿ ಇಕ್ಕೆಲದಲ್ಲೂ ಹಂಪೆಯ ರಚನೆಗಳನ್ನು ಹೋಲುವ ಕಂಬಗಳಿವೆ. ಮೇಲಿನ ಗಾರೆಯ ಗೋಪುರ ವಿನ್ಯಾಸದಲ್ಲೂ ವಿಜಯನಗರ ಶೈಲಿಯನ್ನು ಗುರುತಿಸಬಹುದು. ದೇವಾಲಯದಲ್ಲಿ ಕೃಷ್ಣದೇವರಾಯನ (1509–29) ಒಂದು ದತ್ತಿ ಶಾಸನವೂ ಇರುವುದರಿಂದ ಈ ಮಹಾದ್ವಾರ ಮತ್ತು ಗೋಪುರ ಅವನ ಕಾಲದ ರಚನೆಯಿರಬಹುದು. ಪಾರ್ವತಿ ಮತ್ತು ನಾರಾಯಣ ಗುಡಿಗಳು ಮತ್ತು ಬಸವನ ಕಟ್ಟೆಯ ಮೇಲಿರುವ ದೀಪಸ್ತಂಭ ಸಹ ಇದೇ ಕಾಲದಲ್ಲಿ ರಚಿತವಾಗಿರುವಂತೆ ತೋರುತ್ತದೆ. ಮುಂದೆ ಮೈಸೂರು ಅರಸರು, ಕಳಲೆಯ ದಳವಾಯಿಗಳು ಮತ್ತು ದಿವಾನ್ ಪೂರ್ಣಯ್ಯ ಇವರು ದೇವಾಲಯದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದರೆಂಬುದಕ್ಕೆ ಸಾಂದರ್ಭಿಕ ಸಾಕ್ಷ್ಯಗಳಿವೆ. ಆದರೆ ಯಾವ ಯಾವ ಭಾಗಗಳು ರಚಿತವಾದುವೆಂದು ತೀರ್ಮಾನಿಸುವುದು ಕಷ್ಟ. ದೇವಾಲಯ ಇಂದಿನ

ರೂಪವನ್ನು ತಳೆದುದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ದೇವಾಲಯದ ಒಳಗೆ ಮತ್ತು ಸುತ್ತಲೂ ಹಬ್ಬಿರುವ ಸಾಲುಕಂಬಗಳು ಚತುರ್ಮುಖವಾಗಿದ್ದು ಮಧ್ಯೆ ಮಧ್ಯೆ ಅಷ್ಟಕೋನವಾಗಿ ಒಡೆದಿರುವ ರೀತಿಯವು. ಈ ಕಂಬಗಳು ಮತ್ತು ಅವುಗಳ ಮೇಲಿನ ಶಿಲ್ಪಗಳ ರೀತಿಯಿಂದ ಇವು ಹೆಚ್ಚಿನ ಮಟ್ಟಿಗೆ 18-19ನೆಯ ಶತಮಾನದವೆಂದು ಹೇಳಬಹುದು. 1820ರ ಅನಂತರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ದೇವಾಲಯದ ಬದಲಾವಣೆಗಳನ್ನು ಆರಂಭಿಸಿ ಹಿಂದಿದ್ದ ಹಲವು ಭಾಗಗಳನ್ನು ಉಪಯೋಗಿಸಿಕೊಂಡು ಇಂದಿನ ಕಟ್ಟಡವನ್ನು ರೂಪಿಸಿದಂತೆ ತೋರುತ್ತದೆ. ದೇವಾಲಯದ ಮುಂದಿರುವ ಮಹಾಗೋಪುರವನ್ನು ಅವರು 1845ರಲ್ಲಿ ರಚಿಸಿದರು. ಈ ವಿಷಯವನ್ನು ಸೂಚಿಸುವ ಶಾಸನ ಮಹಾದ್ವಾರದ ದೂಲದ ಮೇಲೆ ಇದೆ. ಬಹುಶಃ ಇದೇ ಕಾಲದಲ್ಲಿ ದೇವಾಲಯದ ಇಂದಿನ ರೂಪ ಸಿದ್ಧವಾದಂತೆ ತೋರುತ್ತದೆ. ಮಹಾದ್ವಾರದ ಮುಂದಿರುವ ಅನೇಕ ಶಿಲ್ಪಗಳಿಂದ ಕೂಡಿದ ಸುಂದರ ಮಂಟಪ ಸು. 1900ರಲ್ಲಿ ನೀಲಗಿರಿ ಮುದ್ದಣ್ಣ ಎಂಬುವರು ಕಟ್ಟಿಸಿದ್ದು.

ಈ ಬೃಹತ್ ದೇವಾಲಯದಲ್ಲಿ ಸು.200ಕ್ಕೂ ಹೆಚ್ಚು ವಿಗ್ರಹಗಳು ಪ್ರತಿಷ್ಠಾಪಿತವಾಗಿವೆ. ಇವುಗಳಲ್ಲಿ ಅರ್ಧದಷ್ಟು ಲಿಂಗಗಳು. ನಂಜುಂಡೇಶ್ವರ ಲಿಂಗ ಹಳೆಯದು. ಪೀಠಯುತವಾಗಿ ಸು. 3" ಎತ್ತರವಿದೆ. ಇತರ ಹೆಚ್ಚಿನ ಲಿಂಗಗಳು ಬೇರೆಬೇರೆ ಕಾಲದಲ್ಲಿ ಸ್ಥಾಪಿತವಾದವು. ಹೆಚ್ಚಿನವು ಪ್ರಾಕಾರದ ಗೋಡೆಗೆ ಸೇರಿದಂತಿರುವ ಒಳಸಾಲಿನಲ್ಲಿವೆ. ಕೆಲವು ಗರ್ಭಗುಡಿಯ ಸಭಾಮಂಟಪದಲ್ಲಿಯೂ ದೇವಾಲಯದ ಈಶಾನ್ಯ ಮತ್ತು ವಾಯವ್ಯ ಭಾಗದ ಕೋಣೆಗಳಲ್ಲಿಯೂ ಮತ್ತು ಅಲ್ಲಲ್ಲಿ ಬಿಡಿಬಿಡಿಯಾಗಿಯೂ ಸ್ಥಾಪಿತವಾಗಿವೆ. ನಾರಾಯಣ ಮತ್ತು ಪಾರ್ವತಿ ಗುಡಿಗಳಲ್ಲಿರುವ ಮೂಲ ವಿಗ್ರಹಗಳು ಸು. 13-14ನೆಯ ಶತಮಾನದವು. ಪಾರ್ವತಿ ಸುಂದರ ಶಿಲ್ಪ. ಇದರಲ್ಲಿ ಹೊಯ್ಸಳ ಶೈಲಿಯ ಛಾಯೆಯನ್ನು ಕಾಣಬಹುದು. ಒಳಗಿನ ಮಹಾದ್ವಾರದ ಮುಂಕೋಣೆಯಲ್ಲಿ ಹೊಯ್ಸಳ ಶೈಲಿಯ ಒಂದು ನೃತ್ಯ ಗಣಪತಿ ಇದೆ. ಸುಬ್ರಹ್ಮಣ್ಯ ಗುಡಿಯಲ್ಲಿರುವ ಸುಬ್ರಹ್ಮಣ್ಯ, ಹಿಂದಿನ ಪ್ರಾಕಾರ ಸಾಲಿನಲ್ಲಿರುವ ಷಣ್ಮುಖ ಮತ್ತು ಉಚ್ಛಿಷ್ಟ ಗಣಪತಿ ಮೂರ್ತಿಸ್ವರೂಪದಲ್ಲಿ ವೈಶಿಷ್ಟ್ಯವುಳ್ಳ ಕೃತಿಗಳು. ದೇವಾಲಯದ ಬಹುಮುಖ್ಯ ಶಿಲ್ಪಗಳೆಂದರೆ ದೇವಾಲಯದ ಬಲಪ್ರಾಕಾರ ಸಾಲಿನಲ್ಲಿರುವ ಶೈವಪುರಾತನರ ವಿಗ್ರಹಗಳು ಮತ್ತು ಎಡಸಾಲಿನಲ್ಲಿರುವ ಲೀಲಾಮೂರ್ತಿಗಳು. ಪುರಾತನರು ಸಾಮಾನ್ಯವಾಗಿ 63 ಎಂದು ಪರಿಗಣಿತ ವಾಗಿದ್ದರೂ ಇಲ್ಲಿ 66 ವಿಗ್ರಹಗಳು ಮೂರು ಮೂರರಂತೆ 22 ಗುಂಪುಗಳಲ್ಲಿವೆ. ಸುಮಾರು ಆಳೆತ್ತರದ ಈ ವಿಗ್ರಹಗಳಲ್ಲಿ ಒಂದೊಂದೂ ವೈಶಿಷ್ಟ್ಯಪೂರ್ಣವಾಗಿ ನಿರೂಪಿತವಾಗಿವೆ. ಸು. 4 ರಿಂದ 5" ಎತ್ತರವಿರುವ ಚಂದ್ರಶೇಖರ, ಕಾಲಸಂಹಾರ, ಅಂಧಕಾಸುರಮರ್ದನ, ಲಿಂಗೋದ್ಭವ ಮೊದಲಾದ 25 ಆಗಮೋಕ್ತ ಶಿವಲೀಲಾಮೂರ್ತಿಗಳೂ ಆಗಮ ದೃಷ್ಟಿಯಿಂದಲೂ ಶಿಲ್ಪಸೌಂದರ್ಯದಿಂದಲೂ ಗಮನಾರ್ಹವಾಗಿವೆ. ಈ ಗುಂಪಿನ ದಕ್ಷಿಣಾಮೂರ್ತಿ ಆಕರ್ಷಕ ಕೃತಿ. ಪುರಾತನರು ಮತ್ತು ಲೀಲಾಮೂರ್ತಿಗಳ ವಿಗ್ರಹಗಳ ಗುಂಪುಗಳು ಕರ್ನಾಟಕದಲ್ಲಿ ಎಲ್ಲೋ ಕೆಲವು ಸ್ಥಳಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ನಂಜನಗೂಡಿನವು ದೊಡ್ಡವೂ ಸುಂದರವೂ ಆಗಿವೆ. ಲೀಲಾ ಮೂರ್ತಿಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಮಾಡಿಸಿದರೆಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ. ಪುರಾತನರ ವಿಗ್ರಹಗಳು ಸಹ ಇದೇ ಕಾಲದ ರಚನೆಗಳಿರಬಹುದು. ಉತ್ಸವ ವಿಗ್ರಹದ ಗುಡಿಯ ನೇರ ಎದುರಿನಲ್ಲಿ ಪ್ರಾಕಾರ ಸಾಲಿನಲ್ಲಿ ಪ್ರತ್ಯೇಕಗೊಳಿಸಿರುವ ಒಂದು ಕೋಣೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಅವರ ನಾಲ್ವರು ಪತ್ನಿಯರ ಆಳೆತ್ತರದ ವಿಗ್ರಹಗಳನ್ನಿಡಲಾಗಿದೆ. ಒಡೆಯರ ಕಾಲದ ವ್ಯಕ್ತಿಶಿಲ್ಪಗಳಲ್ಲಿ ಇವು ಅತ್ಯುತ್ತಮವಾದುವು. ಬಸವನಕಟ್ಟೆಯ ಪಕ್ಕದಲ್ಲಿರುವ ಸು. 8 ಅಡಿ ಎತ್ತರದ ನಂದಿ ಈ ದೇವಾಲಯದ ಬಹು ಭವ್ಯಶಿಲ್ಪ. 1644ರಲ್ಲಿ ದಳವಾಯಿ ವಿಕ್ರಮರಾಯ ಇದನ್ನು ಸ್ಥಾಪಿಸಿದನೆಂದು ಅದರ ಪೀಠದ ಮೇಲೆ ಇರುವ ಶಾಸನ ತಿಳಿಸುತ್ತದೆ.

ಈ ದೇವಾಲಯದಲ್ಲಿ ಲೋಹವಿಗ್ರಹಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಪಾರ್ವತೀ ಸಮೇತ ಚಂದ್ರಶೇಖರ, ಸುಬ್ರಹ್ಮಣ್ಯ, ಪಾರ್ವತಿ, ಗಣಪತಿ, ಚಂಡಿಕೇಶ್ವರ, ಶ್ರೀಭೂಸಮೇತ ನಾರಾಯಣ, ತಾಂಡವೇಶ್ವರ ಮೊದಲಾದ ಲೋಹದ ಉತ್ಸವಮೂರ್ತಿಗಳಿವೆ. ಅಲ್ಲದೆ ಈ ದೇವಾಲಯದಲ್ಲಿ 63 ಪುರಾತನರ ಲೋಹವಿಗ್ರಹಗಳಿವೆ. ಇವು 1739-59ರಲ್ಲಿ ಮೈಸೂರಿನ ದಳವಾಯಿಯಾಗಿದ್ದ ಕಳಲೆ ನಂಜರಾಜಯ್ಯ ಮಾಡಿಸಿಕೊಟ್ಟವು.

ದೇವಾಲಯದ ಪ್ರಾಕಾರದ ಹಾರದ ಕೋಷ್ಠಗಳಲ್ಲಿ ಗಾರೆಯಲ್ಲಿ ಮಾಡಿದ 122 ದೇವಮೂರ್ತಿಗಳಿವೆ. ಇವುಗಳಲ್ಲಿ ಅಷ್ಟದಿಕ್ಪಾಲಕರು, ವೀರಭದ್ರ, ನಾರಾಯಣ, 10 ವಿಧದ ದಕ್ಷಿಣಾಮೂರ್ತಿಗಳು, 7 ವಿಧದ ತಾಂಡವೇಶ್ವರ ಮೂರ್ತಿಗಳು, 16 ವಿಧದ ಸುಬ್ರಹ್ಮಣ್ಯ ವಿಗ್ರಹಗಳು, 25 ಲೀಲಾಮೂರ್ತಿಗಳು, 32 ವಿಧದ ಗಣಪತಿಗಳು, ಸಪ್ತಮಾತೃಕೆಯರು ಮೊದಲಾದವು ಇದ್ದು ಇವು ಶಿಲ್ಪಶಾಸ್ತ್ರ ಅಧ್ಯಯನ ದೃಷ್ಟಿಯಿಂದ ಬಹುಮುಖ್ಯವಾಗಿವೆ. ಅಲ್ಲದೆ ಮಹಾದ್ವಾರದ ಒಳಗೆ ಅಂಗಳದ ಸುತ್ತಲ ಹಾರದಲ್ಲೂ ಇದೇ ರೀತಿಯ ಮೂರ್ತಿಗಳಿವೆ. ಇವೂ 19ನೆಯ ಶತಮಾನದಲ್ಲಿ ರಚನೆಯಾದವು.

ದೇವಸ್ಥಾನದಲ್ಲಿ ಹಿಂದಿನಿಂದಲೂ ಸಂಗ್ರಹವಾಗಿರುವ ಅನೇಕ ವಸ್ತುವಾಹನಗಳಿವೆ. ದೊಡ್ಡ ತೇರು ಮತ್ತು ಪಾರ್ವತಿಯ ತೇರುಗಳು 1819ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮಾಡಿಸಿಕೊಟ್ಟದ್ದು. ಇವರೂ ಇವರ ಪತ್ನಿಯರೂ ಸಲ್ಲಿಸಿದ ಬೆಳ್ಳಿಕುದುರೆ ವಾಹನ (1830), ಬೆಳ್ಳಿ ಮಂಟಪ ಮತ್ತು ಬೆಳ್ಳಿ ಆನೆ (1834), ಬೆಳ್ಳಿ ಬಸವ (1848), ರುದ್ರಾಕ್ಷಿ ಮಂಟಪ, ಗಜರಥ (1847), ಕುದುರೆ ವಾಹನ (1847), ಕೈಲಾಸವಾಹನ (1852) ಶೇಷವಾಹನ ಮೊದಲಾದವು ದೇವಾಲಯದಲ್ಲಿವೆ. ಟಿಪ್ಪು ಸುಲ್ತಾನ್ ಕೊಟ್ಟಿರುವ ಪಂಚರತ್ನ ಖಚಿತ ಬೆಳ್ಳಿ ಬಟ್ಟಲು ಮತ್ತು ಪಚ್ಚೆಹಾರ, ಶೃಂಗೇರಿಯ ನರಸಿಂಹಭಾರತಿ ಸ್ವಾಮಿಗಳು ಕೊಟ್ಟಿರುವ ಎರಡು ಚಿನ್ನದ ಆಭರಣಗಳು ಮೊದಲಾದ ನೂರಾರು ಆಭರಣಗಳು ಇಲ್ಲಿನ ಆಭರಣ ಸಂಗ್ರಹದಲ್ಲಿ ಮುಖ್ಯವಾದವು.

ಈ ದೇವಾಲಯ ವರ್ಷವಿಡೀ ದೇಶದ ವಿವಿಧ ಭಾಗಗಳಿಂದ ಭಕ್ತರನ್ನು ಆಕರ್ಷಿಸುತ್ತಿದೆ. ಸೋಮವಾರ ಮತ್ತು ಪೂರ್ಣಿಮಾ ದಿನಗಳಲ್ಲಿ ವಿಶೇಷ. ಪ್ರತಿ ಪೂರ್ಣಿಮಾ ರಾತ್ರಿ ರಥೋತ್ಸವವುಂಟು. ಅಲ್ಲದೆ ವಾರ್ಷಿಕ ವಾಗಿ ಎರಡು ಜಾತ್ರೆಗಳು ನಡೆಯುತ್ತವೆ. ಅಕ್ಟೋಬರ್-ನವೆಂಬರ್‌ನಲ್ಲಿ ತ್ರಿರಥ (ಚಿಕ್ಕಜಾತ್ರೆ) ಮತ್ತು ಮಾರ್ಚ್- ಏಪ್ರಿಲ್‌ನಲ್ಲಿ ಪಂಚರಥ (ದೊಡ್ಡಜಾತ್ರೆ), ಯಾತ್ರಾರ್ಥಿಗಳ ಉಪಯೋಗಕ್ಕಾಗಿ ಇಲ್ಲಿ ಅನೇಕ ಛತ್ರಗಳಿವೆ. ನಂಜನಗೂಡಿನ ನಂಜುಂಡೇಶ್ವರನನ್ನು ಅನೇಕ ಜನ ಕುಲದೈವ ವೆಂದು ಪರಿಗಣಿಸುತ್ತಾರೆ. ಈ ಸುತ್ತಿನ ಜನಪದದಲ್ಲಿ ನಂಜುಂಡನಿಗೆ ವಿಶೇಷ ಸ್ಥಾನವುಂಟು **(ನೋಡಿ: ನಂಜಯ್ಯ)**.

ಈ ಊರಿನಲ್ಲಿ ಶ್ರೀಕಂಠೇಶ್ವರ ದೇವಾಲಯವಲ್ಲದೆ ಪರಶುರಾಮ, ಚಾಮುಂಡೇಶ್ವರಿ, ಸತ್ಯನಾರಾಯಣ, ದತ್ತಾತ್ರೇಯ, ಗಣಪತಿ ಮೊದಲಾದ ಇತರ ದೇವಾಲಯಗಳೂ ಇವೆ. ಇಲ್ಲಿನ ಪರಶುರಾಮ ದೇವಾಲಯದಲ್ಲಿ ಒಂದು ಶಾಸನಕಲ್ಲು ಪೂಜಾವಸ್ತುವಾಗಿದೆ. ಈ ದೇವಾಲಯವನ್ನು ಸಂದರ್ಶಿ ಸದಿದ್ದಲ್ಲಿ ನಂಜನಗೂಡಿನ ಯಾತ್ರೆ ಅಪೂರ್ಣವೆಂಬ ನಂಬಿಕೆ ಇದೆ.

ನಂಜನಗೂಡಿನಲ್ಲಿ ಶಾಂಕರ, ವೀರಶೈವ ಮತ್ತು ಮಾಧ್ವ ಸಂಪ್ರದಾಯದ ಮಠಗಳಿವೆ. ಇವುಗಳಲ್ಲಿ ರಾಘವೇಂದ್ರಸ್ವಾಮಿ ಮಠ ಪ್ರಾಚೀನವಾದುದು. ಸು. 15ನೆಯ ಶತಮಾನದಲ್ಲಿ ವಿಬುಧೇಂದ್ರ ತೀರ್ಥರಿಂದ ಸ್ಥಾಪಿತವಾದದ್ದು. ಸುಧೀಂದ್ರ, ರಾಘವೇಂದ್ರ ಮೊದಲಾದ ಪ್ರಸಿದ್ಧ ಆಚಾರ್ಯರು ಮಠದ ಪರಂಪರೆಗೆ ಸೇರಿದವರು. ಮಠದಲ್ಲಿ 15–18ನೆಯ ಶತಮಾನಗಳಿಗೆ ಸೇರಿದ ಅನೇಕ ತಾಮ್ರಪಟಗಳೂ ಸನ್ನದುಗಳೂ ಇವೆ. ಇಲ್ಲಿ ಒಳ್ಳೆಯ ಹಸ್ತಪ್ರತಿಗಳ ಸಂಗ್ರಹ ಸಹ ಇದೆ.

ಸ್ಥಳಪುರಾಣಗಳ ಪ್ರಕಾರ ನಂಜನಗೂಡಿಗೆ ಗರಳಪುರಿ ಕ್ಷೇತ್ರ, ದಕ್ಷಿಣಕಾಶಿ ಎಂಬ ಹೆಸರುಗಳೂ ಇವೆ. ಇದು ತ್ರಿವೇಣೀ ಸಂಗಮಸ್ಥಾನ ಎಂಬ ನಂಬಿಕೆ ಇದೆ. ಪರಶುರಾಮ ತನ್ನ ಮಾತೃಹತ್ಯಾಪಾಪವನ್ನು ಇಲ್ಲಿ ಶಿವಾನುಗ್ರಹದಿಂದ ಕಳೆದುಕೊಂಡ, ಗೌತಮ ಋಷಿಗಳ ಆಶ್ರಮ ಇಲ್ಲಿತ್ತು ಎಂದು ಐತಿಹ್ಯ. (ಎಸ್.ಎನ್.)

**ನಂಜನಗೂಡು ಶ್ರೀಕಂಠಶಾಸ್ತ್ರಿ:** 1884– 1958. ಹೊಸಗನ್ನಡದ ಅರುಣೋದಯ ಸಾಹಿತ್ಯಕ್ಕೆ ಮಹತ್ತ್ವದ ಕೊಡುಗೆಯನ್ನಿತ್ತ ಗಣ್ಯರು. ಇವರದು ಪಂಡಿತ ಮನೆತನ. ಪ್ರಸಿದ್ಧ ಪಂಡಿತರಾಗಿದ್ದ ನಂಜನಗೂಡು ಸುಬ್ಬಾಶಾಸ್ತ್ರಿ ಇವರ ತಂದೆ. ಶ್ರೀಕಂಠಶಾಸ್ತ್ರಿಗಳು ಸ್ವತಂತ್ರವಾಗಿ ಸಂಸ್ಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯ ಗಳಿಸಿ, ತಮ್ಮ ಹದಿನೆಂಟನೆಯ ವಯಸ್ಸಿಗೆ ಗ್ರಂಥರಚನಾ ಚಾತುರ್ಯವನ್ನು ಪ್ರದರ್ಶಿಸಿದರು. ಆಗಿನ ಮೈಸೂರು ಮಹಾರಾಜರ ಕೃಪೆಗೆ ಪಾತ್ರರಾಗಿ ಆಸ್ಥಾನ ವಿದ್ವಾಂಸರಾಗಿದ್ದರಲ್ಲದೆ, ಅರಮನೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸು. 40 ವರ್ಷಗಳ ಕಾಲ ಕೆಲಸ ಮಾಡಿದರು. ಅನೇಕ ಐರೋಪ್ಯ ಅಧಿಕಾರಿಗಳಿಗೆ ಇವರು ಕನ್ನಡ ಕಲಿಸಿದರು. ಇವರು ಸು. 78 ಗ್ರಂಥಗಳನ್ನು ಬರೆದಿದ್ದಾರೆ ಎನ್ನಲಾಗಿದೆ. ಇವರ ಕೆಲವು ಗ್ರಂಥಗಳು ತೆಲುಗು, ಮಲೆಯಾಳಂ ಭಾಷೆಗಳಿಗೂ ಅನುವಾದವಾಗಿವೆ.

ಕನ್ನಡ ನಾಟಕ ಸಾಹಿತ್ಯಕ್ಕೆ ಜೀವ ತುಂಬಿದ ಶ್ರೇಯಸ್ಸು ಶಾಸ್ತ್ರಿಗಳದು. ವರದಾಚಾರ್ಯರ ನಾಟಕ ಕಂಪನಿಗೂ ಚಾಮುಂಡೇಶ್ವರಿ ನಾಟಕ ಮಂಡಲಿಗೂ ಶಾಸ್ತ್ರಿಗಳು ಅನೇಕ ನಾಟಕಗಳನ್ನು ಬರೆದುಕೊಟ್ಟರು. ರಂಗಭೂಮಿಯ ಮೇಲೆ ಪ್ರದರ್ಶನಗೊಂಡು ಜನಪ್ರಿಯವಾದ ಇವರ ನಾಟಕಗಳಲ್ಲಿ ಕೆಲವಿವು: ನಿರುಪಮ, ಧ್ರುವವಿಜಯ, ವಿಷ್ಣುಲೀಲಾ, ಸೀತಾ ಪರಿಣಯ, ಸರ್ವಸುಂದರಿ, ಶ್ರೀರಾಮ ಪಾದುಕಾಪಟ್ಟಾಭಿಷೇಕ, ರಾಜಸೂಯಯಾಗ.

ಕಾದಂಬರಿ ಮತ್ತು ಪ್ರಬಂಧಗಳ ಮೂಲಕ ಗದ್ಯವನ್ನು ಹೊಸ ಹದಕ್ಕೆ ತರಲೂ ಶಾಸ್ತ್ರಿಗಳೂ ಶ್ರಮಿಸಿದರು. ಇವರು ಬರೆದಿರುವ 12 ಸ್ವತಂತ್ರ ಕಾದಂಬರಿಗಳಲ್ಲಿ ಅನುಗಸುಂದರಿ, ಸರಳಬಾಲೆ, ರಾಧಾಮಾಧವಿ ಮುಖ್ಯವಾದುವು. ಸುಭಾಷಿತ ಲಹರಿ, ವಿಶ್ವಾಮಿತ್ರ, ಮೈಸೂರು ಯಾತ್ರೆ ಮುಂತಾದ ಕೃತಿಗಳು ಇವರ ಉತ್ತಮ ಗದ್ಯಶೈಲಿಗೆ ಉದಾಹರಣೆಯಾಗಿವೆ. ಕೃಷ್ಣರಾಜೇಂದ್ರ ವಂಶಚರಿತ್ರೆ ಎಂಬ ಇವರ ಚಂಪೂಗ್ರಂಥ ಆಸ್ಥಾನ ವಿದ್ವತ್ಸಭೆಯ ಕವಿತಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆಯಿತು. ತೆಲುಗು ಸಾಹಿತ್ಯದ ವೀರೇಶಲಿಂಗಂ ಪಂತುಲು ಅವರ ಅನೇಕ ಕಾದಂಬರಿಗಳನ್ನೂ ನಾಟಕಗಳನ್ನೂ ಇವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಇವರು ಸಲ್ಲಿಸಿದ ಸಾರ್ವಜನಿಕ ಸೇವೆಯೂ ಗಣ್ಯವಾದುದು. ಕರ್ನಾಟಕ ಚಂದ್ರಿಕೆ ಎಂಬ ಪತ್ರಿಕೆಯನ್ನು 1911ರಲ್ಲಿ ಸ್ಥಾಪಿಸಿ ಸು. 14 ವರ್ಷಗಳ ಕಾಲ ನಡೆಸಿದರು. ಮೈಸೂರು ದಳವಾಯಿ ಪ್ರೌಢಶಾಲೆ, ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮುಂತಾದ ಹಲವು ಸಂಸ್ಥೆಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ಮೈಸೂರಿನಲ್ಲಿ ಅನಾಥ ಸಹಾಯಕ ಸಂಘವೊಂದನ್ನು ಆರಂಭಿಸಿ, 35 ವರ್ಷಗಳ ಕಾಲ ಅದರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಇವರ ಸಾಹಿತ್ಯ ಸೇವೆ ಮತ್ತು ಸಾರ್ವಜನಿಕ ಸೇವೆಗಳನ್ನು ಗಮನಿಸಿ ಮೈಸೂರು ನಾಗರಿಕರು 1927ರಲ್ಲಿ ಇವರಿಗೆ ಸುವರ್ಣಕಂಕಣವನ್ನು ತೊಡಿಸಿ ಗೌರವಿಸಿದರು. ಕನ್ನಡ ಸಾಹಿತ್ಯ ಪರಿಷತ್ತು 1952ರಲ್ಲಿ ಇವರನ್ನು ಸನ್ಮಾನಿಸಿತು. (ಡಿ.ವಿ.)

**ನಂಜನಗೂಡು ಸುಬ್ಬಾಶಾಸ್ತ್ರಿ:** 1834– 1906. ಸಂಸ್ಕೃತ ಮತ್ತು ಕನ್ನಡ ಪಂಡಿತರಾಗಿದ್ದ ಇವರು ಮೈಸೂರು ಮಹಾರಾಜರ ಆಸ್ಥಾನ ವಿದ್ವಾಂಸರೂ ಅಧ್ಯಾಪಕರೂ ಆಗಿದ್ದರು. ಚಾಮರಾಜೇಂದ್ರ ಕೃಪಾಪೋಷಿತ ಅರಮನೆ ನಾಟಕ ಸಂಘದಲ್ಲಿ ಬಸವಪ್ಪಶಾಸ್ತ್ರಿ, ಅಯ್ಯಶಾಸ್ತ್ರಿ, ಜಯರಾಯಾಚಾರ್ಯ ಮುಂತಾದ ಭಾಷಾಸೇವಕರೊಂದಿಗೆ ಕೂಡಿ ಕೆಲಸ ಮಾಡಿದರು. ರಂಗ ಪ್ರಯೋಗವಾಗಬೇಕಿದ್ದ ನಾಟಕಗಳ ಪೂರ್ವಪರೀಕ್ಷಣ ಮಂಡಲಿಯಲ್ಲಿದ್ದ ಇವರು ರಂಗಪ್ರಯೋಗದ ಸಾಧ್ಯಾಸಾಧ್ಯತೆಗಳನ್ನು ಚೆನ್ನಾಗಿ ತಿಳಿದಿದ್ದರು.

ಸಂಸ್ಕೃತದ ಮೃಚ್ಛಕಟಿಕ ಮತ್ತು ಮಾಳವಿಕಾಗ್ನಿಮಿತ್ರ ನಾಟಕಗಳನ್ನು ಇವರು ಕನ್ನಡಕ್ಕೆ ತಂದಿದ್ದಾರೆ. ಸೀತಾಚರಿತ್ರೆ ಮತ್ತು ಉತ್ತರ ಸೀತಾಚರಿತೆ ಇವರ ಸ್ವತಂತ್ರ ಕಾವ್ಯಗಳು. ಸಂಸ್ಕೃತದಲ್ಲಿ ವಿದ್ವಚ್ಚಕೋರಚಂದ್ರಿಕೆ ಮತ್ತು ಶಾರದಾಷ್ಟಕಾದಿ ಸ್ತೋತ್ರ ಎಂಬ ಗ್ರಂಥಗಳನ್ನು ಬರೆದಿದ್ದಾರೆ.

ಇವರು ಮೈಸೂರು ಅರಮನೆ ಮತ್ತು ಶೃಂಗೇರಿ ಪೀಠದಿಂದ ಸನ್ಮಾನಿತರಾಗಿದ್ದರು. ಪ್ರಸಿದ್ಧ ವಿದ್ವಾಂಸರುಗಳಾಗಿದ್ದ ನಂಜನಗೂಡು ಅನಂತನಾರಾಯಣಶಾಸ್ತ್ರಿ ಮತ್ತು ನಂಜನಗೂಡು ಶ್ರೀಕಂಠಶಾಸ್ತ್ರಿ ಇವರ ಪುತ್ರರು. (ಡಿ.ವಿ.)

**ನಂಜನಾಥಾಚಾರ್ಯ:** ಸು. 1500. ವೀರಶೈವ ಕವಿ. ವೈಷ್ಣವವಾದ ಖಂಡನ ಎಂಬ ಗ್ರಂಥದ ಕರ್ತೃ. ತಂದೆ ತ್ರಿಲೋಚನಾಚಾರ್ಯ. ಕೃತಿಯಲ್ಲಿ ಪದ್ಮಣಾಂಕನ (ಸು.1385) ಪದ್ಮರಾಜಪುರಾಣವನ್ನು ನಿರ್ದೇಶಿಸುವುದರಿಂದ ಅವನ ಕಾಲಕ್ಕಿಂತ ಈತ ಈಚಿನವನು. ವೈಷ್ಣವವಾದ ಖಂಡನ ಶಿವಾಧಿಕ್ಯ ಪ್ರತಿಪಾದನೆ ಈ ಕೃತಿಯ ಮೂಲಭೂತ ವೈಶಿಷ್ಟ್ಯ. ಇದು ಗದ್ಯರೂಪದಲ್ಲಿದೆ ತ್ರಿಭುವನತಾತನೆಂ ಬಾತ ಸ್ಥಾಪಿಸಹೊರಟ ವಿಷ್ಣು ಮಹತ್ತ್ವವನ್ನು ತಾನು ವಚನರೂಪಿನಿಂದ ಖಂಡಿಸಿ ಆ ವಚನದೆಡೆಗೆ ವೇದ ಪುರಾಣಾಗ ಮಾದಿಗಳಿಂದ ಆಧಾರಗಳನ್ನೊದಗಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ.

*

**ನಂಜಪ್ಪ,ಕೆ.ಎಲ್.:** 1914–90. ಭಾರತದ ಆಧುನಿಕ ಸಣ್ಣ ಕೈಗಾರಿಕೆಗಳ ಪಿತಾಮಹ. ಕಾರಚೂರು ಲಿಂಗಪ್ಪ ನಂಜಪ್ಪ ಇವರ ಪೂರ್ತಿ ಹೆಸರು. 1914 ಆಗಸ್ಟ್ 14ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಕಾರಚೂರು ಲಿಂಗಪ್ಪ, ತಾಯಿ ತಿಪ್ಪಮ್ಮ. ಆರಂಭಿಕ ಶಿಕ್ಷಣವನ್ನು ಬೆಂಗಳೂರಿನಲ್ಲಿ ಪಡೆದರು. ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ. ವಿದ್ಯಾರ್ಥಿಯಾಗಿದ್ದಾಗಲೇ ಬ್ರಿಟಿಷರ ವಿರುದ್ಧ ಅಸಹಕಾರ ಚಳವಳಿ ಮತ್ತು ಸತ್ಯಾಗ್ರಹಗಳಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸಿದರು (1928).

ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿವೇತನ ಪಡೆದು ಜಪಾನಿಗೆ ತೆರಳಿದರು (1937). ಅಲ್ಲಿ 5 ವರ್ಷಗಳ ಕಾಲ ಸಣ್ಣ ಕೈಗಾರಿಕೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದರು. ಜಪಾನಿನ ಯಾವುದೇ ಕೈಗಾರಿಕೋದ್ಯಮವನ್ನಾದರೂ ಅಧ್ಯಯನ ಮಾಡುವ ವಿಶೇಷ ರಹದಾರಿಯನ್ನು ಆ ಸರ್ಕಾರ ಇವರಿಗೆ ನೀಡಿತ್ತು. ಇಂತಹ ಅನುಮತಿ ಪಡೆದವರಲ್ಲಿ ಇವರೇ ಮೊದಲಿಗರು. ಮಿತ್ಸುಬುಷಿ ಎಕನಾಮಿಕ್ ರಿಸರ್ಚ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಾತ್ಯಕ್ಷಿಕೆಯ ತರಬೇತಿ ಪಡೆದರು.

ಈ ಅನುಭವದ ಹಿನ್ನೆಲೆಯಲ್ಲಿ ಸಣ್ಣ ಕೈಗಾರಿಕೋದ್ಯಮಕ್ಕೆ ನಿಶ್ಚಿತ ರೂಪರೇಷೆಗಳನ್ನು ಕೊಡುವಂತೆ ಪ್ರೇರಣೆ ಮತ್ತು ಪರಿಣತಿಯನ್ನು ರೂಢಿಸಿಕೊಂಡರು.

ಇವರು ಭಾರತಕ್ಕೆ ಮರಳಿದ ಬಳಿಕ ಭದ್ರಾವತಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಮಾರಾಟಾಧಿಕಾರಿಯಾಗಿ ವೃತ್ತಿಜೀವನ ಆರಂಭಿಸಿದರು (1942). ಇವರು ಕೈಗಾರಿಕಾ ಸಹ ನಿರ್ದೇಶಕರಾಗಿದ್ದ ಅವಧಿಯಲ್ಲಿ (1944) ಇವರಿಗೆ ಎಂ. ವಿಶ್ವೇಶ್ವರಯ್ಯನವರ ಸಹಯೋಗ ದೊರೆಯಿತು. ಅವರಿಂದ ಪ್ರಭಾವಿತರಾಗಿ ಭಾರತದಲ್ಲೇ ಪ್ರಪ್ರಥಮವಾಗಿ ಗ್ರಾಮೀಣ ಕೈಗಾರಿಕೆಗಳ ಬಗ್ಗೆ ಕಾರ್ಯಕ್ರಮ ರೂಪಿಸಿದರು. ಈ ಸಂಬಂಧವಾಗಿ ವಿಶ್ವೇಶ್ವರಯ್ಯನವರೊಂದಿಗೆ ಸಹ ಲೇಖಕರಾಗಿ ಎರಡು ಸಂಪುಟಗಳನ್ನು ಪ್ರಕಟಿಸಿದರು. ಮೈಸೂರು ಸಂಸ್ಥಾನದಲ್ಲಿ ಮೊತ್ತ ಮೊದಲಿಗೆ ಆರಂಭವಾದ ಮೈಸೂರು ರಾಜ್ಯ ಕೈಗಾರಿಕೆ ಮತ್ತು ವಾಣಿಜ್ಯ ಯೋಜನೆಗೆ ಪ್ರಥಮ ಕಾರ್ಯದರ್ಶಿಯಾಗಿ ನೇಮಕಗೊಂಡರು (1945). ಈ ಅವಧಿಯಲ್ಲಿ ಇವರ ಮಾರ್ಗದರ್ಶನದಲ್ಲಿ ಬೃಹತ್ ಮತ್ತು ಸಣ್ಣ ಕೈಗಾರಿಕೆಗಳು ಆಧುನೀಕರಣಗೊಂಡವು. ಇವರ ಮುಂದಾಳತ್ವ ಹಾಗೂ ದೂರದೃಷ್ಟಿಯ ಫಲವಾಗಿ ಬೆಂಗಳೂರಿನಲ್ಲಿ ಹಲವು ಸಣ್ಣ ಕೈಗಾರಿಕೆಗಳು ಸ್ಥಾಪನೆಗೊಂಡು ಬೃಹತ್ ಕೈಗಾರಿಕೆಗಳಾಗಿ ಮಾರ್ಪಾಡು ಹೊಂದಿದವು.

ಇವರಿಗೆ ಸಣ್ಣ ಕೈಗಾರಿಕೆಗಳಲ್ಲಿದ್ದ ಅನುಭವ ಪರಿಣತಿಗಳನ್ನು ಗುರುತಿಸಿದ ಭಾರತ ಸರ್ಕಾರ ಇವರನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದಲ್ಲಿ ಸಹ ನಿರ್ದೇಶಕರಾಗಿ ನೇಮಿಸಿತು (1949). ಅನಂತರ ಸ್ಥಾಪನೆಯಾದ ಗುಡಿಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಪ್ರಾಧಿಕಾರದ ಸ್ಥಾಪಕ ನಿರ್ದೇಶಕರಾದರು (1954). ಈ ಅವಧಿಯಲ್ಲಿ ಗೃಹ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮವಹಿಸಿದರು. ಅನಂತರ 1962 ರಲ್ಲಿ ಆರಂಭಗೊಂಡ ಭಾರತದ ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್‌ನ ಅಭಿವೃದ್ಧಿ ಕಮಿಷನರ್ ಆಗಿ ಅಧಿಕಾರ ವಹಿಸಿಕೊಂಡರು (1967). ಈ ಹುದ್ದೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದರಲ್ಲದೆ, ಕೈಗಾರಿಕಾ ವ್ಯವಸ್ಥಾಪಕರಿಗೆ ಎಲ್ಲ ಬಗೆಯ ಸೌಲಭ್ಯಗಳನ್ನು ಒದಗಿಸಿ ತಮ್ಮ ಕರ್ತೃತ್ವ ಶಕ್ತಿಯನ್ನು ಮೆರೆದರು. ಇವರ ನಿಸ್ವಾರ್ಥ ಸೇವೆಗಾಗಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ (1972).

ನಂಜಪ್ಪನವರು ಅಂತಾರಾಷ್ಟ್ರೀಯಮಟ್ಟದಲ್ಲೂ ಖ್ಯಾತಿ ಪಡೆದಿದ್ದರು. ಸು. 20 ರಾಷ್ಟ್ರಗಳು ಇವರನ್ನು ಆಹ್ವಾನಿಸಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಇವರ ಸಲಹೆಗಳನ್ನೂ ಸೇವೆಯನ್ನೂ ಪಡೆದವು. ನಿವೃತ್ತರಾದ ಬಳಿಕವೂ ಭಾರತದ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲೂ ಬಲಪಡಿಸಲೂ ಅವಿಶ್ರಾಂತವಾಗಿ ದುಡಿದ ಇವರು 1990 ಅಕ್ಟೋಬರ್ 8 ರಂದು ಬೆಂಗಳೂರಿನಲ್ಲಿ ನಿಧನರಾದರು. **(ಟಿ.ವಿ.ಎಸ್.ಆರ್)**

**ನಂಜಯ್ಯ[1]:** ಕರ್ನಾಟಕದ ಜನಪದ ಆರಾಧ್ಯದೈವಗಳಲ್ಲಿ ಪ್ರಸಿದ್ಧನಾದವ. ದಕ್ಷಿಣಕಾಶಿಯೆಂದು ಪ್ರಸಿದ್ಧವಾದ ನಂಜನಗೂಡು **(ನೋಡಿ)** ಈ ನಂಜಯ್ಯ (ನಂಜುಂಡೇಶ್ವರ) ನೆಲೆಸಿರುವ ಕ್ಷೇತ್ರ. ಸಮುದ್ರಮಥನ ಕಾಲದಲ್ಲಿ ಹುಟ್ಟಿದ ವಿಷವನ್ನು ಸೇವಿಸಿ ಕಂಠದಲ್ಲಿ ಧರಿಸಿದ್ದರಿಂದ ಶಿವ ವಿಷಕಂಠನಾದ, ನಂಜುಂಡೇಶ್ವರನಾದ ಎಂದು ಪುರಾಣಗಳು ಹೇಳುತ್ತವೆ. ಆದರೆ ಜನಪದ ಗೀತೆಗಳನ್ನು ಕಟ್ಟಿದ ಕವಿಗಳ ದೃಷ್ಟಿಯೇ ಬೇರೆ. ಈ ನಂಜಯ್ಯನನ್ನು ಕುರಿತು ತ್ರಿಪದಿಯಲ್ಲಿ ಹೇಳಿರುವ ಕಥೆ ಹೀಗಿದೆ: ಕಪಿನಿ ಮತ್ತು ಗುಂಡ್ಲುಹೊಳೆಯ ಮಧ್ಯೆ ಇರುವ ನಂಜನಗೂಡು ಜಂಗಮರ ಪಟ್ಟಣವೆಂದು ಪ್ರಸಿದ್ಧವಾದದ್ದು. ಶಿವಜಂಗಮನಾದ ನಂಜಯ್ಯ ವಾಸಿಸುವ ಗುಡಿ (ಮಠ) ಹಿಪ್ಪೆ ತೋಪಿನಲ್ಲಿದೆ. ಅದರ ಬಳಿ ಸೂಳೆಯರ ಬೀದಿಯೂ ಇರುವುದನ್ನು ಮೆಚ್ಚಿಯೇ ನಂಜಯ್ಯ ಅಲ್ಲಿ ನೆಲೆಗೊಂಡ. ಆತನ ಹೆಂಡತಿ ದೇವೀರಿ (ದೇವಾರಿ). ಗುಡಿಯ ಕಳಸ ಚಿನ್ನದ್ದು. ಗುಡಿಯಲ್ಲಿ ಗಂಧದ ಪರಿಮಳ ತುಂಬಿದೆ. ಎಂಟೆಂಟು ದಿವಸಕ್ಕೋ ತಿಂಗಳಿಗೊಮ್ಮೆಯೋ ಇಲ್ಲಿ ಪೂಜೆ ನಡೆಯುತ್ತದೆ. ನಂಜನಗೂಡಿಗೆ ಹೋಗುವ ದಾರಿಯಲ್ಲಿ ಕಲ್ಲುಮುಳ್ಳುಗಳಿಲ್ಲದಂತೆ ದಾರಿಯುದ್ದಕ್ಕೂ ದವನದ ತೋಟವೇ. ನಂಜಯ್ಯನಿಗೆ ತುಂಬೆ ಹೂವಿನ ಪೂಜೆ ನಡೆಯುತ್ತದೆ. ಕಂಬಿ ಸೀರೆಯನ್ನು ಕಾಸೆಹಾಕಿ ಉಟ್ಟ ಸಂಬಳದ ಸೂಳೆಯರು ಆರತಿ ಬೆಳಗುವರು. ಅವನು ಗೊಂಬೆತೇರು ಹತ್ತಿ ಉತ್ಸವ ಹೊರಟಾಗ ಅವನ ಜೊತೆಗೆ ಇನ್ನೂ ಐದು ತೇರುಗಳೂ ನಂದಿಕೋಲುಗಳೂ ಹಿಂಬಾಲಿಸುತ್ತವೆ. ಜನ ಎಸೆವ ಹಣ್ಣು ದವನ ಹಾರಾಡುತ್ತವೆ. ಆಗ ಆರು ತೇರಿನ ಅರಸ, ಮೂರುತೇರಿನ ಮುನಿ, ಗೊಂಬೆತೇರಿನ (ದಳಪತಿ) ಗುರಿಕಾರನಾದ ಭೋಗಿ ನಂಜಯ್ಯ ನಿನ್ನನ್ನು ಹಡೆದವ್ವ ಧನ್ಯಳು ಎಂದು ಜನ ಹೊಗಳುತ್ತಾರೆ.

ನಂಜಯ್ಯ ಮಹಾ ರಸಿಕ. ಪ್ರತಿದಿನವೂ ಆತ ಸೂಳೆಯರಿಂದ ಸೇವಿಸಿಕೊಳ್ಳುತ್ತಾನೆ. ಅವರೊಡನೆ ಪಗಡೆಯಾಡುತ್ತಾನೆ. ಆತ ಎಂಥ ರಸಿಕಜೀವಿಯೆಂದರೆ ಬೆಟ್ಟದ ಚಾಮಾಯಿ (ಚಾಮುಂಡಿ) ನಂಜನಗೂಡು ಹೊಳೆಗೆ ಬಂದು ಜಳಕ ಮಾಡುತ್ತಿರುವಾಗ ವೇಷಮರೆಸಿಕೊಂಡು ಹೋಗಿ ಅವಳ ಸೀರೆಯನ್ನು ಬಚ್ಚಿಟ್ಟು ಬಹಳ ಹೊತ್ತು ಕಾಡಿಸಿ ಕೊನೆಗೆ ಕೊಟ್ಟವ. ಬೆಟ್ಟದ ಚಾಮುಂಡಿ ಅವನ ಪ್ರೀತಿಯ ಸೂಳೆ. ಆಗಾಗ ಬೆಟ್ಟಕ್ಕೆ ಹೋಗಿ ಬರುತ್ತಾನೆ. ಒಂದು ದಿನ ರಾತ್ರಿ ಅವನಿಗೆ ಬೆಟ್ಟಕ್ಕೆ ಹೋಗುವ ಮನಸ್ಸಾಗಿ ಪಕ್ಕದಲ್ಲಿ ಮಲಗಿದ್ದ ದೇವೀರಿಗೆ ತಿಳಿಯದಂತೆ ಕಾವಿಕಂತೆ ಧರಿಸಿ, ಕೈಯಲ್ಲಿ ನಾಗಬೆತ್ತ ಹಿಡಿದು, ಸೇರುಪಾವು ಬಟ್ಲಡಿಕೆ, ಬಿಳಿ ಎಲೆ ತೆಗೆದುಕೊಂಡು, ಮಂದಿಯಿಂದ ಪಂಜನ್ನು ಹಿಡಿಸಿಕೊಂಡು, ಚಾಮುಂಡಿಯ ಅರಮನೆಗೆ ಹೋದ. ತಾವರೆ ಮೈಯಿನ ಚಾಮುಂಡಿ ಪನ್ನೀರಿಂದ ಪಾದ ತೊಳೆದು, ಮುತ್ತಿನ ಸೆರಗಿನಿಂದ ಒರೆಸಿ ಒಳಗೆ ಕರೆದೊಯ್ದು ಹಾಲು ಸಕ್ಕರೆ ಎಡೆಮಾಡಿ ಗಲಿಗಲಿ ಮಂಚದ ಮೇಲೆ ಕುಳ್ಳಿರಿಸಿ ವೀಳೆಯವಿತ್ತಳು. ಪಗಡೆ ಆಟದೊಂದಿಗೆ ನಂಜಯ್ಯ ಆ ರಾತ್ರಿಯನ್ನು ಅವಳೊಂದಿಗೆ ಕಳೆದ. ಅರ್ಧರಾತ್ರಿಯಲ್ಲಿ ಎಚ್ಚರಗೊಂಡ ದೇವೀರಿ ತನ್ನ ಗಂಡ ಪಕ್ಕದಲ್ಲಿ ಇಲ್ಲದ್ದನ್ನು ನೋಡಿದಳು. ಅವಳ ಸಂಶಯ ಬಲವಾಯಿತು. ಅವನು ಬೆಟ್ಟದ ಹೆಣ್ಣಿನ ಸ್ನೇಹ ಮಾಡಿರುವ ವಿಚಾರ ಅವಳಿಗೂ ಸ್ವಲ್ಪ ಗೊತ್ತಿತ್ತು. ಬೆಳಗ್ಗೆ ಬಂದ ಗಂಡನೊಂದಿಗೆ ವಾಗ್ವಾದ ಹೂಡಿದಳು. ಅವರಿಬ್ಬರಿಗೂ ಬಿರುಸಿನ ಸಂಭಾಷಣೆ ನಡೆಯಿತು. ತನಗೆ ವಯಸ್ಸಾಯಿತೆಂದೂ ಈ ವಯಸ್ಸಿನಲ್ಲಿ ಸೂಳೆಯ ಸಹವಾಸವೇ ಎಂದೂ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ನಂಜಯ್ಯ ಪ್ರಯತ್ನಿಸಿ ಕೊನೆಗೆ ಸೋತ. ದೇವೀರಿ ಗಂಡನ ಚಾತುರ್ಯವನ್ನು ನೋಡಿ ಹುಣಿಸೆಮರ ಮುಪ್ಪಾದರೆ ಹುಳಿ ಮುಪ್ಪಾದಾತಾ, ಜವನ (ದವನ) ಒಣಗಿದರೆ ಅದರ ಘಮಲು ಹೋದಾತಾ, ಕಾಲಕ್ಕೂ ಬಿಡಲಿಲ್ಲ ನಿಮ್ಮ ಕಳ್ಳಬುದ್ದೀನ, ನಿಮ್ಮಾಸೆ ತೊಡೆಯಾ, ಹೋಗಿ ಸೀಗೇ ಹಾಕ್ಕೊಂಡು ತಲೇ ತೊಳೆದು ಹೊಳೇಲಿ ಮುಳುಗಿ ಬನ್ನಿ ಎಂದ ಮಾತಿಗೆ ನಂಜಯ್ಯ ಕಪಿನಿ ಹೊಳೆಯಲ್ಲಿ ಸ್ನಾನ ಮಾಡಿ ಬಂದ. ಅನಂತರ ಮನ ಕರಗಿದ ದೇವೀರಿ ಗಿಂಡಿಯಲ್ಲಿ ನೀರು ತಂದು ಅವನ ಪಾದ ತೊಳೆದು ಗುಡಿಯೊಳಗೆ ಕರೆದುಕೊಂಡಳು.

ಕರ್ನಾಟಕದ ನಾನಾ ಭಾಗಗಳಲ್ಲಿ ಈ ನಂಜಯ್ಯನಿಗೆ ಸಂಬಂಧಿಸಿದ ಜನಪದ ಕಥೆ, ಗೀತೆ, ಲಾವಣಿ, ಐತಿಹ್ಯಗಳು ಅಪಾರವಾಗಿ ಲಭ್ಯವಾಗುತ್ತವೆ. ಜನಪದ ವೃತ್ತಿಗಾಯಕರಲ್ಲಿ ಅನೇಕ ಸಂಪ್ರದಾಯದವರು ನಂಜಯ್ಯ ಚಾಮುಂಡಿಯರನ್ನು ಕುರಿತ ಕಾವ್ಯಗಳನ್ನು ಹಾಡುತ್ತಾರೆ. ಹೆಳವರು

ಚಾಮುಂಡಿಪುರಾಣ ಎಂಬ ಹೆಸರಿನಲ್ಲಿ ಈ ಕಥೆಯನ್ನು ಸವಿಸ್ತಾರವಾಗಿ ಹಾಡುತ್ತಾರೆ. ಹೆಣ್ಣುಮಕ್ಕಳು ಹಾಡುವ ತ್ರಿಪದಿ ರೂಪದ ಹಾಡುಗತೆಗಳು ಹೇರಳವಾಗಿ ಸಿಕ್ಕುತ್ತವೆ. ಈ ಕಥೆಗಳಲ್ಲೆಲ್ಲಾ ಶಿವಕಥೆಯ ಸ್ಥೂಲರೇಖೆಯನ್ನು ಗುರುತಿಸಬಹುದು. ಶಿವಗಿರಿಜೆಯರ ಕಲ್ಯಾಣ, ಗಿರಿಜೆಯ ಮೇಲೆ ಶಿವ ಗಂಗೆಯನ್ನು ತಂದ ಪ್ರಸಂಗ ಅತ್ಯಂತ ಜನಪ್ರಿಯವಾದ ಕಥೆ. ಈ ಗಂಗೆಯ ಪ್ರಸಂಗವೇ ಸ್ಥಳೀಯ ಹಿನ್ನೆಲೆಯಲ್ಲಿ ನಂಜಯ್ಯ ಚಾಮುಂಡಿ ಇವರ ಪ್ರಣಯಕಥೆಯಾಗಿ ರೂಪುಗೊಂಡಿದೆ. ತನ್ನ ಮಡದಿಯ ಮೇಲೆ ಉಪಪತ್ನಿಯನ್ನು ತರುವ ಆಶಯ ಅನೇಕ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಹಬ್ಬಿ ನಿಂತಿದೆ. ಬಿಳಿಗಿರಿರಂಗ–ಕುಸುಮಾಲೆ, ಚುಂಚನಗಿರಿ ಭೈರವ–ಮಾಳವಿ, ಮೇಲುಕೋಟೆ ಚಲುವರಾಯ–ವರನಂದಿ ಇವರ ಸಂಬಂಧ ಈ ತೆರನಾದುದು. ಇನ್ನೂ ಅನೇಕ ಕ್ಷೇತ್ರಗಳಲ್ಲಿ ಈ ಬಗೆಯ ಕಥೆಗಳು ಕಾಣಬರುತ್ತವೆ. ಆದರೆ ಒಂದು ಸುಸಂಬದ್ಧ ಕಾವ್ಯವಾಗಿ ರೂಪುಗೊಂಡಿರುವುದು ನಂಜಯ್ಯನ ಕಥೆ ಮಾತ್ರ.

ಜನಪದ ಕಾವ್ಯಗಳಲ್ಲಿ ನಂಜಯ್ಯ ದೊಡ್ಡ ರಸಿಕನಾಗಿ ಚಿತ್ರಿತನಾಗಿದ್ದಾನೆ. ಅವನು ದೇವೀರಿ ಮತ್ತು ಪಾರ್ವತಿ ಎಂಬ ಪತ್ನಿಯರನ್ನು ಪಡೆದುದಾದರೂ ಚಾಮುಂಡಿಯ ಪ್ರಣಯ ಸಂಬಂಧವನ್ನು ಪಡೆದ ಅನಂತರ ಚಾಮುಂಡಿ ಇವನನ್ನು ಯಾವುದೋ ಸಂದರ್ಭದಲ್ಲಿ ಉಪೇಕ್ಷಿಸಿದಾಗ ಅವಳಿಗಿಂತ ಮೇಲಾದ ಪತ್ನಿಯರನ್ನು ತರುವುದಾಗಿ ಹೇಳಿ ಹೊರಟು ದೊಡ್ಡ ಸಾಹಸಯಾತ್ರೆಯನ್ನೇ ಮಾಡುತ್ತಾನೆ. ದೇವಲೋಕ ನಾಗಲೋಕಗಳಿಗೆ ಹೋಗಿ ಅವರಿಬ್ಬರನ್ನು ತರುತ್ತಾನೆ. ತಂದ ಮೇಲೆ ನಂಜಯ್ಯ ಚಾಮುಂಡಿಯೊಡನೆ ಇಟ್ಟುಕೊಂಡ ಪ್ರಣಯಸಂಬಂಧ ಅವರಿಗರಿವಾಗುತ್ತದೆ. ಉಪಾಯಾಂತರದಿಂದ ನಂಜಯ್ಯ ಚಾಮುಂಡಿಯನ್ನು ಜೊತೆಗೂಡಿ ಪಾರ್ವತಿ, ದೇವೀರಿಯರ ಮನಸ್ಸನ್ನು ಒಲಿಸಿಕೊಳ್ಳುವ ವಿಶಿಷ್ಟ ತಂತ್ರ ಈ ಕಾವ್ಯದ ಉತ್ತರಾರ್ಧದಲ್ಲಿ ಕಂಡುಬರುತ್ತದೆ. ಅವರ ಪ್ರಣಯ ಚಿರಂತನವಾಗಿ ನಿಲ್ಲುತ್ತದೆ.

ಈ ಕಥಾವಸ್ತುವಿನ ಹಿನ್ನೆಲೆಯಲ್ಲಿ ಬೇರೆ ಬೇರೆಯ ರೂಪಗಳಲ್ಲಿ ನಂಜಯ್ಯನ ಕಥೆ ಜನಪದ ಜೀವನದಲ್ಲಿ ಪ್ರಚಲಿತವಾಗಿದೆ. ಈ ಕಾವ್ಯವಲ್ಲದೆ ಬೇರೆ ಬೇರೆ ಕಾವ್ಯಗಳಲ್ಲೂ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ನಂಜಯ್ಯನ ಪ್ರಸ್ತಾಪ ಪ್ರಾಸಂಗಿಕವಾಗಿ ಬರುತ್ತದೆ. ದಕ್ಷಿಣ ಕರ್ನಾಟಕದ ಎಲ್ಲ ಭಾಗಗಳಲ್ಲೂ ನಂಜಯ್ಯ ಜನಪ್ರಿಯ ದೈವವಾಗಿ ಜನಪದ ಕಾವ್ಯದ ಒಬ್ಬ ವಿಶಿಷ್ಟ ನಾಯಕನಾಗಿ ನಿಲ್ಲುತ್ತಾನೆ.

ಐತಿಹ್ಯಗಳ ಪ್ರಕಾರ ನಂಜಯ್ಯ ಬಹು ದೊಡ್ಡ ವೈದ್ಯ. ಒಳರೋಗದ ಗಂಡ, ಹಕೀಮ್ ನಂಜುಂಡ ಮುಂತಾದ ಹೆಸರಿನಲ್ಲಿ ಅವನು ಜನಪ್ರಿಯನಾಗಿದ್ದಾನೆ. ನಂಜಯ್ಯನಿಗೆ ಹರಸಿಕೊಂಡರೆ ಕೆಲರೋಗಗಳು ಗುಣವಾಗುತ್ತವೆ ಎಂದು ಜನ ನಂಬುತ್ತಾರೆ. ನಂಜಯ್ಯ ಟಿಪ್ಪು ಸುಲ್ತಾನನ ಆನೆಯ ರೋಗವನ್ನು ನಿವಾರಿಸಿ ಅವನಿಂದಲೂ ಪೂಜೆಯನ್ನು ಸ್ವೀಕರಿಸಿದ ಎಂಬ ಪ್ರತೀತಿ ಇದೆ. *

**ನಂಜಯ್ಯ[2] :** ಸು.1750. ಯಕ್ಷಗಾನ ಕವಿ. ಈತ ಮೂಗೂರು ಅರಸುಗಳ ವಂಶಕ್ಕೆ ಸೇರಿದವ. ಈತನ ವಂಶಪರಂಪರೆ ಹೀಗಿದೆ. ಬಾಗಿಳಿ ಕೆಂಪ ಭೂಪಾಲನ ಮಗ ವೇಶಭೂಪತಿ, ಆತನ ಮಗ ಆಹವವಿಜಯ, ಅವನ ಮಗ ಮಹಲಿಂಗರಾಜೇಂದ್ರ, ಆತನ ಮಗನೇ ಕವಿ ನಂಜಯ್ಯ.

ಈತ ಕಪೋತವಾಕ್ಯ ಮತ್ತು ಶಬರಧನಂಜಯವಿಲಾಸಮಂಜರಿ ಎಂಬೆರಡು ಯಕ್ಷಗಾನ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಎರಡನೆಯದು ಅನುಪಲಬ್ಧ. ವಾಲ್ಮೀಕಿ ರಾಮಾಯಣದ ಸುಂದರಕಾಂಡದ ಮೂರನೆಯ ಸಂಧಿಯಲ್ಲಿ ಬರುವ ಸೂರ್ಯಕುಮಾರನಾದ ಸುಗ್ರೀವ ಶ್ರೀರಾಮನ ಬಳಿಗೆ ಬಂದು ಆಶ್ರಯ ಪಡೆದಾಗ ಶ್ರೀರಾಮ ಸುಗ್ರೀವನಿಗೆ ಹೇಳುವ ಕಪೋತಕಥೆಯೇ ಕಪೋತವಾಕ್ಯದ ವಸ್ತು. *

**ನಂಜಯ್ಯ[3]:** ಸು. 1860. ಯಕ್ಷಗಾನ ಕವಿ. ತ್ರಿಪುರದಹನ, ರಾಧಾವಿಲಾಸ, ಸೋಮಶೇಖರ ಚಿತ್ರಶೇಖರ ಕಥೆ ಎಂಬ ಯಕ್ಷಗಾನಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಈತ ದಕ್ಷಿಣ ಕನ್ನಡ ಜಿಲ್ಲೆಯವನು. ಅಳಿಯ ಲಿಂಗರಾಜನ (1823– 74) ಆಶ್ರಿತನಾಗಿ ಮೈಸೂರಿನಲ್ಲಿ ನೆಲೆಸಿದ. ಇವನು ತನ್ನ ಗ್ರಂಥಗಳಲ್ಲಿ ಸ್ವಹೆಸರನ್ನು ಹೇಳಿಕೊಂಡಿಲ್ಲ. ಎಲ್ಲವೂ ಮಂಜುನಾಥ ಎಂಬ ಅಂಕಿತದಲ್ಲಿವೆ.

ಈಶ್ವರ ಪಾಶುಪತಾಸ್ತ್ರದಿಂದ ತ್ರಿಪುರಗಳನ್ನು ದಹಿಸಿದ ಕಥೆ ತ್ರಿಪುರದಹನ ಯಕ್ಷಗಾನದ ವಸ್ತು. ಇದರಲ್ಲಿ ಒಟ್ಟು 320 ಪದ್ಯಗಳಿವೆ. ರಾಧಾಕೃಷ್ಣರ ಲೀಲಾ ವಿನೋದಗಳು ರಾಧಾವಿಲಾಸದ ವಸ್ತು. ಇದರಲ್ಲಿ ಒಟ್ಟು 241 ಪದ್ಯಗಳಿವೆ. ವಜ್ರಮುಕುಟರಾಯನ ಪುತ್ರರಾದ ಸೋಮಶೇಖರ ಚಿತ್ರಶೇಖರರ ಕಥೆ ಸೋಮಶೇಖರ ಚಿತ್ರಶೇಖರ ಯಕ್ಷಗಾನದ ವಸ್ತು. ಈ ಯಕ್ಷಗಾನ ಕೃತಿಗಳಲ್ಲಿ ಕವಿ ವಿವಿಧ ಛಂದಸ್ಸುಗಳನ್ನು ಬಳಸಿದ್ದಾನೆ.

ಇವನು ಮೋಹವಿವೇಕ ಕಾಳಗ, ಹರಿಶ್ಚಂದ್ರೋಪಾಖ್ಯಾನ, ಬಲಿಚಕ್ರವರ್ತಿಯ ಚರಿತೆ, ಸಾರಂಗಧರನ ಕಥೆ, ಚಂದ್ರಹಾಸನ ಕಥೆ ಎಂಬ ಗ್ರಂಥಗಳನ್ನೂ ರಚಿಸಿದಂತೆ ತೋರುತ್ತದೆ. *

**ನಂಜರಾಜ ಒಡೆಯರ್:** ಮೈಸೂರು ರಾಜವಂಶದ ನಾಮಮಾತ್ರ ರಾಜ (1766– 70). ಇಮ್ಮಡಿ ಕೃಷ್ಣರಾಜ 1766ರಲ್ಲಿ ನಿಧನ ಹೊಂದಿದಾಗ ಅವನ ಮಗನಾದ ಈತನನ್ನು, ಹೈದರನ ಅಭಿಪ್ರಾಯಕ್ಕೆ ಅನುಸಾರವಾಗಿ ಪಟ್ಟಕ್ಕೇರಿಸಲಾಯಿತು. 18 ವರ್ಷದ ಯುವಕನಾದ ನಂಜರಾಜ ಹೈದರನ ಹತೋಟಿಯಲ್ಲಿರಲು ಇಷ್ಟಪಡಲಿಲ್ಲ. ಈತನ ಸ್ವತಂತ್ರ ಪ್ರವೃತ್ತಿಯನ್ನು ಅರಿತ ಹೈದರ್ ರಾಜನಿಗೆ ಸಂದಾಯವಾಗುತ್ತಿದ್ದ ಮೂರು ಲಕ್ಷ ವರಹಗಳನ್ನು ನಿಲ್ಲಿಸಿ, ಅರಮನೆಯ ನಗನಾಣ್ಯಗಳನ್ನು ಕಸಿದುಕೊಂಡು ಇವನ ಸ್ವಾತಂತ್ರ್ಯವನ್ನೂ ಮೊಟಕುಮಾಡಿದ. ಹೈದರ್ ಮಲಬಾರಿನಲ್ಲಿ ತೇಜೋವಧೆ ಹೊಂದಿದ ಸನ್ನಿವೇಶವನ್ನು ಉಪಯೋಗಿಸಿಕೊಂಡು ಅವನ ಅಧಿಕಾರವನ್ನು ಕಿತ್ತೊಗೆಯಲು ಪ್ರಯತ್ನಪಟ್ಟ. ಈ ಗುರಿಯನ್ನು ಸಾಧಿಸುವುದಕ್ಕಾಗಿ ಮೈಸೂರು ರಾಜರೊಡನೆ ಮೈತ್ರಿಯಿಂದಿದ್ದ ಮರಾಠರೊಡನೆ ಸಂಧಾನ ನಡೆಸಿ, ಹೈದರನ ನಿಗ್ರಹಕ್ಕೆ ಸನ್ನದ್ಧನಾದ. ಆದರೆ ಸಹಕಾರಿಯಾಗಲು ಬಂದವರ ಸ್ವಾರ್ಥಸಾಧನೆ ನಂಜರಾಜನ ಉದ್ದೇಶಕ್ಕೆ ಧಕ್ಕೆತಂದಿತು. ಮೈಸೂರಿನ ಮೇಲೆ ದಾಳಿ ನಡೆಸುವ ಯತ್ನದಲ್ಲಿ ಮರಾಠರು ಹೈದರಾಬಾದಿನ ನಿಜಾಮನೊಡನೆ ಸೇರಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಮಾಧವರಾಯನ ನೇತೃತ್ವದಲ್ಲಿ ಮರಾಠರು ಮೈಸೂರು ರಾಜ್ಯದಲ್ಲಿ ಕಾಣಿಸಿಕೊಂಡಾಗ, ಹೈದರ್ ಅವರನ್ನು ತಡೆಯಲು ಯತ್ನಿಸಿ ವಿಫಲನಾದ. ಆದರೆ ಅವರೊಡನೆ ಒಪ್ಪಂದವನ್ನು ಮಾಡಿಕೊಂಡ. ಒಪ್ಪಂದಕ್ಕೆ ಅನುಸಾರವಾಗಿ ಹೈದರ್ ಅವರಿಗೆ 35 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಮರಾಠರ ಸಹಾಯಕ್ಕೆ ಬಂದ ನಿಜಾಮನೊಡನೆ ಹೈದರ್ ಸ್ನೇಹ ಸಂಬಂಧವನ್ನು ಬೆಳೆಸಿಕೊಂಡ. ನಂಜರಾಜನಿಗೆ ಲಾಭವೇನೂ ಆಗಲಿಲ್ಲ. ಹೈದರನ ಕೃಪೆಯಲ್ಲೇ ತನ್ನ ಜೀವಮಾನವನ್ನು ಕಳೆದು 1770ರಲ್ಲಿ ನಿಗೂಢ ಮರಣಕ್ಕೀಡಾದ. (ಕೆ.ಟಿ.ಆರ್.)

**ನಂಜುಂಡಕವಿ:** ಸು. 1525. ರಾಮನಾಥಚರಿತ ಎಂಬ ಕಾವ್ಯದ ಕರ್ತೃ. ಈತನ ತಂದೆ ಎರಡನೆಯ ಮಾಧವ. ಜಯನೃಪಕಾವ್ಯದ ಕರ್ತೃ ಮೂರನೆಯ ಮಂಗರಸ (ಸು.1508) ಇವನ ದೊಡ್ಡಪ್ಪ, ಚಂಗಾಳ್ವ

ದೊರೆ ನಂಜರಾಜನಿಗಾಗಿ (1502–33) ಯುದ್ಧಮಾಡಿ ಮಡಿದ ಎರಡನೆಯ ವಿಜಯ ಇವನ ಚಿಕ್ಕಪ್ಪ. ವಿಜಯನೃಪಾಲ ಕವಿಯ ತಾತನೆಂದು ತಿಳಿದು ಬರುತ್ತದೆ. ಕವಿ ಮೊದಲಿಗೆ ಜೈನನಾಗಿದ್ದು ಅನಂತರ ಶೈವಧರ್ಮೀಯನಾದಂತೆ ತಿಳಿದುಬರುತ್ತದೆ.

ರಾಮನಾಥಚರಿತ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 12 ಆಶ್ವಾಸಗಳೂ 47 ಸಂಧಿಗಳೂ 5807 ಪದ್ಯಗಳೂ ಇವೆ. ಇದಕ್ಕೆ ಕುಮಾರರಾಮನ ಸಾಂಗತ್ಯ ಎಂಬ ಹೆಸರೂ ಇದೆ. ಈ ಕಥೆಯನ್ನು ಕವಿ ತಾನು ರಸದಿಂ ಪುಟ್ಟಿಸಿ ಭಾವದಿಂ ಬಲಿಯಿಸಿ ಪೊಸಬಗೆವೆತ್ತ ಲಂಕೃತಿಯ ಎಸಕದಿಂ ಬಳೆಯಿಸಿ ಕೃತಿಯೆನಿಸಿದ್ದೇನೆ ಎಂಬುದಾಗಿ ಹೇಳಿಕೊಂಡಿದ್ದಾನೆ.

ಕಥಾವಸ್ತು ಹೀಗಿದೆ: ಶಿವಾಣಿಯ ಪ್ರತಿಜ್ಞೆ ಕಾರಣವಾಗಿ ಗಂಧರ್ವನಾಗಿದ್ದ ಅರ್ಜುನ ಹೊಸಮಲೆದುರ್ಗದ ದೊರೆಯಾದ ಕಂಪಿಲನ ಪಟ್ಟದರಸಿ ಹರಿಹರದೇವಿಯವರಿಗೆ ಮಗನಾಗಿ ಕುಮಾರರಾಮ ಹುಟ್ಟಿದ. ಊರ್ವಶಿಯು ಕಂಪಿಲನ ಕಿರಿಯ ಮಡದಿ ರತ್ನಾಜಿಯಾಗಿ ಜನಿಸಿದಳು. ಬೆಳೆದು ದೊಡ್ಡವನಾದ ಕುಮಾರರಾಮ ಪರಾಕ್ರಮ ಮೆರೆದು ಹುಳಿಹೇರುಗೌಡ ಮೊದಲಾದವರ ಸೊಕ್ಕಡಗಿಸಿದ. ಡಿಲ್ಲಿಯ ಸುರತಾಳನಿಂದ ತಪ್ಪಿಸಿಕೊಂಡು ಓಡಿಬಂದ ಬಾದುರಖಾನನಿಗೆ ಆಶ್ರಯ ನೀಡಿ ನೇಮಿಖಾನನ ಸೈನ್ಯವನ್ನು ಹಿಮ್ಮೆಟ್ಟಿಸಿದ. ಶೂಲದ ಹಬ್ಬದಲ್ಲಿ ರತ್ನಾಜಿಗೆ ರಾಮನನ್ನು ಕಂಡು ಮೋಹವಂಕುರಿಸಿತು. ಕುಮಾರರಾಮ ಮತ್ತು ಆತನ ಗೆಳೆಯರು ಮುತ್ತಿನ ಚಂಡಾಟವಾಡಬೇಕೆಂದು ಬಯಸಿದ ದಿನ ಕಂಪಿಲರಾಯ ಬೇಟೆಗೆ ಹೋಗಿದ್ದ. ಆಟದಲ್ಲಿ ರತ್ನಾಜಿಯ ಅಂತಃಪುರಕ್ಕೆ ಸಿಡಿದು ಬಿದ್ದ ಮುತ್ತಿನ ಚೆಂಡನ್ನು ತರಹೋದ ರಾಮನು ಕಾಮಾತುರಳಾಗಿ ಮೇಲೆಬಿದ್ದ ರತ್ನಾಜಿಯನ್ನು ಜರಿದು ನಿವಾರಿಸಿ ಅಲ್ಲಿಂದ ಹೇಗೋ ಪಾರಾಗಿ ಬಂದ. ರತ್ನಾಜಿ ಸೇಡಿನಿಂದ ರಾಮನ ಮೇಲೆ ಸಲ್ಲದ ಅಪವಾದ ಹೊರಿಸಿದಳು. ರತ್ನಾಜಿಯ ಸುಳ್ಳನ್ನು ನಂಬಿದ ಕಂಪಿಲ ರಾಮನನ್ನು ಕೊಲ್ಲಿಸಲು ಆಜ್ಞೆಮಾಡಿದ. ರಾಜನ ದುಡುಕನ್ನು ತಿಳಿದ ಮಂತ್ರಿ ಬೈಚಪ್ಪ ಉಪಾಯದಿಂದ ರಾಮನಿಗೆ ನೆಲಮಾಳಿಗೆಯಲ್ಲಿ ರಕ್ಷೆ ನೀಡಿದ. ರಾಮನ ಮರಣ ವಾರ್ತೆ ತಿಳಿದ ಡಿಲ್ಲಿಯ ಸುರತಾಳ ಹೊಸಮಲೆದುರ್ಗವನ್ನು ಮುತ್ತಲು ಸೈನ್ಯ ಕಳುಹಿಸಿದ. ಆ ಸಂದರ್ಭದಲ್ಲಿ ದಾಳಿಯಿಟ್ಟ ನೇಮಿಯನ್ನು ರಾಮನೇ ಹಿಂದೋಡಿಸಬೇಕಾಯಿತು. ಪೂರ್ವಜನ್ಮದ ಸೇಡಿಗಾಗಿ ಸುರತಾಳನಲ್ಲಿ ಮಾತಂಗಿಯಾಗಿದ್ದ ಗಾಂಧಾರಿಯ ಎದುರು ಹೋರಾಡುತ್ತ ರಾಮ ಯುದ್ಧರಂಗದಲ್ಲಿ ಮಡಿದ. ರಾಮನ ಪರಾಕ್ರಮವನ್ನು ಕಂಡು ಮೋಹಿಸಿ ಆತನನ್ನು ಮದುವೆಯಾಗಲು ಬಯಸಿದ್ದ ಸುರತಾಳನ ಮಗಳು ರಾಮನ ಮರಣವನ್ನು ತಿಳಿದು ಪ್ರಾಣಬಿಟ್ಟಳು. ರಾಮನ ಮರಣವಾರ್ತೆಯನ್ನು ನಿಜವಾಗಿ ತಿಳಿದ ಕಂಪಿಲರಾಯ ತನ್ನ ಮಗನ ಅಳಿವಿಗಾಗಿ, ತನ್ನ ದುಡುಕಿಗಾಗಿ ಪಶ್ಚಾತ್ತಾಪಪಟ್ಟ. ಹೊಸಮಲೆದುರ್ಗ ಕೊನೆಗೂ ಸುರತಾಳರ ಕೈವಶವಾಯಿತು.

ರಾಮನಾಥಚರಿತ ಕನ್ನಡದ ಮೊದಲ ಚಾರಿತ್ರಿಕ ಕಾವ್ಯ. ವೀರಕಾವ್ಯ ಎಂಬ ಅಭಿಧಾನಕ್ಕೆ ಪಾತ್ರವಾಗಿದೆ. ರಾಮನಾಥನ ಶುಚಿತ್ವ ವೀರತ್ವಗಳ ಪ್ರಕಾಶನವೇ ಕಾವ್ಯದ ಮುಖ್ಯ ಉದ್ದೇಶ. ಪುರಾಣದ ಅಲೌಕಿಕತೆಯೊಡನೆ ಮಹಾಭಾರತದ ಪ್ರಮುಖ ಘಟನೆಗಳ ವ್ಯಾಜಾಂತರ ಸಂಯೋಜನೆ, ಸಮಕಾಲೀನ ಜೀವನದ ಸೊಗಸಾದ ಚಿತ್ರಣ, ವಿಷಮ ದಾಂಪತ್ಯದ ದುಷ್ಪರಿಣಾಮ, ಉನ್ಮತ್ತ ಶೃಂಗಾರದ ಲೋಕಕಂಟಕತ್ವ, ಶುಚಿತ್ವ, ವೀರತೆ ಇಲ್ಲಿ ಚಿತ್ರಿತವಾಗಿವೆ. ಶೈಲಿಯಲ್ಲಿ ದೇಸೀಯ ನಯಗಾರಿಕೆ, ಅರ್ಥಸ್ಫುಟತ್ವ, ಸುಕುಮಾರತೆ ಕಂಡುಬರುತ್ತದೆ. ಶೂಲದ ಹಬ್ಬದ ಪ್ರಸಂಗ, ಮುತ್ತಿನ ಚೆಂಡಾಟದ ಪ್ರಸಂಗ, ರತ್ನಾಜಿಯ ಸೌಂದರ್ಯ, ಆಕೆಯ ವಿರಹ ಪರಿತಾಪ, ಯುದ್ಧವಿವರಗಳು ಕಾವ್ಯದಲ್ಲಿ ಸುಂದರವಾಗಿ ವರ್ಣಿತವಾಗಿವೆ. ರತ್ನಾಜಿ ಕುಮಾರರಾಮನನ್ನು ಮೋಹಿಸಿ ಆತನಿಂದ ತಿರಸ್ಕೃತಳಾದ ಸಂದರ್ಭ ಈ ಕಾವ್ಯದ ರಸಘಟ್ಟ. ಕವಿಯು ಇಲ್ಲಿ ಹೆಣ್ಣಿನ ಕಾಮಾತುರದ ಹುಚ್ಚು ಹಂಬಲವನ್ನೂ ಇನ್ನೊಂದೆಡೆ ಗಂಡಿನ ವಜ್ರಕಠೋರ ಮನೋದೃಢತೆಯನ್ನೂ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಶೃಂಗಾರದ ವರ್ಣನೆಯಲ್ಲೂ ಕವಿಯ ಕಲಾವಂತಿಕೆ ಅಭಿವ್ಯಕ್ತಗೊಂಡಿದೆ. ಯುದ್ಧ ವರ್ಣನೆಗಳು ವೀರರಸೋಪೇತವಾಗಿವೆ. ಪಾತ್ರ ಚಿತ್ರಣಗಳಲ್ಲಿಯೂ ಕವಿಯು ಸಿದ್ಧಹಸ್ತನೆನಿಸಿದ್ದು ಕುಮಾರರಾಮ, ರತ್ನಾಜಿ, ಕಂಪಿಲರಾಯ, ಕಾಟಣ್ಣ, ಬೈಚಪ್ಪ, ಸಂಗಿ ಮೊದಲಾದ ಪಾತ್ರಗಳು ಜೀವಂತವಾಗಿ ಮೂಡಿಬಂದಿವೆ. ಸಾಂಗತ್ಯಗ್ರಂಥಗಳಲ್ಲಿ ರತ್ನಾಕರವರ್ಣಿಯ ಭರತೇಶವೈಭವವನ್ನು ಬಿಟ್ಟರೆ ರಾಮನಾಥಚರಿತ ಕಾವ್ಯದೃಷ್ಟಿಯಿಂದ ಅದಕ್ಕೆ ಹೆಗಲೆಣೆಯಾಗಿ ನಿಲ್ಲುವ ಸತ್ವವನ್ನು ಒಳಗೊಂಡಿದೆ. (ಕೆ.ಎಸ್‌ಐ.ಐ.)

**ನಂಜುಂಡಪ್ಪ, ಡಿ.ಎಂ.**: 1930–2005. ಅಂತಾರಾಷ್ಟ್ರೀಯ ಪ್ರಸಿದ್ಧ ಅರ್ಥಶಾಸ್ತ್ರತಜ್ಞ, ಆಡಳಿಗಾರ ಮತ್ತು ಶಿಕ್ಷಣತಜ್ಞರು. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ದೊಗ್ಗನಾಳು ಗ್ರಾಮದಲ್ಲಿ 1930 ಅಕ್ಟೋಬರ್ 5 ರಂದು ಜನಿಸಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ವರ್ಣ ಪದಕದೊಡನೆ

ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದರು. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಅರ್ಥಶಾಸ್ತ್ರ ಬೋಧಕರಾಗಿ ವಿದ್ಯಾರ್ಥಿ ಮತ್ತು ವಿದ್ವಾಂಸರ ಮೆಚ್ಚುಗೆ ಮತ್ತು ಗೌರವ ಗಳಿಸಿದರು. ಮುಂದೆ ಅಮೆರಿಕದ ಸ್ಟಾನ್‌ಫೋರ್ಡ್ ಸಂಶೋಧನ ಸಂಸ್ಥೆ ಮತ್ತು ಹಾರ್ವರ್ಡ್ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಿ ಸಮರ್ಥ ಸಂಶೋಧಕರಾಗಿ ಹೊರಹೊಮ್ಮಿದರು. ಪ್ರತಿಭಾವಂತ ಸಂಶೋಧಕರೂ ಅಧ್ಯಾಪಕರೂ ಆದ ಇವರನ್ನು ಕರ್ನಾಟಕ ಸರ್ಕಾರ ಯೋಜನಾ ಇಲಾಖೆಯ ಕಾರ್ಯದರ್ಶಿಯಾಗಿ ಮತ್ತು ಆಯುಕ್ತರಾಗಿ ನೇಮಿಸಿದಾಗ ಇವರು ಕರ್ನಾಟಕದ ಆರ್ಥಿಕ ಯೋಜನೆಗೆ ಹೊಸ ತಿರುವು ನೀಡಿದರು. ಇವರ ಮುಂದಾಲೋಚನೆಯ ಪರಿಣಾಮವಾಗಿ ವಿಕೇಂದ್ರೀಕೃತ ಯೋಜನೆ ಕಾರ್ಯಗತವಾಗಿ ಪ್ರತಿ ಜಿಲ್ಲೆಗೂ ಪ್ರತ್ಯೇಕವಾಗಿ ಅಭಿವೃದ್ಧಿಯೋಜನೆ ಜಾರಿಗೆ ಬಂತು.

ಶಿಕ್ಷಣ ತಜ್ಞರಾಗಿ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ ಅವುಗಳ ಆಡಳಿತಕ್ಕೆ ಭದ್ರಬುನಾದಿ ಹಾಕಿ ಅವುಗಳ ಅಭಿವೃದ್ಧಿಗೆ ಕಾರಣರಾದರು. ಗಂಭೀರ ಆರ್ಥಿಕ ಚಿಂತಕರೂ ಆಗಿದ್ದ ಇವರು ಅನೇಕ ವೃತ್ತಿಪರ ಸಂಘಟನೆಗಳಲ್ಲೂ ತಮ್ಮ ಸೇವೆ ಸಲ್ಲಿಸಿದ್ದಾರೆ. ಅಖಿಲಭಾರತ ಅರ್ಥಶಾಸ್ತ್ರ ಸಂಘ, ಅಖಿಲ ಭಾರತ ಕಾರ್ಮಿಕ ಅರ್ಥಶಾಸ್ತ್ರ ಸಂಘ, ಭಾರತೀಯ ಸಮಾಜ ವಿಜ್ಞಾನ ಸಂಶೋಧನ ಮಂಡಳಿ, ಪ್ರಾದೇಶಿಕ ಅಸಮತೋಲನ ಸಮಿತಿ, ಮತ್ತು ರೈಲ್ವೆ ಪ್ರಯಾಣಿಕರ ಮತ್ತು ಸರಕು ಸಾಗಣೆದಾರರುಗಳ ಪರಿಣತ ಸಮಿತಿ ಇವೆಲ್ಲವುಗಳ ಅಧ್ಯಕ್ಷರಾಗಿ (ರಾಜ್ಯ ಯೋಜನಾ ಮಂಡಳಿ) ಉಪಾಧ್ಯಕ್ಷರಾಗಿ, ಕೇಂದ್ರೀಯ ಕಾರ್ಮಿಕ ಸಂಶೋಧನ ಸಂಸ್ಥೆಯ

ನಿರ್ದೇಶಕರಾಗಿ, ಭಾರತ ಸರ್ಕಾರದ ಉದ್ದಿಮೆಗಳ ಷೇರು ಮರುಕ್ರಯ ಆಯೋಗದ ಸದಸ್ಯರಾಗಿ ತಮ್ಮ ಅಮೂಲ್ಯ ಸೇವೆಸಲ್ಲಿಸಿದ್ದಾರೆ.

ನಂಜುಂಡಪ್ಪನವರ ಆರ್ಥಿಕ ಚಿಂತನೆಯ ವಿಶಾಲ ವ್ಯಾಪ್ತಿಯೊಳಗೆ ಆರ್ಥಿಕ ಯೋಜನೆಯಲ್ಲಿ ಸರ್ಕಾರದ ಪಾತ್ರ, ನಿರುದ್ಯೋಗ ನಿವಾರಣೆಗೆ ಅಗತ್ಯವಿರುವ ಕ್ರಮಗಳು, ಸಾರ್ವಜನಿಕ ಹಣಕಾಸು, ರಾಷ್ಟ್ರೀಯ ಅಭಿವೃದ್ಧಿ, ಬ್ಯಾಂಕಿನ ಅಗತ್ಯ, ವಿವಿಧ ಕ್ಷೇತ್ರಗಳಲ್ಲಿ ಸರ್ಕಾರ ನೀಡಬೇಕಾಗಿರುವ ಸಹಾಯಧನ, ಆಡಳಿತದಲ್ಲಿ ವಿಕೇಂದ್ರೀಕರಣ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಆರ್ಥಿಕ ಅಂತರಗಳನ್ನು ಹೋಗಲಾಡಿಸಲು ಇರುವ ಕ್ರಮಗಳು, ಕೈಗಾರಿಕಾ ಕಾರ್ಮಿಕರಿಗೆ ಬಂಡವಾಳದಲ್ಲಿ ಪಾಲು, ನೀರಾವರಿ ತೆರಿಗೆ, ರಸ್ತೆಹಣಕಾಸು, ರೈಲ್ವೆದರಗಳ ನೀತಿ, ಶೈಕ್ಷಣಿಕ ಅರ್ಥಶಾಸ್ತ್ರ ಮತ್ತು ಕೃಷಿ ಅಭಿವೃದ್ಧಿಗೆ ಅಗತ್ಯಕ್ರಮಗಳು ಸೇರ್ಪಡೆಗೊಂಡಿದ್ದವು.

ಮಾನವತಾವಾದಿಯಾಗಿದ್ದ ಇವರ ಆರ್ಥಿಕ ಚಿಂತನೆಗಳಲ್ಲಿ ಬಡವರ ಬಗ್ಗೆ ಹೆಚ್ಚು ಕಾಳಜಿ ಕಂಡುಬರುತ್ತದೆ. ಬಡವರ, ದೀನದಲಿತರ ಅಭಿವೃದ್ಧಿಯ ಬಗ್ಗೆ ಇವರು ಸದಾ ಚಿಂತಿಸುತ್ತಿದ್ದರು. ಗಾಂಧೀಜಿ, ವಿನೋಬಾಭಾವೆ, ದಾದಾಬಾಯಿ ನವರೋಜಿ, ಮಹಾದೇವ ರಾನಡೆ, ಆರ್.ಸಿ.ದತ್ತ, ನೆಹರು, ಗಾಡ್ಗಿಲ್ ಮೊದಲಾದ ಹಿರಿಯ ಚೇತನಗಳ ಪ್ರಭಾವಕ್ಕೆ ಒಳಗಾಗಿದ್ದ ನಂಜುಂಡಪ್ಪನವರು ತಮ್ಮ ಚಿಂತನೆಯಲ್ಲಿ, ಕಾರ್ಯಗಳಲ್ಲಿ ಅವುಗಳನ್ನು ತೋರಿಸುತ್ತಿದ್ದರು. ಕರ್ನಾಟಕ ರಾಜ್ಯದ ಯೋಜನಾ ಇಲಾಖೆಯ ಕಾರ್ಯದರ್ಶಿಯಾಗಿ ಸಲ್ಲಿಸಿರುವ ಇವರ ಸೇವೆ ಬಹು ಅಮೂಲ್ಯವೆಂದು ಪರಿಗಣಿಸಲಾಗಿದೆ. ಇವರು ಸಾಂಸ್ಥಿಕ ಹಣಕಾಸು ಇಲಾಖೆಯ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ ಮತ್ತು ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷರಾಗಿದ್ದರು. ಇವರು ಮೌಲಿಕವಾದ 33 ಗ್ರಂಥಗಳನ್ನೂ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಮಾರು 265 ವಿವಿಧ ಲೇಖನಗಳನ್ನೂ ಬರೆದು ಪ್ರಕಟಿಸಿದ್ದಾರೆ. ಇವರು 2005 ಸೆಪ್ಟಂಬರ್ 26ರಂದು ನಿಧನರಾದರು.

(ಸಿ.ಕೆ.ಆರ್.)

**ನಂಜುಂಡಯ್ಯ, ಎಚ್.ವಿ.:** 1860– 1920. ಕರ್ನಾಟಕದ ಏಕೀಕರಣಕ್ಕಾಗಿ, ಕನ್ನಡ ನಾಡುನುಡಿಗಳ ಏಳಿಗೆಗಾಗಿ ದುಡಿದ ಹಿರಿಯ ವಿದ್ವಾಂಸರು. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಅಧ್ಯಕ್ಷರೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿಗಳೂ ಆಗಿದ್ದವರು. ಹೆಬ್ಬಳಲು ವೇಳ್ಪನೂರು ನಂಜುಂಡಯ್ಯ ಎಂಬುದು ಇವರ ಪೂರ್ಣ ಹೆಸರು. ಇವರ ಪೂರ್ವಜರು ಹಿಂದೆ ಆಂಧ್ರದಿಂದ ಮೈಸೂರಿಗೆ ಬಂದವರು. ನಂಜುಂಡಯ್ಯನವರು 1860 ಅಕ್ಟೋಬರ್ 13ರಂದು ಬಡ ಕುಟುಂಬದಲ್ಲಿ ಜನಿಸಿದರು. ಮೊದಲಿಗೆ ಮೈಸೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ, ಅನಂತರ ಮದರಾಸಿನ ಕ್ರಿಶ್ಚನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದರು (1880). ಕೆಲಕಾಲ ಕೊಳ್ಳೇಗಾಲದಲ್ಲಿ ಸಬ್‌ರಿಜಿಸ್ಟ್ರಾರ್ ಆಗಿದ್ದು, ಅನಂತರ ಮದರಾಸಿನಲ್ಲಿ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಗುಮಾಸ್ತರಾದರು. ನೌಕರಿಯಲ್ಲಿದ್ದುಕೊಂಡೇ ಖಾಸಗಿಯಾಗಿ ಬಿ.ಎಲ್. ಪದವಿಯನ್ನೂ (1883) ಎಂ.ಎ. ಪದವಿಯನ್ನೂ (1885) ಪಡೆದರು. ಅನಂತರ ಮೈಸೂರು ಸರ್ಕಾರದಲ್ಲಿ ಉದ್ಯೋಗಕ್ಕೆ ಸೇರಿ (1885) ನಂಜನಗೂಡಿನಲ್ಲಿ ಮುನ್ಸಿಫರಾದರು. ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟಂಟ್ ಕಮಿಶನರಾಗಿ (1886) ಹಾಸನ, ಮೈಸೂರು, ಶಿವಮೊಗ್ಗಗಳಲ್ಲಿ ಸೇವೆ ಸಲ್ಲಿಸಿದಮೇಲೆ ನ್ಯಾಯಾಂಗ ವಿಭಾಗಕ್ಕೆ ಹಿಂದಿರುಗಿ ಬಂದು ಸಬ್ ಜಡ್ಜಿಯಾದರು (1892). ಅನಂತರ ನ್ಯಾಯಶಾಸ್ತ್ರದಲ್ಲಿ ವ್ಯಾಸಂಗ ಮುಂದುವರಿಸಿ ಎಂ.ಎಲ್. ಡಿಗ್ರಿ ಪಡೆದರು (1893). 1895ರಲ್ಲಿ ಮದರಾಸು ವಿಶ್ವವಿದ್ಯಾನಿಲಯದ 'ಫೆಲೋ' ಆಗಿಯೂ ಇದೇ ಸುಮಾರಿನಲ್ಲಿ ಮೈಸೂರು ಸರ್ಕಾರದ ಅಂಡರ್ ಸೆಕ್ರೆಟರಿಯಾಗಿಯೂ ನೇಮಕಗೊಂಡರು. 1897ರಲ್ಲಿ ಶಿವಮೊಗ್ಗದಲ್ಲಿ ಡೆಪ್ಯುಟಿ ಕಮಿಷನರಾಗಿದ್ದರು. ದಿವಾನ್ ಪಿ.ಎನ್. ಕೃಷ್ಣಮೂರ್ತಿಯವರ ಕಾಲದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದು (1901), ಮೈಸೂರು ಸರ್ಕಾರದ ನ್ಯಾಯಶಾಖೆಯ ಚೀಫ್ ಕೋರ್ಟಿನ ನ್ಯಾಯಾಧೀಶರಾದರು (1904). ಅನಂತರ ಮುಖ್ಯ ನ್ಯಾಯಾಧೀಶರಾಗಿ ಸೇವೆಸಲ್ಲಿಸಿ 1916ರಲ್ಲಿ ನಿವೃತ್ತರಾದರು. ಮೈಸೂರು ವಿಶ್ವವಿದ್ಯಾನಿಲಯ ಜನ್ಮತಾಳಲು ಕಾರಣಕರ್ತರಲ್ಲೊಬ್ಬರಾಗಿದ್ದ ಇವರು ಅದರ ಮೊದಲನೆಯ ಉಪಕುಲಪತಿಯಾಗಿ ಸೇವೆ ಸಲ್ಲಿಸಿದರು (1916–20). ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಸಂವರ್ಧನೆಗೆ ಹೋರಾಡಿದ ಮಹನೀಯರಲ್ಲಿ ಪ್ರಮುಖರಾಗಿದ್ದು ಅದರ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು (1915–19).

ಇವರದು ಕಾರುಣ್ಯ, ಸೌಮ್ಯತ್ವ ಹಾಗೂ ಹಾಸ್ಯ ವಿಲಾಸದ ವ್ಯಕ್ತಿತ್ವ. ಮುಖ್ಯಪದರುಗಳು. ಎಂ. ವಿಶ್ವೇಶ್ವರಯ್ಯನವರು ಇವರ ಆಪ್ತಸ್ನೇಹಿತರಾಗಿದ್ದರು. ನ್ಯಾಯಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳನ್ನೂ ಕಾವ್ಯ ನಾಟಕಾದಿ ಸಾಹಿತ್ಯ ಪ್ರಕಾರಗಳನ್ನೂ ಆಳವಾಗಿ ಅಭ್ಯಾಸ ಮಾಡಿದ್ದ ಇವರಿಗೆ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲದೆ ಫ್ರೆಂಚ್ ಭಾಷೆಯಲ್ಲೂ ಹೆಚ್ಚಿನ ಪರಿಶ್ರಮವಿತ್ತು. ಇವರು ತಮ್ಮ ಪುತ್ರನನ್ನು ಕಳೆದುಕೊಂಡ ಸಮಯದಲ್ಲಿ ಫ್ರೆಂಚ್ ಮಹಾಕವಿ ವಿಕ್ಟರ್ ಹ್ಯೂಗೋನ ಕೆಲವು ಕವನಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ, ಆ ಸಂಕಲನಕ್ಕೆ 'ರಾತ್ರಿಯಲ್ಲಿ ಕಂಬನಿ' ಎಂದು ಹೆಸರಿಟ್ಟರು. ಕನ್ನಡದಲ್ಲಿ ಗ್ರಂಥರಚನೆಯನ್ನು ಕೈಗೊಂಡು, ಮಾದರಿಯ ಪತ್ರವ್ಯವಹಾರ ಕುರಿತು ಲೇಖ್ಯಬೋಧಿನಿ, ನ್ಯಾಯಶಾಸ್ತ್ರ ಪರಿಪಾಲನೆ ಕುರಿತು ವ್ಯವಹಾರ ದೀಪಿಕೆ, ಆರ್ಥಿಕ ವಿಚಾರ ಪರಿಚಯವನ್ನೊಳಗೊಂಡಂತೆ ಅರ್ಥಶಾಸ್ತ್ರ ಎಂಬ ಮೂರು ಅಮೂಲ್ಯ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಆ ವಿಷಯಗಳ ಬಗ್ಗೆ ನಡೆದ ಗ್ರಂಥ ರಚನೆಯ ಪ್ರಯತ್ನಗಳಲ್ಲಿ ಸಂಸ್ಥಾನದ ಮೈಸೂರು ರಾಜ್ಯ ವಿವಿಧ ಜಾತಿಕುಲಗಳ ವಿವರ ಪರಿಚಯವುಳ್ಳ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್ ಎಂಬ ಸಂಪುಟಗಳಿಗೆ ಇವರು ಸಂಪಾದಕರಾಗಿದ್ದರು.

ನಂಜುಂಡಯ್ಯನವರು ಪ್ರತಿಭಾ ಪಕ್ಷಪಾತಿಗಳಾಗಿದ್ದರು. ಇವರ ಕಾರ್ಯನಿಷ್ಠೆ, ಸ್ನೇಹಪರ ಮನಸ್ಸು, ರಸಿಕತೆ ಹಾಗೂ ಮಾತಿನ ನಿರಾಡಂಬರತೆಗಳು ಎಲ್ಲರಿಗೂ ಮೆಚ್ಚುಗೆಯಾಗಿದ್ದುವು. ಇವರು ಬೆಂಗಳೂರು (1915, 1916) ಮತ್ತು ಮೈಸೂರು (1917)ಗಳಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಮೂರು ಅಧಿವೇಶನಗಳ ಅಧ್ಯಕ್ಷರಾಗಿದ್ದರು. ಕನ್ನಡದ ಅಂದಿನ ಇತಿಮಿತಿ, ಕನ್ನಡದಲ್ಲಿ ಆಗಬೇಕಾದ ಕೆಲಸದ ಆಧಿಕ್ಯ, ಗ್ರಾಂಥಿಕ ಭಾಷೆಯ ಏಕರೂಪತೆ ಮೊದಲಾದ ಗಮನೀಯ ವಿಚಾರಗಳು ಇವರ ಮೊದಲನೆಯ ಅಧ್ಯಕ್ಷ ಭಾಷಣದಲ್ಲೇ ವ್ಯಕ್ತವಾಗಿವೆ. ಇವರಿಗೆ ಮೈಸೂರು ಮಹಾರಾಜರು 1913ರಲ್ಲಿ ರಾಜಮಂತ್ರಪ್ರವೀಣ ಎಂಬ ಬಿರುದನ್ನು ನೀಡಿ ಗೌರವಿಸಿದರು. 1914ರಲ್ಲಿ ಬ್ರಿಟಿಷ್ ಸರ್ಕಾರ ಸಿ.ಐ.ಇ. ಎಂಬ ಪದವಿಯನ್ನಿತ್ತು ಗೌರವಿಸಿತು.

ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಕುರಿತು ಜೀವನ ಚರಿತ್ರೆಯೊಂದನ್ನು ಪ್ರಕಟಿಸಿದೆ. ಇವರು 1920 ಮೇ 2 ರಂದು ನಿಧನಹೊಂದಿದರು.

(ಜಿ.ಜಿ.)

**ನಂಜುಂಡರಾವ್, ಎಂ.ಎಸ್.:** 1932-2003. ಹೆಸರಾಂತ ಕಲಾವಿದ, ಲೇಖಕ, ಸಂಘಟಕ, ಕರ್ನಾಟಕ ಚಿತ್ರಕಲಾ ಪರಿಷತ್ತಿನ **(ನೋಡಿ)** ರೂವಾರಿ. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಸುದ್ದೇಕುಂಟೆಯಲ್ಲಿ 1932 ಜುಲೈ 5 ರಂದು ಜನಿಸಿದರು. ತಂದೆ ಎಂ.ಎಸ್. ದಾಸಪ್ಪ, ತಾಯಿ ಗೌರಮ್ಮ. ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಇವರ ತಂದೆ ರಂಗಕರ್ಮಿಗಳೂ ಸಾಹಿತ್ಯ ಕಲಾ ಪೋಷಕರೂ ಆಗಿದ್ದರು. ನಂಜುಂಡರಾವ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸಿದ್ಧಾಪುರದಲ್ಲೂ ಮಾಧ್ಯಮಿಕ ಶಿಕ್ಷಣವನ್ನು ಕೊಡಗೇನ ಹಳ್ಳಿಯಲ್ಲೂ ಪ್ರೌಢಶಾಲಾ ಶಿಕ್ಷಣವನ್ನು ಬೆಂಗಳೂರು ಮತ್ತು ಮಧುಗಿರಿಯಲ್ಲೂ ಮುಗಿಸಿದರು. ಎಸ್.ಎಸ್.ಎಲ್.ಸಿ. ಪಾಸಾದದ್ದು 1948ರಲ್ಲಿ. ತಂದೆಯಿಂದ ಪ್ರಭಾವಿತರಾಗಿ ಬಾಲ್ಯದಲ್ಲಿಯೇ ಖಾದಿ ತೊಟ್ಟು ದೇಶಭಕ್ತಿಯನ್ನು ಬೆಳೆಯಿಸಿಕೊಂಡರು. ತಂದೆಯೊಂದಿಗೆ ಹಳ್ಳಿಗಳಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಇವರು ಗ್ರಾಮೀಣ ಜನರ ಕಲೆ, ಜನಜೀವನ, ಸಂಸ್ಕೃತಿಗಳನ್ನು ಅರಿತರು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಮೈಸೂರು ಮಹಾರಾಜರು ಭಾರತ ಒಕ್ಕೂಟಕ್ಕೆ ಸೇರಿಕೊಳ್ಳಲು ಒಪ್ಪದಿದ್ದಾಗ ಮೈಸೂರು ಚಲೋ ಚಳವಳಿ ಆರಂಭವಾಯಿತು. ಆಗ ಇವರು ಮಧುಗಿರಿ ತಾಲ್ಲೂಕಿನ ಹಳ್ಳಿಹಳ್ಳಿಗೂ ಹೋಗಿ ಜನರನ್ನು ಸಂಘಟಿಸಿದರು. ಮಧುಗಿರಿ ತಾಲ್ಲೂಕು ಕಚೇರಿ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಪೊಲೀಸರಿಗೂ ಚಳವಳಿಗಾರರಿಗೂ ಘರ್ಷಣೆ ಉಂಟಾಗಿ ಇವರ ಮೇಲೆ ವಾರಂಟ್ ಹೊರಡಿಸಿದಾಗ ಇವರು ಆಂಧ್ರದ ಗಡಿಯಲ್ಲಿದ್ದ ಸೇವಾಮಂದಿರ ಸೇರಿಕೊಂಡರು.

ಇವರಿಗೆ ಬಾಲ್ಯದಿಂದಲೂ ಚಿತ್ರಕಲೆಯಲ್ಲಿದ್ದ ಆಸಕ್ತಿಯನ್ನು ಗಮನಿಸಿದ ಇವರ ಅಧ್ಯಾಪಕರಾಗಿದ್ದ ಎಸ್. ರಾಮಯ್ಯನವರ ಸಲಹೆ ಮತ್ತು ತಂದೆಯ ಅನುಮತಿಯಿಂದ ಕಲಾ ಶಿಕ್ಷಣಕ್ಕಾಗಿ ಮೈಸೂರಿನ ಶ್ರೀ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಶಾಲೆ ಸೇರಿ ತರಬೇತಿ ಪಡೆದರು (1948-52). ತಮ್ಮಲ್ಲಿದ್ದ ಪ್ರತಿಭೆಯಿಂದ ಜನಸಂಪರ್ಕ ಬೆಳೆಯಿಸಿಕೊಂಡ ಇವರು ಚಿತ್ರರಚನೆಯನ್ನು ಜೀವನಾಧಾರ ಮಾಡಿಕೊಂಡರು. ಪ್ರಕೃತಿ ಚಿತ್ರ, ರೇಖಾಚಿತ್ರ, ವ್ಯಕ್ತಿ ಚಿತ್ರಗಳನ್ನು ರಚಿಸಿದರು. ಇವರು ರಚಿಸಿದ ವ್ಯಕ್ತಿಚಿತ್ರಗಳಲ್ಲಿ ಮಹಾತ್ಮಗಾಂಧಿ, ಎನ್.ಎಸ್.ಹರ್ಡೇಕರ್, ವಲ್ಲಭಭಾಯಿ ಪಟೇಲ್ ಮುಖ್ಯವಾದವು. ಮಡಿಕೇರಿಯ ನಿಸರ್ಗ ದೃಶ್ಯಗಳು, ತಲಕಾವೇರಿ, ತಲಕಾಡು, ಶೃಂಗೇರಿ, ನಂದಿಬೆಟ್ಟ, ಐಹೊಳೆ, ಬೇಲೂರು, ಹಳೇಬಿಡು ಮೊದಲಾದ ರಮ್ಯ ಐತಿಹಾಸಿಕ ತಾಣಗಳನ್ನು ತಮ್ಮ ಕುಂಚದಿಂದ ಸೆರೆ ಹಿಡಿದರು. ಇವರು ರಚಿಸಿದ ಚಿತ್ರಗಳು ಬೆಂಗಳೂರಿನ ವೆಂಕಟಪ್ಪ ಕಲಾಗ್ಯಾಲರಿ, ವಿಧಾನಸೌಧ, ದೆಹಲಿ ಹಾಗೂ ಹಲವು ದೇಶಗಳ ಕಲಾ ಗ್ಯಾಲರಿಗಳಲ್ಲಿ ಸ್ಥಾನಪಡೆದಿವೆ.

ಇವರು 1954 ರಲ್ಲಿ ಬೆಂಗಳೂರಿಗೆ ಬಂದು ಶಿವಾನಂದಶರ್ಮರು ಸ್ಥಾಪಿಸಿದ ರಾಷ್ಟ್ರೀಯ ವಿದ್ಯಾಲಯದಲ್ಲಿ ಕೆಲವು ಕಾಲ ಉಳಿದುಕೊಂಡಿದ್ದರು. ಅನಂತರ ಖಾದಿ ಮಂಡಳಿಯಲ್ಲಿ ಕಲಾವಿದರಾಗಿ ಕೆಲಸ ಮಾಡಿದರು. ಆಗಿನ ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ವಿಧಾನಸೌಧ ಅಲಂಕರಣ ಸಮಿತಿಯಲ್ಲಿ ನಂಜುಂಡರಾಯರನ್ನು ಒಬ್ಬ ಸದಸ್ಯರನ್ನಾಗಿ ನೇಮಿಸಿದರು. ಆಗ ಇವರು ತಮ್ಮ ಕೆಲಸದಲ್ಲಿ ಆಸಕ್ತಿ, ಪ್ರತಿಭೆ, ಪರಿಶ್ರಮಗಳನ್ನು ತೋರಿ ಮುಖ್ಯಮಂತ್ರಿಗಳ ಪ್ರಶಂಸೆಗೆ ಪಾತ್ರರಾದರು. ಭಾರತ ಸರ್ಕಾರದ ಪಂಚವಾರ್ಷಿಕ ಯೋಜನೆಗಳ ಪ್ರಚಾರ, ಮಳಿಗೆಗಳ ಅಲಂಕರಣ, ಸುಭಾಷನಗರದಲ್ಲಿ ಜರುಗಿದ ಕಾಂಗ್ರೆಸ್ ವಸ್ತುಪ್ರದರ್ಶನದ ದ್ವಾರಗಳ ರಚನೆ, ಬೆಂಗಳೂರಿನ ಸದಾಶಿವನಗರದಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದ (1960) ಮುಖ್ಯ ಪ್ರವೇಶದ್ವಾರ ಮತ್ತು ವೇದಿಕೆಯ ಅಲಂಕರಣ ಮಾಡಿ ಜನ ಮೆಚ್ಚುಗೆ ಪಡೆದರು. ಕೆಂಗಲ್ ಹನುಮಂತಯ್ಯನವರ ಪ್ರೇರಣೆಯಿಂದ ಎಂ. ಆರ್ಯಮೂರ್ತಿ, ಎಸ್.ಎಸ್. ಕುಕ್ಕೆ ಮೊದಲಾದವರೊಂದಿಗೆ ಸೇರಿಕೊಂಡು ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ (1960), ಅದರ ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಈ ವೇಳೆಗೆ ಬಾಲಾಂಬ ಎಂಬ ಕಲಾಪ್ರೇಮಿಯೊಂದಿಗೆ ಇವರ ವಿವಾಹವಾಗಿತ್ತು (1956). 1964 ರಿಂದ ಚಿತ್ರಕಲಾ ವಿದ್ಯಾಲಯದ ಅಧ್ಯಾಪಕರಾಗಿ ಅನೇಕ ತರುಣರನ್ನು ಚಿತ್ರಕಲೆಯತ್ತ ಸೆಳೆದುಕೊಂಡರು. ಅದೇ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಸೇವೆ ಸಲ್ಲಿಸಿದರು (1966-72).

ಈ ಸಂದರ್ಭದಲ್ಲಿ ಕರ್ನಾಟಕದ ತರುಣ ಕಲಾವಿದರನ್ನು ಪ್ರೋತ್ಸಾಹಿಸಿದರಲ್ಲದೆ ಕಲಾ ಶಿಕ್ಷಣದ ಜೊತೆಗೆ ಜನಸಾಮಾನ್ಯರಲ್ಲಿ ಕಲಾಭಿರುಚಿಯನ್ನು ಬೆಳೆಸುವುದು, ಸಾಂಪ್ರದಾಯಿಕ ಚಿತ್ರಕಲೆಯನ್ನು ಪುನರುಜ್ಜೀವಿಸುವುದು, ಕಲಾವಿದರನ್ನು ಸಂಘಟಿಸುವುದು, ಭಾರತೀಯ ಚಿತ್ರಕಲೆಯನ್ನು ವಿಶೇಷವಾಗಿ ಕರ್ನಾಟಕದ ಚಿತ್ರಕಲೆ ಮತ್ತು ಕಲಾವಿದರನ್ನು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸುವುದು, ಕಲಾ ಸಂಸ್ಥೆಗಾಗಿ ಕಲಾಭವನ ನಿರ್ಮಾಣ, ಕಲಾ ಗ್ಯಾಲರಿಗಳ ಸ್ಥಾಪನೆ, ಚಿತ್ರಕಲೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವುದು ಇವರ ಧ್ಯೇಯವಾಗಿತ್ತು. ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಇವರು ಅಖಿಲ ಭಾರತ ಕಲಾ ಪ್ರದರ್ಶನವನ್ನು ಮೊದಲ ಬಾರಿಗೆ ಏರ್ಪಡಿಸಿದ್ದರು (1963). ಅನಂತರ ಪ್ರತಿವರ್ಷಕ್ಕೊಂದರಂತೆ ಒಂಬತ್ತು ಇಂಥ ಪ್ರದರ್ಶನಗಳು ನಡೆದುವು. ಇದರಿಂದ ಅಖಿಲ ಭಾರತ ಮಟ್ಟದ ಕಲಾವಿದರು ಒಂದೆಡೆ ಸೇರಿ ವಿಚಾರ ವಿನಿಮಯ ಮಾಡಲು, ಕಲಾ ಪ್ರದರ್ಶನ ನಡೆಸಲು ಅವಕಾಶವಾಯಿತು. ಚಿತ್ರಕಲಾ ಪರಿಷತ್ ಟ್ರಸ್ಟ್ ರೂಪುಗೊಂಡಿದ್ದು 1974ರಲ್ಲಿ.

ಕಲಾವಿಮರ್ಶಕ ಜಿ. ವೆಂಕಟಾಚಲಂ ಅವರ ಪ್ರೇರಣೆಯಿಂದ ಮೈಸೂರು ಸಾಂಪ್ರದಾಯಿಕ ಚಿತ್ರಗಳನ್ನು ಸಂಗ್ರಹಿಸುವ ಕಾರ್ಯವನ್ನು ಕೈಕೊಂಡರು. ಪರಿಣಿತರನ್ನು ಕರೆಯಿಸಿ ಅವರಿಂದ ಸಾಂಪ್ರದಾಯಿಕ ಕಲೆ ಕಲಿಸುವ ಏರ್ಪಾಡು ಮಾಡಿದರು. ಮುಂಬಯಿ, ದೆಹಲಿಗಳಲ್ಲಿ ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿದರು. ಭಾರತದ ಬೇರೆ ಬೇರೆ ಕೇಂದ್ರಗಳಲ್ಲಿ ತೊಗಲುಬೊಂಬೆ ಪ್ರದರ್ಶನ ಏರ್ಪಡಿಸಿದ್ದಲ್ಲದೆ, ಕಲಾವಿದರನ್ನು ಜನಪದ ಉತ್ಸವಗಳಿಗೆ ಕರೆದೊಯ್ದು ಪರಿಚಯಿಸಿದರು.

ಚಿತ್ರಕಲೆಯ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲೂ ಇವರು ಕೆಲಸ ಮಾಡಿದ್ದಾರೆ. ತೊಗಲುಬೊಂಬೆ ಹಾಗೂ ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯ ಬಗ್ಗೆ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಇವರು ಬರೆದ ಕೃತಿಗಳಲ್ಲಿ ನಿಕೋಲಸ್ ರೋರಿಚ್, ಪಿ. ಸುಬ್ಬರಾವ್, ಕರ್ನಾಟಕ ತೊಗಲುಗೊಂಬೆ ಎಂಬ ಬೃಹತ್ ಗ್ರಂಥ- ಇವು ಪ್ರಮುಖವಾಗಿವೆ. ಕಲೆಯ ಅಧ್ಯಯನಕ್ಕಾಗಿ ಇವರು ಜರ್ಮನಿ, ಅಮೆರಿಕ, ರಷ್ಯ ದೇಶಗಳ ಅನೇಕ ಪ್ರಮುಖ ನಗರಗಳನ್ನು ಸಂದರ್ಶಿಸಿದರು. ಮಾಸ್ಕೋದಲ್ಲಿ ಅಂತಾರಾಷ್ಟ್ರೀಯ ರೋರಿಕ್ ಪುರಸ್ಕಾರ ಪಡೆದರು (1999). ಕರ್ನಾಟಕ ಲಲಿತ ಕಲಾ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಕಲೆ ಮತ್ತು ಕರಕುಶಲ ಶಿಕ್ಷಣ ಸಲಹಾ ಸಮಿತಿಯ ಸದಸ್ಯರಾಗಿ,

ಬೆಂಗಳೂರು ವಿಶ್ವವಿದ್ಯಾಲಯದ ಲಲಿತ ಕಲಾ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ, ಗುಲ್ಬರ್ಗ ವಿಶ್ವವಿದ್ಯಾಲಯದ ಲಲಿತ ಕಲಾ ಅಧ್ಯಯನ ಮಂಡಳಿಯ ಸದಸ್ಯರಾಗಿ ಸೇವೆಸಲ್ಲಿಸಿದರು. ಕೇಂದ್ರ ಲಲಿತಕಲಾ ಅಕಾಡೆಮಿಯ ಕರ್ನಾಟಕದ ಪ್ರತಿನಿಧಿಯಾಗಿದ್ದರು (1975). ಇವರಿಗೆ ಹಲವು ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1980), ರಾಜ್ಯೋತ್ಸವ ಪ್ರಶಸ್ತಿ (1984) ಇವು ಉಲ್ಲೇಖನೀಯ. ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ವಿಶ್ವವಿದ್ಯಾಲಯದ ಮಾನ್ಯತೆ, ಜನಪ್ರಿಯತೆ, ಅಂತಾರಾಷ್ಟ್ರೀಯ ಕೀರ್ತಿ ತಂದುಕೊಟ್ಟ ಇವರು 2003 ಮೇ 2 ರಂದು ಬೆಂಗಳೂರಿನಲ್ಲಿ ನಿಧನರಾದರು. (ಎಸ್.ಎಂ.ಕೆ.)

**ನಂಜುಂಡ ಶಿವಯೋಗಿ:** ಒಬ್ಬ ಶಿವಯೋಗಿ. ತುಮಕೂರು ಸಮೀಪದ ಮೈದಾಳ ಈತ ಹುಟ್ಟಿದ ಸ್ಥಳ. ಈತನ ಬಾಲ್ಯಜೀವನದ ವಿವರಗಳು ತಿಳಿದಿಲ್ಲ. ಮಡದಿ, ಮಕ್ಕಳಿಂದ ತುಂಬಿದ ಈತನ ಗೃಹಸ್ಥ ಜೀವನ ಆ ಊರಿನ ಕೂಲಿ ಮಠವೊಂದನ್ನು ಆಶ್ರಯಿಸಿತ್ತು. ಹಳ್ಳಿಯ ಮಕ್ಕಳಿಗೆ ತಕ್ಕಷ್ಟು ಓದುಬರೆಹ ಕಲಿಸಿದ ತರುವಾಯ ಅವರಿಗೆ ಶರಣಲೀಲಾಮೃತ, ಸೋಮೇಶ್ವರ ಶತಕ, ಸರ್ವಜ್ಞನ ವಚನಗಳು. ಚನ್ನಬಸವಪುರಾಣ, ಜೈಮಿನಿ ಭಾರತ ಮತ್ತು ರಾಜಶೇಖರವಿಳಾಸದಂಥ ಕನ್ನಡ ಪ್ರೌಢ ಗ್ರಂಥಗಳನ್ನು ಗಮಕ ಗತಿಯಿಂದ ಓದಿ ಅರ್ಥೈಸುವ ಸಾಮರ್ಥ್ಯವನ್ನು ಉಂಟುಮಾಡಿಕೊಡುವುದು ಈತನ ಕೂಲಿಮಠದ ಹೆಗ್ಗುರಿಯಾಗಿತ್ತು.

ಶಿವಪೂಜಾನಿಷ್ಠನಾದ ಈತ ಮೊದಲಿನಿಂದಲೂ ವೈರಾಗ್ಯದ ಕಡೆಗೆ ಗಮನ ಹರಿಸಿದ್ದ. ಮಧ್ಯವಯಸ್ಸಿನಲ್ಲಿ ಒದಗಿದ ಪತ್ನಿವಿಯೋಗ ಈತನ ವಿರಕ್ತಿಗೆ ಪುಟ ಕೊಟ್ಟಿತು. ತರುವಾಯ ಈತ ಸತ್ಸಂಗವನ್ನು ಬಯಸಿ ಸಿದ್ಧಗಂಗಾ ಕ್ಷೇತ್ರಕ್ಕೆ ಆಗಮಿಸಿದ. ಅಲ್ಲಿ ಶ್ರೀ ಅಟವೀಂದ್ರ ಶಿವಯೋಗಿಗಳ ಸನ್ನಿಧಿ ಸೇರಿ ಅವರ ಅನುಗ್ರಹಕ್ಕೆ ಪಾತ್ರನಾದ. ಅಟವೀಂದ್ರ ಶಿವಯೋಗಿ ಲಿಂಗೈಕ್ಯರಾದ ಅನಂತರ ಈತ ಮತ್ತೆ ತುಮಕೂರಿಗೆ ಹಿಂದಿರುಗಿ ಶಿವಾಲಯವೊಂದರಲ್ಲಿ ಸೇರಿದ. ಈತನ ಸಮಾಧಿ ತುಮಕೂರು ಹತ್ತಿರದ ಉಸ್ಕೂರಿನಲ್ಲಿದೆ.

ಈತನ ಪಾಂಡಿತ್ಯ, ಮಧುರಕಂಠಶ್ರೀ, ಚಿತ್ರಕಲಾಪ್ರಿಯತೆಗಳು ಈತ ರಚಿಸಿರುವ ಕೃತಿಗಳಿಂದ ವೇದ್ಯವಾಗುತ್ತವೆ. ಈತನ ಗ್ರಂಥಗಳಲ್ಲಿ ಮಾರ್ಕಂಡೇಯ ವಿಳಾಸ, ಶ್ರೀಮದಟವೀಶ್ವರ ಗುರುಭಕ್ತಿಸಾರ, ಜಟವೀಶ್ವರ ಗೀತಾಮಂಜರಿ, ಸುರಾಭಾಂಡೇಶ್ವರಾಖ್ಯಾನ, ಹಾಲಾಹಲಭಕ್ಷಣೆಯ ಕಥೆಗಳು ದೊರೆಯುತ್ತವೆ. ಇವರ ಚಿತ್ರಗಳಲ್ಲಿ ಸರ್ವಸಿದ್ಧಿ ಗಣಪತಿ, ಚಂದ್ರಶೇಖರ ಮೂರ್ತಿ, ಗಿರಿಜಾಕಲ್ಯಾಣ ಮಹೋತ್ಸವ, ಉಮಾಮಹೇಶ್ವರಮೂರ್ತಿ, ನಂದಿವಾಹನಮೂರ್ತಿ, ಅಂಧಕಾಸುರ ಸಂಹಾರ ಮತ್ತು ಜೀವನ್ಮುಕ್ತಿ ವಿವೇಕಗಳು ಮುಖ್ಯವಾದವು. *

**ನಂಜುಂಡಸ್ವಾಮಿ, ಎಸ್.:** 1906– 69. ಕರ್ನಾಟಕದ ಹೆಸರಾಂತ ವರ್ಣಚಿತ್ರಕಾರರು ಹಾಗೂ ಶಿಲ್ಪಿಗಳಲ್ಲಿ ಅಗ್ರಗಣ್ಯರು. ಇವರು ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳ ಅಣ್ಣಂದಿರಾದ ಶಿಲ್ಪಸಿದ್ಧಾಂತಿ ವಿರತ್ತ ಸ್ವಾಮಿಗಳ ಮಕ್ಕಳು. ಇವರ ಮೂಲಸ್ಥಳ ಕೊಳ್ಳೇಗಾಲ. ತಾಯಿಯ ತೌರೂರಾದ ಯಳಂದೂರು ತಾಲ್ಲೂಕು ಯರಗಂಬಳ್ಳಿಯಲ್ಲಿ 1906 ಮಾರ್ಚ್ 3ರಂದು ಜನಿಸಿದರು. ತಾಯಿಯ ತೌರೂರಾದ ಯಳಂದೂರು ತಾಲ್ಲೂಕು ಯರಗಂಬಳ್ಳಿಯಲ್ಲಿ ವಂಶಪಾರಂಪರ್ಯವಾಗಿ ಬಂದ ಶಿಲ್ಪಕಲೆಯ ಸಂಪ್ರದಾಯ ಇವರಲ್ಲೂ ನೆಲಸಿ, ಚಿತ್ರಕಲೆಗೆ ಶಾಸ್ತ್ರೀಯ ಅಡಿಪಾಯವನ್ನು ಹಾಕಿಕೊಟ್ಟಿತ್ತು. ಇವರು ಚಿಕ್ಕಂದಿನಿಂದ ಬಡತನದಲ್ಲಿ ಬದುಕಿ ಅಪಾರ ಕಷ್ಟಗಳನ್ನೆದುರಿಸಿ, ಮೈಸೂರಿನ ಶ್ರೀ ಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆಯಲ್ಲಿ ಚಿತ್ರಕಲೆಯ ಅಧ್ಯಾಪಕರಾಗಿ ಜೀವನ ನಡೆಸಿದರು. ಕುಶಲಕಲೆಯ ಎಲ್ಲ ಪ್ರಕಾರಗಳಲ್ಲೂ ಅದ್ವಿತೀಯ ಪ್ರೌಢಿಮೆ ಗಳಿಸಿಕೊಂಡಿದ್ದ. ಇವರು ರೇಖಾಚಿತ್ರ, ತೈಲಚಿತ್ರ, ಜಲವರ್ಣಚಿತ್ರಗಳಲ್ಲಿ ತೋರುತ್ತಿದ್ದ ಚಾಕಚಕ್ಯತೆ ಅಸಾಧಾರಣವಾದದ್ದು. ಪ್ರಕೃತಿಯ ಯಾವುದೇ ವರ್ಣಗಳನ್ನು ಕಣ್ಣಿಗೆ ಕಟ್ಟುವಂತೆ ಸಹಜ ಸುಂದರವಾಗಿ ಕೃತಿಗಳಲ್ಲಿ ಮೂಡಿಸುವ ಶಕ್ತಿಯನ್ನು ಇವರು ಪಡೆದಿದ್ದರು. ಮೈಸೂರಿನ ವಾಣಿವಿಲಾಸ ಮೊಹಲ್ಲಾದಲ್ಲಿರುವ ಮಹಾಜನ ಹೈಸ್ಕೂಲಿನ ಭಿತ್ತಿಯೊಂದರ ಮೇಲೆ ಇವರಿಂದ ರಚಿತವಾದ ಶಾರದಾದೇವಿಯ ಚಿತ್ರವಿದೆ. ಇವರ ಕಬೀರ್ ತೈಲಚಿತ್ರದಲ್ಲಿ ಮುಂಜಾವಿನ ನಸುಗತ್ತಲ ಪ್ರಶಾಂತ ವಾತಾವರಣದ ಕಲ್ಪನೆ ವಿಶಿಷ್ಟವಾದದ್ದು. ಮೈಸೂರಿನ ವೃತ್ತಿಶಿಕ್ಷಣ ಶಾಲೆಯ ಪ್ರದರ್ಶನಾಲಯದಲ್ಲಿ ಇದ್ದ ರಾಜನ ಒಡ್ಡೋಲಗದ ಚಿತ್ರ ಕೂಡ ಇವರ ಕಲಾವಂತಿಕೆಗೆ ಉತ್ತಮ ನಿದರ್ಶನವಾಗಿದೆ. ಈಗ ಅದು ಅಲ್ಲಲ್ಲಿ, ಮೈಸೂರಿನ ಕಲಾಭಿಮಾನಿಗಳೊಬ್ಬರ ಬಳಿ ಇದೆ.

ಮೈಸೂರಿನ ವಸ್ತು ಪ್ರದರ್ಶನ ಶಾಲೆಯ ಕಟ್ಟಡವೊಂದರ ಮೇಲೆ ಇವರಿಂದ ರೂಪಿಸಲ್ಪಟ್ಟ ಜಯಚಾಮರಾಜ ಒಡೆಯರ ಭಾವಚಿತ್ರವಿತ್ತು. ಈಗ ಅದು ಅಲ್ಲಿಲ್ಲ. ಆದರೆ ಭಾವಚಿತ್ರ ರಚನೆಯಲ್ಲಿ ಇವರದ್ದು ಪಳಗಿದ ಕೈ ಎನ್ನುವುದಕ್ಕೆ ಇದೊಂದು ಉತ್ತಮ ಮಾದರಿ.

ನಂಜುಂಡಸ್ವಾಮಿಯವರು ಆಡಂಬರವಿಲ್ಲದ ಸಾಮಾನ್ಯ ಜೀವನ ನಡೆಸಿದವರು. ನಿವೃತ್ತರಾದ ಕೆಲವು ವರ್ಷಗಳ ಮೇಲೆ ಒಂಟಿಕೊಪ್ಪಲಿನಲ್ಲಿದ್ದ ತಮ್ಮ ಮನೆಯನ್ನು ಮಾರಿ ತಮ್ಮ ತಾಯಿಯ ಊರಾದ ಯರಗಂಬಳ್ಳಿಗೆ ಹೋದರು. ಅನಂತರ ಅಲ್ಲೂ ಬಹಳ ಕಾಲ ಇರಲಿಲ್ಲ. ಮಾರಿ ಬಂದ ಹಣ ದಕ್ಕಲಿಲ್ಲ. ಮತ್ತೆ ಪತ್ನಿಪುತ್ರರೊಂದಿಗೆ ಮೈಸೂರಿಗೆ ಬಂದು ಒಂಟಿಕೊಪ್ಪಲಿನಲ್ಲಿ ಚಿಕ್ಕ ಮನೆಯೊಂದನ್ನು ಮಾಡಿಕೊಂಡು ಇದ್ದರು.

ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳ ಪುಣ್ಯಕಥೆಗಳನ್ನು ಓದುವುದು, ಕೇಳುವುದು ಎಂದರೆ ಸ್ವಾಮಿಗಳಿಗೆ ಬಹಳ ಇಷ್ಟ. ಅಲ್ಲಿಯ ರಸ ಸನ್ನಿವೇಶಗಳ ಚಿತ್ರಗಳನ್ನು ಮನಸ್ಸಿನಲ್ಲಿ ಮೂಡಿಸಿಕೊಂಡು ಅದನ್ನು ಕಲೆಯಲ್ಲೇ ರೂಪಿಸುತ್ತಿದ್ದರು. ಇವರ ಗೆಳೆಯರಲ್ಲಿ ಸಾಹಿತಿಗಳು ಕಲಾವಿದರೂ ಹೆಚ್ಚಾಗಿದ್ದರು. ಇವರ ಮಮತೆಯ ಒಬ್ಬ ಗೆಳೆಯರೆಂದರೆ ಕೈಲಾಸಂ.

ಅರಮನೆಯ ಕಲಾವಿದರಾಗಿದ್ದ ಕೇಶವಯ್ಯನವರ ನೆರವು ಸಿಕ್ಕಿದ್ದರಿಂದ ಸ್ವಾಮಿಯವರ ಕಲಾಸಾಧನೆ ಪಕ್ವವಾಯಿತು. ಮೈಸೂರಿನ ಶ್ರೀ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಕಲಾ ಶಾಲೆಯಲ್ಲಿ ಕಲಾಭ್ಯಾಸ ಮಾಡಿದ ಅನಂತರ ಮುಂಬಯಿಯ ಜೇಜೆ. ಕಲಾಶಾಲೆಯಲ್ಲಿ ಅಭ್ಯಾಸ ಮಾಡಿ ಹೆಚ್ಚಿನ ಅನುಭವ ಪಡೆದುಕೊಂಡಿದ್ದರಾಗಿ ಇವರ ಕಲೆಗೆ ಶಾಸ್ತ್ರದ ಭದ್ರವಾದ ತಳಹದಿ ಸಿಕ್ಕಿದಂತಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹ ಸಿಕ್ಕಿತಾಗಿ ಇವರ ಕಲಾ ಪ್ರೌಢಿಮೆ ಪ್ರಕಾಶಕ್ಕೆ ಬರಲು ಅವಕಾಶವಾಯಿತು. ಆಗ ಇವರು ಚಿತ್ರಿಸಿದ ಕೆಲವು ತೈಲವರ್ಣ ಚಿತ್ರಗಳು

ಮಹಾರಾಜರ ಮೆಚ್ಚುಗೆಗೆ ಪಾತ್ರವಾಗಿ ಅರಮನೆಯ ಕಲ್ಯಾಣಮಂಟಪವನ್ನು ಅಲಂಕರಿಸಿದುವು. ಅವು ಈಗಲೂ ಅಲ್ಲಿವೆ. ಪಾಶ್ಚಾತ್ಯ ಶೈಲಿಯಲ್ಲಿ ರಚಿಸಲಾದ ಈ ಕೃತಿಗಳಲ್ಲಿ ಜನರ ಭಾವಭಂಗಿ, ಚಲನವಲನ ಬಹಳ ಸ್ವಾಭಾವಿಕವಾಗಿ ಮೂಡಿಬಂದಿದೆ.

ಚಿತ್ರಕಲೆಯ ಜೊತೆಗೆ ಇವರು ದಂತ ಮತ್ತು ಗಂಧದಲ್ಲಿ ಸುಂದರ ಮೂರ್ತಿಗಳನ್ನು ನಿರ್ಮಿಸುತ್ತಿದ್ದುದೂ ಉಂಟು. ಬೇಲೂರಿನ ಶಿಲಾ ಬಾಲಕಿಯರಿಂದ ಸ್ಫೂರ್ತಿಗೊಂಡು ಇವರು ರಚಿಸಿದ ಒಂದು ಆಕೃತಿ ಮತ್ತು ಗಣಪತಿ ತುಂಬ ಮೋಹಕವಾಗಿವೆ.

ಇವರಿಗೆ ವನಸ್ಪತಿ ಔಷಧಿಯ ತಯಾರಿಕೆಯಲ್ಲಿ ಆಸಕ್ತಿ ಇತ್ತು. ತಾವೇ ಮನೆಯಲ್ಲಿ ಅದನ್ನು ತಯಾರಿಸಿಕೊಳ್ಳುತ್ತಿದ್ದರು. ಒಮ್ಮೆ ಯಾವುದೋ ವ್ಯತ್ಯಾಸದಿಂದಾಗಿ ಇವರು ಸಿದ್ಧಪಡಿಸಿ ಸೇವಿಸಿದ ಔಷಧಿ ಇವರ ಮೈಚರ್ಮವನ್ನು ಕಿತ್ತು ತಿಂದಿತು. ಇದರಿಂದಾಗಿ ಇವರು ಮತ್ತೆ ಅಂಥ ಔಷಧಿಗಳ ಗೋಜಿಗೆ ಹೋಗಲಿಲ್ಲ.

ರಸವಾದದಲ್ಲಿಯೂ ಇವರಿಗೆ ಆಸಕ್ತಿಯಿತ್ತು. ಚಿನ್ನ ತಯಾರಿಸ ಬೇಕೆಂಬುದು ಇವರ ಇನ್ನೊಂದು ಹುಚ್ಚು. ಅನೇಕ ವೇಳೆ ಈ ಗುಂಗು ಇವರನ್ನು ವಿಕ್ಷಿಪ್ತಗೊಳಿಸಿದ್ದೂ ಉಂಟು. ತಮ್ಮ ಮನೆಯ ಕೋಣೆಯೊಂದರಲ್ಲಿ ಗಿಡ ಮೂಲಿಕೆಗಳಿಂದ ರಸ ತೆಗೆದು ಪುಟ ಕೊಡುತ್ತಿದ್ದರು. ಆದರೆ ಇದರಿಂದ ಯಾವ ಲಾಭವೂ ಆಗಲಿಲ್ಲ.

ಇವರಿಗೆ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ತಮ್ಮ ಕೊನೆಯ ದಿನಗಳಲ್ಲಿ ದೊಡ್ಡ ಶಿಲೆಯಲ್ಲಿ ಶ್ರೀ ಚಾಮುಂಡೇಶ್ವರಿ ವಿಗ್ರಹವನ್ನು ಕಡೆಯುತ್ತಿದ್ದರು. ಅದು ಪೂರ್ಣಗೊಳ್ಳುವಷ್ಟರಲ್ಲಿಯೇ ಇವರು 1969 ಡಿಸೆಂಬರ್ 27ರಂದು ನಿಧನರಾದರು.

*

**ನಂದಗಡ:** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರದ ಆಗ್ನೇಯಕ್ಕೆ 10 ಕಿಮೀ ದೂರದಲ್ಲಿದೆ. ಇದನ್ನು ಕಸಬಾ ನಂದಗಡ ಎಂದೂ ಕರೆಯುವರು. ಹಿಂದೆ ಇದೊಂದು ಪ್ರಸಿದ್ಧ ವ್ಯಾಪಾರಿ ಪಟ್ಟಣವಾಗಿತ್ತು. ಮಲ್ಲಸರ್ಜ ದೇಸಾಯಿ ಪೇಶವೆ ಬಾಜಿರಾವ್‌ನಿಂದ ದೊರೆತ ಪ್ರತಾಪರಾವ್ ಎಂಬ ಬಿರುದಿನ ಸಂತೋಷದ ಸ್ಮಾರಕವಾಗಿ ಈ ಗ್ರಾಮದಲ್ಲಿ ಒಂದು ಕೋಟೆ ಕಟ್ಟಿಸಿ ಅದನ್ನು ಪ್ರತಾಪಗಡ ಎಂದು ಕರೆದ. ಈಗ ಅದರ ಅವಶೇಷವಿದೆ. ಕಿತ್ತೂರಿನ ದೊರೆ ಖಾನಾಪುರದ ವ್ಯಾಪಾರಿಗಳನ್ನು ನಂದಗಡದಲ್ಲಿ ನೆಲಸಲು ಪ್ರೋತ್ಸಾಹಿಸುತ್ತಿದ್ದ. ವೀರ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರು 1829ರಲ್ಲಿ ಈ ಗ್ರಾಮದಲ್ಲೇ ಗಲ್ಲಿಗೇರಿಸಿದರು. ಸಂಗೊಳ್ಳಿರಾಯಣ್ಣ ತೋರಿಸಿದ ಸ್ಥಳದಲ್ಲೆ ಆತನನ್ನು ಸಮಾಧಿ ಮಾಡಲಾಯಿತು. ಆ ಸ್ಥಳದಲ್ಲಿ ಈಗ ಬೃಹತ್ ಆಕಾರದ ಅಲದಮರ ಬೆಳೆದಿದೆ. ಜನರು ಸಂತಾನ ಪಡೆಯಲು, ಸುಖಶಾಂತಿಯನ್ನು ಬೇಡಿಕೊಳ್ಳಲು ಆ ಗಿಡಕ್ಕೆ ಭಕ್ತಿಯಿಂದ ಪೂಜಿಸುತ್ತಾರೆ. ನಂದಗಡದ ಸಮೀಪದಲ್ಲಿ ಷಂಷೇರ್‌ಗಡ್ ಎಂಬ ಇನ್ನೊಂದು ಕೋಟೆ ಇದೆ.

ನಂದಗಡದಲ್ಲಿ ಶಾಲೆ ಮತ್ತು ಅಂಚೆ ದೂರವಾಣಿ ಮುಂತಾದ ಸೌಲಭ್ಯವಿದ್ದು ಉತ್ತಮ ಮಾರ್ಗವಿದ್ದು ಇತರ ಗ್ರಾಮದೊಡನೆ ಮತ್ತು ಬೆಳಗಾಂವಿಗೆ ನೇರ ವಾಹನ ಸಂಪರ್ಕ ಹೊಂದಿದೆ. (ಎಸ್.ಎ.ಎಸ್)

**ನಂದಗುಡಿ:** ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಒಂದು ಗ್ರಾಮ. ಕಸಬೆಗೆ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,185. ಕನ್ನಡ ಶಾಸನಗಳಲ್ಲಿ ಈ ಊರನ್ನು ನಂದಗುಲಿ ಅಥವಾ ನಂಜುಗುಲಿ ಎಂದೂ ತಮಿಳು ಶಾಸನಗಳಲ್ಲಿ ನೊಂದಗುಲಿ ಎಂದೂ ಕರೆಯಲಾಗಿದೆ. ಸಮೀಪದ ಧರ್ಮೇಶ್ವರ ದೇವಾಲಯದಲ್ಲಿ ಒಂದು ವಿಷದ ಬಾವಿ ಇದೆಯೆಂದೂ ನಂಜುಗುಲಿ ಹೆಸರು ಇದಕ್ಕೆ ಸಂಬಂಧಿಸಿದ್ದೆಂದೂ ಊಹೆ ಇದೆ. ನಂದಗುಡಿ ಪ್ರಾಚೀನ ಪಾಟಲೀಪುರದ ನಿವೇಶನವೆಂದೂ ಇಲ್ಲಿಯೇ ಉತ್ತುಂಗಭುಜರಾಯನಿಂದ ಬಂಧಿತರಾದ ನವನಂದರನ್ನು ಚಾಣಕ್ಯ ಬಿಡುಗಡೆ ಮಾಡಿದನೆಂದೂ ಐತಿಹ್ಯವಿದೆಯಾದರೂ ಇದಕ್ಕೆ ಚಾರಿತ್ರಿಕ ಆಧಾರವಿಲ್ಲ. ಈ ಗ್ರಾಮದ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಅನುಕ್ರಮವಾಗಿ ರಾಗುಲರಾಸಿ (ರಾಗುಲ ಗುಡ್ಡ) ಮತ್ತು ಅಡ್ಡಬೆಟ್ಟ ಎಂಬ ಹೆಸರಿನ ಎರಡು ಸಣ್ಣ ಬೆಟ್ಟಗಳಿವೆ. ದಂತಕಥೆಯ ಪ್ರಕಾರ ರೈತನೊಬ್ಬ ತನ್ನ ಜಮೀನಿನಲ್ಲಿ ಬೆಳೆದ ರಾಗಿಯನ್ನು ಒಂದುಕಡೆ ಮತ್ತು ಹುಲ್ಲನ್ನು ಮತ್ತೊಂದು ಕಡೆ ರಾಶಿ ಮಾಡಿದ್ದನಂತೆ. ಇದನ್ನು ನೋಡಿದ ಅವನ ಹೆಂಡತಿ ಈ ರಾಗಿ ರಾಶಿಯನ್ನು ತಾನು ಬೀಸಬೇಕಾಗಿ ಬರುತ್ತದಲ್ಲಾ ಎಂದು ವ್ಯಥೆಪಟ್ಟಳಂತೆ. ತಕ್ಷಣ ಈ ರಾಶಿಗಳು ಗುಡ್ಡಗಳಾಗಿ ಮಾರ್ಪಾಡಾ ದುವಂತೆ. ಅಡ್ಡಬೆಟ್ಟದ ಮೇಲೆ ಒಂದು ಕಾಲದಲ್ಲಿ ಪ್ರಾಚೀನ ಕಾಲದ ಅರಮನೆಯೊಂದಿದ್ದಿತಂತೆ. ರಾಗುಲಗುಡ್ಡ ಒಂದು ರೀತಿಯ ಜಂಬುಕಲ್ಲಿನ ಗುಡ್ಡ. ಇಲ್ಲಿ ಕಲ್ಲಿನಲ್ಲಿ ಕೊರೆದ ಒಂದು ದೇವಾಲಯವಿತ್ತು. ಈಗ ಹಾಳಾಗಿದೆ. (ಎಚ್.ವಿ.ಎಸ್.)

**ನಂದಳಿಕೆ:** ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಒಂದು ಗ್ರಾಮ. ಕಾರ್ಕಳದ ಪಶ್ಚಿಮಕ್ಕೆ 16ಕಿಮೀ ದೂರದಲ್ಲಿದೆ. ಜನಸಂಖ್ಯೆ 3,270. ಇಲ್ಲಿ ಮಹಾಲಿಂಗೇಶ್ವರ ದೇವಾಲಯವಿದೆ. ಹಿಂದೆ ಈ ಗ್ರಾಮ ನಂದಳಿಕೆ ಹೆಗ್ಗಡೆಗಳು ಎನಿಸಿಕೊಂಡ ಒಂದು ಸಣ್ಣ ಪಾಳೆಯಗಾರಿಕೆಯ ಪೀಠವಾಗಿತ್ತು. ಈಗಿರುವ ಆ ಕಾಲದ ಹಿಂದಿನ ಮನೆಯಲ್ಲಿ ಮರದ ಸುಂದರ ಕೆತ್ತನೆಯ ಕೆಲಸವನ್ನು ಕಾಣಬಹುದು. ಮುಖ್ಯವಾಗಿ ನಂದಳಿಕೆ ಗ್ರಾಮ ಪ್ರಸಿದ್ಧಿಗೆ ಬಂದುದು. ಕನ್ನಡದ ಶ್ರೇಷ್ಠ ಕವಿ ನಂದಳಿಕೆ ಲಕ್ಷ್ಮೀನಾರಾಯಣಯ್ಯನಿಂದ, ಮುದ್ದಣ **(ನೋಡಿ)** ಎಂಬ ಅಂಕಿತನಾಮ ದಿಂದ ಈತ ರಚಿಸಿದ ಶ್ರೀರಾಮಾಶ್ವಮೇಧ ಮತ್ತು ಇತರ ಕನ್ನಡ ಕೃತಿಗಳು ಇಂದಿಗೂ ಜನಪ್ರಿಯವಾಗಿವೆ. ನಂದಳಿಕೆಯಲ್ಲಿ ಕರ್ನಾಟಕದ ಪ್ರಸಿದ್ಧ ಸಂಗೀತಗಾರರಾಗಿದ್ದ ಬಿಡಾರಂ ಕೃಷ್ಣಪ್ಪನವರ ಪೂರ್ವಿಕರು ವಾಸವಾಗಿದ್ದರೆಂದು ಹೇಳುವರು. (ಕೆ.ಟಿ.ಆರ್.)

**ನಂದಿ:** ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಚಿಕ್ಕಬಳ್ಳಾಪುರದ ನೈಋತ್ಯಕ್ಕೆ 6ಕಿಮೀ ದೂರದಲ್ಲಿರುವ ಗ್ರಾಮ. ಹೋಬಳಿ ಕೇಂದ್ರ. ಇಲ್ಲಿನ ಪ್ರಾಚೀನ ದೇವಾಲಯದಿಂದ ಪ್ರಸಿದ್ಧವಾಗಿದೆ.

ಇಲ್ಲಿನ ಭೋಗನಂದೀಶ್ವರ ದೇವಾಲಯ ಕರ್ನಾಟಕದ ಪ್ರಾಚೀನ ದೇವಾಲಯಗಳಲ್ಲೊಂದು. ಚಿಕ್ಕಬಳ್ಳಾಪುರದಲ್ಲಿ ದೊರೆತ ತಾಮ್ರಶಾಸನ ವೊಂದರಲ್ಲಿ ಬಾಣವಂಶದ ದೊರೆಯಾದ ಬಾಣ ವಿದ್ಯಾಧರನ ಪತ್ನಿಯೂ ದಡ್ಡನರಾಧಿಪನ ತಾಯಿಯೂ ಆದ ರತ್ನಾವಳಿ ಎಂಬಾಕೆ ಈ ಆಲಯವನ್ನು ಕಟ್ಟಿಸಿದಳೆಂದು ಹೇಳಿದೆ. ನಂದಿ ಗ್ರಾಮದಲ್ಲಿಯೇ ಬಾವಿಯೊಂದರಲ್ಲಿ ದೊರೆತ 806ನೆಯ ವರ್ಷದ ರಾಷ್ಟ್ರಕೂಟ ಮುಮ್ಮಡಿ ಗೋವಿಂದನ ತಾಮ್ರ ಶಾಸನದಲ್ಲಿಯೂ ಈ ಪ್ರಸ್ತಾಪವಿದೆ. ಅದರಲ್ಲಿ ರತ್ನಾವಳಿ ಇಂದಪ್ಪರಸನ ಮಗಳೆಂದೂ ಆಕೆಗೆ ಮಾಣಿಕಬ್ಬೆ ಎಂಬ ಇನ್ನೊಂದು ಹೆಸರಿತ್ತೆಂದೂ ಹೇಳಿದೆ. ನಾಲ್ಕು ವರ್ಷಗಳ ಅನಂತರ ಮುಮ್ಮಡಿ ಗೋವಿಂದನ ಆಳ್ವಿಕೆಯ 17ನೆಯ ವರ್ಷದ ಶಾಸನದಲ್ಲಿ ಈ ಶಿವಾಲಯಕ್ಕೆ ನೀಡಿದ ಭೂದಾನದ ಉಲ್ಲೇಖವಿದೆ. ಬಾಣ ವಿದ್ಯಾಧರ 8ನೆಯ ಶತಮಾನದ ಅಂತ್ಯದಲ್ಲಿ ಆಳುತ್ತಿದ್ದನೆಂದು ಊಹಿಸಲಾಗಿದ್ದು ಬಹುಶಃ ಆ ಸಮಯದಲ್ಲಿಯೇ ಈ ದೇವಾಲಯವೂ ಕಟ್ಟಿಸಲ್ಪಟ್ಟಿರಬೇಕು. ಇದೇ ದೇವಾಲಯದಲ್ಲಿ ದೊರೆತ 9ನೆಯ ಶತಮಾನದ ಅಂತ್ಯಭಾಗಕ್ಕೆ ಸೇರಿದ

ನೊಳಂಬಾಧಿರಾಜನ ಶಾಸನದಿಂದ ಈ ದೇವಾಲಯದ ಗೋಪುರವನ್ನು ಆ ಸುಮಾರಿನಲ್ಲಿ ಕಟ್ಟಿಸಲಾಯಿತೆಂದು ತಿಳಿದುಬರುತ್ತದೆ.

370X250 ಅಡಿಗಳ ವಿಸ್ತಾರದ ದ್ರಾವಿಡ ಶೈಲಿಯಲ್ಲಿ ಕಟ್ಟಲಾದ ಅಲಂಕಾರಿಕವಾದ ಈ ದೇವಾಲಯದಲ್ಲಿ ಎರಡು ಗರ್ಭಗೃಹಗಳು ಮತ್ತು ಪ್ರತ್ಯೇಕವಾದ ಎರಡು ನಂದಿಮಂಟಪಗಳಿವೆ. ಈ ಆಲಯದ ಉತ್ತರದ ಗುಡಿ ಭೋಗನಂದೀಶ್ವರನಿಗೂ ದಕ್ಷಿಣದ ಗುಡಿ ಅರುಣಾಚಲೇಶ್ವರನಿಗೂ ಮೀಸಲಾಗಿವೆ. ಒಂದೊಂದೂ ಗುಡಿಗೂ ಸೇರಿದಂತೆ ಪ್ರತ್ಯೇಕವಾದ ಸುಕನಾಸಿ, ನವರಂಗಗಳೂ ಇವೆ. ಇವುಗಳಲ್ಲಿ ಒಂದೊಂದರಲ್ಲೂ ಒಂದಕ್ಕೆ ಅಭಿಮುಖವಾಗಿ ಇನ್ನೊಂದರಂತೆ ಜಾಲಂಧ್ರಗಳಿವೆ.



ಭೋಗನಂದೀಶ್ವರ ದೇವಾಲಯ

ಭೋಗನಂದೀಶ್ವರನ ಗುಡಿಯ ಮುಂದಿನ ನಂದಿಮಂಟಪದಲ್ಲಿ 11ನೆಯ ಶತಮಾನಕ್ಕೆ ಸೇರಿದ ಚೋಳರ ಶಾಸನಗಳಿದ್ದು, ತನ್ಮೂಲಕ ದೇವಾಲಯದ ಆ ಭಾಗಗಳೆಲ್ಲ ಚೋಳರ ಕಾಲದಲ್ಲಿ ಕಟ್ಟಿಸಲ್ಪಟ್ಟವುಗಳೆಂದು ತಿಳಿದುಬರುತ್ತದೆ. ದಕ್ಷಿಣಕ್ಕಿರುವ ಅರುಣಾಚಲೇಶ್ವರ ಗುಡಿಯ ನವರಂಗದಲ್ಲಿನ ಜಾಲಂಧ್ರದಲ್ಲಿ ತಾಂಡವೇಶ್ವರ ವಿಗ್ರಹವಿದ್ದು ಅಲ್ಲಿನ ಶಾಸನ ಅದರ ಕರ್ತೃ ಕೇಶವನೆಂಬುದನ್ನು ತಿಳಿಸುತ್ತದೆ. ಭೋಗನಂದೀಶ್ವರನ ಗುಡಿಯ ನವರಂಗದ ಎಡಭಾಗದಲ್ಲಿ ಧ್ಯಾನ ಮುದ್ರೆಯಲ್ಲಿ ಪದ್ಮಾಸನದಲ್ಲಿರುವ ಒಂದು ವಿಗ್ರಹವಿದೆ. ಇದು ಬಹುಶಃ ಚೋಳ ಅರಸನೊಬ್ಬನ ಪ್ರತಿಕೃತಿಯಾಗಿರಬಹುದೆಂದು ಊಹಿಸಲಾಗಿದೆ. ಈ ನವರಂಗದ ನಾಲ್ಕು ಕಂಬಗಳಲ್ಲಿಯೂ ಉತ್ತಮವಾದ ಕೆತ್ತನೆಯ ಕೆಲಸವನ್ನು ಕಾಣಬಹುದು. ನವರಂಗದ ಭುವನೇಶ್ವರಿ 7" ವಿಸ್ತಾರವಾಗಿದ್ದು ಅದರಲ್ಲಿ ಮಧ್ಯದಲ್ಲಿ ಶಿವ ಮತ್ತು ಪಾರ್ವತಿ ಮತ್ತು ಸುತ್ತಲೂ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಶಿವನಿಗೆ ಸಿಂಹವನ್ನೂ ಪಾರ್ವತಿಗೆ ನಂದಿಯನ್ನೂ ವಾಹನವಾಗಿ ತೋರಿಸಲಾಗಿದೆ. ಎರಡು ಗುಡಿಗಳ ನಡುವೆ ಸಣ್ಣದೊಂದು ಗುಡಿ ಇದೆ. ಎರಡು ಗುಡಿಗಳ ನವರಂಗದ ಹಿಂಭಾಗಕ್ಕೆ ಸಮಾನಾಂತರವಾಗಿರುವ ಈ ಗುಡಿಯ ಸುತ್ತಲೂ ಎರಡು ಅಡಿಗಳಷ್ಟು ಸ್ಥಳವಿದ್ದು ಪ್ರದಕ್ಷಿಣೆಗೆ ಅನುಕೂಲವಾಗಿದೆ. ಇದನ್ನು ಉಮಾಮಹೇಶ್ವರನ ಗುಡಿ ಎಂದು ಕರೆಯುತ್ತಾರೆ.

ಭೋಗನಂದೀಶ್ವರ–ಅರುಣಾಚಲೇಶ್ವರ ಈ ಜೋಡುಗುಡಿಗಳ ಮುಂದಿನ ರಂಗಮಂಟಪ ಕಪ್ಪುಶಿಲೆಯಲ್ಲಿ ಕಟ್ಟಲ್ಪಟ್ಟಿದೆ. ಇದರಲ್ಲಿನ ನಾಲ್ಕು ಕಂಬಗಳಲ್ಲಿ ಸ್ವಲ್ಪವೂ ಸ್ಥಳ ಬಿಡದೆ ಕೆತ್ತನೆ ಕೆಲಸ ಮಾಡಲಾಗಿದೆ. ಮೃಗಗಳು, ಬಳ್ಳಿಗಳು, ಮೂರ್ತಿಗಳು ಹಾಗೂ ಪ್ರಮುಖವಾಗಿ ಪಕ್ಷಿಗಳು ಈ ಕೆತ್ತನೆಯ ಮುಖ್ಯವಸ್ತುಗಳು. ಒಂದೊಂದು ಕಂಬದಲ್ಲಿಯೂ ಎರಡು ಮೂರು ಕಡೆ ಸುಮಾರು 2.1/2 ಅಡಿಗಳಷ್ಟು ಎತ್ತರದ ಸ್ತ್ರೀ ವಿಗ್ರಹಗಳು, ಇವುಗಳ ಮಧ್ಯೆ ಅರೆಗಂಬಗಳು, ಸುತ್ತಲೂ ಪಕ್ಷಿಗಳು ಮತ್ತು ಬಳ್ಳಿಗಳು ಇವನ್ನು ಕೆತ್ತಲಾಗಿದೆ. ಪಕ್ಷಿಗಳನ್ನಂತೂ ಇಲ್ಲಿನ ಬೋದಿಗೆ ಭುವನೇಶ್ವರಿಗಳಲ್ಲಿಯೂ ಕಾಣಬಹುದು. ನಾಲ್ಕು ಅಡಿ ಆಳದ ಭುವನೇಶ್ವರಿಯ ತೊಲೆಗಳ ಒಳಮುಖದಲ್ಲಿ ಗೌರೀಶಂಕರ, ಲಕ್ಷ್ಮೀನಾರಾಯಣ, ಸರಸ್ವತಿ ಮತ್ತು ಬ್ರಹ್ಮ, ಸ್ವಾಹಾದೇವಿ ಮತ್ತು ಅಗ್ನಿ ಇವರುಗಳ ವಿಗ್ರಹಗಳನ್ನು ಕೆತ್ತಲಾಗಿದೆ. ಇನ್ನೊಂದು ಕಡೆ ಅಷ್ಟದಿಕ್ಪಾಲಕರು, ಮತ್ತೊಂದು ಕಡೆ ಮೇಲಿನಿಂದ ತೂಗುಬಿದ್ದಿರುವ ಕಮಲವನ್ನು ಹಿಡಿದುಕೊಂಡಿರುವ ನಾಲ್ಕು ಗಿಣಿಗಳ ಕೆತ್ತನೆ ಇವೆ.

ನಂದಿಮಂಟಪಗಳ ನಡುವೆ ಕಲ್ಯಾಣಮಂಟಪ ಇದೆ. ಇದರಲ್ಲಿನ 12 ಕಂಬಗಳು ಕರಿಕಲ್ಲಿನವು. ಎಂಟು ಕಂಬಗಳ ಮುಂದಿನ ಮುಖದಲ್ಲಿ 3 ಅಡಿ ಎತ್ತರದ ನಿಲುಭಂಗಿಯ ಸ್ತ್ರೀ ವಿಗ್ರಹಗಳು, ಬುಡದ ಫಲಕಗಳಲ್ಲಿ ಸಿಂಹಗಳು ಇವೆ. ಇತರತ್ರ ಮತ್ಸ್ಯವರಾಹಾವತಾರಗಳು, ತಾಂಡವಗಣಪತಿ, ಆಂಜನೇಯ, ಕಾಲಭೈರವ, ಉಮಾಮಹೇಶ್ವರ ಮುಂತಾದ ವಿಗ್ರಹಗಳು ಇವೆ.

ದೇವಾಲಯಗಳ ಹಿಂಭಾಗದಲ್ಲಿ ದೇವಿಯ ಗುಡಿಗಳು ಇವೆ. ಪ್ರಸನ್ನ ಪಾರ್ವತಿ ಭೋಗನಂದೀಶ್ವರನ ದೇವಿಯಾದರೆ, ಇನ್ನೊಂದು ಗುಡಿಯ ಅಪೇತಕುಚಾಂಬ ಅರುಣಾಚಲೇಶ್ವರನ ದೇವಿ. ಎರಡನೆಯ ಪ್ರಾಕಾರದಲ್ಲಿ ವಸಂತ ಮಂಟಪ ಮತ್ತು ತುಲಾಭಾರ ಮಂಟಪಗಳಿವೆ. ಮೂರನೆಯ ಪ್ರಾಕಾರದ ಮಧ್ಯೆ ಶೃಂಗಿತೀರ್ಥವೆಂಬ ದೊಡ್ಡ ಕೊಳ ಇದೆ. ಇದು ದಕ್ಷಿಣ ಪಿನಾಕಿನಿ ನದಿಯ ಉಗಮಸ್ಥಳ ಎಂದು ಹೇಳಿಕೆ. ದೇವಾಲಯದ ಮಹಾದ್ವಾರ 8 ಅಡಿ ಅಗಲ 16 ಅಡಿ ಎತ್ತರ ಇದೆ. ಬಾಗಿಲುತೋಳುಗಳ ಮೇಲೆ ದ್ವಾರಪಾಲಕರ ವಿಗ್ರಹಗಳು, ಲತೆಯನ್ನು ಹಿಡಿದಿರುವ ಸ್ತ್ರೀವಿಗ್ರಹಗಳು ಇವೆ. ನಂದಿಯ ದೇವಾಲಯದಲ್ಲಿ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಕಾಲದಲ್ಲಿ ಕಟ್ಟಿದ್ದರೂ ಒಂದೊಂದೂ ಇನ್ನೊಂದರೊಡನೆ ಚೆನ್ನಾಗಿ ಹೊಂದಿಕೊಂಡಿದೆ ಎಂಬುದೊಂದು ಇದರ ವೈಶಿಷ್ಟ್ಯ.

11ನೆಯ ಶತಮಾನದಲ್ಲಿ ತಮಿಳುನಾಡಿನ ಚೋಳರ ಅಧೀನದಲ್ಲಿದ್ದ ಈ ನಂದಿ ಗ್ರಾಮ ನಿಗರಿಲಿಶೋಟಿ ಮಂಡಲದಲ್ಲಿ ಕಳವರನಾಡಿನ ಒಂದು ಭಾಗವಾಗಿತ್ತು. ಕಳವರ ಎಂಬ ಅದೇ ಹೆಸರಿನ ಗ್ರಾಮ ಈಗ ನಂದಿ ಮತ್ತು ಚಿಕ್ಕಬಳ್ಳಾಪುರಗಳ ನಡುವೆ ಇದೆ. ಶಾಸನಗಳಲ್ಲಿ ನಂದಿಯನ್ನು ಪೆರಿಯನಂದಿ ಎಂತಲೂ ಅಲ್ಲಿನ ದೇವರನ್ನು ಇದು ದಕ್ಷಿಣ ಕೈಲಾಸವೆಂದು ಪ್ರಸಿದ್ಧವಾಗಿತ್ತು. 12ನೆಯ ಶತಮಾನದ (ತಿರು)

ಮಹಾನಂದೀಶ್ವಮುಡೈಯಾರ್ ಎಂದೂ ಕರೆದಿದೆ. ಆಗ ಪೂರ್ವಾರ್ಧದಲ್ಲಿ ಈ ಪ್ರದೇಶ ಹೊಯ್ಸಳ ರಾಮನಾಥನ ವಶವಾಯಿತು. ಅನಂತರ ವಿಜಯನಗರದ ಅರಸರ ಅಧೀನಕ್ಕೆ ಬಂದಿತ್ತು. 15–17ನೆಯ ಶತಮಾನಗಳಲ್ಲಿ ವಿಜಯನಗರದ ಸಾಮಂತರಾದ ಆವತಿಯ ಪ್ರಭುಗಳು ಇಲ್ಲಿ ಆಳಿದರು. 17ನೆಯ ಶತಮಾನದ ಮಧ್ಯಭಾಗದಲ್ಲಿ ಈ ಪ್ರದೇಶ ಆದಿಲ್‌ಶಾಹೀಗಳ ಆಳ್ವಿಕೆಗೆ ಒಳಪಟ್ಟಾಗ ನಂದಿ ಗ್ರಾಮವನ್ನು ಶಹಾಜಿ ಜಹಗೀರಾಗಿ ಕೊಟ್ಟ. ಮುಂದಿನ ಶತಮಾನದಲ್ಲಿ ಹೈದರ್ ಇದನ್ನು ಆಕ್ರಮಿಸಿದ. ಟಿಪ್ಪು ಇದನ್ನು ವಿಸ್ತರಿಸಿ ಹೊಸ ಪೇಟೆಯನ್ನು (ಈಗಿನ ಸುಲ್ತಾನಪೇಟೆ) ಕಟ್ಟಿಸಿದ.

1799– 1808ರಲ್ಲಿ ನಂದಿ ಮತ್ತು ಸುಲ್ತಾನ ಪೇಟೆಗಳ ನಡುವೆ ಬ್ರಿಟಿಷ್ ದಂಡಿನ ಒಂದು ಠಾಣ್ಯ ಇತ್ತು. ನಂದಿಯಲ್ಲಿ ಶಿವರಾತ್ರಿ ಕಾಲದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಬೆಂಗಳೂರು, ಚಿಕ್ಕಬಳ್ಳಾಪುರ, ದೇವನಹಳ್ಳಿ ಮತ್ತು ಕೋಲಾರಗಳಿಂದ ನಂದಿಗೆ ನೇರ ರಸ್ತೆ ಸಂಪರ್ಕ ಇದೆ. ಗ್ರಾಮದಿಂದ ಸು. 2ಕಿಮೀ ದೂರದಲ್ಲಿ, ಬೆಂಗಳೂರು ಬಂಗಾರಪೇಟೆ ನ್ಯಾರೋಗೇಜ್ ರೈಲು ಹಾದಿಯಲ್ಲಿ ನಂದಿ ನಿಲ್ದಾಣವಿದೆ. (ಬಿ.ಆರ್.ಜಿ.)

**ನಂದಿಕೇಶ್ವರ:** ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಒಂದು ಗ್ರಾಮ. ಬಾದಾಮಿಯ ಈಶಾನ್ಯಕ್ಕೆ ಸು.18ಕಿಮೀ ಅಂತರದಲ್ಲಿ ಮಲಪ್ರಭಾ ನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 4,892. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳೂ ಕೊಳವೆ ಬಾವಿಗಳು, ಅಂಚೆಕಚೇರಿ, ಗ್ರಾಮಸೇವಾ ಸಹಕಾರಿ ಸಂಘ ಮುಂತಾದವು ಇದ್ದು ವಿದ್ಯುಚ್ಛಕ್ತಿಯ ಸೌಕರ್ಯ ಪಡೆದಿದೆ. ಪ್ರತಿ ಗುರುವಾರ ಸಂತೆ ನಡೆಯುತ್ತದೆ. ಪ್ರತಿವರ್ಷ ಯುಗಾದಿ ಪಾಡ್ಯದ ದಿನ ನಂದೀಬಸವೇಶ್ವರ ಜಾತ್ರೆ ಜರುಗುತ್ತದೆ.

ಶಿವ ಪಾರ್ವತಿಯರು ಮಹಾಕೂಟದಲ್ಲಿ ತಪಸ್ಸು ಮಾಡುತ್ತಿದ್ದಾಗ ಶಿವನ ವಾಹನ ನಂದಿ ಈ ಸ್ಥಳದಲ್ಲಿ ವಾಸಮಾಡುತ್ತಿದ್ದುದರಿಂದ ಈ ಗ್ರಾಮಕ್ಕೆ ನಂದಿಕೇಶ್ವರವೆಂದು ಹೆಸರು ಬಂತೆಂದು ಪ್ರತೀತಿ. ಬಾದಾಮಿ ಗುಹೆಗಳಲ್ಲಿ ದೊರೆತ ಒಂದು ಶಿಲಾಶಾಸನದಲ್ಲಿ ಕೀರ್ತಿವರ್ಮನ ತಮ್ಮನಾದ ಮಂಗಲೀಶ ವೈಷ್ಣವ ಗುಹೆಯಲ್ಲಿ ಒಂದು ವಿಷ್ಣುಗೃಹವನ್ನು ನಿರ್ಮಿಸಿ ಅದರಲ್ಲಿ ವಿಷ್ಣು ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಆ ದೇವರ ಬಲಿಪೂಜಾ ನಿಮಿತ್ತವಾಗಿ ಲಂಜೀಶ್ವರ ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟನೆಂಬ ಉಲ್ಲೇಖವಿದೆ. ಈ ಲಂಜೀಶ್ವರವೇ ಇಂದಿನ ನಂದಿಕೇಶ್ವರ ಇರಬಹುದು. ನಂದಿಕೇಶ್ವರಕ್ಕೆ ಸಮೀಪದಲ್ಲಿ ದಕ್ಷಿಣದ ಕಾಶಿ ಎಂದು ಕರೆಯುವ ಮಹಾಕೂಟ ಪುಣ್ಯಕ್ಷೇತ್ರವಿದೆ. (ಎಸ್.ಎಸ್.ಎನ್.)

**ನಂದಿಕೋಲು:** ಶೈವ ದೇವಾಲಯಗಳಲ್ಲಿ, ವಿಶೇಷವಾಗಿ ಪೂಜಾ ಸಂದರ್ಭಗಳಲ್ಲಿ ಉತ್ಸವಗಳಲ್ಲಿ ಹೊತ್ತು ಕುಣಿವ ಶೃಂಗಾರಗೊಂಡ ದೊಡ್ಡ ಕೋಲಿನಂಥ ಒಂದು ಸಾಧನ. ಇದನ್ನು ನಂದಿಧ್ವಜ, ನಂದಿಕಂಬ ಎಂದೂ ಕರೆಯುತ್ತಾರೆ.

ನಂದಿಕೋಲು ಸಾಮಾನ್ಯವಾಗಿ ಹದಿನೈದರಿಂದ ಮೂವತ್ತೈದು ಅಡಿ ಉದ್ದವಿರುತ್ತದೆ. ಬೊಂಬಿನ ಕೆಳಭಾಗದಿಂದ ಮೇಲೆ ನಾಲ್ಕು ಅಡಿ ಎತ್ತರದಲ್ಲಿ ಮಂಟಪದಂಥ ನಾಲ್ಕು ಕಂಬದ ಒಂದು ಪೀಠ ಇರುತ್ತದೆ. ಇದರಲ್ಲಿ ಕುಳಿತ ಭಂಗಿಯ ನಂದಿಯ ವಿಗ್ರಹ ಇದ್ದು ಪೀಠದ ಮೇಲ್ಛಾವಣಿಯ ಮೇಲೆ ಪುಟ್ಟ ಸಿಹಿಕುಂಬಳಕಾಯಿ ಆಕಾರದ ಹರಡೆ ಇರುವುದು. ಇದನ್ನು ಗಗ್ರ, ಗಗ್ಗರ ಎಂದೂ ಕರೆಯುತ್ತಾರೆ. ಇದು ಒಳಗೆ ಟೊಳ್ಳಾಗಿದ್ದು, ಹೊತ್ತು ಕುಣಿಯುವಾಗ ಶಬ್ದ ಬರಲೆಂದು ಕೆಲವು ಕಡೆ ಸಣ್ಣ ಜಲ್ಲಿಕಲ್ಲುಗಳನ್ನೋ ಹುಣಿಸೆ ಅಥವಾ ಪಾರಿವಾಣದ ಬೀಜಗಳನ್ನೊ ಹಾಕಿರುತ್ತಾರೆ. ಈ ಹರಡೆಯ ಮೇಲುತುದಿ ಕೆಳತುದಿಗಳಲ್ಲಿ ಅದಕ್ಕೆ ಅಂಟಿಕೊಂಡಂತೆ ಇರುವ ಬಳೆಯ ಆಕಾರದ ಎರಡು ವಸ್ತುಗಳನ್ನು ಪ್ಯಾರಿಯ ಎಂದು ಕರೆಯುತ್ತಾರೆ. ಇವು ಕುಣಿದಾಗ ಝಳಪಿಸುವ, ತಿರುಗುವ ಅನುಕೂಲ ಹೊಂದಿದ್ದು ಹರಡೆಯೊಂದಿಗೆ ಬೇರ್ಪಡಿಸಲಾಗದ ರೀತಿಯಲ್ಲಿ ಹೊಂದಿಕೊಂಡಿರುತ್ತವೆ. ನಂದಿಕೋಲಿನಲ್ಲಿ ಅದರ ಎತ್ತರಕ್ಕೆ ತಕ್ಕಂತೆ ಹತ್ತರಿಂದ ಇಪ್ಪತ್ತು ಹರಡೆಗಳಿರುತ್ತವೆ. ಇವು ಮೇಲಕ್ಕೆ ಹೋದಂತೆಲ್ಲ ಒಂದಕ್ಕೊಂದು ಚಿಕ್ಕವಾಗುತ್ತ ಹೋಗುತ್ತವೆ. ಈ ಹರಡೆಗಳ ನಡುವೆ ಇರುವ ಛತ್ರಿಯಾಕಾರದ ತಗಡುಗಳನ್ನು ಜಾಲ್ರ, ಜಾಲರಿ ಎಂದು ಕರೆಯುತ್ತಾರೆ. ಇವುಗಳ ತುದಿಯಲ್ಲಿ ಸುತ್ತಲೂ ಚಿತ್ತಾರ ಮಾಡಿದ ಲೋಲಾಕಿನಂಥ ಸಣ್ಣ ಸಣ್ಣ ತಗಡುಗಳಿದ್ದು ಇವು ಕೂಡ ಮೇಲಕ್ಕೆ ಹೋದಂತೆಲ್ಲ ಚಿಕ್ಕವಾಗುತ್ತ ಹೋಗಿರುತ್ತವೆ. ಸಾಮಾನ್ಯವಾಗಿ ಇವನ್ನು ಅಲಂಕಾರಕ್ಕಾಗಿಯೂ ಶಬ್ದಕ್ಕಾಗಿಯೂ ಹಾಕಲಾಗಿರುತ್ತದೆ. ಬೊಂಬಿನ ಮೇಲುತುದಿಯಿಂದ ಕೆಳಕ್ಕೆ ನಾಲ್ಕು ಅಡಿಗಳ ವರೆಗೆ ಬಿಳಿ ಮತ್ತು ಕೆಂಪು ಬಟ್ಟೆಗಳಿಂದ ಸುತ್ತಿ ಮುಚ್ಚಲಾಗುತ್ತದೆ. ಇದರ ತುದಿಯಲ್ಲಿ ಕೆಂಪು ಅಥವಾ ಕಾವಿ ಬಣ್ಣದ ಒಂದು ಧ್ವಜವಿರುತ್ತದೆ. ಇದು ಕೆಲವು ಕಡೆ ತ್ರಿಕೋನಾಕೃತಿಯಲ್ಲಿರುತ್ತದೆ. ಕೆಲವು ಕಡೆ ತುದಿ ಮಾತ್ರ ಎರಡು ತ್ರಿಕೋನವಾಗಿರುವುದುಂಟು. ಧ್ವಜದ ನಡುವೆ ಈಶ್ವರಲಿಂಗದ ಚಿತ್ರವೂ ಅಕ್ಕಪಕ್ಕದಲ್ಲಿ ಲಿಂಗದ ಕಡೆಗೆ ಮುಖಮಾಡಿರುವ ಎರಡು ನಂದಿಗಳ ಚಿತ್ರವೂ ಇರುತ್ತವೆ. ಈ ಚಿತ್ರಗಳನ್ನು ಬಿಳಿ ಬಟ್ಟೆಯಲ್ಲಿ ಹೊಲಿಯಲಾಗಿರುತ್ತದೆ. ಎರಡರಿಂದ ಎಂಟು ಅಡಿಗಳಷ್ಟು ಉದ್ದವಾಗಿರುವ ಈ ಧ್ವಜವನ್ನು ಕೆಲವು ಕಡೆ ಬೊಂಬಿಗೆ ಸುತ್ತುವುದೂ ಇನ್ನು ಕೆಲವು ಕಡೆ ಹಾರಾಡಲು ಬಿಡುವುದೂ ಉಂಟು. ಬೊಂಬಿನ ಮೇಲುತುದಿಯಲ್ಲಿ ಚತ್ತು ಅಥವಾ ಛತ್ರಿ ಇರುತ್ತದೆ. ಇದನ್ನು ಕಳಸ ಎಂದು ಕರೆಯುವರು. ಇದರ ಸುತ್ತ ಕೂಡ ಚಿತ್ತಾರ ಮಾಡಿದ ಲೋಲಾಕಿನಂಥ ಸಣ್ಣ ಸಣ್ಣ ತಗಡುಗಳ ಅಲಂಕಾರವಿರುತ್ತದೆ. ಬೊಂಬು ಮತ್ತು ಬಟ್ಟೆ ಇವನ್ನು ಬಿಟ್ಟರೆ ನಂದಿ ಕೋಲಿನ ಉಳಿದ ಭಾಗಗಳೆಲ್ಲ ಹಿತ್ತಾಳೆಯಿಂದ ನಿರ್ಮಾಣವಾಗಿರುತ್ತವೆ. ಕೆಲವು ಕಡೆ ನಂದಿಯ ವಿಗ್ರಹವನ್ನು ಪಂಚಲೋಹದಿಂದ ಮಾಡಿರುತ್ತಾರೆ. ಶಿವನಿಗೆ ವಿಶೇಷವಾಗಿ ಪೂಜೆ ಸಂದಾಗ ಅವನ ವಾಹನವಾದ ನಂದಿಯನ್ನು ಮೆರೆಸುವುದು ಸಂಪ್ರದಾಯ. ಆಗ ನಂದಿಕೋಲನ್ನು ಹೊತ್ತು ಕುಣಿಯುವುದುಂಟು.

ಹೀಗೆ ಹೊತ್ತು ಕುಣಿಯುವಾಗ ಭಾರವನ್ನು ತಡೆದುಕೊಳ್ಳಲು ಹೆಗಲಿಗೆ ನೇತುಹಾಕಿಕೊಳ್ಳಬಹುದಾದಂಥ ಒಂದು ಚೀಲವಿದ್ದು ಇದನ್ನು ಪಟ್ಟಿಕಲ್ಲಿ ಅಥವಾ ನಂದಿಕಲ್ಲಿ ಎಂದು ಕರೆಯುತ್ತಾರೆ. ನಂದಿಕೋಲು ಒಬ್ಬ ಆಳು ಹೊರುವುದಕ್ಕಿಂತ ಭಾರವಾಗಿದ್ದರೆ ಹರಡೆಗಳ ಸಾಲು ಮುಗಿಯುವ ಜಾಗದಿಂದ ಮೂರು ಅಥವಾ ಹೆಚ್ಚು ಹಗ್ಗಗಳನ್ನು ಇಳಿಯಬಿಟ್ಟು, ಸುತ್ತಲೂ ಒಂದೊಂದು ಹಗ್ಗವನ್ನು ಒಬ್ಬೊಬ್ಬರು ಹಿಡಿಯುತ್ತಾರೆ. ನಂದಿಕೋಲು ಹೊತ್ತವನು ತಾಳಕ್ಕೆ ತಕ್ಕಂತೆ ಕುಣಿಯುವಾಗ ಹಗ್ಗದವರು ಅವನಿಗೆ ಅನುಕೂಲಕರ ರೀತಿಯಲ್ಲಿ ಚಲಿಸುತ್ತಾರೆ. ನಂಜನಗೂಡು ತಾಲ್ಲೂಕಿನಲ್ಲಿ ನಂದಿಕೋಲು ಹೊತ್ತವನ ಹೆಗಲ ಮೇಲೆ ಇನ್ನೊಬ್ಬ ನಂದಿಕೋಲು ಹಿಡಿದು ನಿಲ್ಲುವ ಪರಿಪಾಠವಿದೆ. ಹಾಗಾದಾಗ, ನೆಲದ ಮೇಲೆ ನಿಂತವನು ಎರಡು ಭಾರಗಳನ್ನೂ ಸಹಿಸಿಕೊಂಡು ಕುಣಿಯಬೇಕಾಗುತ್ತದೆ. ಇದು ಶ್ರಮದ ಕೆಲಸ. ಆದರೆ ಕುಣಿಯುವ ವ್ಯಕ್ತಿ ಆವೇಶದಲ್ಲಿ ಸರಾಗವಾಗಿ ಕುಣಿಯುತ್ತಾನೆ. ಜೋಡಿ ನಂದಿಕೋಲುಗಳನ್ನು ಬಳಸುವುದು ಎಲ್ಲ ಕಡೆಯೂ ಕಂಡು ಬರುವ ಪದ್ಧತಿ.

ನಂದಿಕೋಲಿನ ಕುಣಿತದ ಜೊತೆ ಕರಡೆ, ಡೊಳ್ಳು, ಸೊನಾಮಿ, ಶ್ರುತಿ, ತಾಳ, ಚಮ್ಮಾಳ ಮುಂತಾದ ವಾದ್ಯ ವಿಶೇಷಗಳನ್ನು ಬಳಸುವರು.

ಈ ವಾದ್ಯಗಳೊಂದಿಗೆ ತಮಟೆ ಬಳಸಬಾರದೆಂಬ ನಂಬಿಕೆ ಇದೆ. ಆದರೆ ಇಂಥ ವಾದ್ಯಗಳ ಪರಿಚಯ ಇಲ್ಲದ ಕಡೆ ತಮಟೆಗಳನ್ನೇ ಬಳಸುತ್ತಾರೆ. ನಂದಿಕೋಲನ್ನು ಹೊತ್ತು ಕುಣಿಯುವ ವ್ಯಕ್ತಿ ಕುಣಿಯುವಾಗ ಅಥವಾ ಮೆರೆಸುವಾಗ ಅದು ಬೀಳದಂತೆ ಎಚ್ಚರ ವಹಿಸಬೇಕಾಗುತ್ತದೆ. ಒಂದು ಪಕ್ಷ ಕಳಸವೋ ನಂದಿ ವಿಗ್ರಹವೋ ಅಥವಾ ಯಾವೊಂದು ಭಾಗವೋ ಕೆಳಕ್ಕೆ ಬಿದ್ದರೆ ಊರಿಗೆ ಕೆಟ್ಟದ್ದಾಗುತ್ತದೆ ಎಂಬ ನಂಬಿಕೆಯಿದೆ. ಅಲ್ಲದೆ ಬೀಳಿಸಿದವನಿಗೆ ದಂಡ ಹಾಕುವ ಪದ್ಧತಿಯೂ ಕೆಲವೆಡೆ ಕಂಡುಬರುತ್ತದೆ. ನಂದಿಕೋಲನ್ನು ವರ್ಷದ ಇಂತಿಂಥ ವಿಶೇಷ ದಿನಗಳಲ್ಲಿ ಮೆರೆಸಬೇಕೆಂಬ ಸಂಪ್ರದಾಯವುಂಟು. ಕೆಲವು ಸಲ ಹರಕೆ ಹೊತ್ತವರೂ ಆಗಾಗ ಮೆರೆಸುತ್ತಾರೆ.

ಸಾಮಾನ್ಯವಾಗಿ ನಂದಿಕೋಲಿಗಾಗಿ ಬಳಸುವ ನೇರವಾದ ಬೊಂಬನ್ನು ಮಲೆನಾಡು ಪ್ರದೇಶದಿಂದ ತರಿಸುವರು. ಬೊಂಬನ್ನು ಪೂಜೆ ಮಾಡಿ ಕಡಿದು ಅದನ್ನು ನೆಲಕ್ಕೆ ಸೋಂಕಿಸದೆ ತಂದು ದೇವಾಲಯದ ಮುಂದೆ ಮತ್ತೆ ಅದಕ್ಕೆ ಪೂಜೆ ಮಾಡಿ ಮಳೆ ಬಿಸಿಲುಗಳಿಗೆ ಬೀಳದಂತೆ ದೇವಾಲಯದಲ್ಲಿಡುತ್ತಾರೆ. ಹೆಚ್ಚು ಎತ್ತರವಿರುವ ನಂದಿಕೋಲುಗಳು ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯ ತಿಪ್ಪೇಸ್ವಾಮಿ ದೇವಾಲಯ, ಮೈಸೂರು ಅರಮನೆ, ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಕೊಟ್ಟೂರೇಶ್ವರ ದೇವಾಲಯ ಮೊದಲಾದ ಕಡೆಗಳಲ್ಲಿ ಕಂಡುಬರುತ್ತವೆ. **(ಕೆ.ಆರ್.)**

**ನಂದಿತಾವರೆ:** ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಒಂದು ಗ್ರಾಮ. ಹರಿಹರ ಮಲೆಬೆನ್ನೂರು ರಸ್ತೆಯಲ್ಲಿ 13 ಕಿಮೀ ದೂರದಲ್ಲಿದೆ ಜನಸಂಖ್ಯೆ 2,294.

ಇಲ್ಲಿರುವ ಅಮೃತಲಿಂಗಮಾಣಿಕೇಶ್ವರ ದೇವಾಲಯ ಚಿಕ್ಕದಾದರೂ ಸುಂದರವಾದ ಹೊಯ್ಸಳ ಶೈಲಿಯ ಕೃತಿ. ಹೊಯ್ಸಳ ಅಧಿಕಾರಿಯಾಗಿದ್ದ ಮಾಣಿಕಣ್ಣ ಎಂಬುವನು ಸು. 1220ರಲ್ಲಿ ಈ ದೇವಾಲಯವನ್ನು ಕಟ್ಟಿಸಿದಂತೆ ತೋರುತ್ತದೆ. ಬಳಪದ ಕಲ್ಲಿನ ಈ ಕಟ್ಟಡದಲ್ಲಿ ಪ್ರಧಾನ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಉತ್ತರದ ಕಡೆ ಇನ್ನೊಂದು ಚಿಕ್ಕ ಗುಡಿ ಇದೆ. ನವರಂಗದ ಮುಂಭಾಗ ಮತ್ತು ಇದರ ಮುಂದಿದ್ದ ಅರ್ಧಮಂಟಪ ಈಚೆಗೆ ನವೀಕೃತವಾಗಿವೆ. ಗರ್ಭಗೃಹ ಚೌಕಾಕಾರವಾಗಿದ್ದು ಅದರ ಹೊರಗೋಡೆಗಳ ಮೇಲೆ ಅರೆಗಂಬಗಳ ಅಲಂಕಾರವಿದೆ. ಅಧಿಷ್ಠಾನ ಭಾಗದಲ್ಲಿ ಐದು ಶಿಲ್ಪಪಟ್ಟಿಕೆಗಳಿವೆ. ಭಿತ್ತಿಯ ಮೇಲೆ ಇಂದ್ರ, ಭೈರವ, ರತಿ, ಮನ್ಮಥ, ನೃತ್ಯಗಣಪತಿ, ದಕ್ಷಿಣಾಮೂರ್ತಿ ಮೊದಲಾದ ಶಿಲ್ಪಗಳಿವೆ. ನವರಂಗ ಮತ್ತು ಗರ್ಭಗೃಹದ ದ್ವಾರಬಂಧಗಳನ್ನು ನಾಜೂಕಾಗಿ ಕೆತ್ತಲಾಗಿದೆ. ದ್ವಾರದ ಸುಕನಾಸಿಯ ಮೇಲೆ ತಾಂಡವೇಶ್ವರ ವಿಗ್ರಹ, ಅದರ ಅಕ್ಕಪಕ್ಕಗಳಲ್ಲಿ ಬ್ರಹ್ಮ ಮತ್ತು ವಿಷ್ಣು ವಿಗ್ರಹಗಳು, ಬಾಗಿಲಿನ ಎಡಗಡೆ ಮಹಿಷಾಸುರಮರ್ದಿನಿಯ ವಿಗ್ರಹ ಇವೆ. ನವರಂಗದಲ್ಲಿ ಬಲಗಡೆ ಸರಸ್ವತಿ ಮತ್ತು ಸಪ್ತಮಾತೃಕೆಯರು, ಎಡಗಡೆ ಸುಬ್ರಹ್ಮಣ್ಯ, ಉಮಾಮಹೇಶ್ವರ ಮತ್ತು ನಾಗದಂಪತಿ ವಿಗ್ರಹಗಳೂ ಎಡಗಡೆಯ ಅಂಕಣವೊಂದರಲ್ಲಿ $4^1/_2$ ಎತ್ತರದ ಸುಂದರವಾದ ವಿಷ್ಣು ವಿಗ್ರಹಗಳೂ ಇವೆ. ದೇವಾಲಯದ ಮಧ್ಯಚಾವಣಿಯ ಮೇಲೆ ಅಷ್ಟದಿಕ್ಪಾಲಕರ ವಿಗ್ರಹಗಳೂ ದೇವಾಲಯದ ಎದುರಿಗೆ ನಂದಿಯೂ ಇವೆ. ಗರ್ಭಗುಡಿ ಮತ್ತು ಸುಕನಾಸಿಯ ಹೊರಗೋಡೆಗಳ ಮೇಲೆ ಶಿವ, ಗಣಪತಿ, ವೀರಭದ್ರ, ಹನುಮಂತ, ದಕ್ಷಿಣಾಮೂರ್ತಿ ಮತ್ತು ಮೋಹಿನಿ ವಿಗ್ರಹಗಳು ಹಾಗೂ ಆನೆ ಮತ್ತು ಶಾರ್ದೂಲಗಳ ಸಾಲುಗಳಿವೆ. ನವರಂಗದಲ್ಲಿ ತಿರುಗಣಿಯಿಂದ ಮಾಡಿದ ನಾಲ್ಕು ಕಂಬಗಳಿವೆ. ನವರಂಗಕ್ಕೆ ಸೇರಿದಂತೆ ಉತ್ತರಕ್ಕಿರುವ ಚಿಕ್ಕ ಗುಡಿಯಲ್ಲಿ ಒಂದು ಕೇಶವ ವಿಗ್ರಹವಿದೆ. ದೇವಾಲಯದ ಮುಂಭಾಗದಲ್ಲಿ ಒಂದು ಚಿಕ್ಕ ಗುಡಿಯಿದ್ದು ಇದರಲ್ಲಿ ಹೊಯ್ಸಳ ಕಾಲದ ನಂದಿ ಶಿಲ್ಪವಿದೆ.

ಈ ದೇವಾಲಯದಲ್ಲಿ ಎಲೆಚಟ್ಟು ಎಂಬ 1.1 ಮೀ ಉದ್ದ 0.6 ಮೀ ಅಗಲದ ಚಿತ್ತಾರದ ಮರದ ಚೌಕಟ್ಟು ಇದೆ. ಸಣ್ಣ ಕಿಂಡಿಗಳು, ಮೇಲುಗಡೆ ಐದು ಹಿಡಿಗಳು ಇರುವ ಈ ಚೌಕಟ್ಟು ತಳಗಿನ ಸಣ್ಣ ಚಕ್ರದ ಮೇಲೆ ಚಲಿಸುತ್ತದೆ. ಹರಕೆ ಹೊತ್ತ ವೀಳ್ಯದೆಲೆಯ ತೋಟಗಾರರು ಈ ಕಿಂಡಿಗಳಲ್ಲಿ ವೀಳ್ಯದೆಲೆಗಳನ್ನಿಟ್ಟು, ಹಿಡಿಗಳಿಗೆ ಸಹ ಎಲೆಗಳನ್ನು ಸುತ್ತಿ ಹಿಡಿಗಳ ಸಹಾಯದಿಂದ ಚೌಕಟ್ಟನ್ನು ಚಲಿಸಿ ಪೂಜೆಯನ್ನು ಸಲ್ಲಿಸುತ್ತಾರೆ. ಈ ಪೂಜೆಗೆ ಅಗತ್ಯವಾದ ಎಲೆಗಳು 2,000. ಪೂಜೆಯಾದ ಮೇಲೆ ಗ್ರಾಮಸ್ಥರಿಗೆ ಆ ವೀಳ್ಯಗಳನ್ನು ಹಂಚುತ್ತಾರೆ. ಎಲೆಯ ತೋಟಗಳಿಗೆ ಕ್ರಿಮಿಕೀಟಗಳು ತಾಕದಿರಲಿ ಎಂಬುದು ಎಲೆಚಟ್ಟು ಪೂಜೆಯ ಉದ್ದೇಶ. **(ವಿ.ಜಿ.ಕೆ.)**

**ನಂದಿದುರ್ಗ:** ಕೋಲಾರ ಜಿಲ್ಲೆಯ ಪ್ರಸಿದ್ಧ ಗಿರಿಧಾಮ ಮತ್ತು ಐತಿಹಾಸಿಕ ಸ್ಥಳ. ಬೆಂಗಳೂರಿನಿಂದ 60ಕಿಮೀ ದೂರದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಕಸಬೆಯಿಂದ ನೈಋತ್ಯಕ್ಕೆ 8ಕಿಮೀ ದೂರದಲ್ಲಿ ಇದೆ.

ನಂದಿದುರ್ಗ ಕೋಲಾರ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿರುವ ಗಿರಿ ಪಂಕ್ತಿಯ ದಕ್ಷಿಣಾಗ್ರದಲ್ಲಿರುವ ಬೆಟ್ಟ. ಸಮುದ್ರಮಟ್ಟದಿಂದ 1,478 ಮೀ ಎತ್ತರವಿರುವ ಬೆಟ್ಟ ಆ ಶ್ರೇಣಿಯ ಅತಿ ದೊಡ್ಡ ಬೆಟ್ಟವೂ ಹೌದು. ಪಾಲಾರ್, ಚಿತ್ರಾವತಿ, ಅರ್ಕಾವತಿ, ಪಾಪಾಘ್ನಿ, ಉತ್ತರ ಮತ್ತು ದಕ್ಷಿಣ ಪಿನಾಕಿನಿ ನದಿಗಳು ಈ ಬೆಟ್ಟದಿಂದ ಉಗಮಿಸುತ್ತವೆ. ಪಕ್ಕದ ಬೆಟ್ಟಗಳೊಡನೆ ಹೊಂದಿಕೊಂಡಂತೆ ಇರುವ ಪಶ್ಚಿಮ ಭಾಗವನ್ನು ಬಿಟ್ಟು ಇತರೆಡೆ ಬಹು ಕಡಿದಾದ ಪಾರ್ಶ್ವಗಳಿರುವ ಈ ಬೆಟ್ಟ ನೆಲದಿಂದ ಮೇಲೆದ್ದ ಬೃಹತ್ ಬಂಡೆಯಂತೆ ಕಾಣುತ್ತದೆ. ಬೆಟ್ಟದ ನೆತ್ತಿಯಿಂದ ನೇರವಾಗಿ ಆಳಕ್ಕೆ ಇಳಿಯುವ ನೈಋತ್ಯ ಪಾರ್ಶ್ವವನ್ನು ಟಿಪ್ಪು ಡ್ರಾಪ್ ಎಂದು ಕರೆಯುತ್ತಾರೆ (ಟಿಪ್ಪು ಸೆರೆಹಿಡಿದ ಶತ್ರುಗಳನ್ನು ಇಲ್ಲಿಂದ ಕೆಳಕ್ಕೆ ತಳ್ಳುತ್ತಿದ್ದನಂತೆ). ಉತ್ತರದ ಬೆಟ್ಟದಲ್ಲಿರುವ ಇದೇ ರೀತಿಯ, ಆದರೆ ಇದಕ್ಕಿಂತ ಚಿಕ್ಕದಾದ, ಒಂದು ಕಮರಿಗೆ ಹೈದರ್ ಡ್ರಾಪ್ ಎಂಬ ಹೆಸರಿದೆ. ಬೆಟ್ಟದ ಮೇಲೆ ಹತ್ತಲು ಹಿಂದೆ ಯಾತ್ರಾರ್ಥಿಗಳು ಉಪಯೋಗಿಸುತ್ತಿದ್ದ ಒಂದು ಮೆಟ್ಟಲು ಹಾದಿ ಇದೆ. ಇದು ಕೆಳಗಿನ ನಂದಿ ಗ್ರಾಮದಿಂದ ಹೊರಟು ಉತ್ತರ ಪಾರ್ಶ್ವದಲ್ಲಿ ಹಾದು ಪಶ್ಚಿಮದೆಡೆಯಿಂದ ಮೇಲೆಕ್ಕೆ ಬರುತ್ತದೆ. ಈಗ ಉತ್ತರ ದೆಡೆಯಿಂದಲೇ ನೇರವಾಗಿ ಬರುವ ಒಂದು ಮೆಟ್ಟಲು ಹಾದಿ ಸಹ ಇದೆ. ಉತ್ತರದ ಕಡೆಯಿಂದ ಪಶ್ಚಿಮದತ್ತ ಹತ್ತಿ ಮೇಲೆ ಬರುವ 6 ಕಿಮೀ ಉದ್ದದ ಒಂದು ಸವಾರಿ ಹಾದಿ ಸಹ ಇದೆ. ದುರ್ಗದ ವಾಯವ್ಯದಲ್ಲಿ ಬಸವನ ಕಣಿವೆ ಎಂಬ ಸ್ಥಳದಲ್ಲಿ ಇದಕ್ಕೆ ಇನ್ನೊಂದು ಸವಾರಿ ಹಾದಿ ಬಂದು ಕೂಡುತ್ತದೆ (ಇದರ ಬಳಿಯಲ್ಲಿ ಒಂದು ದೊಡ್ಡ ಬಸವನ ವಿಗ್ರಹ ಇದೆ). ಇವಲ್ಲದೆ ಮೇಲೆ ಹತ್ತಲು ಬಹು ಸಮೀಪವಾಗಿರುವ ದಕ್ಷಿಣದೆಡೆಯಿಂದ ಬರುವ ಇನ್ನೂ ಒಂದು ಮೆಟ್ಟಲು ಹಾದಿ ಇದೆ. ಈಗ ಬೆಟ್ಟದ ಮೇಲಕ್ಕೆ ಹೋಗಲು ಉತ್ತಮವಾದ ಮೋಟಾರ್ ಹಾದಿಯನ್ನೂ ಮಾಡಲಾಗಿದೆ.

ಬೆಟ್ಟದ ಮೇಲೆ ಹೋದಾಗ ಮೊದಲು ಕಾಣಸಿಗುವುದು ದೊಡ್ಡ ಬಯಲಿನ ಮಧ್ಯದಲ್ಲಿರುವ ಅಮೃತ ಸರೋವರವೆಂಬ ಕೊಳ. ಚೌಕಾಕಾರದ ಈ ಕೊಳದ ಮೆಟ್ಟಲುಗಳು ತಳಭಾಗಕ್ಕೆ ಇಳಿದಂತೆಲ್ಲ ಕಿರಿದಾಗುತ್ತ ಹೋಗುತ್ತದೆ. ಊಟೆಯೊಂದು ಇರುವ ಕಾರಣ ಇಲ್ಲಿ ಸದಾ ನೀರು ಇರುವುದು. ಇಲ್ಲಿ ಇನ್ನೂ ಎರಡು ಕೊಳಗಳು ಪಾತಾಳಗಂಗೆ,

ಅಂತರಗಂಗೆ ಇವೆ. ಅಮೃತ ಸರೋವರದ ಬಳಿ ಇರುವ ಚಬೂತರ ಎಂಬ ಒಂದು ಕಟ್ಟೆಯನ್ನು ಟಿಪ್ಪು ಪ್ರಾರ್ಥನೆ ಮಾಡಲು ಉಪಯೋಗಿ ಸುತ್ತಿದ್ದನಂತೆ. ಅನತಿದೂರದಲ್ಲಿ ಟಿಪ್ಪು ಇಲ್ಲಿ ಬಂದಾಗ ತಂಗುತ್ತಿದ್ದನೆನ್ನ ಲಾದ ಟಿಪ್ಪು ಲಾಡ್ಜ್ ಇದೆ. ಅಲ್ಲದೆ ಸುತ್ತಮುತ್ತಲಿನ ಪ್ರಾಚೀನ ಕಾಲದ ಕೋಟೆಕೊತ್ತಲಗಳ ಅವಶೇಷಗಳಿವೆ.



ಯೋಗನಂದೀಶ್ವರ ದೇವಾಲಯ

ಬೆಟ್ಟದ ಮೇಲೆ ಯೋಗನಂದೀಶ್ವರ ದೇವಾಲಯವಿದೆ. ಇಲ್ಲಿ ಶಿವನು ಯೋಗ ದೀಕ್ಷೆಯಲ್ಲಿರುವುದರಿಂದ ಉತ್ಸವಗಳು ನಡೆಯುವುದಿಲ್ಲ; ಉತ್ಸವಮೂರ್ತಿಯೂ ಇಲ್ಲ. ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಕಲ್ಯಾಣ ಮಂಟಪಗಳನ್ನೊಳಗೊಂಡ ಈ ದೇವಾಲಯವನ್ನು ಚೋಳರ ಕಾಲದಲ್ಲಿ ಕಟ್ಟಲಾಯಿತೆಂದು ಹೇಳುತ್ತಾರಾದರೂ ಇದಕ್ಕೆ ಸಾಕಷ್ಟು ಆಧಾರಗಳಿಲ್ಲ. ಸುಕನಾಸಿಯ ಬಾಗಿಲುವಾಡದ ಹಿತ್ತಾಳೆ ಚೌಕಟ್ಟಿನಲ್ಲಿ ಅನೇಕ ಚಿತ್ರಗಳನ್ನು ಕೆತ್ತಿದೆ. ಎರಡು ಪಕ್ಕಗಳಲ್ಲಿಯೂ 5 ಅಡಿ ಎತ್ತರದ ಲೋಹದ ದ್ವಾರಪಾಲಕ ವಿಗ್ರಹಗಳು ಇವೆ. ಇವು ವಿಜಯನಗರದ ಕೃಷ್ಣದೇವರಾಯನ ಕಾಣಿಕೆ. ನವರಂಗದ ಉತ್ತರದ ಬಾಗಿಲಿನ ಮುಂದೆ ಕಲ್ಯಾಣ ಮಂಟಪ, ಸುಕನಾಸಿಯ ದಕ್ಷಿಣಕ್ಕೆ ಇನ್ನೊಂದು ಮಂಟಪ ಇವೆ. ಇದರಲ್ಲಿ ಲಿಂಗೋದ್ಭವ ಮೂರ್ತಿ, ಗಜಸಂಹಾರ ಮೂರ್ತಿ, ದುರ್ಗಾ, ಮಹಿಷಾಸುರ ಮರ್ದಿನಿ, ನಾಟ್ಯಗಣಪತಿ ಮುಂತಾದ ವಿಗ್ರಹಗಳಿವೆ. ಸಮಪ್ರಮಾಣದ ಆಕರ್ಷಕ ಮೂರ್ತಿಗಳಿವು. ಇಲ್ಲಿನ ದೇವಿಯ ಗುಡಿಯಲ್ಲಿ ಕಾಣುವುದು ಮುಕ್ತಾಂಬೆಯ ವಿಗ್ರಹ. ಈ ಬೆಟ್ಟದ ಮೇಲೆ ತಪಸ್ಸು ಮಾಡಿ ಮುಕ್ತಿ ಪಡೆದಳಾದ ಕಾರಣ ಈ ಹೆಸರು ಎಂಬುದು ಸಾಂಪ್ರದಾಯಿಕ ಕಥೆ.

ನಂದಿದುರ್ಗ ಗಂಗರ ಕಾಲದಿಂದಲೂ ಪ್ರಸಿದ್ಧವಾಗಿದೆ. ಗಂಗರನ್ನು ಶಾಸನಗಳಲ್ಲಿ ನಂದಗಿರಿನಾಥರೆಂದೇ ಕರೆಯಲಾಗಿದೆ. ಆದರೆ ಆ ಕಾಲದ ಅವರ ಶಾಸನಗಳಾವವೂ ಇಲ್ಲಿ ಲಭಿಸದಿರುವುದು ಆಶ್ಚರ್ಯಕರ. ನಂದಿ ಗ್ರಾಮದಲ್ಲಿ ದೊರೆತ ತಾಮ್ರ ಶಾಸನವೊಂದರಲ್ಲಿ ನಂದಿಗಿರಿಯಲ್ಲಿಯ ಮಠದ ಸ್ಥಾನಾಧಿಪತಿಯಾದ ಕಾಳಾಮುಖರ ಗುರು ಈಶ್ವರದಾಸ ದಾನವನ್ನು ಸ್ವೀಕರಿಸಿದನೆಂದಿದೆ. ಆದ್ದರಿಂದ ಕಾಳಾಮುಖರಿಗೆ ಇದು ಪವಿತ್ರವಾದ ಸ್ಥಳವಾಗಿತ್ತೆನ್ನಬಹುದು. ಜೈನಮತಾವಲಂಬಿಗಳಾದ ಗಂಗರ ಕಾಲದಲ್ಲೂ ಇದು ಆನಂದಗಿರಿ ಎನಿಸಿಕೊಂಡಿತ್ತೆಂದೂ ವೃಷಭ ತೀರ್ಥಂಕರರ ಹೆಸರಿನಿಂದ ವೃಷಭ ಪರ್ವತವೆಂಬ ಹೆಸರನ್ನು ಪಡೆದಿತ್ತೆಂದೂ ಪ್ರತೀತಿಗಳಿವೆ. ಸ್ಥಳಪುರಾಣಗಳಲ್ಲಿ ಈ ದುರ್ಗವನ್ನು ಶೃಂಗಿಪರ್ವತ, ಕೂಷ್ಮಾಂಡ ಪರ್ವತವೆಂದು ಕರೆಯಲಾಗಿದೆ. ಕೂಷ್ಮಾಂಡ ಋಷಿ ಇಲ್ಲಿ ನೆಲೆಸಿದ್ದು ಶಿವನನ್ನು ಪೂಜಿಸುತ್ತಿದ್ದನೆಂಬುದೊಂದು ನಂಬಿಕೆ ಇಲ್ಲಿ ಪ್ರಚಲಿತವಾಗಿದೆ. ಯೋಗನಂದೀಶ್ವರಾಲಯದಲ್ಲಿರುವ ಹಲವಾರು ವಿಗ್ರಹಗಳಲ್ಲಿ ಒಂದನ್ನು ಕೂಷ್ಮಾಂಡ ಋಷಿಯದೆಂದು ತೋರಿಸುತ್ತಾರೆ.

17ನೆಯ ಶತಮಾನದ ಶಾಸನವೊಂದರಿಂದ ಇಲ್ಲಿನ ಅತ್ಯುನ್ನತವೂ ಅಭೇದ್ಯವೂ ಆದ ನಂದಿ ಎಂಬ ಗಿರಿಯನ್ನು ಬಳ್ಳಾಪುರದ ರಾಜರು ದುರ್ಗವನ್ನಾಗಿ ಮಾಡಿದರು ಎಂದು ಹೇಳಿದೆ. ಚಿಕ್ಕಬಳ್ಳಾಪುರದ ಪಾಳೆಯಗಾರನಾಗಿದ್ದ ಚಿಕ್ಕಬೈರೇಗೌಡನ ಮಗ ಮರಿಗೌಡ ಇಲ್ಲಿಯ ಕೋಟೆಯನ್ನು ಕಟ್ಟಿಸಿದ. ಶಿವಾಜಿಯ ಮಗ ಸಾಂಬಾಜಿಯ ಆಳ್ವಿಕೆಯಲ್ಲಿ ರಘುನಾಥ ಪಾಂಡೆಯ ಅಣತಿಯಂತೆ ಬಾಲಾಜಿ ಕೃಷ್ಣ ಈ ದುರ್ಗದ ಮೇಲ್ವಿಚಾರಣೆ ವಹಿಸಿಕೊಂಡ. ಟಿಪ್ಪು ಸುಲ್ತಾನ್ ಇಲ್ಲಿನ ಕೋಟೆಕೊತ್ತಳಗ ಳನ್ನು ಮತ್ತಷ್ಟು ಬಲಪಡಿಸಿದ. ಈಗ ಇಲ್ಲಿ ಕಾಣುವ ಕೋಟೆಯ ಅವಶೇಷಗಳು ಬಹು ಮಟ್ಟಿಗೆ ಟಿಪ್ಪು ಸುಲ್ತಾನರ ಕಾಲದವು. 1791ರಲ್ಲಿ ಈ ದುರ್ಗವನ್ನು ಬ್ರಿಟಿಷರು ಆಕ್ರಮಿಸಿದರು. ಇದರ ನೆನಪಿಗಾಗಿ ಎಂಬಂತೆ, ಕೋಟೆಯನ್ನು ಆಕ್ರಮಿಸಲು ಅವರು ಸಾಧಿಸಿದ ಒಂದು ಬಿರುಕಿನ ಬಳಿ 10$^{th}$ Oct. 1791, BREACH ಎಂದು ಬರೆಯಲಾಗಿದೆ. ಕೋಟೆಯ ಒಳಗಡೆ ಕುದುರೆಯ ಲಾಯಗಳು, ಮದ್ದುಗುಂಡುಗಳ ಉಗ್ರಾಣ ಇವೆ.

ತಂಪು ಹವೆ, ಸುತ್ತಲ ಅರಣ್ಯಭರಿತ ಸುಂದರ ಪ್ರಕೃತಿ, ಚಾರಿತ್ರಿಕ ಸ್ಮಾರಕಗಳಿಂದ ಶೋಭಿಸುವ ನಂದಿದುರ್ಗಗಳ ಬೇಸಗೆಯ ತಂಗುದಾಣವಾಗಿ ಜನಪ್ರಿಯವಾಗಿದೆ. ವರ್ಷಪೂರ್ತಿ ಇಲ್ಲಿನ ಹವೆ ಹಿತವಾಗಿರುತ್ತದೆ. ಈ ಬೆಟ್ಟದ ಮೇಲಿನ ಉಷ್ಣಾಂಶ ಸು. 550 ಮೀಟರು ಕೆಳಗಿರುವ ಸುತ್ತಲ ಬಯಲುಪ್ರದೇಶಕ್ಕಿಂತ ಯಾವಾಗಲೂ ಸು. 10ಸೆ.ನಷ್ಟು ಕಡಿಮೆ ಇರುತ್ತದೆ. ಇಲ್ಲಿನ ಅತಿ ಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶ ಕ್ರಮವಾಗಿ ಬೇಸಗೆಯಲ್ಲಿ 29 ಸೆ. – 23 ಸೆ. ಮತ್ತು ಚಳಿಗಾಲದಲ್ಲಿ 21 ಸೆ. – 11 ಸೆ. ಈ ಬೆಟ್ಟದ ಬುಡದಲ್ಲಿ ಬ್ರಿಟಿಷ್ ದಂಡು ನೆಲಸಿದ್ದಾಗಿನಿಂದ (1799–1808) ಬೇಸಗೆ ದಿನಗಳಲ್ಲಿ ಬ್ರಿಟಿಷ್ ಅಧಿಕಾರಿಗಳು ಇಲ್ಲಿ ಬಂದು ತಂಗುತ್ತಿದ್ದರು. ಬೆಟ್ಟದ ಮೇಲೆ ಅಮೃತಸರೋವರದ ಬಳಿ ಇರುವ ಹಣ್ಣಿನ ತೋಟ ಆ ಕಾಲದಲ್ಲಿ ಕರ್ನಲ್ ಕ್ಯುಪ್ರೇಜ್ ಎಂಬುವನು ಬೆಳೆಸಿದ್ದು. 19ನೆಯ ಶತಮಾನದಲ್ಲಿ ಬ್ರಿಟಿಷರು ತಮ್ಮ ವಾಸಕ್ಕಾಗಿ ಕಟ್ಟಿಸಿಕೊಂಡಿದ್ದ ಮನೆಗಳು ಇಲ್ಲಿವೆ. ಕರ್ನಲ್ ಹಿಲ್‌ನ 'ಗ್ಲೆನ್‌ಟಿಲ್ಟ್' ಮಾರ್ಕ್ ಕಬ್ಬನ್ನನ 'ಕಬ್ಬನ್ ಹೌಸ್', ಕ್ಯಾಪ್ಟನ್ ಕನಿಂಗ್‌ಹ್ಯಾಮ್‌ನ ಓಕ್ ಲ್ಯಾಂಡ್ಸ್ ಮುಖ್ಯ ವಾದವು. (ಕನಿಂಗ್ ಹ್ಯಾಮ್ ಕಟ್ಟಿಸಿದ ಮನೆಯಲ್ಲಿ ಮಹಾತ್ಮ ಗಾಂಧಿ ಯವರು ತಂಗಿದ್ದುದರಿಂದ ಈಗ ಅದನ್ನು ಗಾಂಧೀನಿಲಯ ಎಂದು ಕರೆಯಲಾಗುತ್ತಿದೆ). ಇವಲ್ಲದೆ ಪ್ರವಾಸಿಗರಿಗಾಗಿ ಉತ್ತಮವಾಗಿ ಸಜ್ಜುಗೊ ಳಿಸಿದ ಅನೇಕ ಬಂಗಲೆಗಳು ಇಲ್ಲಿವೆ. ಇವು ರಾಜ್ಯದ ಇಲಾಖೆಯ ಅಧೀನ ದಲ್ಲಿವೆ. ರಾಜ್ಯದ ಪ್ರವಾಸೋದ್ಯಮ ಇಲಾಖೆ ಸಹ ಇಲ್ಲಿ ಕುಟೀರಗಳನ್ನು ಕಟ್ಟಿರುವುದಲ್ಲದೆ ಒಂದು ಉಪಾಹಾರಗೃಹವನ್ನೂ ನಡೆಸುತ್ತಿದೆ. **(ಬಿ.ಆರ್.ಜಿ.)**

**ನಂದಿನಾಥ:** ಸು. 1745. ವೀರಶೈವ ಕವಿ. ವಲ್ಲೀಕಂಠಾಭರಣ ಎಂಬ ಕೃತಿಯ ಕರ್ತೃ. ಕಾವ್ಯದಲ್ಲಿ ತನ್ನ ಪರಂಪರೆಯನ್ನು ಹೇಳಿಕೊಂಡಿರುವುದ ರಿಂದ ಈತನ ತಂದೆ ವೀರಭದ್ರೇಶನೆಂದೂ ತಾಯಿ ಕಾಳಿಕಾಂಬೆ ಎಂದೂ ತಿಳಿಯುತ್ತದೆ. ಈತನ ವಿದ್ಯಾಗುರು ಪುಟ್ಟವರ್ಯ. ವಲ್ಲೀಕಂಠಾಭರಣ ಯಕ್ಷಗಾನ ಕೃತಿಯಂತಿದ್ದು 9 ಸ್ಥಲಗಳನ್ನೂ 1610 ಕಂದವೃತ್ತ ಪದ್ಯಗ ಳನ್ನೂ ಒಳಗೊಂಡಿದೆ. ಇದನ್ನು ಕ್ರೋಧನ ಸಂವತ್ಸರದಲ್ಲಿ ಬರೆದು ಮುಗಿಸಿದಂತೆ ತಿಳಿಯುತ್ತದೆ. ಈ ಕಾವ್ಯದಲ್ಲಿ ಮುಖ್ಯವಾಗಿ ಷಣ್ಮುಖನ ದಿಗ್ವಿಜಯ, ವಲ್ಲೀಪರಿಣಯ ವರ್ಣಿತವಾಗಿವೆ. ಕಥೆ ಸೂತಮಹಾಪುರಾಣಿಕ ಶೌನಕಾದಿಗಳಿಗೆ ಹೇಳಿದಂತಿದೆ. ಪೂರ್ವಕವಿಗಳಲ್ಲಿ ಸೋಮಾರಾಧ್ಯ, ನಿಜಗುಣ, ಷಡಕ್ಷರದೇವ ಇವರನ್ನು ಸ್ಮರಿಸಿದ್ದಾನೆ. *

**ನಂದಿನಿ[1]:** ಅಭಿನಯ ಶ್ರೇಷ್ಠತೆಗೆ ಊರ್ವಶಿ ಪ್ರಶಸ್ತಿ ಪಡೆದ ಕನ್ನಡ ಚಿತ್ರನಟಿ. ಇವರು ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ನಂಬಿಯಾರರ ಮಗಳು. ಇವರ ಹುಟ್ಟು ಹೆಸರು ಹೇಮಾ, ತಾರಾನಾಮ ನಂದಿನಿ. ಬಾಲ್ಯದಿಂದಲೂ ಸಂಗೀತ, ಸಾಹಿತ್ಯ, ನೃತ್ಯಗಳಲ್ಲಿ ಇವರಿಗೆ ತೀವ್ರ ಆಸಕ್ತಿ. ಕೇರಳದಲ್ಲಿ ಜನಿಸಿದ್ದರೂ ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ನಡೆಸಿದರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಮದುವೆಯಾದರು. ಬೆಂಗಳೂರಿನ ಚಿತ್ರ ಹಂಚಿಕೆದಾರರೂ ಕರ್ನಾಟಕ ಫಿಲ್ಮ್ ಚೇಂಬರಿನ ಅಧ್ಯಕ್ಷರೂ ಫಿಲ್ಮ್ ಫೆಡರೇಷನ್ ಆಫ್ ಇಂಡಿಯದ ಅಧ್ಯಕ್ಷರೂ ಆಗಿದ್ದ, ಭಕ್ತವತ್ಸಲಂ ಇವರ ಪತಿ. ಗಿರೀಶ್ ಕಾರ್ನಾಡ್ ನಿರ್ದೇಶಿಸಿರುವ ಕಾಡು (1974) ನಂದಿನಿ ಅಭಿನಯಿಸಿರುವ ಒಂದೇ ಚಿತ್ರ. ಆ ಮುನ್ನ ಇವರಿಗೆ ಅಭಿನಯದ ಅನುಭವವಿರಲಿಲ್ಲ. ರಂಗವೇದಿಕೆಯನ್ನು ಹತ್ತಿದವರೂ ಅಲ್ಲ. ಕಾಡು ಚಿತ್ರದಲ್ಲಿನ ಗೌಡಿತಿಯ ಹೆಚ್ಚು ಮಾತಿಲ್ಲದ ಪಾತ್ರದಲ್ಲಿ ಮುಖಭಾವಗಳಿಂದಲೇ ಅಭಿವ್ಯಕ್ತಿ ನೀಡಿ ಒಳ್ಳೆಯ ಅಭಿನಯದಿಂದಾಗಿ ರಾಜ್ಯಮಟ್ಟದ ಪ್ರಶಸ್ತಿ ಗಳಿಸಿದರು. ರಾಷ್ಟ್ರಮಟ್ಟದಲ್ಲಿಯೂ ಸರ್ವೋತ್ತಮ ಅಭಿನಯ ಪ್ರಶಸ್ತಿಯಾದ ಊರ್ವಶಿಯನ್ನೂ ಪಡೆದ ಏಕೈಕ ಕನ್ನಡ ಕಲಾವಿದೆ. *

**ನಂದಿನಿ[2]:** ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಿಂದ ಈ ಹೆಸರಿನ ಒಂದು ಮಾಸಪತ್ರಿಕೆಯೂ ಶಿರಸಿಯಿಂದ ಇದೇ ಹೆಸರಿನ ಒಂದು ವಾರಪತ್ರಿಕೆಯೂ ಪ್ರಕಟವಾಗುತ್ತಿದ್ದುವು. ನಂದಿನಿ ಮಾಸಪತ್ರಿಕೆಯ ಸಂಪಾದಕರು ನಾರಾಯಣ ಸುಬ್ರಹ್ಮಣ್ಯ ಶಾಸ್ತ್ರಿ ಭಡತಿ. ಅವರೇ ಇದರ ಪ್ರಕಾಶಕರು ಹಾಗೂ ಮುದ್ರಕರು. ಈ ಪತ್ರಿಕೆಗಾಗಿಯೇ ಅವರು ನಂದಿನಿ ಮುದ್ರಣಾಲಯವನ್ನು ಸ್ಥಾಪಿಸಿದರು. ಪತ್ರಿಕೆಯ ಪ್ರಥಮ ಸಂಚಿಕೆ ಶಾಲಿವಾಹನ ಶಕ 1847ನೆಯ ಕಾರ್ತೀಕ ಮಾಸ ಶುಕ್ಲಪಕ್ಷದಲ್ಲಿ 1925ರ ಅಕ್ಟೋಬರ್‌ನಲ್ಲಿ ಪ್ರಕಟವಾಯಿತು. ಡಿಮ್ಮೈ 1/8 ಆಕಾರದ 30–40 ಪುಟಗಳಿಂದ ಕೂಡಿದ್ದ ಈ ಪತ್ರಿಕೆಯ ವಾರ್ಷಿಕ ಚಂದಾ ಅಂಚೆ ಸಹಿತ ರೂ. 2. ಪತ್ರಿಕೆಯ ಪ್ರಸಾರ ಸುಮಾರು ಒಂದೂವರೆ ಸಾವಿರ. ಈ ಪತ್ರಿಕೆ ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ವಿಚಾರಗಳಿಗೆ ಮೀಸಲಾಗಿತ್ತು. ಪತ್ರಿಕೆ ಹತ್ತು ವರ್ಷಗಳ ಕಾಲ ನಡೆದು ಸಂಪಾದಕರು ತೀವ್ರ ಕಾಯಿಲೆಗೆ ಒಳಗಾದ್ದರಿಂದ ಪ್ರಕಟಣೆ ನಿಂತುಹೋಯಿತು. ಮಾಸಪತ್ರಿಕೆ ನಿಂತ ಮೇಲೆ ಅದರ ಮುದ್ರಣಾಲಯ ಶಿರಸಿಗೆ ಸ್ಥಳಾಂತರಗೊಂಡಿತು. ನಂದಿನಿ ವಾರಪತ್ರಿಕೆ ಶಿರಸಿಯಿಂದ ಅದೇ ಮುದ್ರಣಾಲಯದಲ್ಲಿ ಅಚ್ಚಾಗಿ 1937 ಫೆಬ್ರವರಿ 9ರಿಂದ ಪ್ರಕಟವಾಗತೊಡಗಿತು. ಕ್ರೌನ್ 1/4 ಆಕಾರದ 8 ಪುಟಗಳೊಡನೆ ಪ್ರತಿ ಮಂಗಳವಾರ ಪ್ರಕಟವಾಗುತ್ತಿದ್ದ ಈ ಪತ್ರಿಕೆಗೆ ಡಿ.ಎಸ್. ವಿಶ್ವಾಮಿತ್ರರು ಸಂಪಾದಕರೂ ಮಹಾಬಲೇಶ್ವರ ಕೃಷ್ಣಪ್ಪ ಹೆಗಡೆಯವರು ಪ್ರಕಾಶಕರೂ, ಸೀತಾ ರಾಮ ವಿಘ್ನೇಶ್ವರ ಭಡತಿಯವರು ಮುದ್ರಕರೂ ಆಗಿದ್ದರು. ಪತ್ರಿಕೆಯ ವಾರ್ಷಿಕ ಚಂದಾ ರೂ.3. ಬಿಡಿ ಪತ್ರಿಕೆಯ ಬೆಲೆ ಒಂದು ಆಣೆ (ಸು. ಆರು ಪೈಸೆ). ಒಂದುವರೆ ಸಾವಿರಕ್ಕೂ ಹೆಚ್ಚು ಚಂದಾದಾರರಿದ್ದ ಈ ಪತ್ರಿಕೆಯ ಸಂಪಾದಕೀಯ ಉಚ್ಚಮಟ್ಟದ್ದಾಗಿರುತ್ತಿತ್ತು. ಅರವಿಂದ, ರಮಣಮಹರ್ಷಿ, ರಾಮಕೃಷ್ಣ ಪರಮಹಂಸ ಮೊದಲಾದವರ ತತ್ತ್ವಗಳ ಪ್ರತಿಪಾದನೆಗೆ ಪತ್ರಿಕೆಯಲ್ಲಿ ವಿಶೇಷ ಅವಕಾಶವಿತ್ತು.

ಪತ್ರಿಕೆಯಲ್ಲಿ ರಾಜಕೀಯ, ಸಾಮಾಜಿಕ ವರದಿಗಳೂ ಕೃಷಿ ವಿಚಾರಗಳೂ ದೇಶ ವಿದೇಶಗಳ ವರ್ತಮಾನಗಳೂ ಸ್ಥಾನಿಕ ಸುದ್ದಿಗಳೂ ಪ್ರಕಟವಾಗುತ್ತಿದ್ದವು. ಅಡಕೆ ತೋಟಗಾರರ ಸಮಸ್ಯೆಗಳೂ ಜಿಲ್ಲೆಯ ಅರಣ್ಯ ಸಂಕಷ್ಟಗಳೂ ಚರ್ಚಿಸಲ್ಪಡುತ್ತಿದ್ದವು. ಅರಣ್ಯ ಪ್ರಧಾನವಾದ ಈ ಭಾಗದಲ್ಲಿ ಆಗ ಸಾರಿಗೆ ಸಂಪರ್ಕಗಳು ಬಹಳ ದುಸ್ತರವಾಗಿದ್ದವು. ಅಂಚೆ ವ್ಯವಸ್ಥೆ ಸಮರ್ಪಕವಾಗಿರಲಿಲ್ಲ. ನಂದಿನಿ ಪತ್ರಿಕೆಯನ್ನು ಸಕಾಲದಲ್ಲಿ ತಲುಪಿಸಲು, ವಿತರಣೆ ಮಾಡಲು ಪತ್ರಿಕೆ ತನ್ನದೇ ಆದ ವ್ಯವಸ್ಥೆ ಮಾಡಿಕೊಂಡಿತ್ತು.

ನಂದಿನಿ ವಾರಪತ್ರಿಕೆ ಜನಜಾಗೃತಿಯನ್ನೂ ವಿಚಾರಕ್ರಾಂತಿಯನ್ನೂ ಉಂಟುಮಾಡಿ ಜನಸಮುದಾಯದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿ ಪ್ರಸಿದ್ಧಿ ಹಾಗೂ ಗೌರವ ಪಡೆಯಿತಾದರೂ ಆರ್ಥಿಕ ಸಂಕಷ್ಟದಿಂದ ಚೇತರಿಸಿಕೊಳ್ಳಲಾರದೆ 1940ರಲ್ಲಿ ನಿಂತುಹೋಯಿತು. *

**ನಂದೀಮಠ, ಎಸ್.ಸಿ.:** 1900–75. ಪ್ರಸಿದ್ಧ ವಿದ್ವಾಂಸರು, ಶಿಕ್ಷಣತಜ್ಞರು. ಪೂರ್ಣ ಹೆಸರು ಶಿವಲಿಂಗಯ್ಯ ಚೆನ್ನಬಸವಯ್ಯ ನಂದೀಮಠ. ಹುಟ್ಟಿದ್ದು ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ನಂದಿ ಗ್ರಾಮದಲ್ಲಿ. ಗೋಕಾಕ ಬೆಳಗಾಂವಿಗಳಲ್ಲಿ ಆರಂಭದ ಶಿಕ್ಷಣವನ್ನು ಮುಗಿಸಿ, ಧಾರವಾಡದ ಕರ್ನಾಟಕ ಕಾಲೇಜಿನಿಂದ ಬಿ.ಎ. ಪದವಿಯನ್ನೂ (1924) ಮುಂಬಯಿ ವಿಶ್ವವಿದ್ಯಾಲಯದಿಂದ (1926) ಎಂ.ಎ. ಪದವಿಯನ್ನೂ



ಪಡೆದರು. ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸ್ವಲ್ಪಕಾಲ ಕೆಲಸಮಾಡಿದ ಮೇಲೆ, ಉನ್ನತ ಶಿಕ್ಷಣಕ್ಕಾಗಿ ಲಂಡನ್‌ಗೆ ತೆರಳಿದ ಇವರು, ಅಲ್ಲಿ ಪ್ರಸಿದ್ಧ ವಿದ್ವಾಂಸರಾದ ಬಾರ್ನೆಟ್‌ರ ಮಾರ್ಗ ದರ್ಶನದಲ್ಲಿ ವೀರಶೈವ ಧರ್ಮ ಹಾಗೂ ತತ್ತ್ವಜ್ಞಾನಗಳ ಕೈಪಿಡಿ ಎಂಬ ವಿಷಯವನ್ನು ಕುರಿತು ಪ್ರೌಢ ಪ್ರಬಂಧವನ್ನು ರಚಿಸಿ 1930ರಲ್ಲಿ ಪಿಎಚ್.ಡಿ. ಪದವಿ ಪಡೆದರು. ಸ್ವದೇಶಕ್ಕೆ ಮರಳಿ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸ್ವಲ್ಪಕಾಲ ಕೆಲಸ ಮಾಡಿದರು. ಅನಂತರ ಬೆಳಗಾಂವಿಯ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿಯವರು ಆರಂಭಿಸಬೇಕೆಂದಿದ್ದ ಲಿಂಗರಾಜ ಕಾಲೇಜಿನ ಸ್ಥಾಪನೆಗಾಗಿ ಶ್ರಮಿಸಿದ ಇವರು ಅನಂತರ ಅದೇ ಕಾಲೇಜಿನ ಮೊದಲ ಪ್ರಿನ್ಸಿಪಾಲರಾಗಿ (1933–44) ಕೆಲಸ ಮಾಡಿ, ಅದನ್ನೊಂದು ದೊಡ್ಡ ಸಂಸ್ಥೆಯನ್ನಾಗಿ ಅಭಿವೃದ್ಧಿಪಡಿಸಿದರು. ಬಾಗಲಕೋಟೆಯಲ್ಲಿ ಬಸವೇಶ್ವರ ಕಾಲೇಜನ್ನು ಸ್ಥಾಪಿಸಿ ಬೆಳೆಸಿದರು. ಮುಂಬಯಿ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿದ್ದುಕೊಂಡು ಉತ್ತರ ಕರ್ನಾಟಕಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾಲಯವೊಂದನ್ನು ಪಡೆಯಲು ಶ್ರಮಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾಗುವಾಗ ಅದರ ರೂಪುರೇಷೆಗಳನ್ನು ಮತ್ತು ಕಾಯಿದೆ ಕಾನೂನುಗಳನ್ನು ರೂಪಿಸುವಲ್ಲಿ ಮಹತ್ತ್ವದ ಕೆಲಸಮಾಡಿದ ನಾಲ್ಕಾರು ಶಿಕ್ಷಣತಜ್ಞರಲ್ಲಿ ಇವರೂ ಒಬ್ಬರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಇವರು ಸಿಂಡಿಕೇಟ್, ಸೆನೆಟ್, ಅಕೆಡೆಮಿಕ್ ಕೌನ್ಸಿಲುಗಳ ಸದಸ್ಯರಾಗಿಯೂ ಸ್ಮರಣೀಯ ಸೇವೆ ಸಲ್ಲಿಸಿದರು. ವಿಶ್ವವಿದ್ಯಾಲಯದ ಕುಲಸಚಿವರಾಗಿಯೂ ಕುಲಪತಿಗಳಾಗಿಯೂ ಇವರು ಸ್ವಲ್ಪಕಾಲ ಕಾರ್ಯನಿರ್ವಹಿಸಿದರು.

ಕನ್ನಡ, ಸಂಸ್ಕೃತ, ಪಾಲಿ, ಪ್ರಾಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಪರಿಶ್ರಮಗಳನ್ನು ಪಡೆದಿದ್ದ ಇವರು ಹಲವು ಅಮೂಲ್ಯ ಲೇಖನಗಳನ್ನೂ ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ಅರ್ಜುನವಾಡದ ಶಾಸನ, ಗುಮ್ಮಳಾಪುರದ ಶಾಸನ ಮತ್ತು ಚೌಡದಾನಪುರ ಶಾಸನಗಳ ಬಗ್ಗೆ ಇವರು ವಿಶ್ಲೇಷಣಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ ಕರ್ನಾಟಕ ಧರ್ಮಗಳು ಇವರ ಒಂದು ಗಣ್ಯಕೃತಿ. ಹರಿಹರನ ಗಿರಿಜಾಕಲ್ಯಾಣ, ಕುವಲಯಾನಂದ ಇವು ಇವರ ಸಂಪಾದಿತ ಗ್ರಂಥಗಳು. ಇವರ ಪ್ರೌಢ ಪ್ರಬಂಧ ಹ್ಯಾಂಡ್ ಬುಕ್ ಆಫ್ ವೀರಶೈವಿಸಂ ಇಂಗ್ಲಿಷಿನಲ್ಲಿ ಪ್ರಕಟವಾಗಿದೆ.

ಬೇಲೂರಿನಲ್ಲಿ 1952ರಲ್ಲಿ ಸೇರಿದ್ದ 35ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಂದೀಮಠರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಲಾಯಿತು. 1975ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿ ಸನ್ಮಾನಿಸಿದೆ. **(ಎಸ್.ಎಸ್.ಬಿ.)**

**ನಗರ (ಬಿದನೂರು):** ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿ ಹೊಸನಗರದಿಂದ 5ಕಿಮೀ ದಕ್ಷಿಣಕ್ಕಿರುವ ಒಂದು ಗ್ರಾಮ. ಜನಸಂಖ್ಯೆ 2,696. ಇದರ ಹಿಂದಿನ ಹೆಸರು ಬಿದನೂರು, ಬಿದಿರೂರು. ಹಲವು ಶಾಸನಗಳಲ್ಲಿ ಈ ಊರನ್ನು ವೇಣುಪುರ ಎಂದೂ ಕರೆದಿದೆ. ಕೆಳದಿ ಇಕ್ಕೇರಿಗಳಲ್ಲಿ ಆಳಿದ ಅರಸರು 1640ರ ಹೊತ್ತಿಗೆ ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಬಿದನೂರ ಅರಸರಾದರು. ಇದು ಘಟ್ಟದ ಕೆಳಗೆ ಇಳಿಯುವ ಹೊಸಂಗಡಿ ಘಾಟಿಯ ದಾರಿಯಲ್ಲಿದ್ದು ವ್ಯಾಪಾರ ಕೇಂದ್ರವೂ ಆದುದರಿಂದ ಬಹುಬೇಗನೆ ಬೆಳೆದು ದೊಡ್ಡ ನಗರವಾಯಿತು. ಕೋಟೆಕೊತ್ತಲಗಳು ಅರಮನೆಗಳು ರಚಿತವಾದುವು. ಇಲ್ಲಿಯ ಕೋಟೆಯ ಸುತ್ತಳತೆ ಹನ್ನೆರಡು ಕಿಮೀಗಳಷ್ಟು ಇದ್ದು ಡಿಲ್ಲಿ ಬಾಗಿಲು, ಕೊಡಿಯಾಲದ ಬಾಗಿಲು, ಕವಿಲೆದುರ್ಗದ ಬಾಗಿಲು ಮುಂತಾದ ಹತ್ತು ಬಾಗಿಲುಗಳಿದ್ದುವು. ಊರಿನಲ್ಲಿ ಎತ್ತರವಾದ ಒಂದು ಗುಡ್ಡದ ಮೇಲೆ ಅರಮನೆಯಿದ್ದು ಅದನ್ನು ಸುತ್ತುವರಿದು ಒಂದು ಒಳಕೋಟೆಯೂ ಇತ್ತು. ಶಿವಪ್ಪನಾಯಕ ಈ ಪಟ್ಟಣವನ್ನು ತುಂಬ ಅಭಿವೃದ್ಧಿಪಡಿಸಿದ. 1763ರಲ್ಲಿ ಹೈದರ್ ದಾಳಿ ಮಾಡಿದಾಗ ಇದು ಅತ್ಯಂತ ಸಂಪದ್ಭರಿತವಾದ ನಗರವಾಗಿತ್ತು. ಸೋಲು ಖಚಿತವಾದಾಗ ಅರಮನೆಗೆ ಬೆಂಕಿಹಚ್ಚಿ ರಾಣಿ ವೀರಮ್ಮಾಜಿ ತಪ್ಪಿಸಿಕೊಂಡು ಓಡಿಹೋದರೂ ಹೈದರನಿಗೆ ಅನೇಕ ಕೋಟಿ ರೂಪಾಯಿಗಳ ಬೆಲೆ ಬಾಳುವ ಕೊಳ್ಳೆ ದೊರೆಯಿತು.

ಹೈದರ್ ತನ್ನ ಸೈನ್ಯವನ್ನು ಅಲ್ಲಿ ಸ್ಥಾಪಿಸಿ ಒಳಕೋಟೆಯ ಮುಂಭಾಗ ದಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ. ಈ ಊರನ್ನು ಅಭಿವೃದ್ಧಿಪಡಿಸಿ ಅದಕ್ಕೆ ಹೈದರ್‌ನಗರ ಎಂಬ ಹೆಸರಿಟ್ಟ. ಇವನ ಕಾಲದಲ್ಲಿ ಈ ಊರಿನಲ್ಲಿ ಹೇರಳವಾಗಿ ಮದ್ದುಗುಂಡು ತಯಾರಿಸಲಾಗುತ್ತಿತ್ತು. ಇಲ್ಲಿ ಟಂಕಸಾಲೆ ಸ್ಥಾಪಿತವಾಗಿ ಹೈದರಿ ಪಗೋಡಗಳು ಮುದ್ರಿತವಾಗುತ್ತಿದ್ದವು. ಮುಂದೆ ಟಿಪ್ಪುವಿನ ಕಾಲದಲ್ಲಿ ಬ್ರಿಟಿಷರು ಈ ಊರನ್ನು ಮುತ್ತಿದಾಗ ಅರಮನೆಯೂ ಸೇರಿ ಈ ಊರಿನ ಬಹುಭಾಗ ಸುಟ್ಟುಹೋಯಿತು. 1789 ರಿಂದೀಚೆಗೆ ಇದಕ್ಕೆ ನಗರ ಎಂಬ ಹೆಸರು ಬಂತು. ಆ ಕಾಲದಲ್ಲಿ ಶಿವಮೊಗ್ಗ ಕಡೂರು ಜಿಲ್ಲೆಗಳು ಸೇರಿದ್ದ ಫೌಜುದಾರಿಗೆ ನಗರ ಕೇಂದ್ರ ಸ್ಥಳವಾಗಿತ್ತು (1831ರ ಅನಂತರ ಇದಕ್ಕೆ ನಗರ ಡಿವಿಜನ್ ಎಂಬ ಹೆಸರು ಬಂತು. 1831–81ರ ಮಧ್ಯೆ ಡಿವಿಜನ್ನುಗಳನ್ನು ತೆಗೆದುಹಾಕಲಾಯಿತು). 1830ರಲ್ಲಿ ಬಿದನೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ವಿರುದ್ಧ ದಂಗೆ ನಡೆಯಿತು. ದಂಗೆಯನ್ನೇನೋ ಅಡಗಿಸಲಾದರೂ ಇದರ ಪರಿಣಾಮದಿಂದ ಬಿದನೂರು ಮತ್ತೆ ಹೀನ ಸ್ಥಿತಿಗೆ ಬಂದಿತು. ಊರಿನಲ್ಲಿ ನಡೆಯುತ್ತಿದ್ದ ವ್ಯಾಪಾರ ಕುಂದಿತು. ಸ್ಪೋಕ್ಸ್ ಎಂಬುವನು 1838ರಲ್ಲಿ ಬಿದನೂರಿನ ಸ್ಥಿತಿಯನ್ನು ಈ ರೀತಿ ವರ್ಣಿಸಿದ್ದಾನೆ: ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಜನಸಂಖ್ಯೆಯಲ್ಲೂ ಐಶ್ವರ್ಯದಲ್ಲೂ ಅವನತಿಯ ಸ್ಥಿತಿಗೆ ಬರುತ್ತಿವೆ. ಹೆಚ್ಚು ಕಡಿಮೆ ಈಗ ನಗರದ ವ್ಯಾಪಾರ ಸಂಪೂರ್ಣ ಕುಸಿದಿದೆ. ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ನಗರ ಅಷ್ಟು ಅನುಕೂಲ ಪರಿಸ್ಥಿತಿಯನ್ನು ಹೊಂದಿಲ್ಲ.

ಪಶ್ಚಿಮಘಟ್ಟಗಳ ಹೆದ್ದಾರಿಯನ್ನು ಉತ್ತಮಪಡಿಸಿದಾಗ ನಗರದ ಸ್ಥಿತಿ ಉತ್ತಮಗೊಳ್ಳುವಂತೆ ಕಂಡಿತು. ಆದರೆ 1893ರಲ್ಲಿ ತಾಲ್ಲೂಕಿನ ಕೇಂದ್ರ ವನ್ನು ಕಲ್ಲೂರುಕಟ್ಟೆಗೆ (ಹೊಸನಗರ) ವರ್ಗಾಯಿಸಿದಾಗ ಬಿದನೂರು ಹೀನಸ್ಥಿತಿಗೆ ಬಂದಿತು.

ಬಿದನೂರರಸರ ಕಾಲದಲ್ಲಿ ಇಲ್ಲಿ ನಿರ್ಮಿತವಾದ ಕಟ್ಟಡಗಳಲ್ಲಿ ದೇವಗಂಗೆ ಎಂಬ ಹೆಸರಿನ ಕೊಳ ಆ ಅರಸರ ಕಲಾ ನಿಪುಣತೆಗೆ ಒಂದು ಕುರುಹು. ಸುತ್ತ ಆವರಿಸಿರುವ ಬೆಟ್ಟಗಳಿಂದ ಹರಿದು ಬರುವ ಝರಿಯ ನೀರನ್ನು ತಡೆದು ನಿರ್ಮಿಸಿರುವ ಏಳು ಕೊಳಗಳು ಒಂದೊಂದೂ ಒಂದೊಂದು ಆಕೃತಿಯಲ್ಲಿದ್ದು ಆಕರ್ಷಣೀಯವಾಗಿವೆ. ಅದರಲ್ಲಿಯೂ ಕಮಲದಾಕೃತಿಯಲ್ಲಿ ಮತ್ತು ನಕ್ಷತ್ರದಾಕೃತಿಯಲ್ಲಿ ಕಲ್ಲಿನಲ್ಲಿ ಕೊರೆದಿರುವ ಎರಡು ಪುಟ್ಟ ಕೊಳಗಳು ವಿಶಿಷ್ಟವಾಗಿವೆ.

ಊರಿನಲ್ಲಿರುವ ನೀಲಕಂಠೇಶ್ವರ ದೇವಾಲಯ ಮಲೆನಾಡಿನ ವಾಸ್ತು ರೀತಿಗೆ ಮಾದರಿಯಾಗಿದೆ. ಗರ್ಭಗುಡಿ, ದೊಡ್ಡ ಸುಕನಾಸಿ ಮತ್ತು ವಿಶಾಲವಾದ ನವರಂಗಗಳಿರುವ ಇದರ ಗರ್ಭಗುಡಿಯ ಮೇಲಿನ ಗೋಪುರ ಮಾತ್ರ ಇಸ್ಲಾಮೀ ಶೈಲಿಯಲ್ಲಿ ಗೋಳಾಕಾರದಲ್ಲಿದೆ. ಗುಡ್ಡೆ ವೆಂಕಟರಮಣಸ್ವಾಮಿ ದೇವಾಲಯ ಇಕ್ಕೇರಿ ಶಿಲ್ಪ ಶೈಲಿಯಲ್ಲಿರುವ ಒಂದು ಸಣ್ಣ ಗುಡಿ. ಎತ್ತರವಾದ ಜಗತಿಯ ಮೇಲೆ ಗರ್ಭಗುಡಿ ಮುಖಮಂಟಪಗಳು ಮಾತ್ರವಿರುವ ಈ ಗುಡಿಯ ಹೊರ ಗೋಡೆಗಳು ಅಲ್ಲಲ್ಲಿ ಮೂರ್ತಿಶಿಲ್ಪದಿಂದ ಅಲಂಕೃತವಾಗಿವೆ. ಇದರ ಗರ್ಭಗೃಹದ ಬಾಗಿಲುವಾಡ ಮಾತ್ರ ಹೊಯ್ಸಳ ರೀತಿಯಲ್ಲಿದ್ದು ಬೇರೆ ಹಳೆಯ ದೇವಾಲಯವೊಂದರಿಂದ ತಂದು ಸೇರಿಸಿದ್ದಾಗಿದೆ. ಇದರ ಮುಂದೆ ತೂಗುಹಾಕಿರುವ ಬೃಹದಾಕಾರದ ಗಂಟೆಗಳು ಈ ಊರಿನ ಚರ್ಚೊಂದಕ್ಕೆ ಸೇರಿದ್ದುದಾಗಿದ್ದು ಅವುಗಳಲ್ಲಿ ಒಂದನ್ನು 1713ರಲ್ಲಿ ಆ್ಯಂಸ್ಟರ್‌ಡ್ಯಾಮ್‌ನಲ್ಲಿ ತಯಾರಿಸಿದಂತೆ ತಿಳಿದುಬರುತ್ತದೆ. ಇತ್ತೀಚೆಗೆ ಈ ಗಂಟೆಯನ್ನು ಶಿವಮೊಗ್ಗದ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. **(ನೋಡಿ: ಕೆಳದಿರಾಜವಂಶ–ವಾಸ್ತುಶಿಲ್ಪ)** **(ಎಂ.ಎಚ್.;ಕೆ.ಎಸ್.ಎಸ್.)**

**ನಗುವನಂದ:** ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಒಂದು ಮಾಸಪತ್ರಿಕೆ. ಹಾಸ್ಯರಸ ಪ್ರಧಾನ ನಿಯತಕಾಲಿಕೆಯೊಂದನ್ನು ತರಬೇಕೆಂದು ಸುಬೋಧ ರಾಮರಾಯರು ಈ ಹೆಸರಿನ ಮಾಸಪತ್ರಿಕೆಯನ್ನು ಜಿ.ಎಸ್. ಕೃಷ್ಣರಾಯರ ಸಂಪಾದಕತ್ವದಲ್ಲಿ ಬೆಂಗಳೂರಿನ ಸುಬೋಧ ಮುದ್ರಣಾಲಯದಿಂದ ಹೊರಡಿಸಿದರು. ಇದರ ಪ್ರಥಮ ಸಂಚಿಕೆ ಜನವರಿ 1933ರಲ್ಲಿ ಪ್ರಕಟವಾಯಿತು. ಜಿ.ಎಸ್. ಕೃಷ್ಣರಾಯರು ಕೆಲವು ವರ್ಷಗಳ ತರುವಾಯ ಪ್ರತ್ಯೇಕಗೊಂಡು ಇದನ್ನು ಸ್ವತಂತ್ರವಾಗಿ 1949ರವರೆಗೆ ಪ್ರಕಟಿಸಿದರು. ಅನಂತರ ರಂಗನಾಥರಾಯರ ಸಂಪಾದಕತ್ವದಲ್ಲಿ 1949 ರಿಂದ 1950ರ ವರೆಗೆ ಪ್ರಕಟಗೊಂಡಿತು. ಆರ್ಥಿಕ ಮುಗ್ಗಟ್ಟಿನಿಂದ ರಂಗಾನಾಥರಾಯರು ಪತ್ರಿಕೆಯನ್ನು ಸುಬೋಧ ರಾಮರಾಯರಿಗೆ ಹಿಂದಿರುಗಿಸಿದರು. ಮತ್ತೆ 1950–63ರ ವರೆಗೆ ಪ್ರಹ್ಲಾದರಾಯರ ನೇತೃತ್ವದಲ್ಲಿ ಸುಬೋಧ ಪ್ರಕಟಣಾಲಯದಲ್ಲಿ ಪ್ರಕಟವಾಯಿತು.

1963ರಲ್ಲಿ ರಾಮರಾಯರು ಮತ್ತೆ ಜಿ.ಎಸ್. ಕೃಷ್ಣರಾಯರ ಜೀವನೋಪಾಯಕ್ಕೆಂದು ವಹಿಸಿಕೊಟ್ಟರು. ಕೃಷ್ಣರಾಯರು ಕೆಲವು ತಿಂಗಳುಗಳ ಕಾಲ ಪತ್ರಿಕೆಯನ್ನು ನಡೆಸಿ ತೀರಿಕೊಂಡರು. ಪತ್ರಿಕೆಯನ್ನು ರಂಗನಾಥರಾಯರಿಗೆ ಪುನಃ ವರ್ಗಾಯಿಸಲಾಯಿತು. ಅವರಿಂದ ಇದು ಒಂದೂವರೆ ವರ್ಷ ಪ್ರಕಟವಾಯಿತು. ಕೊನೆಗೆ ರಂಗನಾಥರಾಯರು ಪತ್ರಿಕೆಯನ್ನು ರಂಜನಾ ಪಬ್ಲಿಕೇಷನ್ಸ್ ಸಂಸ್ಥೆಗೆ ಮಾರಿದರು. ಇದು ದೀಪಾವಳಿಯ ಕಾಲದಲ್ಲಿ ಮಾತ್ರ ವಾರ್ಷಿಕವಾಗಿ ಪ್ರಕಟವಾಗುತ್ತಿದ್ದು 4 ವರ್ಷಗಳ ತರುವಾಯ ನಿಂತುಹೋಯಿತು.

ನಗುವನಂದಕ್ಕೆ 20 ವರ್ಷಗಳಿಗೂ ಹೆಚ್ಚು ಕಾಲ ಅಂಕಣ ಲೇಖಕರಾಗಿದ್ದವರು ವಿ.ಜಿ. ಕೃಷ್ಣಮೂರ್ತಿ. ಚಿತ್ರಕಾರರಾಗಿದ್ದವರು ರಾಘವೇಂದ್ರ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ನಾ. ಕಸ್ತೂರಿ, ಜಿ. ಪುರುಷೋತ್ತಮರಾವ್, ಎಂ.ವಿ. ಪ್ರಭು, ಸುಪುತ್ರ ಸುಬೋಧ ಪ್ರಹ್ಲಾದರಾವ್, ಡಿ.ಕೆ. ಭಾರದ್ವಾಜ್, ವೈ.ಕೆ. ತಿಮ್ಮರಸಯ್ಯ, ನಾಡಿಗೇರ ಕೃಷ್ಣರಾವ್, ಹೊಯ್ಸಳ, ಬಿ.ಎಚ್. ಶ್ರೀಧರ, ಬಿಸ್ರಾ (ಬಿ.ಎಸ್. ರಾಮಚಾರ್), ಸೇವಿ ನಮಿರಾಜ ಮಲ್ಲ, ನವಗಿರಿ ನಂದ ಮೊದಲಾದವರು ಪತ್ರಿಕೆಯ ಲೇಖಕರ ಬರಹದಲ್ಲಿದ್ದರು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಗೋಪಿ ಹಾಗೂ ಆನಂದವಿಗಡನ್ ಪತ್ರಿಕೆಯ ಸಿಂಹ ಇವರು ವ್ಯಂಗ್ಯ ಚಿತ್ರಗಳನ್ನು ನೀಡಿದ್ದಾರೆ.

ನಗುವನಂದ ಮಾಸಪತ್ರಿಕೆಯಾಗಿದ್ದಾಗ ಡಿಮ್ಮೆ 1/4 ಆಕಾರದಲ್ಲಿ ಬರುತ್ತಿತ್ತು. 1951ರಲ್ಲಿ ಇದು ವಾರಪತ್ರಿಕೆಯಾಗಿದ್ದಾಗ ಡಿಮ್ಮೆ 1/8 ಆಕಾರದಲ್ಲಿತ್ತು. ನಗೆಮಲ್ಲಿಗೆ, ಸಮಾಧಿಯ ಅಗ್ನಿಕುಂಡ, ಉಪ ಕಥಾವಳಿ ವಿಭಾಗಗಳು ಜನಪ್ರಿಯವಾಗಿದ್ದುವು. ಜಿ.ಎಸ್. ಕೃಷ್ಣರಾಯರು ಮಂಗಳೂರು ಬಾಸಲ್ ಮಿಷನ್ ಪ್ರೆಸ್‌ನಿಂದ ಪತ್ರಿಕೆಯನ್ನು ಹೊರಡಿಸುತ್ತಿದ್ದಾಗ (1938) ಇದರ ಪ್ರಸಾರ ಸಂಖ್ಯೆ 3,000. 1963ರಲ್ಲಿ ಇದು 6,800ಕ್ಕೆ ಏರಿತ್ತು. ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರ ಪೂಜನಂ ಎಂಬುದು ಪತ್ರಿಕೆಯ ಧ್ಯೇಯವಾಕ್ಯವಾಗಿತ್ತು. *

**ನಗೆಯಮಾರಿತಂದೆ:** ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಶಿವಭಕ್ತರನ್ನು ತನ್ನ ಮಾತಿನ ಬಗೆಯಿಂದ ನಗಿಸುವುದು ಈತನ ಕಾಯಕವಾಗಿತ್ತು. ಆತುರವೈರಿ ಮಾರೇಶ್ವರ ಎಂಬ ಅಂಕಿತದಿಂದ ವಚನಗಳನ್ನು ರಚಿಸಿದ್ದಾನೆ. ಇವನ 100 ವಚನಗಳು ದೊರಕಿವೆ. ಈ ವಚನಗಳು ಸಂಗ್ರಹವೂ ಹಿತಕರವೂ ಸವಿಯೂ ಆಗಿವೆ. ಮಾತಿನಲ್ಲಿ ಆತ್ಮಚಿಂತನೆ, ಜ್ಞಾನಪ್ರಭೆ ಕಂಡುಬರುತ್ತದೆ. ಶೈಲಿ ಸರಳವಾಗಿದ್ದು ವಚನಗಳಲ್ಲಿ ಬಳಸಿರುವ ಭಾವ, ಭಾಷೆ, ಉಪಮೆಗಳು ಸೊಗಸಾಗಿವೆ, ಸಾರವತ್ತಾಗಿವೆ. ನಡೆವ ಕಾಲು ಆನುವ ಕೈ ಬೇಡುವ ಬಾಯಿ ಸರ್ವವ ಕೂಡುವ ಮನವುಡುಗಿ ಘನಲಿಂಗದಲ್ಲಿ ತಲ್ಲೀನವಾದವನಂಗ ಮರುಳ ಕಂಡ ಕನಸಿನಂತೆ ಮೂಗನ ಕಾವ್ಯದಂತೆ ಜಲ ಲಿಪಿಯಂತೆ ಉರಿಯ ಧೂಮದಂತೆ ಇದಾರಿಗೂ ಅಸಾಧ್ಯ ಆತುರವೈರಿ ಮಾರೇಶ್ವರ ಎಂಬ ಈ ವಚನ ಭಕ್ತನ ಮೈಮನ ಭಗವಂತನಲ್ಲಿ ಲೀನವಾದಾಗ ಆ ಅನುಭವ ಎಂಥದ್ದು ಎಂಬುದನ್ನು ಮಾತಿನಲ್ಲಿ ವರ್ಣಿಸಿ ಹೇಳಲು ಸಾಧ್ಯವಿಲ್ಲ ಎಂಬುದನ್ನೂ ಆ ಅನುಭವದ ಅತ್ಯುಚ್ಚ ಸ್ಥಿತಿಯನ್ನೂ ಸುಂದರವಾಗಿ ನಿರೂಪಿಸುತ್ತದೆ. (ಓ.ಎನ್.ಎಲ್.)

**ನಜೀರ್ ಸಾಬ್, ಅಬ್ದುಲ್**: 1934–88. ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆ ಕೊಂಚಮಟ್ಟಿಗೆ ಸಾಕಾರಗೊಳ್ಳಲು ಕಾರಣರಾದ, ಕರ್ನಾಟಕದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಸ್ವಾಯತ್ತತೆ ತಂದುಕೊಟ್ಟ ಕ್ರಾಂತಿಕಾರಿ. ಮಾಜಿಸಚಿವರು. ಇವರ ಪೂರ್ಣ ಹೆಸರು ಅಬ್ದುಲ್ ನಜೀರ್ ಸಾಬ್. ನೀರುಸಾಬ್ ಎಂದೂ ಜನಪ್ರಿಯರಾಗಿದ್ದರು.

ಇವರು ತಮಿಳುನಾಡು ರಾಜ್ಯದ ಸತ್ಯಮಂಗಲ ತಾಲ್ಲೂಕು ತಾಳವಾಡಿ ಹೋಬಳಿ ಬೈಯಣಪುರ ಗ್ರಾಮದಲ್ಲಿ 1934 ಡಿಸೆಂಬರ್ 24ರಂದು ಜನಿಸಿದರು. ತಂದೆ ವೀರ್ ಸಾಹೇಬ್, ತಾಯಿ ಅಯೇಷಾಬೀ. ಕರ್ನಾಟಕದ ಗಡಿಗೆ 3ಕಿಮೀ ದೂರದಲ್ಲಿರುವ ಸ್ವಗ್ರಾಮದಲ್ಲಿ ಕನ್ನಡ ಶಾಲೆಯಲ್ಲೇ ಇವರ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಇವರ ತಂದೆ ತಾಯಿಗಳು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಗುಂಡ್ಲುಪೇಟೆಗೆ ಬಂದು ನೆಲಸಿದರು (1946). ಮುಂದೆ ಮೈಸೂರಿನಲ್ಲಿ ಇಂಟರ್ ಮೀಡಿಯೆಟ್ ವರೆಗೆ ಇವರ ವಿದ್ಯಾಭ್ಯಾಸ ನಡೆದು ಅಲ್ಲಿಗೇ ನಿಂತಿತು. ಮನೆಗೆ ಮರಳಿದ ನಜೀರರು ತಮ್ಮ 21ನೆಯ ವಯಸ್ಸಿಗೇ ಆಶ್ರಫ್ ಜಹಾಬೇಗಮ್ ಎಂಬುವವರನ್ನು ವಿವಾಹವಾದರು. ಇವರಿಗೆ ನಾಲ್ಕು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ಇವರ ತಂದೆ ಕೃಷಿ ಕಸಬಿನಿಂದ ದೊಡ್ಡ ಕುಟುಂಬವನ್ನು ಪೋಷಿಸುತ್ತಿದ್ದರು. ನಿಸ್ವಾರ್ಥತೆ, ಸಹನೆ ಹಾಗೂ ಸೇವಾಪರತೆಯನ್ನು ಬೆಳೆಸಿಕೊಂಡ ನಜೀರ್ ಸಾಬ್ ಅವರು ಸಾರ್ವಜನಿಕ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು.

ಗುಂಡ್ಲುಪೇಟೆಯ ಜನರ ಬಾಯಲ್ಲಿ ಇವರು ಪ್ರೀತಿಯ ನಜೀರ್ ಆದರು. ಆಗ ಈ ಭಾಗದ ಪ್ರಭಾವಶಾಲಿ ರಾಜಕಾರಣಿಯಾಗಿದ್ದ ಪ್ರಸಿದ್ಧ ಕಬ್ಬಳ್ಳಿ ಮನೆತನದ ಕೆ.ಎಸ್. ನಾಗರತ್ನಮ್ಮನವರ **(ನೋಡಿ)** ನಿಷ್ಠಾವಂತ ಅನುಯಾಯಿಯಾಗಿ ಬೆಳೆದರು. ಗುಂಡ್ಲುಪೇಟೆ ಜನರ ಮನಗೆದ್ದು ಪುರಸಭಾ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆಸಲ್ಲಿಸಿದರು. ಇವರ ಸಾರ್ವಜನಿಕ ಸೇವೆಗೆ ಇವರ ತಂದೆಯೂ ತಮ್ಮ ಅನ್ವರಪಾಷ ಅವರೂ ಎಲ್ಲ ರೀತಿಯಿಂದ ಬೆಂಬಲಿಸಿದರು. ನಜೀರ್ ಒಳ್ಳೆಯ ಮಾತುಗಾರರು; ಶ್ರೀಸಾಮಾನ್ಯರಲ್ಲಿ ಒಂದಾಗಿ ಬೆರೆವ ಸಹೃದಯಿ, ಜಾತಿಧರ್ಮ ತಾರತಮ್ಯವಿಲ್ಲದ ವಿಶಾಲ ದೃಷ್ಟಿಯ ವ್ಯಕ್ತಿ, ಜನಮನಕ್ಕೆ ಸ್ಪಂದಿಸುವ, ಪೌರ ಸೌಲಭ್ಯಗಳಿರಲಿ ವೈಯಕ್ತಿಕ ಕಷ್ಟಸುಖಗಳಿರಲಿ ತಮ್ಮ ಸೈಕಲ್ ಏರಿ ಹೋಗಿ ವಿಚಾರಿಸಿ ಪರಿಹರಿಸುವ ಪರೋಪಕಾರಿ ಎಂದೇ ಹೆಸರಾಗಿದ್ದರು.

ನಾಗರತ್ನಮ್ಮನವರ ಮತ್ತು ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಎಚ್. ಪಾಟೀಲರ ಪ್ರೋತ್ಸಾಹದಿಂದ ಇವರು 1976ರಲ್ಲಿ ವಿಧಾನಪರಿಷತ್ತಿಗೆ ಆಯ್ಕೆಯಾದರು. ತಮ್ಮ ಜನಪ್ರೀತಿಯ ಗುಣದಿಂದಾಗಿ ಶಾಸಕ ವೃಂದದಲ್ಲಿ ಬೇಗ ಜನಪ್ರಿಯರಾದರು. ಜನರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಸದನದಲ್ಲಿ ಮಂಡಿಸುತ್ತಿದ್ದರು. 1982ರಲ್ಲಿ ಇವರಿಗೆ ವಿಧಾನಪರಿಷತ್ ಟಿಕೆಟ್ ತಪ್ಪಿಹೋಯಿತು. 1983ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಜನತಾರಂಗ ಅಧಿಕಾರಕ್ಕೆ ಬಂದಿತು. ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಇವರನ್ನು ಗುರುತಿಸಿ ಮತ್ತೆ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದರು. ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಖಾತೆಯ ಸಚಿವರಾದರು (1983).

ಇವರು ತಮ್ಮ ಜೀವನದುದ್ದಕ್ಕೂ ನೆಚ್ಚಿಕೊಂಡು ಬಂದಿದ್ದ ತತ್ತ್ವಾದರ್ಶಗಳನ್ನು ಅನುಷ್ಠಾನಗೊಳಿಸುವ, ಅಧಿಕಾರ ಸ್ಥಾನದಲ್ಲಿದ್ದರೂ ಇವರ ನಿಸ್ವಾರ್ಥ ಹಾಗೂ ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಮುಖ್ಯಮಂತ್ರಿಗಳ ಸಂಪೂರ್ಣ ಬೆಂಬಲವೂ ದೊರೆತು ಇವರಲ್ಲಿ ನೈತಿಕ ಬಲ

ದೃಢವಾಯಿತು. ಸ್ಥಳೀಯ ಸಂಸ್ಥೆಗಳನ್ನು ಸರ್ಕಾರದ ಮತ್ತು ಶಾಸಕರ ಬಿಗಿಮುಷ್ಟಿಯಿಂದ ಬಿಡಿಸಿ ಅವುಗಳಿಗೆ ಸ್ವಾಯತ್ತತೆ ಕೊಟ್ಟು ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂಬುದು ಇವರ ಹೆಬ್ಬಯಕೆಯಾಗಿತ್ತು. ಅದಕ್ಕಾಗಿ ತಾವು ಅಧಿಕಾರಕ್ಕೆ ಬಂದ ಪ್ರಾರಂಭದಿಂದಲೇ ಒಂದು ಹೊಸ ಕಾಯಿದೆ ಜಾರಿಗೆ ತರುವ ಪ್ರಯತ್ನಕ್ಕೆ ಕೈಹಾಕಿದರು. ಅನೇಕ ವಿಧಿವಿಧಾನಗಳನ್ನು ಮುಗಿಸಿ "ಜಿಲ್ಲಾ ಪರಿಷತ್ತು, ತಾಲ್ಲೂಕು ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಗಳ" ಅಧಿನಿಯಮ ಮಂಡಿತವಾಗಿ 1986ರಲ್ಲಿ ಅಂಗೀಕಾರಗೊಂಡು 1987ರಲ್ಲಿ ಜಾರಿಗೆ ಬಂದಿತು. ಈ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್ತು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಲ್ಲಿ ಹೆಚ್ಚಿನ ಅಧಿಕಾರ ಪಡೆದು ಸ್ಥಳೀಯ ಸರ್ಕಾರದ ಸ್ಥಾನಮಾನ ಪಡೆಯಿತು. ತಾಲ್ಲೂಕು ಸಮಿತಿಯು ಜಿಲ್ಲೆ ಮತ್ತು ಮಂಡಲ ಪಂಚಾಯಿತಿಗಳ ನಡುವೆ ಸೇತುವೆಯಾಯಿತು. ಕೆಲವು ಗ್ರಾಮಗಳ ಗುಂಪಿಗೊಂದರಂತೆ ಸ್ಥಾಪಿತವಾದ ಮಂಡಲ ಪಂಚಾಯಿತಿ ತನ್ನ ವ್ಯಾಪ್ತಿಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಂಪೂರ್ಣ ಅಧಿಕಾರ ಪಡೆಯಿತು. ಅದರ ಅಧ್ಯಕ್ಷನನ್ನು 'ಪ್ರಧಾನ' ನೆಂಬ ಘನವಾದ ಹೆಸರಿನಿಂದ ಕರೆಯಲಾಯಿತು. ಈ ಮೂರು ಹಂತಗಳ ಸ್ಥಳೀಯ ಗ್ರಾಮೀಣ ಸಂಸ್ಥೆಗಳ ವ್ಯವಸ್ಥೆ ಜಾರಿಗೆ ತಂದದ್ದು ನಜೀರ್‌ಸಾಬರ ವೈಯಕ್ತಿಕ ಸಾಧನೆಯಾಗಿತ್ತು. ಇದಕ್ಕೆ ಅನೇಕ ಶಾಸಕರ, ಸಚಿವರ ವಿರೋಧವಿದ್ದಿತು. ಅವರೆಲ್ಲ ಮತದಾರರ ಮುಂದೆ ತಮ್ಮ ಪ್ರಭಾವ ಗೌಣವಾಗುತ್ತದೆಂದು ವಿರೋಧಿಗಳು ಪ್ರತಿಭಟಿಸಿದರು. ಆದರೆ ಎಲ್ಲ ಪ್ರತಿರೋಧಗಳ ನಡುವೆಯೂ ನಜೀರರು ಈ ಮಸೂದೆಯನ್ನು ಜಾರಿಗೆ ತಂದು ಇದರ ಮೂಲ ಸ್ವರೂಪವನ್ನು ಮುಂದೆ ಯಾರೂ ಬದಲಾಯಿಸದಂತೆ ಶಾಸನ ರೂಪಿಸಿದರು. ಹೀಗೆ ಜನರ ಕೈಗೆ ಅಧಿಕಾರ ಕೊಟ್ಟ ಇವರು ಪ್ರತಿನಿಧಿಗಳ ಆಯ್ಕೆಯಲ್ಲಿ ವಿವಿಧ ವರ್ಗಗಳಿಗೆ ಮೀಸಲಾತಿಯನ್ನು ಜಾರಿಗೊಳಿಸಿ ಸರ್ವ ವರ್ಗಗಳಿಗೂ ಪ್ರಾತಿನಿಧ್ಯವಿರುವಂತೆ ಮಾಡಿದರು. ಆದರೆ ಇವರ ಘನಉದ್ದೇಶದ ನ್ಯಾಯಪಂಚಾಯಿತಿ ಅಧಿನಿಯಮವನ್ನು ಯಾವುದೇ ಸರ್ಕಾರ ಇನ್ನೂ ಜಾರಿಗೆ ತರಲಾಗಿಲ್ಲ. ನಜೀರ್‌ಸಾಬ್‌ರ ಅಧಿಕಾರ ವಿಕೇಂದ್ರೀಕರಣದ ಈ ಕ್ರಮ ಸರ್.ಎಂ. ವಿಶ್ವೇಶ್ವರಯ್ಯನವರು ಪ್ರಾರಂಭಿಸಿದ್ದ ಸಂಪದಭ್ಯುದಯ ಸಂಸ್ಥೆಗಳ ಆಶಯವನ್ನು ಈಡೇರಿಸಿದಂತಾಗಿತ್ತು. ಯಾವುದೇ ಅಭಿವೃದ್ಧಿ ಕಾರ್ಯದಲ್ಲಿ ಜನಪ್ರತಿನಿಧಿಗಳೂ ಅಧಿಕಾರಿಗಳೂ ಕೂಡಿ ಕೆಲಸ ಮಾಡುವುದು ಇಂಥ ಸಂಸ್ಥೆಗಳ ಉದ್ದೇಶವಾಗಿತ್ತು.

ಇವರಿಗೆ ನೀರುಸಾಬ್ ಎಂಬ ಅಡ್ಡಹೆಸರೂ ಬಂದಿತ್ತು. ಇವರು ತಮ್ಮ ಅಧಿಕಾರಾವಧಿಯಲ್ಲಿ ಕರ್ನಾಟಕದ ಗ್ರಾಮೀಣ ಜನತೆ ಶುದ್ಧ ಕುಡಿವ ನೀರನ್ನು ಒದಗಿಸಲು ಕೈಗೊಂಡ ನಾನಾ ಕ್ರಮಗಳೇ ಈ ಹೆಸರು ಬರಲು ಕಾರಣ. ಕೊಳವೆ ಬಾವಿಗಳನ್ನು ತೋಡುವುದು ಮತ್ತು ಕೊಳಾಯಿ ಮೂಲಕ ನೀರು ಸರಬರಾಜು ಮಾಡುವುದು ಇವರು ಹಾಕಿಕೊಟ್ಟ ಸಮಾಜಮುಖಿ ಕಾರ್ಯಕ್ರಮವಾಗಿತ್ತು. ಗ್ರಾಮೀಣ ಬಡಜನರಿಗೆ ವಸತಿ ಕಲ್ಪಿಸಲೂ ಇವರು ಪೂರ್ಣ ಗಮನಕೊಟ್ಟು ಸಾವಿರಾರು ಕುಟುಂಬಗಳಿಗೆ ಸೂರು ಕಾಣಿಸಿದರು. 'ನೀರು–ಸೂರು' ಆ ಕಾಲದ ಬೀಜ ಮಂತ್ರವಾಗಿತ್ತು. ಸಾಮಾಜಿಕ ಜೀವನದ ಅಭಿವೃದ್ಧಿಯಲ್ಲಿ ಅದ್ವಿತೀಯ ಸಾಧನೆ ಮಾಡಿದ ಇವರು 1988 ಅಕ್ಟೋಬರ್ 24ರಂದು ನಿಧನರಾದರು.

(ಡಿ.ಎಸ್.ಜಿ)

**ನದೀವ್ಯವಸ್ಥೆ ಮತ್ತು ಜಲಸಂಪತ್ತು:** ನೈಋತ್ಯ ಮತ್ತು ಈಶಾನ್ಯ ಮಾರುತಗಳಿಂದ ಒದಗುವ ಮಳೆ ಕರ್ನಾಟಕದ ಜಲಸಂಪತ್ತಿನ ಮೂಲಾಧಾರ. ಆ ನೀರು ದೊಡ್ಡ ನದಿಗಳಾದ ಕೃಷ್ಣಾ, ತುಂಗಭದ್ರಾ ಮತ್ತು ಕಾವೇರಿ ಕಣಿವೆಗಳ ವಿಶಾಲ ಪ್ರದೇಶದಲ್ಲಿ ಹರಿಯುವುದರಿಂದ ಕರ್ನಾಟಕದ ಜಲಸಂಪತ್ತು ಶ್ರೀಮಂತವಾಗಿದೆ. ಈ ನದಿಗಳು ರಾಜ್ಯವನ್ನು ಕ್ರಮವಾಗಿ ಉತ್ತರ, ಮಧ್ಯ ಹಾಗೂ ದಕ್ಷಿಣದ ಪ್ರಮುಖ ಜಲಾನಯನದ ಪ್ರದೇಶಗಳಾಗಿ ವಿಭಾಗಿಸುತ್ತವೆಯಾದರೂ ಕರ್ನಾಟಕ ರಾಜ್ಯದ ಒಟ್ಟು ಪ್ರದೇಶವನ್ನು ನೀರೋಟದ ದೃಷ್ಟಿಯಿಂದ ಐದು ಭಾಗಗಳಾಗಿ ವಿಂಗಡಿಸ ಬಹುದು. ಪಶ್ಚಿಮಘಟ್ಟ ಶ್ರೇಣಿಯಿಂದ ಪಶ್ಚಿಮಾಭಿಮುಖವಾಗಿ ಅರಬ್ಬೀ ಸಮುದ್ರಕ್ಕೆ ಹರಿಯುವ ನದಿಗಳ ಜಲಾನಯನ, ಪಶ್ಚಿಮಘಟ್ಟ ಶ್ರೇಣಿಯ ಪೂರ್ವದ ಬಯಲುನಾಡಿನಲ್ಲಿ ಉತ್ತರಕ್ಕೆ ಕೃಷ್ಣಾನದಿ ಮತ್ತು ಅದರ ಉಪನದಿಗಳ ಜಲಾನಯನ ಮತ್ತು ದಕ್ಷಿಣಕ್ಕೆ ಕಾವೇರಿ ಹಾಗೂ ಅದರ ಉಪನದಿಗಳ ಜಲಾನಯನ, ಉತ್ತರದ ತುದಿಯಲ್ಲಿ ಗೋದಾವರಿಯ ಉಪನದಿ ಮಾಂಜರಾ ಜಲಾನಯನ ಮತ್ತು ನೈಋತ್ಯಕ್ಕೆ ನಂದಿದುರ್ಗ ದಿಂದ ಉಗಮಿಸುವ ಸ್ವತಂತ್ರ ನದಿಗಳಾದ ಪಾಲಾರ್ ಮತ್ತು ಪೆನ್ನಾರ್‌ಗಳ ಜಲಾನಯನ ಪ್ರದೇಶಗಳು.

**1.ಪಶ್ಚಿಮಕ್ಕೆ ಹರಿಯುವ ನದಿಗಳ ಜಲಾನಯನ:** ಪಶ್ಚಿಮಘಟ್ಟಗಳಲ್ಲಿ ಹುಟ್ಟಿ, ಅಲ್ಲಿಂದ ಪಶ್ಚಿಮ ದಿಕ್ಕಿಗೇ ಹರಿದು ಅರಬ್ಬಿ ಸಮುದ್ರವನ್ನು ಸೇರುವ ಉಪನದಿ, ಹೊಳೆ, ಹಳ್ಳಗಳು ಹಲವಾರು. ಮಳೆಗಾಲದಲ್ಲಿ ಇವೆಲ್ಲ ತುಂಬಿ ಹರಿಯುತ್ತವೆ. ಇವುಗಳಲ್ಲಿ ಅತ್ಯಂತ ಉದ್ದವಾದುದು 161 ಕಿಮೀ ಇರುವ ಕಾಳಿ ನದಿ. ಎರಡನೆಯದು 132 ಕಿಮೀ ಉದ್ದದ ಶರಾವತಿ. ಉಳಿದ ಕೆಲವು ಮುಖ್ಯವಾದವೆಂದರೆ: ಅಘನಾಶಿನಿ (121 ಕಿಮೀ), ನೇತ್ರಾವತಿ (96 ಕಿಮೀ), ತಟ್ಟೆಹಳ್ಳ (90 ಕಿಮೀ), ಸೀತಾ ನದಿ (80 ಕಿಮೀ), ಕುಮಾರಾಧಾರಾ (74 ಕಿಮೀ), ಗಂಗೊಳ್ಳಿ ನದಿ (72 ಕಿಮೀ) ಮತ್ತು ಚಕ್ರನದಿ (72 ಕಿಮೀ). ಇನ್ನೂ ಹೆಸರಿಸಬಹುದಾದ ಹಲವು: ಗೌರಿಹೊಳೆ, ಗುರುಪುರ, ಸ್ವರ್ಣ, ವಾರಾಹಿ, ಕುಬ್ಜ, ಹರಿದ್ರಾವತಿ, ಸೋಮ, ಗೋವಿಂದ, ಬೆಣ್ಣೆಹೊಳೆ, ಅತ್ತಿವೇರಿ, ಬೇಡ್ತಿ, ಬರಪೊಳೆ, ಮಹಾದಾಯಿ, ಡೊಂಕನಾಲಾ, ಪಂಡ್ರಿನದಿ, ಇಂಥವು ಒಟ್ಟು 57 ನದಿಗಳೆಂದು ಗುರುತಿಸಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಹುಟ್ಟಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿದು ಸಮುದ್ರ ಸೇರುವ ಶರಾವತಿ ನದಿ ಜಲವಿದ್ಯುತ್ ಯೋಜನೆಗೆ ಪ್ರಸಿದ್ಧವಾಗಿದೆ. ಇದಕ್ಕೆ ಅಡ್ಡಲಾಗಿ ಲಿಂಗನಮಕ್ಕಿ ಜಲಾಶಯವನ್ನು ನಿರ್ಮಿಸಲಾಗಿದೆ. ಕಾಳಿನದಿಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಪಶ್ಚಿಮದತ್ತ ಹರಿದು ಸಮುದ್ರ ಸೇರುತ್ತದೆ. ಇದಕ್ಕೆ ಸುಪ ಬಳಿ ಬೃಹತ್ ಜಲಾಶಯ ನಿರ್ಮಿತವಾಗಿದೆ. ಇದನ್ನು ಜಲವಿದ್ಯುತ್ ಉತ್ಪಾದನೆಗಾಗಿ ಹೆಚ್ಚಾಗಿ ಬಳಸಲಾಗುತ್ತದೆ.

ಈ ಎಲ್ಲ ನದಿಗಳ ಜಲಾನಯನ ಪ್ರದೇಶ ನಾಲೆಗಳಿಂದ ನೀರಾವರಿ ಮಾಡಲು ತಕ್ಕದಾಗಿಲ್ಲ. ಈ ಪ್ರದೇಶದ ವ್ಯವಸಾಯ ಯೋಗ್ಯ ಭೂಮಿ 12.34 ಲಕ್ಷ ಹೆಕ್ಟೇರುಗಳು. ಇದರಲ್ಲಿ 1.76 ಲಕ್ಷ ಹೆಕ್ಟೇರ್ ಮಾತ್ರ ನೀರಾವರಿಗೊಳಪಟ್ಟಿದೆ. ಈ ಎಲ್ಲ ನದಿಗಳ ಉಪಯುಕ್ತತೆ ಇರುವುದು ಅವುಗಳಿಂದ ಉತ್ಪಾದಿಸಬಹುದಾದ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ. ಇವುಗಳಲ್ಲಿ ಕೆಲವನ್ನಾದರೂ ಪೂರ್ವಕ್ಕೆ ತಿರುಗಿಸಿ ನೀರಾವರಿಗೆ ಉಪಯೋಗಿಸುವ ಸಾಧ್ಯತೆಯ ಬಗ್ಗೆ ಪರಿಶೀಲನೆಗಳಾಗುತ್ತಿವೆ. ಈ ಎಲ್ಲ ನದಿಗಳ ಒಟ್ಟು ಜಲಸಂಪತ್ತಿನ ಅಂದಾಜು ಸರಾಸರಿ 38 ಶತಕೋಟಿ ಘನಮೀಟರ್. ಇಡೀ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಸೇ. 93.8, ಕೊಡಗು ಸೇ. 36.6, ಶಿವಮೊಗ್ಗದ ಸೇ. 25.6, ಬೆಳಗಾಂವಿ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸೇ. 10ಕ್ಕಿಂತ ಕಡಿಮೆ ಪ್ರದೇಶ ಒಟ್ಟಿನಲ್ಲಿ ರಾಜ್ಯದ ಸೇ. 13.68 ಪ್ರದೇಶ ಎಂದರೆ 26.214 ಚ.ಕಿಮೀ ಈ ಜಲಾನಯನ ಪ್ರದೇಶಕ್ಕೆ ಸೇರಿರುತ್ತದೆ.

**2.ಕೃಷ್ಣಾ ಜಲಾನಯನ:** ಇದರ ವಿಸ್ತಾರ 1,13,271 ಚ.ಕಿಮೀಗಳಾಗಿದ್ದು ರಾಜ್ಯದ ವಿಸ್ತೀರ್ಣದ ಸೇ. 59 ಭಾಗ ಇದರಲ್ಲಿದೆ. ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ಗುಲ್ಬರ್ಗ ಹಾಗೂ ರಾಯಚೂರು ಜಿಲ್ಲೆಗಳು ಪೂರ್ತಿಯಾಗಿಯೂ ಬೆಳಗಾಂವಿ, ಧಾರವಾಡ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ಸುಮಾರು ಸೇ. 75ರಿಂದ 90 ರವರೆಗೂ ತುಮಕೂರು, ಹಾಸನ, ಬೀದರ್ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಸೇ. 6 ರಿಂದ 38 ರವರೆಗೂ ಈ ಜಲಾನಯನದಲ್ಲಿ ಬರುತ್ತವೆ. ಮುಖ್ಯವಾದ ನದಿ ಮತ್ತು ಉಪನದಿಗಳ ಹೆಸರಿನಲ್ಲಿ 6 ಉಪಜಲಾನಯನಗಳನ್ನು ಈ ಕಣಿವೆಯಲ್ಲಿ ಗುರುತಿಸಲಾಗಿದೆ. ಅವೆಂದರೆ: ಕೃಷ್ಣಾ, ಭೀಮಾ, ಮಲಪ್ರಭಾ, ಘಟಪ್ರಭಾ, ತುಂಗಭದ್ರಾ ಮತ್ತು ವೇದಾವತಿ. ಕೃಷ್ಣಾ ಉಪಜಲಾನಯನದಲ್ಲಿ ವೇದಗಂಗಾ, ದೂದಗಂಗಾ, ಅಗರಣಿ, ಡೋಣಿ ಮುಂತಾದ 23 ಉಪಕಣಿವೆಗಳೂ ಭೀಮಾ ಜಲಾನಯನದಲ್ಲಿ ಅಮರಜ ಮುಂತಾದ 22 ಉಪಕಣಿವೆಗಳೂ ಘಟಪ್ರಭಾದಲ್ಲಿ ಮಾರ್ಕಂಡೇಯ, ಹಿರಣ್ಯಕೇಶಿ, ತಾಮ್ರಪರ್ಣಿ ಮುಂತಾದ 8 ಉಪಕಣಿವೆಗಳೂ ಮಲಪ್ರಭಾದಲ್ಲಿ ಬೆಣ್ಣೆ ಹಳ್ಳವೂ ಸೇರಿ 22 ಮುಖ್ಯ ಹಳ್ಳಗಳೂ ಅತಿ ದೊಡ್ಡ ಉಪಜಲಾನಯನ ವಾದ ತುಂಗಭದ್ರಾದಲ್ಲಿ ತುಂಗಾ, ಭದ್ರಾ, ಮಾಲತಿಹೊಳೆ, ಹೈಹೊಳೆ, ಸೋಮವಾಹಿನಿ, ಹರಿದ್ರ, ಜಂಬದಹಳ್ಳ, ಕನಕನಾಲಾ, ಸಿಂಧೂರ ನದಿ, ದಂಡಾವತಿ, ವರದಾ, ಧರ್ಮಾ, ಕುಮುದ್ವತಿ, ಮಾವಿನಹೊಳೆ, ಹಾವೇರಿಹಳ್ಳ ಮುಂತಾದ 56 ಉಪಕಣಿವೆಗಳೂ ವೇದಾವತಿ ಉಪಜಲಾನಯನದಲ್ಲಿ ಹಗರಿ, ಚಿಕ್ಕಹಗರಿ, ಚಿನ್ನಹಗರಿ, ಕೆರೆತೊರೆ, ಸುವರ್ಣಮುಖಿ ಮುಂತಾದ 14 ಉಪಕಣಿವೆಗಳೂ ಇವೆ. ಘಟಪ್ರಭಾ, ಭೀಮಾನದಿಗಳು ಮಹಾರಾಷ್ಟ್ರದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಕೃಷ್ಣೆಯನ್ನು ಸೇರಿದರೆ, ತುಂಗಭದ್ರಾ ಕರ್ನಾಟಕದಲ್ಲಿ ಹುಟ್ಟಿ ಆಂಧ್ರ ಪ್ರದೇಶದಲ್ಲಿ ಸ್ವಲ್ಪದೂರ ಹರಿದು ಮತ್ತೆ ಆಂಧ್ರಪ್ರದೇಶದಲ್ಲಿ ಮುಖ್ಯ ನದಿಯನ್ನು ಸೇರುತ್ತದೆ. ವೇದಾವತಿಯೂ ಕರ್ನಾಟಕದಲ್ಲಿ ತುಂಗಭದ್ರೆಯನ್ನು ಕೂಡುತ್ತದೆ.

ಈ ಜಲಾನಯನದ ಪಶ್ಚಿಮಘಟ್ಟಗಳಲ್ಲಿ ನೈಋತ್ಯ ಮಾರುತಗ ಳಿಂದಲೇ ವರ್ಷದ ಸೇ. 73ರಷ್ಟು ಎಂದರೆ 1200 ಮಿಮೀಗೂ ಹೆಚ್ಚು ಮಳೆಯಾಗುತ್ತಿದ್ದು ಘಟ್ಟಗಳ ಪೂರ್ವಕ್ಕಿರುವ ವಿಶಾಲ ಪ್ರದೇಶದಲ್ಲಿ 400ರಿಂದ 500 ಮಿಮೀ ಕಡಿಮೆ ಮಳೆಯಾಗುತ್ತ, ಅದರಲ್ಲೂ ವ್ಯತ್ಯಾಸ ಅನಿಶ್ಚಿತೆಗಳಿದ್ದು ಆಗಾಗ್ಗೆ ಅಭಾವ ಪರಿಸ್ಥಿತಿಯನ್ನೆದುರಿಸಬೇಕಾಗಿರುತ್ತದೆ. ಈ ಜಲಾನಯನದಲ್ಲಿನ ವ್ಯವಸಾಯ ಯೋಗ್ಯ ಭೂಮಿ 92.7 ಲಕ್ಷ ಹೆಕ್ಟೇರುಗಳು. ಇದರಲ್ಲಿ 73.1 ಲಕ್ಷ ಹೆಕ್ಟೇರು (71– 72) ಸಾಗುವಳಿಯಾ ಗುತ್ತಿದ್ದು, 7.4 ಲಕ್ಷ ಹೆಕ್ಟೇರುಗಳು ಮಾತ್ರ ನೀರಾವರಿಗೆ ಒಳಪಟ್ಟಿದೆ.

ಕೃಷ್ಣಾನದಿ 1.93 ಶತಕೋಟಿ ಘನ ಮೀಟರ್ ನೀರನ್ನೂ ಘಟಪ್ರಭಾ, ಮಲಪ್ರಭಾ, ತುಂಗಭದ್ರಾ (ವೇದಾವತಿಯೂ ಸೇರಿ) ಮತ್ತು ಭೀಮಾ ನದಿಗಳು ಕ್ರಮವಾಗಿ 1.72, 2.78, 18.58 ಮತ್ತು 2.41 ಶತಕೋಟಿ ಘನಮೀಟರ್ ನೀರನ್ನೂ ತಂದು ಒಟ್ಟು ಸರಾಸರಿ 27.49 ಶತಕೋಟಿ ಘನ ಮೀಟರ್ ನೀರನ್ನು ಒದಗಿಸುತ್ತವೆಂಬುದು ಅಂದಾಜು. ಇವಲ್ಲದೆ ಹಲವಾರು ಸಣ್ಣ ನೀರಾವರಿ ಕಾಮಗಾರಿಗಳಿಂದಾಗಿ ಸು. 2.80 ಶತಕೋಟಿ ಘನ ಮೀಟರ್ ನೀರು ಬಳಸಲ್ಪಡುತ್ತಿದೆಯೆಂದೂ ತಿಳಿಯಲಾಗಿದೆ. ರಾಜ್ಯ ಸರ್ಕಾರ ಕೃಷ್ಣಾ ಜಲಾನಯನ ಪ್ರದೇಶದಿಂದ ಒಟ್ಟು 1,156 ಟಿ.ಎಂ.ಸಿ. ನೀರನ್ನು ನೀರಾವರಿಗೆ ಬಳಸುವ ಸಮಗ್ರ ಯೋಜನೆಯನ್ನು ರೂಪಿಸಿದೆ. ಕೃಷ್ಣಾ ಮತ್ತು ಅದರ ಉಪನದಿಗಳಿಗೆ ಅಡ್ಡಲಾಗಿ ಕೃಷ್ಣಾ ಮೇಲ್ದಂಡೆ ಜಲಾಶಯ, ಆಲಮಟ್ಟಿ ಜಲಾಶಯ, ಭದ್ರಾ ಜಲಾಶಯ, ತುಂಗಭದ್ರಾ ಜಲಾಶಯ ಮೊದಲಾದ ಪ್ರಮುಖ ನೀರಾವರಿ ಯೋಜನೆ ಜಲಾಶಯಗಳನ್ನು ನಿರ್ಮಿಸಲಾಗಿದೆ.

**3.ಕಾವೇರಿ ಜಲಾನಯನ:** ಇದರ ವಿಸ್ತಾರ 34,273 ಚ.ಕಿಮೀ.ಗಳಿದ್ದು ರಾಜ್ಯದ ಒಟ್ಟು ಸೇ. 17.87 ಪ್ರದೇಶವನ್ನು ಒಳಗೊಂಡಿದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳು ಪೂರ್ತಿಯಾಗಿ, ಹಾಸನ ಜಿಲ್ಲೆಯ ಸೇ. 73.5, ಕೊಡಗು ಮತ್ತು ಬೆಂಗಳೂರು ಜಿಲ್ಲೆಗಳ ಸರಾಸರಿ ಸೇ. 65, ತುಮಕೂರು ಜಿಲ್ಲೆಯ ಸೇ. 35.4 ಮತ್ತು ಚಿಕ್ಕಮಗಳೂರು ಜಿಲ್ಲೆಯ ಸೇ. 8.4 ಭಾಗ ಈ ಜಲಾನಯನದಲ್ಲಿವೆ.

ಕಾವೇರಿ ಕಣಿವೆಯ ಮುಖ್ಯ ಉಪಜಲಾನಯನಗಳು ಐದು. ಅವು ಕಾವೇರಿ, ಹೇಮಾವತಿ, ಕಪಿಲಾ, ಶಿಂಷಾ ಮತ್ತು ಅರ್ಕಾವತಿ. ಕಾವೇರಿ, ಹಾರಂಗಿ, ರಾಮತೀರ್ಥ, ಲಕ್ಷ್ಮಣತೀರ್ಥ, ಮಜ್ಜಿಗೆಹೊಳೆ, ಮೊಸರುಹಳ್ಳ, ಲೋಕಪಾವನಿ, ಸುವರ್ಣಾವತಿ, ಎಣ್ಣೆಹೊಳೆ, ಹಂದಿಹಳ್ಳ, ಉಡುತೊರೆ ಹಳ್ಳ, ಪಾಲಾರ್ ಮುಂತಾದ 52 ಉಪಕಣಿವೆಗಳೂ ಸೇರಿ ಕಾವೇರಿ ಉಪಜಲಾನಯನ; ಹೇಮಾವತಿ ಉಪಜಲಾನಯನದಲ್ಲಿ ಹೇಮಾವತಿ, ಬಕ್ಕಿಹಳ್ಳ, ಕಡದಾಳುಹಳ್ಳ, ಜಯಪಾರ್ವತಿ, ಐಗೂರುಹಳ್ಳ, ಉಚ್ಚಂಗಿ ಹೊಳೆ, ಯಗಚಿ, ಸಗರಿಹಳ್ಳ ಮುಂತಾದ 11 ಉಪಕಣಿವೆಗಳು; ಕಪಿಲಾ ಉಪಜಲಾನಯನದಲ್ಲಿ ಕಪಿಲಾ, ನಾಗರಹೊಳೆ, ಸಾರತ್ ಹೊಳೆ, ತಾರಕ, ನುಗು ಮುಂತಾದ 17 ಉಪಕಣಿವೆಗಳು; ಶಿಂಷಾ ಉಪಜಲಾನಯನದಲ್ಲಿ ಶಿಂಷಾ, ಕಣ್ವ, ವೀರವೈಷ್ಣವಿ, ನಾಗಿನಿ, ಭಾರ್ಗವತಿ, ಹುಲುಹಳ್ಳ, ಹೆಬ್ಬಳ್ಳ, ಕಾನಿಹಳ್ಳ, ಚಿಕ್ಕತೊರೆ ಮುಂತಾದ 13 ಉಪಕಣಿವೆಗಳೂ ಅರ್ಕಾವತಿ ಉಪಜಲಾನಯನದಲ್ಲಿ ಅರ್ಕಾವತಿ, ವೃಷಭಾವತಿ, ಕುಮುದ್ವತಿ, ಸುವರ್ಣಮುಖಿ, ಕುನಂದವತಿ, ಮಡಿವಾಳಹೊಳೆ, ಮಾರಿಹಳ್ಳ ಮುಂತಾದ 9 ಉಪಕಣಿವೆಗಳು– ಹೀಗೆ ಇವನ್ನು ವಿಂಗಡಿಸಬಹುದು.

ಕಾವೇರಿ ಜಲಾನಯದ ಸರಾಸರಿ ಮಳೆ ವರ್ಷಕ್ಕೆ 1,400 ಮಿಮೀ. ಇದರ ಒಟ್ಟು ವಿಸ್ತೀರ್ಣದ ಸೇ. 15.8 ರಷ್ಟು ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿನ ಕಾಡುಪ್ರದೇಶವೇ ಆಗಿದೆ. ವ್ಯವಸಾಯ ಯೋಗ್ಯವಾದ 24.5 ಲಕ್ಷ ಹೆಕ್ಟೇರುಗಳಲ್ಲಿ ಬಹುತೇಕ ಸಾಗುವಳಿಯಾಗಿದ್ದು, 2000ದ ಮಾರ್ಚ್‌ವರೆಗೂ 3 ಲಕ್ಷ ಹೆಕ್ಟೇರುಗಳಲ್ಲಿ ನೀರಾವರಿಯಾಗುತ್ತಿದೆ. 2,500 ಮಿಮೀ ಮಳೆಯಾಗುವ ಘಟ್ಟಪ್ರದೇಶಗಳಲ್ಲಿ ದಟ್ಟವಾದ ಕಾಡುಗಳ ನಡುವೆ ಕಾಫಿ, ಏಲಕ್ಕಿ, ಮೆಣಸು, ಅಡಕೆ, ಕಿತ್ತಳೆ ಬೆಳೆಯುವ ಎಸ್ಟೇಟುಗಳಿದ್ದು, ತಗ್ಗು ಪ್ರದೇಶಗಳಲ್ಲಿ ಮಳೆಯ ಆಶ್ರಯದಿಂದಲೇ ಒಂದು ಬತ್ತದ ಬೆಳೆಯನ್ನು ತೆಗೆಯುತ್ತಾರೆ. ಉಳಿದ ಹಾಸನ, ತುಮಕೂರು, ಬೆಂಗಳೂರು ಜಿಲ್ಲೆಗಳ ಭಾಗಗಳೂ ಹಾಗೂ ಮಂಡ್ಯ ಜಿಲ್ಲೆ 600 ರಿಂದ 750 ಮಿಮೀ ಮಳೆ ಬೀಳುವ ಪ್ರದೇಶವಾಗಿದ್ದು ಆಗಾಗ್ಗೆ ಅಭಾವಕ್ಕೊಳಪಡುತ್ತವೆ.

ಕೇಂದ್ರ ಸರ್ಕಾರ ನೇಮಿಸಿದ್ದ ಕಾವೇರಿ ಅಂಕಿ ಅಂಶಗಳ ಸಂಗ್ರಹಣ ಸಮಿತಿ ರಾಜ್ಯದಲ್ಲಿ ಈ ನದಿಯ ಜಲಸಂಪತ್ತು ಸು. 11 ಶತಕೋಟಿ ಘನ ಮೀಟರ್ ಎಂದು ಗೊತ್ತು ಮಾಡಿದೆ. ಆದರೆ ರಾಜ್ಯದ ಎಂಜಿನಿಯರು ಗಳ ಅಂದಾಜು ಇನ್ನೂ ಹೆಚ್ಚಿನದಿದೆ. ಹೇಮಾವತಿ (ಅಕ್ಕಿಹೆಬ್ಬಾಳಿನ ಬಳಿ) 2.92, ಲಕ್ಷ್ಮಣತೀರ್ಥ (ಮುಂಡುವಾಡಿಯಬಳಿ) 0.54 ಕಾವೇರಿ (ಕೃಷ್ಣಾರಾಜಸಾಗರದ ಬಳಿ) 6.71, ಕಪಿಲಾ (ಹುಲ್ಲಹಳ್ಳಿಯ ಬಳಿ) 3.48, ಸುವರ್ಣಾವತಿ 0.31, ಶಿಂಷಾ 1.19, ಅರ್ಕಾವತಿ 0.48, ಉಡುತೊರೆ ಹಳ್ಳ 0.119, ಪಾಲಾರ್ 0.25 ಮತ್ತು ಕಾವೇರಿ ಕಪಿಲಾಗಳ ಉಳಿದ ಭಾಗಗಳಿಂದ 0.99 ಹೀಗೆ ಒಟ್ಟು 17 ಶತಕೋಟಿ ಘನ ಮೀಟರ್ ಈ ನದಿಯಿಂದ ಒದಗುವುದೆಂದು ಅಂದಾಜು ಮಾಡಲಾಗಿದೆ. 2000ದ ಮಾರ್ಚ್‌ವರೆಗೆ 392.87 ಟಿ.ಎಂ.ಸಿ. ನೀರನ್ನು ನೀರಾವರಿಗಾಗಿ ಬಳಸಲಾಗಿದೆ. ಹೇಮಾವತಿ ಜಲಾಶಯ, ಕೃಷ್ಣರಾಜ ಸಾಗರ ಹಾರಂಗಿ ಜಲಾಶಯ, ಕಬಿನಿ ಜಲಾಶಯ ಇವು ಈ ಪ್ರದೇಶದ ಪ್ರಮುಖ ನೀರಾವರಿ ಯೋಜನೆಗಳಾಗಿವೆ.

**4.ಗೋದಾವರಿ ಜಲಾನಯನ :** ಉತ್ತರದ ಬೀದರ್ ಜಿಲ್ಲೆಯ ಸೇ. 82 ಭೂ ವಿಸ್ತಾರ ಎಂದರೆ 4,405 ಚಕಿಮೀ (ರಾಜ್ಯದ ಸೇ. 2.3) ಗೋದಾವರಿಯ ಉಪನದಿಯಾದ ಮಾಂಜರಾ ನದಿಯ ಜಲಾನಯನ ಪ್ರದೇಶವಾಗಿದೆ. ಈ ಭಾಗದಲ್ಲಿ ಮಾಂಜರಾ ಮತ್ತು ಕಾರಂಜಿ ನದಿಗಳಲ್ಲದೆ ಮಧುರನಾಲಾ, ದೇವನಾಲಾ, ಚುಳಕಿ ನಾಲಾ, ಹೆಬ್ಬಾಳ್ ನದಿ, ಚಿಟಗುಪ್ತ ನಾಲಾ ಮುಂತಾದವುಗಳ ಒಟ್ಟು 14 ಉಪಕಣಿವೆಗಳು ಇದರಲ್ಲಿ ಸೇರಿವೆ. ಈ ಪ್ರದೇಶದ ಸರಾಸರಿ ಮಳೆ 750 ರಿಂದ 1,000 ಮಿಮೀ ವರೆಗೆ ಇದ್ದು, ಕೆಲವು ಕೆರೆಗಳು ಮತ್ತು ಬಾವಿಗಳಿಂದ ಮಾತ್ರ ನೀರಾವರಿ ಸಾಧ್ಯವಾಗಿರುತ್ತದೆ. ವ್ಯವಸಾಯ ಯೋಗ್ಯವಾದ 4 ಲಕ್ಷ ಹೆಕ್ಟೇರುಗಳಲ್ಲಿ 2.72 ಲಕ್ಷ ಹೆಕ್ಟೇರುಗಳು ಮಾತ್ರ ಸಾಗುವಳಿಯಾಗಿ ಕೇವಲ 0.20 ಲಕ್ಷ ಹೆಕ್ಟೇರ್ ನೀರಾವರಿಯಾಗಿರುತ್ತದೆ. ಹಿಂದುಳಿದ ಪ್ರದೇಶವಾದ ಇದರ ಅಭಿವೃದ್ಧಿಯಾಗಬೇಕಾದರೆ ಮಾಂಜರಾ ನದಿಯ ನೀರಿನ ಬಳಕೆಯಿಂದ ಮಾತ್ರ. ಇದರಲ್ಲಿ 1.45 ಶತಕೋಟಿ ಮೀಟರ್ ನೀರು ಒದಗುವುದು ಎಂದು ಅಂದಾಜು ಮಾಡಲ್ಪಟ್ಟಿದೆ. ಅಂತಾರಾಜ್ಯ ನದಿಯಾದ ಗೋದಾವರಿಯ ನೀರಿನ ಹಂಚಿಕೆ ವಿವಾದದಲ್ಲಿದ್ದು, ಆಂಧ್ರ ಮತ್ತು ಕರ್ನಾಟಕಗಳ ನಡುವೆ ಆಗಿರುವ ಒಂದು ತಾತ್ಕಾಲಿಕ ಒಪ್ಪಂದದಂತೆ 0.348 ಶತಕೋಟಿ ಘನ ಮೀಟರ್ ಬಳಸಿ 0.42 ಲಕ್ಷ ಹೆಕ್ಟೇರ್ ಜಮೀನಿಗೆ ನೀರೊದಗಿಸಬಲ್ಲ ಕಾರಂಜಿ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಜಲಾನಯನ ಪ್ರದೇಶದಲ್ಲಿ 2000ದ ಮಾರ್ಚ್‌ವರೆಗೆ 22.37 ಟಿ.ಎಂ.ಸಿ. ನೀರನ್ನು ನೀರಾವರಿಗಾಗಿ ಬಳಸಲಾಗಿದೆ. ಮಂಜ್ರಾ ಮತ್ತು ಕಾರಂಜ ಯೋಜನೆಗಳು ಪ್ರಮುಖವಾದವು.

**5. ಪಾಲಾರ್ ಮತ್ತು ಪೆನ್ನಾರ್‌ಗಳ ಜಲಾನಯನ:** ರಾಜ್ಯ ವಿಸ್ತೀರ್ಣದ ಸೇ. 7.09 ರಷ್ಟು ಎಂದರೆ 13,610 ಚ.ಕಿಮೀ ಪ್ರದೇಶ ಈ ಮೂರು ನದಿಗಳ ಜಲಾನಯನದಲ್ಲಿದೆ. ಇಡೀ ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆಯ ಸೇ. 32.7 ಭಾಗ, ತುಮಕೂರಿನ ಸೇ. 27.5 ಭಾಗ ಇದರಲ್ಲಿ ಸೇರಿದೆ. ವ್ಯವಸಾಯ ಯೋಗ್ಯವಾದ 10 ಲಕ್ಷ ಹೆಕ್ಟೇರುಗಳಲ್ಲಿ 5 ಲಕ್ಷ ಸಾಗುವಳಿಯಾಗುತ್ತಿದ್ದು ಕೆರೆ ಮತ್ತು ಬಾವಿಗಳ ಆಶ್ರಯದಿಂದಲೇ 1.50 ಲಕ್ಷ ಹೆಕ್ಟೇರ್ ಭೂಮಿ ನೀರಾವರಿಗೊಳಪಟ್ಟಿದೆ. ಕಡಿಮೆ ಮಳೆ ಬೀಳುವ ಈ ಜಲಾನಯನದಲ್ಲಿ ಒದಗುವ ನೀರಿನ ಅಂದಾಜು 0.98 ಶತಕೋಟಿ ಘನ ಮೀಟರ್. ಯಾವ ಮಧ್ಯಮ ಅಥವಾ ಭಾರಿ ನೀರಾವರಿ ಯೋಜನೆಗೂ ಇಲ್ಲಿ ಅವಕಾಶವಿಲ್ಲವಾಗಿರುತ್ತದೆ.

**ಅಂತರ್ಜಲ ಸಂಪತ್ತು:** ಜಲಾನಯನ ಪ್ರದೇಶಗಳಲ್ಲಿ ಮಳೆಯಿಂದ ಬರುವ ನೀರೇ ಈ ಜಲಸಂಪತ್ತಿಗೆ ಆಧಾರ. ಆ ಮಳೆಯ ನೀರೆಲ್ಲ ಬಾಹ್ಯ ಜಲಸಂಪತ್ತಿಗೇ ಪೂರ್ಣವಾಗಿ ವಿನಿಯೋಗವಾಗದೆ, ಅದರ ಕೊಂಚ ಭಾಗವಾದರೂ ಭೂಮಿಯ ಅಂತರ್ಜಲ ಸಂಪತ್ತನ್ನು ಹೆಚ್ಚಿಸುತ್ತದೆ. ಶಿಲಾ ವರ್ಗ, ಭೂ ಮೇಲ್ಮೈ ರಚನೆ, ವಾಯುಗುಣವನ್ನಲಂಬಿಸಿ ಕರ್ನಾಟಕದ ಭೂ ರಚನೆಯಲ್ಲಿ ಮಣ್ಣಿನ ಮೇಲು ಹೊದಿಕೆಯ ದಪ್ಪ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುವುದಿದ್ದು ಕೆಲವು ಕಡೆ 30 ಮೀಟರ್‌ಗಳಷ್ಟು ಇರುವುದೂ ಉಂಟು. ಇದು ಅಗಲವಾದ ಕಣಿವೆಗಳಲ್ಲಿ ಹೆಚ್ಚು, ಇಳಿಜಾರುಗಳಲ್ಲಿ ತೆಳುವು, ಎತ್ತರ ಪ್ರದೇಶಗಳಲ್ಲಿ ತೀರ ಕಡಿಮೆ ಇರುತ್ತದೆ. ಈ ಮೇಲು ಹೊದಿಕೆ ಮರಳು, ಗ್ರಾವೆಲ್ ಅಥವಾ ಗರಸು, ಎರೆ ಹಾಗೂ ಹ್ಯೂಮಸ್‌ಗಳಿಂದ ಕೂಡಿರುತ್ತದೆ. ಈ ಮಣ್ಣಿಗೂ ಕೆಳಗಿರುವ ಗಟ್ಟಿಯಾದ ಶಿಲೆಗೂ ಮಧ್ಯವರ್ತಿ ವಲಯದಲ್ಲಿರುವ ಕೆಳಮಣ್ಣು ಅಂತರ್ಜಲ ಸಂಪತ್ತಿನ ಆಧಾರವಾಗಿರುತ್ತದೆ.

ಕರ್ನಾಟಕದ ಹೆಚ್ಚಿನ ಭೂ ಭಾಗವು ಗಟ್ಟಿಯಾದ ಶಿಲೆಗಳಿಂದಾದುದರಿಂದ ಅಗಾಧ ಪ್ರಮಾಣದ ಅಂತರ್ಜಲ ಸಂಗ್ರಹಣೆಗೆ ಇದು ವಿಶೇಷ ಯೋಗ್ಯವಾಗೇನೂ ಇಲ್ಲ. ಆದರೂ ಬಹುಕಾಲದಿಂದ ಸತತವಾದ ಭೂ ವ್ಯಾಪಾರ ಕ್ರಿಯೆಯಿಂದಾಗಿ ಶಿಲಾಪದರದ ಮೇಲೆ ಹೊದಿಕೆಯಾಗಿರುವ ಛಿದ್ರಿತ ಬಂಡೆಗಳು ಮತ್ತು ಅಳಕವಾದ ಮಣ್ಣು ಸಾಕಷ್ಟು ಸರಂಧ್ರವಾಗಿರುವುದರಿಂದ ಸುಮಾರು ಪ್ರಮಾಣದ ಅಂತರ್ಜಲವನ್ನು ಇವು ಹಿಡಿದಿಟ್ಟುಕೊಳ್ಳಬಲ್ಲವು. ಪುರಾತನ ಕಾಲದಿಂದಲೂ ಈ ಕಡಿಮೆ ಆಳದಲ್ಲಿ ಕೊರೆಯುವ ಅಂತರ್ಜಲವನ್ನು ಅಷ್ಟೇ ಆಳಕ್ಕೆ ತೋಡಿದ ಬಾವಿಗಳಿಂದ ಉಪಯೋಗಿಸಿಕೊಳ್ಳಲಾಗುತ್ತಿದೆ. 1974ರ ಅಂತ್ಯದಲ್ಲಿನ ಗಣತಿಯ ಪ್ರಕಾರ ರಾಜ್ಯದಲ್ಲಿ ಇಂಥ ಸುಮಾರು 3.5 ಲಕ್ಷ ನೀರಾವರಿ ಬಾವಿಗಳಿದ್ದುವು.

ಶಿಲೆಯ ಶಿಥಿಲತೆಯಿಂದಾಗಿರುವ ಹೊದಿಕೆ ಸರಾಸರಿ 15 ಮೀ ಆಳವಿದೆಯೆಂದು ತಿಳಿಯಲಾಗಿದೆ. ಈ ವಲಯದ ಕೆಳಪದರವೂ ಮಳೆಯ ನೀರು ಕೆಳಕ್ಕೆ ಇಳಿಯುವುದರಿಂದ ಆಯಾ ಕಾಲದಲ್ಲಿ ಅಂತರ್ಜಲಭರಿತವಾಗುವುದು. ಹಾಗೆಯೇ ನೀರನ್ನು ಪಕ್ಕಕ್ಕೆ ಹರಿಯುಗೊಟ್ಟು ಖಾಲಿಯಾಗುವುದು. ಇದನ್ನು ವಿಚ್ಛಿನ್ನ ಸಂಪೂರ್ಣವಲಯ ಎನ್ನಬಹುದು. ಈ ಪದರದ ದಪ್ಪ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗಬಹುದಾದರೂ ಸರಾಸರಿ 3 ಮೀ ಇರುತ್ತದೆಂದು ತಿಳಿಯಬಹುದು. ಇದರ ಸರಂಧ್ರತೆ ಸೇ. 15 ಕ್ಕೆ ಕಡಿಮೆಯಿಲ್ಲದಿರುವುದರಿಂದ ಇದರ ಸಂಪೂರ್ಣ ಸಾಮರ್ಥ್ಯ ಸುಮಾರು 0.5 ಮೀ ದಪ್ಪ ಪದರದ ನೀರನ್ನು ಹಿಡಿದಿಡುವುದಾಗಿರುತ್ತದೆ. ಈ ಪ್ರಮಾಣದ ನೀರು ಪಂಪು, ಏತ ಮುಂತಾದುವುಗಳಿಂದ ಮೇಲೆತ್ತುವುದರಿಂದಾಗಲೀ ಅಥವಾ ಪಕ್ಕದ ಹರಿವಿನಿಂದ ಕೆಳಮಟ್ಟದ ಕಣಿವೆಗಳಿಗೆ ಬಸಿಯುವುದರಿಂದಾಗಲೀ ಖಾಲಿಯಾಗುತ್ತದೆ. ಅಲ್ಲದೆ ವರ್ಷವರ್ಷವೂ ಭರ್ತಿಯಾಗುತ್ತಿದ್ದು ಉಪಯೋಗಿಸಲು ಬರುತ್ತದೆ.

ಈ ವಿಚ್ಛಿನ್ನ ಸಂಪೂರಣ ವಲಯದ ಕೆಳಗಡೆಗೆ, ಗಟ್ಟಿಬಂಡೆಗಳ ಸಂದು ಮತ್ತು ಸೀಳುಗಳಲ್ಲಿ ನೀರು ಸಂಗ್ರಹಿತವಾಗಿರುವ, ಸು. 90 ಮೀ ವರೆಗೂ ಆಳವಿರಬಹುದಾದ ಸ್ಥಾಯೀ ಸಂಪೂರಣ ವಲಯವಿರುತ್ತದೆ. ಇದಕ್ಕೂ ಕೆಳಗಡೆಗೆ, ಗಣಿಗಳಲ್ಲಿ ಕಾಣಬಹುದಾದಂತೆ ಬಂಡೆಗಳು ಶುಷ್ಕವಾಗಿರುತ್ತವೆ. ಈ ವಲಯದಲ್ಲಿ ಮೇಲಿನಿಂದ 45 ಮೀ ಆಳದವರೆಗೆ ಹೆಚ್ಚಿನ ಸಂದುಗಳು ಹಾಗೂ ಸೀಳುಗಳು ಇರಬಹುದಾದ್ದರಿಂದ ಇದು ಹೆಚ್ಚಿನ ನೀರು ಶೇಖರಣೆ ಮತ್ತು ಹರಿವಿಗೆ ತಕ್ಕುದಾಗಿರುತ್ತದೆ. ಇದರ ಸರಂಧ್ರತೆ ಮತ್ತು ಆಳಗಳನ್ನು ಪರಿಗಣಿಸಿ, ಸುಮಾರು 1.5 ಮೀ ದಪ್ಪ ಪದರದ ನೀರು ಸಂಗ್ರಹವಾಗಿರುತ್ತದೆಂದು ಅಂದಾಜು ಮಾಡಲಾಗಿದೆ. ಈ ಆಳದಲ್ಲಿನ ನೀರು ಪಡೆಯಬೇಕಾದರೆ ಕೊಳವೆಬಾವಿಗಳಿಂದ ಮಾತ್ರ ಸಾಧ್ಯವಾಗುತ್ತದೆ.

ಕರ್ನಾಟಕದಲ್ಲಿ ಅಂತರ್ಜಲ ಕಾಣಿಸಿಕೊಳ್ಳುವುದು ಸರಂಧ್ರಿತ ಮೇಲಿನ ಮಣ್ಣು, ಭೂಸವೆತದ ಕೆಳಹೊದಿಕೆ, ಸಂದು ಮತ್ತು ಸೀಳುಗಳುಳ್ಳ ತಳದ ಶಿಲೆ ಇವುಗಳಲ್ಲಿನ ಭೂ ಒಳಗಿನ ಜಲಮಟ್ಟದ ರೂಪದಲ್ಲಿ. ವರ್ಷವರ್ಷಕ್ಕೂ ಇದಕ್ಕೆ ಪುನಃ ಪೂರಣ ಎಷ್ಟು ದೊರೆಯುತ್ತದೆ ಎಂಬ ಅಂದಾಜು ಬೇಕಾಗುತ್ತದೆ. ಮುಖ್ಯವಾಗಿ ಮಳೆಯ ನೀರು ಕೆಳಕ್ಕೆ ಇಳಿಯುವುದರಿಂದ ಮತ್ತು ಇನ್ನು ಸ್ವಲ್ಪ ಭಾಗ ಹೊಳೆಗಳು, ಕೆರೆಗಳು, ಜಲಾಶಯಗಳು ಮತ್ತು ನೀರಾವರಿಗೆ ಉಪಯೋಗಿಸಿದ ನೀರು ಇವುಗಳ ಇಂಗುವಿಕೆಯಿಂದ ಇದು ದೊರೆಯುತ್ತದೆ. ಬೇಸಗೆ ಮತ್ತು ಮಳೆಗಾಲಗಳಲ್ಲಿನ ಜಲಮಟ್ಟದ ವ್ಯತ್ಯಾಸದಿಂದ ಮತ್ತು ಭೂಸವೆತದಿಂದ ಮೇಲು ಹೊದಿಕೆ ಮತ್ತು ಸಂದುಗಳುಳ್ಳ ತಳದ ಬಂಡೆಗಳು ಒಳ್ಳೆಯ ಪುನಃ ಪೂರಣ ಸಾಮರ್ಥ್ಯ ಹೊಂದಿವೆಯೇ ಎಂಬುದು ಗೊತ್ತಾಗುತ್ತದೆ. ರಾಜ್ಯದಾದ್ಯಂತ ಇರುವ ಅನೇಕ ಬಾವಿಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಿದಾಗ ಮಲೆನಾಡು ಪ್ರದೇಶಗಳಲ್ಲಿ ಈ ವ್ಯತ್ಯಾಸ 4 ರಿಂದ 9 ಮೀವರೆಗೂ ಮೈದಾನ ಪ್ರದೇಶದಲ್ಲಿ 1.5ರಿಂದ 4 ಮೀ ವರೆಗೂ

ಇರುವುದೆಂದು ಗೊತ್ತಾಗಿದೆ. ತುಂಬ ತಗ್ಗಿನ ಪ್ರದೇಶಗಳಲ್ಲಿ ಇದು 1ರಿಂದ 1.5 ಮೀ ಮಾತ್ರ ಇರುತ್ತದೆ. ಈ ಬಾವಿಗಳಿಂದ ಪ್ರತಿದಿನ 45 ರಿಂದ 70 ಘನ ಮೀಟರ್ ನೀರು ದೊರೆಯುತ್ತದೆ. ಸರಾಸರಿಯಾಗಿ ಒಂದೊಂದು ಬಾವಿಯೂ 1ರಿಂದ 1.5 ಹೆಕ್ಟೇರ್ ಜಮೀನಿಗೆ ನೀರಾವರಿ ಯೊದಗಿಸುತ್ತದೆ. ನೀರು ಧರಿಸುವ ವಿವಿಧ ರೀತಿಯ ರಚನೆಗಳಲ್ಲಿ ನೀರು ಒದಗಿಸುವ ಲಕ್ಷಣಗಳನ್ನು ಅಂದಾಜುಮಾಡಲು ಬೇರೆ ಬೇರೆ ರೀತಿಯ ಭೂಗರ್ಭ ರಚನಾ ಲಕ್ಷಣಗಳುಳ್ಳ 1,500ಕ್ಕೂ ಹೆಚ್ಚಿನ ಪಂಪ್ ಪರೀಕ್ಷಣಗಳನ್ನು ನಡೆಸಲಾಗಿದೆ. ಸರಾಸರಿಯಾಗಿ ಬಾವಿಗಳಲ್ಲಿನ ಪುನಃ ಕೂಡಿಕೊಳ್ಳುವಿಕೆಯ ವೇಗ ಪ್ರತಿ ನಿಮಿಷಕ್ಕೆ 25ರಿಂದ 75 ಲೀಟರ್‌ವರೆಗೆ ಇರುತ್ತದೆ.

ಮಳೆ ಸ್ವಲ್ಪವೇ ಪ್ರಮಾಣದಲ್ಲಿ ಅಲ್ಪಕಾಲ ಮಾತ್ರ, ಎಲ್ಲೋ ಒಂದೊಂದು ಸಾರಿ ಆಗುತ್ತಿದ್ದರೆ ಮೇಲು ನೆಲವನ್ನು ಮಾತ್ರ ಅದು ಒದ್ದೆಯಾಗಿಸಿ ಬಾಷ್ಪೀಕರಣ ಮತ್ತು (ಸಸ್ಯಗಳ) ಬಾಷ್ಪೋತ್ಸರ್ಜನಗಳಿಂದಾಗಿ ವಾಯು ಮಂಡಲಕ್ಕೇ ಮತ್ತೆ ಅದು ಹಿಂತಿರುಗುತ್ತದೆ. ಮಲೆನಾಡಿನ ಇಳಿಜಾರು ಪ್ರದೇಶಗಳಲ್ಲಿ ಮಳೆಯನೀರಿನ ಹೆಚ್ಚು ಭಾಗ ಹರಿದುಹೋಗುವುದರಿಂದ ಇಂಗುವಿಕೆಯ ಪ್ರಮಾಣ ಕಡಿಮೆಯಾಗಿರುತ್ತದೆ. ಕರಿಮಣ್ಣಿನ ಹೊದಿಕೆಯಿ ರುವ ಉತ್ತರದ ಮೈದಾನ ಪ್ರದೇಶಗಳಲ್ಲಿ, ಮಳೆಯ ನೀರಿನಿಂದ ಒದ್ದೆಯಾದ ಎರೆಮಣ್ಣು ಹಿಗ್ಗಿ ನೀರು ಕೆಳಕ್ಕೆ ಇಂಗುವುದನ್ನು ಸಾಕಷ್ಟು ತಡೆದುಬಿಡುತ್ತದೆ. ಈ ಎಲ್ಲ ಅಂಶಗಳ ಬಗ್ಗೆ ಖಚಿತವಾದ ವೈಜ್ಞಾನಿಕ ಅಂಕಿ ಅಂಶಗಳು ಲಭ್ಯವಿಲ್ಲದ ಕಾರಣ ಅಂತರ್ಜಲ ಸಂಗ್ರಹಕ್ಕೆ ಆಗುವ ಪುನಃ ಪೂರಣ ಪ್ರಮಾಣ ಕಂಡುಹಿಡಿಯುವುದು ಕಷ್ಟವಾದರೂ ಈ ದಿಶೆಯಲ್ಲಿ ವಿಶೇಷ ಪ್ರಯತ್ನವೂ ನಡೆದಿದೆ.

ಮಳೆಯಿಂದ ದೊರೆಯುವ ನೀರಿನಲ್ಲಿ ಬಹು ಅಂಶ ಬಾಷ್ಪೀ ಕರಣ ಉತ್ಸರ್ಜನಗಳಿಂದಾಗಿ ನಷ್ಟವಾಗುತ್ತದೆ. ನೇರವಾಗಿ ಇದನ್ನು ಕಂಡುಹಿಡಿಯಲಾಗದಿದ್ದರೂ ಹವಾಮಾನ ಸ್ಥಿತಿಯ ಎಂದರೆ, ಬಿಸಿಲಿನ ಅವಧಿ, ತೀಕ್ಷ್ಣತೆ, ವಾಯುವಿನಲ್ಲಿನ ತೇವ, ಬೀಸುವ ವೇಗ ಮುಂತಾದ ವಿವರಗಳ ಆಧಾರದ ಮೇಲೆ ಗರಿಷ್ಠ ಸಾಧ್ಯ ಬಾಷ್ಪೀಕರಣ ಉತ್ಸರ್ಜನದ ಪ್ರಮಾಣವನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೂ ಲೆಕ್ಕಾಚಾರ ಮಾಡಿ ಒದಗಿಸಲಾಗಿದೆ. ಸಾಕಷ್ಟು ನೀರು ಸದಾ ದೊರೆಯುವಂತಿದ್ದರೆ, ಸಸ್ಯಾವೃತ ವಾದ ಒಂದು ಭೂಕ್ಷೇತ್ರದಿಂದ ಬಾಷ್ಪೀಕರಣದಿಂದಾಗಿ ನಷ್ಟವಾಗುವ ನೀರಿನ ಗರಿಷ್ಠ ಪ್ರಮಾಣವನ್ನು ಸೂಚಿಸುತ್ತದೆ. ಈ ಬೆಲೆಗಳ ಆಧಾರದ ಮೇಲೆ ಮಳೆಯಿಂದ ದೊರೆಯುವ ನೀರಿನಲ್ಲಿ ನಷ್ಟವನ್ನು ಮೊದಲು ಕಳೆಯಲಾಗುತ್ತದೆ. ಎಷ್ಟೋ ತಿಂಗಳುಗಳಲ್ಲಿ ಬರುವ ಅಲ್ಪ ಪ್ರಮಾಣದ ಮಳೆಯೆಲ್ಲ ಈ ನಷ್ಟವನ್ನು ತುಂಬುವುದಕ್ಕೆ ತೀರಿಹೋಗುತ್ತದೆ. ಸತತವಾಗಿ ಹಾಗೂ ಭಾರಿಯ ಮಳೆ ಬೀಳುವ ತಿಂಗಳುಗಳಲ್ಲಿ ಮಾತ್ರ ನಿಜವಾದ ಹೆಚ್ಚುವರಿಯಿದ್ದು, ಅಂತರ್ಜಲ ಸಂಗ್ರಹಕ್ಕೆ ಪುನಃಪೂರಣ ದೊರೆಯುತ್ತದೆ. ವಾರ್ಷಿಕ ಸರಾಸರಿ ಮಳೆ 700 ಮಿಮೀಗೂ ಕಡಿಮೆ ಇರುವ ಜಿಲ್ಲೆಗಳಲ್ಲಿ ಅಂತರ್ಜಲ ಸಂಪತ್ತನ್ನು ಪುನಃ ಪೂರೈಸಲು ಇರುವ ಹೆಚ್ಚುವರಿ ನೀರು ಬಹಳ ಕಡಿಮೆಯೆಂಬುದನ್ನು ಗಮನಿಸಬಹುದು. ಹೆಚ್ಚು ಅಭಾವವನ್ನೆದುರಿ ಸುವ ಜಿಲ್ಲೆಗಳು ಇವೇ ಆಗಿದ್ದು, ನೀರಾವರಿಗೆ ಅಂತರ್ಜಲದ ಅವಲಂಬನೆ ಹೆಚ್ಚು ಹೆಚ್ಚಿದ್ದು ನೀರು ದೊರೆಯಬೇಕಾದ್ದೂ ಈ ಪ್ರದೇಶಗಳಲ್ಲೇ, ಹವಾಮಾನ ಆಧಾರಿತ ಗಣತಿಯಲ್ಲಿ ಹೀಗೆನ್ನಿಸಿದರೂ ಬೇರೆ ಕೆಲವು ಅಂಶಗಳು ಇಲ್ಲಿ ಸಹಾಯಕ್ಕೆ ಒದಗುತ್ತವೆ. ಮೇಲಿನ ಈ ಕಡಿಮೆ ಮಳೆ ಪ್ರದೇಶಗಳು ಹೆಚ್ಚಾಗಿ ಸಮತಟ್ಟಾದ ಮೈದಾನಗಳಾಗಿದ್ದು ನೆಲದ ನೀರಿನ ಹರಿಯುವಿಕೆ ಕನಿಷ್ಠ ಪ್ರಮಾಣದ್ದಾಗಿರುತ್ತದೆ. ಮಣ್ಣಿನ ಪದರವೂ ತೆಳುವಾಗಿದ್ದು ಬಂಡೆಗಳೂ ಭೂ ವ್ಯಾಪಾರ ಕ್ರಿಯೆಯಿಂದ ಆರ್ದ್ರಿತವಾಗಿ, ಸಂದುಗಳು ಎರೆಯಿಂದ ಮುಚ್ಚಲ್ಪಡದೆ ತೆರವಾಗಿಯೇ ಇದ್ದು ಮೇಲ್ಮಟ್ಟ ದಲ್ಲೇ ಇರುವುದರಿಂದ ಆದ ಅಲ್ಪಸ್ವಲ್ಪ ಮಳೆಯೆಲ್ಲ ಆದಷ್ಟು ಕೂಡಲೇ ಭೂ ಅಂತರ್ಗತವಾಗುತ್ತದೆ. ಸಸ್ಯಾವರಣವೂ ಕಡಿಮೆಯಾದ್ದರಿಂದ ಬಾಷ್ಪೀಕರಣ ನಷ್ಟವೂ ಅಷ್ಟಾಗಿಲ್ಲದೆ, ಅಂತರ್ಜಲ ಸಂಗ್ರಹಣಕ್ಕೆ ದೊರೆಯುವ ಕೊಡುಗೆ ಹೆಚ್ಚಿನ ಪ್ರಮಾಣದಲ್ಲೇ ಇರುವುದೆಂದು ನಿರೀಕ್ಷಿಸಲಾಗುತ್ತದೆ.

ಪರಿವೀಕ್ಷಣವಾಗಿ ಆರಿಸಿರುವ ಬಾವಿಗಳಲ್ಲಿ, ಮಳೆಯ ಅನಂತರ ಆಗುವ ಜಲಮಟ್ಟದ ವಾಸ್ತವ ವ್ಯತ್ಯಾಸವನ್ನು ಪರಿಗಣಿಸಿಯೂ ವಾರ್ಷಿಕ ಪುನಃಪೂರೈಕೆಯನ್ನು ಅಂದಾಜು ಮಾಡಬಹುದು. ಇಲ್ಲಿಯೂ ಶಿಲೆಯ ವರ್ಗೀಕರಣ, ರಚನೆ ಮತ್ತು ಭೂ ವ್ಯಾಪಾರ ಕ್ರಿಯೆಗೆ ಒಳಗಾಗಿರುವ ಪರಿಮಾಣಗಳಿಂದ ವ್ಯತ್ಯಾಸಗಳುಂಟಾಗಬಹುದು.

ಈ ಮುಂದಿನ ಪಟ್ಟಿಯಲ್ಲಿ ಜಿಲ್ಲಾವಾರು ವಾಡಿಕೆ ಮಳೆ (1901–70) ಮತ್ತು ವಾಸ್ತವಿಕ ಮಳೆಯ (2000) ಪ್ರಮಾಣವನ್ನು ತೋರಿಸಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ವಾಡಿಕೆ 1901–70 | ವಾಸ್ತವಿಕ 2000 |
|---|---|---|---|
| I | **ಬೆಂಗಳೂರು ವಿಭಾಗ** | 67 | 68 |
| 1 | ಬೆಂಗಳೂರು | 867 | 1,060 |
| 2 | ಬೆಂಗಳೂರು (ಗ್ರಾ) | 817 | 1,143 |
| 3 | ಚಿತ್ರದುರ್ಗ | 573 | 753 |
| 4 | ದಾವಣಗೆರೆ | 649 | 738 |
| 5 | ಕೋಲಾರ | 744 | 852 |
| 6 | ಶಿವಮೊಗ್ಗ | 1,664 | 1,957 |
| 7 | ತುಮಕೂರು | 688 | 923 |
| II | **ಬೆಳಗಾಂವಿ ವಿಭಾಗ** | | |
| 8 | ಬೆಳಗಾಂವಿ | 808 | 762 |
| 9 | ಬಿಜಾಪುರ | 578 | 607 |
| 10 | ಬಾಗಲಕೋಟೆ | 562 | 593 |
| 11 | ಧಾರವಾಡ | 772 | 726 |
| 12 | ಗದಗ | 612 | 698 |
| 13 | ಹಾವೇರಿ | 753 | 848 |
| 14 | ಉತ್ತರ ಕನ್ನಡ | 2,835 | 3,085 |
| III | **ಗುಲ್ಬರ್ಗ ವಿಭಾಗ** | | |
| 15 | ಬಳ್ಳಾರಿ | 636 | 622 |
| 16 | ಬೀದರ್ | 847 | 959 |
| 17 | ಗುಲ್ಬರ್ಗ | 777 | 805 |
| 18 | ರಾಯಚೂರು | 631 | 640 |
| 19 | ಕೊಪ್ಪಳ | 572 | 701 |
| VI | **ಮೈಸೂರುವಿಭಾಗ** | | |
| 20 | ಚಿಕ್ಕಮಗಳೂರು | 1,925 | 1,831 |
| 21 | ದಕ್ಷಿಣ ಕನ್ನಡ | 3,975 | 3,303 |

| | | | |
|---|---|---|---|
| 22 | ಉಡುಪಿ | 4,119 | 3,805 |
| 23 | ಹಾಸನ | 1,031 | 1,100 |
| 24 | ಕೊಡಗು | 2,718 | 2,641 |
| 25 | ಮಂಡ್ಯ | 700 | 967 |
| 26 | ಮೈಸೂರು | 782 | 960 |
| 27 | ಚಾಮರಾಜನಗರ | 751 | 1,016 |
| | **ರಾಜ್ಯ** | **1,139** | **1,216** |

ಇಡೀ ರಾಜ್ಯವನ್ನು ಪರಿಗಣಿಸಿದಾಗ ಮಳೆಯ ನೀರಿನಿಂದ ಅಂತರ್ಜಲ ಸಂಗ್ರಹಕ್ಕೆ ದೊರೆಯುವ ಕೊಡುಗೆ ಸುಮಾರು ಸೇ. 3 ರಿಂದ 10 ರವರೆಗೆ ಇದೆ. ಅಂದರೆ ವಾರ್ಷಿಕವಾಗಿ ಒಟ್ಟು 11,173 ದಶಲಕ್ಷ ಘನ ಮೀ. (ಕೆ.ವಿ.ಎಸ್‌ಯು)

**ನಯಸೇನ:** ಸು. 1112. ಜೈನಕವಿ. ಧರ್ಮಾಮೃತ ಎಂಬ ಕಾವ್ಯದ ಕರ್ತೃ. ಈಗಿನ ಗದಗ ಜಿಲ್ಲೆಯ ಮುಳಗುಂದ ಇವನ ಜನ್ಮಸ್ಥಳ. ಈತ ಅಲ್ಲಿ ಜೈನ ಸಂನ್ಯಾಸಿಯಾಗಿದ್ದು ರಾಜಪೂಜಿತನೂ ಜನಾನುರಾಗಿಯೂ ಆಗಿದ್ದಂತೆ ಕಂಡುಬರುತ್ತದೆ. ನರೇಂದ್ರಸೇನಮುನಿಪ ಇವನ ಗುರು. ಕವಿಗೆ ಸುಕವಿನಿಕರ ಪಿಕಮಾಕಂದ, ಸುಕವಿಜನಮನಃ ಪದ್ಮಿನೀರಾಜಹಂಸ, ನೂತನಕವಿತಾ ವಿಲಾಸ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ. ಈತ ತನ್ನನ್ನು ನಯಸೇನ, ನಯಸೇನದೇವ, ನಯಸೇನ ಮುನೀಂದ್ರ ಮೊದಲಾಗಿ ಕರೆದುಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಅಸಗ, ಪೊನ್ನ, ಪಂಪ, ಗಜಾಂಕುಶ, ಗುಣವರ್ಮ, ರನ್ನ ಮೊದಲಾದವರನ್ನು ಸ್ತುತಿಸಿದ್ದಾನೆ. ತನ್ನನ್ನು ಮಾನಿತಶೀಲನಿಧಾನನನೂನಗುಣಂ ಸಕಳಭವ್ಯಜನಬುಧಜನಚಿತ್ತಾನಂದಕರಂ ಎಂದು ಹೊಗಳಿಕೊಂಡಿದ್ದಾನೆ. ಈತ ಕನ್ನಡ ಕವಿಗಳ ಭಾಷಾ ಬಳಕೆಯ ಬಗ್ಗೆ ಆಡಿರುವ ಮಾತುಗಳು ಗಮನಾರ್ಹವಾದವು. ಅದುವರೆವಿಗೂ ರಾಜಾಶ್ರಯದಲ್ಲಿಯೇ ಬೆಳೆದು ಯಾರೋ ನಾಲ್ಕು ಜನರಿಗಾಗಿ ಸಂಸ್ಕೃತ ಭೂಯಿಷ್ಠವಾದ ಭಾಷೆಯಲ್ಲಿ ಕಾವ್ಯರಚನೆ ಮಾಡುತ್ತಿದ್ದ ಕವಿಗಳನ್ನು ಕುರಿತು ಈತ ಮೊದಲ ಬಾರಿಗೆ ಪ್ರತಿಭಟಿಸಿದ. ಹೊಸಗನ್ನಡದಲ್ಲಿ ಕಾವ್ಯ ಬರೆಯುತ್ತೇವೆಂದು ಹೇಳಿಕೊಂಡು ಹೊರಟು ಕನ್ನಡದೊಂದಿಗೆ ಸರಿಬೆಸುಗೆ ಹೊಂದದ ಸಂಸ್ಕೃತ ಬಳಸುವವರೂ ಕವಿಗಳೇ ಎಂದು ಅಂಥವರನ್ನು ಕೆಚ್ಚೆದೆಯಿಂದ ಖಂಡಿಸಿದ. ಸಕ್ಕದಮಂ ಪೇೞ್ವೊಡೆ ನೆಱ ಸಕ್ಕದಮಂ ಪೇೞ್ಗೆ ಶುದ್ಧ ಕನ್ನಡದೊಳ್ ತಂದಿಕ್ಕುವುದೆ ಸಕ್ಕದಂಗಳ ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ಎಂದು ಕನ್ನಡ ಸಂಸ್ಕೃತಗಳ ಸರಿದೂಗದ ಬೆರಕೆಯನ್ನು ವಿರೋಧಿಸಿದ. ಆಡುಭಾಷೆಯೇ ಜೀವಂತ ಭಾಷೆ, ಆ ಭಾಷೆಯಲ್ಲಿ ಜನರಿಗೆ ಮುಟ್ಟುವಂತೆ ಕಾವ್ಯವನ್ನು ರಚಿಸಬೇಕೆಂದು ಕವಿಗಳಿಗೆ ಮಾರ್ಗದರ್ಶನ ನೀಡಿದ; ಆ ದಾರಿಯಲ್ಲಿ ನಡೆದ.

ಧರ್ಮಾಮೃತ 14 ಆಶ್ವಾಸಗಳ ಚಂಪೂ ಗ್ರಂಥ. ಧರ್ಮವನ್ನು ತಿಳಿಸುವುದೇ ಈ ಗ್ರಂಥದ ಉದ್ದೇಶವಾಗಿದ್ದು ಕವಿ ಇದನ್ನು ಸುಂದರವಾದ ಕಥೆಗಳ ಮೂಲಕ ಸಾಧಿಸಿದ್ದಾನೆ. ಜಿನದರ್ಶನ ಮಾಹಾತ್ಮ್ಯ, ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢ ದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ, ಧರ್ಮಪ್ರಭಾವನೆ, ಅಹಿಂಸೆ, ಅಸ್ತೇಯ, ಸತ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಈ ವಿಷಯಗಳನ್ನು ಹದಿನಾಲ್ಕು ಆಶ್ವಾಸಗಳಲ್ಲಿ ಪ್ರತಿಪಾದಿಸಲಾಗಿದೆ. ಶ್ರೇಣಿಕ ಮಹಾರಾಜನಿಗೆ ಈ ವಿಷಯಗಳನ್ನು ಗೌತಮ ಗಣಧರರು ಬೋಧಿಸಿದ ರೀತಿಯಲ್ಲಿ ಕಥೆಗಳ ನಿರೂಪಣೆ ಇದೆ. ಕವಿ ತನ್ನ ಗ್ರಂಥವನ್ನು ಕಾವ್ಯರತ್ನವೆಂದು ಕರೆದುಕೊಂಡಿದ್ದಾನೆ.

ನಯಸೇನನ ಲೋಕಾನುಭವ ವ್ಯಾಪಕವಾದುದು. ಕಥೆ ಹೇಳುವಾಗ ರಾಮಾಯಣ, ಮಹಾಭಾರತ ಮತ್ತು ಭಾಗವತಗಳಲ್ಲಿ ಬರುವ ಅನೇಕ ಕಥೆಗಳನ್ನೂ ರೂಢಿಯಲ್ಲಿರುವ ಚಂದ್ರಹಾಸನ ಕಥೆಯಂಥ ಕಥೆಗಳನ್ನೂ ವಿಪುಲವಾಗಿ ಬಳಸಿಕೊಂಡಿದ್ದಾನೆ. ಇದೊಂದು ಕಥೆಗಳ ಉಗ್ರಾಣ. ಮಾಲೆಮಾಲೆಯಾಗಿ ಹೋಲಿಕೆಗಳನ್ನು ಕೊಡುವುದು ಇವನ ವೈಶಿಷ್ಟ್ಯ. ಇದರಿಂದ ಅಲ್ಲಲ್ಲಿ ಕಥೆಯ ಓಟಕ್ಕೆ ಸ್ವಲ್ಪ ಭಂಗ ಬಂದಂತಾಗಿದೆ. ಗಾದೆಮಾತುಗಳನ್ನು ಕವಿ ಧಾರಾಳವಾಗಿ ಬಳಸಿಕೊಂಡಿದ್ದಾನೆ. ಕಥನ ವಿಧಾನ, ತಂತ್ರ, ಭಾಷೆ, ಗಾದೆಮಾತುಗಳ ಬಳಕೆ ಇವುಗಳ ದೃಷ್ಟಿಯಿಂದ ಈ ಕೃತಿ ಜಾನಪದ ಸತ್ತ್ವದಿಂದ ಕೂಡಿದೆ. ಈ ಕೃತಿಯಿಂದ ಆ ಕಾಲದ ಸಾಮಾಜಿಕ ಜೀವನದ ಅನೇಕ ಆಚಾರವಿಚಾರಗಳ ಕ್ವಚಿದ್ದರ್ಶನ ನಮಗೆ ಖಂಡಿತ ದೊರೆಯುತ್ತದೆ. ಈ ದೃಷ್ಟಿಯಿಂದ ಧರ್ಮಾಮೃತ ಸಾಹಿತ್ಯದ ವಿದ್ಯಾರ್ಥಿಗಳಿಗಲ್ಲದೆ ಸಮಾಜವಿಜ್ಞಾನದ ಅಭ್ಯಾಸಿಗಳಿಗೂ ಗಮನಾರ್ಹವಾದ ಕೃತಿಯಾಗಿದೆ. (ಎನ್.ಬಿ.ಎಲ್.;ಜಿ.ಎಸ್.ಎಸ್‌ಐ.)

**ನರಗುಂದ:** ಗದಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪಶ್ಚಿಮ ಮತ್ತು ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯೂ ಈಶಾನ್ಯದಲ್ಲಿ ಬಾಗಲಕೋಟೆ ಜಿಲ್ಲೆಯೂ ದಕ್ಷಿಣದಲ್ಲಿ ಧಾರವಾಡ ಜಿಲ್ಲೆಯೂ ಮತ್ತು ಪೂರ್ವದಲ್ಲಿ ರೋಣ ತಾಲ್ಲೂಕೂ ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 436 ಚ.ಕಿಮೀ. ತಾಲ್ಲೂಕಿನಲ್ಲಿ 35 ಗ್ರಾಮಗಳು ಮತ್ತು ಒಂದು ಪಟ್ಟಣ ಇವೆ. ಕೊಣ್ಣೂರು ಮತ್ತು ನರಗುಂದ ಹೋಬಳಿಗಳು. ಜನಸಂಖ್ಯೆ 92,679.

ಈ ತಾಲ್ಲೂಕಿನ ನರಗುಂದಬೆಟ್ಟ ಪ್ರದೇಶ ಮತ್ತು ಚಿಕ್ಕನರಗುಂದಬೆಟ್ಟ ಪ್ರದೇಶ ಬಿಟ್ಟು ಉಳಿದ ಭಾಗವೆಲ್ಲ ಕಪ್ಪುಮಣ್ಣಿನ, ಬೆಣಚುಗಲ್ಲು, ಸಣ್ಣ ನರುಜುಗಲ್ಲು ಮತ್ತು ಮರಳುಕಲ್ಲಿರುವ ಭೂಮಿ. ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಬಿಜಾಪುರ ಧಾರವಾಡ ಜಿಲ್ಲೆಗಳ ಗಡಿಯಾಗಿ ಮಲಪ್ರಭಾ ನದಿ ಹರಿಯುತ್ತದೆ. ಇದನ್ನು ಬಿಟ್ಟರೆ ತಾಲ್ಲೂಕಿನಲ್ಲಿ ಕೆಲವು ಸಣ್ಣ ಹಳ್ಳಗಳು ಮಾತ್ರ ಇವೆ. ತಾಲ್ಲೂಕಿನಲ್ಲಿ ಸರಾಸರಿ ವಾರ್ಷಿಕ ಮಳೆ ಸು. 560 ಮಿಮೀ. ಈ ತಾಲ್ಲೂಕಿನಲ್ಲಿ ಜೋಳ, ಹತ್ತಿ, ಗೋಧಿ, ಎಣ್ಣೆಬೀಜಗಳು ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಮಲಪ್ರಭಾ ನದಿಯ ದಕ್ಷಿಣ ದಂಡೆಯ ಮೇಲಿನ ಮೆಕ್ಕಲು ಮಣ್ಣಿನ ಪ್ರದೇಶದಲ್ಲಿ ತರಕಾರಿ ಬೆಳೆಗಳನ್ನೂ ಇತರ ತೋಟದ ಬೆಳೆಗಳನ್ನೂ ಬೆಳೆಯುತ್ತಾರೆ. ನರಗುಂದ ತಾಲ್ಲೂಕು ಸೇಂಗಾ ಮತ್ತು ಹತ್ತಿಯ ಮಾರುಕಟ್ಟೆಗೆ ಪ್ರಸಿದ್ಧಸ್ಥಳ.

ನರಗುಂದ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಧಾರವಾಡ ನಗರಕ್ಕೆ ಈಶಾನ್ಯದಲ್ಲಿ ನವಲಗುಂದದ ಉತ್ತರಕ್ಕೆ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 32,561. ಇದೊಂದು ವ್ಯಾಪಾರ ಕೇಂದ್ರ. ಪುರಸಭಾಡಳಿತವಿದೆ. ಪಟ್ಟಣದಲ್ಲಿ ಹತ್ತಿ ಎಕ್ಕುವ ಮತ್ತು ಎಣ್ಣೆ ತಯಾರಿಕೆಯ ಕಾರ್ಖಾನೆಗಳಿವೆ. ಶಂಕರಲಿಂಗ, ಮಹಾಬಲೇಶ್ವರ, ಹನುಮಂತ ದೇವರ ದೇವಾಲಯಗಳಿವೆ. ಇಲ್ಲಿಯ ಮುಖ್ಯ ಆಕರ್ಷಣೆ ನರಗುಂದದ ಬೆಟ್ಟ ಮತ್ತು ಕೋಟೆ. ಇಲ್ಲಿಯ ಕೋಟೆಯನ್ನು ಕರ್ನಾಟಕದ ಬಲವಾದ ಕೋಟೆಗಳಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಈಗ ಕೋಟೆಯ ಅವಶೇಷಗಳು ಮಾತ್ರ ಇವೆ. ನರಗುಂದದಲ್ಲಿ 1720ರಲ್ಲಿ ಕಟ್ಟಿದ ವೆಂಕಟೇಶ ದೇವಾಲಯವಿದೆ. ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ರಥೋತ್ಸವ ಜರುಗುತ್ತದೆ.

ನರಗುಂದದಲ್ಲಿ ಚಾಳುಕ್ಯ ಮನೆತನದ ಮೂರನೆಯ ಸೋಮೇಶ್ವರ, ಎರಡನೆಯ ಜಗದೇಕಮಲ್ಲ ಮತ್ತು ಮೂರನೆಯ ತೈಲಪ ಇವರಿಗೆ

ಸೇರಿದ ಮೂರು ಶಾಸನಗಳಿವೆ. ಆ ಕಾಲದಲ್ಲಿ ನರಗುಂದ ಒಂದು ಅಗ್ರಹಾರವಾಗಿದ್ದು 220 ಮಹಾಜನರು ಇದರ ಆಡಳಿತ ನೋಡಿ ಕೊಳ್ಳುತ್ತಿದ್ದರೆಂದು ತಿಳಿದುಬರುವುದು.

ಶಿವಾಜಿ ಇಲ್ಲಿಯ ಕೋಟೆಯನ್ನು 1674ರಲ್ಲಿ ಕಟ್ಟಿಸಿದ. 1778ರಲ್ಲಿ ನರಗುಂದ ಹೈದರನಿಗೆ ಕಪ್ಪ ಕೊಡುತ್ತಿತ್ತು. ಟಿಪ್ಪು ನರಗುಂದ ಕೋಟೆಯನ್ನು 1785ರಲ್ಲಿ ವಶಮಾಡಿಕೊಂಡ. 1818ರಲ್ಲಿ ಮರಾಠ ಪೇಶವೆಗಳು ದಾದಾಜಿರಾವ್ ಅಪ್ಪ ಎಂಬಾತನಿಗೆ ನರಗುಂದವನ್ನು ವಹಿಸಿಕೊಟ್ಟರು. ಈ ವಂಶದ ನರಗುಂದದ ಭಾಸ್ಕರರಾವ್ ಅಪ್ಪಾಸಾಹೇಬ್ ಅಥವಾ ಬಾಬಾಸಾಹೇಬ (ನೋಡಿ) ಹೆಚ್ಚು ಜನಪ್ರಿಯನಾಗಿದ್ದ. 1857ರಲ್ಲಿ ಬ್ರಿಟಿಷರು ಈತನಿಗೆ ದತ್ತುಪುತ್ರ ಸ್ವೀಕಾರಕ್ಕೆ ಅಂಗೀಕಾರವನ್ನೀಯದೆ, ನರಗುಂದ ರಾಜ್ಯವನ್ನು ನಿಶ್ಶಸ್ತ್ರೀಕರಣಗೊಳಿಸಿ ಅವಮಾನಿಸಿದರು. ಬಾಬಾಸಾಹೇಬ ಈ ಕ್ರಮವನ್ನು ಎದುರಿಸಿ ಯುದ್ಧ ಸಾರಿದ. ಆದರೆ ಇವನನ್ನು ಹತ್ತಿಕ್ಕಿದ ಇಂಗ್ಲಿಷರು 1858ರ ಜೂನ್ ತಿಂಗಳಲ್ಲಿ ಕೋಟೆಯನ್ನೂ ಹಾಳುಗೆಡವಿದರು. **(ಜಿ.ಎಸ್.ಎಚ್.)**

**ನರಸನಾಯಕ:** ವಿಜಯನಗರದ ಸಾಳುವ ನರಸಿಂಹನ (1491–1505) ದಂಡನಾಯಕ ಮತ್ತು ಮಂತ್ರಿ. ಕೆಲವು ಕಾಲ ಸಾಮ್ರಾಜ್ಯದ ವಸ್ತುತಃ ಪ್ರಭು (1492–1503). ತುಳುವವಂಶದ ಈಶ್ವರನಾಯಕನ ಮಗ. ಈ ತಂದೆ ಮಕ್ಕಳಿಬ್ಬರು ಎರಡನೆಯ ದೇವರಾಯನ (1424–46) ತರುವಾಯ ವಿಜಯನಗರ ಸಾಮ್ರಾಜ್ಯ ದುರ್ಬಲ ಸ್ಥಿತಿಗೆ ಬಂದಾಗ ಸಾಳುವ ಒಂದನೆಯ ನರಸಿಂಹನೊಂದಿಗೆ ಕೂಡಿಕೊಂಡು ಅದರ ಪುನಶ್ಚೇತನಕ್ಕಾಗಿ ಸಾಹಸಪಟ್ಟರು. ಉತ್ತರದಲ್ಲಿ ಬಹಮನೀ ಸುಲ್ತಾನರನ್ನು ಹಿಮ್ಮೆಟ್ಟಿಸಿದ್ದಲ್ಲದೆ ದಕ್ಷಿಣದಲ್ಲಿ ಬಂಡಾಯವೆದ್ದಂಥ ಸಾಮಂತರನ್ನೂ ಅಡಗಿಸಿದರು. ಇದರಿಂದ ಇವರ ಪ್ರತಿಷ್ಠೆ ಮತ್ತು ಪರಾಕ್ರಮಗಳು ಸಾಮ್ರಾಜ್ಯದ ರಾಜಕೀಯ ರಂಗದಲ್ಲಿ ದೃಢವಾಗಿ ಮೇಲೇರಿದವು.

ಸಂಗಮವಂಶದ ದುರ್ಬಲ ರಾಜ ಪ್ರೌಢದೇವರಾಯನನ್ನು ಸಿಂಹಾಸನ ದಿಂದ ಕೆಳಗಿಳಿಸಲು ಸಾಳುವವಂಶದ ಒಂದನೆಯ ನರಸಿಂಹನು ನರಸನಾಯಕನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದ (1485). ನ್ಯೂನಿಜ್ ವಿವರಿಸುವಂತೆ ನರಸನಾಯಕನ ಮುತ್ತಿಗೆಯನ್ನು ತಡೆಯಲು ರಾಜಧಾನಿ ಯಲ್ಲಿ ಒಂದು ಪಿಳ್ಳೆಯೂ ಮುಂದಾಗಲಿಲ್ಲ. ಇದರ ಫಲವಾಗಿ ಸಂಗಮ ವಂಶದ ಆಳ್ವಿಕೆ ಕೊನೆಗೊಂಡು ಸಾಳುವ ವಂಶ ಅಧಿಕಾರಕ್ಕೆ ಬಂದಿತು.

ಒಂದನೆಯ ನರಸಿಂಹ 1491ರಲ್ಲಿ ತೀರಿಕೊಂಡಾಗ ಅವನ ಮಕ್ಕಳು ಇನ್ನೂ ಎಳೆಯವರಾಗಿದ್ದರು. ಆಗ ಅವನು ಸಾಯುವ ಕಾಲದಲ್ಲಿ ರಾಜ್ಯಭಾರದ ಹೊಣೆಯನ್ನು ಸ್ವಾಮಿನಿಷ್ಠೆಯುಳ್ಳವನೂ ದಕ್ಷನೂ ಆಗಿದ್ದ ದಂಡನಾಯಕ ಮತ್ತು ಮಂತ್ರಿ ತುಳುವ ನರಸನಾಯಕನಿಗೆ ಒಪ್ಪಿಸಿದ. ರಾಜಕುಮಾರರು ಪ್ರಾಪ್ತವಯಸ್ಸಿಗೆ ಬರುವವರೆಗೂ ರಾಜ್ಯಭಾರವನ್ನು ನಿರ್ವಹಿಸುವುದು ಇವನ ಜವಾಬ್ದಾರಿಯಾಗಿತ್ತು.

ನರಸನಾಯಕನು ನರಸಿಂಹನ ಹಿರಿಯ ಮಗ ತಿಮ್ಮಭೂಪನಿಗೆ ಪಟ್ಟಕಟ್ಟಿದ. ಆದರೆ ಆಡಳಿತದ ಸಂಪೂರ್ಣ ಅಧಿಕಾರವೆಲ್ಲ ಇವನ ಕೈಯಲ್ಲಿತ್ತು. ಇದನ್ನು ಸಹಿಸದೆ ತಿಮ್ಮರಸನೆಂಬ ಮಂತ್ರಿಯಿಂದ ರಾಜ ಕೊಲೆಗೀಡಾದ. ಆಗ ನರಸನಾಯಕ ಪುನಃ 1491ರಲ್ಲಿ ನರಸಿಂಹನ ಎರಡನೆಯ ಮಗ ಇಮ್ಮಡಿ ನರಸಿಂಹನನ್ನು ಸಿಂಹಾಸನದ ಮೇಲೆ ಕೂರಿಸಿದನಾದರೂ ನರಸನಾಯಕನೇ ರಾಜಬಿರುದುಗಳನ್ನು ಧರಿಸಿಕೊಂಡು ಆಡಳಿತ ಸೂತ್ರವನ್ನು ಹಿಡಿದಿದ್ದ. ಇದರಿಂದ ಕ್ರಮೇಣ ಇವನ ಮತ್ತು ರಾಜನ ನಡುವೆ ಒಡಕು ಪ್ರಾರಂಭವಾಯಿತು. 1492ರಲ್ಲಿ ನರಸನಾಯಕ ಪೆನುಗೊಂಡೆಯಿಂದ ಸೈನ್ಯದೊಡನೆ ಸಾಗಿ ವಿಜಯನಗರವನ್ನು ಮುತ್ತಿ, ಇಮ್ಮಡಿ ನರಸಿಂಹನನ್ನು ಪೆನುಗೊಂಡೆಯಲ್ಲಿ ನಿರ್ಬಂಧದಲ್ಲಿಟ್ಟ.

ನರಸನಾಯಕ ಸಿಂಹಾಸನವನ್ನೇರದಿದ್ದರೂ ಇನ್ನೆಲ್ಲ ದೃಷ್ಟಿಯಿಂದಲೂ ತಾನೇ ಸರ್ವಾಧಿಕಾರಿಯಾಗಿ 1492ರಿಂದ 1503ರ ವರೆಗೆ ವಿಜಯನಗರವನ್ನು ಆಳಿದ. ಇವನು ದೀರ್ಘಕಾಲ ಅಧಿಕಾರದಲ್ಲಿರದಿದ್ದರೂ ಇವನ ಸೇವೆ ಸಾಮ್ರಾಜ್ಯಕ್ಕೆ ತುಂಬಾ ಉಪಯುಕ್ತವಾಯಿತು. ಸಾಮ್ರಾಜ್ಯದ ವಿರುದ್ಧ ಬಂಡೆದ್ದ ಅನೇಕ ಸಾಮಂತರನ್ನು ಅಡಗಿಸಿದ. 1496ರಲ್ಲಿ ದಕ್ಷಿಣದ ಕಡೆ ದಂಡೆತ್ತಿಹೋಗಿ ತಂಜಾವೂರು ಮತ್ತು ತಿರುಚ್ಚಿರಾಪಳ್ಳಿಯಲ್ಲಿದ್ದ ಸಾಮ್ರಾಜ್ಯ ಪ್ರತಿನಿಧಿಗಳ ದಬ್ಬಾಳಿಕೆಯನ್ನು ನಿಯಂತ್ರಿಸಿದ. ಕನ್ಯಾಕುಮಾರಿಯ ವರೆಗಿನ ಸಾಮ್ರಾಜ್ಯದ ಭಾಗವನ್ನು ತಹಬಂದಿಗೆ ತಂದಿದ್ದಲ್ಲದೆ ಸ್ಥಳೀಯ ಚೋಳ ಮತ್ತು ಚೇರ ರಾಜರುಗಳನ್ನು ಹಾಗೂ ಮಧುರೆಯ ಮಾನಭೂಷ ಮೊದಲಾದವರನ್ನು ಸಾಮ್ರಾಜ್ಯದ ಪರಮಾಧಿಕಾರವನ್ನು ಅಂಗೀಕರಿಸುವಂತೆ ಮಾಡಿದ. ಶ್ರೀರಂಗಪಟ್ಟಣವನ್ನು ಗೆದ್ದು ಉಮ್ಮತ್ತೂರು ಪಾಳೆಯಗಾರರನ್ನು ಸದೆಬಡಿದ.

ಉತ್ತರದ ಕಡೆ ಬಹಮನೀ ಸುಲ್ತಾನರನ್ನು ಯಶಸ್ವಿಯಾಗಿ ಎದುರಿಸಿದು ದಲ್ಲದೆ ರಾಯಚೂರು ಮತ್ತು ಮುದ್ಗಲ್ಲುಗಳನ್ನು 1493ರಲ್ಲಿ ಸಾಮ್ರಾಜ್ಯಕ್ಕೆ ದಕ್ಕುವಂತೆ ಮಾಡಿದ. 1499ರಲ್ಲಿ ಒರಿಸ್ಸದ ಗಜಪತಿ ಪ್ರತಾಪರುದ್ರ ಎಸಗಿದ ಆಕ್ರಮಣವನ್ನು ಹಿಮ್ಮೆಟ್ಟಿಸಿದ. ಈ ಹಲವು ಕಾರ್ಯಗಳಿಂದ ವಿಜಯನಗರದ ಸಾಮ್ರಾಜ್ಯದ ದೃಢತೆಯನ್ನು ಕಾಪಾಡುವಲ್ಲಿ ಗಣನೀಯ ಸೇವೆ ಸಲ್ಲಿಸಿದ. ನರಸನಾಯಕ 1503ರಲ್ಲಿ ತೀರಿಕೊಂಡ.

ಆಗ ಅಧಿಕಾರಕ್ಕೆ ಬಂದ ಇವನ ಮಗ ವೀರನರಸಿಂಹ ನಿರ್ಬಂಧದ ಲ್ಲಿದ್ದ ಸಾಳುವ ವಂಶದ ರಾಜನನ್ನು 1505ರಲ್ಲಿ ಕೊಲ್ಲಿಸಿ ತಾನೇ ರಾಜನಾಗಿ ವಿಜಯನಗರದಲ್ಲಿ ತುಳುವವಂಶದ ಪ್ರಭುತ್ವವನ್ನು ಸ್ಥಾಪಿಸಿದ. **(ಡಿ.ಎಸ್.ಜಿ.)**

**ನರಸಪ್ಪ ಪೇಟಕರ:** ಬಾದಾಮಿಯಲ್ಲಿ ನಡೆದ (1841) ಬ್ರಿಟಿಷ್ ವಿರೋಧಿ ಬಂಡಾಯದ ಮುಂದಾಳು. ಶಿವಾಜಿಯ ವಂಶಜರಾದ ಸಾತಾರಾದ ಛತ್ರಪತಿಗಳಲ್ಲಿ ಅಧಿಕಾರಿಯಾಗಿದ್ದ ಬ್ರಾಹ್ಮಣ ಕುಟುಂಬದ ದತ್ತಾತ್ರೇಯ ಪೇಟಕರ ಎಂಬವನ ಮಗ. ಈತನನ್ನು ನರಸಿಂಗರಾವ್, ನಿಂಬಾಜಿ ಪೇಟಕರ ಎಂದೂ ಕರೆಯುತ್ತಿದ್ದರು. ನರಸಪ್ಪ ನಡೆಸಿದ ಬಂಡಾಯದ ವಿಚಾರ ಬ್ರಿಟಿಷ್ ಸರ್ಕಾರದ ಕಾಗದ ಪತ್ರಗಳಿಂದ ತಿಳಿದು ಬರುತ್ತದೆ. ಬಾಲ್ಯದಲ್ಲಿ ಸಿಡುಬಿನಿಂದ ಒಂದು ಕಣ್ಣನ್ನು ಕಳೆದುಕೊಂಡಿದ್ದ ಈತ 1839ರಲ್ಲಿ ಸಾತಾರಾದ ಛತ್ರಪತಿ ಪ್ರತಾಪಸಿಂಹನನ್ನು ಪದಚ್ಯುತ ಗೊಳಿಸಿದ ಬಗ್ಗೆ ತೀವ್ರ ಅಸಮಾಧಾನ ತಳೆದು, ಬ್ರಿಟಿಷರ ವಿರುದ್ಧ ಹೋರಾಟ ನಡೆಸುವ ಸಂಕಲ್ಪ ಮಾಡಿ ಪುಣೆ, ನಾಸಿಕ, ಅಹಮದ್‌ನಗರ ಜಿಲ್ಲೆಗಳಲ್ಲಿ ಸಂಚರಿಸಿದ. ಸುರಪುರದಲ್ಲಿ ಜಮಾದಾರನಾಗಿದ್ದ ಸಲೀಮ್ ಅಥವಾ ಕೊಹೆರನ್ ಎಂಬಾತನ ನೆರವಿನಿಂದ ದೇವದುರ್ಗದಲ್ಲಿ ಸುಮಾರು 1000 ಅರಬ್ಬರ ಸೈನ್ಯವನ್ನು ಕೂಡಿಸಿದ. ಸುರಪುರ ರಾಜವಂಶದ ಪೆದನಾಯಕನೂ ಈತನಿಗೆ ನೆರವಾದ. ಹೈದರಾಬಾದಿನ ಬ್ರಿಟಿಷ್ ರೆಸಿಡೆಂಟ್ ಈ ಬಂಡಾಯವನ್ನು ಹತ್ತಿಕ್ಕುವಂತೆ ಸೂಚನೆ ನೀಡಿದಾಗ, ಹೈದರಾಬಾದಿನ ಸೇನೆಯಲ್ಲಿದ್ದ ಅನೇಕ ಅರಬ್ಬರು, ಬಂಡಾಯಗಾರರನ್ನು ಹತ್ತಿಕ್ಕುವ ಬದಲು, ಅವರ ಜೊತೆ ಸೇರಿಕೊಂಡರು. ಆಗ ನರಸಪ್ಪನ ಅನುಯಾಯಿಗಳ ಸಂಖ್ಯೆ 500 ರಿಂದ 5000ದ ವರೆಗೆ ಇರಬಹುದು ಎಂದು ಬ್ರಿಟಿಷ್ ಅಧಿಕಾರಿಗಳ ಅಂದಾಜು. 1841 ಮೇ 27ರಂದು ಈ ಸೇನೆ ಬಾದಾಮಿಯನ್ನು ಪ್ರವೇಶಿಸಿ ಅಲ್ಲಿಯ ಕೋಟೆ ಕಚೇರಿಗಳನ್ನು ವಶಪಡಿಸಿಕೊಂಡಿತಲ್ಲದೆ, ಸಮೀಪದ ಬನಶಂಕರಿ ದೇವಾಲಯದಲ್ಲಿನ ನಗನಾಣ್ಯಗಳನ್ನು ಕೊಳ್ಳೆಹೊಡೆಯಿತು. ಆದರೆ 1841 ಮೇ 2ರಂದು ಧಾರವಾಡ, ಬೆಳಗಾಂವಿಗಳಿಂದ ಬಂದ ಬ್ರಿಟಿಷ್ ಸೇನೆ ಬಂಡಾಯವನ್ನು ಹತ್ತಿಕ್ಕಿ ಬಾದಾಮಿ ಕೋಟೆಯನ್ನು ವಶಪಡಿಸಿಕೊಂಡಿತು. ನರಸಪ್ಪ ಮತ್ತು ಇತರ ನಾಯಕರು ಸೆರೆಸಿಕ್ಕಿದರು. ಅನೇಕರು ಸಾವಿಗೀಡಾದರು.

ನರಸಪ್ಪನಿಗೆ ವಿಚಾರಣೆಯಲ್ಲಿ ಗಲ್ಲು ಶಿಕ್ಷೆವಿಧಿಸಿದರೂ ಮುಂದೆ ಆತ ಒಕ್ಕಣ್ಣ ಎಂಬ ಕಾರಣಕ್ಕಾಗಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು. 1862ರಲ್ಲಿ ಈತ ಅಹಮದಾಬಾದ್ ಸೆರೆಮನೆಯಲ್ಲಿ ಅಸುನೀಗಿದ. ಬಾದಾಮಿಯ ದಂಗೆಯು ವಿಷಯದಲ್ಲಿ, ವಿದೇಶೀಯರ ವಿರುದ್ಧ ತಾವೆಲ್ಲ ಒಂದುಗೂಡಬೇಕೆಂಬ ಭಾವನೆಯಿಂದ ಉತ್ತೇಜಿತರಾಗಿ, ಆಗ ಕಂಪನಿಯ ಸೇವೆಯಲ್ಲಿದ್ದವರೂ ತಮ್ಮ ಹುದ್ದೆಗಳನ್ನು ತ್ಯಜಿಸಿ ಸ್ವಾತಂತ್ರ್ಯ ಯೋಧರನ್ನು ಸೇರಿಕೊಂಡರು. ಬಾದಾಮಿಯ ಕೆಚ್ಚಿನ ಹೋರಾಟ ಬ್ರಿಟಿಷರ ನೀತಿಯಿಂದ ಭಾರತೀಯರಲ್ಲಿ ಕಾಣಿಸಿದ ಪ್ರತಿಕ್ರಿಯೆಗೆ ಒಂದು ಉದಾಹರಣೆ. ಭದ್ರತೆಗಿಂತ ಸ್ವಾತಂತ್ರ್ಯವು ಹೆಚ್ಚು ಅಮೂಲ್ಯವಾದುದೆಂದು ಭಾರತೀಯರಿಗೆ ತೋರುತ್ತಿತ್ತು ಎಂದು ಆಗ ಮುಂಬಯಿಯ ಗವರ್ನರನೂ ಖ್ಯಾತ ಇತಿಹಾಸಕಾರನೂ ಆದ ಎಲ್‌ಫಿನ್‌ಸ್ಟನ್ ಹೇಳಿದ್ದಾನೆ. (ಎಸ್.ಕೆ.)

**ನರಸಮಂಗಲ:** ಚಾಮರಾಜನಗರ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ಚಾಮರಾಜನಗರದ ಆಗ್ನೇಯಕ್ಕೆ ಸು. 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 541. ಇಲ್ಲಿನ ಪ್ರಾಚೀನ ರಾಮಲಿಂಗೇಶ್ವರ



ರಾಮಲಿಂಗೇಶ್ವರ ದೇವಾಲಯ

ದೇವಾಲಯದಿಂದ ಪ್ರಸಿದ್ಧವಾಗಿದೆ. ಇದು ಗಂಗರ ಶೈಲಿಯ ದೇವಾಲಯ. ಸು. 8ನೆಯ ಶತಮಾನದ್ದು. ಈ ದೇವಾಲಯ ಶೈಲಿಯ ದೃಷ್ಟಿಯಿಂದ ತಲಕಾಡು ಗಂಗರ ಕಾಲದ್ದೆಂದು ಹೇಳಬಹುದು. ದೇವಾಲಯದಲ್ಲಿ ವಿಶಾಲವಾದ ಗರ್ಭಗೃಹ, ಕಿರಿದಾದ ಸುಕನಾಸಿ, ಒಂಬತ್ತು ಅಂಕಣಗಳ ನವರಂಗಗಳು ಇವೆ. ಗರ್ಭಗೃಹದ ಮೇಲಿರುವ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ವಿಮಾನ ಮಹಾಬಲಿಪುರದ ವಿಮಾನವನ್ನು ವಿಶೇಷವಾಗಿ ಹೋಲುತ್ತದೆ. ಅಡಿಪಾಯದ ಪಟ್ಟಿಕೆಗಳು ಗುಂಡಗಿದ್ದು ಮೇಲಿನದರಲ್ಲಿ ಮಕರಶಿರದ ಮೀನು, ನೀರುಕುದುರೆ, ಸಿಂಹ ಮುಂತಾದ ಪ್ರಾಣಿಗಳ ಚಿತ್ರಗಳಿವೆ. ಅಡಿಪಾಯದ ಮೇಲಿನ ಭಿತ್ತಿಯ ಭಾಗದ ಗೂಡುಗಳಲ್ಲಿ ಅಲಂಕೃತ ಯಕ್ಷ ಮತ್ತು ಅಪ್ಸರೆಯರ ವಿಗ್ರಹಗಳಿವೆ. ಈ ದೇವಾಲಯದ ಶಿಲ್ಪಗಳು ಬಹುಸುಂದರ ಕೃತಿಗಳು. ದೇವಾಲಯದಲ್ಲಿರುವ ಅಂಧಕಾಸುರಮರ್ದನ ತಾಂಡವೇಶ್ವರ, ದಕ್ಷಿಣಾಮೂರ್ತಿ, ವಿಷ್ಣು, ಉಗ್ರನರಸಿಂಹ, ಬ್ರಹ್ಮ– ಈ ವಿಗ್ರಹಗಳು ಎದೆ, ಕೃಶವಾದ ಕಟಿಭಾಗ, ನೀಳವಾದ ಕೈಕಾಲುಗಳು ಮುಂತಾದ ಲಕ್ಷಣಗಳಿಂದ ಬಹು ಶ್ರೇಷ್ಠ ಶಿಲ್ಪಗಳಾಗಿವೆ. ರಾಮಾಯಣದ ಕಥೆಗೆ ಸಂಬಂಧಪಟ್ಟ ಹಲವಾರು ಸನ್ನಿವೇಶಗಳನ್ನು ಗೋಡೆಗಳ ಮೇಲೆ ಕೆತ್ತಲಾಗಿದೆ. ನವರಂಗದಲ್ಲಿರುವ ಭುವನೇಶ್ವರಿ ಬಹು ಸುಂದರವಾಗಿದೆ. ಅಂಧಕಾಸುರನ ಮೇಲೆ ನರ್ತಿಸುತ್ತಿರುವ ಅಷ್ಟಭುಜ ಶಿವನ ಸುತ್ತಲೂ ಅಷ್ಟದಿಕ್ಪಾಲಕರನ್ನು ಕೆತ್ತಿರುವ ಈ ಭುವನೇಶ್ವರಿ ಬಹಳ ಗಮನಾರ್ಹವಾದುದು. ನವರಂಗದ ಉತ್ತರದಲ್ಲಿರುವ ಪರಶುರಾಮ ಮತ್ತು ಗಣೇಶ ವಿಗ್ರಹಗಳು ಸುಂದರವಾದುವು.

ಈ ದೇವಾಲಯದ ಆಗ್ನೇಯಕ್ಕೆ ಇರುವ ಸಣ್ಣ ದೇವಾಲಯದಲ್ಲಿ ಸಪ್ತಮಾತೃಕೆಯರ ಸುಂದರ ವಿಗ್ರಹಗಳಿವೆ. ಇವುಗಳ ಜೊತೆಯಲ್ಲಿಯೇ ವೀರಭದ್ರ, ಗಣೇಶ, ದಕ್ಷಬ್ರಹ್ಮ, ಭೈರವ, ಕುಮಾರ, ಮಹಿಷಾಸುರಮರ್ದಿನಿ, ಜನಾರ್ದನ, ವಾರಾಹಿ ವಿಗ್ರಹಗಳಿವೆ. ಇವುಗಳೂ ಗಂಗರ ಕಾಲದವೆಂದು ಶಿಲ್ಪಶೈಲಿಯಿಂದ ಹೇಳಬಹುದು. ದೇವಾಲಯದ ದಕ್ಷಿಣಕ್ಕೆ ಇರುವ ಶಾಸನಗಳಲ್ಲಿ ಹೊಯ್ಸಳ ವೀರಬಲ್ಲಾಳ ದೇವಸ್ಥಾನಕ್ಕೆ ದತ್ತಿಬಿಟ್ಟ ವಿಷಯ ನಿರೂಪಿತವಾಗಿದೆ. ಈ ದೇವಾಲಯದಲ್ಲಿ ತಮಿಳು ಶಾಸನಗಳೂ ದೊರಕಿವೆ.

ನರಸಮಂಗಲ–ಅರಕಲವಾಡಿ ಮಾರ್ಗದಲ್ಲಿ ಅನೇಕ ಬೃಹತ್ ಶಿಲಾ ಸಮಾಧಿಗಳು ಇವೆ. (ಎ.ವಿ.ಎನ್.)

**ನರಸಿಂಗರಾವ್, ಮಾನ್ವಿ:** 1911– 69. ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಇಲಾಖೆಯ ಮುಖ್ಯಸ್ಥರಾಗಿದ್ದ ಕನ್ನಡ ಭಾಷಾಸೇವಕರು. ರಾಯಚೂರು ಜಿಲ್ಲೆಯ ಮಾನ್ವಿಯವರು. 1911 ಏಪ್ರಿಲ್ 2ರಂದು ಜನಿಸಿದರು. ತಂದೆ ಪೇಷಕಾರ್ ರಾಘವೇಂದ್ರರಾವ್ ಮಾನ್ವಿ, ತಾಯಿ ಚಂದ್ರಮ್ಮ. ಆರಂಭದ ವ್ಯಾಸಂಗವನ್ನು ರಾಯಚೂರಿನಲ್ಲಿ

ಮುಗಿಸಿದ ಇವರು ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಓದಿ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಿ.ಎ. (1932) ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು. ಅನಂತರ ನಿಜಾಮ ಸರ್ಕಾರದ ವಿದ್ಯಾರ್ಥಿ ವೇತನವನ್ನು ಪಡೆದು, ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. (1936) ಪದವಿಯನ್ನು ಉಪಕುಲಪತಿಗಳ ಸುವರ್ಣ ಪದಕದೊಂದಿಗೆ ಪಡೆದರು. ಇವರು ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ಇಲಾಖೆಯ ಸಂಶೋಧನ ವಿಭಾಗದಲ್ಲಿ ಕೆಲಸ ಮಾಡಿ, ನಡುಗನ್ನಡ ಎಂಬ ಪ್ರೌಢ ಪ್ರಬಂಧವನ್ನು ಬರೆದರು. ಅನಂತರ ಹೈದರಾಬಾದಿನಲ್ಲಿ ನಿಜಾಮ ಸರ್ಕಾರದ ಸುದ್ದಿ ಖಾತೆಯಲ್ಲಿ ಕನ್ನಡ ಭಾಷಾಂತರಕಾರರಾಗಿಯೂ ಹೈದರಾಬಾದ್ ಸಮಾಚಾರ್ ಎಂಬ ಮಾಸಪತ್ರಿಕೆಯ ಸಂಪಾದಕರಾಗಿಯೂ ಹೈದರಾಬಾದಿನ ವಿಧಾನಸಭೆಯಲ್ಲಿ ಚರ್ಚಾ ಸಂಪಾದಕರಾಗಿಯೂ ಸೇವೆಸಲ್ಲಿಸಿದ ಇವರು ಸುದ್ದಿ ಖಾತೆಯ ಉಪನಿರ್ದೇಶಕರಾಗಿ, ಅನಂತರ ಆ ಇಲಾಖೆಯ

ನಿರ್ದೇಶಕರಾಗಿ ಕೆಲಸಮಾಡಿ ನಿವೃತ್ತರಾದರು (1966). ಅನಂತರ ಇವರಿಗೆ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಕನ್ನಡ ಶಾಖೆಗೆ ಮುಖ್ಯಸ್ಥರಾಗಿ ಬರಬೇಕೆಂದು ಆಹ್ವಾನ ಬಂದುದರಿಂದ ಆ ಹುದ್ದೆಯನ್ನು ವಹಿಸಿಕೊಂಡರು. ಕನ್ನಡ ಇಲಾಖೆಯನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ಇವರು ತೊಡಗಿದ್ದಾಲೇ 1969 ಸೆಪ್ಟಂಬರ್ 9ರಂದು ಹೃದಯಾಘಾತದಿಂದ ನಿಧನರಾದರು.

ಇವರು ಪ್ರತಿಭಾವಂತ ಪಂಡಿತರೂ ಒಳ್ಳೆಯ ವಾಗ್ಮಿಗಳೂ ಆಗಿದ್ದರು. ಇವರು ಬರೆದಿರುವ 'ಕನ್ನಡ ಯಾತ್ರೆ' ಒಂದು ಉತ್ತಮ ಪ್ರವಾಸ ಗ್ರಂಥ. ಸರಸ್ವತೀ ತತ್ತ್ವ ಎಂಬುದು ಕಾವ್ಯಮೀಮಾಂಸೆಗೆ ಸಂಬಂಧಿಸಿದ ಕೃತಿ. ಕನ್ನಡ ಸಾಹಿತ್ಯ ಪರಿಚಯ ಎಂಬುದು ಹಿಂದಿಯಲ್ಲಿ ಇರುವ ಪ್ರಕಟಿಸಿರುವ ಗ್ರಂಥ. ಪ್ರಕಟಿಸಿರುವ ಲೇಖನಗಳ ಸಂಖ್ಯೆ ಅಪಾರವಾಗಿದೆ. **(ಪಿ.ವಿ.)**

**ನರಸಿಂಹ I (ವಿಜಯನಗರ):** ಸಾಳುವ ವಂಶದ ರಾಜ (1485–91). ಸಾಳುವ ರಾಜಮನೆತನದ ಸಂಸ್ಥಾಪಕ. ಗುಂಡ ಎಂಬುವನ ಮಗ. ನರಸಿಂಹನ ಪೂರ್ವಿಕರು ಸಂಗಮ ಸಂತತಿಯ ಅರಸರ ಕೈಕೆಳಗೆ ಸೇವೆಸಲ್ಲಿಸುತ್ತ ಬಂದಿದ್ದರು. ನರಸಿಂಹ ಮೊದಲು ಇಮ್ಮಡಿ ವಿರೂಪಾಕ್ಷನ ಕಾಲದಲ್ಲಿ ಚಂದ್ರಗಿರಿ ಪ್ರಾಂತ್ಯದ ಮಹಾಮಂಡಲೇಶ್ವರನಾಗಿ ಕೆಲಸ ನಿರ್ವಹಿಸುತ್ತಿದ್ದ. ಆದರೆ ಆಗ ಕೇಂದ್ರ ಸರ್ಕಾರ ದುರ್ಬಲವಾಗಿದ್ದುದರಿಂದ ಸುತ್ತಮುತ್ತಣ ಪ್ರದೇಶಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದ. ಅಲ್ಲದೆ ಆ ಕಾಲದಲ್ಲಿ ನಡೆದ ಅನೇಕ ಘಟನೆಗಳಿಂದ ನರಸಿಂಹನ ಶೌರ್ಯ ಪ್ರಕಟನೆಗೆ ಅವಕಾಶವಾಗಿ, ತತ್ಕಾಲದ ರಾಜಕೀಯದಲ್ಲಿ ಈತ ಪ್ರಭಾವಿಯಾಗಿ ಬೆಳೆದ. 1463ರಲ್ಲಿ ಒರಿಸ್ಸದ ಗಜಪತಿ ವಿಜಯನಗರದ ಮೇಲೆ ದಾಳಿ ಮಾಡಿದುದರಿಂದ ನರಸಿಂಹ ಆಳುತ್ತಿದ್ದ ಪ್ರಾಂತ್ಯಗಳಿಗೆ ಅಪಾರ ನಷ್ಟ ಉಂಟಾಯಿತು. ನರಸಿಂಹ ಒರಿಸ್ಸದ ರಾಜನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಹವಣಿಸುತ್ತಿದ್ದ. ಈ ಅವಕಾಶ 1470ರಲ್ಲಿ ಒದಗಿ ಬಂದಿತು. ಕಪಿಲೇಂದ್ರನ ಮರಣಾನಂತರ ಆಂತರಿಕ ಕಲಹಗಳುಂಟಾದುದರಿಂದ ನರಸಿಂಹ ಒರಿಸ್ಸದ ರಾಜ್ಯವನ್ನು ಆಕ್ರಮಿಸಿ ಉದಯಗಿರಿ ಕೋಟೆಯನ್ನು ಗೆದ್ದುಕೊಂಡ. ಆದರೆ ಇದೇ ಸಮಯದಲ್ಲಿ ತಮಿಳು ಜಿಲ್ಲೆಗಳಲ್ಲಿ ದಂಗೆ ಕಾಣಿಸಿಕೊಂಡಿದ್ದುದರಿಂದ ನರಸಿಂಹ ಅಲ್ಲಿಗೆ ಧಾವಿಸಬೇಕಾಯಿತು. ಆದರೆ ಈ ದಂಗೆಯನ್ನಡಗಿಸಿ ಹಿಂದಿರುಗುವಷ್ಟರಲ್ಲಿ ಬಹಮನೀ ಸುಲ್ತಾನ ಮುಮ್ಮಡಿ ಮಹಮ್ಮದ್ ಷಾ ತೆಲಂಗಾಣ ಮತ್ತು ಆಂಧ್ರದ ತೀರಪ್ರದೇಶಗಳನ್ನು ಗೆದ್ದುಕೊಂಡಿದ್ದ. ಆದರೂ ನರಸಿಂಹ ಧೈರ್ಯಗುಂದದೆ ಯುಕ್ತಿಯಿಂದ ಮಸುಲಿ ಪಟ್ಟಣ ಬಂದರು ಮತ್ತು ಕೊಂಡವೀಡು ಪ್ರದೇಶಗಳನ್ನು 1480ರಲ್ಲಿ ಗೆದ್ದುಕೊಂಡ. 1481ರಲ್ಲಿ ಮುಮ್ಮಡಿ ಮಹಮ್ಮದ್ ಷಾನ ದಂಡನಾಯಕರು ಕಂಚಿಯ ಮೇಲೆ ದಾಳಿ ಮಾಡಿ ಅಪಾರ ಐಶ್ವರ್ಯದಿಂದ ಹಿಂದಿರುಗುತ್ತಿದ್ದಾಗ ನರಸಿಂಹನ ದಂಡನಾಯಕರು ಅವರ ಮೇಲೆರಗಿ ಅವರನ್ನು ಸೋಲಿಸಿ ಅಪಾರ ಸಂಪತ್ತನ್ನು ವಶಪಡಿಸಿಕೊಂಡರು. ಈ ಎಲ್ಲ ಕಾರ್ಯಾಚರಣೆಗಳಿಂದಾಗಿ 1482ರ ವೇಳೆಗೆ ನರಸಿಂಹ ವಿಜಯನಗರದ ರಾಜ್ಯದಲ್ಲಿ ಪ್ರಬಲ ವ್ಯಕ್ತಿಯಾದ. ಇವನು ಒರಿಸ್ಸ ಮತ್ತು ಬಹಮನೀ ರಾಜ್ಯಗಳ ದಾಳಿಗಳನ್ನು ಹಿಮ್ಮೆಟ್ಟಿಸಿ ವಿಜಯನಗರ ರಾಜ್ಯವನ್ನು ರಕ್ಷಿಸಿದನಲ್ಲದೆ ವಿಜಯನಗರ ರಾಜ್ಯದ ಪೂರ್ವಭಾಗದ ಪ್ರಾಂತ್ಯಗಳಿಗೆಲ್ಲ, ಅಂದರೆ ರಾಜಮಹೇಂದ್ರಿಯಿಂದ ರಾಮೇಶ್ವರದವರೆಗೂ ಅಧಿಪತಿಯಾಗಿ ಪ್ರಸಿದ್ಧಿಗೆ ಬಂದ.

ಈ ಮಧ್ಯೆ ಸಾಮ್ರಾಟ ಇಮ್ಮಡಿ ವಿರೂಪಾಕ್ಷ ಕೊಲೆಯಾಗಿ ಅವನ ಮಗ ಪ್ರೌಢದೇವರಾಯ ರಾಜನಾದ. ಆದರೆ ಅವನ ಕಾಲದಲ್ಲೂ ರಾಜ್ಯದಲ್ಲಿ ಅರಾಜಕತೆ ಮುಂದುವರೆಯಿತು. ಅವನು ರಾಜ್ಯದ ಹಿತಚಿಂತನೆಗೆ ಎಳ್ಳಷ್ಟೂ ಗಮನ ಕೊಡಲಿಲ್ಲ. ಆದ್ದರಿಂದ ವಿಜಯನಗರ ರಾಜ್ಯವನ್ನು ರಕ್ಷಿಸಬೇಕಾದರೆ ಹಳೆಯ ರಾಜವಂಶವನ್ನು ಬದಿಗೊತ್ತಬೇಕೆಂದು ನರಸಿಂಹ ನಿರ್ಧರಿಸಿದ. ಈ ಅಭಿಪ್ರಾಯವನ್ನು ಕೆಲವು ಪ್ರಾಂತ್ಯಾಧಿಕಾರಿಗಳು, ದಂಡನಾಯಕರುಗಳು ಎತ್ತಿಹಿಡಿದರು. ಅವರಲ್ಲಿ ಸಾಳುವ ನರಸಿಂಹನ ಜೊತೆಯಲ್ಲಿ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸಿದ್ದ ಈಶ್ವರನಾಯಕ ಮತ್ತು ಅವನ ಮಗ ನರಸನಾಯಕ ಪ್ರಮುಖರು. ಸಾಳುವ ನರಸಿಂಹನ ಆಜ್ಞೆಯಂತೆ ನರಸನಾಯಕ ವಿಜಯನಗರ ರಾಜಧಾನಿಯನ್ನು ವಶಪಡಿಸಿಕೊಂಡ. ಪ್ರೌಢದೇವರಾಯ ಪಲಾಯನ ಮಾಡಿದ. ನರಸನಾಯಕ ಸಾಳುವ ನರಸಿಂಹನೇ ವಿಜಯನಗರದ ರಾಜನೆಂದು ಘೋಷಿಸಿದ. ಹೀಗೆ 1485ರಲ್ಲಿ ಸಂಗಮ ಮನೆತನದ ಆಳ್ವಿಕೆ ಅಂತ್ಯಗೊಂಡು ಸಾಳುವ ಮನೆತನದ ಅಧಿಕಾರ ಸ್ಥಾಪಿತವಾಯಿತು. ನರಸಿಂಹ ಅಧಿಕಾರದಾಸೆಯಿಂದ ಮಾತ್ರ ಸಿಂಹಾಸನವನ್ನು ಅಪಹರಿಸಲಿಲ್ಲ; ಸಂಗಮ ಸಂತತಿಯ ಕೊನೆಯ ಅರಸುಗಳು ತಮ್ಮ ಕರ್ತವ್ಯವನ್ನು ಮರೆತುದರಿಂದ ಮಾತ್ರ ಈ ಕಾರ್ಯವನ್ನು ಮಾಡಬೇಕಾಯಿತು ಎನ್ನಲಾಗಿದೆ. ಇದರಿಂದ ವಿಜಯನಗರ ರಾಜ್ಯವು ಸಂಪೂರ್ಣವಾಗಿ ನಾಶವಾಗುವುದನ್ನು ತಡೆದಂತಾಯಿತು.

ನರಸಿಂಹ ಅನಂತರ ಕೇವಲ ಆರು ವರ್ಷಗಳ ಕಾಲ ಮಾತ್ರ ರಾಜ್ಯಭಾರ ಮಾಡಿದ. ಇವನು ಅಧಿಕಾರಕ್ಕೆ ಬಂದ ತರುಣದಲ್ಲಿ ಮುಖ್ಯವಾಗಿ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಗಮನ ಕೊಡಬೇಕಾಯಿತು. ಆದರೆ ಈ ದಿಶೆಯಲ್ಲಿ ಇವನು ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಕೆಲವು ಪ್ರಾಂತ್ಯಾಧಿಕಾರಿಗಳು ಇವನ ಅಧಿಕಾರವನ್ನು ವಿರೋಧಿಸಿದರು. ಅವರಲ್ಲಿ ಮುಖ್ಯರಾದವರು ಉಮ್ಮತ್ತೂರಿನ ಪಾಳೆಯಗಾರರು ಮತ್ತು ಶ್ರೀರಂಗಪಟ್ಟಣದ ಅರಸರು. ಆದ್ದರಿಂದ ಅವರ ವಿರುದ್ಧವಾಗಿ ಸತತವಾಗಿ ಹೋರಾಡಬೇಕಾಯಿತು. ಆಂತರಿಕ ವ್ಯವಹಾರಗಳನ್ನು ಸರಿಪಡಿಸುತ್ತಿರುವಾಗಲೇ ನರಸಿಂಹ ವಿದೇಶೀ ದಾಳಿಗಳನ್ನೂ ಎದುರಿಸಬೇಕಾಯಿತು. ಗಜಪತಿ ಪುರುಷೋತ್ತಮ ಸು.1489ರಲ್ಲಿ ಉದಯಗಿರಿಗೆ ಮುತ್ತಿಗೆ ಹಾಕಿದ. ಈ ಯುದ್ಧದಲ್ಲಿ ನರಸಿಂಹ ಸೋತು ಬಂಧಿಸಲ್ಪಟ್ಟ, ಅನಂತರ ಬಿಡುಗಡೆಹೊಂದಿದ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯ ಸ್ಪಷ್ಟವಿಲ್ಲ. ಆದರೆ ಒಟ್ಟಿನಲ್ಲಿ ಈ ಯುದ್ಧದಿಂದಾಗಿ ಉದಯಗಿರಿ ಮತ್ತು ಸುತ್ತಮುತ್ತಣ ಪ್ರದೇಶಗಳನ್ನು ಪುರುಷೋತ್ತಮನಿಗೆ ಬಿಟ್ಟುಕೊಡಬೇಕಾಯಿತು. 1491ರಲ್ಲಿ ನರಸಿಂಹ ಮೃತನಾದ. ಆಗ ಇನ್ನೂ ಚಿಕ್ಕವರಾಗಿದ್ದ ತನ್ನ ಇಬ್ಬರು ಪುತ್ರರ ಪೋಷಕನಾಗಿ ಮಂತ್ರಿ ತುಳುವ ನರಸನಾಯಕನನ್ನು ನೇಮಿಸಿದ್ದ. ಆದರೆ ಈ ವ್ಯವಸ್ಥೆ ಸಾಳುವ ಸಂತತಿಯ ನಿರ್ಮೂಲನಕ್ಕೆ ಕಾರಣವಾಯಿತು. ನೋಡಿ: ನರಸನಾಯಕ. **(ಎಸ್.)**

**ನರಸಿಂಹ II (ವಿಜಯನಗರ):** ಸಾಳುವ ವಂಶದ ರಾಜ (1491–1505). ಸಾಳುವವಂಶದ ಆಳ್ವಿಕೆಯ ಸ್ಥಾಪಕನಾದ ಒಂದನೆಯ ನರಸಿಂಹನ ಕಿರಿಯ ಮಗ. ಒಂದನೆಯ ನರಸಿಂಹ ಮೃತನಾದಾಗ ಅವನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದುದರಿಂದ ಮಂತ್ರಿಯಾಗಿದ್ದ ತುಳುವ ವಂಶದ ನರಸನಾಯಕ ರಾಜಕುಮಾರರ ಪೋಷಕನಾಗಿಯೂ ರಾಜಪ್ರತಿನಿಧಿಯಾಗಿಯೂ ನೇಮಕಗೊಂಡ. ಹಿರಿಯ ಮಗನಾದ ತಿಮ್ಮಭೂಪನಿಗೆ ನರಸನಾಯಕ ಪಟ್ಟಕಟ್ಟಿದ. ಆದರೆ ನರಸನಾಯಕನ ವಿರೋಧಿಯಾಗಿದ್ದ ತಿಮ್ಮರಸ ಎಂಬುವನು ತಿಮ್ಮಭೂಪನನ್ನು ಕೊಲೆ ಮಾಡಿಸಿದ. ಅನಂತರ ಕಿರಿಯನಾದ ಈ ಎರಡನೆಯ ನರಸಿಂಹನಿಗೆ ಪಟ್ಟಾಭಿಷೇಕವಾಯಿತು. ಆದರೆ ರಾಜಪ್ರತಿನಿಧಿಯಾದ ನರಸನಾಯಕ ಅಧಿಕಾರವನ್ನು ತನ್ನಲ್ಲೇ ಕೇಂದ್ರೀಕರಿಸಿಕೊಂಡು ಅನೇಕ ಬಿರುದುಗಳನ್ನು ಧರಿಸಿ ಸಾರ್ವಭೌಮನಂತೆ ಆಳತೊಡಗಿದ. ಇದರಿಂದ ರಾಜನಾದ ಇಮ್ಮಡಿ ನರಸಿಂಹನಿಗೂ

ರಾಜಪ್ರತಿನಿಧಿ ನರಸನಾಯಕನಿಗೂ ಮನಸ್ತಾಪವೇರ್ಪಟ್ಟಿತು. ತಿಮ್ಮಭೂಪನನ್ನು ಕೊಲ್ಲಿಸಿದ ತಿಮ್ಮರಸನನ್ನು ಶಿಕ್ಷಿಸಬೇಕೆಂದು ನರಸನಾಯಕ ರಾಜನಿಗೆ ಸೂಚಿಸಿದ. ಆದರೆ ರಾಜ ಆ ಸೂಚನೆಯನ್ನು ತಿರಸ್ಕರಿಸಿದ. ಅಲ್ಲದೆ ತಿಮ್ಮರಸನಿಗೇ ಆಶ್ರಯವನ್ನಿತ್ತ. ಇದರಿಂದ ಬೇಸತ್ತ ನರಸನಾಯಕ ರಾಜಧಾನಿಯನ್ನು ಬಿಟ್ಟು ಪೆನುಕೊಂಡಕ್ಕೆ ಹೋಗಿ ನೆಲಸಿದ. ಆದರೂ ಇಮ್ಮಡಿ ನರಸಿಂಹ ಮತ್ತು ನರಸನಾಯಕರ ನಡುವೆ ಸೌಹಾರ್ದತೆ ಏರ್ಪಡಲೇ ಇಲ್ಲ. ವೈರತ್ವ ಬೆಳೆಯತೊಡಗಿತು. ಕೋಪಗೊಂಡ ನರಸನಾಯಕ ಪೆನುಕೊಂಡದಿಂದ ಒಂದು ದೊಡ್ಡ ಸೈನ್ಯದೊಡನೆ ವಿಜಯನಗರವನ್ನು ಮುತ್ತಿ ತಿಮ್ಮರಸನನ್ನು ಕೊಲ್ಲಿಸಿದ. ಇಮ್ಮಡಿ ನರಸಿಂಹನನ್ನು ಸೋಲಿಸಿ ಅವನನ್ನು ಪೆನುಕೊಂಡಕ್ಕೆ ಕಳುಹಿಸಿ ಸೆರೆಯಲ್ಲಿಟ್ಟ. ನರಸನಾಯಕ ತಾನೇ ರಾಜನಂತೆ ಆಳ್ವಿಕೆ ನಡೆಸಿದ. ನರಸನಾಯಕನ ಮರಣಾನಂತರ (1503) ಅಧಿಕಾರ ವಹಿಸಿದ ಇವನ ಮಗ ವೀರನರಸಿಂಹ ಅಭಿಷಿಕ್ತ ದೊರೆ ಇಮ್ಮಡಿ ನರಸಿಂಹನನ್ನು 1505ರಲ್ಲಿ ಕೊಲೆ ಮಾಡಿಸಿ ತಾನೇ ರಾಜ್ಯವನ್ನು ವಹಿಸಿಕೊಂಡ. ಇಮ್ಮಡಿ ನರಸಿಂಹನೊಂದಿಗೆ ಸಾಳುವ ಮನೆತನದ ಆಳ್ವಿಕೆಯೂ ಅಂತ್ಯಗೊಂಡಿತು. (ಎಸ್.;ಕೆ.ಎಸ್.ಎಸ್.)

**ನರಸಿಂಹ I (ಹೊಯ್ಸಳ):** ವಿಷ್ಣುವರ್ಧನನ ಮಗ ಮತ್ತು ಅವನ ಉತ್ತರಾಧಿಕಾರಿ (1142– 73). ಇವನಿಗೆ ವಿಜಯನರಸಿಂಹ ಮತ್ತು ಪ್ರತಾಪನರಸಿಂಹ ಎಂಬ ಹೆಸರುಗಳೂ ಇದ್ದವು. ತಾಯಿ ಲಕ್ಷ್ಮೀದೇವಿ. ಹುಟ್ಟಿದ್ದು 1133ರಲ್ಲಿ. ಜನಿಸಿದ ಸ್ವಲ್ಪ ಕಾಲದಲ್ಲೇ ವಿಷ್ಣುವರ್ಧನ ಇವನಿಗೆ ಯುವರಾಜ ಪಟ್ಟವನ್ನು ಕಟ್ಟಿದ. 1142ರಲ್ಲಿ ತಂದೆ ಮರಣ ಹೊಂದಿದಾಗ ಯುವರಾಜ ನರಸಿಂಹ ಇನ್ನೂ ಎಂಟು ವರ್ಷದ ಬಾಲಕನಾಗಿದ್ದರಿಂದ ಸಚಿವರು ನರಸಿಂಹನ ಪಟ್ಟಾಭಿಷೇಕವನ್ನು ನೆರವೇರಿಸಿ, ಇವನು ಪ್ರಾಪ್ತವಯಸ್ಕನಾಗುವವರೆಗೂ ಆಡಳಿತ ನಡೆಸಿದರು. ನರಸಿಂಹ ಅಶಕ್ತ ದೊರೆ. ಈತ ಪಟ್ಟವೇರಿದೊಡನೆಯೇ ವಿಷ್ಣುವರ್ಧನನ ಕಾಲದಲ್ಲಿ ಸೋಲನ್ನನುಭವಿಸಿದ್ದ ಚಾಳುಕ್ಯ ಮಾಂಡಲಿಕರಾದ ಹಾನಗಲ್ಲಿನ ಕದಂಬರು ಪೊಂಬುಚದ ಸಾಂತರರು ಮತ್ತು ಉಚ್ಚಂಗಿಯ ಪಾಂಡ್ಯರು ಹೊಯ್ಸಳ ರಾಜ್ಯದ ಗಡಿಗಳನ್ನು ಆಕ್ರಮಿಸಿದರು. ನರಸಿಂಹನ ಸೇನಾಧಿಕಾರಿಗಳು ನಿಷ್ಠೆಯಿಂದ ಹೋರಾಡಿದರೂ ಬಂಕಾಪುರವನ್ನು ಒಳಗೊಂಡು ಹರಿಹರದಿಂದ ಉತ್ತರಕ್ಕಿದ್ದ ಗಳಿಕೆಯೆಲ್ಲಾ ಹೊಯ್ಸಳರ ಕೈಬಿಟ್ಟಿತಲ್ಲದೆ, ನರಸಿಂಹ ಚಾಳುಕ್ಯ ಸಾರ್ವಭೌಮತ್ವವನ್ನು ಪುನಃ ಒಪ್ಪಬೇಕಾಯಿತು. ಅಲ್ಲದೆ ಚೋಳರೂ ಕೋಲಾರ ಜಿಲ್ಲೆಯ ಸ್ವಲ್ಪ ಭಾಗಗಳನ್ನು ಕೆಲಕಾಲ ಆಕ್ರಮಿಸಿಕೊಂಡರು. ಅತ್ತ ಚಂಗಾಳ್ವರೂ ಸ್ವತಂತ್ರರಾಗಲು ಪ್ರಯತ್ನಿಸಿದರು. ಆದರೆ ಇದು ಸಾಗಲಿಲ್ಲ. ಗಡಿಗಳನ್ನು ಆಕ್ರಮಿಸಲು ಪ್ರಯತ್ನಿಸಿದ ಚಂಗಾಳ್ವರನ್ನು ನರಸಿಂಹನ ದಂಡನಾಯಕರು ಸೋಲಿಸಿದರು. ನರಸಿಂಹ ಪ್ರಾಪ್ತವಯಸ್ಕನಾದ ಮೇಲೂ ಆಡಳಿತಕ್ಕೆ ಗಮನ ನೀಡಲಿಲ್ಲ. ದುರ್ಬಲನೂ ಸ್ತ್ರೀಲೋಲುಪನೂ ಆಗಿದ್ದ. 1156ರಲ್ಲಿ ಬಿಜ್ಜಳನು ಚಾಳುಕ್ಯರನ್ನು ತುಳಿದು ಕಲ್ಯಾಣದ ಸಿಂಹಾಸನವನ್ನು ಆಕ್ರಮಿಸಿದ ಸಂದರ್ಭದಲ್ಲಿ ಹೊಯ್ಸಳರ ಪ್ರಭಾವವನ್ನು ವಿಸ್ತರಿಸುವ ಅವಕಾಶಗಳಿದ್ದರೂ ನರಸಿಂಹ ಪ್ರಯತ್ನಪಡಲಿಲ್ಲ. ತನ್ನ ಆಳ್ವಿಕೆಯ ಕೊನೆಗಾಲದಲ್ಲಿ ನರಸಿಂಹ ತನ್ನ ಪಟ್ಟದ ರಾಣಿಯಾದ ಏಚಲ ಮಹಾದೇವಿಯನ್ನೂ ಯುವರಾಜನಾದ ಕುಮಾರ ವೀರಬಲ್ಲಾಳನನ್ನೂ ಆಡಳಿತಕ್ಕೆ ಸಹಭಾಗಿಯಾಗಿ ನೇಮಿಸಿಕೊಂಡ. ರಾಜ್ಯದಲ್ಲುಂಟಾದ ದುಃಸ್ಥಿತಿಯಿಂದ ಮನನೊಂದ ಯುವರಾಜ ವೀರಬಲ್ಲಾಳ 1173ರ ಪ್ರಾರಂಭದಲ್ಲಿ ತಂದೆಯ ಮೇಲೆ ದಂಗೆಯೆದ್ದು ಸಿಂಹಾಸನವನ್ನು ಹಿಡಿದ. ಈ ಘಟನೆ ನಡೆದ ಸ್ವಲ್ಪ ಕಾಲದಲ್ಲೇ ನರಸಿಂಹ ಮರಣಹೊಂದಿದ.

ವಿಷ್ಣುವರ್ಧನ ಸ್ಥಾಪಿಸಿದ ಭದ್ರವಾದ ಆಡಳಿತ ಮತ್ತು ನರಸಿಂಹನ ಮಂತ್ರಿಗಳೂ ದಂಡನಾಯಕರೂ ಆದ ಹುಳ್ಳ, ಜೋಕಿಮಯ್ಯ, ಬಿಟ್ಟಿಮಯ್ಯ, ಮಾಚಿಮಯ್ಯ ಮೊದಲಾದವರ ನಿಃಸ್ಪೃಹಸೇವೆಯಿಂದ ರಾಜ ಬಲಹೀನನಾಗಿದ್ದರೂ ಹೊಯ್ಸಳ ರಾಜ್ಯ ಛಿದ್ರವಾಗದೆ ಉಳಿದುಬಂದಿತು. ನರಸಿಂಹ ಉದಾರಮತೀಯ ನೀತಿಯನ್ನನುಸರಿಸಿದ. ಇವನ ಕಾಲದಲ್ಲಿ ವೈಷ್ಣವ ಪಂಥದ ಚಟುವಟಿಕೆ ವ್ಯಾಪಕವಾಗಿ ಬೆಳೆಯಿತು. ರಾಮಾನುಜಾಚಾರ್ಯರ ಅನುಯಾಯಿಗಳಲ್ಲೊಬ್ಬರಾದ ತಿರುವ ರಂಗದಾಸ ಎಂಬುವರು ವೈಷ್ಣವ ಪಂಥವನ್ನು ಪ್ರಚಾರ ಮಾಡುತ್ತಾ ತೊಣ್ಣೂರಿನಲ್ಲಿ ವಾಸಿಸುತ್ತಿದ್ದರು. ತೊಣ್ಣೂರು, ಮೇಲುಕೋಟೆಗಳು ಆ ಪಂಥದ ಮುಖ್ಯ ಕೇಂದ್ರಗಳಾಗಿದ್ದವು. ನರಸಿಂಹ ವೈಷ್ಣವ ಪಂಥದ ಆಚಾರ್ಯರಿಗೂ ದೇವಾಲಯಗಳಿಗೂ ವಿಶೇಷ ದಾನದತ್ತಿಗಳನ್ನು ನೀಡಿದ. ಜೈನ ಮತಾವಲಂಬಿಗಳಿಗೂ ಪ್ರೋತ್ಸಾಹ ನೀಡಿದ. 1159ರಲ್ಲಿ ಶ್ರವಣಬೆಳಗೊಳಕ್ಕೆ ಭೇಟಿನೀಡಿ ದಾನಧರ್ಮಗಳನ್ನು ಮಾಡಿದ. ಜೈನಧರ್ಮಾವಲಂಬಿಗಳನ್ನು ಸಚಿವ ಮತ್ತು ದಂಡನಾಯಕ ಹುದ್ದೆಗಳಿಗೆ ಅವನು ನೇಮಿಸಿಕೊಂಡಿದ್ದ.

ಇವನ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಅವುಗಳಲ್ಲಿ ಹೊನ್ನಾವರದ ಕೇಶವ, ಧರ್ಮಪುರದ ಕೇಶವ, ಹುಲ್ಲೇಕೆರೆಯ ಕೇಶವ, ನಾಗಮಂಗಲದ ಕೇಶವ, ಕಿಕ್ಕೇರಿಯ ಬ್ರಹ್ಮೇಶ್ವರ, ಕೋರಮಂಗಲದ ಬೂಚೇಶ್ವರ, ತೆಂಗಿನಘಟ್ಟದ ಹೊಯ್ಸಳೇಶ್ವರ ದೇವಾಲಯಗಳು ಮುಖ್ಯವಾದವು.

ಒಂದನೆಯ ನರಸಿಂಹನಿಗೆ ಪಟ್ಟದ ರಾಣಿಯಾದ ಏಚಲ ಮಹಾದೇವಿಯಲ್ಲದೆ ಚಂಗಲದೇವಿ, ಗುಜ್ಜಲದೇವಿ, ಮೈಳಲದೇವಿ ಎಂಬ ಇತರ ರಾಣಿಯರೂ ಇದ್ದರು. ಇವನ ಅಂತಃಪುರದಲ್ಲಿ ಮುನ್ನೂರಕ್ಕೂ ಮಿಗಿಲಾದ ಆಂಧ್ರ, ಚೋಳ, ಗೌಳ, ಬಂಗಾಲ, ಮಾಳವ, ಸಿಂಹಳ ಮತ್ತು ಇತರ ಪ್ರದೇಶಗಳ ಸುಂದರ ಸ್ತ್ರೀಯರಿದ್ದರೆಂದು ಶಾಸನವೊಂದರಲ್ಲಿ ವರ್ಣಿಸಲಾಗಿದೆ. (ಜಿ.ಆರ್.ಆರ್.)

**ನರಸಿಂಹ II (ಹೊಯ್ಸಳ):** ಪ್ರಸಿದ್ಧ ಅರಸ (1220– 35). ಇಮ್ಮಡಿ ವೀರಬಲ್ಲಾಳ ಮತ್ತು ಅವನ ಪಟ್ಟದ ರಾಣಿ ಪದ್ಮಲದೇವಿಯ ಮಗ. ಜನನ 1184. ಯುವರಾಜ ನರಸಿಂಹನಿಗೆ ಬಲ್ಲಾಳ ಒಳ್ಳೆಯ ಶಿಕ್ಷಣದ ವ್ಯವಸ್ಥೆ ಮಾಡಿದ. ತನ್ನ ತಂದೆಯಿಂದ ಪ್ರಾಂತ್ಯಾಧಿಕಾರಿ ಹಾಗೂ ದಳಪತಿಯಾಗಿ ನೇಮಿತನಾಗಿದ್ದನಾಗಿ ಆಡಳಿತ ನಿರ್ವಹಣೆ ಯುದ್ಧತಂತ್ರಗಳಲ್ಲಿ ನುರಿತ. ಆ ಸಂದರ್ಭದಲ್ಲೇ ಪಾಂಡ್ಯರಾಜನನ್ನು ಸೋಲಿಸಿ ಚೋಳ ಕುಲೋತ್ತುಂಗನಿಗೆ ಪುನಃ ಸಿಂಹಾಸನ ದೊರಕಿಸಿಕೊಡುವುದರಲ್ಲಿ ಯಶಸ್ವಿಯಾದ. ವೀರಬಲ್ಲಾಳನ ಮರಣಾನಂತರ 1220ರಲ್ಲಿ ಅಭಿಷಿಕ್ತನಾದ. ಎರಡನೆಯ ನರಸಿಂಹನಿಗೆ ವೀರನರಸಿಂಹ, ಪ್ರತಾಪನರಸಿಂಹ ಎಂಬ ಹೆಸರುಗಳ ಜೊತೆಗೆ ಸಮಸ್ತಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಚೋಳರಾಜ ಪ್ರತಿಷ್ಠಾಪನಾಚಾರ್ಯ, ಪಾಂಡ್ಯರಾಜಗಜಕೇಸರಿ, ನಿಶ್ಶಂಕಪ್ರತಾಪಚಕ್ರವರ್ತಿ ಮೊದಲಾದ ಬಿರುದುಗಳಿದ್ದವು.

ದೇವಗಿರಿಯ ಸೇವುಣರ ಪರಾಜಯ ಮತ್ತು ತಮಿಳುನಾಡಿನಲ್ಲಿ ಹೊಯ್ಸಳರ ರಾಜಕೀಯ ಪ್ರಭಾವದ ಸ್ಥಾಪನೆ ಇವುಗಳು ನರಸಿಂಹನ ಆಳ್ವಿಕೆಯ ಮುಖ್ಯ ರಾಜಕೀಯ ಘಟನೆಗಳು. ಎರಡನೆಯ ನರಸಿಂಹ ಪಟ್ಟಕ್ಕೆ ಬಂದ ಸ್ವಲ್ಪ ಕಾಲದಲ್ಲೇ ಮಗಧ ರಾಜ್ಯವನ್ನು ನಿರ್ಮೂಲ ಮಾಡಿದ. ಅದೇ ತರುಣದಲ್ಲಿ ತಮಿಳುನಾಡಿನ ರಾಜಕೀಯದಲ್ಲಿ ಗೊಂದಲವುಂಟಾಗಿ ಮೂರನೆಯ ರಾಜರಾಜಚೋಳ ಹೊಯ್ಸಳ ಚಕ್ರವರ್ತಿಯ ಸಹಾಯವನ್ನು ಬೇಡಿದ. ಚೋಳರಾಜ ನರಸಿಂಹನ ಸಹೋದರಿಯಾದ ಸೋಮಲದೇವಿಯನ್ನು ವರಿಸಿದ್ದುದರಿಂದಲೂ ಹಾಗೂ ಹೊಯ್ಸಳರ

ಪ್ರಾಬಲ್ಯವನ್ನು ವಿಸ್ತರಿಸಲೋಸುಗವಾಗಿಯೂ ನರಸಿಂಹ ತಮಿಳುನಾಡಿನತ್ತ ಹೆಚ್ಚು ಗಮನ ಹರಿಸಿದ. ಕೂಡಲೇ ತಮಿಳುನಾಡಿಗೆ ಸೈನ್ಯ ಸಮೇತನಾಗಿ ಧಾವಿಸಿ ರಾಜರಾಜನಿಗೆ ಉಪದ್ರವ ಕೊಡುತ್ತಿದ್ದ ಪಾಂಡ್ಯರನ್ನೂ ಮತ್ತು ಇತರ ಸಾಮಂತರನ್ನೂ ಸೋಲಿಸಿ ಚೋಳರಾಜನನ್ನು ಸಂತೈಸಿದ (1222–23). ಇತ್ತ ಸೇವುಣರು 1223ರಲ್ಲಿ ಹೊಯ್ಸಳ ಸಾಮ್ರಾಜ್ಯದ ಉತ್ತರದ ಗಡಿಗಳ ಮೇಲೆ ಆಕ್ರಮಣ ನಡೆಸಿದರು. ನರಸಿಂಹ ಕೂಡಲೇ ತನ್ನ ರಾಜ್ಯದ ಉತ್ತರ ಗಡಿಯನ್ನು ತಲುಪಿ ಶತ್ರುಗಳನ್ನು ಸದೆಬಡಿದ. ಸೇವುಣ ಸಿಂಘಣನ ದಂಡನಾಯಕರಾದ ವಿಕ್ರಮಪಾಲ ಮತ್ತು ಪಾವುಸ ಎಂಬುವರು ರಣರಂಗದಲ್ಲಿ ಮಡಿದರು. ಸೇವುಣ ಸೈನ್ಯ ಸಂಪೂರ್ಣವಾಗಿ ಸೋತು ಚೆಲ್ಲಾಪಿಲ್ಲಿಯಾಗಿ ಹಿಂದಿರುಗಿತು. ಪುನಃ 1228 ಮತ್ತು 1230ರಲ್ಲೂ ಸೇವುಣರಿಗೂ ಹೊಯ್ಸಳರಿಗೂ ಕದನಗಳಾದವು. ಸೋತ ಸೇವುಣರು ಪ್ರತಾಪ ನರಸಿಂಹನ ಜೀವಿತ ಕಾಲದಲ್ಲಿ ಪುನಃ ಹೊಯ್ಸಳರ ಗಡಿಗಳನ್ನು ಆಕ್ರಮಿಸುವ ಸಾಹಸ ಮಾಡಲಿಲ್ಲ. ತುಂಗಭದ್ರಾನದಿ ಹೊಯ್ಸಳ ಸೇವುಣ ರಾಜ್ಯಗಳ ಗಡಿಯಾಯಿತು.

ಚೋಳ ಮೂರನೆಯ ರಾಜರಾಜನಿಗೆ ನರಸಿಂಹ ಬೆಂಬಲ ಕೊಟ್ಟಿದ್ದರೂ ಆತನೇ ದುರ್ಬಲನಾಗಿದ್ದರಿಂದ ಆಗಾಗ್ಗೆ ಸಾಮಂತರಾದ ಪಾಂಡ್ಯರಿಂದ ಕಿರುಕುಳ ಸಂಭವಿಸುತ್ತಿತ್ತು. ಇದರಿಂದಾಗಿ ನರಸಿಂಹ ಅನೇಕ ವೇಳೆ ರಾಜರಾಜನ ಸಹಾಯಕ್ಕಾಗಿ ಸೈನ್ಯ ಸಮೇತನಾಗಿ ತಮಿಳುನಾಡಿಗೆ ತೆರಳಬೇಕಾಯಿತು. ಸು. 1230ರಲ್ಲಿ ಚೋಳರಾಜ ತನ್ನ ಶತ್ರುಗಳಿಗೆ ಸೆರೆಯಾಗಿದ್ದನಾಗಿ ಚೋಳ ವೈರಿಗಳ ಮೇಲೆ ದೊಡ್ಡ ಪ್ರಮಾಣದ ಯುದ್ಧವನ್ನೇ ಮಾಡಬೇಕಾಯಿತು. ನರಸಿಂಹನು ಪಾಂಡ್ಯರು ಮತ್ತು ಅವರ ಮಿತ್ರರಾದ ಕಾಡವ ಮತ್ತು ತೆಲುಗು ಚೋಡರನ್ನು ಸೋಲಿಸಿ ರಾಜರಾಜನಿಗೆ ಪುನಃ ಸಿಂಹಾಸವನ್ನು ದೊರಕಿಸಿ ಕೊಟ್ಟ. ಅನಂತರ ಕಂಚಿಯಲ್ಲಿ ಸ್ವಲ್ಪಕಾಲ ತಂಗಿದ್ದು ರಾಮೇಶ್ವರದವರೆಗೂ ವಿಜಯಯಾತ್ರೆ ಕೈಗೊಂಡು ಅಲ್ಲಿ ವಿಜಯಸ್ತಂಭವೊಂದನ್ನು ನೆಟ್ಟ. ರಾಜರಾಜನ ಸಹಾಯಕ್ಕಾಗಿ ಹೊಯ್ಸಳ ಸೈನ್ಯದ ತುಕಡಿಯೊಂದನ್ನು ತಮಿಳುನಾಡಿನಲ್ಲಿ ನೆಲೆಗೊಳಿಸಿದ. ಇದರ ವೆಚ್ಚವನ್ನು ಭರಿಸಲು ರಾಜರಾಜ ತನ್ನ ರಾಜ್ಯದ ಶ್ರೀರಂಗಂ ಕಣ್ಣಾನೂರು ಭಾಗಗಳನ್ನು ನರಸಿಂಹನಿಗೊಪ್ಪಿಸಿದ್ದ. ನರಸಿಂಹನ ಪುತ್ರನಾದ ವೀರಸೋಮೇಶ್ವರ ಮಾತೃವಿಹೀನನಾಗಿದ್ದು ಬಾಲ್ಯದಿಂದಲೂ ತನ್ನ ಸೋದರತ್ತೆಯ ಪೋಷಣೆಯಲ್ಲಿ ತಮಿಳುನಾಡಿನಲ್ಲೇ ಬೆಳೆದ. ನರಸಿಂಹ ಅವನಿಗೆ ಯುವರಾಜಪಟ್ಟ ಕಟ್ಟಿದ್ದಮೇಲೆ ಅವನು ಶ್ರೀರಂಗದ ಬಳಿಯಲ್ಲಿ ವಿಕ್ರಮಪುರ ಎಂಬ ಹೊಸ ಪಟ್ಟಣವನ್ನು ಕಟ್ಟಿಸಿ ರಾಜಧಾನಿಯಾಗಿ ಮಾಡಿಕೊಂಡು ಹೊಯ್ಸಳ ಸಾಮ್ರಾಜ್ಯದ ತಮಿಳು ಪ್ರದೇಶಗಳ ಮೇಲೆ ಆಳ್ವಿಕೆ ನಡೆಸುತ್ತಿದ್ದ. ಈ ಹಲವು ಘಟನೆಗಳಿಂದಾಗಿ ಇಮ್ಮಡಿ ನರಸಿಂಹನ ಕಾಲದಲ್ಲಿ ತಮಿಳುನಾಡಿನಲ್ಲಿ ಹೊಯ್ಸಳರ ಪ್ರಭಾವ ಬಹುವಾಗಿ ವಿಸ್ತರಿಸಿತು. ನರಸಿಂಹ 1235ರಲ್ಲಿ ಮೃತನಾದ.

ನರಸಿಂಹನಿಗೆ ಕಾಳಲದೇವಿ, ಲೋಕಾಂಬಿಕಾ, ಗೌರಲದೇವಿ ಎಂಬ ಪತ್ನಿಯರಿದ್ದರು. ಮುಂದೆ ರಾಜನಾದ ಸೋಮೇಶ್ವರ ಕಾಳಲ ದೇವಿಯ ಮಗ. ನರಸಿಂಹನಿಗೆ ಗೌರಲದೇವಿಯಲ್ಲಿ ಹುಟ್ಟಿದ ಎರೆಯಂಗನೆಂಬ ಮಗನೂ ಇದ್ದ.

ಪೋಳಾಲ್ವ, ಅಮಿತಯ್ಯ, ಅಪ್ಪಣ್ಣ, ಸಮುದ್ರಗೋಪಯ್ಯ, ಅಡ್ಡಾಯದ ಹರಿಹರ, ನೀರ್ಗುಂದದ ಚಲ್ಲೆಯನಾಯಕ, ಹುಳಿಯೇರ ಕಪ್ಪಯನಾಯಕ, ಅವನ ತಮ್ಮ ನರಸಿಂಹ ಮೊದಲಾದವರು ನರಸಿಂಹನ ಮಂತ್ರಿ–ದಂಡನಾಯಕರಲ್ಲಿ ಮುಖ್ಯರು.

ಎರಡನೆಯ ನರಸಿಂಹನ ಕಾಲದಲ್ಲಿ ಹಾರ್ನಹಳ್ಳಿಯ ಸೋಮೇಶ್ವರ ಮತ್ತು ಕೇಶವ, ಬೆಳ್ಳೂರಿನ ಮೂಲ ಸಿಂಗೇಶ್ವರ, ಬಸರಾಳಿನ ಮಲ್ಲಿಕಾರ್ಜುನ, ಹೆಗ್ಗೆರೆಯ ಕಲ್ಲೇಶ್ವರ ಮತ್ತು ಗಳಗೇಶ್ವರ, ಹರಿಹರದ ಹರಿಹರೇಶ್ವರ ಮೊದಲಾದ ಪ್ರಸಿದ್ಧ ದೇವಾಲಯಗಳು ನಿರ್ಮಾಣವಾದವು.

(ಜಿ.ಆರ್.ಆರ್.)

**ನರಸಿಂಹ III (ಹೊಯ್ಸಳ):** ಹೊಯ್ಸಳ ಸಾಮ್ರಾಜ್ಯದ ಕನ್ನಡ ಪ್ರದೇಶವನ್ನು ದೋರಸಮುದ್ರದಿಂದ ಆಳಿದ ಅರಸ (1253–92). ವೀರ ಸೋಮೇಶ್ವರ ಮತ್ತು ಅವನ ರಾಣಿ ಬಿಜ್ಜಳ ದೇವಿಯ ಮಗ. ಜನನ 1240. ಸೇವುಣರು ಮತ್ತು ಮಲತಮ್ಮನಾದ ರಾಮನಾಥ ನೊಡನೆ ನಡೆದ ಯುದ್ಧಗಳು ನರಸಿಂಹನ ಕಾಲದ ಮುಖ್ಯ ರಾಜಕೀಯ ಘಟನೆಗಳು.

ನರಸಿಂಹನ ಮಲಸಹೋದರನಾದ ರಾಮನಾಥ ಮಧುರೆಯ ಪಾಂಡ್ಯರ ಪ್ರಾಬಲ್ಯದಿಂದ ತನ್ನ ರಾಜ್ಯದ ಬಹುಭಾಗವನ್ನು ಹಾಗೂ ರಾಜಧಾನಿಯನ್ನೂ ಕಳೆದುಕೊಂಡು ನರಸಿಂಹನ ರಾಜ್ಯದ ಮೇಲೆ ನಿರಂತರವಾದ ಆಕ್ರಮಣ ದಲ್ಲಿ ತೊಡಗಿದ. ರಾಮನಾಥ ಸುಮಾರು ಆರು ಬಾರಿ ನರಸಿಂಹನ ರಾಜ್ಯವನ್ನು ಆಕ್ರಮಿಸಲು ಯತ್ನಿಸಿ ವಿಫಲನಾದ. ಒಂದು ಬಾರಿ ಬೆಂಗಳೂರು ಮತ್ತು ಕುಣಿಗಲು ವರೆಗೆ ರಾಮನಾಥನ ದಾಳಿ ಮುಂದುವರಿಯಿತು. ಆದರೆ ಮೂರನೆಯ ನರಸಿಂಹ ಮತ್ತು ಅವನ ದಕ್ಷ ದಳಪತಿಗಳು ರಾಮನಾಥನ ದಾಳಿಯನ್ನು ಪ್ರತಿಬಾರಿಯೂ ಯಶಸ್ವಿಯಾಗಿ ಹಿಮ್ಮೆಟ್ಟಿಸಿದರು. ಮೂರನೆಯ ನರಸಿಂಹನೂ ರಾಮನಾಥನೂ ದಾಯಾದ ಕಲಹದಲ್ಲಿ ತೊಡಗಿದ್ದ ಪರಿಸ್ಥಿತಿಯನ್ನು ಗಮನಿಸಿದ ದೇವಗಿರಿಯ ಸೇವುಣರು ಹೊಯ್ಸಳ ರಾಜ್ಯವನ್ನು ಆಕ್ರಮಿಸಲು ಸಂಚು ನಡೆಸಿದರು. 1271ರಲ್ಲಿ ಸೇವುಣ ಮಹಾದೇವನ ದಳಪತಿಯಾದ ರತ್ನಪಾಲ ಚಿತ್ರದುರ್ಗ ಜಿಲ್ಲೆಯ ಹಲವು ಪ್ರದೇಶಗಳನ್ನು ವಶಪಡಿಸಿಕೊಂಡ. ನರಸಿಂಹನ ದಂಡನಾಯಕನಾದ ಪೆರುಮಾಳೆ ದಂಡನಾಯಕ ಶತ್ರುಸೈನ್ಯದ ಮೇಲೆ ಬಿದ್ದು ರತ್ನಪಾಲನನ್ನು ಕೊಂದು ಕೈಬಿಟ್ಟಿದ್ದ ಪ್ರಾಂತ್ಯಗಳನ್ನು ವಶಪಡಿಸಿಕೊಂಡ. ಅನಂತರ ಮೂರನೆಯ ನರಸಿಂಹನು ರಾಮನಾಥನ ಆಕ್ರಮಣವನ್ನು ಹಿಮ್ಮೆಟ್ಟಿಸುವ ಕಾರ್ಯದಲ್ಲಿ ಮಗ್ನನಾಗಿದ್ದಾಗ ಸೇವುಣ ಮಹಾದೇವನ ಉತ್ತರಾಧಿಕಾರಿಯಾದ ರಾಮಚಂದ್ರ 1276ರಲ್ಲಿ ಹೊಯ್ಸಳ ರಾಜಧಾನಿಯನ್ನು ಮುತ್ತಲು ಹವಣಿಸಿ ಬೆಳವಾಡಿಯವರೆಗೂ ದಾಳಿ ಮಾಡಿದ. ಈ ಕದನದಲ್ಲಿ ನಿಡುಗಲ್ಲಿನ ಇರುಂಗೋಳಚೋಳ ರಾಮಚಂದ್ರನಿಗೆ ಸಹಾಯ ಮಾಡಿದ. ಹೊಯ್ಸಳ ಸೈನ್ಯ ಶತ್ರು ಸೈನ್ಯವನ್ನು ಚಿತ್ರದುರ್ಗದವರೆಗೂ ಬೆನ್ನಟ್ಟಿ ಓಡಿಸಿತು. 1285ರಲ್ಲಿ ಮೂರನೆಯ ನರಸಿಂಹ ತನ್ನ ಶತ್ರುವಿಗೆ ಸಹಾಯ ನೀಡಿದ ನಿಡುಗಲ್ಲು ಚೋಳನನ್ನು ಸೋಲಿಸಿದ. ನರಸಿಂಹನ ಕಾಲದಲ್ಲಿ ಹೊಯ್ಸಳ ರಾಜ್ಯವು ಅನೇಕ ದಾಳಿಗಳಿಗೊಳಗಾದರೂ ಇವನು ಪರಾಕ್ರಮದಿಂದ ಹೋರಾಡಿ ರಾಜ್ಯವನ್ನು ಸಂರಕ್ಷಿಸಿದ.

ನರಸಿಂಹ ಶೈವ ವೈಷ್ಣವ ಮತ್ತು ಜೈನಪಂಥಗಳಿಗೆ ಪ್ರೋತ್ಸಾಹ ನೀಡಿದ. ಇವನ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಸೋಮದಂಡನಾಯಕನಿಂದ 1268ರಲ್ಲಿ ಕಟ್ಟಿಸಲ್ಪಟ್ಟ ಸೋಮನಾಥಪುರದ ಕೇಶವ ದೇವಾಲಯ ಹೊಯ್ಸಳ ಶೈಲಿಯ ಅತ್ಯಂತ ಶ್ರೇಷ್ಠ ದೇವಾಲಯಗಳಲ್ಲೊಂದಾಗಿದೆ. ತುರುವೇಕೆರೆಯ ಕೇಶವ, ಸೆಟ್ಟಿಕೆರೆಯ ಯೋಗಮಾಧವ, ಹೊಳೆನರಸೀಪುರದ ಲಕ್ಷ್ಮೀನರಸಿಂಹ ಮೊದಲಾದವು ಮೂರನೆಯ ನರಸಿಂಹನ ಕಾಲದಲ್ಲಿ ನಿರ್ಮಾಣವಾದ ಇತರ ಮುಖ್ಯ ದೇವಾಲಯಗಳು. ನರಸಿಂಹನ ಮರಣಾನಂತರ (1292ರಲ್ಲಿ) ಇವನ ಮಗನಾದ ಮೂರನೆಯ ವೀರಬಲ್ಲಾಳ ರಾಜನಾದ.

ಪೆರುಮಾಳೆ, ಸೋಮೆಯ, ಕುಮಾರ ಚಿಕ್ಕಕೇತಯ ನರಸಿಂಹನ ಕಾಲದಲ್ಲಿದ್ದ ಮುಖ್ಯ ದಂಡನಾಯಕರು. (ಜಿ.ಆರ್.ಆರ್.)

**ನರಸಿಂಹಮೂರ್ತಿ,ಕೆ.:** 1919-99. ಕನ್ನಡದ ಅಗ್ರಮಾನ್ಯ ವಿಮರ್ಶಕರು. ನವ್ಯ ಸಾಹಿತ್ಯದ ಪ್ರವರ್ತಕರೆಂದು ಹೆಸರಾಗಿದ್ದವರು. ಇವರು ಕೋಲಾರ ಜಿಲ್ಲೆಯ ಮಂಚನಹಳ್ಳಿಯಲ್ಲಿ 1919 ಮೇ 12 ರಂದು ಜನಿಸಿದರು. ತಂದೆ ಕೃಷ್ಣಮೂರ್ತಿ, ತಾಯಿ ಸಾವಿತ್ರಮ್ಮ. ವಿದ್ಯಾರ್ಥಿ ದೆಸೆಯಲ್ಲಿಯೇ ಪ್ರತಿಭಾವಂತರೆಂದು ಗುರುತಿಸಲ್ಪಟ್ಟಿದ ನರಸಿಂಹಮೂರ್ತಿ ಯವರು ಬೆಂಗಳೂರಿನ ಕೋಟೆ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 2ನೆಯ ರ್‍ಯಾಂಕ್ ಪಡೆದ ಕೀರ್ತಿ ಇವರದ್ದು. ವಿದ್ಯಾರ್ಥಿ ದಿಸೆಯಲ್ಲಿಯೇ ಇವರು ಆರ್. ಕಲ್ಯಾಣಮ್ಮನವರ 'ಸರಸ್ವತಿ' ಪತ್ರಿಕೆಯಲ್ಲಿ ಬರೆಯತೊಡಗಿದ್ದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿ ಯಾಗಿ ಸೇರಿ, 1940ರಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದರು. ಆಗ ಪ್ರಿನ್ಸಿಪಾಲರಾಗಿದ್ದವರು ಜೆ.ಸಿ. ರಾಲೋ. ನರಸಿಂಹಮೂರ್ತಿಯವರು ಅವರ ಮೆಚ್ಚುಗೆಗೆ ಪಾತ್ರರಾಗಿದ್ದರು. ನಿರೀಕ್ಷೆಯಂತೆಯೇ ಪರೀಕ್ಷೆ ಮುಗಿದೊಡನೆಯೇ ಇವರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಅರ್ಹರಾದ ವಿದ್ಯಾರ್ಥಿಗಳಿಲ್ಲವೆಂಬ ಕಾರಣದಿಂದ ಹಿಂದಿನ ವರ್ಷಗಳಲ್ಲಿ ಇಂಗ್ಲಿಷ್ ಎಂ.ಎ. ತರಗತಿಗಳನ್ನು ತೆರೆದಿರಲಿಲ್ಲ. ಆ ವರ್ಷ ನರಸಿಂಹಮೂರ್ತಿಯವರಿಗಾಗಿಯೇ ಎಂಬಂತೆ ಎಂ.ಎ. ತರಗತಿಗಳು ಆರಂಭಗೊಂಡವು. ಎಂ.ಎ. ಪರೀಕ್ಷೆಯಲ್ಲಿಯೂ ಇವರು ಮೊದಲ ದರ್ಜೆಯಲ್ಲಿ ತೇರ್ಗಡೆ ಹೊಂದಿದರು.

ಅನಂತರ ಇವರು ಐ.ಎ.ಎಸ್. ಪರೀಕ್ಷೆಯನ್ನು ಪಾಸುಮಾಡಿ (1956) ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕಗೊಂಡರು. ಮುಂದೆ ಬಳ್ಳಾರಿ ಮತ್ತು ಕೊಡಗು ಜಿಲ್ಲಾಧಿಕಾರಿ ಯಾಗಿ ಕೆಲಸ ಮಾಡಿ ಗುಲ್ಬರ್ಗದಲ್ಲಿ ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸಿದರು. 1977ರಲ್ಲಿ ನಿವೃತ್ತಿ ಹೊಂದಿದರು. ನಿವೃತ್ತಿಯ ಅನಂತರ ಕೆಲವು ಕಾಲ ಅಂದಿನ ಗೌರ್ನರ್ ಆಗಿದ್ದ ಗೋವಿಂದ ನಾರಾಯಣ ಅವರಿಗೆ ವಿಶೇಷಾಧಿಕಾರಿಯಾಗಿದ್ದರು. ಮೈಸೂರಿನ ಆಡಳಿತ ತರಬೇತಿ ಕೇಂದ್ರದಲ್ಲಿಯೂ (ಎ.ಟಿ.ಐ) ಇವರು ಸ್ವಲ್ಪಕಾಲ ಕೆಲಸ ಮಾಡಿದರು. ಆ ದಿನಗಳಲ್ಲಿ ಸಂಸ್ಥೆಯ ಪುಸ್ತಕ ಭಂಡಾರವನ್ನು ಬಹುವಾಗಿ ಬೆಳೆಸಿದರು.

ನಿವೃತ್ತಿಯ ಅನಂತರ ಇವರು 'ಕನ್ನಡಪ್ರಭ' ಪತ್ರಿಕೆಗೆ ಪಾಶ್ಚಾತ್ಯ ಲೇಖಕರನ್ನೂ ಅವರ ಕೃತಿಗಳನ್ನೂ ಕುರಿತು ಒಂದು ಲೇಖನ ಮಾಲೆಯನ್ನೇ ಬರೆದರು. ಹೀಗೆ ಅಲ್ಲಲ್ಲಿ ಇವರು ಬರೆದ ಬಿಡಿ ಲೇಖನಗಳ ಸಂಖ್ಯೆ ತುಂಬ ದೊಡ್ಡದು. ಸಾಹಿತ್ಯದ ಬಗೆಗೆ ಇವರಿಗಿದ್ದ ಸೂಕ್ಷ್ಮ ಸಂವೇದನಾ ಶಕ್ತಿ ಅದ್ವಿತೀಯುವಾದದ್ದು, ಅನನ್ಯವಾದದ್ದು. ಇವರ ಹಾಗೆ ಬಹುಶ್ರುತರಾದ ವಿಮರ್ಶಕರ ಸಂಖ್ಯೆ ಬಹಳ ಕಡಿಮೆ.

ಆನರ್ಸ್ ತರಗತಿಗಳಲ್ಲಿದ್ದಾಗಲೆ ಇವರು ಬರೆದ ಅಶೋಕನ ವಿಜಯ ಎಂಬ ನೀಳ್ಗತೆಗಾಗಿ ಬಿ.ಎಂ.ಶ್ರೀ. ರಜತೋತ್ಸವ ಸುವರ್ಣ ಪದಕವನ್ನು ಗಳಿಸಿದ್ದರು. ಕಳಿಂಗ ಯುದ್ಧಕ್ಕೆ ತಾನೇ ಕಾರಣನಾದ ಅಶೋಕ ಚಕ್ರವರ್ತಿ ಅನಂತರ ಪಶ್ಚಾತ್ತಾಪ ಪಟ್ಟು ಬದುಕಿನಲ್ಲಿ ಸಾರ್ಥಕ್ಯ ಪಡೆದ ಕಥೆಯನ್ನು ಈ ಕವನದಲ್ಲಿ ಹೇಳಲಾಗಿದೆ. ಇದೇ ಸುಮಾರಿನಲ್ಲಿ ಇವರು ಪ್ರಬಂಧ ಸ್ಪರ್ಧೆಯೊಂದರಲ್ಲಿ ಭಾಗವಹಿಸಿ ಬಹುಮಾನ ಪಡೆದರು. ಅಶೋಕನ ವಿಜಯ ಎಂಬ ಕವನ, ಕನ್ನಡ ಸಣ್ಣಕತೆಗಳು ಎಂಬ ಪ್ರಬಂಧ ಇವು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಗೊಂಡು ಓದುಗರ ಗಮನ ಸೆಳೆದಿದ್ದವು. ಆಗ ಉದಯೋನ್ಮುಖ ಲೇಖಕರೊಬ್ಬರ ಬರೆಹವನ್ನು ಕನ್ನಡ ಸಾಹಿತ್ಯ ಪ್ರಪಂಚ ಸಂತೋಷದಿಂದ ಸ್ವಾಗತಿಸಿತು.

21 ನೆಯ ಶತಮಾನದ ಐದನೆಯ ದಶಕ ಕನ್ನಡಕ್ಕೆ ನವ್ಯಕಾವ್ಯ ಪ್ರವೇಶಿಸಿದ ಕಾಲ. ಗೋಕಾಕರು ಈ ಹೊಸ ಕಾವ್ಯದ ಪ್ರವರ್ತಕರಾದರೂ ಅದಕ್ಕೆ ಬಲ ತಂದ ಅಡಿಗರ 'ಚಂಡೆ ಮದ್ದಳೆ' ಪ್ರಕಟವಾದದ್ದು 1954ರಲ್ಲಿ. ಅದಕ್ಕೆ ಸುದೀರ್ಘವಾದ ಹಿನ್ನುಡಿ ಬರೆದು ಹೊಸ ಕಾವ್ಯದ ಲಕ್ಷಣವನ್ನು ಕುರಿತು ಚಿಂತಿಸಿದವರು ನರಸಿಂಹಮೂರ್ತಿ. ಇವರ ನವ್ಯಕಾವ್ಯ ಪ್ರತಿಪಾದನೆ ಅಡಿಗರಿಗೆ ಹೆಚ್ಚಿನ ಬಲ ತಂದುಕೊಟ್ಟಿತು. ನವ್ಯಕಾವ್ಯವನ್ನು ನೋಡುವವರ ದೃಷ್ಟಿಯನ್ನು ಬದಲಾಯಿಸಿತು. ಈ ಹಿನ್ನುಡಿ ಸುಮಾರು 15 ಪುಟಗಳಷ್ಟು ದೀರ್ಘವಾಗಿದ್ದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ದೀರ್ಘ ಹಿನ್ನುಡಿ ಮುನ್ನುಡಿಗಳ ಒಂದು ಪರಂಪರೆಯನ್ನೇ ಆರಂಭಿಸಿತು. ಬಿ.ಸಿ. ರಾಮಚಂದ್ರಶರ್ಮರ ಏಳು ಸುತ್ತಿನ ಕೋಟೆ, ನರಹಳ್ಳಿ ಬಾಲಸುಬ್ರಹ್ಮಣ್ಯರ ಸಿಂಗರ್ ಕತೆಗಳು, ಬಿ.ಎ.ಸನದಿ ಅವರ ಲಿಂಕನ್ ಕವಿತೆಗಳು ಮುಂತಾದ ನಾನಾ ಬಗೆಯ ಪುಸ್ತಕಗಳಿಗೆ ಬರೆದ ಮುನ್ನುಡಿಗಳಲ್ಲಿ ಈ ಪರಂಪರೆಯನ್ನು ಇವರು ಮುಂದುವರಿಸಿಕೊಂಡು ಬಂದರು. ಈ ಮುನ್ನುಡಿಗಳಲ್ಲಿ ಪುಸ್ತಕದ, ಪ್ರಕಾರದ ಸಮಗ್ರ ಪರಿಚಯವಿರುತ್ತದೆ. ಪ್ರತಿಬರಹವೂ ಇವರ ವ್ಯಾಪಕ ವಿದ್ವತ್ತನ್ನು ಸೂಚಿಸುತ್ತದೆ.

1968ರಷ್ಟು ಹಿಂದೆಯೇ ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಇವರು ಅತ್ಯುತ್ತಮ ಸಣ್ಣಕತೆಗಳು ಎಂಬ ಒಂದು ಸಂಗ್ರಹವನ್ನು ಸಿದ್ಧಪಡಿಸಿ ಕೊಟ್ಟಿದ್ದರು. ಈ ಸಂಗ್ರಹವನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಬೇಕೆಂದು ತೀರ್ಮಾನಿಸಿ, ಪರಿಷತ್ತು ಮೂರನೆಯ ಸಂಪುಟವನ್ನು ಮಾತ್ರ ಪ್ರಕಟಿಸಿದೆ. ಅ.ನ.ಕೃಷ್ಣರಾಯರು ಸಂಪಾದಿಸಿದ 'ಕಾಮನಬಿಲ್ಲು' ಸಂಕಲನದ ಅನಂತರ ಬಂದ ಅಧಿಕೃತ ಕಥಾ ಸಂಕಲನ ಇದೆಂದು ಹೇಳಬಹುದು. ಇದರ ಪ್ರಸ್ತಾವನೆಯಲ್ಲಿ ನರಸಿಂಹಮೂರ್ತಿ ಹೀಗೆ ಹೇಳಿದ್ದಾರೆ. "ಈಚಿನ ಹತ್ತು ವರ್ಷಗಳಲ್ಲಿ ಬಂದಿರುವ ಕಥೆಗಳಲ್ಲಿ ಆದಷ್ಟು ಮಟ್ಟಿಗೆ ಎಲ್ಲವನ್ನೂ ಓದಿ ಈ ದೃಷ್ಟಿಯಿಂದ ನನಗೆ ಉತ್ತಮ ಸಾಹಿತ್ಯವೆಂದೂ ಸಂಕಲನ ಯೋಗ್ಯವೆಂದೂ ಕಂಡುಬಂದ ನಲವತ್ತನ್ನು ಈ ಸಂಪುಟಕ್ಕೆ ಆರಿಸಿದ್ದೇನೆ. ಈ ನಲವತ್ತು ಕಥೆಗಳಲ್ಲಿ ಕಥಾಂಶಕ್ಕಿಂತ, ರಚನಾ ವಿಧಾನಕ್ಕಿಂತ, ಭಾಷಾ ಶೈಲಿಗಿಂತ ಇವುಗಳೆಲ್ಲ ಯಾವುದಕ್ಕೆ ಸಾಧಕಗಳು ಮಾತ್ರವೋ ಆ ಧ್ವನಿಗೇ ರಸಕ್ಕೇ ಪ್ರಾಶಸ್ತ್ಯ. ಇವುಗಳ ಕರ್ತೃಗಳು ಕಟ್ಟುಕಥೆಗಾರರಲ್ಲ, ಜೀವನ ದ್ರಷ್ಟಾರರು. ಜೀವನದ ಮೂಲ ಸಮಸ್ಯೆಗಳನ್ನು ಕುರಿತು, ಸಮಾಜದ ವ್ಯವಸ್ಥೆ ವ್ಯವಹಾರಗಳ ಕುರಿತು ಈ ಕತೆಗಳಲ್ಲಿ ಗಂಭೀರವಾದ ನಿಲುವನ್ನು ಕಾಣುತ್ತೇವೆ. ಇಂದಿನ ಬದುಕಿನ ವಿಮರ್ಶೆ, ವಿವರಣೆ ಒಮ್ಮೆಗೇ ಇಲ್ಲಿ ಸಿಗುತ್ತವೆ. ಅಲ್ಲದೆ ಎಲ್ಲ ಬಗೆಯ ವಿಷಯ, ಭಾವ, ಚಿಂತನೆಗಳನ್ನೂ ಚಿತ್ರಿಸಬಲ್ಲ ಶಕ್ತಿ ಕನ್ನಡ ಗದ್ಯಕ್ಕೆ ಎಷ್ಟಿದೆ, ಎಂಥ ಉತ್ತಮ ಕನ್ನಡಗದ್ಯ ಸೃಷ್ಟಿಯಾಗುತ್ತಿದೆ ಎಂದೂ ಈ ಸಂಪುಟದಲ್ಲಿ ಕಾಣಬಹುದು".

ಇವರು ಅನೇಕ ಸಾಹಿತ್ಯ ವಿಮರ್ಶೆಯ ಲೇಖನಗಳನ್ನು ಬರೆದಿದ್ದಾರೆ. ಆದರೆ ಒಂದೂ ಸಂಪುಟ ಪ್ರಕಟವಾಗಿಲ್ಲ. ಪ್ರಿಯದರ್ಶಿ ಮತ್ತು ಇತರ ಕವನಗಳು (1995) ಇವರ ಒಂದು ಕೃತಿ. ಇದರಲ್ಲಿ ರೋಮಾಂಟಿಕ್ ಸಂಪ್ರದಾಯಕ್ಕೇ ಹತ್ತಿರವಾದವೆಂದು ಹೇಳಬಹುದಾದ 35 ಕವಿತೆಗಳು ಸೇರಿವೆ. 'ಮಾಡರ್ನ್ ಕನ್ನಡ ಲಿಟರೇಚರ್' (1992) ಇವರ ಇನ್ನೊಂದು ಪುಸ್ತಕ; ಇದು ಕೇಂದ್ರ ಸಾಹಿತ್ಯ ಅಕಾಡೆಮಿಗೆ ಸಿದ್ಧಪಡಿಸಿದ ಬರೆಹದ ಸಂಕ್ಷಿಪ್ತ ರೂಪ. ಇವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಕನ್ನಡದಿಂದ ಇಂಗ್ಲಿಷ್‌ಗೆ ಅನೇಕ ಅನುವಾದಗಳನ್ನೂ ಮಾಡಿದ್ದಾರೆ. ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದ ಇವರ ಅನುವಾದಗಳಲ್ಲಿ

ಈ ನೆಲದ ಮಣ್ಣಿನ ವಾಸನೆ ನಿಚ್ಚಳವಾಗಿದೆ. ಇವರು 1999 ಜೂನ್ 12 ರಂದು ತಮ್ಮ ಮನೆಯ ಬಳಿಯೇ ಅಪಘಾತಕ್ಕೀಡಾಗಿ ನಿಧನ ಹೊಂದಿದರು. (ಎಚ್.ಎಂ.ಎನ್.ಎ.)

**ನರಸಿಂಹಯ್ಯ, ಆರ್.ಎಲ್.:** 1902– 1969. ಭೌತವಿಜ್ಞಾನ ಪ್ರಾಧ್ಯಾಪಕ ಮತ್ತು ಸಂಶೋಧಕರು. ಜನಪ್ರಿಯ ವಿಜ್ಞಾನ ವಾಙ್ಮಯ ಪ್ರಸಾರಕರು. ಕನ್ನಡ ವಿಜ್ಞಾನ ವಾಙ್ಮಯ ನಿರ್ಮಾಣಕ್ಕೆ ಮಹತ್ತರ ಕೊಡುಗೆಗಳನ್ನು ನೀಡಿದ ಲೇಖಕರು. ಇವರ ಪೂರ್ಣ ಹೆಸರು ರೊದ್ದಂ ಲಕ್ಷ್ಮೀನರಸಿಂಹಯ್ಯ. ಕನ್ನಡದಲ್ಲಿ ಪ್ರೌಢವಿಜ್ಞಾನ ವಿಷಯಗಳ ವಿವರಣೆಗೆ ಅಗತ್ಯವಾದ ಪಾರಿಭಾಷಿಕ ಪದಗಳನ್ನು ಆಯುವಲ್ಲಿ ಹಾಗೂ ಟಂಕಿಸುವಲ್ಲಿ, ಯುಕ್ತವಾದ ಶೈಲಿಯನ್ನು ರೂಪಿಸುವಲ್ಲಿ ಹಾಗೂ ನಿರೂಪಿಸುವಲ್ಲಿ ವಿಶೇಷವಾಗಿ ಶ್ರಮಿಸಿದರು. ಸ್ವತಂತ್ರ ರಚನೆ ಹಾಗೂ ಭಾಷಾಂತರ ಕೃತಿ ಎರಡರಲ್ಲೂ ಉದ್ದಾಮ ವಿಜ್ಞಾನ ಗ್ರಂಥಗಳನ್ನು ರಚಿಸಿ ಕನ್ನಡದಲ್ಲಿ ಉತ್ತಮ ವಿಜ್ಞಾನವಾಙ್ಮಯ ಹೇಗಿರಬೇಕು ಎನ್ನುವುದಕ್ಕೆ ಶಿಷ್ಟ ನಿದರ್ಶನಗಳನ್ನು ಒದಗಿಸಿದರು. ಜನಪ್ರಿಯ ವಿಜ್ಞಾನ ವಿಷಯಗಳ ಮೇಲೆ ಕನ್ನಡದಲ್ಲಿ ಭಾಷಣ ಮಾಡಿ ಜನತೆಯಲ್ಲಿ ವಿಜ್ಞಾನ ಪ್ರಸಾರಕ್ಕೆ ವಿಶೇಷವಾಗಿ ನೆರವಾದರು. ಕನ್ನಡವನ್ನು ವಿಜ್ಞಾನ ಮಾಧ್ಯಮವಾಗಿ ಪಳಗಿಸುವಲ್ಲಿ ಇವರು ನೀಡಿದ ದಿಗ್ದರ್ಶನ ನಿಜಕ್ಕೂ ಅದ್ವಿತೀಯವಾದುದು.

ಇವರು ಬರೆದು ಪ್ರಕಟಿಸಿದ ಶ್ರೇಷ್ಠ ಜನಪ್ರಿಯ ವಿಜ್ಞಾನ ಗ್ರಂಥಗಳ ಪೈಕಿ ಜಗತ್ತುಗಳ ಹುಟ್ಟು, ಸಾವು (1952). ಶಕ್ತಿ (1950), ನಕ್ಷತ್ರ ದರ್ಶನ (1954) ಇವನ್ನು ಹೆಸರಿಸಬೇಕು. ಇವರು ಅನುವಾದ ಮಾಡಿರುವ ಗ್ರಂಥಗಳ ಪೈಕಿ ರಿಖ್ಟ್ ಮೆಯರ್ ಮತ್ತು ಕೆನಾರ್ಡ್‌ರಂತ ಇಂಟ್ರಡಕ್ಷನ್ ಟು ಮೋಡರ್ನ್ ಫಿಸಿಕ್ಸ್ (ಆಧುನಿಕ ಭೌತವಿಜ್ಞಾನ ಪರಿಚಯ). ರಿಚೀ ಕಾಲ್ಡರ್ ರಚಿತ ಸೈನ್ಸ್ ಮೇಕ್ಸ್ ಸೆನ್ಸ್ (ವಿಜ್ಞಾನ ಬುದ್ಧಿಗಮ್ಯ) ಸೇರಿವೆ. ಇವರ ಒಟ್ಟು ಪ್ರಕಟಿತ ಗ್ರಂಥಗಳು ಹತ್ತು. ಪ್ರಕಟಿತ ಲೇಖನಗಳು ಮೂವತ್ತೈದು. ಇವರು ಸ್ವಂತವಾಗಿ ಹಾಗೂ ಇತರರೊಡನೆ ಸೇರಿ ಬರೆದ ಸಂಶೋಧನ ಪ್ರಬಂಧಗಳು ಹನ್ನೊಂದು. ಇವು ಭೌತವಿಜ್ಞಾನದ ವಿವಿಧ ಪ್ರಕಾರಗಳ ಮೇಲೆ ಇಂಗ್ಲಿಷಿನಲ್ಲಿ ಬರೆದಂಥವು.

ಸಂಶೋಧನ ಕ್ಷೇತ್ರದಲ್ಲಿ ಇವರಿಗೆ ಅಪಾರಾಸಕ್ತಿ ಇತ್ತು. ರೇಡಿಯೊ ಎಂಜಿನಿಯರಿಂಗ್, ನಿಸ್ತಂತುಶಾಸ್ತ್ರ, ಜೀವಭೌತವಿಜ್ಞಾನದ ಕೆಲವು ಶಾಖೆಗಳು ಈ ಕ್ಷೇತ್ರಗಳಲ್ಲಿ ಇವರು ಉತ್ತಮ ಸಂಶೋಧಕರ ಒಂದು ಸಂಕುಲವನ್ನೇ ಕಟ್ಟಿ ಬೆಳೆಸಿದ್ದಾರೆ. ವಿದ್ಯಾರ್ಥಿಗಳಿಗೆ ಇವರು ಪ್ರೀತಿಯ ಆರ್.ಎಲ್.ಎನ್. ಎಂದೇ ಪರಿಚಿತರು.

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಜನಿಸಿದ ಇವರು ಪ್ರೌಢಶಾಲಾ ಶಿಕ್ಷಣವನ್ನು ತುಮಕೂರಿನಲ್ಲಿ ಪಡೆದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎಸ್‌ಸಿ. ಪದವಿ ಗಳಿಸಿದರು (1923). ಮೂರು ವರ್ಷಕಾಲ ಶಾಲಾಧ್ಯಾಪಕರಾಗಿ ಅಂದಿನ ಮೈಸೂರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ದುಡಿದರು. ಭೌತವಿಜ್ಞಾನದಲ್ಲಿ ಉನ್ನತಾಧ್ಯಯನ ಮಾಡುವ ಉದ್ದೇಶದಿಂದ ಅಲಹಾಬಾದಿಗೆ ತೆರಳಿ ವಿಖ್ಯಾತ ವಿಜ್ಞಾನಿ ಮೇಘನಾದ ಸಹಾ ಅವರ ಶಿಷ್ಯತ್ವದಲ್ಲಿ ಎಂ.ಎಸ್‌ಸಿ. ಪದವೀಧರರಾದರು (1927). ಮುಂದಿನ ಸುಮಾರು ಎರಡು ವರ್ಷಗಳ ಕಾಲ ಪ್ರೌಢಶಾಲಾಧ್ಯಾಪಕರಾಗಿ ದುಡಿದು 1929ರಲ್ಲಿ ಸೆಂಟ್ರಲ್ ಕಾಲೇಜಿನ ಭೌತವಿಜ್ಞಾನ ವಿಭಾಗದಲ್ಲಿ ಅಧ್ಯಾಪಕರಾಗಿ ನೇಮಕಗೊಂಡು 1958ರಲ್ಲಿ ಆ ಹುದ್ದೆಯಿಂದ ನಿವೃತ್ತರಾಗುವ ತನಕವೂ ಅಲ್ಲಿಯೇ ಇದ್ದು ಸೆಂಟ್ರಲ್ ಕಾಲೇಜ್ ಭೌತವಿಜ್ಞಾನ ವಿಭಾಗವೆಂದರೆ ಆರ್.ಎಲ್.ಎನ್ ಎನ್ನುವಷ್ಟರ ಮಟ್ಟಿಗೆ ಕೀರ್ತಿಭಾಜನರಾದರು. ಆದರೆ ಇವರ ವಿದ್ವತ್ತು, ಸೇವೆ, ಬೋಧನ ಹಾಗೂ ಸಂಶೋಧನ ಸಾಮರ್ಥ್ಯ ಮುಂತಾದ ಗುಣಗಳಿಗೆ ಅನುಗುಣವಾದ ಬಡ್ತಿ ಉತ್ಕರ್ಷಗಳು ವೃತ್ತಿಜೀವನದಲ್ಲಿ ಇವರಿಗೆ ದೊರೆಯಲಿಲ್ಲ.

ಇವರು ನಿವೃತ್ತಿಯ ಅನಂತರ ಅನೇಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು. ಆಗತಾನೇ ರೂಪುಗೊಳ್ಳುತ್ತಿದ್ದ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕ, ವಿಶ್ವೇಶ್ವರಯ್ಯ ಔದ್ಯಮಿಕ ಮತ್ತು ತಾಂತ್ರಿಕ ಸಂಗ್ರಹಾಲಯದಲ್ಲಿ ವಿಶೇಷ ಸಲಹೆಗಾರ, ಬೆಂಗಳೂರಿನ ನ್ಯಾಶನಲ್ ಹಾಗೂ ಆಚಾರ್ಯ ಪಾಠಶಾಲಾ ಕಾಲೇಜುಗಳಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟಿನ ಪರಿಷ್ಕರಣ ಸಮಿತಿಯ ಸದಸ್ಯರಾಗಿ ದುಡಿದರು.

ಎಂ.ಎಸ್‌ಸಿ. ಅಧ್ಯಯನದ ವೇಳೆ ಇವರು ನಿಸ್ತಂತುಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ಪಡೆದಿದ್ದರು. ಈ ಶಾಸ್ತ್ರವನ್ನು ಇವರು ವಿದ್ಯಾರ್ಥಿಗಳಿಗೆ ಪಾಂಡಿತ್ಯಪೂರ್ಣವಾಗಿ ವಿವರಿಸಿ ಕುತೂಹಲ ಮೊಳೆಸುತ್ತಿದ್ದರು. ಬೆಂಗಳೂರಿನ ಜಯಚಾಮರಾಜೇಂದ್ರ ವೃತ್ತಿಶಿಕ್ಷಣಶಾಲೆಯಲ್ಲಿ ಹದಿನೈದು ವರ್ಷಗಳ ಕಾಲ (1945– 60) ಇವರು ರೇಡಿಯೊ ಎಂಜಿನಿಯರಿಂಗ್ ಶಾಸ್ತ್ರವನ್ನು ಪಾಠಮಾಡಿದರು. 1954ರಲ್ಲಿ ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಆಗ ಇವರು ಈ ಸಂಸ್ಥೆಯ ಜೀವ ಭೌತವಿಜ್ಞಾನ ವಿಭಾಗದಲ್ಲಿ ಬೋಧಕರಾಗಿಯೂ ಎಲೆಕ್ಟ್ರೊಎನ್ಸೆಫಲೊಗ್ರಾಫ್ ಯಂತ್ರದ ಮೇಲ್ವಿಚಾರಕರಾಗಿಯೂ ಸೇವೆಸಲ್ಲಿಸಿದರು.

ಇವರದು ಅನನುಕರಣೀಯ ಜೀವನ. ತೀಕ್ಷ್ಣಬುದ್ಧಿಶಕ್ತಿ, ಆಳವಾದ ಪಾಂಡಿತ್ಯ, ಸಿದ್ಧಲೇಖನ, ಕಲೆ, ಉತ್ತಮ ಕಲಾಭಿಜ್ಞತೆ, ವೈಯಕ್ತಿಕ ಜೀವನದಲ್ಲಿ ಚಾರಿತ್ರ್ಯ, ಪ್ರಾಮಾಣಿಕತೆ, ವ್ಯವಹಾರದಲ್ಲಿ ಸ್ನೇಹಪರತೆ ಇವೆಲ್ಲವನ್ನೂ ಒಬ್ಬ ವ್ಯಕ್ತಿಯಲ್ಲಿ ಕಾಣುವುದು ದುರ್ಲಭ. ನರಸಿಂಹಯ್ಯನವರು ಅಂಥ ವ್ಯಕ್ತಿ ಆಗಿದ್ದರು. *

**ನರಸಿಂಹಯ್ಯ, ಎಚ್.:** 1920–2005. ಸುಪ್ರಸಿದ್ಧ ಶಿಕ್ಷಣ ತಜ್ಞ, ವಿಚಾರವಾದಿ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಅಪ್ಪಟ ಗಾಂಧೀವಾದಿ. ಡಾ.ಎಚ್.ಎನ್. ಎಂದೇ ಚಿರಪರಿಚಿತರು. ಕೋಲಾರ ಜಿಲ್ಲೆ ಗೌರೀಬಿದನೂರು ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 1920 ಜೂನ್ 6 ರಂದು ಜನಿಸಿದರು. ತಂದೆ ಹನುಮಂತಪ್ಪ, ತಾಯಿ ವೆಂಕಟಮ್ಮ.

ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಹೊಸೂರಿನಲ್ಲಿ ಮುಗಿಸಿ ಪ್ರೌಢಶಾಲಾ ಶಿಕ್ಷಣಕ್ಕೆಂದು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಸೇರಿದರು (1935). 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದರ ಪರಿಣಾಮವಾಗಿ ಬೆಂಗಳೂರು, ಮೈಸೂರು ಮತ್ತು ಪುಣೆಯ ಯರವಾಡ ಜೈಲಿನಲ್ಲಿ ಒಟ್ಟು ಸುಮಾರು 9 ತಿಂಗಳ ಕಾರಾಗೃಹವಾಸ ಅನುಭವಿಸಿದರು. ಇದರಿಂದಾಗಿ ಎರಡು ವರ್ಷಗಳ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ. ಅನಂತರ ವಿದ್ಯಾಭ್ಯಾಸ ಮುಂದುವರಿಸಿ ಭೌತಶಾಸ್ತ್ರದ ಬಿ.ಎಸ್ಸಿ ಆನರ್ಸ್ ಮತ್ತು ಎಂ.ಎಸ್ಸಿ. ಪದವಿಗಳನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಪಡೆದರು. 1946ರಲ್ಲಿ ಬೆಂಗಳೂರು ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿ ಸೇರಿ, ಪ್ರಾಧ್ಯಾಪಕರಾಗಿ ಹನ್ನೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅನಂತರ ಅದೇ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅಮೆರಿಕದ ಓಹಿಯೊ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ನ್ಯೂಕ್ಲಿಯರ್ ಫಿಸಿಕ್ಸ್‌ನಲ್ಲಿ ಡಾಕ್ಟೊರೇಟ್ ಪದವಿ ಗಳಿಸಿದ (1957–60) ಇವರು ಸದರನ್ ಇಲಿನಾಯ್ಸ್ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷಕಾಲ (1967–68) ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ

ಉಪಕುಲಪತಿಗಳಾಗಿ ನೇಮಕಗೊಂಡು ವಿಶ್ವವಿದ್ಯಾಲಯದ ಪುರೋಭಿವೃದ್ಧಿಗೆ ಶ್ರಮಿಸಿದರು (1972–77). 1975 ರಿಂದ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷರಾಗಿದ್ದರು. ತಮ್ಮ ಜೀವನದ ಬಹುಭಾಗವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟ ಇವರು ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಕಾರಣರಾದರು. ಗೌರಿಬಿದನೂರು ಮತ್ತು ಬಾಗೇಪಲ್ಲಿಯಲ್ಲಿ ನ್ಯಾಷನಲ್ ಕಾಲೇಜುಗಳು, ಹೊಸೂರು, ಯಲ್ದೂರು, ಮುಡಿಯನೂರು, ಸುಬ್ರಹ್ಮಣ್ಯಪುರಗಳಲ್ಲಿ ನ್ಯಾಷನಲ್ ಹೈಸ್ಕೂಲುಗಳ ಸ್ಥಾಪನೆಯಿಂದಾಗಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ದೊರಕುವಂತೆ ಮಾಡಿದರು.



ಇವರಿಗೆ ವಿಜ್ಞಾನದಲ್ಲಿ ಅಚಲವಾದ ನಂಬಿಕೆ. ಶೂನ್ಯದಿಂದ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ: ಮೌಢ್ಯದ ವಿರುದ್ಧ ಸತತ ಹೋರಾಟ ಅಗತ್ಯ. ಜನರ ಅಜ್ಞಾನವನ್ನು ಬಂಡವಾಳವನ್ನಾಗಿಸಿಕೊಂಡು ಶೋಷಣೆ ಮಾಡುವವರ ವಿರುದ್ಧ ಹೋರಾಟ ಮಾತ್ರವಲ್ಲ ಅಂಥವರ ಪೊಳ್ಳುತನವನ್ನು ಬಯಲಿಗೆಳೆಯಬೇಕು ಹಾಗೂ ಅವರ ಹಿಡಿತದಿಂದ ಮುಗ್ಧ ಜನತೆಯನ್ನು ರಕ್ಷಿಸಬೇಕೆಂದು ಇವರ ನಿಲವು. ಬೆಂಗಳೂರು ಸೈನ್ಸ್ ಫೋರಂ ಎಂಬುದು ವಿಜ್ಞಾನದ ಮಹತ್ತ್ವವನ್ನು ಪರಿಚಯಿಸಲೆಂದು ಹುಟ್ಟಿಕೊಂಡ ಇವರ ಮತ್ತೊಂದು ಸಂಸ್ಥೆ. ಎಚ್.ಎನ್. ಇದರ ಸಂಸ್ಥಾಪಕ ಅಧ್ಯಕ್ಷರು (1962). ಬುದ್ಧ, ಐನ್‌ಸ್ಟೈನ್, ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧೀ, ನೆಹರು ಇವರ ತತ್ತ್ವಗಳಿಂದ ಪ್ರಭಾವಿತರಾಗಿದ್ದ ಇವರು ಕೆಲಕಾಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು (1995). ಸಂಗೀತ, ನಾಟಕ, ನೃತ್ಯ ಮುಂತಾದ ಲಲಿತಕಲೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಬೆಂಗಳೂರಿನ ಲಲಿತಕಲಾಪರಿಷತ್ತನ್ನು ಸ್ಥಾಪಿಸಿದರಲ್ಲದೆ (1962) ಅದರ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು.

ತೆರೆದಮನ ಮತ್ತು ಹೋರಾಟದ ಹಾದಿಯಲ್ಲಿ ಇವು ಇವರ ಪ್ರಮುಖ ಬರೆಹಗಳು. ಇವಲ್ಲದೆ ಅನೇಕ ವಿಚಾರಪೂರಿತ ಹಾಗೂ ಹಾಸ್ಯಭರಿತ ಬಿಡಿಲೇಖನಗಳು ಕನ್ನಡ ಹಾಗೂ ಇಂಗ್ಲಿಷಿನಲ್ಲಿ ಪ್ರಕಟಗೊಂಡಿವೆ. 'ತೆರೆದಮನ' ವಿಚಾರ, ನೆನಪುಗಳ ಹಾಗೂ ಲಲಿತ ಪ್ರಬಂಧಗಳ ಸಂಕಲನವಾಗಿದ್ದು ಕನ್ನಡ ವಿಚಾರ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆಯಾಗಿದೆ. ಇದನ್ನು ವಿಚಾರವಾದಿಗಳ ಬೈಬಲ್ ಎಂದೂ ಕರೆಯಲಾಗಿದೆ. 'ಹೋರಾಟದ ಹಾದಿಯಲ್ಲಿ' ಇವರ ಆತ್ಮಕಥೆ.

ಇವರು ಕರ್ನಾಟಕ ವಿಧಾನ ಪರಿಷತ್ತಿನ ನಾಮಕರಣ ಸದಸ್ಯರಾಗಿದ್ದರು (1980–86). ಇವರಿಗೆ ಹಲವು ಪ್ರಶಸ್ತಿ ಗೌರವಗಳು ಸಂದಿವೆ. ಪದ್ಮಭೂಷಣ (1984), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1968), ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಕ್ಕೆ ನೀಡಿದ ತಾಮ್ರಪತ್ರ (1973), ಗುಲ್ಬರ್ಗ ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್ (1988), ದೇವರಾಜ್ ಅರಸು ಪ್ರಶಸ್ತಿ (1994), ಅಮೆರಿಕದಲ್ಲಿ ಇರುವ ಪ್ರಕೃತ್ಯತೀತ ಘಟನೆಗಳ ಸಮಿತಿಯ ಫೆಲೋ (ಕಮಿಟಿ ಫಾರ್ ದಿ ಸೈಂಟಿಫಿಕ್ ಇನ್ವೆಸ್ಟಿಗೇಶನ್ ಕ್ಲೈಮ್ಸ್ ಆಫ್ ದಿ ಪಾರಾನಾರ್ಮಲ್) ಇವು ಮುಖ್ಯವಾದವು. ಇವರು 2005 ಜನವರಿ 31ರಂದು ನಿಧನರಾದರು.

**(ಎಸ್.ಎನ್.ಜಿ.)**

**ನರಸಿಂಹಯ್ಯ, ಎನ್.:** 1925– . ಕನ್ನಡದ ಪತ್ತೇದಾರಿ ಕಾದಂಬರಿಗಳ ಜನಪ್ರಿಯ ಲೇಖಕ. 1925 ಸೆಪ್ಟಂಬರ್ 18 ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಜಿ.ನಂಜಪ್ಪ, ತಾಯಿ ಎಲ್ಲಮ್ಮ. ಇವರ ಮನೆತನ ಮೂಲತಃ ಚಿತ್ರದುರ್ಗ. ಇವರ ತಂದೆ ಲೇಖನಸಾಮಗ್ರಿ ಅಂಗಡಿ ನಡೆಸುತ್ತಿದ್ದರು. ನರಸಿಂಹಯ್ಯನವರು ನಾಲ್ಕನೆಯ ಇಯತ್ತೆಯಲ್ಲಿದ್ದಾಗ ತಂದೆ ತೀರಿಕೊಂಡರು. ಇವರು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಇವರು ಸುಲ್ತಾನ ಪೇಟೆಯ ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದಾಗ ಚಿಕ್ಕಪ್ಪನೂ ತೀರಿಕೊಂಡರು. ಬೇರೆ ದಾರಿಯಿಲ್ಲದೆ ತಾಯಿಯ ತೌರುಮನೆಯಾದ ಚಿಕ್ಕಮಗಳೂರಿಗೆ ಹೋಗಬೇಕಾಯಿತು. ಬಡತನದಿಂದಾಗಿ ಇವರು ದರ್ಜಿಯ ಕೆಲಸಕ್ಕೆ ಸೇರಿಕೊಂಡರು. ಅದೇ ಸಮಯದಲ್ಲಿ ಇಂಡಸ್ಟ್ರೀಯಲ್ ಶಾಲೆಯಲ್ಲಿ ಓದಿದರು. ತಾಯಿಯ ಜೊತೆಗೆ ಇವರೂ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಮುಂದೆ ಇವರು ಹಲವಾರು ಖಾಸಗಿ ಸಾರಿಗೆ ಸಂಸ್ಥೆಗಳಲ್ಲಿ ಮೋಟರ್ ಒರಸುವುದು ಮುಂತಾದ ಕೆಲಸ ಮಾಡಿ, ಪ್ರಥಮ ಚಿಕಿತ್ಸೆಯ ತರಬೇತಿ ಪಡೆದು ಬಸ್ ನಿರ್ವಾಹಕರಾದರು.

ಚಿಕ್ಕಮಗಳೂರಿನಲ್ಲಿ ಹಾವೇರಿಯ ನಾಗರತ್ನಮ್ಮ ಅವರೊಂದಿಗೆ ಇವರ ಮದುವೆಯಾದ ಅನಂತರ (1947). 1948ರ ಡಿಸೆಂಬರ್‌ನಲ್ಲಿ ಸಂಸಾರ ಸಮೇತ ಬೆಂಗಳೂರಿನಲ್ಲಿ ನೆಲಸಿದರು. ಮೊದಲಿನಿಂದಲೂ ಓದುವ ಹವ್ಯಾಸ ಬೆಳೆಸಿಕೊಂಡಿದ್ದ ಇವರು ಟಿ. ನಾರಾಯಣ ಅಯ್ಯಂಗಾರ್ ಎಂಬ ಹಿತೈಷಿಗಳನ್ನು ಕಂಡು ಪುಸ್ತಕ ಬರೆಯುವ ಆಸೆ ವ್ಯಕ್ತಪಡಿಸಿದರು. ನರಸಿಂಹಯ್ಯನವರ ತಂದೆಯೂ ಗ್ರಂಥ ರಚಿಸುತ್ತಿದ್ದರು. ಅವರ ಕೆಲವು ಗ್ರಂಥಗಳು ಪ್ರಕಟವಾಗಿವೆ. ನರಸಿಂಹಯ್ಯನವರ ಅಜ್ಜ ಆಶುಕವಿಗಳಾಗಿದ್ದರು. ನರಸಿಂಹಯ್ಯನವರು ಮೊದಲಿಗೆ ಯಾವ ಪ್ರತಿಫಲವೂ ಇಲ್ಲದೆ ಒಂಬತ್ತು ಪುಸ್ತಕಗಳನ್ನು ಬರೆದುಕೊಟ್ಟರು. ಇವು ನರಸಿಂಹಯ್ಯನವರಿಗೆ ಜನಪ್ರಿಯತೆ ದೊರಕಿಸಿಕೊಟ್ಟವು.

1952 ರಲ್ಲಿ ಬರೆಯಲು ಪ್ರಾರಂಭಿಸಿದ ನರಸಿಂಹಯ್ಯನವರು 1981 ರವರೆಗೆ 520 ಕೃತಿಗಳನ್ನು ರಚಿಸಿದರು. ಅದರಲ್ಲಿ ಪತ್ತೇದಾರಿ ಕಾದಂಬರಿಗಳು 450. ಇವಲ್ಲದೆ ಸಾಮಾಜಿಕ ಕಾದಂಬರಿಗಳು, ಹರಟೆಗಳು, ಐತಿಹಾಸಿಕ ಕಾದಂಬರಿಗಳೂ ಇವೆ. ಇವರು ಬರೆದ ಭಯಂಕರ ಭೈರಾಗಿ ಎಂಬ ಕೃತಿ ಎಂಟು ಮುದ್ರಣಗಳನ್ನು ಕಂಡಿದೆ. ಅದರ 35,000 ಪ್ರತಿಗಳು ಮಾರಾಟವಾಗಿವೆ. ಇವರ ಪತ್ತೇದಾರರು ಮೂವರು: ಪುರುಷೋತ್ತಮ, ಮಧುಸೂದನ ಮತ್ತು ಅರಿಂಜಯ. ನರಸಿಂಹಯ್ಯನವರ ಎಲ್ಲ ಪತ್ತೇದಾರಿ ಕಾದಂಬರಿಗಳಲ್ಲಿ ಇವರೇ ಕಾಣಿಸಿಕೊಳ್ಳುತ್ತಾರೆ. ಅಪರಾಧ ಪತ್ತೆ ಕಾರ್ಯದಲ್ಲಿ ತೊಡಗುತ್ತಾರೆ.

ಚೋರ ಚಕ್ರವರ್ತಿ, ಪಂಚರಂಗಿ ಪದ್ಮಿನಿ, ಪತ್ತೇದಾರನ ಪರಾಜಯ, ಮಾಯಾವಿ ಮಧುಸೂದನ, ಮಾಯವಾದ ಮಹಾರಾಣಿ, ಕಾಳರಾತ್ರಿಯ ಖದೀಮ, ಮೋಜಿನ ಮೋಹನಾಂಗಿ, ಭಯಂಕರ ಭೂತ, ಮಳೆಯಾಳಿ ಮಾಂತ್ರಿಕ, ಮುಂಬಯಿ ದಗಾಕೋರ, ಪಂಜರದ ಪಿಶಾಚಿ, ಮಾಟಗಾತಿಯ ಮಗಳು, ಭಯಂಕರ ಭವಾನಿ, ಮಾಂತ್ರಿಕನ ಕೈಗೊಂಬೆ, ಪಂಜುಳ್ಳಿ ಪಿಶಾಚಿ, ಭಯಂಕರ ಪಿಶಾಚಿ ಮೊದಲಾದ ಇವರ ಅನೇಕ ಪತ್ತೇದಾರಿ ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿವೆ.

ಇವಲ್ಲದೆ ಗಿಳಿ ಕಚ್ಚಿದ ಹಣ್ಣು, ಅತ್ತೆ ಮನೆಯ ಅಳಿಯ, ಪುರೋಹಿತನ ಮಗಳು, ತುಪ್ಪದ ಬಿಂದಿಗೆ, ಗರತಿಯಾದ ಸೂಳೆ, ಬಂಜೆಯ ಮಗಳು, ಹುಳು ಕೊರೆದ ಹೂ, ವೇದ ಓದಿದ ಕೋಣ, ರಾಜ ಮೆಚ್ಚಿದ ರಂಬೆ ಮುಂತಾದ ಐವತ್ತು ಸಾಮಾಜಿಕ ಕಾದಂಬರಿಗಳನ್ನೂ ಈರದಳವಾಯಿ

ಎಂಬ ಐತಿಹಾಸಿಕ ಕಾದಂಬರಿಯನ್ನೂ ಬರೆದಿದ್ದಾರೆ. ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗದ ಮಾದರಿಯಲ್ಲಿ ಇವರು ಬರೆದಿರುವ ಚತುಷ್ಪದಿಗಳ ಸಂಗ್ರಹ 'ಬೊಮ್ಮನ ಬುರುಡೆ'. ನರಸಿಂಹಯ್ಯನವರು ಸಾಮಾನ್ಯ ಜ್ಞಾನಾರ್ಜನೆಗೆ ಬೇಕಾದ ಪುಸ್ತಕಗಳನ್ನೂ ಹಾಸ್ಯ ಚಟಾಕಿಗಳ ಸಂಗ್ರಹವನ್ನೂ ಬರೆದಿದ್ದಾರೆ. ಇವರ ಆತ್ಮಕಥೆಯ ಹೆಸರು 'ನೋವು ನಲಿವು'.

ಇವರ ಅಂತರಿಕ್ಷದಲ್ಲಿ ಅರಿಂಜಯ ಎಂಬ ಕಾದಂಬರಿಗೆ ವೀರೇಂದ್ರ ಹೆಗಡೆ ಚಿನ್ನದ ಪದಕ ದೊರೆತಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1997), ಕರ್ನಾಟಕ ಪತ್ರಿಕಾ ಅಕಾಡೆಮಿ ಮತ್ತು ಸಾಹಿತ್ಯ ಮಿತ್ರವೃಂದದ ಸಾಹಿತ್ಯರತ್ನ ಪ್ರಶಸ್ತಿಗಳು ಇವರಿಗೆ ಸಂದಿವೆ. ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರಿಗೆ ಪತ್ತೇದಾರಿ ಕಾದಂಬರಿಕಾರ ಪ್ರಶಸ್ತಿ ನೀಡಿ ಗೌರವಿಸಲಾಯಿತು (1992). ಅನೇಕ ಸಂಘ ಸಂಸ್ಥೆಗಳು ಇವರ ಕನ್ನಡ ಸೇವೆಯನ್ನು ಗುರುತಿಸಿ ಗೌರವಿಸಿವೆ. (ಎಸ್.ಎಂ.ಕೆ.)

**ನರಸಿಂಹಯ್ಯ, ಸಿ.ಡಿ.:** 1921–2005. ಭಾರತೀಯ ಇಂಗ್ಲಿಷ್‌ನ ಪ್ರಸಿದ್ಧ ಲೇಖಕರು. ಇಂಗ್ಲಿಷ್ ಸಾಹಿತ್ಯ ಬೋಧನೆ ಹಾಗೂ ಖಚಿತ ವಿಮರ್ಶಾ ನಿಲವುಗಳಿಂದ ಭಾರತೀಯ ಸಾಹಿತ್ಯ ವಲಯದಲ್ಲಿ ಸಿಡಿಎನ್ ಎಂದೇ ಖ್ಯಾತರಾದ ಇವರು ಬೆಂಗಳೂರಿನ ಸಮೀಪದ ರಾಮನಗರದಲ್ಲಿ (ಹಿಂದಿನ ಕ್ಲೋಸ್‌ಪೇಟೆ) 1921 ಮೇ ತಿಂಗಳಿನಲ್ಲಿ ಜನಿಸಿದರು. ಮೈಸೂರು ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ವ್ಯಾಸಂಗ ಮುಗಿಸಿ ಅನಂತರದಲ್ಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ರಾಕ್‌ಫೆಲ್ಲರ್ ಶಿಷ್ಯವೇತನ ಪಡೆದುಕೊಂಡರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿ 1950–79 ರವರೆಗೆ ಸೇವೆ ಸಲ್ಲಿಸಿದರು. 1957–62 ರವರೆಗೂ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಪ್ರಾಂಶುಪಾಲ ರಾಗಿ ಸೇವೆ ಸಲ್ಲಿಸಿದರು. ನಿವೃತ್ತಿಯಾದ ಬಳಿಕ ಇಂಗ್ಲಿಷ್ ಸಾಹಿತ್ಯ ಹಾಗೂ ಸಂಸ್ಕೃತಿ, ಕಲೆಯ ಅಧ್ಯಯನ ಕೇಂದ್ರ ಸಂಸ್ಥೆಯಾದ ತಾವೇ ಸ್ಥಾಪಿಸಿದ ಧ್ವನ್ಯಾಲೋಕದ ನಿರ್ದೇಶಕರಾಗಿದ್ದರು.

ಇಂಗ್ಲಿಷ್ ಸಾಹಿತ್ಯದ ಅಧ್ಯಯನಕ್ಕೆ ಸಿಡಿಎನ್ ಅವರ ಕೊಡುಗೆ ಅಪಾರ. ಜೊತೆಗೇ ಇವರ ಪ್ರಭಾವಯುತ ಸಾಹಿತ್ಯ ಗರಡಿಯಲ್ಲಿ ಪಳಗಿದ ಅನೇಕ ಸಾಹಿತಿಗಳು ಕನ್ನಡ ಸಾಹಿತ್ಯದಲ್ಲಿ 'ನವ್ಯ' ಕ್ರಾಂತಿಯನ್ನು ತಂದವರೆಂದರೆ ಅತಿಶಯೋಕ್ತಿಯಾಗಲಾರದು. ಎ.ಕೆ. ರಾಮಾನುಜನ್, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್ ಮೊದಲಾದವರು ಸಿಡಿಎನ್ ಅವರ ಪ್ರಭಾವಕ್ಕೆ ಒಳಗಾದವರೇ. ಸಿಡಿಎನ್ ಅವರು ತಮ್ಮ ವ್ಯಕ್ತಿತ್ವ ವಿಕಾಸ ಹೊಂದಲು ಪುಟವಿಟ್ಟದ್ದು ಕೇಂಬ್ರಿಡ್ಜ್‌ನಲ್ಲಿ ಹೆಸರಾಂತ ವಿಮರ್ಶಕ ಎಫ್.ಆರ್. ಲಿವಿಸ್‌ನ ಕೈಕೆಳಗಿನ ಶಿಷ್ಯವೃತ್ತಿ, "ಸಾಹಿತ್ಯವೆಂದರೆ ಜೀವನದ ಬಿಂಬಮಾತ್ರವಷ್ಟೇ ಅಲ್ಲ, ಅದು ಜೀವನವೇ. ಸಾಹಿತ್ಯದ ಏಕೈಕ ಮಾನದಂಡವೆಂದರೆ ಜೀವನವೇ– ಹಾಗಾಗಿ ಕಠೋರವೆನಿಸಿದರೂ ವಸ್ತುನಿಷ್ಠ ಹಾಗೂ ಸತ್ಯನಿಷ್ಠ ಮಾನದಂಡಗಳನ್ನು ವೃತ್ತಿ ಜೀವನದಲ್ಲಿ ಅಳವಡಿಸುತ್ತ ಸಾಗಬೇಕು. ಮಾನವ, ಶಾಶ್ವತ ಮೌಲ್ಯಗಳು ಸಾರ್ವಕಾಲಿಕವಾಗಿರುತ್ತವೆ. ಅವನ್ನು ಅರ್ಥೈಸಿಕೊಳ್ಳುವುದು, ಅಳವಡಿಸುವುದು ನಮ್ಮ ಜವಾಬ್ದಾರಿ" ಇವು ಲಿವಿಸ್‌ನ ನಿಲುವು. ಅವೆಲ್ಲವನ್ನೂ ಜೀರ್ಣಿಸಿಕೊಂಡು ಸಿಡಿಎನ್ ಅದೇ ರೀತಿ ಜೀವನ ನಡೆಸಿದವರು. ಸಂದೇಹ, ಪೂರ್ವಗ್ರಹ ಪೀಡಿತ ಓದುಗನನ್ನು ಕೂಡ ಕೃತಿಯನ್ನು ಕೂಲಂಕಷವಾಗಿ ನೋಡುವಂತೆ ಮಾಡುವ ಕರ್ತವ್ಯ ವಿಮರ್ಶಕನದ್ದು. ಇದು ಸಿಡಿಎನ್ ಅವರ ನಿಲುವು.

ಅಮೆರಿಕದ ಹಾಗೂ ಕಾಮನ್‌ವೆಲ್ತ್ ಸಾಹಿತ್ಯದಂತಹ, ಹೆಚ್ಚು ಮರೆಯಲ್ಲಿಯೇ ಉಳಿದುಬಿಟ್ಟಂತಹ ಸಾಹಿತ್ಯಗಳತ್ತ ಸಿಡಿಎನ್ ಗಮನ ಹರಿಸಿ ಭಾರತದ ವಿದ್ವಾಂಸರ ಗಮನ ಸೆಳೆಯುವಲ್ಲಿ ಸಫಲರಾದರೂ ಅವರ ಬಹುಪಾಲು ಕಾರ್ಯಕ್ಷೇತ್ರ ಭಾರತದ ಇಂಗ್ಲಿಷ್ ಸಾಹಿತ್ಯದ ಮೇಲೆಯೇ. ಈ ನಿಟ್ಟಿನಲ್ಲಿ ಇವರ ಮೇರು ಕೃತಿ 'ದಿ ಸ್ವಾನ್ ಅಂಡ್ ದಿ ಈಗಲ್' (1969). ಗರುಡದಂತಹ ದೂರದೃಷ್ಟಿ ಹಾಗೂ ಹಂಸದಂತಹ ಕ್ಷೀರನ್ಯಾಯದಂತಿರಬೇಕು. ವಿಮರ್ಶೆಯೆಂಬುದು ಸಿಡಿಎನ್ ಅವರ ಕೃತಿಯ ಶೀರ್ಷಿಕೆಯಲ್ಲೇ ಎದ್ದು ಕಾಣುತ್ತದೆ. ಇದರಲ್ಲೂ ಹಾಗೂ ಇನ್ನಿತರ ಕೃತಿಯಲ್ಲೂ ಸಿಡಿಎನ್ ಅವರಿಗೆ ಪಂಡಿತ್ ನೆಹರೂರವರ ಬರೆವಣಿಗೆಯ ಮೇಲಿನ ಅಭಿಮಾನ ಅಪಾರ. ಇದೇ ಕೃತಿಯಲ್ಲಿ ಭಾರತೀಯ ಇಂಗ್ಲಿಷ್ ಕಾದಂಬರಿಲೋಕದ ದಿಗ್ಗಜರಾದ ರಾಜಾರಾವ್, ಮುಲ್ಕ್‌ರಾಜ್ ಆನಂದ್ ಹಾಗೂ ಆರ್.ಕೆ. ನಾರಾಯಣ್‌ರವರ ವೈಯಕ್ತಿಕ ಸಾಧನೆಗಳತ್ತ ಲೇಖನಿ ಹರಿಸಿ, ಅವರ ಮೌಲ್ಯಮಾಪನ ಮಾಡುವುದರಲ್ಲಿ ಯಶಸ್ವಿಯಾದರು.

ರಾಜಾರಾವ್ ಅವರ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವಲ್ಲಿ ಸಿಡಿಎನ್ ಅವರ ಕೃಷಿ ಅಪರೂಪವಾದದ್ದು. ರಾಜಾರಾವ್‌ರ ಮೊದಲ ಕಾದಂಬರಿ ಕಾಂತಪುರದಿಂದ ಹಿಡಿದು ದಿ ಸರ್ಪೆಂಟ್ ಅಂಡ್ ದಿ ರೋಪ್, ದಿ ಕ್ಯಾಟ್ ಅಂಡ್ ಷೇಕ್ಸ್‌ಪಿಯರ್ ಅಂತಹ ಅತ್ಯಂತ ಕ್ಲಿಷ್ಟವಾದ ತಾತ್ತ್ವಿಕ ದೃಷ್ಟಿಯುಳ್ಳ ಕಾದಂಬರಿಯನ್ನೂ ಸಿಡಿಎನ್ ಎಳೆಎಳೆಯಾಗಿ ಬಿಡಿಸಿ ಬೆಳಕು ಚೆಲ್ಲುತ್ತಾರೆ. ಸುಲಭದಲ್ಲಿ ಓದುಗನ ಕೈಗೆ ಸಿಗದ ಈ ಕಾದಂಬರಿಗಳ ವೈಶಿಷ್ಟ್ಯವನ್ನು ಓದುಗನಿಗೆ ತೋರುತ್ತಲೇ ಮೂಲ ಕೃತಿಯನ್ನು ಮತ್ತೆ ಮತ್ತೆ ಓದಲು ಪ್ರಚೋದಿಸುತ್ತಾರೆ.

ರಾಷ್ಟ್ರ ಸಾಹಿತ್ಯದ ಕಲ್ಪನೆ ಸಿಡಿಎನ್‌ರವರಿಗೆ ಪ್ರಿಯವಾದದ್ದು. ಈ ಪರಿಕಲ್ಪನೆ ಹೇಗೆ ಭಾರತದ ವಿವಿಧ ಭಾಷಾ ಸಾಹಿತ್ಯದಲ್ಲಿ ಬೇರ್ಪಡಿಸಲಾಗದಂತೆ ಅಂತರ್ಗತವಾಗಿ ಹೋಗಿರುವುದನ್ನು ಪ್ರಸ್ತಾಪಿಸುತ್ತ ಈ ವೈಶಿಷ್ಟ್ಯ ಇಂಗ್ಲಿಷ್ ಸಾಹಿತ್ಯದ ಮೂಲ ನೆಲೆ ಎಂದು ಇವರು ಗುರುತಿಸುತ್ತಾರೆ. ಈ ಭಾರತೀಯ ಸಂವೇದನೆಯೇ ಭಾರತೀಯ ಸಾಹಿತ್ಯದ ವಿಶಿಷ್ಟತೆ ಎಂದವರು ಗುರುತಿಸುತ್ತಾ ಅಖಂಡ ಭಾರತೀಯ ಸಂಪ್ರದಾಯವನ್ನು ಜೀವಂತವಾಗಿ ಉಳಿಸಿರುವುದು ಇದೇ ಎಂದು ನುಡಿಯುತ್ತಾರೆ. ಆದರೆ ಪ್ರಸ್ತುತ ಕಾಲದಲ್ಲಿ ಈ ಎದೆ ತೆಗೆದುಕೊಳ್ಳುವಿಕೆ ಒಣ ಪ್ರತಿಷ್ಠೆಯ ಪ್ರತಿಬಿಂಬವಷ್ಟೇ ಆಗಿ ಅನುಕರಣೆ ಅಷ್ಟೇ ಆಗಿದೆ ಎಂದು ವಿಷಾದಿಸುತ್ತಾರೆ.

ಸಿಡಿಎನ್ ಅವರ ಜೀವನ, ಸಾಹಿತ್ಯ ದೃಷ್ಟಿಯ ಮೇಲೆ ಇವರ ಗುರುಗಳಾದ ಲಿವಿಸ್‌ರ ಛಾಪು ಗಾಢವಾಗಿ ಮೂಡಿದೆ. ಅಂದಪಕ್ಷಕ್ಕೆ ಸಿಡಿಎನ್ ಲೀವಿಸ್‌ರ ಸಾಹಿತ್ಯ ದೃಷ್ಟಿಯನ್ನು ಸಾರಾಸಗಟಾಗಿ ಸ್ವೀಕರಿಸಿ ಅದನ್ನು ಭಾರತೀಯ ಸಾಹಿತ್ಯ, ಸಂಸ್ಕೃತಿಯ ಮೇಲೆ ಹೇರಿದವರಲ್ಲ. ನಿರ್ದಾಕ್ಷಿಣ್ಯ ಸಾಹಿತ್ಯ ನಿಲುವುಗಳನ್ನು ಅದು ಬೇರೂರಿರುವ ಸಾಂಸ್ಕೃತಿಕ ಹಾಗೂ ತಾತ್ತ್ವಿಕ ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸುತ್ತ ಸಾಗಿ ಹೇಗೆ ಅದು ಓದುಗನ ಸೂಕ್ಷ್ಮತೆಗೆ, ಸಂವೇದನೆಗೆ ಕಾರಣೀಭೂತವಾಗುತ್ತದೆಂಬುದನ್ನು ತಿಳಿ ಹೇಳುವ ಪ್ರಕ್ರಿಯೆ. ಅದು ಈ ಆದರ್ಶಗಳನ್ನು ಬರೆದರೆ ಸಾಲದು, ಜೀವನದಲ್ಲೂ ಅಳವಡಿಸಬೇಕು ಎಂಬುದನ್ನು ಸಿಡಿಎನ್ ತೋರಿಸುತ್ತಾರೆ ಎಂದು ಸಿಡಿಎನ್ ನೆಚ್ಚಿನ ಶಿಷ್ಯರೂ ಸಹೋದ್ಯೋಗಿಯೂ ಆಗಿದ್ದ ಬೆಳ್ಳಿಯಪ್ಪ ತಮ್ಮ ಲೇಖನದಲ್ಲಿ ಹೀಗೆ

ಬರೆಯುತ್ತಾರೆ. "ಅವರ ವಿಮರ್ಶೆಯ ಬೇರುಗಳು ಇರುವುದು ಅವರ ಭಾರತೀಯತೆಯಲ್ಲಿ ಹಾಗೂ ಅದನ್ನು ಪೋಷಿಸುವದು ಅದೇ". ಹಲವು ಬಾರಿ ಸಿಡಿಎನ್‌ರವರ ಬರೆವಣಿಗೆ, ಮಾತುಗಳು ಲಘುಗ್ರಂಥ ಲೇಖಕನೋ ಪಾದಿಯಲ್ಲಿರುತ್ತವೆ ಎಂದೆನಿಸಬಹುದೇನೋ (ಪಾಂಪ್ಲೆಟೀರ್). ಈ ರೀತಿಯ ಚಿಂತಕನಲ್ಲಿ ಆದಿಪರಿಶೋಧಕನ (ಪಯನೀರ್) ಉತ್ಸಾಹ, ಚೈತನ್ಯಗಳು ಕಾಣಸಿಗುವುದಾದರೆ ಆ ಹಣೆಪಟ್ಟಿಯನ್ನು ಸಿಡಿಎನ್ ಎದೆಗುಂದದೆ ಧರಿಸಬಲ್ಲರು. ಇತರ ವಿಮರ್ಶಕರು ಹೆಜ್ಜೆ ಇಡಲೂ ಹಿಂದೆಗೆಯುತ್ತಿದ್ದಂತಹ ಕಾಲದಲ್ಲಿ ತಮ್ಮ ದಿಟ್ಟ ಹೆಜ್ಜೆಯನ್ನಿಟ್ಟು ಅರಬಿಂದೋರಂತಹ ಚಿಂತಕರನ್ನೂ ಭಾರತೀಯ ಇಂಗ್ಲಿಷ್ ಸಾಹಿತ್ಯವನ್ನೂ ಮನೆಮಾತಾಗಿ ಮಾಡಿದ ಸಿಡಿಎನ್‌ರವರ ಸಾಧನೆ ಅವಿಸ್ಮರಣೀಯ.

ಸಿಡಿಎನ್ ಧ್ವನ್ಯಾಲೋಕವನ್ನು 1979 ರಲ್ಲಿ ಸ್ಥಾಪಿಸಿದರು. ಅದರ ಉದ್ದೇಶಗಳಿವು: ನಮ್ಮ ಸಂಪ್ರದಾಯದೊಡನೆ ನೇರ ಸಂಪರ್ಕವನ್ನು ಇಟ್ಟುಕೊಂಡೇ ಪಾಶ್ಚಾತ್ಯ ವಿಮರ್ಶೆಯಲ್ಲಿನ ಒಳಿತಾದ ಅಂಶಗಳನ್ನು ಸಮಿಶ್ರಗೊಳಿಸುವುದು ಹಾಗೂ ಸಾಹಿತ್ಯ ಕೃತಿಗೆ ಸಂಪೂರ್ಣವಾದ ಪ್ರತಿಕ್ರಿಯೆಯ ಚೇತನವನ್ನು ಪರಿಷ್ಕರಿಸುವದು.

ಸಿಡಿಎನ್ ಪ್ರಪಂಚದ ಎಂಟಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾಗಿ ಉಪನ್ಯಾಸ ನೀಡಿದ್ದಾರೆ. ದತ್ತಿ ಉಪನ್ಯಾಸಗಳನ್ನು ಹದಿನಾಲ್ಕಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ನೀಡಿದ್ದಾರೆ. ರಾಕ್‌ಫೆಲ್ಲರ್ ವಿದ್ಯಾರ್ಥಿವೇತನವನ್ನೂ ಫುಲ್‌ಬ್ರೈಟ್ ನೆನಪಿನ ಉಪನ್ಯಾಸವನ್ನೂ ನೀಡಿದ ಹಿರಿಮೆ ಇವರದ್ದು. ಹತ್ತಕ್ಕೂ ಮಿಗಿಲಾಗಿ ಗ್ರಂಥ ರಚಿಸಿ, ಹನ್ನೆರಡಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿದ್ದಾರೆ. 1974 –77 ರವರೆಗೂ ಇವರು ಅಂತಾರಾಷ್ಟ್ರೀಯ ಕಾಮನ್‌ವೆಲ್ತ್ ಸಾಹಿತ್ಯ ಹಾಗೂ ಭಾಷಾ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ಕರ್ನಾಟಕ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟು ಗೌರವಿಸಿದೆ (1987); ಪ್ರಕಾಶಕರ ಸಂಸ್ಥೆ 1989ರಲ್ಲಿ ಗೌರವ ಸಲ್ಲಿಸಿದೆ. ಇವರು ಅಖಿಲ ಭಾರತ ಇಂಗ್ಲಿಷ್ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿದ್ದರು (1989). ಇವರಿಗೆ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ (1990). ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್ ಪದವಿಯನ್ನೂ ನೀಡಿ ಗೌರವಿಸಿದೆ ಇವರು 2005ರಲ್ಲಿ ನಿಧನರಾದರು.

**(ಕೆ.ಸಿಎಚ್‌ಎ.)**

**ನರಸಿಂಹರಾಜಪುರ:** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಪಶ್ಚಿಮದಲ್ಲಿ ಕೊಪ್ಪ, ಪೂರ್ವಕ್ಕೆ ಚಿಕ್ಕಮಗಳೂರು ಮತ್ತು ತರೀಕೆರೆ ತಾಲ್ಲೂಕುಗಳು, ಉತ್ತರಕ್ಕೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಇವೆ. ಈ ತಾಲ್ಲೂಕಿನ ದಕ್ಷಿಣ ಭಾಗ ಕಿರಿದಾಗುತ್ತ ಹೋಗಿ ಕೊಪ್ಪ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳ ಮಧ್ಯೆ ಚಾಚಿಕೊಂಡಿದೆ. ತಾಲ್ಲೂಕಿನ ವಿಸ್ತೀರ್ಣ 805 ಚ.ಕಿಮೀ. ಬಾಳೆಹೊನ್ನೂರು ಮತ್ತು ನರಸಿಂಹರಾಜಪುರ ಹೋಬಳಿಗಳು. ಈ ತಾಲ್ಲೂಕಿನಲ್ಲಿ 59 ಗ್ರಾಮಗಳು ಇವೆ. ಜನಸಂಖ್ಯೆ 65,639.

ಈ ತಾಲ್ಲೂಕು ಮಲೆನಾಡು ಪ್ರದೇಶ. ಪಶ್ಚಿಮಘಟ್ಟ ಶ್ರೇಣಿಗೆ ಸೇರಿದ ಅರಣ್ಯಭರಿತ ಬೆಟ್ಟಗಳು, ಮಧ್ಯೆ ಮಧ್ಯೆ ಕಣಿವೆಗಳು, ಅನೇಕ ನದಿಝುರಿಗಳು, ಇಲ್ಲಿನ ಸಾಮಾನ್ಯ ದೃಶ್ಯ. ತುಂಗಾನದಿ ತಾಲ್ಲೂಕಿನ ವಾಯುವ್ಯದಲ್ಲಿ ಸ್ವಲ್ಪ ದೂರ ಗಡಿಯಾಗಿ ಹರಿಯುತ್ತದೆ. ಭದ್ರಾನದಿ ಬಾಳೆಹೊನ್ನೂರಿನ ಹತ್ತಿರ ತಾಲ್ಲೂಕನ್ನು ಪ್ರವೇಶಿಸಿ ಮೊದಲು ಉತ್ತರಾಭಿಮುಖವಾಗಿ ನರಸಿಂಹರಾಜಪುರದವರೆಗೆ ಪ್ರವಹಿಸಿ ಈಶಾನ್ಯಕ್ಕೆ ತಿರುಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಭದ್ರಾ ಜಲಾಶಯದ ಹಿನ್ನೀರು ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಹರಡುತ್ತದೆ. ತಾಲ್ಲೂಕಿನಲ್ಲಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ ಸು. 1703 ಮಿಮೀ.

ತಾಲ್ಲೂಕಿನಲ್ಲಿ ರಕ್ಷಿತ ಅರಣ್ಯಪ್ರದೇಶಗಳನ್ನೂ ಸೇರಿಸಿದಂತೆ ಸಾಕಷ್ಟು ಅರಣ್ಯ ಪ್ರದೇಶವಿದ್ದು ಅವುಗಳಲ್ಲಿ ಬಿದಿರು ಅಳಲೆ ಸೀಗೆ ಗೇರು ಮೆಣಸು ತಂಗಡಿ ಇತ್ಯಾದಿ ಗಿಡಮರಗಳು, ಕಾಡುಕೋಣ ಚಿರತೆ ಪುನುಗುಬೆಕ್ಕು ಕಾಡುಹಂದಿ ಮುಳ್ಳುಹಂದಿ ಜಿಂಕೆ ಕಾಡುಕೋಳಿ ನವಿಲು ಜೀವಂಜೀವ ಕೋಗಿಲೆ ಮೊದಲಾದ ಪಕ್ಷಿಮೃಗಗಳು; ತೊರೆನದಿಗಳಲ್ಲಿ ಕುಚ್ಚಿನ ಮರಳು, ಬಿಳಿಕೊರವ, ಹಾವುಮೀನು, ಅವಲಮೀನು, ಹೆಮ್ಮೀನು ಇತ್ಯಾದಿ ಮೀನುಗಳೂ ಹಾಗೂ ಮೊಸಳೆಗಳೂ ಕಾಣಬಹುದು.

ಈ ತಾಲ್ಲೂಕು ಮಲೆನಾಡ ಕಪ್ಪುಮಣ್ಣಿನ ಮತ್ತು ಸ್ವಲ್ಪಭಾಗ ಎರೆಮಣ್ಣಿನ ಭೂಮಿಯಿಂದ ಕೂಡಿದ ಫಲವತ್ತಾದ ಪ್ರದೇಶ. ನದಿ ತೊರೆಗಳ ದಂಡೆಗಳಲ್ಲಿ ಮೆದು ಜೇಡಿಮಣ್ಣಿನ ಪ್ರದೇಶವನ್ನು ಕಾಣಬಹುದು. ಈ ತಾಲ್ಲೂಕಿನ ಮುಖ್ಯ ಬೆಳೆಗಳು ಬತ್ತ, ರಾಗಿ, ಜೋಳ, ಏಲಕ್ಕಿ, ತೆಂಗು, ಅಡಕೆ ಮತ್ತು ಮೆಣಸು.

ಈ ತಾಲ್ಲೂಕಿನಲ್ಲಿ ಶಾಲೆಗಳೂ ಅಂಚೆ ವಿದ್ಯುತ್ ದೂರವಾಣಿ ಸೌಲಭ್ಯಗಳೂ ವೈದ್ಯಕೀಯ ಕೇಂದ್ರಗಳೂ ಇವೆ. ಈ ತಾಲ್ಲೂಕಿನ ಮುಖಾಂತರ ಸುತ್ತಲ ಜಿಲ್ಲೆ ಮತ್ತು ಪಟ್ಟಣಗಳಿಗೆ ಮಾರ್ಗಗಳಿವೆ. ಚಿಕ್ಕಮಗಳೂರು, ತರೀಕೆರೆ, ಭದ್ರಾವತಿ, ಶಿವಮೊಗ್ಗ, ತೀರ್ಥಹಳ್ಳಿ ಮೊದಲಾದ ಕಡೆಗೆ ಇಲ್ಲಿಂದ ಮಾರ್ಗಸಂಪರ್ಕವಿದೆ.

ಈ ತಾಲ್ಲೂಕಿಗೆ ಸೇರಿದ ಬಾಳೆಹೊನ್ನೂರು **(ನೋಡಿ)** ಭದ್ರಾನದಿಯ ಪಶ್ಚಿಮ ದಂಡೆಯ ಮೇಲಿದೆ. ಬಾಳೆಹೊನ್ನೂರಿನಿಂದ ಉತ್ತರಕ್ಕೆ ಒಂದು ಮೈಲಿ ದೂರದಲ್ಲಿ ಬಾಳೆಹಳ್ಳಿಯಲ್ಲಿರುವ ಲಿಂಗಾಯಿತ ಮಠವು ಪಂಚವೀರಶೈವಾಚಾರ್ಯರಲ್ಲಿ ಪ್ರಥಮರಾದ ರೇಣುಕಾಚಾರ್ಯರಿಂದ ಸ್ಥಾಪಿತವಾಯಿತೆಂದು ಹೇಳಲಾಗಿದೆ. ಮಠಕ್ಕೆ ಸೇರಿದ ವೀರಭದ್ರಸ್ವಾಮಿಯ ಗುಡಿ ದ್ರಾವಿಡಶಿಲ್ಪ ಶೈಲಿಯದು. ಬಾಳೆಹೊನ್ನೂರಿಗೆ 8 ಕಿಮೀ ದೂರದಲ್ಲಿ ಭದ್ರಾನದಿಯ ಬಲದಂಡೆಯ ಮೇಲೆ ಇರುವ ಖಾಂಡ್ಯ **(ನೋಡಿ)** ಗ್ರಾಮದಲ್ಲಿ ಮಾರ್ಕಂಡೇಯ ದೇವಾಲಯವಿದೆ.

ನರಸಿಂಹರಾಜಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ. ಚಿಕ್ಕಮಗಳೂರಿನ ವಾಯವ್ಯಕ್ಕೆ 84 ಕಿಮೀ ದೂರದಲ್ಲಿದೆ. ಜನಸಂಖ್ಯೆ 7,464. ಕೋಟೆ ಮತ್ತು ಪೇಟೆ ಎಂಬ ಎರಡು ಭಾಗಗಳು ಈ ಊರಿನಲ್ಲಿ ಇದೆ. ಮಲೆನಾಡಿನ ಪಟ್ಟಣಗಳಂತೆ ಊರಿನ ಮುಖ್ಯ ರಸ್ತೆಯ ಅಕ್ಕಪಕ್ಕಗಳಲ್ಲಿ ಸುಮಾರು ಒಂದು ಮೈಲಿ ದೂರ ಮನೆಗಳು ಹಾಗೂ ಅಂಗಡಿಗಳು ರಸ್ತೆಯ ಎರಡು ಪಕ್ಕಗಳಲ್ಲೂ ಹರಡಿಕೊಂಡಿವೆ. ಊರು ಇತ್ತೀಚಿನ ವ್ಯಾಪಾರಾಭಿವೃದ್ಧಿಯಿಂದ ವಿಸ್ತರಿಸಿ ಹೊಸ ರೂಪ ತಳೆಯುತ್ತಿದೆ. ಸುತ್ತಲ ಊರುಗಳಿಗೆ ಇದೊಂದು ವ್ಯಾಪಾರಕೇಂದ್ರ. ಇಲ್ಲಿ ನಗರಸಭಾಡಳಿತವಿದೆ.

ಹಿಂದೆ ಇಲ್ಲಿನ ಶಿವಾಚಾರ ಮಠದಲ್ಲಿ ಎಡೆಹಾಕಿ ಯಾತ್ರಿಕರಿಗೆ ದಿನವಹಿ ಭೋಜನ ಮಾಡಿಸುತ್ತಿದ್ದುದರಿಂದ ಈ ಊರಿಗೆ ಎಡೆಹಳ್ಳಿ ಎಂಬ ಹೆಸರಿತ್ತು. ಇದು 16ನೆಯ ಶತಮಾನದ ಕೊನೆಯಲ್ಲಿ ತರೀಕೆರೆಯ ಪಾಳೆಯಗಾರರಿಗೆ ಸೇರಿದ್ದು ತರುವಾಯ ಇಕ್ಕೇರಿ ನಾಯಕರಿಗೆ ಸೇರಿತು. ಮೈಸೂರು ಅರಸರ ಆಳ್ವಿಕೆಯಲ್ಲಿ 1882 ರವರೆಗೆ ಇದು ಲಕ್ಕವಳ್ಳಿ ತಾಲ್ಲೂಕಿನ ಕೇಂದ್ರವಾಗಿತ್ತು. ಆ ತರುವಾಯ 1897 ರವರೆಗೆ ಕೊಪ್ಪ ತಾಲ್ಲೂಕಿಗೆ ಸೇರಿದ ಎಡೆಹಳ್ಳಿ ಸಬ್ ತಾಲ್ಲೂಕಿನ ಕಸಬೆಯಾಗಿತ್ತು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಸಹೋದರ ಯುವರಾಜ ನರಸಿಂಹರಾಜ ಒಡೆಯರು ಇಲ್ಲಿಗೆ ಭೇಟಿ ಕೊಟ್ಟ ನೆನಪಿಗಾಗಿ ಇದಕ್ಕೆ ನರಸಿಂಹರಾಜಪುರ ಎಂದು ಹೆಸರಿಡಲಾಯಿತು. ಇಲ್ಲಿನ ಶ್ರೀವೈಷ್ಣವ ಮಠವೂ ಪ್ರಾಚೀನ ಪರಂಪರೆ ಹೊಂದಿದೆ.

ಊರಿನ ರಸ್ತೆಯ ತುದಿಯಲ್ಲಿ ಸಿಂಗನಗದ್ದೆಯ ಬಳಿ ಮೂರು ಜೈನ ಬಸದಿಗಳು ಹಾಗೂ ಒಂದು ಜೈನಮಠ ಇವೆ. ಚಂದ್ರನಾಥ ಬಸದಿಯಲ್ಲಿ 2 1/2 ಎತ್ತರದ ಆಸೀನ ಚಂದ್ರನಾಥನ ಶಿಲಾವಿಗ್ರಹವಿದೆ. ಇದೇ ಬಸದಿಯಲ್ಲಿ ಸರಸ್ವತಿ, ಗಂಧರಪಾದ ಮತ್ತು ಶ್ರುತ– ಈ ಲೋಹ ವಿಗ್ರಹಗಳಿವೆ. ಶಾಂತೇಶ್ವರ ಬಸದಿಯಲ್ಲಿ ಎತ್ತರದ ಶಾಂತೇಶ್ವರ ನಿಂತ ಭಂಗಿಯ ವಿಗ್ರಹವಿದೆ. ಉದ್ದರೆಯ ಚೆಯರಿಯಬ್ಬೆಯ ಶಿಷ್ಯೆ ಚಂಡಿ ಎಂಬಾಕೆಯಿಂದ ಈ ವಿಗ್ರಹ ಪ್ರತಿಷ್ಠಾಪಿತವಾಯಿತೆಂಬ ಬರೆಹ ವಿಗ್ರಹದ ಪ್ರಭಾವಳಿಯ ಮೇಲಿದೆ. ವಿಗ್ರಹ ಸು. 1300ರಲ್ಲಿ ಪ್ರತಿಷ್ಠಾಪಿತವಾಗಿರ ಬಹುದು. ಮೂರನೆಯ ಬಸದಿ ಜ್ವಾಲಾಮಾಲಿನಿಯ ಬಸದಿ.

ಇಕ್ಕೇರಿಯ ಚೆನ್ನಮ್ಮಾಜಿ ಮತ್ತು ವೀರಮ್ಮಾಜಿ ಈ ಊರನ್ನು ಅಭಿವೃದ್ಧಿ ಗೊಳಿಸಿದರು. ಊರಿನ ಪಶ್ಚಿಮಭಾಗಕ್ಕೆ ಬಹುಕಾಲ ಚೆನ್ನಮ್ಮಾಜಿಪೇಟೆ ಎಂಬ ಹೆಸರಿತ್ತು. ಅಲ್ಲಿಗೆ ಸಮೀಪದ ಕೆರೆಗೆ ವೀರಮ್ಮಾಜಿ ಕೆರೆ ಎಂಬ ಹೆಸರು ಇದೆ. ಇಕ್ಕೇರಿ ನಾಯಕರ ಸೇವೆಯಲ್ಲಿ ಅಧಿಕಾರಿ ಸುಗ್ಗಪ್ಪ ಈ ಊರಿನಲ್ಲಿ 7 ಬಾವಿಗಳನ್ನು ತೋಡಿಸಿದ. ಈಗಲೂ ಆ ಬಾವಿಗಳಿಗೆ ಅವನ ಹೆಸರಿದೆ. ತನ್ನ ಗುರು ಶಾಂತಸ್ವಾಮಿಗಾಗಿ ಅವನು ಕಟ್ಟಿಸಿದಮಠ ಈಗಿನ ಪ್ರವಾಸಿ ಮಂದಿರದ ಹಿಂಭಾಗದಲ್ಲಿದೆ. (ವಿ.ಜಿ.ಕೆ.)

**ನರಸಿಂಹರಾಜು, ಟಿ.ಆರ್.:** 1926– 79. ಕನ್ನಡ ರಂಗಭೂಮಿ ಹಾಗೂ ಚಲನಚಿತ್ರರಂಗದ ಪ್ರಸಿದ್ಧ ಹಾಸ್ಯನಟ. ತಿಪಟೂರು ರಾಮರಾಜು ನರಸಿಂಹರಾಜು ಇವರ ಪೂರ್ಣ ಹೆಸರು. 1926ರಲ್ಲಿ ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಜನಿಸಿದರು. ಇವರ ತಾಯಿ ವೆಂಕಟಲಕ್ಷ್ಮಮ್ಮ, ತಂದೆ ರಾಮರಾಜು, ಚಿಕ್ಕಪ್ಪ ಲಕ್ಷ್ಮೀಪತಿರಾಜು.

ನರಸಿಂಹರಾಜು ಅವರು ತಮ್ಮ ಚಿಕ್ಕಪ್ಪನವರ ಪ್ರೋತ್ಸಾಹದಿಂದ ಕನ್ನಡ ರಂಗಭೂಮಿಯ ಪ್ರತಿಷ್ಠಿತ ನಾಟಕ ಮಂಡಳಿಗಳಲ್ಲೊಂದಾಗಿದ್ದ ಸಿ.ಬಿ. ಮಲ್ಲಪ್ಪನವರ ಶ್ರೀ ಚಂದ್ರಮೌಳೀಶ್ವರ ನಾಟಕ ಮಂಡಲಿಯಲ್ಲಿ ಬಾಲಪಾತ್ರಗಳನ್ನು ವಹಿಸುವುದರ ಮೂಲಕ ರಂಗಭೂಮಿಯನ್ನು ಪ್ರವೇಶಿಸಿ ದರು. ಕಂಪನಿಯ ಪ್ರಮುಖ ನಟರಲ್ಲೊಬ್ಬರಾಗಿದ್ದ ಎಚ್.ಕೃಷ್ಣಶಾಸ್ತ್ರಿ ಅವರು ನರಸಿಂಹರಾಜು ಅವರನ್ನು ಬಾಲಪಾತ್ರಗಳಿಗೆ ತಯಾರು ಮಾಡುವಲ್ಲಿ ಹೆಚ್ಚಿನ ಆಸ್ಥೆವಹಿಸಿದರು. ಕಂಪನಿಯಲ್ಲಿದ್ದ ಮುದ್ದಪ್ಪ ಎಂಬುವರು ಇವರಿಗೆ ಅಕ್ಷರಾಭ್ಯಾಸ ಮಾಡಿಸಿ ಬಹು ಶಿಸ್ತಿನಿಂದ ಬೆಳೆಸಿದರು. ನರಸಿಂಹ ರಾಜು ಅವರು 1942ರಲ್ಲಿ ಕೆಲವು ಸಹೋದ್ಯೋಗಿಗಳೊಡನೆ ಸ್ವಂತ ಕಂಪನಿ ಕಟ್ಟಿದರು. ಗೋರಕುಂಬಾರ, ಹರಿಶ್ಚಂದ್ರ ಮುಂತಾದ ಅನೇಕ ಪೌರಾಣಿಕ ನಾಟಕಗಳನ್ನು ಅರಸೀಕೆರೆ ತಾಲ್ಲೂಕಿನಾದ್ಯಂತ ಪ್ರದರ್ಶಿಸಿದರು. ಮೂರು ವರ್ಷಗಳ ಅನಂತರ ಹಲವಾರು ಕಂಪನಿಗಳಲ್ಲಿ ಕಲಾಸೇವೆಗೈದು 1946ರಲ್ಲಿ ಕೃಷ್ಣರಾಜನಗರದ ಎಡತೊರೆ ಕಂಪನಿಗೆ ಸೇರಿದರು. ಈ ಕಂಪನಿ ಅಂದು ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿತ್ತು. ವಿಶ್ವಾಮಿತ್ರ, ರಾಮ, ರಾವಣ, ಬೇಡರ ಕಣ್ಣಪ್ಪ ಮತ್ತು ಭಾರತಲಕ್ಷ್ಮಿ ಮೊದಲಾದ ನಾಟಕಗಳು ಕಂಪನಿಯ ಮುಖ್ಯ ನಾಟಕಗಳೆನಿಸಿದ್ದವು. ಈ ನಾಟಕಗಳಲ್ಲಿ ಇವರು ನಿರ್ವಹಿಸುತ್ತಿದ್ದ ವಿಶ್ವಾನಂದ, ಕಾಶಿ, ಕಾಂಪೌಂಡರ್ ಮೊದಲಾದ ಪಾತ್ರಗಳು ಇವರಿಗೆ ಅಪಾರ ಜನಪ್ರಿಯತೆ ಗಳಿಸಿಕೊಟ್ಟವು. ಬೇಡರಕಣ್ಣಪ್ಪನ ಕಾಶಿ ಪಾತ್ರವಂತೂ ಇವರಿಗೆ ರಂಗಭೂಮಿಯಲ್ಲಿ ಸುಭದ್ರಸ್ಥಾನ ಗಳಿಸಿಕೊಟ್ಟಿತು. ಕೆಲದಿನಗಳ ಅನಂತರ ಹಿರಣ್ಣಯ್ಯ ಮಿತ್ರಮಂಡಳಿಗೆ ಪ್ರವೇಶಿಸಿದರು. ಈ ಮಂಡಳಿಯಲ್ಲಿ ಅಲ್ಪಕಾಲವಿದ್ದು ಭಾರತ ಲಲಿತ ಕಲಾಸಂಘಕ್ಕೆ ಬಂದರು. 1949ರ ಅಂತ್ಯದಲ್ಲಿ ಈ ಮಂಡಳಿಯನ್ನೂ ಬಿಟ್ಟು 1950ರಲ್ಲಿ ಬೇಲೂರು ಗುಂಡಾಜೋಯಿಸರ ಕಂಪನಿಯನ್ನು ಸೇರಿದರು. ನಟ ಸಾಹಿತಿ ಹುಣಸೂರು ಕೃಷ್ಣಮೂರ್ತಿ ಅವರಿಂದ ರಚಿತವಾದ ಅಂದಿನ ಪ್ರಚಲಿತ ಸಮಸ್ಯೆಯ ಕಥಾವಸ್ತುವನ್ನೊಳಗೊಂಡ ಧರ್ಮರತ್ನಾಕರ ಈ ಕಂಪನಿಯ ಹೆಸರಾಂತ ನಾಟಕವಾಗಿದ್ದು ಇದರಲ್ಲಿ ನಾಣಿ ಪಾತ್ರ ಇವರ ಪಾಲಿನದಾಯಿತು.

ಈ ಪಾತ್ರದ ಕೀರ್ತಿ ನಾಟಕರತ್ನ ಗುಬ್ಬಿ ವೀರಣ್ಣನವರ ಕಿವಿಗೂ ಬಿತ್ತು. ಆಗ ವೀರಣ್ಣನವರು ಗೌತಮಬುದ್ಧ ನಾಟಕದ ಪ್ರದರ್ಶನದ ಸಿದ್ಧತೆಗೆ ತೊಡಗಿದ್ದರು. ಈ ನಾಟಕದ ಪ್ರದರ್ಶನಕ್ಕೆ ಮುಂಚೆ ಶಿವರಾತ್ರಿ ಪ್ರಯುಕ್ತ ಬೇಡರಕಣ್ಣಪ್ಪ ನಾಟಕದ ಒಂದೇ ಒಂದು ಪ್ರದರ್ಶನಕ್ಕೆ ವ್ಯವಸ್ಥೆಯಾಗಿತ್ತು. ಕಾಶಿ ಪಾತ್ರಕ್ಕೆ ಇವರಿಗೆ ಆಹ್ವಾನ ಹೋಯಿತು. ಕಾಶಿಪಾತ್ರ ಕಲಾರಸಿಕರ ಪೂರ್ಣ ಮೆಚ್ಚುಗೆಗೆ ಪಾತ್ರವಾಯಿತು. ಗುಬ್ಬಿ ಕಂಪನಿಯ ಖಾಯಂ ನಟರಾಗಿರಲು ಇವರಿಗೆ ವೀರಣ್ಣನವರಿಂದ ಆಹ್ವಾನ ಬಂತು. ಕೆಲವೇ ದಿನಗಳಲ್ಲಿ ಗುಂಡಾ ಜೋಯಿಸರ ಕಂಪನಿ ಬಿಟ್ಟು ಗುಬ್ಬಿ ಕಂಪನಿ ಸೇರಿದರು. ಗುಬ್ಬಿ ಕಂಪನಿ ಆಗ ಪ್ರದರ್ಶಿಸುತ್ತಿದ್ದ (ಸಾಹುಕಾರ) ಆಚಾರಿ, ಕೃಷ್ಣರಾಯ, ಅಡ್ಡದಾರಿ ನಾಟಕಗಳಲ್ಲಿ ಹಾಸ್ಯಪಾತ್ರಗಳನ್ನು ನಿರ್ವಹಿಸಿ ಪ್ರಶಂಸೆಗೆ ಪಾತ್ರರಾದರು.

1953ರಲ್ಲಿ ವೀರಣ್ಣನವರು ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್ ಲಾಂಛನದ ಅಡಿ ಬೇಡರಕಣ್ಣಪ್ಪ ನಾಟಕವನ್ನು ಚಲನಚಿತ್ರವನ್ನಾಗಿ ತಯಾರಿಸಲು ಮದರಾಸಿನ ಎ.ವಿ.ಎಂ. ಅವರೊಡಗೂಡಿದರು. ಚಿತ್ರದ ಸೂತ್ರಧಾರರಾದ ಎಚ್.ಎಲ್.ಎನ್. ಸಿಂಹ ಅವರು ಕಾಶಿ ಪಾತ್ರಕ್ಕೆ ನರಸಿಂಹರಾಜು ಅವರನ್ನೇ ಆಯ್ಕೆಮಾಡಿದರು. ಬೇಡರಕಣ್ಣಪ್ಪ ಇವರ ಅಭಿನಯದ ಮೊದಲ ಕನ್ನಡ ಚಿತ್ರ. ತೆರೆಕಂಡಾಗ ಅಪಾರ ಯಶಸ್ಸುಗಳಿಸಿತಲ್ಲದೆ ನರಸಿಂಹರಾಜು ಅವರಿಗೂ ಒಳ್ಳೆಯ ಹೆಸರು ತಂದಿತು.

ನರಸಿಂಹರಾಜು ಅವರು ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನಕ್ಕರದೇ ಸ್ವರ್ಗ ಇವರ ಅಭಿನಯದ ನೂರನೆಯ ಚಿತ್ರ. ತಮ್ಮ ದಿವಂಗತ ಪುತ್ರ ಶ್ರೀಕಾಂತನ ನೆನಪಿಗಾಗಿ ಪ್ರೊಫೆಸರ್ ಹುಚ್ಚೂರಾಯ ಎಂಬ ಕನ್ನಡ ಚಿತ್ರವನ್ನು ತಯಾರಿಸಿ ಇವರು ನಿರ್ಮಾಪಕರ ಸಾಲಿಗೂ ಸೇರಿದರು. ಇವರು 1979 ಜುಲೈ 21ರಂದು ನಿಧನರಾದರು. (ಎಸ್.ಎಚ್.ವಿ.)

**ನರಸಿಂಹಸ್ವಾಮಿ,ಕೆ.ಎಸ್.:** 1915– 2003. ಆಧುನಿಕ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬರು. ಕನ್ನಡ ಸಾಹಿತ್ಯದ ನವೋದಯ ಕಾಲದಿಂದ ನವ್ಯಕಾವ್ಯ ಸೃಷ್ಟಿಯ ಕಾಲದವರೆಗೂ ತಮ್ಮ ಕಾವ್ಯ ಸೃಷ್ಟಿಯನ್ನು ನಡೆಸುತ್ತ ಬಂದವರು. ಈ ಅವಧಿಯಲ್ಲಿ ಆಗುತ್ತಿರುವ ಬದಲಾವಣೆಗಳ ನ್ನೆಲ್ಲ ತಮ್ಮ ಕಾವ್ಯ ಶೈಲಿಯಲ್ಲೂ ಬಳಸಿಕೊಂಡಿದ್ದರು. ಆದರೆ ತಮ್ಮ ಮೊದಲ ಕವನ ಸಂಗ್ರಹವಾದ ಮೈಸೂರು ಮಲ್ಲಿಗೆಯಿಂದ ಗಳಿಸಿದ ಕೀರ್ತಿ ಮತ್ತು ಜನಪ್ರಿಯತೆ ಇವರಿಗೆ ಅವರ ಇತರ ಕವನ ಸಂಗ್ರಹಗಳಿಂದ ಹೆಚ್ಚಾಗಲಿಲ್ಲ ಎನಿಸುತ್ತದೆ. ಮೊದಲು ಸಂಪಾದಿಸಿದ ಕೀರ್ತಿ ಅಳಿಸಲಿಲ್ಲ ಎಂಬ ಮಾತೂ ನಿಜ. ಅದು ಗಟ್ಟಿಯಾಗಿ ನಿಂತಿತು. ಪ್ರತಿಭೆಯಲ್ಲಾಗಲಿ, ಕಾವ್ಯ ರಚನಾ ಶಕ್ತಿಯಲ್ಲಾಗಲಿ, ವಸ್ತುವಿನ ಆಯ್ಕೆಯಲ್ಲಾಗಲಿ,

ನಿರೂಪಣೆಯಲ್ಲಾಗಲಿ ಮೊದಲ ಕಾವ್ಯದಲ್ಲಿ ಕಾಣಿಸಿಕೊಂಡ ಇವರ ಪ್ರತಿಭೆ, ಶಕ್ತಿ, ವಿವೇಚನೆ ಕಡಿಮೆ ಆಗಲಿಲ್ಲ. ಇವರ ಅನುಭವ ಬೆಳೆದಂತೆ ಅವೂ ಬೆಳೆದವು.

ಇವರು 1915 ಜನವರಿ 25ರಂದು ಮಂಡ್ಯ ಜಿಲ್ಲೆ ಕಿಕ್ಕೇರಿಯಲ್ಲಿ ಹುಟ್ಟಿದರು. ತಂದೆ ಕಿಕ್ಕೇರಿ ಸುಬ್ಬರಾಯ, ತಾಯಿ ಹೊಸಹೊಳಲು ನಾಗಮ್ಮ. ತಂದೆ ಮೈಸೂರಿನಲ್ಲಿ ಒಂದು ಅಂಗಡಿಯ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರು. ಅದೇ ಅವರ ಉದ್ಯೋಗವಾದರೂ ಅವರ ಒಲುಮೆ ಪಿಟೀಲು ವಾದನದಲ್ಲಿತ್ತು. ಈ ಕಲೆಯ ಅಂಶ ಸ್ವಾಮಿಯವರಲ್ಲಿ ಮತ್ತೊಂದು ರೂಪದಲ್ಲಿ ಹೊರಹೊಮ್ಮಿತ್ತು. ಸ್ವಾಮಿಯವರ ವಿದ್ಯಾಭ್ಯಾಸ ಮೈಸೂರಿನ ಮಹಾರಾಜ ಹೈಸ್ಕೂಲು, ಇಂಟರ್‌ಮೀಡಿಯೆಟ್ ಕಾಲೇಜ್ ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಾಯಿತು. ಪಠ್ಯವಿಷಯ ಬಿ.ಎಸ್.ಸಿ. ಇಂಜಿನಿಯರಿಂಗ್, ಇಂಗ್ಲಿಷ್, ಗಣಿತ, ಭೌತವಿಜ್ಞಾನ. ಕಾಲೇಜು ವಿದ್ಯಾಭ್ಯಾಸ ಆರ್ಥಿಕ ತೊಂದರೆಗಳಿಂದಾಗಿ ಮೊಟಕಾಯಿತು. ಪದವಿ ವ್ಯಾಸಂಗ ಪೂರ್ಣವಾಗಲಿಲ್ಲ. ಕನ್ನಡದ ಮೇಲೆ ಹೆಚ್ಚು ಒಲವು ಇದ್ದುದರಿಂದ ತಮ್ಮ ಓದಿನ ವಿಷಯ ಅಲ್ಲದಿದ್ದರೂ ಕನ್ನಡದ ತರಗತಿಗಳಿಗೆ ಹೋಗಿ ಆ ಪಾಠಗಳನ್ನು

ಕೇಳುತ್ತಿದ್ದರು. 19ನೆಯ ವಯಸ್ಸಿಗೆ ಓದು ನಿಂತುಹೋಯಿತು. 22ನೆಯ ವಯಸ್ಸಿನಲ್ಲಿ ಕೆಲಸಕ್ಕೆ ಸೇರಿಕೊಂಡರು (1937). ಅದರ ಹಿಂದಿನ ವರ್ಷವೇ ವಿವಾಹವಾಗಿತ್ತು. ಕೈಹಿಡಿದ ಹೆಂಡತಿ ಶಿವಮೊಗ್ಗದ ವೆಂಕಮ್ಮ, ಆ ವಯಸ್ಸಿನ ಇವರ ಪ್ರೇಮಮಯ ಜೀವನ ಪ್ರೇಮಗೀತೆಗಳ ರಚನೆಗೆ ಸ್ಫೂರ್ತಿ ನೀಡಿತು. ಇವರ ಮೊದಲ ಕವನ ಕಬ್ಬಿಗನ ಕೂಗು (1931) ಕವಿಯ ಹೃದಯದ ಧ್ವನಿಯಾದರೂ ಮುಂದೆ ಅದು ಪ್ರಣಯದ ವಿವಿಧ ಅನುಭವಗಳ ಅಮೃತವಾಣಿಗಳಾಗಿ ಹೊಮ್ಮಿತು.

ಇವರ ಮೊದಲ ಕವನ ಸಂಕಲನ ಮೈಸೂರು ಮಲ್ಲಿಗೆ 1942ರಲ್ಲಿ ಪ್ರಕಟವಾಯಿತು. ಸಂಕೋಚ ಪ್ರಕೃತಿಯ ಇವರು ತಮ್ಮ ಕವನಗಳನ್ನು ಪ್ರಕಟಿಸುವುದಕ್ಕೆ ನಾಚಿಕೆಪಡುತ್ತಿದ್ದ ಆ ಕಾಲದಲ್ಲಿ ಅವನ್ನು ಬೆಳಕಿಗೆ ತಂದವರು ಎ.ಆರ್. ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ ಮತ್ತು ತೀ.ನಂ.ಶ್ರೀ. ಅವರು. ಮೈಸೂರು ಮಲ್ಲಿಗೆಯ ಕವಿತಾ ಸೌರಭ ಕ್ಷಿಪ್ರದಲ್ಲಿಯೇ ನಾಡಿನಾದ್ಯಂತ ಪಸರಿಸಿತು.

ನವೋದಯ ಕಾವ್ಯಮಾರ್ಗವನ್ನು ಹಿಡಿದು ಮುಂದುವರಿದ ಇವರಿಗೆ ಬಿ.ಎಂ.ಶ್ರೀ. ಅವರ ಇಂಗ್ಲಿಷ್ ಗೀತೆಗಳು ಪ್ರಭಾವ ಪುಷ್ಟಿ ಕೊಟ್ಟಿತು. ಹಳ್ಳಿಯಿಂದ ಪಟ್ಟಣಕ್ಕೆ, ಪಟ್ಟಣದಿಂದ ನಗರಕ್ಕೆ ವೃತ್ತಿಯ ದೆಸೆಯಿಂದ ಬಂದು ಸಂಸಾರ ನಿರ್ವಹಿಸಬೇಕಾದಾಗ ಬದುಕಿನ ವಾತಾವರಣ ಬದಲಾಗುತ್ತ, ವಿಶಾಲವಾಗುತ್ತಾ ನಡೆದಂತೆ ಅದನ್ನು ಅನುಸರಿಸಿ ಇವರ ಕಾವ್ಯ ರಚನೆಯೂ ಸಂಕೀರ್ಣವೂ ಸಮೃದ್ಧವೂ ಆಗುತ್ತಾ ಬಂತು. ಐರಾವತ, ದೀಪದಮಲ್ಲಿ (1947), ಉಂಗುರ (1949), ಇರುವಂತಿಗೆ (1952), ಶಿಲಾಲತೆ (1958), ಮನೆಯಿಂದ ಮನೆಗೆ (1960), ತೆರೆದ ಬಾಗಿಲು (1977), ನವಪಲ್ಲವ (1983), ಮಲ್ಲಿಗೆಯ ಮಾಲೆ (ಸಮಗ್ರ ಕವಿತೆಗಳು 1986), ದುಂಡುಮಲ್ಲಿಗೆ (1993), ರಾಬರ್ಟ್ಸ್ ಕವಿಯ ಕೆಲವು ಪ್ರೇಮ ಗೀತೆಗಳು (1997), ಕೆಲವು ಚೀನೀ ಕವನಗಳು (1997), ನೆಲದನಿ (1999), ಸಂಜೆಹಾಡು (2000) ಇವು ಇವರ ಇತರ ಕವನ ಸಂಗ್ರಹಗಳು. ಈ ಕಾವ್ಯ ಕೃತಿಗಳನ್ನಲ್ಲದೆ ಮಾದರಿಯ ಕಲ್ಲು (1942), ಉಪವನ (1958), ದಮಯಂತಿ (1970) ಎಂಬ ಗದ್ಯ ಕೃತಿಗಳನ್ನೂ ಇವರು ಬರೆದಿದ್ದಾರೆ. ಅಲ್ಲದೆ ಇಂಗ್ಲಿಷ್‌ನಿಂದ ಗಾಂಧೀಜಿಯವರ ಹಲವು ಉಕ್ತಿಗಳನ್ನೂ ಯೂರಿಪಿಡೀಸನ ಮೀಡಿಯಾ (1966) ನಾಟಕವನ್ನೂ ಮಾರ್ಕ್‌ಟ್ವೇನನ ಹಕಲ್‌ಬರಿಫಿನ್ನನ ಸಾಹಸಗಳು (1969) ಎಂಬ ಕಾದಂಬರಿಯನ್ನೂ ಹರೀಂದ್ರನಾಥ ಚಟ್ಟೋಪಾಧ್ಯಾಯರ ಕೆಲವು ಮಕ್ಕಳ ಗೀತೆಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಸುಬ್ರಹ್ಮಣ್ಯ ಭಾರತಿ (1971), ಮಾಯಾಶಂಖ ಮತ್ತು ಇತರ ಕತೆಗಳು (1972), ರಾಣಿಯ ಗಿಳಿ ಮತ್ತು ರಾಜನ ಮಂಗ (1972) ಇವು ಇವರ ಇತರ ಅನುವಾದ ಕೃತಿಗಳು.

ಮೈಸೂರು ಮಲ್ಲಿಗೆ ಕೃತಿ ದೇವರಾಜ ಬಹದ್ದೂರ್ ಬಹುಮಾನವನ್ನೂ (1943) ಶಿಲಾಲತೆ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಶಾಖೆಯ ಬಹುಮಾನವನ್ನೂ (1957), ತೆರೆದ ಬಾಗಿಲು ಕವನ ಸಂಗ್ರಹ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ (1977) ಪಡೆದಿದೆ. ಬೆಂಗಳೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್. (1992) ನೀಡಿದೆ. ದುಂಡುಮಲ್ಲಿಗೆ ಕವನ ಸಂಗ್ರಹಕ್ಕೆ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ (1995). ಇದಲ್ಲದೆ ಇವರಿಗೆ ಮಾಸ್ತಿ ಸಾಹಿತ್ಯ ಪ್ರಶಸ್ತಿ (1996), ಕೇರಳದ ಕವಿ ಕುಮಾರನ್ ಆಶಾನ್ ಪ್ರಶಸ್ತಿ (1987) ಲಭಿಸಿವೆ.

ಇವರು ದೆಹಲಿ ಆಕಾಶವಾಣಿ ಕವಿ ಸಮ್ಮೇಳನದಲ್ಲಿ, ಸರ್ವಭಾಷಾ ಕವಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಇವರನ್ನು ಸನ್ಮಾನಿಸಿದೆ. ಇವರು ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ 49ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿಯ ಅಧ್ಯಕ್ಷರಾಗಿದ್ದರು (1976). ಇವರ ಅಭಿಮಾನಿಗಳು ಚಂದನ ಎಂಬ ಅಭಿನಂದನ ಗ್ರಂಥವೊಂದನ್ನು ಅರ್ಪಿಸಿದ್ದಾರೆ (1972).

ಇವರ ಆರಂಭದ ಸಂಕಲನಗಳಲ್ಲಿ ಕಂಡುಬರುವ ಕವಿತೆಗಳು ಬಹುತೇಕ ಪ್ರಣಯದ ಮಧುರ ಸುಕುಮಾರ ಅನುಭವದ ಚಿತ್ರಗಳನ್ನು ಕೊಡುತ್ತವೆ. ಒಲುಮೆಯ ಗೀತೆಗಳಲ್ಲಿ ಪ್ರೇಮದ ಗಂಗೆ ತುಂಬಿ ಹರಿದಿದೆ. ಜೊತೆಗೆ ವಾತ್ಸಲ್ಯಭಾವದ ಚಿತ್ರಗಳೂ ಒಡಮೂಡಿವೆ. ಅವು ಹಾಡುಗಬ್ಬಗಳಾಗಿ, ತರುಣ ವಯಸ್ಸಿನವರ ಅಮರ ಗೀತೆಗಳಾಗಿ, ರಸಕೃತಿಗಳಾಗಿ ಜನಪ್ರಿಯವೂ ಆಗಿವೆ. ಮೈಸೂರು ಮಲ್ಲಿಗೆ ಕಸ್ತೂರಿಯ ನೆಲದಲ್ಲಿ ಕಾಮನಬಿಲ್ಲನ್ನು ಬಿತ್ತಿ ಬೆಳೆಸಿದ ಹೂದೋಟ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲೆಲ್ಲ ಅದು ತನ್ನ ಸುವಾಸನೆಯನ್ನು ಬೀರಿ ಮರುಳುಗೊಳಿಸಿತು. ಅದು ಅರೆಬಿರಿದ ಮೊಗ್ಗಲ್ಲ ಪ್ರಫುಲ ಪುಷ್ಪ ಎಂದು ಮೊದಲಾಗಿ ವಿಮರ್ಶಕರು ಮೆಚ್ಚು ನುಡಿಗಳನ್ನಾಡಿದ್ದಾರೆ.

ರಚನೆಯಲ್ಲಿ ಎರಡನೆಯ ಘಟ್ಟ ಶಿಲಾಲತೆ ಮತ್ತು ಮನೆಯಿಂದ ಮನೆಗೆ ಎಂಬ ಸಂಗ್ರಹಗಳಲ್ಲಿ ಕಂಡುಬರುತ್ತದೆ. ಇಲ್ಲಿ ನವೋದಯದಿಂದ ಕವಿ ನವ್ಯಕಾವ್ಯದ ಕಡೆಗೆ ಹೊರಟ ಸಂಕ್ರಮಣ ಘಟ್ಟದ ರಚನೆಗಳಿವೆ. ಇಂಗ್ಲಿಷ್ ನವ್ಯಕಾವ್ಯಗಳು ಕನ್ನಡದಲ್ಲಿ ಅಂಕುರಿಸುತ್ತಿದ್ದ ನವ್ಯಕಾವ್ಯೋದಯದ ಅರುಣಕಾಂತಿ ಇವರ ಕಾವ್ಯಶಕ್ತಿಯನ್ನು ತಟ್ಟಿ ಎಚ್ಚರಿಸಿತು. ಶಿಲ್ಪ, ಪ್ರತಿಮೆ, ಭಾಷೆ, ವಸ್ತು, ತಂತ್ರ ಜೀವನದರ್ಶನ ಇವರ ರಚನೆಗಳನ್ನು ರೂಪಿಸಿದುವು. ಮಧುರ ಸನ್ನಿವೇಶಗಳು ಜೀವನದ ಜಂಜಡದಿಂದ ಸಾಮಾಜಿಕ ಪ್ರಭಾವಗಳಿಂದ ಪರಿವರ್ತನೆಯಾದವು. ಜೀವನ ಮೌಲ್ಯಗಳು

ವ್ಯತ್ಯಾಸವಾದುವು. ಹೊಸ ಭಾವನೆಗಳು ಹೊಸ ಕಾವ್ಯಮಾರ್ಗದಲ್ಲಿ ಮೂಡಿಬಂದುವು. ಭಾಷೆಯಲ್ಲಿ ಸ್ಪಷ್ಟತೆ, ವಿಡಂಬನೆಯ ಮೊನಚು, ಹಾಸ್ಯದ ಹೊಳಪು ಹೆಣೆದುಕೊಂಡುವು. ಬರಿಗೊಡಗಳಿಗೆ ಸಮಾಧಾನ ಎನ್ನುವ ಕವಿತೆಯಲ್ಲಿ ಬರುವ 'ಬಾಂದಳದ ವಿಮಾನ ಅದೆಷ್ಟು ನಿಧಾನ', 'ದಾರವಿಲ್ಲದ ಸೂಜಿ ನಾಟಿದ ನೀಲಿ ಬಟ್ಟೆಯಲಿ' ಎಂಬ ಚಿತ್ರ ನಯವಂಚನೆಯ ಭರವಸೆಗಳನ್ನು ಮನದಟ್ಟು ಮಾಡಿಸುತ್ತದೆ.

ತೆರೆದ ಬಾಗಿಲು ಸಂಕಲನ ಇವರ ಕಾವ್ಯ ರಚನೆಯ ಮೂರನೆಯ ಘಟ್ಟ. ರೂಪಕಗಳಾಗಲಿ, ಪ್ರತಿಮೆಗಳಾಗಲಿ ಉದಾಹರಣೆಗಾಗಿ ಕವಿತೆಗಳಲ್ಲಿ ಬರುತ್ತಿದ್ದು ಈಗ ಇಡೀ ಕವನ ಒಂದು ಪ್ರತಿಮೆಯಾಗಿ ಒಂದು ರೂಪಕವಾಗಿ ಮಹಾಪ್ರತಿಮೆಯಾಗುತ್ತದೆ. ಇವರ ಕೆಲವು ಕವಿತೆಗಳು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಿಗೆ ಭಾಷಾಂತರವಾಗಿವೆ.

ನರಸಿಂಹಸ್ವಾಮಿಯವರು ಮೈಸೂರು, ನಂಜನಗೂಡು, ಬೆಂಗಳೂರು ಗಳಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ತಮ್ಮ ಸರ್ಕಾರಿ ಉದ್ಯೋಗದಿಂದ 1970 ಜನವರಿ 26ರಂದು ನಿವೃತ್ತರಾದರು. 2003 ಡಿಸೆಂಬರ್ 28ರಂದು ಬೆಂಗಳೂರಿನಲ್ಲಿ ನಿಧನರಾದರು. *

**ನರಸಿಂಹಸ್ವಾಮಿ,ಎಸ್.:** ಭಾವಚಿತ್ರ ರಚನೆಯಿಂದಲೇ ಪ್ರಖ್ಯಾತರಾದ ಮೈಸೂರಿನ ಕಲಾವಿದರು. ಸ್ವರ್ಣಕಲಾ ನಿಪುಣರೆಂಬ ಬಿರುದು ಪಡೆದಿದ್ದ ಶಿಲ್ಪಕಲಾ ಪಿತಾಮಹ ಸಿಂಗಣ್ಣಾಚಾರ್ಯ ಇವರ ತಂದೆ. ಮೈಸೂರಿನಲ್ಲಿ ನರಸಿಂಹಸ್ವಾಮಿಯವರು ಜನಿಸಿದರು. ಬಾಲ್ಯದಿಂದಲೂ ಕಲೆಯ ಒಂದು ಮಧುರ ಸನ್ನಿವೇಶದಲ್ಲಿ ಬೆಳೆದು ಬಂದ ಇವರಿಗೆ ಕಲೆಯಲ್ಲಿ ಒಳ್ಳೆಯ ಆಸಕ್ತಿ ಮೂಡಿತು. ತಂದೆ ಕಡೆಯುತ್ತಿದ್ದ ಮೂರ್ತಿಗಳನ್ನು ನೋಡಿ ನೋಡಿ ಒಬ್ಬ ಕಲೆಗಾರರಾಗಬೇಕೆಂಬ ಮಹದಾಸೆ ಅಂಕುರಿಸಿತು. ರೇಖಾಚಿತ್ರಗಳನ್ನು ತಾವೂ ಅಭ್ಯಸಿಸುತ್ತ ಬಂದರು. ಮೈಸೂರಿನ ಪೌರಸಭೆ ಏರ್ಪಡಿಸಿದ ವಸ್ತುಪ್ರದರ್ಶನದಲ್ಲಿ ಇವರು ತಮ್ಮ ಹದಿನೈದನೆಯ ವಯಸ್ಸಿನಲ್ಲೇ ರಜತ ಪಾರಿತೋಷಕ ಪಡೆದು ಒಪ್ಪೊತ್ತಿನ ವಿದ್ಯಾರ್ಥಿಯಾಗಿ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕೇಶವಯ್ಯನವರಂಥ ಪ್ರಸಿದ್ಧ ಕಲಾವಿದರ ಕೈಕೆಳಗೆ ವ್ಯಾಸಂಗ ಮಾಡತೊಡಗಿದರು.

ತಮ್ಮ ಮಗ ಒಬ್ಬ ಪದವೀಧರನಾಗಬೇಕೆಂಬುದಾಗಿ ಸಿಂಗಣ್ಣಾಚಾರ್ಯರ ಬಯಕೆ. ಆದರೆ ಸ್ವಾಮಿಯವರ ಅತೀವವಾದ ಕಲಾಭಿರುಚಿ ವಿದ್ಯಾಭ್ಯಾಸಕ್ಕೆ ಅಡ್ಡಿಯನ್ನು ತಂದೊಡ್ಡಿತು. ಮೈಸೂರಿನ ಮಿಷನ್ ಹೈಸ್ಕೂಲಿನಲ್ಲಿ ಮೆಟ್ರಿಕ್ ಪರೀಕ್ಷೆಯವರೆಗೂ ಓದಿ, ವ್ಯಾಸಂಗವನ್ನು ಕೈಬಿಟ್ಟರು. ಅನಂತರ ಮದರಾಸಿನ ಕಲಾಪರೀಕ್ಷೆಗಳಿಗೆ ಖಾಸಗಿಯಾಗಿ ಕೂಡುತ್ತ ಬಂದರು. ಈ ಮಧ್ಯೆ ತಂದೆಯವರ ಜೊತೆಯಲ್ಲಿ ಅರಮನೆಗೆ ಹೋಗಿಬರುವ ಒಂದು ಸುಯೋಗವೂ ಆ ಮೂಲಕ ಆಗಿನ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ದೃಷ್ಟಿಗೆ ಬೀಳುವ ಸೌಭಾಗ್ಯವೂ ಇವರ ಪಾಲಿಗೆ ದೊರಕಿತು. ಮಹಾರಾಜರ ಪ್ರೋತ್ಸಾಹದಿಂದಾಗಿ ಸ್ವಾಮಿಯವರು ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಶಾಲೆಯಲ್ಲಿ ತಮ್ಮ ಕಲಾ ವ್ಯಾಸಂಗವನ್ನು ಪ್ರಾರಂಭಿಸಿದರು (1930). ಅಲ್ಲಿ ಅನೇಕ ಹಿರಿಯ ಕಲಾವಿದರ ಸಹವಾಸ, ಸಂಪರ್ಕ ದೊರೆತು ಭಾವಚಿತ್ರ ರಚನೆಯಲ್ಲಿ ಇವರ ಕೈ ಚೆನ್ನಾಗಿ ಪಳಗಿತು. ಇವರ ಇಜ್ಜಲಿನಿಂದ ಬಿಡಿಸಿದ ಮಹಾರಾಷ್ಟ್ರ ವನಿತೆಯೊಬ್ಬಳ ಮೈ ಮಾಡೆಲ್ ಎಂಬ ಭಾವಚಿತ್ರಕ್ಕೆ ಸಿಮ್ಲ ಕಲಾಪ್ರದರ್ಶನ ದಲ್ಲಿ ಸುವರ್ಣ ಪದಕ ಬಂತು. ಮೈಸೂರಿನ ದಸರಾ ಕಲಾಪ್ರದರ್ಶನದಲ್ಲೂ ಅದಕ್ಕೆ ಎಸ್.ಜಿ. ಶಾಸ್ತ್ರಿಗಳ ಬಹುಮಾನವೂ ದೊರೆಯಿತು.

ಮುಂಬಯಿಯ ಚೋರ್‌ಬಜಾರಿಗೆ ನಿತ್ಯವೂ ಹೋಗಿಬರುತ್ತ ಸ್ವಾಮಿಗಳು ಅನೇಕ ಶೀಘ್ರ ರೇಖಾಚಿತ್ರಗಳನ್ನು ಬರೆದರು. ಮದರಾಸಿನ ಕಲಾಪ್ರದರ್ಶನದಲ್ಲಿ ಇಂಥ ಇವರ ಕೃತಿಗೆ ಬಹುಮಾನ ಬಂತು. ಕಲಾವಿದ ಸರ್‌ದೇಸಾಯಿಯವರು ಇವರನ್ನು ಮನೆಯಲ್ಲೇ ಇಟ್ಟುಕೊಂಡು ಪ್ರೀತಿವಿಶ್ವಾಸವನ್ನು ತೋರಿಸಿ ಪ್ರೋತ್ಸಾಹಿಸಿದರು. ಮುಂಬಯಿ ಭಾವಚಿತ್ರ ರಚನಾ ಸಾಮರ್ಥ್ಯದಲ್ಲಿ ಕೀರ್ತಿಶಿಖರವನ್ನೇರಿದ್ದ ಅಗಸ್ಕರ್ ಎಂಬ ಕಲಾವಿದರಿಂದ ಸ್ವಾಮಿಯವರು ರೇಖಾವಿನ್ಯಾಸಕ್ಕೆ ಅದೆಷ್ಟು ಮಹತ್ತ್ವ ವಿದೆಯೆಂಬುದನ್ನು ಅರಿತರು.

ಮುಂಬಯಿಯಲ್ಲಿ ವ್ಯಾಸಂಗವನ್ನು ಮುಗಿಸಿ ಮರಳಿದ ಅನಂತರ ಇವರು 1934ರಲ್ಲಿ ವಿಶ್ವಕವಿ ರವೀಂದ್ರರ ಭಾವಚಿತ್ರವನ್ನು ಛಾಯಾಚಿತ್ರ ಒಂದರ ಆಧಾರದಿಂದ ರಚಿಸಿ, ರವೀಂದ್ರರಿಂದಲೇ ಪ್ರಶಂಸೆ ಪಡೆದರು. ಅಲ್ಲಿಂದೀಚೆಗೆ ಸಾಮ್ರಾಟ ಸಾಮ್ರಾಜ್ಞಿಯವರನ್ನು, ರಾಜಕೀಯ ಧುರೀಣರನ್ನು, ತತ್ತ್ವಜ್ಞಾನಿಗಳನ್ನು, ಕವಿಕುಲತಿಲಕರನ್ನು, ನಾಟಕಲೇಖರನ್ನು, ಮಹಾ ವಿಜ್ಞಾನಿಗಳನ್ನು, ಸುಪ್ರಸಿದ್ಧ ನಟನಟಿಯರನ್ನು ಭಾವಚಿತ್ರಗಳ ವಸ್ತುವಾಗಿ ಬಳಸಿಕೊಂಡು ಚಿತ್ರರಚನೆಯಲ್ಲಿ ಯಶಸ್ಸನ್ನು ಪಡೆದರು. ಇವರು ರಚಿಸಿದ ಪ್ರಸಿದ್ಧ ಭಾವಚಿತ್ರಗಳಲ್ಲಿ ಹಿಟ್ಲರ್, ಚೇಂಬರ್‌ಲಿನ್, ಮುಸಲೋನಿ, ಅಂತೋನಿ ಈಡನ್, ಚರ್ಚಿಲ್, ಲೆನಿನ್, ಷಾ, ಸರ್ ಆಲಿವರ್ ಲಾಡ್ಜ್, ಬರ್ಟ್ರಂಡ್ ರಸೆಲ್, ಹ್ಯಾವ್‌ಲಾಕ್ ಎಲ್ಲಿಸ್, ರೋಮಾ ರೋಲಾ ಮುಂತಾ ದವರ ಚಿತ್ರಗಳು ಮುಖ್ಯವಾದುವುಗಳು.

1941ರಲ್ಲಿ ಸ್ವಾಮಿಯವರು ವಾರ್ಧಾಕ್ಕೆ ಹೋಗಿ, ಬಾಪೂಜಿಯವರ ದರ್ಶನ ಪಡೆದು ಅವರ ಭಾವಚಿತ್ರವನ್ನು ವರ್ಣಗಳಲ್ಲಿ ಬಿಡಿಸಿ ಅವರ ಮೆಚ್ಚುಗೆ ಪಡೆದರು. ಒಮ್ಮೆ ಮೈಸೂರಿಗೆ ಭೇಟಿ ನೀಡಿದ ಮೌಂಟ್ ಬ್ಯಾಟನ್ ಇವರನ್ನು ದೆಹಲಿಗೆ ಕರೆಸಿಕೊಂಡು ತಮ್ಮ ಭಾವಚಿತ್ರವನ್ನು ಬಿಡಿಸಲು ಅವಕಾಶ ಇತ್ತರು. ಗಾಂಧೀಜಿಯವರ ಚಿತ್ರವನ್ನಂತೂ ಪ್ರಧಾನಿ ನೆಹರೂ ಕೊಂಡು ತಮ್ಮ ಅತಿಥಿಗೃಹದಲ್ಲಿ ಇರಿಸಿಕೊಂಡಿದ್ದರು. ಅದು ಈಗ ತೀನ್ ಮೂರ್ತಿ ಭವನದ ನೆಹರು ವಸ್ತು ಸಂಗ್ರಹಾಲಯದಲ್ಲಿದೆ. ಕಸ್ತೂರಬಾ, ನೆಹರು, ರಾಜೇಂದ್ರ ಪ್ರಸಾದ್, ರಾಜಗೋಪಾಲಾಚಾರಿ, ವಿಶ್ವೇಶ್ವರಯ್ಯ, ರಾಧಾಕೃಷ್ಣನ್, ಮಿರ್ಜಾ ಇಸ್ಮಾಯಿಲ್ ಮೊದಲಾದ ಭಾವಚಿತ್ರಗಳನ್ನೂ ಇವರು ಬಿಡಿಸಿದ್ದಾರೆ. ನೃತ್ಯಕಲೆಯಲ್ಲಿ ಅಭಿರುಚಿಯಿದ್ದ ಸ್ವಾಮಿಯವರು ನಾಟ್ಯಸರಸ್ವತಿ ಜಟ್ಟಿ ತಾಯಮ್ಮನವರ ಶಿಷ್ಯರಾಗಿ ನೃತ್ಯಾಭ್ಯಾಸಕ್ಕೆ ತೊಡಗಿ (1940) ಆ ಕಲೆಯಲ್ಲೂ ಖ್ಯಾತಿಪಡೆದರು.

ಇವರು ತಮ್ಮ ಚಿತ್ರಗಳಲ್ಲಿ ಚಿತ್ರಿಸಿರುವುದು ಸಾಮಾನ್ಯವಾಗಿ ಅಂತಾರಾಷ್ಟ್ರೀಯ ಪ್ರಭಾವಿ ವ್ಯಕ್ತಿಗಳನ್ನೇ; ವಿಶ್ವದ ಅನೇಕ ಕಡೆಗಳಲ್ಲಿ ಇವರ ಕೃತಿಗಳು ಶೋಭಿಸುತ್ತಿವೆ. ಸುಪ್ರಸಿದ್ಧ ಆಂಗ್ಲ ಸಾಹಿತ್ಯ ಬರ್ನಾಡ್ ಷಾ ಅವರ ಭಾವಚಿತ್ರ ಈಗ ಲಂಡನ್ನಿನ ಇಂಡಿಯನ್ ಎಂಬಸಿಯಲ್ಲಿ ರಂಜಿಸುತ್ತಿದೆ. ಗಾಂಧೀಜಿ ರಾಟೆ ನೂಲುತ್ತಿರುವಂತಿರುವ ಇವರ ಮತ್ತೊಂದು ಚಿತ್ರ ಪ್ಯಾರಿಸ್‌ನ ಯುನೆಸ್ಕೋ ಭವನದಲ್ಲಿದೆ. ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನರ ಭಾವಚಿತ್ರ ಅಮೆರಿಕದಲ್ಲಿದೆ. ರೂಸ್‌ವೆಲ್ಟ್‌ರ ಚಿತ್ರ ಶ್ವೇತಭವನದಲ್ಲಿದೆ. ಭಾರತದ ಪ್ರಥಮ ದಂಡನಾಯಕ ಜನರಲ್ ಕಾರ್ಯಪ್ಪನವರ ತೈಲ ಭಾವಚಿತ್ರ ಮಡಿಕೇರಿಯ ಕಾಲೇಜಿನಲ್ಲಿದೆ. ಮೈಸೂರು ನಗರದ ನಾನಾ ಸಂಘ ಸಂಸ್ಥೆಗಳ ಭವನಗಳಲ್ಲಿ ಇವರ ಅನೇಕ ತೈಲಚಿತ್ರಗಳು ನೋಡಸಿಗುತ್ತವೆ. ಕನ್ನಡ ಕುಲಪಿತಾಮಹ ಆಲೂರ ವೆಂಕಟರಾಯರ ಹಾಗೂ ಇಂದಿರಾಗಾಂಧಿಯವರ ರೇಖಾಚಿತ್ರಗಳನ್ನೂ ಇವರು ರಚಿಸಿದರು. ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟು ಗೌರವಿಸಿದೆ. *

**ನರಸಿಂಹಾಚಾರ್, ಎಂ.ಎ.:** 1924– 2004. ಕರ್ನಾಟಕ ಸಂಗೀತದ ಹೆಸರಾಂತ ಗಾಯಕ. 1924 ಆಗಸ್ಟ್ 12ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಎಂ.ಎ. ಕೃಷ್ಣಸ್ವಾಮಿ ಐಯ್ಯಂಗಾರ್, ತಾಯಿ ರಾಜಮ್ಮ. ಇವರದು

ಸಂಗೀತದ ಬಗ್ಗೆ ಆಸಕ್ತಿ ಇದ್ದ ಸಂಪ್ರದಾಯಸ್ಥ ಕುಟುಂಬ. ಇವರ ತಾಯಿಯವರು ಕೀರ್ತನೆಗಳು, ಸಂಪ್ರದಾಯದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು.ಇವರ ತಂದೆ ಬಿಡಾರಂ ಕೃಷ್ಣಪ್ಪನವರ ರಾಮಮಂದಿರಕ್ಕೆ ಸತತವಾಗಿ ಸಂಗೀತ ಕಛೇರಿಗಳನ್ನು ಕೇಳಲು ಹೋಗುತ್ತಿದ್ದರು. ಇದರಿಂದ ಇವರಿಗೆ ತಮಿಳುನಾಡಿನ ಅನೇಕ ಸಂಗೀತಗಾರರ ಪರಿಚಯವಾಯಿತು. ಸಂಗೀತದೊಂದಿಗೆ ಕ್ರಿಕೆಟ್‌ನಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ಮೈಸೂರಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ ತಂದೆಯ ಆಶಯದಂತೆ ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದ ಸಂಗೀತ ಕಾಲೇಜು ಸೇರಿದರು. ಅಲ್ಲಿ ಇವರನ್ನು ಮೊದಲು ಕೆಲವು ಪರೀಕ್ಷೆಗಳಿಗೆ ಒಳಪಡಿಸಿದರು. ಬಹಳ ಸಣ್ಣಗಿದ್ದ ಇವರಿಗೆ ಕಪೋತವೃಕ್ಷ (ಪಿಜನ್ ಚೆಸ್ಟ್) ಇದೆಯೆಂದು ವೈದ್ಯರು ಅಭಿಪ್ರಾಯ ಪಟ್ಟರು. ಆದರೂ ಛಲದಿಂದ ಇವರು ಸಂಗೀತ ಪ್ರವೇಶ ಪರೀಕ್ಷೆಯಲ್ಲಿ ಕಾಮವರ್ಧಿ ರಾಗದಲ್ಲಿ ಹಾಡಿ ಎಲ್ಲರ ಮೆಚ್ಚುಗೆ ಪಡೆದು ಪ್ರವೇಶ ಪಡೆಯುವಲ್ಲಿ ಸಫಲರಾದರು.

ಗುರುಗಳಾದ ಸುಭೇಷಯ್ಯರ್‌ರವರ ಪ್ರೋತ್ಸಾಹದಿಂದ ತಮಿಳು ಭಾಷೆಯನ್ನು ಓದಲು ಬರೆಯಲು ಕಲಿತು ತಮಿಳಿನಲ್ಲಿಯೇ ಸಂಗೀತ ಶಾಸ್ತ್ರದ ಪ್ರಶ್ನೆಪತ್ರಿಕೆಗೆ ಉತ್ತರಿಸಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು. ಇವರ ವ್ಯಾಸಂಗದ ದಿನಗಳಲ್ಲಿ ಸುಪ್ರಸಿದ್ಧ ಸಂಗೀತಗಾರರಾದ ಟೈಗರ್ ವರದಾಚಾರ್ಯರು ಪ್ರಾತಃಕಾಲ 5 ಗಂಟೆಗೆ ಶಿಷ್ಯರನ್ನೆಲ್ಲ ಎಬ್ಬಿಸಿ ಅಕಾರ ಸಾಧನೆ ಮಾಡಿಸುತ್ತಿದ್ದಾಗ ಅದರಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಇದಲ್ಲದೇ ಪ್ರತಿ ರಾತ್ರಿ ಊಟವಾದ ಬಳಿಕ ಕೆ.ಎಸ್. ನಾರಾಯಣಸ್ವಾಮಿಯವರ ಮನೆಗೆ ತೆರಳಿ ವೀಣಾವಾದನವನ್ನು ಕೇಳುತ್ತಿದ್ದರು. ಇದರಿಂದ ಅನೇಕ ಗಮಕಿಗಳ ಪರಿಚಯವಾಗಿ ಅದನ್ನು ತಮ್ಮ ಹಾಡುಗಾರಿಕೆಯಲ್ಲಿ ಅಳವಡಿಸಿಕೊಳ್ಳುವುದು ಇವರಿಗೆ ಸಾಧ್ಯವಾಯಿತು. ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳು ವ್ಯಾಸಂಗಮಾಡಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರು. ತಂದೆಯವರ ಆಶಯದಂತೆ ಮೈಸೂರಿನಲ್ಲಿ ಗಾನಕಲಾಮಂದಿರ ಎಂಬ ಸಂಗೀತ ಶಾಲೆಯನ್ನು ಪ್ರಾರಂಭಿಸಿ (1943) ಅನೇಕ ಶಿಷ್ಯರಿಗೆ ತರಬೇತಿ ನೀಡಿದರು. ಇಲ್ಲಿಗೆ ಚೆನ್ನೈನಿಂದ ಪ್ರಖ್ಯಾತ ಸಂಗೀತಗಾರರನ್ನು ಕರೆಯಿಸಿ ಕಛೇರಿಗಳನ್ನು ನಡೆಸಿದರು. ಅನಂತರ ಇವರು ಬೆಂಗಳೂರಿನ ಆಚಾರ್ಯ ಪಾಠಶಾಲೆ ಕಾಲೇಜಿನಲ್ಲಿ ಸಂಗೀತ ಶಿಕ್ಷಕರಾಗಿ ಸೇವೆಸಲ್ಲಿಸಿ ನಿವೃತ್ತರಾದರು (1980). ಇವರು ಇರುವಯ್ಯಾರಿನಲ್ಲಿ ಗುರುಕುಲ ಪದ್ಧತಿಯಲ್ಲೂ ಕೆಲವು ಸಮಯ ಶಿಕ್ಷಕರಾಗಿದ್ದರು.

ಇವರು ಆಕಾಶವಾಣಿಯಲ್ಲಿ ನಿಲಯ ಕಲಾವಿದರಾಗಿಯೂ ಸೇವೆ ಸಲ್ಲಿಸಿದರು (1941). ಇದಲ್ಲದೇ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿಯೂ ಸಂಗೀತ ಕಲಿಸಿದರು. ಇಲ್ಲಿ ಸೇವೆಯಲ್ಲಿರುವಾಗ ಇಂಡಿಯನ್ ಫಿಲಾಸಫಿಕಲ್ ಕಾಂಗ್ರೆಸ್ ಪ್ರತಿ ವರ್ಷ ನಡೆಸುತ್ತಿದ್ದ ಕಾರ್ಯಾಗಾರದಲ್ಲಿ ಶ್ರೀಲಂಕದಲ್ಲಿ ಪ್ರತಿನಿಧಿಯಾಗಿ ಭಾಗವಹಿಸುವ ಅವಕಾಶ ಪಡೆದರು. ಶ್ರೀಲಂಕದಲ್ಲಿ ಅನೇಕ ಕಛೇರಿಗಳನ್ನು ನೀಡಿದ್ದಲ್ಲದೇ ರೇಡಿಯೋ ಸಿಲೋನ್‌ನಲ್ಲಿ ಕರ್ನಾಟಕ ಸಂಗೀತ ಕಾರ್ಯಕ್ರಮವನ್ನು ನೀಡಿದರು. ಇದಾದನಂತರ ಇದೇ ಸಂಸ್ಥೆಯವರು ಶ್ರೀನಗರದಲ್ಲಿ ನಡೆಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೆಚ್ಚುಗೆ ಪಡೆದುದಲ್ಲದೇ ಸ್ವಾಮಿ ಶಿವಾನಂದ ಸರಸ್ವತಿಯವರಿಂದ ಸಂಗೀತ ಜ್ಯೋತಿ ಎಂಬ ಬಿರುದನ್ನೂ ಪಡೆದರು. ತ್ಯಾಗರಾಜರ ಉತ್ಸವ ಪ್ರಬಂಧ ಕೀರ್ತನೆಗಳು, ಪಂಚರತ್ನ ಕೃತಿಗಳು, ನೌಕಾ ಚರಿತ್ರಮು, ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೀರ್ತನೆಗಳು ಇವರ ಸಂಗೀತ ರೂಪಕಗಳಾಗಿವೆ.

ಸಂಗೀತಕ್ಕೆ ಸಂಬಂಧಿಸಿದಂತೆ ಇವರು ಅಪಾರ ಪುಸ್ತಕಗಳನ್ನು ಸಂಗ್ರಹಿಸಿದ್ದರು. ಸಂಗೀತ ವಿಚಾರದಲ್ಲಿ ಅಧಿಕೃತ ಜ್ಞಾನವುಳ್ಳವರಾಗಿದ್ದ ಇವರು ಯಾವುದೇ ಸಂಗೀತ ಸಂಬಂಧಿ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲವರಾಗಿದ್ದರು. ಸಂಗೀತಕ್ಕೆ ಸಂಬಂಧಿಸಿದಂತೆ ಕನ್ನಡ, ಇಂಗ್ಲಿಷ್ ಭಾಷೆಗಳೆರಡರಲ್ಲೂ ಅನೇಕ ವಿದ್ವತ್‌ಪೂರ್ಣ ಲೇಖನಗಳನ್ನೂ ಬರೆದರು.

ಇವರ ಸಿದ್ಧಿಸಾಧನೆಗಳಿಗಾಗಿ ಹಲವಾರು ಗೌರವ ಪ್ರಶಸ್ತಿಗಳು ದೊರಕಿವೆ. ಇವುಗಳಲ್ಲಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಬಿರುದು ಕರ್ನಾಟಕ ಕಲಾತಿಲಕ, ರಾಜ್ಯ ಸಂಗೀತ ವಿದ್ವಾನ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಟಿ. ಚೌಡಯ್ಯ ಸ್ಮಾರಕ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (2004) ಪ್ರಮುಖವಾದವು. ಕರ್ನಾಟಕ ಗಾನಕಲಾ ಪರಿಷತ್ತಿನವರು ಗಾನಕಲಾ ಭೂಷಣ ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ. ಇವರು 2004ರ ಜುಲೈನಲ್ಲಿ ನಿಧನರಾದರು. **(ಎಸ್‌ಯು.ಎಂ.)**

**ನರಸಿಂಹಾಚಾರ್, ಡಿ.ಎಲ್.:** 1906–71. ಕನ್ನಡ ಸಾಹಿತ್ಯ, ಭಾಷೆ, ಗ್ರಂಥ ಸಂಪಾದನೆ- ಹೀಗೆ ಹಲವು ಕ್ಷೇತ್ರಗಳಲ್ಲಿ ಮೌಲಿಕ ಕೆಲಸ ಮಾಡಿದ ಪ್ರಸಿದ್ಧ ವಿದ್ವಾಂಸರು. ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ ಇವರ ಪೂರ್ಣ ಹೆಸರು. ಇವರು 1906 ಅಕ್ಟೋಬರ್ 27ರಂದು ಚಿಕ್ಕನಾಯಕನಹಳ್ಳಿಯಲ್ಲಿ ತಮ್ಮ ಮಾತಾಮಹ ಅಣ್ಣಾಸ್ವಾಮಿ ಅಯ್ಯಂಗಾರ್ಯರ ಮನೆಯಲ್ಲಿ ಹುಟ್ಟಿದರು. ಮನೆಯ ಸುಸಂಸ್ಕೃತ ವಿದ್ಯಾವಂತ ವಾತಾವರಣ ಇವರ ವ್ಯಕ್ತಿತ್ವದ ವಿಕಾಸಕ್ಕೆ ತುಂಬ ಪೋಷಣೆ ನೀಡಿತು. ಎಂಟ್ರೆನ್ಸ್ ಪರೀಕ್ಷೆಯನ್ನು ತುಮಕೂರಿನಲ್ಲಿ ಮುಗಿಸಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೇರಿದರು (1924). ಭೌತಶಾಸ್ತ್ರ ರಸಾಯನಶಾಸ್ತ್ರಗಳನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡು ಆರ್ಟ್ಸ್ ವಿಭಾಗದಲ್ಲಿ ವ್ಯಾಸಂಗ ಮಾಡಿ, ಬಿ.ಎ. ಪರೀಕ್ಷೆಯನ್ನು ಮುಗಿಸಿದರು (1927). ಆ ಪರೀಕ್ಷೆಯಲ್ಲಿ ಕನ್ನಡದಲ್ಲಿ ಹೆಚ್ಚು ಅಂಕಗಳನ್ನು ಪಡೆದದ್ದರಿಂದ ಚಿನ್ನದ ಪದಕ ಮತ್ತು ಬಹುಮಾನಗಳನ್ನು ಗಳಿಸಿದರು. ಅದೇ ವರ್ಷ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಆರಂಭವಾಗಿದ್ದ ಕನ್ನಡ ಎಂ.ಎ. ತರಗತಿಗೆ ಸೇರಿ ಎರಡು ವರ್ಷಗಳ ವ್ಯಾಸಂಗದ ಬಳಿಕ ಪ್ರಥಮದರ್ಜೆ ಪ್ರಥಮ ಸ್ಥಾನಗಳೊಡನೆ ಎಂ.ಎ. ಪದವೀಧರರಾದರು (1929). ಆ ಸಂದರ್ಭದಲ್ಲಿ ಕುವೆಂಪು ಇವರ ಸಹಪಾಠಿಯಾಗಿದ್ದರು. ಅದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯದಿಂದ ಅದೇ ತಾನೇ ಏರ್ಪಾಡಾಗಿದ್ದ ಸಂಶೋಧನ ವಿದ್ಯಾರ್ಥಿವೇತನ ಪಡೆದುಕೊಂಡು ವೀರಶೈವ ಸಾಹಿತ್ಯದ ಆರಂಭಕಾಲವನ್ನು ಕುರಿತು ಸಂಶೋಧನೆ ನಡೆಸಿದರು.

ಮೈಸೂರಿನ ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ರೆಸಿಡೆಂಟ್ ಕನ್ನಡ ಪಂಡಿತರಾಗಿ 1930ರಲ್ಲಿ ಕೆಲಸಕ್ಕೆ ಸೇರಿದ ಇವರು ಅಲ್ಲಿದ್ದ ಎರಡು ವರ್ಷಗಳಲ್ಲಿ ಸಕಲ ವೈದ್ಯಸಂಹಿತಸಾರಾರ್ಣವ ಮತ್ತು ಕುಮಾರವ್ಯಾಸ ಭಾರತದ ಭೀಷ್ಮಪರ್ವ ಸಂಪಾದನಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದರು. ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವಾಗಲೇ ಮಹಾರಾಜ ಕಾಲೇಜಿನಲ್ಲಿಯೂ ಒಪ್ಪೊತ್ತಿನ ಕನ್ನಡ ಪಂಡಿತರಾಗಿ ಪಾಠ ಹೇಳುತ್ತಿದ್ದರು. 1932ರಲ್ಲಿ ಪೂರ್ಣಕಾಲದ ಪಂಡಿತರಾಗಿ ಮಹಾರಾಜ ಕಾಲೇಜಿಗೆ ಬಂದರು. ಅನಂತರ 1939ರಲ್ಲಿ ಮೈಸೂರಿನ ಇಂಟರ್‌ಮಿಡಿಯೆಟ್ ಕಾಲೇಜಿಗೆ ಅಂದರೆ ಈಗಿನ ಯುವರಾಜ ಕಾಲೇಜಿಗೆ ಬಂದು, ಬಳಿಕ 1945ರಲ್ಲಿ ಉಪಪ್ರಾಧ್ಯಾಪಕ ಸ್ಥಾನಕ್ಕೆ ಬಡ್ತಿ ಪಡೆದು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಹೋದರು. ಮೂರು ವರ್ಷಗಳ ಅನಂತರ ಮತ್ತೆ ಮಹಾರಾಜ ಕಾಲೇಜಿಗೆ ಹಿಂದಿರುಗಿ, 1954 ರವರೆಗೆ ಅಲ್ಲಿದ್ದು, ಆ ವರ್ಷ ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟಿಗೆ ಪ್ರಧಾನ ಸಂಪಾದಕರಾಗಿ ಅಧಿಕಾರವಹಿಸಿಕೊಂಡು ಬೆಂಗಳೂರಿಗೆ ತೆರಳಿದರು. 1956ರಲ್ಲಿ ಪ್ರಾಧ್ಯಾಪಕ ಪದವಿಗೆ ಬಡ್ತಿ ಪಡೆದು, ಅಲ್ಲಿಂದ ಮಹಾರಾಜ ಕಾಲೇಜಿಗೆ ಮರಳಿದರು. ಅಧ್ಯಾಪನ ವೃತ್ತಿಯಿಂದ ನಿವೃತ್ತರಾದ ಮೇಲೆ (1962 ಮಾರ್ಚ್ 31) ಅಧ್ಯಯನ, ಸಂಶೋಧನ ಕಾರ್ಯಗಳು ಇನ್ನೂ ವ್ಯಾಪಕಗೊಂಡವು. 1963ರಿಂದ ಸುಮಾರು ಆರು ವರ್ಷಗಳ ಕಾಲ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಸಂಶೋಧನ ವಿದ್ವಾಂಸರಾಗಿದ್ದರು. ಆಗಲೇ ತೀ.ನಂ. ಶ್ರೀಕಂಠಯ್ಯನವರ ನಿಧನದಿಂದ ತೆರವಾದ ಕನ್ನಡ–ಕನ್ನಡ ನಿಘಂಟಿನ ಅಧ್ಯಕ್ಷಪದವಿಯನ್ನೂ ಪ್ರಧಾನ ಸಂಪಾದಕತ್ವವನ್ನೂ ವಹಿಸಿಕೊಂಡರು.



ಇವರು ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾ ಇಲಾಖೆಯಗಳಲ್ಲಿಯೂ ಉಸ್ಮಾನಿಯ ಮತ್ತಿತರ ವಿಶ್ವವಿದ್ಯಾನಿಲಯಗಳಲ್ಲಿಯೂ ಬೇರೆ ಬೇರೆ ವಿದ್ಯಾಸಮಿತಿಗಳಲ್ಲಿಯೂ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ–ಕನ್ನಡ ನಿಘಂಟು ಯೋಜನೆಗೆ ಎ.ಆರ್. ಕೃಷ್ಣಶಾಸ್ತ್ರಿಗಳೂ ತೀ.ನಂ. ಶ್ರೀಕಂಠಯ್ಯನವರೂ ಅಧ್ಯಕ್ಷರಾಗಿದ್ದಾಗಲೂ ಅವರ ಅನಂತರದಲ್ಲಿಯೂ ಪ್ರಬಲವಾದ ಒತ್ತಾಸೆಯಾಗಿದ್ದು, ಶಕ್ತಿಯಾಗಿದ್ದು ಆ ಯೋಜನೆ ಸುವ್ಯವಸ್ಥಿತವಾಗಿಯೂ ಸುಭದ್ರವಾಗಿಯೂ ಮುನ್ನಡೆಯಲು ಬಹುವಾಗಿ ಶ್ರಮಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸಮಯದಲ್ಲಿ (1970) ಇವರ ಸಮಕ್ಷಮದಲ್ಲಿಯೇ ನಿಘಂಟಿನ ಮೊದಲನೆಯ ಸಂಪುಟ ಬಿಡುಗಡೆಯಾಯಿತು. ಇವರು 1959–62ರ ಅವಧಿಯಲ್ಲಿ ಪ್ರಬುದ್ಧ ಕರ್ಣಾಟಕದ ಪ್ರಧಾನ ಸಂಪಾದಕರಾಗಿದ್ದು, ಆ ಪತ್ರಿಕೆಯ ಬೆಳೆವಣಿಗೆಗೆ ಕೂಡ ಶ್ರಮವಹಿಸಿದರು.

ಇವರು ಸಮರ್ಥ ಹಾಗೂ ಶ್ರದ್ಧಾವಂತ ಅಧ್ಯಾಪಕರು; ಶ್ರೇಷ್ಠದರ್ಜೆಯ ಹಾಗೂ ಬಹುಮುಖ ವ್ಯಾಸಂಗದ ವಿದ್ವಾಂಸರು. ಸು. 40 ವರ್ಷಗಳಿಗೂ ಹೆಚ್ಚು ಕಾಲ ಕನ್ನಡ ಭಾಷೆ ಸಾಹಿತ್ಯಗಳ ಏಳಿಗೆಗೆ ಇವರು ತಮ್ಮ ಶಕ್ತಿಸರ್ವಸ್ವವನ್ನೂ ವಿನಿಯೋಗಿಸಿದರು. ಕನ್ನಡ ಭಾಷೆ ಸಾಹಿತ್ಯಗಳ ಏಳಿಗೆಯನ್ನು ತಮ್ಮ ಬದುಕಿನ ದೀಕ್ಷೆಯನ್ನಾಗಿ ಗ್ರಹಿಸಿ, ಅವುಗಳಲ್ಲಿ ತಕ್ಕ ಪ್ರೌಢಿಮೆಯನ್ನು ಮೊದಲು ತಾವು ಗಳಿಸಿಕೊಂಡು ಅನಂತರ ಚಿಂತನ ವಿಚಾರವಿಮರ್ಶೆ ಸಿದ್ಧಾಂತಗಳ ಫಲವನ್ನು ಹಲವು ವರ್ಷಗಳವರೆಗೆ ತಮ್ಮ ಹಲವಾರು ವಿದ್ಯಾರ್ಥಿಗಳಿಗೆ ಅಧ್ಯಾಪನದ ಮೂಲಕವಾಗಿ ಕೈಗೂಡಿಸಿದರು. ಇದರ ಜೊತೆಗೆ ಆಗಿಂದಾಗ್ಗೆ ಲೇಖನಗಳ ಮೂಲಕವೂ ಕೃತಿಗಳ ಮೂಲಕವೂ ಅವುಗಳಿಗೆ ನಿಷ್ಕೃಷ್ಟ ರೂಪವನ್ನು ಕೊಟ್ಟು ಕನ್ನಡ ಸಾಹಿತ್ಯದ ಶಕ್ತಿಯನ್ನೂ ಸಂಪತ್ತನ್ನೂ ಬೆಳೆಸಿದರು. ಭಾಷೆ, ವ್ಯಾಕರಣ, ನಿಘಂಟು, ಗ್ರಂಥಸಂಪಾದನೆ, ಛಂದಸ್ಸು, ಶಾಸನ, ಪ್ರಾಚೀನ ಸಾಹಿತ್ಯ – ಇವನ್ನು ತಮ್ಮ ಕಾರ್ಯಕ್ಷೇತ್ರದ ವಿಷಯಗಳನ್ನಾಗಿ ಹಿಡಿದು ಆ ಒಂದೊಂದು ವಿಷಯದಲ್ಲೂ ವಿರಾಮಶೀಲವಾದ ಗಾಢವಾದ ಸಂಶೋಧನೆಗಳ ಮೂಲಕ ಕನ್ನಡ ವಿದ್ವತ್ತನ್ನು ಬಲಪಡಿಸಿದರು. ಕನ್ನಡ ಸಾಹಿತ್ಯದ ಮೂಲಾಧಾರಗಳನ್ನು ಕಟ್ಟಿದರು. ಇವರ ಬೆಲೆಯುಳ್ಳ ಮೌಲಿಕ ರಚನೆಗಳು ನಿರಂತರ ಅಧ್ಯಯನ ಅಧ್ಯಾಪನಗಳ ವೈಜ್ಞಾನಿಕ ದೃಷ್ಟಿಯ ಅನುಸಂಧಾನ ಸಂಯೋಜನೆಗಳ ಫಲವಾಗಿ ಮೂಡಿಬಂದವು. ಜ್ಞಾನೋಪಾಸನೆಯೇ ಜೀವಿತಸಾರ್ಥಕ್ಯವೆಂದೂ ಸಾಹಿತ್ಯೋಜ್ಜೀವನವೇ ಜೀವನಧ್ಯೇಯವೆಂದೂ ನಂಬಿ ಇವರು ಕೃತಿರಚನೆ ಮಾಡುತ್ತಿದ್ದುದರಿಂದ ಇವರ ರಚನೆಗಳಲ್ಲಿ ಇವರ ಶುದ್ಧವಾದ ಅಭಿರುಚಿ, ಗಾಢವಾದ ಸಾಮರ್ಥ್ಯ, ನಿಷ್ಕೃಷ್ಟವಾದ ವಿಚಾರಧಾರೆ, ಪ್ರಖರವಾದ ವಿಶ್ಲೇಷಕಪಟುತ್ವ, ವಸ್ತುನಿಷ್ಠೆಯ ಛಲಗಾರಿಕೆ, ಚಿರಕಾಲಿಕ ಸತ್ತ್ವ, ಅನಂತಕಾಂತಿ–ಈ ಗುಣಗಳೆಲ್ಲ ಮೇಲಾಗಿ ಪ್ರತಿಫಲಿಸಿ ತೋರುತ್ತಿದ್ದವು.

ಇವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸು. 70–80 ಸಂಶೋಧನ ಲೇಖನಗಳನ್ನು ಬರೆದು ನಾಡಿನ ಬೇರೆ ಬೇರೆ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಇವುಗಳಲ್ಲಿ ಬಹುಪಾಲು ಕನ್ನಡ ಭಾಷೆ ಸಾಹಿತ್ಯಗಳ ಮುಖ್ಯವೂ ಜಟಿಲವೂ ಆದ ಸಮಸ್ಯೆಗಳನ್ನೂ ವಿಷಯಗಳನ್ನೂ ಕುರಿತವಾಗಿವೆ. ಪ್ರಾಚೀನ ಸಾಹಿತ್ಯ, ಆ ಸಾಹಿತ್ಯದ ವಿಮರ್ಶೆ ಮತ್ತು ಚರಿತ್ರೆ, ಗ್ರಂಥ ಸಂಪಾದನೆ, ಶಬ್ದಾರ್ಥ ವಿಚಾರ–ಇವು ಇವರಿಗೆ ಬಹು ಮೆಚ್ಚಿಗೆಯ ವಿಷಯಗಳು. ಸಕಲವೈದ್ಯಸಂಹಿತಾ ಸಾರಾರ್ಣವ, ಭೀಷ್ಮ ಪರ್ವ, ಪಂಪರಾಮಾಯಣ ಸಂಗ್ರಹ, ವಡ್ಡಾರಾಧನೆ, ಸಿದ್ಧರಾಮಚರಿತೆಯ ಸಂಗ್ರಹ, ಶಬ್ದಮಣಿದರ್ಪಣ, ಗೋವಿನ ಹಾಡು – ಇವು ಇವರ ಸಂಪಾದಿತವಾದ ಗ್ರಂಥಗಳು. ಇವುಗಳಲ್ಲದೆ ಇತರರೊಡನೆ ಸೇರಿ ಸಿದ್ಧರಾಮಚಾರಿತ್ರ, ಸುಕುಮಾರಚರಿತ್ರೆ ಎಂಬ ಕೃತಿಗಳನ್ನು ಸಂಪಾದಿಸಿದ್ದಾರೆ. ಇವೆಲ್ಲ ಬಹುಮಟ್ಟಿಗೆ ಶಾಸ್ತ್ರೀಯವಾದ ಗ್ರಂಥ ಸಂಪಾದನೆಯ ನಿಯಮಗಳಿಗೆ ಅನುಸಾರವಾಗಿ ಸಂಪಾದಿತವಾಗಿವೆಯಲ್ಲದೆ, ವಿದ್ವತ್ಪೂರ್ಣವಾದ ಉಪೋದ್ಘಾತ, ಟಿಪ್ಪಣಿಗಳು, ಶಬ್ದಕೋಶ ಮೊದಲಾದ ಸಹಾಯಕ ಸಾಮಗ್ರಿಗಳನ್ನೂ ಒಳಗೊಂಡಿವೆ. 'ಶಬ್ದವಿಹಾರ' ಪ್ರಾಚೀನ ಸಾಹಿತ್ಯದ ಶಬ್ದಾರ್ಥವಿಚಾರವನ್ನು ಕುರಿತ ಗ್ರಂಥ. ಕನ್ನಡ ಗ್ರಂಥಸಂಪಾದನೆ ಗ್ರಂಥಸಂಪಾದನ ಶಾಸ್ತ್ರವನ್ನೂ ಕನ್ನಡ ಗ್ರಂಥಸಂಪಾದನೆಯ ನಾನಾ ಮುಖಗಳನ್ನೂ ಒಳಗೊಂಡಿರುವ ಅತ್ಯುಪಯುಕ್ತವಾದ ಶಾಸ್ತ್ರಗ್ರಂಥ. ಪಂಪಭಾರತದೀಪಿಕೆ ಆ ಗ್ರಂಥಕ್ಕೆ ಸವಿವರವಾದ ಹಾಗೂ ಬೆಲೆಯುಳ್ಳ ಟಿಪ್ಪಣಿಗಳನ್ನು ಕೊಟ್ಟಿರುವ ಸಹಾಯಕ ಗ್ರಂಥ. ಪೀಠಿಕೆಗಳು, ಲೇಖನಗಳು ಎಂಬ ಬೃಹದ್‌ಗ್ರಂಥ ಆಚಾರ್ಯರ ಸಂಶೋಧನ ಮತ್ತು ಇತರ ಲೇಖನಗಳ ಸಮುಚ್ಚಯ.

ಕನ್ನಡ ಭಾಷಾಸಾಹಿತ್ಯಗಳಿಗೆ, ಮುಖ್ಯವಾಗಿ ಸಂಶೋಧನೆ ಸಂಪಾದನೆ ಶಾಖೆಗಳಿಗೆ ಸಲ್ಲಿಸಿದ ವಿಶೇಷ ಸೇವೆಯಿಂದಾಗಿ ಇವರು 1960ರಲ್ಲಿ ಬಿದರೆಯಲ್ಲಿ ನಡೆದ 41ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಆ ಸಂದರ್ಭದ ಸವಿನೆನಪಿಗಾಗಿ ಇವರ ವ್ಯಕ್ತಿತ್ವ ವಿದ್ವತ್ತುಗಳನ್ನು ಕುರಿತ ಜ್ಞಾನೋಪಾಸಕ ಎಂಬ ಅಭಿನಂದನ ಗ್ರಂಥವನ್ನು ಇವರಿಗೆ ಅರ್ಪಿಸಲಾಯಿತು. ಹೀಗೆಯೇ 1967ರಲ್ಲಿ ಉಪಾಯನ ಎಂಬ ಇನ್ನೊಂದು ಬೃಹತ್ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. 1967ರಲ್ಲಿ ಮೈಸೂರು ಸರ್ಕಾರ ಇವರಿಗೆ ರಾಜ್ಯ ಪ್ರಶಸ್ತಿಯನ್ನಿತ್ತು ಗೌರವಿಸಿತು. 1969ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇವರ ಅಪಾರವಾದ ವಿದ್ವತ್ತನ್ನು ಮನ್ನಿಸಿ ಗೌರವ ಡಿ.ಲಿಟ್. ಪದವಿಯನ್ನು ನೀಡಿತು. ಇವರು 1971 ಮೇ 8ರಂದು ನಿಧನರಾದರು. *

**ನರಸಿಂಹಾಚಾರ್,ಪು.ತಿ.:** 1905–98. ಕನ್ನಡದ ನವೋದಯ ಕಾಲದ ಪ್ರಮುಖ ಕವಿಗಳಲ್ಲೊಬ್ಬರು. ಪ್ರಬಂಧಕಾರರು, ನಾಟಕಕಾರರು. ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ ಇವರ ಪೂರ್ಣ ಹೆಸರು. ಪು.ತಿ.ನ. ಇವರ ಕಾವ್ಯನಾಮ. ಇವರು ಮೇಲುಕೋಟೆಯಲ್ಲಿ

1905 ಮಾರ್ಚ್ 17ರಂದು ಚಲುವನಾರಾಯಣಸ್ವಾಮಿಯ ವೈರಮುಡಿ ಉತ್ಸವದ ದಿನ ಜನಿಸಿದರು. ಯದುಗಿರಿಯ ಪ್ರಕೃತಿರಮಣೀಯತೆ, ಚಲುವನಾರಾಯಣಸ್ವಾಮಿಯ ದೇಗುಲದ ಸುತ್ತಲೂ ಇರುವ ಉತ್ಸವಸಂಭ್ರಮಗಳು ಹಾಗೂ ಆಸ್ತಿಕ ವಾತಾವರಣ, ಅಲ್ಲದೆ ಪ್ರಸಿದ್ಧ ಪುಣ್ಯಕ್ಷೇತ್ರದಲ್ಲಿ ಜರುಗುತ್ತಿದ್ದ ಸಂಗೀತ ನಾಟಕಾದಿಗಳ ವೈಭವ ಇವೆಲ್ಲ ಇವರ ಬೆಳೆಯುತ್ತಿದ್ದ ಮನಸ್ಸನ್ನು ಸಂಸ್ಕರಿಸಿದ ಶಕ್ತಿಗಳು. ತಮ್ಮ ಹದಿಮೂರನೆಯ ವರ್ಷದವರೆಗೂ ಮೇಲುಕೋಟೆಯಲ್ಲಿ ಮಾಧ್ಯಮಿಕ ಶಾಲೆ ವ್ಯಾಸಂಗದೊಂದಿಗೆ ವೇದ ಹಾಗೂ ಸಂಸ್ಕೃತಗಳನ್ನು ಕಲಿತರು. ಮುಂದೆ ಮೈಸೂರಿನ ಮಹಾರಾಜ ಕೊಲಿಜಿಯೇಟ್ ಹೈಸ್ಕೂಲಿನಲ್ಲಿ ಮತ್ತು ಮಹಾರಾಜ ಕಾಲೇಜುಗಳಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರಿಸಿ, ಸಂಸ್ಕೃತ ದರ್ಶನದೊಂದಿಗೆ ಇಂಗ್ಲಿಷ್ ಹಾಗೂ ಫ್ರೆಂಚ್ ಭಾಷೆ ಸಾಹಿತ್ಯಗಳನ್ನು ಅಧ್ಯಯನ ಮಾಡಿ ಬಿ.ಎ. ಪದವಿ ಪಡೆದರು (1926).

ಇನ್ಸ್‌ಪೆಕ್ಟರ್ ಆಫ್ ಆಫೀಸ್ ಸಿಸ್ಟಮ್ ಅಂಡ್ ಕೌ ಪ್ರೊಟೆಕ್ಷನ್ ಎಂಬ ಹುದ್ದೆಗೆ ಆಪ್ತಸಹಾಯಕರಾಗಿ (1926) ಚೀಫ್ ಕಮಾಂಡೆಂಟರ ಕಚೇರಿಯಲ್ಲಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು ಅನಂತರ ಮೈಸೂರ್ ಸ್ಟೇಟ್ ಟ್ರೂಪ್ಸ್‌ನಲ್ಲಿ ಸೂಪರಿಂಟೆಂಡೆಂಟ್ ಆಫ್ ಮಿಲಿಟರಿ ಸ್ಟೋರ್ಸ್ ಆಗಿ 1952 ರವರೆಗೆ ಕೆಲಸ ಮಾಡಿದರು. 1952 –61 ರವರೆಗೂ ಮೈಸೂರು ಶಾಸನಸಭೆಯಲ್ಲಿ ಸಂಪಾದಕರಾಗಿದ್ದರು. 1963– 66 ರವರೆಗೆ ಆಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿದ್ದ ಕನ್ನಡ ವಿಶ್ವಕೋಶದ ಕಚೇರಿಯಲ್ಲಿ ಭಾಷಾಂತರಕಾರ ರಾಗಿಯೂ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಕಚೇರಿಯಲ್ಲಿ ಸಂಪಾದಕರಾಗಿಯೂ (1966–71) ಸೇವೆ ಸಲ್ಲಿಸಿದರು.

ಭಾವಗೀತೆ, ಗೀತನಾಟಕ, ಸಂಗೀತರೂಪಕ, ಭಾವನಾಚಿತ್ರ, ರಸಚಿತ್ರ, ಪ್ರಬಂಧ, ವಿಚಾರಸಾಹಿತ್ಯ, ಸಣ್ಣಕಥೆ, ಗದ್ಯನಾಟಕ ಹೀಗೆ ಅನೇಕ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಗೀತನಾಟಕಗಳು ಇವರ ಪ್ರಾತಿನಿಧಿಕ ಪ್ರಕಾರ ಇವರ ಗೀತನಾಟಕಗಳನ್ನು ಸ್ಥೂಲವಾಗಿ ಸಾಹಿತ್ಯ ಪ್ರಮುಖವಾದುವು, ಸಂಗೀತ ಪ್ರಮುಖವಾದುವು ಎಂದು ವಿಂಗಡಿಸ ಬಹುದು. ಅಹಲ್ಯೆ, ಶಬರಿ, ವಿಕಟಕವಿ ವಿಜಯ, ಸತ್ಯಾಯನ ಹರಿಶ್ಚಂದ್ರ– ಇವು ಮೊದಲನೆಯ ವರ್ಗಕ್ಕೆ; ಹಂಸದಮಯಂತಿ ಮತ್ತು ಇತರ ರೂಪಕಗಳು, ರಾಮಪಟ್ಟಾಭಿಷೇಕ–ಇವು ಎರಡನೆಯ ವರ್ಗಕ್ಕೆ ಸೇರುತ್ತವೆ. ಗೋಕುಲ ನಿರ್ಗಮನ, ದೋಣಿಯ ಬಿನದ ಮತ್ತು ಕವಿ– ಈ ನಾಟಕಗ ಳಲ್ಲಿ ಸಾಹಿತ್ಯ ಮತ್ತು ಸಂಗೀತದ ಸಮ್ಮೇಳನವನ್ನು ಗುರುತಿಸಬಹುದು.

ಅಹಲ್ಯೆ (1941), ಶಬರಿ (1946) ಮತ್ತು ಸತ್ಯಾಯನ ಹರಿಶ್ಚಂದ್ರ– ಈ ನಾಟಕಗಳು ವಸ್ತುವಿನ ದೃಷ್ಟಿಯಿಂದ ಪುರಾಣ ವ್ಯಕ್ತಿಗಳನ್ನು ಕುರಿತ, ಬಹುಶಃ ಅವರು ತಮ್ಮ ಜೀವನದಲ್ಲಿ ಕಂಡುಕೊಂಡ ತತ್ತ್ವದ ಅಭಿವ್ಯಕ್ತಿ. ಬಾಳಿನ ಹಂಬಲ ತೀರಿದ ಕೂಡಲೇ ಬಾಳು ಅರ್ಥಹೀನವಾಗುತ್ತದೆ, ಕೃತಕೃತ್ಯ ಚೇತನ ಮುಕ್ತಿಗೆ ಪ್ರಯತ್ನಿಸುತ್ತದೆ ಎಂಬುದು ಶಬರಿ ನಾಟಕದ ಸಂದೇಶ. ಅಹಲ್ಯೆ ಕನ್ನಡ ಗೀತನಾಟಕ ಪ್ರಪಂಚದಲ್ಲೇ ಅನುಪಮವಾದುದು. ದೋಣಿಯ ಬಿನದ ಮತ್ತು ಕವಿ ಕನ್ನಡಕ್ಕೆ ಹೊಸ ಬಗೆಯ ಕೊಡುಗೆಗಳು. ಪ್ರಕೃತಿ ವಸ್ತುಗಳಿಗೆ ವ್ಯಕ್ತಿರೂಪ ನೀಡಿರುವುದು ಈ ಎರಡು ನಾಟಕಗಳಲ್ಲಿನ ವಿಶೇಷ. ವಸ್ತುವಿನ ದೃಷ್ಟಿಯಿಂದ ವಿಕಟಕವಿ ವಿಜಯ ಮಹತ್ತ್ವಪೂರ್ಣವಾದ ಕೃತಿ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಬ್ರಿಟಿಷ್ ಕೃಪಾಪೋಷಿತರಾಗಿದ್ದ ದೇಶೀ ಸಂಸ್ಥಾನಾಧೀಶರು ತಮ್ಮ ಎಲ್ಲ ಅಧಿಕಾರಗಳನ್ನೂ ಕಾಂಗ್ರೆಸ್ಸಿಗೆ ವಹಿಸಬೇಕಾದ ಪರಿಸ್ಥಿತಿ ಭಾರತದ ಇತಿಹಾಸದಲ್ಲಿ ಬಹಳ ನಾಜೂಕಾದ ಸಂದರ್ಭ. ಇಂಥ ಸಮಕಾಲೀನ ರಾಜಕೀಯ ಘಟನೆಯನ್ನು ತುಂಬ ನಾಜೂಕಾಗಿ ಈ ನಾಟಕದಲ್ಲಿ ಪು.ತಿ.ನ. ಚಿತ್ರಿಸಿದ್ದಾರೆ.

ಹಣತೆ (1939), ಮಾಂದಳಿರು (1936), ಶಾರದಯಾಮಿನಿ (1944), ಗಣೇಶದರ್ಶನ, ರಸಸರಸ್ವತಿ (1954), ಮಲೆದೇಗುಲ, ಹೃದಯ ವಿಹಾರಿ (1960), ಇರುಳ ಮೆರಗು (1974), ಹಳೆಬೇರು ಹೊಸ ಚಿಗುರು (1981), ಹಣತೆಯ ಹಾಡು (1998), ಪು.ತಿ.ನ. ಸಮಗ್ರ ಕವನಗಳು (1988)–ಇವು ಕವನ ಸಂಕಲನಗಳು. ನವೋದಯ ಯುಗದಲ್ಲಿ ಸಾಮಾನ್ಯವಾಗಿ ಕಾಣುವ ಪ್ರಕೃತಿ, ಪ್ರೇಮ, ಭಕ್ತಿ, ಆಧ್ಯಾತ್ಮಗಳೇ ಇವರ ಕವನಗಳ ವಸ್ತುಗಳು. ಜೊತೆಗೆ ಅಂದಿನ ರಾಷ್ಟ್ರೀಯ ಎಚ್ಚರ ಇವರ ಕವನಗಳಲ್ಲಿ ಸ್ಥಾನ ಪಡೆದಿದೆ. ಸಂಗೀತ ಪ್ರಿಯವಾದ ಇವರ ಮನಸ್ಸು ಹಾಡುಗಳನ್ನು ರಚಿಸಿದೆ. ಹಾಗೆಯೇ ಗೀತನಾಟಕಗಳಲ್ಲಿನ ಶೈಲಿ ಭಾವಗೀತೆಗಳಲ್ಲೂ ಛಾಯೆದೋರಿ ಎಷ್ಟೋ ಕವನಗಳಲ್ಲಿ ಸಂಭಾಷಣೆ ಗಳನ್ನು ತಂದಿದೆ. ಶರದೃತುವಿನ ನೀಲ ನಿರಾಳ ಆಕಾಶ, ಇರುಳು, ಪರ್ವದಿನಗಳಲ್ಲಿನ ವಿಶೇಷ ವಾತಾವರಣ ಹಾಗೂ ಮೌನ–ಇವು ಇವರು ವಿಶೇಷ ಒಲವು ತೋರಿರುವ ವಸ್ತುಗಳು. ಮೌನದ ಬಗೆಗಿನ ಇವರ ಅನುಭವ ಯದುಗಿರಿಯ ಮೌನವಿಕಾಸ ಎಂಬ ಕವನದಲ್ಲಿ ಸುಂದರವಾಗಿ ಚಿತ್ರಿತವಾಗಿದೆ. ಮಲೆದೇಗುಲ ಇವರ ಭಾವಗೀತ ಪ್ರಪಂಚದಲ್ಲಿ ಪಡೆದ ಸಿದ್ಧಿಯನ್ನು ಪ್ರತಿನಿಧಿಸುವ ಕೃತಿ. ಅತಿಥಿ ಎಂಬುದು ಇವರ ಪ್ರಾತಿನಿಧಿಕ ಕವನಗಳ ಸಂಕಲನ.

ಗದ್ಯಪ್ರಾಚುರ್ಯದ ಕಾಲದಲ್ಲಿ ಗೀತಕ್ಕೆ ಒಲಿದು ತಮ್ಮ ಪ್ರತಿಭೆಯನ್ನು ಮೆರೆಸಿರುವ ನರಸಿಂಹಾಚಾರ್ಯರು ಗದ್ಯದಲ್ಲಿ ಭಾವನಾಚಿತ್ರ, ಸಣ್ಣಕಥೆ, ಪ್ರಬಂಧ ಹಾಗೂ ಕಾವ್ಯ ಮೀಮಾಂಸೆಗಳನ್ನು ಕೊಟ್ಟಿದ್ದಾರೆ. ಗದ್ಯನಾಟಕ ವನ್ನೂ ರಚಿಸಿದ್ದಾರೆ.

ರಾಮಾಚಾರಿಯ ನೆನಪು ಹೆಸರಿಗೆ ತಕ್ಕಂತೆ ನೆನಪುಗಳ ಸಂಕಲನ. ಆದರೆ ಇಲ್ಲಿನ ಚಿತ್ರಣಗಳು ಅಥವಾ ವಿಚಾರಲಹರಿಯನ್ನು ಓದುಗರಿಗೆ ತಲುಪಿಸುವ ಮುನ್ನ ಒಂದು ಸನ್ನಿವೇಶದ ಪರಿವೇಷವನ್ನು ನೀಡುತ್ತಾರೆ; ಪಾತ್ರಗಳನ್ನು ತಂದು ಸಂಭಾಷಣೆಗೆ ತೊಡಗಿಸುತ್ತಾರೆ. ಅಂತೆಯೇ ಅದರ ಸ್ವರೂಪಕ್ಕೆ ಭಾವನಾಚಿತ್ರ ಎಂದು ಹೆಸರಿಟ್ಟಿದ್ದಾರೆ. ಆದರೆ ರಥಸಪ್ತಮಿಯಲ್ಲಿ (1949) ಈ ಪರಿವೇಷ ಹೋಗಿ ಶುದ್ಧಚಿತ್ರಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಧ್ವಜರಕ್ಷಣೆ ಎಂಟು ಕಥೆಗಳ ಸಂಕಲನ (1949). ವಿಧೇಯನಾಗಿ ಬಾಳುತ್ತಿದ್ದ ಸರ್ಕಾರಿ ನೌಕರ ಒಮ್ಮೆಲೇ ಸನ್ನಿವೇಶ ವಶದಿಂದ ಕಿಡಿಯಂತೆ ಸಿಡಿದು ಹುತಾತ್ಮನಾಗುವುದು ಧ್ವಜರಕ್ಷಣೆಯ ಕಥೆ. ಕೋಳಂದೆಯಂಥ ವಿಚಿತ್ರ ಪಾತ್ರಗಳು, ರಾಗಿಣಿ ಎಂಬ ಕಥೆಯಲ್ಲಿ ಸಂದಿರುವ ಸಾಮಾಜಿಕ ನ್ಯಾಯ, ಪ್ರಧಾನವೆಂಬ ಕಥೆಯಲ್ಲಿ ಬರುವ ದಾನದ ಮನೋಭಾವದ ಹಿನ್ನೆಲೆ ಎಲ್ಲವೂ ಮನಸೆಳೆಯುವಂಥವು. ರಾಮಾಚಾರಿಯ ನೆನಪು, ರಥಸಪ್ತಮಿಗಳಲ್ಲಿನ ಶೈಲಿ, ವಿಚಾರಶಕ್ತಿ ಹಾಗೂ ಸಂಸ್ಕೃತ ಸಾಹಿತ್ಯ ಮತ್ತು ಶಾಸ್ತ್ರಗಳ

ಸಂಸ್ಕಾರದಿಂದ ಬಂದಿರುವ ತಾರ್ಕಿಕ ಶಕ್ತಿ, ತಿಳಿಹಾಸ್ಯ, ಲಘುವಿಡಂಬನೆ ಎಲ್ಲವೂ ಇವರ ಎರಡು ಪ್ರಬಂಧ ಸಂಕಲನಗಳಾದ ಈಚಲುಮರದ ಕೆಳಗೆ (1949) ಹಾಗೂ ಧೇನುಕ ಪುರಾಣಗಳಲ್ಲಿ (1967) ಎದ್ದು ಕಾಣುವ ಅಂಶಗಳು. ಈ ಎರಡೂ ಪ್ರಬಂಧ ಸಂಕಲನಗಳಲ್ಲಿ ದಿನನಿತ್ಯದ ವಸ್ತುಗಳೂ ಸಾಮಾನ್ಯ ಸಂಗತಿಗಳೂ ಇವರ ಕಣ್ಣುಗಳಲ್ಲಿ, ವಿಚಾರದ ಓಟದಲ್ಲಿ ಪಡೆಯುವ ವಿಶೇಷತೆಗಳನ್ನೇ ಅಲ್ಲದೆ ವಿವಿಧ ಪ್ರಕ್ರಿಯೆಗಳ ಬಗ್ಗೆ ತರ್ಕ ಸ್ಫುರಿತವಾದ ವಿಶೇಷ ಸತ್ಯಗಳನ್ನು ಇವರು ಹೊರಗೆಡಹಿದ್ದಾರೆ.

ಕಾವ್ಯಕುತೂಹಲದಲ್ಲಿ ಕಾವ್ಯಮೀಮಾಂಸೆಗೆ ಕೆಲವು ಸ್ವೋಪಜ್ಞ ವಿಚಾರಗಳನ್ನು ಇವರು ನೀಡಿದ್ದಾರೆ. ಶ್ರೀಹರಿಚರಿತೆ, ಹರಿಚರಿತ ಮನನ ಎಂಬ ಮಹಾಕಾವ್ಯವನ್ನೂ ಕಾರಿಕೆ ಎಂಬ ರೂಪಗಳಲ್ಲಿ ರಸ ಸಮೀಕ್ಷೆ ಎಂಬ ಕಾವ್ಯಮೀಮಾಂಸೆಯನ್ನೂ ಇವರು ರಚಿಸಿದ್ದಾರೆ. ಇವುಗಳಲ್ಲದೆ ಕನ್ನಡ ಭಗವದ್ಗೀತೆ (1957), ಗಯಟೆಯ ಫೌಸ್ಟ್ ಹಾಗೂ ತಿರುವಾಯ್ ಮೊಳಿಯ ನೂರು ಪದ್ಯಗಳ ಅನುವಾದವನ್ನು ಪದ್ಯಗಳಲ್ಲಿ ಮಾಡಿದ್ದಾರೆ. ಇದಲ್ಲದೆ ಯದುಗಿರಿಯಲ್ಲಿ ಗೆಳೆಯರು (1981) ಎಂಬ ಪುಸ್ತಕವನ್ನು ಪ್ರಕಟಿಸಿರುವರು.

ಇವರಿಗೆ ಹಲವು ಬಗೆಯ ಬಹುಮಾನಗಳು ಬಂದಿವೆ. ಇವರ ಹಂಸದಮಯಂತಿ ಮತ್ತು ಇತರ ರೂಪಕಗಳು ಎಂಬ ಕೃತಿಗೆ ಸಾಹಿತ್ಯ ಅಕಾಡೆಮಿ 1966ರಲ್ಲಿ ಇವರನ್ನು ಸನ್ಮಾನಿಸಿತು. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್. ಪ್ರಶಸ್ತಿ ನೀಡಿ ಗೌರವಿಸಿತು. ಕರ್ನಾಟಕ ಸರ್ಕಾರ ಇವರ ಶ್ರೀಹರಿಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ ನೀಡಿ ಗೌರವಿಸಿದೆ (1991). ಇವರು ಚಿಕ್ಕಮಗಳೂರಿನಲ್ಲಿ ಜರುಗಿದ 53ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು (1981). ಇವರು ಬೆಂಗಳೂರಿನಲ್ಲಿ 1998 ಅಕ್ಟೋಬರ್‌ನಲ್ಲಿ ನಿಧನರಾದರು. ಕನ್ನಡ ಕವಿಗಳು ಇವರನ್ನು ಕುರಿತು ಬರೆದಿರುವ ಪದ್ಯಗಳ ಸಂಕಲನ ಯದುಗಿರಿಯ ವೀಣೆ ಇವರಿಗೆ ಸಮರ್ಪಿತವಾಗಿದೆ. 'ಯದುಗಿರಿ' ಇವರ ಅಭಿನಂದನ ಗ್ರಂಥ (1981). ಶೇಷಮ್ಮ ಇವರ ಪತ್ನಿ.

(ಎಂ.ಜಿ.)

**ನರಸಿಂಹಾಚಾರ್, ಆರ್.:** 1860– 1936. ಕನ್ನಡಕ್ಕೆ ಪುರಸ್ಕಾರವೇ ಇಲ್ಲದಿದ್ದ ಕಾಲದಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ದುಡಿದ ಮಹನೀಯರಲ್ಲೊಬ್ಬರು. ಕರ್ನಾಟಕ ಕವಿಚರಿತ್ರೆಕಾರರು. ಸಂಶೋಧನೆ, ಗ್ರಂಥಸಂಪಾದನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಮೌಲಿಕ ಕೆಲಸ ಮಾಡಿದವರು. ಇವರದು ಪಂಡಿತ ಮನೆತನ. ಶ್ರೀರಂಗಪಟ್ಟಣದ ಮಂಡ್ಯದ ಕೊಪ್ಪಲಿನಲ್ಲಿ 1860 ಏಪ್ರಿಲ್ 9ರಂದು ಹುಟ್ಟಿದರು. ತಂದೆ ತಿರುನಾರಾಯಣ ಪೆರುಮಾಳ್, ತಾಯಿ ಶಿಂಗಮ್ಮಾಳ್. ತಂದೆಯಿಂದಲೇ ಇವರಿಗೆ ಸಂಸ್ಕೃತದ ಅಭ್ಯಾಸವಾಯಿತು. ತಮಿಳು, ಸಂಸ್ಕೃತ, ಕನ್ನಡ ಭಾಷೆಗಳ ಜೊತೆಗೆ ಶಾಲೆಯಲ್ಲಿ ಇಂಗ್ಲಿಷ್ ಭಾಷೆಯ ಪರಿಚಯವೂ ಆಯಿತು. ಅನಂತರ ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪರೀಕ್ಷೆಯಲ್ಲಿ (1882) ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣರಾಗಿ ಅನೇಕ ಪಾರಿತೋಷಿಕಗಳನ್ನು ಪಡೆದರು. ಪದವಿ ಪಡೆದ ತರುಣದಲ್ಲಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಗಳಲ್ಲಿ ಪ್ರೌಢಶಾಲೆಯ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು ಅನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು. ಇಲ್ಲಿ ಇವರ ಬಹುಮುಖ ಪ್ರತಿಭೆಯ ವಿಕಾಸಕ್ಕೆ ಹೆಚ್ಚು ಅವಕಾಶ ದೊರೆಯಿತು. ಇವರು ಕನ್ನಡ ಮತ್ತು ತಮಿಳು ಭಾಷೆಗಳನ್ನು ಓದಿ 1893ರಲ್ಲಿ ಮದರಾಸು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೊಟ್ಟಮೊದಲನೆಯ ಕನ್ನಡ ಎಂ.ಎ. ಪದವೀಧರರಾದರು. ಕನ್ನಡ ಸಾಹಿತ್ಯ ಸಂಶೋಧನೆಗಳ ಕಡೆಗೆ ಮನಸ್ಸು ಒಲಿದುದರಿಂದ ಇವರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ವಿದ್ಯಾ ಇಲಾಖೆಯಲ್ಲಿ ಐದು ವರ್ಷಗಳ ಕಾಲ ಕನ್ನಡ ಭಾಷಾಂತರಕಾರರಾಗಿದ್ದು, 1899ರಲ್ಲಿ ಮೈಸೂರಿನ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯಲ್ಲಿ ಲೂಯಿರೈಸ್‌ರವರಿಗೆ ಸಹಾಯಕರಾಗಿ ನೇಮಕಗೊಂಡರು. ಲೂಯಿರೈಸರ ಅನಂತರ 1906ರಲ್ಲಿ ಇವರೇ ನಿರ್ದೇಶಕರಾಗಿ ನೇಮಕವಾಗಿ 1922 ರವರೆಗೆ ದುಡಿದು ಈ ಹುದ್ದೆಯಿಂದ ನಿವೃತ್ತರಾದರು.

ಇವರು ಸುಮಾರು 16 ವರ್ಷಗಳ ಕಾಲ ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿ ಮಾಡಿದ ಕೆಲಸ ದೊಡ್ಡ ಮಟ್ಟದ್ದು. ಆಗಿನ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ಸಂಚರಿಸಿ ಸು. 5,000 ಹೊಸ ಶಾಸನಗಳನ್ನು ಸಂಗ್ರಹಿಸಿದರು. ಹಿಂದು, ಜೈನ ಮತ್ತು ಮಹಮ್ಮದೀಯರಿಗೆ ಸಂಬಂಧಪಟ್ಟ 1,000 ಕಟ್ಟಡಗಳನ್ನು ಪರೀಕ್ಷಿಸಿದರು. 4,100 ನಾಣ್ಯಗಳ ಸಂಶೋಧನೆ, 1,250 ಛಾಯಾಚಿತ್ರಗಳು ಮತ್ತು 120 ನಕ್ಷೆಗಳ ರಚನೆಗಳೂ ಆದುವು. ಅಪರೂಪವಾದ ಸು.125 ಪ್ರಾಚೀನ ಕನ್ನಡ ಸಂಸ್ಕೃತ ಗ್ರಂಥಗಳನ್ನು ಅವಲೋಕಿಸಿ ಅವುಗಳನ್ನು 100 ಸಂಪುಟಗಳಲ್ಲಿ ಪ್ರತಿ ಮಾಡಿಸಿ ಪ್ರಾಚ್ಯ ಕೋಶಾಗಾರದಲ್ಲಿರಿಸಿದರು. ಎಪಿಗ್ರಾಫಿಯ ಕರ್ನಾಟಿಕದ ವಿಸ್ತಾರವಾದ ಅಕಾರಾದಿ, ಇಲಾಖಾ ವರದಿಗಳ ಅಕಾರಾದಿಗಳನ್ನೂ ಐತಿಹಾಸಿಕ ಮತ್ತು ಸಾಮಾಜಿಕ ಪ್ರಾಮುಖ್ಯವುಳ್ಳ ಶಾಸನ ಸಂಗ್ರಹಗಳನ್ನೂ ಸಿದ್ಧಪಡಿಸಿದರು. ರೈಸರು ಪ್ರಕಟಿಸಿದ್ದ ಶ್ರವಣಬೆಳಗೊಳದ ಶಾಸನಗಳನ್ನೊಳಗೊಂಡ ಎಪಿಗ್ರಾಫಿಯ ಕರ್ನಾಟಿಕದ ಎರಡನೆಯ ಸಂಪುಟವನ್ನು ಇವರು ಸಂಪೂರ್ಣವಾಗಿ ಪರಿಷ್ಕರಿಸಿದರು. ಮೊದಲು 144 ಇದ್ದ ಶಾಸನಗಳ ಸಂಖ್ಯೆ ಪರಿಷ್ಕೃತ ಆವೃತ್ತಿಯಲ್ಲಿ 500 ಆಯಿತು. ಶ್ರವಣಬೆಳಗೊಳದ ಬಸದಿಗಳ ವಿವರಗಳನ್ನು ಒಳಗೊಂಡ ವಿಸ್ತಾರವಾದ ಮುನ್ನುಡಿಯನ್ನು ಈ ಸಂಪುಟಕ್ಕೆ ಬರೆದರು. ಸೋಮನಾಥಪುರದ ಕೇಶವ, ಬೇಲೂರಿನ ಚೆನ್ನಕೇಶವ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯಗಳ ಶಿಲ್ಪಗಳನ್ನು ಪರಿಚಯಿಸುವ ಕೈಪಿಡಿಗಳನ್ನು ಪ್ರಕಟಿಸಿದರು. ಚಂದ್ರವಳ್ಳಿ, ತಲಕಾಡು ಮತ್ತು ಹಳೆಬೀಡುಗಳಲ್ಲಿ ಭೂಶೋಧನೆಗಳನ್ನು ನಡೆಸಿ ರೋಮನ್ನರ ಮತ್ತು ಚೀನಿಯರ ಅನೇಕ ಬಗೆಯ ನಾಣ್ಯಗಳನ್ನು ಸಂಗ್ರಹಿಸಿದರು. ಇವುಗಳ ಜೊತೆಗೆ ಮೈಸೂರು ಸಂಸ್ಥಾನದ ಅನೇಕ ದೇವಾಲಯಗಳು ಮತ್ತು ಪ್ರಾಚೀನ ಶಿಲ್ಪಗಳ ಬಗ್ಗೆ ಸಂಶೋಧನಾತ್ಮಕ ಟಿಪ್ಪಣಿಗಳನ್ನು ಬರೆದಿರುವುದೂ ಇವರ ಬಹುಮುಖ್ಯ ಸಾಧನೆ. ಚಾಳುಕ್ಯ ಶಿಲ್ಪದ ಭಾಗವೆಂದೇ ಅದುವರೆಗೂ ಪರಿಗಣಿಸಲ್ಪಟ್ಟಿದ್ದ ಹೊಯ್ಸಳ ಕಟ್ಟಡಗಳಲ್ಲಿ ಕಂಡುಬರುವ ಶೈಲಿಯ ವಿಶಿಷ್ಟತೆಯನ್ನು ಗುರುತಿಸಿ, ಅದಕ್ಕೆ ಹೊಯ್ಸಳ ಶೈಲಿ ಎಂಬ ಪ್ರತ್ಯೇಕವಾದ ಹೆಸರು ಕೊಟ್ಟ ಕೀರ್ತಿ ಇವರದು. ವಾಸ್ತು, ಶಿಲ್ಪ, ಶಾಸನ ಮತ್ತು ನಾಣ್ಯಗಳನ್ನು

ಕುರಿತ ಅನೇಕ ಸಂಶೋಧನ ಲೇಖನಗಳನ್ನು ಮಿಥಿಕ್ ಸೊಸೈಟಿಯ ತ್ರೈಮಾಸಿಕ ಮತ್ತು ಇಂಡಿಯನ್ ಆಂಟಿಕ್ವರಿ ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಇವರು ಪ್ರಕಟಿಸಿರುವ ಕರ್ನಾಟಕ ಕವಿಚರಿತ್ರೆಯ ಮೂರು ಸಂಪುಟಗಳು ಇವರ ಪಾಂಡಿತ್ಯ ಪರಿಶ್ರಮಗಳಿಗೆ ಸಾಕ್ಷಿಯಾಗಿವೆ. ಸುಮಾರು ಎಂಟನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ಅವಧಿಯಲ್ಲಿ ಬಾಳಿದ 1,100ಕ್ಕೂ ಮಿಕ್ಕ ಕನ್ನಡ ಕವಿಗಳು ಮತ್ತು ಅವರ ಕೃತಿಗಳನ್ನು ಕುರಿತ ವಿವರಗಳು ಈ ಸಂಪುಟಗಳಲ್ಲಿವೆ. ಇವರು ಕಾವ್ಯಾವಲೋಕನ, ಭಾಷಾ ಭೂಷಣ ಮತ್ತು ಶಬ್ದಾನುಶಾಸನಗಳನ್ನು ಸಂಪಾದಿಸಿದ್ದಾರೆ. ನೀತಿಮಂಜರಿ (1911), ನಗೆಗಡಲು (1898), ಶಾಸನ ಪದ್ಯಮಂಜರಿ (1923)–ಇವು ಇವರ ಇತರ ಕೃತಿಗಳು. ಹಿಸ್ಟರಿ ಆಫ್ ಕನ್ನಡ ಲಿಟರೇಚರ್, ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್– ಇವು ಇವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಎರಡು ಗ್ರಂಥಗಳು.

ಭಾರತ ಸರ್ಕಾರದ ಪ್ರಾಚ್ಯ ವಿದ್ಯಾ ಇಲಾಖೆ, ಏಷ್ಯಾಟಿಕ್ ಸೊಸೈಟಿ, ಹೈದರಾಬಾದಿನ ಪ್ರಾಚ್ಯ ವಿದ್ಯಾ ಸಮಿತಿ, ಪ್ಯಾರಿಸ್ಸಿನ ಪ್ರಾಚ್ಯ ವಿದ್ಯಾಸಂಸ್ಥೆ, ಬೆಂಗಳೂರಿನ ಮಿಥಿಕ್ ಸೊಸೈಟಿ ಮುಂತಾದ ಹತ್ತಾರು ದೇಶವಿದೇಶಗಳ ಸಂಘಸಂಸ್ಥೆಗಳೊಂದಿಗೆ ಇವರು ನಿಕಟಸಂಪರ್ಕ ಹೊಂದಿದ್ದರು.

ಇವರು ಸಲ್ಲಿಸಿದ ನಾಡುನುಡಿಗಳ ಸೇವೆಗೆ ಮನ್ನಣೆ ಎಂಬಂತೆ ಹಲವು ಬಗೆಯ ಪ್ರಶಸ್ತಿಗಳೂ ಬಹುಮಾನಗಳೂ ಬಂದುವು. 1907ರಲ್ಲಿ ಇವರಿಗೆ ರಾಯಲ್ ಏಷ್ಯಾಟಿಕ್ ಸೊಸೈಟಿಯ ಗೌರವ ಸದಸ್ಯತ್ವ ದೊರೆಯಿತು. 1913ರಲ್ಲಿ ಆಗಿನ ಮೈಸೂರು ಮಹಾರಾಜರು ಪ್ರಾಕ್ತನ ವಿಮರ್ಶವಿಚಕ್ಷಣ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದರು. 1916ರಲ್ಲಿ ಬ್ರಿಟಿಷ್ ಸರ್ಕಾರದಿಂದ ರಾವ್‌ಬಹದ್ದೂರ್ ಪ್ರಶಸ್ತಿ ಬಂತು. ಕಲ್ಕತ್ತದ ಅಖಿಲಭಾರತ ಸಾಹಿತ್ಯ ಸಂಘ 1924ರಲ್ಲಿ ಇವರಿಗೆ ಪ್ರಾಚ್ಯ ವಿದ್ಯಾವೈಭವ ಎಂಬ ಬಿರುದನ್ನಿತ್ತು ಸನ್ಮಾನಿಸಿತು. 1934ರಲ್ಲಿ ಕೇಂದ್ರ ಸರ್ಕಾರ ಮಹಾಮಹೋಪಾಧ್ಯಾಯ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಧಾರವಾಡದಲ್ಲಿ 1918ರಲ್ಲಿ ನಡೆದ 4ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಕುರಿತು ಒಂದು ಜೀವನ ಚರಿತ್ರೆಯನ್ನು ಪ್ರಕಟಿಸಿದೆ. ಇವರು 1936 ಡಿಸೆಂಬರ್ 6 ರಂದು ನಿಧನಹೊಂದಿದರು. **(ಎನ್.ಎಆರ್.)**

**ನರಸಿಂಹಾಚಾರ್ಯ,ಎಸ್.ಜಿ.:** 1862– 1907. ಹೊಸಗನ್ನಡ ಅರುಣೋದಯ ಕಾಲದ ಪ್ರಸಿದ್ಧ ವಿದ್ವಾಂಸರು. ಸಂಸ್ಕೃತ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದ ಇವರು ಅನೇಕ ಪ್ರಾಚೀನ ಹಸ್ತಪ್ರತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಿದರು. ಜನ್ಮಸ್ಥಳವಾದ ಶ್ರೀರಂಗಪಟ್ಟಣದಲ್ಲಿ, ಅನಂತರ ಮೈಸೂರಿನಲ್ಲಿ ವ್ಯಾಸಂಗ ಮಾಡಿ, ಶ್ರೀರಂಗಪಟ್ಟಣದಲ್ಲಿ ಕೆಲವು ವರ್ಷಗಳ ಕಾಲ ಉಪಾಧ್ಯಾಯರಾಗಿದ್ದರು. ಅನಂತರ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿಯೂ ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಸ್ಥೆಯಲ್ಲಿ ಪಂಡಿತರಾಗಿಯೂ ಕೆಲಸ ಮಾಡಿದರು.

1892ರಲ್ಲಿ ಎಂ.ಎ. ರಾಮನುಜಯ್ಯಂಗಾರ್ಯರ ಜೊತೆಯಲ್ಲಿ ಇವರು ಕರ್ನಾಟಕ ಕಾವ್ಯಮಂಜರಿ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿ ಅನೇಕ ಹಳಗನ್ನಡ ಮತ್ತು ನಡುಗನ್ನಡ ಗ್ರಂಥಗಳನ್ನು ಭಾಗಶಃ ಪ್ರಕಟಿಸಿದರು. ನಶಿಸಿಹೋಗುತ್ತಿದ್ದ ಅನೇಕ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸಲು ಇವರು ಪಟ್ಟ ಶ್ರಮ ಸ್ಮರಣೀಯ. ಕಾವ್ಯಮಂಜರಿ ಕಾರಣಾಂತರಗಳಿಂದ ನಿಂತುಹೋದ ಮೇಲೆ ಇವರು ಮತ್ತೆ ರಾಮಾನುಜಾಯ್ಯಂಗಾರ್ಯರೊಡನೆ ಕರ್ನಾಟಕ ಕಾವ್ಯ ಕಲಾನಿಧಿ ಎಂಬ ಹೊಸ ಮಾಸಪತ್ರಿಕೆಯನ್ನು 1899ರಲ್ಲಿ ಪ್ರಾರಂಭಿಸಿದರು. ಈ ಕಾವ್ಯಮಾಲೆಯಲ್ಲಿ ಆದಿಕಾಲದಿಂದ 20ನೆಯ ಶತಮಾನದವರೆಗಿನ ಅನೇಕ ಕನ್ನಡ ಕವಿಗಳ ಚಂಪೂ, ಗದ್ಯ, ಪದ್ಯ, ನಾಟಕ, ಕೀರ್ತನೆ, ಶತಕ, ನಿಘಂಟು, ಛಂದಸ್ಸು, ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಗಳನ್ನೊಳಗೊಂಡ ಸುಮಾರು 75 ಉದ್ಗ್ರಂಥಗಳು ಪ್ರಕಟವಾದವು. ಈ ಪ್ರೌಢ ಗ್ರಂಥಗಳನ್ನು ಪರಿಷ್ಕರಿಸುವುದರ ಲ್ಲಿಯೂ ವಿಮರ್ಶಿಸುವುದರಲ್ಲಿಂಯೂ ಇವರ ಪ್ರತಿಭೆ ಪಾಂಡಿತ್ಯಗಳು ಪ್ರದರ್ಶಿತವಾಗಿವೆ. ಕರ್ನಾಟಕ ಕವಿಚರಿತೆಯ ಪ್ರಥಮ ಸಂಪುಟದ ರಚನೆಯಲ್ಲಿ ಆರ್. ನರಸಿಂಹಾಚಾರ್ಯರಿಗೆ ಇವರು ಸಹಾಯಕರಾಗಿದ್ದರು.

ನರಸಿಂಹಾಚಾರ್ಯರು ಸಂಸ್ಕೃತ ಮತ್ತು ಇಂಗ್ಲಿಷಿನಿಂದ ಅನೇಕ ಕಾವ್ಯಗಳನ್ನೂ ಗ್ರಂಥಗಳನ್ನೂ ಕನ್ನಡಕ್ಕೆ ಸರಳವಾಗಿಯೂ ಸುಂದರವಾಗಿಯೂ ಭಾಷಾಂತರಿಸಿದ್ದಾರೆ. ಕಾಳಿದಾಸನ ರಘುವಂಶದ ಕೆಲವು ಸರ್ಗಗಳ ಪದ್ಯಾನುವಾದವಾಗಿರುವ ಅಜನೃಪಚರಿತೆ ಮತ್ತು ದಿಲೀಪಚರಿತೆಗಳು ಇವರ ಉತ್ತಮ ಅನುವಾದಕಲೆಗೆ ಸಾಕ್ಷಿಯಾಗಿವೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಮನರಂಜಕವೂ ಬೋಧಪ್ರದವೂ ಆದ ಅನೇಕ ಪಠ್ಯಪುಸ್ತಕಗಳನ್ನು ಇವರು ಸಿದ್ಧಪಡಿಸಿದರು. ಆ ಪಠ್ಯಪುಸ್ತಕಗಳಿಗಾಗಿ ಇಂಗ್ಲಿಷಿನ ಸರಳ ರಗಳೆಯ ಅನೇಕ ಪದ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿದರಲ್ಲದೆ ಸ್ವತಃ ಹೊಸ ಮಾದರಿಯ ಅನೇಕ ಕವನಗಳನ್ನೂ ರಚಿಸಿದರು. ಅಂಥವುಗಳಲ್ಲಿ ನಕ್ಷತ್ರ (ಮಿರುಮಿರುಗುತಿ ಹಾಕಿರುತಾರಣಿಯೆ), ಬಿಡುವು (ಬಾರೋ ನಾವಾಡುವ ಬಾರೊ), ಗೋವಿನಬಾಳು (ಇಟ್ಟರೆ ಸಗಣಿಯಾದೆ), ಕಾವೇರಿಯ ಮಹಿಮೆ (ನೋಡು ಕಾವೇರಿಯು), ನೇಗಿಲು, ಮಕ್ಕಳು ಮಲಗುವ ಹೊತ್ತು, ಹೊಗೆಯ ಗಾಡಿ ಮುಂತಾದವು ಜನಪ್ರಿಯವಾಗಿವೆ. ಇವರ ಪಾಂಡಿತ್ಯಕ್ಕೆ ಮೆಚ್ಚಿ ಆಗಿನ ಮದರಾಸು ಸರ್ಕಾರದ ಶಿಕ್ಷಣ ಇಲಾಖೆಯ ಇನ್‌ಸ್ಪೆಕ್ಟರಾಗಿದ್ದ ಮಾರ್ಸಡನ್ ಎಂಬುವರು ಇಂಗ್ಲಿಷಿನಲ್ಲಿ ತಾವು ರಚಿಸಿದ ಬುಕ್ಸ್ ಫಾರ್ ದಿ ಬ್ರೇನ್ಸ್ ಎಂಬ ಕೃತಿಗಳನ್ನು ಇವರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಿದರಂತೆ. ಇವರ ಇತರ ಕೃತಿಗಳಲ್ಲಿ ಹಿಂದೂ ದೇಶದ ಚರಿತ್ರೆ, ಅಲ್ಲಾವುದ್ದೀನನ ಅದ್ಭುತ ದೀಪ, ಈಸೋಪನ ಕಥೆಗಳು, ಗಲಿವರನ ದೇಶಸಂಚಾರ, ಭಾರತವೀರ ಚರಿತೆ ಮೊದಲಾದವು ಮುಖ್ಯವಾದುವು. ಪದ್ಯಸಾರದ ಎರಡು ಭಾಗಗಳನ್ನು ಇವರು ಸಂಗ್ರಹಿಸಿದ್ದಾರೆ. ಉತ್ತರ ರಾಮಚರಿತೆಯ ಮೂರು ಅಂಕಗಳನ್ನೂ ಭಾಷಾಂತರಿಸಿದ್ದರೆಂದು ಪ್ರತೀತಿ. ಇವರು ರಚಿಸಿದ್ದರೆನ್ನಲಾಗಿರುವ ಅನೇಕ ಕೃತಿಗಳು ಇನ್ನೂ ದೊರಕಿಲ್ಲ.

ಧಾರವಾಡದಲ್ಲಿ 1907ರಲ್ಲಿ ನಡೆದ ಅಖಿಲ ಕರ್ನಾಟಕ ಗ್ರಂಥಕರ್ತರ ಪ್ರಥಮ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಇದು ಕರ್ನಾಟಕದಲ್ಲಿ ಜರುಗಿದ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನವೆನ್ನಬಹುದು. ಇವರ ಸಮಗ್ರ ಕವಿತೆಗಳನ್ನು ಎಸ್.ಜಿ. ನರಸಿಂಹಾಚಾರ್ಯರ ಕವಿತೆಗಳು (ಸಂ: ಟಿ.ವಿ. ವೆಂಕಟಾಚಲಶಾಸ್ತ್ರೀ) ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ.

**(ಎನ್.ಎಆರ್.)**

**ನರಹರಿತೀರ್ಥ:** ಸು. 1280. ಪ್ರಸಿದ್ಧ ಹರಿದಾಸರು. ಮಧ್ವಾಚಾರ್ಯರ ಶಿಷ್ಯರಲ್ಲಿ ಪ್ರಮುಖರು. ಇವರ ಪೂರ್ವಾಶ್ರಮದ ಹೆಸರು ಶ್ಯಾಮಶಾಸ್ತ್ರೀ. ಮೊದಲಿಗೆ ಈ ಹೆಸರಿನಿಂದ ಇವರು ಒರಿಸ್ಸದ ಗಜಪತಿ ರಾಜನಲ್ಲಿ ಅಧಿಕಾರಿಯಾಗಿದ್ದರೆಂದು ತಿಳಿದುಬರುತ್ತದೆ. ಮಧ್ವಾಚಾರ್ಯರು ಬದರಿಯ ಯಾತ್ರೆ ಮುಗಿಸಿ ಒರಿಸ್ಸಕ್ಕೆ ಬಂದಾಗ ಇವರು ಅವರ ಪಾಂಡಿತ್ಯ ಉಪದೇಶಗಳಿಗೆ ಮನಸೋತು ಶಿಷ್ಯರಾಗಿ ಸಂನ್ಯಾಸ ಸ್ವೀಕರಿಸಿ ನರಹರಿತೀರ್ಥರಾದರು. ಅನಂತರ ತಮ್ಮ ಗುರುವಿನ ಅಪ್ಪಣೆಯಂತೆ ಒರಿಸ್ಸದ ರಾಜಧಾನಿಯಲ್ಲೇ ನಿಂತರು. ಕೆಲಕಾಲಾನಂತರ ಗಜಪತಿರಾಜ

ಗರ್ಭಿಣಿಯಾಗಿದ್ದ ಹೆಂಡತಿಯನ್ನು ಬಿಟ್ಟು ನಿಧನನಾಗಲು ಇವರು ಅರಸುಕುಮಾರ ಹುಟ್ಟಿ ಪ್ರಾಪ್ತವಯಸ್ಕನಾಗುವವರೆಗೆ ಅಲ್ಲಿಯೇ ರಾಜ್ಯವಾಳುತ್ತಿದ್ದರು. ಅನಂತರ ರಾಜ್ಯವನ್ನು ಹಕ್ಕುದಾರನಿಗೆ ವಹಿಸಿಕೊಟ್ಟು ಮಧ್ವಾಚಾರ್ಯರ ಅಪೇಕ್ಷೆಯಂತೆ ರಾಜನ ಬೊಕ್ಕಸದಲ್ಲಿದ್ದ ರಾಮ ಸೀತೆಯರ ಮೂಲ ವಿಗ್ರಹಗಳನ್ನು ರಾಜನಿಂದ ಪಡೆದು, ಅವನ್ನು ಗುರುಗಳಿಗೆ ಒಪ್ಪಿಸಿದರಂತೆ. ಮಧ್ವಾಚಾರ್ಯರ ತರುವಾಯ ಮಠಾಧಿ ಪತಿಗಳಾಗಿ ಬಂದ ಪದ್ಮನಾಭತೀರ್ಥರು ವೃಂದಾವನಸ್ಥರಾದ ಮೇಲೆ ಇವರು ಸು. 1324–33ರ ವರೆಗೆ ಪೀಠಾಧಿಪತ್ಯವನ್ನು ವಹಿಸಿಕೊಂಡುದಾಗಿ ತಿಳಿದುಬರುತ್ತದೆ. ಆಂಧ್ರಪ್ರದೇಶದ ಶ್ರೀಕೂರ್ಮಂನಲ್ಲಿ ಇವರಿಗೆ ಸಂಬಂಧಿಸಿದ ಕೆಲವು ಶಾಸನಗಳು ದೊರಕಿವೆ. ಇವರು ಸಂಸ್ಕೃತದಲ್ಲಿ ಉದ್ದಾಮ ಪಂಡಿತರೆನಿಸಿದ್ದು, ಹದಿನೈದು ಗ್ರಂಥಗಳನ್ನು ರಚಿಸಿದುದಾಗಿ ತಿಳಿದುಬರುತ್ತದೆ.

ಸಂಸ್ಕೃತದಲ್ಲೇ ಅಲ್ಲದೆ ಕನ್ನಡದಲ್ಲೂ ಹರಿಕೀರ್ತನೆಗಳನ್ನು ರಚಿಸಿ, ಆ ಮೂಲಕ ಜನರಲ್ಲಿ ದ್ವೈತಮತವನ್ನು ಪ್ರಚಾರಮಾಡುತ್ತ ಅನೇಕ ಕ್ಷೇತ್ರಯಾತ್ರೆಗಳನ್ನು ಮಾಡಿದಂತೆ ಕಂಡುಬರುತ್ತದೆ. ಹರಿದಾಸ ಸಾಹಿತ್ಯಕ್ಕೆ ಮಧ್ವಾಚಾರ್ಯರ ದ್ವಾದಶಸ್ತೋತ್ರ ಒಂದು ಪ್ರೇರಣಾಸ್ತೋತ್ರವಾದರೆ ನರಹರಿತೀರ್ಥರ ಕನ್ನಡ ಕೀರ್ತನೆಗಳು ಹರಿಕೀರ್ತನೆಗಳಿಗೆ ಮೂಲಪ್ರೇರಕ ಶಕ್ತಿಗಳಾದವು. ಇವರ ಕಾಲದಿಂದ ಮುಂದೆ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಹರಿದಾಸರ ಕೀರ್ತನೆಗಳು ಕಂಡುಬರದಿರುವುದರಿಂದಲೂ ನರಹರಿತೀರ್ಥರ ಎರಡು ಕೀರ್ತನೆಗಳು ಮಾತ್ರ ಈಗ ಉಪಲಬ್ಧವಾಗಿರು ವುದರಿಂದಲೂ ಹರಿದಾಸರಲ್ಲಿ ಇವರು ಆದ್ಯರೆಂಬುದನ್ನು ಒಪ್ಪದೆ ಹದಿನೈದನೆಯ ಶತಮಾನದಲ್ಲಿ ಕಂಡುಬರುವ ಶ್ರೀಪಾದರಾಯರು ಹರಿದಾಸಪಂಥದ ಮೂಲಪುರುಷರೆಂದು ಕೆಲವರು ಭಾವಿಸುತ್ತಾರೆ. ಕೀರ್ತನೆಗಳ ರಚನೆ ಕನ್ನಡದಲ್ಲಿ ಆ ಕಾಲಕ್ಕೆ ಇನ್ನೂ ಹೊಸದಾದ್ದರಿಂದ, ಈ ಹೊಸ ಪ್ರಕಾರಕ್ಕೆ ಇನ್ನೂ ನಿಶ್ಚಿತವಾದ ನೆಲೆಬೆಲೆಗಳಾವುವೂ ಕಂಡುಬರದೆ ಇದ್ದುದರಿಂದ, ಮುಂದಿನವರು ವಾದಿನಿಗ್ರಹ ಕಾರ್ಯಗಳಲ್ಲಿ ತೊಡಗಬೇಕಾದುದರಿಂದ, ಮಠಾಧಿಪತಿಗಳ ಕಾರ್ಯ ಸಾಂಪ್ರದಾಯಿಕವಾಗಿ ಸಂಸ್ಕೃತದಲ್ಲಿ ನಡೆಯುತ್ತಿದ್ದುದರಿಂದ ಹರಿದಾಸ ಕೀರ್ತನೆಗಳ ಗಾನ ವಾಹಿನಿ ಅನೇಕ ದಿನ ಗುಪ್ತಗಾಮಿನಿಯಾಗಿಯೇ ಉಳಿಯಬೇಕಾಯಿತು. ಆದರೆ ಜನರ ಆಡುಮಾತಿನಲ್ಲಿಯೇ ಕನ್ನಡದಲ್ಲಿಯೇ ತಮ್ಮ ಹೃದಯಾನು ಭವಗಳನ್ನು ಪರಮಾತ್ಮನಲ್ಲಿ ನಿವೇದಿಸಿಕೊಂಡು ಕೃತಾರ್ಥರಾಗ ಬಹುದು ಎಂಬ ಸೂಕ್ತ ಪ್ರಜ್ಞೆ ಮೊದಲಿಗೆ ಉದಯಿಸಿದ್ದು ನರಹರಿತೀರ್ಥರಲ್ಲಿ.

ಸದ್ಯದಲ್ಲಿ ದೊರಕಿರುವ ಇವರ ಎರಡು (ಕೆಲವರು ಹೇಳುವಂತೆ ಮೂರು) ಕೀರ್ತನೆಗಳ ತಿರುಳನ್ನು ಗಮನಿಸಿದರೆ ದಾಸಸಾಹಿತ್ಯದ ಮುಖ್ಯಲಕ್ಷಣಗಳು ವಿಧಿತವಾಗುತ್ತವೆ. ಭಗವಂತನ ಸಾನ್ನಿಧ್ಯದಲ್ಲಿ ಚಿಂತನ ಪರರಾದ ದಾಸರು ತಮ್ಮನ್ನು ತಾವೇ ಶೋಧಿಸಿಕೊಂಡು, ತಮ್ಮ ಮನಃಸ್ಥಿತಿ ಯನ್ನು ಎಂತು ಮರುಳಾದೆ ನಾನು ಎಂತು ಮರುಳಾದೆ ಎಂಬ ಕೀರ್ತನೆ ಯಲ್ಲಿ ಪರಮಾತ್ಮನಲ್ಲಿ ಬಿನ್ನವಿಸಿಕೊಳ್ಳುತ್ತಾರೆ. ಹರಿಯೇ ಇದು ಸರಿಯೆ ಎಂಬ ಕೀರ್ತನೆಯಲ್ಲಿ ಭಕ್ತನೊಬ್ಬನ ಮನಸ್ಸಿನಹೊಯ್ದಾಟ ಎದ್ದುಕಾಣು ತ್ತದೆ. ಆತ್ಮಪರಿಪಾಕಕ್ಕಾಗಿ ಸಂತತವೂ ಪರಿತಪಿಸುವ ಈ ಚಿತ್ತವೃತ್ತಿ ದೈವಭಕ್ತನ ವಾಣಿಗೆ ಪ್ರೇರಣೆ ನೀಡುತ್ತದೆ. ಇಷ್ಟದೇವತೆಯ ಅನುಗ್ರಹ ವಿಳಂಬವಾಗಲು ಅದರ ಮೊರೆ ಮಿಗಿಲಾಗುತ್ತದೆ. ಈ ಹಂಬಲ ವ್ಯಾಕುಲಗಳು ಹಾಡಾಗಿ ಮೂರ್ತಗೊಂಡಿವೆ. ಈ ಕೀರ್ತನೆಗಳು ಹರಿದಾಸ ಸಾಹಿತ್ಯದ ಅರುಣೋದಯದ ಕಿರಣಗಳಂತಿವೆ. (ಪಿ.ವಿ.ಸಿ.)

**ನರೇಗಲ್ಲ:** ಗದಗ ಜಿಲ್ಲೆ ರೋಣ ತಾಲ್ಲೂಕಿನ ಒಂದು ಪಟ್ಟಣ. ಗದಗ–ಗಜೇಂದ್ರಗಡ ಹೆದ್ದಾರಿ ಮಧ್ಯದಲ್ಲಿರುವ ಈ ಪಟ್ಟಣ ರೋಣಕ್ಕೆ ಆಗ್ನೇಯ ದಿಕ್ಕಿನಲ್ಲಿ 18 ಕಿಮೀ ಮತ್ತು ಗದಗ ಪಟ್ಟಣಕ್ಕೆ ಈಶಾನ್ಯದಲ್ಲಿ 27 ಕಿಮೀ ದೂರದಲ್ಲಿದೆ. ಜನಸಂಖ್ಯೆ 16,685.

ನರೇಗಲ್ಲ ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ. ಪಟ್ಟಣದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿದ್ದು, ಕಲಾ ಮತ್ತು ವಿಜ್ಞಾನ ಕಾಲೇಜು ಸಹ ಇದೆ. ಪ್ರವಾಸಿ ಮಂದಿರ, ಬ್ಯಾಂಕುಗಳು, ವಾಚನಾಲಯಗಳು, ಕೃಷಿಪತ್ತಿನ ಸಂಘಗಳು, ಮರ ಕೊಯ್ಯುವ ಕಾರ್ಖಾನೆ, ಎಣ್ಣೆ ಮತ್ತು ಹತ್ತಿ ಗಿರಣಿಗಳು ಇವೆ. ಪಶುವೈದ್ಯಾಲಯ, ಆರೋಗ್ಯ ಕೇಂದ್ರ, ಅಂಚೆ ಮತ್ತು ದೂರವಾಣಿ, ವಿದ್ಯುತ್ ಮುಂತಾದ ಸೌಕರ್ಯಗಳಿವೆ.

ನರೇಗಲ್ಲದಲ್ಲಿ 10–14ನೆಯ ಅವಧಿಗೆ ಸೇರುವ ಹತ್ತು ಶಿಲಾಶಾಸನಗ ಳಿವೆ. ಆ ಕಾಲದಲ್ಲಿ ನರೇಗಲ್ಲ–12 ಎಂಬ ವಿಭಾಗದ ಮುಖ್ಯ ಪಟ್ಟಣವಾಗಿತ್ತು. ಈ ಪ್ರದೇಶ ಹನ್ನೆರಡನೆಯ ಶತಮಾನದಲ್ಲಿ ಯಲಬುರ್ಗಿಯ ಸಿಂಧರ ಅಧೀನದಲ್ಲಿತ್ತೆಂದು ತಿಳಿದುಬರುತ್ತದೆ.

ನರೇಗಲ್ಲದಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯ ತ್ರಿಪುರಾಂತಕೇಶ್ವರ, ಸೋಮೇಶ್ವರ, ಕಲ್ಮೇಶ್ವರ, ಚಂದ್ರಮೌಳೀಶ್ವರ ಮತ್ತು ಹತ್ತಿರದ ಕೋಡಿಕೊಪ್ಪದಲ್ಲಿ ಮಲ್ಲಬ್ರಹ್ಮದೇವ ಎಂಬ ದೇವಾಲಯಗಳಿವೆ. ಅವುಗಳಲ್ಲಿ ಸೋಮೇಶ್ವರ ದೇವಾಲಯ ಅತ್ಯಂತ ಸುಂದರವೂ ಮತ್ತು ದೊಡ್ಡದೂ ಆಗಿದೆ. ಅದರಲ್ಲಿ ಎರಡು ಭಾಗಗಳಿವೆ. ಅಲ್ಲಿ ಬುಡದಿಂದ ತುದಿಯವರೆಗೆ ನಕ್ಷತ್ರಾಕಾರವಾಗಿ ಕೆತ್ತಿ ಮಾಡಿದ ಅನೇಕ ಸುಂದರವಾದ ಕಲ್ಲಿನ ಕಂಬಗಳಿವೆ. ಹಿಂದೆ ಈಶ್ವರ ಲಿಂಗದ ಗದ್ದುಗೆ ಇದೆ. ಮೊದಲನೆಯ ಭಾಗದ ಎರಡೂ ಬದಿಗಳಲ್ಲಿ ಗೋಡೆಯಷ್ಟು ಉದ್ದವಾದ ಎರಡು ಕಟ್ಟೆಗಳಿವೆ. ಆ ಕಟ್ಟೆಗಳ ಮೇಲ್ಬದಿಯಲ್ಲಿರುವ ಚೌಕು ಕುಳಿಗಳಲ್ಲಿ ಕೂಡಿರುವ ಅನೇಕ ಪ್ರತಿಮೆಗಳ ಸಾಲುಗಳಿವೆ. ಪಶ್ಚಿಮ ಬದಿಯ ಕಟ್ಟೆಯ ಮಧ್ಯದಲ್ಲಿ ವಿವಿಧ ಭಂಗಿಯಲ್ಲಿಯ ನಾರಾಯಣನ ಎರಡು ಮೂರ್ತಿಗಳಿವೆ. ಅದರಂತೆ ಪೂರ್ವ ಬದಿಯ ಕಟ್ಟೆಯ ಮಧ್ಯದಲ್ಲಿ ಈಶ್ವರ ಲಿಂಗವಿದೆ. ಉಳಿದ ನಾಲ್ಕು ದೇವಾಲಯಗಳ ಪೈಕಿ ಚಂದ್ರಮೌಳೀಶ್ವರ ದೇವಾಲಯ ಹಾಳು ಸ್ಥಿತಿಯಲ್ಲಿದೆ. ಈ ದೇವಾಲಯಗಳ ಹೊರತಾಗಿ ದೊಡ್ಡ ಪ್ರಮಾಣದಲ್ಲಿ ಅಂದವಾಗಿ ಕಟ್ಟಿಸಿದ ವೀರಭದ್ರ, ದುರ್ಗಾದೇವಿ, ದತ್ತಾತ್ರೇಯ, ಆಂಜನೇಯ ಮತ್ತು ಮಲ್ಲಿಕಾರ್ಜುನ ದೇವಾಲಯಗಳಿವೆ. ಬಿಜಾಪುರದ ಗೋಳಗುಮ್ಮಟವನ್ನು ನೆನಪಿಗೆ ತರುವ ಭವ್ಯವೂ ಸುಂದರವೂ ಆದ ಒಂದು ದರ್ಗಾ ಇದೆ. ಇದನ್ನು ಒಬ್ಬ ಸುಣ್ಣಗಾರ ಮುದುಕಿ ಕಟ್ಟಿಸಿದ್ದಳೆಂದು ಹೇಳಲಾಗುತ್ತದೆ. ಇವುಗಳಲ್ಲದೆ ವಿರಕ್ತ ಮಠ, ವೀರಪ್ಪಜ್ಜನ ಮಠ, ಅನ್ನದಾನೇಶ್ವರ ಮಠ, ಹಿರೇಮಠ ಎಂಬ ಹಲವಾರು ಮಠಗಳಿವೆ. ಪ್ರತಿವರ್ಷ ಮಾಘಮಾಸದಲ್ಲಿ ಶಿವರಾತ್ರಿ ದಿನ ಕೋಡಿಕೊಪ್ಪದ ವೀರಪ್ಪಜ್ಜನ ಜಾತ್ರೆಯಾಗುತ್ತದೆ. ಆ ದಿನ ದನಗಳ ಪ್ರದರ್ಶನವೂ ನಡೆಯುತ್ತದೆ. (ಎಸ್.ಎಸ್.ಎನ್.)

**ನರ್ಮದಾ:** 1943– . ಪ್ರಸಿದ್ಧ ನೃತ್ಯ ಕಲಾವಿದೆ. 1943 ರಲ್ಲಿ ಜನಿಸಿದರು. ತಂದೆ ಕೆ.ರಾಮರಾವ್, ತಾಯಿ ಶಕುಂತಲಾಬಾಯಿ. ಬಾಲ್ಯದಿಂದಲೆ ನೃತ್ಯದಲ್ಲಿ ವಿಶೇಷ ಒಲವು ಬೆಳೆಸಿಕೊಂಡ ಇವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದವರು ಸ್ವತಃ ಸಂಗೀತ ವಿದುಷಿ, ವೀಣಾವಾದಕಿಯಾಗಿದ್ದ ತಾಯಿ ಶಕುಂತಲಾಬಾಯಿ. ಸನಾತನ ನೃತ್ಯಾಲಯದ ಕೌಶಿಕ್‌ರಲ್ಲಿ ಭರತನಾಟ್ಯ ಕಲಿಕೆ ಪ್ರಾರಂಭಿಸಿದರು. ಅನಂತರ ತಂಜಾವೂರಿನ ವಿದ್ವಾನ್ ಕಿಟ್ಟಪ್ಪಪಿಳ್ಳೆಯವರಲ್ಲಿ ಹೆಚ್ಚಿನ ಪರಿಣತಿ

ಗಳಿಸಿದರು. 10 ವರ್ಷದ ಬಾಲಕಿಯಾಗಿದ್ದಾಗಲೆ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ರಂಗಪ್ರವೇಶ ಮಾಡಿದರು (1953). ದೇಶದಾದ್ಯಂತ ನೂರಾರು ನೃತ್ಯ ಪ್ರದರ್ಶನಗಳನ್ನು ನೀಡಿರುವ ಇವರ ನೃತ್ಯವನ್ನು ಮೆಚ್ಚಿ ಮೈಸೂರು ಮಹಾರಾಜ ಜಯಚಾಮರಾಜ ಒಡೆಯರು ಚಿನ್ನದ ಪದಕ ನೀಡಿ ಗೌರವಿಸಿದ್ದರು.

ಇವರು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎಸ್ಸಿ. ಪದವೀಧರರಾದರು. ಅನಂತರ ಎಂಜಿನಿಯರ್ ಆಗಿದ್ದ ರಾಮರಾವ್ ಎಂಬುವರನ್ನು ವಿವಾಹವಾದರು. ಇವರು ಹೈದರಾಬಾದಿನಲ್ಲಿರುವಾಗ ದುರಾದೃಷ್ಟವಶಾತ್ ಇವರ ಪತಿ ಅಪಘಾತದಲ್ಲಿ ನಿಧನರಾದರು. ಚಿಕ್ಕ ವಯಸ್ಸಿನಲ್ಲೇ ವೈಧವ್ಯಕ್ಕೆ ತುತ್ತಾದ ಇವರು ಬೆಂಗಳೂರಿಗೆ ಮರಳಿದರು. ಮನೆಯವರ ಹಾಗೂ ಗುರು ಕಿಟ್ಟಪ್ಪನವರ ಸಲಹೆಯಂತೆ ಬೆಂಗಳೂರಿನ ಶಂಕರಪುರಂನಲ್ಲಿ ಶಕುಂತಲಾ ನೃತ್ಯಾಲಯ ಪ್ರಾರಂಭಿಸಿದರು. ಅಂದಿನಿಂದ ಭರತನಾಟ್ಯ ಕಲೆಯಲ್ಲಿ ತಮ್ಮದೇ ಆದ ವಿಶೇಷ ಛಾಪನ್ನು ಒತ್ತಿರುವ ಇವರು ಅನೇಕ ಕಲಾವಿದರು ಕೀರ್ತಿಗಳಿಸಲು ಮಾರ್ಗದರ್ಶಿಯಾಗಿದ್ದಾರೆ. ಮಂಜು ಭಾರ್ಗವಿ, ಸಾವಿತ್ರಿ ರಾಮಯ್ಯ, ಶ್ರೀಧರ್, ಪೂರ್ಣಿಮಾ ಗುರುರಾಜ್, ಇಂದಿರಾ ಕಾಡಂಬಿ ಮೊದಲಾದವರು ಇವರ ನೃತ್ಯ ಶಾಲೆಯಲ್ಲಿ ಅರಳಿದ ಕಲಾ ಕುಸುಮಗಳು.

ನೃತ್ಯ ಕ್ಷೇತ್ರದಲ್ಲಿ ಇವರ ಅಪಾರ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಸೇರಿದಂತೆ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾ ತಿಲಕ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಚೆನ್ನೈನ ಮ್ಯೂಸಿಕ್ ಅಕಾಡೆಮಿಯ ಬೆಸ್ಟ್ ಡ್ಯಾನ್ಸ್ ಟೀಚರ್, ಕ್ಯಾಲಿಫೋರ್ನಿಯ ಕನ್ನಡ ಕೂಟ ನೀಡಿದ ಬೆಸ್ಟ್ ಡ್ಯಾನ್ಸ್ ಟೀಚರ್ ಪ್ರಶಸ್ತಿ, ಉದಯ ಕಲಾನಿಕೇತನದ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಇವು ಮುಖ್ಯವಾದವು. ಕರ್ನಾಟಕ ಸರ್ಕಾರ ನೃತ್ಯ ಕ್ಷೇತ್ರದ ಅತ್ಯುನ್ನತ ಶಾಂತಲಾ ಪ್ರಶಸ್ತಿಯನ್ನು ಇವರಿಗೆ ನೀಡಿ ಗೌರವಿಸಿದೆ (2002).

ಶಿಸ್ತು, ಸಂಯಮ, ನೇರ ನುಡಿಗಳನ್ನು ರೂಢಿಸಿಕೊಂಡಿರುವ ನರ್ಮದಾ ಸರಳಜೀವಿ. ಶಿಷ್ಯರ ಏಳಿಗೆಗೆ ಸಂತೋಷಿಸುವ, ಪ್ರೋತ್ಸಾಹಿಸುವ ವಿಶಾಲಹೃದಯಿ. ತಮ್ಮ ಶಿಷ್ಯರ ನೃತ್ಯ ಪ್ರದರ್ಶನಕ್ಕಾಗಿ ಇಂಗ್ಲೆಂಡ್, ಅಮೆರಿಕ, ದುಬೈ, ಅಬುದಾಬಿ ದೇಶಗಳಿಗೆ ಹಲವಾರು ಬಾರಿ ಪ್ರವಾಸ ಮಾಡಿದ್ದಾರೆ. ಇವರ ಅನೇಕ ಶಿಷ್ಯರು ಅಮೆರಿಕದಲ್ಲಿ ಭರತನಾಟ್ಯ ಶಾಲೆಯನ್ನು ನಡೆಸುತ್ತಿದ್ದಾರೆ. ಶಾಸ್ತ್ರೀಯ ನೃತ್ಯದ ಬಗ್ಗೆ ಅಪಾರ ಶ್ರದ್ಧೆ, ನಂಬಿಕೆ, ಗೌರವವನ್ನಿರಿಸಿಕೊಂಡಿರುವ ಇವರು ಸಮಕಾಲೀನ ನೃತ್ಯದ ಬಗ್ಗೆಯೂ ಆಸಕ್ತರು. ಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾದರೂ ತಮ್ಮ ನಾಟ್ಯಶಾಲೆಯಲ್ಲಿ ನಿರಂತರ ನೃತ್ಯ ತಾಲೀಮು ನೀಡುತ್ತಾ ಕಲಾ ಸೇವೆಯನ್ನು ಮುಂದುವರಿಸಿದ್ದಾರೆ. (ಎಸ್‌ಯು.ಎಂ.)

**ನಲ್ಲೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಐತಿಹಾಸಿಕ ಸ್ಥಳ. ವಿಜಯಪುರ ಎಂಬ ಗ್ರಾಮದಿಂದ 12 ಕಿಮೀ ದೂರದಲ್ಲಿದೆ. ಜನಸಂಖ್ಯೆ 999. ಈಗ ಇದು ಸಂಪೂರ್ಣವಾಗಿ ಪಾಳುಬಿದ್ದಿದೆ. ಚೌಡರಾಯನೆಂಬ ಕೊನೆಯ ಪಾಳೆಯಗಾರನ ಕಾಲದಲ್ಲಿ ಶತ್ರುಗಳು ಎರಡು ಬಾರಿ ಈ ಊರನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲರಾಗಿದ್ದರು. ಅಂತಿಮವಾಗಿ ಇದು ಶತ್ರುಗಳ ವಶವಾಯಿತು. ಹೀಗೆ ಶತ್ರುಗಳ ವಶವಾಗಲು ಆ ಪಾಳೆಯಗಾರನ ಮಗಳ ಕುತಂತ್ರವೆ ಮುಖ್ಯ ಕಾರಣವಾಗಿತ್ತಂತೆ. ಆಕೆ ಹೊಸಕೋಟೆ ತಾಲ್ಲೂಕಿನ ಗುಬ್ಬಿಯ ಅರಸನನ್ನು ಮದುವೆಯಾಗಿದ್ದು ಆತನೊಂದಿಗೆ ಯುದ್ಧಕ್ಕೆ ಬಂದು ನಲ್ಲೂರಿಗಿದ್ದ ಸುರಂಗಮಾರ್ಗವನ್ನು ತೋರಿಸಿದ್ದಳಂತೆ. ಶತ್ರುಗಳು ಕೋಟೆಯನ್ನು ಆಕ್ರಮಿಸಲು ಪ್ರಾರಂಭಿಸಿದಾಗ ಚೌಡರಾಯ ತನ್ನ ಕುಟುಂಬದ ಸದಸ್ಯರನ್ನೂ ಬೊಕ್ಕಸವನ್ನೂ ಅರಮನೆಯಲ್ಲಿಯೇ ಬಿಟ್ಟು ಅರಮನೆಗೆ ಬೆಂಕಿ ಹಾಕಿ ಅದನ್ನು ಧ್ವಂಸಮಾಡಲು ಮುಂದಾದನೆಂದು ಹೇಳಲಾಗಿದೆ. ಆತ ಅವಿತಿಟ್ಟದ್ದ ಎನ್ನಲಾದ ಗುಪ್ತ ನಿಧಿಯ ಶೋಧನೆಗೆ ಇಂದಿಗೂ ಪ್ರಯತ್ನಗಳು ನಡೆಯುತ್ತಿವೆ.

ಊರಿನ ಹೊರವಲಯದಲ್ಲಿನ ಹುಣಿಸೇಮರದ ತೋಪಿನ ಮಧ್ಯಭಾಗದಲ್ಲಿ ಇತ್ತೀಚಿನ ವಿಜಯನಗರ ಶೈಲಿಯ, ಈಗ ಹಾಳಾಗಿರುವ ಸುಂದರವಾದ ಚನ್ನರಾಯಸ್ವಾಮಿ ದೇವಾಲಯವಿದೆ. ಇದರ ಹೊರಗೋಡೆಗಳಲ್ಲಿ ಹಾಗೂ ಗೂಡುಗಳಲ್ಲಿ ಕಾಳಿಂಗಮರ್ದನ, ಗೋಪಿಕಾ ವಸ್ತ್ರಾಪಹರಣ, ಗೋಪಾಲಕೃಷ್ಣ ಮುಂತಾದ ಸುಂದರ ಶಿಲ್ಪಗಳಿವೆ. ಇದರ ಒಳಮಾಳಿಗೆ ಬಿದ್ದುಹೋಗಿದ್ದು ಗರ್ಭಗೃಹದಲ್ಲಿ ಮೂರ್ತಿ ಇಲ್ಲ. ಈ ದೇವಾಲಯದ ಸಮೀಪವಿರುವ ಎರಡು ಶಾಸನಗಳಿಂದ ಇಲ್ಲಿಯ ದೇವರನ್ನು ತಿರುಮಲನಾಥ (ವೆಂಕಟೇಶ) ಎಂದು ಗುರುತಿಸಬಹುದು. ಇದರಲ್ಲಿ 1386 ರ ಶಾಸನದಲ್ಲಿ ಮಹಾ ಸಾಮಂತಾಧಿಪತಿ ಸೊಣ್ಣಯನಾಯಕನ ಮಗ ಚಿಕ್ಕ ಅಂಕಯನಾಯಕನು ತಿರುಮಲನಾಥ ದೇವರ ಮುಂದೆ ದೀಪಮಾಲೆಯ ಕಂಬವನ್ನು ನಿಲ್ಲಿಸಿದನೆಂದೂ ಸೊನ್ನಪಿಳ್ಳೆಯಮಗ ಒಡೆಯಪ್ಪನೆಂಬ ಆಚಾರಿ ಇದನ್ನು ಮಾಡಿದನೆಂದೂ ಹೇಳಿದೆ. 1401ರ ಶಾಸನದಲ್ಲಿ ಪೆರುಮಾಳ ಸೆಟ್ಟಿಯ ಮಗ ಮಾರಪ್ಪನು ತಿರುಮಲನಾಥ ದೇವಾಲಯದ ಮುಂದಿರುವ ಗರುಡಗಂಬವನ್ನು ಮಾಡಿಸಿದನೆಂದೂ ಆಚಾರಿ ಅಂಕನಾಯಕನ ಮಗ ಪತಿಓಜ ಇದನ್ನು ಮಾಡಿದನೆಂದೂ ಹೇಳಿದೆ. ಇದರ ಸಮೀಪದಲ್ಲಿ ಗಂಗಮ್ಮ ದೇವಾಲಯವಿದೆ. ಗಣಪತಿ ಹಾಗೂ ಹಾಳಾದ ಭೈರವಮೂರ್ತಿಗಳು ಇದರ ಹೊರಗಡೆ ಇವೆ. ಚನ್ನರಾಯಸ್ವಾಮಿ ದೇವಾಲಯದ ಸಮೀಪದಲ್ಲಿ ಬಹಳಷ್ಟು ಪ್ರಾಚೀನ ಅವಶೇಷಗಳಿವೆ. ಮುಖ್ಯ ರಸ್ತೆಯ ಪಕ್ಕದ ಮಾವಿನ ತೋಪಿನಲ್ಲಿ ಪಾಳುಬಿದ್ದ ಸುಂದರವಾದ ಬಸವಣ್ಣ ದೇವಾಲಯವಿದೆ. ಇದರ ಗರ್ಭಗೃಹ ಮತ್ತು ಮುಖಮಂಟಪಗಳ ಗೋಡೆಗಳು ಚೆನ್ನಾಗಿದ್ದು ಇವು ಸುಂದರವಾದ ಚಚ್ಚೌಕವಾದ ಸ್ತಂಭಗಳಿಂದ ಕೂಡಿವೆ. (ಕೆ.ಎಂ.ಎಸ್.)

**ನವಭಾರತ:** ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಿಂದ ಪ್ರಕಟವಾದ ಮೊತ್ತ ಮೊದಲ ದಿನಪತ್ರಿಕೆ. ವಿ.ಎಸ್. ಕುಡ್ವರವರು 1941 ಜೂನ್ ತಿಂಗಳಲ್ಲಿ ಪತ್ರಿಕೆಯನ್ನು ಪ್ರಾರಂಭಿಸಿದರು. ಮೊದಲ ಒಂದು ವರ್ಷ ಕುಡ್ಪಿ ವಾಸುದೇವ ಶೆಣೈ ಸಂಪಾದಕರಾಗಿದ್ದು ಅನಂತರ ವಿ.ಎಸ್. ಕುಡ್ವ ಅವರೇ 1969 ರವರೆಗೆ ಸಂಪಾದಕರಾಗಿದ್ದರು. ಇವರ ನಿಧನಾನಂತರ 1969ರಿಂದ ಇವರ ಪುತ್ರ ಸಂಜೀವ ಎಸ್. ಕುಡ್ವ ಸಂಪಾದಕರಾಗಿದ್ದಾರೆ. ಪ್ರಥಮದಲ್ಲಿ ಎರಡು ಪುಟಗಳ ದೈನಿಕವಾಗಿದ್ದು 1959ರಲ್ಲಿ ರೋಟರಿ ಮುದ್ರಣ ಯಂತ್ರವನ್ನು ಬಳಸಿಕೊಂಡು ಆರು ಪುಟಗಳ ಪತ್ರಿಕೆಯಾಯಿತು. 1952ರಿಂದಲೇ ಪಿ.ಟಿ.ಐ. ಸಂಸ್ಥೆಯಿಂದಲೂ ದೇಶದ ತನ್ನ ಪ್ರತಿನಿಧಿಗಳ ಮೂಲಕವೂ ಸುದ್ದಿ ಸಂಗ್ರಹಿಸಿ ಪ್ರಕಟಿಸುತ್ತಿತ್ತು. ದಿನನಿತ್ಯದಲ್ಲಿ ವಾರ್ತೆಗಳು, ಸಂಪಾದಕೀಯ, ವ್ಯಂಗ್ಯಬರೆಹ, ವಿಚಾರವೇದಿಕೆ ಮತ್ತು ದೈನಿಕ ಧಾರಾವಾಹಿ

ಕಾದಂಬರಿ ಇದ್ದು 6 ಪುಟಗಳಿರುತ್ತಿದ್ದವು. ಭಾನುವಾರದ ಸಂಚಿಕೆ 8 ಪುಟಗಳಿಂದ ಕೂಡಿದ್ದು ವಾರದ ಕಥೆ, ವನಿತಾವಾಣಿ, ಚಿತ್ರರಂಗ, ಕವನ, ವಾರ ಭವಿಷ್ಯ, ಪುಟಾಣಿ ಪ್ರಪಂಚ ಮತ್ತು ರವಿವಾರದ ಧಾರವಾಹಿ ಕಾದಂಬರಿ ಮೊದಲಾದ ಶೀರ್ಷಿಕೆಗಳನ್ನೊಳಗೊಂಡಿರುತ್ತಿತ್ತು. (ಪಿ.ಕೆ.ಎಸ್.)

**ನವರತ್ನ ರಾಮರಾವ್:** 1879– 1960. ಬ್ರಿಟಿಷ್ ಸಾರ್ವಭೌಮತ್ವದ ಕಾಲದಲ್ಲೂ ಭಾರತೀಯನ ಸ್ವಾಭಿಮಾನವನ್ನುಳಿಸಿಕೊಂಡು, ನಿರ್ಭಯವಾಗಿ ಅಧಿಕಾರವನ್ನು ನಡೆಸಿದ ಮೈಸೂರಿನ ದಕ್ಷ ಅಧಿಕಾರಿಗಳಲ್ಲೊಬ್ಬರು. ಇವರು ಜನಿಸಿದ್ದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ. ನವರತ್ನ ಇವರ ವಂಶಕ್ಕೆ ಬಂದ ಬಿರುದು. ರಾಮರಾಯರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿಯನ್ನು, ಮದರಾಸಿನಲ್ಲಿ ಬಿ.ಎಲ್. ಪದವಿಯನ್ನು ಪಡೆದ ಅನಂತರ, ಎಂಸಿಎಸ್ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿ ಮೈಸೂರು ಸರ್ಕಾರದಲ್ಲಿ ಪ್ರೊಬೇಶನರಿ ಅಮಲ್ದಾರ ರಾಗಿ ಕೆಲಸಕ್ಕೆ ಸೇರಿ, ಕರ್ನಾಟಕದಲ್ಲಿ ರೇಷ್ಮೆ ಇಲಾಖೆಯ ಜನನಕ್ಕೆ ಕಾರಣ ರಾಗಿ ಆ ಇಲಾಖೆಯ ಪ್ರಥಮ ಮುಖ್ಯಾಧಿಕಾರಿಗಳಾದರು. ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯದರ್ಶಿಗಳಾಗಿ ಸ್ವಲ್ಪ



ಕಾಲವಿದ್ದು ಅನಂತರ ರಾಜ್ಯದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಮುಖ್ಯಾಧಿಕಾರಿಗಳಾಗಿ 1934ರಲ್ಲಿ ನಿವೃತ್ತರಾದರು. ಆಗಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರೊಡನೆ ಇವರು ಲಂಡನ್‌ನಲ್ಲಿ ಜರುಗಿದ (1931) ರೌಂಡ್ ಟೇಬಲ್ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದ್ದರು. ಇವರ ಕರ್ತವ್ಯನಿಷ್ಠೆ, ದಕ್ಷತೆಗಳನ್ನು ಮೆಚ್ಚಿ ಜಯಚಾಮರಾಜ ಒಡೆಯರ್ ಅವರು ರಾಜಸೇವಾ ಪ್ರಸಕ್ತ ಎನ್ನುವ ಬಿರುದನ್ನು ಕೊಟ್ಟು ಗೌರವಿಸಿದರು (1943).

ಇವರು ಸಾಹಿತ್ಯ, ಸಂಗೀತ ಪ್ರಿಯರೂ ಸೌಂದರ್ಯೋಪಾಸಕರೂ ಅಪೂರ್ವ ಹಾಸ್ಯಾಭಿರುಚಿಯನ್ನುಳ್ಳವರೂ ಆಗಿದ್ದರು. ಇವರು ಸ್ವತಃ ಪಿಟೀಲನ್ನು ಸೊಗಸಾಗಿ ನುಡಿಸುತ್ತಿದ್ದರಲ್ಲದೆ ಅನೇಕ ಕಥೆ, ಲೇಖನಗಳನ್ನು ಬರೆದಿದ್ದಾರೆ. ನಿವೃತ್ತಿಯ ಅನಂತರ ಇವರು ಬರೆದ 'ಕೆಲವು ನೆನಪುಗಳು' ಕನ್ನಡ ಸಾಹಿತ್ಯ ಭಂಡಾರಕ್ಕೊಂದು ಅಮೂಲ್ಯ ಕೊಡುಗೆಯಾಗಿದೆ. ಮಾಸ್ತಿಯವರ ಚನ್ನಬಸವನಾಯಕ ಕಾದಂಬರಿ ಇವರಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ. (ಎನ್.ಆರ್.)

**ನವಲಗುಂದ:** ಧಾರವಾಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಈ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕಿನ ಪೂರ್ವಕ್ಕೆ ಗದಗ, ಪಶ್ಚಿಮಕ್ಕೆ ಧಾರವಾಡ, ದಕ್ಷಿಣಕ್ಕೆ ಹುಬ್ಬಳ್ಳಿ ಮತ್ತು ಕುಂದಗೋಳ, ಉತ್ತರಕ್ಕೆ ನರಗುಂದ, ಈಶಾನ್ಯಕ್ಕೆ ರೋಣ ತಾಲ್ಲೂಕುಗಳೂ ವಾಯವ್ಯಕ್ಕೆ ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲ್ಲೂಕೂ ಇವೆ. ಧಾರವಾಡದ ಪೂರ್ವಕ್ಕಿರುವ ಈ ತಾಲ್ಲೂಕಿನಲ್ಲಿ ಅಣ್ಣಿಗೇರಿ ಮತ್ತು ಮೊರಬ ಹೋಬಳಿಗಳೂ 58 ಗ್ರಾಮಗಳೂ ಇವೆ. ವಿಸ್ತೀರ್ಣ 1082 ಚ.ಕಿಮೀ. ಜನಸಂಖ್ಯೆ 1,76,648.

ಈ ತಾಲ್ಲೂಕು ಈಶಾನ್ಯದೆಡೆಗೆ ಇಳಿಜಾರಾಗಿರುವ ಸುಮಾರು ಮಟ್ಟಸಪ್ರದೇಶ. ದೊಡ್ಡ ನದಿಗಳು ಇಲ್ಲ. ಈ ತಾಲ್ಲೂಕಿನಲ್ಲಿ ಹರಿಯುವ ಮುಖ್ಯ ಹಳ್ಳಗಳಲ್ಲಿ ಬೆಣ್ಣೆಹಳ್ಳ ಒಂದು. ಇದು ತಾಲ್ಲೂಕಿನ ದಕ್ಷಿಣಭಾಗದಿಂದ ಬಲ್ಲರವಾಡದ ಹತ್ತಿರ ಪ್ರವೇಶಿಸಿ ಉತ್ತರಾಭಿಮುಖವಾಗಿ ಹರಿದು ಯಮನೂರಿನ ಉತ್ತರದಲ್ಲಿ ಈಶಾನ್ಯಾಭಿಮುಖವಾಗಿ ಹರಿದು ಮೂಗನೂರಿನ ಬಲಿ ನರಗುಂದ ತಾಲ್ಲೂಕನ್ನು ಪ್ರವೇಶಿಸಿ ಸ್ವಲ್ಪ ದೂರ ನವಲಗುಂದ ಮತ್ತು ನರಗುಂದ ತಾಲ್ಲೂಕುಗಳ ಗಡಿಯಾಗಿ ಹರಿದು ಮುಂದೆ ಮಲಪ್ರಭಾ ನದಿಯನ್ನು ಸೇರಿಕೊಳ್ಳುವುದು. ತುಪರಿಹಳ್ಳ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಮೊರಬದ ಹತ್ತಿರ ಪಶ್ಚಿಮದೆಡೆಯಿಂದ ಪ್ರವೇಶಿಸಿ ಸುಮಾರು ಪೂರ್ವಾಭಿಮುಖವಾಗಿ ಹರಿದು ಅಳಗವಾಡಿಯ ಬಳಿ ದಕ್ಷಿಣಕ್ಕೆ ತಿರುಗಿ ಆಗ್ನೇಯಾಭಿಮುಖವಾಗಿ ಹರಿದು ನವಲಗುಂದದ ವಾಯವ್ಯದಲ್ಲಿ ಬೆಣ್ಣೆಹಳ್ಳವನ್ನು ಕೂಡುವುದು. ಹಂದಿಗನಹಳ್ಳ ತಾಲ್ಲೂಕಿನ ಆಗ್ನೇಯದಲ್ಲಿ ಕಿತ್ತೂರಿನ ಹತ್ತಿರ ಪ್ರವೇಶಿಸಿ ತಾಲ್ಲೂಕಿನ ಪೂರ್ವಭಾಗದಲ್ಲಿ ಉತ್ತರಾಭಿಮುಖವಾಗಿ ಹರಿದು ತಡಹಾಳ ಗ್ರಾಮದ ಹತ್ತಿರ ಬೆಣ್ಣೆಹಳ್ಳವನ್ನು ಸೇರಿಕೊಳ್ಳುತ್ತದೆ. ಹಂದಿಗನ ಹಳ್ಳಕ್ಕೆ ಪಿಂಜರಹಳ್ಳವು ತುಪ್ಪದ ಕುರಹಟ್ಟಿ ಬಳಿ ಸೇರಿಕೊಳ್ಳುವುದು. ಈ ಹಳ್ಳಗಳಿಗೆ ಮಳೆಗಾಲದಲ್ಲಿ ಸುತ್ತಲಿನಿಂದ ಅನೇಕ ತೊರೆಗಳು ಬಂದು ಸೇರುತ್ತವೆ. ಇವನ್ನು ಹಳ್ಳಗಳೆಂದು ಕರೆದರೂ ನದಿಗಳಷ್ಟೇ ಇವು ಉಪಯುಕ್ತವಾಗಿವೆಯೆನ್ನಬಹುದು. ಇವಲ್ಲದೆ ಹಲವು ಬಾವಿಗಳೂ ಕೆರೆಗಳೂ ತಾಲ್ಲೂಕಿನಲ್ಲಿವೆ. ಈ ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ ಸು. 660 ಮಿಮೀ.

ತಾಲ್ಲೂಕಿನಲ್ಲಿ ಕಪ್ಪು ಎರೆಭೂಮಿ ಪ್ರದೇಶ ಹೆಚ್ಚು. ಜೊತೆಗೆ ಹಳ್ಳಗಳು ಮತ್ತು ಅವುಗಳಿಗೆ ಸೇರುವ ಕೆಲವು ತೊರೆಗಳ ಸುತ್ತಲ ಪ್ರದೇಶ ವ್ಯವಸಾಯ ಯೋಗ್ಯವಾದದ್ದು. ಈ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವಿಲ್ಲವೆನ್ನಬಹುದು. ಬತ್ತ, ಗೋದಿ, ಜೋಳ, ಸೇಂಗಾ, ಎಣ್ಣೆಬೀಜಗಳು, ಹತ್ತಿ ಕೆಲವೊಂದು ದ್ವಿದಳಧಾನ್ಯಗಳನ್ನು ಬೆಳೆಯುತ್ತಾರೆ. ಈ ತಾಲ್ಲೂಕಿನ ಆಕಳುಗಳು ಒಳ್ಳೆಯ ಜಾತಿಯವೆಂಬ ಹೆಸರು ಪಡೆದಿದೆ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಈ ತಾಲ್ಲೂಕಿನಲ್ಲಿ ಇದೆ.

ತಾಲ್ಲೂಕಿನಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗಳಿಲ್ಲ. ಗೃಹ ಮತ್ತು ಗ್ರಾಮೋದ್ಯೋಗಗಳಲ್ಲಿ ಕೈಮಗ್ಗದ ಬಟ್ಟೆ ತಯಾರಿಕೆ, ಚರ್ಮ ಹದಮಾಡುವುದು ಮತ್ತು ಚರ್ಮವಸ್ತುಗಳ ತಯಾರಿಕೆ, ಗುಡಾರಗಳು, ಮರದ ತೊಟ್ಟಿಲುಗಳು ಮತ್ತು ಆಟದ ಸಾಮಾನುಗಳ ತಯಾರಿಕೆಯುಂಟು.

ತಾಲ್ಲೂಕಿನಲ್ಲಿ ದಕ್ಷಿಣ ಭಾಗದಲ್ಲಿ ಗದಗ ಹುಬ್ಬಳ್ಳಿ ರೈಲ್ವೆ ಹಾದಿ ಇದ್ದು ಅಣ್ಣಿಗೇರಿ, ಹೆಬಸೂರು ರೈಲ್ವೆ ನಿಲ್ದಾಣಗಳಿವೆ. ಹುಬ್ಬಳ್ಳಿ ಬಿಜಾಪುರ ರಸ್ತೆ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತದೆ. ನವಲಗುಂದ ರೋಣ, ನವಲಗುಂದ ಸವದತ್ತಿ ರಸ್ತೆಗಳೂ ಮುಖ್ಯ ಮಾರ್ಗಗಳು.

ಈ ತಾಲ್ಲೂಕು ಬಹಮನೀ ಸುಲ್ತಾನರ ಆಳ್ವಿಕೆಗೆ ಸೇರಿತ್ತು. ಕೆಲವು ಕಾಲ ಅಲಾವುದ್ದೀನನ (1436– 58) ಸೋದರಳಿಯ ಜಲಾಲ್‌ಖಾನ್ ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. 1690ರ ಹೊತ್ತಿಗೆ ಔರಂಗಜೇಬನ ಆಡಳಿತಕ್ಕೆ ಈ ಭಾಗವೆಲ್ಲ ಸೇರಿದ್ದು ಕಂದಾಯದ ಹೊಣೆ ನವಲಗುಂದದ ದೇವಾಲಯ ಮನೆತನಕ್ಕೆ ಸೇರಿತ್ತು. 1747ರಲ್ಲಿ ಮರಾಠ ಪೇಶ್ವೆಗಳು ಅನಂತರ 1778ರಲ್ಲಿ ಹೈದರ್ ಅಲಿ ಒಡೆತನಕ್ಕೆ ಬಂತು. 1795 ಮತ್ತು 1800ರಲ್ಲಿ ಧೋಂಡೋಪಂತ ಗೋಖಲೆ ನವಲಗುಂದ ಮತ್ತು ಗದಗನ್ನು ವಶಪಡಿಸಿಕೊಂಡ. 1817ರಲ್ಲಿ ಜನರಲ್ ಮನ್ರೋ, ರಾಮರಾವ್ ಎಂಬುವನನ್ನು ಈ ಭಾಗದ ಆಡಳಿತ ಮತ್ತು ಸೈನ್ಯಾಧಿಕಾರಿಯಾಗಿ ನೇಮಿಸಿದ್ದ. ಗೋಖಲೆಯನ್ನು ರಾಮರಾವ್ ಸೋಲಿಸಿ ಈ ಭಾಗವನ್ನು ವಶಪಡಿಸಿಕೊಂಡನೆಂದೂ ತಿಳಿದುಬರುತ್ತದೆ.

ಈ ತಾಲ್ಲೂಕಿನ ಅಣ್ಣಿಗೇರಿ (**ನೋಡಿ**) ಒಂದು ರೈಲ್ವೆನಿಲ್ದಾಣ. ಇಲ್ಲಿ ಅಮೃತೇಶ್ವರ ದೇವಾಲಯವಿದೆ. ನವಲಗುಂದದ ನೈಋತ್ಯಕ್ಕೆ ಸುಮಾರು 5 ಕಿಮೀ ದೂರದಲ್ಲಿರುವ ಯಮನೂರು ಹೆಬಸೂರು ರೈಲ್ವೆ ನಿಲ್ದಾಣ ದಿಂದ 15 ಕಿಮೀ ದೂರದಲ್ಲಿದೆ. ಹಿಂದುಗಳು ಮತ್ತು ಮುಸಲ್ಮಾನರು ಭಾಗವಹಿಸುವ ಇಲ್ಲಿನ ರಾಜಾಬಾಗ್ ಸವಾರ್ ಉರುಸ್ ಪ್ರಸಿದ್ಧ.

ನವಲಗುಂದ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಧಾರವಾಡದ ಪೂರ್ವಕ್ಕೆ 47 ಕಿಮೀ ಅಂತರದಲ್ಲಿ ಬೆಣ್ಣಿಹಳ್ಳದ ಬಲದಂಡೆಯ ಮೇಲಿದೆ. ಜನಸಂಖ್ಯೆ 47,912. ಈ ಊರು ಸುತ್ತಲ ಪ್ರದೇಶಗಳಿಗೆ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿಂದ ನರಗುಂದ, ಹುಬ್ಬಳ್ಳಿ, ಧಾರವಾಡ, ರೋಣ, ಗದಗ ಮುಂತಾದ ಪಟ್ಟಣಗಳಿಗೆ ಮಾರ್ಗಗಳಿವೆ. ಮಂಗಳವಾರ ಸಂತೆ ಸೇರುವುದು. ಕಾಳುಕಡ್ಡಿ, ಎಣ್ಣೆ, ಹತ್ತಿಗಳ ವ್ಯಾಪಾರ ನಡೆಯುತ್ತದೆ. ದನಗಳ ಮಾರಾಟವೂ ಆಗುವುದು. ಉತ್ತಮ ಗುಣಮಟ್ಟದ ಗುಡಾರಗಳು ಇಲ್ಲಿ ತಯಾರಾಗಿ ನೆರೆಯ ಜಿಲ್ಲೆಗಳಿಗೆ ರವಾನೆಯಾಗುತ್ತವೆ. ತೊಟ್ಟಿಲುಗಳ ಹಾಗೂ ಆಟಿಕೆ ಸಾಮಾನುಗಳ ತಯಾರಿಕೆಗೂ ಈ ಊರು ಪ್ರಸಿದ್ಧ.

ಇಲ್ಲಿ ಪುರಸಭಾಡಳಿತವಿದೆ. ಊರಿಗೆ ನೀಲವ್ವನ ಕೆರೆ ಎಂಬ ಜಲಾಶಯದಿಂದ ನೀರನ್ನು ಒದಗಿಸುವರು. ಈ ಊರನ್ನಾಳಿದ ದೇಸಾಯರ ಮನೆತನಕ್ಕೆ ಸೇರಿದ್ದ ಪ್ರಸಿದ್ಧ ತ್ಯಾಗವೀರ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರು ತಮ್ಮ ಅಪಾರ ಆಸ್ತಿಯನ್ನು ನಾಡಿನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದಾನಮಾಡಿದ್ದಾರೆ. ಇವರ ಸಮಾಧಿ ಊರಲ್ಲಿದೆ. ಈ ಊರಿನ ಗವಿಮಠದಲ್ಲಿ ಪ್ರತಿವರ್ಷ ಎಡೆಯೂರು ಸಿದ್ಧಲಿಂಗೇಶ್ವರರ ಜಾತ್ರೆ ನಡೆಯುತ್ತದೆ. **(ಡಿ.ಕೆ.,ಎಸ್.ಜಿ.ಕೆ.)**

**ನವಿಲ್ಗುಂದದ ಮಾದಿರಾಜ:** ಸು. 1300. ಪಂಡಿತ ಹಾಗೂ ಲಿಪಿಕಾರ. ಇವನ ತಂದೆ ಚಾಮ, ಹೆಂಡತಿ ಮಹಾದೇವಿ. ಮಕ್ಕಳು ಬಂಕರಸ ಮತ್ತು ಮಾಚಿ. ಧಾರವಾಡ ಜಿಲ್ಲೆಯ ನವಲಗುಂದ ಈತನ ಜನ್ಮಸ್ಥಳ. ಇವನಿಗೆ ಬುಧಮಾಧವ ಎಂಬ ಬಿರುದಿದ್ದಂತೆ ತೋರುತ್ತದೆ.

ಈತ ಕಾವ್ಯ ಪ್ರೇಮಿಯೂ ಸ್ವತಃ ಕಾವ್ಯರಚನೆ ಮಾಡಬಲ್ಲ ಸಾಮರ್ಥ್ಯವುಳ್ಳವನೂ ಆಗಿದ್ದ. ಎರಡನೆಯ ಗುಣವರ್ಮನ (ಸು. 1215) ಪುಷ್ಪದಂತ ಪುರಾಣದ ಒಂದು ಪ್ರತಿಯ ಕೊನೆಯಲ್ಲಿ ಆ ಗ್ರಂಥವನ್ನು ಈತ ಪ್ರತಿಮಾಡಿದಂತೆ ಹೇಳುವ ಎರಡು ವೃತ್ತಗಳಿದ್ದು ಅವುಗಳ ಶೈಲಿ ಸುಂದರವೂ ಬಂಧುಬಂಧುರವೂ ಆಗಿರುವುದನ್ನು ನೋಡಿದರೆ ಈತ ಉತ್ತಮ ಮಟ್ಟದ ಕವಿಯಾಗಿದ್ದಂತೆ ತಿಳಿಯುತ್ತದೆ. ಸುಂದರಪ್ರತಿ ಬರೆದರೆ, ಅದು ಚದುರರ ವಿಶೇಷ ವರ್ಣನೆಗೆ ಪಾತ್ರವಾಗಿರಬೇಕು. ಬರೆಯುವವನು ಬಿಂದುವಿನ ಶೋಭೆ, ತಲೆಕಟ್ಟಿನ ಹೊಕ್ಕುಳ ಚೆಲುವು, ಮಾತ್ರೆಯಲ್ಲಿ ನಿಲ್ಲುವ ಬೆಡಗು, ಬಳ್ಳಿಯಲ್ಲಿ ಹೊಂದಿರುವ ನಯ, ವಿಸರ್ಗದಲ್ಲಿ ಹೊಂದಿಕೆ, ಅಕ್ಷರಕ್ಷರದ ಜೋಡಣೆ– ಈ ಮೊದಲಾದ ಲಿಪಿಕಲಾತ್ಮಕ ಅಂಶಗಳನ್ನು ಗಮನದಲ್ಲಿಡಬೇಕು ಎಂದು ಹೇಳುವ ಈತನ ಮಾತುಗಳು ಲಿಪಿಕಾರರಿಗೆ ಮಾರ್ಗದರ್ಶಕವೂ ಈತನ ಲಿಪಿಕಾರತನದ ವೈಶಿಷ್ಟ್ಯಕ್ಕೆ ನಿದರ್ಶನವೂ ಆಗಿವೆ. **(ಡಿ.ಎಸ್.ಎಚ್.)**

**ನಾಗಚಂದ್ರ:** ಜೈನಕವಿ. ಮಲ್ಲಿನಾಥ ಪುರಾಣ, ರಾಮಚಂದ್ರಚರಿತ ಪುರಾಣ (ಪಂಪರಾಮಾಯಣ) ಎಂಬ ಗ್ರಂಥಗಳ ಕರ್ತೃ. ಜಿನಾಕ್ಷರಮಾಲೆ, ಯೋಗಾಮೃತ, ಕಾಮನಕಾಳಗ ಇವೂ ಇವನ ಹೆಸರಿನಲ್ಲಿವೆ. ಅಭಿನವ ಪಂಪ ಎಂಬುದು ಇವನ ಬಿರುದುಗಳಲ್ಲಿ ಮುಖ್ಯವಾದುದು. ತನ್ನ ಗುರುಪರಂಪರೆಯ ವಿನಾ ಮತ್ತಾವುದೇ ವೈಯಕ್ತಿಕ ಸಂಗತಿಯನ್ನು ತನ್ನ ಕೃತಿಗಳಲ್ಲಿ ಹೇಳಿಕೊಂಡಿಲ್ಲವಾದ್ದರಿಂದ, ಇವನ ಕಾಲದೇಶಗಳನ್ನು ನಿರ್ಧರಿಸುವುದು ಕಷ್ಟವಾಗಿದೆ. ಇವನ ಕಾಲ 1040, 1100, 1140 ಎಂದು ಮೂರು ಅಭಿಪ್ರಾಯಗಳಿವೆ. ಇವನು 12ನೆಯ ಶತಮಾನದ ಕವಿಯೆಂದೂ ವಚನಕಾರರ ಸಮಕಾಲೀನ ಅಥವಾ ಅವರಾದಮೇಲೆ ಬಂದವನು ಎಂದೂ ತೋರುತ್ತದೆ. ವಿಜಯಪುರದಲ್ಲಿ ತಾನು ಮಲ್ಲಿಜಿನನ ಭವನವನ್ನು ಕಟ್ಟಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ; ಈ ವಿಜಯಪುರ ಬಹುಶಃ ಈಗಿನ ಬಿಜಾಪುರ, ಆದ್ದರಿಂದ ಇವನು ಆ ಪ್ರಾಂತದವನು ಎಂದು ಹೇಳಬಹುದು. ಇವನು ರಾಜಾಶ್ರಯದಲ್ಲಿದ್ದಂತೆ ತೋರುವುದಿಲ್ಲ. ಜಿನಭಕ್ತಿಪ್ರಧಾನವಾದ ಧಾರ್ಮಿಕ ವ್ಯಕ್ತಿತ್ವವೊಂದು ಇವನ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಶಾಂತರಸದಲ್ಲಿ ಇವನಿಗೆ ವಿಶೇಷವಾದ ಆಸಕ್ತಿ ಮತ್ತು ಅಭಿರುಚಿ.

ಮಲ್ಲಿನಾಥಪುರಾಣ 19ನೆಯ ತೀರ್ಥಂಕರನಾದ ಮಲ್ಲಿನಾಥನ ಕಥೆಯನ್ನು ನಿರೂಪಿಸುವ 14 ಆಶ್ವಾಸಗಳ ಕೃತಿ. ಇದರಲ್ಲಿ ಜೀವಕ್ಕೆ ಶರಣ್ಯವೊಂದೇ ನಿರ್ಮಳ ಧರ್ಮಂ ಎಂಬ ಸಂದೇಶವನ್ನು ಮೊಳಗಿಸುವುದು ಕವಿಯ ವಿವಕ್ಷೆ. ಈ ಕಾವ್ಯಕ್ಕೆ ಆಕರ ಗುಣಭದ್ರಾಚಾರ್ಯರ ಉತ್ತರಪುರಾಣ, ಮಲ್ಲಿನಾಥನ ಕಥೆ ವಾಸ್ತವವಾಗಿ ಕಿರಿದು; ಮೂಲದಲ್ಲಿ ಅದು ಕೇವಲ 66 ಶ್ಲೋಕಗಳಲ್ಲಿ ಉಕ್ತವಾಗಿದೆ. ನಾಗಚಂದ್ರ ಅದನ್ನು ಬಹಳ ಹಿಗ್ಗಲಿಸಿದ್ದಾನೆ; ವರ್ಣನೆಗಳಿಂದ ತುಂಬಿದ್ದಾನೆ. ಮೂಲದಲ್ಲಿ ಮಲ್ಲಿನಾಥನ ಕಥೆಯೊಡನೆ ಸೇರಿಕೊಂಡಿರುವ ಬಲದೇವ ವಾಸುದೇವ ಪ್ರತಿವಾಸುದೇವರ ವೃತ್ತಾಂತವನ್ನು ಇವನು ಬಿಟ್ಟಿದ್ದಾನೆ. ಹೀಗಾಗಿ ಮಲ್ಲಿನಾಥ ಪುರಾಣ ಬಹುಮಟ್ಟಿಗೆ ವರ್ಣನಾತ್ಮಕವಾದ ಕೃತಿಯಾಗಿದೆ. ಪ್ರಾಯಶಃ ಇದು ಕವಿಯ ಪ್ರಥಮ ರಚನೆಯಾದುದರಿಂದ, ಪುರಾಣತ್ವಪ್ರಧಾನವಾದ ಸಾಂಪ್ರದಾಯಿಕ ಬರೆವಣಿಗೆಯಾಗಿ ಪರಿಣಮಿಸಿವೆ. ಆದರೆ ಕವಿಯ ಪ್ರತಿಭೆಯನ್ನು ಬಿಂಬಿಸುವ ಸುಂದರವಾದ ಭಾವಗೀತಾತ್ಮಕ ಭಾಗಗಳಿಗೆ ಮಲ್ಲಿನಾಥಪುರಾಣದಲ್ಲಿ ಕೊರತೆಯಿಲ್ಲ. ಈ ಕೃತಿಯ ಪೂರ್ವಾರ್ಧಕ್ಕಿಂತ ಉತ್ತರಾರ್ಧ ಹೆಚ್ಚು ಪರಿಣತವಾಗಿದೆ. ಇದರಲ್ಲಿ ಬರುವ ಜಿನಸ್ತುತಿ ನಾಗಚಂದ್ರನ ಆತುಸಾರವೆನಿಸಿಕೊಂಡಿದೆ. ಲಕ್ಷ್ಮೀದೇವಿಯ ಪುತ್ರದೋಹದ ವರ್ಣನೆ, ಶರತ್ಕಾಲ ವರ್ಣನೆ, ಪ್ರಭಾತವರ್ಣನೆ ಕಾಮದಹನಪ್ರಸಂಗ ಇವು ಮಲ್ಲಿನಾಥಪುರಾಣದ ಕೆಲವು ಹೃದಯಂಗಮವಾದ ಸ್ಥಾನಗಳು. ಇದೊಂದು ಸತ್ಕಾವ್ಯವೆಂದು ಧಾರಾಳವಾಗಿ ಹೇಳಬಹುದು.

ನಾಗಚಂದ್ರನ ಕೀರ್ತಿ ನಿಂತಿರುವುದು ಮುಖ್ಯವಾಗಿ ರಾಮಚಂದ್ರಚರಿತ ಪುರಾಣದ ಮೇಲೆ. ಇದು 16 ಆಶ್ವಾಸಗಳನ್ನುಳ್ಳ ಉದಾತ್ತ ರಾಘವನ ಆಖ್ಯಾನ. ಇದು ಜೈನಪರಂಪರೆಯ ರಾಮಾಯಣ. ಇದರಲ್ಲಿ ಬರುವ ಪಾತ್ರಗಳೆಲ್ಲ ಜೈನರು; ಇಡೀ ಕೃತಿಯಲ್ಲಿ ಜೈನ ವಾತಾವರಣ ಹರಡಿದೆ. ಇಲ್ಲಿ ರಾಮ ಲಕ್ಷ್ಮಣ ರಾವಣರು ಜೈನ ಶಲಾಕಾಪುರುಷರು, ಆದ್ದರಿಂದ ಇದು ಅಪೂರ್ವವಾದ ರಾಮಕಥೆ. ಆದರೆ ಇದು ನಾಗಚಂದ್ರನ ಸ್ವಂತ ಸೃಷ್ಟಿಯಲ್ಲ. ವಿಮಲಸೂರಿ ಎಂಬ ಕವಿ ಪ್ರಾಕೃತದಲ್ಲಿ ಬರೆದ ಪಉಮಚರಿಯ (ಪದ್ಮಚರಿತ) ಇವನ ರಾಮಾಯಣಕ್ಕೆ ಮೂಲ; ಸಂಸ್ಕೃತದಲ್ಲಿ ರವಿಷೇಣ ಬರೆದ ಮಹಾ ರಾಮಾಯಣಕ್ಕೂ (ಪದ್ಮಪುರಾಣ) ಇವನು ಋಣಿ.

ವಾಲ್ಮೀಕಿ ರಾಮಾಯಣಕ್ಕೂ ಈ ಜೈನ ರಾಮಾಯಣಕ್ಕೂ ಹಲವಾರು ವ್ಯತ್ಯಾಸಗಳಿವೆ. ಉದಾಹರಣೆಗೆ ಇಲ್ಲಿ ಲಕ್ಷ್ಮಣನಿಗೆ ಪ್ರಾಧಾನ್ಯ. ಕಡೆಗೆ ರಾವಣನನ್ನು ಕೊಲ್ಲುವವನೂ ಅವನೇ. ದಶರಥನಿಗೆ ನಾಲ್ವರು ರಾಣಿಯರು, ರಾಮಲಕ್ಷ್ಮಣರು ಏಕಪತ್ನೀವ್ರತಸ್ಥರಲ್ಲ. ಆಂಜನೇಯ ಕೂಡ ವಿವಾಹಿತ, ಮಾರೀಚ ಮಂಥರೆಯರ ಮತ್ತು ಸೇತುಬಂಧನದ ಪ್ರಕರಣಗಳು ಇಲ್ಲಿಲ್ಲ. ಇಂಥ ಅಸಂಖ್ಯಾತ ಮಾರ್ಪಾಟುಗಳಲ್ಲಿ ಬಹುಮುಖ್ಯವಾದ ಮಾರ್ಪಾಟಿರುವುದು ರಾವಣನ ಪಾತ್ರ ನಿರ್ಮಾಣದಲ್ಲಿ, ಜೈನ ರಾಮಾಯಣದ ರಾವಣ ಸಾಹಿತ್ಯ ಪ್ರಪಂಚದ ಒಂದು ಅವಿಸ್ಮರಣೀಯವಾದ ಪಾತ್ರ. ಅವನು

ವೈದಿಕ ರಾಮಾಯಣದ ರಾವಣನಂತೆ ದುಷ್ಟನಲ್ಲ. ಕಾಮಲೋಲುಪನಲ್ಲ, ಅವನು ಸದ್ಗುಣ ಸಂಪನ್ನನಾದ ಮಹಾಪುರುಷ. ಆದರೆ ವಿಧಿಯ ಕೈವಾಡ ದಿಂದ ಆಕಸ್ಮಿಕವಾದ ಅಲ್ಪ ದೌರ್ಬಲ್ಯಕ್ಕೆ ವಶನಾಗಿ ಪತನಗೊಳ್ಳುತ್ತಾನೆ. ಅವನು ಸೀತೆಯನ್ನು ಅಪಹರಿಸಿದರೂ ಕಡೆಗೆ ಪಶ್ಚಾತ್ತಾಪದಿಂದ ಪರಿವರ್ತಿ ತನಾಗಿ ಪುನೀತನಾಗುತ್ತಾನೆ. ಸೀತೆಯನ್ನೂ ರಾಮನಿಗೊಪ್ಪಿಸಬೇಕೆಂದು ಬಗೆದು, ಯುದ್ಧದಲ್ಲಿ ರಾಮಲಕ್ಷ್ಮಣರನ್ನು ಸೆರೆಹಿಡಿದು ತರಲು ಹೋಗಿ ಹತನಾಗುವ ಈ ರಾವಣನ ದುರದೃಷ್ಟ ಅನುಕಂಪ ಹುಟ್ಟಿಸುತ್ತದೆ. ನಾಗಚಂದ್ರನ ರಾವಣನನ್ನು ದುರಂತ ರಾವಣನೆಂದು ಕರೆಯಲಾಗಿದೆ. ಆದರೆ ಅವನದು ನಿಜವಾಗಿಯೂ ದುರಂತವೇ ಎಂಬುದು ಚರ್ಚಾಸ್ಪದ.

ಮಲ್ಲಿನಾಥಪುರಾಣದಲ್ಲಿ ಮೂಲವನ್ನು ವಿಸ್ತರಿಸುವ ಅಗತ್ಯ ನಾಗಚಂದ್ರ ನಿಗೆ ಉಂಟಾದರೆ, ಪಂಪರಾಮಾಯಣದಲ್ಲಿ ಮೂಲವನ್ನು ಸಂಗ್ರಹಿಸುವ ಸಮಸ್ಯೆ ಎದುರಾಗಿದೆ. ಅದನ್ನು ಕವಿ ಯಶಸ್ವಿಯಾಗಿ ದಾಟಿದ್ದಾನೆ. ಇವನ ಸಂಗ್ರಹದ ಜಾಣ್ಮೆ ಪ್ರಶಂಸನೀಯವಾದುದು. ಆದರೂ ಪಂಪರಾಮಾಯಣ ದಲ್ಲಿ ಪುರಾಣದ ಅಂಶಗಳು ಅನಿವಾರ್ಯವಾಗಿ ಉಳಿದಿವೆ. ಉಪರಂಭೆಯ ಪ್ರಸಂಗ, ಸೀತಾಪಹರಣದ ಮತ್ತು ರಾಮನ ವಿಲಾಪದ ಸನ್ನಿವೇಶ, ರಾವಣನ ಪರಿವರ್ತನೆಯ ಪ್ರಕರಣ ಇವು ರಾಮಚಂದ್ರಚರಿತ ಪುರಾಣದ ರಮ್ಯ ರಸೋತ್ಕಟ ಭಾಗಗಳಲ್ಲಿ ಕೆಲವು. ಇದು ಮಹಾಕಾವ್ಯವಲ್ಲದಿದ್ದರೂ ಒಂದು ಶ್ರೇಷ್ಠವಾದ ಕಾವ್ಯವೆಂಬುದರಲ್ಲಿ ಸಂಶಯವಿಲ್ಲ.

ನಾಗಚಂದ್ರನ ಶೈಲಿ ವೈಶಿಷ್ಟ್ಯಪೂರ್ಣವಾದುದು. ಸರಳತೆ, ಮಾಧುರ್ಯ, ಗೇಯತೆ ಅದರ ಪ್ರಮುಖ ಲಕ್ಷಣಗಳು. ಕವಿಯ ಚಿತ್ತವೃತ್ತಿಯಲ್ಲಿ ಪ್ರಧಾನವಾಗಿರುವ ನಯ, ಸೌಕುಮಾರ್ಯ, ಲಾಲಿತ್ಯಗಳು ಇವನ ಶೈಲಿಯಲ್ಲೂ ಕಂಡು ಬರುತ್ತವೆ. ಅವು ಇವನ ಶೈಲಿಯ ಪರಿಮಿತಿಯೂ ಹೌದು. ಶೃಂಗಾರ ಶಾಂತ ಕರುಣ ರಸಗಳ ಚಿತ್ರಣಕ್ಕೆ ಅನುಕೂಲಿಸುವಂತೆ ನಾಗಚಂದ್ರನ ಶೈಲಿ ವೀರ, ರೌದ್ರ, ಭಯಾನಕ ರಸಗಳ ಆವಿಷ್ಕಾರಕ್ಕೆ ಅನುಕೂಲಿಸುವುದಿಲ್ಲ. ಪಂಪ, ರನ್ನರ ಶೈಲಿಯ ಆವೇಶ ಮೊರೆತಗಳು ಇವನ ಶೈಲಿಯಲ್ಲಿಲ್ಲ. ಅರ್ಥಾಂತರ ನ್ಯಾಸಾಲಂಕಾರ ನಾಗಚಂದ್ರನಿಗೆ ಬಹುಪ್ರಿಯವಾದುದು; ಅದನ್ನು ಇವನು ಉದ್ದಕ್ಕೂ ಎರಚುತ್ತಾ ಹೋಗುತ್ತಾನೆ. ಇವನ ಅರ್ಥಾಂತರನ್ಯಾಸಗಳಲ್ಲಿ ಕೆಲವು ಅತ್ಯಂತ ಸಾರ್ಥಕವಾಗಿವೆ.

ಪಾಂಡಿತ್ಯ ಪ್ರದರ್ಶನದ ಸಾಫಲ್ಯ ನಾಗಚಂದ್ರನಿಗಿಲ್ಲ. ಕಾವ್ಯ ಎಲ್ಲರಿಗೂ ಗ್ರಾಹ್ಯವಾಗಬೇಕು. ಅದರಿಂದ ಬದುಕಿಗೆ ಒಳಿತಾಗಬೇಕು ಎಂಬ ನಿಲುವು. ಜನತಾ ಅಂತರ್ದೃಷ್ಟಿ ಇವನದು. ಇವನ ಪ್ರಕಾರ, ಕಾವ್ಯ ಕೇವಲ ಮನರಂಜನೆಯ ಮಾಧ್ಯಮವಾಗಬಾರದು. ಆತ್ಮೋನ್ನತಿಕಾರಕವಾಗಬೇಕು. ಕಾವ್ಯದಲ್ಲಿ ರೀತಿಗಿಂತ ವಸ್ತು ಮುಖ್ಯವೆಂದು ಇವನ ಅಭಿಪ್ರಾಯ; ಕಲೆಗಾಗಿ ಕಲೆ ಎಂಬ ಪಂಥಕ್ಕೆ ಇದು ವಿರುದ್ಧ, ಕವಿ ರಾಗದ್ವೇಷರಹಿತ ನಾಗಿರಬೇಕು ಹಾಗಿಲ್ಲದಿದ್ದರೆ ಅವನ ಕೃತಿ ವಿಷೋದ್ಯಾನವನ್ನು ಬಿತ್ತಿ ಬೆಳೆದಂತಾಗುತ್ತದೆ ಎಂಬ ನಾಗಚಂದ್ರನ ಹೇಳಿಕೆ ಗಮನಾರ್ಹವಾದುದು. ಇವನು ತನ್ನ ಈ ಸಮಷ್ಟಿಕಲ್ಯಾಣನಿಷ್ಠವಾದ ನಿಲುವಿನಿಂದಾಗಿ ಕನ್ನಡ ಚಂಪೂ ಕವಿಗಳಲ್ಲಿ ಒಂದು ಅನನ್ಯವಾದ ಸ್ಥಾನವನ್ನು ಪಡೆದುಕೊಳ್ಳುತ್ತಾನೆ.

ತನ್ನ ಕಾಲಕ್ಕೆ ಜನಪ್ರಿಯತೆಯನ್ನು ಕಳೆದುಕೊಂಡು ಅಧೋಮುಖವಾಗಿದ್ದ ಜೈನ ಧರ್ಮವನ್ನು ಮತ್ತೆ ಜನಪ್ರಿಯವಾಗಿಸಬೇಕು. ಮೇಲೆತ್ತಬೇಕು ಎಂಬ ಘನೋದ್ದೇಶದಿಂದ ತನ್ನ ಎರಡೂ ಕೃತಿಗಳಿಗೂ ಧಾರ್ಮಿಕ ವಸ್ತುವನ್ನು ಆರಿಸಿಕೊಂಡು ಕಾವ್ಯ ರಚಿಸಿದ ನಾಗಚಂದ್ರ ಮಹಾಕವಿಯಲ್ಲದಿದ್ದರೂ ದ್ವಿತೀಯ ಶ್ರೇಣಿಯ ಕವಿಗಳಲ್ಲಿ ಅಗ್ರಗಣ್ಯನಾಗಿ ನಿಲ್ಲುವ ಯೋಗ್ಯತೆ ಯುಳ್ಳವನಾಗಿದ್ದಾನೆ. **(ಸಿ.ಪಿ.ಕೆ.)**

**ನಾಗತಿಹಳ್ಳಿ ಚಂದ್ರಶೇಖರ:** 1958– . ಹೆಸರಾಂತ ಚಲನಚಿತ್ರ ನಿರ್ದೇಶಕ, ಲೇಖಕ ಹಾಗೂ ಪರಿಸರವಾದಿ. ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿ ಗ್ರಾಮದಲ್ಲಿ 1958 ಆಗಸ್ಟ್ 15ರಂದು ಜನಿಸಿದರು. ತಂದೆ ತಿಮ್ಮಶೆಟ್ಟಿಗೌಡ, ತಾಯಿ ಪಾರ್ವತಮ್ಮ. ಬಾಲ್ಯದಿಂದಲೇ ಸಾಹಿತ್ಯಾಸಕ್ತಿ ಹೊಂದಿದ್ದ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಹತ್ತು ಚಿನ್ನದ ಪದಕಗಳನ್ನು ಪಡೆಯುವುದರೊಂದಿಗೆ ಪೂರೈಸಿದರು (1985). ಗ್ರಾಮೀಣ ಪ್ರದೇಶದಿಂದ ಬಂದ ಇವರು ವಿದ್ಯಾರ್ಥಿ ಜೀವನದಲ್ಲಿ ಮೈಲಿಗಲ್ಲುಗಳಿಗೆ ಬಣ್ಣ ಬಳಿಯುವುದು, ರಾಜ್ಯ ಹಾಲು ಒಕ್ಕೂಟದಲ್ಲಿ ದಿನಗೂಲಿಯ ನೌಕರಿ ಮಾಡುವುದು ಮೊದಲಾದ ಕೆಲಸಗಳ ಮೂಲಕ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದರು.



ಇವರು ಹದ್ದುಗಳು, ನನ್ನ ಪ್ರೀತಿಯ ಹುಡುಗನಿಗೆ, ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ಸನ್ನಿಧಿ, ಅಕಾಲ ಮೊದಲಾದ ಆರು ಕಥಾಸಂಕಲನಗಳನ್ನೂ ಎರಡು ಪ್ರವಾಸ ಕಥನಗ ಳನ್ನೂ ಮೂರು ಕಾದಂಬರಿಗ ಳನ್ನೂ ರಚಿಸಿದ್ದಾರೆ.

ಕಾಡಿನಬೆಂಕಿ ಚಲನ ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ ಮತ್ತು ಗೀತರಚನೆ ಮಾಡುವು ದರ ಮೂಲಕ ಚಿತ್ರರಂಗ ಪ್ರವೇಶಿಸಿದರು (1987). ಸಂಕ್ರಾಂತಿ ಚಲನಚಿತ್ರದ ಮೂಲಕ ಕಥೆಗಾರರಾದರು (1988). ಉಂಡೂ ಹೋದ ಕೊಂಡೂಹೋದ ಎಂಬ ಚಿತ್ರ ನಿರ್ದೇಶಿಸಿ (1992) ಯಶಸ್ವಿ ಚಿತ್ರ ನಿರ್ದೇಶಕರೆನಿಸಿದರು. ಕೋಟ್ರೇಶಿ ಕನಸು, ಬಾ ನಲ್ಲೆ ಮಧುಚಂದ್ರಕೆ, ಅಮೆರಿಕಾ ಅಮೆರಿಕಾ, ಹೂಮಳೆ, ನನ್ನ ಪ್ರೀತಿಯ ಹುಡುಗಿ, ಪ್ಯಾರಿಸ್ ಪ್ರಣಯ ಮುಂತಾದ ಚಲನಚಿತ್ರಗಳನ್ನು ನಿರ್ದೇಶಿಸಿ ದ್ದಾರೆ. ಪ್ರತಿಬಿಂಬ, ವಠಾರ ಎಂಬ ಧಾರವಾಹಿಗಳ ಮೂಲಕ ಕಿರುತೆರೆಯಲ್ಲಿಯೂ ಇವರು ಅಪಾರ ಯಶಸ್ಸು ಗಳಿಸಿದರು.

ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳಲ್ಲಿ ವ್ಯಾಪಕ ಪ್ರವಾಸ ಮಾಡಿರುವ ಇವರು ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಚಿತ್ರವನ್ನು ಅಮೆರಿಕದ ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದ ಕೀರ್ತಿ ಇವರದು. ಇವರು ನಿರ್ದೇಶಿಸಿರುವ ಸಂಕ್ರಾಂತಿ ಚಿತ್ರಕ್ಕೆ ಅತ್ಯುತ್ತಮ ಕಥಾಲೇಖನ ರಾಜ್ಯ ಪ್ರಶಸ್ತಿ (1988–89), ಉಂಡೂಹೋದ ಕೊಂಡೂಹೋದ ಚಿತ್ರಕ್ಕೆ ಅತ್ಯುತ್ತಮ ಕಥಾಲೇಖಕ ಪ್ರಶಸ್ತಿ (1992), ಕೊಟ್ರೇಶಿ ಕನಸು ಚಿತ್ರಕ್ಕೆ ಅತ್ಯುತ್ತಮ ಸಾಮಾಜಿಕ ಪರಿಣಾಮ ಬೀರುವ ಚಿತ್ರವೆಂದು ರಾಜ್ಯ ಪ್ರಶಸ್ತಿ (1993–94), ನಿರ್ದೇಶಕರ ಸಂಘದ ಪ್ರಶಸ್ತಿ, ಸನ್ಮಾನ ಹಾಗೂ ಇದೇ ಚಿತ್ರಕ್ಕೆ 1994ರ ಅತ್ಯುತ್ತಮ ಪ್ರಾದೇಶಿಕ ಚಿತ್ರವೆಂದು ರಾಷ್ಟ್ರ ಪ್ರಶಸ್ತಿ ಲಭಿಸಿದೆ. ಅಮೆರಿಕಾ ಅಮೆರಿಕಾ ಚಿತ್ರ ಅತ್ಯುತ್ತಮ ಚಿತ್ರವೆಂದು ರಾಜ್ಯ ಪ್ರಶಸ್ತಿ ಹಾಗೂ ಅತ್ಯುತ್ತಮ ಕಥಾ ಪ್ರಶಸ್ತಿ ಪಡೆದುಕೊಂಡಿದೆ (1996–97). ವಿಭಿನ್ನ ಕಥಾಹಂದರದ ಹೂಮಳೆ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ಗಳಿಸಿದರೆ (1998–99), ನನ್ನ ಪ್ರೀತಿಯ ಹುಡುಗಿ 2001ರ ಅತ್ಯಂತ ಯಶಸ್ವೀ ಚಿತ್ರವೆಂದು ಪ್ರಶಸ್ತಿ ಪಡೆದಿದೆ. **(ಎಸ್‌ಯು.ಎಂ.)**

**ನಾಗದೇವ:** ಸು.11 ನೆಯ ಶತಮಾನದ ಆರಂಭದಲ್ಲಿದ್ದ ಜೈನಕವಿ. ಈತನನ್ನು ಎರಡನೆಯ ನಾಗವರ್ಮ ತನ್ನ ವರ್ಧಮಾನಪುರಾಣದಲ್ಲಿ ಸುಲೋಚನಾಚರಿತಮನಿಂ ಪೊದವಿರೆ ಪೇೞ್ದಿಂ ಕವಿತಾ ವಿದಗ್ಧಮತಿಯೆನಿಪ ನಾಗದೇವಕವೀಂದ್ರಂ ಎಂದು ಹೇಳುವುದರಿಂದ ಈತ ಸುಲೋಚನಾಚರಿತ ಎಂಬ ಕಾವ್ಯವನ್ನು ರಚಿಸಿದಂತೆ ತಿಳಿದುಬರುತ್ತದೆ. ನಾಗವರ್ಮ ಸ್ತುತಿಸಿರುವ ಎಲ್ಲ ಕವಿಗಳ ಕೃತಿಗಳೂ ಚಂಪೂ ಕೃತಿಗಳಾಗಿರುವುದರಿಂದ ಇದೂ ಚಂಪೂ ಕೃತಿಯಾಗಿರಬಹುದೆಂದು ಊಹಿಸಬಹುದಾಗಿದೆ. ಎರಡನೆಯ ನಾಗವರ್ಮ 1042 ರಲ್ಲಿದ್ದವನಾದುದರಿಂದ ಈತ ಇದಕ್ಕೂ ಹಿಂದೆ ಇದ್ದಿರಬೇಕು.

ಕನ್ನಡ ಸಾಹಿತ್ಯದಲ್ಲಿ ಇನ್ನಿಬ್ಬರು ನಾಗವರ್ಮನ ಹೆಸರಿನ ಉಲ್ಲೇಖ ಕಂಡುಬರುತ್ತದೆ. ಕವಿಚರಿತೆಕಾರರು ಶಕ 1129ರಲ್ಲಿ ಕಡೂರು 129ನೆಯ ಶಾಸನವನ್ನು ಬರೆದ ಒಬ್ಬ ನಾಗದೇವನನ್ನು ಹೆಸರಿಸುತ್ತಾರೆ. ಆದರೆ ಈತನ ಕಾಲ ಸು. 1217 ಆಗುತ್ತದೆ. ಈತನನ್ನು ಕವಿತಿಳಕ ಎಂದು ವಿಶ್ಲೇಷಿಸಿ ಹೇಳಿದೆ. ಈತ ಗೌತಮ ಗೋತ್ರದವ. ಈತನ ತಂದೆ ನಾಗದೇವ, ತಾಯಿ ಚಾಮವ್ವೆ ಎಂದು ತಿಳಿದುಬರುತ್ತದೆ.

ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ಕುರ್ತುಕೋಟಿಯಲ್ಲಿರುವ ಶಾಸನಗಳಲ್ಲಿ ಎರಡನ್ನು ಬರೆದ, 1082ರಲ್ಲಿದ್ದ ಇನ್ನೊಬ್ಬ ನಾಗದೇವ ಕಾಣಬರುತ್ತಾನೆ. ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ (1076– 1126) ಈ ಶಾಸನ ರಚಿತವಾಗಿದೆ. ಈ ಶಾಸನದಲ್ಲಿ ಬರುವ

ಅಂಬುಧಿವೇಷ್ಟಿತವಸು
ಧಾಂಬಿಕೆಗೆ ಲಲಾಮಮೆನಿಪ ವಿಪ್ರಗ್ರಾಮಂ
ಪೊಂಬಳಲ ನಾಗದೇವ ಬು
ಧಂ ಬುಧತತಿ ಮೆಚ್ಚೆ ಕಾವ್ಯಮಂ ವಿರಚಿಸಿದಂ

ಎಂಬ ಪದ್ಯದಿಂದ ಈತ ಪ್ರಸಿದ್ಧವಾದ ವಿಪ್ರಗ್ರಾಮ ಪೊಂಬಳಲ ನಾಗದೇವನೆಂದು ತಿಳಿದುಬರುತ್ತದೆ. *

**ನಾಗಮಂಗಲ:** ಮಂಡ್ಯಜಿಲ್ಲೆಯ ಉತ್ತರ ಭಾಗದಲ್ಲಿರುವ ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯಸ್ಥಳ. ತಾಲ್ಲೂಕನ್ನು ಉತ್ತರ ಮತ್ತು ಪೂರ್ವದಲ್ಲಿ ತುಮಕೂರು ಜಿಲ್ಲೆ, ಪಶ್ಚಿಮದಲ್ಲಿ ಹಾಸನಜಿಲ್ಲೆ ಮತ್ತು ಕೃಷ್ಣರಾಜಪೇಟೆ ತಾಲ್ಲೂಕು, ದಕ್ಷಿಣದಲ್ಲಿ ಮಂಡ್ಯ ಮತ್ತು ಪಾಂಡವಪುರ ತಾಲ್ಲೂಕುಗಳು ಸುತ್ತುವರಿದಿದೆ. ಜಿಲ್ಲೆಯಲ್ಲೇ ಅತಿದೊಡ್ಡದಾದ ಈ ತಾಲ್ಲೂಕಿನ ವಿಸ್ತೀರ್ಣ 1,040 ಚ.ಕಿಮೀ. ಜನಸಂಖ್ಯೆ 1,90,770. ಇದು ಪಾಂಡವಪುರ ಉಪಭಾಗದಲ್ಲಿದೆ. 1882 ರವರೆಗೆ ಈ ತಾಲ್ಲೂಕು ಹಾಸನಜಿಲ್ಲೆಯಲ್ಲೂ ಅನಂತರ 1939 ರಲ್ಲಿ ಮಂಡ್ಯಜಿಲ್ಲೆ ಆಗುವವರೆಗೆ ಮೈಸೂರುಜಿಲ್ಲೆಯಲ್ಲೂ ಇತ್ತು. ಕಸಬೆ, ಬಿಂಡಿಗನವಿಲೆ, ಬೆಳ್ಳೂರು, ದೇವಲಾಪುರ ಮತ್ತು ಹೊಣಕೆರೆ ಹೋಬಳಿಗಳು ಒಟ್ಟು ಗ್ರಾಮಗಳ ಸಂಖ್ಯೆ 365.

ತಾಲ್ಲೂಕಿನ ಬಹುಭಾಗ ಹೆಚ್ಚುಕಡಿಮೆ ಮಟ್ಟಸ ಪ್ರದೇಶ. ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಸಾಧಾರಣ ಎತ್ತರದ ಗುಡ್ಡಬೆಟ್ಟಗಳಿವೆ. ಆದಿಚುಂಚನಗಿರಿ ಬೆಟ್ಟ ಪ್ರಸಿದ್ಧವಾದುದು. ಪಶ್ಚಿಮ ಭಾಗದ ಶಿಲೆಗಳಲ್ಲಿ ಸ್ವಲ್ಪಮಟ್ಟಿನ ಚಿನ್ನದ ನಿಕ್ಷೇಪವಿದೆ. ಆದರೆ ಇದು ಬಹು ಅಲ್ಪವಾಗಿದ್ದು ಇದರ ಉತ್ಪಾದನೆ ಆರ್ಥಿಕವಾಗಿ ಲಾಭಕರವಲ್ಲವೆನ್ನಲಾಗಿದೆ. ನಾಗಮಂಗಲದ ಪಶ್ಚಿಮಕ್ಕಿರುವ ಒಂದು ಬೆಟ್ಟದಲ್ಲಿ ಮೃದುವಾದ ಬಳಪದ ಕಲ್ಲು ದೊರಕುತ್ತದೆ. ತಾಲ್ಲೂಕು ಪೂರ್ವ ಮತ್ತು ದಕ್ಷಿಣಕ್ಕೆ ಇಳಿಜಾರಾಗಿದೆ. ತುಮಕೂರು ಜಿಲ್ಲೆಯಿಂದ ಹರಿದುಬರುವ ಶಿಂಷಾನದಿ ಸ್ವಲ್ಪದೂರ ತಾಲ್ಲೂಕಿನ ಈಶಾನ್ಯ ಗಡಿಯಾಗಿ ಹರಿದು ಮುಂದೆ ಮದ್ದೂರಿ ನತ್ತ ಸಾಗುತ್ತದೆ. ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಲೋಕಪಾವನಿ ನದಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಹೆಚ್ಚು ಮಟ್ಟಿಗೆ ಬಂಜರಾಗಿರುವ ಈ ತಾಲ್ಲೂಕಿನಲ್ಲಿ ಅಲ್ಲಲ್ಲಿ ಕುರುಚಲು ಕಾಡುಗಳಿವೆ. *

ಭೂಮಿ ಮುಖ್ಯವಾಗಿ ಮರಳುಮಿಶ್ರಿತ, ಸ್ವಲ್ಪ ಕೆಂಪುಮಣ್ಣಿನ ಹರಹುಗಳು ಅಲ್ಲಲ್ಲಿವೆ. ಮಳೆ ಕಡಿಮೆ, ವಾರ್ಷಿಕ ಸರಾಸರಿ 598 ಮಿಮೀ. ರಾಗಿ, ಜೋಳ, ಹುರುಳಿ, ತೊಗರಿ, ಮೊದಲಾದ ಧಾನ್ಯಗಳು ಇಲ್ಲಿನ ಬೆಳೆಗಳು. ಹಿಂದಿನ ಕಾಲದಿಂದಲೂ ಅನೇಕ ಕೆರೆಗಳನ್ನು ಕಟ್ಟಲಾಗಿದ್ದು ಇಂದೂ ಕೆಲವು ಉಪಯೋಗದಲ್ಲಿವೆ. ನೀರಾವರಿ ಬಾವಿಗಳಿಂದ ಬತ್ತ ಕಬ್ಬುಗಳನ್ನು ಬೆಳೆಯುತ್ತಾರೆ. ಅಲ್ಪಪ್ರಮಾಣದಲ್ಲಿ ತೆಂಗು, ಬಾಳೆ, ಮೆಣಸಿನಕಾಯಿ, ತರಕಾರಿ ಮೊದಲಾದುವನ್ನು ಬೆಳೆಯಲಾಗುತ್ತದೆ. ತಿರುಗನಹಳ್ಳಿಯ ಸಣ್ಣ ಎಂಬ ಒಂದು ಜಾತಿಯ ಬತ್ತ ಈ ತಾಲ್ಲೂಕಿನ ವಿಶೇಷ ಬೆಳೆ. ಭೂಮಿ ಕೆಲವೆಡೆ ಫಲವತ್ತಾಗಿದ್ದರೂ ನೀರಿನ ಅಭಾವದಿಂದ ಇಲ್ಲಿನ ವ್ಯವಸಾಯ ಆರ್ಥಿಕವಾಗಿ ಲಾಭಕರವಾಗಿಲ್ಲ.

ಸೌಮ್ಯಕೇಶವ ದೇವಾಲಯ, ನಾಗಮಂಗಲ

ಕುರಿಗಳನ್ನು ಅಧಿಕ ಪ್ರಮಾಣದಲ್ಲಿ ಸಾಕುವುದು ಇಲ್ಲಿನ ಒಂದು ಮುಖ್ಯ ಕಸಬು. ಇದೇ ಕಾರಣದಿಂದ ಈ ತಾಲ್ಲೂಕಿನ ಹರಗಿನಹಳ್ಳಿಯಲ್ಲಿ ಹಿಂದೆ ಒಂದು ಕುರಿ ಸಾಕಣೆ ಕೇಂದ್ರವನ್ನು ಸ್ಥಾಪಿಸಲಾಗಿತ್ತು. 1863 ರವರೆಗೂ ಅದು ಅಸ್ತಿತ್ವದಲ್ಲಿತ್ತು. ನಾಗಮಂಗಲ ಭಾಗ ಉತ್ತಮ ಹಳ್ಳಿಕಾರು ಜಾತಿಯ ರಾಸುಗಳಿಗೂ ಹೆಸರಾಗಿದೆ. ಕರಡಿಹಳ್ಳಿ ಮತ್ತು ಸುತ್ತಲ ಪ್ರದೇಶಗಳಲ್ಲಿ ಇದರ ಸಾಕಣೆ ಹೆಚ್ಚು. ತಾಲ್ಲೂಕಿನಲ್ಲಿ ಸ್ವಲ್ಪ ಮಟ್ಟಿಗೆ ರೇಷ್ಮೆ ವ್ಯವಸಾಯ ಇದೆ.

ಗಂಗರ ಕಾಲದ ವಾಸ್ತುಕೃತಿಗಳಿರುವ ಕಂಬದಹಳ್ಳಿ **(ನೋಡಿ)**, ಹೊಯ್ಸಳರ ಕಾಲದ ದೇವಾಲಯಗಳಿರುವ ಬೆಳ್ಳೂರು, ಪ್ರಾಚೀನ ಅವಶೇಷಗಳಿರುವ ದೇವಲಾಪುರ, ಪುಣ್ಯಕ್ಷೇತ್ರಗಳಾದ ಬಿಂಡಿಗನವಿಲೆ **(ನೋಡಿ)**, ಆದಿಚುಂಚನಗಿರಿ **(ನೋಡಿ)** ಸುಂದರ ಹಾಗೂ ಪವಿತ್ರ ತಾಣ ಆಲತಿಗಿರಿ **(ನೋಡಿ)** ತಾಲ್ಲೂಕಿನ ಪ್ರಮುಖ ಸ್ಥಳಗಳು. ನಾಗಮಂಗಲದಿಂದ ಸು. 5ಕಿಮೀ ದೂರದಲ್ಲಿ ಕೋಟೆಬೆಟ್ಟದ ಬುಡದಲ್ಲಿರುವ ಪಾಲಗ್ರಹಾರದಲ್ಲಿ ಶ್ರೀನಿವಾಸ ಮತ್ತು ನಾಚಾರಮ್ಮ (ಲಕ್ಷ್ಮಿ) ದೇವಾಲಯಗಳಿವೆ. ಇಲ್ಲಿ ಫೆಬ್ರವರಿ ತಿಂಗಳಿನಲ್ಲಿ ತೇರು ಹಾಗೂ ದನಗಳ ಜಾತ್ರೆ ಜರುಗುತ್ತವೆ. ನಾಗಮಂಗಲದ ಪಶ್ಚಿಮಕ್ಕೆ 6ಕಿಮೀ ದೂರದಲ್ಲಿರುವ ಪಡುವಲ ಪಟ್ಟಣ ಒಂದು ಕಾಲಕ್ಕೆ ಧಾರ್ಮಿಕ ಹಾಗೂ ವಿದ್ಯಾಕೇಂದ್ರವಾಗಿತ್ತು. ಇಲ್ಲಿ ರಾಮಾನುಜಾಚಾರ್ಯರು ತಪಸ್ಸು ಮಾಡಿದರೆಂದು ಒಂದು ಶಾಸನ ತಿಳಿಸುತ್ತದೆ. ಮಾಚಲಗಟ್ಟ, ಹೊಣಕೆರೆ ಹೋಬಳಿಯಲ್ಲಿರುವ ಒಂದು ಗ್ರಾಮ. ಹಿಂದೆ ಇದು ಬಿಜ್ಜಳೇಶ್ವರ ಎಂಬ ಹೆಸರಿನ ದೊಡ್ಡ ಊರಾಗಿತ್ತು. ಇಲ್ಲಿ 13ನೆಯ ಶತಮಾನದ ಮಲ್ಲೇಶ್ವರ ದೇವಾಲಯವಿದೆ. ಇಲ್ಲಿಯ ನಂದಿಯ ವಿಗ್ರಹ ಸುಂದರವಾಗಿದೆ. ಚೋಳಸಂದ್ರದಲ್ಲಿ 1145ರಲ್ಲಿ

ಕಟ್ಟಿದ ಜೈನಬಸದಿ ಇದೆ. ಇದು ಹೊಯ್ಸಳ ಶೈಲಿಯ ಉತ್ತಮ ಕೃತಿಯಾದರೂ ಇಂದು ಶಿಥಿಲವಾಗಿವೆ. ಹಟ್ಣದಲ್ಲಿರುವ ವೀರಭದ್ರ ದೇವಾಲಯ ಹಿಂದೆ ಜೈನಬಸ್ತಿಯಾಗಿತ್ತು. ಹೊಯ್ಸಳ ಶೈಲಿಯಲ್ಲಿರುವ ಈ ಗುಡಿಯನ್ನು 1179ರಲ್ಲಿ ಸೋಮಿಶೆಟ್ಟಿ ಎಂಬ ವರ್ತಕ ಕಟ್ಟಿಸಿದನೆಂದು ಒಂದು ಶಾಸನ ತಿಳಿಸುತ್ತದೆ. ಚಿನಕುರಳಿಯಲ್ಲಿ ಒಂದು ಆಂಜನೇಯ ದೇವಾಲಯವೂ ಅದರ ಸಮೀಪದಲ್ಲಿ ಹಲವು ಮಾಸ್ತಿ ಗುಡಿಗಳೂ ಇವೆ. ಇಲ್ಲಿರುವ ಮಾಸ್ತಿಕಲ್ಲು ವ್ಯಾಸನ ತೋಳುಕಲ್ಲು ರೀತಿಯವು. ಹೈದರ್ ಮತ್ತು ಮರಾಠರ ನಡುವೆ 1771ರಲ್ಲಿ ನಡೆದ ಯುದ್ಧದಲ್ಲಿ ಹೈದರ್ ಪರಾಜಿತನಾದದ್ದು ಇಲ್ಲಿಯೇ, ನಲ್ಲುಂದಿ ಗ್ರಾಮದಲ್ಲಿ ಗೋಪಾಲ ಕೃಷ್ಣ ದೇವಾಲಯವಿದೆ. ಇದು ಭಾಗವಂತಿಕೆಮೇಳಕ್ಕೆ ಹೆಸರಾದ ಸ್ಥಳ. ಈ ತಾಲ್ಲೂಕಿನಲ್ಲಿರುವ ಹದ್ದಿನಕಲ್ಲು ಹನುಮಂತರಾಯನ ಬೆಟ್ಟ ಪವಾಡಕ್ಕೆ ಪ್ರಸಿದ್ಧ. ಈ ಬೆಟ್ಟದ ಮೇಲೆ ಸು. 10" ಎತ್ತರದ ಒಂದು ಕಂಬವಿದೆ. ಇದರಲ್ಲಿ ಇಂದ್ರಜಿತುವಿನ ಚಿತ್ರ ಕೆತ್ತಿದೆ. ಗಾಳಿ ಹಿಡಿದವರಿಗೆ ಈ ಸ್ಥಳದಲ್ಲಿ ಉಪಶಮನವಾಗುತ್ತದೆಂಬ ನಂಬಿಕೆಯಿಂದ ಅನೇಕ ಜನರು ಇಲ್ಲಿಗೆ ಬರುತ್ತಾರೆ. ಈ ಬೆಟ್ಟದ ಬುಡದಲ್ಲಿರುವ ಚೋರಸಂದ್ರ ಜನಪದ ಕಲೆಗೆ ಹೆಸರಾದ ಊರು.

ನಾಗಮಂಗಲ ಈ ತಾಲ್ಲೂಕಿನ ಆಡಳಿತ ಕೇಂದ್ರ. ಮೈಸೂರಿನಿಂದ ಸು. 65 ಕಿಮೀ ಉತ್ತರಕ್ಕೆ ಪಾಂಡವಪುರ–ಬೆಳ್ಳೂರು–ಚಿತ್ರದುರ್ಗ ರಸ್ತೆಯಲ್ಲಿದೆ. ಜನಸಂಖ್ಯೆ 16,052. ಇಲ್ಲಿಂದ ಚನ್ನರಾಯಪಟ್ಟಣ, ಕೃಷ್ಣರಾಜಪೇಟೆ, ಮಂಡ್ಯ, ಮದ್ದೂರುಗಳಿಗೆ ರಸ್ತೆಗಳಿವೆ. ಉತ್ತರದಲ್ಲಿ ಬೆಳ್ಳೂರಿನ ರಸ್ತೆ ಬೆಂಗಳೂರು–ಹಾಸನ ಮಾರ್ಗವನ್ನು ಕೂಡುತ್ತದೆ. ಅಲ್ಲದೆ ತುಮಕೂರು, ಸಿರಾಗಳಿಗೂ ಸಂಪರ್ಕ ರಸ್ತೆಗಳಿವೆ. ಇಲ್ಲಿ ಪುರಸಭೆ ಇದೆ. ಒಂದು ಸರ್ಕಾರಿ ಆಸ್ಪತ್ರೆ, ಪಶು ವೈದ್ಯಶಾಲೆ, ಎರಡು ಸರ್ಕಾರಿ ಪ್ರೌಢಶಾಲೆಗಳು ಹಾಗೂ ಒಂದು ಜೂನಿಯರ್ ಕಾಲೇಜು, ಒಂದು ಕಸಬು ತರಬೇತಿ ಶಾಲೆ ಇವೆ. ಇಲ್ಲಿನ ಸುತ್ತಮುತ್ತ ಗ್ರಾಮಾಂತರ ಪ್ರದೇಶಗಳಲ್ಲಿಯ ವ್ಯವಸಾಯ ಬೆಳೆಗಳಿಗೆ ಇದು ಮಾರಾಟ ಕೇಂದ್ರ. ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ. ಕಂಬಳಿ ನೇಯುವುದು, ಚಾಪೆ ಹಣೆಯುವುದು, ಎಣ್ಣೆ ತೆಗೆಯುವುದು ಮೊದಲಾದ ಉಪಕಸಬುಗಳಿವೆ. ಒಂದು ವೃತ್ತಿ ಶಿಕ್ಷಣ ತರಬೇತಿ ಕೇಂದ್ರವಿದೆ. ಕೈಗಾರಿಕಾ ಘಟಕವೊಂದು ನಿರ್ಮಾಣವಾಗುತ್ತಿದೆ. ನಾಗಮಂಗಲದಲ್ಲಿ ಹಳೆಯ ಸಂಪ್ರದಾಯದ ಹಿತ್ತಾಳೆ, ಕಂಚಿನ ವಿಗ್ರಹಗಳು ಮಾಡುವ ಅನೇಕ ಕುಟುಂಬಗಳಿವೆ. ಇವರು ತಯಾರಿಸುವ ಪೂಜೋಪಕರಣಗಳು ವಿಗ್ರಹಗಳು ಮತ್ತು ಇತರ ಕಲಾವಸ್ತುಗಳಿಗೆ ದೇಶಾದ್ಯಂತ ಬೇಡಿಕೆ ಇದೆ.

ನಾಗಮಂಗಲ ಹಿಂದೆ ಒಂದು ಅಗ್ರಹಾರವಾಗಿತ್ತು. ಈ ಊರಿನ ಸುತ್ತ ರಕ್ಷಣೆಗಾಗಿ ಕೋಟೆ ಇತ್ತು. ನಾಗಮಂಗಲ ಪ್ರದೇಶ ಹಿಂದೆ ದಂಡಕಾರಣ್ಯದ ಭಾಗವಾಗಿತ್ತು. ಲೋಹಿತ ವಂಶದವರು ಇಲ್ಲಿಗೆ ಮೊದಲು ವಲಸೆ ಬಂದರು. ಆ ವಂಶದ ಒಬ್ಬ ಪಾಳೆಯಗಾರ ಕನಸಿನಲ್ಲಿ ಕಂಡ ದೇವರಿರುವ ಹುತ್ತವನ್ನು ಅರಸುತ್ತ, ನಾಗಮಂಗಲವಿರುವ ಸ್ಥಳಕ್ಕೆ ಬಂದು, ಅಲ್ಲಿ ಸರ್ಪವೊಂದು ಸುತ್ತುತ್ತಿದ್ದುದನ್ನೂ ನರಸಿಂಹದೇವರು ಆವಿರ್ಭಾವವಾಗಿದ್ದುದನ್ನೂ ಕಂಡು ಅಲ್ಲಿಯ ದೇವಾಲಯ ನಿರ್ಮಿಸಿದ. ಆದ್ದರಿಂದ ಈ ಸ್ಥಳಕ್ಕೆ ನಾಗಮಂಡಲ ಎಂದು ಹೆಸರಾಯಿತು ಎಂದು ಪ್ರತೀತಿ. ಈಗ ಇದೇ ನಾಗಮಂಗಲವಾಗಿದೆ. ಇದು ಮಹಾಭಾರತ ಕಾಲದಲ್ಲಿದ್ದ ಮಣಿಪುರ, ಈ ನಗರಕ್ಕೆ ಚತುರ್ವೇದ ಭಟ್ಟಾರಕರತ್ನ ಅಗ್ರಹಾರವೆಂಬ ಹೆಸರಿದ್ದು ಹಿಂದೆ ದೊಡ್ಡ ವಿದ್ಯಾ ಮತ್ತು ವ್ಯಾಪಾರ ಕೇಂದ್ರವಾಗಿತ್ತು ಎಂಬ ಕಥೆಗಳೂ ಇವೆ. ಗಂಗರ ಕಾಲದ ಶಾಸನವೊಂದು ಇಲ್ಲಿ ದೊರಕಿದೆ. 1135ರಲ್ಲಿ ವಿಷ್ಣುವರ್ಧನನ ರಾಣಿ ಬಮ್ಮಲದೇವಿ ಇಲ್ಲಿನ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿದಳು. ಆ ಕಾಲದಲ್ಲಿ ಊರು ಪ್ರವರ್ಧಮಾನ ಸ್ಥಿತಿಯಲ್ಲಿದ್ದಂತೆ ತೋರುತ್ತದೆ. 17ನೆಯ ಶತಮಾನದವರೆಗೂ ಲೋಹಿತ ವಂಶದ ಪಾಳೆಯಗಾರರು ಇಲ್ಲಿ ಆಳುತ್ತಿದ್ದರೆನ್ನಲಾಗಿದೆ. ಇಲ್ಲಿಯ ಒಳಕೋಟೆಯನ್ನು ಆ ವಂಶದ ಜೈವಿಡನಾಯಕ 1270ರಲ್ಲಿ ಕಟ್ಟಿಸಿದನೆಂದೂ ಹೊರಕೋಟೆಯನ್ನು ಚನ್ನಪಟ್ಟಣದ ಜಗದೇವರಾಯ ಕಟ್ಟಿಸಿದನೆಂದೂ ಹೇಳಲಾಗುತ್ತದೆ. ಈಗಲೂ ಕೋಟೆಯ ಅವಶೇಷಗಳಿವೆ. ಜಗದೇವರಾಯನ ಕಾಲದಲ್ಲಿ ಇದು ಅವನ ಮುಖ್ಯ ಪಟ್ಟಣಗಳಲ್ಲೊಂದಾಗಿತ್ತು. 1630ರಲ್ಲಿ ಇದು ಮೈಸೂರಿನ ಚಾಮರಾಜ ಒಡೆಯರ ಅಧೀನವಾಯಿತು. ಮೈಸೂರು ಮರಾಠ ಯುದ್ಧಗಳಲ್ಲಿ ಇದಕ್ಕೆ ಅನೇಕ ಬಾರಿ ಹಾನಿ ತಟ್ಟಿತು. 1792ರಲ್ಲಿ ಪರಶುರಾಮ ಭಾವು ಇದನ್ನು ಕೊಳ್ಳೆಹೊಡೆದಿದ್ದ.

ಸೌಮ್ಯಕೇಶವ ಗುಡಿ ಇಲ್ಲಿನ ದೇವಾಲಯಗಳಲ್ಲಿ ದೊಡ್ಡದು. ಹೊಯ್ಸಳರ, ಬಹುಶಃ ವಿಷ್ಣುವರ್ಧನನ ಕಾಲದ್ದು. $4^1/_2$ ಅಡಿ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲಿರುವ ತ್ರಿಕೂಟಾಚಲ. ಮಧ್ಯ ಗರ್ಭಗುಡಿಯಲ್ಲಿ ಸೌಮ್ಯಕೇಶವ, ಪಕ್ಕದವುಗಳಲ್ಲಿ ನರಸಿಂಹ ಮತ್ತು ವೇಣುಗೋಪಾಲ ದೇವರುಗಳಿವೆ. ಹೊರಭಿತ್ತಿಯ ಮೇಲೆ ಕೇವಲ ಅರೆಗಂಬಗಳ ಅಲಂಕರಣವಿದೆ. ಮುಂದುಗಡೆ ಪಾತಾಳಾಂಕಣ, ಸುತ್ತಲೂ ಪ್ರಾಕಾರ ಮತ್ತು ಮಹಾದ್ವಾರದ ಮೇಲೆ ಏಳು ಅಂತಸ್ತಿನ ದ್ರಾವಿಡ ಗೋಪುರ ಇವೆ. ಪಾತಾಳಾಂಕಣದಲ್ಲಿ ಶ್ರೀವೈಷ್ಣವ ಸಂಪ್ರದಾಯದ ದೇವರುಗಳು ಮತ್ತು ಆಳ್ವಾರರುಗಳ ಗುಡಿಗಳಿವೆ. ದೇವಾಲಯದ ಮುಂಭಾಗದಲ್ಲಿರುವ 55 ಅಡಿ ಎತ್ತರದ ಗರುಡಗಂಬ ಉತ್ತಮ ಕಲಾಕೃತಿ. ಗೋಪುರ ಮತ್ತು ಕಂಬವನ್ನು ಕೆತ್ತಿಸಿದವನು ಜಗದೇವರಾಯ ಎಂದು ಹೇಳಿಕೆ. ಈ ದೇವಾಲಯದ ಸಮೀಪದಲ್ಲಿರುವ ನರಸಿಂಹ ದೇವಾಲಯ ಸಹ ಹೊಯ್ಸಳ ಕಾಲದ್ದು. ಕಂಬಗಳನ್ನು ಬಿಟ್ಟರೆ ಹೆಚ್ಚಿನ ಕಲಾವಂತಿಕೆ ಇಲ್ಲಿಲ್ಲ. ಸ್ಥಳೀಯ ಐತಿಹ್ಯಗಳ ಪ್ರಕಾರ ಇದೇ ಈ ಊರಿನ ಅತಿ ಪ್ರಾಚೀನ ದೇವಾಲಯ. ನರಸಿಂಹ ವಿಗ್ರಹ ಸಿಕ್ಕಿದ ಭಾಗದಲ್ಲಿ ಬೆಳೆದಿದ್ದ ಹಂಗರು ಮರದ ನಲವತ್ತು ಅಡಿ ಉದ್ದದ ಒಂದು ಕೊಂಬೆ ಈ ದೇವಾಲಯದಲ್ಲಿದೆ. ಸು. 1135ರ ಭುವನೇಶ್ವರ ದೇವಾಲಯವೂ ಹೊಯ್ಸಳ ಕಾಲದ್ದಾದರೂ ಹೆಚ್ಚು ಮಟ್ಟಿಗೆ ದ್ರಾವಿಡ ಸಂಪ್ರದಾಯದಲ್ಲೇ ಇರುವ ಕಟ್ಟಡ. ವೀರಭದ್ರ ಮತ್ತು ಭದ್ರಕಾಳಿಯ ದೇವಾಲಯಗಳೂ ಇಲ್ಲಿವೆ. ಈ ಊರಿನ ಗ್ರಾಮದೇವತೆಯಾದ ಬಡಗೋಡಮ್ಮನ ದೇವಾಲಯ ಹಿರೀಕೆರೆಯ ಉತ್ತರ ಕೋಡಿಯಲ್ಲಿದೆ. ಅಕ್ಕಸಾಲಿಗರ ಕಾಳಮ್ಮನ ಗುಡಿ ನಾಗಮಂಗಲದ ಒಳ ಕೋಟೆಯ ದಿಡ್ಡಿ ಬಾಗಿಲಿನಲ್ಲಿದೆ. ಊರಿನ ನಾಲ್ಕು ದಿಕ್ಕುಗಳಲ್ಲೂ ಕೆರೆಗಳಿವೆ. ಅವು ಸೂಳೆಕೆರೆ, ಹಿರೀಕೆರೆ, ಸಿಂಗೆ ಅರಸಿನ ಕೆರೆ ಮತ್ತು ಅಮ್ಮನಕೆರೆ, ಕೋಟೆಯ ಅವಶೇಷಗಳಲ್ಲದೆ ಹಳೆಯ ವೈಭವದ ಕುರುಹಾಗಿ ಇನ್ನೂ ಕೆಲವು ಅವಶೇಷಗಳಿವೆ. ಸೌಮ್ಯಕೇಶವ ಮತ್ತು ನರಸಿಂಹ ಗುಡಿಗಳ ಮಧ್ಯದಲ್ಲಿರುವ ಜಾಗವನ್ನು ಜಗದೇವರಾಯನ ಅರಮನೆ ಇದ್ದ ತಾಣ ಎಂದು ಗುರುತಿಸುತ್ತಾರೆ. ಸಮೀಪದಲ್ಲಿ ಹಲವು ಕಂಬಗಳಿರುವ ದೊಡ್ಡ ಮಂಟಪವಿದ್ದು ಇದು ಹಿಂದಿನ ಸಭಾಮಂಟಪವಿದ್ದರೂ ಇರಬಹುದು. ಊರಿನ ಸಮೀಪದಲ್ಲಿ 60 ಅಡಿ ವ್ಯಾಸ ಮತ್ತು 3 ಅಡಿ ಆಳವಿರುವ ಒಂದು ಕೊಳ ಇದೆ. ಅದರ ಮಧ್ಯೆ ಒಂದು ಮಂಟಪವೂ ಇದೆ. ಜಗದೇವರಾಯ ಜಲಕ್ರೀಡೆಗಾಗಿ ಈ ಕೊಳವನ್ನು ಕಟ್ಟಿಸಿದ್ದೆಂದು ಸ್ಥಳಪ್ರತೀತಿ.

**(ಎಚ್.ಎಂ.ಎನ್;*)**

**ನಾಗಮಂಗಲದ ಪ್ರಭುಗಳು:** 15ನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯನಗರದ ಅರಸರ ಆಶ್ರಯದಲ್ಲಿ ನಾಗಮಂಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆ ಸುತ್ತಿನ ಪ್ರದೇಶವನ್ನು ಆಳುತ್ತಿದ್ದ ಒಂದು ಸಾಮಂತ ಮನೆತನದವರು. ಶಾಸನಗಳಿಂದ ತಿಳಿದುಬರುವ ಮಾಹಿತಿಗಳ ಪ್ರಕಾರ ಇವರು ಲೋಹಿತವಂಶಕ್ಕೆ ಸೇರಿದವರು. ಈ ವಂಶದ ಅರಸರಲ್ಲಿ ಶಿಂಗಣ್ಣವೊಡೆಯ ಹಾಗೂ ಆತನ ಪುತ್ರ ತಿಮ್ಮಣ್ಣದಂಡನಾಯಕ ಪ್ರಸಿದ್ಧರು. ತಿಮ್ಮಣ್ಣ ವಿಜಯನಗರದ ಮಲ್ಲಿಕಾರ್ಜುನನ (1446–65) ಕಾಲದಲ್ಲಿ ಮಹಾ ಪ್ರಧಾನ ಎಂಬ ಹುದ್ದೆಯನ್ನು ಪಡೆದಿದ್ದ. ಇವನಿಗೆ ದೇವರಾಜನೆಂಬ ಒಬ್ಬ ತಮ್ಮನಿದ್ದ. ಇವರು ಪರಮಭಾಗವತರೂ ವೈಷ್ಣವರೂ ಆಗಿದ್ದರು. ಇವರು ಶಿಂಗಣ್ಣವೊಡೆಯನ ಸತಿ ಸೀತಾಂಬಿಕಾ ಹೆಸರಿನಲ್ಲಿ ಪಾಂಡವಪುರ ತಾಲ್ಲೂಕಿನ ಹರವು ಗ್ರಾಮದ ಹತ್ತಿರ ಹೊಸವೂರ ಎಂಬುದನ್ನು ಸೀತಾಪುರವೆಂದು ಮಾರ್ಪಡಿಸಿ ಅಲ್ಲಿ ರಾಮಚಂದ್ರದೇವರ ದೇವಸ್ಥಾನ ಕಟ್ಟಿಸಿ ಅನೇಕ ದಾನದತ್ತಿಗಳನ್ನು ಬಿಟ್ಟರು. ತಿಮ್ಮಣ್ಣದಂಡನಾಥ ಹಾಗೂ ಆತನ ಸತಿ ರಂಗಾಂಬಿಕಾ ಇವರು ಮೇಲುಕೋಟೆಯ ದೇವಸ್ಥಾನಕ್ಕೆ ವಿಶೇಷ ದತ್ತಿಗಳನ್ನು ಕೊಟ್ಟರು. ತಿಮ್ಮಣ್ಣನಿಗೆ ಯಾದವಗಿರಿ (ಮೇಲುಕೋಟೆ) ಜೀರ್ಣೋದ್ಧಾರ ಎಂಬ ಬಿರುದೂ ಇದ್ದಿತು. ಮೇಲುಕೋಟೆಯಲ್ಲಿನ ದೇವಸ್ಥಾನದ ಮತ್ತು ರಾಮಾನುಜಸಭೆಯ ಚಟುವಟಿಕೆಗಳು ಸಾಂಗವಾಗಿ ನಡೆಯಲೆಂದು ರಂಗಾಂಬಿಕೆಯ ಬಲ್ಲೇನಹಳ್ಳಿ ಹಾಗೂ ಯಲವದಪಲ್ಲಿ ಗ್ರಾಮಗಳನ್ನು ದತ್ತಿ ಹಾಕಿಕೊಟ್ಟಳು. ದೇವರಾಜ ಕಾವೇರಿ ನದಿಗೆ ಹೊಸದಾಗಿ ಕಟ್ಟೆಯೊಂದನ್ನು ಕಟ್ಟಿಸಿ ಸೀತಾಪುರ ಹರವು ಗ್ರಾಮಗಳ ಮುಖಾಂತರ ಕಾಲುವೆಯೊಂದನ್ನು ಒಯ್ಯುವ ಕೆಲಸವನ್ನು ಮಾಡಿದ (ತನ್ನಿಮಿತ್ತ ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕುಗಳ ಕೆಲ ಗ್ರಾಮಗಳಿಗೆ ನೀರಾವರಿ ಸೌಲಭ್ಯ ದೊರೆಯಿತು). ನಾಮಂಗಲದ ಕೋಟೆಯನ್ನು ಸು. 1270ರಲ್ಲಿ ಈ ವಂಶದ ಜೈವಿಡನಾಯಕ ಕಟ್ಟಿಸಿದನೆಂಬ ಹೇಳಿಕೆ ಇದೆ. 16ನೆಯ ಶತಮಾನದ ಅಂತ್ಯದ ಹೊತ್ತಿಗೆ ಲೋಹಿತ ವಂಶದ ಪ್ರಭುಗಳು ತಮ್ಮ ಅಧಿಕಾರವನ್ನು ಕಳೆದುಕೊಂಡರು. ಆಗ ಚನ್ನಪಟ್ಟಣದಿಂದ ಆಳುತ್ತಿದ್ದ ಸಾಳುವ ವಂಶದ ಜಗದೇವರಾಯನ ಆಳ್ವಿಕೆಗೆ ನಾಗಮಂಗಲವೂ ಒಳಪಟ್ಟಿತ್ತು. (ಎಸ್.ಜಿಎ.)

**ನಾಗರತ್ನಮ್ಮ, ಆರ್.:** 1926 – . ಕನ್ನಡ ರಂಗಭೂಮಿ ಕಲಾವಿದೆ. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಕನ್ನಡ ರಂಗಭೂಮಿಯಲ್ಲಿ ಸ್ತ್ರೀಪಾತ್ರಗಳನ್ನೂ ಪುರುಷರೇ ನಿರ್ವಹಿಸಬೇಕಾಗಿತ್ತು. ಸ್ತ್ರೀಯರು ರಂಗವೇದಿಕೆಯನ್ನೇರುವುದಿರಲಿ, ನಾಟಕಗಳನ್ನು ನೋಡುವುದೂ ಅಪರಾಧ ಎಂಬ ಭಾವನೆ ಇತ್ತು. ಆದರೆ ಈ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿದ ಕಲಾವಿದೆಯರಲ್ಲಿ ಮೊದಲಿಗರು ಎಲ್ಲಮ್ಮ, ರಾಜಮ್ಮ, ಎಂ.ವಿ. ರಾಜಮ್ಮ, ಪಂಡರಿಬಾಯಿ ಮೊದಲಾದವರು. ನಾಗರತ್ನಮ್ಮನವರೂ ಈ ಗುಂಪಿಗೆ ಸೇರಿದವರು. ಇವರು 1926 ಜೂನ್ 21ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಕೃಷ್ಣಭಟ್ಟ, ತಾಯಿ ರುಕ್ಮಿಣಮ್ಮ. ಎಳೆಯ ವಯಸ್ಸಿನಲ್ಲೇ ಇವರಿಗೆ ರಂಗದ ನಂಟು ಉಂಟಾಯಿತು. ಮೈಸೂರಿನ ಅಗ್ರಹಾರದ ತೊಗರಿಬೀದಿಯಲ್ಲಿ ಬೀಡುಬಿಟ್ಟಿದ್ದ ಗುಬ್ಬಿ ಕಂಪನಿ, ಚಾಮುಂಡೇಶ್ವರಿ ಕಂಪನಿಗಳ ರಂಗತಾಲೀಮು ಇವರಲ್ಲಿ ಕುತೂಹಲವನ್ನುಂಟುಮಾಡಿತು. ಚಾಮುಂಡೇಶ್ವರಿ ಕಂಪನಿಯ ತುಕಾರಾಂ ನಾಟಕದಲ್ಲಿ ಚಿಕ್ಕಹುಡುಗಿಯ ಪಾತ್ರದ ಮೂಲಕ ಇವರ ರಂಗಪ್ರವೇಶವಾಯಿತು. 12ನೆಯ ವಯಸ್ಸಿನಲ್ಲಿ ಎಚ್.ಎಲ್.ಎನ್.ಸಿಂಹ ಅವರ ಸಂಸಾರನೌಕ ನಾಟಕದಲ್ಲಿ ಸರಳೆಯ ಪಾತ್ರ ವಹಿಸಿ ಯಶಸ್ಸನ್ನು ಪಡೆದರು. ಪ್ರಾರಂಭದ ದಿನಗಳಲ್ಲಿ ಇವರು ಸಣ್ಣಪುಟ್ಟ ಪಾತ್ರಗಳನ್ನು ಮಾಡುತ್ತ ಮುಂದೆ ನಾಯಕಿ ಪಾತ್ರವಹಿಸುವ ಹಂತಕ್ಕೇರಿದರು. ಇದೇ ಸುಮಾರಿನಲ್ಲಿ ಬಿ.ಎನ್.ಚಿನ್ನಪ್ಪನವರ ಕಲಾಸೇವಾ ಮಂಡಲಿಯ ಕಬೀರದಾಸ್ ನಾಟಕದಲ್ಲಿ ಬೀಬಿಯ ಪಾತ್ರಕ್ಕೆ ಆಯ್ಕೆಯಾದರು. ಅಲ್ಲಿಂದ ಮುಂದೆ ಸಾಹುಕಾರ, ಸದಾರಮೆ, ಪೇಮಲೀಲಾ ನಾಟಕಗಳಲ್ಲಿ ಮುಖ್ಯಪಾತ್ರಗಳನ್ನು ನಿರ್ವಹಿಸಿದರು. ಎಚ್.ಎಲ್.ಎನ್.ಸಿಂಹಾಸ್ ಸೆಲೆಕ್ಟ್ ಆರ್ಟಿಸ್ಟ್‌ನಲ್ಲಿ ಹೆಚ್ಚಿನ ಅನುಭವಗಳಿಸಿದರು. ಸಿ.ಬಿ.ಮಲ್ಲಪ್ಪನವರ ಕಂಪನಿ, ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ, ಶೇಷಕಮಲ ಕಲಾಮಂಡಲಿ, ಮಾಸ್ಟರ್ ಹಿರಣ್ಣಯ್ಯ ಮಿತ್ರ ಮಂಡಲಿ, ಚಲನಚಿತ್ರ ಕಲಾವಿದರ ಸಂಘ ಹಾಗೂ ಕೆಲವು ಹವ್ಯಾಸಿ ತಂಡಗಳಲ್ಲಿ ಪಾತ್ರವಹಿಸಿ ಖ್ಯಾತರಾದರು. ಕೆಲವು ಕಂಪನಿಗಳಲ್ಲಿ ಸಂಬಳವಿಲ್ಲದೆ ದುಡಿಯುವ ಪರಿಸ್ಥಿತಿಯೂ ಎದುರಾಗುತ್ತಿತ್ತು. ಕೆಲವೊಮ್ಮೆ ಊಟ ದೊರೆಯುವುದೂ ಕಷ್ಟವಾಗುತ್ತಿತ್ತು; ಆದರೆ ಇವರ ಪಾತ್ರ ಮಾತ್ರ ರಾಣಿಯದು. ಇಂಥ ಹೊತ್ತಿನಲ್ಲಿ ಕಲಾಭಿಮಾನಿಗಳ ಪ್ರೋತ್ಸಾಹವೇ ರಸದೂಟ ಎನಿಸುತ್ತಿತ್ತು.

ಹಿರಣ್ಣಯ್ಯ ಮಿತ್ರ ಮಂಡಲಿಯ ದೇವದಾಸಿ ನಾಟಕದಲ್ಲಿ ಸುನಂದೆ, ಕೆಲವೊಮ್ಮೆ ಮಣಿಮಂಜರಿ, ಎಚ್ಚಮನಾಯಕ ನಾಟಕದಲ್ಲಿ ಮೋಹಿನಿ ಹಾಗೂ ಲಲಿತಾ ಈ ಪಾತ್ರಗಳನ್ನು ವಹಿಸಿ ಅಭಿನಯದ ಅನುಭವಗಳನ್ನು ತುಂಬಿಕೊಂಡರು. ಇದೇ ಸಮಯದಲ್ಲಿ ತಮ್ಮ ಸಹ ನಟರಾಗಿದ್ದ ಎ.ಆರ್. ಪಾರ್ಥಸಾರಥಿಯವರನ್ನು ವಿವಾಹವಾದರು (1945). ಮುಂದೆ ಪಾರ್ಥಸಾರಥಿಯವರು ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡಲು ಮದರಾಸಿಗೆ ತೆರಳಿದರು. ಆದರೆ ನಾಗರತ್ನಮ್ಮನವರು ಕಂಪನಿಯಲ್ಲೇ ಉಳಿದರು.

ಇವರ ಜೀವನದಲ್ಲಿ 1958ರಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಸ್ತ್ರೀಯರು ಸ್ತ್ರೀಪಾತ್ರಗಳಿಗಷ್ಟೇ ಸೀಮಿತವಾಗದೆ ಪುರುಷ ಪಾತ್ರಗಳಲ್ಲಿಯೂ ಮೆರೆಯುವ ಸುಯೋಗ ಒದಗಿಬಂತು. ಶ್ರೀಕೃಷ್ಣಗಾರುಡಿ ನಾಟಕದಲ್ಲಿ ಎಲ್ಲ ಪುರುಷ ಪಾತ್ರಗಳನ್ನೂ ಸ್ತ್ರೀಯರೇ ವಹಿಸಿದರು. ಈ ನಾಟಕದಲ್ಲಿ ನಾಗರತ್ನಮ್ಮನವರದು ಭೀಮನ ಪಾತ್ರ. ಮಂಡ್ಯದಲ್ಲಿ ನಡೆದ ಮಾದರಿ ಪ್ರಯೋಗವಿದು. ಯಾವ ನಟರಿಗೂ ಕಮ್ಮಿಯಿಲ್ಲದಂತೆ ಅತ್ಯುತ್ತಮವಾಗಿ ನಟಿಸಿ, ಪ್ರೇಕ್ಷಕರನ್ನು ರಂಜಿಸಿದ ಇವರು ಭೀಮನ ಪಾತ್ರದ ನಾಗರತ್ನಮ್ಮ ಎಂದೇ ಪ್ರಸಿದ್ಧರಾದರು. ಈ ಪಾತ್ರ ಎಷ್ಟರಮಟ್ಟಿಗೆ ಪ್ರಭಾವ ಬೀರಿತೆಂದರೆ ಗಜಾನನ ನಾಟಕ ಮಂಡಲಿಯ ಮಾಲೀಕರಾದ ಶ್ರೀ ಪಾದರಾಯರು ಸ್ತ್ರೀ ನಾಟಕ ಮಂಡಲಿಯನ್ನು ಸ್ಥಾಪಿಸಿ (1958) ಅದರ ನಾಯಕತ್ವವನ್ನು ನಾಗರತ್ನಮ್ಮನವರಿಗೆ ವಹಿಸಿದರು. ಈ ಜವಾಬ್ದಾರಿಯನ್ನು ನಾಗರತ್ನಮ್ಮನವರು ಯಶಸ್ವಿಯಾಗಿ ನಿರ್ವಹಿಸಿದರು. ಇದು ನಾಗರತ್ನಮ್ಮನವರ ರಂಗಭೂಮಿಯ ಬದುಕಿನ ಎರಡನೆಯ ಹಂತ ಎನ್ನಬಹುದು. ನಾಗರತ್ನಮ್ಮನವರಿಗೆ ಎಚ್.ಪಿ. ಸರೋಜ, ಬಿ.ಪಿ.ರಾಜಮ್ಮ, ಬಿ.ಎಸ್. ಮಂಜುಳಮ್ಮ, ಬಿ.ಎಸ್. ಪುಟ್ಟಮ್ಮ ಮೊದಲಾದ ಕಲಾವಿದೆಯರ ನಿಕಟಸಂಪರ್ಕ ಇದ್ದುದರಿಂದ ನಾಟಕಗಳನ್ನು ಆಡಲು ಕಷ್ಟವೆನಿಸಲಿಲ್ಲ. ಜೊತೆಗೆ ತಂಗಿ ಆರ್. ಮಂಜುಳಾ ಹಾಸ್ಯ ಪಾತ್ರದಲ್ಲಿದ್ದರು. ತಮ್ಮ ಆರ್. ಪರಮಶಿವನ್ ಸಂಗೀತ ನಿರ್ದೇಶಕರಾದರು. ನಾರಗತ್ನಮ್ಮನವರ ಬಳಗದ ಎಲ್ಲ ಕಲಾವಿದರೂ ವೃತ್ತಿಪರರು, ಹಾಗಾಗಿ ನಿರಂತರವಾಗಿ ಕ್ಯಾಂಪ್ ನಡೆಯಬೇಕಿತ್ತು. ಕೆಲವು ಸಲ ಉಪವಾಸ ಅನಿವಾರ್ಯವಾಗುತ್ತಿತ್ತು. ಅಷ್ಟೇ ಅಲ್ಲದೆ ಸ್ತ್ರೀಯರೆಂಬ ಕಾರಣಕ್ಕಾಗಿ ಕಿರುಕುಳವೂ ಆಗುತ್ತಿತ್ತು. ಇದರಿಂದ ಕೆಲವೊಮ್ಮೆ ಸಂಪಾದನೆ ಕಡಿಮೆಯಾಗುತ್ತಿತ್ತು. ಆದರೂ ಬಂದ ಹಣವನ್ನೆಲ್ಲ ಮಂಡಳಿಯ ಕಲಾವಿದರಿಗೇ ಹಂಚುತ್ತಿದ್ದರು. ತಮ್ಮ ಸಂಸ್ಥೆಯ ಕಲಾವಿದರ ಮಕ್ಕಳಿಗೆ ಬಿಡುವಿನ ವೇಳೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಲು

ಅನುಕೂಲ ಕಲ್ಪಿಸಿ ನೆರವನ್ನು ನೀಡುತ್ತಿದ್ದರು. 'ಕಲಾ ಸೇವೆಯೇ ಪರಮೋಚ್ಚ ಗುರಿ' ಎಂದು ನಾಗರತ್ನಮ್ಮನವರು ಹಾಗೂ ಇವರ ಬಳಗದವರು ಭಾವಿಸಿದ್ದರು. ಸ್ತ್ರೀಯರೇ ಅಭಿನಯಿಸುತ್ತ, ಸ್ತ್ರೀಯರೇ ನಡೆಸುತ್ತಿದ್ದ ಸಂಸ್ಥೆ ಇದೊಂದೇ. ಗಂಡಸರಿಗೂ ಕಷ್ಟವೆನಿಸುತ್ತಿದ್ದ ನಾಟಕ ಕಂಪನಿಯನ್ನು ಸ್ತ್ರೀಯರನ್ನೇ ಕಟ್ಟಿಕೊಂಡು ನಡೆಸುತ್ತಿರುವುದಕ್ಕಾಗಿ ನಾಟಕರತ್ನ ಗುಬ್ಬಿವೀರಣ್ಣನವರು ಇವರನ್ನು ಪ್ರಶಂಸಿಸಿದ್ದರು.

ಸ್ತ್ರೀ ನಾಟಕ ಮಂಡಳಿ ರಜತೋತ್ಸವ ಸುವರ್ಣ ಮಹೋತ್ಸವಗಳನ್ನು ಆಚರಿಸಿತು. ಆದರೆ ಇವರ ಸಂಸ್ಥೆ ಪ್ರಕೃತಿಯ ವಿಕೋಪಕ್ಕೆ ಗುರಿಯಾದದ್ದೂ ಉಂಟು. ಒಮ್ಮೆ ಭಾರಿ ಮಳೆಯಿಂದಾಗಿ ರಂಗಮಂದಿರದ ಚಪ್ಪರವೇ ಉರುಳಿಬಿದ್ದು, ಬಹಳ ನಷ್ಟವಾಯಿತು. ಆದರೂ ಇವರು ಕೈಬಿಡದ ಛಲದಿಂದ ಕಂಪನಿಯನ್ನು ನಡೆಸಿಕೊಂಡು ಬಂದರು. ಮೈಸೂರು ಹಾಗೂ ಕರ್ನಾಟಕದ ಎಲ್ಲೆಡೆ ಸುಮಾರು 210ಕ್ಕೂ ಮಿಕ್ಕು ಊರುಗಳಲ್ಲಿ 28 ವರ್ಷಗಳ ಕಾಲ ಕಂಪೆನಿ ಬೇರೆ ಬೇರೆ ಸ್ಥಳಗಳಲ್ಲಿ ನೆಲೆಯೂರಿ ಪ್ರದರ್ಶನಗಳನ್ನು ನೀಡಿತು. ಕೃಷ್ಣಲೀಲಾ, ಸಂಪೂರ್ಣ ರಾಮಾಯಣ, ಬೇಡರಕಣ್ಣಪ್ಪ, ಸುಭದ್ರಾ ಪರಿಣಯ, ಸದಾರಮೆ, ದೇವದಾಸಿ, ಸಂಸಾರನೌಕೆ, ಮಕಮಲ್‌ಟೋಪಿ ಇಂಥ ಪ್ರಸಿದ್ಧ ನಾಟಕಗಳನ್ನು ಆಡಿ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿತು. ತಮ್ಮ ಪತಿ ಪಾರ್ಥಸಾರಥಿಯವರ ಅಕಾಲ ಮರಣದಿಂದಾಗಿ (1967) ಇವರ ಹೆಗಲಿಗೆ ಎಲ್ಲ ಹೊಣೆಗಾರಿಕೆ ಬಿದ್ದರೂ ರಂಗಭೂಮಿಯ ಬಗ್ಗೆ ಇವರ ಆಸಕ್ತಿ ಕುಂದಲಿಲ್ಲ. ನಾಟಕಗಳ ಪ್ರದರ್ಶನವನ್ನು ಮುಂದುವರಿಸಿದರು. ಆದರೆ ಕೊನೆಗೂ ಇವರು ಕಂಪನಿಯನ್ನು ನಿಲ್ಲಿಸಲೇ ಬೇಕಾಯಿತಾದರೂ ರಂಗಭೂಮಿ ಸೇವೆಯನ್ನು ಮಾತ್ರ ಬಿಡಲಿಲ್ಲ.

ಸ್ತ್ರೀ ನಾಟಕ ಮಂಡಲಿಯ ಪ್ರಮುಖ ನಾಟಕಗಳಾದ ಶ್ರೀಕೃಷ್ಣಗಾರುಡಿಯಲ್ಲಿ ಭೀಮ, ಬೇಡರ ಕಣ್ಣಪ್ಪದಲ್ಲಿ ಕಣ್ಣಪ್ಪ, ರಾಮಾಯಣದಲ್ಲಿ ದಶರಥ ಹಾಗೂ ರಾವಣ, ಸಂಸಾರ ನೌಕೆಯಲ್ಲಿ ಸುಂದರೇಶ, ದೇವದಾಸಿಯಲ್ಲಿ ಸಖಾರಾಮ, ಸದಾರಮೆಯಲ್ಲಿ ಕಳ್ಳ ಹಾಗೂ ಮಕಮಲ್ ಟೋಪಿಯಲ್ಲಿ ಭೂಪಾಲ್ ಈ ಪಾತ್ರಗಳಲ್ಲಿ ನಾಗರತ್ನಮ್ಮನವರ ಅಭಿನಯ ಚಿರಸ್ಮರಣೀಯವಾಗಿದೆ. ಇವರ ಕಲಾಸೇವೆಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಗುಬ್ಬಿವೀರಣ್ಣ ಪ್ರಶಸ್ತಿ ದೊರಕಿವೆ. **(ಎಚ್.ಕೆ.ಆರ್.ಎ)**

**ನಾಗರತ್ನಮ್ಮ, ಕೆ.ಎಸ್.:** 1923–93. ಹೆಸರಾಂತ ಸಂಸದೀಯ ಪಟು. ಶಾಸಕಿಯಾಗಿ, ವಿಧಾನಸಭೆಯ ಅಧ್ಯಕ್ಷರಾಗಿ ಮತ್ತು ಸಚಿವೆಯಾಗಿ ಮೂರು ದಶಕಗಳಿಗೂ ಹೆಚ್ಚುಕಾಲ ವಿವಿಧ ಜವಾಬ್ದಾರಿ ಹುದ್ದೆಗಳನ್ನು ನಿರ್ವಹಿಸಿದ ಕರ್ನಾಟಕದ ಮೊದಲ ತಲೆಮಾರಿನ ಮಹಿಳಾ ರಾಜಕಾರಿಣಿ. ಕಬ್ಬಳ್ಳಿ ಸುಬ್ಬಣ್ಣ ನಾಗರತ್ನಮ್ಮ ಇವರ ಪೂರ್ತಿ ಹೆಸರು.

ಇವರು 1923 ನವೆಂಬರ್ 23 ರಂದು ಜನಿಸಿದರು. ತಂದೆ ಸಿ.ಆರ್. ಗೌಡರು, ಮೈಸೂರು ಸಂಸ್ಥಾನದಲ್ಲಿ ಎಂಜಿನಿಯರ್ ಆಗಿದ್ದರು. ತಾಯಿ ಚನ್ನಮ್ಮ. ಬೆಂಗಳೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ವಿದ್ಯಾವಂತ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದರೂ ಸಂಪ್ರದಾಯಸ್ಥ ಸಮಾಜದ ಪರಿಣಾಮವಾಗಿ ಹನ್ನೊಂದನೆಯ ವರ್ಷದಲ್ಲೇ ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪನವರ ಮಗ ಕೆ.ಸಿ. ಸುಬ್ಬಣ್ಣನವರೊಡನೆ ಇವರ ವಿವಾಹವಾಯಿತು (1934). ಸುಬ್ಬಣ್ಣನವರು ಅಂದಿನ ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದವರು. ಪತಿಯ ಅಕಾಲಿಕ ನಿಧನದ ಅನಂತರ (1947) ಬಹುದೊಡ್ಡ ಮನೆತನದ ಸಮಸ್ತ ಜವಾಬ್ದಾರಿಗಳು ಇವರ ಹೆಗಲಿಗೆ ಬಿದ್ದುವು. ಹೊಣೆಗಾರಿಕೆಗಳಿಂದ ವಿಚಲಿತರಾಗದೆ ಸಮಸ್ತ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿದರು. ಕಬ್ಬಳ್ಳಿ ಮನೆತನ ನಡೆಸಿಕೊಂಡು ಬರುತ್ತಿದ್ದ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಮುನ್ನಡೆಸಿದರು. ಕುಟುಂಬ ಹೊಂದಿದ್ದ ವಿಸ್ತಾರವಾದ ಜಮೀನು ಮತ್ತು ಅಪಾರ ಆಸ್ತಿಯನ್ನು ಸಂರಕ್ಷಿಸಿದರು.

1957ರ ಸಾರ್ವತ್ರಿಕ ಚುನಾವಣೆಯಲ್ಲಿ ಗುಂಡ್ಲುಪೇಟೆ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ವಿಧಾನಸಭೆಗೆ ಆಯ್ಕೆಯಾಗುವುದರ ಮೂಲಕ ಸಕ್ರಿಯ ರಾಜಕೀಯಕ್ಕೆ ಪ್ರವೇಶ ಮಾಡಿದರು. ಕಾಂಗ್ರೆಸ್ ಅಲೆಯ ವಿರುದ್ಧ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಹನ್ನೆರಡು ಸಾವಿರ ಮತಗಳ ಅಂತರದಿಂದ ತಮ್ಮ ಮೊದಲ ಪ್ರಯತ್ನದಲ್ಲೇ ಗೆಲವು ಸಾಧಿಸಿದ್ದು ಇವರ ಅಪೂರ್ವಸಾಧನೆ.

1960ರ ದಶಕದಲ್ಲಿ ಎಸ್. ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಇವರು ಕಾಂಗ್ರೆಸ್ ಪಕ್ಷ ಸೇರಿದರು. 1972ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅತ್ಯಧಿಕ ಬಹುಮತದಿಂದ ಅಧಿಕಾರದ ಗದ್ದುಗೆ ಏರಿತು. ಡಿ. ದೇವರಾಜ ಅರಸು ಮುಖ್ಯಮಂತ್ರಿಗಳಾದರು. ನಾಗರತ್ನಮ್ಮನವರು ವಿಧಾನ ಸಭಾಧ್ಯಕ್ಷರಾಗಿ ಆಯ್ಕೆಗೊಂಡರು. ಐದು ವರ್ಷಗಳ ಕಾಲ (1972–78) ಸಭಾಧ್ಯಕ್ಷರಾಗಿ ಮಹಿಳೆಯೊಬ್ಬರು ಕಾರ್ಯನಿರ್ವಹಿಸಿದ್ದು ವಿಧಾನಸಭೆ ಇತಿಹಾಸದಲ್ಲಿ ಗಮನಾರ್ಹ ಸಂಗತಿ.

ದೇವರಾಜ ಅರಸು ಕಾಂಗ್ರೆಸ್‌ನಿಂದ ದೂರವಾದರೂ ನಾಗರತ್ನಮ್ಮ ಕಾಂಗ್ರೆಸ್ ಪಕ್ಷದಲ್ಲೇ ಉಳಿದರು. ಜನತಾ ಸರ್ಕಾರದ ಆಡಳಿತದಲ್ಲಿ ವಿರೋಧಪಕ್ಷದ ನಾಯಕರಾಗಿ (1987–89) ಕಾರ್ಯನಿರ್ವಹಿಸಿದರು. ತುರ್ತುಪರಿಸ್ಥಿತಿಯ ಅನಂತರ ನಡೆದ ವಿಧಾನಸಭಾ ಚುನಾವಣೆಯೊಂದನ್ನು ಬಿಟ್ಟರೆ 1957 ರಿಂದ ಅವಿರತವಾಗಿ ಮೂರು ದಶಕಗಳ ಅವಧಿಯಲ್ಲಿ ವಿಧಾನಸಭೆಗೆ ಚುನಾಯಿತರಾಗಿದ್ದರು. ಗುಂಡ್ಲುಪೇಟೆ ತಾಲ್ಲೂಕಿನ ಬಹುತೇಕ ಅಭಿವೃದ್ಧಿ ಯೋಜನೆಗಳಲ್ಲಿ ಇವರ ಪಾತ್ರ ಬಹು ಪ್ರಮುಖವಾದುದು. ಕಬ್ಬಳ್ಳಿಯಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರ ಪ್ರಾರಂಭ (1975), ತೆರಕಣಾಂಬಿಯಲ್ಲಿ ಪ್ರೌಢಶಾಲೆಯ ಪ್ರಾರಂಭ, ಗುಂಡ್ಲುಪೇಟೆಯಲ್ಲಿ ಪಶುವೈದ್ಯಶಾಲೆ, ಇತರರೊಂದಿಗೆ ಸೇರಿ ಮೈಸೂರಿ ನಲ್ಲಿ ವಾಣಿವಿಲಾಸ ಮೊಹಲ್ಲಾದ ಮಾತೃಮಂಡಳಿ ವಿದ್ಯಾಸಂಸ್ಥೆಯ ಸ್ಥಾಪನೆ, ನಲ್ಲೂರು ಅಮಾನಿಕೆರೆ ಮತ್ತು ಕಲ್ಲುಕಟ್ಟೆಹಳ್ಳ ನೀರಾವರಿ ಯೋಜನೆಗಳು–ಇವು ನಾಗರತ್ನಮ್ಮ ಅವರ ಶ್ರಮದಿಂದ ಸಾಕಾರಗೊಂಡ ಕೆಲವು ಯೋಜನೆಗಳು. ಮೈಸೂರಿನ ಮರಿಮಲ್ಲಪ್ಪ ಕಾಲೇಜಿನಿಂದ ಆಡಳಿತ ಮಂಡಳಿಯ ಸದಸ್ಯರಾಗಿ, ಕಬ್ಬಳ್ಳಿ ವಿದ್ಯಾರ್ಥಿನಿಲಯದ ಪೋಷಕರಾಗಿಯೂ ಸೇವೆ ಸಲ್ಲಿಸಿದರು. 1970ರ ದಶಕದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷೆಯಾಗಿದ್ದರು. ಬೆಂಗಳೂರಿನಲ್ಲಿ ಲಲಿತಕಲಾ ವಿದ್ಯಾಲಯ ಸ್ಥಾಪನೆಗೂ ಇವರು ಕಾರಣರಾದರು. ಅಖಿಲ ಭಾರತ ಮಹಿಳಾ ಪರಿಷತ್ತಿನ ಮೈಸೂರು ವಿಭಾಗದ ಅಧ್ಯಕ್ಷೆ ಮತ್ತು ಭಾರತದ ಸ್ಕೌಟ್ ಮತ್ತು ಗೈಡ್ ವಿಭಾಗದ ಉಪಾಧ್ಯಕ್ಷೆಯೂ ಆಗಿದ್ದರು.

ಸೋವಿಯತ್ ರಷ್ಯ ಮತ್ತು ಪೂರ್ವ ಜರ್ಮನಿ ಸರ್ಕಾರಗಳ ಆಮಂತ್ರಣದ ಮೇರೆಗೆ ಆ ದೇಶಗಳಿಗೆ ಭೇಟಿ ನೀಡಿ ಅಭಿವೃದ್ಧಿ ಯೋಜನೆಗಳ ಬಗ್ಗೆ ನೇರಮಾಹಿತಿ ಹೊಂದಿದರಲ್ಲದೆ, ಸ್ವೀಡನ್, ಸ್ವಿಟ್ಸರ್‌ಲೆಂಡ್, ನಾರ್ವೆ, ಡೆನ್ಮಾರ್ಕ್, ಹಾಲೆಂಡ್, ಇಂಗ್ಲೆಂಡ್, ಬೆಲ್ಜಿಯಂ, ಫ್ರಾನ್ಸ್, ಇಟಲಿ ಮತ್ತು ಈಜಿಪ್ಟ್ ದೇಶಗಳಲ್ಲೂ ವ್ಯಾಪಕ ಪ್ರವಾಸ ಮಾಡಿದರು. ಸಂಸದೀಯ ಪ್ರತಿನಿಧಿಯಾಗಿ ಮಾರಿಷಸ್‌ನಲ್ಲಿ ನಡೆದ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮೆಕ್ಸಿಕೋದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ಸಂಸದೀಯ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದರು.

ರಾಜಕೀಯ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಇವರು ಭಾರತದಲ್ಲಿ ವಿಧಾನ ಸಭೆಯ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ ಮೊದಲಿಗರು. ಅಂತೆಯೇ ವಿರೋಧ ಪಕ್ಷದ ಸ್ಥಾನವನ್ನು ಮಹಿಳೆಯೊಬ್ಬರು ನಿರ್ವಹಿಸಿರುವುದೂ ಅಪರೂಪದ ಸಂಗತಿ. ಎಸ್. ಬಂಗಾರಪ್ಪನವರ ಮಂತ್ರಿಮಂಡಲದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಸಚಿವರಾಗಿ ಕಾರ್ಯನಿರ್ವಹಿಸಿದರು. ನಾಗರತ್ನಮ್ಮನವರು ಸದನದ ಹೊರಗೆ ಮತ್ತು ಒಳಗೆ ಮಾಡಿದ ಅನೇಕ ಭಾಷಣಗಳು ಅಧ್ಯಯನ ಯೋಗ್ಯವಾಗಿವೆ. ಕೈಗಾರಿಕೆಗಳ ಸ್ಥಾಪನೆ, ಆರೋಗ್ಯ, ಶಿಕ್ಷಣ ಮತ್ತು ಆರೋಗ್ಯ, ಗ್ರಾಮೀಣ ಸಮಸ್ಯೆಗಳು, ವ್ಯವಸಾಯ, ಕೈಗಾರಿಕೆ ಮತ್ತು ಸಾಮಾನ್ಯ ಆಡಳಿತ ಇತ್ಯಾದಿ ವಿಷಯಗಳ ಬಗ್ಗೆ ಮಂಡಿಸಿದ ಇವರ ವಿಚಾರಗಳು ಮನನೀಯ. ಇವರು 1993ರಲ್ಲಿ ನಿಧನಹೊಂದಿದರು. **(ಎಸ್.ಎನ್.ಜಿ.)**

**ನಾಗರತ್ನಮ್ಮ, ಬೆಂಗಳೂರು:** 1873– 1952. ಪ್ರಸಿದ್ಧ ಸಂಗೀತ ವಿದುಷಿ. ಮೈಸೂರು ಜಿಲ್ಲೆಯ ನಂಜನಗೂಡಿನವರು. ತಾಯಿ ಪುಟ್ಟ ಲಕ್ಷ್ಮಮ್ಮ. ವಿದ್ಯಾಭ್ಯಾಸಕ್ಕಾಗಿ ಬಾಲ್ಯದಲ್ಲಿಯೇ ಮೈಸೂರಿಗೆ ಬಂದ ಇವರು, ಸಂಗೀತ ಮತ್ತು ಸಾಹಿತ್ಯಗಳಲ್ಲಿ ಗಣ್ಯ ವಿದ್ವಾಂಸರೂ ಮೈಸೂರು ಅರಮನೆ ಶಾಕುಂತಲ ನಾಟಕ ಸಭೆಯ ಶಿಕ್ಷಕರೂ ಆಗಿದ್ದ ಗಿರಿಭಟ್ಟರ ತಮ್ಮಯ್ಯನವರಲ್ಲೂ ಬಿಡಾರಂ ಕೃಷ್ಣಪ್ಪ ಮತ್ತು ವೀಣೆಶೇಷಣ್ಣನವರಲ್ಲೂ ಕೆಲವು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿ, ಸಾಹಿತ್ಯ, ಸಂಗೀತ ಮತ್ತು ನೃತ್ಯಗಳಲ್ಲಿ ಶಿಕ್ಷಣ ಪಡೆದರು. ಅನಂತರ ಬೆಂಗಳೂರಿಗೆ ಹೋಗಿ ತಮ್ಮ ಸಹೋದರ ವೆಂಕಟಸ್ವಾಮಪ್ಪನವರಲ್ಲಿ ಮತ್ತು ಬೆಂಗಳೂರು ಕಿಟ್ಟಣ್ಣನವರಲ್ಲಿ ನೃತ್ಯ ಸಂಗೀತಗಳಲ್ಲಿನ ತಮ್ಮ ವ್ಯಾಸಂಗವನ್ನು ಮುಂದುವರಿಸಿದರು. ಅನಂತರ ಮದರಾಸಿಗೆ ಹೋಗಿ ತಿರುವೆಂಕಟಾಚಾರ್ಯರು ಮತ್ತು ರಾಮನಾಡ್ ಶ್ರೀನಿವಾಸ ಅಯ್ಯಂಗಾರರಲ್ಲಿ ವ್ಯಾಸಂಗಮಾಡಿ ಸಂಗೀತ ಮತ್ತು ನೃತ್ಯದಲ್ಲಿ ಪ್ರೌಢಿಮೆಯನ್ನು ಗಳಿಸಿದರು. ಅನಂತರ ಹಲವಾರು ಕಡೆ ಕಛೇರಿಗಳನ್ನು ನಡೆಸಿ ಹೆಸರು ಪಡೆದರು.

ನಾಗರತ್ನಮ್ಮನವರಿಗೆ ಸಂಗೀತ, ನಾಟ್ಯ, ಅಭಿನಯ ಶಾಸ್ತ್ರಗಳಲ್ಲಿ ಒಳ್ಳೆಯ ಪರಿಶ್ರಮವಿದ್ದುದರಿಂದ ಇವರ ಸಂಗೀತ ಭಾವಪೂರ್ಣವಾಗಿತ್ತು. ಇವರ ಸಂಗೀತದಲ್ಲಿ ಸ್ವರಕಲ್ಪನೆಗಿಂತ ರಾಗಾಲಾಪನೆ ಮುಖ್ಯ ಲಕ್ಷಣವಾಗಿತ್ತು. ಯದುಕುಲ ಕಾಂಭೋಜಿ ರಾಗವೆಂದರೆ ಇವರಿಗೆ ಬಹಳ ಪ್ರೀತಿ. ದೇವರ ನಾಮಗಳು, ಶ್ಲೋಕಗಳು ಮತ್ತು ರಾಗಮಾಲಿಕೆಗಳನ್ನು ಹಾಡುವುದರಲ್ಲಿಯೂ ಹೆಸರಾಗಿದ್ದರು. ಇವರು ತ್ಯಾಗರಾಜರ ಆರಾಧಕರು. ಅವರ ಕೃತಿಗಳನ್ನು ಹಾಡುವುದರಲ್ಲಿಯೂ ಹೆಸರಾಗಿದ್ದರು. ತಮ್ಮ ಜೀವನದ ಕೊನೆಯ ದಿನಗಳನ್ನು ತಿರುವಯ್ಯಾರಿನಲ್ಲಿ ಕಳೆಯಬೇಕೆಂದು ಸಂಕಲ್ಪಿಸಿದ ಇವರು ಮದರಾಸಿನಲ್ಲಿ ತಾವು ವಾಸಿಸುತ್ತಿದ್ದ ಮನೆಯನ್ನು ಮಾರಿ, ತಿರುವಯ್ಯಾರಿಗೆ ಹೋಗಿ ಅಲ್ಲಿನ ತ್ಯಾಗರಾಜರ ಸಮಾಧಿ ಬಳಿ ಸೀತಾರಾಮ ದೇವಾಲಯವೊಂದನ್ನು ಕಟ್ಟಿಸಿದರು. ಅಲ್ಲಿ ಕರ್ನಾಟಕ ಸಂಗೀತದ ಒಂದು ಪಾಠಶಾಲೆ ಮತ್ತು ಒಂದು ಮೈಸೂರು ಛತ್ರವನ್ನೂ ಕಟ್ಟಿಸಬೇಕೆಂದು ಸಂಕಲ್ಪಿಸಿದ ಇವರು ಇದಕ್ಕಾಗಿ ಕನ್ನಡ ನಾಡಿನಲ್ಲಿ ಸಂಚರಿಸಿ ಹಣ ಸಂಗ್ರಹ ಮಾಡಿದರು. ಈ ಕಟ್ಟಡಗಳ ಕೆಲಸವು ಮುಗಿಯುವ ಮುನ್ನವೇ ತಿರುವಯ್ಯಾರಿನಲ್ಲಿ ನಿಧನರಾದರು. ಇವರಿಗೆ ಆಗಿನ ಮೈಸೂರು ಮಹಾರಾಜರಿಂದ ಪ್ರೋತ್ಸಾಹ ಮತ್ತು ಆಶ್ರಯಗಳು ಲಭಿಸಿದ್ದವು. ತ್ಯಾಗ ಸೇವಾಸಕ್ತೆ, ವಿದ್ಯಾಸುಂದರಿ, ಗಾನಕಲಾವಿಶಾರದಾ ಎಂಬ ಬಿರುದುಗಳು ಇವರಿಗೆ ಬಂದಿದ್ದವು.

**(ವಿ.ಎಸ್.ಎಸ್.)**

**ನಾಗರಸ:** ಸು. 1650. ಬ್ರಾಹ್ಮಣ ಕವಿ. ಕರ್ನಾಟಕ ಭಗವದ್ಗೀತೆ ಎಂಬ ಗ್ರಂಥದ ಕರ್ತೃ. ಇವನ ತಂದೆ ವಿಶ್ವೇಶ್ವರ, ಗುರು ಶಂಕರಗುರು, ಇಷ್ಟ ದೈವ ಪಂಡರಾಪುರದ ವಿಟ್ಠಲ. ಕವಿ ಬಹುಶಃ ಈ ಪಂಡಾರಾಪುರದ ಸಮೀಪದ ಪ್ರಾಂತ್ಯದಲ್ಲಿದ್ದವನಾಗಿರಬಹುದು.

ಭಗವದ್ಗೀತೆ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 19 ಅಧ್ಯಾಯಗಳೂ 737 ಪದ್ಯಗಳೂ ಇವೆ. ಒಂದೊಂದು ಸಂಸ್ಕೃತ ಶ್ಲೋಕವನ್ನು ಒಂದೊಂದು ಭಾಮಿನೀ ಷಟ್ಪದಿಯಾಗಿ ಕನ್ನಡಿಸಿದ್ದಾನೆ. ವಾಸುದೇವ ಕಥಾಮೃತ ಎಂದು ಕವಿಯೇ ಕರೆದಿರುವ ಈ ಕೃತಿ ಕನ್ನಡದ ತಾತ್ವಿಕ ಗ್ರಂಥಗಳ ಸರಳವೂ ಸುಂದರವೂ ಆದ ಅನುವಾದಕ್ಕೆ ಒಂದು ಉದಾಹರಣೆಯಂತಿದೆ. ಮೂಲದ ಆಶಯವನ್ನೆಲ್ಲ ಕನ್ನಡ ಜನತೆಯ ಹೃದಯಕ್ಕೆ ಮುಟ್ಟಿಸಿ ಅವರನ್ನು ಉದ್ಧಾರದ ಕಡೆಗೆ ಕೊಂಡೊಯ್ಯುವ ಸಾಹಸದಲ್ಲಿ ತೊಡಗಿರುವುದು ಕಂಡುಬರುತ್ತದೆ. ಕೃತಿಯ ಭಾಷೆ, ಪದ್ಯ ರಚನಾ ರೀತಿ, ಅಲಂಕಾರಗಳ ಪ್ರಯೋಗ ಈ ಎಲ್ಲ ಕಡೆಯೂ ಕವಿ ಸಾಮಾನ್ಯ ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಸರಳವಾಗಿ ರಚಿಸಿರುವುದು ಗಮನಾರ್ಹವಾಗಿದೆ. ಸಹಜವಾಗಿಯೇ ಭಕ್ತಿ ಈ ಕೃತಿಯ ಮೂಲ ಸ್ರೋತವಾಗಿದೆ. ಕುಮಾರವ್ಯಾಸನ ಅನಂತರ ಹರಿಭಕ್ತಿ ಪರಂಪರೆಯನ್ನು ಮುಂದುವರಿಸಿದ ಕವಿಗಳಲ್ಲಿ ಇವನಿಗೆ ಪ್ರಮುಖ ಸ್ಥಾನ ಸಲ್ಲುತ್ತದೆ. **(ಎಸ್.ಬಿ.ಎಲ್.)**

**ನಾಗರಹೊಳೆ:** ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನಲ್ಲಿ ವಿರಾಜಪೇಟೆಯ ಆಗ್ನೇಯಕ್ಕೆ 61 ಕಿಮೀ ದೂರದಲ್ಲಿರುವ ಒಂದು ಪ್ರಸಿದ್ಧ ಅಭಯಾರಣ್ಯ. ವಿರಾಜಪೇಟೆ ತಾಲ್ಲೂಕಿನ ಆಗ್ನೇಯದಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು ಮೈಸೂರು ಜಿಲ್ಲೆಯಲ್ಲಿ ಕಪಿಲಾ ನದಿಯನ್ನು

ಅರಣ್ಯದಲ್ಲಿ ಆನೆಗಳ ಹಿಂಡು

ಸೇರುವ ನಾಗರಹೊಳೆಯ ಆಸುಪಾಸಿನ ಪ್ರದೇಶವೇ ನಾಗರಹೊಳೆ ಅಭಯಾರಣ್ಯಪ್ರದೇಶ. ದಕ್ಷಿಣ ಕೊಡಗಿನ ಮೇರೆಯಲ್ಲಿ ಹೆಗ್ಗಡದೇವನ ಕೋಟೆ ತಾಲ್ಲೂಕಿಗೆ ಸಮೀಪದಲ್ಲಿರುವ ಈ ಪ್ರದೇಶ 288 ಚ.ಕಿಮೀ ವಿಸ್ತೀರ್ಣವಿದ್ದು ಸಮುದ್ರ ಮಟ್ಟದಿಂದ 2,500 ಎತ್ತರದಲ್ಲಿದೆ. ಇದು ಕಲ್ಲಹಳ್ಳ, ನಾಗರಹೊಳೆ ಮತ್ತು ತಿತಿಮತಿ ಅರಣ್ಯಪ್ರದೇಶಗಳನ್ನು ಒಳಗೊಂಡಿದೆ. ಸದಾ ಹಸುರುಹಚ್ಚಿಗಳಿರುವುದರಿಂದ ಪ್ರಾಣಿಗಳಿಗೆ ಎಲ್ಲಾ ಕಾಲದಲ್ಲೂ ಇಲ್ಲಿ ಆಹಾರ ದೊರಕುತ್ತದೆ. ಸುಲಭವಾಗಿ ನೀರು

ಸಿಗುವ ಸ್ಥಳಗಳು ಇಲ್ಲಿ ಅನೇಕವಿದ್ದು, ಪ್ರಾಣಿಗಳಿಗೆ ಅತಿ ಪ್ರಿಯವಾದ ಉಪ್ಪುನೆಕ್ಕುವ (ಚೌಳುಮಣ್ಣು) ಸ್ಥಳಗಳು ಸುಮಾರು ಮೂವತ್ತು ಇವೆ. ಹಿಂಡುಹಿಂಡಾಗಿ ನಿರಾತಂಕವಾಗಿ ತಿರುಗುವ ಜಿಂಕೆಗಳು, ಕಡವೆ, ಸಾರಂಗ ಮತ್ತು ಕಾಡುಕೋಣಗಳು, ನಿಂತಲ್ಲಿ ನಿಲ್ಲದೆ ಅಲೆದಾಡುವ ನರಿ, ಕೆನ್ನಾಯಿ, ಕಾಡುಹಂದಿಗಳು, ಯಾವುದೇ ಆತಂಕವಿಲ್ಲದೆ ಮಂದಗತಿಯಲ್ಲಿ ತಿರುಗುವ ಆನೆಯ ಹಿಂಡು, ಹುಲಿ, ಕರಡಿ, ಜಿಂಕೆಗಳನ್ನು ಇಲ್ಲಿ ಕಾಣಬಹುದು.

ಇವುಗಳನ್ನೆಲ್ಲ ಹತ್ತಿರದಿಂದ ನೋಡಲು ಕಾಡಿನೊಳಗೆ ಎತ್ತರವಾದ ವೀಕ್ಷಣಾಲಯಗಳನ್ನು ಕಟ್ಟಿದ್ದಾರೆ. ಅಭಯಾರಣ್ಯವನ್ನು ಸುತ್ತಲು ವಾಹನ ಸೌಕರ್ಯ ಇದೆ. ಅಲ್ಲದೆ ಆನೆಗಳ ಮೇಲೂ ಪ್ರವಾಸಿಗರನ್ನು ಅಭಯಾರಣ್ಯ ದೊಳಕ್ಕೆ ಒಯ್ದು, ಪ್ರಾಣಿಗಳ ಹಿಂಡುಗಳನ್ನು ವೀಕ್ಷಿಸಲು ಅನುಕೂಲ ಒದಗಿಸಿದ್ದಾರೆ. ಒಂದಲ್ಲ ಒಂದು ಸ್ಥಳದಲ್ಲಿ ಅತಿ ಹತ್ತಿರದಿಂದ ಪ್ರಾಣಿಗಳನ್ನು ವೀಕ್ಷಿಸಲು ಈ ಸೌಕರ್ಯ ಸಹಾಯಕವಿದ್ದು ಪ್ರವಾಸಿಗರನ್ನು ಈ ಕೇಂದ್ರ ಆಕರ್ಷಿಸುತ್ತದೆ. ಇಲ್ಲಿ ಪ್ರವಾಸಿಗರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಲಾಗಿದೆ. ವಿದ್ಯುಚ್ಛಕ್ತಿ, ನೀರು, ಸುಸಜ್ಜಿತ ಪ್ರವಾಸಿಮಂದಿರ ಹಾಗೂ ಪ್ರಾಣಿಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನುಳ್ಳ ಗ್ರಂಥಾಲಯ ಇವೆ. ಅರಣ್ಯ ಪ್ರದೇಶವನ್ನು ವೀಕ್ಷಿಸಲು ಇಲ್ಲಿ ಪ್ರವಾಸಿಗಳಿಗೆ ಸಹಾಯ ಮಾಡಲು ನಿಯೋಜಿತರಾದ ಅರಣ್ಯ ಇಲಾಖೆಯ ಅಧಿಕಾರಿಗಳಿದ್ದಾರೆ.

ಈ ಪ್ರದೇಶದಲ್ಲಿ ಬೇಟೆಯಾಡುವಂತಿಲ್ಲ. ನಾಗರಹೊಳೆ ಇಂದು ಭಾರತದಲ್ಲೇ ಅತ್ಯಂತ ರಮಣೀಯ ಹಾಗೂ ಆಕರ್ಷಕ ಪ್ರಾಣಿಸಂರಕ್ಷಣಾ ಕೇಂದ್ರವೆಂದು ಹೆಸರು ಪಡೆದಿದೆ. **(ಬಿ.ಡಿ.ಎಸ್.)**

**ನಾಗರಾಜ:** 14ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಜೈನಕವಿ. ಪುಣ್ಯಾಸ್ರವ ಎಂಬ ಚಂಪೂಕಾವ್ಯದ ಕರ್ತೃ. ಸೇಚೆಂಬಪುರದ ಜಿನಶಾಸನ ದೀಪಕನಾದ ವಿವೇಕ ವಿಟ್ಠಲದೇವ ಇವನ ತಂದೆ, ತಾಯಿ ಭಾಗೀರಥಿ, ಸಹೋದರ ತಿಪ್ಪರಸ, ಗುರು ಅನಂತವೀರ್ಯ. ಕವಿಮುಖಮುಕುರ, ಸರಸ್ವತೀಮುಖತಿಲಕ, ಭಾರತೀಭಾಳನೇತ್ರ ಎಂಬುವು ಇವನ ಬಿರುದುಗಳು. ಪೂರ್ವಕವಿಗಳಲ್ಲಿ ಗಜಾಂಕುಶ, ಪಂಪ, ಪೊನ್ನ, ಜನ್ನ, ಬಂಧುವರ್ಮ, ಗುಣವರ್ಮ, ನಾಗಚಂದ್ರ ಇವರನ್ನು ಸ್ತುತಿಸಿದ್ದಾನೆ.

ಪುಣ್ಯಾಸ್ರವವನ್ನು 12 ಅಧಿಕಾರಗಳಾಗಿ ವಿಭಾಗಿಸಲಾಗಿದೆ. ಈ ಕೃತಿಯನ್ನು ತನ್ನ ಗುರುವಿನ ಅಪ್ಪಣೆಯಂತೆ ಸಗರದ ನಗರದವರಿಗಾಗಿ 1331ರಲ್ಲಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಇದು ಸಂಸ್ಕೃತದಿಂದ ಕನ್ನಡಿಸಲಾದ ಗ್ರಂಥ. ಇದರಲ್ಲಿ ಒಟ್ಟು 52 ಕಥೆಗಳಿವೆ. ಈ ಕಥೆಗಳಲ್ಲಿ ಜೈನ ಗೃಹಸ್ಥಧರ್ಮವನ್ನು ವಿವರಿಸಿ, ಒಂದೊಂದು ಗುಣದಲ್ಲಿ ಪ್ರಸಿದ್ಧಿ ಪಡೆದ ಪುರಾಣಪುರುಷರ ಕಥೆಗಳನ್ನು ಹೇಳಿದೆ. ಈ ಕಥೆಗಳು ಜೈನ ಧರ್ಮದ ಶ್ರೇಷ್ಠತೆಯನ್ನು ಸಂಸ್ಥಾಪಿಸುತ್ತವೆ. ಈತನದು ಸರಳವಾದ ಲಲಿತವಾದ ದೇಶೀಶೈಲಿ; ಕಥಾನಿರೂಪಣೆಯಲ್ಲಿ ಕೌಶಲವಿದೆ; ವರ್ಣನೆಗಳಲ್ಲಿ ನೈಜತೆ ಕಂಡುಬರುತ್ತದೆ. ನಾಗೇಂದ್ರನ ನಿಜಕವಿತೆಯ ಕನ್ನಡದ ನುಡಿಯ ಬೆಡಗಿನ ಗಡಣಂ ಸಕ್ಕರೆಯ ಸಿರಿಯಂತೆ ಎಂದು ಕವಿ ತನ್ನ ಕವಿತಾ ಚಾತುರ್ಯವನ್ನು ವಿಶ್ಲೇಷಿಸಿಕೊಂಡಿದ್ದಾನೆ. ಈ ಕಾವ್ಯವನ್ನು ಆರ್ಯಸೇನ ಎಂಬುವನು ತಿದ್ದಿ ಅಂದಗೊಳಿಸಿದಂತೆ ತಿಳಿಯುತ್ತದೆ. ಪಂಪಮಹಾಕವಿಯನ್ನು ಕುರಿತು 'ಪಸರಿಪಕನ್ನಡಕ್ಕೊಡೆಯನೊರ್ವನೆ ಸತ್ಕವಿಪಂಪನಾವಗಂ' ಎಂದು ನಾಗರಾಜ ಹೇಳಿದ ಮಾತು ಕನ್ನಡ ಸಾಹಿತ್ಯದಲ್ಲಿ ಸಾರ್ವಕಾಲಿಕ ಸತ್ಯವಾಗಿ ಇಂದಿಗೂ ಉಳಿದುಬಂದಿದೆ. **(ಪಿ.ವಿ.ಸಿ.)**

**ನಾಗರಾಜ,ಡಿ.ಆರ್.:** 1954–98. ಹೆಸರಾಂತ ವಿಮರ್ಶಕ ಹಾಗೂ ಚಿಂತಕರು. ಕನ್ನಡದ ವಿಮರ್ಶೆಗೆ ಸಾಂಸ್ಕೃತಿಕ ಆಯಾಮವನ್ನು ಒದಗಿಸಿದವರು.

ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಅನಂತರ ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ, ಅಮೆರಿಕದ ಶಿಕಾಗೊ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಹಾಗೂ ಅಕ್ಷರ ಪ್ರಕಾಶನದ ಅಕ್ಷರ ಚಿಂತನ ಮಾಲೆಯ ಸಂಪಾದಕರಾಗಿ ದುಡಿದವರು.

ಅಮೃತ ಮತ್ತು ಗರುಡ ಇವರ ಮೊದಲ ವಿಮರ್ಶಾಕೃತಿ (1983). ಇದರಲ್ಲಿ ಕುವೆಂಪು, ಶಿವರಾಮ ಕಾರಂತ, ಮಾಸ್ತಿ ಮೊದಲಾದ ಲೇಖಕರ ಕುರಿತಾದ ಮತ್ತು ರಂಗಭೂಮಿ, ಕಾವ್ಯ, ಪ್ರಾಯೋಗಿಕ ವಿಮರ್ಶೆಗೆ ಸಂಬಂಧಿಸಿದ 16 ಪ್ರೌಢ ಲೇಖನಗಳಿವೆ. ಆಧುನಿಕ ಕನ್ನಡ ಕಾವ್ಯದ



ನಾಲ್ಕು ಪ್ರಮುಖ ವಸ್ತುಗಳಾದ ಭೂಮಿ, ಕಾಲ, ಕಾಮ ಮತ್ತು ಸಮಾಜಗಳನ್ನು ಮುಂದಿಟ್ಟುಕೊಂಡು ಕನ್ನಡದ ಮುಖ್ಯ ಕವಿಗಳ ಕಾವ್ಯದ ಅಧ್ಯಯನ ವನ್ನೊಳಗೊಂಡಿರುವ ಕೃತಿ 'ಶಕ್ತಿ ಶಾರದೆಯ ಮೇಳ' (1987). ಇದು ಇವರ ಪಿಎಚ್.ಡಿ. ಮಹಾಪ್ರಬಂಧದ ಪರಿಷ್ಕೃತ ರೂಪ. ಜ್ಞಾನದ ಪೂರ್ವನಿಶ್ಚಿತ ಕಲ್ಪನೆಗಳನ್ನು ಮೀರಿನಿಲ್ಲುವ ರಾಜಕೀಯ, ಸಾಹಿತ್ಯಕ, ಸಾಮಾಜಿಕ ವಾಚಿಕೆಗಳನ್ನು ಹೆಣೆದುಕೊಂಡು ಸಾಮಾಜಿಕ ಕಥನವಾಗಿರುವ ಕೃತಿ 'ಸಾಹಿತ್ಯ ಕಥನ' (1996). ಅಲ್ಲಮನನ್ನು ನಮ್ಮ ಕಾಲದ ದೃಷ್ಟಿಯಿಂದಲೂ ಸಾಹಿತ್ಯದ ದೃಷ್ಟಿಯಿಂದಲೂ ನೋಡುವ ಆಚಾರ್ಯ ಕೃತಿ 'ಅಲ್ಲಮ ಮತ್ತು ಶೈವ ಪ್ರತಿಭೆ' (1999). ವಿಮರ್ಶೆಯ ಹೊಸ ನೆಲೆಗಳನ್ನು ತೆರೆದಿಟ್ಟ ಕೃತಿ 'ಸಂಸ್ಕೃತಿ ಕಥನ' (2001).

ಪಾಶ್ಚಾತ್ಯ ಸಾಹಿತ್ಯ ಮಾರ್ಗದರ್ಶಿ ಸಂಪುಟ 1– ಗ್ರೀಕ್ ಸಾಹಿತ್ಯ (1981), ವಸಂತ ಸ್ಮೃತಿ (ಪರ್ಷಿಯನ್ ಸೂಫಿ ಕವಿ ರೂಮಿಯ ಕಾವ್ಯಾನುವಾದ, 1992), ಉರ್ದು ಸಾಹಿತ್ಯ ಸಂಕಲನ 1990, ದಿ ಫೇಮಿಂಗ್ ಫ್ಲೀಟ್ (ದಲಿತ ಚಳವಳಿ ಕುರಿತ ಪುಸ್ತಕ 1993) ಇವು ಇತರ ಪ್ರಕಟಿತ ಕೃತಿಗಳು. ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಹಲವು ವಿಚಾರ ಸಂಕಿರಣಗಳಲ್ಲಿ ಇವರು ತಮ್ಮ ಪ್ರೌಢ ಚಿಂತನೆಗಳನ್ನು ಪ್ರಕಟಿಸಿದ್ದಾರೆ. ನಿರ್ಲಕ್ಷಿತ ಸಾಂಸ್ಕೃತಿಕ ವಾಚಿಕೆಗಳ ಪುನರ್ ವ್ಯಾಖ್ಯಾನದ ಕಾಳಜಿ ಹೊಂದಿದ್ದ ಇವರು ಸಮಸ್ತ ಜ್ಞಾನವೂ ಒಂದು ಬಗೆಯ ಕಥನವೇ ಮತ್ತು ಎಲ್ಲಾ ಜ್ಞಾನಗಳನ್ನು ಸಾಹಿತ್ಯಮೀಮಾಂಸೆಯ ಮೂಲಕ ಪ್ರವೇಶಿಸಲು ಸಾಧ್ಯ ಎಂಬ ನಿಲುವುಳ್ಳವರಾಗಿದ್ದರು. ವಿಮರ್ಶೆಯ ಸಂದರ್ಭದಲ್ಲಿ ವಸ್ತುನಿಷ್ಠ ದೃಷ್ಟಿ ಕೋನ ಮತ್ತು ತಟಸ್ಥ ಮನೋಭಾವ ಹೊಂದಿದ್ದ ಇವರು ವ್ಯಕ್ತಿ ವಿಶಿಷ್ಟ ಲೋಕಜ್ಞಾನ, ಮಾರ್ಕ್ಸ್‌ವಾದೀ ಚಿಂತನೆ, ಫ್ರಾಯ್ಡ್ ಚಿಂತನೆ ಮತ್ತು ಭಾರತೀಯ ಚಿಂತನೆಗಳಿಂದ ಪಡೆದ ಜ್ಞಾನವನ್ನು ತಮ್ಮ ಬರೆವಣಿಗೆಯಲ್ಲಿ ಧಾರೆ ಎರೆದಿದ್ದಾರೆ. ಕನ್ನಡದ ಮೂಲಕವೇ ಸಮಸ್ತ ವಿಶ್ವವನ್ನು ಕಂಡುಕೊಳ್ಳುವ ಮಹತ್ವಾಕಾಂಕ್ಷೆಯ ಅಕ್ಷರ ಚಿಂತನ ಮಾಲೆಯ ಸಂಪಾದಕರಾಗಿ ಸತ್ಯದ ನವದರ್ಶನ, ಆಶೀಶ್ ನಂದಿ ವಿಚಾರಗಳು, ವಾಕ್ಯಪದೀಯ, ದಾರಾಶಿಖೊ, ದಾವ್‌ದಜಂಗ್, ಅಭಿನವಗುಪ್ತ, ಭಾರತೀಯ ಸ್ತ್ರೀವಾದ, ಆನಂದಕುಮಾರಸ್ವಾಮಿ, ಪ್ರತಿಭೆಯ ಒಂದು ಪ್ರವಾಹ ಮೊದಲಾದ ಅನೇಕ ಅಮೂಲ್ಯ ಪುಸ್ತಿಕೆಗಳನ್ನು ಹೊರತಂದಿದ್ದಾರೆ.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರಕಿದ್ದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ ಇವು ಮುಖ್ಯವಾದವು. (ಡಿ.ಕೆಯು)

**ನಾಗಲಾಪುರ:** ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ದಕ್ಷಿಣದಲ್ಲಿ ಮಾಯಸಂದ್ರದಿಂದ ಸು. 8 ಕಿಮೀ ದೂರದಲ್ಲಿರುವ ಒಂದು ಚಿಕ್ಕ ಹಳ್ಳಿ. ಜನಸಂಖ್ಯೆ 1,084. ಹೊಯ್ಸಳರ ಕಾಲದ ಅಗ್ರಹಾರ. ಇತರ ಹೊಯ್ಸಳ ಅಗ್ರಹಾರಗಳಲ್ಲಿರುವಂತೆ ಇಲ್ಲಿಯೂ ಊರ ನಡುವೆ ಒಂದು ವಿಷ್ಣುದೇವಾಲಯ, ಈಶಾನ್ಯಕ್ಕೆ ಒಂದು ಶಿವದೇವಾಲಯ, ಅದರ ಮುಂದೆ ಒಂದು ಕೆರೆ ಇವೆ. ಅಗ್ರಹಾರದ ನಿರ್ಮಾಣದ ಕಾಲ ದೇವಾಲಯಗಳನ್ನು ಕಟ್ಟಿಸಿದವರ ಹೆಸರು ತಿಳಿದಿಲ್ಲ. ದೇವಾಲಯಗಳ ನಿರ್ಮಾಣದ ರೀತಿ ಮತ್ತು ಅಲ್ಲಿನ ಕೆಲವು ಮೂರ್ತಿಗಳನ್ನು ಕಂಡರಿಸಿರುವ ಶಿಲ್ಪಿಯ ಹೆಸರಿನಿಂದ ಅಗ್ರಹಾರ ಮತ್ತು ದೇವಾಲಯಗಳ ನಿರ್ಮಾಣದ ಕಾಲವನ್ನು ಹದಿಮೂರನೆಯ ಶತಮಾನವೆಂದು ಗುರುತಿಸಬಹುದು.



ಚನ್ನಕೇಶವ ದೇವಾಲಯ

ಇಲ್ಲಿನ ಚನ್ನಕೇಶವ ಮತ್ತು ಕೇದಾರೇಶ್ವರ ದೇವಾಲಯಗಳು ಸಂಪೂರ್ಣವಾಗಿ ವಿಕಾಸಗೊಂಡ ಹೊಯ್ಸಳ ಶೈಲಿಯಲ್ಲಿ ನಿರ್ಮಿತವಾದ ಅಲಂಕರಣ ಪೂರ್ಣವಾದ ಕಿರುದೇವಾಲಯಗಳು, ಈಗ ಇವು ಬಹುಮಟ್ಟಿಗೆ ಶಿಥಿಲವಾಗಿವೆ. ಒಂದೇ ವಿನ್ಯಾಸವನ್ನುಳ್ಳ ಈ ದೇವಾಲಯಗಳಲ್ಲಿ ಗರ್ಭಗೃಹ, ಸುಕನಾಸಿ ನವರಂಗಗಳಿದ್ದು ಬಹುಶಃ ಮೊದಲು ಇದ್ದಿರಬಹುದಾದ ಮುಖಭದ್ರ ಈಗ ಇಲ್ಲವಾಗಿದೆ. ಪೂರ್ವ ಮುಖವಾಗಿರುವ ಈ ದೇವಾಲಯಗಳಲ್ಲಿ ಶಿವ ದೇವಾಲಯದ ಪ್ರವೇಶದ್ವಾರ ಮಾತ್ರ ದಕ್ಷಿಣಕ್ಕಿದೆ.

ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ದೇವಾಲಯಗಳು ಜಗತಿಯ ಮೇಲೆ ನಿರ್ಮಿತವಾಗಿದ್ದು ಹೊರಗೋಡೆಗಳ ಬುಡದಲ್ಲಿ ಆನೆ, ಕುದುರೆ, ಬಳ್ಳಿ ಸುರುಳಿ, ಮಕರ, ಹಂಸಗಳ ಸಾಲುಗಳನ್ನು ಕಡೆದಿರುವ ಪಟ್ಟಿಕೆಗಳಿವೆ. ಪೌರಾಣಿಕ ಕಥೆಗಳನ್ನು ಕಂಡರಿಸಿರಬೇಕಾಗಿದ್ದ ನಡುವಣ ಪಟ್ಟಿಕೆಯ ಮೇಲೆ ಯಾವ ಕಂಡರಣೆಯೂ ಇಲ್ಲ. ಗೋಡೆಗಳ ಮೇಲೆ ನುಗ್ಗೇಹಳ್ಳಿ, ಅರಳಗುಪ್ಪೆ, ಹೊಸಹೊಳಲು, ಬಸರಾಳು ಮೊದಲಾದ ಕಡೆ ಇರುವ ದೇವಾಲಯಗಳ ಗೋಡೆಗಳ ಮೇಲಿನ ಮೂರ್ತಿಗಳನ್ನು ನೆನಪಿಗೆ ತರುವ ಲತಾ ವಿತಾನಗಳ ಕೆಳಗೆ ಸುಂದರವಾಗಿ ಬಿಡಿಸಿರುವ ಮೂರ್ತಿಗಳ ಸಾಲುಗಳನ್ನು ನೋಡಬಹುದು. ಆದರೆ ಇಲ್ಲಿನ ಚನ್ನಕೇಶವ ದೇವಾಲಯದ ಹೊರಗೋಡೆಗಳ ಕೆಲವು ಮೂರ್ತಿಗಳನ್ನು ಪೂರ್ಣವಾಗಿ ಕಂಡರಿಸಿಲ್ಲ. ಕೆಲವಂತೂ ಇನ್ನೂ ಕಂಡರಣೆಯ ಆರಂಭ ಹಂತದಲ್ಲಿಯೇ ಇವೆ. ಕೇಶವ ದೇವಾಲಯದ ಗೋಡೆಗಳ ಮೂರ್ತಿಗಳಲ್ಲಿ ಪರವಾಸುದೇವ, ನರಸಿಂಹ, ವರಾಹ, ಲಕ್ಷ್ಮೀನಾರಾಯಣ, ಹಯಗ್ರೀವ, ಯೋಗನಾರಾಯಣ ಮೊದಲಾದ ವಿಷ್ಣುವಿನ ಹಲವು ರೂಪಗಳೂ ಬ್ರಹ್ಮ, ದಕ್ಷಿಣಾಮೂರ್ತಿ, ಇಂದ್ರ ಮತ್ತು ಶಚಿ, ಲಕ್ಷ್ಮಿ, ದುರ್ಗಾ, ಸರಸ್ವತಿ, ಮೋಹಿನಿ, ಮಹಿಷಾಸುರಮರ್ದಿನಿ ಮೊದಲಾದವೂ ಇವೆ. ಕೇದಾರೇಶ್ವರ ದೇವಾಲಯದ ಗೋಡೆಯ ಮೇಲೆ ಗಜಾಸುರಮರ್ದನ, ತಾಂಡವೇಶ್ವರ, ದಕ್ಷಿಣಾಮೂರ್ತಿ, ಉಮಾಮಹೇಶ್ವರ, ವೃಷಭಾರೂಢ ಮೊದಲಾದ ಶಿವನ ರೂಪಗಳೂ ಬ್ರಹ್ಮ, ವಿಷ್ಣು, ಭೈರವ, ಅರ್ಜುನ, ಮನ್ಮಥ, ದುರ್ಗಾ, ಸರಸ್ವತಿ, ಮೋಹಿನಿ ಮೊದಲಾದ ಇತರ ಮೂರ್ತಿಗಳೂ ಇವೆ. ಈಶ್ವರ ದೇವಾಲಯದ ಕೆಲವು ಮೂರ್ತಿಗಳನ್ನು ಕಡೆದವನು ಸಿಗೋಜನ ಮಗ ಬೈಚೋಜ, ಬಹುಶಃ 1246ರಲ್ಲಿ ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದ ಹಲವು ಮೂರ್ತಿಗಳನ್ನು ಕಂಡರಿಸಿದ ನಂದಿಯ ಬೈಚೋಜನೇ ಈತನಾಗಿರಬೇಕು.

ಮೂರ್ತಿಗಳ ಸಾಲಿನ ಮೇಲುಭಾಗದಲ್ಲಿರುವ ಲೋವೆಯ ಮುಂಭಾಗದಲ್ಲಿ ತೋರಣದಂತೆ ಒಂದು ಸಾಲು ಕಮಲದ ಮೊಗ್ಗುಗಳನ್ನು ಇಳಿಬಿಟ್ಟಿದೆ. ಲೋವೆಯಿಂದ ಮೇಲೆ ಗೋಡೆಯ ಮೇಲ್ಭಾಗದಲ್ಲಿ ಜೋಡಿ ಅಥವಾ ಒಂಟಿ ಅರೆಗಂಬಗಳ ಮೇಲೆ ವಿವಿಧಾಕೃತಿಗಳ ಅರೆಗೋಪುರಗಳಿವೆ. ಗೋಪುರಗಳ ಬಹುಭಾಗ ಈಗ ಬಿದ್ದು ಹೋಗಿದೆ.

ಎರಡು ದೇವಾಲಯಗಳ ಒಳಗಣ ಅಲಂಕರಣಗಳೂ ಒಂದೇ ರೀತಿಯಲ್ಲಿದ್ದರೂ ಕೇದಾರೇಶ್ವರ ದೇವಾಲಯದ ಅಲಂಕರಣ ಹೆಚ್ಚು ಆಕರ್ಷಕವಾದುದು. ತಿರುಗಣೆಯಲ್ಲಿ ಕಡೆದ ನವರಂಗದ ಕಂಬಗಳು, ಮಣಿಹಾರಗಳು, ಕೀರ್ತಿಮುಖಗಳು, ಬೋದಿಗೆಯ ಸುತ್ತಲಿನ ಮಣಿತೋರಣಗಳಿಂದ ತುಂಬಿ ಲಾವಣ್ಯಮಯವಾಗಿವೆ. ಆಳವಾದ ಭುವನೇಶ್ವರಿಗಳಿರುವ ನವರಂಗಗಳ ಒಳಚಾವಣಿಯ ಅಂಕಣಗಳು ಬಗೆ ಬಗೆಯ ಕುಸುರಿಕೆಲಸಗಳಿಂದ ತುಂಬಿವೆ. ಅದರಲ್ಲಿಯೂ ಕೇದಾರೇಶ್ವರ ದೇವಾಲಯದ ನವರಂಗದ ನಡುವಣ ದೊಡ್ಡ ಅಂಕಣದ ಆಳವಾದ ಭುವನೇಶ್ವರಿಯು ನಡುವಣ ನೀಳವಾದ ಬಾಳೆಯ ಮೊತೆ, ಸುತ್ತಣ ಬಗೆಬಗೆಯ ಶಿಲ್ಪಗಳಿಂದ ಕೂಡಿ ಅತ್ಯಂತ ಮನೋಜ್ಞವಾಗಿದೆ. ಈ ದೇವಾಲಯಗಳು ಹೊಯ್ಸಳ ಶೈಲಿಯ ಕೊನೆಯ ಹಂತದ ಅಲಂಕಾರಮಯವಾದ ದೇವಾಲಯಗಳಲ್ಲಿ ಮೊದಲ ದರ್ಜೆಗೆ ಸೇರಿದುವೆನ್ನಬಹುದು. (ಎಂ.ಎಚ್.)

**ನಾಗವರ್ಮ I:** ಸು. 990. ಛಂದೋಂಬುಧಿ, ಕರ್ನಾಟಕ ಕಾದಂಬರಿ ಎಂಬ ಗ್ರಂಥಗಳ ಕರ್ತೃ. ಈ ಎರಡು ಕೃತಿಗಳನ್ನೂ ಒಬ್ಬನೇ ನಾಗವರ್ಮ ರಚಿಸಿದನೇ ಅಥವಾ ಬೇರೆ ಬೇರೆ ನಾಗವರ್ಮರು ರಚಿಸಿದರೇ ಎಂಬುದು ಸಾಕಷ್ಟು ಚರ್ಚೆಗೀಡಾಗಿದೆ. ಇವೆರಡೂ ಏಕಕರ್ತೃಕವೆಂದು ಸದ್ಯಕ್ಕೆ ಭಾವಿಸಬೇಕಾಗಿದೆ. ಕವಿಯ ಬಗ್ಗೆ ಛಂದೋಂಬುಧಿಯಿಂದ ತಿಳಿದುಬರುವ ಸಂಗತಿಗಳಿಗೂ ಕರ್ನಾಟಕ ಕಾದಂಬರಿಯಿಂದ ತಿಳಿದುಬರುವ ಸಂಗತಿಗಳಿಗೂ ಸಂಪೂರ್ಣ ಹೊಂದಾಣಿಕೆಯಿಲ್ಲ. ಚಂದ್ರನೆಂಬ ರಾಜ ಕವಿಗೆ ಆಶ್ರಯದಾತನಾಗಿದ್ದನೆಂಬುದೂ ಭೋಜರಾಜನು ಕವಿಗೆ ಕೆಲವು ಜಾತ್ಯಶ್ವಗಳನ್ನು ಕೊಟ್ಟನೆಂಬುದೂ ಕಾದಂಬರಿಯಿಂದ ತಿಳಿದುಬರುವ ಅಂಶಗಳು. ಕವಿ ಸೈಯ್ಯಾಡಿಯವನೆಂಬುದು, ಇವನ ಪೂರ್ವಿಕರು ವೆಂಗಿಯ ವೈದಿಕ ಬ್ರಾಹ್ಮಣರೆಂಬುದು, ಇವನು ಯುದ್ಧವೀರನಾಗಿದ್ದನೆಂಬುದು ಛಂದೋಬುಧಿಯಿಂದ ತಿಳಿದು ಬರುವ ಅಂಶಗಳು. (ಸಿ.ಪಿ.ಕೆ.)

ಛಂದೋಂಬುಧಿ ದೊರೆತಿರುವ ಕನ್ನಡ ಛಂದೋಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವೂ ಪ್ರಸಿದ್ಧವೂ ಪ್ರಾಮಾಣಿಕವೂ ಆದ ಗ್ರಂಥ. ಇದರಲ್ಲಿ ಒಟ್ಟು 6 ಅಧಿಕಾರಗಳಿವೆ. ಸಂಜ್ಞಾ ಪ್ರಕರಣವನ್ನು ಕುರಿತ ಪ್ರಥಮಾಧಿಕಾರದಲ್ಲಿ ಗಣಗಳು, ಗುರುಲಘುಗಳು, ಯತಿ, ಉಕ್ತೆ ಮೊದಲಾದ

26 ಛಂದಸ್ಸುಗಳು, ಅಚ್ಚ ಕನ್ನಡ ಪದ್ಯಜಾತಿಗಳ ಹೆಸರುಗಳು ಇವನ್ನು ಪ್ರಸ್ತಾಪಿಸಿದೆ. ಸಮವೃತ್ತ ವಿವರಣವೆಂಬ ದ್ವಿತೀಯಾಧಿಕಾರದಲ್ಲಿ ಉಕ್ತೆಯಿಂದ ಉತ್ಕೃತಿಯವರೆಗಿನ 26 ಛಂದಸ್ಸುಗಳಲ್ಲಿ ಒಂದೊಂದರಲ್ಲಿಯೂ ಹುಟ್ಟುವ ಅನೇಕ ವರ್ಣವೃತ್ತ ಭೇದಗಳಲ್ಲಿ ಕೆಲವನ್ನು ಮಾತ್ರ ಲಕ್ಷಣ ಲಕ್ಷ್ಯ ಸಮೀಕರಣ ವಿಧಾನದಿಂದ ವಿವರಿಸಿದೆ. ಮಾಲಾವೃತ್ತಾರ್ಧಸಮವಿಷಮಾದಿವೃತ್ತ ಪ್ರಕರಣವೆಂಬ ತೃತೀಯಾಧಿಕಾರದಲ್ಲಿ ಮಾಲಾ ಅರ್ಧಸಮವೃತ್ತ , ವಿಷಮವೃತ್ತ , ಶ್ಲೋಕ, ವೈತಾಳೀಯಾದಿಗಳು, ಜಾತಿಗಾಥೆ, ರಗಳೆ, ದಂಡಕ ಇವನ್ನು ಭೇದಪ್ರಭೇದಗಳ ಸಹಿತವಾಗಿ ಲಕ್ಷಣ ಲಕ್ಷ್ಯವಿಧಾನದಿಂದ ಕಂದಪದ್ಯಗಳಲ್ಲಿ ವಿವರಿಸಿದೆ. ಕಂದಾದಿಮಾತ್ರಾವೃತ್ತ (ಜಾತಿ) ಪ್ರಕರಣವೆಂಬ ಚತುರ್ಥಾಧಿಕಾರದಲ್ಲಿ ಕಂದ, ಆರ್ಯೆ, ಗೀತಿಕೆ, ಸಂಕೀರ್ಣಕ ಮತ್ತು ದುವಯಿ ಇವುಗಳ ಲಕ್ಷಣವನ್ನು ಕಂದಪದ್ಯಗಳಲ್ಲಿ ನಿರೂಪಿಸಿದೆ. ಕರ್ನಾಟಕ ವಿಷಯಜಾತಿ ವೃತ್ತ ಪ್ರಕರಣವೆಂಬ ಪಂಚಮಾಧಿಕಾರದಲ್ಲಿ ಬಹ್ಮ, ವಿಷ್ಣು, ರುದ್ರಗಣಗಳ ಸ್ವರೂಪವನ್ನೂ ಐದು ಅಕ್ಕರಗಳನ್ನೂ ತ್ರಿಪದೀ ಭೇದಗಳನ್ನೂ ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ, ಉತ್ಸಾಹ, ಷಟ್ಪದಿ ಎಂಬಿವನ್ನೂ ಲಕ್ಷಣ ಲಕ್ಷ್ಯಪೂರ್ವಕವಾಗಿ ವಿವರಿಸಿದೆ. ದೇಶೀಯ ಕನ್ನಡ ಛಂದಸ್ಸಿನ ಚರಿತ್ರೆಗೆ ಈ ಪ್ರಕರಣ ತುಂಬು ಉಪಯುಕ್ತವಾದುದಾಗಿದೆ. ಷಟ್ಪ್ರತ್ಯಯ ವಿವರಣ ಪ್ರಕರಣವೆಂಬ ಷಷ್ಠಾಧಿಕಾರದಲ್ಲಿ ಪ್ರಸ್ತಾರ ಮುಂತಾದ 6 ಪ್ರತ್ಯಯಗಳನ್ನು (ಎಂದರೆ ಛಂದಸ್ಸಂಬಂಧಿಯಾದ ಗಣಿತಾಂಶಗಳನ್ನು) ನಿರೂಪಿಸಿದೆ. ಈತ ಸಂಸ್ಕೃತ ಛಂದೋ ವಿಷಯಗಳನ್ನು ನಿರೂಪಿಸುವಲ್ಲಿ ಪಿಂಗಲ, ಜಯದೇವ ಮುಂತಾದವರ ಛಂದೋಗ್ರಂಥಗಳನ್ನು ಬಳಸಿಕೊಂಡಿದ್ದಾನೆ ಎನ್ನುವುದಕ್ಕೆ ಆಧಾರವಿದೆ. ಹೀಗೆಯೇ ಕನ್ನಡ ಛಂದಸ್ಸಿನ ವಿಷಯದಲ್ಲಿಯೂ ಮಾಡಿರಬಹುದೇ ಎನ್ನುವುದನ್ನು ತಿಳಿಯಲು ಸರಿಯಾದ ಆಧಾರಗಳಿಲ್ಲ. ಒಟ್ಟಿನಲ್ಲಿ ನಾಗವರ್ಮನು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಛಂದಸ್ಸುಗಳಲ್ಲಿ ಅಭ್ಯಾಸಿಗಳು ತಿಳಿಯಬೇಕಾಗಿರುವ ಅತ್ಯಗತ್ಯವಾದ ಎಲ್ಲ ಅಂಶಗಳನ್ನೂ ಬಹುಮಟ್ಟಿಗೆ ಸಂಗ್ರಹಿಸಿದ್ದಾನೆಂದು ಹೇಳಬಹುದು. ಈಗಂತೂ ಕನ್ನಡ ಛಂದಸ್ಸಿನ ಚರಿತ್ರೆಗೆ ಛಂದೋಂಬುಧಿಯೇ ಅಡಿಗಲ್ಲು ಮತ್ತು ಆಧಾರ ಭೂತವಾದ ಏಕೈಕ ಗ್ರಂಥ. ಸಂಸ್ಕೃತ, ಲಾಕ್ಷಣಿಕ ಜಯಕೀರ್ತಿ (ಸು. 11ನೆಯ ಶತಮಾನ), ತೆಲುಗು ಲಾಕ್ಷಣಿಕ ಭೀಮಕವಿ (ಸು. 13– 14ನೆಯ ಶತಮಾನ), ಕನ್ನಡ ಲಾಕ್ಷಣಿಕ ಈಶ್ವರ ಕವಿ (ಸು. 15ನೆಯ ಶತಮಾನ) ಮೊದಲಾದವರು ಈ ಗ್ರಂಥವನ್ನು ಅಲ್ಲಲ್ಲಿ ಅನುಸರಿಸಿರುವುದಕ್ಕೆ ಸಾಕ್ಷ್ಯಗಳು ದೊರೆಯುವುದು ಈ ಗ್ರಂಥದ ವ್ಯಾಪಕತೆ ಹಾಗೂ ಜನಪ್ರಿಯತೆಗಳಿಗೆ ಸಾಕ್ಷಿಯಾಗಿದೆ. **(ಟಿ.ವಿ.ವಿ.)**

ಕರ್ನಾಟಕ ಕಾದಂಬರಿ ಚಂಪೂಕಾವ್ಯ. ಸಂಸ್ಕೃತದಲ್ಲಿ ಬಾಣ ಮತ್ತು ಅವನ ಮಗ ಭೂಷಣನಿಂದ ರಚಿತವಾದ ಕಾದಂಬರಿ ಎಂಬ ಗದ್ಯಕಾವ್ಯದ ಅನುವಾದ. ಸಂಸ್ಕೃತ ಕಾದಂಬರಿಯದು ಲಯಾನ್ವಿತವಾದ ಗದ್ಯವಾದುದರಿಂದ ನಾಗವರ್ಮನಿಗೆ ಅದನ್ನು ಪದ್ಯರೂಪಕ್ಕೆ ತಿರುಗಿಸುವುದು ಸುಲಭವೂ ಉಚಿತವೂ ಆಯಿತು. ಶೃಂಗಾರಾದ್ಭುತ ಪ್ರಧಾನವಾದ ಕಾದಂಬರಿಯ ಕಥೆಯ ಸ್ವರೂಪಕ್ಕೆ ಶುದ್ಧಪದ್ಯವೇ ತಕ್ಕ ಮಾಧ್ಯಮವೆಂಬುದನ್ನು ಕವಿ ಮನಗಂಡದ್ದು ಸ್ತುತ್ಯ. ಇವನು ಚಂಪೂರೂಪವನ್ನು ಆರಿಸಿಕೊಂಡುದಕ್ಕೆ, 10ನೆಯ ಶತಮಾನ ಚಂಪೂಯುಗವಾಗಿದ್ದುದೂ ಒಂದು ಕಾರಣವೆಂದು ತೋರುತ್ತದೆ. ನಾಗವರ್ಮನ ಪದ್ಯ ಮಾಧ್ಯಮ ಮೂಲಕಾವ್ಯದ ಕೆಲವು ದೋಷಗಳನ್ನೂ ಅತಿರೇಕಗಳನ್ನೂ ನಿವಾರಿಸಿಕೊಳ್ಳಲು ಸಹಾಯಕವಾಗಿದೆ. ಬಾಣನ ವಾಗ್ವೈಪರೀತ್ಯ, ವರ್ಣನಾಬಾಹುಳ್ಯ, ಸಮಾಜ ಜಟಿಲತೆಗಳಿಗೆ ಅದರಿಂದ ಕಡಿವಾಣ ಹಾಕಿದಂತಾಗಿದೆ. ಮೂಲದ ಸೌಂದರ್ಯ ಸ್ವಾರಸ್ಯ ಜೀವಾಳಗಳಿಗೆ ಭಂಗ ಬರದಂತೆ ನಾಗವರ್ಮ ಭಾಷಾಂತರ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಮೂಲಭೂತವಾಗಿ ಇವನದು ಭಾಷಾಂತರವಾದರೂ ಮೂಲವನ್ನು ಮೀರದ ಸ್ವೋಪಜ್ಞತೆಯನ್ನು ಇವನು ಉದ್ದಕ್ಕೂ ಪ್ರಕಟಿಸಿದ್ದಾನೆ. ಮೂಲಭಾಗಗಳ ವಿಸ್ತರಣ, ಸ್ವತಂತ್ರ ವರ್ಣನಾತುಕ ಪದ್ಯಗಳ ಸೇರ್ಪಡೆ, ಕೆಲವು ಗೌಣವಾದ ಮಾರ್ಪಾಟುಗಳು ಕನ್ನಡ ಕಾದಂಬರಿಯಲ್ಲಿ ಕಂಡುಬರುತ್ತವೆ.

ಕರ್ನಾಟಕ ಕಾದಂಬರಿ ಮುಖ್ಯವಾಗಿ ಒಂದು ಸಂಗ್ರಹಾನುವಾದ. ಮೂಲ ಕೃತಿಯ ಹೂರಣಕ್ಕೆ ಲೋಪವೊದಗದಂತೆ ಅದನ್ನು ಕವಿ ಕುಗ್ಗಿಸಿದ್ದಾನೆ. ಇವನು ಸೇರಿಸಿರುವುದಕ್ಕಿಂತ ಬಿಟ್ಟಿರುವುದು ಹೆಚ್ಚು. ಮೂಲದ ಅನೌಚಿತ್ಯಗಳನ್ನು ಇವನು ಹೋಗಲಾಡಿಸಿದ್ದಾನೆ; ಒಮ್ಮೊಮ್ಮೆ ಮೂಲದ ಒಳ್ಳೆಯ ಭಾಗಗಳನ್ನು ಕಳೆದಿರುವುದೂ ಉಂಟು. ಅಂತೂ ಇವನ ಸಂಗ್ರಹಕಾರ್ಯದಲ್ಲಿ ವೈವಿಧ್ಯವಿದೆ. ಯಥಾವತ್ತಾದ ಅನುವಾದ, ಸಂಗ್ರಹಾನುವಾದ, ವಿಸ್ತಾರಾನುವಾದ, ಭಾವಾನುವಾದ ಮುಂತಾದ ಭಾಷಾಂತರ ಪ್ರಕಾರಗಳನ್ನೆಲ್ಲ ಒಳಗೊಂಡಿರುವ ಕರ್ನಾಟಕ ಕಾದಂಬರಿ ಭಾಷಾಂತರ ಕಲೆಯ ವಿದ್ಯಾರ್ಥಿಗಳಿಗೆ ಅಧ್ಯಯನಯೋಗ್ಯವಾದ ಕೃತಿಯಾಗಿದೆ. ಅದರಲ್ಲಿ ಸೋಲಿನ ಅಂಶಗಳೂ ಇವೆ; ಆದರೆ ಅದು ಗೆಲುವನ್ನು ವಿಶೇಷವಾಗಿ ಸಾಧಿಸಿ ಅತ್ಯುತ್ತಮವಾದ ಅನುವಾದವೆನಿಸಿದೆ.

ಕಾದಂಬರಿ ತುಂಬ ತೊಡಕಾದ ಒಂದು ಪ್ರಣಯಕಥೆಯನ್ನು ಹೇಳುತ್ತದೆ. ಅದು ಮಾನುಷ ಅತಿಮಾನುಷಗಳ ಸಮ್ಮಿಲನವನ್ನೊಳಗೊಂಡ ಒಂದು ಇಂದ್ರಜಾಲ ಸದೃಶವಾದ ಸ್ವಪ್ನಸಮಾನವಾದ ಜಗತ್ತು. ಅದರಲ್ಲಿ ಪುನರ್ಜನ್ಮ, ಶಾಪ ಮುಂತಾದ ಅಸಂಭಾವ್ಯವೆನಿಸುವ ಸಂಗತಿಗಳ ಸರಮಾಲೆಯನ್ನೇ ನೋಡುತ್ತೇವೆ. ಶೃಂಗಾರ ಅದರ ಪ್ರಮುಖ ರಸವಾದರೂ ಅದು ಉದಾತ್ತವಾದ ಶೃಂಗಾರ; ತಪಸ್ಸಿನಿಂದ ಪವಿತ್ರವೂ ಪಕ್ವವೂ ಆಗಿ ಪರಿಣಮಿಸುವಂಥದು. ಈ ಕಾರಣದಿಂದ ಕಾದಂಬರಿ ವಿಶಿಷ್ಟದರ್ಶನಸಂಪನ್ನವಾಗಿ ಇತರ ಶೃಂಗಾರ ಕಾವ್ಯಗಳಿಂದ ವಿಭಿನ್ನವಾಗಿ ನಿಲ್ಲುತ್ತದೆ. ಮಹಾಶ್ವೇತೆ, ಕಾದಂಬರಿ, ಪುಂಡರೀಕ, ಚಂದ್ರಪೀಡ ಈ ಕಾವ್ಯದ ಪ್ರಧಾನ ಪಾತ್ರಗಳು. ಕಾದಂಬರಿಯ ಹೆಸರನ್ನು ಕವಿ ಕಾವ್ಯಕ್ಕೆ ಕೊಟ್ಟಿದ್ದರೂ ಮಹಾಶ್ವೇತೆಯೇ ಕಾವ್ಯದ ನಾಯಿಕೆ. ಅವಳು ಪ್ರೇಮವನ್ನು ತಪಸ್ಸಿನ ಸ್ತರಕ್ಕೇರಿಸಿದ ಮಹಾಮಹಿಳೆ.

ಕರ್ನಾಟಕ ಕಾದಂಬರಿ ಉಪಲಬ್ಧ ಕನ್ನಡಕಾವ್ಯಗಳಲ್ಲಿ ಮೊದಲನೆಯ ಭಾಷಾಂತರವಾಗಿದೆ. ಅಂತೆಯೇ ಪ್ರಪ್ರಥಮ ಶೃಂಗಾರಕಾವ್ಯವಾಗಿದೆ. ಮುಂದೆ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸುವ ಕವಿಗಳಿಗೆ, ಪ್ರಣಯ ಕಾವ್ಯಗಳನ್ನು ರಚಿಸುವವರಿಗೆ ನಾಗವರ್ಮ ಮಾರ್ಗದರ್ಶಕನಾದುದರಲ್ಲಿ ಸಂದೇಹವಿಲ್ಲ. ಇವನ ಪ್ರಭಾವ ಮುಂದಿನ ಅನೇಕ ಕನ್ನಡ ಕವಿಗಳ ಮೇಲಾಗಿದೆ. ಬಿ.ಎಂ.ಶ್ರೀ. ಅವರು ಹೇಳುವಂತೆ ಪಂಪಾದಿಗಳು ಭಾರತ ರಾಮಾಯಣಗಳನ್ನು, ತೀರ್ಥಂಕರ ಪುರಾಣಗಳನ್ನು ಕೊಟ್ಟರೆ, ನಾಗವರ್ಮ ಬಾಣನನ್ನು ಕನ್ನಡಿಗರಿಗೆ ಪರಿಚಯಮಾಡಿಸಿ ಪ್ರೇಮ ಶೃಂಗಾರದ ರಸದೂಟವನ್ನು ಒದಗಿಸಿದ್ದಾನೆ. ಕಾದಂಬರಿ ಮಹಾಕಾವ್ಯವಲ್ಲ; ಆದರೆ ಮಹಾಕಾವ್ಯಕ್ಕೆ ಸಮೀಪವಾಗುವ ಒಂದು ಶ್ರೇಷ್ಠ ರೊಮಾನ್ಸ್. **(ಸಿ.ಪಿ.ಕೆ;ಟಿ.ವಿ.ವಿ)**

**ನಾಗವರ್ಮ II:** ಸು. 1042. ವರ್ಧಮಾನ ಪುರಾಣ, ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ, ಛಂದೋವಿಚಿತಿ, ಅಭಿಧಾನ ವಸ್ತುಕೋಶ ಎಂಬ ಗ್ರಂಥಗಳ ಕರ್ತೃ. ಛಂದೋವಿಚಿತಿಯ ಹೊರತು ಉಳಿದ ಎಲ್ಲ ಗ್ರಂಥಗಳೂ ದೊರೆತು ಪ್ರಕಟವಾಗಿವೆ. ಈ ರಚನೆಗಳಿಂದ ಈತ ಕವಿಯೂ ಆಲಂಕಾರಿಕನೂ ವ್ಯಾಕರಣ ಮತ್ತು ಛಂದಸ್ಸುಗಳಲ್ಲಿ ಉತ್ತಮ ಪಂಡಿತನೂ ನಿಘಂಟುಕಾರನೂ ಆಗಿರುವುದು ಕಂಡುಬರುತ್ತದೆ.

ಇತ್ತೀಚಿನವರೆಗೂ ನಾಗವರ್ಮನ ಕಾಲವನ್ನು ಸು. 1145 ಎಂದು ಕೆಲವರೂ ಇದಕ್ಕಿಂತ ಸ್ವಲ್ಪ ಹಿಂಚುಮುಂಚಿನ ಕಾಲವೆಂದು ಹಲವರೂ ಭಾವಿಸಿದ್ದರು. ಎ. ವೆಂಕಟಸುಬ್ಬಯ್ಯನವರು ಈತ 1015–42 ರವರೆಗೆ ಆಳುತ್ತಿದ್ದ ಜಗದೇಕಮಲ್ಲನೆಂಬ (ಜಯಸಿಂಹ) ಚಾಳುಕ್ಯ ಚಕ್ರವರ್ತಿಯಲ್ಲಿ ಕಟಕೋಪಾಧ್ಯಾಯನಾಗಿದ್ದಿರಬೇಕು ಎಂದು ನಿರ್ಣಯಿಸಿದ್ದರು. ಬಹುಕಾಲದಿಂದ ಅಲಭ್ಯವಾಗಿದ್ದ ಈತನ ವರ್ಧಮಾನಪುರಾಣ ಈಗ ದೊರೆತಿದ್ದು ಇದರಲ್ಲಿ ಬರುವ ಕಾಲಸೂಚಿತ ಪದ್ಯದ ಆಧಾರದಿಂದ ಇವನ ಕಾಲ 1042 ಎಂದು ಖಚಿತವಾಗಿ ತಿಳಿಯುತ್ತದೆ.

ನಾಗವರ್ಮನ ತಂದೆ ವಿಪ್ರಕುಲಪ್ರದೀಪನಾದ ದಾಮೋದರ, ತಾಯಿ ವಿನಯಾಳಂಕೃತೆಯಾದ ವೀರಕಬ್ಬೆ, ವೀರಭಟ್ಟಾರಕರು ಇವನ ಗುರು. ಕವಿಗೆ ಸದ್ಗುಣ ಮಂಡನ, ಜಿನಮತವನಹಂಸ, ವಿಪ್ರವಂಶಾವತಂಸ, ಸಚ್ಚರಿತ್ರಾಭಿರಾಮ, ವಿನಯನಯನಿಧಾನ, ಸ್ವನುಗತಶುಭಶರ್ಮ, ಕವಿತಾ ಗುಣೋದಯ, ವಾಕ್ಯವಿನೋದ, ಸಹಜವತ್ಸಳ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ. ಕವಿ ಕರ್ಣಪೂರನಾದ ತನ್ನನ್ನು ವಸುಮತೀವಳಯವು ಪ್ರೀತಿಯಿಂದ ಸಕಳ ಕಳಾವಿದಂ ಮದವಿದೂರನುದಾರನಮತ್ಸರಂ ಗುಣಾಧಿಕನಭಿಮಾನತುಂಗನವದಾತಯಶಂ ವಿಭುಧೈಕವತ್ಸಳಂ ಸುಕವಿ ಸರಸ್ವತೀವದನಮಂಗಳದರ್ಪಣನೆಂದು ಕರೆಯುತ್ತಿತ್ತೆಂದು ಹೇಳಿಕೊಂಡಿದ್ದಾನೆ. ತಾನು ಕನ್ನಡದಲ್ಲಿ ಅಸಗ, ಗಜಗ, ಗುಣನಂದಿ, ಪೊನ್ನರಿಗೆ ಹಾಗೂ ಸಂಸ್ಕೃತದಲ್ಲಿ ಮಯೂರ, ಬಾಣ, ಕಾಳಿದಾಸಾದ್ಯರಿಗೆ ಸಮಾನನೆಂದು ಪ್ರಶಂಸಿಸಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಶ್ರೀವಿಜಯ, ನಾಗವರ್ಮ, ಪೊನ್ನ, ಪಂಪ, ರನ್ನ ಮತ್ತು ನಾಗದೇವರನ್ನು ಸ್ತುತಿಸಿದ್ದಾನೆ. ಈ ಪೂರ್ವ ಕವಿಸ್ತುತಿಯಲ್ಲಿ ಕಂಡುಬರುವ ನಾಗವರ್ಮನೆಂಬ ಕವಿ ವತ್ಸರಾಜಚರಿತೆಯನ್ನೂ ನಾಗದೇವನು ಸುಲೋಚನಾಚರಿತೆಯನ್ನೂ ಬರೆದಿದ್ದಾರೆಂಬುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿನೂತನ ವಿಷಯವಾಗಿದೆ.

ವರ್ಧಮಾನ ಪುರಾಣ ಚಂಪೂಕಾವ್ಯ. ಇದರಲ್ಲಿ 16 ಆಶ್ವಾಸಗಳೂ 1134 ಪದ್ಯಗಳೂ ಇವೆ. ಕನ್ನಡ ಸಾಹಿತ್ಯದಲ್ಲಿ ದೊರೆತಿರುವ ವರ್ಧಮಾನ ಪುರಾಣಗಳಲ್ಲಿ ಇದೇ ಮೊದಲನೆಯದಾಗಿದೆ. ಇದಕ್ಕೆ ಮಹಾವೀರಚರಿತೆ, ಸನ್ಮತಿಚರಿತೆ, ವೀರವರ್ಧಮಾನಚರಿತೆ ಮೊದಲಾದ ಹೆಸರುಗಳೂ ಇವೆ. ಈ ಕೃತಿರಚನೆಗೆ ಜಿನಸೇನರ ಉತ್ತರಪುರಾಣ ಮತ್ತು ಅಸಗನ ವರ್ಧಮಾನಪುರಾಣ ಎಂಬ ಸಂಸ್ಕೃತ ಕೃತಿಗಳು ಆಧಾರವಾಗಿರಬಹುದು. ಅಲ್ಲದೆ ನಾಗವರ್ಮ ಕೆಲವು ಪ್ರಾಕೃತ ಕೃತಿಗಳಿಂದಲೂ ಉಪಕೃತನಾಗಿರಬಹುದು. ವಸ್ತುವಿನ್ಯಾಸದಲ್ಲಿ, ವರ್ಣನಾವೈಖರಿಯಲ್ಲಿ ಪಂಪ, ರನ್ನ ಮೊದಲಾದ ಪೂರ್ವ ಕನ್ನಡ ಕವಿಗಳಿಂದ ಬಹುಮಟ್ಟಿಗೆ ಪ್ರಭಾವಿತನಾಗಿದ್ದಾನೆ. ಸ್ವಪ್ರತಿಭೆಯಿಂದ ಹಲವು ರಸದಾಣಗಳನ್ನೂ ನಿರ್ಮಿಸಿ, ಸಹೃದಯರ ಮೆಚ್ಚುಗೆ ಪಡೆದಿದ್ದಾನೆ. ಕಾವ್ಯದಲ್ಲಿ ಉಪಜಾತಿ ಅನುಷ್ಟುಭ್, ಕ್ರೌಂಚಪದ, ಮಣಿಭೂಷಣ, ಮೂಲಭಾರಿಣಿ ಮೊದಲಾದ ಅತಿ ವಿರಳವಾದ ಛಂದೋಪ್ರಕಾರಗಳನ್ನು ಬಳಸಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಅಲಂಕಾರಶಾಸ್ತ್ರ ಗ್ರಂಥಗಳಲ್ಲಿಯೇ ಮೊದಲನೆಯದಾದ ಕಾವ್ಯಾವಲೋಕನ ನಾಗವರ್ಮನ ಬಹುಮುಖ ಪ್ರತಿಭೆಯ ರನ್ನಗನ್ನಡಿಯಾಗಿದೆ. ಸೂತ್ರಗಳು ಕಂದಪದ್ಯಗಳಲ್ಲಿ ರಚಿತವಾಗಿವೆ. ಇದರಲ್ಲಿ ಶಬ್ದಸ್ಮೃತಿ, ಕಾವ್ಯಮಲವ್ಯಾವೃತ್ತಿ, ಗುಣವಿವೇಕ, ರೀತಿಕ್ರಮರಸನಿರೂಪಣ, ಕವಿಸಮಯ ಎಂಬ ಐದು ಅಧಿಕರಣಗಳಿದ್ದು, ಇವುಗಳಲ್ಲಿ ಪ್ರಕರಣಗಳೆಂಬ ಒಳ ವಿಭಾಗಗಳೂ ಇವೆ. ಉದಾಹರಣೆಗಳನ್ನು ವಿವಿಧ ಕಾವ್ಯಗಳಿಂದ, ಶಾಸ್ತ್ರಗ್ರಂಥಗಳಿಂದ ಒದಗಿಸಲಾಗಿದೆ.

ಕರ್ನಾಟಕ ಭಾಷಾಭೂಷಣ ಕನ್ನಡ ವ್ಯಾಕರಣಗ್ರಂಥಗಳಲ್ಲಿ ಮೊದಲನೆಯದು. ಇದರಲ್ಲಿ ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ಧಿತ, ಆಖ್ಯಾತ, ಅವ್ಯಯ, ನಿಪಾತ ಎಂಬ 10 ಪರಿಚ್ಛೇದಗಳಿವೆ. ಸೂತ್ರಗಳು ಸಂಸ್ಕೃತ ಭಾಷೆಯಲ್ಲಿವೆ. ಒಟ್ಟು ಸೂತ್ರ ಸಂಖ್ಯೆ 269. ಸೂತ್ರಾರ್ಥ ವಿಶದತೆಗೆ ವೃತ್ತಿಯನ್ನು ಬರೆದು ಕನ್ನಡ ಭಾಷೆಯ ಉದಾಹರಣೆಗಳನ್ನು ಒದಗಿಸಲಾಗಿದೆ. ಗ್ರಂಥರಚನೆಯಲ್ಲಿ ಶರ್ಮಶರ್ಮನ ಕಾತಂತ್ರ ವ್ಯಾಕರಣದ ಪ್ರಭಾವವಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಛಂದೋವಿಚಿತಿ ಇದುವರೆಗೆ ದೊರೆತಿಲ್ಲ. ಕಾವ್ಯಾವಲೋಕನದ 965ನೆಯ ಪದ್ಯದ ಉಲ್ಲೇಖದಿಂದ ಇದು ನಾಗವರ್ಮನ ಗ್ರಂಥವೆಂಬುದು ಸ್ಪಷ್ಟ. ಮೊದಲನೆಯ ನಾಗವರ್ಮ ಬರೆದಿರುವ ಛಂದೋಂಬುಧಿಯೇ ಈ ಗ್ರಂಥವೆಂದೂ ರತ್ನಮಂಜೂಷ ಎಂಬ ಪ್ರಾಚೀನ ಛಂದೋಗ್ರಂಥಕ್ಕೆ ಅದೇ ಭಾಷೆಯಲ್ಲಿ ಬರೆದಿರುವ ಭಾಷ್ಯವೇ ಛಂದೋವಿಚಿತಿ ಎಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಅಭಿಧಾನ ವಸ್ತುಕೋಶ ಕಂದವೃತ್ತಗಳ ರೂಪದಲ್ಲಿ ಕನ್ನಡದಲ್ಲಿ ರಚಿತವಾಗಿರುವ ನಿಘಂಟು. ಇದರಲ್ಲಿ ಸಂಸ್ಕೃತ ಪದಗಳಿಗೆ ಕನ್ನಡ ಅರ್ಥಗಳನ್ನು ವಿವರಿಸಲಾಗಿದೆ. ಅವಿಭಿನ್ನಾರ್ಥ (ಏಕಾರ್ಥ), ಸಾಮಾನ್ಯಾರ್ಥ, ನಾನಾರ್ಥ ಎಂಬ 3 ಕಾಂಡಗಳಿರುವ ಈ ನಿಘಂಟು ಕೆಲವು ಉಪವಿಭಾಗಗಳನ್ನು ಹೊಂದಿದೆ. ಒಂದನೆಯ ಕಾಂಡದಲ್ಲಿ ಸ್ವರ್ಗ, ಕಾಲ, ಸಂಸರಣ, ಸಲಿನ, ಭೂ, ಕಾಲಾಯಸಾದಿ ಧಾತು, ವನ, ವೃಕ್ಷಾದಿ, ಮೃಗಪಕ್ಷಿ, ಪುರಗೃಹೋಪಕರಣಾದಿ, ಮನುಷ್ಯ, ದೇಹಾವಯವಾದಿ. ಭೂಷಣಾದಿ, ಸಮರಾದಿ, ಸಂಪ್ರಕೀರ್ಣ, ಪಶು, ಧಾನ್ಯ ಎಂಬ 16 ವರ್ಗಗಳಿವೆ. 2ನೆಯದರಲ್ಲಿ ವಿಶೇಷಣ, ವಿಶೇಷ್ಯ ಎಂಬ ಎರಡು ವರ್ಗಗಳಿವೆ. 3ನೆಯದರಲ್ಲಿ ನಾನಾರ್ಥ ಒಂದೇ ವರ್ಗವಿದೆ. ತನ್ನ ಈ ಕೋಶವನ್ನು ವರರುಚಿ, ಹಲಾಯುಧ, ಭಾಗುರಿ, ಶಾಶ್ವತ, ಅಮರಸಿಂಹ ಮೊದಲಾದ ಕೋಶಕರ್ತರು ತಂತಮ್ಮ ಕೋಶಗಳಲ್ಲಿ ಹೇಳಿರುವ ಸಂಗತಿಗಳನ್ನು ಸಂಗ್ರಹಿಸಿ ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಇದು ಸಂಸ್ಕೃತ ಮತ್ತು ಹಳಗನ್ನಡ ಕಾವ್ಯಗಳಲ್ಲಿ ಬಳಕೆಯಾಗುವ ಸಂಸ್ಕೃತ ಶಬ್ದಗಳ ಅರ್ಥಗಳನ್ನು ತಿಳಿಯಲೂ ಸಹಾಯ ಮಾಡುವ ಕೋಶವಾದರೂ ಕ್ವಚಿತ್ತಾಗಿ ದೇಶ್ಯಶಬ್ದಗಳ ಅರ್ಥಗಳನ್ನು ತಿಳಿಯಲೂ ಸಹಾಯಕವಾಗಿದೆ. (ಬಿ.ಎಸ್.ಎಸ್.)

**ನಾಗವರ್ಮಾಚಾರ್ಯ:** ಸು. 1071. ಚಂದ್ರಚೂಡಾಮಣಿ ಶತಕ ಎಂಬ ಗ್ರಂಥದ ಕರ್ತೃ. ಈತ ಚಾಳುಕ್ಯರಾಜ ಭುವನೈಕಮಲ್ಲನ ಮಹಾಪ್ರಧಾನಿಯಾಗಿದ್ದ. ತಾನು ಉದಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದಂತೆಯೂ ತನಗೆ ಭಾಸ್ಕರನೆಂಬ (ಉದಯಾದಿತ್ಯನ ರಾಯಭಾರಿ) ಅಣ್ಣನಿದ್ದಂತೆಯೂ ಗ್ರಂಥದ ಕೊನೆಯಲ್ಲಿ ಹೇಳಿಕೊಂಡಿದ್ದಾನೆ. ಇವನು ಅದ್ವೈತಿಯೂ ದೊಡ್ಡ ಪಂಡಿತನೂ ಆಗಿದ್ದನೆಂದೂ ಬಲಿಪುರ ಮತ್ತು ಮುತ್ತೂರುಗಳಲ್ಲಿ ದೇವಾಲಯ, ಸಿದ್ಧತೀರ್ಥಗಳನ್ನು ಮಾಡಿಸಿದನೆಂದೂ ಈತನಿಗೆ ಗುಣಗಳ್ಳನೆಂಬ ಬಿರುದಿದ್ದಿತೆಂದೂ ಒಂದು ಶಾಸನ ತಿಳಿಸುತ್ತದೆ.

ಚಂದ್ರಚೂಡಾಮಣಿ ಶತಕ ಮತ್ತೇಭವಿಕ್ರೀಡಿತದಲ್ಲಿ ರಚಿತವಾಗಿದೆ. ಇದಕ್ಕೆ ಜ್ಞಾನಸಾರವೆಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಇದರಲ್ಲಿ 104 ವೃತ್ತಗಳಿದ್ದು ಪ್ರತಿಯೊಂದೂ ಚಂದ್ರಚೂಡಾಮಣಿ ಎಂಬ ಅಂಕಿತದಿಂದ ಮುಗಿಯುತ್ತದೆ. ಭಕ್ತನ ಶರಣ್ಯತೆ, ಶಿವೈಕ್ಯನಿಷ್ಠೆ ಹಾಗೂ ವೈರಾಗ್ಯ ಪ್ರತಿಪಾದನೆ ಈ ಶತಕದ ವಸ್ತು. ಶೈಲಿ ಸರಳವಾಗಿದೆ. ಈ ಶತಕದ ಪದ್ಯಗಳು ಮುಂದೆ ಸಂಕಲಿತವಾದ ಶತಕ ಸಂಕಲನಗಳಲ್ಲಿ ಉದಾಹೃತಗೊಂಡಿವೆ. ಬರೆಹದ ಗುರು ನಂಜೇದೇವರ ಶಿವಕಾರುಣ್ಯಾಹ್ವಾನ ಶತಕ ಮತ್ತು ಶಿವಕೀರ್ತನೆಶತಕಗಳಲ್ಲಿ ಈ ಶತಕದ ಒಂದೊಂದೂ ಪದ್ಯಗಳಿವೆ. ಅಜ್ಞಾತ ಸಂಕಲನಕಾರನ ನಿಜಾಚರಣೆಶತಕ ಎಂಬ ಸಂಕಲನದಲ್ಲಿ ಈ ಶತಕದ ವೃತ್ತವೊಂದು ಉದ್ಧೃತವಾಗಿದೆ.

ಚಂದ್ರಚೂಡಾಮಣಿ ಶತಕ 11ನೆಯ ಶತಮಾನದಲ್ಲಿ ರಚಿತವಾಗಿರದೆ ಹರಿಹರನ ಅನಂತರದ ಕಾಲದಲ್ಲಿ ರಚಿತವಾಗಿರಬಹುದೆಂದೂ ಕೆಲ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. **(ಎಸ್.ಎಸ್.ವಿ.)**

**ನಾಗಾಭರಣ, ಟಿ.ಎಸ್.:** ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ನಿರ್ದೇಶಕ, ನಟ, ಸಾಮಾಜಿಕ ಹೊಣೆಗಾರಿಕೆಯೇ ಒಂದು ನಿಷ್ಠೆ ಎಂಬ ಸಂದೇಶವನ್ನು ತಮ್ಮ ವಿಶಿಷ್ಟ ಜಾಡಿನ ಚಲನಚಿತ್ರಗಳ ಮೂಲಕ ಜನತೆಗೆ ಪ್ರಸ್ತುತಪಡಿಸಿದವರು. ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಮೈದುಂಬಿಕೊಂಡು ಅದನ್ನು ತಮ್ಮ ಚಿತ್ರಗಳ ಮೂಲಕ ಸಮಯೋಚಿತವಾಗಿ ಇವರು ಪರಿಚಯಿಸಿದ್ದಾರೆ. ತಮ್ಮ ಶಾಲಾ ಕಾಲೇಜು ದಿನಗಳಲ್ಲೇ ರಂಗ ನಾಟಕಗಳತ್ತ ಆಕರ್ಷಿತರಾಗಿ ನಟರಾಗಿ, ನಿರ್ದೇಶಕರಾಗಿ ಹಲವಾರು ಪದಕ – ಪ್ರಶಸ್ತಿಗಳನ್ನು ಬಾಚಿಕೊಂಡರು. ಇವರು ವಿಜ್ಞಾನ ಹಾಗೂ ಕಾನೂನಿನಲ್ಲಿ ಪದವೀಧರರು. ಹೊಸ ಅಲೆಯ ಚಿತ್ರಗಳ ಮೂಲಕ ಗಮನ ಸೆಳೆಯುತ್ತಿದ್ದ ಬಿ.ವಿ. ಕಾರಂತ ಮತ್ತು ಗಿರೀಶ್ ಕಾರ್ನಾಡರೊಂದಿಗೆ ರಂಗಭೂಮಿ ಹಾಗೂ ಚಲನಚಿತ್ರ ಮಾಧ್ಯಮಗಳ ಚಟುವಟಿಕೆಗಳಲ್ಲಿ ಇವರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಶೇಷಾದ್ರಿ ಗವಾಯಿಯವರಲ್ಲಿ ಹಿಂದುಸ್ಥಾನಿ ಸಂಗೀತವನ್ನು ಕೂಡ ಇವರು ಅಭ್ಯಾಸ ಮಾಡಿದರು. ತಮ್ಮ ನಾಟಕ ಚಲನಚಿತ್ರಗಳಲ್ಲಿ ಜನಪದ ಸಂಗೀತವನ್ನು ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಚಿತ್ರರಂಗದಲ್ಲಿ ಬೇರೂರಿ ನಿಲ್ಲಬೇಕೆನ್ನುವ ಹವಣಿಕೆಯಿಂದ ಪಿ. ಭಕ್ತವತ್ಸಲಂರೊಡನೆ ಸಂಕಲನ ಕಾರ್ಯದಲ್ಲಿ ತೊಡಗಿಕೊಂಡು ಸಂಕಲನದಲ್ಲೂ ಪರಿಣಿತಿ ಪಡೆದರು. ದೃಶ್ಯಮಾಧ್ಯಮದ ಎಲ್ಲ ಪ್ರಕಾರಗಳನ್ನೂ ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಅವುಗಳ ಮೇಲೆ ಹಿಡಿತ ಸಾಧಿಸುವ ಸಾಮರ್ಥ್ಯ ಪಡೆದು ಕೊಂಡಿರುವ ಇವರು ಇಲ್ಲಿಯವರೆಗೆ 26 ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇವುಗಳಲ್ಲಿ 12 ಚಿತ್ರಗಳಿಗೆ ರಾಷ್ಟ್ರ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಕನ್ನಡದ ಹೆಸರಾಂತ ನಾಟಕಕಾರ ಶ್ರೀರಂಗರ ಗರಡಿಯಲ್ಲಿ ಪಳಗಿದ ಇವರು ಹಲವು ನಾಟಕಗಳನ್ನು ಪ್ರಯೋಗಿಸಿ ರಂಗಭೂಮಿಯಲ್ಲಿ ಯಶಸ್ವೀ ನಿರ್ದೇಶಕರೆನಿಸಿದ್ದಾರೆ. ಬೆಂಗಳೂರಿನಲ್ಲಿರುವ ಆದರ್ಶ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಇವರು ಮೂರು ವರ್ಷಗಳ ಕಾಲ ಉಪನ್ಯಾಸಕರಾಗಿ ಆರು ವರ್ಷ ಪ್ರಾಂಶುಪಾಲರಾಗಿ ಅನೇಕ ಸೃಜನಶೀಲ ಪ್ರತಿಭೆಗಳನ್ನು ಬೆಳಕಿಗೆ ತಂದಿದ್ದಾರೆ. ಬೆನಕ ಎಂಬ ಮಕ್ಕಳ ನಾಟಕ ಕೇಂದ್ರದ ಸ್ಥಾಪಕ ಅಧ್ಯಕ್ಷರೂ ಇಂಟರ್ ನ್ಯಾಷನಲ್ ಸೆಂಟರ್ ಆಫ್ ಫಿಲ್ಡ್ ಫಾರ್ ಚಿಲ್ಡ್ರನ್ ಅಂಡ್ ಯಂಗ್ ಪೀಪಲ್‌ನ ಸದಸ್ಯರೂ ಆಗಿದ್ದಾರೆ. ಸಂಗ್ಯಾಬಾಳ್ಯಾ, ಕತ್ತಲೆ ಬೆಳಕು, ಶಕಾರನ ಸಾರೋಟು, ಜೋಕುಮಾರಸ್ವಾಮಿ, ಸತ್ತವರ ನೆರಳು, ಈಡಿಪಸ್, ಕೃಷ್ಣಪಾರಿಜಾತ, ಟಿಂಗರ ಬುಡ್ಡಣ್ಣ, ಮುಂದೇನ ಸಖಿ ಮುಂದೇನ, ಹಯವದನ, ನೀಗಿಕೊಂಡ ಸಂಸ, ಬಕ, ಬ್ಲಡ್‌ವೆಡಿಂಗ್ ಮೊದಲಾದವು ಇವರು ನಿರ್ದೇಶಿಸಿರುವ ನಾಟಕಗಳು. ಗ್ರಹಣ, ಅನ್ವೇಷಣೆ, ಬ್ಯಾಂಕರ್ ಮಾರ್ಗಯ್ಯ, ಆಸ್ಫೋಟ, ಸಂತ ಶಿಶುನಾಳ ಷರೀಫ, ಮೈಸೂರ ಮಲ್ಲಿಗೆ, ಚಿನ್ನಾರಿ ಮುತ್ತ, ಆಕಸ್ಮಿಕ, ನಾವಿದ್ದೇವೆ ಎಚ್ಚರಿಕೆ, ಜನುಮದ ಜೋಡಿ, ನಾಗಮಂಡಲ, ನೀಲಾ ಮೊದಲಾದವು ಇವರು ನಿರ್ದೇಶಿಸಿದ ಚಿತ್ರಗಳು.

ಗ್ರಹಣ (1978–79) ನಾಗಾಭರಣ ನಿರ್ದೇಶಿಸಿದ ಚೊಚ್ಚಲ ಚಿತ್ರ. ಇದಕ್ಕೆ ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ, ಅತ್ಯುತ್ತಮ ಚಿತ್ರಕಥೆಗಾಗಿ ರಾಷ್ಟ್ರಪ್ರಶಸ್ತಿ, ಅತ್ಯುತ್ತಮ ಚಿತ್ರಕ್ಕಾಗಿ ರಾಜ್ಯ ಪ್ರಶಸ್ತಿ ಬಂದಿದೆ. ಹಿಂದೀ ಚಿತ್ರರಂಗದ ಪ್ರಬುದ್ಧ ಕಲಾವಿದೆ ಸ್ಮಿತಾ ಪಾಟೀಲ್ ಅಭಿನಯಿಸಿದ ಏಕೈಕ ಕನ್ನಡ ಚಿತ್ರ ಅನ್ವೇಷಣೆ (1982). ಇದು ತೃತೀಯ ಅತ್ಯುತ್ತಮ ಚಿತ್ರವೆಂದು ರಾಜ್ಯ ಪ್ರಶಸ್ತಿ ಪಡೆದುಕೊಂಡಿದೆ. ಖ್ಯಾತ ಆಂಗ್ಲ ಸಾಹಿತಿ ಆರ್.ಕೆ. ನಾರಾಯಣ್ ಅವರ ದಿ ಫೈನಾನ್ಷಿಯಲ್ ಎಕ್ಸ್‌ಪರ್ಟ್ ಕಾದಂಬರಿ ಆಧರಿಸಿದ ಬ್ಯಾಂಕರ್ ಮಾರ್ಗಯ್ಯ (1983–84) ಅತ್ಯುತ್ತಮ ಪ್ರಾದೇಶಿಕ ಭಾಷಾ ಚಿತ್ರಕ್ಕೆ ನೀಡಲಾಗುವ ರಾಷ್ಟ್ರಪ್ರಶಸ್ತಿಗೆ ಪಾತ್ರವಾಗಿದೆ. ಆಸ್ಫೋಟಕ್ಕೆ (1987–88) ರಾಜ್ಯಪ್ರಶಸ್ತಿ ಹಾಗೂ ಫಿಲ್ಮ್ ಫೇರ್ ಪ್ರಶಸ್ತಿಗಳು ದೊರೆತಿವೆ. ಸಂತ ಶಿಶುನಾಳ ಷರೀಫ ಚಿತ್ರಕ್ಕೆ ಪ್ರತಿಷ್ಠಿತ ನರ್ಗಿಸ್‌ದತ್ ರಾಷ್ಟ್ರೀಯ ಭಾವೈಕ್ಯತಾ ರಾಷ್ಟ್ರಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು ಪ್ರಾಪ್ತವಾಗಿವೆ (1989–90). ಮೈಸೂರು ಮಲ್ಲಿಗೆ ಅತ್ಯುತ್ತಮ ಪ್ರಾದೇಶಿಕ ಚಿತ್ರದ ರಾಷ್ಟ್ರಪ್ರಶಸ್ತಿ, ದ್ವಿತೀಯ ಅತ್ಯುತ್ತಮ ಚಿತ್ರವೆಂಬ ರಾಜ್ಯ ಪ್ರಶಸ್ತಿ ಪಡೆದು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಆಯ್ಕೆಯಾಗಿತ್ತು. ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ದಾಂಪತ್ಯ ಜೀವನದ ನೋವು ನಲಿವು ಚಿತ್ರಿಸಿದ ವಿನೂತನ ಪ್ರಯೋಗ ಈ ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಚಿತ್ರ ಎಂದು ರಾಷ್ಟ್ರಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ಬಂದಿವೆ (1991–92). ಚಿನ್ನಾರಿಮುತ್ತ ಅತ್ಯುತ್ತಮ ಪ್ರಾದೇಶಿಕ ಚಿತ್ರಕ್ಕೆ ನೀಡಲಾಗುವ ರಾಷ್ಟ್ರಪ್ರಶಸ್ತಿಯನ್ನು ಅತ್ಯುತ್ತಮ ಮಕ್ಕಳ ಚಿತ್ರ ರಾಜ್ಯ ಪ್ರಶಸ್ತಿಯನ್ನೂ ಗಳಿಸಿದೆ (1993–94). ಕೊಲ್ಕತ್ತದಲ್ಲಿ ನಡೆದ ಭಾರತೀಯ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಪನೋರಮಾ ವಿಭಾಗದಲ್ಲಿ ಕೂಡ ಈ ಚಿತ್ರ ಪ್ರದರ್ಶನ ಕಂಡಿತು. ಆಕಸ್ಮಿಕ ದ್ವಿತೀಯ ಅತ್ಯುತ್ತಮ ಚಿತ್ರವೆಂಬ ರಾಜ್ಯಪ್ರಶಸ್ತಿಯನ್ನೂ (1993–94), ನಾವಿದ್ದೇವೆ ಎಚ್ಚರಿಕೆ ಎಂಬ ಮಕ್ಕಳ ಚಿತ್ರ ಅತ್ಯುತ್ತಮ ಮಕ್ಕಳ ಚಿತ್ರವೆಂಬ ರಾಜ್ಯ ಪ್ರಶಸ್ತಿಯನ್ನೂ ಗಳಿಸಿದೆ (1995–96). ಜನುಮದಜೋಡಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನೂ (1996–97), ನಾಗಮಂಡಲ ದ್ವಿತೀಯ ಅತ್ಯುತ್ತಮ ಚಿತ್ರವೆಂಬ ರಾಜ್ಯ ಪ್ರಶಸ್ತಿಯನ್ನೂ ಗಳಿಸಿದೆ (1996– 97). ವೈಜ್ಞಾನಿಕ ವಿಷಯವನ್ನು ಸರಳವಾಗಿ ನಿರೂಪಿಸಿರುವ ಈ ಚಿತ್ರ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಪಾಲ್ಗೊಂಡಿತ್ತು. ನೀಲಾ ತೃತೀಯ ಅತ್ಯುತ್ತಮ ಚಿತ್ರದ ರಾಜ್ಯ ಪ್ರಶಸ್ತಿಯನ್ನೂ ಪಡೆದುಕೊಂಡಿದೆ. ಇವರ ನಿರ್ದೇಶನದಲ್ಲಿ ಮೂಡಿಬಂದ ಬಂಗಾರದ ಜಿಂಕೆ, ಪ್ರಾಯ ಪ್ರಾಯ ಪ್ರಾಯ, ಸೇಡಿನ ಸಂಚು, ಮಕ್ಕಳಿರಲವ್ವ ಮನೆತುಂಬ, ನೆನಪಿನದೋಣಿ, ಸುರಸುಂದರಾಂಗ, ಪ್ರೇಮಾಗ್ನಿ, ರಾವಣರಾಜ್ಯ, ವಿಮೋಚನೆ, ಜನುಮದಾತ ಈ ಚಿತ್ರಗಳು ಅಪಾರ ಜನಮನ್ನಣೆಗೆ ಪಾತ್ರವಾಗಿವೆ. ಚಂದ್ರಶೇಖರಕಂಬಾರರ ಕಾದಂಬರಿ ಆಧರಿಸಿದ ಸಿಂಗಾರೆವ್ವ ಚಿತ್ರವನ್ನೂ ನಿರ್ದೇಶಿಸಿದ್ದಾರೆ (2003). ಕಿರುತೆರೆಯಲ್ಲೂ ಅತ್ಯಂತ ಜನಪ್ರಿಯ ನಿರ್ದೇಶಕರೆಂಬ ಹೆಗ್ಗಳಿಕೆಗೂ ಪಾತ್ರರಾಗಿರುವ ಇವರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ದೊರೆತಿದೆ (1998–99). **(ಬಿ.ಆರ್‌ವಿ.)**

**ನಾಗಾಯಿ:** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನಲ್ಲಿ ಚಿತ್ತಾಪುರದಿಂದ ನೈಋತ್ಯಕ್ಕೆ ವಾಡಿಗೆ ಹೋಗುವ ಮಾರ್ಗದಲ್ಲಿ 2 ಕಿಮೀ ಅಂತರದಲ್ಲಿರುವ ಸ್ಥಳ. ಇಲ್ಲಿನ ಹಿಂದು, ಜೈನ ಹಾಗೂ ಮುಸಲ್ಮಾನ ಸಂಸ್ಕೃತಿಗಳಿಗೆ ಸಂಬಂಧಿಸಿದ ವಾಸ್ತು ಅವಶೇಷಗಳಿಂದ ಪ್ರಸಿದ್ಧವಾಗಿದೆ. ಇದರ ಹೆಸರು ನಾಗವಾಪಿಯಿಂದ ಬಂದಿರಬಹುದು. ಶಾಸನಗಳಲ್ಲಿ ಇದು ನಾಗವಾವಿ ಎಂದೇ ಪ್ರಸಿದ್ಧ. ಶ್ರೀರಾಮ ವನವಾಸದಲ್ಲಿದ್ದ ಕಾಲದಲ್ಲಿ ಇಲ್ಲಿ ತಂಗಿದ್ದನೆಂದು ಪ್ರತೀತಿ. ನಿಜಾಮರ ಆಡಳಿತದ ಕಾಲದಲ್ಲಿ ಇದು ಪಾಯಿಗಾ ಇಲಾಖೆಗೆ ಸೇರಿದ್ದು ನವಾಬ್ ಆಸ್ಕರಿಯಾರ್ ಜಂಗ ಬಹದ್ದೂರ್ ಹಾಗೂ ನವಾಬ್ ಬಷೀರದ್ದೌಲಾ ಬಹದ್ದೂರ್ ಅವರಿಗೆ ಸಂಬಂಧಪಟ್ಟಿತ್ತು. 1947ರ ಅನಂತರ ಚಿತ್ತಾಪುರದ ಜೊತೆಗೆ ಗುಲ್ಬರ್ಗ ಜಿಲ್ಲೆಯಲ್ಲಿ ವಿಲೀನವಾಯಿತು.

ಈ ಗ್ರಾಮದಲ್ಲಿ ಪುರಾತನ ಅವಶೇಷಗಳು ಸುಮಾರು ಒಂಬತ್ತು ಚದರ ಕಿಮೀಗಳವರೆಗೆ ಹಬ್ಬಿವೆ. ದೇವಾಲಯಗಳು, ಮಸೀದಿಗಳು, ಮನೆಗಳು, ಕೆರೆಗಳು, ಬಾವಿಗಳು ಮುಂತಾಗಿ ಈ ಅವಶೇಷಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಮುಖ್ಯವಾದವು ಜೋಡಿಮಂಟಪ ಗುಡಿ, ಜೈನಬಸದಿ, ಮಸೀದಿ, ದೊಡ್ಡ ಕಮಾನಿನ ಅಗಸಿ, ಮಡಿವಾಳಪ್ಪನ ಗುಡಿ, ಮಹಾದೇವ ದೇವಸ್ಥಾನ, ಶಾಸನ ದೇವಸ್ಥಾನ, ಅರವತ್ತು ಕಂಬದ ಗುಡಿ, ಕಾಲಿ ಮಸ್‌ಜಿದ್ ದರ್ಗಾ, ಕಡಲಿ ಬಸವಣ್ಣನ ಗುಡಿ, ಹಣಮಂತ ದೇವರ ಗುಡಿ, ಮಾಲಗಂಬ, ಮಲ್ಲಯ್ಯನ ಗುಡಿ, ಎಲ್ಲಮ್ಮನ ಗುಡಿ, ಇವುಗಳಲ್ಲದೆ ಅನೇಕ ಗುಣಪತಿಯ ವಿಗ್ರಹಗಳೂ ನಾಗರಕಲ್ಲುಗಳೂ ಇವೆ. ನಾಗಾಯಿಯ ಇನ್ನೊಂದು ವಿಶೇಷವೆಂದರೆ ಇಲ್ಲಿ ಅನೇಕ ನೀರಿನ ಝರಿಗಳೂ ಬಾವಿಗಳೂ ಇವೆ. ಇವುಗಳಲ್ಲಿ ಮುಖ್ಯವಾದುದೆಂದರೆ ನಂದಿಬಾವಿ, ಕಾಲಿಮಸ್‌ಜಿದ್ ಬಾವಿ, ಸಿಡ್ಲಬಾವಿ ಮತ್ತು ಎಲ್ಲಮ್ಮನ ಬಾವಿ- ಇವು ಎಲ್ಲ ಕಾಲದಲ್ಲೂ ತುಂಬಿ ಹರಿಯುತ್ತವೆ.

ನಾಗಾಯಿಯ ಅವಶೇಷಗಳ ಪೈಕಿ ದೇವಸ್ಥಾನಗಳು ಮತ್ತು ಬಸದಿಗಳು ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದವು. ಮಸೀದಿಗಳಲ್ಲಿ ಕೂಡ ಕೆಲವು ಹಳೆಯ ದೇವಸ್ಥಾನಗಳೇ ಆಗಿದ್ದರೆ ಕೆಲವು ಆ ಹಳೆಯ ದೇವಸ್ಥಾನಗಳ ಅವಶೇಷಗಳಿಂದ ಪುನಃ ನಿರ್ಮಾಣ ಮಾಡಿದುವಾಗಿವೆ. ಈ ದೇವಸ್ಥಾನಗಳಲ್ಲಿ ಅರವತ್ತು ಕಂಬದ ಗುಡಿ ಬಹು ಸುಂದರವಾಗಿದೆ. ಇಲ್ಲಿನ ಕಂಬಗಳಲ್ಲಿನ ಚಿತ್ರದ ಕೆಲಸ ಹಾಗೂ ಸುಂದರ ಶಿಲ್ಪಗಳು ಮನಸೂರೆಗೊಳ್ಳುವಂತಿವೆ. ಮಸೀದಿಗಳಲ್ಲಿನ ಕಂಬಗಳೂ ಹೊಳಪು ಮಾಡಿದ, ಚಿತ್ರದಿಂದ ಕೂಡಿದ ಕಂಬಗಳೇ ಆಗಿವೆ. ಸಹಸ್ರ ದೀಪದ ಮಾಲಗಂಬ ತನ್ನಷ್ಟಕ್ಕೆ ವಿಶಿಷ್ಟವೂ ಸುಂದರವೂ ಆಗಿದೆ. ಹಣಮಂತ ದೇವರ ದೇವಾಲಯದಲ್ಲಿನ ಗೋಡೆಗಳಲ್ಲಿ ರಾಮಾಯಣದ ಚಿತ್ರಗಳನ್ನು ಕೆತ್ತಿದೆ; ಇವು ಸುಂದರವಾಗಿವೆ.

ಹನ್ನೆರಡನೆಯ ಶತಮಾನದಲ್ಲಿ ನಾಗವಾವಿಯ ಭೂಭಾಗವನ್ನು ಕಲ್ಯಾಣದ ಚಾಳುಕ್ಯರ ಸಾಮಂತರೂ ಮಾಂಡಲಿಕರೂ ಆದ ಹೈಹಯ ವಂಶದ ರಾಜರು ಆಳುತ್ತಿದ್ದರು. ಇದು ಅವರ ಪ್ರಾಂತ ಅರಲು 300ರಲ್ಲಿ ಇದ್ದಿತು. ಇಲ್ಲಿನ ಶಾಸನವೊಂದರಲ್ಲಿ ನಾಗವಾವಿಯನ್ನು ಕುನ್ತಳ ಮಹೀತಳಕ್ಕೆ ಮುಖಮಿದೆಂಬನ್ತಿರ್ದ್ದ ಅಖಿಲು ಮುನ್ನೂರ್ರ್ಕೆ ತಿಲಕಮಪ್ಪನ್ತಿರ್ದ್ದ ಮಹಾಗ್ರಹಾರ ಎಂದು ವರ್ಣಿಸಿದೆ. ನಾಗಾಯಿಯಲ್ಲಿ ಒಂದು ದೊಡ್ಡ ಘಟಿಕಾಸ್ಥಾನವಿದ್ದು ಇದು ವಿದ್ಯಾಕೇಂದ್ರವಾಗಿದ್ದಿತು. ಮಧುಸೂದನ ದೇವಾಲಯ ಹಾಗೂ ತ್ರೈಪುರುಷದೇವರ ಶಾಲೆ ಈ ಘಟಿಕಾಸ್ಥಾನದ ಕೇಂದ್ರವಾಗಿದ್ದುವು. ಈ ಮಧುಸೂದನ ದೇವಾಲಯ, ತ್ರೈಪುರುಷ ಶಾಲೆ, ರಾಮೇಶ್ವರ ದೇವಸ್ಥಾನ ಮತ್ತು ರಾಮತೀರ್ಥ ಮುಂತಾದವುಗಳನ್ನು ಚಾಳುಕ್ಯ ದೊರೆ ಆಹವಮಲ್ಲ ಸೋಮೇಶ್ವರನ ಮಂತ್ರಿ ಕಾಳಿದಾಸ ದಂಡನಾಯಕ ಮಾಡಿಸಿದ. ಈ ಮಹಾಮಾಣಿಕ ಮಧುಸೂದನ ದೇವಾಲಯದ ಕಳಸ ಸುವರ್ಣದ್ದಾಗಿದ್ದು ಅದು ಆಕಾಶವನ್ನು ತಟ್ಟುತ್ತಿದೆಯೊ ಏನೋ ಎನ್ನುವಷ್ಟು ಎತ್ತರವಾಗಿತ್ತು. ಅದರ ಒಳಗೆ ಅನೇಕ ಸುಂದರ ಸಾಲಭಂಜಿಕೆಗಳು ರಾರಾಜಿಸುತ್ತಿದ್ದವು. ಅಲ್ಲಿ ಒಂದು ನಾಟ್ಯಶಾಲೆಯೂ ಇತ್ತು. ದೇವಸ್ಥಾನದ ಎದುರಿನಲ್ಲಿ ಒಂದು ಗರುಡಗಂಬವಿದ್ದಿತು. ದೇವಸ್ಥಾನದಲ್ಲಿ ಏಕದಂಡಿ, ತ್ರಿದಂಡಿ, ಸ್ನಾತಕ, ಬ್ರಹ್ಮಚಾರಿ, ಹಂಸ, ಪರಮಹಂಸ ಮುಂತಾದವರಿಗೆ ಅನುಷ್ಠಾನ ಭವನಗಳಿದ್ದವು. ಚತುರ್ವೇದಗಳ ಮತ್ತು ಅದರ ಶಾಖೆಗಳ, ಭಟ್ಟ, ನ್ಯಾಸ, ಪ್ರಭಾಕರ ಮೊದಲಾದ ದರ್ಶನಗಳು, ಸಾಹಿತ್ಯ, ಶುಕ್ರನೀತಿ, ಮನುಸ್ಮೃತಿ ಮುಂತಾದವುಗಳ ಅಧ್ಯಯನಕ್ಕೆ ಅಲ್ಲಿ ಆಶ್ರಯವಿದ್ದಿತು. ಈ ವಿಷಯಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳ ಊಟ ಬಟ್ಟೆಗೆ, ಘಟಿಕಾ ಪ್ರಹಾರಿಗೆ, ಪುರಾಣದ ಭಟ್ಟರಿಗೆ, ನೈವೇದ್ಯಮನಡುವ ಬಾಣಸಗೆ, ಕಾಪಿನ ಘಟೆಯರರಿಗೆ, ಮದ್ದಳಿಕಾರರಿಗೆ ಹಾಡುವವರಿಗೆ ಪಾತ್ರದವರಿಗೆ, ಕಂಬದ ಸೂಳೆಯರಿರ್ಗೆ, ದೇವಾಲಯಕ್ಕೆ ಸುಣ್ಣ ಹಾಕುವ ಸುಣ್ಣವೆಸದವನಿಗೆ, ಕಲ್ಕುಟಿಗ, ಕಳಾಸೂತ್ರಧಾರಿ ವೋಜರುಗಳಿಗೆ ಜೀವನೋಪಾಯಕ್ಕೆ ಭೂಮಿಯನ್ನು ದಾನಕೊಟ್ಟುದಾಗಿ ಕೆಲವರಿಗೆ ಇರಲು ನಿವೇಶನಗಳನ್ನು ದತ್ತಿವಿಟ್ಟುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಈ ಎಲ್ಲರಿಂದ ಆ ಘಟಿಕಾಸ್ಥಾನ ತುಂಬಿ ನಾಲ್ನೂರ್ವರ್ ವಿಪ್ರರಿಂದ ಕೂಡಿ ಅಗ್ರಹಾರ ನಾಗವಾವಿ ಅಭಿನವ ಬ್ರಹ್ಮಲೋಕದಂತಿದ್ದಿತಂತೆ. (ಎಸ್.ಜಿಎ.)

**ನಾಗಾರಾಧನೆ:** ಮಾನವ ಜನಾಂಗದಲ್ಲಿ ಆದಿಕಾಲದಿಂದಲೇ ನಾಗಪೂಜೆ ನಡೆದುಬರುತ್ತಿದೆ. ಋಗ್ವೇದದ ಪ್ರಧಾನ ದೈವತ ಸರ್ಪ ಎನ್ನಲಾಗಿದೆ. ಸಿಂಧೂ ಸಂಸ್ಕೃತಿಯ ಅವಶೇಷಗಳಲ್ಲಿ ನಾಗಮಿಥುನವಿದೆ. ಅಶ್ವತ್ಥವೃಕ್ಷದ ಕೆಳಗೆ ಎಡಬಲಗಳಲ್ಲಿ ಹೆಡೆಯೆತ್ತಿರುವ ನಾಗಗಳ ಬಳಿ ಪೂಜೆ ಮಾಡುವ ವ್ಯಕ್ತಿಗಳ ಚಿತ್ರವಿದೆ. ಅಶ್ವತ್ಥೋ ದೇವಸದನಃ ಎಂಬುದು ಅಥರ್ವವೇದದ ಮಾತು. ನಾಗನ ಕಲ್ಲುಗಳನ್ನು ನೆಟ್ಟಿರುವುದು ಹೆಚ್ಚಾಗಿ ಅಶ್ವತ್ಥ ವೃಕ್ಷದ ಕೆಳಗೆ. ಭಾರತೀಯರಿಗೆ ಮಾತ್ರವಲ್ಲ ಈಜಿಪ್ಟ್, ಗ್ರೀಸ್, ಅಸಿಸಿರಿಯ ಮುಂತಾದ ಪುರಾತನ ಸಂಸ್ಕೃತಿಗಳ ಜನತೆಗೂ ನಾಗನೇ ಆದಿದೈವತ. ಈಜಿಪ್ಟಿನ ಆದಿದೇವ ಮಿಡಿನಾಗ. ಭರತ ಖಂಡದಲ್ಲಿ ಶೈವ, ಶಾಕ್ತ, ವೈಷ್ಣವ, ಬೌದ್ಧ, ಜೈನ ಮುಂತಾದ ಎಲ್ಲ ಮತಸಂಪ್ರದಾಯದವರಲ್ಲಿಯೂ ನಾಗಪ್ರತಿಮೆಯ ಪೂಜೆ ಪ್ರಚಲಿತವಿದೆ.

ನಾಗಾರಾಧನೆಯಿಂದ ಗೋವು ಧನ, ಧಾನ್ಯ, ಆಯುಷ್ಯ, ಸಂತಾನ ಸಮೃದ್ಧಿ ಯಾಗುವುದೆಂದು ನಂಬಿಕೆಯಿದೆ. ಹುಟ್ಟಿದ ಮಗು ಬಾಳಲೆಂದು ಮಗುವಿಗೆ ನಾಗರತ್ನ, ನಾಗಮಣಿ, ನಾಗರಾಜ, ಶೇಷ, ಭುಜಂಗ ಇತ್ಯಾದಿ ಹೆಸರನ್ನಿಡುವುದಿದೆ. ಸಂತಾನಾಪೇಕ್ಷೆಯಿಂದ ನಾಗಪೂಜೆ, ನಾಗಬಲಿಗಳನ್ನು ಆಚರಿಸುತ್ತಾರೆ. ವಡ್ಡಾರಾಧನೆ ಎಂಬ ಕನ್ನಡ ಗದ್ಯ ಗ್ರಂಥದ ಸುಕುಮಾರ ಸ್ವಾಮಿಯ ಕಥೆಯಲ್ಲಿ ಚಂಪಾನಗರದ ರಾಜಪುರೋಹಿತ ಸೋಮಶರ್ಮ ಮತ್ತು ಅವನ ಮಡದಿ ತ್ರಿವೇದಿ ಎಂಬ ದಂಪತಿಗಳು ಆ ನಗರದ ಉದ್ಯಾನದ ನಾಗರನ್ನು ಪೂಜಿಸಿ, ಹರಕೆ ಸಲ್ಲಿಸಿ, ಮಗಳನ್ನು ಪಡೆದುದಾಗಿಯೂ ಆ ಮಗಳಿಗೆ ನಾಗಶ್ರೀ ಎಂದು ಹೆಸರಿಟ್ಟುದಾಗಿಯೂ ಆ ಉದ್ಯಾನದಲ್ಲಿ ಕಂಬಳನಾಗ, ಶಂಬರನಾಗ, ಪಾಂಡುಕನಾಗ ಎಂಬ ನಾಗಪ್ರತಿಮೆಗಳಿದ್ದುದಾಗಿಯೂ ಹೇಳಿದೆ.

ನಾಗರಾಧನೆ ಸುಬ್ರಹ್ಮಣ್ಯದೇವರ ಆರಾಧನೆಯಾಗಿರುವುದಕ್ಕೆ ಪುರಾಣ ಕಥೆಯೊಂದಿದೆ. ಹಿಂದೆ ಗರುಡನ ಭೀತಿಯಿಂದ ಗುಹೆಯಲ್ಲಿ ಅಡಗಿದ್ದ ವಾಸುಕಿ ಶಿವನನ್ನು ಕುರಿತು ತಪಸ್ಸುಮಾಡಿದ. ಶಿವ ಮೆಚ್ಚಿ ಬಂದು ಮುಂದೆ ನನ್ನ ಮಗ ಸುಬ್ರಹ್ಮಣ್ಯ ರಾಕ್ಷಸರನ್ನು ಕೊಂದು ನಿನ್ನ ಬಳಿಗೆ ಬರುತ್ತಾನೆ. ನಿನ್ನನ್ನು ತನ್ನ ಅಂಶದಿಂದ ಸ್ಥಾಪಿಸಿ ಪೂಜಾರ್ಹನನ್ನಾಗಿ ಮಾಡುತ್ತಾನೆ. ನಿನ್ನನ್ನು ಭಜಿಸುವವರಿಗೆ ನಾನು ಇಷ್ಟಪ್ರದನಾಗುವೆ ಎಂದು ವರವಿತ್ತುದಾಗಿ ಸ್ಕಂದಪುರಾಣದ ಸಹ್ಯಾದ್ರಿ ಖಂಡದಲ್ಲಿ ಹೇಳಿದೆ. ಯಕ್ಷಗಾನ ಬಯಲಾಟದ ಸಭಾಲಕ್ಷಣದ ಪ್ರಕಾರ ಮಂಡಲ ನಾಯಕನಾದ ಸುಬ್ಬರಾಯನಿಗೆ ಸರ್ಪನಿಗೆ ರಂಗಸ್ಥಳದಲ್ಲಿ ಪೂಜೆ ಸಲ್ಲುತ್ತದೆ.

ಈಗಿನ ಕರ್ನಾಟಕದ ಗೋಕರ್ಣದಿಂದ ಕೇರಳದ ಕನ್ಯಾಕುಮಾರಿವರೆಗಿನ ಪರಶುರಾಮ ಕ್ಷೇತ್ರಕ್ಕೆ ಪ್ರಾಚೀನ ಕಾಲದಲ್ಲಿ ನಾಗಖಂಡ ಎಂದು ಹೆಸರಿತ್ತು (ಶಿಕಾರಿಪುರ ಶಾಸನಾಧಾರ). ಈ ಭಾಗದಲ್ಲಿ ಅಲ್ಲಲ್ಲಿ ನಾಗವನಗಳಿವೆ. ನಾಗವನದಲ್ಲಿ ನಾಗಪ್ರತಿಮೆಗಳ ಕಲ್ಲುಗಳೂ ಇರುತ್ತವೆ. ಸ್ಥಳಿಕರು ವರ್ಷಕ್ಕೊಮ್ಮೆ ಅಥವಾ ಹರಕೆ ಹೇಳಿದ್ದ ಸಂದರ್ಭದಲ್ಲಿ. ನಾಗವನಕ್ಕೆ ತಂಬುಲ ಎಂಬ ಹೆಸರಿನಲ್ಲಿ ಅರ್ಚನೆ ಸಲ್ಲಿಸುತ್ತಾರೆ. ಪೂಜೆಯ ದಿನ

ಕುಲಕುಟುಂಬದವರು ಸೇರಿ ನಾಗವನವನ್ನು ಶುದ್ಧಮಾಡಿ, ಒಕುಳಿ ನೀರನ್ನು ಕುರುದಿಯನ್ನು ಚೆಲ್ಲಿ, ಅರಳು, ಎಳನೀರು, ತೆಂಗಿನಕಾಯಿ, ಬೆಲ್ಲ, ಹೂಹಣ್ಣು, ತಾಂಬೂಲಗಳನ್ನು ನಿವೇದಿಸುತ್ತಾರೆ. ಪ್ರದಕ್ಷಿಣೆ ನಮಸ್ಕಾರಗಳನ್ನು ಸಲ್ಲಿಸಿ ಮನುಷ್ಯರಿಗೂ ದನಕರುಗಳಿಗೂ ಬೆಳೆಗೂ ಕ್ಷೇಮವಾಗುವಂತೆ ಪ್ರಾರ್ಥನೆ ಸಲ್ಲಿಸುತ್ತಾರೆ. ಬ್ರಾಹ್ಮಣೇತರರು ಅರ್ಚಿಸುವ ನಾಗವನದಲ್ಲಿ ಕೋಳಿಯನ್ನು ಬಲಿಕೊಡುವುದೂ ಇದೆ.

ನಾಗರಕಲ್ಲುಗಳನ್ನು ಪ್ರತೀಷ್ಠಾಪಿಸಿರುವುದು

ಉಡುಪಿ ಜಿಲ್ಲೆಯ ಕುಂದಾಪುರ, ಉಡುಪಿ ತಾಲ್ಲೂಕುಗಳಲ್ಲಿ ವೈದ್ಯರು ಎಂಬ ಬ್ರಾಹ್ಮಣ ಕುಲದವರು ನಾಗಮಂಡಲ ಎಂಬ ನೃತ್ಯಾತ್ಮಕ ಪೂಜಾ ಸಮಾರಂಭವನ್ನು ಆಚರಿಸುತ್ತಾರೆ. ಢಕ್ಕೆಯನ್ನು ಬಾರಿಸುತ್ತ ಅದರ ತಾಳದ ಗತಿಗೆ ಸರಿಯಾಗಿ ಕುಣಿದುಕೊಂಡು ನಾಗಮಂಡಲದ ನಾಗನಿಗೂ (ಸುಬ್ರಹ್ಮಣ್ಯ) ಇತರ ದೆವ್ವ ದೇವತೆಗಳಿಗೂ ಪೂಜೆ ಸಲ್ಲಿಸುತ್ತಾರೆ.



ನಾಗಾರಾಧನೆ

ಅರ್ಚಕನಾದ ವೈದ್ಯ ಅರ್ಧನಾರಿ, ಅರ್ಧಪುರುಷ ವೇಷದಲ್ಲಿರುತ್ತಾನೆ. ನಾಗರಾಧನೆಯ ಪ್ರತೀಕವಾಗಿ ನಾಗರ ಪಂಚಮಿ ಹಬ್ಬವನ್ನು ಶ್ರಾವಣ ಮಾಸದ ಶುದ್ಧ ಪಂಚಮಿಯಂದು ಆಚರಿಸಲಾಗುತ್ತದೆ. ನಾಗರಪಂಚಮಿ ಕುರಿತು ಜನಪದ ಕಥೆಗಳೂ ಗೀತಗಳೂ ಕನ್ನಡದಲ್ಲಿ ಪ್ರಚಲಿತವಾಗಿವೆ. ಇವು ಈ ನಾಗಾರಾಧನೆಯ ಹಿನ್ನೆಲೆ ಮತ್ತು ಮಹತ್ತ್ವದ ಬಗೆಗೆ ಬೆಳಕನ್ನು ಚೆಲ್ಲುತ್ತವೆ. ಆದರೆ ಹಿಂದಿನ ದಿನ ನಾಗರಚೌತಿ ಎಂದು ಆಚರಿಸುವ ಕ್ರಮವೂ ಇದೆ.ಇದಲ್ಲದೆ ಶುದ್ಧ ಷಷ್ಠಿದಿನವೂ ನಾಗಾರಾಧನೆ ಮಾಡುವುದುಂಟು. ಈ ಶ್ರಾವಣ ಮಾಸದಲ್ಲಿ ಎಲ್ಲೆಲ್ಲೂ ಹಸುರು ಬೆಳೆದು ನಿಂತಿರುತ್ತದೆ. ಈ ಕಾಲದಲ್ಲೇ ಹಾವುಗಳ ಕಾಟವೂ ಹೆಚ್ಚು. ಆಪತ್ಕಾರಿ ವಿಪತ್ತುಗಳ ಸಾಕ್ಷಾದ್ರೂಪಗಳೇ ಹಾವುಗಳು. ಆದುದರಿಂದ ದೇವರೇ ಸುಬ್ರಹ್ಮಣ್ಯನೇ, ಸರ್ಪಭೀತಿಯಿಂದ ಪಾರುಮಾಡು, ನಾಗನೇ, ತೊಂದರೆ ಕೊಡಬೇಡ, ನಿನ್ನನ್ನು ಇಗೋ ತೃಪ್ತಿಪಡಿಸುತ್ತೇವೆ ಎಂಬ ಭಾವನೆಯಿಂದ ನಾಗಾರಾಧನೆ ರೂಢಿಗೆ ಬಂದಿರಬೇಕು. ನಾಗನನ್ನು ಕ್ಷೇತ್ರಪಾಲಕನೆಂದೂ ಕರೆಯುತ್ತಾರೆ. ನಾಗಗಳಿದ್ದ ಹೊಲದಲ್ಲಿ ಇತರ ಕೀಟಗಳಿಂದ, ಕಳ್ಳರಿಂದ ತೊಂದರೆ ಬರುವುದಿಲ್ಲ. ಈ ಕಾರಣದಿಂದಲೂ ನಾಗಪೂಜೆಗೆ ಔಚಿತ್ಯವಿದೆ.

ನಾಗರಪಂಚಮಿ ಹೆಣ್ಣುಮಕ್ಕಳ ಹಬ್ಬ. ಅವರಿಗೆ ಇದು ಮಾಂಗಲ್ಯ ಪುತ್ರ ಸಂಪತ್ಪ್ರದವೆಂದು ಭಾವಿಸಲಾಗಿದೆ. ಈ ಹಬ್ಬದಂದು ಬೆಳಗ್ಗೆ ಎದ್ದು ಸ್ನಾನಮಾಡಿ ಮಡಿಯುಟ್ಟು ಕಲ್ಲನಾಗನಿಗೆ ಅಥವಾ ಮಣ್ಣಿನ ನಾಗನಿಗೆ ಅಥವಾ ಹುತ್ತಕ್ಕೆ ಪೂಜೆ ನೈವೇದ್ಯ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ. ಅರಳಹಿಟ್ಟು, ತಂಬಿಟ್ಟು, ಉಂಡೆ, ಉಸಳಿಗಳನ್ನು ನೈವೇದ್ಯಮಾಡಿ ಒಬ್ಬೊಬ್ಬರಾಗಿ ಹಾಲೆರೆದು ವಂದಿಸುತ್ತಾರೆ. ರಂಗೋಲಿಯಲ್ಲಿ ನಾಗನನ್ನು ಬಿಡಿಸಿ ಹುತ್ತದ ಮಣ್ಣು, ಗೋದಿಹಿಟ್ಟು- ಇವನ್ನು ಕಲಸಿ ಹಾವಿನ ಆಕೃತಿಗಳನ್ನು ರಚಿಸಿ ತಟ್ಟೆಯಲ್ಲಿಟ್ಟು ಅದನ್ನು ರಂಗೋಲಿಯ ನಾಗನ ಮೇಲಿಟ್ಟು ಹಾಲು, ತುಪ್ಪ, ಅರಳು ಮುಂತಾದುವನ್ನು ನೈವೇದ್ಯ ಮಾಡಿ ಪೂಜಿಸುವುದೂ ಪದ್ಧತಿ. ನಾಗಪೂಜೆಯ ಅನಂತರ ಉಪಾಹಾರ ಅಥವಾ ಊಟ ಮಾಡಿ ಉಯ್ಯಾಲೆಯಾಡಲು ಹೊರಡುತ್ತಾರೆ. ಈ ಹಬ್ಬಕ್ಕೆ ಹೆಣ್ಣು ಮಕ್ಕಳು ತವರುಮನೆಗೆ ಬಂದಿರುವುದು ವಾಡಿಕೆ. *

**ನಾಗಾರ್ಜುನ:** ಸು. 6ನೆಯ ಶತಮಾನ. ಕರ್ನಾಟಕದಲ್ಲಿ ಹುಟ್ಟಿ ವಿಖ್ಯಾತನಾದ ಆಯುರ್ವೇದಾಚಾರ್ಯ. ಸಿದ್ಧರ ಪರಂಪರೆಗೆ ಸೇರಿದವ. ಜೈನಸಾಹಿತ್ಯದಲ್ಲಿ ಖ್ಯಾತನಾದ ವೇದಾಂತಿ. ವೈದ್ಯಶಾಸ್ತ್ರಜ್ಞನಾದ ಪೂಜ್ಯಪಾದನ ಸೋದರಳಿಯ, ಪಾದಲಿಪ್ತಸೂರಿಯ ಮಗ. ಪೂಜ್ಯಪಾದನಿಂದ ವಿದ್ಯೆ ಕಲಿತ. ಜನ್ಮತಃ ಜೈನನಾದರೂ ಬೌದ್ಧಮತದ ತತ್ತ್ವಗಳಲ್ಲಿ ಅಭಿರುಚಿ ಹೊಂದಿ ಬೌದ್ಧ ಮತಾವಲಂಬಿಯಾದ. ಭಾರತದ ನಾನಾ ಭಾಗಗಳಲ್ಲಿ ಹಾಗೂ ನೇಪಾಲ, ಟಿಬೆಟ್‌ಗಳಲ್ಲಿ ಸಂಚರಿಸಿ ಬೌದ್ಧಮತ ಪ್ರಾಚಾರ ಮಾಡಿದ. ಟಿಬೆಟಿನಲ್ಲಿ ಒಂದು ಮಠದ ಅಧಿಪತಿಯಾಗಿ ಬಹುಕಾಲ ಇದ್ದು ಅನೇಕ ಗ್ರಂಥಗಳನ್ನು ರಚಿಸಿದ. ಅನಂತರ ಶ್ರೀಶೈಲದಲ್ಲಿ ನೆಲಸಿ ರಸಸಿದ್ಧಿಯನ್ನು ಪಡೆದುದರಿಂದ ಈತನನ್ನು ಸಿದ್ಧನಾಗಾರ್ಜುನನೆಂದು ಕರೆಯುವುದು ವಾಡಿಕೆಯಾಗಿದೆ. ಭಾರತೀಯ ರಸಶಾಸ್ತ್ರವನ್ನು ಕುರಿತ ರಸಕಚ್ಚಪುಟ, ಕಕ್ಷಪುಟತಂತ್ರ ಅಥವಾ ಸಿದ್ಧಚಾಮುಂಡ ಮುಂತಾದ ಗ್ರಂಥಗಳು ಈತನಿಂದ ರಚಿತವಾಗಿವೆ. *

**ನಾಗೇಂದ್ರರಾವ್, ಆರ್.:** 1896– 1977. ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ರಂಗದ ಉತ್ಕರ್ಷಕ್ಕಾಗಿ ಶ್ರಮಿಸಿದ ಪ್ರಸಿದ್ಧ ನಟ, ನಿರ್ದೇಶಕ, ನಿರ್ಮಾಪಕ. ರಟ್ಟೇಹಳ್ಳಿ ನಾಗೇಂದ್ರರಾವ್ ಎಂಬುದು ಇವರ ಪೂರ್ಣ ಹೆಸರು. 1896 ಜೂನ್ 23ರಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ಜನಿಸಿದರು. ಇವರ ತಂದೆ ರಟ್ಟೇಹಳ್ಳಿ ಕೃಷ್ಣರಾವ್, ತಾಯಿ ರುಕ್ಮಿಣಿದೇವಿ. ನಾಗೇಂದ್ರರಾಯರು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ಅನಂತರ ಅತಿ ಪ್ರಯಾಸದಿಂದ ಪ್ರೌಢಶಾಲೆಯ ವ್ಯಾಸಂಗ ಮುಗಿಸಿದರು. ಆಗ ಶಾಲೆಯ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದು ಉತ್ತಮ ನಟನೆಂಬ ಹೆಸರುಗಳಿಸಿದ್ದರು. ತಂದೆಯ ಮರಣಾನಂತರ ಶಿರಹಟ್ಟಿ ವೆಂಕೋಬರಾಯರ ನಾಟಕಮಂಡಲಿಯಲ್ಲಿ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಒಮ್ಮೆ ಚಂದ್ರಹಾಸ ನಾಟಕದಲ್ಲಿ ವಿಷಯೆಯ ಪಾತ್ರವನ್ನು ನಿರ್ವಹಿಸುತ್ತಿದ್ದಾಗ ವರದಾಚಾರ್ಯರ

ರತ್ನಾವಳಿ ಥಿಯೇಟ್ರಿಕಲ್ ಕಂಪನಿಯ ಪ್ರಮುಖ ನಟರಲ್ಲೊಬ್ಬರಾಗಿದ್ದ ಡಿ.ಜಯರಾಯರ ದೃಷ್ಟಿಗೆ ಬಿದ್ದು ಮೆಚ್ಚುಗೆ ಗಳಿಸಿ ಅವರ ಪ್ರೋತ್ಸಾಹದಿಂದ ವರದಾಚಾರ್ಯರ ಕಂಪನಿಯನ್ನು, ಆ ಮೂಲಕ ರಂಗಭೂಮಿಯನ್ನು ಖಾಯಂ ಆಗಿ ಪ್ರವೇಶಿಸಿದರು.

ವರದಾಚಾರ್ಯರ ಕಂಪನಿ ಸೇರಿದ ಮೇಲೆ ಸ್ತ್ರೀ ಪಾತ್ರಗಳ ನಿರ್ವಹಣೆ ಇವರ ಪಾಲಿನದಾಯಿತು. ರಾಯರಿಗಿದ್ದ ರೂಪ, ಕಂಠ ಮಾಧುರ್ಯದಿಂದಾಗಿ ಸ್ತ್ರೀ ಪಾತ್ರಗಳು ಇವರಿಗೆ ಚೆನ್ನಾಗಿ ಒಪ್ಪುತ್ತಿದ್ದವು. ಪರಿಣಾಮವಾಗಿ ಪ್ರಹ್ಲಾದ ಚರಿತ್ರೆಯಲ್ಲಿ ಭೂದೇವಿ, ಸುಗ್ರೀವಸಖ್ಯ, ಲಂಕಾದಹನ, ಸಂಪೂರ್ಣ ರಾಮಾಯಣ ನಾಟಕಗಳಲ್ಲಿ ಸೀತೆ, ಶಾಕುಂತಲದಲ್ಲಿ ಶಾಕುಂತಲ, ರಾಮವರ್ಮ-ಲೀಲಾವತಿಯಲ್ಲಿ ಲೀಲಾವತಿ, ಹರಿಶ್ಚಂದ್ರದಲ್ಲಿ ಚಂದ್ರಮತಿ ಮೊದಲಾದ ಪಾತ್ರಗಳು, ಲಭ್ಯವಾದವು. ಸ್ತ್ರೀ ಪಾತ್ರಗಳಲ್ಲಿನ ಇವರ ಅಭಿನಯ ರಂಗಭೂಮಿಯ ಅಭಿಮಾನಗಳ ಮೆಚ್ಚುಗೆಗೆ ಪಾತ್ರವಾಯಿತು.

ವರದಾಚಾರ್ಯರ ನಿಧನಾನಂತರ ಕಂಪನಿ ನಿಂತಿತು. ಆಗ ರಾಯರು ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾಕ್ಕೆ ಸೇರಿ ಪ್ರಮುಖ ನಟರಾಗಿ, ವ್ಯವಸ್ಥಾಪಕರಾಗಿ ಕಂಪನಿಯ ಏಳ್ಗೆಗಾಗಿ ಶ್ರಮಿಸಿದರು. ಇಲ್ಲಿರುವಾಗ ಕಂಪನಿಗಾಗಿ ತುಕಾರಾಮ್, ದಾನಶೂರ ಕರ್ಣ, ವೀರ ಅಭಿಮನ್ಯು ನಾಟಕಗಳನ್ನು ಬರೆದು ಪ್ರದರ್ಶಿಸಿದರು. ಕಂಪನಿಯ ಪ್ರಮುಖ ನಾಟಕವಾದ ತುಕಾರಾಮ್‌ನಲ್ಲಿ ಇವರು ನಿರ್ವಹಿಸುತ್ತಿದ್ದ ಜೀಜಾಬಾಯಿ ಪಾತ್ರ ರಂಗಭೂಮಿಯಲ್ಲಿ ಸಾಕಷ್ಟು ಹೆಸರುಗಳಿಸಿತು. ನಿರಂತರವಾಗಿ ಸ್ತ್ರೀ ಪಾತ್ರಗಳನ್ನೇ ನಿರ್ವಹಿಸುತ್ತ ಬಂದ ರಾಯರು ಪುರುಷ ಪಾತ್ರಗಳನ್ನೂ ವಹಿಸತೊಡಗಿದರು. ರಾಜಸೂಯಯಾಗದಲ್ಲಿ ಅರ್ಜುನ, ವೀರ ಅಭಿಮನ್ಯುವಿನಲ್ಲಿ ಅಭಿಮನ್ಯು ಪಾತ್ರಗಳನ್ನು ನಿರ್ವಹಿಸಿ ಪುರುಷ ಪಾತ್ರಗಳಲ್ಲಿಯೂ ತಮ್ಮ ಕಲಾವಂತಿಕೆಯನ್ನು ಪ್ರದರ್ಶಿಸಿದರು.

ಈ ವೇಳೆಗಾಗಲೇ ಮೂಕ ಚಿತ್ರಗಳ ಕಾಲ ಮಾಯವಾಗಿ ಟಾಕಿ ಚಿತ್ರಗಳ ಪ್ರಾದುರ್ಭಾವವಾಗಿತ್ತು. ಚಲನಚಿತ್ರರಂಗದ ಆಕರ್ಷಣೆಗೆ ಸಿಕ್ಕ ರಾಯರು ನಾಟಕ ಕಂಪನಿಯನ್ನು ಬಿಟ್ಟು ಮುಂಬಯಿಗೆ ಹೋದರು. ಅಲ್ಲಿ ತಮಿಳು ನಟ ನಿರ್ದೇಶಕ ರಾಜಾ ಸ್ಯಾಂಡೋ ಅವರ ಪರಿಚಯವಾಗಿ ಅವರ ಪ್ರೋತ್ಸಾಹದಿಂದ ಇಂಪೀರಿಯಲ್ ಫಿಲಮ್ಸ್ ಅವರ ತಮಿಳು ಚಿತ್ರಗಳಲ್ಲಿ ನಟಿಸುವ ಅವಕಾಶ ಲಭಿಸಿತು. ಪಾರಿಜಾತಪುಷ್ಪಹರಣಂ ಇವರ ಅಭಿನಯದ ಮೊದಲ ತಮಿಳು ಚಿತ್ರ. ಈ ಚಿತ್ರದ ಮೂಲಕ ರಾಯರು ಚಲನಚಿತ್ರರಂಗಕ್ಕೆ ಪದಾರ್ಪಣ ಮಾಡಿದರು. ಅನಂತರ ಕೋವಲಂ, ಭಕ್ತ ರಾಮದಾಸ್ ಮುಂತಾದ ತಮಿಳು ಚಿತ್ರಗಳಲ್ಲಿ ಅಭಿನಯಿಸಿದರು. ಈ ನಡುವೆ ಪ್ರಸಿದ್ಧ ರಂಗಭೂಮಿ ನಟ ಸುಬ್ಬಯ್ಯ ನಾಯ್ಡು ಅವರ ಸ್ನೇಹ ಪರಿಚಯವಾಗಿ ಇಬ್ಬರೂ ಸೇರಿ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯನ್ನು ಸ್ಥಾಪಿಸಿ ಕನ್ನಡ ರಂಗಭೂಮಿಯಲ್ಲಿ ಕ್ರಾಂತಿಯನ್ನುಂಟುಮಾಡಿದರು. ಆ ಕಾಲದಲ್ಲಿ ಕನ್ನಡ ರಂಗಭೂಮಿಯಲ್ಲಿ ಗಣನೀಯ ಪ್ರಗತಿಯುಂಟಾಯಿತು. ಬೆಳಕಿನ ಸಂಯೋಜನೆ, ರಂಗಸಜ್ಜಿಕೆಗಳನ್ನು ಅದ್ಭುತ ರೀತಿಯಲ್ಲಿ ರಂಗಕ್ಕೆ ಅಳವಡಿಸಿದರು. ರಾಯರ ದಕ್ಷ ನಿರ್ದೇಶನದಲ್ಲಿ ಭೂಕೈಲಾಸ ನಾಟಕ ಕರ್ನಾಟಕದಲ್ಲಿ ಪ್ರಚಂಡ, ಯಶಸ್ಸು ಗಳಿಸಿತು. ಇದೇ ನಾಟಕದ ತಮಿಳು ಅವತರಣಿಕೆ ತಮಿಳುನಾಡು, ಹೈದರಾಬಾದ್ ಪ್ರಾಂತ್ಯಗಳಲ್ಲೂ ಜಯಭೇರಿ ಹೊಡೆಯಿತು.

1934ರಲ್ಲಿ ನಿರ್ಮಾಣವಾದ ಪ್ರಥಮ ಕನ್ನಡ ವಾಕ್ಚಿತ್ರ ಸತೀ ಸುಲೋಚನ ರಾಯರು ಅಭಿನಯಿಸಿದ ಮೊದಲ ಕನ್ನಡ ಚಿತ್ರ. ಇದರಲ್ಲಿ ಇವರು ರಾವಣನಾಗಿ ಅಭಿನಯಿಸಿದರು. 1939ರಲ್ಲಿ ವೇಲ್ ಪಿಕ್ಚರ್ಸ್ ಪಾಲುಗಾರಿಕೆಯೊಂದಿಗೆ ಭೂಕೈಲಾಸ ಚಿತ್ರವನ್ನು ತೆಲುಗಿನಲ್ಲಿ ತಯಾರಿಸಿದರು. ಈ ಚಿತ್ರ ಪ್ರಚಂಡ ಯಶಸ್ಸು ಗಳಿಸಿತು. ಅನಂತರ ಪ್ರಗತಿ ಪಿಕ್ಚರ್ಸ್ ಪಾಲುಗಾರಿಕೆಯೊಂದಿಗೆ ವಸಂತ ಸೇನೆ (1941), ಹರಿಶ್ಚಂದ್ರ, ಮಹಾತ್ಮ ಕಬೀರ್ ಚಿತ್ರಗಳನ್ನು ನಿರ್ಮಿಸಿದರು. ಇವೂ ಶ್ರೇಷ್ಠ ಚಿತ್ರಗಳೆಂದು ಪ್ರಶಂಸೆ ಪಡೆದವು. ವಸಂತಸೇನೆ ಚಿತ್ರಕ್ಕೆ ಚಿತ್ರ ಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಬರೆದವರು ರಾಯರೇ. ಈ ಚಿತ್ರದಲ್ಲಿ ಇವರು ಶಕಾರನ ಪಾತ್ರವಹಿಸಿದ್ದರು. ಈ ಪಾತ್ರ ರಾಯರ ಹೆಸರನ್ನು ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಚಿರಸ್ಥಾಯಿಯನ್ನಾಗಿ ಮಾಡಿತು.

ಸುಬ್ಬಯ್ಯನಾಯ್ಡು ಅವರೊಂದಿಗಿದ್ದ ದೀರ್ಘ ಸ್ನೇಹಬಾಂಧವ್ಯ ಕಡಿದುಬಿದ್ದ ಅನಂತರ ರಾಯರು 1947ರಲ್ಲಿ ಜೆಮಿನಿ ಚಿತ್ರಸಂಸ್ಥೆಗೆ ಸೇರಿದರು. ಅಲ್ಲಿ ಜೆಮಿನಿ ಚಿತ್ರ ಸಂಸ್ಥೆಗಾಗಿ ಮೂವರು ತನಯರು ಎಂಬ ಚಿತ್ರವನ್ನು ತಾವೇ ನಿರ್ದೇಶಿಸಿದರು. ಅನಂತರ ತಮಿಳು, ತೆಲುಗು ಹಾಗೂ ಹಿಂದಿಯಲ್ಲಿ ತಯಾರಾದ ಸ್ಟ್ರೇಂಜ್ ಬ್ರದರ್ಸ್ ಚಿತ್ರದಲ್ಲಿ ಖಳನಾಯಕನಾಗಿ ಪಾತ್ರವಹಿಸಿದರು. ಆ ಚಿತ್ರದಲ್ಲಿ ರಾಯರ ಪಾತ್ರ ಶ್ರೇಷ್ಠ ಮಟ್ಟದ್ದಾಗಿತ್ತು. ಇವರ ಕೀರ್ತಿ ಭಾರತದಾದ್ಯಂತ ಪ್ರಸರಿಸಿತು. 1952ರಲ್ಲಿ ರಾಯರು ಆರೆನ್ನಾರ್ ಪಿಕ್ಚರ್ಸ್ ಎಂಬ ಸ್ವಂತ ಚಿತ್ರ ಸಂಸ್ಥೆಯನ್ನು ಪ್ರಾರಂಭಿಸಿದರು. ಜಾತಕಫಲ ಈ ಸಂಸ್ಥೆಯ ಪ್ರಥಮ ಕನ್ನಡ ಚಿತ್ರ. ಚಿತ್ರದ ಪ್ರಮುಖ ಪಾತ್ರದ ಜತೆಗೆ ರಾಯರು ನಿರ್ದೇಶನದ ಭಾರವನ್ನೂ ತಾವೇ ಹೊತ್ತರು. ಈ ಚಿತ್ರ ತಮಿಳಿನಲ್ಲಿಯೂ ತಯಾರಾಯಿತು. ಹಿನ್ನೆಲೆ ಗಾಯಕ ಪಿ.ಬಿ. ಶ್ರೀನಿವಾಸ್ ಚಿತ್ರರಂಗಕ್ಕೆ ಪದಾರ್ಪಣಗೈದದ್ದು ಈ ಚಿತ್ರದ ಮೂಲಕವೇ. ಅನಂತರ ತಯಾರಾದ ಪ್ರೇಮದ ಪುತ್ರಿ (1957) ರಾಷ್ಟ್ರಪತಿ ರಜತ ಪದಕ ಪಡೆದ ಮೊದಲ ಕನ್ನಡ ಚಿತ್ರವಾಯಿತು. ವಿಜಯನಗರದ ವೀರಪುತ್ರ, ಆನಂದಬಾಷ್ಪ, ಪತಿಯೇ ದೈವ ಇವು ರಾಯರು ತಯಾರಿಸಿದ ಇತರ ಚಿತ್ರಗಳು.

ರಾಯರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಗಾಳಿಗೋಪುರ ಚಿತ್ರದಲ್ಲಿನ ಅಭಿನಯಕ್ಕಾಗಿ 1963ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿ ಶ್ರೇಷ್ಠ ಪೋಷಕನಟ ಎಂಬ ಪ್ರಶಸ್ತಿ ನೀಡಿ ಗೌರವಿಸಿತು. 1969ರಲ್ಲಿ ತೆರೆಕಂಡ ಹಣ್ಣೆಲೆ ಚಿಗುರಿದಾಗ ಚಿತ್ರದಲ್ಲಿ ಇವರಿಗೆ ಆ ವರ್ಷದ ಶ್ರೇಷ್ಠನಟರೆಂಬ ಪ್ರಶಸ್ತಿ ಲಭಿಸಿತು. ಅದೇ ವರ್ಷ ತೆರೆ ಕಂಡ ನಮ್ಮ ಮಕ್ಕಳು ಚಿತ್ರದ ಉತ್ತಮ ನಿರ್ದೇಶನಕ್ಕಾಗಿ ಇವರಿಗೆ ರಜತ ಪದಕ ದೊರೆಯಿತು. 1961ರಲ್ಲಿ ಇವರು ದಕ್ಷಿಣ ಭಾರತ ಕಲಾವಿದರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ದಕ್ಷಿಣ ಭಾರತ ಫಿಲಂ ಚೇಂಬರ್ ಕಾರ್ಯಕಾರಿ ಸಮಿತಿ ಸದಸ್ಯರೂ ಆಗಿದ್ದರು.

ಕರ್ನಾಟಕ ಸಂಗೀತದಲ್ಲೂ ರಾಯರು ಸಾಕಷ್ಟು ಪರಿಣತರಾಗಿದ್ದರು. ಕೆ.ವಾಸುದೇವಾಚಾರ್ಯರಲ್ಲೂ ಚಿಕ್ಕರಾಮರಾಯರಲ್ಲೂ ಕರಿಗಿರಿರಾಯರಲ್ಲೂ ಕೆಲವು ದಿನಗಳ ಕಾಲ ಸಂಗೀತವನ್ನು ಅಭ್ಯಾಸ ಮಾಡಿದ್ದರು. ಚಲನಚಿತ್ರಗಳಲ್ಲಿ ಅಭಿನಯಿಸುವುದನ್ನು ಕಡಿಮೆ ಮಾಡಿದ ಅನಂತರ ರಾಯರು

ಬೆಂಗಳೂರಿನಲ್ಲಿ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಅದರ ಪ್ರಿನ್ಸಿಪಾಲರಾದರು. ಅದರ ಅಭ್ಯುದಯಕ್ಕಾಗಿ ಶ್ರಮಿಸಿದರು. ಈ ಸಂಸ್ಥೆಯಿಂದ ಅನೇಕ ಪ್ರತಿಭಾವಂತ ನಟರು ಚಿತ್ರರಂಗ ಪ್ರವೇಶಿಸಿದ್ದಾರೆ.

ರಾಯರದು ತುಂಬು ಬಾಳು. ತಮ್ಮ ಮೂವರು ಮಕ್ಕಳನ್ನೂ ಕಲಾ ಪ್ರಪಂಚಕ್ಕೆ ತಂದಿದ್ದರು. ಆರ್.ಎನ್. ಕೃಷ್ಣಪ್ರಸಾದ್ ಛಾಯಾಗ್ರಾಹಕರು, ಆರ್.ಎನ್. ಜಯಗೋಪಾಲ್ ಚಿತ್ರಸಾಹಿತಿ, ಆರ್.ಎನ್. ಸುದರ್ಶನ್ ನಟರು.

ಸುಮಾರು ಮೂರು ದಶಕಗಳ ಕಾಲ ಕನ್ನಡ ಚಿತ್ರರಂಗದ ಹಾಗೂ ರಂಗಭೂಮಿಯ ಏಳಿಗೆಗಾಗಿ ಶ್ರಮಿಸಿ ಕನ್ನಡಿಗರಿಂದ ಕನ್ನಡ ಚಿತ್ರರಂಗದ ಭೀಷ್ಮಾಚಾರ್ಯ ಎಂಬ ಅಭಿದಾನಕ್ಕೆ ಪಾತ್ರರಾದ ರಾಯರು 1977ರ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ನಿಧನರಾದರು. ಇದು ನನ್ನ ಕಥೆ ಎಂಬ ಇವರ ಆತ್ಮಕಥನ ಪ್ರಕಟವಾಗಿದೆ (1974). (ಎಸ್.ಎಚ್.ವಿ)

**ನಾಗೇಂದ್ರ ಸ್ಥಪತಿ:** 1913 – . ಕರ್ನಾಟಕದ ಹೆಸರಾಂತ ಶಿಲ್ಪಿ. ಹುಟ್ಟಿದ್ದು ಮೈಸೂರಿನಲ್ಲಿ. ತಂದೆ ಹೆಸರಾಂತ ಶಿಲ್ಪಿ ಸಿದ್ಧಲಿಂಗಸ್ವಾಮಿ. ಇವರ ನಾಮಕರಣಕ್ಕೆ ಮುಂಚೆ ತೊಟ್ಟಿಲಿನಲ್ಲಿ ಸರ್ಪವೊಂದು ಕಾಣಿಸಿಕೊಂಡದ್ದರಿಂದ ಇವರಿಗೆ ನಾಗೇಂದ್ರ ಸ್ಥಪತಿ ಎಂಬ ಹೆಸರು ಇಡಲಾಯಿತಂತೆ. ತಂದೆಯಿಂದ ಈ ಕಲೆಯಲ್ಲಿ ಆಸಕ್ತರಾಗಿ ಚಾಮರಾಜೇಂದ್ರ ಕಲಾಶಾಲೆಯ ವಿದ್ಯಾರ್ಥಿಯಾಗಿ ಸೇರಿದರು. ಕೆ. ಕೇಶವಯ್ಯ ಇವರ ಕಲಾಗುರು. ಶಿಲ್ಪ, ಜ್ಯೋತಿಷ್ಯ, ಚಿತ್ರ ಮುಂತಾದುವುಗಳ ಕಡೆ ಇವರ ಒಲವು ಹೆಚ್ಚಾಗಿ ಪಾಠಶಾಲೆಯ ಓದು ಅಷ್ಟಾಗಿ ಮುಂದುವರಿಯಲಿಲ್ಲ. ಸಂಗೀತದಲ್ಲೂ ಅಭಿರುಚಿ ಇತ್ತಾಗಿ ಮೃದಂಗ ವಾದನದಲ್ಲಿ ವಿಶೇಷ ಪರಿಶ್ರಮ ಸಾಧಿಸಿದರು. ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರ ಹಾಗೂ ಸಂಗೀತಶಾಸ್ತ್ರರತ್ನವೆಂದು ಖ್ಯಾತರಾಗಿದ್ದ ವಾಸುದೇವಾಚಾರ್ಯರ ಕಚೇರಿಗಳಲ್ಲಿ ಮೃದಂಗ ಬಾರಿಸಿ ಖ್ಯಾತಿ ಪಡೆದರು. ಹೀಗೆ ಕಲೆಯ ನಾನಾ ಪ್ರಕಾರಗಳಲ್ಲಿ ಪಳಗಿ ಕೊನೆಗೆ ಪರಂಪರೆಯಿಂದ ಬಂದ ಶಿಲ್ಪವೃತ್ತಿಯೊಂದನ್ನೇ ಕೈಗೂಡಿಸಿಕೊಂಡು ಒಳ್ಳೆಯ ಕೆಲಸ ಮಾಡಿದರು.

ಚಾಮರಾಜೇಂದ್ರ ಕಲಾಶಾಲೆಯಲ್ಲಿ ಪಾಶ್ಚಾತ್ಯ ಸಂಪ್ರದಾಯದಲ್ಲಿ ಚಿತ್ರಕಲಾ ಶಿಕ್ಷಣ ಪಡೆದು ಅನೇಕ ಶಾಸ್ತ್ರೀಯ ವರ್ಣಚಿತ್ರಗಳನ್ನು ಆ ಸಂಪ್ರದಾಯದಲ್ಲಿ ಇವರು ರಚಿಸಿದ್ದಾರೆ. ಇವರ ಅನೇಕ ದೇವದೇವತಾ ಚಿತ್ರಪಟಗಳನ್ನು ನಾನಾ ಕಡೆಗಳಲ್ಲಿ ಕಾಣಬಹುದು. ಮೈಸೂರಿನ ಅರಮನೆಯ ಸಭಾಮಂಟಪದ ಒಳ ಚಾವಣಿ ವಿನ್ಯಾಸದಲ್ಲಿ ಬರುವ ಶಾಸ್ತ್ರೀಯ ಚಿತ್ರಗಳಲ್ಲಿ ತಂದೆಯ ಮಾರ್ಗದರ್ಶನದಲ್ಲಿಯೇ ಕೆಲಸ ಮಾಡುತ್ತ ಇವರು ಉತ್ತಮ ವರ್ಣ ಮೋಡಿಯನ್ನು ಮೆರೆದಿದ್ದಾರೆ. ಇವರು ಉತ್ತಮ ಶಿಲ್ಪಿಗಳು ಎಂಬುದಕ್ಕೆ ಇವರು ಕಡೆದ ನೈಜ ಶಿಲಾಮೂರ್ತಿಗಳೇ ನಿದರ್ಶನ. ಬಸವಕಲ್ಯಾಣದ ಗುಹೆಗೆ ರಚಿಸಿಕೊಟ್ಟ ಅಕ್ಕಮಹಾದೇವಿ, 5 ಅಡಿ ಎತ್ತರವಿರುವ ಮೈಸೂರು ಅರಮನೆಯ ಭುವನೇಶ್ವರಿ, ಮೈಸೂರಿನ ಕಾಮಕಾಮೇಶ್ವರಿ ದೇವಾಲದ ಶಿಲಾಮೂರ್ತಿಗಳು, ಬೆಂಗಳೂರಿನ ಸುಬ್ರಹ್ಮಣ್ಯಪುರದ ದೇವಾಲಯದ ವಲ್ಲಿದೇವಸೇನ ಸುಬ್ರಹ್ಮಣ್ಯಸ್ವಾಮಿ, ಚಿಕ್ಕಮಗಳೂರಿನ ಸತಿ ಸೋದರ ಸಮೇತನಾದ ಶ್ರೀರಾಮ ವಿಗ್ರಹ, ಗುಲ್ಬರ್ಗಕ್ಕೆ ಮಾಡಿಕೊಟ್ಟ 4 ಅಡಿ ಎತ್ತರದ ಮಹಾಕಾಳಿಕಾ, ದಾವಣಗೆರೆಯ ಪಾರ್ಶ್ವನಾಥ ದೇವಾಲಯಕ್ಕೆ ಮಾಡಿಕೊಟ್ಟ ಪಾರ್ಶ್ವನಾಥ– ಇವುಗಳನ್ನು ಉಲ್ಲೇಖಿಸಬಹುದು.

ಮೈಸೂರಿನ ಕಾಮಕಾಮೇಶ್ವರಿ ದೇವಾಲಯದ ಮುಂದೆ ಬೃಹತ್ ನಂದಿ ವಿಗ್ರಹವೊಂದನ್ನು ಕಡೆಯಬೇಕೆಂಬ ತಂದೆಯ ಆಸೆಯನ್ನು ಇವರು ಈಡೇರಿಸಿದ್ದರು (1954). *

**ನಾಗೇಗೌಡ, ಎಚ್.ಎಲ್.:** 1915 –2005. ಪ್ರಸಿದ್ಧ ಲೇಖಕ, ಜಾನಪದ ವಿದ್ವಾಂಸ, ಸಂಗ್ರಹಕಾರ, ಅನುವಾದಕ, ಜಾನಪದ ಲೋಕ ಎಂಬ ವಸ್ತುಸಂಗ್ರಹಾಲಯ ಹಾಗೂ ಸಂಶೋಧನ ಕೇಂದ್ರದ ನಿರ್ಮಾತೃ. ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹೆರಗನಹಳ್ಳಿ ಇವರ ಹುಟ್ಟೂರು. ತಂದೆ ಲಿಂಗೇಗೌಡ, ತಾಯಿ ಹುಚ್ಚಮ್ಮದೇವಿ. ಹೆರಗನಹಳ್ಳಿ, ಅಳೀಸಂದ್ರ, ನಾಗತಿಹಳ್ಳಿ, ಚನ್ನರಾಯಪಟ್ಟಣ, ಚನ್ನಪಟ್ಟಣ, ಬೆಂಗಳೂರು, ಮೈಸೂರು, ಪುಣೆ ಮುಂತಾದ ಕಡೆಗಳಲ್ಲಿ ಶಿಕ್ಷಣ ಪಡೆದರು. ಇವರು ಕಲಿತದ್ದು ವಿಜ್ಞಾನ ಮತ್ತು ನ್ಯಾಯಶಾಸ್ತ್ರಗಳನ್ನು.

ಇವರು ಬಿ.ಎಸ್‌ಸಿ. ಮತ್ತು ಎಲ್.ಎಲ್.ಬಿ. ಪದವಿಗಳನ್ನು ಪಡೆದ ಅನಂತರ 1939 ರಲ್ಲಿ ನರಸಿಂಹರಾಜಪುರ ಕೋರ್ಟ್ ಹೆಡ್‌ಮುನ್ಷಿಯಾಗಿ ಸರ್ಕಾರಿ ಸೇವೆಗೆ ಸೇರಿದರು. ಅನಂತರ ಮೈಸೂರು ಸಿವಿಲ್ ಸರ್ವಿಸ್ (ಎಂ.ಸಿ.ಎಸ್.) ಸ್ಪರ್ಧಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ರೆವಿನ್ಯೂ ಇಲಾಖೆಯಲ್ಲಿ ನೇಮಕಗೊಂಡರು. ಅಮಲ್ದಾರ್ (ತಹಸೀಲ್ದಾರ್) ಆಗಿ, ಅಸಿಸ್ಟೆಂಟ್ ಕಮಿಷನರ್ ಆಗಿ ಭಾರತ ಸರ್ಕಾರದಲ್ಲಿ ಅನೇಕ ಆಡಳಿತಾತ್ಮಕ ಹುದ್ದೆಗಳನ್ನು ನಿರ್ವಹಿಸಿ 1961 ರಲ್ಲಿ ಐ.ಎ.ಎಸ್. ಶ್ರೇಣಿಗೆ ಸೇರ್ಪಡೆಯಾದರು. ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿದ್ದರು (1961–69). ಅಲ್ಲಿಂದ ಮುಂದೆ ರಾಜ್ಯದ ಲೇಬರ್ ಕಮಿಷನರ್ ಆಗಿ, ಸರ್ವೆ ಇಲಾಖೆಯ ಮುಖ್ಯಾಧಿಕಾರಿಯಾಗಿ, ಮುಂಬಯಿ ಇಲಾಖೆಯ ಕಮಿಷನರ್ ಆಗಿ ಸೇವೆ ಸಲ್ಲಿಸಿದರು. ಆರು ವರ್ಷಗಳ ಕಾಲ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿದ್ದರು (1973–79). ಇವರು ಕರ್ನಾಟಕ ಸರ್ಕಾರದ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಒಮ್ಮೆ ಲೋಕಸಭಾ ಸದಸ್ಯ ಸ್ಥಾನಕ್ಕೆ ಮಂಡ್ಯಜಿಲ್ಲೆಯಿಂದ ಸ್ಪರ್ಧಿಸಿದ್ದರು.

ಉದ್ಯೋಗ ಆಡಳಿತ ಕ್ಷೇತ್ರದಲ್ಲಾದರೂ ಇವರ ಆಸಕ್ತಿ ಮೂಡಿದ್ದು ಕನ್ನಡ ಸಾಹಿತ್ಯ ಮತ್ತು ಜಾನಪದದಲ್ಲಿ. ಕಥೆ, ಕವನ, ಕಾದಂಬರಿ, ಪ್ರವಾಸಸಾಹಿತ್ಯ, ಜೀವನ ಚರಿತ್ರೆ, ಜನಪದ ಸಾಹಿತ್ಯ, ಆತ್ಮಚರಿತ್ರೆ, ಸಂಕೀರ್ಣ– ಹೀಗೆ ವಿವಿಧ ಬಗೆಯ ಸು. 50 ಕೃತಿಗಳನ್ನು ಇವರು ರಚಿಸಿದ್ದಾರೆ. ಕಂಡು ಕೇಳಿದ ಕಥೆಗಳು, ಖೈದಿಗಳ ಕಥೆಗಳು ಇವು ಕಥಾಸಂಕಲನಗಳು. ಕಂಡು ಕೇಳಿದ ಆಗಿಹೋದ ಘಟನೆಗಳನ್ನು ಆಧರಿಸಿ ರಚಿಸಿದ ಎಂಟು ಕಥೆಗಳ ಗುಚ್ಛವೇ ಮೊದಲನೆಯ ಸಂಕಲನ. ಇಲ್ಲಿ ಗ್ರಾಮ್ಯ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲಾಗಿದೆ. ಸಮಾಜದಲ್ಲಿ ಕಂಡುಬರುವ ಅನ್ಯಾಯಗಳ ಚಿತ್ರಣ ಹಾಗೂ ಸುಧಾರಣಾ ಕ್ರಮಗಳನ್ನು ಈ ಕಥೆಗಳಲ್ಲಿ ಕಾಣಬಹುದು. ಖೈದಿಗಳನ್ನು ಸಂದರ್ಶಿಸಿ, ಅವರ ಬದುಕನ್ನು ಅವರ ಮಾತುಗಳಲ್ಲೇ ಧ್ವನಿಮುದ್ರಿಸಿಕೊಂಡು, ಅವಕ್ಕೆ ಕಥಾರೂಪ ನೀಡಿರುವ ಈ ಪ್ರಯತ್ನ ಕನ್ನಡ ಸಾಹಿತ್ಯದಲ್ಲಿ ಒಂದು ವಿನೂತನ ಪ್ರಥಮ ಪ್ರಯೋಗ. ಸಂದರ್ಭದ ಸೆಳೆತ, ಸನ್ನಿವೇಶದ ಒತ್ತಡ, ವಿಚಿತ್ರ ಪ್ರವೃತ್ತಿ, ಚಿತ್ತವಿಕಾರ, ಕ್ಷೋಭೆ, ವಕ್ರತೆ, ವಿಕೃತಿ ಮುಂತಾದುವುಗಳಿಂದ ಖೈದಿಗಳಾಗಿ ಮಾರ್ಪಟ್ಟ ಕ್ಷುದ್ರವೂ ಭೀಭತ್ಸವೂ ಆದ ಚಿತ್ರಣಗಳನ್ನು ಈ ಸಂಕಲನದಲ್ಲಿ ಕಾಣಬಹುದು.

'ನಾನಾಗುವೆ ಗೀಜಗನ ಹಕ್ಕಿ' ಇವರ ಕವನ ಸಂಕಲನಗಳಲ್ಲಿ ಮೊದಲನೆಯದು. ನೇಗಿಲಯೋಗಿ ಎಂಬುದು ಇವರ ಕಾವ್ಯನಾಮ. ಸ್ವತಂತ್ರ ಹಾಗೂ ಅನುವಾದಿತ ಕವನಗಳು ಇದರಲ್ಲಿವೆ. ಗ್ರಾಂಥಿಕಭಾಷೆಯೊಡನೆ ಜನಪದ ಭಾಷೆಯನ್ನು ಬಳಸಿ ಹಳ್ಳಿಗರ ಹಾಗೂ ಬೇಸಾಯಗಾರರ ಬವಣೆ ಬೇಸರ ಕಷ್ಟಕಾರ್ಪಣ್ಯ ಚೆಲುವು ಗೆಲುವು ಸಂತೋಷ ಸಂಭ್ರಮಗಳನ್ನು ಈ ಕವಿತೆಗಳಲ್ಲಿ ಚಿತ್ರಿಸಲಾಗಿದೆ. 'ಕಥೆ ವ್ಯಥೆ' ಎಂಟು

ನೀಳ್ಗವನಗಳ ಎರಡನೆಯ ಕವನ ಸಂಕಲನ. ಒಂದೆರಡು ಕಥನ ಕವನಗಳೂ ಕೆಲವು ಭಾವಗೀತಾತ್ಮಕವಾದವೂ ಇವೆ. ಎಲ್ಲವೂ ಕವಿಯ ಆಂತರಿಕ ಮನೋಭಾವನೆಯ ಪ್ರತೀಕಗಳೆನಿಸುವಂತಿವೆ. ಈ ಸಂಕಲನದಲ್ಲಿಯೂ ಸ್ವತಂತ್ರ ರಚನೆಗಳೊಂದಿಗೆ ಅನುವಾದಗಳೂ ಇವೆ. ಅನುವಾದಗಳಲ್ಲಿ ಕಾವ್ಯ ಸ್ವಂತಿಕೆಯಿದೆ.

ಇವರು ದೊಡ್ಡಮನೆ, ಸೊನ್ನೆಯಿಂದ ಸೊನ್ನೆಗೆ, ಭೂಮಿಗೆ ಬಂದ ಗಂಧರ್ವ ಎಂಬ ಮೂರು ಕಾದಂಬರಿಗಳನ್ನು ಬರೆದಿದ್ದಾರೆ. 'ಕೆನಿಲ್‌ವರ್ತ್' ಸರ್‌ವಾಲ್ಟರ್ ಸ್ಕಾಟ್ ಬರೆದ ಐತಿಹಾಸಿಕ ಕಾದಂಬರಿಯ ಸಂಗ್ರಹಾನುವಾದ.

ದೊಡ್ಡಮನೆ ಬಯಲು ಸೀಮೆಯ ಹಳ್ಳಿಗಳ ಬದುಕನ್ನು ಕುರಿತ ಮಹಾ ಕಾದಂಬರಿ. ಅವಿಭಕ್ತ ಕುಟುಂಬವೊಂದು ಒಡೆದು ಛಿದ್ರವಾಗುವುದು ಇಲ್ಲಿನ ವಸ್ತು. ಮೂರು ತಲೆಮಾರುಗಳ ಬದುಕನ್ನು ಇದು ಚಿತ್ರಿಸುತ್ತದೆ. ಭಾಷೆಯ ದೃಷ್ಟಿಯಿಂದ ಈ ಕಾದಂಬರಿ ಒಂದು ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಬಯಲು ಸೀಮೆಯ ಒಕ್ಕಲು ಮಕ್ಕಳ ಭಾಷೆ ಇಲ್ಲಿ ಸಹಜ ರೀತಿಯಲ್ಲಿ ಬಳಕೆಯಾಗಿದೆ. ಹಾಸ್ಯೋಕ್ತಿಗಳು, ನುಡಿಗಟ್ಟುಗಳು, ಗಾದೆಗಳು ಮುಂತಾದುವೆಲ್ಲ ಹಾಸುಹೊಕ್ಕಾಗಿ ಬಳಕೆಯಾಗಿವೆ. ಸೊನ್ನೆಯಿಂದ ಸೊನ್ನೆಗೆ ಪ್ರಾದೇಶಿಕ ಸತ್ತ್ವವುಳ್ಳ ಕಾದಂಬರಿ. ನೂರು ವರ್ಷಗಳಷ್ಟು ಹಿಂದಿನ ಕಥಾವಸ್ತುವನ್ನು ಉಳ್ಳ ಈ ಕಾದಂಬರಿಯಲ್ಲಿ ಅಂದಿನ ಪರಿಸರವನ್ನು ಸಹಜ ರೂಪದಲ್ಲಿ ಕಾಣಬಹುದು. ಸಂಗೀತ ಲೋಕದ ಮಹಾನ್ ಸಾಧಕ ಭೈರವಿ ಕೆಂಪೇಗೌಡರ ಜೀವನವನ್ನು ಕುರಿತ ಕಾದಂಬರಿ ಭೂಮಿಗೆ ಬಂದ ಗಂಧರ್ವ. ಇಲ್ಲಿನ ಕಥಾನಾಯಕನಾದ ಕೆಂಪೇಗೌಡ ಬೇಗಡೆ, ಸಾರಂಗ, ಖರಹರಪ್ರಿಯ, ಶಂಕರಾಭರಣ, ಕಲ್ಯಾಣಿ, ಕೇದಾರಗೌಳ, ಆನಂದಭೈರವಿ ಮುಂತಾದ ರಾಗಗಳಲ್ಲಿ ನಿಷ್ಣಾತರಾಗಿದ್ದರೂ ಅವರ ಅಚ್ಚುಮೆಚ್ಚಿನ ರಾಗ ಭೈರವಿಯಾಗಿತ್ತು. ಈ ರಾಗದ ಹಾಡುಗಾರಿಕೆಯ ಸಿದ್ಧಿಯಿಂದಾಗಿ ಅವರಿಗೆ ಭೈರವಿ ಕೆಂಪೇಗೌಡರೆಂಬ ಕೀರ್ತಿ ಲಭಿಸಿತ್ತು. ಈ ಕಾದಂಬರಿಯಲ್ಲಿ ಗೌಡರ ಕೌಟುಂಬಿಕ ಚಿತ್ರಣವೂ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. 19 ಮತ್ತು 20 ನೆಯ ಶತಮಾನದ ಹಲವಾರು ಸಂಗೀತಸಾಧಕರ ವ್ಯಕ್ತಿ ಚಿತ್ರಣಗಳು ಇಲ್ಲಿ ಸಾಂದರ್ಭಿಕವಾಗಿ ಪ್ರವೇಶ ಪಡೆದಿದೆ. ವಸ್ತುವಿಗೆ ತಕ್ಕ ಭಾಷೆ ಪ್ರಯೋಗವಾಗಿದೆ. ಆಸ್ಪತ್ರೆಯ ರೋಗಿಗಳು ಕ್ಷಣಕಾಲ ನೋವನ್ನೆಲ್ಲ ಮರೆಯಲಿ ಎಂಬ ಉದ್ದೇಶದಿಂದ ಭೈರವಿಯನ್ನು ಹಾಡುತ್ತ ಹಾಡುತ್ತಲೇ ಕೆಂಪೇಗೌಡರು ಕೊನೆಯುಸಿರೆಳೆದರೆಂಬ ಸಂಗತಿ ಮನಮಿಡಿಯುವಂಥದ್ದು.

ಎಚ್.ಎಲ್. ನಾಗೇಗೌಡರ ಸಾಧನೆಗಳಲ್ಲಿ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳ ಸಿದ್ಧತೆ ಹಾಗೂ ಪ್ರಕಟಣೆ ಮತ್ತು ಜಾನಪದ ಕ್ಷೇತ್ರದ ವ್ಯವಸಾಯ ಇವು ಅತ್ಯಂತ ಮಹತ್ವದವು. ಗ್ರೀಸ್, ರೋಮ್, ಚೀನ, ಅರಬ್, ಫ್ರಾನ್ಸ್, ಪೋರ್ಚುಗೀಸ್, ಇಟಲಿ, ಪರ್ಷಿಯ, ಇಂಗ್ಲೆಂಡ್, ಯುರೋಪ್, ಡಚ್ ಮುಂತಾದ ದೇಶಗಳಿಂದ ವಿವಿಧ ಉದ್ದೇಶಗಳೊಡನೆ ಭಾರತಕ್ಕೆ ಬಂದುಹೋದ ಇನ್ನೂರಕ್ಕೂ ಹೆಚ್ಚು ವಿದೇಶೀ ಪ್ರವಾಸಿಗರು ಎರಡೂವರೆ ಸಾವಿರ ವರ್ಷಗಳ ಅವಧಿಯಲ್ಲಿ ಬರೆದಿಟ್ಟ ದಾಖಲೆಗಳ ಅಮೂಲ್ಯ ಸಂಗ್ರಹವೇ ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು. ಒಟ್ಟು ಹತ್ತು ಸಂಪುಟಗಳಲ್ಲಿ ಪ್ರಕಟವಾಗಿರುವ ಬೃಹತ್ ಪ್ರವಾಸ ಕಥನವಿದು. ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಅದ್ವಿತೀಯ ಕೊಡುಗೆಯಾಗಿದೆ ಎಂಬುದಾಗಿ ಕುವೆಂಪು ಅವರು ಈ ಸಂಪುಟಗಳನ್ನು ಪ್ರಶಂಸಿಸಿದ್ದಾರೆ. ಇತಿಹಾಸ, ಸಂಸ್ಕೃತಿ, ಜಾನಪದ, ಸಮಾಜಗಳು, ಜನಾಂಗಗಳು, ಪುರಾತತ್ತ್ವ ಅಂಶಗಳು, ಆಚರಣೆಗಳು ಇತ್ಯಾದಿ ಬಹುಮುಖ ವಿವರಗಳನ್ನು ಈ ಸಂಪುಟಗಳು ಒಳಗೊಂಡಿವೆ. ಭಾರತದ ಇತಿಹಾಸವನ್ನು ರೂಪಿಸುವಲ್ಲಿ ಈ ಸಂಪುಟಗಳಿಂದ ದೊರೆಯುವ ನೆರವು ಅಪಾರ. ಪ್ರತಿಯೊಂದು ದಾಖಲೆಯ ಪ್ರಾರಂಭದಲ್ಲಿ ಅದರ ಮಹತ್ವ, ಅದರ ಸತ್ಯಾಸತ್ಯತೆ ಮುಂತಾದುವುಗಳನ್ನು ತಿಳಿಸುವ ಪ್ರಾಸ್ತಾವಿಕ ಟಿಪ್ಪಣಿಗಳಿವೆ. ಭಾಷೆ ಸರಳವೂ ಸುಲಲಿತವೂ ಆಗಿದ್ದು ನಿರೂಪಣೆ ಸರಾಗವಾಗಿದೆ. ಕನ್ನಡದಲ್ಲಿ ಇಂಥ ಅಪರೂಪದ ಅನುವಾದ ಇದೊಂದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸ್ಥಾಪನೆಗಾಗಿಯೂ ಹೋರಾಡಿದ (1980) ಗೌಡರು ಯಶಸ್ವಿಯಾಗಿ ಅದರ ಪ್ರಥಮ ಅಧ್ಯಕ್ಷರಾಗಿಯೂ ನೇಮಕಗೊಂಡರು. ಒಟ್ಟು ಆರು ವರ್ಷಗಳ ಕಾಲ ಅಧ್ಯಕ್ಷರಾಗಿದ್ದ ಗೌಡರು ಅಕಾಡೆಮಿ ಹಮ್ಮಿಕೊಳ್ಳಬೇಕಿದ್ದ ಕಾರ್ಯಕ್ರಮಗಳ ಬಗ್ಗೆ ಭದ್ರ ಬುನಾದಿ ಹಾಕಿದರು.

ಜಾನಪದ ಕ್ಷೇತ್ರದಲ್ಲಿ ನಾಗೇಗೌಡರದು ಅದ್ವಿತೀಯ ಸಾಧನೆ. ಈ ಕ್ಷೇತ್ರದಲ್ಲಿ ಅಪಾರವಾಗಿ ದುಡಿದಿರುವ ಇವರು ಅನೇಕ ಸಂಗ್ರಹಗಳನ್ನೂ ಬರೆಹಗಳನ್ನೂ ಪ್ರಕಟಿಸಿದ್ದಾರೆ. ಸೋಬಾನೆ ಚಿಕ್ಕಮ್ಮನ ಪದಗಳು ಒಂದು ವಿಶಿಷ್ಟ ಸಂಕಲನ. ಇದರಲ್ಲಿರುವ ಹಾಡುಗಳನ್ನು ಸೋಬಾನೆ ಪದಗಳು, ಒಸಗೆಯ ಪದಗಳು, ರಾಗಿ ಬೀಸುವ ಪದಗಳು, ತಿಂಗಳು ಮಾವನ ಪದಗಳು, ದೇವರ ಪದಗಳು, ನಂಜುಂಡ ಲಿಂಗ, ಮೇಲುಕೋಟೆ ಚೆಲುವಯ್ಯ, ಈರೋಬಿ, ಗಂಗೆಗೌರಿ, ನಾಗರಗನ್ನೆ, ಜವರಾಯ, ರವಿಕಣ್ಣ ಮತ್ತು ಮಾದೇವಿ ಎಂದು ವಿಭಾಗಿಸಲಾಗಿದೆ. ಹಾಡುಗಳಿಗೆ ಸ್ವರಪ್ರಸ್ತಾರ ಹಾಕಲಾಗಿದೆ.

ಕನ್ನಡ ಜನಪದ ಕಥೆಗಳ ವೈವಿಧ್ಯ ವ್ಯಾಪ್ತಿಗಳನ್ನು ಪರಿಚಯಿಸುವ ಸಂಕಲನ 'ಕರ್ನಾಟಕ ಜನಪದ ಕಥೆಗಳು', ಕರ್ನಾಟಕದ ಎಲ್ಲ ಜಿಲ್ಲೆಗಳನ್ನು ಪ್ರತಿನಿಧಿಸುವ ನೂರು ಕಥೆಗಳ ಗುಚ್ಛವಿದು. ಪ್ರಪಂಚದ ಜನಪದ ಕಥಾ ಶ್ರೇಣಿಯಲ್ಲಿ ಶ್ರೇಷ್ಠ ಕಾಣಿಕೆಗಳನ್ನೊಳಗೊಂಡ ಮಹತ್ವದ ಕೃತಿ.

'ಪದವವೆ ನಮ್ಮ ಎದೆಯಲ್ಲಿ' ಗಾತ್ರದಲ್ಲಿ ಹಾಗೂ ಗುಣದಲ್ಲಿ ಬೃಹತ್ತಾದ ಕೃತಿ. ಸಂಸ್ಕೃತಿಯ ಅಧ್ಯಯನದ ಹಾದಿಯಲ್ಲಿ ವಿಪುಲ ಸಾಮಗ್ರಿ ಒದಗಿಸಿದೆ. ವೃತ್ತಿಗಾಯಕರ ಹಾಡುಗಳನ್ನೂ ಇದು ಒಳಗೊಂಡಿದೆ. ಸೋಬಾನೆ ಪದಗಳು, ಒಸಗೆ ಪದಗಳು, ಲಾಲಿ ಪದಗಳು, ಬಾಂಧವ್ಯದ ಹಾಡುಗಳು, ದೇವಿ ಮತ್ತು ದೇವರು, ಹಾಡ್ಗತೆಗಳು, ಹೊಲೆಯರು ಹೊಗಳುವ ಪದಗಳು, ಕೋಲಾಟದ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು, ಪದವವೆ ನಮ್ಮ ಎದೆಯಲ್ಲಿ ಎಂಬ ಹನ್ನೊಂದು ಭಾಗಗಳಲ್ಲಿ ಈ ಸಂಕಲನ ರೂಪುಗೊಂಡಿದೆ. ಪದವವೆ ನಮ್ಮ ಎದೆಯಲ್ಲಿ ಎಂಬ ಕೊನೆಯ ಭಾಗದಲ್ಲಿ ಬುಡುಬುಡಿಕೆಯವರು, ಹಕ್ಕಿಪಿಕ್ಕರು, ಗೊಲ್ಲರು, ಹೆಳವರು, ಚೌಡಿಕೆಯವರು, ಮಲೆಕುಡಿಯರು, ಲಂಬಾಣಿಗಳು ಮುಂತಾದ ಸಮುದಾಯಗಳವರು ಹಾಡಿದ ಹಾಡುಗಳಿವೆ. ಆಯಾ ಹಾಡುಗಳ

ಪ್ರಾರಂಭದಲ್ಲಿ ಆಯಾ ಜನಾಂಗದ ಪರಿಚಯವಿದೆ. ಜನಾಂಗಗಳ ಹಾಗೂ ಅವರ ಸಂಸ್ಕೃತಿಯ ಅಧ್ಯಯನಕ್ಕೆ ಇಲ್ಲಿ ಸಾಕಷ್ಟು ಸಾಮಗ್ರಿ ಇದೆ.

ಮೈಲಾರಲಿಂಗನ ಕಾವ್ಯ, ಹಾಡಾನ ಬನ್ನಿ ದನಿಯೆತ್ತಿ, ಹಾವು ತುಳಿದೇನೆ, ಗ್ರಾಮ ದೇವತೆ ಮಾರಮ್ಮ, ಆರಂಬದೆತ್ತು, ಏನೂರು, ಆನೆ ಬಂತೊಂದಾನೆ, ಗಾದೆಗಳು, ದುಂಡುಮಲ್ಲಿಗಿ ಹೂವು ಬುಟ್ಟೀಲಿ ಬಂದಾವ, ಪ್ರಶಸ್ತಿ ಪಡೆದ ಮಹನೀಯರು–ಇವು ಜಾನಪದಕ್ಕೆ ಸಂಬಂದಿಸಿದ ಸಂಗ್ರಹಗಳು. ಸರೋಜಿನಿದೇವಿ ಎಂಬ ಜೀವನ ಚರಿತ್ರ, ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ ಎಂಬ ಅನುವಾದ ಗ್ರಂಥವಲ್ಲದೆ, ನನ್ನೂರು, ಬೆಟ್ಟದಿಂದ ಬಟ್ಟಲಿಗೆ ಎಂಬ ಗ್ರಂಥಗಳನ್ನೂ ಇವರು ಪ್ರಕಟಿಸಿದ್ದಾರೆ. 'ನಾಗಸಿರಿ' ಇವರ ಆತ್ಮಕತೆ– ಜೀವನಯಾತ್ರೆ, ವಿದೇಶಯಾತ್ರೆ, ಚುನಾವಣಾ ಯಾತ್ರೆ, ಜಾನಪದ ಯಾತ್ರೆ ಎಂಬ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿದೆ. ಎಚ್.ಎ. ರಾಮಕೃಷ್ಣ ಎಂಬ ವಿದ್ವಾಂಸರೊಂದಿಗೆ ಇವರು ಎಸೆನ್ಶಿಯಲ್ಸ್ ಆಫ್ ಕರ್ನಾಟಕ ಫೋಕ್‌ಲೋರ್ ಎಂಬ ಇಂಗ್ಲಿಷ್ ಗ್ರಂಥವನ್ನು ಪ್ರಕಟಿಸಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಎ ಕ್ಯಾಟಲಾಗ್: ಜಾನಪದ ಲೋಕ ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಜಾನಪದ– ಚಿತ್ರಗಳಲ್ಲಿ ಎಂಬ ಗ್ರಂಥವೂ ಪ್ರಕಟವಾಗಿದೆ.

ಎಲ್ಲಕ್ಕೂ ಕಲಶಪ್ರಾಯವಾದ ಇವರ ಸಾಧನೆ ಎಂದರೆ ರಾಮನಗರದ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸ್ಥಾಪನೆಯಾಗಿರುವ ಜಾನಪದ ಲೋಕ (ನೋಡಿ). ಜಾನಪದ ಜಗತ್ತು ಎಂಬ ತ್ರೈಮಾಸಿಕ 1979 ರಿಂದ ಇವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದೆ. 'ಕನ್ನಡ ಜಾನಪದ ಕೋಶ'ಕ್ಕೂ ಇವರೇ ಸಂಪಾದಕರು. ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಇಲ್ಲಿ ಜನಪದ ಕಲಾಪ್ರದರ್ಶನಗಳು ನಡೆಯುತ್ತವೆ.

ಇವರಿಗೆ ಅನೇಕ ಬಹುಮಾನ, ಪ್ರಶಸ್ತಿ, ಗೌರವಗಳು ದೊರಕಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1974), ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1988), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1990), ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್ (1992) ರಾಜ್ಯ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ (2003), ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ (1995), ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ, ಮುಧೋಳದಲ್ಲಿ ನಡೆದ 64ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಮೊದಲಾದವು ಇವರಿಗೆ ಸಂದಿರುವ ಗೌರವಗಳು. ಇವರ ಗೌರವಾರ್ಥ ನಾಗವಲ್ಲಿ ಎಂಬ ಸಂಭಾವನ ಗ್ರಂಥವೂ (1979), ಇವರ ಜೀವನ ಸಾಧನೆಗಳ ಒಟ್ಟು ನೋಟವನ್ನು ಒಳಗೊಂಡ ನಾಗಸಂಪದ ಎಂಬ ಕೃತಿಯೂ ಪ್ರಕಟವಾಗಿವೆ (2001). ಇವರು 2005 ಸೆಪ್ಟೆಂಬರ್ 25ರಂದು ನಿಧನರಾದರು. (ಕೆ.ಆರ್.)

**ನಾಗೇಶಭಟ್ಟ:** 1741– 82. ಸಂಸ್ಕೃತ ವಿದ್ವಾಂಸ. ಉತ್ತರ ಕನ್ನಡ ಜಿಲ್ಲೆಯಲ್ಲಿನ ಹಳದೀಪುರದಲ್ಲಿ ಹುಟ್ಟಿದ ಇವರನ್ನು ಮಹಾಬಲಭಟ್ಟ ಎಂದೂ ಕರೆಯುತ್ತಿದ್ದರು. ತಂದೆ ವೇಂಕಟೇಶ ಭಟ್ಟ. ತಂದೆಯ ಬಳಿಯಲ್ಲೇ ಓದಿ ಧರ್ಮಶಾಸ್ತ್ರ, ಜ್ಯೋತಿಷ್ಯ, ಯಾಜ್ಞಿಕ ಇತ್ಯಾದಿಗಳಲ್ಲಿ ನಿಷ್ಣಾತರಾದ. ಇವರದು ವೈಷ್ಣವ ಪಂಥ. ಕರ್ನಾಟಕದಲ್ಲಿ ಶ್ರೌತ, ಸ್ಮಾರ್ತಕರ್ಮಗಳ ವಿಷಯಗಳನ್ನು ತಿಳಿದುಕೊಂಡವರಲ್ಲಿ ಇವರಿಗೆ ಅಗ್ರಸ್ಥಾನ. ಇಂದಿಗೂ ಆ ಮರ್ಯಾದೆ ಇವರ ವಂಶಜರಿಗೆ ಸಲ್ಲುತ್ತಿದೆ.

ಸ್ಮೃತ್ಯರ್ಥಮುಕ್ತಾವಲೀ, ತಾಂತ್ರಿಕಮುಕ್ತಾವಲೀ ಮತ್ತು ಆಗಮಗ್ರಂಥ– ಇವು ಮೂರು ಧರ್ಮಶಾಸ್ತ್ರಕ್ಕೆ ಸಂಬಂಧಪಟ್ಟ ಇವರ ಗ್ರಂಥಗಳು. ಆರ್ಯಾತಂತ್ರ, ಆರ್ಯಾಕೌತುಕ ಮತ್ತು ಮಹಾಬಲಸಿದ್ಧಾಂತ ಇವು ಮೂರು ಜ್ಯೋತಿಷಶಾಸ್ತ್ರದಲ್ಲಿನ ಗಣಿತ ವಿಷಯಗಳಿಗೆ ಸಂಬಂಧಪಟ್ಟವು. ಇವರ ಸಂಸ್ಕೃತ ಶೈಲಿ ಸರಳವೂ ಸುಬೋಧವೂ ಆಗಿದೆ. *

**ನಾಗೇಶರಾವ್, ಜಿ.:** 1886– 1960. ಕನ್ನಡ ರಂಗಭೂಮಿಯ ಪ್ರಸಿದ್ಧ ನಟ ಹಾಗೂ ಗಾಯಕರು. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಬಾಣಾವರಕ್ಕೆ ಸು. 11 ಕಿಮೀ ದೂರದಲ್ಲಿರುವ ಗರುಡನಗಿರಿ ಇವರ ಪೂರ್ವಜರು ವಾಸಿಸುತ್ತಿದ್ದ ಸ್ಥಳ. ಇವರು ಶ್ರೀರಂಗಪಟ್ಟಣದಲ್ಲಿ 1986 ಡಿಸೆಂಬರ್ 2ರಂದು ಜನಿಸಿದರು. ಇವರ ತಂದೆ ಶ್ರೀಕಂಠಯ್ಯನವರು ಶ್ರೀರಂಗಪಟ್ಟಣದಲ್ಲಿ ಖ್ಯಾತ ವಕೀಲರಾಗಿದ್ದರು. ನಾಗೇಶರಾಯರಿಗೆ ಮೂವರು ಸೋದರಿಯರೂ ಒಬ್ಬ ಸೋದರನೂ ಇದ್ದರು. ತೆರಕಣಾಂಬಿಯ ಲಕ್ಷ್ಮೀನಾರಾಯಣ ಜೋಯಿಸರ ಮಗಳು ಗೌರಮ್ಮ ಇವರ ಧರ್ಮಪತ್ನಿ. ರಾಯರಿಗೆ ಮಕ್ಕಳಿರಲಿಲ್ಲ.



ನಾಗೇಶರಾಯರು ತಮ್ಮ ಪ್ರಾಥಮಿಕ ಹಾಗೂ ಸ್ವಲ್ಪ ಕಾಲ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಶ್ರೀರಂಗಪಟ್ಟಣದಲ್ಲಿ ನಡೆಸಿದರು. ಮುಂದಿನ ಶಿಕ್ಷಣಕ್ಕಾಗಿ ಮಂಡ್ಯಕ್ಕೆ ಬಂದಾಗ ಇವರಿಗೆ 12 ವರ್ಷ ವಯಸ್ಸು. ಈ ವಯಸ್ಸಿಗೇ ಇವರಿಗೆ ಸಂಗೀತದ ಗೀಳು ಹಿಡಿಯಿತು. ಮಂಡ್ಯದಲ್ಲಿ ಓದುತ್ತಿದ್ದಾಗ ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರ ರತ್ನಾವಳಿ ಥಿಯೆಟ್ರಿಕಲ್ ಕಂಪನಿ ಅಲ್ಲಿ ಮೊಕ್ಕಾಂ ಪ್ರಾರಂಭಿಸಿ ನಾಟಕವಾಡತೊಡಗಿದಾಗ ಸಂಗೀತದ ಗೀಳಿನ ಇವರಿಗೆ ನಾಟಕದ ಗೀಳೂ ಹತ್ತಿತ್ತು. ಅದನ್ನು ಬಿಡಿಸಲು ಮಗನ ಗೀಳನ್ನು ಸೂಕ್ಷ್ಮವಾಗಿ ತಿಳಿದಿದ್ದ ಇವರ ತಂದೆಯವರು ಹೆಚ್ಚಿನ ಓದಿಗಾಗಿ ಬೆಂಗಳೂರಿಗೆ ಕಳುಹಿಸಿದರು. ಅಲ್ಲಿರುವಾಗ ಓದಿನ ಕಡೆ ಗಮನ ಹರಿಸದೆ ಅಂದು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬೆಂಗಳೂರು ಯೂನಿಯನ್ ಎಂಬ ಕಲಾವಿಲಾಸಿ ಸಂಸ್ಥೆಯೊಡನೆ ನಿಕಟ ಸಂಪರ್ಕವಿರಿಸಿಕೊಂಡರು. ಅಲ್ಲಿಗೆ ವಿದ್ಯಾಭ್ಯಾಸವೂ ನಿಂತುಹೋಯಿತು. ಈ ಮಧ್ಯೆ ಇವರ ಹಿರಿಯ ಭಾವಂದಿರೊಬ್ಬರು ಮೈಸೂರಿನಲ್ಲಿ ದೈವಾಧೀನರಾದುದರಿಂದ ಮೈಸೂರಿಗೆ ಧಾವಿಸಿದರು. ಅನಂತರ ಮೈಸೂರಿನಲ್ಲಿ ಮರಿಮಲ್ಲಪ್ಪ ಶಾಲೆಗೆ ಸೇರಿದರಾದರೂ ವಿದ್ಯಾಭ್ಯಾಸ ಹೆಚ್ಚು ಮುಂದುವರಿಯಲಿಲ್ಲ. ಇಲ್ಲಿರುವಾಗ ಅರಮನೆ ಕಂಪನಿ ಹಾಗೂ ವರದಾಚಾರ್ಯರ ಕಂಪನಿ ನಾಟಕಗಳು ಇವರನ್ನು ಆಕರ್ಷಿಸಿದವು.

ಮೊದಲಿನಿಂದಲೂ ರಂಗಭೂಮಿಯ ಬಗ್ಗೆ ಕುತೂಹಲ. ಆಸಕ್ತಿ ಹೊಂದಿದ್ದ ನಾಗೇಶರಾಯರು ಸ್ವಯಂದತ್ತವಾದ ಪ್ರತಿಭೆಯಿಂದಲೂ ವರದಾಚಾರ್ಯರ ಆಶೀರ್ವಾದಬಲದಿಂದಲೂ ಕನ್ನಡ ನಾಟಕರಂಗದ ನಿಸ್ಸೀಮ ಕಲಾವಿದರೆನಿಸಿದರು. ಮುಂದೆ ವರದಾಚಾರ್ಯರ ಕಂಪನಿ, ಶ್ರೀ ಸಾಮ್ರಾಜ್ಯಲಕ್ಷ್ಮೀ ನಾಟಕ ಸಭಾ, ಶ್ರೀ ಚಾಮುಂಡೇಶ್ವರಿ ನಾಟಕ ಸಭಾ ಮತ್ತು ಗುಬ್ಬಿ ಕಂಪನಿ ಮೊದಲಾದ ವೃತ್ತಿನಾಟಕ ಕಂಪನಿಗಳಲ್ಲಿ ಇವರ ಕಲಾಸೇವೆ ಅವ್ಯಾಹತವಾಗಿ ಸಾಗಿ ನಾಯಕ ನಟರಾಗಿ ಪ್ರಖ್ಯಾತರಾದರು. ಶಾಕುಂತಲಾ ನಾಟಕದಲ್ಲಿ ದುಷ್ಯಂತನಾಗಿ, ಹರಿಶ್ಚಂದ್ರ ನಾಟಕದಲ್ಲಿ ಹರಿಶ್ಚಂದ್ರನಾಗಿ ಇವರ ಅಭಿನಯ ಮತ್ತು ಹಾಡುಗಾರಿಕೆ ಅದ್ವಿತೀಯವಾಗಿರುತ್ತಿದ್ದಿತು. ಇವರೊಂದಿಗೆ ಹಲವಾರು ವರ್ಷಕಾಲ ಶ್ರೀ ಸಾಮ್ರಾಜ್ಯಲಕ್ಷ್ಮೀ ನಾಟಕ ಸಭಾ, ಚಾಮುಂಡೇಶ್ವರಿ ನಾಟಕ ಸಭಾಗಳಲ್ಲಿ

ನಾಯಕಿಯಾಗಿ ನಟಿಸಿದ ರಂಗಭೂಮಿಯ ಪ್ರಸಿದ್ಧ ಅಭಿನೇತ್ರಿ ಹಾಗೂ ಸಂಗೀತ ವಿದುಷಿ ಮಳವಳ್ಳಿ ಸುಂದರಮ್ಮನವರು ಇವರ ಅಭಿನಯಸಾಮರ್ಥ್ಯವನ್ನು ಪ್ರಶಂಸಿಸಿದ್ದಾರೆ. ನಾಗೇಶರಾಯರು ಅಭಿನಯಿಸುತ್ತಿದ್ದ ಅರ್ಜುನ, ಕೀಚಕ, ಉತ್ತಾನಪಾದ, ಮನ್ಮಥ, ಕಾಳಿದಾಸ, ವತ್ಸರಾಜ ಈ ಮೊದಲಾದ ಪಾತ್ರಗಳು ಜೀವಂತವಾಗಿರುತ್ತಿದ್ದುವು. ಇವರು ಜೀವಾನಂದರತ್ನಾವಳೀ ನಾಟಕ ಮಂಡಳಿ, ಆರ್ಯ ರತ್ನಾವಳೀ ನಾಟಕ ಸಭಾ ಎಂಬ ಎರಡು ಸ್ವಂತ ಸಂಸ್ಥೆಗಳನ್ನು ನಡೆಸಿದರಾದರೂ ಆರ್ಥಿಕ ಪ್ರೋತ್ಸಾಹವಿಲ್ಲದೆ ಅವು ಹೆಚ್ಚು ಕಾಲ ಮುಂದುವರಿಯಲಿಲ್ಲ. ಇವರ ಅಭಿನಯ ಹಾಗೂ ಸಂಗೀತ ಜ್ಞಾನವನ್ನು ಚಂಬೈ ವೈದ್ಯನಾಥ ಭಾಗವತ, ಸ್ಥಾನಂ ನರಸಿಂಹರಾವ್, ಉಸ್ತಾದ್ ಕರೀಂಖಾನ್ ಮೊದಲಾದ ಗಣ್ಯ ವಿದ್ವಾಂಸರು ಪ್ರಶಂಸಿಸಿದ್ದಾರೆ.

ಓಡಿಯನ್ ಕಂಪನಿ ಎಂಬ ಹೆಸರಾಂತ ಧ್ವನಿಮುದ್ರಿಕೆ ಸಂಸ್ಥೆ ಇವರು ಹಾಡಿದ ಭೀಷಣತಪೋಮಹಾಗ್ನಿ (ಮನ್ಮಥವಿಜಯ), ಅಡಿಗಡಿ ಗಂಗುಳಿ (ಶಾಕುಂತಲಾ), ಚೇತೋಜನ ಬಾಣ (ಕಬೀರ್), ಏಕೆ ಕೋಪಿಪೆ (ವಿರಾಟಪರ್ವ), ಪೋಗುವೆ ಎಲ್ಲಿಗೆ (ವಿರಾಟಪರ್ವ) ಮೊದಲಾದ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿದೆ (1924). ಈ ಧ್ವನಿಮುದ್ರಿಕೆಗಳು ಅಂದು ಕನ್ನಡನಾಡಿನಲ್ಲೂ ನಾಡಿನ ಹೊರಗೂ ಪ್ರಸಿದ್ಧವಾಗಿದ್ದುವು. ಇವರು 1960 ಜನವರಿ 21ರಂದು ನಿಧನರಾದರು. (ಎಸ್.ಎಚ್.ವಿ.)

**ನಾಗೇಶಶಾಸ್ತ್ರಿ, ವೈ.:** 1893– 1974. ಕನ್ನಡ ಭಾಷಾಸೇವಕರು. ಬಳ್ಳಾರಿ ಜಿಲ್ಲೆಯ ಏಳುಬೆಂಚಿ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ನಯನಸ್ವಾಮಿ, ತಾಯಿ ನೀಲಮ್ಮ. ಬಡತನದಿಂದಾಗಿ ಶಾಲೆಯಲ್ಲಿ ಹೆಚ್ಚಿನ ವ್ಯಾಸಂಗ ಮಾಡಲಾಗಲಿಲ್ಲವಾದರೂ ಸ್ವತಂತ್ರವಾಗಿ ಕನ್ನಡ, ಸಂಸ್ಕೃತ, ತೆಲುಗು, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಪರಿಶ್ರಮವನ್ನು ಸಂಪಾದಿಸಿಕೊಂಡರು. ಕೊಪ್ಪಳ ಗವಿಮಠದ ಕೊಂಗೋಡು ವೀರಭದ್ರಶಾಸ್ತ್ರಿಗಳಲ್ಲಿ ಮೂರು ವರ್ಷಕಾಲ ಸಂಸ್ಕೃತ ಸಾಹಿತ್ಯವನ್ನು ವ್ಯಾಸಂಗ ಮಾಡಿದರು. ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲು, ವೀರಶೈವ ಕಾಲೇಜು, ಬೆಳಗಾಂವಿಯ ಲಿಂಗರಾಜ ಕಾಲೇಜು ಮತ್ತು ಮದನಪಲ್ಲಿಯ ಥಿಯೋಸಾಫಿಕಲ್ ಕಾಲೇಜುಗಳಲ್ಲಿ ಕನ್ನಡ ಪಂಡಿತರಾಗಿ ಕೆಲಸ ಮಾಡಿದರು. ಕರ್ನಾಟಕ ಬಂಧು ಎಂಬ ವಾರಪತ್ರಿಕೆಯನ್ನು 1925ರಲ್ಲಿ ಪ್ರಾರಂಭಿಸಿ ಬಳ್ಳಾರಿಯಿಂದ ಕೆಲವು ವರ್ಷಗಳ ಕಾಲ ನಡೆಸಿದರು.



ಇವರ ಸಾಹಿತ್ಯಸೇವೆ ಗಣ್ಯವಾದುದು. ಮರಿಯೋಗೀಶ್ವರ ಪುರಾಣ (1932), ಗವಿಸಿದ್ಧೇಶ್ವರ ಪುರಾಣ (1950) ಮೊದಲಾದ ಪುರಾಣ ಕಥೆಗಳನ್ನು ಪದ್ಯದಲ್ಲಿ ಬರೆದಿದ್ದಾರೆ. ಹಳಗನ್ನಡ ಮತ್ತು ಪ್ರಾಚೀನ ಸಂಸ್ಕೃತ ಕಾವ್ಯಗಳಲ್ಲಿ ಆಸಕ್ತಿ ವಹಿಸಿದ್ದ ಇವರು, ಕಾಳಿದಾಸನ ರಘುವಂಶ ಮತ್ತು ಕುಮಾರ ಸಂಭವಗಳನ್ನು ಷಟ್ಪದಿ, ಚಂಪೂಶೈಲಿಯಲ್ಲೂ ಭಗವದ್ಗೀತೆ ಮತ್ತು ಚಂದ್ರಾಲೋಕ ಗ್ರಂಥಗಳನ್ನು ಚಂಪೂಶೈಲಿಯಲ್ಲೂ ಕನ್ನಡಕ್ಕೆ ತಂದಿದ್ದಾರೆ. ಮಲುಹಣ ಚರಿತ್ರೆ, ಪಂಪಾಂಬಿಕಾಪರಿಣಯ, ವಜ್ರಾಂಗುಳೀಯ, ಮೈರಾವಣಚರಿತ್ರೆ, ವಿಜಯನಗರಾಭ್ಯುದಯ– ಇವು ಇವರು ರಚಿಸಿರುವ ನಾಟಕಗಳು. ನೀತಿ ಚಿಂತಾಮಣಿ, ಜಯಚಾಮರಾಜ ಪಟ್ಟಾಭಿಷೇಕ– ಇವು ಇವರ ಕಾವ್ಯಗಳು. ಅಭಿನವ ಸೀತೆ ಮತ್ತು ವಿದ್ಯಾವಿನೋದಿನಿ ಎಂಬ ಎರಡು ಕಾದಂಬರಿಗಳನ್ನು ಇವರು ಬರೆದಿದ್ದಾರೆ. ವೀರಶೈವಧರ್ಮ ಬೋಧಿನಿ, ಅಷ್ಟಾವರಣವಿವೇಕ, ಇಷ್ಟಲಿಂಗೋಪಾಸನ ಕ್ರಮ, ಸರ್ವಧರ್ಮ ಸಮನ್ವಯಸಿದ್ಧಾಂತ, ಶಕ್ತಿ ವಿಶಿಷ್ಟಾದ್ವೈತ, ಬಸವಣ್ಣನವರ ವೀರಶೈವ ಸಮಾಜ–ಇವು ಇವರು ರಚಿಸಿರುವ ತಾತ್ತ್ವಿಕ ಗ್ರಂಥಗಳು. ಮಗ್ಗೆಯ ಮಾಯಿದೇವನ ಶಿವಾನುಭವ ಸೂತ್ರಸಾರ, ವಿಶೇಷಾರ್ಥ ಪ್ರಕಾಶಿಕೆ, ಶತಕತ್ರಯಗಳು, ಸರ್ಪಭೂಷಣ ಶಿವಯೋಗಿಗಳ ಶ್ರೀಕೈವಲ್ಯ ಕಲ್ಪವಲ್ಲರಿ ಮತ್ತು ರಾಘವಾಂಕನ ಹರಿಶ್ಚಂದ್ರಕಾವ್ಯ–ಇವನ್ನು ಇವರು ಸಂಪಾದಿಸಿದ್ದಾರೆ.

ಇವರ ಪಾಂಡಿತ್ಯ ಪ್ರತಿಭೆಗಳನ್ನು ಗುರುತಿಸಿ ಕಲ್ಕತ್ತ ವಿಶ್ವವಿದ್ಯಾಲಯ 1925ರಲ್ಲಿ ಇವರಿಗೆ ಸರ್ವದರ್ಶನತೀರ್ಥ ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ. ಮದರಾಸು ವಿಶ್ವವಿದ್ಯಾಲಯ 1927ರಲ್ಲಿ ಕನ್ನಡ ಸಂಸ್ಕೃತ ವಿದ್ವಾನ್ ಎಂಬ ಪ್ರಶಸ್ತಿ ನೀಡಿತು. ಮೈಸೂರು ಮಹಾರಾಜರು 1932ರಲ್ಲಿ ಇವರನ್ನು ಆಸ್ಥಾನವಿದ್ವಾಂಸರೆಂದು ಪರಿಗಣಿಸಿ ಸನ್ಮಾನಿಸಿದರು. ಹುಬ್ಬಳ್ಳಿಯಲ್ಲಿ 1933ರಲ್ಲಿ ನಡೆದ 19ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಯಿತು. (ಸಿ.ವಿ.ಸಿ.)

**ನಾಚಿರಾಜ:** ಸು. 1300. ಜೈನಕವಿ. ನಾಚಿರಾಜೀಯ ಎಂಬ ಗ್ರಂಥದ ಕರ್ತೃ. ಅಮರಸಿಂಹನ ಅಮರಕೋಶಕ್ಕೆ ಕನ್ನಡದಲ್ಲಿ ಬರೆದ ವ್ಯಾಖ್ಯಾನ ವಿದು. ಈಗ ದೊರೆತಿರುವ ಕನ್ನಡ ವ್ಯಾಖ್ಯಾನಗಳಲ್ಲಿ ಈ ಗ್ರಂಥವೇ ಅತ್ಯಂತ ಪ್ರಾಚೀನವಾದುದು. ಅಷ್ಟೇ ಅಲ್ಲ, ಅಮರಕೋಶಕ್ಕೆ ಸಂಬಂಧಿಸಿದಂತೆ ಭಾರತೀಯ ಭಾಷೆಗಳಲ್ಲಿ ಬರೆದ ಪ್ರಥಮ ವ್ಯಾಖ್ಯಾನವಿದು. ಈತನ ವ್ಯಾಖ್ಯಾನ ಸರಳವಾಗಿದೆ. ಸಂಸ್ಕೃತಕ್ಕೆ ಪ್ರತಿಯಾಗಿ ಕನ್ನಡ ಶಬ್ದಗಳನ್ನು ಬಳಸುವಲ್ಲಿ ಈತ ಸಾಕಷ್ಟು ಶ್ರಮಿಸಿದ್ದಾನೆ. ಗಿಡ ಮರಗಳ ಹೆಸರಿನ ಪಟ್ಟಿಯಲ್ಲಿ ಇದನ್ನು ಗುರುತಿಸಬಹುದು. ಕೆಲವು ಅನುಕ್ತ ಶಬ್ದಗಳು ಈತನ ವ್ಯಾಖ್ಯಾನದಲ್ಲುಂಟು. ಪ್ರಾಯಶಃ ಮೂಲಶಬ್ದಗಳೊಂದಿಗೆ ಕೆಲವನ್ನು ಹೊಸದಾಗಿ ಈತ ಸೇರಿಸಿರಬೇಕು. ಧನಂಜಯ, ರಭಸ ಇವರುಗಳ ಗ್ರಂಥಗಳನ್ನೂ ನಾಚಿರಾಜ ಉಪಯೋಗಿಸಿದಂತೆ ತಿಳಿದುಬರುತ್ತದೆ. ಮೂಡಬಿದರೆಯಲ್ಲಿ ಈ ಗ್ರಂಥದ ಕೃತಿಗಳಿವೆ. *

**ನಾಣಿ:** 1929–2003. ಮೇಕಪ್ ನಾಣಿ ಎಂದೇ ಪ್ರಸಿದ್ಧರಾಗಿದ್ದ ರಂಗಭೂಮಿಯ ಪ್ರಸಾಧನ ಕಲಾವಿದ, ಚಲನಚಿತ್ರ ನಟ. ಇವರ ಪೂರ್ತಿ ಹೆಸರು ಬಿ.ಎಸ್. ಸೂರ್ಯನಾರಾಯಣ. 1929 ನವೆಂಬರ್ 3 ರಂದು ತುಮಕೂರಿನಲ್ಲಿ ಜನಿಸಿದರು. ತಂದೆ ನಂಜುಂಡಯ್ಯ, ತಾಯಿ ಶಾರದಮ್ಮ. ಮಲೆನಾಡು ಮೂಲದ ನಂಜುಂಡಯ್ಯನವರು ತುಮಕೂರಿನಲ್ಲಿ ವೈದ್ಯರಾಗಿದ್ದರು. ಮಲೆನಾಡು ಹಾಗೂ ಬಯಲುಸೀಮೆಯ ಪ್ರಕೃತಿಯ ದೃಶ್ಯಗಳು ಬಾಲ್ಯದಲ್ಲೇ ನಾಣಿಯವರ ಮೇಲೆ ಪ್ರಭಾವ ಬೀರಿದವು. ತಂದೆಯವರೊಂದಿಗೆ ಕಂಪನಿ ನಾಟಕಗಳ ಪ್ರದರ್ಶನಕ್ಕೆ ತೆರಳುತ್ತಿದ್ದರು. ಸಾಂಪ್ರದಾಯಿಕ ರಂಗಭೂಮಿಯ ಈ ನಾಟಕಗಳು ಬಾಲ್ಯದಲ್ಲಿ ಇವರ ಮೇಲೆ ಆಗಾಧ ಪ್ರಭಾವ ಬೀರಿದವು.

ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿನಲ್ಲಿದ್ದ ತಮ್ಮ ತಾತನ ಮನೆಗೆ ಬಂದರು. ಆಗ ನ್ಯಾಷನಲ್ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ನಾಟಕದ ಗೀಳನ್ನು ಬೆಳೆಸಿಕೊಂಡರು. ಕಾಲೇಜು ಶಿಕ್ಷಣ ಮುಗಿದ ಬಳಿಕ ಸ್ನೇಹಿತರೊಂದಿಗೆ ನಾಟ್ಯಸಂಘ ಆರಂಭಿಸಿ ಅಭಿನಯ, ರಂಗಸಜ್ಜಿಕೆ, ಪ್ರಸಾಧನ ಮೊದಲಾದ ರಂಗಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪ್ರಸಾಧನ ಕಲೆಯ ಬಗ್ಗೆ ಇವರಿಗೆ ವಿಶೇಷ ಆಸಕ್ತಿ ಬೆಳೆಯಿತು. ವರದಾಚಾರ್ ನಾಟಕ ಕಂಪನಿಯಲ್ಲಿ ಮೇಕಪ್‌ಮನ್ ಆಗಿದ್ದ ಡಿ.ಎನ್. ಮೂರ್ತಿರಾವ್ ಅವರಿಂದ ತರಬೇತು ಪಡೆದರು. ಅನಂತರ ಬೆಂಗಳೂರಿನಲ್ಲಿ ಎಲ್ಲೇ ನಾಟಕ ನಡೆದರೂ ಅಲ್ಲಿಗೆ ಹೋಗಿ ಬಣ್ಣ ಹಚ್ಚುತ್ತಿದ್ದರು.

ಇಂಗ್ಲಿಷ್ ನಾಟಕಗಳ ರಂಗಸಜ್ಜಿಕೆ, ಪ್ರಸಾಧನ, ಬೆಳಕಿನ ವಿನ್ಯಾಸಗಳನ್ನು ಕಲಿತ ಇವರು ಹಿಂದಿ ಚಲನಚಿತ್ರನಟ ಶಶಿಕಪೂರರ ಮಾವ ಜೆಫ್ರಿ ಕೆಂಡಾಲ್‌ರ ಷೇಕ್ಸ್‌ಪೀರಿಯಾನಾ ಇಂಟರ್ ನ್ಯಾಷನಲ್ ಕಂಪನಿಯ ರಂಗಸಜ್ಜಿಕೆಗೆ ಸಹಾಯಕರಾದರು. ಜೀವನ ನಿರ್ವಹಣೆಗಾಗಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದರು. ಇಂಗ್ಲೆಂಡ್‌ನಿಂದ ಬಂದ ಇಂಗ್ಲಿಷ್ ಕಮಿಡಿಯನ್ಸ್ ಕಂಪನಿಯ ನಟ, ನಿರ್ದೇಶಕ ಮೇರಿಯಸ್ ಗೊರಿಂಗ್ ಅವರ ಶಿಫಾರಸ್ಸಿನಿಂದ ಲಂಡನ್ನಿಗೆ ತೆರಳಿದರು. ಅಲ್ಲಿ ವಿಶೇಷವಾಗಿ ಪ್ರಸಾಧನ ಕಲೆಯಲ್ಲಿ ತರಬೇತಿ ಪಡೆದರು. ಟಿ.ಪಿ. ಕೈಲಾಸಂ ಅವರ ಗಂಡಸ್ಕತ್ರಿ ನಾಟಕವನ್ನು ಇಂಗ್ಲಿಷ್‌ನಲ್ಲಿ ನಿರ್ದೇಶಿಸಿದರು. ಇಂಗ್ಲೆಂಡಿನ ಡ್ರಾಮಾ ಬೋರ್ಡಿನವರು ನಡೆಸಿದ ಪರೀಕ್ಷೆಯಲ್ಲಿ ಪಾಸಾಗಿ ಪದವೀಧರರಾದರು. ಭಾರತಕ್ಕೆ ಹಿಂದಿರುಗಿದ ಬಳಿಕ ಟಿ.ಟಿ.ಕೆ. ಕಂಪನಿಯಲ್ಲಿ ಕೆಲಸಕ್ಕೆ ಸೇರಿದರು. ಈ ಕಂಪನಿ ತಯಾರಿಸುತ್ತಿದ್ದ ಪ್ರೆಸ್ಟೀಜ್ ಪ್ರೆಷರ್ ಕುಕ್ಕರ್‌ನ ರೂಪದರ್ಶಿಯಾದರು. ಕಲಾಜ್ಯೋತಿ, ಛಾಯಾ ಚಿತ್ರಕಲಾವಿದರು ಅಭಿನಯಿಸುತ್ತಿದ್ದ ನಾಟಕಗಳ ನೇಪಥ್ಯದಲ್ಲಿ ದುಡಿದರು. ಸುಚಿತ್ರ ಫಿಲಂ ಸೊಸೈಟಿ, ಸಿನಿಮಾ ಅಕಾಡೆಮಿ ಮತ್ತು ಪೀರ್ ರಂಗಮಂದಿರ ಮುಂತಾದ ಅನೇಕ ಸಂಘ ಸಂಸ್ಥೆಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಗೆಳೆಯರೊಂದಿಗೆ ಸೇರಿ ಉಲ್ಲಾಳ್ ಷೀಲ್ಡ್ ನಾಟಕ ಸ್ಪರ್ಧೆ ಪ್ರಾರಂಭಿಸಿದರು (1959). ಇದರಿಂದ ಹಲವು ಹತ್ತು ಯುವ ಪ್ರತಿಭೆಗಳು ಬೆಳಕಿಗೆ ಬಂದುವು.

ಇವರ ಪ್ರತಿಭೆಗೆ ಅನೇಕ ಪ್ರಶಸ್ತಿ ಗೌರವಗಳು ಸಂದಿವೆ. ಇವರು ಅನೇಕ ಚಲನಚಿತ್ರಗಳಲ್ಲಿ ನಟರಾಗಿ ಕಲಾನಿರ್ದೇಶಕರಾಗಿ ದುಡಿದಿದ್ದಾರೆ. ಅಬಚೂರಿನ ಪೋಸ್ಟಾಫೀಸು, ಪ್ರೊಫೆಸರ್ ಹುಚ್ಚುರಾಯ ಚಿತ್ರಗಳ ಅಭಿನಯಕ್ಕೆ ಇವರಿಗೆ ರಾಷ್ಟ್ರ ಪ್ರಶಸ್ತಿ ದೊರಕಿದೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮತ್ತು ಸಂದೇಶ ಪ್ರತಿಷ್ಠಾನ ಪ್ರಶಸ್ತಿ ಇವು ಇವರಿಗೆ ಸಂದ ಗೌರವಗಳು. ಇವರದು ರಂಗಭೂಮಿಗೆ ಮೀಸಲಾದ ಕುಟುಂಬ. ಪತ್ನಿ ಭಾರ್ಗವಿ ನಾರಾಯಣ್ ಹೆಸರಾಂತ ನಟಿ. ಮಕ್ಕಳಾದ ಪ್ರಕಾಶ್ ಬೆಳವಾಡಿ **(ನೋಡಿ)**, ಸುಧಾ ಬೆಳವಾಡಿ ಇವರು ರಂಗಭೂಮಿ ಚಲನಚಿತ್ರ, ಕಿರುತೆರೆಗಳಲ್ಲಿ ಹೆಸರಾಗಿದ್ದಾರೆ. ಸುಜಾತ ಬೆಳವಾಡಿ ಮತ್ತು ಪ್ರದೀಪ್ ಬೆಳವಾಡಿ ಇವರ ಇನ್ನಿಬ್ಬರು ಮಕ್ಕಳು. ಕನ್ನಡ ರಂಗಭೂಮಿಗೆ ಅನುಪಮ ಸೇವೆ ಸಲ್ಲಿಸಿದ ನಾಣಿಯವರು 2003 ಡಿಸೆಂಬರ್ 4 ರಂದು ಬೆಂಗಳೂರಿನಲ್ಲಿ ನಿಧನರಾದರು. *

**ನಾಣ್ಯಗಳು:** ಕನ್ನಡ ನಾಡಿನಲ್ಲಿ ಯಾವಾಗ ಹೇಗೆ ಬಳಕೆಗೆ ಬಂದವು ಎಂದು ಹೇಳುವುದು ಕಷ್ಟ. ಬಹು ಪ್ರಾಚೀನ ಕಾಲದಲ್ಲಿ, ನಾಣ್ಯಗಳ ಪದ್ಧತಿ ಪ್ರಾರಂಭವಾಗುವುದಕ್ಕೆ ಮುಂಚೆ ಕವಡೆ, ಹಸು ಮುಂತಾದವು ವಿನಿಮಯ ಮಾಧ್ಯಮವಾಗುತ್ತಿದ್ದವು. ಇವುಗಳಿಗಿದ್ದ ನ್ಯೂನತೆಯನ್ನು ಮತ್ತು ತೊಂದರೆಯನ್ನು ತಪ್ಪಿಸುವುದಕ್ಕಾಗಿ ಚಿನ್ನದ ಚೂರುಗಳನ್ನು ಒಂದು ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಿ ಬಳಸುವ ಪದ್ಧತಿ ಪ್ರಾರಂಭವಾಯಿತು. ಇದೇ ವ್ಯವಸ್ಥಿತ ನಾಣ್ಯಪದ್ಧತಿಗೆ ನಾಂದಿಯಾಯಿತು. ಭಾರತದಲ್ಲಿ ಬಳಕೆಗೆ ಬಂದ ನಾಣ್ಯಗಳಲ್ಲಿ ಅತ್ಯಂತ ಪ್ರಾಚೀನವಾದವನ್ನು ಒತ್ತುಮುದ್ರೆಯ (ಪಂಚ್‌ಮಾರ್ಕ್) ನಾಣ್ಯಗಳೆಂದು ಕರೆಯುತ್ತಾರೆ. ಇವುಗಳ ಬಳಕೆ ಉತ್ತರ ಭಾರತದಲ್ಲಿ ವಿಶೇಷವಾಗಿ ಇದ್ದು ಅಲ್ಲಿಂದ ದಕ್ಷಿಣದ ಕಡೆಗೆ ಬಂದಿತು. ಮೌರ್ಯರ ಕಾಲದಲ್ಲಿ ವಿಶೇಷವಾಗಿ ಚಲಾವಣೆಯಲ್ಲಿದ್ದ ಈ ನಾಣ್ಯಗಳು ಕರ್ನಾಟಕದಲ್ಲಿ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಇಲ್ಲಿಗೆ ಬಂದಿತೆಂದು ತಿಳಿಯಬಹುದು. ಬನವಾಸಿ ಮತ್ತು ವಡಗಾಂವ ಮಾಧವಪುರಗಳಲ್ಲಿ ಒತ್ತುಮುದ್ರೆಯ ನಾಣ್ಯಗಳು ಸುಮಾರು ಕ್ರಿಸ್ತಶಕದ ಆಸುಪಾಸಿನ ಶತಮಾನಗಳಿಗೆ ಸೇರುವ ಪದರಗಳಲ್ಲಿ ದೊರಕಿವೆ. ಇದರಿಂದ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಪ್ರಾಚೀನತಮ ನಾಣ್ಯಗಳು ಇವೆಂದು ಗೊತ್ತಾಗುತ್ತದೆ. ಅಂದಿನಿಂದ ನಾಣ್ಯಗಳ ಬಳಕೆ ಮುಂದುವರಿದುಕೊಂಡು ಬಂದಿದೆ.

ಕರ್ನಾಟಕದಲ್ಲಿ ದೊರಕಿರುವ ನಾಣ್ಯಗಳು ಚಿನ್ನ, ಬೆಳ್ಳಿ, ಚಿನ್ನ ಬೆಳ್ಳಿ ಮಿಶ್ರ ಲೋಹ, ತಾಮ್ರ, ಸೀಸದಿಂದ ತಯಾರಾದವು. ಚಿನ್ನದ ನಾಣ್ಯಗಳು ವಿಶೇಷವಾಗಿ ಚಾಳುಕ್ಯ, ವಿಜಯನಗರ ಮತ್ತು ಟಿಪ್ಪುಸುಲ್ತಾನನ ಕಾಲಗಳಲ್ಲಿ ಬಳಕೆಯಲ್ಲಿದ್ದವು. ಕರ್ನಾಟಕದಲ್ಲಿ ಬೆಳ್ಳಿ ಮತ್ತು ತಾಮ್ರದ ಒತ್ತುಮುದ್ರೆಯ ನಾಣ್ಯಗಳು ಮಾತ್ರ ದೊರಕಿವೆ. ಸಾತವಾಹನರು, ಚುಟುಗಳು ಮತ್ತು ಮಹಾರಠಿಗಳ ನಾಣ್ಯಗಳು ಸೀಸದಿಂದ ಮಾಡಿದವು. ಇಲ್ಲವೇ ಪೊಟಿನ್ ಎಂಬ ಮಿಶ್ರಲೋಹದಿಂದ ತಯಾರಾದವು. ಬನವಾಸಿಯ ಕದಂಬರ ನಾಣ್ಯಗಳು ಚಿನ್ನದವು. ಬಾದಾಮಿಯ ಚಳುಕ್ಯರ ನಾಣ್ಯಗಳು ಚಿನ್ನ ಮತ್ತು ಬೆಳ್ಳಿಯಲ್ಲಿ ದೊರಕಿವೆ. ಹೊಯ್ಸಳರ ನಾಣ್ಯಗಳು ಚಿನ್ನ ಮತ್ತು ತಾಮ್ರಗಳಲ್ಲಿವೆ. ಸೇವುಣರ ನಾಣ್ಯಗಳು ಚಿನ್ನದಲ್ಲಿ ಮಾತ್ರ ದೊರಕಿವೆ. ವಿಜಯನಗರದ ನಾಣ್ಯಗಳಲ್ಲಿ ಚಿನ್ನ ಮತ್ತು ತಾಮ್ರದವು ವಿಶೇಷವಾಗಿದ್ದು ಬೆಳ್ಳಿಯವು ವಿರಳ, ಬಹುಮನೀ ನಾಣ್ಯಗಳು ವಿಶೇಷವಾಗಿ ಬೆಳ್ಳಿ ಮತ್ತು ತಾಮ್ರಗಳಲ್ಲಿದ್ದರೂ ಚಿನ್ನದ ನಾಣ್ಯಗಳೂ ದೊರಕಿವೆ. ಆದಿಲ್‌ಶಾಹೀ ಸುಲ್ತಾನರ ನಾಣ್ಯಗಳು ತಾಮ್ರದಲ್ಲಿ ವಿಶೇಷವಾಗಿದ್ದರೂ ಬೆಳ್ಳಿ ಮತ್ತು ಚಿನ್ನದ ನಾಣ್ಯಗಳೂ ಸಿಕ್ಕಿವೆ. ಆದರೆ ಬರೀದ್ ಶಾಹೀ ಸುಲ್ತಾನರು ತಾಮ್ರನಾಣ್ಯಗಳನ್ನು ಬಿಟ್ಟು ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸಿದಂತೆ ಕಾಣುವುದಿಲ್ಲ. ಹೈದರ್, ಟಿಪ್ಪು ಮತ್ತು ಮೈಸೂರು ಒಡೆಯರ ಕಾಲದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಬಳಕೆಯಲ್ಲಿದ್ದವು.

ಕರ್ನಾಟಕದ ನಾಣ್ಯಗಳ ರೂಪಗಳಲ್ಲೂ ವೈವಿಧ್ಯವಿದೆ. ಭಾರತದ ಎಲ್ಲೆಡೆಯಲ್ಲಿಯೂ ಪ್ರಚಾರದಲ್ಲಿದ್ದ ಒತ್ತು ಮುದ್ರೆ ನಾಣ್ಯಗಳು ವೃತ್ತಾಕಾರ, ಚೌಕಾಕಾರ, ಆಯತಾಕಾರ, ಪಂಚಕೋನ ಮತ್ತು ಇತರ ರೂಪಗಳಲ್ಲಿ ದೊರಕಿವೆ. ಅಂದರೆ ಈ ಕಾಲದಲ್ಲಿ ರೂಪಕ್ಕಿಂತ ತೂಕಕ್ಕೆ ಹೆಚ್ಚು ಮಹತ್ವವಿದ್ದಂತೆ ತೋರುತ್ತದೆ. ಒತ್ತುಮುದ್ರೆಯ ನಾಣ್ಯಗಳಲ್ಲಿ ಕೆಲವದರಲ್ಲಿ ಚಿಹ್ನೆಗಳು ಒಂದೇ ಮುಖದಲ್ಲೂ ಮತ್ತೆ ಕೆಲವದರಲ್ಲಿ ಎರಡು ಮುಖಗಳಲ್ಲೂ ಇರುವುದುಂಟು. ಸಾತವಾಹನರ ನಾಣ್ಯಗಳು ವೃತ್ತಾಕಾರದ ನಾಣ್ಯಗಳಾಗಿದ್ದು ಎರಡು ಮುಖಗಳಲ್ಲೂ ಚಿಹ್ನೆ ಮತ್ತು (ಅಥವಾ) ಬರೆಹಗಳಿರುತ್ತವೆ. ಬನವಾಸಿ ಕದಂಬರ ನಾಣ್ಯಗಳ ವಿಷಯದಲ್ಲಿ ಖಚಿತತೆ ಇಲ್ಲದಿದ್ದರೂ ಪದ್ಮಟಂಕವೆಂಬ ನಾಣ್ಯವನ್ನು ಬಳಕೆಗೆ ತಂದವರು ಅವರೆಂದು ಎಲ್ಲರೂ ಒಪ್ಪುತ್ತಾರೆ. ಈ ನಾಣ್ಯಗಳು ಸಣ್ಣ ಬಟ್ಟಲಿನ ಆಕಾರದಲ್ಲಿದೆ. ತೆಳ್ಳಗಿನ ಚಿನ್ನದ ತಗಡಿನ ಚೂರನ್ನು ತೆಗೆದುಕೊಂಡು ಅದರ ಮಧ್ಯದಲ್ಲಿ ಪದ್ಮದ ಚಿಹ್ನೆಯನ್ನು ಆಳವಾಗಿ ಒತ್ತುವುದರಿಂದ ತಗಡು ಬಗ್ಗಿ ಆ ಆಕಾರವನ್ನು ಪಡೆಯುತ್ತದೆ. ಆ ಪದ್ಮದ ಸುತ್ತಲೂ ಇತರ ಒತ್ತುಮುದ್ರೆಗಳಿರುತ್ತವೆ. ಅನಂತರ ಬಂದ ಬಾದಾಮಿಯ ಚಳುಕ್ಯರು ಈ ತಂತ್ರವನ್ನು ಅನುಸರಿಸಲಿಲ್ಲ. ಅವರು ಸಾತವಾಹನರಂತೆ ವೃತ್ತಾಕಾರದ ಎರಡು ಮುಖಗಳುಳ್ಳ ನಾಣ್ಯಗಳನ್ನು ಅಚ್ಚುಹಾಕಿಸಿದರು. ಇದೇ ತಂತ್ರವನ್ನು ಮುಂದಿನ ಎಲ್ಲ ರಾಜಮನೆತನಗಳೂ ಅನುಸರಿಸಿದವು. ಆದರೆ ಕಲ್ಯಾಣದ ಚಾಳುಕ್ಯರು ಮತ್ತು ದೇವಗಿರಿಯ ಸೇವುಣರು ಪದ್ಮಟಂಕದ ನಾಣ್ಯಗಳನ್ನೇ ಬಳಕೆಗೆ ತಂದರು. ವೃತ್ತಾಕಾರದ ನಾಣ್ಯಗಳೇ ವಿಶೇಷವಾದರೂ ಚೌಕನೆಯ ಮತ್ತು ತಂತಿಯ ರೀತಿಯ ನಾಣ್ಯಗಳನ್ನು ಆದಿಲ್‌ಶಾಹೀ ರಾಜರು ಉಪಯೋಗಿಸಿದರು. ಎರಡನೆಯ ಇಬ್ರಾಹೀಂ ಆದಿಲ್ ಷಾನ ನಾಣ್ಯಗಳು ಚೌಕಾಕಾರದಲ್ಲಿವೆ. ಎರಡನೆಯ ಆದಿಲ್‌ಷಾನ ಬೆಳ್ಳಿಯ ಲಾರಿನ್‌ಗಳು ಮಡಚಿದ ತಂತಿಯ ಆಕಾರದಲ್ಲಿರುವುದು ಗಮನಾರ್ಹ.

ಕರ್ನಾಟಕದಲ್ಲಿ ದೊರಕಿದ ಕೆಲವು ನಾಣ್ಯಗಳು

1 ಸಾತವಾಹನ. ಶ್ರೀಯಜ್ಞ ಸಾತಕರ್ಣಿ, ಪೊಟಿನ್, 2 ಚುಟುಮುಡಾನಂದ, ಸೀನ, 3 ಮಹಾರಥಿ, ಕಲಲಯ, ಸೀನ, 4 ಕದಂಬ, ಚಿನ್ನ (ಪದ್ಮಟಂಕ), 5 ಬಾದಾಮಿ ಚಳುಕ್ಯ, ಚಿನ್ನ, 6 ಗಂಗ, ಚಿನ್ನ, 7 ಕಲ್ಯಾಣ ಚಾಳುಕ್ಯ, ಜಗದೇಕಮಲ್ಲ, ಚಿನ್ನ, 8 ಚಾಳುಕ್ಯ ಸಾಮಂತ ದಂಡಿನ ಗೋವ, ಚಿನ್ನ, 9–10 ಹೊಯ್ಸಳ ವಿಷ್ಣುವರ್ಧನ, ಚಿನ್ನ, 11 ಹೊಯ್ಸಳ ನರಸಿಂಹ, ಚಿನ್ನ, 12 ಸೇವುಣ ಭಿಲ್ಲಮ, ಚಿನ್ನ, 13 ಸೇವುಣ ರಾಮಚಂದ್ರ, ಚಿನ್ನ, 14 ಗೋವ ಕದಂಬ, ಜಯಕೇಶಿ, ಚಿನ್ನ, 15 ಆಳುವ, ಹಾಡ್ಯಧವಂಜಯ, ಚಿನ್ನ, 16 ಆಳುವ, ಚಿನ್ನ, 17 ವಿಜಯನಗರ, ಹರಿಹರ, ಬೆಳ್ಳಿ, 18 ವಿಜಯನಗರ, ಹರಿಹರ, ಚಿನ್ನ, 19 ವಿಜಯನಗರ, ದೇವರಾಯ ಬೆಳ್ಳಿ, 20 ವಿಜಯನಗರ, ಕೃಷ್ಣದೇವರಾಯ, ತಾಮ್ರ, 21 ವಿಜಯನಗರ, ಶ್ರೀರಂಗ ರಾಯ, ಚಿನ್ನ, 22 ವಿಜಯನಗರ, ಅಚ್ಯುತರಾಯ, ಚಿನ್ನ, 23 ಬಹಮನೀ, ಅಲಾಉದ್ದೀನ್ ಬಹಮನ್ ಷಾ, ತಾಮ್ರ, 24 ಆದಿಲ್‌ಶಾಹೀ, ಇಬ್ರಾಹೀಂ ಆದಿಲ್ ಷಾ, ತಾಮ್ರ, 25 ಆದಿಲ್‌ಶಾಹೀ, ಅಲಿ ಆದಿಲ್ ಷಾ, ಬೆಳ್ಳಿ (ಲಾರಿನ್), 26 ಕೆಳದಿ, ಸದಾಶಿವ ನಾಯಕ, ಚಿನ್ನ, 27 ಹೈದರ್ ಅಲಿ, ಚಿನ್ನ, 28–29 ಟಿಪ್ಪುಸುಲ್ತಾನ್, ತಾಮ್ರ, 30 ಟಿಪ್ಪುಸುಲ್ತಾನ್, ಚಿನ್ನ, 31–33 ಮೈಸೂರು, ಕೃಷ್ಣರಾಜ ಒಡೆಯರ್ , ತಾಮ್ರ, 34 ಮೈಸೂರು, ಕೃಷ್ಣರಾಜ ಒಡೆಯರ್ , ತಾಮ್ರ, 35–36 ಮುದ್ರಾಂಕಿತ ನಾಣ್ಯ, ಬೆಳ್ಳಿ, 37 ರೋಮ್, ಅಗಸ್ಟಸ್, ಬೆಳ್ಳಿ, 38 ರೊಮ್, ಟೈಬೀರಿಯಸ್, ಬೆಳ್ಳಿ, 39 ಕ್ಷತ್ರವ, ರುದ್ರಸೇನ, ಬೆಳ್ಳಿ, 40 ಕುಲೋತ್ತುಂಗ ಚೋಳ, ತಾಮ್ರ, 41 ವಿಕ್ರಮಚೋಳ, ತಾಮ್ರ, 42 ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ, ತಾಮ್ರ, 43 ಪೋರ್ಚುಗೀಸ್, ತಾಮ್ರ, 44–47 ಬ್ರಿಟಿಷ್ ಇಂಡಿಯಾ ನಾಣ್ಯಗಳು; 44–45 ತಾಮ್ರ, 46–47 ಬೆಳ್ಳಿ.

ತೂಕ ಮತ್ತು ಆಳತೆಯಲ್ಲಿಯೂ ಕರ್ನಾಟಕದ ನಾಣ್ಯಗಳು ವೈವಿಧ್ಯತೆಯನ್ನು ಪ್ರದರ್ಶಿಸುತ್ತವೆ. ಸಾಮಾನ್ಯವಾಗಿ 52 ಗ್ರೇನ್ ತೂಕದ ಚಿನ್ನದ ನಾಣ್ಯಗಳು ವಿಶೇಷವಾದವು. ಆದರೆ ಇದಕ್ಕೂ ಹೆಚ್ಚು ತೂಕದ ನಾಣ್ಯಗಳನ್ನು ಕೆಲವು ರಾಜರು ಅಚ್ಚು ಹಾಕಿಸಿದರು. ಬಾದಾಮಿಯ ಚಳುಕ್ಯ ದೊರೆವಿಕ್ರಮಾದಿತ್ಯ 117 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಟಂಕಿಸಿದ. ಇದೇ ತೂಕದ ಚಿನ್ನದ ನಾಣ್ಯವನ್ನು ವಿಜಯನಗರದ ಕೃಷ್ಣದೇವರಾಯ ಅಚ್ಚುಹಾಕಿಸಿದ. ಬಹಮನೀ ಸುಲ್ತಾನರನೇಕರು 195 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದರು. ಟಿಪ್ಪುಸುಲ್ತಾನನ ಚಿನ್ನದ ನಾಣ್ಯಗಳು 210 ರಿಂದ 215 ಗ್ರೇನ್ ತೂಗುತ್ತವೆ. ಇವೇ ಕರ್ನಾಟಕದಲ್ಲಿ ದೊರಕಿರುವ ಅತ್ಯಂತ ತೂಕದ ಚಿನ್ನದ ನಾಣ್ಯಗಳು. ಇತರ ಚಿನ್ನದ ನಾಣ್ಯಗಳು 26, 12, 6, 3, 1.5 ಗ್ರೇನ್ ತೂಕದಲ್ಲಿವೆ. 1.5 ಗ್ರೇನ್ ತೂಕದ ನಾಣ್ಯವೇ ಅತ್ಯಂತ ಸಣ್ಣ ಚಿನ್ನದ ನಾಣ್ಯ. ಇದನ್ನು ಪಣವೆಂದು ಕರೆಯಬಹುದು. ಹೈದರ್, ಟಿಪ್ಪು ಮತ್ತು ಮೈಸೂರಿನ ಒಡೆಯರು ಈ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಟಿಪ್ಪುಸುಲ್ತಾನನ ಬೆಳ್ಳಿಯ ನಾಣ್ಯ ಹೈದರಿ ಎನ್ನುವುದರ ವ್ಯಾಸ 1.4". ಇದೇ ಕರ್ನಾಟಕದಲ್ಲಿ ದೊರಕಿರುವ ಅತ್ಯಂತ ಅಗಲವಾದ ನಾಣ್ಯ. ಇವನ ಚಿನ್ನದ ಪಣ ಕೇವಲ 0.28" ವ್ಯಾಸದ್ದು. ಇದೇ ಅತ್ಯಂತ ಚಿಕ್ಕದಿರಬಹುದು.

ನಾಣ್ಯಗಳ ಮೇಲಿನ ಬರೆವಣಿಗೆಯನ್ನು ಗಮನಿಸಿದರೆ ಒಂದು ವಿಧವಾದ ಬೆಳೆವಣಿಗೆ ಕಾಣಬರುತ್ತದೆ. ಒತ್ತುಮುದ್ರೆಯ ನಾಣ್ಯಗಳಲ್ಲಿ ಚಿಹ್ನೆಗಳು ಇವೆಯೇ ಹೊರತು ಯಾವ ಬರೆವಣಿಗೆಯೂ ಇಲ್ಲ. ಸಾತವಾಹನ, ಚುಟು, ಮಹಾರಠಿಗಳ ನಾಣ್ಯಗಳಲ್ಲಿ ಒಂದು ಕಡೆ ರಾಜನ ಹೆಸರು ಮತ್ತೊಂದು ಕಡೆ ಪ್ರಾಣಿಗಳು, ಬೆಟ್ಟ, ನದಿ ಮುಂತಾದ ಚಿಹ್ನೆಗಳು ಕಾಣಬರುತ್ತವೆ. ಈ ನಾಣ್ಯಗಳೇ ಕರ್ನಾಟಕದ ಮೊತ್ತ ಮೊದಲನೆಯ ಬರೆವಣಿಗೆಯನ್ನುಳ್ಳ ನಾಣ್ಯಗಳು. ಈ ಬರೆವಣಿಗೆಯಲ್ಲಿ ಸರಳತೆಯನ್ನು ಕಾಣುತ್ತೇವೆ. ರಾಜನ ಹೆಸರು ಮಾತ್ರವಿರುತ್ತದೆ. ಅವನ ಬಿರುದುಗಳು, ಅವನ ತಂದೆಯ ಹೆಸರು ಮುಂತಾದವು ವಿರಳ. ಇವು ಹೀಗೇ ಮುಂದುವರಿಯುತ್ತವೆ. ಹೊಯ್ಸಳ ಕಾಲಕ್ಕೆ ಬಂದಾಗ ರಾಜನ ಹೆಸರಿನ ಬದಲು ವಿಷ್ಣುವರ್ಧನ ತನ್ನ ಬಿರುದುಗಳನ್ನು ನಾಣ್ಯಗಳ ಮೇಲೆ ಹಾಕಿಸಿದ. ತಲಕಾಡುಗೊಂಡ, ನೊಳಂಬವಾಡಿಗೊಂಡ, ಮಲಪರೊಳುಗಂಡ ಎಂಬ ಅವನ ಬಿರುದುಗಳನ್ನು ಅವನ ನಾಣ್ಯಗಳಲ್ಲಿ ಕಾಣುತ್ತೇವೆ. ಗೋವೆಯ ಕದಂಬರ ನಾಣ್ಯಗಳು ಬರೆಹದ ದೃಷ್ಟಿಯಿಂದ ಗಮನಾರ್ಹವಾದವು. ಅವರು ತಮ್ಮ ಹೆಸರಿನ ಜೊತೆಗೆ ತಮ್ಮ ಪ್ರಶಸ್ತಿಯ ಭಾಗವನ್ನೂ ನಾಣ್ಯದ ಮೇಲೆ ಹಾಕಿಸಿದ್ದಾರೆ. ಶ್ರೀಸಪ್ತಕೋಟೀಶಲಬ್ಧವರ ಎನ್ನುವುದು ಎಲ್ಲ ನಾಣ್ಯಗಳ ಮೇಲೂ ಕಾಣಬರುತ್ತವೆ. ಅದೇ ರೀತಿ ಮಲವರಮಾರಿ ಎನ್ನುವ ಬಿರುದನ್ನೂ ನಾಣ್ಯಗಳ ಮೇಲೆ ಕಾಣುತ್ತೇವೆ. ವಿಜಯನಗರದ ರಾಜರು, ವೀರ, ಪ್ರತಾಪ ಎನ್ನುವ ಪದಗಳನ್ನು ಬಿಟ್ಟರೆ ಇನ್ನಾವ ಪ್ರಶಸ್ತಿಯನ್ನೂ ತಮ್ಮ ನಾಣ್ಯಗಳ ಮೇಲೆ ಹಾಕಿಸಲಿಲ್ಲ. ಬಹಮನೀ ನಾಣ್ಯಗಳಲ್ಲಿ ಬರೆಹ ವಿಶೇಷವಾಗಿರುತ್ತದೆ. ರಾಜನ ಹೆಸರು, ತಂದೆಯ ಹೆಸರು, ಕೊರಾನಿನ ವಾಕ್ಯಗಳು, ತೇದಿ ಮತ್ತು ಟಂಕಸಾಲೆಯ ಹೆಸರು ಇವರ ನಾಣ್ಯಗಳ ಮೇಲೆ ಕಾಣಬರುತ್ತವೆ. ಕೆಲವು ಸಾರಿ ಸಣ್ಣ ಪದ್ಯಗಳಿರುವುದೂ ಉಂಟು. ಆದಿಲ್‌ಶಾಹೀ, ಬರೀದ್ ಶಾಹೀ ಮತ್ತು ಟಿಪ್ಪುವಿನ ನಾಣ್ಯಗಳು ಈ ರೀತಿಯಲ್ಲೇ ಇರುತ್ತವೆ. ಆದಿಲ್‌ಶಾಹೀ ರಾಜ ಮಹಮ್ಮದ್‌ನ ಚಿನ್ನದ ನಾಣ್ಯವನ್ನು ಗಮನಿಸಬಹುದು. ಇದರ ಮೇಲೆ ಪಾರಸೀ ಪದ್ಯ ಒಂದಿದೆ. ಇದರಲ್ಲಿ ಎರಡರ್ಥ ಬರುವಂತೆ ಕವಿ ರಚಿಸಿದ್ದಾನೆ. ಈ ಪ್ರಪಂಚ ಸೌಂದರ್ಯ ಮತ್ತು ಘನತೆಯನ್ನು ಇಬ್ಬರು ಮಹಮ್ಮದರಿಂದ ಪಡೆಯಿತು. ಒಬ್ಬ ಪ್ರವಾದಿ ಮಹಮ್ಮದ್; ಮತ್ತೊಬ್ಬ ಸುಲ್ತಾನನಾದ ಮಹಮ್ಮದ್ ಇದು ಮೊದಲನೆಯ ಅರ್ಥ. ಎರಡನೆಯ ಅರ್ಥದಲ್ಲಿ ಇದು ಇವನ ಹೆಂಡತಿ ತಾಜ್ ಜಹಾನ್‌ಳನ್ನು ಕುರಿತದ್ದು. ಈ ಪ್ರಪಂಚ ಜಹಾನ್ ಸೌಂದರ್ಯ ಮತ್ತು ಘನತೆಯನ್ನು ಪ್ರವಾದಿ ಮಹಮ್ಮದ್‌ನಿಂದ ಪಡೆಯಿತು. ರಾಣಿ (ಜಹಾನ್) ಇದನ್ನು ಸುಲ್ತಾನನಾದ ಮಹಮ್ಮದ್‌ನಿಂದ ಪಡೆದಳು. ಈ ರೀತಿ ಚಮತ್ಕಾರವಾದ ಪದ್ಯಗಳನ್ನು ಕಾಣಬಹುದು.

ಕರ್ನಾಟಕದ ನಾಣ್ಯಗಳಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ, ತೆಲುಗು ಮತ್ತು ಪಾರಸೀ ಭಾಷೆಗಳ ಬರೆಹವನ್ನು ಕಾಣುತ್ತೇವೆ. ಸಾತವಾಹನ ನಾಣ್ಯಗಳು ವಿಶೇಷವಾಗಿ ಪ್ರಾಕೃತ ಭಾಷೆಯ ಬರೆಹವನ್ನು ಹೊಂದಿರುತ್ತವೆ. ಉದಾಹರಣೆಗೆ ರಞೋಸಿವಸಿರಿಸ ಪುಳುಮಾವಿಸ; ವಿಜಯನಗರದ ನಾಣ್ಯಗಳು ಇಮ್ಮಡಿ ದೇವರಾಯರು, ಸದಾಶಿವರಾಯರು, ಮಲ್ಲಿಕಾರ್ಜುನ ರಾಯರು ಎಂಬ ಕನ್ನಡ ಬರೆಹವನ್ನು ಹೊಂದಿವೆ. ಅದೇ ರೀತಿ ಚಿಕರಾಯಲು, ತಿರುಮಲರಾಯಲು ಎಂಬ ತೆಲುಗು ಬರೆಹವನ್ನೂ ಹೊಂದಿವೆ. ಬಹಮನೀ, ಆದಿಲ್‌ಶಾಹೀ, ಬರೀದ್ ಶಾಹೀ ಮತ್ತು ಟಿಪ್ಪುಸುಲ್ತಾನರ ನಾಣ್ಯಗಳು ಪಾರಸೀ ಭಾಷೆಯ ಬರೆಹವನ್ನು ಹೊಂದಿವೆ. ಮೈಸೂರು ಅರಸರ ಕೆಲವು ನಾಣ್ಯಗಳಲ್ಲಿ ಮಾತ್ರ ಪಾರಸೀ ಬರೆಹವಿದೆ.

ಇದೇ ರೀತಿಯಲ್ಲಿ ಲಿಪಿಯಲ್ಲಿಯೂ ವೈವಿಧ್ಯತೆ ಕಂಡುಬರುತ್ತದೆ. ಸಾತವಾಹನ, ಚುಟು ಮತ್ತು ಮಹಾರಠಿ ನಾಣ್ಯಗಳು ಬ್ರಾಹ್ಮೀ ಲಿಪಿಯಲ್ಲಿವೆ. ಬಾದಾಮಿಯ ಚಳುಕ್ಯರು, ಕಲ್ಯಾಣದ ಚಾಳುಕ್ಯರು ಮತ್ತು ಹೊಯ್ಸಳರ ಬರೆಹಗಳು ಕನ್ನಡ ಲಿಪಿಯಲ್ಲಿವೆ. ಸೇವುಣರ ನಾಣ್ಯಗಳ ಮೇಲೆ ನಾಗರೀ ಲಿಪಿಯ ಬರೆಹವಿದೆ. ಆಳುಪರ ನಾಣ್ಯಗಳಲ್ಲಿ ಕನ್ನಡ ಮತ್ತು ನಾಗರೀ ಲಿಪಿಯ ಬರೆಹಗಳಿವೆ. ಗೋವೆಯ ಕದಂಬರ ನಾಣ್ಯಗಳ ಮೇಲೆ ವಿಶೇಷವಾಗಿ ನಾಗರೀ ಲಿಪಿಯ ಬರೆಹವಿದೆ. ಆದರೆ ಶಿವಚಿತ್ತನ ನಾಣ್ಯವೊಂದರಲ್ಲಿ ಶಿವಚಿತ್ತ ಎನ್ನುವ ಬರೆಹ ಐದು ಸಾರಿ ಬರೆಯಲ್ಪಟ್ಟಿದೆ. ಒಂದು, ಮೂರು ಮತ್ತು ಐದನೆಯ ಸಾಲುಗಳು ನಾಗರೀಯಲ್ಲೂ ಎರಡು ಮತ್ತು ನಾಲ್ಕನೆಯ ಸಾಲುಗಳು ಕನ್ನಡ ಲಿಪಿಯಲ್ಲಿಯೂ ಇರುವುದು ಗಮನಾರ್ಹ. ವಿಜಯನಗರದ ಅರಸುಗಳ ನಾಣ್ಯಗಳಲ್ಲಿ ಹತ್ತು ರಾಜರು ಕನ್ನಡ ಲಿಪಿಯ ಬರೆಹವನ್ನು, ಹದಿಮೂರು ಜನ ರಾಜರು ನಾಗರೀ ಲಿಪಿಯ ಬರೆಹವನ್ನು, ಕೇವಲ (ಕೊನೆಗಾಲದ) ಇಬ್ಬರು ರಾಜರು ತೆಲುಗು ಲಿಪಿಯ ಬರೆಹವನ್ನು ನಾಣ್ಯಗಳ ಮೇಲೆ ಹಾಕಿಸಿದರು. ನಾಣ್ಯಗಳನ್ನು ಮೊದಲು ಅಚ್ಚುಹಾಕಿಸಿದ ಒಂದನೆಯ ಹರಿಹರ ಮತ್ತು ಒಂದನೆಯ ಬುಕ್ಕ ಇವರ ನಾಣ್ಯಗಳ ಮೇಲೆ ಕನ್ನಡ ಮತ್ತು ನಾಗರೀ ಬರೆಹವಿದೆ. ಮುಸ್ಲಿಂ ರಾಜರ ನಾಣ್ಯಗಳಲ್ಲಿ ಪಾರಸೀ ಲಿಪಿಯ ಬರೆಹವಿರುತ್ತದೆ. ಮೈಸೂರು ಒಡೆಯರ ನಾಣ್ಯಗಳು ಈ ದೃಷ್ಟಿಯಿಂದ ಗಮನಾರ್ಹ. ಇವರ ನಾಣ್ಯಗಳಲ್ಲಿ ನಾಗರೀ ಕನ್ನಡ ಪಾರಸೀ ಮತ್ತು ರೋಮನ್ ಲಿಪಿಗಳನ್ನು ಕಾಣಬಹುದು. ಒಂದೇ ನಾಣ್ಯದಲ್ಲಿ ಎರಡು ಮತ್ತು ಮೂರು ವಿಭಿನ್ನ ಲಿಪಿಗಳಿರುವುದು ಗಮನಾರ್ಹ. ಮುಮ್ಮಡಿ ಕೃಷ್ಣರಾಜ ಒಡೆಯರ ಇಪ್ಪತ್ತು ಕಾಸಿನ ನಾಣ್ಯದಲ್ಲಿ ಮೊದಲ ಮೂರು ಸಾಲುಗಳಲ್ಲಿ ಕೃಷ್ಣ, ಮಯಿಲಿಕಾಸುಯಿಪತು ಎಂಬ ಕನ್ನಡ ಲಿಪಿಯೂ ನಾಲ್ಕನೆಯ ಸಾಲಿನಲ್ಲಿ XX CASH ಎಂಬ ರೋಮನ್ ಬರೆಹವೂ ಇದೆ. ಇದೇ ರಾಜರ ಮತ್ತೊಂದು ನಾಣ್ಯದಲ್ಲಿ ಮೂರು ಲಿಪಿಗಳಿವೆ. ಮೈಲಿಕಾಸು 25 (ಕನ್ನಡ), XXV CASH (ರೋಮನ್), ಜರ್ಬ್ ಇ ಮಹಿಷೂರ್ (ಪಾರಸೀ) ಬರೆಹಗಳನ್ನು ಕಾಣುತ್ತೇವೆ.

ಪ್ರಾಚೀನ ನಾಣ್ಯಗಳ ಮೇಲೆ ಕಾಲದ ಉಲ್ಲೇಖವಿರುವುದು ಬಹು ವಿರಳ. ಮೊಟ್ಟಮೊದಲನೆಯ ಬಾರಿಗೆ ಕಾಲದ ಉಲ್ಲೇಖವನ್ನು ಕಾಣುವುದು ಗೋವೆಯ ಕದಂಬರ ನಾಣ್ಯಗಳ ಮೇಲೆ. ಇವರ ಕೆಲವು

ನಾಣ್ಯಗಳ ಮೇಲೆ ಪ್ಲವ, ವಿಜಯ, ಹೇವಿಳಂಬಿ, ದುರ್ಮತಿ, ಜಯ ಮುಂತಾದ ಸಂವತ್ಸರಗಳ ಹೆಸರುಗಳನ್ನು ಕಾಣುತ್ತೇವೆ. ಇವು ಆ ನಾಣ್ಯಗಳು ಅಚ್ಚಾದ ವರ್ಷಗಳೆಂದು ಭಾವಿಸಲಾಗಿದೆ. ಒಂದನೆಯ, ಎರಡನೆಯ ಮತ್ತು ಮೂರನೆಯ ಜಯಕೇಶಿಯ ನಾಣ್ಯಗಳು ಒಂದೇ ರೀತಿ ಇರುವುದರಿಂದ, ಅವನ್ನು ಬೇರ್ಪಡಿಸಲು ಈ ಸಂವತ್ಸರದ ಹೆಸರುಗಳು ಸಹಕಾರಿಯಾಗಿವೆ. ವಿಜಯನಗರದ ಯಾವ ನಾಣ್ಯದ ಮೇಲೆಯೂ ಕಾಲದ ಉಲ್ಲೇಖವಿಲ್ಲ. ಮುಸ್ಲಿಂ ರಾಜರ ನಾಣ್ಯಗಳ ಮೇಲೆ ಹಿಜಿರ ವರ್ಷ ನಮೂದಾಗಿರುತ್ತದೆ. ಕೆಲವು ಸಾರಿ ರಾಜನ ಆಳ್ವಿಕೆಯ ವರ್ಷವೂ ಉಲ್ಲೇಖಿತವಾಗಿರುತ್ತದೆ. ಟಿಪ್ಪುಸುಲ್ತಾನನ ಮೊದಲ ನಾಲ್ಕು ವರ್ಷದ ನಾಣ್ಯಗಳು ಹಿಜಿರ ಕಾಲಮಾನವನ್ನು ಉಲ್ಲೇಖಿಸುತ್ತವೆ. ಐದನೆಯ ವರ್ಷದಿಂದ ಅವನು ಮೌಲೂದಿ ಕಾಲಮಾನವನ್ನು ಬಳಕೆಗೆ ತಂದ. ಅವನ ಐದನೆಯ ಆಳ್ವಿಕೆಯ ವರ್ಷದಿಂದ 1215 ಮೌಲೂದಿ ಕಾಲಮಾನ ಬಳಕೆಗೆ ಬಂದು ಅವನ ಕೊನೆ ವರ್ಷ 1227 ಎಂದು ನಮೂದಿತವಾಗಿದೆ. ಮೌಲೂದಿ ಕಾಲಮಾನದಲ್ಲಿ ಟಿಪ್ಪು ಹಿಂದು ಪಂಚಾಂಗವನ್ನೇ ಅನುಸರಿಸಿ ಪ್ರಭವಾದಿ ಸಂವತ್ಸರಗಳನ್ನು ಉಪಯೋಗಿಸಿಕೊಂಡ. ಅವುಗಳಿಗೆ ಬದಲಾಗಿ ತಾನೇ ಹೊಸ ಹೆಸರುಗಳನ್ನು ಕೊಟ್ಟ. ಇದರಲ್ಲಿ ಅಬ್ಜದ್ ಮತ್ತು ಅಬ್ತತ್ ಎಂಬ ಎರಡು ವಿಧಗಳನ್ನು ಅನುಸರಿಸಿದ. ಅದೇ ರೀತಿ ತಿಂಗಳಿಗೂ ಹೊಸ ಹೆಸರನ್ನು ಕೊಟ್ಟು ಅವುಗಳನ್ನು ನಾಣ್ಯಗಳ ಮೇಲೆ ಹಾಕಿಸಿದ. ಮುಮ್ಮಡಿ ಕೃಷ್ಣರಾಜ ಒಡೆಯರ ಕೆಲವು ನಾಣ್ಯಗಳ ಮೇಲೆ ಅವರ ಆಳ್ವಿಕೆಯ ವರ್ಷವಿದೆ; ಮತ್ತೆ ಕೆಲವದರ ಮೇಲೆ ಕ್ರಿಸ್ತಶಕೆಯ ವರ್ಷಗಳಿವೆ.

ಟಂಕಸಾಲೆಗಳ ಹೆಸರುಗಳು ಪ್ರಾಚೀನ ನಾಣ್ಯಗಳ ಮೇಲೆ ಕಾಣಬರುವುದಿಲ್ಲ. ಆದರೆ ಶಾಸನಗಳಿಂದ ಚಾಳುಕ್ಯರ ಕಾಲದಲ್ಲಿ ಲೊಕ್ಕಿಗುಂಡಿ, ಸೂಡಿ ಮುಂತಾದ ಕಡೆಗಳಲ್ಲಿ ಟಂಕಸಾಲೆಗಳಿದ್ದವೆಂದು ತಿಳಿದುಬರುತ್ತದೆ. ಇದೇ ರೀತಿ ಬಾರಕೂರು ಮತ್ತು ಮಂಗಳೂರಿನಲ್ಲಿ ಅಚ್ಚಾದ ಗದ್ಯಾಣಗಳನ್ನು ಬಾರಕೂರು ಗದ್ಯಾಣ, ಮಂಗಳೂರು ಗದ್ಯಾಣವೆಂದು ಕರೆಯುತ್ತಿದ್ದುದು ತಿಳಿದುಬರುತ್ತದೆ. ಆದರೆ ದೊರಕಿರುವ ಗದ್ಯಾಣಗಳ ಮೇಲೆ ಈ ಹೆಸರುಗಳಿಲ್ಲ. ನಾಣ್ಯಗಳ ಮೇಲೆ ಟಂಕಸಾಲೆಯ ಹೆಸರನ್ನು ತೋರಿಸುವುದು ಮಹಮ್ಮದೀಯರ ಕಾಲದಿಂದ ಪ್ರಾರಂಭವಾಯಿತೆಂದು ತೋರುತ್ತದೆ. ಬಹುಮನೀ ನಾಣ್ಯಗಳ ಮೇಲೆ ಇರುವ ಹೆಸರುಗಳಿಂದ ಅಹಸನಾಬಾದ್ (ಗುಲ್ಬರ್ಗ), ಮಹಮ್ಮದಾಬಾದ್ (ಬಿದರೆ) ಮತ್ತು ಫತಾ ಬಾದ್ (ದೌಲತಾಬಾದ್) ಗಳಲ್ಲಿ ಬಹಮನೀ ನಾಣ್ಯಗಳು ಅಚ್ಚಾಗುತ್ತಿದ್ದವೆಂದು ತಿಳಿದುಬರುತ್ತದೆ. ಕೆಳದಿ ನಾಯಕರ ಕಾಲದಲ್ಲಿ ನಗರದಲ್ಲಿ ಒಂದು ಟಂಕಸಾಲೆಯಿದ್ದಿತೆಂದು ಅಲ್ಲಿ ದೊರಕಿರುವ ಒಂದು ಯಂತ್ರದಿಂದ ತಿಳಿಯುತ್ತದೆ. ಅದರ ಮೇಲೆ ಟಂಕಸಾಲೆಕಲ್ಲು ಎನ್ನುವ ಬರೆಹವಿದೆ. ಇದು ಆರು ಪಾರ್ಶ್ವಗಳುಳ್ಳ ಒಂದು ಲೋಹದ ಯಂತ್ರ. ಇದರಲ್ಲಿ ಆರು ವಿವಿಧ ಆಳತೆಯ ತೂತುಗಳಿವೆ. ಇವುಗಳಲ್ಲಿ ಲೋಹವನ್ನು ಹಾಕಿ ಇಂತಹದೇ ಯಂತ್ರದಿಂದ ಬಲವಾಗಿ ಅದುಮಿ ನಾಣ್ಯಗಳನ್ನು ತಯಾರುಮಾಡುತ್ತಿದ್ದರೆಂದು ಹೇಳಬಹುದು. ಟಿಪ್ಪುಸುಲ್ತಾನನ ಕಾಲಕ್ಕೆ ಬಂದರೆ ನಮಗೆ ನಾಣ್ಯಗಳಲ್ಲಿ ಟಂಕಸಾಲೆಯ ಹೆಸರುಗಳು ಕಾಣಬರುತ್ತವೆ. ಇವನ ಕಾಲದಲ್ಲಿ ಹದಿಮೂರು ಟಂಕಸಾಲೆಗಳಿದ್ದವು. ಇವುಗಳಲ್ಲಿ ಕೆಲವಕ್ಕೆ ಟಿಪ್ಪು ಹೊಸ ಹೆಸರುಗಳನ್ನು ಕೊಟ್ಟಿದ್ದ. ಮೈಸೂರು ಒಡೆಯರಲ್ಲಿ ಟಂಕಸಾಲೆಯನ್ನು ಮೊದಲು ಸ್ಥಾಪಿಸಿದವರು ಕಂಠೀರವ ನರಸರಾಜ ಒಡೆಯರು. ಇವರ ಟಂಕಸಾಲೆ ಶ್ರೀರಂಗಪಟ್ಟಣದಲ್ಲಿದ್ದಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದರು. ಇದು 1833 ರವರೆಗೂ ಕೆಲಸ ಮಾಡುತ್ತಿದ್ದಿತು. ಆ ವರ್ಷ ಟಂಕಸಾಲೆಯನ್ನು ಬೆಂಗಳೂರಿಗೆ ಬದಲಾಯಿಸಲಾಯಿತು. 1843ರಲ್ಲಿ ಬೆಂಗಳೂರಿನ ಟಂಕಸಾಲೆ ಕಾರ್ಯವನ್ನು ನಿಲ್ಲಿಸಿತು. ಅಲ್ಲಿಂದ ಮುಂದೆ ಮೈಸೂರು ಒಡೆಯರ ನಾಣ್ಯಗಳು ಅಚ್ಚಾಗಲಿಲ್ಲ.

ಶಾಸನಗಳಿಂದ, ದೇಶೀಯ ಮತ್ತು ವಿದೇಶೀಯರ ಬರೆವಣಿಗೆಗಳಿಂದ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಅನೇಕ ನಾಣ್ಯಗಳ ಹೆಸರುಗಳು ತಿಳಿದುಬರುತ್ತವೆ. ಗದ್ಯಾಣವೆಂಬ ನಾಣ್ಯ ಬಾದಾಮಿಯ ಚಳುಕ್ಯರ ಕಾಲದಿಂದ ಕಾಣಬರುತ್ತದೆ. ವರಹ ಮತ್ತು ಹಣಗಳು ಗಂಗರ ಶಾಸನಗಳಲ್ಲಿಯೂ ದ್ರವಮ್ಮ, ಸುವರ್ಣ, ಗದ್ಯಾಣ, ಕಳಂಜು, ಕಾಸು, ಮಂಜಾಡಿ, ಅಕ್ಕಂ–ಇವು ರಾಷ್ಟ್ರಕೂಟರ ಶಾಸನಗಳಲ್ಲಿಯೂ ಕಾಣಬರುತ್ತವೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಇನ್ನೂ ಹೆಚ್ಚಿನ ಮಾಹಿತಿ ದೊರಕಿದ್ದು ಪಣ, ಹೊನ್ನು, ಹಾಗ, ಕಾಗಿನಿ, ವೀಸ, ಗುಳಿಕೆ ಮತ್ತು ಬೇಳೆ ಎಂಬ ಹೊಸ ನಾಣ್ಯಗಳು ಸಿಗುತ್ತವೆ. ಈ ಕಾಲದ ಶಾಸನಗಳಿಂದ 1 ಗದ್ಯಾಣ = 10 ಪಣ, 1 ಪಣ =4 ಹಾಗ =4 ಕಾಗಿನಿ, 1 ಹಾಗ =4 ಅಥವಾ 5 ವೀಸ ಎಂದೂ ಗೊತ್ತಾಗುತ್ತದೆ. ಸುಮಾರು ಇದೇ ರೀತಿಯ ನಾಣ್ಯಪದ್ಧತಿ ಹೊಯ್ಸಳ, ಸೇವುಣ ಕಾಲದಲ್ಲಿಯೂ ಇದ್ದಿತೆಂದು ಊಹಿಸಬಹುದು. ವಿಜಯನಗರದ ಕಾಲದಲ್ಲಿ ಗದ್ಯಾಣ, ವರಹ, ಪೊನ್, ಪಗೋಡ, ಪ್ರತಾಪ, ಕಾಟಿ, ಪಣ, ಹಾಗ, ವೀಸ, ತಾರ, ಜಿಟಲ್, ಕಾಸು ಎಂಬ ನಾಣ್ಯಗಳೂ ಅವುಗಳ ಪ್ರಭೇದಗಳೂ ಕಾಣಬರುತ್ತವೆ. ಆ ಕಾಲದಲ್ಲಿದ್ದ ನಾಣ್ಯಗಳ ವಿವರ ಹೀಗಿವೆ: 1 ವರಹ =2 ಪ್ರತಾಪ, 1 ಪ್ರತಾಪ =2 ಕಾಟಿ, 1 ವರಹ =10 ಪಣ =8 ಚಿನ್ನಂ, 1 ಪಣ =4 ಹಾಗ, 1 ಹಾಗ =2 ಬೇಳೆ, ಕೆಳದಿ ನಾಯಕರ ಶಾಸನಗಳ ಪ್ರಕಾರ 1 ವರಹ =2 ಹೊನ್ನು, 1 ಹೊನ್ನು =2 ಧರಣ, 1 ಧರಣ =5 ಹಣ, 1 ಹಣ =2 ಅಡ್ಡ, 1 ಅಡ್ಡ =2 ಹಾಗ, 1 ಹಾಗ =2 ಬೇಳೆ, 1 ಹಾಗ =4 ವೀಸ, 1 ವೀಸ =2 ಅರೆವೀಸ =16 ಕಾಸು. ಟಿಪ್ಪುಸುಲ್ತಾನ ಅನೇಕ ಹೊಸ ನಾಣ್ಯಗಳನ್ನು ರೂಢಿಗೆ ತಂದು ಅವುಗಳಿಗೆ ಹೊಸ ಹೆಸರುಗಳನ್ನು ಕೊಟ್ಟಿದ್ದ.

ನಾಣ್ಯಗಳ ಮೇಲಿರುವ ಚಿಹ್ನೆಗಳು ಅಥವಾ ಪ್ರಾಣಿಗಳು ಅಥವಾ ದೇವತೆಯ ಚಿತ್ರಗಳು ಗಮನಾರ್ಹವಾದವು. ಸಾತವಾಹನರ ನಾಣ್ಯಗಳ ಮೇಲೆ ಆನೆ, ಕುದುರೆ ಮುಂತಾದ ಪ್ರಾಣಿಗಳು ಇಲ್ಲವೆ ಬೆಟ್ಟ, ಬೇಲಿಯೊಳಗಿನ ವೃಕ್ಷ, ಬಿಲ್ಲು ಬಾಣ ಮುಂತಾದವುಗಳಿವೆ. ಕದಂಬರ ನಾಣ್ಯಗಳಲ್ಲಿ ಪದ್ಮದ ಚಿಹ್ನೆ ಶಂಖಚಕ್ರಗಳಿವೆ. ಆನೆ ಗಂಗರ ಲಾಂಛನವಾದುದರಿಂದ, ಅದನ್ನು ಅವರ ನಾಣ್ಯಗಳ ಮೇಲೆ ಕಾಣುತ್ತೇವೆ. ಕಲ್ಯಾಣದ ಚಾಳುಕ್ಯರ ನಾಣ್ಯಗಳ ಮೇಲೆ ಗೋಪುರ ವಿಶೇಷವಾಗಿ ಕಾಣುತ್ತದೆ. ಹೊಯ್ಸಳರ ನಾಣ್ಯಗಳಲ್ಲಿ ಅವರ ಲಾಂಛನವಾದ ಸಿಂಹವಿದೆ. ಆಳುಪರ ನಾಣ್ಯಗಳಲ್ಲಿ ಅವರ ಲಾಂಛನ ಮೀನನ್ನು ಕಾಣುತ್ತೇವೆ. ವಿಜಯನಗರದ ಅರಸರು ಹಿಂದು ದೇವತೆಗಳ ಚಿತ್ರಗಳನ್ನು ಹಾಕಿಸಿದರು. ಉಮಾಮಹೇಶ್ವರ, ಲಕ್ಷ್ಮೀನರಸಿಂಹ, ಬಾಲಕೃಷ್ಣ, ವೆಂಕಟೇಶ್ವರ, ಲಕ್ಷ್ಮೀನಾರಾಯಣ, ಶ್ರೀರಾಮ, ಗರುಡ, ಹನುಮಂತ, ವರಾಹ, ದುರ್ಗ ಮುಂತಾದ ದೇವತೆಗಳ ಚಿತ್ರಗಳನ್ನು ನಾಣ್ಯಗಳ ಒಂದು ಮುಖದಲ್ಲಿ ಹಾಕಿಸಿದರು. ಟಿಪ್ಪುಸುಲ್ತಾನನ ನಾಣ್ಯಗಳ ಮೇಲೆ ಆನೆಯ ಚಿತ್ರವಿದೆ. ಮೈಸೂರು ಒಡೆಯರು ಆನೆ ಅಥವಾ ಸಿಂಹದ ಚಿತ್ರ ಅದರ ಮೇಲೆ ಚಾಮುಂಡಿ ಎಂಬ ಬರೆಹವನ್ನು ಹಾಕಿಸಿದರು.

ಹೊರನಾಡುಗಳಲ್ಲಿ ಅಚ್ಚಾದ ಕೆಲವು ನಾಣ್ಯಗಳು ಸಹ ಕರ್ನಾಟಕದಲ್ಲಿ ದೊರಕಿವೆ. 1891ರಲ್ಲಿ ಲೂಯಿ ರೈಸರು ಮೊಟ್ಟಮೊದಲಿಗೆ ಕರ್ನಾಟಕದಲ್ಲಿ ರೋಮನ್ ನಾಣ್ಯವನ್ನು ಪತ್ತೆಮಾಡಿದರು. ಬೆಂಗಳೂರಿಗೆ ಸಮೀಪದಲ್ಲಿರುವ ಯಶವಂತಪುರದಲ್ಲಿ ರೈಲ್ವೆ ಹಳಿಯನ್ನು ಹಾಕುವ

ಸಲುವಾಗಿ ಅಗೆಯುತ್ತಿರುವಾಗ ಮಡಕೆಯೊಂದರಲ್ಲಿ 163 ರೋಮನ್ ಬೆಳ್ಳಿ ನಾಣ್ಯಗಳು ಕಂಡುಬಂದವು. ಈ ನಾಣ್ಯಗಳು ಕ್ರಿ.ಪೂ. 21ರಿಂದ ಕ್ರಿ.ಶ. 51 ರವರೆಗಿನ ನಾಣ್ಯಗಳು. ಇವುಗಳು ರೋಮನ್ ಚಕ್ರವರ್ತಿ ಆಗಸ್ಟಸ್, ಟೈಬೀರಿಯಸ್, ಕ್ಯಾಲಿಗುಲ ಮತ್ತು ಕ್ಲಾಡಿಯಿಸ್ ಅವರಿಗೆ ಸೇರಿದ ನಾಣ್ಯಗಳು. ಒಂದೇ ಒಂದು ನಾಣ್ಯ ಮಾತ್ರ ನೀರೋವಿನ ಹೆಂಡತಿ ಆಂಟೋನಿಯೊ ಅಗಸ್ಟಳಿಗೆ ಸೇರಿದ್ದು. 1947ರಲ್ಲಿ ಚಂದ್ರವಳ್ಳಿಯಲ್ಲಿ ನಡೆಸಿದ ಉತ್ಖನನದಲ್ಲಿ ಒಂದು ರೋಮನ್ ದೀನಾರ ನಾಣ್ಯ ದೊರೆಯಿತು. ಇದು ಚಕ್ರವರ್ತಿ ಟೈಬೀರಿಯಸ್‌ನ ಕಾಲದ್ದು. ಇದರ ವ್ಯಾಸ 0.7" ಮತ್ತು ತೂಕ 2.89 ಗ್ರಾಂಗಳು. ಇದರ ಮುಮ್ಮುಖದಲ್ಲಿ ಟೈಬೀರಿಯಸ್‌ನ ಚಿತ್ರ ಮತ್ತು T1 CASAR DIVI AVGF AVGVSTVS ಎಂಬ ಬರೆಹವಿದೆ. ಹಿಮ್ಮುಖದಲ್ಲಿ ಕುರ್ಚಿಯ ಮೇಲೆ ಕುಳಿತಿರುವ ಸ್ತ್ರೀ ಚಿತ್ರವಿದೆ. ಆಕೆಯ ಕಾಲುಗಳು ಚಿಕ್ಕ ಸ್ಟೂಲಿನ ಮೇಲಿದೆ. ಕೆಳಭಾಗ ದಲ್ಲಿ PONTIF MAXIM ಎಂಬ ಬರೆಹವಿದೆ. ಇದಕ್ಕೂ ಮುಂಚೆ ಮೈಸೂರು ಪುರಾತತ್ತ್ವ ಇಲಾಖೆಯವರು ಚಂದ್ರವಳ್ಳಿಯಲ್ಲಿ ನಡೆಸಿದ ಅಗೆತಗಳಲ್ಲಿಯೂ ಕೆಲವು ರೋಮನ್ ನಾಣ್ಯಗಳು ಬೆಳಕಿಗೆ ಬಂದವು. ಅವುಗಳಲ್ಲಿ ಒಂದು ಅಗಸ್ಟಸ್ ಸೀಸರನ ಕಾಲದ್ದು. 1965ರಲ್ಲಿ ಬೆಂಗಳೂರಿನ ಎಚ್.ಎ.ಎಲ್. ನಿಲ್ದಾಣದಲ್ಲಿ ಕೆಲಸವನ್ನು ಮಾಡುತ್ತಿದ್ದಾಗ 226 ರೋಮನ್ ಬೆಳ್ಳಿಯ ನಾಣ್ಯಗಳು ಸಿಕ್ಕಿದವು. ಇಲ್ಲಿ ದೊರಕಿರುವ ಬೆಳ್ಳಿನಾಣ್ಯಗಳು ಅಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳಿಗೆ ಸೇರಿದವುಗಳು.

ಚೋಳ ಅರಸರಾದ ರಾಜರಾಜ ಮೊದಲಾದವರ ನಾಣ್ಯಗಳು, ಮುಗಲರ ಅಕ್ಬರ್, ಔರಂಗಜೇಬ್, ಸಿಕಂದರ್, ಬಹದೂರ್ ಷಾ ಮೊದಲಾದವರ ನಾಣ್ಯಗಳು, ತಿರುವಾಂಕೂರಿನ ಚಕ್ರಂಗಳು ಸಹ ಕರ್ನಾಟಕದಲ್ಲಿ ಕಂಡುಬಂದಿವೆ. ಈಸ್ಟ್ ಇಂಡಿಯಾ ಕಂಪನಿಯವರು ಕರ್ನಾಟಕದಲ್ಲಿ ಆಡಳಿತವನ್ನು ನಡೆಸುವಾಗ್ಗೆ ಅವರೇ ಛಾಪಿಸುತ್ತಿದ್ದ ರೂಪಾಯಿ ಆಣೆ ಕಾಸು ಮೊದಲಾದ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಬಳಕೆಯಲ್ಲಿದ್ದವು. 1857ರ ಅನಂತರ ಬ್ರಿಟಿಷ್ ಅರಸರ ಹೆಸರಿನಲ್ಲಿ ಅಚ್ಚಾಗುತ್ತಿದ್ದ ಭಾರತೀಯ ನಾಣ್ಯಗಳೂ ಅನಂತರ ಸ್ವತಂತ್ರ ಭಾರತ ಸರ್ಕಾರದ ನಾಣ್ಯಗಳೂ ಚಲಾವಣೆಗೆ ಬಂದುವು.

ಈ ರೀತಿ ವೈವಿಧ್ಯಪೂರ್ಣವಾದ ಕರ್ನಾಟಕದ ನಾಣ್ಯಗಳ ಅಧ್ಯಯನ ಕಾರ್ಯ ವ್ಯವಸ್ಥಿತವಾಗಿ ನಡೆದಿಲ್ಲ. ಮೈಸೂರು, ಬೆಂಗಳೂರು, ಶಿವಮೊಗ್ಗ, ಮದರಾಸು, ಮುಂಬಯಿ ಮುಂತಾದ ಕಡೆಗಳಲ್ಲಿರುವ ವಸ್ತುಸಂಗ್ರಹಾಲಯಗಳಲ್ಲಿ ಕರ್ನಾಟಕ ನಾಣ್ಯಗಳ ಸಂಗ್ರಹಗಳು ಇವೆ.

ಕರ್ನಾಟಕದಲ್ಲಿ ನಾಣ್ಯಶಾಸ್ತ್ರ ವಿಷಯದಲ್ಲಿ ಪ್ರಕಟವಾದ ಗ್ರಂಥಗಳು ಮತ್ತು ಲೇಖನಗಳು ವಿರಳ. ಹಾಕ್ಸ್ ಅವರು 1856 ರಲ್ಲಿ ಪ್ರಕಟಿಸಿದ ಎ ಬ್ರೀಫ್ ಸ್ಕೆಚ್ ಆಫ್ ಗೋಲ್ಡ್, ಸಿಲ್ವರ್ ಅಂಡ್ ಕಾಪರ್ ಕಾಇನೇಜ್ ಆಫ್ ಮೈಸೂರ್ ಎನ್ನುವುದು ಪ್ರಾಚೀನ ಗ್ರಂಥಗಳಲ್ಲೊಂದು. ಅನಂತರ ಎಲಿಯಟ್‌ರವರು ತಮ್ಮ ಕಾಇನ್ಸ್ ಆಫ್ ಸದರ್ನ್ ಇಂಡಿಯ ಎನ್ನುವ ಗ್ರಂಥದಲ್ಲಿ ಕರ್ನಾಟಕದಲ್ಲಿ ಆಳಿದ ಕೆಲವು ರಾಜಮನೆತನಗಳ ನಾಣ್ಯಗಳ ಬಗೆಗೆ ವಿಚಾರ ಮಾಡಿದರು. 1883ರಲ್ಲಿ ಜಿ. ಬಿಡೀ ಎನ್ನುವವರು ಚಾಳುಕ್ಯ, ವಿಜಯನಗರದ ಮತ್ತು ಮೈಸೂರರಸರ ನಾಣ್ಯಗಳನ್ನು ಕುರಿತು ಬರೆದರು. ಇದಾದ ಐದು ವರ್ಷಗಳ ಅನಂತರ ಥರ್ಸ್ಟನ್ ಅವರು ಮದರಾಸು ವಸ್ತುಸಂಗ್ರಹಾಲಯದಲ್ಲಿರುವ ಮೈಸೂರು ನಾಣ್ಯಗಳನ್ನು ಕುರಿತು ಬರೆದರು. 1889ರಲ್ಲಿ ಟೆಫ್ನೆಲ್‌ರವರು ಬೆಂಗಳೂರು ವಸ್ತುಸಂಗ್ರಹಾಲದಲ್ಲಿರುವ ಮೈಸೂರು ನಾಣ್ಯಗಳನ್ನು ವಿಮರ್ಶಿಸಿ ಸೂಚಿಯನ್ನು ಪ್ರಕಟಿಸಿದರು. 1891ರಲ್ಲಿ ಬೆಂಗಳೂರಿನಲ್ಲಿ ಸಿಕ್ಕಿದ ರೋಮನ್ ನಾಣ್ಯಗಳನ್ನು ಕುರಿತು ರೈಸ್‌ರವರು ಒಂದು ಸಣ್ಣ ಲೇಖನವನ್ನು ಬರೆದರು. ಬ್ರಿಟಿಷ್ ನಾಣ್ಯಶಾಸ್ತ್ರಜ್ಞರು ಹೈದರ್ ಮತ್ತು ಟಿಪ್ಪುಸುಲ್ತಾನರ ನಾಣ್ಯಗಳ ಬಗೆಗೆ ವಿಶೇಷ ಆಸಕ್ತಿ ವಹಿಸಿದರು. 1909ರಲ್ಲಿ ಪ್ರಕಟವಾದ ಜಾಕ್‌ಸನ್‌ರ ಕಾಇನ್ ಕಲೆಕ್ಟಿಂಗ್ ಇನ್ ಮೈಸೂರ್, ಕಾಇನ್ ಕಲೆಕ್ಟಿಂಗ್ ಇನ್ ಡೆಕ್ಕನ್, ಟೇಲರ್‌ರವರ ಕಾಇನ್ಸ್ ಆಫ್ ಟಿಪ್ಪುಸುಲ್ತಾನ್ (1914), ಹೆಂಡರ್‌ಸನ್ ಅವರ ಕಾಇನ್ಸ್ ಆಫ್ ಹೈದರ್ ಅಲಿ ಅಂಡ್ ಟಿಪ್ಪುಸುಲ್ತಾನ್ (1921) ಇವು ಮುಖ್ಯವಾದವು. ಆರ್. ನರಸಿಂಹಾಚಾರ್ ಅವರು ತಮಗೆ ದೊರಕಿರುವ ಚುಟು, ಸಾತವಾಹನ, ವಿಜಯನಗರ, ಹೈದರ್, ಟಿಪ್ಪು ಮತ್ತು ಮೈಸೂರು ಒಡೆಯರ ನಾಣ್ಯಗಳನ್ನು ಪುರಾತತ್ತ್ವ ವಾರ್ಷಿಕ ವರದಿಗಳಲ್ಲಿ ಸೇರಿಸಿದ್ದಾರೆ. ಎಂ.ಎಚ್. ಕೃಷ್ಣ ಅವರು ಡೆಕ್ಕನ್ ನ್ಯೂಮಿಸ್ಮ್ಯಾಟಿಕ್ಸ್ ಎನ್ನುವ ತಮ್ಮ ಡಾಕ್ಟೊರೇಟ್ ನಿಬಂಧದ ಕೆಲವು ಭಾಗಗಳನ್ನು ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಅಚ್ಚುಮಾಡಿದರು. ಇವು ಕರ್ನಾಟಕ ನಾಣ್ಯಶಾಸ್ತ್ರ ಅಧ್ಯಯನಕ್ಕೆ ಮಹತ್ತರ ಕೊಡುಗೆ. ಆಂಧ್ರಪ್ರದೇಶ ಸರ್ಕಾರದ ಪುರಾತತ್ವ ಇಲಾಖೆ ಇತ್ತೀಚೆಗೆ ನಾಣ್ಯಶಾಸ್ತ್ರದಲ್ಲಿ ಕೆಲವು ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಕೆಲವು ಕರ್ನಾಟಕಕ್ಕೆ ಸಂಬಂಧಿಸಿವೆ. ರ್‍ಯಾಪ್ಸನ್ ಆಲನ್, ಸ್ಮಿತ್ ಮೊದಲಾದವರು ಪ್ರಕಟಿಸಿದ ನಾಣ್ಯಸೂಚಿಗಳಲ್ಲಿ ಕೆಲವು ಕರ್ನಾಟಕಕ್ಕೆ ಸಂಬಂಧಿಸಿವೆ. ಎ.ವಿ. ನರಸಿಂಹಮೂರ್ತಿಯವರು ಕಾಇನ್ಸ್ ಆಫ್ ಕರ್ನಾಟಕ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಎಚ್. ಖಂಡೋಬರಾವ್ ಅವರ ನಾಣ್ಯ ಕರ್ನಾಟಕ ಎಂಬ ಕೃತಿ ನಾಣ್ಯಶಾಸ್ತ್ರವನ್ನು ಕುರಿತ ಇತ್ತೀಚಿನ ಗ್ರಂಥ. ಇವುಗಳಲ್ಲಿ ರಾಜವಂಶವಾರು ಮಾಹಿತಿಗಳು ದೊರೆಯುತ್ತವೆ. **(ಎ.ವಿ.ಎನ್.)**

**ನಾಮಕರಣ:** ಮಗುವಿಗೆ ಹೆಸರಿಡುವ ಸಮಾರಂಭ. ಅನೇಕ ನಂಬಿಕೆ ಹಾಗೂ ಧಾರ್ಮಿಕ ವಿಧಿಗಳಿಂದ ಕೂಡಿರುವ ಈ ಪದ್ಧತಿ ಕರ್ನಾಟಕದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ಮತದಿಂದ ಮತಕ್ಕೆ ಆಚರಣೆಯ ವಿಧಾನಗಳಲ್ಲಿ ಬಹಳಷ್ಟು ವ್ಯತ್ಯಾಸ ಕಂಡುಬರುತ್ತದೆ. ಕೆಲವರಲ್ಲಿ ಮಗು ಹುಟ್ಟಿದ 10, 11 ಅಥವಾ 12ನೆಯ ದಿನದಲ್ಲಿ ನಾಮಕರಣ ಸಮಾರಂಭವಿರುತ್ತದೆ. ಕ್ಷತ್ರಿಯರು 16ನೆಯ ದಿನ, ವೈಶ್ಯರು 19ನೆಯ ದಿನ, ಶೂದ್ರರು 9, 11, 20, 22 ಅಥವಾ 32ನೆಯ ದಿನ ನಾಮಕರಣ ಮಾಡಿದರೆ ಕೆಲವು ಕಡೆ ಮುಸಲ್ಮಾನರು ಮಗು ಹುಟ್ಟಿದ ದಿನವೇ ಆಚರಿಸುತ್ತಾರೆ. ಗಂಡು ಮಗುವಿಗೆ ಸರಿಸಂಖ್ಯೆ ಅಕ್ಷರವುಳ್ಳ ಹೆಸರಿಟ್ಟರೆ ಒಳ್ಳೆಯದು ಎಂಬ ನಂಬಿಕೆ ಇದೆ. ಬ್ರಾಹ್ಮಣರಲ್ಲಿ ನಾಮಕರಣದ ದಿನ ವಿನಾಯಕ ಪೂಜೆ, ಪುಣ್ಯಾಹ, ನಾಂದಿ ಕಾರ್ಯಗಳು ಮುಗಿದ ಅನಂತರ ತಂದೆ ತಾಯಿಗಳು ಮಗುವಿನೊಡನೆ ಪೂರ್ವಾಭಿಮುಖವಾಗಿ ಕುಳಿತು ಸಂಕಲ್ಪ ಪಠಿಸುತ್ತಾರೆ. ಮಗುವಿನ ನಾಮಕರಣಕ್ಕಿಂತ ಮುಂಚೆ ಒಂದು ರಹಸ್ಯ ಹೆಸರನ್ನಿಟ್ಟಿರುತ್ತಾರೆ. ತಂದೆ ತಾಯಿಗೆ ಮಾತ್ರ ಈ ಹೆಸರು ತಿಳಿದಿರುತ್ತದೆ. ನಾಮಕರಣದ ದಿನ ಇಡುವ ಹೆಸರಿಗೆ ಸಾರ್ವಜನಿಕ ಹೆಸರು ಎನ್ನುತ್ತಾರೆ. ಒಂದು ತಟ್ಟೆಯಲ್ಲಿ ಅಕ್ಕಿ ತುಂಬಿ ಅದರಲ್ಲಿ ಕುಲದೇವತೆಯ ಹೆಸರು, ಮಗು ಹುಟ್ಟಿದ ತಿಂಗಳು, ನಕ್ಷತ್ರ ಮತ್ತು ಇಡಬೇಕೆಂದಿರುವ ಹೆಸರು ಬರೆದು ಹೆಸರಿಗೆ ಸಂಬಂಧಿಸಿದ ದೇವತೆಗಳಿಗೆ ಹದಿನಾರು ಔಪಚಾರಿಕ ಪೂಜೆಗಳನ್ನು ಅರ್ಪಿಸಿ ಅನಂತರ ಮಗುವಿನ ತಂದೆ ಮಗುವಿನ ಹೆಸರನ್ನು ಬಲಕಿವಿಯಲ್ಲಿ ಹೇಳಿ ಮಂತ್ರವನ್ನು ಪಠಿಸುತ್ತಾನೆ. ಅನಂತರ ಸಮಾರಂಭದಲ್ಲಿ ಭಾಗವಹಿಸಿದ ಹಿರಿಯರು ಮಗುವಿಗೆ ಆಶೀರ್ವದಿಸುತ್ತಾರೆ. ಭೋಜನ ಹಾಗೂ ಫಲ ತಾಂಬೂಲ ವಿತರಣೆಯೊಂದಿಗೆ ಸಮಾರಂಭ ಮುಕ್ತಾಯವಾಗುತ್ತದೆ.

ಶೈವರಲ್ಲಿ 11 ಅಥವಾ 12ನೆಯ ದಿನ ನಾಮಕರಣವಿರುತ್ತದೆ. ಜಂಗಮನ ಪಾದೋದಕದಿಂದ ಸೂತಕ ಕಳೆದುಕೊಳ್ಳುತ್ತಾರೆ. ಮೊದಲು ಕಳಸಪೂಜೆ, ಪಂಚಾಮೃತದಿಂದ ಲಿಂಗಪೂಜೆ ಇವು ನಡೆಯುತ್ತವೆ. ಪಂಚಾಕ್ಷರೀ ಮಂತ್ರವನ್ನು ಮಗುವಿನ ಕಿವಿಯಲ್ಲಿ ಪಠಿಸುವ ಕಾರ್ಯ

ಕರ್ಣಬೋಧೆ ಮುಗಿದ ಅನಂತರ ಮನೆಯವರ ಒಪ್ಪಿಗೆ ಮೇರೆಗೆ ಪೂಜಾರಿ ನಾಮಕರಣ ಮಾಡುತ್ತಾನೆ. ಸಾಮಾನ್ಯವಾಗಿ ಶಿವಪಾರ್ವತಿಯರ ಹೆಸರುಗಳು, ವೀರಶೈವ ಸಂತರ ಹೆಸರುಗಳು ಇವರಲ್ಲಿ ಹೆಚ್ಚಾಗಿವೆ.

ಕೆಲವು ಕಡೆ ಒಕ್ಕಲಿಗರಲ್ಲಿ ನಾಮಕರಣ ಮಾಡುವವನು ದಾಸಪ್ಪ. ಮಗುವಿಗೆ ಆಯ್ಕೆ ಮಾಡಿದ ಹೆಸರನ್ನು ಇಡುವಾಗ ಜೋರಾಗಿ ಮೂರು ಬಾರಿ ಕೂಗಿ ಶಂಖ ಊದುತ್ತಾನೆ. ಆದರೆ ಮೈಸೂರಿನ ಸುತ್ತಮುತ್ತಲಿನ ಕೆಲವು ಒಕ್ಕಲಿಗರಲ್ಲಿ (ಪಿರಿಯಾಪಟ್ಟಣ, ಕೃಷ್ಣರಾಜನಗರ) ನಾಮಕರಣ ಪದ್ಧತಿ ವಿಶಿಷ್ಟವಾಗಿರುತ್ತದೆ. ಮಗು ಹುಟ್ಟಿದ 12ನೆಯ ದಿನ ಮುತ್ತೈದೆಯರು ಸೇರಿ ಮಗು ಬಾಣಂತಿಯರಿಗೆ ಸ್ನಾನಮಾಡಿಸುತ್ತಾರೆ. ಸೂಲಗಿತ್ತಿ ಒಂದು ಜಿರಳೆಯನ್ನು ತಂದು ಮನೆಯ ಯಾವ ಸ್ಥಳದಲ್ಲಿ ಹೆರಿಗೆಯಾಯಿತೋ ಅಲ್ಲಿ ಒಂದು ಸಣ್ಣ ಕುಳಿ ತೋಡಿ, ಎಡೆಹಾಕಿ, ಆ ಜಿರಳೆಯನ್ನು ಕುಳಿಯಲ್ಲಿಟ್ಟು ಪ್ರಾಣಕ್ಕೆ ಪ್ರಾಣ ಎಂಬ ಉದ್ಗಾರದೊಂದಿಗೆ ಮಣ್ಣು ಮುಚ್ಚಿ ಆ ಸ್ಥಳಕ್ಕೆ ಮಗುವನ್ನು ತಂದು ಮೂರು ಸುತ್ತು ಪ್ರದಕ್ಷಿಣೆ ಹಾಕಿಸಿ, ಮೂರು ಸಲ ಅಡ್ಡಬೀಳಿಸಿ ತೊಟ್ಟಿಲಿಗೆ ಹಾಕುತ್ತಾಳೆ. ಇದಕ್ಕೆ ಗುಣಿಶಾಸ್ತ್ರ (ಗುಣಿ ಬಾಯಿ ಮುಚ್ಚುವುದು) ಎನ್ನುವರು. ಮಧ್ಯಾಹ್ನ ನೆಂಟರಿಷ್ಟರಿಗೆಲ್ಲ ಊಟವಿರುತ್ತದೆ. ಊಟದ ಪಂಕ್ತಿಯಲ್ಲಿ ಮನೆಯ ಅಥವಾ ಸಂಬಂಧಿಗಳ ಹಿರಿಯ ಹೆಂಗಸೊಬ್ಬಳು ಮಗುವಿಗೆ ಇಡಬೇಕೆಂದಿರುವ ಹೆಸರನ್ನು ಜೋರಾಗಿ ಕೂಗಿ ಹೇಳುತ್ತಾಳೆ (ಉದಾ: ತಿಮ್ಮೇಗೌಡ ಕಣ್ರಪ್ಪೋ ಹೆಸರು). ಊಟ ಮುಗಿದ ಅನಂತರ ನೆಂಟರಿಷ್ಟರು ಮಗುವಿನ ತೊಟ್ಟಿಲ ಹತ್ತಿರ ಹೋಗಿ ಹೆಸರು ಕರೆದು ತೇಯ್ದಿಟ್ಟಿರುವ ಬಜೆ ಹಾಗೂ ಬೆಣ್ಣೆಯನ್ನು ಮಗುವಿನ ಬಾಯಿಗೆ ಸ್ವಲ್ಪ ಹಾಕಿ ಉಡುಗೊರೆಯನ್ನು ನೀಡುವರು.

ಮಗು ಹುಟ್ಟಿದ 12 ಅಥವಾ 14ನೆಯ ದಿನ ಜೈನರು ಮೈಲಿಗೆ ಕಳೆಯುವ ವಿಧಿಗಳನ್ನು ಮುಗಿಸಿ ಪುಣ್ಯಾಹ, ಹೋಮಗಳನ್ನು ಮಾಡುತ್ತಾರೆ. ಮಗುವಿನ ತಂದೆ ಸ್ನಾನ ಮುಗಿಸಿ ಹೊಸ ಉಡುಪು ತೊಟ್ಟು ತಟ್ಟೆಯಲ್ಲಿರುವ ಅಕ್ಕಿಯ ಮೇಲೆ ಅರಿಸಿನದ ಕೊನೆಯಿಂದ ಮಗುವಿಗೆ ಇಡಬೇಕಾಗಿರುವ ಹೆಸರು ಬರೆಯುತ್ತಾನೆ. ಹಾಲು ಬೆಣ್ಣೆಗಳಿಂದ ಒಂದು ಪಾತ್ರೆಯಲ್ಲಿ ಮಗುವಿನ ವಿವಿಧ ಆಭರಣಗಳನ್ನು ಮುಳುಗಿಸಿರುತ್ತಾರೆ. ದರ್ಭೆಯಿಂದ ತೀರ್ಥ ಪ್ರೋಕ್ಷಣೆಯಾದ ಅನಂತರ ಮಗುವಿಗೆ ಆಭರಣ ತೊಡಿಸಿ ಅರ್ಹಂತನ 108 ಹೆಸರುಗಳನ್ನು ಪಠಿಸಿ ಮಗುವಿಗೆ ಒಳ್ಳೆಯದು ಮಾಡುವಂತೆ ಕೇಳಿಕೊಳ್ಳುತ್ತಾರೆ. ಪುರೋಹಿತ ಮಗುವಿನ ಹೆಸರನ್ನು ಜೋರಾಗಿ ಕೂಗಿ ಹೇಳಿದ ಅನಂತರ ತಂದೆ ಮಗುವಿನ ಬಲಕಿವಿಯಲ್ಲಿ ಹೆಸರನ್ನು ಉಚ್ಚರಿಸುತ್ತಾನೆ. ಆ ದಿನ ಅಗ್ನಿಗೆ ಅರ್ಘ್ಯ ಕೊಡುವುದು, ಬ್ರಾಹ್ಮಣರಿಗೆ ದಾನಕೊಡುವುದು ಇವೇ ಮೊದಲಾದ ಕಾರ್ಯಕ್ರಮಗಳಿರುತ್ತವೆ.

ಕೊಡವರಲ್ಲಿ ನಾಮಕರಣದ ದಿನ ಮಗುವಿನ ತಾಯಿಯನ್ನು ವಧುವಿನ ರೀತಿಯಲ್ಲಿ ಶೃಂಗರಿಸುತ್ತಾರೆ. ಮಗುವಿಗೆ ಬಿಳಿ ಉಡುಪು ತೊಡಿಸಿ ಆ ಮಗುವಿನ ಅಜ್ಜಿ ಎತ್ತಿಕೊಂಡು ಬರುತ್ತಾಳೆ. ಮಜ್ಜಿಗೆಯನ್ನು ಸೋಸಿ ಅದರ ಗಸಿಯಲ್ಲಿ ಅನ್ನ ಕಲಸಿ ಮಗುವಿಗೆ ಸ್ವಲ್ಪ ಕೊಟ್ಟು ಉಳಿದುದನ್ನು ಅಲ್ಲಿದ್ದ ಮಕ್ಕಳಿಗೆ ಕೊಡುತ್ತಾರೆ. ಕಲ್ಲೊಂದಕ್ಕೆ ಬಿಳಿ ವಸ್ತ್ರವನ್ನು ಸುತ್ತಿ ಮಗುವಿಗೆ ಇಡಬೇಕೆಂದಿರುವ ಹೆಸರಿಟ್ಟು, ತಾಯಿ ಮತ್ತು ಅಜ್ಜಿ ಕಲ್ಲನ್ನು ಒಮ್ಮೆ ಮಗುವನ್ನು ಒಮ್ಮೆ ತೊಟ್ಟಿಲಿಗೆ, ಅನಂತರ ನೆಲಕ್ಕೆ ಸರತಿಯಂತೆ ಇಡುತ್ತಾರೆ. ಕಲ್ಲಿನಷ್ಟೇ ಆಯುಷ್ಯ ಮಗುವಿಗೂ ಬರಲಿ ಎಂಬುದೇ ಕಲ್ಲನ್ನು ಬಳಸುವುದರ ಸಂಕೇತ. ಪಾಲು ಕುಳುಂಬಾಕು ಬಾ ಹೇಳುತ್ತ ನಾಮಕರಣವಾಗುತ್ತದೆ (ತಾಯಿಯ ಹಿರಿಯ ಅಣ್ಣನಿಂದ). ಅನಂತರ ನೀರಿಗೆ ಹೋಗುವ ಶಾಸ್ತ್ರ ನಡೆಯುತ್ತದೆ. ಶುಭ ಸಂಕೇತವಾಗಿ ಕುಶಾಲುತೋಪು ಹಾರಿಸುವುದು, ವಾದ್ಯಗಾನ ಮುಂತಾದವುಗಳಿರುತ್ತವೆ.

ಕರ್ನಾಟಕದ ಗುಡ್ಡಗಾಡಿನ ಜನರಲ್ಲಿ ನಾಮಕರಣ ಸಮಾರಂಭ ತುಂಬ ಸರಳವಾಗಿರುತ್ತದೆ. ಗೊಲ್ಲರಲ್ಲಿ ಕಣಿಗಾರನನ್ನೋ ಅಥವಾ ಹಟ್ಟಿಯ ಮುಖ್ಯಸ್ಥನನ್ನೋ ಕಂಡು ಅವನಿಂದ ಹೆಸರು ತಿಳಿದು ನಾಮಕರಣ ಮಾಡುತ್ತಾರೆ. ಅಗಸರಲ್ಲಿ ಸೂಲಗಿತ್ತಿಯೇ ಮಗುವಿಗೆ ನಾಮಕರಣ ಮಾಡುತ್ತಾಳೆ. ದೊಂಬರಲ್ಲಿ ಕಣಿಗಾರನನ್ನು ಕರೆಸಿ ನಾಮಕರಣ ಮಾಡಿಸುತ್ತಾರೆ. ಕರ್ನಾಟಕದಲ್ಲಿ ಕ್ರೈಸ್ತರು ಮಗುವಿಗೆ ಜ್ಞಾನಸ್ನಾನ (ಬ್ಯಾಪ್ಟಿಸಮ್) ಮಾಡಿಸುವಾಗಲೇ ಪಾದ್ರಿ ನಾಮಕರಣವನ್ನೂ ನೆರವೇರಿಸುತ್ತಾನೆ.

ಕರ್ನಾಟಕದಲ್ಲಿ ಸಾಮಾನ್ಯವಾಗಿ ಮಗುವಿಗೆ ಮನೆದೇವರ ಅಥವಾ ಕುಲದೇವತೆಯ ಹೆಸರಲ್ಲದೆ, ಪೂರ್ವಿಕರ ಹೆಸರುಗಳನ್ನು ಇಡುವುದು ವಾಡಿಕೆ. ಈಚಿನ ದಿನಗಳಲ್ಲಿ ಈ ಕ್ರಮಗಳು ಬಹುಮಟ್ಟಿಗೆ ಬದಲಾಗುತ್ತಿವೆ. ಹಿಂದಿನ ಶುದ್ಧ ಕನ್ನಡ ಪದಗಳಿಂದ ಕೂಡಿದ ಹೆಸರುಗಳ ಸ್ಥಾನವನ್ನು ಸಂಸ್ಕೃತ ಪದಗಳು ಅಲಂಕರಿಸಿವೆ. ದೀರ್ಘ ಹೆಸರುಗಳಿಗೆ ಪ್ರತಿಯಾಗಿ ಸಂಕ್ಷಿಪ್ತ ಹೆಸರುಗಳನ್ನು ಇಡಲಾಗುತ್ತಿದೆ. ಅದರಲ್ಲಿ ಎರಡು ಅಥವಾ ಮೂರಕ್ಷರಗಳ ಹೆಸರುಗಳು ಜನಪ್ರಿಯವಾಗುತ್ತಿದೆ. ಅರ್ಥಕ್ಕಿಂತಲೂ ಉಚ್ಚಾರಕ್ಕೆ ಒತ್ತು ಸಿಗುತ್ತಿದೆ. (ಎಸ್.ಎನ್.ಜಿ.)

**ನಾಯಕನಹಟ್ಟಿ:** ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಒಂದು ಪಟ್ಟಣ ಮತ್ತು ಪುಣ್ಯಕ್ಷೇತ್ರ. ಚಳ್ಳಕೆರೆಗೆ ವಾಯವ್ಯದಲ್ಲಿ 22 ಕಿಮೀ ದೂರದಲ್ಲಿ ಚಳ್ಳಕೆರೆ– ಜಗಳೂರು ಮಾರ್ಗಮಧ್ಯದಲ್ಲಿದೆ. ಜನಸಂಖ್ಯೆ 12,891. ಇದು 47 ಗ್ರಾಮಗಳನ್ನೊಳಗೊಂಡ ಹೋಬಳಿ ಕೇಂದ್ರ. ಇಲ್ಲಿ ನಗರಸಭಾಡಳಿತವಿದೆ. ಊರಿನ ಸುತ್ತ ಹಸುರು ಚೆಲ್ಲಿ ನಿಂತಿರುವ ತೆಂಗು ಮತ್ತು ಇತರ ಗಿಡಮರಗಳು ಇದ್ದು ಮನಸ್ಸಿಗೆ ಆನಂದವನ್ನುಂಟು ಮಾಡುತ್ತವೆ. ಇಲ್ಲಿ ಸು. 250 ವರ್ಷಗಳ ಹಿಂದೆ ಜೀವಿಸಿದ್ದು ಅನೇಕ ಪವಾಡಗಳನ್ನು ಮೆರೆದು ಲೋಕೋಪಯುಕ್ತ ಕಾರ್ಯವೆಸಗಿದ ತಿಪ್ಪೇರುದ್ರಯ್ಯ ಎಂಬ ಪ್ರಸಿದ್ಧ ಶಿವಶರಣನ ದೇವಾಲಯವಿದೆ. ಈ ದೇವಾಲಯದ ಗೋಪುರ ಸು. 24 ಮೀ ಎತ್ತರವಿದೆ. ಈ ಗೋಪುರವನ್ನು ಬಸಟ್ಟಪ್ಪನೆಂಬ ಭಕ್ತನೊಬ್ಬ ಕಟ್ಟಿಸಿದನೆಂದು ತಿಳಿದುಬರುತ್ತದೆ. ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿರುವ ಈ ಗೋಪುರ ಹಲವು ಪೌರಾಣಿಕ ಚಿತ್ರಗಳನ್ನೊಳಗೊಂಡಿದ್ದು, ಪ್ರೇಕ್ಷಕರ ಕುತೂಹಲವನ್ನು ಕೆರಳಿಸುತ್ತದೆ. ಗೋಪುರದ ಮಹಾದ್ವಾರವನ್ನು ದಾಟಿ ಮುಂದೆ ನಡೆದರೆ ಪ್ರಶಾಂತ ವಾತಾವರಣದಲ್ಲಿ ಮಹಂತೇಶ್ವರಲಿಂಗದ ದರ್ಶನವಾಗುತ್ತವೆ.

ಈ ಊರಿನ ಮತ್ತೊಂದು ಪ್ರೇಕ್ಷಣೀಯ ಸ್ಥಳವೆಂದರೆ ಗ್ರಾಮಕ್ಕೆ ಸುಮಾರು ಒಂದೂವರೆ ಕಿಮೀ ದೂರದಲ್ಲಿರುವ ಚಿಕ್ಕಕೆರೆಯೆಂಬ ರಮಣೀಯವಾದ ತಟಾಕ ಮತ್ತು ಈ ಕೆರೆಯ ಹಿಂದೆ ಇರುವ ತಿಪ್ಪೇರುದ್ರಯ್ಯನ ಸಮಾಧಿ. ಇದನ್ನು ಹೊರಮಠವೆಂದು ಕರೆಯುತ್ತಾರೆ. ದುಂಡುಗೋಪುರದ ಮಹಾದ್ವಾರವನ್ನು ಹಾಯ್ದು ಒಳಗೆ ಅಡಿಯಿಟ್ಟರೆ ಸಮಾಧಿಯ ಸುತ್ತ ವಿಶಾಲವಾದ ಅಂಗಳವಿದ್ದು ಎತ್ತರವಾದ ಪ್ರಾಕಾರವಿದೆ ಮತ್ತು ಇತ್ತೀಚೆಗೆ ಭಕ್ತಾದಿಗಳು ಕಟ್ಟಿಸಿರುವ ಕೆಲವು ಮಂಟಪಗಳು, ಪೌಳಿಗಳು ಜಾತ್ರೆಯ ಸಮಯದಲ್ಲಿ ಭಕ್ತರು ತಂಗಲು ಅನುಕೂಲವಾಗಿವೆ.

ಕಲ್ಯಾಣದಲ್ಲಿ ಜನಿಸಿದ ಪಂಚಗಣಾಧೀಶ್ವರರಲ್ಲೊಬ್ಬರಾದ ತಿಪ್ಪೇರುದ್ರಸ್ವಾಮಿ ಕನ್ನಡ ನಾಡಿನ ಹಲವು ಭಾಗಗಳಲ್ಲಿ ಸಂಚರಿಸಿ ಕೊನೆಗೆ ನಾಯಕನಹಟ್ಟಿಗೆ ಬಂದು ನೆಲಸಿದನೆಂದೂ ಹನುಮಯ್ಯನ ಹಟ್ಟಿಯ ಬಳಿ ಇರುವ ಏಕಾಂತಮಠದಲ್ಲಿ ಹಲವು ವರ್ಷಗಳ ಕಾಲ ತಪೋನಿರತನಾಗಿದ್ದು ಅದ್ಭುತ ಪವಾಡಗಳಿಂದ ಮೆರೆದು, ಜನರನ್ನು ಸನ್ಮಾರ್ಗದತ್ತ

ಕರೆದೊಯ್ಯುವ ಪುಣ್ಯ ಕಾರ್ಯದಲ್ಲಿ ತೊಡಗಿದ್ದನೆಂದೂ ಈ ಸಂತ ಹಿರೇಕೆರೆ, ಚಿಕ್ಕಕೆರೆ ಮೊದಲಾದ ಐದು ಕೆರೆಗಳನ್ನೂ ಹಲವು ಹಳ್ಳಿಗಳನ್ನೂ ಕಟ್ಟಿಸಿದನೆಂದೂ ಪ್ರತೀತಿ.

ಈ ಊರಿನ ಇತಿಹಾಸಕ್ಕೆ ಸಂಬಂಧಪಟ್ಟಂತೆ (1620, 1625) ಎರಡು ಶಾಸನಗಳು ದೊರಕಿವೆ. ಇವುಗಳಲ್ಲಿ ಮಲ್ಲಪ್ಪನಾಯಕನೆಂಬುವನ ಉಲ್ಲೇಖವಿದೆ. ಆತ ಹಟ್ಟಿ ಎಂಬ ಹಳ್ಳಿಗೆ ಬಂದು ನೆಲಸಿದಂತೆಯೂ ವಿಜಯನಗರದ ಅರಸರು ಈತನನ್ನೇ ಆ ಪ್ರಾಂತ್ಯಕ್ಕೆ ಒಡೆಯನನ್ನಾಗಿ ನೇಮಿಸಿದ್ದರಿಂದ ಹಟ್ಟಿ ಎಂದಿದ್ದ ಆ ಗ್ರಾಮ ನಾಯಕನಹಟ್ಟಿ ಎಂಬ ಹೆಸರನ್ನು ಪಡೆಯಿತೆಂದೂ ಹೇಳುವರು. ಅನಂತರ ಬಂದ ಈ ನಾಯಕನ ವಂಶಸ್ಥನಾದ ಬೂದಿಮಲ್ಲನಾಯಕ ರಾಜ್ಯವನ್ನು ಮೊಳಕಾಲ್ಮೂರುವರೆಗೂ ವಿಸ್ತರಿಸಿದ. ಚಿತ್ರದುರ್ಗದ ಹಿರೇ ಮದಕರಿನಾಯಕ ತನ್ನ ಆಳ್ವಿಕೆಯಲ್ಲಿ ಈ ಪ್ರದೇಶವನ್ನು ವಶಪಡಿಸಿಕೊಂಡು ತನ್ನ ಸಂಸ್ಥಾನಕ್ಕೆ ಸೇರಿಕೊಂಡ.

ಈ ನಾಡಿನ ಭಾಗದ ಜನರ ಆರಾಧ್ಯದೈವವಾಗಿ ಬೆಳಗುತ್ತಿರುವ ತಿಪ್ಪೇರುದ್ರಯ್ಯನ ಜಾತ್ರೆ ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಬಹಳ ವೈಭವದಿಂದ ಜರುಗುತ್ತದೆ. (ಎಚ್.ಎಂ.ಪಿ.)

**ನಾಯಕಸ್ವಾಮಿ:** ಉತ್ತರ ಕನ್ನಡ ಜಿಲ್ಲೆಯಲ್ಲಿದ್ದ ಒಬ್ಬ ಸಂತಕವಿ. ಪೂರ್ಣ ಹೆಸರು ಶಂಕರ ಮಂಗೇಶ ನಾಯಕ ಕರಂಡೇದೇಸಾಯಿ. ಹುಟ್ಟಿದ್ದು ಕುಮಟ ತಾಲ್ಲೂಕಿನಲ್ಲಿಯ ಅಂತರವಳ್ಳಿ ಗ್ರಾಮದಲ್ಲಿ. ಒಮ್ಮೆ ತಮ್ಮ ಕುಲದೇವತೆಯಾದ ಗೋವೆಯ ಪ್ರದೇಶದಲ್ಲಿನ ಶ್ರೀಕ್ಷೇತ್ರ ಮಂಗೇಶಕ್ಕೆ ಹೋದಾಗ ಆಕಸ್ಮಾತ್ ಕುಟುಂಬದವರೆಲ್ಲ ಕಾಡಿನ ರಸ್ತೆಯಲ್ಲಿ ಬೇರೆ ಬೇರೆಯಾಗಿ ದಾರಿ ತಪ್ಪಿಸಿಕೊಂಡರಾಗಿ ಈತ ಹಿಂದಕ್ಕೆ ಹೋಗದೆ ಮಂಗೇಶದಲ್ಲಿಯೇ ಉಳಿದ. ಅಲ್ಲಿರುವಾಗ ಸಂನ್ಯಾಸಿಯೊಬ್ಬನಿಂದ ವೈರಾಗ್ಯವನ್ನು ಪಡೆದ. ಅನಂತರದಲ್ಲಿ ಕಳೆದುಹೋದ ತಂದೆ ತಾಯಿಗಳ ಭೇಟಿಯಾಗಲಾಗಿ ಅವರೊಂದಿಗೆ ಮಂಗೇಶದಲ್ಲಿಯೇ ನೆಲೆಹೊಂದಿದ. ಮಂಗೇಶವೇ ಕಾಶಿ ಎಂದು ಅರಿತ ಈತ ಅಲ್ಲಿಯೇ ನಿಂತು ಧಾರ್ಮಿಕ ಜೀವನ ನಡೆಸಿದ. ಅಲ್ಲಿ ಈತನ ಸಮಾಧಿ ಇದೆ. ಪ್ರತಿವರ್ಷ ವೈಶಾಖ ಬಹುಳ ದ್ವಾದಶಿಯಂದು ಈ ಸಂತನ ಪುಣ್ಯತಿಥಿಯನ್ನು ಮಾಡಲಾಗುತ್ತಿದೆ. ಅಂದು ಅಲ್ಲಿ ಒಂದು ಜಾತ್ರೆಯೂ ಸೇರುತ್ತದೆ.

ಪ್ರಾಸಾದಿಕ ಕವಿಯಾಗಿದ್ದ ಈತ ಶಿವಗೀತೆಯ ಮೇಲೆ ಒಂದು ಟೀಕೆಯನ್ನು ಬರೆದಿದ್ದಾನೆ. ಅನೇಕ ಶಿವಸ್ತುತಿಗಳನ್ನು ಬರೆದಿದ್ದಾನೆ. ಶ್ರೀಮಂಗೇಶನ ಶಿಬಿಕೋತ್ಸವ (ಪಲ್ಲಕ್ಕಿ ಸೇವೆ) ಸಮಯದಲ್ಲಿ ಈತನಿಂದ ರಚಿತವಾದ ಝುಲಪೆಗಳನ್ನು ಗೀತೆಗಳನ್ನು ಹೇಳುತ್ತಾರೆ. *

**ನಾಯಕ, ಹಾ.ಮಾ.:** 1931–2000. ಕನ್ನಡ ಅಂಕಣ ಪ್ರಕಾರಕ್ಕೆ ಘನತೆ, ಗೌರವ, ಕೀರ್ತಿ, ಸಾಹಿತ್ಯಕ ಮೌಲ್ಯ ತಂದುಕೊಟ್ಟ ಪ್ರಸಿದ್ಧ ಸಾಹಿತಿ. 'ಕನ್ನಡ ನನ್ನ ಮೊದಲ ಪ್ರೀತಿ, ಎರಡನೆಯ ಪ್ರೀತಿಯೂ ಅದೇ' ಎಂದು ಹೇಳುತ್ತ ಕನ್ನಡವನ್ನು ಕಟ್ಟುವ ಕೆಲಸದಲ್ಲಿ ಬದುಕು ಸವೆಸಿದ ಹೋರಾಟಗಾರ. ಹಾರೋಗದ್ದೆ ಮಾನಪ್ಪ ನಾಯಕ ಎಂಬುದು ಇವರ ಪೂರ್ಣ ಹೆಸರು. ಕನ್ನಡ ನಾಡಿನ ಉದ್ದಗಲಕ್ಕೆ ಹಾಮಾನಾ ಎಂದೇ ಚಿರಪರಿಚಿತರಾಗಿದ್ದರು. ಇವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯಲ್ಲಿ 1931 ನವೆಂಬರ್ 12 ರಂದು ಜನಿಸಿದರು. ತಂದೆ ಶ್ರೀನಿವಾಸ ನಾಯಕ, ತಾಯಿ ರುಕ್ಮಿಣಿಯಮ್ಮ. ಎಂಟು ಮಕ್ಕಳ ದೊಡ್ಡ ಕುಟುಂಬದಲ್ಲಿ ಇವರೇ ಹಿರಿಯ ಮಗ. ಬಡತನದಲ್ಲಿ ಬಾಲ್ಯವನ್ನು ಕಳೆದ ಇವರು ಓದಿ ವಿದ್ಯಾವಂತರಾಗಲು ಪಟ್ಟ ಪಾಡು ಅಷ್ಟಿಷ್ಟಲ್ಲ. ಪ್ರೌಢಶಾಲೆಯವರೆಗಿನ ವಿದ್ಯಾಭ್ಯಾಸವನ್ನು ಶಿವಮೊಗ್ಗೆಯಲ್ಲೂ ಕಾಲೇಜು ವಿದ್ಯಾಭ್ಯಾಸವನ್ನು ಮೈಸೂರಿನಲ್ಲೂ ಸ್ನಾತಕೋತ್ತರ ಶಿಕ್ಷಣವನ್ನು ಕಲ್ಕತ್ತೆಯಲ್ಲೂ ನಡೆಸಿದರು. ಇವರು ಬಿ.ಎ. ಆನರ್ಸ್ ಮಾಡಿದ ಮೇಲೆ (1955), ಭಾಷಾವಿಜ್ಞಾನದಲ್ಲಿ ಎಂ.ಎ. ಪದವಿ ಪಡೆದರು (1958). ಅನಂತರ ಅಮೆರಿಕದ ಇಂಡಿಯಾನಾ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪಡೆದರು (1964).

ಆನರ್ಸ್ ಪದವಿ ಪಡೆದ ಮೇಲೆ ಇವರು ತುಮಕೂರಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು (1955). ಅನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಭಾಷಾವಿಜ್ಞಾನದ ರೀಡರ್ ಆದರು (1959). 1961ರಲ್ಲಿ ಸ್ನಾತಕೋತ್ತರ ಕನ್ನಡ ವಿಭಾಗಕ್ಕೆ ಬಂದ ಇವರು ಕಾಲಕ್ರಮೇಣ ಪ್ರವಾಚಕರಾಗಿ, 1968 ರಲ್ಲಿ ಕನ್ನಡ ಪ್ರಾಧ್ಯಾಪಕರಾದರು. ದೇ. ಜವರೇಗೌಡರ ಅನಂತರ 1969 ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದರು. 1984 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡ ಇವರು ಎರಡು ವರ್ಷಗಳ ಅನಂತರ



ತಾತ್ವಿಕ ಕಾರಣಗಳಿಗಾಗಿ ರಾಜೀನಾಮೆ ನೀಡಿ ಕನ್ನಡ ಅಧ್ಯಯನ ಸಂಸ್ಥೆಗೆ ಪ್ರಾಧ್ಯಾಪಕರಾಗಿ ಮರಳಿದರು. ಫೆಬ್ರವರಿ 1991ರಲ್ಲಿ ನಿವೃತ್ತರಾದರು. ಅನಂತರ ಮೈಸೂರಿನಲ್ಲಿಯೇ ನೆಲೆಸಿದ್ದ ಇವರು 2000 ನವೆಂಬರ್ 10 ರಂದು ನಿಧನಹೊಂದಿದರು.

ಹಾ.ಮಾ. ನಾಯಕರು ಹದಿನೈದು ವರ್ಷಗಳ ಕಾಲ (1969–84) ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು. ದೇ. ಜವರೇಗೌಡರು ಆರಂಭಿಸಿದ ಕನ್ನಡ ವಿಶ್ವಕೋಶ, ಎಪಿಗ್ರಾಫಿಯ ಕರ್ನಾಟಿಕ, ಹರಿದಾಸ ಸಾಹಿತ್ಯ, ಸಂಪಾದನೆ, ಜಾನಪದ ಗ್ರಂಥಗಳ ಪ್ರಕಟಣೆಯ ಯೋಜನೆಗಳನ್ನು ಮುನ್ನಡೆಸಿದರು. ಜೊತೆಗೆ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಛಂದಸ್ಸಿನ ಚರಿತ್ರೆ, ಕನ್ನಡ ರೈಟರ್ಸ್ ಅಂಡ್ ದೇರ್ ವರ್ಕ್ಸ್, ಧರ್ಮಶಾಸ್ತ್ರದ ಇತಿಹಾಸ ಹಾಗೂ ಮಹಾಭಾರತ ಸಂಪುಟಗಳನ್ನು ಪ್ರಕಟಿಸಿದರು. ಎಂ.ಆರ್. ಶ್ರೀ. ಅವರ ಲೇಖನಗಳು, ಎಸ್. ಶ್ರೀಕಂಠಶಾಸ್ತ್ರಿಗಳ ಲೇಖನಗಳು, ಬಿ.ಎಂ.ಶ್ರೀ ಅವರ ರಚನೆಗಳ ಸಮಗ್ರ ಸಂಪುಟ ಹೊರತಂದರು. ತಮ್ಮ ನಿರ್ದೇಶಕತ್ವದ ಅವಧಿಯಲ್ಲಿ 350 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದರು. ಕನ್ನಡದ ಅತಿ ಮಹತ್ವದ ಯೋಜನೆಗಳಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಪಾಲ್ಗೊಳ್ಳುವಂತಾಗಿಸಿದರು. ರಚನಾತ್ಮಕ ಹಾಗೂ ಮಹತ್ತ್ವಪೂರ್ಣ ಕೆಲಸಗಳಿಂದ ಕನ್ನಡ ಕಟ್ಟುವ ಕೆಲಸವನ್ನು ನಿರಂತರವಾಗಿಸಿದರು.

ನಾಯಕರು 80ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಹದಿನೆಂಟರ ಹರೆಯದಲ್ಲಿ ಪ್ರಕಟಿಸಿದ 'ಬಾಳ್ನೋಟಗಳು' ಇವರ ಮೊದಲ ಕೃತಿ. ಇದು ಸಾಹಿತಿಗಳ ಮೆಚ್ಚುಗೆಗೂ ಊರವರ ವಿವಾದಕ್ಕೂ ಪಾತ್ರವಾಗಿದ್ದುಂಟು. ಪ್ರಬಂಧ, ಜೀವನಚರಿತ್ರೆ, ವಿಮರ್ಶೆ, ಅನುವಾದ, ಸೂಚಿಸಾಹಿತ್ಯ, ಅಂಕಣ ಪ್ರಕಾರ ಇವು ನಾಯಕರು ಕೃಷಿ ಮಾಡಿದ ಮುಖ್ಯ ಕ್ಷೇತ್ರಗಳು. 'ನಮ್ಮ ಮನೆಯ ದೀಪ' ವಿವಿಧ ಭಾಷೆಗಳಿಗೆ ಅನುವಾದಗೊಂಡು ಮನೆಮಾತಾಗಿರುವ ಲಲಿತ ಪ್ರಬಂಧ ಕೃತಿ. 'ಜಾನಪದ ಸ್ವರೂಪ' ಜಾನಪದದ ವೈಜ್ಞಾನಿಕ ಅಧ್ಯಯನವನ್ನು

ಉದ್ಘಾಟಿಸಿದ ಕಿರುಕೃತಿ. ಹಲವಾರು ಮುದ್ರಣ ಕಂಡಿರುವ ಹೊತ್ತಗೆ. 'ರವೀಂದ್ರನಾಥಠಾಕೂರ್' ಒಪ್ಪವಾದ ಒಂದು ಜೀವನಚರಿತ್ರೆ. 'ಪ್ರಣಯ ಪದಾವಳಿ', ಮೈಥಿಲಿಯ ವಿದ್ಯಾಪತಿಯ ಹಾಡುಗಳ ಅನುವಾದವಾದರೆ 'ಸುನೇರಿ', ಅಮೃತಾ ಪ್ರೀತಮ್ ಅವರ ಪಂಜಾಬಿ ಕವನಗಳ ಕನ್ನಡ ರೂಪ. ಜಾನಪದ ಗ್ರಂಥಗಳು, ಗೋಕಾಕರ ಗ್ರಂಥಗಳು, ಮಾಸ್ತಿಯವರ ಕೃತಿಗಳನ್ನು ಕುರಿತಂತೆ ಇವರು ಸೂಚಿಗಳನ್ನು ತಯಾರಿಸಿದ್ದಾರೆ. ಈ ಎಲ್ಲವೂ ಹಾ.ಮಾ. ನಾಯಕರ ಆಸಕ್ತಿಯ ವೈವಿಧ್ಯ, ಬಹುಶ್ರುತತೆಗೆ ಸಾಕ್ಷಿ.

ಸಂಕೀರ್ಣ, ಸಮೀಕ್ಷೆ, ಸಂದರ್ಭ, ಸಂಗ್ರಹ, ಸಂಚಯ, ಸೃಜನ ಮುಂತಾದವು ನಾಯಕರ ಲೇಖನ ಸಂಗ್ರಹಗಳು. ಇವುಗಳಲ್ಲಿ ಆಧುನಿಕ ಕನ್ನಡ ಕೃತಿಗಳ ಬಗ್ಗೆ ಆಧುನಿಕ ಕನ್ನಡ ಸಾಹಿತಿಗಳ ಬಗ್ಗೆ ಬರೆದ ಬರೆಹಗಳಿವೆ. ಇವರಿಗೆ ಸಮಕಾಲೀನ ಭಾರತೀಯ ಸಾಹಿತ್ಯದ ವ್ಯಾಪಕವಾದ ಪರಿಚಯವಿತ್ತು. ಸ್ತವನ, ಸ್ಮರಣ, ಸೊಡರು ಮುಂತಾದ ಸಂಗ್ರಹಗಳಲ್ಲಿ ಇಂಥ ದೃಷ್ಟಿಯ ಹಾಗೂ ಭಾರತೀಯ ಲೇಖಕರನ್ನು ಕುರಿತ ಪರಿಚಯಾತ್ಮಕ ಬರೆಹಗಳಿವೆ. ಗೊರೂರು, ಪರಮೇಶ್ವರಭಟ್ಟ, ಕಾವ್ಯಾನಂದ ಮೊದಲಾದ ಹಿರಿಯರ ಹಾಗೂ ಹಲವಾರು ಕಿರಿಯರ ಪುಸ್ತಕಗಳಿಗೆ ಬರೆದ ಮುನ್ನುಡಿಗಳ ಸಂಕಲನಗಳು ಸಿಂಗಾರ, ಸಂಭ್ರಮ, ಸನಾದಿ, ಸನ್ನುಡಿ, ಸೋಗಿಲು. ಇವು ನಮ್ಮ ಸಾಹಿತಿಗಳನ್ನು ಉತ್ತೇಜಿಸುವ, ಅವರ ಕೃತಿಗಳನ್ನು ಏರು ಬೆಳಕಿನಲ್ಲಿಟ್ಟು ಮುಂದುಮಾಡುವಲ್ಲಿ ಅವರ ನಿರಂತರ ಪ್ರಯತ್ನ.

ನಾಯಕರ ಸಾಹಿತ್ಯ ಸಾಧನೆಯ ಪ್ರಧಾನವಾದ ಕೃಷಿ ಇವರ ಅಂಕಣ ಸಾಹಿತ್ಯ. ಶಿವಮೊಗ್ಗೆಯ 'ನಂದಿನಿ' ಮಾಸಪತ್ರಿಕೆಗೆ ತಮ್ಮ ಹತ್ತೊಂಬತ್ತರ ಹರಯದಲ್ಲೇ ಇವರು ಪೂರ್ಣಿಮೆಗೆ ಪತ್ರಗಳು ಎಂಬ ಶೀರ್ಷಿಕೆಯಲ್ಲಿ ಅಂಕಣ ಬರೆಯುತ್ತಿದ್ದರು. ಅನಂತರ 'ಕನ್ನಡಪ್ರಭ' ದಿನಪತ್ರಿಕೆಯ ಸಾಹಿತ್ಯ ಸಲ್ಲಾಪ ಅಂಕಣ ಇವರಿಗೆ ಪ್ರಸಿದ್ಧಿ, ಗೌರವ ತಂದುಕೊಟ್ಟಿತು. ಪ್ರಜಾಮತದಲ್ಲಿ ಹಾ.ಮಾ. ನಾಯಕ ಬರೆಯುತ್ತಾರೆ ಎಂಬ ಅಂಕಣ ಬರೆದರು. ಪ್ರಜಾವಾಣಿಯ 'ಸಂಪ್ರತಿ', ಗ್ರಂಥಲೋಕದ 'ತಿಂಗಳ ಪುಸ್ತಕ' ಇವರಿಗೆ ವಿಪುಲ ಖ್ಯಾತಿ ತಂದುಕೊಟ್ಟಿತು. ತರಂಗ, ಇಂಚರ, ಸಂಕೇತ, ಕರ್ಮವೀರ, ಸುಧಾ ನಿಯತಕಾಲಿಕೆಗಳಲ್ಲೂ ಇವರು ಬರೆದರು. ಸಾಹಿತಿಯೊಬ್ಬರು ಇಷ್ಟೊಂದು ಪತ್ರಿಕೆಗಳಿಗೆ ಹಲವು ವರ್ಷ ಅಂಕಣ ಬರೆದ ನಿದರ್ಶನ ಮತ್ತೊಂದು ಭಾಷೆಯಲ್ಲಿಲ್ಲ. ನಾಯಕರ ಅಂಕಣಗಳು ಬಹುಶ್ರುತತೆಯ, ವ್ಯಾಪಕ ವ್ಯಾಸಂಗದ ತೀಕ್ಷ್ಣ ಚಿಂತನೆಯ, ತೀವ್ರ ಭಾಷಾಭಿಮಾನದ ಬಲದಿಂದ ಸತ್ತ್ವಯುತವಾಗಿದ್ದವು. ಮೋಹಕವಾದ ಶೈಲಿ, ಆಕರ್ಷಕವಾದ ನಿರೂಪಣೆ, ವಿಚಾರ ಸಮೃದ್ಧಿಗಳಿಂದ ಅವು ತುಂಬಿಕೊಂಡಿರುತ್ತಿದ್ದವು. ಜಗತ್ತಿನ ಭಾರತದ ಕರ್ನಾಟಕದ ಲೇಖಕರು ಕಲಾವಿದರು ಕೃತಿಗಳು ಸಾಂಸ್ಕೃತಿಕ ಸಂಘಸಂಸ್ಥೆಗಳು ಮಾತ್ರವಲ್ಲದೆ ವಾರದ ಆಗುಹೋಗುಗಳು ಸಾಮಾನ್ಯ ಓದುಗನಿಗೆ ಇದರ ಮೂಲಕ ಪರಿಚಯವಾಗುತ್ತಿತ್ತು. ಲಲಿತ ಪ್ರಬಂಧದ ಚೌಕಟ್ಟು, ವ್ಯಕ್ತಿ ಚಿತ್ರದ ರೇಖೆಗಳು, ಆತ್ಮಕಥೆಯ ಭಿತ್ತಿ ಅಲ್ಲಿ ಮೇಳವಿಸಿದ್ದುವು. ಸಾಂಸ್ಕೃತಿಕ ವಾರಚರಿ, ಸಮೂಹ ಮಾಧ್ಯಮ ಶಿಕ್ಷಣ ಲೇಖನ ಎಂದೂ ಈ ಬರೆಹಗಳನ್ನು ವಿಮರ್ಶಕರು ಹೊಗಳಿದ್ದಾರೆ. ಸಾಹಿತ್ಯ ಸಲ್ಲಾಪ, ಸಲ್ಲಾಪ, ಸಮೂಹ, ಸಂಪರ್ಕ, ಸಾಂಪ್ರತ, ಸಂವಹನ, ಸಂಪ್ರತಿ ಇವು ಇವರ ಕೆಲವು ಮುಖ್ಯ ಅಂಕಣ ಬರೆಹ ಸಂಪುಟಗಳು. ಇವರ 'ಸಂಪ್ರತಿ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ (1989). ಅಖಿಲ ಭಾರತ ಮಟ್ಟದಲ್ಲಿ ಅಂಕಣ ಬರೆಹಗಳನ್ನೂ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿಗೆ ಪರಿಗಣಿಸಿದ್ದು ಕನ್ನಡಕ್ಕೆ ಸಂದ ಗೌರವವಾಗಿದೆ.

ಆಕಾಶವಾಣಿಯಲ್ಲಿ ಚಿಂತನ ಚೆನ್ನುಡಿಗಳನ್ನು ಪ್ರಸಾರ ಮಾಡಿ ಆ ಚಿಂತನ ಪ್ರಬಂಧಗಳನ್ನು ಜನಪ್ರಿಯಗೊಳಿಸಿ ಒಂದು ಪ್ರಕಾರವಾಗಿ ಸ್ಥಾಪಿಸಿದ ಕೀರ್ತಿಯಲ್ಲಿ ಅಗ್ರಪಾಲು ನಾಯಕರಿಗೆ ಸಲ್ಲುತ್ತದೆ. ಸೌಜನ್ಯ, ಆತ್ಮವಿಶ್ವಾಸ, ಕರ್ತವ್ಯ, ಮಹತ್ವಾಕಾಂಕ್ಷೆ, ಪ್ರೀತಿ, ಅಧಿಕಾರ, ಸ್ನೇಹ, ಓದುಗಾರಿಕೆ, ಸ್ಥಿತಪ್ರಜ್ಞತೆ, ಭ್ರಷ್ಟಾಚಾರ, ಸಂಸ್ಕೃತಿ ಕುರಿತ ಇವರ ಬಾನುಲಿ ಭಾಷಣಗಳು ಅಡಕವೂ ಅನನ್ಯವೂ ಆಗಿವೆ. ಹಲವೆಡೆ ತಾವು ಓದಿದ, ಕೇಳಿದ, ಕಂಡು ಅನುಭವಿಸಿದ ಸಂಗತಿಗಳ ಚಿಂತನೆಗಳ ಎಳೆಗಳನ್ನೂ ಇವರು ಇಲ್ಲಿ ನೇಯ್ದಿದ್ದಾರೆ. ಸೂಲಂಗಿ, ಸಂಗತಿ, ಸಂಪಣ, ಸುರಗಿ ಇವು ಮನನೀಯ ಸಂಕಲನಗಳು. ಕರ್ನಾಟಕದಲ್ಲಿ ಕನ್ನಡವೇ ಪ್ರಥಮ, ಪ್ರಧಾನ, ರಾಜ, ರಾಣಿ, ರಾಜಕುಮಾರ ಎಲ್ಲ; ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು ಎಂದು ಹೇಳಿದ ನಾಯಕರು ಕನ್ನಡದ ಸ್ಥಾನಮಾನ ಕುರಿತಂತೆ ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ಹೋರಾಡಿದವರು. ಇಂಗ್ಲಿಷ್ ಮೋಹ, ಹಿಂದಿಯ ಹೇರಿಕೆ, ಸಂಸ್ಕೃತಕ್ಕಿದ್ದ ಸವಲತ್ತುಗಳಿಂದ ಕನ್ನಡಕ್ಕೆ ಆಗುತ್ತಿದ್ದ ಅನ್ಯಾಯವನ್ನು ಇವರು ಯೋಚಿಸಿ, ತರ್ಕಿಸಿ ವಾದಿಸುತ್ತಿದ್ದರು. ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನದಲ್ಲಿ ಇವರು ಮಂಡಿಸಿದ ಒಂದು ನಿರ್ಣಯ ಗೋಕಾಕ್ ಚಳವಳಿಗೆ ನಾಂದಿಯಾಯಿತು. ಕನ್ನಡದ ಕಾರ್ಯ ಪ್ರಸಾರಗಳಿಗೆ, ಏಳಿಗೆ ಬೆಳವಣಿಗೆಗಳಿಗೆ ಬಿ.ಎಂ. ಶ್ರೀ., ಅ.ನ.ಕೃ., ಅವರ ಅನಂತರ ಕರ್ನಾಟಕದಾದ್ಯಂತ ಸುತ್ತಾಡಿದವರು ಹಾ.ಮಾ. ನಾಯಕರು. ಕೆಲವು ಸಂದರ್ಭದಲ್ಲಿ ನಾಯಕರು ಕನ್ನಡಕ್ಕೆ ಏಕವ್ಯಕ್ತಿ ಕಾವಲು ಸಮಿತಿಯಂತೆಯೂ ಇದ್ದರು.

ನಾಯಕರು ಹಲವು ಬಗೆಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಇವು ಕೆಲವು ಮುಖ್ಯ ಪ್ರಶಸ್ತಿಗಳು. ಇವರ 'ಸಲ್ಲಾಪ'ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ, 'ಸಂಪ್ರತಿ'ಗೆ ಐ.ಬಿ.ಎಚ್. ಎಜುಕೇಷನ್ ಟ್ರಸ್ಟ್ ಪ್ರಶಸ್ತಿ ಲಭಿಸಿದ್ದವು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಇವರು ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ, ಭಾರತೀಯ ಜ್ಞಾನಪೀಠ, ಬಿ.ಡಿ. ಗೋಯೆಂಕಾ ಬಹುಮಾನ ಮುಂತಾದ ಸಮಿತಿಗಳಲ್ಲಿದ್ದರು. ದೇಶ ವಿದೇಶಗಳ ಸಂಕಿರಣಗಳಲ್ಲಿ ಭಾಗವಹಿಸಿದ್ದ ಇವರು ಬೀದರ್‌ನಲ್ಲಿ ನಡೆದ 57 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ ಶಿಷ್ಯರು, ಮಿತ್ರರು, ಅಭಿಮಾನಿಗಳು ಇವರಿಗೆ 60 ವರ್ಷಗಳು ತುಂಬಿದಾಗ ಮಾನ ಎಂಬ ಅಭಿನಂದನ ಗ್ರಂಥ ಸಮರ್ಪಿಸಿದರು (1992).

(ಎನ್.ಎಸ್.ಟಿ.)

**ನಾಯ್ಡು, ಆರ್.ಎಸ್.:** ಪ್ರಸಿದ್ಧ ಚಿತ್ರಕಾರ, ಶಿಲ್ಪಿ. ಹುಟ್ಟಿದ್ದು ಬೆಂಗಳೂರಿನಲ್ಲಿ. ತಂದೆ ರಂಗಸ್ವಾಮಿ, ತಾಯಿ ರಂಗನಾಯಕಮ್ಮ, ಸಹೋದರ ಭೂವಿಜ್ಞಾನ ಪ್ರಾಧ್ಯಾಪಕರಾಗಿದ್ದ ಜಗಪತಿ ನಾಯ್ಡು. ಇವರ ಬಾಲ್ಯದ ವಿದ್ಯಾಭ್ಯಾಸ ಕೆಲಕಾಲ ತಿರುಚ್ಚಿರಾಪಳ್ಳಿಯಲ್ಲಿಯೂ ಅನಂತರ ಧಾರವಾಡದಲ್ಲಿಯೂ ನಡೆಯಿತು. ಆಟಪಾಟಗಳೊಂದಿಗೆ ಚರ್ಚಾಕೂಟಗಳಲ್ಲೂ ಭಾಗವಹಿಸುತ್ತಿದ್ದರು. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದಾಗ ಯುವಕ ಕಾಂಗ್ರೆಸ್ ಸಂಸ್ಥೆಯೊಂದನ್ನು ಕಟ್ಟಿದರು. ಕಾಂಗ್ರೆಸ್ ಚಟುವಟಿಕೆಯಲ್ಲಿ ಓಡಾಡತೊಡಗಿ ಮೊದಲ ಬಾರಿಗೆ ಆರು ತಿಂಗಳ ಸಾದಾ ಸಜೆಯನ್ನು ಜೈಲಿನಲ್ಲಿ ಅನುಭವಿಸಿದರು (1933). ಮತ್ತೆ ಇವರು ಎರಡನೆಯ ಬಾರಿ ಕಠಿಣ ಶಿಕ್ಷೆಗೊಳಗಾದರು (1934). ಇವರಿದ್ದ ಯರವಾಡಾ ಜೈಲಿನಲ್ಲಿ ಗಾಂಧೀಜಿ, ಮಹದೇವ

ದೇಸಾಯಿ, ಜಮನಾಲಾಲ್ ಬಜಾಜ್ ಮುಂತಾದ ಗಣ್ಯ ರಾಷ್ಟ್ರಭಕ್ತರೂ ಇದ್ದರು. ಆ ಜೈಲಿನಲ್ಲಿ ಎದ್ದು ಕಾಣುತ್ತಿದ್ದ ಪ್ರಾಂತೀಯ ಪಕ್ಷಪಾತವನ್ನು ಇವರು ಪ್ರತಿಭಟಿಸಿದರು. ಇದನ್ನು ಸಹಿಸಲಾರದ ಸರ್ಕಾರ ಇವರ ಜೈಲುಶಿಕ್ಷೆಯ ಅವಧಿಯನ್ನು ಹೆಚ್ಚಿಸಿತು. ಅದೇ ಕಾಲಕ್ಕೆ ಜರ್ಮನ್ ದಿನಪತ್ರಿಕೆಯ ಸಂಪಾದಕರೊಬ್ಬರ ಸ್ನೇಹದಿಂದ ಮಾರ್ಕ್ಸ್‌ವಾದವನ್ನು ಸ್ವೀಕರಿಸಿದರು. ಕಾಂಗ್ರೆಸ್ ದಿನಾಚರಣೆಯಂದು ಜೈಲಿನಲ್ಲಿದ್ದ ತಮ್ಮ ಮಿತ್ರರ ಸಹಾಯದಿಂದ ಜೇಡಿಮಣ್ಣನ್ನು ತರಿಸಿ ರಾತ್ರಿಯೆಲ್ಲ ನಿದ್ದೆಗೆಟ್ಟು ನಾಲ್ಕಡಿ ಗಾತ್ರದ ಕ್ರಾಂತಿವೀರ ಲೆನಿನ್ ಮೂರ್ತಿಯನ್ನು ಸೃಜಿಸಿದರು. ಸೆರೆಮನೆಯಿಂದ ಹೊರಬಂದ ಮೇಲೆ ಇವರ ಮನಃಸ್ವಾಸ್ಥ್ಯ ಕೆಟ್ಟಿತು.



ಕಿರಿಕಿರಿ ವಾತಾವರಣದಲ್ಲಿ ಬಾಳತೊಡಗಿದರು. ಜೀವನ ದಲ್ಲಿ ಜುಗುಪ್ಸೆಗೊಂಡು, ಮುಂಬಯಿಯಲ್ಲಿ ತಾವು ವಾಸಿಸುತ್ತಿದ್ದ ಮಹಡಿಯಿಂದ ಕೆಳಕ್ಕೆ ದುಮುಕಿ ಸಾಯಲು ಪ್ರಯತ್ನಿಸಿ ವಿಫಲರಾದರು. ಚಿಂತೆ ಮರೆಯಲು ಪುಸ್ತಕಗಳ ಮೊರೆ ಹೊಕ್ಕರು. ಯುವಕ ರನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಹುರಿದುಂಬಿಸುವ ಸಲುವಾಗಿ ಒಂದು ಯುವ ಜನ ಸಂಸ್ಥೆ ಕಟ್ಟಿಕೊಂಡರು. ಅದರ ವತಿಯಿಂದ ಒಂದು ಕ್ರಾಂತಿಕಾರಿ ಪತ್ರಿಕೆಯೂ ಹೊರಬಂತು. ಪೊಲೀಸ್ ಚಿತ್ರಗುಪ್ತರ ವಕ್ರದೃಷ್ಟಿ ಇವರ ಮೇಲೆ ಬಿತ್ತು. ಆಗ ಇವರು ಭೂಗತರಾಗಬೇಕಾಯಿತು. ಉಪಟಳ ಹೆಚ್ಚಾದಾಗ ಗುಪ್ತಚಾರರು ಇವರನ್ನು ಬಂಧಿಸಿದರು. ಮತ್ತೆ ಕೆಲವು ತಿಂಗಳ ಶಿಕ್ಷೆ ಅನುಭವಿಸ ಬೇಕಾಯಿತು. ಅನಂತರ ರಾಜಕೀಯ ಬುದ್ಧಿಜೀವಿಗಳಾದ ಮೆಹರಾಲಿ, ಮೀನೂ ಮಸಾನಿ, ಅಶೋಕ ಮೆಹ್ತ ಮುಂತಾದವರ ಜೊತೆ ಸೇರಿ ಸಮಾಜವಾದಿ ಪಕ್ಷ ಕಟ್ಟಿದ್ದರು. ಅದರ ವತಿಯಿಂದ ಭಾರತದ ಆರ್ಥಿಕತೆ ಬಗ್ಗೆ ಪಿಕ್ಟೋರಿಯಲಂ ಎಕನಾಮಿಕ್ಸ್ ಎಂಬ ಸಚಿತ್ರ ವಾರಪತ್ರಿಕೆಯನ್ನು ಪ್ರತಿವಾರವೂ ಪ್ರಕಟಿಸುತ್ತಿದ್ದರು. ನ್ಯಾಷನಲ್ ಫ್ರೆಂಚ್ ಪತ್ರಿಕೆಯಲ್ಲಿ ಆಗಾಗ ಇವರ ಕ್ರಾಂತಿಕಾರಿ ವ್ಯಂಗ್ಯಚಿತ್ರಗಳು ಪ್ರಕಟವಾಗುತ್ತಿದ್ದವು.

ಲಂಡನ್ನಿಗೆ ಹೋಗಿ ಅಲ್ಲಿ ಇದ್ದಷ್ಟು ಕಾಲವನ್ನು ಕಾರ್ಮಿಕರೊಂದಿಗೆ ಕಳೆದರು. ಅಲ್ಲಿಂದ ಮಾಸ್ಕೋಗೆ ಹೋಗಬೇಕೆಂಬ ಆಸೆ ಎರಡನೆಯ ಮಹಾಯುದ್ಧದಿಂದಾಗಿ ನೆರವೇರಲಿಲ್ಲ. ತಪ್ಪಿಸಿಕೊಂಡಾದರೂ ಮಾಸ್ಕೋ ಮುಟ್ಟಬೇಕೆಂದಿದ್ದರೂ ಗುಪ್ತಚಾರರಿಂದಾಗಿ ಸಾಧ್ಯವಾಗಲಿಲ್ಲ. ಅದೇ ವೇಳೆಗೆ ಭಾರತದಿಂದ ಕರೆ ಬಂತು. ಹಿಂತಿರುಗಲು ಹಡಗಿನಲ್ಲಿ ಅವಕಾಶ ದೊರೆಯಲಿಲ್ಲ. ಒಬ್ಬ ಭಾರತೀಯ ವಿದ್ಯಾರ್ಥಿಯ ನೆರವಿನಿಂದಾಗಿ ತಾಯಿನಾಡು ತಲುಪಿದರು.

ಮುಂಬಯಿಗೆ ಮರಳಿ ಕೆಲವು ವರ್ಷ ಅಲ್ಲಿ ಕಳೆದರು. ಒಮ್ಮೆ ಗುಜರಾತಿನ ಸ್ವಾರ್ಥಲಂಪಟರ ವ್ಯಂಗ್ಯಚಿತ್ರವನ್ನು ಶೀಸೆಯ ಆಕೃತಿಯಲ್ಲಿ ರಚಿಸಿ ಪ್ರಕಟಿಸಿದರು. ಆ ಚಿತ್ರದ ಬಗ್ಗೆ ಎಲ್ಲ ಕಡೆಯೂ ಗುಲ್ಲೆದ್ದಿತು. ಎಲ್ಲರ ಗಮನವನ್ನೂ ಅದು ಶೀಘ್ರವಾಗಿ ಸೆಳೆಯಿತು. ಕೊನೆಗೆ ಬೆಂಕಿಪೊಟ್ಟಣದ ಮೇಲೆಯೂ ಅದು ಕಾಣಿಸಿಕೊಂಡಿತು. ಮುಂಬಯಿಂದ ಕಲ್ಕತ್ತದವರೆಗೂ ಅದರ ಕೀರ್ತಿ ಹರಡಿತು. ಮುಂಬಯಿ ಬೇಸರ ಬಂದಾಗ ಬೆಂಗಳೂರಿಗೆ ಬಂದು ಸೇರಿದರು. ಅಲ್ಲಿಂದ 1957ರಲ್ಲಿ ಮೈಸೂರಿಗೆ ಬಂದು ನೆಲೆಸಿದ್ದರು.

ಇವರ ಕುಂಚ ವಿಡಂಬನಾತ್ಮಕ ರೇಖಾಚಿತ್ರದಿಂದ ವರ್ಣ ಚಿತ್ರಗಳವರೆಗೆ ಕೆಲಸ ಮಾಡಿದೆ. ಇವರು ಮೊದಲಿಂದಲೂ ಸಾಂಪ್ರದಾಯಿಕ ಕಲೆಯನ್ನು ಒಪ್ಪಿದವರಾದರೂ ಅಂದಚಂದಗಳ ಅಂಧಾನುಕರಣೆಗೆ ಮಾರು ಹೋದವರಲ್ಲ. ಇವರ ಕಲೆ ಬರೀ ತಾಂತ್ರಿಕವಾಗಿ ಉಳಿಯಲಿಲ್ಲ. ಯಾರೊಬ್ಬರ ಯಾವೊಂದರ ಪ್ರಭಾವಕ್ಕೂ ಇವರು ಬಲಿ ಬೀಳಲಿಲ್ಲ. ಜೀವನದ ಸಿಹಿಕಹಿಗಳ ತೂಗಾಟದಲ್ಲಿ ಬೆಳೆದು ಬಂದ ಈ ಹಿರಿಯ ಜೀವಿಗೆ ಸಾಮಾನ್ಯ ಮಾನವನ ಬಗ್ಗೆ ಆಳವಾದ ಅನುಕಂಪ, ಸಹಾನು ಭೂತಿ ಮೈಗೂಡಿ ಬಂದಿದ್ದವು. ಇವರು ರಚಿಸಿದ ಚಿತ್ರಗಳಲ್ಲಿ ಜೀವಂತಿಕೆ, ಸಾದೃಶ್ಯ ತುಂಬಿ ತುಳುಕುತ್ತವೆ. ರೇಖೆಗಳಲ್ಲಿ ಅದ್ಭುತ ನಿರೂಪಣೆ, ಗತಿವಿನ್ಯಾಸಗಳನ್ನು ಸೂಚಿಸುವ ಮಿತವ್ಯಯದ ನೂತನ ಶೈಲಿಯಿಂದಾಗಿ ಸಾಮರಸ್ಯವನ್ನು ಕಾಣುತ್ತೇವೆ. ಇವರು ಎಳೆಯುವ ಪ್ರತಿಯೊಂದು ಗೆರೆಯೂ ಇವರ ಹೃದಯದ ಅಂತರಾಳದಿಂದ ನೇರ ಚಿಮ್ಮಿದಂತಿರುತ್ತದೆ. ಇವರ ರೇಖಾಚಿತ್ರಗಳ ವಸ್ತುವಿಶೇಷ. ಇವರ ಕಲ್ಪನಾಶಕ್ತಿ ಅಸಾಧಾರಣವಾ ದುದಾಗಿತ್ತು. ಮೈಸೂರಿನಲ್ಲಿ ಇವರ ಗೌರವಾರ್ಥ ಬಡಾವಣೆಯೊಂದಕ್ಕೆ ಇವರ ಹೆಸರನ್ನು ಇಡಲಾಗಿದೆ. *

**ನಾರಾಯಣ್, ಆರ್.ಕೆ.:** 1906– 2001. ಇಂಗ್ಲಿಷ್ ಭಾಷೆಯಲ್ಲಿ ಬರೆಯುತ್ತಿದ್ದ ಅಗ್ರಗಣ್ಯ ಭಾರತೀಯ ಲೇಖಕರು. ಮೈಸೂರಿನಲ್ಲಿ ನೆಲೆಸಿದ್ದರು. ಇವರ ಪೂರ್ವಿಕರ ಸ್ಥಳ ತಮಿಳುನಾಡಿನ ಸೇಲಂ ಜಿಲ್ಲೆಯ ರಾಶಿಪುರಂ. ತಂದೆ ಕೃಷ್ಣಸ್ವಾಮಿ ಅಯ್ಯರ್, ತಾಯಿ ಜ್ಞಾನಾಂಬಾಳ್. ಆರು ಗಂಡು. ಎರಡು ಹೆಣ್ಣು ಮಕ್ಕಳಲ್ಲಿ ನಾರಾಯಣ್ ಎರಡನೆಯವರು. ಇವರ ಸಹೋದರ ಆರ್.ಕೆ. ಲಕ್ಷ್ಮಣ್ ಪ್ರಪಂಚಖ್ಯಾತ ವ್ಯಂಗ್ಯ ಚಿತ್ರಗಾರ. ಮದರಾಸಿನಲ್ಲಿ ನೆಲೆಸಿದ್ದ ತಂದೆ ಕೃಷ್ಣಸ್ವಾಮಿ ಅಯ್ಯರ್ ಅವರಿಗೆ ಮೈಸೂರು ಸಂಸ್ಥಾನದಲ್ಲಿ ಉದ್ಯೋಗ ದೊರಕಿದ್ದರಿಂದ ಇಲ್ಲಿಗೆ ವಲಸೆ ಬಂದರು. ಆದರೆ ನಾರಾಯಣ್ ಅವರು ಅಜ್ಜಿಯ ಪೋಷಣೆಯಲ್ಲಿ ಕೆಲಕಾಲ ಮದರಾಸಿನಲ್ಲೇ ಉಳಿದರು. ಇವರ ತಂದೆಯವರು ಮೊದಲು ಚನ್ನಪಟ್ಟಣ ದಲ್ಲಿ ಅನಂತರ ಹಾಸನದಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಮೈಸೂರಿಗೆ ವರ್ಗವಾದಾಗ ಮಗನನ್ನು ತಮ್ಮ ಬಳಿಗೇ ಕರೆಸಿಕೊಂಡರು. ನಾರಾಯಣ್ ಅವರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾದರು. ಓದಿನಲ್ಲಿ ಅಷ್ಟಾಗಿ ಆಸಕ್ತಿ ತೋರದ ಇವರು ಬಿ.ಎ. ಮುಗಿಸಿದಾಗ 24 ವರ್ಷ. ಆದರೆ ಓದುತ್ತಿರುವಾಗಲೇ ಇವರಿಗೆ ಬರೆಯುವ ಆಸಕ್ತಿ. ಬಿ.ಎ. ಮುಗಿದಮೇಲೆ ಸ್ವಲ್ಪಕಾಲ ಸೆಕ್ರೆಟೇರಿಯೇಟ್‌ನಲ್ಲೂ ಐದು ದಿನ ಮಾತ್ರ ಚನ್ನಪಟ್ಟಣದಲ್ಲಿ ಅಧ್ಯಾಪಕ ವೃತ್ತಿಯಲ್ಲೂ ಇದ್ದು ಒಗ್ಗದೆ, ಬರೆಹವನ್ನೇ ವೃತ್ತಿಯಾಗಿ ಆಯ್ಕೆ ಮಾಡಿಕೊಂಡರು. ಪತ್ರಿಕೆಗಳಿಗೆ ಲೇಖನ ಮತ್ತು ಸುದ್ದಿ ಸಂಗ್ರಹಗಳನ್ನು ಬರೆಯತೊಡಗಿದರಲ್ಲದೆ ಸ್ವಲ್ಪ ಕಾಲ ದಿ ಇಂಡಿಯನ್ ಥಾಟ್ ಎಂಬ ನಿಯತಕಾಲಿಕವನ್ನೂ ನಡೆಸಿದರು.

ಇವರ ಪ್ರಥಮ ಕಾದಂಬರಿ ಸ್ವಾಮಿ ಅಂಡ್ ಫ್ರೆಂಡ್ಸ್ 1935ರಲ್ಲಿ ಇಂಗ್ಲೆಂಡಿನಲ್ಲಿ ಪ್ರಕಟವಾಯಿತು. ಅನಂತರ ದಿ ಗೈಡ್, ಮಿ. ಸಂಪತ್, ಫೈನಾನ್ಸಿಯಲ್ ಎಕ್ಸ್‌ಪರ್ಟ್ ಮುಂತಾದ 10 ಕಾದಂಬರಿಗಳೂ 7 ಕಥಾಸಂಕಲನಗಳೂ ಪ್ರಕಟವಾದವು. ಅಲ್ಲದೆ ಪ್ರವಾಸ ಕಥನ, ಹರಟೆ, ಜೀವನಸ್ಮೃತಿ, ಪೌರಾಣಿಕ ಕಥಾಸಂಗ್ರಹ ಮತ್ತು ರಾಮಾಯಣದ ಇಂಗ್ಲಿಷ್ ರೂಪಾಂತರವನ್ನೂ ಇವರು ಕೊಟ್ಟಿದ್ದಾರೆ.

ನಾರಾಯಣ್ ಅವರ ಕೃತಿಗಳ ಅನುಭವ, ಪ್ರೇರಣೆ ಮುಖ್ಯವಾಗಿ ಭಾರತೀಯ ಪರಂಪರೆಗೆ ಸೇರಿದ್ದು. ಇವರ ಒಟ್ಟು ದೃಷ್ಟಿಯಲ್ಲಿಯೇ ಪರಂಪರೆಯ ಮೌಲ್ಯಗಳಿಗೆ ಮನ್ನಣೆಯಿದೆ. ಆದ್ದರಿಂದಲೇ ಇವರು ತಾವು ಆರಿಸಿರುವ ವ್ಯಕ್ತಿಗಳನ್ನು ಸಾಂಪ್ರದಾಯಿಕ ಕಟ್ಟುಪಾಡಿನಲ್ಲಿ ಜೀವನ ಸಂಗ್ರಾಮವನ್ನು ನಡೆಸುತ್ತಿರುವಂತೆ ಚಿತ್ರಿಸುತ್ತಾರೆ. ಒಳ್ಳೆಯ ಬರೆಹಗಾರ

ಧರ್ಮ ಮತ್ತು ಕುಟುಂಬ ಜೀವನದಲ್ಲಿ ಬೇರುಗಳನ್ನು ಬಿಟ್ಟಿರಬೇಕು ಎನ್ನುವ ಇವರು ಆರಿಸುವುದೂ ಮಧ್ಯಮ ವರ್ಗದ ಜನಜೀವನ ಮತ್ತು ಅವರ ಕೌಟುಂಬಿಕ ಸಮಸ್ಯೆಗಳನ್ನೇ. ಇವರ ಮತ್ತೊಂದು ವೈಶಿಷ್ಟ್ಯವೆಂದರೆ ವ್ಯಕ್ತಿ ಸಂಗತಿಗಳನ್ನು ನೋಡುವ ದೃಷ್ಟಿ, ಜೀವನದ ಸಂದರ್ಭಗಳನ್ನು ವಿನೋದದ ದೃಷ್ಟಿಯಿಂದ ನೋಡಿದರೂ ಆಳಗಳನ್ನಿವರು ಕೆದಕುತ್ತಾರೆ. ವೈಚಿತ್ರ್ಯಪೂರ್ಣ ವ್ಯಕ್ತಿಗಳಲ್ಲಿ ಇವರಿಗೆ ಬಲು ಆಸಕ್ತಿ. ಸಾಮಾನ್ಯವಾಗಿ ಇತರರಿಗೆ ಗೋಚರಿಸದೆ ಹೋಗುವ ಸಾಧಾರಣ ವ್ಯಕ್ತಿ ಸಂಗತಿಗಳು ಇವರ ದೃಷ್ಟಿಗೆ ಬೀಳುತ್ತವೆ. ಸಾಮಾನ್ಯತೆಯಿಂದ ಅಸಾಮಾನ್ಯತೆಗೇರಲು ವ್ಯಕ್ತಿಗಳು ಯತ್ನಿಸುವುದನ್ನು ಲವಲವಿಕೆಯಿಂದ ಇವರು ವಿಶ್ಲೇಷಿಸುತ್ತಾರೆ.



ಇವರ ಕಾದಂಬರಿಗಳ ಕಾರ್ಯಕ್ಷೇತ್ರವೆಲ್ಲ ಮಾಲ್ಗುಡಿ ಎಂಬ ಕಾಲ್ಪನಿಕ ಪಟ್ಟಣದಲ್ಲಿ ನಡೆಯುತ್ತದೆ. ಒಂದು ಪರಿಮಿತ ವ್ಯಾಪ್ತಿಯಲ್ಲಿ ವ್ಯಕ್ತಿಗಳ ವಿಚಿತ್ರ ನಡೆಯನ್ನೂ ಸಾಮಾನ್ಯತೆಯಿಂದ ಅಸಾಮಾನ್ಯತೆಗೆ ಏರಿ ಅಲ್ಲಿಂದ ಮೊದಲಿನ ಸ್ಥಿತಿಗೇ ಬರುವ ಜೀವನ ವೈವಿಧ್ಯವನ್ನೂ ಗುರುತಿಸಲು ಮಾಲ್ಗುಡಿ ಸಮಾಜ ಇವರಿಗೆ ತುಂಬ ಸಹಕಾರಿಯೆನಿಸಿದೆ. ಅಲ್ಲಿನ ಭೌಗೋಳಿಕ ವಿನ್ಯಾಸ–ತೋಪು, ಬೆಟ್ಟ, ಗುಹೆ, ರಸ್ತೆ, ಓಣಿ, ವಿಸ್ತರಣೆ, ಶಾಲೆ, ಬ್ಯಾಂಕು, ಸ್ಟುಡಿಯೋ, ರೈಲು ನಿಲ್ದಾಣ, ಸರಯೂನದಿ ಮಾಲ್ಗುಡಿಯ ವೈವಿಧ್ಯ ಪೂರ್ಣ ಜನನಿಬಿಡ ಪ್ರಪಂಚದಷ್ಟೇ ಬಲುಬೇಗ ಓದುಗರಿಗೆ ಪ್ರಿಯವಾಗುತ್ತದೆ.

ಇವರ ಮೊದಲ ಕಾದಂಬರಿ ಸ್ವಾಮಿ ಅಂಡ್ ಫ್ರೆಂಡ್ಸ್ ಬಾಲಕರ ಪ್ರಪಂಚದ ವಿವಿಧ ನಡೆನುಡಿಗಳನ್ನೂ ಬಿರುಸು ಬಿನ್ನಾಣಗಳನ್ನೂ ಮನೋಜ್ಞವಾಗಿ ಚಿತ್ರಿಸುತ್ತದೆ. ಯೌವನೋದಯದ ರೊಮ್ಯಾಂಟಿಕ್ ಪ್ರವೃತ್ತಿ ಮತ್ತು ಪರಿಚಿತ ಕುಟುಂಬ ಜೀವನದ ಸೌಖ್ಯದ ವಿರೋಧ ಚಿತ್ರಗಳನ್ನು ದಿ ಬ್ಯಾಚಲರ್ ಆಫ್ ಆರ್ಟ್ಸ್ (1937) ಕೊಡುತ್ತದೆ. ಸಂಸಾರದ ವಿರಸದಲ್ಲಿ ನೊಂದ ಹೆಣ್ಣು ಪ್ರತಿಭಟಿಸಿ ಮನೆಯಿಂದ ಹೊರಗೆ ಹೋದರೂ ಕೌಟುಂಬಿಕ ಸೆಳೆತಕ್ಕೆ ಸಿಕ್ಕಿ ಗಂಡನ ಬಳಿಗೆ ಹಿಂದಿರುಗುವುದು ದಿ ಡಾರ್ಕ್ ರೂಮ್‌ನ (1938) ವಸ್ತು. ದಿ ಇಂಗ್ಲಿಷ್ ಟೀಚರ್‌ನಲ್ಲಿ (1945) ನಾರಾಯಣರ ಸ್ವಂತ ಅನುಭವದ ಚಿತ್ರಣ ಅದಕ್ಕೆ ಒಂದು ತೀವ್ರತೆಯನ್ನು ತಂದುಕೊಟ್ಟಿದೆ.

ಇಲ್ಲಿಂದ ಮುಂದಿನ ಇವರ ಕೃತಿಗಳಲ್ಲಿ ಮಾಲ್ಗುಡಿಯ ಪ್ರಪಂಚ ಸ್ವಲ್ಪ ವಿಸ್ತಾರವಾಗಿ, ವಿಚಿತ್ರ ಪ್ರಕೃತಿಯ, ವ್ಯಕ್ತಿಗಳ ಪರಿಚಯವಾಗುತ್ತದೆ. ಮುಖ್ಯವಾಗಿ ಚುರುಕು ನಡೆಯ, ಸಾಹಸ ಪ್ರಿಯರೆನಿಸುವ, ಆದರೂ ವಿಚಿತ್ರ ಪ್ರವೃತ್ತಿಯಿಂದ ಆಗಹೋಗದ ವ್ಯವಹಾರಗಳಲ್ಲಿ ತೊಡಗಿ, ಕೊನೆಗೆ ಸಾಮಾನ್ಯಸ್ಥಿತಿಗೆ ಇಳಿಯುವ ಪಾತ್ರಸಮೂಹವನ್ನು ಈ ಕೃತಿಗಳಲ್ಲಿ ಕಾಣಬಹುದು. ಮಿ. ಸಂಪತ್‌ನಲ್ಲಿ (1949) ಮುದ್ರಣಕಾರ ಸಂಪತ್ ಚಲನಚಿತ್ರ ತಯಾರಿಸುವ ಹುಚ್ಚಿಗೆ ಬಿದ್ದು ಕೈಸುಟ್ಟುಕೊಂಡು ಒಂಟಿಯಾಗಿ ರೈಲು ನಿಲ್ದಾಣದತ್ತ ಸಾಗುತ್ತಿರುವುದನ್ನು ನೋಡುತ್ತೇವೆ. ದಿ ಫೈನಾನ್ಸಿಯಲ್ ಎಕ್ಸ್‌ಪರ್ಟ್‌ನ (1952) ಮಾರ್ಗಯ್ಯ, ಹಣಸಂಚಯದ ವಿಪರೀತಮತಿಯಾಗಿ ದೊಡ್ಡ ದೊಡ್ಡ ಲೇವಾದೇವಿಯಲ್ಲಿ ತೊಡಗಿ ದಿವಾಳಿಯಾಗುತ್ತಾನೆ. ಮಾತು ಕೇಳದ ಮಗನ ಮೇಲಿನ ಪ್ರೇಮ ಅವನ ಜೀವನದಲ್ಲಿ ಸಂಕಟ ತಂದರೂ ಅವನ ಮಾನವೀಯತೆಯನ್ನೂ ತೋರಿಸುತ್ತದೆ. ವೇಯ್ಟಿಂಗ್ ಫಾರ್ ದಿ ಮಹಾತ್ಮಾ (1955) ಗಾಂಧೀ ಚಳವಳಿಯ ಹಿನ್ನೆಲೆಯಲ್ಲಿ ಇಬ್ಬರ ಪ್ರೇಮ ಬೆಳೆದ ರೀತಿಯನ್ನು ಸೊಗಸಾಗಿ ಅನಾವರಣಗೊಳಿಸಿದೆ. ದಿ ಗೈಡ್ (1958) ಅನೇಕ ಕಾರಣಗಳಿಂದ ನಾರಾಯಣರ ಅತ್ಯುತ್ತಮ ಕೃತಿ. ವಸ್ತು, ತಂತ್ರನಾವೀನ್ಯತೆ, ಜೀವನಸಂದಿಗ್ಧತೆ ಎಲ್ಲವೂ ಈ ಕಾದಂಬರಿಯ ಸಂಕೀರ್ಣತೆಗೆ ಸಹಕಾರಿ. ಇಲ್ಲಿ ಎರಡು ನಡೆಯ ಸಂಕೀರ್ಣತೆಯಿದೆ. ತೀರ ಸಾಮಾನ್ಯ ಸ್ಥಿತಿಯಿಂದ ಅಸಾಧಾರಣ ಸ್ಥಿತಿಗೆ ಏರುವ ನಡೆ ಒಂದು ಕಡೆ, ಅಸಾಧಾರಣ ಸ್ಥಿತಿಯನ್ನು ನಿರಾಕರಿಸುವಲ್ಲಿ ಬರುವ ಮಿಶ್ರಫಲ ಮತ್ತೊಂದು ಕಡೆ. ಮಾಲ್ಗುಡಿಯ ಪ್ರವಾಸಿಗರ ಗೈಡ್ ಮಾರ್ಗದರ್ಶಿ ಆದ ರಾಜು, ನರ್ತಕಿ ರೋಸಿಯ ಜೀವನದಲ್ಲಿ ಗೈಡ್ ಆಗುವ ಸ್ಥಿತಿಗೇರುತ್ತಾನೆ. ಆದರೆ ಪ್ರಬಲ ಆಕಾಂಕ್ಷೆಗೆ ಈಡಾಗಿ, ಮಾಡಿದ ಅಪರಾಧಕ್ಕಾಗಿ ಸೆರೆಮನೆಯ ವಾಸ ಅನುಭವಿಸಬೇಕಾಗುತ್ತದೆ. ಅದು ಮುಗಿದಮೇಲೆ ಹೊರಗೆ ಬಂದಾಗ ಅಪರಿಚಿತ ಜನ ಅವನನ್ನು ಮಹಾತ್ಮ ಪಟ್ಟಕ್ಕೇರಿಸಿ ಜೀವನದ ಇನ್ನೊಂದು ನಡೆಯ ಗೈಡ್ ಆಗಿ ಮಾಡಿಕೊಳ್ಳುತ್ತಾರೆ. ಜೀವನದ ವಿರೋಧಾಭಾಸದಲ್ಲಿ ರಾಜುವಿನ ಅನುಭವ ದಿಙ್ಮೂಢಗೊಳಿಸುವಂಥದು.

ಪುರಾಣ ಕಥೆಗಳ ಮೌಲ್ಯಗಳನ್ನು ಗುರುತಿಸುವ ನಾರಾಯಣ್ ಅವರ ಕೊನೆಯ ನಾಲ್ಕು ಕೃತಿಗಳಲ್ಲಿ ಅವನ್ನು ಸಾಂಕೇತಿಕವಾಗಿಯೂ ನೇರವಾಗಿಯೂ ಬಳಸಿದ್ದಾರೆ. ದಿ ಮ್ಯಾನ್ ಈಟರ್ ಆಫ್ ಮಾಲ್ಗುಡಿ ಎಂಬುದು ಮೋಹಿನಿ ಭಸ್ಮಾಸುರರ ಕಥೆಯ ಆಧುನಿಕ ರೂಪ. ರಾಕ್ಷಸೀ ಸ್ವಭಾವದ ಒಬ್ಬ ವ್ಯಕ್ತಿ, ತನ್ನ ಪಶುಬಲದಿಂದ ಎಲ್ಲರಲ್ಲೂ ಭೀತಿ ಹುಟ್ಟಿಸಿ, ದುರ್ಮಾರ್ಗಪ್ರವರ್ತಕನಾದಾಗ ಅವನ ಬಲವೇ ಅವನಿಗೆ ಮುಳುವಾಗುತ್ತದೆ. ಕೊನೆಯ ಕಾದಂಬರಿ ದಿ ವೆಂಡರ್ ಆಫ್ ಸ್ವೀಟ್ಸ್‌ನಲ್ಲಿ ಪ್ರಾಪಂಚಿಕತೆಯನ್ನು ಬಿಟ್ಟು ಪಾರಮಾರ್ಥಿಕದತ್ತ ವ್ಯಕ್ತಿ ಸರಿಯುವ ಚಿತ್ರಣವಿದೆ. ಈ ಎರಡು ಕಾದಂಬರಿಗಳ ನಡುವೆ ಬಂದ ಗಾಡ್ಸ್, ಡೆಮನ್ಸ್ ಅಂಡ್ ಅದರ್ಸ್ (1965) ಎಂಬ ಸಣ್ಣಕಥಾಸಂಕಲನದಲ್ಲಿ ಪುರಾಣ ಕಾವ್ಯಗಳಿಂದ ಆಯ್ದ 14 ಕಥೆಗಳಿವೆ. ಇವರ ರಾಮಾಯಣ (1972) ಕಂಬ ರಾಮಾಯಣವನ್ನು ಅನುಸರಿಸಿ ರಚಿತವಾದುದು.

ಇವರ ಪ್ರಕಟಿತ ಸಣ್ಣಕಥೆಗಳು ಸು. 80. ವಿಷಯವೈವಿಧ್ಯ, ತಿಳಿಹಾಸ್ಯ ಮತ್ತು ಆಕರ್ಷಕ ನಿರೂಪಣೆಗಳಿಂದಾಗಿ ಇವರ ಹರಟೆಗಳೂ ಪ್ರವಾಸ ಕಾಲದ ದಿನಚರಿ ಮೈ ಡೇಟ್‌ಲೆಸ್ ಡೈರಿ (1960) ಮತ್ತು ಜೀವನಸ್ಮೃತಿಗಳನ್ನೊಳಗೊಂಡ ಮೈ ಡೇಸ್ (1975) ಇವೂ ಓದುಗರಿಗೆ ಬಹಳ ಕಾಲ ನೆನಪಿನಲ್ಲಿ ಉಳಿಯುವ ಇತರ ಗದ್ಯಕೃತಿಗಳು.

ಪಾಶ್ಚಾತ್ಯ ದೇಶಗಳಲ್ಲಿ ಆರಂಭವಾದ ನಾರಾಯಣರ ಕೃತಿ ಪ್ರಕಟಣೆ ಮತ್ತು ಪ್ರಶಂಸೆ ದೇಶವಿದೇಶಗಳಲ್ಲಿ ಇವರಿಗೆ ಅನೇಕ ಪ್ರಶಸ್ತಿಗಳನ್ನು ದೊರಕಿಸಿದೆ. 1960ರಲ್ಲಿ ಇವರ ಕಾದಂಬರಿ ದಿ ಗೈಡ್‌ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. 1964ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ದೊರೆಯಿತು. ಲೀಡ್ಸ್ ವಿಶ್ವವಿದ್ಯಾಲಯದಿಂದ 1967ರಲ್ಲಿ ಡಿ.ಲಿಟ್. ಪದವಿ, 1975ರಲ್ಲಿ ಮೈ ಡೇಸ್ ಎನ್ನುವ ಜೀವನಸ್ಮೃತಿಗಾಗಿ ಅಮೆರಿಕ ಭಾಷಾಸಂಸ್ಥೆಯೊಂದರಿಂದ 2000 ಡಾಲರುಗಳ ನಗದು ಬಹುಮಾನಗಳು ಬಂದಿವೆ. ಇವರ ಅನೇಕ ಕೃತಿಗಳು ಪ್ರಮುಖ ಐರೋಪ್ಯ ಮತ್ತು ಭಾರತೀಯ ಭಾಷೆಗಳಲ್ಲಿ ಅನುವಾದವಾಗಿವೆ. ಡಿ ಗೈಡ್ ಇಂಗ್ಲಿಷಿನಲ್ಲೂ ಹಿಂದಿಯಲ್ಲೂ ಚಲನಚಿತ್ರವಾಗಿರುವುದೇ ಅಲ್ಲದೆ ಅದರ ನಾಟಕದ

ರೂಪವೂ ಬ್ರಾಡ್‌ವೇ ರಂಗಭೂಮಿಯ ಮೇಲೆ ಪ್ರದರ್ಶಿತವಾಗಿವೆ. ಚಲನಚಿತ್ರವಾಗಿ ಬಂದಿರುವ ಇವರ ಇನ್ನೊಂದು ಕೃತಿ ಮಿ. ಸಂಪತ್. ದೂರದರ್ಶನದಲ್ಲಿ ಪ್ರಸಾರವಾದ ಇವರ ಸ್ವಾಮಿ ಮತ್ತು ಮಾಲ್ಗುಡಿ ಡೇಸ್ ಧಾರವಾಹಿ ಜನಪ್ರಿಯವಾಯಿತು. ಇವರ ಹೆಸರು ಮನೆಮಾತಾಯಿತು. 1989ರಲ್ಲಿ ನಾರಾಯಣರು ರಾಜ್ಯಸಭೆಗೆ ನಾಮಕರಣಗೊಂಡರು. ಪದ್ಮಭೂಷಣ, ಪದ್ಮವಿಭೂಷಣ, ಸಾಹಿತ್ಯ ಅಕಾಡೆಮಿಯ ಫೆಲೋಷಿಪ್‌ಗಳಿಂದ ಇವರು ಸನ್ಮಾನಿತರಾದರು. ಇವರ ಪತ್ನಿ ರಾಜಮ್ಮ 1949ರಲ್ಲಿ ನಿಧನ ಹೊಂದಿದರು. ಹೇಮಾ ಒಬ್ಬಳೇ ಮಗಳು. ನಾರಾಯಣ್ ಅವರು 2001ರಲ್ಲಿ ನಿಧನ ಹೊಂದಿದರು. (ಜಿ.ಎ.ಆರ್.)

**ನಾರಾಯಣ:** ಸು. 1600 ಬ್ರಾಹ್ಮಣ ಕವಿ. ಉತ್ತರರಾಮಚರಿತೆಯ ಕರ್ತೃ. ತಂದೆ ತಾತಧೀಮಣಿ, ಗುರು ತಿಮ್ಮಣಾರ್ಯ. ಇವನೂ ಸೇರಿದಂತೆ ಉತ್ತರ ರಾಮಾಯಣವನ್ನು ಕುರಿತು ತಿರುಮಲೆ ವೈದ್ಯ, ಯೋಗೀಂದ್ರ, ನರಸ ಮೊದಲಾದ ಕನ್ನಡ ಕವಿಗಳು ಗ್ರಂಥರಚನೆ ಮಾಡಿದ್ದಾರೆ. ಆದರೆ ಗಾತ್ರ ಹಾಗೂ ವಿಷಯ ನಿರೂಪಣೆಗಳಲ್ಲಿ ಈತನ ಕೃತಿಗೆ ಮಹತ್ತ್ವದ ಸ್ಥಾನವಿದೆ. ಈ ಕಾವ್ಯ ಭಾಮಿನೀ ಷಟ್ಪದಿಯಲ್ಲಿದ್ದು 46 ಸಂಧಿ 2,138 ಪದ್ಯಗಳನ್ನೊಳಗೊಂಡಿದೆ. ಇದಕ್ಕೆ ಆಧಾರಗ್ರಂಥ ವಾಲ್ಮೀಕಿ ರಾಮಾಯಣದಲ್ಲಿ ಸೇರ್ಪಡೆಯಾಗಿರುವ ಉತ್ತರ ಕಾಂಡ. *

**ನಾರಾಯಣ, ಎಚ್.ಕೆ.:** 1934– . ಸುಗಮ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತ ಕಲಾವಿದ. ಹಾಸನ ಜಿಲ್ಲೆ ಹೊಳೆನರಸೀಪುರದಲ್ಲಿ 1934 ಮಾರ್ಚ್ 14 ರಂದು ಜನಿಸಿದರು. ತಂದೆ ಕೇಶವಯ್ಯ, ತಾಯಿ ಸಣ್ಣಮ್ಮ. ಇವರದು ಸಂಗೀತಗಾರರ ಮನೆತನ. ತಂದೆ ಕೇಶವಯ್ಯ ಶಾರದಾ ಸಂಗೀತ ಪಾಠಶಾಲೆಯನ್ನು ತೆರೆದಿದ್ದರು. ಅದರ ಆಶ್ರಯದಲ್ಲಿ ಪಿಟೀಲು ಹಾಗೂ ಹಾಡುಗಾರಿಕೆಯನ್ನು ಕಲಿಸುತ್ತಿದ್ದರು. ಈ ಸಂಗೀತದ ಪರಿಸರ ನಾರಾಯಣರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿತು. ಮಗನಿಗೆ ಆರನೆಯ ವಯಸ್ಸಿನಿಂದಲೇ ತಂದೆ ಪಿಟೀಲು ಕಲಿಸಲು ಪ್ರಾರಂಭಿಸಿದರು. ಯಾವುದೋ ಒಂದು ಸಂದರ್ಭದಲ್ಲಿ ದುರಸ್ತಿಗೆ ಕೊಟ್ಟಿದ್ದ, ಮುರಿದು ಹೋದ ಪಿಟೀಲು ವಾಪಸ್ಸು ಬರದಿದ್ದಾಗ ಇವರು ವಾದ್ಯಗಾರಿಕೆ ಬಿಟ್ಟು ಹಾಡುಗಾರಿಕೆಯನ್ನು ಕಲಿಯುವಂತಾಯಿತು. ಸಂಗೀತದಲ್ಲಿ ಸೀನಿಯರ್ ಪರೀಕ್ಷೆ ಮುಗಿಸಿದರು. ಅನಂತರ ಮೈಸೂರಿಗೆ ಬಂದು ಆರ್.ಕೆ. ಶ್ರೀಕಂಠನ್ ಅವರಲ್ಲಿ ಸಂಗೀತಾಭ್ಯಾಸ ಮುಂದುವರಿಸಿದರು. ವಿದ್ವತ್ ಪರೀಕ್ಷೆಯಲ್ಲಿ ಚಿನ್ನದ ಪದಕ ಗಳಿಸಿದರು. ಎಸ್.ಎಸ್.ಎಲ್.ಸಿ. ಯವರೆಗೆ ಓದಿದರು. ಮೈಸೂರು ಆಕಾಶವಾಣಿಯಲ್ಲಿ ಸ್ಕ್ರಿಪ್ಟ್ ರೈಟರ್ ಆಗಿ ಸೇರಿದರು (1954). ಸಂಗೀತ ಕಾರ್ಯಕ್ರಮಗಳಿಗೆ ಸ್ವರ ಪ್ರಸ್ತಾರ ಬರೆದುಕೊಡುತ್ತಿದ್ದರು. ಹಿಂದುಸ್ಥಾನಿ ಸಂಗೀತದಲ್ಲೂ ಆಸಕ್ತಿಯನ್ನು ಬೆಳೆಸಿಕೊಂಡರು. ಆಕಾಶವಾಣಿ ನಿಲಯ ಮೈಸೂರಿನಿಂದ ಬೆಂಗಳೂರಿಗೆ ವರ್ಗಾವಣೆಯಾಯಿತು (1955). ಬೆಂಗಳೂರು ಆಕಾಶವಾಣಿಯಲ್ಲಿ ಜೂನಿಯರ್ ಮ್ಯೂಸಿಕ್ ಕಂಪೋಸರ್ ಹುದ್ದೆಗೆ ಆಯ್ಕೆಯಾದರು (1974). ಅನಂತರ 1982 ರಲ್ಲಿ ಮ್ಯೂಸಿಕ್ ಪ್ರೊಡ್ಯೂಸರ್ ಆಗಿ ಆಯ್ಕೆಯಾದರು. ಅನಂತರ ಮೊದಲ ದರ್ಜೆಯ ಆಕಾಶವಾಣಿಯ ಸಂಗೀತ ಸಂಯೋಜಕರಾಗಿ 36 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದರು.

ಆಕಾಶವಾಣಿ ಇವರ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸಿದೆ. ಕಲಾವಿದರಾಗಿ ಜನಮನವನ್ನು ಮುಟ್ಟಲು ಈ ಸಂದರ್ಭ ಬಹಳ ಸಹಕಾರಿಯಾಯಿತು. ನಾರಾಯಣ ಅವರು ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಎರಡರಲ್ಲೂ ಪರಿಣತಿ ಸಾಧಿಸಿದ್ದಾರೆ. ಇವರು ಹಲವು ಕವನಗಳಿಗೆ ರಾಗಸಂಯೋಜಿಸಿ ಹಾಡಿದ್ದಾರೆ; ಅನೇಕ ಕಲಾವಿದರಿಂದ ಹಾಡಿಸಿದ್ದಾರೆ. ಹಲವು ಸಂಗೀತ ರೂಪಕಗಳಿಗೆ ಸಂಗೀತ ಸಂಯೋಜನೆ ಮಾಡಿ ಯಶಸ್ವಿಯಾಗಿದ್ದಾರೆ. ಇವರು ರಜನೀಕಾಂತರಾವ್ ಅವರೊಂದಿಗೆ ಸಂಗೀತ ನೀಡಿದ ಮೇಘಸಂದೇಶ ರೂಪಕಕ್ಕೆ ಆಕಾಶವಾಣಿಯ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ.

ಸುಗಮ ಸಂಗೀತ, ಶಾಸ್ತ್ರೀಯ ಸಂಗೀತದ ಜೊತೆಗೆ ಭರತನಾಟ್ಯಕ್ಕೆ ಹಿನ್ನೆಲೆ ಗಾಯನವನ್ನು ಒದಗಿಸಿ ಯಶಸ್ವಿಯಾದುದು ಇವರ ಹೆಗ್ಗಳಿಕೆ. ಇದಲ್ಲದೆ ರಮಣಾಂಜಲಿ ತಂಡದ ಸದಸ್ಯರಾಗಿ ಕಳೆದ 25 ವರ್ಷಗಳಿಂದ ರಾಜಕುಮಾರ್ ಭಾರತಿ ಯವರೊಂದಿಗೆ ಹಲವು ಭಾಷೆಗಳ 150 ಧ್ವನಿಸುರುಳಿಗಳಲ್ಲಿ ಹಾಡಿದ್ದಾರೆ. ಭಾರತದ ಮೂಲೆ ಮೂಲೆಗಳಲ್ಲಿ ಹಾಡುವುದರ ಜೊತೆಗೆ ಅಮೆರಿಕ, ಇಂಗ್ಲೆಂಡ್, ಸಿಂಗಪುರ್, ಹಾಂಕಾಂಗ್, ಶ್ರೀಲಂಕ, ಮಂಗೋಲಿಯ, ರಷ್ಯ, ಮನಿಲಾ ಮೊದಲಾದ ದೇಶಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಇವರು ಹಾಡಿದ ಧ್ವನಿಸುರಳಿಗ ಳಲ್ಲಿ ಶಾಸ್ತ್ರೀಯ ಸಂಗೀತ, ವಚನಗಳು, ದಾಸರ ಪದಗಳು, ಭಕ್ತಿಗೀತೆಗಳು ಎಲ್ಲವೂ ಸೇರಿವೆ.

ಇವರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಇವರನ್ನು ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ (1984–85), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1988), ಆರ್ಯಭಟ ಪ್ರಶಸ್ತಿ (1997), ಕರ್ನಾಟಕ ಸರ್ಕಾರ ಸುಗಮ ಸಂಗೀತದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡುವ ಪ್ರತಿಷ್ಠಿತ ಸಂತ ಶಿಶುನಾಳ ಷರೀಫ ಪ್ರಶಸ್ತಿ ಇವರಿಗೆ ಲಭಿಸಿವೆ (2000).

ಅಪಾರ ಶಿಷ್ಯ ವರ್ಗವನ್ನು ಹೊಂದಿರುವ ಇವರು ನಿವೃತ್ತಿಯ ಬಳಿಕ ತರಳಬಾಳು ಕೇಂದ್ರ ಹಾಗೂ ಭಾರತೀಯ ವಿದ್ಯಾಭವನಗಳಲ್ಲಿ ಸುಗಮ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತವನ್ನು ಕಲಿಸುತ್ತಿದ್ದಾರೆ. (ಎಚ್.ಆರ್.ಎಲ್.)

**ನಾರಾಯಣ ಕವಿ:** ಸು. 1450. ಬ್ರಾಹ್ಮಣ ಕವಿ. ಭಾಗವತ ಸಂಹಿತಾರ್ಥ ಎಂಬ ಗದ್ಯ ಗ್ರಂಥದ ಕರ್ತೃ. ಗ್ರಂಥಾಂತ್ಯದಲ್ಲಿ ಉಲ್ಲೇಖಿತವಾಗಿರುವ ವಿದ್ಯಾರಣ್ಯಯೋಗಿ 1368ರಲ್ಲಿ ಗತಿಸಿದ ಶೃಂಗೇರಿ ಮಠದ ಸ್ವಾಮಿಯಾಗಿದ್ದ ಪಕ್ಷದಲ್ಲಿ ಇವನ ಕಾಲ ಸು. 1450 ಆಗಬಹುದು ಎಂದು ಆರ್. ನರಸಿಂಹಾಚಾರ್ಯರು ತಿಳಿಸಿದ್ದಾರೆ. ಈಗ ಉಪಲಬ್ಧವಿರುವ ಹಸ್ತಪ್ರತಿಗಳು ಚತುರ್ಥಸ್ಕಾಂಧ ಒಂಬತ್ತನೆಯ ಅಧ್ಯಾಯಕ್ಕೇ ಮುಗಿದಿರುವುದರಿಂದ ಇನ್ನುಳಿದ ಸ್ಕಂದಗಳನ್ನು ಬರೆದನೋ ಇಲ್ಲವೋ ಎಂಬ ವಿಷಯ ಸಂದಿಗ್ಧವಾಗಿದೆ. ಈ ಗ್ರಂಥಕ್ಕೆ ಸಂಸ್ಕೃತ ಶ್ರೀಮದ್ಭಾಗವತವೇ ಆಧಾರ. ಗದ್ಯದಲ್ಲಿ ಭಾಗವತದ ಭಾವಾನುವಾದಕ್ಕೆ ತೊಡಗಿದವರಲ್ಲಿ ಈತನೇ ಮೊದಲಿಗ.

ಭಾಗವತ ಸಂಹಿತಾರ್ಥದಲ್ಲಿ ಶ್ರೀಹರಿಯ ಗುಣಚಾರಿತ್ರ ಮಹಿಮೆಗಳನ್ನು ವಿವರವಾಗಿ ಹೇಳಿದೆ. ಹಾಗೆಯೇ ತಮಸ್ಸು, ರಜಸ್ಸು, ಸಾತ್ವಿಕ

ಗುಣತ್ರಯಗಳನ್ನೂ ಆಯಾ ಸಂದರ್ಭಕ್ಕನುಸಾರವಾಗಿ ಅನ್ವಯಿಸಿ ಹೇಳುವುದಲ್ಲದೆ ಅವುಗಳಿಂದೊದಗುವ ಫಲಾಫಲಗಳನ್ನು ತಿಳಿಸಿದೆ. ಗ್ರಂಥದಲ್ಲಿ ಸನಕಾದಿ ಯೋಗಿಗಳು, ವರಾಹ, ನಾರದ, ನಾರಾಯಣ, ಕಪಿಲಮುನೀಂದ್ರ ಅತ್ರಿಮುನಿಯ ಮಗ ದತ್ತಾತ್ರೇಯ, ಯಜ್ಞ, ವೃಷಭ, ಪೃಥುರಾಯ, ಮತ್ಸ್ಯ, ಕೂರ್ಮ, ಧನ್ವಂತರಿ, ಜಗನ್ಮೋಹಿನಿ, ನರಸಿಂಹ, ವಾಮನ, ಪರಶುರಾಮ, ವ್ಯಾಸ, ರಾಮ, ಬಲರಾಮ ಕೃಷ್ಣ ಈ ಹತ್ತೊಂಬತ್ತು ಅವತಾರಗಳ ಸ್ಥೂಲ ಪರಿಚಯವಿದೆ. ಆದರೆ ಮುಖ್ಯವಾಗಿ ಪಾಂಡವರ ಕಥೆಯನ್ನು ರಚಿಸಬೇಕೆಂಬ ಆಶಯ ಕವಿಗಿರುವುದರಿಂದ ಕವಿ ಅದನ್ನೇ ವಿಸ್ತಾರವಾಗಿ ನಿರೂಪಿಸಿದ್ದಾನೆ. ಅಲ್ಲದೆ ಶ್ರೀ ಕೃಷ್ಣನ ಮಹಿಮೆ, ಲೀಲೆಗಳಿಗೂ ಪ್ರಾಶಸ್ತ್ಯ ನೀಡಿದ್ದಾನೆ. ತನ್ನ ಗ್ರಂಥವನ್ನು ಜನಸಾಮಾನ್ಯರು ಓದಲೆಂದೇ ತಿಳಿಯಾದ ನಡುಗನ್ನಡ ಭಾಷೆಯಲ್ಲಿ ಹೆಚ್ಚಾಗಿ ಚಿಕ್ಕಚಿಕ್ಕ ವಾಕ್ಯಗಳಲ್ಲಿ ರಚಿಸಿದ್ದಾನೆ. *

**ನಾರಾಯಣ, ಜಿ.:** 1923– . ಕನ್ನಡ ಸಾಹಿತ್ಯ ಪ್ರೇಮಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ, ಆಡಳಿತ ತಜ್ಞ, ಪ್ರತಿಕೋದ್ಯಮಿ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ದೇಶಹಳ್ಳಿಯಲ್ಲಿ 1923 ಸೆಪ್ಟೆಂಬರ್ 2ರಂದು ಜನಿಸಿದರು. ತಂದೆ ಗಿರಿಗೌಡ, ತಾಯಿ ಸಣ್ಣಮ್ಮ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಗಳನ್ನು ಮಂಡ್ಯ ಜಿಲ್ಲೆಯಲ್ಲಿ ಪೂರೈಸಿ ವಾರ್ಧಾ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿ ಪಡೆದು ಸ್ವಾತಂತ್ರ್ಯ ಸಮರ ಹಾಗೂ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟಗಳಲ್ಲಿ ಸ್ವಯಂ ಸೇವಕರಾಗಿ ದುಡಿದರು.

ಜವಾಬ್ದಾರಿ ಸರ್ಕಾರದ ಹೋರಾಟದ ಮುಖಪತ್ರಿಕೆಯಾಗಿದ್ದ 'ವಾರ್ತಾ'ದ ವ್ಯವಸ್ಥಾಪಕರಾಗಿ ಪತ್ರಿಕಾ ವ್ಯವಸಾಯ ಆರಂಭಿಸಿದರು. ಅಕ್ಷರ ಪ್ರಚಾರ ಸಮಿತಿಗಾಗಿ ಗೋವಿನ ಹಾಡಿನ ಧಾಟಿಯಲ್ಲಿ ರಚಿಸಿಕೊಟ್ಟ 100 ಪದ್ಯಗಳನ್ನುಳ್ಳ ಅಕ್ಷರವ ನೀವ್ ಕಲಿಯಿರಿ ಎಂಬ ಕಾವ್ಯಕ್ಕೆ ಸಿದ್ಧವನಹಳ್ಳಿ ಕೃಷ್ಣಶರ್ಮರು ಮುನ್ನುಡಿ ಬರೆದಿದ್ದು ಅದು ಬೆಳಕು ಎಂಬ ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಯಿತು. ಮಂಡ್ಯ ಜಿಲ್ಲೆಯಲ್ಲಿ ಉಂಟಾದ ಮಲೇರಿಯಾ ಹಾವಳಿಯನ್ನು ಕುರಿತು ಮಲೇರಿಯಾ ಹಾವಳಿ ಎಂಬ ಲಾವಣಿ, ಸಕ್ಕರೆ ಕಂಪನಿಯ ಆಡಳಿತದ ಅವ್ಯವಸ್ಥೆಯಿಂದ ರೈತರಿಗೆ ಉಂಟಾದ ತೊಂದರೆ ಕುರಿತು ಕಬ್ಬಿನ ಲಾವಣಿ ಹಾಗೂ ಕಬ್ಬಿನ ಕಥಾಂತರ ಎಂಬ ಕೃತಿ ಬರೆದು ಅಚ್ಚು ಹಾಕಿಸಿದ್ದಲ್ಲದೆ, ಜಾತ್ರೆಗಳಲ್ಲಿ ಖುದ್ದಾಗಿ ಹಾಡುವ ಮೂಲಕ ಜನಜಾಗೃತಿ ಮೂಡಿಸಿದರು. 1950ರಲ್ಲಿ ಸ್ವತಂತ್ರ ಮುದ್ರಣಾಲಯವನ್ನು ಸ್ಥಾಪಿಸಿ 1951 ಜನವರಿ 26ರಂದು ವಿನೋದ ಎಂಬ ಹಾಸ್ಯ ಮಾಸಿಕವನ್ನು ಆರಂಭಿಸಿದರು. ಪ್ರತಿವರ್ಷ ಆಗಸ್ಟ್ 15ರಂದು ವಿನೋದದ ವಿಶೇಷ ಸಂಚಿಕೆ ಪ್ರಕಟವಾಗುತ್ತಿದೆ. 1975ರಲ್ಲಿ ರಜತ ಮಹೋತ್ಸವ ಆಚರಿಸಿದ ಈ ಪತ್ರಿಕೆ 2002 ಆಗಸ್ಟ್ 15ರಂದು ಸುವರ್ಣ ಮಹೋತ್ಸವ ಆಚರಿಸಿತು. ಇಷ್ಟು ದೀರ್ಘ ಕಾಲದಿಂದ ಸತತವಾಗಿ ಪ್ರಕಟವಾಗುತ್ತಿರುವ ಏಕೈಕ ಹಾಸ್ಯ ಮಾಸಿಕ ಎಂಬ ಹೆಗ್ಗಳಿಕೆ ವಿನೋದಕ್ಕೆ ಸಲ್ಲುತ್ತದೆ.

ಇವರು ಚಾಮರಾಜಪೇಟೆ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ಕೇಂದ್ರ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಸಮಿತಿ ಸದಸ್ಯರಾಗಿ, ಮೈಸೂರು ಹಿಂದಿ ಪರಿಷತ್ತಿನ ಕಾರ್ಯದರ್ಶಿಯಾಗಿ ಒಂದು ವರ್ಷ ಕಾರ್ಯ ನಿರ್ವಹಿಸಿದರು. 1957ರಲ್ಲಿ ಬೆಂಗಳೂರು ನಗರ ಪಾಲಿಕೆಗೆ ಚುನಾಯಿತರಾಗಿ 7 ವರ್ಷಗಳ ಕಾಲ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. 1964ರಲ್ಲಿ ಬೆಂಗಳೂರು ನಗರದ ಮೇಯರ್ ಆಗಿ ಆಯ್ಕೆಯಾದರು. ಬೆಂಗಳೂರು ನಗರಕ್ಕೆ ಕಾವೇರಿ ನೀರಿನ ಸರಬರಾಜಿಗಾಗಿ ಕಾವೇರಿ ಯೋಜನೆಯ ಶಂಕುಸ್ಥಾಪನೆ, ನಗರಪಾಲಿಕೆಯಲ್ಲಿ ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನ, ಬೆಂಗಳೂರು ನಗರದ ಸಂಸ್ಥಾಪಕ ಕೆಂಪೇಗೌಡರ ಪ್ರತಿಮೆಯ ಸ್ಥಾಪನೆ ಇವು ಇವರ ಅವಧಿಯ ಮುಖ್ಯ ಸಾಧನೆಗಳು.

ಇವರು 1969ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿ ಒಟ್ಟು 9 ವರ್ಷಗಳ ಕಾಲ ಆ ಸ್ಥಾನದಲ್ಲಿದ್ದರು. ಕನ್ನಡದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದು ಪರಿಷತ್ತಿನ ನೂತನ ಶಕಪುರುಷ ಎಂದು ಹೆಸರಾದರು. ಪರಿಷತ್ತಿನ ಕಾರ್ಯ ಚಟುವಟಿಕೆಗಳ ವಿಸ್ತರಣೆಗಾಗಿ ತ್ರೈವಾರ್ಷಿಕ ಯೋಜನೆ, ಕನ್ನಡ ರಾಜ್ಯೋತ್ಸವದಲ್ಲಿ ಮನೆಯಿಂದ ಮನೆಗೆ ಪುಸ್ತಕ ಮಾರಾಟದ ಯೋಜನೆ, ಜನಪದ ಕಲೆಗಳ ರಕ್ಷಣೆಗೆ ಮತ್ತು ಅಭಿವೃದ್ಧಿಗಾಗಿ ಬೃಹತ್ ಯೋಜನೆ, ಗಮಕ ಕಲೆಯನ್ನು ಉಳಿಸಲು ಗಮಕಕಲಾ ತರಗತಿಗಳ ಆರಂಭ, ಕನ್ನಡದಲ್ಲಿ ಆಡಳಿತಕ್ಕೆ ನೆರವಾಗಲು ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ತರಗತಿಗಳು, ಜಿಲ್ಲಾ ಸಾಹಿತ್ಯ ಸಮ್ಮೇಳನಗಳು, ಪುಸ್ತಕಗಳ ಪ್ರಕಟಣ ಮಾಲಿಕೆಗಳು, ಗಡಿನಾಡು ಕನ್ನಡಿಗರ ಸಮ್ಮೇಳನ, ಹೊರನಾಡ ಕನ್ನಡಿಗರೊಂದಿಗೆ ಸಂಪರ್ಕದ ದಿಸೆಯಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟನೆ ಮೊದಲಾದವನ್ನು ಯಶಸ್ವಿಯಾಗಿ ಕಾರ್ಯರೂಪಗೊಳಿಸಿದರು. ಇವರ ಕಾಲಾವಧಿಯಲ್ಲಿ ರೂಪುಗೊಂಡ ಕನ್ನಡ–ಕನ್ನಡ ಸಂಕ್ಷಿಪ್ತ ನಿಘಂಟು ಹಾಗೂ ಕನ್ನಡ ರತ್ನಕೋಶದ ಪ್ರಕಟಣೆಗಳು ಕನ್ನಡ ಪುಸ್ತಕ ಮಾರಾಟದ ಇತಿಹಾಸದಲ್ಲಿ ದಾಖಲೆ ಸ್ಥಾಪಿಸಿದವು.

ಯಾವುದೇ ಕೆಲಸಕಾರ್ಯವಾಗಲಿ ಯೋಜನಾಬದ್ಧವಾಗಿ ಕಾರ್ಯ ರೂಪಕ್ಕೆ ತರುವವರೆಗೆ ನಿಷ್ಠೆಯಿಂದ ದುಡಿಯುವ ವ್ಯಕ್ತಿ ಎಂದು ಹೆಸರಾದ ಜಿ. ನಾರಾಯಣ ಅವರಿಗೆ ಪತ್ರಿಕಾ ಅಕಾಡೆಮಿಯ ಅಧ್ಯಕ್ಷ ಪದವಿ, ಕರ್ನಾಟಕ ಗಮಕಕಲಾ ಪರಿಷತ್ತಿನ ಅಧ್ಯಕ್ಷ ಪದವಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೊದಲ ಅಧ್ಯಕ್ಷ ಪದವಿ ಮೊದಲಾದ ಸ್ಥಾನಗೌರವಗಳು ಲಭಿಸಿದ್ದವು. ಹಲವಾರು ಸನ್ಮಾನ ಹಾಗೂ ಪ್ರಶಸ್ತಿ ಗೌರವಗಳಿಗೆ ಪಾತ್ರರಾದ ಇವರಿಗೆ ರಾಜ್ಯ ಸರ್ಕಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. (ಕೆ.ಆರ್.ಎಸ್.ಆರ್.)

**ನಾರಾಯಣದಾಸ:** 1823–70. ಕೀರ್ತನಕಾರ, ವಾಗ್ಗೇಯಕಾರ ಹಾಗೂ ಕವಿ. ತಿಮ್ಮಪ್ಪದಾಸರ ಜೇಷ್ಠಪುತ್ರ. 1823 ಫೆಬ್ರವರಿ 11ರಂದು ಜನಿಸಿದರು. ತಿಮ್ಮಪ್ಪದಾಸರ ಪೂಜಾವಿಧಾನ ಕೀರ್ತನೆಗಳು ಲಿಖಿತವಾಗಿರುವ ಕಾಗದದ ಹಸ್ತಪ್ರತಿಯಲ್ಲಿ ನಾರಾಯಣದಾಸ ಎಂದು ಸ್ವನಾಮ ಮುದ್ರಿಕೆಯಿರುವ 39 ಕೀರ್ತನೆಗಳು ಲಿಖಿತವಾಗಿವೆ. ಈ ಕೀರ್ತನೆಗಳೆಲ್ಲವೂ ಪ್ರಾಯಿಕವಾಗಿ ಕುಲದೈವ ವೆಂಕಟರಮಣ, ರಾಮಚಂದ್ರಮೂರ್ತಿ, ಶಿವ, ಚಾಮುಂಡೇಶ್ವರಿ ಮುಂತಾಗಿ ದೇವತಾ ಸ್ತೋತ್ರರೂಪದಲ್ಲಿವೆ. ಒಂದು ಕೀರ್ತನೆ ಶೃಂಗೇರಿ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳನ್ನು (1866–1913) ಕುರಿತಿದೆ. ಚಾಮರಾಜ ಒಡೆಯರ ಪಟ್ಟಾಭಿಷೇಕವನ್ನು ಹಾರೈಸುವ, ಅವರು ಪಟ್ಟಾಭಿಷಿಕ್ತರಾದದ್ದಕ್ಕೆ (1868) ಸಂತೋಷವನ್ನು ಸೂಚಿಸುವ ಕೀರ್ತನೆಗಳು ಎರಡಿವೆ. ಇವರ ಕೀರ್ತನೆಗಳಲ್ಲಿ ತಂದೆ ತಿಮ್ಮಪ್ಪದಾಸರ ಕೀರ್ತನೆಗಳಲ್ಲಿರುವಂತೆ ತತ್ತ್ವ

ವಿಚಾರವಾಗಲಿ, ಭಕ್ತಿಭಾವದ ಹೃದಯಂಗಮ ಅಭಿವ್ಯಕ್ತಿಯಾಗಲಿ ಕಂಡು ಬರುವುದಿಲ್ಲ. ಆದರೆ ಕೆಲವು ಕೀರ್ತನೆಗಳು ಬಿಕ್ಕಟ್ಟಾಗಿ ರಚಿತವಾಗಿದ್ದು, ಸಮಕಾಲೀನ ವಾಗ್ಗೇಯಕಾರರ ಕೃತಿಗಳ ಬಂಧಗೌರವದ ಪ್ರಭಾವವನ್ನು ಪ್ರತಿಬಿಂಬಿಸುತ್ತವೆ. **(ಎಂ.ವಿ.ಎಸ್.)**

**ನಾರಾಯಣಮೂರ್ತಿ, ಎನ್.ಆರ್.:** 1946 – . ಬೆಂಗಳೂರಿನ ಇನ್‌ಫೋಸಿಸ್ ಸಂಸ್ಥೆಯ ಅಧ್ಯಕ್ಷ. ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ 1946 ಆಗಸ್ಟ್ 20ರಂದು ಜನಿಸಿದರು. ತಂದೆ ಎನ್. ರಾಮರಾವ್ ಶಿಕ್ಷಕರಾಗಿದ್ದರು. ತಾಯಿ ಪದ್ಮಾವತಮ್ಮ. ಇವರ ಮೊದಲ ಓದು ಮೈಸೂರಿನ ಶಾರದಾವಿಲಾಸ ಶಾಲೆಯಲ್ಲಿ. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ರ‍್ಯಾಂಕ್ ವಿಜೇತರು. ಕಾನ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಓದುವ ಅವಕಾಶ ಒದಗಿ ಬಂದರೂ ಮನೆಯ ಆರ್ಥಿಕ ಸ್ಥಿತಿಯಿಂದಾಗಿ ಅಲ್ಲಿಗೆ ಹೋಗಲಾಗಲಿಲ್ಲ. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ (ಎನ್‌ಐಇ) ಕಾಲೇಜಿನಲ್ಲಿ ಓದಿ ವಿದ್ಯುತ್ ಎಂಜನಿಯರಿಂಗ್‌ನಲ್ಲಿ ರ‍್ಯಾಂಕ್ ನೊಂದಿಗೆ ಬಿ.ಇ. ಪದವಿ ಪಡೆದರು (1967). ಮುಂದೆ ಓದಲು ಶಿಷ್ಯ ವೇತನ ಸಿಕ್ಕಿದ್ದರಿಂದ ಕಾನ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಐಐಟಿ) ಓದಿ ಸ್ನಾತಕೋತ್ತರ ಪದವಿ (ಎಂ.ಟೆಕ್) ಪಡೆದರು (1969).

ಇದೇ ಸಮಯದಲ್ಲಿ ಕಂಪ್ಯೂಟರ್ ಮಾಹಿತಿ ತಂತ್ರಜ್ಞಾನ ಕುರಿತ ಅಲೆ ಪ್ರಾರಂಭವಾಗಿತ್ತು. ಇವರು ಕಂಪ್ಯೂಟರ್ ಕ್ಷೇತ್ರದತ್ತ ಆಸಕ್ತರಾಗಿ ಅಧ್ಯಯನದಲ್ಲಿ ತೊಡಗಿದರು. ಅಹಮದಾಬಾದಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲಸಕ್ಕೆ ಸೇರಿಕೊಂಡರು. ಮುಂದೆ ಸೆಸ್ಮಾ ಪ್ಯಾರಿಸ್, ಸಿಸ್ಟಮ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಪುಣೆ), ಕಂಪ್ಯೂಟರ್ ಸಿಸ್ಟಮ್ಸ್ (ಮುಂಬಯಿ) ಗಳಲ್ಲಿ ಕೆಲಸ ಮಾಡುತ್ತ ಕಂಪ್ಯೂಟರ್‌ನ ಸಾಧ್ಯತೆಗಳನ್ನು ಕಂಡುಕೊಂಡರು. ಇವರು ಮಾದರಿ ತಯಾರಿಸಿ ಅಭಿವೃದ್ಧಿಪಡಿಸಿದ ಭಾರತದ ಮೊಟ್ಟಮೊದಲ ಬೇಸಿಕ್ ಇಂಟರ್‌ಪ್ರಿಟರ್ ಮತ್ತು ದೇಶದ ಪ್ರಥಮ ಷೇರಿಂಗ್ ಆಪರೇಟಿಂಗ್ ಸಿಸ್ಟಮ್ ಯಶಸ್ವಿಯಾದವು. ಪ್ಯಾರಿಸ್‌ನ ಡಿಗಾಲೆ ಏರ್‌ಪೋರ್ಟಿನಲ್ಲಿ ಸರಕು ಸಾಗಾಟಕ್ಕಾಗಿ ರಿಯಲ್ ಆಪರೇಟಿಂಗ್ ಸಿಸ್ಟಮ್ ತಯಾರಿಸಿ 400 ಟರ್ಮಿನಲ್ ಮಾದರಿ ರಚನೆಗಾಗಿ ದುಡಿದ ತಂಡದಲ್ಲಿ ನಾರಾಯಣ ಮೂರ್ತಿಯವರೂ ಇದ್ದರು.

ಇವರ ಪತ್ನಿ ಸುಧಾ ಮೂರ್ತಿ ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್ ಓದಿ, ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಕಂಪ್ಯೂಟರ್ ವಿಜ್ಞಾನ ಶಿಕ್ಷಣ ಪಡೆದು ಎಂ.ಟೆಕ್, ಮುಗಿಸಿ ಪುಣೆಯ ಟೆಲ್ಕೋ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಾರಾಯಣಮೂರ್ತಿಯವರ ಪರಿಚಯ ಬೆಳೆದು ಇಬ್ಬರೂ ಮದುವೆಯಾದರು.

1970ರ ದಶಕದಲ್ಲಿ ಭಾರತದಲ್ಲಿ ಕಂಪ್ಯೂಟರ್ ಕ್ರಾಂತಿ ಪ್ರಾರಂಭವಾದಾಗ ಎಲ್ಲ ರಾಜ್ಯ ಸರಕಾರಗಳು, ಖಾಸಗಿ ಸಂಸ್ಥೆಗಳು ಕಂಪ್ಯೂಟರ್ ಪ್ರಯೋಜನ ಪಡೆಯಲು ಸಂಕಲ್ಪಿಸಿದ ಸಂದರ್ಭದಲ್ಲಿ ನಾರಾಣಯ ಮೂರ್ತಿಯವರು ಈ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಬೇಕೆಂಬ ಹೆಬ್ಬಯಕೆಯಿಂದ ಸಾಫ್ಟ್‌ವೇರ್ ಉದ್ಯಮಕ್ಕೆ ಕೈಹಾಕಿದರು (1981). ಪುಣೆಯಲ್ಲಿ ತಮ್ಮ ಆರುಜನ ಸಹೋದ್ಯೋಗಿ ಮಿತ್ರರೊಡಗೂಡಿ ಮನೆಯಲ್ಲಿಯೇ ಇನ್‌ಫರ್ಮೇಶನ್ ಸಿಸ್ಟಮ್ಸ್ ಎಂಬ ಸಂಸ್ಥೆ ಆರಂಭಿಸಿದರು (1981). ಮುಂದೆ ಇದೇ ಸಂಸ್ಥೆ ಇನ್‌ಫೋಸಿಸ್ ಟೆಕ್ನಾಲಜಿ ಲಿಮಿಟೆಡ್ ಎಂಬ ಹೆಸರಿನಿಂದ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆಯಿತು. ಮೊದಲ ಎರಡು ಮೂರು ವರ್ಷ ಪುಣೆಯಲ್ಲಿ ಕಾರ್ಯನಿರ್ವಹಿಸಿದ ಈ ಸಂಸ್ಥೆ 1984ರಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡು ಅಲ್ಲಿ ಮುಖ್ಯ ಕಾರ್ಯಾಲಯವನ್ನಾರಂಭಿಸಿತು. ಈ ಸಂಸ್ಥೆ ಸಾಫ್ಟ್‌ವೇರ್ ಅಭಿವೃದ್ಧಿ, ಮರುಜೋಡಣೆ ಮತ್ತು ನಿರ್ವಹಣೆಯ ಕಾರ್ಯದೊಂದಿಗೆ ಸಾಫ್ಟ್‌ವೇರ್ ತಂತ್ರಜ್ಞಾನ ಕ್ಷೇತ್ರದಲ್ಲಿ ಸಮಗ್ರ ಸೇವೆ ನೀಡುತ್ತಿದೆ. ಕರ್ನಾಟಕ, ಮಹಾರಾಷ್ಟ್ರ, ಒರಿಸ್ಸ, ತಮಿಳುನಾಡು ರಾಜ್ಯಗಳಲ್ಲಿ ಹನ್ನೊಂದು ಮತ್ತು ವಿದೇಶಗಳಲ್ಲಿ ಹದಿಮೂರು ಶಾಖೆಗಳನ್ನು ಹೊಂದಿದೆ. ಪ್ರಪಂಚದ ಪ್ರಸಿದ್ಧ ಕಂಪನಿಗಳಾದ ರಿಬೋಕ್, ಸಿಟಿಗ್ರೂಪ್, ಗ್ಯಾಪ್, ಬೋಯಿಂಗ್, ನೆಸ್ಲೆ, ನಾರ್ಡ್‌ಸ್ಟ್ರಾರ್ಮ ಜನರಲ್ ಎಲೆಕ್ಟ್ರಿಕ್, ವೀಸಾ, ಆಪಲ್, ನಾರ್ಟೆಲ ಮೊದಲಾದ 130 ಕಂಪನಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಸಾಫ್ಟ್‌ವೇರ್ ಸೇವೆ ಒದಗಿಸುತ್ತಿದೆ.

ನಾರಾಯಣಮೂರ್ತಿಯವರು ಭಾರತ ಸರಕಾರದ ರಿಸರ್ವ್ ಬ್ಯಾಂಕ್‌ನ ಕೇಂದ್ರ ಮಂಡಳಿಯಲ್ಲಿ ನಿರ್ದೇಶಕರಾಗಿ, ಇಂಡೋ ಬ್ರಿಟಿಷ್ ಪಾರ್ಟ್‌ನರ್ ಶಿಪ್ ಸಂಸ್ಥೆಯ ಸಹ ಅಧ್ಯಕ್ಷರಾಗಿ ಪ್ರಧಾನಮಂತ್ರಿಯವರ ವ್ಯಾಪಾರ ಮತ್ತು ಕೈಗಾರಿಕಾ ಮಂಡಳಿಯಲ್ಲಿ ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಏಷ್ಯದ ಅನೇಕ ದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಸಲಹೆಗಾರರಾಗಿದ್ದಾರೆ. ನವೆಂಬರ್ 2002ರಲ್ಲಿ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಸಂಸ್ಥೆ (ಭಾರತದ ಸೆಕ್ಯೂರಿಟಿ ಮತ್ತು ವಿನಿಮಯ ಮಂಡಳಿ) ಇವರನ್ನು ಕಾರ್ಪೊರೇಟ್ ಗವರ್ನೆನ್ಸ್ ಕಮಿಟಿಯ ಮುಖ್ಯಸ್ಥರನ್ನಾಗಿ ನೇಮಿಸಿತು. ಇವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಮತ್ತು ಇಂಡಿಯನ್ ಇಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಅಹಮ್ಮದಾಬಾದ್ ಈ ಸಂಸ್ಥೆಗಳ ಆಡಳಿತ ಮಂಡಳಿಯ (ಗವರ್ನಿಂಗ್ ಬಾಡಿ) ಅಧ್ಯಕ್ಷರಾಗಿದ್ದಾರೆ. ಇದಲ್ಲದೆ ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ವಿವಿಧ ಮಟ್ಟದ ಸದಸ್ಯರಾಗಿದ್ದಾರೆ.

ಇನ್‌ಫೋಸಿಸ್ ಯಶಸ್ಸಿಗೆ ನಾರಾಯಣಮೂರ್ತಿಯವರ ದೂರದೃಷ್ಟಿ, ನಿರಂತರ ದುಡಿಮೆ, ಶಿಸ್ತು, ಪ್ರಾಮಾಣಿಕತೆ ಕಾರಣವಾಗಿವೆ. ಇವರು ಈ ಸಂಸ್ಥೆಯ ಅಧ್ಯಕ್ಷರೂ ಸಲಹೆಗಾರರೂ ಆಗಿದ್ದಾರೆ. ಈಗ ತಮ್ಮ ಸಹೋದ್ಯೋಗಿ, ಸಂಸ್ಥಾಪಕರೊಬ್ಬರಿಗೆ ಈ ಜವಾಬ್ದಾರಿಯನ್ನು ವಹಿಸಿಕೊಟ್ಟದ್ದಾರೆ.

ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಫಾರ್ಚೂನ್ ಪತ್ರಿಕೆ 2003ರ ಏಷ್ಯದ ಇಬ್ಬರು ಉದ್ಯಮಿಗಳಲ್ಲಿ ನಾರಾಯಣಮೂರ್ತಿಯವರೂ ಒಬ್ಬರು ಎಂದು ಆಯ್ಕೆ ಮಾಡಿದೆ. 2002ರಲ್ಲಿ ಅರ್ನ್‌ಸ್ಟ್ ಅಂಡ್ ಯಂಗ್ 'ಭಾರತದ ವರ್ಷದ ಸಾಹಸಿ ಉದ್ಯಮಿ' ಎಂದು ಘೋಷಿಸಿದೆ. 2001ರಲ್ಲಿ ಟೈಮ್ಸ್, ಸಿ.ಎನ್.ಎನ್. ಮಾಧ್ಯಮಗಳು ಜಗತ್ತಿನಲ್ಲಿ ಹೊಸ ಉದ್ಯಮ ಸೃಷ್ಟಿ ಮತ್ತು ಮಾರುಕಟ್ಟೆಗಳ ಸಾಧ್ಯತೆಗಳಿಗೆ ಹೊಸರೂಪ ಕೊಟ್ಟ ಇಪ್ಪತ್ತೈದು ಪ್ರಭಾವಶಾಲಿ ಜಾಗತಿಕ ಕಾರ್ಯನಿರ್ವಾಹಕರಲ್ಲಿ ನಾರಾಯಣಮೂರ್ತಿಯವರೂ ಒಬ್ಬರು ಎಂದು ಇವರನ್ನು ಆಯ್ಕೆ ಮಾಡಿದೆ. ಸ್ವಿಟ್ಸರ್‌ಲೆಂಡಿನ ಮಾಕ್ಸ ಸ್ಮಿಡೇನಿ ಲಿಬರ್ಟಿ 2001 ಪ್ರಶಸ್ತಿ ದೊರಕಿದೆ. 1996–97ರಲ್ಲಿ ಜೆಆರ್‌ಡಿ ಟಾಟಾ ಅವರ ಕಾರ್ಪೋರೇಟ್ ಲೀಡರ್‌ಶೀಪ್ ಅವಾರ್ಡ್ ಇವರಿಗೆ ಬಂದಿದೆ. 1998ರಲ್ಲಿ

ಕಾನ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇವರಿಗೆ ಪ್ರಶಸ್ತಿ ನೀಡಿದೆ. ಇವಲ್ಲದೆ ಇನ್ನು ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳ ಪ್ರಶಸ್ತಿ, ಗೌರವಗಳು ಇವರಿಗೆ ಸಂದಿವೆ. ಇವರಿಗೆ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನೂ (1998) ಭಾರತ ಸರ್ಕಾರ ಪದ್ಮಶ್ರೀ (2000) ಪ್ರಶಸ್ತಿಯನ್ನೂ ನೀಡಿ ಗೌರವಿಸಿವೆ. (ಎಸ್.ಎಂ.ಕೆ.)

**ನಾರಾಯಣಶಾಸ್ತ್ರಿ, ಎನ್.ಎಸ್.:** 1902– 55. ಪ್ರಸಿದ್ಧ ಮನೋವಿಜ್ಞಾನ ಪರಿಣತರು, ನಾಟಕಕಾರರು, ಶ್ರೇಷ್ಠ ನಟರು. ಇವರು ನರಸಿಂಹರಾಜಪುರದಲ್ಲಿ 1902 ಜೂನ್ 12ರಂದು ಜನಿಸಿದರು. ವೈದಿಕ ವಿದ್ವಾಂಸರಾಗಿದ್ದ ಸುಬ್ರಹ್ಮಣ್ಯಶಾಸ್ತ್ರೀ ಇವರ ತಂದೆ. ಇವರ ಮನೆತನ ಪುರ ಮನೆತನ ಎಂದು ಸುತ್ತಮುತ್ತ ಹೆಸರುಗೊಂಡಿತು.

ನಾರಾಯಣಶಾಸ್ತ್ರಿಗಳ ಪದವಿಪೂರ್ವದ ವಿದ್ಯಾಭ್ಯಾಸ ಹುಟ್ಟೂರಿನಲ್ಲೂ ತುಮಕೂರಿನಲ್ಲೂ ನಡೆಯಿತು. ಅನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿಯನ್ನೂ (1925) ಎಂ.ಎ. ಪದವಿಯನ್ನೂ (1927) ಪಡೆದರು. ಪ್ರಾಯೋಗಿಕ ಮನೋವಿಜ್ಞಾನ ಇವರ ಎಂ.ಎ. ಪದವಿ ವ್ಯಾಸಂಗದ ಪ್ರಧಾನ ವಿಷಯ. ಆ ವಿಷಯದ ಪ್ರಾಧ್ಯಾಪಕರಾಗಿದ್ದ ಎಂ.ವಿ. ಗೋಪಾಲಸ್ವಾಮಿಯವರ ಪ್ರಿಯ ಶಿಷ್ಯರಾಗಿದ್ದ ಇವರು ವ್ಯಾಸಂಗ ಮಾಡಿದ ಕಾಲೇಜಿನಲ್ಲಿಯೇ ಅಧ್ಯಾಪಕರಾಗಿ ನೇಮಕಗೊಂಡು ಹಲವು ವರ್ಷಕಾಲ ಸೇವೆ ಸಲ್ಲಿಸಿದರು. ಅಧ್ಯಾಪನದೊಂದಿಗೆ ಸಂಶೋಧನೆಯನ್ನೂ ಮಾಡುತ್ತಿದ್ದ ಶಾಸ್ತ್ರಿಗಳು 1940ರಲ್ಲಿ ಸೌಂದರ್ಯಾನುಭೂತಿಯ ಮನೋವೈಜ್ಞಾನಿಕ ವಿವರಣೆ ಎಂಬ ಪ್ರೌಢ ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಡಿ.ಲಿಟ್ ಪದವಿಯನ್ನು ಪಡೆದರು. ಕೆಲವು ವರ್ಷಗಳ ತರುವಾಯ ಮಹಾರಾಜ ಕಾಲೇಜಿನ ಉದ್ಯೋಗವನ್ನು ಬಿಟ್ಟು ಬೆಂಗಳೂರಿನ ಟಾಟಾ ವಿಜ್ಞಾನ ಸಂಸ್ಥೆಯ ಮನೋವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾದರು. 1945– 1951 ರವರೆಗೆ ಭಾರತೀಯ ವಿಜ್ಞಾನ ಮಹಾಸಭೆಯ ಮನೋವಿಜ್ಞಾನ ಶಾಖೆಯ ಅಧ್ಯಕ್ಷರಾಗಿದ್ದರು. 1953ರಲ್ಲಿ ಇವರು ಇಂಗ್ಲೆಂಡಿನಲ್ಲಿ ಅಧ್ಯಯನ ಪ್ರವಾಸ ಮಾಡಿ ಹಿಂತಿರುಗಿದರು. ಅದೇ ವರ್ಷ ಬ್ರಿಟನ್ನಿನ ಮನೋವಿಜ್ಞಾನ ಸಂಘದ ಗೌರವ ಸದಸ್ಯರಾಗಿ ಆಯ್ಕೆಯಾದರು. ಈ ಗೌರವವನ್ನು ಪಡೆದ ಭಾರತೀಯರಲ್ಲಿ ಇವರೇ ಮೊದಲಿಗರು.

ನಾಟಕದ ಬಗ್ಗೆ ವಿಶೇಷ ಒಲವನ್ನು ಬೆಳೆಸಿಕೊಂಡಿದ್ದ ಶಾಸ್ತ್ರಿಗಳು ಮಹಾರಾಜ ಕಾಲೇಜಿನಲ್ಲಿ ಇದ್ದಷ್ಟು ಕಾಲವೂ ಕಾಲೇಜು ಸಂಘ ಮತ್ತು ಕರ್ನಾಟಕ ಸಂಘಗಳ ಆಶ್ರಯದಲ್ಲಿ ಪ್ರತಿವರ್ಷವೂ ನಡೆಯುತ್ತಿದ್ದ ನಾಟಕ ಪ್ರದರ್ಶನಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತಿದ್ದರು. ಕೆ.ವಿ. ಪುಟ್ಟಪ್ಪನವರ ಯಮನಸೋಲು (ಯಮನ ಪಾತ್ರ) ಮತ್ತು ಬಿರುಗಾಳಿ (ಭೈರವ ನಾಯಕ), ಬಿ.ಎಂ. ಶ್ರೀಕಂಠಯ್ಯನವರ ರನ್ನನ ಗದಾಯುದ್ಧ ನಾಟಕ (ಭೀಮ) ಮತ್ತು ಅಶ್ವತ್ಥಾಮನ್ (ಅಶ್ವತ್ಥಾಮನ್), ಎ.ಎನ್. ಮೂರ್ತಿರಾಯರ ಆಷಾಢಭೂತಿ (ಶಂಕರಪ್ಪ), ವೆಂಬಾರ್ ವೆಂಕಟಾಚಾರ್ಯರ ಸಾವಿನ ಸಮಸ್ಯೆ (ತೆನಾಲಿ ರಾಮಕೃಷ್ಣ) ಮುಂತಾದ ನಾಟಕಗಳಲ್ಲಿ ಹಾಸ್ಯಮಯ ಪಾತ್ರವಾಗಲಿ, ಗಂಭೀರ ಪಾತ್ರವಾಗಲಿ, ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಪಾತ್ರಪೋಷಣೆ ಮಾಡಿ, ಪ್ರೇಕ್ಷಕ ವರ್ಗಕ್ಕೆ ಅಪೂರ್ವವಾದ ರಸದೌತಣವನ್ನು ಒದಗಿಸುತ್ತಿದ್ದರು. ಮೈಸೂರಿನ ಸಾಹಿತ್ಯ ನಾಟಕ ಕಲಾ ಸಂಸ್ಥೆಯವರು ಪ್ರದರ್ಶಿಸುತ್ತಿದ್ದ ಕನ್ನಡ ಮತ್ತು ಇಂಗ್ಲಿಷ್ ನಾಟಕಗಳಲ್ಲೂ ಇವರು ಅಭಿನಯಿಸುತ್ತಿದ್ದರು. ವಸಂತಸೇನಾ (ಮೃಚ್ಛಕಟಿಕದ ರೂಪಾಂತರ) ಎಂಬ ಮೂಕ ಚಲನಚಿತ್ರದಲ್ಲಿ ಪಾಲಕ ಮಹಾರಾಜನ ಪಾತ್ರವಹಿಸಿದ್ದರು. ಕಲಾ ವಿಲಾಸಿ ರಂಗಭೂಮಿಯ ವಿನೂತನ ವಾಸ್ತವ ಶೈಲಿಯ ಅಭಿನಯ ಸಂಪ್ರದಾಯದ ಬೆಳವಣಿಗೆಗೆ ಶಾಸ್ತ್ರಿಗಳ ಕೊಡುಗೆ ಬೆಲೆಯುಳ್ಳದ್ದು.

ಇವರಿಗೆ ರಂಗಭೂಮಿಯ ಪ್ರತ್ಯಕ್ಷ ಅನುಭವವಿದ್ದುದರಿಂದ, ಭಾಸನ ಪಂಚರಾತ್ರ ನಾಟಕವನ್ನು ಪ್ರಯೋಗದೃಷ್ಟಿಯಿಂದ ಕನ್ನಡಕ್ಕೆ ರೂಪಾಂತರ ಮಾಡಿದ್ದಾರೆ. ಈ ಮೂಲಕ ಲಕ್ಷಣಬದ್ಧ ಪ್ರಾಚೀನ ನಾಟಕಗಳನ್ನು ಆಧುನಿಕ ರಂಗಪ್ರಯೋಗದ ಅಗತ್ಯಗಳಿಗೆ ತಕ್ಕಂತೆ ಅಳವಡಿಸುವ ಕ್ರಮಕ್ಕೆ ಒಂದು ಒಳ್ಳೆಯ ಮಾದರಿಯನ್ನು ಒದಗಿಸಿದ್ದಾರೆ. ಆಧುನಿಕ ವೈಜ್ಞಾನಿಕ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಭಾಷಣ ಮಾಡುವುದು ಕಷ್ಟಸಾಧ್ಯ ಎಂಬ ಭಾವನೆಯ ಜೊತೆಗೆ, ವಿಶ್ವವಿದ್ಯಾನಿಲಯದ ವಲಯದಲ್ಲಿಯೇ ಕನ್ನಡದ ಬಗೆಗೆ ತಿರಸ್ಕಾರ ಪ್ರಬಲವಾಗಿದ್ದ ಆ ಕಾಲದಲ್ಲಿ, ನಮ್ಮ ದೇಶಕ್ಕೆ ಹೊಸತಾದ ಮನೋವೈಜ್ಞಾನಿಕ ವಿಚಾರಗಳನ್ನು ಕುರಿತು ಮನಮಾತಿನ ಕನ್ನಡದಲ್ಲಿ ಆಕರ್ಷಕವಾಗಿ ಭಾಷಣ ಮಾಡುತ್ತಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆಯಲ್ಲಿ ಕನಸುಗಳು ಎಂಬ ವಿಷಯವಾಗಿ ಮಾಡಿದ ಭಾಷಣ ಅದೇ ಹೆಸರಿನಲ್ಲಿ ಅಚ್ಚಾಗಿದೆ (1933). ಮಹಾಪುರುಷ ಎಂಬ ಇವರ ಕಾದಂಬರಿ ವಿಕ್ಟರ್ ಹ್ಯೂಗೋನ ಲೆ ಮಿಸರೆಬಲ್ ಎಂಬ ಫ್ರೆಂಚ್ ಭಾಷೆಯ ಪ್ರಸಿದ್ಧ ಕಾದಂಬರಿಯ ರೂಪಾಂತರ. ಮನೋರೋಗಗಳು ಮತ್ತು ಪ್ರಾಯೋಗಿಕ ಮನಶ್ಶಾಸ್ತ್ರ ಪ್ರವೇಶಿಕೆ ಇವು ಇವರ ಇಂಗ್ಲಿಷ್ ಕೃತಿಗಳು. ಮನೋವಿಜ್ಞಾನ ಕ್ಷೇತ್ರದಲ್ಲಿ ಇವರ ಪ್ರೌಢಿಮೆಯನ್ನು ಗುರುತಿಸಿ ಸಂಯುಕ್ತ ರಾಷ್ಟ್ರ ಸಂಘದ ಯುನೆಸ್ಕೊ ಶಾಖೆ ಕೈರೊ ನಗರದ ಸಮಾವೇಶದಲ್ಲಿ ಇವರನ್ನು ಒಬ್ಬ ಪ್ರಧಾನಾಧಿಕಾರಿಯಾಗಿ ನೇಮಿಸಿಕೊಂಡಿತ್ತು.

ಇವರು ದೆಹಲಿಯ ಮನೋವೈಜ್ಞಾನಿಕ ಕೇಂದ್ರ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾಗ 1955 ಸೆಪ್ಟಂಬರ್ 5ರಂದು ತಮ್ಮ 54ನೆಯ ವಯಸ್ಸಿನಲ್ಲಿ ನಿಧನರಾದರು. (ಎಂ.ವಿ.ಎಸ್.)

**ನಾರಾಯಣಶೆಟ್ಟಿ, ಎಸ್.:** 1930– . ಕನ್ನಡದಲ್ಲಿ ಸುಜನಾ ಎಂಬ ಕಾವ್ಯನಾಮದಿಂದ ಹೆಸರಾದ ಕವಿ, ವಿಮರ್ಶಕ. ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲಿನಲ್ಲಿ 1930 ಏಪ್ರಿಲ್ 13ರಂದು ಜನಿಸಿದರು. ತಂದೆ ಸುಬ್ಬಶೆಟ್ಟಿ. ಹೊಸಹೊಳಲು, ಹೊಳೆನರಸೀಪುರಗಳಲ್ಲಿ ಶಾಲಾ ವ್ಯಾಸಂಗ ಮಾಡಿದರು. ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ವಿಜ್ಞಾನದಲ್ಲಿ ಇಂಟರ್‌ಮೀಡಿಯೆಟ್ ಓದಿದರು. ಅನಂತರ ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿ ಕನ್ನಡದಲ್ಲಿ ಎಂ.ಎ. ಪಡೆಯಬೇಕೆಂದು ಬಯಸಿದರಾದರೂ ಇವರು ವಿಜ್ಞಾನದ ವಿದ್ಯಾರ್ಥಿಯಾದ್ದರಿಂದ ಪ್ರವೇಶ ಸಿಗುವುದಕ್ಕೆ ನಿಯಮ ಅಡ್ಡಿಬಂತು. ಪ್ರವೇಶ ದೊರಕದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದೆಂದು ಮನಸ್ಸು ಮಾಡಿದ್ದರು. ಕೊನೆಗೂ ಇವರು ಕನ್ನಡ ಬಿ.ಎ. (ಆನರ್ಸ್)ಗೆ ಪ್ರವೇಶ ಪಡೆದರು. ಅನಂತರ ಕನ್ನಡ ಎಂ.ಎ. ಪದವಿ ಪಡೆದು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಮುಂದೆ ಪ್ರವಾಚಕರೂ ಪ್ರಾಧ್ಯಾಪಕರೂ ಸ್ವಲ್ಪಕಾಲ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರೂ ಆಗಿ ಕಾರ್ಯನಿರ್ವಹಿಸಿದರು (1985– 87) ಮತ್ತು ಯುವರಾಜ ಕಾಲೇಜಿನ ಪ್ರಾಚಾರ್ಯರಾಗಿ (1988) ನಿವೃತ್ತಿಹೊಂದಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ಣಾಟಕ ಪತ್ರಿಕೆಯ ಸಂಪಾದಕರಾಗಿದ್ದರು (1959– 65).

ಸುಜನಾ ಅವರ ಮೊದಲನೆಯ ಕವನ ಸಂಕಲನ ಮಂಗಳಾರತಿ (1956). ನಾಣ್ಯಯಾತ್ರೆ 1965ರಲ್ಲಿ ಪ್ರಕಟವಾಯಿತು. 1982 ರ ವರೆಗಿನ ಇವರ ಕವನಗಳು ಒಂದೇ ಸೂರಡಿಯಲ್ಲಿ ಎಂಬ ಶೀರ್ಷಿಕೆಯಡಿ ಪ್ರಕಟವಾಗಿವೆ. ಸೊನ್ನೆ ಎರಡರ ನಡುವೆ (1982), ಉಡಿದಾರ (1982)– ಇವು ಇವರ ಇತರ ಕವನ ಸಂಕಲನಗಳು. ಹೃದಯ ಸಂವಾದ (1965), ಪರಂಪರೆ (1982), ಕುವೆಂಪು ಮತ್ತು ಪರಂಪರೆ (1984)– ಇವು ವಿಮರ್ಶಾ ಸಂಕಲನಗಳು. ಕಣಗಳು (1983) ಎಂಬುದು ಕಿರುಕವಿತೆಗಳ ಸಂಕಲನ.

ಸುಜನಾ ಅವರ ಮಹಾಕಾವ್ಯ 'ಯುಗಸಂಧ್ಯಾ' (1999). ಹತ್ತು ವರ್ಷಗಳ ಕಾಲಾವಧಿಯಲ್ಲಿ ಇವರು ಇದನ್ನು ರಚಿಸಿದರು. ತಮ್ಮ ಕಾವ್ಯರಚನೆಯ ಪ್ರಾರಂಭದ ದಿನಗಳಿಂದಲೂ ಗುಪ್ತವಾಗಿ, ಬಿಡದೆ ನಡೆದುಬಂದಿರಬಹುದಾದ ಸರಳ ರಗಳೆಯ ಛಂದಸ್ಸನ್ನು ಕೊಂಚ ಸ್ವಾತಂತ್ರ್ಯ ವಹಿಸಿ ಬಳಸಿಕೊಂಡಿರುವುದಾಗಿ ಇವರು ಹೇಳಿಕೊಂಡಿದ್ದಾರೆ. ಇದು ಮಹಾಭಾರತದ ಪಾಂಡವ ವಿಜಯದ ಅನಂತರದ ಕಥೆ. 'ವ್ಯಾಸರು ಮಹಾಭಾರತದಲ್ಲಿ ಆ ಭಾಗವನ್ನು ವಿಶೇಷವಾಗಿ ಬೆಳೆಸಿದ್ದಾರೆ. ಆದರೆ



ಕನ್ನಡದಲ್ಲಿ ಭಾರತವನ್ನು ಬರೆದ ಪಂಪನಾಗಲಿ, ಕುಮಾರವ್ಯಾಸನಾಗಲಿ ಆ ಜಾಡಿನಲ್ಲಿ ಮುನ್ನಡೆಯಲಿಲ್ಲ. ಪಾಂಡವರು ಗೆದ್ದ ಮೇಲೆ, ಧರ್ಮಾಧರ್ಮ ಯುದ್ಧದಲ್ಲಿ ಧರ್ಮಕ್ಕೆ ಜಯ ದೊರಕಿದ ಮೇಲೆ ಮುಂದೆ ಏನು ಸ್ವಾರಸ್ಯವಿದ್ದೀತು ಎಂದೋ ಏನೋ' ಎಂಬುದು ಸುಜನಾ ಅವರ ಅನಿಸಿಕೆ. ಇವರು ವ್ಯಾಸಹೃದಯವನ್ನು ಅರಿತು ಮುನ್ನಡೆದರು. ಮಹಾಭಾರತ ಯುದ್ಧವಾದ ಮೇಲೆ ಕೊನೆಯಲ್ಲಿ ಕೃಷ್ಣ ಬೇಡನೊಬ್ಬನ ಬಾಣಕ್ಕೆ ದೇಹತ್ಯಾಗ ಮಾಡಿದ. ಇದರ ಅರ್ಥವೇನು? ಎಲ್ಲವೂ ಸಪ್ಪೆಯಾಗಿ ಪರಿಣಮಿಸಬೇಕೆ? ಮಹಾಭಾರತ ಯುದ್ಧಾನಂತರವೂ ಉಳಿದಿದ್ದ ಲೋಕಕಂಟಕರೆಲ್ಲರ ನಿರ್ನಾಮ ದೈವಸಂಕಲ್ಪವಾಗಿತ್ತು. ಬೇಡನ ಬಾಣಕ್ಕೆ ಕೃಷ್ಣ ದೇಹತ್ಯಾಗ ಮಾಡಿದ್ದು ಅರ್ಥವತ್ತಾದದ್ದು. ಮುಳ್ಳನ್ನು ಮುಳ್ಳಿನಿಂದ ತೆಗೆದು ಎರಡನ್ನೂ ಎಸೆದುಬಿಡುವಂತೆ, ಲೋಕಕಾರ್ಯವನ್ನು ನಿರ್ಮೂಲ ಮಾಡಿದ ಶ್ರೀಕೃಷ್ಣ ತನ್ನ ದೇಹವನ್ನು ಕಳಚಿ ಒಗೆದ ದರ್ಶನ ಸುಜನಾ ಅವರಿಗೆ ಆಯಿತು. ಇವರ ದೃಷ್ಟಿಯಲ್ಲಿ ಇದೊಂದು ಅದ್ಭುತ. ಮುಂದಿನ ಕಥೆಯನ್ನು ಇವರು ಇಲ್ಲಿ ವರ್ಣಿಸಿದ್ದಾರೆ.

ಕುಮಾರವ್ಯಾಸ ಭಾರತವನ್ನು ಜನಪ್ರಿಯ ಆವೃತ್ತಿಗಾಗಿ ಸಿದ್ಧಪಡಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ಆಗಿನಿಂದಲೇ ಈ ಕಥಾಭಾಗದ ಅಭಿವ್ಯಕ್ತಿಗೆ ಮಾನಸಿಕವಾಗಿ ತೊಡಗಿದ್ದರು. 'ಯುಗಸಂಧ್ಯಾ' ಮಹಾಕಾವ್ಯವನ್ನು ರಚಿಸತೊಡಗಿದಾಗ ಇವರ ದೇಹಸ್ಥಿತಿ ಕೆಟ್ಟಿತು. ಲೇಖನಿ ಹಿಡಿದು ಬರೆಯಲಾಗದವರಾದರು. ಮಕ್ಕಳ ಸಹಕಾರ ದಿಂದ ಇದು ಪೂರೈಸಿತು. ಭಾರತೋತ್ತರ ಕಥಾ ವಿಷಯ ಪ್ರಸಂಗದೊಳ ಗೇನುಂಟು? ರಸಪೂರ್ಣ ಕಥೆಯೆ, ಕ್ರಿಯೆಯೆ, ದರ್ಶನವೆ? ಮನುಜಮನದ ರ್ಥಗಳೆ ಎಂಬ ಪ್ರಶ್ನೆಗೆ ನಾನೂರಿಪ್ಪತ್ತೈದು ಪುಟಗಳ ಈ ಮಹಾಕಾವ್ಯ ಉತ್ತರವಾಗಿದೆ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ (2002).

ಇವರಿಗೆ ದೊರಕಿರುವ ಇತರ ಪ್ರಶಸ್ತಿಗಳು ಇವು: ವರ್ಧಮಾನ ಪ್ರಶಸ್ತಿ (1982), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1989), ರಾಜ್ಯೋತ್ಸವ ಪ್ರಶಸ್ತಿ (1994), ದೇವರಾಜ ಬಹದ್ದೂರ್ ಪ್ರಶಸ್ತಿ (1997). **(ಎಚ್.ಎಸ್.ಕೆ.)**

**ನಾಲ್ಕುನಾಡು:** ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕಿನಲ್ಲಿ ನಾಪೊಕ್ಲು ನಾಡಿನಲ್ಲಿರುವ ಒಂದು ಪ್ರಾಚೀನ ಸ್ಥಳ. ನಾಪೊಕ್ಲುವಿನಿಂದ 10ಕಿಮೀ ದೂರದಲ್ಲಿರುವ ಈ ಸ್ಥಳವನ್ನು ಕಕ್ಕಬೆಯ ಮೂಲಕ ತಲುಪಬಹುದು. ಕೊಡಗಿನ ಪಶ್ಚಿಮಭಾಗದಲ್ಲಿ ಉನ್ನತವಾಗಿ ಎದ್ದ ಬೆಟ್ಟಸಾಲು, ದಟ್ಟವಾಗಿ ಬೆಳೆದ ಕಾಡುಗಳಿಂದ ಸ್ವಾಭಾವಿಕವಾದ ರಕ್ಷಣೆಯನ್ನು ಪಡೆದಿದ್ದು ಕೊಡಗಿನ ಅರಸರಿಗೆ ಇದು ಭದ್ರ ನೆಲೆಯಾಗಿತ್ತು. ಸ್ವಾಭಾವಿಕವಾದ ರಕ್ಷಣೆಯ ಜೊತೆಗೆ ಈ ಗಿರಿದುರ್ಗಕ್ಕೆ ಕೊಡಗಿನ ಅರಸರು ಆಳವಾದ ಕಡಂಗುಗಳನ್ನು ತೋಡಿಸಿ ಮತ್ತಷ್ಟು ಭದ್ರಪಡಿಸಿದ್ದುದರಿಂದ ಶತ್ರುಗಳ ದಾಳಿಗೆ ಅಭೇದ್ಯವೆನಿಸಿತ್ತು. ಇದಕ್ಕೆ ಸೇರಿದಂತೆಯೇ ಕೊಡಗಿನಲ್ಲಿಯೇ ಅತ್ಯುನ್ನತವಾದ ತಡಿಯಂಡಮೋಳ್ ಎಂಬ ಶಿಖರವುಳ್ಳ ಬೆಟ್ಟವಿರುವುದು. ಹಾಲೇರಿ ಮಡಿಕೇರಿಗಳ ಜೊತೆಗೆ ಕೊಡಗಿನ ಅರಸರಿಗೆ ಇದು ಮೂರನೆಯ ರಾಜಧಾನಿ. ಈಗ ಯವಕಪಾಡಿ ಎಂದು ಕರೆಯುವ ಹಳ್ಳಿಯಲ್ಲಿ ದೊಡ್ಡ ವೀರರಾಜೇಂದ್ರ 1792ರಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ. ಈ ಅರಮನೆಗಾಗಿಯೇ ಈ ಸ್ಥಳ ಈಗಲೂ ಪ್ರಸಿದ್ಧವಾಗಿದೆ. ಮಡಿಕೇರಿ ಅರಮನೆಯಷ್ಟು ದೊಡ್ಡದಲ್ಲದಿದ್ದರೂ ಇದು ಇನ್ನಷ್ಟು ಭದ್ರವಾದ ಮತ್ತು ಸ್ಥೂಲವಾದ ಕಟ್ಟಡ. ಎರಡು ಅಂತಸ್ತುಗಳಲ್ಲಿ ಕಟ್ಟಲಾಗಿರುವ ಈ ಅರಮನೆಗೆ ಇಟ್ಟಿಗೆ ಗಾರೆಗಳ ದಪ್ಪ ಗೋಡೆಗಳಿದ್ದು ಉಳಿದಂತೆ ಹೆಚ್ಚು ಮರದ ಸಾಮಾನುಗಳನ್ನೇ ಉಪಯೋಗಿಸಿದೆ. ಕೆಳಗಿನ ಅಂತಸ್ತಿನಲ್ಲಿ ದಪ್ಪಮರದ ಕಂಬಗಳಿದ್ದು, ಅವು ಬುಡದಪ್ಪನಾಗಿದ್ದು ಮೇಲೆ ಹೋಗುತ್ತ ಸಣ್ಣಗಾಗುವಂತೆ ಇವೆ. ಮೇಲಿನ ಅಂತಸ್ತಿನಲ್ಲಿ ಸುಂದರವಾದ ಕಂಡರಣೆಯನ್ನು ಕಾಣಬಹುದು. ಮೇಲಿನ ದೊಡ್ಡ ಹಜಾರ ಅರಸನ ಒಡ್ಡೋಲಗ ಶಾಲೆಯಾಗಿತ್ತು. ಅದರ ಕಂಬಗಳೂ ಬುಡದಪ್ಪನಾದ ಮೇಲೇರುತ್ತ ಸಣ್ಣಗಾಗುವಂತಿದ್ದು ಅಂದವಾಗಿ ಕಂಡರಿಸ ಲಾಗಿವೆ. ಮರದ ತೊಲೆಗಳು ಮತ್ತು ಹಲಗೆಗಳಿಂದ ನಿರ್ಮಿಸಿರುವ ಚಾವಣಿಯ ಒಳಭಾಗದಲ್ಲಿ ಕೆತ್ತನೆಯ ಕೆಲಸವಿದೆ. ಮತ್ತು ಚಾವಣಿಯಲ್ಲಿ ಹೂ, ಬಳ್ಳಿ, ಸುರುಳಿ ಮುಂತಾದ ಅಲಂಕರಣಗಳನ್ನು ಬಣ್ಣದಿಂದ ಚಿತ್ರಿಸಿದೆ. ಮಡಿಕೇರಿಯ ಅರಮನೆಯ ಕೆಲವು ಭಾಗಗಳಲ್ಲಿ ಉಳಿದುಬಂದಿರುವಂತೆ ಇಲ್ಲಿಯೂ ಗೋಡೆಯ ಮೇಲೆ ಒಂದು ಕಾಲದಲ್ಲಿ ವ್ಯಕ್ತಿಚಿತ್ರಗಳು, ದೇವರ ಮೂರ್ತಿಗಳ ಚಿತ್ರಗಳು ತುಂಬಿದ್ದಂತೆ ತೋರುತ್ತದೆ. ಆದರೆ ಈಗ ಅವು ಬಹುಮಟ್ಟಿಗೆ ಈಚೆಗೆ ಬಳಿದಿರುವ ಸುಣ್ಣದಿಂದ ಮುಚ್ಚಿಹೋಗಿದ್ದು ಚಿತ್ರಗಳ ಕುರುಹು ಮಾತ್ರ ಅಲ್ಲಲ್ಲಿ ಗೋಚರಿಸುತ್ತದೆ. ಒಂದು ಕಡೆ ಜಗತಿಯಂತೆ ಉನ್ನತ ಸ್ಥಾನವೊಂದಿದ್ದು ಅಲ್ಲಿ ರಾಜನ ಸಿಂಹಾಸನವಿರುತ್ತಿತ್ತು. ಒಟ್ಟಿನಲ್ಲಿ ಕಟ್ಟಡದ ಉಳಿದ ಭಾಗಗಳು ಸರಳವಾಗಿದ್ದರೂ ಈ ಓಲಗಶಾಲೆಯನ್ನು ಸುಂದರವಾಗಿ ಅಲಂಕರಿಸಿದೆ.

ಇಲ್ಲಿನ ಮತ್ತೊಂದು ಆಕರ್ಷಕವಾದ ಕಟ್ಟಡವೆಂದರೆ ಅರಮನೆಯ ಮುಂದೆ ಬಲಭಾಗದ ಮೂಲೆಯಲ್ಲಿ ನಿಂತಿರುವ ಪುಟ್ಟದಾದ ಒಂದು ಮಂಟಪ. ಇದನ್ನು ಧಾರೆಯಮಂಟಪ ಎನ್ನುತ್ತಾರೆ. ದೊಡ್ಡವೀರರಾಜೇಂದ್ರ 1796ರಲ್ಲಿ ಮಹದೇವಮ್ಮನನ್ನು ಮದುವೆಯಾದಾಗ ಆ ಮದುವೆಯ ಸಮಾರಂಭಕ್ಕಾಗಿ ಈ ಪುಟ್ಟ ಮಂಟಪವನ್ನು ನಿರ್ಮಿಸಲಾಯಿತು. ಚೌಕ ವಿನ್ಯಾಸದ ಒಂದಂಕಣದ ಈ ಮಂಟಪದ ನಾಲ್ಕು ಕಡೆಯೂ ಮುಸ್ಲಿಂ ರೀತಿಯ ವೃತ್ತ ಭಾಗಗಳನ್ನುಳ್ಳ ಕಮಾನುಗಳಿದ್ದು ನಾಲ್ಕು ಮೂಲೆಗಳಲ್ಲಿಯೂ ಅರೆಗಂಬಗಳು, ಮೂರ್ತಿಗಳಿಂದ ಅಲಂಕೃತವಾದ ಗೂಡುಗಳು, ಗೂಡುಗಳ ಪಕ್ಕಗಳಲ್ಲಿ ಬಗೆಬಗೆಯ ಅಲಂಕರಣಗಳಿಂದ ತುಂಬಿದ ಪಟ್ಟಿಕೆಗಳು ಇವೆ. ಇವೆಲ್ಲ ತುಂಬ ನವುರಾಗಿ ನಿರ್ಮಿತವಾಗಿವೆ. ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿದ್ದು ಗಚ್ಚಿನಲ್ಲಿ ಅಲಂಕರಣಗಳನ್ನೂ ಮೂರ್ತಿಗಳನ್ನೂ ಬಿಡಿಸಿರುವ ಈ ಮಂಟಪ ಬಹುಶಃ ಕೊಡಗಿನಲ್ಲಿಯೇ ಅತಿ ಸುಂದರವಾದ ಮಂಟಪವೆನ್ನಬಹುದು.

ಅರಮನೆಯ ಕೆಳಭಾಗದಲ್ಲಿ ಒಂದು ಕಾಲಕ್ಕೆ ನಾಡಿನ ಕಚೇರಿಯಿತ್ತು. ಮೇಲಿನ ಅಂತಸ್ತನ್ನು ಉನ್ನತ ಅಧಿಕಾರಿಗಳು ಬಂದಾಗ ಉಳಿದುಕೊಳ್ಳಲು

ಉಪಯೋಗಿಸುತ್ತಿದ್ದರು. ಈಗ ಇಲ್ಲಿ ಜೇನುಸಾಕಣೆ ಕೇಂದ್ರವೊಂದಿದೆ. ಈ ಊರಿನಲ್ಲಿ ಪನ್ನಂಗಲತಮ್ಮೆಯ ದೇವಾಲಯವಿದೆ. ಇದಕ್ಕೆ ನಡೆದು ಕೊಳ್ಳುವವರು ಹೆಚ್ಚಾಗಿ ಹರಿಜನರು. ಏಪ್ರಿಲ್ ತಿಂಗಳಿನಲ್ಲಿ ಇಲ್ಲಿ ನಡೆಯುವ ಜಾತ್ರೆಗೆ ಅಧಿಕಸಂಖ್ಯೆಯಲ್ಲಿ ಜನರು ಸೇರುತ್ತಾರೆ. (ಎಂ.ಎಚ್.)

**ನಿಂಬಾಳ:** ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಒಂದು ಗ್ರಾಮ. ಇಂಡಿಯ ನೈಋತ್ಯಕ್ಕೆ 22ಕಿಮೀ, ಬಿಜಾಪುರದ ಈಶಾನ್ಯಕ್ಕೆ 36 ಕಿಮೀ ಮತ್ತು ಬಿಜಾಪುರ-ಸೊಲ್ಲಾಪುರ ರಸ್ತೆಯ ಹೊರ್ತಿ ಗ್ರಾಮದ ಬಲಕ್ಕೆ 8 ಕಿಮೀ ಅಂತರದಲ್ಲಿದೆ. ಇದು ಗದಗ-ಸೊಲ್ಲಾಪುರ ರೈಲು ಮಾರ್ಗದಲ್ಲಿ ಬಿಜಾಪುರ-ಇಂಡಿರೋಡ್ ಮಧ್ಯದಲ್ಲಿರುವ ಒಂದು ನಿಲ್ದಾಣ. ಈ ಗ್ರಾಮದಿಂದ ಸುತ್ತಿನ ತಡವಲಗ, ಹೊರ್ತಿ ಮತ್ತು ಇಂಡಿಗೆ ಮಾರ್ಗ ಸಂಪರ್ಕವುಂಟು.

ಇದು ತತ್ತ್ವಜ್ಞಾನಿ ಮತ್ತು ಯೋಗಿ ಆರ್.ಡಿ.ರಾನಡೆ ಅವರ ಧಾರ್ಮಿಕ ಕೇಂದ್ರವಾಗಿತ್ತು. ಅವರು ಸಮಾಧಿಸ್ಥರಾದದ್ದೂ ಇಲ್ಲಿಯೇ. ಪ್ರತಿವರ್ಷ ಇಲ್ಲಿ ಇವರ ಶಿಷ್ಯರು ಸೇರಿ ಸಪ್ತಾಹವನ್ನಾಚರಿಸುತ್ತಾರೆ. ನಿಂಬಾಳದಲ್ಲಿ ಪ್ರಸಿದ್ಧ ಹೊಯ್ಸಳ ಶಿಲ್ಪಿ ಜಕ್ಕಣಾಚಾರ್ಯ ಇದ್ದನೆಂದು ಪ್ರತೀತಿ.

(ಎಸ್.ಎಸ್.ಎನ್.)

**ನಿಕ್ಕಂ, ಎನ್.ಎ.:** 1903-74. ಪ್ರಸಿದ್ಧ ತತ್ತ್ವಶಾಸ್ತ್ರ ಪ್ರಾಧ್ಯಾಪಕರು. ನಿಕ್ಕಂ ನಾರಾಯಣರಾವ್ ಅಪ್ಪುರಾವ್ ಇವರ ಪೂರ್ಣ ಹೆಸರು. 1903 ಮೇ 5ರಂದು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೆಸ್ತೂರು ಗ್ರಾಮದಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿ ತತ್ತ್ವಶಾಸ್ತ್ರದಲ್ಲಿ ಬಿ.ಎ. ಪದವೀಧರರಾದರು. ವಿವಾಹವಾದದ್ದು 1929ರಲ್ಲಿ. ತತ್ತ್ವಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದರು. ಬಾಬಾ ಸ್ಮಾರಕ ಸುವರ್ಣ ಪದಕ ಪಡೆದರು (1930). ಅದೇ ವರ್ಷ ಮೈಸೂರು ಸಂಸ್ಥಾನದ ದಾಮೋದರಂ ದಾಸ್ ವಿದೇಶಿ ವಿದ್ಯಾರ್ಥಿ ವೇತನ ಪಡೆದು ಉಚ್ಚಶಿಕ್ಷಣ ಪಡೆಯಲು (ಕೇಂಬ್ರಿಜ್ಜಿನ ಸೇಂಟ್ ಜಾನ್ ಕಾಲೇಜಿನಲ್ಲಿ) ಇಂಗ್ಲೆಂಡಿಗೆ ತೆರಳಿ ತತ್ತ್ವಶಾಸ್ತ್ರದ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಇವರ ಶಿಕ್ಷಣವೃತ್ತಿ ಚಾಮರಾಜನಗರದಲ್ಲಿ ಶಾಲಾ ಮಕ್ಕಳಿಗೆ ಬೋಧಿಸುವುದರೊಂದಿಗೆ ಆರಂಭವಾಯಿತು. ತರುವಾಯ ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಅನಂತರ ಕೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ಅಧ್ಯಾಪಕರಾದರು. ಆರು ವರ್ಷಗಳ ಅನಂತರ ಬೆಂಗಳೂರು ಮಹಾರಾಣಿ ಕಾಲೇಜಿನ ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡರು (1944-55). ಆ ವೇಳೆಯಲ್ಲಿ ಫುಲ್‌ಬ್ರೈಟ್ ಮತ್ತು ಫೋರ್ಡ್ ಫೌಂಡೇಷನ್ ವ್ಯಾಸಂಗವೇತನ ಪಡೆದು 1952-53ರಲ್ಲಿ ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ಸೆಲಿಮನ್ ಕಾಲೇಜಿನ ಪಂಡಿತಸಭೆಯ ಸಹಸದಸ್ಯರಾಗಿದ್ದರು. 1955ರಲ್ಲಿ ಮಹಾರಾಜ ಕಾಲೇಜಿನಲ್ಲಿ ತತ್ತ್ವಶಾಸ್ತ್ರ ಹಾಗೂ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರೂ ಪ್ರಾಧ್ಯಾಪಕರೂ ಆದರು. ಭಾರತೀಯ ಧರ್ಮಶಾಸ್ತ್ರ ಹಾಗೂ ದರ್ಶನಗಳ ಬಗ್ಗೆ ಇವರ ಪಾಂಡಿತ್ಯ ಪಾಶ್ಚಾತ್ಯ ದಾರ್ಶನಿಕರ ಗಮನವನ್ನು ಸೆಳೆಯಿತು. ಇವರು 12 ವರ್ಷಗಳ ಕಾಲ (1949-61) ಭಾರತೀಯ ದಾರ್ಶನಿಕ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಯುನೆಸ್ಕೊ ಸಂಸ್ಥೆಯ ಯೋಜನೆಯ ಪ್ರಕಾರ ಎರಡು ಚಕ್ರಗೋಷ್ಠಿಗಳನ್ನು ಏರ್ಪಡಿಸಿದರು. ಈ ಪರಿಷತ್ತಿನ ದೆಹಲಿ ಅಧಿವೇಶನಕ್ಕೆ ಇವರು ಅಧ್ಯಕ್ಷರಾಗಿ ನೇಮಕವಾದರು (1965).

ಅಂತಾರಾಷ್ಟ್ರೀಯ ದಾರ್ಶನಿಕ ಸಂಸ್ಥೆಯ ಚುನಾಯಿತ ಸದಸ್ಯರಾಗಿ ಅಥೆನ್ಸ್, ವಾರ್ಸಾ, ಪ್ಯಾರಿಸ್, ಜೆರೂಸಲೆಂ, ಸಾಂತಾ ಬಾರ್ಬರ, ಮೈಸೂರು, ಆ್ಯಮ್‌ಸ್ಟರ್‌ಡ್ಯಾಂ, ಹೈಡೆಲ್‌ಬರ್ಗ್, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಈ ಸ್ಥಳಗಳಲ್ಲಿ ನಡೆದ ಸಮ್ಮೇಳನಗಳಲ್ಲಿ ಭಾಗವಹಿಸಿದರು. 1958ರಲ್ಲಿ ವೆನಿಸ್‌ನಲ್ಲಿ ನಡೆದ ಎಂಟನೆಯ ಅಂತಾರಾಷ್ಟ್ರೀಯ ದಾರ್ಶನಿಕ ಪರಿಷತ್ತಿನ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿದರು. ಯುನೆಸ್ಕೊ ಸಂಸ್ಥೆ ವ್ಯವಸ್ಥೆಗೊಳಿಸಿದ ದಾರ್ಶನಿಕ ಸಂಘಗಳ ಅಂತಾರಾಷ್ಟ್ರೀಯ ಒಕ್ಕೂಟದ ಆಡಳಿತ ಸಮಿತಿಯ ಸದಸ್ಯರಾಗಿ ಎರಡು ಬಾರಿ ಚುನಾಯಿತರಾದರು. ಯುನೆಸ್ಕೊ ಸದಸ್ಯ ರಾಷ್ಟ್ರಗಳಲ್ಲಿ ತತ್ತ್ವಶಾಸ್ತ್ರ, ಶಿಕ್ಷಣದ ಪರಿಶೀಲನೆ ಮತ್ತು ಮಾನವ ಹಕ್ಕುಗಳ ಸಂಬಂಧವಾದ ಪತ್ರಗಳ ಆಧಾರ ಗ್ರಂಥ ತಯಾರಿಕೆ - ಇವುಗಳ ಬಗ್ಗೆ ಯುನೆಸ್ಕೊ ಸಂಸ್ಥೆ ಏರ್ಪಡಿಸಿದ ಉಪ ಆಯೋಗಗಳಲ್ಲಿ ಸದಸ್ಯರಾಗಿದ್ದರು. ಅಮೆರಿಕದ ದಾರ್ಶನಿಕ



ಸಂಘ, ಇಂಗ್ಲೆಂಡಿನ ಅರಿಸ್ಟಾಟಲ್ ಪಂಥದಸಂಘ, ನ್ಯೂಯಾರ್ಕಿನ ನೀತಿಶಾಸ್ತ್ರ ಸಂಸ್ಥೆ, ಭಾರತದ ಪಿ.ಇ.ಎನ್. ಸಂಘ, ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಅಮೆರಿಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ- ಇವುಗಳ ಸದಸ್ಯರಾಗಿದ್ದರು. ಇವರು 1960ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕವಾದರು.

ನಿಕ್ಕಂ ಉತ್ತಮ ಚಿಂತಕರಾಗಿದ್ದರು. ಭಾರತ ಸಂಸ್ಕೃತಿಯ ಕೆಲವು ಕಲ್ಪನೆಗಳು, ಶುದ್ಧ ಪ್ರಜ್ಞೆಯ ಬಗ್ಗೆ ಕಾಂಟನ ವಿಮರ್ಶೆಗೆ ಒಂದು ಪ್ರಸ್ತಾವನೆ, ಬುದ್ಧಿ ಅರಿವು ಮತ್ತು ಸಹಜ ಪ್ರಜ್ಞೆ, ಉಪನಿಷತ್ತಿನ ಬೋಧಕರು, ರಮಣ ಮಹರ್ಷಿ ಆಧ್ಯಾತ್ಮ ಯೋಗದ ಒಂದು ಅಧ್ಯಯನ, ಹತ್ತು ಪ್ರಧಾನ ಉಪನಿಷತ್ತುಗಳು, ಗಾಂಧಿಯವರ ಧರ್ಮ ಸಾಕ್ಷಾತ್ಕಾರ- ಇವು ಇವರ ಕೆಲವು ಗ್ರಂಥಗಳು. ಇವರು ಪತಂಜಲಿಯ ಯೋಗಸೂತ್ರಗಳ ಬಗ್ಗೆ ಮೂರು ಅಧ್ಯಾಯಗಳನ್ನು ರಚಿಸಿದರು. ಹಲವಾರು ದಾರ್ಶನಿಕ ಸಂಸ್ಥೆಗಳ ಹಾಗೂ ದಾರ್ಶನಿಕ ಸಮ್ಮೇಳನಗಳ ಪ್ರಕಟಣೆಗಳಿಗೆ ಇವರು ಸಂಪಾದಕರಾಗಿದ್ದರು. ಶಾಂತಿಸಾಧನೆಗೆ ಮಾನವಕುಲದ ಮೇಲೆ ಪ್ರಭಾವ ಬೀರಿದ ಗ್ರಂಥಗಳು ಎಂಬ ಮಾಲಿಕೆಯಲ್ಲಿ ಅಂತಾರಾಷ್ಟ್ರೀಯ ದಾರ್ಶನಿಕ ಸಂಸ್ಥೆ ಪ್ರಕಟಿಸಿದ ಅಶೋಕನ ಧರ್ಮ ಶಾಸನಗಳು (ಶಿಕಾಗೊ ವಿಶ್ವವಿದ್ಯಾಲಯ, 1959) ಎಂಬ ಗ್ರಂಥಕ್ಕೆ ಇವರು ಸಂಪಾದಕರಾಗಿದ್ದರು. *

**ನಿಜಗಲ್ಲು:** ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕಿನ ಒಂದು ಬೆಟ್ಟ. ತುಮಕೂರಿಗೆ 16 ಕಿಮೀ ದೂರದಲ್ಲಿ ಬೆಂಗಳೂರು-ತುಮಕೂರು ರಸ್ತೆಯಲ್ಲಿದೆ. ಈ ಬೆಟ್ಟವನ್ನು ಶೂರಗಿರಿ ಎಂದೂ ರಸಸಿದ್ಧರಬೆಟ್ಟ ಮತ್ತು ಉದ್ದಂಡಯ್ಯನಬೆಟ್ಟವೆಂತಲೂ ಕರೆಯುತ್ತಾರೆ. ಎತ್ತರ 1,085ಮೀ. ಉತ್ತರ ಮತ್ತು ಪೂರ್ವಭಾಗಗಳಿಂದ ಮಾತ್ರ ಬೆಟ್ಟವನ್ನು ಹತ್ತಬಹುದು.

ನಿಜಗಲ್ಲು ಬೆಟ್ಟದ ಮೇಲೆ ವೀರಭದ್ರಸ್ವಾಮಿಗುಡಿ (ನಿಜಗಲ್ಲು ಮಠ) ಇದೆ. ಗುಡಿಯಲ್ಲಿ 12' ಎತ್ತರದ ವೀರಭದ್ರನ ವಿಗ್ರಹದ ಎಡಕ್ಕೆ ದಕ್ಷನ ವಿಗ್ರಹ, ಬಲಕ್ಕೆ ಭದ್ರಕಾಳಿ ವಿಗ್ರಹಗಳಿವೆ. ವೀರಭದ್ರನ ಬಲಕ್ಕೆ ಇರುವ 1.5' ಎತ್ತರದ ಆಸೀನ ವಿಗ್ರಹ ಕೇಕೆ ಹೊಡೆದು ನಗುತ್ತಿದ್ದ ಕೇಕೆಸ್ವಾಮಿಯದು. ಆತ ಸಶರೀರವಾಗಿ ಕೈಲಾಸಕ್ಕೆ ಹೋದನೆಂಬ

ಪ್ರತೀತಿ ಇದೆ. ಈ ಗುಡಿಯನ್ನು ಕಟ್ಟಿಸಿದ ಹಾಲಿನ ಹಂಪಣ್ಣನ ವಿಗ್ರಹ ಗುಡಿಯ ಹೊರಗಿನ ದೀಪಸ್ತಂಭದ ಬಳಿ ಇದೆ. ಅವನನ್ನು ಕೋಡಿಯಪ್ಪ ನೆಂದು ಪೂಜಿಸುತ್ತಾರೆ. ಬೆಟ್ಟದ ಮೇಲೆ ಹಿಂದಿನ ಪಾಳೆಯಗಾರರು ಕಟ್ಟಿಸಿದ ಕೋಟೆಯ ಅವಶೇಷಗಳು, ಫಿರಂಗಿ, ಮದ್ದುಗುಂಡುಗಳನ್ನಿಟ್ಟಿದ್ದ ಸ್ಥಳ ಹಾಗೂ ರಾಗಿ ಕಣಜಗಳಿವೆ. ಕಂಚಿನ ದೊಣೆ, ಆನೆ ದೊಣೆ, ಸಿದ್ಧರ ದೊಣೆ, ಅಕ್ಕ ತಂಗಿಯರ ದೊಣೆ ಮೊದಲಾದ ನೀರಿನ ದೊಣೆಗಳಿವೆ. ಸಿದ್ಧರ ದೊಣೆಯ ಪೂಜೆಗೆ ಒಬ್ಬ ಫಕೀರ ಇದ್ದು ಹಿಂದುಗಳು ಸಹ ಅವನ ಪೂಜೆ ಸಲ್ಲಿಸುತ್ತಾರೆ. ರಸಸಿದ್ಧರ ಗುಡಿಯಲ್ಲಿನ ರಸಸಿದ್ಧ ಋಷಿಯ ವಿಗ್ರಹವನ್ನು ಹಿಂದುಗಳು ಪೂಜಿಸುತ್ತಾರೆ. ಹಿಂದೆ ಬೆಟ್ಟದ ಮೇಲೆ ಹಲವು ಮಂದಿ ಸಿದ್ಧರು ಸಾಮಾನ್ಯ ಲೋಹಗಳನ್ನು ಚಿನ್ನವಾಗಿ ಮಾರ್ಪಡಿಸುವ ರಸವನ್ನು ತಯಾರಿಸಿದ ಕಾರಣ ಬೆಟ್ಟಕ್ಕೆ ರಸಸಿದ್ಧರ ಬೆಟ್ಟ ಎಂಬ ಹೆಸರಾಯಿತೆಂದು ಪ್ರತೀತಿ. ಅಕ್ಕತಂಗಿಯರ ದೊಣೆಯ ಬಳಿ ಇರುವ ನರಸಿಂಹಸ್ವಾಮಿ ದೇವಾಲಯ ಶಿಥಿಲಾವಸ್ಥೆ ಯಲ್ಲಿದೆ. ಹಿಂದು, ಮುಸಲ್ಮಾನರು ಈ ಬೆಟ್ಟವನ್ನು ಪವಿತ್ರವೆಂದು ಭಾವಿಸಿರುವುದು ಅದರ ವೈಶಿಷ್ಟ್ಯ. ಬೆಟ್ಟದ ಇಳುಕಲಿನಲ್ಲಿರುವ ಗವಿಯಲ್ಲಿ ಶಿವನ ಗುಡಿ ಇದೆ. ಅದರ ಹೊರಬಂಡೆಗಳ ಮೇಲೆ ಗಣಪತಿ, ವೀರಭದ್ರ ಮತ್ತು ಸುಬ್ರಹ್ಮಣ್ಯ ವಿಗ್ರಹಗಳನ್ನು ಕೆತ್ತಿದ್ದಾರೆ. **(ವಿ.ಜಿ.ಕೆ.)**

**ನಿಜಗುಣದೇವ:** ಸು. 1150. ವಚನಕಾರ. ಬಸವಣ್ಣನಿಗಿಂತ ಸ್ವಲ್ಪ ಹಿಂದೆ ಇದ್ದವನು ಎಂದು ವಿದ್ವಾಂಸರ ಅಭಿಪ್ರಾಯ. ಬಿಜಾಪುರ ಜಿಲ್ಲೆಯ ಚಿಮ್ಮಲಿಗೆ ಎಂಬ ಊರಿನವ. ಚಿಮ್ಮಲಿಗೆಯಲ್ಲೇ ಐಕ್ಯನಾದನೆಂದು ಪ್ರತೀತಿ. ಚಿಮ್ಮಲಿಗೆಯಲ್ಲಿ ನಿಜಗುಣೇಶ್ವರ ಲಿಂಗ ಎಂಬ ಹೆಸರಿನ ದೇವಸ್ಥಾನ ಇಂದಿಗೂ ಕಂಡುಬರುತ್ತದೆ. ಕೆಂಭಾವಿಯ ಚಂದಿಮರಸ ಇವನ ಶಿಷ್ಯನಾಗಿದ್ದಂತೆ ತಿಳಿದುಬರುತ್ತದೆ.

ಇವನಿಗೆ ನಿಜಗುಣಯೋಗಿ ಎಂಬ ಪರ್ಯಾಯ ನಾಮವೂ ಕಂಡುಬರುತ್ತದೆ. ಈತನ ಹೆಸರು ಗಣಸಹಸ್ರನಾಮದಲ್ಲಿ ಉಕ್ತವಾಗಿದೆ. ಸದ್ಯದಲ್ಲಿ ಈತನ ಎಂಟು ವಚನಗಳು ಮಾತ್ರ ಸಿಕ್ಕಿವೆ. ನಿಜಗುಣಯೋಗಿಯ ಯೋಗ ಎಂಬುದು ಈತನ ವಚನಗಳ ಅಂಕಿತ. ಈತ ಬೇರಾವ ವಚನಕಾರರ ಹೆಸರನ್ನೂ ಉಲ್ಲೇಖಿಸಿಲ್ಲ. ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೋಢಸ್ಥಲ, ಸಿದ್ಧರಾಮಯ್ಯನ ಸಮಾಧಿ ಸ್ಥಲ ಇಂತಿವರ ಕರುಣಪ್ರಸಾದ ವೆನಗಾಯಿತ್ತು ಚೆನ್ನಮಲ್ಲಿಕಾರ್ಜುನಯ್ಯ ಎಂಬಲ್ಲಿ ಈತನನ್ನು ಸ್ಮರಿಸಿದ್ದಾಳೆ. ಇದರಿಂದ ಈತ ಶಿವಯೋಗದ ಸ್ವರೂಪವನ್ನು ಚೆನ್ನಾಗಿ ಬಲ್ಲವನಾಗಿದ್ದ ನೆಂದು ವಿದಿತವಾಗುತ್ತದೆ. ಈತನ ವಚನಗಳಲ್ಲಿ ಪರಮಾತ್ಮನ ಅರಿವು, ಯೋಗ, ಅಂತರ್ಜ್ಞಾನ ಮೊದಲಾದ ವಿಷಯಗಳು ಹೃದಯಂಗಮವಾಗಿ ವರ್ಣಿತವಾಗಿದೆ.

ಪಾತಂಜಲ ಯೋಗದಲ್ಲಿ ಹೇಳಿದಂತೆ ಯೋಗವೆಂದರೆ ಚಿತ್ತವೃತ್ತಿ ನಿರೋಧವೆಂದು ಈತ ಹೇಳಿಲ್ಲ. ಹಠಯೋಗಿಗಳಂತೆ ಇವನು ದೇಹವನ್ನು ಕ್ಲೇಶಗೊಳಿಸುವ ಸಾಧನಗಳನ್ನು ಸಮರ್ಥಿಸಿಲ್ಲ. ಅಂಗಲಿಂಗಗಳಲ್ಲಿಯ ಭಿನ್ನತ್ವವಳಿಯುವುದೇ ಯೋಗ ಎಂದು ಹೇಳಿದ್ದಾನೆ.

ಇವನ ಒಂದು ವಚನ ಹೀಗಿದೆ: ಸರ್ವಮಯವಾತ್ಮನೆಂದಲ್ಲಿ ರಕ್ಷಿಸಿ ಶಿಕ್ಷಿಸಿಹೆನೆಂಬದೆನೋ. ಅಣೋರಣೀಯಾನ್ ಮಹತೋ ಮಹೀಯಾನ್ ಎಂದಲ್ಲಿ ಬೇರೊಂದರಿದು ಕುರಿತು ಕಾಬುದೇನೋ. ಇದಿರಿಗೆ ತಾನಿಲ್ಲ ತನಗರಿವಿಲ್ಲವೆಂದಲ್ಲಿ ಗಜಬಜೆಯಲ್ಲಿ ಕುಜನವೇತಕ್ಕೆ ಬೇರಿಗೆ ನೀರನೆರೆದಲ್ಲಿ ಶಾಖೆಗೆ ಸಂದುಂಟೆ ಅಂಗಪ್ರಾಣ ಲಿಂಗವೊಂದೆಂದಲ್ಲಿ ಅರ್ಪಿತಕ್ಕೆ ಹಿಂದು ಮುಂದಿಲ್ಲ ನಿಜಗುಣಯೋಗಿಯ ಯೋಗಕ್ಕೆ ಮುನ್ನವೇ ಇಲ್ಲ. *

**ನಿಜಗುಣಶಿವಯೋಗಿ:** ಸು. 1500. ವೀರಶೈವ ಕವಿ. ಷಟ್‌ಶಾಸ್ತ್ರಗಳೆಂದು ಪ್ರಸಿದ್ಧವಾದ ಅನುಭವಸಾರ, ಕೈವಲ್ಯಪದ್ಧತಿ, ಪರಮಾರ್ಥಗೀತೆ, ಪರಮಾನುಭವಬೋಧೆ, ಪರಮಾರ್ಥ ಪ್ರಕಾಶಿಕೆ, ವಿವೇಕ ಚಿಂತಾಮಣಿ ಎಂಬ ಗ್ರಂಥಗಳ ಕರ್ತೃ. ಇವನಿಗೆ ನಿಜಗುಣಾರಾಧ್ಯ ಎಂಬ ಹೆಸರೂ ಇದೆ. ಈತ ಮೊದಲಿಗೆ ಕೊಳ್ಳೇಗಾಲ ತಾಲ್ಲೂಕಿನ ಶಂಭುಲಿಂಗಬೆಟ್ಟದ ಸುತ್ತಮುತ್ತಲ ನಾಡಿಗೆ ಅರಸನಾಗಿದ್ದು ಅನಂತರ ವಿರಕ್ತನಾಗಿ ಶಂಭುಲಿಂಗನ ಬೆಟ್ಟದಲ್ಲಿ (ಚಿಲಕವಾಡಿ) ಹಲವು ವರ್ಷ ತಪಸ್ಸು ಮಾಡಿ ಶಿವಯೋಗಿ ಯಾಗಿ ಹೆಸರು ಪಡೆದನೆಂಬ ಪ್ರತೀತಿ ಇದೆ. ಶಂಭುಲಿಂಗಸ್ವಾಮಿಗಳೆಂಬ ಸನ್ಯಾಸಿ ಈತನ ಗುರು. ಅರವತ್ತು ಮೂವರ ತ್ರಿಪದಿ ಇವನ ಇನ್ನೊಂದು ಗ್ರಂಥ. ಇವನ ಎಲ್ಲ ಗ್ರಂಥಗಳಲ್ಲಿ ಶಂಭುಲಿಂಗನ ಅಂಕಿತ ದೊರೆಯುತ್ತದೆ.

ಅನುಭವಸಾರ ಗುರುಶಿಷ್ಯ ಸಂವಾದ ರೂಪವಾಗಿದ್ದು ತ್ರಿಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 8 ಸಂಧಿ, 46 ಸೂತ್ರ, 535 ಪದ್ಯ ಇವೆ. ಸಕಲ ವೇದಾಂತಸಾರವನ್ನು ಸಾಧಕರಿಗೆ ತಿಳಿಯುವಂತೆ ಹೇಳುತ್ತೇನೆಂದು ಕವಿ ಹೇಳಿಕೊಂಡಿದ್ದಾನೆ.

ಕೈವಲ್ಯ ಪದ್ಧತಿ ಅನುಭಾವಗೀತೆಗಳ ಸಂಕಲನ. ಇದರಲ್ಲಿ 5 ಸ್ಥಲಗಳೂ 174 ವಚನಗಳ ಜೋಡೂ 648 ಪದ್ಯಗಳೂ ಇವೆ. ಕವಿ ಇದನ್ನು ಅಬಾಲಯವ್ವನ ವೃದ್ಧರಿಗಾಯಾಸವಿನಿತಿಲ್ಲದಂತೆ ಸಮ್ಯಗ್‌ಜ್ಞಾನಿಗಳೊಡಂಬಡುವಂತೆ ಸಕಲ ವೇದಾಂತಾಗಮ ಸ್ಮೃತಿಪುರಾಣೇತಿಹಾಸಸೂತ್ರಾದಿ ಶಾಸ್ತ್ರಸಮ್ಮತದಿಂ ಪುರಾತನ ಗೀತಾನುಗುಣ್ಯವೆನಿಸಿ ಮೃದುಮಧುರ ಲಕ್ಷಣಯುಕ್ತವಾಗಿ ರಚಿಸಿರುವಂತೆ ಹೇಳಿಕೊಂಡಿದ್ದಾನೆ. ಭಾವನೆಗಳಿಗೆ ಅನುಗುಣವಾದ ಬಗೆಬಗೆಯ ರಾಗಗಳು ಇಲ್ಲಿ ಮೂಡಿಬಂದಿವೆ. ಈ ದೃಷ್ಟಿಯಿಂದ ಇದು ಕರ್ನಾಟಕ ಸಂಗೀತ ಶಾಸ್ತ್ರಜ್ಞರಿಗೆ ಮಹತ್ವಪೂರ್ಣ ವಾದ ಗ್ರಂಥವಾಗಿದೆ. ಇಲ್ಲಿ ಕಂಡುಬರುವ ನಾದಮಾಧುರ್ಯ, ಮಾತಿನ ಸೊಗಸು ಕೃತಿಯ ಮಹತ್ವದ ಅಂಶಗಳಾಗಿವೆ.

ಪರಮಾರ್ಥಗೀತೆ ಹೆಚ್ಚಾಗಿ ಲಲಿತ ರಗಳೆಯಲ್ಲಿದ್ದು ಅಲ್ಲಲ್ಲಿ ಕೆಲವು ಕಂದಗಳೂ ಕಂಡುಬರುತ್ತವೆ. ಗ್ರಂಥ ಗುರುಶಿಷ್ಯ ಸಂವಾದ ರೂಪವಾಗಿದೆ. ಇದರಲ್ಲಿ 11 ಗತಿ, 32 ಕಂದ, 121 ನಿರೂಪಣೆ, 1496 ಚರಣ ಇವೆ. ಶ್ರುತಿಪುರಾಣೇತಿಹಾಸಸ್ಮೃತಿಯರ್ಥವನ್ನು ಕನ್ನಡಿಸಿದಂತೆ ಕವಿ ಹೇಳಿಕೊಂಡಿದ್ದಾನೆ. ಪ್ರತಿಪಾದಿತವಾದ ತತ್ತ್ವ ಗಹನವಾಗಿದ್ದು ಸಾಮಾನ್ಯರಿಗೂ ಸುಲಭವಾಗಿ ಎಟಕುವಂತಿದೆ.

ಪರಮಾನುಭವಬೋಧೆ ಯಾಜ್ಞವಲ್ಕ್ಯ, ಮೈತ್ರೇಯಿ ಸಂವಾದರೂಪ ವಾಗಿದ್ದು ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 6 ಸಂಧಿಗಳೂ 122 ಸೂತ್ರಗಳೂ 985 ಪದ್ಯಗಳೂ ಇವೆ. ಅದ್ವೈತ ತತ್ತ್ವವನ್ನು ಪ್ರಕಟಿಸುವೆನು ಬೋಧಗತಿಯಿಂದ ಎಂದು ಕವಿ ಹೇಳಿಕೊಂಡಿದ್ದಾನೆ.

ಪರಮಾರ್ಥ ಪ್ರಕಾಶಿಕೆ ಚನ್ನಸದಾಶಿವಯೋಗಿಕೃತ ಶಿವಯೋಗಪ್ರದೀಪಿಕೆಗೆ ಕನ್ನಡ ವ್ಯಾಖ್ಯಾನ. ಇದರಲ್ಲಿ ಐದು ಪರಿಚ್ಛೇದಗಳಿವೆ. ಸಂಸ್ಕೃತ ಜ್ಞಾನವಿಲ್ಲದ ಮೋಕ್ಷಾಪೇಕ್ಷಿಗಳಿಗೆ ಸುಲಭವಾಗಿ ತಿಳಿಯುವಂತೆ ಈ ವ್ಯಾಖ್ಯಾನವನ್ನು ಬರೆದುದಾಗಿ ಕವಿ ಹೇಳಿಕೊಂಡಿದ್ದಾನೆ.

ವಿವೇಕ ಚಿಂತಾಮಣಿ ಗದ್ಯಗ್ರಂಥ. ಇದರಲ್ಲಿ ಒಟ್ಟು ಹತ್ತು ಪ್ರಕರಣಗಳಿದ್ದು 765 ವಿಷಯಗಳು ಸಂಗ್ರಹಿತವಾಗಿವೆ. ಕನ್ನಡದ ಮೊದಲ ವಿಶ್ವಕೋಶ ಎಂಬ ದೃಷ್ಟಿಯಿಂದ, ಸಂಗೀತ ಶಾಸ್ತ್ರದ ವಿಷಯ ವಿವೇಚನೆಯ ದೃಷ್ಟಿಯಿಂದ ಈ ಗ್ರಂಥಕ್ಕೆ ಮಹತ್ತ್ವದ ಸ್ಥಾನ ದೊರಕಿದೆ. ಅರವತ್ತುಮೂವರ ತ್ರಿಪದಿಗೆ ಪುರಾತನರ ತ್ರಿವಿಧಿ ಎಂಬ ಹೆಸರಿದ್ದು ಇದರಲ್ಲಿ 77 ತ್ರಿಪದಿಗಳಿವೆ. ಕೃತಿ 63 ಜನ ಶಿವಭಕ್ತರ ಸ್ತುತಿರೂಪವಾಗಿದೆ.

ನಿಜಗುಣಶಿವಯೋಗಿ ಕನ್ನಡದಲ್ಲೇ ಅಲ್ಲದೆ ಸಂಸ್ಕೃತದಲ್ಲೂ ಗ್ರಂಥಗಳನ್ನು ರಚಿಸಿದ್ದಾನೆ. ಸಾರಭೂತವಾದ ಚಿಂತಾಮಣಿ, ದರ್ಶನಸಾರಂ,

ಆತ್ಮಕರ್ತ ಎಂಬ ಪ್ರೌಢಗ್ರಂಥಗಳು ಸಂಸ್ಕೃತದಲ್ಲಿವೆ. ಈತನ ಸಾಧನೆ ಸಿದ್ಧಿ ಕರ್ನಾಟಕದ ಆಧ್ಯಾತ್ಮಿಕ ಚರಿತ್ರೆಯಲ್ಲಿ ಒಂದು ಉಜ್ವಲವಾದ ಘಟ್ಟವನ್ನು ನಿರ್ಮಿಸಿದೆ. (ಎಚ್.ಎ.ಕೆ., ಬಿ.ಎಸ್.ಎಸ್.)

**ನಿಜಗುಣಾರ್ಯ:** ಸು.1650. ವೀರಶೈವ ಕವಿ. ಅದ್ವೈತರಾಮಾಯಣ ಎಂಬ ಕೃತಿಯ ಕರ್ತೃ. ಈತ ತನ್ನ ಕೃತಿಯಲ್ಲಿ ನಿಜಗುಣಾರ್ಯವಚನದ ಮೃತ ಎಂದು ಹೇಳಿಕೊಂಡಿದ್ದಾನೆ. ನಿಜಗುಣ ಶಿವಯೋಗಿಯೇ ಈ ಹೆಸರಿನಿಂದ ಈ ಕೃತಿಯನ್ನು ರಚಿಸಿರಬಹುದೆ ಎಂಬ ಸಂಶಯಕ್ಕೆ ಎಡೆಯಿದೆ. ಆದರೆ ನಿಜಗುಣ ಶಿವಯೋಗಿಯ ಕೃತಿಗಳಲ್ಲಿ ಕಂಡುಬರುವ ಶಂಭುಲಿಂಗನ ಅಂಕಿತ ಈತನ ಕೃತಿಯಲ್ಲಿಲ್ಲವಾದುದರಿಂದ ಇಬ್ಬರೂ ಭಿನ್ನರೆನ್ನಬಹುದು.

ಈತನ ಅದ್ವೈತರಾಮಾಯಣ ವಚನಗಳಲ್ಲಿದೆ. ದೊರೆತಿರುವ ಅಸಮಗ್ರ ಕೃತಿಯಲ್ಲಿ 24 ಸಂಧಿಗಳು, 933 ವಚನಗಳಿರುವುದಾಗಿ ಕವಿಚರಿತೆಕಾರರು ಹೇಳಿದ್ದಾರೆ. ಅದ್ವೈತದಲ್ಲಿ ರಾಮರಾವಣರ ನಿಜಪಥವನು ಪಾದವೈಭವ ವನ್ನು ಮಂಡೋದರಿಯ ರಾವಣನ ವಾದವನು ಉಸಿರುವೆನು ಎಂದು ಕವಿ ಹೇಳಿಕೊಂಡಿದ್ದಾನೆ. ಈ ಕೃತಿಗೆ ಆಧಾರ ಯಾವುದೆಂದು ತಿಳಿಯದು. ಕೆಲವೆಡೆ ಎಂದನಾಮುನಿಪ ಕೇಳ್ಕೆ ಶಾಂತಾರಾಮ ಎಂದಿರುವುದರಿಂದ ಶಾಂತಾರಾಮ ಎಂಬಾತನಿಗೆ ಮುನೀಶ್ವರನೊಬ್ಬ ರಾಮಾಯಣವನ್ನು ಕಥಿಸಿರಬಹುದು. ಇವನ ಒಂದು ವಚನ ಹೀಗಿದೆ:

ದಶಶಿರೋತ್ತಮನು ದಶರಥೋತ್ತಮನು ಎರಡು ಕಲೆತಂದೆ ರಾಮಗುಣ. ಭಕ್ತಿ ಭಾವವು ಎರಡು ಕಲೆತಂದೆ ಲಕ್ಷ್ಮಣಗುಣ ಕಮಲ ಸೂರ್ಯನ ಕಲೆತುದೆ ಸೀತಾ ಗುಣ. ಮನಧನವ ಕಲೆತಂದೆ ಭರತಗುಣ. ಜೀವ ಭೂವಿಜಯ ಕಲೆತಂದು ಶತ್ರುಘ್ನ ಗುಣ. ಐದು ಗುಣ ಕಲೆತಂದೇ ದೇಹಗುಣವೆಂದಾ. ಇವನ ವಚನಗಳಲ್ಲೂ ಬೆಡಗಿನ ವಚನಗಳಂತೆ ಗೂಢಾರ್ಥ ತುಂಬಿರುವಂತೆ ತೋರುತ್ತದೆ. *

**ನಿಜಲಿಂಗಪ್ಪ, ಎಸ್.:** 1902–2000. ವಿಶಾಲ ಮೈಸೂರಿನ (ಈಗ ಕರ್ನಾಟಕ) ಪ್ರಥಮ ಮುಖ್ಯಮಂತ್ರಿ. ಭಾರತದ ಹಿರಿಯ ರಾಜಕಾರಣಿ. ಬಳ್ಳಾರಿ ಜಿಲ್ಲೆಯ ಹಲುಗಾವಲು ಗ್ರಾಮದ ಅಬ್ಬಲೂರು ಅಡಿವೆಪ್ಪ ಮತ್ತು ನೀಲಮ್ಮ ದಂಪತಿಗಳ ಪುತ್ರರಾಗಿ 1902 ಡಿಸೆಂಬರ್ 10ರಂದು ಜನಿಸಿದರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಚಿತ್ರದುರ್ಗ ಜಿಲ್ಲೆಯ ಸಿದ್ಧವನಹಳ್ಳಿಯಲ್ಲಿದ್ದ ತಮ್ಮ ಚಿಕ್ಕಪ್ಪ ರುದ್ರಪ್ಪನವರ ಆಶ್ರಯದಲ್ಲಿ ಬೆಳೆದರು. ಅಂದಿನಿಂದ ಇವರು ಸಿದ್ಧವನಹಳ್ಳಿ ನಿಜಲಿಂಗಪ್ಪ ನವರೆನಿಸಿಕೊಂಡರು. ಚಿಕ್ಕಪ್ಪನ ಸಹಾಯ ಸಹಕಾರಗಳಿಂದ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸಿದ್ಧವನಹಳ್ಳಿಯಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ದಾವಣಗೆರೆಯಲ್ಲಿ ಮತ್ತು ಪದವಿ ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿ ಬಿ.ಎ. ಪದವಿ ಪಡೆದರು. ಅನಂತರ ಪುಣೆ ವಿಶ್ವವಿದ್ಯಾಲಯದಿಂದ ಎಲ್‌ಎಲ್.ಬಿ. ಪದವಿ ಗಳಿಸಿದ (1926) ಇವರು ಬೆಂಗಳೂರು ಹೈಕೋರ್ಟಿನಲ್ಲಿ ವಕೀಲ ವೃತ್ತಿಯನ್ನು ಕೈಗೊಂಡು ಸಾರ್ವಜನಿಕ ಸೇವಾಕ್ಷೇತ್ರವನ್ನು ಪ್ರವೇಶಿಸಿದರು.

ಬೆಂಗಳೂರಿನಲ್ಲಿ ಅಧ್ಯಯನ ಮಾಡುತ್ತಿದ್ದಾಗಲೇ 1924ರಲ್ಲಿ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಮಹಾಸಭೆಯ ಅಧಿವೇಶನಕ್ಕೆ ಸ್ವಯಂಸೇವಕರಾಗಿ ಹೋಗಿದ್ದರು. ಗಾಂಧೀಜಿಯವರ ದಂಡೀಯಾತ್ರೆಯಿಂದ ಪ್ರಭಾವಿತರಾಗಿ ಸಕ್ರಿಯ ರಾಜಕಾರಣಕ್ಕಿಳಿದು 1931 ರಿಂದಲೂ ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿಯ ವಿರೋಧಿ ಪಕ್ಷಗಳನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಿದ್ದಲ್ಲದೆ ಅಖಿಲ ಭಾರತ ಕಾಂಗ್ರೆಸ್ ಪಕ್ಷದಲ್ಲಿ ಸಂಸ್ಥಾನದ ಕಾಂಗ್ರೆಸ್ ಪಕ್ಷವನ್ನು ವಿಲೀನಗೊಳಿಸಿ, ಕಾಂಗ್ರೆಸ್ಸಿನ ಧ್ಯೇಯವಾದ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಕಂಕಣಬದ್ಧರಾದರು. ಅರಣ್ಯಸತ್ಯಾಗ್ರಹ ನಿಮಿತ್ತವಾಗಿ ಆಗಿನ ಸರ್ಕಾರ ಇವರನ್ನು ಬಂಧಿಸಿ ಒಂದೂವರೆ ವರ್ಷ ಸಶ್ರಮ ಕಾರಾಗೃಹ ವಾಸವನ್ನು ವಿಧಿಸಿತಲ್ಲದೆ, ಜೀವನಾಧಾರವಾಗಿದ್ದ ವಕೀಲ ವೃತ್ತಿಯ ಸನ್ನದನ್ನೂ ಹಿಂತೆಗೆದುಕೊಂಡಿತು. ಮತ್ತೆ 1942ರ ಚಲೇಜಾವ್ ಚಳವಳಿಯ ಸಂಬಂಧದಲ್ಲೂ ಸರ್ಕಾರ ಇವರನ್ನು ಬಂಧಿಸಿತ್ತು.

ನಿಜಲಿಂಗಪ್ಪನವರು (1945–46) ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ (1948–54) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಘಟನಾ ಸಭೆಯ ಸದಸ್ಯರಾಗಿಯೂ (1946–47) ಲೋಕಸಭೆಯ ಸದಸ್ಯರಾಗಿಯೂ (1952–56) ಸೇವೆ ಸಲ್ಲಿಸಿದ್ದಾರೆ.



ಸ್ವಾತಂತ್ರ್ಯಾನಂತರ ಕರ್ನಾಟಕ ಏಕೀಕರಣಕ್ಕಾಗಿ ಅವಿಶ್ರಾಂತವಾಗಿ ಹೋರಾಡಿದ ಇವರು 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ವಿಶಾಲ ಕರ್ನಾಟಕದ ಪ್ರಪ್ರಥಮ ಮುಖ್ಯಮಂತ್ರಿಯಾದರು. 1958ರಲ್ಲಿ ಮುಖ್ಯಮಂತ್ರಿ ಪದವಿಯಿಂದ ನಿವೃತ್ತರಾದ ಮೇಲೆ ಸಹಕಾರಿ ಕೃಷಿ ಪದ್ಧತಿಯ ಅಧ್ಯಯನ ತಂಡದ ಮುಖ್ಯಸ್ಥರಾಗಿ ಮತ್ತು ದಿ ಇಂಡಿಯನ್ ಆಯಿಲ್ ಕಂಪೆನಿಯ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 1961ರಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸದಸ್ಯರಾಗಿ ಆಯ್ಕೆಯಾದರು.

1962–1968 ರವರೆಗೆ ಮತ್ತೆ ಮೈಸೂರು ರಾಜ್ಯದ ಮುಖ್ಯಮಂತ್ರಿಯಾದರು. ಈ ಅವಧಿಯಲ್ಲಿ ನಿಜಲಿಂಗಪ್ಪನವರು ಭಾರತದ ಪ್ರಭಾವಶಾಲಿ ರಾಜಕಾರಣಿಗಳಲ್ಲಿ ಒಬ್ಬರೆನಿಸಿದರು. ಅವರ ಮುಖ್ಯಮಂತ್ರಿ ಅಧಿಕಾರ ಅವಧಿಯಲ್ಲಿ ಕಡಿದಾಳ್ ಮಂಜಪ್ಪನವರು ಕಂದಾಯ ಸಚಿವರಾಗಿ ಭೂಗೇಣಿದಾರರಿಗೆ ಸಂಬಂಧಿಸಿದ ಮಹತ್ವದ ಭೂಸುಧಾರಣಾ ಕಾಯಿದೆ ಜಾರಿಗೆ ಬಂದಿತು. ಅವರು ಕಾಂಗ್ರೆಸ್ ಸಿಂಡಿಕೇಟ್ ಸದಸ್ಯರಲ್ಲಿ ಒಬ್ಬರೆನಿಸದೆ ರಾಷ್ಟ್ರರಾಜಕೀಯದಲ್ಲಿ ಪ್ರಭಾವಶಾಲಿಯಾಗಿದ್ದರು. 1967ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾದರು. ಇವರ ಅಧಿಕಾರ ಅವಧಿಯಲ್ಲಿ ಕಾಂಗ್ರೆಸ್ಸಿನ ವಿಭಜನೆಯಾಯಿತು (1970). ಅನಂತರ ಇವರು ಸುಮಾರು ಒಂದು ವರ್ಷ ಕಾಲ ಸಂಸ್ಥಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು.

ನಿಜಲಿಂಗಪ್ಪನವರಿಗೆ 1968ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಎಲ್.ಎಲ್.ಡಿ. ಪದವಿಯನ್ನಿತ್ತು ಗೌರವಿಸಿತು. 1997ರಲ್ಲಿ ಕರ್ನಾಟಕ ಸರ್ಕಾರದ ಕರ್ನಾಟಕ ರತ್ನ ಪ್ರಶಸ್ತಿಗೂ ಭಾಜನರಾದರು. ನಿಜಲಿಂಗಪ್ಪ ನವರು ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಅಧಿಕಾರಾವಧಿಯಲ್ಲಿ ಕೃಷಿ, ನೀರಾವರಿ, ವಿದ್ಯುತ್ ಉತ್ಪಾದನೆಗಳ ಕಡೆ ವಿಶಿಷ್ಟ ಗಮನ ಹರಿಸಿದರು. ತಮ್ಮ ಬದುಕಿನುದ್ದಕ್ಕೂ ಆದರ್ಶ ಮೌಲ್ಯಗಳ ಪ್ರತಿಪಾದಕರಾಗಿದ್ದರು. ಅವರು ತಮ್ಮ ಜೀವಿತದ ಕೊನೆಯವರೆಗೆ ಸಾರ್ವಜನಿಕ ಜೀವನದ ಆಗುಹೋಗುಗಳ ಬಗ್ಗೆ ಆಸಕ್ತಿ ಹೊಂದಿದ್ದ ಆಶಾಜೀವಿ. ನಿಜಲಿಂಗಪ್ಪ

ನವರು ಒಬ್ಬ ನಿರ್ಭೀತ, ನಿಷ್ಕಳಂಕ ಚಾರಿತ್ರ್ಯದ ವ್ಯಕ್ತಿಯಾಗಿದ್ದರು. ಅವರನ್ನು ಕುರಿತ ಜೀವನ ಚರಿತ್ರೆಗಳೂ ರಚಿತವಾಗಿವೆ. ಅವುಗಳಲ್ಲಿ ದೇ. ಜವರೇಗೌಡರು ಬರೆದಿರುವ ಕಾಯಕಯೋಗಿ ರಾಷ್ಟ್ರನಾಯಕ (1992) ಪ್ರಮುಖವಾದುದು. 2000 ಆಗಸ್ಟ್ 8ರಂದು ನಿಜಲಿಂಗಪ್ಪನವರು ನಿಧನರಾದರು. *

**ನಿಜಲಿಂಗಾರಾಧ್ಯ:** ಸು.1800. ವೀರಶೈವಕವಿ. ನಿಜಲಿಂಗಶತಕ ಎಂಬ ಕೃತಿಯ ಕರ್ತೃ. ಈತನನ್ನು ತುಂಗಭದ್ರಾತೀರದಲ್ಲಿರುವ ಖಾದ್ರಿಪುರದವನೆಂದು ಕವಿಚರಿತೆಕಾರರು ಹೇಳವುದು ಸರಿಯಲ್ಲವೆಂದೂ ತಮಗೆ ದೊರೆತ ಎಲ್ಲ ಹಸ್ತಪ್ರತಿಗಳಲ್ಲೂ ತುಂಗಭದ್ರಾ ತೀರದೊಳೆಸೆವ ಕುದ್ರುಪುರನನಿವಾಸ ನಿಜಲಿಂಗಭವಭಂಗ ಶರಣಜನವರದ ಜಯತು ಎಂದಿರುವುದರಿಂದ, ಈತ ತುಂಗಭದ್ರಾತೀರಕ್ಕೆ ಸಮೀಪವಾಗಿರುವ ಹಾವನೂರು, ಗುತ್ತಲ ಗ್ರಾಮಗಳಿಗೆ ಸೇರಿದವನಿರಬೇಕೆಂದೂ ಸುಂಕಾಪುರ ಅವರು ಅಭಿಪ್ರಾಯಪಟ್ಟಿದ್ದಾರೆ.

ನಿಜಲಿಂಗಶತಕ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 100 ಪದ್ಯಗಳಿವೆ. ಶತಕದ ಪ್ರತಿಪದ್ಯದ ಅಂತ್ಯವೂ ನಿಜಲಿಂಗ ಭವಭಂಗ ಶರಣ ಜನವರದ ಜಯತು ಎಂದು ಕೊನೆಗೊಳ್ಳುತ್ತದೆ. ಹಲವು ಪ್ರತಿಗಳಲ್ಲಿ ನಿಜಲಿಂಗಭವ ಭಂಗ ಶರಣಜನವರದ ಭಕ್ತಿಸಂಗ, ನಿಜಲಿಂಗಭವಭಂಗ ಶರಣುಜನವರದ ದೇವ ಎಂದಿದೆ.

ಕನ್ನಡದ ಎಲ್ಲ ಶತಕಕಾರರಂತೆ ಈತನೂ ಭಕ್ತಿಜ್ಞಾನವೈರಾಗ್ಯಗಳನ್ನು ಬೋಧಿಸುತ್ತ ನೀತಿಯನ್ನು ಹೇಳಿದ್ದಾನೆ. ಶಿವಸ್ತುತಿ ಈ ಶತಕದ ಬಹುಭಾಗವನ್ನೇ ಆಕ್ರಮಿಸಿದೆ. ದೇವರ ದೇವನಾದ ನಿಜಲಿಂಗನ ಕೃಪೆಯಿದ್ದವನಿಗೆ ಏತರ ಕೊರತೆಯೂ ಆಗಲಾರದೆಂಬ ಭರವಸೆ ಬಹುತೇಕ ಎಲ್ಲ ಪದ್ಯಗಳಲ್ಲೂ ಬಂದಿದೆ.

ಜಾಣಪದ್ಧತಿ, ಮೂರ್ಖಪದ್ಧತಿಗಳೆರಡನ್ನೂ ಕವಿ ಬಹು ಸರಸವಾಗಿ ಹೇಳಿದ್ದಾನೆ. ಈ ಎರಡೂ ಪದ್ಧತಿಗಳ ವಿಷಯ ನಿರೂಪಣೆಯಲ್ಲಿ ನಿಷ್ಠುರವಾದ ಸಮಾಜ ವಿಡಂಬನೆಯನ್ನು ಮಾಡಿದ್ದಾನೆ. ಎಂಬತ್ತುನಾಲ್ಕು ಲಕ್ಷ ಯೋನಿಗಳಲ್ಲಿ ತೊಳತೊಳಲಿ ಬಂದ ಮಾನುಷ ಜನ್ಮವು ಸಕಲರಲ್ಲೂ ಅಧಿಕ. ಆದರೆ ಸಂಸಾರವೋ ಚಾಡಿಕೋರರು, ಚೋರರುಗಳು, ಸಿರಿವಂತರ ನೋಡಿ ಬಳಲುವ ದುರಾಚಾರಿಗಳು, ಪಾಪಿಗಳು, ದುರ್ಜನರು, ದಯಾಹೀನರು, ಕೂಡಿ ನಡೆದಲ್ಲಿ ಭೇದವನ್ನಿಕ್ಕುವವರು, ಪೆರರ್ಗೆ ಕೇಡೆಣಿಸುವರು, ಕುಟಿಲರು, ಕುಹಕಿಗಳು ಮುಂತಾದವರಿಂದ ತುಂಬಿ ಹೋಗಿದೆ. ಇಂಥವರ ಮಧ್ಯದಲ್ಲಿ ಹೇಗೆ ಜೀವಿಸಬೇಕೆಂದು ಕವಿ ತನ್ನ ಇಷ್ಟದೈವದ ಮೊರೆಹೋಗಿದ್ದಾನೆ. *

**ನಿಟ್ಟೂರು[1]:** ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಒಂದು ಹಳ್ಳಿ. ಗುಬ್ಬಿಗೆ 10 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,702. 1226ರ ಶಾಸನವೊಂದರಲ್ಲಿ ಈ ಸ್ಥಳವನ್ನು ಹೆರುಡೆನಾಡಿನ ಶಿರೋಮಣಿ, ಗಂಗವಾಡಿ ತೊಂಬತ್ತಾರು ಸಾವಿರಕ್ಕೆ ನಾಭಿಯ ಮನೆ ಹಾಗೂ ತೆಂಕಣದ ಅಯ್ಯಾವಳೆ (ಐಹೊಳೆ) ಎಂದು ವರ್ಣಿಸಲಾಗಿದೆ.

ಇಲ್ಲಿರುವ ಶಾಂತೀಶ್ವರಬಸದಿಯು ಗರ್ಭಗೃಹ ಸುಕನಾಸಿ ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದ್ದು 12ನೆಯ ಶತಮಾನದ ಹೊಯ್ಸಳರ ಕಾಲದ ರಚನೆಯಾಗಿದೆ. ನವರಂಗದ ದ್ವಾರ ಸುಂದರವಾಗಿ ಕೆತ್ತಿದ್ದು, ಅದರ ಮೇಲಿರುವ ಶಾಸನ ಅದನ್ನು ಕೆತ್ತಿದವನ ಹೆಸರನ್ನು ಉಲ್ಲೇಖಿಸುತ್ತದೆ. ಈ ಬಸದಿಯ ಈಶಾನ್ಯದಲ್ಲಿ ಪದ್ಮಾವತಿ, ದಕ್ಷಿಣದಲ್ಲಿ ಬ್ರಹ್ಮದೇವರ ಗುಡಿಗಳಿವೆ. ಬಸದಿಯ ಹೊರಗೋಡೆ ಅಲ್ಲಲ್ಲಿ ಒಂದು ಅಥವಾ ಎರಡು ಅರೆಗಂಬಗಳು ಮತ್ತು ಸೊಗಸಾಗಿ ಕೆತ್ತಲಾದ ಕಿರುಗೋಪುರಗಳಿಂದ ಅಲಂಕೃತವಾಗಿದೆ. ಮಧ್ಯೆ ಮಧ್ಯೆ ಕುಳಿತ ಹಾಗೂ ನಿಂತ ಜಿನಮೂರ್ತಿಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಕೆಲವು ಭಿನ್ನವಾಗಿವೆ. ಕೆಲವು ಅಪೂರ್ಣಸ್ಥಿತಿಯಲ್ಲಿವೆ. ನವರಂಗದ ಉತ್ತರ ಮತ್ತು ದಕ್ಷಿಣ ಭಾಗದ ಹೊರಗೋಡೆಗಳಲ್ಲಿ ಸೊಗಸಾಗಿ ಕೆತ್ತಿದ ಎರಡು ಗೂಡುಗಳಿವೆ. ಇವುಗಳಲ್ಲಿ ವಿಗ್ರಹಗಳಿಲ್ಲ. ನವರಂಗದ ಕಂಬಗಳು ಎಂಟು, ಹದಿನಾರು ಮತ್ತು ಮೂವತ್ತೆರಡು ಕೋಣಗಳುಳ್ಳವಾಗಿ ನಕ್ಷತ್ರಕಮಲಗಳಂತೆ ವಿವಿಧ ರೀತಿಯಲ್ಲಿ ಕೆತ್ತಲಾಗಿವೆ. ಭುವನೇಶ್ವರಿಗಳು 2.5' ಆಳವಿದ್ದು, ಅವುಗಳಲ್ಲಿ ಸುಂದರ ಅಷ್ಟದಿಕ್ಪಾಲಕ ಮೂರ್ತಿಗಳಿವೆ. ಗರ್ಭಗೃಹದಲ್ಲಿ ಶಾಂತಿನಾಥ ಜಿನಬಿಂಬವಿದೆ. ಬಸದಿಯ ಸುತ್ತಲೂ ಅನೇಕ ನಿಸಿಧಿಗಳಿವೆ.

ಇಲ್ಲಿ ಗ್ರಾಮದೇವತೆ ಮಾರಿಯಮ್ಮನ ಒಂದು ದೇವಾಲಯವಿದೆ. ಪ್ರತಿ ವರ್ಷ ಜಾತ್ರೆ ನಡೆಯುತ್ತದೆ. (ಎಚ್.ಎಂ.ಎಸ್.ಆರ್.)

**ನಿಟ್ಟೂರು[2]:** ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನಲ್ಲಿ ತುಂಗಭದ್ರಾ ನದಿ ದಂಡೆಯ ಮೇಲಿರುವ ಒಂದು ಪ್ರಮುಖ ಶಿಲಾಯುಗ ನೆಲೆ. ಜನಸಂಖ್ಯೆ 1,385. ಇಲ್ಲಿ ಪೂರ್ವಶಿಲಾಯುಗ ಮತ್ತು ಮಧ್ಯಶಿಲಾಯುಗ ಕಾಲಗಳ ಸಂಸ್ಕೃತಿಗಳ ಅವಶೇಷಗಳು ಮತ್ತು ಆ ಕಾಲದ ಪ್ರಾಣಿಗಳ ಪಳೆಯುಳಿಕೆಗಳು ನದಿದಂಡೆಯ ಪದರಗಳಲ್ಲಿ ಸಿಕ್ಕಿವೆ. ನದಿದಂಡೆಯ 15 ಅಡಿಗಳೆತ್ತರದ ಪದರಗಳಲ್ಲಿ ಕೆಲಭಾಗದಲ್ಲಿ ಉಂಡೆಕಲ್ಲುಗಳ ಗಟ್ಟಿಪದರ ಅದರ ಮೇಲೆ ಹಿಂದಿನ ಕಾಲದ ಕೆಂಚು ಮೆಕ್ಕಲು ಮಣ್ಣಿನ ಪದರ, ಮತ್ತು ಎಲ್ಲಕ್ಕೂ ಮೇಲೆ ಈಚಿನ ಕಪ್ಪು ಎರೆಮಣ್ಣಿನ ಪದರಗಳಿವೆ. ಕೆಳಗಿನ ಉಂಡೆಕಲ್ಲುಗಳ ಪದರದಲ್ಲಿ ಕಲ್ಲಿನ ಆಯುಧಗಳು ಮತ್ತು ಈಗ ನಷ್ಟವಾಗಿರುವ ತಳಿಗೆ ಸೇರಿದ ದನದ ಪಳೆಯುಳಿಕೆಗಳು ಕಂಡು ಬಂದಿವೆ. ಇಲ್ಲಿರುವ ಪಳೆಯುಳಿಕೆಗಳ ಆಧಾರದಿಂದ ಇಲ್ಲಿನ ಶಿಲಾಯುಧ ಗಳನ್ನು ಮಧ್ಯ ಪ್ಲೈಸ್ಟೋಸೀನ್ ಯುಗದವೆಂದು ನಿರ್ಧರಿಸಬಹುದು.

ಬಸಾಲ್ಟ್ ಅಥವಾ ಅಗ್ನಿಶಿಲೆಯ ಉಂಡೆಕಲ್ಲುಗಳಲ್ಲಿ ಒಮ್ಮುಖವಾಗಿ ಮತ್ತು ದ್ವಿಮುಖವಾಗಿ ಚಕ್ಕೆಗಳನ್ನು ತೆಗೆದು ತಯಾರಿಸಿದ ಮಚ್ಚುಗಳು (ಚಾಪರ್) ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಮೊನೆಯಾದ, ಅಗಲವಾದ, ಉಬ್ಬಿಕೊಂಡಿರುವ ಅಥವಾ ಕಮಾನಿನಂತೆ ಒಳಸರಿದ ಅಲಗುಳ್ಳ ಒಮ್ಮುಖ ಮಚ್ಚುಗಳು ಮತ್ತು ಆಯುಧದ ಸುತ್ತಲೂ ಅಲಗುಳ್ಳ ಅಥವಾ ಉಬ್ಬಿಕೊಂಡಿರುವ ಅಲಗುಳ್ಳ ದ್ವಿಮುಖ ಮಚ್ಚುಗಳು ಅಲ್ಲಿಯ ಪೂರ್ವಶಿಲಾಯುಗದ ಆಯುಧ ರೀತಿಗಳು.

ಮಧ್ಯಶಿಲಾಯುಗದ ಆಯುಧಗಳಲ್ಲಿ ಚಕ್ಕೆಕಲ್ಲುಗಳ ಮೇಲೆ ಮಾಡಿದ ಹೆರೆಯುವ ಆಯುಧಗಳು, ಮೊನೆಗಳು ಲೆವಲ್ವಾ ವಿಧಾನದ ತಿರುಳ್ಗಲ್ಲು ಗಳ ಮತ್ತು ಚಕ್ಕೆ ಕಲ್ಲುಗಳು ಮುಖ್ಯವಾದವು. ಸುಧಾರಿತ ತಯಾರಿಕಾ ತಂತ್ರವನ್ನು ಪ್ರತಿಬಿಂಬಿಸುವ ಮಧ್ಯಶಿಲಾಯುಗದ ಈ ಅವಶೇಷಗಳು ಇತರ ಪ್ರದೇಶಗಳ ಸಂಸ್ಕೃತಿಯನ್ನು ಹೋಲುತ್ತವೆ.

ನಿಟ್ಟೂರು ಬಳಿಯ ನೆಲೆಯ ಮಹತ್ತ್ವ ವಿಶಿಷ್ಟವಾದುದು. ದಕ್ಷಿಣ ಭಾರತದಲ್ಲಿ ಆ ಕಾಲದ ಸಂಸ್ಕೃತಿಯ ಅವಶೇಷಗಳು ಬಹುಮಟ್ಟಿಗೆ ಕೈಗೊಡಲಿ, ಸೀಳುಗ (ಕ್ಲೀವರ್) ಮತ್ತು ಚಕ್ಕೆ ಕಲ್ಲಿನಾಯುಧ ಪದ್ಧತಿಗೆ ಸೇರಿದವು. ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಕೆಲವೆಡೆಗಳಲ್ಲಿ ಮಾತ್ರ ವಾಯವ್ಯ ಭಾರತದ ಪೂರ್ವಶಿಲಾಯುಗ ಪದ್ಧತಿಗೆ ಸೇರಿದ ಉಂಡೆಕಲ್ಲುಗಳಿಂದ ತಯಾರಿಸಿದ ಮಚ್ಚುಗ (ಚಾಪರ್) ನೂರಕ್ಕೆ 40ರ ಪ್ರಮಾಣದಲ್ಲಿ ಕಂಡುಬಂದಿದೆ. ಈವರೆಗೂ ಭಾರತೀಯ ಪುರಾತತ್ತ್ವಜ್ಞರು ವಾಯವ್ಯ ಭಾರತದಲ್ಲಿ ತುಂಡುಕೊಡಲಿ ಸಂಸ್ಕೃತಿ ಮತ್ತು ಭಾರತದ

ಉಳಿದೆಡೆಗಳಲ್ಲಿ ಕೈಗೊಡಲಿ ಸಂಸ್ಕೃತಿ ಪ್ರಧಾನವಾಗಿದೆಯೆಂದು ಹೇಳುತ್ತಿದ್ದರು. ಆದರೆ ನಿಟ್ಟೂರಿನ ಉಂಡೆಕಲ್ಲಿನ ಆಯುಧಗಳು ಕೈಗೊಡಲಿ ಸಂಸ್ಕೃತಿಯ ಸೋಂಕಿಲ್ಲದೆ ಅಸ್ತಿತ್ವದಲ್ಲಿರುವುದು ಮತ್ತು ಕರ್ನೂಲಿನ ಸಾಕ್ಷ್ಯ ಈ ನಂಬಿಕೆಗೆ ಧಕ್ಕೆ ತರುವುದಲ್ಲದೆ ಶಿಲಾಯುಗ ಸಂಸ್ಕೃತಿಯ ಮೂಲ ಸ್ವರೂಪಕ್ಕೆ ಹೊಸ ತಿರುವನ್ನು ಕೊಡುವಂತಾಗಿದೆ. **(ಬಿ.ಕೆ.ಜಿ.)**

**ನಿಟ್ಟೂರು ನಂಜಯ್ಯ:** ಸು. 1725. ಪ್ರಸಿದ್ಧ ವ್ಯಾಖ್ಯಾನಕಾರ. ಕೇಶಿರಾಜನ ಶಬ್ದಮಣಿದರ್ಪಣ ಎಂಬ ವ್ಯಾಕರಣ ಗ್ರಂಥಕ್ಕೆ ಟೀಕೆಯನ್ನೂ ಸಂಸ್ಕೃತದಲ್ಲಿ ವೇದಾಂತಸಾರ ವೀರಶೈವ ಚಿಂತಾಮಣಿ ಎಂಬ ಗ್ರಂಥವನ್ನೂ ಬರೆದಿದ್ದಾನೆ. ನಿಟ್ಟೂರು ಈತನ ಸ್ಥಳ. ವೇದಾಂತಸಾರ ವೀರಶೈವ ಚಿಂತಾಮಣಿ ಗ್ರಂಥದ ಉತ್ತರ ಖಂಡದ ಮೂರು ಹಸ್ತಪ್ರತಿಗಳು ಬಳ್ಳಾರಿಯ ಸುತ್ತಮುತ್ತ ದೊರೆತಿರುವುದರಿಂದಲೂ ಈತ ಉತ್ತರ ಕರ್ನಾಟಕ ಪ್ರದೇಶದವನಾಗಿರಬೇಕೆಂದೂ ಇವನ ಹುಟ್ಟೂರಾದ ನಿಟ್ಟೂರು ಬಳ್ಳಾರಿಯ ಸಮೀಪವಿದ್ದಿರಬೇಕೆಂದೂ ಊಹಿಸಬಹುದಾಗಿದೆ. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಇವನ ಹುಟ್ಟೂರಾಗಿರಬೇಕೆಂದೂ ಕೆಲವರ ಅಭಿಪ್ರಾಯ.

ಶಬ್ದಮಣಿದರ್ಪಣದ ಟೀಕೆಯಲ್ಲಿ ಪ್ರತಿಸೂತ್ರಕ್ಕೂ ಪದಚ್ಛೇದ, ಅನ್ವಯ, ಟೀಕು–ಎಂದು ಮೂರು ಭಾಗಮಾಡಿಕೊಂಡು ಅರ್ಥ ವಿವರಿಸಿದ್ದಾನೆ. ಸಂದಿಗ್ಧವಾದೆಡೆಯಲ್ಲಿ ಭಟ್ಟಾಕಳಂಕನ ಶಬ್ದಾನುಶಾಸನದ (ಸು. 1604) ಸೂತ್ರಗಳನ್ನು ಉದ್ಧರಿಸಿ ವಿಚಾರ ಎಂಬ ಭಾಗದಲ್ಲಿ ವಿಸ್ತೃತ ವಿವರಣೆ ನೀಡಿದ್ದಾನೆ. ಉದಾಹರಣೆಗೆ ಒಂದು ಸೂತ್ರವನ್ನು ಉದ್ಧರಿಸಲಾಗಿದೆ:

ಅವತರಿಸಿರ್ಕುಮುವರ್ಣದ
ಋವರ್ಣದೋತೌತ್ವದಗ್ರದೊಳ್ ಸ್ವರಮಿರೆ ವ
ತ್ವ ವಿಧಾನಂ ಬಹುಳತೆಯ
ತ್ವವತ್ವದೊಳ್ ಸಂಸ್ಕೃತಕ್ಕೆ ತಾ ನಿಲ್ಲೆಂದುಂ

ಪದಚ್ಛೇದ–ಅವತರಿಸಿ ಇರ್ಕುಂ, ಉವರ್ಣದ ಋವರ್ಣದ ಓತೌತ್ವದ ಅಗ್ರದೊಳ್ ಸ್ವರಂ ಇರೆ, ವತ್ವ ವಿಧಾನಂ; ಬಹುಳತೆ ಯತ್ವವತ್ವದೊಳ್ ಸಂಸ್ಕೃತಕ್ಕೆ ತಾಂ ಇಲ್ಲ ಎಂದುಂ.

ಅನ್ವಯ–ಉವರ್ಣದ ಋವರ್ಣದ ಓತೌತ್ವದ ಅಗ್ರದೊಳ್ ಸ್ವರಂ ಇರೆ, ವತ್ವ ವಿಧಾನಂ ಅವತರಿಸಿ ಇರ್ಕುಂ; ಸಂಸ್ಕೃತಕ್ಕೆ ಯುತ್ವವತ್ವದೊಳ್ ಬಹುಳತೆ ತಾಂ ಎಂದುಂ ಇಲ್ಲ.

ಟೀಕು–ಉವರ್ಣದ= ಉ ಊ ಎಂಬ ಸವರ್ಣದ ಋವರ್ಣದ = ಋ ೠ ಎಂಬ ಸವರ್ಣದ; ಓತೌತ್ವದ=ಓಕಾರ ಔಕಾರದ; ಅಗ್ರದೊಳ್=ಮುಂದೆ; ಸ್ವರಂ=ಸ್ವರಾಕ್ಷರಂ; ಇರೆ=ಇರೆ; ವತ್ವವಿಧಾನಂ=ವಕಾರದ ವಿಧಾನಂ; ಅವತರಿಸಿರ್ಕುಂ=ಹುಟ್ಟಿರ್ಪುದು; ಸಂಸ್ಕೃತಕ್ಕೆ=ಸಂಸ್ಕೃತ ಶಬ್ದಕ್ಕೆ; ಯತ್ವವತ್ವದೊಳ್=ಯತ್ವಸಂಧಿ ವತ್ವಸಂಧಿಯಲ್ಲಿ; ಬಹುಳತೆ=ಬಹುಳತ್ವ_ತಾನ್=ತಾನ್;ಎಂದುಂ=ಆವಾಗಳುಂ; ಇಲ್ಲ=ಉಂಟಾಗದು

ವಿಚಾರಂ– ಕನ್ನಡದ ಶಬ್ದದಲ್ಲಿ ಯತ್ವವತ್ವ ಸಂಧಿಗಳಲ್ಲಿ ಬಹುಳ ಮುಂಟೆಬುದರ್ಥ. ಅತ್ವದಿನಿವರ್ಣದಿಂ ಮತ್ತೋತ್ವದಿನೈತ್ವ ದಿನವರ್ಣದಿಂ ಮುಂದಕ್ಕುಂ ಯತ್ವಂ, ಉವರ್ಣದ ಋವರ್ಣದೋತೌತ್ವದಗ್ರದೊಳ್ ಸ್ವರಮಿರೆ ವತ್ವವಿಧಾನ ವೆಂಬ ಈ ಯತ್ವ ಸಂಧಿವತ್ವ ಸಂಧಿಗಳಲ್ಲಿ ವಿಚಾರಮುಂಟು; ಅತ್ವಮದೆಂತೆಂದೊಡೆ ಶಬ್ದಾನುಶಾಸನದಲ್ಲಿ (ಸೂತ್ರಂ 1ನೆಯ ಪಾದದ 38ನೆಯ ಸೂತ್ರಂ) ಅತ ಓಷ್ಠ್ಯೇ ಸ್ವರೇ ಪರೇ ಅಕಾರ ಸ್ಯವಗ್ಭವತಿ ಎಂಬುದಾಗಿ ಅಕಾರಕ್ಕೆ ಓಷ್ಠ್ಯಸ್ವರಂ ಪರಮಾಗೆ ವತ್ವಸಂಧಿಯಾಗುವುದು. ಆ+ಉದಕಂ=ಆವುದಕಂ; ಆ+ಊರ್=ಆವೂರ್; ಆ+ಊಟಂ=ಆವೂಟಂ ಎಂಬಂತೆ ಓಷ್ಠ್ಯ ಗ್ರಹಣದಿಂ ಕಂಠೋಷ್ಠ್ಯಮಂ ಸಂಗ್ರಹಿಸಲ್ಪಟ್ಟುದು.

ಈ ಟೀಕು ಶಬ್ದಮಣಿದರ್ಪಣಾಭ್ಯಾಸಿಗಳಿಗೆ ಒಂದು ಕೈಗನ್ನಡಿಯಂತಿದೆ.

ವೇದಾಂತಸಾರ ವೀರಶೈವ ಚಿಂತಾಮಣಿ ಪೂರ್ವಖಂಡ ಮತ್ತು ಉತ್ತರಖಂಡ ಎಂಬ ಎರಡು ಭಾಗಗಳನ್ನೊಳಗೊಂಡಿದೆ. ಪೂರ್ವಖಂಡ ಅಲಭ್ಯವಾಗಿದ್ದು ಇದರಲ್ಲಿ ವೀರಶೈವ, ಶುದ್ಧಶೈವ, ಮಿಶ್ರಶೈವ ಮುಂತಾದ ಶೈವರು ಆಚರಿಸಬೇಕಾದ ಸಾಮಾನ್ಯ ಧರ್ಮ ನಿರೂಪಿತವಾಗಿರುವಂತೆ ತಿಳಿಯುತ್ತದೆ. ಉತ್ತರಖಂಡದಲ್ಲಿ 21 ಪ್ರಕರಣಗಳಿದ್ದು ಅವುಗಳಲ್ಲಿ ವೀರಶೈವರ ವಿಶೇಷ ಧರ್ಮಗಳು ನಿರೂಪಿತವಾಗಿವೆ. ಲಿಂಗಾಂಗ ಸಂಯೋಗ ಮತ್ತು ಶಿವಜೀವೈಕ್ಯರೂಪಗಳನ್ನು ತಿಳಿಸುವುದು ಈ ಗ್ರಂಥದ ಗುರಿ ಎಂದು ಹೇಳಿ, ಇವುಗಳ ಅರಿವಿನಿಂದಲೇ ಮುಕ್ತಿ ಎಂಬುದಾಗಿ ಹೇಳಿದ್ದಾನೆ. ಈತನಿಗೆ ಕಾಮಿಕಾಗಮ, ವೀರಾಗಮ ಮುಂತಾದ ಆಗಮಗಳೂ ಶಂಕರಸಂಹಿತೆ, ಸೂತಸಂಹಿತೆ ಮುಂತಾದ ಸಂಹಿತೆಗಳೂ ಶೈವಪುರಾಣ, ಆದಿತ್ಯಪುರಾಣ, ಮಾನವಪುರಾಣ ಮೊದಲಾದ ಪುರಾಣಗಳೂ ಸಿದ್ಧಾಂತ ಶಿಖಾಮಣಿ, ವಿಶೇಷಾರ್ಥಪ್ರಕಾಶಿಕೆ, ಆರಣ್ಯಕಗಳು, ಉಪನಿಷತ್ತುಗಳು– ಇವುಗಳ ಪೂರ್ಣಪರಿಚಯವಿದ್ದು ಅವುಗಳಲ್ಲಿ ಹೇಳಲಾಗಿರುವ ವೀರಶೈವಧರ್ಮ ಮತ್ತು ಆಚಾರಗಳ ಲಕ್ಷಣಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಅವುಗಳಿಗೆ ವಿವರಣೆ ನೀಡಿದ್ದಾನೆ.

ಭಸ್ಮಧಾರಣೆ, ಲಿಂಗಧಾರಣೆ, ರುದ್ರಾಕ್ಷಿಧಾರಣೆ, ಲಿಂಗಪೂಜೆ – ಇವುಗಳ ವಿಧಾನಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾನೆ. ಶಿವಸಂಸ್ಕಾರವಿಲ್ಲದವನನ್ನು ಶ್ವಪಚನೆಂದು ಕರೆದಿದ್ದಾನೆ. ಶಿವಸಂಸ್ಕಾರವನ್ನು ಪಡೆದಮೇಲೆ ಅವನಲ್ಲಿ ಜಾತಿಭೇದವನ್ನೆಣಿಸಬಾರದು; ಹಾಗೆ ಭೇದವನ್ನೆಣಿಸಿದರೆ ಅವರಿಗೆ ರೌರವನರಕ ಪ್ರಾಪ್ತವಾಗುತ್ತದೆಂದು ಹೇಳಿದ್ದಾನೆ. ಶೈವರನ್ನು ಬ್ರಾಹ್ಮಣರೆಂದು ಗಣಿಸಿದ್ದಾನೆ. ಬ್ರಹ್ಮಜ್ಞಾನವುಳ್ಳವನು ಬ್ರಾಹ್ಮಣನೆಂದು ಮಹಾಭಾರತದಲ್ಲಿ ಹೇಳಿರುವುದರಿಂದ ಶೈವನು ಬ್ರಹ್ಮಜ್ಞಾನವುಳ್ಳವನಾದುದರಿಂದ ಅವನೂ ಬ್ರಾಹ್ಮಣನೆನಿಸುತ್ತಾನೆಂದು ವಾದಿಸಿದ್ದಾನೆ.

ಅವತಾನ ಮಂತ್ರದಲ್ಲಿ ಕಲಿಯುಗದಲ್ಲಿ ನಂದೀಶ್ವರನೇ ಮುಂತಾದ ಗಣಧರರು ಬಸವಣ್ಣ, ಪ್ರಭುದೇವ, ರೇವಣಸಿದ್ಧರಾಗಿ ಜನಿಸುತ್ತಾರೆ. ಅವರ ಜೀವನ ಚರಿತ್ರೆಯೂ ಸೋಮನಾಥಭಾಷ್ಯ, ಬಸವಪುರಾಣ, ಆರಾಧ್ಯಚಾರಿತ್ರ್ಯದಲ್ಲಿ ಪ್ರಸಿದ್ಧವಾಗುತ್ತದೆ ಎಂದು ಹೇಳುವುದರ ಮೂಲಕ ಬಸವಾದಿಗಳನ್ನು ಸ್ಮರಿಸಿಕೊಂಡಿದ್ದಾನೆ. ವೀರಶೈವಧರ್ಮಾಭ್ಯಾಸಿಗಳಿಗೆ ಇದೊಂದು ಆಕರಗ್ರಂಥವಾಗಿದೆ. ಈ ಗ್ರಂಥವನ್ನು ಮಣೂರು ಮಠಾಧ್ಯಕ್ಷ ವೇದಮೂರ್ತಿ ಮಲ್ಲಿಕಾರ್ಜುನ ಶಾಸ್ತ್ರಿಯವರು ಸಂಪಾದಿಸಿ ಪ್ರಕಟಿಸಿದ್ದಾರೆ (1908). ರಂಗಾಚಾರ್ಯಶಾಸ್ತ್ರೀ ಮುದೋಳಕರ್ ಎಂಬುವವರು ಇದನ್ನು ಮರಾಠಿ ಭಾಷೆಗೆ ಭಾಷಾಂತರಿಸಿದ್ದಾರೆ. *

**ನಿಟ್ಟೂರು ಶ್ರೀನಿವಾಸರಾವ್:** 1903– 2004. ಕರ್ನಾಟಕ (ಮೈಸೂರು) ರಾಜ್ಯದ ನಿವೃತ್ತ ಮುಖ್ಯ ನ್ಯಾಯಾಧೀಶರು. ತಾಯಿ ಸೀತಮ್ಮ. ತಂದೆ ಶಾಮಣ್ಣನವರು ಎ.ವಿ. ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಸೋದರಮಾವ ಸರ್ ಎಂ.ಎನ್. ಕೃಷ್ಣರಾವ್. ಶ್ರೀನಿವಾಸರಾವ್ 1903 ಆಗಸ್ಟ್ 24ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರು ಮೂರು ವರ್ಷದವರಾಗಿದ್ದಾಗ ತಾಯಿಯನ್ನು ಕಳೆದುಕೊಂಡರು.

ಇವರು ಪ್ರಾಥಮಿಕ ಶಿಕ್ಷಣ ಪಡೆದದ್ದು ಹೊಸದುರ್ಗದಲ್ಲಿ, ಅನಂತರ ಚಳ್ಳಕೆರೆ, ಶಿವಮೊಗ್ಗದಲ್ಲಿ ಇವರ ಓದು ಸಾಗಿತು. ಜೊತೆಗೆ ಇವರು ಹಿಂದಿ ಮತ್ತು ಸಂಸ್ಕೃತದಲ್ಲೂ ಪ್ರಾವೀಣ್ಯ ಪಡೆದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್‌ಸಿ. ಪದವಿ ಗಳಿಸಿದರು. ಅನಂತರ ಮದರಾಸು ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಗಳಿಸಿ ವಕೀಲರಾಗಿದ್ದರು (1927). 1953ರಲ್ಲಿ ಇವರು ಅಡ್ವೊಕೇಟ್ ಜನರಲ್‌ರಾಗಿ ನಿಯುಕ್ತರಾದರು. 1955ರಲ್ಲಿ ಮೈಸೂರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕವಾದರು. 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದ ಬಳಿಕ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿ ಮುಂದುವರಿದರು. 1961ರಲ್ಲಿ ಮುಖ್ಯ ನ್ಯಾಯಾಧೀಶರಾಗಿ 1963ರಲ್ಲಿ ನಿವೃತ್ತರಾದರು. 1964ರಲ್ಲಿ ಕೇಂದ್ರ ಸರಕಾರದ ಜಾಗ್ರತ ಆಯೋಗದ ಪ್ರಥಮ ಆಯುಕ್ತರಾಗಿ ನೇಮಕಗೊಂಡರು. ಆಡಳಿತದಲ್ಲಿನ ಭ್ರಷ್ಟಾಚಾರವನ್ನು ತೊಡೆದು ಹಾಕಲು ಸಂತಾನಂ ಆಯೋಗದ ಶಿಫಾರಸನ್ನು ಕಾರ್ಯಗತಗೊಳಿಸಲು ಪ್ರಯತ್ನಿಸಿದರು. ಇವರು 1968 ರವರೆಗೆ ಈ ಹುದ್ದೆಯಲ್ಲಿದ್ದರು. ಇವರಿಗೆ ಮೊದಲಿನಿಂದಲೂ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ಅತೀವ ಆಸಕ್ತಿಯಿತ್ತು. ಇವರು ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಇವರು ಸಕ್ರಿಯರಾಗಿ ದುಡಿದರು. ಜವಾಬ್ದಾರಿ ಸರಕಾರದ ರಚನೆಯ ಹೋರಾಟದಲ್ಲೂ ಇವರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಶಾಖೆ ತೆರೆದು ಹಿಂದಿ ಪ್ರಚಾರಕರಿಗೆಲ್ಲ ಮಾರ್ಗದರ್ಶನ ಮಾಡುತ್ತ ಹದಿನೈದು ವರ್ಷ ಅದರ ಗೌರವ ಕಾರ್ಯದರ್ಶಿಯಾಗಿ ದುಡಿದರು. ಮಹಾತ್ಮಾಗಾಂಧೀಜಿಯವರು ಮೂರು ತಿಂಗಳು ಬೆಂಗಳೂರಿನಲ್ಲೂ ಒಂದೂವರೆ ತಿಂಗಳು ನಂದಿಬೆಟ್ಟದಲ್ಲೂ ಇದ್ದಾಗ, ಇವರು ಗಾಂಧೀಜಿಯವರ ಒಡನಾಟ ಬೆಳೆಸಿಕೊಂಡು, ಅವರು ಹಮ್ಮಿಕೊಂಡ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಖಾದಿ ಪ್ರಚಾರದಲ್ಲಿ ತೊಡಗಿದರಲ್ಲದೆ ಸ್ವತಃ ಖಾದಿಧಾರಿಯಾದರು.

ಸ್ವಾತಂತ್ರ್ಯ ಚಳವಳಿಯ ಸಂದೇಶವನ್ನು ಜನತೆಗೆ ತಲುಪಿಸಬೇಕು, ಗಾಂಧೀ ಸಾಹಿತ್ಯವನ್ನು ಪ್ರಚಾರ ಮಾಡಬೇಕು. ಕನ್ನಡ ಲೇಖಕರನ್ನು ಪ್ರೋತ್ಸಾಹಿಸಬೇಕು ಎಂಬ ಉದ್ದೇಶದಿಂದ ಇವರು ಸತ್ಯಶೋಧನ ಪ್ರಕಟಣಾಮಂದಿರವನ್ನು ಆರಂಭಿಸಿ (1928) 1967 ರವರೆಗೆ ಅದನ್ನು ತಮ್ಮ ಮಗ ಚಂದ್ರಶೇಖರರ ಸಹಾಯದಿಂದ ನಡೆಸಿದರು. ಇವರಿಬ್ಬರ ಪರಿಶ್ರಮದಿಂದ ಸತ್ಯಶೋಧನ ಪ್ರಕಟಣಾಮಂದಿರ ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆಯಿತು. ಈ ಪ್ರಕಟಣಾಲಯದಿಂದ ಅನೇಕ ಸಾಹಿತಿಗಳ ಉತ್ತಮ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಬೆಳೆವಣಿಗೆಯಲ್ಲಿ ಇವರು ಸಕ್ರಿಯರಾಗಿ ಐವತ್ತಕ್ಕೂ ಹೆಚ್ಚು ವರ್ಷ ದುಡಿದರು.

ಇವರು ಸರ್.ಎಂ.ಎನ್. ಕೃಷ್ಣರಾವ್ ಅವರ ಮಗಳು ಪದ್ಮಮ್ಮ ಅವರನ್ನು 1921ರಲ್ಲಿ ಮದುವೆಯಾದರು. ಮೊದಲಿನಿಂದಲೂ ರಾಷ್ಟ್ರೀಯ ಭಾವನೆ ಬೆಳೆಸಿಕೊಂಡ ಈ ದಂಪತಿಗಳು ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆ ಮತ್ತು ಗಾಂಧೀಜಿಯವರ ಅನಾಸಕ್ತಿಯೋಗವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಅದರ ಪ್ರತಿಗಳು ಸುಲಭ ಬೆಲೆಯಲ್ಲಿ ಮನೆಮನೆಗೂ ತಲುಪುವಂತೆ ಯತ್ನಿಸಿದರು. ಇವರು ಇಂಗ್ಲಿಷಿನ ಕೆಲವು ಕಥೆಗಳನ್ನೂ ಕನ್ನಡಕ್ಕೆ ತಂದಿದ್ದಾರೆ. ಸ್ತ್ರೀಯರಿಗಾಗಿ ಒಂದು ಗ್ರಂಥ ಬರೆದಿದ್ದಾರೆ. ಇವರು ಬರೋಡದಲ್ಲಿ ಸೇರಿದ್ದ ಹೊರನಾಡು ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನ್ಯಾಷನಲ್ ಕಾಲೇಜಿನಲ್ಲಿದ್ದಾಗ ಸೇವಾದಳದ ಚಟುವಟಿಕೆಗಳಲ್ಲೂ ತೊಡಗಿಕೊಂಡಿದ್ದರು. ಡಿ.ವಿ. ಗುಂಡಪ್ಪನವರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಆರಂಭಿಸಿದಂದಿನಿಂದಲೂ ನಿಟ್ಟೂರರು ಆ ಸಂಸ್ಥೆಯನ್ನು ಬೆಳೆಸಲು ಹಲವು ಕ್ರಮ ಕೈಗೊಂಡರು. ಈ ಸಂಸ್ಥೆಯ ಕಾರ್ಯದರ್ಶಿಯಾಗಿ (1945–64) ಮತ್ತು (1975–2003) ಸಂಸ್ಥೆಯ ಪೋಷಕರಾಗಿ ದುಡಿದರು. ನಿರಾಡಂಬರ ವ್ಯಕ್ತಿಯಾಗಿದ್ದ ನಿಟ್ಟೂರರು ಬೆಂಗಳೂರಿನ ಸಭೆ ಸಮಾರಂಭಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು.

ಇವರು ಬೆಂಗಳೂರಿನ ಗಾಂಧಿ ಸ್ಮಾರಕನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಪ್ರಕೃತಿ ಚಿಕಿತ್ಸಾ ಪರಿಷತ್, ಇಂಡಿಯನ್ ನ್ಯಾಷನಲ್ ಸೆಂಟರ್ ಆಫ್ ದಿ ವರ್ಲ್ಡ್ ಯೂನಿಯನ್ ಇಂಟರ್ ನ್ಯಾಷನಲ್ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 1954ರ ಡಿಸೆಂಬರ್‌ನಲ್ಲಿ ಬೆಳಗಾಂವಿಯಲ್ಲಿ ನಡೆದ ಬಾರ್ ಕೌನ್ಸಿಲ್‌ನ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಚಿತ್ತೂರು ಜಿಲ್ಲೆಯ ಲಾ ಕಾನ್‌ಫರೆನ್ಸ್ ಅಧ್ಯಕ್ಷರಾಗಿ 1965ರಲ್ಲಿ ನಿಯುಕ್ತರಾದರು. ಮೊದಲಿನಿಂದಲೂ ಅರವಿಂದಾಶ್ರಮದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಇವರು ಸುಮಾರು 10 ವರ್ಷ ಅದರ ಅಧ್ಯಕ್ಷರಾಗಿದ್ದರು. ಇವರು ಸಂಯುಕ್ತ ಕರ್ನಾಟಕದ ಆರಂಭದ ದಿನಗಳಿಂದಲೂ ಲೋಕಶಿಕ್ಷಣ ಟ್ರಸ್ಟಿನ ಸಂಪರ್ಕವಿಟ್ಟುಕೊಂಡಿದ್ದರು. ಅನೇಕ ಬಾರಿ ಇವರು ಟ್ರಸ್ಟಿನ ಅಧ್ಯಕ್ಷರಾಗಿದ್ದರು.

ಇವರಿಗೆ ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯ ಗೌರವ ಡಾಕ್ಟರೇಟ್ ಬಂದಿದೆ (1996). ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದವರಿಗೆ ಕೊಡುವ ಅತ್ಯುನ್ನತ ಗೌರವ ಡಾಕ್ಟೋರೇಟ್ ಪದವಿ (ಎಲ್‌ಎಲ್.ಡಿ) ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ (1997).

ಇವರು ಅಮೆರಿಕ, ಯುರೋಪ್, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಪ್ರವಾಸ ಮಾಡಿದ್ದರು. 2001ರಲ್ಲಿ ಮಾಂಚೆಸ್ಟರ್‌ನಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ ಇವರು ಭಾಗವಹಿಸಿದ್ದರು. ಬೆಂಗಳೂರಿನ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು 2004 ಆಗಸ್ಟ್ 12ರಂದು ನಿಧನರಾದರು. (ಎಸ್.ಎಂ.ಕೆ.)

**ನಿಡುಗಲ್ಲು:** ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಕಸಬಾದಿಂದ ಪಶ್ಚಿಮಕ್ಕೆ ಸು. 29 ಕಿಮೀ ದೂರದಲ್ಲಿರುವ ಒಂದು ಸಣ್ಣ ಹಳ್ಳಿ. ಇದೇ ಹೆಸರಿನ ಹೋಬಳಿಯ ಕೇಂದ್ರ. ಜನಸಂಖ್ಯೆ 357. ಸಮುದ್ರಮಟ್ಟದಿಂದ 1221 ಮೀ ಎತ್ತರಕ್ಕೆ ಮೊನಚಾಗಿ ಚಾಚಿಕೊಂಡು ಸುತ್ತಲಿನ ಪ್ರದೇಶಕ್ಕೆ ಎದ್ದುಕಾಣುವಂತಿರುವ ಈ ಗ್ರಾಮದ ಸಮೀಪದ ಬೆಟ್ಟವೊಂದರಿಂದ ಈ ಸ್ಥಳಕ್ಕೆ ನಿಡುಗಲ್ಲು ಎಂದು ಹೆಸರು ಬಂದಿದೆ.

ಬೆಟ್ಟದ ಪಾದದಲ್ಲಿ ಪೂರ್ವ ಮತ್ತು ದಕ್ಷಿಣಕ್ಕೆ ಗ್ರಾಮವಿದೆ. ಹಿಂದೆ ವೈಭವದಿಂದ ಮೆರೆದ ಈ ಸ್ಥಳ 9–10ನೆಯ ಶತಮಾನದಲ್ಲಿ ಹೆಂಜೇರಿನಿಂದ (ಈಗಿನ ಹೇಮಾವತಿ) ಆಳುತ್ತಿದ್ದ ನೊಳಂಬ ರಾಜರ ವಶದಲ್ಲಿತ್ತು. ಅನಂತರ ಸ್ಥಳೀಯ ಚೋಳವಂಶವೊಂದರ ಒಡೆತನದಲ್ಲಿತ್ತು.

ವಿಜಯನಗರ ಅರಸುಗಳ ಕಾಲದಲ್ಲಿ ತಿಪ್ಪನಾಯಕನ ವಂಶಕ್ಕೆ ಸೇರಿದ ಪಾಳೆಯಗಾರರು ಇಲ್ಲಿ ಆಳುತ್ತಿದ್ದರು **(ನೋಡಿ: ಹರತಿಯ ಪಾಳೆಯಗಾರರು)**. ಗ್ರಾಮದ ಸಮೀಪದಲ್ಲಿರುವ ಬೆಟ್ಟ (ನಿಡುಗಲ್ಲುದುರ್ಗ) ಎರಡು ಮೂರು ಘಟ್ಟಗಳಲ್ಲಿ ಮೇಲೆ ಹಬ್ಬಿದೆ. ಏರು ಕಡಿದು, ಅದರ ಮೇಲೇರಿದರೆ ಅನೇಕ ಗಿರಿ ಪಂಕ್ತಿಗಳು ಮತ್ತು ಸರೋವರಗಳ ಹರಿವಿನ ಭವ್ಯದೃಶ್ಯವನ್ನು ಕಾಣಬಹುದು. ಬೆಟ್ಟ ಅನೇಕ ಕೋಟೆಗಳಿಂದ ಆವೃತವಾಗಿದೆ. ಈ ಕೋಟೆಗಳಿಗೆ ಕಲ್ಲೇಶ್ವರಕೋಟೆ, ಭೈರವನ ಕೋಟೆ, ಅರೆಕೋಟೆ, ನಾಗೇಶ್ವರಕೋಟೆ ಮುಂತಾಗಿ ಕರೆಯುತ್ತಾರೆ. ಅಂತೆಯೇ ಅಲ್ಲಿನ ಅನೇಕ ಹೆಬ್ಬಾಗಿಲುಗಳಿಗೆ ಮತನೂರುಬಾಗಿಲು, ಸಿಂಗಾರದ ಬಾಗಿಲು, ಸಿಮಲಯ್ಯನ ದಿಡ್ಡಿ ಮೊದಲಾದ ಹೆಸರುಗಳಿವೆ. ಅನೇಕ ದೊಣೆಗಳೂ ಹಿಂದಿನ ಕಾಲದ ಉಗ್ರಾಣಗಳು, ಮದ್ದಿನ ಮನೆಗಳು, ಫಿರಂಗಿಯ ತುಂಡುಗಳು ಮತ್ತು ಅರಮನೆಯ ಅವಶೇಷಗಳೂ ಕೋಟೆಗಳೊಳಗಿವೆ. ಬೆಟ್ಟದ ತುದಿಯಲ್ಲಿ ಹರತಿಯ ಪೊಟ್ಟಣ್ಣನಾಯಕ ಕಟ್ಟಿದ (1653) ಬಸವನಗುಡಿ, ಸ್ವಲ್ಪ ಕೆಳಗೆ ತಿಮ್ಮಣ್ಣನಾಯಕ ಜೀರ್ಣೋದ್ಧಾರ ಮಾಡಿದ (1670) ಹಳೆಯ ಕಾಳಹಸ್ತೇಶ್ವರ ಗುಡಿ ಇವೆ. ಸಮೀಪದಲ್ಲೇ 1150ರಲ್ಲಿ ಕಟ್ಟಿದ ಅನೇಕ ಸುಂದರ ಶಿಲ್ಪಗಳಿರುವ ಈಗ ಶಿಥಿಲವಾಗಿರುವ ನಾಗೇಶ್ವರ ದೇವಾಲಯವಿದೆ. ಇದರಿಂದ ಅನತಿ ದೂರದಲ್ಲಿ ಹಿಂದೆ ಪಟ್ಟಣದ ನೀರು ಸರಬರಾಜಿಗಾಗಿ ಇದ್ದ ಭೂಗತ ನಾಲೆ ಇದೆ. ಹರತಿಯ ಚಿಕ್ಕತಿಪ್ಪನಾಯಕ ತನ್ನ ಹೆಂಡತಿ ಲಕ್ಷ್ಮೀದೇವಿಯ ನೆನಪಿಗಾಗಿ ಕಟ್ಟಿದ (1487) ಲಕ್ಷ್ಮಣೇಶ್ವರ ದೇವಾಲಯ ಮತನೂರು ಬಾಗಿಲ ಬಳಿ ಇದೆ.

ಬೆಟ್ಟದ ಮೊದಲ ಏರಿನಲ್ಲಿ ತಳದ ಗ್ರಾಮಕ್ಕೆ ಸೇರಿದಂತೆ ರಂಗಧಾಮನ ಮಂಟಪವೆಂಬ ಶಿಖರವಿರುವ ಒಂದು ಚಿಕ್ಕ ದೇವಾಲಯವಿದೆ. ಗ್ರಾಮದ ಸುತ್ತಮುತ್ತ ಅನತಿದೂರದಲ್ಲಿ ವೀರಭದ್ರ, ಪಾರ್ಶ್ವನಾಥ, ಆದಿನಾರಾಯಣ, ಲಕ್ಷ್ಮೀನರಸಿಂಹ, ನಗರೇಶ್ವರ, ಮಲೆಮಲ್ಲಿಕಾರ್ಜುನ ಮತ್ತು ಸೋಮೇಶ್ವರ ದೇವಾಲಯಗಳಿವೆ. ಇವುಗಳಲ್ಲಿ ಸುಂದರವಾದ ಕೆಲವು ವಿಗ್ರಹಗಳಿರುವ ಪಾರ್ಶ್ವನಾಥ ಬಸದಿ ಶಾಸನವೊಂದರಲ್ಲಿ ಜೋಗುವಟ್ಟಿಗೆಯ ಬಸದಿ ಎಂದು ಕರೆಯಲಾಗಿರುವ 1232ರಲ್ಲಿ ರಚಿತವಾದ ದೇವಾಲಯ. ನಗರೇಶ್ವರ ಮತ್ತು ಸೋಮೇಶ್ವರ ದೇವಾಲಯಗಳು ಕ್ರಮವಾಗಿ 1248 ಮತ್ತು 1292ರಲ್ಲಿ ರಚಿತವಾದ ದ್ರಾವಿಡ ರೀತಿಯ ಕಟ್ಟಡಗಳು.

ಇವಲ್ಲದೆ ದುರ್ಗದ ಅಡಿಯಲ್ಲಿ ಹೊಟ್ಟೇಶ್ವರ (ರಚನೆ 1681), ರಾಮ, ಕಾಶಿವಿಶ್ವೇಶ್ವರ ದೇವಾಲಯಗಳು ಮತ್ತು ಮಿರ್ಜಾ ಹುಸೇನ್ ವಲಿಯ ಸಮಾಧಿ ಸಹ ಇವೆ. (ಎಚ್.ವಿ.ಎಸ್.)

**ನಿಡುಗಲ್ಲು ಚೋಳರು:** 12–13ನೆಯ ಶತಮಾನಗಳಲ್ಲಿ ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳ ಕೆಲವು ಭಾಗಗಳನ್ನು ಆಳುತ್ತಿದ್ದ ಮಹಾಮಂಡಲೇಶ್ವರ ಮನೆತನದ ಅರಸರು. ಇವರ ರಾಜಧಾನಿ ಮೊದಲು ಹೆಂಜೇರು (ಅನಂತಪುರ ಜಿಲ್ಲೆ, ಹಿಂದೂಪುರ ತಾಲ್ಲೂಕಿನಲ್ಲಿರುವ ಈಗಿನ ಹೇಮಾವತಿ), ಅನಂತರ ನಿಡಗಲ್ಲು (ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು). ಇವರು ಸೂರ್ಯವಂಶದವರು. ಕರಿಕಾಲನ ವಂಶೋದ್ಭವರು. ಇವರಿಗೆ ಒಱೆಯೂರುಪುರವರಾಧೀಶ್ವರ, ರೊದ್ದರಗೋವ, ಅಱುವತ್ತರು ಮಂಡಳಿಕರ ಗಂಡ, ಗಂಡಭೇರುಂಡ, ಚೋಳಮಹಾರಾಜ ಇತ್ಯಾದಿ ಬಿರುದುಗಳಿದ್ದುವು.

ಇವರಿಗೂ ಮೂಲಚೋಳ ವಂಶದವರಿಗೂ ಇದ್ದ ಸಂಬಂಧ ತಿಳಿಯದು. ಇವರು ಚೋಳರೆಂದು ಪ್ರಸಿದ್ಧರಾಗಿದ್ದರೂ ಇವರ ಶಾಸನಗಳೆಲ್ಲಾ ಕನ್ನಡದಲ್ಲಿವೆ. ಅಲ್ಲದೆ ಚೋಳಧನಂಜಯ, ಚೋಳಿಕ, ಮುತ್ತರಸ ಮುಂತಾದ ಚೋಳನಾಮವುಳ್ಳ ವ್ಯಕ್ತಿಗಳು 8ನೆಯ ಶತಮಾನದಲ್ಲಿಯೇ ಈ ಪ್ರದೇಶದಲ್ಲಿ ಆಳುತ್ತಿದ್ದರೆಂಬುದೂ ಗಮನಾರ್ಹ ವಿಷಯ.

ಸದ್ಯದ ನಿಡುಗಲ್ಲು ಚೋಳರ ಶಾಸನಗಳಲ್ಲಿ ಬ್ರಹ್ಮಭೋಗೇಂದ್ರ, ಮಂಗಿ, ಬೀಚಿದೇವ (ಬಬ್ಬೆದೇವ), ಗೋವಿಂದ ಎಂಬ ಪೂರ್ವಿಕರ ಪುತ್ರಾನುಕ್ರಮ ದೊರಕುತ್ತದೆ. ಗೋವಿಂದನ ಮಗ ವೀರಪಾಂಡ್ಯ ಇರುಂಗೊಳದೇವ ಪ್ರಥಮ ಮಹಾಮಂಡಲೇಶ್ವರ. ಇವನ ಆಳ್ವಿಕೆ 1106ರ ಹೊತ್ತಿಗೇ ಪ್ರಾರಂಭವಾಗಿತ್ತು. 1128ರ ಒಂದು ಶಾಸನದಲ್ಲಿ ಇವನು ರೊದ್ದ 300, ಸಿರೆ 300, ಹೆಱುವೆ 300, ಸಿಂದವಾಡಿ 1000 ಪ್ರಾಂತ್ಯವನ್ನು ಚಾಳುಕ್ಯತ್ರೈಲೋಕ್ಯಮಲ್ಲನ ಆಶ್ರಯದಲ್ಲಿ ಆಳುತ್ತಿದ್ದನೆಂದು ಹೇಳಿದೆ. ವಿಷ್ಣುವರ್ಧನ ಇವನ ಮೇಲೆ ದಂಡೆತ್ತಿಬಂದಿದ್ದನೆಂದು ಹೊಯ್ಸಳ ಶಾಸನಗಳು ತಿಳಿಸುತ್ತವೆ. ಇರುಂಗೊಳನಿಗೆ ಆಳ್ವದೇವಿ ಎಂಬ ಪತ್ನಿಯೂ ಮಲ್ಲಿದೇವ ಎಂಬ ಮಗನೂ ಇದ್ದರು. ಮಲ್ಲಿದೇವ ತನ್ನ ತಂದೆಯ ಜೊತೆಯಲ್ಲಿಯೇ 1108ರಲ್ಲಿ ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿ ಕೆಲವು ಪ್ರದೇಶಗಳನ್ನು ಆಳುತ್ತಿದ್ದ. 1147ರ ಹೊತ್ತಿಗೆ ಇಮ್ಮಡಿ ಜಗದೇಕಮಲ್ಲನ ಆಶ್ರಯದಲ್ಲಿ ತನ್ನ ತಂದೆಯ ರಾಜ್ಯದ ಮೇಲೆ ಒಡೆತನವನ್ನು ಪಡೆದಿದ್ದ. ಇವನ ರಾಜಧಾನಿ ಹೆಂಜೇರು. ಹೊಯ್ಸಳ ಒಂದನೆಯ ನರಸಿಂಹ ಇವನ ಮೇಲೆ ಅಸಫಲ ದಾಳಿ ಮಾಡಿದ್ದ. ಇವನ ಮಂತ್ರಿ ತಂತ್ರಪಾಲ 1167ರಲ್ಲಿ ಹೆಂಜೇರಿನ ಘಟಿಕಾಸ್ಥಾನಕ್ಕೆ ದಾನವಿತ್ತನೆಂದು ಒಂದು ಶಾಸನದಿಂದ ತಿಳಿಯುತ್ತದೆ. ಇವನ ಆಳ್ವಿಕೆಯ ಬಗ್ಗೆ ತಿಳಿದಿರುವ ಕಡೆಯ ವರ್ಷ 1179. ಇವನಿಗೆ ಲಕ್ಷ್ಮಾದೇವಿ ಮತ್ತು ಸೀತಾದೇವಿ ಎಂಬ ಇಬ್ಬರು ಪತ್ನಿಯರೂ ಬಮ್ಮ ಎಂಬ ಮಗನೂ ಇದ್ದರು. ಬಮ್ಮನ ಹೆಂಡತಿ ಬೀಚಲದೇವಿ. ಇವನ ಇನ್ನೊಬ್ಬ ಮಗನಿರಬಹುದಾದ ಗೋವಿಂದ ಎಂಬುವನ ಉಲ್ಲೇಖ 1207ರ ಒಂದು ಶಾಸನದಲ್ಲಿ ದೊರಕುತ್ತದೆ. 1208ರ ಸುಮಾರಿನಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳ ನಿಡುಗಲ್ಲನ್ನು ಆಕ್ರಮಿಸಿದ್ದ. ಪುನಃ 1232ರ ಹೊತ್ತಿಗೆ ಬಮ್ಮನ ಮಗ ಇರುಂಗೊಳ, 11 ಪ್ರಾಯಶಃ ಸ್ವತಂತ್ರನಾಗಿ ನಿಡುಗಲ್ಲು ರಾಜಧಾನಿಯಿಂದ ಆಳುತ್ತಿದ್ದ. 1267ರಲ್ಲಿ ಇರುಂಗೋಳನು ಹೊಯ್ಸಳ ರಾಜ್ಯಕ್ಕೆ ಸೇರಿದ್ದ ಆನೆಬಿದ್ದಸರಿಯ (ದೇವರಾಯನದುರ್ಗ) ಮೇಲೆ ಆಕ್ರಮಣ ಮಾಡಿದ್ದನಲ್ಲದೆ, 1276ರಲ್ಲಿ ಸೇವುಣರ ಜೊತೆ ಸೇರಿ, ದೋರಸಮುದ್ರದ ದಾಳಿಯಲ್ಲೂ ಭಾಗವಹಿಸಿದ್ದ. 1278ರ ಒಂದು ಶಾಸನದಿಂದ ಹೆದ್ದೊರೆ ಇವನ ರಾಜ್ಯದ ಗಡಿಯಾಗಿದ್ದಿತೆಂದು ತಿಳಿಯುತ್ತದೆ. ಇಮ್ಮಡಿ ಗೋವಿಂದ, ಮುಮ್ಮಡಿ ಇರುಂಗೊಳ, ಭೋಗ, ಬೊಮ್ಮ ಇತ್ಯಾದಿ ರಾಜರು ನಿಡಗಲ್ಲು ರಾಜ್ಯವನ್ನು ಆಳಿದರೆಂದು ಕೆಲವರ ಹೇಳಿಕೆ. ಆದರೆ ಇದು ಅಸ್ಪಷ್ಟ ವಿಷಯ.

ನಿಡುಗಲ್ಲು ಚೋಳರ ಕಿರುಕುಳವನ್ನು ಸಹಿಸದ ಹೊಯ್ಸಳ ಇಮ್ಮಡಿ ನರಸಿಂಹ 1285ರಲ್ಲಿ ನಿಡಗಲ್ಲನ್ನು ನೆಲಸಮ ಮಾಡಿದ. ಇದರೊಂದಿಗೆ ಈ ಚೋಳವಂಶದ ಆಳ್ವಿಕೆ ಕೊನೆಗೊಂಡಂತೆ ತೋರುತ್ತದೆ.

ಅನಂತರ 14–15ನೆಯ ಶತಮಾನಗಳ ಶಾಸನಗಳಲ್ಲಿ ಪ್ರಾಯಶಃ ಈ ಕುಲದ ಕೆಲವು ತುಂಡಧಿಕಾರಿಗಳ ಹೆಸರುಗಳು ಮಾತ್ರ ಕೇಳಿಬರುತ್ತವೆ. (ಎಚ್.ವಿ.ಎಸ್.)

**ನಿಪ್ಪಾಣಿ:** ಬೆಳಗಾಂವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಒಂದು ಪಟ್ಟಣ. ಹೋಬಳಿ ಕೇಂದ್ರ. ಬೆಳಗಾಂವಿ–ಕೊಲ್ಹಾಪುರ ಮಾರ್ಗದಲ್ಲಿ ಮಹಾರಾಷ್ಟ್ರ–ಬೆಳಗಾಂವಿಯ ಗಡಿಯಂಚಿನಲ್ಲಿ ಬೆಳಗಾಂವಿಯ ಉತ್ತರಕ್ಕೆ 72 ಕಿಮೀ ದೂರದಲ್ಲೂ ಚಿಕ್ಕೋಡಿಯ ಪಶ್ಚಿಮಕ್ಕೆ 24ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 58,081.

ನಿಪ್ಪಾಣಿ ಪ್ರಸಿದ್ಧಿಗೆ ಬರಲು ದೇಸಾಯಿ ಸಿದ್ದೋಜಿರಾವ್ ಅಪ್ಪಾಸಾಹೇಬ ನಿಂಬಾಳಕರ ಎಂಬಾತ ಕಾರಣನೆಂದು ಹೇಳುವರು. 1812ರಲ್ಲಿ ಎಲ್‌ಫಿನ್‌ಸ್ಟನ್‌ನ ಮಧ್ಯಸ್ಥಿಕೆಯಿಂದ ಕೊಲ್ಲಾಪುರದ ಅರಸ ಮನಗೋಳಿ ಮತ್ತು ಚಿಕ್ಕೋಡಿ ಪರಗಣೆಗಳನ್ನು ನಿಪ್ಪಾಣಿಕರನಿಗೆ ಕೊಟ್ಟನೆಂದು ತಿಳಿದುಬರುತ್ತದೆ. ಮುಂದೆ ನಿಪ್ಪಾಣಿಕರ ಪೇಶ್ವೆಗಳ ಪಕ್ಷ ವಹಿಸಿದ್ದಕ್ಕಾಗಿ ಬ್ರಿಟಿಷರು ಮನಗೋಳಿ ಮತ್ತು ಚಿಕ್ಕೋಡಿ ಪರಗಣೆಗಳನ್ನು ವಾಪಸ್ಸು ಪಡೆದು ಕೊಲ್ಲಾಪುರದ ಅರಸನಿಗೆ ಕೊಟ್ಟರು. 1839ರಲ್ಲಿ ಅಪ್ಪಾಸಾಹೇಬ ಮೃತನಾದುದರಿಂದ ಇಂಗ್ಲಿಷ್ ಸರ್ಕಾರ ಅವನ ಮೊದಲಿನ 15000 ದ ದೇಸಗತಿಯನ್ನು ಬಿಟ್ಟು ಉಳಿದ ಸೀಮೆಯನ್ನೆಲ್ಲಾ ತನ್ನ ವಶಕ್ಕೆ ತೆಗೆದುಕೊಂಡಿತು.

ಇಂದು ನಿಪ್ಪಾಣಿ ಒಂದು ಪ್ರಮುಖ ವ್ಯಾಪಾರ ವಾಣಿಜ್ಯ ಕೇಂದ್ರವಾಗಿದೆ. ಅಕ್ಕಿ, ಅಡಕೆ, ಏಲಕ್ಕಿ, ಸಕ್ಕರೆ, ಕಾಳು, ವಸ್ತ್ರ ಮತ್ತು ಪಾತ್ರೆಗಳ ವ್ಯಾಪಾರ ದಿನೇ ದಿನೇ ಬೆಳೆಯುತ್ತಿದೆ. ನಿಪ್ಪಾಣಿ ತಂಬಾಕಿನ ವ್ಯಾಪಾರಕ್ಕೆ ಇಡೀ ಜಿಲ್ಲೆಯಲ್ಲೇ ಪ್ರಸಿದ್ಧ. ರೈಲುಮಾರ್ಗವಿಲ್ಲದಿದ್ದರೂ ಉತ್ತಮವಾದ ರಸ್ತೆಗಳಿರುವುದರಿಂದ ಜಿಲ್ಲೆಯ ಎಲ್ಲಾ ಕಡೆಗೂ ಮಾರ್ಗಸಂಪರ್ಕವಿದೆ. ನಿಪ್ಪಾಣಿ ಪೌರಾಡಳಿತಕ್ಕೆ ಒಳಪಟ್ಟಿದೆ. 1956 ರವರೆಗೂ ಇಡೀ ಬೆಳಗಾಂವಿ ಜಿಲ್ಲೆಯಲ್ಲೇ ಕುಡಿಯಲು ಕೊಳಾಯಿ ನೀರನ್ನು ಪಡೆಯುತ್ತಿದ್ದ ನಗರ ನಿಪ್ಪಾಣಿ ಒಂದೇ. ರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ, ಪ್ರವಾಸಿಮಂದಿರ, ಧರ್ಮಶಾಲೆ, ಗ್ರಂಥಭಂಡಾರ ಪ್ರೌಢಶಾಲೆ ಮತ್ತು ಕಾಲೇಜುಗಳು ಇವೆ. **(ಎಸ್.ಸಿ.ವಿ.;ವಿ.ಕೆ.)**

**ನಿರಂಜನ:** 1924– 92. ಪ್ರಸಿದ್ಧ ಸಾಹಿತಿ, ಪತ್ರಕರ್ತ, ಅಂಕಣಕಾರ, ಪ್ರಗತಿಶೀಲ ಮನೋಭಾವದ ವಿಚಾರವಂತರು. ಕುಳಕುಂದ ಶಿವರಾಯ ಎಂಬುದು ಇವರ ನಿಜನಾಮ. ಬಾಲ್ಯದಲ್ಲಿ ಗಾಂಧೀವಾದಕ್ಕೆ ಮನಸೋತು, ಅನಂತರ ಸಮಾಜವಾದದತ್ತ ಒಲವು ಬೆಳೆಸಿಕೊಂಡರು. ಹರೆಯದಲ್ಲಿ ಸಮತಾವಾದದ ಸಿದ್ಧಾಂತಗಳಿಂದ ಪ್ರಭಾವಿತರಾಗಿ ಮಾರ್ಕ್ಸ್‌ವಾದಿಯಾಗಿ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಸದಸ್ಯರಾದರು (1943). ಹಲವಾರು ವರ್ಷಗಳ ಅನಂತರ ನಾನಾ ಕಾರಣಗಳಿಂದಾಗಿ ಪಕ್ಷದಿಂದ ಹೊರಬಂದು (1953) ತಮ್ಮ ದಾರಿ ತಾವೇ ಕಂಡುಕೊಂಡರು.

ಇವರು 1924 ಜೂನ್ 15ರಂದು ಈಗಿನ ಮಂಗಳೂರು ಜಿಲ್ಲೆ ಪುತ್ತೂರು ತಾಲ್ಲೂಕಿನ ಕುಳಕುಂದ ಎಂಬ ಹಳ್ಳಿಯಲ್ಲಿ ಜನಿಸಿದರು. ತಾಯಿ ಚಿನ್ನಮ್ಮ. ತಾಯಿಯ ಹೋರಾಟದ ಮನೋಭಾವವೇ ಮಗನಿಗೂ ಮೈ ಮನಗೂಡಿ ಬಂದಿತು. ತಾಯಿ ಅಕ್ಕರೆಯಿಂದ ಇವರನ್ನು ಶಿವರಾಯ ಎಂದು ಕರೆಯುತ್ತಿದ್ದರು. ಕಾಪುವಿನಲ್ಲಿ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ವನ್ನು (1930– 33), ಸುಳ್ಯದಲ್ಲಿ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸವನ್ನು (1934– 38) ಪೂರೈಸಿದರು. ಆ ಅವಧಿಯಲ್ಲಿ ಮಡಕೇರಿಯಿಂದ ಸುಳ್ಯ ಮಾರ್ಗವಾಗಿ ಬಂದ ಗಾಂಧಿಜೀಯನ್ನು ಕಂಡರು. 1935ರಲ್ಲಿ ಶಿವರಾಮ ಕಾರಂತರ ನೇತೃತ್ವದಲ್ಲಿ ಸುಳ್ಯದಲ್ಲಿ ನಡೆದ ಮಕ್ಕಳ ಕೂಟದಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. 1937ರ ಮೊದಲ ಭಾಗದಲ್ಲಿ ಪುತ್ತೂರಿಗೆ ಹೋಗಿ ಜವಾಹರಲಾಲ್ ನೆಹರುರವರ ಭಾಷಣವನ್ನು ಕೇಳಿದರು. ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿ (1938– 41) ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತು ತೇರ್ಗಡೆಯಾದರು. ಆದರೆ ಆಳುವ ಪರಕೀಯರ ಹಂಗು ಬೇಡವೆಂದು ಉತ್ತೀರ್ಣತಾ ಪತ್ರವನ್ನು ನಿರಾಕರಿಸಿ, ಉದ್ಯೋಗವನ್ನರಸುತ್ತ ಮಂಗಳೂರಿಗೆ ಬಂದರು. ರಾಷ್ಟ್ರಬಂಧು ಪತ್ರಿಕಾಲಯದಲ್ಲಿ ಕಾರ್ಯನಿರ್ವಹಿಸುತ್ತಲೇ (1942) ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಪತ್ರಿಕೆಯ ಸುದ್ಧಿಗಾರರಾಗಿ ಕೆಲಸ ಮಾಡಿದರು.

ಪತ್ರಿಕಾ ರಂಗದಲ್ಲಿ ಹೆಚ್ಚಿನ ಅವಕಾಶಕ್ಕಾಗಿ ಮಂಗಳೂರನ್ನು ತೊರೆದು ಬೆಂಗಳೂರಿಗೆ ಬಂದರು. ಪ್ರಜಾಮತ ಪತ್ರಿಕೆಯ ಸಹಸಂಪಾದಕರಾದರು (1945). ಅನಂತರ 1947 ಮೇ 1ರಂದು ಆರಂಭವಾದ ಜನಶಕ್ತಿ ಪತ್ರಿಕೆಯ ಸಂಪಾದಕರಾದರು. 1948ರಲ್ಲಿ ಕಮ್ಯೂನಿಸ್ಟ್ ಪಕ್ಷದ ವಿರುದ್ಧ ಸರ್ಕಾರ ಅಸ್ತ್ರಹಿಡಿದಾಗ ಭೂಗತ ಜೀವನ ನಡೆಸಿದರು. ಜನಶಕ್ತಿ ಪತ್ರಿಕೆಯ ಮೇಲೆ ಸರ್ಕಾರ ನಿಷೇಧಾಜ್ಞೆ ಹೇರುವವರೆಗೂ ಹುಬ್ಬಳ್ಳಿ- ಧಾರವಾಡಗಳಲ್ಲಿ ತಲೆಮರೆಸಿಕೊಂಡು ಪತ್ರಿಕೆಗೆ ಸುದ್ದಿಯನ್ನು ಮುಟ್ಟಿಸುತ್ತಿದ್ದರು. ಆ ದಿನಗಳಲ್ಲಿಯೇ ಕುಳಕುಂದ ಶಿವರಾಯರು ನಿರಂಜನರಾದದ್ದು. ಜನಶಕ್ತಿ ಪತ್ರಿಕೆಯಲ್ಲಿ ಮೂರು ವರ್ಷದ ಹಿಂದೆ ಬರೆದ ಲೇಖನಗಳಿಗೆ ಸಂಬಂಧಿಸಿದಂತೆ ಇದೇ ಅವಧಿಯಲ್ಲಿ ಇವರನ್ನು ಬೆಂಗಳೂರಿನಲ್ಲಿ ಬಂಧಿಸಲಾಯಿತು (1951). ತರುವಾಯ ಕಾರವಾರಕ್ಕೆ ಕರೆದೊಯ್ದು ದೀರ್ಘ ವಿಚಾರಣೆಯ ಅನಂತರ ದಂಡ ವಿಧಿಸಿ ಖುಲಾಸೆ ಮಾಡಲಾಯ್ತು.

ಕನ್ನಡ ಅಂಕಣ ಬರೆಹಗಾರರಲ್ಲಿ ಇವರದು ದೊಡ್ಡ ಹೆಸರು. ಇವರು ಬರೆದ ಅಂಕಣ ಶೀರ್ಷಿಕೆಗಳು ಹೀಗಿವೆ: ಸರೂ, ಕೇಳಿದೆಯಾ (ಪ್ರಜಾಮತ, 1945), ಸರೋಜ ಸಂಚಯ (ಉಷಾ, 1946), ಸಂಗಾತಿಯ ಸಂಚಯ (ಜನಶಕ್ತಿ, 1947), ಓದುಗರೊಡನೆ ಐದು ನಿಮಿಷ (ಚಿತ್ರಗುಪ್ತ), ಬಿಸಿಲು ಬೆಳದಿಂಗಳು (ನವಶಕ್ತಿ, 1952), ಮಧುಸಂಚಯ (ಸಾಧನಾ, 1956), ಬೇವು ಬೆಲ್ಲ (ಪ್ರಜಾವಾಣಿ, 1962), ದಿನಚರಿಯಿಂದ (ಕರ್ಮವೀರ). ಇವರು 1964 ರಿಂದ 67ರ ವರೆಗೆ ಇನ್ಫಾ (ಇಂಡಿಯನ್ ನ್ಯೂಸ್ ಅಂಡ್ ಫೀಚರ್ ಅಲೆಯನ್ಸ್) ಸಂಸ್ಥೆಗೆ ಬೆಂಗಳೂರಿನ ಬಾತ್ಮಿದಾರರಾಗಿ ನೇಮಕಗೊಂಡು ಕಾರ್ಯನಿರ್ವಹಿಸಿದ್ದರು. ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿಯಾಗಿ (1943), ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿಯಾಗಿ (1944) ಸಮರ್ಥವಾಗಿ ದುಡಿದರು.

ಇವರು ವಿದ್ಯಾರ್ಥಿ ದೆಸೆಯಲ್ಲಿ ಕಿಶೋರ, ಕತೆಗಾರ, ಕು.ಶಿ.ರಾ. ಶೀರಾ, ಕುಳಕುಂದ ಮೊದಲಾದ ಹೆಸರಿನ ಹತ್ತಾರು ಕಥೆಗಳನ್ನು ಬರೆದಿದ್ದು, ಅವು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಇವರು ಮೊದಲು ಕವಿತೆಗಳನ್ನು ಬರೆದರು. 'ಕರ್ನಾಟಕದ ಕೊಡಗೂಸು' ಕವಿತೆಯನ್ನು ಕು.ಶಿ.ರಾ. ಎಂಬ ಹೆಸರಿನಲ್ಲಿ ಬರೆದಿದ್ದಾರೆ. ಅಲ್ಲದೆ ರಷ್ಯನ್ ಕವಿ ಕಾನ್‌ಸ್ಟಾಂಟಿನ್ ಸಿಮೊನೊವ ಯುದ್ಧರಂಗದಿಂದ ಯೋಧನೊಬ್ಬ ನಲ್ಲೆಗೆ ಬರೆದಂತೆ ಬರೆದಿರುವ ಕವಿತೆಯೊಂದನ್ನು ಕನ್ನಡಕ್ಕೆ ಕಾದಿರೆನಗಾಗಿ ಎಂದು ಅನುವಾದಿಸಿದ್ದಾರೆ. ಆ ದಿನಗಳಲ್ಲಿಯೆ ಇವರು ಬರೆದ ಎಣ್ಣೆ; ಚಿಮಣಿ ಎಣ್ಣೆ ಎಂಬ ಕಥೆ ರಾಷ್ಟ್ರಬಂಧುವಿನಲ್ಲಿ ಪ್ರಕಟವಾಯಿತು. ಈ ಕಥೆಯನ್ನು ಪ್ರಕಟಿಸಿ ಪತ್ರಿಕೆಯ ಸಂಪಾದಕರಾಗಿದ್ದ ಕಡೆಂಗೋಡ್ಲು ಶಂಕರಭಟ್ಟರು ಬ್ರಿಟಿಷ್ ಸರ್ಕಾರದ ವಿಚಾರಣೆಗೊಳಗಾಗಿದ್ದರು. ಈ ಕಥೆಯ ಮಹತ್ತ್ವ ಎಷ್ಟೆಂದರೆ, ಭಾರತದಲ್ಲಿ ತುರ್ತು ಪರಿಸ್ಥಿತಿಯಿದ್ದಾಗ (1975– 76) ಅರುಣ ಪತ್ರಿಕೆಯ ಸಂಪಾದಕರು ಮರುಮುದ್ರಿಸಲು ಸರ್ಕಾರದ ಅನುಮತಿ ಕೋರಿದರೂ ಒಪ್ಪಿಗೆ ದೊರಕಲಿಲ್ಲ.

ಇವರು ರಕ್ತಸರೋವರ, ಅನ್ನಪೂರ್ಣ, ಕೊನೆಯ ಗಿರಾಕಿ, ವಾರದ ಹುಡುಗ, ಕಾತ್ಯಾಯಿನಿ, ಒಂಟಿ ನಕ್ಷತ್ರ ನಕ್ಕಿತು ಮೊದಲಾದ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲ ಕಥೆಗಳನ್ನು ಐ.ಬಿ.ಎಚ್. ಪ್ರಕಾಶನ ಧ್ವನಿ 1, ಧ್ವನಿ 2 ಎಂಬ ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ. ಕಥೆಗಳ ಆರಂಭದಲ್ಲಿ ಆಯಾ ಕಥೆಯ ಹುಟ್ಟು, ಸಂದರ್ಭ, ಬೆಳವಣಿಗೆಯನ್ನು ಕೂಡ ಲೇಖಕರು ನೀಡಿದ್ದಾರೆ. ಬಾಲ್ಯದಲ್ಲಿ ತನ್ನ ಸುತ್ತಮುತ್ತ ನಡೆದ ಘಟನೆಗಳನ್ನು ಅಂದರೆ, ತಂದೆಯಿಲ್ಲದ ಕೊರತೆಯಿಂದಾಗಿ ಬಾಲಕನೊಬ್ಬ ಅನುಭವಿಸುವ ವೇದನೆ, ಬಡವಿಧವೆ ತಾಯಿಯ ದೈನಂದಿನ ಬದುಕಿನ ಯಾತನೆ, ತೊಳಲಾಟಗಳನ್ನು ವಸ್ತುವಾಗಿಸಿಕೊಂಡು ಹಲವಾರು ಕಥೆಗಳನ್ನು ಬರೆದಿದ್ದಾರೆ. ಒಂದು ಹಿಡಿಹುಲ್ಲು, ಬಹಿಷ್ಕೃತೆ, ಮೂರುದುಡ್ಡು ಮೊದಲಾದ ಕಥೆಗಳಲ್ಲಿ ಇಂಥ ಬದುಕಿನ ಚಿತ್ರಣವನ್ನು ಕಾಣಬಹುದು. ರಕ್ತ ಸರೋವರ ಕಥೆಯಲ್ಲಿ ಕ್ಷಿಪ್ರಬದಲಾವಣೆ ತರಬಯಸುವ ಕ್ರಾಂತಿ ಮತ್ತು ದುರಂತಗಳ ಚಿತ್ರಣವಿದೆ. ಕೊನೆಯ ಗಿರಾಕಿ ಕಥೆಯಲ್ಲಿ ಹೆಣ್ಣಿನ ಅಸಹಾಯಕತೆಯನ್ನು ದುರ್ಬಲ ಮನಸ್ಸಿನ ಪುರುಷರು ದುರುಪಯೋಗಪಡಿಸಿಕೊಳ್ಳುವ ಚಿತ್ರಣವಿದೆ. ಈ ಕಥೆಯಲ್ಲಿ ಬರುವ ಕಾಣಿಯಂತಹ ಹೆಣ್ಣುಗಳು ನಿರಂತರ ಶೋಷಣೆಗೊಳಗಾಗುತ್ತ ಸಾಮಾಜಿಕ ಸಮಸ್ಯೆಯ ಪ್ರತಿನಿಧಿಗಳಾಗಿದ್ದಾರೆ. ಒಂಟಿ ನಕ್ಷತ್ರ ನಕ್ಕಿತು ಕಥೆಯಲ್ಲಿ ಎರಡು ತಲೆಮಾರುಗಳ ನಡುವಿನ ಅಭಿಪ್ರಾಯ ಭೇದಗಳನ್ನು ಅಣೆಕಟ್ಟಿನ ವಿವಾದದಲ್ಲಿ ವ್ಯಕ್ತಗೊಳಿಸಿದ್ದಾರೆ. ಕಣ್ಣಾರೆ ಕಂಡವರು ಕಥೆಯಲ್ಲಿ ಬಲಪ್ರಯೋಗದಿಂದ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ನಿರ್ಲಜ್ಜ ರಾಜಕಾರಣಿಗಳ ಚಿತ್ರಣವಿದ್ದು, ಸಮಕಾಲೀನ ವ್ಯವಸ್ಥೆಯ ಮುಖಕ್ಕೆ ಕನ್ನಡಿ ಹಿಡಿದಂತಿದೆ. ಇವರ ಕಥೆಗಳು ಹಿಂದಿ, ತೆಲುಗು, ಮಲಯಾಳಂ, ಇಂಗ್ಲಿಷ್, ರಷ್ಯನ್ ಮತ್ತಿತರ ಭಾಷೆಗಳಿಗೆ ಅನುವಾದಿತವಾಗಿವೆ.

ನಿರಂಜನರು ಇಪ್ಪತ್ತೈದು ಕಾದಂಬರಿಗಳನ್ನು ಬರೆದಿದ್ದಾರೆ. ಮೊದಲ ನೆಯ ಕಾದಂಬರಿ ವಿಮೋಚನೆ. ಕೊನೆಯ ಕಾದಂಬರಿ ಮೃತ್ಯುಂಜಯ. ಬನಶಂಕರಿ, ರಂಗಮ್ಮನ ವಠಾರ, ದೂರದ ನಕ್ಷತ್ರ, ನವೋದಯ, ಚಿರಸ್ಮರಣೆ, ಕಲ್ಯಾಣಸ್ವಾಮಿ, ಸ್ವಾಮಿ ಅಪರಂಪಾರ – ಕೆಲವು ಪ್ರಮುಖ ಕಾದಂಬರಿಗಳು. ಇವರ ಕಾದಂಬರಿಗಳನ್ನು ಐತಿಹಾಸಿಕ ವಸ್ತುವುಳ್ಳವು, ಹೋರಾಟ ಪ್ರಧಾನವಾದವು ಮತ್ತು ಸಾಮಾಜಿಕ ವಸ್ತುವುಳ್ಳವು ಎಂದು ಸ್ಥೂಲವಾಗಿ ಮೂರು ಗುಂಪಾಗಿ ವಿಂಗಡಿಸಬಹುದು. ಚಿರಸ್ಮರಣೆ, ಮೃತ್ಯುಂಜಯ, ಕಲ್ಯಾಣಸ್ವಾಮಿ, ಸ್ವಾಮಿ ಅಪರಂಪಾರ ಕಾದಂಬರಿಗಳಲ್ಲಿ ಐತಿಹಾಸಿಕ ಘಟನೆಗಳ ಕಥಾವಸ್ತು ಇದೆ. ಆದರೆ ಇಲ್ಲಿಯೂ ಹೋರಾಟದ ಚಿತ್ರಣ ಬರುತ್ತದೆ. ಚಿರಸ್ಮರಣೆ ಕಾದಂಬರಿಯ ಮೊದಲರ್ಧದಲ್ಲಿ ಕಯ್ಯೂರು ಎಂಬ ಹಳ್ಳಿಯ ಶಿಕ್ಷಕರೊಬ್ಬರು ತನ್ನ ಶಿಷ್ಯರಾದ ಅಪ್ಪು ಮತ್ತು ಚಿರಕುಂಡರ ಮುಖಾಂತರ ಇಡೀ ಹಳ್ಳಿಯನ್ನು ಎಚ್ಚೆತ್ತುಕೊಳ್ಳು ವಂತೆ ಮಾಡಿ, ರೈತ ಚಳುವಳಿ ನಡೆಸುವುದು ಕಂಡುಬಂದರೆ ಉತ್ತರಾರ್ಧದಲ್ಲಿ ಜಮೀನ್ದಾರರ ಒಳಸಂಚು, ಬ್ರಿಟಿಷರ ದಬ್ಬಾಳಿಕೆ, ರೈತರ ಮುಂದಾಳುಗಳಾದ ಅಪ್ಪು, ಚಿರಕುಂಡ, ಕುಞಂಬು, ಅಬೂಬಕರ್ ಅವರು ಗಲ್ಲು ಶಿಕ್ಷೆಗೊಳಗಾಗುವ ಚಿತ್ರಣವಿದೆ. ಮೃತ್ಯುಂಜಯ ಕಾದಂಬರಿಯಲ್ಲಿ ನಾಲ್ಕುವರೆ ಸಾವಿರ ವರ್ಷಗಳ ಹಿಂದೆ ಈಜಿಪ್ಟ್ ದೇಶದಲ್ಲಿ ನಡೆದ ಗುಲಾಮರ ಮತ್ತು ಅವರನ್ನು ತಮ್ಮ ಬಲವಾದ ಹಿಡಿತದಲ್ಲಿರಿಸಿಕೊಂಡು ದೌರ್ಜನ್ಯ, ದಬ್ಬಾಳಿಕೆಯಿಂದ ಆಳುವವರ ನಡುವೆ ನಡೆದ ಬಿಡುಗಡೆಯ ಹೋರಾಟದ ಚಿತ್ರಣವಿದೆ. ಕಲ್ಯಾಣಸ್ವಾಮಿ ಕಾದಂಬರಿಯಲ್ಲಿ ಕೊಡಗಿನ ಅರಸು ಚಿಕವೀರ ರಾಜೇಂದ್ರ ಅಧಿಕಾರ ಕಳೆದುಕೊಂಡ ಅನಂತರ ಆತನ ದಳಪತಿಯಾಗಿದ್ದ ಪುಟ್ಟಬಸವನೇ ಕಲ್ಯಾಣ ಸ್ವಾಮಿಯಾಗಿ ಬ್ರಿಟಿಷರ ಎದುರಾಗಿ ಜನತೆಯನ್ನು ಒಗ್ಗೂಡಿಸಿ ನಡೆಸಿದ ಹೋರಾಟದ ಕಥೆಯಿದೆ. ಸ್ವಾಮಿ ಅಪರಂಪಾರ ಕಾದಂಬರಿಯಲ್ಲಿ ಚಿಕವೀರ ರಾಜೇಂದ್ರನ ದೊಡ್ಡಪ್ಪನ ಮಗ ವೀರಪ್ಪಸ್ವಾಮಿ ಅಪರಂಪಾರ ನಾಗಿ ವೇಷ ಬದಲಿಸಿಕೊಂಡು ಕೊಡಗು ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಪ್ರಯತ್ನ ಕಂಡುಬರುತ್ತದೆ. ಹೋರಾಟ ಪ್ರಧಾನವಾದ ವಿಮೋಚನೆ ಕಾದಂಬರಿಯಲ್ಲಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಕಂಡುಬರುವ ಜನಸಾಮಾನ್ಯರ ಜೀವನ ಚಿತ್ರಗಳಲ್ಲಿ ಶೋಷಣೆ ಎಡಬಿಡದೆ ಮುಂದುವರೆದಿರುವುದನ್ನು ಕಾಣಬಹುದು. ಸಾಮಾಜಿಕ ಕಾದಂಬರಿಯಾದ ಏಕಾಂಗಿನಿಯ ಕಥಾನಾಯಕಿ ಸುನಂದ ತನ್ನ ಗಂಡ ಪುಟ್ಟಣ್ಣನಿಂದ ದೈಹಿಕ ಮತ್ತು ಮಾನಸಿಕ ಹಿಂಸೆಗೊಳಗಾಗುತ್ತಾಳೆ. ಅನಂತರದಲ್ಲಿ ಗಂಡನಿಂದ ವಿವಾಹ ವಿಚ್ಛೇದನ ಪಡೆದು ಛಲದಿಂದ ಏಕಾಂಗಿಯಾಗಿ ಬದುಕುವ ನಿರ್ಧಾರ ತೆಗೆದುಕೊಳ್ಳುತ್ತಾಳೆ. ರಂಗಮ್ಮನ ವಠಾರ ಕಾದಂಬರಿ ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ಮಧ್ಯಮ ವರ್ಗದವರ ಒಳಬದುಕಿನ ಹೊರಗನ್ನು ಬಯಲು ಮಾಡುತ್ತದೆ. ವಿಮೋಚನೆ (ರಷ್ಯನ್, ಪೋಲಿಷ್, ಇಂಗ್ಲಿಷ್, ಮಲಯಾಳಂ, ತೆಲುಗು), ಅಭಯ (ತೆಲುಗು), ಚಿರಸ್ಮರಣೆ (ಮಲಯಾಳಂ, ತೆಲುಗು, ತಮಿಳು, ಮರಾಠಿ, ಬಂಗಾಲಿ, ತುಳು, ಇಂಗ್ಲಿಷ್), ಸ್ವಾಮಿ ಅಪರಂಪಾರ (ಮಲಯಾಳಂ), ಮೃತ್ಯುಂಜಯ (ಮಲಯಾಳಂ, ತೆಲುಗು, ಹಿಂದಿ, ಅರಬ್ಬಿ) ಕಾದಂಬರಿಗಳು ಇತರ ಭಾಷೆಗೆ ಭಾಷಾಂತರಗೊಂಡಿವೆ.

ಇವರು ಗಾರ್ಕಿಯ ಮದರ್ ಕಾದಂಬರಿಯನ್ನು ತಾಯಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಸಮತಾವಾದ, ಜನತೆಯ ನಡುವೆ, ಚೀಣಾ ದೇಶದ ನೀತಿ ಕಥೆಗಳು, ಮಾನವನ ಪಾಡು, ಸಂಗಮ್ ರಾಜಕೀಯ ವ್ಯವಸ್ಥೆ ಮೊದಲಾದವು ಇವರ ಅನುವಾದಿತ ಕೃತಿಗಳು. ಇವರು ನಾಟಕಗಳನ್ನೂ ಬರೆದಿದ್ದಾರೆ. ಸಂಗಮ ಸ್ನಾನ, ಆಹ್ವಾನ, ನಾವೂ ಮನುಷ್ಯರು ಮೊದಲಾದವು ಇವರ ನಾಟಕಗಳು. 1969ರಲ್ಲಿ ಕರ್ನಾಟಕ ಸಹಕಾರಿ ಪ್ರಕಾಶನ ಎಂಬ ಸಂಸ್ಥೆಯವರು ಮಕ್ಕಳಿಗಾಗಿ ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯನ್ನು ತರಲು ಯೋಜಿಸಿದಾಗ ಅದರ ಜವಾಬ್ದಾರಿಯನ್ನು ವಹಿಸಿಕೊಂಡ ನಿರಂಜನರು ಏಳು ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟರು. 1979–82ರ ಅವಧಿಯಲ್ಲಿ ನವಕರ್ನಾಟಕ ಪ್ರಕಾಶನ ಸಂಸ್ಥೆಗಾಗಿ ಪ್ರಪಂಚದ ಹಲವಾರು ದೇಶ, ಭಾಷೆಯ ಕಥೆಗಳನ್ನು ಕನ್ನಡಕ್ಕೆ ತಂದುಕೊಡುವ ಹೊಣೆಗಾರಿಕೆಯನ್ನು ಹೊತ್ತು ವಿಶ್ವಕಥಾಕೋಶ ಮಾಲಿಕೆಯಲ್ಲಿ 25 ಸಂಪುಟಗಳನ್ನು ಸಂಪಾದಿಸಿ ಕೊಟ್ಟರು. ಭಾರತದ ಇನ್ನಾವುದೇ ಭಾಷೆಯಲ್ಲೂ ಇಂಥ ಯೋಜನೆ ನಡೆದಿಲ್ಲ. ಈ ಎರಡೂ ಯೋಜನೆಯ ಕೆಲಸಗಳು ನಿರಂಜನರ ವಿದ್ವತ್ತಿಗೆ ಸಾಕ್ಷಿಯಾಗಿವೆ.

ಇವರು ಸಲ್ಲಿಸಿದ ಸಾಹಿತ್ಯಕ ಸೇವೆಗಾಗಿ ಅನೇಕ ಗೌರವ ಪ್ರಶಸ್ತಿಗಳು ಇವರಿಗೆ ಲಭ್ಯವಾಗಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1962), ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ (1974), ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ (1985) ಇವುಗ ಳನ್ನು ಹೆಸರಿಸಬಹುದು. ಇವರು ರಾಯಚೂರಿನಲ್ಲಿ ಜರುಗಿದ 38ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿದ್ದರು. 1976ರಲ್ಲಿ ದಾವಣಗೆರೆಯಲ್ಲಿ ಸಮಾವೇಶಗೊಂಡ ಪ್ರಗತಿಪಂಥ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1986ರಲ್ಲಿ ಪುತ್ತೂರಿನಲ್ಲಿ ಇವರಿಗೆ ನಿರಂಜನ ಅಭಿನಂದನ ಗ್ರಂಥವನ್ನು ಸಮರ್ಪಣೆ ಮಾಡಲಾಯಿತು.

ಪ್ರಸಿದ್ಧ ಲೇಖಕಿ ಅನುಪಮಾ ನಿರಂಜನ **(ನೋಡಿ)** ಇವರ ಪತ್ನಿ. ಇವರದು ಅಂತರ್ಜಾತೀಯ ವಿವಾಹ (1956). ಇವರಿಗೆ ತೇಜಸ್ವಿನಿ,

ಸೀಮಂತಿನಿ – ಇಬ್ಬರು ಹೆಣ್ಣು ಮಕ್ಕಳು. ತೇಜಸ್ವಿನಿ ಕೂಡ ಉತ್ತಮ ಲೇಖಕಿ. ನಿರಂಜನ ಅವರು ಪಾರ್ಶ್ವವಾಯು ಪೀಡಿತರಾಗಿ 1992 ಮಾರ್ಚ್ 13ರಂದು ಹೈದರಾಬಾದಿನಲ್ಲಿ ನಿಧನ ಹೊಂದಿದರು. **(ಎಂ.ಎಲ್.ಎಸ್.)**

**ನಿರಂಜನಮೂರ್ತಿ:** ಲಿಂಗವಂತರಲ್ಲಿ ಸರ್ವಸಂಗ ಪರಿತ್ಯಾಗ ಮಾಡಿದ ಬ್ರಹ್ಮಚರ್ಯ ಮತ್ತು ವೈರಾಗ್ಯ ಜೀವನವುಳ್ಳ ವಿರಕ್ತರನ್ನು ಈ ಹೆಸರಿನಿಂದ ಕರೆಯುತ್ತಾರೆ. ವೀರಶೈವ ಸಿದ್ಧಾಂತ ಗ್ರಂಥಗಳಲ್ಲೂ ಶರಣರ ವಚನಗಳಲ್ಲೂ ಬರುವ ಹೆಸರುಗಳಲ್ಲಿ ಇದು ಪ್ರಮುಖವಾದ್ದು. ನಿರಂಜನಮೂರ್ತಿಗಳ ಮೂಲಪುರುಷ ಬಳ್ಳಿಗಾವಿಯ ಅಲ್ಲಮಪ್ರಭು. ಆತನ ಗುರು ಅನಿಮಿಷದೇವರು, ಆತನ ಪರಮಗುರು ನಂದಿಕೇಶ್ವರ, ಅನಂತರ ಬರುವವರು ಹರದನಹಳ್ಳಿಯ ಅನಾದಿಗಣೇಶ್ವರರು, ನಿರಂಜನಮೂರ್ತಿಗಳ ಪರಂಪರೆಯಲ್ಲಿ ಮೂರು ಸಾವಿರ ಭಕ್ತರು, ಏಳು ಸಾವಿರ ಚರಮೂರ್ತಿಗಳು, ನೂರೊಂದುಮಂದಿ ವಿರತಿಗಳು, ಏಳುನೂರ ಎಪ್ಪತ್ತು ಮಂದಿ ಅಮರಗಣಂಗಳು ಆಗಿಹೋಗಿದ್ದಾರೆ. ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಕಲ್ಯಾಣದ ಶೂನ್ಯಸಿಂಹಾಸನದ ಪರಂಪರೆಯಲ್ಲಿ ಚಿತ್ರದುರ್ಗದ ಮುರುಘಾಮಠ, ಹುಬ್ಬಳ್ಳಿಯ ಮೂರು ಸಾವಿರ ಮಠ, ಗದುಗಿನ ತೋಂಟದಾರ್ಯ ಮಠ, ಉರುವಕೊಂಡದ ಕರಿಬಸವಸ್ವಾಮಿ ಮಠ – ಈ ನಾಲ್ಕು ಗುರುಮಠಗಳನ್ನು ನಿರಂಜನಮೂರ್ತಿಗಳ ಮೂಲ ಸ್ಥಾನವೆಂದು ಹೇಳಲಾಗಿದೆ.

ಹೆಣ್ಣು, ಹೊನ್ನು, ಮಣ್ಣುಗಳನ್ನು ಗೆದ್ದವನು, ಜನನಮರಣಗಳಿಗೆ ಅತೀತನಾದವನು ಅನಾದಿ ನಿರಂಜನಮೂರ್ತಿ ಎನಿಸುತ್ತಾನೆ. *

**ನಿರಂಜನ ವಂಶರತ್ನಾಕರ:** ವೀರಶೈವ ಮತೀಯ ಗ್ರಂಥ. ಇದರಲ್ಲಿ ಶೂನ್ಯ ಸಿಂಹಾಸನ ಗುರುಗಳಾದ ಅಲ್ಲಮಪ್ರಭು, ಚನ್ನಬಸವೇಶ್ವರ, ಅನಾದಿ ಗಣನಾಥ, ಆದಿಗಣನಾಥ, ನಿರ್ಮಾಯ ಗಣೇಶ್ವರ, ನಿರಂಜನಸ್ವಾಮಿ, ಜ್ಞಾನಾನಂದ ಸ್ವಾಮಿ, ಆತುಗಣವರ, ಆಥ್ಯಾತು ಗಣನಾಥ, ರುದ್ರಮುನಿ ಸ್ವಾಮಿ, ಬಸವಪ್ರಭು, ಆದಿಲಿಂಗಸ್ವಾಮಿ ಇತ್ಯಾದಿ ಗುರುಪರಂಪರೆ ಚರಿತ್ರೆಯನ್ನು ಹೇಳಲಾಗಿದೆ. ಈ ಗ್ರಂಥ ಐತಿಹಾಸಿಕ ಮಹತ್ತ್ವವನ್ನು ಪಡೆದಿದೆ. ಗ್ರಂಥಕರ್ತೃ ಅದ್ಭುತ ಸಂಗತಿಗಳನ್ನು ವರ್ಣಿಸುವುದನ್ನು ಬಿಟ್ಟು ಐತಿಹಾಸಿಕ ಸಂಗತಿಗಳನ್ನು ಸಂಗ್ರಹಿಸಲು ವಿಶೇಷವಾಗಿ ಪ್ರಯತ್ನಿಸಿದಂತೆ ಕಾಣುತ್ತದೆ. ಈ ಗ್ರಂಥದ ಪ್ರಕಾರ ಮಠಾಧಿಪತಿಗಳು ವೀರಶೈವ ಮತಪ್ರಸಾರದ ಸಲುವಾಗಿ ಎಷ್ಟು ಮಹತ್ತ್ವದ ಪಾತ್ರ ವಹಿಸಿದ ರೆಂಬುದನ್ನು ತಿಳಿಯಬಹುದು. ವೀರಶೈವರಲ್ಲಿ ಶೂನ್ಯ ಸಿಂಹಾಸನದ ಮಠಾಧಿಪತಿಗಳ ಪರಂಪರೆಯನ್ನು ನಿರಂಜನವಂಶವೆಂದು ಕರೆಯುತ್ತಾರೆ.

1932ರಲ್ಲಿ ಫ.ಗು. ಹಳಕಟ್ಟಿಯವರು ತಮಗೆ ದೊರೆತ ಅಪೂರ್ಣ ಹಸ್ತಲಿಖಿತ ಪ್ರತಿಯ ಸಹಾಯದಿಂದ ತಮ್ಮ ಶಿವಾನುಭವ ಗ್ರಂಥಮಾಲೆ ಯಲ್ಲಿ ಇದನ್ನು ಪ್ರಕಟಿಸಿದ್ದಾರೆ. ಗ್ರಂಥದಲ್ಲಿ ಗ್ರಂಥಕರ್ತೃವಿನ ಹೆಸರು ಉಕ್ತವಾಗಿಲ್ಲ. ದೊರೆತಿರುವ ಗ್ರಂಥ ಅಪೂರ್ಣವಿದೆ. *

**ನಿರಂಜನಾರ್ಯ:** ಸು. 1750. ನಂಜುಂಡಶತಕ, ನಿಷ್ಕಾಮ ವಚನ ಮತ್ತು ಗಗನಾರ್ಯರ ತತ್ತ್ವಗಳು ಈತನ ಹೆಸರಿನಲ್ಲಿ ಲಭ್ಯವಿರುವ ಕೃತಿಗಳು. ನಿರಂಜನಾರ್ಯ ಎಂಬುದು ಕವಿಯ ನಿಜನಾಮವೋ ಅಲ್ಲವೋ ಎಂಬುದು ಸ್ಪಷ್ಟವಿಲ್ಲ. ನಂಜುಂಡ ಶತಕದ ಮುಕ್ತಾಯದಲ್ಲಿ ತಾನು ಗಗನಾನಂದ ಗುರುವರ್ಯನ ಶಿಷ್ಯನೆಂದು ಕವಿ ಹೇಳಿಕೊಂಡಿದ್ದಾನೆ.

ನಂಜುಂಡ ಶತಕ ಕಂದ ಪದ್ಯಗಳಲ್ಲಿದ್ದು ಪ್ರತಿ ಪದ್ಯವೂ ಗುರುನಂಜುಂಡಾ ಎಂದು ಮುಗಿಯುತ್ತದೆ. ಇದಕ್ಕೆ ನೀತಿಶಾಸ್ತ್ರ ಎಂಬ ಹೆಸರೂ ಉಂಟು. ಅನುಭಾವ, ನೀತಿ ಈ ಪದ್ಯಗಳ ವಸ್ತು.

ನಿಷ್ಕಾಮ ವಚನ ಹಾಡುಗಳ ಸಂಕಲನ. ಇದರಲ್ಲಿ 129 ಹಾಡುಗಳಿರುವು ದಾಗಿ ಕವಿಚರಿತೆಕಾರರು ತಿಳಿಸಿದ್ದಾರೆ. ಗಗನಾರ್ಯರ ತತ್ತ್ವಗಳು ಎಂಬುದು ಇನ್ನೊಂದು ಹಾಡಿನ ಸಂಕಲನ. ಈ ಹಾಡುಗಳಲ್ಲಿ ವೇದಾಂತವನ್ನು ಬೋಧಿಸಿದೆ. ಕೆಲವು ಹಾಡುಗಳಲ್ಲಿ ಗುರು ಗಗನಾರ್ಯರನ್ನೇ ಸ್ತುತಿಸಿದೆ. ಗಗನಾರ್ಯ ಎಂಬುದು ಹಾಡುಗಳ ಅಂಕಿತ. ಜೀವನದಲ್ಲಿ ಕಷ್ಟವನ್ನು ಅನುಭವಿಸಿ ಸಾಕಾಗಿ, ಸೋತು ಬಹು ಕಷ್ಟಪಟ್ಟೆನಾಭವದಿ ಸಾಕಿನ್ನಹಹ ನಾನ್ಯೆಕ್ಯವಾಗುವೆ ನಿಮ್ಮ ಪದದಿ ಎಂದು ಕವಿ ಹಾಡಿದ್ದಾನೆ. *

**ನಿರಾಲಂಬದೇವ:** 1639– 1711. ವಚನಕಾರ ಶಿವಯೋಗಿ. ಈತನನ್ನು ನಿರಾಲಂಬಶರಣ ಷಣ್ಮುಖ ಶಿವಯೋಗಿ ಎಂದೂ ಕರೆಯುತ್ತಾರೆ. ಅಖಂಡೇಶ್ವರ ಇವನ ವಚನಗಳ ಅಂಕಿತ. ಈತನನ್ನು ಕೊನೆಯ ಶ್ರೇಷ್ಠ ವಚನಕಾರನೆಂದು ಕರೆಯುವ ವಾಡಿಕೆಯಿದೆ. ಈತನ ತಂದೆ ತಾಯಿಗಳು ಮಲ್ಲಶೆಟ್ಟಪ್ಪ ಮತ್ತು ದೊಡ್ಡಮಾಂಬೆಯರು. ಗುರು ಅಖಂಡೇಶ್ವರ, ಗುಲ್ಬರ್ಗ ಜಿಲ್ಲೆಯಲ್ಲಿರುವ ಜೇವರಗಿ ಎಂಬ ಸ್ಥಳದಲ್ಲಿ ಈತ ಅಧಿಪತಿಯಾಗಿದ್ದ ಮಠವಿದೆ. ಈತನ ಹಾಗೂ ಈತನ ಗುರು ಅಖಂಡೇಶ್ವರರ ಗದ್ದುಗೆಗಳೆರಡೂ ಅಲ್ಲಿವೆ. ಆ ಊರಿನಲ್ಲಿ ಇಂದಿಗೂ ಈತನ ಹೆಸರಿನಲ್ಲಿ ರಥೋತ್ಸವ ನಡೆಯುತ್ತದೆ. ಜೇವರಿಗಿಗೆ ಸು. 10ಕಿಮೀ. ದೂರದ ಕೊಳಕೂರ ಎಂಬ ಗ್ರಾಮದ ನಿಸರ್ಗ ಸುಂದರ ತಾಣದಲ್ಲಿ ಈ ಶಿವಯೋಗಿ ತನ್ನ ಸಾರವತ್ತಾದ ಜೀವನದ ಸ್ವಲ್ಪಭಾಗವನ್ನು ಕಳೆದಿದ್ದನೆನ್ನಲು ಆಧಾರವಿದೆ. ಮುಂದೆ ಈತ ಅಖಂಡೇಶ್ವರರ ಉತ್ತರಾಧಿಕಾರಿಯಾಗಿ, ಜೇವರಿಗಿ ವಿರಕ್ತ ಮಠಕ್ಕೆ ಸ್ವಾಮಿಯಾದ. ಅಖಂಡೇಶ್ವರ ಮತ್ತು ಷಣ್ಮುಖ ಶಿವಯೋಗಿಗಳಿಂದ ಇಂದಿನವರೆಗೆ ಈ ಮಠದ ಪರಂಪರೆ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಈಗಿರುವ ಸ್ವಾಮಿಗಳು ಪರಂಪರೆಯಲ್ಲಿ ಹನ್ನೊಂದನೆಯವರು.

ಈತನನ್ನು ಆ ಕಾಲದ ಸಾಮಾಜಿಕ ಅಂತರದ ವಿರುದ್ಧ ಹೋರಾಡಿದ ಕ್ರಾಂತಿಕಾರಿ ಎನ್ನಲಾಗಿದೆ. ಅಸ್ಪೃಶ್ಯರ ಉದ್ಧಾರಕ್ಕಾಗಿ ಈತ ಶ್ರಮಿಸಿದ ಸಂಕೇತವಾಗಿ ಇಂದಿಗೂ ಜೇವರಗಿಯ ಹರಿಜನ ಕೇರಿಯಲ್ಲಿ ಶಿವಯೋಗಿಯ ಮಠವೊಂದಿದೆ. ಹರಿಜನರೊಡನೆ ಸಹಪಂಕ್ತಿಭೋಜನ ಮತ್ತು ಸಮಾನತೆಗಳನ್ನು ಕೇವಲ ಬೋಧಿಸದೆ ನಡೆದು ತೋರಿದ ಶಿವಯೋಗಿ ಈತ. ಅನೇಕರಿಗೆ ಶಿವದೀಕ್ಷೆಯನ್ನೂ ಕೊಟ್ಟನೆನ್ನಲಾಗಿದೆ. ಆದರೆ ಇದನ್ನು ಅಂದಿನ ಪ್ರತಿಷ್ಠಿತ ವೀರಶೈವರು ಒಪ್ಪಿದಂತೆ ಕಾಣುವುದಿಲ್ಲ.

ಈತ ಒಟ್ಟು 717 ವಚನಗಳನ್ನೂ 41 ಜೋಗುಳ ಪದಗಳನ್ನೂ ರಚಿಸಿದ್ದಾನೆ. ವಚನ ಹಾಗೂ ಪದಗಳು ಅನುಭಾವಪೂರ್ಣವಾಗಿ, ಭಾವೋದ್ದೀಪಕವಾಗಿ ಅಂತರಾತುತೇಜೋಯುಕ್ತವಾಗಿದೆ. ಅಸ್ಪೃಶ್ಯರನ್ನು ಒಪ್ಪಿಕೊಳ್ಳದವರನ್ನು ಒಡಂಬಡಿಸುವಂತಿರುವ ಈತನ ಒಂದು ವಚನ ಹೀಗಿದೆ:

ನಾನಾವರ್ಣದ ಕಾಷ್ಟವ ಸುಟ್ಟಲ್ಲಿ ಏಕವರ್ಣದ ಬೂದಿಯಪ್ಪುದಲ್ಲದೆ

ಆ ಕಾಷ್ಟದ ಕುಲ ಉಂಟೇ ಅಯ್ಯಾ

ತೊಟ್ಟ ಬಿಟ್ಟ ಹಣ್ಣು ಮರಳಿ ತೊಟ್ಟ ಹತ್ತ ಬಲ್ಲುದೇ ಅಯ್ಯಾ

ಕಷ್ಟ ಜನ್ಮದಲ್ಲಿ ಹುಟ್ಟಿದಾತನಾದಡಾಗಲಿ ನೆಟ್ಟನೆ ಶ್ರೀ ಗುರು ಕಾರುಣ್ಯವ ಪಡೆದು, ಇಷ್ಟಲಿಂಗ ಸಂಬಂಧಿಯಾಗಿ

ಆಚಾರ ಕ್ರಿಯಾ ಸಂಪನ್ನನಾದ ಶರಣನ

ಜಾತಿ ಪೂರ್ವವ ಎತ್ತಿ ದೂಷಿಸುವ ಪಾತಕರ ಬಾಯಲ್ಲಿ

ಬಾಲ ಹುಳುಗಳು ಸುರಿಯದೆ ಮಾಣ್ಬವೆ ಹೇಳಾ ಅಖಂಡೇಶ್ವರಾ

*

**ನಿಸಾರ್‌ಅಹಮದ್,ಕೆ.ಎಸ್.:** 1936 – . ಪ್ರಸಿದ್ಧ ಕವಿ ಹಾಗೂ ವಿಮರ್ಶಕ. ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ 1936 ಫೆಬ್ರವರಿ 5ರಂದು ಹುಟ್ಟಿದರು. ಸೆಂಟ್ರಲ್ ಕಾಲೇಜಿನಲ್ಲಿ ಓದಿ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು (1959). ಅನಂತರ ಅಧ್ಯಾಪಕರಾಗಿ ಕರ್ನಾಟಕದ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕೆಲಸಮಾಡಿ, ಪ್ರಾಧ್ಯಾಪಕರಾಗಿ ನಿವೃತ್ತರಾದರು (1994). ವಿದ್ಯಾರ್ಥಿ ದೆಸೆಯಲ್ಲಿ ಸೆಂಟ್ರಲ್ ಕಾಲೇಜಿನ ಪ್ರತಿಷ್ಠಿತ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಕನ್ನಡ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ಈತನಕ ಒಟ್ಟು 25 ಕೃತಿಗಳನ್ನು ರಚಿಸಿ ಜನಮನ್ನಣೆಗೆ ಪಾತ್ರರಾಗಿದ್ದಾರೆ.

ಮನಸು ಗಾಂಧಿಬಜಾರು (1960), ನೆನೆದವರ ಮನದಲ್ಲಿ (1964), ಸುಮುಹೂರ್ತ (1967), ಸಂಜೆ ಐದರ ಮಳೆ (1970), ನಾನೆಂಬ ಪರಕೀಯ (1972), ನಿತ್ಯೋತ್ಸವ (1976), ಸ್ವಯಂ ಸೇವೆಯ ಗಿಳಿಗಳು (1977), ಅನಾಮಿಕ ಆಂಗ್ಲರು (1982), ಬಹಿರಂತರ (1990), ನವೋಲ್ಲಾಸ (1994), ಆಕಾಶಕ್ಕೆ ಸರಹದ್ದುಗಳಿಲ್ಲ (1998), ಅರವತ್ತೈದರ ಐಸಿರಿ (2001)–ಇವು ಇವರ ಕವನ ಸಂಕಲನಗಳು. ತಮ್ಮ ಆಯ್ದ ಕವಿತೆಗಳನ್ನು ನಿಸಾರ್ ಅಹಮದ್ ಆಯ್ದಕವಿತೆಗಳು (1974), ಸಮಗ್ರ ಕವಿತೆಗಳು (1991), ನಿಸಾರರ ಪ್ರಾತಿನಿಧಿಕ ಕವನಗಳು (2001), ಸಮಗ್ರ ಭಾವಗೀತೆಗಳು (2001) ಎಂಬ ಸಂಕಲನಗಳಲ್ಲಿ ಪ್ರಕಟಿಸಿದ್ದಾರೆ.

ಇವರು ಕನ್ನಡದ ಅತ್ಯುತ್ತಮ ಹಾಗೂ ಸಮರ್ಥ ಕವಿಗಳಲ್ಲೊಬ್ಬರು. ಇವರ ಕಾವ್ಯದಲ್ಲಿ ನಿಸರ್ಗಪ್ರೀತಿ, ರಾಷ್ಟ್ರಾಭಿಮಾನ, ಸಂಸ್ಕೃತಿಯನ್ನು ಒಪ್ಪಿಕೊಳ್ಳುವ ಮನೋಭಾವ ಮೊದಲಾದ ನವೋದಯದ ಆಶಯಗಳನ್ನು ವಿಶೇಷವಾಗಿ ಕಾಣುತ್ತೇವೆ. ಜೊತೆಗೆ ವಿಡಂಬನೆ, ತಿಳಿಹಾಸ್ಯ, ವ್ಯಂಗ್ಯ, ಅಂತರ್ಮುಖತೆ–ಇವರ ಹಲವಾರು ಕವಿತೆಗಳಿಗೆ ಆಕಾರ ನೀಡಿವೆ. ಪರಕೀಯಪ್ರಜ್ಞೆ ನಿಸಾರರ ಕಾವ್ಯದಲ್ಲಿ ಕೆಲವೊಮ್ಮೆ ಮೂಲಸ್ಥಾಯಿಯಾಗಿರುವುದನ್ನು ಗಮನಿಸಬಹುದು. ಜೊತೆಗೆ ಸುತ್ತಣ ಬದುಕಿನ ರೀತಿನೀತಿಗಳ ಬಗ್ಗೆ ಅತ್ಯಂತ ಸೂಕ್ಷ್ಮವಾಗಿ ಚಿಂತಿಸುವ, ವಿಶಾಲ ಮನೋಭಾವ ವ್ಯಕ್ತಪಡಿಸುವ ಗುಣವನ್ನು ಇವರ ಕಾವ್ಯ ನಾಯಕನಲ್ಲಿ ಗುರುತಿಸಬಹುದಾಗಿದೆ. ಸಂಘರ್ಷಕ್ಕಿಂತ ಸಂಧಾನ ಸಮನ್ವಯಗಳಲ್ಲಿ ನಂಬಿಕೆಯುಳ್ಳ ಕವಿ ಇವರು. ಬಹುಸಂಖ್ಯಾತರ ನಡುವೆ ಬದುಕುತ್ತಿರುವ ವಿದ್ಯಾವಂತ ಮುಸ್ಲಿಂ ಯುವಕನ ಆತಂಕಭರಿತ ಚಿತ್ರವನ್ನು ಇವರ ಕವಿತೆಗಳಲ್ಲಿ ಕಾಣುತ್ತೇವೆ. ನಿಮ್ಮೊಡನಿದ್ದೂ ನಿಮ್ಮಂತಾಗದೆ, ಉಭಯಕಷ್ಟ ಈ ಕವಿತೆಗಳ ನೆಲೆ ಈ ರೀತಿಯದು. ಅಮ್ಮ ಆಚಾರ ನಾನು, ರಂಗೋಲಿ ಮತ್ತು ಮಗ, ಕುರಿಗಳು ಸಾರ್ ಕುರಿಗಳು ಮುಂತಾದ ಹಲವಾರು ಶ್ರೇಷ್ಠ ಕವಿತೆಗಳನ್ನು ನೀಡಿದ ನಿಸಾರರು ಸೌಂದರ್ಯ ಮತ್ತು ಕಲೆಯ ವ್ಯಾಪ್ತಿಯನ್ನು ಹಿಗ್ಗಿಸುವ ಕಾವ್ಯವನ್ನು ನೀಡುವಲ್ಲಿ ಅತ್ಯಂತ ಯಶಸ್ವಿ ಕವಿ ಎನಿಸಿದರು. ಇವರ ಕವಿತೆಗಳಲ್ಲಿ ಮುಸ್ಲಿಂ ಸಂವೇದನೆ ವ್ಯಾಪಕವಾಗಿ ಶೋಧನಾತ್ಮಕವಾಗಿ ಬಾರದೇ ಇದ್ದರೂ ಭಾಷಾ ದೃಷ್ಟಿಯಿಂದ ತಮ್ಮ ಕಾವ್ಯದಲ್ಲಿ ಉರ್ದು ಪದಗಳನ್ನು ಸಹಜವೆಂಬಂತೆ ಬಳಸಿ ಯಶಸ್ವಿಯಾಗಿದ್ದಾರೆ. ನಿಸಾರರ ಕವಿತೆಗಳು ಇಂಗ್ಲಿಷ್, ಹಿಂದಿ, ಉರ್ದು, ಮಲೆಯಾಳಂ, ತೆಲುಗು, ಮರಾಠಿ ಹಾಗೂ ಚೀನಿ ಭಾಷೆಗಳಿಗೆ ತರ್ಜುಮೆಯಾಗಿವೆ.

ಕಾವ್ಯ ಕ್ಷೇತ್ರದಲ್ಲಿ ಸ್ವೋಪಜ್ಞತೆಯನ್ನೂ ಸ್ವತಂತ್ರತೆಯನ್ನೂ ಉಳಿಸಿಕೊಂಡೇ ಬಂದ ಇವರು ವೈಚಾರಿಕ ಕ್ಷೇತ್ರದಲ್ಲೂ ಚಿಂತನ ಮಂಥನ ನಡೆಸಿದ್ದಾರೆ. ಇದು ಬರಿ ಬೆಡಗಲ್ಲೋ ಅಣ್ಣ (1960) ಸಂಕಲನದ ಮೂಲಕ ವಿಮರ್ಶಕರು ಎನಿಸಿದ್ದಾರೆ. ಮನದೊಂದಿಗೆ ಮಾತುಕತೆ (1991), ಹಿರಿಯರು ಹರಸಿದ ಹೆದ್ದಾರಿ (1992), ಅಚ್ಚುಮೆಚ್ಚು (1996), ವಿಚಾರ ವಿಹಾರ (1998), ಸಮಗ್ರ ಗದ್ಯ ಬರಹಗಳು (2002) ಮುಂತಾದ ಕೃತಿಗಳಲ್ಲಿ ಇವರ ವೈಚಾರಿಕ ಚಿಂತನೆ ಪ್ರಕಟವಾಗಿದೆ.

ಅನುವಾದದ ಕ್ಷೇತ್ರದಲ್ಲಿಯೂ ನಿಸಾರರು ಗಮನ ಸೆಳೆದಿದ್ದಾರೆ. ಷೇಕ್ಸ್‌ಪಿಯರ್ ಮಹಾಕವಿಯ ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ, ಒಥೆಲೊ ನಾಟಕಗಳನ್ನು ಸಮಕಾಲೀನ ಭಾಷೆಯಲ್ಲಿ ಅನುವಾದಿಸಿ ಮೊಟ್ಟ ಮೊದಲ ಬಾರಿಗೆ ರಂಗಸ್ಥಳದ ಮೇಲೆ ಅವುಗಳನ್ನು ಅತ್ಯಂತ ಯಶಸ್ವಿಗೊಳಿಸಲು ಕಾರಣರಾಗಿದ್ದಾರೆ. ನಾಟಕಾನುವಾದದ ಕ್ಷೇತ್ರದ ಕ್ರಾಂತಿಕಾರಕ ಪರಿವರ್ತನೆಗೆ ನಾಂದಿ ಹಾಡಿದ್ದಾರೆ. ಇವರ ಈ ನಾಟಕ ತರ್ಜುಮೆಗಳಿಂದ ಪ್ರೇರಿತರಾಗಿ ಅನೇಕರು ಷೇಕ್ಸ್‌ಪಿಯರ್ ಹಾಗೂ ಆಧುನಿಕ ಪಾಶ್ಚಾತ್ಯ ನಾಟಕಕಾರರ ಕೃತಿಗಳನ್ನು ಕನ್ನಡಿಸಿದ್ದಾರೆ. ಕನ್ನಡದಲ್ಲಿ ನಿಸಾರರ ಅನುವಾದಗಳಿಗೆ ಐತಿಹಾಸಿಕ ಮಹತ್ವವಿದೆ.

1978ರಲ್ಲಿ ಭಾರತೀಯ ಭಾಷೆಗಳಲ್ಲೇ ಮೊಟ್ಟಮೊದಲನೆಯ ಭಾವಗೀತೆಗಳ ಕ್ಯಾಸೆಟ್ ‘ನಿತ್ಯೋತ್ಸವ’ವನ್ನು ಹೊರತಂದು ಆ ನಿಟ್ಟಿನಲ್ಲಿ ಹೊಸ ಹಾದಿಯನ್ನು ನಿರ್ಮಿಸಿದ ಕೀರ್ತಿ ನಿಸಾರರಿಗೆ ಸಲ್ಲುತ್ತದೆ. ಇಲ್ಲಿನ ಕವಿತೆಗಳಿಗೆ ಸಂಗೀತ ನೀಡಿ, ಭಾವ ತುಂಬಿ ಹಾಡಿದವರು ಮೈಸೂರು ಅನಂತಸ್ವಾಮಿಯವರು. ದೇಶ ವಿದೇಶಗಳಲ್ಲಿಯೂ ನಿತ್ಯೋತ್ಸವ ಜನಪ್ರಿಯ ಕನ್ನಡ ಕ್ಯಾಸೆಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಸುಶ್ರಾವ್ಯ, ನವೋಲ್ಲಾಸ ಮತ್ತು ಅಪೂರ್ವ, ಅಭಿಷೇಕ ಎಂಬ ಕ್ಯಾಸೆಟ್‌ಗಳು ಈಚೆಗೆ ಬಿಡುಗಡೆಯಾಗಿವೆ. 1994ರಲ್ಲಿ ಇವರ ಸುಮಧುರ ಎಂಬ ಕ್ಯಾಸೆಟ್ ವಿದೇಶದ ದುಬೈ ಮತ್ತು ಅಬುಧಾಬಿ ಪಟ್ಟಣಗಳಲ್ಲಿ ಬಿಡುಗಡೆಯಾದ ಕನ್ನಡ ಸುಗಮ ಸಂಗೀತದ ಪ್ರಥಮ ಕ್ಯಾಸೆಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದಲ್ಲದೆ ನಿತ್ಯೋತ್ಸವ, ಸುಮಧುರ, ನವೋಲ್ಲಾಸ ಕ್ಯಾಸೆಟ್‌ಗಳು ಸಿ.ಡಿ. ರೂಪದಲ್ಲಿ ಕೂಡ ಹೊರಬಂದಿವೆ.

ಹಕ್ಕಿಗಳು (1978), ಶಿಲೆಗಳು ಖನಿಜಗಳು (1978), ಬರ್ಡ್ಸ್ (1978), ರಾಕ್ಸ್ ಅಂಡ್ ಮಿನರಲ್ಸ್ (1978), ಪುಟ್ಟ ಸಂತರು ಮತ್ತು ಕಲೆಗಳು (1978) – ಇವು ಇವರ ಇತರ ಕೃತಿಗಳು. ದಶವಾರ್ಷಿಕ ಕವಿತೆಗಳು (1974– 83), ದಶವಾರ್ಷಿಕ ವಿಮರ್ಶೆ (1974– 83), ದಶವಾರ್ಷಿಕ ಸಣ್ಣಕತೆಗಳು (1974– 83), ಟೆನ್ ಇಯರ್ಸ್ ಆಫ್ ಕನ್ನಡ ಪೊಯೆಟ್ರಿ, ಮಾಸ್ತಿಯವರ ಚಿಕವೀರರಾಜೇಂದ್ರ: ಒಂದು ವಿವೇಚನೆ ಮೊದಲಾದ ಗ್ರಂಥಗಳಿಗೆ ಸಂಪಾದಕರಾಗಿಯೂ ಇವರು ಕಾರ್ಯ ನಿರ್ವಹಿಸಿದ್ದಾರೆ.

ಇವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರ, ಗೌರವಗಳು ದೊರಕಿವೆ. ದೆಹಲಿಯಲ್ಲಿ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಏರ್ಪಾಡಾಗುವ ರಾಷ್ಟ್ರೀಯ ಕವಿಸಮ್ಮೇಳನದಲ್ಲಿ ಇವರು ಎರಡು ಬಾರಿ ಭಾಗವಹಿಸಿದ್ದರು (1967, 1985). 1978ರಲ್ಲಿ ಅಂತಾರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಇವರ ಹಕ್ಕಿಗಳು ಎಂಬ ಪುಸ್ತಕಕ್ಕೆ ಎನ್.ಸಿ.ಇ.ಆರ್.ಟಿ. ರಾಷ್ಟ್ರೀಯ

ಬಹುಮಾನ ದೊರಕಿತು. 1981ರಲ್ಲಿ ಇವರ ಹೆಜ್ಜೆಗುರುತು ಎಂಬ ಕೃತಿಗೆ ಸೋವಿಯತ್ ಲ್ಯಾಂಡ್ ನೆಹರು ಅಂತಾರಾಷ್ಟ್ರೀಯ ಪುರಸ್ಕಾರ ದೊರಕಿದೆ. ಕರ್ನಾಟಕ ರಾಜ್ಯೋತ್ಸವದ ಬೆಳ್ಳಿಹಬ್ಬದ ಪ್ರಯುಕ್ತ ರಾಜ್ಯ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ (1981). ಕೊಲ್ಲಿ ರಾಷ್ಟ್ರದ ದುಬೈ ಮತ್ತು ಅಬುಧಾಬಿ ಪಟ್ಟಣಗಳಲ್ಲಿ ಇವರನ್ನು ಅಲ್ಲಿನ ಕರ್ನಾಟಕ ಸಂಘಗಳು ಸನ್ಮಾನಿಸಿವೆ (1994). ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, (1981, 1982, 1991), ಕೆಂಪೇಗೌಡ ಪ್ರಶಸ್ತಿ (1990), ವಿಶ್ವಮಾನವ ಪ್ರಶಸ್ತಿ (1995), ಸದ್ಭಾವನಾ ಪ್ರಶಸ್ತಿ (1998), ಅನಕೃ ನಿರ್ಮಾಣ ಪ್ರಶಸ್ತಿ (2001), ವೈ.ಬಿ. ತಾತಾಚಾರಿ ಹೆಸರಿನ ಕನ್ನಡ ಸಾಹಿತ್ಯ ಪುರಸ್ಕಾರ (2002) ಮೊದಲಾದ ಹಲವಾರು ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ (1984- 87). ಇವರ ಕಾಲದಲ್ಲಿ ಅಕಾಡೆಮಿಯ ಕಾರ್ಯಕ್ಷೇತ್ರ ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಿತು. **(ಜಿ.ಆರ್.ಟಿ.)**

**ನೀತಿಮಾರ್ಗ:** ತಲಕಾಡು ಗಂಗರಸರ ಒಂದು ಬಿರುದು. ಇದನ್ನೂ ಸತ್ಯವಾಕ್ಯ ಎಂಬುದನ್ನೂ ಇಮ್ಮಡಿ ಶಿವಮಾರನ ಅನಂತರದ ಗಂಗ ಅರಸರು ಏಕಾಂತರ ವರಸೆಯಾಗಿ ಉಪಯೋಗಿಸುತ್ತಿದ್ದರೆಂದು ಹೇಳಲಾಗಿದೆ. ಅಂದರೆ ಒಬ್ಬ ರಾಜ ಸತ್ಯವಾಕ್ಯನಾದರೆ ಮುಂದಿನವನು ನೀತಿಮಾರ್ಗ, ಅವನ ಮುಂದಿನವನು ಪುನಃ ಸತ್ಯವಾಕ್ಯ ಈ ರೀತಿ. ಇದು ಸಾಮಾನ್ಯವಾಗಿ ಸರಿಯಾಗಿದ್ದರೂ ಪೂರ್ಣ ಖಚಿತವಾಗಿಲ್ಲ. ಗಂಗರಾಜರುಗಳಲ್ಲಿ ಎಱೆಗಂಗ I (843- 70), ಎಱೆಗಂಗ II (886- 920), ರಾಚಮಲ್ಲ III (933- 36), ಮರುಳ (961- 63) ಮತ್ತು ಗೋವಿಂದರಸ ಇವರು ನೀತಿಮಾರ್ಗ ಬಿರುದನ್ನು ಧರಿಸಿದ್ದರು. ಇವರಲ್ಲಿ ಕೆಲವರ ಬಗ್ಗೆ ಅವರ ಹೆಸರಿನ ಶೀರ್ಷಿಕೆಯಡಿಯಲ್ಲಿ ಲೇಖನಗಳನ್ನು ಕೊಡಲಾಗಿದೆ. *

**ನೀನಾಸಂ ರಂಗಶಿಕ್ಷಣ ಕೇಂದ್ರ:** ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕಕ್ಕೆ ಹೆಸರು ತಂದ ರಂಗತಂಡ. ನೀಲಕಂಠೇಶ್ವರ ನಾಟ್ಯಸೇವಾ ಸಂಘ ಇದರ ಪೂರ್ತಿ ಹೆಸರು. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಹೆಗ್ಗೋಡು ಇದರ ಕೇಂದ್ರಸ್ಥಾನ. ಇದು ಸ್ಥಳೀಯ ಯುವಕರ ಹವ್ಯಾಸಿ ನಾಟಕ ತಂಡವಾಗಿ ಸ್ಥಾಪನೆಗೊಂಡಿತ್ತು (1949). ಇಲ್ಲಿಯವರೆಗೆ 40 ಕ್ಕೂ ಹೆಚ್ಚು ನಾಟಕಗಳನ್ನಾಡಿದೆ. ಅವುಗಳಲ್ಲಿ ಮುಖ್ಯವಾದವು: ಶಹಜಹಾನ್ (1953), ರಂಗಭಾರತ (1973), ಸಂಗ್ಯಾ ಬಾಳ್ಯಾ (1974), ಬಕ (1975), ಘಾಶಿರಾಂಕೊತ್ವಾಲ್ (1976), ಒಂದು ಲೋಕ ಕಥೆ (1977), ಸಾಹೇಬರು ಬರುತ್ತಾರೆ (1983), ಹ್ಯಾಮ್ಲೆಟ್ (1984), ಬೆಪ್ಪುತಕಡಿ ಭೋಳೇ ಶಂಕರ (1987), ಜೋಕುಮಾರ ಸ್ವಾಮಿ (1989) ಈ ನಾಟಕಗಳನ್ನು ಕೆ.ವಿ. ಸುಬ್ಬಣ್ಣ, ಬಿ.ವಿ.ಕಾರಂತ, ಪ್ರಸನ್ನ, ಕೆ.ವಿ.ಅಕ್ಷರ, ಚಿದಂಬರರಾವ್ ಜಂಬೆ, ಚಂದ್ರಶೇಖರ ಕಂಬಾರ ಮೊದಲಾದವರು ನಿರ್ದೇಶಿಸಿದ್ದಾರೆ.

1970 ರ ದಶಕದಲ್ಲಿ ನೀನಾಸಂ ತನ್ನ ಚಟುವಟಿಕೆಗಳನ್ನು ವಿಸ್ತರಿಸಿತು. ನೀನಾಸಂ ಚಿತ್ರಸಮಾಜದ ಸ್ಥಾಪನೆಯಾದದ್ದು 1973 ರಲ್ಲಿ. ಇದು ಚಿತ್ರೋತ್ಸವ, ಚಿತ್ರವಿಮರ್ಶಾ ಕಾರ್ಯಾಗಾರ ಮತ್ತು ಚಲನಚಿತ್ರಕ್ಕೆ ಸಂಬಂಧಿಸಿದ ಕನ್ನಡ ಪುಸ್ತಕ ಪ್ರಕಟಣೆಯನ್ನು ಆರಂಭಿಸಿತು. ಪ್ರಥಮ ಚಲನಚಿತ್ರೋತ್ಸವ ಸಂಘಟಿಸಿ ಗ್ರಾಮೀಣ ಜನರಿಗೆ ಜಾಗತಿಕ ಮಟ್ಟದ ನಿರ್ದೇಶಕರ ಚಿತ್ರಗಳನ್ನು ಪ್ರದರ್ಶಿಸಿತು (1977). ಇದಲ್ಲದೆ ರಾಜ್ಯದ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಜನಸ್ಪಂದನ ಕಾರ್ಯಕ್ರಮ ಏರ್ಪಡಿಸಿತ್ತು (1983-85). ಈ ಕಾರ್ಯಕ್ರಮದ ಅಡಿಯಲ್ಲಿ ಹೆಗ್ಗೋಡಿನಲ್ಲಿ 16 ಚಿತ್ರೋತ್ಸವಗಳು, 10 ಚಿತ್ರ ಸಂವೇದನಾ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಇದೇ ವೇಳೆ ಹೆಗ್ಗೋಡಿನಿಂದ ಹೊರಗಡೆ 55 ಚಿತ್ರಸಹೃದಯತಾ ಶಿಬಿರಗಳನ್ನೂ 93 ಚಿತ್ರೋತ್ಸವಗಳನ್ನೂ ಸಂಸ್ಥೆ ಸಂಘಟಿಸಿತು. ಪ್ರತಿವರ್ಷ 10 ದಿನಗಳ ಕಾಲ ಚಲನಚಿತ್ರ ಶಿಬಿರಗಳನ್ನು 1979 ರಿಂದ 88 ರವರೆಗೆ ನಡೆಸಿಕೊಂಡು ಬರಲಾಯಿತು. ಅದೀಗ ನೀನಾಸಂ ಸಂಸ್ಕೃತಿ ಶಿಬಿರವಾಗಿ ಮುಂದುವರಿದಿದೆ.

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ (ಎನ್‌ಎಸ್‌ಡಿ) ಮಾದರಿಯಲ್ಲಿ ನೀನಾಸಂ ರಂಗ ಶಿಕ್ಷಣ ಕೇಂದ್ರ ಸ್ಥಾಪನೆಗೊಂಡಿತು (1980). ಕನ್ನಡದ ಉತ್ಸಾಹೀ ಯುವಕರಿಗೆ ರಂಗಕಲೆಗಳಲ್ಲಿ ಶಾಸ್ತ್ರೀಯವಾದ ತರಬೇತಿ ಕೊಡುವ ಮುಖ್ಯ ಉದ್ದೇಶದಿಂದ ಆರಂಭವಾದ ಈ ಕೇಂದ್ರ ರಂಗಶಿಕ್ಷಣವನ್ನು ದೇಶೀಯ ಅಗತ್ಯಕ್ಕೆ ಅನುಗುಣವಾಗಿ ರೂಪಿಸಿಕೊಂಡಿದ್ದು ಮಹತ್ತ್ವದ ಸಾಧನೆ. ರಂಗಶಿಕ್ಷಣಕ್ಕೆ ಅಗತ್ಯವಾದ ಮಾಹಿತಿ ಹಾಗೂ ಪಠ್ಯಗಳನ್ನು ಕನ್ನಡದಲ್ಲಿ ತಯಾರಿಸಿರುವುದು ಹಾಗೂ ರಂಗಶಿಕ್ಷಣಕ್ಕೆ ಸಂಬಂಧಿಸಿದ ಸಮೃದ್ಧ ಗ್ರಂಥಭಂಡಾರ ಹೊಂದಿರುವುದು ಈ ಕೇಂದ್ರದ ವಿಶೇಷ. ರಂಗಶಿಕ್ಷಣ ಕೇಂದ್ರ 89 ನಾಟಕಗಳನ್ನೂ 155 ಅಭ್ಯಾಸಿ ಪ್ರಯೋಗಗಳನ್ನೂ ರಂಗದ ಮೇಲೆ ತಂದಿದೆ (2001).

ನೀನಾಸಂ ರಂಗಶಿಕ್ಷಣ ಕೇಂದ್ರ ರಂಗಕಲೆಯ ಒಂದು ವರ್ಷದ ಡಿಪ್ಲೊಮಾ ನಡೆಸುತ್ತಿದೆ. ಇದು ರಂಗಭೂಮಿಯ ತಾತ್ತ್ವಿಕ ಮತ್ತು ಪ್ರಾಯೋಗಿಕ ತರಬೇತಿಯನ್ನು ಒಳಗೊಂಡಿದೆ. ರಂಗಸಿದ್ಧಾಂತ, ನಾಟಕ ಇತಿಹಾಸ, ರಂಗಭೂಮಿ ಇತಿಹಾಸ, ರಂಗಾಭಿನಯ, ರಂಗಸಿದ್ಧತೆ ಮತ್ತು ರಂಗಪ್ರಯೋಗಗಳು ಪಠ್ಯಕ್ರಮದ ಅವಿಭಾಜ್ಯ ಅಂಗಗಳು. ಪ್ರತಿವರ್ಷ ತರಬೇತಿಗಾಗಿ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ 20 ಜನರನ್ನು ಆಯ್ಕೆಮಾಡಲಾಗುತ್ತದೆ.

ತಿರುಗಾಟ ನೀನಾಸಂನ ಒಂದು ವಿಶಿಷ್ಟ ಕಾರ್ಯಕ್ರಮ. ಇಲ್ಲಿನ ರಂಗತಂಡ ನಾಟಕವನ್ನು ರಾಜ್ಯದ ಮೂಲೆಮೂಲೆಗಳಿಗೆ ತಲುಪಿಸುತ್ತದೆ. ಇಂಥ ಒಂದು ಕಾರ್ಯಕ್ರಮ ಆರಂಭಗೊಂಡಿದ್ದು 1985 ರಲ್ಲಿ. ನೀನಾಸಂ ರಂಗಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ಅವಕಾಶವನ್ನು ಇದು ಕಲ್ಪಿಸುತ್ತದೆ. ಜೊತೆಗೆ ಕನ್ನಡದಲ್ಲಿ ಕ್ಷೀಣಿಸಿದ್ದ ವೃತ್ತಿ ರಂಗಭೂಮಿಗೆ ಕಾಯಕಲ್ಪ ನೀಡುವ ಉದ್ದೇಶವನ್ನು ಒಳಗೊಂಡಿದೆ. ತಿರುಗಾಟದ ಉದ್ದೇಶಕ್ಕಾಗಿ ಪ್ರತಿವರ್ಷ ಮೂರು ನಾಟಕಗಳ ಜೊತೆಗೆ ಒಂದು ಮಕ್ಕಳ ನಾಟಕವನ್ನು ಆಯ್ದುಕೊಳ್ಳಲಾಗುತ್ತದೆ. ಮೂರು ತಿಂಗಳ ರಂಗ ತಾಲೀಮಿನ ಅನಂತರ ನಾಲ್ಕು ತಿಂಗಳು, ರಾಜ್ಯದ ಬಹುಪಾಲು ಹಳ್ಳಿ ಪಟ್ಟಣಗಳಿಗೆ ಭೇಟಿ ನೀಡಿ ನಾಟಕ ಪ್ರದರ್ಶಿಸಲಾಗುವುದು.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ನೆರವಿನೊಂದಿಗೆ ನೀನಾಸಂ ಶಾಲಾರಂಗ ಎಂಬ ಶಿಕ್ಷಣದಲ್ಲಿ ರಂಗಭೂಮಿ ಯೋಜನೆಯನ್ನು ನಡೆಸಿತು (1991-93). ರಂಗಶಿಕ್ಷಣ ಕೇಂದ್ರದಲ್ಲಿ ಕಲಿತ ಕಲಾವಿದರ ಗುಂಪೊಂದಕ್ಕೆ ವಿಶೇಷ ತರಬೇತಿ ನೀಡಿ ಶಾಲೆಗಳಲ್ಲಿ ರಂಗಭೂಮಿ ಅಥವಾ ಸಾಂಸ್ಕೃತಿಕ ಕಾರ್ಯಾಗಾರಗಳನ್ನು ನಡೆಸಲಾಯಿತು. ಕಾರ್ಯಾಗಾರದ ಅಂತ್ಯದಲ್ಲಿ ರಂಗ ಪ್ರಯೋಗಗಳಿರುತ್ತಿದ್ದವು. ರಾಜ್ಯದಲ್ಲಿ ಇದುವರೆಗೆ ಇಂಥ ಅನೇಕ ಕಾರ್ಯಾಗಾರಗಳು ನಡೆದಿವೆ.

ಕೆ.ವಿ. ಸುಬ್ಬಣ್ಣನವರು **(ನೋಡಿ)** ನೀನಾಸಂ ಚಟುವಟಿಕೆಗಳ ರೂವಾರಿ. ಇವರು ತಮಗೆ ಸಂದ ಮ್ಯಾಗ್‌ಸೆಸೆ ಪುರಸ್ಕಾರದೊಂದಿಗೆ ಬಂದ ಹಣವನ್ನು ಮೂಲಧನವನ್ನಾಗಿ ಇರಿಸಿ ನೀನಾಸಂ ಪ್ರತಿಷ್ಠಾನವನ್ನು

ಸ್ಥಾಪಿಸಿದ್ದಾರೆ (1992). ಠೇವಣಿಯಿಂದ ಬರುವ ಆದಾಯದಿಂದ ನೀನಾಸಂ ಚಟುವಟಿಕೆಗಳನ್ನು ಹೆಗ್ಗೋಡಿನ ಹೊರಕ್ಕೂ ವಿಸ್ತರಿಸಲಾಗಿದೆ. ಒಂದರಿಂದ ಮೂರು ದಿನಗಳ ಅವಧಿಯ ಸಾಹಿತ್ಯ ಅಧ್ಯಯನ ಶಿಬಿರಗಳನ್ನು ರಾಜ್ಯದ ವಿವಿಧೆಡೆ ಏರ್ಪಡಿಸಲಾಗಿದೆ. ಈವರೆಗೆ ಅಂಥ 40ಕ್ಕೂ ಹೆಚ್ಚು ಶಿಬಿರಗಳು ನಡೆದಿವೆ.

ಆಧುನಿಕ ರಂಗಭೂಮಿಯ ಎಲ್ಲ ಸೌಲಭ್ಯಗಳನ್ನು ಹೊಂದಿರುವ ಶಿವರಾಮ ಕಾರಂತ ರಂಗಮಂದಿರ ನೀನಾಸಂ ನಿರ್ಮಾಣಗಳಲ್ಲೊಂದು. ನೀನಾಸಂ ಮಾತುಕತೆ ಎಂಬುದು ಸಂಸ್ಥೆ ತನ್ನ ಚಟುವಟಿಕೆಗಳನ್ನು ದಾಖಲಿಸಲು ಹೊರತರುತ್ತಿರುವ ಖಾಸಗಿ ಪ್ರಸಾರದ ತ್ರೈಮಾಸಿಕ ಪತ್ರಿಕೆ; ಈ ಪತ್ರಿಕೆಯ ಸಂಪಾದಕರು ಯಶವಂತ ಜಾಧವ್. **(ಎನ್‌ಎ.ಐ.)**

**ನೀರಾವರಿ:** ಕೃಷಿಗೆ ಅತ್ಯಾವಶ್ಯಕವಾದ ನೀರನ್ನು ಕೃತಕ ರೀತಿಯಲ್ಲಿ ಸರಬರಾಜು ಮಾಡುವ ವಿಧಾನವೇ ನೀರಾವರಿ. ಕರ್ನಾಟಕದಲ್ಲಿ ವರ್ಷದ ಕೆಲವೇ ತಿಂಗಳುಗಳಲ್ಲಿ ಮಾತ್ರ ಹೆಚ್ಚು ಮಳೆ ಬೀಳುತ್ತದೆಯಾದ್ದರಿಂದ ಇಲ್ಲಿ ದೊರೆಯುವ ನೀರು ಸಾಕಷ್ಟಿದ್ದರೂ ಅದು ವ್ಯರ್ಥವಾಗಿ ಹರಿದು ಹೋಗುವುದು. ವಿವಿಧ ಭಾಗಗಳಲ್ಲಿ ಬೀಳುವ ಮಳೆಯ ಪರಿಮಾಣ ಆವಶ್ಯಕತೆಗಿಂತ ವ್ಯತ್ಯಾಸವಾಗಿರುವುದು. ಕೆಲವೆಡೆ ಅನಿಶ್ಚಿತವಾಗಿರುವುದು ಮುಂತಾದ ಕಾರಣಗಳಿಂದ ಉತ್ತಮ ನೀರಾವರಿ ವ್ಯವಸ್ಥೆಯನ್ನು ರೂಢಿಸುವುದು ಆವಶ್ಯಕವಾಗಿದೆ. ಈ ಅಂಶವನ್ನು ನಾಡಿನ ಜನ ಹಿಂದಿನಿಂದಲೇ ಮನಗಂಡಿದ್ದು ನೀರಾವರಿ ಕೆಲಸಗಳನ್ನು ಕೈಗೊಂಡಿದ್ದರು. ಇಂದು ಆಧುನಿಕ ವಿಜ್ಞಾನದ ಬೆಳವಣಿಗೆಯೊಡನೆ ಇನ್ನೂ ಹೆಚ್ಚು ವ್ಯಾಪಕವಾಗಿ ವ್ಯವಸ್ಥಿತವಾಗಿ ನೀರಾವರಿಯನ್ನು ರೂಢಿಸಲಾಗುತ್ತಿದೆ.

**ಪ್ರಾಚೀನ :** ಪ್ರಾಚೀನ ಕರ್ನಾಟಕದಲ್ಲಿ ನೀರಾವರಿಯ ಬಗ್ಗೆ ಸ್ಪಷ್ಟ ಕಲ್ಪನೆ ಇತ್ತು. ಕೃಷಿ ಭೂಮಿಗಳನ್ನು ದೇವಮಾತೃಕ ಮತ್ತು ನದೀಮಾತೃಕಗಳೆಂಬ ಎರಡು ಬಗೆಗಳಲ್ಲಿ ವಿಂಗಡಿಸುತ್ತಿದ್ದರು. ಕೇವಲ ಮಳೆ ನೀರನ್ನವಲಂಬಿಸಿದ್ದ ಭೂಮಿಗಳೇ ದೇವಮಾತೃಕಗಳು. ನದಿಯ ನೀರನ್ನು ನೀರಾವರಿ ವಿಧಾನದಲ್ಲಿ ಕಾಲುವೆಗಳ ಮೂಲಕ ಹಾಯಿಸಿದ್ದನ್ನು ಆಶ್ರಯಿಸಿರುವ ಭೂಮಿಗಳು ನದೀಮಾತೃಕಗಳು.

ನೀರಾವರಿ ಪ್ರಧಾನವಾಗಿ ನದಿ, ಕೆರೆ ಮತ್ತು ಬಾವಿಗಳನ್ನು ಅವಲಂಬಿಸಿತ್ತು. ನೀರಾವರಿ ಸಾಧನಗಳೆನಿಸಿದ್ದ ಕಾಲುವೆ, ಕೆರೆಕಟ್ಟೆ ಹಾಗೂ ಬಾವಿಗಳನ್ನು ಕಟ್ಟಿಸುವುದು ಅತಿ ಪುಣ್ಯದ ಕೆಲಸ. ಇದರಿಂದ ಜನತೆಗೆ ಶ್ರೇಯಸ್ಕರವಾಗುವುದು ಮಾತ್ರವಲ್ಲದೆ, ದೇವತೆಗಳೂ ಸುಪ್ರೀತರಾಗುತ್ತಾರೆಂಬ ನಂಬಿಕೆ ಜನಮನದಲ್ಲಿ ಆಳವಾಗಿ ಬೇರೂರಿದ್ದಿತು. ಅಂತೆಯೇ ರಾಜರು, ರಾಜ್ಯಾಧಿಕಾರಿಗಳು, ಶ್ರೀಮಂತರು ಅಷ್ಟೇಕೆ ಸ್ತ್ರೀಯರು ಹಾಗೂ ಸಂನ್ಯಾಸಿಗಳೂ ಈ ಪುಣ್ಯಕಾರ್ಯದಲ್ಲಿ ಭಾಗಿಗಳಾಗಿದ್ದಾರೆ. ಹಾಗೆಯೇ, ಗ್ರಾಮಸಭೆ, ವರ್ತಕಶ್ರೇಣಿ, ದೇವಸ್ಥಾನಗಳಂಥ ಸಂಸ್ಥೆಗಳೂ ಈ ದಿಶೆಯಲ್ಲಿ ಹಿಂದೆ ಬಿದ್ದಿಲ್ಲ. ಅಂದಿನ ಸಮಾಜ ನೀರಾವರಿ ಕಾರ್ಯಕ್ಕೆ ಕೊಟ್ಟಿದ್ದ ಮಹತ್ವ ಹಾಗೂ ಆದ್ಯತೆ ಗಮನಾರ್ಹವಾದುದು. "ಹರಿಯುತ್ತಿರುವ ನೀರಿಗೆ ಅಡ್ಡಲಾಗಿ ಕಟ್ಟುವ ಕಟ್ಟೆಯೇ ಸೇತು (ಸೇತು ಜಲಪ್ರವಾಹ ಬಂಧ), ಇಂಥ ಸೇತುಕಾರ್ಯವನ್ನು ಯಾರೇ ಆಗಲಿ, ತಮ್ಮ ಭೂಮಿಗಳಿಗೆ ಇದರಿಂದ ನಷ್ಟವೇ ಆದರೂ ಅಡ್ಡ ಬಂದು ನಿಲ್ಲಿಸಕೂಡದು. ಏಕೆಂದರೆ ಇದರಿಂದ ಆಗುವ ನಷ್ಟ ಅಲ್ಪ. ಆದರೆ ಪ್ರಯೋಜನ ಮಾತ್ರ ಅತ್ಯಧಿಕ. ಅಸಂಖ್ಯಾತ ಜನರಿಗೆ ಉಪಕಾರಿ. ಬಾವಿ, ಕೊಳ ಮುಂತಾದವುಗಳ ನಿರ್ಮಾಣಕಾರ್ಯಗಳನ್ನು ಎಂದಿಗೂ ನಿಲ್ಲಿಸಬಾರದು; ಇವುಗಳಿಗೆ ಬೇಕಾಗುವ ಸ್ಥಳಾವಕಾಶವಾದರೂ ಅಲ್ಪ ಮಾತ್ರ, ಆದರೆ ತಮ್ಮಲ್ಲಿನ ವಿಪುಲವಾದ ನೀರಿನಿಂದ ಅತ್ಯುಪಯುಕ್ತ"- ಇದು ಪ್ರಸಿದ್ಧ ಧರ್ಮಶಾಸ್ತ್ರಕಾರನಾದ ವಿಜ್ಞಾನೇಶ್ವರನ ಹೇಳಿಕೆ. ಈ ಮಾತುಗಳಲ್ಲಿ ನೀರಾವರಿ ಕಾರ್ಯಗಳ ಬಗ್ಗೆ ಅಂದಿನ ಸಮಾಜದ ಸ್ಪಷ್ಟ ಧೋರಣೆಯನ್ನು ಕಾಣಬಹುದು.

ಸೇತುಬಂಧಗಳ ಪ್ರಸ್ತಾಪ ಹಲವಾರು ಶಾಸನಗಳಲ್ಲಿವೆ. ವರದಾನದಿಗೆ ಒಂದು ಮಹಾ ಸೇತುವಿತ್ತಂತೆ. ಕಾವೇರಿಗೆ ತೂಬುಗಳು ಹಾಗೂ ಕಾಲುವೆಗಳಿದ್ದ ಸಂಗತಿಯೂ ಶಾಸನೋಕ್ತವೇ. ತುಂಗಭದ್ರೆಯ ನೀರು ಕಾಲುವೆಯ ಮೂಲಕ ಹರಿದು ಹೊಲಗದ್ದೆ ತಲುಪಿದ್ದನ್ನು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ 13ನೆಯ ವರ್ಷದಲ್ಲಿ ಬರೆಸಿರುವ ಮುನಿರಾಬಾದ್ ಶಾಸನ ವರ್ಣಿಸುತ್ತದೆ. ತ್ರೈಲೋಕ್ಯಮಲ್ಲ ಸೋಮೇಶ್ವರನ ಕಾಲದಲ್ಲಿದ್ದ ಆದಿತ್ಯಭಟ್ಟನೆಂಬಾತ ತುಂಗಭದ್ರಾ ನದಿಯ ದಂಡೆಗಳನ್ನು ಸಮೀಕ್ಷಿಸಿ ಒಂದು ದೊಡ್ಡ ಕಾಲುವೆಯನ್ನು ತೋಡಿಸಿದ. ಇದರಿಂದ ಹೊರಟ ಸಣ್ಣ ಸಣ್ಣ ನಾಲೆಗಳು ಹಲವಾರು. ಅಲ್ಲದೆ ಮೇಲ್ದಂಡೆಯ (ಉದ್ದಿಯ ಕಾಲು) ಮತ್ತು ಕೆಳದಂಡೆಯ (ಪಳ್ಳವಾಯ್ಕಾಲು) ಕಾಲುವೆಗಳನ್ನೂ ಮಾಡಿಸಿ ಇವೆಲ್ಲವನ್ನೂ ಅಲ್ಲಿನ ಪ್ರಜೆಗಳಿಗೆ ಅರ್ಪಿಸಿದ. ಈ ನೀರಾವರಿ ಯಿಂದ ಬಾಳೆಯೇ ಮುಂತಾದ ಬೆಳೆಗಳು ಸಮೃದ್ಧವಾಗಿ ಬೆಳೆಯಿತು ಎಂದು ಒಂದು ಶಾಸನ ತಿಳಿಸುತ್ತದೆ. ಮತ್ತೊಂದು ನಿದರ್ಶನವನ್ನು ಹಳೇಬೀಡಿನ ಸು. 1300ರ ಶಾಸನವೊಂದರಲ್ಲಿ ನೋಡಬಹುದು. ಯಗಚಿ ನದಿಯ ನೀರನ್ನು ರಾಜಧಾನಿಯಾದ ದ್ವಾರಸಮುದ್ರಕ್ಕೆ (ಇಂದಿನ ಹಳೇಬೀಡಿಗೆ) ತರಲು ಮಾಡಿದ ಪ್ರಯತ್ನದ ಪ್ರಸ್ತಾಪ ಇಲ್ಲಿದೆ. ಇದರ ಬಗ್ಗೆ ಕ್ಯಾಪ್ಟನ್ ಮೆಕೆಂಜಿಯವರ ಅಭಿಪ್ರಾಯವನ್ನು ಇಲ್ಲಿ ಗಮನಿಸ ಬಹುದು. 'ರಾಜಧಾನಿಗೆ ಅಗತ್ಯವಿರುವ ನೀರು, ಮತ್ತು ಸುತ್ತಮುತ್ತಲ ಕೃಷಿಭೂಮಿಗಳಿಗೆ ಬೇಕಾದ ನೀರನ್ನು ಸರಬರಾಜು ಮಾಡುವ ಸಲುವಾಗಿ, ಬೇಲೂರಿನ ಸಮೀಪದಲ್ಲಿ ಹರಿಯುತ್ತಿದ್ದ ಯಗಚಿಯ ನೀರನ್ನು ಕಾಲುವೆ ಮೂಲಕ ಹಳೆಬೀಡಿಗೆ ತರಲಾಯಿತು. ಹಾಸನ-ಬೇಲೂರು ಮಾರ್ಗದ 25ನೆಯ ಕಿಮೀ ಕಲ್ಲಿನ ಹತ್ತಿರ ಕಾಣುವ, ಆಳವಾಗಿ ತೋಡಿರುವ ಕಾಲುವೆಯ ಕೆಲಸ ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಅಂದು ತೋಡಿರುವ ಕಾಲುವೆಯ ಗಾತ್ರ ಆಳಗಳನ್ನು ವೀಕ್ಷಿಸಿದರೆ, ಇದೇನು ಸಾಧಾರಣ ಕಾರ್ಯವಲ್ಲವೆನಿಸುತ್ತದೆ. ಈ ಇಡೀ ಯೋಜನೆ ಅಂದಿನ ಶಿಲ್ಪಿಗಳ ಕೌಶಲ್ಯಕ್ಕೆ ಕೀರ್ತಿ ತರುವಂತಿದೆ' ಎಂದಿದ್ದಾನೆ. ಕೋಲಾರ ಜಿಲ್ಲೆಯ 1388ರ ಶಾಸನವೊಂದು ತಿಳಿಸುವಂತೆ ಎರಡನೆಯ ಬುಕ್ಕರಾಯನ ಅಪ್ಪಣೆಯ ಮೇರೆಗೆ, ಸಿಂಗಾಯಭಟ್ಟ ಎಂಬ ಜಲಸೂತ್ರನು ಹೆನ್ನೆ ನದಿಯ ನೀರನ್ನು ಒಂದು ಕಾಲುವೆಯ ಮೂಲಕ ಸಿರುವೆರ ಕೆರೆಗೆ ಹರಿಸಿದ. ಇದರಿಂದ ಆಗ ನೀರಾವರಿ ತಜ್ಞರಿದ್ದ ಬಗ್ಗೆ ಸುಳಿವು ದೊರೆಯುತ್ತದೆ.

ಬೆಟ್ಟಗುಡ್ಡಗಳಿಂದ ಹರಿದು ಬರುವ ಸಣ್ಣಸಣ್ಣ ನದಿಗಳ ನೀರನ್ನೂ ಕಾಲುವೆಗಳ ಮೂಲಕ ಹಾಯಿಸಿ, ಬೆಳೆಗಳನ್ನು ಬೆಳೆಯುತ್ತಿದ್ದಂತೆ ಕಾಣುತ್ತದೆ. ಇಂಥ ನೀರಾವರಿಯಿಂದ ಕಬ್ಬು, ಬತ್ತ ಮುಂತಾದವುಗಳನ್ನೂ ಬೆಳೆಯುತ್ತಿದ್ದಂತೆ ಶಾಸನವೊಂದು ತಿಳಿಸುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ, ಕಣಿವೆಯ ಕೆಳಭಾಗಗಳಲ್ಲಿನ ಬತ್ತದ ಗದ್ದೆಗಳಿಗೆ ಸಣ್ಣ ಸಣ್ಣ ನದಿಗಳಿಂದ ನೀರು ಹಾಯಿಸಿ ವರ್ಷಕ್ಕೆ ಎರಡು ಬೆಳೆಗಳನ್ನೂ ತೆಗೆಯುತ್ತಿದ್ದರಂತೆ ಇಂಥ ಗದ್ದೆಗಳನ್ನು ಪುಲ್ಲೆಯ ಬಯಲು ಎಂದು ಕರೆಯಲಾಗಿದೆ. ಪುಲ್ಲೆಯ ಬಯಲಿನ ಪ್ರಸ್ತಾಪ ಕೆಲವು ಶಾಸನಗಳಲ್ಲೂ ಇದೆ. **(ಎಸ್.ಜಿ.)**

ಕೆರೆಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತಿ ಪ್ರಮುಖವೆನಿಸಿದ್ದುವು. ಈ ವಿಷಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನೊದ ಗಿಸುವ ಬಹುಪಾಲು ಶಾಸನಗಳು ಕೆರೆಗಳ ಬಗ್ಗೆ ಪ್ರಸ್ತಾಪ ಮಾಡವಂತಹುವೇ ಆಗಿವೆ. ಆದರೆ ಕರ್ನಾಟಕದಲ್ಲಿ ಎಂದಿನಿಂದ ಕೆರೆಗಳ

ನಿರ್ಮಾಣ ಪ್ರಾರಂಭವಾಯಿತೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಹಲವು ಪ್ರಾಗಿತಿಹಾಸಕಾರರ ಮೇರೆಗೆ ಕ್ರಿ.ಪೂ. ಒಂದು ಸಾವಿರದ ಸುಮಾರಿಗೆ ಕರ್ನಾಟಕಕ್ಕೆ ವಲಸೆ ಬಂದ ಬೃಹತ್ ಶಿಲಾಸಮಾಧಿಗಳನ್ನು ಕಟ್ಟುತ್ತಿದ್ದ ಹಾಗೂ ಕಬ್ಬಿಣದ ಉಪಯೋಗವನ್ನು ತಿಳಿದಿದ್ದ ಜನರಿಂದ ಕೆರೆಗಳ ನಿರ್ಮಾಣಕಾರ್ಯ ಆರಂಭವಾಗಿರಬಹುದೆಂದು ಊಹೆ. ಏಕೆಂದರೆ ಈ ಜನರ ನೆಲೆಗಳು ಮತ್ತು ಸ್ಮಶಾನ ಪ್ರದೇಶಗಳು ಪ್ರಾಚೀನ ಕೆರೆಗಳ ಸಮೀಪದಲ್ಲಿ ಕಂಡುಬಂದಿವೆ. ಅಲ್ಲದೆ ಕೆಲವು ಬೃಹತ್ ಶಿಲಾಸಮಾಧಿಗಳಲ್ಲಿ ಬತ್ತ ಅಥವಾ ಬತ್ತದ ಹೊಟ್ಟು ದೊರಕಿರುವುದು ಆ ಕಾಲದಲ್ಲಿ ನೀರಾವರಿ ವ್ಯವಸಾಯ ಇದ್ದುದಕ್ಕೆ ಸೂಚಕವಾಗಿದೆ.

ಕೆರೆಗಳ ನಿರ್ಮಾಣ ಮಾನವನ ಆರ್ಥಿಕ ಜೀವನದಲ್ಲಿ ಒಂದು ಮೈಲಿಗಲ್ಲು. ಕೆರೆಗಳ ನಿರ್ಮಾಣದಿಂದ ಮಾನವ ನದಿದಂಡೆಯನ್ನೇ ತನ್ನ ವಾಸಕ್ಕಾಗಿ ಅವಲಂಬಿಸಬೇಕಾದ ಆವಶ್ಯಕತೆ ಇಲ್ಲದಂತಾಗಿ ತನ್ನ ಜೀವನದ ಪ್ರಗತಿಗೆ ಅನುಕೂಲವಾಗುವಂಥ ಸ್ಥಳಗಳಿಗೆ ವಲಸೆ ಹೋಗಬಲ್ಲವನಾದ. ಕೆರೆಕಟ್ಟುವುದು ಸಾಮೂಹಿಕ ಕೆಲಸವಾದ್ದರಿಂದ ಮತ್ತು ಜನಬಲವನ್ನು ಸಂಘಟಿಸಲು ಮುಂದಾಳು ಅಥವಾ ಮುಖಂಡನ ಆವಶ್ಯಕತೆ ಇರುವುದರಿಂದಾಗಿ ಮಾನವನ ಸಂಘಜೀವನದಲ್ಲಿ ಪ್ರಗತಿಯ ಸಾಧನೆ ಕಂಡುಬರುವುದು ಸಹಜ. ಬಹುಶಃ ಕೆರೆಗಳನ್ನು ಕಟ್ಟುವ ರೂಢಿ ಬೆಳೆದಂತೆ ಕರ್ನಾಟಕದ ಎಲ್ಲೆಡೆಗಳಲ್ಲೂ ಹೊಸ ಹಳ್ಳಿಗಳು ಹುಟ್ಟಿಕೊಂಡುವು. ಅನಾವೃಷ್ಟಿಯ ಭಯವಿಲ್ಲದೆ ಎರಡು ಮೂರು ಬೆಳೆಗಳನ್ನು ಬೆಳೆಯುವುದರಿಂದಾದ ಆರ್ಥಿಕ ಸುಧಾರಣೆ ಮತ್ತು ಸಂತೃಪ್ತಿಯಿಂದಾಗಿ ಮತ್ತು ಕಾಲದ ಉಳಿತಾಯದಿಂದಾಗಿ ಆಧ್ಯಾತ್ಮಿಕ ಹಾಗೂ ಹೊಸ ಅನ್ವೇಷಣೆಗಳ ಕಡೆ ಮನಗೊಡುವಂತಾಗಿ ಮಾನವನ ಪ್ರಗತಿಯಲ್ಲಿ ತೀವ್ರಗತಿ ಕಂಡುಬರುವ ಸಾಧ್ಯತೆಯುಂಟಾಯಿತು. ಈ ಉಪಯೋಗಗಳೇ ನೀರಾವರಿಯನ್ನು ಮತ್ತಷ್ಟು ರೂಢಿಸಲು ಪ್ರೋತ್ಸಾಹದಾಯಕವಾದುವು. ಬಹುಶಃ ಪ್ರತಿ ಗ್ರಾಮದಲ್ಲಿ ಒಂದೊಂದು ಅಥವಾ ಇನ್ನೂ ಹೆಚ್ಚು ಕೆರೆಗಳಿರುತ್ತಿದ್ದವೆನ್ನಬಹುದು. ಕೆರೆಗಳಿಗೆ ಅವುಗಳ ಮಹತ್ವವನ್ನು ತಿಳಿದು ಪೂಜ್ಯ ಸ್ಥಾನ ಕೊಡಲಾಯಿತು ಹಾಗೂ ಕೆರೆಗಳನ್ನು ನಿರ್ಮಿಸಿದವರಿಗೂ ಪೂಜ್ಯಸ್ಥಾನ ಲಭಿಸಿತು. ಆದ್ದರಿಂದ ರಾಜರು, ರಾಜಮನೆತನದವರು ಹಾಗೂ ಶ್ರೀಮಂತರು ಕೆರೆಗಳನ್ನು ನಿರ್ಮಿಸಿ ಜನಪ್ರಿಯರಾದುದಲ್ಲದೆ ತಮ್ಮ ಹೆಸರನ್ನು ಅಮರಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಸ್ತ್ರೀಯರು ಹಾಗೂ ಸಂನ್ಯಾಸಿಗಳೂ ಕೆರೆಗಳನ್ನು ಕಟ್ಟಿಸಿದ ನಿದರ್ಶನಗಳು ಹಲವಾರು. ವೇಶ್ಯೆಯರೂ ತಮ್ಮ ಸಂಪಾದನೆಯಿಂದ ಸಮಾಜ ಹಿತದದೃಷ್ಟಿಯಿಂದ ಕೆರೆಗಳನ್ನು ಕಟ್ಟಿಸಿದ ನಿದರ್ಶನಗಳು ಶಾಸನಗಳಿಂದ ತಿಳಿದು ಬರುತ್ತವೆ. ಮಾತ್ರವಲ್ಲದೆ, ಗ್ರಾಮಸಭೆ, ವರ್ತಕಶ್ರೇಣಿ ಮತ್ತು ದೇವಾಲಯಗಳಂಥ ಸಂಘಸಂಸ್ಥೆಗಳೂ ಈ ಸಾಧನೆಯಲ್ಲಿ ಹಿಂದೆ ಬಿದ್ದಿರಲಿಲ್ಲ.

ಕದಂಬ ಮಯೂರಶರ್ಮ (ಸು. 340) ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯಲ್ಲಿ ಕೆರೆಯನ್ನು ಕಟ್ಟಿಸಿದ ವಿಷಯವನ್ನು ತಿಳಿಸುವ ಅಲ್ಲಿನ ಶಾಸನ ಕೆರೆಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ದೊರೆಯುವ ಅತಿ ಪ್ರಾಚೀನ ಶಾಸನೋಲ್ಲೇಖ. ಹಾಗೆಯೇ ಕಾಕುಸ್ಥವರ್ಮ ಕಟ್ಟಿಸಿದ ತಟಾಕದ ಪ್ರಸ್ತಾಪ ತಾಳಗುಂದ ಶಾಸನದಲ್ಲಿದೆ. ಹೊಯ್ಸಳ 2ನೆಯ ವೀರಬಲ್ಲಾಳನ ಮಂತ್ರಿಯೆನಿಸಿದ್ದ ವೀರದಂಡನಾಯಕ ತಾನೇ ಹೊಸದಾಗಿ ಕಟ್ಟಿಸಿದ ವೀರಬಲ್ಲಾಳಪುರದಲ್ಲಿ ಒಂದು ಯೋಜನೆಯ ಮೇರೆಗೆ ನಾಲ್ಕು ದೊಡ್ಡ ಕೆರೆಗಳನ್ನು ಮಾಡಿಸಿ ಅವನ್ನು ರುದ್ರಸಮುದ್ರ, ಗಂಗಾಸಮುದ್ರ, ಅಚ್ಯುತಸಮುದ್ರ ಮತ್ತು ಭೀಮಸಮುದ್ರ ಎಂದು ಕರೆದ.

ಕೃಷ್ಣದೇವರಾಯ ತಾನೇ ಹೊಸದಾಗಿ ಕಟ್ಟಿಸಿದ ನಾಗಲಾಪುರ ಪಟ್ಟಣಕ್ಕೆ ನೀರನ್ನೊದಗಿಸುವುದಕ್ಕಾಗಿ ಮತ್ತು ಕೃಷಿಭೂಮಿಗಳಿಗೆ ನೀರನ್ನು ಸರಬರಾಜು ಮಾಡುವ ಸಲುವಾಗಿ, ರಾಜಧಾನಿಯ ಬಳಿ ಒಂದು ಬೃಹತ್ ಕೆರೆಯನ್ನು ಕಟ್ಟಿಸಿದ. ಪಯೆಸ್‌ನ ವರ್ಣನೆಯ ಪ್ರಕಾರ ಈ ವಿಶಾಲವಾದ ಕೆರೆ ಎರಡು ಬೆಟ್ಟಗಳ ನಡುವಣ ಪ್ರದೇಶದಲ್ಲಿದ್ದು, ಎಲ್ಲ ಕಡೆಯಿಂದಲೂ ಹರಿದು ಬರುವ ನೀರು ಅಲ್ಲಿ ಸಂಗ್ರಹವಾಗುವಂತಿತ್ತು. ಅಲ್ಲದೆ, ಒಂದು ಸರೋವರದ ನೀರನ್ನು ಹಲವು ಮೈಲಿಗಳ ದೂರದಿಂದ ಕೊಳವೆಗಳ ಮೂಲಕ ತಂದು ಈ ಕೆರೆಗೆ ಬಿಡಲಾಗುತ್ತಿತ್ತು. ಈ ಕೆರೆಯಲ್ಲಿ ಅಂದವಾಗಿ ಕೆತ್ತಿರುವ ಶಿಲ್ಪಗಳನ್ನು ಹೊಂದಿರುವ ಮೂರು ದೊಡ್ಡ ಕಂಬಗಳಿದ್ದು, ಇವುಗಳ ಮೇಲ್ಭಾಗದಲ್ಲಿ ಕೊಳವೆಗಳು ಹಾದುಹೋಗಿದ್ದುವು. ಅಗತ್ಯವಿದ್ದಾಗ, ಈ ಕೊಳವೆಗಳ ಮೂಲಕ ಗದ್ದೆ ತೋಟಗಳಿಗೆ ನೀರನ್ನು ಹಾಯಿಸುತ್ತಿದ್ದರು. ಈ ಕೆರೆಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಕೆಲಸಗಾರರ ಸಂಖ್ಯೆ ಏನಿಲ್ಲದಿದ್ದರೂ 15–20 ಸಾವಿರಕ್ಕೇನೂ ಕಡಿಮೆಯಿರಲಾರದೆಂಬುದು ಪಯೆಸ್‌ನ ಅಂದಾಜು. ಇರುವೆಗಳ ಸಾಲಿನಂತೆ ಕಾಣಿಸುತ್ತಿದ್ದ ಈ ಅಸಂಖ್ಯಾತ ಕಾರ್ಮಿಕ ಜನಸ್ತೋಮ ಓಡಾಡುತ್ತಿದ್ದ ನೆಲವೇ ಕಾಣಿಸುತ್ತಿರಲಿಲ್ಲ ಎನ್ನುತ್ತಾನೆ ಪಯೆಸ್. ಅಲ್ಲದೆ, ಈ ನಿರ್ಮಾಣ ಕಾರ್ಯದ ಮೇಲ್ವಿಚಾರಣೆಯನ್ನು ಚಕ್ರವರ್ತಿ ತನ್ನ ಹಲವಾರು ಅಧಿಕಾರಿಗಳಿಗೆ ವಹಿಸಿದ್ದ. ಕೆರೆಗಳ ಬಗ್ಗೆ ಇಂಥ ಅಸಂಖ್ಯಾತ ವಿವರಗಳು ಶಾಸನಗಳಲ್ಲಿ ದೊರಕುತ್ತವೆ.

ಕೆರೆಯನ್ನು ಯಾರೇ ಕಟ್ಟಿಸಿರಲಿ ಅದನ್ನು ಕಾಪಾಡಿಕೊಂಡು ಬರುವ ಹೊಣೆ ಆ ಊರಿನ ಜನರದ್ದಾಗಿತ್ತು. ಆ ಊರಿನ ವಿವಾಹ, ಉಪನಯನ ಕಾಲಗಳಲ್ಲಿ ಎತ್ತಿದ ತೆರಿಗೆಗಳು ಹಾಗೂ ಪ್ರಾಯಶ್ಚಿತ್ತ, ದಂಡ ಮುಂತಾದವುಗಳ ಮೂಲಕ ಬರುವ ಹಣವನ್ನು ಆ ಊರಿನ ಕೆರೆಗೆ ಸಂಬಂಧಿಸಿದ ದುರಸ್ತಿ ಕೆಲಸಕ್ಕೆ ಬಿಟ್ಟು ಕೊಡುತ್ತಿದ್ದರು. ರಾಜರು, ರಾಜವಂಶದವರು ಹಾಗೂ ಶ್ರೀಮಂತರು ಕೆರೆಯನ್ನು ಸುಸ್ಥಿತಿಯಲ್ಲಿಡಲು, ಭೂಮಿಯನ್ನು ಬಿಟ್ಟುಕೊಡುತ್ತಿದ್ದರು. ಅಂಥ ಭೂಮಿಗೆ ಬಿತ್ತುವಾಟ ಎನ್ನುತ್ತಿದ್ದರು. ಒಂದು ಊರಿನ ಕೆರೆಯ ನೀರನ್ನು ಇನ್ನೊಂದು ಊರಿನ ಗದ್ದೆಗಳಿಗೆ ಹರಿಸಬೇಕಾದರೆ ನಾಡಿನ ಎಲ್ಲಾ ಪ್ರಭುಗಾವುಂಡಗಳ ಒಪ್ಪಿಗೆ ಪಡೆಯಬೇಕಾಗಿದ್ದಿತು. ಕೆರೆಗಳಿಗೆ ಪುರಾತನತ್ವ ಮತ್ತು ಪಾವಿತ್ರ್ಯವನ್ನು ಕೊಡಲು ಪುರಾಣಪ್ರಸಿದ್ಧ ಪುರುಷನೊಡನೆ ಸಂಬಂಧ ಕಲ್ಪಿಸುತ್ತಿದ್ದರು. ಹಾವೇರಿಯ ಹೆಗ್ಗೆರೆಯನ್ನು ನಳಚಕ್ರವರ್ತಿ ಕಟ್ಟಿಸಿದ್ದೆಂದು ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಇಲ್ಲಿ ಉದಾಹರಿಸಬಹುದು. ಕೆರೆಗಳ ಬಗ್ಗೆ ಜನಗಳಿಗಿದ್ದ ಪೂಜ್ಯಭಾವನೆ ಮತ್ತು ಕೆರೆಗಾಗಿ ಸರ್ವಸ್ವವನ್ನೂ ತ್ಯಾಗಮಾಡುವ ಮನೋಭಾವ ಆ ಕಾಲದಲ್ಲಿತ್ತು ಎಂಬುದನ್ನು ಕೆರೆ ನಿರ್ಮಿಸುತ್ತಿರುವಾಗ ಎಷ್ಟೆ ಆಳ ಅಗೆದರೂ ನೀರು ಬಾರದಿದ್ದಾಗ ಊರ ಪ್ರಮುಖನ ಪ್ರೀತಿಯ ವ್ಯಕ್ತಿಯನ್ನು ಬಲಿಕೊಡಬೇಕಾಗಿ ಬರುವುದನ್ನು ವಸ್ತುವಾಗುಳ್ಳ ಹಲವು ಕಥೆಗಳು ಸೂಚಿಸುತ್ತವೆ. **(ಎಸ್.ಜಿ., ಬಿ.ಎಸ್.)**

ನೀರಾವರಿ ಸಾಧನೆಗಳೆನಿಸಿದ ಕೆರೆ– ಕಾಲುವೆ ಮುಂತಾದವುಗಳನ್ನು ಖಾಸಗಿ ವ್ಯಕ್ತಿಗಳು ನಿರ್ಮಿಸಿದಲ್ಲಿ, ಅಂತಹವರಿಗೆ ಭೂಮಿ ಕೊಡುಗೆ, ತೆರಿಗೆ ರಿಯಾಯಿತಿ (ಅಥವಾ ಮನ್ನಣೆ) ಮುಂತಾದ ರೂಪಗಳಲ್ಲಿ ಅಂದಿನ ಸರ್ಕಾರ ಪುರಸ್ಕರಿಸಿ, ಉತ್ತೇಜನ ಕೊಡುತ್ತಿತ್ತು. ಹಾಗೆಯೇ ಪ್ರಜೆಗಳೂ ಅಂಥ ಸಂದರ್ಭಗಳಲ್ಲಿ ತಮ್ಮ ಭೂಮಿಗಳಿಗೆ ನಷ್ಟವಾದಲ್ಲಿ ಆ ಭೂಮಿಗಳನ್ನು ತ್ಯಾಗಮಾಡಿ, ಬದಲು ಬೇರೆ ಭೂಮಿಗಳನ್ನು ಪಡೆಯಲು ಹಿಂಜರಿಯುತ್ತಿರಲಿಲ್ಲ.

ಪ್ರಾಚೀನ ಶಾಸನಗಳು ಆಗಿನ ಕಾಲದಲ್ಲಿದ್ದ ನೀರಾವರಿ ವ್ಯವಸ್ಥೆಯ ಬಗ್ಗೆ ಇನ್ನೂ ಅನೇಕ ವಿವರಗಳನ್ನು ಒದಗಿಸುತ್ತವೆ. 1087ರ ಶಾಸನವೊಂದು

ತಿಳಿಸುವಂತೆ ಬೆಳ್ಕೆಯರ ಎಱಗನೆಂಬುವನು ಸಿರಿಗುಪ್ಪೆಯಲ್ಲಿ ಮರುಕಟ್ಟಿನ ಪಿಡಿಯ ಬಾವಿಯನ್ನು ಕಟ್ಟಿಸಿದ. ಇಂಥ ನಿದರ್ಶನಗಳು ಶಾಸನಗಳಲ್ಲಿ ಅನೇಕ. ಕೆರೆಗಳ ತೂಬಿನಿಂದ ಹೊರಟ ನೀರು ಕಾಲುವೆಗಳ (ಬಾಯ್ಕಲ್, ಕಾಲ್) ಮೂಲಕ ಹರಿದು, ಕೃಷಿ ಭೂಮಿಗಳನ್ನು ತಲುಪುತ್ತಿತ್ತು. ಬಾವಿಗಳಿಂದ ಏತಗಳ ಸಹಾಯದಿಂದ ನೀರೆತ್ತುವ ವ್ಯವಸ್ಥೆಯೂ ರೂಢಿಯಲ್ಲಿತ್ತು. ಇಂಥದೇ ಮತ್ತೊಂದು ನೀರೆತ್ತುವ ಯಂತ್ರವೆಂದರೆ ಘಟೀಯಂತ್ರ ಅಥವಾ ಅರಘಟ್ಟ ಘಟೀಯಂತ್ರ. ಹಾಸನ ಜಿಲ್ಲೆಯ 1147ರ ಶಾಸನವೊಂದರಲ್ಲಿ ಬರುವ ವರ್ಣನೆಯಂತೆ 'ಈ ಯಂತ್ರಕ್ಕೆ ಎತ್ತುಗಳನ್ನು ಹೂಡಿರುತ್ತಾರೆ. ಯಂತ್ರದ ಚಕ್ರ ಮೇಲುಗಡೆ (ಎತ್ತುಗಳು ಚಲಿಸಿದಂತೆ) ತಿರುಗುತ್ತಿರುತ್ತದೆ. ಇದಕ್ಕೆ ಕಟ್ಟಿರುವ ಕುಂಭಗಳ ಒಂದು ಸಾಲು ನೀರನ್ನು ಹೊತ್ತು ಮೇಲಕ್ಕೆ ಬರುತ್ತಿದ್ದರೆ, ನೀರನ್ನು ಸುರಿದು ಬರಿದಾದ ಕುಂಭಗಳ ಒಂದು ಸಾಲು ಕೆಳಕ್ಕೆ ಇಳಿಯುತ್ತಿರುತ್ತದೆ'. ಈ ವರ್ಣನೆ ಪ್ರಾಚೀನ ಕಾಲದಲ್ಲಿ ಕರ್ನಾಟಕದಲ್ಲಿ 'ಪರ್ಷಿಯನ್ ವೀಲ್' ಸಹ ಬಳಕೆಯಲ್ಲಿತ್ತೆಂಬುದನ್ನು ಸೂಚಿಸುತ್ತದೆ. **(ಎಸ್.ಜಿ.)**

ಕೆರೆಕಟ್ಟೆಗಳನ್ನು ಧರ್ಮಕಾರ್ಯಗಳೆಂದೂ ಸಮಾಜದ ಆರ್ಥಿಕ ವ್ಯವಸ್ಥೆಯ ಉನ್ನತಿಗೆ ಸಾಧನವೆಂದೂ ಪರಿಗಣಿಸಿ ಶ್ರೀಮಂತರೂ ರಾಜರೂ ರಾಜ್ಯಾಧಿಕಾರಿಗಳೂ ಕಟ್ಟಿಸುತ್ತಿದ್ದ ಪ್ರವೃತ್ತಿ ಇತ್ತೀಚಿನವರೆಗೂ ನಡೆದುಬಂದಿತ್ತು. ವಿಜಯನಗರ ಕಾಲದಲ್ಲಿ ತುಂಗಭದ್ರಾ ನದಿಗೆ ಕಟ್ಟಿದ್ದ ಸುಮಾರು 8 ಅಣೆಕಟ್ಟೆಗಳೂ (ಈಗ 11,000 ಹೆಕ್ಟೇರಿಗೆ ನೀರುಣಿಸುತ್ತಿವೆ) ಮೈಸೂರು ಅರಸರ ಕಾಲದಲ್ಲಿ ಕಾವೇರಿ ನದಿಗೆ ಕಟ್ಟಿದ 6 ಅಣೆಕಟ್ಟುಗಳೂ ಇವೆ. ಟಿಪ್ಪುಸುಲ್ತಾನ ಸಹ ಕಾವೇರಿಗೆ ಇಂದಿನ ಕೃಷ್ಣರಾಜಸಾಗರ ಇರುವ ಬಳಿ ಒಂದು ಕಟ್ಟೆಯನ್ನು ಕಟ್ಟಲು ಉದ್ದೇಶಿಸಿದ್ದಕ್ಕೆ ಶಾಸನ ದಾಖಲೆ ಇದೆ. ಇದೇ ರೀತಿ ಆದಿಲ್‌ಶಾಹೀ ಅರಸರೂ ಅನೇಕ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಹೀಗೆ ಕಾಲಾನುಕಾಲದಿಂದ ಬೆಳೆದುಬಂದ ನೀರಾವರಿ ಕಾರ್ಯಗಳಿಂದ ಇಂದು ನಾಡಿನ ನೀರಾವರಿ ಸೌಕರ್ಯ ಸಾಕಷ್ಟುಮಟ್ಟಿಗೆ ಹರಡಿದೆ. ಇವೆಲ್ಲಾ ಇಂದಿನ ಬೃಹತ್ ಕಟ್ಟೆಗಳಿಗೆ ಹೋಲಿಸಿದರೆ ಬಹುತೇಕ ಚಿಕ್ಕ ನೀರಾವರಿ ಕಾರ್ಯಗಳು. ಆದರೂ ಈ ಪ್ರಾಚೀನಕಾಲದ ಕೆರೆಕಟ್ಟೆಗಳು ನಾಡಿನಲ್ಲಿ ಇಂದಿನ ನೀರಾವರಿಯಾಗುವ ಕೃಷಿಭೂಮಿಯಲ್ಲಿ ಸುಮಾರು ಕಾಲು ಭಾಗಕ್ಕಷ್ಟಾದರೂ ನೀರೊದಗಿಸುತ್ತಿವೆ. ಶಿಥಿಲವಾಗಿರುವ ಅಥವಾ ಪೂರ್ಣವಾಗಿಯೋ ಅಥವಾ ಭಾಗಶಃವಾಗಿಯೋ ಹೂತುಬಿದ್ದಿರುವ ಅನೇಕ ಕೆರೆಗಳ ದುರಸ್ತಿಯಿಂದ ಇನ್ನೂ ಹೆಚ್ಚು ಉಪಯೋಗ ಪಡೆಯಬಹುದಾಗಿದೆ.

ಸು.19ನೆಯ ಶತಮಾನದಾರಭ್ಯ ಬ್ರಿಟಿಷರ ಆಡಳಿತ ವ್ಯವಸ್ಥೆ ರೂಢಿಗೆ ಬಂದ ಕಾಲದಿಂದಲೂ ನೀರಾವರಿ ಕಾರ್ಯಗಳ ಬಗ್ಗೆ ಹೊಸ ರೂಢಿಗಳು ಬೆಳೆಯುತ್ತಿವೆ. ನಾಡಿನ ಜಲಸಂಪತ್ತು ಸಾರ್ವಜನಿಕ ಸಂಪತ್ತೆಂಬ ಭಾವನೆ ಮತ್ತು ಬದಲಾದ ಆರ್ಥಿಕ ಸ್ಥಿತಿಗಳಿಂದಾಗಿ ಎಲ್ಲೋ ಕೆಲವು ಬಾವಿಕುಂಟೆಗಳನ್ನು ಬಿಟ್ಟು ನೀರಾವರಿಗೆ ಉಪಯುಕ್ತವಾದ ಕೆರೆಕಟ್ಟೆಗಳನ್ನು ಕಟ್ಟುವ ಕಾರ್ಯ ಸರ್ಕಾರದ ಹೊಣೆಯಾಗಿದೆ. ಇತ್ತೀಚಿನ ತಾಂತ್ರಿಕ ಮುನ್ನಡೆ ಹೊಸ ಹೊಸ ವಿಧಾನಗಳನ್ನು ರೂಢಿಸುತ್ತಿದೆ. ನಾಡಿನ ಜಲಸಂಪತ್ತು ಮತ್ತು ಅವಶ್ಯಕತೆಯನ್ನು ಸರಿಯಾಗಿ ಎಣಿಸಿ ಯೋಜಿತವಾದ ರೀತಿಯಲ್ಲಿ ನೀರಾವರಿಯನ್ನು ವ್ಯವಸ್ಥೆಗೊಳಿಸುವ ಕಾರ್ಯ ನಡೆಯುತ್ತಿದೆ. ಬೃಹತ್ ನೀರಾವರಿ ಯೋಜನೆಗಳು ಕಾರ್ಯಗತವಾಗುತ್ತಿವೆ.

ಸ್ವಾತಂತ್ರ್ಯಪೂರ್ವದಲ್ಲಿ ನೀರಾವರಿಯ ಪ್ರಗತಿ ಮಂದಗತಿಯಲ್ಲೇ ಇತ್ತೆನ್ನಬಹುದು. ಹಿರಿಯೂರಿನ ಬಳಿಯ ವಾಣಿವಿಲಾಸಸಾಗರ 1907ರಲ್ಲಿ ಪೂರ್ಣಗೊಂಡ ವೇದಾವತಿ ನದಿಗೆ ಅಡ್ಡಲಾಗಿ 408 ಮೀ ಉದ್ದ 43 ಮೀ ಎತ್ತರದ ಕಟ್ಟೆಯನ್ನು ಕಟ್ಟಿ ಚಿತ್ರದುರ್ಗ ಜಿಲ್ಲೆಯ 2,621 ಹೆಕ್ಟೇರುಗಳಿಗೆ ನೀರಾವರಿ ಒದಗಿಸಿದ್ದು (ವೆಚ್ಚ 45 ಲಕ್ಷ ರೂ.), ಮೈಸೂರಿನ ಬಳಿಯ ಕೃಷ್ಣರಾಜಸಾಗರ (1932ರಲ್ಲಿ ಪೂರ್ಣಗೊಂಡ ಕಾವೇರಿಗೆ ಅಡ್ಡಲಾಗಿ 2,621 ಮೀ ಉದ್ದ 41 ಮೀ ಎತ್ತರದ ಕನ್ನಂಬಾಡಿ ಕಟ್ಟೆಯಿಂದ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ 59,580 ಹೆಕ್ಟೇರುಗಳಿಗೆ ನೀರಾವರಿ ಒದಗಿಸಿದ್ದು (ವೆಚ್ಚ 5.5 ಕೋಟಿ ರೂ.) ಈ ದಿಶೆಯಲ್ಲಿ ಪ್ರಮುಖವಾದ ಮೈಲಿಗಲ್ಲುಗಳು. ಇನ್ನೂ ಇಂತಹವೆಂದರೆ ಭದ್ರಾ ಅಣೆಕಟ್ಟು (1927ರಲ್ಲಿ ಭದ್ರಾ ನದಿಗೆ 250 ಮೀ ಉದ್ದ 3.7 ಮೀ ಎತ್ತರ, ಶಿವಮೊಗ್ಗ ಜಿಲ್ಲೆಯ 4,250 ಹೆಕ್ಟೇರುಗಳು), ಕುಮುದ್ವತಿ ನದಿಯ ಅಂಜನಾಪುರ ಜಲಾಶಯ (1936ರಲ್ಲಿ 1,585 ಮೀ ಉದ್ದ, 20.7 ಮೀ ಎತ್ತರದ ಮಣ್ಣಿನ ಏರಿ ಶಿವಮೊಗ್ಗ ಜಿಲ್ಲೆಯ 6,263 ಹೆಕ್ಟೇರುಗಳು), ಮಾರ್ಕೋನಹಳ್ಳಿ ಜಲಾಶಯ (1939ರಲ್ಲಿ, ಶಿಂಷಾ ನದಿಗೆ 1,609 ಮೀ ಉದ್ದ 22.2 ಮೀ ಎತ್ತರ, ತುಮಕೂರು ಜಿಲ್ಲೆಯ 6,073 ಹೆಕ್ಟೇರುಗಳು), ಕಣ್ವ ಜಲಾಶಯ (1946 ರಲ್ಲಿ ಕಣ್ವ ನದಿಗೆ 1,431 ಮೀ ಉದ್ದ 18 ಮೀ ಎತ್ತರ, ಬೆಂಗಳೂರು ಜಿಲ್ಲೆಯ 2,025 ಹೆಕ್ಟೇರುಗಳು, ಬೈರಮಂಗಲ ಜಲಾಶಯ) 1945ರಲ್ಲಿ 1,619 ಹೆಕ್ಟೇರುಗಳು ಹಾಗೆಯೇ ಗೋಕಾಕ (5,749 ಹೆಕ್ಟೇರುಗಳು) ಮತ್ತು ಧರ್ಮಾ (3,956 ಹೆಕ್ಟೇರು) ನಾಲಾಜಾಲಗಳು.

ಪಂಚವಾರ್ಷಿಕ ಯೋಜನೆಗಳ ಆರಂಭದಿಂದ ನೀರಾವರಿ ಕಾಮಗಾರಿಗಳನ್ನು ಹೆಚ್ಚು ಉತ್ಸಾಹದಿಂದ ಕಾರ್ಯಗತಗೊಳಿಸಲಾಯಿತು. ಹಲವಾರು ಸಣ್ಣ, ಮಧ್ಯಮ ಹಾಗೂ ಭಾರಿ ಪ್ರಮಾಣದ ಕಾರ್ಯಗಳು ಪ್ರಾರಂಭಿಸಲ್ಪಟ್ಟವು.

ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕಾರ್ಯಗತವಾದ ಮುಖ್ಯ ನೀರಾವರಿ ಕಾಮಗಾರಿಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

**ಭದ್ರಾ ಜಲಾಶಯ:** 1947ರಲ್ಲೇ ಪ್ರಾರಂಭವಾಗಿ ಪೂರ್ಣಗೊಂಡಿರುವ ಈ ಜಲಾಶಯ ಲಕ್ಕವಳ್ಳಿಯ ಬಳಿ ಭದ್ರಾ ನದಿಗೆ ಅಡ್ಡಲಾಗಿ 440 ಮೀ ಉದ್ದ ಹಾಗೂ 59 ಮೀ ಎತ್ತರದ ಕಲ್ಲುಗಾರೆ ಕೆಲಸ ಮತ್ತು 1,115 ಮೀ ಉದ್ದದ ಮಣ್ಣಿನ ಏರಿಗಳಿಂದ ನಿರ್ಮಿತವಾಗಿದೆ. ಅದರ ಎಡ, ಬಲ ಎರಡೂ ಕಾಲುವೆಗಳಿಂದ ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ಸುಮಾರು 1 ಲಕ್ಷ ಹೆಕ್ಟೇರುಗಳನ್ನು ನೀರಾವರಿಗೆ ತಂದಿರುವುದರೊಡನೆ 25,000 ಕಿವಾ ವಿದ್ಯುತ್ತನ್ನೂ ಉತ್ಪತ್ತಿಮಾಡುತ್ತದೆ. ಇದಕ್ಕೆ ತಗುಲಿರುವ ವೆಚ್ಚ ಸುಮಾರು ರೂ. 40 ಕೋಟಿ.

**ತುಂಗಾ ಅಣೆಕಟ್ಟು:** ಶಿವಮೊಗ್ಗಕ್ಕೆ ಸುಮಾರು 11 ಕಿಮೀ ದೂರದಲ್ಲಿ ತುಂಗಾನದಿಗೆ ಅಡ್ಡಲಾಗಿ ಕಟ್ಟಿರುವ 542.5 ಮೀ ಉದ್ದ 18 ಮೀ ಎತ್ತರವಿರುವ ಅಣೆಕಟ್ಟು ಶಿವಮೊಗ್ಗ ಜಿಲ್ಲೆಯ 8,700 ಹೆಕ್ಟೇರುಗಳು ನೀರಾವರಿಯಾಗುತ್ತಿದೆ. ಇದರ ಒಟ್ಟು ವೆಚ್ಚ ರೂ. 3.56 ಕೋಟಿ.

**ನುಗು ಜಲಾಶಯ:** ಕಾವೇರಿಯ ಉಪನದಿ ಕಪಿಲಾಗೆ ಬಂದು ಸೇರುವ ನುಗು ಹೊಳೆಗೆ ಹೆಗ್ಗಡದೇವನಕೋಟೆ ತಾಲ್ಲೂಕು ಬೀರವಾಳದ ಬಳಿ 616 ಮೀ ಉದ್ದ 41 ಮೀ ಎತ್ತರದ ಕಲ್ಲುಗಾರೆಯ ಕಟ್ಟೆಯನ್ನು ಕಟ್ಟಿ ಮೈಸೂರು ಜಿಲ್ಲೆಯ 8,000 ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ತರಲಾಗಿದೆ. ಇದಕ್ಕೆ ಆಗಿರುವ ವೆಚ್ಚ ರೂ. 3.11 ಕೋಟಿ.

**ತುಂಗಾಭದ್ರಾ ಜಲಾಶಯ:** ಇದು ಹಿಂದಿನ ಹೈದರಾಬಾದ್ ಮತ್ತು ಮದರಾಸು ರಾಜ್ಯಗಳು ಒಟ್ಟಾಗಿ ಕೈಗೊಂಡ ಒಂದು ಬೃಹತ್ ಯೋಜನೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ 2440 ಮೀ ಉದ್ದ 49.4 ಮೀ ಎತ್ತರ ಉಳ್ಳ ಅಡ್ಡಗಟ್ಟೆ. ಇದರ ಕೆಲಸ

ವನ್ನು 1945ರಲ್ಲೇ ಪ್ರಾರಂಭಿಸಲಾಗಿದ್ದು 1962ರಲ್ಲಿ ಮುಗಿಯಿತು. ಇದರ ಎಡದಂಡೆ ನಾಲೆ ರಾಯಚೂರು ಜಿಲ್ಲೆಯಲ್ಲಿನ 2,32,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಬಲ ಒದಗಿಸಿದರೆ, ದಂಡೆಯ ಕೆಳಮಟ್ಟದ ನಾಲೆ ಬಳ್ಳಾರಿ ಜಿಲ್ಲೆಯಲ್ಲಿ 37,000 ಹೆಕ್ಟೇರ್‌ಗಳನ್ನೂ ಮೇಲುಮಟ್ಟದ ನಾಲೆ ಸುಮಾರು 80,000 ಹೆಕ್ಟೇರ್‌ಗಳನ್ನೂ ನೀರಾವರಿಗೆ ತರುತ್ತದೆ. ಬಲದಂಡೆಯ ಈ ಎರಡೂ ನಾಲೆಗಳು ಕರ್ನಾಟಕದ ಗಡಿಯನ್ನು ದಾಟಿ ಆಂಧ್ರ ಪ್ರದೇಶದಲ್ಲೂ ಸೇವಾನಿರತವಾಗಿರುತ್ತವೆ ಎಂಬುದು ಇಲ್ಲಿನ ವಿಶೇಷ. ನೀರಾವರಿಯೊಡನೆ ವಿದ್ಯುದುತ್ಪಾದನೆಯೂ ಸೇರಿರುವ ಈ ಯೋಜನೆಯ ಒಟ್ಟು ವೆಚ್ಚ ರೂ. 158 ಕೋಟಿ.

**ರಾಜುಲಬಂಡ ಅಣೆಕಟ್ಟು:** ತುಂಗಭದ್ರಾ ಜಲಾಶಯಕ್ಕೆ 128 ಕಿಮೀ ಕೆಳಗೆ ಅದೇ ನದಿಗೆ ಅಡ್ಡಲಾಗಿ ರಾಜುಲಬಂಡ ಎಂಬಲ್ಲಿ 820 ಮೀ ಉದ್ದ ಹಾಗೂ 9.5 ಮೀ ಎತ್ತರವಿರುವ ಒಂದು ಅಣೆಕಟ್ಟೆಯನ್ನು ಕಟ್ಟಿ ಎಡದಂಡೆಯಲ್ಲಿ 117 ಕಿಮೀ ಉದ್ದದ ನಾಲೆಯನ್ನು ತೆಗೆಯಲಾಗಿದೆ. ಇದರ ಮೊದಲಿನ 48 ಕಿಮೀ ಕರ್ನಾಟಕದ ರಾಯಚೂರು ಜಿಲ್ಲೆಯಲ್ಲಿದ್ದು ಮುಂದಿನದು ಆಂಧ್ರದಲ್ಲಿದೆ. 2.51 ಕೋಟಿ ರೂ. ವೆಚ್ಚದ ಈ ಯೋಜನೆ ಯಿಂದ ನಮ್ಮಲ್ಲಿ 2,970 ಹೆಕ್ಟೇರ್ ಪ್ರದೇಶ ನೀರಾವರಿಗೆ ಬಂದಿದೆ. ಇದು ಸಹ ಹಿಂದಿನ ಹೈದರಾಬಾದ್ ಸರ್ಕಾರದಿಂದ 1947ರಲ್ಲಿ ಪ್ರಾರಂಭಿಸಲ್ಪಟ್ಟಿದ್ದುದು (ರೂ. 4.33 ಕೋಟಿ ಒಟ್ಟು ವೆಚ್ಚ).

**ಚಿಕ್ಕಹಗರಿ ಕಟ್ಟೆ:** ತುಂಗಭದ್ರಾಕ್ಕೆ ಒಂದು ಉಪನದಿಯಾದ ಚಿಕ್ಕಹಗರಿ ಹೊಳೆಗೆ ಮಾನ್ವಿ ಗ್ರಾಮದ ಬಳಿ 1,783 ಮೀ ಉದ್ದವೂ 15.2 ಮೀ ಎತ್ತರವೂ ಉಳ್ಳ ಮಣ್ಣಿನ ಏರಿಯನ್ನು ಕಟ್ಟಿ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 2,950 ಹೆಕ್ಟೇರ್ ಪ್ರದೇಶವನ್ನು 2.96 ಕೋಟಿ ರೂ. ವೆಚ್ಚದಲ್ಲಿ ನೀರಾವರಿಗೆ ತರಲಾಗಿದೆ.

**ಕನಕನಾಲೆ ಕಟ್ಟೆ:** ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕು ಕಳ್ಳರ ಹಟ್ಟಿಯ ಬಳಿ ಕನಕನಾಲೆ ಹೊಳೆಗೆ 781 ಮೀ ಉದ್ದ 17.7 ಮೀ ಎತ್ತರದ ಮಣ್ಣು ಏರಿಯನ್ನು ಹಾಕಿ ಸಿಂಧನೂರು ತಾಲ್ಲೂಕಿನ 2,040 ಹೆಕ್ಟೇರ್ ನೀರಾವರಿಗೆ ತರಲು 97 ಲಕ್ಷ ರೂ. ಖರ್ಚು ಮಾಡಿದೆ.

**ಜಂಬದಹಳ್ಳ ಕಟ್ಟೆ:** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ದುಗ್ಗಲಾಪುರದ ಬಳಿ ಜಂಬದ ಹಳ್ಳಕ್ಕೆ ಅಡ್ಡಲಾಗಿ ಕಟ್ಟಿದೆ. ಇಲ್ಲಿನ ಮಣ್ಣಿನ ಏರಿ ಅತ್ಯಂತ ಆಳದ ತಳಪಾಯದಿಂದ 31.7 ಮೀ ಎತ್ತರವಿರುವುದು ಉಲ್ಲೇಖನೀಯ. 838 ಮೀ ಉದ್ದವಿದ್ದು 1.18 ಕೋಟಿ ರೂ ಖರ್ಚಿನಲ್ಲಿ ಮಾಡಿರುವ ಈ ಯೋಜನೆಯಿಂದ 1,520 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲ್ಪಟ್ಟಿದೆ.

ಈ ಕೆಳಗಿನವು ಕೆಲವು ಮಧ್ಯಮ ಪ್ರಮಾಣದ ಪ್ರಮುಖ ಕಾಮಗಾರಿಗಳು.

**ಚಿಕ್ಕಹೊಳೆ ಕಟ್ಟೆ:** ಚಾಮರಾಜನಗರ ತಾಲ್ಲೂಕಿನಲ್ಲಿ ಸುವರ್ಣಾವತಿಯ ಉಪನದಿಯಾದ ಚಿಕ್ಕಹೊಳೆಗೆ 674.5 ಮೀ ಉದ್ದ 25 ಮೀ ಎತ್ತರದ ಕಟ್ಟೆಯಿಂದ ಸುಮಾರು 90 ಲಕ್ಷ ರೂ. ವೆಚ್ಚದಲ್ಲಿ 1,300 ಹೆಕ್ಟೇರ್‌ಗೆ ನೀರಾವರಿ ಒದಗಿಸಿದೆ.

**ಹೆಬ್ಬಳ್ಳ ಕಟ್ಟೆ:** ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ತಾರಕಾನದಿಯ ಉಪ ನದಿಯಾದ ಹೆಬ್ಬಳ್ಳಕ್ಕೆ ಕಟ್ಟಲಾಗಿದೆ. 863 ಮೀ ಉದ್ದ 19.5 ಮೀ ಎತ್ತರದ ಏರಿ ಇದೆ. 58 ಲಕ್ಷ ರೂ. ವೆಚ್ಚ, 1,200 ಹೆಕ್ಟೇರ್‌ಗೆ ನೀರಾವರಿ ಒದಗುತ್ತದೆ.

**ಮಂಗಳಾ ಜಲಾಶಯ:** ಕುಣಿಗಲು ತಾಲ್ಲೂಕಿನಲ್ಲೂ ಶಿಂಷಾಕ್ಕೆ ಉಪನದಿ ಯಾದ ನಾಗಿನಿಗೆ ಅಡ್ಡಲಾಗಿ 701 ಮೀ ಉದ್ದ 13.7 ಮೀ ಎತ್ತರದ ಏರಿ ಯಿಂದ ನಿರ್ಮಿಸಿದೆ. ವೆಚ್ಚ 39 ಲಕ್ಷರೂ. 800 ಹೆಕ್ಟೇರ್‌ಗೆ ನೀರಿನ ಸೌಲಭ್ಯ.

**ಸಾಲೂರುಹಳ್ಳ ಕಟ್ಟೆ:** ಶಿವಮೊಗ್ಗ ಜಿಲ್ಲೆಯಲ್ಲಿ ಕುಮುದ್ವತಿಗೆ ಸೇರುವ ಸಾಲೂರು ಹಳ್ಳಕ್ಕೆ ಅಂಬಿಗೋಳ ಬಳಿಯಲ್ಲಿ ಇದೆ. 683 ಮೀ ಉದ್ದ 20.7 ಮೀ ಎತ್ತರ 1.1 ಕೋಟಿ ರೂ. ವೆಚ್ಚ 2,920 ಹೆಕ್ಟೇರ್ ಜಮೀನಿಗೆ ನೀರಾವರಿ.

**ಹತ್ತಿಕೋಣೆ ಕಟ್ಟೆ:** ಯಾದಗಿರಿ ತಾಲ್ಲೂಕಿನಲ್ಲಿ ಭೀಮಾದ ಉಪನದಿ ಯಾದ ಹತ್ತಿಕೋಣೆ ಹೊಳೆಗೆ 923 ಮೀ ಉದ್ದ 22 ಮೀ ಎತ್ತರದ ಏರಿ. 58 ಲಕ್ಷ ರೂ. ವೆಚ್ಚ. 1920 ಹೆಕ್ಟೇರಿಗೆ ನೀರಾವರಿ.

**ಅರೆಶಂಕರ ಕಟ್ಟೆ:** ಬಿಜಾಪುರ ಜಿಲ್ಲೆಯ ಅರೆಶಂಕರ ಹೊಳೆಗೆ ಒಟ್ಟು 1,189 ಮೀ ಉದ್ದ 4.3 ಮೀ ಎತ್ತರವುಳ್ಳ ಕಟ್ಟೆಯನ್ನು ಕಟ್ಟಿ 22 ಲಕ್ಷ ರೂ. ವೆಚ್ಚದಲ್ಲಿ 1,230 ಹೆಕ್ಟೇರ್‌ಗೆ ನೀರಾವರಿ ಒದಗಿಸಿದೆ.

**ಚಿತವಾಡಿ: ಯೋಜನೆ:** ಹುನಗುಂದ ತಾಲ್ಲೂಕಿನಲ್ಲಿ ಕಡ್ಲಪ್ಪನ ಹೊಳೆಗೆ ಅಡ್ಡಲಾಗಿ 1,533 ಮೀ ಉದ್ದ 11.9 ಮೀ ಎತ್ತರದ ಏರಿಯಿಂದ ನಿರ್ಮಿಸಿದ ಚಿತವಾಡಿಗಿ ನೀರಾವರಿ ಯೋಜನೆಯಿಂದ 36 ಲಕ್ಷ ರೂ. ವೆಚ್ಚದಲ್ಲಿ 900 ಹೆಕ್ಟೇರ್‌ಗೆ ನೀರು ಒದಗುತ್ತದೆ.

**ರಾಮನಹಳ್ಳಿ ಕೆರೆ:** ಸಿಂದಗಿ ತಾಲ್ಲೂಕಿನಲ್ಲಿ ನವಲಿ ಹೊಳೆಗೆ ಅಡ್ಡಲಾಗಿ 1637 ಮೀ ಉದ್ದ 11.9 ಮೀ ಎತ್ತರದ ಏರಿಯಿಂದ ರಾಮನಹಳ್ಳಿ ಕೆರೆಯನ್ನು ನಿರ್ಮಿಸಿ 41 ಲಕ್ಷ ರೂ. ಗಳ ವೆಚ್ಚದಲ್ಲಿ 1920 ಹೆಕ್ಟೇರ್‌ಗೆ ನೀರಾವರಿ ಒದಗಿಸುತ್ತದೆ.

**ಕಳಸಕೊಪ್ಪ ಕೆರೆ:** ಬಾಗಲಕೋಟೆ ತಾಲ್ಲೂಕಿನಲ್ಲಿ 279 ಮೀ ಉದ್ದ 15.9 ಮೀ ಎತ್ತರದ ಏರಿ 21.5 ಲಕ್ಷ ರೂ. ಖರ್ಚು. 1130 ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ.

**ಕೊಳಚಿ (ಮಲಪ್ರಭಾ) ಕಟ್ಟೆ:** ರಾಮದುರ್ಗ ತಾಲ್ಲೂಕಿನ ಕೊಳಚಿ ಬಳಿ ಮಲಪ್ರಭಾ ನದಿಗೆ 211.8 ಮೀ ಉದ್ದ 5.8 ಮೀ ಎತ್ತರದ ಅಣೆ, ಬೆಳಗಾಂವಿ, ಧಾರವಾಡ, ಜಿಲ್ಲೆಗಳ 1260 ಹೆಕ್ಟೇರ್‌ಗೆ ನೀರಾವರಿ, 47 ಲಕ್ಷ ರೂ.ಖರ್ಚು.

**ಹರಿನಾಲಾ ಕಟ್ಟೆ:** ಬೈಲಹೊಂಗಲ ತಾಲ್ಲೂಕಿನಲ್ಲಿ ಮಲಪ್ರಭಾದ ಉಪನದಿಯಾದ ಹರಿನಾಲಾಕ್ಕೆ 2,271 ಮೀ ಉದ್ದ 2.8 ಮೀ ಎತ್ತರದ ಕಟ್ಟೆ; 83 ಲಕ್ಷ ರೂ. ವೆಚ್ಚ, 4,300 ಹೆಕ್ಟೇರ್‌ಗೆ ನೀರಾವರಿ.

**ಧರ್ಮಾ ಜಲಾಶಯ:** ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲ್ಲೂಕಿನಲ್ಲಿ 4,300' ಉದ್ದ 66' ಎತ್ತರದ ಮಣ್ಣಿನ ಏರಿ, ಧಾರವಾಡ ಜಿಲ್ಲೆಯ 1600 ಹೆಕ್ಟೇರ್ ಹೊಸ ಅಚ್ಚುಕಟ್ಟಿಗೆ ನೀರು ಒದಗಿಸುವುದಲ್ಲದೆ, ಹಳೆಯ ಧರ್ಮಾ ನಾಲೆಗಳ 4,750 ಹೆಕ್ಟೇರ್‌ಗೆ ನೀರಾವರಿಯನ್ನು ಸುಭದ್ರವಾಗಿಸುತ್ತದೆ. 1.41 ಕೋಟಿ ರೂ. ವೆಚ್ಚ.

**ಕ್ಯಾದಗಿ ಕಟ್ಟೆ:** ಬಿಜಾಪುರ ಜಿಲ್ಲೆಯ ನಾಗಠಾಣ ಹಳ್ಳಿಯ ಬಳಿ ಕ್ಯಾದಗಿ, ಹೊಳೆಗೆ ಅಡ್ಡಲಾಗಿ 3700' ಉದ್ದ 35' ಎತ್ತರದ ಏರಿ. 17.8 ಲಕ್ಷ ರೂ. ವೆಚ್ಚ. 600 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ. ಹೇಮಾವತಿಗೆ ಉಪನದಿಯಾದ ಯಗಚಿ ನದಿಗೆ ಬೇಲೂರು ಬಳಿ ಅಣೆಕಟ್ಟೆ ನಿರ್ಮಿತವಾಗಿದೆ.

**ಗುಂಡಾಲು ಯೋಜನೆ:** ಕೊಳ್ಳೇಗಾಲ ತಾಲ್ಲೂಕಿನಲ್ಲಿ ಗುಂಡಾಲು ಹೊಳೆಗೆ 3.985' ಉದ್ದ 101' ಎತ್ತರದ ಮಣ್ಣಿನ ಏರಿಯನ್ನು ಕಟ್ಟಿ 3 ಕೋಟಿ ರೂ ವೆಚ್ಚದಲ್ಲಿ 6,040 ಹೆಕ್ಟೇರಿಗೆ ನೀರಾವರಿ ಒದಗಿಸುವುದು.

**ನಾರಿಹಳ್ಳ ಯೋಜನೆ:** ಬಳ್ಳಾರಿ ಜಿಲ್ಲೆಯ ನಾರಿಹಳ್ಳಕ್ಕೆ 908' ಉದ್ದದ ಏರಿಯನ್ನು ಕಟ್ಟಿ 2 ಕೋಟಿ ರೂ ವೆಚ್ಚದಲ್ಲಿ 1400 ಹೆಕ್ಟೇರಿಗೆ ನೀರೊದಗಿಸುವುದು.

**ಚಂದ್ರಂಪಳ್ಳಿ ಯೋಜನೆ:** ಚಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿಯಲ್ಲಿ ಭೀಮಾಉಪನದಿಯಾದ ಸರನಾಲಾಕ್ಕೆ 2250' ಉದ್ದ 90' ಎತ್ತರದ ಮಣ್ಣಿನ ಏರು ಅಂದಾಜು 1.2 ಕೋಟಿ ರೂ ವೆಚ್ಚದಲ್ಲಿ 4,200 ಹೆಕ್ಟೇರಿಗೆ ನೀರಾವರಿ.

ತರುವಾಯ ಕೈಗೊಂಡ ಇನ್ನು ಕೆಲವು ಯೋಜನೆಗಳಿದ್ದು ಅವನ್ನು ಮುಂದೆ ಪರಿಶಿಷ್ಟದಲ್ಲಿ ಕೊಡಲಾಗಿದೆ. ಕೆಲವು ಭಾರಿ ಪ್ರಮಾಣದ ನೀರಾವರಿ ಯೋಜನೆಯನ್ನು ಸ್ವಾತಂತ್ರ್ಯಾನಂತರ ಕೈಗೊಂಡು ಪೂರ್ಣಗೊಳಿಸಲಾಗಿದೆ. ಅವುಗಳಲ್ಲಿ ಕಾವೇರಿ ಜಲಾನಯನ ಪ್ರದೇಶದ ಕಪಿಲಾ, ಹಾರಂಗಿ, ಹೇಮಾವತಿ ಜಲಾಶಯಗಳು ಸೇರಿವೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಘಟಪ್ರಭಾ, ಮಲಪ್ರಭಾ ಯೋಜನೆಗಳು ಸೇರಿವೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಒಂದರ ಕೆಳಗೆ ಒಂದರಂತೆ ಬಿಜಾಪುರ ಜಿಲ್ಲೆಯ ಆಲಮಟ್ಟಿ ಮತ್ತು ಗುಲ್ಬರ್ಗ ಜಿಲ್ಲೆಯ ನಾರಾಯಣಪುರ ಎಂಬಲ್ಲಿ ಎರಡು ಜಲಾಶಯಗಳನ್ನು ನಿರ್ಮಿಸಲಾಗಿದೆ. ಮೊದಲನೆಯದು 519 ಮೀ ಎತ್ತರವಿದ್ದು ಪೂರ್ಣಪ್ರಮಾಣದ ಜಲಾಶಯ ನಿರ್ಮಾಣವಾಗಿದೆ. ಬಿದರೆ ಜಿಲ್ಲೆಯಲ್ಲಿ ಮಾಂಜರಾ ನದಿಯ ಉಪನದಿಯಾದ ಕಾರಂಜಿ ಹೊಳೆಗೆ ಜಲಾಶಯ ನಿರ್ಮಿಸಿರುವುದಲ್ಲದೆ ಚುಲ್ಕಿ ನಾಲಾ ಯೋಜನೆ ಹಮ್ಮಿಕೊಳ್ಳಲಾಗಿದೆ.

ಪಶ್ಚಿಮದತ್ತ ಹರಿಯುವ ವರಾಹಿ ಮತ್ತು ಮಹದಾಯಿ ನದಿಗಳಿಗೆ ಜಲಾಶಯ ನಿರ್ಮಿಸಲಾಗುತ್ತಿದೆ. ಶರಾವತಿ ನದಿಗೆ ನಿರ್ಮಿಸಿರುವ ಲಿಂಗನಮಕ್ಕಿ ಜಲಾಶಯವು ವಿದ್ಯುತ್ ಉತ್ಪಾದನೆಗೆ ವರದಾನವಾಗಿದ್ದು ನೀರಾವರಿಗೂ ಸಹಕಾರಿಯಾಗಿದೆ.

**ಜಲಸಂಪತ್ತು:** ಕರ್ನಾಟಕ ರಾಜ್ಯ ಭಾರತದ ಇತರ ಅನೇಕ ರಾಜ್ಯಗಳಂತೆ ಮಳೆಗಾಲದಲ್ಲಿ ನದಿ, ಹೊಳೆ, ಹಳ್ಳ, ತೊರೆಗಳಲ್ಲಿ ಹರಿಯುವ ನೀರನ್ನು ಸಂಗ್ರಹಿಸಿ ನೀರಾವರಿಗೆ ಅನುಕೂಲ ಕಲ್ಪಿಸಿಕೊಳ್ಳಬೇಕಾಗಿದೆ. ಬೇಸಿಗೆಯಲ್ಲಿ ಇವುಗಳಲ್ಲಿ ಹರಿಯುವ ನೀರಿನ ಪ್ರಮಾಣ ಅತ್ಯಲ್ಪವಾಗಿರುವುದರಿಂದ ಜಲಾಶಯ, ಅಣೆಕಟ್ಟು ಒಡ್ಡು ಮತ್ತು ಬ್ಯಾರೇಜ್‌ಗಳು ಹಾಗೂ ಕೆರೆಗಳು ಇವುಗಳಲ್ಲಿ ಸಂಗ್ರಹಿಸುವ ನೀರೇ ಇಲ್ಲಿನ ನೀರಾವರಿಗೆ ಆಧಾರ. ಆದ್ದರಿಂದ ರಾಜ್ಯ ಸರ್ಕಾರವು ನೀರಾವರಿಗೆ ವಿಶೇಷ ಆದ್ಯತೆ ನೀಡಿದ್ದು ನಾನಾ ಬಗೆಯ ನೀರಾವರಿ ಯೋಜನೆಗಳನ್ನು ಹಮ್ಮಿಕೊಂಡಿದೆ.

ಒಂದು ಅಂದಾಜಿನ ಪ್ರಕಾರ ರಾಜ್ಯದಲ್ಲಿ ನೀರಾವರಿಗೆ ಅಂತಿಮವಾಗಿ ಒಳಪಡಿಸಬಹುದಾದ ಪ್ರದೇಶ 55 ಲಕ್ಷ ಹೆಕ್ಟೇರ್‌ಗಳು. ಇದು ನಿವ್ವಳ ಬಿತ್ತನೆ ಪ್ರದೇಶದ ಸೇ. 51.4 ಭಾಗವಾಗುತ್ತದೆ. ಇದರಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ 35 ಲಕ್ಷ ಹೆಕ್ಟೇರ್‌ಗಳು, ಭೂಮೇಲ್ಮೈಯ ನೀರನ್ನು ಬಳಸುವುದರಿಂದ 10 ಲಕ್ಷ ಹೆಕ್ಟೇರ್‌ಗಳು ಮತ್ತು ಭೂಮಿಯ ಒಳಗಿನ ನೀರನ್ನು ಬಳಸುವುದರಿಂದ 10 ಲಕ್ಷ ಹೆಕ್ಟೇರ್‌ಗಳ ಪ್ರದೇಶವನ್ನು ನೀರಾವರಿಗೆ ಒಳಪಡಿಸುವ ಉದ್ದೇಶವಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಕೃಷ್ಣಾಜಲಾನಯನ ಪ್ರದೇಶದಿಂದ 1,156 ಟಿ.ಎಂ.ಸಿ. ನೀರನ್ನು, ಕಾವೇರಿ ಜಲಾನಯನ ಪ್ರದೇಶದಿಂದ 408.62 ಟಿ.ಎಂ.ಸಿ. ನೀರನ್ನು ಮತ್ತು ಗೋದಾವರಿ ಜಲಾನಯನ ಪ್ರದೇಶದಿಂದ 22.37 ಟಿ.ಎಂ.ಸಿ. ನೀರನ್ನು ನೀರಾವರಿಗೆ ಬಳಸಿಕೊಳ್ಳುವ ಮಾಸ್ಟರ್ ಯೋಜನೆ ಸಿದ್ಧವಾಗಿತ್ತು. ಪಾಲಾರ್, ಪೆನ್ನಾರ್ ಮತ್ತು ಪಶ್ಚಿಮದತ್ತ ಹರಿಯುವ ನದಿಗಳಿಂದ 103.31 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವ ಯೋಜನೆಗಳು ರೂಪುಗೊಳ್ಳುತ್ತಿವೆ. ಹಾಲಿ 2000ದ ಮಾರ್ಚ್‌ವರೆಗೆ 1179.47 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳಲು ಸಾಧ್ಯವಾಗಿದೆ. ಕಿರಿಯ, ಮಧ್ಯಮ ಮತ್ತು ಭಾರಿ ನೀರಾವರಿ ಯೋಜನೆಗಳಿಂದ 29.36 ಲಕ್ಷ ಹೆಕ್ಟೇರ್‌ಗಳನ್ನು ನೀರಾವರಿಗೆ ಒಳಪಡಿಸಲು ಸಾಧ್ಯವಾಗಿದೆ (2000–2001).

ಈ ಮೇಲೆ ಹೆಸರಿಸಿದ ಯೋಜನೆಗಳಲ್ಲದೆ ರಾಜ್ಯ ಸರ್ಕಾರವು ಇನ್ನೂ ಹತ್ತಾರು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ರಾಜ್ಯ ಸರ್ಕಾರವು ಕರ್ನಾಟಕ ನೀರಾವರಿ ನಿಗಮವನ್ನು ಸ್ಥಾಪಿಸಿದ್ದು ಅದು ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ತುಂಗಾ ಮೇಲ್ದಂಡೆ ಯೋಜನೆ, ಹಿಪ್ಪರಗಿ ಯೋಜನೆ (ಬಾಗಲಕೋಟೆ ಜಿಲ್ಲೆ), ಹರಿನಾಲ ಯೋಜನೆ, ಗಂಡೋರಿನಾಲ ಯೋಜನೆ (ಗುಲ್ಬರ್ಗ ಜಿಲ್ಲೆ) ಘಟಪ್ರಭಾ ಯೋಜನೆಗಳು ಪ್ರಗತಿಯಲ್ಲಿವೆ. ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಂಡಿದ್ದು ಆಲಮಟ್ಟಿ ಜಲಾಶಯದಲ್ಲಿ 519 ಮೀ ಗೆ ನೀರು ಸಂಗ್ರಹವಾಗಿದೆ. 2002–03ರಲ್ಲಿ ರಾಜ್ಯವು ನೀರಾವರಿಗಾಗಿ 2790 ಕೋಟಿ ರೂ.ಗಳನ್ನು ನಿಗದಿಗೊಳಿಸಿದೆ. ಇದು ರಾಜ್ಯ ಬಜೆಟ್‌ನ ಯೋಜನಾ ವೆಚ್ಚದ ಸೇ. 32 ರಷ್ಟು. ನೀರಾವರಿ ಸೌಲಭ್ಯಕ್ಕಾಗಿ ವಿಶ್ವಬ್ಯಾಂಕಿನಿಂದ 690 ಕೋಟಿ ರೂ.ಗಳ ನೆರವು ಪಡೆಯಲಾಗಿದೆ. 2000 ಕ್ಕೂ ಹೆಚ್ಚು ನೀರು ಬಳಕೆದಾರರ ಸಂಘಗಳು ಸ್ಥಾಪನೆಗೊಂಡಿವೆ. ಜಲಸಂಪನ್ಮೂಲ ಇಲಾಖೆಯು ಕಳೆದ ಮೂರು ವರ್ಷಗಳಲ್ಲಿ (1999–2002) ನೀರಾವರಿಗಾಗಿ 6040 ಕೋಟಿ ರೂ.ಗಳನ್ನು ಖರ್ಚು ಮಾಡಿ ಒಟ್ಟು 6.64 ಲಕ್ಷ ಎಕರೆಗಳಿಗೆ ಹೊಸದಾಗಿ ನೀರಾವರಿ ಸೌಲಭ್ಯ ಕಲ್ಪಿಸಿದೆ. ಸಮಗ್ರ ನೀರಾವರಿ ವ್ಯವಸ್ಥೆಯನ್ನು ಪುನರ್‌ರೂಪಿಸುವ ಕಾರ್ಯ ನಡೆದಿದೆ. ಈ ಯೋಜನೆಯಂತೆ ಹಳೆಯ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಕಾಲುವೆಗಳ ವಿಸ್ತರಣೆ, ದುರಸ್ತಿ ಮತ್ತು ಆಧುನೀಕರಣ ಕಾರ್ಯಗಳು ಸೇರಿವೆ. ಕೆರೆಗಳ ಹೂಳೆತ್ತುವುದು, ಕೃಷಿ ಹೊಂಡಗಳನ್ನು ತೋಡುವುದು, ಹೊಸ ಕೆರೆಗಳನ್ನು ನಿರ್ಮಿಸುವುದು, ಎತ್ತು ನೀರಾವರಿ ಕಲ್ಪಿಸುವುದು ಸಣ್ಣ ನೀರಾವರಿಯ ಪ್ರಮುಖ ಕಾಮಗಾರಿಗಳಾಗಿವೆ.

**ಅಂತರ ಜಲಬಳಕೆ:** ದಿನೇ ದಿನೇ ನೀರಿನ ಅಗತ್ಯ ಹೆಚ್ಚುತ್ತಿದ್ದು ಅದಕ್ಕಾಗಿ ಅಂತರಜಲ ಮೂಲಗಳಿಂದ ನೀರನ್ನು ಸಂಗ್ರಹಿಸುವ ಅಗತ್ಯ ಬಿದ್ದಿದೆ. ಬಾವಿಗಳು ಕೊಳವೆ ಬಾವಿಗಳು ಈ ಅಂತರ ಜಲವನ್ನು ಹೊರತೆಗೆಯುವಲ್ಲಿ ಪ್ರಮುಖ ಸಾಧನಗಳಾಗಿವೆ. ನೀರಾವರಿಗಾಗಿ ಸಾಮಾನ್ಯವಾಗಿ ತೆಗೆದ ಬಾವಿಗಳು 10 ಮೀ ಅಗಲವಿದ್ದು (ಚೌಕ ಅಥವಾ ವೃತ್ತಾಕಾರ) 10 ಮೀ ಆಳಕ್ಕೆ ಹೋಗಿರುತ್ತವೆ. ಕೇವಲ ಅಗೆತದಿಂದ ಅಥವಾ ಕೆಲವು ವೇಳೆ ಮಾತ್ರ ಬಂಡೆಯನ್ನು ತೆಗೆಯಲು ಸಿಡಿಮದ್ದನ್ನು ಉಪಯೋಗಿಸಿ ಇವನ್ನು ತೆಗೆಯಲಾಗುತ್ತದೆ. ಹೆಚ್ಚಿನ ಬಾವಿಗಳಿಗೆ ಅಸ್ತರಿ ಕಟ್ಟಡವೇನೂ ಇರುವುದಿಲ್ಲ. ತೆಗೆದ ಮಣ್ಣನ್ನು ಅಲ್ಲೇ ಸುತ್ತಲೂ ಹಾಕಿ ವ್ಯವಸಾಯದ ಭೂಮಿ ಅನುಪಯುಕ್ತವಾಗುತ್ತದೆ. ಇವನ್ನು ತೋಡಲು ಸುಮಾರು ದಿನ ಹಿಡಿಯುತ್ತದೆ. ಆದರೆ ವಿಶೇಷ ಸಲಕರಣೆಗಳ ಅಗತ್ಯವಿರುವುದಿಲ್ಲ. ಸಾಕಷ್ಟು ನೀರಿನ ಸಂಗ್ರಹವಿದ್ದು, ಎತ್ತಿಗೆ ಹೆಚ್ಚಾಗಿರದ ಕಾರಣ ಸರಳವಾಗಿದ್ದ ಪಂಪುಗಳಿಂದ ನೀರನ್ನು ಎತ್ತಬಹುದು. ಆಳವಾದ ವಲಯದಲ್ಲಿನ ಸ್ಥಾಯಿ ಜಲಸಂಪತ್ತಿನ ಆಶ್ರಯವಿಲ್ಲದುದರಿಂದ ಅಭಾವ ಕಾಲದಲ್ಲಿ ಸಾಕಷ್ಟು ರಕ್ಷಣೆ ದೊರಕುವುದಿಲ್ಲ.

ನೀರಿನ ಸಂಗ್ರಹಣೆಗಾಗಿ ತೆಗೆದ ಬಾವಿಗಳನ್ನು ತೋಡಿ ಅದರೊಳಗೆ ಕೊಳವೆ ಬಾವಿಗಳನ್ನು ತೋಡುವ, ಹಾಗೂ ಹಾಲಿ ಇರುವ ತೆಗೆದ ಬಾವಿಗಳ ನೀರಿನ ಆಶ್ರಯವನ್ನು ಹೆಚ್ಚಿಸಲು ಅವುಗಳೊಳಗೇ ಕೊಳವೆ ಬಾವಿಗಳನ್ನು ಕೊರೆಯುವ ಕ್ರಮವೂ ಈಗೀಗ ಅಭ್ಯಾಸಕ್ಕೆ ಬರುತ್ತಿದೆ. ಕಾಲಕ್ರಮೇಣ ಅಗಲವಾದ ತೆರೆದ ಬಾವಿಗಳಿಗೆ ಬದಲಾಗಿ ಸಮೂಹದ ಕೊಳವೆ ಬಾವಿಗಳು ಹೆಚ್ಚು ಬಳಕೆಗೆ ಬರುವುವೆಂದು ನಿರೀಕ್ಷಿಸಬಹುದು.

ಕೊಳವೆ ಬಾವಿಗಳಿಗೆ ಹೆಚ್ಚಿನ ಜಾಗ ಬೇಕಿಲ್ಲ. ಕೆಲವೇ ದಿನಗಳಲ್ಲಿ ಅವನ್ನು ಮಾಡಿ ಮುಗಿಸಿಬಿಡಬಹುದು. ಆಳದಲ್ಲಿರುವ ಜಲಸಂಗ್ರಹವನ್ನು ತೆಗೆಯುವುದರಿಂದ ನೀರಿನ ಮಟ್ಟ ಋತುಮಾನದ ವ್ಯತ್ಯಾಸಗಳಿಗೆ ಒಳಗಾಗುವುದಿಲ್ಲ. ಮಳೆ ಅಭಾವದ ವರ್ಷಗಳಲ್ಲೂ ತೊಂದರೆಯಿರುವುದಿಲ್ಲ. ಇವು ಸಾಮಾನ್ಯವಾಗಿ 150 ಮಿಮೀ (6 ಅಂಗುಲ) ವ್ಯಾಸವಿದ್ದು 30 ರಿಂದ 50 ಮೀ ಆಳಕ್ಕೆ ಕೊರೆಯಲ್ಪಟ್ಟಿರುತ್ತವೆ. ಅಂತರ್ಜಲದ ಮಟ್ಟ ಕುಸಿದಿರುವೆಡೆ ಈ ಆಳ ಇನ್ನೂ ಹೆಚ್ಚಾಗಿರುತ್ತದೆ. ಸರಾಸರಿ ಪ್ರತಿ ನಿಮಿಷಕ್ಕೆ 60 ರಿಂದ 80 ಲೀಟರ್ ನೀರನ್ನು ಇವು ಒದಗಿಸುತ್ತವೆ. ವಿದ್ಯುತ್ ಪಂಪ್‌ಗಳನ್ನು ಅಥವಾ ಇಂಧನ ಪಂಪ್‌ಗಳನ್ನು ಬಳಸಿ ನೀರನ್ನು ಎತ್ತಲಾಗುತ್ತದೆ. ಅಂತರ್ಜಲದ ಕೊರತೆಯಿಂದಾಗಿ ಈ ಕೊಳವೆ ಬಾವಿಗಳು ಇಂಗಿ ಹೋಗುವ ಪ್ರಕರಣಗಳು ಹೆಚ್ಚುತ್ತಿವೆ.

ಈಗ ಹನಿ ನೀರಾವರಿ ವಿಧಾನವೂ ನೀರಿನ ಮಿತವ್ಯಯಕ್ಕಾಗಿ ಜಾರಿಗೆ ಬಂದಿದೆ. ಜೊತೆಗೆ ಮಳೆಯ ನೀರನ್ನು ಹೇಗೆ ಭೂಮಿಯ ಒಳಗೆ ಸೇರಿಸಿ ಅಗತ್ಯ ಬಿದ್ದಾಗ ಬಳಸಿಕೊಳ್ಳಬೇಕೆಂಬ ಬಗ್ಗೆ ಒಂದು ವಿಜ್ಞಾನವೇ ಬೆಳೆಯುತ್ತಿದೆ. ಇದು 'ಜಲ ಸಾಕ್ಷರತೆ' ಎಂಬ ಹೊಸ ಘೋಷಣೆಗೂ ಕಾರಣವಾಗಿದೆ.

**ಸಮಸ್ಯೆಗಳ ಮುನ್ನೋಟ:** ವ್ಯವಸಾಯದ ಕೆಲಸಕಾರ್ಯಗಳಿಗೆ ಪ್ರಥಮ ಅಗತ್ಯ ನೀರು. ಕ್ಲುಪ್ತವಾದ ಮಾರುತಗಳಲ್ಲಿ ಬರುವ ಮಳೆಯನ್ನೇ ಹೆಚ್ಚಾಗಿ ಅವಲಂಬಿಸಿರುವ ನಮ್ಮ ರಾಜ್ಯ ವರುಣ ದೇವನ ಕೃಪೆಯ ಅಸ್ಥಿರ ವರ್ತನೆಗೆ ಪಕ್ಕಾಗಿ ಅನಿಶ್ಚಿತತೆಯ ತೊಳಲಾಟದಲ್ಲೇ ಇರುತ್ತದೆ. ಇದರಿಂದಾಗಿ ರಾಜ್ಯದ ಒಂದಲ್ಲ ಒಂದು ಭಾಗ ಆಗಾಗ್ಗೆ ಕ್ಷಾಮ ಇಲ್ಲವೆ ಅಭಾವ ಪರಿಸ್ಥಿತಿಗೆ ತುತ್ತಾಗಿರುತ್ತದೆ. ಕೇಂದ್ರ ಸರ್ಕಾರ ನೇಮಿಸಿದ್ದ 1972ರ ನೀರಾವರಿ ಆಯೋಗವು ರಾಜ್ಯದ ಸೇ. 75 ಭಾಗವು ವಾರ್ಷಿಕ ಮಳೆ ಬೀಳುವ ಪ್ರಮಾಣದಲ್ಲಿ ಸೇ. 30 ಕ್ಕಿಂತ ಹೆಚ್ಚು ವ್ಯತ್ಯಾಸವನ್ನು ಅನುಭವಿಸುತ್ತಿರುವುದನ್ನು ಗುರುತಿಸಿ, ಕರ್ನಾಟಕ ಅಧಿಕಾಂಶ ಅಭಾವ ಮತ್ತು ಕ್ಷಾಮಗಳಿಗೆ ಆಸ್ಪದ ಹೊಂದಿರುವ ರಾಜ್ಯವೆಂದು ಸ್ಪಷ್ಟವಾಗಿ ತೀರ್ಮಾನಿಸಿದೆ. ಈ ಸಂದರ್ಭಕ್ಕೆ ಅನುಗುಣವಾಗಿಯೇ ಭೂಮಿಯ ಮೇಲಿನ ಹಾಗೂ ಒಳಗಿರುವ ನೀರಿನ ಅತ್ಯಧಿಕ ಪ್ರಯೋಜನ ಪಡೆದು, ಆದಷ್ಟು ಹೆಚ್ಚು ಪ್ರದೇಶಕ್ಕೆ ನಿಶ್ಚಿತ ನೀರಾವರಿಯ ಸೌಕರ್ಯ ಒದಗಿಸಲು ಗರಿಷ್ಟ ಪ್ರಮಾಣದ ಪ್ರಯತ್ನ ಅಗತ್ಯವಾಗಿರುವುದು.

ಕರ್ನಾಟಕದ ಜಲಸಂಪತ್ತು ಯಥೇಚ್ಛವಾಗಿಯೇ ಇದೆ **(ನೋಡಿ: ನದೀ ವ್ಯವಸ್ಥೆ ಮತ್ತು ಜಲಸಂಪತ್ತು)**. ಎಲ್ಲ ನದಿಗಳಲ್ಲಿ ವಾರ್ಷಿಕವಾಗಿ ದೊರಕುವ ಒಟ್ಟು ಅಂದಾಜು ಸು. 4000 ಶತಕೋಟಿ ಘನ ಅಡಿಗಳು. ಆದರೆ ಇದಿಷ್ಟೂ ಉಪಯುಕ್ತ ಬಳಕೆಗೆ ಸಿಗುವುದಿಲ್ಲ. ನೀರು ಆವಿಯಾಗಿ ಹೋಗುವುದು, ನೆಲದಲ್ಲಿ ಇಂಗುವುದು, ಪ್ರವಾಹದಲ್ಲಿ ಕೊಚ್ಚಿಹೋಗುವುದು, ಇವಲ್ಲದೆ ಸಮುದ್ರಕ್ಕೆ ಅಥವಾ ರಾಜ್ಯದ ಗಡಿಗೆ ಅತಿ ಸನಿಹದಲ್ಲಿ ಬೀಳುವ ಮಳೆಯಿಂದ ಒದಗುವ ನೀರನ್ನು ಸಂಗ್ರಹಿಸಿ ಇನ್ನೂ ಕೆಳಗಿನ ನಮ್ಮ ಭೂಮಿಯಲ್ಲೇ ಉಪಯೋಗಿಸಲಾಗದಿರುವುದು ಇವೆಲ್ಲವನ್ನೂ ಕಳೆದರೆ, ನಾವು ಪ್ರಯೋಜನ ಪಡೆಯಬಹುದು ಎನ್ನುವ ಜಲ ಸಂಪತ್ತು ಸು. 2000 ಶತಕೋಟಿ ಘನ ಅಡಿಗಳು ಎಂದು ಅಂದಾಜು. ಪಶ್ಚಿಮಕ್ಕೆ ಹರಿಯುವ ನದಿಗಳಿಗೆ ಸೂಕ್ತವಾದ ಕಡೆ ಒಡ್ಡು ಕಟ್ಟಿ ಪೂರ್ವದ ಬಯಲಿಗೆ ಕೊಂಚವಾದರೂ ತಿರುಗಿಸಿಕೊಳ್ಳಬಹುದಾದ್ದು ಹಾಗೂ ಎತ್ತು ನೀರಾವರಿ ಇವನ್ನೂ ಸೇರಿಸಿ ಅಂದಾಜು ಮಾಡಿದರೆ 2000 ಶತಕೋಟಿ ಘನ ಅಡಿಗಳೆಂದು ಪರಿಗಣಿಸಬಹುದು. ನಮ್ಮ ಜಲಸಂಪತ್ತಿನ ಪ್ರಧಾನ ಆಗರಗಳಾದ ಕೃಷ್ಣಾ ಮತ್ತು ಕಾವೇರಿಗಳೆರಡೂ ಅಂತರರಾಜ್ಯ ನದಿಗಳಾದ್ದರಿಂದ ಅವುಗಳಲ್ಲಿ ನಮ್ಮ ಭಾಗವೆಷ್ಟು ಎಂಬುದು ಇತರರ ಮರ್ಜಿಗೂ ಒಳಪಟ್ಟಿದ್ದು ಒಡಂಬಡಿಕೆ ಹಾಗೂ ಆಯೋಗಗಳ ತೀರ್ಪಿಗೆ ಬದ್ಧವಾಗಿದೆ.

ಸಂಪತ್ತಿನ ಅಂದಾಜು ಅಷ್ಟಿದ್ದರೂ ಪ್ರಾರಂಭದಿಂದ ಯೋಜನಾ ಪೂರ್ವ 1951 ರವರೆಗೆ ನಾವು ರೂಢಿಸಿಕೊಂಡಿದ್ದುದು ಕೇವಲ 48 ಶತಕೋಟಿ ಘನ ಅಡಿಗಳು. ನಾಲ್ಕು ಪಂಚವಾರ್ಷಿಕ ಯೋಜನೆಗಳ ತರುವಾಯವೂ ಬಳಸಿಕೊಳ್ಳಲು ಆಗಿದುದ್ದು 600 ಟಿ.ಎಂ.ಸಿ. 2000 ದ ಮಾರ್ಚ್‌ವರೆಗೆ 1,179.47 ಟಿ.ಎಂ.ಸಿ. ನೀರನ್ನು ನೀರಾವರಿಗೆ ಬಳಸಿಕೊಳ್ಳುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಅಂಶಗಳನ್ನು ನೀರಾವರಿ ಮಾಡಬಹುದಾದ ವಿಸ್ತಾರದ ಪರಿಗಣನೆಯಿಂದಲೂ ತಿಳಿಯಬಹುದಾಗಿದೆ. ಕರ್ನಾಟಕದ ಭೌಗೋಳಿಕಾ ವಿಸ್ತಾರ ಸುಮಾರು 1.9 ಕೋಟಿ ಹೆಕ್ಟೇರುಗಳು. ಇದರಲ್ಲಿ ಬಂಡೆ, ಕಾಡು, ಮೇಡು, ಊರುಗಳನ್ನು ಬಿಟ್ಟು ವ್ಯವಸಾಯ ಯೋಗ್ಯವಾದ್ದು ಸು. 1.4 ಕೋಟಿ. ಸರಾಸರಿ ಉಳುಮೆಯಾಗುತ್ತಿರುವ ಭೂಮಿ ಸು. 1 ಕೋಟಿ ಹೆಕ್ಟೇರ್. 1997–98ನೆಯ ಸಾಲಿನಲ್ಲಿ ನೀರಾವರಿಯಾದ ಒಟ್ಟು ಜಮೀನಿನ ಪ್ರಮಾಣ 23.63 ಲಕ್ಷ ಹೆಕ್ಟೇರುಗಳು. ಅದರಲ್ಲಿ ನಾಲೆಗಳ ಪಾಲು ಸೇ. 38.24; ಬಾವಿಗಳು (19.05), ಕೆರೆಗಳು (10.14), ಕೊಳವೆ ಬಾವಿಗಳು (17.39), ಇತರ ಮೂಲಗಳು (10.51), ಏತನೀರಾವರಿ (4.7). ಸುಮಾರು ಆರು ಲಕ್ಷ ಹೆಕ್ಟೇರ್‌ಗಳ ಭೂಮಿಯಲ್ಲಿ ವಾರ್ಷಿಕವಾಗಿ ಒಂದಕ್ಕಿಂತ ಹೆಚ್ಚು ನೀರಾವರಿ ಬೆಳೆ ತೆಗೆಯಲಾಗುತ್ತಿದೆ. ಇದರಿಂದಾಗಿ ನೀರಾವರಿಗೆ ಒಳಗಾದ ಪ್ರದೇಶ 28 ಲಕ್ಷ ಹೆಕ್ಟೇರ್‌ಗಳಾಗಿದೆ. ದೇಶದ ಒಟ್ಟು ಬಿತ್ತನೆ ಪ್ರದೇಶದಲ್ಲಿ ನೀರಾವರಿ ಪ್ರದೇಶ ಸೇ. 32 ರಷ್ಟಿದ್ದರೆ. ಕರ್ನಾಟಕದಲ್ಲಿ ಅದು 23.5 ರಷ್ಟಿದೆ. ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಅದು ಅನುಕ್ರಮವಾಗಿ 48 ಮತ್ತು 38 ಆಗಿದೆ (1989–90). ಇದು ಕರ್ನಾಟಕ ಇನ್ನೂ ಸಾಧಿಸಬೇಕಾದ ಪ್ರಗತಿಯ ಬಗ್ಗೆ ಬೆಳಕು ಬೀರುತ್ತದೆ.

ರಾಜ್ಯದ ಮುಖ್ಯ ನದಿಗಳಾದ ಕಾವೇರಿ, ತುಂಗಭದ್ರಾ ಮತ್ತು ಕೃಷ್ಣಾ ಅಂತರರಾಜ್ಯ ನದಿಗಳಾಗಿರುವುದು, ಕರ್ನಾಟಕ ಒಂದಾಗುವ ಮುನ್ನ ಅದರ ಸುಮಾರು ಅರ್ಧದಷ್ಟು ಪ್ರದೇಶವಾದ ಮೈಸೂರು ಒಂದು ಆಶ್ರಿತ ಸಂಸ್ಥಾನವಾಗಿದ್ದು, ನೆರೆಯ ರಾಜ್ಯಗಳಾದ ಆಗಿನ ಬ್ರಿಟಿಷ್ ಪ್ರಾಂತ್ಯಗಳ ಯಾವುದೇ ಕೋರಿಕೆಯು ಸಂಸ್ಥಾನದ ಬೇಡಿಕೆಗಿಂತ ಹೆಚ್ಚಿನ ಆದ್ಯತೆ ಪಡೆಯುತ್ತಿದ್ದುದು ಈ ಹಿಂದುಳಿಯುವಿಕೆಗೆ ಒಂದು ಕಾರಣವೆನ್ನಬಹುದು. ಉದಾಹರಣೆಯಾಗಿ ತುಂಗಭದ್ರಾ ಬಗ್ಗೆ ಹೇಳುವುದಾದರೆ 1892ರಲ್ಲಿ ಮೈಸೂರು–ಮದರಾಸುಗಳ ನಡುವೆ ಆದ ಒಪ್ಪಂದದಂತೆ ಇದರ ಮುಖ್ಯ ಉಪನದಿಗಳಾದ ತುಂಗಾ, ಭದ್ರಾ ಮತ್ತು ಹಗರಿಗಳಿಂದ ಮದರಾಸಿನ ಅಪ್ಪಣೆಯಿಲ್ಲದೆ (ಕಾವೇರಿಗೂ ಇದು ಅನ್ವಯಿಸಿತ್ತು) ಯಾವ ನೀರಾವರಿ ಅಭಿವೃದ್ಧಿ ಕಾರ್ಯವನ್ನೂ ಮೈಸೂರು ಕೈಗೊಳ್ಳುವಂತಿರಲಿಲ್ಲ. ಮೈಸೂರಿನಂತೆಯೇ ಇದೇ ನದಿಯ ಮೇಲಿನ ಬ್ರಿಟಿಷ್ ಆಡಳಿತದಲ್ಲಿದ್ದ ಮುಂಬಯಿ ಪ್ರಾಂತ್ಯಕ್ಕೇ ಆಗಲಿ ಅಥವಾ ಇನ್ನೊಂದು ಆಶ್ರಿತ ಸಂಸ್ಥಾನವಾದ ಹೈದರಾಬಾದಿಗೇ ಆಗಲಿ ಇಂಥ ನಿಷೇಧವಿರಲಿಲ್ಲ. ಲಕ್ಕವಳ್ಳಿ ಜಲಾಶಯದ ಬಗ್ಗೆ 1936ರಲ್ಲಿ ಮತ್ತೆ 1944ರಲ್ಲಿ ಬೇರೆಯ ಒಪ್ಪಂದಗಳಾಗುವ ತನಕ ಇದೇ ಚಾಲ್ತಿಯಲ್ಲಿತ್ತೆಂಬುದನ್ನು ಮನಗಾಣಬೇಕು. ಅದೇ ರೀತಿ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿ ಕಟ್ಟೆ ಕಟ್ಟುವ ಬಗ್ಗೆ ಒಪ್ಪಂದಕ್ಕೆ ಬರಲು ಎದುರಿಸಿದ ತೊಡಕುಗಳು ಸಹ ರಾಜ್ಯದ ಅಸಹಾಯಕ ಅಥವಾ ದುರ್ಬಲ ಸ್ಥಿತಿಯನ್ನು ಸೂಚಿಸುತ್ತದೆ. ನದಿಯ ಮೇಲಿನ ಪ್ರದೇಶಗಳಲ್ಲಿ ಹೀಗೆ ಉಪಯೋಗಿಸಲಾಗದೆ ಬಿಟ್ಟ

ನೀರೆಲ್ಲ ಅದರ ಮುಖಜಭೂಮಿಯಲ್ಲಿ ಹೆಚ್ಚಿನ ನೀರಾವರಿಗೆ ಅನುಕೂಲ ಮಾಡಿಕೊಟ್ಟದ್ದು ಕಾಲಕ್ರಮೇಣ ಇವುಗಳ ಹಕ್ಕು ಸ್ಥಾಪನೆಗೆ ಎಡೆಮಾಡಿ ಕೊಟ್ಟಿತೆನ್ನಬಹುದು. ಕರ್ನಾಟಕದ ಏಕೀಕರಣವಾಗುವ ಮುನ್ನ ಇದರ ಭಾಗಗಳು ಹಲವು ರಾಜ್ಯಗಳಲ್ಲಿ ಹಂಚಿಹೋಗಿದ್ದು ಯಾವುದೇ ದೊಡ್ಡ ಯೋಜನೆಗಳನ್ನು ಕೈಗೊಳ್ಳಲು ಒಂದು ಸಮಗ್ರ ದೃಷ್ಟಿಯ ಕೊರತೆ ಇದ್ದುದೂ ಇಂಥ ಮುನ್ನಡೆಗೆ ಆತಂಕವಾಗಿದ್ದಿತು. ಕಾವೇರಿ ನೀರಿನ ಹಂಚಿಕೆ ವಿವಾದ ಮುಂದುವರಿದೇ ಇದೆ. ಕೃಷ್ಣಾನದಿಗೆ ನೀರಿನ ಹಂಚಿಕೆಗೆ ಬಚಾವತ್ ಆಯೋಗ ಕೆಲವೊಂದು ಮಾರ್ಗದರ್ಶನಗಳನ್ನೂ ನಿಗದಿಪಡಿಸಿದೆ. ರಾಜ್ಯದ ಒಟ್ಟು ಜಲಸಂಪತ್ತಿನ ಮೂರನೆಯ ಒಂದು ಭಾಗ ಪಶ್ಚಿಮಕ್ಕೆ ಹರಿಯುವ ನದಿಗಳ ಕೊಡುಗೆಯಾಗಿದ್ದು ಅದನ್ನು ಉಪಯುಕ್ತವಾಗಿ ಬಳಸುವುದು ಒಂದು ಸಮಸ್ಯೆಯಾಗಿದೆ. ಇಷ್ಟೊಂದು ನೀರನ್ನು ನಾವು ವೃಥಾ ಸಮುದ್ರಕ್ಕೆ ಬಿಟ್ಟುಬಿಡುತ್ತಿದ್ದೇವೆಂಬ ಆಪಾದನೆಗೆ ಇದು ಗುರಿಮಾಡಿದೆ. ನೀರಾವರಿಗಿಂತ ವಿದ್ಯುತ್ ಉತ್ಪಾದನೆಗೆ ಇವು ಹೆಚ್ಚು ಅನುವಾಗಿದ್ದು ಶರಾವತಿ ನದಿಯಿಂದ ಅಂಥ ಪ್ರಯೋಜನ ಈಗಾಗಲೇ ಪಡೆಯಲಾಗುತ್ತಿದೆ. ಇತರ ಕೆಲವು ಮಳೆಗಾಲದಲ್ಲಿ ತುಂಬಿ ಹರಿಯುವ ಈ ನದಿಗಳ ಪ್ರವಾಹವನ್ನು ತಡೆಹಿಡಿದು ಕೂಡಿಡಲು ಭಾರಿ ಜಲಾಶಯಗಳ ನಿರ್ಮಾಣಕ್ಕೆ ಸೂಕ್ತ ನಿವೇಶನಗಳಿರಬೇಕು. ತಡೆಹಿಡಿದ ನೀರನ್ನು ಕಾಲುವೆಗಳ ಮೂಲಕ ಹರಿಸಿ ಉಪಯೋಗಿಸಲು ಮುಂದೆ ವಿಶಾಲವಾದ ಬಯಲಿರಬೇಕು. ಕರಾವಳಿಯಲ್ಲಿ ಅಂಥ ಅವಕಾಶವಿಲ್ಲ. ಇರುವುದಕ್ಕೂ ಒಂದು ಬೆಳೆಗೆ ಸಾಕಷ್ಟು ಮಳೆಯ ನೀರೇ ಆಧಾರ ಆಗುವುದರಿಂದ ಅದರ ಅಗತ್ಯವೂ ಇಲ್ಲ. ಹೀಗಾಗಿ ಈ ನೀರಿನ ಪರಮ ಪ್ರಯೋಜನ ಪಡೆಯಬೇಕಾದರೆ ಅವುಗಳಲ್ಲಿ ಆದಷ್ಟನ್ನು ಪೂರ್ವಕ್ಕೆ ತಿರುಗಿಸುವುದೊಂದೇ ಮಾರ್ಗ. ಇದಕ್ಕೆ ಭೂ ರಚನೆಯ ಇತಿಮಿತಿಗಳಿವೆ. ಪಂಪುಗಳಿಂದ ನೀರನ್ನೆತ್ತಿ ಘಟ್ಟದ ಆಚೆಗೆ ಬಿಡುವುದನ್ನೂ ಸಹ ಮುಂದೆ ಯೋಚಿಸಬೇಕಾಗಬಹುದು. ಅಗತ್ಯತೆಯ ಒತ್ತಡದಲ್ಲಿ ಅದಕ್ಕಾಗುವ ವೆಚ್ಚ ಗೌಣವಾಗುತ್ತದೆ. (ಕೆ.ವಿ.ಎಸ್‌ಯು.)

**ನೀಲಕಂಠ ಬಸವರಾಜ:** ಸು. 14ನೆಯ ಶತಮಾನ. ಬಸವರಾಜೀಯ ಎಂಬ ಸಂಸ್ಕೃತ ಆಯುರ್ವೇದ ಶಾಸ್ತ್ರದ ಕರ್ತೃ. ತಂದೆ ನಮಃಶ್ಶಿವಾಯ. ಹುಟ್ಟಿದ್ದು ಧಾರವಾಡ ಜಿಲ್ಲೆ ಕೊಟ್ಟೂರು ಗ್ರಾಮದಲ್ಲಿ. ನಿಡುಮಾಮಿಡಿ ಬಗೆಯ ಸತ್ಸಂಪ್ರದಾಯಕ್ಕೆ ಸೇರಿದ ರಾಮದೇಶಿಕ ಈತನ ಶಿಷ್ಯ. ತನ್ನ ಕೃತಿಯಲ್ಲಿ ಕಷ್ಟವಾದ ಭಾಗಗಳಿಗೆ ತೆಲುಗಿನಲ್ಲಿ ವ್ಯಾಖ್ಯಾನ ಮಾಡಿದ್ದಾನೆ. ಇದರ ಮೊದಲ ಮೂರು ಅಧ್ಯಾಯಗಳಲ್ಲಿ ವೈದ್ಯಕೀಯ ಪರೀಕ್ಷೆಯಲ್ಲಿ ಅನುಸರಿಸಬೇಕಾದ ಮಾರ್ಗ ವಿಧಾನಗಳನ್ನು ಸೂಚಿಸಿದ್ದಾನೆ. ಉಳಿದ ಇಪ್ಪತ್ತು ಅಧ್ಯಾಯಗಳಲ್ಲಿ ನಾನಾ ಕಾಯಿಲೆಗಳ ಪರೀಕ್ಷೆ ಹಾಗೂ ನಿವಾರಣಾ ಕ್ರಮಗಳನ್ನೂ ಕೊನೆಯ ಅಧ್ಯಾಯದಲ್ಲಿ ರಸೌಷಧಿಗಳ ತಯಾರಿಕಾವಿಧಾನವನ್ನೂ ಹೇಳಲಾಗಿದೆ. ಈಗಲೂ ಈ ಗ್ರಂಥ ಆಂಧ್ರಪ್ರದೇಶ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ. *

**ನೀಲಕಂಠ ಶಿವಾಚಾರ್ಯ[1]:** ವೀರಶೈವ ಆಚಾರ್ಯರು. ಇವರು ಶಂಕರಾಚಾರ್ಯರ ಸಮಕಾಲೀನರಿದ್ದಂತೆ ತೋರುತ್ತದೆ. ಇವರನ್ನು ಆನಂದ ಗಿರಿಯ ಶಂಕರವಿಜಯದಲ್ಲಿ ಶಿರೋಲಿಗಂಧಾರಿ ಜಂಗಮಾ ಚಾರ್ಯರೆಂದೂ ವಿದ್ಯಾರಣ್ಯಕೃತ ಶಂಕರದಿಗ್ವಿಜಯದಲ್ಲಿ ಗೋಕರ್ಣದಲ್ಲಿ ಶಂಕರರೊಡನೆ ಶಾಸ್ತ್ರ ವಾಕ್ಯಾರ್ಥ ನಡೆಯಿಸಿದ ಹರದತ್ತಾಚಾರ್ಯರ ಗುರುವೆಂದೂ ಹೇಳಿದೆ. ಇವರು ಶಿವಸೂತ್ರ ಮತ್ತು ಬ್ರಹ್ಮಸೂತ್ರಗಳ ಮೇಲೆ ಭಾಷ್ಯಾದಿಗಳನ್ನೂ ಅನೇಕ ನಿಬಂಧಗಳನ್ನೂ ರಚಿಸಿದ್ದರೆಂದು ಇವರ ಬ್ರಹ್ಮಸೂತ್ರ ಭಾಷ್ಯದ ಆಧಾರದ ಮೇಲೆ ಕ್ರಿಯಾಸಾರವೆಂಬ ಕಾರಿಕೆಯನ್ನು ಬರೆದಿರುವ ನೀಲಕಂಠ ಶಿವಾಚಾರ್ಯರ (ಸು. 1400) ಹೇಳಿಕೆಗಳಿಂದ ತಿಳಿಯುತ್ತದೆ. (ಎಂ.ಜಿ.ಎನ್.)

**ನೀಲಕಂಠ ಶಿವಾಚಾರ್ಯ[2]:** ಸು. 1400. ವೀರಶೈವ ಆಚಾರ್ಯ. ಕ್ರಿಯಾಸಾರ ಎಂಬ ಗ್ರಂಥದ ಕರ್ತೃ. ಇವರು ಕನ್ನಡದಲ್ಲಿ ಸಕಲಾಗಮಾರ್ಥ ವಿವರಣ ಎಂಬ ಮತ್ತೊಂದು ಗ್ರಂಥವನ್ನು ಬರೆದಿದ್ದಂತೆ ಕ್ರಿಯಾಸಾರದಲ್ಲಿ ಬರುವ ಕೆಲವು ಉಲ್ಲೇಖಗಳಿಂದ ತಿಳಿಯುತ್ತದೆ. ಆದರೆ ಇದು ಉಪಲಬ್ಧವಾಗಿಲ್ಲ. ಇವರ ತಂದೆ ಮಲ್ಲಯ್ಯ, ತಾಯಿ ಚನ್ನಮ್ಮ.

ಕ್ರಿಯಾಸಾರ ಮೊದಲನೆಯ ನೀಲಕಂಠ ಶಿವಾಚಾರ್ಯರ ಬ್ರಹ್ಮಸೂತ್ರ ಭಾಷ್ಯಕ್ಕೆ ಕಾರಿಕಾ ರೂಪವಾಗಿದೆ; ಸಂಸ್ಕೃತದಲ್ಲಿದೆ. ಇದರ ಮೊದಲ ನಾಲ್ಕು ಉಪದೇಶಗಳು ಬ್ರಹ್ಮಸೂತ್ರಭಾಷ್ಯದ ನಾಲ್ಕು ಅಧ್ಯಾಯಗಳ ಸಾರ. ಈ ಗ್ರಂಥವನ್ನು ಶಾರದಾತಿಲಕ ಮತ್ತು ಪುರಶ್ಚರ್ಯಾರ್ಣವ (ನೇಪಾಳ ಪ್ರತಾಪಸಿಂಹ ಮಹಾರಾಜ ಬಹದ್ದೂರ್ ವಿರಚಿತ) ಗ್ರಂಥಗಳಿಗೆ ಪ್ರಮಾಣವಾಗಿ ಸ್ವೀಕರಿಸಿರುವುದರಿಂದ ಇದು ಭಾರತದ ದಕ್ಷಿಣೋತ್ತರ ಭಾಗಗಳೆರಡರಲ್ಲಿಯೂ ಪ್ರಸಿದ್ಧಿ ಪಡೆದಿದ್ದಂತೆ ಕಂಡುಬರುತ್ತದೆ. ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ ಕ್ರಿಯಾಸಾರದ ಅನೇಕ ಭಾಗಗಳು ಅನುವಾದವಾಗಿವೆ. (ಎಂ.ಜಿ.ಎನ್.,ಎಚ್.ಸಿ.ಎಸ್.)

**ನೀಲಕಂಠಾಚಾರ್,ಎನ್.ಜಿ.:** 1924. ಹೆಸರಾಂತ ಲೋಹಶಿಲ್ಪಿ. ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಜನಿಸಿದರು (1924). ಶಿಲ್ಪಕಲೆಯನ್ನೇ ವಂಶಪಾರಂಪರ್ಯವಾಗಿ ರೂಢಿಸಿಕೊಂಡು ಬಂದಿದ್ದ ಉತ್ತಮ ಶಿಲ್ಪಿಗಳ ಕುಟುಂಬ ಇವರದು. ಎಳೆಯ ವಯಸ್ಸಿನಿಂದಲೂ ಹಿತ್ತಾಳೆ, ಕಂಚು, ಪಂಚಲೋಹ ಕಲೆಗಳಿಗೆ ಮನಸೋತರು. ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯನ್ನು ಸೇರಿದ (1942) ಇವರು ಅಲ್ಲಿ ಶಿಕ್ಷಕರಾಗಿದ್ದ ಪ್ರಸಿದ್ಧ ಶಿಲ್ಪಿ ಎನ್.ವಿ. ಸೂರ್ಯನಾರಾಯಣಾಚಾರ್ಯರಲ್ಲಿ ಐದು ವರ್ಷ ಕಾಲ ಶಿಷ್ಯವೃತ್ತಿ ಮಾಡಿದರು. ಲೋಹಶಿಲ್ಪಕಲೆಯಲ್ಲಿ ನಕಾಸೆ ಕೆಲಸ ಅತ್ಯಂತ ನಾಜೂಕಿನ ಹಾಗೂ ಸೂಕ್ಷ್ಮ ರೀತಿಯದು. ಈ ಕೆಲಸದಲ್ಲಿ ಪರಿಣಿತಿ ಸಾಧಿಸಿದರು. ಇವರು ನಿರ್ಮಿಸಿದ ಶಿವಶಂಕರ ಲೀಲಾ ನೃತ್ಯ, ಕಂಚಿನ ಮದನಿಕೆ, ಪಂಚಲೋಹದ, ಚೆನ್ನಕೇಶವಮೂರ್ತಿ, ನಾಟ್ಯ ಸರಸ್ವತಿ, ವೇಣುಗೋಪಾಲ– ಇವು ಇವರ ಕಲಾನೈಪುಣ್ಯತೆಗೆ ಸಾಕ್ಷಿ.

ಹೊಯ್ಸಳ ಶೈಲಿಯ ವೈಭವಪೂರ್ಣ ಪಂಚಲೋಹದ ವೇಣು ಗೋಪಾಲ ಮೂರ್ತಿಯ ಕಲಾಕೌಶಲ್ಯವನ್ನು ಮೆಚ್ಚಿ ಅಖಿಲ ಭಾರತ ಹಸ್ತಶಿಲ್ಪ ಮಂಡಲಿ ಇವರಿಗೆ ರಾಷ್ಟ್ರಮಟ್ಟದ ಪುರಸ್ಕಾರವನ್ನು ನೀಡಿ ಗೌರವಿಸಿತು (1978). ಬೆರಗುಮೂಡಿಸುವ ಕುಸುರಿ ಕೆಲಸದಿಂದ ಸಾಕಾರ ಗೊಂಡಿರುವ ಮೂರು ಅಡಿ ಎತ್ತರದ ವೇಣುಗೋಪಾಲ ಮೂರ್ತಿ ಇವರ ಕಲಾಪ್ರೌಢಿಮೆಗೊಂದು ಭವ್ಯ ಸಾಕ್ಷಿ. ಇವರ ಲೋಹಕಲಾ ಮೂರ್ತಿಗಳು ದೇಶವಿದೇಶಗಳಲ್ಲಿಯೂ ವಸ್ತುಸಂಗ್ರಹಾಲಯಗಳಲ್ಲಿಯೂ ವಿಶೇಷ ಪ್ರದರ್ಶನಗಳಲ್ಲಿಯೂ ಪಾಲ್ಗೊಂಡು ಹಸ್ತಶಿಲ್ಪ ಕ್ಷೇತ್ರದಲ್ಲಿ ಇವರಿಗೆ ವಿಶಿಷ್ಟಸ್ಥಾನ ಗಳಿಸಿಕೊಟ್ಟಿವೆ.

ಇವರ ಸಾಧನೆಗಾಗಿ ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದವು: ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1995), ರಾಮಸನ್ ಕಲಾ ಪ್ರತಿಷ್ಠಾನದ ಶಿಲ್ಪಶ್ರೀ ಸನ್ಮಾನ, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರ್ಕಾರದ ಜಕಣಾಚಾರಿಪ್ರಶಸ್ತಿ (1996), ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿದ್ದ ಇವರು ಅದರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ (2002– 04). (ಎನ್.ಎಂ.)

**ನೀಲಕಂಠಾಚಾರ್ಯ:** ಸು.1485. ವೀರಶೈವ ಕವಿ. ಆರಾಧ್ಯಚಾರಿತ್ರ ಎಂಬ ಗ್ರಂಥದ ಕರ್ತೃ. ಇದು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಚರಿತ್ರೆಯನ್ನೊಳಗೊಂಡಿದೆ. ಶಿವಲೆಂಕಮಂಚಣ್ಣ ಪಂಡಿತ, ಉರಿಲಿಂಗಪೆದ್ದಿಗಳ ವಂಶಸ್ಥನಾದ ಈತ ತನ್ನ ವಂಶ ಪರಂಪರೆಯನ್ನು ಸುದೀರ್ಘವಾಗಿ ಹೇಳಿಕೊಂಡಿದ್ದಾನೆ. ವಿತತಕರ್ಣಾಟಲಕ್ಷಣ ಕಮಲಭವನೆನಿಪ ಚತುರವರ ತಾನೆಂದು ತನ್ನನ್ನು ವಿಶ್ಲೇಷಿಸಿ ಕೊಂಡಿದ್ದಾನೆ. ವಾರ್ಧಕ ಷಟ್ಪದಿಯಲ್ಲಿರುವ ಈ ಕೃತಿಯಲ್ಲಿ 5 ಪ್ರಕರಣ, 65 ಸಂಧಿ, 3,069 ಪದ್ಯಗಳಿವೆ. ಪಾಲ್ಕುರಿಕೆ ಸೋಮನಾಥ ಆಂಧ್ರ ಭಾಷೆಯಲ್ಲಿ ಹೇಳಿದುದನ್ನು ಈತ ಕನ್ನಡದಲ್ಲಿ ರಚಿಸಿದ್ದಾನೆ.

ಬಸವಾದಿ ಪ್ರಮಥರು ಭೂಲೋಕದಲ್ಲಿ ಕೈಗೊಂಡ ಕಾರ್ಯವನ್ನು ಮುಂದುವರಿಸಲು ಪರಮೇಶ್ವರ ಮಲ್ಲಿಕಾರ್ಜುನ ಪಂಡಿತಾರಾಧ್ಯನನ್ನು ಧರೆಗೆ ಕಳುಹಿಸಿದ್ದರಿಂದ ಭೃಂಗಿಯ ನಿಷ್ಠೆ. ದೂರ್ವಾಸನ ಶಾಪಶಕ್ತಿ. ಗೌತಮನ ವೈಖರಿ, ರುದ್ರಪ್ರಮಥರ ಪ್ರಸಾದೈಕರತಿ, ಉಪಮನ್ಯುಮುನಿಯ ಗುರುತ್ವ, ವೀರಭದ್ರನ ಶೌರ್ಯ ಇವನ್ನು ಒಟ್ಟುಗೂಡಿಸಿಕೊಂಡ ಬಿಂಬವೊಂದು ದ್ರಾಕ್ಷಾರಮ ಪಟ್ಟಣದ ಭೀಮಪಂಡಿತನ ಸತಿ ಗೌರಾಂಬಿಕೆಯ ಉದರದಲ್ಲಿ ಮೂರ್ತಗೊಂಡಿತು. ಹೀಗೆ ಜನಿಸಿದ ಮಲ್ಲಿಕಾರ್ಜುನ ಪಂಡಿತಾರಾಧ್ಯ ಸಕಲಾಗಮಪಂಡಿತನಾಗಿ ಧರ್ಮಬೋಧೆ ಮಾಡಿದ. ಇದೇ ಇಲ್ಲಿನ ಕಥಾವಸ್ತು.

ದೀಕ್ಷಾಪ್ರಕರಣದಲ್ಲಿ ಅಷ್ಟಾವರಣಗಳ ಮಹಿಮೆಯನ್ನೂ ಪುರಾತನ ಪ್ರಕರಣದಲ್ಲಿ ಗುರುಭಕ್ತಾಂಡಾರ, ಮಲ್ಹಣ ಮೊದಲಾದ ಶಿವಭಕ್ತರ ಕಥಾನಕಗಳನ್ನೂ ವಾದ ಪ್ರಕರಣದಲ್ಲಿ ಬೌದ್ಧ, ಜೈನ, ಚಾರ್ವಾಕ, ವೈದಿಕ ಮತಗಳನ್ನು ಖಂಡಿಸಿರುವುದನ್ನೂ ಮಹಿಮಾ ಪ್ರಕರಣದಲ್ಲಿ ಚೋಳರಾಜ, ನಂಬಿಯಣ್ಣ, ದೋಣಮಾರ್ಯ ಮೊದಲಾದ ಶರಣರ ಮಹಿಮೆಯನ್ನೂ ಕಡೆಯದಾದ ಪರ್ವತ ಪ್ರಕರಣದಲ್ಲಿ ಶ್ರೀಶೈಲಗಿರಿಯ ಮಹಿಮೆಯನ್ನೂ ಕಾಣಬಹುದು.

ಸಂದರ್ಭಕ್ಕೆ ತಕ್ಕಂತೆ ಕಾವ್ಯದುದ್ದಕ್ಕೂ ಶಿವ, ಅಗ್ನಿ, ವಾಯು, ಸ್ಕಂದ ಪುರಾಣಗಳಿಂದ ಆಯ್ದ ಉದ್ಧೃತ ವಾಕ್ಯಗಳಿವೆ. ಕಾವ್ಯಬಂಧ ಲಲಿತವಾಗಿದೆ.*

**ನೀಲಕಂಠಾರಾಧ್ಯ:** ಸು. 1500. ವೀರಶೈವ ಕವಿ. ಪರವಾದಿಗಜಾಂಕುಶ ತಾರಾವಳಿ ಎಂಬ ಗ್ರಂಥದ ಕರ್ತೃ. ಈತನಿಗೆ ಪರಮತವೇಶ್ಯಾಭುಜಂಗ ಎಂಬ ಬಿರುದಿದ್ದಂತೆ ತಿಳಿಯುತ್ತದೆ.

ಪರವಾದಿಗಜಾಂಕುಶ ತಾರಾವಳಿ ಗದ್ಯ ಮತ್ತು ರಗಳೆಯಲ್ಲಿ (ಪದ್ಯ) ರಚಿತವಾಗಿದೆ. ಇದರಲ್ಲಿ ಒಟ್ಟು ಇಪ್ಪತ್ತೇಳು ರಗಳೆಯ ಭಾಗಗಳೂ ಇಪ್ಪತ್ತೇಳು ಗದ್ಯಭಾಗಗಳೂ ಆದ್ಯಂತ್ಯದಲ್ಲಿ ಒಂದೊಂದು ಕಂದ ಪದ್ಯವೂ ಸಮಾವೇಶಗೊಂಡಿವೆ. ತಾನು ಈ ಗ್ರಂಥವನ್ನು ಸಕಲವೇದಶಾಸ್ತ್ರೋಪನಿಷದರ್ಥಮಂ ಗರ್ಭೀಕರಿಸಿ ಜೈನ ಚಾರ್ವಾಕ ಮಾಯಾವಾದಿ ವೈಷ್ಣವರೆಂಬ ಮದಗಜಕ್ಕೆ ಅಂಕುಶವಾಗಿ ರಚಿಸಿರುವಂತೆ ಹೇಳಿಕೊಂಡಿದ್ದಾನೆ. ಇವನ ಕೃತಿಯಲ್ಲಿ ಸ್ವಮತಮಂಡನೆ, ಪರಮತಖಂಡನೆ ಕಂಡುಬರುತ್ತದೆ. ಈತನ ರಗಳೆ ಲಲಿತ ರಗಳೆಯಂತೆ ರಚಿತವಾಗಿದ್ದರೂ ಆದಿಪ್ರಾಸವನ್ನು ದ್ವಿಪದ ಘಟಕಕ್ಕೆ ಮಾತ್ರ ಬಳಸಿಕೊಳ್ಳದೆ ಅಖಂಡ ಕಾವ್ಯಭಾಗಕ್ಕೂ ಅನ್ವಯಿಸಿಕೊಂಡಿದ್ದಾನೆ. ಅಲ್ಲದೆ ಅಂತ್ಯಪ್ರಾಸವನ್ನು ಪೂರ್ಣವಾಗಿ ಉಲ್ಲಂಘಿಸಿರುವುದೂ ಒಂದು ಗಮನಾರ್ಹ ಅಂಶ. ಯಾಂತ್ರಿಕ ಗಣವಿಭಜನೆಯಾಗಲಿ ಮಾತ್ರೆಗಳ ಲೆಕ್ಕಾಚಾರವಾಗಲಿ ಇವನಲ್ಲಿ ಸಾಂಪ್ರದಾಯಿಕವಾಗಿ ಉಳಿದಂತಿಲ್ಲ. ರಗಳೆ ಛಂದಸ್ಸಿನ ನಿಯಮದಂತೆ ಎರಡನೆಯ ಪಾದದ ಕೊನೆಯಲ್ಲಿ ಯತಿ ನಿರ್ದೇಶನವಿಲ್ಲ. ಅದರ ಬದಲು ಪದ ಮತ್ತು ಭಾವಗಳೆರಡೂ ಹರಿವನ್ನು ಪಡೆದು ಮುಂದಿನ ಸಾಲುಗಳಿಗೂ ಹರಿದು ಒಂದು ಬಗೆಯ ಸರಳ ರಗಳೆಯಂತೆ ಬಳಕೆಯಾಗಿರುವುದು ಈ ಕವಿಯ ಒಂದು ವೈಶಿಷ್ಟ್ಯವಾಗಿದೆ. ಈ ದೃಷ್ಟಿಯಿಂದ ನೀಲಕಂಠಾರಾಧ್ಯನು ಪಾಂಡಿತ್ಯ ಹಾಗೂ ಪ್ರಯೋಗಶೀಲತೆಗಳೆರಡನ್ನೂ ಮೈಗೂಡಿಸಿಕೊಂಡ ಗಮನಾರ್ಹ ವ್ಯಕ್ತಿಯಾಗಿದ್ದಾನೆ. **(ಎನ್.ಬಿ.ಎಲ್.)**

**ನೀಲಗಾರರು:** ದಕ್ಷಿಣ ಕರ್ನಾಟಕದ ದಕ್ಷಿಣ ಭಾಗದಲ್ಲಿ ಪ್ರಮುಖವಾಗಿ ಕಂಡುಬರುವ ಧಾರ್ಮಿಕ ವೃತ್ತಿಗಾಯಕರು, ಮಂಟೇಸ್ವಾಮಿಯನ್ನು ಶಿಷ್ಯರಾದ ಚಿಕ್ಕಲ್ಲೂರು ಸಿದ್ದಪ್ಪಾಜಿ, ಕಪ್ಪಡಿ ರಾಚಪ್ಪಾಜಿ ಮತ್ತು ಮಳವಳ್ಳಿ ಹಾಗೂ ಬೊಪ್ಪಗೌಡನಪುರದ ಅರಸುಮನೆತನದ ಸ್ವಾಮಿಗಳ ಮಹಿಮೆಯ ಪ್ರಸಾರಕ್ಕೆ ಮೀಸಲಾದ ವಿಶಿಷ್ಟ ಭಕ್ತರು. ಇವರನ್ನು ಲೀಲೆಗಾರರು ಎಂದೂ ಕರೆಯಲಾಗುತ್ತದೆ. ತಮ್ಮನ್ನು ಇವರು ಮಂಟೇದವರು, ಮಂಟೇಸ್ವಾಮಿಗಳು ಎಂದು ಕರೆದುಕೊಳ್ಳುತ್ತಾರೆ.

ಮಂಟೆಸ್ವಾಮಿ ಸಂಪ್ರದಾಯದ ಧಾರ್ಮಿಕ ವೃತ್ತಿಗಾಯಕರು

ಇವರ ವೇಷಭೂಷಣಗಳು ವಿಶಿಷ್ಟವಾದುವು. ತಲೆಯಲ್ಲಿ ಕೆಂಪು ರುಮಾಲು, ಮೈಮೇಲೆ ಕರಿಯ ಮೇಲಂಗಿ, ಮಂಡಿಯಿಂದ ತುಸು ಕೆಳಗೆ ಚಾಚಿರುವ ಕಚ್ಚೆಯ ಪಂಚೆ, ಕೈಯಲ್ಲಿ ಅಷ್ಟೇನೂ ಉದ್ದವಲ್ಲದ ನಾಗರ ಹೆಡೆಯ ಅಥವಾ ಸಿಂಹಮುಖದ ಕರಿಯ ತಂಬೂರಿ, ಜೊತೆಗೆ ಚಿಟಗಿ ಅಥವಾ ಹೆಬ್ಬೆರಳಿನಲ್ಲಿ ಎರಡು ಗಗ್ಗರಗಳು, ಹಣೆಯಲ್ಲಿ ಭಸ್ಮ ಜೊತೆಗೆ ಕುಂಕುಮದ ತಿಲಕ, ಕೊರಳಲ್ಲಿ ಮೂರು ರುದ್ರಾಕ್ಷಿ ಧರಿಸಿರುತ್ತಾರೆ.

ಧರೆಗೆ ದೊಡ್ಡವರು, ಮಂಟೇದ ಒಡೆಯ, ಹಲಗೂರು ಪವಾಡ – ಇವು ಇವರು ಹಾಡುವ ಮುಖ್ಯ ಧಾರ್ಮಿಕ ಕಥೆಗಳು. ಈ ಕಥೆಗಳ ಜೊತೆಗೆ ಅನೇಕ ಲೌಕಿಕ ಕಥೆಗಳನ್ನು ಹಾಡುತ್ತಾರೆ. ಅವುಗಳಲ್ಲಿ ಚೆಲುವ ಚೆನ್ನಿಗರಾಮ, ಮೈದಾಳು ರಾಮಣ್ಣ, ನಂಜಯ್ಯ ಚಾಮುಂಡಿ, ಸಾರಂಗಧರ, ಪಿರಿಯಾಪಟ್ಟಣದ ಲಾವಣಿ, ಅರ್ಜುನ ಜೋಗಿ ಹಾಡು, ಗಜಪತಿರಾಜ, ಬಂಜೆ ಹೊನ್ನಮ್ಮ, ಚೆಲುವರಾಯ, ಬಾಲನಾಗಮ್ಮ ಮುಖ್ಯವಾದುವು.

ಧಾರ್ಮಿಕ ಕಥೆಗಳನ್ನು ಹಾಡುವಾಗ ಸಿದ್ಧಯ್ಯ ಶಿವನೇ ಬನ್ನಿ, ಪರಂಜ್ಯೋತಿ ನೀವೆ ಬನ್ನಿ; ಮಂಟೇದ ಲಿಂಗಯ್ಯ ನೀವೆ ಬನ್ನಿ ಎಂದು ಸೊಲ್ಲುಸೊಲ್ಲಿಗೂ ಗುರು ಸಿದ್ಧಪ್ಪಾಜಿಯವರನ್ನು ನೆನೆಯುತ್ತ ತಂಬೂರಿಯನ್ನು ನುಡಿಸುತ್ತ ಕಥೆಯನ್ನು ಮುಖ್ಯ ಕಥೆಗಾರ ಹಾಡಿದರೆ ಹಿಮ್ಮೇಳದವರು ಚಿಟಗಿ, ಏಕತಾರಿಗಳನ್ನು ನುಡಿಸುತ್ತಾರೆ. **(ಟಿ.ಎಸ್.ಆರ್.)**

**ನೀಲಮ್ಮ:** (ನೀಲಾಂಬಿಕೆ) 12ನೆಯ ಶತಮಾನದಲ್ಲಿ ಬಾಳಿದ ಪ್ರಸಿದ್ಧ ಶಿವಶರಣೆ ಹಾಗೂ ವಚನಕಾರ್ತಿ. ಬಸವಣ್ಣನವರ ಧರ್ಮಪತ್ನಿ. ಈಕೆ ಬಿಜ್ಜಳನಲ್ಲಿ ಮಂತ್ರಿಯಾಗಿದ್ದ ಬಲದೇವನ ತಮ್ಮ ಸಿದ್ಧರಸ

ಮಂತ್ರಿಯ ಮಗಳು ಎಂದು ಸಿಂಗಿರಾಜಪುರಾಣದಲ್ಲಿ ಹೇಳಿದೆ. ಬಸವಣ್ಣನವರ ಕಿರಿಯ ಧರ್ಮಪತ್ನಿಯಾಗಿ ಅವರ ಎಲ್ಲ ಧಾರ್ಮಿಕ ಸಾಮಾಜಿಕ ಕಾರ್ಯಗಳಲ್ಲಿ ಮಹತ್ತ್ವದ ಪಾತ್ರವಹಿಸಿ ಅವರ ಲೌಕಿಕ, ಆಧ್ಯಾತ್ಮಿಕ ಜಗತ್ತಿಗೆ ಬೆನ್ನೆಲುಬಾಗಿ ಅವರ ಜೀವನಕ್ಕೆ ಹೊಸ ಚೈತನ್ಯ ತಂದ ಇವಳನ್ನು ಬಸವಣ್ಣನವರು ನೀಲಾಂಬಿಕೆ, ನೀಲಲೋಚನೆ ಎಂದೂ ಕರೆದಿದ್ದಾರೆ. ಈಕೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪಡೆದ ಸಿದ್ಧಿ ಅತ್ಯದ್ಭುತವೂ ಅನ್ಯಾದೃಶವೂ ಆದುದು. ಈಕೆಗೆ ತನ್ನ ಸಿದ್ಧಿಯಲ್ಲಿ ಎಷ್ಟು ಪರಿಪೂರ್ಣವಾದ ವಿಶ್ವಾಸವಿತ್ತೆಂಬುದು ಇವಳ ಜೀವನದ ಕೊನೆಯ ಘಟನೆಯೊಂದರಿಂದ ವ್ಯಕ್ತವಾಗುತ್ತದೆ. ಕಲ್ಯಾಣದ ಅನ್ಯಾಯವನ್ನು ಕಂಡು ಬಸವಣ್ಣನವರು ಕೂಡಲ ಸಂಗಮದಲ್ಲಿ ಐಕ್ಯವಾಗಲು ಆ ಕ್ಷೇತ್ರದ ಕಡೆಗೆ ಹೊರಟಾಗ ತನ್ನ ಜೊತೆ ಹೊರಡುವಂತೆ ಹೆಂಡತಿಗೆ ಹೇಳಲು ಹಡಪದ ಅಪ್ಪಣ್ಣನನ್ನು ಕಳುಹಿಸಿದರು. ಆಗ ಆತನಿಗೆ ಹೇಳಿದ 'ಪರಿಣಾಮ ಮೂರ್ತಿ ಬಸವನ ಮೂರ್ತಿ ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇಕೆ ಅಪ್ಪಣ್ಣಲ ಅಲ್ಲಿರ್ಪ ಸಂಗಯ್ಯ ಇಲ್ಲಿಲ್ಲವೆಲ ಅಲ್ಲಿ ಇಲ್ಲಿ ಎಂಬ ಉಭಯುಭಾವವೇಕೆಲ ಅಂಗಯ್ಯುಲ್ಲಿರುವ ಲಿಂಗ ತಂದೆ ಸರ್ವವ್ಯಾಪಿಯಾಗಿರಲು ಅಲ್ಲೆ ಇಲ್ಲೆ ಎಂಬ ಉಭಯಕ್ಕೆ ಎಡೆಯಿಲ್ಲ' ಎಂಬ ಮಾತುಗಳು ಈಕೆಯ ವ್ಯಕ್ತಿತ್ವಕ್ಕೆ, ಅನುಭಾವದೃಷ್ಟಿಗೆ ನಿದರ್ಶನಗಳಾಗಿವೆ. ಈಕೆಗೆ ಬಾಲಸಂಗಯ್ಯನೆಂಬ ಮಗ ಹುಟ್ಟಿ ಆತ ಬಹುಬೇಗನೆ ಮರಣಹೊಂದಿದನೆಂದು ತಿಳಿದುಬರುತ್ತದೆ.

ಈಕೆ ಸಂಗಯ್ಯ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾಳೆ. ಇದುವರೆಗೆ 125 ವಚನಗಳು ದೊರಕಿವೆ. ಇವಳ ವಚನಗಳಲ್ಲಿ ಶಿವಾನುಭವ, ತಾತ್ತ್ವಿಕ ದೃಷ್ಟಿ, ಭಕ್ತಿಭಾವ ಎದ್ದುಕಾಣುತ್ತವೆ. ಅಲ್ಲದೆ ಇವಳ ಮನಸ್ಸಿನ ಅನೇಕ ಭಾವನೆಗಳ ಹೋರಾಟ, ಶಾಂತಿ, ಸಾಮರಸ್ಯ ಮುಂತಾದುವುಗಳನ್ನು ಇವು ಸ್ಪಷ್ಟಪಡಿಸುತ್ತವೆ. ಈಕೆಯ ವಚನಗಳು ಆಧ್ಯಾತ್ಮಿಕ ಸಾಹಿತ್ಯದಲ್ಲಿ ಉನ್ನತ ಮಟ್ಟವನ್ನು ಪಡೆದಿವೆ.

ಈಕೆ ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತಿಳಿಯುತ್ತದೆ. ಇವಳ ಸ್ತುತಿರೂಪವಾಗಿ ನೀಲಮ್ಮನ ಸ್ತೋತ್ರ, ನೀಲಾಂಬಿಕಾ ಪಂಚವಿಂಶತಿ, ನೀಲಮ್ಮನ ತ್ರಿವಿಧಿ ಮೊದಲಾದ ಗ್ರಂಥಗಳು ರಚಿತವಾಗಿವೆ. **(ಟಿ.ಜಿ.ಎಸ್.)**

**ನುಗು:** ಕಪಿಲಾ ನದಿಯ ಒಂದು ಉಪನದಿ. ಭೃಗು ಎಂದೂ ಹೆಸರಿರುವ ಈ ನದಿ ಕೇರಳದ ವೈನಾಡಿನ ನೆಲ್ಲಂಬೂರು ಬೆಟ್ಟಗಳಲ್ಲಿ ಹುಟ್ಟಿ, ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಮೂಲಕ ಉತ್ತರಕ್ಕೆ ಹರಿದು ಹಂಪಾಪುರ ಎಂಬಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ಸಾಧಾರಣ ಕಾಡು ಪ್ರದೇಶದ ಮೂಲಕ ಹರಿಯುವ ಈ ನದಿಯ ಪಾತ್ರದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಚಿನ್ನದ ಹುಡಿ ದೊರಕುತ್ತದೆ. ಲಕ್ಷ್ಮಣಾಪುರ ಎಂಬಲ್ಲಿ ಈ ನದಿಗೆ ಒಂದು ಚಿಕ್ಕ ಅಣೆಕಟ್ಟು ಇದೆ. ಬೀರವಾಳು ಗ್ರಾಮದ ಹತ್ತಿರ ಮಧ್ಯ ಪ್ರಮಾಣದ ಅಣೆಕಟ್ಟನ್ನು ನಿರ್ಮಿಸಲಾಗಿದೆ. 1959ರಲ್ಲಿ ಈ ಜಲಾಶಯದ ನಿರ್ಮಾಣ ಕಾರ್ಯ ಮುಗಿಯಿತು. ಈ ಜಲಾಶಯದ ಕಟ್ಟೆಯ ಎತ್ತರ 44 ಮೀ ಮತ್ತು ಉದ್ದ 637 ಮೀ. ಸು. 10,500 ಹೆಕ್ಟೇರ್ ಭೂಮಿ ಇದರಿಂದ ನೀರಾವರಿಗೆ ಒಳಪಟ್ಟಿದೆ. ಈ ನೀರಾವರಿ ಪ್ರದೇಶದ ಬಹು ಭಾಗ ನಂಜನಗೂಡು ತಾಲ್ಲೂಕಿಗೆ ಸೇರಿದೆ. **(ಎ.ಕೆ.)**

**ನುಗ್ಗೇಹಳ್ಳಿ:** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಚನ್ನರಾಯಪಟ್ಟಣದ ಈಶಾನ್ಯಕ್ಕೆ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 4,770.

ಸುಂದರವಾದ ಹೊಯ್ಸಳ ದೇವಾಲಯಗಳಿಗಾಗಿ ಈ ಊರು ಪ್ರಸಿದ್ಧವಾಗಿದೆ. ಈಗ ಲಕ್ಷ್ಮೀನರಸಿಂಹ ದೇವಾಲಯ ಎಂದು ಕರೆಯುವ ವಿಷ್ಣು ದೇವಾಲಯ (ರಚನೆ 1246) ತ್ರಿಕೂಟಾಚಲ, ಮಧ್ಯದ ಗರ್ಭಗುಡಿಯಲ್ಲಿ ಪ್ರಸನ್ನಕೇಶವ ವಿಗ್ರಹ ಇದೆ. ಉಳಿದ ಗರ್ಭಗುಡಿಗಳಲ್ಲಿ ಒಂದು ಕಡೆ ಲಕ್ಷ್ಮೀನರಸಿಂಹ ಮತ್ತು ಇನ್ನೊಂದು ಕಡೆ ವೇಣುಗೋಪಾಲ ಮೂರ್ತಿಗಳು ಇವೆ. ಮಧ್ಯದ ಗರ್ಭಗುಡಿಗೆ ಮಾತ್ರ ಹೊಯ್ಸಳರ ಕಾಲದ ಸುಂದರ ಗೋಪುರವಿದೆ. ಸೋಮನಾಥಪುರ, ಹೊಸಹೊಳಲು, ಅರಳಗುಪ್ಪೆ ಮುಂತಾದ ಕಡೆ ಇರುವ ಹೊಯ್ಸಳ ದೇವಾಲಯಗಳ ಮಾದರಿಯಲ್ಲಿಯೇ ಇರುವ ಈ ದೇವಾಲಯ ಜಗತಿಯ ಮೇಲೆ ಬಳಪದ ಕಲ್ಲಿನಿಂದ ನಿರ್ಮಿತವಾಗಿದ್ದು ಹೊರಗೋಡೆಗಳ ಬುಡದಲ್ಲಿ ಆನೆ, ಕುದುರೆ ಪೌರಾಣಿಕ ಕಥೆ, ಮಕರ ಮತ್ತು ಹಂಸಗಳ ಸಾಲುಗಳನ್ನೊಳಗೊಂಡ ಪಟ್ಟಿಕೆಗಳಿವೆ. ಪೌರಾಣಿಕ ಕಥೆಗಳಲ್ಲಿ ಭಾಗವತದ ಕಥೆಯನ್ನು ಮಾತ್ರ ಶಿಲ್ಪಿಸಿರುವುದೊಂದು ಈ ದೇವಾಲಯದ ವೈಶಿಷ್ಟ್ಯ. ಗೋಡೆಗಳ



ಲಕ್ಷ್ಮೀನರಸಿಂಹ ದೇವಾಲಯ

ಮೇಲಿನ ಮೂರ್ತಿಗಳು ಬಹುಮಟ್ಟಿಗೆ ಹೊಸಹೊಳಲು ಮತ್ತು ಸೋಮನಾಥಪುರದ ದೇವಾಲಯಗಳ ಮೇಲಿನ ಮೂರ್ತಿಗಳಂತೆಯೇ ಇದ್ದು ಬಳ್ಳಿವಿತಾನಗಳ ಕೆಳಗೆ ಹಲವು ಭಂಗಿಗಳಲ್ಲಿ ನಿಂತಿರುವ ಬಗೆಬಗೆಯ ದೇವತಾ ಮೂರ್ತಿಗಳು ಅವುಗಳ ಎತ್ತರಕ್ಕೆ ಸ್ವಲ್ಪ ಸ್ಥೂಲವೆನಿಸಿದರೂ ರಮಣೀಯವಾಗಿದ್ದು ಹೊಯ್ಸಳ ಶಿಲ್ಪದ ಮಾದರಿಯೆನಿಸಿದೆ. ಸುಂದರವಾದ ನವರಂಗದ ದ್ವಾರದ ಮೇಲೆ ವೀಣೆ ನುಡಿಸುತ್ತಿರುವ ಸರಸ್ವತಿಯ ಮೂರ್ತಿಯಿದೆ. ನವರಂಗದ ಒಳ ಚಾವಣಿಗಳಲ್ಲಿ ಆಳವಾದ ಭುವನೇಶ್ವರಿಗಳಿದ್ದು ಒಂದೊಂದೂ ಬೇರೆ ಬೇರೆ ಬಗೆಯ ಆಕೃತಿಗಳನ್ನು ಹೊಂದಿವೆ. ಈ ದೇವಾಲಯದ ಅನೇಕ ಮೂರ್ತಿಗಳನ್ನು ಕಡೆದಿರುವವನು ಪ್ರಸಿದ್ಧ ಶಿಲ್ಪಿ ಮಲ್ಲಿತಮ್ಮ. ಇವನು ದೇವಾಲಯದ ಉತ್ತರಭಾಗದಲ್ಲಿ ತನ್ನ ನೈಪುಣ್ಯವನ್ನು ತೋರಿದ್ದರೆ ದಕ್ಷಿಣಭಾಗದಲ್ಲಿ ಅಷ್ಟೇ ಉತ್ತಮವಾಗಿ ಕಂಡರಿಸಿರುವವನು ಅರಿಬಿರಿದ ರೂವಾರಿ ಗಿರಿ ವಜ್ರದಂಡ, ಬಿರಿದ ಪ್ರಸಾದಿ ಮಸ್ತಕಶೂಲ ಎಂಬ ಬಿರುದುಗಳಿದ್ದ ನಂದಿಯ ಬೈಚೋಜ. ಈ ದೇವಾಲಯದ ಪಾತಾಳಾಂಕಣ, ಹಜಾರ, ಹೊರನವರಂಗ ಮತ್ತು ಉಳಿದೆರಡು ಗರ್ಭಗುಡಿಗಳ ಗೋಪುರಗಳು ಇಲ್ಲಿ ಆಳುತ್ತಿದ್ದ ಪಾಳೆಯಗಾರರ ಕಾಲದಲ್ಲಿ ನಿರ್ಮಿತವಾದುವು.

ಇಲ್ಲಿರುವ ಸದಾಶಿವದೇವಾಲಯ 1249ರ ರಚನೆ. ಆದರೆ ಈಗ ಸುತ್ತಲೂ ಅನೇಕ ಈಚಿನ ಕಟ್ಟಡಗಳು ತುಂಬಿವೆ. ಮೂಲ ಹೊಯ್ಸಳ

ದೇವಾಲಯದ ಹೊರಗೋಡೆಗಳ ಮೇಲೆ ಮೂರ್ತಿಶಿಲ್ಪವಿಲ್ಲದಿದ್ದರೂ ಇದರ ಗೋಪುರ ವಿಶಿಷ್ಟವಾಗಿದೆ. ನವರಂಗದ ಭುವನೇಶ್ವರಿಗಳು ಸುಂದರವಾಗಿವೆ.

13ನೆಯ ಶತಮಾನದಲ್ಲಿ ನುಗ್ಗೇಹಳ್ಳಿ ಒಂದು ಅಗ್ರಹಾರವಾಗಿತ್ತು. ಹೊಯ್ಸಳ ಸೋಮೇಶ್ವರನ ಕಾಲದಲ್ಲಿ 1246ರಲ್ಲಿ ಬೊಮ್ಮಣ್ಣ ದಂಡನಾಯಕ ಇದನ್ನು ಅಗ್ರಹಾರವಾಗಿ ಮಾಡಿದನೆಂದೂ ಊರಿನ ಮಧ್ಯದಲ್ಲಿ ವಿಷ್ಣುದೇವಾಲಯ ಮತ್ತು ಈಶಾನ್ಯಕ್ಕೆ ಶಿವದೇವಾಲಯವನ್ನು ಕಟ್ಟಿಸಿದನೆಂದೂ ಶಾಸನಗಳು ತಿಳಿಸುತ್ತವೆ. ಈತನ ಅಕ್ಕ ಲಕ್ಕವ್ವೆ ಮತ್ತು ಬಲುಮನುಷ್ಯ ಕಮ್ಮಟದ ಬಸವಣ್ಣ ಇವರಿಬ್ಬರೂ ಇಲ್ಲಿ ಛತ್ರಗಳನ್ನು ಕಟ್ಟಿಸಿ ದತ್ತಿ ಬಿಟ್ಟರು. ವಿಜಯನಗರದ ಅರಸರ ಆಳಿಕೆಯ ಕಾಲದಲ್ಲಿ ಇದು ಒಂದು ನಾಡಿನ ರಾಜಧಾನಿಯಾಗಿದ್ದು ಕಟ್ಟಿಗೆ ಗುಂಡಪ್ಪನಾಯಕ ಆಳುತ್ತಿದ್ದಾಗ ಇಲ್ಲಿನ ದೇವಾಲಯಗಳ ಜೀರ್ಣೋದ್ಧಾರ ನಡೆಯಿತು. (ಎಂ.ಎಚ್.)

16ನೆಯ ಶತಮಾನದಲ್ಲಿ ನುಗ್ಗೇಹಳ್ಳಿ ಒಂದು ಪಾಳೆಯಪಟ್ಟಾಗಿತ್ತು. ಇದನ್ನು ಆಳಿದ ನುಗ್ಗೇಹಳ್ಳಿ ಪಾಳೆಯಗಾರರು ಪೂಡೂರ ವಂಶಕ್ಕೆ ಸೇರಿದವರು. ಒಂದು ಬಿರುದಿನ ಪ್ರಕಾರ ಇವರು ಹದಿಮೂರು ರಾಜರನ್ನು ಮೀರಿಸಿದವರು. ಸು. 1573ರ ಒಂದು ಶಾಸನದ ಪ್ರಕಾರ ಇವರ ವಂಶಾವಳಿ ವಿಜಯನಗರದ ಪ್ರೌಢದೇವರಾಯನ ಅಳಿಯ ತಿರುಮಲರಾಯನವರೆಗೂ ಹೋಗುತ್ತದೆ. ತಿರುಮಲರಾಯನಿಗೆ ರಾಯ ಒಡೆಯ ಎಂಬ ಮಗನಿದ್ದ. ಈತ ತಿರುವೇಂಗಳನಾಥ ದೇವರ ಪ್ರತಿಮೆಯನ್ನು ಪ್ರತಿಷ್ಠಿಸಿ ಕಟ್ಟಿಗೆಯ ಹಳ್ಳಿಯನ್ನು ದಾನವಾಗಿ ಕೊಟ್ಟ. ಕಬ್ಬಿಗರ ಕೈಪಿಡಿ ಎಂಬ ಗ್ರಂಥದ ಕರ್ತೃ ಲಿಂಗಮಂತ್ರಿ ಎಂಬುವನು ಈತನ ಮಂತ್ರಿಯಾಗಿದ್ದ. ರಾಯ ಒಡೆಯನ ಮಗ ಇಂದುಶೇಖರ, ಇವನ ಮಗ ಬಸವರಾಜಯ್ಯ ದೇವ ಮಹಾಅರಸು. 1531ರ ಒಂದು ಶಾಸನ ನುಗ್ಗೇಹಳ್ಳಿಯ ವಿರೂಪರಾಜ ಮಹಾ ಅರಸುವಿನ ಮಗನಾದ ಮಲರಾಜನು ಸೀಗೆಯ ಹನುಮಂತ ದೇವಾಲಯಕ್ಕೆ ಭೂಮಿಯನ್ನು ದಾನಮಾಡಿದನೆಂದು ತಿಳಿಸುತ್ತದೆ. ಮಲರಾಜನಿಗೆ ಭುವನ್ಯೆಕ ವೀರ ಮತ್ತು ಗಜಬೇಟೆರಾಜ ಎಂಬ ಬಿರುದುಗಳಿದ್ದವು. ವಿರೂಪರಾಜ ಅರಸುವಿನ ಕಾಲದಲ್ಲಿ ರಾಮನಾಥಪುರದ ರಾಮೇಶ್ವರ ದೇವಾಲಯಕ್ಕೆ ಒಂದು ದಾನವನ್ನು ಕೊಡಲಾಯಿತು. ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದ ಉತ್ಸವಮೂರ್ತಿ ಮತ್ತು ಹಲವು ಇತರ ಲೋಹದ ಪ್ರತಿಮೆಗಳ ಹೆಸರುಪಟ್ಟಿಯ ಪ್ರಕಾರ ಈ ವಿಗ್ರಹಗಳನ್ನು ನುಗ್ಗೇಹಳ್ಳಿಯ ಪಾಳೆಯಗಾರನಾಗಿದ್ದ ಗೋಪಾಲನೆಂಬಾತ ಮಾಡಿಸಿದನೆಂದು ತಿಳಿಯುತ್ತದೆ. (ಎ.ವಿ.ವಿ.)

**ನುಲಿಯ ಚಂದಯ್ಯ:** ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಕಲ್ಯಾಣದಲ್ಲಿ ಹುಲ್ಲಿನ ಹಗ್ಗ ಮಾಡಿ ಮಾರುವ ಕಾಯಕ ಕೈಕೊಂಡು ಜೀವಿಸುತ್ತಿದ್ದ. ಈತ ಬಿಜಾಪುರ ಜಿಲ್ಲೆಯ ಶಿವಣಗಿ ಗ್ರಾಮದವನೆಂಬ ಹೇಳಿಕೆ ಇದೆ. ಇವನು ನಿಃಸ್ಪೃಹಿಯೂ ತತ್ತ್ವಾಚರಣೆಯಲ್ಲಿ ನಿಷ್ಠುರನೂ ಆಗಿದ್ದ. ಇಷ್ಟ ಲಿಂಗ ಹೆಚ್ಚೋ ಜಂಗಮ ಹೆಚ್ಚೋ ಎಂಬ ವೀರಶೈವ ಧರ್ಮದ ಸೂಕ್ಷ್ಮ ಚರ್ಚೆಯ ವಿಷಯದಲ್ಲಿ ಈತನ ಹೆಸರು ಪ್ರಸಿದ್ಧಿಪಡೆದಿದೆ. ಒಮ್ಮೆ ಸಜ್ಜೆಯಿಂದ ಈತನ ಇಷ್ಟಲಿಂಗ ಜಾರಿ ನೀರಿಗೆ ಬಿದ್ದಾಗ ಆ ಲಿಂಗ ತಾನಾಗಿಯೇ ಇವನನ್ನು ಅನುಸರಿಸಿ ಬರುವಂತೆ ಮಾಡಿದನೆಂಬ ಕಥೆಯಿದೆ.

ಈತ ಚಂಡೇಶ್ವರಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ 49 ವಚನಗಳು ದೊರೆತಿವೆ. ಕೈದಹಿಡಿದಾಡುವರೆಲ್ಲರೂ ಇಱಿಯ ಬಲ್ಲರೆ? ಸಾಧನೆಯ ಮಾಡುವ ಬಾಲರೆಲ್ಲರು ಕಾದಬಲ್ಲರೆ? ಅರ್ಥಿಗೆ ಮಾಡುವ ಕೃತ್ಯವಂತರೆಲ್ಲರು ಸದ್ಭಕ್ತರಪ್ಪರೆ? ಅದು ಚಂಡೇಶ್ವರಲಿಂಗಕ್ಕೆ ಸಲ್ಲದ ಮಾಟ ಎಂಬ ವಚನ ಇವನ ಶೈಲಿಗೆ, ಅನುಭಾವ ಶ್ರೀಮಂತಿಕೆಗೆ ನಿದರ್ಶನವಾಗಿದೆ. ಈತನ ವಿಷಯವನ್ನು ಕುರಿತು ನುಲಿಯ ಚಂದಯ್ಯನ ಶರದ ಎಂಬ ಗ್ರಂಥ ರಚಿತವಾಗಿದೆ. (ಎಸ್.ಎಸ್.ಎಂ.ಎ.)

**ನೂರೊಂದಯ್ಯ:** ಸು. 1740. ವೀರಶೈವ ಕವಿ. ಸೌಂದರ ಕಾವ್ಯದ ಕರ್ತೃ. ಮೈಸೂರು ದೊರೆ ಇಮ್ಮಡಿ ಕೃಷ್ಣರಾಜನ (1734–66) ಸಮಕಾಲೀನ. ಕಳಲೆ ನಂಜರಾಜನ ಆಶ್ರಿತನಾಗಿದ್ದಂತೆ ಕಾಣುತ್ತದೆ. ಈ ಕೃತಿ ಸಾಂಗತ್ಯದಲ್ಲಿದ್ದು 13 ಸಂಧಿ 1395 ಪದ್ಯಗಳನ್ನೊಳಗೊಂಡಿದೆ. ನಂಜುಂಡಲಿಂಗನ ಕೃಪೆಯಿಂದ ಕೃತಿಯನ್ನು ರಚಿಸಿರುವುದಾಗಿ ಕವಿ ತಿಳಿಸಿದ್ದಾನೆ. ಪ್ರತಿ ಸಂಧಿಯ ಕೊನೆಯಲ್ಲಿ ಪಶ್ಚಿಮರಂಗೇಶನ ಸ್ತುತಿ ಇದೆ.

ಸೌಂದರಕಾವ್ಯ ಐತಿಹಾಸಿಕ ಕಾವ್ಯಪರಂಪರೆಗೆ ಸಂಬಂಧಿಸಿದ ಕೃತಿ. ಇದರಲ್ಲಿ ಮೈಸೂರು ಅರಸು ಇಮ್ಮಡಿ ಕೃಷ್ಣರಾಜನ ದಳಪತಿಗಳಾದ ಕಳಲೆ ದೇವರಾಜ, ನಂಜರಾಜರು ಶ್ರೀರಂಗಪಟ್ಟಣವನ್ನು ಆಕ್ರಮಿಸಲು ತೊಡಗಿದ ಮೊಗಲರ ಬಾರಮಲ್ಲ ಮತ್ತು ಬಾದುರರೊಡನೆ ನಡೆಸಿದ ಹೋರಾಟ ಹಾಗೂ ಗಳಿಸಿದ ವಿಜಯದ ವಿವರಗಳಿವೆ. ಕಾವ್ಯದಲ್ಲಿ ಬರುವ ಅಂದಿನ ರಾಜರ ಬಗೆಗಿನ ಉಲ್ಲೇಖಗಳು, ಯುದ್ಧ ವರ್ಣನೆಗಳು, ಮಹಾನವಮಿ ಉತ್ಸವ, ಚಂಡಿಕಾಪೂಜೆ, ಮಲ್ಲರ ಕಾಳಗ ವಿಜೇತರ ಸನ್ಮಾನಾದಿಗಳ ಪರಿಶೀಲನೆಯಿಂದ ಅಂದಿನ ಕಾಲದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಚಿತ್ರವನ್ನು ಕಂಡುಕೊಳ್ಳಬಹುದಾಗಿದೆ. ಈ ದೃಷ್ಟಿಯಿಂದ ಈ ಕೃತಿ ಅಂದಿನ ಕಾಲದಲ್ಲಿನ ರಾಜಕೀಯದ ಪರಿಸ್ಥಿತಿಯನ್ನು ಅಭ್ಯಸಿಸುವವರಿಗೆ ಮೂಲ ಸಾಮಗ್ರಿಯನ್ನೊದಗಿಸುವ ತವನಿಧಿಯಾಗಿದೆ. *

**ನೃತ್ಯ:** ಮಾನವನ ಕಲಾಭಿವ್ಯಕ್ತಿ ಮಾಧ್ಯಮಗಳಲ್ಲಿ ನೃತ್ಯ ಬಹು ಪ್ರಾಚೀನವಾದ್ದಾಗಿರಬೇಕೆಂಬುದು ಇತಿಹಾಸಕಾರರ ಅಭಿಪ್ರಾಯ. ಆದರೆ ಈ ಕಲೆಯ ಪ್ರಾಚೀನತೆ ಹಾಗೂ ಹಿಂದೆ ಪ್ರಚಲಿತವಿದ್ದ ರೀತಿಗಳ ಸ್ವರೂಪವನ್ನು ನಿರ್ಧರಿಸಲು ಸಾಕಷ್ಟು ಆಧಾರಗಳು ದೊರಕುವುದಿಲ್ಲ. ಕರ್ನಾಟಕದಲ್ಲಿ ರಾಯಚೂರು, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳ ಕೆಲವು ಪ್ರಾಗೈತಿಹಾಸಿಕ ನೆಲೆಗಳ ಬಳಿಯ ಕೆಲವು ಬಂಡೆಗಳ ಮೇಲೆ, ಸಾಮೂಹಿಕ ನೃತ್ಯದಲ್ಲಿ ನಿರತರಾಗಿರುವ ವ್ಯಕ್ತಿಗಳ ಚಿತ್ರಗಳು ಇವೆ. ಆ ಕಾಲದ ಸ್ಥಳೀಯ ಜನಾಂಗಗಳಲ್ಲಿ ರೂಢಿತವಾಗಿದ್ದ ನೃತ್ಯ ಪದ್ಧತಿಗೆ ಇಂಥ ಚಿತ್ರಗಳೇ ಸಾಕ್ಷ್ಯ. ಆದರೆ ಈ ಚಿತ್ರಗಳ ಕಾಲವನ್ನು ತೀರ್ಮಾನಿಸುವುದು ಸುಲಭವಲ್ಲ. ಹೆಚ್ಚಿನವು ನವಶಿಲಾಯುಗ ಮತ್ತು ತಾಮ್ರಶಿಲಾಯುಗದ ಕಾಲದವಿರಬೇಕೆಂದು ಕೆಲವು ಸಾಂದರ್ಭಿಕ ಸಾಕ್ಷ್ಯಗಳಿಂದ ಊಹಿಸಲಾಗಿದೆ. ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ (ನೋಡಿ) ಬಳಿ ಇರುವ ಇಂಥ ಒಂದು ಚಿತ್ರದಲ್ಲಿ ಹಲವು ವ್ಯಕ್ತಿಗಳು ಸಾಲಾಗಿ ಕೈಕೈ ಹಿಡಿದು ನರ್ತಿಸುತ್ತಿದ್ದಂತೆ ತೋರಿಸಲಾಗಿದೆ. ಆ ಚಿತ್ರದ ಸನ್ನಿವೇಶ, ನಿರೂಪಣಾವಿಧಾನ – ಇವುಗಳನ್ನು ಅಭ್ಯಸಿಸಿದ ಪ್ರಾಗಿತಿಹಾಸಕಾರರೊಬ್ಬರು ಇದನ್ನು ನವಶಿಲಾಯುಗದ ಕಾಲದ್ದೆಂದು ನಿರ್ದೇಶಿಸಿರುವುದಲ್ಲದೆ, ಇದೇ ರೀತಿಯ ನೃತ್ಯ ಸಂಪ್ರದಾಯ ಈಗಲೂ ಆ ಪರಿಸರದ ಬೋಯ ಜನಾಂಗದಲ್ಲಿ ರೂಢಿತವಾಗಿರುವುದನ್ನು ಗುರುತಿಸಿದ್ದಾರೆ. ಬೋಯಗಳು ಸಂಕ್ರಾಂತಿ ಹಬ್ಬದ ಕಾಲದಲ್ಲಿ ಬೇಟೆಯಾಡುವ ಮೊದಲು ಬೇಟೆ ಫಲಯುತವಾಗಲು ಈ ರೀತಿಯ ನೃತ್ಯವನ್ನು ಮಾಡುತ್ತಾರೆ. ಈ ವಿಷಯ ಕರ್ನಾಟಕದಲ್ಲಿ ಪ್ರಾಗಿತಿಹಾಸ ಕಾಲದಲ್ಲಿ ರೂಢಿಯಲ್ಲಿದ್ದ ಒಂದು ನೃತ್ಯ ಸಂಪ್ರದಾಯದ ಬಗ್ಗೆ ಕಿರುಕಿಂಡಿಯನ್ನು ಒದಗಿಸುವುದಲ್ಲದೆ, ಬಹುಶಃ ಅಂದಿನ ಬಹುತೇಕ ನೃತ್ಯಗಳು ಇತರ ಪ್ರಾಚೀನ ಜನಾಂಗಗಳಲ್ಲಿದ್ದಂತೆ ಇಲ್ಲಿಯೂ ಧಾರ್ಮಿಕ ಮಾಂತ್ರಿಕ ಸ್ವರೂಪದ್ದಾಗಿರಬಹುದಾದುದನ್ನು ಸೂಚಿಸುತ್ತದೆ.

ಇಂದು ಕರ್ನಾಟಕದಲ್ಲಿ ಪ್ರಚಲಿತವಾಗಿರುವ ನೃತ್ಯ ಸಂಪ್ರದಾಯಗಳಲ್ಲಿ ಜನಪದ, ಶಿಷ್ಟ ಎಂಬ ಎರಡು ಭಿನ್ನ ಸಂಪ್ರದಾಯಗಳನ್ನು ಗಮನಿಸ ಬಹುದು. ಇವುಗಳಲ್ಲಿ ಕಂಡುಬರುವ ತಂತ್ರ ಮತ್ತು ಅಭಿವ್ಯಕ್ತಿ ರೀತಿಗಳು ಈ ಸಂಪ್ರದಾಯಗಳ ವಿಶಿಷ್ಟತೆಯನ್ನು ಸೂಚಿಸುವುದಲ್ಲದೆ, ಜನಪದ ಸಂಪ್ರದಾಯ ಬಹುತೇಕ ಪರಂಪರಾಗತವಾಗಿ ಉಳಿದು ಬಂದಿದ್ದು ಸರಳ ರೀತಿಯವಾಗಿದ್ದರೆ, ಶಿಷ್ಟ ಸಂಪ್ರದಾಯ ಶಾಸ್ತ್ರೀಯ ಚೌಕಟ್ಟಿನೊಳಗೆ ಬೆಳೆದು ಬಂದಿರುವುದನ್ನು ಗಮನಿಸಬಹುದು. ಅಲ್ಲದೆ ಜನಪದ ನೃತ್ಯ ಸಂಪ್ರದಾಯಗಳು ಬಹುಮಟ್ಟಿಗೆ ಸ್ಥಳೀಯವೇ ಆಗಿದ್ದರೆ, ಶಿಷ್ಟ ಸಂಪ್ರದಾಯ ಕರ್ನಾಟಕದ ಹೊರಗೂ ಪ್ರಚಲಿತವಾಗಿ ವ್ಯಾಪಕವಾಗಿದೆ. ಮೇಲೆ ಉದಾಹರಿಸಿದ ಪ್ರಾಗೈತಿಹಾಸಿಕ ಚಿತ್ರಗಳು ಮತ್ತು ಬೋಯಗಳ ನೃತ್ಯಗಳ ಮಾಹಿತಿ ಜನಪದ ಸಂಪ್ರದಾಯದ ಮೂಲವನ್ನೂ ಸೂಚಿಸು ವಂತಿವೆ. ಈ ಜನಪದ ನೃತ್ಯಗಳು ಸಹ ಕಾಲಕಾಲಕ್ಕೆ ಪರಿಸರ ಪ್ರಭಾವ ದಿಂದ ಪ್ರಾಚೀನ ಕಾಲದಿಂದ ಇಲ್ಲಿನವರೆಗೆ ನಡೆದುಬಂದ ಗತಿಯಲ್ಲಿ ಬದಲಾವಣೆಗಳನ್ನು ಸ್ವಲ್ಪಮಟ್ಟಿಗೆ ಹೊಂದಿರಬಹುದಾದರೂ ತನ್ನ ಮೂಲ ಆಶಯಗಳನ್ನು ಹೆಚ್ಚುಕಡಿಮೆ ಉಳಿಸಿಕೊಂಡು ಬಂದಿರುವಂತೆ ತೋರುತ್ತದೆ. ಆದರೆ ಈ ಸಂಪ್ರದಾಯದ ಇತಿಹಾಸ ರಚನೆಗೆ ದೊರಕುವ ಸಾಮಗ್ರಿಗಳು ಬಹು ಅಲ್ಪ. ಕರ್ನಾಟಕದಲ್ಲಿ ಇಂದು ಸುಮಾರು 40ಕ್ಕೂ ಹೆಚ್ಚು ಜನಪದ ನೃತ್ಯರೂಪಗಳನ್ನು ಗುರುತಿಸಲಾಗಿದೆ **(ನೋಡಿ: ಜನಪದ ನೃತ್ಯಗಳು)**.

ಕರ್ನಾಟಕದಲ್ಲಿ ಶಿಷ್ಟವೆನ್ನಬಹುದಾದ ನೃತ್ಯ ಪರಂಪರೆ ಎಂದು ಪ್ರಾರಂಭವಾಯಿತು; ಅದಕ್ಕೂ ಸ್ಥಳೀಯ ಜನಪದ ನೃತ್ಯಗಳಿಗೂ ಇರುವ ಅಥವಾ ಇದ್ದ ಸಂಬಂಧವೇನು ಎಂಬ ಅಂಶಗಳು ಅಸ್ಪಷ್ಟವಾಗಿವೆ. ಇಂದಿನ ಶಿಷ್ಟ ನೃತ್ಯ ಸಂಪ್ರದಾಯದ ಪ್ರಚಾರ ಮತ್ತು ಪರಿಸರವನ್ನು ಗಮನಿಸಿದರೆ ಇದು ನಾಗರಿಕ ವರ್ಗಗಳಲ್ಲಿ ವಿಶಿಷ್ಟವಾಗಿ ಕಂಡುಬರು ವಂಥದಾಗಿರುವುದರಿಂದ ಬಹುಶಃ ನಾಗರಿಕ ವ್ಯವಸ್ಥೆ ಕರ್ನಾಟಕದಲ್ಲಿ ರೂಢಿಗೆ ಬಂದ ಕಾಲದಿಂದ ಇಂಥ ಸಂಪ್ರದಾಯವೂ ಬೆಳೆದಿರಬಹುದು ಎನ್ನಬಹುದಾದರೂ ಇದಕ್ಕೆ ಸ್ಪಷ್ಟ ಮಾಹಿತಿಗಳಿಲ್ಲ. ಕರ್ನಾಟಕದಲ್ಲಿ ಸನ್ನತಿ ಮೊದಲಾದೆಡೆ ದೊರಕುವ ಸಾತವಾಹನರ ಕಾಲದ ಶಿಲ್ಪ ಫಲಕಗಳಲ್ಲಿ ಕೆಲವೆಡೆ ನರ್ತಕರ ಶಿಲ್ಪಗಳು ಇವೆ. ಹಾಗೆಯೇ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮುಂದೆ ಎಲ್ಲೋರ, ಹಳೇಬೀಡು, ಬೇಲೂರು, ಹಂಪೆ ಮೊದಲಾದ ಹಲವಾರು ವಾಸ್ತುಶಿಲ್ಪ ಕಲಾಕೇಂದ್ರಗಳಲ್ಲಿ ನರ್ತಿಸುತ್ತಿರುವ ದೇವಶಿಲ್ಪಗಳೂ ಮಾನವಶಿಲ್ಪಗಳೂ ಇವೆ. ಇವುಗಳಲ್ಲಿ ನಿರೂಪಿತವಾಗಿರುವ ನೃತ್ಯಭಂಗಿಗಳು, ಪೋಷಕ ವಾದ್ಯಗಳು ಇವುಗಳನ್ನು ಪರಿಶೀಲಿಸಿ ಬೇರೆ ಬೇರೆ ಗ್ರಾಂಥಿಕ ಆಧಾರಗಳು ಮತ್ತು ಪ್ರಚಲಿತವಾಗಿರುವ ಶಿಷ್ಟ ನೃತ್ಯಸಂಪ್ರದಾಯದೊಡನೆ ಹೋಲಿಸಿ ಕರ್ನಾಟಕದ ಶಿಷ್ಟ ನೃತ್ಯಸಂಪ್ರದಾಯದ ಬೆಳವಣಿಗೆಯನ್ನು ಸ್ಥೂಲವಾಗಿ ನಿರ್ದೇಶಿಸಬಹುದಾ ದರೂ ಅಂಥ ಅಧ್ಯಯನ ಇನ್ನೂ ನಡೆದಿಲ್ಲ. ಆದರೆ ಈ ಶಿಲ್ಪಗಳ ನಿರೂಪಣೆಯ ಪರಿಸರ ಮತ್ತು ಅನೇಕ ಸಾಂದರ್ಭಿಕ ಅಂಶಗಳು ಇವುಗಳಲ್ಲಿ ಬಹುಮಟ್ಟಿಗೆ ಶಿಷ್ಟ ನೃತ್ಯ ಸಂಪ್ರದಾಯದ ನಿರೂಪಣೆ ಕಂಡು ಬರುತ್ತದೆ ಎನ್ನಬಹುದು. ಬೇಲೂರಿನ ಕೇಶವ ದೇವಾಲಯದಲ್ಲಿರುವ ಮದನಿಕೆ ವಿಗ್ರಹಗಳಲ್ಲಿ ಕಂಡುಬರುವ ನೃತ್ಯ ಭಂಗಿಗಳು, ರಸಭಾವ ನಿರೂಪಣೆ, ಚೆಲುವು ಲೋಕಪ್ರಸಿದ್ಧವಾಗಿವೆ (ಪಟ್ಟದಕಲ್ಲು, ಹಂಪೆ ಮೊದಲಾದೆಡೆಗಳಲ್ಲಿ ಕೋಲಾಟ ಮೊದಲಾದ ಜನಪದ ನೃತ್ಯಗಳೂ ಅಪರೂಪವಾಗಿ ಶಿಲ್ಪಿತವಾಗಿವೆ).

ಶಿಷ್ಟ ನೃತ್ಯಸಂಪ್ರದಾಯದ ಬೆಳವಣಿಗೆಗೆ ರಾಜಾಸ್ಥಾನಗಳು, ಶ್ರೀಮಂತವರ್ಗ ಮತ್ತು ದೇವಾಲಯಗಳು ಆವಶ್ಯಕ ಪೋಷಣೆಯನ್ನು ಒದಗಿಸಿರುವುವು. ಕರ್ನಾಟಕದ ಅನೇಕ ಶಾಸನ ಮತ್ತು ಸಾಹಿತ್ಯ ಕೃತಿಗಳು ಈ ವಿಷಯದ ಬಗ್ಗೆಯೂ ಅಂದಿನ ನೃತ್ಯ ಸ್ವರೂಪದ ಬಗ್ಗೆಯೂ ಹಲವು ಮಾಹಿತಿಗಳನ್ನು ಒದಗಿಸುತ್ತವೆ. ಕ್ರಿ.ಶ. 9ನೆಯ ಶತಮಾನದ ಪಟ್ಟದಕಲ್ಲಿನ ಒಂದು ಶಾಸನದಲ್ಲಿ ಭರತನಾಟ್ಯಶಾಸ್ತ್ರದಲ್ಲಿ ಸಂಪೂರ್ಣ ಪರಿಣತಿಯನ್ನು ಪಡೆದಿದ್ದ ಒಬ್ಬ ನಟನ ಪ್ರಶಂಸೆಯಿದೆ. ದೇವಾಲಯದಲ್ಲಿ ದೇವರಿಗೆ ಸಂಗೀತ ನೃತ್ಯಸೇವೆಗಳನ್ನು ಅರ್ಪಿಸುವುದು ರೂಢಿಯಲ್ಲಿದ್ದ ಮತ್ತು ಈ ಉದ್ದಿಶ್ಯಕ್ಕಾಗಿ ದೇವದಾಸಿಯರನ್ನು (ಪಾತ್ರ) ನಿಯಮಿಸುತ್ತಿದ್ದ ವಿಷಯವನ್ನು ಕರ್ನಾಟಕದ ನೂರಾರು ಶಾಸನಗಳು ತಿಳಿಸುತ್ತವೆ. ಪಟ್ಟದಕಲ್ಲಿನ 778–79ರ ಒಂದು ಶಾಸನ ಈ ಪದ್ಧತಿಯ ಬಗ್ಗೆ ಕರ್ನಾಟಕದಲ್ಲಿ ದೊರಕುವ ಪ್ರಾಚೀನ ಉಲ್ಲೇಖವೆಂದು ತೋರುತ್ತದೆ. ಜಿನ ಭವನದಲ್ಲಿ ನಡೆಯುವ ವಾರವಿಲಾಸಿನೀವಿರಂತ ನೃತ್ಯಗೀತವಾದ್ಯಗಳಿಗೆ ದಾನ ಕೊಟ್ಟ ಪ್ರಸ್ತಾಪ 802ರ ಶಾಸನವೊಂದರಲ್ಲಿದೆ. ದೇವಾಲಯಗಳಿಗೆ ಪೋಷಣೆ ಬೆಳೆದು ಅವುಗಳ ಸಂಪತ್ತು ವರ್ಧಿಸಿದಂತೆಲ್ಲಾ ಅವು ಶಿಷ್ಟ ನೃತ್ಯಕಲೆಯನ್ನು ಪೋಷಿಸುವ ಸ್ಥಾನಗಳಾಗಿಯೂ ಬೆಳೆದಂತೆ ತೋರುತ್ತದೆ. ಈ ವ್ಯವಸ್ಥೆ ಇತ್ತೀಚೆಗೆ 20ನೆಯ ಶತಮಾನದ ಹತ್ತಿರದವರೆಗೂ ರೂಢಿಯಲ್ಲಿತ್ತು.

ರಾಜರು, ಮಾಂಡಲಿಕರು ನೃತ್ಯ ಸಂಗೀತಾದಿ ಕಲಾಪೋಷಕರಾಗಿದ್ದುದು ಬಹುಶ್ರುತ ವಿಷಯ. ಅಲ್ಲದೆ ರಾಜಕುಲದ ಅನೇಕ ಸ್ತ್ರೀಯರೂ ನೃತ್ಯಕಲೆಯಲ್ಲಿ ಪರಿಣತಿಯನ್ನು ಪಡೆದವರಾಗಿರುತ್ತಿದ್ದರೆಂಬ ವಿಷಯ ಸಹ ಶಾಸನೋಲ್ಲೇಖಗಳಿಂದ ತಿಳಿಯುತ್ತದೆ. ಉದಾಹರಣೆಗೆ ವಿಷ್ಣು ವರ್ಧನನ ರಾಣಿ ಶಾಂತಲದೇವಿ ನೃತ್ಯವಿದ್ಯಾವಿಶಾರದೆಯಾಗಿದ್ದಳೆಂಬುದನ್ನು ಅನೇಕ ಶಾಸನಗಳು ಬಹುವಾಗಿ ಹೊಗಳಿವೆ. ಸು. 1174ರಲ್ಲಿ ಕಳಚುರಿ ಸೋವಿದೇವನ ರಾಣಿಯಾದ ಸೋವಲದೇವಿ ತನ್ನ ದೇಶದ ಹಾಗೂ ಪರದೇಶದ ಲಲಿತಕಲಾ ನಿಪುಣರಾದ ರಸಿಕರ ಮುಂದೆ ತನ್ನ ನೃತ್ಯಪಾಂಡಿತ್ಯವನ್ನು ಪ್ರದರ್ಶಿಸುತ್ತಿದ್ದಳಂತೆ. ಹಾಗೆಯೇ ತ್ರಿಭುವನಮಲ್ಲ ಮಲ್ಲಿದೇವ ಚೋಳ ಮಹಾರಾಜನ ರಾಣಿಯಾದ ಲಕ್ಷ್ಮಾದೇವಿಯು ಸಾಹಿತ್ಯ, ಹಾಡುಗಾರಿಕೆ ಹಾಗೂ ವಾದ್ಯಸಂಗೀತ, ನೃತ್ಯಕಲೆಗಳಲ್ಲಿ ಪ್ರವೀಣಳಾಗಿದ್ದಳಂತೆ.

ರಾಜಾಸ್ಥಾನಗಳಲ್ಲಿ ನೃತ್ಯದ ಕಲಿಕೆ ಮತ್ತು ಪ್ರಸಾರಕ್ಕೆ ವಿಶೇಷ ವ್ಯವಸ್ಥೆ ಇದ್ದಿರಬೇಕು. ಸು. 1520ರಲ್ಲಿ ರಚಿತವಾದ ಸಂಗೀತ ಸೂರ್ಯೋದಯ ಎಂಬ ಗ್ರಂಥದ ಕರ್ತೃ ಬಂಧಂ ಲಕ್ಷ್ಮೀನಾರಾಯಣನು ಕೃಷ್ಣದೇವರಾಯನಿಗೆ ಮತ್ತು ಅವನ ರಾಣಿವಾಸಕ್ಕೆ ಸಂಗೀತ ಮತ್ತು ನಾಟ್ಯಾಚಾರ್ಯನಾಗಿದ್ದ ನೆಂದು ಹೇಳಲಾಗಿದೆ. ಕೃಷ್ಣದೇವರಾಯನ ಅರಮನೆಗೆ ಸಂಬಂಧಿಸಿದ ನೃತ್ಯ ಸಭಾಗೃಹವೊಂದನ್ನು ಪಯೆಸ್ ಎಂಬ ಪೋರ್ಚುಗೀಸನು ವರ್ಣಿಸಿ, ಅಲ್ಲಿನ ಗೋಡೆಗಳಲ್ಲೂ ಕಂಬಗಳಲ್ಲೂ ನೃತ್ಯಭಂಗಿಗಳನ್ನು ಬರೆದಿರು ವುದನ್ನು ತಿಳಿಸಿದ್ದಾನೆ. ಈ ಸಭಾಗೃಹವೂ ವಿಸ್ತಾರವಾಗಿತ್ತು. ರಾಣಿಯರು ನರ್ತನವನ್ನು ಕಲಿಯುವುದಕ್ಕಾಗಿ ಅಲ್ಲಿಗೆ ಬರುತ್ತಿದ್ದರು. ನೃತ್ಯಕಲಾ ವಿದೆಯರು ತಮ್ಮ ಅಭ್ಯಾಸ ನಡೆಸಲು ಎಲ್ಲ ರೀತಿಯ ಅನುಕೂಲ ಅಲ್ಲಿ ಇತ್ತು. ಗೋಡೆ, ಕಂಬದ ಮೇಲೆ ಅನೇಕ ಭಂಗಿಗಳಿಂದ ಕೂಡಿದ ಮೂರ್ತಿಚಿತ್ರಗಳನ್ನು ಬಿಡಿಸಲಾಗಿತ್ತು. ನೃತ್ಯಕಲಾವಿದೆಯರು ತಮ್ಮ ನೃತ್ಯಕಲೆಯನ್ನು ತಿದ್ದಿಕೊಳ್ಳುವುದಕ್ಕೆ ಇವು ಸಹಾಯಕವಾಗಿದ್ದುವು. ಈ ಸಭಾಗೃಹದ ಒಂದು ಕೊನೆಯಲ್ಲಿ ಸ್ತ್ರೀಯರು ಮೈಚಾಚಿ ಕೈಕಾಲುಗಳನ್ನು ಸಡಿಲಿಸಿಕೊಳ್ಳುವ ವಿಧಾನಗಳು ಬರೆದಿರುವ ಚಿತ್ರಗಳ ಸಹಾಯದಿಂದ, ಕಲಾವಿದೆಯರು ತಮ್ಮ ನೃತ್ಯಗಳನ್ನು ಲಾಲಿತ್ಯ ಪೂರ್ಣವಾಗಿ ಮಾಡುವ ಬಗೆ ತಿಳಿದಿದ್ದರು ಎಂದೂ ಪಯೆಸ್ ವರ್ಣಿಸಿದ್ದಾನೆ. ಆದರೆ ದುರ್ದೈವವಶಾತ್ ಆ ಸಭಾಗೃಹ ಇಂದು ಮರೆಯಾಗಿದೆ.

ಅಲ್ಲಿ ಭರತನಾಟ್ಯ ಶಾಸ್ತ್ರದ 108 ಕರಣಗಳು ಚಿತ್ರಿಸಲ್ಪಟ್ಟದ್ದ ವಿಷಯವನ್ನು ಖಂಡಿತವಾಗಿ ಊಹಿಸಬಹುದು. (ಸಿ.ಡಿ.)

ಅನೇಕ ಕನ್ನಡ ಕಾವ್ಯಗಳಲ್ಲಿ ಕಂಡುಬರುವ ನೃತ್ಯಪ್ರಸಂಗಗಳ ವರ್ಣನೆಗಳು ಸಹ ಗಮನಾರ್ಹವಾದುವು. ಪಂಪ, ಹರಿಹರ, ರತ್ನಾಕರವರ್ಣಿ ಮುಂತಾದ ಕವಿಗಳು ನೃತ್ಯವನ್ನು ಸವಿಸ್ತಾರವಾಗಿ ರಸೋಪೇತವಾಗಿ ವರ್ಣಿಸಿರುವುದುಂಟು. ಪಂಪನ ಆದಿಪುರಾಣದಲ್ಲಿ ಬರುವ ನೀಲಾಂಜನೆಯ ನೃತ್ಯಪ್ರಸಂಗ ಒಳ್ಳೆಯ ಉದಾಹರಣೆ. ಮಧುರವಾದ ಗೀತವಾದ್ಯಗಳ ಹಿನ್ನೆಲೆಯಲ್ಲಿ ಗಣಿಕಾ ತಿಲಕ ಎಂಬ ಖ್ಯಾತಿಪಡೆದಿದ್ದ ನೀಲಾಂಜನೆಯು ಕರ್ವಿನಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಂಕಿತ್ತೆನಿಸುವ ಹಾಗೆ ರಂಗಪ್ರವೇಶ ಮಾಡುತ್ತಾಳೆ. ರಂಗ ಪ್ರವೇಶದ ಜೊತೆ ಜೊತೆಗೆ ಆಕೆ ಜನಾಂತರಂಗವನ್ನೂ ಪ್ರವೇಶಿಸುತ್ತಾಳೆ. ಅನುಪಮ ಸುಂದರಿಯಾಗಿದ್ದ ನೀಲಾಂಜನೆ ಜವನಿಕೆಯ ಮರೆಯಲ್ಲಿ ಮುಗಿಲ ಮರೆಯ ವಿದ್ಯುಲ್ಲತೆಯಂತೆ ಗೋಚರಿಸುತ್ತಾಳೆ. ಜವನಿಕೆಯನ್ನು ಸರಿಸಿ ರಸಿಕ ವೃಂದದ ಮುಂದೆ ಬಂದು ಪುಷ್ಪಾಂಜಲಿಯನ್ನು ಸೂಸಿ ನರ್ತಿಸತೊಡಗಿದ ನೀಲಾಂಜನೆಯ ನೃತ್ಯವೈಖರಿ ವಿನೂತನವಾದದ್ದು. ಅದನ್ನು ಪಂಪ ಹೀಗೆ ವಿವರಿಸುತ್ತಾನೆ: ತಾಳದ ಲಯಮಂ ನಿಱಿ ನೀಳಾಳಕಮಾರದ ಪೊದಳ್ದ ಮುತ್ತೆಂಬಿವು ಮುಂಮೇಳಿಸಿ ಕಯ್ಕೊಂಡುವು ಲುಳಿತಾಳಕಿ ಕಯ್ಕೊಂಡಳೆಂಬುದೊಂದಚ್ಚರಿಯೇ. ನೀಲಾಂಜನೆಯು ಲಯಬದ್ಧವಾಗಿ ನರ್ತಿಸುವುದಿರಲಿ, ಆಕೆ ಉಟ್ಟ ಸೀರೆಯ ನೆರಿಗೆ, ತೊಟ್ಟ ಹೊಸ ಹಾರದ ಮುತ್ತುಗಳು ಹಾಗೂ ಆಕೆಯ ನೀಲವರ್ಣದ ಸುಂದರ ಮುಂಗುರುಳು ಅವಳಿಗಿಂತ ಮುನ್ನವೇ ನರ್ತಿಸಿದುವು ಎನ್ನುವಲ್ಲಿ ಅಪೂರ್ವ ಸೊಗಸಿದೆ; ನರ್ತನದ ಪರಿಪೂರ್ಣತೆಯನ್ನು ಸೂಚಿಸುವ ಅಂಶವೂ ಇಲ್ಲಿ ವ್ಯಕ್ತವಾಗುತ್ತದೆ. ರಸಭಾವಾಭಿನಯಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಂಗಮಂ ಎಂದು ಆಕೆ ನರ್ತಿಸುತ್ತಿದ್ದಂತೆಯೇ ನರ್ತನದ ಎಲ್ಲ ಅಂಶಗಳೂ ಹೊಸ ಜೀವ ಪಡೆದುಕೊಂಡವೆಂಬುದು ಪಂಪನ ಮಾತು. ಭಾರತಿ ಸಾತ್ವತಿ ಕೈಶಿಕಿ ಆರಭಟಿ ಎಂಬ ವೃತ್ತಿಯಲ್ಲಿ ರಸವನ್ನು ಸಂಚಾರಿಸುವಲ್ಲಿ, ಭಾವವನ್ನು ವಿಸ್ತರಿಸುವಲ್ಲಿ ನೀಲಾಂಜನೆಯದೇ ಹೊಸ ಬೆಡಗು ಎನ್ನುವಂತಿತ್ತು. ಹೀಗೆ ನರ್ತಿಸುತ್ತಿದ್ದಾಗ ನಡುವೆ ಕುಡುಪನ್ನು ಬಾರಿಸುತ್ತಿದ್ದ ವಾದ್ಯಗಾರ ತಡವರಿಸಿದ. ಆಗ ನೀಲಾಂಜನೆಯು ತನ್ನ ಹುಬ್ಬಿನ ಸನ್ನೆಯಿಂದ ಆತನಿಗೆ ಕುಡುಪನ್ನು ಸರಿಯಾಗಿ ಬಾರಿಸುವ ನಿರ್ದೇಶನ ನೀಡಿದಳಂತೆ. ಆ ವರ್ಣನೆ ಹೀಗಿದೆ: ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವಿದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್ ಎಂಬ ಈ ಮಾತುಗಳು ನೀಲಾಂಜನೆಯ ಕುಡಿಹುಬ್ಬಿನ ಲಾಸ್ಯವನ್ನೂ ಆಕೆಗೆ ವಾದ್ಯಗಳ ಲಯದ ಬಗ್ಗೆ ಇದ್ದ ನಿಖರ ಹಾಗೂ ಸ್ಪಷ್ಟ ಜ್ಞಾನವನ್ನೂ ಮನಗಾಣಿಸುತ್ತವೆ. ಆಕೆಯ ತುಂಬುಯೌವನದ ಮೈಮಾಟ, ನಗುಮುಖ, ಬಟ್ಟಲುಗಣ್ಣಳ ಕುಡಿಮಿಂಚಿನ ನೋಟ, ನರ್ತಿಸುವಾಗ ಆಕೆ ಹಾರವನ್ನು ಅಳವಡಿಸುವ, ವಸ್ತ್ರಗಳನ್ನು ಸರಿಪಡಿಸಿಕೊಳ್ಳುವ ಬಗೆ, ಒನಪು ಒಯ್ಯಾರ ನೋಡುಗರನ್ನು ಹುಚ್ಚೆಬ್ಬಿಸುವಷ್ಟರಮಟ್ಟಿಗೆ ಶೃಂಗಾರಪೂರಿತವಾಗಿರುತ್ತದೆ. ಭರತಾಗಮದಲ್ಲಿ ಹೇಳುವ ಮೂವತ್ತೆರಡು ಅಂಗಹಾರವನ್ನೂ ನೂರೆಂಟು ಕರಣಗಳನ್ನೂ ಚಾಚೂ ತಪ್ಪದೆ ಅನುಸರಿಸಿ ನೀಲಾಂಜನೆ ನರ್ತಿಸಿದಳಂತೆ.

ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಕೂಡ ನರ್ತನದ ಬಗ್ಗೆ ಹೆಚ್ಚಿನ ಮಾಹಿತಿ ದೊರಕುತ್ತದೆ. ಈ ಕಾವ್ಯದಲ್ಲಿ ಬರುವ ಪೂರ್ವನಾಟಕ ಸಂಧಿ, ಉತ್ತರನಾಟಕ ಸಂಧಿ ಎಂಬ ಭಾಗಗಳಲ್ಲಿ ನಾಟ್ಯಶಾಲೆಯ ಅಲಂಕಾರಕ್ಕೆ ಸಂಬಂಧಿಸಿದಂತೆ, ನಾಟ್ಯಾಭಿನಯಕ್ಕೆ ಸಂಬಂಧಿಸಿದಂತೆ ಅನೇಕ ಸಂಗತಿಗಳು ಉಲ್ಲೇಖಗೊಂಡಿವೆ. ಭರತನ ನಾಟ್ಯಶಾಲೆಯನ್ನು ಪನ್ನೀರು, ಕುಂಕುಮ, ಸಾದು, ಕಸ್ತೂರಿಯಲ್ಲಿ ಸಾರಣೆಗೊಳಿಸಿ, ಪುಷ್ಪ ಮಾಲೆಗಳನ್ನೂ ಮುತ್ತಿನ ಕುಚ್ಚುಗಳನ್ನೂ ತೂಗುಬಿಟ್ಟು, ರನ್ನಗನ್ನಡಿಗಳನ್ನು ಅಳವಡಿಸಿ, ಕಂಬಗಳಲ್ಲಿ, ಲೋವೆಗಳಲ್ಲಿ ಗಿಳಿಯನೋದಿಸುವಂತೆ, ವೀಣೆಯ ನುಡಿಸುವಂತೆ, ಒಲೆದು ಪಾತ್ರವನಾಡುವಂತೆ ಕೆತ್ತಿದ ಸುಂದರ ಲಲನಾಮಣಿಯರ ಪ್ರತಿಮೆಗಳನ್ನೂ ಸುರರ ಖೇಚರರ ಪೆಣ್ಗಂಡು ರೂಪವನ್ನು ಅಲ್ಲಲ್ಲಿ ಬರೆದು ಅಲಂಕರಿಸಲಾಗಿತ್ತೆಂದು ವರ್ಣಿಸಿದೆ. ನೃತ್ಯದ ಪ್ರಾರಂಭಕ್ಕೆ ಮೊದಲು ಭರತೇಶನ ಮುಂದೆ ನಾಟ್ಯವಿದ್ಯಾಧರನೆಂಬ ನಟ್ಟುವನೊಬ್ಬ ಬಂದು ತಾನು ಎರಡು ಪಾತ್ರಗಳನ್ನು ತಿದ್ದಿರುವುದಾಗಿ ಅವರ ನರ್ತನವನ್ನು ಚಿತ್ತೈಸಬೇಕೆಂದು ಬಿನ್ನವಿಸಿಕೊಂಡು ರಂಗದ ಹಿಂದೆ ಹೋಗಿ ನರ್ತಕಿಯರಿಗೆ ನರ್ತನ ಪ್ರಾರಂಭಿಸಲು ಸೂಚನೆ ನೀಡುತ್ತಾನೆ. ಆಗ ನೇತ್ರ ಮೋಹಿನಿ, ಚಿತ್ತ ಮೋಹಿನಿ ಎಂಬ ಇಬ್ಬರು ನರ್ತಕಿಯರು ರಂಗಪ್ರವೇಶಿಸಿ ಪುಷ್ಪಾಂಜಲಿಯನ್ನು ಸೂಸಿ ಮದ್ದಳೆ ತಾಳಮೇಳ ಶ್ರುತಿಯ ಹಿನ್ನೆಲೆಯಲ್ಲಿ ನರ್ತಿಸುತ್ತಾರೆ. ಪಚ್ಚೆಯ ಚಲ್ಲಣ ಪಂಚವರ್ಣದ ಕಾಸೆ ಬೆಚ್ಚಮುತ್ತಿನ ಮೊಲೆಗಟ್ಟು ಅಚ್ಚಜವ್ವನೆಯರಿದ್ದರು ನೋಡುವರ ಮನ ಹುಚ್ಚೆದ್ದು ಧರೆಗೆ ಬೀಳ್ವಂತೆ ಎಂಬ ಮಾತುಗಳಲ್ಲಿ ನರ್ತಕಿಯರ ಉಡುಪು, ಅವರ ಅನುಪಮ ಸೌಂದರ್ಯ ನಿರೂಪಿತವಾಗಿದೆ.

ನೇತ್ರಮೋಹಿನಿಯು ತಾಳಲಯಗಳನ್ನು ಅರಿತು ಹೀಗೆ ನರ್ತಿಸುತ್ತಾಳೆ: ನೂರೆಂಟು ಕರಣ ನೂರೆಂಟು ನಿಲವು ಹದಿಮೂರು ಶಿರೋಭೇದವರಿದು ಬೇರೆಬೇರೆರುವತ್ತನಾಲ್ಕು ಭೇದದ ಹಸ್ತದೋರಿ ನರ್ತಿಸಿದಳಾ ಗಣಿಕೆ ಚಾರಿ ಮೂವತ್ತೆರಡನುಚರಿಸಿರಲಂಗಹಾರ ಮೂವತ್ತೆರಡೆಸೆಯೆ ಸೇರಿ ಮೂವತ್ತಾರು ನೋಟ ರಂಜಿಸೆ ನಾಟ್ಯಸಾರಗಾಣಿಸಿ ನಟಿಸಿದಳು. ಅನಂತರ ಚಿತ್ತಮೋಹಿನಿ ಎಂಬುವಳು ರಂಗ ಪ್ರವೇಶಿಸಿ ನರ್ತಿಸುತ್ತಾಳೆ. ಆ ವರ್ಣನೆ ಹೀಗಿದೆ: ಮರ್ದಲತಾಳಾನುಗತಿಯೊಳು ನಡೆದಳಾ ಪೆರ್ದೆರೆಯಂತೆ ಮುಂದೊತ್ತಿ ಸಾರ್ದಳು ಹಿಂದಕೆ ಕಡಲಭರತವೊಳಸಾರ್ದಿಳಿವಂತೆ ಜೋಕೆಯೊಳು ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ ಜಲಧಿಯ ಸುಳಿಯೊಯೆಂಬಂತೆ ಬಲಕೆಡಕೊಲೆದು ಹರಿವಳೆಳೆವಿಸಿಲಲ್ಲಿ ಯೆಳೆ ನಾಗ ಹರಿವಂತೆ ಮುರಿದು ನಟಿಸಿ ರಂಗದೊಳು ಮೇಲುಪ್ಪರಿಸು ವಳಾಗಪುಟವೇರಿ ಪೊಯ್ಚೆಂಡಿನಂತೆ ಬೊಗರಿಯಂತೊಲೆದಾಡುವಳು ನಿಲುವಳು ಹೊನ್ನಬೊಗರಿಮೊಲೆಯ ಮೋಹನಾಂಗಿ ಮೋರೆಯೊಲೆದು ನೋಡಿ ನೃಪಸುತರಿಗೆ ಹುಬ್ಬು ಹಾರಿಸುವಳು ನಸುನಗುತ. *

ಈ ರೀತಿಯ ವರ್ಣನೆಗಳಿಂದ ಪ್ರಾಚೀನ ಕಾಲದಲ್ಲಿದ್ದ ಶಿಷ್ಟ ನೃತ್ಯ ಸಂಪ್ರದಾಯದ ಸ್ವರೂಪವನ್ನು ತಿಳಿಯಬಹುದಾಗಿದೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಕಾವ್ಯಗಳಲ್ಲಿ ಬರುವ ವರ್ಣನೆಗಳಲ್ಲಿ ಭರತನ ನಾಟ್ಯಶಾಸ್ತ್ರದ ಪಾರಿಭಾಷಿಕ ಪದಗಳು ಬಹುವಾಗಿ ಬಳಕೆಗೊಂಡಿರುವುದು. ಅಂದಿನ ನೃತ್ಯಕಲೆ ನಾಟ್ಯಧರ್ಮ ಎಂದೆನಿಸಲ್ಪಟ್ಟು ಆಂಗಿಕಾಭಿನಯದೊಳಗೂಡಿ ಮೈ ಕೈ ಚಲನೆಗಳಿಗೆ ಅರ್ಥಭಾವಗಳಿದ್ದು ಸಂಗೀತಮಯವಾಗಿತ್ತು. ಅಂದಿನ ಅನೇಕ ಗ್ರಂಥಗಳಲ್ಲಿ ಸೂಚಿಸಿದ್ದ ನೃತ್ಯರೂಪಗಳು ಇಂದಿನ ಭರತನಾಟ್ಯ ಪ್ರದರ್ಶನದ ಕಾರ್ಯಕ್ರಮಕ್ಕೆ ತಳಹದಿಯನ್ನು ಹಾಕಿದಂತಿದೆ.

ವಿಜಯನಗರದ ಅವನತಿಯ ಅನಂತರ ಶಾಸ್ತ್ರೀಯ ನೃತ್ಯಕಲೆ ತಮಿಳುನಾಡು ಮತ್ತಿತರ ಭಾಗಗಳಲ್ಲಿ ವಿಶೇಷವಾಗಿ ಬೆಳೆಯಿತಾದರೂ ಕರ್ನಾಟಕದ ಕಾಣಿಕೆ ಸಹ ಅದಕ್ಕಿದೆ. 17ನೆಯ ಶತಮಾನದಲ್ಲಿ ಸಿಂಹ ಭೂಪಾಲ ಎಂಬ ಅರಸ ಲಾಸ್ಯರಂಜನ ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದು ನೃತ್ಯಕಲೆಯ ಶಾಸ್ತ್ರ, ವಿನಿಯೋಗ, ಆಚರಣೆ, ಕಟ್ಟುನಿಟ್ಟುಗಳನ್ನೆಲ್ಲ ಕೂಲಂಕಷವಾಗಿ ತಿಳಿಸಿರುವನು. 1908ರಲ್ಲಿ ವೆಂಕಟಸುಂದರಸಾನಿ

ಎಂಬುವರು ರಸಿಕಜನಮನೋಲ್ಲಾಸಿನಿ ಸಾರಸಂಗ್ರಹ ಭರತಶಾಸ್ತ್ರಂ ಎಂಬ ಸ್ವಾರಸ್ಯವಾದ ವಿಷಯವನ್ನು ಬರೆದುದನ್ನು ತಿಳಿಯುತ್ತೇವೆ. ಈ ರಚನೆಯ ಮೂರನೆಯ ಭಾಗವೆಲ್ಲ ಸಂಗೀತ ನೃತ್ಯಕಲೆಗೆ ಮೀಸಲಾಗಿದೆ.

ಮೈಸೂರಿನ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ನೃತ್ಯಕಲೆಗೆ ಒಳ್ಳೆಯ ಪ್ರೋತ್ಸಾಹ ದೊರಕಿತು. 19ನೆಯ ಶತಮಾನದ ಮಧ್ಯದಲ್ಲಿ ನೃತ್ಯ ಕಲೆಯಲ್ಲಿ ತಮಿಳುನಾಡಿನಲ್ಲಿ ಹೆಸರುವಾಸಿಯಾದ ಪಂದನಲ್ಲೂರು ಸಹೋದರರಲ್ಲಿ ಹಿರಿಯವರಾದ ಚಿನ್ನಯ್ಯಪಿಳ್ಳೆಯವರನ್ನು ಕೃಷ್ಣರಾಜ ಒಡೆಯರು ತಮ್ಮ ಆಸ್ಥಾನಕ್ಕೆ ಬರಮಾಡಿಸಿ, ಅವರಿಂದ ಅನೇಕ ಗುರುಗಳಿಗೂ ಶಿಷ್ಯಂದಿರಿಗೂ ಹೆಚ್ಚಿನ ನೃತ್ಯಾಭ್ಯಾಸ ಒದಗಿಸಿದರು. 1860 ರಿಂದ 81 ರವರೆಗೆ ಕಲೆಗೆ ಪ್ರೋತ್ಸಾಹ ಕಡಿಮೆಯಾದರೂ ಚಾಮರಾಜ ಒಡೆಯರು ಪಟ್ಟಕ್ಕೆ ಬಂದಮೇಲೆ ಪುನಃ ಸಂಗೀತ ನೃತ್ಯಕಲೆಗೆ ರಾಜದರಬಾರುಗಳಲ್ಲಿ ಒಳ್ಳೆಯ ಸ್ಥಾನ ದೊರಕಿತು. ಕಳೆದ ಶತಮಾನದಲ್ಲಿ ಮೈಸೂರು ರಾಜ್ಯದಲ್ಲಿ ಭರತನಾಟ್ಯ ಸಂಪ್ರದಾಯ ಅಕಳಂಕವಾಗಿತ್ತು. ಮೈಸೂರು, ಬೆಂಗಳೂರು, ಮುಳಬಾಗಲು, ಕಡೂರು, ತಿರುಮಕೂಡಲು ನರಸೀಪುರ ಮುಂತಾದ ಸ್ಥಳಗಳಲ್ಲಿ ಭರತನಾಟ್ಯವಿದ್ಯೆಯಲ್ಲಿ ಹೆಸರುವಾಸಿಯಾದ ದೇವದಾಸಿ ಪಂಗಡದವರು ದೇವಸ್ಥಾನದ ಆಶ್ರಯ ಪಡೆದು ಜೀವಿಸುತ್ತಿದ್ದರು. ಈ ದೇವದಾಸಿ ಪಂಗಡದವರಿಗೆ ಸ್ಥಳೀಯ ಶ್ರೀಮಂತರಿಂದಲೋ ಅಥವಾ ಜಮೀನುದಾರರಿಂದಲೋ ಅಥವಾ ಕಲೋಪಾಸಕರಿಂದಲೋ ಪ್ರೋತ್ಸಾಹ ಸಿಗುತ್ತಿತ್ತು. ಅವರಿಗೆ ಭರತ ನಾಟ್ಯಕಲೆಯ ಸಾಂಪ್ರದಾಯಿಕ ಕಲಾರಾಧನೆಗೆ ತಕ್ಕ ಶಾಸ್ತ್ರೋಕ್ತ ವಿದ್ಯಾಭ್ಯಾಸವೇ ಅಲ್ಲದೆ ಸಂಗೀತ ಕಲೆಯ ಪಾಠವೂ ಆಗುತ್ತಿದ್ದ ಕಾರಣ, ಈ ಕಲಾವಿದರು ಪ್ರಜ್ಞಾಶಾಲಿ ಪಂಗಡಕ್ಕೆ ಸೇರಿದವ ರೆಂದೆನಿಸಿಕೊಳ್ಳುತ್ತಿದ್ದರು. ನಿತ್ಯಸುಮಂಗಲಿಯರಾದ ಈ ದೇವದಾಸಿಯರು ಬಾರದೆ ಯಾವ ಮದುವೆ ಸಮಾರಂಭವೂ ಜರಗುತ್ತಿರಲಿಲ್ಲ. ಮಂಗಳಸೂತ್ರ ಕಟ್ಟುವ ಶಾಸ್ತ್ರ ಈ ನಿತ್ಯಸುಮಂಗಲಿಯರಿಂದ ಆಗುತ್ತಿದ್ದುದರಿಂದ ಅವರ ಬರುವಿಕೆಗೆ ಸಂಭ್ರಮದ ಆಹ್ವಾನವಿತ್ತು. ಈ ದೇವದಾಸಿ ಪಂಗಡದ ಪ್ರಭಾವ ಸುಮಾರಾಗಿ ಎಲ್ಲರ ಮೇಲೆಯೂ ಇತ್ತು. ಈ ಕಾರಣದಿಂದ ಕ್ರಮೇಣ ಭರತನಾಟ್ಯಕಲೆ ದೈವಿಕ ಭಾವನೆ ಕಳೆದುಕೊಂಡು ಷಡ್ವೈರಗಳಿಗೆ ತುತ್ತಾಯಿತು. ಆದರೂ ದೇವಾಲಯಕ್ಕೆ ಸೇರಿದ್ದ ಅಥವಾ ಅರಮನೆಗಳಿಗೆ ಸೇರಿದ್ದ ಕೆಲವು ಕಲಾವಿದರು ಈ ಕಲೆಯನ್ನು ಕಾಪಾಡಿಕೊಂಡು ಬಂದಂತೆ ಕಲೋಪಾಸಕರು ಕಲೆಯಿಂದ ವೈಭವಯುಕ್ತ ಅನುಭವವನ್ನು ಪಡೆಯು ವಂತಾಯಿತು. ಮದುವೆ ಸಮಾರಂಭಗಳಲ್ಲೂ ದೇವಸ್ಥಾನದ ಉತ್ಸವ ಗಳಲ್ಲಿಯೂ ಭರತನಾಟ್ಯಕಲೆ ಪ್ರದರ್ಶಿತವಾಗುತ್ತಿತ್ತು.

19ನೆಯ ಶತಮಾನದ ಅಂತ್ಯದವರೆಗೆ ಮೈಸೂರು ಸಂಸ್ಥಾನದ ಮುಖ್ಯ ಪಟ್ಟಣಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅನೇಕ ದೇವದಾಸಿ ಯರು ಈ ಕಲೆಯನ್ನು ಕಾಪಾಡಿಕೊಂಡು ಬಂದಿದ್ದರು. ದೇವಾಲಯಗಳೇ ಅಂದಿನ ಜನರ ಸಾಮಾಜಿಕ ಜೀವನದ ಕೇಂದ್ರವಾಗಿದ್ದವು ಎನ್ನಬಹುದು. ತಿರುಮಕೂಡಲು ನರಸೀಪುರ, ಮುಳಬಾಗಲು, ಚಿಂತಾಮಣಿ ಹತ್ತಿರದ ಹೂವಡಿ ಮುಂತಾದ ಸ್ಥಳಗಳಲ್ಲಿ ಸು. 200 ಕಸಬುದಾರ ದೇವದಾಸಿಗಳೂ ಅವರಿಗೆ ಸೇರಿದ ನಟವನಾರ್‌ಗಳೂ ಸಂಗೀತ ಪಂಗಡದವರೂ ವಾಸಿಸುತ್ತಿದ್ದರು. ಮುಳಬಾಗಲಿನ ದೇವಸ್ಥಾನದಲ್ಲಿ 14 ದೇವದಾಸಿಯರು ಇದ್ದು ವಾರಕ್ಕೊಮ್ಮೆ ದೇವಾಲಯದ ಪೂಜಾಕ್ರಮದಲ್ಲಿ ಭಾಗವಹಿಸುತ್ತಿದ್ದರು. ನಟುವನಾರ್‌ಗಳಲ್ಲದೆ ಸಂಸ್ಕೃತ ಪಂಡಿತರಾದ ಕೆಲವು ಬ್ರಾಹ್ಮಣರು ಈ ಕಲೆಯ ಅಭಿನಯವನ್ನು ಶಾಸ್ತ್ರೋಕ್ತವಾಗಿ ಈ ದೇವದಾಸಿಯರಿಗೆ ಹೇಳಿಕೊಡುವ ಪದ್ಧತಿಯಿತ್ತು. ಈ ಸಾಲಿಗೆ ಸೇರಿದ ಒಬ್ಬ ಮಹನೀಯರು ಮುಳಬಾಗಲಿನ ಪನಸೇಕರಿ ವೆಂಕಟಸುಬ್ಬ ಭಟ್ಟರು. ಅವರು 19ನೆಯ ಶತಮಾನದ ಅಂತ್ಯದಲ್ಲಿ ನೃತ್ಯಗುರುಗಳೆಂದೆನಿಸಿ ವಿಶೇಷ ಗೌರವ ಪಡೆದಿದ್ದರು. ಅವರ ಶಿಷ್ಯಂದಿರು ಅವರ ತರಬೇತಿಯಿಂದ ಕಾಲು ಹೆಜ್ಜೆ ವಿನ್ಯಾಸಗಳಲ್ಲಿ ಒಳ್ಳೆಯ ಅಭ್ಯಾಸ ಪಡೆದು ತುಂಬಾ ಖ್ಯಾತಿ ಪಡೆದಿದ್ದರು. ಇವರಲ್ಲಿ ಬೈರತೂರ್ ವೆಂಕಟಲಕ್ಷ್ಮಿ ಅಭಿನಯ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದರು. ಈ ಶತಮಾನದ ಆದಿಯಲ್ಲೂ ಭರತನಾಟ್ಯಕ್ಕೆ ಇದ್ದ ಕಳಂಕ ಮಾಸಿಹೋಗಲಿಲ್ಲ. ಆದರೂ ಕಾಲಚಕ್ರ ಉರುಳಿದಂತೆ ಕಲೆಯ ಪುನರುತ್ಥಾನವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರೋತ್ಸಾಹ ವಿಶೇಷವಾಗಿತ್ತು. ಕಲೆಗಳು ಮೆರೆದುವು. ಅವರು ಸ್ವತಃ ಲಲಿತಕಲಾಜ್ಞಾನಿಯಾದ ಕಾರಣ ಕಲೆಗಳಿಗೆ ಅತ್ಯಂತ ಉತ್ತಮ ಸ್ಥಾನವನ್ನು ಕಲ್ಪಿಸಿ ಕಲೋಪಾಸಕರು ಕಲೆಗಳನ್ನು ಪಡೆಯಲು ಸಹಾಯವನ್ನು ಇತ್ತರು. ತಿರುಮಕೂಡಲು ನರಸೀಪುರದ ತಿರುಮಕೂಡಲು ಸುಂದರಮ್ಮನವರು ಅಷ್ಟಪದಿಗಳನ್ನು ಹೃದಯಂಗಮ ವಾಗಿ ಅಭಿನಯಿಸುತ್ತಿದ್ದರು. ಚಂದ್ರವದನಮ್ಮ, ಪುಟ್ಟದೇವಮ್ಮ, ನಾಗರತ್ನ ಮತ್ತು ಬೆಂಗಳೂರಿನ ವರಾಲು –ಇವರು ಮೈಸೂರು ರಾಜ್ಯದ ಹೆಸರಾಂತ ನರ್ತಕಿಯರು. ರಮಾಮಣಿ, ಕೊನಮಾರ ದೇವಿಯಮ್ಮ ಹಾಗೂ ದೇವಾಲಯವೊಂದನ್ನು ಅರ್ಪಿಸಿದ್ದ ಮೂಗೂರು ತ್ರಿಪುರಸುಂದರಮ್ಮ ನವರೂ ಹೆಸರುವಾಸಿ ದೇವದಾಸಿಯರು, ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಅರಮನೆಯಲ್ಲಿದ್ದ ಅಂಬಲ್ ನರಸಿಂಹ ಅಯ್ಯಂಗಾರ್‌ರವರು ಲಲಿತ ಕಲೆಗಳಿಗೆ ಪ್ರೋತ್ಸಾಹವನ್ನು ನೀಡುತ್ತಿರುವಾಗಲೇ ಕಲೆಯ ಒಳ್ಳೆಯ ಅಂತಸ್ತನ್ನು ಕಾಣಬಯಸುತ್ತಿದ್ದರು.

ಅರಮನೆಯ ಪ್ರೋತ್ಸಾಹ ಹಾಗೂ ದೇವಾಲಯಕ್ಕೆ ಸಂಬಂಧಪಟ್ಟ ದೇವದಾಸಿಯರು ಮತ್ತು ಅವರ ನಟುವನಾರ್ ಪಂಗಡಕ್ಕೆ ಸೇರಿದ ಕಲಾವಿದರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಸು. 200 ವರ್ಷಗ ಳಿಂದ ಭರತನಾಟ್ಯ ಒಂದು ವಿಶಿಷ್ಟ ರೂಪವನ್ನು ತಾಳಿ ಅಭಿವೃದ್ಧಿಪಡೆಯಿತು. ಕವೀಶ್ವರ ಗಿರಿಯಪ್ಪ ಮತ್ತು ಕಾಶಿಗುರು ಎಂಬುವರು ಅಭಿನಯ ಕಲೆಯಲ್ಲಿ ಧುರೀಣರಾಗಿದ್ದರು. ಅನಂತರ ಅಮೃತಪ್ಪ, ಅಪ್ಪಯ್ಯ, ದಾಸಪ್ಪ, ಕಿಟ್ಟಪ್ಪ ಮತ್ತು ಜಟ್ಟಿತಾಯಮ್ಮನವರು ನಾಟ್ಯರಂಗದಲ್ಲಿ ಮೆರೆದ ಪ್ರಖ್ಯಾತ ನೃತ್ಯಕಲಾವಿದರು. ಈ ನೃತ್ಯಗುರುಗಳ ಶಿಷ್ಯಂದಿರು ಪರಂಪರೆಯಾಗಿ ಇಂದಿಗೂ ನಾಟ್ಯಕಲೆಯನ್ನು ಅಭ್ಯಾಸ ಮಾಡುತ್ತಲಿದ್ದಾರೆ. 1947ರಲ್ಲಿ ನಿಧನರಾದ ಮೈಸೂರಿನ ಜಟ್ಟಿತಾಯಮ್ಮ ಹಾಗೂ ಕೋಲಾರ ಕಿಟ್ಟಪ್ಪ ಮತ್ತು ಅವರ ಶಿಷ್ಯಂದಿರಾದ ಕೋಲಾರ ಪುಟ್ಟಪ್ಪ ಇವರು ಇಂದಿಗೂ ಜನಮನದಲ್ಲಿದ್ದಾರೆ. ಕೋಲಾರ ಕಿಟ್ಟಪ್ಪನವರ ಶಿಷ್ಯಂದಿರಾದ ಗುಂಡಪ್ಪನವರು 12 ವರ್ಷಗಳ ಕಾಲ ತರಬೇತು ಪಡೆದು ಪ್ರಖ್ಯಾತ ನರ್ತಕರ ಮನೆತನಕ್ಕೆ ಸೇರಿದ ನಟುವನಾರ್ ಆದ್ದರು. ಅವರ ಮುತ್ತಜ್ಜಿ ರಂಗನಾಯಕಮ್ಮನವರೂ ಅಜ್ಜಿ ರಂಗಮ್ಮನವರೂ ನಾಟ್ಯ ನಿಪುಣತೆಯನ್ನೂ ಪಡೆದಿದ್ದರು. ಅವರ ವಂಶ ಕರ್ನಾಟಕ ನೃತ್ಯಕಲೆಗೆ ನಿರತ ಸೇವೆ ಸಲ್ಲಿಸಿದೆ. ಅವರ ಶಿಷ್ಯಂದಿರು ಇಂದಿಗೂ ಕಲಾಸೇವೆಯನ್ನು ಮಾಡುತ್ತಲಿದ್ದಾರೆ. ಇವರೆಲ್ಲರ ಕಾರ್ಯಸಾಧನದಿಂದ ಭರತ ನಾಟ್ಯದಲ್ಲಿ ಮೈಸೂರು ಶೈಲಿ ಎಂಬುದೂ ಬೆಳೆದಿದೆ.

ನಾಟ್ಯ ರಂಗದ ಪ್ರಮುಖರಲ್ಲಿ ಕೆಲವರ ವಿಷಯ ಸ್ವಲ್ಪಮಟ್ಟಿಗೆ ತಿಳಿದಿದೆ. ದಾಸಪ್ಪನವರು ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ದ್ದರು. ಅವರಿಗೆ ನಾಟ್ಯಕಲೆಗೆ ಶಾಸ್ತ್ರೋಕ್ತ ತಿಳುವಳಿಕೆಯಿತ್ತು. ಅವರ ಮಗಳಾದ ಜಟ್ಟಿತಾಯಮ್ಮ **(ನೋಡಿ)** ಅತ್ಯಂತ ಹೆಸರುವಾಸಿಯಾದವರು. ಅವರಿಗೆ ನೃತ್ಯಕಲೆ ಒಂದು ಕಲೆ ಮಾತ್ರವಲ್ಲ, ದೈವಸಾಕ್ಷಾತ್ಕಾರವನ್ನು ಪಡೆಯುವ ಸಾಧನೆಯಾಗಿತ್ತು. ಜಟ್ಟಿತಾಯಮ್ಮನವರ ಶಿಷ್ಯರಾದ ವೆಂಕಟಲಕ್ಷ್ಮಮ್ಮ **(ನೋಡಿ)** ಸುಮಾರು ಎರಡು ದಶಕಗಳ ಕಾಲ ಶಿಕ್ಷಣ ಪಡೆದು ಇಂದಿಗೂ ಕಲಾಸೇವೆ ಮಾಡುತ್ತಲಿದ್ದಾರೆ. ರಾಜಾಶ್ರಯವನ್ನು

ಪಡೆದ ಇನ್ನೊಬ್ಬ ಕಲಾವಿದೆ ಚಂದ್ರವದನಮ್ಮನವರು ಭಾವಾಭಿನಯಕ್ಕೆ ಹೆಸರು ವಾಸಿಯಾಗಿದ್ದರಲ್ಲದೆ ಸಂಗೀತ ಕಲೆಯಲ್ಲೂ ನಿಪುಣೆಯಾಗಿದ್ದರು. ವಿಖ್ಯಾತನಾಟ್ಯ ಗುರುಗಳಾದ ಅಮೃತಪ್ಪ ಮತ್ತು ಅಪ್ಪಯ್ಯನವರಿಂದ ಪಾಠವನ್ನು ಕಲಿತ ಪುಟ್ಟದೇವಮ್ಮ ಮತ್ತು ಆಕೆಯ ಮಗಳು ಚಿಕ್ಕದೇವಮ್ಮ ಇವರೂ ಅರಮನೆಯ ಪ್ರೋತ್ಸಾಹ ಪಡೆದ ಕಲಾವಿದೆಯರು.

ಬೆಂಗಳೂರು ನಗರದಲ್ಲಿ ವಿದ್ವಾನ್ ಕೋಲಾರ ಪುಟ್ಟಪ್ಪನವರು ಪ್ರಖ್ಯಾತ ನಾಟ್ಯಗುರುಗಳಾಗಿ ನಾಗರತ್ನ ಮತ್ತು ವರಾಲು ಇವರನ್ನು ತರಬೇತು ಮಾಡಿ ಶ್ರೇಷ್ಠ ಅಭಿನಯಕಲಾವಿದೆಯರನ್ನಾಗಿ ಮಾಡಿದರು. ಕೋಲಾರ ಪುಟ್ಟಪ್ಪನವರು ನಾಟ್ಯಕಲೆಯ ಪಾರಂಪರ್ಯ ಕುಟುಂಬದಲ್ಲಿ ಜನಿಸಿದವರು. ಪಂದನಲ್ಲೂರಿನಿಂದ ಬಂದ ಕಂಚಿ ಸದಾಶಿವಯ್ಯ ಇವರ ಗುರುಗಳು. ಇವರು ಬೆಂಗಳೂರಿನಲ್ಲಿ 1945 ರವರೆಗೆ ಪಾಠ ಹೇಳಿಕೊಡುತ್ತಿದ್ದರು. ಪ್ರಪಂಚಖ್ಯಾತ ರಾಮಗೋಪಾಲ್ ಮತ್ತು ಯು.ಎಸ್. ಕೃಷ್ಣರಾಯರು ಇವರ ಶಿಷ್ಯರು.

1910 ರಿಂದ 30 ರವರೆಗೆ ಭರತನಾಟ್ಯಕಲೆಯು ಕಳಂಕಪೂರಿತವಾಗಿ ಕಸಬುದಾರ ಕಲಾವಿದರೂ ತಮಗೆ ಸಲ್ಲತಕ್ಕ ಮರ್ಯಾದೆ ಕಳೆದು ಕೊಂಡರು. ದೇವಾಲಯಗಳಲ್ಲಿ ನೃತ್ಯಸೇವೆಯನ್ನು ನಿರ್ಬಂಧಿಸಲಾಯಿತು. ದೇವದಾಸಿಯರ ಜೀವನವೂ ತುಂಬಾ ಕಷ್ಟಕರವಾಯಿತು. ಆದರೂ ಕಲಾಸಕ್ತಿಯುಳ್ಳ ಶಿಷ್ಯಂದಿರೂ ನಾಟ್ಯಗುರುಗಳೂ ಕಲೋಪಾಸಕರೂ ಕಲೆಯನ್ನು ಅರಸಿ ಕಾಪಾಡಿದರು.

ಮದರಾಸಿನ ಕಲಾಕ್ಷೇತ್ರದ ರುಕ್ಮಿಣಿದೇವಿ ಮತ್ತು ಕೃಷ್ಣ ಅಯ್ಯರ್ ಅವರ ನಿರಂತರ ಪರಿಶ್ರಮದ ಫಲವಾಗಿ ನೃತ್ಯಕಲೆಯ ಪುನರುತ್ಥಾನವಾಯಿತು. ಕ್ರಮೇಣ ಸುಶಿಕ್ಷಿತರೂ ಕಲೆಗಾಗಿ ಮತ್ತು ಅದರ ಅಭಿವೃದ್ಧಿಗಾಗಿ ಕೆಲಸ ಮಾಡುವಂತಾಯಿತು. ಬೆಂಗಳೂರಿನಲ್ಲಿ ರಾಮಗೋಪಾಲರವರು ನಾಟ್ಯಸಂಸ್ಥೆಯನ್ನು ಸ್ಥಾಪಿಸಿ ಕಲೆಗಾಗಿ ತನುಮನ ಧನವನ್ನು ನೀಡಿದರು. ಅವರ ಶ್ರಮದಿಂದಾಗಿ ಶಿಕ್ಷಿತ ಜನತೆಯ ಕಲೆಯ ಶ್ರೇಷ್ಠತೆಯನ್ನು ಅರಿತು ಬೆರಗಾದರು. ಯು.ಎಸ್. ಕೃಷ್ಣರಾಯರೂ ಈ ಪಂಗಡಕ್ಕೆ ಸೇರಿ ಮೈಸೂರು ಸಂಸ್ಥಾನದಲ್ಲೆಲ್ಲ ಭರತನಾಟ್ಯ ಕಲೆಯ ಪ್ರಸಾರ ಮಾಡಿದರು. ಅವರೂ ಅವರ ಪತ್ನಿ ಚಂದ್ರಭಾಗಾದೇವಿಯವರೂ ಸುಶಿಕ್ಷಿತರೂ ಕುಲೀನ ಮನೆತನದವರೂ ಎಂದೆನಿಸಿ ನರ್ತಿಸಿ, ಉಪನ್ಯಾಸಗಳನ್ನು ಕೊಟ್ಟು ಸಂಸ್ಥಾನಾದ್ಯಂತ ಪ್ರಯಾಣ ಮಾಡಿ ವಿವಿಧ ಜನತೆಗೆ ಕಲೆಯ ತಿರುಳನ್ನೂ ಅಂದವನ್ನೂ ತಿಳಿಸಿ ಕಲೆಯ ಪ್ರಸಾರ ಮಾಡಿದರು. ಮೈಸೂರು ಭರತನಾಟ್ಯ ಸಂಪ್ರದಾಯಕ್ಕೆ ಒಂದು ವಿಶೇಷ ಗೌರವ, ಸ್ಥಾನಮಾನವನ್ನು ರಚಿಸಿ ಅಭಿವೃದ್ಧಿ ಮಾಡಿದರು. ಇವರು ಶಾಸ್ತ್ರೋಕ್ತ ಭರತನಾಟ್ಯವಿದ್ಯೆಯ ತಳಹದಿಯ ಮೇಲೆ ಹೊಸ ಪ್ರಯೋಗಗಳನ್ನೂ ಮಾಡಿದ್ದಾರೆ. ಇವರು ಕನ್ನಡ ಭಾಷೆಯಲ್ಲಿ ಪದಗಳನ್ನು ಭರತನಾಟ್ಯಕ್ಕೆ ಅಳವಡಿಸಿಕೊಂಡವರಲ್ಲಿ ಅಗ್ರಗಣ್ಯರು.

ಮೀನಾಕ್ಷಿ ಸುಂದರಂ ಪಿಳ್ಳೆಯವರ ಪುತ್ರರಾದ ವಿದ್ವಾನ್ ಮುತ್ತಯ್ಯಪಿಳ್ಳೆ ಮತ್ತು ಮೊಮ್ಮಕ್ಕಳಾದ ವಿದ್ವಾನ್ ಕಿಟ್ಟಪ್ಪನವರು ಪಂದನಲ್ಲೂರು ಸಂಪ್ರದಾಯವನ್ನು ಕನ್ನಡಿಗರಿಗೆ ಹೇಳಿಕೊಡುವ ಸಲುವಾಗಿ ಬೆಂಗಳೂರಿನಲ್ಲೇ ಬಂದು ವಾಸವಾಗಿದ್ದಾರೆ. ಅವರ ವಂಶವೆಲ್ಲ ಈಗ 1965ರಿಂದ ಕರ್ನಾಟಕದ ಕಲಾವಿದರಿಗೆ ಭರತನಾಟ್ಯ ಹೇಳಿಕೊಡುತ್ತಿದೆ. ಇತ್ತೀಚೆಗೆ ಸು. 1972ರಲ್ಲಿ ಬೆಂಗಳೂರಿನಲ್ಲಿ ಮೀನಾಕ್ಷಿಸುಂದರಂ ಪಿಳ್ಳೆಯವರ ಹೆಸರಿನಲ್ಲಿ ಲೀಲಾ ರಾಮನಾಥನ್‌ರವರ ನೇತೃತ್ವದಲ್ಲಿ ಒಂದು ಭರತನಾಟ್ಯ ಶಾಲೆ ಸ್ಥಾಪಿತವಾಗಿದೆ. ಈ ಪಂದನಲ್ಲೂರು ನೃತ್ಯಪೀಠ ಬೆಂಗಳೂರಿನಲ್ಲಿ ಹೆಸರುವಾಸಿಯಾಗಿದೆ. ಇಲ್ಲಿ ತರಬೇತಿ ಪಡೆದ ಕುಮಾರಿಯರಾದ ಆಶಾ, ರೇವತಿ ಪ್ರಪಂಚಖ್ಯಾತಿ ಪಡೆದಿದ್ದಾರೆ.

ಬೆಂಗಳೂರಿನಲ್ಲಿಯೇ ಇನ್ನೂ ಇತರ ಹೆಸರುವಾಸಿ ನೃತ್ಯಪೀಠಗಳಿವೆ. ಅವುಗಳಲ್ಲಿ ಶ್ರೀ ಮತ್ತು ಶ್ರೀಮತಿ ಯು.ಎಸ್.ಕೃಷ್ಣರಾಯರು ನಡೆಸುತ್ತಿರುವ ನೃತ್ಯಪೀಠ (ಸ್ಥಾಪನೆ 1942). ಮಹಾಮಾಯಾ ನೃತ್ಯಪೀಠ (1973) ಪ್ರತಿಭಾನ್ವಿತ ಕಲಾವಿದರನ್ನು ತಯಾರಿಸಿವೆ. ಇಂದ್ರಾಣಿ ರಹಮಾನ್, ಸೋನಾಲ್ ಮಾನಸಿಂಗ್, ಸುಧಾರಾಣಿ, ಜಿಲ್ ರೋಸೆನ್ ಬ್ಲೂಂ ಮೊದಲಾದವರು ಕೃಷ್ಣರಾವ್ ದಂಪತಿಗಳಿಂದ ತರಬೇತಿ ಪಡೆದವರು. ಭಾರತೀಯ ವಿದ್ಯಾಭವನದ ನೃತ್ಯ ಕೇಂದ್ರ (1969), ನಟುವನಾರ್ ಗುಂಡಪ್ಪನವರ ಶಿಷ್ಯ ಎಚ್.ಆರ್.ಕೇಶವಮೂರ್ತಿಯವರ ಕೇಶವ ನೃತ್ಯಶಾಲಾ(1949), ವಿ.ಎಸ್.ಕೌಶಿಕ್ ನಡೆಸುತ್ತಿರುವ ಸನಾತನ ಕಲಾಕ್ಷೇತ್ರ (1946), ಮಾಣಿಕ್ಯಂ ಅವರ ಭರತನಾಟ್ಯ ಕಲಾಶಾಲೆ, ಲಲಿತಾ ದೊರೆ ಅವರ ಗಣೇಶ ನೃತ್ಯಶಾಲೆ, ಟಿ.ಎಸ್. ಭಟ್ಟರ ಮೇನಕ ನೃತ್ಯ ಶಾಲೆ (1957), ಶೇಖರ್‌ರವರ ಸರಸ್ವತೀ ನಾಟ್ಯಶಾಲೆ, ಬೆಂಗಳೂರಿನ ಪ್ರಮುಖ ನೃತ್ಯಪೀಠಗಳು, ಬೆಂಗಳೂರಿನಲ್ಲಿ ಇನ್ನೂ ಅನೇಕ ನೃತ್ಯಗುರುಗಳಿದ್ದಾರೆ.

ಮಂಗಳೂರಿನಲ್ಲಿ ಯು.ಎಸ್.ಕೃಷ್ಣರಾಯರ ನೃತ್ಯ ವಿದ್ಯಾಲಯದಲ್ಲಿ ಭರತನಾಟ್ಯ ಹಾಗೂ ಕಥಕಳಿ ಶಾಸ್ತ್ರೀಯ ನೃತ್ಯಕಲೆಯನ್ನು ಉಚಿತವಾಗಿ ಹೇಳಿಕೊಡಲಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಹಲವಾರು ನೃತ್ಯ ಸಂಸ್ಥೆಗಳಿದ್ದರೂ ಗಮನಕ್ಕೆ ಬರುವ ನೃತ್ಯಪೀಠ ಶ್ರೀನಿವಾಸ ಕುಲಕರ್ಣಿ ಯವರು ಹಂಸಭಾವಿಯಲ್ಲಿ ಸ್ಥಾಪಿಸಿರುವ ನೃತ್ಯಭಾರತಿ ಎಂಬ ನೃತ್ಯಶಾಲೆ. ಅವರು ಸು. 30–35 ವರ್ಷಗಳಿಂದ ನೃತ್ಯರಂಗದಲ್ಲಿ ಅವಿರತವಾಗಿ ಕೆಲಸ ಮಾಡಿ ಪಳಗಿದ ಕಲಾವಿದರು. ಅಲ್ಲದೆ ಕರ್ನಾಟಕದ ಸಣ್ಣಪುಟ್ಟ ಊರು ಹಳ್ಳಿಗಳಲ್ಲಿ ಸು. 100ಕ್ಕೂ ಮೇಲ್ಪಟ್ಟು ನೃತ್ಯಗುರುಗಳಿದ್ದು ಭರತನಾಟ್ಯ, ಕಥಕ್, ಕಥಕಳಿ ಮತ್ತು ಇತರ ನೃತ್ಯಗಳನ್ನು ಹೇಳಿ ಕೊಡುತ್ತಲಿದ್ದಾರೆ. ಈಗ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಲಲಿತಕಲೆಗಳ ಕಾಲೇಜುಗಳಲ್ಲಿ ಪದವಿ ಮಟ್ಟದಲ್ಲಿ ನೃತ್ಯ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಕರ್ನಾಟಕದಲ್ಲಿ ಇಂದು ಕಥಕ್, ಕಥಕಳಿ, ಮಣಿಪುರಿ ಮೊದಲಾದ ನೃತ್ಯ ಸಂಪ್ರದಾಯಗಳು ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಶಿಷ್ಟ ನೃತ್ಯ ರೂಪಗಳಲ್ಲಿ ಭರತನಾಟ್ಯ ಅದರಲ್ಲೂ ಮೈಸೂರು ಸಂಪ್ರದಾಯದ ಭರತನಾಟ್ಯ ಈ ನಾಡಿನ ವೈಶಿಷ್ಟ್ಯವೆನ್ನಬಹುದು. (ಸಿ.ಡಿ.;*)

**ನೃಪಕಾಮ:** ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಪ್ರದೇಶದಲ್ಲಿ ಆಳಿದ ಹೊಯ್ಸಳ ದೊರೆ (ಸು. 1000–45). ಮೊದಲಿಗೆ ಇವನೇ ಹೊಯ್ಸಳ ಮನೆತನದ ಮೊದಲ ರಾಜನಿರಬಹುದೆಂದು ತಿಳಿಯಲಾಗಿತ್ತು. ಆದರೆ ಇತ್ತೀಚೆಗೆ ಪತ್ತೆಯಾದ ಚಿಕ್ಕಮಗಳೂರು ತಾಲ್ಲೂಕಿನ ಉಪ್ಪಳ್ಳಿ ಶಾಸನದಿಂದ ಹೊಯ್ಸಳವಂಶದ ಮೊದಲ ರಾಜರ ವಿವರಗಳು ದೊರೆತಿವೆ (ನೋಡಿ: ಹೊಯ್ಸಳರು). ಇವನನ್ನು ಕಾಮನೃಪ, ರಾಚಮಲ್ಲ ಪೆರ್ಮಾನಡಿ ಎಂದೂ ಕೆಲವು ಶಾಸನಗಳಲ್ಲಿ ಹೆಸರಿಸಲಾಗಿದೆ. ಈ ಎರಡನೆಯ ಹೆಸರಿನಿಂದಾಗಿ ನೃಪಕಾಮ ತಲಕಾಡಿನ ಗಂಗಸಂತತಿಯೊಡನೆ ಸಂಬಂಧ ಹೊಂದಿದ್ದನೆಂದು ಹಲವು ವಿದ್ವಾಂಸರೂ ಇವನು ಮೊದಲಲ್ಲಿ ಗಂಗರ ಸಾಮಂತನಾಗಿರಬೇಕೆಂದು ಮತ್ತೆ ಕೆಲವು ವಿದ್ವಾಂಸರೂ ಅಭಿಪ್ರಾಯ ಪಟ್ಟಿದ್ದಾರೆ. ಅನೇಕ ಶಾಸನಗಳಲ್ಲಿ ಬರುವ ಹೊಯ್ಸಳ ವಂಶಾವಳಿಯಲ್ಲಿ ನೃಪಕಾಮನ ಹೆಸರು ಕಂಡುಬರದೆ ಸಾಮಾನ್ಯವಾಗಿ ಆದ್ಯ ಸಳನಾದ ಅನಂತರ ಅವನ ವಂಶದಲ್ಲಿ ವಿನಯಾದಿತ್ಯನೆಂಬುವನು ರಾಜನಾದನು ಎಂಬ ಹೇಳಿಕೆಯಿರುತ್ತದೆ. ಒಂದೆರಡು ಶಾಸನಗಳಲ್ಲಿ ಮಾತ್ರ ನೃಪಕಾಮ ವಿನಯಾದಿತ್ಯನ ತಂದೆ ಎಂಬ ಉಲ್ಲೇಖವಿದೆ. ಇವನ ಶಾಸನಗಳಾದರೋ ಇವನನ್ನು ಹೊಯ್ಸಳ ಎಂದು ಸ್ಪಷ್ಟವಾಗಿ ನಿರ್ದೇಶಿಸುತ್ತವೆ. ಕೊಂಗಾಳ್ವ

ಶಾಸನವೊಂದರಲ್ಲಿ ನೃಪಕಾಮನನ್ನು ಮುಂಡಹೊಯ್ಸಳ ಎಂದು ಸಂಬೋಧಿಸಲಾಗಿರುವುದರಿಂದ ನೃಪಕಾಮ ಜೈನಮತಾವಲಂಬಿಯಾಗಿರ ಬೇಕೆಂದು ಒಂದು ಊಹೆ.

1022 ರಿಂದ 27 ರವರೆಗೆ ನೃಪಕಾಮನ ಅನೇಕ ಶಾಸನಗಳು ದೊರೆತಿವೆ. ಇವನು 1022ರಲ್ಲಿ ಕೊಂಗಾಳ್ವರ ಮೇಲೆ ದಂಡೆತ್ತಿಹೋಗಿದ್ದ ನಲ್ಲದೆ, 1026ರಲ್ಲಿ ಮಣ್ಣೆ ಎಂಬಲ್ಲಿ ಅವರನ್ನು ಮತ್ತೆ ಎದುರಿಸಿದ. 1027ರಲ್ಲಿ ಬನವಾಸಿಯಲ್ಲಿ ಪ್ರಾಯಶಃ ಕದಂಬರ ಮೇಲೆ ನಡೆದ ಯುದ್ಧವೊಂದರಲ್ಲಿ ಅವರ ಸಹಾಯಕನಾಗಿದ್ದ. ವಿಷ್ಣುವರ್ಧನ ಹೊಯ್ಸಳನ ಪ್ರಧಾನಾಮಾತ್ಯನಾದ ಗಂಗರಾಜನ ತಂದೆ ಏಚರಾಜ ಬಾಲ್ಯದಲ್ಲಿ ನೃಪಕಾಮನ ಆಸ್ಥಾನದಲ್ಲಿದ್ದನೆಂದು ಶ್ರವಣಬೆಳಗೊಳದ ಶಾಸನವೊಂದರಿಂದ ತಿಳಿದುಬರುತ್ತದೆ. **(ಜಿ.ಆರ್.ಆರ್.)**

**ನೆಲಮಂಗಲ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು. ಜಿಲ್ಲೆಯ ವಾಯವ್ಯ ಭಾಗದಲ್ಲಿ ಆಗ್ನೇಯ ವಾಯವ್ಯಾಭಿ ಮುಖವಾಗಿ ಹರಡಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ತುಮಕೂರು, ಕೊರಟಗೆರೆ ತಾಲ್ಲೂಕುಗಳೂ ಪೂರ್ವದಲ್ಲಿ ದೊಡ್ಡಬಳ್ಳಾಪುರ ಮತ್ತು ಉತ್ತರ ಬೆಂಗಳೂರು ತಾಲ್ಲೂಕುಗಳೂ ಪಶ್ಚಿಮ ಮತ್ತು ನೈಋತ್ಯದಲ್ಲಿ ಮಾಗಡಿ ತಾಲ್ಲೂಕೂ ಸುತ್ತುವರೆದಿವೆ. ದಾಸನಪುರ, ನೆಲಮಂಗಲ, ಸೋಮಪುರ ಮತ್ತು ತ್ಯಾಮಗೊಂಡ್ಲು ಹೋಬಳಿಗಳಿದ್ದು 314 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 653.1 ಚ.ಕಿಮೀ. ಜನಸಂಖ್ಯೆ 1,74,880.

ಶಿವಗಂಗೆ (4559') ಮತ್ತು ನಿಜಗಲ್ಲು ಈ ತಾಲ್ಲೂಕಿನ ಮುಖ್ಯ ಬೆಟ್ಟಗಳು. ಈ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶ ಇಲ್ಲವೆಂದೇ ಹೇಳಬಹುದು. ದೊಡ್ಡಬೆಲೆ ಮತ್ತು ಬೊಮ್ಮನಹಳ್ಳಿಯ ಬಳಿ ಸರ್ಕಾರದಿಂದ ಪೋಷಕವಾದ ಸಾಮಾಜಿಕ ಅರಣ್ಯಗಳನ್ನು ಬೆಳೆಸಲಾಗುತ್ತಿದೆ. ಈ ತಾಲ್ಲೂಕಿನ ಮಣ್ಣು ನಸುಗೆಂಪುಮಿಶ್ರಿತವಾಗಿದ್ದು ಹಲವು ಭಾಗಗಳಲ್ಲಿ ಫಲವತ್ತಾಗಿದೆ. ವಾರ್ಷಿಕ ಸರಾಸರಿ ಮಳೆ 1140 ಮಿಮೀ. ಬೇಸಾಯ ಜನರ ಮುಖ್ಯ ಕಸಬು. ಅರ್ಕಾವತಿ ಮತ್ತು ಅದರ ಉಪನದಿಯಾದ ಕುಮುದ್ವತಿ ಈ ತಾಲ್ಲೂಕಿನ ಮುಖ್ಯ ನದಿಗಳು. ಈ ತಾಲ್ಲೂಕಿನಲ್ಲಿ ದೊಡ್ಡ ನೀರಾವರಿ ಅಣೆಕಟ್ಟುಗಳಾಗಲಿ, ಜಲಾಶಯಗಳಾಗಲಿ ಇಲ್ಲ. ಸಣ್ಣ ಪುಟ್ಟ ಕೆರೆಗಳಿದ್ದು ಅವುಗಳ ನೀರನ್ನು ಬತ್ತ ಮತ್ತು ಬಾಗಾಯ್ತು ಬೆಳೆಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಅಂತಹ ಕೆರೆಗಳಲ್ಲಿ ಚಿಕ್ಕಣ್ಣನ ಅಣೆ, ತ್ಯಾಮಗೊಂಡ್ಲುವಿನ ಅಮಾನಿಕೆರೆ, ಕೆರೆಗತ್ತಿಗನೂರಿನ ಕೆರೆ, ಸೊಂಡೆಕೊಪ್ಪದ ಕೆರೆ, ಮಣ್ಣೆ ಕೆರೆ ಮೊದಲಾದವುಗಳನ್ನು ಹೆಸರಿಸ ಬಹುದಾಗಿದೆ. ರಾಗಿ ಈ ತಾಲ್ಲೂಕಿನ ಮುಖ್ಯವಾದ ಬೆಳೆ. ಅವರೆ, ತೊಗರಿ, ಹುರುಳಿ ಮತ್ತು ಎಣ್ಣೆಬೀಜಗಳನ್ನೂ ಮುಸುಕಿನ ಜೋಳ ಮತ್ತು ಕೆಲವು ಹಣ್ಣುಗಳನ್ನೂ ಬೆಳೆಯಲಾಗುತ್ತಿದೆ. ಸಣ್ಣಪುಟ್ಟ ಕೆರೆಗಳ ಅಚ್ಚುಕಟ್ಟಿನಲ್ಲಿ ಬತ್ತ ಮತ್ತು ಕಬ್ಬನ್ನೂ ಬೆಳೆಯುವರು. ಇತ್ತೀಚೆಗೆ ನೀರಾವರಿ ಬಾವಿಗಳನ್ನು ತೋಡಿ ವಿದ್ಯುತ್ ಪಂಪುಗಳ ಸಹಾಯದಿಂದ ನೀರೆತ್ತಿ ಬೆಳೆ ಬೆಳೆಯಲಾಗುತ್ತಿದೆ.

ಈ ತಾಲ್ಲೂಕಿನ ನಿಡವಂದ ಒಂದು ರೈಲ್ವೆ ನಿಲ್ದಾಣ ಮತ್ತು ವ್ಯಾಪಾರಕೇಂದ್ರ. ಶಿವಗಂಗೆ **(ನೋಡಿ)** ಒಂದು ಪವಿತ್ರ ಕ್ಷೇತ್ರ. ಈ ತಾಲ್ಲೂಕಿನ ತೋಟಗೆರೆ ಗ್ರಾಮದಲ್ಲಿ ಅರ್ಜುನ ದೇವಾಲಯ ಇದ್ದು ಅದು ಈಗ ಹಾಳುಬಿದ್ದಿದೆ. ತ್ಯಾಮಗೊಂಡ್ಲು ಹೋಬಳಿ ಕೇಂದ್ರ ವಾಗಿರುವುದಲ್ಲದೆ ದೊಡ್ಡ ವ್ಯಾಪಾರ ಕೇಂದ್ರ. ಎಲೆಕ್ಯಾತನಹಳ್ಳಿ ಜೈನಧರ್ಮೀಯರ ಮುಖ್ಯಸ್ಥಳ. ನಿಜಗಲ್ಲು ಮತ್ತು ಇತರ ಕಡೆಗಳಲ್ಲಿ ಸಣ್ಣಪುಟ್ಟ ಪಾಳೆಗಾರರು ಆಳುತ್ತಿದ್ದರು. ಮಹಿಮಾಪುರ ಗ್ರಾಮದ ಬಳಿಯಿರುವ ಗುಡ್ಡಕ್ಕೆ ಮಹಿಮೆರಂಗನ ಬೆಟ್ಟ ಎಂಬ ಹೆಸರಿದ್ದು ಅದರ ಮೇಲೆ ರಂಗನಾಥ ಸ್ವಾಮಿಯ ದೇವಾಲಯವಿದೆ. ಇಲ್ಲಿ ವರ್ಷಕ್ಕೊಂದು ಭಾರಿ ಜಾತ್ರೆ ನಡೆಯುತ್ತದೆ. ಬರದಿ ಗ್ರಾಮದ ಬಳಿ ಇರುವ ರಾಮದೇವರ ಗುಡ್ಡದ ಮೇಲೆ ಶ್ರೀರಾಮ ದೇವಾಲಯವಿದೆ. ಸುತ್ತಮುತ್ತಿನ ಜನ ಇಲ್ಲಿ ವಿವಾಹಗಳನ್ನು ಜರುಗಿಸುವರು, ಬಿನ್ನಮಂಗಲದ ಮುಕ್ತಿನಾಥ ದೇವಾಲಯ ಒಂದನೆಯ ರಾಜೇಂದ್ರ ಚೋಳನ ಆಳ್ವಿಕೆಯಲ್ಲಿ ನಿರ್ಮಾಣ ವಾದ್ದು. ಹೆಗ್ಗುಂದ ಬೆಟ್ಟದ ಪಾದದಲ್ಲಿ ವೀರಭದ್ರ ಮತ್ತು ಮಲ್ಲಿಕಾರ್ಜುನ ಎಂಬ ಎರಡು ಗುಹಾಲಯಗಳಿವೆ. ಇಲ್ಲಿನ ಶ್ರೀರಾಮ ದೇವಾಲಯದ ಬಳಿ ಇರುವ ಸ್ತಂಭಕ್ಕೆ ಶ್ರೀರಾಮನ ಹಯವನ್ನು ಕಟ್ಟಲಾಗಿತ್ತೆಂದು ಪೌರಾಣಿಕ ಕಥೆ. ಮಣ್ಣೆ (ಮಾನ್ಯಪುರ) ಗಂಗರ ಶ್ರೀಪುರುಷನ (725–88) ಮತ್ತು ಅನಂತರ ರಾಷ್ಟ್ರಕೂಟರ ಕಾಲದಲ್ಲಿ ಮುಖ್ಯಸ್ಥಳವಾಗಿತ್ತು.

ನೆಲಮಂಗಲ ಈ ತಾಲ್ಲೂಕು ಮತ್ತು ಹೋಬಳಿಯ ಆಡಳಿತ ಕೇಂದ್ರ. ಬೆಂಗಳೂರು–ತುಮಕೂರು ಮಾರ್ಗದಲ್ಲಿ ಬೆಂಗಳೂರಿನ ವಾಯವ್ಯಕ್ಕೆ ಸು. 27 ಕಿಮೀ ದೂರದಲ್ಲಿದೆ. ಜನಸಂಖ್ಯೆ 25,287

ಈ ಪಟ್ಟಣ ವ್ಯಾಪಾರಕೇಂದ್ರಗಳಾದ ಮಾಗಡಿ, ಬೆಂಗಳೂರು, ದೊಡ್ಡಬಳ್ಳಾಪುರ ಮತ್ತು ತುಮಕೂರುಗಳ ಮಧ್ಯದಲ್ಲಿದ್ದು ಉತ್ತಮ ರಸ್ತೆಸಂಪರ್ಕವನ್ನು ಹೊಂದಿದೆ. ಈ ಪಟ್ಟಣದಲ್ಲಿ ಆಸ್ಪತ್ರೆ, ಅಂಚೆತಂತಿ, ದೂರವಾಣಿ, ವಿದ್ಯುತ್, ಶಾಲೆಗಳು ಮುಂತಾದ ಸೌಲಭ್ಯಗಳು ಇವೆ. ಇಂದಿನ ನೆಲಮಂಗಲದ ಬಳಿಯಲ್ಲೇ ಹಿಂದೆ ಭೂಮಂಗಲ ಎಂಬ ದೊಡ್ಡ ಊರಿದ್ದು ಅದು ಯುದ್ಧವೊಂದರಲ್ಲಿ ಹಾಳಾಯಿತೆಂದೂ ಅನಂತರ ಇಂದಿನ ಪಟ್ಟಣ ಅಸ್ತಿತ್ವಕ್ಕೆ ಬಂತೆಂದೂ ಐತಿಹ್ಯ. **(ಜಿ.ಆರ್.ಆರ್.)**

**ನೇತ್ರಾಣಿ ದ್ವೀಪಗಳು:** ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕಿನ ಪ್ರವಾಸಿ ಸ್ಥಳ. ಇದಕ್ಕೆ ಪಿಜನ್ ಐಲೆಂಡ್ ಅಥವಾ ಪಾರಿವಾಳ ದ್ವೀಪ ವೆಂಬ ಹೆಸರೂ ಇದೆ. ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲೊಂದಾದ ಮುರ್ಡೇಶ್ವರ ದಿಂದ ದಕ್ಷಿಣಕ್ಕೆ ಭಟ್ಕಳದಿಂದ 18 ಕಿಮೀ ದೂರದಲ್ಲಿದೆ. ನೇತ್ರಾಣಿ ನಡುಗಡ್ಡೆಯು ಕಣ್ಣಿನ ಗುಡ್ಡೆಯಾಕಾರವನ್ನು ಹೋಲುವುದರಿಂದ ಜನಪದರ ಬಾಯಲ್ಲಿ ನೇತ್ರಾಣಿಯಾಗಿದೆ. ರೋಮಿನ ಪ್ರವಾಸಿ ಬುಕಾನನ್ ಈ ದ್ವೀಪಕ್ಕೆ 1801 ರಲ್ಲಿ ಭೇಟಿ ಕೊಟ್ಟಾಗ ಅಲ್ಲಿ ಕಲ್ಲಿನ ಕಂಬಕ್ಕೆ ಪೂಜೆ ಸಲ್ಲಿಸುತ್ತಿದ್ದುದನ್ನು ಕಂಡು ಅದನ್ನು ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸಿದ್ದಾನೆ. ಈ ಕಲ್ಲಿನ ಕಂಬವನ್ನು ಭಕ್ತರು ಜಟ್ಟಿಗದೇವರೆಂದು ಹೇಳುತ್ತಾರೆ ಎಂದು 1975ರಲ್ಲಿ ಈ ದ್ವೀಪಕ್ಕೆ ಭೇಟಿ ಕೊಟ್ಟ ಹೂಮ್ ತನ್ನ ಪ್ರವಾಸ ಸಾಹಿತ್ಯದಲ್ಲಿ ತಿಳಿಸಿದ್ದಾನೆ. ಹಿಂದೆ ಎಲ್ಲ ಧರ್ಮದವರೂ ಇಲ್ಲಿ ಹರಕೆ ಒಪ್ಪಿಸುತ್ತಿದ್ದರು. ಇಂದಿಗೂ ಇಲ್ಲಿ ಜಟ್ಟಿಗನ ಗುಡಿ, ಮಸೀದಿ, ಚರ್ಚು ಇವೆ. ಹರಕೆ ಹೊತ್ತ ಭಕ್ತಾದಿಗಳು ಕೆಲವೊಮ್ಮೆ ಕೋಳಿ ಮತ್ತು ಕುರಿಗಳನ್ನು ಇಲ್ಲಿಗೆ ತಂದು ದೇವರಿಗೆ ಬಿಡುತ್ತಾರೆ. ಅಂಥ ಪ್ರಾಣಿ ಪಕ್ಷಿಗಳು ಈ ದ್ವೀಪದಲ್ಲಿ ಸಾಕಷ್ಟಿವೆ.

ನೇತ್ರಾಣಿ ಗುಡ್ಡ ಕಡಿದಾಗಿರುವುದರಿಂದ ಅದರ ಸಮೀಪಕ್ಕೆ ಯಾಂತ್ರಿಕ ದೋಣಿ ಹೋಗುವುದಿಲ್ಲ. 100 ಮೀ ದೂರದಲ್ಲಿ ಲಂಗರು ಹಾಕಿದ ದೋಣಿಯಿಂದ ಅಲ್ಲಿಗೆ ಪಾತಿ ದೋಣಿಯಲ್ಲಿ ಹೋಗಬೇಕು. ಗುಡ್ಡೆಯ ಮರಕ್ಕೆ ಕಟ್ಟಿದ ಹಗ್ಗದ ನೆರವಿನಿಂದ ಗುಡ್ಡೆಯನ್ನು ಜನ ಹತ್ತುವುದುಂಟು. ಗೊಂಡರು, ಮೊಗವೀರರು, ಖಾರ್ವಿಗಳು, ನೇತ್ರಾಣಿ ಜಟ್ಟಿಗನ ಭಕ್ತವರ್ಗಕ್ಕೆ ಸೇರಿದವರಾಗಿದ್ದಾರೆ. ಇಲ್ಲಿನ ಎತ್ತರದ ಅಂಕುಡೊಂಕಾದ ಬಂಡೆಗಳ ರಚನೆ ಪಾರಿವಾಳಗಳ ವಾಸಕ್ಕೆ ಅನುಕೂಲಕರವಾಗಿದೆ. ಇಲ್ಲಿ ಪಾರಿವಾಳಸಂಖ್ಯೆ ಅಧಿಕವಿರುವುದರಿಂದ ಪಾಶ್ಚಾತ್ಯರು ಈ ದ್ವೀಪವನ್ನು ಪಿಜನ್ ಐಲೆಂಡ್ ಎಂದು ಕರೆದರಂತೆ. ಹಿಂದೆ ಅಂಜದೀವ್‌ನಿಂದ

ಜನರು ಇಲ್ಲಿಗೆ ಬಂದು ಗೂಡುಗಳನ್ನು ಸಂಗ್ರಹಿಸಿ ಮುಂಬಯಿಗೆ ಕಳುಹಿಸುತ್ತಿದ್ದರು. ಈ ದ್ವೀಪದಲ್ಲಿ ಪಾರಿವಾಳಗಳಲ್ಲದೆ ಇನ್ನಿತರ ಪಕ್ಷಿ ಸಂಕುಲವೂ ಇದೆ. ಪಕ್ಷಿವೀಕ್ಷಣೆಗೆ ಇದೊಂದು ಉತ್ತಮ ತಾಣ. ಇಲ್ಲಿಗೆ ವಿಹಾರಕ್ಕೆ ಹೋಗಿಬರಲು ನವೆಂಬರ್– ಮಾರ್ಚ್ ಅವಧಿ ಸೂಕ್ತಕಾಲ. (ಎಸ್.ಜಿ.ಬಿ.)

**ನೇತ್ರಾವತಿ:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ನದಿ. ಪಶ್ಚಿಮ ಘಟ್ಟದ ಕುದುರೆಮುಖ ಪರ್ವತದಲ್ಲಿ ಹುಟ್ಟಿ, ಬಂಗಾಡಿ ಕಣಿವೆಯ ಮುಖಾಂತರ ಹರಿದು ಉಜಿರೆ, ಧರ್ಮಸ್ಥಳ, ಬೆಳ್ತಂಗಡಿಗಳನ್ನು ದಾಟಿ ಬಂಟ್ವಾಳದ ಮುಖಾಂತರ ಮಂಗಳೂರೆಡೆಗೆ ಸಾಗಿ, ಕೋಡಿಯಾಲದ ಬಳಿ ಅರಬ್ಬೀಸಮುದ್ರವನ್ನು ಸೇರುತ್ತದೆ. ನದಿಯ ಹರಿವಿನ ಒಟ್ಟು ಉದ್ದ 96 ಕಿಮೀ. ಕುಮಾರಧಾರಾ ಮತ್ತು ಗುರುಪುರ ಹೊಳೆಗಳು ಇದರ ಮುಖ್ಯ ಉಪನದಿಗಳು. ಕುಮಾರಧಾರಾ ನೇತ್ರಾವತಿಯ ದಕ್ಷಿಣದಿಂದ ಬಂದು ಉಪ್ಪಿನಂಗಡಿ ಬಳಿ ಸೇರುತ್ತದೆ. ಗುರುಪುರ ಹೊಳೆ ಉತ್ತರದಿಂದ ಬಂದು ಮಂಗಳೂರಿನ ಬಳಿ ಸಂಗಮವಾಗುತ್ತದೆ. ಮುಂಗಾರು ಮಳೆಯ ದಿನಗಳಲ್ಲಿ ನೇತ್ರಾವತಿಯಲ್ಲಿ ಅಧಿಕ ಪ್ರವಾಹ ವಿರುತ್ತದೆ. ನದಿಯ ಮಧ್ಯೆ ಕಲ್ಲುಬಂಡೆಗಳೂ ಮಡುವುಗಳೂ ಇವೆ. ಬಂಟ್ವಾಳದಿಂದ ಮುಂದಕ್ಕೆ ದೋಣಿಗಳ ಸಂಚಾರಕ್ಕೆ ಅನುಕೂಲವಾಗಿವೆ. ಮಂಗಳೂರಿನ ಬಳಿ ನದಿಯ ಪಾತ್ರ ವಿಶಾಲವಾಗಿದ್ದು ಮಧ್ಯೆ ಸಣ್ಣ ದ್ವೀಪಗಳಿವೆ. ಫಲವತ್ತಾಗಿರುವ ಈ ಭಾಗಗಳು ಬತ್ತ, ಕಬ್ಬು ಬೆಳೆಗೆ ಉಪಯುಕ್ತವಾಗಿವೆ. ಉಲ್ಲಾಳದ ಬಳಿ ನೇತ್ರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ರೈಲು ಸೇತುವೆ ದಕ್ಷಿಣ ಭಾರತದ ಬಹು ಉದ್ದವಾದ ರೈಲು ಸೇತುವೆಗಳಲ್ಲಿ ಒಂದು. (ಕೆ.ಬಿ.ಸಿ.)

**ನೇಮಿಚಂದ್ರ[1]:** ಹತ್ತನೆಯ ಶತಮಾನದಲ್ಲಿದ್ದ ಪ್ರಸಿದ್ಧ ಜೈನ ಆಚಾರ್ಯ. ಗೊಮ್ಮಟಸಾರ, ತ್ರಿಲೋಕಸಾರ, ಲಬ್ಧಿಸಾರ ಎಂಬ ಗ್ರಂಥಗಳನ್ನು ಪ್ರಾಕೃತದಲ್ಲಿ ಬರೆದಿದ್ದಾರೆ. ಇವರಿಗೆ ಸಿದ್ಧಾಂತಚಕ್ರವರ್ತಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಅಭಯನಂದಿ ಇವರ ಗುರು.

ಗೊಮ್ಮಟಸಾರ ಷಟ್ಖಂಡಾಗಮದ ಸಾರವನ್ನೊಳಗೊಂಡಿದ್ದು ಕರ್ಮಸಿದ್ಧಾಂತವನ್ನು ಕುರಿತ ಮಹತ್ತ್ವಪೂರ್ಣ ಗ್ರಂಥವಾಗಿದೆ. ಇದನ್ನು ಚಾವುಂಡರಾಯನಿಗಾಗಿ ಬರೆದಂತೆ ತಿಳಿಯುತ್ತದೆ. ಈ ಗ್ರಂಥದ ರಚನೆಯಲ್ಲಿ ಕನಕನಂದಿಯ ಸಹಾಯ ಇವರಿಗೆ ದೊರೆತಂತೆ ತೋರುತ್ತದೆ. ಚಾವುಂಡರಾಯನನ್ನು ಕುರಿತು ಹಲವು ಸಂಗತಿಗಳು ಇದರಿಂದ ಲಭ್ಯವಾಗುತ್ತವೆ. ಅವುಗಳಲ್ಲಿ ಚಾವುಂಡರಾಯ ಗೊಮ್ಮಟೇಶ್ವರ ವಿಗ್ರಹ ಪ್ರತಿಷ್ಠಾಪಿಸಿದ ಸಂಗತಿ ಮುಖ್ಯವಾದುದು. ಈ ಕೃತಿಯನ್ನು ಕುರಿತು ಸಂಸ್ಕೃತದಲ್ಲಿ ಅಭಯಚಂದ್ರ ಮತ್ತು ನೇಮಿಚಂದ್ರ (ಕನ್ನಡ ಟೀಕೆಯ ಆಧಾರದಿಂದ ಬರೆದದ್ದು), ಕನ್ನಡದಲ್ಲಿ ಕೇಶವವರ್ಣಿ ಇವರು ವಿಸ್ತೃತ ಟೀಕೆಗಳನ್ನು ಬರೆದಿದ್ದಾರೆ. (ಎ.ಎನ್.ಯು.)

**ನೇಮಿಚಂದ್ರ[2]:** ಸು. 12ನೆಯ ಶತಮಾನ. ಜೈನಕವಿ. ಲೀಲಾವತೀ ಮಹಾಪ್ರಬಂಧಂ ಮತ್ತು ನೇಮಿನಾಥ ಪುರಾಣಂ ಎಂಬ ಚಂಪೂಕಾವ್ಯಗಳನ್ನು ರಚಿಸಿ ಪ್ರಸಿದ್ಧನಾಗಿದ್ದಾನೆ. ಈತ ಲೀಲಾವತೀಕಾವ್ಯದಲ್ಲಿ ಲಕ್ಷ್ಮಣರಾಜ (ಸೌಂದತ್ತಿಯ ರಟ್ಟವಂಶದ ರಾಜ ಸು.1190) ಮತ್ತು ಚಂದಲದೇವಿಯರನ್ನು ಕೊಂಡಾಡಿದ್ದಾನೆ. ನೇಮಿನಾಥ ಪುರಾಣದಲ್ಲಿ ವೀರಬಲ್ಲಾಳನ (1173–1220) ಮಂತ್ರಿ ಸೆಜ್ಜೆವಳ ಪದ್ಮನಾಭನನ್ನು ಹೊಗಳಿ ಅವನ ಹಾಗೆಯೇ ಹೊಯ್ಸಳ ಆಶ್ರಯದಲ್ಲಿದ್ದಂತೆ ಹೇಳಿಕೊಂಡಿದ್ದಾನೆ. ಲಕ್ಷ್ಮಣರಾಜನ ಆಶ್ರಿತನಾಗಿದ್ದುಕೊಂಡು ತನ್ನ ಪ್ರೌಢಕಾವ್ಯವಾದ ಲೀಲಾವತೀಮಹಾಪ್ರಬಂಧವನ್ನೂ ಹೊಯ್ಸಳ ರಾಜ ಪದ್ಮನಾಭನ ಆಶ್ರಯದಲ್ಲಿದ್ದುಕೊಂಡು ನೇಮಿನಾಥಪುರಾಣವನ್ನೂ ರಚಿಸಿದನೆಂದು ತಿಳಿಯಬಹುದು. ನೇಮಿಚಂದ್ರ ತನಗಿಂತ ಮುಂಚೆ ಕೃತಿರಚನೆ ಮಾಡಿದ ಯಾವ ಕನ್ನಡ ಕವಿಯನ್ನೂ ಸ್ಮರಿಸಿಲ್ಲ. ಮಧುರಕವಿ ನೇಮಿಚಂದ್ರನನ್ನು ಹೊಗಳುತ್ತ ನೇಮಿಜನ್ನಮರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ ಎಂದು ನುಡಿದಿದ್ದಾನೆ.

ನೇಮಿಚಂದ್ರ ಬಹಳ ಆತ್ಮಾಭಿಮಾನವುಳ್ಳ ಕವಿ. ಇವನು ಧರಿಸಿದ ಬಿರುದುಗಳಿಗೆ ಲೆಕ್ಕವಿಲ್ಲ. ಭಾರತೀಚಿತ್ತಚೋರ, ಸಾಹಿತ್ಯ ವಿದ್ಯಾಧರ, ಚತುರ್ಭಾಷಾ ಚಕ್ರವರ್ತಿ, ಕವಿರಾಜಕುಂಜರ, ಸುಕರಕವಿಶೇಖರ ಎಂಬೀ ಹೆಸರುಗಳೇ ಕವಿಗೆ ಪಾಂಡಿತ್ಯದ ಪ್ರತಿಭೆಯ ಹೆಮ್ಮೆ ವಿಶೇಷವಾಗಿದ್ದಿತೆಂಬುದನ್ನು ಸೂಚಿಸುತ್ತವೆ. ಇವನು ತನ್ನ ಕವಿತೆಯ ಮೇಲ್ಮೆಯನ್ನೂ ಪಾಂಡಿತ್ಯಪ್ರತಾಪವನ್ನೂ ಯಾವ ಬಗೆಯ ಸಂಕೋಚವೂ ಇಲ್ಲದೆ ಹೊಗಳಿಕೊಂಡಿದ್ದಾನೆ.

ಲೀಲಾವತೀಪ್ರಬಂಧ ಹದಿನಾಲ್ಕು ಆಶ್ವಾಸಗಳುಳ್ಳ ಪ್ರೌಢಚಂಪೂಕಾವ್ಯ. ತಾನು ಈ ಕಾವ್ಯದಲ್ಲಿ ಶೃಂಗಾರವನ್ನು ಸೆರೆಹಿಡಿದಿಟ್ಟಿರುವಂತೆ ಹೇಳಿಕೊಂಡಿದ್ದಾನೆ. ಆದ್ದರಿಂದಲೇ ಇವನಿಗೆ ಶೃಂಗಾರಕಾರಾಗೃಹ ಎಂಬ ಬಿರುದು ಬಂತೆಂದು ತೋರುತ್ತದೆ. ಈ ದೊಡ್ಡ ಕಾವ್ಯವನ್ನು ಒಂದೇ ವರ್ಷದಲ್ಲಿ ಬರೆದು ಮುಗಿಸಿದನಂತೆ. ಕಾವ್ಯದಲ್ಲಿರುವ ಕಥೆ ಸ್ವಲ್ಪ; ವರ್ಣನೆಯೇ ಅಪಾರವಾಗಿ ಬೆಳೆದಿದೆ. ಕಂದರ್ಪದೇವನೆಂಬ ಒಬ್ಬ ರಾಜಕುಮಾರ ಒಂದು ರಾತ್ರಿ ಕನಸಿನಲ್ಲಿ ಮಹಾಸುಂದರಿಯಾದ ತರುಣಿಯೊಬ್ಬಳನ್ನು ಕಂಡು ಅವಳನ್ನು ಮೆಚ್ಚಿ ಮೋಹಿಸಿದ. ಮಾರನೆಯ ದಿನ ಬೆಳಗ್ಗೆ ತನ್ನ ಕನಸಿನ ಸುಂದರಿ ಎಲ್ಲಿರುವಳೋ ಎಂದು ಹುಡುಕಲು ನಿರ್ಧರಿಸಿ ತನ್ನ ಸ್ನೇಹಿತನಾದ ಮಂತ್ರಿಪುತ್ರ ಮಕರಂದವನ್ನೂ ಜತೆಯಲ್ಲಿ ಕರೆದುಕೊಂಡು ಪ್ರಯಾಣ ಹೊರಟ. ಕುಸುಮಪುರದ ಅರಸು ಶೃಂಗಾರ ಶೇಖರನ ಮಗಳು ಲೀಲಾವತಿ ಕನಸಿನಲ್ಲಿ ಸುಂದರ ಪುರುಷನೊಬ್ಬನನ್ನು ಕಂಡು ಮೋಹಿಸಿ ಅವನನ್ನು ಹುಡುಕಲು ಜನರನ್ನು ಅಟ್ಟಿದಳು. ಕೊನೆಗೆ ಇವರಿಬ್ಬರೂ ಸಂಧಿಸಿ ಪರಸ್ಪರ ಒಲಿದು ಮದುವೆಯಾದರು. ಕಂದರ್ಪದೇವ ಲೀಲಾವತೀ ಸಮೇತನಾಗಿ ಬನವಾಸಿಗೆ ಬಂದು ಸುಖವಾಗಿ ರಾಜ್ಯವಾಳಿದ. ಈ ಚಿಕ್ಕ ಕಥೆಯ ಹಂದರದ ಮೇಲೆ ನೇಮಿಚಂದ್ರ ಅನೇಕ ಸನ್ನಿವೇಶಗಳನ್ನು ಸೃಷ್ಟಿಸಿ ಶೃಂಗಾರರಸಪ್ರತಿಪಾದನೆಗೆ ಬೇಕಾದಷ್ಟು ಅವಕಾಶವನ್ನು ಕಲ್ಪಿಸಿಕೊಂಡಿದ್ದಾನೆ. ಸ್ವಪ್ನಸಂದರ್ಶನದಿಂದಲೇ ಮನಸ್ಸಿನಲ್ಲಿ ಮೊಳೆತ ಮೆಚ್ಚಿಗೆಯ ಮೋಹ ಬಲಿತು ಪ್ರೇಮಿಗಳು ಪರಸ್ಪರ ಸಂದರ್ಶನಕ್ಕೆ ಹಂಬಲಿಸಿ ಕಾತರರಾಗಿ ಅನ್ವೇಷಣೆ ನಡೆಸಿದ ವೃತ್ತಾಂತ, ನಾಯಕನಾಯಕಿಯರ ಪರಸ್ಪರ ಸಂದರ್ಶನ, ಸಮ್ಮೋಹಸಮಾಗಮಗಳ ಕಥೆ ಶೃಂಗಾರರಸಪ್ರತಿಪಾದನೆಗೆ ಹಲವು ಸಂದರ್ಭಗಳನ್ನು ಒದಗಿಸಿವೆ. ಆದರೆ ನೇಮಿಚಂದ್ರ ಪ್ರೇಮಿಗಳ ಮನೋವೃತ್ತಿಯ ನಾನಾ ಅವಸ್ಥೆಗಳನ್ನು ಬಣ್ಣಿಸುವ ಭರದಲ್ಲಿ ಅನೇಕ ಕಡೆ ಲಜ್ಜೆ, ಸಂಕೋಚ ಮತ್ತು ಗಾಂಭೀರ್ಯಗಳನ್ನು ಮರೆತಿದ್ದಾನೆ. ಇವನ ಒಲವು ಹೆಚ್ಚಾಗಿ ಆಂಗಿಕ ಶೃಂಗಾರ ನಿರೂಪಣೆಯ ಕಡೆಗೇ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಹಲವು ಸಂದರ್ಭಗಳಲ್ಲಿ ಇವನ ಶೃಂಗಾರ ನಿರೂಪಣೆ ಸುಸಂಸ್ಕೃತರಾದ ವಾಚಕರಿಗೆ ಬೇಸರವನ್ನೇ ತರಿಸುವಂತಿದೆ ಎಂಬ ಅಭಿಪ್ರಾಯವೂ ಇದೆ.

ಈ ಕಾವ್ಯ ಬಾಣಭಟ್ಟನ ಕಾದಂಬರಿಯನ್ನೂ ಮೀರಿಸಿದೆಯೆಂದು ಕೆಲವರು ಹೇಳುವುದುಂಟು. ಕಾದಂಬರೀಕಾವ್ಯವನ್ನು ಸುಟ್ಟು ಲೀಲಾವತಿಗೆ ತಿಲಕವಿಟ್ಟು ಆನೆಯ ಮೇಲೆ ಮೆರವಣಿಗೆ ಮಾಡಲಾಯಿತೆಂಬ ಕಥೆ ಅನಂತರದ ಕೆಲವು ಕನ್ನಡ ಕೃತಿಗಳಲ್ಲಿ ಪ್ರಸ್ತಾಪಿತವಾಗಿದೆಯಾದರೂ ಇದು ದಂತಕಥೆಯೆನ್ನಬಹುದು. ಆದರೆ ಕಾದಂಬರಿಯ ಔನ್ನತ್ಯಗಾಂಭೀರ್ಯಗಳು ಇಲ್ಲಿ ಕಾಣಿಸುವುದಿಲ್ಲ. ನೇಮಿಚಂದ್ರ ಮಹಾಪಂಡಿತ, ಇವನಿಗೆ

ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಆಳವಾದ ಪಾಂಡಿತ್ಯವಿದೆ. ಕನ್ನಡ ಭಾಷೆ ಇವನಿಗೆ ವಶವಾಗಿದೆ. ಇವನ ಭಾಷಾ ಪ್ರಭುತ್ವ ಯಾರನ್ನಾದರೂ ಬೆರಗುಗೊಳಿಸುತ್ತದೆ. ಇವನ ಶಬ್ದಭಂಡಾರ ವಿಪುಲವಾದದ್ದು. ನಿಘಂಟುಗಳಲ್ಲಿ ದೊರೆಯದ ಅನೇಕ ಅಪರೂಪ ಶಬ್ದಗಳು ಕೃತಿಯಲ್ಲಿ ಹೇರಳವಾಗಿ ಸಿಕ್ಕುತ್ತವೆ. ಕವಿಯ ವರ್ಣನಾವೈಭವದಲ್ಲಿ ಹಲವು ಸಲ ವಾಚಕರು ಕತೆಯ ಸನ್ನಿವೇಶವನ್ನೇ ಮರೆತುಹೋಗುವ ಸಂದರ್ಭಗಳೂ ಉಂಟು. ಆದರೆ ಆ ವರ್ಣನೆಗಳಲ್ಲಿಯೂ ಸಹಜತೆ ಕಡಿಮೆ. ಕೃತಕವೂ ಚಮತ್ಕಾರಯುಕ್ತವೂ ಆದ ಉಪಮಾರೂಪಕಾದಿ ಅಲಂಕಾರಗಳು ಈತನ ಕೃತಿಯಲ್ಲಿ ಹೇರಳವಾಗಿ ಸಿಕ್ಕುತ್ತವೆ.

ಲೀಲಾವತೀಪ್ರಬಂಧ ಬಹಳ ಮಟ್ಟಿಗೆ ಸುಬಂಧು ಕವಿಯ ವಾಸವದತ್ತಾ ಕೃತಿಯ ಕಥೆಯನ್ನು ಹೋಲುತ್ತದೆ. ಅದರ ಆಧಾರದ ಮೇಲೆಯೇ ನೇಮಿಚಂದ್ರ ಈ ಕೃತಿಯನ್ನು ಕಟ್ಟಿರುವಂತೆ ತೋರುತ್ತದೆ. ಆದರೆ ಕಥೆಯಲ್ಲಿ ಒಂದೆರಡು ಮಾರ್ಪಾಟುಗಳನ್ನು ಮಾಡಿದ್ದಾನೆ. ಪಾತ್ರಗಳ ಹೆಸರುಗಳನ್ನೂ ಕೆಲವು ಕಡೆ ವ್ಯತ್ಯಾಸ ಮಾಡಿದ್ದಾನೆ. ಅಲ್ಲದೆ ಸುಬಂಧುವಿನ ಕೃತಿಯಲ್ಲಿ ಇಲ್ಲದ ಜೈನಮತದ ಆವರಣವನ್ನು ಇಲ್ಲಿ ಕವಿ ಕಲ್ಪಿಸಿದ್ದಾನೆ. ಆದರೆ ಈ ಕೃತಿಯಲ್ಲಿ ನೈಜವಾದ ಪಾತ್ರಚಿತ್ರಣವಾಗಲಿ ಹೃದಯಾಹ್ಲಾದಕಾರಿಯಾದ ಸನ್ನಿವೇಶ ವರ್ಣನೆಯಾಗಲಿ ವಿಶೇಷವಾಗಿ ಕಾಣಿಸುವುದಿಲ್ಲ. ನೇಮಿಚಂದ್ರ ಲೀಲಾವತಿಯಂಥ ಪ್ರಣಯ ವೃತ್ತಾಂತವನ್ನು ತನ್ನ ಕಾವ್ಯವಸ್ತುವಾಗಿ ಆರಿಸಿಕೊಳ್ಳದೆ ಯಾವುದಾದರೊಂದು ಇತಿಹಾಸ ಕಥೆಯನ್ನೋ ಒಂದು ಜಿನೇಂದ್ರಚರಿತ್ರೆಯನ್ನೋ ವಸ್ತುವಾಗಿ ತೆಗೆದು ಕೊಂಡಿದ್ದರೆ ಇವನ ಪಾಂಡಿತ್ಯಪ್ರತಿಭೆಗಳಿಗೆ ಹೆಚ್ಚಿನ ಶೋಭೆ ಬರುತ್ತಿದ್ದಿತೆಂದು ಹೇಳಬಹುದು.

ನೇಮಿನಾಥಪುರಾಣ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿಜಿನೇಶ್ವರನ ಪುಣ್ಯಚರಿತ್ರೆ. ಇದರಲ್ಲಿ ಎಂಟು ಆಶ್ವಾಸಗಳಿವೆ. ಈ ಕಾವ್ಯದಲ್ಲಿ ಕೌರವ ಪಾಂಡವರ ಕಥೆ, ಶ್ರೀಕೃಷ್ಣಚರಿತ್ರೆ ಮತ್ತು ನೇಮಿಜಿನೇಶ್ವರನ ಕಥೆ–ಈ ಮೂರನ್ನೂ ಸೇರಿಸಿ ಹೇಳಲು ಹೊರಟು ಕೃಷ್ಣ ಕಂಸನನ್ನು ಕೊಂದ ವೃತ್ತಾಂತವನ್ನು ಹೇಳಿ ಮುಗಿಸುವ ಸಂದರ್ಭಕ್ಕೆ ಕಾವ್ಯ ನಿಂತುಹೋಗಿದೆ. ಇದರಲ್ಲಿ ಇವನು ಹೇಳಬಯಸಿದ ಮೂರು ಕಥೆಗಳಲ್ಲಿ ಯಾವುದೂ ಪೂರ್ಣವಾಗದೆ ಅರ್ಧದಲ್ಲಿಯೇ ನಿಂತುಹೋಗಿದೆ. ಆ ಕಾರಣದಿಂದಲೇ ಈ ಕೃತಿಗೆ ಅರ್ಧನೇಮಿ ಪುರಾಣವೆಂಬ ಹೆಸರು ಪ್ರಚಾರದಲ್ಲಿದೆ. ಆದ್ದರಿಂದ ಬಹುಶಃ ನೇಮಿಚಂದ್ರ ಈ ಕೃತಿಯನ್ನು ಪೂರ್ಣ ಮಾಡದೆಯೇ ಮರಣ ಹೊಂದಿರಬಹುದೆಂದು ತೋರುತ್ತದೆ. ಸೂಕ್ತಿಸುಧಾರ್ಣವ, ಕಾವ್ಯಸಾರ ಎಂಬ ಸಂಕಲನ ಗ್ರಂಥಗಳಲ್ಲಿ ನೇಮಿನಾಥಪುರಾಣದ ಪದ್ಯಗಳು ಉದ್ಧೃತವಾಗಿವೆ.

ಸಾಧಾರಣವಾಗಿ ಜೈನಪುರಾಣಗಳಲ್ಲಿ ದೀರ್ಘವಾಗಿರುವ ಕಥಾನಾಯಕನ ಭವಾವಳಿಯ ಕಥನ ಅರ್ಧನೇಮಿ ಪುರಾಣದಲ್ಲಿ ಬಹಳ ಸಂಕ್ಷೇಪವೂ ರಮ್ಯವೂ ಆಗಿದೆ. ವಿಂಧ್ಯಕಗಿವಾಗುರೆಯರ ವೃತ್ತಾಂತ, ಇಭ್ಯಕೇತುವಿನ ಕಥೆ– ಇವು ನೇಮಿಚಂದ್ರನಿಗೆ ಆಧಾರವಾದ ಜಿನಸೇನ ಗುಣಭದ್ರರ ಕೃತಿಗಳಲ್ಲಿಯೂ ಕಾಣಿಸುವುದಿಲ್ಲ. ನೇಮಿಚಂದ್ರ ಮೂಲಕಥೆಯನ್ನು ಸಂಗ್ರಹಿಸಿ ಹೇಳುತ್ತಾ ಕೆಲವು ಹೊಸ ಕಥೆಗಳನ್ನು ಸೇರಿಸಿದ್ದಾನೆ. ಇವುಗಳನ್ನು ಕವಿ ಬೇರೆ ಯಾವ ಗ್ರಂಥದಿಂದ ಆರಿಸಿಕೊಂಡನೋ ತಿಳಿಯದು.

ನೇಮಿನಾಥಪುರಾಣದಲ್ಲಿ ಹಲವಾರು ಕಥೆಗಳನ್ನು ಜೋಡಿಸಿರುವುದ ರಿಂದ ಇಲ್ಲಿ ವಸ್ತ್ವೈಕ್ಯವಿಲ್ಲ; ಕಥಾರಚನೆಯಲ್ಲಿ ಏಕಸೂತ್ರತೆ ಇಲ್ಲ. ಆದರೆ ಹೇಳಿರುವ ಬಿಡಿ ಕಥೆಗಳು, ವರ್ಣಿಸಿರುವ ಹಲವು ಸನ್ನಿವೇಶಗಳು ಬಹಳ ಸುಂದರವಾಗಿವೆ. ಈ ಕಥೆಗಳನ್ನು ಜೋಡಿಸಿರುವುದರಲ್ಲಿ ಕವಿ ತನ್ನ ಕಲಾವಂತಿಕೆಯನ್ನು ಚೆನ್ನಾಗಿ ತೋರಿಸಿಕೊಂಡಿದ್ದಾನೆ. ಇವನ ಕವಿತ್ವವೈಭವ ಲೀಲಾವತಿಗಿಂತ ಈ ಕೃತಿಯಲ್ಲಿ ಚೆನ್ನಾಗಿ ಪ್ರಕಾಶವಾಗಿದೆ. ವಾಮನಾವತಾರದ ಕಥೆಯನ್ನು ಕವಿ ಬಹಳ ರಸವತ್ತಾಗಿ, ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ್ದಾನೆ. ಚಾಣೂರ ಕೃಷ್ಣರ ಮಲ್ಲಯುದ್ಧವನ್ನು ಮನದುಂಬುವಂತೆ ವರ್ಣಿಸಿದ್ದಾನೆ. ಈ ಸನ್ನಿವೇಶಗಳನ್ನು ಚಿತ್ರಿಸುವಾಗ ಪಂಪನಿಂದ ಪ್ರಭಾವಿತನಾಗಿರುವಂತೆ ತೋರುತ್ತದೆ. ಶ್ರೀಕೃಷ್ಣನ ವಿಶ್ವರೂಪದರ್ಶನ ವೃತ್ತಾಂತವನ್ನು ಪಂಪ ಬಹಳ ಸೂಕ್ಷ್ಮವಾಗಿ ಹೇಳಿ ಮುಗಿಸಿದ್ದರೆ ನೇಮಿಚಂದ್ರ ಅದನ್ನು ವಾಮನಾವತಾರ ಕಥೆಯಲ್ಲಿ ವಿಸ್ತಾರವಾಗಿ ಹೇಳಿದ್ದಾನೆ. ಭೀಮ ಜರಾಸಂಧರ ಯುದ್ಧ, ಭೀಮ ಕೀಚಕರ ಮಲ್ಲಯುದ್ಧದ ವರ್ಣನೆ, ನೇಮಿಚಂದ್ರಕವಿಯ ಮನೋನೇತ್ರದೆದುರಿಗಿ ದ್ದಂತೆ ತೋರುತ್ತದೆ. ಚಾಣೂರ ಕೃಷ್ಣರ ಮಲ್ಲಯುದ್ಧವನ್ನು ಬಣ್ಣಿಸುವಾಗ, ಈ ಸನ್ನಿವೇಶ ನಿರೂಪಣೆಗೆ ತೊಡಗಿದಾಗ ನೇಮಿಚಂದ್ರ ತನ್ನ ಪಾಂಡಿತ್ಯವನ್ನು ಮರೆತು ಕವಿತಾ ಪ್ರತಿಭೆಯನ್ನೇ ಮೆರೆಸಿದ್ದಾನೆ. ಈ ಸನ್ನಿವೇಶ ಮಾತಿನಲ್ಲಿ ಮೂಡಿಬಂದ ಉತ್ತಮ ವರ್ಣಚಿತ್ರದಂತೆ ಶೋಭಿಸುತ್ತದೆ. ಇಲ್ಲಿ ಕವಿಯ ಮಾತುಗಾರಿಕೆ ಮತ್ತು ಸಹಜವರ್ಣನೆಗಳು ಯಾರೇ ಆದರೂ ಮೆಚ್ಚಿಕೊಳ್ಳುವಂತಿವೆ. ಕನ್ನಡ ಕವಿಗಳು ನೇಮಿನಾಥ ಪುರಾಣವನ್ನು ಹಾರ್ದಿಕವಾಗಿ ಮೆಚ್ಚಿಕೊಂಡು ರಸವೋ ರಸಾಯನವೋ ಕೃತಿವಸಂತವೋ ಕಿವಿಗಳಮೃತವೋ ಎಂದು ಬಹುವಾಗಿ ಹೊಗಳಿದ್ದಾರೆ. ಪಾಂಡಿತ್ಯ ಪ್ರತಿಭೆ ಶೈಲಿ ವರ್ಣನಾನೈಪುಣ್ಯ ಅಭಿರುಚಿ ಕಥನಕೌಶಲ– ಈ ಎಲ್ಲವನ್ನೂ ಗಮನಿಸಿದರೆ ನೇಮಿಚಂದ್ರನನ್ನು ಪಂಪ, ಕುಮಾರವ್ಯಾಸರ ಅಗ್ರಪಂಕ್ತಿಗೆ ಸೇರಿಸಲಾಗದಿದ್ದರೂ ದ್ವಿತೀಯ ಸ್ತರದ ಕವಿಗಳ ಸಾಲಿನಲ್ಲಿ ಮಾನ್ಯ ಸ್ಥಾನವನ್ನು ನೀಡಬಹುದಾಗಿದೆ. **(ಕೆ.ವಿ.ಇ.)**

**ನೊಣವಿನಕೆರೆ:** ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿ ತಿಪಟೂರಿನಿಂದ ಆಗ್ನೇಯಕ್ಕೆ ಸು. 13 ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 4,658. ಶಾಸನಗಳಲ್ಲಿ ನೊಣಬನಕೆರೆ ಎಂದು ಉಲ್ಲೇಖ ಗೊಂಡಿರುವ ಈ ಊರಿನ ಬಳಿ ವಿಶಾಲವಾದ ದೊಡ್ಡ ಕೆರೆಯೊಂದು ಇದೆ. ಕೆರೆ ಬಹುಶಃ ನೊಳಂಬ ರಾಜನೊಬ್ಬನಿಂದ ನಿರ್ಮಿತವಾಗಿದ್ದು ಅದೇ ಊರಿನ ಹೆಸರಿಗೆ ಕಾರಣವಾಗಿರಬಹುದು. ವಾಸ್ತುಶಿಲ್ಪ ಹಾಗೂ ಕಲೆಯ ದೃಷ್ಟಿಯಿಂದ ಪ್ರಮುಖವೆನಿಸಿದ ಕೆಲವು ಶೈವ ಹಾಗೂ ವೈಷ್ಣವ ದೇವಾಲಯಗಳು ಈ ಊರಿನಲ್ಲಿವೆ. ಸುಮಾರು ಹತ್ತನೆಯ ಶತಮಾನದ ನೊಳಂಬರ ಕಾಲದ ನೊಣಬೇಶ್ವರ, ಶಾಂತೇಶ್ವರ, ಗರಿಗೇಶ್ವರ, ಚೋಳೇಶ್ವರ ಹಾಗೂ ಕಲ್ಲೇಶ್ವರ ಎಂಬ ಐದು ಶಿವದೇವಾಲಯಗಳಿವೆ. ಆದರೆ ಹೆಚ್ಚು ಪ್ರಸಿದ್ಧವಾದ ದೇವಾಲಯಗಳೆಂದರೆ ಹೊಯ್ಸಳ ಕಾಲದ ವೇಣುಗೋಪಾಲ ಅಥವಾ ಗೋಪಾಲಸ್ವಾಮಿ ದೇವಾಲಯ ಹಾಗೂ ವಿಜಯನಗರ ಕಾಲಕ್ಕೆ ಸೇರುವ ಬ್ಯಾಟರಾಯ ದೇವಾಲಯ.

ನೊಣಬೇಶ್ವರ ಹಾಗೂ ಗರಿಗೇಶ್ವರ ದೇವಾಲಯಗಳು ತುರುವೇಕೆರೆಗೆ ಹೋಗುವ ಮಾರ್ಗದ ಪಕ್ಕದಲ್ಲಿ ದಿಬ್ಬದ ಮೇಲಿವೆ. ನೊಣಬೇಶ್ವರನ ಗುಡಿ ಒಂದು ಚಿಕ್ಕಕಟ್ಟಡ. ಮೂಲತಃ ಕಗ್ಗಲ್ಲಿನಿಂದ ನಿರ್ಮಿತವಾಗಿದ್ದು ಹತ್ತೊಂಬತ್ತನೆಯ ಶತಮಾನದಲ್ಲಿ ಜೀರ್ಣೋದ್ಧಾರ ಮಾಡಿದಾಗ ಇಟ್ಟಿಗೆಯ ಗೋಡೆಗಳನ್ನು ನಿರ್ಮಿಸಲಾಗಿದೆ. ಚಿಕ್ಕ ಗರ್ಭಗೃಹ, ತೆರೆದ ಸುಕನಾಸಿ ಹಾಗೂ ನವರಂಗಗಳಿವೆ. ಇಲ್ಲಿನ ಲಿಂಗ ಮಧ್ಯಮ ಗಾತ್ರದ್ದಾಗಿದ್ದು ಮೇಲ್ಭಾಗ ಚಪ್ಪಟೆಯಾಗಿದೆ. ಸುಕನಾಸಿ ಹಾಗೂ ನವರಂಗದ ಕಂಬಗಳು ಚತುರಸ್ರ ಮತ್ತು ಅಷ್ಟಕೋನಗಳಿಂದ ಕೂಡಿದ್ದು ಗಂಟೆಯಾಕಾರದ ಕಂಠದ ಮೇಲೆ ಚಿತ್ರಗಳನ್ನು ಹೊಂದಿವೆ. ನವರಂಗದ ಭುವನೇಶ್ವರಿಯಲ್ಲಿ ಒಂಬತ್ತು ಫಲಕಗಳಿದ್ದು ಮಧ್ಯದಲ್ಲಿ ಪದ್ಮವನ್ನು

ಬಿಡಿಸಿದೆ. ನವರಂಗದ್ವಾರದ ಎರಡೂ ಪಾರ್ಶ್ವಗಳಲ್ಲಿ ಅಷ್ಟಕೋನದ ಅರೆಗಂಬ, ಲಾಳಾಕೃತಿಯ ಕೀರ್ತಿಮುಖ ಹಾಗೂ ಲತಾಪಟ್ಟಿಕೆಗಳಿವೆ. ಕಪೋತದ ಮೇಲೂ ಇದೇ ಬಗೆಯ ಕೀರ್ತಿಮುಖಗಳಿವೆ. ನೊಣಬೇಶ್ವರ ದೇವಾಲಯಕ್ಕೆ ಉತ್ತರದಲ್ಲಿರುವ ಗರಿಗೇಶ್ವರ ಅದೇ ಬಗೆಯ ದ್ವಾರ ಹಾಗೂ ಕಂಬಗಳಿಂದ ಕೂಡಿದೆ. ಮೂಲತಃ ಇವೆರಡೂ ಅವಳಿ ದೇವಾಲಯಗಳಾಗಿದ್ದವೆಂದು ಹೇಳಬಹುದು. ಇವೆರಡೂ ದೇವಾಲಯಗಳ ನಡುವೆ ಚಿಕ್ಕ ವೇದಿಕೆಯೊಂದರ ಬಳಿ ಸಪ್ತಮಾತೃಕೆ ವಿಗ್ರಹಗಳಿದ್ದುವು (ಈಗ ಇವನ್ನು ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯ ದಲ್ಲಿಡಲಾಗಿದೆ).

ಗರಿಗೇಶ್ವರ ದೇವಾಲಯದ ಹಿಂದೆ ಅನತಿದೂರದಲ್ಲೇ ಶಾಂತೇಶ್ವರ ದೇವಾಲಯವಿದೆ. ಇದು ಮೇಲಿನ ಎರಡು ದೇವಾಲಯಗಳಂತಿದ್ದರೂ ತೆರೆದ ಸುಕನಾಸಿ ಹಾಗೂ ಹೆಚ್ಚು ಅಲಂಕೃತ ಕಂಬಗಳಿಂದ ಕೂಡಿದೆ. ನವರಂಗದಲ್ಲಿ ವಿಶಿಷ್ಟ ರೀತಿಯಲ್ಲಿ ಅಲಂಕೃತವಾದ ಪ್ರಾಚೀನ ನಂದಿ ವಿಗ್ರಹವಿದೆ. ಕೆರೆಯ ಉತ್ತರ ತೂಬಿನ ಪೂರ್ವಕ್ಕಿರುವ ಕಲ್ಲೇಶ್ವರ ದೇವಾಲಯ ಚಿಕ್ಕ ಗರ್ಭಗೃಹ ತೆರೆದ ಸುಕನಾಸಿ ಹಾಗೂ ನವರಂಗಗಳನ್ನು ಹೊಂದಿದೆ. ಸು. 11ನೆಯ ಶತಮಾನಕ್ಕೆ ಸೇರುವ ಈ ದೇವಾಲಯದ ಮೂಲಗೋಡೆಗಳು ಚೋಳಕಾಲದಲ್ಲಿ ಇಟ್ಟಿಗೆಗಳಿಂದ ರಚಿತವಾಗಿದ್ದಿರ ಬೇಕು. ಹೆಚ್ಚು ಕಡಿಮೆ ಮೇಲೆ ಹೇಳಿದ ಇತರ ದೇವಾಲಯಗಳಂತೆಯೇ ನಿರ್ಮಿತವಾಗಿರುವ ಚೋಳೇಶ್ವರ ದೇವಾಲಯ ಊರ ಮಧ್ಯದಲ್ಲಿ ವೇಣುಗೋಪಾಲ ದೇವಾಲಯಕ್ಕೆ ದಕ್ಷಿಣದಲ್ಲಿ ನಿಂತಿದೆ.

ಹೊಯ್ಸಳರ ಕಾಲದ ವೇಣುಗೋಪಾಲ ಅಥವಾ ಗೋಪಾಲಸ್ವಾಮಿ ದೇವಾಲಯ ತ್ರಿಕೂಟಾಚಲ. ಒಳಗಿನ ನವರಂಗ, ಪಶ್ಚಿಮದ ಸುಕನಾಸಿ, ಮೂರು ಗರ್ಭಗೃಹಗಳು ಹಾಗೂ ಗೋಪುರವಿಲ್ಲದ ಮಹಾದ್ವಾರ – ಇವು ಹೊಯ್ಸಳ ಕಾಲದ ರಚನೆಗಳು. ಮುಖಮಂಟಪ, ಹದಿನಾರು ಕೋನದ ಅರೆಗೋಳವಿಯಾಕಾರದ ದಿಂಡಿನ ಆರು ಕಂಬಗಳಿಂದ ಕೂಡಿದ ಹೊರನವರಂಗಗಳು, ಅನಂತರ ಕಾಲಕ್ಕೆ ಅಂದರೆ ಬಹುಶಃ ವಿಜಯನಗರ ಕಾಲಕ್ಕೆ ಸೇರುತ್ತವೆ. ದಕ್ಷಿಣ ಗರ್ಭಗೃಹದಲ್ಲಿ ವೇಣುಗೋಪಾಲ, ಉತ್ತರ ದಲ್ಲಿ ಯೋಗಾನರಸಿಂಹ ಹಾಗೂ ಪಶ್ಚಿಮದಲ್ಲಿ ಜನಾರ್ದನ ವಿಗ್ರಹಗಳು ಇವೆ. ಇವು ಹೊಯ್ಸಳ ಶಿಲ್ಪಗಳು. ಜನಾರ್ದನ ವಿಗ್ರಹ ಸ್ವಲ್ಪ ಭಿನ್ನವಾಗಿದೆ. ವಿಜಯನಗರದ ಕಾಲಕ್ಕೆ ಸೇರುವ ವಿಶ್ವಕ್ಸೇನ ಹಾಗೂ ವೈಷ್ಣವ ವಿಗ್ರಹಗಳು ಈ ದೇವಾಲಯದಲ್ಲಿವೆ. ಲೋಹದ ಜನಾರ್ದನ ಮೂರ್ತಿಗಳು ತುಂಬ ಸುಂದರವಾಗಿದ್ದು ಇವು ವಿಜಯನಗರ ಕಾಲದ ರಚನೆಗಳಾಗಿವೆ.

ಬ್ಯಾಟರಾಯ ದೇವಾಲಯ ಸು. 16ನೆಯ ಶತಮಾನದಲ್ಲಿ ಕೋನೇರಿ ಅಯ್ಯಂಗಾರ್ ಎಂಬುವರಿಂದ ನಿರ್ಮಿತವಾಯಿತೆಂದು ತಿಳಿದುಬರುತ್ತದೆ. ಈ ದೇವಸ್ಥಾನದ ನವರಂಗದ ಕಂಬವೊಂದರ ಮೇಲೆ ಗಡ್ಡಬಿಟ್ಟು ಟೋಪಿಯನ್ನು ಹಾಕಿಕೊಂಡು ಕೈಮುಗಿದುಕೊಂಡಿರುವ ಪುರುಷವಿಗ್ರಹವೇ ಕೋನೇರಿ ಅಯ್ಯಂಗಾರರ ಚಿತ್ರವೆಂದು ಹೇಳುತ್ತಾರೆ. ದೇವಾಲಯದಲ್ಲಿ ಗೋಪುರವಿಲ್ಲದ ಮಹಾದ್ವಾರ, ಗರ್ಭಗೃಹ, ಸುಕನಾಸಿ ಮತ್ತು ನವರಂಗಮಂಟಪ ಇವೆ. ಇಲ್ಲಿನ ಕಂಬಗಳ ಮೇಲೆ ವಿಜಯನಗರದ ಕೃಷ್ಣದೇವರಾಯ, ಅವನ ರಾಣಿಯರು ಹಾಗೂ ಇತರ ಪ್ರಮುಖರ ಮೂರ್ತಿಗಳನ್ನು ಕೆತ್ತಿದೆ. ಅಲಮೇಲುದೇವಿ, ಗಣೇಶ, ಸುದರ್ಶನ ಮತ್ತು ವೈಷ್ಣವ ಆಳ್ವಾರರುಗಳ ವಿಗ್ರಹಗಳೂ ಈ ದೇವಾಲಯದಲ್ಲಿವೆ. ಗರ್ಭಗೃಹದಲ್ಲಿ ಪ್ರಭಾವಳಿಸಹಿತವಾದ ಕಪ್ಪುಶಿಲೆಯ ಸುಂದರ ವೆಂಕಟೇಶಮೂರ್ತಿ ಇದೆ. ಈ ವಿಗ್ರಹ ಹೊಯ್ಸಳ ಶೈಲಿಯ ಪ್ರಭಾವಕ್ಕೆ ಒಳಗಾದ ವಿಜಯನಗರ ಕಾಲದ ಶಿಲ್ಪಕ್ಕೆ ಒಂದು ಒಳ್ಳೆಯ ನಿದರ್ಶನ.

ಉಡಸಲಮ್ಮ ಎಂಬ ಗ್ರಾಮದೇವತೆಯ ದೇವಸ್ಥಾನ ಈ ಊರಿನಲ್ಲಿದೆ. ಕೆರೆಯ ಏರಿಯ ಮೇಲೆ ಗೊಲ್ಲಮ್ಮನ ವಿಗ್ರಹವಿದ್ದು, ಅದು ಸು. 3' ಎತ್ತರ ಹಾಗೂ ನಾಲ್ಕು ಕೈಗಳನ್ನು ಹೊಂದಿದೆ. ಕೆರೆಯ ಏರಿ ಭದ್ರವಾಗಿ ನಿಲ್ಲಲೋಸುಗ ಹಾಲು ಮೊಸರು ಮಾರುವುದಕ್ಕೆ ನಿತ್ಯ ಆ ಮಾರ್ಗವಾಗಿ ಬರುತ್ತಿದ್ದ ಗೊಲ್ಲರ ಹೆಂಗಸೊಬ್ಬಳನ್ನು ಬಲಿಕೊಟ್ಟರಂತೆ. ಅವಳು ನೀರಗಂಟಿಯ ಕನಸಿನಲ್ಲಿ ಕಾಣಿಸಿಕೊಂಡು ತನ್ನ ವಿಗ್ರಹವನ್ನು ಕೆರೆಯ ಏರಿಯ ಮೇಲೆ ಸ್ಥಾಪಿಸಲು ಕೇಳಿಕೊಂಡಳಂತೆ. ಅದರಂತೆ ನೀರಗಂಟಿ ನಡೆದುಕೊಂಡನೆಂದು ಇಲ್ಲಿಯ ಐತಿಹ್ಯವೊಂದು ತಿಳಿಸುತ್ತದೆ. ಈ ಊರಿನ ಕೆರೆಯ ಏರಿಯ ಕೆಳಗಿರುವ ಕೋಡಿಬಸವಣ್ಣನ ದೇವಸ್ಥಾನದ ಹತ್ತಿರವಿರುವ ಹೊಂಡವನ್ನು (ನಾಯಿಗುಡಿಯ ಹಳ್ಳ) ಶಿಂಷಾನದಿಯ ಉಗಮಸ್ಥಾನ ಎಂದು ಗುರುತಿಸುತ್ತಾರೆ.

ಪ್ರತಿ ವರ್ಷ ಮೇ ತಿಂಗಳಲ್ಲಿ ಬ್ಯಾಟರಾಯಸ್ವಾಮಿ ರಥೋತ್ಸವ ಜರುಗುತ್ತದೆ. ಪ್ರತಿ ಬುಧವಾರ ಈ ಊರಿನಲ್ಲಿ ಸಂತೆ ಸೇರುತ್ತದೆ.

ನೊಣವಿನಕೆರೆ ಹಿಂದೆ ಹೆಬ್ಬಾರು ಶ್ರೀವೈಷ್ಣವರ ಪಂಚಗ್ರಾಮಗಳ ಲ್ಲೊಂದಾಗಿತ್ತು. ಉಳಿದ ನಾಲ್ಕು ಗ್ರಾಮಗಳೆಂದರೆ ಕಡಬ, ಮಾಯಸಂದ್ರ, ನುಗ್ಗೇಹಳ್ಳಿ ಮತ್ತು ಬಿಂಡಿಗನವಿಲೆ. (ಎಚ್.ಎಂ.ಎನ್.ಆರ್.;ಎಸ್.ಎನ್.ಜಿ.)

**ನೊಳಂಬ ವಂಶ:** 8– 11ನೆಯ ಶತಮಾನಗಳ ಅವಧಿಯಲ್ಲಿ ಮೊದಲಿಗೆ ನೊಳಂಬಳಿಗೆ ಸಾಸಿರ (ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಲಿನ ಪ್ರದೇಶ) ಎಂಬ ಚಿಕ್ಕ ಪ್ರಾಂತ್ಯದ ಅಧಿಪತಿಗಳಾಗಿ ಆಳಿಕೆಯನ್ನು ಪ್ರಾರಂಭಿಸಿ, 9– 10ನೆಯ ಶತಮಾನಗಳಲ್ಲಿ ಪ್ರಬಲರಾಗಿ ಈಗಿನ ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಬಳ್ಳಾರಿ, ಆಂಧ್ರ ಪ್ರದೇಶದ ಅನಂತಪುರ, ಚಿತ್ತೂರು, ಧರ್ಮಪುರಿ ಜಿಲ್ಲೆಗಳ ಭಾಗಗಳನ್ನೊಳಗೊಂಡಿದ್ದ ನೊಳಂಬವಾಡಿ 32000 ಎಂಬ ವಿಸ್ತಾರವಾದ ಪ್ರಾಂತ್ಯವನ್ನು ಆಳಿದ ಸಾಮಂತರ ರಾಜಮನೆತನ. ಈ ಮನೆತನದ ಅರಸರು ಕಾಲಕಾಲದಲ್ಲಿ ತಲಕಾಡಿನ ಗಂಗರು, ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು ಈ ರಾಜವಂಶಗಳ ಅಧೀನರಾಗಿದ್ದರು. ಇವರು ಕದಂಬ, ಗಂಗ, ಕಲ್ಯಾಣದ ಚಾಳುಕ್ಯ ವಂಶಗಳೊಡನೆ ವಿವಾಹಸಂಬಂಧವನ್ನೂ ಮತ್ತು ಬಾಣರು, ವೈಡುಂಬರು, ಚೋಳರು ಮುಂತಾದವರೊಡನೆ ರಾಜಕೀಯ ಸಂಪರ್ಕವನ್ನೂ ಹೊಂದಿದ್ದರು. ಇವರ ರಾಜಧಾನಿ ಪೆಂಜೀರು ಅಥವಾ ಹೆಂಜೇರು (ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರಾ ತಾಲ್ಲೂಕಿನಲ್ಲಿರುವ ಹೇಮಾವತಿ). ಇವರ ಲಾಂಛನ ನಂದಿ.

ನೊಳಂಬ ಪದದ ವ್ಯುತ್ಪತ್ತಿ ಅನಿರ್ದಿಷ್ಟ. ಇವರು ಈಶ್ವರ ವಂಶಜರೆಂದು ಒಂದು ಶಾಸನದಲ್ಲಿ ಹೇಳಿದೆ. ಮತ್ತೊಂದು ಶಾಸನದಲ್ಲಿ ರಾಜಕುಮಾರಿಯೊಬ್ಬಳು ನೊಳಂಬ ವಂಶ ಮತ್ತು ಪಲ್ಲವ ಕುಲದವಳೆಂದೂ ವರ್ಣಿತಳಾಗಿದ್ದಾಳೆ. ಆದರೆ ನೊಳಂಬರಿಗೂ ಕಂಚಿಯ ಪಲ್ಲವರಿಗೂ ಇದ್ದ ಸಂಬಂಧವೇನೆಂಬುದು ಸರಿಯಾಗಿ ತಿಳಿದಿಲ್ಲ.

ನೊಳಂಬರ ಮೂಲಪುರುಷ ತ್ರಿಣಯನ ಪಲ್ಲವ. ಇವನನ್ನು ಈಶ್ವರ ವಂಶಜ, ಕಂಚೀಪತಿ ಎಂದು ಒಂದು ಶಾಸನ ವರ್ಣಿಸುತ್ತದೆ. ಇವನ ವಂಶದಲ್ಲಿ ಹುಟ್ಟಿದವನು ಮಂಗಳ ನೊಂಬಾಧಿರಾಜ (ಸು. 730– 75). ಈತ ಕಿರಾತ ನೃಪತಿಯನ್ನು ಜಯಿಸಿದನೆಂದೂ ಕರ್ನಾಟರಿಂದ ಸ್ತುತಿಸಲ್ಪಟ್ಟವನೆಂದೂ ಹೇಮಾವತಿ ಶಾಸನದಲ್ಲಿ ಹೇಳಿದೆ. ಅನಂತರ ಇವನ ಮಗನಾದ ಸಿಂಹಪೋತ (ಸು. 775– 805) ಪಟ್ಟಕ್ಕೆ ಬಂದ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಒಂದು ಶಾಸನದಿಂದ ಸಿಂಹಪೋತನು (ಕಲಿ ನೊಳಂಬಾಧಿರಾಜ) ಪೆರ್ಮಾನಡಿಯ ಆಜ್ಞೆಯ ಮೇರೆಗೆ ದುಗ್ಗಮಾರನ ಮೇಲೆ ದಂಡೆತ್ತಿಹೋದನೆಂದು ತಿಳಿಯುತ್ತದೆ. ಇಲ್ಲಿಯ

ದುಗ್ಗಮಾರ ಗಂಗರಾಜ ಶ್ರೀಪುರುಷನ ಮಗ ಹಾಗೂ ಶಿವಮಾರನ ಸಹೋದರ; ಪ್ರಾಯಶಃ ಶ್ರೀಪುರುಷನ ಮರಣಾನಂತರ ಸಿಂಹಾಸನಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಸಿಂಹಪೋತನು ಶಿವಮಾರನ ಪಕ್ಷ ವಹಿಸಿ, ದುಗ್ಗ ಮಾರನ ಮೇಲೆ ದಂಡೆತ್ತಿ ಹೋಗಿರಬಹುದು. ರಾಷ್ಟ್ರಕೂಟ ಧ್ರುವನಿಂದ ಎರಡನೆಯ ಶಿವಕುಮಾರ ಪರಾಜಿತನಾದ ಮೇಲೆ ಗಂಗರ ಸಾಮಂತ ರಾಗಿದ್ದ ನೊಳಂಬರು ರಾಷ್ಟ್ರಕೂಟರ ಆಶ್ರಿತರಾದರು. ಸಿಂಹಾಪೋತನ

ಕಾಳಿ ವಿಗ್ರಹ

ಮಗ ಚಾರುಪೊನ್ನೇರ ಪರಮೇಶ್ವರ ಪಲ್ಲವಾಧಿರಾಜ (ಸು. 805–30) ರಾಷ್ಟ್ರಕೂಟ 3ನೆಯ ಗೋವಿಂದನ ಕೈಕೆಳಗೆ ನೊಳಂಬಳಿಗೆ ಸಾಸಿರ ಮುಂತಾದ ಪ್ರಾಂತ್ಯಗಳನ್ನಾಳುತ್ತಿದ್ದ.

ಪುನಃ ಸು. 820ರ ಹೊತ್ತಿಗೆ ನೊಳಂಬರು ತಮ್ಮ ನಿಷ್ಠೆಯನ್ನು ಪಶ್ಚಿಮದ ಗಂಗರಿಗೆ ಬದಲಾಯಿಸಿದಂತೆ ತೋರುತ್ತದೆ. ಗಂಗರಾಜನಾದ ಒಂದನೆಯ ರಾಚಮಲ್ಲ ತನ್ನ ಮಗಳು (ನೀತಿಮಾರ್ಗನ ತಂಗಿ) ಜಾಯಬ್ಬೆಯನ್ನು ಚಾರುಪೊನ್ನೇರನ ಮಗನಾದ ಪೊಳಲ್ಚೋರನಿಗೆ ವಿವಾಹ ಮಾಡಿಕೊಟ್ಟಿದ್ದ. ಚಾರುಪೊನ್ನೇರನ ಅನಂತರ ಅವನ ಮಗ ಒಂದನೆಯ ಪೊಳಲ್ಚೋರ (ನೊಳಂಬಾಧಿರಾಜ, ಸು.830–75) ಗಂಗರುಸಾಸಿರ ಪ್ರಾಂತ್ಯವನ್ನು (ಕೋಲಾರ, ಬೆಂಗಳೂರು ಮತ್ತು ಚಿತ್ತೂರು ಜಿಲ್ಲೆಯ ಭಾಗಗಳು) ಗಂಗ ನೀತಿಮಾರ್ಗನ ಕೈಕೆಳಗೆ ಆಳುತ್ತಿದ್ದನೆಂದು ಕೋಲಾರದ ಶಾಸನದಲ್ಲಿ ಹೇಳಿದೆ. ಈ ಪ್ರಾಂತ್ಯ 810ರಲ್ಲಿ ಮಹಾಬಲಿ ಬಾಣರ ವಶದಲ್ಲಿದ್ದು ಒಂದನೆಯ ರಾಚಮಲ್ಲನ ಕಾಲದಲ್ಲಿ ನೊಳಂಬರ ವಶವಾಯಿತು. ಪೊಳಲ್ಚೋರ ಬಲಶಾಲಿ ದೊರೆ. ಈತನ ಕಾಲದಲ್ಲಿ ನೊಳಂಬರ ರಾಜ್ಯ ನೊಳಂಬಳಿಗೆಸಾಸಿರ, ಗಂಗರುಸಾಸಿರ ಅಷ್ಟೇ ಅಲ್ಲದೆ ಇನ್ನೂ ಇತರ ಪ್ರಾಂತ್ಯಗಳನ್ನೂ ಒಳಗೊಂಡಿತ್ತು. ಒಂದನೆಯ ನೀತಿಮಾರ್ಗನ ಹಿಂದೂಪುರ ಶಾಸನದಲ್ಲಿ (853) ಕಂಚಿಯವರೆಗೆ ರಾಜ್ಯವಾಳುತ್ತಿದ್ದನೆಂದು ಹೇಳಿರುವ ನೊಳಂಬರಾಜನು ಪೊಳಲ್ಚೋರನೇ ಇರಬಹುದೆಂಬುದಕ್ಕೆ ಸಾಂದರ್ಭಿಕ ಸಾಕ್ಷ್ಯಗಳಿವೆ. ಇವನ ಕಾಲದಲ್ಲಿ ನಂದಿಯ ಭೋಗನಂದೀಶ್ವರ ದೇವಾಲಯದ ಗೋಪುರದ ಜೀರ್ಣೋದ್ಧಾರ ಕಾರ್ಯಗಳು ನಡೆದವು. ಈತ ಅನಂತಪುರ ಜಿಲ್ಲೆಯ ಕಂಬದೂರಿನಲ್ಲಿ ಬೆಳ್ದುಗೊಂಡೆಯ ಕೆರೆಯನ್ನು ಸಹ ಕಟ್ಟಿಸಿದ.

ನೊಳಂಬಾಧಿರಾಜ ಪೊಳಲ್ಚೋರನಿಗೆ ಗಂಗವಂಶದ ಜಾಯಬ್ಬೆಯಿಂದ ಜನಿಸಿದ್ದ ಮಹೇಂದ್ರ (ನೊಳಂಬಾಧಿರಾಜ, ತ್ರಿಭುವನಧೀರ; ಸು. 875–97) ಮೊದಲು 2ನೆಯ ರಾಚಮಲ್ಲನ ಕೈಕೆಳಗೆ ಗಂಗರು ಸಾಸಿರ ಪ್ರಾಂತ್ಯದ ಅಧಿಪತಿಯಾಗಿ ರಾಜ್ಯಭಾರವನ್ನು ಪ್ರಾರಂಭಿಸಿದ. ಗಂಗವಂಶದ ಗಾಮಬ್ಬೆ ಈತನ ಪತ್ನಿ. ಈತ ವಿಸ್ತರಣಾವಾದಿ. ಗಂಗರುಸಾಸಿರ ಪ್ರಾಂತ್ಯಕ್ಕಾಗಿ ನೊಳಂಬರ ಜೊತೆ ಬಾಣರ ಕಲಹ ಇವನ ಕಾಲದಲ್ಲಿ ಮುಂದುವರಿಯಿತು. ಆದರೆ ಇವನು ಗಂಗ ರಾಚಮಲ್ಲ ಮತ್ತು ತೆಲುಗು ಚೋಳ ರಾಜನಾದ ಮಹೇಂದ್ರ ವಿಕ್ರಮರ ಸಹಾಯದಿಂದ ಬಾಣ ದೊರೆ ವಿದ್ಯಾಧರನನ್ನು ಸೋರೆಮಟಿ ಮತ್ತಿತರ ಕಡೆಗಳಲ್ಲಿ ನಡೆದ ಕಾಳಗಗಳಲ್ಲಿ ಸೋಲಿಸಿ, ಮಹಾಬಲಿಕುಲವಿಧ್ವಂಸಕ ಎಂಬ ಬಿರುದನ್ನು ಧರಿಸಿ ತನ್ನ ಆಡಳಿತವನ್ನು ಪುಲಿನಾಡಿನ ಮೇಲೂ ವಿಸ್ತರಿಸಿದ. ಈ ಸಾಧನೆಯಿಂದ ಮತ್ತನಾದ ಮಹೇಂದ್ರ ಮೇಲ್ದೊರೆಗಳಾದ ಗಂಗರ ಮೇಲೆಯೆ ಯುದ್ಧಮಾಡಿ ಅವರ ರಾಜ್ಯದ ಅನೇಕ ಭಾಗಗಳನ್ನು ವಶಪಡಿಸಿಕೊಂಡಿರಬೇಕೆಂದು ತಲಕಾಡಿಗೆ ಕೇವಲ 40 ಕಿಮೀ ದೂರದ ತಾಯಲೂರಿನಲ್ಲಿ (ಮಂಡ್ಯ ಜಿಲ್ಲೆ) ಇರುವ ಇವನ ಶಾಸನದಿಂದ (895) ಊಹಿಸಬಹುದಾಗಿದೆ. ಅಲ್ಲದೆ ಮತ್ತೊಂದು ಶಾಸನ ಮಹೇಂದ್ರನನ್ನು ಗಂಗಮಂಡಲ 96,000 ದ ಅಧಿಪತಿ ಎಂದು ವರ್ಣಿಸಿದೆ. ಮಹೇಂದ್ರ ಎಷ್ಟು ಶೀಘ್ರವಾಗಿ ಉಚ್ಛ್ರಾಯಸ್ಥಿತಿಗೇರಿದನೋ ಅಷ್ಟೇ ಬೇಗ ಅವನಿಗೆ ಅಧಃಪತನವೂ ಕಾದಿತ್ತು. ಅನತಿಕಾಲದಲ್ಲಿ ಗಂಗರು ಹೂಡಿದ ಮರು ಯುದ್ಧದಲ್ಲಿ ಹತನಾದ. ಕೂಡಲೂರಿನ ತಾಮ್ರಶಾಸನದಲ್ಲಿ ರಾಜಮಲ್ಲನ ತಮ್ಮನ ಮಗನಾದ ಎರೆಯಪ್ಪ ಅನೇಕ ಕಾಳಗಗಳಲ್ಲಿ ಮಹೇಂದ್ರನನ್ನು ಸೋಲಿಸಿ ಅವನ ರಾಜ್ಯವನ್ನು ಆಕ್ರಮಿಸಿಕೊಂಡನೆಂದು ಹೇಳಿದರೆ, ಶಿವಮೊಗ್ಗ ಜಿಲ್ಲೆಯ ಹುಮಚ ಶಾಸನದಲ್ಲಿ ಎರೆಯಪ್ಪನು ಮಹೇಂದ್ರನನ್ನು ಕೊಂದು ಮಹೇಂದ್ರಾಂತಕನೆಂಬ ಬಿರುದನ್ನು ಪಡೆದ ಎಂದು ತಿಳಿಸುತ್ತದೆ. ಏನೇ ಆದರೂ ಮಹತ್ವಾಕಾಂಕ್ಷಿಯೂ ಶೂರನೂ ಆದ ಮಹೇಂದ್ರನ ಕಾಲದಲ್ಲಿ ನೊಳಂಬರಾಜ್ಯ ಅದರ ವಿಸ್ತೀರ್ಣದ ಪರಮಾವಧಿಯನ್ನು ಮುಟ್ಟಿತ್ತು.

ಮಹೇಂದ್ರನ ತರುವಾಯ ಗಂಗರಾಜಕುಮಾರಿ ಗಾಮಬ್ಬೆಯಿಂದ ಜನಿಸಿದ ಅವನ ಮಗ ಅಯ್ಯಪ್ಪದೇವ (ಸು.897–934) ಪಟ್ಟಕ್ಕೆ ಬಂದ. ಮಹೇಂದ್ರನ ಇನ್ನೊಬ್ಬ ಮಗನೆಂದು ಹಲವು ವಿದ್ವಾಂಸರು ಅಭಿಪ್ರಾಯ

ಪಟ್ಟೆರುವ ಮಧುಗಿರಿ ಶಾಸನದ (897) ನೊಳಂಬಾಧಿರಾಜ ನೊಳಿಪಯ್ಯ ಈ ಅಯ್ಯಪದೇವನಿಗೆ ಇದ್ದ ಇನ್ನೊಂದು ಹೆಸರು. ಪಟ್ಟಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೇ ಅಯ್ಯಪನು 2ನೆಯ ರಾಚಮಲ್ಲನೊಂದಿಗೆ ಯುದ್ಧಕ್ಕೆ ಹೋದ. ಅರಸೀಕೆರೆಯ ಒಂದು ಶಾಸನದ ಪ್ರಕಾರ ಇವನು ಆಸಂದಿನಾಡ ಮೇಲೆ ಯುದ್ಧ ಮಾಡಲು ತನ್ನ ಸಮಸ್ತ ಬಲದೊಂದಿಗೆ ಬಂದು ಕಲಿಕಟ್ಟೆಯಲ್ಲಿ (ಅರಸೀಕೆರೆ ತಾಲ್ಲೂಕು ಕಣಿಕಟ್ಟೆ) ತಂಗಿದ್ದ; ಮತ್ತು ಅಲ್ಲಿ ನಡೆದ ಯುದ್ಧದಲ್ಲಿ ಮಡಿದ ಒಬ್ಬನಿಗೆ ರಾಚಮಲ್ಲ ಹಾಗೂ ಎರೆಯಪ್ಪ ಕಲ್ನಾಡನ್ನು ಕೊಟ್ಟರು. ಈ ಯುದ್ಧದ ಫಲಿತಾಂಶ ತಿಳಿಯದು. ಆದರೆ ಅನಂತರ ಅಯ್ಯಪದೇವ ಪ್ರಾಯಶಃ ಗಂಗ ಸಾಮಂತನಾಗಿ ನೊಳಂಬವಾಡಿ 32,000 ಎಂಬ ವಿಸ್ತಾರವಾದ ಪ್ರಾಂತ್ಯವನ್ನು ಆಳಿದ. ಈತ ಪೂರ್ವ ಚಾಳುಕ್ಯ ಕುಲದ ಒಂದನೆಯ ಅಮ್ಮಣರಾಯನನ್ನು (ಸು. 918–25) ಯುದ್ಧದಲ್ಲಿ ಸೋಲಿಸಿದನೆಂದು ಧರ್ಮಪುರಿಯ ಒಂದು ಶಾಸನ ತಿಳಿಸುತ್ತದೆ. 931ರಲ್ಲಿ ಈತ ರಾಷ್ಟ್ರಕೂಟ 4ನೆಯ ಗೋವಿಂದನ ಕೈಕೆಳಗೆ ಮಾಸವಾಡಿ ಮತ್ತು ಕೋಗಳಿ ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ಬಳ್ಳಾರಿ ಜಿಲ್ಲೆಯ ಶಿರಸ್ತಹಳ್ಳಿ ಶಾಸನದಿಂದ ತಿಳಿದುಬರುತ್ತದೆ. ಕೊನೆಗೆ ಅಯ್ಯಪದೇವ ಪೂರ್ವ ಚಾಳುಕ್ಯ ವಂಶದ ಬೀರ ಮಹೇಂದ್ರನೊಂದಿಗೆ (ಎರಡನೆಯ ಭೀಮ) ಗಂಗ ಎರೆಯಪ್ಪನ ಪರವಾಗಿ ತುಂಬೆಪಾಡಿಯಲ್ಲಿ ಕಾದಿ ಮಡಿದ. ಈತನಿಗೆ ಗಂಗ ವಂಶಜಳಾದ ಪೊಲ್ಲಬ್ಬರಸಿ ಮತ್ತು ನಾಗಿಯೆಬ್ಬೆ, ಹಳೆಯಬ್ಬೆ ಎಂಬ ಮೂವರು ಪತ್ನಿಯರೂ ಅಣ್ಣಿಗ, ದಿಲೀಪ, ಅಂಕಯ್ಯ ಮತ್ತು ನೊಳಿಪ ಎಂಬ ನಾಲ್ವರು ಗಂಡು ಮಕ್ಕಳೂ ಇದ್ದರು. ಇವನ ಆಳಿಕೆಯ ಕಾಲದಲ್ಲಿ ಮಕ್ಕಳಾದ ಅಣ್ಣಿಗ (920), ನೊಳಿಪ ಮತ್ತು ಅಣ್ಣಿಗನ ಮಗ ಇರುಳಚೋರ (928) ಆಡಳಿತದ ನಿರ್ವಹಣೆಯಲ್ಲಿ ಭಾಗಿಗಳಾಗಿದ್ದರು.

ಅಯ್ಯಪದೇವನ ಅನಂತರ ಗಂಗವಂಶದ ಪೊಲ್ಲಬ್ಬರಸಿಯಿಂದ ಹುಟ್ಟಿದ ಅವನ ಮಗ ಅಣ್ಣಿಗ (ಬೀರ ನೊಳಂಬ ಅಣ್ಣಯ್ಯ ಸು. 932–40) ಪಟ್ಟಕ್ಕೆ ಬಂದ. ಚಾಳುಕ್ಯ ವಂಶದ ಅತ್ತಿಯಬ್ಬರಸಿ ಈತನ ಪತ್ನಿ. ಇವನ ಕಾಲದಲ್ಲಿ ನೊಳಂಬರ ಮತ್ತು ಪಶ್ಚಿಮಗಂಗರ ಮೈತ್ರಿ ಒಡೆಯಿತು. ಗಂಗ 3ನೆಯ ರಾಚಮಲ್ಲನ ಮೇಲೆ ಈತ ಕೊತ್ತಮಂಗಲ ಎಂಬಲ್ಲಿ ಯುದ್ಧ ಹೂಡಿ ಸೋತ. ಸ್ವಲ್ಪ ಕಾಲದಲ್ಲಿಯೇ ರಾಷ್ಟ್ರಕೂಟ ಮೂರನೆಯ ಕೃಷ್ಣ ತನ್ನ ಭಾವಮೈದುನ ಬೂತುಗನಿಗೆ ರಾಜ್ಯವನ್ನು ಕೊಡಿಸಲು ಗಂಗವಾಡಿಯ ಮೇಲೆ ಆಕ್ರಮಣ ಮಾಡಿದಾಗ ಅಣ್ಣಿಗನನ್ನು ಸಹ ಸೋಲಿಸಿದ.

ಅಣ್ಣಿಗನ ತರುವಾಯ ಆತನ ತಮ್ಮ ಇರಿವನೊಳಂಬ ದಿಲೀಪ (ಸು. 940–68) ರಾಷ್ಟ್ರಕೂಟ ಸಾಮಂತನಾಗಿ ಪಟ್ಟಕ್ಕೆ ಬಂದ. ಇವನಿಗೆ ನೊಳಿಪಯ್ಯ ಎಂಬ ಇನ್ನೊಂದು ಹೆಸರೂ ಪಲ್ಲವರಾಮ, ಪಲ್ಲವರೊಡೆಗಂಡ, ತ್ರಿಭುವನ ಧೀರ, ಏಕವಾಕ್ಯ ಎಂಬ ಬಿರುದುಗಳೂ ಇದ್ದುವು. ರಾಷ್ಟ್ರಕೂಟ 3ನೆಯ ಕೃಷ್ಣ 949ರಲ್ಲಿ ಚೋಳರಾಜ್ಯದ ಮೇಲೆ ಕೈಕೊಂಡ ಈ ದಂಡಯಾತ್ರೆಯಲ್ಲಿ ಇರಿವನೊಳಂಬನೂ ಪಾಲ್ಗೊಂಡಿದ್ದ. ಇಪಿಲಿ ಎಂಬ ಸ್ಥಳದಲ್ಲಿ ನಡೆದ ಘೋರ ಕಾಳಗದಲ್ಲಿ ಗಜಾಂಕುಶ ಚೋಳನನ್ನು ಇರಿವನೊಳಂಬ ಎದುರಿಸಿದ ಎಂದು ಮಡಕಶಿರಾದ ಒಂದು ಶಾಸನದಲ್ಲಿ ಹೇಳಿದೆ. ದಿಲೀಪನ ಕೈಕೆಳಗೆ ಮಹಾಬಲಿ ಕುಲದ ಸಾಂಬಯ್ಯ ಕೋಲಾರ ಜಿಲ್ಲೆಯಲ್ಲಿಯೂ ವೈದುಂಬ ಶಿಖಾಮಣಿ ವಿಕ್ರಮಾದಿತ್ಯ ತಿರುವಯ್ಯ ಗಂಗರು ಸಾಸಿರ ಪ್ರಾಂತ್ಯವನ್ನೂ ಆಳುತ್ತಿದ್ದರು. 3ನೆಯ ಕೃಷ್ಣನ 26ನೆಯ ವರ್ಷದ ವೇಲೂರಿನ ಶಾಸನದಲ್ಲಿ ನೊಳಂಬ ತ್ರಿಭುವನಧೀರ (ದಿಲೀಪ) ವೇಲೂರ್‌ಪಾಟೆ ಗ್ರಾಮವನ್ನು ದತ್ತಿಯನ್ನಾಗಿ ಕೊಟ್ಟನೆಂದು ಹೇಳಿದೆ. ಆದರೆ ಇರಿವ ನೊಳಂಬನ ರಾಜ್ಯದ ಎಲ್ಲೆಯು ಅಲ್ಲಿಯವರೆಗೆ ವಿಸ್ತರಿಸಿತ್ತೆಂದು ಹೇಳುವುದು ಕಷ್ಟ. ದಿಲೀಪನಿಗೆ ಪಿರಿಯಬ್ಬರಸಿ ಎಂಬ ಪತ್ನಿಯೂ ನನ್ನಿನೊಳಂಬ, ಅಯ್ಯಪದೇವ ಎಂಬ ಮಕ್ಕಳೂ ಇದ್ದರು. 949ರಲ್ಲಿ ಅಯ್ಯಪದೇವ ಇರಿವನೊಳಂಬನ ಕೈಕೆಳಗೆ ರಾಜ್ಯವಾಳುತ್ತಿದ್ದ. ಈತನಿಗೆ ಕಂಚೀಪುರವರೇಶ್ವರ, ದಕ್ಷಿಣ ದಂಡಾಧಿಪತಿ ಮುಂತಾದ ಬಿರುದುಗಳಿದ್ದುವು.

ಮಿಥುನ ಶಿಲ್ಪಗಳು

ಇರಿವನೊಳಂಬ ದಿಲೀಪನ ಅನಂತರ ಆತನ ಜ್ಯೇಷ್ಠಪುತ್ರ ಛಲದಂಕಕಾರ ನನ್ನಿನೊಳಂಬ (ಸು. 968–70) ಪಟ್ಟಕ್ಕೆ ಬಂದ. ಇವನಿಗೆ ನನ್ನಿಪೊಳಲ್ಚೋರ (II) ಎಂಬ ಮಗನಿದ್ದ. ಈತ 965ರಲ್ಲಿ ಇರಿವನೊಳಂಬನ ಕೈಕೆಳಗೆ ರಾಜ್ಯವಾಳುತ್ತಿದ್ದ ಎಂದು ಕಂಬದೂರಿನ ಒಂದು ಶಾಸನ ಹೇಳುತ್ತದೆ. ಇದೇ ಶಾಸನದಿಂದ ಈತನಿಗೆ ರಾಜಮನೋಜ ಮುಂತಾದ ಬಿರುದುಗಳಿದ್ದವೆಂದೂ ಮತ್ತು ಈತನ ಮುಖ್ಯಮಂತ್ರಿ ಶ್ರೀವತ್ಸಗೋತ್ರದ ಚಾವುಂಡಯ್ಯನೆಂದೂ ತಿಳಿದುಬರುತ್ತದೆ. 2ನೆಯ ಪೊಳಲ್ಚೋರನಿಗೆ ಕದಂಬ ವಂಶದ ದೀವಾಂಬಿಕೆ ಅಥವಾ ದೀವಬ್ಬರಸಿ ಎಂಬ ಪತ್ನಿ ಹಾಗೂ ಇವಳಿಂದ ಜನಿಸಿದ ಮಹೇಂದ್ರ ಮತ್ತು ಇರಿವನೊಳಂಬ ಎಂಬ ಇಬ್ಬರು ಮಕ್ಕಳು ಇದ್ದರು. ಪೊಳಲ್ಚೋರ ಸ್ವತಂತ್ರವಾಗಿ ರಾಜ್ಯವಾಳಿರಲಾರ. ರಾಜಮನೋಜ ಪೊಳಲ್ಚೋರನ ಪತ್ನಿ ದೀವಬ್ಬರಸಿ ತನ್ನ ಪತಿಯ ಮರಣಾನಂತರ ಆತನ ಹೆಸರಿನಲ್ಲಿ ಪೊಳಲ್ಚೋರಮಂಗಲ ಎಂಬ ಒಂದು ಅಗ್ರಹಾರವನ್ನು ಕಟ್ಟಿಸಿದಳು.

ಅನಂತರ ಮಹೇಂದ್ರನ ಪರೋಕ್ಷದಲ್ಲಿ ಪೊಳಲ್ಚೋರಮಂಗಲದಲ್ಲಿ ದೀವಬ್ಬಾಸಮುದ್ರವನ್ನು ಮಾಡಿಸಿ ಅಲ್ಲಿ ಒಂದು ವಿಷ್ಣುವಿಗ್ರಹವನ್ನು ಕಟ್ಟಿಸಿದಳೆಂದು ಆವನಿಯ ಶಾಸನವೊಂದು ತಿಳಿಸುತ್ತದೆ. ಪೊಳಲ್ಚೋರ ಅಕಾಲ ಮೃತ್ಯುವಿಗೆ ಈಡಾಗಿರಬಹುದು. ಶ್ರವಣಬೆಳಗೊಳದ ಶಾಸನದಲ್ಲಿ ನೊಳಂಬ ಕುಲಾಂತಕನೆಂದು ವರ್ಣಿತನಾಗಿರುವ 2ನೆಯ ಮಾರಸಿಂಹನಿಗೂ ನೊಳಂಬರಿಗೂ 970ರಲ್ಲಿ ನಡೆದ ಘೋರ ಯುದ್ಧದಲ್ಲಿ ಪೊಳಲ್ಚೋರನೇ ಮೊದಲಾಗಿ ಅನೇಕ ವೀರರು ಮಡಿದಿರಬೇಕು. ಮಾರಸಿಂಹ ನೊಳಂಬರನ್ನು ಸೋಲಿಸಿ ಅವರನ್ನು ಅವರ ರಾಜ್ಯದಿಂದ ಹೊರ ಅಟ್ಟಿದ್ದಂತೆ ತೋರುತ್ತದೆ. ಕಲಗೋಡು (ಬಳ್ಳಾರಿ ಜಿಲ್ಲೆ) ಶಾಸನದ ಪ್ರಕಾರ (977) ನೊಳಂಬ ಪಲ್ಲವರ ಬಿರುದುಗಳನ್ನು ಹೊಂದಿರುವ ಮಯ್ದುಮ್ಮರಸನೆಂಬ ರಾಜ ಆ ಪ್ರದೇಶದಲ್ಲಿ ಆಗ ರಾಜ್ಯವಾಳುತ್ತಿದ್ದ. ಈತ ಪೊಳಲ್ಚೋರನ ಮಗ (2ನೆಯ) ಮಹೇಂದ್ರ (ಸು. 977– 81) ಇರಬೇಕು. ಚಿತ್ತೂರು ಜಿಲ್ಲೆಯ ಕರ್ಷನಪಲ್ಲಿ ಶಾಸನದಲ್ಲಿ ಮಹೇಂದ್ರ ಚೋಳನಾಡಿನಿಂದ ಬರುವಾಗ ನೊಳಂಬವಾಡಿಯನ್ನು ಹೊಕ್ಕು ಗಂಗರು ಸಾಸಿರದ ಕೋಲಾರದಲ್ಲಿಳಿದು ಕೀರ್ತಿಗಾಮುಂಡನ ಮಗನಿಗೆ ಪಟ್ಟವನ್ನು ಕಟ್ಟಿದನೆಂದು ಉಲ್ಲೇಖವಿದೆ. ಪ್ರಾಯಶಃ ಗಂಗರಿಂದ ಸೋಲನ್ನನುಭವಿಸಿದ ಮೇಲೆ ನೊಳಂಬರು ತಮ್ಮ ರಾಜ್ಯವನ್ನು ಪುನರ್ವಶಪಡಿಸಿಕೊಳ್ಳಲು ಕಲ್ಯಾಣದ ಚಾಳುಕ್ಯ ರಾಜ 2ನೆಯ ತೈಲಪನ ಸ್ನೇಹವನ್ನು ಬಯಸಿರಬೇಕು. ಮಹೇಂದ್ರನು ಚೋಳ ನಾಡಿನಿಂದ ಹಿಂತಿರುಗಿದ್ದು ಎರಡನೆಯ ತೈಲಪ ಚೋಳರಾಜ್ಯದ ಮೇಲೆ ಕೈಕೊಂಡ ದಂಡಯಾತ್ರೆಯ (ಸು. 980) ಸಂದರ್ಭದಲ್ಲಿರಬೇಕೆಂದು ಊಹಿಸಬಹುದು. 981ರ ಬೆಳಗಲ್ಲು (ಬಳ್ಳಾರಿ ಜಿಲ್ಲೆ) ಶಾಸನದಲ್ಲಿ ಅಹವಮಲ್ಲ (ತೈಲಪ) ರಾಜ್ಯವಾಳುತ್ತಿದ್ದಾಗ ವೀರ ನೊಳಂಬ ಪೆಮ್ಮಾನಡಿಯ ಮಹಾದೇವಿ ರೇವಲದೇವಿ ಕೆಲವು ದಾನಗಳನ್ನು ಮಾಡಿದಳೆಂದು ಹೇಳಿದೆ. ಪ್ರಾಯಶಃ ಈ ಶಾಸನದ ವೀರನೊಳಂಬ ವೀರ ಮಹೇಂದ್ರ ನಾಗಿರಲೂ ಸಾಧ್ಯ.

ರಾಜರಾಜ ಚೋಳ 991ರಲ್ಲಿ ನೊಳಂಬವಾಡಿ ಮತ್ತು ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡ. ದಿಲೀಪನ ಮೊಮ್ಮಗನೂ ಅಯ್ಯಪದೇವನ ಮಗನೂ ಆದ ಗನ್ನರಸ ಎಂಬುವನು ರಾಜರಾಜನ ಸಾಮಂತನಾಗಿ ಆಳುತ್ತಿದ್ದನೆಂದು ಹೊಸಕೋಟೆಯ (ಬೆಂಗಳೂರು ಜಿಲ್ಲೆ) 997ರ ಒಂದು ಶಾಸನದಿಂದ ತಿಳಿಯುತ್ತದೆ. 1010ರ ಆಲೂರು ಶಾಸನದಲ್ಲಿ ಚಾಳುಕ್ಯ 5ನೆಯ ವಿಕ್ರಮಾದಿತ್ಯನ ಕೈಕೆಳಗೆ ಇರಿವನೊಳಂಬಾಧಿರಾಜ ಘಟೆಯಂಕಕಾರ ಎಂಬುವನು ನೊಳಂಬವಾಡಿ 32,000, ಕೋಗಳಿ, ಬಲ್ಲುಕುಂದೆ 300, ಕುಕ್ಕನೂರು 30 ಮತ್ತು ಮಾಸೆವಾಡಿಯ ಐದು ಗ್ರಾಮಗಳನ್ನು ಆಳುತ್ತಿದ್ದನೆಂದು ಹೇಳಿರುವುದರಿಂದ ಈ ಕಾಲದಲ್ಲಿ ನೊಳಂಬರು ಕಲ್ಯಾಣ ಚಾಳುಕ್ಯರ ಅನುಗ್ರಹದಿಂದ ನೊಳಂಬವಾಡಿಯನ್ನು ಪುನಃ ಸಾಧಿಸಿಕೊಂಡಿದ್ದಲ್ಲದೆ, ದೇಶದ ಇನ್ನೂ ಇತರ ಪ್ರದೇಶಗಳನ್ನೂ ಆಧಿಪತ್ಯವನ್ನೂ ಆಗುಮಾಡಿಕೊಂಡರೆಂದು ಊಹಿಸಬಹುದು. ಈ ಶಾಸನದ ಇರಿವನೊಳಂಬ ಘಟೆಯಂಕಕಾರ ಎರಡನೆಯ ಮಹೇಂದ್ರನ ತಮ್ಮನಾದ ಇರಿವನೊಳಂಬನೆಂದೇ ತೋರುತ್ತದೆ. ಇರಿವನೊಳಂಬ ಎರಡನೆಯ ತೈಲಪನ ಮೊಮ್ಮಗಳನ್ನು (ವಿಕ್ರಮಾದಿತ್ಯನ ತಂಗಿ) ಮದುವೆಯಾಗಿದ್ದ. ಹೀಗೆ ನೊಳಂಬರು ಚಾಳುಕ್ಯರೊಂದಿಗೆ ರಾಜಕೀಯ ಮತ್ತು ವಿವಾಹಸಂಬಂಧಗಳಿಂದ ಅವರ ಪ್ರೀತ್ಯಾದರಗಳನ್ನು ಗಳಿಸಿ ಕಡೆಯವರೆಗೂ ಮಾಂಡಲಿಕರಾಗಿ ಅವರ ಕೈಕೆಳಗೆ ಆಳತೊಡಗಿದರು. ಎರಡನೆಯ ಮಹೇಂದ್ರನ ತರುವಾಯ ಆಳಿದ ಎಲ್ಲ ನೊಳಂಬರಾಜರೂ ತಮ್ಮ ಹೆಸರಿನ ಜೊತೆಗೆ ತತ್ಕಾಲದ ಚಾಳುಕ್ಯಾಧಿಪತಿಗಳ ಬಿರುದುಗಳನ್ನು ಸಹ ಸೇರಿಸಿಕೊಳ್ಳುವುದು ವಾಡಿಕೆಯಾಯಿತು. ಇರಿವನೊಳಂಬ ಘಟೆಯಂಕಕಾರ 1024 ರವರೆಗೆ ಆಳಿದ. ಅನಂತರ ಈತನ ಮಗ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವ (ಸು. 1024– 37) ಪಟ್ಟಕ್ಕೆ ಬಂದ. ಇದಕ್ಕೂ ಮುಂಚೆ ಇವನು ಗಂಗವಾಡಿ 96,000, ಕದಂಬಳಿಗೆ 1,000, ಕೋಗಳಿ 500, ಮಾಸವಾಡಿ 140ರ ಸ್ವಲ್ಪಭಾಗ, ಬಲ್ಲಕುಂದೆ 300 ಮತ್ತು ಕುಪಿಹಾರ 70ನ್ನೊಳಗೊಂಡಿದ್ದ ಎಡತೊರೆ 2,000 ಮುಂತಾದ ಪ್ರಾಂತ್ಯಗಳನ್ನು ಜಗದೇಕಮಲ್ಲ 2ನೆಯ ಜಯಸಿಂಹನ ಕೈಕೆಳಗೆ 1018ರಲ್ಲೇ ತನ್ನ ತಂದೆಯ ಜೊತೆ ಆಳುತ್ತಿದ್ದ. ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾನದಿಯ ತೀರದಲ್ಲಿದ್ದ ಕಂಪಿಲಿ ಇವನ ರಾಜಧಾನಿ. 1032ರ ಒಂದು ಶಾಸನದಲ್ಲಿ ಇವನು ನೊಳಂಬವಾಡಿ 32000 ಮತ್ತು ಕದಂಬಳಿಗೆ 1,000 ಮುಂತಾದ ಪ್ರಾಂತ್ಯಗಳನ್ನಾಳುತ್ತಿದ್ದನೆಂದು ಹೇಳಿರುವುದರಿಂದ ತಂದೆಯ ಮರಣಾನಂತರ ನೊಳಂಬವಾಡಿಗೆ ಅಧಿಪತಿಯಾದನೆಂದು ಹೇಳಬಹುದು.

ಜಗದೇಕಮಲ್ಲ ನೊಳಂಬ ಉದಯಾದಿತ್ಯದೇವನಿಗೆ ಜಗದೇಕಮಲ್ಲ ಈರ್ಮಡಿ ನೊಳಂಬ ಮತ್ತು ತ್ರೈಲೋಕ್ಯಮಲ್ಲ ನನ್ನಿನೊಳಂಬ ಎಂಬಿಬ್ಬರು ಮಕ್ಕಳಿದ್ದರು. ಇವನ ಅನಂತರ ಜಗದೇಕಮಲ್ಲ ಈರ್ಮಡಿ ನೊಳಂಬ ಪಲ್ಲವ ಪೆರ್ಮಾನಡಿ (ಸು. 1037– 44) ಕದಂಬಳಿಗೆ 1,000, ಕೋಗಳಿ 500, ಬಲ್ಲಕುಂದೆ 300, ಕರಿವೀಡಿ 30 ಮುಂತಾದ ಪ್ರಾಂತ್ಯಗಳನ್ನು ಆಳಿದ. ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿ 1039ರಲ್ಲಿ ತನ್ನ ಅಣ್ಣನ ಜೊತೆಗೆ ರಾಜ್ಯವಾಳುತ್ತಿದ್ದ. ಈ ವಿಷಯವನ್ನು ತಿಳಿಸುವ ಬಳ್ಳಾರಿ ಜಿಲ್ಲೆಯ ಕಂಚಿಕೆರೆ ಶಾಸನದಲ್ಲಿ ಈತ ಜಗದೇಕಮಲ್ಲ ನನ್ನಿನೊಳಂಬನೆಂದು ಉಕ್ತವಾಗಿದ್ದಾನೆ. ಈತನ ಪಟ್ಟಾಭಿಷೇಕ 1044ರ ಏಪ್ರಿಲ್ 5ರಂದು ನಡೆಯಿತು. ಭೋಗವತೀಪುರವರೇಶ್ವರನ ಸಿಂದರಸ ಉದಯಾದಿತ್ಯ ಈತನ ಕೈಕೆಳಗೆ ಆಳುತ್ತಿದ್ದ. 1046ರಲ್ಲಿ ನೊಳಂಬವಾಡಿ 32,000 ಕದಂಬಳಿಗೆ 1,000 ಕೋಗಳಿ 500, ಬಲ್ಲಕುಂದೆ 300 ಮುಂತಾದುವು ಈತನ ಆಧಿಪತ್ಯದಲ್ಲಿದ್ದುವು. 1054ರಲ್ಲಿ ಕೊಪ್ಪಂ ಎಂಬಲ್ಲಿ ನಡೆದ ಚಾಳುಕ್ಯಚೋಳ ಯುದ್ಧದಲ್ಲಿ ತ್ರೈಲೋಕ್ಯಮಲ್ಲ ನನ್ನಿನೊಳಂಬ ಚಾಳುಕ್ಯರ ಪರವಾಗಿ ಹೋರಾಡಿ ಮಡಿದಂತೆ ತೋರುತ್ತದೆ. ಮೂಲ ನೊಳಂಬ ರಾಜವಂಶ ಇವನೊಂದಿಗೇ ಮುಕ್ತಾಯವಾಯಿತು. 1057ರ ಹೊತ್ತಿಗೆ ನೊಳಂಬವಾಡಿ ಪ್ರಾಂತ್ಯ ಚಾಳುಕ್ಯ ರಾಜಕುಮಾರ 6ನೆಯ ವಿಕ್ರಮಾದಿತ್ಯನ ನೇರ ಆಡಳಿತಕ್ಕೆ ಒಳಪಟ್ಟಿತ್ತು; ಅಷ್ಟೇ ಅಲ್ಲದೆ ನೊಳಂಬ ವಂಶದ ಬಿರುದುಗಳನ್ನು ಇವನ ತಮ್ಮ ತನಗೇ ಅಳವಡಿಸಿಕೊಂಡ.

**ವಾಸ್ತು–ಶಿಲ್ಪ:** 8–11ನೆಯ ಶತಮಾನಗಳ ನಡುವೆ ನೊಳಂಬ, ಪಲ್ಲವರ ಪ್ರೋತ್ಸಾಹದಿಂದ ಇವರ ರಾಜ್ಯದಲ್ಲಿ ಬೆಳೆದ ವಾಸ್ತುಶಿಲ್ಪ ಶೈಲಿ ದಕ್ಷಿಣ ಭಾರತೀಯ ವಾಸ್ತುಶಿಲ್ಪ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ನೊಳಂಬರು ಮೂಲತಃ ಪಲ್ಲವರಾಗಿದ್ದರೂ ಕರ್ನಾಟಕದಲ್ಲಿ ಆಳುತ್ತಿದ್ದುದರಿಂದ ಮತ್ತು ಇವರ ರಾಜ್ಯ ಕನ್ನಡ ಮತ್ತು ತಮಿಳು ರಾಜ್ಯಗಳ ನಡುವೆ ಇದ್ದುದರಿಂದ ಇವರ ವಾಸ್ತುಶಿಲ್ಪ ಸಂಪ್ರದಾಯದಲ್ಲಿ ಕರ್ನಾಟಕ–ತಮಿಳು ಶೈಲಿಗಳ, ಅಂದರೆ ಬಾದಾಮಿ ಚಳುಕ್ಯ, ಗಂಗ, ಪಲ್ಲವ ಸಂಪ್ರದಾಯಗಳ ಸಮ್ಮಿಳನ ಕಾಣುತ್ತದೆ. ನೊಳಂಬ ಶಿಲ್ಪಿಗಳು ಇವುಗಳ ಗುಣಗಳನ್ನು ತಮ್ಮ ಕಲೆಯಲ್ಲಿ ಅಳವಡಿಸಿಕೊಂಡಿದ್ದಲ್ಲದೆ ಅವುಗಳನ್ನು ತಮ್ಮದೇ ಆದ ರೀತಿಯಲ್ಲಿ ಸಂಯೋಜಿಸಿ, ಉತ್ತಮಪಡಿಸಿ, ಸ್ವಶೈಲಿಯನ್ನು ರೂಪಿಸಿಕೊಂಡಿರುವುದು ಈ ವಾಸ್ತುಶಿಲ್ಪ ಸಂಪ್ರದಾಯದ ವೈಶಿಷ್ಟ್ಯ.

ಈಗ ಗುರುತಿಸಿರುವ ಇವರ ಎಲ್ಲಾ ದೇವಾಲಯಗಳು 9–10ನೆಯ ಶತಮಾನಗಳವು. ಈ ದೇವಾಲಯಗಳ ತಳವಿನ್ಯಾಸದಲ್ಲಿ ಸಾಮಾನ್ಯವಾಗಿ

ಒಂದು ಚೌಕಟ್ಟಾದ ಗರ್ಭಗೃಹ, ಅದರ ಮುಂದೆ 2 ಅಥವಾ 4 ಕಂಬಗಳಿರುವ ಆಯಾಕಾರದ ಅರ್ಧಮಂಟಪ ಮತ್ತು ಅದರ ಮುಂದೆ ಒಂದು ಹಜಾರ ಇರುತ್ತವೆ. ಹಜಾರದ ಮುಂಭಾಗದಲ್ಲಿ ಮುಖಮಂಟಪ ವಿರುವುದಿಲ್ಲ. ಅದರ ಬದಲು ದೇವಾಲಯದ ಮುಂದೆ ಪ್ರತ್ಯೇಕವಾದ ಒಂದು ನಂದಿಮಂಟಪವಿರುತ್ತದೆ. ಹೊರಮೈಯಲ್ಲಿ, ಅಧಿಷ್ಠಾನ ಸಾಮಾನ್ಯವಾಗಿ ನಾಲ್ಕು ಸಮಾನಾಂತರ ಅಡ್ಡಪಟ್ಟಿಕೆಗಳಿಂದ ಕೂಡಿರುತ್ತದೆ. ಇವುಗಳಲ್ಲಿ ಮೂರನೆಯ ಪಟ್ಟಿ ಬಹಳ ಮಟ್ಟಿಗೆ ಭಿತ್ತಿಯ ಮೇಲಿನ ಕಪೋತದಂತಿದ್ದು, ಅದರ ಮೇಲೆ ಕೂಡು ಮತ್ತು ವಿವಿಧ ಪ್ರಾಣಿಗಳ ಶಿಲ್ಪಗಳಿರುತ್ತವೆ. ಬಿತ್ತಿ ಮಟ್ಟವಾಗಿದ್ದರೂ ನೀಳವಾದ ತೆಳು ಅರೆಕಂಬ ಗಳು, ಕೋಷ್ಠಗಳು ಮತ್ತು ಜಾಲಂಧ್ರಗಳಿಂದ ಕೂಡಿದ್ದು ಸರಳವಾಗಿ ಅಂಲಕೃತವಾಗಿರುತ್ತದೆ. ಭಿತ್ತಿಯ ಮೇಲೆ ಕೂಡುಗಳಿಂದ ಅಲಂಕೃತವಾದ ಕಪೋತವೂ ಅದರ ಮೇಲೆ ಶಾಲಾ, ಕೂಟ, ಪಂಜರಗಳಿಂದೊಡಗೂಡಿದ ಹಾರವೂ ಇರುತ್ತದೆ. ಶಿಖರ ಸಾಮಾನ್ಯವಾಗಿ ಘಟ್ಟಘಟ್ಟವಾಗಿ ಮೇಲೇಳುವ ದಾಕ್ಷಿಣಾತ್ಯ ಶೈಲಿಯದು (ಇದುವರೆಗೆ ಉಳಿದುಬಂದಿರುವ ನೊಳಂಬರ ಕಾಲದ ಶಿಖರಗಳೆಂದರೆ ನಂದಿಯಲ್ಲಿರುವ ಅರುಣಾಚಲೇಶ್ವರ ಮತ್ತು ಭೋಗನಂದೀಶ್ವರ ದೇವಾಲಯದಲ್ಲಿರುವವು). ದೇವಾಲಯದ ಒಳಭಾಗದ ಭಿತ್ತಿಗಳು, ಮಟ್ಟಸವಾಗಿ ಸರಳವಾಗಿರುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಕಂಬಗಳು ಮತ್ತು ಬಾಗಿಲುವಾಡಗಳು ಬಹಳಮಟ್ಟಿಗೆ ಸೂಕ್ಷ್ಮ ಅಲಂಕರಣವನ್ನು ಹೊಂದಿರುತ್ತವೆ. ಹಜಾರದ ಚಾವಣಿ ಸಾಮಾನ್ಯವಾಗಿ ನಾಲ್ಕು ಕಂಬಗಳಿಂದ ಎತ್ತಿದ ತೊಲೆಗಳಿಂದ ಒಂಬತ್ತು ಅಂಕಣಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ. ಮಧ್ಯದ ಅಂಕಣದ ಛತ್ತು ಒಂಬತ್ತು ಅಂಕಣಗಳಾಗಿ ವಿಂಗಡಿಸಲ್ಪಟ್ಟು, ಅಷ್ಟದಿಕ್ಪಾಲಕರುಗಳಿಂದ ಸುತ್ತುವರಿಯಲ್ಪಟ್ಟ ಶಿವನ ಶಿಲ್ಪವನ್ನು ಹೊಂದಿರುತ್ತದೆ. ನೊಳಂಬರ ಬಹುಪಾಲು ದೇವಾಲಯ ಗಳಲ್ಲಿ ಕಂಡುಬರುವ ಈ ರೀತಿಯ ಶಿಲ್ಪ ಸುಂದರವೂ ಸೂಕ್ಷ್ಮವೂ ಆಗಿರುತ್ತದೆ.

ನೊಳಂಬರ ದೇವಾಲಯಗಳು ಹೇಮಾವತಿ (ಆಂಧ್ರ ಪ್ರದೇಶ), ನಂದಿ, ಆವನಿ (ಕೋಲಾರ ಜಿಲ್ಲೆ) ಮತ್ತು ಧರ್ಮಪುರಿ (ತಮಿಳುನಾಡು) ಈ ಸ್ಥಳಗಳಲ್ಲಿ ಕಂಡು ಬಂದಿವೆ. ನೊಳಂಬರ ರಾಜಧಾನಿಯಾಗಿದ್ದ ಹೇಮಾವತಿಯಲ್ಲೇ ಇವರ ಐದು ದೇವಾಲಯಗಳನ್ನು ಕಾಣಬಹುದು. ದೊಡ್ಡೇಶ್ವರ ದೇವಾಲಯ ಇವುಗಳೆಲ್ಲದರಲ್ಲಿ ಮುಖ್ಯವಾದುದು. ಇಲ್ಲಿಯ ವೈಶಿಷ್ಟ್ಯವೆಂದರೆ ಹದಿನಾರು ಕಂಬಗಳಿರುವ ಹಜಾರ ಮತ್ತು ಗಂಗೆ, ವಿಷ್ಣು, ಬ್ರಹ್ಮ, ಕಾರ್ತಿಕೇಯ, ಮಿಥುನ ಮುಂತಾದ ವಿಗ್ರಹಗಳನ್ನು ಹೊಂದಿರುವ ಜಾಲಂಧ್ರಗಳು, ಚಾಳುಕ್ಯರ, ಕಲಾಶೈಲಿಯ ಪ್ರಭಾವವನ್ನು ಹೊಂದಿರುವ ಈ ಜಾಲಂಧ್ರಗಳು ನೊಳಂಬರ ಕಲೆಯಲ್ಲಿ ಅದ್ವಿತೀಯವಾ ದುವು. ಹೇಮಾವತಿಯ ಅಕ್ಕತಂಗಿ ಗುಡಿಗಳಲ್ಲಿ ಮುಂಚಿನ ಚೋಳರ ಕಲೆಯ ಪ್ರಭಾವವನ್ನು ಕಾಣಬಹುದು. ವಿರೂಪಾಕ್ಷ, ಮಲ್ಲೇಶ ಮತ್ತು ಸಿದ್ಧೇಶ್ವರ ದೇವಾಲಯಗಳು ಸುಂದರವಾದ ಬಾಗಿಲುವಾಡಗಳು ಮತ್ತು ಕಂಬಗಳನ್ನು ಹೊಂದಿವೆ.

ಆವನಿಯಲ್ಲಿರುವ ನೊಳಂಬರ ದೇವಾಲಯಗಳಲ್ಲಿ ಮುಖ್ಯವಾದು ದೆಂದರೆ ಲಕ್ಷ್ಮಣೇಶ್ವರ. ಈ ದೇವಾಲಯದ ಆಕರ್ಷಕ ಅಧಿಷ್ಠಾನ ನೊಳಂಬರ ದೇವಾಲಯ ಅಧಿಷ್ಠಾನಗಳಲ್ಲೆಲ್ಲಾ ಅತ್ಯುತ್ತಮವಾದುದು. ಇಲ್ಲಿಯ ಜಾಲಂಧ್ರಗಳು ಮತ್ತು ಸಣ್ಣ ಭಿತ್ತಿಕೋಷ್ಠಗಳು, ಕಂಬಗಳು, ಹಜಾರ, ಚಾವಣಿಯ ಅಷ್ಟದಿಕ್ಪಾಲಕ ಶಿಲ್ಪ ಮುಂತಾದವುಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ. ಲಕ್ಷ್ಮಣೇಶ್ವರ ದೇವಾಲಯದ ಆವರಣದಲ್ಲಿರುವ ಭರತೇಶ್ವರ, ಆಂಜನೇಶ್ವರ, ಶತ್ರುಘ್ನೇಶ್ವರ ದೇವಾಲಯ ಗಳು ಬಹಳಮಟ್ಟಿಗೆ ದುರಸ್ತಿಯಾಗಿದ್ದರೂ ಇವುಗಳ ಅಧಿಷ್ಠಾನ, ಕಂಬ, ಬಾಗಿಲುವಾಡ ಮುಂತಾದವುಗಳು ನೊಳಂಬರ ವಾಸ್ತುಶಿಲ್ಪದ ಪ್ರತೀಕವಾಗಿ ಉಳಿದಿವೆ.

ನಂದಿಯಲ್ಲಿರುವ ಒಂದೇ ಮಾದರಿಯ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳು ನೊಳಂಬರ ಕಾಲದ ಉತ್ತಮ ಕೃತಿಗಳು. ಅರುಣಾಚಲೇಶ್ವರ ದೇವಾಲಯದಲ್ಲಿರುವ ನಟರಾಜ ವಿಗ್ರಹ ಮತ್ತು ಬಳ್ಳಿಯ ಸುರುಳಿಗಳ ಅಲಂಕರಣವನ್ನು ಹೊಂದಿರುವ ಜಾಲಂಧ್ರಗಳ ಕಲಾವಂತಿಕೆ ಅಸಮ. ನೊಳಂಬಶೈಲಿಯ ಕಂಬಗಳು ಮತ್ತು ಹಜಾರ ಚಾವಣಿಯಲ್ಲಿರುವ ಅಷ್ಟದಿಕ್ಪಾಲಕರ ಶಿಲ್ಪಗಳು ಭೋಗನಂದೀಶ್ವರ ದೇವಾಲಯದ ಮುಖ್ಯ ಆಕರ್ಷಣೆ. ಈ ಎರಡು ದೇವಾಲಯಗಳ ಹಾರ ಮತ್ತು ಶಿಖರ ದ್ರಾವಿಡ ಶೈಲಿಯಲ್ಲಿದ್ದು ಉತ್ತಮ ಶಿಲ್ಪಗಳನ್ನು ಹೊಂದಿವೆ. ಈ ದೇವಾಲಯಗಳ ಮುಂದಿರುವ ನಂದಿಮಂಟಪಗಳು ಪ್ರಾಯಶಃ ಇದೇ ಕಾಲದವು.

ಧರ್ಮಪುರಿಯಲ್ಲಿರುವ ಎರಡು ದೇವಾಲಯಗಳು ಕಾಮಾಕ್ಷಿಯಮ್ಮ ಮತ್ತು ಮಲ್ಲಿಕಾರ್ಜುನ 9–10ನೆಯ ಶತಮಾನಕ್ಕೆ ಸೇರಿದವು. ಕಾಮಾಕ್ಷಿಯಮ್ಮ ದೇವಾಲಯದ ಉನ್ನತವಾದ ಅಧಿಷ್ಠಾನ ತಳಭಾಗದಲ್ಲಿ ಕಡೆಯಲ್ಪಟ್ಟಿರುವ ರಾಮಾಯಣ ಶಿಲ್ಪಕತೆ, ತಳಪಾದಿಯನ್ನು ಎತ್ತಿ ಹಿಡಿದಿರುವ ದಿಗ್ಗಜಗಳು ಮುಂತಾದ ಅಲಂಕರಣದಿಂದ ಕೂಡಿದ್ದು ಇಡೀ ನೊಳಂಬ ವಾಸ್ತುಶಿಲ್ಪದಲ್ಲಿ ವಿಶಿಷ್ಟ ರೀತಿಯದಾಗಿದೆ. ಪೌರಾಣಿಕ ಮತ್ತು ಧಾರ್ಮಿಕ ಶಿಲ್ಪಗಳನ್ನು ಒಳಗೊಂಡಿರುವ ಕಂಬಗಳು ಮತ್ತು ಅಷ್ಟದಿಕ್ಪಾಲಕರ ಶಿಲ್ಪವುಳ್ಳ ಚಾವಣಿ ಹಜಾರದ ಸೌಂದರ್ಯವನ್ನು ವರ್ಧಿಸಿವೆ. ನಾನಾ ರೀತಿಯ, ಸುಂದರವೂ ಸೂಕ್ಷ್ಮವೂ ಆದ ಉಬ್ಬುಶಿಲ್ಪಗಳುಳ್ಳ ಕಂಬಗಳು ಮತ್ತು ಅಷ್ಟದಿಕ್ಪಾಲಕರ ಶಿಲ್ಪವುಳ್ಳ ಹಜಾರದ ಚಾವಣಿ ಮಲ್ಲಿಕಾರ್ಜುನ ದೇವಾಲಯದ ಮುಖ್ಯ ಆಕರ್ಷಣೆ. **(ಎಂ.ಎಸ್.ಕೆ.)**

ನೊಳಂಬರು ಮೂಲತಃ ಶೈವರಾಗಿದ್ದುದರಿಂದ ಇವರ ಹೆಚ್ಚಿನ ಶಿಲ್ಪಗಳು ಶೈವಧರ್ಮಕ್ಕೆ ಸಂಬಂಧಪಟ್ಟವು. ಆದರೆ ಇವರ ಸಮನ್ವಯ ದೃಷ್ಟಿಯನ್ನು ಸೂಚಿಸುವಂತೆ ಕಂಬಗಳ ಮೇಲಿನ ಅಲಂಕರಣದಲ್ಲಿ ವೈಷ್ಣವ ಶಿಲ್ಪಗಳೂ ಇರುವುದುಂಟು. ಈ ಕಾಲದವುಗಳಲ್ಲಿ ಹೆಚ್ಚಿನವು ದೇವಾಲಯಗಳಲ್ಲಿ ಸ್ಥಾಪಿಸಲು ಮಾಡಿದ್ದ ದೇವಮೂರ್ತಿಗಳು ಮತ್ತು ವಾಸ್ತುಭಾಗವಾಗಿ ಬರುವ ಉಬ್ಬುಶಿಲ್ಪಗಳು, ಶೈಲಿಯ ದೃಷ್ಟಿಯಿಂದ ನೋಡಿದರೆ, ನೊಳಂಬ ವಾಸ್ತು ಕೃತಿಗಳಂತೆ ಶಿಲ್ಪಗಳಲ್ಲೂ ಕರ್ನಾಟಕ ಮತ್ತು ತಮಿಳುನಾಡಿನ ಶಿಲ್ಪಸಂಪ್ರದಾಯಗಳ ಸಂಗಮ ಕಂಡುಬರುತ್ತದೆ. ಅಲ್ಲದೆ ನೊಳಂಬರ ಕಾಲ ಕರ್ನಾಟಕ ಶಿಲ್ಪ ಪರಂಪರೆಯಲ್ಲಿ ಪ್ರಾಚೀನ ನೈಸರ್ಗಿಕ ನಿರೂಪಣಾ ಪದ್ಧತಿಯಿಂದ ನಡುಗಾಲದ ಅತ್ಯಲಂಕರಣಾತ್ಮಕ ನಿರೂಪಣಾ ಪದ್ಧತಿಗೆ ಪರಿವರ್ತನೆಯನ್ನು ಹೊಂದುತ್ತಿದ್ದ ಕಾಲವಾದ್ದ ರಿಂದ, ಈ ಕಾಲದ ಶಿಲ್ಪಗಳಲ್ಲಿ ಈ ಪರಿವರ್ತನೆಯ ಧಾಟಿ ಎದ್ದುಕಾಣು ತ್ತದೆ. ದೇವಮೂರ್ತಿಗಳಲ್ಲಿ ಕೆಲವು ಸಲ ಆಯುಧಗಳನ್ನು ಸ್ವಾಭಾವಿಕ ರೀತಿಯಲ್ಲೂ ಕೆಲವು ಸಲ ಕೃತಕವಾಗಿ ಆದರೆ ಕಲಾತ್ಮಕವಾಗಿ ಹಿಡಿದಿರು ವಂತೆ ನಿರೂಪಿಸಿರುವುದು ಈ ಅಂಶಕ್ಕೆ ಒಳ್ಳೆಯ ಉದಾಹರಣೆ. ಹಾಗೆಯೇ ಈ ಕಾಲದ ಶಿಲ್ಪಗಳು ಅಲಂಕೃತವಾಗಿದ್ದರೂ ಅಲಂಕರಣದ ಪರಿಮಾಣ ಪ್ರಾಚೀನ ಪಲ್ಲವ ಚಳುಕ್ಯಾದಿ ಶಿಲ್ಪಗಳಿಗಿಂತ ಹೆಚ್ಚಾಗಿಯೂ ಮುಂದಿನ ಹೊಯ್ಸಳ ಶಿಲ್ಪಗಳಿಗಿಂತ ಕಡಿಮೆಯಾಗಿಯೂ ಇರುತ್ತದೆ. ಈ ಹಲವು ಕಾರಣಗಳಿಂದ ನೊಳಂಬ ಶಿಲ್ಪಗಳ ನಿರೂಪಣೆ ಮತ್ತು ಅಲಂಕರಣದಲ್ಲಿ ಒಂದು ರೀತಿಯ ನಾವೀನ್ಯತೆ, ರಮ್ಯತೆ ಲಾಲಿತ್ಯ, ಚೆಲುವುನಿಲುವು ಮತ್ತು ಮುಖಭಂಗಿ ಪ್ರಮುಖವಾಗಿ ಕಾಣುತ್ತವೆ. *

ಈಗ ಮದರಾಸು ವಸ್ತುಸಂಗ್ರಹಾಲಯದಲ್ಲಿರುವ, ಪೆನುಗೊಂಡೆಯ ಶಿವ ಪಾರ್ವತಿಯರ ಕುಳಿತ ಭಂಗಿಯ ವಿಗ್ರಹ ಇವರ ಶಿಲ್ಪಕಲೆಯ

ಮೇರುಕೃತಿ. ಇದು 9ನೆಯ ಶತಮಾನದ್ದು. ಈ ವಿಗ್ರಹದ ಮುಖಭಂಗಿ ಮತ್ತು ಸುಂದರ ಅಲಂಕರಣ ಬಹು ಆಕರ್ಷಕವಾಗಿವೆ. ಇದೇ ಸಂಗ್ರಹಾಲಯದಲ್ಲಿರುವ ನೊಳಂಬ ಕಾಲದ ವೀಣಾಧರ ದಕ್ಷಿಣಾಮೂರ್ತಿ ಮತ್ತು ಸೂರ್ಯ ಭವ್ಯವಾದುವು. ದಕ್ಷಿಣಾ ಮೂರ್ತಿಯ ಜಟಾವಿನ್ಯಾಸ ಸ್ವಲ್ಪಮಟ್ಟಿಗೆ ಚೋಳ ಶೈಲಿಯದು. ಭವ್ಯವಾದ ಸಮಭಂಗಿಯಲ್ಲಿ ನಿಂತಿರುವ ಸೂರ್ಯವಿಗ್ರಹ ದೃಢತೆಯನ್ನೂ ಅಚಲತೆಯನ್ನೂ ಸಾರುತ್ತದೆ. ಅಧಿಕವಾಗಿ ಅಲಂಕೃತವಾದ, ಕೈಯಲ್ಲಿ ಕಮಲಗಳನ್ನು ಹಿಡಿದಿರುವ ಈ ವಿಗ್ರಹದ ಮುಖಮುದ್ರೆ ಗಂಭೀರವಾಗಿದೆ. ಇದೇ ರೀತಿಯ ಅನೇಕ ಸೂರ್ಯ ವಿಗ್ರಹಗಳಿವೆ.

ನೊಳಂಬರ ಶೈಲಿಯ ಕಾಳಿಯ ವಿಗ್ರಹಗಳು ವಿಭಿನ್ನವಾದುವು. ದೃಢವಾದ ಮೈಕಟ್ಟು, ಸೌಮ್ಯವೆಂದೇ ಹೇಳಬಹುದಾದ ಮುಖಮುದ್ರೆ, ಜಟಾಮುಕುಟ, ಕಪಾಲಮಾಲೆ, ನಾಗಕುಚಬಂಧ, ತೋಳ್ಬಂದಿ ಮುಂತಾದವುಗಳನ್ನು ಹೊಂದಿರುವ ಈ ವಿಗ್ರಹಗಳು ಅತ್ಯಂತ ಆಕರ್ಷಕವಾಗಿವೆ. ಈ ಶೈಲಿಯ ಸಪ್ತಮಾತೃಕೆಯರ ಶಿಲ್ಪಗಳನ್ನು ಈ ಕಾಲದ ಪ್ರತಿಯೊಂದು ದೇವಾಲಯದಲ್ಲಿಯೂ ಕಾಣಬಹುದು. ಒಂದೇ ಕಲ್ಲಿನಲ್ಲಿ ಸಾಲಾಗಿ ಕೆತ್ತಿರುವ ಮತ್ತು ಬೇರೆ ಬೇರೆಯಾಗಿ ಇರುವ ಈ ವಿಗ್ರಹಗಳು ಅನೇಕ. ಇವುಗಳ ಪೈಕಿ ಹೇಮಾವತಿಯ ದೊಡ್ಡೇಶ್ವರ ದೇವಾಲಯದಲ್ಲಿರುವ ಸಹಜಾಕಾರದಲ್ಲಿರುವ ನಾಲ್ಕು ಮಾತೃಕೆಯರ ವಿಗ್ರಹಗಳು ಮುಖ್ಯವಾದುವು. ಎತ್ತರವಾದ ಪೀಠದ ಮೇಲೆ ಕುಳಿತಿರುವ ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ ಮತ್ತು ವಾರಾಹೀ ವಿಗ್ರಹಗಳು ಮೋಹಕವಾಗಿವೆ. ಇವುಗಳಲ್ಲಿ ನೈಜ ದೈಹಿಕ ಸೌಂದರ್ಯವನ್ನು ಮೂಡಿಸುವಲ್ಲಿ ಶಿಲ್ಪಿ ಸಫಲನಾಗಿದ್ದಾನೆ.

## ನೊಳಂಬರ ವಂಶಾವಳಿ

- ತ್ರಿಣಯನ ಪಲ್ಲವ
  - ಮಂಗಳ ನೊಳಂಬಾಧಿರಾಜ (ಸು. 730–75)
    - ಸಿಂಹಪೋತ (ಸು. 775–805)
      - ಚಾರುಪೊನ್ನೇರ (ಪರಮೇಶ್ವರ ಪಲ್ಲವಾಧಿರಾಜ, ಸು. 805–30)
        - ಪೊಳಲ್ಚೋರ I (ನೊಳಂಬಾಧಿರಾಜ, 830–75) (ಪತ್ನಿ: ಗಂಗಕುಲದ ಜಾಯಬ್ಬೆ)
          - ಮಹೇಂದ್ರ I (ನೊಳಂಬಾಧಿರಾಜ, ಸು. 875–97) (ಪತ್ನಿ: ಗಂಗಕುಲದ ಗಾಮಬ್ಬೆ)
            - ಅಯ್ಯಪದೇವ (ನೊಳಂಬಾಧಿರಾಜ ನೊಳಿಪಯ್ಯ, ನನ್ನಿಗಾಶ್ರಯ, 897–ಸು. 934) (ಪತ್ನಿ: ಗಂಗಕುಲದ ಪೊಲ್ಲಬ್ಬರಸಿ)
              - ಅಣ್ಣಿಗ (ಬೀರನೊಳಂಬ, ಸು. 934–40) (ಪತ್ನಿ: ಚಾಳುಕ್ಯ ಕುಲದ ಅತ್ತಿಯಬ್ಬರಸಿ)
                - ಇರುಳಚೋರ
              - ದಿಲೀಪ (ಇಱಿವನೊಳಂಬ, ಸು. 940–68) (ಪತ್ನಿ: ಪಿರಿಯಬ್ಬರಸಿ)
                - ನನ್ನಿನೊಳಂಬ (ಚಲಂದಕಕಾರ, ಸು. 968–70)
                  - ಪೊಳಲ್ಚೋರ II (ರಾಜಮನೋಜ) (ಪತ್ನಿ: ಕದಂಬ ವಂಶದ ದೀವಬ್ಬರಸಿ)
                    - ಮಹೇಂದ್ರ II (ಸು. 977–81) (ಪತ್ನಿ: ರೇವಲದೇವಿ)
                    - ಇಱಿವನೊಳಂಬ II (ಘಟೆಯಂಕಕಾರ, ಸು. 1010–24) (ಪತ್ನಿ: ಚಾಳುಕ್ಯ ಕುಲದ ಮಹಾದೇವಿ)
                      - ಜಗದೇಕಮಲ್ಲ ನೊಳಂಬ, ಪಲ್ಲವ ಉದಯಾದಿತ್ಯದೇವ (ಸು. 1024–37)
                        - ಜಗದೇಕಮಲ್ಲ ಈರ್ಮಡಿ ನೊಳಂಬ (ಸು. 1037–44)
                        - ತ್ರೈಲೋಕ್ಯಮಲ್ಲ ನನ್ನಿನೊಳಂಬ (ಸು. 1044–54)
                - ಅಯ್ಯಪದೇವ II (ಸು. 949–66)
                  - ಗನ್ನರಸ (997)
              - ಮಯ್ದುನೊಳಿಪ (ಸು. 918)
              - ಅಂಕಯ್ಯ (ಸು. 897)

ನೊಳಂಬರ ಶಿಲ್ಪದ ಮತ್ತೊಂದು ಮೇರುಕೃತಿಯೆಂದರೆ ಹೇಮಾವತಿಯಲ್ಲಿರುವ, ಬಾದಾಮಿ ಚಳುಕ್ಯರ ಶೈಲಿಯನ್ನನುಸರಿಸಿ ಮಾಡಿರುವ ಮಹಿಷಾಸುರ ಮರ್ದಿನಿ, ಚಿಕ್ಕದಾದರೂ ಚೊಕ್ಕವಾಗಿರುವ ದೇವಿಯ ಈ ಸುಂದರ ವಿಗ್ರಹಕ್ಕೆ ಸರಿಸಾಟಿಯಾದುದು ಇಡೀ ದಕ್ಷಿಣ ಭಾರತದಲ್ಲೇ ದುರ್ಲಭ. ತ್ರಿಶೂಲ, ಚಕ್ರಧಾರಿಯಾಗಿ ಮಹಿಷಾಸುರನನ್ನು ಅನಾಯಾಸವಾಗಿ ಸಂಹರಿಸುತ್ತಿರುವ ದೇವಿಯ ಈ ವಿಗ್ರಹ ತ್ರಿಪರಿಮಾಣದ ಶಿಲ್ಪಕ್ಕೆ ಒಂದು ಉತ್ತಮ ನಿದರ್ಶನ. ನೊಳಂಬರ ಶಿಲ್ಪದಲ್ಲಿ ಮಹಿಷಾಸುರ ಮರ್ದಿನಿಗೆ ವಿಶಿಷ್ಟವಾದ ಸ್ಥಾನವಿದೆ. ಅನೇಕ ರೀತಿಯ ಮತ್ತು ವಿವಿಧ ಭಂಗಿಯ ದೇವಿಯ ಶಿಲ್ಪಗಳು ಬಾಗಿಲುವಾಡಗಳಲ್ಲಿ, ಜಾಲಂಧ್ರಗಳಲ್ಲಿ, ಕಂಬಗಳಲ್ಲಿ ಹಾಗೂ ಬಿಡಿಯಾಗಿ ಸಿಕ್ಕುತ್ತವೆ.



ಮಲ್ಲಿಕಾರ್ಜುನ ದೇವಾಲಯದ ದ್ವಾರ, ಹೇಮಾವತಿ

ನೊಳಂಬರ ಕಾಲದ ನಂದಿಯ ಶಿಲ್ಪಗಳು ಬಹಳ ರಮಣೀಯವಾದವುಗಳು. ಬಹಳಮಟ್ಟಿಗೆ ವೆಂಗಿ ಚಾಳುಕ್ಯರ ನಂದಿಗಳನ್ನು ಇವು ಹೋಲುತ್ತವೆ. ತರಂಗಾಕೃತಿಯ ಗಂಗೆದೊಗಲು ಉನ್ನತವಾದ ಹಿಣಿಲು ಮತ್ತು ಬಲಿಷ್ಟ ದೇಹವನ್ನು ಹೊಂದಿದ್ದು ಮೋಹಕವಾದ ಭಂಗಿಯಲ್ಲಿ ಕುಳಿತಿರುವ ಈ ನಂದಿ ವಿಗ್ರಹಗಳು ಕತ್ತಿನಿಂದ ಇಳಿಬಿದ್ದು ಮುಂಭಾಗದ ನೆಲದ ಮೇಲೆ ಹರಡಿಕೊಂಡಿರುವ ಘಂಟಾಹಾರ, ಗೆಜ್ಜೆಯಹಾರ ಮತ್ತು ಶಿರಪಟ್ಟಿಗಳನ್ನು ಹೊಂದಿರುತ್ತವೆ.

ಈ ಕಾಲದ ಜಾಲಂಧ್ರಗಳು ವಾಸ್ತುಶಿಲ್ಪದ ಅಂಗಗಳೆಂದು ಪರಿಗಣಿಸಲ್ಪಡಬೇಕಾದರೂ ಅವುಗಳ ತಯಾರಿಕೆಯಲ್ಲಿ ಕಂಡುಬರುವ ಕೌಶಲ್ಯ ಮತ್ತು ಅವುಗಳೊಳಗೆ ನಿರೂಪಿತವಾಗಿರುವ ಸುಂದರ ಮೂರ್ತಿಶಿಲ್ಪಗಳಿಂದ ಅವನ್ನು ಶಿಲ್ಪಗಳ ಸಾಲಿಗೇ ಸೇರಿಸಬಹುದು. ಬಾದಾಮಿ ಚಳುಕ್ಯರ ದೇವಾಲಯಗಳಲ್ಲಿ ವಾಸ್ತು ಆವಶ್ಯಕತೆಗೆ ಪೂರಕವಾಗಷ್ಟೇ ಇದ್ದ ಜ್ಯಾಮಿತಿಕ ವಿನ್ಯಾಸಗಳೊಡನಿದ್ದ ಈ ಜಾಲಂಧ್ರಗಳು ನೊಳಂಬ ಶಿಲ್ಪಿಗಳ ಕೈಯಲ್ಲಿ ಮೂರ್ತಿಶಿಲ್ಪದ ಮಾಧ್ಯಮವಾಗಿಯೂ ಬೆಳೆಯಿತು. ಈ ಜಾಲಂಧ್ರಗಳು ಒಂದೇ ಕಲ್ಲಿನಿಂದ ಮಾಡಲ್ಪಟ್ಟಿದ್ದು ದೇವಕೋಷ್ಠ ಅಥವಾ ದ್ವಾರದ ಎಲ್ಲಾ ಅಂಗಗಳನ್ನು, ಅಂದರೆ ಎರಡೂ ಪಕ್ಕಗಳಲ್ಲಿ ನಿಧಿಗಳು, ಗೋಡೆಗಂಬಗಳು, ಹಾಸುಗಲ್ಲು, ಕಪೋತ ಮುಂತಾದವುಗಳನ್ನು ಹೊಂದಿದ್ದು ಮಧ್ಯ ಭಾಗದಲ್ಲಿ ಸುಂದರವಾದ ಮೂರ್ತಿಶಿಲ್ಪವನ್ನೋ ಅಥವಾ ಬಳ್ಳಿಯ ಸುರುಳಿಯನ್ನೋ ಹೊಂದಿರುತ್ತವೆ. ವಿಗ್ರಹಗಳ ಅಕ್ಕಪಕ್ಕಗಳಲ್ಲಿ ಸಣ್ಣದಾದ ರಂಧ್ರಗಳಿದ್ದು ದೇವಾಲಯದ ಒಳಭಾಗಕ್ಕೆ ಆವಶ್ಯಕವಾದ ಗಾಳಿ ಬೆಳಕು ಬರುತ್ತದೆ. ಕೆಲವು ಸಲ ಈ ಜಾಲಂಧ್ರಗಳಿಗೆ ವಾಸ್ತುಶಿಲ್ಪದ ಅಲಂಕರಣಗಳ ಬದಲು ಕೇವಲ ಒಂದು ಚಪ್ಪಟೆಯಾದ ಅಂಚು ಮಾತ್ರ ಇರುವ ನಿದರ್ಶನಗಳೂ ಉಂಟು. ನೊಳಂಬರ ಜಾಲಂಧ್ರಗಳಿಗೆ ಉತ್ತಮ ನಿದರ್ಶನವೆಂದರೆ ಹೇಮಾವತಿಯ ದೊಡ್ಡೇಶ್ವರ ದೇವಾಲಯದಲ್ಲಿರುವವು. ಇವು ಗಂಗಾ, ಮಿಥುನ, ಬ್ರಹ್ಮ, ವಿಷ್ಣು, ಕಾರ್ತಿಕೇಯ ಮುಂತಾದ ವಿಗ್ರಹಗಳನ್ನು ಹೊಂದಿವೆ. ಇವಲ್ಲದೆ ಒಂದು ಸುಂದರವಾದ ಜಾಲಂಧ್ರದಲ್ಲಿ ಸರ್ಪಗತಿಯಲ್ಲಿ ಮೇಲೇರುವ ಲತೆ ಮತ್ತು ಇದರ ಅರ್ಧ ಸುರುಳಿಗಳ ನಡುವೆ ಸೂಕ್ಷ್ಮವಾಗಿ ಕೊರೆದಿರುವ, ನರ್ತಿಸುತ್ತಿರುವ ಹೆಂಗಸರು, ಗಂಡಸರು ಮತ್ತಿತರ ವಾದ್ಯವೃಂದದವರ ಶಿಲ್ಪಗಳಿವೆ. ಇದರಲ್ಲಿ ಕಂಡುಬರುವ ಪ್ರಕೃತಿಯ ಮತ್ತು ಮಾನವ ವಸ್ತುಗಳ ಸಮ್ಮಿಳನ ಊಹೆಗೂ ನಿಲುಕದಷ್ಟು ಸುಂದರವಾಗಿದೆ. ರಾಜೇಂದ್ರಚೋಳ ತನ್ನ ವಿಜಯದ ಸಂಕೇತವಾಗಿ ನೊಳಂಬವಾಡಿಯಿಂದ ತೆಗೆದುಕೊಂಡು ಹೋಗಿ ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ ಸ್ಥಾಪಿಸಿರುವ ಹಸಿರು ಕಲ್ಲಿನ ಜಾಲಂಧ್ರ- ಇನ್ನೊಂದು ಉತ್ಕೃಷ್ಟ ಕೃತಿ. ನೊಳಂಬರ ಎಲ್ಲಾ ದೇವಾಲಯದಲ್ಲಿಯೂ ಈ ರೀತಿಯ ಜಾಲಂಧ್ರಗಳನ್ನು ಕಾಣಬಹುದು.

ನೊಳಂಬರ ಕಾಲದ ಕಂಬಗಳು ವಾಸ್ತು ಅಂಗಕ್ಕಿಂತ ಹೆಚ್ಚಾಗಿ ಶಿಲ್ಪಕೃತಿಗಳೇ ಆಗಿವೆ. ಸ್ಪಷ್ಟವಾಗಿ ಮತ್ತು ನಾಜೂಕಾಗಿ ಕಡೆಯಲ್ಪಟ್ಟ ಸಂಪೂರ್ಣವಾಗಿ ನೊಳಂಬರ ಶೈಲಿಯದೆಂದೇ ಹೇಳಬಹುದಾದ ಸ್ಥಂಭಗಳು, ಸಣ್ಣದಾದ ಒಂದು ಅಧಿಷ್ಠಾನ, ಚಚ್ಚೌಕವಾದ ಒಂದೇ ಕಲ್ಲಿನ ಕಂಬ. ಶಿರ ಮತ್ತು ಬೋದಿಗೆಗಳನ್ನು ಹೊಂದಿರುತ್ತವೆ. ಕಂಬದ ಮಧ್ಯಭಾಗ ನಾಲ್ಕೂ ಮೂಲೆಗಳಲ್ಲಿ ಕಚ್ಚು ಮಾಡಲ್ಪಟ್ಟು ಮಧ್ಯಭಾಗದ ನಾಲ್ಕು ಮುಖಗಳಲ್ಲಿ ಒಂದೊಂದು ಲಂಬಪಟ್ಟಿಯಿರುತ್ತದೆ. ಕಂಬದ ಕೆಳಭಾಗ ಅಲಂಕಾರರಹಿತ. ಮೇಲ್ಭಾಗ ನಾಲ್ಕೂ ಕಡೆಗಳಲ್ಲಿ ಸುಂದರವಾದ ಮತ್ತು ನವಿರಾದ ಉಬ್ಬುಶಿಲ್ಪವನ್ನು ಹೊಂದಿರುತ್ತದೆ. ಪ್ರತಿಯೊಂದು ಮುಖದಲ್ಲಿಯೂ ಅರ್ಧವೃತ್ತಾಕಾರದ ತಿರುಚಿದ ಎರಡೆರಡು ಮುತ್ತಿನ ಮಾಲೆಗಳಿದ್ದು ಇವುಗಳ ಮಧ್ಯಭಾಗದಲ್ಲಿ ಧಾರ್ಮಿಕ, ಲೌಕಿಕ ಮತ್ತು ನೈಸರ್ಗಿಕ ವಿಷಯಗಳು ಶಿಲ್ಪಿತವಾಗಿರುತ್ತವೆ. ಇದರ ಮೇಲ್ಭಾಗದಲ್ಲಿ ಸುಂದರವಾದ ಎಳೆಯ ಬಳ್ಳಿಗಳೂ ಕೀರ್ತಿಮುಖದ ಸಾಲೂ ಇರುತ್ತವೆ. ಅವುಗಳ ಮೇಲ್ಭಾಗದಲ್ಲಿ ಕಂಬವು ದುಂಡಾಗಿದ್ದು ನಾಲ್ಕೂ ಮೂಲೆಗಳಲ್ಲಿ ಒಂದೊಂದು ಸಣ್ಣದಾದ ಕುಳಿತಿರುವ ಸಿಂಹಗಳನ್ನು ಹೊಂದಿರುತ್ತವೆ. ಕಂಬದ ಬೋದಿಗೆಯು ದುಂಡಾಗಿ ಮೆತ್ತೆಯಾಕಾರವಾಗಿದ್ದು, ಕೆಲವು ಸಲ ಬಹಳ ನುಣುಪಾಗಿರುತ್ತದೆ. ರಾಜರಾಜ ಚೋಳನು ನೊಳಂಬವಾಡಿಯಿಂದ ಸಾಗಿಸಿ ತಂಜಾವೂರಿನ ಬಳಿ ಇರುವ ತಿರುವಾಯೂರಿನ ದೇವಾಲಯದಲ್ಲಿ ಸ್ಥಾಪಿಸಿರುವ ನೊಳಂಬರ ಐವತ್ತು ಕಂಬಗಳು ಅವರ ಶೈಲಿಯ ಕಂಬಗಳ ಕಲಾಸೌಂದರ್ಯಕ್ಕೆ ಸಾಕ್ಷಿ.

ನೊಳಂಬರ ಸೂಕ್ಷ್ಮ ಶಿಲ್ಪಕ್ಕೆ ಮತ್ತೊಂದು ನಿದರ್ಶನ ಅವರ ದೇವಾಲಯದ ಬಾಗಿಲುವಾಡಗಳು. ಹೆಚ್ಚಿನಮಟ್ಟಿಗೆ ಬಾದಾಮಿ ಚಳುಕ್ಯರ

ದೇವಾಲಯದ ಬಾಗಿಲುಗಳ ಮಾದರಿಯನ್ನು ಹೊಂದಿರುವ ಇವುಗಳು ಚಳುಕ್ಯರ ಮಾದರಿಯವುಗಳಿಗಿಂತ ಸುಂದರವಾಗಿವೆ. ನೊಳಂಬರ ಬಾಗಿಲುವಾಡಗಳ ವಿಶೇಷವೆಂದರೆ ಬಳ್ಳಿಸುರುಳಿಗಳು, ಮುತ್ತಿನ ಹಗ್ಗಗಳು, ನೀಳವಾಗಿರುವ ಅರೆಗಂಬಗಳು, ಯಾಳಿಗಳು, ಚಿತ್ರಪಟ್ಟಿಗಳು ಮತ್ತು ಇವುಗಳನ್ನು ಬೇರ್ಪಡಿಸುವ ಆಳವಾದ ಗಾಡಿಗಳು ಮುಂತಾದವುಗಳ ಅಲಂಕರಣ. ಬಾಗಿಲಿನ ಎರಡೂ ಕಡೆಗಳಲ್ಲಿ ಗಜಾರೂಢರಾದ ಶ್ರೀನಿಧಿ ಪದ್ಮನಿಧಿಗಳು, ಗಂಗಾ–ಯಮುನಾ ಮತ್ತು ದ್ವಾರಪಾಲಕರು ಇದ್ದು ಬಾಗಿಲುವಾಡದ ಮೇಲ್ಭಾಗದಲ್ಲಿ ಕುಳಿತಿರುವ ಗಜಲಕ್ಷ್ಮಿ ಮತ್ತು ಮಂಗಳ ಚಿಹ್ನೆಗಳು ಇರುತ್ತವೆ. ಬಾಗಿಲಿನ ಮೇಲ್ಭಾಗದಲ್ಲಿ ಇಳಿಜಾರಾದ ಕೂಡುಗಳಿಂದ ಕೂಡಿದ ಕಪೋತ ಮತ್ತು ಅದರ ಮೇಲೆ ಸಣ್ಣ ಸಣ್ಣ ಮಂಟಪಗಳ ಸಾಲಿನಿಂದ ಮಾಡಿದ ಕೈಪಿಡಿಗೋಡೆಗಳಿದ್ದು ಇಡೀ ಬಾಗಿಲುವಾಡವು ಆಕರ್ಷಣೀಯ ಶಿಲ್ಪ ಸಂಯೋಜನೆಯಾಗಿರುತ್ತದೆ. ನುಣುಪಾದ ಮತ್ತು ಮೃದುವಾದ ಕಲ್ಲಿನಿಂದ ಮಾಡಲ್ಪಟ್ಟಿರುವ ಇವು ನೊಳಂಬರ ಸೂಕ್ಷ್ಮಶಿಲ್ಪಕ್ಕೆ ಒಂದು ಉತ್ತಮ ನಿದರ್ಶನವಾಗಿರುವುದೇ ಅಲ್ಲದೆ ದೇವಾಲಯದ ಸೌಂದರ್ಯವನ್ನು ವರ್ಧಿಸುವ ಮುಖ್ಯ ಸಾಧನವಾಗಿವೆ. (ಎಂ.ಎಸ್.ಕೆ;*)

**ನೊಳಂಬವಾಡಿ:** ಕರ್ನಾಟಕದ ಪೂರ್ವಭಾಗದಲ್ಲಿದ್ದ ಒಂದು ಪ್ರಾಚೀನ ಪ್ರಾಂತ್ಯ. ಎಂಟನೆಯ ಶತಮಾನದಿಂದ ಸುಮಾರು ಹನ್ನೊಂದ ನೆಯ ಶತಮಾನದವರೆಗೆ ಈ ಪ್ರಾಂತ್ಯದಲ್ಲಿ ಆಳಿದ ನೊಳಂಬರಿಂದ ನೊಳಂಬವಾಡಿ ಎಂದು ಹೆಸರು ಬಂತು. ಚಿತ್ರದುರ್ಗ ಜಿಲ್ಲೆಯನ್ನು ಕೇಂದ್ರಸ್ಥಾನವಾಗಿ ಹೊಂದಿದ್ದ ನೊಳಂಬಳಿಗೆ ಸಾಸಿರವೆಂಬ ಪ್ರಾಂತ್ಯ ಕಾಲಕ್ರಮೇಣ ವಿಸ್ತರಿಸಲ್ಪಟ್ಟು ಒಂಬತ್ತನೆಯ ಶತಮಾನದ ಆದಿಭಾಗದಲ್ಲಿ ನೊಳಂಬವಾಡಿ 32,000 ಎಂಬ ವಿಸ್ತಾರ ಪ್ರಾಂತ್ಯವಾಯಿತು. ಇದು ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಆಂಧ್ರ ಪ್ರದೇಶದ ಅನಂತಪುರ ಈ ಜಿಲ್ಲೆಗಳನ್ನು ಮತ್ತು ಇದಕ್ಕೆ ಸೇರಿಕೊಂಡಂತಿರುವ ಚಿತ್ತೂರು, ಧರ್ಮಪುರಿ, ಬೆಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳನ್ನು ಒಳಗೊಂಡಿದ್ದಿತು. ಈ ವಿಶಾಲ ಪ್ರಾಂತ್ಯದ ರಾಜಧಾನಿ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೆಂಜೇರು ಅಥವಾ ಹೇಮಾವತಿ. ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯದಲ್ಲಿದ್ದ ಈ ಪ್ರಾಂತ್ಯದಲ್ಲಿ ಅನೇಕ ಕದನಗಳು ನಡೆದವು. ನೊಳಂಬರು, ತಲಕಾಡಿನ, ಗಂಗರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ಸೇವುಣರು ಮುಂತಾದ ವಿವಿಧ ರಾಜಮನೆತನಗಳು ಈ ಪ್ರಾಂತ್ಯದ ಮೇಲೆ ಇಲ್ಲವೇ ಇದರ ವಿವಿಧ ಭಾಗಗಳ ಮೇಲೆ ಆಳಿಕೆ ನಡೆಸಿದವು. ಹತ್ತನೆಯ ಶತಮಾನದ ಅಂತ್ಯದಲ್ಲಿ ಒಂದನೆಯ ರಾಜರಾಜ ಚೋಳ ನೊಳಂಬವಾಡಿಯ ದಕ್ಷಿಣಭಾಗಗಳನ್ನು ಆಕ್ರಮಿಸಿಕೊಂಡ. ಅನಂತರ ಹೊಯ್ಸಳ ವಿಷ್ಣುವರ್ಧನ ನೊಳಂಬವಾಡಿಯನ್ನು ಆಕ್ರಮಿಸಿಕೊಂಡು ನೊಳಂಬವಾಡಿಗೊಂಡ ಎಂಬ ಬಿರುದನ್ನು ಧರಿಸಿದ.

ತಮಿಳುರಾಜ್ಯಗಳ ಮೇಲೆ ದಂಡಯಾತ್ರೆ ಮಾಡುವುದಕ್ಕೆ ಇದು ಮುಖ್ಯ ದಾರಿಯಾಗಿ ಉತ್ತಮ ಆಯಕಟ್ಟಿನ ಪ್ರದೇಶವಾಗಿದ್ದುದರಿಂದ ಇದರ ಪ್ರಾಮುಖ್ಯ ಹೆಚ್ಚಿತ್ತು. ಅನೇಕ ಅಭೇದ್ಯವಾದ ದುರ್ಗಗಳಿಂದ ಕೂಡಿದ್ದು ಈ ಪ್ರಾಂತ್ಯದ ಹೆಚ್ಚಳಕ್ಕೆ ಕಾರಣವಾಯಿತು. ನಂದಿ, ಮಿಡಿಗೇಶಿ, ಮಡಕಶಿರಾ, ಉಚ್ಚಂಗಿ ಮುಂತಾದ ದುರ್ಗಗಳು ಈ ಪ್ರಾಂತ್ಯದ ಮುಖ್ಯ ಸ್ಥಳಗಳು. ಹೊಯ್ಸಳರು ಮತ್ತು ಸೇವುಣರ ಪತನಾನಂತರ ಈ ಪ್ರಾಂತ್ಯ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಅನಂತರದ ಶಾಸನಗಳಲ್ಲಿ ನೊಳಂಬವಾಡಿಯ ಹೆಸರು ಕಾಣಬರುವುದಿಲ್ಲ. (ಎ.ವಿ.ಎನ್.)

**ನ್ಯಾಮತಿ:** ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಒಂದು ಗ್ರಾಮ. ಹೊನ್ನಾಳಿ–ಆಯನೂರು ರಸ್ತೆಯಲ್ಲಿ ಹೊನ್ನಾಳಿ ಪಟ್ಟಣದ ನೈಋತ್ಯದಲ್ಲಿ ಸು. 13 ಕಿಮೀ ದೂರದಲ್ಲಿ ತುಂಗಭದ್ರಾನದಿಯ ಎಡದಂಡೆಯ ಮೇಲಿದೆ. ದಿವಾನ್ ಪೂರ್ಣಯ್ಯನ ಕಾಲದಲ್ಲಿ ಇದು ಪೇಟೆ ಸ್ಥಳವಾಗಿ ಅಭಿವೃದ್ಧಿಯಾಯಿತು. 1869–82 ರವರೆಗೆ ಇದೇ ಹೊನ್ನಾಳಿ ತಾಲ್ಲೂಕಿನ ಮುಖ್ಯಸ್ಥಳವಾಗಿತ್ತು. ಈ ಊರು ಮಲೆನಾಡು ಮತ್ತು ಮೈದಾನ ಪ್ರದೇಶಗಳ ಮಧ್ಯಭಾಗದಲ್ಲಿರುವುದರಿಂದ ಒಳ್ಳೆಯ ವ್ಯಾಪಾರಸ್ಥಳವಾಗಿದೆ. ನಗರ ಮತ್ತು ಕೊಪ್ಪದಿಂದ ಬರುವ ಅಡಕೆ ಮತ್ತು ಮಲೆನಾಡು ಪ್ರದೇಶದಿಂದ ಬರುವ ಧಾನ್ಯ, ಬೆಲ್ಲ – ಇವನ್ನು ಶೇಖರಿಸಿ ಇಲ್ಲಿಂದ ಬಳ್ಳಾರಿ, ಧಾರವಾಡ ಮುಂತಾದ ಪಟ್ಟಣಗಳಿಗೆ ಕಳುಹಿಸಲಾಗುತ್ತದೆ. ಅವುಗಳಿಗೆ ಬದಲಾಗಿ ಬಟ್ಟೆ ಮತ್ತಿತರ ವಸ್ತುಗಳನ್ನು ಮಲೆನಾಡು ಪ್ರದೇಶಗಳಿಗೆ ಒದಗಿಸಲಾಗುತ್ತದೆ. ಹತ್ತಿಯ ವ್ಯಾಪಾರ ಉಂಟು. ಶಿವಮೊಗ್ಗ ಹೊನ್ನಾಳಿ ಮಧ್ಯದಲ್ಲಿ ಬರುವ ನ್ಯಾಮತಿಗೆ ಉತ್ತಮ ಮಾರ್ಗಗಳಿದ್ದು ವಾಹನಸೌಲಭ್ಯವಿದೆ. ನ್ಯಾಮತಿಯಲ್ಲಿ ಒಂದು ಜೂನಿಯರ್ ಕಾಲೇಜು ಮತ್ತು ಆರೋಗ್ಯ ಕೇಂದ್ರ ಇವೆ. ನ್ಯಾಮತಿಯ ಬಳಿಯಲ್ಲಿ ಹಳೆಯ ಶಿಲಾಯುಗದ ಆದಿಭಾಗಕ್ಕೆ ಸೇರಿದ ನೆಲೆಯೊಂದನ್ನು ಗುರುತಿಸಲಾಗಿದೆ. (ಕೆ.ಪಿ.)

**ನ್ಯಾಮತಿ ಪ್ರಭಣ್ಣ:** 20ನೆಯ ಶತಮಾನದ ಆದಿಭಾಗದಲ್ಲಿದ್ದ ಕನ್ನಡ ವಿದ್ವಾಂಸರು. ದಾವಣಗೆರೆ ಜಿಲ್ಲೆಯ ನ್ಯಾಮತಿ ಇವರ ಜನ್ಮಸ್ಥಳ. ಇವರ ಜನನ, ಬಾಲ್ಯ, ವಿದ್ಯಾಭ್ಯಾಸಗಳ ಬಗ್ಗೆ ಹೆಚ್ಚಿನ ವಿಷಯ ತಿಳಿದುಬಂದಿಲ್ಲ. ಇವರು ಪಂಡಿತ ಪರೀಕ್ಷೆ ಪಾಸುಮಾಡಿ ಮೊದಲಿಗೆ ನ್ಯಾಮತಿಯ ಪ್ರೌಢ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರಾಗಿದ್ದರು. ಕೆಲವು ಕಾಲ ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಕೆಲಸ ಮಾಡಿದರು. ಇವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಘನವಿದ್ವಾಂಸರಾಗಿದ್ದರು. ಇವರ ವಿದ್ವತ್ತನ್ನು ಗಮನಿಸಿದ ಅಂದಿನ ಸರ್ಕಾರ ಇವರನ್ನು ಮೈಸೂರು ಸರ್ಕಾರದ ಭಾಷಾಂತರ ಕಚೇರಿಗೆ ವರ್ಗಾಯಿಸಿತು. ಅನಂತರ ಇವರು ಬೆಂಗಳೂರಿಗೆ ಬಂದು ನೆಲೆಸಿದರು. ಈ ನಡುವೆ ಇವರು ಕನ್ನಡ–ಕನ್ನಡ ನಿಘಂಟೊಂದನ್ನು ರಚಿಸುವ ಯೋಜನೆ ಹಾಕಿಕೊಂಡಿದ್ದು ಅದರ ಮಹತ್ತ್ವವನ್ನು ಆಗಿನ ವಿದ್ಯಾಧಿಕಾರಿಗಳಾಗಿದ್ದ ಸಿ.ಆರ್. ರೆಡ್ಡಿಯವರಿಗೆ ತಿಳಿಸಿದಾಗ ಅವರು ಪ್ರಭಣ್ಣನವರಿಗೆ ನಿಘಂಟಿನ ರಚನೆಗಾಗಿ ಸರ್ಕಾರದ ವತಿಯಿಂದ ಎಲ್ಲ ನೆರವನ್ನೂ ಕೊಡಿಸಿದರಂತೆ. ಆದರೆ ಈ ನಿಘಂಟು ಪೂರ್ಣಗೊಳ್ಳುವ ಮೊದಲೇ ಪ್ರಭಣ್ಣನವರು ಶಿವೈಕ್ಯರಾದಂತೆಯೂ ನಿಘಂಟಿನ ಉಳಿದ ಭಾಗವನ್ನು ಇವರ ಅಣ್ಣ ಶಾಂತವೀರಪ್ಪನವರು ಮುಗಿಸಿದಂತೆಯೂ ತಿಳಿದುಬರುತ್ತದೆ. ಈ ನಿಘಂಟು ಅಚ್ಚಾಗಿಲ್ಲ. ಪ್ರಭಣ್ಣನವರು ರುಕ್ಮಿಣೀಕಲ್ಯಾಣ ಎಂಬ ನಾಟಕವನ್ನು ಬರೆದಿರುವ ಬಗೆಗೆ ಪ್ರತೀತಿ ಇದೆ.

ಪ್ರಭಣ್ಣನವರ ಕನ್ನಡ–ಕನ್ನಡ ನಿಘಂಟು ಕನ್ನಡ ಭಾಷೆಗೊಂದು ಅಪೂರ್ವ ಕೊಡುಗೆ. ಕಿಟ್ಟೆಲ್ ಅವರ ನಿಘಂಟನ್ನುಳಿದರೆ ಮಹತ್ತು ಬೃಹತ್ತುಗಳಲ್ಲಿ ಇದು ಎರಡನೆಯದು. ನಿಘಂಟಿನ ರಚನೆಯನ್ನು ನೋಡಿದರೆ ಪ್ರಭಣ್ಣನವರಿಗಿದ್ದ ಪ್ರತಿಭೆ, ಶಾಸ್ತ್ರೀಯ ದೃಷ್ಟಿ, ಕನ್ನಡ–ಸಂಸ್ಕೃತ ಭಾಷೆಗಳ ಮೇಲಿನ ಪಾಂಡಿತ್ಯ ವ್ಯಕ್ತವಾಗುತ್ತದೆ. ಈ ನಿಘಂಟಿನಲ್ಲಿ ಕನ್ನಡ ಶಬ್ದಗಳಿಗೆ ಮಾತ್ರ ಅರ್ಥವನ್ನು ಕೊಡಲಾಗಿದೆ. ಆಡುಮಾತುಗಳನ್ನು ಆಯ್ದು ಅವುಗಳ ರೂಪನಿಷ್ಪತ್ತಿಯನ್ನೂ ಕೊಟ್ಟಿದೆ. ಹಲವಾರು ಹಳಗನ್ನಡ ಕಾವ್ಯಗಳಿಂದ ಶಬ್ದಗಳನ್ನು ಸಂಗ್ರಹಿಸಿ, ಅವುಗಳನ್ನು ಅಕಾರಾದಿಯಾಗಿ ವಿಂಗಡಿಸಿ, ಪ್ರತಿಯೊಂದು ಶಬ್ದದ ಅರ್ಥಚ್ಛಾಯೆಯನ್ನು

ವಿವರಿಸಿ ಅವುಗಳ ಸಮರ್ಥನೆಗಾಗಿ ಪ್ರಯೋಗಗಳನ್ನು ಕೊಟ್ಟಿದೆ. ಒಂದು ಶಬ್ದದ ಅರ್ಥಚ್ಛಾಯೆಗಳನ್ನು ನಿಷ್ಕರ್ಷಿಸಿರುವಲ್ಲಿ ಮೊದಲು ಶಬ್ದವನ್ನು ಅನಂತರ ಆ ಶಬ್ದದ ವಾಚಕವನ್ನು ತರುವಾಯ ಅದರ ಅರ್ಥಚ್ಛಾಯೆಗಳನ್ನು ಕ್ರಮವಾಗಿ ಕೊಟ್ಟು ಅನಂತರ ಪ್ರತಿಯೊಂದು ಅರ್ಥಕ್ಕೂ ಪ್ರಾಚೀನ ಕಾವ್ಯಗಳಿಂದ ಪ್ರಯೋಗಗಳನ್ನು ಉದ್ಧರಿಸಿದೆ. ಉದಾಹರಣೆಗಾಗಿ ನಿಘಂಟಿನ ಒಂದು ಪ್ರಯೋಗವನ್ನು ನೋಡಬಹುದು: ಅಚ್ಚಿಗ (ನಾ) 1 ದಡ್ಡತನ: ಕಾವ್ಯಜ್ಞರಿಂ, ಕಲ್ಲದಚ್ಚಗದಿಂ ಕಟ್ಟಿದ ಕನ್ನಡದ ಪಾಟಿಗಿಬ್ಬ (ಅರ್ಧನೇಮಿಪುರಾಣ, 1–35). 2 ಭ್ರಾಂತಿ; ಮಾಯೆ; ಮೋಹ. ಏನೊಂದುಮಿಲ್ಲದಚ್ಚಿಗವೊಂದುಂಟು ತೊಡರ್ವೆವೆ (ಆದಿಪುರಾಣ, 6–26), 3. ಚೌತ್ಸುಕ್ಯ, ಕುತೂಹಲ; ಸಂತೋಷ. ಅಚ್ಚಿಗಂ ಪೊಗಬ್ದುದೆ (ರಾಜಶೇಖರ ವಿಳಾಸ (14–94), 4. ಸಂತಾಪ; ಮನೋವ್ಯಾಕುಲ. ಸುಯ್ದು ಬೆಂಕಿಯೊಳ್ ಬೆಂದವುದೆಂಬಿನಂ ಆಗಳಾಕೆಗಾದಚ್ಚಿಗಮಂ ತೆನಲ್(ಲೀಲಾವತಿ, 10–67) 5. ನೆವ, ವ್ಯಾಜ. ಪೂದಿಱೆವಚ್ಚಿಗದಿಂ ಸ್ಮರಕೇಳಿಗೆಳಸಿದರ್ (ಲೀಲಾವತಿ, 13–107). 6. ಕಷ್ಟದೆಸೆ; ದುರವಸ್ಥೆ. ಹೆಚ್ಚಿದಡವಿಂದೊಳೊರ್ಬನೇ ಶಿವನಚ್ಚಿಗದೊಳಿರ್ದಪನಕಟಕಟ (ಬಸವಪುರಾಣ, 16–2), 7. ಆಯಾಸ, ನಿಚ್ಚವಯಣದಿಂದಚ್ಚಿಗಂ ಸಮನಿಸಿದಂತೆ (ಶಾಂತಿಪುರಾಣ, 12–12). 8. ಕೇಡು; ಸಂಕಟ. ಬಂದುದೆತ್ತಣಚ್ಚಿಗಮೆಮಗೆಂದು ಬಾಯಬಿಡಭೀರುಗಳ (ಚಂದ್ರಪ್ರಭ ಪುರಾಣ, 9– 85) 9. ಕ್ರೋಧ; ಈರ್ಷೆ; ಮತ್ಸರ. ಎನಗಾಱಿಗಮಂ ಮಮಚ್ಚಿಪೊಡೊತ್ತಿಮುಱಿಜಾಣಾ (ಅರ್ಧನೇಮಿಪುರಾಣ, 8–57) 10. ಒತ್ತುವಣೆ; ಬಲಾತ್ಕಾರ. ತಾನೇ ತೊಲಗಿಸಿದಪುದೆಮ್ಮಚ್ಚಿಗಮದೇಕೆ (ಅರ್ಧನೇಮಿಪುರಾಣ, 8–821). 11. ದಿಗ್ಭ್ರಮೆ; ಸೋಜಿಗ; ವಿಸ್ಮಯ. ನಿಚ್ಚಗಾಳೆಗದೊಳಚ್ಚಿಗಂಗೊಳಿಸಿ (ಅಜಿತ ಪುರಾಣ,9–34) 12. ಭಯ; ಗಾಬರಿ, ಅಚ್ಚಿಗದೊಳ್ ಪುಯ್ಯಲಿಪಂತೆ (ಆದಿಪುರಾಣ, 12–76). 13. ಸೌಂದರ್ಯ; ಸೊಬಗು. ಒಪ್ಪಿಡಿನಡುವಿನಚ್ಚಿಗದ ಬಾಲೆಯರ್ (ಜೈಮಿನಿಭಾರತ,20–2) 14. ರೂಪ; ಆಕಾರ, ಅಚ್ಚಿಯೊಳಚ್ಚಿಗ ಮೊಂದಿರಲಚ್ಚೊತ್ತಿದಂತೆ ಅದೆ (ಚಿಕ್ಕದೇವರಾಜವಿಜಯ, 6–182) 15. ಅರ್ಚಕ (ತದ್ಭವ). **(ಆರ್.ಎನ್.ವಿ.)**

**ನ್ಯಾಮತಿ ಲಕ್ಷ್ಮೀನರಸಿಂಹ:** 19ನೆಯ ಶತಮಾನದ ಒಬ್ಬ ಕವಿ. ರಾಮಕಥಾರಂಜನ ಎಂಬ ಕೃತಿಯ ಕರ್ತೃ. ಈತನ ಸ್ಥಳ ನ್ಯಾಮತಿ. ತಲ್ಪಗಿರಿ ರಂಗವಿಠಲನ ಪರಮ ಭಕ್ತ. ತಂದೆ ತಾಯಿಯರು ಸುಬ್ಬಣ್ಣ, ಲಕ್ಷ್ಮೀವಾಂಬೆ, ವೃತ್ತ, ಗೀತಿಕೆ, ಸೀಸಪದ್ಯ, ಕಂದ–ಹೀಗೆ ವಿವಿಧ ಛಂದಸ್ಸಿನಲ್ಲಿರುವ ರಾಮಕಥಾರಂಜನ ಕಾವ್ಯದಲ್ಲಿ 68 ಸರ್ಗಗಳಿವೆ. ಹನುಮಂತನ ಸೀತಾನ್ವೇಷಣ ಕಾರ್ಯ ಕೃತಿಯ ವಸ್ತು. ಹನುಮಂತನ ಶ್ರೀರಾಮ ಭಕ್ತಿಯನ್ನು ಹೆಚ್ಚು ರಸವತ್ತಾಗಿ ಚಿತ್ರಿಸಲಾಗಿದೆ. ಕನ್ನಡ ಕವಿತೆಯಾದರೂ ತೆಲುಗಿನ ವಾಸನೆ ಛಾಯೆ ಕಾಣುತ್ತದೆ ಎಂದು ಗ್ರಂಥದ ಬಗ್ಗೆ ಕರ್ನಾಟಕ ಕವಿಚರಿತಕಾರರು ಅಭಿಪ್ರಾಯಪಟ್ಟದ್ದಾರೆ. *

**ನ್ಯಾಯಾಲಯಗಳು:** ಸಂಸದೀಯ ಪ್ರಜಾಸತ್ತೆಗೆ ಅನುಗುಣವಾಗಿ ರಾಜ್ಯಾಂಗದ 214ನೆಯ ಅನುಚ್ಛೇದದ ಪ್ರಕಾರ ಕರ್ನಾಟಕದಲ್ಲಿ ಇತರ ರಾಜ್ಯಗಳಂತೆಯೇ ನ್ಯಾಯವ್ಯವಸ್ಥೆ ಇದೆ. ಇಡೀ ರಾಜ್ಯವ್ಯಾಪ್ತಿಯುಳ್ಳ ಉಚ್ಚನ್ಯಾಯಾಲಯ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿದೆ. ಇದು ಭಾರತ ಒಕ್ಕೂಟದ ಏಕಾತ್ಮಕ ನ್ಯಾಯಾಂಗ ವ್ಯವಸ್ಥೆಗೆ ಒಳಪಟ್ಟಿರುವುದರಿಂದ ಭಾರತದ ಅಧ್ಯಕ್ಷರ ಮತ್ತು ಉಚ್ಚತಮ ನ್ಯಾಯಾಲಯದ ಹತೋಟಿಗೆ ಸೇರಿದೆ. ರಾಜ್ಯಪಾಲರೊಡನೆ ಸಮಾಲೋಚಿಸಿ ರಾಷ್ಟ್ರಾಧ್ಯಕ್ಷರು ಈ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆಯನ್ನು ನಿರ್ಧರಿಸಿ ಅದರಂತೆ ನೇಮಕ ಮಾಡುತ್ತಾರೆ. ಹೀಗೆ ಒಮ್ಮೆ ನೇಮಿಸಿದ ನ್ಯಾಯಾಧೀಶರು ತಮ್ಮ 62ನೆಯ ವಯಸ್ಸಿನವರೆಗೆ ಸೇವೆ ಸಲ್ಲಿಸುವರು. ಇವರನ್ನು ಸಂಸತ್ತಿನ ಎರಡೂ ಸದನಗಳ ಒಪ್ಪಿಗೆ ಇಲ್ಲದೆ ಕೆಲಸದಿಂದ ತೆಗೆಯುವಂತಿಲ್ಲ. ಈ ನ್ಯಾಯಾಲಯ ತನ್ನ ನಿಮಯಗಳಿಗೆ ಅನುಸಾರವಾಗಿ ಬರುವ ಮತ್ತು ಕೆಳನ್ಯಾಯಾಲಯಗಳ ಮೂಲಕ ಬಂದ ಮೊಕದ್ದಮೆಗಳೆರಡನ್ನೂ ವಿಚಾರಮಾಡಿ ತೀರ್ಪುನೀಡುತ್ತದೆ. ರಾಜ್ಯದ ಇತರ ಎಲ್ಲಾ ನ್ಯಾಯಾಲಯಗಳ ಮೇಲ್ವಿಚಾರಣೆ, ಕೋರ್ಟಿನ ಅಧಿಕಾರಗಳನ್ನೂ ಸೇವಕರನ್ನೂ ನೇಮಿಸುವುದು ಮತ್ತು ನಿಯಂತ್ರಿಸುವುದು ಮತ್ತು ಕೆಳನ್ಯಾಯಾಲಯಗಳಿಂದ ಮೊಕದ್ದಮೆಗಳನ್ನು ತನ್ನ ವಿಚಾರಣೆಗೆ ತೆಗೆದುಕೊಳ್ಳುವುದು ಈ ಹಕ್ಕುಗಳನ್ನು ಪಡೆದಿದೆ. ಜಿಲ್ಲಾ, ತಾಲ್ಲೂಕು ಮತ್ತು ಎಲ್ಲಾ ಕೆಳದರ್ಜೆ ನ್ಯಾಯಾಲಯಗಳಿಗೆ ರಾಜ್ಯಪಾಲರು ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಿ ನೇಮಕ ಮಾಡುತ್ತಾರೆ. ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಿವೆ. ಎಲ್ಲಾ ನ್ಯಾಯಾಲಯಗಳು ಪ್ರಾದೇಶಿಕ ವ್ಯಾಪ್ತಿ ರೆವಿನ್ಯೂ ಆಡಳಿತ ಘಟಕಗಳಿಗೆ ಹೊಂದಿಕೊಂಡಂತೆ ಇರುತ್ತದೆ. ಜಿಲ್ಲಾ ನ್ಯಾಯಾಧೀಶರನ್ನೂ ಮತ್ತು ಸಿವಿಲ್ ಜಡ್ಜರನ್ನೂ ಬಿಟ್ಟು ಇತರ ಎಲ್ಲಾ ಕೆಳದರ್ಜೆ ನ್ಯಾಯಾಲಯಗಳ ನ್ಯಾಯಾಧೀಶರನ್ನೂ ಲೋಕಸೇವಾ ಆಯೋಗ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ನೇಮಿಸುತ್ತದೆ. ಕೆಳನ್ಯಾಯಾಲಯಗಳ ಕಾರ್ಯವ್ಯಾಪ್ತಿಯನ್ನು ಉಚ್ಚ ನ್ಯಾಯಾಲಯ ನಿರ್ಧರಿಸುವುದು. ಇತರ ಮೊಕದ್ದಮೆಗಳ ಜೊತೆಗೆ ರಾಜ್ಯದ ಅನೇಕ ಕಾಯಿದೆಗಳು ಈ ನ್ಯಾಯಾಲಯ ವ್ಯಾಪ್ತಿಗೆ ನ್ಯಾಯ ವಿತರಣೆಗೆ ಒಳಪಟ್ಟಿರುತ್ತವೆ. ನ್ಯಾಯಪರಿಪಾಲನೆಯ ಹೊಣೆಯನ್ನು ನಿರ್ವಹಿಸುತ್ತಿರುವ ಅಧೀನ ನ್ಯಾಯಾಲಯಗಳು ಈ ರೀತಿ ಇವೆ: 1. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯಗಳು (ಜಿಲ್ಲೆಗೆ ಒಂದು). 2. ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟರ್ ನ್ಯಾಯಾಲಯಗಳು (ಜಿಲ್ಲೆಗೆ ಒಂದು). 3. ಬೆಂಗಳೂರು ನಗರದಲ್ಲಿ ಮೆಟ್ರೊಪಾಲಿಟನ್ ಮತ್ತು ಚೀಫ್ ಮೆಟ್ರೊಪಾಲಿಟನ್ ನ್ಯಾಯಾಲಯಗಳು, 4. ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು (ಜಿಲ್ಲೆಗೆ ಒಂದು). 5.ಲಘು ನ್ಯಾಯಾಲಯಗಳು, 6. ಮುನ್ಸೀಫರ ನ್ಯಾಯಾಲಯಗಳು. 7. ಮುನ್ಸೀಫರ ಮತ್ತು ಜುಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು (ತಾಲ್ಲೂಕು ಮಟ್ಟದಲ್ಲಿ). 8. ಜುಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು. ಇದಲ್ಲದೆ, ವ್ಯಾಜ್ಯ ಸಂಖ್ಯೆಯನ್ನು ಗಮನಿಸಿ ಅಲ್ಲಲ್ಲಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳನ್ನು ಸ್ಥಾಪಿಸುವ ಏರ್ಪಾಡೂ ಇದೆ. ಈ ರೀತಿ ಬೆಂಗಳೂರು ನಗರದಲ್ಲಿ ಉದ್ಭವವಾಗುವ ಅಧಿಕ ಸಿವಿಲ್ ವ್ಯಾಜ್ಯಗಳನ್ನು ಗಮನಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಇದೇ ರೀತಿ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯಗಳು ವಿವಿಧ ಜಿಲ್ಲೆಗಳಲ್ಲಿವೆ.

ಬೆಂಗಳೂರು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರುಗಳ ನ್ಯಾಯಾಲಯಗಳು ಕ್ರಿಮಿನಲ್ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯಗಳಾಗಿವೆ.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮುಖ್ಯತಃ ಅಪೀಲು ನ್ಯಾಯಾಲಯವಾಗಿದೆ. ಆದರೆ ಮರಣದಂಡನೆ ಮೊದಲಾದ ಘೋರ ಶಿಕ್ಷೆಗಳನ್ನು ವಿಧಿಸಬೇಕಾಗುವ ಪ್ರಕರಣದಲ್ಲಿ ಅದಕ್ಕೆ ಮೂಲ ಅಧಿಕಾರ ವ್ಯಾಪ್ತಿಯುಂಟು. ಇದಕ್ಕಿಂತ ಕೆಳಗಿನ ನ್ಯಾಯಾಲಯಗಳಿಗೆ ಅಪೀಲು ಅಧಿಕಾರವ್ಯಾಪ್ತಿಯಿಲ್ಲ. ಅಪರಾಧಸಂಜ್ಞಾನ ಮತ್ತು ದಾವೆಯ ಆರ್ಥಿಕ ಮೌಲ್ಯ ಇವುಗಳ ವೈವಿಧ್ಯಕ್ಕನುಗುಣವಾಗಿ ಅಧಿಕಾರವ್ಯಾಪ್ತಿಯಲ್ಲಿಯೂ ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ಎಲ್ಲ ನ್ಯಾಯಾಲಯಗಳಲ್ಲಿ ನಾಜರ್, ಶಿರಸ್ತೇದಾರ, ಬೇಲಿಫ್ ಮೊದಲಾದ ಸಹಾಯಕ ಅಧಿಕಾರಿಗಳು

ಇರುವರು. ಅಭಿಯೋಗ ನಡೆಸಲು ಮತ್ತು ಆರೋಪ ಪತ್ರಗಳನ್ನು ತಯಾರಿಸಲು ಆವಶ್ಯಕ ಸಹಾಯ ನೀಡುವುದಕ್ಕಾಗಿ ಅಭಿಯೋಗ ನಿರ್ದೇಶನಾಲಯವನ್ನೂ ರಚಿಸಲಾಗಿದೆ. ಉತ್ತರ ಕರ್ನಾಟಕ ಭಾಗಕ್ಕೆ ಒಂದು ಪ್ರತ್ಯೇಕ ಉಚ್ಚನ್ಯಾಯಾಲಯ ಪೀಠವನ್ನು ಸ್ಥಾಪಿಸುವ ಬಗ್ಗೆ ಪ್ರಗತಿ ಸಾಧಿಸಿದ್ದು ಶೀಘ್ರವೇ ಅದು ಈಡೇರುವ ಹಂತದಲ್ಲಿದೆ.



ಉಚ್ಚನ್ಯಾಯಾಲಯ, ಬೆಂಗಳೂರು

ಈ ಸಾಂಪ್ರದಾಯಿಕ ನ್ಯಾಯ ವಿತರಣ ವ್ಯವಸ್ಥೆಯ ಜೊತೆಗೆ ಇತರ ನ್ಯಾಯಾಧಿಕಾರ ಪಡೆದ ಅಂಗಗಳೂ ನ್ಯಾಯವಿತರಣೆಯಲ್ಲಿ ನಿರತವಾಗಿವೆ. ಭೂಸುಧಾರಣೆ ಸಂಬಂಧವಾದ ವಿವಾದಗಳು ಮತ್ತು ತಕರಾರುಗಳನ್ನು ಪರಿಶೀಲಿಸಲು ಭೂನ್ಯಾಯಾಧಿಕರಣವಿದೆ. ಕಾರ್ಮಿಕರ ಕುಂದುಕೊರತೆಗಳು ಅಥವಾ ವಿವಾದಗಳನ್ನು ಬಗೆಹರಿಸಲು ಕಾರ್ಮಿಕ ನ್ಯಾಯಾಲಯಗಳಿವೆ. ಶ್ರೀಸಾಮಾನ್ಯರಿಗೆ ನ್ಯಾಯಾವಾದಿಗಳು ಸುಲಭವಾಗಿ ಲಭ್ಯವಾಗಲು ಉಚಿತ ಕಾನೂನು ಸೇವೆಯನ್ನು ಸರ್ಕಾರ ಒದಗಿಸಿದೆ. 1986ರಲ್ಲಿ ಲೋಕಾಯುಕ್ತ ಎಂಬ ಜಾಗೃತ ಆಯೋಗವನ್ನು ಸ್ಥಾಪಿಸಲಾಯಿತು. ಸರ್ಕಾರಿ ನೌಕರರ ಭ್ರಷ್ಟಾಚಾರಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಮುಂದಿನ ಕ್ರಮಕೈಗೊಳ್ಳಲು ಶಿಫಾರಸು ಮಾಡಿ ವರದಿ ನೀಡುವ ಅಧಿಕಾರವನ್ನು ಇದು ಹೊಂದಿದೆ.

1974ರ ನವೆಂಬರ್ 1ರಿಂದ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ ಮಟ್ಟದಲ್ಲಿ ಕನ್ನಡವೂ ನ್ಯಾಯಾಲಯದ ಅಧಿಕೃತ ಭಾಷೆಯೆಂಬುದಾಗಿ ಸರ್ಕಾರ ಘೋಷಿಸಿದೆ. ಇದಲ್ಲದೆ ರಾಜ್ಯದಲ್ಲಿ ಕಾರ್ಮಿಕ ನ್ಯಾಯಾಲಯಗಳೂ ಮಾರಾಟಕರ ಮತ್ತು ರಾಜಸ್ವ ಅಪೀಲು ನ್ಯಾಯಾಧಿಕರಣಗಳೂ ತಮ್ಮ ತಮ್ಮ ಕ್ಷೇತ್ರದಲ್ಲಿ ನ್ಯಾಯಾಂಗದ ಕಾರ್ಯವನ್ನು ನಿರ್ವಹಿಸುತ್ತವೆ.

ಕರ್ನಾಟಕದ ನ್ಯಾಯ ಪರಿಪಾಲನೆಯ ಇತಿಹಾಸ ಪ್ರಾಚೀನವಾದುದು. ರಾಜರು, ಮಹಾಮಂಡಲೇಶ್ವರರು, ಪಾಳೆಯಗಾರರು, ಊರ ಗೌಡ ಮೊದಲಾದವರು ಅನೂಚಾನವಾದ ನ್ಯಾಯವ್ಯವಸ್ಥೆಯನ್ನು ಧರ್ಮದ ಚೌಕಟ್ಟಿನೊಳಗೇ ಅನುಸರಿಸಿಕೊಂಡು ಬಂದರು ಎನ್ನಬಹುದು. ಪಂಚಾಯತಿ ಮಾಡುವವರು ಭಟ್ಟರು, ನ್ಯಾಯನಿರ್ಣಯ ಮಾಡುವವರು ಪಂಡಿತರು, ರಕ್ಷೆ ಶಿಕ್ಷೆ ನೋಡಿಕೊಳ್ಳುವವರು ಪಕ್ಷನಾಥರು ಎಂಬ ಕದಂಬರ ಕಾಲದ ಗೌಳವನಾಡಿನ ಪ್ರಾಚೀನ ಗ್ರಾಮಪದ್ಧತಿಯ ಮಾತು ಗಮನಾರ್ಹವಾಗಿದೆ. ಕದಂಬರ ಕಾಲದ ಧರ್ಮಕರಣಿಕರು, ಗಂಗರಕಾಲದ ರಾಜಾಧ್ಯಕ್ಷರು ಮತ್ತು ಧರ್ಮಾಧ್ಯಕ್ಷರು ನ್ಯಾಯಶುದ್ಧಿಯನ್ನು ಕಾಪಾಡುತ್ತಿದ್ದರು. ಮಹಾ ದಂಡನಾಯಕರೂ ನಾಡೊಡೆಯರೂ ದ್ರೋಹಘರಟ್ಟಗಳೆಂದು ಪ್ರಸಿದ್ಧರಾಗಿದ್ದಾರೆ. ಪಂಚನಿರ್ಣಯ ಪದ್ಧತಿಯೂ ಪ್ರಾಚುರ್ಯ ಪಡೆದಿತ್ತು. ಈ ಕಾಲದಲ್ಲಿ ಸಮತೋಲದಿವ್ಯ, ಅಗ್ನಿದಿವ್ಯ, ಜಲದಿವ್ಯ, ವಿಷದಿವ್ಯ ಮತ್ತು ತಂಡುಲದಿವ್ಯಗಳು ನ್ಯಾಯಾಸ್ಥಾನದ ಪ್ರಮಾಣಸಾಧನಗಳಾಗಿದ್ದುವು. ಬೆಳೆದುಬಂದ ರೂಢಿಸಂಪ್ರದಾಯಗಳನ್ನು ಸಮರ್ಥಿಸುತ್ತ ಪ್ರಾಚೀನ ಧರ್ಮಶಾಸ್ತ್ರಗಳಿಗೆ ಅಪೂರ್ವ ವ್ಯಾಖ್ಯಾನ ರೂಪವಾಗಿ ವಿಜ್ಞಾನೇಶ್ವರನ 'ಮಿತಾಕ್ಷರ' ನ್ಯಾಯಾಸ್ಥಾನಗಳ ಕೈಪಿಡಿಯಂತಿತ್ತು.

ಚಾಳುಕ್ಯ ಮತ್ತು ಹೊಯ್ಸಳರಸರ ಕಾಲದಲ್ಲಿ ವ್ಯಾವಹಾರಿಕ ಮತ್ತು ಅಪರಾಧಿಕ ಎಂಬ ವಿಭಜನೆಯಾಗಿ ನ್ಯಾಯತೀರ್ಮಾನದ ವ್ಯವಸ್ಥೆ ಉತ್ತಮಗೊಂಡಿತ್ತು. ಸಮಸ್ತ ಸಾಮ್ರಾಜ್ಯದ ಸಮಗ್ರ ದಂಡಾಚರಣೆಗೆ ಮಂಡಲಾಧಿಪತಿಗಳೂ ಹೆಗ್ಗಡೆಗಳೂ ನಿಯುಕ್ತರಾಗಿದ್ದರು. ವಿಜಯನಗರದ ಕಾಲದಲ್ಲಿ ವಿವೇಕಿಗಳೂ ಸಭ್ಯರೂ ಇರುವ ವರಿಷ್ಠ ನ್ಯಾಯಾಲಯಗಳು ರೂಪತಾಳಿದವು. ರಾಜರುಗಳೂ ನ್ಯಾಯದಾನ ಮಾಡುತ್ತಿದ್ದ ನಿದರ್ಶನಗಳು ಶಾಸನೋಕ್ತವಾಗಿವೆ.

ಮೈಸೂರು ಒಡೆಯರ ರಾಜ್ಯಭಾರದ ಕಾಲದಲ್ಲಿಯೂ ಶಾಸ್ತ್ರಸಮ್ಮತವಾಗಿಯೇ ನ್ಯಾಯಪರಿಪಾಲನೆ ನಡೆಯಿತು. ದೂರುಗಳು ಬಂದಾಗ ಒಡೆಯರೇ ಸ್ವತಃ ಪ್ರವಾಸ ಮಾಡಿ ಆಯಾ ಸ್ಥಳದಲ್ಲಿಯೇ ನ್ಯಾಯ ತೀರ್ಮಾನ ಮಾಡಿದ್ದುಂಟು. ಗ್ರಾಮಗಳಲ್ಲಿ ಗ್ರಾಮಪಂಚಾಯತಿಗಳು ನ್ಯಾಯ ತೀರ್ಮಾನ ಮಾಡುತ್ತಿದ್ದು ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಅಲ್ಲೇ ದೊರಕುತ್ತಿತ್ತು. ಸುಮಾರು ನಾನೂರು ವರ್ಷಗಳು ಇಸ್ಲಾಮೀಯ ಆಳ್ವಿಕೆಯ ಕಾಲದಲ್ಲಿ ಮುಗಲ ರೀತಿಯ ಅದಾಲತ್ತು ಪದ್ಧತಿಯೂ ಪ್ರಚಲಿತವಾಗಿತ್ತು. ಮುಂದೆ ನ್ಯಾಯಪಾರಮ್ಯದ ತತ್ತ್ವಕ್ಕೆ ದಿನೇ ದಿನೇ ಮಹತ್ತ್ವ ಹೆಚ್ಚಿ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗದಿಂದ ಬೇರ್ಪಡುವ ಏರ್ಪಾಡುಗಳೂ ಜಾರಿಗೆ ಬಂದುವು.

ಮೈಸೂರು ಸಂಸ್ಥಾನ ಕೆಲವು ಕಾಲ ಕಮಿಷನರುಗಳ ಆಳ್ವಿಕೆಗೆ ಒಳಪಟ್ಟಾಗ ಇಲ್ಲಿಯೂ ನ್ಯಾಯವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾದುವು. 85 ತಾಲ್ಲೂಕು ಕೋರ್ಟುಗಳು, 8 ಮುಖ್ಯ ಸದರ್ ಮುನ್ಸೀಫ್ ಕೋರ್ಟುಗಳು, 4 ಸೂಪರಿಂಟೆಂಡೆಂಟ್ ಕೋರ್ಟುಗಳು ಮತ್ತು ಮೂವರು ನ್ಯಾಯಾಧೀಶರಿಂದ ಕೂಡಿದ ಒಂದು ಹುಜೂರ್ ಅದಾಲತ್ತು ಸ್ಥಾಪಿತವಾದುವು. ಒಂದು ಕಮಿಷನರ ಕೋರ್ಟೂ ರಚಿತವಾಯಿತು.

1855–56ರಲ್ಲಿ ಲಾರ್ಡ್ ಡಾಲ್‌ಹೌಸಿಯ ಭೇಟಿಯ ಪರಿಣಾಮವಾಗಿ ಮೈಸೂರು ಪ್ರದೇಶದಲ್ಲಿ ಒಬ್ಬ ಚೀಫ್ ಜುಡಿಷಿಯಲ್ ಕಮಿಷನರ್ ನಿಯುಕ್ತನಾದ. ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳಲ್ಲಿ ಪಂಚಾಯತಿಯ ಸಹಾಯ ಪಡೆದುಕೊಳ್ಳಲಾಗುತ್ತಿತ್ತು. ಕ್ರಮೇಣ ಪ್ರತಿ ಜಿಲ್ಲೆಗೊಬ್ಬರಂತೆ ನ್ಯಾಯಾಂಗ ಸಹಾಯಕರೂ ನಿಯುಕ್ತರಾದರು. 1884ರಲ್ಲಿ ಮೈಸೂರು ರಾಜ್ಯದಲ್ಲಿ ಒಂದು ಚೀಫ್ ಕೋರ್ಟು ಸ್ಥಾಪಿತವಾಗಿತ್ತು. ಅದನ್ನೇ ಮಹಾರಾಜರ ಆಡಳಿತ ಕಾಲದಲ್ಲಿ 1930ರಲ್ಲಿ ಮೈಸೂರಿನ ಉಚ್ಚನ್ಯಾಯಾಲಯವೆಂದು ಹೆಸರಿಸಲಾಯಿತು. ಕೊಡಗಿನ ಮೇಲಿದ್ದ ಮದರಾಸು ನ್ಯಾಯಾಲಯದ ಅಧಿಕಾರವ್ಯಾಪ್ತಿ ಕೊನೆಗೊಂಡು, ಕೊಡಗು ಪ್ರದೇಶ 1953ರಿಂದ ಮೈಸೂರು ಉಚ್ಚನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಟ್ಟಿತು. ಹೈದರಾಬಾದು, ಮುಂಬಯಿ, ಮದರಾಸು ಕನ್ನಡ ಪ್ರದೇಶಗಳಲ್ಲಿ ಮುನ್ಸೀಫ್, ಜುಡಿಷಿಯಲ್ ಮ್ಯಾಜಿಸ್ಟ್ರೇಟ್, ಸಿವಿಲ್ ಹಾಗೂ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಅಧೀನ ನ್ಯಾಯಾಲಯಗಳಿದ್ದುವು. 1950ರಲ್ಲಿ ಸಂವಿಧಾನ ಜಾರಿಗೆ ಬಂದು ಇಡೀ ಭಾರತಕ್ಕೊಂದು ಸರ್ವೋಚ್ಚ ನ್ಯಾಯಾಲಯವೂ ಪ್ರತಿ ರಾಜ್ಯದಲ್ಲೂ ಈಗ ಇರುವ ನ್ಯಾಯಾಂಗ ವ್ಯವಸ್ಥೆಯೂ ರೂಢಿಗೆ ಬಂದುವು. **(ಕೆ.ಡಿ.)**

# ಪ

**ಪಂಕಜ್ ಅದ್ವಾನಿ:** 1985– . ಅಂತಾರಾಷ್ಟ್ರೀಯ ಖ್ಯಾತಿಯ ಬಿಲಿಯರ್ಡ್ಸ್ ಹಾಗೂ ಸ್ನೂಕರ್ ಕ್ರೀಡಾಪಟು. ರಾಜೀವ್ ಗಾಂಧೀ ಖೇಲ್ ರತ್ನ ಪ್ರಶಸ್ತಿ ಗಳಿಸಿದ ಕರ್ನಾಟಕದ ಮೊದಲಿಗರು.

ಇವರು 1985 ಜುಲೈ 24ರಂದು ಜನಿಸಿದರು. ತಮ್ಮ 13ನೆಯ ವಯಸ್ಸಿನಲ್ಲೇ ಕರ್ನಾಟಕದ ಬಿಲಿಯರ್ಡ್ಸ್ ಚಾಂಪಿಯನ್ ಆದ ಇವರನ್ನು ತರಬೇತಿಗೊಳಿಸಿದವರು 'ದ್ರೋಣಾಚಾರ್ಯ' ಪ್ರಶಸ್ತಿ ಪುರಸ್ಕೃತ (2005) ಅರವಿಂದ್ ಸವೂರ್. ಬಿಲಿಯರ್ಡ್ಸ್ ಕ್ಷೇತ್ರದತ್ತ ಎಳವೆಯಲ್ಲೇ ಆಕರ್ಷಿತರಾದ ಅದ್ವಾನಿಯವರು ಹಂತಹಂತವಾಗಿ ಸಾಧನೆಯ ಮೆಟ್ಟಿಲೇರಿದವರು.



1997ರಲ್ಲಿ ಬಿ.ಎಸ್. ಸಂಪತ್ ಸ್ಮಾರಕ ಅಂಗವಿಕಲರ ಸ್ನೂಕರ್ ಚಾಂಪಿಯನ್‌ಶಿಪ್, ಟಿ.ಎ. ಸೆಲ್ವರಾಜ್ ಸ್ಮಾರಕ ಬಿಲಿಯರ್ಡ್ಸ್ ಚಾಂಪಿಯನ್ ಶಿಪ್ ಹಾಗೂ ಕರ್ನಾಟಕ ರಾಜ್ಯ ಜ್ಯೂನಿಯರ್ ಸ್ನೂಕರ್ ಚಾಂಪಿಯನ್ ಶಿಪ್‌ಗಳನ್ನು ಗೆದ್ದರು. ಚೀನದಲ್ಲಿ ನಡೆದ ವಿಶ್ವ ಅಮೆಚೂರ್ ಸ್ನೂಕರ್ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿ ಗೆದ್ದಾಗ ಇವರಿಗೆ ಕೇವಲ 17 ವರ್ಷ.

ಸರಳರೂ ಮಿತಭಾಷಿಗಳೂ ಆಗಿರುವ ಇವರ ಯಶಸ್ಸಿನ ಗುಟ್ಟು ಅಪೂರ್ವ ಏಕಾಗ್ರತೆ. ಯಾವುದೇ ಎದುರಾಳಿಯ ವಿರುದ್ಧ ಸಮಾಧಾನ ಚಿತ್ತದಿಂದ, ತಾಳ್ಮೆಯಿಂದ ಆಡುವುದು ಇವರ ವೈಶಿಷ್ಟ್ಯ. ಭಾರತೀಯ ಜ್ಯೂನಿಯರ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಪ್ರಶಸ್ತಿಯನ್ನು ನಾಲ್ಕು ಬಾರಿ (2000, 2001, 2003 ಮತ್ತು 2005) ಗೆದ್ದು ಐತಿಹಾಸಿಕ ಸಾಧನೆ ಮಾಡಿರುವುದು ಇವರ ವಿಶೇಷ.

ಇವರು ವೃತ್ತಿಪರ ಆಟಗಾರರಾದುದು 2003ರಲ್ಲಿ. ಚೀನದಲ್ಲಿ ಆಗ ನಡೆದ ಐ.ಬಿ.ಎಸ್.ಎಫ್ ವಿಶ್ವ ಸ್ನೂಕರ್ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿ ಗೆದ್ದು ಪ್ರಪಂಚದ ಅತಿ ಕಿರಿಯ ಸ್ನೂಕರ್ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾದರು. 2005ರಲ್ಲಿ ಏಷ್ಯನ್ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್ ಗಳಿಸಿದರು. ಡಬ್ಲುಎಸ್‌ಎ ಚಾಲೆಂಜ್ ಟೂರ್ ಪ್ರಶಸ್ತಿ (2004), ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್, ಏಷ್ಯನ್ ಬಿಲಿಯರ್ಡ್ಸ್ ಚಾಂಪಿಯನ್ ಶಿಪ್, ಭಾರತ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್ ಹಾಗೂ ಡಬ್ಲುಎಸ್‌ಎ ಚಾಲೆಂಜ್ ಟೂರ್ ಚಾಂಪಿಯನ್‌ಶಿಪ್ (2005)– ಇವು ಇವರು ಗಳಿಸಿದ ಇತರ ಪ್ರಶಸ್ತಿಗಳು. ದೋಹದಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗಳಿಸಿದರು (2006).

ಇವರು 2004ರಲ್ಲಿ ಅರ್ಜುನ ಪ್ರಶಸ್ತಿ ದೊರೆತಿದೆ. ಇವರಿಗೆ 2006ರಲ್ಲಿ ಭಾರತದ ಅತ್ಯುನ್ನತ ಕ್ರೀಡಾಪ್ರಶಸ್ತಿಯಾದ ರಾಜೀವ್‌ಗಾಂಧೀ ಖೇಲ್ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅತಿ ಕಿರಿಯ ವಯಸ್ಸಿನಲ್ಲಿ (21ವರ್ಷ) ಈ ಪ್ರಶಸ್ತಿ ಪಡೆದವರೆಂಬ ಕೀರ್ತಿಗೆ ಇವರು ಪಾತ್ರರಾಗಿದ್ದಾರೆ. ಈಗ ಇವರು ಬೆಂಗಳೂರಿನ ಭಗವಾನ್ ಮಹಾವೀರ ಜೈನ್ ಕಾಲೇಜಿನಲ್ಲಿ ಬಿ.ಕಾಂ. ಪದವಿಗಾಗಿ ವ್ಯಾಸಂಗ ನಿರತರಾಗಿದ್ದಾರೆ (2006). **(ಎಸ್.ಬಿಎಚ್‌ಎ)**

**ಪಂಕಜನಹಳ್ಳಿ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಜನಸಂಖ್ಯೆ 311. ಕಸಬೆಗೆ 13 ಕಿಮೀ ದೂರದಲ್ಲಿ ತಿಪಟೂರು ತಾಲ್ಲೂಕಿನ ಕಿಬ್ಬನಹಳ್ಳಿಗೆ ಹತ್ತಿರದಲ್ಲಿದೆ.

ಇಲ್ಲಿಯ ಮಲ್ಲಿಕಾರ್ಜುನ ದೇವಾಲಯ ದ್ರಾವಿಡಶೈಲಿಯ ದೊಡ್ಡ ದೇವಾಲಯ. ಇದರಲ್ಲಿ ಒಂದು ಗರ್ಭಗೃಹ, ಸುಕನಾಸಿ, ಪ್ರದಕ್ಷಿಣಾಪಥ, ನವರಂಗ, ಅರ್ಧಮಂಟಪ, ಪಾತಾಳಾಂಕಣ, ನಂದಿಮಂಟಪ, ಗೋಪುರಯುತವಾದ ಮಹಾದ್ವಾರ ಮತ್ತು ಪ್ರಾಕಾರಗಳಿವೆ. ದೇವಾಲಯ ಪೂರ್ವಾಭಿಮುಖವಾಗಿದೆ. ನೂರೊಂದು ಲಿಂಗಗಳನ್ನು ಪ್ರತಿನಿಧಿಸುತ್ತವೆನ್ನುವ ಗುಂಡುಕಲ್ಲುಗಳಿಂದ ಇಲ್ಲಿನ ಲಿಂಗ ರಚಿತವಾಗಿದೆ. 4 ಮೀ ಎತ್ತರವಿರುವ ಮಹಾದ್ವಾರ ಸುಂದರ ರಚನೆ. ಅದರಂತೆ ಕಂಬಗಳೂ ಬಾಗಿಲುವಾಡವೂ ಉತ್ತಮ ಕೆತ್ತನೆಗಳಿಂದ ಕೂಡಿದೆ. ದೇವಾಲಯದ ಕಂಬಗಳ ಮೇಲೆ ಗಣಪತಿ, ಶಕ್ತಿ ಮೊದಲಾದ ಅನೇಕ ಶಿಲ್ಪಗಳಿವೆ. ಮುಂದುಗಡೆಯಿರುವ ದೀಪಸ್ತಂಭ ಶಿಲ್ಪಿಗಳ ನೈಪುಣ್ಯತೆಯನ್ನು ಸಾರುವ ಮತ್ತೊಂದು ಅಂಶ. ಇದು ಸು.13ಮೀ ಎತ್ತರವಿದೆ. ದೇವಾಲಯದ ಎಡಭಾಗದಲ್ಲಿ ಪಾರ್ವತಿ ಗುಡಿ ಇದೆ. ದಕ್ಷಿಣದಲ್ಲಿ ವೀರಭದ್ರ ಗುಡಿ ಇದೆ. ದೇವಾಲಯದ ಉತ್ತರದಲ್ಲಿ ಒಂದು ದೊಡ್ಡ ಕೊಳ ಮತ್ತು ಅದರ ಮಧ್ಯೆ ಒಂದು ಮಂಟಪ ಇದೆ. ಈ ಊರಿನ ರಂಗನಾಥ ದೇವಾಲಯ ಇಲ್ಲಿನ ಇನ್ನೊಂದು ಗುಡಿ. **(ಎಸ್.ಎಂ.ವಿ.)**

**ಪಂಚಸಿಂಹಾಸನಗಳು:** ವೀರಶೈವರಿಗೆ ಬಹು ಪ್ರಮುಖ ಎನಿಸಿರುವ ಐದು ಪೀಠಗಳು. ಚಿಕ್ಕಮಗಳೂರು ಜಿಲ್ಲೆಯ ಭದ್ರಾನದಿಯ ತೀರದಲ್ಲಿರುವ ಬಾಳೇಹಳ್ಳಿವೀರ ಸಿಂಹಾಸನ ಮಠ, ಉಜ್ಜಯಿನಿಯ ಧರ್ಮಸಿಂಹಾಸನ ಮಠ, ಶ್ರೀಶೈಲದ ಸೂರ್ಯಸಿಂಹಾಸನ ಮಠ, ಕಾಶಿಯ ಜ್ಞಾನಸಿಂಹಾಸನ ಮಠ, ಕೇದಾರದ ವೈರಾಗ್ಯ ಸಿಂಹಾಸನ ಮಠ. ಇವಲ್ಲದೆ ಚಿತ್ರದುರ್ಗ, ಗದಗ, ಹುಬ್ಬಳ್ಳಿ, ಉರವಕೊಂಡ ಮತ್ತು ಕಲ್ಯಾಣಗಳಲ್ಲಿ ಶೂನ್ಯ ಸಿಂಹಾಸನ ಮಠಗಳೂ ಶಿವಗಂಗೆ, ಸುತ್ತೂರು, ರಾಜಪುರ, ಕುಂಭಕೋಣ, ನಾಗಲಾಪುರ, ದೇವನೂರುಗಳಲ್ಲಿ ವೀರಸಿಂಹಾಸನ ಮಠಗಳೂ ಸಾಕಷ್ಟು ಪ್ರಸಿದ್ಧವೆನಿಸಿವೆ. *

**ಪಂಚಾಕ್ಷರಿ:** ನಮಃ ಶಿವಾಯ ಎಂಬ ಮಂತ್ರ. ಇವನ್ನು ಶೈವರೂ ವೀರಶೈವರೂ ಬಹಳ ಪವಿತ್ರವೆಂದು ಭಾವಿಸಿದ್ದಾರೆ. ಇದಕ್ಕೆ ಓಂಕಾರ ಸೇರಿಸಿದರೆ ಷಡಕ್ಷರಿ ಮಂತ್ರ ಅಥವಾ ಪ್ರಣವಪಂಚಾಕ್ಷರಿಯಾಗುತ್ತದೆ. ಅಷ್ಟಾವರಣದಲ್ಲಿ ಈ ಮಂತ್ರ ಒಂದು ಸ್ಥಳವನ್ನು ಆಕ್ರಮಿಸಿದೆ. ಕೊಂಡಗುಳಿ ಕೇಶಿರಾಜ (1160) ಈ ಮಂತ್ರದ ಮಹಿಮೆಯನ್ನು ತಿಳಿಸುವುದಕ್ಕಾಗಿಯೇ ಷಡಕ್ಷರಿ ಮಂತ್ರದ ಮಹಿಮೆ ಎಂಬ ಗ್ರಂಥವನ್ನು ಬರೆದಿದ್ದಾನೆ. ವೇದದ ಶ್ರೀರುದ್ರ ಮಂತ್ರದಲ್ಲಿ ನಮಃ ಶಿವಾಯಚ, ಶಿವತರಾಯಚ ಎಂಬ ಪಂಕ್ತಿಯಿದೆ. ಬಸವಣ್ಣ ತನ್ನ ವಚನದಲ್ಲಿ 'ಭವಬಂಧನ ದುರಿತಂಗಳಗೆಲ್ದೊಡೆ ಓಂನಮಶ್ಶಿವಾಯ ಶರಣೆಂದೆಡೆ ಸಾಲದೆ' ಎಂದು ಹೇಳಿದ್ದಾನೆ. ದಿನಂಪ್ರತಿ ಬೆಳಗು ಸಂಜೆಸ್ನಾನ ಮಡಿಯಿಂದ ಪರಿಶುದ್ಧರಾಗಿ 108ಕ್ಕೆ ಕಡಿಮೆಯಿಲ್ಲದೆ ಈ ಮಂತ್ರವನ್ನು ಜಪಿಸಿದರೆ ಅಥವಾ ಲಿಖಿಸಿದರೆ ಮುಕ್ತಿ ಸುಲಭವಾಗಿ ದೊರಕುತ್ತದೆ ಎಂಬ ನಂಬಿಕೆ ವೀರಶೈವರಲ್ಲಿದೆ.

ಸೂಕ್ಷ್ಮಾಗಮದಲ್ಲಿ ಓಂಕಾರ ಯುಕ್ತವಾದ ಪಂಚಾಕ್ಷರಿಯನ್ನು ಮಂತ್ರರಾಜ ಎಂದು ಕರೆಯಲಾಗಿದೆ. ಶಿವಗೀತೆಯಲ್ಲಿ ಪಂಚಾಕ್ಷರೀ ಜಪಪರಃ ಸಮಭಕ್ತಃ ಸರ್ವೇಪ್ರಿಯಃ ಎಂದು ಹೇಳಿದೆ. ಸಿದ್ಧಾಂತ ಶಿಖಾಮಣಿಯಲ್ಲಿ ಪಂಚಾಕ್ಷರೀರ್ವಧ್ವಿಮಾಮ್ ವಿದ್ಯಾಮ್ ಪ್ರಣವೇನ ಷಡಕ್ಷರೀಮ್ ಜಪೇ ಸಮಾಹಿತ್ಪೋ ಭೂತ್ವ ಶಿವಪೂಜಾ ಪರಾಯಣಃ ಎಂಬ ಮಾತಿಗೆ ಪಂಚಾಕ್ಷರಿ ಮಂತ್ರದ ಮಹಿಮೆಯನ್ನು ತಿಳಿದರೆ ಸಾಕು ಉಳಿದ ಮಂತ್ರಗಳಿಂದ ಏನು ಪ್ರಯೋಜನ ಎಂದು ಅರ್ಥ. *

**ಪಂಚಾಕ್ಷರಿ ಗವಾಯ್:** 1892– 1944. ಪ್ರಸಿದ್ಧ ಸಂಗೀತಗಾರರು. ಹಾವೇರಿ ಜಿಲ್ಲೆ ಹಾನಗಲ್ಲು ತಾಲ್ಲೂಕಿನ ಕಾಡಶೆಟ್ಟಿಹಳ್ಳಿಯಲ್ಲಿ 1892 ಫೆಬ್ರವರಿ 2ರಂದು ಜನಿಸಿದರು. ಇವರ ತಂದೆ ಚರಂತಿಮಠದ ಗುರುಪಾದಯ್ಯ ಮತ್ತು ತಾಯಿ ನೀಲಮ್ಮ.

ಗದಿಗೆಯ್ಯ ಇವರ ಬಾಲ್ಯದ ಹೆಸರು. ಇವರ ಅಣ್ಣ ಗುರುಪಾದಯ್ಯ, ಇಬ್ಬರೂ ಹುಟ್ಟುಕುರುಡರಾಗಿದ್ದರು. ಇಬ್ಬರೂ ಬಾಲ್ಯದಿಂದಲೇ ಗಾಯನ ಕಲೆಯಲ್ಲಿ ಆಸಕ್ತಿ ತೋರಿ ತಾವು ಕೇಳಿದ ಪದಪದ್ಯಗಳನ್ನು ಇಂಪಾಗಿ ಹಾಡುತ್ತಿದ್ದರು. ಒಮ್ಮೆ ಇವರು ಹಾಡುವುದನ್ನು ಕೇಳಿದ ಹಾನಗಲ್ಲು ಮಠದ ಕುಮಾರ ಸ್ವಾಮಿಗಳು, ಶಿರಾಳ ಕೊಪ್ಪದ ಗದಿಗೆಪ್ಪ ಗವಾಯಿಗಳಿಂದ ಕರ್ನಾಟಕ ಸಂಗೀತವನ್ನು ಶಾಸ್ತ್ರೀಯವಾಗಿ ಪಾಠ ಹೇಳಿಸಿದರು. ಮುಂದೆ ಇಬ್ಬರನ್ನೂ ಮೈಸೂರಿಗೆ ಕಳಿಸಿ ಕೆಲವು ಪಂಡಿತರಲ್ಲಿ ವಿದ್ಯಾಧ್ಯಯನ ಮಾಡಿಸಿದರು. ಈ ಮಧ್ಯೆ ಅಣ್ಣ ಗುರುಪಾದಯ್ಯ ಅಕಾಲ ಮರಣಕ್ಕೆ ತುತ್ತಾದರು. ಗದಿಗೆಯ್ಯ ಮುಂಬಯಿಗೆ ಹಿಂದುಸ್ಥಾನೀ ಸಂಗೀತ ಕಲಿಯಲು ಹೋಗಿ ಪ್ರಯೋಜನವಾಗದೆ ಹಾನಗಲ್ಲಿಗೆ ಮರಳಿ ಬಂದು ಕುಮಾರಸ್ವಾಮಿಗಳ ಅನುಮತಿಯಂತೆ ಮೀರಜ್‍ನ ನೀಲಕಂಠ ಬುವಾ ಅವರಲ್ಲಿ ಹಿಂದುಸ್ಥಾನೀ ಸಂಗೀತವನ್ನು (ಗ್ವಾಲಿಯರ್ ಶೈಲಿ) ಪರಿಪೂರ್ಣವಾಗಿ ಅಭ್ಯಾಸಮಾಡಿದರು. ಮುಂದೆ ಆಜನ್ಮ ಬ್ರಹ್ಮಚಾರಿಗಳಾಗಿ, ಕುಮಾರಸ್ವಾಮಿಗಳು ಆಶೀರ್ವದಿಸಿ ಕೊಟ್ಟ ಪಂಚಾಕ್ಷರ ಗವಾಯ್ ಎಂಬ ಹೆಸರಿನ ಮುಖಾಂತರ ಸಂಗೀತ ಪ್ರಪಂಚಕ್ಕೆ ಸೇವೆ ಸಲ್ಲಿಸಿದರು.

ಗವಾಯಿಗಳು ಸಾವಿರಾರು ಜನ ಬಡಬಗ್ಗರಿಗೆ, ಅಂಗಹೀನರಿಗೆ ಅನ್ನ, ವಸ್ತ್ರ, ವಸತಿಗಳನ್ನು ಕೊಟ್ಟು ಕರ್ನಾಟಕ ಮತ್ತು ಹಿಂದುಸ್ಥಾನೀ ಸಂಗೀತವನ್ನು ಹೇಳಿಕೊಟ್ಟರು. ಇವರು 1914ರಲ್ಲಿ ಸ್ಥಾಪಿಸಿದ ಶ್ರೀ ಕುಮಾರೇಶ್ವರ ಕೃಪಾಪೋಷಿತ ಸಂಗೀತ ಸಾಹಿತ್ಯ ಮಹಾವಿದ್ಯಾಲಯ ಇಂದಿಗೂ ಗದಗಿನಲ್ಲಿ ಪುಟ್ಟರಾಜ ಗವಾಯಿಗಳ ನೇತೃತ್ವದಲ್ಲಿ ನಡೆಯುತ್ತಿದೆ. ಪಂಚಾಕ್ಷರಿ ಗವಾಯಿಗಳ ಮುಖ್ಯ ಶಿಷ್ಯರಲ್ಲಿ ಪುಟ್ಟರಾಜ ಗವಾಯ್, ಗುರುಬಸವಯ್ಯ ಗವಾಯ್ ಬ್ಯಾಡಗಿ, ಮೃತ್ಯುಂಜಯ ಗವಾಯ್ ಪುರಾಣಿಕಮಠ, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ಆರ್.ವಿ. ಶೇಷಾದ್ರಿ ಗವಾಯ್, ಅರ್ಜುನಸಾ ನಾಕೋಡ ಮೊದಲಾದವರನ್ನು ಹೆಸರಿಸಬಹುದು.

ಪಂಚಾಕ್ಷರಿ ಗವಾಯಿಗಳು 1944 ಜೂನ್ 10ರಂದು ಗದಗಿನಲ್ಲಿ ನಿಧನರಾದರು. ಪ್ರತಿವರ್ಷ ಇವರ ಪುಣ್ಯತಿಥಿ ಗದಗಿನಲ್ಲಿ ನಡೆಯುತ್ತದೆ. ಆಗ ಇವರ ಶಿಷ್ಯ ಪ್ರಶಿಷ್ಯರು ಮತ್ತು ಅಭಿಮಾನಿಗಳಿಂದ ಗಾಯನ, ಕೀರ್ತನ, ಭಾಷಣ ಇತ್ಯಾದಿಗಳು ನಡೆಯುತ್ತವೆ. (ಆರ್.ವಿ.ಎಸ್.)

**ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ:** 1927– . ಅಖಿಲ ಭಾರತ ಖ್ಯಾತಿಯ ಸಂಗೀತ ಕಲಾವಿದ. 1927 ಅಕ್ಟೋಬರ್ 12ರಂದು ಧಾರವಾಡ ಜಿಲ್ಲೆ ಶಿಶುನಾಳದಲ್ಲಿ ಜನಿಸಿದರು. ತಾಯಿ ಸಾಕಮ್ಮ, ತಂದೆ ಚನ್ನಬಸವಯ್ಯ. ಇವರದು ಸಂಗೀತದ ವಾತಾ ವರಣವಿದ್ದ ಮನೆತನ. ಚೆನ್ನ ಬಸವಯ್ಯನವರ ಅಣ್ಣ ಬಸವಲಿಂಗಯ್ಯ ಪುರಾಣ ಹಾಗೂ ಕೀರ್ತನ ಕಲೆಯಲ್ಲಿ ನಿಷ್ಣಾತರಾಗಿದ್ದರು. ದಾಸರ ಪದ ಮತ್ತು ಶಿಶುನಾಳ ಶರೀಫರ ಪದಗಳನ್ನು ಅವರು ಸದಾ ಹಾಡುತ್ತಿದ್ದರು. ಮನೆಯಲ್ಲಿ ಶಾಸ್ತ್ರೀಯವಾಗಿ ಸಂಗೀತ ಅಭ್ಯಾಸ ನಡೆಸದಿ ದ್ದರೂ ಆ ಕಡೆಗೆ ತುಂಬ ಒಲವಿತ್ತು. ಊರು ಹಾಗೂ ಕುಟುಂಬದ ಸಂಗೀತ ಪರಿಸರ ಬಾಲಕ ಪಂಚಾಕ್ಷರಿಸ್ವಾಮಿಯ ಮೇಲೆ ಪ್ರಭಾವ ಬೀರಿದುವು. ತಮ್ಮ ಎಳನೆಯ ವಯಸ್ಸಿನಲ್ಲೇ ಸಂಗೀತ ಕಲಿಯಲು ಗುರುಕುಲವನ್ನು ಸೇರಿದರು. ಗದಗಿನ ವೀರೇಶ್ವರ ಪುಣ್ಯಾಶ್ರಮದ ಉಭಯಗಾನ ವಿಶಾರದ ಪಂಚಾಕ್ಷರಿ ಬುವಾ ಇವರ ಗುರುಗಳಾಗಿದ್ದರು. ಅವರಲ್ಲಿ ಹತ್ತು ವರ್ಷ ಗ್ವಾಲಿಯರ್ ಶೈಲಿಯ ಸಂಗೀತಾಭ್ಯಾಸ ನಡೆಸಿದರು. ಅನಂತರ ಮಲ್ಲಿಕಾರ್ಜುನ ಮನ್ಸೂರರ ಬಳಿ ಜಯಪುರ್ ಅತ್ರೌಲಿ ಘರಾನ ಶೈಲಿಯನ್ನು ಅಭ್ಯಾಸ ಮಾಡಿದರು. ಇದರಿಂದ ಇವರು ಗ್ವಾಲಿಯರ್ ಹಾಗೂ ಜಯಪುರ್ ಅತ್ರೌಲಿ ಘರಾನದ ಸಮ್ಮಿಶ್ರಣದ ಮಧುರ ಗಾಯನದ ಶೈಲಿಯಲ್ಲಿ ನಿಷ್ಣಾತರಾದರು. ಮಲ್ಲಿಕಾರ್ಜುನ ಮನ್ಸೂರ್ ಅವರೊಂದಿಗೆ ಇವರು ಭಾರತದ ಎಲ್ಲೆಡೆ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇದಲ್ಲದೆ ಆಕಾಶವಾಣಿ ಹಾಗೂ ದೂರದರ್ಶನಗಳ ಮೊದಲ ದರ್ಜೆಯ ಕಲಾವಿದರಾಗಿಯೂ ಸೇವೆ ಸಲ್ಲಿಸಿದ್ದಾರೆ. ಜಯಪುರ್ ಅತ್ರೌಲಿ ಘರಾನದಲ್ಲಿ ಇನ್ನೂ ಹೆಚ್ಚಿನ ಅಧ್ಯಯನ ಕೈಗೊಳ್ಳಲು ಮೂರು ವರ್ಷಗಳ ಕಾಲ ಕೊಲ್ಲಾಪುರದಲ್ಲಿ ನೆಲಸಿ ಬುವಾ ಸರನಾಯ್ಕರವರಲ್ಲಿ ಶಿಷ್ಯವೃತ್ತಿಯನ್ನು ಕೈಗೊಂಡರು.

ಇವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದಲ್ಲಿ ಸಂಗೀತದ ಉಪನ್ಯಾಸಕರಾಗಿಯೂ ದುಡಿದಿದ್ದಾರೆ. ಆಕಾಶ ವಾಣಿಯ ಸಂಗೀತ ಸಮ್ಮೇಳನಗಳು, ರಾಷ್ಟ್ರೀಯ ಕಾರ್ಯಕ್ರಮಗಳು, ಪ್ರತಿ ಮಂಗಳವಾರ ಪ್ರಸಾರವಾಗುವ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಹಲವಾರು ಬಾರಿ ಹಾಡಿದ್ದಾರೆ. ಯುರೋಪ್, ಅಮೆರಿಕ ದೇಶಗಳಿಗೆ ಹಲವು ಭಾರಿ ಭೇಟಿ ನೀಡಿ ಸಂಗೀತ ಕಛೇರಿಯ ಜೊತೆಗೆ ಸಂಗೀತ ಪಾಠವನ್ನೂ ಹೇಳಿಕೊಟ್ಟಿದ್ದಾರೆ.

ಇವರು ಜಯಪುರ್ ಅತ್ರೌಲಿ ಘರಾನ ಶೈಲಿಯಲ್ಲಿ ಅನೇಕ ಶಿಷ್ಯರನ್ನು ಬೆಳೆಸಿದ್ದಾರೆ. ಬನಾರಸ್ ಹಿಂದು ವಿಶ್ವವಿದ್ಯಾಲಯದ ಸರಯೂ ಆರ್. ಸೊನ್ನಿ, ಮುಂಬಯಿಯ ಗೀತಾ ಜಾವಡೇಕರ್, ಅಮೆರಿಕದ ನಿರ್ಮಲ ಜಯನಂದಯ್ಯ, ಹೊನ್ನಾವರದ ಪಂ.ಷಡಕ್ಷರಿ ಬುವಾ ಯತ್ನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದ ಎ.ಯು.ಪಾಟೀಲ್, ಮುಕ್ತಾ, ಮಜುಮದಾರ್, ಶಶಿಕಲಾ, ವಿ.ಜಾವಡಿ, ಮೃತ್ಯುಂಜಯ, ಅಗಡಿ ಹಾಗೂ ಬೆಂಗಳೂರಿನ ನಾಗರಾಜ ರಾವ್ ಹವಾಲ್ದಾರ್ ಮೊದಲಾದವರನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದು.

ಇವರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ್ದ ಸೇವೆಯನ್ನು ಗುರುತಿಸಿ ಅನೇಕ ಸಂಘಸಂಸ್ಥೆಗಳು ಹಾಗೂ ಸರ್ಕಾರ ಇವರನ್ನು ಗೌರವಿಸಿದೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ (1988– 89), ಕರ್ನಾಟಕ ರಾಜ್ಯ ಪ್ರಶಸ್ತಿ (1994) ಇವರಿಗೆ ಲಭಿಸಿವೆ. ನಾದಬ್ರಹ್ಮ ಸಂಗೀತಕಲಾನಿಧಿ, ಲಯಬ್ರಹ್ಮ–ಇವು ಇವರಿಗೆ ಸಂದಿರುವ ಕೆಲವು ಬಿರುದುಗಳು. ಪುಟ್ಟರಾಜ ಸಮ್ಮಾನ (2002) ಹಾಗೂ ಕನಕ ಪುರಂದರ ಪ್ರಶಸ್ತಿಗಳೂ ಇವರಿಗೆ ದೊರತಿವೆ.

ಇವರು ಬಸವಣ್ಣ ಹಾಗೂ ಅಕ್ಕಮಹಾದೇವಿಯ ವಚನಗಳನ್ನು ಹಾಡಿ ಅಕ್ಕಕೇಳವ್ವ ಎಂಬ ಧ್ವನಿಸುರುಳಿಯನ್ನು ತಂದಿದ್ದಾರೆ. ಚೆನ್ನೈಯ ಶ್ರುತಿ ಪ್ರತಿಷ್ಠಾನ ತನ್ನ ಸಂಗ್ರಹಾಲಯಕ್ಕಾಗಿ ಇವರಿಂದ ಇನ್ನೂರು ರಾಗಗಳನ್ನು ಹಾಡಿಸಿ ಕಾಯ್ದಿರಿಸಿದೆ. (ಎಚ್.ಆರ್.ಎಲ್.)

**ಪಂಚಾಚಾರ್ಯರು:** ವೀರಶೈವ ಮತಗ್ರಂಥಗಳಲ್ಲಿ ರೇವಣ್ಣಸಿದ್ಧ, ಮರುಳ ಸಿದ್ಧ, ಏಕೋರಾಮ, ವಿಶ್ವಾರಾಧ್ಯ ಮತ್ತು ಪಂಡಿತಾರಾಧ್ಯ ಎಂಬ ಐದು ಮಂದಿ ಶಿವಾಚಾರ್ಯರ ಹೆಸರುಗಳನ್ನು ಬಹಳವಾಗಿ ಹೇಳಿದೆ. ಇವರು ವೀರಶೈವ ಮತಾಚಾರ್ಯರು ಎಂದು ಕೂಡ ಕೆಲವು ಗ್ರಂಥಕಾರರು ಹೇಳಿದ್ದಾರೆ. ಈ ವಿಚಾರ ಶಿವಾಗಮಗಳಲ್ಲಿ ಮೊಟ್ಟಮೊದಲು ಉಕ್ತವಾಗಿದೆ. ಇವರು ಪರಶಿವನ ಸದ್ಯೋಜಾತ, ಅಘೋರ, ವಾಮದೇವ, ಈಶಾನ್ಯ, ತತ್ಪುರುಷ ಎಂಬ ಪಂಚಮುಖಗಳಲ್ಲಿ ಜನಿಸಿದರೆಂದೂ ಅಂತರ ಕೊಲ್ಲಿಪಾಕಿ, ಶ್ರೀಶೈಲ, ಉಜ್ಜಯಿನಿ, ಕಾಶಿ ಮತ್ತು ಕೇದಾರ ಲಿಂಗಗಳಲ್ಲಿ ಅವತರಿಸಿದರೆಂದೂ ಇವರು ಅಯೋನಿಜರೆಂದೂ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಎಂಬ ಪಂಚಗೋತ್ರಗಳ ಅಧಿಪತಿಗಳೆಂದೂ ವೀರಶೈವ ಮತಾಚಾರ್ಯರೆಂದೂ ಸ್ವಯಂಭು ಮೊದಲಾದ ಆಗಮಗಳಲ್ಲಿ ಹೇಳಿದೆ. ವೀರಶೈವ ಪುರಾಣಾದಿಗಳು ಈ ವಿಷಯಗಳನ್ನು ಎತ್ತಿ ಹೇಳಿವೆ. ಮೇಲಿನ ಈ ಐವರು ಆಚಾರ್ಯರ ಹೆಸರಿನಲ್ಲಿ ಕ್ರಮವಾಗಿ ಬಾಳೇಹಳ್ಳಿ (ಚಿಕ್ಕಮಗ ಳೂರು ಜಿಲ್ಲೆ), ಉಜ್ಜಯಿನಿ (ಬಳ್ಳಾರಿ), ಶ್ರೀಶೈಲ (ಕರ್ನೂಲು ಜಿಲ್ಲೆ), ಕಾಶೀಕ್ಷೇತ್ರ ಮತ್ತು ಕೇದಾರ (ಉತ್ತರ ಪ್ರದೇಶ)– ಈ ಐದು ಕ್ಷೇತ್ರಗಳಲ್ಲಿ ಈ ಆಚಾರ್ಯ ಪಂಚಕದ ಮಠಪೀಠಗಳು ಪ್ರಸಿದ್ಧವಾಗಿವೆ.

ಜಗದ್ಗುರು ರಂಭಾಪುರಿ ಪೀಠ, ಬಾಳೇಹಳ್ಳಿ (ಚಿಕ್ಕಮಗಳೂರು ಜಿಲ್ಲೆ)

ಷಡಕ್ಷರಿ ತನ್ನ ವೃಷಭೇಂದ್ರ ವಿಜಯದಲ್ಲಿ ಪೂರ್ವಾಚಾರ್ಯರನ್ನು ಸ್ಮರಿಸುವಾಗ ಶ್ರೀಗಳಾಚತುರಾಚಾರ್ಯ ಪದಾಂಬುಜಂಗಳೆಮಗೀಗಾಮೋದ ಸಂದೋಹಮಂ ಎಂದೂ ರಾಜಶೇಖರ ವಿಳಾಸದಲ್ಲಿ ರೇಣುಕ ರಾಮ ಪಂಡಿತ ಮಹಾ ಮರುಳಾರ್ಯರ ಮಾಣದೆ ಬಣ್ಣಿಸುತ್ತೆಱಗಿಮೇಣ್ಪಡೆವಂ ಪರಮಾರ್ಥ ಸಿದ್ಧಿಯಂ ಎಂದೂ ಹೇಳಿದ್ದಾನೆ. ಗೂಳೂರಿನಲ್ಲಿ ವಾಸವಾಗಿದ್ದ ಸಂಪಾದನೆಯ ಪರ್ವತೇಶ (1698) ಚತುರಾಚಾರ್ಯ ಪುರಾಣವನ್ನು ಬರೆದಿದ್ದಾನೆ. ಇದರಲ್ಲಿ ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ ಎಂಬ ಈ ನಾಲ್ವರು ಆಚಾರ್ಯರ ಚರಿತ್ರೆಯನ್ನು ಮುಖ್ಯವಾಗಿ ಹೇಳಿ, ಕಡೆಯಲ್ಲಿ ವಿಶ್ವೇಶ್ವರಾಚಾರ್ಯರನ್ನು ಸೇರಿಸಿ, ಪಂಚಕಲಶದ ಆಚಾರ್ಯಚರಿತ ಎಂದಿದ್ದಾನೆ. ಈ ವಿಷಯಗಳನ್ನು ನೋಡಿದರೆ ಮೊದಲಿಗೆ ನಾಲ್ಕೇಜನ ಆಚಾರ್ಯರಿದ್ದು ಆ ಪಟ್ಟಿಗೆ ಅನಂತರ ವಿಶ್ವಾರಾಧ್ಯ ಸೇರಿ ಆಚಾರ್ಯರ ಸಂಖ್ಯೆ ಐದು ಆಗಿರಬೇಕೆಂದು ತೋರುತ್ತದೆ.

ಕಾಶಿಯಲ್ಲಿರುವ ಜಂಗಮವಾಡಿ ಮಠ ವಿಶ್ವಾರಾಧ್ಯರ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಮಠಕ್ಕೆ ಕಾಶಿಯ ಹಾಗೂ ಮೈಸೂರು ಮಹಾರಾಜರು ಬರೆಸಿಕೊಟ್ಟ ಶಾಸನಗಳಿವೆ. ಜಹಾಂಗೀರ್, ಔರಂಗಜೇಬ್, ಷಹಜಹಾನ್ ಮೊದಲಾದವರು? ಕೊಟ್ಟ ಶಾಸನಗಳಿವೆ. ಕೆಳದಿ ರಾಜ ದೊಡ್ಡಸಂಕಣ ನಾಯಕ ಈ ಮಠಕ್ಕೆ ಹೆಚ್ಚು ಸೇವೆ ಸಲ್ಲಿಸಿದ್ದಾನೆ. ಪ್ರಯಾಗದ ತ್ರಿವೇಣಿ ಸಂಗಮದ ಹತ್ತಿರ ಈ ಮಠದ ಶಾಖೆ ಇದೆ. ವೀರಶೈವರಲ್ಲಿ ನಡೆಯುವ ಶಿವದೀಕ್ಷಾ ಕರ್ಮಗಳು ಈ ಐವರು ಆಚಾರ್ಯರ ಹೆಸರಿನ ಪಂಚಕಳಸದ ಸನ್ನಿಧಿಯಲ್ಲಿ ನಡೆಯುತ್ತವೆ. *

**ಪಂಚಾಮೃತ:** ಗದಗ್‌ನಿಂದ (ಇಂದಿನ ಗದಗ ಜಿಲ್ಲೆ) ಪ್ರಕಟವಾಗು ತ್ತಿದ್ದ ಮಾಸಪತ್ರಿಕೆ. 1961 ಏಪ್ರಿಲ್‌ನಲ್ಲಿ ಆರಂಭವಾಯಿತು. ಡೆಮಿ ಅಷ್ಟದಳ ಆಕಾರದ ಸು. 120 ಪುಟಗಳಿಂದ ಕೂಡಿದ್ದ ಈ ಪತ್ರಿಕೆಯ ಸಂಪಾದಕರು ಪಂಢರೀನಾಥಾಚಾರ್ಯ ಗಲಗಲಿ. ವಿವಿಧ ಅಭಿರುಚಿಗಳ ವಾಚಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಲೇಖನಗಳನ್ನು ಪ್ರಕಟಿಸಲಾಗುತ್ತಿತ್ತು. ಮನರಂಜಕ ಹಾಗೂ ನೀತಿಬೋಧಕ ವಿಷಯಗಳಿಗೆ ಹೆಚ್ಚು ಗಮನ ಸಲ್ಲುತ್ತಿತ್ತು. ಹಾಸ್ಯ ಲೇಖನಗಳು, ವಿಚಾರಪೂರ್ಣ ಬರೆಹಗಳು, ಸಾಮಾಜಿಕ ಐತಿಹಾಸಿಕ ಹಾಗೂ ಪತ್ತೇದಾರಿ ಕಥೆಗಳು ಆಕರ್ಷಕವಾಗಿ ಬರುತ್ತಿದ್ದುವು. ಪತ್ರಿಕೆಯ ಕೆಲವು ಪ್ರಧಾನ ವಿಭಾಗಗಳಿವು: ವೇದ ಬೋಧ, ಸಂಸ್ಕೃತ ಕವಿ ಕೃತಿ ಪರಿಚಯ, ಸುಭಾಷಿತಗಳು, ದೊಡ್ಡವರ ಸಣ್ಣಕಥೆಗಳು ಮತ್ತು ಪುಸ್ತಕ ವಿಭಾಗ. ಪುಸ್ತಕ ವಿಭಾಗದಲ್ಲಿ ಹೆಚ್ಚಾಗಿ ಬರುತ್ತಿದ್ದುದು ಮರಾಠಿ, ತೆಲುಗು, ಹಿಂದಿ ಇತ್ಯಾದಿ ಭಾಷೆಗಳಲ್ಲಿಯ ಕಾದಂಬರಿಗಳ ಭಾಷಾಂತರಗಳು.

ಪಂಚಾಮೃತ ಸುಂದರವಾಗಿ ಪ್ರಕಟವಾಗುತ್ತಿತ್ತು. ಹೊದಿಕೆಯ ಮೇಲೆ ವರ್ಣರಂಜಿತ ಚಿತ್ರವಿರುತ್ತಿತ್ತು. 1967ರ ನವೆಂಬರ್ ದೀಪಾವಳಿ ಸಂಚಿಕೆಯೊಂದಿಗೆ ಪತ್ರಿಕೆ ಡೆಮಿ ಅಷ್ಟದಳ ಆಕಾರ ತಾಳಿತು. ಆ ವೇಳೆಗೆ ಪತ್ರಿಕೆ ಆರ್ಥಿಕ ಮುಗ್ಗಟ್ಟಿಗೊಳಗಾಗಿದ್ದಿತೆಂಬುದು ವ್ಯಕ್ತವಾಗುವುದು. ಸಂಪಾದಕ ಗಲಗಲಿಯವರೆ ಪತ್ರಿಕೆಯ ಎಲ್ಲ ಹೊಣೆಯನ್ನೂ ಹೊತ್ತಿದ್ದುದರಿಂದ ಪ್ರಕಟಣೆಯನ್ನು ನಿರ್ವಹಿಸುವುದು ಕೊನೆಕೊನೆಗೆ ಬಹಳ ಕಷ್ಟಕರವಾಗಿ ಪರಿಣಮಿಸಿತು. 1972ರ ಹೊತ್ತಿಗೆ ಪತ್ರಿಕೆ ನಿಂತುಹೋಯಿತು.

ಪಂಚಾಮೃತ ಜೀವಂತವಾಗಿದ್ದ ಕಾಲದಲ್ಲಿ ಪಂಢರಿನಾಥಾಚಾರ್ಯ ಗಲಗಲಿಯವರು ಕನ್ನಡ ಪತ್ರಿಕೋದ್ಯಮದಲ್ಲಿ ತಮ್ಮ ಸಾಮರ್ಥ್ಯವನ್ನು ಅದರ ಮೂಲಕ ಪ್ರಕಟಿಸಿದರು. ಈ ಅಲ್ಪಾವಧಿಯಲ್ಲಿ ಪತ್ರಿಕೆ ಕನ್ನಡ ಓದುಗರ ಮನವನ್ನು ಸೆಳೆದು ಜನಾದರಣೀಯ ಸಾಹಿತ್ಯವನ್ನು ಹಂಚಿತು. ಪತ್ರಿಕೆ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಪ್ರತಿ ತಿಂಗಳೂ ಹಂಚಿಕೆಯಾಗುತ್ತಿದ್ದ ಪ್ರತಿಗಳ ಸಂಖ್ಯೆ ಸು. 11,000. ಪತ್ರಿಕೆ ಗದಗ್‌ನ ನ್ಯೂ ಗದಗ ಪ್ರಿಂಟರಿಯಲ್ಲಿ ಮುದ್ರಣವಾಗುತ್ತಿತ್ತು. *

**ಪಂಚಾಚಾರ:** ವೀರಶೈವರಲ್ಲಿ ಪಂಚಾಚಾರ್ಯರು ನೀತಿ ಪ್ರಧಾನವಾದ ಸದಾಚಾರ, ಶಿವಚಾರ, ಲಿಂಗಾಚಾರ, ಭೃತ್ಯಾಚಾರ, ಗಣಾಚಾರ ಎಂಬ ಐದು ಆಚಾರಗಳನ್ನು ಹೇಳಿರುತ್ತಾರೆ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು ಎಂಬ ಬಸವಣ್ಣನವರ ವಚನದಂತೆ ಸಮಾಜದಲ್ಲಿ ವ್ಯಕ್ತಿಯೋಗ್ಯವಾಗಿ ನಡೆಯಲು ಈ ಆಚಾರಗಳು ನೆರವಾಗುತ್ತವೆ.

**ಸದಾಚಾರ:** ಪರಸ್ತ್ರೀ, ಪರದ್ರವ್ಯ, ಪರವಸ್ತುಗಳನ್ನು ಮುಟ್ಟದಿರುವುದು, ಪರನಿಂದೆಯನ್ನು ಮಾಡದಿರುವುದು, ಪರಹಿಂಸೆಯನ್ನು ಆಚರಿಸದಿರುವುದು, ಸದಾಶಾಸ್ತ್ರೋಕ್ತ ಮಾರ್ಗದಲ್ಲಿ ನಡೆಯುವುದು, ಗುರುಹಿರಿಯಲ್ಲಿ ಶ್ರದ್ಧಾನಿಷ್ಠನಾಗಿರುವುದು ದೈವಭಕ್ತಿ ಸಂಪನ್ನನಾಗಿರುವುದು ಇತ್ಯಾದಿ.

**ಶಿವಾಚಾರ:** ಶಿವಭಕ್ತಿ ಸಂಪನ್ನವಾಗಿ ಅನ್ಯದೈವಗಳನ್ನು ಸ್ಮರಿಸದಿರುವವನು ಏಕೋದೇವೋ ಪಾಸಕನಾಗಿ, ಶಿವೈಕ್ಯ ವ್ರತವುಳ್ಳವನಾಗಿರುವುದು, ಶಿವಾಗಮಗಳಲ್ಲಿ ಲುಪ್ತವಾಗಿರುವುದು, ಶಿವಕ್ಷೇತ್ರಗಳನ್ನು ಸಂದರ್ಶಿಸುವುದು, ಶಿವಭಕ್ತರನ್ನು ಸಂರಕ್ಷಿಸುವುದು ಇತ್ಯಾದಿ.

**ಲಿಂಗಾಚಾರ:** ಇಷ್ಟ ಪ್ರಾಣ, ಭಾವಲಿಂಗಗಳ ಅನುಸಂಧಾನ ಮಾಡಿ ಸ್ಥೂಲ, ಸೂಕ್ಷ್ಮ ಕಾರಣವೆಂಬ ತ್ಯಾಗಾಂಗ, ಯೋಗಾಂಗ, ಭೋಗಾಂಗಗಳನ್ನು ತ್ರಿವಿಧ ಲಿಂಗಪೂಜೆಯಲ್ಲಿ ಆಚರಿಸುವುದು. ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಲಿಂಗವೇ ಕಾರಣವೆಂದೂ ಜಗತ್ತೆಲ್ಲವೂ ಲಿಂಗಮಯವೆಂದೂ ತಿಳಿಯುವುದು.

**ಭೃತ್ಯಾಚಾರ:** ಎನಗಿಂತ ಕಿರಿಯರಿಲ್ಲ. ಶಿವಶರಣರಿಗಿಂತ ಹಿರಿಯರಿಲ್ಲ ಎಂಬ ಬಸವಣ್ಣನವರ ವಚನದಂತೆ, ದಾಸೋಹಂ ಭಾವದಿಂದ ನಡೆಯುವುದು, ಶರಣರನ್ನು ಗುರುಜಂಗಮರನ್ನು ಕಂಡರೆ ಶರಣಾರ್ಥಿ ಎಂದು ಕೈಂಕರ್ಯಭಾವದಿಂದ ವರ್ತಿಸುವುದು.

**ಗಣಾಚಾರ:** ಶಿವಾಗಮೋಕ್ತ ರೀತಿಯಿಂದ ನಡೆನುಡಿಗಳನ್ನು ಶಿವಧರ್ಮಕ್ಕೆ ಅನುಗುಣವಾಗಿ ವರ್ತಿಸುವುದು. ಶಿವಕ್ಷೇತ್ರ, ಶಿವಶರಣರನ್ನು ರಕ್ಷಿಸುವುದು ಇತ್ಯಾದಿ.

*

**ಪಂಚಾಯಿತಿಕೆ:** ವ್ಯಾಜ್ಯಗಳು ಹುಟ್ಟಿಕೊಂಡಾಗ, ವಿಷಯವನ್ನು ತಿಳಿದ ಸ್ಥಳದವರಿಂದಲೇ ಚಾವಡಿಯಲ್ಲಿ ಅಥವಾ ದೇವಸ್ಥಾನದಲ್ಲಿ ಕುಳಿತು, ಎರಡು ಪಕ್ಷಗಳವರ ವಾದಗಳನ್ನೂ ಕೇಳಿ, ತೀರ್ಮಾನಕೊಡುವ ಜನಪದ ವಿಧಾನ. ಈ ತೀರ್ಮಾನದಂತೆ ವ್ಯಾಜ್ಯದ ಉಭಯತ್ರರೂ ನಡೆದುಕೊಳ್ಳುವುದು ವಾಡಿಕೆ. ಇಂದಿನ ಕಾಲದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿ, ಕೋರ್ಟುಕಚೇರಿ ವ್ಯವಹಾರ ಎಲ್ಲರಿಗೂ ತಿಳಿದಿರುವುದರಿಂದ ಸ್ಥಳದ ಪಂಚಾಯಿತಿಕೆಗಳಿಗೆ ಹಿಂದಿನಷ್ಟು ಪ್ರಾಮುಖ್ಯತೆ ಇಲ್ಲವೆಂಬುದು ನಿಶ್ಚಯ. ಆದರೂ ಕೋರ್ಟುಗಳಲ್ಲಿ ಉಂಟಾಗುವ ವಿಳಂಬ, ಒದಗಿಸಬೇಕಾದ ಪುರಾವೆಯ ಅಸಂಖ್ಯಾತ ಕಾಗದಪತ್ರಗಳು, ಕ್ಷಣ ಕ್ಷಣವೂ ಪಕ್ಷಗಳನ್ನು ಬದಲಾಯಿಸುತ್ತಿರುವ ಸಾಕ್ಷಿಗಳ ಮನಸ್ಸನ್ನು ಒಲೈಸುವ ಕಷ್ಟ, ವಕೀಲರು ಪದೇಪದೇ ಕೇಳುವ ಶುಲ್ಕ ಈ ಎಲ್ಲ ಕಾರಣಗಳಿಂದ ಇಂದೂ ಹಳ್ಳಿಗರು ತಮ್ಮ ನಿತ್ಯವ್ಯವಹಾರಕ್ಕೆ ಸಂಬಂಧಿಸಿದ ಬಹುಪಾಲು ವ್ಯಾಜ್ಯಗಳನ್ನು ಸ್ಥಳದ ಪಂಚಾಯಿತಿಕೆಯಲ್ಲಿಯೇ ತೀರ್ಮಾನ ಮಾಡಿಕೊಳ್ಳುತ್ತಾರೆ. ಎಲ್ಲ ದೃಷ್ಟಿಯಿಂದಲೂ ಇದು ಕ್ಷೇಮವೆಂಬುದು ಅವರಿಗೂ ಮನದಟ್ಟಾಗಿದೆ.

ಹಿಂದೆ ಹಳ್ಳಿಗಳಲ್ಲಿ ಪಂಚಾಯಿತಿಕೆಗಳಿಗೆ ಪ್ರಾಮುಖ್ಯತೆ ಬಹಳವಾಗಿತ್ತು. ಆಗಿನ ಕಾಲದ ತಪ್ಪುಗಳು, ತಕ್ಸೀರುಗಳು, ವ್ಯಾಜ್ಯ ಕಾರಣಗಳು ತಕ್ಕಮಟ್ಟಿಗೆ ಸರಳವಾಗಿದ್ದವು. ಭೂಮಿ, ಹಣಕಾಸು, ಸಣ್ಣಪುಟ್ಟ ಕಳವು, ಸ್ತ್ರೀಪುರುಷರ ಲೈಂಗಿಕ ಪ್ರವೃತ್ತಿ ಪ್ರೇರಿತ ಅಪರಾಧಗಳು, ಹೊಡೆದಾಟ – ಇವು ಅಂದಿನ ಸಾಮಾನ್ಯ ವ್ಯಾಜ್ಯಕಾರಣವಾಗಿರುತ್ತಿದ್ದವು. ಅಂದಿನವರು ಇವುಗಳನ್ನೆಲ್ಲ ಸ್ಥಳದ ಪಂಚಾಯಿತಿಕೆಗಳಲ್ಲಿಯೇ ತೀರ್ಮಾನಿಸುತ್ತಿದ್ದರು. ಇಬ್ಬರು ವ್ಯಾಜ್ಯಕಾರರಲ್ಲಿ ಯಾರಾದರೂ ಒಬ್ಬನು ಗ್ರಾಮದ ಮುಖಂಡನೆನಿಸಿಕೊಳ್ಳುವವನಲ್ಲಿ, ಮತ್ತೊಬ್ಬನ ಮೇಲೆ ಒಂದು ಫಿರ್ಯಾದನ್ನು ಕೊಟ್ಟರೆ ಗ್ರಾಮದ ಮುಖಂಡ, ಉಳಿದ ಗ್ರಾಮಸ್ಥರೊಂದಿಗೆ ಮಾತುಕತೆಯಾಡಿ ವಿಚಾರಣೆಗಾಗಿ ಒಂದು ದಿನವನ್ನು ಗೊತ್ತುಮಾಡುತ್ತಿದ್ದ. ವಿಚಾರಣೆ ಸಾಧಾರಣವಾಗಿ ನಡೆಯುತ್ತಿದ್ದುದು ಸಂಧ್ಯಾಕಾಲದ ಅನಂತರ ದೇವಸ್ಥಾನದಲ್ಲಿ. ಕೆಲವರು ಪಂಚಾಯಿತಿದಾರರಾಗಿ ಜಗಲಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಪಂಚಾಯಿತಿದಾರರಲ್ಲಿ ಬಡವಬಲ್ಲಿದವೆಂಬ ಭೇದವಿರಲಿಲ್ಲ. ಆದರೆ ಅವರು ನಿಷ್ಪಕ್ಷಪಾತಿಗಳೂ ಒಳ್ಳೆಯ ನಡತೆಯುಳ್ಳವರೂ ಪ್ರಾಮಾಣಿಕರೆಂಬ ನಂಬಿಕೆಯನ್ನು ಜನರಲ್ಲಿ ಉಂಟುಮಾಡಿದವರೂ ಆಗಿರಬೇಕಾಗಿತ್ತು. ಪಂಚಾಯಿತಿಯಲ್ಲಿರುವಾಗ ಗಟ್ಟಿಯಾಗಿ ಮಾತನಾಡುವುದಾಗಲಿ, ಪೊಳ್ಳು ಅಥವಾ ಹಗುರವಾದ ಮಾತನಾಡುವುದಕ್ಕಾಗಲಿ, ಕೊನೆಗೆ ಬೀಡಿ ನಶ್ಯ ಉಪಯೋಗಿಸುವುದಕ್ಕಾಗಲಿ ಅವಕಾಶವಿರುತ್ತಿರಲಿಲ್ಲ. ಸನ್ನಿವೇಶದಲ್ಲಿ ತುಂಬ ಗಾಂಭೀರ್ಯವಿರುತ್ತಿತ್ತು. ಎರಡು ಪಕ್ಷಗಳವರೂ ಅಲ್ಲಿಗೆ ತಮ್ಮ ತಮ್ಮ ಸಾಕ್ಷಿಗಳನ್ನು ಕರೆತರುತ್ತಿದ್ದರು. ವಿಚಾರಣೆ ಗಂಭೀರವಾಗಿ ಆತುರ ಕಾತುರವಿಲ್ಲದೆ ಮುಚ್ಚುಮರೆಯಿಲ್ಲದ ಕೂಲಂಕಷವಾಗಿ ನಡೆಯುತ್ತಿತ್ತು. ಎಲ್ಲರೂ ಗ್ರಾಮಸ್ಥರೇ ಆದುದರಿಂದಲೂ ಜಮೀನು ಮುಂತಾದುವುಗಳಲ್ಲಿ ಅವರೆಲ್ಲರಿಗೂ ಅನುಭವವಿದ್ದುದರಿಂದಲೂ ಸತ್ಯವನ್ನು ನಿಖರವಾಗಿ ಕಂಡುಹಿಡಿಯುತ್ತಿದ್ದರು. ಕೆಲವು ವೇಳೆ ಪಂಚಾಯ್ತಿದಾರರೇ ತಪ್ಪು ಯಾರದೆಂದು ಕಂಡುಹಿಡಿಯಲು ಒಂದು ಉಪಸಮಿತಿಯನ್ನು ನಿಯಮಿಸುತ್ತಿದ್ದರು. ಅವರು ತಮ್ಮ ತೀರ್ಪನ್ನು ಹೇಳಿದ ಮೇಲೆ ಎಲ್ಲರೂ ಒಟ್ಟಾಗಿ ಸೇರಿ ನಿರ್ಣಯಿಸಿ ತೀರ್ಮಾನ ಮಾಡುತ್ತಿದ್ದರು. ಜಮೀನಿನ ವ್ಯಾಜ್ಯವಾಗಿದ್ದರೆ ಜಮೀನು ಯಾರಿಗೆ ಸೇರಬೇಕು, ಅದಕ್ಕೆ ಹಣ ಕೊಡಬೇಕಾದರೆ ಯಾರು ಎಷ್ಟು ಕೊಡಬೇಕು ಎಂಬುದನ್ನು ತೀರ್ಮಾನಿಸಿ ನಿರ್ಧರಿಸುತ್ತಿದ್ದರು. ಹಣಕಾಸು ಲೇವಾದೇವಿ ವ್ಯಾಜ್ಯವಾದರೆ ಅದಕ್ಕೆ ತಕ್ಕ ತೀರ್ಮಾನವನ್ನು ಕೊಡುತ್ತಿದ್ದರು. ಹೊಡೆದಾಟವಾಗಿದ್ದರೆ ತಪ್ಪು ಯಾರದೆಂದು ಕಂಡುಹಿಡಿದು ದಂಡವನ್ನು ವಿಧಿಸಿ ಆ ಹಣವನ್ನು ಊರೊಟ್ಟಿನ ನಿಧಿಗೆ ಸೇರಿಸುತ್ತಿದ್ದರು. ದಂಡದಲ್ಲಿ ಸ್ವಲ್ಪ ಭಾಗವನ್ನು ಗಾಯಗೊಂಡವರ ಉಪಚಾರಕ್ಕಾಗಿ ಕೊಡಿಸುತ್ತಿದ್ದರು. ಲೈಂಗಿಕ ಅಪರಾಧಗಳ ಸಂದರ್ಭದಲ್ಲಿ, ಹುಡುಗ ಹುಡುಗಿ ಮದುವೆಯಾಗದವರಾಗಿದ್ದರೆ ಇಬ್ಬರಿಗೂ (ಅವರು ಜಾತಿ ಮತ್ತು ಇತರ ದೃಷ್ಟಿಗಳಿಂದ ಒಪ್ಪಿದರೆ) ವಿವಾಹ ಮಾಡಿಸುತ್ತಿದ್ದರು. ಬೇರೆ ಬೇರೆ ಜಾತಿಯವರಾಗಿದ್ದರೆ ದಂಡವನ್ನು ವಿಧಿಸುತ್ತಿದ್ದರು.

ಇಂಥ ಸಣ್ಣಪುಟ್ಟ ವ್ಯವಹಾರಗಳಿಗೆ ಮಾತ್ರ ಪಂಚಾಯಿತಿಕೆ ಸೀಮಿತವಾಗಿರದೆ ಖೂನಿ ಹೊರತು (ಕೆಲವು ವೇಳೆ ಖೂನಿಗೆ ಸಹ) ದೊಡ್ಡ ದೊಡ್ಡ ಆಸ್ತಿ ವಿಭಾಗಕ್ಕೆ ಸಂಬಂಧಪಟ್ಟ ವ್ಯಾಜ್ಯಗಳನ್ನೂ ಒಳಗೊಂಡಿದ್ದು ನೂರಕ್ಕೆ ತೊಂಬತ್ತೈದಕ್ಕಿಂತ ಹೆಚ್ಚು ಭಾಗ, ಇಂಥ ಸಮಸ್ಯೆಗಳು ಪಂಚಾಯಿತಿಗಳಲ್ಲಿ ತೀರ್ಮಾನವಾಗುತ್ತಿದ್ದವು. ಇಂಥ ಪಂಚಾಯಿತಿಕೆಗಳಿಗೆ ನ್ಯಾಯ ಎಂದು ಕರೆಯುತ್ತಿದ್ದರು. ನ್ಯಾಯಕ್ಕೆ ಕುಂತವು, ನ್ಯಾಯ ಬಿದ್ದಯ್ತೆ,

ನ್ಯಾಯ ಹೂಡುಸ್ತಿನೀ, ನ್ಯಾಯ ಇಟ್ಕೊಂಡವ್ರೆ ಎಂಬ ಮಾತುಗಳು ಹಳ್ಳಿಗಳಲ್ಲಿ ಕೆಲವೆಡೆ ಈಗಲೂ ಪ್ರಚಾರದಲ್ಲಿವೆ. ಪಂಚಾಯಿತಸ್ಥರ ತೀರ್ಮಾನವನ್ನು ಉಭಯ ಪಕ್ಷಗಳವರೂ ಒಪ್ಪುತ್ತಿದ್ದರು. ಒಪ್ಪದಿದ್ದವನನ್ನು ಊರಿಗೆ ಒಂಟಿಯಾಗಿ ಮಾಡಿ ಅವನಿಗೆ ಬೆಂಕಿ ನೀರು ಕೊಡಕೂಡದು, ಅವನೊಂದಿಗೆ ಯಾರೂ ಸೇರಕೂಡದು, ಸೇರಿದರೆ ಅವನು ಕೊಡಬೇಕಾದ ದಂಡವನ್ನು ಸೇರಿದವರೂ ಕೊಡಬೇಕಾಗುತ್ತದೆ ಎಂದು ನಿರ್ಬಂಧಿಸುತ್ತಿದ್ದರು. ರೈತ ಸಮಾಜಜೀವಿಯಾದುದರಿಂದ ಒಂಟಿಯಾಗಿರಲು ಹೆದರಿ ತನಗೆ ವಿಧಿಸಿದ ದಂಡವನ್ನು ಕೊಟ್ಟುಬಿಡುತ್ತಿದ್ದ. ಸಕಾಲಕ್ಕೆ ಕೊಡದ ತಪ್ಪಿಗಾಗಿ ವಿಧಿಸಿದ ಹೆಚ್ಚು ದಂಡವನ್ನೂ ಕೊಡುತ್ತಿದ್ದ. ಅವನ ಅವಿಧೇಯತೆಗೆ ಯಾರಾದರೂ ಕುಮ್ಮಕ್ಕು ಕೊಟ್ಟಿದ್ದರೆ ಗ್ರಾಮಸ್ತರು ಅವನಿಗೂ ದಂಡ ವಿಧಿಸುತ್ತಿದ್ದರು.

ನ್ಯಾಯ ತೀರ್ಮಾನಕ್ಕೆ ಹಳ್ಳಿಯ ಪಂಚಾಯಿತಿಕೆಗಳೇ ಅಲ್ಲದೆ ಅದಕ್ಕೂ ಮೇಲುಪಟ್ಟ ನ್ಯಾಯಾಸ್ಥಾನಗಳೂ ಇದ್ದವು. ಎರಡು ಪಕ್ಷದವರಲ್ಲಿ ಯಾರಿಗೆ ಹಳ್ಳಿಯ ಪಂಚಾಯಿತಿಕೆಯ ತೀರ್ಪು ಪೂರ್ಣ ಸಮಾಧಾನವನ್ನು ನೀಡಲಿಲ್ಲವೋ ಅವರು ನಾಡಗೌಡರೆಂಬುವರಲ್ಲಿ ಹೋಗಿ ತಮ್ಮ ಮೊಕದ್ದ ಮೆಯನ್ನು ದಾಖಲು ಮಾಡುತ್ತಿದ್ದರು. ನಾಡಗೌಡರೆಂದರೆ ಆ ಪ್ರಾಂತದ ಇಂತಿಷ್ಟು ಹಳ್ಳಿಗಳಿಗೆ ಯಜಮಾನರೆಂದು ಜನ ಔಪಚಾರಿಕವಾಗಿ ಒಪ್ಪಿಕೊಂಡವರು. ಈತ ಹಣಕಾಸು ಲೇವಾದೇವಿ, ಜಮೀನ್ದಾರಿ, ದನಕರು ವಹಿವಾಟು ಎಲ್ಲ ದೃಷ್ಟಿಯಿಂದಲೂ ಅನುಕೂಲವಾಗಿದ್ದವನಾಗಿರುತ್ತಿದ್ದ. ಇವನ ಮಾತನ್ನು ಇವನ ಆಳ್ವಿಕೆಗೆ ಸೇರಿದ ಜನರೆಲ್ಲ ಅಂಗೀಕರಿಸುತ್ತಿದ್ದರು. ಈತ ಇಂಥ ವ್ಯಾಜ್ಯಗಳನ್ನು ತೀರ್ಮಾನ ಮಾಡಲು ಒಂದು ದಿನವನ್ನು ಗೊತ್ತುಮಾಡಿ, ಒಂದು ಸ್ಥಳವನ್ನು ನಿಗದಿ ಮಾಡಿ ಸ್ವಂತ ಖರ್ಚಿನಲ್ಲಿ ಅಲ್ಲಿ ಬಂದು ಬೀಡು ಬಿಡುತ್ತಿದ್ದ. ಒಂದೊಂದು ವೇಳೆ ಜಾತ್ರೆ ಕಾಲದಲ್ಲಿ ಜಾತ್ರೆ ಮೈದಾನದಲ್ಲಿಯೂ ಬೀಡು ಬಿಟ್ಟು ನಾಲ್ಕು ಐದು ದಿನ ವಿಚಾರಣೆ ಮಾಡಿ ನ್ಯಾಯವನ್ನು ಬಗೆಹರಿಸಿ ತೀರ್ಪು ಕೊಟ್ಟು ಹೋಗುತ್ತಿದ್ದ. ಫೀರ್ಯಾದಿಗಾಗಲಿ, ಅಪರಾಧಿಗಾಗಲಿ ಆ ತೀರ್ಮಾನವು ಸಮಾಧಾನವಾಗ ದಿದ್ದಲ್ಲಿ, ಆಗ ಅವರು ಮೇಲುನಾಡಗೌಡ ಎಂಬುವನಲ್ಲಿ ಹೋಗಿ ಪುನರ್‌ವಿಚಾರಣೆಗೆ ಬೇಡುತ್ತಿದ್ದರು. ಮೇಲುನಾಡಗೌಡನೆಂಬುವನು ವರ್ಷಕ್ಕೆ ಒಂದು ಗೊತ್ತಾದ ದಿನ, ನದಿಯ ತೀರ, ಹೊಳೆಯ ದಡ, ತೋಪು, ಬೆಟ್ಟದ ತಪ್ಪಲು ಮುಂತಾದ ವಿಶಾಲ ಪ್ರದೇಶದಲ್ಲಿ ತನ್ನ ದರ್ಬಾರು ನಡೆಸುತ್ತಿದ್ದ. ಇವನ ಜೊತೆಯಲ್ಲಿ ಅನೇಕ ಜನರಿರುತ್ತಿದ್ದರು. ಇವರೆಲ್ಲರ ಊಟ ಎಲೆ ಅಡಿಕೆ ಹೊಗೆಸೊಪ್ಪು ಮುಂತಾದ ಖರ್ಚನ್ನೂ ಫಿರ್ಯಾದಿಯೇ ಕೊಡಬೇಕಾಗುತ್ತಿತ್ತು. ಮೇಲುನಾಡಗೌಡ, ನಾಲ್ಕು ಐದು ದಿನ ಸಾಂಗವಾಗಿ ವ್ಯಾಜ್ಯ ಸ್ವರೂಪವನ್ನು ವಿಚಾರಿಸಿ ಬುದ್ಧಿವಂತಿಕೆಯ ಪ್ರಶ್ನೆಗಳನ್ನು ಹಾಕಿ ಬಹುಮಟ್ಟಿಗೆ ನಿಜಾಂಶವನ್ನು ಕಂಡುಹಿಡಿದು ಸಮರ್ಪಕವಾಗಿ ತೀರ್ಪನ್ನು ಕೊಡುತ್ತಿದ್ದ. ಮೇಲುನಾಡಗೌಡನೂ ತುಂಬ ಧನಿಕನೇ ಆಗಿರುತ್ತಿದ್ದುದ ರಿಂದ ಬಂದಿದ್ದವರಿಗೆಲ್ಲ ಪಾನಕ ಫಲಾಹಾರ ಪಂಚಾಮೃತ ಮುಂತಾದುವನ್ನು ತನ್ನ ಖರ್ಚಿನಿಂದಲೇ ಹಂಚಿಸುತ್ತಿದ್ದ. ಮೇಲುನಾಡಗೌಡನ ಸಭೆ ರಾಜ ದರ್ಬಾರಿನಂತೆಯೇ ಇರುತ್ತಿತ್ತು. ಇಂಥ ನ್ಯಾಯ ತೀರ್ಮಾನದ ಕಾಲದಲ್ಲಿ ಹಳ್ಳಿಯ ಕುಸ್ತಿಗಳು, ಕತ್ತಿಪಟ್ಟಾವರಸೆಗಳು, ಯಕ್ಷಗಾನ, ಕೋಲಾಟ, ಬಸವನ ಆಟ ಮುಂತಾದ ಜನಪದ ವಿನೋದಗಳೂ ನಡೆಯುತ್ತಿದ್ದವು. ವಾದಿಯಾಗಲಿ ಪ್ರತಿಪಕ್ಷದವರಾಗಲಿ ಮೇಲುನಾಡಗೌಡನ ತೀರ್ಮಾನವನ್ನು ಒಪ್ಪದಿದ್ದಲ್ಲಿ, ಅವರಿಗೆ ಸರ್ಕಾರದ ಕೋರ್ಟಿಗೆ ಹೋಗುವುದೊಂದೇ ಉಳಿದ ದಾರಿಯಾಗಿತ್ತು.

ಈಚೆಗೆ ನಾಡಗೌಡ, ಮೇಲುನಾಡಗೌಡ ಇವರ ವಿಚಾರಣೆ ತುಂಬ ವಿರಳ. ಆದರೆ ಈಗಲೂ ಸ್ಥಳದಪಂಚಾಯಿತಿಕೆಗಳಿಂದಲೇ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವ ಮಂದಿ ಹಳ್ಳಿಗಳಲ್ಲಿದ್ದಾರೆ. (ಜಿ.ಆರ್.ಐ.)

**ಪಂಜೆ ಮಂಗೇಶರಾವ್:** 1874– 1937. ಹೊಸಗನ್ನಡ ಅರುಣೋದಯ ಕಾಲದ ಹೆಸರಾಂತ ಸಾಹಿತಿ. ಕನ್ನಡ ಮಕ್ಕಳ ಸಾಹಿತ್ಯದ ಪಿತಾಮಹರು. ಸಣ್ಣಕಥೆ, ಕಥನಕವನ, ಹರಟೆ – ಈ ಮುಂತಾದ ಕ್ಷೇತ್ರಗಳಲ್ಲಿ ಹಿರಿಯ ಕೆಲಸ ಮಾಡಿದವರು. ಬಂಟ್ವಾಳದಲ್ಲಿ 1874 ಫೆಬ್ರವರಿ 22ರಂದು ಜನಿಸಿದರು. ತಂದೆ ರಾಮಪ್ಪಯ್ಯ, ತಾಯಿ ಸೀತಾ. ಇವರ ಹೆಸರಿನ ಜೊತೆಗಿರುವ ಪಂಜೆ ಇವರ ಪೂರ್ವಿಕರಿದ್ದ ಸ್ಥಳ. ಮುಂದೆ ಇದು ಇವರ ಮನೆತನದ ಹೆಸರೇ ಆಯಿತು. ಇವರ ತಂದೆ ಊರಿನ ಶಾನುಭೋಗರಾಗಿದ್ದರು. ತಂದೆಯವರ ಸದಾಚಾರ, ದೈವಿಭಕ್ತಿ, ಸರಳತೆಗಳೂ ತಾಯಿಯ ಧಾರ್ಮಿಕತೆ, ಪರೋಪಕಾರ ಬುದ್ಧಿಗಳೂ ಇವರ ಎಳೆಯ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರಿದುವು. ಮನೆಯಲ್ಲಿ ನಡೆಯುತ್ತಿದ್ದ ಭಜನೆ, ಕೀರ್ತನೆ, ಪ್ರವಚನ ಮುಂತಾದವುಗಳ ವಾತಾವರಣ ಇವರಿಗೆ ವಾಚನಾಭಿರುಚಿಯನ್ನೂ ಪದ್ಯ ಹಾಡುವುದನ್ನೂ ಮೈಗೂಡಿಸಿತು. ತಾಯಿ ಹೇಳುತ್ತಿದ್ದ ಕಥೆಗಳು ಇವರಿಗೆ ಮುಂದೆ ಕಥೆ ಹೇಳುವ ಕಲೆಗೆ ಬೀಜ ಹಾಕಿದುವು.



ಬಂಟ್ವಾಳದ ಶಾಲೆಯಲ್ಲಿ ಪಂಜೆಯವರ ಆರಂಭದ ವ್ಯಾಸಂಗ ನಡೆಯಿತು. ಓದಿನ ಜತೆಗೆ ಬಗೆಬಗೆಯ ಆಟಗ ಳಲ್ಲೂ ಬರೆವಣಿಗೆಯಲ್ಲೂ ಆಸಕ್ತಿವಹಿಸಿದರು. ಈ ಸಮಯದಲ್ಲಿಯೇ ಇವರಲ್ಲಿ ನಾದಪ್ರಿಯತೆ ಪ್ರಾಸಪ್ರಿಯತೆ ಚಮತ್ಕಾರಪ್ರಿಯತೆ ವಿನೋದ ಪ್ರಿಯತೆ ಈ ಗುಣಗಳೂ ಬೆಳೆದುವು.

ಪ್ರೌಢವ್ಯಾಸಂಗಕ್ಕೆಂದು ಪಂಜೆಯವರು ಮಂಗಳೂರಿಗೆ ಹೋದರು. ಆ ಅವಧಿಯಲ್ಲಿ ತಂದೆಯ ತೀವ್ರ ಅನಾರೋಗ್ಯದ ವಾರ್ತೆ ಬಂದು ಬಂಟ್ವಾಳವನ್ನು ಕಾಲುನಡಗೆಯಲ್ಲೇ ತಲಪಿದರು. ತಂದೆ ಕುಡಿಯಬೇಡ, ನೀತಿಯನ್ನು ಬಿಡಬೇಡ, ಎಷ್ಟೇ ಕಷ್ಟಬಂದರೂ ತಂಗಿತಮ್ಮಂದಿರನ್ನು ತೊರೆಯಬೇಡ ಎಂದು ಕೊನೆಯ ಉಪದೇಶವನ್ನು ಕೊಟ್ಟು ಮಗನನ್ನು ಬೀಳ್ಕೊಂಡರು. ತಂದೆಯವರ ಈ ಉಪದೇಶ ಮುಂದೆ ಇವರಿಗೆ ದಾರಿದೀಪವಾಯಿತು. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಸಂಸಾರದ ಹೊರೆಯನ್ನು ಹೊತ್ತು ಪಂಜೆಯವರು ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಸಂಸಾರ ನಿರ್ವಹಿಸಿ, ತಾವೂ ಕಲಿತು ಬೆಳೆದರು. 1894ರಲ್ಲಿ ಬೆನಗಲ್ ರಾಮರಾಯರ ಸಹೋದರಿ ಗಿರಿಜಾಬಾಯಿಯನ್ನು ಇವರು ಮದುವೆಯಾದರು.

ಮಂಗಳೂರು ಸರ್ಕಾರಿ ಕಲಾಶಾಲೆಯಲ್ಲಿ 1896ರಲ್ಲಿ ಇವರಿಗೆ ಸಹಾಯಕ ಕನ್ನಡ ಪಂಡಿತರ ಕೆಲಸ ದೊರೆಯಿತು (ಈ ಹುದ್ದೆಗೆ ನಂದಳಿಕೆ ಲಕ್ಷ್ಮೀನಾರಾಯಣಯ್ಯನವರು (ಮುದ್ದಣ್ಣ) ಅರ್ಜಿ ಹಾಕಿದ್ದರೂ ಆಂಗ್ಲಭಾಷೆ ಬಲ್ಲವರೆಂಬ ಕಾರಣದಿಂದ ಪಂಜೆಯವರೇ ನೇಮಕಗೊಂಡರು). ಶಾಲೆಯಲ್ಲಿ ಪಾಠ ಮಾಡುವಾಗ ಪದ್ಯಗಳನ್ನು ಅರ್ಥವತ್ತಾಗಿಯೂ ಭಾವಪ್ರಚೋದಕವಾಗಿಯೂ ಸಾಭಿನಯವಾಗಿಯೂ ಹಾಡಿ ಕಲಿಸುತ್ತಿದ್ದರು. ಗದ್ಯವನ್ನೂ ರಸವತ್ತಾಗಿ ಹೇಳಿಕೊಡುತ್ತಿದ್ದ ಇವರು ವಿದ್ಯಾರ್ಥಿಗಳಲ್ಲಿ ಬಹುಬೇಗ ಜನಪ್ರಿಯರಾದರು. ಅನಂತರ ಮದರಾಸಿಗೆ ಹೋಗಿ ಎಲ್.ಟಿ.

ಪದವಿ ಪಡೆದ ಪಂಜೆಯವರು ಮಂಗಳೂರು ಶಿಕ್ಷಕರ ತರಬೇತು ಕಾಲೇಜು ಹಾಗೂ ಮಡಿಕೇರಿ ಸರ್ಕಾರಿ ಕಾಲೇಜುಗಳಲ್ಲಿ ಉಪಾಧ್ಯಾಯರಾಗಿ, ಮುಖ್ಯೋಪಾಧ್ಯಾಯರಾಗಿ, ಮಂಗಳೂರು ರೇಂಜಿನಲ್ಲಿ ಡೆಪ್ಯುಟಿ ಎಜ್ಯುಕೇಷನಲ್ ಇನ್ಸ್‌ಪೆಕ್ಟರಾಗಿ ಸೇವೆ ಸಲ್ಲಿಸಿ, ಶೈಕ್ಷಣಿಕ ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳನ್ನು ತಂದರು.

ಪಂಜೆಯುವರು ತಮ್ಮ ಉಪಾಧ್ಯಾಯ ವೃತ್ತಿಯ ಜೊತೆಗೆ ಬರೆವಣಿಗೆಯನ್ನೂ ನಡೆಸಿಕೊಂಡು ಬಂದರು. 1900ರಲ್ಲಿ ಮಂಗಳೂರಿನಲ್ಲಿ ಬೋಳಾರ ವಿಠಲರಾಯರು ಪ್ರಾರಂಭಿಸಿದ ಸುವಾಸಿನಿ ಎಂಬ ಪತ್ರಿಕೆ ಇವರ ಸಾಹಿತ್ಯಕ್ಷೇತ್ರದ ದುಡಿಮೆಗೆ ಒಳ್ಳೆಯ ನೆರವಿತ್ತಿತ್ತು. ಸಂಪಾದಕರಾಗಿ ಬೆನಗಲ್ ರಾಮರಾಯರಿದ್ದರೂ ಎಲ್ಲ ಕಾರ್ಯವನ್ನೂ ಇವರೇ ನಿರ್ವಹಿಸುತ್ತಿದ್ದರು. ಆ ಪತ್ರಿಕೆಯಲ್ಲಿ ಇವರು ಬರೆದ ನನ್ನ ಚಿಕ್ಕತಂದೆ, ನನ್ನ ಚಿಕ್ಕತಂದೆಯ ಉಯಿಲು, ಕಮಲಪುರದ ಹೋಟ್ಲಿನಲ್ಲಿ ಮುಂತಾದ ಸರಸವಿನೋದದ ಕಥೆಗಳೂ ಪೃಥುಲಾ, ದುರ್ಗಾವತಿ ಮುಂತಾದ ಐತಿಹಾಸಿಕ ಕಥೆಗಳೂ ಪ್ರಕಟವಾದುವು. ಈ ಲೇಖನ ವ್ಯವಸಾಯದಲ್ಲಿ ಇವರು ವಸ್ತುನಿರೂಪಣೆಗೆ ಉಚಿತವಾದ ಶೈಲಿಯನ್ನು ರೂಪಿಸಿದರು. ಮಣ್ಣಿನವಾಸನೆಯ ನುಡಿಗಟ್ಟುಗಳನ್ನು ಬಳಸಿ, ಸರಳತೆಯ ತಳಹದಿಯಲ್ಲಿ ಕನ್ನಡಕ್ಕೆ ಹೊಸ ಚೇತನವನ್ನುಂಟುಮಾಡಿದರು. ಮಂಗಳೂರಿನ ಬಾಸೆಲ್ ಮಿಶನ್ನಿನ ಸತ್ಯದೀಪಿಕೆಯಲ್ಲಿ ಪಂಜೆಯವರು ಆಗಾಗ ಲಘುಪ್ರಬಂಧ ಗಳನ್ನೂ ಹರಟೆಯ ಮಲ್ಲ ಎಂಬ ಹೆಸರಿನಿಂದ ಪ್ರಚಲಿತ ವಿಷಯಗಳ ವಿಮರ್ಶೆ ವಿಡಂಬನೆಗಳನ್ನೂ ಪ್ರಕಟಿಸಿದರು.

ಪಂಜೆಯುವರು ಮಡಿಕೇರಿಯ ಸೆಂಟ್ರಲ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದಾಗ ಕೊಡಗಿನ ಚೆಲುವು ಮತ್ತು ಆ ನಾಡವರ ಜೀವನವನ್ನು ಕುರಿತು ಬರೆದ ಹುತ್ತರಿ ಹಾಡು ಕೊಡಗಿನ ರಾಷ್ಟ್ರಗೀತದಂತಿದೆ. ಹಾಗೆಯೇ ಇವರು ತುಳು ಜನಪದ ಸಾಹಿತ್ಯದಿಂದ ಆಯ್ದುಕೊಂಡು ಬರೆದ ಕೋಟಿ ಚನ್ನಯ್ಯ ಎಂಬುದೂ ಅತ್ಯುತ್ತಮ ಕೃತಿ. ಇವರು ಕಾಲಕಾಲಕ್ಕೆ ಬರೆದು ಪ್ರಕಟಿಸಿದ ಕವನಗಳನ್ನು ಸಂಗ್ರಹಿಸಿ ಬಾಸೆಲ್ ಮಿಶನ್ ಕನ್ನಡ ಮೊದಲನೆಯ ಪುಸ್ತಕ ಎಂಬ ಹೆಸರಿನಿಂದ ಪ್ರಕಟಿಸಿತು (1912). ಅನಂತರ 1919ರಲ್ಲಿ ಇದೇ ಸಂಸ್ಥೆಯಿಂದ ಇವರ ಕನ್ನಡ ಎರಡನೆಯ ಪುಸ್ತಕವೂ ಪ್ರಕಟವಾಯಿತು. ಪಂಜೆಯವರು ಅಜ್ಜಿ ಸಾಕಿದ ಮಗು, ಇಲಿಗಳ ಥಕ್ಕಥೈ, ಕೊಕ್ಕೋಕೋ ಕೋಳಿ, ಗುಡುಗುಡು ಗುಮ್ಮಟದೇವ, ಬೊಕ್ಕಬಾಯಿ ಕೊಕ್ಕರಾಜ, ಮಾತಾಡೋ ರಾಮಪ್ಪ, ಮೂರು ಕರಡಿಗಳು ಮುಂತಾದವನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಪಂಜೆಯವರು ಮಕ್ಕಳ ಸಾಹಿತ್ಯದ ಪ್ರಕಟಣೆ ಪ್ರಚಾರಗಳಿಗೆಂದೇ ಮಂಗಳೂರಿನಲ್ಲಿ 1921ರಲ್ಲಿ ಬಾಲಸಾಹಿತ್ಯ ಮಂಡಲ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಮಕ್ಕಳಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸುವುದರಲ್ಲಿ ಈ ಸಂಸ್ಥೆ ವಹಿಸಿದ ಪಾತ್ರ ಸ್ಮರಣೀಯ. ಮೂಡಬಿದಿರೆಯ ಹೊಸ ಬಸದಿಯ ಶಿಲಾಶಾಸನಗಳು, ಬಿಳಗಿ ಅರಸರ ವಂಶಾವಳಿ ಮುಂತಾದ ಪಂಜೆಯವರ ಹಲವು ಸಂಶೋಧನ ಲೇಖನಗಳು ಪಂಚಕಜ್ಜಾಯ ಎಂಬ ಹೆಸರಿನಲ್ಲಿ 1927ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಪಂಜೆಯವರು ನಿಕಟ ಸಂಪರ್ಕ ಹೊಂದಿದ್ದರು. ಮದರಾಸು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗದ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದಾರೆ. ಪಂಜೆಯವರ ನಾಡುನುಡಿಗಳ ಸೇವೆಯನ್ನು ಗಮನಿಸಿ ಕನ್ನಡದ ಜನತೆ ಇವರನ್ನು ರಾಯಚೂರಿನಲ್ಲಿ 1934ರಲ್ಲಿ ನಡೆದ 20ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು.

ಪಂಜೆ ಮಂಗೇಶರಾಯರು ತಮ್ಮ ಕೊನೆಯ ದಿನಗಳನ್ನು ಹೈದರಾಬಾದಿನಲ್ಲಿ ತಮ್ಮ ಮಕ್ಕಳ ಮನೆಯಲ್ಲಿದ್ದುಕೊಂಡು ಕಳೆದರು. ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಕುಮಾರವ್ಯಾಸ ಭಾರತವನ್ನು ಸಂಪಾದಿಸುವ ಕೆಲಸದಲ್ಲಿ ತೊಡಗಿದ್ದರು. ಆದರೆ ನ್ಯುಮೋನಿಯ ಜ್ವರಕ್ಕೆ ತುತ್ತಾಗಿ 1937 ಸಪ್ಟೆಂಬರ್ 25ರಂದು ನಿಧನರಾದರು.

1974ರಲ್ಲಿ ಪಂಜೆಯವರ ಜನ್ಮಶತಾಬ್ಧಿ ವರ್ಷವನ್ನು ನಾಡಿನಾದ್ಯಂತ ಆಚರಿಸಲಾಯಿತು. ಆ ಸಂದರ್ಭದಲ್ಲಿಇವರ ಬರೆಹಗಳನ್ನು ಮೂರು ಸಂಪುಟಗಳಲ್ಲಿ ಓರಿಯಂಟ್ ಲಾಂಗಮನ್ ಸಂಸ್ಥೆಯವರು ಪ್ರಕಟಿಸಿದ್ದಾರೆ.

(ಟಿ.ಜಿ.ಕೆ.ಬಿ.)

**ಪಂಡರೀಬಾಯಿ,ಎಂ.:** 1928– 2003. ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಕಲಾವಿದೆ; ಚಿತ್ರನಿರ್ಮಾಪಕಿ. ಜನಿಸಿದ್ದು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ. ತಂದೆ ರಂಗರಾಯರು ಪ್ರಸಿದ್ಧ ಕೀರ್ತನಕಾರರಾಗಿದ್ದರು. ತಾಯಿ ಶಿಕ್ಷಕಿ. ಬಡತನ ಮತ್ತು ಊರಿಂದೂರಿಗೆ ಸಂಚಾರ ಇವುಗಳಿಂದಾಗಿ ಇವರ ಓದು ಪ್ರಾಥಮಿಕ ಶಿಕ್ಷಣಕ್ಕೆ ಕೊನೆಗೊಂಡಿತು. ಒಳ್ಳೆಯ ಕಂಠಶ್ರೀ ಪಡೆದಿದ್ದ ಇವರು ತಂದೆಯಿಂದ ಕೀರ್ತನಕಲೆಯನ್ನು ಕಲಿತರು. ನಾಡಿನ ನಾನಾ ಭಾಗಗಳಲ್ಲಿ ಅನೇಕ ಕೀರ್ತನೆಗಳನ್ನು ಹಾಡಿ ಒಳ್ಳೆಯ ಹೆಸರನ್ನು ಗಳಿಸಿದರು. ನಾಟಕ ಕಲೆಯ ಬಗ್ಗೆಯೂ ಅಭಿರುಚಿ ಬೆಳೆಸಿಕೊಂಡ ಇವರು ತಮ್ಮ ಸಹೋದರ ವಿಮಲಾನಂದದಾಸರು ನಡೆಸುತ್ತಿದ್ದ ಆದರ್ಶ ನಾಟಕ ಸಂಘದಲ್ಲಿ ಚಿಕ್ಕ ಪಾತ್ರಗಳನ್ನು ಅಭಿನಯಿಸಿದರು. ಅನಂತರ ಟಿ. ಚೌಡಯ್ಯನವರ ಮೂಲಕ ಚಿತ್ರರಂಗವನ್ನು ಪ್ರವೇಶಿಸಿ ವಾಣಿ ಎಂಬ ಚಿತ್ರದಲ್ಲಿ ಪ್ರಥಮ ಬಾರಿಗೆ ಅಭಿನಯಿಸಿದರು.

ಎಚ್.ಎಲ್.ಎನ್.ಸಿಂಹ ಅವರು ನಿರ್ದೇಶಿಸಿದ ಬೇಡರ ಕಣ್ಣಪ್ಪ ಚಿತ್ರದಲ್ಲಿ ಅಭಿನಯಿಸಿ, ಚಿತ್ರರಂಗದಲ್ಲಿ ಜನಪ್ರಿಯತೆಯನ್ನು ಗಳಿಸಿ ಗುಣಸಾಗರಿ, ಭಕ್ತಕುಂಬಾರ, ರಾಜಾವಿಕ್ರಮ ಚಿತ್ರಗಳ ನಾಯಕಿಯಾಗಿ ಅಭಿನಯಿಸಿದರು. ಹರಿಶ್ಚಂದ್ರ ಚಿತ್ರದ ಮೂಲಕ ಸುಪ್ರಸಿದ್ಧ ತಾರೆಯಾಗಿ, ಅನೇಕ ಪ್ರಶಸ್ತಿಗಳನ್ನು ಪಡೆದರು. ಕನ್ನಡ ಚಿತ್ರಗಳಲ್ಲದೆ ತಮಿಳು, ಹಿಂದಿ, ಮಲೆಯಾಳಂ. ತೆಲುಗು, ಮರಾಠಿ ಮತ್ತು ತುಳು ಚಿತ್ರಗಳಲ್ಲೂ ಇವರು ಅಭಿನಯಿಸಿದ್ದಾರೆ. ತಮಿಳಿನ ಪರಾಶಕ್ತಿ, ಹಿಂದಿಯ ಬಾಬಿ ಈ ಚಿತ್ರಗಳು ಇವರಿಗೆ ಒಳ್ಳೆಯ ಯಶಸ್ಸನ್ನು ತಂದುಕೊಟ್ಟವು. ಕನ್ನಡದಲ್ಲಿ ಅಬ್ಬಾ ಆ ಹುಡುಗಿ, ತೇಜಸ್ವಿನಿ ಮುಂತಾದ ಚಿತ್ರಗಳನ್ನೂ ಇವರು ನಿರ್ಮಿಸಿದರು.

ಸಂತಸಖು, ರೇಣುಕಾಮಹಾತ್ಮೆ, ಭದ್ರವಿಜಯ, ಅನ್ನಪೂರ್ಣ, ಮುರಿಯದ ಮನೆ, ಮಹಾಸತಿ ಅನಸೂಯ, ಚಂದ್ರಹಾಸ, ಬೆಳ್ಳಿಮೋಡ, ಒಡಹುಟ್ಟಿದವಳು, ಮಧುರ ಮಿಲನ, ನಮ್ಮ ಮಕ್ಕಳು, ನಮ್ಮ ಮನೆ, ಗೆಜ್ಜೆಪೂಜೆ, ಜೇನುಗೂಡು ಮೊದಲಾದ ಅನೇಕ ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ನಟಿಸಿದರು. ತಮಗೆ ಜೋಡಿಯಾಗಿ ನಟಿಸಿದ ರಾಜಕುಮಾರ್, ಶಿವಾಜಿಗಣೇಶನ್ ಮೊದಲಾದ ನಾಯಕನಟರಿಗೆ ಹಲವು ಚಿತ್ರಗಳಲ್ಲಿ ತಾಯಿ ಪಾತ್ರದಲ್ಲಿ ಅಭಿನಯಿಸಿದರು. ಇದಲ್ಲದೇ ದಕ್ಷಿಣದ ಪ್ರಸಿದ್ಧ

ನಟರಾದ ಎಂ.ಜಿ. ರಾಮಚಂದ್ರನ್, ರಜನೀಕಾಂತ್, ವಿಷ್ಣುವರ್ಧನ್, ಅಂಬರೀಶ ಮೊದಲಾದವರ ತಾಯಿ ಯಾಗಿ ನಟಿಸಿದರು. ಸುಮಾರು ಆರು ದಶಕಗಳ ಕಾಲ ದಕ್ಷಿಣ ಭಾರತದ ವಿವಿಧ ಭಾಷೆಗಳಲ್ಲಿ 1200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದರು.

ಪಂಡರೀಬಾಯಿಯವರಿಗಿದ್ದ ರಂಗಭೂಮಿಯ ಆಸಕ್ತಿಯ ಫಲವಾಗಿ ಶ್ರೀಕೃಷ್ಣ ಚೈತನ್ಯ ನಾಟಕ ಸಭಾ ಎಂಬ ಸಂಸ್ಥೆ ಜನ್ಮತಾಳಿತು. ಈ ನಾಟಕ ಸಭಾದ ಭಕ್ತಮೀರಾ, ಶಾಂತಿನಿವಾಸಂ ನಾಟಕಗಳು ಜನಪ್ರಿಯವಾಗಿವೆ. ಇವರ ತಾರಾ ಬದುಕಿನ ಸಾಧನೆ ಗಮನಿಸಿ ಡಾ. ರಾಜಕುಮಾರ್ ಪ್ರಶಸ್ತಿ ನೀಡಲಾಗಿದೆ (1994– 95).

ಪಂಡರೀಬಾಯಿಯವರು ತಮ್ಮ ಜೀವನದ ಐದನೆಯ ದಶಕದಲ್ಲಿ ಮಂಡ್ಯದ ಕಲಾರಾಧಕ ಪಿ.ಎಚ್. ರಾಮರಾವ್ ಎಂಬುವರನ್ನು ವಿವಾಹವಾದರು. ಪಂಢರಾಪುರದ ಶ್ರೀ ಪಾಂಡುರಂಗಸ್ವಾಮಿ ಇವರ ಆರಾಧ್ಯದೈವ. ಇದರ ಪ್ರತೀಕವಾಗಿ ಚೆನ್ನೈನ ತಮ್ಮ ನಿವಾಸದ ಬಳಿ ಶ್ರೀಪಾಂಡುರಂಗ ದೇವಸ್ಥಾನವೊಂದನ್ನು ನಿರ್ಮಿಸಿದ್ದಾರೆ. ಪರಮ ಸಾತ್ವಿಕರಾದ ಇವರಿಗೆ ಕರ್ನಾಟಕದ ಕಲೆ, ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ತುಂಬ ಅಭಿಮಾನವಿತ್ತು. ಇವರು ಚೆನ್ನೈನಲ್ಲಿ 2003 ರಲ್ಲಿ ನಿಧನರಾದರು. (ಬಿ.ಎಸ್.ಎಸ್.ಆರ್.)

**ಪಂಡಿತ ತಾರಾನಾಥ:** 1891– 1942. ಸುಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದ ಇವರು, ಯೋಗಶಾಸ್ತ್ರ, ಸಂಗೀತ, ತತ್ತ್ವಜ್ಞಾನ, ಶಿಕ್ಷಣ, ಸಾಹಿತ್ಯ ಮತ್ತು ರಾಜಕಾರಣ ಮುಂತಾದ ರಂಗಗಳಲ್ಲೂ ದುಡಿದವರು. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಲ್ಲಿ ಜನಿಸಿದ ಇವರು ತಂದೆ ರಂಗರಾಯರಿಂದ ಸಂಸ್ಕೃತ ಮತ್ತು ಸಂಗೀತವನ್ನು ಕಲಿತರು. ಆಧ್ಯಾತ್ಮಿಕ ಜ್ಞಾನಾರ್ಜನೆಯ ಹುಚ್ಚಿನಿಂದ ಬಾಲ್ಯದಲ್ಲಿಯೇ ಸಂನ್ಯಾಸಿಗಳ ಹಿಂದೆ ಕೆಲವು ಕಾಲ ಅಲೆದಾಡಿದರು. ಅನಂತರ ಹೈದರಾಬಾದಿನ ವೈದ್ಯಕೀಯ ಕಾಲೇಜಿಗೆ ಸೇರಿದರಾದರೂ ವ್ಯಾಸಂಗವನ್ನು ಮಧ್ಯೆ ಬಿಟ್ಟು ಬಿದರೆಯ ಸರ್ಕಾರಿ ಶಾಲೆಯೊಂದರಲ್ಲಿ 1912ರಲ್ಲಿ ಕೆಲಸಕ್ಕೆ ಸೇರಿದರು. ಆಗ ಅಲ್ಲಿಗೆ ಆಗಮಿಸಿದ್ದ ನೇಪಾಳದ ಯೋಗಿ ಉತ್ತಮದಾಸ ಪರಮಹಂಸರು ಮತ್ತು ಯೋಗೀಶ್ವರಾನಂದರಿಂದ ಯೋಗ ಮತ್ತು ಆಯುರ್ವೇದ ದೀಕ್ಷೆಯನ್ನು ಪಡೆದರು. ನಿಜಾಮ ಸರ್ಕಾರದ ಆಡಳಿತದ ಅವ್ಯವಸ್ಥೆಯಿಂದ ನೊಂದು, ಸ್ವಾತಂತ್ರ್ಯದ ಸ್ಫೂರ್ತಿಯಿಂದ ತಾರಾನಾಥರು ತಳಮಳಿಸುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಇವರು ಅದೇ ತಳಮಳವನ್ನು ಉಂಟು ಮಾಡುತ್ತಿದ್ದಾರೆಂದು ಭಾವಿಸಿದ ಆಗಿನ ನಿಜಾಮ ಸರ್ಕಾರ ತಾರಾನಾಥರನ್ನು ಬಿದರೆಯಿಂದ ರಾಯಚೂರಿಗೂ ಅನಂತರ ನಿರ್ಮಲಿಗೂ ವರ್ಗ ಮಾಡಿತು. ಇದರಿಂದ ಸಿಡಿದೆದ್ದ ತಾರಾನಾಥರು ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ರಾಯಚೂರಿನಲ್ಲಿ ಹಮ್‍ದರ್ದ್ ಹೈಸ್ಕೂಲ್ ಎಂಬ ಖಾಸಗಿ ಶಾಲೆಯನ್ನು 1920ರ ಯುಗಾದಿಯಂದು ಪ್ರಾರಂಭಿಸಿದರು. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ದುಮುಕಿ ಆದರ್ಶ ನಾಯಕರೆನಿಸಿ ಕೊಂಡ ಇವರನ್ನು ನಿಜಾಮ ಸರ್ಕಾರ ರಾಜ್ಯದಿಂದ ಗಡೀಪಾರು ಮಾಡಿತು.



ತಾರಾನಾಥರು ಇದರಿಂದ ಧೃತಿಗೆಡದೆ, ತುಂಗಭದ್ರೆಯ ದಡದಲ್ಲಿ ತುಂಗಭದ್ರಾ ಸ್ಟೇಷನ್ ಬಳಿ ಪ್ರೇಮಾಯತನ ಎಂಬ ಆಶ್ರಮವನ್ನು ಸ್ಥಾಪಿಸಿ, ಅದನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಅಲ್ಲಿ ಆಯುರ್ವೇದ, ಸಾಹಿತ್ಯ, ಯೋಗ, ಸಮಾಜಶಾಸ್ತ್ರ ಮತ್ತು ಪತ್ರಿಕೋದ್ಯಮಗಳಲ್ಲಿ ಶಿಕ್ಷಣಕ್ಕೆ ಏರ್ಪಾಡು ಮಾಡಿದರು. ಪ್ರೇಮ ಎಂಬ ಇಂಗ್ಲಿಷ್ ಮತ್ತು ಕನ್ನಡ ನಿಯತಕಾಲಿಕ ಪತ್ರಿಕೆಯನ್ನು ಆರಂಭಿಸಿದರು. ಆಧ್ಯಾತ್ಮ ಜ್ಞಾನ, ಪಂಚಭೂತಜ್ಞಾನ, ತಂತ್ರವಿದ್ಯೆ ಮತ್ತು ರಸಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿದ್ದ ತಾರಾನಾಥರ ಬಳಿ ನೂರಾರು ದೇಶೀಯ ವಿದ್ಯಾರ್ಥಿಗಳಿರುತ್ತಿದ್ದರು.

ತಾರಾನಾಥರು ಧರ್ಮಸಂಭವ ಅಥವಾ ಧರ್ಮದ ಮೂಲತತ್ತ್ವಗಳು (1931) ಎಂಬ ಸಾಮಾಜಿಕ ಸುಧಾರಣೆಯ ಗ್ರಂಥ, ಪ್ರಸಿದ್ಧ ರಸೌಷಧಿಗಳು, ಸುಲಭ ಚಿಕಿತ್ಸೆ ಎಂಬ ವೈದ್ಯ ಗ್ರಂಥಗಳನ್ನು ಬರೆದಿದ್ದಾರೆ. ತಾಯಂದಿರಿಗೆ ಮತ್ತು ಪತ್ರಗಳು ಎಂಬುವು ಇವರ ಇತರ ಗ್ರಂಥಗಳು.

ರಾಯಚೂರಿನಲ್ಲಿ 1937ರಲ್ಲಿ ನಡೆದ ಅಖಿಲ ಭಾರತ ಆಯುರ್ವೇದ ಮತ್ತು ಯುನಾನಿ ಆನುವಂಶಿಕ ವೈದ್ಯರ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಇವರು 1942ರಲ್ಲಿ ನಿಧನರಾದರು. (ಜಿ.ಆರ್.ಪಿ.)

**ಪಂಡಿತಾರಾಧ್ಯ:** ವೀರಶೈವ ಆಚಾರ್ಯರು. ಇವರು ಶಿವದೀಕ್ಷಾದಿ ಧರ್ಮಕಾರ್ಯಗಳಲ್ಲಿ ಎಸಗುವ ಪಂಚಕಲಾಶಾರಾಧನೆಯಲ್ಲಿ ಉಪಾಸ್ಯರಾಗಿರುವ ಚತುರಕ್ಷರ, ಚತುರ್ವಕ್ತ್ರ, ಧೇನುಕರ್ಣ ಮತ್ತು ಪಂಡಿತಾರಾಧ್ಯ ಎಂಬ ಹೆಸರುಗಳಿಂದ ಕ್ರಮವಾಗಿ ಶ್ರೀಶೈಲದಲ್ಲಿ ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳ ಆದಿಯಲ್ಲಿ ಅವತರಿಸಿ ವೀರಶೈವ ಮತಸಿದ್ಧಾಂತವನ್ನು ಪ್ರಬೋಧಗೊಳಿಸಿದಂತೆ ಉಲ್ಲೇಖಗಳಿವೆ. ಪಾಲ್ಕುರಿಕೆ ಸೋಮನಾಥನ ಗಣಸಹಸ್ರನಾಮದಲ್ಲಿಯೂ ಈ ಹೆಸರುಗಳ ಉಲ್ಲೇಖವಿದೆ.

ಆಗಮೋಕ್ತರಾದ ಇವರ ದೇಶಕಾಲಾದಿ ವಿವರಗಳು ತಿಳಿದುಬಂದಿಲ್ಲ. ವೇದೋಪನಿಷತ್ತುಗಳಿಗೆ ಭಾಷ್ಯಾದಿಗಳನ್ನು ಬರೆದಂತೆ ಲಿಂಗಧಾರಣ ಚಂದ್ರಿಕಾ (ನಂದಿಕೇಶ್ವರ ಕೃತ), ತೈತ್ತಿರೀಯೋಪನಿಷತ್ ಭಾಷ್ಯಂ (ವೃಷಭಪಂಡಿತಾರಾಧ್ಯ) ಎಂಬ ಗ್ರಂಥಗಳಲ್ಲಿ ಉಕ್ತವಾಗಿದೆ. ಆದರೆ ಈ ರಚನೆಗಳು ಉಪಲಬ್ಧವಿಲ್ಲ. (ಎಂ.ಜಿ.ಎನ್.)

**ಪಂತುಲು,ಬಿ.ಆರ್.:** 1911– 74. ಕನ್ನಡ ಚಿತ್ರಗಳ ಉತ್ಕರ್ಷಕ್ಕೆ ಶ್ರಮಿಸಿದ ನಿರ್ಮಾಪಕ, ನಿರ್ದೇಶಕ ಹಾಗೂ ನಟ. ಬುಡುಗೂರು ರಾಮಕೃಷ್ಣ ಪಂತುಲು ಇವರ ಪೂರ್ಣ ಹೆಸರು. ಬಂಗಾರಪೇಟೆ ಸಮೀಪದ ಕೋಲಾರ ಜಿಲ್ಲೆ ಕುಪ್ಪಂಗೆ 11 ಕಿಮೀ ದೂರದಲ್ಲಿರುವ ಬುಡುಗೂರಿನಲ್ಲಿ 1911 ಜುಲೈ 26 ರಂದು ಜನಿಸಿದರು. ಇವರ ತಂದೆ ವೆಂಕಟಾಚಲಯ್ಯನವರು ಸ್ವಭಾವತಃ ಕಲಾ ಪ್ರೇಮಿ. ಸಂಗೀತ, ಸಾಹಿತ್ಯ, ನೃತ್ಯ ಮತ್ತು ನಾಟಕ ಕಲೆಯಲ್ಲಿ ಒಳ್ಳೆಯ ಅಭಿರುಚಿ ಹೊಂದಿದ್ದರು. ಇವರಿಗೆ ಐದು ಮಂದಿ ಮಕ್ಕಳು. ಮೂರು ಗಂಡು, ಎರಡು ಹೆಣ್ಣು. ಪಂತುಲು ಕಿರಿಯ ಮಗ. ಇವರ ಮಾತೃಭಾಷೆ ತೆಲುಗು. ಇವರ ಗ್ರಾಮ ಕನ್ನಡ ಮತ್ತು ತಮಿಳು ಭಾಷೆಗಳ ಕೂಡು ಪ್ರದೇಶದಲ್ಲೇ ಇದ್ದುದರಿಂದ ಬಾಲ್ಯದಿಂದಲೇ ಈ ಮೂರು ಭಾಷೆಗಳನ್ನು ಕಲಿತರು. ಇವರ ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲಿಯೇ ನಡೆಯಿತು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಮದರಾಸಿಗೆ ತೆರಳಿದರು. ಮದರಾಸಿನ ತೆಲುಗು ಶಾಲೆಯಲ್ಲಿ ಇವರ ವಿದ್ಯಾಭ್ಯಾಸ ಮುಂದುವರಿಯಿತು. ಮೊದಲಿನಿಂದಲೂ ನಾಟಕ ಮತ್ತು ಅಭಿನಯ ಕಲೆಯ ಬಗ್ಗೆ ಅಪಾರ ಅಭಿರುಚಿಯಿದ್ದ ಪಂತುಲು ಅವರಿಗೆ ಇಲ್ಲಿ ಅವುಗಳ ಸಮಗ್ರದರ್ಶನವಾಯಿತು. ಶಾಲಾ ಸಮಾರಂಭಗಳಲ್ಲಿ ಪ್ರಹ್ಲಾದ, ಚಂದ್ರಹಾಸ ನಾಟಕಗಳಲ್ಲಿ ಪಾತ್ರವಹಿಸಿ

ಮೆಚ್ಚುಗೆ ಪಡೆದರು. ಈ ಅವಧಿಯಲ್ಲೇ ಇವರಿಗೆ ಮದರಾಸಿನಲ್ಲಿ ಬೀಡುಬಿಟ್ಟಿದ್ದ ಹಲವಾರು ತಮಿಳು, ತೆಲುಗು ನಾಟಕ ಕಂಪನಿಗಳ ಸಹವಾಸವೂ ಲಭಿಸಿತು. ಮದರಾಸಿನಲ್ಲಿ ಇದ್ದುಕೊಂಡು ಇವರು ಹೆಚ್ಚಿನ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ. ಸ್ವಲ್ಪ ದಿನಗಳಲ್ಲಿಯೇ ತಮ್ಮ ತಾತನವರ ಮನೆಗೆ ಹಿಂತಿರುಗಬೇಕಾಯಿತು. ಅನಂತರ ಕೆಲವೇ ದಿನಗಳಲ್ಲಿ ಇವರಿಗೆ ಶಾಲಾ ಉಪಾಧ್ಯಾಯನ ವೃತ್ತಿ ದೊರೆಯಿತು.

ಹುಟ್ಟುಕಲಾವಿದರಾಗಿದ್ದ ಪಂತುಲು ಅವರು ಶಾಲೆಯ ಹುಡುಗರಿಗೆ ಕಲಿಸಿದ್ದು ಪಾಠ ಪ್ರವಚನಗಳನ್ನಲ್ಲ; ನಾಟಕಗಳನ್ನು. ಒಂದು ದಿನ ಶಾಲಾ ಇನ್ಸ್‌ಪೆಕ್ಟರ್ ಹಠಾತ್ತಾಗಿ ಶಾಲೆಗೆ ಭೇಟಿಕೊಟ್ಟಾಗ ಈ ಉಪಾಧ್ಯಾಯರ ಗುಟ್ಟು ರಟ್ಟಾಯಿತು. ಪರಿಣಾಮವಾಗಿ ಉದ್ಯೋಗವನ್ನು ಕಳೆದುಕೊಳ್ಳಬೇಕಾಯಿತು. ಅನಂತರ ಕಲಾಸೇವೆಯ ಉದ್ದೇಶದಿಂದ ಬೆಂಗಳೂರಿಗೆ ಬಂದರು. ಅಲ್ಲಿ ತಮ್ಮ ಸಂಬಂಧಿಕ ಹಿರಿಯರೊಬ್ಬರಾದ ಪಾಪಯ್ಯ ಎಂಬುವರ ಸಹಾಯದಿಂದ ಹೆಸರಾಂತ ಚಂದ್ರಕಲಾ ನಾಟಕ ಮಂಡಲಿಗೆ ಪದಾರ್ಪಣ ಮಾಡಿದರು. ಪ್ರಬುದ್ಧ ಕಲಾವಿದರುಗಳ ಸಂಗಮಸ್ಥಾನವಾಗಿದ್ದ ಈ ಸಂಸ್ಥೆಯ ಮಾಲೀಕರು ಮಹಮದ್ ಪೀರ್. ಈ ಕಂಪನಿಯಲ್ಲಿ ಪಂತುಲು ಅವರು ನಿರ್ವಹಿಸುತ್ತಿದ್ದ ಪಾತ್ರಗಳು ಸ್ಮರಣೀಯ. ಸಂಸಾರನೌಕೆ ನಾಟಕದ ಸುಂದರನ ಪಾತ್ರ ಇವರಿಗೆ ಒಳ್ಳೆಯ ಕೀರ್ತಿಯನ್ನು ತಂದು ಕೊಟ್ಟಿತು. ಹಲವಾರು ವರ್ಷಗಳ ಕಾಲ ಈ ಮಂಡಲಿಯಲ್ಲಿ ಕಲಾಸೇವೆ ಗೈದು ಕಾರಣಾಂತರಗಳಿಂದ ಪೀರ್ ಸಾಹೇಬರ ಕಂಪನಿಯನ್ನು ಬಿಟ್ಟು ಗುಬ್ಬಿ ಕಂಪನಿ ಸೇರಿದರು. ಅಂದು ಗುಬ್ಬಿ ಕಂಪನಿಯವರು ಪ್ರಯೋಗಿಸುತ್ತಿದ್ದ ಆಶಾಪಾಶ ಮತ್ತು ಕೃಷ್ಣಗಾರುಡಿ ನಾಟಕಗಳಲ್ಲಿ ವಸಂತಶೇಖರ ಮತ್ತು ಧರ್ಮರಾಯನ ಪಾತ್ರವನ್ನು ವಹಿಸತೊಡಗಿದರು. ಗುಬ್ಬಿ ಕಂಪನಿಯಲ್ಲಿ ಹಲವಾರು ತಿಂಗಳ ಪರ್ಯಂತ ಪಾತ್ರವಹಿಸಿ ಹುಬ್ಬಳ್ಳಿ ಮೊಕ್ಕಾಂನಲ್ಲಿ ಕಂಪನಿಯಿಂದ ಹೊರ ಬಂದರು. ಅನಂತರ ಸ್ವತಃ ಕಂಪನಿಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಬೆಂಗಳೂರಿಗೆ ಬಂದು ಪೈಲ್ವಾನ್ ಅಣ್ಣಯ್ಯಪ್ಪ ಎಂಬುವರ ಅಭಯಹಸ್ತವನ್ನು ಕೋರಿ ಬೆಂಗಳೂರಿನ ತುಳಸಿತೋಟ ಥಿಯೇಟರಿನಲ್ಲಿ ಕಲಾಸೇವಾ ಮಂಡಲಿ ಲಾಂಛನದಲ್ಲಿ ಸ್ವಂತ ಕಂಪನಿ ಆರಂಭಿಸಿದರು. ಎಚ್.ಎಲ್.ಎನ್.ಸಿಂಹ, ಎಂ.ಎಸ್.ಮಾಧವರಾವ್, ಎಂ.(ಡಿಕ್ಕಿ) ಮಾಧವರಾವ್, ಹೊಳಲು ಸುಬ್ರಹ್ಮಣ್ಯ ಶಾಸ್ತ್ರಿ ಮೊದಲಾದ ಅನೇಕ ಕಲಾವಿದರ ಒಡನಾಟ ಇಲ್ಲಿ ಕೂಡಿಬಂತು. ಸಿಂಹ ಅವರ ಸಂಸಾರನೌಕೆ ಕಲಾಸೇವಾಮಂಡಲಿಯ ಮುಖ್ಯನಾಟಕವಾಯಿತು. ಸುಂದರನ ಪಾತ್ರ ಪಂತುಲು ಅವರದಾಯಿತು. ಈ ಪಾತ್ರದ ಜೊತೆಗೆ ಪುರೋಹಿತ (ಸದಾರಮೆ), ರಾವಣ (ರಾಮಾಯಣ), ನಾಯಕ (ಗುಲೇಬಕಾವಲಿ) ಮೊದಲಾದ ಪಾತ್ರಗಳನ್ನು ಅಭಿನಯಿಸಿ ಜನಪ್ರಿಯರಾದರು.

ಕನ್ನಡನಾಡಿನ ಪ್ರಮುಖ ಕೇಂದ್ರಗಳಲ್ಲದೆ ಮದರಾಸಿನ ಮೊಕ್ಕಾಂ ಅನ್ನೂ ಕಂಪನಿ ಆರಂಭಿಸಿತು. ಮದರಾಸಿನ ಸೌಂದರ್ಯ ಮಹಲ್‌ನಲ್ಲಿ ಸಂಸಾರನೌಕೆ ಪ್ರದರ್ಶನಗೊಂಡಾಗ ಅದನ್ನು ನೋಡಿ, ಮೆಚ್ಚಿ ಮದರಾಸಿನ ದೇವಿ ಫಿಲಂಸ್ ಅವರು ಆ ನಾಟಕವನ್ನು ಕನ್ನಡ ಚಲನಚಿತ್ರವಾಗಿ ತಯಾರಿಸಲು ಮುಂದೆ ಬಂದರು. ಸಿಂಹ ಅವರ ನಿರ್ದೇಶನದಲ್ಲಿ ಸಂಸಾರನೌಕೆ ಚಿತ್ರ ಸಿದ್ಧವಾಯಿತು. 1936ರಲ್ಲಿ ತಯಾರಾದ ಈ ಚಿತ್ರ ಕನ್ನಡದಲ್ಲೇ ಅಲ್ಲದೆ ಇಡೀ ದಕ್ಷಿಣ ಭಾರತದಲ್ಲೆ ಪ್ರಥಮ ಸಾಮಾಜಿಕ ಚಿತ್ರವೆನಿಸಿತು. ಈ ಚಿತ್ರದಲ್ಲೂ ಪಂತುಲು ಅವರು ಸುಂದರನ ಪಾತ್ರವನ್ನೇ ವಹಿಸಿದ್ದರು. ಚಿತ್ರ ಪ್ರಮುಖ ಕೇಂದ್ರಗಳಲ್ಲೆಲ್ಲ ತೆರೆಕಂಡು ಯಶಸ್ವಿಯಾಯಿತು. ಪಂತುಲು ಅವರ ಕೀರ್ತಿಯೂ ಹರಡಿತು. ಈ ಚಿತ್ರದ ಅನಂತರ ರಾಜಭಕ್ತಿ ಎಂಬ ತಮಿಳು ಚಿತ್ರದಲ್ಲಿ ದುರ್ಜಯನ ಪಾತ್ರವಹಿಸಿದರು. ಇದು ಪಂತುಲು ಅವರು ಅಭಿನಯಿಸಿದ ಪ್ರಥಮ ತಮಿಳು ಚಿತ್ರ. ಈ ಚಿತ್ರದ ಅಭಿನಯದಿಂದಾಗಿ ತಮಿಳುನಾಡಿನಲ್ಲಿ ಇವರ ಕೀರ್ತಿ ಹೆಚ್ಚಿತು. ಆದರೆ ಕೆಲವೇ ದಿನಗಳಲ್ಲಿ ನಾಟಕ ಕಂಪನಿಗೆ ಕ್ಷೀಣದೆಸೆ ಪ್ರಾರಂಭವಾಯಿತು. ಅನಂತರ ಪಂತುಲು ಅವರು ಮದರಾಸಿನಲ್ಲೇ ನೆಲಸಲು ಮನಸ್ಸು ಮಾಡಿದರು. ಸ್ವಲ್ಪ ದಿನಗಳಲ್ಲೇ ತ್ರಿಭಾಷಾತಾರೆ ಕನ್ನಡಿತಿ ಎಂ.ವಿ. ರಾಜಮ್ಮನವರು ನಿರ್ಮಿಸಿದ ರಾಧಾರಮಣಿ ಕನ್ನಡ ಚಿತ್ರಕ್ಕೆ ನಾಯಕನ ಪಾತ್ರಕ್ಕೆ ಆಯ್ಕೆಯಾದರು. ಈ ಚಿತ್ರ ಬಿಡುಗಡೆಯಾದ ಅನಂತರ ಟಿ.ಆರ್. ಮಹಾಲಿಂಗಂ ಅವರ ನಾಟಕ ಕಂಪನಿಯಲ್ಲಿ ಮ್ಯಾನೇಜರ್ ಹಾಗೂ ನಟರಾಗಿ ಶ್ರಮಿಸತೊಡಗಿದರು. ಮುಂದೆ ಲವಂಗಿ, ವಿಜಯಲಕ್ಷ್ಮೀ, ವೀಟು ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದರು. ಎ.ವಿ.ಎಂ. ಅವರಿಂದ ತಯಾರಾದ ವೀಟು ದಕ್ಷಿಣ ಭಾರತದಲ್ಲೆಲ್ಲ ಅಪಾರ ಜನಮನ್ನಣೆಗಳಿಸಿ ತಮಿಳುನಾಡಿನಾದ್ಯಂತ ಪಂತುಲು ಅವರ ಹೆಸರು ಚಿರಪರಿಚಿತವಾಯಿತು.

ಈ ಚಿತ್ರದ ಅನಂತರ ಟಿ.ಆರ್. ಮಹಾಲಿಂಗಂ ಅವರೊಡನೆ ಕೂಡಿಕೊಂಡು ಸುಕುಮಾರ ಪ್ರೊಡಕ್ಷನ್ಸ್ ಚಿತ್ರ ತಯಾರಿಕಾ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೊದಲ ಚಿತ್ರ ಮಚ್ಛರೇಖಾ. ಅಲ್ಪಕಾಲದಲ್ಲೇ ಇವರಿಬ್ಬರ ಸಂಯುಕ್ತ ಉದ್ಯಮ ಬೇರೆಗೊಂಡಿತು. ಅನಂತರ ಪ.ನೀಲಕಂಠನ್ ಅವರ ಸಹಕಾರದೊಡನೆ ಪದ್ಮಿನಿ ಪಿಕ್ಚರ್ಸ್ (ಮಗಳು ಪದ್ಮಿನಿಯ ಹೆಸರನ್ನೆ ಚಿತ್ರಸಂಸ್ಥೆಗಿಟ್ಟರು) ಸ್ಥಾಪಿಸಿದರು. 1954ರಲ್ಲಿ ಸಂಸ್ಥೆಯ ವತಿಯಿಂದ ಕಲ್ಯಾಣಂ ಪಣ್ಣಿಯಂ ಬ್ರಹ್ಮಚಾರಿ ಚಿತ್ರ ನಿರ್ಮಾಣವಾಯಿತು. 'ಮೊದಲ ತೇದಿ' ಸಂಸ್ಥೆಯ ದ್ವಿತೀಯ ಕಾಣಿಕೆ. ಮೂರನೆಯ ಚಿತ್ರ ಶಿವಶರಣೆ ನಂಬಿಯಕ್ಕನನ್ನು ಕುರಿತದ್ದು. ನಾಲ್ಕನೆಯ ಚಿತ್ರ ರತ್ನಗಿರಿ ರಹಸ್ಯ. ಈ ಚಿತ್ರದ ತಯಾರಿಕೆಯ ಮೊದಲು ಪ.ನೀಲಕಂಠನ್ ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯಿಂದ ನಿರ್ಗಮಿಸಿದರು. 1956ರಲ್ಲಿ ತಯಾರಾದ ಈ ಕನ್ನಡ ಚಿತ್ರ ಅದ್ಭುತ ಯಶಸ್ಸು ಗಳಿಸಿ ತಂಗಮಲೈ ರಹಸ್ಯ ಎಂಬ ಹೆಸರಿನಿಂದ ತಮಿಳಿನಲ್ಲೂ ನಿರ್ಮಾಣಗೊಂಡಿತು. ಅನಂತರ ಸ್ಕೂಲ್ ಮಾಸ್ಟರ್ ಚಿತ್ರ ತಯಾರಾಯಿತು (1958). ಇದಕ್ಕೆ ಕನ್ನಡ ಚಿತ್ರಪ್ರಿಯರ ಉದಾರವಾದ ಉತ್ತೇಜನ ದೊರೆಯಿತು. ಸ್ಕೂಲ್ ಮಾಸ್ಟರ್ ಅಖಿಲ ಭಾರತ ಮಟ್ಟದಲ್ಲಿ ಪ್ರಶಸ್ತಿಪಡೆದ ಮೊದಲ ಕನ್ನಡ ಚಿತ್ರ. ಈ ಚಿತ್ರ ತೆಲುಗು ಮತ್ತು ಹಿಂದಿಯಲ್ಲೂ ತಯಾರಾಗಿ ಯಶಸ್ಸುಗಳಿಸಿತು. ಸ್ಕೂಲ್ ಮಾಸ್ಟರ್ ತೆಗೆದ ತರುಣದಲ್ಲಿಯೇ ಸುಹಾಗ್ ಹಿಂದಿ ಚಿತ್ರವನ್ನು ನಿರ್ಮಿಸಿದರು. ಇದು ಕನ್ನಡ ರತ್ನಗಿರಿ ರಹಸ್ಯದ ಹಿಂದೀ ಅವತರಣಿಕೆ. ಅನಂತರ ಶಬಾಷ್ ಮೀನಾ ನಿರ್ಮಿಸಿದರು. ಈ ಚಿತ್ರದ ಮೂಲಕ ಬಿ.ಸರೋಜಾದೇವಿ ತಮಿಳು ಚಿತ್ರರಂಗ ಪ್ರವೇಶಿಸಿದರು. ದಿಲ್ ತೇರಾ ದಿವಾನ ಹೆಸರಿನಲ್ಲಿ ಹಿಂದಿಯಲ್ಲಿ ಈ ಚಿತ್ರವನ್ನು ತಯಾರಿಸಿ ಅಖಿಲಭಾರತ ವ್ಯಾಪ್ತಿಯನ್ನು ಪಡೆದುಕೊಂಡರು.

ಈ ಚಿತ್ರದ ಅನಂತರ ಮಹಾಸಾಹಸವೊಂದಕ್ಕೆ ಕೈಹಾಕಿದರು. ತಮಿಳುನಾಡಿನ ಆರಾಧ್ಯ ದೇವತೆಯ ಸ್ಥಾನದಲ್ಲಿ ಮಂಡಿಸಿರುವ

ವೀರಪಾಂಡ್ಯ ಕಟ್ಟಬೊಮ್ಮನ್‌ನ ಜೀವಿತೇತಿಹಾಸವನ್ನು ವರ್ಣಚಿತ್ರವಾಗಿ ತೆಗೆಯಲು ಸಂಕಲ್ಪಿಸಿ ಒಂದು ವರ್ಷಕಾಲ ಶ್ರಮಿಸಿ ಚಿತ್ರವನ್ನು ಪೂರ್ಣಗೊಳಿಸಿದರು. ದಕ್ಷಿಣ ಭಾರತದ ಅನೇಕ ಪ್ರಮುಖ ಕೇಂದ್ರಗಳಲ್ಲಿ ಈ ಚಿತ್ರ ಏಕಕಾಲಕ್ಕೆ ತೆರೆಕಂಡು ಪ್ರದರ್ಶಿತವಾದೆಡೆಯಲ್ಲೆಲ್ಲ ಜಯಭೇರಿ ಬಾರಿಸಿ ಶತದಿನೋತ್ಸವವನ್ನೂ ಕಂಡಿತು. ಈ ಚಿತ್ರವನ್ನು 1959ರಲ್ಲಿ ಭಾರತದಲ್ಲಿ ತಯಾರಾದ ಅತ್ಯುತ್ತಮ ಚಿತ್ರವೆಂದು ಕೇಂದ್ರ ಸರ್ಕಾರ ಪರಿಗಣಿಸಿ ಕೈರೋದಲ್ಲಿ ನಡೆದ ಆಫ್ರೇಷ್ಯಾ ಚಲನಚಿತ್ರ ಮಹೋತ್ಸವಕ್ಕೆ ಆಯ್ಕೆಮಾಡಿತು. ಈ ಚಿತ್ರದ ಅನಂತರ ಎಂ.ವಿ.ರಾಜಮ್ಮ ಮತ್ತು ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯ ಸಂಯುಕ್ತ ಉದ್ಯಮವಾಗಿ ಮಕ್ಕಳ ರಾಜ್ಯ ನಿರ್ಮಾಣಗೊಂಡಿತು. ಇಂದಿನ ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಈ ಚಿತ್ರದ ಮೂಲಕ ಚಿತ್ರರಂಗವನ್ನು ಪ್ರವೇಶಿಸಿದರು. ಅನಂತರ ತಯಾರಾದ ಕಿತ್ತೂರು ರಾಣಿ ಚೆನ್ನಮ್ಮನ ಜೀವಿತೇತಿಹಾಸವನ್ನೊಳಗೊಂಡ ಕಿತ್ತೂರ ಚೆನ್ನಮ್ಮ ಎಂಬ ಚಿತ್ರ ಕನ್ನಡನಾಡಿನಲ್ಲಿ ಸಾಕಷ್ಟು ಹೆಸರು ಮಾಡಿತಲ್ಲದೆ ಪ್ರಾದೇಶಿಕ ಮಟ್ಟದಲ್ಲಿ ರಾಷ್ಟ್ರ ಪ್ರಶಸ್ತಿಯನ್ನೂ ಗಳಿಸಿತು.

ಪದ್ಮಿನಿ ಚಿತ್ರಸಂಸ್ಥೆಯ ವತಿಯಿಂದ ಮೇಲಿನ ಚಿತ್ರಗಳ ಜೊತೆಗೆ ಗಾಳಿ ಗೋಪುರ, ಸಾಕುಮಗಳು, ಎಮ್ಮೆ ತಮ್ಮಣ್ಣ, ದುಡ್ಡೇ ದೊಡ್ಡಪ್ಪ, ಗಂಗೆ ಗೌರಿ, ಚಿನ್ನದ ಗೊಂಬೆ, ಆಯಿರತ್ತಿಲ್ ಒರುವನ್, ನಾಡೋಡಿ ಮನ್ನನ್, ರಹಸ್ಯ ಪೋಲೀಸ್ 115, ಕೃಷ್ಣದೇವರಾಯ ಮೊದಲಾದ ಕನ್ನಡ ತಮಿಳು ಚಿತ್ರಗಳೂ ನಿರ್ಮಾಣಗೊಂಡವು. ಎಂ.ಜಿ.ಆರ್. ನಟಿಸುತ್ತಿದ್ದ ತಮಿಳು ಚಿತ್ರ ಮಧುರೈ ಮೀಟ್ಟಿಯ ಸುಂದರಪಾಂಡಿಯನ್ ಮತ್ತು ಬಿ.ಜಿ.ಎಲ್. ಸ್ವಾಮಿ ಅವರ ಕಾಲೇಜುರಂಗ ಎಂಬ ಕಾದಂಬರಿಯಾಧಾರಿತ ಕನ್ನಡ ಚಿತ್ರ ಇವುಗಳ ನಿರ್ಮಾಣ ಕಾರ್ಯದಲ್ಲಿದ್ದಾಗ ಪಂತುಲು ಅವರು 1974ರಲ್ಲಿ ನಿಧನರಾದರು. **(ಎಸ್.ಎಚ್.ವಿ.)**

**ಪಂಪ:** ಸು.941. ಕನ್ನಡದ ಆದಿಕವಿ, ಮಹಾಕವಿ. ವಿಕ್ರಮಾರ್ಜುನ ವಿಜಯ (ಪಂಪಭಾರತ), ಆದಿಪುರಾಣ ಎಂಬ ಕಾವ್ಯಗಳ ಕರ್ತೃ.

ಪಂಪ ತನ್ನ ಎರಡೂ ಕಾವ್ಯಗಳಲ್ಲಿ ಸ್ವವಿಷಯವನ್ನು ತಕ್ಕಮಟ್ಟಿಗೆ ವಿವರಪೂರ್ಣವಾಗಿ ಹೇಳಿಕೊಂಡಿದ್ದಾನೆ. ಇವನ ಹೇಳಿಕೆಗಳು ಹಲವು ಚಾರಿತ್ರಿಕಾಂಶಗಳಿಂದಲೂ ಶಾಸನಗಳಿಂದಲೂ ಸಮರ್ಥನೆಗೊಂಡಿವೆ. ಪಂಪ ತಾನು ಹುಟ್ಟಿದ ವರ್ಷವನ್ನು ಹೀಗೆ ಹೇಳಿದ್ದಾನೆ:

ದುಂದುಭಿಗಭೀರ ನಿನದಂ
ದುಂದುಭಿಸಂವತ್ಸರೋದ್ಭವಂ ಪ್ರಕಟಯಶೋ
ದುಂದುಭಿ ಸಿಂಹಾಸನಸುರ
ದುಂದುಭಿಜಿನಚರಣಕಮಳಭೃಂಗಂ ಪಂಪಂ (ಆದಿಪು.ಆ. 1–321)

ಈ ಸಂವತ್ಸರ ಕ್ರಿ.ಶ.902 ಮಾರ್ಚ್ 13–ಕ್ರಿ.ಶ.903 ಮಾರ್ಚ್ 2ರ ಮಧ್ಯದ ಅವಧಿಗೆ ಸರಿಹೊಂದುತ್ತದೆ.

ಆದಿಪುರಾಣವನ್ನು ಮುಗಿಸಿದ ತೇದಿಯನ್ನೂ ಅವನೇ ತಿಳಿಸಿದ್ದಾನೆ:

ಶಕವರ್ಷಮೆಂಟುನೂಱ
ಕ್ಕೆ ಕಡೆಯೊಳಱುವತ್ತುಮೂಱು ಸಂದಂದು ಜಗ
ತ್ಪ್ರಕಟ ಪ್ಲವಸಂವತ್ಸರ
ದ ಕಾರ್ತಿಕಂ ಮುದಮನೀಯೆ ನಂದೀಶ್ವರದೊಳ್

ಸಿತಪಕ್ಷದ ಪಂಚಮಿ(ಪೌರ್ಣಮಿ) ದಿನ
ಪತಿವಾರಂ ಶುಭದಮೂಲನಕ್ಷತ್ರದೊಳ
ನ್ವಿತಮಾಗೆ ನೆಗೞ್ದುದೀ ಮ
ತ್ಕೃತಿ ಜಗದೊಳ್ ಪುದಿದು ಸಾಗರಾಂತ ಕ್ಷಿತಿಯಂ (ಆದಿಪು.ಆ. 16–38,39)

ಇದರ ಅರ್ಥ ಶಾ.ಶ.863, ಕಾರ್ತಿಕ ನಂದೀಶ್ವರ ಪರ್ವದಲ್ಲಿ ಹುಣ್ಣಿಮೆ ತಿಥಿ ಆದಿತ್ಯವಾರದಂದು ಎಂದು. ಈ ವಿವರಗಳು ಕ್ರಿ.ಶ.941 ನವೆಂಬರ್ 11ಕ್ಕೆ ಸರಿಹೊಂದುತ್ತವೆ. ಜೈನರಿಗೆ 'ನಂದೀಶ್ವರ ಪರ್ವ' ಬಹಳ ಮಹತ್ವದ್ದು. ಇದನ್ನು ಶುಕ್ಲಪಕ್ಷದ ಅಷ್ಟಮಿಯಿಂದ ಪೌರ್ಣಮಿಯ ಅವಧಿಯಲ್ಲಿ ಆಚರಿಸುತ್ತಾರೆ. ವಿದ್ವಾಂಸರು ಈ ಸಾಂಸ್ಕೃತಿಕ ಸಂಗತಿಗೆ ಮಹತ್ವ ಕೊಡದೆ, ಗಣನೆಗೆ ತೆಗೆದುಕೊಳ್ಳದೆ ನಿರ್ಣಯಗಳನ್ನು ನೀಡಿದ್ದಾರೆ. ಆದರೆ ಅವನ್ನು ಈಗ ಮರುಪರಿಶೀಲನೆಗೆ ಒಳಪಡಿಸಬೇಕಾಗಿದೆ. ಪಂಪನ ಕೃತಿಗಳು, ವೃಷಭಾದ್ರಿಯ ಶಿಲಾಶಾಸನ (ಪಂಪನ ತಮ್ಮ ಜಿನವಲ್ಲಭನದು), ಕರೀಮ್‌ನಗರ ವಸ್ತುಸಂಗ್ರಹಾಲಯ ಶಾಸನ ಮತ್ತು ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ತಮಿಳುನಾಡಿನ ಶಾಸನಗಳು–ಇವೆಲ್ಲ ಪಂಪನ ಚರಿತ್ರೆ, ಕೃತಿಯ ಹಿನ್ನೆಲೆ ಹಾಗೂ ನಾಯಕ ನಾಯಕಿಯರ ಮತ್ತು ಪ್ರತಿನಾಯಕನ ಬಗೆಗೆ ಅನೇಕ ಹೊಸ ಸಂಗತಿಗಳನ್ನು ಹೊರಗೆಡಹಿವೆ:

ಪಂಪಭಾರತ ಅಥವಾ ವಿಕ್ರಮಾರ್ಜುನವಿಜಯಂ ಕಾವ್ಯದ ಕೊನೆಯ ಭಾಗ–ಎಂದರೆ 14ನೆಯ ಆಶ್ವಾಸದಲ್ಲಿ ಅಸ್ತವ್ಯಸ್ತವಾಗಿ 'ಕ್ರಮತಪ್ಪಿದ' ಮೂರು ಪದ್ಯಗಳು 'ಆದಿಪುರಾಣಂ' ಕಾವ್ಯದ 9ನೆಯ ಆಶ್ವಾಸದ ಆರಂಭದಲ್ಲಿ ಬಂದಿದ್ದು 'ವಿಕ್ರಮಾರ್ಜುನ ವಿಜಯಂ' ಕಾವ್ಯವನ್ನು ಕವಿ ಮೊದಲು ಸಮಾಪ್ತಿಗೊಳಿಸಿದನೆಂದು ತಿಳಿಸುತ್ತವೆ. ಆ ಮೂರು ಪದ್ಯಗಳಿವು:

(ಅ) ವಿಕ್ರಮಾರ್ಜುನ ವಿಜಯಂ (ಆಶ್ವಾಸ– 14):

ಎಡೆಗೊಂಡಿರಿಮುತ್ಸಂಚಂ
ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಮಿ
ರ್ಪೆಡೆಯೊಳಿರಿಂ ನೀವಱಿವಿರ್
ಮಿಡುಕಿದೊಡನೆ ಚಿತ್ರವೇತ್ರದಂಡಧರರ್ಕಳ್ ॥22॥

ಮಗಮಗಮಗಿಸುವ ಮೃಗಮದ
ದಗರುವ ಕಪ್ಪುರದ ಕಂಪುಮಂ ಸೂಡಿದ ಬಾ
ಸಿಗದ ಪೊಸಗಂಪನಿಂಬಾ
ಗೊಗೆದಿರೆ ಮಾಡಿದುದು ಚಮರರುಹ ಗಂಧವಹಂ ॥25॥

ಪಸರಿಸಿದ ತಾರಹಾರದ
ಪೊಸವೆಳ್ದಿಂಗಳುಮನಮರ್ದ ಪೆರ್ದುಡುಗೆಗಳೊಳ್
ಮಿಸುಗುವ ಪೊಸ ಮಾಣಿಕದೆಳ
ವಿಸಿಲುಮನೊಡಗಾಣಲಾದುದರಿಗನ ಸಭೆಯೊಳ್ ॥26॥

(ಆ) <u>ಆದಿಪುರಾಣಂ (ಆಶ್ವಾಸ–9)</u>:

ಮಗಮಗಿಸುವ ನವಮೃಗಮದ
ದಗರುವ ಮಳಯಜದಕಂಪುಮಂ ಸೂಡಿದ ಬಾ
ಸಿಗದ ಪೊಸಗಂಪುಮಂ ನೆರೆ
ದುಗಿಬಗಿಮಾಡಿದವು ಚಮರರುಹಪವನಂಗಳ ॥4॥

ಪಸರಿಸಿದ ತಾರಹಾರದ
ಪೊಸವೆಳ್ದಿಂಗಳುಮನಮರ್ದ ಪೆರ್ದುಡಿಗೆಗಳೊಳ್
ಮಿಸುಗುವ ಪೊಸಮಾಣಿಕದೆಳ
ವಿಸಿಲುಮನೊಡಗಾಣಲಾದುದಾಸ್ಥಾಯಿಕೆಯೊಳ್ ॥5॥

ಎಡೆಗೋದಿರದಿರಿಮುಚ್ಚಂ
ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಮಿ
ರ್ಪೆಡೆಯೊಳಿರಿಂ ನೀಮಱಿವಿರ್
ಮಿಡುಕಿದೊಡೆನೆ ಚಿತ್ರವೇತ್ರದಂಡಧರರ್ಕಳ್ ॥6॥

ವಿಕ್ರಮಾರ್ಜುನವಿಜಯದ ಪದ್ಯಗಳು ಕಚ್ಚಾಪ್ರತಿಯವು ಮತ್ತು ಆದಿಪುರಾಣದವು ಶುದ್ಧವಾಗಿಸಿ ಬರೆದ ಪದ್ಯಗಳು. ಸ್ವಯಂ ಕವಿಯೆ ತಿದ್ದಿ ಬರೆದುದಕ್ಕೆ–ಪಾಠಾಂತರಕ್ಕೆ ಇವು ಒಳ್ಳೆಯ ನಿದರ್ಶನ. ಆದಿಪುರಾಣದಲ್ಲಿ ಆದಿತೀರ್ಥಂಕರನ ಆಸ್ಥಾನದ ವರ್ಣನೆಯಲ್ಲಿ ಈ ಪದ್ಯಗಳು ಬಂದಿವೆ. ಇದು ಗಮನಾರ್ಹವಾದ ವಿಷಯ. 'ವಿಕ್ರಮಾರ್ಜುನ ವಿಜಯಂ' ಕೃತಿ ಮೊದಲು ಮತ್ತು 'ಆದಿಪುರಾಣಂ' ಅನಂತರ ರಚಿತವಾದದ್ದು. ಮತ್ತೆ ಈ ಎರಡಕ್ಕೂ ಅಂತರ ಅಷ್ಟೇನೂ ಇಲ್ಲ. ಕವಿಯೆ ಹೇಳಿರುವಂತೆ ಅವೆರಡೂ ಒಂದೇ ವರ್ಷ ಬರೆಯಲ್ಪಟ್ಟಿವೆ.

ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂ
ತಳಕೆ ಸಮಸ್ತಭಾರತಮುಮಾದಿಪುರಾಣಮುಮೆಂದು ಮೆಯ್ಯಸುಂ
ಗೊಳುತಿರೆಪೂಣ್ದುಪೂಣ್ದತೆಱದೊಂದಱುದಿಂಗಳೊಳೊಂದು ಮೂಱುತಿಂ
ಗಳೊಳೆಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ
(ವಿವಿ.ಆ.14–60)

'ವಿಕ್ರಮಾರ್ಜುನವಿಜಯ'ದಲ್ಲಿ ಲೌಕಿಕ ಧರ್ಮವನ್ನೂ ಆದಿಪುರಾಣ ದಲ್ಲಿ ಧರ್ಮವನ್ನೂ (ವಿಶೇಷವಾಗಿ ಹೇಳುವುದಾದರೆ ಕೇವಲ ಜೈನಧರ್ಮದ ಸಂಗತಿಗಳನ್ನೂ) ಹೇಳುವುದಾಗಿ ತಿಳಿಸಿದ್ದಾನೆ. ಈ ಎರಡೂ ಕಾವ್ಯಗಳು ಕಿಂಚಿದ್ ಜೊತೆಜೊತೆಯಾಗಿ ಬರೆದುದು ಕಂಡುಬರುತ್ತದೆ. ಲೌಕಿಕ ಕಾವ್ಯ ವಿಕ್ರಮಾರ್ಜುನವಿಜಯದಲ್ಲಿ ಆರಂಭದಲ್ಲಿ ತನ್ನನ್ನು ಆಹ್ವಾನಿಸಿ ಕಾವ್ಯವನ್ನು ಬರೆಯಲು ಕೇಳಿಕೊಂಡ ಆಶ್ರಯದಾತ ಇಮ್ಮಡಿ ಅರಿಕೇಸರಿಯ ಚರಿತ್ರೆಯನ್ನೂ ತನ್ನ ಲೌಕಿಕ ಚರಿತ್ರೆಯನ್ನೂ ಆ ಕಾವ್ಯದ ಕೊನೆಯ ಆಶ್ವಾಸದಲ್ಲೂ ವಿವರಿಸಿದ್ದಾನೆ. ಆದಿಪುರಾಣದಲ್ಲಿ ತನ್ನ ಜೀವನ ಆಧ್ಯಾತ್ಮಿಕ ಪಂಥಾನ 'ಆಧ್ವಾನ' ಕಾವ್ಯವಾಗಿಸಿದ್ದಾನೆ. ಈ ಎರಡೂ ಕಾವ್ಯಗಳ ಚೌಕಟ್ಟುಗಳು ಒಂದೇ ಆಗಿವೆ. ವಿಕ್ರಮಾರ್ಜುನ ವಿಜಯ ಕಾವ್ಯದ ಹಿನ್ನೆಲೆ ಇದೀಗ ಸ್ಪಷ್ಟವಾಗಿದೆ. ಅದೆಂದರೆ ತಕ್ಕೋಲಂ ಯುದ್ಧದಲ್ಲಿ ಅರಿಕೇಸರಿ ಹಾಗೂ ಆತನ ಭಾವಮೈದುನ ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣದೊರೆಯ ಜಯ. ಇವರ ಆ ಯುದ್ಧಜಯವೇ ಕಾವ್ಯದ ವಸ್ತು; ಮಹಾಭಾರತದ ಕಥೆ ಆ ಬಳ್ಳಿ ಹಬ್ಬುವುದಕ್ಕೆ ಒಂದು ಹಂದರ – ಆಸರೆ. 'ವಿಕ್ರಮಾರ್ಜುನ' ಎಂಬ ಬಿರುದಿನ ಇಮ್ಮಡಿ ಅರಿಕೇಸರಿ ಈ ಕಾವ್ಯದ ನಾಯಕ, ಅವನಿಗೇ ಈ ಕಾವ್ಯದಲ್ಲಿ ಪಟ್ಟಾಭಿಷೇಕ. ಅವನಿಗೆ ಪಟ್ಟವನ್ನು ಬಿಟ್ಟುಕೊಟ್ಟವನೇ ಈ ಕಾವ್ಯದ ಪ್ರತಿನಾಯಕ. ಸುಯೋಧನ, ಸುಯೋಧನ ಪಾತ್ರದಲ್ಲಿ ಸಮೀಕರಿಸಿದ ಚೋಳ ದೊರೆ 'ರಾಜರಾಜ'. ಅರ್ಥಾತ್ 'ವಿಕ್ರಮಾರ್ಜುನವಿಜಯಂ' ಕಾವ್ಯದ ನಾಯಕ ಅರ್ಜುನ ಹಾಗೂ ಪ್ರತಿನಾಯಕ ಪಟ್ಟ ಬಿಟ್ಟುಕೊಟ್ಟವನು ಸುಯೋಧನ. ವೈಶಂಪಾಯನ ಸರೋವರದಲ್ಲಿ ಚಿತ್ತಸ್ಖಲನವಾದದ್ದು ಸುಯೋಧನನಿಗೆ–ದೊರೆ ರಾಜರಾಜನಿಗೆ (ವಿ.ವಿ.ಆ–13: ವ); ಇದು ಗಮನಾರ್ಹ.

ಪಂಪ ತನ್ನ ಆಶ್ರಯದಾತನಾದ ಅರಿಕೇಸರಿಯ ವಂಶಾವಳಿ ಬಗೆಗೆ ಇನಿತು ವಿಷಯಗಳನ್ನು ತಿಳಿಸಿದ್ದಾನೆ. ಇಮ್ಮಡಿ ಅರಿಕೇಸರಿವರೆಗಿನ ರಾಜ್ಯವಾಳಿದ ರಾಜರು, ಅವರ ರಾಜ್ಯ ಮತ್ತು ಹಿರಿಮೆಗರಿಮೆಗಳನ್ನು ವಿಶದವಾಗಿಯೆ ತಿಳಿಸಿದ್ದಾನೆ. ಇದೊಂದು ಚಳುಕ್ಯ ವಂಶದ ಶಾಖೆ. ಇದರ ಮೂಲ ಪುರುಷ ಯುದ್ಧಮಲ್ಲ. ಈತ ಬೋದನ ರಾಜಧಾನಿಯಿಂದ ರಾಜ್ಯವಾಳುತ್ತಿದ್ದ; ಬೋದನದಲ್ಲಿ ಐನೂರು ಆನೆಗಳ ಸೇನೆಯನ್ನು ಇಟ್ಟುಕೊಂಡಿದ್ದ. ಈ ರಾಜ್ಯದ ವ್ಯಾಪ್ತಿ 14 ಲಕ್ಷ (ಸಪಾದಲಕ್ಷಕ್ಷಿತಿ=1,25,000) ಗ್ರಾಮಗಳನ್ನು ಹೊಂದಿದ್ದಿತು. ಈ ಬೋದನ ಈಗಿನ ಆಂಧ್ರಪ್ರದೇಶ ರಾಜ್ಯದ ನಿಜಾಮಬಾದ್ ಜಿಲ್ಲೆಯಲ್ಲಿದೆ. ಈಗ ಅದು ಅದೇ ಹೆಸರಿನ ತಾಲ್ಲೂಕಿನ ಮುಖ್ಯ ನಗರವಾಗಿದೆ. ಈ ಬೋದನ ಪ್ರದೇಶವೇ ಪಂಪ ಹೇಳಿರುವ, ಅರಿಕೇಸರಿಗೆ ಆನುವಂಶಿಕವಾಗಿ ಬಂದ ಕುರುಜಾಂಗಣ ನಾಡು; ವಿಕ್ರಮಾರ್ಜುನವಿಜಯ ಕಾವ್ಯದ ವಿಕ್ರಮಾರ್ಜುನನ ರಾಜ್ಯ. ಕುರುಜಾಂಗಣನಾಡು, ಏಕಚಕ್ರ ನಗರ (ಪಟ್ಟಣ ಸಹಿತ ಪ್ರದೇಶ: ವಿ.ವಿ.ಆ.3–22) ಹಾಗೂ ಇಂದ್ರಪ್ರಸ್ಥ ಎಲ್ಲವೂ ಇಮ್ಮಡಿ ಅರಿಕೇಸರಿಯ ರಾಜ್ಯವನ್ನು ಸೂಚಿಸುತ್ತವೆ. ಅವಕ್ಕೆ ಒಡೆಯರಾಗಿದ್ದವರು ಚಳುಕ್ಯ ದೊರೆಗಳು.

ಪಂಪ ತನ್ನ ಬಗೆಗೆ ಒಂದಷ್ಟು ಸಂಗತಿಗಳನ್ನು ತಿಳಿಸಿದ್ದಾನೆ. ಅವು ಅವನ ಆತ್ಮಕಥನ ಎಂದರೆ ತಪ್ಪಲ್ಲ. ಅವನೇ ತಿಳಿಸಿದ ಅವನ ವಂಶಾವಳಿ ಚರಿತ್ರೆ ಇಂತಿದೆ:

ಮಾಧವಸೋಮಯಾಜಿ
(ಈತ ವೆಂಗಿಪಳು ಎಂಬ ಅಗ್ರಹಾರವನ್ನು ಹೊಂದಿದ್ದ ಘನವಿದ್ವಾಂಸ. ಯಜ್ಞಯಾಗಗಳನ್ನು ಮಾಡುವ ವೈದಿಕ ಕಾರ್ಯದಲ್ಲಿ ನಿರತನಾಗಿದ್ದ ವೈದಿಕಬ್ರಾಹ್ಮಣ)
|
ಅಭಿಮಾನಚಂದ್ರ
(ಈತ ಪಡೆದ ಸಂಪತ್ತನ್ನೆಲ್ಲ ಬೇಡಿಬೇಡಿದವರಿಗೆ ಕೊಟ್ಟ ಮಹಾದಾನಿ – ಭವ್ಯರತ್ನಾಕರ (ಜಿನವಲ್ಲಭನ ಗಂಗಾಧರ ಶಾಸನ)
|
ಕೊಮರಯ್ಯ
(ವೇದವೇದಾಂಗಪಾರಗ)
|
ಭೀಮ
(ಗುಣಮಣಿ ರತ್ನಾಕರ – ಜಿನಧರ್ಮ ಪ್ರಸಾರಕ)
|
ಪಂಪ (ವಾದೀಭ)

ಪಂಪಂ ಧಾತ್ರೀವಳಯ ನಿ
ಳಿಂಪಂ ಚತುರಂಗಬಳಭಯಂಕರಣಂ ನಿ
ಷ್ಕಂಪಂ ಲಲಿತಾಲಂಕರ
ಣಂ ಪಂಚಶರೈಕರೂಪನಪಗತಪಾಪಂ (ವಿ.ವಿ.ಆ–14–49)

ಇದು ಎಲ್ಲ ಹಸ್ತಪ್ರತಿಗಳಲ್ಲಿ ಇರುವ ಪಾಠ. ಪಂಪ ತನ್ನನ್ನು ಅಪಗತಪಾಪಂ ಎಂದು ಹೇಳಿಕೊಂಡಿರುವುದನ್ನು ಗಮನಿಸಬೇಕು. 40ನೆಯ ವಯಸ್ಸಿಗಾಗಲೇ (901–41) ಅವನು ಪಾಪವೆಲ್ಲವನ್ನೂ ಕಳೆದುಕೊಂಡಿದ್ದನು! ಮಹಾಪುರಾಣವನ್ನು ಅನುವಾದ ಮಾಡುವಷ್ಟು, ಮಹಾಭಾರತವನ್ನು–ಸಾಗರವನ್ನು– ಹೊಕ್ಕು ಈಸಾಡುವಷ್ಟು (ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸುವೆಂ) ಶಕ್ತಿಶಾಲಿಯಾಗಿದ್ದ. ಭಾಸ, ಕಾಳಿದಾಸ, ಹರ್ಷ, ಭಟ್ಟನಾರಾಯಣ ಹಾಗೂ ಭರತನಿಂದ ಆನಂದವರ್ಧನನವರೆಗೆ ಕಾವ್ಯಶಾಸ್ತ್ರವನ್ನು ಆಲೋಚನೆ ಮಾಡಿದ್ದ; ಪಂಚಾಂಗ, ವ್ಯಾಕರಣ, ಛಂದೋವಿಚಿತಿ, ಹಸ್ತ್ಯಶ್ವಶಾಸ್ತ್ರ, ವೈದ್ಯ, ಸಂಗೀತ, ಧರ್ಮಶಾಸ್ತ್ರಗಳಲ್ಲಿ ಪ್ರವೀಣನಾಗಿದ್ದ; ಷಡ್ದರ್ಶನದಲ್ಲಿ, ತರ್ಕಶಾಸ್ತ್ರದಲ್ಲಿ ನಿಷ್ಣಾತನಾಗಿದ್ದ; ಮತ್ತೆ ಅರಿಕೇಸರಿ ರಾಜನ ಆಸ್ಥಾನ ಸಭಾಸದರೆಲ್ಲ ಮೆಚ್ಚಿ ಪ್ರಶಂಸಿಸುವಷ್ಟು ಪ್ರಗಲ್ಭ ಪಂಡಿತನಾಗಿದ್ದ. ಈ ಪಂಪ ತನ್ನ ತಾಯಿಯ ಬಗೆಗಾಗಲಿ, ಸೋದರ ಸಂಬಂಧಿಗಳ ಬಗೆಗಾಗಲಿ ಒಂದಕ್ಷರವನ್ನೂ ಬರೆದಿಲ್ಲ. ಈ ಕಾರಣದಿಂದಲೇ ಡಿ.ಎಲ್.ಎನ್.ಹಾಗೂ ಎನ್.ವೆಂಕಟರಮಣಯ್ಯ ಮೊದಲಾದ ವಿದ್ವಾಂಸರು ಪಂಪನನ್ನು ತನ್ನ ಅಣ್ಣನೆಂದು ಹೇಳಿದ ಜಿನವಲ್ಲಭ ಪ್ರಾಯ: ಅವನ ಮಲತಾಯಿಯ ಮಗನಾಗಿರಬೇಕೆಂದು – ಸಾಪತ್ನ್ಯ ಸಹೋದರ ಸಂಬಂಧಿ ಎಂದು

– ಊಹಿಸಿದ್ದಾರೆ. ಈ ಜಿನವಲ್ಲಭನ ಶಾಸನದಿಂದ ಪಂಪನ ಪೂರ್ವಜರ ಆಸ್ತಿ ಗುಂಡಿಕಙ್ಖ(ಗುಂಡ್ಲಕಮ್ಮ) ನದೀತಟದಲ್ಲಿದ್ದ ನಿಡುಂಗೊಣ್ಡೆ ಹಾಗೂ ವಂಗಿಪಱು (ವೆಂಗಿಪಟು) ಗ್ರಾಮಗಳಲ್ಲಿ ಇದ್ದಿತೆಂಬುದು ಸ್ಪಷ್ಟವಿದೆ. ಜಿನವಲ್ಲಭ ಕನ್ನಡ ಹಾಗೂ ತೆಲುಗು ಎರಡೂ ಭಾಷೆಗಳಲ್ಲಿ ಶಾಸನವನ್ನು ಬರೆಸಿದ್ದಾನೆ. ಅವನ ಶಾಸನ, ಕನ್ನಡ ಸಾಹಿತ್ಯದಷ್ಟೆ ತೆಲುಗು ಸಾಹಿತ್ಯಕ್ಕೂ ಮಹತ್ವದ್ದು. ಏಕೆಂದರೆ ಇದರಲ್ಲಿ ಬಂದಿರುವ ಕಂದಪದ್ಯಗಳೇ ತೆಲುಗು ಸಾಹಿತ್ಯದ ಉಪಲಬ್ಧ ಮೊದಲು ಕಂದಪದ್ಯಗಳು. ಜಿನವಲ್ಲಭನ ತಾಯಿ ಅಬ್ಬಣಬ್ಬೆ ಅಣ್ಣಿಗೆರೆಯ ಜೋಯಿಸ ಸಿಂಘನ ಮೊಮ್ಮಗಳು. ಜಿನವಲ್ಲಭನ ಶಾಸನ ಕರೀಮ್‌ನಗರ ಜಿಲ್ಲೆಯಲ್ಲಿ ಕರೀಮ್‌ನಗರದಿಂದ ಜಗತ್ಯಾಲಕ್ಕೆ ಹೋಗುವ ಮಾರ್ಗದಲ್ಲಿ ಕುರ್ಕ್ಯಾಲ ಗ್ರಾಮದ ಬಳಿಯ ಬೊಮ್ಮಲಗುಟ್ಟ (ವೃಷಭಾದ್ರಿ) ಬೆಟ್ಟದಲ್ಲಿದೆ; ಕನ್ನಡನಾಡಿನ ಪಶ್ಚಿಮ ಪ್ರಾಂತದ ಅಣ್ಣಿಗೆರೆ ಯಿಂದ ಬಹುದೂರದಲ್ಲಿದೆ; ಏನಿಲ್ಲವೆಂದರೂ 600–700 ಮೈಲಿಗಳ ಆಚೆಗಿದೆ.

ಒಂದು ಸಂದರ್ಭದಲ್ಲಿ ಕಾವ್ಯದ ನಾಯಕ ಅರ್ಜುನ, ಸ್ವತ: ಕವಿಯು ತನ್ನ ಪೂರ್ವಜರು ಇದ್ದ ಸ್ಥಳಗಳ ಬಗ್ಗೆ ಹೇಳಿದ ಸಂಗತಿಗಳನ್ನು ಈ ಸಂದರ್ಭದಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಕವಿಯ ಆಶ್ರಯದಾತ ಕವಿಗೆ ಸನ್ಮಾನ ಮಾಡಿದ್ದುದು ತಾನು ಪಟ್ಟಾಭಿಷಿಕ್ತನಾಗಿ ಆಳುತ್ತಿದ್ದ ರಾಜ್ಯದ ರಾಜಧಾನಿ ಬೋಧನದಲ್ಲಿ. ಇತರ ದಕ್ಷಿಣ ಭಾರತದ ಸ್ಥಳಗಳೆಂದರೆ ಉದಯಗಿರಿ, ನಂದೆ, ಅಪರನಂದೆ, ಆಶ್ವಿನಿ ಹಾಗೂ ಮಹಾನಂದೆ ತೀರ್ಥಗಳು. ಈ ಸ್ಥಳಗಳು ಈಗಿನ ಕರ್ನೂಲು ಜಿಲ್ಲೆಯ ನಂದ್ಯಾಲ ತಾಲ್ಲೂಕು ಹಾಗೂ ಪ್ರಕಾಶಂ ಜಿಲ್ಲೆಯ ಗಡಿಯಲ್ಲಿವೆ. ಜಿನವಲ್ಲಭನು ವಿವರಿಸಿದ ಗುಂಡಿಕ (ಗುಂಡ್ಲಕಮ್ಮ) ನದಿ ಈ ಸ್ಥಳಗಳಲ್ಲೇ ತನ್ನ ಉಗಮ ಸ್ಥಾನವನ್ನು ಹೊಂದಿದೆ. ಗುಂಡ್ಲಕಮ್ಮ ನದಿ ಪೂರ್ವಕ್ಕೆ ಹರಿದು ಬಂಗಾಲ ಕೊಲ್ಲಿಗೆ ಸೇರುತ್ತದೆ. ನಿಡುಂಗೊಣ್ಡೆ/ನಿಡುಗುಂದಿ ಅಥವಾ ವಿನುಕೊಂಡ ಈ ನದಿಯ ಬಳಿಯಲ್ಲಿ ಇಂದಿಗೂ ಇದೆ. ಮಹಾನಂದೆ (ಮಹಾನಂದಿ) ಈಗಲೂ ಆಂಧ್ರಪ್ರದೇಶದ ಒಂದು ಪ್ರಸಿದ್ಧ ತೀರ್ಥಕ್ಷೇತ್ರ. ಕಾವ್ಯದ ನಾಯಕ ಅಲ್ಲಿಂದ ಮುಂದಕ್ಕೆ ರಾಮೇಶ್ವರಕ್ಕೆ ಹೋದವನು ಹಿಂದಕ್ಕೆ ಪಾಂಡವರ ರಾಜಧಾನಿ ಇಂದ್ರಪ್ರಸ್ಥಕ್ಕೆ ಪ್ರಯಾಣ ಬೆಳೆಸುತ್ತಾನೆ. ಉತ್ತರಕ್ಕೆ ಹೊರಟಾಗ ಮೊದಲು ಬರುವ ತೀರ್ಥಕ್ಷೇತ್ರ ಅಗಸ್ತ್ಯತೀರ್ಥ. ಅದರ ಮುಂದೆಯೆ ಮಲಯಪರ್ವತ, ಎಂದರೆ ಈಗಿನ ನೀಲಗಿರಿ ಪರ್ವತ ಶ್ರೇಣಿ. ಮಲಯಪರ್ವತವನ್ನು ಇಳಿದ ಕೂಡಲೆ ಕಣ್ಣಿಗೆ ಮುಂದೆ ಕಾಣುವುದು ಕಡಲು. ಆ ಕಡಲ ಕಿನಾರೆಯಲ್ಲೆ ಉತ್ತರಕ್ಕೆ ಹೋಗುತ್ತ ನಾಗರಖಂಡ ಅಥವಾ ಜಿಮೂತವಾಹನನು ತನ್ನನ್ನು ಗರುಡನಿಗೆ ಅರ್ಪಿಸಿದ ಶೈಲವನ್ನು ನೋಡುತ್ತ ಗೋಕರ್ಣಕ್ಕೆ ಬರುತ್ತಾನೆ, ಗೋಕರ್ಣನಾಥನನ್ನು ನೋಡುತ್ತಾನೆ, ಕಾಳಿದಾಸನ ಶಾಕುಂತಲ ನಾಟಕದ ಶಿವನ ಸ್ವರೂಪ ಅಷ್ಟತನುವಿನ ಆಕಾರ, ಸಾಕಾರವಾಗಿ ನಿಲ್ಲುತ್ತದೆ (ಅಪ್, ಅಗ್ನಿ, ಯಜಮಾನ, ಸೂರ್ಯ, ಚಂದ್ರ, ಆಕಾಶ, ಅವನಿ ಹಾಗೂ ಪವನ).

ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿದಿಹುತಂ ಯಾ ಹವಿರ್ಯಾ ಹೋತ್ರೀ ।
ಯೇ ದ್ವೇ ಕಾಲಂ ವಿಧತ್ತಃ ಶ್ರುತಿವಿಷಯಗುಣಾ ಯಾಸ್ಥಿತಾ ವ್ಯಾಪ್ಯ ವಿಶ್ವಂ ।
ಯಾಮಾಹುಃ ಸರ್ವಬೀಜಪ್ರಕೃತಿರಿತಿ ಯಯಾ ಪ್ರಾಣಿನಃ ಪ್ರಾಣ ವನ್ತಃ ।
ಪ್ರತ್ಯಕ್ಷಾಭಿಃ ಪ್ರಪನಸ್ತನುಭಿರವತು ವಸ್ತಾಭಿರಷ್ಟಾಭಿರೀಶಃ ॥

ಮೇಲಿನ ಶ್ಲೋಕಗಳು ಕನ್ನಡದ ಕನ್ನಡಿಯಲ್ಲಿ ಕೆಳಗಿನಂತೆ ಪ್ರತಿಫಲಿಸಿ ನಿಂತಿವೆ:

ಗೋಕರ್ಣನಾಥನಂ ಗೌರೀನಾಥನನ್ ಅವನಿ ಪವನ ಗಗನ ದಹನ ತರಣಿಸಲಿಲ ತುಹಿನಕರ ಯಜಮಾನಮೂರ್ತಿಯಂ ತ್ರಿಳೋಕೈಕ ಸಂಗೀತ ಕೀರ್ತಿಯಂ ಕಂಡು ಕೆಯ್ಗಳಂ ಮುಗಿದು –

ಪೃಥ್ವಿ॥ ಪ್ರಚಂಡಲಯತಾಂಡವ ಕ್ಷುಭಿತಯಾಶು ಯಸ್ಯಾನಯಾ
ಸದಿಗ್ವಳಯಯಾ ಭುವಾ ಸಗಿರಿ ಸಾಗರ ದ್ವೀಪಯಾ
ಕುಲಾಲ ಕರನಿರ್ಭರ ಭ್ರಮಿತ ಚಕ್ರಲೀಲಾಯಿತಂ
ಸಸರ್ವ ಜಗತಾಂ ಗುರುರ್ಗಿರಿಸುತಾಪತಿಃ ಪಾತುನಃ ॥

ಇಲ್ಲಿ ಇಬ್ಬರೂ ಕವಿಗಳು ಈಶ್ವರನನ್ನು ಸ್ತ್ರೀಲಿಂಗದಲ್ಲಿ ಸ್ತುತಿಸಿರುವುದು ಗಮನಾರ್ಹ. ಮುಂದೆ ಪಂಪ ಈ ಗೋಕರ್ಣನಾಥನಿರುವ ಬನವಾಸಿ ಪ್ರದೇಶವನ್ನೇ ಇನ್ನೂ ನಾಲ್ಕು ಪದ್ಯಗಳಲ್ಲಿ ವರ್ಣಿಸಿದ್ದಾನೆ: 'ಸೊಗಯಿಸಿ ಬಂದ ಮಾಮರನೇ', 'ಚಾಗದಭೋಗದಕ್ಕರದಗೇಯದ' 'ತೆಂಕಣ ಗಾಳಿಸೋಂಕಿದೊಡಂ' ಹಾಗೂ 'ಅಮರ್ದಂ ಮುಕ್ಕುಳಿಪಂತುಟಪ್ಪ' ಎಂದು ಪ್ರಾರಂಭವಾಗುವ ಇವೇ ಆ ನಾಲ್ಕು ಪದ್ಯಗಳು. ಬನವಾಸಿ ದೇಶ ಪಂಪನ ಕಾಲಕ್ಕೆ ಬನವಾಸಿ ಪನ್ನಿರ್ಚ್ಛಾಸಿರ (ಬನವಾಸಿ–12000) ಎಂದು ಪ್ರಸಿದ್ಧವಾಗಿತ್ತು; ಅದರ ವ್ಯಾಪ್ತಿ ಶಿವಮೊಗ್ಗ ಜಿಲ್ಲೆಯ ಷಿಕಾರಿಪುರ, ಸೊರಬ, ಸಾಗರ ಅನಂತರ ಮಂಗಳೂರು ಅಥವಾ ದಕ್ಷಿಣ ಕನ್ನಡ ಜಿಲ್ಲೆಯ ಭೂಭಾಗದಿಂದ ಆರಂಭಿಸಿ ಉತ್ತರದಲ್ಲಿ ಗೋವೆಯ ಪ್ರದೇಶದವರೆಗೆ ಹಬ್ಬಿತ್ತು. ಬನವಾಸಿ ಎಂದರೆ ನಗರವಲ್ಲ, 'ಬನವಾಸಿ' ಎಂಬುದು ನಗರವಾಚೀ ಶಬ್ದವೂ ಅಲ್ಲ. ಮುಂದೆ ಕಾವ್ಯದ ನಾಯಕ ದ್ವಾರಕೆಗೆ ಹೋಗುತ್ತಾನೆ. ಪಂಪ ದ್ವಾರಕೆಗೆ ಹೋಗಿ ಅಲ್ಲಿಂದ ನೇಮಿನಾಥ ತೀರ್ಥಂಕರನ ನಿರ್ವಾಣ ಸ್ಥಳ ಗಿರಿನಾರ ಪರ್ವತಕ್ಕೆ ಹೋಗಿರಬೇಕು ಅಥವಾ ಹೋಗುವಾಗ್ಗೆ ದ್ವಾರಕೆಯನ್ನು ಅವನು ನೋಡಿರಬೇಕು. ಹೀಗೆ ಪಂಪನ ಸ್ವಾಮಿಕಾರ್ಯ ಸ್ವಕಾರ್ಯ ಎರಡೂ ಸುಸೂತ್ರವಾಗಿ ಜರುಗಿವೆ.

ಪಂಪ ತನ್ನ ಪೂರ್ವಜರ ಸ್ಥಳವನ್ನೂ ತಾನು ಪಡೆದ ಬಾಡಗಳನ್ನೂ ಅಗ್ರಹಾರ 'ಧರ್ಮಪುರ' ಊರಿನ ವರ್ಣನೆಯನ್ನೂ ವಿವರವಾಗಿ ನೀಡಿದ್ದಾನೆ:

1. ವೆಂಗಿಪಟು–ಇದು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಬಾಪಟ್ಲ ಬಳಿ ಇದೆ. ಅದು ವೆಂಗಿಮಂಡಲದಲ್ಲಿ ಇದ್ದಿತು.

2. ವಸಂತ–ಇದರ ಹೆಸರು 'ವೆಸಂತ' ಎಂದಿರಬಹುದು. ವಿದ್ವಾಂಸ ರಾದ ಎನ್.ರಮೇಶನ್ ಅವರ ಒಂದು ಲೇಖನ ಈ ಬಗ್ಗೆ ಹೊಸ ಬೆಳಕನ್ನು ಚೆಲ್ಲುತ್ತದೆ.

3. ಕೊಟ್ಟೂರು–ಹೋಲಿಕೆಯಲ್ಲಿ ಬಂದಿದೆ. 'ಜಿನತಿರುಮಲ್ಯೆ' (ಅರ್ಹಂತಗಿರಿ) ಬಳಿಯಿರುವ 'ಕಥೈ ಕೊಟ್ಟೂರ' ಇದರ ಸಣ್ಣಿಸಿದ ರೂಪ.

4. ನಿಡಗುಂದಿ ಮತ್ತು ನಿಡುಂಗೊಣ್ಡೆ ಎರಡೂ ಒಂದೇ ಊರನ್ನು ಸೂಚಿಸುತ್ತವೆ. ಅದು ಇಂದಿನ ಗುಂಡ್ಲಕಮ್ಮ ನದೀ ತಟದಲ್ಲಿದ್ದಿತು.

5. ವಿಕ್ರಮಪುರ – ಹೋಲಿಕೆಯಲ್ಲಿ ಬಂದಿದೆ. 'ಸಿಂಹವಿಕ್ರಮಪುರ' ಇದರ ಸಣ್ಣಿಸಿದ ರೂಪ. ಈ ಊರು ನೆಲ್ಲೂರು ಜಿಲ್ಲೆಯಲ್ಲಿದೆ (ಆಂಧ್ರಪ್ರದೇಶ).

6. ಅರಿಕೇಸರಿಯಿಂದ ಪಂಪನು ಪಡೆದ ಅಗ್ರಹಾರ 'ಧರ್ಮಪುರ'. ಅವನೇ ಹೇಳಿರುವಂತೆ ಸಬ್ಬಿಸಾಸಿರ ಪ್ರದೇಶದಲ್ಲಿದೆ (ಸಬ್ಬಿನಾಡು

ಕರೀಮ್‌ನಗರ ಜಿಲ್ಲೆಯಲ್ಲಿದೆ). ಈ ವಿಷಯವನ್ನು ತಿಳಿಸುವ ಆ ಪದ್ಯ ಹೀಗಿದೆ:

ಬೀರದಳವಿಯ ನನ್ನಿಯ ಚಾಗದ ಶಾಸನಂ ಚಂದ್ರಾರ್ಕತಾರಾಂಬರಂ
ಮೇರುನಿಲ್ವಿನಂ ನಿಲವೇೞ್ಕುಂ ಕಾವ್ಯಕ್ಕೆ ತಾನಿತ್ತಂ ಶಾಸನದಗ್ರಹಾರಂ
ಸಾರಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮಭಂಡಾರದಂತೆ
ಸಾರಮಾದುದು ಬಿಟ್ಟಗ್ರಹಾರಮಾ ಚಬ್ಬಿಸಾಸಿರದೊಳಂ ಧರ್ಮಪುರಂ
(ಪಿರಿಯಕ್ಕರ-ವಿ.ವಿ.ಆ.14-56)

'ಬಚ್ಚೆ ಸಾಸಿರಂ' ಎಂದು ಕೆಲವು ಪ್ರತಿಗಳಲ್ಲಿದೆ. ಚಬ್ಬಿ/ಸಬ್ಬಿ - ಅರ್ಥವಾಗದಾಗ ಹುಟ್ಟಿಕೊಂಡ ಪಾಠವಿದು. ಈಗ ಅದನ್ನು ನಾವು ಸರಿಪಡಿಸಿಕೊಳ್ಳಬಹುದು.

ಪಂಪ ತನ್ನ ಕನ್ನಡವು ಪುಲಿಗೆಱೆಯ ತಿರುಳಕನ್ನಡ ಎಂದು ಹೇಳಿದ್ದಾನೆ. ಕವಿರಾಜಮಾರ್ಗ ಕೃತಿ ತಿರುಳ್ಗನ್ನಡ ಎಂಬ ಮಾತನ್ನು ಈ ಮೊದಲು ಬಳಸಿದೆ. ಅದರ ಪ್ರಭಾವದಲ್ಲೇ ಪಂಪನೂ ತನ್ನ ಕನ್ನಡ ಅದೇ ತಿರುಳ್ಗನ್ನಡ ಎಂದು ಹೇಳಿರಬಹುದು. ಪಂಪನಿಗೂ ಪುಲಿಗೆರೆಗೂ ಇದ್ದ ಸಂಬಂಧದ ಸಂಗತಿಯನ್ನು ತಿಳಿಸುವ ದಾಖಲೆ ಇದುವರೆಗೆ ಉಪಲಬ್ಧವಾಗಿಲ್ಲ. ತಿರುಳ್ಗನ್ನಡ ಎಂದರೆ ಪ್ರಮಾಣಿತ ಶುದ್ಧಭಾಷೆ ಎಂದು ವಿದ್ವಾಂಸರು ಅರ್ಥೈಸಿದ್ದಾರೆ. ಇದು ಸರಿಯಾದರೆ ಮತ್ತೆ ಪಂಪ ಈ ಭಾಗದವನೇ ಆಗಿದ್ದರೆ ದತ್ತಿಗ್ರಾಮಗಳನ್ನು-ಅಗ್ರಹಾರವನ್ನು-ಇಲ್ಲಿಯೇ ಪಡೆಯುತ್ತಿದ್ದ; ಸಬ್ಬಿನಾಡಿನಲ್ಲಿ-ಸಪಾದಲಕ್ಷ ಕ್ಷಿತಿಯಲ್ಲಿ ಅಲ್ಲ. ಅವನು ದತ್ತಿ ಪಡೆದ ಊರುಗಳಲ್ಲಿ ಅವನು ಇದ್ದನೆಂದರೆ ಅದು ವಾಸ್ತವ ಸಂಗತಿ.

ಪಂಪನ ಬಾಲ್ಯವೂ ಅಭ್ಯಾಸವೂ ಜೈನಮುನಿಗಳ ಬಳಿಯಲ್ಲಿ ಆಗಿರಬೇಕು. ಇದನ್ನು ಅವನೇ ಆದಿಪುರಾಣ ಗ್ರಂಥದಲ್ಲಿ ತಿಳಿಸಿದ್ದಾನೆ:

ಮುನಿಜನದೋದಿಸಿದೋಜೆಯೊ
ಳನುವದಿಪುದಿದೊಂದೆ ಕೊಂಡಕುಂದಾನ್ವಯನಂ
ದನವನಶುಕಮೆಂದೆನಗಿನಿ
ಸನುಗ್ರಹಂಗೆಯ್ಗೆ ಕರುಣದಿಂ ಮುನಿನಿವಹಂ ॥ (ಆದಿಪು.ಆ-1:14)

ಮುನಿಗಳು ಓದಿಸಿದ ಪದ್ಧತಿಯಲ್ಲಿ, ಕ್ರಮದಲ್ಲಿ, ಆದಿಪುರಾಣವನ್ನು ಅಂದರೆ ಮಹಾಪುರಾಣದ ಭಾಗವನ್ನು ರಚಿಸಿದ್ದಾನೆ-ಒಂದು ದೃಷ್ಟಿಯಲ್ಲಿ ಒಂದಷ್ಟು ಅನುವಾದಿಸುವ ಕೆಲಸವನ್ನೂ ಮಾಡಿದ್ದಾನೆ. ಆದಿಪುರಾಣ ಇತ್ತ ಪೂರ್ಣಸ್ವತಂತ್ರ ಕೃತಿಯೂ ಅಲ್ಲ, ಅತ್ತ ಸಂಪೂರ್ಣ ಅನುವಾದವೂ ಅಲ್ಲ. ಒಂದು ಸತ್ಯವೆಂದರೆ ಆ ಮುನಿವೃಂದದಿಂದ ಅವನು ಓದನ್ನು ಕಲಿತಿದ್ದಾನೆ ಮತ್ತು ಅವರಿಂದ ದೀಕ್ಷೆಯನ್ನೂ ಪಡೆದಿದ್ದಾನೆ ಎಂದು ಹೇಳಬಹುದು. ಆ ಕಾರಣದಿಂದಲೇ ಅವನು ಆ ಕೊಂಡಕುಂದಾನ್ವಯ ನಂದನವನದಶುಕ. ಕೊಂಡಕುಂದಾನ್ವಯ ಎಂಬುದು 'ಹನಸೋಗೆ ಅನ್ವಯ' ಇದ್ದ ಹಾಗೆ. 'ಕೊಂಡಕುಂದೆ' (ಕೊಂಡಕುಂದೆತೀರ್ಥ ಎಂಬ ಗ್ರಾಮ ಗುಂತಕಲ್ ರೈಲ್ವೆ ಜಂಕ್ಷನ್ ಊರ ಹತ್ತಿರದ ಒಂದು ಗ್ರಾಮ). ಕೊಂಡಕುಂದಾನ್ವಯ ಎಂಬುದು ಶ್ರುತಕೇವಲಿ ಭದ್ರಬಾಹುಗಳ ಸಾಕ್ಷಾತ್ ಶಿಷ್ಯರಾದ ಪದ್ಮನಂದಿಯತಿಗಳಿಂದ ಆರಂಭವಾಗಿ ಮುಂದುವರೆದದ್ದು. ಈಗಿನ ಕನ್ನಡನಾಡು ಹಾಗೂ ಆಂಧ್ರಪ್ರದೇಶಗಳ ಭೂಭಾಗದಲ್ಲಿ ಪ್ರಸಿದ್ಧ ವಾಗಿತ್ತು. ಕೊಂಡಕುಂದರು (ಕುಂದಕುಂದಾಚಾರ್ಯರು) ಸುಮಾರು 84 ಕೃತಿಗಳನ್ನು ಬರೆದರು ಎಂದು ಪ್ರತೀತಿ. ಅವರು ಎಲ್ಲ ಕೃತಿಗಳನ್ನೂ ಪ್ರಾಕೃತದಲ್ಲಿಯೆ ಬರೆದಿದ್ದಾರೆ. ಕೊಂಡಕುಂದರದು ಕರ್ನಾಟಕದಲ್ಲಿ ಪ್ರಸಿದ್ಧ ಜೈನಗುರುಪರಂಪರೆ. ಆ ಪರಂಪರೆಯಲ್ಲಿಯೆ ದೀಕ್ಷೆ ಪಡೆದ ವ್ಯಕ್ತಿ ಪಂಪ. ತನ್ನನ್ನು ತಾನು ಆ ನಂದನವನದ ಶುಕ ಎಂದು ಹೇಳಿದ್ದಾನೆ. ಹೀಗೆ ಹೇಳುವಾಗ್ಗೆ ಅವನ ಮುಂದೆ ಜಿನಚತುರ್ವಿಂಶತಿಕಾ ಸ್ತೋತ್ರಮಾಲೆಯ 'ತ್ವಂಧರ್ಮೋದಯ ತಾಪಸಾಶ್ರಮ ಶುಕಃ' ಎಂಬ ಸ್ತುತಿ ಇದೆ. ಪಂಪನು ವೈರಾಗ್ಯವನ್ನು ತಳೆದು ಮುನಿಯಾಗಿದ್ದನೆನ್ನುವುದಕ್ಕೆ ಆ ಸಪಾದಲಕ್ಷ ಕ್ಷಿತಿಯಲ್ಲಿ ಇಂದಿಗೂ ಮುನಿಪಂಪಂ ಎಂಬ ಗ್ರಾಮವಿದೆ. ಸ್ಥಳನಾಮವಿಜ್ಞಾನ 'ಪಂಪ' ಮುನಿ ಆಗಿದ್ದಿರಬಹುದೆಂದು ಸಾರುತ್ತದೆ. ಈಗ ಈ ಹೊಸ ದೃಷ್ಟಿಕೋನದ ಹಿನ್ನೆಲೆಯಲ್ಲಿಯೂ ಪಂಪನ ಬಗೆಗೆ ಅಧ್ಯಯನ ನಡೆಯಬೇಕಾಗಿದೆ.

ಪಂಪಭಾರತ ಅರ್ಥಾತ್ ವಿಕ್ರಮಾರ್ಜುನವಿಜಯ ಚರಿತ್ರೆ ಹಾಗೂ ಮಹಾಭಾರತ ಕಥೆಯನ್ನು ಹೊಂದಿಸಿ ಬರೆದ ದ್ವಿಸಂಧಾನಕಾವ್ಯ. ಪಂಪ ತಾನು ಒಪ್ಪಿಕೊಂಡಂತೆ- ಆಶ್ರಯದಾತನ ಆಶೆಯಂತೆ-ಕಾವ್ಯವನ್ನು ಬರೆದು ಮುಗಿಸಿದ್ದಾನೆ. ಅದರ ಯಶಸ್ಸು ಸಹೃದಯನ ಹೃದಯ ಸಿರಿವಂತಿಕೆಯ ನಿರ್ಣಯದಲ್ಲಿದೆ. ಆದಿಪುರಾಣ ಧಾರ್ಮಿಕ ಕಾವ್ಯ; ಧರ್ಮವನ್ನು ಬೆಳಗುವುದಕ್ಕಾಗಿ ಬರೆದ ಕೃತಿ. 24 ತೀರ್ಥಂಕರರನ್ನು ಕುರಿತು ಬರೆದ ಕೃತಿ 'ಮಹಾಪುರಾಣ' ಎನ್ನಿಸಿಕೊಳ್ಳುತ್ತದೆ. ಕೂಚಿಭಟ್ಟಾರಕರು, ಶ್ರೀನಂದಿಮುನೀಶ್ವರರು ಮತ್ತು ಕವಿ ಪರಮೇಶ್ವರರು ಬರೆದ ಪುರಾಣ ಕಥೆಯನ್ನೇ ಜಿನಸೇನಾಚಾರ್ಯರು ಮತ್ತು ಗುಣಭದ್ರಾಚಾರ್ಯರು 'ಮಹಾಪುರಾಣ'ದಲ್ಲಿ ಬರೆದಿದ್ದಾರೆ. ಆ ಪೂರ್ವಸೂರಿಗಳ ಕೃತಿಗಳು ಈಗ ಉಪಲಬ್ಧವಿಲ್ಲ. ಪಂಪ, ಚಾವುಂಡರಾಯ ಮೊದಲಾದವರು ಆ ಕೃತಿಗಳನ್ನು ಬಳಸಿಕೊಂಡಿದ್ದಾರೆ. (ಎಸ್.ಜಿಎ.)

ಆದಿಪುರಾಣ ಚಂಪೂವಿನಲ್ಲಿ ರಚಿತವಾಗಿದೆ. ಇದರಲ್ಲಿ 16 ಆಶ್ವಾಸಗಳೂ 1,555 ಪದ್ಯಗಳೂ ಇವೆ. ಆದಿಪುರಾಣ ಧಾರ್ಮಿಕ ಗ್ರಂಥ; ಲೋಕಕಲ್ಯಾಣಕ್ಕಾಗಿ ಧರ್ಮಾಮೃತವನ್ನು ವರ್ಷಿಸಿದ ಆದಿ ತೀರ್ಥೇಶ್ವರಚರಿತ. ಕರ್ಣಾಮೃತಸ್ಯಂದಿಯಕ್ಕಿದು ಭವ್ಯಾವಳಿಗೆ ಎಂದು ಪಂಡಿತರು ಪ್ರೇರೇಪಿಸಿದರೂ ಮುಖ್ಯವಾಗಿ ತನಗೆ ಪುಣ್ಯ ದೊರಕಲೆಂದೂ ಕರ್ಮನಿರ್ಜರೆಯಾಗಲೆಂದೂ ಬಯಸಿ, ಅನಂತಸುಖಾಭಿಲಾಷಿಯಾಗಿ ಷೋಡಶ ಭಾವನೆಯಿಂದ ಬರೆದ ಷೋಡಶ ಆಶ್ವಾಸಗಳುಳ್ಳ ಪವಿತ್ರ ಗ್ರಂಥ. ಈ ಕಾವ್ಯ ರಚನೆಯಿಂದ ಪಂಪ ಆತ್ಮಸಂತುಷ್ಟಿಯನ್ನೂ ಪಂಡಿತಪ್ರಶಂಸೆಯನ್ನೂ ಗಳಿಸಿ ಪುರಾಣಕವಿಯೆಂದೂ ಮಹಾಕವಿಯೆಂದೂ ಪ್ರಸಿದ್ಧನಾದ.

ಪಂಪನ ಆದಿಪುರಾಣ ಜಿನಸೇನಾಚಾರ್ಯರ ಪೂರ್ವಪುರಾಣಕ್ಕೆ ಅನೇಕ ವಿಧಗಳಲ್ಲಿ ಋಣಿಯಾಗಿದೆ. ವಿಶ್ರುತವೀರಸೇನಜಿನಸೇನಾಚಾರ್ಯ ಪರ್ಯಂತಮಾಗಿರೆ ಬಂದೀಕಥೆ ಗುಣ್ಪುವೆತ್ತುದವರುಂಜ್ಞಾನರ್ಥಿ ಸಂಪನ್ನರೆಂದಿರದಾಂ ಧೃಷ್ಟನೆನೀಕಥಾಬ್ಧಿಯುಮನೇನೀಸಲ್ಕನಂದಂ ದನೋ ಎಂದು ತನ್ನ ಋಣವನ್ನೊಪ್ಪಿಕೊಂಡು ವಿನಯವನ್ನು ಮೆರೆದಿದ್ದಾನೆ. ಪಂಪ ಕಥಾವಸ್ತುವಿಷಯದಲ್ಲಿ ಜಿನಸೇನಾಚಾರ್ಯರಿಗೆ ಕಡ ಹೊತ್ತಿದ್ದರೂ ಅವನ ಅನ್ಯಾದೃಶ ಪ್ರತಿಭೆ ಮೂಲಕಥೆಯನ್ನು ಕುಗ್ಗಿಸುವಲ್ಲಿ ಕುಗ್ಗಿಸಿ, ಹಿಗ್ಗಿಸಬೇಕಾದಲ್ಲಿ ಹಿಗ್ಗಿಸಿ ಆದಿಪುರಾಣದಲ್ಲಿ ಕಾವ್ಯಧರ್ಮ-ಧರ್ಮಗಳ ಸಮನ್ವಯವನ್ನು ಬಹುಮಟ್ಟಿಗೆ ಸಾಧಿಸಿದ್ದಾನೆ. ಈ ಕಾವ್ಯದಲ್ಲಿ ಜೈನಧರ್ಮದ ಶಾಸ್ತ್ರಪ್ರಕ್ರಿಯೆಯ ವಿವರಗಳನ್ನು ಬಿತ್ತರಿಸಿರುವ ಭಾಗಗಳು ಕಾವ್ಯದ ಉತ್ತಮಿಕೆಯನ್ನು ತಗ್ಗಿಸಿವೆ. ಈ ದೋಷಸಂಭವಕ್ಕೆ ವಸ್ತುವಿನ ಸ್ವರೂಪವೇ ಕಾರಣವೆಂದು ಕೆಲವು ವಿಮರ್ಶಕರ ಅಭಿಪ್ರಾಯ. ಕಾವ್ಯನಿರೂಪಣೆಯಲ್ಲಿ ಕೈಬಿಡಬಹುದಾಗಿದ್ದ ಈ ನೀರಸ ಭಾಗಗಳನ್ನು ಹಾಗೆ ಮಾಡದಿರಲು ಕವಿಯ ಧರ್ಮಶ್ರದ್ಧೆಯೇ ಕಾರಣ ಎಂದೂ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ.

ಆದಿಪುರಾಣವನ್ನು ರಚಿಸುವ ಸಂದರ್ಭದಲ್ಲಿ ಪಂಪನ ಮನಸ್ಸನ್ನು ಆವರಿಸಿದ್ದದ್ದು ಜೈನಧರ್ಮ, ಅದರ ಬಗೆಗಿನ ಪ್ರಶ್ನಾತೀತ ಶ್ರದ್ಧೆ. ಲೌಕಿಕತೆಯನ್ನು ಮೀರಿದ ಧಾರ್ಮಿಕತೆಯೇ ಪ್ರಧಾನವಾಗಿದ್ದರೂ ಧರ್ಮಾಂಧತೆಯಿಂದ ಪಾರಾದ ಮನೋದೃಷ್ಟಿ ಪಂಪನದು. ಹಾಗಾಗಿ ಇವನ ದೃಷ್ಟಿಯಲ್ಲಿ ಕಾವ್ಯದ ಪ್ರಯೋಜನವೆಂಬುದು ಲೌಕಿಕತೆ ಮೀರಿದುದಾಗಿದ್ದು ಕೇವಲ ಅಂಥ ಮನೋಭಾವವನ್ನು ಹೀಗೆ ಪ್ರಶ್ನಿಸಿದ:

ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಟ್ಟೆ ಲಾಭಮೆಂ
ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗಟ್ಟೆ ಮುಕ್ತಿ ಸಂ
ಭವಿಸುವ ಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ
ರವೆ ಪೆಱರೇವುದೇಂ ಪೆಱರ ಮಾಡುವುದೇಂ ಪೆಱರಿಂದಮಪ್ಪುದೇಂ

(ಆದಿಪು. ಆ. 1–36) ಸಾಮಾನ್ಯವಾಗಿ ಜೈನ ಧಾರ್ಮಿಕ ಗ್ರಂಥಗಳಲ್ಲಿ ಒಬ್ಬ ತೀರ್ಥಂಕರನ ಭವಾವಳಿ ಇದ್ದಂತೆ ಇನ್ನೊಬ್ಬನದು ಇರುವುದಿಲ್ಲ. ಈ ಭವಾವಳಿಯ ಸ್ವರೂಪವನ್ನು ಕಲಾತ್ಮಕವಾಗಿ ಆವಿಷ್ಕಾರ ಮಾಡುವುದರಲ್ಲಿ ಕವಿಪ್ರತಿಭೆಗೆ ಅವಕಾಶವಿದ್ದರೂ ಕೆಲವೊಮ್ಮೆ ಚರ್ವಿತಚರ್ವಣದಿಂದ ನೀರಸವಾಗಿ ಬಿಡಬಹುದು. ಆದರೆ ಈ ಕಲಾಕರ್ಮವನ್ನು ಪಂಪ ಅಮೋಘವಾಗಿ ನಿರ್ವಹಿಸಿದ್ದಾನೆ. ಆದಿತೀರ್ಥಂಕರನ ಭವಾವಳಿಯ ಅನುಕ್ರಮವನ್ನು ಪಂಪನ ಒಂದು ಅಕ್ಕರವೃತ್ತ ಹೀಗೆ ನಿರೂಪಿಸಿದೆ:

ಭೋಗಾಕಾಂಕ್ಷಿತಂ ಜಯವರ್ಮಂ ಬೞಿಕೀಮಹಾಬಲಂ ಲಲಿತಾಂಗಂ
ವಜ್ರಜಂಘಂ
ಭೋಗಭೂಮಿಜಂ ಶ್ರೀಧರದೇವಂ ಸುವಿಧಿನರಾಧಿಪನಚ್ಯುತೇಂದ್ರಂ
ಸಾಗರಾಂತಂ ನೆಲನೆನಿತನಿತುಮಂ ಚಕ್ರದಿಂ ಬೆಸಕೆಯ್ಸಿಸಿದ ವಜ್ರನಾಭಿ
ಯಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಬಂದಿಲ್ಲಿ ತಾನಾದಿದೇವನಾದಂ
(ಆದಿಪು.ಆ. 16–58)

ಭವದಿಂದ ಭವದೊಳ್ ತಗುಳ್ದು ಪರಮಸ್ನೇಹಂಗಳು ಜೀವಗಳನ್ನು ಮೋಹಸಂಕೋಲೆಯಿಂದ ಹೇಗೆ ಬಂಧಿಸುತ್ತವೆ, ಅದರಿಂದ ಬಿಡಿಸಿಕೊಂಡು ಸದ್ಗತಿ ಪಡೆಯಲು ಜೀವ ಹೇಗೆ ಹೆಣಗುತ್ತದೆ ಎಂಬ ಜಿನಧರ್ಮತತ್ತ್ವವನ್ನು ವೃಷಭದೇವನ ಪೂರ್ವಜನ್ಮಾವಳಿಕಥನದಲ್ಲಿ ಪಂಪ ಮನೋಹರವಾಗಿ ಪ್ರತಿಪಾದಿಸಿದ್ದಾನೆ. ವಿಶೇಷವಾಗಿ ಲಲಿತಾಂಗ–ಸ್ವಯಂಪ್ರಭೆ, ವಜ್ರಜಂಘ–ಶ್ರೀಮತಿ ಇವರು ಪ್ರಣಯಿಗಳಾಗಿ ಹುಟ್ಟಿ ಭೋಗಜೀವನದ ಪರಾಕಾಷ್ಠೆಯನ್ನು ಮುಟ್ಟಿಯೂ ಕೊನೆಗೊಮ್ಮೆ ಮರಣವನ್ನು ಅಪ್ಪಲೇಬೇಕಾಗಿ ಬಂದ ಸನ್ನಿವೇಶಗಳ ಚಿತ್ರಣ ಹೃದಯಸ್ಪರ್ಶಿಯಾಗಿದೆ. ಈ ಸಂದರ್ಭಗಳು ಕಾವ್ಯದೃಷ್ಟಿಯಿಂದ ಗಮನಾರ್ಹವಾದವುಗಳು. ಕೊನೆಯ ಜನ್ಮದಲ್ಲಿ ಆದಿನಾಥ ಭೂಲೋಕದಲ್ಲಿ 14ನೆಯ ಮನುವಾದ ನಾಭಿರಾಜನಿಗೆ ವೃಷಭಸ್ವಾಮಿ (ಪುರುದೇವ) ಎಂಬ ಹೆಸರಿನ ಪುತ್ರನಾಗಿ ಜನ್ಮವೆತ್ತಿ ಸಂಸಾರದಲ್ಲಿ ಭೋಗಾಸಕ್ತನಾದರೂ ನಿರ್ಲಿಪ್ತವಾಗಿ ಬಾಳಿ, ಪರಿನಿಷ್ಕ್ರಮಣ ಕಾಲ ಬಂದಾಗ ನೀಲಾಂಜನೆಯೆಂಬವಳ ಅಮೋಘನೃತ್ಯವನ್ನು ನೋಡುತ್ತಿರುವಾಗಲೇ ಗತಾಯುವಾಗಿದ್ದ, ಅವಳು ಹಠಾತ್ತನೆ ಕಣ್ಮರೆಯಾದ ಘಟನೆಯಿಂದ ತೀವ್ರವೈರಾಗ್ಯಪರನಾಗಿ ಮುಕ್ತಿ ಸಾಧಿಸಲು ತೆರಳುತ್ತಾನೆ. ಪುರುದೇವಭವದಲ್ಲಿ ವರ್ಣಿತವಾದ ಪಂಚಕಲ್ಯಾಣಗಳಲ್ಲಿ ತೀರ್ಥಂಕರರ ಜನ್ಮಾಭಿಷೇಕ ಕಲ್ಯಾಣವೂ ಕಡೆಯದಾದ ಪರಿನಿಷ್ಕ್ರಮಣ ಕಲ್ಯಾಣವೂ ಪಂಪನ ಪ್ರತಿಭಾವಿಲಾಸದಲ್ಲಿ ದಿವ್ಯಭವ್ಯವಾಗಿ ಮೂಡಿ ಮೆರೆದಿವೆ. ಪುರುದೇವನ ಜನ್ಮಕಥೆಗೆ ಪೂರಕವಾಗಿ ಭರತ ಚಕ್ರವರ್ತಿ–ಬಾಹುಬಲಿಗಳ ಕಥೆಯೂ ಉಜ್ವಲವಾಗಿ ಚಿತ್ರಿತವಾಗಿದೆ. ಆದಿದೇವನ ಕಥೆಯಲ್ಲಿ ಭೋಗನಿರಾಸವೂ ಭರತನ ಕಥೆಯಲ್ಲಿ ವೈಭವಮದದ ನಿರರ್ಥಕತೆಯೂ ಕಾವ್ಯಧರ್ಮಕ್ಕೆ ಅಧೀನವಾಗಿ ನಿರೂಪಿತವಾಗಿವೆ. ಕಾವ್ಯಶಿಲ್ಪದದೃಷ್ಟಿಯಿಂದ ಇಡಿಯಾಗಿ ಪರಿಶೀಲಿಸಿದಾಗ, ಪಂಪನ ಧರ್ಮಶ್ರದ್ಧೆಯಿಂದಲೂ ಭಕ್ತಿಜ್ಞಾನವೈರಾಗ್ಯಭಾವನೆಗಳಿಂದಲೂ ಕವಿತಾದೇಶದ ಪ್ರಥಮ ಸ್ಫೂರ್ತಿಯಿಂದಲೂ ಪ್ರಜ್ವಲಿಸುವ ಕಾವ್ಯ ಕಡೆಗೆ ಆತನ ಭಾರತಕ್ಕೆ ಒಂದು ಕೈಮೇಲೆಂದು ಹೇಳಿದರೂ ಹೇಳಬಹುದಾಗಿದೆ ಎಂದು ಬಿ. ಎಂ. ಶ್ರೀಯವರು ಆದಿಪುರಾಣವನ್ನು ಕುರಿತು ಅಭಿಪ್ರಾಯಪಟ್ಟಿದ್ದಾರೆ. ಭಾರತ ಆದಿಪುರಾಣಗಳಲ್ಲಿ ಆದಿಪುರಾಣಕ್ಕೆ ಹೆಚ್ಚಿನ ಗೌರವ ಸ್ಥಾನ ಸಲ್ಲುವುದು ನ್ಯಾಯವಾಗಿದೆ. ಲೌಕಿಕವನ್ನು ಭಾರತದಲ್ಲಿಯೂ ಆಗಮವನ್ನು ಆದಿಪುರಾಣದಲ್ಲಿಯೂ ಪಂಪನು ಬೆಳಗಿರುವುದೇ ಇದಕ್ಕೆ ಕಾರಣವೆನ್ನಬೇಕು. ಅಲ್ಲದೆ ಪಂಪನ ಆದಿಪುರಾಣದ ದರ್ಶನಪೂರ್ವಕವಾದ ಕಲೆ ಆತನ ಕಲಾಪೂರ್ಣವಾದ ವಿಕ್ರಮಾರ್ಜುನವಿಜಯದ ದರ್ಶನಕ್ಕಿಂತಲೂ ಶಾಶ್ವತತರವಾದ ಪರಮಪುರುಷಾರ್ಥ ಪರವಾಗಿರುವುದರಿಂದಲೂ ಅದು ಸುಪಕ್ವ ಚೇತನರಿಗೆ ಮೆಚ್ಚಾಗುವ ಸಂಭವವುಂಟು ಎಂಬ ಕುವೆಂಪು ಅವರ ವಿಮರ್ಶಾಪೂರ್ವಕವಾದ ಅಭಿಪ್ರಾಯವೂ ಇದನ್ನೇ ಸಮರ್ಥಿಸುತ್ತದೆ.

ವಿಕ್ರಮಾರ್ಜುನವಿಜಯ 14 ಆಶ್ವಾಸ ಹಾಗೂ 1,609 ಪದ್ಯಗಳುಳ್ಳ ಚಂಪೂಕಾವ್ಯ. ಪಂಪಭಾರತ ಎಂದೂ ಪ್ರಸಿದ್ಧವಾಗಿದೆ. ಕಾವ್ಯದ ಆರಂಭದಲ್ಲಿ ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆನ್ ಕವಿ ವ್ಯಾಸನೆನ್ ಎಂಬ ಗರ್ವಮೆನಗಿಲ್ಲ ಎಂಬ ವಿನಮ್ರತೆಯಿಂದ ವ್ಯಾಸರನ್ನು ನೆನೆದಿದ್ದಾನೆ. 'ಕತೆ ಪಿರಿದಾಡೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ' ಎಂದು ಪಂಡಿತರೇ ಹೊಗಳಲು ಈ ಕೃತಿಯನ್ನು ರಚಿಸಲು ಮನಸ್ಸಾಯಿತೆಂದು ಹೇಳಿದ್ದಾನೆ. ಅಲ್ಲದೆ ಅರಿಕೇಸರಿ, ಪಂಪನಿಗೆ ಪಿರಿದನಿತ್ತು ಗೌರವಿಸಿ ಇತಿಹಾಸ ಕತೆಯನ್ನು ಬರೆಯಲೊಪ್ಪಿಸಿದ. ಗುಣಾರ್ಣವನ ಬಲ್ಪು ತನ್ನ ಮನಸ್ಸನ್ನು ಸೆರೆಹಿಡಿಯಲು ತಾನು ಅರಿಕೇಸರಿಯನ್ನು ಅರ್ಜುನನೊಂದಿಗೆ ಹೋಲಿಸಿ ಕಾವ್ಯ ಬರೆದುದಾಗಿಯೂ ಹೇಳಿಕೊಂಡಿದ್ದಾನೆ.

ವಿಕ್ರಮಾರ್ಜುನವಿಜಯ ಪ್ರಸಿದ್ಧವಾದ ಮಹಾಭಾರತ ಕಥೆಯನ್ನು ವಸ್ತುವಾಗುಳ್ಳದ್ದು. ಕವಿ ಇದನ್ನು ಸಮಸ್ತಭಾರತ ಎಂದು ಅನೇಕ ಕಡೆ ನಿರ್ದೇಶಿಸಿದ್ದಾನೆ. ಅರಿಕೇಸರಿಯ ವೃತ್ತಾಂತವನ್ನು ಅರ್ಜುನನ ಕಥೆಯೊಂದಿಗೆ ಸಮಾಸ ಮಾಡಿರುವುದರಿಂದ (ಎಂದರೆ, ಕೂಡಿಸಿರುವುದರಿಂದ) ಸಮಸ್ತಭಾರತ ಎಂಬ ಹೆಸರು ಇದಕ್ಕೆ ಅನ್ವರ್ಥಕ ಎಂದು ವಿದ್ವಾಂಸರು ವ್ಯಾಖ್ಯಾನಿಸಿದ್ದಾರೆ. ಈ ಆಶಯ ಕವಿಗೆ ಇದ್ದಿರಬಹುದು. ಆದರೆ ಇನ್ನೂ ಮುಂದೆ ಹೋಗಿ, ಅರಿಕೇಸರಿಯ ಸಂಬಂಧವುಳ್ಳ ಕೆಲವು ಸಮಕಾಲೀನ ಚಾರಿತ್ರಿಕ ವ್ಯಕ್ತಿಗಳ ವೃತ್ತಾಂತವನ್ನು ಭಾರತಕಥೆಯ ಪ್ರಮುಖ ವ್ಯಕ್ತಿಗಳ ವೃತ್ತಾಂತಗಳೊಂದಿಗೆ ಸಮಸ್ತ ಮಾಡಿದ್ದಾನೆ ಎಂಬ ವಿಚಾರಧಾರೆಯೂ ಈಗ ಸಂಶೋಧನೆಯಿಂದ ಸಾಕಷ್ಟು ಸ್ಥಿರಪಟ್ಟಿದೆ. ಇದು ಹೇಗಿದ್ದರೂ ಪಂಪನ ದೃಷ್ಟಿಯಲ್ಲಿ ಭಾರತ ಕೇವಲ ವಿಕ್ರಮಾರ್ಜುನ ವಿಜಯವಲ್ಲ; ಅನೇಕ ಮಹಾಪುರುಷರ ಕಥೆ ಹಾಗೂ ಅವರ ನಡವಳಿಕೆಗಳ ಮೂಲಕ ಲೌಕಿಕವನ್ನು ಎಂದರೆ ಲೋಕಧರ್ಮವನ್ನು ಬೆಳಗುವ ಕೃತಿ. ಈ ಆಶಯವು ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ, ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ, ಚಾಪವಿದ್ಯಾಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಲಿವರ್ಗಳಿನೀ ಭಾರತಂ ಲೋಕಪೂಜ್ಯಂ ಎಂಬ ಪಂಪನ ಉಪಸಂಹಾರವಾಕ್ಯದಲ್ಲಿ ಸುವ್ಯಕ್ತವಾಗಿದೆ. **(ಎಂ.ವಿ.ಎಸ್.)**

ಆದಿ ವಂಶಾವತಾರ, ರಂಗಪ್ರವೇಶ, ಜತುಗೃಹದಾಹ, ಹಿಡಿಂಬವಧೆ, ಬಕಾಸುರವಧೆ, ದ್ರೌಪದೀಸ್ವಯಂವರ, ಯುಧಿಷ್ಠಿರಪಟ್ಟಬಂಧನ,

ಇಂದ್ರಪ್ರಸ್ಥಪ್ರವೇಶ, ಅರ್ಜುನನದಿಗ್ವಿಜಯ, ಸುಭದ್ರಾಹರಣ, ಖಾಂಡವವನ ದಹನ, ಮಯದರ್ಶನ, ರಾಜಸೂಯಯಾಗ, ಜರಾಸಂಧಶಿಶುಪಾಲಾದಿಗಳ ವಧೆ, ದ್ಯೂತಪ್ರಸಂಗ, ಅರಣ್ಯಪರ್ವದ ವಿವರ, ವಿರಾಟಪರ್ವದ ವಿವರ, ಕೀಚಕವಧೆ, ದೂತಕಾರ್ಯ, ಕುರುಕ್ಷೇತ್ರ ಪ್ರಯಾಣ, ಭೀಷ್ಮಕರ್ಣವಿವಾದ, ಭೀಷ್ಮಶರಶಯನ, ದ್ರೋಣಾಭಿಷೇಕ, ಅಭಿಮನ್ಯುವಧೆ, ದ್ರೋಣವಧೆ, ಅಶ್ವತ್ಥಾಮಕರ್ಣವಿವಾದ, ಕರ್ಣಾಭಿಷೇಕ, ಸಂಸಪ್ತಕರ ವಧೆ, ದುಶ್ಶಾಸನ ವಧೆ, ವೇಣೀಸಂಹನನ, ಕರ್ಣಾರ್ಜುನ ಯುದ್ಧ, ಕರ್ಣನ ಮರಣ, ಶಲ್ಯಾಭಿಷೇಕ, ಶಲ್ಯನ ಪತನ ಭೀಮದುರ್ಯೋಧನರ ಗದಾಯುದ್ಧ, ದುರ್ಯೋಧನನ ವಧೆ, ಪಂಚಪಾಂಡವರ ಶಿರಶ್ಛೇದನ ಇತ್ಯಾದಿಗಳನ್ನು ಒಂದೂ ಕುಂದದಂತೆ ಹೇಳುವುದು (ಕತೆ ಪಿರಿದಾಡೊಡಂ ಕತೆಯ ಮೆಯ್ಗಿಡಲೀಯದೆ) ಪಂಪನ ಉದ್ದೇಶವಾಗಿದ್ದು ಈ ಎಲ್ಲ ವಿಷಯಗಳಲ್ಲಿಯೂ ಕವಿ ಯಶಸ್ವಿಯಾಗಿದ್ದಾನೆಂದು ಹೇಳಬಹುದು. ಪಂಚಪತೀತ್ವದ ಮಾರ್ಪಾಟು, ಸುಭದ್ರೆಗೆ ಅರ್ಜುನನ ಅಗ್ರಮಹಿಷಿಪಟ್ಟ, ಅರ್ಜುನನ ಪಟ್ಟಾಭಿಷೇಕ – ಹೀಗೆ ಎಡೆತಪ್ಪಿಬಂದ ಈ ಒಂದೆರಡು ದೋಷಗಳನ್ನು ಬಿಟ್ಟರೆ ವಿಕ್ರಮಾರ್ಜುನವಿಜಯ ಒಂದು ಅತ್ಯುತ್ತಮ ಕಾವ್ಯ. 'ಅದರ ಕಟ್ಟಣದಲ್ಲಿ ಒಂದು ಅಪೂರ್ವತೆಯಿದೆ. ಉಜ್ವಲತೆಯಿದೆ'. ಮೂಲ ಮಹಾಭಾರತವನ್ನು ಸಂಗ್ರಹಗೊಳಿಸುವಲ್ಲಿ ಮಹಾಕವಿಗೆ ಮಾತ್ರ ಸಾಧ್ಯವೆಂಬ ಕೌಶಲವನ್ನು ಪಂಪ ಮೆರೆದಿದ್ದಾನೆ. ಹಲವಾರು ಪದ್ಯಗಳಲ್ಲಿ ವಿಸ್ತರಿಸಬಹುದಾದುದನ್ನು ಕೆಲಪದ್ಯಗಳಲ್ಲಿ ಒಂದೆರಡು ಮಾತುಗಳಲ್ಲಿ ಹೇಳಿ ಮುಗಿಸಿದ್ದಾನೆ. ಶಂತನು–ಸತ್ಯವತಿಯರ ಪ್ರಣಯಕಥೆಯನ್ನು ಇದಕ್ಕೆ ಉದಾಹರಿಸಬಹುದು:

ಮೃಗಯಾವ್ಯಾಜದಿನೊರ್ಮೆ ಶಂತನು ತೊೞಲ್ತರ್ಪಂ
ಪಳಂಚಲ್ಕೆ ತ
ನ್ಮೃಗ ಶಾಬಾಕ್ಷಿಯ ಕಂಪುತಟ್ಟೆ ಮಧುಪಂಬೋಲ್ ಸೋಲ್ತು
ಕಂಡೊಲ್ದುನ
ಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀಂ ಬಾ ಪೋಪ
ಮೆಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ
(ವಿ.ವಿ.ಆ.1–70)

– ಇಲ್ಲಿನ ಪ್ರಣಯಿಗಳ ಈ ಸಂಕ್ಷಿಪ್ತ ಸಂಭಾಷಣೆ ಧ್ವನಿರಮ್ಯವಾಗಿದೆ

**(ಎಸ್.ಜಿಎ.)**

ಯಾವುದೇ ಸನ್ನಿವೇಶವನ್ನು ಕಣ್ಣಿಗೆಕಟ್ಟುವಂತೆ ಹಿತಮಿತವಾಗಿ ವರ್ಣಿಸುವುದು ಪಂಪನ ವೈಶಿಷ್ಟ್ಯ. ಶಿಶುಪಾಲವಧೆಯ ಸಂದರ್ಭ, ಭೀಷ್ಮರ ಪಟ್ಟಾಭಿಷೇಕ ಸಂದರ್ಭ, ಕರ್ಣಕುಂತಿಯರ ಸಂವಾದಸಂದರ್ಭ –ಇವು ಮೇಲಿನ ಮಾತಿಗೆ ಸಾಕ್ಷಿಯನ್ನೊದಗಿಸುತ್ತವೆ. ಪಾತ್ರಚಿತ್ರಣದಲ್ಲಿಯೂ ಪಂಪನದು ಎತ್ತಿದ ಕೈ. ದುರ್ಯೋಧನ, ಕರ್ಣ, ಭೀಮ, ದ್ರೌಪದಿ, ಅರ್ಜುನ, ಭೀಷ್ಮ, ದ್ರೋಣ, ಯುದಿಷ್ಠಿರ, ಕೃಷ್ಣ – ಈ ಮೊದಲಾದ ಪಾತ್ರಗಳು ಸಜೀವತೆಯಿಂದ ಕೂಡಿವೆ. ಮಾನವಸ್ವಭಾವವನ್ನು ಪಂಪನಂತೆ ಸೂಕ್ಷ್ಮವಾಗಿ ಚಿತ್ರಿಸಿದ ಕವಿಗಳು ಕನ್ನಡದಲ್ಲಿ ವಿರಳ. ಕರ್ಣದುರ್ಯೋಧನರ ಸ್ನೇಹವನ್ನಂತೂ ಕವಿ ಅನನ್ಯ ರೀತಿಯಲ್ಲಿ ಚಿತ್ರಿಸಿದ್ದಾನೆ. ಕರ್ಣದುರ್ಯೋಧನರ ಪಾತ್ರಗಳು ಪಂಪನ ಮನಸೆಳೆದಿರುವಂತೆ, ಹೃದಯವನ್ನು ಕಲಕಿರುವಂತೆ ಇನ್ನಾವ ಪಾತ್ರಗಳೂ ಅಷ್ಟೊಂದು ಪ್ರಭಾವ ಬೀರಿಲ್ಲ. ಆದ್ದರಿಂದಲೇ ಕವಿ ರಣರಂಗದಲ್ಲಿ ಕರ್ಣ ಮರಣಹೊಂದಿದ ಸಮಯದಲ್ಲಿ ಚರಮಗೀತೆಯನ್ನು ಬರೆಯುತ್ತ 'ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ' ಎಂದು ಕಂಬನಿದುಂಬಿ ನುಡಿದಿರುವುದು.

*

ಪಂಪನದು ಔಚಿತ್ಯಮೀರದ ಶೈಲಿ; ಅದರಲ್ಲಿ ದೇಸಿ ಹಾಗೂ ಮಾರ್ಗಪದ್ಧತಿ ಬಂಧಗಳ ಸುಂದರ ಸಮನ್ವಯವಿದೆ, ರಸಧ್ವನಿ ಪ್ರಣವತೆಯಿದೆ, ಪ್ರಸನ್ನ ಗಂಭೀರತೆಯಿದೆ. ಅಕ್ಷರಶಕ್ತಿ, ಶಬ್ದಶಕ್ತಿ, ಅರ್ಥಶಕ್ತಿ, ಛಂದೋಲಯ ಇವುಗಳನ್ನು ಧ್ವನಿಸಿದ್ಧಿಗಾಗಿ ಬಳಸಿಕೊಳ್ಳುವ ಕಾವ್ಯಕೌಶಲ, ನಾಟಕೀಯಪ್ರಜ್ಞೆ, ಶಬ್ದಚಿತ್ರ ನಿರ್ಮಾಣಶಕ್ತಿ ಇವೇ ಮುಂತಾದ ಕಾವ್ಯಗುಣಗಳನ್ನು ಹೊಮ್ಮಿಸಬಲ್ಲ ಪಂಪನ ಪ್ರತಿಭೆ ಆತನನ್ನು ಕವಿಗಳ ಕವಿಯಾಗಿ ಮಾಡಿ, ಸುಕವಿಜನಮನೋಮಾನಸೋತ್ತಂಸಹಂಸಂ ಎಂಬ ಅವನ ಬಿರುದನ್ನು ಸಾರ್ಥಕಪಡಿಸಿದೆ. ವಿಕ್ರಮಾರ್ಜುನವಿಜಯ ಲೌಕಿಕ ಕಾವ್ಯವಾದುದರಿಂದ, ವೀರಕಾವ್ಯವಾದುದರಿಂದ ಕಾವ್ಯದುದ್ದಕ್ಕೂ ವೀರರಸ ನೊರೆಗಟ್ಟಿ ಹರಿಯುತ್ತದೆ. ಯುದ್ಧವರ್ಣನೆಗಳು ಸಹಜತೆಯಿಂದ ಕೂಡಿದ್ದು ಕವಿಯ ದಟ್ಟವಾದ ಲೋಕಾನುಭವಕ್ಕೆ ದ್ಯೋತಕವಾಗಿವೆ.

ಆದಿಪುರಾಣ ವಿಕ್ರಮಾರ್ಜುನವಿಜಯಗಳೆರಡೂ ಕನ್ನಡದ ಅಗ್ರಮಾನ್ಯ ಆದಿಮಹಾಕಾವ್ಯಗಳು, ಚಂಪೂಕಾವ್ಯ ಪ್ರಕಾರದ ಶ್ರೇಷ್ಠತಮ ಮಾದರಿಗಳು. ಮುನ್ನಿನ ಕಬ್ಬಮನೆಲ್ಲಮಿಕ್ಕಿಮೆಟ್ಟಿದುವು ಸಮಸ್ತಭಾರತಮುಂ ಆದಿಪುರಾಣ ಮಹಾಪ್ರಬಂಧಮುಂ ಎಂಬ ಪಂಪನ ಹೇಳಿಕೆಯಿಂದ ಈ ಎರಡು ಕೃತಿಗಳು ಪಂಪಪೂರ್ವಯುಗದ ಗಣ್ಯಕೃತಿಗಳೆಲ್ಲವನ್ನೂ ಮೀರಿಸಿದ್ದುವು ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಎರಡು ಕೃತಿಗಳೂ ಪಂಪನ ಪ್ರತಿಭೆಯನ್ನು ಶಾಶ್ವತವಾಗಿ ವಿಶ್ವವ್ಯಾಪಿಯಾಗಿ ಬೆಳಗುವ ಕೃತಿಗಳೆಂಬುದರಲ್ಲಿ ಸಂದೇಹವಿಲ್ಲ. ಆಧುನಿಕ ವಿಮರ್ಶೆಯ ಪುನರ್ಮೌಲ್ಯಮಾಪನದ ಅಗ್ನಿಪರೀಕ್ಷೆಯಲ್ಲಿ ಎಂದೂ ತೇರ್ಗಡೆಯಾಗಬಲ್ಲ ಸತ್ತ್ವವನ್ನು ಹೊಂದಿರುವ ಉದ್ಘಕೃತಿಗಳಿವು.

ಜಿನಸೇನಾಚಾರ್ಯ ಹಾಗೂ ವ್ಯಾಸಮುನೀಂದ್ರರಿಂದ ಕಥಾವಸ್ತುಗಳನ್ನು ಪಡೆದ ಋಣವನ್ನು ಒಪ್ಪಿಕೊಂಡಿರುವ ಪಂಪ ತನಗಿಂತ ಹಿಂದಿನ ಸಂಸ್ಕೃತ ಮಹಾಕವಿಗಳಿಂದ ಪ್ರಭಾವಿತನಾಗಿದ್ದರೂ ಅವರನ್ನು ಸ್ಮರಿಸದಿರುವುದು ಅಚ್ಚರಿಯನ್ನುಂಟುಮಾಡುತ್ತದೆ. ಭಾಸ, ಕಾಳಿದಾಸ, ಹರ್ಷ, ಬಾಣ, ಮಾಘ, ಭಾರವಿ – ಈ ಸಂಸ್ಕೃತ ಮಹಾಕವಿಗಳ ಪ್ರಭಾವವನ್ನು ಪಂಪನ ಕೃತಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಕನ್ನಡದ ಅನೇಕ ಕವಿಗಳು ಪಂಪನ ನೇರ ಪ್ರಭಾವಕ್ಕೆ ಒಳಗಾಗಿದ್ದಾರೆ. ರನ್ನನಂತೂ (ಸು.993) ಪಂಪನಿಗೆ ಬಹುವಿಧಗಳಲ್ಲಿ ಋಣಿಯಾಗಿದ್ದಾನೆ. ಪಂಪನ ಭಾರತ ವಿಕ್ರಮಾರ್ಜುನವಿಜಯವಾದರೆ ರನ್ನನ ಗದಾಯುದ್ಧ ಸಾಹಸಭೀಮವಿಜಯ; ಆಶ್ರಯದಾತನನ್ನು ಕಥಾನಾಯಕನಿಗೆ ಹೋಲಿಸಿ ಕಥೆಯನ್ನು ಹೇಳುವ ರೀತಿಯಲ್ಲಿಯೂ ಪಂಪನ ಅನುಕರಣವಿದೆ. ಇಷ್ಟೇ ಅಲ್ಲ, ಈ ಗದಾಯುದ್ಧದ ಕಥೆಗೆ ವಿಕ್ರಮಾರ್ಜುನವಿಜಯದ ಹದಿಮೂರನೆಯ ಆಶ್ವಾಸದ ಕಥೆಯೇ ಮೂಲ; ವರ್ಣನಾದಿಗಳೂ ಕೆಲವೆಡೆಗಳಲ್ಲಿ ಪಂಪಭಾರತವನ್ನೇ ಅನುಸರಿಸಿರುವುವು; ಕೆಲವು ಪದ್ಯಗಳೂ ಪದ್ಯಭಾಗಗಳೂ ಪಂಪಭಾರತದ ಈ ಭಾಗದ ಪಡಿನೆಳಲಿನಂತಿವೆ. ರಾಮಚಂದ್ರಚರಿತಪುರಾಣದ ಕರ್ತೃವಾದ ನಾಗಚಂದ್ರ (ಸು.1100) ತಾನು ಮಹಾಕವಿ ಪಂಪನಿಗೆ ಸಮನಾದವನು ಎಂಬ ಅರ್ಥದಲ್ಲಿ ತನ್ನನ್ನು ಅಭಿನವ ಪಂಪನೆಂದು ಕರೆದುಕೊಂಡಿದ್ದಾನೆ. ಅವನ ಕೃತಿ ಪಂಪರಾಮಾಯಣವೆಂದು ಪ್ರಸಿದ್ಧವಾಗಿದೆ. ದುರ್ಗಸಿಂಹ, ಎರಡನೆಯ ನಾಗವರ್ಮ, ನಯಸೇನ, ರುದ್ರಭಟ್ಟ, ಬ್ರಹ್ಮಶಿವ, ಎರಡನೆಯ ಗುಣವರ್ಮ ಮೊದಲಾದ ಅನೇಕ ಕವಿಗಳು ಪಂಪನ ಗೀರ್ಗುಂಫದ ಪೆಂಪು, ಅಸದೃಶಮಪ್ಪಪೂರ್ವರಸಂ, ಸನ್ನುತಕವಿತಾಗುಣ, ಹಂಪದೇವೋಕ್ತ ಪ್ರಯೋಗ, ರಸಿಕಾಗ್ರಣಿ ಪಂಪನ ನುಣ್ಪುವೆತ್ತ ನುಡಿ, ಪಂಪನಿಂಪು, ಪಂಪನೋಜೆ ಎಂದು ಮುಂತಾಗಿ ಪಂಪನ ಕವಿತೆಯ ಗುಣಗಳನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಕುಮಾರವ್ಯಾಸಭಾರತದಲ್ಲಿಯೂ ಪಂಪ

ಭಾರತದ ಪ್ರಭಾವವನ್ನು ಗುರುತಿಸಲಾಗಿದೆ. ತೆಲುಗಿನಲ್ಲಿ ಭಾರತವನ್ನು ಬರೆದ ನನ್ನಯಭಟ್ಟನ ಕೃತಿಯಲ್ಲೂ ಪಂಪಭಾರತದ ಪ್ರಭಾವವನ್ನು ವಿದ್ವಾಂಸರು ಗುರುತಿಸಿದ್ದಾರೆ. ಪಂಪನ ಪ್ರಭಾವಮುದ್ರೆಯ ವ್ಯಾಪಕತ್ವಕ್ಕೆ ಇದು ಗಮನಾರ್ಹ ನಿದರ್ಶನವಾಗಿದೆ. ಈ ಹಿನ್ನೆಲೆಯಲ್ಲಿ ಪಂಪ ಕನ್ನಡ ಕವಿಕುಲಗುರು ಎಂಬ ಪ್ರಶಸ್ತಿಗೆ ಅರ್ಹನಾಗಿದ್ದಾನೆ. ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ ಎಂಬ ಕವಿ ನಾಗರಾಜನ (ಸು.1331) ಉಕ್ತಿ ಎಂದಿಗೂ ಸಲ್ಲುವ ಮಾತಾಗಿದೆ. (ಎಂ.ವಿ.ಎಸ್.)

**ಪಟ ಕುಣಿತ:** ದಕ್ಷಿಣ ಕರ್ನಾಟಕದ ಮಂಡ್ಯ, ಮೈಸೂರು, ತುಮಕೂರು ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಪ್ರಚಲಿತವಿರುವ ಜನಪದ ನೃತ್ಯ. ಸು. 10–20 ಅಡಿ ಉದ್ದದ ಕೋಲುಗಳಿಗೆ ರೇಷ್ಮೆಯಂಥ ಬಣ್ಣಬಣ್ಣದ ಬಟ್ಟೆಯ ಪಟ್ಟಿಗಳನ್ನು ಸುತ್ತಿ ಅಲಂಕಾರ ಮಾಡಿ, ಅದರ ತುದಿಗೆ ಹಿತ್ತಾಳೆ ಅಥವಾ ಬೆಳ್ಳಿಯ ಛತ್ರಿಯನ್ನು ಅಳವಡಿಸಿರುತ್ತಾರೆ. ಇದನ್ನೇ ಪಟ ಎಂದು ಕರೆಯಲಾಗುತ್ತದೆ.

ಸಾಮಾನ್ಯವಾಗಿ ಒಕ್ಕಲಿಗರಲ್ಲಿ ಹೆಚ್ಚು ಪ್ರಚಲಿತವಿರುವ ಈ ಕುಣಿತ ನಡೆಯುವುದು ಹಬ್ಬಹರಿದಿನ ಹಾಗೂ ಜಾತ್ರೆ ಉತ್ಸವಗಳಲ್ಲಿ. ತಮಟೆ

ಮತ್ತು ನಗಾರಿ ಕುಣಿತಕ್ಕೆ ಹಿನ್ನೆಲೆ ವಾದ್ಯಗಳು, ಈ ಕುಣಿತದಲ್ಲಿ ಕನಿಷ್ಠ ಹತ್ತರಿಂದ ಹನ್ನೆರಡು ಜನ ಕಲಾವಿದರು ಪಾಲ್ಗೊಳ್ಳುತ್ತಾರೆ.

ಪ್ರತಿಯೊಬ್ಬ ಕಲಾವಿದನ ವೇಷಭೂಷಣಗಳದೇ ಇಲ್ಲಿ ಒಂದು ವಿಶೇಷ. ಕಲಾವಿದರು ಕಾಸೆ ಪಂಚೆ, ನಿಲುವಂಗಿ ತೊಟ್ಟು, ತಲೆಗೆ ರುಮಾಲು ಸುತ್ತುತ್ತಾರೆ. ಇವೆಲ್ಲ ಉಡುಪು ಬಿಳಿಯ ಬಣ್ಣದ್ದು. ಸೊಂಟಕ್ಕೆ ಬಣ್ಣದ ಪಟ್ಟಿಯನ್ನು ಬಿಗಿದರೆ, ಕೊರಳಿಗೆ ಮಣಿಸರವನ್ನು ಧರಿಸಿರುತ್ತಾರೆ. ಎಡಗೈಯಲ್ಲಿ ಬಿಳಿಯ ಚೌಕ, ಬಲಗೈಯಲ್ಲಿ 'ನಿವಾರ'ದಲ್ಲಿ ಸಿಕ್ಕಿಸಿದ ಪಟದ ಕೋಲನ್ನು ಹಿಡಿದಿರುತ್ತಾರೆ. ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡಿರುತ್ತಾರೆ. ಕಲಾವಿದರು ಎಡದ ಕೈಯಲ್ಲಿ ವಸ್ತ್ರವನ್ನು ಬೀಸುತ್ತಾ ತಮಟೆಯ ಗತ್ತಿಗೆ ಹೆಜ್ಜೆಹಾಕುತ್ತಾರೆ. ಈ ಕುಣಿತದಲ್ಲಿ ಹೆಜ್ಜೆ ಕುಣಿತ, ಎರಡ್ಹೆಜ್ಜೆ ಕುಣಿತ, ಮೂರ್ಹೆಜ್ಜೆ ಕುಣಿತ, ಸುತ್ತು ಹೆಜ್ಜೆ, ಸಾಲು ಹೆಜ್ಜೆ ಎಂಬ ವೈವಿಧ್ಯತೆಗಳನ್ನು ಕಾಣಬಹುದು. ಸಾಮಾನ್ಯವಾಗಿ ಒಂಟಿಸಾಲಿನಲ್ಲಿ ಕುಣಿತ ನಡೆಯುತ್ತದೆ ಒಮ್ಮೊಮ್ಮೆ ಕಲಾವಿದರು ಎರಡು ಸಾಲಾಗಿ ಪರಸ್ಪರ ಎದುರು ನಿಂತು ಕುಣಿಯುವುದುಂಟು ಹಾಗೆಯೇ ವೃತ್ತಾಕಾರದಲ್ಲಿ ಚಲಿಸುತ್ತಾ ಪಟದಕೋಲುಗಳನ್ನು ಹಿಂದಕ್ಕೆ ಮುಂದಕ್ಕೆ ಬಾಗಿಸಿ ಕುಣಿಯುವ ರೀತಿ ಇಡೀ ಗೋಪುರವೇ ಚಲಿಸಿದಂತೆ ಭಾಸವಾಗುತ್ತದೆ.

ಕುಣಿತದಲ್ಲಿ ಕಂಡುಬರುವ ಉತ್ಸಾಹ ಹೆಜ್ಜೆ ಹಾಕುದಾಗಿನ ಗೆಜ್ಜೆನಾದ, ವೀರಾವೇಶ ಮತ್ತು ಬಹು ಎತ್ತರಕ್ಕೆ ಕಟ್ಟಿದ ಈ ಪಟವನ್ನು ಬಾಗಿಸಿ, ಬಳುಕಿಸಿ ಕೇಕೆ ಹಾಕುತ್ತಾ ಕುಣಿಯುವುದನ್ನು ಗಮನಿಸಿದಾಗ ಇದೊಂದು ವಿಜಯೋತ್ಸವ ಸಂದರ್ಭದ ಕಲೆಯಾಗಿರಬಹುದು ಎಂದು ಊಹಿಸಬಹುದಾಗಿದೆ. ಈ ಕಲೆ ವೈಷ್ಣವ ಸಂಪ್ರದಾಯದ ಕುಣಿತಗಳಲ್ಲಿ ಒಂದೆಂದೂ ಹೇಳಲಾಗುತ್ತದೆ. (ಎಂ.ಆರ್‌ಇ.)

**ಪಟೇಲ್, ಜೆ.ಎಚ್.**: 1930–2000. ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (1996–99), ಸಮಾಜವಾದಿ ಇವರು ಇಂದಿನ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಕಾರಿಗನೂರಿನಲ್ಲಿ 1930 ಅಕ್ಟೋಬರ್ 1ರಂದು ಜನಿಸಿದರು. ತಂದೆ ಹಾಲಪ್ಪ ಪಟೇಲ್, ತಾಯಿ ಮಹಾದೇವಮ್ಮ. ಇವರ ತಂದೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದವರು. ಪಟೇಲರು ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ಹಳ್ಳಿಗಳಲ್ಲಿ ನಡೆಯಿತು. ದಾವಣಗೆರೆಯಲ್ಲಿ ಪ್ರೌಢಶಿಕ್ಷಣ ಮುಗಿಸಿದರು. ಮೈಸೂರಿನಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿ ಪಡೆದರು. ಬೆಳಗಾಂವಿಯ ಕಾನೂನು ಶಿಕ್ಷಣ ಕಾಲೇಜಿಗೆ ಸೇರಿ ಎಲ್‌ಎಲ್.ಬಿ. ಪದವಿ ಪಡೆದರು.

1947ರಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಜೈಲುಶಿಕ್ಷೆ ಅನುಭವಿಸಿದರು. ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಸಿದ್ಧಾಂತಗಳಿಗೆ ಮಾರುಹೋಗಿ ಸಮಾಜವಾದಿ ಪಕ್ಷ ಸೇರಿದರು. ಆಗ ಶಾಂತವೇರಿ ಗೋಪಾಲಗೌಡ, ಜಾರ್ಜ್ ಫರ್ನಾಂಡೀಸ್, ಮಧುಲಿಮೆಯೆ ಮೊದಲಾದವರ ಒಡನಾಟ ಲಭಿಸಿತು. ಸಾಗರ ತಾಲ್ಲೂಕಿನ ಕಾಗೋಡಿನ ಗೇಣಿದಾರರ ಪರವಾಗಿ ಚಳವಳಿಯಲ್ಲಿ ಭಾಗವಹಿಸಿದರು. ಕುವೆಂಪು ಸಾಹಿತ್ಯದಿಂದ ಪ್ರಭಾವಿತರಾದರು. ಸಾಹಿತ್ಯ, ಸಂಗೀತ, ಹಾಸ್ಯ ಇವುಗಳಲ್ಲಿ ಅಭಿರುಚಿ ಬೆಳೆಸಿಕೊಂಡರು. ಇವರ ಭಾಷಣಗಳು ಹಾಸ್ಯ ವಿಡಂಬನೆ ಹಾಗೂ ಕಾವ್ಯ ಮಿಶ್ರಿತವಾಗಿದ್ದು ಜನರನ್ನು ಆಕರ್ಷಿಸುತ್ತಿದ್ದವು. ಚುನಾವಣೆಗಳಲ್ಲಿ ಸೈದ್ಧಾಂತಿಕ ಸ್ಪರ್ಧೆಗೆ ಒಲವು ತೋರಿದರು. ಇವರಿಗೆ ಅದರಲ್ಲಿ ಜಯದ ಅವಕಾಶ ದೊರೆತದ್ದು 1967ರಲ್ಲಿ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದಾಗ. ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡಿ ದೇಶಾದ್ಯಂತ ಖ್ಯಾತಿ ಪಡೆದರು. 1975ರ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ 21 ತಿಂಗಳು ಸೆರವಾಸದಲ್ಲಿದ್ದರು.

1978ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಚನ್ನಗಿರಿ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಶಾಸಕರಾದರು. ಸಂಸದೀಯ ಪಟು ಮತ್ತು ವಾಗ್ಮಿಯಾಗಿದ್ದ ಇವರ ಭಾಷಣ ಹಾಗೂ ವ್ಯಂಗ್ಯದ ಮಾತುಗಳು

ಹಾಗೂ ಇವರು ನೀಡುತ್ತಿದ್ದ ಸಾದೃಶ್ಯಗಳು ಕೇಳುಗರಿಗೆ ಆಕರ್ಷಕವಾಗಿರುತ್ತಿದ್ದವು. ಡಿ. ದೇವರಾಜ ಅರಸರನ್ನು ಬಹಳಷ್ಟು ಶಾಸಕರು ತೊರೆದ ಸಂದರ್ಭದಲ್ಲಿ ಇವರು ಅವರ ಬೆಂಬಲಕ್ಕೆ ನಿಂತರು. 1983ರಲ್ಲಿ ಚನ್ನಗಿರಿ ಕ್ಷೇತ್ರದಿಂದಲೇ ಮತ್ತೆ ಶಾಸಕರಾಗಿ ಆಯ್ಕೆಯಾದರು. ಆಗ ಅಸ್ತಿತ್ವಕ್ಕೆ ಬಂದ ಜನತಾರಂಗ ಸರ್ಕಾರದಲ್ಲಿ ಸಚಿವರಾದರು. 1985ರಲ್ಲಿ ಪಕ್ಷ ಬಲವರ್ಧನೆ ಮಾಡಲು ಸಚಿವ ಸ್ಥಾನ ತ್ಯಜಿಸಿದರು. 1994ರಲ್ಲಿ ಜನತಾದಳ ವಿಧಾನಸಭೆಯಲ್ಲಿ ಬಹುಮತ ಪಡೆದಾಗ ಎಚ್.ಡಿ. ದೇವೇಗೌಡರ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾದರು. ಎಚ್.ಡಿ. ದೇವೇಗೌಡರು ಭಾರತದ ಪ್ರಧಾನಮಂತ್ರಿಯಾಗಿ ಆಯ್ಕೆಯಾದುದರಿಂದ ಅವರಿಂದ ತೆರವಾದ ಸ್ಥಾನಕ್ಕೆ 1996 ಮೇ 31ರಂದು ಕರ್ನಾಟಕದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು.



ಆಡಳಿತ ಅನುಭವಿ ಪಟೇಲರು ಮುಖ್ಯಮಂತ್ರಿಯಾಗಿ ಸುಗಮವಾಗಿ ಸರ್ಕಾರ ನಡೆಸಿದರು. ಅಧಿಕಾರದಲ್ಲಿದ್ದಾಗಲೂ ವಿರೋಧಪಕ್ಷದಲ್ಲಿದ್ದಾಗಲೂ ಇವರು ತಮ್ಮ ಭಾಷೆ, ಭಾವ ವಿಡಂಬನೆ ಮತ್ತು ತರ್ಕಬದ್ಧ ವಿಶ್ಲೇಷಣೆಯನ್ನು ಒಂದೇ ಸಮನಾಗಿ ಪ್ರವಹಿಸುತ್ತಾ ಬಂದವರು. ಕಹಿಸತ್ಯ ಪ್ರಸ್ತಾಪಿಸಲು ಇವರು ಹಿಂದೆ ಮುಂದೆ ನೋಡುತ್ತಿರಲಿಲ್ಲ. ತಮ್ಮ ಇತಿಮಿತಿಯ ಬಗ್ಗೆಯೂ ದೋಷ ದೌರ್ಬಲ್ಯಗಳ ಬಗ್ಗೆಯೂ ಮನಬಿಚ್ಚಿ ಮಾತನಾಡುತ್ತಿದ್ದರು. ಇದರಿಂದಾಗಿ ಇವರು ಎಷ್ಟೋ ಸಲ ಪೇಚಿಗೆ ಸಿಕ್ಕಿದ್ದುಂಟು. ಇವರೇ ಒಮ್ಮೆ ಮುಖ್ಯಮಂತ್ರಿಯಾಗಿ ತಾವು ಮಾಡಿದ ಕೆಲಸವನ್ನು ಜನ ಗಮನಿಸದೆ ನನ್ನ ಹಾಸ್ಯವಿಡಂಬನೆಯನ್ನೇ ಮುಖ್ಯವಾಗಿ ತೆಗೆದುಕೊಂಡಂತೆ ಕಾಣಿಸುತ್ತದೆಂದು ಹೇಳಿದ್ದುಂಟು. ಪಟೇಲರು ಮುಖ್ಯಮಂತ್ರಿಗಳಾಗಿ 1997ರಲ್ಲಿ ಜಿಲ್ಲೆಗಳ ಪುನರ್ ರಚನೆ ಮಾಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಬಹಳ ಕಾಲದಿಂದ ನೆನೆಗುದಿಗೆ ಬಿದ್ದಿದ್ದ ಈ ಕಾರ್ಯವನ್ನು ಜಾರಿಗೆ ತಂದು ಹೊಸದಾಗಿ ಏಳು ಜಿಲ್ಲೆಗಳನ್ನು ರಚಿಸಿದರು. 1999ರಲ್ಲಿ ಜನತಾದಳ ಮತ್ತು ಬಿಜೆಪಿ ಪಕ್ಷಗಳು ಸಂಯುಕ್ತವಾಗಿ ಚುನಾವಣೆಯನ್ನು ಎದುರಿಸಲು ಮಾಡಿಕೊಂಡ ಮೈತ್ರಿ ವಿಫಲವಾಯಿತು. ಆಗ ಇವರು ಮುಖ್ಯಮಂತ್ರಿ ಸ್ಥಾನದಿಂದ ಇಳಿದರು. ಅದೇ ಸಮಯಕ್ಕೆ ಇವರ ಆರೋಗ್ಯವೂ ಹದಗೆಟ್ಟಿತು. ಇವರು 2000 ಡಿಸೆಂಬರ್ 12ರಂದು ನಿಧನರಾದರು. ಇವರ ಪತ್ನಿ ಸರ್ವಮಂಗಳ. ಇವರ ಪುತ್ರ ಮಹಿಮಾ ಪಟೇಲ್ ಶಾಸಕರು. (ಡಿ.ಎಸ್.ಜೆ.)

**ಪಟ್ಟಣಗಳು:** 2001ರ ಜನಗಣತಿಯ ಮೇರೆಗೆ ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಪಟ್ಟಣಗಳು 237. ಬೆಂಗಳೂರು ನಗರ ಮತ್ತು ಅದರ ನಗರ ಸಮೂಹ ಜನಸಂಖ್ಯೆ 56,86,844. ಈ ಜನಸಾಗರದ ಸಮೀಪಕ್ಕೆ ಬರುವ ಇತರ ಯಾವುದೇ ಬೃಹತ್ ನಗರ ಕರ್ನಾಟಕದಲ್ಲಿಲ್ಲ. 5ಲಕ್ಷ ಜನಸಂಖ್ಯೆಗೂ ಹೆಚ್ಚಿದ್ದು 10 ಲಕ್ಷಕ್ಕೆ ಕಡಿಮೆ ಇರುವ ನಗರಗಳ ಸಂಖ್ಯೆ 3. ಅವೆಂದರೆ ಮೈಸೂರು, ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರು. ಒಂದುಲಕ್ಷದ ಮೇಲೆ ಐದು ಲಕ್ಷಗಳಿಗೆ ಒಳಪಟ್ಟಿರುವ ನಗರಗಳ ಸಂಖ್ಯೆ 20. ಒಟ್ಟು ಪಟ್ಟಣಗಳನ್ನು ಜನಸಂಖ್ಯೆಗೆ ಅನುಸಾರವಾಗಿ ಆರು ವರ್ಗಗಳಾಗಿ ವಿಂಗಡಿಸಲಾಗಿದೆ. ಆ ವರ್ಗಗಳಲ್ಲಿರುವ ಪಟ್ಟಣಗಳ ಸಂಖ್ಯೆ, ಪಟ್ಟಣವಾಸಿಗಳ ಸಂಖ್ಯೆಯನ್ನು (2001) ಈ ಕೆಳಗೆ ಸೂಚಿಸಲಾಗಿದೆ.

| ವರ್ಗ(ಜನಸಂಖ್ಯೆ ಮಿತಿ) | ಪಟ್ಟಣಗಳು | ಪಟ್ಟಣವಾಸಿಗಳಸಂಖ್ಯೆ |
|---|---|---|
| 1. 1,00,000ಕ್ಕೂ ಹೆಚ್ಚು | 24 | 1,20,43,036 |
| 2. 50,000ದಿಂದ 99,999 | 27 | 1,726,134 |
| 3. 20,000ದಿಂದ 49,999 | 101 | 3,096,525 |
| 4. 10,000ದಿಂದ 19,999 | 53 | 839,021 |
| 5. 5,000ದಿಂದ 9,999 | 27 | 192,477 |
| 6. 5,000ಕ್ಕೂ ಕಡಿಮೆ | 5 | 22,665 |
| **ಒಟ್ಟು** | **237** | **17,919,858** |

ಪಟ್ಟಣಗಳಲ್ಲಿ ನಡೆಯುವ ವಿವಿಧ ಚಟುವಟಿಕೆಗಳ ಸ್ವರೂಪವನ್ನು ಗಮನಿಸಿ ಅವನ್ನು ಸಂಸ್ಥಾಕೇಂದ್ರಗಳು, ವಾಣಿಜ್ಯಕೇಂದ್ರಗಳು, ವಿಹಾರ ಮತ್ತು ಜಾತ್ರಾ ಕೇಂದ್ರಗಳು, ಮಹಾನಗರಗಳು ಎಂದು ವಿಂಗಡಿಸಬಹುದು. ಯಾತ್ರಾಸ್ಥಳಗಳು, ಬಂದರುಗಳು, ದುರ್ಗಗಳು, ಯೋಜನಾ ಕೇಂದ್ರಗಳು ಹಾಗೂ ಸೈನ್ಯ ಶಿಬಿರಗಳೂ ಈ ವಿಂಗಡಣೆಯಲ್ಲೇ ಸೇರುತ್ತವೆ.

**ಸಂಸ್ಥಾ ಕೇಂದ್ರಗಳು:** ಹಿಂದೆ ದೇವಸ್ಥಾನ, ಚರ್ಚು ಮುಂತಾದ ಸಂಸ್ಥೆಗಳ ಸುತ್ತಲೂ ಗ್ರಾಮಗಳು ಮತ್ತು ಪಟ್ಟಣಗಳು ಬೆಳೆಯುತ್ತಿದ್ದುವು. ಇವುಗಳೊಂದಿಗೆ ಅರಮನೆಗಳ ಹಾಗೂ ಸರ್ಕಾರಿ ಕಚೇರಿಗಳ ಕೇಂದ್ರವಾದ ರಾಜಧಾನಿಯಂಥ ನಗರಗಳೂ ಬೆಳೆಯಲು ಪ್ರಾರಂಭಿಸಿದವು. ಹಾಗೆಯೇ ರೈಲ್ವೆ ಕೇಂದ್ರ, ವಿಶ್ವವಿದ್ಯಾನಿಲಯ ಮತ್ತು ವಿದ್ಯಾಸಂಸ್ಥೆಗಳು ಸಹ ಬೆಳೆದವು. ಇವುಗಳಲ್ಲಿ ಮೈಸೂರು ನಗರದ ಉದಾಹರಣೆಯನ್ನು ನಾವು ತೆಗೆದುಕೊಳ್ಳಬಹುದು. ಅರಮನೆಯ ಕೇಂದ್ರ ಮತ್ತು ರಾಜಧಾನಿಯಾಗಿ ಬೆಳೆದು, ಮುಂದಕ್ಕೆ ಈ ನಗರ ರೈಲ್ವೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಕೇಂದ್ರವಾಯಿತು. ನಗರದ ಪಶ್ಚಿಮ ಬಡಾವಣೆಗಳು ತೀವ್ರವಾಗಿ ಬೆಳೆದು ಜನಪ್ರಿಯವಾಗಲೂ ಮಾನಸಗಂಗೋತ್ರಿಯ ವಿದ್ಯಾಕೇಂದ್ರವೇ ಮೂಲಕಾರಣ. ಮತ್ತೊಂದು ಇಂಥ ಸಂಸ್ಥಾನಗರ ಧಾರವಾಡ. ಕರ್ನಾಟಕ ವಿಶ್ವವಿದ್ಯಾಲಯದ ಕೇಂದ್ರವಲ್ಲದೆ ಜಿಲ್ಲಾ ಕೇಂದ್ರವೂ ಆಗಿರುವ ಧಾರವಾಡದ ಬೆಳವಣಿಗೆ ಈ ಸಂಸ್ಥೆಗಳನ್ನೇ ಅವಲಂಬಿಸಿದೆ. ಇದೇ ರೀತಿ ನಂಜನಗೂಡು, ಉಡುಪಿ, ಮಣಿಪಾಲ ಮುಂತಾದ ಸ್ಥಳಗಳಲ್ಲೂ ಇಂಥ ಸಂಸ್ಥೆಗಳಿಂದ ಆ ನಗರಗಳ ಬೆಳವಣಿಗೆ ಆಗುತ್ತಿರುವುದನ್ನು ಗಮನಿಸಬಹುದು. ಹಲವಾರು ಕಲಾ ಮತ್ತು ಧಾರ್ಮಿಕ ಕೇಂದ್ರಗಳು ಈ ಶತಮಾನದ ಮೊದಲ ಭಾಗದಲ್ಲೇ ಪಟ್ಟಣಗಳಾಗಿ ಪರಿಗಣಿತವಾಗಿದ್ದರೂ ಅವುಗಳ ಜನಸಂಖ್ಯೆಯಲ್ಲಿ ಇಂದಿಗೂ ಗಮನಾರ್ಹ ಹೆಚ್ಚಳವಾಗಿಲ್ಲ. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯ ಜನಸಂಖ್ಯೆ 1901ರಲ್ಲಿ 2,430 ಇದ್ದಿತು. 2001ರಲ್ಲಿ ಅದರ ಜನಸಂಖ್ಯೆ 4,253. ಹೀಗಾಗಲು ಕಾರಣ ಅದಕ್ಕೆ ಪಟ್ಟಣವಾಗಿ ಬೆಳೆಯಲು ಇತರ ಅನುಕೂಲಕರ ಅಂಶಗಳಿಲ್ಲದಿರುವುದು. ಜೊತೆಗೆ ಯಾತ್ರಾಸ್ಥಳವಾಗಿರುವುದು. ಹೀಗೆಯೇ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ.

**ವಾಣಿಜ್ಯ ಕೇಂದ್ರಗಳು:** ಪಟ್ಟಣಗಳ ಬೆಳವಣಿಗೆಗೆ ಹೆಚ್ಚು ಪ್ರೇರಕವಾದದ್ದು ವಾಣಿಜ್ಯ. ಜನರು ವ್ಯವಸಾಯವನ್ನೇ ಅವಲಂಬಿಸಿದ್ದ ಕಾಲದಲ್ಲಿ ಹತ್ತಾರು ಹಳ್ಳಿಗಳ ಮಧ್ಯೆ ವಾರಕ್ಕೊಮ್ಮೆ ಸಂತೆ ನಡೆಯುತ್ತಿದ್ದ ಗ್ರಾಮಗಳೂ ಮತ್ತು ಸುತ್ತಮುತ್ತಲ ನೂರಾರು ಗ್ರಾಮಗಳಿಗೂ ಪಟ್ಟಣಗಳಿಗೂ ಸಂಬಂಧ ಕಲ್ಪಿಸಿ ಸಾಮಾನುಗಳ ಪೂರೈಕೆಗೆ ಅನುಕೂಲವಾಗುವಂಥ ಮಂಡಿ

ಪಟ್ಟಣಗಳು ಬೆಳೆದವು. ಇವಲ್ಲದೆ ಕೆಲವು ಭಾರೀ ನಗರಗಳೂ ಪ್ರಾಂತಮಟ್ಟದಲ್ಲಿ ಬೆಳೆದು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಸಾಮಾನುಗಳನ್ನು ಒದಗಿಸುವ ವಾಣಿಜ್ಯ ಸಂಸ್ಥೆಗಳಿಂದ ಕೂಡಿದ್ದವು. ಇವುಗಳಲ್ಲಿ ಬಂದರುಗಳೂ ಭಾರೀ ಸಂತೇಪೇಟೆಗಳನ್ನೊಳಗೊಂಡ ಪಟ್ಟಣಗಳೂ ಮುಖ್ಯವಾದವು. ಸಂಪರ್ಕ ಮಾರ್ಗಗಳು ಸಂಧಿಸುವ ಮತ್ತು ವ್ಯವಸಾಯ ಪ್ರಾಧಾನ್ಯತೆಯ ಸ್ಥಳಗಳಲ್ಲಿ ವಾಣಿಜ್ಯ ಕೇಂದ್ರಗಳು ಬೆಳೆದವು. ಬೆಂಗಳೂರು, ದಾವಣಗೆರೆ, ಗದಗ, ಹುಬ್ಬಳ್ಳಿ, ರಾಯಚೂರು, ಗಂಗಾವತಿ, ತಿಪಟೂರು, ಅರಸೀಕೆರೆ, ಚಿಂತಾಮಣಿ ಮುಂತಾದವು ಇಂಥ ಕೇಂದ್ರಗಳಿಗೆ ಉದಾಹರಣೆಗಳು. ಸಾಮಾನ್ಯವಾಗಿ ಎಲ್ಲ ಪಟ್ಟಣಗಳಲ್ಲಿ ವಾಣಿಜ್ಯವೆ ಪ್ರಧಾನವಾಗಿರುವುದರಿಂದ ಅಂಥವನ್ನು ವಾಣಿಜ್ಯ ಕೇಂದ್ರಗಳೆಂದು ಕರೆಯಬಹುದು.

**ಕೈಗಾರಿಕಾ ಕೇಂದ್ರಗಳು:** ಕೈಗಾರಿಕಾ ಕ್ರಾಂತಿಯಾದ ಮೇಲೆ ದೊಡ್ಡ ದೊಡ್ಡ ಉದ್ದಿಮೆಗಳು ಸ್ಥಾಪನೆಯಾಗುತ್ತ ಬಂದವು. ಕೈಗಾರಿಕೆಗಳು ಸ್ಥಾಪನೆಯಾದಂತೆಲ್ಲ ಪಟ್ಟಣಗಳು ರಭಸದಿಂದ ಬೆಳೆಯಲು ಪೂರಕ ವಾಯಿತು. ಮೊದಮೊದಲು ವಾಣಿಜ್ಯ ಕೇಂದ್ರಗಳಲ್ಲಿ ಕೈಗಾರಿಕೆಗಳು ಸ್ಥಾಪಿತವಾಗಲಾರಂಭಿಸಿ, ಕ್ರಮೇಣ ಅವು ಕೈಗಾರಿಕಾ ನಗರಗಳಾಗಿ ಪರಿವರ್ತನೆಗೊಳ್ಳುವುದು ಸಾಮಾನ್ಯ ಪ್ರವೃತ್ತಿ. ಮಂಗಳೂರು, ಹುಬ್ಬಳ್ಳಿ, ದಾವಣಗೆರೆ, ಬಾಗಲಕೋಟೆ, ಹಾಸನ ಮುಂತಾದ ನಗರಗಳು ಕೈಗಾರಿಕಾ ಕೇಂದ್ರ ಸ್ವರೂಪವನ್ನು ಪಡೆಯುತ್ತಿರುವುದನ್ನು ಗಮನಿಸಬಹುದು. ಕೆಲವು ಕಡೆ ಕಚ್ಚಾಪದಾರ್ಥಗಳು ಸಿಗುವುದರಿಂದ ಕೈಗಾರಿಕೆಗಳು ನೆಲಸಿ ಹೊಸ ಪಟ್ಟಣ ಹುಟ್ಟಿಕೊಂಡವು. ಸಿಮೆಂಟ್ ಮತ್ತು ಕಾಗದ ಕಾರ್ಖಾನೆಗಳಿಂದಾಗಿ ಭದ್ರಾವತಿ ಕೈಗಾರಿಕಾ ನಗರವಾಗಿ ಬೆಳೆದಿದೆ. ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಚಿನ್ನದ ಗಣಿ ಕೆಲಸಕ್ಕಾಗಿಯೇ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯ ನಗರ ಬೆಳೆಯಿತು. ಇತ್ತೀಚೆಗೆ ದಾಂಡೇಲಿ ಕೂಡ ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ.

**ವಿಹಾರ ಮತ್ತು ಜಾತ್ರಾ ಕೇಂದ್ರಗಳು:** ಇಂಥ ಕೇಂದ್ರಗಳೂ ಪಟ್ಟಣಗಳಾಗಿ ಬೆಳೆಯುವುದುಂಟು. ಸವದತ್ತಿಯ ಎಲ್ಲಮ್ಮನ ಗುಡ್ಡ, ನಾಯಕನಹಟ್ಟಿ–ಇವು ಉದಾಹರಣೆಗಳು. ತೀರ್ಥಹಳ್ಳಿ, ಉಡುಪಿ, ಗುಲ್ಬರ್ಗ ಮುಂತಾದವು ಮೂಲತಃ ಜಾತ್ರಾಕೇಂದ್ರಗಳೇ. ಮಹದೇಶ್ವರಬೆಟ್ಟ, ಚುಂಚನಕಟ್ಟೆ, ಗೋಕರ್ಣ, ಸುಬ್ರಹ್ಮಣ್ಯ, ಜೋಗ, ಕೆಮ್ಮಣ್ಣುಗುಂಡಿ ಗಿರಿಧಾಮ ಮೊದಲಾದ ಜಾತ್ರಾ ಮತ್ತು ವಿಹಾರಕೇಂದ್ರಗಳೂ ಪಟ್ಟಣಗಳಾಗಿ ಬೆಳೆಯುವ ಸೂಚನೆಗಳನ್ನು ತೋರುತ್ತಿವೆ.

**ಮಹಾನಗರ:** ಹತ್ತು ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರವನ್ನು ಮಹಾನಗರ ಎಂದು ಕರೆಯುವುದು ವಾಡಿಕೆ. ಬೆಂಗಳೂರು ನಮ್ಮ ರಾಜ್ಯದ ಏಕಮೇವ ಮಹಾನಗರ. 1971ರಲ್ಲಿ 16.54 ಲಕ್ಷ ಜನವಸತಿಯಿದ್ದ ಬೆಂಗಳೂರು ಈಗ 56,86,844 ಜನಸಂಖ್ಯೆ ಹೊಂದಿದ್ದು ಈ ಮಹಾನಗರ ಭಾರತದ ಮಹಾನಗರಗಳಲ್ಲಿ 5ನೆಯ ಸ್ಥಾನ ಹೊಂದಿದೆ (2001). ಇದು ಪ್ರಪಂಚದಲ್ಲಿ ಮತ್ತು ಭಾರತದಲ್ಲಿ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ನಗರಗಳಲ್ಲೊಂದು.

**ನಗರಯೋಜನೆ:** ಜನಸಂಖ್ಯೆ ಹೆಚ್ಚಿದಂತೆ ನಗರಗಳಲ್ಲಿ ಮನೆಗಳ ಅಭಾವ, ಕುಡಿಯುವ ನೀರಿನ ಕೊರತೆ, ಸಾರಿಗೆ ಸಂಪರ್ಕದಲ್ಲಿ ಅವ್ಯವಸ್ಥೆ ಮತ್ತು ಕೊಳಚೆ ಪ್ರದೇಶಗಳು ಕಂಡುಬರುವುದು ಸ್ವಾಭಾವಿಕ. ರಸ್ತೆಗಳ ಉದ್ದಕ್ಕೂ ಕೈಗಾರಿಕೆಗಳ ಸ್ಥಾಪನೆ, ಅವುಗಳ ಸುತ್ತಲೂ ಮನೆ ಕಟ್ಟುವುದು, ವಾಸದ ಮನೆಗಳ ಮಧ್ಯೆ ಕೈಗಾರಿಕಾ–ವಾಣಿಜ್ಯ ಚಟುವಟಿಕೆಗಳ ಸ್ಥಾಪನೆ ಮೊದಲಾವು ಹೆಚ್ಚಿ ನಗರಗಳ ನೈರ್ಮಲ್ಯ ಹಾಗೂ ವಾತಾವರಣ ಕೆಡುತ್ತದೆ. ಹೀಗೆ ನಗರಗಳ ನೈರ್ಮಲ್ಯ ಮತ್ತು ವಾತಾವರಣವು ಕೆಡದಂತೆ ಸೂಕ್ತ ಕ್ರಮಗಳನ್ನು ಕೈಗೊಂಡು ನಗರಗಳ ಬೆಳವಣಿಗೆಯನ್ನು ರೂಪಿಸಿ ನಿರ್ದೇಶಿಸುವ ವಿಧಾನವನ್ನು ನಗರ ಯೋಜನೆ ಎಂದು ಕರೆಯುತ್ತಾರೆ. ನಗರಗಳ ಸ್ಥೂಲ ರೂಪವನ್ನು ಸೂಚಿಸುವ ರಸ್ತೆಗಳು, ಕಟ್ಟಡಗಳು, ಸಾರ್ವಜನಿಕ ಸೌಲಭ್ಯಗಳು ಮುಂತಾದವುಗಳನ್ನು ಒದಗಿಸುವದಕ್ಕಷ್ಟೇ ಇಂಥ ಯೋಜನೆ ಸೀಮಿತಗೊಂಡಿಲ್ಲ. ನಾಗರಿಕರ ಆಸೆ ಆಕಾಂಕ್ಷೆಗಳನ್ನು ನೆರವೇರಿಸುವ ಮತ್ತು ಅವರ ಆರ್ಥಿಕ ಪ್ರಗತಿಗೆ ಬೇಕಾಗುವ ಕೈಗಾರಿಕೆ, ವಾಣಿಜ್ಯ ಇತ್ಯಾದಿಗಳ ಬೆಳವಣಿಗೆಗೆ ಸಹಾಯಕವಾಗುವ ಚಟುಚಟಿಕೆಗಳಿಗೂ ನಗರ ಯೋಜನೆ ಗಮನ ಕೊಡುತ್ತದೆ. ಜನರು ತುಂಬು ಜೀವನ ನಡೆಸಿ ಸುಖ ಸಂತೋಷದಿಂದ ವಾಸಿಸಲು ಒಳ್ಳೆಯ ವಾತಾವರಣವನ್ನು ಕಲ್ಪಿಸುವುದೇ ನಗರ ಯೋಜನೆಯ ಮುಖ್ಯ ಗುರಿ.

ನಗರ ಯೋಜನೆಯನ್ನು ಕೈಗೊಳ್ಳುವ ಮೊದಲು ಅನೇಕ ವಿಷಯಗಳನ್ನು ಸಂಗ್ರಹಿಸಬೇಕಾಗುವುದು. ಮುಖ್ಯವಾಗಿ ಮೇಲ್ಮೈ ಲಕ್ಷಣ, ಪ್ರಚಲಿತ ಭೂ ಉಪಯೋಗ, ಕಟ್ಟಡಗಳು ಇರುವ ಸ್ಥಿತಿ, ಜನಗಣತಿ ಮತ್ತು ಜನಸಾಂದ್ರತೆ, ಸಾಮಾಜಿಕ–ಆರ್ಥಿಕ ಸ್ಥಿತಿ, ಸಂಚಾರಸೌಲಭ್ಯಗಳು, ಸಾರ್ವಜನಿಕ ಆವಶ್ಯಕತೆಗಳು, ವಸತಿ ಸಮಸ್ಯೆ, ಕ್ರೀಡಾ ಮತ್ತು ವಿಹಾರ ಸೌಲಭ್ಯ, ವ್ಯಾಪಾರ ಮತ್ತು ವಾಣಿಜ್ಯ, ಕೈಗಾರಿಕೆ, ಸಾರ್ವಜನಿಕ ಉಪಯುಕ್ತ ಕಟ್ಟಡಗಳು ಇತ್ಯಾದಿಗಳ ಬಗ್ಗೆ ಸಮೀಕ್ಷೆ ನಡೆಸಬೇಕಾಗುತ್ತದೆ. ಈ ಸಮೀಕ್ಷೆಗಳಿಂದ ವಿವರಗಳನ್ನೆಲ್ಲ ಕ್ರೋಡೀಕರಿಸಿ ಇಂದಿನ ಸಮಸ್ಯೆಗಳನ್ನೂ ಮುಂದಿನ ಆವಶ್ಯಕತೆಗಳನ್ನೂ ಕಂಡುಹಿಡಿಯಬೇಕು. ಮುಂಬರುವ 20–30 ವರ್ಷಗಳಲ್ಲಿ ನಗರದ ಜನಸಂಖ್ಯೆ ಮತ್ತು ಭವಿಷ್ಯತ್ತಿನ ಈ ಜನಸಂಖ್ಯೆ ಬೇಕಾಗುವ ಜಮೀನಿನ ವಿಸ್ತರಣೆಯ ಲೆಕ್ಕಹಾಕಬೇಕು. ವಾಸಸ್ಥಳ, ಕೈಗಾರಿಕಾ ಪ್ರದೇಶ, ವಾಣಿಜ್ಯ ಪ್ರದೇಶ, ಸಾರ್ವಜನಿಕ ಉಪಯೋಗ, ಉದ್ಯಾನ, ಕ್ರೀಡಾಂಗಣ ಇತ್ಯಾದಿ ವಿವಿಧ ಉದ್ದೇಶಗಳಿಗೆ ಬೇಕಾಗಬಹುದಾದ ಭೂ ಉಪಯೋಗದ ವಲಯಗಳನ್ನು ಸೂಕ್ತಸ್ಥಳದಲ್ಲಿ ಸೂಚಿಸಬೇಕು. ಯೋಗ್ಯವಾದ ಸಂಚಾರ ವ್ಯವಸ್ಥೆಯನ್ನೂ ರೂಪಿಸಬೇಕಾಗುತ್ತದೆ. ನಗರ ಬೆಳವಣಿಗೆಗಾಗಿ ತಯಾರಿಸುವ ಬೃಹತ್ ಯೋಜನೆಯಲ್ಲಿ ಮುಂದೆ ಕೈಕೊಳ್ಳಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಶಿಫಾರಸುಗಳನ್ನು ನಮೂದಿಸಿರಬೇಕು. ಅಲ್ಲದೆ ಭೂ ಉಪಯೋಗದ ಆಯಾ ವಲಯಗಳಲ್ಲಿ ಅಭಿವೃದ್ಧಿಯನ್ನು ನಿಯಂತ್ರಿಸಲು ವಲಯ ನಿಯಂತ್ರಣ ಅಧಿನಿಯಮಗಳನ್ನು ರಚಿಸಬೇಕು.

ಕರ್ನಾಟಕ ರಾಜ್ಯದಲ್ಲಿ ಈ ಹಿಂದೆ ನಗರಯೋಜನೆಯನ್ನು ವಾಸ್ತುಶಿಲ್ಪಿಗಳೂ ನೋಡಿಕೊಳ್ಳುತ್ತಿದ್ದರು. 1959ರಲ್ಲಿ ಪ್ರತ್ಯೇಕ ನಗರಯೋಜನಾ ಇಲಾಖೆ ಅಸ್ತಿತ್ವಕ್ಕೆ ಬಂತು. 3ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಲಾಖೆಯಲ್ಲಿ 10 ಘಟಕಗಳು, 4ನೆಯ ಪಂಚವಾರ್ಷಿಕ ಯೋಜನೆಯಲ್ಲಿ 5 ಘಟಕಗಳು, 5ನೆಯ ಪಂಚವಾರ್ಷಿಕ ಯೋಜನೆಯಲ್ಲಿ 4 ಘಟಕಗಳು–ಹೀಗೆ ಎಲ್ಲ ಜಿಲ್ಲೆಗಳಲ್ಲೂ ಸ್ಥಾಪಿತವಾದವು. ಪ್ರಸ್ತುತ ಇಲಾಖೆಯ ಕೇಂದ್ರ ಕಚೇರಿ ಬೆಂಗಳೂರಿನಲ್ಲಿದ್ದು ಪ್ರತಿ ಜಿಲ್ಲೆಯಲ್ಲಿ ಇಲಾಖೆಯ ಶಾಖೆಗಳಿವೆ. ಇವು ನಗರಯೋಜನಾ ಘಟಕಗಳಾಗಿರುವುದಲ್ಲದೆ ಪ್ರಾದೇಶಿಕ ಯೋಜನಾ ಘಟಕಗಳೂ ಆಗಿವೆ.

ನಾಗರಿಕ ಹಿತಸಾಧನೆ ನಗರ ಯೋಜನೆಗಳ ಅಂತಿಮ ಗುರಿಯಾದ್ದರಿಂದ ಈ ಯೋಜನೆಗಳಿಗೆ ಅನುಗುಣವಾಗಿ ವ್ಯಕ್ತಿಯು ತನ್ನ ಜಮೀನನ್ನು ಉಪಯೋಗಿಸುವ ಹಕ್ಕಿನ ಮೇಲೆ ಕೆಲಮಟ್ಟಿಗೆ ನಿರ್ಬಂಧ ವಿಧಿಸಬೇಕಾಗುತ್ತದೆ. ಆದಕಾರಣ ಯೋಜನಾ ಸಂಸ್ಥೆಗಳಿಗೆ ಶಾಸನ ಮುಖೇನ ಸಾಕಷ್ಟು ಅಧಿಕಾರಗಳನ್ನು ವಹಿಸಿಕೊಡುವುದು ಅವಶ್ಯ. 1961ರಲ್ಲಿ ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ವ್ಯಾಪಕ

ಶಾಸನವೊಂದನ್ನು ಸಿದ್ಧಗೊಳಿಸಿದ ಕರ್ನಾಟಕ ಈ ದಿಶೆಯಲ್ಲಿ ಪ್ರಥಮ ಹೆಜ್ಜೆಯಿಟ್ಟ ರಾಜ್ಯ. ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ಕಾನೂನು ಎಂಬ ಈ ಅಧಿನಿಯಮ 1965 ಜನವರಿ 15ರಿಂದ ಜಾರಿಗೆ ಬಂತು. ಈ ಕಾಯಿದೆಯ ರೀತ್ಯಾ 'ರಾಜ್ಯ ನಗರಯೋಜನಾ ಮಂಡಲಿ' ಯನ್ನೂ ಅನೇಕ ಪ್ರದೇಶಗಳಿಗೆ ಯೋಜನಾ ಪ್ರಾಧಿಕಾರ ವ್ಯವಸ್ಥೆಗಳನ್ನೂ ನಿರ್ಮಿಸಲಾಗಿದೆ. ರಾಜ್ಯ ನಗರ ಯೋಜನಾ ಮಂಡಲಿಯು ಯೋಜನೆ ಮತ್ತು ಅಭಿವೃದ್ಧಿಯನ್ನು ಕುರಿತು ಮತ್ತು ಇದಕ್ಕೆ ಸಂಬಂಧಪಟ್ಟ ಕಾರ್ಯನೀತಿ ಮತ್ತು ಸೂತ್ರಗಳ ವಿಚಾರವಾಗಿ ಸರ್ಕಾರಕ್ಕೂ ಯೋಜನಾ ಪ್ರಾಧಿಕಾರ ವ್ಯವಸ್ಥೆಗಳಿಗೂ ಸಲಹೆ ನೀಡುವ ರಾಜ್ಯಮಟ್ಟದ ಸಂಸ್ಥೆಯಾಗಿದೆ. ಯೋಜನಾ ಪ್ರಾಧಿಕಾರ ವ್ಯವಸ್ಥೆಗಳು ಆಯಾ ಪ್ರದೇಶಕ್ಕೆ ಸಂಬಂಧಪಟ್ಟ ಯಾವುದೇ ಅಭಿವೃದ್ಧಿ ಯೋಜನೆಯನ್ನು ಮತ್ತು ಕಾರ್ಯಕ್ರಮಗಳನ್ನು ಪರಿಶೀಲಿಸಿ ಅಂತಿಮ ರೂಪರೇಖೆ ತಯಾರಿಸಲು ರಚಿಸಲ್ಪಟ್ಟ ಸ್ವತಂತ್ರ ಸಂಸ್ಥೆಗಳು.

ಸಂಬಂಧಪಟ್ಟ ನಗರ, ಪಟ್ಟಣ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನೊಳಗೊಂಡು ಅಭಿವೃದ್ಧಿಗೊಳಿಸಬೇಕಾಗಿರುವ ಸ್ಥಳೀಯ ಯೋಜನಾ ಪ್ರದೇಶವನ್ನು ಶಾಸನಬದ್ಧವಾಗಿ ನಿರ್ಧರಿಸಿ ಯೋಜನಾ ಪ್ರಾಧಿಕಾರ ವ್ಯವಸ್ಥೆಯನ್ನು ನೇಮಿಸಬೇಕಾಗುತ್ತದೆ. ಶೀಘ್ರವಾಗಿ ಬೆಳೆಯುತ್ತಿರುವ ಕೆಳಕಂಡ ಪ್ರದೇಶಗಳಿಗೆ ಇಂಥ ಪ್ರಾಧಿಕಾರ ವ್ಯವಸ್ಥೆಗಳನ್ನು ರಚಿಸಲಾಗಿದೆ: (1) ಬೆಂಗಳೂರು ಮಹಾನಗರ (2) ಮೈಸೂರು (3) ಮಂಗಳೂರು (4) ಹುಬ್ಬಳ್ಳಿ-ಧಾರವಾಡ (5) ಬೆಳಗಾಂವಿ (6) ಗುಲ್ಬರ್ಗ (7) ದಾಂಡೇಲಿ ಪ್ರದೇಶ (8) ಶಿವಮೊಗ್ಗ-ಭದ್ರಾವತಿ ಪ್ರದೇಶ (9) ದಾವಣಗೆರೆ (10) ಕೋಲಾರ ಚಿನ್ನದ ಗಣಿ ಪ್ರದೇಶ (11) ವಿಜಯನಗರ ಉಕ್ಕು ಕಾರ್ಖಾನೆ ಪ್ರದೇಶ, ಹಾಸನ. ಇವುಗಳಲ್ಲದೆ ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆ ಇರುವ ಪ್ರತಿಯೊಂದು ನಗರಕ್ಕೂ ನಗರಾಭಿವೃದ್ಧಿ ಸಮಿತಿ ರಚಿಸುವ ಕಾರ್ಯ ನೀತಿಯನ್ನು ಸರ್ಕಾರ ಕೈಗೊಂಡಿದೆ. ಇದರ ಪರಿಣಾಮವಾಗಿ ರಾಜ್ಯದ ಇನ್ನುಳಿದ ಜಿಲ್ಲಾ ಕೇಂದ್ರಗಳಿಗೂ ಹಾಗೂ 50 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಿರುವ ನಗರ ಪ್ರದೇಶಗಳಿಗೂ ಯೋಜನಾಪ್ರಾಧಿಕಾರಗಳನ್ನು ಹಂತ ಹಂತವಾಗಿ ರಚಿಸಲಾಗುತ್ತದೆ. ನಗರಯೋಜನೆ ಇಲಾಖೆಯು ಯೋಜನಾ ಪ್ರಾಧಿಕಾರ ವ್ಯವಸ್ಥೆಗಳಿಗೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವ ಹಾಗೂ ಮುಂದಿನ ಕಾರ್ಯಕ್ರಮಗಳನ್ನು ನಿರ್ವಹಿಸುವ ಕೆಲಸದಲ್ಲಿ ನೆರವು ನೀಡುತ್ತದೆ.

ಯಾವುದೇ ಪ್ರದೇಶಕ್ಕೆ ಸಂಬಂಧಪಟ್ಟ ಸಮಗ್ರ ಸವಿವರ ಅಭಿವೃದ್ಧಿ ಯೋಜನೆಯನ್ನು ಮೂರು ಹಂತಗಳಲ್ಲಿ ತಯಾರಿಸಲಾಗುತ್ತದೆ. ಯೋಜನಾ ಪ್ರದೇಶಕ್ಕೊಳಪಟ್ಟ ಭೂಮಿಯ ಉಪಯೋಗವನ್ನು ಪೂರ್ವಭಾವಿಯಾಗಿ ನಿಯಂತ್ರಿಸುವ ಮತ್ತು ಕ್ರಮಬದ್ಧಗೊಳಿಸುವ ಪ್ರಾರಂಭಿಕ ಅಥವಾ ಸ್ಥೂಲ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದೇ ಪ್ರಥಮ ಹಂತ. ಆ ಬಳಿಕ ಸವಿಸ್ತಾರ ಭೂ ಬಳಕೆಯನ್ನು ಸೂಚಿಸುವ ಹಾಗೂ ಮುಂದಕ್ಕೆ ಕೈಗೊಳ್ಳಬೇಕಾದ ಅಭಿವೃದ್ಧಿಗಳ, ಸುಧಾರಣೆಗಳ ವಿವರಣೆಗಳನ್ನೊಳಗೊಂಡ 'ವ್ಯಾಪಕ ಅಭಿವೃದ್ಧಿ ಯೋಜನೆ' ತಯಾರಿಸುವುದು ಎರಡನೆಯ ಹಂತ. ವ್ಯಾಪಕ ಅಭಿವೃದ್ಧಿ ಯೋಜನೆಯಲ್ಲಿ ಒಳಗೊಂಡಿರುವ ವಿವಿಧ ಅಭಿವೃದ್ಧಿ ಸೂಚನೆಗಳನ್ನು ಕಾರ್ಯಗತಗೊಳಿಸುವ ಉದ್ದೇಶದ ಸಲುವಾಗಿ ನಗರದ ಬೇರೆ ಬೇರೆ ಭಾಗಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ತಯಾರಿಸುವದೇ ಕೊನೆಯ ಹಂತ.

ಈಗಾಗಲೇ ಬೆಂಗಳೂರು ಮಹಾನಗರ, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾಂವಿ, ದಾಂಡೇಲಿ ಪ್ರದೇಶ, ಗುಲ್ಬರ್ಗ, ಶಿವಮೊಗ್ಗ-ಭದ್ರಾವತಿ ಪ್ರದೇಶಗಳ ಸ್ಥೂಲ ಅಭಿವೃದ್ಧಿ ಯೋಜನೆಗಳೂ ಶಾಸನಾನುಬದ್ಧವಾಗಿ ಸರ್ಕಾರದ ಮನ್ನಣೆ ಪಡೆದಿದ್ದು ಅವುಗಳನ್ನು ಜಾರಿಯಲ್ಲಿ ತರಲಾಗಿದೆ. ದಾವಣಗೆರೆ ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳ ಸ್ಥೂಲಾಭಿವೃದ್ಧಿ ಯೋಜನೆಗಳು ಸಿದ್ಧವಾಗಿದೆ. ಅಲ್ಲದೆ ಇವೆಲ್ಲ ಪ್ರದೇಶಗಳ ವ್ಯಾಪಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದರ ಪ್ರಗತಿ ವಿವಿಧ ಘಟ್ಟಗಳಲ್ಲಿವೆ.

ಯೋಜನಾ ಪ್ರಾಧಿಕಾರ ವ್ಯವಸ್ಥೆಗಳನ್ನು ನಿಯಮಿಸದ ಇನ್ನುಳಿದ ನಗರಗಳ ಯೋಜನಾ ಅಭಿವೃದ್ಧಿಯನ್ನೂ ಸಾಧಿಸಲು ಬೇರೆ ಬೇರೆ ನಗರ ಪ್ರದೇಶಗಳ, ಪ್ರವಾಸಿ ಕೇಂದ್ರಗಳ, ಯಾತ್ರಾಕ್ಷೇತ್ರಗಳ, ಗಿರಿಧಾಮಗಳ, ಉಪನಗರಗಳ ಸಮೀಕ್ಷೆಯನ್ನು ಕೈಗೊಂಡು ಅವಶ್ಯವಿರುವ ಅಭಿವೃದ್ಧಿ ಯೋಜನೆಗಳನ್ನೂ ನಗರ ಬಡಾವಣೆ ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನೂ ಸಿದ್ಧಪಡಿಸಲಾಗುತ್ತಿದೆ. ಈಗಾಗಲೇ ರಾಜ್ಯದ 30 ನಗರಗಳಿಗೆ ಇಂಥ ಕರಡು ಅಭಿವೃದ್ಧಿ ಯೋಜನೆಗಳು ಸಿದ್ಧವಾಗಿವೆ. ನಗರ ಯೋಜನಾ ಸಮಿತಿಗಳು ರಚನೆಯಾಗಿವೆ. ಅಲ್ಲದೆ ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಮಂಡಳಿಗಳು, ರಾಜ್ಯಗೃಹನಿರ್ಮಾಣಮಂಡಳಿ, ಗೃಹನಿರ್ಮಾಣ ಸಹಕಾರ ಸಂಸ್ಥೆಗಳು ಮತ್ತು ಇತರ ಅಭಿವೃದ್ಧಿ ಸಂಸ್ಥೆಗಳು ಸಿದ್ಧಗೊಳಿಸುವ ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆ.

ಪಟ್ಟಣ ಪ್ರದೇಶದಲ್ಲಿ, ಮುಖ್ಯವಾಗಿ ಮಹಾನಗರದಲ್ಲಿ ಸಂಚಾರ ಸಾರಿಗೆಯ ಪ್ರಾಧಾನ್ಯತೆಯು ಹೆಚ್ಚಿರುತ್ತದೆ. ಬೆಂಗಳೂರು ಮಹಾನಗರದಲ್ಲಿ ಅನೇಕ ಸಂಚಾರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಗಳನ್ನು ಅರಿತುಕೊಂಡು ಅವುಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ವ್ಯಾಪಕವಾದ ಸಂಚಾರ ಸಾರಿಗೆ ಅಧ್ಯಯನವನ್ನು ಕೈಕೊಂಡು ವಿವರವಾದ ವರದಿಗಳನ್ನು ತಯಾರಿಸಲಾಗಿದೆ. ಇದರ ಫಲವಾಗಿ ಮಹಾನಗರದ ಅನೇಕ ಕಡೆ ಫ್ಲೈಓವರ್‌ಗಳು, ವರ್ತುಲ ರಸ್ತೆಗಳು ರಚನೆಯಾಗಿವೆ. ಮೈಸೂರು ನಗರದಲ್ಲೂ ವರ್ತುಲ ರಸ್ತೆ ನಿರ್ಮಾಣವಾಗಿದೆ. ದಾಂಡೇಲಿ ಸಂಪನ್ಮೂಲ ಪ್ರದೇಶ ಮತ್ತು ತುಂಗಭದ್ರಾ ನದಿಕಣಿವೆ ಪ್ರದೇಶಕ್ಕೂ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಗೊಳಿಸಲಾಗಿದೆ. **(ಕೆ.ಎಸ್.ಆರ್.ಎ.)**

**ಪಟ್ಟದಕಲ್ಲು**: ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಪೂರ್ವಕ್ಕೆ 22 ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಎಡದಡದಲ್ಲಿರುವ ಗ್ರಾಮ. ಜನಸಂಖ್ಯೆ 2,482. ಹಿಂದೆ ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಪ್ರಸಿದ್ಧವಾಗಿದ್ದ ಐತಿಹಾಸಿಕ ಸ್ಥಳ. ಇಲ್ಲಿರುವ ಬಾದಾಮಿಯ ಚಳುಕ್ಯರ ಕಾಲದ ದೇವಾಲಯಗಳಿಂದ ಪ್ರಾಮುಖ್ಯತೆ ಪಡೆದಿದ್ದು ಪ್ರವಾಸಿಕೇಂದ್ರವಾಗಿ ಬೆಳೆಯುತ್ತಿದೆ. ಯುನೆಸ್ಕೊ ಸಂಸ್ಥೆ ಇದನ್ನು ಪ್ರಪಂಚದ ಐತಿಹಾಸಿಕ ಸ್ಮಾರಕವೆಂದು ಘೋಷಿಸಿದೆ. ಇಲ್ಲಿಗೆ ಬಾದಾಮಿ ಮತ್ತು ಐಹೊಳೆಗಳಿಂದ ಉತ್ತಮ ಮಾರ್ಗ ಸಂಪರ್ಕವಿದೆ.

ಪಟ್ಟದಕಲ್ಲಿನ ಪ್ರದೇಶ ಪ್ರಾಗಿತಿಹಾಸದ ಕಾಲದಿಂದಲೂ ಜನವಸತಿಯುಳ್ಳದ್ದಾಗಿತ್ತು. ಇಲ್ಲಿನ ಮಲಪ್ರಭಾನದಿಯ ದಂಡೆಯಲ್ಲಿ ಹಳೆಯ ಶಿಲಾಯುಗದ ಶಿಲಾಯುಧಗಳು ದೊರಕಿವೆ. ಈ ಗ್ರಾಮಕ್ಕೆ ಒಂದು ಕಿಮೀ ಪಶ್ಚಿಮದಲ್ಲಿ ಬಾಚನಗುಡ್ಡ ಗ್ರಾಮದ ಬಳಿ ಬೃಹತ್ ಶಿಲಾಸಮಾಧಿಗಳೂ ಅಲ್ಲಿಂದ ಸ್ವಲ್ಪ ದೂರದಲ್ಲಿ ಆದಿಚಾರಿತ್ರಿಕ ಕಾಲದ ಒಂದು ನೆಲೆಯೂ ಬೆಳಕಿಗೆ ಬಂದಿವೆ. ಚಳುಕ್ಯ ಪೂರ್ವ (ಬಹುಶಃ ಸಾತವಾಹನ) ಕಾಲಕ್ಕೆ ಸಂಬಂಧಿಸಿದ ಕೆಲವು ಇಟ್ಟಿಗೆಯ ಕಟ್ಟಡಗಳ ಅವಶೇಷಗಳೂ ಪಟ್ಟದಕಲ್ಲಿನಲ್ಲಿ ದೊರಕಿವೆ. ಸಂಗಮೇಶ್ವರ ದೇವಾಲಯ ಮತ್ತು

ಜೈನದೇವಾಲಯದ ಬಳಿಯಲ್ಲಿ ಇತ್ತೀಚೆಗೆ ನಡೆಸಿದ ಉತ್ಖನನಗಳಿಂದ ಈ ಕಟ್ಟಡಗಳು ಬೆಳಕಿಗೆ ಬಂದುವು. ಕ್ರಿ.ಶ.2ನೆಯ ಶತಮಾನದಲ್ಲಿದ್ದ ಗ್ರೀಕ್ ಭೂಗೋಳಕಾರ ಟಾಲೆಮಿ ವ್ಯಾಪಾರ ಸ್ಥಳಗಳಲ್ಲಿ ಒಂದೆಂದು ಹೆಸರಿಸಿರುವ ಪೆತರ್ಗಲ್ ಈ ಪಟ್ಟದಕಲ್ಲು ಎಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ.

ಪಟ್ಟದಕಲ್ಲು ವಿಶೇಷ ಪ್ರಾಮುಖ್ಯತೆಯನ್ನು ಪಡೆದದ್ದು ಬಾದಾಮಿಯ ಚಳುಕ್ಯರ ಕಾಲದಲ್ಲಿ; ಅದರಲ್ಲೂ 7–8ನೆಯ ಶತಮಾನಗಳಲ್ಲಿ. ಚಳುಕ್ಯ ವಿನಯಾದಿತ್ಯನ ಒಂದು ಶಾಸನ ಇದನ್ನು ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಕರೆದಿದೆ. ಈ ಪ್ರದೇಶದ ಸುತ್ತ ನಸುಗೆಂಪು ಬಣ್ಣದ ಕಲ್ಲುಗುಡ್ಡಗಳು ಇರುವುದರಿಂದ ಕಿಸುವೊಳಲ್ ಎಂದೂ ಚಳುಕ್ಯ ಸಮ್ರಾಟರು ಇಲ್ಲಿ ತಮ್ಮ ಪಟ್ಟಬಂಧ ಮಹೋತ್ಸವವನ್ನು ನೆರವೇರಿಸಿ ಕೊಳ್ಳುತ್ತಿದ್ದರಿಂದ ಪಟ್ಟದ ಕಿಸುವೊಳಲ್ ಎಂದೂ ಹೆಸರಾಗಿದ್ದಂತೆ ತೋರುತ್ತದೆ. ಇಲ್ಲಿ ರಾಜರು ಪಟ್ಟಾಭಿಷಿಕ್ತರಾಗುತ್ತಿದ್ದ ವಿಷಯ 11–



ವಿರೂಪಾಕ್ಷ ದೇವಾಲಯ

12ನೆಯ ಶತಮಾನದ ಶಾಸನಗಳಲ್ಲಿ ಸಿಂಗರಾಜಪುರಾಣ(ಸು. 1500) ಮತ್ತು ಹಮ್ಮೀರ ಕಾವ್ಯ (ಸು. 1540) ಈ ಗ್ರಂಥಗಳಲ್ಲಿ ವರ್ಣಿತವಾಗಿದೆ. ನದಿಯ ದಂಡೆಯ ಒಂದು ಎತ್ತರವಾದ ಬಯಲಿನಲ್ಲಿ ಚಳುಕ್ಯರ ಕಾಲದ್ದೆಂದು ಊಹಿಸಲಾಗಿರುವ ಮಣ್ಣಿನ ಪಾತ್ರೆಗಳೂ ಕಲ್ಲಿನ ಕಂಬಗಳೂ ದೊರಕಿದ್ದು, ಆ ಬಯಲೇ ಪಟ್ಟಬಂಧದ ಸಭಾಮಂಟಪವಾಗಿರಬಹುದೆಂದು ತರ್ಕಿಸಲಾಗಿದೆ. ಇಲ್ಲಿ ಮಲಪ್ರಭಾ ನದಿ ಉತ್ತರಗಾಮಿಯಾಗಿರುವುದರಿಂದ ಈ ಸ್ಥಳ ತೀರ್ಥಕ್ಷೇತ್ರವೆಂದು ಪರಿಗಣಿತವಾಗಿದ್ದು, ಸಮೀಪದ ರಾಜಧಾನಿ ಬಾದಾಮಿಯಲ್ಲಿದ್ದ ಅರಸರು ಇಲ್ಲಿ ಪಟ್ಟಬಂಧೋತ್ಸವವನ್ನು ಮಾಡಿಕೊಳ್ಳುತ್ತಿದ್ದರೆ ಆಶ್ಚರ್ಯವಿಲ್ಲ. 1162ರ ಶಾಸನವೊಂದು ಕಿಸುವೊಳಲನ್ನು ದಕ್ಷಿಣದ ಕಾಶಿಯೆಂದು ಹೇಳಿದೆ. ಈ ಊರು ಕೆಲವು ಚಳುಕ್ಯ ಅರಸರ ಕಾಲದಲ್ಲಿ ರಕ್ತಪುರ (ಕಿಸುವೊಳಲ್‌ನ ಸಂಸ್ಕೃತ ರೂಪ) ಎಂಬ ಅಭಿಧಾನದಿಂದ ಒಂದು ರಾಜಧಾನಿಯಾಗಿತ್ತೆಂದೂ ಕೆಲವು ಕಾಲ ನೆಲೆವೀಡಾಗಿತ್ತೆಂದೂ ಅನೇಕ ಚಳುಕ್ಯ ಶಾಸನಗಳಿಂದ ತಿಳಿದುಬರುತ್ತದೆ. ಇದೇ ಕಾರಣದಿಂದಾಗಿ ಈ ಊರಿನಲ್ಲಿ ತತ್ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಿತವಾದುವು.

ಅನಂತರ ರಾಷ್ಟ್ರಕೂಟರ ಕಾಲದಲ್ಲೂ ಈ ಊರು ಪ್ರಸಿದ್ಧ ಸ್ಥಳವಾಗಿರಬೇಕೆಂಬುದು ಕವಿರಾಜಮಾರ್ಗದಲ್ಲಿ ತಿರುಳ್ಗನ್ನಡ ಸೀಮೆಯನ್ನು ವರ್ಣಿಸುವ ಪಟ್ಟಿಯಲ್ಲಿ ಬರುವ ಕಿಸುವೊಳಲ ಹೆಸರಿನಿಂದ ಊಹಿಸಬಹುದಾಗಿದೆ. ರಾಷ್ಟ್ರಕೂಟ ಕಲಿವಲ್ಲಭನ ಕಾಲದ ಶಾಸನವೊಂದು ವಿರೂಪಾಕ್ಷ ದೇವಾಲಯದ ಉತ್ತರ ದಿಶೆಯ ಮುಖಮಂಟಪದಲ್ಲಿ ಇನ್ನೂ ಇದ್ದು ಈ ಹೇಳಿಕೆಗೆ ಋಜುತೆಯನ್ನೊದಗಿಸುತ್ತದೆ. ಮುಂದೆ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಊರು ಕಿಸುಕಾಡು 70 ಎಂಬ ಚಿಕ್ಕ ಪ್ರಾಂತ್ಯದ ಮುಖ್ಯಸ್ಥಳವಾಗಿತ್ತು. ಆ ಕಾಲದ ಕೆಲವು ಶಾಸನಗಳಲ್ಲಿ ಅಂದಿನ ರಾಜ ಮಾಂಡಳಿಕರು ಇಲ್ಲಿನ ದೇವಾಲಯಗಳಿಗೆ ದತ್ತಿಕೊಟ್ಟ ವಿವರಗಳು ದೊರಕುತ್ತವೆ. 2ನೆಯ ಸೋಮೇಶ್ವರನ (ಭುವನೈಕಮಲ್ಲ) 1070ರ ಶಾಸನವೊಂದರಲ್ಲಿ ಆತ ಕಿಸುವೊಳಲಿನ ಮೂಲಸ್ಥಾನ ದೇವರಿಗೆ 12 ಮತ್ತರು ಭೂಮಿಯನ್ನು ದತ್ತಿ ಬಿಟ್ಟ ವಿಷಯ ಬರೆದಿದೆ. ಪಟ್ಟದಕಲ್ಲಿನಲ್ಲಿ ಪಟ್ಟಾಭಿಷೇಕೋತ್ಸವವು ನಡೆಯುತ್ತಿದ್ದುದನ್ನು ತಿಳಿಸಿದೆ. 1162ರ ಶಾಸನವೊಂದರಿಂದ ಈ ಭೂಭಾಗ ಎರಂಬರಗೆಯ ಸಿಂದರ ಆಡಳಿತಕ್ಕೊಳಪಟ್ಟುದು ಸ್ಪಷ್ಟವಿದೆ. ಆ ಮರದ ಮಹಾಮಂಡಲೇಶ್ವರ 2ನೆಯ ಚಾವುಂಡರ ಪತ್ನಿ ದೇಮಲದೇವಿಯ ಪುತ್ರ ಆಚುಗಿ ಪಟ್ಟಣದ ಕಿಸುವೊಳಲನ್ನು ಕಲಿಮಾರವೃತ್ತಿಯಿಂದ ವಿಶ್ವೇಶ್ವರನಿಗೆ ಸಮನೆನಿಸಿದ ವಿಜಯೇಶ್ವರ ದೇವರಿಗೆ 300 ಮತ್ತರು ಭೂಮಿಯನ್ನು ದತ್ತಿ ಬಿಟ್ಟಳು. ಕಲ್ಯಾಣದ ಚಾಳುಕ್ಯರ ಕಾಲದ ಅನಂತರ ಪಟ್ಟದಕಲ್ಲು ತನ್ನ ಉತ್ತಮಸ್ಥಿತಿಯನ್ನು ಕಳೆದುಕೊಳ್ಳಲಾರಂಭಿಸಿ ಕ್ರಮೇಣ ಈಗಿನ ಚಿಕ್ಕ ಗ್ರಾಮವಾಗಿ ಪರಿಣಮಿಸಿತು.

ಪಟ್ಟದಕಲ್ಲಿನ ಹಿರಿಮೆಗರಿಮೆಗಳಿಗೆ ಕಾರಣ ಇಲ್ಲಿನ ದೇವಾಲಯಗಳು. ಈ ದೇವಾಲಯಗಳು ಕರ್ನಾಟಕದ ವಾಸ್ತುಶಿಲ್ಪ ಬೆಳೆವಣಿಗೆಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಭಾರತದಲ್ಲಿ ಕಂಡು ಬರುವ ಎರಡು ಪ್ರಮುಖ ವಾಸ್ತು ಪ್ರಕಾರಗಳಾದ ದ್ರಾವಿಡ ಮತ್ತು ನಾಗರ ರೀತಿಯ ದೇವಾಲಯಗಳು ಒಟ್ಟಿಗೆ ಈ ಸ್ಥಳದಲ್ಲಿ ಕಂಡುಬರುವುದು ಇಲ್ಲಿಯ ವಿಶೇಷ. ಸೌಂದರ್ಯ ದೃಷ್ಟಿಯಿಂದಲೂ ಈ ದೇವಾಲಯಗಳು ಉನ್ನತಮಟ್ಟದವು. ಹಿಂದೆ ಪಟ್ಟದಕಲ್ಲು ತೀರ್ಥಕ್ಷೇತ್ರವೆಂದೂ ಹೆಸರುಗಳಿಸಿತ್ತಾಗಿ ಈ ದೇವಾಲಯಗಳು ಬಹುಜನರನ್ನು ಆಕರ್ಷಿಸುತ್ತಿದ್ದಿರಬೇಕು. ಇಲ್ಲಿರುವ ಸುಮಾರು ಹತ್ತು ದೇವಾಲಯಗಳು ಬಹುಪ್ರಸಿದ್ಧ. ಅವುಗಳಲ್ಲಿ ಒಂಬತ್ತು ಶೈವ, ಒಂದು ಜೈನ ಜಿನಾಲಯ ಊರ ಹೊರಗೆ ಬಾದಾಮಿಯ ದಾರಿಯಲ್ಲಿದೆ. ಉಳಿದ ಒಂಬತ್ತು ದೇವಾಲಯಗಳೂ ನದಿಯ ದಂಡೆಗುಂಟ ದಕ್ಷಿಣದಿಂದ ಉತ್ತರಕ್ಕೆ ಹಬ್ಬಿಕೊಂಡಿವೆ.

ಪಟ್ಟದಕಲ್ಲಿನ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯ ಬಹು ಸುಂದರವೂ ದೊಡ್ಡದೂ ಆದ ಕೃತಿ. ಚಳುಕ್ಯ ಇಮ್ಮಡಿ ವಿಕ್ರಮಾದಿತ್ಯ (733–45) ಮೂರು ಸಲ ಪಲ್ಲವರನ್ನು ಸೋಲಿಸಿ ಕಂಚಿಯನ್ನು ಆಕ್ರಮಿಸಿಕೊಂಡಿದ್ದರ ಜ್ಞಾಪಕಾರ್ಥವಾಗಿ ಅವನ ಒಬ್ಬ ರಾಣಿ ಲೋಕಮಹಾದೇವಿ ಈ ದೇವಾಲಯವನ್ನೂ ಇನ್ನೊಬ್ಬ ರಾಣಿ ಈ ದೇವಾಲಯದ ಸಮೀಪದಲ್ಲಿರುವ ಮಲ್ಲಿಕಾರ್ಜುನ ದೇವಾಲಯವನ್ನೂ ಕಟ್ಟಿಸಿದರೆಂದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಈಗಿನ ವಿರೂಪಾಕ್ಷ ದೇವಾಲಯದ ಪೂರ್ವದ ಹೆಸರು ಲೋಕೇಶ್ವರ ಅಥವಾ ಲೋಕಪಾಲೇಶ್ವರ, 67 ಮೀ ಉದ್ದ ಮತ್ತು 32 ಮೀ ಅಗಲವಾಗಿ ಸುಮಾರು ಆಯತಾಕಾರವಾದ ಪ್ರಾಕಾರದಿಂದ ಆವೃತವಾದ ಅಂಗಳದ ಮಧ್ಯದಲ್ಲಿ ದೇವಾಲಯದ ಮೂಲ ಘಟಕವಿದೆ. ಪ್ರಾಕಾರದ ಗೋಡೆಗೆ ಸೇರಿದಂತೆ ಒಳಗೆ ಚಿಕ್ಕ ಗುಡಿಗಳೂ ಪೂರ್ವ ಮತ್ತು ಪಶ್ಚಿಮದಲ್ಲಿ ಪ್ರವೇಶದ್ವಾರಗಳೂ ಇವೆ. ಪೂರ್ವದ ದ್ವಾರ ಮಂಟಪದಂತಿದ್ದ ನದಿಯೆಡೆಗೆ ತೆರೆದಂತಿದೆ. ಈ ದ್ವಾರದ ಮೇಲೆ ಕುಳ್ಳಾದ ಶಿಲಾಶಿಖರವಿದ್ದು, ಇದು ಮುಂದೆ ದಕ್ಷಿಣಭಾರತದಲ್ಲಿ ಬೆಳೆದ ಮಹಾದ್ವಾರಗೋಪುರಗಳ ಮೊಳಕೆಯೋ ಪಾದಿಯಲ್ಲಿದೆ. ಈ ದ್ವಾರದ ಕಂಬಗಳ ಮೇಲೆ ದಂಪತಿಗಳ ಸುಂದರ ಉಬ್ಬುಶಿಲ್ಪಗಳಿವೆ.

ಇಲ್ಲಿಂದ ಒಳಗೆ ನಡೆಯುತ್ತಿದ್ದಂತೆಯೇ ಒಂದು ನಂದಿಮಂಟಪವಿದೆ. 7.5ಮೀ ಉದ್ದಗಲವಾಗಿ ಸಮಚತುರ್ಭುಜಾಕಾರದ ತಳವಿನ್ಯಾಸವಿರುವ ಈ ಮಂಟಪದಲ್ಲಿ 2.5ಮೀ ಎತ್ತರದ ಜಗುಲಿಯ ಮೇಲೆ ನಾಲ್ಕು ದೊಡ್ಡ ದುಂಡಗಿನ ಕಂಬಗಳು ಚಾವಣಿಯನ್ನು ಹೊತ್ತು ನಿಂತಿವೆ. ಜಗುಲಿಯ ಬದಿಯಲ್ಲಿ ಸುತ್ತಲೂ ಆನೆಗಳ ಮತ್ತು ಕುಬ್ಜರ ಉಬ್ಬುಶಿಲ್ಪಗಳಿವೆ. ಅಲ್ಲಲ್ಲಿ ಸುಂದರ ಮಿಥುನಗಳನ್ನು ಮತ್ತು ಕಿನ್ನರ ಜೊತೆಗಳನ್ನು ಕೆತ್ತಿದ್ದಾರೆ. ಕಮಲವನ್ನು ಕೈಯಲ್ಲಿ ಹಿಡಿದ ಓರ್ವ ಸ್ತ್ರೀ, ಅಂಕುಶವನ್ನು ಹಿಡಿದ ಇಂದ್ರಾಣಿ, ಶುಕಭಾಷಿಣಿ ಇವರುಗಳ ಶಿಲ್ಪಗಳೂ ಬಹು ಸುಂದರವಾಗಿದ್ದು ಉಲ್ಲೇಖಾರ್ಹವಾಗಿವೆ.

ನಂದಿಮಂಟಪದಿಂದ 5ಮೀ ಅಂತರದಲ್ಲಿ ದೇವಾಲಯದ ಮೂಲ ಘಟಕವಿದೆ. ಇದರಲ್ಲಿ ಪ್ರದಕ್ಷಿಣಾಪಥದಿಂದ ಆವೃತವಾದ ಗರ್ಭಗುಡಿ ಮತ್ತು ಅಂತರಾಳ, ದೊಡ್ಡ ಸಭಾಮಂಟಪ ಮತ್ತು ಈ ಮಂಟಪದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಶೆಗಳಲ್ಲಿ ಮುಖಮಂಟಪಗಳು ಎತ್ತಿಹಿಡಿದಂತಿರುವ ಆನೆ, ಸಿಂಹಗಳ ಶಿಲ್ಪಗಳಿರುವ ಎತ್ತರದ ಅಧಿಷ್ಠಾನ, ಮಂಟಪವನ್ನು ಏರಲು ಮುಂದೆ ಪಾವಟಿಗೆ, ಮೇಲೆ ವಿಸ್ತಾರವಾದ ಮಂಟಪ ಭಾಗವೂ ಇಕ್ಕೆಲಗಳಲ್ಲಿ ಕಕ್ಷಾಸನ ಮುಂದೆ ಎತ್ತರವಾದ ಸಹಜ ಸುಂದರವಾದ ದಂಪತಿ ಶಿಲ್ಪಗಳಿಂದ ಕೂಡಿದ ಎರಡು ಕಂಬಗಳು ಮತ್ತು ಹಿಂದೆ ಗೋಡೆ ಇವುಗಳ ಮೇಲೆ ನಿಂತ ಮಟ್ಟಸ ಚಾವಣಿ – ಇವುಗಳಿಂದ ಕೂಡಿದೆ. ಪೂರ್ವದ ಮುಖಮಂಟಪದಲ್ಲಿ ಅವು ವಿಜಯಾದಿತ್ಯ, ಲೋಕಮಹಾದೇವಿ ಮೊದಲಾದವರು ಬಿಟ್ಟ ದತ್ತಿಗಳನ್ನು ತಿಳಿಸುವ ಕೆಲವು ಶಾಸನಗಳಿವೆ. ಕಂಬಗಳು ಸುಂದರ ಕೆತ್ತನೆಗಳನ್ನು ಹೊಂದಿವೆ. ದ್ವಾರಪಾಲಕರು, ಪದ್ಮನಿಧಿ, ಶಂಖನಿಧಿ ಮೊದಲಾದ ಶಿಲ್ಪಗಳು, ಸೂರ್ಯ ಮತ್ತು ಆತನ ಇಬ್ಬರು ಸತಿಯರನ್ನು (ಉಷಾ ಮತ್ತು ಪ್ರತ್ಯುಷಾ) ಕೆತ್ತಿರುವ ಚಾವಣಿ ಇವು ಆಕರ್ಷಣೀಯವಾಗಿವೆ. ಮೋಡದಲ್ಲಿ ಚಲಿಸುತ್ತಿರುವ ಸೂರ್ಯನ ರಥದ ಚಿತ್ರ ವಿಶೇಷ ರಮಣೀಯವಾಗಿದೆ. ದಕ್ಷಿಣ ಹಾಗೂ ಉತ್ತರ ಮುಖಮಂಟಪದಲ್ಲಿಯೂ ಕೆಲವು ಸುಂದರವಾದ ಶಿಲ್ಪಗಳನ್ನು ಕೆತ್ತಿದ್ದಾರೆ. ದಕ್ಷಿಣ ಮುಖಮಂಟಪದ ನೃಸಿಂಹ ಹಿರಣ್ಯಕಶಿಪು ಇವರ ದ್ವಂದ್ವ ಯುದ್ಧ, ರಾವಣ ಕೈಲಾಸಪರ್ವತವನ್ನು ಎತ್ತಿರುವ ಶಿಲ್ಪ ಉಲ್ಲೇಖನಾರ್ಹವಾಗಿವೆ. ಅದರಂತೆ ಉತ್ತರ ಮಂಟಪದಲ್ಲಿನ ಗಜೇಂದ್ರಮೋಕ್ಷ ಕಥಾನಕ ಚಿತ್ರಗಳು ಸೊಗಸಾಗಿವೆ. ಪ್ರತಿ ಮುಖಮಂಟಪದಿಂದ ಸಭಾಮಂಟಪಕ್ಕೆ ಪ್ರವೇಶಿಸುವ ದ್ವಾರಗಳು ಕುಸುರಿಕೆಲಸದಿಂದ ಪಂಚಶಾಖಾ ದ್ವಾರಬಂಧಗಳು, ದ್ವಾರತೋಳುಗಳ ಕೆಳಗೆ ಗಂಗಾ– ಯಮುನೆಯರ ಶಿಲ್ಪಗಳು, ಮೇಲಿನ ಜಂತಿಯಲ್ಲಿ ನಾಗಬಾಲಗಳನ್ನು ಹಿಡಿದು ಹಾರುತ್ತಿರುವ ಗರುಡಶಿಲ್ಪ, ಪಕ್ಕಗಳಲ್ಲಿ ದ್ವಾರಪಾಲಕರು– ಇವುಗಳಿಂದ ಕೂಡಿವೆ.

ಸಭಾಮಂಟಪವು ಉತ್ತರದಕ್ಷಿಣ 15.2 ಮೀ ಮತ್ತು ಪೂರ್ವ ಪಶ್ಚಿಮ 14.4 ಮೀ ಉದ್ದಗಲಗಳನ್ನು ಹೊಂದಿದೆ. 2.23 ಮೀ ಎತ್ತರದ ಚಚ್ಚೌಕದ ಹದಿನೆಂಟು ಕಂಬಗಳು ನಾಲ್ಕು ಸಾಲುಗಳಲ್ಲಿದ್ದು ಚಾವಣಿಯನ್ನು ಹೊತ್ತು ನಿಂತಿವೆ. ಅವುಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ ಕಥಾನಕಗಳನ್ನು ನಿರೂಪಿಸುವ ಚಿತ್ರಗಳನ್ನು ಕೆತ್ತಲಾಗಿದೆ. ಮಂಟಪದ ಮಧ್ಯದಲ್ಲಿನ ಚಾವಣಿಯಲ್ಲಿ ಸುರುಳಿ ಸುತ್ತಿದ ನಾಗನನ್ನೂ ಗಜಲಕ್ಷ್ಮಿಯನ್ನೂ ಕೆತ್ತಿದ್ದಾರೆ. ಅನೇಕ ಕಂಬಗಳಲ್ಲಿ ಬಳ್ಳಿಗಳನ್ನೂ ಸಿಂಹಲತೆ ಅಥವಾ ಕೀರ್ತಿಮುಖಗಳನ್ನೂ ಬಿಡಿಸಿದ್ದಾರೆ. ಕಂಬಗಳಲ್ಲಿ, ಸ್ತಂಭಿಕೆಗಳಲ್ಲಿ ಪೌರಾಣಿಕ ಕಥಾನಕಗಳ ಜೊತೆಗೆ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಸೊಗಸಾದ ಚಿತ್ರಗಳನ್ನೂ ನವುರಾಗಿ ಬಿಡಿಸಿದ್ದಾರೆ. ಅವುಗಳು ಅಂದಿನ ಸಂಸ್ಕೃತಿಯನ್ನು ವಿವರಿಸುತ್ತವೆ. **(ಎಸ್.ಜಿ.)**

ಸಭಾಮಂಟಪದಿಂದ ಸುಕನಾಸಿಯ ಭಾಗಕ್ಕೆ ಪ್ರವೇಶಿಸುವ ದ್ವಾರವೂ ಸಭಾಮಂಟಪದ ದ್ವಾರದಂತೆಯೇ ಸುಂದರವಾಗಿ ಅಲಂಕೃತವಾಗಿದ್ದು ಇಲ್ಲೂ ಗಂಗಾ ಯಮುನಾ ವಿಗ್ರಹಗಳಿವೆ. ಗರ್ಭಗೃಹ ಚೌಕಾಕಾರದ್ದು. ಮಧ್ಯದಲ್ಲಿ ಚೌಕನೆಯ ಪಾಣಿಪೀಠದ ಮೇಲೆ ಹೊಳಪಿನ ಕರಿಕಲ್ಲಿನ ಲಿಂಗವಿದೆ. ಗರ್ಭಗೃಹ ಮತ್ತು ಸುಕನಾಸಿಯನ್ನೂ ಸುತ್ತುವರಿದಂತೆ ಪ್ರದಕ್ಷಿಣಾಪಥವಿದೆ. ಇದರ ಮುಂತುದಿಗಳಲ್ಲಿ ಹೊರಗೋಡೆಗೆ ಸೇರಿದಂತೆ ಇಕ್ಕೆಲಗಳಲ್ಲಿ ಒಂದೊಂದು ಚಿಕ್ಕ ಗರ್ಭಗೃಹಗಳಿದ್ದು ಇವುಗಳಲ್ಲಿ ಎಡಗಡೆಯದರಲ್ಲಿ ಮಹಿಷಮರ್ದಿನಿಯ ವಿಗ್ರಹವಿದೆ. ಇನ್ನೊಂದರಲ್ಲಿ ಗಣಪತಿ ಇದ್ದಿರಬಹುದು; ಅದು ಈಗ ಉಳಿದಿಲ್ಲ. ಪ್ರದಕ್ಷಿಣಾಪಥ ಹಾಗೂ ಸಭಾಮಂಟಪದ ಗೋಡೆಗಳಲ್ಲಿ ಅಳವಡಿಸಲಾಗಿರುವ ಅನೇಕ ವಿನ್ಯಾಸಗಳಲ್ಲಿರುವ ಜಾಲಂಧ್ರಗಳಿಂದ ನಸುಬೆಳಕು

ಜಂಬುಲಿಂಗ ದೇವಾಲಯ

ಒಳಗೆ ಬೀಳುವಂತಿದ್ದು ಒಳಗಿನ ಶಿಲ್ಪಗಳ ಅವಲೋಕನಕ್ಕೆ ಇವು ಅನುಕೂಲ ಮಾಡಿಕೊಡುತ್ತವೆ. ದೇವಾಲಯದ ಹೊರಗೆ ಏರು ವಿನ್ಯಾಯಸದಲ್ಲಿ ತಳಭಾಗದಲ್ಲಿ ಅನೇಕಪಟ್ಟಿಕೆಗಳಿರುವ ಎತ್ತರ ಅಧಿಷ್ಟಾನವೂ ಮೇಲೆ ಅರೆಗಂಬಗಳೂ ಮತ್ತು ಕೋಷ್ಠಗಳಿರುವ ಭಿತ್ತಿಯೂ ಅದರ ಮೇಲೆ ದಿಂಡಿನ ಕಪೋತ ಮತ್ತು ಅದರ ಮೇಲೆ ಕಾಲಾಕೂಟಗಳಿರುವ ಹಾರ ಇವೆ. ಭಿತ್ತಿ ಭಾಗದಲ್ಲಿ ಮಟ್ಟ ಪ್ರದೇಶದಲ್ಲಿ ಹಾಗೂ ಕೋಷಿವಿಗಳಲ್ಲಿ ಲಿಂಗೋದ್ಭವ ಶಿವ, ಅಷ್ಟಭುಜ ಶಿವ, ನಟರಾಜ, ನರಸಿಂಹ, ಸೀತಾಪಹರಣ, ಜನಾರ್ದನ, ಹರಿಹರ, ದಂಪತಿಗಳು ಮೊದಲಾದ ಅನೇಕ ಉಬ್ಬು ಶಿಲ್ಪಗಳು ಎದ್ದುಕಾಣುವ ರೀತಿಯಲ್ಲಿ ರೂಪಿತವಾಗಿವೆ. ಈ ಶಿಲ್ಪಗಳ ಸೌಂದರ್ಯ ಅನುಪಮವಾದುದು.

ಗರ್ಭಗುಡಿಯ ಮೇಲೆ ದ್ರಾವಿಡ ಮಾದರಿಯ ತ್ರಿತಳ ಶಿಖರವಿದೆ. ಪ್ರತಿ ತಳದಲ್ಲೂ ಗರ್ಭಗುಡಿಯ ಹೊರಮೈಯಲ್ಲಿರುವ ವಾಸ್ತು ಅಂಶಗಳನ್ನು ಮೇಲೆ ಹೋದಂತೆ ಚಿಕ್ಕದಾಗಿರುವಂತೆ ಒಟ್ಟನಲ್ಲಿ ಮೆಟ್ಟಲುಮೆಟ್ಟಲಾಗಿ ಕಾಣುವಂತೆ ರೂಪಿಸಲಾಗಿದ್ದು, ಅದರ ಮೇಲೆ ಚೌಕಾಕಾರದ ದಪ್ಪ ಸ್ತೂಪಿ ಮತ್ತು ಮೇಲೆ ಕಳಶವನ್ನು ಅಳವಡಿಸಲಾಗಿದೆ. ಈ ಶಿಖರದ ಮುಂಭಾಗ ಸುಕನಾಸಿಯ ಮೇಲೂ ಮುಂದುವರಿಯುವಂತೆ ರೂಪಿಸಲಾಗಿದೆ.

ಕರ್ನಾಟಕ ವಾಸ್ತುಶಿಲ್ಪ ಇತಿಹಾಸದಲ್ಲಿ ಪಟ್ಟದಕಲ್ಲಿನ ಈ ವಿರೂಪಾಕ್ಷ ದೇವಾಲಯ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಬಾದಾಮಿಯ ಚಳುಕ್ಯರ ಕಾಲದ ದೇವಾಲಯಗಳಲ್ಲೆಲ್ಲಾ ಇದೇ ಅತಿ ದೊಡ್ಡದು ಹಾಗೂ ಸಕಲಾಂಗ ಪರಿಪೂರ್ಣವಾದುದು. ಈ ದೇವಾಲಯದ ಮೂಲ ಮಾದರಿ

ಕಂಚಿಯ ಕೈಲಾಸನಾಥ ದೇವಾಲಯದಿಂದ ಸ್ಫುರಿತವಾಗಿರಬಹುದೆಂದು ಹಲವು ವಿದ್ವಾಂಸರ ಅಭಿಪ್ರಾಯ. ಮುಂದೆ ಎಲ್ಲೋರದಲ್ಲಿ ಕಡೆಯಲಾಗಿರುವ ಕೈಲಾಸ ದೇವಾಲಯದಲ್ಲಿ ಹೆಚ್ಚು ಕಡಿಮೆ ಇದೇ ವಿನ್ಯಾಸವನ್ನು ಅಳವಡಿಸಿಕೊಳ್ಳಲಾಗಿದೆ. ಈ ದೇವಾಲಯವನ್ನು ರೂಪಿಸಿದ ಸರ್ವಸಿದ್ಧಿ ಆಚಾರಿ, ಚೆಂಗಮ್ಮ, ಬಲದೇವ ಮುಂತಾದ ಶಿಲ್ಪಿಗಳ ಹೆಸರುಗಳು ಇಲ್ಲಿನ ಶಾಸನಗಳಿಂದ ದೊರಕುತ್ತದೆ.

ವಿರೂಪಾಕ್ಷ ದೇವಾಲಯದ ರಚನೆಯ ಕಾಲದಲ್ಲೇ ಇಮ್ಮಡಿ ವಿಕ್ರಮಾದಿತ್ಯನ ಇನ್ನೊಬ್ಬ ರಾಣಿ ತ್ರೈಲೋಕ್ಯ ಮಹಾದೇವಿಯಿಂದ ರಚಿತವಾದ ಮಲ್ಲಿಕಾರ್ಜುನ ದೇವಾಲಯ ತ್ರೈಲೋಕ್ಯೇಶ್ವರ ವಿರೂಪಾಕ್ಷ ಗುಡಿಯ ಸಮೀಪದಲ್ಲೇ ಈ ಗುಡಿಯ ವಾಯವ್ಯಕ್ಕಿದೆ. ಇದು ವಿನ್ಯಾಸದಲ್ಲಿ ವಿರೂಪಾಕ್ಷ ದೇವಾಲಯದ ಪ್ರತಿರೂಪವೇ. ಆದರೆ ಅದಕ್ಕಿಂತ ಸ್ವಲ್ಪ ಚಿಕ್ಕದು. ನಂದಿಮಂಟಪ ಶಿಥಿಲವಾಗಿದೆ. ಸುತ್ತುಪ್ರಾಕಾರ ಬಹುಮಟ್ಟಿಗೆ ಹಾಳಾಗಿದೆ. ಗರ್ಭಗೃಹದ ಮೇಲಿನ ಶಿಖರದ ಸ್ತೂಪಭಾಗ ವಿರೂಪಾಕ್ಷದಂತೆ ಚೌಕೋನವಾಗಿರದೆ ವೃತ್ತಾಕಾರವಾಗಿದೆ. ದೇವಾಲಯದ ಮುಖಮಂಟಪದ ಕಂಬಗಳ ಮೇಲೆ ಸುಂದರ ಸ್ತ್ರೀವಿಗ್ರಹಗಳಿವೆ. ಗರ್ಭಗೃಹದ ಒಳಗೆ ಚಳುಕ್ಯಕಾಲೀನ ಲಿಂಗವಿದ್ದರೂ ಸಭಾಮಂಟಪಕ್ಕೆ ಹೋಗುವ ದ್ವಾರದ ಲಲಾಟಬಿಂಬದಲ್ಲಿ ಗರುಡವಾಹನ ವಿಷ್ಣುವಿನ ಶಿಲ್ಪವಿದೆ. ಸಭಾಮಂಟಪದ ಕಂಬಗಳ ಮೇಲೆ ರಾಮಾಯಣ, ಮಹಾಭಾರತ, ಹರಿವಂಶ, ಪಂಚತಂತ್ರಗಳ ಕಥಾ ಸನ್ನಿವೇಶಗಳು ಮತ್ತು ಕೆಲವು ಸಾಮಾಜಿಕ ದೃಶ್ಯಗಳನ್ನು ಬಿಡಿಸಲಾಗಿದೆ. ಇಲ್ಲಿನ ಭಕ್ತನಲ್ಲಿ ನಂದಿಸಮೇತ ಪಾರ್ವತೀಪರಮೇಶ್ವರ ಶಿಲ್ಪವಿದೆ. ದೇವಾಲಯದ ಗೋಡೆಗಳಲ್ಲಿ ಅನೇಕ ದೇವ ಮತ್ತು ಸ್ತ್ರೀಮೂರ್ತಿಗಳು ಸುಂದರವಾಗಿ ನಿರೂಪಿತವಾಗಿವೆ.

ಸಂಗಮೇಶ್ವರ ದೇವಾಲಯ ದ್ರಾವಿಡ ಶೈಲಿಯಿಲ್ಲಿರುವ ಇನ್ನೊಂದು ಕೃತಿ. ವಿರೂಪಾಕ್ಷನ ಗುಡಿಯಿಂದ ಸ್ವಲ್ಪ ದೂರಕ್ಕಿರುವ ಈ ದೇವಾಲಯ ಮೇಲಿನ ಎರಡು ದೇವಾಲಯಗಳಿಗಿಂತಲೂ ಹಳೆಯದು. ಇದನ್ನು ಚಳುಕ್ಯ ವಿಜಯಾದಿತ್ಯ (696–733) ಕಟ್ಟಿಸಿದನೆಂದೂ ಇದಕ್ಕೆ ವಿಜಯೇಶ್ವರ ಎಂಬ ಹೆಸರಿತ್ತೆಂದೂ ಇಲ್ಲಿನ ಶಾಸನಗಳಿಂದ ತಿಳಿಯುತ್ತದೆ. ದೇವಾಲಯ ಸ್ವಲ್ಪಮಟ್ಟಿಗೆ ಶಿಥಿಲವಾಗಿದ್ದು ಈಗ ಗರ್ಭಗುಡಿ, ಅಂತರಾಳ ಮತ್ತು ಸಭಾಮಂಟಗಳಿವೆ. ಅಂತರಾಳ ಮತ್ತು ಗರ್ಭಗುಡಿಯ ಸುತ್ತ ಪ್ರದಕ್ಷಿಣಾಪಥವಿದೆ. ಗರ್ಭಗೃಹದಲ್ಲಿ ಕರಿಶಿಲೆಯ ಲಿಂಗವಿದೆ. ಗರ್ಭಗುಡಿ ಸರಳವಾಗಿದ್ದು ಇದರ ತ್ರಿಶಾಖಾದ್ವಾರಬಂಧ ಶಿಲ್ಪರಹಿತವಾಗಿರುವುದು ವಿಶೇಷ. ದ್ವಾರ ತೋಳುಗಳ ಕೆಳಗೆ ಯಮುನಾ ಗಂಗಾ ವಿಗ್ರಹಗಳಿವೆ. ಚೌಕಟ್ಟಿನ ಇಬ್ಬದಿಯಲ್ಲಿ ನಂದಿ ಮತ್ತು ವೀರಭದ್ರ ಈ ದ್ವಾರಪಾಲ ಶಿಲ್ಪಗಳಿವೆ. ಗರ್ಭಗುಡಿಯ ಹೊರಗೋಡೆಯ ಮೇಲೆ ಪಶ್ಚಿಮ ಮತ್ತು ಉತ್ತರ ಬದಿಯಲ್ಲಿ ಕ್ರಮವಾಗಿ ನಟರಾಜ ಮತ್ತು ಗಜಾಸುರಮರ್ದನ ಈ ಉಬ್ಬುಶಿಲ್ಪಗಳಿವೆ. ದಕ್ಷಿಣ ಗೋಡೆಯ ಮೇಲೆ ಪೂರ್ಣ ಕೆತ್ತದಿರುವ ಉಗ್ರನರಸಿಂಹನ ಚಿತ್ರ ರೇಖಾಮಾತ್ರವಾಗಿದೆ. ಪ್ರದಕ್ಷಿಣಾಪಥದ ಸುತ್ತಲಿನ ಗೋಡೆಗಳಲ್ಲಿ ಪ್ರತಿ ಗೋಡೆಗೆ ಮೂರರಂತೆ ಅನೇಕ ವಿನ್ಯಾಸಗಳ ಜಾಲಂಧ್ರಗಳಿವೆ. ಪ್ರದಕ್ಷಿಣಾಪಥದ ಮುನ್ನಂಚಿನಲ್ಲಿ ಒಂದೊಂದು ಚಿಕ್ಕ ಗರ್ಭಗೃಹಗಳಿವೆ. ಇವುಗಳಲ್ಲಿದ್ದ ಮೂಲ ಮೂರ್ತಿಗಳು ಉಳಿದಿಲ್ಲ. ಸಭಾಮಂಟಪ ವಿಶಾಲವಾಗಿದ್ದು ಇದರಲ್ಲಿ 20 ಕಂಬಗಳುಳ್ಳ ನಾಲ್ಕು ಸಾಲುಗಳು ಛತ್ತನ್ನು ಎತ್ತಿಹಿಡಿದಿದೆ. ಕಂಬಗಳು ಸರಳ ಚೌಕೋನ ಭೇದ ವಿನ್ಯಾಸದವು. ಸಭಾಮಂಟಪದ ಮೂರು ಕಡೆಗಳಲ್ಲಿದ್ದ ಮುಖಮಂಟಪಗಳು ಬಿದ್ದುಹೋಗಿವೆ. ದೇವಾಲಯದ ಹೊರಮೈ ನೋಟದಲ್ಲಿ ಬುಡದಲ್ಲಿ ಅಧಿಷ್ಠಾನ ಪಟ್ಟಿಕೆಗಳು, ಮೇಲೆ ಅನೇಕ ಶಿಲ್ಪಗಳಿಂದ ಅಲಂಕೃತವಾಗಿರುವ ಭಿತ್ತಿ ಅದರ ಮೇಲೆ ಸ್ವಲ್ಪ ಬಾಗಿರುವ ಕಪೋತ, ಕೂಟ ಶಾಲಾಗಳು ಮತ್ತು ಕೆಲವು ಶಿಲ್ಪಗಳಿರುವ ಹಾಸ ಇವೆ. ಗರ್ಭಗೃಹದ ಮೇಲಿನ ದ್ರಾವಿಡ ಮಾದರಿಯ ಶಿಖರ ಎರಡು ತಳಗಳಲ್ಲಿವೆ. ಮೇಲೆ ಚೌಕೋನ ಸ್ತೂಪಿ ಮತ್ತು ಕಲಶ ಇವೆ. ಶಿಖರ ಸುಕನಾಸಿಯು ಮೇಲೆ ಚಾಚಿಲ್ಲ. ದೇವಾಲಯದ ಭಿತ್ತಿಯಲ್ಲಿ ಅರ್ಧನಾರೀಶ್ವರ ಭೃಂಗಿ, ವಿಷ್ಣು, ಭೂವರಾಹ, ಅಂಧಕಾಸುರ ಮೊದಲಾದ ಶಿಲ್ಪಗಳೂ ಶಿಖರದ ಮೇಲೆ ಲಕುಲೀಶ, ಗಜಾಸುರ ಮರ್ದನ ಮತ್ತು ವಿಷ್ಣು ಮೊದಲಾದವೂ ಇವೆ.

ಮೇಲಿನ ಚಳುಕ್ಯ ಕಾಲದ ದ್ರಾವಿಡ ಸಂಪ್ರದಾಯ ವಿನ್ಯಾಸದ ದೇವಾಲಯಗಳ ಜೊತೆಗೆ ಪಟ್ಟದಕಲ್ಲಿನ ಗಳಗನಾಥ, ಕಾಶಿವಿಶ್ವನಾಥ, ಜಂಬುಲಿಂಗ, ಕಾಡಸಿದ್ದೇಶ್ವರ–ಈ ನಾಗರ ಸಂಪ್ರದಾಯದ ದೇವಾಲಯಗಳೂ ಇವೆ.

ವಿರೂಪಾಕ್ಷ ಗುಡಿಯಿಂದ ಸ್ವಲ್ಪ ಉತ್ತರಕ್ಕಿರುವ ಗಳಗನಾಥ ದೇವಾಲಯ ಪೂರ್ವಾಭಿಮುಖವಾಗಿದ್ದು ವಿಶಾಲವಾದ ಸಭಾಮಂಟಪ 129ಮೀ ವಿಸ್ತೀರ್ಣ, ಅಂತರಾಳ ಮತ್ತು ಗರ್ಭಗುಡಿಯಿಂದ ಕೂಡಿದೆ. ಇದರ ಶಿಖರ ರೇಖಾನಾಗರ ಪ್ರಾಸಾದ ಪದ್ಧತಿಯಂತೆ ಅತಿ ಚಂದವಾಗಿ ಪ್ರಮಾಣಬದ್ಧವಾಗಿದೆ. ಸಭಾಮಂಟಪದಿಂದ ಅಂತರಾಳ ಮತ್ತು ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣೆ ಹಾಕಲು ಅನುಕೂಲವಾಗುವ ಹಾಗೆ ಪ್ರದಕ್ಷಿಣಾಪಥವಿದ್ದು ಇದು ಹೊರಬದಿಯಲ್ಲಿ ಸುತ್ತಲೂ ಜಾಲರಿಯುಳ್ಳ ಗೋಡೆಯಿಂದ ಆವರಿಸಲ್ಪಟ್ಟಿದೆ. ಈಗ ಸಭಾ ಮಂಟಪದ ಅಧಿಷ್ಠಾನ ಮಾತ್ರ ಉಳಿದಿದೆ. ಇದರ ಕಂಬಗಳು, ಗೋಡೆಗಳು ಮತ್ತು ಮಾಡು ಏನೂ ಉಳಿದಿಲ್ಲ. ಇದರ ಮಾಡಿನ ಮೇಲೆ ಇದ್ದ ಶಿಖರದ ಸುಕನಾಸಿಯ ಚಾಚು, ವಾಯವ್ಯ ಮೂಲೆಯ ಮತ್ತು ಉತ್ತರ ಭಾಗದ ಪ್ರದಕ್ಷಿಣಾಪಥದ ಹೊರಬದಿಯ ಗೋಡೆಗಳು ಹಾಳಾಗಿವೆ. ದಕ್ಷಿಣ ಭಾಗದಲ್ಲಿ ಬಾಗಿಲಿಲ್ಲದ ಸಣ್ಣದಾದ ಅರ್ಧ ಮಂಟಪವಿದ್ದು, ಅದರಲ್ಲಿ ಭಗ್ನವಾದ ಆದರೆ ಮನೋಹರವಾದ ಎಂಟು ಕೈಗಳುಳ್ಳ ಅಂಧಕಾಸುರಾಂತಕನ (ಶಿವ) ಮೂರ್ತಿಯಿದೆ.

ಅಂತರಾಳದ ಬಾಗಿಲಿನ ಚೌಕಟ್ಟಿನ ಒಂದೊಂದು ಬದಿಯು ನಾಲ್ಕು ಶಾಖೆಗಳಾಗಿ ವಿಭಾಗಿಸಿದ್ದು, ಅವು ಸೂಕ್ಷ್ಮ ಕುಸುರಿನ ಕೆತ್ತನೆಯಿಂದ ಅಲಂಕೃತವಾಗಿವೆ. ಕೆಳಬದಿಯಲ್ಲಿ ಗಂಗೆ, ಯಮುನೆಯರು ಮತ್ತು ದಂಪತಿಗಳ ದ್ವಾರಪಾಲಕ ಮೂರ್ತಿಗಳಿವೆ. ಚೌಕಟ್ಟಿನ ಮೇಲೆ ಅಡ್ಡಜಂತಿಯ ಮಧ್ಯದಲ್ಲಿನ ಲಲಾಟಬಿಂಬದಲ್ಲಿ ಶಿವ ನಟರಾಜನ ಮೂರ್ತಿಯಿದೆ. ಆದುದರಿಂದ ಈ ದೇವಾಲಯ ಮೂಲತಃ ಈಶ್ವರನ ದೇವಾಲಯವೇ ಆಗಿರಬೇಕು. ಅಂತರಾಳ ಸಣ್ಣದಾಗಿದ್ದು ತೀರ ಸರಳವಾಗಿದೆ. ಗರ್ಭಗೃಹ ವಿಶಾಲವಾಗಿದೆ. ಈಗ ನೆಲದ ಮಧ್ಯದಲ್ಲಿ 11–12ನೆಯ ಶತಮಾನದ ಕಪ್ಪುಶಿಲೆಯ ಶಿವಲಿಂಗವಿದೆ. ಗರ್ಭಗುಡಿಯ ಹೊರಗೋಡೆಯಲ್ಲಿ ಮೂರು ಬರಿದಾದ ದೇವಕೋಷ್ಠಗಳಿವೆ.

ಗರ್ಭಗುಡಿಯ ಅಧಿಷ್ಠಾನ ಮೂರು ಅಡ್ಡ ಮಡಿಕೆಗಳಿಂದ ವಿಭಾಗಿಸಲ್ಪಟ್ಟಿದೆ. ದೇವಕೋಷ್ಠಗಳ ಕೆಳಭಾಗದ ಪ್ರದೇಶದ ಮೇಲಿನ ಅಡ್ಡಮಡಿಕೆಯಲ್ಲಿ ಸಣ್ಣಗೂಡುಗಳಿದ್ದು ಅದರಲ್ಲಿ ಕುಬೇರ ಗಜಲಕ್ಷ್ಮಿ ಮುಂತಾದ ಸಣ್ಣಸಣ್ಣ ಉಬ್ಬು ಶಿಲ್ಪಗಳಿವೆ. ಅರ್ಧಮಂಟಪದ ಅಧಿಷ್ಠಾನದ ಅಡ್ಡಪಟ್ಟಿಕೆಯಲ್ಲಿ ಸೇವಕರಿಂದ ಕೂಡಿದ ರಾಜ, ಕುಸ್ತಿಯಾಟ, ಗಂಡಭೇರುಂಡ, ಪಂಚತಂತ್ರದಲ್ಲಿನ ಕೊಯ್ದು ಮರದಲ್ಲಿ ಸಿಕ್ಕಿಸಿದ ಬೆಣೆಯನ್ನು ಕೋಳಿಂಯೊಂದು ಕೀಳುವ ಸನ್ನಿವೇಶ, ಮಕರತೋರಣವೇ ಮುಂತಾದ ಚಿತ್ರಗಳಿವೆ.

ಶಿಖರವು ಚೈತ್ಯ ಗೂಡುಗಳ ಅಡ್ಡ ಸಾಲುಗಳಿಂದ ಚಿತ್ರಿತವಾದ ಉದ್ದ ಪಟ್ಟಿಕೆಗಳಿಂದ ಕೂಡಿದೆ. ನಾಲ್ಕು ಮೂಲೆಗಳಲ್ಲಿ ಅಲ್ಲಲ್ಲಿ

ಒಟ್ಟು ನಾಲ್ಕು ರಾಯನೆಲ್ಲಿಕಾಯಿ ತರಹದ ಆಮಲಕಗಳಿವೆ. ಶಿಖರವು ಬದಿಗಳಲ್ಲಿ ಉಬ್ಬಿದ್ದು, ಮೇಲೆ ಸಣ್ಣದಾಗುತ್ತ ತುದಿಯಲ್ಲಿ ಆಮಲಕ ಮತ್ತು ಕಲಶದಿಂದ ಅಲಂಕೃತವಾಗಿವೆ. ನಾಗರ ಶೈಲಿಯ ಉತ್ತಮ ಉದಾಹರಣೆಯಾಗಿರುವ ಈ ದೇವಾಲಯ ಸು.8ನೆಯ ಶತಮಾನದ ಪೂರ್ವಭಾಗದಲ್ಲಿ ರಚಿತವಾದುದು. **(ಎ.ಎಸ್.)**

ಗಳಗನಾಥ ದೇವಾಲಯದ ಹಿಂಬದಿಯಲ್ಲಿ ಇರುವ ಜಂಬುಲಿಂಗ ದೇವಾಲಯ ಚಿಕ್ಕದು. ನಾಗರರೇಖಾ ಪ್ರಾಸಾದ ಶೈಲಿಯ ಈ ಗುಡಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪದಿಂದ ಕೂಡಿತ್ತು. ಸಭಾಮಂಟಪದ ಅಡಿಪಾಯ ಮಾತ್ರ ಈಗ ಉಳಿದಿದೆ. ಶಿಖರದ ಮೇಲಿನ ಆಮಲಕ ಬಿದ್ದುಹೋಗಿದೆ. ಅಂತರಾಳದ ದ್ವಾರಬಂಧದ ಇಬ್ಬದಿಯಲ್ಲಿ ನಂದಿ, ವೀರಭದ್ರ, ದ್ವಾರಪಾಲಕ ಮೂರ್ತಿಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಹೊರಗೋಡೆಯ ಮಧ್ಯಭಾಗದಲ್ಲಿ ಒಂದೊಂದು ದೇವಕೋಷ್ಠಗಳಿದ್ದು, ಅವುಗಳಲ್ಲಿ ದಕ್ಷಿಣಾತ್ ಉತ್ತರವಾಗಿ ಕ್ರಮವಾಗಿ ಲಕುಳೀಶ, ಅರ್ಧನಾರೀಶ್ವರ ಮತ್ತು ವಿಷ್ಣುವಿನ ಮೂರ್ತಿಗಳಿವೆ. ಗರ್ಭಗುಡಿಗೆ ಪ್ರದಕ್ಷಿಣಾಪಥವಿಲ್ಲದಿರುವುದು ಮತ್ತು ಮೇಲಿನ ನಾಗರರೇಖಾ ಶಿಖರ ಗರ್ಭಗೃಹದ ಗೋಡೆಯ ನೇರದಲ್ಲೇ ಮೇಲೇಳುವುದೂ ಈ ದೇವಾಲಯದ ವಾಸ್ತು ವೈಶಿಷ್ಟ್ಯಗಳು. ಇದೂ 8ನೆಯ ಶತಮಾನದ ರಚನೆ.

ಕಾಡಸಿದ್ಧೇಶ್ವರ ದೇವಾಲಯ

ಜಂಬುಲಿಂಗ ದೇವಾಲಯದ ಹತ್ತಿರದಲ್ಲೇ ಉತ್ತರಕ್ಕಿರುವ ಕಾಡಸಿದ್ದೇಶ್ವರ ದೇವಾಲಯ ವಿನ್ಯಾಸದಲ್ಲಿ ಹಾಗೂ ಗಾತ್ರದಲ್ಲಿ ಜಂಬುಲಿಂಗ ದೇವಾಲಯದಂತೆಯೇ ಇದೆ. ಇದರ ಗರ್ಭಗೃಹದ ಲಲಾಟದ ಮೇಲೆ ನಂದಿಯ ಮೇಲೆ ಕುಳಿತ ಶಿವಪಾರ್ವತಿಯರ ಸುಂದರ ವಿಗ್ರಹವೂ ಅದರ ಎರಡೂ ಪಕ್ಕಗಳಲ್ಲಿ ದ್ವಾರ ತೋಳುಗಳ ಮೇಲುಭಾಗದಲ್ಲಿ ಎಡಗಡೆ ವಿಷ್ಣು ಮತ್ತು ಬಲಗಡೆ ಬ್ರಹ್ಮ ಈ ವಿಗ್ರಹಗಳೂ ಇವೆ. ದಕ್ಷಿಣ, ಪಶ್ಚಿಮ ಮತ್ತು ಉತ್ತರ ಹೊರಗೋಡೆಗಳ ದೇವಕೋಷ್ಠಗಳಲ್ಲಿ ಕ್ರಮವಾಗಿ ಲಕುಳೀಶ, ಹರಿಹರ ಮತ್ತು ಅರ್ಧನಾರೀಶ್ವರ ಮೂರ್ತಿಗಳಿವೆ.

ನಾಗರಪ್ರಾಸಾದ ಶಿಖರವಿರುವ ಇನ್ನೊಂದು ಗುಡಿ ಕಾಶಿವಿಶ್ವೇಶ್ವರ. ಇದು ಮಲ್ಲಿಕಾರ್ಜುನ ದೇವಾಲಯದ ಉತ್ತರಬದಿಯಲ್ಲಿ, ಹಿಂದೆ ಅದರ ಪ್ರಾಕಾರವಿದ್ದ ಭಾಗದಲ್ಲಿದೆ. ಇದರಲ್ಲಿ ಈಗ ಗರ್ಭಗೃಹ ಮತ್ತು ಅಂತರಾಳ ಮಾತ್ರ ಉಳಿದಿವೆ. ಮುಂದಿದ್ದ ಸಭಾಮಂಟಪದ ಅಡಿಪಾಯ ಮಾತ್ರ ಈಗ ಉಳಿದಿದೆ. ಗರ್ಭಗುಡಿಯ ಮೇಲೆ ನಾಗರೇಖಾ ಶಿಖರವಿದೆ. ಆದರೆ ಶಿಖರದ ಆಮಲಕ ಮತ್ತು ಕಳಶ ಬಿದ್ದು ಹೋಗಿವೆ. ಇದರ ಸುಕನಾಸಿಯ ಮುಖಪಟ್ಟಿಯಲ್ಲಿ ಚೈತ್ಯ ಗೂಡಿನೊಳಗೆ ನಟರಾಜನ ಉಬ್ಬುಶಿಲ್ಪವಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಅಂತರಾಳದ ಬಾಗಿಲ ಚೌಕಟ್ಟಿನ ಎರಡು ಬದಿಗಳಲ್ಲಿ ದೇವಕೋಷ್ಠಗಳಿವೆ. ಎಡಗಡೆಯದರಲ್ಲಿ ತ್ರಿಪುರಾಂತಕನ ಮೂರ್ತಿ ಇದೆ. ಚೌಕಟ್ಟಿನ ಶಾಖೆಗಳಲ್ಲಿ ಬುಡದಲ್ಲಿ ಗಂಗಾ ಯಮುನಾ ಮತ್ತು ಮೇಲೆ ನಾಗಬಾಲವನ್ನು ಹಿಡಿದ ಗರುಡನ ಲಲಾಟಬಿಂಬ ಇದೆ. ಅಂತರಾಳದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಪ್ರತಿಯೊಂದು ಕಂಬದ ಮಧ್ಯಭಾಗದಲ್ಲಿ ಸುಂದರವಾದ ಸ್ತ್ರೀಯರ ಉಬ್ಬುಶಿಲ್ಪಗಳಿವೆ. ಅಲ್ಲದೆ ಕೆಲವದರ ಮೇಲೆ ಪುರಾಣಕಥೆಗಳ ಮತ್ತು ಹರಿವಂಶದ ಕೃಷ್ಣಲೀಲಾ ಸನ್ನಿವೇಶಗಳ ತೆಳು ಉಬ್ಬುಶಿಲ್ಪ ಪಟ್ಟಿಕೆಗಳಿವೆ. ಛತ್ತಿನಲ್ಲಿ ಸುತ್ತಲೂ ಅಷ್ಟದಿಕ್ಪಾಲಕರಿಂದೊಡಗೂಡಿದ ಸೋಮಸ್ಕಂದ ವಿಗ್ರಹವಿದೆ. ಈ ದೇವಾಲಯ 8ನೆಯ ಶತಮಾನದ ಉತ್ತರಭಾಗದಲ್ಲಿ ರಚಿತವಾಗಿರಬಹುದೆಂದು ಊಹಿಸಲಾಗಿದೆ.

ವಿರೂಪಾಕ್ಷ ದೇವಾಲಯದಿಂದ ಸ್ವಲ್ಪ ದೂರದಲ್ಲಿ ದಕ್ಷಿಣಕ್ಕೆ ನದಿಯ ದಂಡೆಯಲ್ಲಿ ಇರುವ ಪಾಪನಾಥ ದೇವಾಲಯ ಪಟ್ಟದಕಲ್ಲಿನಲ್ಲಿ ಚೆನ್ನಾಗಿ ಉಳಿದು ಬಂದಿರುವ ದೇವಾಲಯಗಳಲ್ಲಿ ಒಂದು. ವಾಸ್ತು-ಶಿಲ್ಪ ದೃಷ್ಟಿಯಿಂದಲೂ ಇದು ವೈಶಿಷ್ಟ್ಯಪೂರ್ಣವಾಗಿರುವ ಗುಡಿ; ಸುಮಾರು ದೊಡ್ಡ ದೇವಾಲಯವೂ ಹೌದು. ದೇವಾಲಯದಲ್ಲಿ ಮುಖಮಂಟಪ, ವಿಶಾಲವಾದ ಅರ್ಧಮಂಟಪ ಮತ್ತು ಪ್ರದಕ್ಷಿಣಾಪಥವುಳ್ಳ ಗರ್ಭಗೃಹ ಇವೆ. ಗರ್ಭಗುಡಿ ಚೌಕವಾಗಿದ್ದು ಒಳಗೆ ದೊಡ್ಡ ಪೀಠದ ಮೇಲೆ ನಯವಾಗಿ ಕೆತ್ತಲಾದ ಲಿಂಗವಿದೆ. ಗರ್ಭಗುಡಿಯ ದ್ವಾರಬಂಧದ ಬದಿಗಳಲ್ಲಿ ದ್ವಾರಪಾಲಕರು ಮತ್ತು ಮೇಲೆ ಗಜಲಕ್ಷ್ಮಿಯ ಲಲಾಟಬಿಂಬ, ಚಾಮರ ಇಂದ್ರ ಅಗ್ನಿ ಅಷ್ಟದಿಕ್ಪಾಲಕರು ಮೊದಲಾದ ಉಬ್ಬುಶಿಲ್ಪಗಳಿವೆ. ಗರ್ಭಗುಡಿಯ ಹೊರಮೈಯಲ್ಲಿ ದಕ್ಷಿಣ, ಪಶ್ಚಿಮ ಮತ್ತು ಉತ್ತರದ ದೇವಕೋಷ್ಠಗಳಲ್ಲಿ ಕ್ರಮವಾಗಿ ಶಿವ, ಸೂರ್ಯ ಮತ್ತು ವಿಷ್ಣುವಿನ ಉಬ್ಬುಶಿಲ್ಪ ಫಲಕಗಳಿವೆ. ಗರ್ಭಗುಡಿಯ ಸುತ್ತಲೂ ಮುಚ್ಚಿರುವ ಪ್ರದಕ್ಷಿಣಾಪಥವಿದೆ. ಅಂತರಾಳ ವಿಶಾಲವಾಗಿದ್ದು ಅದರ ಬಾಗಿಲ ಶಾಖೆಗಳಲ್ಲಿ ಕೋಡುಗಳುಳ್ಳ ಮಾನವರೂಪದ ನಂದಿ ಮತ್ತು ವೀರಭದ್ರ ದ್ವಾರಪಾಲಕರೂ ಮೇಲೆ ಲಲಾಟದಲ್ಲಿ ಸರ್ಪಗಳ ಬಾಲಗಳನ್ನು ಹಿಡಿದ ಗರುಡನ ಮತ್ತು ಅದರ ಮೇಲೆ ಗಜಲಕ್ಷ್ಮಿಯ ಶಿಲ್ಪಗಳಿವೆ. ಮಹಾಮಂಟಪದ ಮಧ್ಯಭಾಗದಲ್ಲಿ ನಾಲ್ಕು ನಾಲ್ಕು ಕಂಬಗಳ ನಾಲ್ಕು ಸಾಲುಗಳಿವೆ. ಇವು ಸ್ವಲ್ಪ ಸಣ್ಣವಾಗಿವೆಯಲ್ಲದೆ ಸೊಗಸಾದ ಸ್ತ್ರೀ ಹಾಗೂ ದಂಪತಿಗಳ ಕೆತ್ತನೆಗಳನ್ನು ಹೊಂದಿವೆ. ಗೋಡೆಯಲ್ಲಿಯ ಅರೆಗಂಬಗಳ ಮೇಲೂ ಇದೇ ರೀತಿಯ ಶಿಲ್ಪಗಳಿವೆ. ಇಲ್ಲಿ ಗೋಡೆಗಳಿಗೆ ಸೇರಿದಂತೆ ಕಕ್ಷಾಸನಗಳಿರುವುದು ವಿಶೇಷ. ಇವುಗಳ ಮೇಲೆ ನಿಂತ ಚಿಕ್ಕ ಅರೆಗಂಬಗಳಲ್ಲೂ ತೆಳು ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ರಾಜನೊಬ್ಬ ಪತ್ನೀಸಮೇತನಾಗಿ ಹಲವು ಸಾಮಂತರೊಡನೆ ಕುಳಿತಿರುವುದನ್ನು ತೋರಿಸುವ ಶಿಲ್ಪ ಕುತೂಹಲಕಾರಿಯಾದುದು. ಇಲ್ಲಿ ಬಹುಶಃ ಇಮ್ಮಡಿ ವಿಕ್ರಮಾದಿತ್ಯನ ರಾಜಸಭೆಯನ್ನು ಶಿಲ್ಪಿಸಿದೆ ಎಂಬ ಊಹೆ ಇದೆ. ಈ ಸಭಾಮಂಟಪದ ಛತ್ತಿನಲ್ಲಿ ಗಜಲಕ್ಷ್ಮಿ, ನಾಗಬಂಧ, ಅನಂತಶಾಯಿ-ಈ ಉಬ್ಬುಶಿಲ್ಪಗಳಿವೆ. ಛತ್ತಿನ ದಂತಿಯ ಮೇಲೂ ವಿಷ್ಣು, ಗಂಧರ್ವ, ಶಿವಪಾರ್ವತಿ ಮೊದಲಾದ ತೆಳು ಉಬ್ಬುಶಿಲ್ಪಗಳಿವೆ. ಈ ಮಂಟಪದ ಹೊರಗೋಡೆಗಳಲ್ಲಿ ಹಳಿಕಂಡಿಗಳನ್ನು ಜೋಡಿಸಲಾಗಿದೆ. ಪ್ರವೇಶದ್ವಾರದ ಎಡಭಾಗದಲ್ಲಿ ದ್ವಾರಪಾಲಕರಿದ್ದಾರೆ. ದ್ವಾರಬಂಧದ ಮೇಲೆ ಮಕರತೋರಣದ ಕೆಳಗೆ ಗಜಲಕ್ಷ್ಮಿ ಅಲಂಕೃತಳಾಗಿದ್ದಾಳೆ. ಮುಖಮಂಟಪ ಚಿಕ್ಕದಾಗಿದ್ದು ಎತ್ತರದ ಕಟ್ಟೆಯ ಮೇಲಿದೆ. ಅಧಿಷ್ಠಾನ ಭಾಗದಲ್ಲಿ ಸಿಂಹ ಮತ್ತು ಆನೆ ಸವಾರರ ಶಿಲ್ಪಗಳಿವೆ.

ದೇವಾಲಯದ ಏರುವಿನ್ಯಾಸದಲ್ಲಿ ಕೆಳಗೆ ಅಧಿಷ್ಠಾನ, ಮೇಲೆ ದೇವಕೋಷ್ಠಗಳು ಮತ್ತು ಅರೆಗಂಬಗಳಿಂದ ಕೂಡಿದ ಭಿತ್ತಿ, ಕಪೋತ

ಶಾಲ ಮತ್ತು ಕೂಟಗಳಿರುವ ಹಾರ ಇವೆ. ಗೋಡೆಯಲ್ಲಿ ದಳಿಕಂಡಿಗಳಲ್ಲದೆ ಉದ್ದಕ್ಕೂ ರಾಮಯಣ, ಮಹಾಭಾರತ ಕಥಾನಕಗಳ ಚಿತ್ರಗಳನ್ನೂ ಕೆತ್ತಿದ್ದಾರೆ. ದಕ್ಷಿಣ ಪಶ್ಚಿಮ ಮತ್ತು ಉತ್ತರದ ದೇವಕೋಷ್ಠ ಗಳಲ್ಲಿ ಶಿವ, ಸೂರ್ಯ ಮತ್ತು ವಿಷ್ಣುಮೂರ್ತಿಗಳನ್ನು ಕಾಣಬಹುದು. ಅಲ್ಲಲ್ಲಿ ಅನೇಕ ಅಲಂಕೃತ ಮಿಥುನಗಳನ್ನು ಕೆತ್ತಿದ್ದಾರೆ. ಸ್ತಂಭಿಕೆಗಳೂ ಅಲಂಕಾರದ ಕೆತ್ತನೆಗಳಿಂದೊಡಗೂಡಿವೆ. ಕೊಳಲು ತಂತ್ರೀವಾದ್ಯ ಮುಂತಾದ ವಾದ್ಯಗಳನ್ನು ಬಾಜಿಸುವ ಚಿತ್ರಗಳೂ ಕೆಲವೆಡೆಯಿವೆ. ಗರ್ಭಗೃಹದ ಮೇಲೆ ನಾಗರ ಶೈಲಿಯ ಶಿಖರವಿದೆ. ಆದರೆ ತುದಿಯಲ್ಲಿ ಆಮಲಕ ಅಥವಾ ಗುಂಡು ಇತ್ಯಾದಿ ರೀತಿಯ ಮುಗಿತಾಯವಿಲ್ಲ.

ವಾಸ್ತುದೃಷ್ಟಿಯಿಂದ ಈ ದೇವಾಲಯವನ್ನು ದ್ರಾವಿಡ ಮತ್ತು ನಾಗರಶೈಲಿಗಳ ಮಿಶ್ರಣ ಎನ್ನಬಹುದು. ಉದಾಹರಣೆಗೆ ನಾಗರರೇಖಾ ಶಿಖರ ನಾಗರಶೈಲಿಯ ಅಂಶವಾದರೆ, ಶಾಲ ಮತ್ತು ಕೂಟಗಳ ಹಾರ ದ್ರಾವಿಡ ಪದ್ಧತಿಯದು. ಇದರ ನಿರ್ಮಾಣದ ಕಾಲದ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಸು. 650,680,700,735,740 ಎಂದು ವಿವಿಧ ರೀತಿಯ ಹೇಳಿಕೆಗಳಿವೆ. ಈ ದೇವಾಲಯದಲ್ಲಿ ಕಂಡುಬರುವ ಸರ್ವಸಿದ್ಧಿ ಆಚಾರಿ, ಬಲದೇವ ಮತ್ತು ಚೆಜ್ಜಮ್ಮ ಎಂಬ ಶಿಲ್ಪಿಗಳ ಹೆಸರುಗಳು ವಿರೂಪಾಕ್ಷ ದೇವಾಲಯಗಳಲ್ಲೂ ಕಂಡುಬರುವುದರಿಂದ ಇವು ಸುಮಾರು ಹತ್ತಿರ ಕಾಲದ ರಚನೆಗಳಾಗಿರಬಹುದು. ಕೇವಲ ಶೈಲಿ, ದೇವಾಲಯದ ಸ್ವರೂಪ–ಇವುಗಳನ್ನು ಪರಿಗಣಿಸಿ ಹೇಳುವುದಾದರೆ ಪಾಪನಾಥ ದೇವಾಲಯ ಲೋಕೇಶ್ವರ ದೇವಾಲಯದಷ್ಟು ನಯನುಣು ಪುಗಳನ್ನು ಹೊಂದಿಲ್ಲ. ಆದ್ದರಿಂದ ಸ್ವಲ್ಪ ಮುಂದಿನದಿರಬಹುದು. ಈ ದೇವಾಲಯ ಬಹುಶಃ ಸುಮಾರು ಸಮೀಪಕಾಲದಲ್ಲೇ ಎರಡು ಘಟ್ಟಗಳಲ್ಲಿ ಕಟ್ಟಿರಬಹುದು ಎನ್ನಿಸುತ್ತದೆ. ದೇವಾಲಯದ ವಾಸ್ತು ಭಾಗಗಳ ಅಳವಡಿಕೆ. ಅಲಂಕರಣ ವೈವಿಧ್ಯ–ಇವು ಈ ಅಂಶವನ್ನು ಸೂಚಿಸುತ್ತವೆ. ಬಹುಶಃ ಗರ್ಭಗುಡಿ ಮತ್ತು ಒಳ ಅಂತರಾಳ ಒಂದು ಘಟ್ಟದ್ದಾಗಿದ್ದು ಮುಂದಿನ ಸಭಾಮಂಟಪ, ಮುಖಮಂಟಪ ಮತ್ತು ಮೇಲಿನ ನಾಗರಶಿಖರ ಅನಂತರದವು ಇರಬಹುದು.

ವಿರೂಪಾಕ್ಷ ದೇವಾಲಯ ಗುಂಪಿನಿಂದ ವಾಯವ್ಯಕ್ಕೆ ಸ್ವಲ್ಪ ದೂರದಲ್ಲಿ ಬಾದಾಮಿ ರಸ್ತೆಯ ಪಕ್ಕದಲ್ಲಿ ಒಂದು ಜೈನ ದೇವಾಲಯವಿದೆ. ದ್ರಾವಿಡ ಶೈಲಿಯಲ್ಲಿರುವ ಈ ದೇವಾಲಯದಲ್ಲಿ ಮುಖಮಂಟಪ, ಸಭಾಮಂಟಪ, ಅರ್ಧಮಂಟಪ ಮತ್ತು ಪ್ರದಕ್ಷಿಣಾಪಥಯುತ ಗರ್ಭಗುಡಿ ಇವೆ. ಪ್ರದಕ್ಷಿಣಾಪಥದ ಹೊರಗಿನ ಗೋಡೆಗಳು ಬಿದ್ದುಹೋಗಿವೆ. ಕಂಬಗಳು ಉದ್ದಕ್ಕೂ ಹಲವು ಅಡ್ಡ ಮಡಿಕೆಗಳಿಂದ ಕೂಡಿದ್ದು ಚಳುಕ್ಯ ಕಂಬಗಳಿಗಿಂತ ವಿಭಿನ್ನವಾಗಿವೆ. ಅಂತರಾಳ ವಿಶಿಷ್ಟವಾಗಿ ಪ್ರತ್ಯೇಕವಾಗಿದೆ. ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಚಿಕ್ಕ ಶಿಖರವಿದೆ. ಮುಂದಿನ ಮುಖಮಂಟಪ ದಲ್ಲಿ ಕಕ್ಷಾಸನವಿದ್ದು ಅದರ ಹೊರಮೈಯಲ್ಲಿ ಅನೇಕ ಉಬ್ಬುಶಿಲ್ಪಗಳಿವೆ. ಹಲವಾರು ಚಳುಕ್ಯ ವಿಭಿನ್ನ ವಾಸ್ತು ಅಂಶಗಳಿಂದ ಕೂಡಿದ ಈ ದೇವಾಲಯ ಬಹುಶಃ 9ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತ ವಾಗಿರಬಹುದು. (ಎಸ್.ಜಿ‌ಎ)

ಸುಮಾರು ಚೆನ್ನಾಗಿ ಉಳಿದಿರುವ ಮೇಲಿನ ಒಂಬತ್ತು ದೇವಾಲಯಗಳ ಲ್ಲದೆ ಇತರ ಕೆಲವು ಚಿಕ್ಕ ಅಥವಾ ಬಹು ಹಾಳಾದ ದೇವಾಲಯಗಳು ಮತ್ತು ಚಳುಕ್ಯ ರಾಷ್ಟ್ರಕೂಟ ಕಾಲದ ಹಲವು ಶಿಲ್ಪಾವಶೇಷಗಳನ್ನೂ ಪಟ್ಟದಕಲ್ಲಿನಲ್ಲಿ ಕಾಣಬಹುದು. ಅವುಗಳಲ್ಲಿ ಸಂಗಮೇಶ್ವರ ಗುಡಿಯ ಎಡಬದಿಯಲ್ಲಿರುವ ಚಂದ್ರಶೇಖರ ದೇವಾಲಯ ವಾಸ್ತುಶಿಲ್ಪ ದೃಷ್ಟಿಯಿಂದ ವಿಶಿಷ್ಟವಾದುದು. ಇದು ಅಡ್ಡಮಾಡಿನ ಮಂಟಪ ಶೈಲಿಯಲ್ಲಿದ್ದು, ಕುಸುರಿನ ಕೆತ್ತನೆಯಾಗಲಿ, ಮೂರ್ತಿಶಿಲ್ಪಗಳಾಗಲಿ ಇಲ್ಲದೆ ಬಹು ಸರಳವಾಗಿ ಇದ್ದು ಪಟ್ಟದಕಲ್ಲಿನ ಕಟ್ಟಡಗಳಲ್ಲಿ ಪ್ರಾಚೀನವಾದದ್ದೇನೋ ಎಂದು ಅನಿಸುತ್ತದೆ. ಸಂಗಮೇಶ್ವರ ದೇವಾಲಯದ ಸುತ್ತಮುತ್ತ ಶಿವಲಿಂಗಗಳುಳ್ಳ ಸಣ್ಣ ಗುಡಿಗಳು ಕೆಲವಿವೆ. ಈ ದೇವಾಲಯಗಳ ಗುಂಪಿನ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ನಿಂತಿರುವ ಒಂದು ಕಂಬ ರಾಷ್ಟ್ರ ಕೂಟರ ಕಾಲದ ಸುಂದರ ಶಿಲ್ಪಗಳಿಂದ ಕೂಡಿರುವ ಉತ್ತಮ ಕೃತಿ.

ಪಟ್ಟದಕಲ್ಲಿನಲ್ಲಿ ಸು. 30 ಶಾಸನಗಳನ್ನು ಇದುವರೆಗೆ ಕಂಡುಹಿಡಿಯಲಾ ಗಿದೆ. ಇವುಗಳಲ್ಲಿ ಕೆಲವನ್ನು ಕಂಬಗಳಲ್ಲಿ, ಗೋಡೆಗಳಲ್ಲಿ, ತೊಲೆಗಳಲ್ಲಿ ಮತ್ತು ಶಿಲ್ಪಗಳ ಪಾದಪೀಠದಲ್ಲಿ ಕೆತ್ತಿದ್ದಾರೆ. ಅವು ಪಟ್ಟದಕಲ್ಲಿನ ದೇವಾಲಯಗಳ ರೂವಾರಿಗಳನ್ನು ಹೆಸರಿಸುತ್ತವಲ್ಲದೆ, ಆ ದೇವಾಲಯಗಳ ನಿರ್ಮಾಣಕ್ಕೆ ಕಾರಣ, ದಾನದತ್ತಿಗಳು ಇತ್ಯಾದಿಗಳನ್ನೂ ಜೊತೆಗೆ ವಿವರಿಸುತ್ತವೆ (ಗಂಗಾತಟದ ಮೃಗಥಣಿಕಾದಿಂದ ಬಂದ ಜ್ಞಾನಶಿವಾಚಾರ್ಯನ ವಿಷಯವನ್ನು ತಿಳಿಸುವ ಪ್ರಸಿದ್ಧವಾದ ಪಟ್ಟದಕಲ್ಲು ಸ್ತಂಭಶಾಸನ ಈಗ ಬಿಜಾಪುರ ವಸ್ತುಸಂಗ್ರಹಾಲಯದಲ್ಲಿದೆ).

ಒಂದು ಕಾಲದಲ್ಲಿ ಪವಿತ್ರ ಸ್ಥಳವೆಂದು ಪರಿಗಣಿತವಾಗಿದ್ದು, ಪಟ್ಟದ ಸ್ಥಾನವಾಗಿದ್ದ ಪಟ್ಟದಕಲ್ಲು ಕಲಾರಸಿಕರಿಗೆ ಹಾಗೂ ವಾಸ್ತು–ಶಿಲ್ಪ ವಿದ್ಯಾರ್ಥಿಗಳಿಗೆ ಇಂದಿಗೂ ಆಕರ್ಷಣೀಯ ಸ್ಥಾನವಾಗಿದೆ. ಒಂದೇ ಕಡೆ ನಾಗರ ಮತ್ತು ದ್ರಾವಿಡ ಶೈಲಿಯ ಉತ್ತಮ ದೇವಾಲಯಗಳನ್ನು ಕಟ್ಟಿರುವ ಏಕೈಕ ಸ್ಥಳ ಪಟ್ಟದಕಲ್ಲು. ಅಲ್ಲದೆ ಇದು ಚಳುಕ್ಯ ಶೈಲಿಯ ಕೊನೆಯ ಘಟ್ಟದ ಮಹೋನ್ನತ ಕೃತಿಗಳನ್ನೂ ಹೊಂದಿರುವ ಸ್ಥಳ. ಒಬ್ಬ ವಿದ್ವಾಂಸರ ಪ್ರಕಾರ ಇಲ್ಲಿನ ಶಿಲ್ಪಗಳು ಇಡೀ ಪಶ್ಚಿಮ ಭಾರತದಲ್ಲೇ ಅನುಪಮವಾದ ಸೌಂದರ್ಯವುಳ್ಳವು. *

**ಪಟ್ಟಾಭಿರಾಮರೆಡ್ಡಿ, ಟಿ.**: 1919–2006. ಕನ್ನಡದ ಪ್ರಮುಖ ಚಲನ ಚಿತ್ರ ನಿರ್ಮಾಪಕರು, ನಿರ್ದೇಶಕರು; ತೆಲುಗಿನ ಪ್ರಸಿದ್ಧ ಕವಿ ಹಾಗೂ ಚಿಂತಕರು. ಇವರ ಪೂರ್ಣಹೆಸರು ತಿಕ್ಕವರಪು ಪಟ್ಟಾಭಿರಾಮರೆಡ್ಡಿ. ಆಂಧ್ರಪ್ರದೇಶದ ನೆಲ್ಲೂರಿನಲ್ಲಿ 1919 ಫೆಬ್ರವರಿ 19ರಂದು ಜನಿಸಿದರು. ತಾಯಿ ಸುಂದರಮ್ಮ. ತಂದೆ ರಾಮರೆಡ್ಡಿ ಅವರು ಸಾಹಿತ್ಯಾಸಕ್ತರು, ದಾನಿಗಳು; ಸೋದರಮಾವ ಪ್ರಸಿದ್ಧ ಸಾಹಿತಿ ಮತ್ತು ರಾಜಕಾರಣಿ ಬೆಜವಾಡ ಗೋಪಾಲರೆಡ್ಡಿ. 1922ರಲ್ಲಿ ಗಾಂಧೀಜಿ ಅವರು ಇವರ ಮನೆಗೆ ಭೇಟಿಕೊಟ್ಟಿದ್ದರು. ಇವರ ಮನೆಗೆ ಶಾಂತಿನಿಕೇತನ ಎಂದು ನಾಮಕರಣ ಮಾಡಿದ್ದರು. ಅನಂತರ ಪಟ್ಟಾಭಿ ಅವರು ರವೀಂದ್ರರ ಶಾಂತಿನಿಕೇತನಕ್ಕೆ ಹೋಗಿ ವಿದ್ಯಾಭ್ಯಾಸ ಮುಂದುವರಿಸಿದರು (1937). ಇಂಗ್ಲಿಷ್ ಸಾಹಿತ್ಯಾಭ್ಯಾಸ ಮಾಡಲು ಕೋಲ್ಕತ ವಿಶ್ವವಿದ್ಯಾಲಯ ಸೇರಿದರು. ಆದರೆ ಅಲ್ಲಿಯ ವಾತಾವರಣ, ಬಡತನ, ಅಶಾಂತಿ, ಸಾಮಾಜಿಕವಾಗಿ ನಡೆಯುತ್ತಿದ್ದ ಶೋಷಣೆ ನೋಡಿ ಮನನೊಂದು ಆತಂಕಗೊಂಡು ನೆಲ್ಲೂರಿಗೆ ಹಿಂದಿರುಗಿದರು. ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಅಧ್ಯಯನ ನಡೆಸಲು ಅಮೆರಿಕದ ಕೊಲಂಬಿಯ ವಿಶ್ವವಿದ್ಯಾಲಯ ಸೇರಿ ಪದವಿ ಪಡೆದರು.

ವಿದ್ಯಾರ್ಥಿಯಾಗಿದ್ದಾಗಲೇ ಪಠಾಭಿ ಎಂಬ ಕಾವ್ಯನಾಮದಿಂದ ಕವನಗಳನ್ನು ಬರೆಯಲಾರಂಭಿಸಿದರು. ‘ಫಿಡೇಲು ರಾಗಾಲ ಡಜನ್’ (ಪಿಟೀಲು ರಾಗಗಳ ಡಜನ್, 1939) ತೆಲುಗಿನ ನವ್ಯಕಾವ್ಯಕ್ಕೆ ನಾಂದಿ ಹಾಡಿತು. ಇದು ಕನ್ನಡಕ್ಕೆ ಅನುವಾದಗೊಂಡಿದೆ (ಆರ್.ವಿ.ಎಸ್.ಸುಂದರಂ). ವಚನ ಪದ್ಯ ಎಂಬ ಆಧುನಿಕ ಕಾವ್ಯ ಪ್ರಕಾರಕ್ಕೆ ಇವರೇ ಆದ್ಯರಾದರು. ಅನಂತರ ಕಯಿತ ನಾ ದಯಿತ (ಕವಿತೆ ನನ್ನ ಹೆಂಡತಿ), ಪಠಾಭಿ ಪನ್‌ಚಾಂಗಂ ಎಂಬ ಕಾವ್ಯಾತ್ಮಕ ‘ಪನ್’ಗಳ (ಶ್ಲೇಷೋಕ್ತಿ) ಸಂಕಲನ ಪ್ರಕಟವಾದುವು.

ವಿದ್ಯಾಭ್ಯಾಸ ಮುಗಿಸಿ ಪತ್ನಿ ಸ್ನೇಹಲತಾ ಅವರೊಡನೆ ಮದರಾಸಿನಲ್ಲಿ ನೆಲಸಿದರು. ಇಬ್ಬರಿಗೂ ನಾಟಕ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿ ಅಪಾರ ಆಸಕ್ತಿ. ಇವರು 'ಮದ್ರಾಸ್ ಪ್ಲೇಯರ್ಸ್' ಎಂಬ ಹವ್ಯಾಸಿ ನಾಟಕ ಸಂಸ್ಥೆ ಸ್ಥಾಪಿಸಿದರು. ಮದರಾಸಿನಲ್ಲಿದ್ದಾಗಲೇ ಕೆಲವು ತೆಲುಗು ಚಲನಚಿತ್ರಗಳನ್ನು ನಿರ್ಮಿಸಿದರು. ಅನಂತರ ಬೆಂಗಳೂರಿಗೆ ಬಂದು ನೆಲಸಿದರು (1967). ರೆಡ್ಡಿ ದಂಪತಿಗಳಿಗೆ ರಾಮಮನೋಹರ ಲೋಹಿಯಾ, ಮಧುಲಿಮಯೆ, ಶಾಂತವೇರಿ ಗೋಪಾಲಗೌಡ ಮೊದಲಾದವರ ಆತ್ಮೀಯ ಒಡನಾಟ ಲಭಿಸಿತ್ತು. ಗೋಪಾಲಗೌಡರು ಒಮ್ಮೆ ಲೋಹಿಯಾ ಅವರಿಗೆ ಯು.ಆರ್.ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿಯ ಕಥೆಯನ್ನು ಹೇಳುತ್ತಿದ್ದುದನ್ನು ಕೇಳಿ ರೆಡ್ಡಿ ಅವರು ಅದನ್ನು ಚಲನಚಿತ್ರ ಮಾಡುವ ಆಸಕ್ತಿ ತೋರಿದರು. ಆ ಮೂಲಕ ಕನ್ನಡ ಚಲನಚಿತ್ರ ಕ್ಷೇತ್ರಕ್ಕೆ ಪದಾರ್ಪಣ ಮಾಡಿದರು. ಲೇಖಕ ಮತ್ತು ನಟ ಗಿರೀಶ ಕಾರ್ನಾಡರ ನಿರ್ದೇಶನ, ಆಸ್ಟ್ರೇಲಿಯದ ಟಾಮ್ ಕೊವನ್‌ರ ಛಾಯಾಚಿತ್ರ, ಸ್ಟೀವನ್ ಕಾರ್ಟ್ ಅವರ ಸಹಕಾರ, ರಾಜೀವ್ ತಾರಾನಾಥರ ಸಂಗೀತ, ಸ್ನೇಹಲತಾ ಅವರ ನಟನೆ–ಇವೆಲ್ಲವೂ ಮೇಳವಿಸಿ 'ಸಂಸ್ಕಾರ' (1970) ಚಿತ್ರ ಯಶಸ್ವಿಯಾಯಿತು. ಕನ್ನಡದಲ್ಲಿ ಪ್ರಾಯೋಗಿಕ ಚಲನಚಿತ್ರ ನಿರ್ಮಾಣಕ್ಕೆ ಈ ಚಿತ್ರ ನಾಂದಿ ಹಾಡಿತು. ಇವರ ಈ ಪ್ರಯತ್ನ ಕನ್ನಡ ಚಲನಚಿತ್ರರಂಗದಲ್ಲಿ ಒಂದು ಬಗೆಯ ಸಂಚಲನವನ್ನುಂಟುಮಾಡಿತು. ಭಾರತಾದ್ಯಂತ ಹೊಸ ಅಲೆಯ ಚಿತ್ರದ ಪ್ರಭಾವ ಬೀರಿದ ಮೊತ್ತಮೊದಲ ಕನ್ನಡ ಚಲನಚಿತ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಯಿತು. ಈ ಚಿತ್ರಕ್ಕೆ 1971ರಲ್ಲಿ ರಾಷ್ಟ್ರೀಯ ಚಿನ್ನದ ಪದಕ ಪ್ರಶಸ್ತಿ ಬಂದಿತಲ್ಲದೆ ಅನೇಕ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನೂ ಗಳಿಸಿತು.



ಅನಂತರ ರೆಡ್ಡಿ ಅವರು ಪಿ.ಲಂಕೇಶರ 'ಕ್ರಾಂತಿ ಬಂತು ಕ್ರಾಂತಿ'ಯನ್ನು ಚಂಡಮಾರುತ (1977) ಎಂಬ ಹೆಸರಿನಲ್ಲಿ ಚಲನಚಿತ್ರ ಮಾಡಿದರು. ಶೃಂಗಾರ ಮಾಸ (1984) ಎಂಬ ವಿಶಿಷ್ಟ ಚಲನಚಿತ್ರವನ್ನು ನಿರ್ಮಿಸಿದರು. ಇವರ ನಿರ್ಮಾಣವಾದ 'ದೇವರಕಾಡು' (1993) ಅತ್ಯುತ್ತಮ ಚಿತ್ರವೆಂದು ಪ್ರಶಂಸೆ ಪಡೆಯಿತು. ರೆಡ್ಡಿಯವರು ದೂರದರ್ಶನ ಮಾಧ್ಯಮದಲ್ಲಿ ಕನ್ನಡದ ಶ್ರೇಷ್ಠ ಕಥೆಗಳನ್ನು ಪ್ರಸಾರ ಮಾಡಿದರು. ಅರವಿಂದರ 'ಸಾವಿತ್ರಿ'ಯನ್ನು ನಾಟಕ ರೂಪಕ್ಕೆ ಪರಿವರ್ತಿಸಿದರು. ಇದು ಯಶಸ್ವಿ ಪ್ರದರ್ಶನವೆನಿಸಿತು.

ರೆಡ್ಡಿಯವರು ಬಹುಮುಖ ಪ್ರತಿಭಾವಂತರು. ಪಾಶ್ಚಾತ್ಯ ನವ್ಯಕವಿಗಳ ಧೋರಣೆಗಳನ್ನು ತೆಲುಗು ಸಾಹಿತ್ಯಕ್ಕೆ ತಂದ ಅತಿನವ್ಯ ಕವಿ ಇವರು. ಇವರಿಗೆ ಗಣಿತ ಕ್ಷೇತ್ರದಲ್ಲೂ ಬಹಳ ಆಸಕ್ತಿ ಇತ್ತು. ನಂಬರ್ ಥಿಯರಿಗೆ ಸಂಬಂಧಿಸಿದಂತೆ ಮೂಲಭೂತ ಸಮಸ್ಯೆಯೊಂದನ್ನು ಬಿಡಿಸಲು ಪ್ರಯತ್ನಿಸಿ ಬಹುಪಾಲು ಯಶಸ್ವಿಯಾಗಿದ್ದರಂತೆ. ಕ್ರಿಯಾಶೀಲರಾಗಿ 87 ವರ್ಷಗಳ ತುಂಬು ಜೀವನ ನಡೆಸಿದ ಇವರು 2006 ಮೇ 6ರಂದು ಬೆಂಗಳೂರಿನಲ್ಲಿ ನಿಧನರಾದರು. **(ಎ.ಡಿ.)**

**ಪತ್ತಿನ ಸೇವೆ:** ಗೌರವಕ್ಕೆ ಅರ್ಹರಾದವರಿಗೆ ಪತ್ತು (ಪಂಜು) ಹಿಡಿದು ಸಲ್ಲಿಸುವ ಸೇವೆ (ನಮಸ್ಕಾರ). ಇದನ್ನು ಜ್ಯೋತಿ ಸೇವೆ, ದೀವಟಿಗೆ ಸಲಾಮು ಎಂದೂ ಕರೆಯುವುದುಂಟು. ಸುಮಾರು ಎರಡು ಮೊಳ ಉದ್ದದ ಬಿದಿರು ಕಡ್ಡಿಯ ಮೇಲ್ಭಾಗದ ಒಂದು ಮೊಳದಷ್ಟು ಭಾಗಕ್ಕೆ ತೆಳುವಾದ ಬಟ್ಟೆ ಸುತ್ತಿ ಅದನ್ನು ಮುಂಗೈ ಗಾತ್ರಕ್ಕೆ ಮಾಡಿ, ಅನಂತರ ಅದರ ಮೇಲ್ಭಾಗ ಬಿಟ್ಟು ಉಳಿದ ಭಾಗಕ್ಕೆಲ್ಲಾ ಸಗಣಿ ಬಗ್ಗಡ ಬಳಿದು ಒಣಗಿಸುವರು. ಸಗಣಿ ಬಳಿಯುವುದರಿಂದ ಬಟ್ಟೆ ಒಂದಕ್ಕೊಂದಕ್ಕೆ ಅಂಟಿಕೊಳ್ಳುವುದಲ್ಲದೆ ಎಣ್ಣೆ ಹಾಕಿ ಉರಿಸಿದಾಗ ನಿಧಾನವಾಗಿ ಉರಿಯುವುದಕ್ಕೂ ಅನುಕೂಲವಾಗುತ್ತದೆ. ಇದನ್ನೇ ಪತ್ತು ಎನ್ನುವುದು. ಇದು ಸೇದುವ ಚುಟ್ಟದ ಆಕಾರವಿರುತ್ತದೆ. ಪತ್ತಿನ ಸೇವೆಯನ್ನು ಹೆಚ್ಚಾಗಿ ದೇವರಿಗೂ ರಾಜಮಹಾರಾಜರುಗಳಿಗೂ ಗುರುಹಿರಿಯರಿಗೂ ಸಲ್ಲಿಸುವುದು ವಾಡಿಕೆ. ಮದುವೆಗಳಲ್ಲಿ ಪತ್ತು ಹಿಡಿದರೂ ಸೇವೆ ಸಲ್ಲಿಸುವಂತೆ ಕಾಣಬರುವುದಿಲ್ಲ.

ಪತ್ತುಗಳನ್ನು ಹಿಡಿಯುವವರು ಅಗಸರು ಮಾತ್ರ. ಇದು ಇವರ ಕುಲ ಕಸಬೂ ಹೌದು. ಇವರ ಜೊತೆ ಬೇರೆಯವರು ಬೆಳಕಿನ ಉಳಿದ ಸಾಧನಗಳಾದ ದೀವಟಿಗೆ, ಇಲಾಲು (ಹಿಲಾಲು), ಕಕ್ಕಡ, ದೊಂದಿ, ಸೂಡಿ ಮುಂತಾದವುಗಳನ್ನು ಹಿಡಿಯುತ್ತಾರೆ. ಪತ್ತುಗಳನ್ನು ಉರಿಸಲು ಹಿಂದೆ ಹೊಂಗೆ, ಹಿಪ್ಪೆ, ಬೇವು, ಹರಳು ಮುಂತಾದ ಎಣ್ಣೆ ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಸೀಮೆಎಣ್ಣೆಯನ್ನು ಬಳಸುತ್ತಾರೆ. ಉರಿ ಕ್ಷೀಣಿಸಿದಂತೆ ಮತ್ತೆ ಮತ್ತೆ ಎಣ್ಣೆ ಹಾಕಿ ಪತ್ತನ್ನು ದಳವಾಗಿ ಉರಿಸುತ್ತಾರೆ. ಸೇವೆಯಲ್ಲಿ ಎರಡು ಮೂರು ವಿಧವಿದ್ದಂತೆ ತಿಳಿಯುತ್ತದೆ. ಒಂದು: ದೇವರ ಎದುರಿಗೆ ನಿಂತು, ಒಂದೊಂದು ಕೈಯಲ್ಲಿ ಒಂದೊಂದು ಪತ್ತು ಹಿಡಿದು, ಕೈ ಅಗಲಿಸಿ ಪತ್ತುಗಳನ್ನು ಹೊರಭಾಗದಿಂದ ಮುಂದಕ್ಕೆ ತಂದು ಕೂಡಿಸಿ ಭಕ್ತಿಯಿಂದ ನಡು ಬಗ್ಗಿಸಿ ಕಣ್ಮುಚ್ಚಿ ನಮಸ್ಕಾರ ಮಾಡುವುದು, ಅನಂತರ ಉಳಿದ ಮೂರು ದಿಕ್ಕುಗಳಿಗೂ ಅದೇ ರೀತಿ ಮಾಡುವುದು. ಎರಡು: ಪತ್ತುಗಳನ್ನು ದೇವರ ಮುಂದೆ ಅಡ್ಡಡ್ಡವಾಗಿ ಇಟ್ಟು, ಜ್ಯೋತಿಯನ್ನು ದಾಟಿ, ಮತ್ತೆ ದೇವರಿಗೆ ಎದುರಾಗಿ ನಿಂತು ಮೇಲೆ ಹೇಳಿದ ರೀತಿಯಲ್ಲಿ ನಮಸ್ಕಾರ ಮಾಡುವುದು.ದೀವಟಿಗೆ ಸಲಾಮು ಎಂಬ ಪದ ಬಹುಶಃ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಕಾಲದಿಂದೀಚೆಗೆ ಚಾಲ್ತಿಯಲ್ಲಿ ಬಂದಿರಬಹುದೆಂದು ಊಹಿಸ ಬಹುದಾಗಿದೆ. **(ಎಚ್.ಎಲ್.ಎನ್.)**

**ಪತ್ರ ಸಾಹಿತ್ಯ:** ಕಾವ್ಯ ನಾಟಕ ಪ್ರಬಂಧಗಳಂತೆ ಪತ್ರ ಸಾಹಿತ್ಯವೂ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಒಂದು; ಅಷ್ಟೇ ಮುಖ್ಯವಾದುದೂ ಹೌದು. ಸಾಹಿತ್ಯ ಎಂಬ ಪದವನ್ನು ಅದರ ಸ್ಥೂಲ ಹಾಗೂ ವ್ಯಾಪಕ ಅರ್ಥದಲ್ಲಿ ಬಳಸಿದಾಗ ವ್ಯಾವಹಾರಿಕ ಪತ್ರಗಳೂ ಪತ್ರಸಾಹಿತ್ಯದಲ್ಲಿ ಸೇರುತ್ತವೆ. ಆದರೆ ಇಲ್ಲಿ ನಿಜ ಸಾಹಿತ್ಯದ ಸೊಗಡನ್ನುಳ್ಳ ಪತ್ರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ.

ಪ್ರಾರಂಭದ ದಿನಗಳಲ್ಲಿ ಅಂದರೆ ಭಾಷೆಯನ್ನು ಮನುಷ್ಯ ಸಂವಹನ ಕಾರ್ಯಕ್ಕಾಗಿ ಬಳಸಿಕೊಂಡಾಗಲೇ ಪತ್ರಗಳ ಉಗಮವಾಯಿತು ಎಂದು ನಾವು ಸ್ಥೂಲವಾಗಿ ಗ್ರಹಿಸಬಹುದು. ಸಂವಹನ ಕ್ರಿಯೆ ವಿಸ್ತಾರವಾದಂತೆಲ್ಲ ಭಾಷಾಬಳಕೆ ಆ ಮೂಲಕ ಪತ್ರಗಳ ಬಳಕೆಯೂ ವಿಸ್ತಾರವಾಗುತ್ತ ಬಂದುವು. ಅಷ್ಟೇ ಅಲ್ಲದೆ ಸಾಮಾನ್ಯವಾಗಿ ಎಲ್ಲ ಜನರ ದಿನನಿತ್ಯದ ಬದುಕಿನಲ್ಲಿ ಪತ್ರದ ಸ್ಥಾನವಿರುವುದರಿಂದ ಇದಕ್ಕೆ ಉಳಿದೆಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಪ್ರಾಮುಖ್ಯ ಹೆಚ್ಚಿತು.

ಕನ್ನಡದ ಮೊದಲ ಗದ್ಯಗ್ರಂಥವಾದ ವಡ್ಡಾರಾಧನೆಯಲ್ಲಿ ಓಲೆ ಎಂಬ ಪದವನ್ನು ಪತ್ರ ಎಂಬ ಅರ್ಥದಲ್ಲಿ ಬಳಸಲಾಗಿದೆ. 15ನೆಯ

ಶತಮಾನದ ಹೊತ್ತಿಗೆಲ್ಲ ಕಾಗದ ಎಂಬುದು ಪತ್ರಕ್ಕೆ ಪರ್ಯಾಯವಾಗಿ ಬಳಕೆಯಾಗಿರುವುದನ್ನು ಪುರಂದರದಾಸರ 'ಕಾಗದ ಬಂದಿದೆ' ಎಂಬ ಕೀರ್ತನೆಯಲ್ಲಿ ಗುರುತಿಸಬಹುದು.

ವೈಯಕ್ತಿಕ ಪತ್ರಗಳು: ದಿನನಿತ್ಯದ ಬದುಕಿನಲ್ಲಿ ನಾವು ನಾನಾ ಬಗೆಯ ಪತ್ರವ್ಯವಹಾರವನ್ನು ಮಾಡುತ್ತಿರುತ್ತೇವೆ. ಮತ್ತೊಬ್ಬರ ಕ್ಷೇಮಸಮಾಚಾರ ತಿಳಿದುಕೊಳ್ಳುವುದಕ್ಕೆ, ಮಾನವೀಯ ಸಂಬಂಧಗಳನ್ನು ಕುದುರಿಸಿಕೊಳ್ಳುವುದಕ್ಕೆ ಅಥವಾ ವಿಷಯ ಸಂಗ್ರಹಣೆಗಾಗಿ ಪತ್ರಗಳನ್ನು ಒಬ್ಬರಿಗೊಬ್ಬರು ಬರೆಯುತ್ತೇವೆ. ಇಂಥ ಪತ್ರಗಳಲ್ಲಿ ದಿನನಿತ್ಯದ ಆಗುಹೋಗಿನ ಸಂಗತಿಗಳಿರಬಹುದು ಅಥವಾ ವೈಯಕ್ತಿಕ ಸಂಗತಿಗಳಿರ ಬಹುದು. ಸಾಮಾನ್ಯವಾಗಿ ಈ ಮಾದರಿಯ ಪತ್ರಗಳಲ್ಲಿ ಆತ್ಮೀಯತೆ ಎದ್ದು ಕಾಣುವ ಲಕ್ಷಣವಾಗಿರುತ್ತದೆ. ವೈಯಕ್ತಿಕ ಪತ್ರಗಳ ಮೂಲಕ ಪ್ರಸಿದ್ಧ ವ್ಯಕ್ತಿಯೊಬ್ಬನ ಜೀವನದ ಸೋಲುಗೆಲವುಗಳನ್ನು, ಆ ಮೂಲಕ ಆಯಾ ಸಮಾಜಕ್ಕೆ ಅಥವಾ ದೇಶಕ್ಕೆ ಆತನ ಕೊಡುಗೆಗಳ ಇತಿಮಿತಿಗ ಳನ್ನು ಅರಿತುಕೊಳ್ಳಬಹುದು. ಈ ವೈಯಕ್ತಿಕ ಅಥವಾ ಸ್ನೇಹಪತ್ರಗಳ ಅನೇಕ ಸಂಕಲನಗಳನ್ನು ನಾವು ಕನ್ನಡದಲ್ಲಿ ಮತ್ತು ಇತರ ಭಾಷೆಗಳಲ್ಲಿ ಕಾಣಬಹುದಾಗಿದೆ.

1947ರಲ್ಲಿ ಉರ್ದುಮೂಲದಿಂದ (ಲೇ: ಕಾಜಿಅಬ್ದುಲ್ ಗಫಾರ್) ಕನ್ನಡಕ್ಕೆ ಅನುವಾದವಾಗಿ ಬಂದ (ಅನು : ಲಿಂಗಸುಗೂರು ವಿಠ್ಠಲರಾಯರು) ಲೈಲಾ ಪತ್ರಗಳು ಪ್ರಣಯ ಸಂಬಂಧವಾದವು. ಈ ಪತ್ರಗಳು ಮುಸ್ಲಿಂ ಧಾರ್ಮಿಕ ನಿಯಮಗಳನ್ನೇ ಮೂಲಭೂತವಾಗಿ ಪ್ರಶ್ನಿಸುತ್ತವೆ. ನಾಡಿಗ ಕೃಷ್ಣಮೂರ್ತಿಯವರ ನಮ್ಮ ಕಾಗದಗಳು (1950) ಎಂಬ ಸಂಕಲನದಲ್ಲಿ ನಮಗೆ ಅಮೆರಿಕದ ಜನ, ಅವರ ಸಂಸ್ಕೃತಿ, ಲಂಡನ್ನಿನ ಜನಜೀವನ ಮುಂತಾದವುಗಳ ಪರಿಚಯವಾಗುತ್ತದೆ. 1950 ರಲ್ಲಿ ಕನ್ನಡದಲ್ಲಿ ಬಂದ ವಿವೇಕಾನಂದರ ಪತ್ರಮಾಲೆಯಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದ ಅನೇಕ ಸಂಗತಿಗಳಿವೆ. 'ಪ್ರಪಂಚದಲ್ಲಿ ಪ್ರೀತಿಸಲು ಯೋಗ್ಯವಾದುದು ಒಂದೇ ವಸ್ತು. ಅದೇ ಭಗವಂತ (ಪತ್ರ 10) ಎಂಬಲ್ಲಿ ವಿವೇಕಾನಂದರ ದೈವಪ್ರಜ್ಞೆಯನ್ನೂ ಶ್ರೀಮಂತರು ಎನಿಸಿಕೊಳ್ಳುವವರನ್ನು ಎಂದಿಗೂ ನೆಚ್ಚಬೇಡಿ, ಬದುಕುವುದಕ್ಕಿಂತ ಹೆಚ್ಚಾಗಿ ಅವರು ಸತ್ತಿದ್ದಾರೆ' (ಪತ್ರ 14) ಎಂಬಲ್ಲಿ ಶ್ರೀಮಂತರ ಸತ್ತಬದುಕನ್ನೂ ಜಾತಿ ಎಂಬುದು ಸಮಾಜದಲ್ಲಿ ಒಂದು ಆಂತರಿಕ ವಿಭಾಗವಾಗಿ 'ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ. ಜನ ಕಳೆದುಕೊಂಡ ಸಾಮಾಜಿಕ ವ್ಯಕ್ತಿತ್ವವನ್ನು ಅವರಿಗೆ ಮರಳಿ ಕೊಡುವುದರಿಂದ ಈ ಪಿಡುಗು ತಾನೆ ಮಾಯವಾಗುವುದು' (ಪತ್ರ 15)–ಎಂಬಲ್ಲಿ ವಿವೇಕಾನಂದರ ಜೀವನದೃಷ್ಟಿಯನ್ನೂ ಗುರುತಿಸ ಬಹುದಾಗಿದೆ.

ವಿ. ಶೆಟ್ಟಿಯವರ ಕೆನಡದಲ್ಲಿ ಕನ್ನಡಿಗ–ನಮಗೆ ಕೆನಡದ ಜನಜೀವನದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸುವ ಒಂದು ಉತ್ತಮ ಪತ್ರಸಂಕಲನ. ಎಚ್. ವಿ. ಚಂದ್ರಶೇಖರ್ ತಮ್ಮ ತಂಗಿಗೆ ಬರೆದಿರುವ ಪುಸ್ತಕ 'ಪಯಣದ ಹಾದಿಯಿಂದ' ಪ್ರವಾಸ ಮಾಡಿದಾಗ ತಂಗಿಗೆ ಬರೆದ ಪತ್ರಗಳು ವೀಕ್ಷಕ ವಿವರಣೆಯಂತೆ ಎಂಬ ಅವರ ಮಾತು ಅರ್ಥಪೂರ್ಣವಾದುದು. ಸಾಹಿತ್ಯ ಲಾಲನೆ (1967) ಮಾಸ್ತಿ ವೆಂಕಟೇಶ ಅಯ್ಯಂಗಾರರಿಂದ ಸಂಪಾದಿತವಾದ ಪತ್ರಸಂಕಲನ. ಸಂಕಲನದ ಬಹುಭಾಗ ಇಂಗ್ಲಿಷ್ ಪತ್ರಗಳಿಂದ ತುಂಬಿದೆ. ಮಾಸ್ತಿಯವರು ಬರೆದ ಮತ್ತು ಅವರಿಗೆ ಬೇರೆಯವರು ಬರೆದ ಪತ್ರಗಳಲ್ಲಿ ಕೆಲವು ಕಡೆ ಅವರ ಕೃತಿಗಳ ವಿಮರ್ಶೆ ನಡೆದಿರುವುದೂ ಉಂಟು.

ಡಿ.ವಿ.ಜಿ. ಯವರು ಚೆನ್ನಬಸವನಾಯಕ ಎಂಬ ಪುಸ್ತಕದಲ್ಲಿ ಪರೋಕ್ಷವಾಗಿ ಮಾಸ್ತಿಯವರ ಚೆನ್ನಬಸವನಾಯಕ ಕೃತಿಯ ಮೌಲ್ಯ ನಿಷ್ಕರ್ಷಣೆಯ ಪ್ರಯತ್ನ ನಡೆದಿರುವುದು ಕಾಣುತ್ತದೆ. ಮೋಪಸಾನ ಓಲೆಗಳು (ಅನು: ಪಿ. ವೆಂಕೋಬಾಚಾರ್ಯ) ಫ್ರೆಂಚ್ ಸಾಹಿತಿ ಮೋಪಸಾನ ಜೀವನದ ಕಷ್ಟಸುಖಗಳಿಗೆ ಹಿಡಿದ ಕನ್ನಡಿಯಂತಿವೆ.

ದಕ್ಷಿಣೇಶ್ವರ ದರ್ಶನ (1962) ಪತ್ರಸಂಕಲನವನ್ನು ಪ್ರಕಟಿಸಿದ ಕೋ. ಚೆನ್ನಬಸಪ್ಪ ಅವರು ಪುಸ್ತಕದ ಮುನ್ನುಡಿಯಲ್ಲಿ ಪತ್ರ ಬರೆಯುವವನಿಗೆ ವಿಷಯದ ಪರಿಮಿತಿ ಯಾವುದೂ ಇಲ್ಲ. ಅವನ ಕಲ್ಪನಾ ಸಾಮರ್ಥ್ಯಕ್ಕೆ ಸ್ವಚ್ಛಂದ ಸಾಮರ್ಥ್ಯವಿದೆ ಎಂದು ತಿಳಿಸುತ್ತಾರೆ. ಈ ದೇಶದ ಜಾತಿಪದ್ಧತಿ ಹೋಗಲು ಅವರು ಅಲ್ಲಿ ಕೊಡುವ ಪರಿಹಾರ ಗಮನಾರ್ಹವಾದುದು. ನವರತ್ನರಾಮ್ ಅವರ ಪ್ಯಾರಿಸ್ಸಿನಿಂದ ಪ್ರೇಯಸಿಗೆ (1966) ಎಂಬುದು ಒಂದು ಉತ್ತಮ ಪತ್ರಸಂಕಲನ. ಪುಸ್ತಕದುದ್ದಕ್ಕೂ ಬರುವ ಪ್ಯಾರಿಸ್ ನಗರದ ವರ್ಣನೆ, ಅಲ್ಲಿಯ ವೇಶ್ಯಾಜೀವನ, ಹೋಟೆಲುಗಳ ವರ್ಣನೆ, ಭಾಷಾ ಗೊಂದಲ ಮುಂತಾದವನ್ನು ಸರಳವಾಗಿ, ಮನಮೋಹಕವಾಗಿ ನಿರೂಪಿಸಿದ್ದಾರೆ. ಹರಿಹರಪ್ರಿಯರು ಸಂಪಾದಿಸಿದ ಕುವೆಂಪು ಪತ್ರಗಳು (1974) ಕುವೆಂಪು ಅವರು ಬೇರೆ ಬೇರೆಯವರಿಗೆ ಬರೆದ ಪತ್ರಗಳ ಸಂಕಲನ. ದೇಜಗೌ ಅವರ ಕುಲಪತಿಯ ಪತ್ರಗಳು (1975)– ಅವರ ಕನ್ನಡದ ಅಭಿಮಾನವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಸಿಂಪಿ ಲಿಂಗಣ್ಣ ಸಂಪಾದಿತ ಅರವಿಂದರ ಪತ್ರಗಳು ಅಧ್ಯಾತ್ಮ ಸಂಗತಿಗಳನ್ನು ತಿಳಿಸುತ್ತವೆ. ನೆಹರೂ ಅವರ ಪತ್ರಗುಚ್ಛ (1975) ಅವರ ವಿಭಿನ್ನ ಮುಖಗಳನ್ನು ಪರಿಚಯ ಮಾಡಿಕೊಡುತ್ತದೆ.

ವೈಯಕ್ತಿಕ ಪತ್ರಗಳಲ್ಲಿ ಯಾವುದನ್ನು ಪ್ರಕಟಿಸಬೇಕು ಯಾವುದನ್ನು ಪ್ರಕಟಿಸಬಾರದು ಎಂಬ ಪರಿವೆ ಇರಬೇಕಾಗುತ್ತದೆ. ಇಲ್ಲದಿದ್ದರೆ ಪತ್ರಗಳ ಉದ್ದೇಶ ಸಾಧನೆಯಾಗದೇ ಹೋಗುವ ಸಾಧ್ಯತೆಗಳೂ ಇರುತ್ತವೆ.

ಸಾಹಿತ್ಯಕ ಪತ್ರಗಳು : ಸಾಹಿತ್ಯ ಪ್ರಕಾರಗಳಲ್ಲಿ ಹರಟೆಯ ಶೈಲಿ ಬಹುಜನಪ್ರಿಯವಾದುದು. ಬಹುಶಃ ಅದಕ್ಕಿಂತ ಆಕರ್ಷಕವಾದುದು ಮತ್ತು ಅದಕ್ಕಿಂತಲೂ ಹೆಚ್ಚು ಜನಪ್ರಿಯವಾದುದು ಸಾಹಿತ್ಯಕ ಪತ್ರಗಳು. ಹರಟೆಯ ಶೈಲಿ ಒಳ್ಳೆಯ ಸ್ನೇಹ ಪತ್ರದ ಲಕ್ಷಣ, ಅದು ಒಂದು ಘನವಿಚಾರದ ಅಂತರಂಗವನ್ನು ಒಂದು ಲಘು ಟೀಕೆಯಿಂದ ಹೊರಪಡಿಸುವ ಸೊಗಸು (ನಮ್ಮ ಕಾಗದಗಳು–ಮುನ್ನುಡಿ) ಎಂಬ ಡಿವಿಜಿ ಅವರ ಮಾತು ಸಾಹಿತ್ಯಕ ಪತ್ರಗಳಿಗೆ ಹೆಚ್ಚು ಅನ್ವಯಿಸುತ್ತದೆ.

ಕನ್ನಡದಲ್ಲಿ ಸಾಹಿತ್ಯಕ ಪತ್ರಗಳ ಸಂಖ್ಯೆ ಗಣನೀಯವಾಗಿ ಸಿಗದಿದ್ದರೂ ಈ ಪ್ರಕಾರದಲ್ಲಿ ಕೆಲವು ಉತ್ತಮ ಕೃತಿಗಳು ಹೊರಬಂದಿವೆ. ಸಿ. ಕೃಷ್ಣ ಅವರ ಮುಗುದೆಯರ ಪತ್ರಗಳು (1945) ಈ ದಿಸೆಯಲ್ಲಿ ಒಂದು ಗಮನಾರ್ಹ ಪತ್ರಸಂಕಲನ. ಮುಖ್ಯವಾಗಿ ಇದು ಪ್ರಣಯ ಪತ್ರಗಳ ಸಂಕಲನವಾಗಿ ಕಂಡರೂ ಪ್ರೇಮವೆಂದರೆ ಗಂಡಹೆಂಡಿರಿಬ್ಬರೇ ಸಂತೋಷವಾಗಿರುವುದಲ್ಲ. ತಮ್ಮ ಸುತ್ತಮುತ್ತ ಇರುವವರಿಗೂ ಸಂತೋಷದ ಬೆಳಕನ್ನು ನೀಡುವಂಥದಾಗಿರಬೇಕು ಎಂಬ ದೇಶೋ ವಿಶಾಲವಾದ ನೀತಿಯ ತಿಳಿವು ಇಲ್ಲಿದೆ ಎಂದು ಪುಸ್ತಕದ ಮುನ್ನುಡಿಕಾರ ರಾದ ಕೂಡಲಿ ಚಿದಂಬರಂ ಅವರು ಹೇಳಿರುವ ಮಾತು ಈ ಸಂಕಲನಕ್ಕೆ ಬಹುಪಾಲು ಅನ್ವಯಿಸುತ್ತದೆ. ವಿ.ಕೃ. ಗೋಕಾಕರ ಜೀವನ ಪಾಠಗಳು (1961) ಎಂಬ ಕೃತಿಯಲ್ಲಿ ಬಹುಪಾಲು ದೀರ್ಘಪತ್ರಗಳಿವೆ. ಪತ್ರಗಳ ವಸ್ತು ದೇವರು, ಪ್ರೇಮ, ಪ್ರೀತಿ, ಭಕ್ತಿ, ಮಾರ್ದವತೆ ಮುಂತಾದವು. ಕೊಚ್ಚಿಕೊಂಡು ಬರುವ ಕ್ರೋಧ ಎಂಥ ಅಣೆಕಟ್ಟನ್ನಾದರೂ ಕೋಡಿವರಿದು ಬರಬಲ್ಲದು ( ಪತ್ರ 1), ಮಹತ್ವಾಕಾಂಕ್ಷೆ ಉರಿಯ ನಾಲಗೆಯಿದ್ದಂತೆ,

ಅದಕ್ಕೆ ಇಂಧನ ದೊರೆತಲ್ಲಿ ಅದು ಚಿದಾಕಾಶವನ್ನೇ ವ್ಯಾಪಿಸಿ ಅದನ್ನೆಲ್ಲ ಹೊಗೆಯಿಂದ ತುಂಬಿ ಬಿಡುವುದು (ಪತ್ರ 11) ಎಂಬಲ್ಲಿ ಎಚ್ಚರಿಕೆಯೂ ಮನೆ ಒಂದು ಪ್ರಯೋಗಶಾಲೆ, ವಿರಾಮಧಾಮ (ಪತ್ರ 13) ಎಂಬಲ್ಲಿ ತಿಳಿವಳಿಕೆಯೂ ಓ ಗೆಳೆಯ ಚೊಕ್ಕಾಗಿ ಕಳೆದುಹೋಗು, ಇದ್ದಾಗ ಹೂವಿನಂತೆ ಗಮಗಮಿಸು, ಇಲ್ಲದಾಗ ಅದರ ಸವಿನೆನಪು ಉಳಿಯಲಿ (ಪತ್ರ 14) ಎಂಬಲ್ಲಿ ಹಿತವಚನವೂ ಇದೆ. ಬದುಕು ಬಂಗಾರ (1966) ಎಂಬುದು ಪಂಚಾಕ್ಷರಿ ಹಿರೇಮಠರು ಬರೆದಿರುವ ಪ್ರಣಯಪತ್ರಗಳ ಸಂಕಲನ. ಜೀವನ ವಿಮರ್ಶೆ ನೈತಿಕದೃಷ್ಟಿ ಸಂಕಲನದಲ್ಲಿ ಕಾಣಬರುತ್ತವೆ. ಎಂ. ಗೋವಿಂದ ಪೈ ಅವರ ಕೆಲವು ಪತ್ರಗಳು (ಸಂ: ಜಿ. ಪಿ. ರಾಜರತ್ನಂ, 1971), ಸಂಶೋಧನ ದೃಷ್ಟಿಯಿಂದ ಕೂಡಿವೆ. ಪತ್ರಗಳ ಭಾಷೆ ಬಹುಪಾಲು ಇಂಗ್ಲಿಷ್. ತೀರ್ಥಂಕರ, ಗೊಮ್ಮಟ ಮುಂತಾದ ಪದಗಳ ನಿಷ್ಪತ್ತಿಯ ಬಗ್ಗೆ ಪತ್ರವ್ಯವಹಾರ ನಡೆಸಿರುವುದು ವ್ಯಕ್ತವಾಗುತ್ತವೆ. ಎ.ಎಸ್. ನಂಜುಂಡಸ್ವಾಮಿ ಅವರ ಗೌರವ ತಪಸ್ವಿ (1967) ಪತ್ರಸಂಕಲನ ದಲ್ಲಿ ಸಾಹಿತ್ಯ, ಕಲೆ ಮತ್ತು ಧರ್ಮ ಇತ್ಯಾದಿಗಳನ್ನು ಕುರಿತು ಚರ್ಚಿಸಲಾಗಿದೆ. ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರ ಪತ್ರಸಂಕಲನ ಸ್ನೇಹಸೇತುವಿನ (1971) ಪತ್ರಗಳು ಮೇಲು ನೋಟಕ್ಕೆ ವೈಯಕ್ತಿಕ ಪತ್ರಗಳಂತೆ ಕಂಡುಬಂದರೂ ಅನೇಕ ಪತ್ರಗಳಲ್ಲಿ ಸಾಹಿತ್ಯ, ಕಲೆ, ಜೀವನ ಮೀಮಾಂಸೆಗಳೇ ತುಂಬಿವೆ.

ನೆಹರೂ ಅವರ ಪ್ರಸಿದ್ಧವಾದ ಕೃತಿ 'ಮಗಳಿಗೆ ತಂದೆಯ ಓಲೆಗಳು'. ಗಾಂಧಿಯವರ ಪತ್ರಗಳೂ ಕನ್ನಡಕ್ಕೆ ಬಂದಿರುವುದು ಗಮನಿಸಬೇಕಾದ ವಿಷಯ. ಈ ಪತ್ರಗಳಲ್ಲಿ ಹಿರಿಯ ಭಾರತೀಯರಿಬ್ಬರ ಜೀವನ ದೃಷ್ಟಿ, ವಿವೇಕ ಎದ್ದು ಕಾಣುತ್ತವೆ.

ಎ.ಎನ್. ಮೂರ್ತಿರಾಯರ ಚಿತ್ರಗಳು–ಪತ್ರಗಳು (1978) ಸಂಕಲನ ದಲ್ಲಿ ಅವರು ತೀನಂಶ್ರೀ ಅವರಿಗೂ ತಮ್ಮ ಮಗನಿಗೂ ಸೊಸೆಗೂ ಬರೆದ ಪತ್ರಗಳಲ್ಲಿ ಕೆಲವು ಉತ್ತಮ ಸಾಹಿತ್ಯಕ ಮೌಲ್ಯದವಾಗಿವೆ.

ದೇಜಗೌ ಅವರು ವಿದೇಶದಲ್ಲಿರುವ ತಮ್ಮ ಮಗಳಿಗೆ ಬರೆದ ಪತ್ರಗಳ ಸಂಕಲನ 'ತುಡಿತ'. ಇವುಗಳಲ್ಲಿ ತಂದೆ ಮತ್ತು ಮಗಳ ಭಾವನಾತ್ಮಕ ಸಂಬಂಧದ ತೀವ್ರತೆಯನ್ನು ಕಾಣಬಹುದು.

ಪತ್ರಸಂಕಲನ ವ್ಯವಸಾಯ ಕನ್ನಡದಲ್ಲಿ ಇನ್ನೂ ಸಾಕಷ್ಟು ಆಗಬೇಕಾಗಿದೆ. ರಾಜಕಾರಣಿ ಅಥವಾ ಅಧಿಕಾರಿಗಳ ಮಾತಂತಿರಲಿ, ಸಾಹಿತಿಗಳೂ ಕನ್ನಡ ದಲ್ಲಿ ಸಾಕಷ್ಟು ಪತ್ರಸಾಹಿತ್ಯವನ್ನು ಸೃಷ್ಟಿಸಿಲ್ಲ ಎಂಬ ದೇಜಗೌ ಅವರ ಮಾತು ಕನ್ನಡ ಪತ್ರಸಾಹಿತ್ಯದ ಕೊರತೆಯನ್ನು ತೋರಿಸುತ್ತದೆ. *

**ಪತ್ರಿಕೋದ್ಯಮ:** ಕರ್ನಾಟಕದ ಪತ್ರಿಕೋದ್ಯಮಕ್ಕೆ 160 ವರ್ಷಗಳ ದೀರ್ಘ ಇತಿಹಾಸವಿದೆ. ಈ ಇತಿಹಾಸ ವಾರ್ತಾಪತ್ರಿಕೆ ಮತ್ತು ನಿಯತ ಕಾಲಿಕೆಗಳ ಬರೆವಣಿಗೆ, ಸಂಪಾದನೆ ಮತ್ತು ಪ್ರಕಟಣೆ ಅಲ್ಲದೆ, ಸುದ್ದಿ ಸಂಗ್ರಹಣ, ಪ್ರಸಾರಣ, ಪತ್ರಿಕೆಗಳ ನಿರ್ವಹಣ, ಜಾಹೀರಾತು ಮುಂತಾದ ಚಟುವಟಿಕೆಗಳನ್ನೆಲ್ಲ ಒಳಗೊಂಡಿದೆ. ಪ್ರಥಮದಲ್ಲಿ ಧರ್ಮಪ್ರಚಾರ, ಅನಂತರ ಕನ್ನಡ ನಾಡು ಮತ್ತು ನುಡಿಯ ಏಳ್ಗೆ–ಈ ಉದ್ದೇಶಗಳನ್ನಿಟ್ಟು ಕೊಂಡು ಪತ್ರಿಕೆಗಳು ಪ್ರಾರಂಭವಾದುವು. ಬಹುತೇಕ ಪತ್ರಿಕೆಗಳು ಕನ್ನಡ ನವೋದಯದ ಕಾಲದಲ್ಲಿ ಊರ್ಜಿತಗೊಂಡು, ರಾಷ್ಟ್ರಬಿಡುಗಡೆಯ ಮತ್ತು ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಕಾಲದಲ್ಲಿ ಜನರಲ್ಲಿ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಲು ಛಲದಿಂದ ನಡೆದು ಹೋರಾಟದ ಬದುಕನ್ನು ನಡೆಸಿದುವು. ಎರಡನೆಯ ಮಹಾಯುದ್ಧಾನಂತರ ಕಾಲದಲ್ಲಿ ಕರ್ನಾಟಕದ ಪತ್ರಿಕೋದ್ಯಮ ಬೃಹತ್ತಾಗಿ ಬೆಳೆದಿದೆ. ಕರ್ನಾಟಕದ ಪತ್ರಿಕೆಗಳು ಭಾರತದ ಇತರ ಭಾಷೆಗಳ ಪತ್ರಿಕೆಗಳಂತೆಯೇ ಇಲ್ಲಿಯ ಜನಜೀವನದ ವಿವಿಧ ಮುಖಗಳ ಪ್ರತಿಬಿಂಬವಾಗಿವೆ.

ಈಗ ನಮಗಿರುವ ಆಧಾರಗಳ ಪ್ರಕಾರ ಕನ್ನಡದ ಮೊದಲ ಪತ್ರಿಕೆ ಮಂಗಳೂರ ಸಮಾಚಾರ. ಇದು ಪ್ರಕಟವಾದುದು 1843 ಜುಲೈ 1ರಂದು. ಮಂಗಳೂರಿನಲ್ಲಿ ಜನಸೇವೆಯಲ್ಲಿ ತೊಡಗಿದ್ದ ಬಾಸೆಲ್ ಮಿಶನ್ನಿನ ಪಾದ್ರಿ ಹರ್ಮನ್ ಮೋಗ್ಲಿಂಗ್ ಈ ಪತ್ರಿಕೆಯ ಸಂಪಾದಕ ಹಾಗೂ ಕನ್ನಡ ಪತ್ರಿಕೋದ್ಯಮದ ಆದ್ಯ ಪ್ರವರ್ತಕ. ಈತ ಭಾರತಕ್ಕೆ ಬಂದುದು 1836ರಲ್ಲಿ ಮಂಗಳೂರಿಗೆ ಬಂದ ಬಳಿಕ ಮಂಗಳೂರು ಸಮಾಚಾರ 1844ರ ಹೊತ್ತಿಗೆ ಬಳ್ಳಾರಿಗೆ ವರ್ಗಾವಣೆಗೊಂಡಿತು. ಅಲ್ಲಿ ಕನ್ನಡ ಸಮಾಚಾರ **(ನೋಡಿ)** ಎಂದು ಹೆಸರು ಬದಲಿಸಿಕೊಂಡಿತು. ಎರಡು ವರ್ಷಗಳ ಬಳಿಕ ವಾಪಸ್ಸು ಮಂಗಳೂರಿಗೇ ಬಂದು ಕೆಲಕಾಲ ಮುಂದುವರಿಯಿತು.

ಮಂಗಳೂರ ಸಮಾಚಾರ ಕಲ್ಲಚ್ಚಿನಲ್ಲಿ ಮುದ್ರಣಗೊಳ್ಳುತ್ತಿತ್ತು. ನಾಲ್ಕು ಪುಟಗಳ ಈ ಪತ್ರಿಕೆಯ ಬೆಲೆ ಕೇವಲ ಒಂದು ದುಡ್ಡು. ಅದರಲ್ಲಿ ಅಂಚೆ ವೆಚ್ಚವೂ ಸೇರಿತ್ತು. ಪತ್ರಿಕೆಯ ಒಡೆತನ ಬಾಸೆಲ್ ಮಿಸಶನ್ನಿಗೆ ಸೇರಿದ್ದೆಂದು ಹೇಳಲಾಗಿದೆ. ಆದರೆ ಎಲ್ಲಿಯೂ ಅದರ ಉಲ್ಲೇಖವಿಲ್ಲ. ಹಾಗೆಯೇ ಕ್ರೈಸ್ತಧರ್ಮ ಪ್ರಸಾರಕ್ಕಾಗಿ ಈ ಪತ್ರಿಕೆಯನ್ನು ಮೋಗ್ಲಿಂಗ್ ಬಳಸಿಕೊಳ್ಳಲಿಲ್ಲ ಎಂಬುದು ಗಮನಿಸಬೇಕಾದ ವಿಚಾರ.

ಹೀಗೆ ಆರಂಭವಾದ ಕನ್ನಡ ಪತ್ರಿಕೋದ್ಯಮ ದೇಶದ ಇತರ ಭಾಷಾ ಪತ್ರಿಕೆಗಳಲ್ಲಿ ಆದಂತೆ ಕನ್ನಡ ಪತ್ರಿಕೋದ್ಯಮವೂ ಆರಂಭಿಕ ತೊಂದರೆಗಳನ್ನು ದಾಟಿ ಬಂದು ಈಗ ಪ್ರೌಢಾವಸ್ಥೆ ತಲಪಿದೆ. ಪತ್ರಿಕೋದ್ಯಮದ ಮುಖ್ಯ ಕವಲಾದ ದಿನಪತ್ರಿಕೆಗಳೂ ನಿಯತಕಾಲಿಕೆಗಳೂ ಈ ಅವಧಿಯಲ್ಲಿ ಕನ್ನಡದಲ್ಲಿ ಹುಲುಸಾಗಿ ಬೆಳೆದಿವೆ. ಕನ್ನಡದ ಮೊದಲ ಪತ್ರಿಕೆ ಮಂಗಳೂರ ಸಮಾಚಾರ ಪಾಕ್ಷಿಕವಾಗಿದ್ದರೆ 1849ರಲ್ಲಿ ಆರಂಭಗೊಂಡಿದ್ದ ಸುಬುದ್ಧಿ ಪ್ರಕಾಶವನ್ನು ಮೊದಲ ವಾರ ಪತ್ರಿಕೆಯೆಂದು ಗುರುತಿಸಲಾಗಿದೆ. ಅದು ಬೆಳಗಾಂವಿಯಿಂದ ಪ್ರಕಟವಾಗುತ್ತಿತ್ತು. ಕಲ್ಲಚ್ಚಿನಲ್ಲಿ ಮುದ್ರಿಸಲಾಗುತ್ತಿತ್ತು. ಕಾನರೀಸ್ ವರ್ನಾಕ್ಯುಲರ್ ಸೊಸೈಟಿಯ ಆಶ್ರಯದಲ್ಲಿ ವೆಂಕಟರಂಗೋ ಕಟ್ಟಿಯವರು 1861ರ ನವೆಂಬರ್ ತಿಂಗಳಿನಲ್ಲಿ ಹೊರಡಿಸಿದ ಕನ್ನಡ ಜ್ಞಾನಬೋಧಕ ಮೊದಲು ವಾರಪತ್ರಿಕೆಯೂ ಅನಂತರ ಮಾಸಿಕವೂ ಆಗಿತ್ತು. 1862ರಲ್ಲಿ ಬಿ.ಎಚ್.ರೈಸ್ ಬೆಂಗಳೂರಿನಲ್ಲಿ ಆರಂಭಿಸಿ 1868ರ ವರೆಗೆ ನಡೆಸಿದ ಅರುಣೋದಯ ಕನ್ನಡದ ಆದ್ಯ ಮಾಸಪತ್ರಿಕೆಗಳಲ್ಲಿ ಒಂದು.

19ನೆಯ ಶತಮಾನದಲ್ಲಿ ಪ್ರಕಟಗೊಂಡ ಕನ್ನಡ ಪತ್ರಿಕೆಗಳು ನೂರಕ್ಕಿಂತ ಕಡಿಮೆ. ಅವುಗಳಲ್ಲಿ ಮೂರ್ನಾಲ್ಕು ದಿನಪತ್ರಿಕೆಗಳನ್ನು ಬಿಟ್ಟರೆ ಉಳಿದವುಗಳೆಲ್ಲ ನಿಯತಕಾಲಿಕೆಗಳು. ಧಾರ್ಮಿಕ ವಿಷಯಗಳು, ಕನ್ನಡ ಕಾವ್ಯಗಳು, ರಾಜಕಾರಣ, ಸೃಜನಶೀಲ ಸಾಹಿತ್ಯ ಅಂದಿನ ಪತ್ರಿಕೆಗಳ ಆಸಕ್ತಿಯ ಕ್ಷೇತ್ರಗಳಾಗಿದ್ದುವು.

ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಕಟಗೊಂಡ ಶೈಕ್ಷಣಿಕ ಆಸಕ್ತಿಯ ಪತ್ರಿಕೆಗಳ ಪೈಕಿ ಹೆಸರಿಸಬೇಕಾದುದು ಕನ್ನಡ ಶಾಲಾ ಪತ್ರಿಕೆ. 1865ರಲ್ಲಿ ಬೆಳಗಾಂವಿಯಲ್ಲಿ ಮಠಪತ್ರಿಕೆ ಎಂಬ ಹೆಸರಿನಿಂದ ಈ ಪತ್ರಿಕೆ ಹೊರಟಿತು. 1867ರ ಏಪ್ರಿಲ್‌ನಲ್ಲಿ ಅದು ಶಾಲಾ ಪತ್ರಿಕೆ ಎಂದು ಪುನರ್ನಾಮಕರಣಗೊಂಡಿತು. ಬೆಳಗಾಂವಿಯಿಂದ ಧಾರವಾಡದ ಟೀಚರ್ಸ್ ಟ್ರೇನಿಂಗ್ ಕಾಲೇಜಿಗೆ ಅದರ ಒಡೆತನ ವರ್ಗಾವಣೆಗೊಂಡಿತು. 1871ರಲ್ಲಿ ಅದನ್ನು ಕನ್ನಡ ಶಾಲಾಪತ್ರಿಕೆ ಎಂದು ಕರೆಯಲಾಯಿತು. ಜೀವನ ಶಿಕ್ಷಣ ಎಂಬ ಹೆಸರಿನಿಂದ ಮುಂದುವರಿದ ಈ ಪತ್ರಿಕೆಗೆ 136 ವರ್ಷಗಳ ಇತಿಹಾಸವಿದೆ. ಕನ್ನಡದಲ್ಲಿ ಪ್ರಕಟಗೊಳ್ಳುತ್ತಿರುವ ಪತ್ರಿಕೆಗಳಲ್ಲೆಲ್ಲ ಇದು ಹಿರಿಯದಾಗಿದೆ. ಶಿಕ್ಷಣಾಧಿಕಾರಿಯಾಗಿದ್ದ ಡೆಪ್ಯುಟಿ ಚನ್ನಬಸಪ್ಪ **(ನೋಡಿ)** ಆರಂಭ ಕಾಲದಲ್ಲಿ ಈ ಪತ್ರಿಕೆಯ ಬೆನ್ನೆಲುಬಾಗಿ ಬೆಳೆಸಿದರು.

ರಾಜ್ಯಪತ್ರವಾಗಿ ಪ್ರಕಟಗೊಳ್ಳುತ್ತಿರುವ ಕರ್ನಾಟಕ ಸರ್ಕಾರದ ಗೆಜೆಟ್ 19ನೆಯ ಶತಮಾನದಲ್ಲೇ ಆರಂಭಗೊಂಡು ಇನ್ನೂ ಮುಂದುವರೆದಿರುವ ಮತ್ತೊಂದು ಪತ್ರಿಕೆ. ಈಗ ರಾಜ್ಯ ಪತ್ರ ಸರ್ಕಾರದ ಅಧಿಕೃತ ಸೂಚನಾ ಪತ್ರಗಳನ್ನು ಪ್ರಕಟಿಸುವುದಕ್ಕಷ್ಟೇ ಸೀಮಿತವಾಗಿದೆ. ಈಗಿನ ರಾಜ್ಯಪತ್ರದ ಪೂರ್ವರೂಪ ಮೈಸೂರು ಗೆಜೆಟ್, 1866 ಏಪ್ರಿಲ್ 7ರಂದು ಮೊದಲು ಪ್ರಕಟಗೊಂಡಿತು.

ವೃತ್ತಿಯಲ್ಲಿ ಶಿಕ್ಷಕರಾಗಿದ್ದ ವೆಂಕಟರಂಗೋಕಟ್ಟಿಯವರ ಪತ್ರಿಕಾ ಸಾಧನೆಯೂ ವಿಶೇಷ ಉಲ್ಲೇಖನೀಯ. ಜನರಲ್ಲಿ, ಮುಖ್ಯವಾಗಿ ಮಕ್ಕಳಲ್ಲಿ ಜ್ಞಾನ ಪ್ರಸಾರ ಮಾಡುವುದು, ಓದುವ ಹವ್ಯಾಸ ಹೆಚ್ಚಿಸುವುದು ಇವರ ಉದ್ದೇಶವಾಗಿತ್ತು. ಶೋಧಕ ಎಂಬ ಮಾಸಪತ್ರಿಕೆಯನ್ನು ಇವರು 1875–78ರ ವರೆಗೆ ನಡೆಸಿದರು. ಮೊದಲು ಬೆಳಗಾಂವಿಯಿಂದ ಪತ್ರಿಕೆ ಪ್ರಕಟವಾಗುತ್ತಿತ್ತು. ಅನಂತರ ಧಾರವಾಡದಿಂದ ಲೋಕಶಿಕ್ಷಕ ಎಂಬ ಇನ್ನೊಂದು ಪತ್ರಿಕೆಯನ್ನೂ ಪ್ರಾರಂಭಿಸಿದರು (1888).

ಹತ್ತೊಂಬತ್ತನೆಯ ಶತಮಾನದ ಅಂತಿಮ ಚರಣದಲ್ಲಿ ಮೈಸೂರು ಭಾಗದ ಪತ್ರಿಕೋದ್ಯಮದ ನಾಯಕತ್ವ ವಹಿಸಿದವರು ಎಂ. ವೆಂಕಟಕೃಷ್ಣಯ್ಯ **(ನೋಡಿ)**. ಇವರ ಸಾರ್ವಜನಿಕ ಸೇವೆಯ ಹಲವು ಮುಖಗಳಲ್ಲಿ ಪತ್ರಿಕೋದ್ಯಮವೂ ಒಂದಾಗಿತ್ತು. ತಾತಯ್ಯ ಎಂದೇ ಖ್ಯಾತರಾಗಿದ್ದ ಇವರು ಒಂದು ಸಂಸ್ಥೆಯ ರೀತಿ ಬೆಳೆದು ಹಲವು ಪತ್ರಿಕೆಗಳ ಸ್ಥಾಪಕರಾಗಿ, ಮೈಸೂರಿನ ಸಾರ್ವಜನಿಕ ಜೀವನಕ್ಕೆ ಹೇಗೋ ಪತ್ರಿಕೋದ್ಯಮಕ್ಕೂ ಆಧಾರಸ್ತಂಭವಾಗಿದ್ದರು.

ಹಿತಬೋಧಿನಿ ಮಾಸಪತ್ರಿಕೆಯ ಮೂಲಕ ಇವರು ಪತ್ರಿಕಾರಂಗ ಪ್ರವೇಶಿಸಿದರು. ಹಿತಬೋಧಿನಿ 1883ರಲ್ಲಿ ಆರಂಭಗೊಂಡು 1890ರ ವರೆಗೆ ನಡೆದು ಬಂತು. ಈ ಪತ್ರಿಕೆ ಆ ಕಾಲದಲ್ಲಿ ಅಪಾರ ಜನಮನ್ನಣೆ ಗಳಿಸಿತ್ತು ಎನ್ನಲಾಗಿದೆ. ವೃತ್ತಾಂತ ಚಿಂತಾಮಣಿ (1885) ಇವರ ಇನ್ನೊಂದು ಜನಪ್ರಿಯ ಪತ್ರಿಕೆ. ತೀಕ್ಷ್ಣ ಸಂಪಾದಕೀಯಗಳಿಂದ ಆಡಳಿತಗಾರರಿಗೆ ಈ ಪತ್ರಿಕೆ ಚುರುಕು ಮುಟ್ಟಿಸುತ್ತಿತ್ತು. ಮೈಸೂರು ಹೆರಾಲ್ಡ್ ಎಂಬ ಪತ್ರಿಕೆಯನ್ನು 1886ರಲ್ಲೂ ವೆಲ್ತ್ ಆಫ್ ಮೈಸೂರು ಎಂಬುದನ್ನು 1912ರಲ್ಲೂ ಸಂಪಾದಿಸಿ ಪ್ರಕಟಿಸಿದ ಖ್ಯಾತಿ ತಾತಯ್ಯ ನವರದು. ಇದಲ್ಲದೆ ಇವರ ಪತ್ರಿಕಾ ಸಾಹಸದ ಸಾಲಿಗೆ ಸೇರಬೇಕಾದ ಇತರ ಪತ್ರಿಕೆಗಳೆಂದರೆ ಸಂಪದಭ್ಯುದಯ (ಕನ್ನಡ ದಿನಪತ್ರಿಕೆ 1912), ನೇಚರ್ ಕ್ಯೂರ್ (ಇಂಗ್ಲಿಷ್ ದಿನಪತ್ರಿಕೆ) ಮತ್ತು ಸಾಧ್ವಿ (1899). ಸಾಧ್ವಿ **(ನೋಡಿ)** ಮೊದಲು ವಾರಪತ್ರಿಕೆಯಾಗಿ ಆರಂಭಗೊಂಡು ಅನಂತರ ದಿನಪತ್ರಿಕೆಯಾಗಿ ಬೆಳೆದು ಬಂದು, ವೆಂಕಟಕೃಷ್ಣಯ್ಯನವರ ಶಿಷ್ಯ ಅಗರಂರಂಗಯ್ಯನವರ ಸಂಪಾದಕತ್ವದಲ್ಲಿ ಈ ಪತ್ರಿಕೆ ಶತಮಾನದ ಸನಿಹ ಬದುಕಿತು. ಒಂದು ಕಾಲದಲ್ಲಿ ಮೈಸೂರಿನ ಜನಪ್ರಿಯ ಪತ್ರಿಕೆಗಳಲ್ಲೊಂದಾಗಿತ್ತು. ಅಗರಂ ರಂಗಯ್ಯನವರ ಕಾಲಾನಂತರ ಕೆಲಕಾಲ ನಿಂತುಹೋಗಿದ್ದ ಸಾಧ್ವಿ ಈಗ ಹೊಸ ಮಾಲೀಕತ್ವದಲ್ಲಿ ಮುಂದುವರಿದಿದೆ.

ಕನ್ನಡದಲ್ಲಿ ಪತ್ರಿಕಾ ಚಟುವಟಿಕೆಗಳು ಗರಿ ಕೆದರಿದಂತೆಲ್ಲ ಮೂರು ಮುಖ್ಯ ಪ್ರಾದೇಶಿಕ ಕೇಂದ್ರಗಳು ಪತ್ರಿಕೆಯ ದೃಷ್ಟಿಯಿಂದ ಹುಟ್ಟಿಕೊಂಡುವು. ಇವನ್ನು ಮಂಗಳೂರು, ಮೈಸೂರು ಹಾಗೂ ಧಾರಾವಾಡ ವಿಭಾಗಗಳೆಂದು ಪರಿಗಣಿಸಬಹುದು. ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದು ಕರ್ನಾಟಕ ಭಾಗದಲ್ಲಿ ಕನ್ನಡ ಪತ್ರಿಕಾ ಚಟುವಟಿಕೆಗಳಿಗೆ ಪ್ರೋತ್ಸಾಹವಿರ ಲಿಲ್ಲ. ಕರ್ಕಿ ಸೂರಿ ವೆಂಕಟರಮಣಶಾಸ್ತ್ರಿ **(ನೋಡಿ)** ಆ ಕಾಲದಲ್ಲೇ ಮುಂಬಯಿಗೆ ತೆರಳಿ 1885ರಲ್ಲಿ ಹವ್ಯಕ ಕಾರವಾರ ಚಂದ್ರಿಕ ಎಂಬ ಸಾಪ್ತಾಹಿಕವನ್ನು ಆರಂಭಿಸಿದ್ದು ಹಾಗೂ ಅದು ಆಗ ಮುಂಬಯಿ ಪ್ರಾಂತ್ಯಕ್ಕೆ ಸೇರಿದ್ದ ಉತ್ತರ ಕನ್ನಡ ಜಿಲ್ಲೆಯಲ್ಲೂ ಜನಪ್ರಿಯವಾಗಿದ್ದು ಉಲ್ಲೇಖನೀಯ. ಈ ಪತ್ರಿಕೆ ನಾಲ್ಕು ವರ್ಷ ಬಾಳಿತು. ಹಿತೋಪದೇಶ ಎಂಬ ಮಾಸಿಕವನ್ನೂ ಇವರು ಕೆಲಕಾಲ ನಡೆಸಿದರು. ಮಕ್ಕಳಿಗಾಗಿಯೂ ವಿಶೇಷ ಪತ್ರಿಕೆ ನಡೆಸಿದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಕನ್ನಡದಲ್ಲಿ ಪ್ರಕಟವಾದುದು ಬಹುಪಾಲು ನಿಯತಕಾಲಿಕೆಗಳೇ ಆದರೂ ಶತಮಾನದ ಕೊನೆಯ ಘಟ್ಟಗಳಲ್ಲಿ ದಿನಪತ್ರಿಕೋದ್ಯಮ ಕಾಲಿರಿಸುವುದನ್ನು ಕಾಣುತ್ತೇವೆ. ಪ್ರಪ್ರಥಮ ಕನ್ನಡ ದಿನಪತ್ರಿಕೆಯೆಂದು ಗುರುತಿಸಲಾಗಿರುವ ಸೂರ್ಯೋದಯ ಪ್ರಕಾಶಿಕ ಪ್ರಕಟಗೊಂಡಿದ್ದು 1888ರಲ್ಲಿ. ಈ ಪತ್ರಿಕೆಯ ಸ್ಥಾಪಕರು ಮೈಸೂರಿನ ಬಿ.ನರಸಿಂಗರಾವ್.

19ನೆಯ ಶತಮಾನದ ಅಂತ್ಯಕ್ಕೆ ಕನ್ನಡ ಪತ್ರಿಕಾ ಲೋಕ ಬಿರುಸಿನಿಂದ ಮುನ್ನಡೆಯುತ್ತಿದ್ದುದನ್ನು ಕಾಣುತ್ತೇವೆ. ಸುದ್ದಿಯ ವಾಹಕಗಳಾದ ದಿನಪತ್ರಿಕೆಗಳು, ಮನರಂಜನೆ ಮೂಲವಾದ ನಿಯತಕಾಲಿಕೆಗಳು ಪ್ರತ್ಯೇಕ ಕವಲಾಗಿ ಬೆಳೆಯಲಾಂಭಿಸಿದುವು. ಹಾಗೆಯೇ ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಹೊರಡಿಸಲಾಗುವ ಪತ್ರಿಕೆಗಳ ಜೊತೆ, ಘೋಷಿಸಿಕೊಂಡ ವಿಶೇಷ ಆಸಕ್ತಿಗಳನ್ನೇ ಪೋಷಿಸುವ ವಿಶೇಷಾಸಕ್ತಿ ನಿಯತಕಾಲಿಕೆಗಳೂ ಚಲಾವಣೆಯಲ್ಲಿವೆ. 1860ರ ದಶಕದಲ್ಲೇ ಮಂಗಳೂರಿ ನಿಂದ ಉಭಯ ಗೋಪಾಲಕೃಷ್ಣ ಎಂಬವರು ಪ್ರಕಟಿಸಿದ ನ್ಯಾಯಸಂಗ್ರಹ ಎಂಬುದು ವಿಶೇಷಾಸಕ್ತಿ ನಿಯತಕಾಲಿಕ ಪ್ರತ್ಯೇಕ ಕವಲೊಡೆದುದಕ್ಕೆ ಸೂಚನೆ. ಇಂದಿನ ಜನಪ್ರಿಯ ನಿಯತಕಾಲಿಕೆಗಳಲ್ಲಿ ಕಂಡುಬರುವ ಕಥೆ, ಕವನ, ಪ್ರಬಂಧ, ಲೇಖನ, ವಿಜ್ಞಾನ, ರಾಜಕೀಯ ಮುಂತಾಗಿ ಎಲ್ಲ ವರ್ಗಗಳ ಆಸಕ್ತಿ ಗಮನದಲ್ಲಿರಿಸಿಕೊಂಡು ಓದುವ ಸಾಮಗ್ರಿಗಳನ್ನು ನೀಡುವ ಪತ್ರಿಕೆಗಳು ನೀಡುವ ಪತ್ರಿಕೆಗಳು ಆಗಲೂ ಇದ್ದುವು. ಕಾವ್ಯಕ್ಕೆ, ಸಾಹಿತ್ಯಕ್ಕೆ, ಧರ್ಮಕ್ಕೆ ಮುಂತಾಗಿ ಸೀಮಿತ ಆಸಕ್ತಿಯನ್ನು ಮಾತ್ರ ಪೋಷಿಸುವ ಪತ್ರಿಕೆಗಳೂ ಬಂದುವು. ಕನ್ನಡದ ಮೊದಲ ಸಾಹಿತ್ಯ ಪತ್ರಿಕೆಯೆಂದು ಗುರುತಿಸಬಹುದಾದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾಗ್ಭೂಷಣ **(ನೋಡಿ)** ಮಾಸಪತ್ರಿಕೆ 1896ರಿಂದ ಪ್ರಕಟಣೆ ಆರಂಭಿಸಿತ್ತು.

ಕನ್ನಡ ಪತ್ರಿಕೆಗಳ ದೃಷ್ಟಿಯಿಂದ 1843–1900 ರ ವರೆಗಿನದು ಆರಂಭಿಕ ಘಟ್ಟ. ಕನ್ನಡಕ್ಕೆ ಆಗಿನ್ನೂ ಪತ್ರಿಕೆ ಹೊಸ ಸರಕು; ಹೊಸ ಮಾಧ್ಯಮ 1901–1950 ರವರೆಗಿನದು ಎರಡನೆಯ ಹಂತ. ಇದು ಬೆಳವಣಿಗೆಯ ಕಾಲ. ಹೋರಾಟದ ಕಾಲವೂ ಹೌದು. ಇಡೀ ದೇಶಕ್ಕೆ ದೇಶದ ಎಲ್ಲ ಕ್ಷೇತ್ರಗಳಿಗೆ ಈ ಅವಧಿ ಹೋರಾಟದ ಕಾಲ. ತನ್ನ ಅಸ್ತಿತ್ವವನ್ನು ಸಾಬೀತುಪಡಿಸಬೇಕಾದ ಕಾಲ. ಪತ್ರಿಕೋದ್ಯಮ ಇದಕ್ಕೆ ಹೊರತಾಗಿರಲಿಲ್ಲ. ದೇಶದ ಸ್ವಾತಂತ್ರ್ಯಕ್ಕೆ ಒತ್ತು ನೀಡುವ, ಕನ್ನಡ ರಾಜ್ಯವನ್ನು ಸ್ಥಾಪಿಸುವ, ಹೋರಾಟದ ಜೊತೆ ತನ್ನ ಕಾಲ ಮೇಲೆ ತಾನು ನಿಲ್ಲಲು ಪತ್ರಿಕೆಗಳು ಹೋರಾಡಿದ ಕಾಲ 20ನೆಯ ಶತಮಾನದ ಮೊದಲರ್ಧದ್ದು.

ಕನ್ನಡ ಪತ್ರಿಕೆಗಳ ದೃಷ್ಟಿಯಿಂದ 20ನೆಯ ಶತಮಾನದ ಆರಂಭ ಕಾಲ ಮೈಸೂರು ಸಂಸ್ಥಾನದ ವ್ಯಾಪ್ತಿಯ ಪತ್ರಿಕೆಗಳಿಗೆ ಉತ್ತೇಜಕವಾದ ಕಾಲವಾಗಿರಲಿಲ್ಲ. ದಿವಾನ್ ರಂಗಾಚಾರ್ಲು ಅವರ ತರುವಾಯ ಮೈಸೂರು ಸಂಸ್ಥಾನದ ದಿವಾನರಾದ ಕೆ. ಶೇಷಾದ್ರಿ ಅಯ್ಯರ್ ಪತ್ರಿಕೆಗಳ ಬಗ್ಗೆ ತೀವ್ರ ಅಸಹನೆ ಹೊಂದಿದವರಾಗಿದ್ದರು. ಅದೇ ಹೊತ್ತಿಗೆ ಚಾಮರಾಜ ಒಡೆಯರ್ ನಿಧನರಾಗಿ ಅಪ್ರಾಪ್ತ ವಯಸ್ಕರಾದ ನಾಲ್ವಡಿ ಕೃಷ್ಣರಾಜ

ಒಡೆಯರ್ ಪಟ್ಟಕ್ಕೆ ಬಂದರು. ಇದು ದಿವಾನರ ಪ್ರಭುತ್ವವನ್ನು ಹೆಚ್ಚಿಸಿತ್ತು. ಶೇಷಾದ್ರಿ ಅಯ್ಯರ್ ಬಳಿಕ ದಿವಾನರಾಗಿ ಬಂದ ವಿ.ಪಿ. ಮಾಧವರಾಯರು ಪತ್ರಿಕೆಗಳ ಮೇಲೆ ಕೆಂಗಣ್ಣು ಬೀರಿದರು. ಇವರ ಅನಂತರ ಬಂದ ದಿವಾನ್ ಪಿ.ಎನ್. ಕೃಷ್ಣಮೂರ್ತಿಯವರಂತೂ ಮೈಸೂರು ಸ್ಟ್ಯಾಂಡರ್ಡ್ ಪತ್ರಿಕೆಯ ಪ್ರತಿನಿಧಿಯನ್ನು ಪ್ರಜಾಪ್ರತಿನಿಧಿ ಸಭೆಯಿಂದ ಹೊರಗಟ್ಟಿ ಪತ್ರಿಕೆಗಳಿಗೆ ಪಾಠ ಕಲಿಸುವುದಾಗಿ ಎಚ್ಚರಿಸಿದ್ದರು. ನಿರಂತರವಾಗಿ ದಿವಾನರುಗಳ ದುರಾಗ್ರಹಕ್ಕೆ ತುತ್ತಾಗಿ ಪತ್ರಿಕೆಗಳು ಅನುಭವಿಸಿದ ಶಿಕ್ಷೆಯೆಂದರೆ 1908ರ ಮೈಸೂರು ಸಂಸ್ಥಾನದ ಪತ್ರಿಕಾ ಪ್ರತಿಬಂಧಕ ಶಾಸನ. ಈ ಶಾಸನಕ್ಕನುಗುಣವಾಗಿ ಮೈಸೂರ ಸಂಸ್ಥಾನದಲ್ಲಿ ಪತ್ರಿಕೆ ಪ್ರಕಟಿಸುವವರು ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕಿತ್ತು. ಸರ್ಕಾರ ಯಾವ ಸಮಯದಲ್ಲಿ ಬೇಕಾದರೂ ಯಾವುದೇ ಪತ್ರಿಕೆಗೆ ನೀಡಿದ್ದ ಅನುಮತಿಯನ್ನು ವಾಪಸ್ಸು ಪಡೆಯಬಹುದಿತ್ತು. ಅನುಮತಿ ಪಡೆಯದೇ ಅಥವಾ ಅನುಮತಿ ರದ್ದಾದ ಬಳಿಕವೂ ಪತ್ರಿಕೆ ಹೊರಡಿಸುವವರು ಶಿಕ್ಷೆಗೆ ಗುರಿಯಾಗಬೇಕಿತ್ತು. ರಾಜ್ಯದಿಂದ ಅಂಥವರನ್ನು ಗಡಿಪಾರು ಮಾಡಲಿಕ್ಕೂ ಕಾನೂನಿನಲ್ಲಿ ಅವಕಾಶವಿತ್ತು. ಹೀಗೆ ಸರ್ಕಾರದ ದುರಾಗ್ರಹಕ್ಕೆ ತುತ್ತಾದವರಲ್ಲಿ ಕನ್ನಡ ನಡೆಗನ್ನಡಿ ಪತ್ರಿಕೆಯ ಸಂಪಾದಕ ರಾಗಿದ್ದ ಎಂ. ಗೋಪಾಲ ಅಯ್ಯಂಗಾರ್ ಮತ್ತು ಎಂ. ಶ್ರೀನಿವಾಸಅಯ್ಯಂಗಾರ್ ಸಹೋದರರನ್ನು ಹೆಸರಿಸಬೇಕು. 1895ರಲ್ಲೇ ಆರಂಭವಾಗಿದ್ದ ಇವರ ಪತ್ರಿಕೆ 1908ರ ಪತ್ರಿಕಾ ಶಾಸನಕ್ಕೆ ಪ್ರತೀಕಾರವಾಗಿ ಬೆಂಗಳೂರಿನಿಂದ ಅನಿವಾರ್ಯವಾಗಿ ಮದರಾಸಿಗೆ ವರ್ಗಾವಣೆಗೊಳ್ಳ ಬೇಕಾಯ್ತು. ಈ ಅವಧಿಯಲ್ಲಿ ಆದ ಸಾಮಾಜಿಕ ಸಂಘಟನೆಗಳ ಫಲವಾಗಿ ಕೆಲವು ಸಮುದಾಯಗಳು ತಮ್ಮ ಮುಖವಾಣಿಯಾಗಿ ಪತ್ರಿಕೆಗಳನ್ನು ಹೊರತಂದವು. ಅವುಗಳಲ್ಲಿ ಬೆಂಗಳೂರಿನಿಂದ ಒಕ್ಕಲಿಗರ ಸಂಘದವರು ಹೊರತಂದ ಒಕ್ಕಲಿಗರ ಪತ್ರಿಕೆ (1906) ನಗರದಲ್ಲಿ ಬೇಗ ಜನಪ್ರಿಯತೆ ಗಳಿಸಿತು.

ಕನ್ನಡದ ಹೆಸರಾಂತ ಲೇಖಕ ಡಿ.ವಿ. ಗುಂಡಪ್ಪ **(ನೋಡಿ)** ಭಾರತಿ ಎಂಬ ರಾಷ್ಟ್ರೀಯ ದಿನಪತ್ರಿಕೆಯನ್ನು 1907ರಲ್ಲಿ ಆರಂಭಿಸಿದರು. 1908ರ ಕರಾಳ ಪತ್ರಿಕಾ ಶಾಸನಕ್ಕೆ ಪ್ರತಿರೋಧವಾಗಿ ಭಾರತಿಯ ಪ್ರಕಟಣೆ ನಿಲ್ಲಿಸಿದರು. ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದ ತಿರುಮಲೆ ತಾತಾಚಾರ್ಯ ಶರ್ಮರು ತಮ್ಮ ಸಂಪಾದಕೀಯ ಅಂಕಣವನ್ನು ಖಾಲಿ ಬಿಡುವ ಮೂಲಕ ಶಾಸನಕ್ಕೆ ತಮ್ಮ ಪ್ರತಿಭಟನೆ ಸೂಚಿಸಿದರು. ವೆಂಕಟಕೃಷ್ಣಯ್ಯನವರೂ ತಮ್ಮ ಪ್ರಕಟಣೆಗಳನ್ನು ನಿಲ್ಲಿಸಿ ಈ ಶಾಸನಕ್ಕೆ ವಿರೋಧ ವ್ಯಕ್ತಪಡಿಸಿದರು. ಮುಂದೆ ಮೈಸೂರು ಸಂಸ್ಥಾನಕ್ಕೆ ಎಂ. ವಿಶ್ವೇಶ್ವರಯ್ಯ ದಿವಾನರಾಗಿ ಬಂದ ಬಳಿಕ ಪರಿಸ್ಥಿತಿ ಬದಲಾಯಿತು.ಇವರ ಕಾಲದಲ್ಲಿ ಶಾಸನಕ್ಕೆ ತಿದ್ದುಪಡಿ ಮಾಡಲಾಯಿತು. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪೂರ್ಣ ಗೌರವವಿದ್ದ ವಿಶ್ವೇಶ್ವರಯ್ಯನವರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಕಮರಿಹೋಗಿದ್ದ ಕನ್ನಡ ಪತ್ರಿಕೆಗಳು ಮತ್ತೆ ಚಿಗುರಲು ಅನುಕೂಲವಾಯಿತು.

ಪತ್ರಿಕೋದ್ಯಮಕ್ಕೆ ಪೂರಕವಾದ ಈ ವಾತಾವರಣದಲ್ಲಿ ಕನ್ನಡದ ಉತ್ಕೃಷ್ಟ ಪತ್ರಕರ್ತರಾಗಿ ಬೆಳೆದ ಡಿ. ವಿ. ಗುಂಡಪ್ಪನವರು 1907ರಲ್ಲೇ ಬೆಂಗಳೂರಿನಿಂದ ಸಮಾಚಾರ ಸಂಗ್ರಹವೆಂಬ ದಿನಪತ್ರಿಕೆ ಹೊರಡಿಸಿದ್ದರು. ಇವರ ಇನ್ನಿತರ ಪತ್ರಿಕಾ ಸಾಹಸಗಳೆಂದರೆ ಸುಮತಿ (1909) ಎಂಬ ವಾರಪತ್ರಿಕೆ. ಕರ್ನಾಟಕ (1913–21) ಎಂಬ ಅರ್ಧವಾರ ಪತ್ರಿಕೆ, ಕರ್ನಾಟಕ ಜೀವನ ಎಂಬ (1916) ಮಾಸಪತ್ರಿಕೆ ಹಾಗೂ ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆಗಳು (1909–23).

20ನೆಯ ಶತಮಾನದ ಆರಂಭದಲ್ಲಾಗಲೇ ಕನ್ನಡದ ಪತ್ರಿಕೋದ್ಯಮ ವನ್ನೂ ಸೇರಿಸಿ ಇಡೀ ಭಾರತೀಯ ಪತ್ರಿಕೋದ್ಯಮಕ್ಕೆ ಸ್ವಾತಂತ್ರ್ಯ ಹೋರಾಟದ ಗಾಳಿ ಬೀಸತೊಡಗಿತ್ತು. 1884ರಲ್ಲೇ ಸ್ಥಾಪನೆಗೊಂಡ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಂಪೂರ್ಣ ಸ್ವರಾಜ್ಯ ತನ್ನ ಗುರಿಯೆಂದು ಘೋಷಿಸಿತ್ತು. ಬಾಲ ಗಂಗಾಧರ ಟಿಳಕ, ಗೋಪಾಲಕೃಷ್ಣ ಗೋಖಲೆ, ಮೋತಿಲಾಲ್ ಘೋಷ್ ಮೊದಲಾದ ಕಾಂಗ್ರೆಸ್ಸಿನ ನಾಯಕರು ಬ್ರಿಟಿಷರ ಜೊತೆ ಸಂಗ್ರಾಮಕ್ಕೆ ಇಳಿದಿದ್ದರು. ವಿಶೇಷವೆಂದರೆ ಈ ನಾಯಕರೆಲ್ಲರಿಗೂ ಒಂದಿಲ್ಲೊಂದು ಪತ್ರಿಕೆಯ ಜೊತೆ ಸಂಪರ್ಕವಿತ್ತು. ಇದು ಕಾರಣವಾಗಿ ಭಾರತೀಯ ದೇಶಭಾಷಾ ಪತ್ರಿಕೋದ್ಯಮವೇ ನೇರವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದಂತೆ ಭಾಸವಾಗತೊಡಗಿತ್ತು. ಆಂಗ್ಲರ ಒಡೆತನವಿದ್ದ ಇಂಗ್ಲಿಷ್ ಪತ್ರಿಕೆಗಳನ್ನು ಹೊರತುಪಡಿಸಿ ಇತರ ಎಲ್ಲಾ ದೇಶ ಭಾಷಾ ಪತ್ರಿಕೆಗಳು ಸ್ವಾತಂತ್ರ್ಯದ ಪರವಾಗಿದ್ದುವು. ಸ್ವಾತಂತ್ರ್ಯ ಚಳವಳಿಗೆ ಒತ್ತುಕೊಟ್ಟು ವರದಿಗಳನ್ನು ಪ್ರಕಟಿಸುತ್ತಿದ್ದುವು. 1920ರ ಬಳಿಕ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚುಕ್ಕಾಣಿ ಹಿಡಿದ ಮಹಾತ್ಮಾ ಗಾಂಧಿ ಸ್ವತಃ ಶ್ರೇಷ್ಠ ಪತ್ರಕರ್ತರಾಗಿದ್ದರು. ಕಾಂಗ್ರೆಸ್ಸಿನ ಮೊದಲ ಸಾಲಿನ ನಾಯಕರಾದ ಜವಾಹರಲಾಲ್ ನೆಹರೂ ಪತ್ರಿಕೆ ನಡೆಸುತ್ತಿದ್ದರು. ಆ ಕಾಲದ ಹಿರಿಯ ಕಾಂಗ್ರೆಸ್ ನಾಯಕರಿಗೆಲ್ಲ ಪತ್ರಿಕಾ ಸಂಪರ್ಕವಿತ್ತೆಂದು ಸಾಮಾನ್ಯವಾಗಿ ಅಭಿಪ್ರಾಯ ಪಡಬಹುದು.

ದೇಶ ಭಾಷಾ ಪತ್ರಿಕೆಗಳಲ್ಲಿ ಕಂಡುಬಂದ ಈ ಪರಿಸ್ಥಿತಿಯಿಂದ ಕನ್ನಡ ಪತ್ರಿಕೋದ್ಯಮ ಭಿನ್ನವಾಗಿರಲಿಲ್ಲ. ಆಗಿನ ಕಾಲದಲ್ಲಿ ಪ್ರಕಟಗೊಂಡ ಪತ್ರಿಕೆಗಳ ಹೆಸರನ್ನು ಗಮನಿಸಿದರೆ ಅವುಗಳಿಗಿದ್ದ ಸ್ವರಾಜ್ಯದ ಕನಸು, ನವ ಆರಂಭದ ಹುಮ್ಮಸ್ಸು, ದೇಶ ಸಾಕಾರಗೊಳ್ಳಬೇಕೆಂಬ ಆಸೆ ವ್ಯಕ್ತವಾಗುತ್ತದೆ. ಮೈಸೂರಿನ ದೇಶಾಭಿಮಾನಿ (1898), ತಾಯಿನಾಡು (1926), ಶಿವಮೊಗ್ಗದ ಶುಭೋದಯ (1914), ಬೆಂಗಳೂರಿನ ಭಾರತೀ (1902), ನವಜೀವನ (1929), ಉಡುಪಿಯ ಸತ್ಯಾಗ್ರಹ (1921), ಉದಯ ಭಾರತ (1927), ಉಡುಪಿಯ ದೇಶಬಂಧು (1926), ಮಂಗಳೂರಿನ ದೇಶಭಕ್ತ (1980), ಬಿಜಾಪುರದ ನವೀನ ಭಾರತ (1922), ಹುಬ್ಬಳ್ಳಿಯ ದೇಶಬಂಧು (1930), ಮಂಡ್ಯದ ಭಾರತ ವರ್ಷ (1909), ತುಮಕೂರಿನ ಭಾರತ ಸಂದೇಶ (1927)– ಹೀಗೆ 20ನೆಯ ಶತಮಾನದ ಮೊದಲ ಮೂರು ದಶಕಗಳಲ್ಲಿ ಪ್ರಕಟಗೊಂಡ ಪತ್ರಿಕೆಗಳಲ್ಲಿ ಸ್ವರಾಜ್ಯದ ಹೊಸ ದೇಶದ ಕನಸು ನಿಚ್ಚಳವಾಗಿ ಪ್ರಕಟವಾಗುತ್ತದೆ.

ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಹೊತ್ತಿನಲ್ಲೇ ಕನ್ನಡಿಗರು ಇನ್ನೊಂದು ಹೋರಾಟದಲ್ಲಿ ತೊಡಗಿಕೊಂಡಿದ್ದರು. ಅದು ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ಭಾಗಗಳನ್ನೆಲ್ಲ ಒಂದು ಆಡಳಿತಾಂಗವಾಗಿ ಕಟ್ಟಿ ಹೊಸ ಕನ್ನಡ ರಾಜ್ಯವನ್ನು ರಚಿಸಬೇಕೆಂಬ ಕನಸು. ಅನೇಕರಿಗೆ ಭಾರತದ ಉದಯದಷ್ಟೇ ಕರ್ನಾಟಕ ಏಕೀಕರಣ **(ನೋಡಿ)** ಮುಖ್ಯವಾ ಗಿತ್ತು. ಅದಕ್ಕಾಗಿ ಪ್ರಾಣತೆರಲೂ ಜನ ಸಿದ್ಧವಿದ್ದರು. ಈ ಭಾವನೆಯನ್ನು ಆ ಕಾಲದ ಪತ್ರಿಕೆಗಳ ಹೆಸರುಗಳಲ್ಲೇ ಕಾಣುತ್ತೇವೆ. ಬಿಜಾಪುರದ ಕರ್ನಾಟಕ ಭಾಷಾ ಸೇವಕ (1894), ಕರ್ನಾಟಕ ವೃತ್ತ (1892), ಕರ್ನಾಟಕ ವೈಭವ (1892, ಬೆಂಗಳೂರಿನ ಕರ್ನಾಟಕ (1913–21), ಕರ್ನಾಟಕ ಜೀವನ (1916), ಬೆಳಗಾಂವಿಯ ಸಂಯುಕ್ತ ಕರ್ನಾಟಕ (1929), ನಂಜನಗೂಡಿನ ಕರ್ನಾಟಕ ನಂದಿನಿ (1916)– ಹೀಗೆ ಸರ್ವವೂ ಕರ್ನಾಟಕಮಯವಾಗಿದ್ದ ಕಾಲವದು. ಹಾಗೆಯೇ ಮಂಗಳೂರಿನ ಕನ್ನಡ ಕೋಗಿಲೆ (1916), ಬೆಂಗಳೂ ರಿನ ಕನ್ನಡ ಜ್ಯೋತಿ (1937), ಕನ್ನಡ ವಾಣಿ (1933), ಮಂಗಳೂರಿನ ಕನ್ನಡ ಕೇಸರಿ (1885) ಮುಂತಾಗಿ ಕನ್ನಡ ಪ್ರಜ್ಞೆ ಜಾಗೃತಗೊಳ್ಳುತ್ತಿರು ವುದನ್ನು ಪತ್ರಿಕೆಗಳ ಹೆಸರುಗಳ ಮೂಲಕವೇ ಗುರುತಿಸಬಹುದು.

## ಪತ್ರಿಕೋದ್ಯಮ

ಸುದೀರ್ಘ ಹೋರಾಟದ ಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಕನ್ನಡಿಗರ ಒತ್ತಾಸೆಯ ಫಲವಾಗಿ, ಭಾಷಾವಾರು ಪ್ರಾಂತ್ಯಗಳ ರಚನೆಯ ವೇಳೆ ಕನ್ನಡ ರಾಜ್ಯವೂ ಉದಯವಾಯಿತು. ವಿಶೇಷವೆಂದರೆ ಪ್ರಜೆಗಳ ಅಭೀಪ್ಸೆ ಸಾಕಾರಗೊಂಡು ಭಾರತ ಸರ್ಕಾರ ಮೈಸೂರು ರಾಜ್ಯ ರಚಿಸಿ ಪ್ರಜೆಗಳ ಆಶಯಕ್ಕೆ ಮಾನ್ಯತೆ ಬಂದುದರ ಪ್ರತಿಬಿಂಬವೋ ಎನ್ನುವಂತೆ 1930 ರಿಂದ 60ರ ಅವಧಿಯಲ್ಲಿ ಪ್ರಕಟವಾದ ಅನೇಕ ಪತ್ರಿಕೆಗಳ ಹೆಸರುಗಳಿವೆ. ಉದಾಹರಣೆಗೆ ಕನ್ನಡದಲ್ಲಿ ಹಿರಿಯ ದಿನಪತ್ರಿಕೆ ಪ್ರಜಾವಾಣಿ ಪ್ರಾರಂಭವಾದುದು 1948ರಲ್ಲಿ. ಪ್ರಜಾಬಂಧು (1932), ಪ್ರಜಾಮತ (1931)– ಈ ಪತ್ರಿಕೆಗಳು ಈ ಮೊದಲು ಪ್ರಕಟವಾಗುತ್ತಿದ್ದವು.

20ನೆಯ ಶತಮಾನ ಆದಿಯಿಂದ ಸುಮಾರು ಐದು ದಶಕಗಳ ಕಾಲದವರೆಗೆ ಕನ್ನಡ ಪತ್ರಿಕೋದ್ಯಮದಲ್ಲಿ ಮಹತ್ತರ ಸಾಧನೆ ಮಾಡಿದ ಅನೇಕ ಪತ್ರಿಕೆಗಳು ಜೀವ ತಳೆದುವು. ಹಾಗೆಯೇ ಕರ್ನಾಟಕ ಸಂದರ್ಭಕ್ಕೆ ಬಹುಮುಖ್ಯ ಕೊಡುಗೆಗಳನ್ನು ನೀಡಿದ ಅನೇಕ ಮಹನೀಯರೂ ಈ ಅವಧಿಯಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದು ಉಲ್ಲೇಖನೀಯ. ಈ ಅವಧಿಯಲ್ಲಿ ಹುಟ್ಟಿದ್ದ ಹೆಚ್ಚಿನ ಪತ್ರಿಕೆಗಳು ಈಗ ಇಲ್ಲ. ಪತ್ರಕರ್ತರೂ ಇಲ್ಲ. ಆದರೆ ಕನ್ನಡ ಪತ್ರಿಕಾ ಚರಿತ್ರೆಯಲ್ಲಿ ದಾಖಲಾಗಲೇಬೇಕಾದ ಕೆಲವು ಹೆಸರುಗಳಿವೆ. ಪಿ. ಆರ್. ರಾಮಯ್ಯನವರ ತಾಯಿನಾಡು (1926), ಎನ್.ಎಸ್. ಸೀತಾರಾಮಶಾಸ್ತ್ರಿಗಳ ದೇಶಬಂಧು (1931), ಎಂ. ಸೀತಾರಾಮ ಶಾಸ್ತ್ರಿಗಳ ವೀರಕೇಸರಿ (1928), ತಿರುಮಲೆ ತಾತಾಚಾರ್ಯ ಶರ್ಮರ ವಿಶ್ವಕರ್ನಾಟಕ (1925), ಬಿ.ಎನ್. ಗುಪ್ತರ ಪ್ರಜಾಮತ (1931), ಆಲೂರು ವೆಂಕಟರಾಯರ ಜಯಕರ್ನಾಟಕ (1922), ಕಡೆಂಗೋಡ್ಲು ಶಂಕರ ಭಟ್ಟರ ರಾಷ್ಟ್ರಬಂಧು (1928), ಎಚ್.ಕೆ. ವೀರಣ್ಣಗೌಡರ ಚಿತ್ರಗುಪ್ತ (1928), ಪಿ.ಶೇಷಪ್ಪನವರ ಕಿಡಿ (1949)–ಇವು ಈ ಅವಧಿಯಲ್ಲಿ ಬಹು ಪಾಲು ಕನ್ನಡ ಪತ್ರಿಕೋದ್ಯಮ ನಾಯಕತ್ವ ವಹಿಸಿದ್ದವು.

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಆರಂಭವಾಗಿ ಇಂದಿಗೂ ಪ್ರಕಟಣೆಯಲ್ಲಿದ್ದು ಕನ್ನಡ ಪ್ರಮುಖ ದಿನಪತ್ರಿಕೆಗಳೆನಿಸಿರುವ ಎರಡು ಪತ್ರಿಕೆಗಳ ಬಗ್ಗೆ ಇಲ್ಲಿ ಪ್ರತ್ಯೇಕ ಉಲ್ಲೇಖ ಅಗತ್ಯ. ಅದರಲ್ಲಿ ಮೊದಲಿನದು ಸಂಯುಕ್ತ ಕರ್ನಾಟಕ **(ನೋಡಿ)** ವಾದರೆ ಇನ್ನೊಂದು ಪ್ರಜಾವಾಣಿ.

ಈಗ ಹುಬ್ಬಳ್ಳಿಯಲ್ಲಿ ಪ್ರಧಾನ ಕಚೇರಿಯನ್ನೂ ಬೆಂಗಳೂರಿನಲ್ಲಿ ಇನ್ನೊಂದು ಆವೃತ್ತಿಯನ್ನೂ ಹೊಂದಿರುವ ಸಂಯುಕ್ತ ಕರ್ನಾಟಕ, ಕರ್ನಾಟಕ ಏಕೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ ಪತ್ರಿಕೆ. ಇದು ಸ್ವಾತಂತ್ರ್ಯ ಹೋರಾಟದಲ್ಲೂ ಉತ್ತರ ಕರ್ನಾಟಕದಲ್ಲಿ ಮುಂಚೂಣಿಯಲ್ಲಿತ್ತು. ಇಂದಿಗೂ ಕನ್ನಡದ ಐದು ದೊಡ್ಡ ದಿನಪತ್ರಿಕೆಗಳ ಪೈಕಿ ಅತ್ಯಂತ ಹಿರಿಯ ಪತ್ರಿಕೆ.

ಕರ್ಮವೀರ 1921ರ ವೇಳೆಗೆ ಧಾರವಾಡದಲ್ಲಿ ಪ್ರಾರಂಭವಾಗಿದ್ದ ವಾರಪತ್ರಿಕೆ. ರಂಗನಾಥ ದಿವಾಕರರು ಸಂಪಾದಕರಾಗಿದ್ದಾಗ ಕರ್ಮವೀರ **(ನೋಡಿ)** ಸಂಯುಕ್ತ ಕರ್ನಾಟಕದ ಸೋದರ ಪತ್ರಿಕೆಯಾಗಿ ಬೆಳೆಯಿತು. ಲೋಕ ಶಿಕ್ಷಣ ಟ್ರಸ್ಟ್ ಇನ್ನೊಂದು ಪ್ರಕಟಣೆ ಕಸ್ತೂರಿ **(ನೋಡಿ)** ಮಾಸಿಕ. ಕಳೆದ ಐದು ದಶಕಗಳಿಂದ ತನ್ನತನವನ್ನು ಉಳಿಸಿಕೊಂಡಿರುವ ಕಸ್ತೂರಿ ಕನ್ನಡಿಗರ ರೀಡರ್ಸ್ ಡೈಜೆಸ್ಟ್ ಎನಿಸಿದೆ. ಕರ್ಮವೀರ ಮಧ್ಯದಲ್ಲಿ ಸ್ಥಗಿತ ಕಂಡಿದ್ದರೂ ಪುನರಾರಂಭಗೊಂಡಿತು.

ಕನ್ನಡದಲ್ಲಿ ಆಧುನಿಕ ವೃತ್ತಿಪರ ಪತ್ರಿಕೋದ್ಯಮ ಆರಂಭಗೊಂಡಿದ್ದು ಪ್ರಜಾವಾಣಿ **(ನೋಡಿ)** ಪತ್ರಿಕೆ ಎಂದು ಅನೇಕರು ಗುರುತಿಸುತ್ತಾರೆ. ಪ್ರಜಾವಾಣಿ 1948ರಲ್ಲಿ ಡೆಕ್ಕನ್ ಹೆರಾಲ್ಡ್ ಇಂಗ್ಲಿಷ್ ಪತ್ರಿಕೆಯ ಸಹೋದರಿ ಪ್ರಕಟಣೆಯಾಗಿ ಆರಂಭಗೊಂಡಿತು. ಬೆಂಗಳೂರಿನಲ್ಲಿ ಆ ಕಾಲದ ಹಿರಿಯ ಸಮಾಜ ಕಾರ್ಯಕರ್ತರಾಗಿದ್ದ ನೆಟ್ಟಕಲ್ಲಪ್ಪ ಪ್ರಜಾವಾಣಿಯ ಸ್ಥಾಪಕರು. ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ಪ್ರಕಾಶನ ಸಂಸ್ಥೆಯಡಿ ಪ್ರಜಾವಾಣಿ ಪ್ರಕಟಗೊಳ್ಳುತ್ತಿದ್ದು ಪ್ರಜಾವಾಣಿಯ ಸ್ಥಾಪಕ ಸಂಪಾದಕರು ಬಿ.ಪುಟ್ಟಸ್ವಾಮಯ್ಯ **(ನೋಡಿ)**, ಅನಂತರ ಟಿ.ಎಸ್. ರಾಮಚಂದ್ರರಾವ್ **(ನೋಡಿ)**, ಖಾದ್ರಿ ಶಾಮಣ್ಣ **(ನೋಡಿ)**, ಟಿ.ಎನ್. ಕೃಷ್ಣಮೂರ್ತಿ **(ನೋಡಿ)**,ಎಂ.ಬಿ.ಸಿಂಗ್ **(ನೋಡಿ)** ಇವರ ಮಾರ್ಗದರ್ಶನದಲ್ಲಿ ಪ್ರಜಾವಾಣಿ ಕನ್ನಡದ ಮುಂಚೂಣಿಯ ಪತ್ರಿಕೆಯಾಗಿ ಬೆಳೆಯಿತು. ಪ್ರಜಾವಾಣಿಯ ಜೊತೆ ಸುಧಾ ವಾರಪತ್ರಿಕೆ ಹಾಗೂ ಮಯೂರ ಮಾಸಿಕಗಳು ದಿ ಪ್ರಿಂಟರ್ಸ್ ಮೈಸೂರು ಪ್ರಕಾಶನದ ಕೊಡುಗೆಗಳಾಗಿವೆ.

ಕನ್ನಡದ ದೊಡ್ಡ ದಿನಪತ್ರಿಕೆಗಳಲ್ಲಿ ನಾಲ್ಕು ದಶಕಗಳಿಗೂ ಹೆಚ್ಚಿನ ಚರಿತ್ರೆಯಿರುವ ಇನ್ನೊಂದು ಪತ್ರಿಕೆ ಕನ್ನಡ ಪ್ರಭ **(ನೋಡಿ)**. ದೇಶದ ಪ್ರಮುಖ ಪತ್ರಿಕಾ ಸಮೂಹಗಳಲ್ಲಿ ಒಂದೆನಿಸಿರುವ ಇಂಡಿಯನ್ ಎಕ್ಸ್‌ಪ್ರೆಸ್ ಗುಂಪಿಗೆ ಸೇರಿದ ಕನ್ನಡ ಪತ್ರಿಕೆ. ಇದು ಆರಂಭಗೊಂಡಿದ್ದು 1957ರಲ್ಲಿ. ಆಗಿನ ಕಾಲದ ಹಿರಿಯ ಪತ್ರಕರ್ತರಾಗಿದ್ದ ಎನ್.ಎಸ್. ಸೀತಾರಾಮಶಾಸ್ತ್ರಿಗಳು ಕನ್ನಡ ಪ್ರಭದ ಸ್ಥಾಪಕ ಸಂಪಾದಕರು.

ಕರಾವಳಿ ಕರ್ನಾಟಕದ ಜನಪ್ರಿಯ ದೈನಿಕ ಉದಯವಾಣಿ **(ನೋಡಿ)**, ಕನ್ನಡದ ಇನ್ನೊಂದು ದೊಡ್ಡ ದಿನಪತ್ರಿಕೆ. 1941ರಲ್ಲಿ ಮಂಗಳೂರಿನಲ್ಲಿ ನವಭಾರತ ಎಂಬ ದೈನಿಕ ಆರಂಭವಾಯಿತು. ವಿ.ಎಸ್. ಕುಡ್ವರು ಈ ಪತ್ರಿಕೆಯ ಸಂಪಾದಕರಾಗಿದ್ದರು. ಕರಾವಳಿಯಲ್ಲಿ ನವಭಾರತ ಅತ್ಯಂತ ಜನಪ್ರಿಯವಾಗಿದ್ದ ವೇಳೆ ಅದಕ್ಕೆ ಪ್ರತಿಸ್ಪರ್ಧಿಯೆಂಬಂತೆ ಉದಯವಾಣಿ ಆರಂಭವಾಗಿದ್ದು 1970ರಲ್ಲಿ. ಉದಯವಾಣಿ ಮಣಿಪಾಲ ಸಮೂಹದ ಕೊಡುಗೆ.

ಮಣಿಪಾಲ ಸಮೂಹದಿಂದ ಉದಯವಾಣಿ ದೈನಿಕವಲ್ಲದೆ ತರಂಗ ವಾರಪತ್ರಿಕೆ, ತುಷಾರ ಮಾಸಿಕ, ರೂಪತಾರಾ ಪಾಕ್ಷಿಕಗಳೂ ಪ್ರಕಟಗೊಳ್ಳುತ್ತಿವೆ. ತರಂಗ ವಾರಪತ್ರಿಕೆಗೆ ಸ್ಥಾಪಕ ಸಂಪಾದಕರು ಸಂತೋಷಕುಮಾರ ಗುಲ್ವಾಡಿ. 1983ರಲ್ಲಿ ತರಂಗ ಅತ್ಯಂತ ವೇಗವಾಗಿ ತನ್ನ ಪ್ರಸಾರವನ್ನು ಹೆಚ್ಚಿಸಿಕೊಂಡಿತು.

ಕೇಂದ್ರ ಸರ್ಕಾರ ಕಾಲದಿಂದ ಕಾಲಕ್ಕೆ ಪತ್ರಿಕೆಗಳನ್ನು ಸಣ್ಣ, ಮಧ್ಯಮ ಮತ್ತು ದೊಡ್ಡ ಪತ್ರಿಕೆಗಳೆಂದು ವಿಂಗಡಿಸುತ್ತದೆ. ಈ ರೀತಿಯ ವರ್ಗೀಕರಣಕ್ಕೆ ಪತ್ರಿಕೆಗಳ ಪ್ರಸಾರ ಸಂಖ್ಯೆಯೇ ಆಧಾರ. ಈಗ ಚಾಲ್ತಿಯಲ್ಲಿರುವ ನಿಯಮದ ಪ್ರಕಾರ 25 ಸಾವಿರ ಪ್ರತಿಗಳವರೆಗೆ ಪ್ರಸಾರವಿರುವ ಪತ್ರಿಕೆಗಳನ್ನು ಸಣ್ಣ ಪತ್ರಿಕೆಗಳೆಂದೂ 25,000 ದಿಂದ 50,000 ವರೆಗಿನ ಪ್ರಸಾರ ಹೊಂದಿರುವ ಪತ್ರಿಕೆಗಳನ್ನು ಮಧ್ಯಮ ಪ್ರಮಾಣದ ಪತ್ರಿಕೆಗಳೆಂದೂ 75 ಸಾವಿರಕ್ಕೂ ಹೆಚ್ಚು ಪ್ರಸಾರವಿರುವ ಪತ್ರಿಕೆಗಳನ್ನು ದೊಡ್ಡ ಪತ್ರಿಕೆಗಳೆಂದೂ ಗುರುತಿಸಲಾಗುತ್ತದೆ. ಇಂಡಿಯಾ 2000 ವರದಿಯ ಪ್ರಕಾರ ಕನ್ನಡದಲ್ಲಿ ನಿಖರವಾಗಿ ಪತ್ರಿಕೆಗಳ ಪ್ರಸಾರ ಎಷ್ಟೆಂದು ಪತ್ರಿಕಾ ರಿಜಿಸ್ಟ್ರಾರ್ ಅವರಿಗೆ ವರದಿ ಸಲ್ಲಿಸಿದ ಪತ್ರಿಕೆಗಳು 72 ಮಾತ್ರ. ಈ 72 ಪತ್ರಿಕೆಗಳ ಪೈಕಿ 8 ಪತ್ರಿಕೆಗಳು ದೊಡ್ಡ ಪ್ರಮಾಣದವು, 21 ಪತ್ರಿಕೆಗಳು ಮಧ್ಯಮ ಪ್ರಮಾಣದವು, 43 ಪತ್ರಿಕೆಗಳು ಸಣ್ಣ ಪತ್ರಿಕೆಗಳು ಎಂದು ಗುರುತಿಸಲಾಗಿದೆ. ಈಗ ಕರ್ನಾಟಕದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳ ಒಟ್ಟು ಸಂಖ್ಯೆ 1455. ಇವುಗಳಲ್ಲಿ 72 ಪತ್ರಿಕೆಗಳ ಪ್ರಸಾರವನ್ನು ಮಾತ್ರ ನಿಖರವಾಗಿ ಗುರುತಿಸಲು ಸಾಧ್ಯವಾಗಿರುವುದರಿಂದ ಅವುಗಳಲ್ಲಿ ಮಾತ್ರ ಪತ್ರಿಕೆಗಳ ವರ್ಗೀಕರಣ ಮಾಡಬೇಕಾಗುತ್ತದೆ. ಉಳಿದ ಬಹುಸಂಖ್ಯಾತ ಪತ್ರಿಕೆಗಳು ಸಣ್ಣ ಪತ್ರಿಕೆಗಳೇ ಆಗಿದ್ದು

ಇವುಗಳ ಪ್ರಸಾರದ ಬಗ್ಗೆ ನಿಖರವಾದ ಮಾಹಿತಿ ಪಡೆಯಲು ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಪತ್ರಿಕಾ ರಿಜಿಸ್ಟ್ರಾರ್ ಅವರ ಬಳಿಯೂ ಇಂಥ ಮಾಹಿತಿ ಲಭ್ಯವಿರುವುದಿಲ್ಲ. ಪ್ರಸಾರದ ಮಟ್ಟಿಗೆ ಆಯಾ ಪತ್ರಿಕಾ ಸಂಪಾದಕರ ಹೇಳಿಕೆಗಳನ್ನೇ ಅವಲಂಬಿಸಬೇಕಾಗುತ್ತದೆ.

ಕನ್ನಡದ 72 ಪತ್ರಿಕೆಗಳಲ್ಲಿ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿ, ಕನ್ನಡ ಪ್ರಭ, ಸುಧಾ, ತರಂಗ– ಈ ಪತ್ರಿಕೆಗಳು ದೊಡ್ಡ ಪತ್ರಿಕೆಗಳು. ಇವುಗಳ ಪೈಕಿ ಒಂದು ಲಕ್ಷಕ್ಕೂ ಹೆಚ್ಚು ಪ್ರಸಾರವಿರುವ ದಿನಪತ್ರಿಕೆ ಒಂದೇ ಒಂದು. ಆದರೆ ನಿಯತಕಾಲಿಕೆಗಳು ಮೂರು. ಹಾಗೆಯೇ 75 ಸಾವಿರಕ್ಕೂ ಹೆಚ್ಚು ಪ್ರಸಾರವಿರುವ ದಿನಪತ್ರಿಕೆಗಳು ಮೂರು ಹಾಗೂ ನಿಯತಕಾಲಿಕ ಒಂದು ಮಾತ್ರ. ಈಗ ಈ ಪತ್ರಿಕೆಗಳ ಒಟ್ಟು ಪ್ರಸಾರ ಸು. 960 ಸಾವಿರ ಪ್ರತಿಗಳು.

ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಪತ್ರಿಕೋದ್ಯಮ ಸಾಕಷ್ಟು ಬೆಳೆದಿದೆ, ಬದಲಾಗಿದೆ. ಹೊಸನೀರು ಬಂದು ಹಳೆನೀರು ಕೊಚ್ಚಿ ಹೋಗಿದೆ. ಆ ವೇಳೆಗಾಗಲೇ ಗಟ್ಟಿಯಾಗಿ ಬೇರೂರಿದ್ದ ಸಂಯುಕ್ತ ಕರ್ನಾಟಕವೂ ಸ್ವಾತಂತ್ರ್ಯದ ಜೊತೆಯೇ ಬಂತೆನ್ನಬಹುದಾದ ಪ್ರಜಾವಾಣಿಯೂ ಈ ಅವಧಿಯಲ್ಲಿ ವಿಶಾಲ ಕರ್ನಾಟಕದಲ್ಲಿ ಪ್ರಸಾರ ಹೆಚ್ಚಿಸಿಕೊಂಡು ಬೆಳೆದು, ಇವುಗಳನ್ನು ಅನುಸರಿಸಿ ಬಂದ ಕನ್ನಡ ಪ್ರಭ ಮತ್ತು ಉದಯವಾಣಿ ಹಾಗೂ ಈಗ ಪ್ರಕಟವಾಗುತ್ತಿರುವ ವಿಜಯ ಕರ್ನಾಟಕ –ಇವು ಕನ್ನಡ ದಿನಪತ್ರಿಕೆಗಳ ಏಕಪ್ರಾಬಲ್ಯವನ್ನು ಹೋಗಲಾಡಿಸಿದುವು. ಉದ್ಯಮಿ ವಿಜಯ ಸಂಕೇಶ್ವರ ವಿಜಯಾನಂದ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಸಂಸ್ಥೆಯ ವಿಜಯಕರ್ನಾಟಕ ಎಂಟು ಆವೃತ್ತಿಗಳೊಡನೆ ಪ್ರಕಟವಾಗುತ್ತಿದೆ. ಇದರ ಪ್ರಸಾರ ಸಂಖ್ಯೆ ನಾಲ್ಕು ಲಕ್ಷ. ಕನ್ನಡ ಪತ್ರಿಕೆಗಳ ಮಧ್ಯೆ ಈವರೆಗೆ ಕಾಣದಿದ್ದ ಬೆಲೆಯುದ್ಧವನ್ನೂ ವಿಜಯ ಕರ್ನಾಟಕ ಹುಟ್ಟುಹಾಕಿದೆ. ಅತಿ ಕಡಿಮೆ ಅವಧಿಯಲ್ಲಿ ವಿಜಯಕರ್ನಾಟಕ ಬೆಳೆದಿದೆ.

1942ರಲ್ಲಿ ಹುಬ್ಬಳ್ಳಿಯಲ್ಲಿ ಆರಂಭವಾದ ವಿಶಾಲ ಕರ್ನಾಟಕ ಇಂದಿಗೂ ಪ್ರಭಾವೀ ಪತ್ರಿಕೆಯಾಗಿ ಮುಂದುವರಿದಿದೆ. ಕನ್ನಡದ ಹಿರಿಯ ಪತ್ರಕರ್ತರಲ್ಲಿ ಒಬ್ಬರಾದ ಪಾಟೀಲ ಪುಟ್ಟಪ್ಪ **(ನೋಡಿ)** ಕಳೆದ ಐದು ದಶಕ ನಡೆಸಿರುವ ವಾರಪತ್ರಿಕೆ ಪ್ರಪಂಚ. ಈ ಪತ್ರಿಕೆ ನನ್ನ ಹೃದಯದಿಂದ ನಿಮ್ಮ ಹೃದಯಕ್ಕೆ ಎಂಬ ಸಂಪಾದಕೀಯಕ್ಕಾಗಿ ಪ್ರಸಿದ್ಧವಾಗಿದೆ.

ತುರ್ತು ಪರಿಸ್ಥಿತಿಯ ಅನಂತರ ಕನ್ನಡ ಪತ್ರಿಕೋದ್ಯಮದಲ್ಲಿ ದಾಖಲಿಸಬೇಕಾದ ಮುಖ್ಯ ಬೆಳೆವಣಿಗೆಗಳೆಂದರೆ ಟ್ಯಾಬ್ಲಾಯ್ಡ್ ಪತ್ರಿಕೆಗಳ ಉದಯ, ವಿಪುಲವಾದ ನಿಯತಕಾಲಿಕೆಗಳ ಪ್ರಕಟಣೆ. ಕನ್ನಡ ಪತ್ರಿಕೋದ್ಯಮಕ್ಕೆ ವಸ್ತು, ವಿನ್ಯಾಸ, ನಿರೂಪಣೆಗಳ ದೃಷ್ಟಿಯಿಂದ ತಿರುವನ್ನು ನೀಡಿದ್ದು ಲಂಕೇಶ್ ಪತ್ರಿಕೆಯ ಪ್ರಕಟಣೆ. ಕನ್ನಡದ ಸೃಜನಶೀಲ ಬರೆಹಗಾರರು ಹಾಗೂ ಅಂಕಣಕಾರರಾಗಿ ಹೆಸರು ಮಾಡಿದ್ದ ಪಿ.ಲಂಕೇಶ್ **(ನೋಡಿ)** 1983ರಲ್ಲಿ ಕನ್ನಡಕ್ಕೆ ಹೊಚ್ಚ ಹೊಸತೆನ್ನಿಸಿದ ಈ ಪತ್ರಿಕೆಯನ್ನು ಆರಂಭಿಸಿದರು. ಇದನ್ನು ಕನ್ನಡದ ಜಾಣ–ಜಾಣೆಯರ ಪತ್ರಿಕೆ ಎಂಬುದಾಗಿ ಕರೆದರು. ಆವರೆಗೂ ಪತ್ರಿಕೆಗಳು ಮಡಿವಂತಿಕೆಯಿಂದಾಗಿ ಬಳಸದಿದ್ದ ಆಡುಮಾತಿನ ನುಡಿಗಟ್ಟುಗಳನ್ನು ಬಳಕೆಗೆ ತಂದು ಪತ್ರಿಕಾ ಭಾಷೆಯನ್ನು ಲಂಕೇಶ್ ಬದಲಿಸಿದರು. ಬಂ (ಬಂಗಾರಪ್ಪ), ಗುಂ (ಗುಂಡೂರಾವ್) ಎಂಬ ವಿಶಿಷ್ಟ ಸಂಕೇತಾಕ್ಷರಗಳನ್ನೂ ಶಬ್ದಗಳನ್ನೂ ಸೃಷ್ಟಿಸಿ ಪತ್ರಿಕಾ ಭಾಷೆಯನ್ನು ಚುರುಕುಗೊಳಿಸಿದರು.

ಲಂಕೇಶ್ ಪತ್ರಿಕೆಯನ್ನು ಅನುಸರಿಸಿ ನೂರಾರು ಪತ್ರಿಕೆಗಳು ಕನ್ನಡದಲ್ಲಿ ಬಂದುಹೋಗಿದೆ. ಕೆಲವು ಪತ್ರಿಕೆಗಳು ಜನರನ್ನು ಬ್ಲಾಕ್‌ಮೇಲ್ ಮಾಡುವ ಹಳದಿ ಪತ್ರಿಕೋದ್ಯಮಕ್ಕೂ ಇಳಿದದ್ದುಂಟು. 1995ರಲ್ಲಿ ಆರಂಭಗೊಂಡಿರುವ ಹಾಯ್ ಬೆಂಗಳೂರು ಎಂಬ ಟ್ಯಾಬ್ಲಾಯ್ಡ್ ಪತ್ರಿಕೆ ಲಂಕೇಶ್ ಪತ್ರಿಕೆಯನ್ನೂ ಮೀರಿ ಓದುಗರಿಗೆ ಲಗ್ಗೆ ಇಟ್ಟಿದೆ. ಇದರ ಸಂಪಾದಕ–ಪ್ರಕಾಶರು ರವಿ ಬೆಳೆಗೆರೆ. ಇವುಗಳನ್ನನುಸರಿಸಿ ಇಂದು ಅಗ್ನಿ, ಕನ್ನಡ ಟೈಮ್ಸ್ ಮುಂತಾದ ಅನೇಕ ಟ್ಯಾಬ್ಲಾಯ್ಡ್‌ಗಳು ಪ್ರಕಟವಾಗುತ್ತಿವೆ.

80ರ ದಶಕದಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ಕಂಡುಬಂದ ಇನ್ನೊಂದು ಮುಖ್ಯ ಬೆಳೆವಣಿಗೆ ನಿಯತಕಾಲಿಕಗಳ ಸುಗ್ಗಿ. ಸಾಲುಸಾಲಾಗಿ ನಿಯತಕಾಲಿಕೆಗಳು ಹೆಚ್ಚಾಗಿ ಬೆಂಗಳೂರು ಕೇಂದ್ರವಾಗಿ ಪ್ರಕಟಗೊಂಡವು. ಸುದ್ದಿಸಂಗಾತಿ, ಸಂಕೇಶ, ಮನ್ವಂತರ ಮುಂತಾದವು ವಾರಪತ್ರಿಕೆಗಳು. ವೈಜ್ಞಾನಿಕವಾಗಿ ಲೈಂಗಿಕ ಜ್ಞಾನವನ್ನು ಜನತೆಗೆ ಕೊಡಹೊರಟ ರತಿವಿಜ್ಞಾನದಂಥ ಅನೇಕ ಮಾಸಿಕಗಳೂ ಸಾಲುಸಾಲಾಗಿ ಪ್ರಕಟಗೊಂಡಿವೆ. ಆದರೆ ಈ ಉತ್ಸಾಹ ಒಂದು ದಶಕವೂ ಉಳಿಯಲಿಲ್ಲ. ಆರಂಭಗೊಂಡ ಹಾಗೆ ಈ ನಿಯತಕಾಲಿಕೆಗಳು ಒಂದೊಂದಾಗಿ ನಿಂತುಹೋದವು ಮಾತ್ರವಲ್ಲ ಇಂಥ ಈ ಉತ್ಸಾಹ ಮೊದಲೇ ಪ್ರಕಟಗೊಳ್ಳುತ್ತಿದ್ದ ಪ್ರಜಾಮತದಂಥ ಹಳೇ ಪತ್ರಿಕೆಗಳನ್ನೂ ಆಪೋಶನ ತೆಗೆದುಕೊಂಡಿತು.

ಜಿಲ್ಲಾ ಪತ್ರಿಕೆಗಳು ಕನ್ನಡ ಪತ್ರಿಕೋದ್ಯಮ ರಂಗಕ್ಕೆ ಅಪಾರವಾಗಿ ಕೊಡುಗೆ ನೀಡಿವೆ. ರಾಜ್ಯ ಮಟ್ಟದ ಪತ್ರಿಕೆಗಳ ಆಯಾ ಪ್ರದೇಶದ ಪ್ರಸಾರವನ್ನು ಮೀರಿಸುವಷ್ಟು ಈ ಪತ್ರಿಕೆಗಳ ಪ್ರಸಾರವಿದೆ. ಒಂದೊಂದು ಜಿಲ್ಲೆಯಲ್ಲೂ ಕನಿಷ್ಠ ಒಂದೊಂದು ಪತ್ರಿಕೆಯಾದರೂ ಸ್ಥಳೀಯವಾಗಿ ಪ್ರಬಲವಾಗಿ ಬೆಳೆದಿರುವುದು ಕನ್ನಡದ ವಿಶೇಷ. ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಬೆಳಗಾಂವಿ, ದಾವಣಗೆರೆ, ಹಾಸನ, ಹುಬ್ಬಳ್ಳಿಗಳಲ್ಲಿ ಈ ಬಗೆಯ ಪತ್ರಿಕೆಗಳು ಮಧ್ಯಮ ಪ್ರಮಾಣದ ಪ್ರಸಾರವನ್ನೂ ಹೊಂದಿದೆ. ಒಂದೊಂದು ಕಡೆಯಲ್ಲಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳು ಪ್ರವರ್ಧಮಾನಕ್ಕೆ ಬಂದಿವೆ.

ಪ್ರತಿಯೊಂದೂ ಜಿಲ್ಲೆಯಲ್ಲಿ ಪ್ರಬಲವಾಗಿ ಬೇರೂರಿರುವ ಸ್ಥಳೀಯ ಪತ್ರಿಕೆಗಳು ಪ್ರಶಂಸಾರ್ಹ ಕೆಲಸ ಮಾಡುತ್ತಿವೆ. ಅನೇಕ ಸುದ್ದಿಗಳು ಮೊದಲು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡು ಅನಂತರ ರಾಜ್ಯದ ಹಾಗೂ ದೇಶದ ಗಮನ ಸೆಳೆಯುತ್ತವೆ. ಸ್ಥಳೀಯ ಮಟ್ಟದಲ್ಲಿ ಅವುಗಳ ಪ್ರಭಾವದಿಂದಾಗಿ ರಾಜಕಾರಣಿಗಳು ಹಾಗೂ ಅಧಿಕಾರಸ್ಥರು ಕೂಡ ಈ ಪತ್ರಿಕೆಗಳನ್ನು ಗಂಭೀರವಾಗಿ ಸ್ವೀಕರಿಸುತ್ತಾರೆ. ಸಣ್ಣ ಹಾಗೂ ಸ್ಥಳೀಯ ಮಟ್ಟದ ಪತ್ರಿಕೆಗಳು ಕನ್ನಡ ಪತ್ರಿಕೋದ್ಯಮದ ಅವಿಭಾಜ್ಯ ಅಂಗಗಳಾಗಿವೆ. ಸಣ್ಣ ಪತ್ರಿಕೆಗಳನ್ನು ಬಲಗೊಳಿಸುವುದಕ್ಕಾಗಿ ಪತ್ರಕರ್ತರಿಗೆ ತರಬೇತಿ, ಸಾಲ ಸೌಲಭ್ಯ ಮುಂತಾಗಿ ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಂಗನಾಥ ದಿವಾಕರ, ಎಂ.ಬಿ.ಸಿಂಗ್ ಹಾಗೂ ಪಿ.ಆರ್.ರಾಮಯ್ಯ ಅವರ ನೇತೃತ್ವದ ಸಮಿತಿಗಳು ಮುಖ್ಯವಾಗಿ ಸಣ್ಣ ಪತ್ರಿಕೆಗಳ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ವರದಿ ನೀಡಿವೆ.

ಹೀಗೆ ಕಳೆದ ಒಂದೂವರೆ ಶತಮಾನದಿಂದ ಕನ್ನಡ ಪತ್ರಿಕೋದ್ಯಮದಲ್ಲಿ ಮಾನವನ ಆಸಕ್ತಿಯ ಕ್ಷೇತ್ರಗಳನ್ನೂ ಆಧುನಿಕ ಪ್ರವೃತ್ತಿಗಳನ್ನೂ ಪ್ರತಿನಿಧಿಸುವ ಹಾಗೆ ವೈವಿಧ್ಯಮಯ ಆಸಕ್ತಿಯ ಪತ್ರಿಕೆಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಸಾಹಿತ್ಯ ಪತ್ರಿಕೆಗಳದ್ದೇ ಪ್ರತ್ಯೇಕ ಕವಲು. ಆರಂಭದಿಂದಲೂ ಪತ್ರಿಕೆ ಎಂದ ಮೇಲೆ ಅದರಲ್ಲಿ ಸಾಹಿತ್ಯಕ್ಕೆ ಸ್ಥಾನ ಇದ್ದೇ ಇದೆ. ಆಗಿನ್ನೂ ಕನ್ನಡದ ಆಧುನಿಕ ಕತೆ, ಕಾವ್ಯದ ಕಾಲ ಆರಂಭವಾಗಿರಲಿಲ್ಲ. ಆದರೂ 19ನೆಯ ಶತಮಾನದ ಮಧ್ಯ ಭಾಗದಲ್ಲಿ ಬಂದ ಪತ್ರಿಕೆಗಳಲ್ಲೇ ಪ್ರಬಂಧದ ಮಾದರಿಯ ಬರೆಹಗಳನ್ನು ಕಾಣಬಹುದಾಗಿದೆ. ಕನ್ನಡದ ಆರಂಭ ಕಾಲದ ಪತ್ರಿಕೆಗಳು ಸಾಹಿತ್ಯ

ಪತ್ರಿಕೆಗಳೆಂದು ತಮ್ಮನ್ನು ಕರೆದುಕೊಳ್ಳದಿದ್ದರೂ ಸಾಹಿತ್ಯಿಕ ಬರೆಹಗಳಿಗೆ ಒತ್ತು ನೀಡುತ್ತಿದ್ದುವು. ವಿಶೇಷವೆಂದರೆ 19ನೆಯ ಶತಮಾನದ ಅಂತ್ಯದ ವೇಳೆಗೆ ಹಳೆಯ ಕನ್ನಡ ಕಾವ್ಯಗಳನ್ನು ಪ್ರಕಟಿಸುವುದಕ್ಕಾಗಿಯೇ ಪತ್ರಿಕೆಗಳು ಹುಟ್ಟಿಕೊಂಡುವು. ಇವನ್ನು ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯ ಪತ್ರಿಕೆಗಳ ಪೂರ್ವ ರೂಪಗಳು, ಸಾಹಿತ್ಯ ಪತ್ರಿಕೆಗಳಿಗೆ ಭೂಮಿಕೆ ಸಿದ್ಧಮಾಡಿದ ಪತ್ರಿಕೆಗಳು ಎಂದು ಕರೆಯಬಹುದು. ಕರ್ನಾಟಕ ಭಾಷಾ ಸೇವಕ (1891), ಕರ್ನಾಟಿಕ ಕಾವ್ಯಮಂಜರಿ (1892), ಕರ್ನಾಟಕ ಗ್ರಂಥಮಾಲಾ (1893), ಕಾವ್ಯ ಕಲ್ಪದ್ರುಮ (1897) ಮೊದಲಾದ ಪತ್ರಿಕೆಗಳನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದು. ಕರ್ನಾಟಕ ಭಾಷಾ ಸೇವಕದಲ್ಲಿ ಪ್ರಾಚೀನ ಕಾವ್ಯಗಳ ಕನ್ನಡ ಭಾಷಾಂತರ ಅಥವಾ ರೂಪಾಂತರಗಳ ಜೊತೆಗೆ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ವಿಷಯಗಳು ಪ್ರಕಟಗೊಳ್ಳುತ್ತಿದ್ದುವು. ಕರ್ನಾಟಕ ಕಾವ್ಯಮಂಜರಿ ಪ್ರಾಚೀನ ಕಾವ್ಯಗಳ ಪ್ರಕಟಣೆಗೇ ಮೀಸಲಾದ ಪತ್ರಿಕೆಯಾಗಿತ್ತು. ಕರ್ನಾಟಕ ಗ್ರಂಥಮಾಲ ಇಂಗ್ಲಿಷ್, ಬಂಗಾಲಿ, ಸಂಸ್ಕೃತ ಗ್ರಂಥಗಳನ್ನು ಅನುವಾದಿಸಿ ಗ್ರಂಥಮಾಲೆ ರೂಪದಲ್ಲಿ ಪ್ರಕಟಿಸುತ್ತಿತ್ತು. ಕಾವ್ಯಕಲ್ಪಧ್ರುಮ, ಸಂಸ್ಕೃತ ಮತ್ತು ಕನ್ನಡದಲ್ಲಿ ಪ್ರಕಟಗೊಳ್ಳುತ್ತಿತ್ತು. ಸಂಸ್ಕೃತ ಕಾವ್ಯ, ನಾಟಕಗಳ ಪ್ರಕಟಣೆ ಹಾಗೂ ಅನುವಾದ ಇದರ ಉದ್ದೇಶವಾಗಿತ್ತು. ಈ ಪತ್ರಿಕೆಗಳಿಗೆ ಸಾಹಿತ್ಯದೊಂದಿಗೆ ಅವಿನಾಭಾವ ಸಂಬಂಧವಿತ್ತು. ಇಂದಿನ ಅರ್ಥದಲ್ಲಿ ಅವುಗಳಿಗೆ ನಿಯತಕಾಲಿಕತೆ ಹಾಗೂ ಮುಂದುವರಿಕೆ ಇರಲಿಲ್ಲ. ಹೀಗಾಗಿ ಇವುಗಳನ್ನು ಪೂರ್ಣಪ್ರಮಾಣದ ಸಾಹಿತ್ಯ ನಿಯತಕಾಲಿಕೆಗಳೆಂದು ಕರೆಯಲಾಗದು.

ಸುವಾಸಿನಿ (1900) ದಕ್ಷಿಣ ಕನ್ನಡ ಜಿಲ್ಲೆಯ ಮೇಲ್ಮಟ್ಟದ ಸಾಹಿತ್ಯಕ ಪತ್ರಿಕೆ. ಈ ಪತ್ರಿಕೆಗೆ ನಾಡಿನ ನಾನಾ ಭಾಗಗಳಿಂದ ಲೇಖಕರು ಬರೆಯುತ್ತಿದ್ದರು. ಕನ್ನಡದ ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರ ಉಗಮಿಸಿದ್ದು ಈ ಪತ್ರಿಕೆಯಲ್ಲಿ. ಕನ್ನಡ ಸಣ್ಣಕಥೆಗಳ ಜನಕರಲ್ಲೊಬ್ಬರೆಂದು ಹೆಸರಾಗಿರುವ ಪಂಜೆ ಮಂಗೇಶರಾಯರ ಸಣ್ಣಕಥೆಗಳು, ಬಿ. ವೆಂಕಟಾಚಾರ್ಯರ ಕಾದಂಬರಿ ಈ ಪತ್ರಿಕೆಯಲ್ಲಿ ಬೆಳಕು ಕಂಡವು.

ಕನ್ನಡ ನವೋದಯ ಕಾವ್ಯದ ಆರಂಭದಲ್ಲಿ ಎರಡು ಪತ್ರಿಕೆಗಳು ಅಲ್ಪಕಾಲ ಪ್ರಕಟವಾದರೂ ಅವುಗಳನ್ನು ವಿಶೇಷವಾಗಿ ಗಮನಿಸಬೇಕು. ಪ್ರಭಾತ (1918) ಮತ್ತು ಕವಿತಾ (1919) ತದ್ರೂಪಿ ಪತ್ರಿಕೆಗಳು. ಇಡೀ ಪತ್ರಿಕೆ ಕವನಕ್ಕೇ ಮೀಸಲಾಗಿ, ಸಂಪಾದಕೀಯ, ಜಾಹೀರಾತು ಹಾಗೂ ಇತರ ಪ್ರಕಟಣೆಗಳೂ ಕವನದಲ್ಲೇ ಇದ್ದುವು. ಪ್ರಭಾತದಲ್ಲಿ ಆ ಕಾಲದ ಖ್ಯಾತ ಲೇಖಕರಾಗಿದ್ದ ಶಾಂತಕವಿಗಳು, ಕಾವ್ಯಾನಂದ ಪುಣೇಕರ, ವಲ್ಲಭ ಮಹಾಲಿಂಗ ಕಟ್ಟಿ, ಬಸವಾರ್ಯ, ಕಿತ್ತೂರ ಕನ್ನಡ ವಾಮನ, ಕರಿಬಸವಶಾಸ್ತ್ರಿ, ಎಂ.ಎನ್.ರೈನಾಪುರ, ಶ್ರೀನಿವಾಸ ಕಟ್ಟಿ, ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ ಮೊದಲಾದವರೆಲ್ಲರೂ ಕವಿತೆಗಳನ್ನು ಬರೆಯುತ್ತಿದ್ದರು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದೀರ್ಘಕಾಲದಿಂದ ಸಾಹಿತಿಗಳ ವೇದಿಕೆಯಾಗಿ, ಆಧುನಿಕ ಕನ್ನಡ ಸಾಹಿತ್ಯದ ಭಾಗವಾಗಿರುವ ಎರಡು ಪತ್ರಿಕೆಗಳು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ **(ನೋಡಿ)** ಮತ್ತು ಪ್ರಬುದ್ಧ ಕರ್ನಾಟಕ **(ನೋಡಿ)**. ಈ ಪತ್ರಿಕೆಗಳು ಈಗಲೂ ತಮ್ಮ ಪ್ರಕಟಣೆಯನ್ನು ಮುಂದುವರಿಸಿವೆ.

ಕನ್ನಡ ಸಾಹಿತ್ಯ 20ನೆಯ ಶತಮಾನ ಮೂರನೆಯ ದಶಕದಲ್ಲಿ ಮುಂದುವರಿದಂತೆ ಕೋಟ ಶಿವರಾಮ ಕಾರಂತರ ವಸಂತ (1921), ಪಂಡಿತ ತಾರಾನಾಥರ ಪ್ರೇಮ (1923), ಆಲೂರು ವೆಂಕಟರಾಯರ ಜಯಕರ್ನಾಟಕ (1923), ಮಂಜೇಶ್ವರ ಅನಂತರಾಯರ ಕರ್ನಾಟಕ ಕೇಸರೀ (1928), ಅ.ನ.ಕೃಷ್ಣರಾಯರ ಕಥಾಂಜಲಿ (1929) ಮುಂತಾದ ಪತ್ರಿಕೆಗಳು ದಾಖಲಾದವು. ತಿಳಿನಗೆಯ ಲೇಖನಗಳಿಗೆ ಮೀಸಲಾದ ಕೊರವಂಜಿ (1942), ಇಂಗ್ಲಿಷ್‌ನ ರೀಡರ್ಸ್ ಡೈಜೆಸ್ಟ್ ಮಾದರಿಯ ಪುಸ್ತಕ ಪ್ರಪಂಚ (1943), ನವಚೇತನ (1944), ಶಕ್ತಿ (1950), ಹಂಸ (ಕೈಬರಹದ ಪತ್ರಿಕೆ 1951), ಲೇಖಕ (1953) – ಇವುಗಳು 20ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಪ್ರಕಟಣೆಯಲ್ಲಿದ್ದ ಮುಖ್ಯ ಸಾಹಿತ್ಯಕ ಪತ್ರಿಕೆಗಳು **(ನೋಡಿ; ಕಥಾಂಜಲಿ, ಕೊರವಂಜಿ, ಪುಸ್ತಕ ಪ್ರಪಂಚ)**.

'ಕವಿತಾ' ಕವನ ಮತ್ತು ಕಾವ್ಯ ವಿಮರ್ಶೆಗಳ ಋತು ಪತ್ರಿಕೆಯೆಂದು ಘೋಷಿಸಿಕೊಂಡು ಒಂದು ದಶಕಕ್ಕೂ ಹೆಚ್ಚು ಕಾಲ ಬದುಕಿತ್ತು. ಇದರ ಪ್ರಧಾನ ಸಂಪಾದಕರು ಬಾ.ಕಿ.ನ. ಎರಡು ವರ್ಷಗಳ ಬಳಿಕ ಕವಿತಾ ಪತ್ರಿಕೆ ಸಾಗರಕ್ಕೆ ವರ್ಗಾವಣೆಗೊಂಡು ಸಾಗರದಿಂದ ಗೋಪಾಲಕೃಷ್ಣ ಅಡಿಗರು ಹೊರತರುತ್ತಿದ್ದ ಸಾಕ್ಷಿಯೊಂದಿಗೆ ಲೀನವಾಗಿ ಸಾಕ್ಷಿ ಮತ್ತು ಕವಿತಾ ಆಯಿತು. ಮತ್ತೆ ಕೆಲವರ್ಷ ಪ್ರಕಟಗೊಂಡು ದಶಕ ಪೂರೈಸಿ ಕವಿತಾ ನಿಂತು ಹೋಯಿತು. ಲಹರಿ–ನವ್ಯದ ಸೃಜನಶೀಲರೇ ಸಾರಥ್ಯ ವಹಿಸಿಕೊಂಡ ಇನ್ನೊಂದು ಪತ್ರಿಕೆ. ಮೈಸೂರಿನಿಂದ ಪೂರ್ಣಚಂದ್ರ ತೇಜಸ್ವಿ ಹಾಗೂ ಬಿ.ಎಸ್. ಶ್ರೀರಾಮ ಅವರ ಸಂಪಾದಕತ್ವದಲ್ಲಿ ಇದರ ಮಾಸಿಕ ಆರು ಸಂಚಿಕೆಗಳು ಪ್ರಕಟಗೊಂಡವು.

'ಸಂಕ್ರಮಣ' ಕನ್ನಡ ಸಾಹಿತ್ಯದಲ್ಲಿ ಬೆಳ್ಳಿ ಹಬ್ಬವನ್ನು ಕಂಡ ಕೆಲವೇ ಪತ್ರಿಕೆಗಳಲ್ಲಿ ಒಂದು. ನವ್ಯದ ಸಂದರ್ಭದಲ್ಲಿ ಅಂದರೆ 1965ರಲ್ಲಿ ಹುಟ್ಟಿದ ಈ ಪತ್ರಿಕೆ ನವ್ಯೋತ್ತರ ಸಾಹಿತ್ಯ ಸಂದರ್ಭದಲ್ಲಿ ನೀಡಿದ ಕೊಡುಗೆ ಮಹತ್ತ್ವವಾದುದು.

ಸಂಕ್ರಮಣವನ್ನು ಧಾರವಾಡದಲ್ಲಿ ಹುಟ್ಟುಹಾಕಿದವರಲ್ಲಿ ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ ಹಾಗೂ ಸಿದ್ಧಲಿಂಗ ಪಟ್ಟಣ ಶೆಟ್ಟಿಯವರು ಪ್ರಮುಖರು. ಕಾಲಾನುಕ್ರಮದಲ್ಲಿ ಗಿರಡ್ಡಿ ಗೋವಿಂದರಾಜ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಹಿಂದೆ ಸರಿದು ಚಂದ್ರಶೇಖರ ಪಾಟೀಲರು ಅದರ ಸಾರಥ್ಯ ವಹಿಸಿದರು. ಪಾಟೀಲರ ಹೆಂಡತಿ ನೀಲಾ ಪಾಟೀಲರು ಸಂಪಾದಕಿಯಾಗಿರುವ ಈ ಪತ್ರಿಕೆಯನ್ನು ಚಂಪಾರವರ ಪತ್ರಿಕೆಯೆಂದೇ ಗುರುತಿಸಲಾಗುತ್ತದೆ.

ಸಮೀಕ್ಷಕ (1965), ಆನಂದ (1966), ಪ್ರಜ್ಞೆ (1968), ಅಜಂತ (1969), ಸಂಕೀರ್ಣ (1970)– ಈ ಅವಧಿಯಲ್ಲಿ ಪ್ರಕಟವಾದ ಇತರ ಸಾಹಿತ್ಯಕ ಪತ್ರಿಕೆಗಳು. 'ಸಮನ್ವಯ' ವಿಭಿನ್ನ ಸಾಹಿತ್ಯ ಪ್ರಕಾರಗಳಿಗೆ ಸಮಾನ ವೇದಿಕೆಯಾಗುವ ಆಶಯದಿಂದ 1968ರಲ್ಲಿ ಬೆಂಗಳೂರಿನಿಂದ ಪ್ರಕಟಗೊಂಡ ತ್ರೈಮಾಸಿಕ ಪತ್ರಿಕೆ. ಇದರ ಸಂಪಾದಕರು ಪ.ಸು.ಭಟ್ಟ. 'ಪ್ರತೀಕ' ರಾಯಚೂರಿನಿಂದ 1968ರಲ್ಲಿ ಪ್ರಕಾಶನಗೊಂಡರೆ 'ಚಿಗುರೆಲೆ' ಮಂಡ್ಯದಿಂದ 1969ರಲ್ಲಿ ಬೆಳಕು ಕಂಡಿತು. ಚಿಗುರೆಲೆಗೆ ಪಂಡಿತ ಮ. ಮಲ್ಲಪ್ಪ ಸಂಪಾದಕರು. ಪ್ರತೀಕ ನವ್ಯ ಸಾಹಿತ್ಯಕ್ಕೆ ಒತ್ತುಕೊಟ್ಟು ಆ ಭಾಗದ ಲೇಖಕರನ್ನು ಪರಿಚಯಿಸಿತು. 'ಮುಂಗಾರು' ಎಪ್ಪತ್ತರ ದಶಕದಲ್ಲಿ ಮಂಗಳೂರಿನಲ್ಲಿ ಮಿಂಚಿ ಮಾಯವಾದ ಸಾಹಿತ್ಯ ಪತ್ರಿಕೆ. ಆಗಸ್ಟ್ 1972ರಲ್ಲಿ ಈ ತ್ರೈಮಾಸಿಕದ ಮೊದಲ ಸಂಚಿಕೆ ಪ್ರಕಟವಾಯಿತು. ಪರಂಪರೆ (1972), ಕಾವ್ಯ (1973), ನೀತಿ (1973), ದಲಿತ (1974), ಮಣ್ಣಿನ ಬದುಕು (1974), ವರ್ತಮಾನ (1978) ಮುಂತಾದವು ಈ ಅವಧಿಯಲ್ಲಿ ಬೆಳಕು ಕಂಡ ಹಾಗೂ ರಮ್ಯ–ನವ್ಯ–ನವ್ಯೋತ್ತರದ ಚರ್ಚೆಗಳಿಗೆ ವೇದಿಕೆಯಾದ ಪತ್ರಿಕೆಗಳು. ಇದೇ ಹೊತ್ತಿಗೆ ಬೆಂಗಳೂರು ವಿಶ್ವವಿದ್ಯಾಲಯದ ತ್ರೈಮಾಸಿಕ ಸಾಹಿತ್ಯ ಪತ್ರಿಕೆ ಸಾಧನೆ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಅರ್ಧವಾರ್ಷಿಕ ಸಾಹಿತ್ಯ ಪತ್ರಿಕೆ ಕರ್ನಾಟಕ ಭಾರತೀ ಪ್ರಕಟಣೆ ಆರಂಭಿಸಿದುವು. ಮೈಸೂರು ವಿಶ್ವವಿದ್ಯಾನಿಲಯ ಪ್ರಬುದ್ಧ ಕರ್ನಾಟಕದ ಪ್ರಕಟಣೆಯೊಂದಿಗೆ ವಿಜ್ಞಾನ ಕರ್ನಾಟಕ ಮತ್ತು ಮಾನವಿಕ ಕರ್ನಾಟಕಗಳೆಂಬ ಎರಡು ಶಾಸ್ತ್ರೀಯ ಅಧ್ಯಯನಕ್ಕೆ ಮೀಸಲಾದ

ತ್ರೈಮಾಸಿಕಗಳನ್ನು ಪ್ರಾರಂಭಿಸಿತು. ಕನ್ನಡ ವಿಶ್ವವಿದ್ಯಾಲಯ ವಿವಿಧ ವಿಷಯಗಳನ್ನಾಧರಿಸಿ ನಿಯತಕಾಲಿಕೆಗಳನ್ನು ಹೊರತರುತ್ತಿರುವುದಲ್ಲದೆ ಕನ್ನಡ ಪ್ರಕಟಣೆಗಳ ಸೂಚಿಯನ್ನು ಪ್ರಕಟಿಸುತ್ತಿದೆ. ಮಹಿಳಾ ಅಧ್ಯಯನ ವೆಂಬ ವಿಶಿಷ್ಟ ನಿಯತಕಾಲಿಕವೂ ಇವುಗಳಲ್ಲಿ ಒಂದು.

ಮುಕ್ತ ಚರ್ಚೆಗಾಗಿ ಶೂದ್ರ ಎಂಬ ತಿಂಗಳ ಪತ್ರಿಕೆ 1975ರಲ್ಲಿ ಆರಂಭಗೊಂಡಿತು. ಈ ಪತ್ರಿಕೆಯಿಂದಾಗಿ ಅದೇ ಹೆಸರು ಪಡೆದ ಶೂದ್ರ ಶ್ರೀನಿವಾಸ ಇದರ ಸಂಪಾದಕರು. ವೈಯಕ್ತಿಕ ಪ್ರಯತ್ನವಾಗಿಯೂ ಎರಡು ದಶಕಕ್ಕೂ ಹೆಚ್ಚು ಕಾಲ ಜೀವಂತವಿದ್ದ ಸಾಹಿತ್ಯ ಪತ್ರಿಕೆಗಳಲ್ಲಿ ಇದು ಒಂದಾಗಿತ್ತು. ಒಡನಾಡಿ (1975), ಕಾದಂಬರಿ (1977), ಬದುಕು (1977), ಪುಸ್ತಕ ಪುರವಣಿ (1977), ಗ್ರಂಥಲೋಕ ಈ ಅವಧಿಯಲ್ಲಿ ದಾಖಲಾದ ಕೆಲ ಪತ್ರಿಕೆಗಳು.

80ರ ದಶಕದಲ್ಲಿ ಕನ್ನಡದಲ್ಲಿ ಬಂಡಾಯ–ದಲಿತ ಚಳವಳಿ ಹುಟ್ಟಿಕೊಂಡು ಅನೇಕ ಸಾಹಿತ್ಯ ಪತ್ರಿಕೆಗಳ ಹುಟ್ಟಿಗೂ ಕಾರಣವಾದವು. ಈ ಪತ್ರಿಕೆಗಳು ದಲಿತ–ಬಂಡಾಯ ಚಳವಳಿಯನ್ನೂ ಬೆಳೆಸಿದುವು. ಬಂಡಾಯ ಸಾಹಿತ್ಯ (1983), ಸೃಜನವೇದಿ (1984), ಅನ್ವೇಷಣೆ (1984), ಅಂತರ (1986), ಸಂವಾದ (1986), ಕವಿಮಾರ್ಗ (1987), ಸಾಹಿತ್ಯ ಸಂಗಾತಿ (1989), ಒಡಲಾಳ (1990), ಚ. ಏಕಾಕ್ಷರ ಪತ್ರಿಕೆ (1992),ಸಾಹಿತ್ಯ ಸಂಘರ್ಷ (1992), ಹೊಸದಿಕ್ಕು (1992), ಪ್ರಜ್ಞೆ (1993) – ಇವು ಮುಖ್ಯವಾಗಿ ಇಪ್ಪತ್ತನೆಯ ಶತಮಾನದ ಕೊನೆಯ ಎರಡು ದಶಕಗಳಲ್ಲಿ ದಲಿತ – ಬಂಡಾಯ ಸಾಹಿತ್ಯ ಚಳವಳಿಗೆ ನೀರೆರೆದು ಪೋಷಿಸಿದ, ಅವುಗಳ ಸಾಧನೆ ಸೋಲುಗಳಿಗೆ ಸಾಕ್ಷಿಯಾದ ಪತ್ರಿಕೆಗಳು.

ಇದೇ ವೇಳೆಗೆ ದಲಿತ ಬಂಡಾಯಕ್ಕೆ ಸೀಮಿತವೆನಿಸಿಕೊಳ್ಳದ ಯಾವುದೇ ಚಳವಳಿಗೆ ವೇದಿಕೆಯಾಗದೇ ಶುದ್ಧ ಸಾಹಿತ್ಯಕ ವೇದಿಕೆಯಾದ ಅನೇಕ ಪತ್ರಿಕೆಗಳೂ ಇದ್ದುವು. ಉದಾಹರಣೆಗೆ ಕನ್ನಡ ಸಾಹಿತ್ಯ ಪತ್ರಿಕೆಗಳ ಪೈಕಿ ವಿಶಿಷ್ಟ ಸ್ಥಾನ ಪಡೆದ 'ರುಜುವಾತು' ಆರಂಭಗೊಂಡಿದ್ದು 1982ರಲ್ಲಿ. 'ಸೃಜನಶೀಲ ಹೊಸ ಪ್ರಯೋಗಗಳಿಗಾಗಿ, ಹೊಸ ದಿಕ್ಕಿನ ಹುಡುಕಾಟಕ್ಕಾಗಿ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದ ಶೋಧಕ್ಕಾಗಿ' ಎಂಬುದು ರುಜುವಾತಿನ ಘೋಷಣೆ. ಕನ್ನಡದ ಹಿರಿಯ ಸಾಹಿತಿ, ವಿಮರ್ಶಕ ಯು.ಆರ್. ಅನಂತಮೂರ್ತಿ **(ನೋಡಿ)** ಈ ಪತ್ರಿಕೆಯ ಸಂಪಾದಕರು. ತ್ರೈಮಾಸಿಕವಾಗಿ ಆರಂಭವಾದ ಇದು ಕನಿಷ್ಠ 25 ಸಂಚಿಕೆಗಳವರೆಗೆ ನಿಯತವಾಗಿಯೇ ಬಂದಿತು. ಸದ್ಯಕ್ಕೆ ರುಜುವಾತು ಅನಿಯತಕಾಲಿಕವಾಗಿ ಪ್ರಕಟಗೊಳ್ಳುತ್ತಿದೆ.

ಲೋಚನ (1982), ಚಂದನ (1984), ಸಂಚಯ (1987), ಅನಿಕೇತನ (1988), ಗಾಂಧಿಬಜಾರ್ (1988), ಕನ್ನಡ ಸಾಹಿತ್ಯ ಲೋಕ (1993), ಪುಸ್ತಕ ಮಾಹಿತಿ (1993)–ಇವಿಷ್ಟು ನವ್ಯ, ದಲಿತ, ಬಂಡಾಯ ಎಂಬ ಘೋಷಣೆಯ ಹಣೆಪಟ್ಟಿಯ ಹಂಗಿಲ್ಲದೇ ಶುದ್ಧ ಸಾಹಿತ್ಯ ಪತ್ರಿಕೆಗಳಾಗಿ ಕನ್ನಡದಲ್ಲಿ ಬೆಳಕು ಕಂಡಂಥವು. ಇತ್ತೀಚೆಗೆ ದೇಶಗತಿ ಎಂಬ ಪತ್ರಿಕೆ ಪ್ರಕಟವಾಗುತ್ತಿದೆ.

ಈಗ 20ನೆಯ ಶತಮಾನ ಮುಗಿದು ಜಗತ್ತು 21ನೆಯ ಶತಮಾನಕ್ಕೆ ಕಾಲಿರಿಸಿದೆ. ಕ್ಷಣಕ್ಷಣಕ್ಕೂ ಪ್ರಪಂಚದ ಮಟ್ಟದಲ್ಲಿ ಅನೇಕ ರೀತಿಯ ಬದಲಾವಣೆಗಳಾಗುತ್ತಿವೆ. ಅದರ ಪರಿಣಾಮ ಕರ್ನಾಟಕದ ಮೇಲೆ, ಒಟ್ಟಾರೆ ಕನ್ನಡ ಸಾಹಿತ್ಯ ಸಂದರ್ಭದ ಮೇಲೂ ಆಗಿದೆ, ಆಗುತ್ತಿದೆ.

ಈಗ ಕನ್ನಡದ ದೊಡ್ಡ ಪತ್ರಿಕೆಗಳೇ ಅಸ್ತಿತ್ವಕ್ಕಾಗಿ ಹೋರಾಡುತ್ತಿವೆ. ಬೆಲೆಯಿಳಿಸಿಕೊಂಡು ಪ್ರಸಾರ ಹೆಚ್ಚಿಸಿಕೊಳ್ಳುವ ಕಸರತ್ತಿನಲ್ಲಿ ಸ್ಪರ್ಧೆಗಿಳಿದಿವೆ. ದಶಕದ ಹಿಂದೆ ಕೈಗಾರಿಕೆ ಹಾಗೂ ವಾಣಿಜ್ಯ ವ್ಯವಹಾರಗಳಿಂದಾಗುವ ಮುದ್ರಣ ಮಾಧ್ಯಮಕ್ಕೆ ಬರುತ್ತಿದ್ದ ಜಾಹೀರಾತುಗಳು ದೂರದರ್ಶನ ಚಾನಲುಗಳ ಪಾಲಾಗುತ್ತಿವೆ. ಹೀಗಾಗಿ ಪತ್ರಿಕೆಗಳ ಜಾಹೀರಾತು ಆದಾಯ ಶೇಕಡಾವಾರು ಇಳಿಕೆಗಂಡಿದೆ. ಪತ್ರಿಕೆಗಳ ನಡುವಿನ ಪ್ರಸಾರದ ಸ್ಪರ್ಧೆಯಲ್ಲಿ ಪ್ರಸಾರವೂ ಇಳಿಮುಖವಾಗಿದೆ. ಮಾಹಿತಿ ತಂತ್ರಜ್ಞಾನ ಪ್ರವೇಶದಿಂದ ಪತ್ರಿಕೋದ್ಯಮ ರಂಗದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿವೆ. ಮಾಹಿತಿ ಜ್ಞಾನದ ದೃಷ್ಟಿಯಿಂದ ಈಗ ಪ್ರಪಂಚ ಜಾಗತಿಕ ಹಳ್ಳಿಯಾಗಿ ಪರಿವರ್ತಿತವಾಗುತ್ತಿದೆ. **(ಎನ್‌ಐ.ವಿ.)**

**ಪದ್ಮಣಾಂಕ:** ಸು. 1420. ವೀರಶೈವ ಕವಿ. ಪದ್ಮರಾಜಪುರಾಣ ಎಂಬ ಕಾವ್ಯದ ಕರ್ತೃ. ಈತ ಕೆರೆಯ ಪದ್ಮರಸನ ವಂಶದಲ್ಲಿ ಹುಟ್ಟಿದವ. ಇವನ ಅಜ್ಜ ವೀರಣಾಚಾರ್ಯ, ತಂದೆ ಪದ್ಮಣಾರ್ಯ. ಪದ್ಮಣಾಂಕ ಉತ್ತಮ ಕಥೆಗಾರ, ಶಾಸ್ತ್ರಾಗಮತಜ್ಞ, ಪಂಡಿತ, ಸರಸಸತ್ಕವಿ, ಕಾವ್ಯಶಾಸ್ತ್ರ ಚಿತ್ಯಜ್ಞಾನ ದೃಷ್ಟಿಯುತ, ಸೂಕ್ಷ್ಮನಿರೀಕ್ಷಣಾಶಕ್ತಿಸಂಪನ್ನ, ಸಂಗೀತಶಾಸ್ತ್ರ ಪರಿಣತಮತಿ, ಉಭಯಕವಿ ಎಂಬ ಹೊಗಳಿಕೆಗೆ ಪಾತ್ರನಾಗಿದ್ದಾನೆ.

ಪದ್ಮರಾಜಪುರಾಣ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 13 ಸಂಧಿ, 1,270 ಪದ್ಯ ಇವೆ. ಹೊಯ್ಸಳ ನರಸಿಂಹ ಬಲ್ಲಾಳನಲ್ಲಿ ದಂಡಾಧಿಪತಿಯೂ ಮಂತ್ರಿಯೂ ಆಗಿದ್ದ ಕೆರೆಯ ಪದ್ಮರಸನ ಚರಿತೆ ಕಾವ್ಯವಸ್ತು. ಮೊದಲ 10 ಸಂಧಿಗಳಲ್ಲಿ ಕಾವ್ಯಕಥೆ ನಿರೂಪಿತವಾಗಿದ್ದು ಕೊನೆಯ 3 ಸಂಧಿಗಳಲ್ಲಿ ಶಾಸ್ತ್ರ ವಿಚಾರ ಹೇಳಿದೆ. ಮುಖ್ಯ ಕಥೆಯೊಂದಿಗೆ ನೂರಾರು ಉಪಕಥೆಗಳು ಬಂದಿದ್ದರೂ ಮೂಲ ಕಥಾಪ್ರವಾಹಕ್ಕೆ ಯಾವುದೇ ಅಡ್ಡಿಯುಂಟಾಗಿಲ್ಲ. ಕವಿ ವರ್ಣನೆಗಳಿಗಿಂತ ಕಥನಕ್ರಿಯೆಗೆ ಪ್ರಾಮುಖ್ಯತೆ ನೀಡಿದ್ದಾನೆ. ಶೈಲಿ ಪ್ರೌಢವಾಗಿದೆ. ಕೃತಿಯಲ್ಲಿ ಕಾವ್ಯಾಂಶ, ಇತಿಹಾಸಾಂಶ ಹಾಗೂ ತಾತ್ತ್ವಿಕಾಂಶ–ಈ ಮೂರು ಮುಪ್ಪುರಿಗೊಂಡಿವೆ. ಕೆರೆಯ ಪದ್ಮರಸ, ಹರಿಹರ, ರಾಘವಾಂಕ–ಇವರ ಜೀವನಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳ ಮೇಲೆ ಈ ಕಾವ್ಯ ಬೆಳಕು ಚೆಲ್ಲುತ್ತದೆ. **(ಇ.ಎಸ್.)**

**ಪದ್ಮನಾಭ:** ಸು. 1680. ಜೈನಕವಿ. ಪದ್ಮಾವತೀಚರಿತ್ರೆ ಎಂಬ ಗ್ರಂಥದ ಕರ್ತೃ. ಕವಿಯು ತುಳುವ ದೇಶದ ಚೂಲಿಕಾ ಪಟ್ಟಣದ ಅರಸು ತಿರುಮಲ ಸಾಮಂತನಲ್ಲಿ ಕೋಶಾಧ್ಯಕ್ಷನಾಗಿದ್ದುದಾಗಿ ಹೇಳಿಕೊಂಡಿದ್ದಾನೆ. ಜೊತೆಗೆ ಆಶ್ರಯದಾತನ ಪರಾಕ್ರಮ, ದಯಾಪರತೆ, ಧರ್ಮಾಸಕ್ತಿಗಳನ್ನು ಹೊಗಳಿದ್ದಾನೆ. ತಿರುಮಲ ಸಾಮಂತನ ಸೋದರಿ ಚೆನ್ನಮಾಂಬಿಕೆ ಪ್ರಾಪ್ತವಯಸ್ಕಳಾದೊಡನೆ ಶಂಕರರಸನನ್ನು ವರಿಸಿ ತಾನೇ ರಾಜ್ಯಭಾರದ ಹೊಣೆ ಹೊತ್ತ ಸಮಯದಲ್ಲಿ ಕವಿ ತಾನು ಕೃತಿ ರಚಿಸಿದುದಾಗಿ ಹೇಳಿಕೊಂಡಿದ್ದಾನೆ.

ಪದ್ಮಾವತೀಚರಿತ್ರೆ ಸಾಂಗತ್ಯದಲ್ಲಿದೆ. ಇದರಲ್ಲಿ 12 ಸಂಧಿಗಳೂ 1,600 ಪದ್ಯಗಳೂ ಇವೆ. ಇದನ್ನು ಜಿನದತ್ತರಾಯ ಚರಿತೆ, ಅಮ್ಮನವರ ಚರಿತೆ ಎಂದೂ ಕವಿ ಸಂಬೋಧಿಸಿದ್ದಾನೆ. 23ನೆಯ ತೀರ್ಥಂಕರ ಪಾರ್ಶ್ವನಾಥನ ಧರ್ಮಬೋಧೆಯ ಫಲವಾಗಿ ಶುದ್ಧ ಜ್ಞಾನದಿಂದ ಮುಡುಪಿದ ಸರ್ಪಯುಗಳ ನಾಗಲೋಕದ ಧರಣೇಂದ್ರ ಪದ್ಮಾವತಿಯರೆಂಬ ಯಕ್ಷಯಕ್ಷಿಯರಾಗುತ್ತಾರೆ. ಈ ಪದ್ಮಾವತಿಯ ಮಹಿಮೆಯನ್ನು ಕುರಿತ ಕೃತಿಯೇ ಪದ್ಮಾವತೀಚರಿತ್ರೆ.

ಕವಿ ಸಾಂಪ್ರದಾಯಿಕವಾದ ಅಷ್ಟಾದಶವರ್ಣನೆಗಳನ್ನು ಅಳವಡಿಸಿಕೊಂಡಿದ್ದಾನೆ. ಕೆಡುವಾಗ ಬುದ್ಧಿ ಕಿವಿಗೆ ಕೇಳದು. ಪರಸೇವೆ ಪರಕಷ್ಟ, ಮೆಚ್ಚಿದವಗೆ ಮಸಣ ಸುಖ ಎಂಬಲ್ಲಿ ಕವಿಯ ಲೋಕಜ್ಞಾನದ ಪರಿಚಯವಾಗುತ್ತದೆ. ಪದ್ಮಾವತೀಚರಿತ್ರೆ ಜೈನಕಾವ್ಯವಾದರೂ ಭವಾವಳಿಯ ತೊಡರಿಲ್ಲದೆ ಓದಿಸಿಕೊಳ್ಳುವ ಗುಣವನ್ನು ಪಡೆದುಕೊಂಡಿದೆ. **(ಎಂ.ಆರ್.ಯು.)**

**ಪರ:** ಕಷ್ಟ ಉಂಟಾದಾಗ, ಸಂತೋಷದ ಘಟನೆಯೇನಾದರೂ ಜರುಗಿದಾಗ ಅಥವಾ ತಮ್ಮ ಬಯಕೆಯೊಂದು ಈಡೇರುವ ಸಲುವಾಗಿ ಇಷ್ಟದೈವಕ್ಕೆ ಕಟ್ಟಿಕೊಂಡ ಹರಕೆ ತೀರಿಕೆಯ ಒಂದು ಜನಪದ ನಡೆವಳಿಕೆ. ಸಾಮಾನ್ಯವಾಗಿ ಹರಕೆ ಹೊರುವವರು ಇಂಥ ಕಾಲದಲ್ಲಿ ಬಂದು ಹರಕೆ ತೀರಿಸುತ್ತೇವೆಂದು ತಮ್ಮ ಇಷ್ಟದೈವಕ್ಕೆ ನಿವೇದಿಸಿಕೊಂಡಿರುತ್ತಾರೆ. ಒಂದು ವೇಳೆ ಅಂಥ ಕಾಲದಲ್ಲಿ ಹರಕೆ ತೀರಿಸಲು ಆರ್ಥಿಕ ತೊಂದರೆ ಯಿಂದಲೋ ಇನ್ನಾವುದೆ ಕಾರಣದಿಂದಲೋ ಅಶಕ್ತರಾದಾಗ, ಅನುಕೂಲ ವಾದಾಗ ಬಂದು ಹರಕೆ ತೀರಿಸುವುದಾಗಿ ತಪ್ಪುಕಾಣಿಕೆ ಕಟ್ಟಿ ಇಡುತ್ತಾರೆ. ಅರಿಸಿನದ ಬಟ್ಟೆಯಲ್ಲಿ ಕಾಸನ್ನು ಕಟ್ಟಿ ಪೂಜಿಸಿ ದೇವರ ಮುಂದೆ ಇಡುವುದಕ್ಕೆ ತಪ್ಪುಕಾಣಿಕೆ ಎನ್ನುವರು. ಇದನ್ನು ಹರಕೆ ಸಲ್ಲಿಸಲು ದೇವರ ಸನ್ನಿಧಿಗೆ ಹೋದಾಗ ದೇವರ ಗೋಲಕಕ್ಕೆ ಹಾಕುತ್ತಾರೆ.

ಪರವನ್ನು ಮಾಂಸಾಹಾರಿಗಳು ಸಾಮಾನ್ಯವಾಗಿ ಮಂಗಳವಾರ ಅಥವಾ ಶುಕ್ರವಾರ, ಸಸ್ಯಾಹಾರಿಗಳು ಸೋಮವಾರ ಅಥವಾ ಶನಿವಾರ ಆಚರಿಸುತ್ತಾರೆ. ಸಾತ್ತ್ವಿಕ ಪೂಜೆ ಸಲ್ಲಿಸುವವರು ತಾವು ಹರಕೆ ಕಟ್ಟಿಕೊಂಡ ದೈವದ ಗುಡಿಗೆ ಹೋಗಿ ಗುಡಿಯ ಆವರಣದಲ್ಲಿ ಒಲೆ ಹೂಡಿ ಅಡುಗೆ ಮಾಡಿ, ತಮ್ಮ ಶಕ್ತ್ಯನುಸಾರವಾಗಿ ಜನರನ್ನು ಕರೆದು ಊಟ ಹಾಕುತ್ತಾರೆ. ಕುರಿಯನ್ನೋ ಕೋಳಿಯನ್ನೋ ಬಲಿಕೊಟ್ಟು, ಅದನ್ನು ಅಲ್ಲಿ ಶುಚಿಮಾಡಿ, ಕತ್ತರಿಸಿ ಪರ ಮಾಡುವ ಪದ್ಧತಿ ಹರಸಿಕೊಳ್ಳುವವರನ್ನೂ ಹರಸಿಕೊಂಡಿರುವ ದೈವವನ್ನೂ ಅವಲಂಬಿಸಿರುತ್ತದೆ. ಹರಕೆ ಸಲ್ಲಿಸಬೇಕಾಗಿರುವ ದೈವದ ಗುಡಿ ಹತ್ತಾರು ಮೈಲಿಗಿಂತ ದೂರ ಇದ್ದರೆ, ಅಲ್ಲಿಗೆ ಹೋಗಿ ಪೂಜೆ ಮಾತ್ರ ಸಲ್ಲಿಸಿ ಹಿಂದಕ್ಕೆ ಬಂದು, ಊರ ಹೊರಗೆ ನೀರು ನಿಡಿ ಇರುವ ಜಾಗದಲ್ಲಿ ಆ ದೈವದ ಹೆಸರಿನಲ್ಲಿ ಅಡುಗೆ ಮಾಡಿ ಪರದಲ್ಲಿ ಪಾಲು ಗೊಳ್ಳಲು ಬಂದ ಊರ ಜನರಿಗೆ ಊಟ ಹಾಕುತ್ತಾರೆ.

ಉತ್ತರ ಕರ್ನಾಟಕದಲ್ಲಿ ಈ ಆಚರಣೆಯನ್ನು ಪರು ಎಂದು ಕರೆಯುವರು. ಇಲ್ಲಿ ಪರುವನ್ನು ನಿರ್ದಿಷ್ಟವಾಗಿ ಮಂಗಳವಾರ ಅಥವಾ ಶುಕ್ರವಾರ ಮಾತ್ರ ಆಚರಿಸುತ್ತಾರೆ. ಇದನ್ನು ಊರ ಹೊರಗೆ ಮಾಡಬೇಕೆಂಬ ನಿಯಮವೇನೂ ಇಲ್ಲ. ಸಂಬಂಧಪಟ್ಟ ದೈವಕ್ಕೆ ಪೂಜೆ ಸಲ್ಲಿಸಿ ಮನೆಯಲ್ಲಿ ಮಾಡಿಕೊಳ್ಳಬಹುದು. ಆದರೆ ಆ ದಿನ ಎಣ್ಣೆಯಲ್ಲಿ ಕರಿದ ಪದಾರ್ಥಗ ಳನ್ನು ಉಪಯೋಗಿಸುವಂತಿಲ್ಲ. ಪ್ರತಿಯೊಂದು ತಿನಿಸನ್ನೂ ಕುದಿಸುವುದರ ಮೂಲಕವೇ ತಯಾರಿಸಬೇಕು. ಪರುವಿನಲ್ಲಿ ಕಣಕದ ಜೋಳದ ಕಡುಬು ತೀರ ಸಾಮಾನ್ಯಭಕ್ಷ್ಯ. ಜೋಳ ಸಿಗದಿದ್ದಾಗ ಸಜ್ಜೆ ಮತ್ತಿತರ ಧಾನ್ಯಗಳಿಂದ ಕಡುಬು ಮಾಡುತ್ತಾರೆ. **(ಕೆ.ಆರ್.)**

**ಪರಮದೇವ:** ಸು.1777. ಬ್ರಾಹ್ಮಣ ಕವಿ. ತುರಂಗಭಾರತ, ತತ್ತ್ವ ಚೌಪದ, ನಾರಾಯಣಾಕ್ಷರಮಾಲಿಕಾ ಎಂಬ ಗ್ರಂಥಗಳ ಕರ್ತೃ. ದಕ್ಷಿಣ ಕನ್ನಡ ಜಿಲ್ಲೆಯ ಹನ್ನರ ಮಾಗಣೆ ಹತ್ತಿರವಿರುವ ಸುಳಿಗೋಡು ಈತನ ಜನ್ಮಸ್ಥಳ. ತಂದೆ ಶಂಕರನಾರಾಯಣ. ಇವನ ಮನೆತನದವರು (ತೋಟ) ವ್ಯವಸಾಯಗಾರರು. ಕವಿ ಬಡತನದಿಂದಾಗಿ ಸಾಲಮಾಡಿ ಆಸ್ತಿ ಕಳೆದು ಕೊಂಡು ಊರನ್ನೇ ಬಿಟ್ಟು ಶಿವಮೊಗ್ಗ ಜಿಲ್ಲೆಯ ಸಾಗರದ ಅಘೋರೇಶ್ವರ ದೇವಾಲಯದ ಬಳಿ ಬಂದು ಚಿಪ್ಪಳಿಯಲ್ಲಿ ವಾಸಿಸುತ್ತಿದ್ದ. ಅಲ್ಲಿ ಕೆಲವು ಹುಡುಗರಿಗೆ ಪಾಠ ಹೇಳಿ ಜೀವನ ಸಾಗಿಸಿದ. ಅನಂತರ ಕೇದಿಗೆಸರ ಎಂಬಲ್ಲಿ ಕಟ್ಟಿದ ನೂತನ ಗಣಪತಿ ದೇವಾಲಯಕ್ಕೆ ಅರ್ಚಕನಾದ. ಇಲ್ಲಿಂದ ಈತನ ಕಾವ್ಯಸೃಷ್ಟಿ ಆರಂಭವಾದಂತೆ ತೋರುತ್ತದೆ.

ತತ್ತ್ವಚೌಪದ ಈತನ ಪ್ರಥಮ ಕೃತಿ. ಇದರಲ್ಲಿ ಒಟ್ಟು 54 ಪದ್ಯಗಳಿದ್ದು ಅದ್ವೈತಮತವನ್ನು ಪ್ರತಿಪಾದಿಸಲಾಗಿದೆ. ತುರಂಗಭಾರತ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 96 ಸಂಧಿ, 4,720 ಪದ್ಯ ಇವೆ. ಈ ಕಾವ್ಯದಲ್ಲಿ ಭಾರತದ ಕಥೆಯನ್ನು ಸಂಕ್ಷೇಪವಾಗಿ ಎಲ್ಲರಿಗೂ ತಿಳಿವಂತೆ ಹೇಳುವುದು ತನ್ನ ಮುಖ್ಯ ಉದ್ದೇಶವೆಂದಿದ್ದಾನೆ. ಕಾವ್ಯವು ಕೋಣಿ ಲಕ್ಷ್ಮೀರಮಣದೇವರ ಅಂಕಿತದಲ್ಲಿದೆ. ಇದನ್ನು ಕವಿ 1777ರಲ್ಲಿ ಬರೆದಂತೆ ತಿಳಿಯುತ್ತದೆ. ಭಾವಭಾಷೆಗಳಲ್ಲಿ ಅನೇಕ ಕಡೆ ಸಾಮರಸ್ಯ ಕಂಡುಬರುತ್ತದೆ. ಭೀಮಜರಾಸಂಧರ ಯುದ್ಧ ಸಂದರ್ಭದಲ್ಲಿ ಬರುವ ನುಡಿನುಡಿಗೆ ಮೂದಲಿಸಿ ಬೈಬೈದು ಬೊಬ್ಬಿರಿಸಿ ತಡವಡಿಸಿ ತೊಡೆತೊಡೆ ಗಳಿಂದವುಕಿ ಬಿಗಿಬಿಗಿಯ ಹಿಡಿಹಿಡಿದು ಕೈದುಡುಕಿ ಕಾದಿದರು ಜಾಡುದರು ಮೀಟುದರು ಸಂಗದೊಳು–ಎಂಬಂಥ ಮಾತುಗಳು ಇವನ ಶೈಲಿಗೆ ನಿದರ್ಶನವಾಗಿದೆ. ಕಾವ್ಯದಲ್ಲಿಯ ವರ್ಣನೆಗಳು ಕೆಲವೆಡೆ ಚೆನ್ನಾಗಿವೆ. ನಾರಾಯಣಾಕ್ಷರಮಾಲಿಕಾ ಉಪಲಬ್ಧವಿಲ್ಲ. **(ಎಂ.ಆರ್.)**

**ಪರಮಯ್ಯ ಹಾಸ್ಯಗಾರ, ಕರ್ಕಿ**: 1885–1972. ಪ್ರತಿಭಾನ್ವಿತ ಯಕ್ಷಗಾನ ನಟ ಹಾಗೂ ಶಿಕ್ಷಕ. ಹುಟ್ಟಿದ್ದು ಉತ್ತರ ಕನ್ನಡ ಜಿಲ್ಲೆಯ ಕರ್ಕಿಯಲ್ಲಿ. ವಾಹನ ಸೌಕರ್ಯವಿಲ್ಲದಿದ್ದ ಆ ಕಾಲದಲ್ಲಿ ರಾಜ್ಯದ ಗಡಿದಾಟಿ, ಬಡೋದೆ, ಸಾಂಗ್ಲಿ ಸಂಸ್ಥಾನಗಳಲ್ಲಿ ಯಕ್ಷಗಾನದ ಕಲಾವೈಭವ ವನ್ನು ಪ್ರದರ್ಶಿಸಿ, ಆ ಸಂಸ್ಥಾನಿಕರ ಗೌರವದ್ಯೋತಕ ಉಂಬಳಿ ಉಡುಗೊರೆಗಳನ್ನು ಪಡೆದುಬಂದ ಸಾಹಸದ ಚರಿತ್ರೆ ಕರ್ಕಿ ಯಕ್ಷಗಾನ ಮಂಡಳಿಯದು. ಆ ಮೇಳದಲ್ಲಿ ಪರಮಯ್ಯನವರ ಪೂರ್ವಜರು ಇದ್ದರು. ಕರ್ಕಿಯದಲ್ಲಿ ಆರೇಳು ತಲೆಮಾರುಗಳಿಂದ ಈ ಕಲೆಯನ್ನು ಆರಾಧಿಸುತ್ತ ಬಂದ ಕೆಲವು ಮನೆತನಗಳಲ್ಲಿ ಈಗ ಉಳಿದಿರುವುದು ಕೇವಲ ಎರಡು ಮನೆತನಗಳು: ಒಂದು–ಹಾಸ್ಯಗಾರ ಕುಟುಂಬ, ಇನ್ನೊಂದು ಮದ್ದಳೆಗಾರ ಕುಟುಂಬ.

ಪರಮಯ್ಯ ಹಾಸ್ಯಗಾರ ಕುಟುಂಬದವರು. ಇವರು ತಮ್ಮ ಹತ್ತನೆಯ ವಯಸ್ಸಿನಲ್ಲಿಯೇ ತಂದೆ ವರದ ಹಾಸ್ಯಗಾರ ಮತ್ತು ಅವರ ಜೊತೆ ಪಾತ್ರಧಾರಿ ಹುಲಿಮಕ್ಕಿ ರಾಮಕೃಷ್ಣ ಹೆಗಡೆಯವರಿಂದ ನೃತ್ಯಾಭ್ಯಾಸಕ್ಕೆ ತೊಡಗಿದರು. ಬಾಲಗೋಪಾಲ ವೇಷದಿಂದ ಆರಂಭಿಸಿ, ಸ್ತ್ರೀವೇಷದಲ್ಲಿ ಪಳಗಿ, ಮೀನಾಕ್ಷಿ, ದಾಕ್ಷಾಯಿಣಿ, ದಮಯಂತಿ ಮೊದಲಾದ ಪಾತ್ರಗಳಿಂದ ಪ್ರೇಕ್ಷಕರನ್ನು ಆಕರ್ಷಿಸಿದರು. ಕುಮಾರ ಪಾತ್ರಗಳಾದ ಅಭಿಮನ್ಯು, ಸುಧನ್ವ, ಬಭ್ರುವಾಹನರ ಪಾತ್ರಗಳಲ್ಲಿ ಮೆರೆದರು. ಇವರ ಕಲಾಪ್ರೌಢಿಮೆ ದಿನೇದಿನೇ ಪ್ರವರ್ಧಮಾನವಾದಂತೆ ನಾಯಕ ಪ್ರತಿನಾಯಕ ಪಾತ್ರಗಳೇ ಇವರಿಗೆ ಮೀಸಲಾದವು. ಇವರ ಕೀಚಕ, ಭಸ್ಮಾಸುರ, ರಾಮ, ಕೃಷ್ಣ, ಅರ್ಜುನ, ಬಲದೇವ, ಕಿರಾತ, ವಾಲ್ಮೀಕಿ ಮೊದಲಾದ ಪಾತ್ರಗಳು ಈಗಲೂ ಮನೆ ಮಾತಾಗಿವೆ. ಗುಬ್ಬಿ ಗಣಪತಿ ಹೆಗಡೆ, ಹನುಮಂತ ಭಂಡಾರಿ, ಮಂಜಪ್ಪ ಶೆಟ್ಟಿ ಮೊದಲಾದವರು ಇವರಿಗಿಂತ ಹಿರಿಯರು. ದೇವರು ಹೆಗಡೆ, ರಾಧಾಭಟ್ಟರು, ಶಿವರಾಮಭಂಡಾರಿ, ತಿಮ್ಮಯ್ಯ ಭಾಗವತ ಮೊದಲಾದವರು ಸಮಕಾಲೀನರು.

ಇವರು ಪ್ರತಿಭಾನ್ವಿತ ನಟರಷ್ಟೇ ಅಲ್ಲದೆ ಯಕ್ಷಗಾನದ ಪ್ರಭಾವಶಾಲಿ ಸಮರ್ಥ ಶಿಕ್ಷಕರೂ ಆಗಿದ್ದರು. ತಮ್ಮ ನಲ್ವತ್ತೆರಡನೆಯ ವಯಸ್ಸಿನಲ್ಲಿ ಚಿಕ್ಕ ಬಾಲಕರಿಗೆ ತರಬೇತಿ ಕೊಟ್ಟು ಮೇಳವನ್ನು ರಚಿಸಿದ್ದರು. ಆದರ ಯಕ್ಷಗಾನಕ್ಕೆ ವಿಶೇಷ ಪ್ರೋತ್ಸಾಹವಿರದ ಆ ಕಾಲದಲ್ಲಿ ಆ ಕಿರಿಯರು ಬೇರೆ ಬೇರೆ ಉದ್ಯೋಗವನ್ನು ಅವಲಂಬಿಸಿದವರಾಗಿ ಮೇಳ ಊರ್ಜಿತ ವಾಗಲಿಲ್ಲ. ಆದರೂ ಧೃತಿಗೆಡದೆ ತಮ್ಮ ಅರುವತ್ತನೆಯ ವಯಸ್ಸಿನಲ್ಲಿ ತಮ್ಮ ನಾಲ್ವರು ಮಕ್ಕಳು, ಇಬ್ಬರು ಮೊಮ್ಮಕ್ಕಳಿಗೆ ಮತ್ತು ಊರಿನ ಕೆಲವು ಬಾಲಕರಿಗೆ ತರಬೇತಿ ಕೊಟ್ಟು ಕರ್ಕಿಯ ಮೇಳವನ್ನು ಪುನರುಜ್ಜೀವನ ಗೊಳಿಸಿದರು. ನೆರೆಯ ಊರುಗಳ ಕಲಾವಿದರನ್ನು ಸೇರಿಸಿಕೊಂಡರು. ಅಂದಿನಿಂದ ಈ ಮೇಳ ಕಲೆಗಾಗಿಯೇ ಬಹುಕಾಲ ದುಡಿದಿದೆ.

ಇವರು 1955ರಲ್ಲಿ ತಮ್ಮ ಮೇಳವನ್ನು ಮುಂಬಯಿಗೆ ಒಯ್ದು, ಮುಂಬಯಿ ರಾಜ್ಯದ ದ್ವಿತೀಯ ನಾಟ್ಯ ಮಹೋತ್ಸವದಲ್ಲಿ ಸ್ಪರ್ಧಿಸಿ ಬಹುಮಾನ ಪಡೆದರು. ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಇವರಿಗೆ ಪ್ರಶಸ್ತಿಯನ್ನಿತ್ತು ಗೌರವಿಸಿದೆ (1969). ಇವರು 1972ರಲ್ಲಿ ನಿಧನರಾದರು.

*

**ಪರಮಶಿವಯ್ಯ, ಜೀ.ಶಂ.**: 1933–95. ಹೆಸರಾಂತ ಜಾನಪದ ವಿದ್ವಾಂಸರು. ಜಾನಪದ ಕ್ಷೇತ್ರದಲ್ಲಿ ಜೀಶಂಪ ಎಂದೇ ಪ್ರಸಿದ್ಧರಾಗಿದ್ದವರು. ಜೀಶಂಪ ಎಂದರೆ ಜಾನಪದ, ಜಾನಪದ ಎಂದರೆ ಜೀಶಂಪ – ಹೀಗೆ ಜಾನಪದಕ್ಕೆ ಪರ್ಯಾಯ ಎನಿಸಿದ್ದರು. ಇವರು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಅಂಬಲಜೀರಹಳ್ಳಿಯಲ್ಲಿ ಸಾಮಾನ್ಯ ರೈತ ಕುಟುಂಬದಲ್ಲಿ 1933ರಲ್ಲಿ ಜನಿಸಿದರು. ತಂದೆ ಶಂಕರಗೌಡ, ತಾಯಿ ರಂಗಮ್ಮ. ಬಾಲ್ಯದಿಂದಲೂ ತಾಯಿ ಹಾಡುತ್ತಿದ್ದ ಜನಪದ ಗೀತೆಗಳಿಂದ ಪ್ರಭಾವಿತರಾದ ಇವರು ಜನಪದ ಕ್ಷೇತ್ರದಲ್ಲಿ ಅರ್ಪಣಾ ಮನೋಭಾವದಿಂದ ಕೆಲಸ ನಿರ್ವಹಿಸಲು ಸಾಧ್ಯವಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ಪ್ರಾಧ್ಯಾಪಕರಾಗಿದ್ದ ಇವರು ಐವತ್ತರ ದಶಕದಲ್ಲೇ ಸೃಜನಶೀಲ ಬರವಣಿಗೆಯಿಂದ ನಾಡಿನ ಗಮನ ಸೆಳೆದಿದ್ದರು. ಕಥೆಗಾರರಾಗಿ, ಕವಿಯಾಗಿ, ಪ್ರಬಂಧಕಾರರಾಗಿ ಹೆಸರು ಮಾಡಿದ್ದರೂ ಇವರನ್ನು ಸಂಪೂರ್ಣವಾಗಿ ಮರುಳು ಮಾಡಿದ ಕ್ಷೇತ್ರ ಜಾನಪದ. ಇವರ ಸೃಜನಶೀಲ ವ್ಯಕ್ತಿತ್ವ ಕರ್ನಾಟಕ ಜಾನಪದ ಕ್ಷೇತ್ರದ ಉದ್ದಗಲವನ್ನು, ಜಾನಪದದ ಆಳವನ್ನು ಅಳೆಯುವ ಇವರ ಪ್ರಯತ್ನಕ್ಕೆ ಸಹಕಾರಿಯಾಯಿತು. ಇವರ ಪ್ರಾಮಾಣಿಕ ದುಡಿಮೆ, ವಿದ್ವತ್ತುಗಳ ಕಾರಣದಿಂದ ಕರ್ನಾಟಕ ಜಾನಪದ ಜಾಗತಿಕ ವಿದ್ವಾಂಸರ ಗಮನ ಸೆಳೆಯುವಂತಾಯಿತು. ಜಾನಪದವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಗಂಭೀರವಾಗಿ ಅಭ್ಯಾಸಿಸುವ, ವಿಶ್ಲೇಷಿಸುವ ಮನೋಧರ್ಮ ಇವರದಾಗಿತ್ತು. ಇವರ ಸಂಗ್ರಹಣೆ ಮತ್ತು ಸಂಶೋಧನೆಯ ಫಲವಾಗಿ ಕನ್ನಡ ಜಾನಪದದ ಎಷ್ಟೋ ಅಜ್ಞಾನ ನೆಲೆಗಳ ಮೇಲೆ ಹೊಸ ಬೆಳಕು ಬೀಳುವಂತಾಯಿತು.

ಜೀಶಂಪ ಅವರ ಜಾನಪದ ಕ್ಷೇತ್ರದ ಪ್ರಮುಖ ಸಾಧನೆಗಳನ್ನು ಹೀಗೆ ಪಟ್ಟಿ ಮಾಡಬಹುದು: ಜನಪದಗೀತೆ, ಕಾವ್ಯಗಳ ವ್ಯಾಪಕ ಸಂಗ್ರಹ ಹಾಗೂ ಅವುಗಳ ಕ್ರಮಬದ್ಧ ಅಧ್ಯಯನ; ಕರ್ನಾಟಕ ಜನಪದ ವೃತ್ತಿಗಾಯಕರ ಪರಂಪರೆಗಳನ್ನು ಶೋಧಿಸಿ ಪ್ರಚುರಗೊಳಿಸಿದ್ದು; ಜನಪದ ಗದ್ಯ ಕಥನಗಳ ಅಧ್ಯಯನದ ಮಹತ್ತ್ವವನ್ನು ಎತ್ತಿ ಹಿಡಿದು ಉತ್ತಮ ಸಂಗ್ರಹಗಳನ್ನು ಹೊರತಂದದ್ದು; ಕರ್ನಾಟಕದ ಪ್ರಮುಖ ಕಲೆಗಳನ್ನು ಗುರುತಿಸಿ ಮೇಳಗಳ ಮೂಲಕ ಅವುಗಳನ್ನು ಜನಪ್ರಿಯಗೊಳಿಸಿದ್ದು; ಮರೆತು ಹೋಗಿದ್ದ ಮೂಡಲಪಾಯ ಯಕ್ಷಗಾನಕಲೆಯನ್ನು ಪುನಶ್ಚೇತನಗೊಳಿಸಿದ್ದು; ಸಂಶೋಧನ ಬರೆಹ ಹಾಗೂ ಗ್ರಂಥಗಳ ಮೂಲಕ ಕನ್ನಡ ಜಾನಪದ ವಿದ್ವತ್ತನ್ನು ಬೆಳೆಸಿದ್ದು; ಕರ್ನಾಟಕ ಜಾನಪದ ಪರಿಷತ್ತು, ಜನಪದ ಕಲಾಕೂಟ, ಜಾನಪದ ಬಳಗ, ಮೂಡಲಪಾಯ ಯಕ್ಷಗಾನ ಟ್ರಸ್ಟ್, ಭೈರವೇಶ್ವರ ಯಕ್ಷಗಾನ ಮಂಡಳಿ, ಪುತ್ಥಳಿ ಮೇಳ ಮೊದಲಾದ ಸಂಸ್ಥೆಗಳನ್ನು ಕಟ್ಟಿ ಜಾನಪದ ಸಂವರ್ಧನ ಕಾರ್ಯದಲ್ಲಿ ತೊಡಗಿದ್ದು; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನು ಕಟ್ಟಿ ಬೆಳೆಸಿದ್ದು, ಜೊತೆಗೆ ಜಾನಪದ ಅಧ್ಯಯನವನ್ನು ರೂಪಿಸಿ ಬೋಧನಾಂಗವನ್ನು ಸಾಕಷ್ಟು ವಿಸ್ತರಿಸಿದ್ದು; ವಿದೇಶಗಳಲ್ಲಿ ಸಂಚರಿಸಿ ಜಾನಪದ ಅಧ್ಯಯನ ಕೇಂದ್ರಗಳನ್ನು ಸಂದರ್ಶಿಸಿ ತಮ್ಮ ಅನುಭವವನ್ನು ವಿಸ್ತರಿಸಿಕೊಂಡದ್ದು ಹಾಗೂ ಕರ್ನಾಟಕ ಜಾನಪದದ ಬಗ್ಗೆ ವಿದೇಶೀಯರ ಆಸಕ್ತಿ ಸೆಳೆದದ್ದು. ಸ್ವತಃ ಸಂಶೋಧನೆ ಮಾಡಿ ಪ್ರಕಟಿಸಿದ ಕೃತಿಗಳಷ್ಟೇ ಮಹತ್ತ್ವಪೂರ್ಣವಾಗಿ ಇವರು ನೀಡಿದ ಮತ್ತೊಂದು ಕಾಣಿಕೆಯೆಂದರೆ ನೂರಾರು ಜನ ಶಿಷ್ಯರು ಜಾನಪದ ಕ್ಷೇತ್ರದಲ್ಲಿ ದೀಕ್ಷೆ ತೆಗೆದುಕೊಂಡು ದುಡಿಯುವಂತೆ ಮಾಡಿರುವುದು.

ಇವರು ಕ್ಷೇತ್ರಕಾರ್ಯಾನುಭವ ಮತ್ತು ಅಧ್ಯಯನಾನುಭವಗಳ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದದ ಬಗ್ಗೆ ಅಧಿಕಾರವಾಣಿಯಿಂದ ಮಾತಾಡಬಲ್ಲ ಏಕಮೇವ ವಿದ್ವಾಂಸರಾಗಿದ್ದರು. ಜಾನಪದದಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಕೆಲವು ಮುಖ್ಯ ಜಾನಪದ ಕೃತಿಗಳು: ನಮ್ಮ ಜನಪದ ಸಾಹಿತ್ಯ, ಜನಪದ ಸಾಹಿತ್ಯ ಸಮೀಕ್ಷೆ (1967), ಜಾನಪದ: ಕೆಲವು ಮುಖಗಳು (1975), ಜಾನಪದ ಸಂಗಮ (1978), ಜಾನಪದ ಗಂಗೋತ್ರಿ (1988), ಜನಪದ ಕಲಾವಿಹಾರ. ಇವರ ಸಾಧನೆಯಲ್ಲಿ ಮರೆಯದೆ ಹೆಸರಿಸಬೇಕಾದುದು ವೃತ್ತಿಗಾಯಕರನ್ನು ಕುರಿತು ಇವರು ನಡೆಸಿದ ಸಂಶೋಧನೆ. ಕರ್ನಾಟಕ ವೃತ್ತಿಗಾಯಕ ಸಂಶೋಧನೆಯ ಪೂರ್ಣಫಲ ನಮಗೆ ಸಮಗ್ರವಾಗಿ ಒಂದೆಡೆ ದೊರೆಯುವುದು ಇವರ 'ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು' (1979) ಗ್ರಂಥದಲ್ಲಿ. ಕನ್ನಡ ವೃತ್ತಿಗಾಯಕ ಕಾವ್ಯಗಳು(1982) ಎಂಬುದು ಇವರ ಇನ್ನೊಂದು ಮೇರುಕೃತಿ. ಇದು ವೃತ್ತಿಗಾಯಕ ಪರಂಪರೆಯ ವಿಶಿಷ್ಟ ಕಾವ್ಯಗಳನ್ನು ಒಳಗೊಂಡಿದೆ. ವೃತ್ತಿಗಾಯಕ ಅಧ್ಯಯನಕ್ಕೆ ಇವರು ನೀಡಿರುವ ಈ ಕೊಡುಗೆ ಕನ್ನಡ ಜಾನಪದ ಕ್ಷೇತ್ರದಲ್ಲಿ ಬಲು ಮಹತ್ತ್ವದ ಹೆಜ್ಜೆಯಾಗಿದೆ.

ಇವರು ಜನಪದ ರಂಗಭೂಮಿಗೆ ಒಂದು ಹೊಸ ಆಯಾಮ ಕಲ್ಪಿಸಿದರು. ಮೂಡಲಪಾಯ ಯಕ್ಷಗಾನಕಲಾಕಾಶಿ ಎನಿಸಿರುವ ಕೊನೇಹಳ್ಳಿಯ ಮೂಡಲಪಾಯ ಯಕ್ಷಗಾನ ಕೇಂದ್ರದ ಮೂಲಕ ಇವರು ಆ ಕಲೆಗೆ ಒಂದು ನೆಲೆಯನ್ನು ರೂಪಿಸಿದರು. ಘಟ್ಟದಕೋರೆ ಮಾದರಿಗಳನ್ನು ಗುರುತಿಸಿ ಅದಕ್ಕೆ ಪ್ರತ್ಯೇಕ ಸ್ಥಾನವನ್ನು ಕಲ್ಪಿಸಿಕೊಟ್ಟರು. ಮೈಸೂರು ವಿಶ್ವವಿದ್ಯಾನಿಲಯದ ಜನಪದ ಕಲಾಕೂಟ ಸಂಘಟನೆ ಇವರ ಕಲ್ಪನೆಯ ಕೂಸು. ವಿದ್ಯಾವಂತ ಯುವಕರಿಗೆ ಕಲೆಗಳಲ್ಲಿ ಆಸಕ್ತಿ ಮೂಡಿಸಿ ಅವರಿಗೆ ಕಲೆಗಳಲ್ಲಿ ತರಬೇತಿ ನೀಡಿ ವಿನೂತನ ಪ್ರಯೋಗವನ್ನು ಮಾಡಿದರು.

ಕರ್ನಾಟಕದಲ್ಲಿ ಜಾನಪದ ವಿದ್ವಾಂಸರನ್ನು ಸಂಘಟಿಸಿ ಜಾನಪದ ಸಂಶೋಧನೆ ಸಂವರ್ಧನೆಗಳಿಗೆ ಪೂರಕವಾಗುವಂತೆ ಕರ್ನಾಟಕ ಜಾನಪದ ಪರಿಷತ್ತನ್ನು ಸ್ಥಾಪಿಸುವಲ್ಲಿ (1968) ಇವರದೇ ಗಣ್ಯಪಾತ್ರ. ಅಖಿಲಭಾರತ ವ್ಯಾಪ್ತಿಯ 'ಫೋಕ್‌ಲೋರ್ ಫೆಲೋಸ್ ಆಫ್ ಇಂಡಿಯಾ' ಸಂಸ್ಥೆಯನ್ನು ವಿದ್ವಾಂಸರಾದ ಜವಾಹರಲಾಲ್ ಹಂಡೂ ಅವರ ಜತೆಗೂಡಿ ಕಟ್ಟಿದರು. ಈ ಸಂಸ್ಥೆ ಅನೇಕ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ವ್ಯವಸ್ಥೆ ಮಾಡಿತು. ಜನಪದ ಪ್ರದರ್ಶಕ ತಂಡಗಳನ್ನು ಕರೆದುಕೊಂಡು ಹಲವು ಬಾರಿ ಇವರು ವಿದೇಶ ಪ್ರವಾಸ ಮಾಡಿದರು. ಕರ್ನಾಟಕದ ಕಲೆಯ ಸೊಗಸನ್ನು

ಟರ್ಕಿ, ಸೈಪ್ರಸ್, ಟ್ಯುನೀಸಿಯ, ಮಾಲ್ಟಾ ಮೊದಲಾದ ದೇಶಗಳಲ್ಲಿ ಹರಡಿದ ಕೀರ್ತಿ ಇವರದು. ಇಂಗ್ಲೆಂಡ್, ಚೆಕೋಸ್ಲೋವಾಕೀಯ, ಸ್ಕಾಟ್ಲೆಂಡ್, ಫ್ರಾನ್ಸ್, ಜರ್ಮನಿ, ಡೆನ್ಮಾರ್ಕ್, ಸ್ವೀಡನ್ ಮೊದಲಾದ ದೇಶಗಳನ್ನು ಸುತ್ತಿ ಅಲ್ಲಿಯ ಜಾನಪದ ವಸ್ತುಸಂಗ್ರಹಾಲಯಗಳು ಹಾಗೂ ಸಂಶೋಧ ನಾಲಯಗಳನ್ನು ಸಂದರ್ಶಿಸಿ ತಮ್ಮ ಜಾನಪದದ ಅನುಭವ ಶ್ರೀಮಂತಿಕೆ ಯನ್ನು ವಿಸ್ತರಿಸಿಕೊಂಡರು.

ಜಾನಪದ ಕ್ಷೇತ್ರದಲ್ಲಿನ ಸಾಧನೆಗಾಗಿ ಇವರಿಗೆ ದೊರೆತ ಮುಖ್ಯ ಪ್ರಶಸ್ತಿಗಳು: ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಪ್ರಶಸ್ತಿ (1977), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1987). ಇವರಿಗೆ ದೊರೆತ ಮುಖ್ಯ ಗೌರವಗಳು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷಸ್ಥಾನ (1981), ಕರ್ನಾಟಕ ವಿಶ್ವವಿದ್ಯಾಲಯದ 13ನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ (1987). ಇವರು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಆಗಿದ್ದರು (1987). ಇವರು 1995 ಜೂನ್ 17ರಂದು ಬೆಂಗಳೂರಿನಲ್ಲಿ ನಿಧನಹೊಂದಿದ್ದರು. **(ಎ.ಎಚ್.)**

**ಪರಮೇಶ್ವರಭಟ್ಟ, ಎಸ್.ವಿ.**: 1904-2000. ನವೋದಯ ಸಾಹಿತ್ಯದ ಪ್ರಸಿದ್ಧ ಕವಿ, ಅನುವಾದಕ, ಭಾಷಣಕಾರ, ಶಿಕ್ಷಣತಜ್ಞ ಹಾಗೂ ವಿಮರ್ಶಕರು. ಶೃಂಗೇರಿ ಸದಾಶಿವರಾಯ ವಿದ್ಯಾರಣ್ಯಪುರ ಪರಮೇಶ್ವರಭಟ್ಟ ಇವರ ಪೂರ್ಣಹೆಸರು. 1904 ಫೆಬ್ರವರಿ 8ರಂದು ಜನಿಸಿದರು. ತಂದೆ ಸದಾಶಿವರಾಯ, ತಾಯಿ ಲಕ್ಷ್ಮಮ್ಮ. ತಂದೆ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಮಾಳೂರಿನಲ್ಲಿ ಶಿಕ್ಷಕರಾಗಿದ್ದರು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಂದೆಯ ಹಾರೈಕೆಯಲ್ಲಿ ಬೆಳೆದರು. ಇವರಿಗೆ ಇಬ್ಬರು ಸಹೋದರಿಯರಿದ್ದರು.ಹಿರಿಯಕ್ಕ ಕೃಷ್ಣವೇಣಿ ಚಿಕ್ಕಂದಿನಲ್ಲೇ ತೀರಿ ಕೊಂಡರು. ರಾಯರಿಗೆ ಹರಿಕಥೆ, ಸಂಗೀತ, ನಾಟಕ, ಕೋಲಾಟ, ತಾಳಮದ್ದಲೆ, ಬಯಲಾಟ, ಆಟಿಕೆಗಳ ನಿರ್ಮಾಣ- ಹೀಗೆ ಹತ್ತಾರು ಕಲೆಗಳಲ್ಲಿ ಆಸಕ್ತಿ, ಅಭಿರುಚಿಗಳಿದ್ದುವು. ತಂದೆಯ ಸಾಂಸ್ಕೃತಿಕ ಆಸಕ್ತಿ ಗಳು, ಮಲೆನಾಡಿನ ಪ್ರಾಕೃತಿಕ ಸೌಂದರ್ಯಗಳು ಪರಮೇಶ್ವರ ಭಟ್ಟರ ಕವಿ ಮನೋಭಾವವನ್ನು ರೂಪಿಸಿದವು.

ಪ್ರಾಥಮಿಕ ಮಾಧ್ಯಮಿಕ ಶಾಲಾ ಶಿಕ್ಷಣಗಳನ್ನು ಸಮೀಪದ ತೂದೂರು ಕಟ್ಟೆಯಲ್ಲಿ ಮುಗಿಸಿ ತೀರ್ಥಹಳ್ಳಿಯಲ್ಲಿ ಪ್ರೌಢಶಾಲೆಯ ಶಿಕ್ಷಣ ಪಡೆದರು. ತೀರ್ಥಹಳ್ಳಿಯ ಸುತ್ತಣ ಸಾಹಿತ್ಯಕ ವಾತಾವರಣ, ಕನ್ನಡ ಅಧ್ಯಾಪಕರಾ ಗಿದ್ದ ಕಮಕೋಡು ನರಸಿಂಹಶಾಸ್ತ್ರಿಗಳ ಕಾವ್ಯಪಾಠ ಹಾಗೂ ಒತ್ತಾಸೆಗಳು ಇವರಲ್ಲಿ ಉತ್ಸಾಹ, ಸ್ಫೂರ್ತಿ, ಆತ್ಮವಿಶ್ವಾಸಗಳನ್ನು ತುಂಬಿದವು. ಈ ಅವಧಿಯಲ್ಲಿಯೇ ಕವಿತಾ ರಚನೆಗೆ ತೊಡಗಿದ್ದರು. ಅನಂತರ ಇವರು ಬೆಂಗಳೂರಿಗೆ ಬಂದು ಇಂಟರ್ ಮೀಡಿಯೆಟ್ ಕಾಲೇಜು ವಿದ್ಯಾರ್ಥಿ ಯಾದರು. ಅಲ್ಲಿ ಕನ್ನಡದ ದಿಗ್ಗಜಗಳೆನಿಸಿದ ವಿ. ಸೀತಾರಾಮಯ್ಯ, ಕೆ.ವೆಂಕಟರಾಮಪ್ಪನವರು ಗುರುಗಳಾಗಿ ದೊರೆತರು. ವಿ.ಸೀ. ಯವರ ವಿದ್ವತ್ತು, ವೆಂಕಟರಾಮಪ್ಪನವರ ಹಾಸ್ಯಪ್ರಜ್ಞೆ ಪರಮೇಶ್ವರಭಟ್ಟರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ್ದುಂಟು.

ಅನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಆನರ್ಸ್ ತರಗತಿಗೆ ಸೇರಿದರು. ಆಗ ಇವರಿಗೆ ಎಚ್.ಎಂ. ಶಂಕರನಾರಾಯಣರಾವ್, ಜಿ. ವೆಂಕಟಸುಬ್ಬಯ್ಯನವರಂಥ ಸ್ನೇಹಿತರು ದೊರೆತರು. ವಾರಾನ್ನ ಮಾಡಿಕೊಂಡು ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಆಗ ಕುವೆಂಪು, ನಾ. ಕಸ್ತೂರಿ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರೀ, ತೀನಂಶ್ರೀ, ಡಿ.ಎಲ್.ಎನ್. ಅವರಂಥ ಘಟಾನುಘಟಿಗಳ ವಿದ್ವದ್ವಲಯದಲ್ಲಿ ಪಳಗಿದರು. ನಾಟಕವಾಡುವುದು, ಆಡಿಸುವುದು, ಕಾವ್ಯವಾಚನ ಮಾಡುವುದು, ಚರ್ಚಾಕೂಟಗಳಲ್ಲಿ ಭಾಷಣಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಭಟ್ಟರ ಪಠ್ಯೇತರ ಹವ್ಯಾಸಗಳಾಗಿದ್ದವು. 1937ರಲ್ಲಿ ಇವರ 'ಮಾಚಯ್ಯ' ಎಂಬ ಅನುವಾದಿತ ಕವನಕ್ಕೆ ಬಿ.ಎಂ.ಶ್ರೀ ಚಿನ್ನದ ಪದಕ ದೊರೆಯಿತು. 1938ರಲ್ಲಿ ಏಕೈಕ ವಿದ್ಯಾರ್ಥಿಯಾಗಿ ಕನ್ನಡ ಎಂ.ಎ. ತರಗತಿಗೆ ಹಾಜರಾದರು. ಪ್ರಥಮದರ್ಜೆಯಲ್ಲಿ ಉತ್ತೀರ್ಣವಾಗಿ ಕೇಣಿ ಸಿದ್ದಪ್ಪನವರ ಬಂಗಾರದ



ಪದಕ ಪಡೆದರು. ಆ ವೇಳೆಗೆ ಇವರಿಗೆ ಆಧಾರವಾಗಿದ್ದ ಇವರ ದೊಡ್ಡಪ್ಪ ತೀರಿಕೊಂಡರು. ಅಕ್ಕ ತುಂಗಮ್ಮನವರ ಪತಿಯ ಸಾವಿನ ವಾರ್ತೆಯೂ ಬಂದಿತ್ತು. ಹೆಚ್ಚುಕಡಿಮೆ ಅದೇ ವೇಳೆಗೆ ಇವರ ನೆಚ್ಚಿನ ಗುರುಗಳಾಗಿದ್ದ ವೆಂಕಣ್ಣಯ್ಯ ನವರು ಇಲ್ಲವಾದರು. ಈ ಎಲ್ಲ ದುಃಖ ದುಗುಡಗಳು ಇವರ ಮನಸ್ಸಿನ ಮೇಲೆ, ಇವರ ಕಾವ್ಯಜೀವನದ ಮೇಲೆ ಗಾಢ ಪ್ರಭಾವ ಬೀರಿದವು. 1939ರಲ್ಲಿ ಮೈಸೂರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ, ತಿಂಗಳಿಗೆ ನಲವತ್ತುರೂಪಾಯಿ ಸಂಬಳದ ಮೇಲೆ ವೃತ್ತಿಜೀವನ ಪ್ರಾರಂಭಿಸಿದರು.

1940ರಲ್ಲಿ ರಾಜಲಕ್ಷ್ಮಿಯವರನ್ನು ವಿವಾಹವಾದರು. ಇಂಟರ್ ಮೀಡಿಯಟ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಇವರಿಗೆ ತುಮಕೂರಿಗೆ ವರ್ಗವಾಯಿತು. ಎರಡನೆಯ ಮಹಾಯುದ್ಧ ಕಾಲವದು. ಒಮ್ಮೆ ತರಗತಿಯಲ್ಲಿ ಪಾಠಮಾಡುತ್ತಿದ್ದಾಗಲೇ ಮುಂದಣ ಮೇಜಿನ ಖಾನೆಯಲ್ಲಿದ್ದೊಂದು ಕೈಬಾಂಬು ಸಿಡಿಯಿತು. ಕೂದಲೆಳೆಯಷ್ಟರಿಂದ ಮೃತ್ಯುದವಡೆಯಿಂದ ಇವರು ಪಾರಾದರು. ಈ ಅವಧಿಯಲ್ಲಿ ರಾಗಿಣಿ ಎಂಬ ಇವರ ಮೊದಲ ಕವನ ಸಂಕಲನ ಪ್ರಕಟವಾಯಿತು. ಕೆಲಕಾಲ ಇವರು ಶಿವಮೊಗ್ಗದ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು.

1950ರ ವೇಳೆಗೆ ಮಡದಿಯ ಅನಾರೋಗ್ಯ ನಿಮಿತ್ತ ಮೈಸೂರಿಗೆ ಬಂದರು. ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಅನಂತರ 1960ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಸ್ನಾತಕೋತ್ತರ ವಿಭಾಗದಲ್ಲಿ ಕನ್ನಡ ಅಧ್ಯಾಪಕರಾದರು. ಇವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದರು. ಇವರಿದ್ದಲ್ಲಿ ಹಾಸ್ಯ, ಸರಸಸಂಭಾಷಣೆ, ಉಲ್ಲಾಸ ಸದಾ ಇರುತ್ತಿತ್ತು. ಅನಂತರ ರೀಡರ್ ಆಗಿ (1964), ಪ್ರಾಧ್ಯಾಪಕರಾದರು (1968). ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಮಂಗಳೂರಿನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರೂ ಕನ್ನಡ ವಿಭಾಗದ ಮುಖ್ಯಸ್ಥರೂ ಆದರು. ಅಲ್ಲಿದ್ದ ಆರುವರ್ಷಗಳ ಅವಧಿಯಲ್ಲಿ ತಮ್ಮ ಸಹೋದ್ಯೋಗಿಗಳು, ವಿದ್ಯಾರ್ಥಿಗಳೇ ಅಲ್ಲದೆ ಮಂಗಳೂರಿನ ನಾಗರಿಕರ ಪ್ರೀತಿ ವಿಶ್ವಾಸಗಳನ್ನೂ ಗಳಿಸಿದರು. ಸ್ನಾತಕೋತ್ತರ ಕೇಂದ್ರದ ಬೆಳವಣಿಗೆಗೆ ಅಪಾರವಾಗಿ ಶ್ರಮಿಸಿ ದರು. ನಿವೃತ್ತರಾದ (1974) ಬಳಿಕ ಯು.ಜಿ.ಸಿ. ಸಂಶೋಧನ ಪ್ರಾಧ್ಯಾಪಕ ರಾದರು. ಆಗ ಇವರು ಕುವೆಂಪು ಅವರ ಜೀವನ ಸಾಹಿತ್ಯಗಳನ್ನು ಕುರಿತಂತೆ ಅಧ್ಯಯನ ನಡೆಸಿ ವಿಮರ್ಶಾ ಸಂಪುಟಗಳನ್ನು (ಐದು) ಪ್ರಕಟಿಸಿದರು. ಇವರ ಈ ಕಾರ್ಯ ಕುವೆಂಪು ಅವರ ಪ್ರಶಂಸೆಗೂ ಪಾತ್ರವಾಯಿತು.

ಕಾವ್ಯರಚನೆ ಹಾಗೂ ಅನುವಾದ– ಈ ಎರಡೂ ಕ್ಷೇತ್ರಗಳಲ್ಲಿ ಭಟ್ಟರದು ಅದ್ವಿತೀಯ ಸಾಧನೆ. ಕಾಳಿದಾಸನ ಸಮಗ್ರ ಕೃತಿಗಳನ್ನು ಮಹಾಕಾವ್ಯ, ಖಂಡಕಾವ್ಯ, ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಕಾಳಿದಾಸ ಮಹಾಸಂಪುಟ ಎಂಬ ಕೃತಿಯನ್ನು ಪ್ರಕಟಿಸಿದರು (1963). ಭಟ್ಟರ ವಿದ್ವತ್ತು, ಶ್ರಮ, ಸಾಧನೆಗಳು ಇಲ್ಲಿ ಮುಪ್ಪುರಿಗೊಂಡಿವೆ. ಒಬ್ಬನೇ ಲೇಖಕನ ಸಮಗ್ರ ಕೃತಿಗಳ ಅನುವಾದಿತ ಕೃತಿಗಳ ಪ್ರಕಟಣೆ ಅತ್ಯಂತ ವಿರಳವೆಂದೇ ಹೇಳಬೇಕು. ಕನ್ನಡದಲ್ಲಿ ಇದೊಂದು ದಾಖಲೆ, ಅಂಥ ಮಹತ್ತ್ವದ ಸಾಧನೆ ಭಟ್ಟರದು. ಬಹುಶಃ ಇಂಥ ಉದಾಹರಣೆಗಳು ಇತರ ಭಾರತೀಯ ಭಾಷೆಗಳಲ್ಲಿ ಹೆಚ್ಚು ದೊರೆಯಲಾರವು. ಭಾಸ, ಹರ್ಷ, ಭವಭೂತಿಯರ ಸಮಗ್ರಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಕೀರ್ತಿಯೂ ಇವರದಾಗಿದೆ. ಜಯದೇವ ಕವಿಯ ಗೀತಗೋವಿಂದ, ಹಾಲರಾಜನ ಗಾಥಾಸಪ್ತಶತಿ, ಭರ್ತೃಹರಿಯ ಭಕ್ತಿ–ವೈರಾಗ್ಯ–ಶೃಂಗಾರ–ಶತಕತ್ರಯ, ಅಮರ ಕವಿಯ ಶೃಂಗಾರ ಕವಿತಾಮಂಜರಿ –ಇವುಗಳನ್ನು ಇವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಹೀಗೆಯೇ ಇಂಗ್ಲಿಷ್‌ನ ಕೆಲವು ಲೇಖನಗಳನ್ನೂ ಕೃತಿಗಳನ್ನೂ ಇವರು ಅನುವಾದಿಸಿರುವುದುಂಟು.

ಭಟ್ಟರು ಸುಮಾರು ಎಪ್ಪತ್ತೈದು ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಸಾಹಿತ್ಯ ಸೃಷ್ಟಿಯತ್ತ ಕಣ್ಣುಹಾಯಿಸಿದರೆ ಅವುಗಳ ಗಾತ್ರ, ವಿಷಯ ವೈವಿಧ್ಯ ಬೆರಗು ಹುಟ್ಟಿಸುವಂಥದು. ಛಂದೋಬದ್ಧ ಕಾವ್ಯದಿಂದ ಹಿಡಿದು ಮುಕ್ತ ಛಂದೋ ಕಾವ್ಯದ ವರೆಗೆ ಇವರ ಕಾವ್ಯಸೃಷ್ಟಿಯ ಹರಹು ವ್ಯಾಪಿಸಿದೆ. ಮುಕ್ತಕ ಕಾವ್ಯ ರಚನೆಯಲ್ಲಿ ಭಟ್ಟರದು ದೊಡ್ಡ ಹೆಸರು. ಸಾಂಗತ್ಯ, ತ್ರಿಪದಿ, ಏಳೆ, ಗಾದೆ, ಒಗಟು, – ಎಲ್ಲವನ್ನೂ ರಚಿಸಿದ್ದಾರೆ. ರಾಗಿಣಿ, ಗಗನಚುಕ್ಕಿ, ಅಂಚೆಯ ಪೆಟ್ಟಿಗೆ, ಇಂದ್ರಗೋಪ, ಸಂಜೆಮಲ್ಲಿಗೆ–ಇವು ಇವರ ಕವನ ಸಂಕಲನಗಳು. ಇಂದ್ರಚಾಪ, ಚಂದ್ರವೀಧಿ, ಸುರಗಿ–ಸುರಹೊನ್ನೆ, ಚಿತ್ರಪಥ, ತುಂಬೆಹೂವು, ಮಳೆಬಿಲ್ಲು – ಇವರ ಮುಕ್ತಕ ಸಂಕಲನಗಳು. ಉಪ್ಪುಕಡಲು, ಪಾಮರ, ಉಂಬರ–ಇವು ವಚನಸಂಕಲನಗಳು. ಏಳುನೂರಾ ಐದು ವಚನಗಳಿರುವ ಉಪ್ಪುಕಡಲು ಈ ಕ್ಷೇತ್ರದ ಒಂದು ಅನನ್ಯ ಕೃತಿ. 'ಕಣ್ಣುಮುಚ್ಚಾಲೆ' ಸ್ವರಚಿತ ಒಗಟುಗಳ ಸಂಕಲನ. ಇವರು ಸರಸ ಸಾಹಿತ್ಯ ಪ್ರಕಾಶನ ಎಂಬ ಪ್ರಕಾಶನವನ್ನು ಹುಟ್ಟು ಹಾಕಿ ಅನೇಕ ಸ್ವಂತ ಕೃತಿಗಳನ್ನೂ ಇತರ ಲೇಖಕರ ಕೃತಿಗಳನ್ನೂ ಪ್ರಕಟಿಸಿದರು. ಇವರು ವಿವಿಧ ಪ್ರಕಾರಗಳಲ್ಲಿ ರಚಿಸಿರುವ ಕೃತಿಗಳನ್ನು ಆಯ್ದು 'ಅರುವತ್ತರ ಅರಳು' ಎಂಬ ಕೃತಿಯನ್ನು ಪ್ರಕಟಿಸಲಾಗಿದೆ.

ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ದೊರೆತಿವೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (1970), ಕನ್ನಡ ಸಾಹಿತ್ಯ ಪರಿಷತ್ತಿನ ಚಿನ್ನದ ಹಬ್ಬದ ಸನ್ಮಾನ, ರಾಜ್ಯ ಸಾಹಿತ್ಯ ಅಕಾಡೆಮಿ ಸನ್ಮಾನ (1971), ಚಾವುಂಡರಾಯ ಪ್ರಶಸ್ತಿ, ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಪ್ರಶಸ್ತಿ. ಇವರ ನೆಚ್ಚಿನ ವಿದ್ಯಾರ್ಥಿಗಳು ಇವರಿಗೆ ಪೂರ್ಣಕುಂಭ ಎಂಬ ಸಂಭಾವನಾ ಗ್ರಂಥವನ್ನು ಸಮರ್ಪಿಸಿದ್ದಾರೆ (1972). ಮೈಸೂರು ಮತ್ತು ಕುವೆಂಪು ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಿ ಗೌರವಿಸಿದೆ. ಇವರು 2000 ಅಕ್ಟೋಬರ್ 27ರಂದು ನಿಧನರಾದರು. **(ಟಿ.ಎನ್.ಎಸ್.)**

**ಪರಮೇಶ್ವರಾಚಾರ್ಯ, ಎಂ.**: 1924–. ಹೆಸರಾಂತ ರಥಶಿಲ್ಪಿ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ನೂಲೇನೂರು ಗ್ರಾಮದಲ್ಲಿ 1924 ಜೂನ್ 24 ರಂದು ಜನಿಸಿದರು. ತಂದೆ ಮಾನಾಚಾರ್ಯ, ತಾಯಿ ವೀರಮ್ಮ. ತಮ್ಮ ಬಾಲ್ಯದಲ್ಲೇ ತಾಯಿತಂದೆಗಳನ್ನು ಕಳೆದುಕೊಂಡು ಸೋದರಮಾವಂದಿರಾದ ಕೆಂಚವೀರಾಚಾರ್ಯ ಮತ್ತು ಕಾಳಾಚಾರ್ಯರ ಪೋಷಣೆಯಲ್ಲಿ ಬೆಳೆದರು. ಕಾಳಾಚಾರ್ಯರು ಇವರಿಗೆ ಬಾಲ್ಯದಲ್ಲೇ ರಥಶಿಲ್ಪವನ್ನು ಅಭ್ಯಾಸ ಮಾಡಿಸಿದರು. ಶಾಸ್ತ್ರೀಯ ರೀತಿಯಲ್ಲಿ ರಥ ನಿರ್ಮಾಣ ಮಾಡುವ ನಾಲ್ಕೈದು ಅಪರೂಪದ ರಥಶಿಲ್ಪಿಗಳ ಮನೆತನಗಳಲ್ಲಿ ಇಂದು ಇವರ ಮನೆತನವೂ ಒಂದಾಗಿದೆ.



ತಾಮ್ರದ ಉಬ್ಬುಕೆತ್ತನೆ, ಚಿನ್ನಬೆಳ್ಳಿ, ನಕಾಸಿ ಕೆಲಸವನ್ನು ಗೊಪ್ಪೇನ ಹಳ್ಳಿ ಚಿಕ್ಕವೀರಾಚಾರ್ಯರಿಂದ ಅಭ್ಯಾಸ ಮಾಡಿದರು. ಅನಂತರ ಶಿಲಾಶಿಲ್ಪ, ಕಂಚಿನ ಶಿಲ್ಪಗಳ ನಿರ್ಮಾಣವನ್ನು ರೂಢಿಸಿಕೊಂಡರು. ಪರಂಪರೆಯಿಂದ ಶಿಲ್ಪಶಾಸ್ತ್ರವನ್ನು ಗುರು ಮುಖೇನ ಅಧ್ಯಯನ ಮಾಡಿರುವ ಇವರು ಕಂಚು, ಪಂಚಲೋಹ, ಶಿಲೆ, ಚಿನ್ನ, ಬೆಳ್ಳಿ, ತಾಮ್ರಗಳಲ್ಲಿ ಶಿಲ್ಪಕೃತಿಗಳನ್ನು ರಚಿಸುವ ಸಾಮರ್ಥ್ಯ ಪಡೆದುಕೊಂಡಿದ್ದಾರೆ. ಇವರ ಬಳಿ ಶಿಲ್ಪಕಲೆ ಅಧ್ಯಯನ ಮಾಡಿದ ಅನೇಕ ಶಿಷ್ಯರಿದ್ದಾರೆ.

ಲೋಹದಲ್ಲಿ ರಂಗನಾಥ ಸ್ವಾಮಿಯ ಬೆಳ್ಳಿ ಪಲ್ಲಕ್ಕಿ (ದೇವರಹಳ್ಳಿ), ಬೆಳ್ಳಿಯಲ್ಲಿ ವೀರಭದ್ರಸ್ವಾಮಿ (ಚಿತ್ರದುರ್ಗ ಜಿಲ್ಲೆ), ಪಂಚಲೋಹದ ಬನಶಂಕರಿ (ತರೀಕೆರೆ), ಆಂಜನೇಯಸ್ವಾಮಿಗೆ ಪ್ರಭಾವಳಿ (ಮಳವಳ್ಳಿ), ಬಾಬಾ ಅಂಬೇಡ್ಕರ್ ವಿಗ್ರಹ (ದಾವಣಗೆರೆ), ಗಾಂಜಿ ವೀರಪ್ಪನವರ ಆಳೆತ್ತರದ ಕಂಚಿನ ಮೂರ್ತಿ ಮೊದಲಾದವು ಉಲ್ಲೇಖನೀಯ. ಚಳ್ಳಕೆರೆಯ ಕುಮಾರಸ್ವಾಮಿ ಹಾಗೂ ವಿನಾಯಕ, ಶಿವಮೊಗ್ಗದ ಅಂಬಾಭವಾನಿ, ಬಳ್ಳಾರಿಯ ವೇಣುಗೋಪಾಲ, ಹೊಳಲೂರಿನ ವೀರಭದ್ರಸ್ವಾಮಿ, ಚಿರಡೋಣಿಯ ಮಹಾಕಾಳಿಕಾಂಬ, ಅರಸೀಕೆರೆಯ ಅಂಬಾಭವಾನಿ ಮೊದಲಾದ ದೇವತಾಮೂರ್ತಿಗಳನ್ನು ಇವರು ಶಿಲೆಯಲ್ಲಿ ರಚಿಸಿಕೊಟ್ಟಿದ್ದಾರೆ. ಸಿದ್ಧಾರೂಢ ಸ್ವಾಮಿಗಳು, ಹರ್ಡೇಕರ್ ಮಂಜಪ್ಪ, ಮಹಾತ್ಮಾ ಗಾಂಧಿ, ಮುರಳು ಸಿದ್ಧೇಶ್ವರಸ್ವಾಮಿ ಮೊದಲಾದ ವ್ಯಕ್ತಿ ಶಿಲ್ಪಗಳನ್ನೂ ಮಾಡಿಕೊಟ್ಟಿದ್ದಾರೆ. ನಿರಗುಂದದ ಭೈರವೇಶ್ವರ ರಥ, ಯಗಚಿಯ ಮಲ್ಲಿಕಾರ್ಜುನಸ್ವಾಮಿ ರಥ, ಬಿಂಡಿಗನವಿಲೆ ಚೆನ್ನಕೇಶವ ಸ್ವಾಮಿ ರಥ, ಮೈಸೂರು ಒಂಟಿಕೊಪ್ಪಲಿನ ವೆಂಕಟರಮಣಸ್ವಾಮಿ ರಥ, ಹಂಪೆ ಶ್ರೀ ವಿರೂಪಾಕ್ಷ ರಥ, ನಾಯಕನಹಟ್ಟಿಯ ತಿಪ್ಪೇರುದ್ರಸ್ವಾಮಿ ರಥ, ಬಳ್ಳಾರಿಯ ಕಾಳಿಕಾ ಕಮಲೇಶ್ವರ ರಥ, ಗೊಪ್ಪೇನಹಳ್ಳಿ ಆಂಜನೇಯಸ್ವಾಮಿ ರಥ–ಇವು ಇವರು ನಿರ್ಮಿಸಿದ ರಥಗಳು. ಇದಲ್ಲದೆ ಅನೇಕ ದೇವಾಲಯಗಳಿಗೆ ಕುಸುರಿ ಕೆಲಸದ ಮರದ ಬಾಗಿಲುಗಳನ್ನೂ ರೂಪಿಸಿಕೊಟ್ಟಿದ್ದಾರೆ.

ಷಟ್ಪದಿಯಲ್ಲಿ ಪದ್ಯ ರಚಿಸುವುದು ಇವರ ಇನ್ನೊಂದು ಹವ್ಯಾಸ. ಇವರು ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಗೌರವ ಪ್ರಶಸ್ತಿ (1995), ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಜಕಣಾಚಾರಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ (2000). **(ಎಸ್.ಎಂ.)**

**ಪರಮೇಶ್ವರಾಚಾರ್, ಸಿ.**: 1927–. ಅಂತಾರಾಷ್ಟ್ರೀಯ ಪ್ರಸಿದ್ಧ ಶಿಲ್ಪಿ. ಜಕಣಾಚಾರಿ ಪ್ರಶಸ್ತಿ ಪುರಸ್ಕೃತರು. ಇವರು ನಗರದಲ್ಲಿ 1927 ನವೆಂಬರ್ 8ರಂದು ಜನಿಸಿದರು. ಇವರ ಪೂರ್ವಜರು ವಿಜಯನಗರದಲ್ಲಿ

ಪ್ರಮುಖ ಶಿಲ್ಪಿಗಳಾಗಿದ್ದರು. ಅನಂತರ ಶ್ರೀರಂಗಪಟ್ಟಣ ಹಾಗೂ ಮೈಸೂರುಗಳಲ್ಲಿ ಆಸ್ಥಾನ ಶಿಲ್ಪಿಗಳಾಗಿ ಸೇವೆ ಸಲ್ಲಿಸಿದವರು; ಇವರ ಅಜ್ಜ ಕಾಳಾಚಾರ್ಯ ಮತ್ತು ತಂದೆ ಚೌಡಾಚಾರ್ಯರು ಪ್ರಸಿದ್ಧ ಕಂಚಿನ ಶಿಲ್ಪಿಗಳು ಮತ್ತು ಜ್ಯೋತಿಷಿಗಳು. ಇವರ ತಾಯಿಯ ಕಡೆಯವರೂ ಶಿಲ್ಪಿಗಳು, ಇಂತಹ ಪರಿಸರದಲ್ಲಿ ಇವರು ದಾರು ಮತ್ತು ಲೋಹ ಶಿಲ್ಪಗಳಲ್ಲಿ ಪರಿಗಣತಿ ಗಳಿಸಿದರು.

ಇವರು ಚಿಕ್ಕಂದಿನಿಂದಲೇ ಶಿಲ್ಪಕಲೆಯಲ್ಲಿ ಆಸಕ್ತರಾಗಿದ್ದರು. ಅನೇಕ ಶಿಲ್ಪ ರಚನೆಯನ್ನು ಮಾಡಿದ್ದರು. ಇವರು ಕೆಲಕಾಲ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಶಿಲ್ಪಕಲೆಯನ್ನು ಅಭ್ಯಾಸ ಮಾಡಿದರಲ್ಲದೆ. ಹೆಸರಾಂತ ಶಿಲ್ಪಿಗಳಾದ ಸಿದ್ಧಲಿಂಗಸ್ವಾಮಿ ಹಾಗೂ ನಾಗೇಂದ್ರ ಸ್ಥಪತಿಯವರಲ್ಲಿಯೂ ಶಾಸ್ತ್ರೋಕ್ತವಾಗಿ ಶಿಲ್ಪಕಲಾಭ್ಯಾಸ ಮಾಡಿದರು. ಅರಮನೆಯ ಆವರಣದಲ್ಲಿ ಮೈಸೂರು ಮಹಾರಾಜರ ಅಪೇಕ್ಷೆಯಂತೆ ನಿರ್ಮಿತವಾದ ಭುವನೇಶ್ವರಿ ಮತ್ತು ಕಾಮ-ಕಾಮೇಶ್ವರಿ ದೇವಾಲಯದ ಶಿಲ್ಪ ಕಾರ್ಯಗಳಲ್ಲಿಯೂ ಇವರು ಪಾಲುಗೊಂಡರು. ಅನಂತರ ಬೆಂಗಳೂರಿನ ವಿಧಾನಸೌಧದ ರಚನೆಯ ವೇಳೆಯಲ್ಲಿ (1955-56) ಅಲ್ಲಿಯ ಮರಗೆತ್ತನೆ ಹಾಗೂ ಗಾರೆಯ ವಿನ್ಯಾಸಗಳ ನಕ್ಷೆ ರಚಿಸಿ, ಮೇಲ್ವಿಚಾರಣೆ ನಡೆಸಿಕೊಟ್ಟರು.

ಮೈಸೂರಿನ ಸಾಯಿಪ್ರಸನ್ನಮಂದಿರ, ಬೆಂಗಳೂರಿನ ರೇಣುಕಾಚಾರ್ಯ ಕಾಲೇಜು, ಬೆಂಗಳೂರಿನ ಹಿರಿಯ ಪ್ರಾಥಮಿಕ ಶಾಲೆ, ದೆಹಲಿಯ ಕೈಗಾರಿಕಾ ಪ್ರದರ್ಶನಾಲಯ, ಬಾಂಬೆಯ ಅಗರ್‌ವಾಲಾ ಹೌಸ್, ಅಮೆರಿಕ ಸಂಯುಕ್ತ ಸಂಸ್ಥಾನದ ಅಮರ್ ಏಷಿಯಾ ಫೈನ್ ಆರ್ಟ್ಸ್, ರೋಮ್, ಜರ್ಮನಿ, ದೆಹಲಿಯ ಆಕಾಶವಾಣಿ, ಬೆಂಗಳೂರಿನ ಲಲಿತಕಲಾ ಅಕಾಡೆಮಿ ಮತ್ತು ಚಿತ್ರಕಲಾ ಪರಿಷತ್ತು ಇಂತಹ ಹಲವಾರು ಪ್ರತಿಷ್ಠಿತ ಸ್ಥಳಗಳಲ್ಲಿ ಇವರ ಕಲಾಕೃತಿಗಳನ್ನು ಕಾಣಬಹುದು. ವಾರಾಣಸಿಯ ನೈಮಿಶಾರಣ್ಯದಲ್ಲಿಯ ಆನಂದಮಯಿ ಆಶ್ರಮಕ್ಕೆ 13 ಅಡಿಯ ಶ್ರೀಗಂಧದ ಮಂಟಪವನ್ನು ತಯಾರಿಸಿರುವುದು, ರಾಮಾಯಣ ಮತ್ತು ಕೃಷ್ಣ ಲೀಲೆಯ 110 ಅಡಿ ಎತ್ತರದ ಶ್ರೀಗಂಧದ ಮಂಟಪಗಳನ್ನು ನಿರ್ಮಿಸಿರುವ ಹೆಮ್ಮೆ ಇವರದ್ದಾಗಿದೆ. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಮತ್ತು ಕರ್ನಾಟಕ ಕ್ರ್ಯಾಫ್ಟ್ಸ್ ಕೌನ್ಸಿಲ್ಲಿನ ಸದಸ್ಯರೂ ಇವರಲ್ಲಿ ತರಬೇತಿ ಪಡೆದಿದ್ದಾರೆ. ದೇಶ ವಿದೇಶಗಳಿಂದ ಬಂದ ಹಲವಾರು ವಿದ್ಯಾರ್ಥಿಗಳಿಗೆ ಇವರು ತರಬೇತಿ ನೀಡಿದ್ದಾರೆ.

ಭಾರತೀಯ ಪ್ರವಾಸೋದ್ಯಮ ಇಲಾಖೆಯ ಅಪೇಕ್ಷೆಯಂತೆ 1980ರಲ್ಲಿ ಇವರು ಸ್ವಿಟ್ಜರ್‌ಲೆಂಡ್‌ಗೆ ಭೇಟಿಕೊಟ್ಟು ಅಲ್ಲಿನ ಅನೇಕ ಸ್ಥಳಗಳಲ್ಲಿ ಹಾಗೂ ಜಿನೀವದಲ್ಲಿ ಮರದ ಕೆತ್ತನೆ ಮತ್ತು ಶಿಲ್ಪಕಲೆ ಕುರಿತು ಪ್ರಾತ್ಯಕ್ಷಿಕೆಗಳನ್ನು ನೀಡಿದರು. 1985ರಲ್ಲಿ ಅಮೆರಿಕದ ಶಿಕಾಗೊದಲ್ಲಿ ನಡೆದ 'ಭಾರತ ಉತ್ಸವ'ದಲ್ಲಿ ಕರ್ನಾಟಕ ರಾಜ್ಯದ ಶಿಲ್ಪಕಲೆಯನ್ನು ಪ್ರತಿನಿಧಿಸಿದ್ದರು.

ಇವರಿಗೆ 1965ರಲ್ಲಿ ಕೇಂದ್ರ ಪುರಸ್ಕಾರ, 1966ರಲ್ಲಿ ರಾಜ್ಯಪ್ರಶಸ್ತಿ, 1990ರಲ್ಲಿ ಲಲಿತಕಲಾ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ, ಅದರ ಅಧ್ಯಕ್ಷರಾಗಿಯೂ ಇವರು ಸೇವೆಸಲ್ಲಿಸಿದ್ದಾರೆ. ಇವರಿಗೆ 1995ರಲ್ಲಿ ಜಕಣಾಚಾರಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

(ಎನ್.ಎಮ್.)

**ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು:** ಭಾರತದಲ್ಲಿ ಹಲವಾರು ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಅನೇಕ ಬುಡಕಟ್ಟುಗಳು ಮತ್ತು ಜಾತಿಗಳು ಆರ್ಥಿಕ ಸಾಮಾಜಿಕವಾಗಿ ಇತರ ಸಮಾಜ ವರ್ಗಗಳ ಜೊತೆ ಸಮಾನಸ್ಕಂದವಾಗಿ ಬೆಳೆಯಲು ಅವಕಾಶ ಇಲ್ಲದ್ದನ್ನು ಅನುಲಕ್ಷಿಸಿ ಅಂಥ ವರ್ಗಗಳನ್ನು ಗುರುತಿಸಿ ಅವಕ್ಕೆ ವಿಶಿಷ್ಟ ಸೌಲಭ್ಯಗಳನ್ನು ಒದಗಿಸುವ ಕ್ರಮವನ್ನು ಕೈಗೊಳ್ಳಲು ಭಾರತ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸಂವಿಧಾನದ 341,342ನೆಯ ಅನುಚ್ಛೇದಗಳ ಪ್ರಕಾರ ರಾಷ್ಟ್ರಪತಿ ಅಂಥ ವರ್ಗಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ಪ್ರಕಟಿಸಿದ್ದಾರೆ. ಸಂವಿಧಾನದ ಪರಿಶಿಷ್ಟ ಭಾಗವಾಗಿ ಇದು ಸೇರುವುದರಿಂದ ಈ ಪಟ್ಟಿಯಲ್ಲಿರುವ ವರ್ಗಗಳನ್ನು ಪರಿಶಿಷ್ಟ (ಅನುಸೂಚಿತ) ಬುಡಕಟ್ಟುಗಳು ಮತ್ತು ಪರಿಶಿಷ್ಟ (ಅನುಸೂಚಿತ) ಜಾತಿಗಳು ಎಂದು ಪರಿಗಣಿಸಲಾಗುತ್ತದೆ.

**ಬುಡಕಟ್ಟುಗಳು:** ಕರ್ನಾಟಕಕ್ಕೆ ಸಂಬಂಧಿಸಿದಂಥ ಪರಿಶಿಷ್ಟ ಬುಡಕಟ್ಟುಗಳು ಒಟ್ಟು 49. ಸಮುದಾಯಗಳನ್ನು ಪರಿಶಿಷ್ಟವರ್ಗವೆಂದು ಘೋಷಿಸಿದೆ. ಈ 49 ಬುಡಕಟ್ಟು ಸಮುದಾಯಗಳಲ್ಲಿ ಜೇನುಕುರುಬ ಹಾಗೂ ಕೊರಗ ಬುಡಕಟ್ಟುಗಳನ್ನು ಮೂಲನಿವಾಸಿ ಬುಡಕಟ್ಟು ಸಮುದಾಯ ಎಂದು ಪರಿಗಣಿಸಿದೆ. ಕರ್ನಾಟಕ ರಾಜ್ಯದಲ್ಲಿ 1991ರ ಜನಗಣತಿ ಪ್ರಕಾರ ಪರಿಶಿಷ್ಟವರ್ಗದವರ ಒಟ್ಟು ಜನಸಂಖ್ಯೆ 19,15,691 ಇದ್ದು ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ. 4.26ರಷ್ಟು ಇರುತ್ತದೆ. ಈ ಜನಸಂಖ್ಯೆಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಅವು ಪಾರಂಪರಿಕವಾಗಿ ಹರಡಿರುವ ಪ್ರದೇಶವನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ:

| **ಪರಿಶಿಷ್ಟ ಬುಡಕಟ್ಟು** | **ವಾಸಿಸುವ ಜಿಲ್ಲೆಗಳು** |
|---|---|
| 1 ಅಡಿಯರು | ದಕ್ಷಿಣ ಕನ್ನಡ |
| 2 ಬರ್ದ | ಬೆಳಗಾಂವಿ, ಧಾರವಾಡ |
| 3 ಬಾವಚ | ಬೆಳಗಾಂವಿ, ಧಾರವಾಡ, ಉತ್ತರ ಕನ್ನಡ |
| 4 ಭಿಲ್ಲರು | ಬೀದರ್, ರಾಯಚೂರು |
| 5 ಭಿಲ್ಲರು (ದುಂಗರಿ) | ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ |
| 6 ಚೆಂಚು | ರಾಯಚೂರು, ಗುಲ್ಬರ್ಗ, ಬೀದರ್ |
| 7 ದುಬಲ | ಉತ್ತರ ಕನ್ನಡ |
| 8 ಗಮಟ | ಬೆಳಗಾಂವಿ, ಬಿಜಾಪುರ |
| 9 ಗೊಂಡ | ಬೀದರ್, ಗುಲ್ಬರ್ಗ, ರಾಯಚೂರು |
| 10 ರಾಜಗೊಂಡ | ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ |
| 11 ಗೌದಳರು | ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಹಾಸನ, ಕೋಲಾರ, ಮಂಡ್ಯ, ಮೈಸೂರು,ಶಿವಮೊಗ್ಗ |
| 12 ಹಕ್ಕಿಪಿಕ್ಕಿ | ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಹಾಸನ, ಕೋಲಾರ, ಮಂಡ್ಯ, ಮೈಸೂರು,ಶಿವಮೊಗ್ಗ |
| 13 ಹಸಲರು | ಬೆಂಗಳೂರು, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ |
| 14 ಇರುಳಿಗರು | ಬೆಂಗಳೂರು, ಚಿಕ್ಕಮಗಳೂರು, ಹಾಸನ, ಕೋಲಾರ, ಮೈಸೂರು, ಶಿವಮೊಗ್ಗ, ತುಮಕೂರು |

| | | |
|---|---|---|
| 15 | ಜೇನುಕುರುಬರು | ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು |
| 16 | ಕಾಡುಕುರುಬರು | ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು |
| 17 | ಕಮ್ಮಾರ | ದಕ್ಷಿಣ ಕನ್ನಡ |
| 18 | ಕಣಿಯನ್ | ಮೈಸೂರು |
| 19 | ಕಾಥೋಡಿ | ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ |
| 20 | ಕಟ್ಟುನಾಯಕನ್ | ದಕ್ಷಿಣ ಕನ್ನಡ |
| 21 | ಕೋಕ್ನಾ | ಬೆಳಗಾಂವಿ, ಧಾರವಾಡ |
| 22 | ಕೋಲಿ ಧೊರ | ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರಕನ್ನಡ |
| 23 | ಕೊಂಡಕಾಪು | ಮೈಸೂರು |
| 24 | ಕೊರಗರು | ಮೈಸೂರು, ದಕ್ಷಿಣ ಕನ್ನಡ |
| 25 | ಕೊರಮ | ಕೊಡಗು |
| 26 | ಕೋಟಾ | ದಕ್ಷಿಣ ಕನ್ನಡ |
| 27 | ಕೋಯಾ | ಬಳ್ಳಾರಿ, ರಾಯಚೂರು |
| 28 | ಕುಡಿಯರು | ಕೊಡಗು |
| 29 | ಮೇಲಕುಡಿ | ದಕ್ಷಿಣ ಕನ್ನಡ |
| 30 | ಕುರುಬ | ಕೊಡಗು |
| 31 | ಕುರುಮನ್ | ಮೈಸೂರು, ದಕ್ಷಿಣ ಕನ್ನಡ |
| 32 | ಮಹಾಮಲಸರ್ | ದಕ್ಷಿಣ ಕನ್ನಡ |
| 33 | ಮಲ್ಲೈಕುಡಿ | ಚಿಕ್ಕಮಗಳೂರು, ಹಾಸನ |
| 34 | ಮಲಸರ್ | ದಕ್ಷಿಣ ಕನ್ನಡ |
| 35 | ಮಲ್ಯೆಕಂಡಿ | ದಕ್ಷಿಣ ಕನ್ನಡ |
| 36 | ಮಲೇರು | ಬೆಂಗಳೂರು, ಚಿಕ್ಕಮಗಳೂರು, ಹಾಸನ, ಮಂಡ್ಯ, ಶಿವಮೊಗ್ಗ |
| 37 | ಮರಾಠ | ಕೊಡಗು |
| 38 | ಮರಾಟಿ | ದಕ್ಷಿಣ ಕನ್ನಡ |
| 39 | ಮೇದ | ಕೊಡಗು |
| 40 | ನಾಯಕರು | ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ |
| 41 | ಪಲ್ಲಿಯನ್ | ದಕ್ಷಿಣ ಕನ್ನಡ |
| 42 | ಪಣಿಯನ್ | ದಕ್ಷಿಣ ಕನ್ನಡ |
| 43 | ಪರ್ಧಿ | ಬೆಳಗಾಂವಿ, ಬಿಜಾಪುರ, ಧಾರವಾಡ |
| 44 | ರಥವಾ | ಬೆಳಗಾಂವಿ |
| 45 | ಷೋಲಗ | ಮೈಸೂರು, ದಕ್ಷಿಣ ಕನ್ನಡ |
| 46 | ಸೋಲಿಗರು | ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು, ತುಮಕೂರು |
| 47 | ತೋಟಿ | ಬೀದರ್ |
| 48 | ತೋಡ | ದಕ್ಷಿಣ ಕನ್ನಡ |
| 49 | ವರ್ಲಿ | ಬೆಳಗಾಂವಿ |
| 50 | ವಿಟಿಯೋಲ | ಬಿಜಾಪುರ |
| 51 | ಎರವ | ಕೊಡಗು |
| 52 | ನಮೂದಿಸದಿರುವವರು | ಎಲ್ಲಾ ಜಿಲ್ಲೆಗಳು |

ಒಟ್ಟಾರೆ ಪರಿಶಿಷ್ಟ ಬುಡಕಟ್ಟುಗಳ ಜನರ ಸಂಖ್ಯೆ ಕರ್ನಾಟಕದ ಒಟ್ಟು ಜನಸಂಖ್ಯೆಯ 4.26ರಷ್ಟಾಗುತ್ತದೆ. ಈ ಜನರು ಮುಖ್ಯವಾಗಿ ಮೈಸೂರು, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಹಳ ಸಂಖ್ಯೆಯಲ್ಲಿ ಇದ್ದಾರೆ. ಬೆಂಗಳೂರು, ಬೆಳಗಾಂವಿ, ಚಿಕ್ಕಮಗಳೂರು, ತುಮಕೂರು, ಶಿವಮೊಗ್ಗ ಮತ್ತು ಹಾಸನಗಳಲ್ಲಿ ಕೂಡ ತಕ್ಕಮಟ್ಟಿಗೆ ಇದ್ದಾರೆ. ಸಂವಿಧಾನದ ಪ್ರಕಾರ ಇಂಥ ಬುಡಕಟ್ಟುಗಳು ಸಾಂದ್ರವಾಗಿರುವ ಪ್ರದೇಶಗಳನ್ನು ಅನುಸೂಚಿತ ಪ್ರದೇಶ ಎಂದು ಸಾರಿ ವಿಶೇಷ ಸೌಲಭ್ಯಗಳನ್ನು ಒದಗಿಸಬಹುದಾದರೂ ಕರ್ನಾಟಕದಲ್ಲಿ ಅಂಥ ಸಾಂದ್ರ ಪ್ರದೇಶಗಳು ಇಲ್ಲವಾದ್ದರಿಂದ ಯಾವ ಪ್ರದೇಶವನ್ನೂ ಅನುಸೂಚಿತ ಎಂದು ಸಾರಿಲ್ಲ.

ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಈ ಪರಿಶಿಷ್ಟ ವರ್ಗದ ಸಮುದಾಯಗಳ ಅಭಿವೃದ್ಧಿಗೆ ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತವೆ. ಈ ಕಾರ್ಯಕ್ರಮಗಳ ಅನುಷ್ಠಾನ, ಉಸ್ತುವಾರಿ ನೋಡಿಕೊಳ್ಳಲು ಕರ್ನಾಟಕ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯಡಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನೂ 1999ರಲ್ಲಿ ಪ್ರತ್ಯೇಕವಾಗಿ ಪ್ರಾರಂಭಿಸಿ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ಎಡೆಮಾಡಿಕೊಟ್ಟಿದೆ.

ಇತ್ತೀಚಿನ ವರ್ಷಗಳಲ್ಲಿ ಕೆಲವೊಂದು ಪಂಗಡಗಳ ಸೇರ್ಪಡೆಯಿಂದಾಗಿ ಅಂದರೆ ನಾಯ್ಕ, ಬೇಡ, ಬೇಡರ್ ಮತ್ತು ವಾಲ್ಮೀಕಿ ಪಂಗಡಗಳು ಪರಿಶಿಷ್ಟವರ್ಗಕ್ಕೆ ಸೇರ್ಪಡೆಯಾಗಿರುವುದರಿಂದ ಪರಿಶಿಷ್ಟವರ್ಗಗಳ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಗಿದೆ. 1991ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು 19.15 ಲಕ್ಷ ಪ.ವರ್ಗಗಳ ಜನಸಂಖ್ಯೆ ಇದ್ದು ಇದು ರಾಜ್ಯದ ಜನಸಂಖ್ಯೆಯ ಶೇಕಡಾ 4.26ರಷ್ಟು ಇರುತ್ತದೆ. 1971ರ ಜನಗಣತಿಯ ಪ್ರಕಾರ ಮೂಲವಾಸಿ ಪಂಗಡಗಳು ಹೆಚ್ಚಾಗಿದ್ದ ಮೈಸೂರು, ಕೊಡಗು, ಚಿಕ್ಕಮಗಳೂರು, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ (ಇತ್ತೀಚೆಗೆ ಜಿಲ್ಲಾ ವಿಂಗಡಣೆಯಿಂದಾಗಿ ಚಾಮರಾಜನಗರ ಮತ್ತು ಉಡುಪಿ ಜಿಲ್ಲೆಗಳು ಹೊಸದಾಗಿ ಅಸ್ತಿತ್ವಕ್ಕೆ ಬಂದಿವೆ). 5 ಸುಸಂಘಟಿತ ಗಿರಿಜನ ಅಭಿವೃದ್ಧಿ ಮೂಲ ಜನಾ ಘಟಕಗಳನ್ನು ಸ್ಥಾಪಿಸಿ ಅವುಗಳ ಉಸ್ತುವಾರಿಗೆ ಐದು ಮೂಲ ಜನಾ ಸಮನ್ವಯಾಧಿಕಾರಿಗಳಿದ್ದು ಇವರುಗಳು ಜಿಲ್ಲಾಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇತರ ಜಿಲ್ಲೆಗಳಲ್ಲಿ ಜಿಲ್ಲಾ ಸಮಾಜಕಲ್ಯಾಣ ಅಧಿಕಾರಿಗಳೇ ಪರಿಶಿಷ್ಟವರ್ಗದ ಅಭಿವೃದ್ಧಿ ಕಾರ್ಯಕ್ರಮಗಳ ಉಸ್ತುವಾರಿಯನ್ನು ನಿರ್ವಹಿಸುತ್ತಿದ್ದಾರೆ. 2002–2003ನೆಯ ಸಾಲಿನಲ್ಲಿ ನೂತನವಾಗಿ ಚಾಮರಾಜನಗರ, ಚಿತ್ರದುರ್ಗ, ಬೆಳಗಾಂವಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ಪಂಗಡ ಕಲ್ಯಾಣಾಧಿಕಾರಿಗಳ ಕಛೇರಿ ಪ್ರಾರಂಭಿಸಿದೆ. ತಾಲ್ಲೂಕು ಮಟ್ಟದಲ್ಲಿ

ತಾಲ್ಲೂಕು ಸಮಾಜಕಲ್ಯಾಣಧಿಕಾರಿಗಳು ಇತರ ಸಿಬ್ಬಂದಿಯೊಂದಿಗೆ ಇಲಾಖೆಯ ಕಾರ್ಯಕ್ರಮಗಳನ್ನೂ ಜಾರಿಗೊಳಿಸುತ್ತಿದ್ದಾರೆ.

ಪರಿಶಿಷ್ಟ ಬುಡಕಟ್ಟುಗಳು ಬಹುಮಟ್ಟಿಗೆ ಆದಿವಾಸಿ ಸಮುದಾಯಗಳು. ಆದರೆ ಸಂವಿಧಾನದ ಉದ್ದಿಶ್ಯದಿಂದ ತಯಾರಿಸಲಾದ ಪಟ್ಟಿ ಮತ್ತು ಮಾನವಶಾಸ್ತ್ರಜ್ಞರು ತಮ್ಮ ಮಾನದಂಡಗಳ ಅವಲಂಬಿತವಾಗಿ ಬುಡಕಟ್ಟುಗಳೆಂದು ನಿರೂಪಿಸುವ ವರ್ಗಗಳ ಯಾದಿಯಲ್ಲಿ ಏಕತೆಯಿಲ್ಲ. ಮಾನವಶಾಸ್ತ್ರಜ್ಞರ ಪ್ರಕಾರ ಪರಿಶಿಷ್ಟ ಪಟ್ಟಿಯ ಸುಮಾರು 27 ಸಮುದಾಯಗಳನ್ನು ಮಾತ್ರ ಬುಡಕಟ್ಟುಗಳು ಎಂದು ಪರಿಗಣಿಸಬಹುದು. ಕರ್ನಾಟಕದ ಬುಡಕಟ್ಟುಗಳ ಬಗ್ಗೆ ಥರ್ಸ್ಟನ್, ಎಂಥೋವೆನ್, ನಂಜುಂಡಯ್ಯ, ಅನಂತಕೃಷ್ಣ ಅಯ್ಯರ್ ಮತ್ತು ಲೂಯಿಸ್–ಇವರು ಕೆಲವು ವಿವರಗಳನ್ನು ನೀಡಿದ್ದಾರೆ. ಅವರ ಬರೆಹಗಳ ಆಧಾರದ ಮೇಲೆ ಕೆಲವು ಮುಖ್ಯ ಬುಡಕಟ್ಟುಗಳ ಸ್ಥೂಲ ಪರಿಚಯವನ್ನು ಪಡೆಯಬಹುದು. ಈ ವಿವರಗಳು ಬಹುಮಟ್ಟಿಗೆ 19ನೆಯ ಶತಮಾನ ಮತ್ತು 20ನೆಯ ಶತಮಾನದ ಆದಿಭಾಗದಲ್ಲಿದ್ದ ಸ್ಥಿತಿಗತಿಗಳ ಬಗ್ಗೆ ಅನ್ವಯಿಸುತ್ತವೆ.

**ಅಡಿಯರು :** ಅಡಿಯರೆಂದರೆ ಆಳು ಎನ್ನುವ ಅರ್ಥ ಬರುತ್ತದೆ. ಇವರು ಮುಖ್ಯವಾಗಿ ದಕ್ಷಿಣ ಕನ್ನಡದ ದಟ್ಟಡವಿಗಳಲ್ಲಿ ಕಂಡುಬರುತ್ತಾರೆ. ತುಳು, ಮಲೆಯಾಳಂ ಮತ್ತು ತಮಿಳು ಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ಬಣ್ಣಬಣ್ಣದ ಬಳೆ ಮತ್ತು ಬೆಂಡೋಲೆಗಳನ್ನು ಧರಿಸುವುದೆಂದರೆ ಗಂಡಸರು ಮತ್ತು ಹೆಂಗಸರಿಗೆ ಬಹಳ ಇಷ್ಟ. ಇವರು ಹೆಚ್ಚಾಗಿ ಕಾಫಿ ತೋಟಗಳಲ್ಲಿ ಕೃಷಿಕೂಲಿಗಳಾಗಿ ಕೆಲಸ ಮಾಡುತ್ತಾರೆ. ಬೇಟೆಯಾಡುವುದು ಇವರ ಮುಖ್ಯ ಹವ್ಯಾಸ. ಅನೇಕ ಹಿಂದು ಹಬ್ಬಗಳನ್ನು ಆಚರಿಸುವವರಾದರೂ ಇವರಿಗೆ ತಮ್ಮದೇ ಆದ ಅನೇಕ ದೇವತೆಗಳಿವೆ.

**ಭಿಲ್ಲರು:** ಭಿಲ್ಲರು ಎಂಬ ಶಬ್ದ ಬಹುಶಃ ಬಿಲ್ಲಿನಿಂದ ಬಂದಿದೆ. ಗಂಡಸರು ಕೌಪೀನವನ್ನೊಂದು ಬಿಟ್ಟು ಏನನ್ನೂ ಧರಿಸುವುದಿಲ್ಲ. ಹೆಂಗಸರು ಆಕರ್ಷಕವಾದ ಆಭರಣಗಳನ್ನು ಮತ್ತು ಅರಿವೆಯನ್ನು ಧರಿಸುತ್ತಾರೆ. ಅವರಿಗೆ ತಮ್ಮದೇ ಆದ ಭಾಷೆ ಇದೆ. ಕಾಡಿನಲ್ಲಿರುವವರು ಬೇಟೆಯಾಡಿ ಜೀವಿಸುತ್ತಾರೆ. ಕೆಲವರು ಆಹಾರ ಸಂಗ್ರಹಿಸಿ ಅಲೆಮಾರಿಗಳಾಗಿದ್ದು ಹಾವಾಡಿಸುವುದನ್ನಾಗಲೀ ಅಥವಾ ಗಿಡಮೂಲಿಕೆಗಳನ್ನು ಮಾರುವುದನ್ನಾಗಲಿ ಮಾಡುತ್ತಾರೆ. ಬಹಳಷ್ಟು ಭಿಲ್ಲರು ಹಿಂದುಗಳಾಗಿದ್ದರೂ ಕೆಲವರು ಮುಸ್ಲಿಮರು ಅಥವಾ ಕ್ರಿಶ್ಚಿಯನ್ನರು ಇದ್ದಾರೆ.

**ಇರುಳರು :** ಇವರು ಕಪ್ಪುಬಣ್ಣದ ಅಗಲ ಮೂಗಿನ ಗುಂಗುರು ಕೂದಲಿನ ಜನ. ಇವರ ಹೆಸರೇ ಸೂಚಿಸುವಂತೆ ಬಹಳ ಕಪ್ಪು ಬಣ್ಣದವರು. ಬೇಟೆಯಾಡುವುದು ಮತ್ತು ಕಾಡಿನ ವಸ್ತುಗಳನ್ನು ಸಂಗ್ರಹಿಸುವುದು ಮುಖ್ಯ ಉದ್ಯೋಗ. ಇವರಾಡುವ ಭಾಷೆಯಲ್ಲಿ ತಮಿಳಿನ ಮತ್ತು ಕನ್ನಡದ ಅಂಶಗಳನ್ನು ಕಾಣಬಹುದು. ಮೊದಲಿನಿಂದಲೂ ಕುಮರಿ ಬೇಸಾಯ ಮಾಡುತ್ತಿರುವವರಾದರೂ ಈಗೀಗ ವ್ಯವಸ್ಥಿತ ಬೇಸಾಯಕ್ಕೆ ನಿಂತಿದ್ದಾರೆ. ಬಿದಿರು, ಜೇನು ಮತ್ತು ಕಟ್ಟಿಗೆಯನ್ನು ಕಾಡಿನಿಂದ ತಂದು ಮಾರುವುದನ್ನು ಕೂಡ ಮಾಡುತ್ತಾರೆ. ಕೆಲವರು ಕುರಿ ಮತ್ತು ಕೋಳಿಗಳನ್ನು ಸಾಕುತ್ತಾರೆ.

**ಹಸಲರು :** ಇವರು ಕಪ್ಪುಬಣ್ಣದ ಗುಂಗುರುಗೂದಲಿನ ಮತ್ತು ದಪ್ಪ ತುಟಿಯ ಜನ. ಈ ಜನ ಅಲೆಮಾರಿಗಳಾಗಿದ್ದು ಕಾಡಿನಲ್ಲಿ ಶಂಕು ತಲೆಯಾಕಾರದ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಬಹಳಷ್ಟು ಜನ ತಮ್ಮ ಜೀವನಕ್ಕೆ ಕಾಡಿನಲ್ಲಿ ಸಿಗುವ ಜೇನು ಮತ್ತಿತರ ವಸ್ತುಗಳನ್ನು ಅವಲಂಬಿಸುತ್ತಾರೆ. ಇನ್ನು ಕೆಲವರು ಕಾಫಿ ತೋಟಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ.

**ಹಕ್ಕಿಪಿಕ್ಕಿ:** ಗಂಡಸರು ಮತ್ತು ಹೆಂಗಸರು ಈ ಜನಾಂಗದಲ್ಲಿ ತುರುಬು ಕಟ್ಟಿಕೊಳ್ಳುವುದು ವಿಶೇಷ. ಹೆಂಗಸರು ಹೆಚ್ಚಾಗಿ ಸೀರೆಯನ್ನುಟ್ಟರೆ, ಗಂಡಸರು ಪಂಚೆ, ಷರಾಯಿ ಧರಿಸುತ್ತಾರೆ. ಹೆಸರೇ ಸೂಚಿಸುವಂತೆ ಹಕ್ಕಿ ಬೇಟೆಯಾಡುವುದೇ ಇವರ ಮುಖ್ಯ ಉದ್ಯೋಗ. ಅಲೆಮಾರಿ ಜೀವನ ಇವರಿಗೆ ಬಹಳ ಒಗ್ಗಿಹೋಗಿದೆ. ನವಿಲಿನಂತೆ ಕೂಗಿ ನವಿಲು ಹಿಡಿಯುವುದಾಗಲೀ ಹಕ್ಕಿಗಳನ್ನು ಹೊಡೆದು ಕೆಡವುವುದಾಗಲೀ ಇವರಿಗೆ ಬಹಳ ಸುಲಭವಾದ ಕೆಲಸ. ಗಂಡಸರು ಬೇಟೆಯಾಡಿದ ಪ್ರಾಣಿಗಳನ್ನು ಮಾರುವುದರಲ್ಲಿ ನಿಷ್ಣಾತರಾದರೆ, ಹೆಂಗಸರು ಕಣಿ ಹೇಳುವುದರಲ್ಲಿ ನಿಷ್ಣಾತರು.

**ಕುರುಬರು:** ಕುರುಬರಲ್ಲಿ ಬೆಟ್ಟಕುರುಬರು ಮತ್ತು ಜೇನುಕುರುಬರು ಎಂದು ಎರಡು ವಿಧಗಳುಂಟು. ಬೆಟ್ಟಕುರುಬರು ಬೆಟ್ಟಗಳಲ್ಲಿ ವಾಸಿಸುವ ಕುಳ್ಳ ಜನಾಂಗಕ್ಕೆ ಸೇರಿದವರು. ಬೇಟೆಯಾಡುವುದು ಇವರ ಮುಖ್ಯ ಉದ್ಯೋಗ. ನೇಗಿಲಿಲ್ಲದೇ ವ್ಯವಸಾಯ ಮಾಡುತ್ತಾರೆ. ಬಿದಿರಿನ ಕೆಲಸದಲ್ಲಿ ಬಹಳ ನಿಷ್ಣಾತರು. ಇವರ ಭಾಷೆಯಲ್ಲಿ ಮಲೆಯಾಳಂ, ತುಳು ಮತ್ತು ತಮಿಳು ಶಬ್ದಗಳನ್ನು ಕಾಣಬಹುದು. ಹೆಂಗಸರು ಬಣ್ಣಬಣ್ಣದ ಬಟ್ಟೆಗಳನ್ನು ತಮ್ಮದೇ ಆದ ಶೈಲಿಯಲ್ಲಿ ಉಡುವುದುಂಟು; ಕಾಡಿನಲ್ಲಿ ಸಿಗುವ ಗಿಡಮೂಲಿಕೆಗಳನ್ನು ಮಾರುವುದುಂಟು. ಜೇನು ಕುರುಬರಿಗೆ ಜೇನು ಮಾರಿ ಜೀವಿಸುವುದರಿಂದ ಈ ಹೆಸರು ಬಂದಿದೆ. ಬಾಣ ಮತ್ತು ಬಲೆಗಳ ಸಹಾಯದಿಂದ ಬೇಟೆಯಾಡುವುದರಲ್ಲಿ ಇವರು ಬಹಳ ನಿಸ್ಸೀಮರು.

**ಕೊರಗರು:** ಇವರಲ್ಲಿ ಅಂಡೆಕೊರಗರು, ವಸ್ತ್ರಕೊರಗರು ಮತ್ತು ಸಪ್ಪು ಕೊರಗರು ಎಂದು ಮೂರು ವಿಧಗಳುಂಟು. ಬುಟ್ಟಿ ಹೆಣೆಯುವುದು ಮತ್ತು ಭಿಕ್ಷೆ ಬೇಡುವುದು ಇವರ ಮುಖ್ಯ ಉದ್ಯೋಗ. ಹೆಚ್ಚಾಗಿ ಇವರು ಊರ ಹೊರಗೆ ವಾಸಿಸುತ್ತಾರೆ. ಕನ್ನಡ ಮಿಶ್ರಿತ ತುಳು ಮಾತನಾಡುತ್ತಾರೆ. ಬೇಸಾಯವನ್ನಾಗಲೀ ಅಥವಾ ಕಾಡಿನ ವಸ್ತುಗಳ ಸಂಗ್ರಹಣೆಯನ್ನಾಗಲೀ ಮಾಡುವುದಿಲ್ಲ. ಇವರು ಮೊಸಳೆ ಹಿಡಿಯುವುದರಲ್ಲಿ ಬಹಳ ನಿಷ್ಣಾತರು.

**ಗೌದಳರು:** ಇವರಲ್ಲಿ ಊರುಗೌದಳರು ಮತ್ತು ಕಾಡುಗೌದಳರು ಎಂದು ಎರಡು ವಿಧ. ಕನ್ನಡವೇ ಇವರ ಭಾಷೆ. ಕಾಡುಗೌದಳರು ಆಕಳು ಎಮ್ಮೆಗಳನ್ನು ಪಾಲನೆ ಮಾಡಿ ಜೀವಿಸುತ್ತಾರೆ. ಮೊದಲಿನಿಂದಲೂ ಇವರು ಅಲೆಮಾರಿ ಪಶುಪಾಲಕರೆಂದು ಹೆಸರುವಾಸಿಯಾಗಿದ್ದಾರೆ. ಹೆಂಗಸರು ಕಾಡಿನಿಂದ ಕಟ್ಟಿಗೆ ತಂದು ಮಾರುವುದು, ಆಕರ್ಷಕ ರೀತಿಯಲ್ಲಿ ಚಾಪೆಗಳನ್ನು ತಯಾರಿಸುವುದು– ಈ ಕೆಲಸಗಳನ್ನು ಮಾಡುತ್ತಾರೆ.

**ಮಲೆಕುಡಿಯರು:** ಮಲೆಕುಡಿಯರು ಎನ್ನುವ ಹೆಸರು ಮಲೆ (ಬೆಟ್ಟ)ಗಳಲ್ಲಿ ವಾಸಿಸುವವರು ಎನ್ನುವುದರಿಂದ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರು ಹೆಚ್ಚಾಗಿ ಕಂಡುಬರುತ್ತಾರೆ. ಹೆಚ್ಚಾಗಿ ಕಾಡುಗಳಲ್ಲಿ ಬಂಡೆಯ ಸಂಧಿಗಳಲ್ಲಿ ವಾಸಿಸುವುದುಂಟು. ಕೆಲವರು ಕಾಫಿ ತೋಟಗಳಲ್ಲಿ ಕೂಲಿ ಮಾಡುತ್ತಾರೆ. ಒಂದು ಬಗೆಯ ತುಳು ಭಾಷೆಯನ್ನು ಮಾತನಾಡುತ್ತಾರೆ.

**ಮರಾಠರು:** ಗಂಡಸರು ಅಂಗಿ ಷರಾಯಿಯನ್ನು ಧರಿಸುತ್ತಾರೆ. ಕಿವಿಯಲ್ಲಿ ಬೆಂಡೋಲೆಗಳನ್ನು ಧರಿಸುತ್ತಾರೆ. ಹೆಂಗಸರು ವಿಶೇಷ ರೀತಿಯಲ್ಲಿ ಸೀರೆಯನ್ನುಡುತ್ತಾರೆ. ಮರಾಠಿ ಮಿಶ್ರಿತ ಕನ್ನಡ ಮಾತನ್ನಾಡುತ್ತಾರೆ. ಬಿದಿರಿನ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಹೆಚ್ಚಾಗಿ ಬೇಸಾಯವನ್ನು ಮಾಡುವವರಾದರೂ ಕೆಲವರು ಹಾಲು ಮೊಸರು ಮಾರಿ ಜೀವಿಸುತ್ತಾರೆ.

**ಪರ್ಧಿ :** ಇವರು ಹೆಚ್ಚಾಗಿ ಅಲೆಮಾರಿಗಳು. ಬೇಟೆಯಾಡುವುದೇ ಮುಖ್ಯ ಉದ್ಯೋಗ. ಪರ್ಧಿ ಎನ್ನುವ ಹೆಸರು ಪರಧ ಎನ್ನುವ ಮರಾಠಿ ಶಬ್ದದಿಂದ ಬಂದಿದ್ದು. ಪರಧ ಎಂದರೆ ಬೇಟೆಯಾಡುವುದು ಎಂದರ್ಥ.

ಇವರು ಬೇಟೆಯಾಡುವ ವಿಧಾನಗಳ ಮೇಲೆ ಇವರಲ್ಲಿ ಅನೇಕ ವಿಧಗಳುಂಟು. ಕೆಲವರು ಕೋತಿಗಳನ್ನು ಸಾಕಿದರೆ, ಇನ್ನು ಕೆಲವರು ಚಿರತೆಗಳನ್ನು ಸಾಕುತ್ತಾರೆ. ಇನ್ನು ಕೆಲವರು ಪ್ರಾಣಿಪಕ್ಷಿಗಳನ್ನು ಬೇಟೆಯಾಡುತ್ತಾರೆ. ಕೆಲವರು ಕಲ್ಲು ಒರಳುಗಳನ್ನು ಮಾಡಿ ಮಾರುವುದುಂಟು.

**ಮಲೇರು :** ಗಂಡಸರು ಬಟ್ಟೆ ಧರಿಸುವುದು ಕಡಿಮೆ. ಹೆಂಗಸರು ಎಡಭುಜದ ಮೇಲೆ ಗಂಟುಕಟ್ಟಿ ಸೀರೆ ಉಡುತ್ತಾರೆ. ಇವರು ತುಳುಮಿಶ್ರಿತ ಕನ್ನಡ ಮಾತನಾಡುತ್ತಾರೆ. ಹೆಚ್ಚಾಗಿ ಗುತ್ತಿಗೆದಾರರಿಗೆ ಕೂಲಿಯಾಳಾಗಿ ಕೆಲಸ ಮಾಡುತ್ತಾರೆ. ಕೆಲವರು ಬೇಟೆಯಾಡುವರು. ಹೆಂಗಸರು ಬುಟ್ಟಿ ಮತ್ತು ಚಾಪೆಗಳನ್ನು ಹೆಣೆಯುವಲ್ಲಿ ನಿಷ್ಣಾತರು.

**ಮೇದರು:** ಬಿದಿರಿನಿಂದ ಬುಟ್ಟಿ, ತೊಟ್ಟಿಲು ಮುಂತಾದ ವಸ್ತುಗಳನ್ನು ತಯಾರಿಸುವುದರಲ್ಲಿ ನಿಷ್ಣಾತರು. ಕೊಡಗಿನಲ್ಲಿ ಇವರ ಹೆಂಗಸರು ಕೊಡಗಿನ ಹೆಂಗಸರಂತೆ ಸೀರೆ ಉಡುತ್ತಾರೆ. ಕೊಡಗಿನ ಹಬ್ಬಗಳಲ್ಲಿ ಮದ್ದಳೆ ಬಾರಿಸುವ ಕೆಲಸ ಇವರದು. ಕೆಲವರು ವ್ಯವಸಾಯ ಮಾಡುತ್ತಾರೆ.

**ಸೋಲಿಗ :** ಇವರ ಹೆಸರು ತಮಿಳು ಸೋಲೈ ಅಂದರೆ ಪೊದರು ಎಂಬುದರಿಂದ ಬಂದಿದೆ. ಮಾತೃಭಾಷೆ ತಮಿಳಾದರೂ ಕನ್ನಡ ಮಾತನಾಡುತ್ತಾರೆ. ಬಿದಿರಿನ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಇವರು ಹೆಚ್ಚಾಗಿ ಕುಮರಿ ಪದ್ಧತಿಯ ವ್ಯವಸಾಯ ಮಾಡುತ್ತಾರೆ. ಇವರು ಉತ್ತಮ ಶಿಕಾರಿಗಳೆಂದು ಪ್ರಸಿದ್ಧಿ ಪಡೆದಿದ್ದಾರೆ. ಕುರಿ, ಹಂದಿ ಮತ್ತು ಕೋಳಿ ಸಾಕುತ್ತಾರೆ.

**ಕಪಲರು :** ಇವರು ಸಾಧಾರಣ ಎತ್ತರದವರಾಗಿದ್ದು ಕಂದು ಬಣ್ಣದವರಾಗಿದ್ದಾರೆ. ಹೆಂಗಸರು ಕೊಡಗಿನ ಹೆಂಗಸರಂತೆ ಸೀರೆ ಉಡುತ್ತಾರೆ. ತಮಿಳು ಮಿಶ್ರಿತ ಮಲೆಯಾಳಂ ಮಾತನಾಡುವರಾದರೂ ಕನ್ನಡ ಮಾತನಾಡಬಲ್ಲರು. ಹಿಂದಿನಿಂದ ಬೇಟೆಯಾಡಿ ಜೀವನ ಸಾಗಿಸುತ್ತಿದ್ದರೂ ಈಗ ಹೆಚ್ಚಾಗಿ ಕಾಫಿ ತೋಟಗಳಲ್ಲಿ ಕೂಲಿ ಕೆಲಸ ಮಾಡುವರು.

**ಎರವರು :** ಇವರು ಕಂದು ಬಣ್ಣದ ಗುಂಗುರುಕೂದಲಿನ ಜನ. ಗಂಡಸರು ಪಂಚೆ ಷರಾಯಿ ಹಾಕಿದರೆ, ಹೆಂಗಸರು ಬಲಭುಜದ ಮೇಲೆ ಗಂಟು ಹಾಕಿ ಸೀರೆ ಉಡುತ್ತಾರೆ. ಇವರು ಆಡುವ ಭಾಷೆ ತಮಿಳು, ಮಲೆಯಾಳಂ, ಕನ್ನಡ ಮತ್ತು ಕೊಡಗು ಮಿಶ್ರಿತವಾದುದು. ಅಲೆಮಾರಿ ಜೀವನವನ್ನು ತೊರೆದು ಈಗ ಕೂಲಿ ಕೆಲಸ ಮಾಡುತ್ತಾರೆ. ಹೆಚ್ಚಾಗಿ ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಾರೆ.

ಆದಿಕರ್ನಾಟಕ, ಆದಿದ್ರಾವಿಡ, ಭೋವಿ, ಭಾಂಬಿಗುಂಪು, ಹೊಲೆಯ, ಮಾದಿಗ, ಲಂಬಾಣಿ,ಹೊಲೇರು ಎಂಬ ಎಂಟು ಜಾತಿಗಳು ಮತ್ತು ಜಾತಿ ನಮೂದಿಸಲ್ಪಡದವರು ಒಟ್ಟಿಗೆ ಪರಿಶಿಷ್ಟ ಜಾತಿಗಳ ಸೇ. 87 ರಷ್ಟಾಗುತ್ತಾರೆ. ಉಳಿದ 92 ಜಾತಿಗಳು ಒಟ್ಟು ಪರಿಶಿಷ್ಟ ಜಾತಿಗಳ 13ರಷ್ಟು ಮಾತ್ರ ಆಗುತ್ತಾರೆ. ಆದರೆ 17 ಜಾತಿಗಳು ಮಾತ್ರ ಹತ್ತು ಸಾವಿರಕ್ಕಿಂತ ಹೆಚ್ಚು ಸಂಖ್ಯೆಯಲ್ಲಿವೆ. ಅವೆಂದರೆ ಆದಿಆಂಧ್ರ (30,514), ಬೇಡಜಂಗಮ (13,676), ಭಂಗಿ (76,979), ಬ್ಯಾಗಾರು (16,873), ಚಲುವಾದಿ (42,194), ಚಂಭಾರ (10,500), ಧೋರಕಕ್ಕಯ್ಯ (10,513), ಕೊರಚ (22,243), ಕೊರಮ (32,120), ಮಹರ್ ತರಲ್ (33,527), ಮಹರ್, (18,402), ಮಂಗ್ (13,248), ಮೋಚಿ (23,685), ಮೊಗೇರು (16,994), ಮುಂಡಾಲ (12,729) ಮತ್ತು ಸಮಗಾರ (10,230)– ಇವೆಲ್ಲಾ ಜಾತಿಗಳು ಸೇರಿ ಒಟ್ಟು ಪರಿಶಿಷ್ಟ ಜಾತಿಗಳ 10ರಷ್ಟಾಗುತ್ತಾರೆ.

1991ರ ಜನಗಣತಿ ಮೇರೆಗೆ ಜಿಲ್ಲಾವಾರು ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಜನಸಂಖ್ಯೆ ಈ ಮುಂದಿನಂತಿದೆ:

| **ಕ್ರಮ ಸಂಖ್ಯೆ** | **ಜಿಲ್ಲೆಯ ಹೆಸರು** | **ಜನಸಂಖ್ಯೆ** | |
|---|---|---|---|
| | | **ಪರಿಶಿಷ್ಟಜಾತಿ** | **ಪರಿಶಿಷ್ಟಪಂಗಡ** |
| 1 | ಬೆಂಗಳೂರು | 711,775 | 53,631 |
| 2 | ಬೆಂಗಳೂರು (ಗ್ರಾ) | 326,599 | 49,305 |
| 3 | ಚಿತ್ರದುರ್ಗ | 285,621 | 222,763 |
| 4 | ದಾವಣಗೆರೆ | 302,344 | 155,600 |
| 5 | ಕೋಲಾರ | 570,400 | 153,019 |
| 6 | ಶಿವಮೊಗ್ಗ | 236,526 | 32,948 |
| 7 | ತುಮಕೂರು | 408,524 | 167,632 |
| **I** | **ಬೆಂಗಳೂರು ವಿಭಾಗ** | **2,841,789** | **834,898** |
| 8 | ಬೆಳಗಾಂವಿ | 406,955 | 83,076 |
| 9 | ಬಿಜಾಪುರ | 291,513 | 17,360 |
| 10 | ಬಾಗಲಕೋಟೆ | 218,349 | 22,175 |
| 11 | ಧಾರವಾಡ | 124,645 | 23,396 |
| 12 | ಗದಗ | 118,850 | 20,534 |
| 13 | ಹಾವೇರಿ | 167,004 | 61,169 |
| 14 | ಉತ್ತರಕನ್ನಡ | 91,990 | 10,168 |
| **II** | **ಬೆಳಗಾಂವಿ ವಿಭಾಗ** | **1,419,306** | **237,878** |
| 15 | ಬಳ್ಳಾರಿ | 311,252 | 147,869 |
| 16 | ಬೀದರ್ | 260,033 | 104,215 |
| 17 | ಗುಲ್ಬರ್ಗ | 610,641 | 106,935 |
| 18 | ರಾಯಚೂರು | 249,148 | 120,444 |
| 19 | ಕೊಪ್ಪಳ | 148,775 | 59,828 |
| **III** | **ಗುಲ್ಬರ್ಗ ವಿಭಾಗ** | **1,579,849** | **539,291** |
| 20 | ಚಿಕ್ಕಮಗಳೂರು | 195,852 | 26,534 |
| 21 | ದಕ್ಷಿಣಕನ್ನಡ | 114,272 | 64,493 |
| 22 | ಉಡುಪಿ | 61,276 | 41,666 |
| 23 | ಹಾಸನ | 273,379 | 16,581 |
| 24 | ಕೊಡಗು | 59,009 | 40,312 |
| 25 | ಮಂಡ್ಯ | 226,626 | 11,936 |
| 26 | ಮೈಸೂರು | 391,780 | 63,399 |
| 27 | ಚಾಮರಾಜನಗರ | 206,141 | 38,703 |
| **VI** | **ಮೈಸೂರು ವಿಭಾಗ** | **1,528,335** | **303,624** |
| | **ರಾಜ್ಯ** | **7,369,279** | **1,915,691** |

**ಕಲ್ಯಾಣ ಕಾರ್ಯಕ್ರಮ :** ಭಾರತ ಸರ್ಕಾರ ಎಲ್ಲ ಪರಿಶಿಷ್ಟ ಬುಡಕಟ್ಟು ಮತ್ತು ಜಾತಿಗಳಿಗೂ ಕೆಲವು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ. ಇವೆಲ್ಲ ಕರ್ನಾಟಕಕ್ಕೂ ಅನ್ವಯಿಸುತ್ತವೆ. ಮುಖ್ಯವಾಗಿ ಇಲ್ಲಿ ಸಂವಿಧಾನದ 46, 275 ಮತ್ತು 339ನೆಯ ಅನುಚ್ಛೇದಗಳನ್ನು ಹೆಸರಿಸಬಹುದಾಗಿದೆ.

46ನೆಯ ಅನುಚ್ಛೇದದ ಪ್ರಕಾರ ರಾಜ್ಯ ಸರ್ಕಾರಗಳು ಹಿಂದುಳಿದ ಜನರ ವಿದ್ಯಾಭ್ಯಾಸ ಮತ್ತು ಆರ್ಥಿಕ ಪರಿಸ್ಥಿತಿಯನ್ನು ವಿಶೇಷ ಜಾಗ್ರತಿಯಿಂದ ಸುಧಾರಿಸಬೇಕೆಂದು ತಿಳಿಸಿದೆ. ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳನ್ನು ಸಾಮಾಜಿಕ ಅನ್ಯಾಯ ಮತ್ತು ಎಲ್ಲ ರೀತಿಯ ಶೋಷಣೆಗಳಿಂದ ರಕ್ಷಿಸಬೇಕೆಂದು ತಿಳಿಸಿದೆ. 275ನೆಯ ಅನುಚ್ಛೇದವು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಸಹಾಯಧನ ಕೊಡಬೇಕೆಂದು ತಿಳಿಸುತ್ತದೆ. ಈ ಸಹಾಯಧನವನ್ನು ಪರಿಶಿಷ್ಟ ಜಾತಿಗಳು ಹಾಗೂ ಬುಡಕಟ್ಟುಗಳ ಕಲ್ಯಾಣಕ್ಕೆ ಮತ್ತು ಒಳ್ಳೆಯ ಆಡಳಿತಕ್ಕೆ ಉಪಯೋಗಿಸಬೇಕೆಂದು ತಿಳಿಸುತ್ತದೆ. 339ನೆಯ ನಿಯಮದ ಪ್ರಕಾರ ರಾಷ್ಟ್ರಪತಿಯವರು ಅನುಸೂಚಿತ ಪ್ರದೇಶಗಳ ಆಡಳಿತದ ಬಗ್ಗೆ ವರದಿ ಕೇಳಲು ಅಧಿಕಾರವನ್ನೀಯುತ್ತದೆ. ಅದೇ ರೀತಿ ಸೌಲಭ್ಯಗಳನ್ನು ಹತ್ತು ವರ್ಷಗಳ ಅನಂತರ ವಿಸ್ತರಿಸುವ ಬಗ್ಗೆ ಅಧಿಕಾರವೀಯುತ್ತದೆ.

ಅಲ್ಲದೆ ಸಂವಿಧಾನದ ಅನೇಕ ಅನುಚ್ಛೇದಗಳು ಪರಿಶಿಷ್ಟ ವರ್ಗಗಳ ಕಲ್ಯಾಣದ ಸಲುವಾಗಿ ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಂವಿಧಾನದಲ್ಲಿವೆ. ಅದರಂತೆ 17ನೆಯ ಅನುಚ್ಛೇದ ಅಸ್ಪೃಶ್ಯತಾಪದ್ಧತಿಯನ್ನು ಖಂಡಿಸುತ್ತದೆ. ಇನ್ನೂ ಅನೇಕ ಅನುಚ್ಛೇದಗಳ ಪ್ರಕಾರ ಸರ್ಕಾರಿ ಸೇವೆಯಲ್ಲಿ ಸ್ಥಾನಗಳನ್ನು ಕಾಯ್ದಿಡುವಿಕೆ, ವಿಧಾನಸಭೆ ಮತ್ತು ಸಂಸತ್ತಿನಲ್ಲಿ ಯೋಗ್ಯ ಪ್ರಾಧಾನ್ಯತೆ ಮುಂತಾದ ಕಾರ್ಯಕ್ರಮಗಳ ಬಗ್ಗೆ ಉಲ್ಲೇಖವಿದೆ.

ಕರ್ನಾಟಕದಲ್ಲಿ ಹಿಂದುಳಿದ ವರ್ಗದವರ ಕ್ಷೇಮ ಕಾರ್ಯಕ್ರಮಗಳು 1940ರಷ್ಟು ಹಿಂದಿನಿಂದಲೇ ನಡೆದುಕೊಂಡು ಬಂದಿವೆಯಾದರೂ ಈ ಕಾರ್ಯಕ್ರಮಗಳಿಗೆ ಬಹಳ ಪ್ರಾಮುಖ್ಯತೆ ಸಿಕ್ಕಿದ್ದು ಸ್ವಾತಂತ್ರ್ಯಾನಂತರವೆ. ಈ ಕಾರ್ಯಕ್ರಮಗಳು 1952–53ರಿಂದ ಪ್ರಾರಂಭವಾದರೂ 1956ರವರೆಗೂ ಅವಕ್ಕೆ ಒಂದು ಸರಿಯಾದ ರೂಪರೇಷೆ ಇರಲಿಲ್ಲ. ಕರ್ನಾಟಕದ ಉದಯದ ಅನಂತರ ಪರಿಶಿಷ್ಟ ಜಾತಿಗಳ ಸೇವಾಕಾರ್ಯವನ್ನು ಸಮಾಜ ಕಲ್ಯಾಣ ಇಲಾಖೆಗೆ ವಹಿಸಲಾಯಿತು.

ಸಮಾಜಕಲ್ಯಾಣ ಇಲಾಖೆಯವರು ರೂಪಿಸಿರುವ ಕಾರ್ಯಯೋಜನೆಗಳು ಭಾರತದ ಸಂವಿಧಾನದಲ್ಲಿ ಹೇಳಿರುವ ಧೋರಣೆಗೆ ಅನುಗುಣವಾಗಿವೆ ಮತ್ತು ಈ ಸಮುದಾಯದ ಸರ್ವತೋಮುಖ ಕ್ಷೇಮಾಭ್ಯುದಯವನ್ನು ಅವು ಒಳಗೊಂಡಿವೆ. ಈ ಕಾರ್ಯಕ್ರಮಗಳು ಈ ಮುಂದಿನಂತೆ ಹೇಳಿರುವ ಮೂರು ಪ್ರಮುಖ ಅಂಶಗಳ ಚೌಕಟ್ಟಿನಲ್ಲಿ ಬರುತ್ತವೆ. 1 ಆರ್ಥಿಕ ಅಭಿವೃದ್ಧಿ, 2 ರಕ್ಷಣೆ ಮತ್ತು 3 ಆರೋಗ್ಯ, ವಸತಿ ಮತ್ತಿತರ ಯೋಜನೆಗಳು

ಸಂವಿಧಾನದ ನಿರ್ದೇಶಕ ತತ್ತ್ವಗಳಿಗನುಸಾರವಾಗಿ ಕರ್ನಾಟಕ ಸರ್ಕಾರ ಮೊದಲನೆಯ ಪಂಚವಾರ್ಷಿಕ ಯೋಜನೆಯಿಂದ ಐದನೆಯ ಪಂಚವಾರ್ಷಿಕ ಯೋಜನೆಯ ಕೊನೆಯವರೆಗೂ ಕೆಲವು ಕಲ್ಯಾಣ ಯೋಜನೆಗಳನ್ನು ಹಾಕಿಕೊಂಡಿತ್ತು. ಈಗ 10ನೆಯ ಯೋಜನೆಯಲ್ಲಿ ಕೂಡ ಇಂಥ ಆಶಯ ಮುಂದುವರಿದಿದೆ. ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣದ ಸಲುವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಧನವಿನಿಯೋಗಮಾಡುತ್ತವೆ.

ಆದಿವಾಸಿಗಳು ಮುಖ್ಯವಾಗಿ ವ್ಯವಸಾಯ ಮತ್ತು ಅರಣ್ಯಗಳನ್ನು ಅವಲಂಬಿಸಿರುವುದರಿಂದ ತೃತೀಯ ಯೋಜನೆಯ ಕೊನೆಯ ಹೊತ್ತಿಗೆ 66 ವ್ಯವಸಾಯ ಕಾಲೋನಿಗಳನ್ನು ಸ್ಥಾಪಿಸಲಾಗಿತ್ತು. ಈ ಕಾಲೋನಿಗಳಲ್ಲಿ ಭೂಸ್ವಾಧೀನಕ್ಕೆ, ಸುಧಾರಿತ ಬೀಜಗಳ ಖರೀದಿಗೆ, ವ್ಯವಸಾಯ ಉಪಕರಣಗಳಿಗೆ, ಮನೆ ಕಟ್ಟುವುದಕ್ಕೆ, ರಸ್ತೆ ಮಾಡಲಿಕ್ಕೆ ಮತ್ತು ಕುಡಿಯುವ ನೀರಿನ ಬಾವಿಗಳಿಗೆ ಸಹಾಯ ಮಾಡಲಾಗಿದೆ. ಇದಲ್ಲದೆ ಉತ್ತಮ ತಳಿಯ ಆಕಳು, ಹಂದಿ, ಕೋಳಿ ಮತ್ತು ಕುರಿ ಸಾಕಣೆಗೆ ಸಹಾಯ ಮಾಡಲಾಗಿದೆ. ಮೂರನೆಯ ಯೋಜನೆಯಲ್ಲಿ ಎರಡು ವಿವಿಧೋದ್ದೇಶ ಸಹಕಾರ ಪುನರ್ವಸತಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯನ್ವಯ ಉತ್ತಮ ಹೋರಿಗಳು, ರಾಸಾಯನಿಕ ಗೊಬ್ಬರ, ಉಪಕರಣಗಳು ಮತ್ತು ಸುಧಾರಿತ ಬೀಜಗಳನ್ನು ಕೊಡಲಾಗಿದೆ.

ಕರ್ನಾಟಕದಲ್ಲಿ ಅನುಸೂಚಿತ ಪ್ರದೇಶಗಳಿಲ್ಲದಿರುವುದರಿಂದ ಕೆಲವು ತಾತ್ಕಾಲಿಕ ಆದಿವಾಸಿ ಅಭಿವೃದ್ಧಿ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ಘಟಕಗಳು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಕೊಡಗು ಜಿಲ್ಲೆಯ ನಾಗರ ಹೊಳೆ ಮತ್ತು ಸೋಮವಾರಪೇಟೆ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಉಡುಪಿ ಮತ್ತು ಕಾರ್ಕಳದಲ್ಲಿವೆ. ಅರಣ್ಯದ ವಸ್ತುಗಳಿಗಾಗಿ ಉತ್ತಮ ಮಾರುಕಟ್ಟೆಯನ್ನು ಕಲ್ಪಿಸುವ ಸಲುವಾಗಿ ಕನಕಪುರ, ಬಿಳಿಗಿರಿರಂಗನಬೆಟ್ಟ, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಹುಣಸೂರು, ಪುತ್ತೂರು, ನಾಗರಹೊಳೆ ಮತ್ತು ಕುಶಾಲನಗರಗಳಲ್ಲಿ ಅರಣ್ಯ ಕಾರ್ಮಿಕರ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ. ಆದಿವಾಸಿ ಮಹಿಳೆಯರ ಸಲುವಾಗಿ ನಾಲ್ಕು ಬಿದಿರಿನ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಗುಡ್ಡಗಾಡು, ಅರಣ್ಯಪ್ರದೇಶಗಳಲ್ಲಿ ವಾಸವಾಗಿರುವ ಗಿರಿಜನ ಕಾಲೋನಿಗಳಿಗೆ ಸಂಪರ್ಕರಸ್ತೆ ಕಲ್ಪಿಸುವುದು, ರಸ್ತೆ ಸುಧಾರಣೆ ಮತ್ತು ನೈರ್ಮಲ್ಯ ನಿರ್ವಹಣೆಗೆಂದು ಈ ವರ್ಷ (2002) 198.57 ಲಕ್ಷ ಮಂಜೂರು ಮಾಡಲಾಗಿತ್ತು(2002).

ಪರಿಶಿಷ್ಟ ಪಂಗಡದವರಿಗೆಂದು ಡಾ. ಅಂಬೇಡ್ಕರ್, ಆಶ್ರಯ ಮುಂತಾದ ವಸತಿಯೋಜನೆಗಳಡಿ ಈ ವರ್ಷ (2002) 1960 ಲಕ್ಷ ರೂ ವೆಚ್ಚದಲ್ಲಿ 11,900 ಮನೆಗಳನ್ನು ನಿರ್ಮಿಸಿಕೊಡಲಾಗಿದೆ. 91 ಗುಡ್ಡಗಾಡು ಕಾಲೋನಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆಂದು 74ಲಕ್ಷ ರೂ ವೆಚ್ಚದಲ್ಲಿ 31 ಕಿರು ನೀರು ಸರಬರಾಜು ಯೋಜನೆಗಳು 60 ಕೊಳವೆ ಬಾವಿ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲಾಗಿದೆ. ಈ ಕಾಲೋನಿಗಳಿಗೆ ಆರೋಗ್ಯ ಸೌಲಭ್ಯ ನೀಡಲು 28ಲಕ್ಷ ರೂ. ವೆಚ್ಚದಲ್ಲಿ 7 ಸಂಚಾರಿ ವಾಹನಗಳ ಖರೀದಿಗೆ ಒಪ್ಪಿಗೆ ನೀಡಲಾಗಿದೆ.

ಮೈಸೂರು, ಚಾಮರಾಜನಗರ, ಶಿವಮೊಗ್ಗ, ಹಾವೇರಿ, ರಾಯಚೂರು, ಕೊಪ್ಪಳ, ಚಿಕ್ಕಮಗಳೂರು ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಏತ ನೀರಾವರಿ ಹನಿನೀರಾವರಿ ಮೊದಲಾದ ನೀರಾವರಿ ಯೋಜನೆಗಳಿಗೆ 110 ಲಕ್ಷ ರೂಪಾಯಿ ಒದಗಿಸಲಾಗಿದೆ.

ಆರೋಗ್ಯ ಯೋಜನೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯು 6 ಸಂಚಾರಿ ಆರೋಗ್ಯ ಘಟಕಗಳನ್ನು ಮೈಸೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದೆ.

ಪರಿಶಿಷ್ಟ ವರ್ಗದವರ ಮಕ್ಕಳಿಗೆ ಚಿಕ್ಕ ಮಯಸ್ಸಿನಲ್ಲೇ ಶಾಲೆಗೆ ಹೋಗುವ ಅಭ್ಯಾಸ ರೂಢಿಸಲು ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳ ಯೋಜನೆ ರೂಪಿಸಲಾಗಿದೆ. ರಾಜ್ಯದಲ್ಲಿ ಇಂತಹ 70 ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳಿದ್ದು, 3285 ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಮೂರರಿಂದ ಐದು ವರ್ಷ ವಯಸ್ಸಿನ ಮಕ್ಕಳು ಇಂತಹ ಕೇಂದ್ರದಲ್ಲಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಪ್ರತಿ ಕೇಂದ್ರದಲ್ಲಿ 50 ಮಕ್ಕಳಿಗೆ ಪ್ರವೇಶಾವಕಾಶ ಇರುತ್ತದೆ.

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮಶಾಲೆಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಊಟ, ಸಮವಸ್ತ್ರ, ಪುಸ್ತಕ, ಲೇಖನ ಸಾಮಗ್ರಿ ಇತ್ಯಾದಿ ಸವಲತ್ತುಗಳನ್ನು ಒದಗಿಸಲಾಗುವುದು.

ರಾಜ್ಯದಲ್ಲಿ 120 ಆಶ್ರಮ ಶಾಲೆಗಳಿದ್ದೂ 6900 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

5ರಿಂದ 10ನೆಯ ತರಗತಿಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ಹಾಗೂ ಊಟದ ಸೌಕರ್ಯ ಒದಗಿಸಲು ವಿದ್ಯಾರ್ಥಿನಿಲಯಗಳನ್ನು ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ಸ್ಥಾಪಿಸಲಾಗಿದೆ. ರಾಜ್ಯದ್ಯಾಂತ 72 ಮೆಟ್ರಿಕ್ ಪೂರ್ವ ಬಾಲಕರ ಮತ್ತು 32 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳಿದ್ದು ಇವುಗಳಲ್ಲಿ ಪ್ರತಿ ವರ್ಷ 4950 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು ಕೊಳ್ಳುತ್ತಿದ್ದಾರೆ.

ಮೆಟ್ರಿಕ್ ಅನಂತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕ, ಬಾಲಕಿಯರ 10ಮೆಟ್ರಿಕ್ ಅನಂತರದ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಪ್ರತಿ ವಿದ್ಯಾರ್ಥಿಗೆ ತಿಂಗಳೊಂದಕ್ಕೆ 450 ರೂಪಾಯಿಗಳ ವೆಚ್ಚದಲ್ಲಿ ಊಟ ತಿಂಡಿ ಒದಗಿಸಲಾಗುವುದು.

ಅನುದಾನಿತ ವಿದ್ಯಾರ್ಥಿನಿಲಯಗಳನ್ನು ನಡೆಸುವ ಸ್ವಯಂ ಸಂಸ್ಥೆಗಳಿಗೆ ಉತ್ತೇಜನ ನೀಡಲು ಖಾಸಗಿ ವಿದ್ಯಾರ್ಥಿನಿಲಯಗಳಿಗೂ ಧನ ಸಹಾಯ ನೀಡಲಾಗುತ್ತಿದೆ. ರಾಜ್ಯದಲ್ಲಿ ಇಂತಹ 21 ಅನುದಾನಿತ ವಿದ್ಯಾರ್ಥಿ ನಿಲಯಗಳಿವೆ. ಇವುಗಳಲ್ಲಿ 1091 ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಬಯಸುವ ಪಜಾ/ಪವ.ಗಳ ವಿದ್ಯಾರ್ಥಿಗಳಿಗೆ ಹಣಕಾಸು ನೆರವು ನೀಡಿ ಅವರ ವ್ಯಾಸಂಗ ಸೂತ್ರವಾಗಿ ನಡೆಯುವಂತೆ ಸಹಾಯ ಒದಗಿಸಲಾಗುತ್ತಿದೆ. ತಲಾ ಗರಿಷ್ಟ 10 ಲಕ್ಷ ರೂಗಳ ನೆರವು ನೀಡುವ ಈ ಯೋಜನೆಯಲ್ಲಿ 18 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾದ ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆ ಹಾಗೂ ಮಂಡ್ಯ, ಉತ್ತರಕನ್ನಡ ಜಿಲ್ಲೆಗಳಲ್ಲಿ ಸಹಕಾರಿ ತತ್ತ್ವದ ಆಧಾರದ ಮೇಲೆ 21 ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್) ಕಾರ್ಯನಿರ್ವಹಿಸು ತ್ತಿವೆ. ಈ ಸಂಘಗಳಲ್ಲಿ ಪರಿಶಿಷ್ಟ ಪಂಗಡದ 62,336 ಜನರನ್ನು ಸದಸ್ಯರನ್ನಾಗಿ ನೋಂದಾಯಿಸಿಕೊಂಡು ಅವರಿಗೆ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಿ ಲಾಭಾಂಶವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಅವಶ್ಯವಿರುವ ಅಲ್ಪಾವಧಿ ಸಾಲವನ್ನು ಕೂಡಾ ಈ ಸಂಘಗಳು ನೀಡುವುದರಿಂದ ಸ್ಥಳೀಯ ಲೇವಾದೇವಿಗಾರರಿಂದ ಶೋಷಣೆಗೊಳಗಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತಿದೆ. ಕೆಲವು ಸಂಘಗಳು ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದ್ದು, ಸಂಸ್ಕರಿಸಿ ಮಾರಾಟ ಮಾಡುವುದರಿಂದ ಹೆಚ್ಚಿನ ಲಾಭ ಪಡೆಯಲು ಅವಕಾಶವಿರುತ್ತದೆ. ಈ ಸಂಸ್ಥೆಗಳಿಗೆ ಕೇಂದ್ರಸರ್ಕಾರದ "ಟ್ರೈಫೆಡ್" ಸಂಸ್ಥೆಮೂಲಕ ಹೆಚ್ಚಿನ ಸಹಾಯ ದೊರೆಯುತ್ತದೆ.

ಗಿರಿಜನ ಪ್ರದೇಶಗಳಲ್ಲಿ ಈ ಸಹಕಾರ ಸಂಘಗಳು ಜೀವನಾವಶ್ಯಕ ಪದಾರ್ಥಗಳನ್ನು ನ್ಯಾಯಬೆಲೆಗೆ ವಿತರಿಸುವುದರ ಜೊತೆಗೆ ಸದಸ್ಯರು ಹೆಣೆದ ಬುಟ್ಟಿ ಮತ್ತಿತರ ಬಿದಿರು ಮತ್ತು ಬೆತ್ತದ ಸಾಮಗ್ರಿಗಳನ್ನು ಮಾರಾಟ ಮಾಡುವ ವ್ಯವಸ್ಥೆಯೂ ಇರುತ್ತದೆ.

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯನ್ನು ರೂಪಿಸಲಾಗಿದೆ. ವಿವಿಧ ಅಭಿವೃದ್ಧಿ ಇಲಾಖೆಗಳು /ನಿಗಮಗಳು/ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ಸೇ. 3ರಷ್ಟನ್ನು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮೀಸಲಾಗಿಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಶೈಕ್ಷಣಿಕ ಅಭಿವೃದ್ಧಿಗೆ ಹಲವಾರು ಆರ್ಥಿಕ ಸವಲತ್ತುಗಳ ಜೊತೆಗೆ ವಸತಿ ಕುಡಿಯುವ ನೀರು, ರಸ್ತೆ ಸಂಪರ್ಕ ಆರೋಗ್ಯ, ನೈರ್ಮಲ್ಯೀಕರಣ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಿದೆ. ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಗಿರಿಜನ ಉಪಯೋಜನೆಯಡಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಅರಣ್ಯ, ರೇಷ್ಮೆ ಇಲಾಖೆಗಳಲ್ಲಿ ಸಹಾಯಧನ ನೀಡುವು ದರ ಮೂಲಕ ಇವುಗಳಲ್ಲಿ ತೊಡಗಿಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದವರು ಪರಿಶಿಷ್ಟ ವರ್ಗದ ಕಾಲೋನಿಗಳ ವಿದ್ಯುದ್ದೀಕರಣ, ಕುಟೀರಜ್ಯೋತಿ ಯೋಜನೆಯಡಿ ಮನೆಗಳಿಗೆ ವಿದ್ಯುತ್ ಸೌಲಭ್ಯ ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ.

ಮೂರರಿಂದ ಆರನೆಯ ವಯಸ್ಸಿನ ಮಕ್ಕಳಿಗಾಗಿ 70 ಶಿಶುವಿಹಾರಗ ಳನ್ನು ತೆರೆಯಲಾಗಿದೆ. ಇಲ್ಲಿ ಮಧ್ಯಾಹ್ನದ ಉಪಾಹಾರದ ಸೌಲಭ್ಯವನ್ನು ಕಲ್ಪಿಸಲಾಗಿದೆ. ಆರರಿಂದ ಒಂಬತ್ತು ವಯಸ್ಸಿನ ಮಕ್ಕಳಿಗಾಗಿ ಆಶ್ರಮಶಾಲೆ ಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತೆರೆಯಲಾಗಿದೆ. ನಾಲ್ಕನೆಯ ತರಗತಿಯವರೆಗೆ ಇಲ್ಲಿ ಶಿಕ್ಷಣ ಕೊಡಲಾಗುವುದು. ಆಶ್ರಮಶಾಲೆಗಳಲ್ಲಿ ಅಲ್ಲದೆ ಬೇರೆ ಶಾಲೆಗಳನ್ನು ಸೇರುವಂತೆ ಆದಿವಾಸಿ ಮಕ್ಕಳನ್ನು ಪ್ರೋತ್ಸಾಹಿಸಲಾಗಿದೆ.

ಇದಲ್ಲದೆ ಪದವಿಪೂರ್ವ ವಿದ್ಯಾರ್ಥಿವೇತನಗಳನ್ನು ಕೊಡುವ ಸೌಲಭ್ಯವೂ ಇದೆ. ಈ ಸೌಲಭ್ಯವನ್ನು ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಅನೇಕ ವಿದ್ಯಾರ್ಥಿಗಳಿಗೆ ಕೊಡಲಾಗಿದೆ. ಇದಕ್ಕಾಗಿ ವಿದ್ಯಾರ್ಥಿನಿಲಯಗ ಳನ್ನು ಪರಿಶಿಷ್ಟ ಬುಡಕಟ್ಟುಗಳಿಗಾಗಿ ತೆರೆಯಲಾಗಿದೆ. ಪದವಿ ಅನಂತರ ವಿದ್ಯಾರ್ಥಿವೇತನಗಳನ್ನು ಕೂಡ ಕೊಡಲಾಗಿದೆ.

ಐದನೆಯ ಯೋಜನೆಯಲ್ಲಿ ಸಮಾಜಕಲ್ಯಾಣ ಖಾತೆಯು ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಈ ಸಂಬಂಧದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗಾಗಿ ಹಣ ವಿನಿಯೋಗಿಸುವುದೆಂದು ಅಂದಾಜು. ರಾಜ್ಯ ಸರ್ಕಾರದ ಬುಡಕಟ್ಟುಗಳ ಅಭಿವೃದ್ಧಿ ಯೋಜನೆ ಯನ್ವಯ ಸಮಾಜಕಲ್ಯಾಣ ಖಾತೆ ವಿದ್ಯಾಭ್ಯಾಸ, ಆರೋಗ್ಯ, ಮನೆ ಮತ್ತು ಆರ್ಥಿಕ ಅಭಿವೃದ್ಧಿಗಳಿಗಾಗಿ ಹಣ ಮೀಸಲಿರಿಸಿದೆ. ಈ ಯೋಜನೆ ಯಲ್ಲಿ ಅನೇಕ ಉಪಕಾರ್ಯಕ್ರಮಗಳಿದ್ದು ಮುಖ್ಯವಾಗಿ ಪಶುಪಾಲನೆ, ವ್ಯವಸಾಯ, ನೀರಾವರಿ, ಸಹಕಾರ, ರೇಷ್ಮೆ ಸಾಕಣೆ, ಅರಣ್ಯ, ವಿದ್ಯುದೀ ಕರಣ, ಉದ್ಯೋಗ ಮತ್ತು ತರಬೇತಿ, ವಿದ್ಯಾಭ್ಯಾಸ, ಆರೋಗ್ಯ, ಮನೆಕಟ್ಟು ವುದು, ರಸ್ತೆನಿರ್ಮಾಣ–ಇವು ಮುಖ್ಯ ಅಭಿವೃದ್ಧಿ ಕಾರ್ಯಕ್ರಮಗಳು.

ಇವಲ್ಲದೆ ವಿಶೇಷ ಪ್ರದೇಶ ಅಭಿವೃದ್ಧಿ ಯೋಜನೆಯ ಪ್ರಕಾರ ಕಾರ್ಕಳ, ಉಡುಪಿ, ಬೆಳ್ತಂಗಡಿ, ಸೋಮವಾರಪೇಟೆ, ನಾಗರಹೊಳೆ, ಹೆಗ್ಗಡದೇವನ ಕೋಟೆ–ಈ ತಾತ್ಕಾಲಿಕ ಘಟಕಗಳಲ್ಲಿ ಮತ್ತು ಬೆಳಗಾಂವಿ ಮತ್ತು ಗೋಕಾಕ ತಾಲ್ಲೂಕುಗಳಲ್ಲಿ ಕೆಲ ಯೋಜನೆಗಳಿವೆ. ಈ ಯೋಜನೆ ಯನ್ವಯ ವ್ಯವಸಾಯ, ಪಶುಪಾಲನೆ, ಜೇನುಸಾಕಣೆ ಕಾರ್ಯಕ್ರಮದ ಅಭಿವೃದ್ಧಿಗೆ ಹಣ ಉಪಯೋಗಿಸುವುದು.

ಪರಿಶಿಷ್ಟ ಜಾತಿಗಳಿಗೆ ಸೇರಿದ ಬಹುಜನರು ವ್ಯವಸಾಯವನ್ನವಲಂಬಿ ಸಿದ್ದು, ಇವರಲ್ಲಿ ಭೂಹೀನ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿರುವುದ ರಿಂದ ಅವರ ಕಲ್ಯಾಣ ಕಾರ್ಯಕ್ರಮಗಳಲ್ಲಿ ವ್ಯವಸಾಯಕ್ಕೆ ಪ್ರಾಧಾನ್ಯತೆ

ಕೊಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಇತರೇ ದುರ್ಬಲ ವರ್ಗಗಳಿಗಾಗಿ ಇದುವರೆಗೆ 13 ವಿವಿಧೋದ್ದೇಶ ಸಹಕಾರಿ ಪುನರ್ವಸತಿ ಯೋಜನೆಗಳನ್ನು ಆರಂಭಿಸಲಾಗಿದೆ. ಈ ಯೋಜನೆಗಳಲ್ಲಿ ಬರುವ ಸಹಕಾರ ಸಂಘದ ಸದಸ್ಯರಿಗೆ ಭೂಮಿ ನೀಡಿಕೆ, ವಸತಿ ನಿರ್ಮಾಣ ಮತ್ತು ಕುಡಿಯುವ ನೀರಿನ ಬಾವಿ ಸೌಕರ್ಯಗಳೇ ಅಲ್ಲದೆ, ಭೂಸಾರ ಸಂರಕ್ಷಣೆ, ಭೂಮಿ ಸುಧಾರಣೆ ಮತ್ತು ನೀರಾವರಿ ಸೌಲಭ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

ಈ ಜನರ ಆರ್ಥಿಕ ಚಟುವಟಿಕೆಗಳಲ್ಲಿ ಕೃಷಿಯೇ ಪ್ರಧಾನವಾದ ಕಸಬಾಗಿರುವುದರಿಂದ ಇದುವರೆಗಿನ ಯೋಜನೆಗಳಲ್ಲಿ ಅನೇಕ ಕೃಷಿ ಕಾಲೋನಿಗಳನ್ನು ಆರಂಭಿಸಲಾಗಿದೆ. ಇತ್ತೀಚಿನ ಅಂದಾಜಿನ ಪ್ರಕಾರ ಭೂಹೀನ ಕೃಷಿಕಾರ್ಮಿಕರಿಗೆ ಐದನೆಯ ಯೋಜನೆಯಲ್ಲಿ ಹಂಚಲು ಸಾಗುವಳಿಗೆ ಅರ್ಹವಾದ ಭೂಮಿ ದೊರೆಯುವ ನಿರೀಕ್ಷೆ ಇದೆ. ರಾಜ್ಯದ ನೂತನ ಭೂಸುಧಾರಣಾ ಶಾಸನದ ಪ್ರಕಾರ ಈ ಭೂಮಿ ಹಂಚಿಕೆಯಲ್ಲಿ ಸೇಕಡ 50 ಭಾಗ ಹಿಂದುಳಿದ ವರ್ಗಗಳಿಗೆ ಸಲ್ಲಲಿದೆ.

ಪರಿಶಿಷ್ಟ ಜಾತಿ ಮತ್ತು ಇನ್ನುಳಿದ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಲೂ ಹೊಲಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ತರಬೇತಿಯು ಅವಧಿಯಲ್ಲಿ ಶಿಷ್ಯವೇತನವನ್ನು ಕೊಡುವುದಲ್ಲದೆ, ತರಬೇತಿಯ ಅನಂತರ ಯಶಸ್ವಿ ಅಭ್ಯರ್ಥಿಗಳಿಗೆ ಒಂದೊಂದು ಹೊಲಿಗೆ ಯಂತ್ರವನ್ನು ನೀಡಲಾಗುತ್ತದೆ. ಇದಲ್ಲದೆ ನಾರಿನ ಕೈಗಾರಿಕಾ ತರಬೇತಿ ಕೇಂದ್ರಗಳು, ಬಣ್ಣಹಾಕುವ ಕೆಲಸದ ಎರಡು ತರಬೇತಿ ಕೇಂದ್ರಗಳು ಇವೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಮಕ್ಕಳಿಗೆ ಅನುಕೂಲವಾಗುವಂತೆ 365 ಮಹಿಳೆ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮೂರರಿಂದ ನಾಲ್ಕು ವಯಸ್ಸಿನ ಪರಿಶಿಷ್ಟ ಜಾತಿಯ ಪ್ರಾಥಮಿಕ ಶಾಲಾಪೂರ್ವ ಮಕ್ಕಳಿಗೆ ಶಿಶುವಿಹಾರಗಳಿಗಾಗಿ ಈ ಕೇಂದ್ರಗಳು ಸೇವೆ ಸಲ್ಲಿಸುತ್ತಿವೆ. ಮಕ್ಕಳ ಕ್ಷೇಮಪಾಲನೆಯ ಜೊತೆಗೆ ಈ ಕೇಂದ್ರಗಳಲ್ಲಿ ಮಧ್ಯಾಹ್ನದ ಉಪಾಹಾರವನ್ನು ಕೂಡ ಕೊಡಲಾಗುತ್ತಿದೆ.

ಪರಿಶಿಷ್ಟ ಜಾತಿಗೆ ಸೇರಿದ ವಿಶ್ವವಿದ್ಯಾನಿಲಯಪೂರ್ವ ಶಾಲಾ ವಿದ್ಯಾರ್ಥಿನಿಯರಿಗಾಗಿ ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ವಸತಿ ಕಲ್ಪಿಸಲಾಗಿದೆ. ಈ ಸಮುದಾಯದ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ ವಿದ್ಯಾರ್ಥಿನಿಲಯಗಳನ್ನು ಆರಂಭಿಸುವ ಸ್ವಯಂಸೇವಾ ಸಂಸ್ಥೆಗಳಿಗೂ ಸೂಕ್ತ ಧನಸಹಾಯ ನೀಡಲಾಗುತ್ತದೆ. ಪರಿಶಿಷ್ಟ ಜಾತಿಯ ಮಕ್ಕಳು ಇತರ ಸಮುದಾಯದ ಮಕ್ಕಳೊಂದಿಗೆ ಸಲುಗೆಯಿಂದ ಕಲೆಯುವಂತೆ ಮಾಡಲು 1965-66ರಿಂದಲೇ ಒಂದು ಹೊಸ ವ್ಯವಸ್ಥೆಯನ್ನು ಮಾಡಲಾಗಿದೆ. ಅದರಂತೆ ಪರಿಶಿಷ್ಟ ವಿದ್ಯಾರ್ಥಿನಿಲಯಗಳಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಇರುವ ಸ್ಥಾನಗಳಲ್ಲಿ ಸೇ. 25 ಸ್ಥಾನಗಳನ್ನು ಇತರ ಸಮುದಾಯದ ಮಕ್ಕಳಿಗಾಗಿ ತೆರವು ಮಾಡಿದೆ. ಅದೇ ರೀತಿ ಇತರ ಮತೀಯ ವಿದ್ಯಾರ್ಥಿನಿಲಯಗಳಲ್ಲೂ ಸೇ. 25 ಸ್ಥಾನಗಳನ್ನು ಪರಿಶಿಷ್ಟ ಜಾತಿ ಹಾಗೂ ಇತರ ಪಂಗಡದ ಮಕ್ಕಳಿಗೆ ಮೀಸಲಿಡಲಾಗುತ್ತದೆ. ಪರಸ್ಪರ ಜಾತಿ ಕಟ್ಟುಕಟ್ಟಲೆಗಳನ್ನು ನಿವಾರಿಸಿ ಸಾಮಾಜಿಕ ಐಕ್ಯತೆಯನ್ನು ಉತ್ತೇಜಿಸುವುದು ಈ ವ್ಯವಸ್ಥೆಯ ಉದ್ದೇಶವಾಗಿದೆ.

ಪ.ಜಾ/ಪ.ವ, ಹಿಂದುಳಿದವರು, ಅಲ್ಪಸಂಖ್ಯಾತರಿಗೆಂದು ವಸತಿಶಾಲೆ ನಡೆಸುತ್ತಿದ್ದು ಈ ಶಾಲೆಗಳಲ್ಲಿ ವಸತಿಯೊಂದಿಗೆ ವ್ಯಾಸಂಗ ಪಡೆದ ವಿದ್ಯಾರ್ಥಿಗಳ ಸಂಖ್ಯೆ 15,370. ಹುಡ್ಕೊ ಸಂಸ್ಥೆಯ ನೆರವಿನೊಂದಿಗೆ 110.90 ಕೋಟಿ ರೂ. ಗಳ ವೆಚ್ಚದಲ್ಲಿ 62 ವಸತಿ ಶಾಲಾ ಕಟ್ಟಡಗಳು ನಿರ್ಮಾಣ ಕೈಗೊಂಡಿದ್ದು 2002ರ ಡಿಸೆಂಬರದ ವೇಳೆಗೆ 20 ಕಟ್ಟಡಗಳು ಪೂರ್ಣವಾಗಲಿವೆ. 5000 ವಿದ್ಯಾರ್ಥಿಗಳಿಗೆ ವಸತಿ, ಊಟ, ಒದಗಿಸುವ ಸಾಮರ್ಥ್ಯವಿರುವ 100 ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ.

"ಪ.ಜಾ/ಪ.ವ ಇತರ ಹಿಂದುಳಿದ ವರ್ಗಗಳ ನೇಮಕಾತಿ ಮೀಸಲಾತಿ ಕಾಯ್ದೆ 1990ಕ್ಕೆ ತಿದ್ದುಪಡಿ ತಂದು ಶೈಕ್ಷಣಿಕ ಉದ್ದೇಶಕ್ಕೆ ಸಿಂಧುತ್ವ ಪ್ರಮಾಣ ಪತ್ರ ಕಡ್ಡಾಯವಲ್ಲ" ಎಂದು ಘೋಷಿಸಲಾಗಿದೆ.

ಪ.ಜಾ/ಪ.ವ ದ ಹೆಣ್ಣು ಮಕ್ಕಳು ನಿಯಮಿತವಾಗಿ ಶಾಲೆಗೆ ಬಂದು ವಿದ್ಯಾಭ್ಯಾಸ ಕೈಗೊಳ್ಳಬೇಕು ಎನ್ನುವುದು ಸರ್ಕಾರದ ಉದ್ದೇಶ. ಇದಕ್ಕೆಂದು ಅವರಿಗೆ ಈವರೆಗೆ ನೀಡಲಾಗುತ್ತಿದ್ದ ವಾರ್ಷಿಕ 100ರೂಗಳ ಪ್ರೋತ್ಸಾಹ ಧನದ ಜೊತೆಗೆ 500ರೂಗಳ ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಇದುವರೆಗೂ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಮಾತ್ರ ಇದ್ದ ಈ ಯೋಜನೆಯನ್ನು ವಿಸ್ತರಿಸಿ 6 ಮತ್ತು 7ನೆಯ ತರಗತಿಗಳ ವಿದ್ಯಾರ್ಥಿನಿಯರನ್ನು ಈ ವ್ಯಾಪ್ತಿಗೆ ತರಲಾಗಿದೆ. ಇವರಿಗೆ ನೀಡುವ ವಾರ್ಷಿಕ ಪ್ರೋತ್ಸಾಹಧನದ ಮೊತ್ತ 250 ರೂ ಗಳು.

ಪರಿಶಿಷ್ಟ ಜಾತಿಯ ಮಕ್ಕಳು ಉದ್ಯೋಗ ಪಡೆಯಲು ಸಮರ್ಥರಾಗುವಂತೆ ಉದ್ಯೋಗ ಹಾಗೂ ತರಬೇತಿ ಇಲಾಖೆಯವರು ಶಿಷ್ಯವೇತನಗಳನ್ನು ನೀಡಿ ಕೈಗಾರಿಕಾ ತರಬೇತಿ ಅಥವಾ ಕೇಂದ್ರಗಳನ್ನು ಸೇರಿಕೊಳ್ಳುವಂತೆ ಸರ್ಕಾರ ಪ್ರೋತ್ಸಾಹ ಕೊಡುತ್ತದೆ. ಇದುವರೆಗೆ ರಾಜ್ಯದ ನಾನಾ ತರಬೇತಿ ಕೇಂದ್ರಗಳಲ್ಲಿ ವಸತಿಗಾಗಿ ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗಿದೆ. ಅದಕ್ಕೆಂದೇ 'ನವಚೇತನ' ಕಾರ್ಯಕ್ರಮ. ವಿವಿಧ ವೃತ್ತಿ ಕೌಶಲಗಳಲ್ಲಿ ಪ.ಜಾ/ಪ.ವ ದವರಿಗೆ ತರಬೇತಿ ನೀಡುವ ಈ ಕಾರ್ಯಕ್ರಮದಲ್ಲಿ 3 ವರ್ಷಗಳಲ್ಲಿ 3430 ವಿದ್ಯಾರ್ಥಿಗಳು ವೃತ್ತಿಪರ ತರಬೇತಿ ಪಡೆದಿದ್ದಾರೆ. ಇಂಥ ಸೌಲಭ್ಯವನ್ನು ಸು. 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ.

ಸ್ಪರ್ಧಾಯುಗವಾದ ಇಂದಿನ ದಿನಗಳಲ್ಲಿ ಅಗತ್ಯವಾದ ಅರ್ಹತೆಗಳಿಸಿಕೊಳ್ಳಲು ಕಂಪ್ಯೂಟರ್ ಜ್ಞಾನ ಅತ್ಯವಶ್ಯ. ಪ.ಜಾ/ಪ.ವ ವಿದ್ಯಾರ್ಥಿಗಳು ಕಂಪ್ಯೂಟರ್ ಜ್ಞಾನ ಪಡೆಯಲೆಂದು ಅವರಿಗೆಂದೇ ವಿಶೇಷ ಒಂದು ವರ್ಷದ ತರಬೇತಿ ತರಗತಿಗಳನ್ನು ನಡೆಸಲಾಗುತ್ತಿದೆ.

ಪಾಲಿಟೆಕ್ನಿಕ್ ಮತ್ತು ಐಟಿಐಗಳಲ್ಲಿ ಪ.ಜಾ/ಪ.ವ ವಿದ್ಯಾವಂತ ಯುವಕರಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. ಈ ಯೋಜನೆಯನ್ನು ಕೇಂದ್ರಸರ್ಕಾರದ ನೆರವಿನ ವಿಶೇಷ ನೆರವಿನ ವಿಶೇಷ ಘಟಕಯೋಜನೆಯಡಿ ಜಾರಿ ಮಾಡಲಾಗುತ್ತಿದೆ. 20,000 ಪ.ಜಾ/ಪ.ವರ್ಗದ ವಿದ್ಯಾವಂತರಿಗೆ ತರಬೇತಿ ನೀಡಲಾಗುತ್ತಿದೆ. ಈ ಕಾರ್ಯಕ್ರಮಕ್ಕೆಂದು ಕೋಟ್ಯಂತರ ರೂಪಾಯಿಗಳನ್ನು ಅನುದಾನವಾಗಿ ನಿಗದಿಪಡಿಸಲಾಗಿದೆ.

ವಿಶ್ವವಿದ್ಯಾನಿಲಯುದ ಶಿಕ್ಷಣ ಪಡೆಯುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನ ದೊರೆಯುತ್ತದೆ. ಕಾಲೇಜು ವಿದ್ಯಾರ್ಥಿನಿಲಯುಗಳಿಗೆ ಸೇರಿದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ, ತಾವು ಪಡೆಯುವ ಕೇಂದ್ರ ವಿದ್ಯಾರ್ಥಿವೇತನಕ್ಕಿಂತ ಊಟದ ವೆಚ್ಚ ಹೆಚ್ಚಾಗುವ ಸಂದರ್ಭಗಳಿದ್ದಲ್ಲಿ ಅಂಥ ವಿದ್ಯಾರ್ಥಿಗಳಿಗೆ ಕೇಂದ್ರ ವಿದ್ಯಾರ್ಥಿವೇತನದ ಜೊತೆಗೆ ರಾಜ್ಯ ಸರ್ಕಾರ ತಿಂಗಳಿಗೆ 100 ರೂ. ಗಳಿಗಿಂತ ಹೆಚ್ಚಿನ ವೇತನವನ್ನು ಕೊಡುತ್ತದೆ. ಇಂಥ ಯೋಜನೆಯನ್ನು ಆರಂಭಿಸಿದುದರಲ್ಲಿ ಇಡೀ ರಾಷ್ಟ್ರದಲ್ಲಿ ಕರ್ನಾಟಕವೇ ಮೊಟ್ಟಮೊದಲನೆಯದಾಗಿದೆ.

ಅಗತ್ಯ ಪಠ್ಯಪುಸ್ತಕಗಳು ಮತ್ತಿತರ ಸಲಕರಣೆಗಳನ್ನು ಕೊಳ್ಳಲು ಅಸಮರ್ಥರಾಗಿರುವ ವಿದ್ಯಾರ್ಥಿಗಳು ತಾವು ಓದುವ ಸಂಸ್ಥೆಯಿಂದ

ತಮಗೆ ಬೇಕಾದ ಪಠ್ಯಪುಸ್ತಕಗಳನ್ನು ಪಡೆದುಕೊಂಡು ತಮ್ಮ ಅಭ್ಯಾಸವು ಮುಗಿದ ಮೇಲೆ ಹಿಂತಿರುಗಿಸಲು ಅವಕಾಶವಿದೆ.

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ತೋಟಗಾರಿಕೆ ತರಬೇತಿ ನೀಡುವ ಒಂದು ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಇಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ಶಿಷ್ಯವೇತನ ನೀಡಲಾಗುತ್ತಿದೆ.

ಸಮಾಜಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಶಿಕ್ಷಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ವಿಶೇಷ ಬೋಧನೆಗೆ ಅವಕಾಶ ಕಲ್ಪಿಸಲು ಕ್ರಮಕೈಗೊಳ್ಳಲಾಗಿದೆ. ಶಾಲಾ ವೇಳೆಯ ಹೊರತಾಗಿ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ತರಬೇತಿ ಪಡೆದ ಒಪ್ಪೊತ್ತಿನ ಅವಧಿಯ ಉಪಾಧ್ಯಾಯರನ್ನು ನೇಮಿಸಲಾಗಿದೆ.

ಬೆಳ್ಳಿಬೆಳಕು ಯೋಜನೆಯಡಿ ಅತಿ ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ 890 ಮನೆಗಳನ್ನು ನಿರ್ಮಿಸಲು 231 ಲಕ್ಷ ರೂ. ವೆಚ್ಚಮಾಡಲಾಗಿದೆ. ಅಂಬೇಡ್ಕರ್, ಆಶ್ರಯ ಮುಂತಾದ ವಸತಿಯೋಜನೆಗಳಡಿ ಈ ವರ್ಷ (2001) 1960 ಲಕ್ಷರೂ. ವೆಚ್ಚದಲ್ಲಿ 11,900 ಮನೆಗಳನ್ನು ನಿರ್ಮಿಸಿಕೊಡಲಾಗಿದೆ.

ಸಾಮಾಜಿಕ ನ್ಯಾಯದ ಹೆಜ್ಜೆಯಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಮತ್ತೊಂದು ಮಹತ್ತ್ವದ ಕಾರ್ಯಕ್ರಮವೆಂದರೆ ಪರಿಶಿಷ್ಟ ಜಾತಿಯವರಿಗೆ ವಕೀಲಿ ನೆರವನ್ನು ಒದಗಿಸುವುದು. ಭೂಮಾಲೀಕರ ಜಮೀನು ಹಾಗೂ ನಿವೇಶನಗಳಿಂದ ಉಚ್ಚಾಟಿಸಲ್ಪಟ್ಟು ಕೋರ್ಟು ವಿವಾದಕ್ಕೆ ಒಳಗಾಗಿರುವಂಥ ಈ ವರ್ಗದ ಜನರು ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಂಡು, ನ್ಯಾಯ ದೊರಕಿಸಿಕೊಳ್ಳಲು, ನ್ಯಾಯಾಲಯಕ್ಕೆ ಹೋಗಲು ಅಗತ್ಯವಾದ ಕಾನೂನು ನೆರವು ಪಡೆಯುತ್ತಾರೆ.

ರಾಜ್ಯ ಯೋಜನೆಗಳಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳ ಜೊತೆಗೆ ಪರಿಶಿಷ್ಟ ಜಾತಿಯವರ ಸಲುವಾಗಿ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಈ ಕೇಂದ್ರ ಕಾರ್ಯಕ್ರಮಗಳ ಪ್ರಕಾರ ಎರಡನೆಯ ಯೋಜನೆಯ ಅವಧಿಯಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಕೃಷಿ ಕಾಲೋನಿಗಳನ್ನು ಆರಂಭಿಸಲಾಗಿದೆ. ಈ ಕಾಲೋನಿಗಳಲ್ಲಿ ವಾಸಮಾಡುವ ಪರಿಶಿಷ್ಟ ಜಾತಿಯವರಿಗೆ ವಸತಿ, ಕುಡಿಯುವ ನೀರಿನ ಬಾವಿ, ಸಮುದಾಯ ಕೇಂದ್ರ ಕಟ್ಟಡ, ಉಳುಮೆಯ ಎತ್ತುಗಳು, ಉಪಕರಣಗಳು, ಬೀಜ ಮತ್ತು ಗೊಬ್ಬರ, ಕೂಡುರಸ್ತೆಗಳು ಮೊದಲಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಇದಲ್ಲದೆ ಈ ಜಾತಿಗಳಿಗೆ ಸೇರಿದ 6 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಪೌಷ್ಟಿಕ ಆಹಾರ ಒದಗಿಸುವ ಒಂದು ಯೋಜನೆ ಕೂಡ ಜಾರಿಯಲ್ಲಿದೆ.

ಪರಿಶಿಷ್ಟ ಜಾತಿಯವರಿಗೆ ಉದ್ಯೋಗಗಳನ್ನು ಮೀಸಲಾಗಿಡುವ ಬಗ್ಗೆ ಸಮಾಜಕಲ್ಯಾಣ ಇಲಾಖೆಯ ನಿರ್ದೇಶನಾಲಯದಲ್ಲಿ ರಚಿಸಲಾಗಿರುವ ಉದ್ಯೋಗ ವಿಭಾಗದಿಂದ ಆಗಿಂದಾಗ್ಗೆ ಪರಿಶೀಲನೆ ನಡೆಯುತ್ತದೆ. ಅಗತ್ಯ ಮೀಸಲು ಹುದ್ದೆಗಳಿಗೆ ಈ ಪಂಗಡದ ಅಭ್ಯರ್ಥಿಗಳನ್ನು ನೇಮಿಸದಿರುವ ಸಂದರ್ಭಗಳನ್ನು ಸರ್ಕಾರದ ಗಮನಕ್ಕೆ ತರುವುದು ಈ ವಿಭಾಗದ ಕಾರ್ಯ.

ವಿವಿಧ ಸರ್ಕಾರಿ ಇಲಾಖೆಗಳಲ್ಲಿ 8700 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದ್ದು ಈ ಹುದ್ದೆಗಳನ್ನು ಶೀಘ್ರ ತುಂಬುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಇದರಲ್ಲಿ 3351 ಹುದ್ದೆಗಳನ್ನು ತುಂಬಲು 58 ಇಲಾಖೆಗಳು ಹಾಗೂ 1719 ಹುದ್ದೆಗಳ ನೇಮಕಾತಿಗೆ 34 ಸಂಸ್ಥೆಗಳು ಪ್ರಕಟಣೆ ಹೊರಡಿಸಿವೆ. ವಿಶ್ವವಿದ್ಯಾನಿಲಯ/ಮಂಡಳಿಗಳಲ್ಲಿ 2637 ಬ್ಯಾಕ್‌ಲಾಗ್ ಹುದ್ದೆ ಗುರುತಿಸಲಾಗಿದೆ. ಬ್ಯಾಕ್‌ಲಾಗ್ ಹುದ್ದೆಗಳನ್ನು ಅತ್ಯಂತ ಶೀಘ್ರ ತುಂಬುವ ಕಾರ್ಯಕ್ಕೆ ಚಾಲನೆ ದೊರೆತಿದೆ.

ಸಂವಿಧಾನವು ಅಸ್ಪೃಶ್ಯತಾ ಪದ್ಧತಿಯನ್ನು ನಿಷೇಧಿಸುವುದನ್ನು ಗಮನದಲ್ಲಿಟ್ಟುಕೊಂಡು ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕ ಬಾವಿಗಳಲ್ಲಿ ಎಲ್ಲರಿಗೂ ಅವಕಾಶ ಕೊಡುವುದು, ಗೃಹನಿರ್ಮಾಣ ಮಂಡಳಿಯ ಮನೆಗಳನ್ನು ಮೀಸಲಿಡುವುದು, ಬೇರೆ ಮತೀಯ ವಿದ್ಯಾರ್ಥಿ ನಿಲಯಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಪ್ರವೇಶ, ದೇವಸ್ಥಾನಗಳ ಆಡಳಿತ ಮಂಡಲಿಗಳಲ್ಲಿ ಪರಿಶಿಷ್ಟ ಜಾತಿಯವರ ನೇಮಕ, ಸಾರ್ವಜನಿಕ ಪ್ರದೇಶಗಳಲ್ಲಿ ಅಸ್ಪೃಶ್ಯತಾ ನಿವಾರಣೆ ಮುಂತಾದ ಅನೇಕ ಕಾರ್ಯಕ್ರಮಗಳಿವೆ. ಈ ಕಾರ್ಯಕ್ರಮಗಳಲ್ಲಿ ಪಟ್ಟಣ ಪ್ರದೇಶದಲ್ಲಿ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದ್ದು ಪ್ರಮುಖವಾದದ್ದು.

ಹಿಂದುಳಿದವರ ಹೆಸರಿನಲ್ಲಿ ಸಂವಿಧಾನದತ್ತ ಸೌಲಭ್ಯಗಳನ್ನು ದುರುಪಯೋಗ ಪಡಿಸಿಕೊಳ್ಳದಿರಲು ಕರ್ನಾಟಕ ಸರ್ಕಾರ ಒಂದು ಹಿಂದುಳಿದ ವರ್ಗಗಳ ಆಯೋಗ ನಿಯಮಿಸಿತ್ತು. ಈಗ ಆ ಆಯೋಗದ ಬಹುಪಾಲು ಶಿಫಾರಸುಗಳನ್ನು ಜಾರಿಗೆ ತರಲಾಗಿದೆ.

ಹರಿಜನ ಗಿರಿಜನರ ಕಲ್ಯಾಣಕ್ಕಾಗಿ ಸಾರ್ಥಕ ಬುನಾದಿ ನಿರ್ಮಿಸಿರುವ ಕಾರ್ಯಕ್ರಮಗಳಲ್ಲಿ ಮುಖ್ಯವಾದುದೆಂದರೆ ಅಭಿವೃದ್ಧಿ ಕಾರ್ಪೊರೇಷನ್ ಸ್ಥಾಪನೆ. ಸುಮಾರು ಒಂದು ಕೋಟಿ ರೂಪಾಯಿಗಳ ಮೂಲಧನದೊಂದಿಗೆ ಅಸ್ತಿತ್ವಕ್ಕೆ ಬಂದಿರುವ ಈ ಸಂಸ್ಥೆ, ಹರಿಜನ ಗಿರಿಜನರು ತಮ್ಮ ಪರಂಪರಾಗತ ಲಾಭದಾಯಕ ವೃತ್ತಿಗಳನ್ನು ಅವಲಂಬಿಸಿ ಅವುಗಳನ್ನು ಅಭಿವೃದ್ಧಿಪಡಿಸಲು ಅಗತ್ಯವಾದ ನೆರವು ನೀಡುವ ಹೊಣೆ ಹೊತ್ತಿದೆ. ಈ ದೃಷ್ಟಿಯಿಂದ ಸಣ್ಣ ಪ್ರಮಾಣದ ಗೃಹಕೈಗಾರಿಕೆಗಳ ಸ್ಥಾಪನೆಗೂ ಈ ಸಂಸ್ಥೆ ಪ್ರಾಮುಖ್ಯವಿತ್ತಿದೆ. ವೈದ್ಯ, ಯಂತ್ರಶಿಲ್ಪ, ವಾಸ್ತುಶಿಲ್ಪ ಇವೇ ಮೊದಲಾದ ವೃತ್ತಿಗಳನ್ನು ಅವಲಂಬಿಸುವ ಹರಿಜನರಿಗೆ ಸಹಾಯ ನೀಡುವುದು ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆ. ಲಾರಿ, ಮುದ್ರಣಯಂತ್ರ, ಆಟೋರಿಕ್ಷಾ ಇವೇ ಮೊದಲಾದ ಜೀವನೋಪಾಯ ಸಾಧನಸೌಕರ್ಯಗಳನ್ನು ಕಂತಿನ ರೂಪಿನಲ್ಲಿ ಒದಗಿಸುವುದೂ ಕಾರ್ಪೊರೇಷನ್ನಿನ ಕಾರ್ಯಕ್ರಮಗಳಲ್ಲಿ ಸೇರಿವೆ. ಕೋಳಿ ಸಾಕಣೆ, ಹೈನುಗಾರಿಕೆ, ಕೃಷಿಸುಧಾರಣೆಗೂ ಕಾರ್ಪೊರೇಷನ್ ನೆರವು ನೀಡುತ್ತದೆ. ಹರಿಜನ ಗಿರಿಜನರ ಆರ್ಥಿಕ ಜೀವನ ಸಾಧನೆಗಾಗಿ ಈ ಸಂಸ್ಥೆ ನೀಡಬಹುದಾದ ವಿವಿಧೋದ್ದೇಶ ನೆರವುಗಳಲ್ಲಿ ಇವು ಕೆಲವು ಮಾತ್ರ. ಇದಲ್ಲದೆ ಪರಿಶಿಷ್ಟವರ್ಗಕ್ಕೆ ಸೇರಿದ ಜೀತದಾಳುಗಳನ್ನು ಮುಕ್ತಗೊಳಿಸಲಾಗಿದೆ. ಸರ್ಕಾರಿ ಸೇವೆ ಹಾಗೂ ತರಬೇತಿ ಯೋಜನೆಗಳಲ್ಲಿ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಸಂಬಂಧಿಸಿದ ಪ್ರವೇಶಗಳಲ್ಲಿ ಈ ವರ್ಗದ ಅಭ್ಯರ್ಥಿಗಳಿಗೆ ಆದ್ಯಗಮನ ಕೊಡಲಾಗಿದೆ. (ಬಿ.ಇ.ಯು.)

**ಪರಿಸರ ಚಳವಳಿ**: ಕರ್ನಾಟಕದಲ್ಲಿ, ವಿಶೇಷವಾಗಿ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕದಲ್ಲಿಯೇ ಅರಣ್ಯನಾಶದ ವಿರುದ್ಧ ಹಾಗೂ ಅಣೆಕಟ್ಟುಗಳ ವಿರುದ್ಧ ಅಸಮಾಧಾನದ ಹೊಗೆ ಏಳತೊಡಗಿತ್ತು. 1979ರಲ್ಲಿ ಕೇರಳದ 'ಮೌನಕಣಿವೆ'ಯಲ್ಲಿ ಅಣೆಕಟ್ಟು ನಿರ್ಮಿಸಬಾರದೆಂದು ಸಸ್ಯವಿಜ್ಞಾನಿಗಳು ಒತ್ತಾಯ ತಂದಿದ್ದರು. ಅದೇ ವರ್ಷ ಭಾರತದಲ್ಲಿ ಮೊದಲ ಪರಿಸರ ಆಂದೋಲನವಾಗಿ ಹಿಮಾಲಯದ ತಪ್ಪಲಿನಲ್ಲಿ ಆರಂಭವಾದ ಚಿಪ್ಕೊ ಚಳವಳಿ ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯದ ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬೇಡ್ತಿ ಕಣಿವೆಯಲ್ಲಿ ಎಂಬತ್ತರ ದಶಕದಲ್ಲಿ ಅಪ್ಪಿಕೋ ಚಳವಳಿ ಎಂಬ ಹೆಸರಿನಿಂದ ಪ್ರಾರಂಭಗೊಂಡಿತು.

ಶಿರಸಿ ತಾಲ್ಲೂಕಿನ ಹುಲೀಕಲ್ಲು ಅರಣ್ಯವಿಭಾಗಕ್ಕೆ ಸೇರಿದ ಸಾಲ್ಕಣಿ ಹಾಗೂ ಸುತ್ತಮುತ್ತಲಿನ ಊರುಗಳ ಜನ ಏಪ್ರಿಲ್-ಮೇ ತಿಂಗಳಲ್ಲಿ ಹತ್ತಿರದ ಅಮ್ಮನ ಕಾಡಿಗೆ ಹೋಗಿ ಅಲ್ಲಿಯ ವನದೇವಿಗೆ ಪೂಜೆಸಲ್ಲಿಸಿ, ವನಭೋಜನ ಮಾಡಿ ಬರುವ ಪದ್ಧತಿಯನ್ನು ಹಿಂದಿನ ಕಾಲದಿಂದಲೂ ಅನೂಚಾನವಾಗಿ ನಡೆಸಿಕೊಂಡು ಬರುತ್ತಿದ್ದರು. ಆ ಕಾಡಿನಿಂದ ಜನರಿಗೆ ಉರುವಲು ಸಿಗುತ್ತಿತ್ತು. ಅಲ್ಲಿರುವ ಹರಿಯುವ ಕಣಿಗಾರ ಹಾಗೂ ಬಸವನ ಹಳ್ಳಗಳು ವರ್ಷವಿಡೀ ಹೊಲಗಳಿಗೆ ನೀರನ್ನು ಒದಗಿಸುತ್ತಿತ್ತು. ದೊಡ್ಡ ಅಣೆಕಟ್ಟುಗಳ ಲಾಭ-ನಷ್ಟಗಳ ಚರ್ಚೆಗೆಂದು ಶಿರಸಿಯಲ್ಲಿ ಎಂಬತ್ತರ ದಶಕದಲ್ಲಿ ಒಂದು ರಾಷ್ಟ್ರೀಯ ವಿಚಾರಗೋಷ್ಠಿ ನಡೆದಾಗ ವಿಜ್ಞಾನಿಗಳು, ಅರ್ಥತಜ್ಞರು ಹಾಗೂ ಶಿವರಾಮಕಾರಂತರಂತಹ ಹಿರಿಯರು ಪರಿಸರ ನಾಶದ ವಿವಿಧ ಅಪಾಯಕಾರಿ ಆಯಾಮಗಳ ಬಗೆಗೆ ಚಿಂತನೆ ನಡೆಸಿದರು. ಪಶ್ಚಿಮಘಟ್ಟ ಪ್ರದೇಶದಂಥ ಸೂಕ್ಷ್ಮಜೀವ ಪರಿಸರದಲ್ಲಿ ಗಣಿಗಾರಿಕೆ, ಅಣೆಕಟ್ಟು, ನೆಡುತೋಪು, ಹೆದ್ದಾರಿ ನಿರ್ಮಾಣ, ನಗರ ನಿರ್ಮಾಣಗಳಂಥ ಚಟುವಟಿಕೆಗಳು ಚುರುಕಾಗಿ ನಡೆದಿದ್ದ ಕಾಲ ಅದಾಗಿತ್ತು. ಶಿರಸಿಯ ಬಳಿಯೇ ನೀಲಗಿರಿ ನೆಡುತೋಪು ನಿರ್ಮಿಸಲೆಂದು ಗುತ್ತಿಗೆದಾರರು ಕಳಾಸೆ ಎಂಬ ನೈಸರ್ಗಿಕ ಅರಣ್ಯವನ್ನು 1983 ಸೆಪ್ಟೆಂಬರ್ 8ರಂದು ಕಡಿಯಲಾರಂಭಿಸಿದಾಗ ಆ ಭಾಗಗಳ ಎಲ್ಲ ಗ್ರಾಮಸ್ಥರೂ ಮೊದಲ ಬಾರಿಗೆ ಹಸುರುಮರಗಳನ್ನು ತಬ್ಬಿಕೊಂಡು ಅಹಿಂಸಾತ್ಮಕವಾಗಿ ಪ್ರತಿಭಟನೆ ವ್ಯಕ್ತಪಡಿಸಿದರು. ತಾಲ್ಲೂಕಿನ ಗುಬ್ಬಿಗದ್ದೆ, ಬಾಳೆಗದ್ದೆ ಹಾಗೂ ಮಂಡೆಮನೆ ಗ್ರಾಮಗಳ ಯುವಕರು ಹಸುರುಮರಗಳ ಕಡಿತವನ್ನು ವಿರೋಧಿಸಿ ಬಿಳಿಗಲ್ ಅಡವಿಯಲ್ಲಿ ಅಪ್ಪಿಕೋ ಚಳವಳಿ ನಡೆಸಿದರು. ಮೂರು ತಿಂಗಳ ಕಾಲ ಸತತವಾಗಿ ಹಗಲು ರಾತ್ರಿ ಆ ಅರಣ್ಯ ಪ್ರದೇಶದಲ್ಲಿ ಕಾವಲಿದ್ದರು. ಜನರೆಲ್ಲ ಜಾತಿಮತ ಭೇದಗಳನ್ನು ಬದಿಗಿರಿಸಿ ಈ ಚಳವಳಿಯಲ್ಲಿ ಪಾಲ್ಗೊಂಡರು. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ವಿಭಾಗದ ಗೇರುಸೊಪ್ಪೆವಲಯದ ರೇಂಜ್, ವಾಟೇಹಳ್ಳ ಅರಣ್ಯಪ್ರದೇಶದಲ್ಲಿ ವಾಜಗೋಡ, ಗೊದ್ದಲಮನೆ, ದಾನಮೊಂವ್, ತಲೀಕೇರಿ, ಕೆಳಗಿನಮನೆ ಮೊದಲಾದ ಊರುಗಳ ಗ್ರಾಮಸ್ಥರು ಮತ್ತು ಸಿದ್ದಾಪುರ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು 1984 ಡಿಸೆಂಬರ್ 13ರಂದು ಇದೇ ಚಳವಳಿಯನ್ನು ನಡೆಸಿದರು. ಇದರಲ್ಲಿ ಚಿಪ್ಕೊ ಚಳವಳಿಯ ನೇತಾರ ಸುಂದರಲಾಲ್ ಬಹುಗುಣ ಅವರು ಭಾಗವಹಿಸಿದ್ದರು. ಸಿದ್ದಾಪುರ ತಾಲ್ಲೂಕಿನ ಸುಗಾವಿಗ್ರಾಮದ ನೀಲಗಿರಿತೋಪಿನ ನೈಸರ್ಗಿಕ ಪರಿಸರ ನಾಶದ ವಿರುದ್ಧ ಹೊನ್ನಾವರ ತಾಲ್ಲೂಕಿನ ಮಹಿಮೆ ಗ್ರಾಮದ ಬೈಲಗದ್ದೆ, ಹುಕ್ಕೊಳ್ಳಿ, ಕೆಂಜಾಲದ ಹಳ್ಳಿಗರು 1985 ಫೆಬ್ರವರಿ 19ರಂದು ಚಳವಳಿ ನಡೆಸಿದರು. ಸಾಗರ ಅರಣ್ಯವಲಯದ ಹೊಸನಗರ ಕ್ಷೇತ್ರದ ಮೂಕಾಂಬಿಕಾ ಅಭಯಾರಣ್ಯದ ಬಳಿ ಪ್ಲೆಯ್‌ವುಡ್‌ಗಾಗಿ ಹಸಿಮರಗಳನ್ನು ಕಡಿಯುವುದನ್ನು ವಿರೋಧಿಸಿ ಜನರು 1986ರಲ್ಲಿ ತೀವ್ರವಾಗಿ ಚಳವಳಿ ಹೂಡಿದರು. ಮುಂದೆ ಇದೇ ಚಳವಳಿ ಕಾಳ್ಗಿಚ್ಚಿನಂತೆ ಪಶ್ಚಿಮಘಟ್ಟಗಳ ವಿರುದ್ಧ ರಾಜ್ಯದ ಕೆಲವು ಬಯಲು ಜಿಲ್ಲೆಗಳಲ್ಲೂ ರೈತಸಂಘಗಳು ಚಳವಳಿ ನಡೆಸಿದವು. 80ರ ದಶಕವನ್ನು 'ಪರಿಸರ ಚಳವಳಿಗಳ ದಶಕ' ಎಂದೇ ಹೇಳಬಹುದಾದ ಮಟ್ಟಿಗೆ ರಾಣೆಬೆನ್ನೂರಿನಲ್ಲಿ 'ಕಿತ್ತುಕೊ-ಹಚ್ಚಿಕೊ' ಚಳವಳಿ, ಹರಿಹರದಲ್ಲಿ ತುಂಗಭದ್ರೆಯ ಜಲಮಾಲಿನ್ಯದ ವಿರುದ್ಧ ಆಂದೋಲನ, ಕೈಗಾದಲ್ಲಿ ಪರಮಾಣು ಸ್ಥಾವರದ ವಿರುದ್ಧ ಹೋರಾಟ, ಶರಾವತಿ ಟೇಲ್‌ರೇಸ್ ಅಣೆಕಟ್ಟಿನ ವಿರುದ್ಧ ಚಳವಳಿ, ಕುದುರೆ ಮುಖದಲ್ಲಿ ಗಣಿಗಾರಿಕೆ ವಿರೋಧಿಸಿ ಪ್ರತಿಭಟನೆ ನಡೆದವು. 1986ರಲ್ಲಿ 'ಪಶ್ಚಿಮಘಟ್ಟ ಉಳಿಸಿ' ಎಂಬ ಸುದೀರ್ಘವಾದ ಐದು ರಾಜ್ಯಗಳ 800ಕಿಮೀ ಉದ್ದದ ಪಾದಯಾತ್ರೆಯಲ್ಲಿ ಕರ್ನಾಟಕದ ಎಲ್ಲ ಪರಿಸರ ಸಂಘಟನೆಗಳೂ ಪಾಲ್ಗೊಂಡವು.

ಹಸುರು ಮರಗಳಿಂದ ಆರ್ಥಿಕ ಲಾಭವಾಗುವುದೆಂದು ತಿಳಿದ ಅರಣ್ಯ ಇಲಾಖೆಯ ಆಗಿನ ನೀತಿಯನ್ನು ಬದಲಿಸಬೇಕು; ನಿಸರ್ಗನಾಶದಿಂದಾಗುವ ವ್ಯಾಪಕ ದುಷ್ಪರಿಣಾಮಗಳ ಅಲಕ್ಷ್ಯದಿಂದಾಗುವ ಅಪಾಯಗಳ ಬಗೆಗೆ ಅರಿವು ಮೂಡಿಸುವುದು ಹಾಗೂ ಜನರ ಜೀವನಾಧಾರವಾದ ಕೃಷಿಗೆ ಅಗತ್ಯವಾದ ಮಣ್ಣು, ನೀರು, ಮಳೆ, ಗೊಬ್ಬರ ಮೊದಲಾದವುಗಳ ಸಮರ್ಪಕ ಪೂರೈಕೆ ಅರಣ್ಯವನ್ನೇ ಅವಲಂಬಿಸಿರುವ ಬಗೆಗೂ ವ್ಯಾಪಕ ಅರಿವು ಮೂಡಿಸುವುದು ಒಟ್ಟಾರೆಯಾಗಿ ಹೇಳುವುದಾದರೆ ಮಲೆನಾಡ ಹಸುರು ಬಯಲುಸೀಮೆಯ ಉಸಿರು, ಅರಣ್ಯವನ್ನು ಉಳಿಸು ಬೆಳೆಸು ಬಳಸು ಎಂಬಂತಹ ಉದ್ದೇಶ ಹಾಗೂ ವಿಚಾರಧಾರೆಗಳನ್ನು ಅಪ್ಪಿಕೋ ಚಳವಳಿ ತಳೆದಿದೆ.

ನಾಡಿನಲ್ಲಿ ಪರಿಸರ ಕುರಿತ ಅನೇಕ ವಿವಾದ ಪ್ರಕರಣಗಳು ನ್ಯಾಯಾಲಯಗಳನ್ನೂ ಪ್ರವೇಶಿಸಿದವು. ಅರಣ್ಯ ನೆಡುತೋಪು ನಿಗಮದ ವಿರುದ್ಧ ಶಿವರಾಮಕಾರಂತರು, ಹರಿಹರ ಪಾಲಿಫೈಬರ್ ಕಂಪನಿಯ ವಿರುದ್ಧ ಎಸ್.ಆರ್. ಹಿರೇಮಠ್, ಶರಾವತಿ ಟೇಲ್‌ರೇಸ್ ವಿರುದ್ಧ ಕುಸುಮಾ ಸೊರಬ, ಕೈಗಾ ಪರಮಾಣು ಸ್ಥಾವರದ ವಿರುದ್ಧ ವಿಷ್ಣುಕಾಮತ್ ಮತ್ತಿತರರು ನ್ಯಾಯಾಲಯಗಳಲ್ಲಿ ದಾವೆ ಹೂಡಿದರು. ಶಿವರಾಮಕಾರಂತರು ಹೂಡಿದ ದಾವೆಗೆ ಮಾತ್ರ ಜಯ ಲಭಿಸಿತು. ಅರಣ್ಯ ನೆಡುತೋಪು ನಿಗಮವನ್ನು ಬರಖಾಸ್ತು ಮಾಡಲಾಯಿತು. 1988ರಲ್ಲಿ ಕೈಗಾ ಚಳವಳಿಯ ತೀವ್ರತೆಯಿಂದಾಗಿ ಕರ್ನಾಟಕ ಸರ್ಕಾರ ಪರಮಾಣು ಶಕ್ತಿಯ ಕುರಿತು ರಾಷ್ಟ್ರೀಯ ಸಮ್ಮೇಳನವೊಂದನ್ನು ಬೆಂಗಳೂರಿನಲ್ಲಿ ನಡೆಸಿತು.

1989ರ ಲೋಕಸಭಾ ಚುನಾವಣೆಯಲ್ಲಿ ಭಾರತದ ಆವರೆಗಿನ ಏಕೈಕ 'ಪರಿಸರ ಅಭ್ಯರ್ಥಿ'ಯಾಗಿ ಶಿವರಾಮಕಾರಂತರು ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸಿ ಸೋತ ಅನಂತರ ಪರಿಸರ ಚಳವಳಿಯ ಕಾವು ಬಹುತೇಕ ಕಡಿಮೆಯಾಯಿತು. ಅಲ್ಲಿಯವರೆಗಿನ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಅನೇಕ ಯುವಕರು ರಾಮಜನ್ಮಭೂಮಿಯ ಸಂರಕ್ಷಣೆಯತ್ತ ಹೆಚ್ಚಿನ ಗಮನ ಹರಿಸಿದ್ದೂ ಇತರರು ಪರಿಸರ ಸಮಸ್ಯೆಗಳಿಂದ ವಿಮುಖವಾಗಲು ಮುಖ್ಯ ಕಾರಣವೆನ್ನಬಹುದು.

ಅನಂತರದ ವರ್ಷಗಳಲ್ಲಿ ಅಲ್ಲೊಂದು ಇಲ್ಲೊಂದು ಚಿಕ್ಕಪುಟ್ಟ ಹೋರಾಟಗಳು ನಡೆದವು. ಬಿಡದಿಯಲ್ಲಿ ಜಪಾನಿ ಟೌನ್‌ಶಿಪ್ ವಿರುದ್ಧ, ಬೀದರಿನಲ್ಲಿ ಔಷಧಕಾರ್ಖಾನೆಗಳ ವಿರುದ್ಧ, ಸಾಗರದ ಬಳಿ ಇಕ್ಕೇರಿಯಲ್ಲಿ ಚಿನ್ನದ ಗಣಿಗಾರಿಕೆ ವಿರುದ್ಧ ಹಾಗೂ ಮಂಗಳೂರಿನ ಬಳಿ ತೈಲ ಸಂಸ್ಕರಣಾ ಘಟಕ ಮತ್ತು ತಣ್ಣೀರು ಬಾವಿಯ ಹಡಗು ಒಡೆಯುವ ಉದ್ಯಮಗಳ ವಿರುದ್ಧ, ಹಾವೇರಿಯಲ್ಲಿ ಕುಲಾಂತರಿ ಹತ್ತಿಯ ಬೇಸಾಯದ ವಿರುದ್ಧ, ನಡೆದ ಕೈಗಾ ಮತ್ತು ಶರಾವತಿ ಕೊಳ್ಳಗಳಲ್ಲೂ ಪ್ರತಿಭಟನಾತ್ಮಕ ಚಳುವಳಿಗಳು, ಹೀಗೆ ಅತ್ಯಂತ ಉಗ್ರ ಚಳವಳಿಗಳು ಮುಗಿದು ರಚನಾತ್ಮಕ ಕೆಲಸಗಳನ್ನು ಪರಿಸರ ಹೋರಾಟಗಾರರೇ ಆರಂಭಿಸಿದರು, ಕೈಗಾ ಸುತ್ತಮುತ್ತ ಜನರ ಆರೋಗ್ಯ ಸಮೀಕ್ಷೆ, ಶರಾವತಿ ಟೇಲ್‌ರೇಸ್ ಜಲಾಶಯದ ಸುತ್ತ ಅಳಿದುಳಿದ ಅರಣ್ಯಗಳ ರಕ್ಷಣಾ ಕ್ರಮಗಳ ಕುರಿತು ಸಮೀಕ್ಷಾ ಕಾರ್ಯಗಳು ಆರಂಭವಾದವು. ಕೆರೆಗಳ ಹೂಳೆತ್ತುವಲ್ಲಿ ಮತ್ತು ನಗರ ಜನ್ಯ ಘನತ್ಯಾಜ್ಯಗಳ ವಿಲೇವಾರಿಯಲ್ಲಿ ಜನರ ಕಾಳಜಿಗೆ ಸರಕಾರ ಹಿಂದೆಂದಿಗಿಂತ ಚುರುಕಾಗಿ ಪ್ರತಿಕ್ರಿಯೆ ತೋರತೊಡಗಿತು. ಆದರೆ ಹೊಸಹೊಸ ಅಭಿವೃದ್ಧಿ ಯೋಜನೆಗಳ ಪ್ರಸ್ತಾವನೆ ಹೆಚ್ಚುತ್ತ ಹೋದಷ್ಟೂ ಅವುಗಳ ವಿಕಾರ ಮುಖಗಳ ಬಗ್ಗೆ ಚರ್ಚಿಸುವ, ಬೀದಿಗಿಳಿದು ಪ್ರತಿಭಟಿಸುವ ಸ್ಪಂದನಶೀಲತೆ ಮಾತ್ರ ಕ್ಷೀಣಿಸಿತು. 'ನೇರ ಹೋರಾಟ' ಎಂಬುದು ಮುಗಿದ ಅಧ್ಯಾಯವೆನಿಸಿತು.

ಕುದುರೆಮುಖ ಕಬ್ಬಿಣ ಅದಿರಿನ ಗಣಿಗಾರಿಕೆಯ ಗುತ್ತಿಗೆಯ ಅವಧಿಯನ್ನು ವಿಸ್ತರಿಸಬಾರದೆಂದು ಯು.ಆರ್. ಅನಂತಮೂರ್ತಿ ನೇತೃತ್ವದ ಬಹಿರಂಗ ಸಭೆ ಹಾಗೂ ನ್ಯಾಯಾಲಯ ವ್ಯಾಜ್ಯವನ್ನು ಬಿಟ್ಟರೆ 21ನೆಯ ಶತಮಾನದ ಆರಂಭದ ವೇಳೆಗೆ ಪರಿಸರ ಹೋರಾಟಗಳು ತಣ್ಣಗಾಗಿವೆ. ಆದರೆ ಸಾಹಿತ್ಯದಲ್ಲಿ, ಪಠ್ಯಪುಸ್ತಕಗಳಲ್ಲಿ, ಚಿತ್ರಕಲೆ, ಸಿನಿಮಾ-ನಾಟಕಗಳಂಥ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಪರಿಸರದ ಕಾಳಜಿ ಆಳವಾಗಿ ಬೇರೂರಿದೆ. ಭಾರತದ ಇತರ ಎಲ್ಲ ರಾಜ್ಯಗಳಿಗಿಂತ ಹೆಚ್ಚಿನ ಸಂಖ್ಯೆಯ, ಹೆಚ್ಚಿನ ತೀವ್ರತೆಯ ಪರಿಸರ ಹೋರಾಟಗಳು ಕರ್ನಾಟಕದಲ್ಲೇ ನಡೆದಿದ್ದರಿಂದ ಪರಿಸರ ಸಂವೇದನೆ ಜನಮನದಲ್ಲಿ ಅಂತಃಸ್ರೋತವಾಗಿದೆ. **(ಎನ್‌ಎಚ್;ಆರ್.ಎ.)**

**ಪರೀಕ್ಷೆಗಳು ಮತ್ತು ಪದವಿಗಳು:** ವ್ಯಕ್ತಿಯ ಯೋಗ್ಯತೆ, ಸಾಧನೆ, ಸ್ಥಾನ ಮುಂತಾದವನ್ನು ನಿರ್ಧರಿಸುವುದಕ್ಕಾಗಿ ನಡೆಸುವ ಪರೀಕ್ಷೆಗಳು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ವಿವಿಧ ರೂಪದಲ್ಲಿ ಆಚರಣೆಯಲ್ಲಿವೆ. ರಾಜರ ಆಸ್ಥಾನಗಳಲ್ಲಿ ಧಾರ್ಮಿಕ ಮತ್ತು ಇತರ ವಿಷಯಗಳನ್ನು ಕುರಿತ ಪಂಡಿತರ ಚರ್ಚೆ, ಕಾವ್ಯರಚನೆ, ಸಮಸ್ಯಾ ಪರಿಹಾರ ಮುಂತಾದ ಕ್ಷೇತ್ರಗಳಲ್ಲಿ ನಡೆಯುತ್ತಿದ್ದ ಸ್ಪರ್ಧೆ, ಬಿಲ್ಲುವಿದ್ಯೆ, ಮಲ್ಲವಿದ್ಯೆ ಮುಂತಾದವುಗಳಲ್ಲಿ ನಡೆಯುತ್ತಿದ್ದ ಪಂದ್ಯಾಟ, ಜನ ಸಾಮಾನ್ಯರಲ್ಲಿ ಪ್ರಚಾರದಲ್ಲಿದ್ದ ಒಗಟು ಬಿಡಿಸುವುದು, ವಿದ್ಯಾಸಂಸ್ಥೆಗಳು ಏರ್ಪಡಿಸುತ್ತಿದ್ದ ಸಮಾವರ್ತನ-ಇವೇ ಮುಂತಾದವು ಒಂದು ರೀತಿಯ ಪರೀಕ್ಷೆಗಳೇ ಆಗಿದ್ದುವು. ವ್ಯಕ್ತಿಗಳಿಗೆ ಪದವಿ ಪ್ರಶಸ್ತಿ ನೀಡುವುದೂ ಕರ್ನಾಟಕದಲ್ಲಿ ಎಂದಿನಿಂದಲೂ ಪ್ರಚಾರದಲ್ಲಿದೆ. ರಾಜರೂ ಮಠಾಧಿಪತಿಗಳೂ ಖ್ಯಾತ ವ್ಯಕ್ತಿಗಳ ಸೇವೆ, ಸಾಧನೆ, ಯೋಗ್ಯತೆ ಮುಂತಾದವಕ್ಕೆ ವಿವಿಧ ರೂಪದ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದ್ದರು. ಅದಕ್ಕೆ ಯಾವುದಾದರೂ ವಿಧಾನದಿಂದ ಅರ್ಹತೆಯನ್ನು ನಿರ್ಧರಿಸುವುದೂ ವಾಡಿಕೆಯಲ್ಲಿತ್ತು. ಹೀಗೆ ಕರ್ನಾಟಕದಲ್ಲಿ ಪರೀಕ್ಷೆಗಳೂ ಪದವಿಗಳೂ ಹಿಂದಿನಿಂದ ಪ್ರಚಾರದಲ್ಲಿದ್ದರೂ ಅವುಗಳು ತಮ್ಮ ಆಧುನಿಕ ಸ್ವರೂಪದಲ್ಲಿ ಇಲ್ಲಿಗೆ ಕಳೆದ ಶತಮಾನದ ಆದಿಯಲ್ಲಿ ಇಂಗ್ಲಿಷ್ ಶಿಕ್ಷಣ ಪದ್ಧತಿಯೊಡನೆ ಆಗಮಿಸಿದುವೆಂದು ಹೇಳಬಹುದು.

ಸದ್ಯದಲ್ಲಿ ಎರಡು ಬಗೆಯ ಪರೀಕ್ಷೆಗಳು ಪ್ರಚಾರದಲ್ಲಿವೆ-ಶಾಲಾಕಾಲೇಜುಗಳ ಶೈಕ್ಷಣಿಕ ಪರೀಕ್ಷೆಗಳು ಮತ್ತು ಸ್ಪರ್ಧಾಪರೀಕ್ಷೆಗಳು. ಶೈಕ್ಷಣಿಕ ಪರೀಕ್ಷೆಗಳಲ್ಲಿ ಎರಡು ವಿಧ-ತರಗತಿಯ ಪರೀಕ್ಷೆಗಳು ಮತ್ತು ಸಾರ್ವತ್ರಿಕ ಪರೀಕ್ಷೆಗಳು.

ತರಗತಿಯ ಪರೀಕ್ಷೆಗಳು: ವಿದ್ಯಾರ್ಥಿ ಸಾಧಿಸುವ ಶೈಕ್ಷಣಿಕ ಪ್ರಗತಿಯನ್ನು ಅರಿತುಕೊಳ್ಳುವುದೂ ಅವನಿಗೆ ಅಗತ್ಯ ಮಾರ್ಗದರ್ಶನ ನೀಡುವುದೂ ಇವುಗಳ ಮುಖ್ಯ ಉದ್ದೇಶ; ಜೊತೆಗೆ ತರಗತಿಯಿಂದ ಮುಂದಿನ ತರಗತಿಗೆ ತೇರ್ಗಡೆ ಮಾಡಿಸುವುದಕ್ಕೂ ಇದನ್ನು ಆಧಾರ ಮಾಡಿಕೊಳ್ಳಲಾಗುತ್ತಿದೆ. ಪ್ರಾಥಮಿಕ ಶಾಲೆಯ 1,2,3,4,5,6ನೆಯ ತರಗತಿಗಳಲ್ಲಿ ಮಧ್ಯವಾರ್ಷಿಕ ಮತ್ತು ವಾರ್ಷಿಕ ತರಗತಿಯ ಪರೀಕ್ಷೆಗಳು ನಡೆಯುತ್ತವೆ. 7ನೆಯ ತರಗತಿಯ ಅಂತ್ಯದಲ್ಲಿ ಒಂದು ಬಗೆಯ ಜಿಲ್ಲಾಮಟ್ಟದ ಸಾರ್ವತ್ರಿಕ ಪರೀಕ್ಷೆ ನಡೆಯುತ್ತದೆ. ಅದರಲ್ಲಿ ಉತ್ತೀರ್ಣರಾದವರಿಗೆ ಪ್ರೌಢಶಾಲೆಗೆ ಸೇರಲು ಅರ್ಹತೆ ಬರುತ್ತದೆ. ಈಚೆಗೆ ಪ್ರೌಢಶಾಲೆಯ 8,9ನೆಯ ತರಗತಿಗಳಲ್ಲಿ ಮಧ್ಯವಾರ್ಷಿಕ ಪರೀಕ್ಷೆಯನ್ನೂ ಆಯಾ ತರಗತಿಯ ಕೊನೆಯಲ್ಲಿ ಜಿಲ್ಲಾಮಟ್ಟದ ಸಾರ್ವತ್ರಿಕ ಪರೀಕ್ಷೆಯನ್ನೂ ನಡೆಸಲಾಗುತ್ತಿದೆ. 10ನೆಯ ತರಗತಿಯ ಕೊನೆಯಲ್ಲಿ ನಡೆಯುವ ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ (ಎಸ್.ಎಸ್.ಎಲ್.ಸಿ) ಪರೀಕ್ಷೆಯ ಮೊಟ್ಟಮೊದಲನೆಯ ಪೂರ್ಣ ಪ್ರಮಾಣದ ಸಾರ್ವತ್ರಿಕ ಪರೀಕ್ಷೆ. ಅದರಲ್ಲಿ ಉತ್ತೀರ್ಣರಾದವರು ಜೂನಿಯರ್ ಕಾಲೇಜಿಗೆ (ಪದವಿ-ಪೂರ್ವ) ಪ್ರವೇಶಾರ್ಹತೆ ಪಡೆಯುತ್ತಾರೆ. ಸರ್ಕಾರದ ಅಧೀನ (ಸಬಾರ್ಡಿನೇಟ್) ಸ್ಥಾನಗಳಲ್ಲಿ ಕೆಲಸಕ್ಕೆ ಸೇರಲೂ ಬರುತ್ತದೆ. ಈಚೆಗೆ ಈ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲೂ ಪ್ರತ್ಯೇಕವಾಗಿ ಕೂಡುವ ಮತ್ತು ಪ್ರತ್ಯೇಕವಾಗಿ ಫಲಿತಾಂಶ ಪ್ರಕಟಿಸುವ ಸೌಲಭ್ಯ ಬಳಕೆಗೆ ಬಂದಿದೆ. ಈ ಪರೀಕ್ಷೆಯನ್ನು ನಡೆಸಲು ಸೆಕೆಂಡರಿ ಎಜುಕೇಷನ್ ಎಗ್ಸಾಮಿನೇಷನ್ ಬೋರ್ಡ್ ಎಂಬ ಪರೀಕ್ಷಾ ಮಂಡಲಿಯಿದೆ.

1971-72ರಿಂದ ಆರಂಭವಾದ 2 ವರ್ಷದ ಜೂನಿಯರ್ ಕಾಲೇಜುಗಳಲ್ಲಿ ಪ್ರತಿವರ್ಷವೂ ಸಾರ್ವತ್ರಿಕ ಪರೀಕ್ಷೆ ನಡೆಯುತ್ತದೆ. ತರಗತಿಯ ಪರೀಕ್ಷೆಗಳನ್ನು ಪಡೆದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಸಾರ್ವತ್ರಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳೊಡನೆ ಸ್ವಲ್ಪ ಪ್ರಮಾಣದಲ್ಲಿ ಸೇರಿಸಿಕೊಂಡು ವಿದ್ಯಾರ್ಥಿಯ ಫಲಿತಾಂಶವನ್ನು ನಿರ್ಧರಿಸಲಾಗುವುದು. ಜೂನಿಯರ್ ಕಾಲೇಜಿನ (ಪಿ.ಯು.ಸಿ) ಅಂತಿಮ ಸಾರ್ವತ್ರಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ವಿಶ್ವವಿದ್ಯಾಲಯಕ್ಕೆ ಸೇರುವ ಅರ್ಹತೆ ಪಡೆಯುತ್ತಾರೆ.

ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಇವೂ ನಿರ್ದಿಷ್ಟ ಪದವಿಗಳೇ ಆದರೂ ಮುಖ್ಯವಾಗಿ ವಿಶ್ವವಿದ್ಯಾಲಯ ನೀಡುವ ಬಿ.ಎ., ಬಿ.ಎಸ್‌ಸಿ., ಎಂ.ಎ., ಎಂ.ಎಸ್‌ಸಿ. ಮುಂತಾದುವನ್ನು ಕರ್ನಾಟಕದಲ್ಲಿ ಪದವಿ ಎಂದು ನಿರ್ದೇಶಿಸಲಾಗುತ್ತಿದೆ. ವಿಶ್ವವಿದ್ಯಾಲಯಗಳೂ ಇತರ ಉನ್ನತ ಶಿಕ್ಷಣ ಸಂಸ್ಥೆಗಳೂ ನೀಡುವ ಡಿಪ್ಲೊಮಗಳಿಗೂ ಈ ಪದವನ್ನು ಬಳಸುವುದುಂಟು. ವಿಶ್ವವಿದ್ಯಾಲಯದ ಎಲ್ಲ ತರಗತಿಗಳಲ್ಲೂ ಪ್ರತಿವರ್ಷದ ಮಧ್ಯವಾರ್ಷಿಕ ತರಗತಿಯ ಪರೀಕ್ಷೆ ಕೇವಲ ವಿದ್ಯಾರ್ಥಿಯ ಶಿಕ್ಷಣಾಭಿವೃದ್ಧಿಯನ್ನು ಅಳೆದು ಅವನಿಗೆ ಸೂಕ್ತ ಮಾರ್ಗದರ್ಶನ ನೀಡುವುದಕ್ಕಾಗಿ ನಡೆಯುತ್ತದೆ. ಈಚೆಗೆ ತರಗತಿಯ ಪ್ರತಿವರ್ಷದ ಅಂತ್ಯದಲ್ಲೂ ಸಾರ್ವತ್ರಿಕ ಪರೀಕ್ಷೆಯೊಂದು ಆಚರಣೆಗೆ ಬಂದಿದೆ. ತರಗತಿಯ ಮಧ್ಯವಾರ್ಷಿಕ ಪರೀಕ್ಷೆಯಲ್ಲೂ ಇತರ ಆಂತರಿಕ ಮೌಲ್ಯಮಾಪನದಲ್ಲೂ ಪಡೆದ ಅಂಕಗಳನ್ನು ಸ್ವಲ್ಪಮಟ್ಟಿಗೆ ಗಣನೆಗೆ ತೆಗೆದುಕೊಂಡು ಸಾರ್ವತ್ರಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಯನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಿಸಲಾಗುವುದು. ಎಲ್ಲ ವರ್ಷದ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಪಡೆದ ಅಂಕಿಗಳನ್ನು ಸಮಾವೇಶಗೊಳಿಸಿಕೊಂಡು ತರಗತಿಯ ಅಂತಿಮ ವರ್ಷದ ಸಾರ್ವತ್ರಿಕ ಪರೀಕ್ಷೆಯ ಫಲಿತಾಂಶವನ್ನು ನಿರ್ಧರಿಸಲಾಗುವುದು.

**ವಿಶ್ವವಿದ್ಯಾಲಯದ ಪದವಿಗಳು** ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಮೂರು ಅಂತಸ್ತುಗಳಲ್ಲಿ ಅಧ್ಯಯನ ಘಟಕಗಳು ವ್ಯವಸ್ಥೆಗೊಂಡಿವೆ. ಇದನ್ನನುಸರಿಸಿ ಮೂರು ಅಂತಸ್ತುಗಳಲ್ಲಿ ಪರೀಕ್ಷೆ ನಡೆಸಿ ಪದವಿ ನೀಡುವುದೂ ವಾಡಿಕೆಯಲ್ಲಿದೆ.

**1. ಪ್ರಥಮ ಪದವಿ ಪರೀಕ್ಷೆ:** ವಿಶ್ವವಿದ್ಯಾಲಯದ ಅಥವಾ ಕಾಲೇಜಿನ 3,4 ಅಥವಾ 5 ವರ್ಷದ ಶಿಕ್ಷಣದ ಅನಂತರ ನಡೆಯುವ ಸಾರ್ವತ್ರಿಕ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ನೀಡುವ ಬ್ಯಾಚುಲರ್ ಪದವಿ ಪ್ರಥಮ ಹಂತದ್ದು. ಇದರಿಂದ ವಿದ್ಯಾರ್ಥಿಗೆ ಸ್ನಾತಕೋತ್ತರ ತರಗತಿಗೆ ಅಥವಾ ಕೆಲವು ಕೆಲಸಗಳಿಗೆ ಸೇರಲು ಅರ್ಹತೆ ಬರುತ್ತದೆ. ಕಲಾಶಾಸ್ತ್ರಗಳು, ಮಾನವಿಕ ವಿಷಯಗಳು, ಭಾಷೆ, ವಿಜ್ಞಾನ ವಿಷಯಗಳು, ಕೃಷಿ, ನೇಯ್ಗೆ, ದಂತವೈದ್ಯ, ಉಪಚಾರಿಕ, ಪಶುವೈದ್ಯ, ಔಷಧಿನಿರ್ಮಾಣ ಶಾಸ್ತ್ರ, ವೈದ್ಯಶಾಸ್ತ್ರ, ಎಂಜಿನಿಯರಿಂಗ್ ಮುಂತಾದ ವಿಷಯಗಳಲ್ಲಿ

ಈ ಪರೀಕ್ಷೆ ನಡೆಯುತ್ತದೆ. ಪ್ರತಿ ವಿಶ್ವವಿದ್ಯಾಲಯವೂ ತನ್ನ ಪ್ರಾದೇಶಿಕ ವ್ಯಾಪ್ತಿಯಲ್ಲಿ ಅದನ್ನು ನಡೆಸುವುದು, ಆದರೆ ಅಂಚೆ ಮೂಲಕ ಅಥವಾ ಖಾಸಗಿ ಶಿಕ್ಷಣದ ವಿದ್ಯಾರ್ಥಿಗಳಿಗೆ ನಡೆಸುವ ಪರೀಕ್ಷೆಗಳು ಈ ವ್ಯಾಪ್ತಿಯ ಹೊರಗೂ ನಡೆಯುತ್ತದೆ. ಕೆಲವು ಸ್ನಾತಕೋತ್ತರ ಶಿಕ್ಷಣಗಳಿಗೆ ಪ್ರವೇಶ ಪಡೆಯಲು ಪ್ರವೇಶ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಪರೀಕ್ಷೆಗಳ ಅಂಕದ ಸೇಕಡ 50 ಹಾಗೂ ನಿಯತ ಪದವಿ ಪರೀಕ್ಷೆಗಳ ಅಂಕದ ಸೇಕಡ 50 ಅಂಕಗಳನ್ನು ಕೂಡಿಸಿ ವಿದ್ಯಾರ್ಥಿಯ ಅರ್ಹತಾ ಅಂಕಗಳನ್ನು ಗುರುತಿಸಲಾಗುತ್ತದೆ.

**2. ದ್ವಿತೀಯ ಪದವಿ ಪರೀಕ್ಷೆ :** ಬ್ಯಾಚುಲರ್ ಪದವಿಯ ಅನಂತರ ಎರಡು ಅಥವಾ ಮೂರು ವರ್ಷದ ಸ್ನಾತಕೋತ್ತರ ಶಿಕ್ಷಣದ ಅನಂತರ ನಡೆಯುವ ಮಾಸ್ಟರ್ ಪದವಿ ಪರೀಕ್ಷೆ ದ್ವಿತೀಯ ಹಂತದ್ದು. ಮಾಸ್ಟರ್ ಪದವಿಯ ಪ್ರತಿ ವರ್ಷದ ಕೊನೆಯಲ್ಲೂ ಈಚೆಗೆ ಸಾರ್ವತ್ರಿಕ ಪರೀಕ್ಷೆ ಆಚರಣೆಗೆ ಬರುತ್ತಿದೆ. ಇತ್ತೀಚೆಗೆ ಸೆಮೆಸ್ಟರ್ ಪದ್ಧತಿಯೂ ಆಚರಣೆಗೆ ಬಂದಿದೆ. ಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ಸ್ವಲ್ಪಮಟ್ಟಿಗೆ ಸಾರ್ವತ್ರಿಕ ಅಂತಿಮ ಪರೀಕ್ಷೆಯಲ್ಲಿ ಪಡೆದ ಅಂಕಗಳೊಡನೆ ಸಮಾವೇಶ ಮಾಡಿಕೊಂಡು, ಫಲಿತಾಂಶವನ್ನು ನಿರ್ಧರಿಸಲಾಗುವುದು. ಅಂತಿಮ ಸಾರ್ವತ್ರಿಕ ಪರೀಕ್ಷೆಯಲ್ಲಿ ಬರೆವಣಿಗೆಯ ಪರೀಕ್ಷೆಯ ಜೊತೆಗೆ ವಾಚಾ ಪರೀಕ್ಷೆಯನ್ನೂ (ವೈವವೋಸಿ) ನಡೆಸಲಾಗುವುದು. ಸಾಮಾನ್ಯವಾಗಿ ಪ್ರತಿ ವಿಶ್ವವಿದ್ಯಾಲಯವೂ ವಿವಿಧ ವಿಷಯ ವಿಭಾಗಗಳಲ್ಲಿ ಈ ಹಂತದ ಪರೀಕ್ಷೆ ನಡೆಸುತ್ತಿವೆ. ಕೆಲವು ವಿಶ್ವವಿದ್ಯಾಲಯಗಳು ಅವುಗಳ ಅಂಗ ಕಾಲೇಜುಗಳಿಗೆ ಅಥವಾ ಸ್ವಾಯತ್ತ ಸಂಸ್ಥೆಗಳಿಗೆ ಮಾಸ್ಟರ್ಸ್ ಪದವಿ ಶಿಕ್ಷಣ ನೀಡುವ ಅವಕಾಶ ಕಲ್ಪಸಿವೆ.

ಬ್ಯಾಚುಲರ್ ಪದವೀಧರರು ಶಿಕ್ಷಣಶಾಸ್ತ್ರದ ಕಾಲೇಜಿನಲ್ಲಿ ಒಂದು ವರ್ಷದ ಅಧ್ಯಾಪಕ ವೃತ್ತಿ ಶಿಕ್ಷಣ ಪಡೆದ ಮೇಲೆ ಸಾರ್ವತ್ರಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿ.ಇಡಿ. ಪದವಿ ಪಡೆಯಬಹುದು. ಅವರು ಒಂದು ವರ್ಷದ ಎಂ.ಇಡಿ. ತರಗತಿಗೆ ಸೇರುವುದಕ್ಕೂ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗುವುದಕ್ಕೂ ಅರ್ಹತೆ ಪಡೆಯುವರು. ಈಚೆಗೆ ಪ್ರಥಮ ಪದವೀಧರರು ಎರಡು ವರ್ಷದ ಶಿಕ್ಷಣಶಾಸ್ತ್ರದ ಮಾಸ್ಟರ್ ಪದವಿ (ಶಿಕ್ಷಣಶಾಸ್ತ್ರದ ಎಂ.ಎ) ತರಗತಿಗೂ ಸೇರಬಹುದು ಅಥವಾ ಒಂದು ವರ್ಷದ ಗ್ರಂಥಾಲಯ ವಿಜ್ಞಾನದ ಬಿ.ಲಿಬ್. ಪದವಿ ಪರೀಕ್ಷೆಗೂ ಹೋಗಬಹುದು. ಅವರಿಗೆ ಅನಂತರ ಒಂದು ವರ್ಷದ ಮಾಸ್ಟರ್ ಪದವಿ ಪರೀಕ್ಷೆಗೆ (ಎಂ.ಲಿಬ್) ಅವಕಾಶವಾಗುವುದು. ಬ್ಯಾಚುಲರ್ ಪದವಿ ಪಡೆದವರಿಗೆ ಒಂದು ವರ್ಷದ ಇಂಗ್ಲಿಷ್, ಕನ್ನಡ, ದೈಹಿಕ ಶಿಕ್ಷಣ ಮುಂತಾದ ವಿಷಯಗಳ ಡಿಪ್ಲೊಮ ಪರೀಕ್ಷೆಗೂ ಕೂಡಬಹುದು.

1990ರ ದಶಕ ಪರೀಕ್ಷಾ ಶಿಕ್ಷಣ ವಿಷಯಗಳಲ್ಲಿ ಬಹುತರ ಬೆಳೆವಣಿಗೆ ಕಂಡಿತು. ಸ್ನಾತಕೋತ್ತರ ಶಿಕ್ಷಣದಲ್ಲಿ ಸೆಮೆಸ್ಟರ್ ಪರೀಕ್ಷಾ ಪದ್ಧತಿ ಕಡ್ಡಾಯವಾಗಿ ಜಾರಿಗೆ ಬಂದಿತು. ತರುವಾಯ ಪದವಿ ಪರೀಕ್ಷೆಗಳಲ್ಲೂ ಸೆಮೆಸ್ಟರ್ ಅಥವಾ ಚಾತುರ್ಮಾಸಿಕ ಪರೀಕ್ಷಾ ವಿಧಾನವನ್ನು ಅಳವಡಿಸಲಾಗಿದೆ. ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ವಿಷಯಗಳು ಅಂತಾರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ಮೇಲೆ ಅವುಗಳಲ್ಲಿ ಹತ್ತು ಹಲವು ಶಿಕ್ಷಣಗಳು ಜಾರಿಗೆ ಬಂದಿವೆ. ವಿಶ್ವವಿದ್ಯಾಲಯಗಳಲ್ಲದೆ ಮಾನ್ಯತೆ ಪಡೆದ ಖಾಸಗಿ ಸಂಸ್ಥೆಗಳೂ ಈ ವಿಷಯಗಳಲ್ಲಿ ತರಬೇತಿ ನೀಡಿ ಪರೀಕ್ಷೆ ನಡೆಸಿ ಪ್ರಮಾಣಪತ್ರ ನೀಡುತ್ತಿವೆ. ಇದರಿಂದ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗಿದೆ. ಸರ್ಟಿಫಿಕೇಟ್ ಶಿಕ್ಷಣ, ಡಿಪ್ಲೊಮಾ ಶಿಕ್ಷಣಗಳನ್ನು ಪರೀಕ್ಷೆಗಳನ್ನು ನಡೆಸುವ ಸಂಸ್ಥೆಗಳು ವ್ಯಾಪಕವಾಗಿ ಹುಟ್ಟಿಕೊಂಡಿವೆ. ಸ್ನಾತಕೋತ್ತರ ಡಿಪ್ಲೊಮೊ, ಎಂ.ಬಿ.ಎ. ಎಂ.ಸಿ.ಎ. ಮೊದಲಾದ ಅಧ್ಯಯನ ಶಿಸ್ತುಗಳು (ಶಿಕ್ಷಣಗಳು) ಖಾಸಗಿ ಕಾಲೇಜುಗಳಲ್ಲೂ ಪ್ರಾರಂಭವಾಗಿವೆ.

**3. ತೃತೀಯ ಅಂತಸ್ತಿನ ಪದವಿ ಪರೀಕ್ಷೆ :** ಮಾಸ್ಟರ್ ಪದವಿಯ ಅನಂತರ ನಡೆಯುವ ಡಾಕ್ಟೊರೇಟ್ ಪದವಿ ಪರೀಕ್ಷೆ ವಿಶ್ವವಿದ್ಯಾಲಯದ ಪರಮೋಚ್ಚ ಪದವಿ ಪರೀಕ್ಷೆ. ಇದಕ್ಕೆ ನಿರ್ದಿಷ್ಟ ತರಗತಿಯ ಶಿಕ್ಷಣವಾಗಲಿ ಕಾಲಾವಧಿಯಾಗಲಿ ಗೊತ್ತುಮಾಡಿರುವುದಿಲ್ಲ. ಆದರೆ ಎರಡು ವರ್ಷಗಳಿಗೆ ಕಡಿಮೆಯಿಲ್ಲದೆ ವ್ಯಾಸಂಗ ನಡೆಸಬೇಕಾಗುತ್ತದೆ. ವಿಶ್ವವಿದ್ಯಾಲಯ ಅಂಗೀಕರಿಸಿದ ವಿಷಯವೊಂದನ್ನು ಕುರಿತು ಅದು ನೇಮಕ ಮಾಡುವ ಮಾರ್ಗದರ್ಶಕರೊಬ್ಬರ ನೇತೃತ್ವದಲ್ಲಿ ಸಂಶೋಧನೆ ನಡೆಸಿ ಅದರ ವರದಿಯನ್ನು ಮಹಾಪ್ರಬಂಧದ ರೂಪದಲ್ಲಿ ರಚಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಅಗತ್ಯವಾದರೆ ವಾಚಾ ಪರೀಕ್ಷೆಯೂ ನಡೆಯುವುದು. ಅಂಗೀಕೃತವಾದ ವಿದ್ಯಾರ್ಥಿಗೆ ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡುವುದು. ಪಿಎಚ್.ಡಿ ಪದವಿಗೆ ಸಮಾನಾಂತರವೂ ಆದರೆ ಅದಕ್ಕಿಂತ ಉನ್ನತವೂ ಆದುದೆಂದು ಪರಿಗಣಿಸಲಾಗಿರುವ (ಕೆಲವು ವಿಭಾಗದಲ್ಲಿ ಮಾತ್ರ) ವಿಷಯ ವಿಭಾಗದ ಡಾಕ್ಟೊರೇಟ್ ಪದವಿಯನ್ನೂ ನೀಡಲಾಗುವುದು. ಪಿಎಚ್.ಡಿ. ಪದವಿ ಮಾರ್ಗದರ್ಶಕರ ನೇತೃತ್ವದಲ್ಲಿ ನಡೆಯುವ ಸಂಶೋಧನೆಯಾದರೆ ವಿಷಯ ವಿಭಾಗದ ಡಾಕ್ಟೊರೇಟ್ ಸ್ವತಂತ್ರ ಸಂಶೋಧನೆಗೆ ಅಥವಾ ಅದನ್ನೊಳಗೊಂಡ ಪ್ರಕಟಣೆಗೆ ನೀಡುವ ಪದವಿ. ಸದ್ಯದಲ್ಲಿ ಡಿ.ಲಿಟ್, ಡಿ.ಎಸ್‌ಸಿ., ಡಿ.ಇ., ಡಿ.ಎಲ್., ಡಿ.ಇಡಿ. ಈ ಪದವಿಗಳು ಅಸ್ತಿತ್ವದಲ್ಲಿವೆ. ಯಾವುದಾದರೂ ಕ್ಷೇತ್ರದಲ್ಲಿ ಗಣ್ಯಸೇವೆ ಸಲ್ಲಿಸಿದ ಖ್ಯಾತ ವ್ಯಕ್ತಿಗಳಿಗೂ ಇವನ್ನು ಗೌರವ ಪದವಿಗಳಾಗಿ ನೀಡುವುದು ಆಚರಣೆಯಲ್ಲಿದೆ.

**ಪರೀಕ್ಷಾ ವಿಧಾನ :** ಬರೆವಣಿಗೆಯ ಪರೀಕ್ಷೆ ಬಹುಮಟ್ಟಿಗೆ ಪ್ರಬಂಧ ರೂಪದ ಉತ್ತರ ಬಯಸುವ ಪ್ರಶ್ನೆಪತ್ರಿಕೆಗಳ ಮೂಲಕ ನಡೆಯುತ್ತದೆ. ಈಚೆಗೆ ಎಲ್ಲ ಮಟ್ಟದ ಪರೀಕ್ಷೆಗಳಲ್ಲೂ ಪುಟ್ಟ ಪುಟ್ಟ ಉತ್ತರ ಬಯಸುವ ವಸ್ತುನಿಷ್ಠ ಪ್ರಶ್ನೆಗಳನ್ನೂ ಸ್ವಲ್ಪಮಟ್ಟಿಗೆ ಸೇರಿಸಲಾಗುತ್ತಿದೆ. ಸಾಮಾನ್ಯವಾಗಿ ಎಲ್ಲ ಸಾರ್ವತ್ರಿಕ ಪರೀಕ್ಷೆಗಳಲ್ಲೂ ಮೌಲ್ಯಮಾಪನದಲ್ಲಿ ಅವಾಸ್ತವಿಕತೆಯನ್ನು ಕಡಿಮೆ ಮಾಡಲು ಬೆಲೆ ಕಟ್ಟುವ ಬಗ್ಗೆ ನೀತಿನಿಯಮಗಳ ನಿರೂಪಣೆ, ಉತ್ತರ ಪ್ರಶ್ನೆಪತ್ರಿಕೆಗಳ ಪುನಃಪರಿಶೀಲನೆ, ನಿರ್ದಿಷ್ಟ ಉತ್ತರ ಬಯಸುವ ಪ್ರಶ್ನೆಗಳ ಸೇರಿಕೆ ಮುಂತಾದ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಆಂತರಿಕ ಮತ್ತು ಬಾಹ್ಯ ಪರೀಕ್ಷಕರು ಇಬ್ಬರು ಅಥವಾ ಮೂವರು ಪರೀಕ್ಷಕರು ಮೌಲ್ಯಮಾಪನ ಮಾಡಿ, ಅವರೆಲ್ಲರ ಸರಾಸರಿ ಅಭಿಪ್ರಾಯದ ಆಧಾರದ ಮೇಲೆ ಫಲಿತಾಂಶವನ್ನು ನಿರ್ಧರಿಸಲಾಗುವುದು. ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಪರೀಕ್ಷೆ ಹೆಚ್ಚು ವಾಸ್ತವಿಕವೂ ನ್ಯಾಯಸಮ್ಮತವೂ ಆಗಿರುವಂತೆ ಮಾಡಲು ನೀಡಿರುವ ಸಲಹೆಗಳನ್ನೂ ಆಚರಣೆಗೆ ತರಲಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಶ್ನೆಗಳ ಕೋಠಿ (ಕ್ವೆಶ್ಚನ್ ಬ್ಯಾಂಕ್)ಯ ಪದ್ಧತಿ ಅನುಷ್ಠಾನಕ್ಕೆ ಬರುತ್ತಿದೆ.

**ಸ್ಪರ್ಧಾ ಪರೀಕ್ಷೆಗಳು :** ಕೇಂದ್ರದ ಲೋಕಸೇವಾ ಆಯೋಗ ಭಾರತ ಸರ್ಕಾರದ ಉನ್ನತ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆರಿಸಲು ಸೇವಾ ಪರೀಕ್ಷೆಗಳನ್ನು ನಡೆಸುವುದು; ಇದರಲ್ಲಿ ಅಗತ್ಯವೆನಿಸುವಷ್ಟು ಮಂದಿಯನ್ನು ದಕ್ಷತೆಯ ಆಧಾರದ ಮೇಲೆ ಆರಿಸಲಾಗುವುದು. ಅಖಿಲಭಾರತ ಸಾಮಾನ್ಯ ಆಡಳಿತ, ಪೊಲೀಸು ಮುಂತಾದ ಸೇವಾಶಾಖೆಗಳ ಉನ್ನತ ಹುದ್ದೆಗಳಿಗೆ ಈ ಪರೀಕ್ಷೆ ನಡೆಯುವುದಲ್ಲದೆ ತಾಂತ್ರಿಕ, ವೃತ್ತಿ, ವ್ಯವಹಾರ ಮುಂತಾದ ಸೇವಾಶಾಖೆಗಳಿಗೂ ನಡೆಯುತ್ತವೆ.

ರಾಜ್ಯದ ಲೋಕಸೇವಾ ಆಯೋಗ ಉನ್ನತ ಹುದ್ದೆಗಳಿಗೂ ಅಧೀನ ಹುದ್ದೆಗಳಿಗೂ ಸೇರಬಯಸುವ ಅಭ್ಯರ್ಥಿಗಳಿಗಾಗಿ ಪ್ರತ್ಯೇಕ ಸ್ಪರ್ಧಾ ಪರೀಕ್ಷೆಗಳನ್ನು ನಡೆಸುವುದು.

ಬೆರಳಚ್ಚು, ಷಾರ್ಟ್‌ಹ್ಯಾಂಡ್, ಸಂಗೀತ, ನೃತ್ಯ, ಸಂಸ್ಕೃತ ಮುಂತಾದವುಗಳಲ್ಲೂ ಶಾಲಾಮಟ್ಟದ ಪರೀಕ್ಷೆಗಳು ನಡೆಯುತ್ತವೆ. ಎಲ್ಲ ಮಟ್ಟದಲ್ಲಿ ಹಿಂದಿ ಪರೀಕ್ಷೆಗಳು ನಡೆಯುತ್ತವೆ. ಅವನ್ನು ನಡೆಸಲು ಬೇರೆ ಬೇರೆ ಅಧಿಕೃತ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ **(ನೋಡಿ)** 25 ವರ್ಷ ತುಂಬಿದ ಯಾರು ಬೇಕಾದರೂ ಪ್ರಥಮ ಪದವಿ ಪರೀಕ್ಷೆಗೂ 35 ವರ್ಷ ತುಂಬಿದವರು ಸ್ನಾತಕೋತ್ತರ ಪದವಿಗೂ ಕೂರಬಹುದಾದ ಅವಕಾಶ ಕಲ್ಪಿಸಿದೆ. **(ಎಸ್.ಎಸ್.ವಿ)**

**ಪರ್ವತದೇವ:** ಸು. 1578. ವೀರಶೈವ ಕವಿ. ನನ್ನಯ್ಯಚಾರಿತ್ರ ಎಂಬ ಗ್ರಂಥದ ಕರ್ತೃ. ಉತ್ತರದೇಶದ ವಿದ್ಯಾನಗರ ಈತನ ಸ್ಥಳ. ಉತ್ತರ ದೇಶದ ವಿದ್ಯಾನಗರದ ಒಂಟೆತ್ತಿನಮಠದ ಸ್ವಾಮಿ ವಿರುಪಾಕ್ಷ ಈತನ ಗುರು.

ನನ್ನಯ್ಯಚಾರಿತ್ರ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 14 ಸಂಧಿಗಳೂ ಸು. 1,800 ಪದ್ಯಗಳೂ ಇವೆ. ಬಸವಣ್ಣನವರ ಕಾಲದಲ್ಲಿದ್ದ ನನ್ನಯ್ಯವೆಂಬ ಶಿವಶರಣರ ಚರಿತ್ರೆಯನ್ನು ಇದರಲ್ಲಿ ವರ್ಣಿಸಲಾಗಿದೆ. ಮೂಲಕಥೆಯೊಂದಿಗೆ ಇದರಲ್ಲಿ ಸು. 72 ಶಿವಭಕ್ತರ ಕಥೆಗಳನ್ನು ಸೇರಿಸಿ ಹೇಳಿದ್ದಾನೆ. ತಾನು ಹೊಸದಾಗಿ ಕಥೆಯನ್ನು ಹೆಣೆಯಲಿಲ್ಲ ವೆಂದೂ ಹಿಂದೆ ಶಿವಕವಿಗಳು ಹೇಳಿದ್ದ ಕಥೆಯನ್ನೇ ತನಗೆ ತೋರಿದಂತೆ ಹೇಳಿರುವುದಾಗಿಯೂ ಹೇಳಿದ್ದಾನೆ. ಈ ನನ್ನಯ್ಯನ ಕಥೆಯು ಪಾಲ್ಕುರಿಕೆ ಸೋಮನಾಥನ ಸೋಮೇಶ್ವರ ಪುರಾಣ, ಉತ್ತರದೇಶದ ಬಸವಲಿಂಗನ ಬಸವೇಶ್ವರ ಪುರಾಣ, ಕಥಾಸಾಗರ, ಶಾಂತಲಿಂಗ ದೇಶಿಕನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ, ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತಮಹಾಪುರಾಣ, ಲಕ್ಕಣ್ಣದಂಡೇಶನ ಶಿವತತ್ತ್ವಚಿಂತಾಮಣಿ, ಮಾದಣ್ಣನ ನನ್ನಯ್ಯಚಾರಿತ್ರ, ಮೇದಿನೀರಾಯನ ಸುಜ್ಞಾನಿದೇವಕಾವ್ಯ ಎಂಬ ಕಾವ್ಯಗಳಲ್ಲಿ ಕಂಡುಬರುತ್ತದೆ. ಕವಿಯು ಕಾವ್ಯದಲ್ಲಿ ವರ್ಣನೆಗಳಿ ಗಿಂತ ಕಥೆಗೇ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾನೆ; ಕಾವ್ಯಬಂಧ ಸರಳವಾಗಿದೆ. ಉದಾಹರಣೆಗೆ ಜಲದೊಳಗಣ ಮೀನು ಬಾಯ ಸವಿಗೆ ಹೋಗಿ ಬಲೆಗಾರನ ಗಾಳದಲ್ಲಿ ಸಿಲುಕಿದಂದದಿ ಹೊನ್ನು ಹೆಣ್ಣು ಮಣ್ಣಿಗೆ ಸಿಲುಕಿ ಬಲು ಕೇಡ ಕೆಡುವರು ನರರು ಎಂಬ ಪದ್ಯ ಸರಳ ಮಾತುಗಳಲ್ಲಿ ವೈರಾಗ್ಯವನ್ನು ಬೋಧಿಸುತ್ತದೆ. **(ಎಂ.ಪಿ.ಎಂ)**

**ಪರ್ವತವಾಣಿ**: 1911–94. ಕನ್ನಡ ಆಧುನಿಕ ರಂಗಭೂಮಿಯ ಜನಪ್ರಿಯ ನಾಟಕಕಾರ, ನಟ, ನಿರ್ದೇಶಕ. ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪರ್ವತವಾಡಿಯಲ್ಲಿ 1911 ಸೆಪ್ಟಂಬರ್ 2ರಂದು ಜನಿಸಿದರು. ಪಿ. ನರಸಿಂಗರಾವ್ ಇವರ ಹುಟ್ಟು ಹೆಸರು; ಪರ್ವತವಾಣಿ ಕಾವ್ಯನಾಮ. ಇವರು ಮದರಾಸು, ತುಮಕೂರು, ಬೆಂಗಳೂರುಗಳಲ್ಲಿ ವಿದ್ಯಾಭ್ಯಾಸ ಮಾಡಿ ಮೈಸೂರಿನ ಮಹಾರಾಜ ಕಾಲೇಜು ಸೇರಿ ಬಿ.ಎ(ಆನರ್ಸ್) ಪದವಿಗಳಿಸಿದರು. ಅರಣ್ಯ ಇಲಾಖೆಗೆ ಸೇರಿ (1935) ಮೂವತ್ತೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದರು (1967).

ಹಳೆಯ ಮೈಸೂರು ಭಾಗದಲ್ಲಿ ಕೈಲಾಸಂ ಅವರ ತರುವಾಯ ಜನಪ್ರಿಯ ನಾಟಕಕಾರರಾದ ಪರ್ವತವಾಣಿಯವರು 1939ರಲ್ಲಿ ನಾಟಕಗಳನ್ನು ಬರೆಯಲು ತೊಡಗಿದರು. 'ಮಾಲತಿ' ಇವರ ಮೊದಲ ನಾಟಕ. ರಂಗದ ಮೇಲೆ ಪ್ರದರ್ಶಿತಗೊಂಡು ಯಶಸ್ವಿಯಾಯಿತಾದರೂ ಲೇಖಕರಿಗೆ ತೃಪ್ತಿಯಾಗದ್ದರಿಂದ ಹಸ್ತಪ್ರತಿಯನ್ನು ಹರಿದು ಹಾಕಿದರು. ವೃತ್ತಿರಂಗಭೂಮಿ ಸ್ವತಂತ್ರ ನಾಟಕಗಳ ಕೊರತೆಯಿಂದ ಪೌರಾಣಿಕ ನಾಟಕಗಳಲ್ಲೇ ಗಿರಕಿ ಹೊಡೆಯುತ್ತಿದ್ದ ದಿನಗಳಲ್ಲಿ ಪ್ರಸಿದ್ಧರೆನಿಸಿದ್ದ ವಿದೇಶಿ ನಾಟಕಕಾರರಾದ ಷೇಕ್ಸ್‌ಪಿಯರ್, ಮೋಲಿಯೆರ್, ಚೆಕೋವ್, ಗೋಲ್ಡ್‌ಸ್ಮಿತ್, ಶೆರಿಡನ್, ಸ್ಟೀವನ್ಸನ್, ಇಬ್ಸನ್, ಗಾರ್ಕಿ, ಗೊಗೊಲ್ ಮೊದಲಾದವರ ನಾಟಕಗಳನ್ನು ಕನ್ನಡ ಸಂಸ್ಕೃತಿಯ ಜಾಯಮಾನಕ್ಕೆ ಹೊಂದಿಕೊಳ್ಳುವಂತೆ ಕಸಿಮಾಡಿ, ಆ ಪಾತ್ರಗಳನ್ನು ಗುಂಡ, ಕಿಟ್ಟಿ, ರಾಮು, ಕಮಲ, ಸೀನಿ, ಭೀಮುಗಳನ್ನಾಗಿಸಿ ರಂಗಭೂಮಿಗೆ, ಕನ್ನಡ ನಾಟಕ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದರು. ಇವರ ನಾಟಕಗಳ ರಚನೆ ಅಷ್ಟಕ್ಕೇ ಸೀಮಿತವಾಗದೆ ಹೆಚ್ಚಿನ ಸಂಖ್ಯೆಯಲ್ಲಿ ಸ್ವತಂತ್ರ ನಾಟಕಗಳನ್ನು ಬರೆದರು.



ಕನ್ನಡ ಸಾಹಿತ್ಯ ಪರಿಷತ್ತು ತನ್ನ 27ನೆಯ ಸಮ್ಮೇಳನವನ್ನು ಶಿವಮೊಗ್ಗದಲ್ಲಿ ನಡೆಸಿದ ಸಂದರ್ಭದಲ್ಲಿ ಸಾಹಿತಿಗಳನ್ನು ಭದ್ರಾವತಿಗೆ ಕರೆಸಿಕೊಂಡು ಪರ್ವತವಾಡಿ ಮತ್ತು ಮಿತ್ರರು 'ಬಹದ್ದೂರ್ ಗಂಡ' ನಾಟಕವನ್ನು ರಂಗದ ಮೇಲೆ ಪ್ರದರ್ಶಿಸಿದರು, ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿ.ಕೃ. ಗೋಕಾಕರು ನರಸಿಂಗರಾಯರ ನಾಟಕ, ನಾಟಕ ಪ್ರದರ್ಶನವನ್ನು ಮನಸಾರೆ ಮೆಚ್ಚಿಕೊಂಡು 'ಪರ್ವತವಾಡಿ' ಎನ್ನುವುದಕ್ಕಿಂತ 'ಪರ್ವತವಾಣಿ' ಎಂಬುದು ಹೆಚ್ಚು ಸೂಕ್ತವಾಗುತ್ತದೆಂದು ಸೂಚಿಸಿದರು. ಇದು ನರಸಿಂಗರಾಯರು 'ಪರ್ವತವಾಣಿ' ಯಾದುದರ ಹಿನ್ನೆಲೆ. ಇದೇ ನಾಟಕ ಬೆಂಗಳೂರಿನಲ್ಲಿ ಅವ್ಯಾಹತವಾಗಿ 140 ಪ್ರದರ್ಶನಗಳನ್ನು ಕಂಡಿದ್ದು, ಅಂದಿನ ಕಾಲಕ್ಕೆ ಒಂದು ದಾಖಲೆಯೇ ಆಗಿದೆ.

ಇವರು ತಾವು ಕಂಡು, ಕೇಳಿದ ಘಟನೆಗಳನ್ನು ಆಧರಿಸಿ ಸ್ವತಂತ್ರ ನಾಟಕಗಳನ್ನು ರಚಿಸುವುದಾಗಿ ಹೇಳುತ್ತಿದ್ದರು. ಇವರ ನೆಂಟರ ಮನೆಗೆ ಬಂದ ಹೆಣ್ಣನ್ನು ವರನ ಕಡೆಯವರು ನೋಡದೆ ಕೈಕೊಟ್ಟಾಗ, ಹೆಣ್ಣನ್ನು ಕರೆದು ತಂದಿದ್ದವರ ದುಃಖವನ್ನು ಕಂಡು 'ಮೀನಾಮದುವೆ' ರೂಪಗೊಂಡಿತು. ಒಬ್ಬ ನಟಿ ತಾನು ನಂಬಿದ್ದ ಪ್ರಿಯಕರನಿಂದ ವಂಚಿತಳಾಗಿ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಾಗ 'ನಾಯಿಬಾಲ' ರಚಿತವಾಯಿತು. ಸರ್ಕಾರಿ ಸೇವೆಯಲ್ಲಿರುವವರು ಇಬ್ಬರನ್ನು ಮದುವೆಯಾಗಬಾರದೆಂಬ ಪರಿಪತ್ರ ಹೊರಡಿಸಿದಾಗ 'ಪಿಂಡಕ್ಕಾಗಿ' ಎಂಬ ನಾಟಕ ರಚಿತವಾಯಿತು. ಚುನಾವಣೆಯ ಅವಾಂತರಗಳನ್ನು ಹಾಸ್ಯಮಯವಾಗಿ ಕಲ್ಪಿಸಿಕೊಂಡಿದ್ದರೂ ಅದನ್ನು ಗಂಭೀರವಾದ ಹಿನ್ನೆಲೆಯಲ್ಲಿ ನೋಡುವ ದೃಷ್ಟಿಯನ್ನು 'ಚುನಾವಣೆ' ನಾಟಕದಲ್ಲಿ ನೋಡಬಹುದು. 'ಬೇಡ ನೀ ಕೊಲಬೇಡ' ಪ್ರಾಣಿದಯೆಯ ಬಗ್ಗೆ ಪ್ರಚಾರಮಾಡುವಂತಿರುವ ಈ ನಾಟಕದಲ್ಲಿ ಪ್ರಾಣಿಗಳದೇ ಆದ ನ್ಯಾಯಾಲಯ, ವಿಚಾರಣೆ, ಅಭಿಪ್ರಾಯಗಳನ್ನು ತುಂಬ ಕೌಶಲದಿಂದ ಕಲ್ಪಿಸಲಾಗಿದೆ. ಚಿಕ್ಕಮಕ್ಕಳಿಗಾಗಿ ಹಿರಿಯರು ಪ್ರದರ್ಶಿಸಬಹುದಾದ ನಾಟಕವಿದು. 'ಸಾವಿತ್ರಿ' ನಾಟಕ ಹಿಂದಿನ ಕಥೆಗಳಿಂದ ಭಿನ್ನವಾಗಿದೆ. ಇಲ್ಲಿ ಆಕೆ ಗಂಡನನ್ನು ಬದುಕಿಸಿಕೊಳ್ಳುವುದು ಯಮನಿಂದಲ್ಲ, ಸೃಷ್ಟಿಗೆ ಕಾರಣನಾಗುವ ಬ್ರಹ್ಮನಿಂದ ಗಲ್ಲಿಗೇರಿಸುವ ಪದ್ಧತಿ ಸಾಧುವೇ, ಅಸಾಧುವೇ ಎಂಬುದನ್ನು 'ಹಗ್ಗದ ಕೊನೆ' ನಾಟಕದಲ್ಲಿ ವಿಚಾರಮಾಡಿದ್ದಾರೆ.

ಗಂಡು–ಹೆಣ್ಣುಗಳ ಲೈಂಗಿಕ ರೋಗದಂಥ ಸಮಸ್ಯೆಯನ್ನು ಕುರಿತ 'ಕನಕಾಭಿಷೇಕ', ಪ್ರಾಣಿಬಲಿ, ಹಿಂಸೆ, ಅಸ್ಪೃಶ್ಯತೆ, ಪರಮತ ಅಸಹಿಷ್ಣುತೆ ಕವಿಯ ಕರ್ತವ್ಯ ಪ್ರಜ್ಞೆಯನ್ನು ಕುರಿತಂತಹ ವಿಮರ್ಶೆಗೆ 'ಕವಿಭಿಕ್ಷೆ' ನಾಟಕಗಳನ್ನು ಹೆಸರಿಸಬಹುದು. 'ಸಪ್ತಪದಿ' ನಾಟಕದಲ್ಲಿ ಪುರೋಹಿತರು ಹೇಳಿದಂತೆ ವಧು–ವರರು ಲಗ್ನದ ಸಮಯದಲ್ಲಿ ಏಳು ಹೆಜ್ಜೆಗಳನ್ನಿಡುವಾಗ ಅವರ ಹಿಂದಿನ ಅನುಭವಗಳು ನೆನಪಿಗೆ ಬರುತ್ತವೆ. 'ಮುಕುತಿ–ಮೂಗುತಿ' ಸಮಾಜವನ್ನು ತಿದ್ದುವ ಸಲುವಾಗಿ ಪುರಂದರ ದಾಸರ ಪೂರ್ವಕಥೆಯನ್ನು ಆಧರಿಸಿ ಬರೆದ ನಾಟಕ. 'ಕೀಚಕ' ಮಹಾಭಾರತದ ಒಂದು ಪಾತ್ರವನ್ನು ಆಧರಿಸಿದ ಪೌರಾಣಿಕ ನಾಟಕ. ಒಂದು ನೀಚಪಾತ್ರವನ್ನು ಉತ್ತಮಗೊಳಿಸಲು ಹೊರಟು ಮತ್ತೊಂದು ಉತ್ತಮಪಾತ್ರವನ್ನು ನೀಚವಾಗುವಂತೆ ಮಾಡುವ ಸಿದ್ಧ ಸೂತ್ರದ ಅಪಾಯದಿಂದ ಈ ನಾಟಕ ಪಾರಾಗಿದೆ. ಸಾಮಾಜಿಕ ಕಾಳಜಿಯನ್ನು ಗಿಳಿಯಪಂಜರ, ತಿನ್ನಬೇಕೇ ತಿಂದು ಕುಡಿಯಬೇಕೇ, ಮಂಗಮಾಯ, ವಿಷನಿಮಿಷ, ಬೇವು–ಬೆಲ್ಲ ಮೊದಲಾದ ನಾಟಕಗಳಲ್ಲಿ ಕಾಣಬಹುದು. ಮಾತಿನ ಕಚಗುಳಿ ಇದ್ದು ನಮ್ಮನ್ನು ನಗಿಸುತ್ತಲೇ ನೋವಿನ ನೆಲೆಗಳತ್ತ ನಮ್ಮ ಗಮನ ಸೆಳೆಯುವುದು ಇವರ ಶೈಲಿ. ಹಾಗೆಂದ ಮಾತ್ರಕ್ಕೆ ಇವರನ್ನು ಹಾಸ್ಯನಾಟಕಕಾರ ಎಂದು ಸೀಮಿತಗೊಳಿಸಲಾಗದು. 'ಇಷ್ಟಾರ್ಥ' ಎಂಬ ರುದ್ರನಾಟಕವನ್ನೂ ಇವರು ಬರೆದಿದ್ದಾರೆ.

ಇವರ 'ಉಂಡಾಡಿ ಗುಂಡ' ಆಲಿವರ್ ಗೋಲ್ಡ್‌ಸ್ಮಿತ್‌ನ ಷಿ ಸ್ಟೂಪ್ಸ್ ಟು ಕಾನ್‌ಕರ್ ಎಂಬ ಇಂಗ್ಲಿಷ್ ನಾಟಕದ ರೂಪಾಂತರ. 'ನಾನು ನೀನೇ' ನಾಟಕ ಸ್ಟೀವನ್‌ಸನ್‌ನ ಮಾರ್ಕ್ಹೀಮ್ ಎಂಬ ಸಣ್ಣಕಥೆಯ ಆಧಾರದಿಂದ ರಚಿತವಾದದ್ದು. ಆಸ್ಕರ್ ವೈಲ್ಡ್‌ನ 'ದಿ ವುಮನ್ ಆಫ್ ನೋ ಇಂಪಾರ್ಟೆನ್ಸ್' ಯಃಹಕಶ್ಚಿತ್ ಹೆಂಗಸು ಆಗಿ ರೂಪ ತಳೆಯಿತು. ಷೇಕ್ಸ್‌ಪಿಯರ್‌ನ' ಟೇಮಿಂಗ್ ಆಫ್ ದಿ ಷ್ರೂ' ಕನ್ನಡದಲ್ಲಿ 'ಬಹದ್ದೂರ್ ಗಂಡ' ನಾಗಿ ಕಾಣಿಸಿಕೊಂಡಿತು. 'ಔತಣ' ಎಂಬುದು ರಷ್ಯನ್ ನಾಟಕಕಾರ ಚೆಕಾಫ್‌ನ 'ದಿ ವೆಡಿಂಗ್' ನಾಟಕದ ಅಳವಡಿಕೆಯಾಗಿದೆ. ಭದ್ರಾವತಿಯಲ್ಲಿ ಅರಣ್ಯ ಇಲಾಖೆಯ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಬ್ಬಿಣದ ಕಾರ್ಖಾನೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರದರ್ಶಿಸಿದ ಕೃಷ್ಣ ಪಾರಿಜಾತ ನಾಟಕದಲ್ಲಿ ಕೃಷ್ಣನಾಗಿ ಅಭಿನಯಿಸಿದ ಅನಂತರ ಕೈಲಾಸಂ ಅವರ 'ಬಂಡ್ವಾಳವಿಲ್ಲದ ಬಡಾಯಿ' ಮೂರ್ತಿರಾಯರ 'ಆಷಾಢ ಭೂತಿ' ಮೊದಲಾದ ನಾಟಕಗಳಲ್ಲಿ ಪಾತ್ರವಹಿಸತೊಡಗಿದರು. ಕೆಲವು ಚಲನಚಿತ್ರಗಳಲ್ಲಿಯೂ ಇವರು ಅಭಿನಯಿಸಿದ್ದಾರೆ.

ಪರ್ವತವಾಣಿ ನಾಟಕಲೋಕ ಎಂಬ ಹೆಸರಿನಲ್ಲಿ ಐದು ಸಂಪುಟಗಳಲ್ಲಿ ಇವರ ಅನೇಕ ನಾಟಕಗಳು ಸಂಕಲನಗೊಂಡಿವೆ (1980). ಈ ಸಂಪುಟಗಳನ್ನು ತಾವೇ ದುಡ್ಡುಹಾಕಿ ಪ್ರಕಟಿಸಿದ್ದು ಒಂದು ವಿಶೇಷ. 1980ರಲ್ಲಿ ನಂ ಕಂಪ್ನಿ ಎಂಬ ಕೂಟವನ್ನು ಸ್ಥಾಪಿಸಿ, ನಾಟಕ ಕಲೆ ಕುರಿತು ಉಪನ್ಯಾಸಗಳನ್ನು ಏರ್ಪಡಿಸುವುದು, ನಾಟಕಗಳನ್ನು ಓದಿಸುವುದು, ಲೇಖಕರನ್ನು ಸನ್ಮಾನಿಸುವುದು ಮುಂತಾದ ಉಪಯುಕ್ತ ಕಲಾಪಗಳನ್ನು ನಡೆಸಿದರು.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರಕಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ,ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1980). ಇವುಗಳನ್ನು ಹೆಸರಿಸಬಹುದು. ಇವರು 1994 ಮಾರ್ಚ್ 17ರಂದು ನಿಧನರಾದರು.

(ಎಂ.ಎಲ್.ಎಸ್.)

**ಪರ್ವತ ಶಿವಯೋಗಿ:** ಸು. 1650. ವೀರಶೈವ ಕವಿ ಹಾಗೂ ಪ್ರಸಿದ್ಧ ವ್ಯಾಖ್ಯಾನಕಾರ. ಈತ ಚೆನ್ನಬಸವನ ಕರಣಹಸುಗೆ, ಚೆನ್ನಬಸವನ ಮಿಶ್ರಾರ್ಪಣ, ಕರಸ್ಥಲದ ನಾಗಲಿಂಗ ತ್ರಿಪದಿ, ಗುರುಸ್ತೋತ್ರ ತ್ರಿಪದಿ, ಮುರಿಗೆಯ ಶಾಂತ ವೀರೇಶನ ಪ್ರಭುಲಿಂಗಕಂದ, ಬಸವೇಶ್ವರದೇವರ ವಚನಸಾರಾರ್ಥ–ಈ ಗ್ರಂಥಗಳಿಗೆ ಟೀಕೆ ಬರೆದಿದ್ದಾನೆ. ಬಾಲೇಂದುಪುರದ ಹರೀಶ್ವರ ಶಾಂತವೀರೇಶ್ವರ ಈತನ ದೀಕ್ಷಾಗುರು; ಜ್ಞಾನೋಪದೇಶಮಾಡಿದ ಗುರು ಸಿದ್ಧಲಿಂಗಸ್ವಾಮಿ. ಗ್ರಂಥಗಳ ಕೊನೆಯಲ್ಲಿರುವ ಗದ್ಯದಿಂದ ಕವಿ ಷಟ್‌ಸ್ಥಲ ಬ್ರಹ್ಮಜ್ಞಾನ ಪಾರಂಗತನೂ ವರ್ಣಾಶ್ರಮಾತೀತ ವೀರಮಾಹೇಶ್ವರಾಚಾರ್ಯನೂ ಆಗಿದ್ದನೆಂದು ತಿಳಿದುಬರುತ್ತದೆ. ಈತ ಟೀಕೆಯನ್ನು ಬರೆಯುವಾಗ ಶಬ್ದಶಃ ಅರ್ಥವಲ್ಲದೆ ತಾತ್ಪರ್ಯವನ್ನೂ ವಿಶೇಷಾರ್ಥವನ್ನೂ ಅಲ್ಲಲ್ಲಿ ಬರೆದು ಓದುಗರ ಸಂಶಯ ನಿವಾರಿಸಿ ವ್ಯಾಖ್ಯಾನಕಾರರಲ್ಲಿ ಇವನಿಗೆ ಉನ್ನತ ಸ್ಥಾನ ದೊರಕಿದೆ. (ಎಸ್.ಆರ್.ಎ.)

**ಪಲ್ಲವರ ಆಳ್ವಿಕೆ:** ಪ್ರಾರಂಭದಲ್ಲಿ ಕೃಷ್ಣಾ ಮತ್ತು ಪಾಲಾರ್ ನದಿಗಳ ನಡುವಿನ ವಿಸ್ತಾರ ಪ್ರಾಂತದಲ್ಲಿ ಅಧಿಕಾರ ನಡೆಸುತ್ತಿದ್ದ ಕ್ಷತ್ರಿಯ ಸಮುದಾಯವಾದ ಪಲ್ಲವರು ಇತಿಹಾಸ ಆರಂಭ ಕಾಲದಿಂದಲೇ ದಕ್ಷಿಣ ಭಾರತದಲ್ಲಿ ಕಂಡುಬರುತ್ತಾರೆ. ಪಲ್ಲವರು ಎಂದ ಕೂಡಲೇ ತಮಿಳುನಾಡಿನಲ್ಲಿ ಆಳಿದ ಒಂದು ರಾಜಮನೆತನ ಎಂಬ ಅಭಿಮತ ವಿದ್ವಾಂಸರಲ್ಲಿ ಸಾಮಾನ್ಯವಾಗಿ ಮೂಡಿದೆ. ಇದಕ್ಕೆ ಕಾರಣ ಆ ಮನೆತನದ ಇತಿಹಾಸವನ್ನು ಬರೆದವರು ಆನುಷಂಗಿಕ ಆಕರಗಳಿಂದ ಮಾಹಿತಿ ತೆಗೆದುಕೊಂಡು ಮೂಲ ದಾಖಲೆಗಳನ್ನು ನೋಡದಿರುವುದೇ ಆಗಿದೆ. ಕರ್ನಾಟಕದ ಇತಿಹಾಸವನ್ನು ಬರೆದ ಯಾವ ಇತಿಹಾಸಕಾರರೂ ಪಲ್ಲವ ರಾಜಮನೆತನ ಕರ್ನಾಟಕದಲ್ಲಿ ರಾಜಧಾನಿ ಮಾಡಿಕೊಂಡು ಯಾವುದಾದರೂ ಊರಿನಿಂದ ಆರಂಭದಲ್ಲಿ ರಾಜ್ಯವನ್ನು ಆಳಿದರೆಂದು ಹೇಳಿಲ್ಲ. ಹಿರೇಹಡಗಲಿ ಶಾಸನದ ಪಠ್ಯ ಈ ನಿಟ್ಟಿನಲ್ಲಿ ಹೊಸ ಹೊಳಹುಗಳನ್ನು ಚೆಲ್ಲುವ ಮುಖ್ಯ ಆಕರವಾಗಿದೆ.

ಮೌರ್ಯರು, ನಂದರು, ದಕ್ಷಿಣ ಭಾರತದಲ್ಲಿ ರಾಜ್ಯವಾಳಿದ ಮೊದಲ ರಾಜಮನೆತನಗಳು. ನಂದಗಿರಿ– ನಂದಿದುರ್ಗ ಮತ್ತು ಕಟವಪ್ರ ಎಂದರೆ ಕಬ್ಬಿಪ್ಪು ಅಥವಾ ಇಂದಿನ ಶ್ರವಣ ಬೆಳಗೊಳದ ಚಿಕ್ಕಬೆಟ್ಟ ದುರ್ಗವಾಗಿದ್ದವು. ಶಾತವಾಹನರು ಅಥವಾ ಇಕ್ಷ್ವಾಕುಗಳು ಆಗಲೇ ದಕ್ಷಿಣ ಭಾರತಕ್ಕೆ ಬಂದು ಆಡಳಿತದ ಚುಕ್ಕಾಣಿಯನ್ನು ಹಿಡಿದ ಮನೆತನ. ಅದೇ ರೀತಿಯಲ್ಲಿ ಪಲ್ಲವರೂ ಆ ಕಾಲದಲ್ಲೇ ವಲಸೆ ಬಂದವರು, ಅಧಿಕಾರಸ್ಥಾನದಲ್ಲಿ ನೆಲೆನಿಂತವರು. ಮೌರ್ಯರ ಅನಂತರ ದಕ್ಷಿಣಾಪಥಕ್ಕೆ ಒಡೆಯರಾದವರು ಸಾತವಾಹನರು. ಆದರೆ ವಾಸ್ತವದಲ್ಲಿ ಕೃಷ್ಣಾ ಹಾಗೂ ತುಂಗಭದ್ರಾಗಳ ಈಚೆಗೆ, ಅದರಲ್ಲೂ ಪೆನ್ನಾರ್ ನದಿಯ ತಟದಿಂದ ಈಚೆಗೆ ಸಾತವಾಹನರ ಆಳ್ವಿಕೆಯ ಕುರುಹುಗಳು ದೊರೆತಿಲ್ಲ. ಇಕ್ಷ್ವಾಕುಗಳು ರಾಮಾಯಣದಷ್ಟು ಪ್ರಾಚೀನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ವಲಸೆ ಬಂದಿದ್ದಾರೆ, ನೆಲಸಿನಿಂತಿದ್ದಾರೆ. ಪಲ್ಲವರು ಎಂದರೆ ತುಂಡಿಕೇರ, ತಾಳಜಂಘ, ವೀತಿಹೋತ್ರ, ಅವಸ್ತ್ಯ ಹಾಗೂ ಹೈಹಯ (ಹೇಹಯ) ನಮುದಾಯಗಳ ವಲಸೆ ಬಂದ ಗುಂಪುಗಳಲ್ಲೊಂದಕ್ಕೆ ಸಂಬಂಧಪಟ್ಟಿದ್ದು ಆ ಮುಂದೆ ತೋಳ್ಬಲದಿಂದ ಪ್ರಸಿದ್ಧರಾದವರು. ಕೃಷ್ಣಾನದಿಯ ಎಡಬಲದಿಂದ ಪಾಲಾರ್ ನದಿಯು ಇತ್ತಿತ್ತ ಇಡೀ ದಕ್ಷಿಣಭಾರತದಲ್ಲಿ ಹಬ್ಬಿನಿಂತ ಸಮುದಾಯ, ಇಕ್ಷ್ವಾಕುಗಳು, ತೊಂಡೈಮಾನರು ಆಗಿನ ರಾಜಕೀಯ ಪದ್ಧತಿಯಂತೆ ಶುಲ್ಕಗಳನ್ನು, ಆದಾಯಗಳನ್ನು ಸಂಗ್ರಹಿಸಿ ಮೇಲಧಿಕಾರದ ವ್ಯವಸ್ಥೆಗೆ ಇನಿತು ಕೊಟ್ಟು ತಾವೂ ಬಾಳಿ ಬದುಕಿದವರು. ಕರ್ನಾಟಕ, ಇಂದಿನ ಆಂಧ್ರಪ್ರದೇಶ

ಹಾಗೂ ತಮಿಳುನಾಡುಗಳಲ್ಲಿ ಅರ್ಥಾತ್ ದಕ್ಷಿಣ ಭಾರತದ ತುಂಬ ಅಲ್ಲಲ್ಲಿ ಅನೇಕ ಕಡೆಗಳಲ್ಲಿ ಪಲ್ಲವರ ವಂಶಲತೆಯ ಕುಡಿಗಳು ಅಂದಂದಿನ ಆವಶ್ಯಕತೆಗಳಿಗೆ ಅನುಸರಿಸಿ ವ್ಯಾಪಿಸಿ ನಿಂತಿದ್ದವು. ಕರ್ನಾಟಕದಲ್ಲಿ ಬನವಾಸಿ, ಆಂಧ್ರದಲ್ಲಿ ಆರಂಭದಲ್ಲಿ ಅಮರಾವತಿ ಹಾಗೂ ತಮಿಳುನಾಡಿನಲ್ಲಿ ಕಂಚಿ ಇವರಿಗೆ ರಾಜಧಾನಿಗಳಾಗಿದ್ದವು. ಸಾತವಾಹನರನ್ನು ಅಧಿಕಾರದ ಗದ್ದುಗೆಯಿಂದ ಉರುಳಿಸಿ ತಾವೇ ಮಹಾರಾಜರಾದಾಗ ಇವರು ಮೊದಲು ಇದ್ದುದು ಬನವಾಸಿಯಲ್ಲಿ. ಮಹಾರಾಜ ಬೊಪ್ಪಸ್ವಾಮಿ ಭಟ್ಟಾರಕ 'ವಿಜಯ ವೈಜಕೇಯ' (ಬನವಾಸಿ) ರಾಜಧಾನಿಯಿಂದ ರಾಜ್ಯವಾಳುತ್ತಿದ್ದ ಆ ಕಾಲದಲ್ಲೇ 'ಚಿಲ್ಲರೇ ಕೊಡುಂಕ' ಗ್ರಾಮವನ್ನು ಬ್ರಾಹ್ಮಣರಿಗೆ ದತ್ತಿಯಾಗಿತ್ತ. ಕಂಚಿಯಿಂದ ಆಳುತ್ತಿದ್ದ ಆತನ ಪುತ್ರನಾದ ಶಿವಸ್ಕಂದವರ್ಮ ಆ ದತ್ತಿಯನ್ನೇ ಪುನರ್‌ನವೀಕರಿಸಿದ. ಹೀಗೆ ಪುನರ್‌ನವೀಕರಿಸಿದ ದಾಖಲೆಯೇ ಹಿರೇ ಹಡಗಲಿ ಶಾಸನ (ಇಪಿ, ಇಂಡಿಕ, ಸಂಪುಟ1). ಅದರಲ್ಲಿ ಬೊಪ್ಪಸ್ವಾಮಿ ಭಟ್ಟಾರಕನ ಪಾದಾನುಧ್ಯಾತ (ಪುತ್ರ) ಶಿವಸ್ಕಂದವರ್ಮನು ಆಜ್ಞಾಪಿಸಿ ಜಾರಿ ಮಾಡಿದ್ದಾನೆಂದು ತಿಳಿದುಬರುತ್ತದೆ.

ಪಲ್ಲವರಿಗೆ ಸಂಬಂಧಿಸಿದ ಹಲವು ದಾಖಲೆಗಳು ಕರ್ನಾಟಕದಲ್ಲಿವೆ. ಕನ್ನಡ ಭಾಷೆಗೆ ಸಂಬಂಧಿಸಿದಂತೆ ಸದ್ಯ ಮೊದಲ ದಾಖಲೆ ಎನ್ನಿಸಿಕೊಂಡಿರುವ ಹಲ್ಮಿಡಿ ಶಾಸನದಲ್ಲಿ ಆ ಶಾಸನವನ್ನು ಬರೆಸಿದ ವ್ಯಕ್ತಿಗಳಲ್ಲಿ ಒಬ್ಬನಾದ ವಿಜರಸ (ವಿಜಯಅರಸ) ಕೇಕಯ ಹಾಗೂ ಪಲ್ಲವರನ್ನು ಸೋಲಿಸಿದುದಕ್ಕಾಗಿಯೆ ಎರಡು ಗ್ರಾಮಗಳನ್ನು (ಹಲ್ಮಿಡಿ ಹಾಗೂ ಮೂಳಿವಳ್ಳಿ) ಉಂಬಳಿಯಾಗಿ ಪಡೆದ. ಈ ಉಂಬಳಿಯು ಈ ಪಲ್ಲವ ಶಾಖೆ ಒಂದು ಚಿಕ್ಕ ಎಂಬುದನ್ನು ಸೂಚಿಸುತ್ತದೆ. ದಾವಣಗೆರೆ ತಾಲ್ಲೂಕಿನ ಅಣಜಿಶಾಸನದಂತೆ ಕದಂಬ ಕೃಷ್ಣವರ್ಮ ಹಾಗೂ ಪಲ್ಲವ ನಣಕ್ಕಾಸರಾಜ ಇವರಿಬ್ಬರು ಶಿವನಂದಿವರ್ಮ ದರ್ಭೆಯ ಹಾಸಿಗೆಯ ಮೇಲೆ ಮಲಗಿ ಮರಣವನಪ್ಪಿದ. ಶಿವನಂದಿವರ್ಮ ಕೇಕಯ ಕುಲದಲ್ಲಿ ಹುಟ್ಟಿದ್ದ ಮತ್ತು ವೈರಿಗಳಲ್ಲಿ ಒಬ್ಬನಾದ ನಣಕ್ಕಾಸ ಪಲ್ಲವರಾಜ. ಈತನ ಹೆಸರು ಬನವಾಸಿ ಕಂಚಿ ಶಾಖೆಯಲ್ಲಿ ಕಂಡುಬರದು. ಮತ್ತೆ ಆ ಮುಂದೆ ಹೇಮಾವತಿ (ಮಡಕಶಿರ ತಾಲ್ಲೂಕು, ಆಂಧ್ರಪ್ರದೇಶ) ನಗರದಿಂದ ರಾಜ್ಯವಾಳಿದ ಪಲ್ಲವನೊಳಂಬರ ವಂಶವೃಕ್ಷದಲ್ಲಾಗಲಿ ಅವರ

**ಈ ರಾಜಮನೆತನದ ವಂಶಾವಳಿ :**

- ಮಹಾರಾಜ ಬಪ್ಪಸ್ವಾಮಿ (ಬನವಾಸಿಯಿಂದ ಆಳುತ್ತಿದ್ದ)
  - ಶಿವಸ್ಕಂದವರ್ಮ (ಸ್ಕಂದವರ್ಮ I, ಕಂಚಿ ನಗರದಿಂದ ಆಳುತ್ತಿದ್ದ)
    - ವೀರವರ್ಮ
      - ಶಿವಸ್ಕಂದವರ್ಮ (ಸ್ಕಂದವರ್ಮ II, ಕಂಚಿ)
        - ವಿಷ್ಣುವರ್ಮ (ಸು. 455) (ಯುವ ಮಹಾರಾಜ) (455)
        - ಸಿಂಹವರ್ಮ (ಸು. 455 ಅಥವಾ 448) (ವೆಸಂತ ತಾಮ್ರ ಶಾಸನ) (448 & 455)
          - (I) ಸಿಂಹವರ್ಮ (II) (580–86)
            - (2) ಸಿಂಹವಿಷ್ಣು (586–610)
              - (3) ಮಹೇಂದ್ರವರ್ಮ (I) (610–30)
              - (4) ನರಸಿಂಹವರ್ಮ (I) (630–68)
              - (5) ಮಹೇಂದ್ರವರ್ಮ (II) (668–69)
              - (6) ಪರಮೇಶ್ವರವರ್ಮ (I) (669–91)
              - (7) ನರಸಿಂಹವರ್ಮ (II) (690–91–728–29)
                - ಮಹೇಂದ್ರವರ್ಮ (III)
                - (8) ಪರಮೇಶ್ವರವರ್ಮ (II) (728–31)
            - ಭೀಮವರ್ಮ
              - ಬುದ್ಧವರ್ಮ
              - ಆದಿತ್ಯವರ್ಮ
              - ಗೋವಿಂದವರ್ಮ
              - ಹಿರಣ್ಯವರ್ಮ
              - (9) ನಂದಿವರ್ಮ (II) (731–96)
              - (10) ದಂತಿವರ್ಮ (796–846)
              - (11) ನಂದಿವರ್ಮ (III) (846–69)
                - (12) ನೃಪತುಂಗವರ್ಮನ್ (869–95)
                - (13) ಅಪರಾಜಿತವರ್ಮನ್ (895–913)
        - ನಂದಿವರ್ಮ I (ಉದಯೇಂದಿವರಂ ತಾಮ್ರ ಶಾಸನ)

ಶಾಸನಗಳಲ್ಲಾಗಲಿ ಈತನ ಬಗ್ಗೆ ಕಿಂಚಿತ್ತೂ ಮಾಹಿತಿ ಉಪಲಬ್ಧವಿಲ್ಲ. 'ನೊಣ' ಎಂದರೆ ಭ್ರಮರ. ಈ ನೊಣ>ನೊಳ>ನಣ ಆಗಿರಲು ಸಾಧ್ಯವಿದೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ನೊಣ–ಭ್ರಮರ–ಪಾದಪಂಕಜ ಭ್ರಮರ–ಭ್ರಮರಾಂಬಿಕಾ ಪಾದ ಪಂಕಜ ಭ್ರಮರ ಎಂಬುದೇ ನೊಳಂಬ ಆಗಿದೆಯೆನ್ನುವುದನ್ನು (ನೊಳ+ಅಂಬಾ>ನೊಳಂಬ) ಗಮನಿಸಿ ದರೆ 'ನಣಕ್ಕಾಸ' ಎಂಬ ಶಬ್ದ ನೊಣ+ರಕ್ಕಸ ಎಂಬ ಎರಡು ಶುದ್ಧರೂಪದ ಶಬ್ದಗಳ ವಿಕೃತರೂಪವೆನ್ನಬಹುದು. ಈ ನಣಕ್ಕಾಸ ನೊಳಂಬರ ಪೂರ್ವಜರಲ್ಲಿ ಒಬ್ಬ. ನೊಳಂಬ ಎಂಬ ಹೆಸರು ಸದ್ಯ ಮಂಗಲ ರಾಜನಿಂದ ಅನಂತರದಲ್ಲಿ ಪ್ರಚಲಿತವಾಯಿತು. ತತ್ಪೂರ್ವದಲ್ಲಿ ಹಾಗೂ ಅನಂತರದಲ್ಲೂ ಆ ಮನೆತನವೂ 'ಪಲ್ಲವ' ಎಂದೇ ಪ್ರಸಿದ್ಧವಾಯಿತು.

ಆದಿಯಮ ವಂಶಸ್ಥರೂ ಅಂತೆಯೇ ಕಾಡುವೆಟ್ಟಿಗಳೂ ಪಲ್ಲವ ವಂಶಕ್ಕೇ ಸಂಬಂಧಿಸಿದ್ದಾರೆ. ಅವರ ಚರಿತ್ರೆಯೂ ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಸರಿಯಾದ ರೀತಿಯಲ್ಲಿ ಸೇರಬೇಕಾಗಿದೆ. ಆದಿಯಮ ಮನೆತನದವರು ಚೋಳರ ಸಾಮಂತರಾಗಿದ್ದರು. ಹೊಯ್ಸಳ ವಿಷ್ಣುವರ್ಧನ ತಲಕಾಡಿನಲ್ಲಿ ಅವರನ್ನು ಸೋಲಿಸಿದ್ದ. (ಎಸ್.ಜಿಎ;ಜಿ.ಆರ್.ಆರ್)

ಕನ್ನಡದ ಚುಟುಕುಲದ ಅರಸರಿಗೂ ಪಲ್ಲವರಿಗೂ ರಕ್ತಸಂಬಂಧವಿದ್ದು ದಾಗಿ ತಿಳಿದುಬರುತ್ತದೆ. ಮೊದಲ ಪಲ್ಲವರ ಹಲವು ಪ್ರಾಕೃತ ಶಾಸನಗಳು ಬಳ್ಳಾರಿ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಹಾಗೂ ಇತರ ಕಡೆಗಳಲ್ಲಿ ದೊರೆತಿವೆ. 'ಕಾಡುವೆಟ್ಟಿ' ಮನೆತನಕ್ಕೆ ಸಂಬಂಧಿಸಿದ ಶಾಸನಗಳು ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲೂ ದೊರಕಿವೆ. ಕದಂಬ ಮಯೂರ ಶರ್ಮ ಪಲ್ಲವರೊಡನೆ ಯುದ್ಧ ಹೂಡಿ ಹೋರಾಡಿದುದಾಗಿಯೂ ಇವನ ಪರಾಕ್ರಮವನ್ನೂ ಕುಲಪರಂಪರೆಯನ್ನೂ ಕಂಡ ಪಲ್ಲವರಾಜ ಇವನಿಗೆ ತನ್ನ ರಾಜ್ಯಕ್ಕೆ ಸೇರಿದ್ದ ಪ್ರೇಹರಾದಿಂದ ಪಶ್ಚಿಮ ಸಮುದ್ರದವರೆಗೆ ಹಬ್ಬಿದ್ದ ಪ್ರದೇಶವನ್ನು ಕೊಟ್ಟು ಪಟ್ಟಕಟ್ಟಿ ರಾಜನೆಂದು ಘೋಷಿಸಿದುದಾ ಗಿಯೂ ಕದಂಬರ ಶಾಸನಗಳಿಂದ ವಿದಿತವಾಗುತ್ತದೆ. ಅನಂತರ ಆಳಿದ ಕದಂಬ ರಾಜರಿಗೂ ಪಲ್ಲವರಿಗೂ ಅನೇಕ ಯುದ್ಧಗಳು ನಡೆದವು. ಕದಂಬ ರಾಜ್ಯ ದಾಯಾದಿ ಕಲಹಗಳಿಂದ ಇಬ್ಭಾಗವಾದಾಗ ಒಂದು ಶಾಖೆಯನ್ನು ಪುರಸ್ಕರಿಸಿ ಮತ್ತೊಂದು ಶಾಖೆಯನ್ನು ಸದೆಬಡಿಯುವ ಕಾರ್ಯವನ್ನು ಪಲ್ಲವರು ಕೈಗೊಂಡರು. 4ನೆಯ ಶತಮಾನ ಮಧ್ಯಭಾಗ ದಲ್ಲಿ ಕನ್ನಡನಾಡಿನಲ್ಲಿ ಸ್ಥಾಪಿತವಾದ ತಲಕಾಡಿನ ಗಂಗಮನೆತನಕ್ಕೂ ಪಲ್ಲವ ಮನೆತನಕ್ಕೂ ಪ್ರಾರಂಭದಿಂದ ಪಲ್ಲವರ ಕೊನೆಗಾಲದವರೆಗೂ ಒಂದಿಲ್ಲೊಂದು ವಿಧವಾದ ಸಂಬಂಧವಿತ್ತು. ಪ್ರಾರಂಭದಲ್ಲಿ ಈ ಎರಡು ಮನೆತನಗಳ ಮಧ್ಯೆ ಮಧುರ ಬಾಂಧವ್ಯವಿತ್ತು. ಪಲ್ಲವ ಒಂದನೆಯ ಸಿಂಹವರ್ಮನು ಗಂಗ ಹರಿವರ್ಮನ ಮತ್ತು ಸ್ಕಂದವರ್ಮನು ತಡಂಗಲ–ಮಾಧವನ ಸಿಂಹಾಸನಾರೋಹಣ ಉತ್ಸವದಲ್ಲಿ ಭಾಗವಹಿಸಿದುದಾಗಿ ತಿಳಿದುಬರುತ್ತದೆ. ಆದರೆ ಗಂಗ ದುರ್ವಿನೀತನ ಪರಾಕ್ರಮದಿಂದ ವಿಫಲವಾಯಿತು.

ಚಳುಕ್ಯ ಪುಲಕೇಶಿಯು ಪಲ್ಲವ ಮಹೇಂದ್ರವರ್ಮನನ್ನು ಸೋಲಿಸಿದ. ಆದರೆ ಪಲ್ಲವ ನರಸಿಂಹವರ್ಮನು ಚಳುಕ್ಯರಾಜ್ಯವನ್ನು ಮುತ್ತಿ ಪುಲಕೇಶಿಯ ಸೈನ್ಯವನ್ನು ಸೋಲಿಸಿ ಅವನ ರಾಜ್ಯವನ್ನು ಆಕ್ರಮಿಸಿದ (ಸು. 652). ಇಂಥ ದುರ್ಭರ ಸನ್ನಿವೇಶದಲ್ಲಿ ಗಂಗ ಭೂವಿಕ್ರಮ ತನ್ನ ಅಳಿಯನೂ ಪುಲಕೇಶಿಯ ಪುತ್ರರಲ್ಲೊಬ್ಬನೂ ಆದ ಒಂದನೆಯ ವಿಕ್ರಮಾದಿತ್ಯನ ಸಹಾಯಕ್ಕೆ ಧಾವಿಸಿ ಅನೇಕ ಯುದ್ಧಗಳಲ್ಲಿ ಪಲ್ಲವರ ಸೈನ್ಯವನ್ನು ಸದೆಬಡಿದು ಚಳುಕ್ಯ ಅಧಿಕಾರವನ್ನು ಪುನಃ ಸ್ಥಾಪಿಸುವಲ್ಲಿ ನೆರವಾದ. ಚಳುಕ್ಯ 2ನೆಯ ವಿಕ್ರಮಾದಿತ್ಯ ಪಲ್ಲವ ರಾಜಧಾನಿಯಾದ ಕಂಚಿಯನ್ನು ಮುತ್ತಿ ಪಲ್ಲವ ನಂದಿವರ್ಮನನ್ನು ಸೋಲಿಸಿ ಕಂಚಿಯ ದೇವಾಲಯಗಳಿಗೆ ವಿಶೇಷ ಸವಲತ್ತುಗಳನ್ನು ನೀಡಿದ. ಚಳುಕ್ಯ ಸಂತತಿಯ ತರುವಾಯ ಕನ್ನಡ ನಾಡಿನಲ್ಲಿ ಸಾರ್ವಭೌಮತ್ವವನ್ನು ಸ್ಥಾಪಿಸಿದ ರಾಷ್ಟ್ರಕೂಟರಿಗೂ ಪಲ್ಲವರಿಗೂ ರಕ್ತಸಂಬಂಧ ಹಾಗೂ ಹಗೆತನಗಳು ಮುಂದುವರಿದವು. ರಾಷ್ಟ್ರಕೂಟ ದಂತಿದುರ್ಗ ಪಲ್ಲವರನ್ನು ಸೋಲಿಸಿದುದಾಗಿ ತಿಳಿದುಬರುತ್ತದೆ. ಅನಂತರ ಆಳಿದ ಧ್ರುವ ಮತ್ತು ಗೋವಿಂದ ಮೊದಲಾದ ಸಾಮ್ರಾಟರು ತಮ್ಮ ದಿಗ್ವಿಜಯಗಳಲ್ಲಿ ಪಲ್ಲವರನ್ನು ಸೋಲಿಸಿದರು. ಅಮೋಘವರ್ಷ ನೃಪತುಂಗನ ಕಾಲದಲ್ಲಿ ರಾಷ್ಟ್ರಕೂಟ ಮತ್ತು ಪಲ್ಲವ ಮನೆತನಗಳ ಮಧ್ಯ ಸಂಬಂಧವೇರ್ಪಟ್ಟಿತು. ಅಮೋಘವರ್ಷ ತನ್ನ ಪುತ್ರಿಯೊಬ್ಬಳನ್ನು ಪಲ್ಲವ ನಂದಿವರ್ಮನಿಗೆ ವಿವಾಹ ಮಾಡಿಕೊಟ್ಟುದುದಾಗಿ ತಿಳಿದುಬರುತ್ತದೆ.

ಕನ್ನಡನಾಡಿನ ಚಿತ್ರದುರ್ಗ, ಬಳ್ಳಾರಿ, ತುಮಕೂರು ಮತ್ತು ಆಂಧ್ರದ ಅನಂತಪುರ ಜಿಲ್ಲೆಗಳನ್ನು ಒಳಗೊಂಡಿದ್ದ ನೊಳಂಬವಾಡಿ ಪ್ರದೇಶದ ಮೇಲೆ ಪಲ್ಲವ ನೊಳಂಬ ಎಂಬ ಮಾಂಡಲಿಕ ಮನೆತನ 8–11ನೆಯ ಶತಮಾನಗಳಲ್ಲಿ ಆಳ್ವಿಕೆ ನಡೆಸಿತು. ಈ ಮನೆತನಕ್ಕೂ ಕಂಚಿಯ ಪಲ್ಲವ ಮನೆತನಕ್ಕೂ ಇದ್ದ ಸಂಬಂಧ ಸ್ಪಷ್ಟವಿಲ್ಲ. (ಜಿ.ಆರ್.ಆರ್.)

**ಪಲ್ಲವಿ ರಾಮಲಿಂಗಯ್ಯ**: ಪ್ರಸಿದ್ಧ ಸಂಗೀತಗಾರರು. ಹತ್ತೊಂಬತ್ತನೆಯ ಶತಮಾನದ ದ್ವಿತೀಯ ಪಾದದಲ್ಲಿ ಬೆಂಗಳೂರು ಜಿಲ್ಲೆಯ ಕುಣಿಗಲು ತಾಲ್ಲೂಕು ಜೋಡಿಹೆಬ್ಬಳಲು ಗ್ರಾಮದಲ್ಲಿ ಜನಿಸಿದರು. ನರಸಪ್ಪ ಮತ್ತು ಸಾವಿತ್ರಮ್ಮ ಇವರ ಮಾತಾಪಿತೃಗಳು.

ರಾಮಲಿಂಗಯ್ಯನವರು ಸಂಸ್ಕೃತ, ತೆಲುಗು ಭಾಷೆಗಳನ್ನೂ ಸಂಗೀತ ಜ್ಯೋತಿಷ್ಯಗಳನ್ನೂ ಅಭ್ಯಾಸಮಾಡಿ ಅವುಗಳಲ್ಲಿ ಪಾಂಡಿತ್ಯ ಗಳಿಸಿದರು. ಸಂಗೀತವನ್ನು ಅವರ ತಂದೆಯವರಲ್ಲಿ ಅಭ್ಯಾಸ ಮಾಡಿದರು. ಇವರ 20ನೆಯ ವಯಸ್ಸಿನಲ್ಲಿ ಸುಬ್ಬಮ್ಮನೆಂಬ ಕನ್ಯೆಯೊಡನೆ ವಿವಾಹವಾಗಿ ಸ್ವತಂತ್ರ ಜೀವನಾಕಾಂಕ್ಷೆಯಿಂದ ಬೀರೂರಿಗೆ ತೆರಳಿ ಅಲ್ಲಿ ನೆಲಸಿದರು. ಅಲ್ಲಿ ಸುಂಕದ ಅಧಿಕಾರಿಗಳಾಗಿದ್ದು ಸಂಗೀತ ವಿದ್ಯೆಯಲ್ಲಿ ಪ್ರವೀಣರಾದರು. ರಾಮಲಿಂಗಯ್ಯನವರಲ್ಲಿ ಶಾರೀರಸಂಪತ್ತು, ವಿದ್ಯಾಪ್ರೌಢಿಮೆ ಹಾಗೂ ಪರಮಾರ್ಥಸಾಧನೆಗಳು ಸಂಗಮವಾಗಿದ್ದವೆಂದು ಅವರನ್ನು ಕಂಡುಕೇಳಿದವರು ಹೇಳುತ್ತಿದ್ದರಂತೆ. ಕರ್ಣಾಟಕ ಸಂಗೀತದ ಅತ್ಯಂತ ಪ್ರೌಢಮನೋಧರ್ಮ ಗೇಯ ಪ್ರಕಾರವಾದ ಪಲ್ಲವಿ ಗಾಯನದಲ್ಲಿ ಇವರು ಅದ್ವಿತೀಯರಾಗಿದ್ದುದರಿಂದ ದಕ್ಷಿಣ ಭಾರತದಲ್ಲೆಲ್ಲ ಇವರಿಗೆ ಪಲ್ಲವಿ ರಾಮಲಿಂಗಯ್ಯ ಎಂಬ ಹೆಸರೇ ಚಿರಪರಿಚಿತವಾಗಿತ್ತು. ಸಾಧಾರಣ ವಾಗಿ ಬಳಸುವ ಆದಿ, ತ್ರಿಪುಟ, ರೂಪಕ ಮುಂತಾದ ಸುಳಾದಿತಾಳಗಳಲ್ಲಿ ಮಾತ್ರವಲ್ಲದೆ ದೇಶೀ ತಾಳಗಳೆಂದು ಹೆಸರಾದ ನೂರಿಪ್ಪತ್ತೆಂಟು ತಾಳಗಳಲ್ಲಿಯೂ ಮರ್ಮ, ಭಂಗ, ಉರುಪು, ಸಂಕರ ಮುಂತಾದ ಅಪೂರ್ವ ತಾಳಗಳಲ್ಲಿಯೂ ಅವಧಾನ ಪದ್ಧತಿಯಲ್ಲಿಯೂ ಇವರು ಕಛೇರಿಯನ್ನು ಮಾಡುತ್ತಿರುವಾಗಲೆ ಪ್ರೌಢವೂ ಜಟಿಲವೂ ಆದರೆ ಬಹು ಶ್ರಾವ್ಯವೂ ಚಮತ್ಕಾರ ಯುಕ್ತವೂ ಆದ ಪಲ್ಲವಿಗಳನ್ನು ಆಶುರಚನೆ ಮಾಡಿ ಹಾಡಿ ತೋರಿಸುತ್ತಿದ್ದರು. ಹೀಗೆ ದೇಶೀ ತಾಳ ಪಲ್ಲವಿ ಗಾಯನ ಪದ್ಧತಿಯು ಇವರಿಂದ ಕರ್ನಾಟಕದಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಕನ್ನಡದಲ್ಲಿ ಕೆಲವು ದೇವರನಾಮಗಳನ್ನು ಸಹ ರಚಿಸಿದ್ದರೆಂದೂ ತಿಳಿದು ಬರುತ್ತದೆ. ದಕ್ಷಿಣ ದೇಶದ ಹಲವು ರಾಜಮಹಾರಾಜರುಗಳಿಂದಲೂ ಇವರು ಸನ್ಮಾನಿತರಾಗಿದ್ದರು. ತ್ಯಾಗರಾಜರ ಪ್ರಮುಖ ಶಿಷ್ಯರಾಗಿದ್ದ ಮಾನಂಬಚುಚ್ಚಾವಡಿ ವೆಂಕಟಸುಬ್ಬಯ್ಯನವರಲ್ಲಿ ಒಂದು ವರ್ಷಕಾಲ ಶಿಷ್ಯವೃತ್ತಿಯನ್ನು ಕೈಗೊಂಡು ತ್ಯಾಗರಾಜ ಪರಂಪರೆಯ ಕೃತಿಗಳನ್ನೂ ಗಾನಶೈಲಿಯನ್ನೂ ರಾಮಲಿಂಗಯ್ಯನವರು ಮೈಗೂಡಿಸಿಕೊಂಡರು. ಇವರಿಗೆ ನಾಲ್ವರು ಪುತ್ರರೂ ಇಬ್ಬರು ಪುತ್ರಿಯರೂ

ಇದ್ದರು. 1900–01ರಲ್ಲಿ ಪ್ಲೇಗಿಗೆ ಬಲಿಯಾಗಿ ಇವರೂ ಇವರ ಪತ್ನಿಯೂ ಕೇವಲ ಹನ್ನೆರಡು ದಿನಗಳ ಅಂತರದಲ್ಲಿ ನಿಧನರಾದರು. (ಆರ್.ಎಸ್.)

**ಪಶುಸಂಗೋಪನೆ:** ಕರ್ನಾಟಕದಲ್ಲಿ ಆಹಾರ ಉತ್ಪಾದನೆ ಹಾಗೂ ಕೃಷಿ ಕೆಲಸಗಳಿಗಾಗಿ ಬಳಸಲಾಗುವ ಮುಖ್ಯ ಬಗೆಯ ಜಾನುವಾರುಗಳೆಂದರೆ ದನ, ಎಮ್ಮೆ, ಕುರಿ, ಮೇಕೆ, ಹಂದಿ ಮತ್ತು ಕೋಳಿ. ಕೃಷಿಯಲ್ಲಿ ಸ್ವಲ್ಪಮಟ್ಟಿಗೆ ಯಾಂತ್ರಿಕತೆ ಸಾಧ್ಯವಾಗಿದ್ದರೂ ಜಾನುವಾರುಗಳ ಕಾರ್ಯಶಕ್ತಿಯೇ ಕೃಷಿಕಾರ್ಯಗಳ ಮುಖ್ಯ ಚಾಲಕಶಕ್ತಿಯಾಗಿದೆ. ಉತ್ತಮ ಮೇವು ಮತ್ತು ನಿರ್ವಹಣೆಗಳಿಂದ ಜಾನುವಾರುಗಳ ಕಾರ್ಯಶಕ್ತಿಯನ್ನು ಕನಿಷ್ಠ ಸೇ. 20ರಷ್ಟು ಹೆಚ್ಚಿಸಬಹುದು. ಯೋಗ್ಯವಾದ ಕೃಷಿ ಭೂಮಿಯ ಬೇಡಿಕೆಯ ಹೆಚ್ಚಳದಿಂದಾಗಿ ಉತ್ತಮ ಕಾರ್ಯಶಕ್ತಿಯುಳ್ಳ ಜಾನುವಾರುಗಳ ಆವಶ್ಯಕತೆ ಹೆಚ್ಚಿದೆ. ಭೂ ಹಿಡುವಳಿಯನ್ನು ಮಿತಗೊಳಿಸುವುದರಿಂದ ಹಾಗೂ ತೈಲ ಪದಾರ್ಥಗಳ ಕೊರತೆಯಿಂದಾಗಿ ಕೃಷಿಯಾಂತ್ರಿಕತೆಗೆ ತೊಡಕು ಉಂಟಾಗಿರುವುದರಿಂದ ಜಾನುವಾರುಗಳ ಆವಶ್ಯಕತೆ ಹೆಚ್ಚಿದೆ. ಇನ್ನು ಮುಂದೂ ಹಲವು ದಶಕಗಳ ಕಾಲ ಕರ್ನಾಟಕದಲ್ಲಿ ವ್ಯವಸಾಯ ಮತ್ತು ಒಳನಾಡ ಓಡಾಟ ಎತ್ತುಗಳನ್ನೇ ಅವಲಂಬಿಸಿರುತ್ತದೆ.

ದನಗಳ ಮತ್ತೊಂದು ಮುಖ್ಯ ಉಪಯೋಗವೆಂದರೆ ಹಾಲಿನ ಪೂರೈಕೆ. ಹಾಲು, ಮಾಂಸ ಮತ್ತು ಮೊಟ್ಟೆಗಳ ಲಭ್ಯತೆ ಬಹಳ ಕಡಿಮೆಯಿರುವುದರಿಂದ ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವುದು ಬಹುಮುಖ್ಯ. ಈಗಾಗಲೇ ಸಾಕಷ್ಟು ಹೆಚ್ಚಾಗಿರುವ ಜಾನುವಾರುಗಳ ಸಂಖ್ಯೆಯನ್ನು ಹೆಚ್ಚಿಸದೆ ಉತ್ತಮ ತಳಿ ಎಬ್ಬಿಕೆ, ಮೇಯಿಸುವಿಕೆ ಮತ್ತು ನಿರ್ವಹಣಾ ವಿಧಾನಗಳಿಂದ ಈಗಿರುವ ಜಾನುವಾರುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಇದನ್ನು ಸಾಧಿಸಬಹುದು. ಜಾನುವಾರು ಕೇಂದ್ರದ ಗೊಬ್ಬರ ಜಾನುವಾರು ಸಾಕಣೆಯ ಅತಿ ಬೆಲೆಬಾಳುವ ಉಪೋತ್ಪನ್ನ, ಇದು ಮಣ್ಣಿನ ರಚನೆಯನ್ನು ಉತ್ತಮಗೊಳಿಸಲು, ಮಣ್ಣಿನ ನೀರು ಶೇಖರಣೆಯ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದರಿಂದಲೇ ಇದನ್ನು ಮಣ್ಣಿನ ಜೀವಜೀವಾಳ ಎಂದು ಕರೆಯುತ್ತಾರೆ. ಕೋಳಿಗೊಬ್ಬರ ಎಲ್ಲಕ್ಕಿಂತ ಅತ್ಯಂತ ಬೆಲೆಬಾಳುವ ಗೊಬ್ಬರ.

### ಪಶು ಸಂಪತ್ತು ಮತ್ತು ಅಭಿವೃದ್ಧಿ ಕಾರ್ಯಗಳು

1997ರ ಜಾನುವಾರು ಗಣತಿಯ ಪ್ರಕಾರ ಕರ್ನಾಟಕ ರಾಜ್ಯದ ವಿವಿಧ ಜಾನುವಾರುಗಳ ಸಂಖ್ಯೆ ಇಂತಿದೆ–ಮಿಶ್ರತಳಿಯ ದನಕರುಗಳು 11,30,551, ಸ್ಥಳೀಯ 95,38,626, ವಿದೇಶಿತಳಿ 1,61,953, ಒಟ್ಟು 1,08,31,130 ದನಕರುಗಳಿದ್ದವು ಮತ್ತು 43,67,183 ಎಮ್ಮೆಗಳು, ಮಿಶ್ರ, ವಿದೇಶಿ ಮತ್ತು ಸ್ಥಳೀಯವಾದ ಒಟ್ಟು 80,03,078. ಕುರಿಗಳು, 48,74,759 ಮೇಕೆಗಳು, ವಿವಿಧ ಬಗೆಯ ಒಟ್ಟು 4,05,444. ಹಂದಿಗಳು 22,834, ಮೊಲಗಳು 2,13,98,756 ಕೋಳಿಗಳು ಇದ್ದು.

**ದನ:** ಕರ್ನಾಟಕ ರಾಜ್ಯ ಬಹಳ ಹಿಂದಿನಿಂದಲೂ ಉತ್ತಮ ದನಗಳಿಗೆ ಹೆಸರಾಗಿದೆ. ರಾಜ್ಯದಲ್ಲಿ ಎರಡು ರೀತಿಯ ದನಗಳನ್ನು ಕಾಣಬಹುದು. ಮೊದಲನೆಯದು ಬಹಳ ಹೆಚ್ಚಿನ ಪ್ರಮಾಣದಲ್ಲಿರುವ ನಿರ್ದಿಷ್ಟ ಗುಂಪಿಗೆ ಸೇರದ ನಾಡುದನ. ಇವು ಗಾತ್ರದಲ್ಲಿ ಸಣ್ಣವು ಹಾಗೂ ವಿವಿಧ ಬಣ್ಣದವು. ಎರಡನೆಯದು ಮುಖ್ಯವಾದ ಶುದ್ಧ ತಳಿಗಳನ್ನು ಒಳಗೊಳ್ಳುತ್ತದೆ. ಇವುಗಳ ಪ್ರಮಾಣ ಬಹಳ ಕಡಿಮೆ. ಇವು ನಿರ್ದಿಷ್ಟ ಗಾತ್ರ ಹಾಗೂ ಬಣ್ಣದವು.

ಕರ್ನಾಟಕದ ಉತ್ತಮ ದನಗಳನ್ನು ಅವುಗಳ ಉಪಯೋಗದ ಮೇರೆಗೆ ಎರಡು ಗುಂಪುಗಳಾಗಿ ವಿಭಾಗಿಸಬಹುದು:

1. ದೇವನಿ ಮತ್ತು ಕೃಷ್ಣಕೊಳ್ಳ ತಳಿಗಳು – ಎರಡು ಉದ್ದೇಶದವು.
2. ಅಮೃತ ಮಹಲ್, ಹಳ್ಳಿಕಾರ್, ಖಿಲಾರಿ ಮತ್ತು ಅಲಂಬಾಡಿ ತಳಿಗಳು – ಕೆಲಸಕ್ಕೆ ಯೋಗ್ಯವಾದವು.

ಕರ್ನಾಟಕಕ್ಕೇ ವಿಶಿಷ್ಟವಾದ ಹೈನು ತಳಿ ಯಾವುದೂ ಇಲ್ಲ. ಕೆಲವು ಪಟ್ಟಣಗಳಲ್ಲಿ ಹಾಗೂ ಸರ್ಕಾರಿ ಸಾಕಣೆ ಕೇಂದ್ರಗಳಲ್ಲಿ ಕೆಲವು ಸಿಂಧಿ ದನಗಳು ಇದ್ದುವು. ಇತ್ತೀಚಿನ ವರ್ಷಗಳಲ್ಲಿ ಮಿಶ್ರತಳಿ ಎಬ್ಬಿಕೆಯಿಂದ ಮೈಸೂರು ಹಾಗೂ ಬೆಂಗಳೂರು ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಮಿಶ್ರತಳಿ ದನಗಳ ಸಂಖ್ಯೆ ಹೆಚ್ಚುತ್ತಿದೆ. ರಾಜ್ಯ ಸರ್ಕಾರ ಕೈಗೊಂಡಿರುವ ತೀವ್ರತಳಿ ಅಭಿವೃದ್ಧಿ ಕಾರ್ಯಕ್ರಮದಿಂದಾಗಿ ಇತರೆ ಜಿಲ್ಲೆಗಳಲ್ಲೂ ಮಿಶ್ರತಳಿಗಳನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿರುವ ಕೆಲವು ಮುಖ್ಯ ತಳಿಗಳ ವಿವರ ಈ ರೀತಿ ಇದೆ:

**1. ಅಮೃತಮಹಲ್:** ಈ ತಳಿ ಕಾರ್ಯಶಕ್ತಿಗೆ ಭಾರತದಲ್ಲೇ ಹೆಸರಾದದ್ದು. ಇದು ಸಿಟ್ಟಿನ, ಚುರುಕು ಸ್ವಭಾವದ್ದು. ಕಷ್ಟಸಹಿಷ್ಣುತೆಗೆ ಹೆಸರಾದದ್ದು. ಈ ತಳಿಯ ಹಸುಗಳಲ್ಲಿ ಹಾಲಿನ ಉತ್ಪಾದನೆ ಬಹಳ ಕಡಿಮೆ. ಸುಸಂಬದ್ಧವಾದ ಕಿರಿದಾದ ಮೈಕಟ್ಟು, ಬೂದು ಬಣ್ಣ, ಉದ್ದವಾದ ತುದಿ ಚೂಪಾದ ಪ್ರಮುಖವಾಗಿ ಕಾಣುವ ಹಣೆಯಿರುವ ತಲೆ, ಕಾಲುಗಳ ಉದ್ದ ಮಧ್ಯಮ ಮತ್ತು ಕಾಲಿನ ಭಾಗಗಳು ಸುಸಂಬದ್ಧ, ಸುಮಾರಾಗಿ ದಪ್ಪನಾದ ಮೂಳೆ, ಲಯಬದ್ಧ ನಡಿಗೆ ಈ ತಳಿಯ ಲಕ್ಷಣ. ಈ ತಳಿಗಳು ಮುಖ್ಯವಾಗಿ ಚಿತ್ರದುರ್ಗ, ತುಮಕೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಯ ಭಾಗಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲೂ ಈ ತಳಿಯ ಎತ್ತುಗಳು ಸಾಕಷ್ಟು ಪ್ರಮಾಣದಲ್ಲಿ ಉಂಟು. ಅಮೃತಮಹಲ್ ದನಗಳನ್ನು ಅಜ್ಜಂಪುರ ಕೇಂದ್ರಕ್ಕೆ ಸೇರಿದ ಸಾವಿರಾರು ಎಕರೆಯ ಅಮೃತಮಹಲ್ ಕಾವಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾಕಲಾಗುತ್ತಿತ್ತು.

**2. ಹಳ್ಳಿಕಾರ್ :** ಕರ್ನಾಟಕದಲ್ಲಿ ಕೃಷಿ ಕೆಲಸಕ್ಕೆ ಬಹಳ ಜನಪ್ರಿಯವಾದ ತಳಿ. ರಸ್ತೆ ಸಾರಿಗೆ ಕೆಲಸಕ್ಕೂ ಇದು ಉಪಯುಕ್ತವೆನಿಸಿದೆ. ದನಗಳನ್ನು ಕೊಟ್ಟಿಗೆಯಲ್ಲಿ ಮೇಯಿಸಿ ಸಣ್ಣ ಗುಂಪುಗಳಲ್ಲಿ ಹಾಕಲಾಗುತ್ತದೆ. ಬಣ್ಣ ಸಾಮಾನ್ಯವಾಗಿ ಬೂದು, ಭುಜ ಹಾಗೂ ಚಪ್ಪೆಯ ಮೇಲೆ ಬಣ್ಣ ಸ್ವಲ್ಪ ದಟ್ಟವಾಗಿರುತ್ತದೆ. ಕತ್ತು ತೆಳು ಹಾಗೂ ಉದ್ದವಾದುದು. ಕಾಲುಗಳು ಬಲವಾಗಿದ್ದು ಒಂದರಿಂದ ಒಂದು ದೂರವಾಗಿರುತ್ತವೆ. ತಲೆ ಉದ್ದ ಹಾಗೂ ತುದಿಯಲ್ಲಿ ಚೂಪಾಗಿದೆ. ಹಣೆ ಸ್ವಲ್ಪ ಉಬ್ಬಿದ್ದು ಅದರ ಮಧ್ಯ ಒಂದು ಕಾಲುವೆಯಂತ ತಗ್ಗು ಇರುತ್ತದೆ. ಕೊಂಬುಗಳು ಉದ್ದ ಹಾಗೂ ಚೂಪು; ಕತ್ತಿನ ಮೇಲೆ ಹಿಂದಕ್ಕೆ ಹಾಗೂ ಸ್ವಲ್ಪ ಮೇಲಕ್ಕೆ ಬಗ್ಗಿದಂತಿವೆ. ಕೆಚ್ಚಲು ಚಿಕ್ಕದು, ಹಾಲಿನ ಉತ್ಪಾದನೆ ಕಡಿಮೆ. ಈ ತಳಿಯನ್ನು ಮುಖ್ಯವಾಗಿ ತುಮಕೂರು, ಹಾಸನ, ಮೈಸೂರು, ಮಂಡ್ಯ, ಕೋಲಾರ, ಬೆಂಗಳೂರು ಜಿಲ್ಲೆಗಳು ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಣಬಹುದು. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಕಂಡುಬರುವ ಹಳ್ಳಿಕಾರ್ ತಳಿಯ ಒಂದು ಬಗೆಯಾದ ಗುಜ್ಜಮಾವು ಸುಮಾರಾಗಿ ಹಾಲು ಕೊಡುತ್ತದೆ.

**3. ಖಿಲಾರಿ :** ಇದು ವ್ಯವಸಾಯ ಮತ್ತು ವೇಗವಾದ ರಸ್ತೆ ಸಾರಿಗೆಗೆ ಸೂಕ್ತವಾದ ಅತ್ಯುತ್ತಮ ತಳಿ. ಈ ಹಸುಗಳು ಬಹಳ ಕಡಮೆ ಹಾಲು ಉತ್ಪಾದಿಸುತ್ತವೆ. ಇದು ಉತ್ತರ ಕರ್ನಾಟಕದ ತಳಿ. ಹಳ್ಳಿಕಾರ್ ಮತ್ತು ಅಮೃತ ಮಹಲ್ ತಳಿಗಳನ್ನು ಹೋಲುತ್ತದೆ. ಬಿಳಿ ಹಾಗೂ ಬೂದು ಸಾಮಾನ್ಯ ಬಣ್ಣಗಳು. ಮುಖ ನೀಳ, ಹಣೆಯ ಮಧ್ಯದಲ್ಲಿ

ತಗ್ಗು ಬೀಳುವಂತೆ ಕಣ್ಣುಗಳ ಮೇಲೆ ಉಬ್ಬಿರುತ್ತದೆ. ಕೊಂಬು ಬುಡದಲ್ಲಿ ದಪ್ಪವಾಗಿಯೂ ತುದಿಯಲ್ಲಿ ಚೂಪಾಗಿಯೂ ಇರುತ್ತದೆ.

**4. ಆಲಂಬಾಡಿ:** ಇವು ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಬೆಟ್ಟಗಾಡು ಪ್ರದೇಶದಲ್ಲಿ ಅಭಿವೃದ್ಧಿ ಹೊಂದಿದ ದನಗಳು. ಇವನ್ನು ಸಾಮಾನ್ಯವಾಗಿ ಕಾಡಿನಲ್ಲಿ ಮೇಯಿಸಿ ಸಾಕಲಾಗುತ್ತದೆ. ಈ ತಳಿ ಹಳ್ಳಿಕಾರ್ ತಳಿಯನ್ನು ಹೋಲುತ್ತದೆ. ದಟ್ಟ ಬೂದು ಅಥವಾ ಕಪ್ಪು ಇದರ ಸಾಮಾನ್ಯ ಬಣ್ಣಗಳು. ತಲೆ ಸಣ್ಣ ಮತ್ತು ನೀಳ. ಹಣೆ ಉಬ್ಬಿಕೊಂಡಿರುತ್ತದೆ. ಉದ್ದವಾದ ಕೊಂಬುಗಳು, ಹಿಂದಕ್ಕೆ ಹಾಗೂ ಸ್ವಲ್ಪ ಮೇಲಕ್ಕೆ ಚಾಚಿಕೊಂಡಿರುತ್ತವೆ. ಚೆನ್ನಾಗಿ ಬಗ್ಗಿದ ಪಕ್ಕೆಲುಬುಗಳುಳ್ಳ ದೊಡ್ಡ ಮೈಕಟ್ಟು ಇರುತ್ತದೆ. ಎತ್ತುಗಳು ಚುರುಕು ಮತ್ತು ಗಡುಸು. ಈ ತಳಿಯ ಹಸುಗಳಲ್ಲಿ ಹಾಲಿನ ಉತ್ಪಾದನೆ ಕಡಿಮೆ.

**5. ದೇವನಿ:** ಈ ತಳಿ ಬೀದರ್ ಜಿಲ್ಲೆ ಹಾಗೂ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ. ಇದು ಮಧ್ಯಮ ಗಾತ್ರದ, ಬಿಳಿ ಕಪ್ಪು ಇಲ್ಲವೇ ಬಿಳಿಕಂದು ಬಣ್ಣಗಳ ಅನಿರ್ದಿಷ್ಟ ಮಚ್ಚೆಗಳ ದನ. ಈ ತಳಿಯ ಎತ್ತುಗಳು ಚೆನ್ನಾಗಿ ದುಡಿಮೆ ಮಾಡುತ್ತವೆ ಹಾಗೂ ಹಸುಗಳು ಸುಮಾರಾಗಿ ಹಾಲು ಕೊಡುತ್ತವೆ. ಈ ತಳಿ ನೋಡಲು ಸುಂದರ. ಚರ್ಮ ಗಾಜಿನಂತೆ ನುಣುಪು. ಹಣೆ ಅಷ್ಟಾಗಿ ಉಬ್ಬಿಲ್ಲ. ಕೊಂಬು ಮೋಟು ಮತ್ತು ಹೊರಕ್ಕೆ, ಹಿಂದಕ್ಕೆ ಬಗ್ಗಿರುತ್ತವೆ.

**6. ಕೃಷ್ಣಕೊಳ್ಳ:** ಈ ತಳಿಯ ದನಗಳು ದೊಡ್ಡ ಗಾತ್ರದವು. ಆದ್ದರಿಂದ ಕಪ್ಪು ಜೇಡಿಮಣ್ಣಿನಲ್ಲಿ ಕೆಲಸಮಾಡಲು ಮತ್ತು ಇತರ ಕಷ್ಟದ ಕೆಲಸಗಳಿಗೆ ಸೂಕ್ತವಾದುವು. ಇದು ರಾಮದುರ್ಗ, ಜಮಖಂಡಿ, ಮುಧೋಳ, ಅಥಣಿ ಮತ್ತು ಚಿಕ್ಕೋಡಿ ತಾಲ್ಲೂಕುಗಳಲ್ಲಿ ಕಂಡುಬರುತ್ತದೆ. ಇವು ಬೂದು-ಬಿಳಿ ಬಣ್ಣದವು. ಕತ್ತು ತುಂಡಾಗಿದ್ದು ಬಲವಾಗಿರುತ್ತದೆ. ಚಿಕ್ಕದಾದ ಮತ್ತು ಬಗ್ಗಿರುವ ಇದರ ಕೊಂಬುಗಳು ತಲೆಯ ಹೊರಕೋನದಿಂದ ಹೊರಟು ಸ್ವಲ್ಪ ಮೇಲಕ್ಕೆ ಹಾಗೂ ಒಳಕ್ಕೆ ಬಗ್ಗಿರುತ್ತವೆ. ಹಸುಗಳು ಸುಮಾರಾಗಿ ಹಾಲು ಕೊಡುತ್ತವೆ.

**ಮಿಶ್ರತಳಿ ದನಗಳು :** ಕರ್ನಾಟಕದ್ದೇ ಆದ ಯಾವುದೊಂದು ಹೈನತಳಿ ದನ ಇಲ್ಲದಿರುವುದರಿಂದ ಹೊರದೇಶದ ತಳಿಗಳಾದ ಜರ್ಸಿ, ಹಾಲ್‌ಸ್ಟೀನ್ ಮತ್ತು ರೆಡ್‌ಡೇನ್ ತಳಿಗಳೊಂದಿಗೆ ಹಾಯಿಸಿ ಉತ್ತಮಗೊಳಿಸಿದ ಕಾರ್ಯ ಉತ್ತೇಜಕ ಪ್ರತಿಫಲಗಳನ್ನು ಕೊಟ್ಟಿದೆ. ಮಿಶ್ರತಳಿ ಹಸು ದಿನಕ್ಕೆ ಸರಾಸರಿ 10 ಲೀಟರ್ ಹಾಲು ಕರೆಯುತ್ತದೆ. 25 ಲೀಟರ್ ಮತ್ತು ಅದಕ್ಕೂ ಹೆಚ್ಚು ಹಾಲು ಕರೆದಿರುವ ದಾಖಲೆಗಳು ಉಂಟು. ಮಿಶ್ರತಳಿಯ ಹೋರಿಕರುಗಳೂ ಉತ್ತಮ ಎತ್ತುಗಳಾಗಬಲ್ಲವು. ಇಂಥ ಎತ್ತುಗಳ ಒಂದೇ ಕೊರತೆಯೆಂದರೆ ಅವುಗಳ ನಿಧಾನಪ್ರವೃತ್ತಿ ಮತ್ತು ಬಿಸಿಲು ಕಾಲದಲ್ಲಿ ಮಧ್ಯಾಹ್ನದ ಹೊತ್ತು ಅವುಗಳಿಗೆ ಸ್ವಲ್ಪ ವಿಶ್ರಾಂತಿ ಬೇಕಾಗಬಹುದು. ಆದರೆ ಇವು ಸ್ಥಳೀಯ ತಳಿ ಎತ್ತುಗಳಿಗಿಂತ ಕಡಮೆ ಬೆಲೆಗೆ ಸಿಗುತ್ತವೆ. ಇವುಗಳಲ್ಲದೆ ಈ ಕೆಳಕಂಡ ಭಾರತೀಯ ಗೋತಳಿಗಳಿವೆ – ಮಲೆನಾಡು ಗಿಡ್ಡ, ಜವಾರಿ, ಕಂಗಾಯಂ, ಅಂಬ್ಲಾಚೇರಿ, ಬರಗೂರು, ಓಂಗೋಲ್, ವೆಚೂರು, ಡಾಂಗಿ, ಗೌಳವ್, ಗಿರ್, ರಾಟಿ, ಥಾರ್‌ಪಾರ್ಕರ್, ಹರ್ಯಾನ್, ಸಾಹಿವಾಲ್, ಕಾಂಕ್ರೇಜ್, ಮಾಳ್ವಿ, ನಾಗೋರ್, ಪುಂಗನೂರ್, ಬಚಾರ್, ಕೆಂಕಾಥ ನಿಮಾರಿ, ಮೇವಾಟಿ, ಸಿರಿ, (ರೆಡ್) ಕೆಂಪುಸಿಂಧಿ, ಮೇವಾಡ್, ಮೇವಾಟಿ ಮತ್ತು ಲಾಲ್ ಕಂದ್ಹಾರಿ ಮುಂತಾದವು.

**ದನ ಅಭಿವೃದ್ಧಿ ಯೋಜನೆಗಳು :** ರಾಜ್ಯದಲ್ಲಿ ಹೆಚ್ಚು ಸಂಖ್ಯೆಯಲ್ಲಿರುವ ದನಗಳನ್ನು ಉತ್ತಮಗೊಳಿಸಿ ಪ್ರಾಣಿಜನ್ಯ ನೈಟ್ರೋಜನ್ ಲಭ್ಯತೆಯ ಪ್ರಮಾಣವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಹಲವು ಯೋಜನೆಗಳನ್ನು ಹಾಕಿಕೊಂಡಿದೆ.

**1. ತೀವ್ರತಳಿ ಅಭಿವೃದ್ಧಿ ಯೋಜನೆ:** ಬೆಂಗಳೂರು ಮತ್ತು ಧಾರವಾಡಗಳಲ್ಲಿ ಎರಡು ತೀವ್ರತಳಿ ಅಭಿವೃದ್ಧಿ ಯೋಜನೆಗಳಿವೆ. ಒಂದೊಂದು ಕ್ಷೇತ್ರದಲ್ಲೂ 100 ಕೃತಕ ವೀರ್ಯಾವಾಪನೆ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಈ ಕೇಂದ್ರಗಳು ಕೃತಕ ವೀರ್ಯಾವಾಪನೆ ಕಾರ್ಯವೇ ಅಲ್ಲದೆ ಸಾಮಾನ್ಯ ರೋಗಗಳಿಗೆ ಚಿಕಿತ್ಸೆ, ದನಗಳಿಗೆ ಲಸಿಕೆ ಹಾಕುವುದು, ಜಾನುವಾರು ಪ್ರದರ್ಶನ ಮತ್ತು ಕರುಗಳ ಪ್ರದರ್ಶನಗಳನ್ನು ನಡೆಸುತ್ತವೆ.

**2. ಮಾದರಿ ಗ್ರಾಮಯೋಜನೆ:** ರಾಜ್ಯದಾದ್ಯಂತ ತಳಿ ಎಬ್ಬಿಕೆ ಕಾರ್ಯಕ್ಕೆ ಉತ್ತೇಜನ ಕೊಡಲು, ಹಲವು ಶಾಖೆಗಳಿರುವ 30 ಮಾದರಿ ಗ್ರಾಮ ಯೋಜನೆ ವಿಭಾಗಗಳನ್ನು ಪ್ರಾರಂಭಿಸಲಾಗಿದೆ.

**3. ಕೇಂದ್ರ ವೀರ್ಯ ಶೇಖರಣಾ ಕೇಂದ್ರ:** ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತಳಿ ಎಬ್ಬಿಕೆ ಕಾರ್ಯ ಸುಗಮವಾಗಿ ನಡೆಯಲು ಬೆಂಗಳೂರು, ಧಾರವಾಡ, ಮೈಸೂರು ಮತ್ತು ಮುನಿರಾಬಾದುಗಳಲ್ಲಿ ವೀರ್ಯ ಶೇಖರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಶೇಖರಿಸಿದ ವೀರ್ಯವನ್ನು ಸಂಸ್ಕರಿಸಿ ಸುತ್ತಲ ಎಲ್ಲ ಕೇಂದ್ರಗಳಿಗೂ ಸರಬರಾಜು ಮಾಡಲಾಗುವುದು. ಈ ಕೇಂದ್ರಗಳಲ್ಲಿ ಜರ್ಸಿ, ಹಾಲ್‌ಸ್ಟೀನ್ ಮತ್ತು ರೆಡ್‌ಡೇನ್ ಹೋರಿಗಳು ಹಾಗೂ ಮುರ್ರ ಕೋಣಗಳನ್ನು ಸಾಕಲಾಗಿದೆ.

**4. ಜಾನುವಾರು ಕೇಂದ್ರಗಳು:** ಅತಿ ಕಡಿಮೆ ಸಮಯದಲ್ಲಿ ಹಾಲು ಉತ್ಪಾದನೆ ಹೆಚ್ಚಿಸಲು ರೈತರಿಗಿರುವ ಏಕಮಾತ್ರ ಮಾರ್ಗವೆಂದರೆ ಮಿಶ್ರತಳಿ ಎಬ್ಬಿಕೆ. ಅದರಿಂದ ದನಗಳ ತಳಿ ಅಭಿವೃದ್ಧಿಗಾಗಿ ಹೊರದೇಶದ ಉತ್ತಮ ಹೈನ ತಳಿಗಳೊಂದಿಗೆ ಮಿಶ್ರತಳಿ ಎಬ್ಬಿಕೆ ಕಾರ್ಯವನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ.

(ಅ) ಬೀಜದ ಹೋರಿಗಳ ಉತ್ಪಾದನೆಗಾಗಿ ಹಾಲ್‌ಸ್ಟೀನ್ ಶುದ್ಧ ತಳಿಯ ಒಂದು ಸಣ್ಣ ಗುಂಪನ್ನು ಹೆಸರಘಟ್ಟದ ಜಾನುವಾರು ಹಾಗೂ ಸಂಶೋಧನ ಕೇಂದ್ರದಲ್ಲಿ ಇಡಲಾಗಿದೆ.

(ಆ) ಡೇನಿಷ್ ಸರ್ಕಾರದ ಸಹಕಾರದೊಂದಿಗೆ ಹೆಸರಘಟ್ಟ ಮತ್ತು ಮುನಿರಾಬಾದುಗಳಲ್ಲಿ ಇಂಡೋ-ಡೇನಿಷ್ ಯೋಜನೆ ಪ್ರಾರಂಭವಾಗಿ ರೆಡ್‌ಡೇನ್ ತಳಿಯೊಂದಿಗೆ ಮಿಶ್ರತಳಿ ಎಬ್ಬಿಕೆ ಕಾರ್ಯ ಈ ಪ್ರದೇಶಗಳ ಸುತ್ತಮುತ್ತ ನಡೆಯುತ್ತಿದೆ.

(ಇ) ಇಂಡೋ-ಡೇನಿಷ್ ಯೋಜನೆಯ ಅಂಗವಾಗಿ ಡೆನ್ಮಾರ್ಕಿನ ಜರ್ಸಿಗಳನ್ನು ಕೂಡಿಗೆ ಮತ್ತು ಧಾರವಾಡಗಳಲ್ಲಿ ಇಟ್ಟು ಅದರ ಸುತ್ತ ಮುತ್ತಲ ಪ್ರದೇಶಗಳಲ್ಲಿ ಮಿಶ್ರತಳಿ ಎಬ್ಬಿಕೆ ಕಾರ್ಯ ನಡೆಯುತ್ತಿದೆ.

(ಈ) ರಾಜ್ಯದ ಪ್ರಸಿದ್ಧ ಕಾಮಗಾರಿ ತಳಿಗಳನ್ನು ಉಳಿಸಿ, ಬೆಳೆಸಿ, ತಳಿ ಎಬ್ಬಿಕೆಗೆ ಉತ್ತಮ ಬೀಜದ ಹೋರಿಗಳನ್ನು ಉತ್ಪಾದಿಸಲು ರಾಜ್ಯದ ಪಶುಸಂಗೋಪನಾ ಇಲಾಖೆ ತನ್ನ ಆಶ್ರಯದಲ್ಲಿ ಬೆಂಗಳೂರಿನ ಹೆಸರಘಟ್ಟ, ಬಳ್ಳಾರಿ ಜಿಲ್ಲೆಯ ಕುರಿಕುಪ್ಪೆ, ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ, ಧಾರವಾಡ ಜಿಲ್ಲೆಯ ಬಂಕಾಪುರ ಮತ್ತು ತೇಗೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೊಯ್ಲಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿದೆ.

**5. ಹೈನ ಅಭಿವೃದ್ಧಿ:** ಪ್ರಪಂಚ ಹಣಕಾಸು ಸಂಸ್ಥೆಯ ಸಹಯೋಗದೊಂದಿಗೆ ಹೈನ ಅಭಿವೃದ್ಧಿ ಯೋಜನೆಗಾಗಿ 1975-76ರಿಂದ ಕರ್ನಾಟಕ ಹೈನ ಅಭಿವೃದ್ಧಿ ಸಂಸ್ಥೆ ಪ್ರಾರಂಭವಾಯಿತು. ತಳಿ ಎಬ್ಬಿಕೆ, ಪಶುವೈದ್ಯಕೀಯ ಸಹಾಯ, ಮೇವು ಹಾಗೂ ಹಸಿರು ಮೇವಿನ ಅನುಕೂಲಗಳ ಜತೆಗೆ ಹಾಲು ಶೇಖರಣೆ ಹಾಗೂ ಸಂಸ್ಕರಣೆ ಕಾರ್ಯಗಳಲ್ಲಿ ಭಾಗವಹಿಸಿ ಮಿಶ್ರತಳಿ ದನಗಳನ್ನು ಹೆಚ್ಚಿಸಿ ಹಾಲಿನ ಉತ್ಪಾದನೆ ಹೆಚ್ಚಿಸುವ ಯೋಜನೆಯನ್ನು ಈ ಸಂಸ್ಥೆ ಕೈಗೊಂಡಿದೆ. ಬೆಂಗಳೂರು, ತುಮಕೂರು,

ಕೋಲಾರ, ಮಂಡ್ಯ, ಮೈಸೂರು, ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಒಳಗೊಳ್ಳುವ ಈ ಯೋಜನೆಯಡಿ ಕೆಳಕಂಡ ಕಾರ್ಯಗಳನ್ನು ಹಾಕಿಕೊಳ್ಳಲಾಗಿದೆ: (1) ಸುಮಾರು 1,800 ಹಾಲಿನ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು, (2) ಹೊರದೇಶದ ಹೈನು ತಳಿಗಳನ್ನು ಬಳಸಿ ಕೃತಕ ವೀರ್ಯಾವಾಪನೆ ಮಾಡಿ ಮಿಶ್ರತಳಿ ಎಬ್ಬಿಕೆ ಕಾರ್ಯ ಮಾಡುವುದು, ಇದಕ್ಕೆ ಪೂರಕವಾಗಿ ಮೇವು ಬೆಳೆಯುವಿಕೆ, ಮೇವು ಶೇಖರಣೆ ಮುಂತಾದ ಕಾರ್ಯಗಳನ್ನು ಅಭಿವೃದ್ಧಿಪಡಿಸುವುದು, (3) ಹೈನೋದ್ಯಮಿಗಳಿಗೆ ಮಿಶ್ರತಳಿ ಹಸುಗಳನ್ನು ಕೊಳ್ಳಲು ಸಾಲ, (4) ಸಾಂಕ್ರಾಮಿಕ ರೋಗಗಳ ನಿದಾನ, ಪ್ರಯೋಗಾಲಯ, ದನಗಳ ರೋಗ ನಿರೋಧಶಕ್ತಿಯ ಬಗ್ಗೆ ಸಂಶೋಧನೆ ನಡೆಸುವ ಕಾರ್ಯವನ್ನು ಹೆಬ್ಬಾಳದ ಪಶುವೈದ್ಯ ಕಾಲೇಜಿಗೆ ವಹಿಸಿಕೊಡಲಾಗಿದೆ.

ಪ್ರಮುಖ ಊರುಗಳ ಸುತ್ತಮುತ್ತ ಹೈನುಭಿವೃದ್ಧಿ ಕಾರ್ಯ ನಡೆಸಲು ಹಾಗೂ ಜನರಿಗೆ ಉತ್ತಮವಾದ ಮತ್ತು ಪಾಶ್ಚರೀಕರಣಗೊಂಡ ಹಾಲನ್ನು ಒದಗಿಸಲು ಪಶುಸಂಗೋಪನಾ ಇಲಾಖೆ ಧಾರವಾಡ, ಬೆಳಗಾಂವಿ, ಮಂಗಳೂರು, ಶಿವಮೊಗ್ಗ, ಮೈಸೂರು, ಗುಲ್ಬರ್ಗ ಮತ್ತು ಕೂಡಿಗೆಗಳಲ್ಲಿ 7 ಡೈರಿಗಳನ್ನೂ ಹಾಸನ, ರಾಯಚೂರು, ಕುಮಟಗಿ, ಬಿಜಾಪುರ ಮತ್ತು ಬಳ್ಳಾರಿಗಳಲ್ಲಿ 5 ಗ್ರಾಮೀಣ ಡೈರಿ ಕೇಂದ್ರಗಳನ್ನೂ ಮಂಗಳೂರು ಮತ್ತು ಧಾರವಾಡಗಳಲ್ಲಿ 2 ಡೈರಿ ವಿಸ್ತರಣಾ ಯೋಜನೆಗಳನ್ನೂ ಪ್ರಾರಂಭಿಸಿದೆ. ಇದು ಗ್ರಾಮೀಣ ಪ್ರದೇಶದ ಜನರಲ್ಲಿ ಹೈನೋದ್ಯಮದ ಬಗ್ಗೆ ಆಸಕ್ತಿ ಹುಟ್ಟಿಸಿ ಜನರಿಗೆ ಪೂರಕ ಉದ್ಯಮ ಒದಗಿಸಿ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸಹಕಾರಿಯಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಹಾಲನ್ನು ಸಂಗ್ರಹಿಸುವ ಸಲುವಾಗಿ ಸರಕಾರಿ ಡೈರಿಯ ಪ್ರದೇಶಗಳಲ್ಲಿ ಮತ್ತು ಗ್ರಾಮೀಣ ಹೈನು ಕೇಂದ್ರ ಘಟಕ ಪ್ರದೇಶಗಳಲ್ಲಿ ಪಶುಸಂಗೋಪನಾ ಇಲಾಖೆಯು ಶೈತ್ಯಕಾರಕಗಳನ್ನು (ಚಿಲಿಂಗ್ ಯೂನಿಟ್ಸ್) ಪ್ರಾರಂಭಿಸಿದೆ. ಇದರಿಂದ ಉತ್ಪಾದಕ ಕಾಲದ ಹಾಗೂ ಹಣದ ನಷ್ಟವಿಲ್ಲದೆ ಹಾಲನ್ನು ನೇರವಾಗಿ ಶೈತ್ಯಕಾರಕಕ್ಕೆ ಕೊಡಬಹುದು. ಹಾಲಿನ ಉತ್ಪಾದನೆ ಹೆಚ್ಚಿಸಲು ಹೈನು ಸಹಕಾರಿ ಸಂಘಗಳ ಸದಸ್ಯರುಗಳಿಗೆ ಬ್ಯಾಂಕುಗಳಿಂದ ಸಾಲ ಮಂಜೂರು ಮಾಡುವ ವ್ಯವಸ್ಥೆಯೂ ಇದೆ.

**ಎಮ್ಮೆ :** ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಪಂಢಾರಪುರ ತಳಿ ಬಿಟ್ಟರೆ ಕರ್ನಾಟಕದ್ದೇ ಎನ್ನಲಾಗುವ ಶುದ್ಧ ಎಮ್ಮೆ ತಳಿ ಯಾವುದೂ ಇಲ್ಲ. ಇದನ್ನು ಬಿಟ್ಟರೆ ಪ್ರಮುಖವಾದದ್ದು ಮುರ್ರ. ಇದನ್ನು ಉತ್ತರ ಭಾರತದಿಂದ ತರಿಸಿಕೊಳ್ಳಲಾಯಿತು.

ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಸ್ಥಳೀಯ ಎಮ್ಮೆಗಳು ಗಾತ್ರದಲ್ಲಿ ಸಣ್ಣವು, ಸುಮಾರಾಗಿ ಹಾಲು ಕೊಡುತ್ತವೆ. ಉತ್ತರ ಕರ್ನಾಟಕದಲ್ಲಿ ಇದ್ದುದರಲ್ಲಿ ಉತ್ತಮವಾದ ಎಮ್ಮೆಗಳು ಕಂಡುಬರುತ್ತವೆ.

ಉತ್ತರ ಕರ್ನಾಟಕದಲ್ಲಿ ಧಾರವಾಡ ಅಥವಾ ಹೊಳೆಸಾಲ ಎಂಬ ಜಾತಿಯ ಎಮ್ಮೆಗಳಿವೆ. ಆದರೆ ಇವನ್ನು ಒಂದು ತಳಿ ಎಂದು ಪರಿಗಣಿಸಲಾಗಿಲ್ಲ. ಇವನ್ನು ಸಾಮಾನ್ಯವಾಗಿ ಬೆಳಗಾಂವಿ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕಾಣಬಹುದು. ಇವು ಒಂದು ಸೂಲಿಗೆ ಸರಾಸರಿ 1100ರಿಂದ 1300 ಕೆಜಿ ಹಾಲನ್ನು ಕೊಡುತ್ತವೆ. ಆಯ್ದ ತಳಿ ಎಬ್ಬಿಸುವಿಕೆಯಿಂದ ಹಾಗೂ ಮುರ್ರ ಮತ್ತು ಸುರ್ತಿ ತಳಿಗಳಿಂದ ಮಿಶ್ರತಳಿ ಎಬ್ಬಿಕೆಯಿಂದ ಈ ಎಮ್ಮೆಗಳನ್ನು ಉತ್ತಮಗೊಳಿಸಬಹುದು.

ಎಮ್ಮೆಗಳ ತಳಿ ಎಬ್ಬಿಕೆ, ಮೇಯಿಸುವಿಕೆ, ರೋಗ ನಿಯಂತ್ರಣ ಮತ್ತು ನಿರ್ವಹಣೆಗಳ ಬಗ್ಗೆ ತೀವ್ರ ಸಂಶೋಧನೆಯ ಆವಶ್ಯಕತೆ ಕಂಡುಬಂದಿತು. ಇದಕ್ಕಾಗಿ 'ಹೈನುಗಾರಿಕೆಗಾಗಿ ಎಮ್ಮೆ' ಎಂಬ ಉದ್ದೇಶದಿಂದ ಅಖಿಲ ಭಾರತ ಸಹಕಾರಿ ಸಂಶೋಧನಾ ಯೋಜನೆ ಪ್ರಾರಂಭವಾಗಿದೆ. ಇಂಥ ಒಂದು ಕೇಂದ್ರ ಧಾರವಾಡದಲ್ಲಿದೆ. ಈ ಸಂಶೋಧನೆ ರಾಜ್ಯದ ವಿವಿಧ ಭಾಗಗಳಿಗೆ ತಳಿ ಎಬ್ಬಿಕೆಗಾಗಿ ಉತ್ತಮ ಕೋಣಗಳನ್ನು ಒದಗಿಸುವುದರ ಜತೆಗೆ ಎಮ್ಮೆಗಳ ಶರೀರಕ್ರಿಯಾಶಾಸ್ತ್ರದ ಮೇಲೆ ಕೂಡ ಸಾಕಷ್ಟು ಹೊಸ ಬೆಳಕು ಚೆಲ್ಲುತ್ತದೆ.

**ಕುರಿ**: ಬನ್ನೂರು, ಬಳ್ಳಾರಿ, ಹಾಸನ ಮತ್ತು ದಖನಿ–ಇವು ಕರ್ನಾಟಕದ ಕುರಿ ತಳಿಗಳು. ಉಪಯುಕ್ತತೆಯ ದೃಷ್ಟಿಯಿಂದ ಬನ್ನೂರು (ಬಂಡೂರು) ಉತ್ತಮ ಮಾಂಸದ ತಳಿ. ಇದನ್ನು ಭಾರತದ ಅನೇಕ ರಾಜ್ಯಗಳಲ್ಲಿ, ಅಲ್ಲಿನ ಕುರಿಗಳ ಉತ್ತಮೀಕರಣಕ್ಕೆ ಬಳಸುತ್ತಿದ್ದಾರೆ. ಬಳ್ಳಾರಿ ಮತ್ತು ದಖನಿ ಮಿಶ್ರಬಣ್ಣದ ಕುರಿಗಳನ್ನು ಇನ್ನೂ ಸುಧಾರಿಸಬೇಕಾಗಿದೆ. ಹಾಸನ ತಳಿಯ ಬಣ್ಣ ಬಿಳಿ. ಮಧ್ಯಮಗಾತ್ರದ್ದಾದ ಇದು ಇದ್ದುದರಲ್ಲಿ ಉತ್ತಮ ಉಣ್ಣೆಯನ್ನು ಕೊಡುತ್ತದೆ.

ಕರ್ನಾಟಕದಲ್ಲಿ ಕುರಿ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ:

(ಅ) ಕರ್ನಾಟಕ ರಾಜ್ಯ ಸರಕಾರ ದನಗೂರು, ಚಳ್ಳಕೆರೆ, ಶಿರಹಟ್ಟಿ, ಅನಗವಾಡಿ, ಗುತ್ತಲ ಮತ್ತು ಕುರಿಕುಪ್ಪೆಗಳಲ್ಲಿ 6 ಕುರಿ ಸಾಕಣೆ ಕೇಂದ್ರಗಳನ್ನು ಸ್ಥಾಪಿಸಿದೆ. ಈ ಕೇಂದ್ರಗಳ ಮುಖ್ಯ ಕಾರ್ಯವೆಂದರೆ ಮಿಶ್ರತಳಿ ಅಥವಾ ಶುದ್ಧ ತಳಿಯ ಬೀಜದ ಟಗರುಗಳನ್ನು ಉತ್ಪಾದಿಸಿ ವಿವಿಧ ಭಾಗಗಳಿಗೆ ಸರಬರಾಜು ಮಾಡುವುದು.

(ಆ) ಡಾರ್ಸ್ಟ್‌ಹಾರ್ನ್ ಮತ್ತು ಸಟ್ಲಾಕ್ ತಳಿಗಳಿಂದ ಬನ್ನೂರು ಕುರಿ ತಳಿಯನ್ನು ಉತ್ತಮೀಕರಿಸಲು ಬಂಡೂರು ಕುರಿ ಕೇಂದ್ರವನ್ನು ಅಖಿಲ ಭಾರತ ಸಹಕಾರಿ ಕುರಿ ಅಭಿವೃದ್ಧಿ ಯೋಜನೆಯ ಒಂದು ಅಂಗಕೇಂದ್ರವನ್ನಾಗಿ ಮಾಡಲು ಯೋಜಿಸಲಾಗಿದೆ.

(ಇ) ರಾಣೆಬೆನ್ನೂರಿನಲ್ಲಿ ಉಣ್ಣೆ ಉದ್ಯಮವೇ ಅಲ್ಲದೆ ಉಣ್ಣೆಯ ವಿಶ್ಲೇಷಣೆಗಾಗಿ ಒಂದು ಪ್ರಯೋಗಾಲಯವನ್ನು ಪ್ರಾರಂಭಿಸಲಾಗಿದೆ. ಹೊಸಪೇಟೆ, ಯಾದಗಿರಿ, ಚನ್ನರಾಯಪಟ್ಟಣ, ಬಿಜಾಪುರ, ನಾಗಮಂಗಲ, ಕೋಲಾರ, ರಾಣೆಬೆನ್ನೂರು, ಹೊಸದುರ್ಗ ಮತ್ತು ಮಳವಳ್ಳಿಗಳಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಖಾಸಗಿ ಸಾಕಣೆದಾರರ ಕುರಿಗಳ ಉಣ್ಣೆಯ ಗುಣ ಮತ್ತು ಮೊತ್ತಗಳನ್ನು ವೈಜ್ಞಾನಿಕ ತಳಿ ಎಬ್ಬಿಕೆ ವಿಧಾನಗಳಿಂದ ಉತ್ತಮಗೊಳಿಸುವುದೇ ಈ ಯೋಜನೆಗಳ ಉದ್ದೇಶ. ಪ್ರತಿಯೊಂದು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ ಕೇಂದ್ರದಲ್ಲೂ 8 ವಿಸ್ತರಣಾ ಕೇಂದ್ರಗಳುಂಟು. ಇಲಾಖೆಯ ಕುರಿಸಾಕಣೆ ಕೇಂದ್ರಗಳಿಂದ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ ಕೇಂದ್ರಗಳಿಗೆ ಬೀಜದ ಟಗರುಗಳನ್ನು ಸರಬರಾಜು ಮಾಡಲಾಗುವುದು.

**ಮೇಕೆ**: ಕರ್ನಾಟಕದ ಮೇಕೆಗಳು ಯಾವ ನಿರ್ದಿಷ್ಟ ತಳಿಗೂ ಸೇರಿದವುಗಳಲ್ಲ. ಪಂಜಾಬ್ ಮತ್ತು ಕೇರಳದಲ್ಲಿ ಸಿಗುವ ಬೀತಲ್, ಮಲಬಾರಿ ಮುಂತಾದ ತಳಿಗಳನ್ನೂ ಹೊರದೇಶದ ತಳಿಗಳಾದ ಆಲ್‌ಪೈನ್, ನುಬಿಯಾನ್ಸ್ ಅಥವಾ ಟೊಗ್ಗಾನ್‌ಬರ್ಗ್ ಮುಂತಾದವನ್ನೂ ಬಳಸಿ ಉತ್ತಮ ಮಾಂಸ ಪಡೆಯಬಹುದು.

**ಹಂದಿ :** ಕರ್ನಾಟಕದಲ್ಲಿ ಕಾಡುಹಂದಿ, ಸ್ಥಳೀಯ ಹಂದಿ, ವಿದೇಶಿ ಹಂದಿ ಮತ್ತು ಉತ್ತಮೀಕರಿಸಿದ ಹಂದಿ ಎಂಬ 4 ರೀತಿಯ ಹಂದಿಗಳಿವೆ. ಹಂದಿಸಾಕಣೆ ಅತ್ಯಂತ ಬಡವರ ಕೈಯಲ್ಲಿದೆ ಮತ್ತು ಅದನ್ನು ಅತ್ಯಂತ ನಿಕೃಷ್ಟ ರೀತಿಯಲ್ಲಿ ನಡೆಸಲಾಗುತ್ತಿದೆ. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಂತಹ ಕೆಲವು ಭಾಗಗಳಲ್ಲಿ ವಿದೇಶಿ ತಳಿಗಳ ಸಾಕಣೆ

ಹಾಗೂ ಮಿಶ್ರತಳಿ ಎಬ್ಬಿಕೆಯಿಂದ ಸ್ಥಳೀಯ ಹಂದಿಗಳ ಉತ್ತಮೀಕರಣದ ಮುಖಾಂತರ ಹಂದಿ ಸಾಕಣೆಯ ಸುಧಾರಿತ ಕ್ರಮಗಳನ್ನು ಅನುಸರಿಸ ಲಾಗುತ್ತಿದೆ.

ಸಾಮಾನ್ಯವಾಗಿ ಹಂದಿ ಸಾಕುವ ದುರ್ಬಲ ವರ್ಗದವರಿಗೆ ತಳಿ ಎಬ್ಬಿಕೆ ಹಂದಿಗಳನ್ನು ಸರಬರಾಜು ಮಾಡಲು ರಾಜ್ಯ ಸರ್ಕಾರ ಹೆಸರಘಟ್ಟ ಮತ್ತು ಕೂಡಿಗೆಗಳಲ್ಲಿ ಹಂದಿ ತಳಿ ಎಬ್ಬಿಕೆ ಕೇಂದ್ರಗಳನ್ನು ಪ್ರಾರಂಭಿಸಿದೆ.

**ಕೋಳಿ : ನೋಡಿ : ಕೋಳಿಸಾಕಣೆ.**

## ಪಶುವೈದ್ಯಕೀಯ ಯೋಜನೆಗಳು

ಪ್ರಾಣಿ ಆರೋಗ್ಯವನ್ನು ಕಾಪಾಡಲು ರಾಜ್ಯದಲ್ಲಿ ಕೆಲವು ಕಾರ್ಯಕ್ರಮಗ ಳಿವೆ. ರಾಜ್ಯದಾದ್ಯಂತ ಜಾನುವಾರುಗಳ ಆರೋಗ್ಯ ರಕ್ಷಣೆಗಾಗಿ ಆಸ್ಪತ್ರೆಗಳನ್ನು ರಾಜ್ಯ ಸರ್ಕಾರ ನಡೆಸುತ್ತಿದೆ; ಇದಲ್ಲದೆ ಪಶುವೈದ್ಯ ಇನ್‌ಸ್ಪೆಕ್ಟರುಗಳು ನಿರ್ವಹಿಸಲು ಗ್ರಾಮೀಣ ದವಾಖಾನೆಗ ಳಿವೆ. ರೋಗಪೀಡಿತ ಪ್ರಾಣಿಗಳ ಚಿಕಿತ್ಸೆಯಲ್ಲದೆ ಜಿಲ್ಲೆ ಮತ್ತು ತಾಲ್ಲೂಕು ಪಶುವೈದ್ಯ ದವಾಖಾನೆಗಳಲ್ಲಿ ಕೃತಕ ವೀರ್ಯಾವಾಪನೆ ಕೇಂದ್ರಗಳೂ ಉಂಟು. ಕೆಲವು ಕಡೆ ಕೋಳಿಸಾಕಣೆ ಕೇಂದ್ರಗಳೂ ಇವೆ.

ದನ, ಎಮ್ಮೆ, ಕುರಿ, ಮೇಕೆ ಮತ್ತು ಕೋಳಿಗಳ ರೋಗನಿದಾನ ಹಾಗೂ ಅವುಗಳ ನಿರೋಧಕ ಜೈವಿಕಗಳ ಉತ್ಪಾದನೆ ಕಾರ್ಯವನ್ನು ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶುವೈದ್ಯ ಜೈವಿಕ ಸಂಸ್ಥೆ ನಡೆಸುತ್ತದೆ. ಪಶುವೈದ್ಯ ಜೈವಿಕ ಸಂಸ್ಥೆಯ ಅಂಗವಾದ ಪರೋಪಜೀವಿಶಾಸ್ತ್ರವಿಭಾಗ ಪ್ರಾಣಿಗಳ ಪರೋಪಜೀವಿ ರೋಗಗಳ ಬಗ್ಗೆ ಸಂಶೋಧನೆ ನಡೆಸುತ್ತದೆ. ಇದಲ್ಲದೆ ಮದ್ದೂರು ತಾಲ್ಲೂಕಿನ ದೊಡ್ಡರಸಿನಕೆರೆ, ಶಿಕಾರಿಪುರ ತಾಲ್ಲೂಕಿನ ಗ್ರಾಮ, ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಮತ್ತು ಅಗಸರಪುರ, ಮಂಡ್ಯ ತಾಲ್ಲೂಕಿನ ಕೊತ್ತತ್ತಿ, ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಹಿರಿಯೂರು ತಾಲ್ಲೂಕಿನ ಮಸಕಲ್ ಮತ್ತು ಇತರ ಕೆಲವು ಸ್ಥಳಗಳಲ್ಲಿ ಪರೋಪಜೀವಿಶಾಸ್ತ್ರ ಕೇಂದ್ರಗಳಿವೆ. ಈ ಕೇಂದ್ರಗಳು ರೋಗಪೀಡಿತ ಪ್ರಾಣಿಗಳಿಂದ ಮಾದರಿಗಳನ್ನು ಸಂಗ್ರಹಿಸಿ ಹೆಬ್ಬಾಳಕ್ಕೆ ಕಳುಹಿಸಿಕೊಡುವು ದಲ್ಲದೆ ವಿವಿಧ ಔಷಧಗಳ ಕ್ರಿಯಾಶೀಲತೆಯನ್ನೂ ಪರೀಕ್ಷಿಸುತ್ತವೆ. ಅಲ್ಲದೆ, ದನ, ಕುರಿ ಮತ್ತು ಮೇಕೆಗಳಿಗೆ ಕಾಲಕಾಲಕ್ಕೆ ಪರೋಪಜೀವಿ ನಾಶಕ ಔಷಧಗಳನ್ನು ಕೊಡುವುದೂ ಈ ಕೇಂದ್ರಗಳ ಕೆಲಸ.

ಹೆಬ್ಬಾಳದಲ್ಲಿರುವ ಪಶುವೈದ್ಯ ಜೈವಿಕ ಸಂಸ್ಥೆ ಚಪ್ಪೆ, ನರಡಿ, ಮೆಟ್ರೆಕಟ್ಟು, ದೊಡ್ಡರೋಗ, ಕುರಿ ಸಿಡುಬು, ನಾಯಿಹುಚ್ಚು, ಒಳರಕ್ತನಂಜು, ಕೋಳಿ ಸಿಡುಬು, ರಾಣಿಕೇಟ್ ಮುಂತಾದ ರೋಗಗಳ ವಿರುದ್ಧ ಲಸಿಕೆ ತಯಾರಿಸುತ್ತದೆ. ರೋಗ ಪ್ರಸಾರವನ್ನು ತಡೆಗಟ್ಟಲು ಈ ಲಸಿಕೆಗಳನ್ನು ರಾಜ್ಯದಾದ್ಯಂತ ಸರಬರಾಜು ಮಾಡಲಾಗುತ್ತದೆ; ಹಾಗೂ ಲಸಿಕೆ ಹಾಕುವ ಕೆಲಸವನ್ನು ಪುಕ್ಕಟೆಯಾಗಿ ದೊರಕಿಸಿ ಕೊಡಲಾಗುತ್ತದೆ.

ಗೆರಸಲು ರೋಗನಿರೋಧ ಲಸಿಕೆ ತಯಾರಿಕೆ ಕೇಂದ್ರ ಒಂದನ್ನು ಕೇಂದ್ರ ಸರ್ಕಾರ ಬೆಂಗಳೂರಿಗೆ ಮಂಜೂರು ಮಾಡಿದೆ. ಲಸಿಕೆ ಉತ್ಪಾದನೆ ಶೀಘ್ರವಾಗಿ ಪ್ರಾರಂಭವಾಗಲಿದೆ. ಜಾನುವಾರುಗಳ ಗೆರಸಲು ರೋಗ ನಿಯಂತ್ರಣದಲ್ಲಿ ಇದು ಮಹತ್ತ್ವದ ಪಾತ್ರವಹಿಸಲಿದೆ. ಹಾಗೆಯೇ ಜಾನುವಾರುಗಳನ್ನು ದೊಡ್ಡರೋಗದ ವಿರುದ್ಧ ರಕ್ಷಿಸಲು ರಾಜ್ಯದಲ್ಲಿ ದೊಡ್ಡರೋಗ ನಿರ್ಮೂಲನಾ ಯೋಜನೆಯೊಂದು ಕಾರ್ಯಶೀಲವಾಗಿದೆ.

ಬಳ್ಳಾರಿ, ಬೆಳಗಾಂವಿ, ಗುಲ್ಬರ್ಗ ಮತ್ತು ಮಂಗಳೂರುಗಳಲ್ಲಿ ಪ್ರಾದೇಶಿಕ ಪರೀಕ್ಷಾ ಪ್ರಯೋಗಾಲಯಗಳಿವೆ. ಈ ಪ್ರಯೋಗಾಲಯಗಳು ಜಾನುವಾರುಗಳ ರೋಗಪರೀಕ್ಷೆ ಮತ್ತು ನಿದಾನದಲ್ಲಿ ಪಶುವೈದ್ಯರಿಗೆ ನೆರವಾಗುತ್ತವೆ, ಅಲ್ಲದೆ ಆ ಪ್ರದೇಶಕ್ಕೆ ಬೇಕಾಗುವ ಜೈವಿಕಗಳನ್ನು ದಾಸ್ತಾನು ಮಾಡುತ್ತವೆ.

ಪಶುಸಂಗೋಪನೆ ಇಲಾಖೆಗಾಗಿಯೇ 1970ರಿಂದ ಒಂದು ಪ್ರತ್ಯೇಕ ಔಷಧಾಗಾರ ಪ್ರಾರಂಭವಾಗಲಿದೆ. ಇದು ಎಲ್ಲ ಪಶುವೈದ್ಯ ಸಂಸ್ಥೆಗಳಿಗೂ ಬೇಕಾಗುವ ಔಷಧಗಳನ್ನು ಮತ್ತು ಸಲಕರಣೆಗಳನ್ನು ದೊರಕಿಸಿಕೊಳ್ಳಲು ನೆರವಾಗುತ್ತದೆ.

**ಪಶುವೈದ್ಯಶಾಲೆಗಳು 31-3-2000ರಲ್ಲಿ ಇದ್ದಂತೆ.**

| ಕ್ರಮ ಸಂಖ್ಯೆ | ಜಿಲ್ಲೆ | ಆಸ್ಪತ್ರೆಗಳು | ಚಿಕಿತ್ಸಾಲಯಗಳು | ಪ್ರಾಥಮಿಕ ಪಶುವೈದ್ಯ ಕೇಂದ್ರಗಳು |
|---|---|---|---|---|
| 1 | ಬೆಂಗಳೂರು (ನಗರ) | 20 | 38 | 38 |
| 2 | ಬೆಂಗಳೂರು (ಗ್ರಾ.) | 16 | 37 | 89 |
| 3 | ಚಿತ್ರದುರ್ಗ | 7 | 29 | 78 |
| 4 | ದಾವಣಗೆರೆ | 7 | 44 | 85 |
| 5 | ಕೋಲಾರ | 21 | 52 | 74 |
| 6 | ಶಿವಮೊಗ್ಗ | 13 | 31 | 94 |
| 7 | ತುಮಕೂರು | 15 | 54 | 127 |
| **I** | **ಬೆಂಗಳೂರು ವಿಭಾಗ** | **9 9** | **2 8 5** | **5 8 5** |
| 8 | ಬೆಳಗಾಂವಿ | 14 | 56 | 126 |
| 9 | ಬಿಜಾಪುರ | 7 | 16 | 88 |
| 10 | ಬಾಗಲಕೋಟೆ | 8 | 18 | 81 |
| 11 | ಧಾರವಾಡ | 5 | 16 | 38 |
| 12 | ಗದಗ | 6 | 15 | 46 |
| 13 | ಹಾವೇರಿ | 10 | 29 | 69 |
| 14 | ಉತ್ತರ ಕನ್ನಡ | 11 | 25 | 67 |
| **II** | **ಬೆಳಗಾಂವಿ ವಿಭಾಗ** | **61** | **175** | **515** |
| 15 | ಬಳ್ಳಾರಿ | 8 | 24 | 54 |
| 16 | ಬೀದರ್ | 5 | 30 | 54 |
| 17 | ಗುಲ್ಬರ್ಗ | 12 | 43 | 199 |
| 18 | ರಾಯಚೂರು | 5 | 13 | 44 |
| 19 | ಕೊಪ್ಪಳ | 9 | 11 | 59 |
| **III** | **ಗುಲ್ಬರ್ಗ ವಿಭಾಗ** | **3 9** | **121** | **410** |
| 20 | ಚಿಕ್ಕಮಗಳೂರು | 15 | 41 | 68 |
| 21 | ದಕ್ಷಿಣ ಕನ್ನಡ | 9 | 20 | 54 |
| 22 | ಉಡುಪಿ | 8 | 22 | 55 |
| 23 | ಹಾಸನ | 12 | 47 | 108 |
| 24 | ಕೊಡಗು | 6 | 21 | 26 |

| | | | | |
|---|---|---|---|---|
| 25 | ಮಂಡ್ಯ | 21 | 70 | 92 |
| 26 | ಮೈಸೂರು | 16 | 37 | 104 |
| 27 | ಚಾಮರಾಜನಗರ | 7 | 14 | 38 |
| **IV** | **ಮೈಸೂರು ವಿಭಾಗ** | **94** | **272** | **545** |
| | **ರಾಜ್ಯ** | **293** | **853** | **2,055** |

**ಪಶುವೈದ್ಯಶಾಲೆಗಳು 31-3-2000ರಲ್ಲಿ ಇದ್ದಂತೆ.**

| ಕ್ರಮ ಸಂಖ್ಯೆ | ಜಿಲ್ಲೆ | ಸಂಚಾರಿ ಚಿಕಿತ್ಸಾಲಯಗಳು | ಕೃತಕ ಗರ್ಭಧಾರಣಾ ಕೇಂದ್ರಗಳು | ಪ್ರಾಥಮಿಕ ಪಶುವೈದ್ಯ ಕೇಂದ್ರಗಳು |
|---|---|---|---|---|
| 1 | ಬೆಂಗಳೂರು (ನಗರ) | 3 | 24 | 123 |
| 2 | ಬೆಂಗಳೂರು (ಗ್ರಾ.) | 8 | 36 | 186 |
| 3 | ಚಿತ್ರದುರ್ಗ | 6 | 13 | 133 |
| 4 | ದಾವಣಗೆರೆ | 6 | 21 | 163 |
| 5 | ಕೋಲಾರ | 11 | 33 | 191 |
| 6 | ಶಿವಮೊಗ್ಗ | 7 | 10 | 155 |
| 7 | ತುಮಕೂರು | 10 | 18 | 224 |
| **I** | **ಬೆಂಗಳೂರು ವಿಭಾಗ** | **51** | **155** | **1,175** |
| 8 | ಬೆಳಗಾಂವಿ | 10 | 31 | 237 |
| 9 | ಬಿಜಾಪುರ | 4 | 6 | 121 |
| 10 | ಬಾಗಲಕೋಟೆ | 4 | 6 | 117 |
| 11 | ಧಾರವಾಡ | 6 | 39 | 104 |
| 12 | ಗದಗ | 4 | 7 | 78 |
| 13 | ಹಾವೇರಿ | 7 | 20 | 135 |
| 14 | ಉತ್ತರ ಕನ್ನಡ | 12 | 21 | 136 |
| **II** | **ಬೆಳಗಾಂವಿ ವಿಭಾಗ** | **47** | **130** | **928** |
| 15 | ಬಳ್ಳಾರಿ | 7 | 3 | 96 |
| 16 | ಬೀದರ್ | 5 | 8 | 102 |
| 17 | ಗುಲ್ಬರ್ಗ | 10 | 20 | 284 |
| 18 | ರಾಯಚೂರು | 4 | 5 | 71 |
| 19 | ಕೊಪ್ಪಳ | 5 | 12 | 96 |
| **III** | **ಗುಲ್ಬರ್ಗ ವಿಭಾಗ** | **31** | **48** | **649** |
| 20 | ಚಿಕ್ಕಮಗಳೂರು | 7 | 5 | 136 |
| 21 | ದಕ್ಷಿಣ ಕನ್ನಡ | 5 | 5 | 93 |
| 22 | ಉಡುಪಿ | 3 | 4 | 92 |
| 23 | ಹಾಸನ | 8 | 9 | 184 |
| 24 | ಕೊಡಗು | 3 | 18 | 74 |
| 25 | ಮಂಡ್ಯ | 7 | 4 | 194 |
| 26 | ಮೈಸೂರು | 7 | 9 | 173 |
| 27 | ಚಾಮರಾಜನಗರ | 4 | 12 | 75 |
| **IV** | **ಮೈಸೂರು ವಿಭಾಗ** | **44** | **66** | **1,021** |
| | **ರಾಜ್ಯ** | **173** | **399** | **3,773** |

### ಇತರ ಕಾರ್ಯಕ್ರಮಗಳು

**ಕಸಾಯಿಖಾನೆಗಳಲ್ಲಿ ಮಾಂಸ ಪರೀಕ್ಷೆ:** ಮಾಂಸ ಬೇಗ ಕೆಡುವ ಪದಾರ್ಥವಾದ್ದರಿಂದ ಸರಿಯಾದ ಸಂಸ್ಕರಣ ಮತ್ತು ಶೇಖರಣೆಯಿಂದ ಮಾತ್ರ ಅದನ್ನು ತಾಜಾವಾಗಿ ಇಡಬಹುದು. ಕರ್ನಾಟಕದಲ್ಲಿ ಮಾಂಸ ಶೇಖರಣೆಯನ್ನು ವಾಣಿಜ್ಯ ಮಟ್ಟದಲ್ಲಿ ಕೈಗೊಳ್ಳಲಾಗಿಲ್ಲ. ಉತ್ಪಾದಿತ ಮಾಂಸವೆಲ್ಲ ಆಗಲೇ ತಾಜಾ ಸ್ಥಿತಿಯಲ್ಲೇ ಉಪಯೋಗಿಸಲ್ಪಡುತ್ತದೆ. ರಾಜ್ಯದಲ್ಲಿರುವ ಸರ್ಕಾರಿ ಮತ್ತು ಪುರಸಭಾ ಕಸಾಯಿಖಾನೆಗಳಲ್ಲಿ ಪದವೀಧರ ಪಶುವೈದ್ಯರು ಮಾಂಸವನ್ನು ಮಾರಾಟಕ್ಕೆ ಬಿಡುಗಡೆ ಮಾಡುವ ಮೊದಲು ಪರೀಕ್ಷಿಸುತ್ತಾರೆ. ಸರ್ಕಾರಿ ಹಾಗೂ ಇತರೆ ಕಸಾಯಿಖಾನೆಗಳಲ್ಲಿ ಆಧುನಿಕ ಹಾಗೂ ಆರೋಗ್ಯಕರ ಪರಿಸರವನ್ನೊದಗಿಸಲು ಕರ್ನಾಟಕ ರಾಜ್ಯ ಸರ್ಕಾರ ಬೆಂಗಳೂರು ಪ್ರಾಣಿಜನ್ಯ ಆಹಾರ ಕಾರ್ಪೊರೇಷನನ್ನು ಪ್ರಾರಂಭಿಸಿದೆ. ಬೆಂಗಳೂರಿಗೆ ಸ್ವಚ್ಛ ಹಾಗೂ ಆರೋಗ್ಯಕರ ಮಾಂಸವನ್ನು ಸರಬರಾಜು ಮಾಡುವುದು ಇದರ ಉದ್ದೇಶ. ಮುಂದೆ ಕಾಲಕ್ರಮೇಣ ಈ ಸೌಲಭ್ಯ ರಾಜ್ಯದ ಇತರೆ ಭಾಗಗಳಿಗೂ ಲಭ್ಯವಾಗಬಹುದು.

**ಪಶುವೈದ್ಯ ವಿದ್ಯಾಭ್ಯಾಸ:** ಪಶುವೈದ್ಯ ಪದವೀಧರರನ್ನು ತಯಾರು ಮಾಡಲು 1958ರಲ್ಲಿ ಬೆಂಗಳೂರಿನ ಪಶುವೈದ್ಯ ಕಾಲೇಜು ಪ್ರಾರಂಭವಾಯಿತು. 1965ರಲ್ಲಿ ಕೃಷಿ ವಿಶ್ವವಿದ್ಯಾಲಯ ಪ್ರಾರಂಭವಾದಾಗ ಈ ಕಾಲೇಜು ಅದರ ಒಂದು ಅಂಗಸಂಸ್ಥೆಯಾಯಿತು. ಅನೇಕ ಪಶುವೈದ್ಯ ಮತ್ತು ಪಶುಸಂಗೋಪನಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟೊರೇಟ್ ಪದವಿಗಳ ಸೌಲಭ್ಯವಿರುವುದರ ಜೊತೆಗೆ ಸ್ವಂತ ಉದ್ಯೋಗದಲ್ಲಿ ಆಸಕ್ತರಾದವರಿಗೆ ಕೋಳಿ, ಹಂದಿ ಮತ್ತು ಕುರಿ ಸಾಕಣೆ ಹಾಗೂ ಹೈನೋದ್ಯಮಗಳಲ್ಲಿ ಕಿರುಕಾಲಾವಧಿ ತರಬೇತಿ ಸೌಲಭ್ಯಗಳಿವೆ.

ಕುಕ್ಕುಟ ವಿಜ್ಞಾನ ವಿಭಾಗದಲ್ಲಿ ಕೋಳಿಸಾಕಣೆಯ ಸ್ನಾತಕೋತ್ತರ ತರಬೇತಿ ಯೋಜನೆಯೊಂದಿಗೆ ಬಡ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಕಲಿಕೆಯೊಂದಿಗೆ ಗಳಿಕೆ ಯೋಜನೆಯೂ ಉಂಟು. ಕಾಲೇಜಿನಲ್ಲಿ ಅತ್ಯಾಧುನಿಕ ಹೈನು ಸಂಸ್ಕರಣ ಕೇಂದ್ರವೂ ಇದೆ. ವಿವಿಧ ರಂಗಗಳಲ್ಲಿ ಹೊಸ ಸಂಶೋಧನೆಗಳಿಗೆ ಕಾಲೇಜು ಸುಸಜ್ಜಿತವಾಗಿದೆ; ಅಲ್ಲದೆ ಜಾನುವಾರುಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಸುತ್ತಮುತ್ತಲ ಕೆಲವು ಹಳ್ಳಿಗಳನ್ನೂ ದತ್ತು ತೆಗೆದುಕೊಂಡಿದೆ.

ಪಶು ಸಂಪತ್ತಿನ ಸಂವರ್ಧನೆ ಮತ್ತು ಸಂಶೋಧನಾ ಕಾರ್ಯಗಳು ನಿರಂತರವಾಗಿ ನಡೆಯಬೇಕೆಂಬ ಉದ್ದೇಶದಿಂದ ಕರ್ನಾಟಕ ರಾಜ್ಯ ಸರ್ಕಾರ 2003ರಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಇದರ ಕೇಂದ್ರ ಸ್ಥಾನ ಬೀದರ್‌ನಲ್ಲಿದೆ. ಸಮಗ್ರ ಪಶುವೈದ್ಯಕೀಯ ಕಾಲೇಜುಗಳು ಇದರ ವ್ಯಾಪ್ತಿಗೆ ಸೇರಿವೆ.

**ದನಗಳ ಜಾತ್ರೆಗಳು:** ಪ್ರತಿವರ್ಷ ಸುಮಾರು 150ಕ್ಕೂ ಹೆಚ್ಚು ದನದ ಜಾತ್ರೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ನಡೆದು ಸಾವಿರಾರು ದನಗಳ ಮಾರಾಟ ನಡೆಯುತ್ತದೆ. ಅಲ್ಲದೆ ಜಾತ್ರೆಯಲ್ಲಿ ಕುರಿ, ಮೇಕೆ, ಕುದುರೆಗಳಂತಹ ಇತರೆ ಜಾನುವಾರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತವೆ. ಜಾನುವಾರುಗಳ ತಳಿ ಎಬ್ಬಿಕೆದಾರರಿಗೆ ಇಂತಹ ಜಾತ್ರೆಗಳು ಉತ್ತಮ ತಳಿ ಎಬ್ಬಿಕೆಗೆ ಉತ್ತೇಜನ ಕೊಡುತ್ತವೆ.

**ಜಾನುವಾರು ಪ್ರದರ್ಶನಗಳು :** ಪಶುಸಂಗೋಪನಾ ಇಲಾಖೆ ತಾಲ್ಲೂಕು ಮಟ್ಟ, ಜಿಲ್ಲಾಮಟ್ಟ ಹಾಗೂ ರಾಜ್ಯಮಟ್ಟಗಳಲ್ಲಿ ಜಾನುವಾರು ಪ್ರದರ್ಶನಗಳನ್ನೇರ್ಪಡಿಸುತ್ತದೆ. ಆಯ್ಕೆಯಾದ ಜಾನುವಾರುಗಳಿಗೆ ಬಹುಮಾನಗಳು ಮತ್ತು ಅರ್ಹತಾಪತ್ರಗಳನ್ನು ಕೊಡಲಾಗುವುದು. ರಾಜ್ಯಮಟ್ಟದಲ್ಲಿ ಬಹುಮಾನ ಪಡೆದ ಜಾನುವಾರುಗಳು ವಲಯ ಪ್ರದರ್ಶನದ ಅನಂತರ ಅಖಿಲ ಭಾರತ ಜಾನುವಾರು ಪ್ರದರ್ಶನಗಳಲ್ಲಿ ಭಾಗವಹಿಸುವುವು.

**(ಟಿ.ಎನ್.ಎಸ್.ಐ.;ಕೆ.ಎಸ್.ವಿ.;ಎಂ.ಎಸ್.ವಿ.)**

**ಪಶ್ಚಿಮ ಘಟ್ಟಗಳು**: ದಕ್ಷಿಣ ಭಾರತದಲ್ಲಿ ಪಶ್ಚಿಮ ಕರಾವಳಿಗೆ ಸಮೀಪದಲ್ಲಿ, ತಪತಿ ನದಿಯ ಬಳಿಯಿಂದ ಕನ್ಯಾಕುಮಾರಿಯವರೆಗೆ ಸು. 1,300 ಕಿಮೀ ದೂರ ಹಬ್ಬಿರುವ ಪರ್ವತಶ್ರೇಣಿ. ಸಹ್ಯಾದ್ರಿ ಎಂದೂ ಇದಕ್ಕೆ ಹೆಸರಿದೆ. ದಕ್ಷಿಣದ ಪಾಲಘಾಟ್ ತೆರಪಿನ ವಿನಾ ಅವಿಚ್ಛಿನ್ನವಾಗಿ ಸಾಗಿರುವ ಈ ಘಟ್ಟಗಳು ಮಹಾರಾಷ್ಟ್ರ, ಗೋವ, ಕರ್ನಾಟಕ, ತಮಿಳು ನಾಡು ಹಾಗೂ ಕೇರಳ ಭಾಗಗಳಲ್ಲಿ ಹರಡಿವೆ. ಕರ್ನಾಟಕದಲ್ಲಿ ಹಬ್ಬಿರುವ ಪಶ್ಚಿಮಘಟ್ಟ ಸಾಲು ಸಸ್ಯ ಸಂಪತ್ತಿನ ವೈವಿಧ್ಯಕ್ಕೂ ಭೂಲಕ್ಷಣದ ಔನ್ನತ್ಯಕ್ಕೂ ಹೆಸರಾಗಿದೆ.

ಪಶ್ಚಿಮ ಘಟ್ಟಗಳು ಮಹಾರಾಷ್ಟ್ರ ರಾಜ್ಯದ ಉತ್ತರ ತುದಿಯಲ್ಲಿ, ತಪತಿ ನದಿ ಕಣಿವೆಯ ಕುಂದೈಬಾರಿ ಬಳಿ (ಉ.ಅ. 21.6 ಮತ್ತು ಪೂ. ರೇ. 74.11) ಪ್ರಾರಂಭವಾಗಿ ಸಮುದ್ರಮಟ್ಟಕ್ಕೆ ಸರಾಸರಿ 1,220 ಮೀ ಎತ್ತರದೊಳಗೆ ಸಾಗಿವೆ. ಸಮುದ್ರಕ್ಕೂ ಘಟ್ಟಗಳಿಗೂ ಅಂತರ 32ರಿಂದ 104 ಕಿಮೀ. ಪ್ರಾರಂಭದ ಸ್ಥಳದಿಂದ ತ್ರಿಯಂಬಕ್ ಕಣಿವೆಯ ವರೆಗೆ ಘಟ್ಟಗಳ ಹರವು 160 ಕಿಮೀ. ಆ ಭಾಗದಲ್ಲಿ ಪಶ್ಚಿಮದಿಂದ ದಕ್ಷಿಣಕ್ಕೆ ದಟ್ಟವಾದ ಅರಣ್ಯದಿಂದ ಕೂಡಿದ ಪೀಂತ್, ಮೊಖಾಡ ಮತ್ತು ಜನಹಾರ್ ಬೆಟ್ಟಗಳಿವೆ. ಪಶ್ಚಿಮದ ಕಡೆ ಆಳವಾದ ಕಮರಿಗಳಿವೆ. ಇಲ್ಲಿಯ ಬೆಟ್ಟಗಳು ಕೊಂಕಣದ ಇಳುಕಲು ಭೂಮಿಗೂ ಮಾಲ್ಸೆಜ್ ಕಣಿವೆಯವರೆಗೆ 64 ಕಿಮೀ, ದೂರ ದಕ್ಷಿಣದಿಂದ ಆಗ್ನೇಯಕ್ಕೂ ಅಲ್ಲಿಂದ ಖಂಡಾಲ ಹಾಗೂ ವಾಗ್ಜೈವರೆಗೆ 96 ಕಿಮೀ. ದೂರ ನೈಋತ್ಯದ ಕಡೆಗೂ ಸಾಗಿ, ಮಹಾರಾಷ್ಟ್ರದ ಗಡಿಯನ್ನು ದಾಟುವವರೆಗೆ ಪುನಃ ಆಗ್ನೇಯದ ಕಡೆ ಹಬ್ಬಿವೆ.

ಪಶ್ಚಿಮ ಘಟ್ಟಗಳ ಉದ್ದಕ್ಕೂ ಪೂರ್ವ ಭಾಗಕ್ಕೆ ಹಲವು ಚಾಚುಗಳು ಹಾಗೂ ಉಪಶ್ರೇಣಿಗಳು ಹರಡಿವೆ. ಮಹಾರಾಷ್ಟ್ರದಲ್ಲಿ ಪೂರ್ವದ ಕಡೆ ಹಬ್ಬಿರುವ ಉಪ ಶ್ರೇಣಿಗಳು ಗೋದಾವರಿ, ಭೀಮಾ ಮತ್ತು ಕೃಷ್ಣಾ ನದಿಗಳ ಕಣಿವೆಗಳನ್ನು ವಿಭಜಿಸಿವೆ.

ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಹೆಚ್ಚು ಕಣಿವೆ ಮಾರ್ಗಗಳಿರುವುದು ಮಹಾರಾಷ್ಟ್ರದಲ್ಲಿ. ಈ ಕಣಿವೆ ದಾರಿಗಳನ್ನು ರಕ್ಷಿಸಲು ಕಟ್ಟಿದ ಹಾಗೂ ಮರಾಠರ ಇತಿಹಾಸದಲ್ಲಿ ಪ್ರಸಿದ್ಧವಾದ ಅನೇಕ ಗಿರಿದುರ್ಗಗಳಿವೆ. ಕರ್ನಾಟಕದ ಸರಹದ್ದಿಗೆ ಬಂದಂತೆ ಹಾಗೆಯೇ ಈ ಗಿರಿ–ಕಣಿವೆ ಮಾರ್ಗಗಳು ಮುಂದುವರಿಯುತ್ತವೆ. ದೇವಗಢಕ್ಕೂ ಬೆಳಗಾಂವಿ ಜಿಲ್ಲೆಯ ನಿಪ್ಪಾಣಿಗೂ ನಡುವಣ ಫೋಂಡಾ ಕಣಿವೆಮಾರ್ಗ. ವೆಂಗೂರ್ಲ ಹಾಗೂ ಬೆಳಗಾಂವಿ ನಡುವಣ ಅಂಬೋಲಿ ಮತ್ತು ರಾಮ್ ಕಣಿವೆಗಳು, ಈ ಭಾಗದಲ್ಲಿ ಮುಖ್ಯವಾದವು.

ಗೋವೆಯ ಪಶ್ಚಿಮಕ್ಕೆ ಇರುವ ಸಮುದ್ರವನ್ನು ಬಿಟ್ಟರೆ ಉಳಿದ ಮೂರು ಕಡೆಗಳಲ್ಲಿ ಪಶ್ಚಿಮ ಘಟ್ಟಗಳು ಸುತ್ತುವರಿದಿವೆ. ಮರ್ಮಗೋವ ದಿಂದ ಧಾರವಾಡಕ್ಕೆ ಹೋಗುವ ರೈಲುಮಾರ್ಗ ಕ್ಯಾಸ್‌ಲ್‌ರಾಕ್ ಅಂಚಿನಲ್ಲಿ ಸಾಗಿದೆ. ಮಹಾರಾಷ್ಟ್ರದಿಂದ ಗೋವೆಯವರೆಗೆ ಅನೇಕ ಕಣಿವೆ ಮಾರ್ಗಗಳಿದ್ದರೂ ಕರ್ನಾಟಕ ಹಾಗೂ ಕೇರಳ ಭಾಗಗಳಲ್ಲಿ ಕಣಿವೆ ದಾರಿಗಳು ಕಡಿಮೆ. ಕರ್ನಾಟಕದಲ್ಲಿ ಕಾರವಾರ ಹಾಗೂ ಧಾರವಾಡಗಳ ನಡುವಣ ಅರಬೈಲು ಕಣಿವೆ, ಕುಮಟಾ–ಹುಬ್ಬಳ್ಳಿ ನಡುವಣ ದೇವಿಮನೆ ಕಣಿವೆ, ಶಿವಮೊಗ್ಗ ಜಿಲ್ಲೆಯಲ್ಲಿ ಕೊಡಚಾದ್ರಿಯ ಉತ್ತರಕ್ಕೆ ಕೊಲ್ಲೂರು ಘಾಟ್, ಹೈದರ್ (ಹೊಸಂಗಡಿ) ಘಾಟ್ ಹಾಗೂ ಆಗುಂಬೆ ಘಾಟ್, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಭೂಂದ್ ಘಾಟ್ ಅಥವಾ ಚಾರ್ಮಾಡಿ ಘಾಟ್, ಹಾಸನ ಜಿಲ್ಲೆಯಲ್ಲಿ ಹಾಸನಕ್ಕೂ ಮಂಗಳೂರಿಗೂ ಸಂಪರ್ಕ ಕಲ್ಪಿಸುವ ಮಂಜರಾಬಾದ್ ಘಾಟ್ ಹಾಗೂ ಬಿಸಲೆ ಘಾಟ್–ಇವೆಲ್ಲವೂ ಪಶ್ಚಿಮ ಘಟ್ಟಗಳ ಪೂರ್ವದ ಸ್ಥಳಗಳಿಗೂ ಪಶ್ಚಿಮದ ಕರಾವಳಿಯ ಸ್ಥಳಗಳಿಗೂ ಸಂಬಂಧ ಕಲ್ಪಿಸಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಾಗರ ತಾಲ್ಲೂಕಿನ ಪಶ್ಚಿಮದ ಗೋವರ್ಧ ನಗಿರಿಯಿಂದ ದೇವರಕೊಂಡದವರೆಗೆ ಪಶ್ಚಿಮ ಘಟ್ಟಗಳ ಸಾಲು ಸಮುದ್ರದಂಚಿಗೆ 16 ಕಿಮೀ ಅಂತರದಲ್ಲಿದೆ; ಅಲ್ಲಿಂದ ಆಗ್ನೇಯದ ಕಡೆಗೆ ಸಾಗಿ ಚಿಕ್ಕಮಗಳೂರು ಜಿಲ್ಲೆಯ ನೈಋತ್ಯದಲ್ಲಿ ಕುದುರೆಮುಖದ ಕಡೆ ಹಬ್ಬಿದೆ. ಈ ಭಾಗ ಕೃಷ್ಣಾ ಹಾಗೂ ಕಾವೇರಿ ನದಿಗಳ ಉಪನದಿಗಳ ಹರಿವಿನ ಪ್ರದೇಶದ ಜಲವಿಭಾಜಕಗಳನ್ನು ಸೃಷ್ಟಿಸಿದೆ. ಅಲ್ಲಿಂದ ಮುಂದಕ್ಕೆ ಘಟ್ಟಗಳ ಸಾಲು ಕೊಡಗಿನ ಕಡೆ ಮುಂದುವರಿದು ಸಮುದ್ರದಂಚಿಗೆ 72 ಕಿಮೀ ದೂರದಲ್ಲಿದೆ. ಇಲ್ಲೂ ಪ್ರಧಾನ ಶ್ರೇಣಿಯಿಂದ ಉಪಶ್ರೇಣಿಗಳು ಪೂರ್ವಕ್ಕೆ ಹರಡಿಕೊಂಡಿವೆ. ಶಿವಮೊಗ್ಗ ಜಿಲ್ಲೆಯ ಕವಲೆದುರ್ಗದಲ್ಲಿ ಶರಾವತಿ ಉದ್ಭವಿಸಿ, ಹರಿದಾ ನದಿಯೊಂದಿಗೆ ಕೂಡಿ, ಜೋಗದಲ್ಲಿ ಧುಮುಕಿ, ಪಶ್ಚಿಮ ಘಟ್ಟಗಳನ್ನು ಹಾದು ಹೊನ್ನಾವರದ ಬಳಿ ಸಮುದ್ರಕ್ಕೆ ಬೀಳುತ್ತದೆ. ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳ ಕವಲುಗಳು ಕೊಡಚಾದ್ರಿ (1,343 ಮೀ), ಗೋವರ್ಧನಗಿರಿ ಮತ್ತು ಚಂದ್ರಗುತ್ತಿ (852 ಮೀ). ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮದ ಅಂಚಿನಲ್ಲಿ ಪಶ್ಚಿಮ ಘಟ್ಟಗಳು ಬಹಳ ಎತ್ತರವಾಗಿವೆ. ಅಲ್ಲಿಯ ಪ್ರಧಾನ ಬೆಟ್ಟಗಳು ಮೆತ್ರಿ (ಮೇರುತಿ) ಗುಡ್ಡ (1,661 ಮೀ), ವರಾಹ ಪರ್ವತ (1,457 ಮೀ), ಮುಳ್ಳಯ್ಯನಗಿರಿ (1,938 ಮೀ), ಕಲ್ಹತ್ತಗಿರಿ (1,876 ಮೀ), ಮತ್ತು ಕುದುರೆಮುಖ (1,894 ಮೀ), ಶೃಂಗಗಿರಿಯ ತಪ್ಪಲಿನಲ್ಲಿ ಶೃಂಗೇರಿ ಕ್ಷೇತ್ರವಿದೆ. ಈ ಶ್ರೇಣಿ ತುಂಗಾ, ಭದ್ರಾ, ನೇತ್ರಾವತಿ, ಶರಾವತಿ ಮತ್ತು ಹೇಮಾವತಿ ನದಿಗಳ ಉಗಮದ ತಾಣವಾಗಿದೆ. ಪ್ರಾಚೀನ ಕಾಲದಿಂದ ಬಳಕೆಯಲ್ಲಿದ್ದ ಬಲ್ಲಾಳರಾಯನದುರ್ಗದ ಘಾಟಿ ಮಾರ್ಗ ಕಳಸದ ಸಮೀಪ ಬಂದರೆ ಶಿಶಿಲ ಘಾಟಿಮಾರ್ಗ ಶಿಶಿಲ ಪರ್ವತದ ಬುಡದಲ್ಲಿ ಸಾಗುತ್ತದೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ತಪ್ಪಲಿನಲ್ಲಿ ಘಟ್ಟಗಳ ಅಂಚಿನಲ್ಲಿದೆ. ಮಂಜರಾಬಾದ್ ಘಾಟ್ ರಸ್ತೆ ಹಾಸನ ಮತ್ತು ಕೊಡಗು, ಮಂಗಳೂರು ಮೊದಲಾದ ಸ್ಥಳಗಳಿಗೆ ಸಂಪರ್ಕ ಕಲ್ಪಿಸಿದೆ. 1979ರಲ್ಲಿ ಹೊಸದಾಗಿ ತೆರೆದ ಹಾಸನ–ಮಂಗಳೂರು ರೈಲುಮಾರ್ಗ ಇದೇ ಘಾಟ್ ಮೂಲಕ ಸಾಗಿದೆ. ಕೊಡಗಿನ ಉತ್ತರದಲ್ಲಿ ರುವ ಪುಷ್ಪಗಿರಿ ಅಥವಾ ಸುಬ್ರಹ್ಮಣ್ಯ ಸಮುದ್ರಮಟ್ಟಕ್ಕೆ 1,715 ಮೀ ಎತ್ತರದಲ್ಲಿದೆ. ಮೈಸೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಪಶ್ಚಿಮ ಘಟ್ಟಗಳು ದಕ್ಷಿಣದ ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಕಡೆಗೆ ಮುಂದುವರಿಯುತ್ತವೆ.

ಕೊಡಗನ್ನು ಬಿಟ್ಟ ಕೂಡಲೇ ಘಟ್ಟಗಳ ಸಾಲುಗಳು ಪೂರ್ವಭಾಗ ದಿಂದ ಹಬ್ಬಿದ ಪೂರ್ವ ಘಟ್ಟಗಳೊಂದಿಗೆ ಸೇರುತ್ತವೆ. ಅವು ಸಂಧಿಸುವ ಕಡೆ ಎತ್ತರಕ್ಕೆ ನಿಂತಿರುವ ಬೆಟ್ಟಗಳು ನೀಲಮಲೆ ಅಥವಾ ನೀಲಗಿರಿ. ಈ ಬೆಟ್ಟಗಳಲ್ಲಿ ತಮಿಳುನಾಡಿನ ಗಿರಿಧಾಮವಾದ ಉದಕಮಂಡಲ (2,133 ಮೀ), ಕೂನೂರು (2,133 ಮೀ), ವೆಲಿಂಗ್‌ಡನ್, ಕೋಟಗಿರಿ, ದೊಡ್ಡಬೆಟ್ಟ (2,660 ಮೀ), ಮಕುರ್ತಿ (2,438 ಮೀ) ಮುಖ್ಯವಾದವು.

ನೀಲಗಿರಿಯ ದಕ್ಷಿಣದಲ್ಲಿ ಕೇರಳಕ್ಕೂ ತಮಿಳುನಾಡಿನ ಕೊಯಮತ್ತೂರಿಗೂ ನಡುವೆ ಪಾಲಘಾಟ್ ತೆರಪು ಇದೆ. ಇದು ಪಶ್ಚಿಮಘಟ್ಟಗಳನ್ನು ಅಡ್ಡಲಾಗಿ ಕತ್ತರಿಸಿದಂತೆ ಇದೆ. ಈ ತೆರಪಿನ ಅಗಲ 27ಕಿಮೀ. ಕಣಿವೆ ದಾರಿಗಳನ್ನು ಬಿಟ್ಟರೆ, ಇಡೀ ಪಶ್ಚಿಮ ಘಟ್ಟಗಳ ಶ್ರೇಣಿ ವಿಭಜಿತವಾದಂತೆ ದಾರಿ ಬಿಟ್ಟಿರುವುದು ಇದೊಂದೇ ಕಡೆ. ಪಾಲಘಾಟ್ ತೆರಪು ಸಮುದ್ರ ಮಟ್ಟಕ್ಕೆ 305ಮೀ. ಎತ್ತರದಲ್ಲಿದೆ. ಇದರ ಮೂಲಕ ದಕ್ಷಿಣ ರೈಲುಮಾರ್ಗ ಸಾಗಿದೆ. ಈ ತೆರಪಿನಿಂದ ಪಶ್ಚಿಮ ಘಟ್ಟಗಳ ಪೂರ್ವಕ್ಕೂ ಕರಾವಳಿಗೂ ಸಂಪರ್ಕ ಉಂಟಾಗಿದೆ.

ಪಾಲಘಾಟ್ ತೆರಪಿನ ಅನಂತರ ಪಶ್ಚಿಮ ಘಟ್ಟಗಳು ಹಠಾತ್ತನೆ ಬಹಳ ಎತ್ತರವಾಗಿ ದಕ್ಷಿಣಕ್ಕೆ ಮುಂದುವರಿದಿವೆ. ಅವಕ್ಕೆ ಈ ಭಾಗದಲ್ಲಿ ಆನೈಮಲೈ ಅಥವಾ ಆನೆಬೆಟ್ಟ ಎಂಬ ಹೆಸರುಂಟು. ಇಲ್ಲಿ ಪಶ್ಚಿಮ ಘಟ್ಟಗಳ ಶಾಖೆಗಳು ಪೂರ್ವಕ್ಕೂ ಪಶ್ಚಿಮಕ್ಕೂ ವ್ಯಾಪಿಸಿವೆ. ಪಶ್ಚಿಮಕ್ಕೆ ವ್ಯಾಪಿಸಿರುವ ಬೆಟ್ಟ ನೆಲ್ಲಿಯಂಪತ್ತಿ; ಪೂರ್ವಕ್ಕೆ ವ್ಯಾಪಿಸಿರುವುದು ಪಳನಿಮಲೈ. ಪಳನಿ ಬೆಟ್ಟಗಳಲ್ಲಿ ಕೊಡೈಕೆನಾಲ್ ಗಿರಿಧಾಮವಿದೆ. ಮುಂದೆ ಕೇರಳದ ಕಡೆಗೆ ದಕ್ಷಿಣಕ್ಕೆ ಹಬ್ಬಿರುವ ಪಶ್ಚಿಮ ಘಟ್ಟಗಳು ಕನ್ಯಾಕುಮಾರಿಯ ಬಳಿ ಭಾರತದ ದಕ್ಷಿಣ ತುದಿಯಲ್ಲಿ ಮುಕ್ತಾಯ ಗೊಳ್ಳುತ್ತವೆ.

ಪಾಲಘಾಟ್ ತೆರಪಿನ ಮಾರ್ಗವಲ್ಲದೆ ಕೇರಳದ ಕ್ವಿಲಾನ್‌ನಿಂದ ತಮಿಳುನಾಡಿನ ತಿನ್ನವೆಲ್ಲಿವರೆಗೆ ಹಾಕಿರುವ ರೈಲು ಮತ್ತು ರಸ್ತೆ ಮಾರ್ಗಗಳು ಭಾರತ ಪರ್ಯಾಯ ದ್ವೀಪದ ಪಶ್ಚಿಮ ಹಾಗೂ ಪೂರ್ವ ತೀರಗಳಿಗೆ ಸಂಪರ್ಕ ಕಲ್ಪಿಸಿವೆ. ಕಣ್ಣನೂರು ಹಾಗೂ ತೆಲಿಚ್ಚೇರಿಯಿಂದ ಕರ್ನಾಟಕದ ಬಯಲು ಸೀಮೆಗೆ ಪೆರುಂಬಾಡಿ ಮತ್ತು ಪೆರಿಯಕಣಿವೆ ಮಾರ್ಗಗಳಿವೆ. ಕೋಳಿಕೊಡಿನಿಂದ ನೀಲಗಿರಿಗೆ ವೈಯತ್ತಿರಿ–ಗೂಡಲೂರು ಘಾಟ್ ಮಾರ್ಗವಿದೆ.

ಪಶ್ಚಿಮ ಘಟ್ಟಗಳಲ್ಲಿ ಮನಮೋಹಕ ನೈಸರ್ಗಿಕ ದೃಶ್ಯಗಳಿವೆ. ಕರ್ನಾಟಕದ ಆಗುಂಬೆ ಘಾಟಿನ ಸೂರ್ಯಾಸ್ತದ ನೋಟ ಸುಂದರವಾದ್ದು. ಜೂನ್–ಸೆಪ್ಟೆಂಬರ್ ನಡುವೆ ಮುಂಗಾರು ಮಳೆ. ಕೇರಳ, ನೀಲಗಿರಿ, ಚಿಕ್ಕಮಗಳೂರು, ಶಿವಮೊಗ್ಗ ಪ್ರದೇಶಗಳ ದಟ್ಟಡವಿಗಳ ಭಾಗಗಳಲ್ಲಿ ಹೆಚ್ಚು ಮಳೆಯಾಗುತ್ತದೆ. ಆಗುಂಬೆಯಲ್ಲಿ ಅತ್ಯಂತ ಹೆಚ್ಚು ಮಳೆಯಾಗುತ್ತದೆ. ಪಶ್ಚಿಮಘಟ್ಟಗಳ ಉದ್ದಕ್ಕೂ ನಿತ್ಯ ಹಸುರಿನ ಕಾಡುಗಳಿವೆ. ದಟ್ಟಡವಿಗಳಲ್ಲಿ ಬಿದಿರು, ತೇಗ, ಹೊನ್ನೆ, ಶ್ರೀಗಂಧ ಮೊದಲಾದ ಮರಗಳಿವೆ. ಚಿಕ್ಕಮಗಳೂರು ಜಿಲ್ಲೆಯಿಂದ ಕೇರಳದವರೆಗೆ ಕಾಫಿ, ಚಹ, ಏಲಕ್ಕಿ, ಬಾಳೆ, ಮೆಣಸು, ಗೋಡಂಬಿ ಬೆಳೆಗಳಾಗುತ್ತವೆ. ಇಲ್ಲಿಯ ವನ್ಯಮೃಗಗಳು ಕಾಡುಕೋಣ, ಹುಲಿ, ಆನೆ, ಜಿಂಕೆ, ಡೊಂಕು ಕೊಂಬಿನ ನೀಲಗಿರಿ ಕಾಡುಕುರಿ.

ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಅನೇಕ ರಾಜ್ಯಗಳು ಸ್ಥಾಪಿತವಾಗಿದ್ದುವು. ಸಾತಾರಾ ಮತ್ತು ಕೊಲ್ಹಾಪುರಗಳಲ್ಲಿ ಮರಾಠರು, ಕೊಂಕಣದಲ್ಲಿ ಸಿಲ್ಹಾರರು, ನಾಸಿಕ್ ಪುಣೆ ಬನವಾಸಿ ಭಾಗಗಳಲ್ಲಿ ಚಾಟು ಸಾತಕರ್ಣಿ ಅಥವಾ ಚಾಟುನಾಗರು (3ನೆಯ ಶತಮಾನ) ನಾಸಿಕ್ ಜಿಲೆಯ ಮಯೂರ ಖಿಂಡಿ ಮತ್ತು ತರುವಾಯ ಕರ್ನಾಟಕದ ಮಾನ್ಯಖೇಟಗಳಲ್ಲಿ (ಈಗಿನ ಮಾಲಖೇಡ್) ರಾಷ್ಟ್ರಕೂಟರು, ಬನವಾಸಿಯಲ್ಲಿ ಕದಂಬರು, ಕೊಡಗಿನಲ್ಲಿ ಕೊಂಗಾಳ್ವ, ಚೆಂಗಾಳ್ವ ಹಾಗೂ ಕೊಡಗಿನ 17 ಹಾಗೂ 18ನೆಯ ಶತಮಾನಗಳ ರಾಜರು, ಮೂಡಗೆರೆ ತಾಲ್ಲೂಕಿನ ಸೊಸೆವೂರಿನಲ್ಲಿ (ಅಂಗಡಿ) ಮತ್ತು ಮುಂದೆ ದ್ವಾರಸಮುದ್ರದಲ್ಲಿ (ಹಳೇಬೀಡು) ಹೊಯ್ಸಳರು, ಪಶ್ಚಿಮ ಘಟ್ಟಗಳವರೆಗೆ ವಿಜಯನಗರ ಸಾಮ್ರಾಟರು, ಪೊಂಬುಜದಲ್ಲಿ (ನಗರ ತಾಲ್ಲೂಕು ಹುಂಚ ಅಥವಾ ಹುಮಚ) ಆಳುಪರು, ಕಾರ್ಕಳ ಉಲ್ಲಾಳ ಗೇರುಸೊಪ್ಪೆ ಮೊದಲಾದ ಸ್ಥಳಗಳಲ್ಲಿ ಜೈನ ಅರಸರಲ್ಲಿ ಕೆಲವರು, ಶಿವಮೊಗ್ಗ ಜಿಲ್ಲೆಯ ಬಿದನೂರಿನಲ್ಲಿ ಇಕ್ಕೇರಿಯ ನಾಯಕರು, ಸೇಲಂ ಕೊಯಮತ್ತೂರು ಭಾಗಗಳಲ್ಲಿ ಪಶ್ಚಿಮ ಗಂಗರು, ವಂಜಿಯಲ್ಲಿ (ಈಗಿನ ತಿರುವನಂತಪುರ) ಕೇರಳದ ಚೇರರು ತಂತಮ್ಮ ಪ್ರಭುತ್ವಗಳನ್ನು ಸ್ಥಾಪಿಸಿಕೊಂಡಿದ್ದರು.

ಪಶ್ಚಿಮ ಘಟ್ಟಗಳು ಸುಲಭವಾಗಿ ದಾಟಲಾಗದ ಗೋಡೆಗಳಂತಿರುವುದರಿಂದ ಪಶ್ಚಿಮ ಕರಾವಳಿಯೊಂದಿಗೆ ಪೂರ್ವಭಾಗದ ಮಲೆ ಹಾಗೂ ಬಯಲುಸೀಮೆಗಳ ಕರಾವಳಿಯ ಸಂಪರ್ಕವಿಲ್ಲದೆ ಅಲ್ಲಿಯ ಜನರು ಪ್ರಾಚೀನ ಕಾಲದಿಂದ ತಮ್ಮವೇ ಸಂಸ್ಕೃತಿ, ಭಾಷೆ ಹಾಗೂ ಆಚಾರಗಳನ್ನು ಬೆಳೆಸಿಕೊಂಡರು. ಹೀಗಾಗಿ ಮಹಾರಾಷ್ಟ್ರ, ಕೊಂಕಣ, ತುಳು, ಮಲೆಯಾಳ ಹಾಗೂ ಕೊಡಗಿನ ಜನರ ಭಾಷೆಗಳೂ ನಡೆನುಡಿಗಳೂ ವೈಶಿಷ್ಟ್ಯಪೂರ್ಣವಾಗಿವೆ. ಅಳಿಯಸಂತಾನ ಪದ್ಧತಿ ತುಳುನಾಡಿನಿಂದ ದಕ್ಷಿಣದ ಕೇರಳದವರೆಗೆ ಹಬ್ಬಿತು. ನೀಲಗಿರಿಯಲ್ಲಿ ತೋಡರು, ಕರುಂಬರು, ಆನೆಮಲೈ ಅರಣ್ಯಗಳಲ್ಲಿ ಕಾಡರು, ಕರ್ನಾಟಕದ ಭಾಗದಲ್ಲಿ ಮಲೆಕುಡಿಯರು, ಮೊದಲಾದ ಆದಿವಾಸಿಗಳು ವಾಸಿಸುತ್ತಾರೆ. **(ವಿ.ಜಿ.ಕೆ.)**

**ಪಶ್ಚಿಮವಾಹಿನಿ:** ಕಾವೇರಿ ನದಿಯ ಪಶ್ಚಿಮ ಕವಲಿನ ದಂಡೆಯ ಮೇಲಿನ ಒಂದು ಸ್ಥಳ. ಇದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಪಶ್ಚಿಮ ನೈಋತ್ಯಕ್ಕಿದ್ದು ಮೈಸೂರಿಗೆ 10 ಕಿಮೀ ದೂರದಲ್ಲಿದೆ. ಶ್ರೀರಂಗಪಟ್ಟಣದ ಪಶ್ಚಿಮ ತುದಿಯಲ್ಲಿ ಕಾವೇರಿ ನದಿ ಎರಡಾಗಿ ಕವಲೊಡೆದು, ದಕ್ಷಿಣ ಕವಲಿನ ಒಂದು ಉಪ ಕವಲು ಸ್ವಲ್ಪ ದೂರ ಪಶ್ಚಿಮಕ್ಕೆ ತಿರುಗಿ ಹರಿಯುವುದರಿಂದ ಇದಕ್ಕೆ ಪಶ್ಚಿಮವಾಹಿನಿ ಎಂದು ಕರೆಯಲಾಗಿದೆ. ಅದೇ ಹೆಸರಿನಿಂದಲೇ ಈ ಸ್ಥಳವನ್ನು ಗುರುತಿಸುತ್ತಾರೆ. ಈ ಕವಲುಗಳು ಮುಂದೆ ಸಂಗಮದಲ್ಲಿ ಕೂಡಿಕೊಳ್ಳುವುವು. ಪಶ್ಚಿಮವಾಹಿನಿ ಪವಿತ್ರ ತೀರ್ಥವೆಂದು ಪ್ರಸಿದ್ಧವಾಗಿದೆ. ಇಲ್ಲಿ ಮೈಸೂರು ಅರಸರ ಕಾಲದಲ್ಲಿ ಕಟ್ಟಿಸಿದ್ದ ಸ್ನಾನಘಟ್ಟಗಳು ಇವೆ. ನದಿಯ ಎರಡೂ ಬದಿಯಲ್ಲಿ ಅನೇಕ ಧರ್ಮಛತ್ರಗಳನ್ನು ಕಟ್ಟಲಾಗಿದ್ದು ಅಲ್ಲಿ ಮದುವೆ ಮುಂತಾದ ಕಾರ್ಯಗಳನ್ನು ನೆರವೇರಿಸುವರು. ಕಾವೇರಿ ನೀರಿನ ಪೂರೈಕೆಯಿಂದಾಗಿ ಪಶ್ಚಿಮವಾಹಿನಿಯ ಸುತ್ತಲೂ ಬತ್ತ ಮತ್ತು ಕಬ್ಬಿನ ಗದ್ದೆಗಳೂ ತೆಂಗಿನ ತೋಟಗಳೂ ಸಮೃದ್ಧವಾಗಿವೆ. ಪ್ರಸಿದ್ಧ ಪಕ್ಷಿಧಾಮ ರಂಗನತಿಟ್ಟು**(ನೋಡಿ)** ಇದರ ಸಮೀಪದಲ್ಲೇ ಇದೆ. ಪಶ್ಚಿಮವಾಹಿನಿ ಬೆಂಗಳೂರು–ಮೈಸೂರು ರೈಲುಮಾರ್ಗದ ಒಂದು ನಿಲ್ದಾಣ. **(ವಿ.ಜಿ.ಕೆ.)**

**ಪಾಂಚಾಳ ಗಂಗ:** ಸು. 1650. ಚೆನ್ನರಾಮಸಾಂಗತ್ಯ ಎಂಬ ಗ್ರಂಥದ ಕರ್ತೃ. ಈತ ಮೈಸೂರು ಜಿಲ್ಲೆಯ ತಗಡೂರಿನವನಿರಬಹುದೆಂದು ಊಹೆ. ಇವನಿಗೆ ಕನ್ನಡ ಕವಿಜಾಣ ಎಂಬ ಬಿರುದಿದ್ದಂತೆ ತಿಳಿಯುತ್ತದೆ.

ಚೆನ್ನರಾಮಸಾಂಗತ್ಯವನ್ನು ಕುಮಟರಾಮನ ಕಥೆ, ಚೆನ್ನರಾಮನ ಕಥೆ ಎಂದೂ ಕರೆಯಲಾಗಿದೆ. ಕುಮಾರರಾಮನ ಕಥೆ ಇದರ ವಸ್ತು. ಇದರಲ್ಲಿ ಕಾವ್ಯತ್ವದೊಂದಿಗೆ ಇತಿಹಾಸವೂ ಮಿಶ್ರಿತವಾಗಿದೆ. ಕೃತಿ ಮುದ್ರಿತವಾಗಿಲ್ಲ. ಸುಮಾರು 30ಕ್ಕೂ ಹೆಚ್ಚು ಹಸ್ತಪ್ರತಿಗಳು ದೊರಕುತ್ತವೆ. ಇವುಗಳಲ್ಲಿ ಒಂದು ಇದ್ದಂತೆ ಇನ್ನೊಂದು ಇರುವುದಿಲ್ಲ. ಸಂಧಿಗಳ ಸಂಖ್ಯೆ, ಪದಗಳ ಸಂಖ್ಯೆ, ಕಥೆಯಲ್ಲಿನ ಘಟನೆಗಳಲ್ಲಿ ನಾನಾ ಅಂತರ ಕಂಡುಬರುತ್ತದೆ. ಕೃತಿ ಬಹುಶಃ 12 ಸಂಧಿ ಹಾಗೂ ಸು. 3,000 ಪದ್ಯಗಳನ್ನೊಳಗೊಂಡ ರಚನೆಯಾಗಿರುವಂತೆ ತೋರುತ್ತದೆ. ಕುಮಾರರಾಮನನ್ನು ಕುರಿತ ಅನೇಕ ಕೈಫಿಯತ್ತುಗಳು ಪಾಂಚಾಳ ಗಂಗನ ಕೃತಿಯನ್ನು ಹೋಲುತ್ತವೆ.

ಗಂಗನ ಸಾಂಗತ್ಯ ಶೈಲಿ ಸರಳವಾಗಿದೆ. ವರ್ಣನೆಗಳಲ್ಲಿ ಸಂಕ್ಷಿಪ್ತತೆ, ಸಾಂಪ್ರದಾಯಿಕತೆ ಕಂಡುಬರುತ್ತದೆ. ಅಲ್ಲದೆ ಜನಪದ ಸಾಹಿತ್ಯದಲ್ಲಿ

ಬರುವ ಕಥೆಗೂ ಇಲ್ಲಿನ ಕಥೆಗೂ ಬಹುಮಟ್ಟಿಗೆ ಸಾಮ್ಯವಿದೆ. ಇದರಿಂದ ಈತನ ಕೃತಿ ಹೆಚ್ಚು ಜನಪ್ರಿಯವಾಗಿತ್ತೆಂದು ಊಹಿಸ ಬಹುದಾಗಿದೆ. (ಎಸ್.ಆರ್.ಡಿ.)

**ಪಾಂಡವಪುರ:** ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು; ಈ ತಾಲ್ಲೂಕಿನ ಹಾಗೂ ಕೃಷ್ಣರಾಜಪೇಟೆ, ಪಾಂಡವಪುರ, ನಾಗಮಂಗಲ, ಶ್ರೀರಂಗಪಟ್ಟಣ–ಈ ತಾಲ್ಲೂಕುಗಳನ್ನೊಳಗೊಂಡ ಜಿಲ್ಲಾ ಉಪವಿಭಾಗದ ಕೇಂದ್ರ, ಮಂಡ್ಯ ಜಿಲ್ಲೆಯ ನೈಋತ್ಯದಲ್ಲಿರುವ ಈ ತಾಲ್ಲೂಕಿನ ಉತ್ತರಕ್ಕೆ ನಾಗಮಂಗಲ, ಪೂರ್ವಕ್ಕೆ ಮಂಡ್ಯ, ಆಗ್ನೇಯದಲ್ಲಿ ಶ್ರೀರಂಗಪಟ್ಟಣ, ಪಶ್ಚಿಮದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕುಗಳೂ ದಕ್ಷಿಣದಲ್ಲಿ ಕೃಷ್ಣರಾಜಸಾಗರವೂ ಸುತ್ತುವರಿದಿವೆ. ಈ ತಾಲ್ಲೂಕಿನಲ್ಲಿ ಪಾಂಡವಪುರ, ಮೇಲುಕೋಟೆ ಮತ್ತು ಚಿನಕುರುಳಿ ಮೂರು ಹೋಬಳಿಗಳೂ 175 ಗ್ರಾಮಗಳೂ ಇವೆ. ವಿಸ್ತೀರ್ಣ 533 ಚಕಿಮೀ. ಜನಸಂಖ್ಯೆ 1,75,009.

ಈ ತಾಲ್ಲೂಕು ಹಿಂದೆ ಮೈಸೂರು ಜಿಲ್ಲೆಯ ಒಂದು ಭಾಗವಾಗಿದ್ದು ಇದಕ್ಕೆ ಫ್ರೆಂಚ್‌ರಾಕ್ಸ್ ಅಥವಾ ಹಿರೋಡೆ ಎಂಬ ಹೆಸರಿತ್ತು. 1882ರಲ್ಲಿ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ರಚಿಸಲಾಯಿತು. ಅನಂತರ ಫ್ರೆಂಚ್‌ರಾಕ್ಸ್ ಎಂಬ ಉಪ ತಾಲ್ಲೂಕು ಮಾಡಿದ್ದು, ಅದು 1923ರಲ್ಲಿ ರದ್ದಾಯಿತು. ಪಾಂಡವಪುರ ಕಸಬ ಹೋಬಳಿ ಶ್ರೀರಂಗಪಟ್ಟಣದ ತಾಲ್ಲೂಕಿಗೆ ಸೇರಿತು. ಕೃಷ್ಣರಾಜಸಾಗರದ ನಿರ್ಮಾಣದ ಅನಂತರ 1937 ಜುಲೈ 1ರಿಂದ ಹಿರೋಡೆ, ಮೇಲುಕೋಟೆ ಮತ್ತು ಚಿನಕುರಳಿ ಹೋಬಳಿಗಳನ್ನು ಶ್ರೀರಂಗ ಪಟ್ಟಣ ತಾಲ್ಲೂಕಿನಿಂದ ಬೇರ್ಪಡಿಸಿ ಫ್ರೆಂಚ್‌ರಾಕ್ಸ್ (ಪಾಂಡವಪುರ) ಎಂಬ ಹೊಸ ತಾಲ್ಲೂಕನ್ನು ರಚಿಸಲಾಯಿತು. 1939ರಲ್ಲಿ ಮೈಸೂರು ಜಿಲ್ಲೆ ವಿಭಜಿಸಲ್ಪಟ್ಟಾಗ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಮಂಡ್ಯಜಿಲ್ಲೆಗೆ ಸೇರಿತು.

ಈ ತಾಲ್ಲೂಕು ಏರಿಳಿತಗಳಿಂದ ಕೂಡಿದ ಮೇಲ್ಮೈಲಕ್ಷಣವನ್ನು ಹೊಂದಿದ್ದು ಪೂರ್ವ ಹಾಗೂ ಉತ್ತರ ಭಾಗಗಳಲ್ಲಿ ಪಾಂಡವಪುರ ಮತ್ತು ಮೇಲುಕೋಟೆ ಬಳಿ ಗ್ರಾನೈಟ್ ಶಿಲೆಗಳ ಬೆಟ್ಟಗಳಿಂದ ಕೂಡಿದೆ. ಮೇಲುಕೋಟೆ (3589) ತಾಲ್ಲೂಕಿನ ಎತ್ತರದ ಬೆಟ್ಟ. ಲೋಕಪಾವನಿ ನದಿ ತಾಲ್ಲೂಕಿನ ಉತ್ತರದಿಂದ ದಕ್ಷಿಣಕ್ಕೆ ಹರಿದು ತಾಲ್ಲೂಕಿನ ದಕ್ಷಿಣ ದಂಚಿನಲ್ಲಿ ಹರಿಯುವ ಕಾವೇರಿಯನ್ನು ಸೇರಿಕೊಳ್ಳುವುದು. ಪಾಂಡವಪುರ ತಾಲ್ಲೂಕಿನ ಹೆಚ್ಚುಭಾಗ ಕಾವೇರಿ ಮತ್ತು ಲೋಕಪಾವನಿ ನದಿಗಳ ಬಯಲನ್ನು ಒಳಗೊಂಡಿದೆ. ಈ ತಾಲ್ಲೂಕಿನ ಮಣ್ಣು ಗ್ರಾನೈಟ್ ಮತ್ತು ನೀಸ್ ಶಿಲೆಗಳಿಂದ ಉಂಟಾಗಿದ್ದು ಕೆಂಪು ಜೇಡಿಮಣ್ಣು ಹಾಗೂ ಮರಳು ಮಿಶ್ರಿತ ಭೂಮಿ ಇದೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 600.71 ಮಿಮೀ.

ಈ ತಾಲ್ಲೂಕು ಕೃಷಿಪ್ರಧಾನವಾದ ಪ್ರದೇಶ. ಹೆಚ್ಚು ಭಾಗ ನೀರಾವರಿ ಸೌಲಭ್ಯ ಪಡೆದಿದೆ. ಇದೇ ತಾಲ್ಲೂಕಿಗೆ ಸೇರಿದ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲಾದ ಕೃಷ್ಣರಾಜಸಾಗರದಿಂದ ಬರುವ ಉತ್ತರ ದಡದ ವಿಶ್ವೇಶ್ವರಯ್ಯ ಕಾಲುವೆ, ಲೋಕಪಾವನಿ ನದಿ ಮತ್ತು ಅನೇಕ ಕೆರೆಗಳು ವ್ಯವಸಾಯಕ್ಕೆ ನೀರನ್ನು ಒದಗಿಸುತ್ತವೆ. ಈ ತಾಲ್ಲೂಕಿನ ತೊಣ್ಣೂರು ಕೆರೆ ದೊಡ್ಡದು. ಬತ್ತ, ರಾಗಿ, ಜೋಳ, ಕಬ್ಬು, ನೆಲಗಡಲೆ ಪ್ರಮುಖ ಬೆಳೆಗಳು. ಕೆಲವು ದ್ವಿದಳಧಾನ್ಯಗಳನ್ನೂ ಬೆಳೆಯುತ್ತಾರೆ. ಮಂಡ್ಯ ಜಿಲ್ಲೆಯ ಇತರ ತಾಲ್ಲೂಕುಗಳಂತೆ ಇದು ಕೂಡ ಸಾಂದ್ರ ಬೇಸಾಯ ಪದ್ಧತಿಯ (ಪ್ಯಾಕೇಜ್ ಪ್ರೋಗ್ರಾಮ್ ಸ್ಕೀಮ್) ಯೋಜನೆಗೆ ಒಳಪಟ್ಟದ್ದು, ಅನೇಕ ರೀತಿಯ ಪರಿಷ್ಕೃತ ಉತ್ತಮ ಬಿತ್ತನೆ ಬೀಜಗಳು, ರಾಸಾಯನಿಕ ಗೊಬ್ಬರಗಳ ಬಳಕೆ, ವೈಜ್ಞಾನಿಕ ಬೇಸಾಯ ಪದ್ಧತಿ, ಆಧುನಿಕ ವ್ಯವಸಾಯೋಪಕರಣಗಳ ಬಳಕೆ ಮುಂತಾದುವುಗಳ ಹಾಗೂ ರೈತರಿಗೆ ತಾಂತ್ರಿಕ ಮತ್ತು ಆರ್ಥಿಕ ಸಹಾಯ ಹಾಗೂ ಮಾರ್ಗದರ್ಶನ ದೊರೆಯು ತ್ತಿದ್ದು ಕೃಷಿ ಹೆಚ್ಚಿನ ಪ್ರಗತಿಯನ್ನು ಹೊಂದುತ್ತಿದೆ.

ಈ ತಾಲ್ಲೂಕಿನಲ್ಲಿ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ, ಬತ್ತದ ಗಿರಣಿಗಳು, ಕೈಮಗ್ಗದ ಕೈಗಾರಿಕೆ, ಬೆಲ್ಲ ತಯಾರಿಕೆ ಮತ್ತು ವ್ಯವಸಾಯೋಪಕರಣಗಳನ್ನು ತಯಾರು ಮಾಡುವ ಬಡಗಿ ಮತ್ತು ಕಮ್ಮಾರರ ಕೈಗಾರಿಕೆಗಳು ಮುಂತಾದ ಕೃಷಿ ಆಧಾರಿತ ದೊಡ್ಡ ಹಾಗೂ ಸಣ್ಣಪ್ರಮಾಣದ ಕೈಗಾರಿಕೆಗಳು ಇವೆ.

ಕುಂತಿಬೆಟ್ಟ, ಪಾಂಡವಪುರ

ಈ ತಾಲ್ಲೂಕಿನಲ್ಲಿ ಶ್ರೀರಂಗಪಟ್ಟಣದಿಂದ ಪಾಂಡವಪುರದ ಮೂಲಕ ಮೇಲುಕೋಟೆವರೆಗೆ ಹಾದುಹೋಗುವ ಒಂದೇ ಒಂದು ಪ್ರಾಂತೀಯ ಹೆದ್ದಾರಿಯಿದ್ದು ಇದು ಮಂಡ್ಯ, ಮೈಸೂರು, ಹಾಸನ ಮತ್ತು ತುಮಕೂರು ಜಿಲ್ಲೆಗಳೊಡನೆ ಸಂಪರ್ಕವೇರ್ಪಡಿಸುತ್ತದೆ. ತಾಲ್ಲೂಕಿನ ಹೋಬಳಿ ಕೇಂದ್ರಗಳಾದ ಮೇಲುಕೋಟೆ, ಪಾಂಡವಪುರ, ಚಿನಕುರಳಿಗಳಿಗೆ ಜಿಲ್ಲಾ ರಸ್ತೆಗಳಿದ್ದು ಇತರ ಮುಖ್ಯ ಗ್ರಾಮಗಳಿಗೆ ಗ್ರಾಮೀಣ ರಸ್ತೆಗಳಿವೆ. ಮೈಸೂರು –ಬೆಂಗಳೂರು ರೈಲು ಮತ್ತು ರಸ್ತೆ ಮಾರ್ಗಗಳು ಪಾಂಡವಪುರದ ಮೂಲಕ ಹಾದುಹೋಗಿವೆ.

ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಜೂನಿಯರ್ ಮತ್ತು ಪದವಿ ಕಾಲೇಜು, ಮೂಲಶಿಕ್ಷಣಶಾಲೆಗಳು ಇವೆ. ಈ ತಾಲ್ಲೂಕಿ ನಲ್ಲಿ ಪಾಂಡವಪುರ ಮತ್ತು ಮೇಲುಕೋಟೆ **(ನೋಡಿ)** ಪಟ್ಟಣಗಳು. ಮೇಲುಕೋಟೆ ರಾಮಾನುಜಾಚಾರ್ಯರು ನೆಲಸಿದ್ದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ.

ಪಾಂಡವಪುರ ಇದೇ ತಾಲ್ಲೂಕಿನ ಮತ್ತು ಹೋಬಳಿಯ ಆಡಳಿತ ಕೇಂದ್ರ. ಮಂಡ್ಯ ಜಿಲ್ಲೆಯ ಉಪವಿಭಾಗದ ಆಡಳಿತ ಕೇಂದ್ರವೂ ಆಗಿರುವ ಈ ಪಟ್ಟಣ ಶ್ರೀರಂಗಪಟ್ಟಣದ ಉತ್ತರಕ್ಕೆ ಸುಮಾರು 6 ಕಿಮೀ ದೂರದಲ್ಲೂ ಮೈಸೂರಿನಿಂದ 24 ಕಿಮೀ ದೂರದಲ್ಲೂ ಮತ್ತು ಮಂಡ್ಯದ ಪಶ್ಚಿಮಕ್ಕೆ 23 ಕಿಮೀ ದೂರದಲ್ಲೂ ಇದೆ. ಪಾಂಡವಪುರ ಪಟ್ಟಣದಲ್ಲಿ 9,211 ಮಂದಿ ಪುರುಷರೂ 9025 ಮಂದಿ ಮಹಿಳೆಯರೂ ಇದ್ದು ಒಟ್ಟು ಜನಸಂಖ್ಯೆ 18,236.

ಪಾಂಡವಪುರ ಈಗ ಒಂದು ವ್ಯಾಪಾರ ಕೇಂದ್ರವಾಗಿದೆ. ಶಾಲೆ ಕಾಲೇಜುಗಳೂ ವೈದ್ಯಕೀಯ ಸೌಲಭ್ಯಗಳೂ ಇರುವ ಪಟ್ಟಣವಾಗಿದೆ. ಇಲ್ಲಿ ಸ್ಥಾಪಿತವಾಗಿರುವ ಸಕ್ಕರೆ ಕಾರ್ಖಾನೆಯಿಂದಾಗಿ ಪಟ್ಟಣ ವಿಸ್ತರಿಸು ತ್ತಿದೆ. ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ. ಇಲ್ಲಿನ ಸ್ಥಳಪುರಾಣದ

ಪ್ರಕಾರ ಪಾಂಡವರು ಅವರ ಅಜ್ಞಾತವಾಸದ ಸಮಯದಲ್ಲಿ ಈ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದರಂತೆ. ಇಲ್ಲಿಗೆ ಸಮೀಪದಲ್ಲಿ ಅಕ್ಕತಂಗಿಬೆಟ್ಟ ಹಾಗೂ ಕುಂತಿಬೆಟ್ಟ ಎಂಬ ಬೆಟ್ಟಗಳಿವೆ. ಇಲ್ಲಿ ಬೃಹತ್‌ಶಿಲಾಸಮಾಧಿ ಸಂಸ್ಕೃತಿಯ ಕಾಲದ ಅವಶೇಷಗಳು ಇವೆ. ಈ ಊರು ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಮಿಲಿಟರಿ ಕೇಂದ್ರವಾಗಿತ್ತು. ಫ್ರೆಂಚ್ ಸೈನ್ಯದ ತುಕಡಿ ಇಲ್ಲಿ ಕೆಲವು ಸಮಯ ಬೀಡುಬಿಟ್ಟಿದ್ದರಿಂದ ಇದಕ್ಕೆ ಫ್ರೆಂಚ್‌ರಾಕ್ಸ್ ಎಂಬ ಹೆಸರು ಬಂತೆಂದು ಹೇಳಲಾಗುತ್ತದೆ. ಶ್ರೀರಂಗಪಟ್ಟಣವನ್ನು ಬ್ರಿಟಿಷರು ಮುತ್ತಿಗೆ ಹಾಕಿದಾಗ ಬ್ರಿಟಿಷ್ ಸೈನ್ಯದ ತುಕಡಿಗಳು ಈಗಿನ ಪಾಂಡವಪುರ ರೈಲ್ವೆನಿಲ್ದಾಣದ ಹತ್ತಿರ ಬೀಡುಬಿಟ್ಟಿದ್ದವು. **(ಕೆ.ಆರ್.ಎನ್.)**

**ಪಾಜಕ**: ಉಡುಪಿಯ ದಕ್ಷಿಣಕ್ಕೆ 11ಕಿಮೀ ದೂರದಲ್ಲಿರುವ ಒಂದು ಪುಣ್ಯಕ್ಷೇತ್ರ. ದ್ವೈತಮತಸ್ಥಾಪಕ ಮಧ್ವಾಚಾರ್ಯರ ಜನ್ಮಸ್ಥಳ. ಮಧ್ವಾಚಾರ್ಯರ ತಂದೆ ಮಧ್ಯಗೇಹಭಟ್ಟರು ಉಡುಪಿಯ ಕಡಿಯಾಳಯ ಸಗ್ರಿಯಲ್ಲಿ ವಾಸಿಸುತ್ತಿದ್ದು, ಅನಂತರ ಪಾಜಕಕ್ಷೇತ್ರಕ್ಕೆ ಹೋಗಿ ಅಲ್ಲಿ ನೆಲಸಿದರು. ಅಲ್ಲಿ ಜನಿಸಿದ ವಾಸುದೇವ ಮುಂದೆ ಮಧ್ವಾಚಾರ್ಯರೆಂದು ಖ್ಯಾತರಾದರು. ಈ ಕ್ಷೇತ್ರದ ಸಮೀಪದಲ್ಲಿ ಕುಂಜಾರುಗಿರಿ ಎಂಬ ಬೆಟ್ಟವಿದೆ. ಇದಕ್ಕೆ ದುರ್ಗಾಬೆಟ್ಟವೆಂದೂ ಹೆಸರು. ಈ ಬೆಟ್ಟದ ನಾಲ್ಕೂದಿಕ್ಕುಗಳಲ್ಲಿ ನಾಲ್ಕು 'ತೀರ್ಥ'ಗಳಿವೆ. ಇವು ಸರದಿಯಂತೆ ಪರಶುರಾಮ ನಿರ್ಮಿತವೆಂದು ಪ್ರತೀತಿ. ವಾದಿರಾಜರು ಪ್ರತಿಷ್ಠಾಪಿಸಿದ ಮಧ್ವಾಚಾರ್ಯರ ಗುಡಿಯಿದೆ. ಸರದಿಯಂತೆ ಶ್ರೀಕೃಷ್ಣಮಠದ ಸರ್ವಜ್ಞ ಪೀಠವನ್ನು ಏರುವ ಸ್ವಾಮಿಗಳು ಅದಕ್ಕೆ ಮುನ್ನ ಪರ್ಯಾಯಪೂರ್ವದ ಸಂಚಾರದ ಅಂಗವಾಗಿ ಈ ಕ್ಷೇತ್ರವನ್ನು ಸಂದರ್ಶಿಸುತ್ತಾರೆ. ಈ ಗುಡಿಗೆ ಸಮೀಪದಲ್ಲಿ ಆಚಾರ್ಯರ ಹಿರಿಯರು ವಾಸಿಸಿದ ಮನೆಯಿದೆ. ಈಗ ಅದಕ್ಕೆ ಮೂಡುಮಠವೆಂದು ಹೆಸರು. ಅದರ ಪಕ್ಕದಲ್ಲೇ ಮಧ್ವಾಚಾರ್ಯರು ತಾಯಿಗಾಗಿ ನಿರ್ಮಿಸಿಕೊಟ್ಟ ವಾಸುದೇವತೀರ್ಥ ಎಂಬ ಪುಷ್ಕರಣಿಯಿದೆ. ತಂದೆಯನ್ನು ಸಾಲಿಗನ ಉಪಟಳದಿಂದ ತಪ್ಪಿಸಲು ಬಾಲಕ ವಾಸುದೇವ ಅವನಿಗೆ ಹುಣಸೆಬೀಜಗಳನ್ನಿತ್ತನೆಂದೂ ಅವೆಲ್ಲವೂ ಚಿನ್ನದ ನಾಣ್ಯಗಳಾಗಿ ಪರಿವರ್ತನೆ ಹೊಂದಿದವೆಂದೂ ಪ್ರತೀತಿ. ಆಚಾರ್ಯರು ಆ ಸಾಲಿಗನೇ ಹುಟ್ಟಿದ ಮನೆಯನ್ನು ಪುನರ್ನಿರ್ಮಿಸಿದನೆಂದೂ ನಂಬಲಾಗಿದೆ. ತಾನು ಸ್ಥಾಪಿಸಿದ ದ್ವೈತ ಮತ ಬಹುಕಾಲ ಉಳಿಯುವುದಾಗಿ ತಂದೆಗೆ ನಂಬುಗೆ ಬರುವ ಸಲುವಾಗಿ ಒಣಮರದ ಗೆಲ್ಲನ್ನು ಚಿಗುರುವಂತೆ ಮಾಡಿದ ಸ್ಥಳ, ಕದ್ದು ಹಾಲುಕುಡಿಯುತ್ತಿದ್ದ ಬೆಕ್ಕಿಗೆ ಪ್ರತಿಬಂಧಕವಾಗಿ ಹಾಸುಗಲ್ಲನ್ನು ಇರಿಸಿದ ಸ್ಥಳ ಎಂದು ಆಯಾ ಸ್ಥಳಗಳನ್ನು ಊರವರು ಯಾತ್ರಾರ್ಥಿಗಳಿಗೆ ತೋರಿಸುತ್ತಾರೆ.

ಈ ಕ್ಷೇತ್ರದಲ್ಲಿರುವ ಬೃಹತ್‌ಗ್ರಾತದ ಬಂಡೆಗಳನ್ನು ಒಡೆದು ರಸ್ತೆಗಳಿಗೆ ಬೇಕಾಗುವ ಜಲ್ಲಿಕಲ್ಲು ಸರಬರಾಜು ಮಾಡುವ ಪ್ರಯತ್ನಗಳು ನಡೆದಾಗ ಉಡುಪಿಯ ಅಷ್ಟಮಠದ ಯತಿಗಳು ಹಾಗೂ ಪರಿಸರಾಸಕ್ತರು ಪ್ರತಿಭಟಿಸಿ ಈ ಕೆಲಸಕ್ಕೆ ತಡೆಯೊಡ್ಡಿದ್ದರು. **(ಎ.ವಿ.ಎನ್‌ಎ.)**

**ಪಾಟೀಲ್, ಕೆ.ಎಚ್.:** 1925–92. ಮಾಜಿ ಸಚಿವರು. ಸಹಕಾರಿ ಕ್ಷೇತ್ರದ ಧುರೀಣರು. ಹಿರಿಯ ರಾಜಕಾರಣಿ. ಇವರು 1925 ಮಾರ್ಚ್ 16ರಂದು ಗದಗದಲ್ಲಿ ಜನಿಸಿದರು. ಇವರ ಸ್ವಂತ ಊರು ಇಲ್ಲಿಗೆ ಸಮೀಪದ ಹುಲಕೋಟಿ. ತಂದೆ ರಂಗನಗೌಡ, ತಾಯಿ ನಿಂಗಮ್ಮ. ಗೌಡಕಿ ಮನೆತನಕ್ಕೆ ಸೇರಿದ ಪಾಟೀಲರು ದೊಡ್ಡ ಹಿನ್ನೆಲೆಯಲ್ಲಿ ಬೆಳೆದವರು. ಇವರ ತಂದೆ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಊರಿನ ಯಜಮಾನರಾಗಿದ್ದವರು. ಪಾಟೀಲರು ಪ್ರೌಢಶಾಲೆಯವರೆಗೂ ವ್ಯಾಸಂಗ ಮಾಡಿ ನೇರವಾಗಿ ಜೀವನ ರಂಗಕ್ಕಿಳಿದವರು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಚಳವಳಿಗೆ ದುಮುಕಿ ನಾಯಕತ್ವ ಗುಣ ಪ್ರದರ್ಶಿಸಿದರು. ಇವರದು ಹುಟ್ಟುಹೋರಾಟಗಾರ ಮನೋಭಾವ.

ಇವರು ತಮ್ಮ ಹದಿನೆಂಟರ ತಾರುಣ್ಯದಲ್ಲೇ ಸ್ವಗ್ರಾಮ ಹಲಕೋಟಿ ಪಂಚಾಯಿತಿಯ ಸರಪಂಚರಾದರು. ಬಿಚ್ಚುಮಾತಿನ ಇವರ ನಡೆನುಡಿಗಳು ಜನರಲ್ಲಿ ಇವರ ಬಗ್ಗೆ ವಿಶ್ವಾಸ ಮೂಡುವಂತೆ ಮಾಡಿದವು. ಇವರ ವ್ಯಕ್ತಿತ್ವ ಜನರನ್ನು ಸೂಜಿಗಲ್ಲಿನಂತೆ ಸೆಳೆಯಿತು; ಅವರು ತಮ್ಮ ದುಃಖದುಮ್ಮಾನಗಳನ್ನು ಇವರಲ್ಲಿ ತೋಡಿಕೊಳ್ಳತೊಡಗಿದರು. ತಾವು ಬೆಳೆದ ಬೆಳೆಗೆ ಸೂಕ್ತ ಬೆಲೆಯಿಲ್ಲದೆ ರೈತರು ಬಡತನದಲ್ಲಿ ಕಂಗಾಲಾಗಿರುವುದನ್ನು ಕಂಡರು; ಸಾಲಗಾರರ ಶೂಲಕ್ಕೆ ಬಿದ್ದು ನಾಶವಾಗುತ್ತಿದ್ದವರ ಸಂಕಟ ತಿಳಿದರು. ಇವರಿಗೆ ಆಗ ಜನರನ್ನು ಇಂಥ ಸಂಕಷ್ಟದಿಂದ ಪಾರುಮಾಡಲು ಸಹಕಾರಿ ಆಂದೋಲನವನ್ನು ಬಲಪಡಿಸುವುದೊಂದೇ ದಾರಿ ಎಂಬ ಅರಿವಾಯಿತು. ತಮ್ಮ ವೈಯಕ್ತಿಕ



ಸುಖಸಂತೋಷಗಳನ್ನು ಬದಿಗೊತ್ತಿ ಸಹಕಾರಿ ಸಂಸ್ಥೆಗಳನ್ನು ಮತ್ತು ಶಿಕ್ಷಣ ಸಂಸ್ಥೆಗಳನ್ನು ಕಟ್ಟಲು ಮುಂದಾದರು. ಇದರಿಂದ ಇವರು ಪಟ್ಟಭದ್ರರ ವಿರೋಧ ಎದುರಿಸಬೇಕಾಗಿ ಬಂದರೂ ತಮ್ಮ ಗುರಿಯನ್ನು ಬಿಡಲಿಲ್ಲ.

ಗ್ರಾಮ ಸ್ವರಾಜ್ಯದ ಕನಸು ನನಸಾಗಲು ತಮ್ಮ ಗ್ರಾಮ ಹುಲಕೋಟಿಯನ್ನೇ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡರು. 1950ರ ದಶಕದಲ್ಲಿ ಅಲ್ಲಿ ಒಂದಾದ ಮೇಲೊಂದರಂತೆ ಅನೇಕ ಸಂಸ್ಥೆಗಳನ್ನು ಸ್ಥಾಪಿಸುತ್ತ ಹೋದರು. ಗ್ರಾಮೀಣ ಉಗ್ರಾಣ, ಶಾಲೆಗಳು, ಗ್ರಾಮಕೇಂದ್ರ, ಶ್ರೀರಾಮಮಂದಿರ, ಗರಡಿಮನಿ, ಸ್ನಾನಗೃಹಗಳು, ಪಶು ಚಿಕಿತ್ಸಾಲಯ– ಹೀಗೆ ಗ್ರಾಮಾಭಿವೃದ್ಧಿ ಸಂಸ್ಥೆಗಳು ಪ್ರಾರಂಭವಾಗಿ ಅಲ್ಲಿನ ಜನರು ಸ್ವಾವಲಂಬಿಗಳಾಗಲು ನೆರವಾದವು. 1955ರ ಹೊತ್ತಿಗೆ ಸಹಕಾರದ ವ್ಯಾಪ್ತಿಯನ್ನು ತಾಲ್ಲೂಕು ಕೇಂದ್ರವಾದ ಗದಗಕ್ಕೂ ವಿಸ್ತರಿಸಿದರು. ಅಲ್ಲಿ ಹತ್ತಿ ಮಾರಾಟ ಸಹಕಾರ ಸಂಘ ಪ್ರಾರಂಭಿಸಿದರು. ಅಲ್ಲಿನ ಪುರಸಭೆಗೆ ತಮ್ಮ ಬೆಂಬಲಿಗರು ಆರಿಸಿ ಬರುವಂತೆ ಮಾಡಿದರು. 1954ರಲ್ಲಿ ಎ.ಪಿ.ಸಿ.ಸಿ. ಸದಸ್ಯರಾಗುವ ಮೂಲಕ ರಾಜಕೀಯ ಮಾನ್ಯತೆಯೂ ಇವರಿಗೆ ಸಂದಿತು. ಹುಲಕೋಟಿಯಲ್ಲಿ ಸಹಕಾರ ಚಳವಳಿಯ ಬಗ್ಗೆ ದೊಡ್ಡ ಸಮಾವೇಶ ನಡೆಸಿದರು. ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದು, ಸೇವಾದಳ ಸಂಘಟನೆ, ಬೆಟಗೇರಿಯಲ್ಲಿ ಹಿಂದ್ ಸೇವಾ ಸಂಘ ಸ್ಥಾಪನೆ ಹೀಗೆ ವಿವಿಧ ಸಂಸ್ಥೆಗಳನ್ನು ಬೆಳೆಸಿ ಆ ಪ್ರಾಂತಕ್ಕೆ ಚಟುವಟಿಕೆ ತಂದುಕೊಟ್ಟರು.

ಪಾಟೀಲರ ಸಹಕಾರ ಸಂಘಟನೆ ಜಿಲ್ಲಾ ಮಟ್ಟ ತಲುಪಲು ಹೆಚ್ಚು ಕಾಲ ಹಿಡಿಯಲಿಲ್ಲ. ಧಾರವಾಡ ಜಿಲ್ಲಾ ಸಹಕಾರಿ ಮಾರಾಟ ಒಕ್ಕೂಟ ಸ್ಥಾಪಿಸಿದರು. ಇದರಿಂದ ರೈತರು ಮಧ್ಯವರ್ತಿಗಳಿಂದ ಶೋಷಣೆಗೊಳಗಾಗುವುದು ಆದಷ್ಟು ತಪ್ಪಿತು. 1962ರ ಹೊತ್ತಿಗೆ ಪ್ರತ್ಯೇಕ ಗದಗ ಜಿಲ್ಲೆ ರಚನೆಯ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟರು. ಇದು ಇವರ ದೂರದೃಷ್ಟಿಗೆ ಸಾಕ್ಷಿಯಾಗಿದೆ (ಅನಂತರ 1997ರಲ್ಲಿ ಈ ಬೇಡಿಕೆ ಈಡೇರಿತು). 1962ರಲ್ಲಿ ವಿಧಾನಸಭೆ ಪ್ರವೇಶಿಸುವ ಪ್ರಯತ್ನ ಮಾಡಿದರೂ ಅದು ಫಲಿಸಲಿಲ್ಲ. ಸಹಕಾರಿ ಆಂದೋಲನವನ್ನು ರಾಜ್ಯದಲ್ಲಿಯೇ ಮಾದರಿಯಾಗುವಂತೆ ರೂಪಿಸಿದರು. ಇದರಿಂದ ಇವರಿಗೆ ಜನಮನ

ಗೆಲ್ಲಲು ಸಾಧ್ಯವಾಯಿತು. ರಾಜ್ಯದ ಎ.ಪಿ.ಎಂ.ಸಿ. ಪ್ರತಿನಿಧಿಗಳ ದೊಡ್ಡ ಸಮಾವೇಶವನ್ನು ಗದಗದಲ್ಲಿ ನಡೆಸಿದರು. ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಪಾಟೀಲರ ಕೊಡುಗೆಯ ಬಗ್ಗೆ ತಿಳಿಯಲು ಈ ಕ್ಷೇತ್ರದ ಮುಂದಾಳುಗಳಿಗೆ ಇದರಿಂದ ಸಾಧ್ಯವಾಯಿತು. ಗ್ರಾಮಶಿಕ್ಷಣವನ್ನು ಸಹಕಾರಿ ಚಳವಳಿಯೊಂದಿಗೆ ಮೇಳವಿಸಿ ಮುನ್ನಡೆಸಿದ್ದು ಇವರ ಕೊಡುಗೆ.

ಇವರು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರಲು ಅನೇಕ ಎಡರು ತೊಡರುಗಳಿದ್ದವು. ಆಗಿನ ಪ್ರಭಾವಿ ನಾಯಕರಾಗಿದ್ದ ಎಸ್. ನಿಜಲಿಂಗಪ್ಪನವರ ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆಯ ಅಭ್ಯರ್ಥಿತನವನ್ನು ವಿರೋಧಿಸಿ ದೊಡ್ಡ ಸಂಕಷ್ಟ ತಂದುಕೊಂಡರು. ಆದರೆ ನೇರ ನಡೆಯ ಪಾಟೀಲರು ಕಾಂಗ್ರೆಸ್ ಪಕ್ಷ ಉತ್ತುಂಗ ಸ್ಥಿತಿಯಲ್ಲಿದ್ದ ಕಾಲದಲ್ಲೇ ಅದನ್ನು ತೊರೆದು 1965ರಲ್ಲಿ ಸಾಹುಕಾರ ಚನ್ನಯ್ಯನವರು ಸ್ಥಾಪಿಸಿದ್ದ ಜನತಾ ಪಕ್ಷ ಸೇರಿ ಅದರ ಮಹಾಕಾರ್ಯದರ್ಶಿಯಾದರು. ಗದಗದಲ್ಲಿ ಹತ್ತಿ ಮಾರಾಟ ಮಹಾ ಸಂಘ, ಧಾರವಾಡದಲ್ಲಿ ಎಣ್ಣೆ ಕಾಳುಗಳ ಮಾರಾಟ ಅಸ್ತಿತ್ವಕ್ಕೆ ಬರಲು ಕಾರಣರಾದರು. ಗದಗದಲ್ಲಿ ರೈತಭವನ (1963), ಹುಲಕೋಟಿಯಲ್ಲಿ ಪ್ರೌಢಶಾಲೆ ಮತ್ತು ಪರಿಶಿಷ್ಟವರ್ಗದವರಿಗೆ ಸಮಾಜ ಕೇಂದ್ರ (1967), ಬಿಂಕದಕಟ್ಟಿಯಲ್ಲಿ ಸಮಾಜ ಮಂದಿರ, ಧರ್ಮಶಾಲೆ, ಉಗ್ರಾಣ, ಬೆಟಗೇರಿಯಲ್ಲಿ ಬಾಕಿಯರ ಪ್ರೌಢಶಾಲೆ, ಗದಗದಲ್ಲಿ ರೆಡ್ಡಿ ಸಹಕಾರಿ ಸಾಲ ಬ್ಯಾಂಕ್, ಹುಲಕೋಟಿಯಲ್ಲಿ ನೆಲಗಡಲೆ ಸಂಸ್ಕರಣ ಸಂಘ ಹೀಗೆ ಹತ್ತು ಹಲವು ಸಂಸ್ಥೆಗಳು ಅಸ್ತಿತ್ವಕ್ಕೆ ಬರಲು ಪ್ರೇರಣೆ ನೀಡಿದರು.

1967ರಲ್ಲಿ ಇವರು ಗದಗ ಕ್ಷೇತ್ರದಿಂದ ಜನತಾಪಕ್ಷದ ಪ್ರಣಾಳಿಕೆಯಿಂದ ವಿಧಾನಸಭೆ ಪ್ರವೇಶಿಸಿದರು. ಮುಂದೆ ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸೇರಿ 1972ರಲ್ಲಿ ಮತ್ತೆ ವಿಧಾನಸಭಾ ಸದಸ್ಯರಾದರು. ಡಿ. ದೇವರಾಜ ಅರಸರ ಮಂತ್ರಿಮಂಡಲದಲ್ಲಿ ಸಚಿವರಾದರು. ಕೃಷಿ ಮತ್ತು ಅರಣ್ಯ ಖಾತೆಗಳನ್ನು ನಿರ್ವಹಿಸಿದರು. ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿದರು. ಜಿಲ್ಲೆಗೊಂದು ಮಣ್ಣು ಪರೀಕ್ಷಾ ಕೇಂದ್ರ ಸ್ಥಾಪಿಸಿದರು. ಜೊತೆಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಇಂದಿರಾಗಾಂಧಿಯವರ ಕುಟುಂಬದ ಆಪ್ತ ವಲಯದಲ್ಲಿ ಇದರು. ಸಣ್ಣ ಸಮುದಾಯದಿಂದ ಬಂದ ಇವರು ಉತ್ತರ ಕರ್ನಾಟಕದ ಪ್ರಬಲ ಕೋಮಿನ ರಾಜಕೀಯದ ನಡುವೆ ಉಳಿದುಬರುವುದು ಅಷ್ಟು ಸುಲಭದ ಸಂಗತಿಯಾಗಿರಲಿಲ್ಲ. ಆದರೆ ಅದಮ್ಯ ಉತ್ಸಾಹಿಯೂ ಸಂಘಟನ ಚತುರರೂ ಆಗಿ ಇವರು ಅದರಲ್ಲೂ ಯಶಸ್ವಿಯಾದರು. ಡಿ. ದೇವರಾಜ ಅರಸರನ್ನು ವಿರೋಧಿಸಿ ಅವರ ಪದಚ್ಯುತಿಗೆ ಮುಂದಾದ ಭಿನ್ನಮತೀಯರ ನಾಯಕತ್ವ ವಹಿಸಿದರು (1978). ಆದರೆ ಡಿ. ದೇವರಾಜ ಅರಸರೇ ಚುನಾವಣೆಯಲ್ಲಿ ಗೆದ್ದು ಬಹುಮತ ಪಡೆದಾಗ ಪಾಟೀಲರು ರಾಜಕೀಯ ಏಕಾಂಗಿತನ ಅನುಭವಿಸಿದರು. ರಾಜಕೀಯ ಸ್ಥಿತ್ಯಂತರದಲ್ಲಿ ಅರಸು ಅವರು ಅಧಿಕಾರ ಕಳೆದುಕೊಂಡಾಗ ಆರ್. ಗುಂಡೂರಾಯರು ಸರ್ಕಾರ ರಚಿಸಿದರು. ಆಗ ಪಾಟೀಲರು ತಮ್ಮ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ್ದರು. ತಮ್ಮ ಊರಿಗೆ ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಯಲ್ಲಿ ಸಫಲರಾದರು (1980). ರಾಜಕೀಯ ಬಿಡುವಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮುಕ್ತ ಶಿಕ್ಷಣದ ಪ್ರಯೋಜನ ಪಡೆದು ಎಂ.ಎ. ಪದವೀಧರರಾದರು. ಇಂದಿರಾಗಾಂಧಿಯವರನ್ನು ಗದಗಕ್ಕೆ ಕರೆಸಿ ತಮ್ಮ ಕಾರ್ಯಶೀಲತೆಯ ಪರಿಚಯ ಮಾಡಿಕೊಟ್ಟರು; ಮರಳಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು. 1985ರಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರಾಗಿ ಚುನಾಯಿತರಾಗಿ ಕಲಾಪಗಳಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಂಡರು. 1989ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಇವರಿಗೆ ಮುಖ್ಯಮಂತ್ರಿ ಹುದ್ದೆ ಸ್ವಲ್ಪದರಲ್ಲಿ ತಪ್ಪಿಹೋಯಿತು. ಆದರೆ ಕಂದಾಯ ಮತ್ತು ಕಾರ್ಮಿಕ ಖಾತೆ ಸಚಿವರಾಗಿ ಹಲವಾರು ಕಾರ್ಯಕ್ರಮ ಗಳನ್ನು ಜಾರಿಗೆ ತಂದರು. ಬಂಗಾರಪ್ಪನವರ ಸಂಪುಟದಲ್ಲೂ ಸಹಕಾರ ಸಚಿವರಾಗಿದ್ದರು. "ಸಹಕಾರಿ ಆಂದೋಲನ ಅವರ ಉಸಿರಾಗಿತ್ತು; ಪ್ರಾಣವಾಗಿತ್ತು. ಒಬ್ಬ ದೂರದೃಷ್ಟಿಯ ನಿಸ್ವಾರ್ಥ ಸಹಕಾರ ತತ್ವನಿಷ್ಠ ಏನನ್ನು ಸಾಧಿಸಬಹುದು ಎಂಬುದನ್ನು ನಂಬಬೇಕಾದರೆ ಹುಲಕೋಟಿ ನೋಡಬೇಕು" ಎಂದು ಕೋ. ಚೆನ್ನಬಸಪ್ಪನವರು ಇವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಒಂದೆಡೆ ಗುರುತಿಸಿದ್ದಾರೆ. ಇದು ಪಾಟೀಲರ ಜೀವನ ಸಾಧನೆಗೆ ಜೀವಂತ ವ್ಯಾಖ್ಯೆ. ಇವರು 1992 ಫೆಬ್ರವರಿ 9ರಂದು ನಿಧನರಾದರು ಇವರ ಪುತ್ರ ಎಚ್.ಕೆ. ಪಾಟೀಲರು ರಾಜ್ಯದಲ್ಲಿ ಸಚಿವರಾಗಿ, ಹೆಸರುಮಾಡಿದ್ದಾರೆ. *

**ಪಾಟೀಲ, ಆರ್.ಬಿ.:** 1925 –. ಪ್ರಸಿದ್ಧ ವೈದ್ಯರು, ಸಮಾಜ ಸೇವಕರು. ರೇವಣಸಿದ್ದಪ್ಪಗೌಡ ಬಸಪ್ಪಗೌಡ ಪಾಟೀಲ ಇವರ ಪೂರ್ಣನಾಮ. ಬಿಜಾಪುರ ಜಿಲ್ಲೆಯ ಅಂಗಡಿಗೇರಿಯಲ್ಲಿ 1925ರ ನವೆಂಬರ್ 20ರಂದು ಜನಿಸಿದರು. ಬಿಜಾಪುರ ಧಾರವಾಡಗಳಲ್ಲಿ ಅಧ್ಯಯನ ಮಾಡಿ, ಮುಂದೆ ಮುಂಬಯಿಯ ಜಿ.ಎಸ್. ಮೆಡಿಕಲ್ ಕಾಲೇಜಿನಿಂದ

1951ರಲ್ಲಿ ವೈದ್ಯಕೀಯ ಪದವೀಧರರಾದರು. ಅನಂತರ ಇಂಗ್ಲೆಂಡಿಗೆ ತೆರಳಿ, 1956ರಲ್ಲಿ ರಾಯಲ್ ಕಾಲೇಜ್ ಆಫ್ ಸರ್ಜನ್ಸ್‌ದ ಫೆಲೋಶಿಪ್ ಪಡೆದರು. ಭಾರತಕ್ಕೆ ಮರಳಿ 1957ರಲ್ಲಿ ಹುಬ್ಬಳ್ಳಿಯ ಸಹಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾಗಿ ಹನ್ನೆರಡು ವರ್ಷಗಳ ಕಾಲ ಕಾರ್ಯಮಾಡಿ, 1969ರಿಂದ ಹುಬ್ಬಳ್ಳಿಯಲ್ಲಿ ತಮ್ಮ ಖಾಸಗಿ ನರ್ಸಿಂಗ್ ಹೋಂ ಮೂಲಕ ರೋಗಿಗಳಿಗೆ ಸೇವೆಸಲ್ಲಿಸುತ್ತಿದ್ದಾರೆ. ಹುಬ್ಬಳ್ಳಿ ಸಹಕಾರಿ ಆಸ್ಪತ್ರೆ ಪಾಟೀಲರ ಹಿರಿತನದಲ್ಲಿ ಅಭಿವೃದ್ಧಿಯಾಯಿತು. ತಮ್ಮ ಕರ್ತೃತ್ವಶಕ್ತಿ ಮತ್ತು ಶಸ್ತ್ರಕ್ರಿಯಾಪರಿಣತಿಯಿಂದ ಆ ಆಸ್ಪತ್ರೆಯನ್ನು ಜನಪ್ರಿಯಗೊಳಿಸಿ ಉತ್ತರ ಕರ್ನಾಟಕದ ವ್ಯಾಧಿಗ್ರಸ್ತ ಜನರಿಗೆ ಯಾತ್ರಾಸ್ಥಳವನ್ನಾಗಿ ಪರಿವರ್ತಿಸಿದರು. ಅಲ್ಲಿದ್ದ 12 ವರ್ಷಗಳ ಕಾಲದಲ್ಲಿ ಇಪ್ಪತ್ತೈದು ಸಹಸ್ರಕ್ಕೂ ಹೆಚ್ಚಿನ ಶಸ್ತ್ರಕ್ರಿಯೆಗಳನ್ನು ಮಾಡಿದ ಪವಾಡ ಇವರದು. ತಮ್ಮ ಸೌಜನ್ಯ, ವಿನಯಶೀಲತೆ ಮತ್ತು ಮಾನವೀಯ ಅನುಕಂಪದಿಂದ ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧರಾದರು. ಪಾಟೀಲರ ಹಸ್ತಸ್ಪರ್ಶ ನಾಡಿನ ಅಸಂಖ್ಯಾತ ರೋಗಿಗಳಿಗೆ ವಿಶ್ವಾಸ ಕುದುರಿಸುವ ಶಕ್ತಿಯಾಗಿ ಕಾರ್ಯ ಮಾಡಿದೆ. ಶಸ್ತ್ರಕ್ರಿಯೆಯಲ್ಲಿ ಸ್ಥಿರವಾದ ಕೈ, ಉದ್ವಿಗ್ನಗೊಳ್ಳದ ಮನಸ್ಸು, ಅನುಕಂಪ ತೋರುವ ಹೃದಯ ಮತ್ತು ಭರವಸೆ ನೀಡುವ ಕಣ್ಣುಗಳನ್ನು ಪಡೆದ ಪಾಟೀಲರು ನಿಯಮಿತತನಕ್ಕೆ, ಅವಿರತ ದುಡಿಮೆಗೆ ಮತ್ತು ಸರಳ ಸಜ್ಜನಿಕೆಗೆ ಹೆಸರಾಗಿದ್ದಾರೆ. ವಿಶ್ವಾಸ ಮೂಡಿಸುವುದು ರೋಗಿಗೆ ವೈದ್ಯ ಕೊಡುವ ಮೊದಲ ಔಷಧ ಎಂಬುದರಲ್ಲಿ ಇವರ ಬಲವಾದ ನಂಬುಗೆ. ಕೇವಲ ಹತ್ತು ಹಾಸಿಗೆಗಳಿದ್ದ ಹುಬ್ಬಳ್ಳಿ ಸಹಕಾರಿ ಆಸ್ಪತ್ರೆ ಒಂದೇ ದಶಕದಲ್ಲಿ 200 ಹಾಸಿಗೆಗಳನ್ನು ಹೊಂದಿ ವೈದ್ಯಕೀಯ ಸೇವೆಯ ಎಲ್ಲ ವಿಭಾಗಗಳನ್ನು ಪಡೆದುಕೊಂಡಿತು.

ಇವರು 1963ರಿಂದ 1975ರವರೆಗೆ ಕರ್ನಾಟಕ ವೈದ್ಯಕೀಯ ಕಾಲೇಜಿನಲ್ಲಿ ಶಸ್ತ್ರಚಿಕಿತ್ಸೆಯ ಗೌರವ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ಅನೇಕ ವಿದ್ಯಾರ್ಥಿಗಳಿಗೆ ಮತ್ತು ವೈದ್ಯರಿಗೆ ಮಾರ್ಗದರ್ಶನ ಮಾಡಿದರು. ಹುಬ್ಬಳ್ಳಿಯ ರೆಡ್‌ಕ್ರಾಸ್ ಸಂಸ್ಥೆ, ಆಯುರ್ವೇದ ಮಹಾವಿದ್ಯಾಲಯ, ಅಂಧತ್ವನಿವಾರಣಾ ಸಂಸ್ಥೆ ಮತ್ತು ರೋಟರಿ ಸಂಸ್ಥೆಗಳ ಅಧ್ಯಕ್ಷರಾಗಿಯೂ ಸಾರ್ವಜನಿಕ ಸೇವೆಮಾಡಿದ್ದಾರೆ.

ಉತ್ತರ ಕರ್ನಾಟಕದ ಅನೇಕರಲ್ಲಿ ಬಾಯಿ, ಗಂಟಲು, ಅನ್ನನಾಳದ ಕ್ಯಾನ್ಸರ್ ವಿಪುಲವಾಗಿ ಬರುವುದನ್ನು ತಮ್ಮ ಅಧ್ಯಯನದ ಮೂಲಕ ಕಂಡುಕೊಂಡ ಪಾಟೀಲರು ಆ ರೋಗಕ್ಕೆ ಯಾವ ವೈದ್ಯಕೀಯ ಸೌಲಭ್ಯಗಳೂ ಇಲ್ಲದ್ದನ್ನು ಮನಗಂಡು ಕ್ಯಾನ್ಸರ್ ಆಸ್ಪತ್ರೆಯನ್ನು ಕಟ್ಟುವಲ್ಲಿ ಮುಂದಾದರು. ಇವರ ಮೇಲಿನ ಪ್ರೀತಿ, ವಾತ್ಸಲ್ಯದ ದ್ಯೋತಕವಾಗಿ ಅಲ್ಪಾವಧಿಯಲ್ಲಿ ಸಾರ್ವಜನಿಕರಿಂದ 41 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಲು ಸಾಧ್ಯವಾಯಿತು. ಇವರ ನಿಸ್ವಾರ್ಥಸೇವೆಯ ಪ್ರತೀಕವಾಗಿ 1977ರಲ್ಲಿ 75 ಹಾಸಿಗೆಗಳೊಡನೆ ರೋಗಿಗಳಿಗೆ ಶಸ್ತ್ರಚಿಕಿತ್ಸೆ ಮತ್ತು ವಿಕಿರಣ ಕ್ರಿಯೆಯ ಆಧುನಿಕ ಚಿಕಿತ್ಸೆಯನ್ನು ನೀಡುವ ಸೌಲಭ್ಯವನ್ನು ಪಡೆದಿರುವ ಕರ್ನಾಟಕ ಕ್ಯಾನ್ಸರ್ ಚಿಕಿತ್ಸಾ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿಯಲ್ಲಿ ತಲೆಯೆತ್ತಿ ನಿಂತಿದೆ. ಪಾಟೀಲರು ಕ್ಯಾನ್ಸರ್ ಮೇಲೆ ಕಿರುಹೊತ್ತಗೆಯೊಂದನ್ನು ರಚಿಸಿದ್ದಾರೆ.

ಇವರ ಸೇವೆಯನ್ನು ಗಮನಿಸಿದ ಭಾರತ ಸರ್ಕಾರ 1969ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನಿತ್ತು ಗೌರವಿಸಿತು. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪ್ರಶಸ್ತಿಯನ್ನಿತ್ತಿದೆ (1976). (ಪಿ.ಎಸ್.ಎಸ್‌ಎ)

**ಪಾಟೀಲ ಪುಟ್ಟಪ್ಪ:** 1922– . ಕನ್ನಡ ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಪಾಪು ಎಂದೇ ಪ್ರಸಿದ್ಧರಾದ ಲೇಖಕ, ಪತ್ರಿಕೋದ್ಯಮಿ, ಅಂಕಣ ಬರೆಹಗಾರರು. ಇಂದಿನ ಹಾವೇರಿ ಜಿಲ್ಲೆಯ ಕುರುಬಗೊಂಡ ಗ್ರಾಮದಲ್ಲಿ 1922 ಜನವರಿ 14ರಂದು ಜನಿಸಿದರು. ತಂದೆ ಸಿದ್ಧಲಿಂಗಪ್ಪ, ತಾಯಿ ಮಲ್ಲಮ್ಮ. ಇವರು ಪ್ರಾಥಮಿಕ ಶಿಕ್ಷಣವನ್ನು ಹಲಗೇರಿಯಲ್ಲೂ ಮುಂದಿನ ಓದನ್ನು ಬ್ಯಾಡಗಿ, ಚಿತ್ರದುರ್ಗ, ಹಾವೇರಿಗಳಲ್ಲೂ ಮುಗಿಸಿದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಪಡೆದರು. ಬೆಳಗಾಂವಿ ಕಾಲೇಜಿನಲ್ಲಿ ಎಲ್‌ಎಲ್.ಬಿ. (1945), ಕ್ಯಾಲಿಫೋರ್ನಿಯದಲ್ಲಿ ಎಂ.ಎಸ್‌ಸಿ. ಮುಗಿಸಿದರು. ಇವರದು ಪೊಲೀಸ್ ಪಟೇಲರ ಮನೆತನ. ಬಾಲ್ಯದಲ್ಲಿಯೇ ರಾಷ್ಟ್ರೀಯ ಚಳವಳಿಯತ್ತ ಆಕರ್ಷಿತರಾದರು. ನಹಿ ರಖನಾ, ನಹಿ ರಖನಾ ಎಂದು ಮದ್ಯದ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿ ಯಶಸ್ವಿಯಾದರು (1930). ಹುಬ್ಬಳ್ಳಿಗೆ ನೆಹರೂ ಬಂದಾಗ (1930) ಅವರನ್ನು ಕಂಡು ತುಂಬ ಪ್ರಭಾವಿತರಾದರು. ಗಾಂಧೀಜಿಯವರು ಬ್ಯಾಡಗಿಗೆ ಬಂದಾಗ ಶಾಲೆಯಲ್ಲಿ ಓದುತ್ತಿದ್ದ ಪುಟ್ಟಪ್ಪನವರು ಸ್ವಯಂ ಸೇವಕರಾಗಿ ಸ್ವಾಗತಿಸುವ ಸಾಲಿನಲ್ಲಿ ನಿಂತಾಗ ಗಾಂಧೀಜಿಯವರಿಂದ ಬೆನ್ನುತಟ್ಟಿಸಿಕೊಂಡರು (1934). ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದಾಗ ಕಾಂಗ್ರೆಸ್‌ಪರ ಪ್ರಚಾರ ಕೈಕೊಂಡರು (1937).

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದಾಗ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರು (1942). ಅದೇ ವರ್ಷ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿ ವಿದ್ಯಾರ್ಥಿ ಸಂಘಟನೆ ಮಾಡಿದ ಆಪಾದನೆಯಲ್ಲಿ ಬಂಧನದಲ್ಲಿದ್ದು ಬಳಿಕ ಒಂದು ವರ್ಷ ಭೂಗತ ಕಾರ್ಯಕರ್ತರಾಗಿ ಕೆಲಸ ಮಾಡಿದರು. ಅನಂತರ ವಕಾಲತ್ತು ಮಾಡುವ ಉದ್ದೇಶದಿಂದ ಮುಂಬಯಿಗೆ ತೆರಳಿದರು. ಆಗ ಇವರು ಪತ್ರಿಕೆಗಳಿಗೆ ಇಂಗ್ಲಿಷಿನಲ್ಲಿ ಲೇಖನ ಬರೆಯುತ್ತಿದ್ದರು. ಸರದಾರ ವಲ್ಲಭಬಾಯಿ ಪಟೇಲರನ್ನು ಭೇಟಿಯಾದಾಗ ಪತ್ರಿಕೋದ್ಯಮದಲ್ಲಿ ತೊಡಗಿಕೊಳ್ಳಲು ಅವರು ಸಲಹೆ ಮಾಡಿದರು. 'ಬಾಂಬೆ ಕ್ರಾನಿಕಲ್', ಫ್ರೀಪ್ರೆಸ್ ಜರ್ನಲ್‌ಗಳಿಗೆ ಲೇಖನ ಬರೆಯುತ್ತಿದ್ದಾಗ ಫ್ರೀಪ್ರೆಸ್ ಜರ್ನಲ್‌ನಲ್ಲಿ ಸೇರುವ ಒತ್ತಾಯ ಬಂದರೂ ಕರ್ನಾಟಕಕ್ಕೆ ತಾನು ಸೇವೆ ಸಲ್ಲಿಸಬೇಕೆಂದು ಕರ್ನಾಟಕಕ್ಕೆ ಹಿಂತಿರುಗಿ ದಾವಣಗೆರೆಯಲ್ಲಿ ಕನ್ನಡಿಗರ ಪ್ರಥಮ ಮಹಾಧಿವೇಶನ ಕೂಡಿಸಲು ಶ್ರಮಿಸಿದರು (1946). ವಿಶಾಲ ಕರ್ನಾಟಕ ವಾರಪತ್ರಿಕೆಗೆ ಸೇರಿಕೊಂಡರು. ಅನಂತರ ಇದನ್ನು ದಿನಪತ್ರಿಕೆಯನ್ನಾಗಿ ಮಾಡಿದರು (1947 ಆಗಸ್ಟ್ 9). ಕರ್ನಾಟಕ ಏಕೀಕರಣ ಚಳವಳಿಯಲ್ಲಿ ತೊಡಗಿಕೊಂಡು (1949) ಬಿ.ಎನ್. ದಾತಾರರ ನೇತೃತ್ವದಲ್ಲಿ ಮಂಗಳವೀಡು ಶ್ರೀನಿವಾಸರಾವ್, ಕೃಷ್ಣಕುಮಾರ ಕಲ್ಲೂರ, ವೆಂಕಟೇಶ ಮಾಗಡಿ, ರಾಮಚಂದ್ರರಾವ್ ಅವರೊಡಗೂಡಿ ಮೈಸೂರಿನಲ್ಲಿ ಸರದಾರ ಪಟೇಲರನ್ನು ಕಂಡು ಕರ್ನಾಟಕ ಏಕೀಕರಣದ ಬಗ್ಗೆ ಒತ್ತಾಯಿಸಿದರು. ಅನಂತರ ಪತ್ರಿಕೋದ್ಯಮದ ಅಧ್ಯಯನಕ್ಕಾಗಿ 1949ರ ಅಂತ್ಯದಲ್ಲಿ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯಕ್ಕೆ ಹೋದರು.

ನವಯುಗ ದಿನಪತ್ರಿಕೆಯ ಸಂಪಾದಕರಾಗಿ ಕರ್ನಾಟಕ ಏಕೀಕರಣಕ್ಕೆ ಚಾಲನೆ ಒದಗಿಸಿದರು (1953). ಪ್ರಪಂಚ ವಾರಪತ್ರಿಕೆ ಆರಂಭಿಸಿ ತಮ್ಮ ವೈವಿಧ್ಯಮಯ ಬರೆವಣಿಗೆಯಿಂದ ಓದುಗರನ್ನು ಸೆರೆಹಿಡಿದರು (1954 ಮಾರ್ಚ್ 10). ಸಂಗಮ ಎಂಬ ಕನ್ನಡ ಪ್ರಥಮ ಡೈಜಸ್ಟ್‌ನ್ನೂ ಆರಂಭಿಸಿದರು (1957). ವಿಶ್ವವಾಣಿ ಎಂಬ ದಿನಪತ್ರಿಕೆ ಆರಂಭಿಸಿ (1959 ಆಗಸ್ಟ್ 31) ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಮನೋರಮಾ ಎಂಬ ಚಲನಚಿತ್ರ ಮಾಸಿಕವನ್ನೂ (1961) ಸ್ತ್ರೀ ಎಂಬ ಮಾಸಿಕವನ್ನೂ ಪ್ರಕಟಿಸುತ್ತಿದ್ದರು (1964).

ಇವರು ಶಿಕ್ಷಣ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರು (1961). ರಾಜ್ಯಸಭೆಯ ಸದಸ್ಯರಾಗಿ ಆಯ್ಕೆಯಾದ ಇವರು ಧಾರವಾಡ ಮತ್ತು ಕರ್ನಾಟಕದ ಸಮಸ್ಯೆಗಳಿಗೆ ಧ್ವನಿಯಾದರು (1962–71). 1967ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದರು. ಅಲ್ಲಿ ರಂಗಮಂದಿರ ನಿರ್ಮಾಣಕ್ಕೆ ಕಾರಣರಾಗಿ ಇಂದಿಗೂ ಅದರ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ.

ಇವರು ವ್ಯಾಪಕವಾಗಿ ವಿದೇಶ ಯಾತ್ರೆ ಮಾಡಿದ್ದಾರೆ. ಪಶ್ಚಿಮ ಜರ್ಮನಿ, ಬ್ರಿಟನ್, ರಷ್ಯಗಳಿಗೆ ಭೇಟಿ ನೀಡಿದ್ದಾರೆ. ಆರಂಭದಿಂದಲೂ ಕನ್ನಡ ಪರ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದಿದ್ದ ಇವರು ಗೋಕಾಕ ವರದಿ ಜಾರಿಗೊಳಿಸಲು ರಾಜ್ಯ ವ್ಯಾಪಿ ಆಂದೋಲನ ನಡೆದಾಗ ಅದರ ನೇತೃತ್ವ ವಹಿಸಿದ್ದರು. ಕರ್ನಾಟಕ ಸರಕಾರ ಕನ್ನಡ ಕಾವಲು ಮತ್ತು ಗಡಿಸಲಹಾ ಸಮಿತಿ ರಚಿಸಿ ಇವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿತು (1985–89). ಕರ್ನಾಟಕಾದ್ಯಂತ ಸಂಚಾರ ಕೈಗೊಂಡು ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ ಬರುವಂತೆ ಕಾರ್ಯ ಚಟುವಟಿಕೆಯನ್ನು ರೂಪಿಸಿದರು.

ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಅಂಕಣ ಬರೆಹಗಾರರಾಗಿ ತಮ್ಮ ಲೇಖನಗಳನ್ನು ಬರೆದಿದ್ದಾರೆ. ಇವರ ಲೇಖನಗಳು ಸಂಗ್ರಹ ರೂಪದ

ಲ್ಲಿಯೂ ಪ್ರಕಟವಾಗಿವೆ. ನನ್ನದು ಈ ಕನ್ನಡ ನಾಡು (1975), ನಮ್ಮದು ಈ ಭರತಭೂಮಿ (1977), ಕರ್ನಾಟಕದ ಕಥೆ (1991), ಸೋವಿಯತ್ ದೇಶ ಕಂಡೆ, ಸಾವಿನ ಮೇಜವಾನಿ (1944), ಗವಾಕ್ಷಿ ತೆರೆಯಿತು (1974), ಶಿಲಾಬಾಲಿಕೆ ನುಡಿದಳು (1974), ಕಲಾಸಂಗಮ, ಬೆಳೆದ ಬದುಕು, ಭಾರತದ ಬೆಳಕು, ನೆಲದ ನಕ್ಷತ್ರಗಳು, ಸರ್.ಸಾಹೇಬರು, ಹೊಸಮನಿ ಸಿದ್ದಪ್ಪನವರು, ಪ್ರಪಂಚದ ಪಟುಗಳು, ನಮ್ಮ ದೇಶ, ನಮ್ಮ ಜನ (1973), ಈಗ ಹೊಸದನ್ನು ಕಟ್ಟೋಣ (1975), ಉಸಿರಾಗಲಿ ಸಮಗ್ರ ಕನ್ನಡ, ಪಾಪು ಪ್ರಪಂಚ (2000)– ಇವು ಇವರ ಕೆಲವು ಕೃತಿಗಳು. ಇವರು ಅಖಿಲ ಕರ್ನಾಟಕ ಕನ್ನಡ ಹೋರಾಟ ಸಂಘಗಳ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ (1992).

ಇವರು ನಾಡಿಗೆ ಸಲ್ಲಿಸಿದ ಸೇವೆಗಾಗಿ ಹಲವಾರು ಪ್ರಶಸ್ತಿ ಗೌರವಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿ (1994), ಕರ್ನಾಟಕ ಸರ್ಕಾರ ನೀಡುವ ಪ್ರತಿಷ್ಠಿತ ಟಿ.ಎಸ್.ರಾಮಚಂದ್ರರಾವ್ ಪ್ರಶಸ್ತಿ (1994), ರಾಜ್ಯ ಪ್ರಶಸ್ತಿ (1976), ವಿಶ್ವೇಶ್ವರಯ್ಯ ಭಾರತ ಜ್ಯೋತಿ ಪ್ರಶಸ್ತಿ (1990), ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ (1993), ಹುಬ್ಬಳ್ಳಿಯ ಟಿಳಿಕ–ಮೊಹರೆ ಪ್ರಶಸ್ತಿ (1999), ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ (1996), ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ (2001), ಶಾಂತವೇರಿ ಗೋಪಾಲಗೌಡ ಪ್ರಶಸ್ತಿ (2002), ಆದಿಚುಂಚನಗಿರಿಶ್ರೀಗಳಿಂದ ಚುಂಚಶ್ರೀ ಪ್ರಶಸ್ತಿ (2003) ಇವರಿಗೆ ಸಂದಿವೆ. ಇವರು ಬೆಳಗಾಂವಿಯಲ್ಲಿ ಜರುಗಿದ ಅಖಿಲ ಭಾರತ 70ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (2003). **(ಎಸ್.ಎಂ.ಕೆ.)**

**ಪಾಠಕ್, ಕೆ.ಬಿ.:** 1851–1932. ಪ್ರಸಿದ್ಧ ವಿದ್ವಾಂಸರು. ಕಾಶೀನಾಥ ಬಾಪೂಜಿ ಪಾಠಕ್ ಇವರ ಪೂರ್ಣ ಹೆಸರು. ಮರಾಠಿ ಭಾಷೆಯ ಹಿರಿಯ ಕವಿ ರಾಮಜೋಶಿ ಹುಟ್ಟಿದ ಸೊಲ್ಲಾಪುರದ ಜೋಶಿಗಳ ಮನೆತನಕ್ಕೆ ಸೇರಿದವರು. ಈ ಮನೆತನದ ಕೆಲವರು ಕನ್ನಡನಾಡಿನ ಹುಬ್ಬಳ್ಳಿಗೆ ವಲಸೆ ಬಂದು ಇಲ್ಲಿಯೇ ವಸತಿ ಮಾಡಿದ ಹಾಗೆ ತೋರುತ್ತದೆ. ಪಾಠಕರ ತಂದೆ ಬಾಪುಶಾಸ್ತ್ರಿ ಖ್ಯಾತ ಘನಪಾಠಿಗಳು. ತಮ್ಮ ಮಗ ತಮ್ಮಂತೆ ವೈದಿಕ ವಿದ್ಯೆಯನ್ನು ಕಲಿಯಲಿ ಎಂಬ ಹಂಬಲದಿಂದ ಅವರು ಬೆಳಗಾಂವಿ ಕೊಲ್ಲಾಪುರಗಳಲ್ಲಿ ನೆಲೆಸಿದ್ದರು. ಪಾಠಕರು 1877 ರಲ್ಲಿ ಪದವೀಧರರಾದ ಮೇಲೆ ಬೆಳಗಾಂವಿಯ ಸರ್ದಾರ್ ಹೈಸ್ಕೂಲಿನಲ್ಲಿ ಪ್ರಥಮ ಸಹಾಯಾಧ್ಯಾಪಕರಾದರು. ಅದೇ ಐದು ವರ್ಷಗಳ ಮುನ್ನ ಆರಂಭಗೊಂಡಿದ್ದ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯ ಪ್ರತಿಗಳು ಅಲ್ಲಿ ಇವರ ಕಣ್ಣಿಗೆ ಬಿದ್ದು ಇವರ ವಿದ್ವತ್ ಜೀವನಕ್ಕೆ ಸ್ಫೂರ್ತಿ ದೊರೆಯಿತು. ಖ್ಯಾತ ಶಾಸನತಜ್ಞರಾದ ಜೆ.ಎಫ್. ಫ್ಲೀಟ್ ಅವರು ಆಗ ಬೆಳಗಾಂವಿಯ ಕಲೆಕ್ಟರ್ ಆಗಿದ್ದುದರಿಂದ ತಾವು ಆ ಪತ್ರಿಕೆಗೆ ಇವರಂತೆ ಲೇಖನಗಳನ್ನು ಬರೆಯುವುದೂ ಹಳಗನ್ನಡ ಮಾತುಗಳ ವಿವರಣೆಯಲ್ಲಿ ಕಂಡುಬರುವ ತಪ್ಪುಗಳನ್ನು ತಿದ್ದುವುದೂ ಸಾಧ್ಯವಾದೀತೆಂದು ಇವರು ತಿಳಿದರು. ದಕ್ಷಿಣ ಮಹಾರಾಷ್ಟ್ರದ ಜೈನಮಿತ್ರರ ನೆರವಿನಿಂದ ಅವರಿಗೆ ಅಪರಿಚಿತವೂ ಅಪ್ರಕಟಿತವೂ ಆದ ದಿಗಂಬರ ಜೈನ ಹಸ್ತಪ್ರತಿಗಳನ್ನು ನೋಡುವ ಅವಕಾಶ ಲಭಿಸಿತು.

ಪಾಠಕರು ಇಂಡಿಯನ್ ಆಂಟಿಕ್ವೆರಿ ಮತ್ತು ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆಯ ಪತ್ರಿಕೆಗಳಲ್ಲಿ ಪ್ರಕಟಿಸಿದ ಸಂಶೋಧನ ಲೇಖನಗಳು ಫ್ಲೀಟ್ ಅವರ ಗಮನವನ್ನು ಸೆಳೆದವು. ಅವರು ಅಂದಿನ ಭಾರತ ಸರ್ಕಾರದ ಶಾಸನತಜ್ಞರಾಗಿ ನೇಮಕಗೊಂಡಾಗ ಇವರನ್ನು ತಮ್ಮ ಸಹಾಯಕರನ್ನಾಗಿ ನೇಮಿಸಿಕೊಳ್ಳಲು ಕರೆಕಳುಹಿಸಿದರು. ಆದರೆ ತಮ್ಮ ಸಂಶೋಧನೆಗೆ ವಿದ್ಯಾ ಇಲಾಖೆಯ ಸೇವೆಯಲ್ಲಿದ್ದರೆ ಹೆಚ್ಚು ಅನುಕೂಲವಿರುತ್ತದೆಂದು ಪಾಠಕರು ಆ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲ. ಬಳಿಕ 1884ರಲ್ಲಿ ಮಿರಜ್‌ನ ಸೀನಿಯರ್ ಚೀಫ್ ಅವರಿಗೆ ಟ್ಯೂಟರ್ ಆಗಿ ನೇಮಕಗೊಂಡರು. ಈ ಕಾರಣಕ್ಕಾಗಿ ಕೊಲ್ಲಾಪುರದಲ್ಲೇ ಇರಬೇಕಾಗಿ ಬಂದು, ಅಲ್ಲಿಯ ಜೈನಮಠದ ಸರಸ್ವತೀ ಭಂಡಾರದ ಪ್ರಯೋಜನವನ್ನು ಪಡೆದರು. ಇಲ್ಲಿಯೇ ಇವರಿಗೆ ಡೆಕ್ಕನ್ ಕಾಲೇಜಿನ ಪ್ರಾಚ್ಯಭಾಷಾ ಪ್ರಾಧ್ಯಾಪಕ ಆರ್.ಜಿ.ಭಂಡಾರಕರ ಅವರ ಪರಿಚಯವಾಗಿ, ಅವರಿಗೆ ಅನೇಕ ಜೈನ ಗ್ರಂಥಗಳ ಹಾಗೂ ಅವುಗಳ ಪರಿಭಾಷೆಯ ಮಾತುಗಳನ್ನು ವಿವರಿಸುವ ಸುಯೋಗ ದೊರೆಯಿತು. ಇದರ ಫಲವಾಗಿ 1889ರಲ್ಲಿ ಡೆಕ್ಕನ್ ಕಾಲೇಜಿನಲ್ಲಿ ಪ್ರಾಚ್ಯಭಾಷಾ ಪ್ರಾಧ್ಯಾಪಕರ ಸಹಾಯಕ ಹುದ್ದೆ ತೆರವಾದಾಗ ಭಂಡಾರಕರರು ಪಾಠಕರಿಗೆ ಅದನ್ನು ನೀಡಿದರು. ಇವರು ತಮ್ಮ ಸಂಸ್ಕೃತ ಸಾಹಿತ್ಯ ಚರಿತ್ರೆಯ ಅಧ್ಯಯನಕ್ಕೆ ಅದರಿಂದ ಅನುಕೂಲವಿದೆಯೆಂದು ಕೂಡಲೇ ಒಪ್ಪಿಕೊಂಡರು. ಈ ಅವಧಿಯಲ್ಲಿ ಇವರು ಕೆಲವು ಒಳ್ಳೆಯ ಸಂಶೋಧನ ಲೇಖನಗಳನ್ನು ಬರೆದರು. 1893ರಲ್ಲಿ ಮ್ಯಾಕ್ಸ್‌ಮುಲ್ಲರ್ ಅವರ ಅಧ್ಯಕ್ಷತೆಯಲ್ಲಿ ಲಂಡನ್ನಿನಲ್ಲಿ ನಡೆದ ಒಂಬತ್ತನೆಯ ವಿಶ್ವಪ್ರಾಚ್ಯ ವಿದ್ವಾಂಸರ ಸಮ್ಮೇಳನದಲ್ಲಿ ಇವರು ಓದಿದ ದಿಗಂಬರ ಜೈನಸಾಹಿತ್ಯದಲ್ಲಿ ಕುಮಾರಿಲನ ಸ್ಥಾನ ಎಂಬ ಲೇಖನವೂ ಶಂಕರಾಚಾರ್ಯರ ಕಾಲವನ್ನು ಕುರಿತ ಇನ್ನೊಂದು ಲೇಖನವೂ ವಿದ್ವಾಂಸರ ಗಮನ ಸೆಳೆದವು.

ಮೈಸೂರು ಪ್ರಾಕ್ತನ ಇಲಾಖೆಯ ಅಂದಿನ ಮುಖ್ಯಸ್ಥರಾಗಿದ್ದ ಲೂಯಿ ರೈಸ್ ಅವರು ಪಾಠಕರ ಸೇವೆಯನ್ನು ಎರಡು ವರ್ಷಗಳ ಕಾಲ ಎರವಲು ಪಡೆದರು. ಈ ಸಂದರ್ಭದಲ್ಲಿ ರೈಸ್ ಅವರ ಪ್ರೋತ್ಸಾಹದಿಂದ ಕನ್ನಡದ ಆದ್ಯಕೃತಿ ಕವಿರಾಜಮಾರ್ಗವನ್ನು ಸಂಪಾದಿಸಿ ಬಿಬ್ಲಿಯೊಥೀಕ ಕರ್ನಾಟಿಕದ ಐದನೆಯ ಪ್ರಕಟನೆಯಾಗಿ 1898ರಲ್ಲಿ ಹೊರತಂದರು. ಅದೇ ವರ್ಷ ರೈಸ್ ಅವರು ಸಂಪಾದಿಸಿದ ಪಂಪಕವಿಯ ವಿಕ್ರಮಾರ್ಜುನವಿಜಯಕ್ಕೆ ಅದರ ಕಥಾಸಂಗ್ರಹವನ್ನೂ ಬರೆದರು. ಬಳಿಕ ಮುಂಬಯಿ ಸರ್ಕಾರದ ಸೇವೆಗೆ ಹಿಂದಿರುಗಿ ಕಾರವಾರ, ಠಾಣಾ, ಸೊಲ್ಲಾಪುರಗಳಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆಸಲ್ಲಿಸಿ, 1901ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ನೇಮಕವಾದರು. 1908ರವರೆಗೂ ಆ ಹುದ್ದೆಯಲ್ಲಿದ್ದು ನಿವೃತ್ತರಾದರು. ಆ ವರ್ಷವೇ ಮುಂಬಯಿಯ ವಿಶ್ವವಿದ್ಯಾಲಯ ಇವರನ್ನು ಭಗವಾನ್ ದಾಸ್ ಇಂದ್ರಜೀ ದತ್ತಿ ಉಪನ್ಯಾಸವನ್ನು ನೀಡಲು ಆಹ್ವಾನಿಸಿತು. ಆಗ ಇವರು ಆರಿಸಿಕೊಂಡ ವಿಷಯ–ಇನ್ಸ್ಕ್ರಿಪ್ಷನ್ ಇನ್ ದಿ ಕೆನರೀಸ್ ಡಿಸ್ಟ್ರಿಕ್ಟ್ಸ್ ಆಫ್ ದಿ ಬಾಂಬೇ ಪ್ರೆಸಿಡೆನ್ಸಿ.

ಇವರು ನಿವೃತ್ತರಾದ ಮೇಲೆಯೂ ತಮ್ಮ ಅಧ್ಯಯನ–ಸಂಶೋಧನಗಳನ್ನು ಮುಂದುವರಿಸಿದರು. ಲೇಖನಗಳನ್ನು ಭಂಡಾರಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಪತ್ರಿಕೆಯಲ್ಲಿ ಪ್ರಕಟಿಸುತ್ತ ಬಂದರು. 1928ರಲ್ಲಿ ಆ ಸಂಸ್ಥೆಯ ಮಹಾಸದಸ್ಸು ಇವರನ್ನು ತನ್ನ ಗೌರವ ಸದಸ್ಯರನ್ನಾಗಿ ಮಾಡಿಕೊಂಡಿತು. ಅದೇ ಜರ್ಮನಿಯ ಟ್ಯೂಬಿಂಗೆನ್ ವಿಶ್ವವಿದ್ಯಾಲಯ ಇವರಿಗೆ ಸಂಸ್ಕೃತ ಮತ್ತು ಜೈನಸಾಹಿತ್ಯದಲ್ಲಿ ನಡೆಸಿದ ಮೌಲಿಕ ಮತ್ತು ಉನ್ನತ ಸೇವೆಗಾಗಿ ಗೌರವ ಡಾಕ್ಟೊರೇಟ್ ಪದವಿಯನ್ನು ನೀಡಿತು. ಇವರಿಗೆ 80 ವರ್ಷಗಳು ತುಂಬಿದಾಗ (1930 ಸೆಪ್ಟಂಬರ್ 29) ಆ ನೆನಪಿಗೆ ಒಂದು ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು (ಈ ಗ್ರಂಥ ಭಂಡಾರಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಮೂಲಕ 1934ರಲ್ಲಿ ಅಚ್ಚಾಗಿದೆ). ಪಾಠಕರು ತಮ್ಮ 82ನೆಯ ವಯಸ್ಸಿನಲ್ಲಿ 1932 ಸೆಪ್ಟಂಬರ್ 2ರಂದು ಹುಬ್ಬಳ್ಳಿಯಲ್ಲಿ ನಿಧನರಾದರು.

ಇವರು ಸು. 20 ಶಾಸನಗಳನ್ನು ಕಂಡುಹಿಡಿದು ಸಂಪಾದಿಸಿದ್ದಾರೆ. 50ಕ್ಕೂ ಮೇಲ್ಪಟ್ಟು ಲೇಖನಗಳನ್ನು ಬರೆದಿದ್ದಾರೆ. ಅವು ಇಂಡಿಯನ್ ಆಂಟಿಕ್ವೆರಿ, ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆಯ ಪತ್ರಿಕೆ, ಭಂಡಾರಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಪತ್ರಿಕೆ ಮತ್ತು ಇತರ ಕಡೆಗಳಲ್ಲಿ ಅಚ್ಚಾಗಿವೆ. ಕರ್ನಾಟಕದ ಶಿಲಾ ಮತ್ತು ತಾಮ್ರಶಾಸನ ಗಳು, ಜೈನ ಮತ್ತು ಬೌದ್ಧಧರ್ಮಗಳು–ಸಾಹಿತ್ಯ, ಸಂಸ್ಕೃತ ಭಾಷೆ ಸಾಹಿತ್ಯಗಳು, ಕನ್ನಡ ಭಾಷೆ ಸಾಹಿತ್ಯಗಳು, ಕರ್ನಾಟಕದ ಹಾಗೂ ಭಾರತದ ಇತಿಹಾಸ–ಇವು ಆ ಲೇಖನಗಳು ಕುರಿತಿರುವ ಮುಖ್ಯ ವಿಷಯಗಳು. (ಟ.ವಿ.ವಿ)

**ಪಾಠಕ್,ಜಿ ಎಸ್.:** 1896– . ನ್ಯಾಯವಾದಿ, ಆಡಳಿತ ತಜ್ಞ; ಭಾರತದ ಮಾಜಿ ಉಪರಾಷ್ಟ್ರಪತಿ. 1896ರ ಫೆಬ್ರವರಿ 26ರಂದು ಜನಿಸಿದರು. ಲಾಹೋರಿನ ಸರ್ಕಾರಿ ಕಾಲೇಜಿನಲ್ಲಿ ಮತ್ತು ಅಲಹಾಬಾದ್ ವಿಶ್ವವಿದ್ಯಾಲ ಯದಲ್ಲಿ ಉಚ್ಚ ಶಿಕ್ಷಣ ಪೂರೈಸಿದ ಅನಂತರ 1919ರಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ (ಈಗಿನ ಉತ್ತರ ಪ್ರದೇಶ) ವಕೀಲ ವೃತ್ತಿಯನ್ನಾರಂಭಿಸಿದರು. 1928ರಲ್ಲಿ ಅಲಹಾಬಾದಿಗೆ ಬಂದು ಉಚ್ಚ ನ್ಯಾಯಾಲಯದ ವಕೀಲರಾ ದರು. ವೃತ್ತಿಯಲ್ಲಿ ಯಶಸ್ಸುಗಳಿಸಿದ್ದ ಇವರನ್ನು 1945ರಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ನೇಮಿಸಲಾಯಿತು. ಆದರೆ 1946ರಲ್ಲಿ ಇವರು ಆ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಪುನಃ ವಕೀಲ ವೃತ್ತಿಗೆ ಇಳಿದರು. 1946–1959ರ ಅವಧಿಯಲ್ಲಿ ಇವರು ಏಳು ಸಲ ವಿಶ್ವಸಂಸ್ಥೆಗೆ ಭಾರತೀಯ ನಿಯೋಗದಲ್ಲಿ ಕಾಶ್ಮೀರ ವಿಷಯದಲ್ಲಿ ವಿಶೇಷ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದರು. 1957ರಲ್ಲಿ ರಾಯಭಾರಿ ಹುದ್ದೆಗೆ ಸಮನಾದ ಗೌರವ ಸ್ಥಾನದಲ್ಲಿ ಇವರು ಪ್ರಧಾನಮಂತ್ರಿ ನೆಹರು ಅವರ ವಿಶೇಷ ಪ್ರತಿನಿಧಿಯಾಗಿ, ಕಾಶ್ಮೀರ ಸಮಸ್ಯೆಯನ್ನು ಕುರಿತಂತೆ ಭಾರತದ ನಿಲುವನ್ನು ಅನ್ಯದೇಶಗಳಿಗೆ ಮನದಟ್ಟುಮಾಡಿಕೊಡುವ ಉದ್ದೇಶದಿಂದ ಅನೇಕ ದೇಶಗಳನ್ನು ಸಂದರ್ಶಿಸಿದರು. ತಮ್ಮ ಚಟುವಟಿಕೆ ಗಳಿಗೆ ದಿಲ್ಲಿಯೇ ಕೇಂದ್ರವಾದಾಗಿನಿಂದ ಇವರು ವರಿಷ್ಠ ನ್ಯಾಯಾಲಯ ದಲ್ಲಿ ಹಿರಿಯ ವಕೀಲರಾಗಿ ಕಾರ್ಯನಿರ್ವಹಿಸತೊಡಗಿದರು. 1960ರಲ್ಲಿ ರಾಜ್ಯಸಭೆಗೆ ನಿಯುಕ್ತರಾದ ಅನಂತರ ಇವರು ಅನೇಕ ಸಂಸದೀಯ ಸಮಿತಿಗಳ ಸದಸ್ಯರಾಗಿ ಕೆಲಸ ಮಾಡಿದರು. ಇವರು ಕೇಂದ್ರ ಸರ್ಕಾರದಲ್ಲಿ ಕಾನೂನು ಮಂತ್ರಿಯೂ ಆಗಿದ್ದರು (1966–67). ಅನಂತರ ಇವರು ಮೈಸೂರು ರಾಜ್ಯದ (ಈಗಿನ ಕರ್ನಾಟಕ) ರಾಜ್ಯಪಾಲರಾಗಿದ್ದರು (1967ರ ಮೇ– 1969ರ ಆಗಸ್ಟ್). ಅನಂತರ ಇವರು ಭಾರತದ ಉಪರಾಷ್ಟ್ರಪತಿ (1969–74) ಹಾಗೂ ಪದನಿಮಿತ್ತ ಇವರು ರಾಜ್ಯ ಸಭೆಯ ಅಧ್ಯಕ್ಷರೂ ಆಗಿದ್ದರು. ಉಪರಾಷ್ಟ್ರಪತಿಯಾಗಿದ್ದಾಗ ದೆಹಲಿ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿದ್ದರು. ದೇಶದ ಪ್ರಖ್ಯಾತ ನ್ಯಾಯವಾದಿಯಾದ ಇವರಿಗೆ ಸಾಗರ ವಿಶ್ವವಿದ್ಯಾಲಯ (1970), ಭಾಗಲಪುರ ವಿಶ್ವವಿದ್ಯಾಲಯ (1970), ಕುರುಕ್ಷೇತ್ರ ವಿಶ್ವವಿದ್ಯಾಲಯ ಮತ್ತು (1971) ವಿಕ್ರಮ ವಿಶ್ವವಿದ್ಯಾಲಯ ಡಾಕ್ಟರ್ ಆಫ್ ಲಾಸ್ ಗೌರವ ಪದವಿ ನೀಡಿ ಗೌರವಿಸಿವೆ. ದರ್ಭಾಂಗದ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ವಿದ್ಯಾವಾಚಸ್ಪತಿ ಎಂಬ ಗೌರವ ಪದವಿ ನೀಡಿತು (1971). ನಿವೃತ್ತಿಯ ಅನಂತರ ಇವರು ವರಿಷ್ಠ ನ್ಯಾಯಾಲಯದ ವಕೀಲರಾಗಿ ದೆಹಲಿಯಲ್ಲೇ ನೆಲಸಿದ್ದರು. *

**ಪಾಠಕ, ಬಿಂದುಮಾಧವ:** 1935–2004. ಪ್ರಸಿದ್ಧ ಸಂಗೀತ ಕಲಾವಿದ, ರುದ್ರಾವೀಣಾವಾದಕ. 1935 ಏಪ್ರಿಲ್ 9ರಂದು ಹುಬ್ಬಳ್ಳಿಯಲ್ಲಿ ಜನಿಸಿದರು. ಇವರದು ಕಲಾವಿದರ ಪರಂಪರೆಗೆ ಸೇರಿದ ಮನೆತನ. ಇವರ ತಂದೆ ಪಂಡಿತ ದತ್ತೋಪಂತ ಪಾಠಕ. ಅವರು ರುದ್ರವೀಣಾವಾದ ಕರು. ಇವರು ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಸಂಗೀತ ಶಿಕ್ಷಣವನ್ನು ತಂದೆಯಿಂದ ಪಡೆದರು. ಇಂಗ್ಲಿಷ್, ಹಿಂದಿ, ಸಂಗೀತ ಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವೀಧರರಾದ ಇವರು ಕರ್ನಾಟಕ ವಿಶ್ವವಿದ್ಯಾಲಯ ದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದರು. ಶಿರಸಿಯ ಎಂ. ಎಂ. ಕಲಾವಿಜ್ಞಾನ ಕಾಲೇಜಿನಲ್ಲಿ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದರು (1963–80). ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗ ದಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ (1985–95) ಸೇವೆಸಲ್ಲಿಸಿದರು.

ಅರ್ಧಶತಮಾನಕ್ಕೂ ಹೆಚ್ಚು ಕಾಲ ಸಂಗೀತ ಸೇವೆ ಸಲ್ಲಿಸಿದ ಇವರು ಭಾರತೀಯ ಸಂಗೀತ ಚರಿತ್ರೆ ಹಾಗೂ ಪುಟ್ಟರಾಜ ಗವಾಯಿಯವರನ್ನು ಕುರಿತು ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಸಂಗೀತ ಮತ್ತ ಕಲೆಯ ಬಗೆಗೆ ಹಲವು ವಿಚಾರಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಇವರು ಆಕಾಶವಾಣಿಯ ಹೆಸರಾಂತ ಸಂಗೀತ ಕಲಾವಿದರಾಗಿ ದ್ದರು. ಸಾರ್ಕ್ ಸಮ್ಮೇಳನ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಕಲಾಮೇಳಗಳಲ್ಲಿ ರುದ್ರವೀಣೆ, ಸಿತಾರ್ ನುಡಿಸಿ ಜನಮನ್ನಣೆ ಗಳಿಸಿದ್ದಾರೆ. ಇವರು ಉಸ್ತಾದ್ ಬಂದೇಅಲಿಖಾನ್ ಘರಾಣೆಗೆ ಸೇರಿದ ಕಲಾವಿದರು. ರಾಮಚಂದ್ರಹೆಗಡೆ ಹಳದಕ್ಕೈ, ಶ್ರೀಕಾಂತಪಾಠಕ, ಜ್ಯೋತಿಹೆಗಡೆ, ಮುರಳಿಧರರಾವ್ ಮೊದಲಾದ ಬೀನ್ ವಾದಕರಿಗೆ ಇವರು ಗುರುವಾಗಿದ್ದರು.

ಇವರ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಕನಕಪು ರಂದರ ಪ್ರಶಸ್ತಿ ನೀಡಿದೆ (1994). ರಾಜ್ಯ ಸಂಗೀತ ನಾಟಕ ಅಕಾಡೆಮಿ ಕರ್ನಾಟಕ ಕಲಾತಿಲಕ ಪ್ರಶಸ್ತಿ ನೀಡಿದೆ. ಆರ್ಯಭಟ ಸಂಸ್ಥೆ ಸಂಗೀತ ವಿದ್ಯಾ ಪ್ರಪೂರ್ಣ ಗೌರವ ಪ್ರಶಸ್ತಿ ನೀಡಿದೆ. ಯಮನ್, ದರಬಾರಿಗಳಲ್ಲಿ ಇವರು ನುಡಿಸುವ ಸಿತಾರ್‌ವಾದನ ಅತ್ಯಂತ ಮೋಹಕವಾದುದು. ಇವರು 2004 ಫೆಬ್ರವರಿ 4ರಂದು ನಿಧನರಾದರು. (ಜಿ.ಎಂ.ಎಚ್.)

**ಪಾಡ್ದನ:** ತುಳುನಾಡಿನಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ, ಭೂತಾ ರಾಧನೆಯ ಅಂಗವಾಗಿ ಹುಟ್ಟಿಬಂದ ಒಂದು ಜನಪದ ಸಾಹಿತ್ಯ ಪ್ರಕಾರ. ಭೂತ ಪೂಜೆಯ ಸಂದರ್ಭಗಳಲ್ಲಿ ಆಯಾ ಭೂತದ ಚರಿತ್ರೆ ಮತ್ತು ಅತಿಮಾನುಷ ಸಾಮರ್ಥ್ಯಗಳನ್ನು ವಿಶಿಷ್ಟವಾದ ಧಾಟಿಯಲ್ಲಿ ನಿರೂಪಿಸುವ ಪದ್ಯಗಂಧಿ ವಚನ ಕಾವ್ಯ. ಇದನ್ನು ಪಾಡ್ಡನೊ, ಪಾಡ್ದೊನೊ, ಪಾಡದಾನ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಪಾಡ್ದನಗಳನ್ನು ಸಂಧಿ ಎಂದೂ ಕರೆದಿರುವುದುಂಟು. ಕೆಲವು ಭೂತಗಳ ಚರಿತ್ರೆ ಸುದೀರ್ಘವಾಗಿ ಹಲವು ಸಂಧಿಗಳಾಗಿ ವಿಂಗಡಣೆಗೊಂಡಿರುವಂತೆ ಕಂಡುಬರುವುದರಿಂದ ಭೂತದ ಸಂಧಿ ಎಂದೂ ಕರೆದಿರಬಹುದೆಂದು ತೋರುತ್ತದೆ. ಪಾಡ್ದನಗಳನ್ನು ಸಾಮಾನ್ಯವಾಗಿ ಇಬ್ಬರು ಜೊತೆಗೂಡಿ ಹಾಡುವರು. ಹಾಡಿನ ಜೊತೆಗೆ ತೆಂಬರೆ (ಸಣ್ಣ ಡೋಲು) ಎಂಬ ವಾದ್ಯವನ್ನು ಎರಡೂ ಕೈಗಳಲ್ಲಿ, ಒಂದು ಬದಿಯನ್ನು ಕೋಲಿನಿಂದ ಇನ್ನೊಂದು ಬದಿಯನ್ನು ಕೈಯಿಂದ ಬಡಿಯುವವರು. ಹಾಡುವ ಧಾಟಿಯಲ್ಲಿ ನಾಲ್ಕೈದು ವಿಧಗಳಿವೆ. ಲಕ್ಕೆಸಿರಿ, ಪಂಜುರ್ಲಿ ಮೊದಲಾದ ಪಾಡ್ದನಗಳನ್ನು ಎತ್ತರದ ಸ್ವರದಲ್ಲಿ ಹಾಡಿದರೆ ಕಲ್ಕುಡ, ಬಬ್ಬರ್ಯ ಮೊದಲಾದ ಪಾಡ್ದನಗಳನ್ನು ಮಧ್ಯಮ ಸ್ವರದಲ್ಲಿ ಹಾಡುತ್ತಾರೆ. ಹಾಡಿನ ಧಾಟಿಗನುಗುಣವಾಗಿ ತೆಂಬರೆ ವಾದ್ಯದ ದನಿಯೂ ಏರಿಳಿಯುತ್ತಿರುತ್ತದೆ. ಕೆಲವು ಪಾಡ್ದನಗಳನ್ನು ಹಾಡುವಾಗ ಮೊದಲಿಗೆ ವಾದ್ಯ ಬಡಿಯದೆ, ಮಧ್ಯೆ ಮಧ್ಯೆ ಹಾಡು ನಿಲ್ಲಿಸಿ ಬಡಿಯುವ ಸಂಪ್ರದಾಯವೂ ಇದೆ. ಸಾಮಾನ್ಯವಾಗಿ ಬ್ರಾಹ್ಮಣರನ್ನು ಬಿಟ್ಟು ಉಳಿದ ತುಳುವರು ಇವುಗಳನ್ನು ಹಾಡುತ್ತಾರೆ. ಅವರಲ್ಲೂ ಹೆಚ್ಚಾಗಿ ಹಾಡುವವರು ನಲ್ಕೆ, ಪರವೆ, ಪಂಬರ, ಪಾಣಾರ, ಕಣಿಯ

ಮೊದಲಾದ ವರ್ಗದವರು. ಪಾಡ್ದನಗಳನ್ನು ಭೂತೋತ್ಸವ ಸಂದರ್ಭಗಳಲ್ಲಿ ಮಾತ್ರವಲ್ಲದೆ ಬೇರೆ ಸಂದರ್ಭಗಳಲ್ಲೂ ಮನರಂಜನೆಗಾಗಿ ಹಾಡುವುದುಂಟು.

ಪಾಡ್ದನಗಳಿಂದ ತಿಳಿದುಬರುವಂತೆ ಭೂತಗಳಲ್ಲಿ ಅನೇಕ ವರ್ಗದವುಗಳಿವೆ. ಉತ್ಪತ್ತಿಕ್ರಮ, ಪರಾಕ್ರಮ, ಅಂತಸ್ತು, ಯೋಗ್ಯತೆಗಳನ್ನು ಪರಿಶೀಲಿಸಿ ಇವುಗಳನ್ನು ವಿಂಗಡಿಸಬಹುದಾಗಿದೆ. ಪ್ರೇತಪೂಜೆ ಅಥವಾ ಪಿತೃಪೂಜೆ ಭೂತಾರಾಧನೆಯೊಂದಿಗೆ ಪ್ರತ್ಯೇಕಿಸಲಾಗದ ರೀತಿಯಲ್ಲಿ ಸಮ್ಮಿಶ್ರಗೊಂಡಿದೆ. ಬಬ್ಬರ್ಯ, ಕಲ್ಕುಡ, ಕಲ್ಲುರ್ಟಿ, ಕೋಟಿ-ಚೆನ್ನಯ್ಯ, ಕಾಂತಾಬಾರೆ-ಬುದಾಬಾರೆ, ಅಕ್ಕೆರಸು-ಪೂಂಜೆದಿ, ಅಬ್ಬಗೆ-ದಾರಗೆ, ಸೊನ್ನೆ-ಗಿಂಡೆ, ಮಯ್ಯಗ-ಮೈಸಗ, ಕೋಟಿಪೂಂಜ, ಕೋಡದಬ್ಬು-ತನ್ನಿಮಾನಿಗ, ಬಿಕ್ಕುಬಲ್ಲಾಳ, ನಾಡು, ಜೋಗಿಪುರುಷ, ಕೊರಗ ತನಿಯ, ಬಿಕ್ರಮೇಲಾಂಟ, ಮಾಯಂದಾಳ್, ಮದಿಮಾಳ್‌ಭೂತ, ಆಲಿಭೂತ-ಇವರೆಲ್ಲ ಮೃತಪಟ್ಟು ಭೂತತ್ವವನ್ನು ಹೊಂದಿ ಆರಾಧನೆ ಸ್ವೀಕರಿಸುವ ಮಾನವ ವ್ಯಕ್ತಿಗಳು.

ಪಾಡ್ದನಗಳಲ್ಲಿ ಹೆಚ್ಚಿನವು ವೀರಗಾಥೆಗಳು. ಕೋಟಿ-ಚೆನ್ನಯ್ಯ ಪಾಡ್ದನಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದ ಸುದೀರ್ಘ ರಚನೆ. ಇದರಲ್ಲಿ ಎರಡು ತಲೆಮಾರಿನ ಕಥಾವಸ್ತು ಅಡಕವಾಗಿದೆ. ಕಥೆಯೊಂದಿಗೆ ತುಳುನಾಡಿನ ನಂಬಿಕೆ, ನಡವಳಿಕೆ, ಸಂಸ್ಕೃತಿ ಚಿತ್ರವಾಗಿದೆ. ಕಲ್ಕುಡ ಒಬ್ಬ ಶ್ರೇಷ್ಠ ಶಿಲ್ಪಿಯ ಜೀವನ ಚಿತ್ರವನ್ನೊಳಗೊಂಡ ಧಾರ್ಮಿಕ ಕಥೆ. ತೂಕತ್ತೇರಿ, ವಜ್ರದಕುಮಾರ ಮೊದಲಾದ ಕಥೆಗಳೂ ಸುಂದರವಾಗಿವೆ. ಕಥೆಯಲ್ಲಿ ಕೇವಲ ಸ್ತ್ರೀಯರೇ ಪಾತ್ರವಹಿಸುವ ಪಾಡ್ದನಗಳೂ ಇವೆ. ಕೊಲ್ಲೂರು ಮೂಕಾಂಬಿಕೆ ಜೇವು ಎಂಬ ಪಾಡ್ದನ ದಾಂಪತ್ಯ ಜೀವನದ ಸಮಸ್ಯೆಯೊಂದಿಗೆ ಬದುಕಿನ ದುರಂತತೆಯನ್ನು ಜೀವಂತವಾಗಿ ಚಿತ್ರಿಸುತ್ತದೆ. ಈ ಕಥೆ ರಚನೆಯಲ್ಲಿ ಕನ್ನಡ ಜನಪದ ಸಾಹಿತ್ಯದಲ್ಲಿ ಪ್ರಖ್ಯಾತವಾಗಿರುವ ಕೆರೆಗೆಹಾರ ಕಥನಗೀತೆಯನ್ನು ಹೋಲುವಂತಿದೆ. ನಾಗಿಸಿರಿಕನ್ಯೆಗೆ, ಕರ್ನಗೆ, ಅಸುರೆಲೆ ಬಂಗಾರ್, ಸುಬ್ಬಿಯಮ್ಮ, ಬಾಲೆ ತಂಗಡಿ ಓನ್ನಮ್ಮ ಜೇವು ಮೊದಲಾದವು ಸ್ತ್ರೀಯರಿಗೆ ಸಂಬಂಧಿಸಿದ ಪಾಡ್ದನಗಳು.

ಪುರಾಣಯುಗದಿಂದ ಇಳಿದು ಬಂದ ಬೇರೆಬೇರೆ ದೇವತೆಗಳ ಅವತಾರವೆನಿಸಿದ ಅನೇಕ ದೈವಗಳಿವೆ. ಅಂಥ ಚಾಮುಂಡಿ, ಲೆಕ್ಕೇಸಿರಿ (ರಕ್ತೇಶ್ವರಿ), ಜುಮಾದಿ (ಧೂಮಾವತಿ), ಭೈರವ, ವೀರಭದ್ರ ಮೊದಲಾದ ದೇವತೆಗಳಿಗೆ ತಮ್ಮದೇ ಆದ ಪ್ರತ್ಯೇಕ ಪಾಡ್ದನಗಳಿವೆ.

ಸ್ಥಳೀಯ ಭೂತಗಳಲ್ಲದೆ ತುಳುನಾಡಿಗೆ ಇತರ ಕಡೆಗಳಿಂದ ಬಂದ ಭೂತಗಳ ವೃತ್ತಾಂತವನ್ನು ಆಯಾ ಪಾಡ್ದನಗಳ ಮೂಲಕ ತಿಳಿಯಬಹುದು. ಮೂಡದಾಯ, ತೋಡುಕುಕ್ಕಿನಾರ್, ಜಾರಂದಾಯ, ಕಿನ್ನಿಮಾಣಿ, ಪೂಮಾಣಿ, ಮಂಜೊಟ್ಟಿನಾರ್, ಪಂಜುಳಿನ ಮೊದಲಾದ ದೈವಗಳು ಘಟ್ಟದ ಮೇಲಿಂದಲೂ ಮಲೆಯಾಳ ಚಾಮುಂಡಿ ಮೊದಲಾದುವು ಕೇರಳದ ಕಡೆಯಿಂದಲೂ ಬಂದವುಗಳಾಗಿವೆ.

ಭೂತಗಳ ಉತ್ಪತ್ತಿ ಕುರಿತು ಕೆಲವೊಂದು ವಿಚಿತ್ರ ವೃತ್ತಾಂತಗಳನ್ನು ಗುರುತಿಸಬಹುದು. ಪಂಜುರ್ಲಿ ವಿಷ್ಣುವಿನ ಬೆವರಿನ ಬಿಂದುವಿನಿಂದ ಹುಟ್ಟಿದನೆಂದು ಒಂದು ಪಾಡ್ದನದಲ್ಲಿ ಹೇಳಿದರೆ, ಪಂಜಿನ ಗುಜ್ಜಾರೆ-ಪಂಜಿನ ಕಾಳಿ ಎಂಬ ವರಾಹದಂಪತಿಗಳಿಗೆ (ಇವರು ಅವಳಿಜವಳಿಯಾಗಿ ಜನಿಸಿ ದೇವರ ಅನುಜ್ಞೆಯಂತೆ ಮತ್ತೆ ದಂಪತಿಗಳಾದವರು) ಹುಟ್ಟಿ, ಶಿವನ ನಂದನವನವನ್ನು ಹಾಳುಮಾಡಲು ಹೋಗಿ ಶಾಪಗ್ರಸ್ಥನಾದ 'ಹಂದಿಪಿಳ್ಳೆ' ಎಂದು ಇನ್ನೊಂದು ಪಾಡ್ದನ ವಿವರಿಸುತ್ತದೆ. ಮುಂಡತ್ತಾಯ (ಮೂಡದಾಯ) ಶಿವನ ಹಣೆಯ ಬೆವರಿನಿಂದ ಹುಟ್ಟಿದವನಂತೆ. ಈತನನ್ನು ವೈದ್ಯನಾಥನೆಂದೂ ಕಾಳಭೈರವನೆಂದೂ ಕರೆಯುತ್ತಾರೆ. ತಾನು ತಿರುಪತಿಯಲ್ಲಿ ತಿಮ್ಮಪ್ಪನಾಗಿಯೂ ಕಾಶಿಯಲ್ಲಿ ಕಾಳಭೈರವನಾಗಿಯೂ ನೆಲಸಿರುವುದಾಗಿ ಮೂಡದಾಯನ ನುಡಿಗಟ್ಟು ತಿಳಿಸುತ್ತದೆ. ಆಕಾಶಮಾರ್ಗವಾಗಿ ರಥವೇರಿ ಹೋಗುತ್ತಿದ್ದ ರಾಮದೇವರ ಬೆವರ ಬಿಂದು ಕೋಡದಬ್ಬುವಿನ ಜನನಕ್ಕೆ ಕಾರಣವಾಯಿತಂತೆ. ತೋಡುಕುಕ್ಕಿನಾರ್, ಮಂಜೊಟ್ಟಿನಾರ್ ಮೊದಲಾದವರು ತಮಗೆ ತಾವೇ ಮಲ್ಲಿಗೆಯಲ್ಲಿ ಹುಟ್ಟಿ ಸಂಪಗೆಯಲ್ಲಿ ನಡೆದಾಡಿದವರಂತೆ. ಕೊರಗ ತನಿಯ, ಪುರುಷಸಂಪರ್ಕವಿಲ್ಲದೆ ಕೇವಲ ಸತ್ಯದ ಪ್ರಭಾವದಿಂದ ಬಾಲೆಡಮುದ್ದು ಎಂಬಾಕೆಯಲ್ಲಿ ಹುಟ್ಟಿದುದಾಗಿಯೂ ಆಕೆ ಮೊದಲು ಒಂದು ಪಾರಿವಾಳವಾಗಿದ್ದು ಬಳಿಕ ಹೆಣ್ಣಾದುದಾಗಿಯೂ ಕಥೆಯಿದೆ. ಸತ್ಯನಾಪುರದ 'ಸಿರಿ'ಯು ಲಂಕೆ ಲೋಕವಾಥ ಬ್ರಹ್ಮದೇವರ ಪ್ರಸಾದನಾದ 'ಸಿಂಗಾರ'ದ (ಕವುಂಗಿನ ಹೂ) ಗೊಂಚಲಿನಲ್ಲಿ ಉದ್ಭವಿಸಿದಳಂತೆ.

ಪಾಡ್ದನಗಳಲ್ಲಿ ಭೂತಗಳ ಮಹಿಮೆಯಷ್ಟೆ ತುಂಬಿರದೆ ಹೆಚ್ಚಿನವು ಅತ್ಯಂತ ರೋಚಕವಾದ ಕಥಾನಕಗಳಾಗಿದ್ದು, ತುಳುನಾಡಿನ ಪುರಾಣಗಳೆನಿಸಲು ಅರ್ಹವಾಗಿವೆ. ಎಲ್ಲ ನಾಡಿನ ಪುರಾಣಗಳಲ್ಲಿ ವರ್ಣಿತವಾಗಿರುವಂತೆ ಲೋಕಸೃಷ್ಟಿಯ ಬಗೆಗೆ ಸುಂದರ ಕಲ್ಪನೆಗಳನ್ನು ಈ ಪಾಡ್ದನಗಳಲ್ಲಿ ಕಾಣಬಹುದು. ಬಲೀಂದ್ರನ ಪಾಡ್ದನದಲ್ಲಿ ಬರುವ ವಿಶ್ವರೂಪದರ್ಶನದಂತ ವರ್ಣನೆ ಅಪೂರ್ವವಾದುದು. ಪಾಡ್ದನಗಳಲ್ಲಿ ಎಲ್ಲ ರಸಗಳಿಗೂ ಅವಕಾಶವಿದ್ದರೂ ವೀರ, ಅದ್ಭುತ, ರೌದ್ರ ರಸಗಳಿಗೆ ಪ್ರಾಶಸ್ತ್ಯ ಹೆಚ್ಚು. ಆಯಾ ರಸಕ್ಕೆ ಅನುಸರಿಸಿ ಹಾಡುವ ಧಾಟಿಯೂ ವ್ಯತ್ಯಾಸವಾಗುತ್ತದೆ. ತಾಳಲಯ ಬದ್ಧತೆ ಇವುಗಳ ಹುಟ್ಟುಗುಣ. ಭಾಷೆ ಕಾವ್ಯ ಭಾಷೆಯಾದರೂ ಪ್ರಾಸನಿಯಮವಿಲ್ಲ. ಛಂದಸ್ಸಿನ ನಿರ್ಬಂಧವಿಲ್ಲ. ಶೈಲಿ ನೇರ ಹಾಗೂ ಸರಳ. ವಾಕ್ಯರಚನೆ ತುಂಬ ಚಿಕ್ಕದಾಗಿದ್ದು, ಚುರುಕಾಗಿದ್ದು ಕಥೆಯ ನೇರ ಓಟಕ್ಕೆ ಸಹಾಯಕವಾಗುತ್ತದೆ. ಕಥಾನಿರೂಪಣೆ, ವಸ್ತುನಿಷ್ಠತೆ, ಪುನರುಕ್ತಿ, ಪಲ್ಲವಿ ಮೊದಲಾದ ಅಂಶಗಳಲ್ಲಿ ಪಾಡ್ದನಗಳು ಜನಪದ ಲಾವಣಿಗಳನ್ನು ಹೋಲುತ್ತವೆ.

ಪಾಡ್ದನಗಳನ್ನು ಹಾಡುವಾಗ ಅರ್ಧವೇಷವನ್ನು ಮಾತ್ರ ತೊಟ್ಟ ಭೂತವೇಷಧಾರಿ ಹಾಡಿನ ಧಾಟಿಗೂ ತೆಂಬರೆಯ ಪೆಟ್ಟಿಗೂ ಸರಿಯಾಗಿ ಹೆಜ್ಜೆಯಿಕ್ಕುತ್ತ ಕುಣಿದು ಒಂದು ವಿಶಿಷ್ಟ ಆವರಣವನ್ನು ಸೃಷ್ಟಿಸುತ್ತಾನೆ. ಪಾಡ್ದನದ ಒಂದು ಸೊಲ್ಲನ್ನು ಒಬ್ಬ ಎತ್ತಿಕೊಂಡು ಇನ್ನೊಬ್ಬ (ಅಥವಾ ಇನ್ನೊಬ್ಬಳು) ಅದನ್ನು ಮುಂದುವರಿಸುವ ಕ್ರಮವೂ ಇದೆ. ಜಾತಿ ಕೇದಗೆ ನೀತಿ ಸಂಪಗೆ, ಕುಡ್ತ್ ಲಕ್ಯೆರ್ ಮಡಿತ್ ಕುತ್ಯೆರ್, ಕಾಯಿ ತಿಂದೆ ಕಪ್ಪುರಾಯೆ ಸುಣ್ಣ ತಿಂದೆ ಉಗುಡಾಯೆ, ಅಯ್ಯಯ್ಯೊ ದೋಸೋ ನೆಪ್ಪ ಉಳೊ ಉಳೊ ಪಾಪೋನೆಪ್ಪ, ಪಾಪ ತುಂಬಯಾದೋಸ ಪೊರ್ದಯಾ-ಈ ಮೊದಲಾದವು ಪಾಡ್ದನಗಳಲ್ಲಿ ಪದೇ ಪದೇ ಪ್ರಯೋಗವಾಗುವ ನುಡಿಗಟ್ಟುಗಳು.

ನೂರಾರು ಭೂತಗಳಿಗೆ ಸಂಬಂಧಪಟ್ಟ ನೂರಾರು ಪಾಡ್ದನಗಳಲ್ಲಿ ತುಳುನಾಡಿನ ಪ್ರಾಚೀನ ಸಂಸ್ಕೃತಿ ಹುದುಗಿ ಕುಳಿತಿದ್ದು ಅಲ್ಲಿನ ಪ್ರಾಚೀನ ಚರಿತ್ರೆ ಮಿನುಗುತ್ತದೆ. ಪಾಡ್ದನಗಳಲ್ಲಿ ಅವಲೋಕನದಿಂದ ತುಳುನಾಡಿನ ಪುರಾತನ ಜನಜೀವನ, ಅಂದಿನವರ ಆಹಾರವಿಹಾರಗಳು, ಆಟಪಾಟಗಳು, ಆಚಾರವಿಚಾರಗಳು, ಕಲೆ, ಧರ್ಮಗಳು, ರಾಜ್ಯದ ಆಡಳಿತಕ್ರಮ, ಕೃಷಿಕೈಗಾರಿಕೆಗಳು, ವ್ಯಾಪಾರಸಾಪಾರ ಉಡುಪುತೊಡುಪು, ಕಾಳಗವಿಧಾನ ಮುಂತಾದ ವಿವರಗಳು ಮನದಟ್ಟಾಗುತ್ತವೆ.

ಒಟ್ಟಿನಲ್ಲಿ ಪಾಡ್ದನಗಳಲ್ಲಿ ಜನಪದ ಸಂಸ್ಕೃತಿ ತನ್ನ ಅಭಿವ್ಯಕ್ತಿ ಕಂಡುಕೊಂಡಿದೆ. ಅನಾಮಧೇಯ ವ್ಯಕ್ತಿಗಳಿಂದ ಅಭಿವ್ಯಕ್ತವಾಗಿ ಕಿವಿಯಿಂದ

ಕಿವಿಗೆ ಹರಿದು ಬಂದ ಇಂಥ ಹಾಡಿನ ರಾಶಿಯಲ್ಲಿ ಅನೇಕ ಕಡೆ ಸುಂದರ ಕವಿಹೃದಯವನ್ನೂ ರಸಿಕತೆಯನ್ನೂ ತುಳುಭಾಷೆಯ ಬೀಸು ಬಿರುಸು ಮೆಲ್ಪುಸೊಂಪುಗಳನ್ನೂ ಗುರುತಿಸಬಹುದಾಗಿದೆ. (ಎ.ಎಸ್‌ಬ.)

**ಪಾಪಘ್ನಿ:** ಕೋಲಾರ ಜಿಲ್ಲೆಯಲ್ಲಿ ಹರಿಯುವ ಒಂದು ಚಿಕ್ಕ ನದಿ. ಪಾಪಘ್ನಿ ಹೆಸರೇ ಸೂಚಿಸುವಂತೆ ಪಾಪನಿವಾರಕ ನದಿಯೆಂದು ಪರಿಗಣಿತ ವಾಗಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ಕಳವರದುರ್ಗದಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಶಿಡ್ಲಗಟ್ಟ ತಾಲ್ಲೂಕಿನ ಕಣಿವೆಗಳಲ್ಲಿ ಹರಿದು ಬಾಗೇಪಲ್ಲಿ ತಾಲ್ಲೂಕನ್ನು ಹಾದು ಚಿತ್ತೂರು ಜಿಲ್ಲೆಯಲ್ಲಿ ಪ್ರವಹಿಸಿ ಮುಂದೆ ಉತ್ತರಪಿನಾಕಿನಿಯನ್ನು ಸೇರುತ್ತದೆ. ಕೋಲಾರಜಿಲ್ಲೆಯ ಅಂಚಿನಲ್ಲೆ ಆಂಧ್ರಪ್ರದೇಶದ ಕಡೆ ನದಿಗೆ ಅಡ್ಡಲಾಗಿ ವ್ಯಾಸಸಮುದ್ರ ಕೆರೆ ಇದೆ (ಈ ಕೆರೆಯನ್ನು ವ್ಯಾಸರಾಯರು ಕಟ್ಟಿಸಿದರೆಂದು ಹೇಳಲಾಗಿದೆ). ಈ ಕೆರೆಯ ಹಿನ್ನೀರು ಕೋಲಾರ ಜಿಲ್ಲೆಯ ಚೇಳೂರಿನವರೆಗೂ ವ್ಯಾಪಿಸುತ್ತದೆ. ಕೋಲಾರ ಜಿಲ್ಲೆಯಲ್ಲಿ ಬುರುಡುಗುಂಟೆಯ ಬಳಿ ಒಂದು ಕಟ್ಟೆಯನ್ನೂ ದೇವಗನಹಳ್ಳಿಯ ಬಳಿ ವೆಂಕಟೇಶ ಸಾಗರವೆಂಬ ಕಟ್ಟೆಯನ್ನೂ ಕಟ್ಟಿದೆ. ಈ ಜಲಾಶಯಗಳಿಂದ ಹಾಗೂ ವ್ಯಾಸಸಮುದ್ರ ಕೆರೆಯಿಂದ ಸುತ್ತಮುತ್ತಲಿನ ಭೂಮಿಗೆ ನೀರಾವರಿ ಅನುಕೂಲವಿದೆ.

ರಾಜ್ಯದಲ್ಲಿ ಈ ನದಿ ಹರಿಯುವ ದೂರ 68 ಕಿಮೀ. ಇದರ ಜಲಾನಯನ ಪ್ರದೇಶ ಸು. 860 ಚ.ಕಿಮೀ. ಕೋಲಾರ ಜಿಲ್ಲೆಯ ಉತ್ತರ ತಾಲ್ಲೂಕುಗಳ ನೀರಾವರಿಗೆ ಈ ನದಿ ಬಹು ಉಪಯುಕ್ತವಾಗಿದೆ. (ವಿ.ಜಿ.ಕೆ.)

**ಪಾರ್ತಿಸುಬ್ಬ:** 1750–1830. ಸುಪ್ರಸಿದ್ಧ ಯಕ್ಷಗಾನ ಕವಿ. ಪುತ್ರ ಕಾಮೇಷ್ಟಿ, ಸೀತಾಸ್ವಯಂವರ, ಪಟ್ಟಾಭಿಷೇಕ, ಪಂಚವಟಿ, ವಾಲಿಸಂಹಾರ, ಉಂಗುರಸಂಧಿ ಸೇತುಬಂಧನ, ಅಂಗದಸಂಧಾನ, ಕುಂಭಕರ್ಣಾದಿ ಕಾಳಗ, ಕುಶಲವರ ಕಾಳಗ, ಕೃಷ್ಣಚರಿತೆ, ಐರಾವತ ಎಂಬ ಹನ್ನೊಂದು ಯಕ್ಷಗಾನ ಪ್ರಸಂಗಗಳನ್ನೂ ಯಕ್ಷಗಾನ ಪೂರ್ವರಂಗ ಪ್ರಯೋಗದ ಸಭಾಲಕ್ಷಣವೆಂಬ ಶಾಸ್ತ್ರಗ್ರಂಥವನ್ನೂ ರಚಿಸಿದ್ದಾನೆ. ಈತ ಕರಾವಳಿಯ ಕನ್ನಡ ಜಿಲ್ಲೆಯಲ್ಲಿ ಯಕ್ಷಗಾನ ಬಯಲಾಟದ ಶಾಸ್ತ್ರೀಯ ಸಂಪ್ರದಾಯ ವನ್ನು ರೂಢಿಸಿದ ಮೂಲಪುರುಷನೆಂಬ ಪ್ರತೀತಿ ಇದೆ. ಕಾಸರಗೋಡು ತಾಲ್ಲೂಕಿನ ಕುಂಬಳೆ ಇವನ ಜನ್ಮಸ್ಥಳ. ಇಲ್ಲಿ ಕಣಿಪುರ (ಕಣ್ವಪುರ) ಗೋಪಾಲಕೃಷ್ಣ ದೇವಸ್ಥಾನದ ಪಾಟಾಳಿ ವರ್ಗಕ್ಕೆ ಸೇರಿದ ಸ್ಥಾನಿಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ. ಇವನ ತಾಯಿ ಪಾರ್ವತಿ. ಪಾರ್ವತಿಯ ಮಗನಾದುದರಿಂದ ಪಾರ್ತಿಸುಬ್ಬ ಎಂಬ ಹೆಸರು ರೂಢಿಯಲ್ಲಿ ಬಂತು. ಇವನ ಮನೆಮಾತು ತುಳು. ವಿದ್ಯಾಭ್ಯಾಸವನ್ನು ಕೇರಳದಲ್ಲಿ ಪಡೆದ. ಕೆಲಕಾಲ ಅಲ್ಲಿಯೇ ಕಥಕ್ಕಳಿ ಪ್ರಯೋಗದಲ್ಲಿ ಭಾಗವತನಾಗಿದ್ದ. ಈ ಕಥಕ್ಕಳಿ ರಾಮಾಯಣ ಪ್ರಬಂಧಗಳ ಆದರ್ಶದಿಂದಲೇ ಯಕ್ಷಗಾನ ಕೃತಿಗಳನ್ನು ರಚಿಸಿದ. ಅದರ ಎಷ್ಟೋ ಪದ್ಯಗಳು ಇವನ ರಾಮಾಯಣ ಕೃತಿಗಳಲ್ಲಿ ಭಾಷಾಂತರವಾಗಿ ಬಂದಿವೆ. ಈತ ತನ್ನ ಸಭಾಲಕ್ಷಣ ಶಾಸ್ತ್ರಗ್ರಂಥದಲ್ಲಿ ಕಥಕ್ಕಳಿ ರಾಮಾಯಣದ ಕರ್ತೃ ಬಾಲ ಕೇರಳವರ್ಮ ರಾಜನನ್ನು ಸ್ಮರಿಸಿದ್ದಾನೆ. ರಾಮಾಯಣದ ಕಥೆಯನ್ನು ಯಕ್ಷಗಾನಗಳಲ್ಲಿ ಹೇಳಿದವರಲ್ಲಿ ಈತನೇ ಮೊದಲಿಗ.

ಇವನ ಎಲ್ಲ ಕೃತಿಗಳಲ್ಲಿ ಕಣಿಪುರ ಗೋಪಾಲಕೃಷ್ಣ ಅಂಕಿತವಿರು ವುದು ಕಂಡು ಬರುತ್ತದೆ. ತನ್ನ ಕೃತಿಯಲ್ಲಿ ಕುಂಬಳೆಯ ಮದವೂರ ವಿಘ್ನೇಶ್ವರನನ್ನು ಸ್ತುತಿಸಿದ್ದಾನೆ. ಸಭಾಲಕ್ಷಣ ಗ್ರಂಥದ ಆರಂಭಕ್ಕೆ ಈತ ರಚಿಸಿದ ಮದವೂರ ವಿಘ್ನೇಶ್ವರನ ಸ್ತುತಿಪದ್ಯವನ್ನು ಯಕ್ಷಗಾನ ಪ್ರಯೋಗದ ಆರಂಭಕ್ಕೆ ಇಂದಿಗೂ ತಪ್ಪದೆ ಹಾಡುತ್ತಾರೆ. ಈತನ ರಾಮಾಯಣ ಕೃತಿಯಲ್ಲಿ 'ಬತ್ತೀಸಾಕೃತಿ ರಾಗತಾಳ ವಿಧದಿಂ ರಾಮಾಯಣಂ ಪೇಳ್ವುದ' ಎಂದಿರುವ ಪ್ರಕಾರ ಪದ್ಯರಚನೆಯಲ್ಲಿ ವಿಭಿನ್ನ ರಸಭಾವ, ಸಂದರ್ಭಗಳಿಗೆ ತಕ್ಕಂಥ ರಾಗತಾಳ ನಿಯಮವನ್ನು ವಿಧಿಸಿದ್ದಾನೆ. ಇದನ್ನೇ ಇವನ ಅನಂತ ರದ ಕವಿಗಳೆಲ್ಲರೂ ಅನುಸರಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಕಥಕ್ಕಳಿ ಪ್ರಯೋಗದ ವೇಷಭೂಷಣಗಳು, ರಂಗಸಜ್ಜಿಕೆ, ಶಾಸ್ತ್ರೀಯ ನಾಟ್ಯಾಭಿನಯ ಇವುಗಳಿಂದ ಈತ ಸಿದ್ಧಗೊಳಿಸಿದ ದಶಾವತಾರ ಮೇಳವನ್ನು ಕುಂಬಳೆ ರಾಜರ ಆಶ್ರಯದಲ್ಲಿ ನಡೆಸಿದ. ತನ್ನ ಇಳಿವಯಸ್ಸಿ ನವರೆಗೂ ಮೇಳದ ಸಂಚಾರದಲ್ಲಿದ್ದು ಉತ್ತರಕ್ಕೆ ಕುಂದಾಪುರದವರೆಗೆ ಈ ಬಯಲಾಟ ಪ್ರಯೋಗವನ್ನು ಪ್ರಚಾರಕ್ಕೆ ತಂದ. ಯಕ್ಷಗಾನ ತೆಂಕತಿಟ್ಟು ಎಂದು ಹೆಸರಾದ ಈ ಸಂಪ್ರದಾಯ ದಕ್ಷಿಣ ಕನ್ನಡ ಜಿಲ್ಲೆಯ ಈ ಚೌಕಟ್ಟಿನ ಕ್ಷೇತ್ರದಲ್ಲಿ ಇಂದೂ ಪ್ರಸಿದ್ಧವಾಗಿದೆ. ಪಾರ್ತಿಸುಬ್ಬ ತುಳುವಿನ ಲ್ಲಿಯೂ ಕಣಿಪುರ ಕೃಷ್ಣನ ಅಂಕಿತದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದಂತೆ ತಿಳಿಯುತ್ತದೆ. ಇವನ ಎಲ್ಲ ಕೃತಿಗಳನ್ನು ಸಂಕಲನ ರೂಪದಲ್ಲಿ ಪ್ರಕಟಿಸಲಾಗಿದೆ. (ಕೆ.ಕೆ.ಬಿ.)

**ಪಾರ್ಶ್ವಪಂಡಿತ:** ಸು. 1205. ಜೈನಕವಿ. ಪಾರ್ಶ್ವನಾಥಪುರಾಣ ಎಂಬ ಕಾವ್ಯದ ಕರ್ತೃ. ಈತ ಸೌಂದತ್ತಿಯ ರಟ್ಟವಂಶದ 4ನೆಯ ಕಾರ್ತವೀರ್ಯರಾಜನ ಆಸ್ಥಾನಕವಿಯಾಗಿದ್ದನೆಂದು ತೋರುತ್ತದೆ. ಇವನ ತಂದೆ ಲೋಕಣನಾಯಕ, ತಾಯಿ ಕಾಮಿಯಕ್ಕ, ಅಣ್ಣ ನಾಗಣ, ಗುರು 'ಶ್ರೀ ಕುಮುದೇಂದು ನಿರ್ಮಳ ಯಶಃಪ್ರಸರಂ ವಾಸುಪೂಜ್ಯಂ'. ಕವಿಕುಳ ತಿಲಕ, ವಿಬುಧಜನಮನಃಪದ್ಮಿನೀ ಪದ್ಮಮಿತ್ರಂ, ಸುಕವಿಜನಮನೋಹರ್ಷ ಸಸ್ಯಪ್ರವರ್ಷಂ ಎಂಬುವು ಬಿರುದುಗಳು. ಪೂರ್ವಕವಿಗಳಲ್ಲಿ ಕವಿಪರ ಮೇಷ್ಠಿ, ಪೂಜ್ಯಪಾದ, ಒಂದನೆಯ ಗುಣವರ್ಮ, ಪಂಪ, ಪೊನ್ನ, ರನ್ನ, ಕವಿಕಾಮ, ನಾಗಚಂದ್ರ, ನೇಮಿಚಂದ್ರ, ಬೊಪ್ಪಣ ಪಂಡಿತ, ಅಗ್ಗಳ, ಆಚಣ್ಣ ಮೊದಲಾದವರನ್ನು ಸ್ಮರಿಸಿದ್ದಾನೆ. ಪಾರ್ಶ್ವಪಂಡಿತ ಒಂದು ಶಾಸನವನ್ನೂ ರಚಿಸಿರುವಂತೆ ತಿಳಿಯುತ್ತದೆ. ಈ ಶಾಸನ 1205ರಲ್ಲಿ ಹುಟ್ಟಿದ್ದಾಗಿದ್ದು ಇದರಲ್ಲಿ ಕೂಂಡಿಮಂಡಲದ ರಟ್ಟವಂಶದ ದೊರೆ ಕಾರ್ತವೀರ್ಯನು ಶುಭಚಂದ್ರ ಭಟ್ಟಾರಕರಿಗೆ ದತ್ತಿಯನ್ನು ಬಿಟ್ಟ ವಿಷಯ ನಿರೂಪಿತವಾಗಿದೆ. ಶಾಸನದಲ್ಲಿ ಕವಿ ಹೇಳಿಕೊಂಡಿರುವ ಕವಿಕುಳತಿಳಕ ಎಂಬ ಬಿರುದು ಪಾರ್ಶ್ವನಾಥಪುರಾಣದಲ್ಲಿ ಕಂಡು ಬರುತ್ತದೆ.

ಪಾರ್ಶ್ವನಾಥಪುರಾಣ ಹದಿನಾರು ಆಶ್ವಾಸಗಳುಳ್ಳ ಚಂಪೂಕಾವ್ಯ. ಇದನ್ನು 1222ರಲ್ಲಿ ಬರೆದಂತೆ ತಿಳಿಯುತ್ತದೆ. ಜಿನಸೇನರ ಪೂರ್ವಪುರಾಣ ಈ ಕಾವ್ಯಕ್ಕೆ ಆಕರ. ಇದರಲ್ಲಿ ಇಪ್ಪತ್ತಮೂರನೆಯ ತೀರ್ಥಂಕರ ಪಾರ್ಶ್ವನಾಥನ ಚರಿತೆ ವರ್ಣಿತವಾಗಿದೆ. ಜೊತೆಗೆ ಪಾರ್ಶ್ವನಾಥನ ಹಿಂದಿನ ಜನ್ಮಗಳಾದ ಮರುಭೂತಿ, ಗಜೇಂದ್ರ, ಸಹಸ್ರಾರಕಲ್ಪೇಂದ್ರ, ವಿದ್ಯಾಧರ, ಅಚ್ಯುತಕಲ್ಪೇಂದ್ರ, ವಜ್ರನಾಭಿ, ಅಹಮಿಂದ್ರದೇವ, ಆನಂದ, ಆನತಕಲ್ಪೇಂದ್ರ–ಈ ಒಂಬತ್ತು ಜನ್ಮಗಳ ಕಥೆಗಳೂ ಮನೋಹರವಾಗಿ ನಿರೂಪಿತವಾಗಿವೆ. ಕಾವ್ಯದಲ್ಲಿ ಬರುವ ಕಮಠನ ಕಥೆ ಸುಂದರವಾಗಿದೆ. ಕಥನಸರಣಿಯಲ್ಲಿ ನಾಗಚಂದ್ರನ ಪ್ರಸಾದಗುಣವಿದೆ; ಪರಿಶುದ್ಧತೆಯಿದೆ. ಕವಿ ವರ್ಣನೆಗೆ ಹೆಚ್ಚಿನ ಪ್ರಾಧಾನ್ಯ ನೀಡಿದ್ದರೂ ಕಥೆಯನ್ನು ಸ್ವಾರಸ್ಯ ಕೆಡದ ಹಾಗೆ ನಿರೂಪಿಸಿದ್ದಾನೆ. ವರ್ಣನೆಗಳಲ್ಲಿ ಸಂಸ್ಕೃತ ಪ್ರಚುರತೆ, ಅಲಂ ಕಾರಗಳ ವಿದಗ್ಧತೆ, ಶೈಲಿಯ ಪ್ರೌಢತೆಗಳನ್ನು ಕಾಣಬಹುದಾಗಿದೆ. ಇವನಿ ಗಿಂತ ಹಿಂದಿನ ಜೈನಪರಂಪರೆಯ ವರ್ಚಸ್ಸು ಇವನ ಕಾವ್ಯದ ಮೇಲಾಗಿದ್ದು ಪಾರ್ಶ್ವನಾಥನ ಚರಿತ್ರೆಯನ್ನು ಕುರಿತಂತೆ ಪಾರ್ಶ್ವನಾಥಪುರಾಣ ಕನ್ನಡದ ಪ್ರಥಮ ಕೃತಿ ಎಂಬ ದೃಷ್ಟಿಯಿಂದ ಗಮನಾರ್ಹವಾಗಿದೆ. (ಕೆ.ಬಿ)

**ಪಾಲಾರ್:** ಕೋಲಾರ ಜಿಲ್ಲೆಯಲ್ಲಿ ಹರಿಯುವ ಒಂದು ನದಿ. ಇದು ಜಿಲ್ಲೆಯ ನಂದಿದುರ್ಗ ಬೆಟ್ಟದ ಮೇಲೆ ಒಂದು ಬಾವಿಯಲ್ಲಿ ಚಿಲುಮೆಯ ರೀತಿ ಗುಪ್ತಗಾಮಿನಿಯಾಗಿ ಯಾವುದೋ ಒಂದು ಸ್ಥಳದಲ್ಲಿ ದಕ್ಷಿಣ ಪಿನಾಕಿನಿಯನ್ನು ದಾಟುತ್ತದೆ ಎಂದು ಸ್ಥಳೀಯ ನಂಬಿಕೆ. ಆದರೆ ಈ ನದಿ ಅಂಬಾಜಿದುರ್ಗಕ್ಕೆ ಪಶ್ಚಿಮದಲ್ಲಿರುವ ಕೈವಾರದ ನೆರೆಯ ಪ್ರದೇಶದಲ್ಲಿ ಉಗಮ ಹೊಂದಿ ಮೊದಲಿಗೆ ಕೈವಾರದ ಹತ್ತಿರವಿರುವ ಗೌತಮಗುಡ್ಡದಲ್ಲಿ ಗೋಚರವಾಗುತ್ತದೆ. ಜಂಗಮ ಕೋಟೆಯಿಂದ ಕೋಲಾರದಿಂದಾಚೆಗೆ 16 ಕಿಮೀ ದೂರ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಯೆನಂಡಹಳ್ಳಿಯ ಹತ್ತಿರ ಇದಕ್ಕೆ ಒಂದು ಉಪನದಿ ಬಂದು ಸೇರಿಕೊಳ್ಳುತ್ತದೆ. ಅನಂತರ ಆಗ್ನೇಯ ದಿಕ್ಕಿಗೆ, ಬಂಗಾರಪೇಟೆ ತಾಲ್ಲೂಕಿನಲ್ಲಿ ಹರಿಯುವಾಗ ಬೇತಮಂಗಲ ಮತ್ತು ರಾಮಸಾಗರ ಎಂಬ ದೊಡ್ಡ ಕೆರೆಗಳಾಗಿ ಮಾರ್ಪಟ್ಟು ಅನಂತರ ಕರ್ನಾಟಕ ರಾಜ್ಯವನ್ನು ಬಿಟ್ಟು ಗುಂಡಲಪಲ್ಲಿ ಎಂಬ ಹಳ್ಳಿಯ ಹತ್ತಿರ ಉತ್ತರ ಆರ್ಕಾಟ್ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಅಲ್ಲಿಂದ ವೆಲ್ಲೂರು, ಆರ್ಕಾಟ್ ಮತ್ತು ಕಾಂಜೀವರಂಗಳ ಮೂಲಕ ಚಿಂಗಲ್‍ಪೇಟೆ ಜಿಲ್ಲೆಯಲ್ಲಿ ಹರಿದು ಚೆನ್ನೈಗೆ ದಕ್ಷಿಣದಲ್ಲಿ ಬಂಗಾಲಕೊಲ್ಲಿಯನ್ನು ಸೇರುತ್ತದೆ.

ಪಾಲಾರ್ ಎಂದರೆ ಹಾಲಿನ ನದಿ ಎಂದು ಅರ್ಥ. ಪುರಾಣಗಳಲ್ಲಿ ಕ್ಷೀರನದಿ ಎಂದು ಕರೆಯಲಾಗಿದೆ. ಕರ್ನಾಟಕದಲ್ಲಿ ಈ ನದಿಯ ಹರಿವಿನ ಒಟ್ಟು ಉದ್ದ 108 ಕಿಮೀ. ಜಿಲ್ಲೆಯಲ್ಲಿ ಈ ನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ 2,712 ಚ.ಕಿಮೀ. ಪಾಲಾರ್ ನದಿಯ ಸೇ. 90ರಷ್ಟು ನೀರನ್ನು ಹಲವಾರು ಕೆರೆಗಳ ಮತ್ತು ಒಡ್ಡುಗಳ ಮೂಲಕ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. **(ಆರ್.ಜಿ.ಎಸ್.)**

**ಪಾವಂಜೆ, ಎನ್.ಜಿ.:** 1892–1965. ಪ್ರಸಿದ್ಧ ಚಿತ್ರಕಲಾವಿದರು. ಉಡುಪಿ ಬಳಿಯ ಪಾವಂಜೆ ಗ್ರಾಮದಲ್ಲಿ 1892ರಲ್ಲಿ ಜನಿಸಿದರು. ನರಹರಿ ರಾವ್ ಗೋಪಾಲಕೃಷ್ಣ ಪಾವಂಜೆ ಇವರ ಪೂರ್ಣ ಹೆಸರು. ಮೊದಲು ಮುಂಬಯಿ ಜೆ.ಜೆ. ಕಲಾ ಶಾಲೆಯಲ್ಲಿ ಕಲಾಭ್ಯಾಸ ನಡೆಸಿದರು. ಚಿತ್ರಕಲೆಯಲ್ಲಿ ಉನ್ನತ ವ್ಯಾಸಂಗಕ್ಕಾಗಿ ಜರ್ಮನಿಗೆ ತೆರಳಿದರು. ಅಲ್ಲಿ ಕಲರ್ ಲಿತೋಗ್ರಫಿಯ ವಿಶೇಷ ಶಿಕ್ಷಣ ಪಡೆದರು. ಅಲ್ಲಿದ್ದ ಏಳು ವರ್ಷಗಳಲ್ಲಿ ತೈಲ ಹಾಗೂ ಜಲವರ್ಣಗಳ ಚಿತ್ರರಚನೆಯಲ್ಲಿ ಹೆಚ್ಚಿನ ಪರಿಶ್ರಮವನ್ನು ಗಳಿಸಿಕೊಂಡರು. ಪಾಶ್ಚಾತ್ಯ ಕಲಾಸಂಪ್ರದಾಯವನ್ನು ಜೀರ್ಣಿಸಿಕೊಂಡು ಕಲಾಪ್ರೌಢಿಮೆಯನ್ನು ಸಾಧಿಸಿಕೊಂಡರು. ಅಲ್ಲಿ ಇವರು ನಕಲು ಮಾಡಿದಂಥ 'ಹೆಲ್‍ಮೆಟ್' ಎಂಬ ಸುಂದರ ತೈಲಕೃತಿ ಶ್ರೀರಂಗಪಟ್ಟಣದ ಸ್ಕಾಟ್ ಬಂಗಲೆ ಚಿತ್ರಸಂಗ್ರಹಾಲಯದಲ್ಲಿತ್ತು. ಅದು ಈಗ ಮೈಸೂರಿನ ಜಗನ್ಮೋಹನ ಚಿತ್ರಶಾಲೆಯಲ್ಲಿದೆ.

ಜರ್ಮನಿಯಿಂದ ಹಿಂತಿರುಗಿದ (1922) ಅನಂತರ ಇವರು ಬೆಂಗಳೂರಿನಲ್ಲಿ ನೆಲಸಿದರು. ಅಮೆಚೂರ್ ನಾಟ್ಯರಂಗ ಇವರನ್ನು ಆಕರ್ಷಿಸಿತು. ಅಪೂರ್ವ ಕಲಾ ಪ್ರೇಮಿಗಳೆನಿಸಿದ್ದ ಎಸ್.ಜಿ. ಶಾಸ್ತ್ರಿಯವರು ಇವರ ಕಲಾಪ್ರೌಢಿಮೆಯನ್ನು ಕನ್ನಡ ಜನಕ್ಕೆ ಪರಿಚಯ ಮಾಡಿಕೊಟ್ಟರು.

ಅನಂತರ ಇವರು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಕೆಲವು ವರ್ಷಗಳ ಕಾಲ ದಸರ ವಸ್ತುಪ್ರದರ್ಶನದ ಕಾರ್ಯದರ್ಶಿಯಾಗಿದ್ದುದೂ ಉಂಟು. ಇವರಿಂದಾಗಿ ಚಾಮರಾಜೇಂದ್ರ ಕಲಾಶಾಲೆಯ ಗೌರವ ಘನತೆ ಹೊರಪ್ರಾಂತ್ಯಗಳಿಗೂ ಪಸರಿಸಿತು. ಒಮ್ಮೆ ಮೈಸೂರಿಗೆ ಬಂದ ವೈಸ್‍ರಾಯ್ ಲಾರ್ಡ್‍ಇರ್ವಿನ್ನರಿಗೆ ಪಾವಂಜೆಯವರ ಎರಡು ನಿಸರ್ಗ ಚಿತ್ರಗಳನ್ನು ಅಂದಿನ ಸರ್ಕಾರ ಕಾಣಿಕೆಯಾಗಿ ಅರ್ಪಿಸಿತು.

ಕಲಾವಿದರ ಬಗ್ಗೆ ಪಾವಂಜೆ ಅವರಿಗೆ ಇದ್ದ ಆತ್ಮೀಯತೆ ಮಮತೆ ಅಪರೂಪವಾದುದು. ನಂಜುಂಡಸ್ವಾಮಿಗಳಂಥ ಕಲಾವಿದರು ಇವರಿಂದ ಪಡೆದು ಸ್ಫೂರ್ತಿಯನ್ನು ನೆನೆಪು ಮಾಡಿಕೊಂಡಿದ್ದಾರೆ. ನಿವೃತ್ತರಾಗಿ ಬೆಂಗಳೂರಿಗೆ ಹೋಗಿ ನೆಲಸಿದ ಇವರು ಗಣೇಶಬೀಡಿ ಏಜಂಟರಾಗಿ ಜೀವನ ನಡೆಸಿದರು. ಮೈಸೂರು ಚಿತ್ರಕಲಾ ಪರಿಷತ್ತು ಇವರನ್ನು ಗೌರವಿಸಿದೆ. *

**ಪಾವಂಜೆ ಗುರುರಾವ್**: 1869–1948. ಅಲಭ್ಯವಾಗಿದ್ದ ದಾಸ ಸಾಹಿತ್ಯ ಕೃತಿಗಳನ್ನೂ ಯಕ್ಷಗಾನ ಸಾಹಿತ್ಯ ಕೃತಿಗಳನ್ನೂ ಸಂಗ್ರಹಿಸಿ, ಪರಿಶೋಧಿಸಿ, ಪ್ರಕಟಿಸಿ ಜನರ ಕೈಗೆ ತಲುಪಿಸುವ ಮಹತ್ತ್ವದ ಸಾಧನೆ ಮಾಡಿದ ಪ್ರಕಾಶಕರು. 1869 ಮೇ 2ರಂದು ಉಡುಪಿ ತಾಲ್ಲೂಕಿನ ಪಾವಂಜೆಯಲ್ಲಿ ಜನಿಸಿದರು. ಇವರ ತಂದೆ ಕೊಳುವೈಲು ರಾಮಕೃಷ್ಣಯ್ಯ, ತಾಯಿ ರಾಜಮ್ಮ. ರಾಮಕೃಷ್ಣಯ್ಯನವರು ಉಡುಪಿಯ ಪುತ್ತಿಗೆ ಮಠದ ಶಿಷ್ಯಪರಂಪರೆಗೆ ಸೇರಿದವರು. ಪಾವಂಜೆಯವರ ಆರಂಭಿಕ ಶಿಕ್ಷಣ ಹುಟ್ಟೂರಿನ ಐಗಳ ಮಠದಲ್ಲಾಯಿತು. ಅಲ್ಲಿ ಇವರಿಗೆ ಸಂಸ್ಕೃತ–ಕನ್ನಡ ವರ್ಣಮಾಲೆಯ ಪರಿಚಯ, ಅಮರಕೋಶ ಮುಂತಾದ ಸಂಸ್ಕೃತ ಗ್ರಂಥಗಳ ಪಠಣವಾಯಿತು. ಬಂಧುಗಳಾದ ಕುಂಬಳೆಯ ವೈದ್ಯ ಪದ್ಮನಾಭ ಇರ್ನಿತ್ತಾಯರ ಒತ್ತಾಸೆಯಿಂದ ಕೇರಳದ ತಿರುವನಂತಪುರಕ್ಕೆ ಹೋಗಿ ಅಲ್ಲಿ ಎಂಟು ವರ್ಷಗಳ ಕಾಲ ನೆಲಸಿ ಮೆಟ್ರಿಕ್ ಪಾಸು ಮಾಡಿಕೊಂಡು ಊರಿಗೆ ಮರಳಿದರು. ಮುಂದೆ ಬಂಧುಗಳಾದ ಇರ್ನಿತ್ತಾಯರ ಮನೆಯಲ್ಲೇ ನೆಲಸಿ ಆಯುರ್ವೇದವನ್ನು ಅಭ್ಯಾಸಮಾಡಿ ಅದರಲ್ಲಿ ಪರಿಣತರಾದರು. ಉಡುಪಿಯ ಶ್ರೀಮತ್ಸುಧೀಂದ್ರತೀರ್ಥ ಶ್ರೀಪಾದಂಗಳವರ ಪ್ರೋತ್ಸಾಹದಿಂದ ಔಷಧಾಲಯವನ್ನು ತೆರೆದರು. ಈ ವೃತ್ತಿಯ ಜತೆಗೆ ಪೂಜಾಸಾಮಗ್ರಿಗಳನ್ನೂ ನಿತ್ಯಾನುಷ್ಠಾನಕ್ಕೆ ಬೇಕಾಗುವ ಪರಿಕರಗಳನ್ನೂ ಮಾರಾಟ ಮಾಡುವ ಉಪಕ್ರಮದಲ್ಲೂ ತೊಡಗಿದರು.

ಒಂದು ಹಂತದಲ್ಲಿ ವೈದ್ಯವೃತ್ತಿಯನ್ನು ಕೈಬಿಟ್ಟು ದಾಸಸಾಹಿತ್ಯ ಸಂಗ್ರಹ–ಪರಿಶೋಧನೆ–ಪ್ರಕಟಣೆಗೆ ಪಾವಂಜೆಯವರು ತಮ್ಮ ಬದುಕನ್ನು ಅರ್ಪಿಸಿಕೊಂಡರು. ಉಡುಪಿಯ ಶ್ರೀ ಕೃಷ್ಣ ದೇವಾಲಯಕ್ಕೆ ಕರ್ನಾಟಕದ ಎಲ್ಲ ಮೂಲೆಗಳಿಂದ, ವಿಶೇಷವಾಗಿ ಉತ್ತರ ಕರ್ನಾಟಕದಿಂದ ಬರುತ್ತಿದ್ದ ಮಾಧ್ವ ಮಹಿಳೆಯರು ಗುಂಪು ಗುಂಪಾಗಿ ಅನಂತೇಶ್ವರ ಗುಡಿ, ಮಠಗಳ ಚಾವಡಿಗಳಲ್ಲಿ ಕುಳಿತು ದಾಸರ ಪದಗಳನ್ನು ಹಾಡುತ್ತಿದ್ದರಂತೆ. ಬರೆದುಕೊಳ್ಳಲು ಅನುಕೂಲವಾಗುವಂತೆ ಕುಳಿತು ಹಾಡಿ ಎಂದರೆ ಅವರ ಮಡಿವಂತ ಮನಸ್ಸು ಒಪ್ಪುತ್ತಿರಲಿಲ್ಲವಂತೆ. ತಮ್ಮ ಬಾಯೊಳಗಿನ ದೇವರ ನಾಮಗಳು ಪುಸ್ತಕಗಳ ರೂಪದಲ್ಲಿ ಪ್ರಕಟವಾಗುವುದು, ಎಲ್ಲರ ಕೈ ಸೇರುವುದು ಅಂದಿನ ಮಂದಿಗೆ ಇಷ್ಟವಿರಲಿಲ್ಲ. ಅಂತಹ ಆಚಾರಶೀಲ, ಮಡಿ–ಮೈಲಿಗೆಯಂತಹ ವಿಚಾರಗಳಿಂದ ಮುದುಡಿ ಹೋಗಿದ್ದ ದಾಸಸಾಹಿತ್ಯದ ಕೊಪ್ಪರಿಗೆಯಂತಿದ್ದ ಮಹಿಳೆಯರಿಗೆ

ಉಡುಪಿಯ ವಿವಿಧ ಮಠಗಳಲ್ಲಿ ವಾಸ್ತವ್ಯಕ್ಕೆ ಏರ್ಪಾಡು ಮಾಡಿ, ಕೃಷ್ಣದರ್ಶನ, ಊಟೋಪಚಾರಕ್ಕೆ ವ್ಯವಸ್ಥೆ ಮಾಡಿಸಿ ತಮ್ಮ ಬಂಧುಗಳಂತೆ ಪ್ರೀತಿಯಿಂದ ಕಂಡು ಮನವೊಲಿಸಿ ಪಾವಂಜೆಯವರು ಅವರಿಂದ ದಾಸರ ದೇವರನಾಮ, ಸುಳಾದಿ, ಉಗಾಭೋಗಗಳನ್ನು ಹಾಡಿಸಿ ಬರೆದುಕೊಂಡರು. ಈ ಕಾರ್ಯದಲ್ಲಿ ಇವರಿಗೆ ನೆರವಾದವರು ಇವರ ಹೆಣ್ಣು ಮಕ್ಕಳಾದ ಮಂದಾಕಿನಿಬಾಯಿ, ಜಾನಕಿಬಾಯಿ ಹಾಗೂ ಭಾರತಿ (ಚಲನಚಿತ್ರರಂಗದ ವಾದಿರಾಜ ಹಾಗೂ ಹರಿಣಿಯ ತಾಯಿ). ಈ ವಿಧಾನದಲ್ಲಿ ದೊಡ್ಡ ಪ್ರಮಾಣದ ದಾಸರ ರಚನೆಗಳು, ಸಂಪ್ರದಾಯದ ಹಾಡುಗಳು ದಾಖಲುಗೊಂಡವು. ಜೊತೆಗೆ ಯಾತ್ರಾರ್ಥಿಗಳಾಗಿ ಬರುತ್ತಿದ್ದ ಬೇಲೂರಿನ ಭೀಮಾಚಾರ್ಯ, ತೀರ್ಥಹಳ್ಳಿ ಯಲವಟ್ಟಿ ರಾಮರಾಯ, ಕೊಯಮತ್ತೂರು ಶ್ರೀನಿವಾಸರಾಯ, ಕೆ. ಗೋವಿಂದದಾಸ, ಪೋಲಾಂನ ಎಚ್.ರಂಗರಾವ್, ಕುರ್ಡಿ ಗುಂಡಾಚಾರ್ಯ ಜೋಶಿ, ಮಂಗಳೂರಿನ ತುಪಾಕಿ ಮನೆತನಕ್ಕೆ ಸೇರಿದ ವೆಂಕಟರಮಣಾಚಾರ್ಯ, ಸುಬ್ಬಣ್ಣಾಚಾರ್ಯ, ರಾಮಾಚಾರ್ಯ ಮೊದಲಾದವರಿಂದ ಹಸ್ತಪ್ರತಿಗಳನ್ನು ಸಂಗ್ರಹಿಸಿ ತಾವು ಬರೆದುಕೊಂಡ ದಾಸರ ರಚನೆಗಳೊಂದಿಗೆ ತಾಳೆನೋಡಿ ಗ್ರಂಥ ಸಂಪಾದನೆ ಮಾಡುತ್ತಿದ್ದರು. ಹೀಗೆ ಸಿದ್ಧಗೊಳಿಸಿದ ಹಸ್ತಪ್ರತಿಗಳನ್ನು ಬೇಲೂರು ಕೇಶವದಾಸ, ಕಲಮದಾನಿ ಭೀಮಾಚಾರ್ಯ, ಹಂಡೆ, ಶ್ರೀಪಾದದಾಸ, ಗಾನವಿದುಷಿ ಉಡುಪಿ ಲಕ್ಷ್ಮೀಬಾಯಿ ಮೊದಲಾದವರಿಗೆ ತೋರಿಸಿ ಪರಿಷ್ಕರಿಸುತ್ತಿದ್ದರಂತೆ. ಜನಪದರಲ್ಲಿ ದೊರೆತ ಸಾಮಗ್ರಿಗಳ ಆಡುಮಾತಿನ ಚಹರೆ- ಛಾಪುಗಳನ್ನು ತಿದ್ದಿ ತೀಡಿ ಬರೆಹದ ಭಾಷೆಗೆ ಬಳಸುವ, ಆ ಮೂಲಕ ಶುದ್ಧ ರೂಪಕ್ಕೆ ತರುವ ಪಂಡಿತ ಪ್ರವೃತ್ತಿ ಇವರದಾಗಿರಲಿಲ್ಲ. ಒಂದೇ ಪದದ ವ್ಯತ್ಯಯ ರೂಪಗಳು ದೊರೆತಾಗ ಅವುಗಳ ವಿಕಲ್ಪರೂಪಗಳನ್ನೇ ಉಳಿಸಿಕೊಳ್ಳುತ್ತಿದ್ದರು. ಹೀಗಾಗಿ ಇವರು ನಡೆಸಿದ ಪಠ್ಯೀಕರಣ ಪ್ರಕ್ರಿಯೆ ಹಾಗೂ ಸಂಪಾದನದ ವಿಧಾನ ತುಂಬ ಶಾಸ್ತ್ರೀಯವಾಗಿತ್ತು.



ಪಾವಂಜೆಯವರ ಸಾರಸ್ವತ ಕೈಂಕರ್ಯವನ್ನು ನಾಲ್ಕು ಘಟಕಗಳಾಗಿ ಹೀಗೆ ವಿಂಗಡಿಸಬಹುದು. ನಿತ್ಯಾನುಷ್ಠಾನಕ್ಕೆ ಅವಶ್ಯವಾಗಿದ್ದ ಸ್ತೋತ್ರ ಸಾಹಿತ್ಯ, ಹೆಣ್ಣು ಮಕ್ಕಳ ಸಂಪ್ರದಾಯದ ಹಾಡು ಹಾಗೂ ವ್ರತಕತೆಗಳು, ಯಕ್ಷಗಾನ ಪ್ರಸಂಗ ಸಾಹಿತ್ಯ, ಹರಿದಾಸ ಸಾಹಿತ್ಯ. ಪುಸ್ತಕದ ಮುದ್ರಣ- ಮಾರಾಟ ಇವರಿಗೆ ಒಂದು ಕಾಯಕವಾಗಿತ್ತೇ ಹೊರತು ವ್ಯಾವಹಾರಿಕವಾಗಿರಲಿಲ್ಲ. ಗ್ರಂಥಗಳ ಮುದ್ರಣ ವಿನ್ಯಾಸ, ರಟ್ಟು ಕಟ್ಟುವ ಬಗೆ, ಮುಖಪುಟ ವಿನ್ಯಾಸ, ಶಬ್ದಶುದ್ಧಿ, ಒಪ್ಪೋರಣಗಳಿಗೆ ಇವರು ವಿಶೇಷ ಗಮನ ನೀಡುತ್ತಿದ್ದರು. ಗ್ರಂಥದ ಬೆಲೆ ಸಾಮಾನ್ಯ ಓದುಗನ ಕೈಗೆ ಎಟಕುವಂತಿರಬೇಕು ಎನ್ನುವುದು ಇವರ ನಿಲುವಾಗಿತ್ತು.

1908ರಲ್ಲಿ ಇವರು ಸ್ಥಾಪಿಸಿದ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದ ಮೂಲಕ ಇವರು ತಮ್ಮ ಜೀವಿತಾವಧಿಯಲ್ಲಿ ಸು.450 ಗ್ರಂಥಗಳನ್ನು ಪ್ರಕಟಿಸಿದರೆನ್ನುವುದು ಸಣ್ಣ ವಿಷಯವಲ್ಲ. ಇವರು ಹೀಗೆ ಪ್ರಕಟಿಸಿದ ಗ್ರಂಥಗಳ ಪುಟಗಳ ವ್ಯಾಪ್ತಿ 10 ಸಾವಿರವನ್ನೂ ಮೀರುತ್ತದೆ. ಇವರು ತಮ್ಮ ಪ್ರಕಾಶನದ ಪುಸ್ತಕಗಳ ಮುದ್ರಣಕ್ಕಾಗಿಯೇ ಉಡುಪಿಯಲ್ಲಿ 1917ರಲ್ಲಿ ಶ್ರೀ ಕೃಷ್ಣ ಮುದ್ರಣಾಲಯವನ್ನು ಪ್ರಾರಂಭಿಸಿದ್ದರು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತೀರಾ ಅವಗಣನೆಗೆ ಪಾತ್ರವಾದ ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಭಾಗವತರ ಬಾಯ್ದೆರೆ ಮೂಲದಿಂದ ಅಕ್ಷರ ಪ್ರಪಂಚಕ್ಕೆ ತಂದವರಲ್ಲಿ ಪಾವಂಜೆಯವರು ಪ್ರಾತಃಸ್ಮರಣೀಯರು. ಮುದ್ದಣನ ಪ್ರಸಿದ್ಧ ಯಕ್ಷಗಾನ ಕೃತಿ ರತ್ನಾವತಿಕಲ್ಯಾಣವನ್ನು ಮೊದಲಿಗೆ ಪ್ರಕಟಿಸಿದ ಕೀರ್ತಿ ಇವರದು. ಸದ್ಯ ದೊರಕಿರುವ ದಾಖಲೆಯಂತೆ ಇವರು 88 ಯಕ್ಷಗಾನ ಪ್ರಸಂಗ ಕೃತಿಗಳನ್ನು ಅಚ್ಚು ಹಾಕಿದ್ದಾರೆ. ಅರ್ಥಧಾರಿಗಳಿಗೆ ಅನುಕೂಲವಾಗಲೆಂದು ಕೆಲವೊಂದು ಯಕ್ಷಗಾನ ಪ್ರಸಂಗಗಳಿಗೆ ಅರ್ಥವನ್ನೂ ಬರೆದು ಪ್ರಕಟಿಸಿದ್ದುಂಟು.

ಮಹಿಳೆಯರಿಗೆ ನಿತ್ಯ ಹಾಡಿಕೊಳ್ಳಲು ಅನುಕೂಲವಾಗಬಲ್ಲ ವಿವಾಹದ ಹಾಡುಗಳು, ಉದಯರಾಗದ ಕೃತಿಗಳು, ಕಲ್ಯಾಣ ಗೀತೆಗಳು, ವ್ರತಕತೆಗಳು, ಬ್ರಹ್ಮ ಕೊರವಂಜಿ, ದತ್ತಾತ್ರೇಯ ಜನನ ಹಾಡು, ಮದಾಲಸೆ, ಜೋಗುಳ ತೂಗಿದ ಹಾಡುಗಳು ಮುಂತಾದವನ್ನು ಪ್ರಕಟಿಸುವ ಮೂಲಕ ಮನೆಯೊಳಗೇ ಇರುತ್ತಿದ್ದ ಮಹಿಳೆಯರ ಸಾಮಾಜೀಕರಣಕ್ಕೆ ನೆರವಾದರು. ಇವರು ಪ್ರಕಟಿಸಿದ ಉದಯರಾಗ ಸಂಪುಟ ತುಂಬ ಜನಪ್ರಿಯವಾಗಿತ್ತು.

19ನೆಯ ಶತಮಾನದ ಕೊನೆಯಲ್ಲಿ ಮೋಗ್ಲಿಂಗ್, ಗ್ಯಾರೆಟ್, ಗಾವರ್ ಮೊದಲಾದ ವಿದೇಶಿ ವಿದ್ವಾಂಸರು ಹರಿದಾಸ ಸಾಹಿತ್ಯವನ್ನು ಜನರ ನಾಲಗೆಯಿಂದಲೆ ಸಂಗ್ರಹಿಸಿ ಪ್ರಕಟಿಸಿದರು. ಮುಂದೆ ಈ ಕೆಲಸವನ್ನು ಮುಂದುವರಿಸಿದ ಕೀರ್ತಿ ಪಾವಂಜೆಯವರಿಗೆ ಸಲ್ಲುತ್ತದೆ. ಇವರು ಸಂಗ್ರಹಿಸಿ ಪ್ರಕಟಿಸಿದ ಕೆಲವು ಮುಖ್ಯ ದಾಸ ಸಾಹಿತ್ಯ ಸಂಪುಟಗಳ ವಿವರಗಳನ್ನು ಹೀಗೆ ನೀಡಬಹುದು:

ಪುರಂದರದಾಸರ ಕೀರ್ತನೆಗಳು (1917–39) ಐದು ಸಂಪುಟಗಳು, ಕೃತಿಗಳ ಸಂಖ್ಯೆ 983; ವಾದಿರಾಜ ಕೀರ್ತನೆಗಳು (1920), ಕೃತಿಗಳ ಸಂಖ್ಯೆ 152; ಕನಕದಾಸರ ಕೀರ್ತನೆಗಳು (1918), ಕೃತಿಗಳ ಸಂಖ್ಯೆ 152; ವಿಜಯದಾಸರ ದೇವರ ನಾಮಗಳು (1918–29, ಎರಡು ಭಾಗ) ಕೃತಿಗಳ ಸಂಖ್ಯೆ 160; ವಿಜಯದಾಸರ ಸುಳಾದಿಗಳು (1929 ಎರಡು ಭಾಗ), ಕೃತಿಗಳ ಸಂಖ್ಯೆ 316; ಗೋಪಾಲದಾಸರ ಕೃತಿಗಳು (1923), ಕೃತಿಗಳ ಸಂಖ್ಯೆ 100; ಜಗನ್ನಾಥದಾಸರ ಕೃತಿಗಳು (1919), ಕೃತಿಗಳ ಸಂಖ್ಯೆ 132; ದಾಸರ ಪದಗಳ ಸಂಗ್ರಹ (ಮೂರು ಭಾಗ, 1926 – 43), ಕೃತಿಗಳ ಸಂಖ್ಯೆ 314. ಇವಲ್ಲದೆ ಪುರಂದರದಾಸರ ಸುಳಾದಿಗಳು, ಉಗಾಭೋಗಗಳು, ಮೋಹನದಾಸರ ಕೋಲುಹಾಡು, ವಾದಿರಾಜರ ಭ್ರಮರಗೀತ, ಗುಂಡಕ್ರಿಯೆ, ಸ್ವಪ್ನಪದ, ಶ್ರೀ ಕೃಷ್ಣ ಬಾಲಲೀಲೆ, ಕನಕದಾಸರ ಹರಿಭಕ್ತಿಸಾರಗಳೂ ಪ್ರಕಟವಾಗಿವೆ. ಇವರು 1948 ಜನವರಿ 23ರಂದು ನಿಧನರಾದರು. **(ಎ.ವಿ.ಎನ್‌ಎ.)**

**ಪಾವಂಜೆ ಗೋಪಾಲಕೃಷ್ಣಯ್ಯ**: 1866–1945. ಪ್ರಸಿದ್ಧ ಚಿತ್ರ ಕಲಾವಿದರು. ದಕ್ಷಿಣಕನ್ನಡಜಿಲ್ಲೆಯ ಪಾವಂಜೆ ಗ್ರಾಮದಲ್ಲಿ 1866ರಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸರಾವ್ ಹೆಸರಾಂತ ವೈದ್ಯರಾಗಿದ್ದರು. ಬಾಲ್ಯದಲ್ಲಿಯೇ ಚಿತ್ರಕಲೆಯ ಬಗ್ಗೆ ಆಸಕ್ತಿ ಉಂಟಾಯಿತು. ಎಫ್.ಎ. ತರಗತಿಯಲ್ಲಿ ಓದುವಾಗ ಕಾಲೇಜಿನ ಪ್ರಾಂಶುಪಾಲರಾದ ಹೆನ್ಸ್‌ಮೇನರ ಚಿತ್ರವನ್ನು ಚಿತ್ರಿಸಿದರು. ಇದರಿಂದ ಸಂತೋಷಗೊಂಡ ಅವರು ಹೆಸರಾಂತ ಕಲಾವಿದನಾಗು ಎಂದು ಹರಸಿದರು. ಮುಂಬಯಿ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಶಾಲೆಗೆ ಪ್ರವೇಶ ದೊರೆಯುವಂತೆ ಮಾಡಿದರು (1885).

ಕಲಾಶಾಲೆಯಲ್ಲಿ ತಮ್ಮ ಕಲಾಚಾತುರ್ಯದಿಂದ ಎಲ್ಲರನ್ನೂ ಬೆರಗುಗೊಳಿಸಿ, ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ಇವರು ಅದೇ ಶಾಲೆಯಲ್ಲಿ ಅಧ್ಯಾಪಕರಾಗಿ ಹೆಸರು ಗಳಿಸಿದರು (1886). ಖಾದಿಯ ಬಗ್ಗೆ ವಿಶೇಷವಾದ ಕಾಳಜಿ ಇದ್ದ ಇವರು ಸದಾ ಬಿಳಿ ವಸ್ತ್ರಧಾರಿಯಾಗಿ ಶಿಷ್ಯವೃಂದದಿಂದ 'ವೈಟ್‌ಮ್ಯಾನ್' ಎಂಬ ಹೆಸರು ಗಳಿಸಿದರು.

ಮುಂಬಯಿನಗರದಲ್ಲಿ ಪ್ಲೇಗ್ ಬಂದಾಗ ಬಲವಂತದಿಂದ ತಂದೆ ಇವರನ್ನು ಮಂಗಳೂರಿಗೆ ಕರೆಯಿಸಿಕೊಂಡರು. ಮಂಗಳೂರಿನ ಸೇಂಟ್ ಆನ್ ಕಾಲೇಜಿನಲ್ಲಿ ಕಲಾಶಿಕ್ಷಕರಾಗಿ ತಿಂಗಳಿಗೆ ಎರಡು ರೂಪಾಯಿ ಸಂಬಳ ಪಡೆದು ದುಡಿದರು. ಅನಂತರ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕಲಾಶಿಕ್ಷಕರಾಗಿ ನೇಮಕಗೊಂಡರು (1902). ಇವರು ಶಿಸ್ತಿನ ಜೀವನವನ್ನು ಮೈಗೂಡಿಸಿಕೊಂಡಿದ್ದರು. ದಕ್ಷತೆಯಿಂದ ಬೋಧನೆ ಮಾಡುತ್ತಿದ್ದರು. ಇವರು ಮಹಾತ್ಮಾಗಾಂಧೀಜಿಯವರ ಅನುಯಾಯಿ. ಸ್ವತಃ ಚರಕದಿಂದ ತಾವು ತೆಗೆದ ನೂಲಿನ ಬಟ್ಟೆಯನ್ನೇ ಧರಿಸುತ್ತಿದ್ದರು. ಕೆನರಾ ಹೈಸ್ಕೂಲಿನಿಂದ 1926ರಲ್ಲಿ ನಿವೃತ್ತರಾದರು. ಕನ್ನಡ, ಮಲಯಾಳಂ, ಮರಾಠಿ, ಇಂಗ್ಲಿಷ್, ಹಿಂದಿ, ಗುಜರಾತಿ, ಸಂಸ್ಕೃತ ಈ ಏಳು ಭಾಷೆಗಳಲ್ಲಿ ಇವರಿಗೆ ಪಾಂಡಿತ್ಯವಿತ್ತು.

ಭಾವಚಿತ್ರ ರಚಿಸುವುದರಲ್ಲಿ ಇವರು ಸಿದ್ಧಹಸ್ತರಾಗಿದ್ದರು. ಇವರು ಅನೇಕ ಗಣ್ಯರ ತೈಲಚಿತ್ರಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದುದು ಕೆನರಾಬ್ಯಾಂಕಿನ ಅಮ್ಮೆಂಬಳ ಸುಬ್ಬರಾವ್ ಪೈ ಅವರದ್ದು. ಇವಲ್ಲದೇ ಅನೇಕ ರಾಜಮಹಾರಾಜರ ತೈಲಚಿತ್ರಗಳನ್ನು ರಚಿಸಿಕೊಟ್ಟರು. ಧರ್ಮಸ್ಥಳದ ಮಂಜುನಾಥ ದೇವಾಲಯ, ಉಡುಪಿ ಶ್ರೀಕೃಷ್ಣದೇವಾಲಯ, ಕುಕ್ಕೆ ಸುಬ್ರಹ್ಮಣ್ಯ ದೇವಾಲಯ, ಹುಬ್ಬಳ್ಳಿಯ ಸಿದ್ಧಾರೂಢ ಮಠ, ಮಧ್ವಾಚಾರ್ಯ, ಶಂಕರಾಚಾರ್ಯ, ಗುರುಕುಲ ಪ್ರವೇಶ, ಉಡುಪಿಯ ಕಡಗೋಳು ಕೃಷ್ಣ, ಸರ್.ಪಿ.ಆರ್. ರಾವ್ ಮುಂತಾದ ನೂರಾರು ಕೃತಿಗಳನ್ನು ಇವರು ರಚಿಸಿದ್ದಾರೆ. ಇದಲ್ಲದೆ ತೆಂಗಿನನಾರು, ಗರಿ, ಮರ, ಕಾಗದ ಹಾಗೂ ಮಣ್ಣಿನಿಂದ ಅನೇಕ ಕಲಾಕೃತಿಗಳನ್ನು ರಚಿಸಿದ್ದರು. ಒಳ್ಳೆಯ ಸಂಗ್ರಹಕಾರರೂ ಆಗಿದ್ದರು.

ಇವರ ಕಲಾಸಾಧನೆಯನ್ನು ಮೆಚ್ಚಿ ಹಲವಾರು ಸಂಘಸಂಸ್ಥೆಗಳು ಸನ್ಮಾನಿಸಿ ಬಿರುದು ನೀಡಿ ಗೌರವಿಸಿವೆ. ಧರ್ಮಸ್ಥಳದ ಧರ್ಮಾಧಿಕಾರಿ ಚಂದಯ್ಯ ಹೆಗಡೆ, ಹುಬ್ಬಳ್ಳಿಯ ಸಿದ್ಧಾರೂಢ ಮಠ (1930), ಕಲ್ಕತ್ತದ ಎನ್.ಬಿ.ಎಸ್. ಸಂಘದಿಂದ ಇವರು ಸನ್ಮಾನಿತರಾಗಿದ್ದರು. ಚಿತ್ರಕಲಾನಿಧಿ, ಚಿತ್ರಕಲಾಚಾರ್ಯ, ಚಿತ್ರಕಲಾಕೋವಿದ, ಕಲಾಶಿಕ್ಷಣ ಪ್ರವೀಣ ಮುಂತಾದ ಬಿರುದುಗಳಿಂದಲೂ ಇವರನ್ನು ಗೌರವಿಸಲಾಗಿದೆ.

ಇವರ ಹಿರಿಯ ಮಗ ಎನ್.ಜಿ. ಪಾವಂಜೆ ಕೂಡ ತಂದೆಯಂತೆಯೆ ಹೆಸರಾಂತ ಕಲಾವಿದರಾಗಿದ್ದರು. ಅವರೂ ಜೆ.ಜೆ. ಕಲಾಶಾಲೆಯಲ್ಲಿ ಹಾಗೂ ಜರ್ಮನಿಯಲ್ಲಿ ಕಲಾಶಿಕ್ಷಣ ಪಡೆದು ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಗೋಪಾಲ ಕೃಷ್ಣಯ್ಯನವರು 1945ರಲ್ಲಿ ನಿಧನ ಹೊಂದಿದರು. **(ಆರ್.ಜಿ.ಆರ್.)**

**ಪಾವಗಡ:** ತುಮಕೂರು ಜಿಲ್ಲೆಯ ಈಶಾನ್ಯದಲ್ಲಿರುವ ಒಂದು ತಾಲ್ಲೂಕು ಮತ್ತು ತಾಲ್ಲೂಕು ಆಡಳಿತ ಕೇಂದ್ರ ಪಟ್ಟಣ. ತಾಲ್ಲೂಕಿನ ಪಶ್ಚಿಮದ ಕಡೆ ಚಿತ್ರದುರ್ಗ ಜಿಲ್ಲೆಯಿದ್ದು ಉಳಿದೆಲ್ಲ ಕಡೆ ಆಂಧ್ರಪ್ರದೇಶ ಸುತ್ತುವರಿದಿದೆ. ಮಧುಗಿರಿ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ 144 ಗ್ರಾಮಗಳಿದ್ದು ಎರಡು ಪಟ್ಟಣಗಳಿವೆ. ನಿಡುಗಲ್ಲು, ಪಾವಗಡ, ಹೊಸಕೋಟೆ ಮತ್ತು ನಾಗಲಮಡಿಕೆ ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 1,356 ಚ.ಕಿಮೀ. ತಾಲ್ಲೂಕಿನ ಜನಸಂಖ್ಯೆ 2,46,255.

ಜಿಲ್ಲೆಯ ಪೂರ್ವಾರ್ಧದಲ್ಲಿ ಉತ್ತರದಕ್ಷಿಣವಾಗಿ ಹರಡಿರುವ ಕಣಶಿಲೆಯ ಬೆಟ್ಟಗಳ ಸಾಲು ಪಾವಗಡದ ಮುಖಾಂತರ ಹಾದುಹೋಗಿದೆ. ಈ ಸಾಲಿಗೆ ಸೇರಿದ ಪಾವಗಡ ಬೆಟ್ಟ ಸಮುದ್ರಮಟ್ಟದಿಂದ 918ಮೀ ಎತ್ತರವಾಗಿದೆ. ತಾಲ್ಲೂಕಿನಲ್ಲಿ ಇರುವ ಇನ್ನೆರಡು ಎತ್ತರದ ಬೆಟ್ಟಗಳೆಂದರೆ ಕಾಮನದುರ್ಗ (1,077 ಮೀ) ಮತ್ತು ನಿಡುಗಲ್ಲುಬೆಟ್ಟ (1,149 ಮೀ). ಕ್ಲೋಸ್‌ಪೇಟೆ ಗ್ರಾನೈಟ್ ಶಿಲೆಗಳ ಗುಂಪಿಗೆ ಸೇರಿದ ಕುರುಂದ ರೀತಿಯ ಶಿಲಾಪದರಗಳು ಕೆಲವೆಡೆ ಇವೆ. ಭೂಮಿ ಬಹುಮಟ್ಟಿಗೆ ಕೆಂಪು ಮಣ್ಣಿನದು.

ತಾಲ್ಲೂಕಿನ ಪೂರ್ವದಲ್ಲಿ ಉತ್ತರಪಿನಾಕಿನಿ ಸ್ವಲ್ಪದೂರ ಹರಿದು ಆಂಧ್ರಪ್ರದೇಶವನ್ನು ಸೇರುತ್ತದೆ. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 556 ಮಿಮೀ. ಇದೇ ಇಡೀ ಜಿಲ್ಲೆಯಲ್ಲಿ ಕಡಿಮೆ ಮಳೆ ಬೀಳುವ ತಾಲ್ಲೂಕು. ತಾಲ್ಲೂಕಿನಲ್ಲಿ ರಾಗಿ, ಬತ್ತ, ಜೋಳ, ಹಾರಕ, ನವಣೆ, ಹುರುಳಿ, ಅವರೆ, ತೊಗರಿ, ನೆಲಗಡಲೆ ಬೆಳೆಯುತ್ತಾರೆ. ಕಬ್ಬು ಮತ್ತು ತೆಂಗಿನ ಬೆಳೆ ಸ್ವಲ್ಪ ಉಂಟು. ಪಶುಪಾಲನೆಯಿದ್ದು ಅವುಗಳ ಅಭಿವೃದ್ಧಿ ಮತ್ತು ರಕ್ಷಣೆಗೆ ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ.

ತಾಲ್ಲೂಕಿನಲ್ಲಿ ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಯ್ಗೆಯುಂಟು. ಅದಕ್ಕೆ ಸಂಬಂಧಿಸಿದಂತೆ ಸಹಕಾರ ಸಂಘಗಳಿವೆ. ಕೆಲವು ವಾಣಿಜ್ಯ ಬ್ಯಾಂಕುಗಳಿದ್ದು ವ್ಯಾಪಾರ, ವ್ಯವಸಾಯಕ್ಕೆ ಆರ್ಥಿಕ ನೆರವು ದೊರೆಯುವುದು. ತಾಲ್ಲೂಕಿನಲ್ಲಿ ಶಾಲೆಗಳೂ ಕಾಲೇಜುಗಳೂ ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಮತ್ತು ಔಷಧಾಲಯಗಳೂ ಇವೆ.

ಈ ತಾಲ್ಲೂಕಿನ ಉಲ್ಲೇಖಾರ್ಹ ಸ್ಥಳಗಳಲ್ಲಿ ನಿಡುಗಲ್ಲು **(ನೋಡಿ)** ಮುಖ್ಯವಾದುದು. ಇದು ಹಿಂದೆ ಪಾಳೆಯಪಟ್ಟಿನ ಕೇಂದ್ರವಾಗಿತ್ತು. ಇಲ್ಲಿ ಅನೇಕ ಐತಿಹಾಸಿಕ ಅವಶೇಷಗಳು ಇವೆ. ಬಂಗಾರನಾಯಕನ ಬೆಟ್ಟದಲ್ಲಿ ಹಳೆಯ ಕೋಟೆಯ ಮತ್ತು ಕಟ್ಟಡಗಳ ಅವಶೇಷಗಳಿವೆ. ಇಲ್ಲಿನ ಕದಂಬರಾಯ ದೇವಾಲಯದಲ್ಲಿ 13 ಅಡಿಯ ಕಲ್ಲಿನ ಒಂದು ಕಂಬ ಪೂಜಾವಿಗ್ರಹವಾಗಿರುವುದು ವಿಶೇಷ. ಗುಂಡಲಹಳ್ಳಿಯಲ್ಲಿ ಅಕಲೆ ಸಮುದ್ರವೆಂಬ ದೊಡ್ಡ ಕೆರೆ ಇದೆ. ಇಲ್ಲಿನ ಈಶ್ವರ ಮತ್ತು ಆಂಜನೇಯ ದೇವಾಲಯಗಳು ಪ್ರಸಿದ್ಧ. *

ಪಾವಗಡ ಈ ತಾಲ್ಲೂಕಿನ ಮುಖ್ಯಪಟ್ಟಣ. ತುಮಕೂರಿನ ಉತ್ತರಕ್ಕೆ 96 ಕಿಮೀ ದೂರದಲ್ಲಿದೆ. ಪಟ್ಟಣದ ಜನಸಂಖ್ಯೆ 28,068.

ಪಾವಗಡ ಬೆಟ್ಟದ ಪಾದದ ದಕ್ಷಿಣದ ಕಡೆ ಪಟ್ಟಣವಿದೆ. ತುಮಕೂರು–ಮಧುಗಿರಿ–ಬಳ್ಳಾರಿ ಹೆದ್ದಾರಿ ಪಾವಗಡದ ಮೂಲಕ ಹಾದುಹೋಗುತ್ತದೆ. ಪಾವಗಡದಿಂದ ಹಿಂದೂಪುರ, ಶಿರಾ, ಚಿತ್ರದುರ್ಗಗಳಿಗೆ ಉತ್ತಮ ರಸ್ತೆಗಳಿವೆ. ಈಚೆಗೆ ಇದು ವ್ಯಾಪಾರಸ್ಥಳವಾಗಿ ಬೆಳೆಯುತ್ತಿದೆ. ಇಲ್ಲಿ ಉಣ್ಣೆ, ಹತ್ತಿ ಮತ್ತು ರೇಷ್ಮೆ ಕೈಗಾರಿಕೆ ಇದೆ. ಊರು ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ. **(ಕೆ.ಆರ್.ಆರ್.)**

ಪಾವಗಡ ಊರಿನ ಹೆಸರು ಇಲ್ಲಿ ಸಿಕ್ಕಿದ ವಿಶಿಷ್ಟ ರೀತಿಯ ಒಂದು ನಾಗರಕಲ್ಲಿನಿಂದ (ಪಾಮು–ಗೊಂಡ) ಬಂದಿತೆನ್ನಲಾಗಿದೆ. ಈ ಊರು ಹಿಂದೆ ಒಂದು ಪಾಳೆಯ ಪಟ್ಟಿನ ಕೇಂದ್ರವಾಗಿತ್ತು. ಈ ಪಾಳೆಯ ಪಟ್ಟಿನ ಮೊದಲಿಗ ಬಾಲಪ್ಪನಾಯಕ. ಈತ 1585ರ ಸುಮಾರಿನಲ್ಲಿ ಗುತ್ತಿಯಿಂದ ಬಂದು ಚಿಕ್ಕಬಳ್ಳಾಪುರದ ಹಾವಳಿ ಭೈರೇಗೌಡನಲ್ಲಿ

ಸೇವೆಗೆ ಸೇರಿದ್ದ ಎರ್ರಗೊಲ್ಲಕುಲದ ಮೂವರು ಸೋದರರಲ್ಲಿ ಒಬ್ಬ. ಹಾವಳಿ ಬೈರೇಗೌಡನಿಗೆ ಮಕ್ಕಳಿಲ್ಲದ್ದರಿಂದ ಆತ ಬಾಲಪ್ಪನಾಯಕನನ್ನೇ ದತ್ತು ತೆಗೆದುಕೊಂಡಿದ್ದ. ಒಮ್ಮೆ ಗುತ್ತಿಯ ಮೇಲೆ ಆಕ್ರಮಣ ನಡೆದಾಗ ಅದನ್ನು ನಿವಾರಿಸಲು ಪೆನುಗೊಂಡೆಯ ಅರಸನ ಅಪೇಕ್ಷೆಯಂತೆ ಹಾವಳಿ ಬೈರೇಗೌಡ ಸೈನ್ಯವನ್ನು ಕಳುಹಿಸಬೇಕಾಯಿತು. ಬಾಲಪ್ಪನ ನೇತೃತ್ವದಲ್ಲಿ ನಡೆದ ಸೈನ್ಯ ಗುತ್ತಿಯ ಆಕ್ರಮಣವನ್ನು ಸಮರ್ಥವಾಗಿ ತೆರವು ಮಾಡಿತು. ಬಾಲಪ್ಪನಿಗೆ ಕೆಲವು ಗ್ರಾಮಗಳ ಉಂಬಳಿ ದೊರೆಯಿತು. ಅನಂತರ ಈ ಹಿಂದೆ ದರೋಡೆಕಾರರ ಕಾರ್ಯಸ್ಥಾನವಾಗಿದ್ದ ಪಾವಗಡ ವನ್ನು ಬಾಲಪ್ಪ ಆಕ್ರಮಿಸಿದ. ಕೆಲ ಕಾಲಾನಂತರ ಒಮ್ಮೆ ಪೆನುಗೊಂಡೆ ಯಲ್ಲಿ ಮದ್ದಿನ ಮನೆಗೆ ಸಿಡಿಲು ಬಡಿದು ಅನಾಹುತವಾಯಿತು. ಆಗ ಪೆನುಗೊಂಡೆಯ ರಾಜ ವೆಂಕಟಪತಿದೇವನೂ ಊರಲ್ಲಿರಲಿಲ್ಲ. ಬಾಲಪ್ಪ ಸ್ವತಃ ಅಲ್ಲಿಗೆ ನಡೆದು ಪರಿಸ್ಥಿತಿಯನ್ನು ತಹಬಂದಿಗೆ ತಂದ. ಇದರಿಂದ ತುಷ್ಟನಾದ ವೆಂಕಟಪತಿದೇವ ಬಾಲಪ್ಪನನ್ನು ಪಾಳೆಯಗಾರನ ಪದವಿಗೇರಿಸಿ ಕೆಲವು ಪ್ರದೇಶಗಳನ್ನು ಕೊಟ್ಟ. ಹೀಗೆ ಸ್ಥಾಪಿತವಾದ ಪಾಳೆಯ ಪಟ್ಟು ಸುಮಾರು ನೂರು ವರ್ಷಗಳಿಗೂ ಹೆಚ್ಚುಕಾಲ ಅಸ್ತಿತ್ವದಲ್ಲಿತ್ತು. ಸು. 1776ರಲ್ಲಿ ಹೈದರ್ ಪಾವಗಡವನ್ನು ಆಕ್ರಮಿಸಿದ. ಆಗಿನ ಪಾಳೆಯಗಾರನಾಗಿದ್ದ ತಿಮ್ಮಪ್ಪನಾಯಕನನ್ನು ಮಧುಗಿರಿಯಲ್ಲಿ ಸೆರೆಯಿಟ್ಟ. ಮೂರನೆಯ ಮೈಸೂರು ಯುದ್ಧದ ಕಾಲದಲ್ಲಿ (1790–92) ಕಾರ್ನ್‌ವಾಲೀಸನ ಯೋಚನೆಯಂತೆ ಮರಾಠರು ಮಧುಗಿರಿಯನ್ನು ಆಕ್ರಮಿಸಿದಾಗ ತಿಮ್ಮಪ್ಪನಾಯಕ ಬಿಡುಗಡೆ ಹೊಂದಿ ಮತ್ತೆ ಪಾವಗಡಕ್ಕೆ ಬಂದ. ಆದರೆ ಅನಂತರ ಶಾಂತಿ ಒಪ್ಪಂದದಲ್ಲಿ ಈ ಭಾಗ ಟಿಪ್ಪುವಿಗೆ ಉಳಿಯಿತಾಗಿ, ತಿಮ್ಮಪ್ಪನಾಯಕನ ಆಳ್ವಿಕೆಯೂ ಕೊನೆಗೊಂಡಿತು.

ಪಾವಗಡದ ಊರಿನ ಸುತ್ತಮುತ್ತ ಮತ್ತು ಬೆಟ್ಟದ ಮೇಲೆ ಕೋಟೆಕೊತ್ತಳಗಳ ಅವಶೇಷಗಳು ಉಳಿದಿವೆ. ಇಲ್ಲಿನ ಮೊದಲ ಕೋಟೆಯನ್ನು ವಿಜಯನಗರದ ಅಧಿಕಾರಿ ಗೋಪ ಎಂಬುವನು 1405–06ರಲ್ಲಿ ಕಟ್ಟಿಸಿದಂತೆ ಇಲ್ಲಿನ ಒಂದು ಶಾಸನ ತಿಳಿಸುತ್ತದೆ. ಅನಂತರ ಪಾವಗಡದ ಪಾಳೆಯಗಾರರು ಉತ್ತಮಪಡಿಸಿದರು. ಈಗ ಉಳಿದಿರುವ ಕೋಟೆಯ ಬಹುಭಾಗ ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದ್ದು. ಹೈದರ್ 1771ರಲ್ಲಿ ಚಿತ್ರದುರ್ಗ ಪಾಳೆಯಗಾರನೊಡನೆ ಯುದ್ಧ ನಿರತನಾಗಿದ್ದಾಗ ಈ ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಿದ. ದೊಡ್ಡ ದೊಡ್ಡ ಬಂಡೆಗಳಿಂದ (ಕೆಲವು ನೂರು ಅಡಿಗಿಂತಲೂ ಎತ್ತರ) ಹಲವು ಘಟ್ಟಗಳಲ್ಲಿ ಏರುವ ಪಾವಗಡ ಬೆಟ್ಟದ ಸುತ್ತ ಮತ್ತು ಮೇಲೆ ಕೋಟೆಗೋಡೆಗಳು ಹಬ್ಬಿವೆ. ಮೇಲುಗಡೆಗೇರುವಲ್ಲಿ ಹತ್ತು ಹೆಬ್ಬಾಗಿಲುಗಳಿವೆ. ಬುಡದ ಹತ್ತಿರ ಕಮ್ಮರ ಮಂಟಪ ಎಂಬ ಮಂಟಪವಿದೆ. ಬೆಟ್ಟದ ಮೇಲೆ ಬೆಟ್ಟದ ಆಂಜನೇಯ ಎಂಬ ಏಳು ಅಡಿ ಎತ್ತರದ ವಿಗ್ರಹವಿದೆ. ಮತ್ತಷ್ಟು ಮೇಲೆ ಕೊನೇರಿ ದೊಣೆ ಎಂಬ ಚಿಲುಮೆ ಮತ್ತು ಸಮೀಪದಲ್ಲಿ ಕೊನೇರಿ ಮಂಟಪ ಎಂಬ ಮಂಟಪ, ತುಪ್ಪದ ಕಣುಕು ಇವೆ. ಇನ್ನಷ್ಟು ಮೇಲೆ ಒಂದು ಬಾವಿ ಇದೆ. ಈ ಬಾವಿಯಿಂದ ಸು. 80 ಅಡಿ ಮೇಲಕ್ಕೆ ನೀರೆತ್ತಲಾಗುತ್ತಿತ್ತಂತೆ. ಬೆಟ್ಟದ ತುದಿಯಲ್ಲಿ ಸುಲ್ತಾನ್ ಬತೇರಿ, ಅದರಿಂದ ಸ್ವಲ್ಪ ಪಶ್ಚಿಮಕ್ಕೆ ಸುಬ್ಬರಾಯನ ಬತೇರಿ ಇವೆ. ಅಲ್ಲದೆ ಬೆಟ್ಟದಲ್ಲಿ ಅಕ್ಕಮ್ಮನ ದೊಣೆ, ಬಾಬಯ್ಯನ ಕೆರೆ, ಭೀಮನ ದೊಣೆ ಮೊದಲಾದ ಹಲವು ನೀರಿನ ಆಸರೆಗಳಿವೆ. ಅಲ್ಲಲ್ಲಿ ರಾಗಿ ಕಣಜ, ಬತ್ತದ ಕಣಜ ಮತ್ತು ಮದ್ದಿನ ಮನೆಗಳ ಕಟ್ಟಡಗಳಿವೆ. ಪಾವಗಡದಲ್ಲಿ ಒಂದು ಗೋಪಾಲಕೃಷ್ಣ ದೇವಾಲಯವಿದೆ.

*

**ಪಾವಟೆ, ಡಿ.ಸಿ.:** 1899–1979. ಶಿಕ್ಷಣತಜ್ಞ ಮತ್ತು ದಕ್ಷ ಆಡಳಿತಗಾರರು. ಇವರ ಪೂರ್ಣ ಹೆಸರು ದಾನಪ್ಪ ಚಿಂತಪ್ಪ ಪಾವಟೆ. ಬೆಳಗಾಂವಿ ಜಿಲ್ಲೆಯ ಮಮದಾಪುರದಲ್ಲಿ 1899 ಆಗಸ್ಟ್ 2ರಂದು ಜನಿಸಿದರು. ಮಾಧ್ಯಮಿಕ ಶಿಕ್ಷಣವನ್ನು ಗೋಕಾಕ ಮತ್ತು ಕೊಲ್ಲಾಪುರಗಳಲ್ಲಿ ಪೂರೈಸಿ, 1919ರಲ್ಲಿ ಧಾರವಾಡದ ಕರ್ನಾಟಕ ಕಾಲೇಜನ್ನು ಸೇರಿ 1923ರಲ್ಲಿ ಗಣಿತದಲ್ಲಿ ಪ್ರಥಮ ದರ್ಜೆಯಲ್ಲಿ ಆನರ್ಸ್ ಪದವೀಧರರಾದರು. ಕೇಂಬ್ರಿಜ್ಜ್ ವಿಶ್ವವಿದ್ಯಾಲಯದ ಸಿಡ್ನಿ ಸಸೆಕ್ಸ್ ಕಾಲೇಜಿಗೆ 1924ರಲ್ಲಿ ಸೇರಿ ಗಣಿತಶಾಸ್ತ್ರದ ಟ್ರೈಫಾಸ್ ಭಾಗ 1 ಹಾಗೂ 2ರಲ್ಲಿ ಪ್ರಥಮ ಶ್ರೇಣಿ ಗಳಿಸಿದರು. 1927ರಲ್ಲಿ ರ್‍ಯಾಂಗ್ಲರ್ ಆಗಿ, ಕಾಲೇಜಿನ ರಿಸರ್ಚ್ ಸ್ಕಾಲರ್‌ಷಿಪ್ ಪಡೆದರು. ಅನಂತರ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರೊಫೆಸರ್ ಮತ್ತು ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದರು (1928–30). 1930ರಿಂದ ಮುಂಬಯಿ ವಿದ್ಯಾ ಇಲಾಖೆ ಸೇರಿ ಶಿಕ್ಷಣ ಖಾತೆಯ ಹಲವು ಸ್ಥಾನಗಳಲ್ಲಿ ಕೆಲಸ ಮಾಡಿ 1947ರಲ್ಲಿ ಇಲಾಖೆಯ ನಿರ್ದೇಶಕರಾದರು.

ಸರ್ಕಾರಿ ಸೇವೆಯಿಂದ ನಿವೃತ್ತರಾದ ಅನಂತರ 1954ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾದರು. ಶ್ರೇಷ್ಠ ಶೈಕ್ಷಣಿಕ ಹಿನ್ನೆಲೆ, ಶಿಕ್ಷಣ ಕ್ಷೇತ್ರದ ದೀರ್ಘ ಮತ್ತು ಬಹುಮುಖ ಅನುಭವ–ಇವುಗಳಿಂದಾಗಿ ನವೀನವಾಗಿ ಉದಯವಾದ ವಿಶ್ವವಿದ್ಯಾಲಯದ ಆಡಳಿತ ಸೂತ್ರಗಳನ್ನು ವಹಿಸಿಕೊಂಡಂದಿನಿಂದ ಎಲ್ಲೆಲ್ಲಿಯೂ ಹೊಸ ಚೈತನ್ಯವನ್ನು ತುಂಬಿದರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಒಂದೇ ಸಮನೆ ಐದು ಅವಧಿಗೆ ಆಯ್ಕೆಯಾದರು. ಹದಿನಾಲ್ಕು ವರ್ಷಗಳ ಇವರ ಆಡಳಿತದ ಅವಧಿಯಲ್ಲಿ 350 ಎಕರೆ ವಿಸ್ತಾರವಾದ ಮಹಾಬಲೇಶ್ವರ ಗುಡ್ಡದ ಮೇಲಿನ ಕ್ಯಾಂಪಸ್ಸಿನಲ್ಲಿ ವಿಶ್ವವಿದ್ಯಾಲಯದ ಅನೇಕ ಕಟ್ಟಡಗಳು ತಲೆಎತ್ತಿದವು. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಿಗೆ ಸಮರ್ಥರಾದ ವಿದ್ವನ್ಮಾನ್ಯರನ್ನು ಆಯ್ಕೆ ಮಾಡಿ ನಿಯಮಿಸಿದರು. ವಿಶ್ವವಿದ್ಯಾಲಯದ ಗ್ರಂಥಭಂಡಾರವನ್ನು ಆಧುನಿಕವಾಗಿ ವ್ಯವಸ್ಥೆಗೊಳಿಸಿದರು. ಭಾರತದ ಅತ್ಯಂತ ಪ್ರಗತಿಪರ ವಿಶ್ವವಿದ್ಯಾಲಯಗಳಲ್ಲಿ ಒಂದೆಂಬ ಖ್ಯಾತಿಯನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ತಂದುಕೊಟ್ಟರು. ಇವರು ಅಂತರ ವಿಶ್ವವಿದ್ಯಾಲಯ ಮಂಡಲಿಯ ಸದಸ್ಯರಾಗಿ ಕೆಲಸಮಾಡಿದರಲ್ಲದೆ ಬ್ರಿಟಿಷ್ ಕಾಮನ್‌ವೆಲ್ತ್ ವಿಶ್ವವಿದ್ಯಾಲಯದ ಸಂಘದಲ್ಲಿ ಭಾರತ ವಿಶ್ವವಿದ್ಯಾಲಯಗಳನ್ನು ಪ್ರತಿನಿಧಿಸಿ ಕಾರ್ಯಾಂಗ ಸಮಿತಿಯ ಸದಸ್ಯರಾಗಿದ್ದರು. ಶೈಕ್ಷಣಿಕ ನಿಯಾಮಕಗಳ ಮೇಲೆ ಯುರೋಪ್, ಅಮೆರಿಕ, ಏಷ್ಯ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮೊದಲಾದ ದೇಶಗಳನ್ನು ಸಂದರ್ಶಿಸಿದರು. ಜಿನೇವದಲ್ಲಿ ನಡೆದ 19ನೆಯ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನಕ್ಕೆ ಭಾರತೀಯ ನಿಯೋಗದ ನಾಯಕರಾಗಿದ್ದರು. 1955–56ರ ಅಧಿಕೃತ ಭಾಷಾ ಸಮಿತಿಯ ಸದಸ್ಯರಾಗಿದ್ದರು. ಭಾರತ ಸರ್ಕಾರದ ಕೇಂದ್ರ ಸಲಹಾ ಮಂಡಳಿಯ ಸದಸ್ಯರಾಗಿ ಹಲವು ವರ್ಷ ಸೇವೆ ಸಲ್ಲಿಸಿದರು. 1962ರ ಗುಹಾವಟಿ ವಿಶ್ವವಿದ್ಯಾಲಯ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ಪಾವಟೆಯವರ ಸರ್ವತೋಮುಖ ಸೇವೆಯನ್ನು ಗಮನಿಸಿ ಭಾರತ ಸರ್ಕಾರ 1966ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಗೌರವಿಸಿತು. ಇವರು 1967ರಲ್ಲಿ ಪಂಜಾಬಿನ ರಾಜ್ಯಪಾಲರಾಗಿ ನೇಮಕಗೊಂಡರು. ತಮ್ಮ ದೀರ್ಘಾವಧಿಯ ಆಡಳಿತಾನುಭವದಿಂದ ಪಂಜಾಬಿನ ಪರಿಸ್ಥಿತಿಯನ್ನು ಸುಧಾರಿಸಿದರು.

ನಿವೃತ್ತರಾದ ಅನಂತರ ಇವರು ಬೆಂಗಳೂರಿನಲ್ಲಿ ನೆಲೆಸಿದರು. ಇವರು ಕಟ್ಟಿ ಬೆಳೆಸಿದ ಕರ್ನಾಟಕ ವಿಶ್ವವಿದ್ಯಾಲಯದ ಆವರಣಕ್ಕೆ

ಪಾವಟೆನಗರ ಎಂದು ನಾಮಕರಣ ಮಾಡಲಾಗಿದೆ (1980). ಇವರ ಕಂಚಿನ ಪ್ರತಿಮೆಯನ್ನೂ ವಿದ್ಯಾಸೌಧದ ಎದುರು ಪ್ರತಿಷ್ಠಾಪಿಸಲಾಗಿದೆ. ಇವರ ಜನ್ಮದಿನವನ್ನು 'ಶಿಕ್ಷಣ ತಜ್ಞ'ರ ದಿನವಾಗಿ ಆಚರಿಸಲಾಗುತ್ತಿದೆ.

ಇವರು ಎಲಿಮೆಂಟ್ಸ್ ಆಫ್ ಕ್ಯಾಲ್‌ಕ್ಯೂಲಸ್ ಎಂಬ ಗಣಿತಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕವನ್ನೂ ಮೆಮೊರೀಸ್ ಆಫ್ ಎನ್ ಎಜ್ಯುಕೇಷನಲ್ ಅಡ್ಮಿನಿಸ್ಟ್ರೇಟರ್ ಮತ್ತು ಮೈ ಡೇಸ್ ಆ್ಯಸ್ ಗವರ್ನರ್ ಎಂಬ ಗ್ರಂಥಗಳನ್ನೂ ಬರೆದಿದ್ದಾರೆ. ಈ ಪುಸ್ತಕಗಳಿಂದ ಸ್ವಾತಂತ್ರ್ಯಪ್ರಾಪ್ತಿಯ ಅನಂತರ ದೇಶದ ರಾಜಕೀಯ ಮತ್ತು ಶೈಕ್ಷಣಿಕ ಪರಿಸ್ಥಿತಿಯ ಹಾಗೂ ಸಮಸ್ಯೆಗಳ ಬಗೆಗೆ ಮಹತ್ತ್ವದ ವಿಚಾರವಿಮರ್ಶೆ ದೊರೆಯುವುದು. (ಎಸ್.ಡಬ್ಲ್ಯು.)

**ಪಾಶುಪತ:** ಸು. 7-13ನೆಯ ಶತಮಾನಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಬಹು ಪ್ರಭಾವಶಾಲಿಯಾಗಿದ್ದ ಒಂದು ಶೈವಪಂಥ. ಲಾಕುಳ ಶೈವ. ಲಕುಲೀಶ (ನಕುಲೀಶ) ಪಾಶುಪತ, ಮಾಹೇಶ್ವರಧರ್ಮ ಮೊದಲಾದ ಹೆಸರುಗಳಿಂದಲೂ ಪ್ರಸಿದ್ಧವಾಗಿ ಒಂದು ಕಾಲದಲ್ಲಿ ಇಡೀ ಭಾರತವಲ್ಲದೆ ಆಗ್ನೇಯ ಏಷ್ಯ ದೇಶಗಳಲ್ಲೂ ಹರಡಿದ್ದ ಈ ಪಂಥದ ಪ್ರವರ್ತಕ 2ನೆಯ ಶತಮಾನದಲ್ಲಿ ಗುಜರಾತಿನ ಕಾರವಾನ್‌ನಲ್ಲಿ ಅವತರಿಸಿದ್ದ ಲಕುಲೀಶ. ಕ್ರಮೇಣ ಈತ ಶಿವಾವತಾರಿಯೆಂದು ಎಣಿಸಲ್ಪಟ್ಟನಲ್ಲದೆ ಸಿದ್ಧಾಂತಕ್ಕೂ ಪಂಥಕ್ಕೂ ಇವನ ಹೆಸರೇ ಪ್ರಚಲಿತವಾಯಿತು. ಲಕುಲೀಶ ಗಣಸಹಸ್ರನಾಮೋಕ್ತನೂ ಇಪ್ಪತ್ತೆಂಟು ಮಂದಿ ಯೋಗಾಚಾರ್ಯರಲ್ಲಿ ಒಬ್ಬನೂ ಆಗಿದ್ದಾನೆ.

ಕರ್ನಾಟಕದಲ್ಲಿ ಪಾಶುಪತಪಂಥ ಕಾಲಿಟ್ಟದ್ದು ಬಹುಶಃ 6ನೆಯ ಶತಮಾನದಲ್ಲಿ. ಈ ಸಂಬಂಧದ ಪ್ರಥಮ ಶಾಸನೋಲ್ಲೇಖವೆಂದು ಪರಿಗಣಿಸಲಾಗಿರುವ ಮಂಗಲೀಶನ ಮಹಾಕೂಟ ಸ್ತಂಭಶಾಸನದಲ್ಲಿ (602) ಗಂಗಾತಟದಿಂದ ಬಂದ ಜ್ಞಾನ ಶಿವಾಚಾರ್ಯನೆಂಬ ಶೈವ ಆಚಾರ್ಯನ ವಿಷಯವಿದೆಯಾದರೂ ಪಾಶುಪತದ ಹೆಸರು ಸ್ಪಷ್ಟವಾಗಿ ಪ್ರಸ್ತಾಪಿಸಲಾಗಿಲ್ಲ. ಬಾದಾಮಿಯಲ್ಲಿ ನಕುಲೀಶನಿಗೆ ಕಟ್ಟಿದ ಒಂದು ಚಳುಕ್ಯ ಕಾಲೀನ ಗುಡಿಯಿದ್ದು ಅದರಲ್ಲಿ ಅವನ ಮೂರ್ತಿ ಇದೆ. ಪಾಶುಪತದ ಸ್ಪಷ್ಟ ಉಲ್ಲೇಖ ಚಿಕ್ಕಮಗಳೂರು ಜಿಲ್ಲೆಯ ಕಿಗ್ಗದಲ್ಲಿರುವ ಸು. 700ರ ಶಾಸನದಲ್ಲಿದೆ. 10-12ನೆಯ ಶತಮಾನಗಳಲ್ಲಿ ಈ ಪಂಥ ಅತ್ಯಂತ ಪ್ರಭಾವಶಾಲಿಯಾಗಿತ್ತು. ಬಳ್ಳಿಗಾವೆ, ಕೊಲ್ಲಾಪುರ ಮೊದಲಾದ ಪ್ರಖ್ಯಾತ ಸ್ಥಾನಗಳಲ್ಲದೆ ಸುಮಾರು ಎಲ್ಲ ಪ್ರಸಿದ್ಧ ಸ್ಥಳಗಳಲ್ಲೂ ಈ ಪಂಥದವರ ದೇವಾಲಯ-ಮಠಗಳಿದ್ದುವು. ಕೆಲವು ಮಠಗಳ ಅಧೀನದಲ್ಲಿ ಅನೇಕ ಊರುಗಳಲ್ಲಿ ಹಂಚಿಹೋಗಿದ್ದ ಉಪಮಠಗಳೂ ಇದ್ದು, ಕರ್ನಾಟಕದ ಸುಮಾರು ಎಲ್ಲೆಡೆಯಲ್ಲೂ ಈ ಪಂಥ ವ್ಯಾಪಿಸಿತ್ತು. ಪಾಶುಪತ ಆಚಾರ್ಯರು ನಿಷ್ಠಾವಂತರೂ ಜ್ಞಾನಿಗಳೂ ವಿದ್ಯಾವಂತರೂ ಆಗಿರುತ್ತಿದ್ದುದರಿಂದ, ರಾಜರಿಂದಲೂ ಸಮಾಜದಿಂದಲೂ ಗೌರವಿಸಲ್ಪಡುತ್ತಿದ್ದರೆಂದು ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ಈ ಪಂಥದಲ್ಲಿ ಹಲವು ಶಾಖೆಗಳಿದ್ದುವು, ಅವು ಪರ್ಷೆ, ಆಮ್ನಾಯ (ಅವಳಿ), ಸಂತತಿ ಇತ್ಯಾದಿಗಳಿಂದ ಸೂಚಿತವಾಗುತ್ತಿದ್ದವು. ಶಕ್ತಿಪರ್ಷೆ, ಸಿಂಹಪರ್ಷೆ ಪ್ರಸಿದ್ಧವಾದವು. ಶಕ್ತಿಪರ್ಷೆಯಲ್ಲಿ ಎರಡು ಆಮ್ನಾಯಗಳು, ಪರ್ವತಾಮ್ನಾಯ (ಪರ್ವತಾವಳಿ) ಮತ್ತು ಭುಜಂಗಾವಳಿ. ಹಿರಿಯ ಮಠಕ್ಕೆ ಪ್ರತಿಬದ್ಧವಾದ ಮಠಗಳನ್ನು ಹೆಸರಿಸುವಲ್ಲಿ ಶ್ರೀಪರ್ವತದಗಸ್ತ್ಯೇಶ್ವರದ ಸಂತತಿ, ಮೂವರ ಕೋಣೆಯ ಸಂತತಿ, ಇಟ್ಟಗೆಯ ಸಂತತಿ ಇತ್ಯಾದಿಯಾಗಿ ಸಂತತಿ ಪದ ಬಳಕೆಯಾಗುತ್ತಿತ್ತು. ಆ ಕಾಲದಲ್ಲಿ ಈ ಪಂಥದ ಹಲವಾರು ಆಚಾರ್ಯರು ಪ್ರತಿಷ್ಠಿತ ಸ್ಥಾನವನ್ನು ಗಳಿಸಿದ್ದರು. ಇವರಿಗೆ ದೇವ, ಪಂಡಿತ, ರಾಶಿ, ಶಕ್ತಿ, ಜೀಯ, ಶಿವ, ಗೊರವ, ವ್ರತಿ, ಮುನಿ ಮುಂತಾದ ಪರ್ಯಾಯ ನಾಮಗಳಿದ್ದವು. ಇವರು ಸ್ನಾನ ಜಪಹೋಮ ನಿಯಮ ಧ್ಯಾನ ಅನುಷ್ಠಾನ ಶೀಲತತ್ಪರರೂ ವ್ಯಾಸ ಅಗಸ್ತ್ಯ ದುರ್ವಾಸ ವಿಶ್ವಾಮಿತ್ರ ನಾರದಾದಿ ದಿವ್ಯ ಮುನಿ ಚಾರಿತ್ರರೂ ಕೌಪೀನ ಮೌಂಜೀಧರರೂ ರುದ್ರಾಕ್ಷಾಲಂಕೃತರೂ ಜಂಗಮ ಲಿಂಗಾವತಾರರೂ ಲಾಕುಳಾಗಮ ಸಮಯ ಸಮುದ್ಧಾರರೂ ಆಗಿದ್ದರೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಈ ಸಂಪ್ರದಾಯದ ಕೇಂದ್ರಸ್ಥಾನಗಳಲ್ಲಿ ಬಳ್ಳಿಗಾವೆ ಕೇದಾರೇಶ್ವರ ದೇವಾಲಯ ಮತ್ತು ಅದಕ್ಕೆ ಹೊಂದಿಕೊಂಡಿದ್ದ ಕೋಡಿಮಠ ಮುಖ್ಯವಾದುದು. ಈ ಪಟ್ಟಣದಲ್ಲಿ ಹನ್ನೊಂದನೆಯ ಶತಮಾನದ ಆರಂಭದಲ್ಲಿ ಕೇದಾರಶಕ್ತಿಮುನಿ ಎಂಬುವನು ಕೇದಾರೇಶ್ವರ ದೇವಾಲಯ ಹಾಗೂ ಪಕ್ಕದಲ್ಲಿರುವ ಕೋಡಿಮಠವನ್ನು ಸ್ಥಾಪಿಸಿದ. ಈತನ ಶಿಷ್ಯಪರಂಪರೆಯಲ್ಲಿ ಬಂದ ಮಠಾಧಿಪತಿಗಳು, ವಿದ್ವಾಂಸರು, ನೈಷ್ಠಿಕ ಬ್ರಹ್ಮಚಾರಿಗಳು, ತಪೋನಿಷ್ಠರು ಹಾಗೂ ಕರ್ತೃತ್ವಶಾಲಿಗಳಾದ್ದರಿಂದ ಅಲ್ಪಕಾಲದಲ್ಲಿಯೇ ಇದು ಪ್ರಸಿದ್ಧ ವಿದ್ಯಾಕೇಂದ್ರವಾಗಿ ಪ್ರಖ್ಯಾತವಾಯಿತು. ಒಂದು ಶಾಸನ ಈ ವಿದ್ಯಾಕೇಂದ್ರದ ಹೆಚ್ಚಳವನ್ನು ಕುರಿತು 'ದಕ್ಷಿಣ ಕೇದಾರಸ್ಥಾನಮುಂ, ಶಿವಲಿಂಗ ಪೂಜಾಪುಳಕಸಸ್ಯಸರಸ ಕೇದಾರಸ್ಥಾನಮುಂ, ನೈಷ್ಠಿಕ ಬ್ರಹ್ಮಚರ್ಯಶಿವಮುನಿಜನಾನುಷ್ಠಾನ ನಿಷ್ಠಿತಸ್ಥಾನಮುಂ, ಸಾಂಗಋಗ್ ಯಜುಸ್ಸಾಮಾಥರ್ವಚತುರ್ವೇದಸ್ವಾಧ್ಯಾಯಸ್ಥಾನಮುಂ ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣವ್ಯಾಖ್ಯಾನ ಸ್ಥಾನಮುಂ, ಲಾಕುಳ ಸಿದ್ಧಾಂತ ಪಾತಂಜಳಾದಿ ಯೋಗಶಾಸ್ತ್ರ ವ್ಯಾಖ್ಯಾನ ಸ್ಥಾನಮುಂ, ನ್ಯಾಯವೈಶೇಷಿಕ ಮೀಮಾಂಸಾ ಸಾಂಖ್ಯ ಬೌದ್ಧಾದಿ ಷಡುದರ್ಶನ ವ್ಯಾಖ್ಯಾನ ಸ್ಥಾನಮುಂ, ಅಷ್ಟಾದಶಪುರಾಣ ಧರ್ಮಶಾಸ್ತ್ರ ಸಕಳ ಕಾವ್ಯನಾಟಕ ನಾಟಕಾದಿ ವಿವಿಧ ವಿದ್ಯಾಸ್ಥಾನಮುಂ, ದೀನಾನಾಥ ವ್ಯಂಗ್ಯ ಅಂಧ ಬಧಿರ ಕಥಕ ಗಾಯಕ ವಾದಕ ವಾಂಶಿಕ ನರ್ತಕ ವೈತಾಳಿಕ ನಗ್ನ ಭಗ್ನ ಶ್ರವಣ ಏಕದಂಡಿ ತ್ರಿದಂಡಿ ಹಂಸ ಪರಮಹಂಸಾದಿ ನಾನಾದೇಶ ಭಿಕ್ಷುಕಜನ ನಿವಾರ್ಯ ಅನ್ನದಾನಸ್ಥಾನಮುಂ, ನಾನಾ ಅನಾಥ ರೋಗಿಜನ ಭೈಷಜ್ಯ ಸ್ಥಾನಮುಂ, ಸಕಲಭೂತ ಅಭಯಪ್ರಧಾನ ಸ್ಥಾನಮುಮಾಗಿ ಕೋಡಿಯ ಮಠಮಿರ್ಪುದು' ಎಂದು ವರ್ಣಿಸಿದೆ.

12ನೆಯ ಶತಮಾನದ ಅನಂತರ ವೀರಶೈವಧರ್ಮ ಪ್ರಚಾರಗೊಂಡಂತೆ ಪಾಶುಪತ ಪಂಥ ತನ್ನ ಪ್ರಭಾವವನ್ನು ಕಳೆದುಕೊಂಡಂತೆ ಕಾಣುತ್ತದೆ. ಈ ಎರಡು ಪಂಥಗಳಲ್ಲೂ ಕೆಲವು ಸಾಮ್ಯಗಳೂ ಇದ್ದುದರಿಂದ ಪಾಶುಪತ ಅನುಯಾಯಿಗಳು ವೀರಶೈವದಲ್ಲಿ ಲೀನವಾಗಿರುವ ಸಾಧ್ಯತೆಯೂ ಇದೆ. ಪಾಶುಪತ ಪಂಥಕ್ಕೆ ಸೇರಿದ್ದ ಅನೇಕ ಮಠಗಳು ಕ್ರಮೇಣ ವೀರಶೈವ ಕೇಂದ್ರಗಳಾಗಿ ಬೆಳೆದ ವಿಷಯ ಅನೇಕ ಶಾಸನಗಳು ಮತ್ತು ಇತರ ದಾಖಲೆಗಳಿಂದ ವಿದಿತವಾಗುತ್ತದೆ. ಆದರೂ 13-14ನೆಯ ಶತಮಾನದವರೆಗೂ ಪಾಶುಪತಪಂಥ ಅಲ್ಪಸ್ವಲ್ಪವಾಗಿಯಾದರೂ ಪ್ರತ್ಯೇಕವಾಗಿ ಉಳಿದಿದ್ದಂತೆ ತೋರುತ್ತದೆ. 14ನೆಯ ಶತಮಾನದ ಮೊದಲ ವಿಜಯನಗರ ರಾಜರ ಶಾಸನಗಳಲ್ಲಿ ಕ್ರಿಯಾಶಕ್ತಿ ಎಂಬ ಗುರು ರಾಜಗುರುವಾಗಿ ಉಲ್ಲೇಖಿತವಾಗಿದ್ದಾನೆ.

ಲಾಕುಳಾಗಮ ಶಿವನ ಮುಖದಿಂದ ಹೊರಟ ಧರ್ಮಶಾಸ್ತ್ರ. ಈ ಪಂಥ ವೇದ ಪ್ರಾಮಾಣ್ಯವನ್ನು ಒಪ್ಪುತ್ತದೆ. ಶೈವಾಗಮೋಕ್ತಜ್ಞಾನ, ಕ್ರಿಯಾಚರ್ಯಾ ಮತ್ತು ಯೋಗಪಾದಗಳಲ್ಲಿ ಉಕ್ತವಾದ ಧರ್ಮಾಚರಣ ಈ ಪಂಥದಲ್ಲಿದೆ.

ಈ ಪಂಥದ ರೀತ್ಯಾ ಶಿವ ಪರಮೋಚ್ಚದೇವತೆ. ಬ್ರಹ್ಮಚರ್ಯ ವ್ರತದಿಂದ ನೈಷ್ಠಿಕರಾಗಿದ್ದು, ಭಸ್ಮಲೇಪನ ಲಿಂಗಧಾರಣೆಯಿಂದ ಶುದ್ಧರಾಗಿ ಶಿವತತ್ತ್ವವನ್ನು ಸಾಧಿಸಬೇಕೆಂದು ಈ ಮಾರ್ಗ ಸೂಚಿಸುತ್ತದೆ. ಜೀವ

ಪಶು, ಶಿವ ಪತಿ, ಅಜ್ಞಾನದಿಂದಾದ ಬಂಧನವೇ ಪಾಶ ಎಂದು ಇವರು ಗ್ರಹಿಸಿದ್ದರು. ಸಾತ್ತ್ವಿಕ ಪೂಜೆ ಧ್ಯಾನಾದಿಗಳಿಂದ ಪಶುವೆನಿಸಿದ ಜೀವ ಪತಿಯಾದ ಶಿವನನ್ನು ಆರಾಧಿಸಿ ಪಾಶಮುಕ್ತನಾಗುವುದೇ ಈ ಧರ್ಮದ ಮೂಲ ಉದ್ದೇಶ. ಗುಡಿಗೋಪುರಗಳಲ್ಲಿ ಸ್ಥಾವರಲಿಂಗದ ಪೂಜೆ ಅಂದಿಗೆ ಮಾನ್ಯವಾಗಿದ್ದುದರಿಂದ ಇವರಿಗೆ ದೇಗುಲಗಳು ಪೂಜೆಗೆ ಪವಿತ್ರ ಸ್ಥಾನಗಳೆನಿಸಿದ್ದವು. ಇವರ ಮೇಲೆ ವೈದಿಕಧರ್ಮದ ಪ್ರಭಾವ ಹೆಚ್ಚಾಗಿದ್ದುದರಿಂದ ಇವರು ತಮ್ಮ ಪೂಜೆ ಮತ್ತು ಉಪಾಸನೆಗ ಳಲ್ಲಿ ಬಹುಮಟ್ಟಿಗೆ ವೈದಿಕರ ಹೆದ್ದಾರಿಯನ್ನೇ ಮುಂದುವರಿಸುತ್ತಿದ್ದರೆಂದು ಕಾಣುತ್ತದೆ. ಶಿವ ಪರಮೋಚ್ಚದೇವನಾದರೂ ವಿಷ್ಣು, ಸೂರ್ಯ, ಕೇಶವ, ಶಕ್ತಿ ಮೊದಲಾದ ದೇವರೂ ಪೂಜ್ಯರಾಗಿದ್ದರು. ಪಾಶುಪತ ಪಂಥಕ್ಕೆ ಸೇರಿದ ಅನೇಕ ದೇವಾಲಯಗಳಲ್ಲಿ ಶಿವನ ಜೊತೆಯಲ್ಲಿ ಗಣಪತಿ, ಮಹಿಷಾಸುರಮರ್ದಿನಿ, ಸಪ್ತಮಾತೃಕೆಯರು–ಇವನ್ನು ಪ್ರತಿಷ್ಠೆ ಮಾಡಿರುವುದು ಕಂಡುಬರುತ್ತದೆ. ಅಲ್ಲದೆ ಹಲವು ದೇವಾಲಯಗಳು ತ್ರಿಕೂಟಾಚಲಗಳಾಗಿದ್ದು, ಪ್ರಧಾನ ದೇವತೆ ಲಿಂಗವಾಗಿದ್ದರೆ, ಉಳಿದೆರಡು ಗರ್ಭಗುಡಿಗಳಲ್ಲಿ ಸಾಮಾನ್ಯವಾಗಿ ಸೂರ್ಯ ಮತ್ತು ಕೇಶವರ ವಿಗ್ರಹಗಳು ಕಂಡುಬರುತ್ತವೆ. ಪರಮತತ್ತ್ವವು ಜ್ಞಾನಸ್ವರೂಪಿಯಾಗಿದ್ದು, ಶಿವ–ಶಕ್ತ್ಯಾತ್ಮಕವಾಗಿದ್ದು, ಭೌತಿಕ ಪ್ರಕಟನಾರೂಪಗಳು ಯಾವ ರೀತಿಯದಾದರೂ ತಜ್ಜನ್ಯಗಳೇ ಎಂಬ ತತ್ತ್ವ ಇದರಲ್ಲಿದೆ.

ಕಾಳಾಮುಖ ಬಹುಶಃ ಪಾಶುಪತದ ಒಂದು ಶಾಖೆ. ಇದರ ಪ್ರಸ್ತಾಪ ಕರ್ನಾಟಕದ ಹಲವು ಶಾಸನಗಳಲ್ಲಿದೆ. ದಕ್ಷಿಣ ಭಾರತದ ಹಲವು ಗ್ರಂಥಗಳಲ್ಲಿ ಕಾಳಾಮುಖ ಮತ್ತು ಲಕುಲೀಶ ಪಾಶುಪತದ ಬಗ್ಗೆ ವ್ಯತ್ಯಾಸವನ್ನು ಗಮನಿಸಿಲ್ಲ. ಆದರೆ ಉತ್ತರ ಭಾರತದ ಶಾಸನಗಳಲ್ಲಿ ಪಾಶುಪತದ ಬಗ್ಗೆ ಉಲ್ಲೇಖವಿದ್ದರೂ ಕಾಳಾಮುಖದ ಪ್ರಸ್ತಾಪವಿಲ್ಲದಿರು ವುದನ್ನು ನೋಡಿದರೆ ಕಾಳಾಮುಖ ಬಹುಶಃ ಪಾಶುಪತದ ಒಂದು ಪ್ರಭೇದವಾಗಿ ದಕ್ಷಿಣ ಭಾರತದಲ್ಲಷ್ಟೇ ಪ್ರಚಲಿತವಾಗಿದ್ದಂತೆ ತೋರುತ್ತದೆ. ಇವರಲ್ಲೂ ಶಕ್ತಿಪರ್ಷೆ ಮೊದಲಾದ ಶಾಖೆಗಳ ಹೆಸರಿದ್ದು, ಇದು ಕಾಳಾಮುಖ ಮತ್ತು ಪಾಶುಪತದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲದಿದ್ದುದನ್ನು ಸೂಚಿಸುತ್ತದೆ. ಆದರೆ ಈ ಪ್ರಭೇದದ ಅನುಯಾಯಿಗಳು ಮುಖದ ಮೇಲೆ ಕರಿಯ ಗೆರೆಗಳನ್ನು ಎಳೆದುಕೊಳ್ಳುತ್ತಿದ್ದ ರೂಢಿಯಿದ್ದುದರಿಂದ ಇವರಿಗೆ ಕಾಳಾಮುಖರೆಂಬ ಹೆಸರು ಬಂದಿರಬಹುದು. ಕಾಳಾಮುಖಕ್ಕೆ ಏಕ್ಕೋಟಿ ಸಮಯ ಎಂಬ ಹೆಸರೂ ಇತ್ತು. ಕಾಳಾಮುಖ ಸಮಯವೂ ರಾಜಾಶ್ರಯ ಮತ್ತು ರಾಜಮನ್ನಣೆಯನ್ನು ಪಡೆದ ಧರ್ಮವಾಗಿದ್ದಿತು. ಇವರಿಗೆ ಅನೇಕ ಮಠಮಾನ್ಯಗಳಿದ್ದು ಕಾಳಾಮುಖರ ಗುರುಗಳು ಸಮಾಜದ ಹಿತಕ್ಕಾಗಿ ದುಡಿಯುತ್ತಿದ್ದರೆಂಬುದಕ್ಕೆ ಶಾಸನಗಳ ಆಧಾರಗ ಳುಂಟು. ರಾಜರುಗಳು ಇವರಿಗೆ ಕಾಲಕರ್ಚಿ ದಾನವನ್ನು ಕೊಡುವಷ್ಟರ ಮಟ್ಟಿಗೆ ಇವರು ರಾಜಗೌರವವನ್ನು ಪಡೆದಿದ್ದರು.

ಕಾಳಾಮುಖರ ದಾರ್ಶನಿಕ ಸಿದ್ಧಾಂತವನ್ನು ಪ್ರತ್ಯೇಕವಾಗಿ ವಿವರಿಸುವ ಯಾವುದೇ ಒಂದು ಮೂಲಗ್ರಂಥವೂ ದೊರೆತಿಲ್ಲ. ಬಹುಮಟ್ಟಿಗೆ ಇವರು ಪಾಶುಪತ ಶೈವ ಸಿದ್ಧಾಂತದ ಎಲ್ಲ ಅಂಶಗಳನ್ನೂ ಒಪ್ಪಿ ಆಚರಿಸುತ್ತಿದ್ದ ರೆಂದು ತಿಳಿಯುತ್ತದೆ.

(ಎಂ.ಜಿ.ಎನ್.;ಎ.ಎಲ್.ಎಸ್.)

**ಪಾಶ್ಚಾತ್ಯ ಸಂಗೀತ:** ಕರ್ನಾಟಕ ಸಂಗೀತ ಸುಸ್ವರದಿಂದ ಕೂಡಿದ 'ರಾಗ ಸಂಗೀತ' ವಾದರೆ ಪಾಶ್ಚಾತ್ಯ ಸಂಗೀತ ಸ್ವರಮೇಳ ಪದ್ಧತಿಯ ಆಧಾರದಲ್ಲಿದ್ದು ಇದನ್ನು 'ಸ್ವರಸಾಮ್ಯ ಸಂಗೀತ' ಎನ್ನಬಹುದು. ಅಂದರೆ ಏಕಕಾಲದಲ್ಲಿ ಮೂರು ಅಥವಾ ಐದು ಸ್ವರಗಳು ಬರುತ್ತವೆ. ಇದನ್ನು ಕಾರ್ಡ್ ಎನ್ನಲಾಗುವುದು. ಇಂತಹ ಕಾರ್ಡ್‌ಗಳನ್ನು ಮೇಳೈಸು ವುದೇ ಪಾಶ್ಚಾತ್ಯ ಸಂಗೀತ ಪದ್ಧತಿಯ ಲಕ್ಷಣ. ಕರ್ನಾಟಕದಲ್ಲಿ ಪಾಶ್ಚಾತ್ಯ ಸಂಗೀತದ ಪ್ರಚಾರ ಬ್ರಿಟಿಷ್ ಆಡಳಿತದೊಂದಿಗೆ ಪ್ರಾರಂಭವಾಯಿತು. ಅದರಲ್ಲಿಯೂ ಬ್ರಿಟಿಷರಿಗೆ ಮೈಸೂರು ಸಂಸ್ಥಾನದ ಮೇಲೆ ಪ್ರಭುತ್ವ ಬಂದು, ಅವರು ತಮ್ಮ ಸಾಂಸ್ಕೃತಿಕ ಪ್ರಭಾವವನ್ನು ಇಲ್ಲಿ ಬೀರತೊಡಗಿದ ಮೇಲೆ ಎನ್ನಬಹುದು. ಅಂದರೆ ಅದು ಕರ್ನಾಟಕದ ನೆಲದಲ್ಲಿ ಕಾಲಿಟ್ಟದ್ದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ನಮ್ಮಜನ ಮಿಲಿಟರಿ ಬ್ಯಾಂಡ್ ಎಂದು ಹೆಸರಿಸಿದ್ದ ಪಾಶ್ಚಿಮಾತ್ಯ ವಾದ್ಯಮೇಳದಿಂದ ಅದರ ಅಂಕುರಾರ್ಪಣವಾಯಿತು. ಇದರ ಜೊತೆಗೆ ಕ್ರಮೇಣ ಅವರ ಚರ್ಚು ಸಂಗೀತ ಇಲ್ಲಿನವರ ಮೇಲೆ ಪ್ರಭಾವ ಬೀರತೊಡಗಿತು. ಅವರ ಭಾಷೆಯ ಚರ್ಚು ಹಾಡುಗಳನ್ನು ಪ್ರಾದೇಶಿಕ ಭಾಷೆಯ ಹಾಡುಗಳಾಗಿ ಪರಿವರ್ತಿಸಿ ಅವರ ಸಂಗೀತ ಪದ್ಧತಿಯಲ್ಲಿ ಹಾಡತೊಡಗಿದುದರಿಂದ ಭಾಷೆ ಆಕರ್ಷಣೆಗೆ ಮುಖ್ಯ ಕಾರಣವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಇದರ ಪ್ರಭಾವ ಕೇವಲ ಒಮ್ಮುಖವಾಗಿತ್ತು. ನುಡಿಸುತ್ತಿದ್ದವರು ಅವರು, ಕೇಳುತ್ತಿದ್ದವರು ನಾವು. ಆದ್ದರಿಂದ ಅದರ ಪ್ರಭಾವ ಸೀಮಿತವಾಗಿತ್ತು.

ಆದರೆ ಚಾಮರಾಜ ಒಡೆಯರ ಕಾಲದಲ್ಲಿ ಪಾಶ್ಚಾತ್ಯ ಸಂಗೀತದ ಪ್ರಭಾವ ಸಾಕಷ್ಟು ಹೆಚ್ಚಾಯಿತು. ಅದನ್ನು ಕಲಿಯಬೇಕೆಂಬ ಅಪೇಕ್ಷೆ ಸಹ ಸಹಜವಾಗಿ ಉಂಟಾಯಿತು. ಚಾಮರಾಜ ಒಡೆಯರ ಕಾಲದಲ್ಲಿ ಡಫ್ರಿಸ್ ಮತ್ತು ಒಟೋ ಸ್ಮಿತ್ ಎಂಬ ಪಾಶ್ಚಾತ್ಯ ಸಂಗೀತ ಪರಿಣತರು ಮೈಸೂರಿಗೆ ಬಂದರು. ಸ್ವತಃ ಚಾಮರಾಜ ಒಡೆಯರೇ ಪಾಶ್ಚಾತ್ಯ ಪದ್ಧತಿಯಲ್ಲಿ ಪಿಟೀಲನ್ನು ನುಡಿಸುವುದರಲ್ಲಿ ಪರಿಣತಿಯನ್ನು ಪಡೆದರು. ಇದು ಉಳಿದ ಕೆಲವು ವಿದ್ವಾಂಸರಲ್ಲಿಯೂ ಕಲಿಯಲು ಪ್ರೇರಣೆ ಇತ್ತಿತು. ಚಾಮರಾಜ ಒಡೆಯರಿಗೆ ಸ್ವಯಂ ವೀಣೆ ಶೇಷಣ್ಣನವರೇ ಕರ್ನಾಟಕ ಸಂಗೀತದ ಶಿಕ್ಷಣವಿತ್ತಿದ್ದರು. ಕರ್ನಾಟಕ ಸಂಗೀತ ಪಾಶ್ಚಾತ್ಯ ಸಂಗೀತಗಳ ಪರಿಶ್ರಮ ಪಡೆದಿದ್ದ ಚಾಮರಾಜ ಒಡೆಯರು ಅರಮನೆಯಲ್ಲಿಯೂ ಎರಡೂ ಪದ್ಧತಿಯ ವಾದ್ಯಮೇಳಗಳನ್ನು ಸ್ಥಾಪಿಸಿದರು. ಆ ಕಾಲದಲ್ಲಿಯೇ ಮೈಸೂರು ಒಡೆಯರ ರಾಜಗೀತೆ 'ಕಾಯೌ ಶ್ರೀಗೌರಿ ಕರುಣಾ ಲಹರೀ' ಪಾಶ್ಚಿಮಾತ್ಯ ಸಂಗೀತದ ಮೇಜರ್ ಸ್ಕೇಲ್‌ನಲ್ಲಿ ರಚನೆಯಾದುದು. ಈ ರಾಜಗೀತೆಯನ್ನು ಅರಮನೆಯ ಸಾಹಿತ್ಯ, ಸಂಗೀತ ವಿದ್ವಾಂಸರು ಒಟ್ಟಿಗೆ ಸೇರಿ ರಚಿಸಿದರೂ ಈ ಗೀತೆಯ ಜೊತೆಗೆ ಇನ್ನೂ ಕೆಲವು ಕೃತಿಗಳನ್ನು ಪಾಶ್ಚಾತ್ಯ ಸಂಗೀತಕ್ಕೆ ವಿದ್ವಾಂಸರು ಅಳವಡಿಸಿದರು. ಕರಿಬಸವಶಾಸ್ತ್ರೀ, ವೀಣೆ ಶೇಷಣ್ಣ, ವೀಣೆ ಶಾಮಣ್ಣ, ಭಕ್ಷಿ ಸುಬ್ಬಣ್ಣ, ಹಾಡುಗಾರರಾದ ಚಿಕ್ಕಸುಬ್ಬರಾಯರು ಮೊದಲಾದ ವಿದ್ವಾಂಸರು ಈ ಕೆಲಸ ಮಾಡಿದರು.

ಪಾಶ್ಚಾತ್ಯ ಸಂಗೀತ ನಿಜವಾಗಿ ವ್ಯಾಪಕವಾದ ರೀತಿಯಲ್ಲಿ ಬೇರೂರಿದ್ದುದು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ಅವರು ಸಿಂಹಾಸನಕ್ಕೆ ಬರುವಷ್ಟ ರಲ್ಲಿಯೇ ಕರ್ನಾಟಕ ಹಾಗೂ ಪಾಶ್ಚಾತ್ಯ ಸಂಗೀತಗಳಲ್ಲಿ ಒಳ್ಳೆಯ ಪ್ರಭುತ್ವ ಸಂಪಾದಿಸಿದ್ದರು. ಇವೆರಡರ ಜೊತೆಗೆ ಅವರು ಹಿಂದುಸ್ಥಾನೀ ಸಂಗೀತದಲ್ಲಿ ಸಹ ಅಪಾರವಾದ ತಿಳಿವಳಿಕೆ ಹೊಂದಿದ್ದರು. ಅವರು ಓಲಗ, ಕೊಳಲು, ವೀಣೆ, ಸಿತಾರ್, ಪಿಟೀಲು ಮತ್ತು ಪಿಯಾನೋ ವಾದ್ಯಗಳ ನುಡಿಸಾಣಿಕೆಯಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರು. ಅವರ ಕಾಲದಲ್ಲಿ ಪಾಶ್ಚಾತ್ಯ ಸಂಗೀತಕ್ಕೆ ವ್ಯಾಪಕತೆ ಹೆಚ್ಚಿತು. ತಮ್ಮ ಆಸ್ಥಾನ ವಿದ್ವಾಂಸರು ಪಾಶ್ಚಾತ್ಯ ಸಂಗೀತದಲ್ಲಿ ಸಹ ಪರಿಣತಿ ಪಡೆಯಲೆಂದು ಅವರಿಗೆ ದಕ್ಷ ಶಿಕ್ಷಕರನ್ನು ನೇಮಿಸಿದರು. ವೀಣೆ ವೆಂಕಟಗಿರಿಯಪ್ಪನವರೇ ಮೊದಲಾದ ವಿದ್ವಾಂಸರಿಗೆ ಶಿಕ್ಷಣ ದೊರೆಯಿತು. ಅವರುಗಳು ಪಾಶ್ಚಾತ್ಯ ಸಂಗೀತ ಪದ್ಧತಿಯಲ್ಲಿ ಸ್ವರಪ್ರಸ್ತಾರ ಹಾಕುವುದರಲ್ಲಿ ಸಿದ್ಧಿಯನ್ನು ಪಡೆದರು.

ಅರಮನೆಯ ವಾದ್ಯಮೇಳಗಳಿಗೆ ವೆಂಕಟಗಿರಿಯಪ್ಪನವರೇ ಮಾರ್ಗದರ್ಶಕರಾದರು. ಆ ಕಾಲದಲ್ಲಿ ನಮ್ಮ ಅನೇಕ ಕೃತಿಗಳಿಗೆ ಪಾಶ್ಚಾತ್ಯ ಪದ್ಧತಿಯಲ್ಲಿ ಪ್ರಸ್ತಾರವನ್ನೂ ಪಾಶ್ಚಾತ್ಯ ಸಂಗೀತಕ್ಕೆ ಕರ್ನಾಟಕ ಸಂಗೀತದ ಸ್ವರಪ್ರಸ್ತಾರ ಪದ್ಧತಿಯನ್ನೂ ಅಳವಡಿಸುವ ಮಹತ್ತ್ವದ ಕಾರ್ಯ ಆಯಿತು. ಜೊತೆಗೆ ಒಂದು ಬಗೆಯ ಮೇಳಸಾಧನ ಪ್ರಯೋಗವನ್ನು ಸಹ ಮಾಡಲಾಯಿತು. ಒಮ್ಮೆ ನಾಲ್ವಡಿ ಕೃಷ್ಣರಾಜ ಒಡೆಯರು ಪಾಶ್ಚಾತ್ಯ ಸಂಗೀತಕ್ಕೆ ಹೊಂದುವಂತೆ ಕರ್ನಾಟಕ ರಾಗ ಸಂಯೋಜನೆ ಮಾಡುವಂತೆ ನಮ್ಮ ವಿದ್ವಾಂಸರಿಗೆ ಹೇಳಿದರು. ವೀಣೆ ಶೇಷಣ್ಣನವರು ಆ ಕೆಲಸವನ್ನು ಯಶಸ್ವಿಯಾಗಿ ಮಾಡಿದರು. ಕಮಾಚ್, ಕೇದಾರ, ಕಾಪಿ, ಬೇಹಾಗ್, ಕಾಂಭೋಜಿ, ಜಂಝೂಟಿ, ಶಂಕರಾಭರಣ ಮೊದಲಾದ ರಾಗಗಳು ತಮ್ಮ ಮೂಲ ಭಾವಗಳನ್ನು ಕಳೆದುಕೊಳ್ಳದೆ ಪಾಶ್ಚಾತ್ಯ ಸಂಗೀತಕ್ಕೆ ಹೊಂದುವಂತೆ ಅವರು ರಚನೆ ಮಾಡಿದರು. ಅವರ ರಚನೆಗಳಿಗೆ ಪಾಶ್ಚಾತ್ಯ ವಿದ್ವಾಂಸರ ಮೆಚ್ಚುಗೆಯೂ ದೊರಕಿತು.

ಅನಂತರ ಪಟ್ಟಕ್ಕೆ ಬಂದ ಜಯಚಾಮರಾಜ ಒಡೆಯರು ಸಹ ಪಾಶ್ಚಾತ್ಯ ಸಂಗೀತದಲ್ಲಿಯೂ ವಿಶೇಷ ಪರಿಣತಿಯನ್ನು ಪಡೆದರು. ಲಂಡನ್‌ನ ರಾಯಲ್ ಇನ್‌ಸ್ಟಿಟ್ಯೂಟ್ ನಡೆಸುವ ಸಂಗೀತ ಪರೀಕ್ಷೆಗಳಲ್ಲಿಯೂ ಒಡೆಯರು ತೇರ್ಗಡೆಯಾಗಿದ್ದರೆಂದಮೇಲೆ ಅವರ ಸಂಗೀತ ಪ್ರೌಢಿಮೆಯ ಮಟ್ಟ ಎಷ್ಟೆಂದು ತಿಳಿಯುತ್ತದೆ. ಒಡೆಯರವರ ಸಹೋದರಿ ವಿಜಯಮ್ಮಣ್ಣಿ ಅವರು ಪಿಯಾನೋ ನುಡಿ ಸಿದ್ಧಹಸ್ತರೆನಿಸಿದ್ದರು.

ಪಾಶ್ಚಾತ್ಯ ಸಂಗೀತದ ಔತಣ ಪ್ರತಿವಾರದಲ್ಲಿ ಒಂದು ದಿವಸ ಮೈಸೂರಿನ ಕರ್ಜನ್ ಪಾರ್ಕಿನಲ್ಲೂ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲೂ ನಡೆಯುತ್ತಿತ್ತು. ಬಹಳ ಜನ ಅದನ್ನು ಕೇಳುತ್ತಿದ್ದರು. ಫಿಲೋಮಿನಾ ತಂಬೂಚೆಟ್ಟಿ ಅವರು ಪಾಶ್ಚಾತ್ಯ ಪದ್ಧತಿಯಲ್ಲಿ ಪಿಟೀಲು ವಾದನದಲ್ಲಿ ಪ್ರಾವೀಣ್ಯ ಪಡೆದು ಖ್ಯಾತಿ ಪಡೆದರು. ಹಾಗೆಯೇ ನರಸಿಂಗರಾವ್ ಅವರು ಪಿಯಾನೋವನ್ನೂ ಸುಂದರರಾವ್ ಅವರು ಪಿಟೀಲನ್ನೂ ಚಿಕ್ಕರಾಮರಾಯರು ಜಲತರಂಗವನ್ನೂ ಪಾಶ್ಚಾತ್ಯ ಸಂಗೀತ ಪದ್ಧತಿಯಲ್ಲಿ ನುಡಿಸಿ ಹೆಸರು ಗಳಿಸಿದ್ದರು. ಇವರುಗಳಲ್ಲದೆ ವೀಣೆ ಶಿವರಾಮಯ್ಯ, ಆರ್.ಎಸ್.ಕೇಶವಮೂರ್ತಿ, ಸ್ವರಮೂರ್ತಿ ವಿ.ಎಸ್.ರಾವ್, ವೀಣೆ ದೊರೆಸ್ವಾಮಿ ಅಯ್ಯಂಗಾರ್, ತಿಟ್ಟೆಕೃಷ್ಣಯ್ಯಂಗಾರ್, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಶಿವರುದ್ರಪ್ಪ, ವೀಣೆ ಲಕ್ಷ್ಮಿನಾರಾಯಣಪ್ಪ, ಶಿವಪ್ಪ, ವೆಂಕಟೇಶ ದೇವರು, ಹಂಡೆ ದಾಸಪ್ಪ, ಶೀನಪ್ಪ ಮೊದಲಾದವರೆಲ್ಲ ಪಾಶ್ಚಾತ್ಯ ವಾದ್ಯಮೇಳಗಳಲ್ಲಿ ಸಹ ಭಾಗವಹಿಸುತ್ತಿದ್ದರು; ಪಾಶ್ಚಾತ್ಯ ಸಂಗೀತವನ್ನು ಬಲ್ಲವರೂ ಆಗಿದ್ದರು. ಹೀಗೆ ಆಂಗ್ಲರು ತಂದ ಈ ಸಂಗೀತ ಮೈಸೂರು ಅರಸುಮನೆತನದವರ ಪ್ರೋತ್ಸಾಹದಿಂದ ಕರ್ನಾಟಕದಲ್ಲಿ ನೆಲೆನಿಂತಿತು.

ಈಚಿನ ನಮ್ಮ ಕನ್ನಡ ಚಿತ್ರಸಂಗೀತ ಪಾಶ್ಚಾತ್ಯ ಸಂಗೀತದಿಂದ ಬೇಕಾದಷ್ಟು ಎರವಲು ಪಡೆದಿದೆ. ಅದರಲ್ಲೂ ಪಾಶ್ಚಾತ್ಯ ಸಂಗೀತ ವಾದ್ಯಗಳಾದ ಸ್ಯಾಕ್ಸೋಫೋನ್, ಟ್ರಂಪೆಟ್, ಅಕಾರ್ಡಿಯನ್, ಗಿಟಾರ್, ಮ್ಯಾಂಡಲಿನ್, ಬ್ಯೂಬೊಫೋನ್, ವೈಬ್ರೋಟೋನ್, ಷೆಲ್ಲೋ, ಡಬ್ಬಲ್ ಬೇಸ್, ಟಿಂಪೊನಿ, ಪಿಯಾನೋ, ಕ್ಲಿಯೋವಯೊಲಿನ್, ಕೆಟಲ್ ಡ್ರಮ್, ಮೊರಾತೋ ಮೊದಲಾದ ವಾದ್ಯಗಳೆಲ್ಲ ಚಿತ್ರಸಂಗೀತಕ್ಕೆ ಅತ್ಯಂತ ಅವಶ್ಯವಾಗಿವೆ. ಪಾಶ್ಚಾತ್ಯ ಸಂಗೀತ ಕಲಿತ ವಾದ್ಯಗಾರರಿಗೆ ಟಾಪ್ ವಯೊಲಿನ್ ವಾದ್ಯಗಾರರಿಗೆ ಅವರ ಪದ್ಧತಿಯಲ್ಲೇ ಸ್ವರಪ್ರಸ್ತಾರವನ್ನು ಕೊಡಲಾಗುತ್ತದೆ. ಅಲ್ಲದೆ ಆಂಗ್ಲೋ ಇಂಡಿಯನ್ ಸಮಾಜದಲ್ಲಿ, ಚರ್ಚುಗಳಲ್ಲಿ, ಕೆಲವು ಹೊಟೇಲ್‌ಗಳಲ್ಲಿ ಪಾಶ್ಚಾತ್ಯ ಸಂಗೀತ ಪದ್ಧತಿ ಸಾಕಷ್ಟು ಗಾಢವಾಗಿ ಉಳಿದುಕೊಂಡಿರುವುದಲ್ಲದೆ ಅಲ್ಲಿನ ಹೊಸ ಪ್ರಯೋಗಗಳು ಮತ್ತು ರೂಪಾಂತರಗಳು ಸಹ ಪ್ರಚಲಿತವಾಗುತ್ತಿವೆ. ಆದರೆ ಪಾಶ್ಚಾತ್ಯಸಂಗೀತ ಈಗಿನ ಮಟ್ಟಿಗೆ ಪಟ್ಟಣಗಳಿಗೆ ಸೀಮಿತವಾಗಿದೆ ಎನ್ನಬಹುದು. ಅಪರೂಪವಾಗಿ ಈ ಸಂಗೀತ ಪ್ರಕಾರದ ಉಪಯೋಗ ವೃತ್ತಿಯ ಮಟ್ಟದವರೆಗೆ ಏರಿದೆ. ಶ್ರೀಯುತ ಸ್ವಾಮಿ ಅವರ ಮಕ್ಕಳು ಉಷಾ ಉತ್ತಪ್ ಮತ್ತು ಮಾಯಾ ಪಾಶ್ಚಾತ್ಯ ಸಂಗೀತದ ಬಾಯಿಹಾಡಿಕೆಯಲ್ಲಿ (ಪಾಪ್‌ಸಾಂಗ್) ಸುಪ್ರಸಿದ್ಧರಾಗಿದ್ದಾರೆಂಬುದನ್ನೂ ಅವರು ಕನ್ನಡಿಗರೆಂಬುದನ್ನೂ ಇಲ್ಲಿ ನೆನೆಯಬಹುದು. **(ಸಿ.ಕೆ.ಎನ್.)**

**ಪಾಳೆಯಗಾರರು:** ಕರ್ನಾಟಕದಲ್ಲಿ (ಹಾಗೂ ದಕ್ಷಿಣ ಭಾರತದ ಇತರೆಡೆಗಳಲ್ಲಿ) ಸಂಭವಿಸಿದ ಕೆಲವು ಚಾರಿತ್ರಿಕ ಆಗುಹೋಗುಗಳಿಂದ ಚಿಕ್ಕ ಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರಿಗೆ ಪಾಳೆಯಗಾರರು ಎಂಬ ಹೆಸರು ರೂಢಿಗತವಾಗಿದೆ. ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾ ವಿಭಾಗ, ಶಿಬಿರ, ಠಾಣ್ಯ ಎಂಬ ಅರ್ಥವನ್ನು ಸೂಚಿಸುತ್ತದೆ. ಅದರ ಮುಖ್ಯಸ್ಥರೇ ಪಾಳೆಯಗಾರರು. ಕರ್ನಾಟಕದಲ್ಲಿ ಸು.13ನೆಯ ಶತಮಾನದ ಅಂತ್ಯದವರೆಗೂ ಕೆಲವು ಮನೆತನದವರು ಕೆಲವು ಪ್ರದೇಶಗಳ ಮೇಲೆ ವಂಶಪಾರಂಪರ್ಯವಾಗಿ ಸಾಮ್ರಾಟರ ಸಾಮಂತರಾಗಿ, ತಮ್ಮ ಪ್ರದೇಶದ ಆಂತರಿಕ ಆಡಳಿತಕ್ಕೆ ಸಂಬಂಧಿಸಿದಂತೆ ಬಹುತೇಕ ಸ್ವತಂತ್ರರಾಗಿ, ಆಡಳಿತ ನಡೆಸುತ್ತಿದ್ದರು. ಆದರೆ 14ನೆಯ ಶತಮಾನದ ಆದಿ ಭಾಗದಲ್ಲಿ ನಡೆದ ಇಸ್ಲಾಮೀ ಅರಸರ ದಾಳಿಗಳಿಂದ ಇಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ಆರಂಭವಾಯಿತು. ಹೊಯ್ಸಳ 3ನೆಯ ಬಲ್ಲಾಳನ ಕಾಲದ ಹೊತ್ತಿಗೆ ಸ್ಥಳೀಯ ಸಾಮಂತ ಮನೆತನಗಳ ಪಾರಂಪರ್ಯ ಸಂಸ್ಥಾನಗಳು ಮರೆಯಾಗುತ್ತ ಬಂದುವು. ಅದರ ಬದಲು ರಾಜನೇ ನೇರವಾಗಿ ಕೆಲವು ದಂಡನಾಯಕರಿಗೆ ಕೆಲವು ಪ್ರದೇಶಗಳನ್ನು ಆಳುವ ಅಧಿಕಾರ ವಹಿಸಿಕೊಡುವ ರೂಢಿ ಬೆಳೆಯಿತು. ಈ ಅಧಿಕಾರಿಗಳು ರಾಜನಿಂದ ದೊರಕಿದ ಪ್ರದೇಶಗಳ ಆದಾಯಗಳನ್ನು ಅನುಭವಿಸಿಕೊಂಡು ಉತ್ತಮವಾದ ಸೈನ್ಯವನ್ನು ಸಜ್ಜಾಗಿ ಇರಿಸಿಕೊಂಡು ರಾಜನಿಗೆ ಆವಶ್ಯಕತೆ ಬಂದಾಗ ಸೈನ್ಯ ಸಹಾಯವನ್ನು ಒದಗಿಸಬೇಕಾಗುತ್ತಿತ್ತು. ಈ ವ್ಯವಸ್ಥೆಯೇ ಮುಂದಿನ ಕಾಲದಲ್ಲೂ ಮುಂದುವರಿದು ಪಾಳೆಯಪಟ್ಟಗಳ ಸ್ಥಾಪನೆಯಾಯಿತು.

*

15-16ನೆಯ ಶತಮಾನಗಳಲ್ಲಿ ವಿಜಯನಗರ ಅರಸರು ಅನೇಕ ಪಾಳೆಯಗಾರರಿಗೆ ಚಿಕ್ಕಪುಟ್ಟ ನಾಡುಗಳನ್ನು ಕೊಟ್ಟು, ಅವರು ಕಾಲಕಾಲಕ್ಕೆ ನಿಗದಿಯಾದ ಪೊಗದಿ ಸಲ್ಲಿಸುತ್ತ ಬರಬೇಕೆಂದೂ ಅವಶ್ಯವಾದಾಗ ಸೈನ್ಯಸಹಾಯ ನೀಡಬೇಕೆಂದೂ ವಿಧಿಸಿದರು. ಈ ನಾಡುಗಳನ್ನು ಮಾಗಣೆಗಳೆಂದೂ ಕರೆಯಲಾಗುತ್ತಿತ್ತು. ಪಾಳೆಯಗಾರರು ಬಹುಮಟ್ಟಿಗೆ ಸ್ಥಳೀಯ ಜನರೇ ಆಗಿದ್ದು ತಮ್ಮ ಪ್ರದೇಶದ ನಾಯಕರಾಗಿರುತ್ತಿದ್ದರು. ನಾಯಕ, ಗೌಡ-ಈ ರೀತಿಯ ಅಧಿಕಾರ ನಾಮಗಳನ್ನು ಉಪಯೋಗಿಸುತ್ತಿದ್ದರು. ತಾವು ಅನುಭವಿಸುತ್ತಿದ್ದ ನಾಡಿನ ಮೇಲೆ ಸಂಪೂರ್ಣ ಹತೋಟಿ ಹೊಂದಿರುತ್ತಿದ್ದು, ಅದರ ಅಭಿವೃದ್ಧಿಗೂ ಶ್ರಮಿಸುತ್ತಿದ್ದರು. ಅಪರೂಪವಾಗಿ ಸ್ವತಂತ್ರರಾಗುವ ಸಂಭವ ಒದಗಿದಾಗ ಇವರು ರಾಜ ಎಂದು ಕರೆದುಕೊಂಡುದೂ ಉಂಟು.

ತಾಳೀಕೋಟೆಯ ದುರಂತದ ತರುವಾಯ ಈ ಸಾಮಂತ ಪಾಳೆಯಗಾರರಿಗೆ ಸ್ವತಂತ್ರರಾಗಲು ಅಲ್ಲಲ್ಲಿ ಅವಕಾಶ ಸಿಕ್ಕಿದರೂ ಹೆಚ್ಚಿನ ಪಾಳೆಯಪಟ್ಟುಗಳು ಅನಂತರದ ವಿಜಯನಗರದ ಅರಸರಿಗೆ ನಾಮಮಾತ್ರವಾಗಿಯಾದರೂ ಅಧೀನತ್ವವನ್ನು ಒಪ್ಪಿಕೊಳ್ಳುತ್ತಿದ್ದುವು. ಆದರೆ 17ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಅರವೀಡು ವಂಶದ ಪತನವಾದ ಮೇಲೆ, ಹೆಚ್ಚುಕಡಿಮೆ ಎಲ್ಲ ಪಾಳೆಯಗಾರರೂ ಸ್ವತಂತ್ರರಾದರು. **(ಎಂ.ಕೆ.ಬಿ)**

ಕರ್ನಾಟಕದ ಭಾಗದಲ್ಲಿ ಈ ರೀತಿ ತಲೆ ಎತ್ತಿದ ಸುಮಾರು 60ಕ್ಕೂ ಹೆಚ್ಚು ಪಾಳೆಯಪಟ್ಟುಗಳು ಇದ್ದುವು. ಆದರೆ ಕಾಲಕಾಲಕ್ಕೆ ಈ ಪಾಳೆಯ ಪಟ್ಟುಗಳ ಪರಸ್ಪರ ಕಚ್ಚಾಟ, ಅಧಿಕಾರ ವಿಸ್ತರಣಾಕಾಂಕ್ಷೆ ಮೊದಲಾದ ಕಾರಣಗಳಿಂದ ಈ ಸಂಖ್ಯೆ ಏರುವುದೂ ಕುಗ್ಗುವುದೂ ಸಾಮಾನ್ಯವಾಗಿತ್ತು. ಇವುಗಳಲ್ಲಿ ಮೂಲತಃ ಪಾಳೆಯಪಟ್ಟುಗಳಾಗಿದ್ದ ಕೆಳದಿ ಮತ್ತು ಮೈಸೂರು ರಾಜತ್ವದೆಡೆಗೆ ಜಿಗಿದುವು. ಈ ಕಾರಣದಿಂದ 18ನೆಯ ಶತಮಾನದ ಆದಿಭಾಗದ ಹೊತ್ತಿಗೆ ಅನೇಕ ಪಾಳೆಯಪಟ್ಟುಗಳು ಶಿಥಿಲವಾದುವು. ಮುಂದೆ ಹೈದರ್ ಮತ್ತು ಟಿಪ್ಪುಸುಲ್ತಾನ್ ಮೈಸೂರು ರಾಜ್ಯದ ವಿಸ್ತಾರವನ್ನು ಸಾಧಿಸಿ ಸುಮಾರು ಎಲ್ಲ ಪಾಳೆಯಪಟ್ಟುಗಳನ್ನೂ ಕೊನೆಗಾಣಿಸಿದರು. ಟಿಪ್ಪು ಮತ್ತು ಬ್ರಿಟಿಷರ ಯುದ್ಧದ ಕಾಲದಲ್ಲಿ ಮತ್ತು ಸ್ವಲ್ಪ ಅನಂತರ ಕೆಲವು ಪಾಳೆಯಗಾರರು ಮತ್ತೆ ತಲೆ ಎತ್ತಲು ಪ್ರಯತ್ನಿಸಿದರೂ ಅದು ಸಫಲವಾಗಲಿಲ್ಲ (ಈ ಸಂಪುಟದಲ್ಲಿ ಮುಖ್ಯವಾದ ಪಾಳೆಯಗಾರ ವಂಶಗಳ ಬಗ್ಗೆ ಪ್ರತ್ಯೇಕ ಲೇಖನಗಳಿವೆ. ಕೆಲವು ಚಿಕ್ಕಪುಟ್ಟ ಪಾಳೆಯಪಟ್ಟುಗಳ ಬಗ್ಗೆ ಆಯಾ ಸ್ಥಳಗಳ ಶೀರ್ಷಿಕೆಗಳಲ್ಲೇ ವಿವರಗಳನ್ನು ಒದಗಿಸಲಾಗಿದೆ).

*

**ಪಾಳ್ಯ:** ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಒಂದು ಗ್ರಾಮ; ಹೋಬಳಿ ಕೇಂದ್ರ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಆಲೂರಿಗೆ ಸುಮಾರು 8 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,426. ಇಲ್ಲಿ ಲಕ್ಷ್ಮೀಜನಾರ್ಧನ, ರಾಮೇಶ್ವರ, ತ್ರಿಪುರಾಂತಕೇಶ್ವರ ಎಂಬ ದೇವಾಲಯಗ ಳಿವೆ, ಲಕ್ಷ್ಮೀಜನಾರ್ಧನ ದೇವಾಲಯದ ಮೂಲ ಕಟ್ಟಡ 14ನೆಯ ಶತಮಾನದ ಮೊದಲ ಭಾಗದಲ್ಲಿ ರಚನೆಗೊಂಡಂತೆ ತೋರುತ್ತದೆ. ದೇವಾಲಯದ ಪ್ರಾಕಾರ ಹಾಗೂ ಪ್ರಾಕಾರದೊಳಗಿರುವ ಚಿಕ್ಕ ಗುಡಿಗಳನ್ನು ಪಾಳೆಯಗಾರರ ಕಾಲದಲ್ಲಿ ಕಟ್ಟಿರಬೇಕು. ದೇವಾಲಯದಲ್ಲಿರುವ ಮೂಲವಿಗ್ರಹದ ರಚನೆ ಹಾಗೂ ವಿನ್ಯಾಸ ಕುತೂಹಲಕಾರಿಯಾಗಿದ್ದು 11ನೆಯ ಶತಮಾನದ ಶಿಲ್ಪ ಶೈಲಿಯದೆಂಬಂತೆ ಕಂಡುಬರುತ್ತದೆ. ರಾಮೇಶ್ವರ ದೇವಾಲದಯ ಕಟ್ಟಡ 19ನೆಯ ಶತಮಾನದ ರಚನೆಯಾಗಿರು ವಂತೆ ತೋರುತ್ತಿದ್ದು ರಾಮೇಶ್ವರ ಲಿಂಗ ಬಹುಶಃ ಅದಕ್ಕೂ ಹಿಂದಿನ ಕಾಲದ್ದಿರಬೇಕು. ತ್ರಿಪುರಾಂತಕೇಶ್ವರ ದೇವಾಲಯ ಈಗಿನ ಕಾಲದ ನಾಡುಹೆಂಚಿನ ಮೇಲ್ಛಾವಣಿಯನ್ನೊಳಗೊಂಡ ಗೃಹದಂತಿದ್ದು ಅದರಲ್ಲಿ ರುವ ಕಲಾಕೃತಿಗಳು 17ನೆಯ ಶತಮಾನದವಿರಬೇಕೆಂದು ತೋರುತ್ತದೆ. ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ವಾಸ್ತುಶಿಲ್ಪದ ಕೆಲವು ಅವಶೇಷಗಳು ಕಂಡುಬಂದಿವೆ. ಇಲ್ಲಿ ಜೈನಬಸದಿಯೊಂದಿದ್ದು ಅದು ವಿಜಯನಗರ ಕಾಲಕ್ಕಿಂತ ಹಿಂದಿನ ರಚನೆಯಾಗಿರುವಂತೆ ಕಂಡುಬರುತ್ತದೆ. ಗ್ರಾಮದ ಸನಿಹದಲ್ಲಿ ಎರಡು ಕಿರುಹಳ್ಳಗಳು ಹರಿಯುತ್ತವೆ. ಅವುಗಳನ್ನು ಸ್ಥಳೀಯರು ಶಂಖತೀರ್ಥ, ಚಕ್ರತೀರ್ಥ ಎಂದು ಕರೆಯುತ್ತಾರೆ. ಇವೆರಡೂ ಕೂಡಿ ಹರಿಯುವ ಸಣ್ಣ ತೊರೆಯನ್ನು ಪದ್ಮಾವತಿ ಹೊಳೆ ಎನ್ನುವರು. ಮಹಾರಾಜನದುರ್ಗದಿಂದ ಈ ಪ್ರದೇಶವನ್ನು ಆಳುತ್ತಿದ್ದ ಪಾಳೆಯಗಾರ ನೊಬ್ಬ ಈ ಗ್ರಾಮದಲ್ಲಿ ಖಜಾನೆಯೊಂದನ್ನು ಮಾಡಿಕೊಂಡಿದ್ದು ಇಲ್ಲಿ ಕೋಟೆ ಗೋಡೆಯನ್ನು ಕಟ್ಟಿಸಿದಂತೆ ತಿಳಿಯುತ್ತದೆ. ಈ ಊರಿನಲ್ಲಿ ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಲಕ್ಷ್ಮೀಜನಾರ್ಧನಸ್ವಾಮಿಯ ಜಾತ್ರೆ ನಡೆಯುತ್ತದೆ.

*

**ಪಿಕ್ಲಿಹಾಳು:** ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಮುದ್ಗಲ್ಲಿನಿಂದ 5 ಕಿಮೀ ದಕ್ಷಿಣದಲ್ಲಿ ಇರುವ ಒಂದು ಗ್ರಾಮ. ಜನಸಂಖ್ಯೆ 819. ಇಲ್ಲಿನ ಪ್ರಾಗೈತಿಹಾಸಿಕ ನಿವೇಶನದಿಂದ ಈ ಗ್ರಾಮ ಪ್ರಸಿದ್ಧವಾಗಿದೆ. ಈ ನಿವೇಶನ ಗ್ರಾಮದ ಉತ್ತರ ದಿಸೆಯಲ್ಲಿ 2ಕಿಮೀ ದೂರದಲ್ಲಿರುವ ಕಣಶಿಲೆಯ ಗುಡ್ಡಗಳ ನಡುವೆ ಇದೆ. 1952ರಲ್ಲಿ ಕೇಂಬ್ರಿಜ್ಜ್ ವಿಶ್ವವಿದ್ಯಾಲಯದ ಎಫ್.ಆರ್.ಆಲ್ಚಿನ್‌ರವರು ಇದನ್ನು ಕಂಡುಹಿಡಿದರು. ಅದೇ ವರ್ಷವೇ ಈ ಸಂಶೋಧಕರು ಇಲ್ಲಿ ನಡೆಸಿದ ಉತ್ಖನನದ ಪರಿಣಾಮವಾಗಿ ಶಿಲಾ–ತಾಮ್ರಯುಗ ಹಂತದಲ್ಲಿಯ ನೂತನ ಶಿಲಾಯುಗದ ಕಾಲದಿಂದ ಆದಿಚಾರಿತ್ರಿಕ ಕಾಲದವರೆಗೆ ಇಲ್ಲಿ ಜನವಸತಿ ಇತ್ತೆಂಬುದಕ್ಕೆ ಸಾಕಷ್ಟು ಪುರಾವೆಗಳು ದೊರೆತವು.

ಇಲ್ಲಿಯ ನೂತನ ಶಿಲಾಯುಗದ ಕಾಲಮಾನವನ್ನು ಆಲ್ಚಿನ್‌ರವರು ಆದಿನೂತನ ಶಿಲಾಯುಗ (ಲೋಯರ್ ನಿಯೋಲಿತಿಕ್) ಮತ್ತು ಅಂತ್ಯನೂತನ ಶಿಲಾಯುಗ (ಅಪ್ಪರ್ ನಿಯೋಲಿತಿಕ್) ಎಂದು ಎರಡು ಘಟ್ಟಗಳಾಗಿ ವಿಂಗಡಿಸಿದ್ದಾರೆ. ನೂತನ ಶಿಲಾಯುಗದ ಮೊದಲನೆಯ ಭಾಗದಲ್ಲಿ ವಾಸಿಸುತ್ತಿದ್ದ ಜನರು ಕೈಯಲ್ಲಿ ಮಾಡಿದ ಕಂದುಬಣ್ಣದ ಮೃತ್ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಇವುಗಳನ್ನು ಅನೇಕ ವೇಳೆ ಉಜ್ಜಿ ನುಣುಪಾಗಿಸಿದ್ದ, ಕೆಲವು ಪಾತ್ರೆಗಳಿಗೆ ಕೆಮ್ಮಣ್ಣು ಹಚ್ಚಿ ಚಿತ್ರೀಕರಿಸುತ್ತಿದ್ದ, ಇನ್ನು ಕೆಲವು ಪಾತ್ರೆಗಳನ್ನು ಸುಡುವುದಕ್ಕೆ ಮುಂಚೆಯೇ ವರ್ಣಗಳಿಂದ ಅಲಂಕರಿಸಿದ್ದ ಉದಾಹರಣೆಗಳೂ ಕಂಡುಬಂದಿವೆ. ನಿತ್ಯೋಪಯುಕ್ತವಾದ ಪಾತ್ರೆಗಳಲ್ಲದೆ ಕಾಲುಗಳುಳ್ಳ ಬಟ್ಟಲುಗಳೂ ಮಣ್ಣಿನಲ್ಲಿ ಮಾಡಿದ ಎತ್ತಿನ ಬೊಂಬೆಗಳೂ ಉಜ್ಜಿ ನಯಮಾಡಿದ ಕಪ್ಪು ಕಲ್ಲಿನ ಕೊಡಲಿಗಳೂ ಬೆಣಚುಕಲ್ಲಿನ ಚಕಮಕಿ ಆಯುಧಗಳೂ ಈ ಘಟ್ಟದ ಸ್ತರಗಳಲ್ಲಿ ಕಂಡುಬಂದವು.

ನೂತನ ಶಿಲಾಯುಗದ ಅಂತ್ಯಭಾಗದಲ್ಲಿ ಕಂದುಬಣ್ಣದ ಮೃತ್ಪಾತ್ರೆ ಗಳು ಕಾಣೆಯಾಗುತ್ತವೆ. ಅದಕ್ಕೆ ಬದಲು ಬೂದು ಬಣ್ಣ ಅನೇಕ ಛಾಯೆಯ ಮೃತ್ಪಾತ್ರೆಗಳು ಕಂಡುಬರುತ್ತವೆ. ಇವುಗಳನ್ನು ಕೂಡ ಮೇಲಿಂದ ಮೇಲೆ ತಿಕ್ಕಿ ನುಣುಪಾಗಿಸಿರುವುದು ಕಾಣುತ್ತದೆ. ಈ ಘಟ್ಟದಲ್ಲಿ ಶಿಲಾಯುಧಗಳ ಬಳಕೆಯ ಜೊತೆಗೆ ತಾಮ್ರದ ಉಪಯೋಗವೂ ಖಚಿತ ವಾಗಿ ಕಂಡುಬರುತ್ತದೆ. ಆದರೆ ತಾಮ್ರದ ಬಳಕೆ ಬಹಳ ಕಡಿಮೆ ಪ್ರಮಾಣದಲ್ಲಿತ್ತು. ಈ ಘಟ್ಟದ ಮುಂದುವರಿಕೆಯಾಗಿ ನೂತನ ಶಿಲಾಯುಗದ ಅಂತ್ಯಕ್ಕೂ ಕಬ್ಬಿಣಯುಗದ ಪ್ರಾರಂಭಕ್ಕೂ ನಡುವೆ ಉತ್ತರ ದಖನ್ ಪ್ರದೇಶದಿಂದ ಸಾಂಸ್ಕೃತಿಕ ಅಂಶಗಳು ಬಂದು ಪಿಕ್ಲಿಹಾಳಿನ ಜನ ಜೀವನದಲ್ಲಿ ಸೇರಿಕೊಂಡಂತೆ ತೋರುತ್ತದೆ. ಇದಕ್ಕೆ ಸಾಕ್ಷ್ಯವಾಗಿ, ಮಹಾರಾಷ್ಟ್ರದ ಜೋರ್ವೆ ಮುಂತಾದ ಶಿಲಾತಾಮ್ರಯುಗೀನ ನಿವೇಶನಗ ಳಲ್ಲಿ ದೊರೆತಂತೆ ವರ್ಣರಂಜಿತ ಮೃತ್ಪಾತ್ರೆಗಳು ಈ ಸ್ಥಳದಲ್ಲಿಯೂ ದೊರೆತಿವೆ.

ಪಿಕ್ಲಿಹಾಳಿನಲ್ಲಿ ತಾಮ್ರಶಿಲಾಯುಗದ ಘಟ್ಟದ ಅನಂತರದ ಸ್ತರಗಳಲ್ಲಿ ಕಬ್ಬಿಣಯುಗದ ಅವಶೇಷಗಳು ದೊರೆತಿವೆ. ಈ ಕಾಲದಲ್ಲಿ ಜನಾಂಗ ವೊಂದು ಇಲ್ಲಿಗೆ ವಲಸೆ ಬಂದು, ಇಲ್ಲಿನ ಮೊದಲ ನಿವಾಸಿಗಳೊಡನೆ ಕೂಡಿ ಜೀವನ ನಡೆಸಿದ್ದಕ್ಕೆ ಸಾಕ್ಷ್ಯಗಳಿವೆ. ಹೊಸ ಮತ್ತು ಹಳೆಯ ಜನಾಂಗಗಳ ಸಾಂಸ್ಕೃತಿಕ ಅಂಶಗಳು ಮಿಶ್ರವಾಗಿ ಕಂಡುಬರುವ ಹಲವು ಸ್ತರಗಳು ಇಲ್ಲಿವೆ. ಹೊಸ ಜನರ ಮೃತ್ಪಾತ್ರೆಗಳ ಬಳಕೆಯಲ್ಲಿ ಬದಲಾವಣೆ ತಂದರು. ಬೂದು ಬಣ್ಣದ ಮಡಕೆ ಬದಲು ಕಪ್ಪು ಮತ್ತು ಕೆಂಪು ವರ್ಣವುಳ್ಳ ಚಕ್ರದ ಮೇಲೆ ಮಾಡಿದ ಮಡಕೆ ಕುಡಿಕೆಗಳ ಉಪಯೋಗ ಹೆಚ್ಚಾಗಿ ಕಂಡುಬರುತ್ತದೆ. ಅಲ್ಲದೆ ಕಬ್ಬಿಣದ ವಸ್ತುಗಳ ಉಪಯೋಗವೂ ಪ್ರಾರಂಭವಾಗುತ್ತದೆ.

ಈ ಎರಡು ವರ್ಗಗಳ ಶವಸಂಸ್ಕಾರ ಪದ್ಧತಿಯಲ್ಲಿ ಸ್ಪಷ್ಟ ವ್ಯತ್ಯಾಸ ಕಂಡುಬರುತ್ತದೆ. ಉತ್ಖನನದಲ್ಲಿ ನೂತನ ಶಿಲಾಯುಗಕ್ಕೆ ಸೇರಿದ ಮೂರು ಶವಕುಣಿಗಳು ಬೆಳಕಿಗೆ ಬಂದುವು. ಇವೆಲ್ಲದರಲ್ಲೂ ಶವವನ್ನು ಅದಕ್ಕಾಗಿಯೇ

ತೋಡಿದ ದೀರ್ಘವೃತ್ತಾಕಾರದ ಪ್ರತ್ಯೇಕ ಗುಂಡಿಗಳಲ್ಲಿ ಹೂಳಲಾಗಿದ್ದಿತು. ಈ ಗುಂಡಿಗಳಲ್ಲಿ ಮೃತರ ಮರಣೋತ್ತರ ಜೀವನಕ್ಕಾಗಿ ಮಡಕೆಗಳನ್ನು ಇಟ್ಟಿದ್ದರು. ಗಂಡಸಿನ ಸಮಾಧಿಯೊಂದರಲ್ಲಿ, ಪಾದದ ಬಳಿ ಕಲ್ಲಿನ ಕೊಡಲಿಯೊಂದೂ ಸೊಂಟದ ಬಳಿ ಸಣ್ಣ ಬಟ್ಟಲೂ ಮತ್ತು ಶಿರದ ಬಳಿ ಐದು ಚಕಮಕಿ ಆಯುಧಗಳೂ ಇಡಲ್ಪಟ್ಟಿದ್ದುವು. ಹೆಣ್ಣಿನ ಶವಕುಣಿಯೊಂದರಲ್ಲಿ ತಲೆಯ ಬಳಿ ಗುಂಡಿಯಾಕಾರದ ಗಡಿಗೆಯೂ ಮತ್ತು ಸೊಂಟದ ಬಳಿ ದೊಡ್ಡ ಬಟ್ಟಲೂ ಕಂಡುಬಂದವು. ವಿಶೇಷವೆಂದರೆ, ಈ ಶವಕುಣಿಗಳೆಲ್ಲವೂ ನೂತನ ಶಿಲಾಯುಗದ ಜನರ ವಾಸಸ್ಥಾನದಲ್ಲಿಯೇ ಕಂಡುಬಂದವು.

ಕಬ್ಬಿಣಯುಗದ ಜನರ ಸಮಾಧಿಗಳು ವಾಸಸ್ಥಾನದ ನಿವೇಶನದಿಂದ ದೂರ ಇವೆ. ಇವು ವೃತ್ತಾಕಾರದ ಬೃಹತ್‍ಶಿಲಾಸಮಾಧಿಗಳು. ಇಲ್ಲಿಯ ಗೋರಿಗಳ ಉತ್ಖನನವಿನ್ನೂ ಆಗಿಲ್ಲವಾದರೂ ಬ್ರಹ್ಮಗಿರಿ ಮುಂತಾದ ಇತರ ನಿವೇಶನಗಳಲ್ಲಿ ನಡೆಸಿದ ಉತ್ಖನನಗಳ ಆಧಾರದ ಮೇಲೆ ಈ ಗೋರಿಗಳು ಕಬ್ಬಿಣಯುಗಕ್ಕೆ ಸೇರಿದುವೆಂಬುದು ಸ್ಪಷ್ಟ. ಸ್ವಲ್ಪ ಹೆಚ್ಚು ಕಡಿಮೆ ಈ ಸಾಂಸ್ಕೃತಿಕ ಪರಂಪರೆಗೆ ಸೇರಿದೆನ್ನಬಹುದಾದ ಕೆಲವು ಬೃಹದಾಕಾರದ ಬಂಡೆ ನಿಲುಸು ಕಲ್ಲುಗಳಿವೆ.ಇವುಗಳಲ್ಲಿ ಒಂದೆರಡನ್ನು ಭಾಗಶಃ ಪರೀಕ್ಷಿಸಲಾಯಿತು. ಇವುಗಳೊಡನೆ ಶವಸಂಸ್ಕಾರದ ಚಿಹ್ನೆಗಳೇನೂ ದೊರೆಯಲಿಲ್ಲ. ಪ್ರಾಯಶಃ ಇವು ಮೃತಿ ಹೊಂದಿದವರ ಸ್ಮರಣಾರ್ಥ ನಿಲ್ಲಿಸಿದ ಬಂಡೆಗಳಿರಬಹುದುದೆಂದು ಊಹಿಸಲಾಗಿದೆ.

ಕಬ್ಬಿಣಯುಗದ ಅಂತ್ಯಭಾಗದಲ್ಲಿ ಐತಿಹಾಸಿಕ ಯುಗದ ಪ್ರಾರಂಭವಾಯಿತೆನ್ನಬಹುದು. ಇದಕ್ಕೆ ಆಧಾರವಾಗಿ ಕೆಂಪು ಮತ್ತು ಕಪ್ಪು ಬಣ್ಣದ ಮೃತ್ಪಾತ್ರೆಗಳೂ ಅವುಗಳಲ್ಲಿ ಶ್ವೇತವರ್ಣ ರೇಖಾಚಿತ್ರಿತ ಪಾತ್ರೆಗಳೂ ದೊರಕುತ್ತವೆ. ಈ ಕಾಲದ ಅನಂತರ ಈ ನೆಲೆಯಲ್ಲಿ ಜನವಸತಿ ಮುಂದುವರೆದಂತಿಲ್ಲ.

ಈ ಸಾಂಸ್ಕೃತಿಕ ಘಟ್ಟಗಳ ಕಾಲದ ಬಗ್ಗೆ ಪಿಕ್ಲಿಹಾಳಿನ ಉತ್ಖನನದಲ್ಲಿ ನೇರ ಸಾಕ್ಷ್ಯ ದೊರೆಯದಿದ್ದರೂ ಇತರ ಸಾಂಸ್ಕೃತಿಕ ನಿವೇಶನಗಳ ಉತ್ಖನನದ ಆಧಾರದ ಮೇಲೆ ಆಲ್ಚಿನ್‍ರವರು ಈ ಕೆಳಕಂಡ ಕಾಲಸೂಚಿಯನ್ನು ಒದಗಿಸಿದ್ದಾರೆ:

| | |
|---|---|
| ಆದಿ ನೂತನ ಶಿಲಾಯುಗ | ಪ್ರ.ಶ.ಪೂ. 2000–1250 |
| ಅಂತ್ಯ ನೂತನ ಶಿಲಾಯುಗ | ಪ್ರ.ಶ.ಪೂ. 1250–650 |
| ತಾಮ್ರ ಶಿಲಾಯುಗ | ಪ್ರ.ಶ.ಪೂ. 650–550 |
| ಕಬ್ಬಿಣ ಯುಗ | ಪ್ರ.ಶ.ಪೂ.555–ಕ್ರಿ.ಶ.1ನೆಯ ಶತಮಾನ |
| ಐತಿಹಾಸಿಕ ಯುಗ | 1ನೆಯ ಶತಮಾನದಿಂದ 300 |

ಪಿಕ್ಲಿಹಾಳ ಉತ್ಖನನದ ಅನಂತರ ತೆಕ್ಕಲಕೋಟೆ, ಹಳ್ಳೂರು, ವಟಗರ್, ಮೊದಲಾದ ಸ್ಥಳಗಳಲ್ಲಿಯ ಪೂರ್ವಭಾವಿ ಇತಿಹಾಸ ಕಾಲದ ಜನ ವಾಸ್ತವ್ಯ ನೆಲೆಗಳ ಹಾಗೂ ಕೊಮಾರನಹಳ್ಳಿಯಲ್ಲಿಯ ಆದಿ ಕಬ್ಬಿಣಯುಗದ ಬೃಹತ್ ಶಿಲಾಗೋರಿಗಳ ಉತ್ಖನನ ಮತ್ತು ಅಧ್ಯಯನಗಳಿಂದ ಮೇಲೆ ವಿವರಿಸಿದ ಸಂಸ್ಕೃತಿಗಳ ಪುನರ್ವಿಮರ್ಶಿತ ಕಾಲಮಾನಗಳೂ ಹೀಗಿವೆ:

1. ನೂತನ ಶಿಲಾಯುಗ ಪ್ರಚಲಿತ ಶಕೆ ಪ್ರ.ಶ.ಪೂ.ಸು.3000–2700

2. ಸುಧಾರಿಸಿದ ನೂತನ ಶಿಲಾಯುಗ ಪ್ರಚಲಿತ ಶಕೆ ಪೂರ್ವ ಸು.2700–2300

3. ಶಿಲಾ–ತಾಮ್ರಯುಗ ಹಂತದಲ್ಲಿಯ ನೂತನ ಶಿಲಾಯುಗ (ಆದಿಭಾಗ)

ಪ್ರಚಲಿತ ಶಕೆ ಕ್ರಿ.ಪೂ.ಸು.2300–1700

4. ಶಿಲಾತಾಮ್ರಯುಗ ಹಂತದಲ್ಲಿಯ ನೂತನ ಶಿಲಾಯುಗ (ಉತ್ತರ ಭಾಗ) ಪ್ರಚಲಿತ ಶಕೆ ಪ್ರ.ಶ.ಪೂ.ಸು. 1700–1000(800)

5. ಆದಿ ಕಬ್ಬಿಣಯುಗದ ಬೃಹತ್ ಶಿಲಾಸಂಸ್ಕೃತಿ ಪ್ರಚಲಿತ ಶಕೆ ಪ್ರ.ಶ.ಪೂ.ಸು. 1300–200

6. ಆದಿ ಇತಿಹಾಸ ಸಂಸ್ಕೃತಿ ಪ್ರಚಲಿತ ಶಕೆ ಪ್ರ.ಶ.ಪೂ.ಸು.300–ಪ್ರಚಲಿತ–ಶಕೆ200.

**(ಎಂ.ಎಸ್.ಎನ್.ಆರ್.)**

**ಪಿತೃಪೂಜೆ:** ಮೃತರಾದ ಪಿತೃಗಳ ಪ್ರೀತ್ಯರ್ಥವಾಗಿ ಹಾಗೂ ಅವರ ಅನುಗ್ರಹಕ್ಕಾಗಿ ಆಚರಿಸುವ ಒಂದು ಧಾರ್ಮಿಕ ಸಂಪ್ರದಾಯ. ಬ್ರಾಹ್ಮಣರು ಇದನ್ನು ತಿಥಿ, ಶ್ರಾದ್ಧ ಎಂಬ ಹೆಸರುಗಳಿಂದ ಕರೆಯುತ್ತಾರೆ. ಶ್ರಾದ್ಧದ ದಿನ ಇಬ್ಬರು ಬ್ರಾಹ್ಮಣ ಗೃಹಸ್ಥರನ್ನು (ಪತ್ನಿಯುಳ್ಳವರು) ಕರೆದು ಮಂತ್ರತಂತ್ರ ಸಮೇತ ಅರ್ಘ್ಯ, ಪಾದ್ಯ, ಭೋಜನ, ವಸ್ತ್ರ, ದಕ್ಷಿಣೆ, ತಾಂಬೂಲಾದಿಗಳಿಂದ ಉಪಚರಿಸಿ ಪಿತೃವಿಗೆ ಪಿಂಡಪ್ರಧಾನ ಮಾಡಿ ತಿಲೋದಕ ತರ್ಪಣ ಬಿಡುತ್ತಾರೆ. ಗೋಗ್ರಾಸವಿತ್ತು ಕಾಗೆಗೆ ಅನ್ನವನ್ನರ್ಪಿಸಿದ ಅನಂತರ ತಿಥಿ ಮಾಡಿದ ಯಜಮಾನ ತನ್ನ ಕುಟುಂಬದವರೊಡನೆ ಹಾಗೂ ಆಹ್ವಾನಿತ ಬಂಧುಮಿತ್ರರೊಡನೆ ಊಟ ಮಾಡುತ್ತಾನೆ. ಶ್ರಾದ್ಧಕ್ಕೆ ಬಂದ ಬ್ರಾಹ್ಮಣರು ಮತ್ತು ಪಿತೃವಿನ ಮಕ್ಕಳು ಆ ದಿನ ಒಪ್ಪೊತ್ತನ್ನು (ರಾತ್ರಿ ಊಟ ಮಾಡುವುದಿಲ್ಲ) ಆಚರಿಸುವುದು ರೂಢಿ. ಮಹಾಲಯದ ವೇಳೆ ಮಾತೃ–ಪಿತೃ ಎಂಬ ಉಭಯಕುಲದ ಪೂರ್ವಪಿತೃಗಳಿಗೂ ಪಿಂಡಪ್ರಧಾನ ಮಾಡುವ ಅಷ್ಟಗೆ–ಎಂಬ ಶ್ರಾದ್ಧವಿಧಿಯೂ ಬ್ರಾಹ್ಮಣರಲ್ಲಿ ಪ್ರಚಲಿತವಿದೆ.

ಜೈನರಲ್ಲಿ ಸೈದ್ಧಾಂತಿಕವಾಗಿ ಶ್ರಾದ್ಧವನ್ನು ಹೇಳಿಲ್ಲ. ಆದರೆ ವೈದಿಕ ಧರ್ಮದ ಪ್ರಭಾವದಿಂದಾಗಿ ಇವರಲ್ಲಿಯೂ ಇದು ಆಚರಣೆಯಲ್ಲಿದೆ. ಶ್ರಾದ್ಧದ ದಿನ ಪಿತೃಗಳ ಪ್ರೀತ್ಯರ್ಥವಾಗಿ ಜೈನಬ್ರಾಹ್ಮಣಸತ್ಕಾರ, ಪಿತೃತರ್ಪಣ, ಜಿನಪೂಜೆ ಮೊದಲಾದುವನ್ನು ಆಚರಿಸಿ ಸಕುಟುಂಬಸಮೇತ ಭೋಜನ ಮಾಡುತ್ತಾರೆ.

ವೀರಶೈವ ಸಿದ್ಧಾಂತದ ಪ್ರಕಾರ ಶ್ರಾದ್ಧಕರ್ಮ ಅವಶ್ಯವಿಲ್ಲ. ಆದರೂ ತಿಥಿಯನ್ನಾಚರಿಸುವ ವಾಡಿಕೆ ಇವರಲ್ಲಿದೆ. ತಿಥಿಯ ದಿನ ಕಳಸವನ್ನಿಟ್ಟು ಮೃತನ ರುಮಾಲಿದ್ದರೆ (ಬಟ್ಟೆ) ಅದನ್ನು ಕಳಸಕ್ಕಿಟ್ಟು, ಆಭರಣಗಳಿಂದ ಅಲಂಕರಿಸಿ ಅರ್ಚಿಸುವುದು, ಜಂಗಮರನ್ನು ಆಹ್ವಾನಿಸಿ ಸತ್ಕರಿಸುವುದು ಪದ್ಧತಿ. ಮೃತನ ಸಮಾಧಿಯಿದ್ದರೆ ಅಲ್ಲಿಗೆ ಹೋಗಿ ಆ ದಿನ ಅದನ್ನು ಪೂಜಿಸಿ ಬರುತ್ತಾರೆ. ಗೋಗ್ರಾಸವಿಡುವುದು, ಕಾಗೆಗೆ ಎಡೆಯನ್ನರ್ಪಿಸುವುದು, ಎಲ್ಲರೂ ಭೋಜನ ಮಾಡುವುದು – ಇವು ಇವರಲ್ಲಿ ವಾಡಿಕೆಯಿದೆ.

ಹಿಂದು ಜನಾಂಗದ ಅಂಗವಾಗಿರುವ ಗೊಲ್ಲ, ರೆಡ್ಡಿ, ನಾಯ್ಡು, ಉಪ್ಪಾರ ಮುಂತಾದ ಕೆಲವು ಜಾತಿಗಳವರು ಬ್ರಾಹ್ಮಣರಿಂದ ಪೌರೋಹಿತ್ಯ ಮಾಡಿಸಿ ಭಾದ್ರಪದದ ಪಾಡ್ಯದಂದು ಅಥವಾ ಅಮಾವಾಸ್ಯೆಯಂದು ಪಿತೃಪೂಜೆ ಆಚರಿಸುತ್ತಾರೆ. ಈ ದಿನ ಮನೆಯಲ್ಲಿ ಕಳಸವಿಟ್ಟು, ಧೂಪದೀಪಗಳನ್ನಿರಿಸಿ, ಕಳಸದ ಬಳಿ ಹೊಸ ಬಟ್ಟೆಯನ್ನಿಟ್ಟು ತೆಂಗಿನಕಾಯಿ ಒಡೆದು ನೈವೇದ್ಯ ಮಾಡಿ ಪೂಜಿಸಿ ಪಿತೃಪೂಜೆ ಸಲ್ಲಿಸಿ ಬ್ರಾಹ್ಮಣರಿಗೆ, ಜಂಗಮರಿಗೆ ಪಡಿ ಕೊಡುತ್ತಾರೆ. ಬಿಳಿಮಗ್ಗದವರಲ್ಲಿ ಮಕ್ಕಳಿದ್ದು ಸತ್ತವರಿಗೆ ಮಾತ್ರ ಪಿತೃಪೂಜೆ ಸಲ್ಲಿಸುವ ವಾಡಿಕೆ ರೂಢಿಯಲ್ಲಿದೆ. ಕಾಡುಗೊಲ್ಲರು ಸತ್ತವರ ಹೆಸರಿನಲ್ಲಿ ಒಂದು ಕಲ್ಲನ್ನು ತಮ್ಮ ಗುಡಿಸಲು ಮುಂದೆ ನಿಲ್ಲಿಸಿ,

ಮಹಾಲಯದಲ್ಲಿ ಒಂದು ಬಾಳೆಲೆಯಲ್ಲಿ ಅನ್ನ ತುಪ್ಪ ಬೆಲ್ಲ ಹೊಸ ಬಟ್ಟೆ ಮುಂತಾದವನ್ನಿಟ್ಟು ಪಿತೃಪೂಜೆ ಸಲ್ಲಿಸುತ್ತಾರೆ. ಮಾದಿಗರು ಪಿತೃಸಮಾಧಿಯ ಕಲ್ಲನ್ನು ಪೂಜಿಸಿ, ಮನೆಗೆ ಬಂದು ಹೆಂಡದ ಕಳಸವಿಟ್ಟು, ಅದಕ್ಕೆ ಕುರಿಯನ್ನೊ ಅಥವಾ ಕೋಳಿಯನ್ನೊ ಬಲಿಯಿತ್ತು ಪೂಜಿಸುವರು. ಇದನ್ನು ಗಣೇಶಚತುರ್ಥಿಯಂದು ಅಥವಾ ಮಹಾಲಯ ಅಮಾವಾಸ್ಯೆಯಂದು ಆಚರಿಸುವರು.

ಒಕ್ಕಲಿಗರಲ್ಲಿ ಪಿತೃಪೂಜೆಯನ್ನು ಮಹಾಲಯ ಅಮಾವಾಸ್ಯೆಯಂದು ಆಚರಿಸಲಾಗುತ್ತದೆ. ಇದನ್ನು ಹಿರಿಯರಿಗೆ ಬಟ್ಟೆ ಇಡುವುದು, ಅನ್ನ ಹಾಕುವುದು ಎಂದೂ ಕರೆಯುತ್ತಾರೆ. ಆ ದಿನ ತಮ್ಮ ಪಿತೃಗಳು ಉಪಯೋಗಿಸುತ್ತಿದ್ದ ಎಲ್ಲ ರೀತಿಯ ವಸ್ತುಗಳನ್ನೂ (ತಿಂಡಿತಿನಿಸು ಬಟ್ಟೆ ಮೊದಲಾದವು) ಎಡೆಗೆ ಇಟ್ಟು ಸೀರೆ ಬಟ್ಟೆ ಇಟ್ಟು ಪೂಜಿಸುವರು. ಕೆಲವರಲ್ಲಿ ಅಂದು ಖಾರದ ಊಟದ ಏರ್ಪಾಡಿದ್ದರೆ ಇನ್ನು ಕೆಲವರು ಸಿಹಿ ಊಟವನ್ನು ಮಾತ್ರ ಮಾಡುತ್ತಾರೆ. ನೆಂಟರು ಮಕ್ಕಳೆಲ್ಲ ಒಂದೆಡೆ ಸೇರಿ ಮೃತರ ಆತ್ಮಕ್ಕೆ ಶಾಂತಿ ಕೋರಿ ಪೂಜಿಸಿ ಒಟ್ಟಿಗೆ ಊಟ ಮಾಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಭೂತಾರಾಧನೆ ಸಾರ್ವಜನಿಕವಾಗಿ ಆಚರಿಸಲಾಗುವ ಪಿತೃಪೂಜೆ. ಕೋಟಿ ಚೆನ್ನಯ್ಯ, ಕಲ್ಲುರ್ಟಿ, ಪಂಜುರ್ಳಿ–ಮುಂತಾದ ಭೂತಾರಾಧನೆಯ (ಭೂತದ ಕೋಲ) ವೇಳೆಗೆ ಒಬ್ಬ ವ್ಯಕ್ತಿ, ಆಯಾ ಭೂತದ ವೇಶವನ್ನು ಅಣಿಗೊಳಿಸಿ ಆವೇಶಗೊಂಡು ಹರಕೆ ಕಾಣಿಕೆಗಳನ್ನು ಸ್ವೀಕರಿಸಿ, ಅನುಗ್ರಹಿಸುತ್ತಾನೆ. ಇದರಿಂದ ಭೂತಕ್ಕೆ ತೃಪ್ತಿಯಾಯಿತೆಂದು ಭಾವನೆ. ಕೊಲೆಗೆ ಬಳಸುವುದು ಎಂಬುದು ಕೌಟುಂಬಿಕವಾಗಿ ಆಚರಿಸುವ ಪಿತೃಪೂಜೆ. ಸುಗ್ಗಿ ತಿಂಗಳಲ್ಲಿ (ಫಾಲ್ಗುಣ ಮಾಸ) ಅರಳು, ಬನ್ನಂಗಾಯಿ (ಎಳೆತೆಂಗಿನಕಾಯಿ), ಅಕ್ಕಿ, ಕೋಳಿ ಮಾಂಸದ ಅಡುಗೆ–ಮುಂತಾದುವನ್ನು ಬಾಳೆ ಎಲೆಗಳಿಗೆ ಬಡಿಸಿ, ಪ್ರಾರ್ಥನೆ ಮಾಡುವರು. ಆಗ ಒಬ್ಬನಿಗೆ ಭೂತ ಮೈಮೇಲೆ ಬಂದು, ತಾನು ತೃಪ್ತಿಪಟ್ಟುದಾಗಿ ಹೇಳಿ ಕೊನೆಯ ಆಶೀರ್ವಾದವನ್ನು ನೀಡುವನು.

ಮಹಮ್ಮದೀಯರಲ್ಲಿ, ಕ್ರೈಸ್ತರಲ್ಲಿ ಕೂಡ ಪಿತೃಪೂಜೆ ಆಚರಣೆಯಲ್ಲಿದೆ. ಮಹಮ್ಮದೀಯರು ವ್ಯಕ್ತಿ ಸತ್ತ ದಿನವೇ ಆಚರಿಸುತ್ತಾರೆ. ಅಂದು ಪಿತೃವಿನ ಪ್ರೀತಿಯ ತಿಂಡಿತಿನಸುಗಳನ್ನು ಸಿದ್ಧಗೊಳಿಸಿ, ಕುರಾನನ್ನು ಪಠಿಸಿ ಪಿತೃವಿನ ಆತ್ಮಶಾಂತಿಗಾಗಿ ಪ್ರಾರ್ಥಿಸಿ, ಎಲ್ಲರೂ ಒಟ್ಟಾಗಿ ಭೋಜನ ಮಾಡುವ ಮೂಲಕ ಈ ಸಮಾರಂಭ ನಡೆಯುತ್ತದೆ. ಕ್ರೈಸ್ತರು ತಮ್ಮ ಪಿತೃಗಳ ಮರಣದ ವಾರ್ಷಿಕ ದಿನವನ್ನು ತಮ್ಮ ಧರ್ಮಗುರುವಿಗೆ ತಿಳಿಸಿ ಅವನ ಮೂಲಕ ಮೃತನ ಆತ್ಮಕ್ಕೆ ಶಾಂತಿ ಕೋರಿಸುತ್ತಾರೆ. ಅನಂತರ ಬಂಧುಬಳಗದವರು ಒಟ್ಟುಗೂಡಿ ಮೃತನ ಆತ್ಮಕ್ಕೆ ಶಾಂತಿ ಕೋರಿ ಭೋಜನ ಮಾಡುತ್ತಾರೆ. (ಟಿ.ಕೆ.ಬಿ)

**ಪಿರಿಯಾಪಟ್ಟಣ:** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಆಡಳಿತ ಕೇಂದ್ರ. ಜಿಲ್ಲೆಯ ವಾಯುವ್ಯಕ್ಕಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಹಾಸನಜಿಲ್ಲೆಯ ಅರಕಲಗೂಡು, ಕೃಷ್ಣರಾಜನಗರ ತಾಲ್ಲೂಕುಗಳೂ ಪೂರ್ವದಲ್ಲಿ ಹುಣಸೂರು, ದಕ್ಷಿಣದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕು, ಪಶ್ಚಿಮ ಮತ್ತು ವಾಯುವ್ಯದಲ್ಲಿ ಸೋಮವಾರಪೇಟೆ ತಾಲ್ಲೂಕುಗಳು ಸುತ್ತುವರಿದಿವೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 814.5 ಚ.ಕಿಮೀ. ಪಿರಿಯಾಪಟ್ಟಣ, ಹಾರನಹಳ್ಳಿ, ಬೆಟ್ಟದಪುರ ಮತ್ತು ರಾವಂದೂರು ಹೋಬಳಿಗಳಿದ್ದು ಒಟ್ಟು 201 ಗ್ರಾಮಗಳಿವೆ. ಈ ತಾಲ್ಲೂಕಿ ಜನಸಂಖ್ಯೆ. 2,24,254.

ತಾಲ್ಲೂಕಿನ ಹೆಚ್ಚು ಭಾಗ ಪಶ್ಚಿಮ ಘಟ್ಟಗಳ ಪಾದ ಪ್ರದೇಶದಲ್ಲಿ ಇದೆ. ಪಿರಿಯಾಪಟ್ಟಣದ ಪಶ್ಚಿಮಕ್ಕೆ ಇರುವ ಮಾಕಲ್ಲಯ್ಯನ ಬೆಟ್ಟ, ಜೇನುಕಲ್ಲುಬೆಟ್ಟ ತಾಲ್ಲೂಕಿನ ದೊಡ್ಡ ಬೆಟ್ಟಗಳು. ಕೊಡಗು ಜಿಲ್ಲೆಗೆ ಹತ್ತಿರವಿರುವ ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ದಟ್ಟವಾದ ಕಾಡು ಇದೆ. ಪಿರಿಯಾಪಟ್ಟಣ ತಾಲ್ಲೂಕಿನ ಪಶ್ಚಿಮ ಮತ್ತು ವಾಯವ್ಯ ಗಡಿಯಲ್ಲಿ ಕಾವೇರಿ ನದಿ ಹರಿದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕನ್ನು ಪ್ರತ್ಯೇಕಿಸಿದೆ. ನದಿಯ ಬಲದಂಡೆಯ ಭಾಗಕ್ಕೆ ನೀರಿನ ಸರಬರಾಜಿದ್ದು ತಾಲ್ಲೂಕಿನ ವ್ಯವಸಾಯಕ್ಕೆ ಅನುಕೂಲವಾಗಿದೆ. ಈ ತಾಲ್ಲೂಕಿನಲ್ಲಿ ಪ್ರಮುಖವಾಗಿ ಹೊಗೆಸೊಪ್ಪು, ಹತ್ತಿ, ಅಡಕೆ ಬೆಳೆಯುತ್ತಾರೆ. ರಾಗಿ, ಬತ್ತ ಸಾಮಾನ್ಯ ಬೆಳೆಗಳು. ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 874.19 ಮಿಮೀ. ಈ ತಾಲ್ಲೂಕಿನ ಪಿರಿಯಾಪಟ್ಟಣದ ಮುಖಾಂತರ ಮೈಸೂರು–ಮಡಿಕೇರಿ, ಹಾಸನ–ಕಣ್ಣಾನೂರು ಮತ್ತು ಅರಕಲಗೂಡು–ವಿರಾಜಪೇಟೆಗೆ ಹಾದಿಗಳು ಸಾಗುತ್ತವೆ. ಅಲ್ಲದೆ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಹುಣಸೂರು–ಕಣ್ಣಾನೂರು ರಸ್ತೆಯೂ ಉತ್ತರ ಭಾಗದಲ್ಲಿ ಮೈಸೂರು–ಬೆಟ್ಟದಪುರ–ಕೊಪ್ಪ–ಸಿದ್ದಾಪುರ ರಸ್ತೆಗಳೂ ಇವೆ.

ಪಿರಿಯಾಪಟ್ಟಣದ ವಾಯವ್ಯಕ್ಕೆ 16ಕಿಮೀ ದೂರದಲ್ಲಿ ಪಿರಿಯಾಪಟ್ಟಣ –ಹಾಸನ ರಸ್ತೆಯಲ್ಲಿರುವ ಬೆಟ್ಟದಪುರ ಈ ತಾಲ್ಲೂಕಿನ ಪ್ರಮುಖ ಸ್ಥಳಗಳಲ್ಲೊಂದು. ಇಲ್ಲಿರುವ ಬೆಟ್ಟ ಸಮುದ್ರಮಟ್ಟದಿಂದ 4,389 ಅಡಿ ಎತ್ತರದಲ್ಲಿದೆ. ಬೆಟ್ಟದ ಮೇಲೆ ಸಿಡಿಲು ಮಲ್ಲಿಕಾರ್ಜುನ ಎಂಬ ಪ್ರಸಿದ್ಧ ದೇವಾಲಯವಿದೆ. ಊರಿನಲ್ಲಿ ವೀರಶೈವ ವಿರಕ್ತಮಠವಿದೆ. ಇದೇ ತಾಲ್ಲೂಕಿನ ಬೈಲುಕುಪ್ಪೆಯಲ್ಲಿ ಟಿಬೆಟ್ಟಿನಿಂದ ನಿರಾಶ್ರಿತರಾಗಿ ಬಂದ ಜನರಿಗೆ ಸರ್ಕಾರ ವಸತಿಯನ್ನು ಕಲ್ಪಿಸಿದೆ. ವೃತ್ತಿ ಗಾಯಕರಾದ ನೀಲಗಾರರು, ದೇವರಗುಡ್ಡರು ಈ ತಾಲ್ಲೂಕಿನಲ್ಲಿ ವಿಶೇಷವಾಗಿ ಕಾಣಬರುತ್ತಾರೆ.

ಪಿರಿಯಾಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಮೈಸೂರಿನಿಂದ ಪಶ್ಚಿಮಕ್ಕೆ 67ಕಿಮೀ ದೂರದಲ್ಲಿ ಮೈಸೂರು–ಮಡಿಕೇರಿ ಮಾರ್ಗದಲ್ಲಿ ಹುಣಸೂರಿನ ಪಶ್ಚಿಮಕ್ಕೆ ಸು. 20 ಕಿಮೀ ದೂರದಲ್ಲಿದೆ. ಪಟ್ಟಣದ ಜನಸಂಖ್ಯೆ 14,922. ಕೊಡಗು ಮತ್ತು ಮೈಸೂರು ನಗರಗಳ ನಡುವಿನ ಸರಕು ಸಾಗಣೆಯ ಮತ್ತು ವ್ಯಾಪಾರ ಕೇಂದ್ರವಾಗಿರುವ ಈ ಊರಿಗೆ ಸಿಂಗಪಟ್ಟಣ ಎಂಬುದು ಪ್ರಾಚೀನ ಹೆಸರು. ಐತಿಹ್ಯದ ಪ್ರಕಾರ ಅಗಸ್ತ್ಯಮುನಿ ಈ ಊರನ್ನು ಸಂದರ್ಶಿಸಿದ್ದನೆಂದು ತಿಳಿಯುತ್ತದೆ. ಚಂಗಾಳ್ವರ ಆಳ್ವಿಕೆಯಲ್ಲಿ ಪಿರಿಯಾಪಟ್ಟಣ ಒಂದು ಪ್ರಮುಖ ಪಟ್ಟಣವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಪಿರಿಯರಾಜ (1586–1607) ಎಂಬ ಚಂಗಾಳ್ವ ಅರಸ ತನ್ನ ತಂದೆ ಈ ಊರಿನಲ್ಲಿ ಕಟ್ಟಿಸಿದ್ದ ಮಣ್ಣಿನ ಕೋಟೆಯನ್ನು ಕೆಡವಿಸಿ ಕಲ್ಲಿನ ಕೋಟೆಯನ್ನು ನಿರ್ಮಿಸಿದನೆಂದೂ ಅವನ ಜ್ಞಾಪಕಾರ್ಥವಾಗಿ ಈ ಊರಿಗೆ ಪಿರಿಯಾಪಟ್ಟಣ ಎಂಬ ಹೆಸರು ಬಂದಿತೆಂದೂ ತಿಳಿದುಬರುತ್ತದೆ. ವೀರರಾಜನ ಕಾಲದಲ್ಲಿ (ಸು.1625) ಈ ಊರು ಮೈಸೂರು ಅರಸು ಕಂಠೀರವ ನರಸರಾಜನ ಕೈವಶವಾಯಿತು. ವೀರರಾಜನಿಗೂ ಕಂಠೀರವ ನರಸರಾಜನಿಗೂ ನಡೆದ ಯುದ್ಧವನ್ನು ಕುರಿತ ಪಿರಿಯಾಪಟ್ಟಣ ಕಾಳಗ ಎಂಬ ಸುದೀರ್ಘ ಜನಪದ ವೀರಕಾವ್ಯವೊಂದು ಲಭ್ಯವಾಗಿದೆ.

ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ಕೊಡಗು ಮತ್ತು ಟಿಪ್ಪುವಿನ ಸೈನ್ಯಗಳ ನಡುವೆ ನಡೆದ ಹೋರಾಟಕ್ಕೆ ಪಿರಿಯಾಪಟ್ಟಣವೇ ಕೇಂದ್ರವಾಗಿತ್ತು. ಪಿರಿಯಾಪಟ್ಟಣದಲ್ಲಿದ್ದ ಸೆರೆಮನೆಯಲ್ಲಿ ಕೊಡಗಿನ ವೀರರಾಜೇಂದ್ರನನ್ನು ಟಿಪ್ಪು ನಾಲ್ಕು ವರ್ಷ ಬಂಧಿಸಿದ್ದನೆಂದು

ತಿಳಿಯುತ್ತದೆ. ಬ್ರಿಟಿಷರು ಕೊಡಗಿನ ಮೂಲಕ ದಂಡುತೆಗೆದುಕೊಂಡು ಬಂದಾಗ ಶತ್ರುಗಳಿಗೆ ಏನೂ ಸಿಗದಂತೆ ಮಾಡಲು ಕೋಟೆಯನ್ನೇ ಅಲ್ಲದೆ ಪಟ್ಟಣದಲ್ಲಿನ ಕೆಲವು ಕಟ್ಟಡಗಳನ್ನು ನಾಶಪಡಿಸಲಾಯಿತು.

ಈ ಊರಿನಲ್ಲಿ ಪಿರಿಯಾಪಟ್ಟಣದಮ್ಮ, ಕನ್ನಂಬಾಡಮ್ಮ, ಕೋಟೆಮಾರಿ, ಆಂಜನೇಯ, ವೈದ್ಯೇಶ್ವರ, ಚೆನ್ನಕೇಶವ, ಮಾದೇಶ್ವರ, ವೆಂಕಟೇಶ್ವರ ಎಂಬ ದೇವಸ್ಥಾನಗಳಿವೆ. ವರ್ಷಕ್ಕೊಮ್ಮೆ ಕನ್ನಂಬಾಡಮ್ಮ ಹಾಗೂ ಪಿರಿಯಾಪಟ್ಟಣದಮ್ಮ ದೇವತೆಗಳ ಹೆಸರಿನಲ್ಲಿ ಜಾತ್ರೆ ನಡೆಯುತ್ತದೆ. ನಿಡುಮಾಮಿಡಿ ಮತ್ತು ಜಪದಕಟ್ಟೆಮಠ ಎಂಬ ಎರಡು ವೀರಶೈವ ಮಠಗಳು ಈ ಊರಿನಲ್ಲಿವೆ. ವರ್ಷಕ್ಕೊಮ್ಮೆ ನಡೆಯುವ ಬಾಬಯ್ಯನ ಹಬ್ಬದಲ್ಲಿ (ಮುಸ್ಲಿಂ ಹಬ್ಬ) ಉಪ್ಪಾರಗೇರಿಯ ಹಿಂದುಗಳು ಪಿರಿಯಾಪಟ್ಟಣ ಕಾಳಗಕ್ಕೆ ಸಂಬಂಧಿಸಿದ ಹಾಡನ್ನು ಹಾಡುತ್ತ ಮಜ್ಜಣ ಗುಣಿತ ಎಂಬ ಜನಪದ ನೃತ್ಯ ಮಾಡುವುದು ಈ ಊರಿನಲ್ಲಿ ಕಾಣಬರುವ ಒಂದು ವಿಶಿಷ್ಟ ಸಂಪ್ರದಾಯ.

ಈ ಊರಿನಲ್ಲಿ ಒಂದು ಸರ್ಕಾರಿ ಜೂನಿಯರ್ ಕಾಲೇಜು, ಪದವಿ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ಪುರಸಭೆ ಇವೆ. ಪ್ರತಿ ಶನಿವಾರ ಸಂತೆ ನಡೆಯುತ್ತದೆ. (ಆರ್.ಜಿ.ಎಸ್.;ಎಸ್.ಎನ್.ಜಿ.)

**ಪಿರಿಯಾಪಟ್ಟಣದ ಕಾಳಗ:** ಕನ್ನಡ ಜನಪದ ಐತಿಹಾಸಿಕ ವೀರಕಾವ್ಯಗಳಲ್ಲಿ ವಿಸ್ತಾರವೂ ಸುಸಂಬದ್ಧವೂ ಕುತೂಹಲಕಾರಿಯೂ ಕರುಣಾಜನಕವೂ ಆದ ಒಂದು ಅಪೂರ್ವ ಜನಪದ ವೀರಕಾವ್ಯ. ಮೈಸೂರು ದಳವಾಯಿಗೂ ಪಿರಿಯಾಪಟ್ಟಣದ ವೀರರಾಜ ದೊರೆಗೂ ನಡೆದ ಭೀಕರ ಕಾಳಗದಲ್ಲಿ ಪಿರಿಯಾಪಟ್ಟಣವು ಮೈಸೂರು ದೊರೆಗಳ ವಶವಾಗಿ ವೀರರಾಜ ತನ್ನ ಮೂವರು ಮಡದಿಯರನ್ನು ಕೊಂದು ತಾನು ಪ್ರಾಣ ಕಳೆದುಕೊಳ್ಳುವುದು ಈ ಲಾವಣಿಯ ಕಥಾವಸ್ತು. ಮಾರ್ಗಕಾವ್ಯವೊಂದರ ವ್ಯಾಪ್ತಿಯಲ್ಲಿ ಹಲವು ವಿಭಾಗಗಳಾಗಿ ಹರಿಯುವ ಈ ಕಾವ್ಯ ಒಳಗೊಂಡಿರುವ ವಿವರಗಳು ಆಶ್ಚರ್ಯಕರವಾದುವು. ಹತ್ತಾರು ಪಾತ್ರಗಳು ತಮ್ಮ ತಮ್ಮ ಹಿನ್ನೆಲೆಯಲ್ಲಿ ಸ್ವಸಂಪೂರ್ಣವಾಗಿ ಬೆಳೆದು ನಿಲ್ಲುವುದು. ಒಂದೊಂದು ಪಾತ್ರದ ಹೆಸರೂ ತಪ್ಪದೆ ಮೌಖಿಕ ಸಂಪ್ರದಾಯದಲ್ಲಿ ಉಳಿದು ಬಂದಿರುವುದು ಈಗ ಗಮನಾರ್ಹ ಅಂಶವಾಗಿದೆ. ಸೈನ್ಯದ ವಿವರಗಳನ್ನು ನೀಡುವಾಗ, ತಂಗುದಾಣಗಳನ್ನು ಹೆಸರಿಸುವಾಗ, ಯುದ್ಧಸನ್ನಿವೇಶಗಳನ್ನು ಕಲ್ಪಿಸುವಾಗ, ಹೋರಾಟದ ರೋಮಾಂಚಕಾರಕ ದೃಶ್ಯಗಳನ್ನು ಬಿಡಿಸುವಾಗ ಪ್ರಕಟವಾಗಿರುವ ಕಾವ್ಯರಚನಾಸಾಮರ್ಥ್ಯ, ವರ್ಣನಾಕೌಶಲ ಮೆಚ್ಚುವಂತಿದೆ. ಗ್ರಂಥಸ್ಥ ಕಾವ್ಯದ ಗತ್ತಿನಲ್ಲಿ, ಹರಹಿನಲ್ಲಿ ರೂಪುಗೊಂಡಿರುವ ಈ ಕಾವ್ಯದ ನಿರ್ವಹಣೆ ಆಶ್ಚರ್ಯಕರವಾದುದು. ಮಹಾ ಕಾವ್ಯದ ವಸ್ತುವೊಂದನ್ನು ಕವಿ ಖಂಡ ಕಾವ್ಯದಲ್ಲಿ ಅಡಕಗೊಳಿಸಿದ್ದಾನೆ ಎಂಬ ಎಲ್ಲಾ ಅಂಶಗಳು ಮನದಟ್ಟಾಗುತ್ತವೆ.

ಪಿರಿಯಾಪಟ್ಟಣದ ಕಾಳಗ ಒಂದು ಐತಿಹಾಸಿಕ ಲಾವಣಿಯಾಗಿ ಅದಕ್ಕೆ ಸಂಬಂಧಿಸಿದಂತೆಯೇ ಹಲವು ವಿವರಗಳನ್ನು ನೀಡುವಂತೆಯೇ ಜೀವನಮೌಲ್ಯ, ಕಾವ್ಯಮೌಲ್ಯದ ದೃಷ್ಟಿಯಿಂದಲೂ ವಿಚಾರಾರ್ಹವಾಗಿದೆ. ಜನಪದ ಸಂಸ್ಕೃತಿಯ ದಟ್ಟನೆಲೆಯನ್ನು ಲಾವಣಿಯ ಉದ್ದಕ್ಕೂ ಕಾಣುತ್ತೇವೆ. ಅದ್ಭುತ ಕಲ್ಪನೆ, ವರ್ಣನೆಗಳ ಮಾಯಾಜಾಲವೇ ಜನಪದ ಕವಿಯ ಬಾಯಲ್ಲಿ ಹೊರಹೊಮ್ಮಿರುವುದು ಆಶ್ಚರ್ಯವನ್ನುಂಟು ಮಾಡಿದರೂ ಸತ್ಯಸಂಗತಿಯಾಗಿದೆ. ವೀರರಿಗೆ ಇರಬೇಕಾದ ಶೌರ್ಯ, ಧೈರ್ಯ, ಸ್ಥೈರ್ಯಗಳ ಹಾಗೂ ವೀರ ರಮಣಿಯರಿಗೆ ಇರಬೇಕಾದ ಮನಃಸ್ಥೈರ್ಯವನ್ನು ಮನಮುಟ್ಟುವಂತೆ ಲಾವಣಿಯಲ್ಲಿ ಬಣ್ಣಿಸಲಾಗಿದೆ.

ಇಲ್ಲಿಯ ಸಾಹಿತ್ಯಕ ಮೌಲ್ಯ ಕೂಡ ಕಡೆಗಣಿಸುವಂಥದ್ದಲ್ಲ. ಅದ್ಭುತ ವರ್ಣನೆಗಳಿಂದ, ಹೃದಯಸ್ಪರ್ಶಿ ಹಾಗೂ ಹೃದಯ ವಿದ್ರಾವಕ ಸನ್ನಿವೇಶ ಗಳಿಂದ ಒಂದೊಂದು ಘಟ್ಟವೂ ಪರಿಣಾಮಕಾರಿಯಾಗಿ ಪ್ರಭಾವ ಬೀರುತ್ತದೆ. ಸಂದರ್ಭೋಚಿತವಾಗಿ ಬರುವ ಮಾತುಗಳು, ಅದಕ್ಕೆ ತಕ್ಕ ಭಾಷೆ ಇವುಗಳಿಂದಾಗಿ ಈ ಕಾವ್ಯ ತನ್ನದೇ ಆದ ಒಂದು ಸೊಗಸನ್ನು ಪಡೆದುಕೊಂಡಿದೆ. (ಡಿ.ಕೆ.ಆರ್.)

**ಪೀಟರ್, ವಿ.ಜೆ.:** 1937–99. ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆದ ಹಾಕಿಪಟು, ತರಬೇತುದಾರರು. ಇವರು 1937 ಜೂನ್ 19ರಂದು ಮದರಾಸಿನಲ್ಲಿ ಜನಿಸಿದರು. ಮದರಾಸು ಎಂಜಿನಿಯರಿಂಗ್ ಗ್ರೂಪ್ಸ್‌ನೊಂದಿಗೆ ಆಡುವುದರ ಮೂಲಕ ಇವರು ತಮ್ಮ ಕ್ರೀಡಾ ಜೀವನವನ್ನು ಪ್ರಾರಂಭಿಸಿದರು. ಸತತವಾಗಿ 8ವರ್ಷ ಎಂ.ಇ.ಜಿ.ಗೆ ಆಡಿದ ಅನಂತರ ಸರ್ವೀಸಸ್‌ಗೆ ಆಹ್ವಾನಿತರಾದರು. ಸು.11ವರ್ಷಗಳ ಕಾಲ ಸರ್ವೀಸಸ್ ಪರ ಆಡಿದರು (1958–69). 1960ರಲ್ಲಿ ಕಲ್ಕತ್ತದಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್ ಗೆದ್ದುಕೊಂಡ ಸರ್ವೀಸಸ್ ತಂಡದ ಸದಸ್ಯರಾಗಿದ್ದರು. 1966ರಲ್ಲಿ ರೈಲ್ವೇಸ್‌ನೊಂದಿಗೆ ಚಾಂಪಿಯನ್‌ಷಿಪ್ ಹಂಚಿಕೊಂಡರು. 1958ರಲ್ಲಿ ಟೋಕಿಯೊ ಏಷ್ಯನ್ ಕ್ರೀಡೆಗಳಲ್ಲಿ ಆಡುವುದರೊಂದಿಗೆ ಇವರು ಭಾರತವನ್ನು ಪ್ರತಿನಿಧಿಸಿದರು. ಇದರಲ್ಲಿ ಅಂತಿಮ ಪಂದ್ಯದಲ್ಲಿ ಭಾರತ ಪಾಕಿಸ್ತಾನಕ್ಕೆ ಶರಣಾಯಿತು. 1962ರ ಜಕಾರ್ತ ಏಷ್ಯನ್‌ಗೇಮ್ಸ್‌ನಲ್ಲಿ ಭಾರತದ ಪರ ಆಡಿ ಬೆಳ್ಳಿ ಪದಕ ಗೆದ್ದರು. 1966ರ ಬ್ಯಾಂಕಾಕ್ ಏಷ್ಯನ್ ಕ್ರೀಡೆಯಲ್ಲಿ ಚಿನ್ನದ ಪದಕ ಗೆಲ್ಲುವುದರ ಮೂಲಕ ಭಾರತಕ್ಕೆ ಕೀರ್ತಿಯನ್ನು ತಂದಿತ್ತರು.

ಇವರು ಮೂರು ಬಾರಿ ಒಲಂಪಿಕ್ಸ್ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 1960ರಲ್ಲಿ ರೋಮ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ ಪಾಕಿಸ್ತಾನಕ್ಕೆ ಸೋತಿತು. ಇದೇ ವರ್ಷ ಶ್ರೀಲಂಕಾಗೆ ತೆರಳಿದ ಭಾರತ ತಂಡದಲ್ಲಿ ಇವರು ಇದ್ದರು. 4 ವರ್ಷಗಳ ಅನಂತರ ಟೋಕಿಯೊ ಒಲಂಪಿಕ್ಸ್‌ನಲ್ಲಿ ಪಾಕಿಸ್ತಾನದಿಂದ ಮತ್ತೆ ಆ ಪ್ರಶಸ್ತಿಯನ್ನು ಭಾರತ ಪಡೆದುಕೊಂಡಿತು. 1968ರ ಮೆಕ್ಸಿಕೊ ಒಲಂಪಿಕ್ಸ್‌ನಲ್ಲಿ ಕಂಚಿನ ಪದಕ ಪಡೆದುಕೊಂಡ ಭಾರತ ತಂಡದಲ್ಲಿ ಪೀಟರ್ ಅವರ ಪಾತ್ರವಿತ್ತು. 1963ರಲ್ಲಿ ಪೋಲೆಂಡ್, ಜರ್ಮನಿ, ಇಂಗ್ಲೆಂಡ್, 1964ರಲ್ಲಿ ನ್ಯೂಜಿಲೆಂಡ್ ಹಾಗೂ ಸಿಂಗಪುರ್, 1965ರಲ್ಲಿ ಬೆಲ್ಜಿಯಂ, ಹಾಲೆಂಡ್, ಬರ್ಲಿನ್, ಈಜಿಪ್ಟ್‌ಗಳಲ್ಲಿ ನಡೆದ ಎಲ್ಲಾ ಪಂದ್ಯಗಳಲ್ಲಿ ಪಾಲ್ಗೊಂಡಿದ್ದರು. 1975ರಲ್ಲಿ ಕೌಲಾಲಂಪುರದಲ್ಲಿ ವಿಶ್ವಕಪ್ ಗೆದ್ದುಕೊಂಡ ಭಾರತ ತಂಡದ ಕೋಚ್‌ಗಳಲ್ಲಿ ಇವರೂ ಒಬ್ಬರಾಗಿದ್ದರು.

ಇವರ ಕ್ರೀಡಾ ಸಾಧನೆಗಾಗಿ ಅನೇಕ ಪ್ರಶಸ್ತಿ ಗೌರವಗಳು ಲಭ್ಯವಾಗಿವೆ. ಮೈಸೂರು ಸರ್ಕಾರದಿಂದ ಉತ್ತಮ ಆಟಗಾರ ಪ್ರಶಸ್ತಿಯನ್ನು (1964), ಭಾರತ ಸರ್ಕಾರದ ಅರ್ಜುನ ಪ್ರಶಸ್ತಿಯನ್ನೂ (1966) ಪಡೆದಿರುವ ಇವರು ಉತ್ತಮ ಸರ್ವೀಸಸ್ ಕೀಡಾಪಟು ಪ್ರಶಸ್ತಿಯನ್ನೂ (1967) ಅಭಿಮನ್ಯು ಪ್ರಶಸ್ತಿಯನ್ನೂ (1982) ಪಡೆದುಕೊಂಡಿದ್ದಾರೆ. 1984ರಲ್ಲಿ ಇವರಿಗೆ ವಿಶಿಷ್ಟ ಸೇವಾ ಪದಕ ದೊರೆಕಿದೆ. ಇವರು 1999ರಲ್ಲಿ ನಿಧನಹೊಂದಿದರು.

(ಎಸ್.ಆರ್.ಯು.)

**ಪುಗಡಿ ಕುಣಿತ:** ಕೃಷಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ಆಚರಣೆಗೆ ಬಂದ ವಿಶಿಷ್ಟ ಬಗೆಯ ಹೆಂಗಸರ ಜನಪದ ಕುಣಿತ. ಹಿಂದೆ ಎಲ್ಲೆಡೆಯೂ ಸಾಕಷ್ಟು ಪ್ರಚಾರದಲ್ಲಿದ್ದು ಈ ಕುಣಿತ ಇಂದು ಉತ್ತರ ಕನ್ನಡ ಜಿಲ್ಲೆಯ ಆಗೇರರು, ಹಾಲಕ್ಕಿ ಒಕ್ಕಲಿಗರು ಮುಂತಾದ ಕೆಲ ಸಮುದಾಯಗಳಲ್ಲಿ ಮಾತ್ರ ಪ್ರಚಲಿತವಿದೆ. ಕುಣಿತದ ರೀತಿ ಹಾಗೂ ಸಂದರ್ಭಗಳು

ಬುಡಕಟ್ಟಿನಿಂದ ಬುಡಕಟ್ಟಿಗೆ ಭಿನ್ನವಾಗಿವೆ. ಆಗೇರರಲ್ಲಿ ಮಗು ಹುಟ್ಟಿ 'ಅಂವೆ' ಶುದ್ಧ ಮಾಡುವಾಗ ಈ ಕುಣಿತ ಕುಣಿಯುತ್ತಾರೆ. ಯುವತಿಯರು ಸಮಸಂಖ್ಯೆಯಲ್ಲಿ ನಿಂತು, ಒಬ್ಬೊಬ್ಬರು ಒಂದೊಂದು ಬರಿದಾದ ತಾಮ್ರದ ಕೊಡವನ್ನು ಕೈಯಲ್ಲಿ ಹಿಡಿದು.

ಆಚುಮಲಿಂಗ ಈಚುಮಲಿಂಗ

ಸೋಮೇ ತಿಮ್ಮಪ್ಪನ ಪುಗಡಿ ಮಲ್ಲಿಂಗ

ಎಂದು ಹಾಡುತ್ತ ಹಾಡಿನ ಗತ್ತಿಗೆ ಕಟಿಕುಣಿಸುತ್ತ ಮೈ ಬಳುಕಿಸುತ್ತ ಕುಣಿಯುವರು. ಕುಣಿಯುವಾಗ ಒಬ್ಬರ ಮೈಗೆ ಇನ್ನೊಬ್ಬರ ಮೈ ಸ್ಪರ್ಶವಾಗಬಾರದು. ಕುಣಿದು ಕುಣಿದು ಒಂದು ಪಂಗಡ ಆಯಾಸಗೊಂಡ ಮೇಲೆ ಇನ್ನೊಂದು ಪಂಗಡ ಕುಣಿಯುತ್ತದೆ. ಕುಣಿದಾದ ಮೇಲೆ ತಾಮ್ರದ ಕೊಡವನ್ನು ಒಂದೆಡೆ ಬೋರಲು ಹಾಕಿ ಕಾಯೊಡೆದು ಪೂಜಿಸುತ್ತಾರೆ. ದಿನವಿಡಿ ಜರುಗುತ್ತಿದ್ದ ಈ ನೃತ್ಯ ಇಂದು ಆಗೇರರಲ್ಲಿ ಕ್ವಚಿತ್ತಾಗಿ ಕೆಲವೆಡೆ ಮಾತ್ರ ಉಳಿದಿದೆ. ಅಂವೆ ಶುದ್ಧ ಮಾಡುವ ದಿನದ ಹೊರತಾಗಿ ಬೇರೆ ದಿನಗಳಲ್ಲಿ ಈ ಕುಣಿತ ಕುಣಿಯುವುದಿಲ್ಲ.

ಉತ್ತರ ಕನ್ನಡ ಬೆಸ್ತ ಮಹಿಳೆಯರ ಪುಗಡಿ ಕುಣಿತ

ಹಿಂದೆಕ್ಕೆ ಕೋಮಾರ ಪಂತರು, ಭಂಡಾರಿಗಳು, ಕೊಂಕಣ ಮರಾಠರು ಮೊದಲಾದ ಬುಡಕಟ್ಟಿನವರು ಗಣೇಶ ಚೌತಿಯ ಸಂದರ್ಭದಲ್ಲಿ ಗಣೇಶ ವಿಗ್ರಹದ ಮುಂದುಗಡೆ ಪುಗಡಿ ಕುಣಿಸುತ್ತಿದ್ದರು. ಇಬ್ಬರು ಯುವತಿಯರು ಬರಿಗೊಡದ ಬಾಯನ್ನು ತಮ್ಮ ಬಾಯ ಹತ್ತಿರ ಹಿಡಿದು ಕೊಡದ ಒಳಗಡೆ ಅಬುಸ್ ಅಬುಸ್ ಎಂದು ಊದುತ್ತ ಹಿನ್ನೆಲೆಯಲ್ಲಿ ಹಾಡುವ ಹಾಡುಗಾರ್ತಿಯರ ಹಾಡಿನ ಲಯಕ್ಕೆ ತಕ್ಕಂತೆ ಕಟಿಕುಣಿಸುತ್ತ ಕುಣಿಯುತ್ತಿದ್ದರು. ಇಂದು ಈ ನೃತ್ಯ ರೂಪ ಕಣ್ಮರೆಯಾಗಿದೆ.

ಹಾಲಕ್ಕಿ ಒಕ್ಕಲಿಗರಲ್ಲಿ ಪ್ರಚಲಿತವಿರುವ ಪುಗಡಿ ಕುಣಿತ ಸ್ವಲ್ಪ ಬೇರೆಯದು. ಹೆಂಗೆಳೆಯರೆಲ್ಲರೂ ಒಂದೆಡೆ ಗೋಲಾಕಾರವಾಗಿ ಒಬ್ಬರ ಕೈಯ್ಯನ್ನೊಬ್ಬರು ಗಂಟಿ ನಿಲ್ಲುತ್ತಾರೆ. ನುರಿತ ಒಬ್ಬಳು ಹಾಡುತ್ತಾಳೆ.

ಪುಗಡೇ ಹಾಕೂವೇ ಪುಗಡೇ ಕೊಣೂವೇ

ಸೋಮೀ ತಿಮ್ಮಪ್ಪರಾಯಾಗ್ ಶರಣಂಬೂವೇ ಪುಗಡೇ ಪೂ

–ಹೀಗೆ ಆಕೆ ಹಾಡಿದಂತೆ ಉಳಿದವರು ಹಾಡುತ್ತ ವೃತ್ತಾಕಾರದಲ್ಲಿ ನಿಂತ ಹಾಗೆಯೇ ಮುಂದಕ್ಕೆ ಹಾರಿ ಬಾಗಿ, ಮತ್ತೆ ಹಿಂದಕ್ಕೆ ಜಿಗಿದು ನಿಂತು, ಮತ್ತೆ ಮತ್ತೆ ಅದೇ ಕ್ರಮದಲ್ಲಿ ಕುಣಿಯುತ್ತಾರೆ. ಇವರಲ್ಲಿ ಪುಗಡಿಯನ್ನು ಇಂಥದೇ ನಿರ್ದಿಷ್ಟ ದಿನ ಕುಣಿಯಬೇಕೆಂಬ ನಿರ್ಬಂಧವಿಲ್ಲವಾದರೂ ದೀಪಾವಳಿಯಲ್ಲಿ ಬಲೀಂದ್ರನ ಮುಂದೆ ಹೆಚ್ಚಾಗಿ ಕುಣಿಯುವರು.

ಪುಗಡಿ ಎನ್ನುವ ಪದ ಪುಗು ಧಾತುವಿನಿಂದ ನಿಷ್ಪನ್ನವಾದಂತಿದೆ. ಪುಗು–ಪುಗಲಿ>ಪಗಳಿ>ಪಗಡಿ ಎಂದರೆ ಪ್ರವೇಶಿಸಲಿ ಎಂದರ್ಥ. ಕಂದನಿಲ್ಲದ ಮನೆ ಬರಿದಾಗಿರುತ್ತದೆ, ಮನೆಯಲ್ಲಿ ಕೂಸು ಕಂದಯ್ಯ ಆಡಿ ಸುಖ ಸಂತೋಷ ತುಂಬಲಿ ಎಂಬ ಹಾರೈಕೆಯ ಹಿನ್ನೆಲೆಯಲ್ಲಿ, ಆಗೇರರಲ್ಲಿ ಅಂವೆ ಶುದ್ಧ ಮಾಡುವಾಗ ಪುಗಡಿ ಕುಣಿಯುವ ಸಂಪ್ರದಾಯ ಬೆಳೆದು ಬಂದಿರಬೇಕು. ಗಣೇಶ ಚೌತಿಯಂದು ದವಸಧಾನ್ಯಗಳಿಲ್ಲದೆ ಮನೆ ಬರಿದಾಗಿರುತ್ತದೆ. ಆ ಬರಿದಾಗಿರುವುದರ ಸಂಕೇತ ಖಾಲಿ ಕೊಡ. ಕೊಡದಲ್ಲಿ ಗಾಳಿಯೂದುವುದು ಬರಿದಾಗಿರುವುದರಲ್ಲಿ ಚೈತನ್ಯ ತುಂಬಿದುದರ ಸಂಕೇತ. ಮನೆ ದವಸ ಧಾನ್ಯಗಳಿಂದ ತುಂಬಿ ಸೂಸಲಿ– ಎಂಬ ಹಾರೈಕೆಯ ಧ್ವನಿ ಗಣೇಶ ಚೌತಿಯ ಸಂದರ್ಭದ ಪುಗಡಿಯಲ್ಲಿ ಅಡಗಿದೆ. ದೀಪಾವಳಿಯಲ್ಲಿ ಕೃಷಿಸ್ವಾಮಿಯಾದ ಬಲೀಂದ್ರನ ಆಗಮನದಿಂದ ಧಾನ್ಯ ಸಮೃದ್ಧಿಯಾದ ಸಂತೃಪ್ತಿಯ ಮೆರೆತ ದೀಪಾವಳಿಯ ಸಂದರ್ಭದ ಪುಗಡಿಯಲ್ಲಿ ಅಡಕವಾಗಿದೆ. *

**ಪುಟ್ಟಣ್ಣ, ಎಂ.ಎಸ್.:** 1854–1930. ಕನ್ನಡ ಭಾಷೆ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಿದ ಹಿರಿಯರು; ಕಾದಂಬರಿಕಾರರು. ಕನ್ನಡದ ಪ್ರಥಮ ಜೀವನ ಚರಿತ್ರೆ ಎಂದು ಹೆಸರುಗೊಂಡಿರುವ ಕುಣಿಗಲು ರಾಮಶಾಸ್ತ್ರಿಗಳ ಚರಿತ್ರೆಯ (1908) ಕರ್ತೃ. ಹುಟ್ಟಿದ್ದು ಚನ್ನಪಟ್ಟಣದಲ್ಲಿ. ತಂದೆ ಸೂರ್ಯನಾರಾಯಣ ಶಾಸ್ತ್ರಿ. ಚಿಕ್ಕಂದಿನಲ್ಲಿಯೇ ತಂದೆ–ತಾಯಿಗಳನ್ನು ಕಳೆದುಕೊಂಡ ಪುಟ್ಟಣ್ಣನವರು, ಮೈಸೂರಿಗೆ ಬಂದು ಸೋದರಮಾವನ ಮನೆಯಲ್ಲಿ ಬೆಳೆದರು. ಆಗ್ಗೆ ಮೈಸೂರಿನಲ್ಲಿ ಪ್ರಭಾವಶಾಲಿಯಾಗಿದ್ದ ಮರಾಠಿ ಪಂತೋಜಿಗಳ ಮಠಗಳಲ್ಲಿ ವ್ಯಾಸಂಗ ಮಾಡಿದರು. ದೇಶದಲ್ಲಿ ತಲೆದೋರಿದ ಕ್ಷಾಮದ ಪರಿಣಾಮವಾಗಿ ಬಿ.ಎ.ವ್ಯಾಸಂಗವನ್ನು ಮಧ್ಯದಲ್ಲಿಯೆ ಬಿಟ್ಟು, ಕೋಲಾರದ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ (1878) ಸುಮಾರು ಎರಡು ವರ್ಷಗಳ ಕಾಲ ಕೆಲಸ ಮಾಡಿದರು. ಈ ಮಧ್ಯೆ ಇವರು ತಮ್ಮ ವ್ಯಾಸಂಗವನ್ನು ಮುಂದುವರಿಸಿ, ಮದರಾಸು ವಿಶ್ವವಿದ್ಯಾಲಯದಿಂದ 1885ರಲ್ಲಿ ಬಿ.ಎ. ಪದವಿ ಪಡೆದರು. ಅನಂತರ ಮೈಸೂರು ಚೀಫ್ ಕೋರ್ಟಿನಲ್ಲಿ ಭಾಷಾಂತರಕಾರರಾಗಿ ನೇಮಕಗೊಂಡರು. ಆಮೇಲೆ ರೆವಿನ್ಯೂ ಇಲಾಖೆಯನ್ನು ಸೇರಿ, ಅಮಲ್ದಾರರಾಗಿ ಬಾಗೇಪಲ್ಲಿ, ಮುಳಬಾಗಲು, ಚಿತ್ರದುರ್ಗ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಕೆಲಸ ಮಾಡಿ ನಿವೃತ್ತರಾದರು. ಅನಂತರ ಬೆಂಗಳೂರಿನಲ್ಲಿ ಸ್ವಲ್ಪಕಾಲ ವಕೀಲರಾಗಿದ್ದರು.*

ಪುಟ್ಟಣ್ಣನವರು ಉಪಾಧ್ಯಾಯ ವೃತ್ತಿಯಲ್ಲಿದ್ದಾಗಲೇ ಲೇಖನ ಚಟುವಟಿಕೆಯನ್ನು ಆರಂಭಿಸಿದ್ದರು. ಶಾಲಾ ಪಠ್ಯಪುಸ್ತಕಗಳನ್ನು ರಚಿಸಿದ್ದರಲ್ಲದೆ, ಮಕ್ಕಳಿಗಾಗಿ ನೀತಿ ಚಿಂತಾಮಣಿ ಎಂಬ ಪುಸ್ತಕವನ್ನು ಮೂರು ಭಾಗಗಳಾಗಿ ಪ್ರಕಟಿಸಿದ್ದರು. ನಿವೃತ್ತರಾದ ಮೇಲೆ ಇವರು ಬರೆದ ಕುಣಿಗಲು ರಾಮಶಾಸ್ತ್ರಿಗಳ ಚರಿತ್ರೆ, ಮಾಡಿದ್ದುಣ್ಣೋ ಮಹಾರಾಯ (1915), ಮುಸುಕು ತೆಗೆಯೇ ಮಾಯಾಂಗನೆ (1928)– ಈ ಕೃತಿಗಳು ಇವರಿಗೆ ಒಳ್ಳೆಯ ಪ್ರಸಿದ್ಧಿಯನ್ನು ತಂದುಕೊಟ್ಟವು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಕುಣಿಗಲು ರಾಮಶಾಸ್ತ್ರಿಗಳ ವ್ಯಕ್ತಿತ್ವದ ಜೊತೆಗೆ, ಆ ಕಾಲದ ಜನಜೀವನದ ಚಿತ್ರಣ ಕುಣಿಗಲು ರಾಮಶಾಸ್ತ್ರಿಗಳ ಜೀವನಚರಿತ್ರೆಯಲ್ಲಿ ಬಹು ಚೆನ್ನಾಗಿ ವರ್ಣಿತವಾಗಿದ್ದು, ಕಾದಂಬರಿಯಂತೆ ಸ್ವಾರಸ್ಯವಾಗಿ ಓದಿಸಿಕೊಂಡು ಹೋಗುತ್ತದೆ. ಕನ್‌ಫ್ಯೂಷಿಯಸ್,

ಮಹಮೂದ್ ಗವಾನ್, ಹೈದರಬಾದ್ ಸಂಸ್ಥಾನದ ಮಂತ್ರಿಯಾಗಿದ್ದ ಸಾಲಾರ್ ಜಂಗ್ – ಇವು ಇವರು ಬರೆದಿರುವ ಜೀವನ ಚರಿತ್ರೆಗಳು.

ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳು ವಿರಳವಾಗಿದ್ದ ಕಾಲದಲ್ಲಿ, ಪುಟ್ಟಣ್ಣನವರು ಮಾಡಿದ್ದುಣ್ಣೋ ಮಹಾರಾಯ ಮತ್ತು ಮುಸುಕು ತೆಗೆಯೇ ಮಾಯಾಂಗನೆ ಎಂಬ ಎರಡು ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ಬರೆದರು. ಮೈಸೂರು, ಮೇಲುಕೋಟೆ, ನಂಜನಗೂಡು ಮತ್ತು ಚಾಮರಾಜನಗರ–ಈ ಪ್ರದೇಶಗಳ ಆ ಕಾಲದ ಜನಜೀವನ, ಶೀಲಸ್ವಭಾವಗಳನ್ನು, ಜನಜೀವನದ ವಿವಿಧ ಮುಖಗಳನ್ನು ಈ ಕಾದಂಬರಿಗಳಲ್ಲಿ ಸೊಗಸಾಗಿ ಅನಾವರಣಗೊಳಿಸಿದ್ದಾರೆ.

ಪುಟ್ಟಣ್ಣನವರಿಗಿದ್ದ ಇತಿಹಾಸಪ್ರಜ್ಞೆಗೆ ಇವರು ರಚಿಸಿರುವ ಇಕ್ಕೇರಿ ಸಂಸ್ಥಾನದ ಚರಿತ್ರೆ, ಚಿತ್ರದುರ್ಗದ ಪಾಳೆಯಗಾರರು, ಹಿಂದೂ ಚರಿತ್ರ ದರ್ಪಣ, ಭಾಗ. 1,2–ಮುಂತಾದ ಕೃತಿಗಳು ಸಾಕ್ಷಿಯಾಗಿವೆ.

ಷೇಕ್ಸ್‌ಪಿಯರ್‌ನ ಸಿಂಬೆ ಲೈನ ಮತ್ತು ಕಿಂಗ್ ಲಿಯರ್ ನಾಟಕಗಳನ್ನು, ಜಯಸಿಂಹರಾಜಚರಿತ್ರೆ ಮತ್ತು ಹೇಮಚಂದ್ರರಾಜ ವಿಲಾಸ ಎಂಬ ಹೆಸರಿನಿಂದ ಕನ್ನಡಕ್ಕೆ ತಂದಿದ್ದಾರೆ. ಮಕ್ಕಳಿಗಾಗಿ ಇವರು ರಚಿಸಿರುವ ನೀತಿಚಿಂತಾಮಣಿ ಮತ್ತು ಪೇಟೆ ಮಾತೇನಜ್ಜಿ ಪುಸ್ತಕಗಳು ಜನಪ್ರಿಯವಾಗಿವೆ. ಇವರ ಕೃತಿಗಳು ಜನ ಜೀವನದ ಸಜೀವ ಚಿತ್ರಣಕ್ಕೂ ಹೊಸಗನ್ನಡದ ದೇಸಿನಿಷ್ಠ ಶೈಲಿಗೂ ಮಾದರಿಯಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಪುಟ್ಟಣ್ಣನವರು, ಪರಿಷತ್ತಿನ ಕಾರ್ಯದರ್ಶಿಯಾಗಿಯೂ (1918–19) ಕೆಲಸಮಾಡಿದರು. ಮದರಾಸು ವಿಶ್ವವಿದ್ಯಾಲಯದ ಕನ್ನಡ ಪರೀಕ್ಷಕರಾಗಿದ್ದ (1890–92) ಇವರು ಆಗಿನ ಮೈಸೂರು ಸಂಸ್ಥಾನದ ಪಠ್ಯಪುಸ್ತಕ ಸಮಿತಿಯ ಸದಸ್ಯರೂ ಆಗಿದ್ದರು.

ಇವರು 1930 ಮೇ 11ರಂದು ನಿಧನರಾದರು.ಇವರು ಬಹುಕಾಲ ವಾಸವಾಗಿದ್ದ ಬೆಂಗಳೂರು ಬಸವನಗುಡಿ ಪ್ರದೇಶದ ರಸ್ತೆಯೊಂದಕ್ಕೆ ಇವರ ಹೆಸರಿಡಲಾಗಿದೆ. **(ಜಿ.ವಿ.ಎಸ್.)**

**ಪುಟ್ಟಣ್ಣ ಕಣಗಾಲ್, ಎಸ್.ಆರ್.:** 1933–84. ಕನ್ನಡ ಚಿತ್ರರಂಗದ ಪ್ರತಿಭಾವಂತ ನಿರ್ದೇಶಕರಲ್ಲೊಬ್ಬರು. ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಕಣಗಾಲ್ ಗ್ರಾಮದಲ್ಲಿ 1933ರಲ್ಲಿ ಜನಿಸಿದರು. ಇವರ ತಂದೆ ಎಸ್.ಪಿ.ರಾಮಸ್ವಾಮಯ್ಯ. ಪುಟ್ಟಣ್ಣನವರು ವಿದ್ವಾಂಸರ ಮನೆತನದಲ್ಲಿ ಜನ್ಮತಾಳಿದರೂ ಇವರಿಗೆ ಕ್ರಮವಾದ ಶಿಕ್ಷಣ ದೊರೆಯುದೇ ಹೋಯಿತು. ಬಾಲ್ಯದಿಂದಲೂ ಇವರಿಗೆ ನಾಟಕ ಹಾಗೂ ಚಲನಚಿತ್ರದ ಗೀಳು ಅಪಾರವಾಗಿದ್ದುದರಿಂದ ಸಣ್ಣ ವಯಸ್ಸಿನಲ್ಲೇ ಮನೆ ಬಿಟ್ಟರು. ಅನಂತರ ಕೆಲವು ವರ್ಷಗಳ ಕಾಲ ನಾನಾ ಉದ್ಯೋಗಗಳನ್ನು

ಕೈಗೊಂಡರು. ಚಿತ್ರರಂಗವನ್ನು ಪ್ರವೇಶಿಸಿದ್ದು ಮದರಾಸಿನ ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯ ಖ್ಯಾತ ನಿರ್ಮಾಪಕ, ನಿರ್ದೇಶಕ ನಟ ಬಿ.ಆರ್. ಪಂತುಲು ಅವರ ಬಳಿ ಸಹಾಯಕ ನಿರ್ದೇಶಕರಾಗಿ. ಆಮೇಲೆ ಮಲೆಯಾಳಂ ಚಿತ್ರಗಳ ಮೂಲಕ ನಿರ್ದೇಶಕನ ಹಂತಕ್ಕೇರಿದರು. ಬೆಳ್ಳಿಮೋಡ ಇವರ ಸ್ವತಂತ್ರ ನಿರ್ದೇಶನದ ಪ್ರಥಮ ಕನ್ನಡ ಚಿತ್ರ (1967). ಈ ಚಿತ್ರದ ನಿರ್ದೇಶನದ ಜೊತೆಗೆ ಚಿತ್ರಕಥೆಯನ್ನೂ ಇವರೇ ರಚಿಸಿದರು. ಮಲ್ಲಮ್ಮನ ಪವಾಡ, ಕಪ್ಪು–ಬಿಳುಪು, ಕರುಳಿನಕರೆ, ಗೆಜ್ಜೆಪೂಜೆ, ಶರಪಂಜರ, ಸಾಕ್ಷಾತ್ಕಾರ, ನಾಗರಹಾವು, ಎಡಕಲ್ಲು ಗುಡ್ಡದ ಮೇಲೆ, ಉಪಾಸನೆ, ಬಿಳೀ ಹೆಂಡ್ತಿ, ಕಥಾಸಂಗಮ, ಕಾಲೇಜು ರಂಗ, ರಂಗನಾಯಕಿ, ಮಾನಸ ಸರೋವರ, ಅಮೃತಘಳಿಗೆ, ಋಣಮುಕ್ತಳು, ಮಸಣದ ಹೂವು, ಧರಣಿ ಮಂಡಲ ಮಧ್ಯದೊಳಗೆ, ಫಲಿತಾಂಶ–ಇವು ಇವರ ನಿರ್ದೇಶನದ ಕೆಲವು ಕನ್ನಡ ಚಿತ್ರಗಳು.

ಪುಟ್ಟಣ್ಣನವರು ಕನ್ನಡ, ತೆಲುಗು, ತಮಿಳು, ಮಲೆಯಾಳಂ ಚಿತ್ರಗಳೂ ಸೇರಿದಂತೆ ನಲವತ್ತಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಯಾವ ಭಾಷೆಯ ಚಿತ್ರವನ್ನೇ ದಿಗ್ದರ್ಶಿಸಲಿ ಅದು ಉತ್ತಮವಾಗಿರಬೇಕು, ಜನ ಮೆಚ್ಚುವಂತಿರಬೇಕು ಎಂಬುದು ಇವರ ಗುರಿ. ಇವರ ನಿರ್ದೇಶನದಲ್ಲಿ ತೆರೆ ಕಂಡ ಬೆಳ್ಳಿಮೋಡ, ಗೆಜ್ಜೆಪೂಜೆ, ಶರಪಂಜರ, ನಾಗರಹಾವು, ಉಪಾಸನೆ, ಕಥಾಸಂಗಮ–ಈ ಚಿತ್ರಗಳು ರಾಜ್ಯಪ್ರಶಸ್ತಿ ಪಡೆದಿವೆ. ಗೆಜ್ಜೆಪೂಜೆ (1970), ಶರಪಂಜರ (1971)– ಈ ಚಿತ್ರಗಳು ಪ್ರಾದೇಶಿಕ ಮಟ್ಟದಲ್ಲಿ ರಾಷ್ಟ್ರಪ್ರಶಸ್ತಿ ಗಳಿಸಿವೆ. ಗೆಜ್ಜೆಪೂಜೆಯ ಉತ್ತಮ ಚಿತ್ರಕಥೆಗಾಗಿ ಪುಟ್ಟಣ್ಣನವರಿಗೆ ಅಖಿಲಭಾರತ ಮಟ್ಟದಲ್ಲಿ ರಾಷ್ಟ್ರಪ್ರಶಸ್ತಿ ಲಭಿಸಿದೆ (1970). ಅತ್ಯುತ್ತಮ ಚಿತ್ರ ನಿರ್ದೇಶನಕ್ಕಾಗಿ ಇವರಿಗೆ ನಾಲ್ಕು ಬಾರಿ ರಾಜ್ಯಪ್ರಶಸ್ತಿ ಲಭ್ಯವಾಗಿದೆ. 1974ರಲ್ಲಿ ದಕ್ಷಿಣ ಭಾರತೀಯ ಚಿತ್ರನಿರ್ದೇಶಕರ ಸಂಘ ಇವರನ್ನು ಆ ವರ್ಷದ ಅತ್ಯುತ್ತಮ ನಿರ್ದೇಶಕ ಎಂದು ಗೌರವಿಸಿತು. ಅದೇ ವರ್ಷ ರಷ್ಯದಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಪ್ರತಿನಿಧಿಯಾಗಿ ಹೋಗಿಬಂದರು.

ಕನ್ನಡದಲ್ಲಿ ಇವರ ಚಿತ್ರಗಳ ಮೂಲಕ ಅನೇಕ ಉತ್ತಮ ನಟರು ಹಾಗೂ ನಟಿಯರು ಚಿತ್ರರಂಗವನ್ನು ಪ್ರವೇಶಿಸಿದ್ದಾರೆ. ಗಂಗಾಧರ್ (ಗೆಜ್ಜೆಪೂಜೆ), ವಿಷ್ಣುವರ್ಧನ, ಅಂಬರೀಷ್(ನಾಗರಹಾವು), ಚಂದ್ರಶೇಖರ್ (ಎಡಕಲ್ಲು ಗುಡ್ಡದ ಮೇಲೆ), ಡಾ. ಮಣ್ಣೂರ್ (ಉಪಾಸನೆ), ಗೋವಿಂದರಾವ್ (ಕಥಾಸಂಗಮ), ಅನಿಲ್‌ಕುಮಾರ್ (ಬಿಳೀ ಹೆಂಡ್ತಿ), ಜೈಜಗದೀಶ್ (ಫಲಿತಾಂಶ) ಅವರಲ್ಲಿ ಮುಖ್ಯರು. ಗೆಜ್ಜೆಪೂಜೆಯಲ್ಲಿ ಒಂದು ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡ ಆರತಿಯನ್ನು **(ನೋಡಿ)** ಚಿತ್ರರಂಗದಲ್ಲಿ ಪ್ರಸಿದ್ಧ ನಾಯಕಿ ನಟಿಯಾಗಿ ಮುಂದೆ ಬರಲು ಪ್ರೋತ್ಸಾಹ ನೀಡಿದವರು ಪುಟ್ಟಣ್ಣನವರೇ.ಇವರು 1984ರಲ್ಲಿ ನಿಧನ ಹೊಂದಿದರು. ಇವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ (1986–87) ಕನ್ನಡದ ಪ್ರತಿಭಾವಂತ ನಿರ್ದೇಶಕರೊಬ್ಬರಿಗೆ ಒಂದು ಲಕ್ಷರೂಪಾಯಿ ನಗದು ಬಹುಮಾನ ಮತ್ತು ಪ್ರಶಸ್ತಿಯನ್ನು ಜಾರಿಗೆ ತಂದಿದೆ. ಜಿ.ವಿ.ಅಯ್ಯರ್, ಬಿ.ಎಸ್. ರಂಗ, ಕೆ.ಎಸ್.ಎಲ್. ಸ್ವಾಮಿ, ಎಂ.ಆರ್. ವಿಠ್ಠಲ್, ಗಿರೀಶ್ ಕಾಸರವಳ್ಳಿ, ಬಾಲಕೃಷ್ಣ ಮೊದಲಾದವರು ಈ ಪ್ರಶಸ್ತಿ ಪಡೆದ ಕೆಲವು ಗಣ್ಯರು.

**(ಎಸ್.ಎಚ್.ವಿ)**

**ಪುಟ್ಟಣ್ಣಚೆಟ್ಟಿ, ಕೆ.ಪಿ.:** 1856–1938. ಮೈಸೂರು ಸಂಸ್ಥಾನದ ಉನ್ನತ ಅಧಿಕಾರಗಳಲ್ಲಿದ್ದು ದೇಶಸೇವೆ, ಭಾಷಾಸೇವೆ ಮತ್ತು ದಾನಶೀಲತೆಗಳಲ್ಲಿ ಆದರ್ಶಪ್ರಾಯರೆನಿಸಿದವರು. ಬೆಂಗಳೂರು ಜಿಲ್ಲೆಯ ಕೃಷ್ಣರಾಜಪುರದಲ್ಲಿ 1856 ಏಪ್ರಿಲ್ 29ರಂದು ಜನಿಸಿದರು. 1875ರಲ್ಲಿ ಮೈಸೂರು ಸರ್ಕಾರದ ಸೇವೆಗೆ ಸೇರಿ 1886ರಲ್ಲಿ ಅಸಿಸ್ಟೆಂಟ್ ಕಮಿಷನರಾಗಿ 1898ರಲ್ಲಿ ಡೈಪುಟಿ ಕಮಿಷನರಾಗಿ ಸೇವೆ ಸಲ್ಲಿಸಿದರು. ಇವರ ಸೇವೆಯನ್ನು

ಮೆಚ್ಚಿ 1911ರಲ್ಲಿ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ 'ರಾಜಸಭಾಭೂಷಣ' ಪ್ರಶಸ್ತಿ ನೀಡಿ ಗೌರವಿಸಿದರು. ಭಾರತ ಸರ್ಕಾರವೂ ಇವರಿಗೆ 'ದಿವಾನ್ ಬಹದ್ದೂರ್' ಪ್ರಶಸ್ತಿ ನೀಡಿ ಸನ್ಮಾನಿಸಿತು. 1911ರಲ್ಲೆ ಇವರು ಸಂಸ್ಥಾನದಲ್ಲಿ ದಿವಾನರಿಗೆ ಸಲಹೆ ಮಾಡಲು ಇರುತ್ತಿದ್ದ ಎಕ್ಸಿಕ್ಯುಟಿವ್ ಕೌನ್ಸಿಲಿನ ಸದಸ್ಯರಾಗಿ ಖ್ಯಾತಿಗೆ ಬಂದರು. ಇದು ಪುಟ್ಟಣ್ಣ ಚೆಟ್ಟರ ಸಾರ್ವಜನಿಕ ಸೇವಾರಂಗದ ಪ್ರಥಮ ಹೆಜ್ಜೆಯಾಯಿತು. 1912ರಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತರಾಗಿ ಮೈಸೂರು ಬ್ಯಾಂಕಿನ ಅಧ್ಯಕ್ಷರಾದರು.

ಸರ್. ಎಂ. ವಿಶ್ವೇಶ್ವರಯ್ಯ ಮತ್ತು ಇತರ ಮಹನೀಯರ ಅಪೇಕ್ಷೆಗೆ ಕಟ್ಟುಬಿದ್ದು ಇವರು ಸಾರ್ವಜನಿಕ ಕ್ಷೇತ್ರಕ್ಕೆ ಹೆಚ್ಚಾಗಿ ಪ್ರವೇಶಿಸಬೇಕಾಗಿ ಬಂದು ಬೆಂಗಳೂರಿನ ಪೌರ ಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು (1913–20). ಇದೇ ಸಮಯದಲ್ಲಿ (1915–22) ಬೆಂಗಳೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದರು. 1914ರಲ್ಲಿ ಕೈಸರ್–ಎ–ಹಿಂದ್ ಪದಕವೂ 1917ರಲ್ಲಿ ಸಿ.ಐ.ಇ. ಸನ್ಮಾನವೂ 1925ರಲ್ಲಿ ಸರ್ ಪ್ರಶಸ್ತಿಯೂ ಇವರಿಗೆ ಬಂದವು. 1924ರಲ್ಲಿ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಚುನಾಯಿತರಾದರು. 1927ರಲ್ಲಿ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ ರಜತೋತ್ಸವ ಸಮಿತಿಗೂ 1936ರಲ್ಲಿ ನಡೆದ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವಕ್ಕೂ ಅಧ್ಯಕ್ಷರಾಗಿದ್ದರು. ಉಪನ್ಯಾಸಗಳನ್ನು ಏರ್ಪಡಿಸುವ ಮತ್ತು ಪುಸ್ತಕಗಳನ್ನು ಪ್ರಕಟಿಸುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇವರು ಇಪ್ಪತ್ತುಸಾವಿರ ರೂಪಾಯಿಯ ಶಾಶ್ವತ ನಿಧಿ ಕಲ್ಪಿಸಿದರು. ಕನ್ನಡ ಭಾಷೆ ಸಂಸ್ಕೃತಿಗಳ ಏಳ್ಗೆಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಹಾಗೂ ಸಂವರ್ಧನೆಗಳಿಗಾಗಿ ಅಪಾರ ಸಹಾಯ ಮಾಡಿದ್ದಾರೆ. 1921ನೆಯ ಮೇ ತಿಂಗಳಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಏಳನೆಯ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಪರಿಷತ್ತು ಇವರನ್ನು ಗೌರವಿಸಿತು. ಅಧ್ಯಕ್ಷ ಭಾಷಣದಲ್ಲಿ "ನಮ್ಮ ದೇಶೋನ್ನತಿಯೂ ನಮ್ಮ ಮೋಕ್ಷವೂ ದೇಶಭಾಷೆಗಳ ಮೂಲಕವಾಗಿಯೇ ಆಗಬೇಕು" ಎಂದೂ 1936ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ವಿಶೇಷ ಸಾಹಿತ್ಯ ಸಮ್ಮೇಳನದ ಉದ್ಘಾಟನೆ ಮಾಡುತ್ತಾ "ನಮ್ಮಲ್ಲಿ ಸಾಹಿತ್ಯ ಪ್ರಚಾರವಾಗಿ ಜ್ಞಾನ ಹರಡಲಿ. ಕನ್ನಡಿಗರು ಮುಂದಕ್ಕೆ ಬರಲಿ ಕನ್ನಡಬಾಳು ಬೆಳೆಯಲಿ" ಎಂದೂ ಹರಸಿದ್ದಾರೆ. 1938ರಲ್ಲಿ ಬೆಂಗಳೂರು ವೀರಶೈವ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. 1905 ಮತ್ತು 1927ರಲ್ಲಿ ನಡೆದ ಅಖಿಲಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರೂ ಆಗಿದ್ದ ಇವರು 1938 ಜುಲೈ 23ರಂದು ನಿಧನರಾದರು. ಇವರ ನೆನಪಾಗಿ ಬೆಂಗಳೂರಿನಲ್ಲಿ ಸರ್ ಪುಟ್ಟಣ್ಣ ಚೆಟ್ಟಿ ಪುರಭವನ ಹಾಗೂ ರಸ್ತೆ ಇವೆ. **(ಕೆ.ಕೆ.)**

**ಪುಟ್ಟಪ್ಪ, ಕೆ.ವಿ.:** 1904–94. ಕುವೆಂಪು ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿ ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿದ ಕವಿಗಳು. ದಾರ್ಶನಿಕರು, ಶಿಕ್ಷಣತಜ್ಞರು, ಆಡಳಿತಗಾರರು. 20ನೆಯ ಶತಮಾನದ ಮೇರುಕೃತಿ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಕರ್ತೃ. ಪೂರ್ಣ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿ ಇವರ ಊರು. ತಾಯಿಯ ಊರಾದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರಿಕೊಡಿಗೆಯಲ್ಲಿ 1904 ಡಿಸಂಬರ್ 29ರಂದು ಜನಿಸಿದರು. ತಂದೆ ವೆಂಕಟಪ್ಪಗೌಡ; ತಾಯಿ ಸೀತಮ್ಮ.

ಪುಟ್ಟಪ್ಪನವರು ಹುಟ್ಟಿದ ಸಮಯದಲ್ಲಿ ಮಲೆನಾಡು ಮೌಢ್ಯ ಮತ್ತು ಕಂದಾಚಾರಗಳ ಗೊಂಡಾರಣ್ಯವಾಗಿತ್ತು. ಶಾಲೆಯ ಶಿಕ್ಷಣ ದೊರೆಯುವುದು ಕನಸಿನ ಮಾತಾಗಿತ್ತು. ಶ್ರೀಮಂತ ಮಕ್ಕಳಿಗೆ ಮಾತ್ರ ಕೂಲಿಮಠದಲ್ಲಿ ಖಾಸಗಿಯಾಗಿ ಅಕ್ಷರಾಭ್ಯಾಸ ಸಾಧ್ಯವಿತ್ತು. ಪುಟ್ಟಪ್ಪನವರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಐಗಳಿಂದ ಮನೆಯ ಮಹಡಿಯಲ್ಲಿ ಮರಳು ಮತ್ತು ಸ್ಲೇಟಿನ ಮೇಲೆ ಅಕ್ಷರಾಭ್ಯಾಸ ನಡೆಯಿತು. ಪುಟ್ಟಪ್ಪನವರು ತಮ್ಮ ಬಾಲ್ಯ ಜೀವನವನ್ನು ಸಾಮಾನ್ಯ ಬಾಲಕರಂತೆಯೇ ಕಳೆದರು. ಇವರ ಮನೆಯಲ್ಲಿ ಆಗಾಗ್ಗೆ ನಡೆಯುತ್ತಿದ್ದ ರಾಮಾಯಣ, ಮಹಾಭಾರತಗಳ ವಾಚನ, ಊರಲ್ಲಿನ ಭಾಗವತರಾಟಗಳು ಇವರ ಎಳೆಯ ಮನಸ್ಸಿನ ಮೇಲೆ ಗಾಢ ಪ್ರಭಾವವನ್ನು ಬೀರಿದವು. ಒಮ್ಮೆ ಬಿ.ಎಸ್.ಡಿ. ಮೋಸೆಸ್ ಎಂಬ ಕ್ರೈಸ್ತ ಪಾದ್ರಿಯೊಬ್ಬರ ಬೋಧನೆಯಿಂದಾಗಿ ಪುಟ್ಟಪ್ಪನವರು ಕ್ರೈಸ್ತಧರ್ಮದ ಬಗ್ಗೆ ಅಪಾರವಾದ ವ್ಯಾಮೋಹಕ್ಕೆ ಒಳಗಾದದ್ದೂ ಉಂಟು. ಇದರಿಂದ ತಪ್ಪಿಸಿಕೊಳ್ಳಲು ಇವರಿಗೆ ಸಾಕಷ್ಟು ಕಾಲ ಹಿಡಿಯಿತು.

ಪುಟ್ಟಪ್ಪನವರು ಪ್ರಕೃತಿಯ ಮಡಿಲಲ್ಲಿ ಬೆಳೆದವರು. ಸಹ್ಯಾದ್ರಿ ಸೀಮೆಯ ಗಿಳಿ ಕಾಜಾಣ ಕೋಗಿಲೆ ಕಾಮಳ್ಳಿ ಮೊದಲಾದ ಪಕ್ಷಿ ಸಂಕುಲ, ಕಡ, ಮುಸಿಯ, ಕೋಡಗ, ಜಿಂಕೆ, ಸಾರಗ, ಹುಲಿ ಮುಂತಾದ ಪ್ರಾಣಿಸಮೂಹ, ಕೇದಗೆ ಬಕುಳ ಮಲ್ಲಿಗೆ ಸೀತಾಳಿ ಮುಂತಾದ ಪುಷ್ಪ ರಾಶಿ ಇವರನ್ನಾಕರ್ಷಿಸಿ ಇವರಿಗೆ ಆನಂದದ ಪೀಯೂಷವನ್ನೂಡಿದವು. ಹುಲಿಯ ಗರ್ಜನೆ, ಹಂದಿಯ ಆರ್ಭಟ, ಕಾಡುಕೋಳಿಯ ಚೀರುಲಿ ಇವರಿಗೆ ಸಾಹಸವನ್ನು ಕಲಿಸಿದವು. ಕೂಡು ಬೇಟೆ, ಸಾರಿಕೆ ಬೇಟೆ, ಮರಸು ಬೇಟೆ, ಬೆಳ್ದಿಂಗಳ ಬೇಟೆ ಮುಂತಾದವು ಇವರಿಗೆ ಕೌತುಕದ ಹೊಸಲೋಕವನ್ನು ತೆರೆದು ತೋರಿದವು. ಸೂಣೆಹಣ್ಣು, ಕಲ್ಲುಸಂಪಗೆ ಹಣ್ಣು, ಕಾಡು ಮಾವಿನ ಹಣ್ಣು, ಕಣಗಿಲು ಹಣ್ಣು, ಇಪ್ಪೆಹಣ್ಣು, ನೇರಳೆಹಣ್ಣು ಇವರಿಗೆ ವೈವಿಧ್ಯಮಯವಾದ ಸವಿರುಚಿಯ ತಿನಿಸುಗಳಾದವು. ತುಂಗಾನದಿ ಇವರ ವಿಹಾರದ ಕೇಂದ್ರವಾಯಿತು. ಹೀಗೆ 'ಮಲೆಯ ನಾಡ ಬನಗಳಲಿ ಮುಗುದ ಬಾಲ ಅಲೆಯುತಿರಲು ಅರಿಯದಂತೆ ಹೆಜ್ಜೆಯಿಟ್ಟು ಬೆನ್ನ ಹಿಂದೆ' ಕಬ್ಬದಂಗನೆ ನಡೆದು ಬಂದಳು. ಆದರೆ ಅದನ್ನು ಕಂಡುಕೊಳ್ಳಲು ಇವರಿಗೆ ಸಾಕಷ್ಟು ಕಾಲ ಬೇಕಾಯಿತು.

ತೀರ್ಥಹಳ್ಳಿಯಲ್ಲಿ ತಮ್ಮ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಮುಗಿಸಿದ ಪುಟ್ಟಪ್ಪನವರು 1918ರಲ್ಲಿ ಮೈಸೂರಿಗೆ ಬಂದು, ವೆಸ್ಲಿಯನ್ ಮಿಷನ್ ಹೈಸ್ಕೂಲಿನ ವಿದ್ಯಾರ್ಥಿಯಾದರು. ಹೈಸ್ಕೂಲು ಜೀವನ ಇವರ ಜೀವನದ ಒಂದು ಪ್ರಮುಖ ಘಟ್ಟ. ಮಲೆನಾಡನ್ನು ಬಿಟ್ಟು ಮೈಸೂರಿಗೆ ಬಂದದ್ದು ಇವರ ಜ್ಞಾನಾರ್ಜನೆಯ ವಿಕಾಸಕ್ಕೆ ತುಂಬಾ ಸಹಾಯಕವಾಯಿತು. ಅಲ್ಲಿ ದೊಡ್ಡ ದೊಡ್ಡ ಗ್ರಂಥ ಭಂಡಾರಗಳು ಇವರ ಜ್ಞಾನದಾಹವನ್ನು ಒಂದರ್ಥದಲ್ಲಿ ಇಂಗಿಸಿದರೆ ಮತ್ತೊಂದರ್ಥದಲ್ಲಿ ಹೆಚ್ಚು ಮಾಡುತ್ತಿದ್ದವು. ಈ ಬಗೆಯ ಸಾತ್ತ್ವಿಕ ಅತೃಪ್ತಿ ಇವರ ಪ್ರತಿಭೆಯ ವಿಕಾಸಕ್ಕೂ ಸುಪ್ತಚೇತನದ ಪ್ರಕಾಶಕ್ಕೂ ದಾರಿಮಾಡಿಕೊಟ್ಟಿತು. ಈ ಸಮಯದಲ್ಲೇ ಇವರಿಗೆ ವ್ಯಾಪಕವಾದ ಸಾಹಿತ್ಯಾಸಕ್ತಿ ಬೆಳೆದದ್ದು, ಪಾಶ್ಚಾತ್ಯ ಸಾಹಿತ್ಯದ ಪ್ರಮುಖ ಕವಿಗಳಾದ ವರ್ಡ್ಸ್‌ವರ್ತ್, ಷೆಲ್ಲಿ, ಟಾಲ್‌ಸ್ಟಾಯ್ ಮೊದಲಾದವರ

ಕೃತಿಗಳನ್ನು ಇವರು ಓದಿದ್ದು ಮತ್ತು ಮಿಲ್ಟನ್ ಕವಿಯ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯದ ಗಾಢ ಪ್ರಭಾವಕ್ಕೊಳಗಾದದ್ದು, ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣ ಪರಮಹಂಸರ ಕೃತಿಗಳನ್ನು ಅಧ್ಯಯನ ಮಾಡಿ ಹಿಂದುಧರ್ಮದ ಮೇಲೆ ಅಪಾರವಾಗಿ ಅನುರಕ್ತಗೊಂಡದ್ದೂ ಈ ಸಮಯದಲ್ಲೇ. ಶಂಕರಾಚಾರ್ಯರ ಕೃತಿಗಳಿಂದಲೂ ಇವರು ಪ್ರಭಾವಿತರಾದರು. ಮಹಾತ್ಮಾಗಾಂಧೀಜಿಯವರ ಸ್ವಾತಂತ್ರ್ಯ ಚಳವಳಿಯ ಪ್ರಭಾವಕ್ಕೆ ಒಳಗಾದ ಇವರು ವಿದೇಶೀಯ ಉಡುಗೆಯನ್ನು ತ್ಯಜಿಸಿ ಸ್ವದೇಶೀಯ ಉಡುಗೆಯನ್ನು ಧರಿಸಲು ನಿರ್ಧರಿಸಿದರು. ತಮ್ಮ ಜೀವನದುದ್ದಕ್ಕೂ ಖಾದಿ ಧರಿಸುವುದನ್ನು ಮುಂದುವರಿಸಿಕೊಂಡು ಬಂದರು.

ಪುಟ್ಟಪ್ಪನವರು 1921ರಲ್ಲಿ ಹೈಸ್ಕೂಲಿನಲ್ಲಿದ್ದಾಗ 'ಪದ್ಮಪತ್ರದ ಸಂಘ'ವನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ ಕಾವ್ಯವಿಮರ್ಶೆ, ವಿವೇಕಾನಂದರ ಕೃತಿಗಳ ಚರ್ಚೆ ಮತ್ತು ವ್ಯಾಸಂಗ ಗೋಷ್ಠಿಗಳನ್ನು ನಡೆಸಿದರು. ಅದೇ ಸಮಯದಲ್ಲಿ ಇವರಿಗೆ ಸ್ವಾಮಿ ಸಿದ್ದೇಶ್ವರಾನಂದರ ಪರಿಚಯವಾಗಿ, ಆ ಮೂಲಕ ಶ್ರೀರಾಮಕೃಷ್ಣಾಶ್ರಮದ ಸಂಪರ್ಕ ಬೆಳೆಯಿತು. ಈ ಸಂಪರ್ಕ ಸಂಬಂಧಕ್ಕೆ ತಿರುಗಿ ಬಾಳಿನುದ್ದಕ್ಕೂ ಉಳಿದು ಬಂತು. ಅದು ಇವರ ಜೀವನದ ಕೆಲವು ಮುಖ್ಯ ತಿರುವುಗಳಿಗೂ ಕಾರಣವಾಯಿತು. ಪುಟ್ಟಪ್ಪನವರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ, ಶ್ರೇಷ್ಠ ಇಂಗ್ಲಿಷ್ ಕವನಗಳನ್ನು ಅನುಸರಿಸಿ ಇಂಗ್ಲಿಷ್ ಭಾಷೆಯಲ್ಲಿ ಅನೇಕ ಕವನಗಳನ್ನು ರಚಿಸಿದ್ದರು. ಆ ಕವನಗಳಲ್ಲಿ ಕೆಲವನ್ನು ಆಯ್ದು ಬಿಗಿನರ್ಸ್ ಮ್ಯೂಸ್ ಎಂಬ ಕವನ ಸಂಕಲನವನ್ನು (1922) ಪ್ರಕಟಿಸಿದರು. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಪುಟ್ಟಪ್ಪನವರಿಗಿದ್ದ ಇಂಗ್ಲಿಷ್ ವ್ಯಾಮೋಹ. ಅದು ಕನ್ನಡವನ್ನು ಅಸಡ್ಡೆಯಾಗಿ ಕಾಣುವಷ್ಟರ ಮಟ್ಟಿಗೆ ಗಾಢವಾಗಿತ್ತು. ಈ ಹುಚ್ಚನ್ನು ಬಿಡಿಸಿದವರು ಐರಿಷ್ ಕವಿ ಜೇಮ್ಸ್ ಕಸಿನ್ಸ್ ಅವರು. ಕುವೆಂಪು ಅವರ ಇಂಗ್ಲಿಷ್ ಕವನಗಳನ್ನು ನೋಡಿದ ಅವರು ಪುಟ್ಟಪ್ಪನವರನ್ನು ಕನ್ನಡದಲ್ಲಿ ಬರೆಯುವಂತೆ ಪ್ರೇರೇಪಿಸಿದರು. ಅದೊಂದು ಪರಿವರ್ತನೆಯ ಮಹಾಘಟ್ಟ. ಮುಂದೆ ಇವರು ಕನ್ನಡದಲ್ಲಿ ಕಾವ್ಯರಚನೆಗೆ ತೊಡಗಿದರು. 1924ರಲ್ಲಿ ಗೋವಿನ ಹಾಡಿನ ಧಾಟಿಯಲ್ಲಿ ರಚಿತವಾದ ಅಮಲನ ಕಥೆ-ಇವರ ಮೊದಲ ಕನ್ನಡ ಕಾವ್ಯ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಅದೇ ವರ್ಷ ಇವರು ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾದರು. ಅಲ್ಲಿ ಇವರಿಗೆ ಬಿ.ಎಂ. ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿಗಳ ಪ್ರೀತಿ ವಾತ್ಸಲ್ಯ ಪ್ರೋತ್ಸಾಹ ಮತ್ತು ಮಾರ್ಗದರ್ಶನಗಳು ಲಭ್ಯವಾದುವು. ಇವರ ಕನ್ನಡಾಭಿಮಾನ ಮತ್ತಷ್ಟು ದೃಢವಾಯಿತು. ಬಿ.ಎ. ಮುಗಿಯುವ ಹೊತ್ತಿಗೆ ಪಾಶ್ಚಾತ್ಯಸಾಹಿತ್ಯ, ವಿಮರ್ಶೆ, ಕಾವ್ಯಮೀಮಾಂಸೆ, ತತ್ತ್ವಶಾಸ್ತ್ರ ಮುಂತಾದ ವಿಷಯಗಳು ಇವರಿಗೆ ಕರಗತವಾದವು. ಪ್ಲೇಟೋ ಅರಿಸ್ಟಾಟಲ್ ರಿಂದ ಹಿಡಿದು ಕಾಂಟ್, ಹೆಗಲ್ ಅವರವರೆಗೆ ಇವರ ಅಧ್ಯಯನ ನಡೆದಿತ್ತು. ಬಿ.ಎ. ಎರಡನೆಯ ತರಗತಿಯಲ್ಲಿದ್ದಾಗಲೆ ಇವರ ಪ್ರಸಿದ್ಧ ಕೃತಿ ಕಿಂದರಿಜೋಗಿ ಪ್ರಕಟವಾಯಿತು. 1926ರ ಹೊತ್ತಿಗೆ ಕುವೆಂಪು ಕನ್ನಡನಾಡಿನಲ್ಲೆಲ್ಲ ಮನೆ ಮಾತಾಗಿದ್ದರು. 1928ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಕವಿಸಮ್ಮೇಳನದ ಅಧ್ಯಕ್ಷರಾದರು. 8-10-1929ರಲ್ಲಿ ಕಲ್ಕತ್ತೆಗೆ ಹೋಗಿ ಗುರುಮಹಾರಾಜರ ಭೇಟಿಮಾಡಿ, ದೀಕ್ಷೆಪಡೆದು ಸ್ವಾಮಿ ವಿವೇಕಾನಂದರ ಕೊಠಡಿಯ ದರ್ಶನ ಪಡೆದರು. ಈ ಪ್ರಭಾವ ಇವರ ಮೇಲೆ ದಟ್ಟವಾಗಿಯೇ ಆಯಿತು. ಇವರು ಬ್ರಹ್ಮಚಾರಿಯಾಗಿಯೇ ಉಳಿಯುವ ಸಾಧ್ಯತೆಗಳು ಕಂಡುಬಂದವು. ಆದರೆ ಅನೇಕರ ಪ್ರಯತ್ನದಿಂದಾಗಿ ಹಾಗಾಗದೆ ಕುವೆಂಪು 1937ರ ಏಪ್ರಿಲ್ ತಿಂಗಳಲ್ಲಿ ತೀರ್ಥಹಳ್ಳಿ ದೇವಂಗಿಯ ರಾಮಣ್ಣಗೌಡರ ಪುತ್ರಿ ಹೇಮಾವತಮ್ಮನವರನ್ನು ಮದುವೆಯಾದರು. ಅವರ ದಾಂಪತ್ಯ ಜೀವನದ ಪ್ರಭಾವದಿಂದ ಪ್ರೇಮ ಕಾಶ್ಮೀರ, ಜೇನಾಗುವಾ, ಚಂದ್ರಮಂಚಕೆ ಬಾ ಚಕೋರಿಯಂಥ ಉನ್ನತಮಟ್ಟದ ಶೃಂಗಾರಗೀತೆಗಳ ಸಂಕಲನಗಳು ಪ್ರಕಟವಾದವು. ಪೂರ್ಣಚಂದ್ರ ತೇಜಸ್ವಿ, ಕೋಕಿಲೋದಯ ಚೈತ್ರ ಎಂಬ ಗಂಡು ಮಕ್ಕಳು ಇಂದುಕಲಾ ಮತ್ತು ತಾರಿಣಿ ಎಂಬ ಹೆಣ್ಣು ಮಕ್ಕಳೂ ಜನಿಸಿದರು.

ಪುಟ್ಟಪ್ಪನವರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ (1929), ಉಪಪ್ರಾಧ್ಯಾಪಕರಾಗಿ (1939) ಮತ್ತು ಪ್ರಾಧ್ಯಾಪಕರಾಗಿ (1945) ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನಬೋಧನೆ ಮಾಡಿದ್ದಲ್ಲದೆ 1955ರಲ್ಲಿ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಕಾರ್ಯನಿರ್ವಹಿಸಿದರು. ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡು ಸುಮಾರು ನಾಲ್ಕು ವರ್ಷಗಳ ಕಾಲ (1956-60) ಆ ಹುದ್ದೆಯಲ್ಲಿದ್ದರು. ಪುಟ್ಟಪ್ಪನವರು ಅಧಿಕಾರಕ್ಕಾಗಿ ಎಂದೂ ಆಸೆಪಟ್ಟವರಲ್ಲ. ಆದರೆ ಅನಾಯಾಸವಾಗಿ ಒದಗಿದ ವಿವಿಧ ಹುದ್ದೆಗಳ ನೆರವಿನಿಂದ ಕನ್ನಡಭಾಷೆ ಸಾಹಿತ್ಯಗಳ ಮೇಲ್ಮೆಗಾಗಿ ಇವರು ಮಾಡಿದ ದುಡಿಮೆ ಕರ್ನಾಟಕದ ಇತಿಹಾಸದ ಭಾಗವಾಗಿದೆ. ಪುಟ್ಟಪ್ಪನವರು ಇಂಟರ್‌ಮೀಡಿಯೆಟ್ ಹಂತದಲ್ಲಿ ಮೊದಲ ಬಾರಿಗೆ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಜಾರಿಗೆ ತಂದರು. ಇವರು ಕುಲಪತಿಗಳಾದ ಸಮಯದಲ್ಲಿ ಸ್ಥಾಪಿಸಿದ ಮಾನಸಗಂಗೋತ್ರಿ (1960) ಇಂದು ಒಂದು ದೊಡ್ಡ ವಿದ್ಯಾಕೇಂದ್ರವಾಗಿ ಬೆಳೆದಿದೆ. ವಿಶ್ವವಿದ್ಯಾನಿಲಯದ ಕಾರ್ಯ ಕಲಾಪವನ್ನು ಬೋಧನಾಂಗ,

ಸಂಶೋಧನಾಂಗ ಮತ್ತು ಪ್ರಸಾರಾಂಗ ಎಂದು ವಿಭಜಿಸಿ ಅದಕ್ಕೆ ಚೈತನ್ಯವನ್ನು ತುಂಬಿದರು. ಶಿಕ್ಷಣದ ಎಲ್ಲ ಹಂತಗಳಲ್ಲೂ ಕನ್ನಡದ ವ್ಯಾಪಕ ಬಳಕೆಗೆ ಪ್ರಯತ್ನಿಸಿದರು. ಪ್ರಸಾರಾಂಗದ ಮೂಲಕ ಕನ್ನಡದಲ್ಲಿ ಪಠ್ಯಪುಸ್ತಕಗಳ ನಿರ್ಮಾಣಕ್ಕೆ ಭದ್ರವಾದ ಅಡಿಪಾಯ ಹಾಕಿದರು. 1960ರಲ್ಲಿ ಉಪಕುಲಪತಿಯ ಸ್ಥಾನದಿಂದ ನಿವೃತ್ತರಾದ ಪುಟ್ಟಪ್ಪನವರು ಮುಂದೆ ತಮ್ಮ ಪೂರ್ಣ ಕಾಲವನ್ನು ಸಾಹಿತ್ಯ ಸೃಷ್ಟಿಗಾಗಿ ಮೀಸಲಾಗಿರಿಸಿದರು. ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದನ್ನು ಬಹಳಮಟ್ಟಿಗೆ ಬಿಟ್ಟುಬಿಟ್ಟರು. ಆದರೆ ಸಾಹಿತ್ಯದ ಕಾಳಜಿಯಿಂದ ಅವರ ಬಳಿಗೆ ಯಾರೇ ಹೋದರೂ ಗಂಟೆಗಟ್ಟಲೆ ಚರ್ಚಿಸಿ, ಸಲಹೆ ಕೊಡುತ್ತಿದ್ದರು. ಕಾಡುಹರಟೆಗಾಗಲೀ ಲೋಕಾಭಿರಾಮದ ವ್ಯವಹಾರಕ್ಕಾಗಲೀ ಅವರಲ್ಲಿ ಎಡೆ ಇರಲಿಲ್ಲ.

ಕುವೆಂಪು ಕನ್ನಡ ನಾಡುನುಡಿಗಳ ಮೇಲ್ಮೆಗಾಗಿ, ಕರ್ನಾಟಕದ ಏಕೀಕರಣಕ್ಕಾಗಿ ಸತತವಾಗಿ ಹೋರಾಟ ಮಾಡಿದರು. ಈ ಸಂಗ್ರಾಮದಲ್ಲಿ ಇವರ ಧೀಮಂತ ಲೇಖನಿಯೇ ಖಡ್ಗವಾಯಿತು. ಇವರ ಮಹೋನ್ನತ ವ್ಯಕ್ತಿತ್ವವನ್ನು ಎದುರಿಸಲಾರದೆ ಕನ್ನಡ ವಿರೋಧಿ ಶಕ್ತಿ ಕುಗ್ಗಿತು. ಛಿದ್ರಛಿದ್ರವಾಗಿದ್ದ ಕನ್ನಡ ನಾಡು ಒಂದುಗೂಡಬೇಕು, ಅದಕ್ಕೆ ಕರ್ನಾಟಕವೆಂದು ಹೆಸರಾಗಬೇಕೆಂದು ಕುವೆಂಪು ನಿರಂತರವಾಗಿ ಸಾರಿಸಾರಿ ಹೇಳಿದರು. ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು, ಆಡಳಿತ ಭಾಷೆಯಾಗಬೇಕು ಎಂಬುದಾಗಿ ಇವರು ತಮ್ಮ ಬರೆಹಗಳಲ್ಲಿ, ಭಾಷಣಗಳಲ್ಲಿ ಘೋಷಿಸಿದರು. ಬಹುಭಾಷೆಗಳಲ್ಲಿ ದ್ವಿಭಾಷೆ ಎಂಬುದು ಕುವೆಂಪು ಸೂತ್ರ. ಇವರಿಗೆ ಅನ್ಯಭಾಷೆಗಳ ಬಗ್ಗೆ ಅಗೌರವವಿಲ್ಲ. ಬಲಾತ್ಕಾರದ ಭಾಷೆಯಾಗಿ ಮಾತ್ರ ಇವರು ಯಾವುದನ್ನೂ ಸಹಿಸರು. ಕರ್ನಾಟಕವನ್ನು ಪ್ರೀತಿಸುವಂತೆಯೇ ಭಾರತವನ್ನು ಪ್ರೀತಿಸುತ್ತಾರೆ. ಅಂತೆಯೇ ವಿಶ್ವವನ್ನು ಕೂಡ. ಭಾರತ ಜನನಿಯ ತನುಜಾತೆಯಾಗಿ ಇವರು ಕರ್ನಾಟಕ ಮಾತೆಯನ್ನು ಪರಿಭಾವಿಸುತ್ತಾರೆ.

ಕುವೆಂಪು ಸೃಷ್ಟಿಸಿರುವ ಸಾಹಿತ್ಯ ಬೆರಗುಗೊಳಿಸುವಂಥದು. ಕಾವ್ಯ, ಕಥೆ, ಕಾದಂಬರಿ, ನಾಟಕ, ಜೀವನಚಿತ್ರ, ಮಕ್ಕಳ ಸಾಹಿತ್ಯ, ಮಹಾಕಾವ್ಯ ಮುಂತಾದ ನಾನಾಪ್ರಕಾರಗಳಲ್ಲಿ ಇವರು ಸುಮಾರು ಅರವತ್ತಾರು ಕೃತಿಗಳನ್ನು (1977) ಪ್ರಕಟಿಸಿದ್ದಾರೆ. ಪ್ರತಿಭೆ, ಪಾಂಡಿತ್ಯ ಮತ್ತು ವ್ಯಾಪಕವಾದ ಜೀವನಾನುಭವದ ಬೆಳಕಿನಲ್ಲಿ ಇವರ ಕೃತಿಗಳು ಕಾಂತಿಗೊಂಡಿವೆ.

ಕುವೆಂಪು ಮೂಲತಃ ಕವಿ. ಇವರ ಯಾವುದೇ ಸಾಹಿತ್ಯ ಪ್ರಕಾರ ಇದನ್ನು ಸಮರ್ಥಿಸುತ್ತದೆ. ಕಾವ್ಯದ ಗಂಧ ಅದಕ್ಕೆ ತಟ್ಟಿರುತ್ತದೆ. ಅಮಲನ ಕಥೆಯಿಂದ ಹಿಡಿದು ಶ್ರೀ ರಾಮಾಯಣದರ್ಶನಂ ಮಹಾಕಾವ್ಯದವರೆಗೆ ಇವರ ಕಾವ್ಯವಾಹಿನಿ ವಿವಿಧ ಗತಿಗಳಲ್ಲಿ, ವಿವಿಧ ಸ್ತರಗಳಲ್ಲಿ ವಿವಿಧ ರೀತಿಯಲ್ಲಿ ಪ್ರವಹಿಸಿವೆ. ಕಲೆ, ಜೀವನ, ತತ್ತ್ವ, ಅಧ್ಯಾತ್ಮ, ಪ್ರಕೃತಿ, ಪ್ರೀತಿ, ದೇವರು, ನಾಡು, ನುಡಿ, ವಿಜ್ಞಾನ, ಪುರಾಣ, ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಮೀಮಾಂಸೆ – ಹೀಗೆ ಎಲ್ಲವೂ ಇವರ ಕಾವ್ಯಚಿಂತನೆಗೆ ವಸ್ತುವಾಗಿದೆ. ಕೊಳಲು, ನವಿಲು, ಪಾಂಚಜನ್ಯ, ಕಲಾಸುಂದರಿ, ಕೃತ್ತಿಕೆ, ಕಿಂಕಿಣಿ, ಇಕ್ಷುಗಂಗೋತ್ರಿ, ಪಕ್ಷಿಕಾಶಿ, ಪ್ರೇತಕ್ಯೂ, ಹೊನ್ನ ಹೊತ್ತಾರೆ ಮುಂತಾದ ಕವನಸಂಕಲನಗಳಲ್ಲಿ ಇದನ್ನು ಗುರುತಿಸಬಹುದು.

ಜೀವನದ ನಾನಾ ವ್ಯಾಪಾರಗಳು ಕುವೆಂಪುರವರ ಅಂತಃಚಕ್ಷುವಿನಿಂದ ಆವಿಷ್ಕಾರಗೊಂಡು ಹೊಸ ಹೊಸ ಅರ್ಥಗಳನ್ನು ಮುಕ್ಕಳಿಸಿವೆ. ಭಾವದ ಉನ್ಮತ್ತಾವಸ್ಥೆಯ ಶ್ರೇಷ್ಠತಮ ಅಭಿವ್ಯಕ್ತಿಯಲ್ಲೂ ಗಾಢವಾದ ಜೀವನಶ್ರದ್ಧೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಹೊಂದಿರುವುದು ಕುವೆಂಪು ಕಾವ್ಯದ ವಿಶೇಷ. ವ್ಯಾಪಕವಾದ ಜೀವನ ವೈಚಿತ್ರ್ಯದ ಹರವಿನಿಂದ ಕವಿ ತೀವ್ರವಾಗಿ ಸಂವೇದನೆಗೊಂಡಿದ್ದರಿಂದ, ವೈವಿಧ್ಯಮಯವಾದ ಕಾವ್ಯದ ವಿಕಾಸಕ್ಕೆ ಕಾರಣವಾಯಿತು. ಅನುಭವದ ಸಂಕೀರ್ಣತೆ ಅಭಿವ್ಯಕ್ತಿಯ ಸಂಕೀರ್ಣತೆಗೆ ಮೀಟುಗೋಲಾಗಿ ಕುವೆಂಪುರವರ ಸಾಹಿತ್ಯ ನಾನಾ ರೀತಿಯಲ್ಲಿ ಬಣ್ಣಗೊಂಡಿದೆ. ವಿಮರ್ಶಕರೊಬ್ಬರ ಮಾತಿನಲ್ಲಿ ಹೇಳುವುದಾದರೆ ಕುವೆಂಪು ಪಾಶ್ಚಾತ್ಯ ಸಾಹಿತ್ಯಕ್ಕೆ ಒಂದು ಸವಾಲು; ಅಲ್ಲಿನ ಸಮಸ್ತ ಕಾವ್ಯ ಪ್ರಕಾರಗಳನ್ನು ಕನ್ನಡಕ್ಕೆ ತಂದವರು. ಆಧುನಿಕ ಸಾಹಿತಿಗಳಲ್ಲಿ ಇವರಷ್ಟು ವೈವಿಧ್ಯತೆಯನ್ನು ವ್ಯಾಪಕತೆಯನ್ನು ಕನ್ನಡಕ್ಕೆ ತಂದುಕೊಟ್ಟವರು ಮತ್ತೊಬ್ಬರಿಲ್ಲ. ಕುವೆಂಪು ಅವರ ಸಾಹಿತ್ಯದ ಬಾಹ್ಯ ರೂಪಾಂಶಕ್ಕೆ ಪಾಶ್ಚಾತ್ಯ ಸಾಹಿತ್ಯಕ ಆಕಾರಗಳು ತಕ್ಕಮಟ್ಟಿಗೆ ಆಕರಗಳಾಗಿದ್ದರೂ ಭಾರತೀಯ ಬದುಕಿನ ಸಾಂಸ್ಕೃತಿಕ ಹಿನ್ನೆಲೆ ಮತ್ತು ಪರಂಪರೆ ಅದರ ಜೀವಶಕ್ತಿ ಎಂಬುದನ್ನು ಮರೆಯುವಂತಿಲ್ಲ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ತೀವ್ರ ಪ್ರಭಾವಕ್ಕೊಳಗಾಗಿರುವ ಬಿಗಿನರ್ಸ್ ಮ್ಯೂಸ್ ಮತ್ತು ಏಲಿಯನ್ ಹಾರ್ಪ್ ಎಂಬ ಇವರ ಇಂಗ್ಲಿಷ್ ಕವನ ಸಂಕಲನಗಳಲ್ಲೂ ನಮ್ಮ ನೆಲದ ಕಂಪು ಹೊರಹೊಮ್ಮಿರುವುದನ್ನು ಗುರುತಿಸಬಹುದು.

ವೈಚಾರಿಕತೆ ಕುವೆಂಪು ಸಾಹಿತ್ಯದ ಜೀವಜೀವಾಳ. ಇವರು ಮೌಢ್ಯದ ವಿರುದ್ಧ ಸಿಡಿದು ಸಿಡಿಲಾದದ್ದು ಗಮನಾರ್ಹವಾದ ಅಂಶ. ಇವರ ಬಹುಪಾಲು ಕವನಗಳು ವಿಚಾರ ಪರಿಪ್ಲುತವಾಗಿವೆ. ಜನತೆ ಅಂಧಶ್ರದ್ಧೆಯ ಗೊಂಡಾರಣ್ಯದಿಂದ ಪಾರಾಗಿ ವಿಚಾರಬುದ್ಧಿಯನ್ನು, ವೈಜ್ಞಾನಿಕ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂಬ ಕಳಕಳಿ ಇವರ ಬಹಳಷ್ಟು ಕವನಗಳಲ್ಲಿ ವ್ಯಕ್ತವಾಗಿದೆ.

ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮುಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನದೀವಿಗೆಯ ಹಿಡಿಯಬನ್ನಿ
ಓ, ಬನ್ನಿ, ಸೋದರರೆ ಬೇಗ ಬನ್ನಿ;
ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ;
ಓ, ಬನ್ನಿ, ಸೋದರರೆ ವಿಶ್ವಪಥಕೆ

ಜಾತಿ, ಮತ, ಪಂಥ, ಗುಂಪು, ವರ್ಗವ್ಯವಸ್ಥೆ, ವರ್ಣವ್ಯವಸ್ಥೆ ಮುಂತಾದ ಸಂಕುಚಿತ ದೃಷ್ಟಿಯ ನಾನಾ ಅಡ್ಡಗೋಡೆಗಳನ್ನು ಕೆಡವಿ, ಅಜ್ಞಾನದ ಕತ್ತಲೆಯನ್ನು ಭೇದಿಸಿಕೊಂಡು ಹೊರಬಂದು ಮಾನವ ಮತವನ್ನು ಹಿಡಿದು, ವಿಶ್ವಪಥದಲ್ಲಿ ನಡೆಯಬೇಕೆಂಬ ಹಿರಿಯ ಸಂದೇಶ ಇವರದು. ಕಲ್ಕಿ, ಇಂದಿನ ದೇವರು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಗೊಬ್ಬರ, ಕಿಶೋರ ನಾಸ್ತಿಕನ ಚಾರ್ವಾಕ ಗೀತೆ ಮುಂತಾದ ಇವರ ಕವನಗಳನ್ನು ಈ ನಿಟ್ಟಿನಲ್ಲಿ ನೆನೆಯಬಹುದು.

ನವಿಲು, ಪಕ್ಷಿಕಾಶಿ ಮುಂತಾದ ಸಂಕಲನಗಳಲ್ಲಿರುವ ಪ್ರಕೃತಿಯನ್ನು ಕುರಿತ ಕುವೆಂಪು ಕವನಗಳು ಕನ್ನಡದ ಕಾವ್ಯಕ್ಷೇತ್ರವನ್ನು ವಿಸ್ತರಿಸಿದುವು. ಕುವೆಂಪು ಸಾಹಿತ್ಯಕ ತತ್ತ್ವಗಳಿಗಿಂತ ಹೆಚ್ಚಾಗಿ ಜೀವನದ ವಾಸ್ತವಿಕತೆಗೆ ಅಂಟಿಕೊಂಡವರು. ಅನುಭವದ ಆಯಾ ಕ್ಷಣವನ್ನು ಪ್ರಾಮಾಣಿಕವಾಗಿ ಕಡೆದಿಡುವುದು ಇವರ ಮುಖ್ಯ ಉದ್ದೇಶ. ಪ್ರಕೃತಿಯ ಗೀತೆಗಳು ಇವರ ಸ್ವಸಂತೋಷಕ್ಕಾಗಿ ಹಾಡಿಕೊಂಡಾಗ ಮೂಡಿ ಬಂದವು. ಹೀಗಾಗಿ ಇಲ್ಲಿ ಕವಿ ಮತ್ತು ಪ್ರಕೃತಿಯ ನಿಕಟ ಸಂಬಂಧ,ಪ್ರಕೃತಿಯಲ್ಲಿ ಇವರು

ಪಡೆಯುವ ತನ್ಮಯತೆ, ಅಲ್ಲಿ ಅವರು ಗುರುತಿಸುವ ಸೌಂದರ್ಯ, ಆ ಮೂಲಕ ಭಗವಂತನನ್ನು ಕಾಣುವ ಮನೋಭಾವ ಮುಖ್ಯವಾಗುತ್ತದೆ. ಪ್ರಕೃತಿಯ ರೂಕ್ಷತೆಯನ್ನಾಗಲಿ ಲಾಲಿತ್ಯವನ್ನಾಗಲಿ ಕಂಡಾಗಲೆಲ್ಲ ಕವಿಚೇತನ ಸಂಭ್ರಮಗೊಳ್ಳುತ್ತದೆ. ತತ್ಪರಿಣಾಮವಾಗಿ ಈ ಸಡಗರ ಮತ್ತು ಲವಲವಿಕೆ ಇವರ ಕವನಗಳಲ್ಲೂ ಕಂಡುಬರುತ್ತದೆ. ಗೀತೆಗಳ ನಡೆ ಸಹಜ ಸುಂದರವಾಗಿರುತ್ತದೆ. ಮೊದಮೊದಲು ಶಿಶುಸಹಜವಾದ ಮುಗ್ಧತೆಯಿಂದ ಪ್ರಕೃತಿಯನ್ನು ಕಂಡ ಕವಿ ಮುಂದೆ ಕ್ರಮ ಕ್ರಮವಾಗಿ ಆಧ್ಯಾತ್ಮಿಕ ಪ್ರೇಮರಹಸ್ಯದಿಂದ ಅದನ್ನು ದರ್ಶಿಸುತ್ತಾರೆ. ಚಿನ್ನದ ಚೆಂಡಿನಂತೆ ಮೂಡುವ ಸೂರ್ಯ ಕವಿಯ ಪಾಲಿಗೆ ಸರ್ವೇಂದ್ರಿಯ ಸುಖನಿಧಿಯಾಗಿ, ಸರ್ವಾತ್ಮನ ಸನ್ನಿಧಿಯಾಗಿ ಕಂಡು ಬರುತ್ತಾನೆ. ಬೆಳ್ಳಕ್ಕಿಯ ಹಾರುವಿಕೆಯ ರೂಪದಲ್ಲಿ ದೇವರು ರುಜು ಮಾಡುವುದನ್ನು ಸುಲಭವಾಗಿ ಕಾಣುತ್ತಾರೆ. ಇಂಥ ಸಮಯಗಳಲ್ಲಿ ಅರಿವಿಕೆಗಿಂತ ಇರುವಿಕೆಯ ಸುಖವನ್ನು ಪಡೆಯಬೇಕೆಂಬುದು ಕವಿಯ ಸಂದೇಶ. ಕನ್ನಡದಲ್ಲಿ ಮಾತ್ರವಲ್ಲದೆ ಇಡೀ ಭಾರತೀಯ ಸಾಹಿತ್ಯದಲ್ಲಿ ಕುವೆಂಪು ಅವರ ಹಾಗೆ ಪ್ರಕೃತಿಯನ್ನು ಸಾಹಿತ್ಯ ಶರೀರದ ಒಂದು ಅವಿಭಾಜ್ಯ ಅಂಗವಾಗಿ ರೂಪಿಸಿದ ಕವಿಗಳು ಅತಿ ವಿರಳ.

ಕುವೆಂಪು ಪ್ರಕೃತಿಯಲ್ಲಿ ಭಗವಂತನನ್ನು ಕಾಣುವಂತೆಯೇ ಪ್ರಣಯವನ್ನೂ ಭಗವದಾರಾಧನೆಯಾಗಿ ಗ್ರಹಿಸುತ್ತಾರೆ.

ನಾ ನಿನಗೆ ನೀ ನನಗೆ ಜೇನಾಗುವಾ

ರಸದೇವಗಂಗೆಯಲಿ ಮೀನಾಗುವಾ

ಹೂವಾಗುವಾ ಹಣ್ಣಾಗುವಾ

ರತಿರೂಪಿ ಭಗವತಿಗೆ ಮುಡಿಪಾಗುವಾ !

– ಎಂಬ ಕವಿತೆಯಲ್ಲಿ ಇದನ್ನು ಗುರುತಿಸಬಹುದು.

ಕುವೆಂಪು ಅವರ ಕಥನಕವನಗಳಲ್ಲಿ ಶೈಲಿ ಮತ್ತು ಛಂಧಸ್ಸಿನ ದೃಷ್ಟಿಯಿಂದ ನಾನಾ ಪ್ರಯೋಗಗಳು ನಡೆದಿವೆ. ಈ ಬಗೆಯ ಕಾವ್ಯದಲ್ಲಿ ಸಾಮಾನ್ಯ ಜನರ ಬದುಕಿನ ನೈಜ ಚಿತ್ರಣವಿದ್ದು, ವಸ್ತು ಭಾವ ತತ್ತ್ವ ಮತ್ತು ಅಭಿವ್ಯಕ್ತಿಗಳಲ್ಲಿ ಒಳ್ಳೆಯ ಸಾಂಗತ್ಯವಿದೆ.

ನಾಟಕ ಕ್ಷೇತ್ರದಲ್ಲೂ ಕುವೆಂಪು ಅವರ ಸಾಧನೆ ದೊಡ್ಡ ಮಟ್ಟದ್ದು, ಇವರು ರಚಿಸಿರುವ ಹದಿನಾಲ್ಕು ನಾಟಕಗಳನ್ನು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ಮಕ್ಕಳ ನಾಟಕಗಳೆಂದು ವಿಂಗಡಿಸಬಹುದು. ಇವುಗಳಲ್ಲಿ ಜಲಗಾರ, ಬೆರಳ್ಗೆ ಕೊರಳ್, ಶ್ಮಶಾನ ಕುರುಕ್ಷೇತ್ರ, ಶೂದ್ರ ತಪಸ್ವಿ ನಾಟಕಗಳು ತುಂಬ ಮಹತ್ತ್ವದ ಕೃತಿಗಳಾಗಿವೆ. ಸಂಪ್ರದಾಯ ಜಡವಾದ ಸಮಾಜದಲ್ಲಿ ಕರ್ಮಯೋಗಿ ಜಲಗಾರನ ವ್ಯಕ್ತಿತ್ವ ಆದರ್ಶ ಪ್ರಾಯವಾಗಿದೆ. ನಿಸರ್ಗದ ಬಯಲುವೇದಿಕೆಯಲ್ಲಿ ಕಾಯಕವೇ ಕೈಲಾಸ ಎಂಬ ತತ್ತ್ವ ಪ್ರತಿಮಾರೂಪವನ್ನು ಪಡೆದುಕೊಂಡಿದೆ. ಅನೀತಿ, ಅಧರ್ಮ ಮತ್ತು ಜಾತಿಮದಾಂಧತೆಯಿಂದ ಕೆಸರಾದ ಸಾಮಾಜಿಕ ಪರಿಸರವೊಂದನ್ನು ಪ್ರತಿಮಾರೂಪದ ಕಲಾಮಾಧ್ಯಮದಿಂದ ಮೊದಲ ಬಾರಿಗೆ ಯಶಸ್ವಿಯಾಗಿ ರಂಗಭೂಮಿಯ ಮೇಲೆ ತಂದು ಜನಮನದ ಮೇಲೆ ತೀವ್ರವಾದ ಪರಿಣಾಮವನ್ನುಂಟು ಮಾಡಿದ್ದಾರೆ. 'ನನಗೇಕೆ ಶಿವಗುಡಿಯ ಯಾತ್ರೆ, ಕರ್ಮವೆ ಆರಾಧನೆ, ಸೇವೆಯೇ ಪೂಜೆ. ಪೊರಕೆ ಎನ್ನ ಭಾಗದ ಆರತಿ, ಗುಡಿಸುವುದೇ ನನ್ನ ದೇವರ ಪೂಜೆ' ಎನ್ನುವ ಜಲಗಾರನ ಮಾತಿನಲ್ಲಿ ಕರ್ಮ, ಸುಧಾರಣೆ ಮತ್ತು ಪ್ರಗತಿಗಾಮಿಯ ದೃಷ್ಟಿಯಿದೆ. ಶೂದ್ರ ತಪಸ್ವಿ ನಾಟಕಗಳಲ್ಲಿ ಪುರಾಣದ ವಸ್ತುವನ್ನು ಒಪ್ಪಿಕೊಂಡು ಅಲ್ಲಿನ ಮೌಢ್ಯತೆಯನ್ನು ತಿರಸ್ಕರಿಸಿದ್ದಾರೆ. ಬೆರಳ್ಗೆ ಕೊರಳ್ ಕನ್ನಡ ನಾಟಕ ಸಾಹಿತ್ಯದ ದೊಡ್ಡ ಸಿದ್ಧಿಗಳಲ್ಲಿ ಒಂದು. ಪೂರ್ಣದೃಷ್ಟಿಯಿಂದ ಕೂಡಿ ದರ್ಶನ ದೀಪ್ತವಾಗಿರುವ ಈ ನಾಟಕ ಗುರುತತ್ತ್ವ, ಕರ್ಮತತ್ತ್ವ ಮತ್ತು ಯಜ್ಞತತ್ತ್ವಗಳಿಂದ ಕೂಡಿದೆ. ಅರ್ಜುನನ ಮತ್ಸರಾಗ್ನಿಯ ಫಲವಾಗಿ ಏಕಲವ್ಯನ ಬೆರಳು ಗುರು ದ್ರೋಣರಿಗೆ ಆಹುತಿಯಾಗುತ್ತದೆ. ಅದರ ಫಲವಾಗಿ ದ್ರೋಣರ ಕೊರಳು ಬಲಿಯಾಗಿ, ಕರ್ಮದ ಪಾಂಗು ಮರಿಗೆ ಮರಿ, ಮರಿಗೆ ಮರಿಯಾಗಿ ಪರಿಣಮಿಸುತ್ತದೆ. ಕುರುಕ್ಷೇತ್ರ ಭೂಮಿಯಲ್ಲಿ ಮಹಾಭಾರತದ ಯುದ್ಧಾನಂತರ ಕಂಡು ಬರುವ ಭೀಕರ ಚಿತ್ರ, ಶ್ಮಶಾನ ಕುರುಕ್ಷೇತ್ರಂ ನಾಟಕದ ವಸ್ತು (1931). ಯುದ್ಧದಿಂದಾಗುವ ಅನರ್ಥ ಪರಂಪರೆಗಳನ್ನು ತುಂಬಾ ಪರಿಣಾಮಕಾರಿಯಾಗಿ ಈ ನಾಟಕ ದಲ್ಲಿ ತಂದಿದ್ದಾರೆ. ವಸ್ತು ಪೌರಾಣಿಕವಾದರೂ ಉಳಿದ ನಾಟಕಗಳಿಗಿಂತ ಹೆಚ್ಚು ಹೊಸ ವಿಷಯಗಳು ಇದರಲ್ಲಿ ಕಂಡುಬರುತ್ತವೆ. ನಾಶವೆಲ್ಲ ನವಸೃಷ್ಟಿಗೆ ನಾಂದಿ ಎಂಬ ತತ್ತ್ವ ಈ ನಾಟಕದಲ್ಲಿದೆ. ಅಲ್ಲದೆ ಸಾರ್ವಭೌಮತ್ವ ಭಂಗಂ ಸ್ವತಂತ್ರ ಭಾರತರಂಗಂ, ಸರ್ವಪ್ರಜಾಧಿಪತ್ಯಂ, ಸರ್ವಸಮತ್ವಂ, ಜಗತ್ ಕಲ್ಯಾಣಂ ಎಂದು ಸಾರಿದುದರಲ್ಲಿ ಈ ಕವಿಗಿರುವ ಋಷಿದೃಷ್ಟಿ, ಸ್ವಾತಂತ್ರ್ಯ ಪ್ರಜ್ಞೆ ಮತ್ತು ಸರ್ವೋದಯ ದೃಷ್ಟಿಯನ್ನು ಗುರುತಿಸಬಹುದು.

ಚಿಂತನ, ದರ್ಶನ, ವಾಸ್ತವತೆಯನ್ನು ಮತ್ತು ಋಜು ಮಾರ್ಗಗಳಿಂದಾಗಿ ಕುವೆಂಪು ಅವರ ನಾಟಕಗಳು ಕನ್ನಡ ಸಾಹಿತ್ಯದಲ್ಲಿ ಬೆಳಕಾಗಿವೆ. ಅಂಧಶ್ರದ್ಧೆ, ಕಂದಾಚಾರ, ವರ್ಣವಿದ್ವೇಷ ಮೊದಲಾದ ಸಾಮಾಜಿಕ ರೋಗಗಳಿಗೆ ಇವರು ತಮ್ಮ ನಾಟಕಗಳಲ್ಲಿ ಮದ್ದುಮಾಡಿ ಆಧುನಿಕತೆ ಯನ್ನು ಮೆರೆದಿದ್ದಾರೆ. ಪುರಾಣದ ಹಳೆಯ ತತ್ತ್ವಾಯುಧಗಳಿಗೆಲ್ಲ ವಿಜ್ಞಾನಯುಗದ ಹೊಸ ಸಾಣೆಯನ್ನು ಹಿಡಿದಿದ್ದಾರೆ. ಪ್ರಕೃತಿ ಹಿನ್ನೆಲೆಯಾಗಿ ನಿಲ್ಲುವುದು ಮಾತ್ರವಲ್ಲದೆ ಸೂತ್ರವೂ ಆಗಿ ಬರುವುದು ಇವರ ನಾಟಕಗಳ ಮತ್ತೊಂದು ವೈಶಿಷ್ಟ್ಯ. ರಸವತ್ತಾದ ಕಥಾಭಾಗಗಳು, ವಿನೂತನವಾದ ಕಲ್ಪನೆ, ಉತ್ತಮ ಸಂವಿಧಾನ, ಮನಮುಟ್ಟುವ ನಾಟ್ಯಶೈಲಿ, ಪಾತ್ರಗಳ ಜೀವಂತಿಕೆ, ಸಮಕಾಲೀನ ಪ್ರಜ್ಞೆ ಮುಂತಾದ ಅಂಶಗಳಿಂದ ಕುವೆಂಪು ನಾಟಕಗಳು ಕನ್ನಡ ಸಾಹಿತ್ಯದಲ್ಲಿ ಉನ್ನತ ಸ್ಥಾನ ಪಡೆದಿವೆ.

ವಿಮರ್ಶೆ ಮತ್ತು ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿಯೂ ಕುವೆಂಪು ರವರ ಸ್ವಂತ ಕೊಡುಗೆ ದೊಡ್ಡದಾಗಿಯೇ ಇದೆ. ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯ ತತ್ತ್ವಗಳನ್ನು ಮೊದಲಿಗೆ ಕನ್ನಡಕ್ಕೆ ತಂದುದಲ್ಲದೆ ಪ್ರತಿಮಾ, ಪ್ರತಿಕೃತಿ, ದರ್ಶನವಿಮರ್ಶೆ ಮೊದಲಾದ ಮಾರ್ಗಗಳನ್ನು ತೆರೆದರು. ರಸೋವೈಸಃ, ವಿಭೂತಿ ಪೂಜೆ, ತಪೋನಂದನ, ದ್ರೌಪದಿಯ ಶ್ರೀಮುಡಿ, ಸಾಹಿತ್ಯ ಪ್ರಚಾರ ಮುಂತಾದ ಕೃತಿಗಳು ಈ ಸಂಬಂಧದಂಥವು. ಇವರ ಕಾವ್ಯಗಳಲ್ಲಿಯೂ ಕಾವ್ಯಮೀಮಾಂಸೆ ಸುಂದರವಾಗಿ ವ್ಯಕ್ತಗೊಂಡಿದೆ.

ಚಿತ್ರಾಂಗದಾ ಕಾವ್ಯ ಶ್ರೀ ರಾಮಾಯಣದರ್ಶನಂ ಮಹಾಕಾವ್ಯದ ಮೊದಲ ಮೆಟ್ಟಿಲಾಗಿ ಹುಟ್ಟಿತು. ಕುವೆಂಪುರವರು ಬಿಡಿಭಾವಗೀತೆಗಳಲ್ಲಿ ಎಲ್ಲ ಸಾಧ್ಯತೆಗಳನ್ನೂ ಸೂರೆಗೊಂಡು ಸಿದ್ಧಿಯನ್ನು ಪಡೆದ ಮೇಲೆ ಮಹಾಕಾವ್ಯಕ್ಕೆ ಕೈಚಾಚುವುದು ಅನಿವಾರ್ಯವಾಯಿತು. ಈ ಮಹಾಮಾರ್ಗ ಕ್ರಮಣಕ್ಕೆ ಆದಿಯಲ್ಲಿ ದೀವಿಗೆಯಾಗಿ ಬೆಳಕು ಬೀರಿದ್ದು, ಸೇತುವೆಯಾಗಿ ನಿಂತದ್ದು ಚಿತ್ರಾಂಗದಾ ಖಂಡಕಾವ್ಯ. ವ್ಯಾಸಭಾರತದ ಮಹಾರಣ್ಯದಲ್ಲಿ ತೃಣಮಾತ್ರವಾಗಿ ಗೋಚರಿಸುವ ಚಿತ್ರಾಂಗದೆಯ ಕಥೆ, ಜೈಮಿನಿಭಾರತದಲ್ಲಿ ಒಂದು ಆಖ್ಯಾನವಾಗಿ ದೊರೆಯುತ್ತದೆ. ರವೀಂದ್ರನಾಥಠಾಕೂರರು ಚಿತ್ರಾಂಗದೆಯ ಪ್ರಣಯ ಕಥೆಯನ್ನು ಆಧರಿಸಿ ಚಿತ್ರಾ ಎಂಬ ನಾಟಕವನ್ನು ರಚಿಸಿದ್ದಾರೆ. ಕುವೆಂಪುರವರು ಇವುಗಳೆಲ್ಲವನ್ನು ಆಧರಿಸಿ ಸಾಕಷ್ಟು ಮಾರ್ಪಾಡುಗಳೊಂದಿಗೆ ಚಿತ್ರಾಂಗದೆಯ ಜೀವನಕ್ಕೆ ಸಂಬಂಧಪಟ್ಟ ಪೂರ್ಣಸ್ವರೂಪದ ಕಲಾಕೃತಿಯನ್ನು ನಿರ್ಮಿಸಿದ್ದಾರೆ. ಪಾರ್ಥನ ಕಾಮಪ್ರೇಮಕ್ಕೆ ಬಲಿಯಾದ ಸಾಹಸಿ ಸ್ತ್ರೀಯೋರ್ವಳ ಬದುಕಿನ ಪ್ರೇಮ,

ತ್ಯಾಗ, ತಪಸ್ಸು ಮತ್ತು ಪಾತಿವ್ರತ್ಯದ ಮಹತ್ತ್ವವನ್ನು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶಿಷ್ಟವಾಗಿ ಕಡೆದಿಟ್ಟಿದ್ದಾರೆ. ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಮಾತ್ರ ಕಂಡುಬರುತ್ತಿದ್ದ ಮಹೋಪಮೆಗಳನ್ನು ಮೊತ್ತ ಮೊದಲ ಬಾರಿಗೆ ಕನ್ನಡದಲ್ಲೂ ತಂದುದು ಇಲ್ಲಿನ ಹೆಗ್ಗಳಿಕೆ. ಶೃಂಗಾರ, ವೀರ ಮತ್ತು ಕರುಣರಸ ಪ್ರಧಾನವಾದ ಆರು ಪರ್ವಗಳಿಂದ ಕೂಡಿರುವ ಈ ಖಂಡಕಾವ್ಯದಲ್ಲಿ ಏಳು ಮಹೋಪಮೆಗಳಿವೆ. ಇವು ಈ ಕಾವ್ಯದ ಯಶಸ್ಸಿಗೆ ಸಾಧಕವಾಗಿದೆ. ಕನ್ನಡದ ಲಲಿತರಗಳೆಯನ್ನು ಸಡಿಲಗೊಳಿಸಿ, ಪಾಶ್ಚಿಮಾತ್ಯರ ಬ್ಲಾಂಕ್ ವರ್ಸನ್ನು ಅಳವಡಿಸಿ ಪಂಚಮಾತ್ರಾಗಣದ ಸರಳರಗಳೆಯಲ್ಲಿ ಈ ಕಾವ್ಯನಿರ್ಮಾಣವಾಗಿದೆ. ಸರಳರಗಳೆಯ ಬೆಳೆದ ಪರಿಪಕ್ವ ರೂಪವೇ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ಮಹಾ ಛಂದಸ್ಸು. ಆದರೆ ಸಾನೆಟ್ಟು ಮತ್ತು ಚಿತ್ರಾಂಗದಾ ಕಾವ್ಯದಲ್ಲಿ ನಡೆದ ಈ ಪ್ರಯೋಗ ಉದ್ದೇಶ ಪೂರ್ವಕವಾದುದಲ್ಲ ಎಂಬುದನ್ನು ಕವಿಯೇ ಹೇಳಿದ್ದಾರೆ. (ಎಂ.ಸಿ.ವಿ.)

ಕುವೆಂಪುರವರು ಮಹಾಛಂದಸ್ಸಿನಲ್ಲಿ ರಚಿಸಿರುವ ಶ್ರೀರಾಮಾಯಣ ದರ್ಶನಂ ಒಂದು ಬೃಹತ್ ಮಹಾಕಾವ್ಯ. ಅದು ಈ ಯುಗದ ಮೇರುಕೃತಿ. ಅದು ಇಡೀ ಜನಾಂಗದ ಉಸಿರು. ಭಾರತೀಯ ಸಂಸ್ಕೃತಿಯ ಕಲಾರೂಪ. ವೇದೋಪನಿಷತ್ತುಗಳ ಸಾರ, ಕವಿಯ ಆಧ್ಯಾತ್ಮಿಕ ಸಾಧನೆಯಿಂದ ಪ್ರಣೀತವಾದ ದರ್ಶನಗ್ರಂಥ.

ಕುವೆಂಪುರವರ ಶ್ರೀರಾಮಾಯಣದರ್ಶನಕ್ಕೆ ಸಂಸ್ಕೃತದ ವಾಲ್ಮೀಕಿ ರಾಮಾಯಣವೇ ತಳಹದಿ. ಆದರೆ ಅದರ ಮೇಲೆ ಕುವೆಂಪು ನಿರ್ಮಿಸಿದ ಮಹಾಸೌಧ ಅನನ್ಯವಾದುದು. ತಮ್ಮ ಕೃತಿಯಲ್ಲಿ ರಾಮಾಯಣ 'ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ, ಮರುಹುಟ್ಟುವಡೆದಂತೆ' ಪ್ರಕಟವಾಗಿದೆಯೆಂದು ಅವರೇ ಹೇಳಿಕೊಂಡಿದ್ದಾರೆ. ಶ್ರೀರಾಮಾಯಣ ದರ್ಶನಕ್ಕೂ ವಾಲ್ಮೀಕಿ ರಾಮಾಯಣಕ್ಕೂ ಅನೇಕ ವ್ಯತ್ಯಾಸಗಳಿವೆ. ವಾಲ್ಮೀಕಿ ರಾಮಾಯಣದಲ್ಲಿ ಪಾಪನಾಶವಾದರೆ ಕುವೆಂಪು ರಾಮಾಯಣದಲ್ಲಿ ಅದು ಪುಣ್ಯವಾಗಿ ಪರಿವರ್ತನೆಗೊಳ್ಳುತ್ತದೆ. ಅಲ್ಲಿ ಕಾಮಾಂಧನೂ ನೀಚನೂ ಜಗತ್ ಕಂಟಕನೂ ಗರ್ವಿಷ್ಠನೂ ಆಗಿದ್ದ ರಾವಣ ಕೊನೆಯವರೆಗೂ ದುಷ್ಟನಾಗಿಯೇ ಉಳಿದು ರಾಮನಿಂದ ಹತನಾಗುತ್ತಾನೆ. ಆದರೆ ಇಲ್ಲಿ ರಾವಣ ಮಹಾವ್ಯಕ್ತಿಯಾಗಿ ಪರಿವರ್ತನೆಯನ್ನು ಪಡೆಯುತ್ತಾನೆ. ರಾವಣ ರಾಮನ ಮತ್ತೊಂದು ರೂಪವಾಗಿರುತ್ತಾನೆ; ರಾಮಶಕ್ತಿಯೇ ರಾವಣಶಕ್ತಿಯಾಗುತ್ತದೆ. ಕೊನೆಯಲ್ಲಿ ರಾವಣಶಕ್ತಿ ರಾಮಶಕ್ತಿಯಲ್ಲಿ ವಿಲೀನಗೊಳ್ಳುತ್ತದೆ. ಸೀತೆ ಅವನಿಗೆ ಮಾತೃಸ್ವರೂಪಳಾಗಿ ಕಂಡುಬರುತ್ತಾಳೆ. ಮರುಜನ್ಮದಲ್ಲಿ ಆ ಅಭೀಪ್ಸೆ ಕೃತಿಗೊಳ್ಳುತ್ತದೆ. ರಾಮನ ವನವಾಸಕ್ಕೆ ಕಾರಣಳಾಗಿ ಎಲ್ಲರಿಂದಲೂ ದೂಷಣೆಗೀಡಾದ ವಾಲ್ಮೀಕಿ ರಾಮಾಯಣದ ಮಂಥರೆ ಇಲ್ಲಿ ಲೋಕಕಲ್ಯಾಣದ ಕರಣಶಕ್ತಿಯಾಗಿ ಕಂಡುಬರುತ್ತಾಳೆ. ಈ ಎರಡೂ ಪಾತ್ರಗಳು (ರಾವಣ ಮತ್ತು ಮಂಥರೆ) ಮನೋವಿಜ್ಞಾನದ ಹಿನ್ನೆಲೆಯಲ್ಲಿ ಹೆಚ್ಚಾಗಿ ಹೊಳಪುಗೊಳ್ಳುತ್ತವೆ. ಜಡದಲ್ಲೂ ಚೈತನ್ಯವನ್ನು ಕಾಣುವ ಕವಿಪ್ರತಿಭೆ ಪಾಪಿಗೂ ಉದ್ಧಾರವನ್ನು ಬಯಸುತ್ತದೆ. ಪ್ರತಿ ಪಾತ್ರವೂ ಮತ್ತೊಂದು ಪಾತ್ರದ ಉದ್ಧಾರಕ್ಕಾಗಿ ದುಡಿಯುತ್ತದೆ. 'ಪಾಪಿಗುದ್ಧಾರ ಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯಲಿ' ಎಂಬುದೇ ಶ್ರೀರಾಮಾಯಣದರ್ಶನದ ಉದ್ದಕ್ಕೂ ಮೊಳಗುತ್ತಿರುವ ದಿವ್ಯ ಸಂದೇಶ. ಕಲೆಯ ಕೈ ಹಿಡಿದು ದರ್ಶನ ಸಾಗುವುದು ತತ್ತ್ವ ಅನುಭವಗೊಂಡು ಕಾವ್ಯವಾಗಿರುವುದು ರಾಮಾಯಣದರ್ಶನದುದ್ದಕ್ಕೂ ಕಂಡುಬರುವ ಇನ್ನೊಂದು ಮಹತ್ತ್ವದ ಸಂಗತಿ. ಅತೀಂದ್ರಿಯ ಯೋಗ ಮತ್ತ ಅನ್ನಮಯ ಪ್ರಾಣಮಯಕ್ಕೆ ಸಂಬಂಧಪಟ್ಟ ವಿಷಯಗಳು ಕವಿಯ ಆತ್ಮಸಾಧನೆಯ ಉನ್ನತಿಯನ್ನು ಪರಿಚಯಿಸುತ್ತವೆ. ಭವ್ಯವಾದ ಪ್ರಕೃತಿವರ್ಣನೆಗೆ ಕರ್ತೃವಿನ ಅನುಭವ ಜೀವ ತುಂಬಿದೆ. ಇಲ್ಲಿನ ಮಹೋಪಮೆಗಳು ಕಾವ್ಯಶಕ್ತಿಯನ್ನು ಹೆಚ್ಚಿಸಿವೆ; ದಶಾನನ ಸ್ವಪ್ನಸಿದ್ಧಿಯಲ್ಲಿ ಸ್ವಯಂ ಕವಿ ಅನುಭವಿಸಿದ ಕನಸು ಮೂಲದ್ರವ್ಯವಾಗಿದೆ. ಆಧುನಿಕ ಸಂಕೀರ್ಣ ಯುಗಪ್ರಜ್ಞೆ ಕಾವ್ಯದುದ್ದಕ್ಕೂ ತೆರೆದುಕೊಂಡಿದೆ. ಇಂದ್ರಜಿತುವಿನ ಶಸ್ತ್ರಾಗಾರದಲ್ಲಿ ಆಧುನಿಕ ಶಸ್ತ್ರಾಸ್ತ್ರಗಳ ಹೆಸರುಗಳಿವೆ. ಯುದ್ಧವರ್ಣನೆಯಲ್ಲಿ ಎರಡನೆಯ ಮಹಾಯುದ್ಧದ ಪ್ರಭಾವವಿದೆ. ಶ್ರೀರಾಮಕೃಷ್ಣ ಪರಮಹಂಸರ ಸರ್ವಧರ್ಮಸಮನ್ವಯ, ಗಾಂಧೀಜಿಯವರ ಸರ್ವೋದಯ, ಅರವಿಂದರ ಪೂರ್ಣದೃಷ್ಟಿ, ಮನೋವಿಜ್ಞಾನ, ರಾಜಕೀಯ ವಿಚಾರಧಾರೆ–ಹೀಗೆ ಒಂದೊಂದು ಮಹಾಕಾವ್ಯದ ನಿರ್ಮಿತಿಗೆ ಕಾಲವನ್ನೂ ನೆಲವನ್ನೂ ಸಿದ್ಧಗೊಳಿಸಿ ಬೆಂಬಲಿಸಿವೆ. ಕವಿಗಿರುವ ಸಕಲ ಧರ್ಮ ಗ್ರಂಥಗಳ ಅಧ್ಯಯನ, ಭಾರತೀಯ ಮತ್ತು ಪಾಶ್ಚಿಮಾತ್ಯ ಕಾವ್ಯಗಳ ಪರಿಚಯ, ಮನೋವಿಜ್ಞಾನ, ಖಗೋಳಶಾಸ್ತ್ರ, ಸೌಂದರ್ಯಶಾಸ್ತ್ರ ಮತ್ತು ಭೌತವಿಜ್ಞಾನಗಳ ಪರಿಜ್ಞಾನ, ಅಸಾಧಾರಣ ಕಲ್ಪನೆ, ಪ್ರತಿಭೆ, ಮಾನವೀಯತೆ, ವಿದ್ವತ್ತು ಮತ್ತು ಶಬ್ದಸಂಪತ್ತಿ ಮುಂತಾದವು–ಶ್ರೀರಾಮಾಯಣದರ್ಶನಂ ಜಗತ್ತಿನ ಶ್ರೇಷ್ಠ ಮಹಾಕಾವ್ಯಗಳ ಸಾಲಿಗೆ ಸೇರಲು ಕಾರಣಗಳಾಗಿವೆ. (ಎಂ.ಸಿ.ವಿ.;ಕೆ.ಒ.ಸಿ.)

ಕಾನೂರು ಸುಬ್ಬಮ್ಮ ಹೆಗ್ಗಡತಿ (1938) ಮತ್ತು ಮಲೆಗಳಲ್ಲಿ ಮದುಮಗಳು (1967) ಕುವೆಂಪುರವರ ಎರಡು ಮಹಾಕಾದಂಬರಿಗಳು. ಮಲೆನಾಡಿನ ಬಗೆ ಬಗೆಯ ಜೀವನ ವಿಧಾನಗಳು ಈ ಕಾದಂಬರಿಗಳಲ್ಲಿ ತೆರೆದುಕೊಂಡಿವೆ. ಪ್ರಾದೇಶಿಕ ವೈವಿಧ್ಯತೆಯಿಂದ ಕೂಡಿರುವ ಇಲ್ಲಿನ ಸಂಕೀರ್ಣ ಬದುಕಿನಲ್ಲಿ ಮಣ್ಣಿನ ವಾಸನೆ, ಹೆಣ್ಣಿನ ವಾಸನೆ, ಕಳ್ಳಿನ ವಾಸನೆ, ಬಾಡಿನ ವಾಸನೆ ಎಲ್ಲವೂ ಇದ್ದು ಕಾದಂಬರಿಗಳಿಗೆ ಒಂದು ಸಹಜ ಕಂಪು ಬಂದಿದೆ. ಹಳತು–ಹೊಸತರ ಸಂಘರ್ಷದ ಸಂಕ್ರಮಣಾವಸ್ಥೆಯ ಮಜಲಿನಲ್ಲಿ ಸಿಕ್ಕಿರುವ ಮಲೆನಾಡಿನ ಜನಜೀವನದ ಏರಿಳಿತ ಬಹುಶಃ ಕನ್ನಡದ ಬೇರಾವ ಕಾದಂಬರಿಯಲ್ಲೂ ಕಾಣದ ಮಟ್ಟಿಗೆ ಇಲ್ಲಿ ಆಕರ್ಷಕವಾಗಿ ಚಿತ್ರಿತವಾಗಿದೆ. ಕವಿಯ ಉಳಿದ ಕಾವ್ಯಗಳಲ್ಲಿ ಸಾಮಾನ್ಯವಾಗಿ ಮಲೆನಾಡಿನ ಪ್ರಕೃತಿಯ ರಮಣೀಯ ರೂಪ ಮಾತ್ರ ಪ್ರಕಟವಾಗಿದ್ದರೆ ಇವರ ಕಾದಂಬರಿಗಳಲ್ಲಿ ಅದರ ಎಲ್ಲ ಮುಖಗಳೂ ಅನಾವರಣಗೊಂಡಿವೆ. ಪ್ರಕೃತಿಯಲ್ಲಾಗುವ ಬದಲಾವಣೆಗಳು ಗುಣವಾಗಿ ಆಗುವ ಜೀವನ ಬದಲಾವಣೆಗಳನ್ನೂ ಇವರ ಕಾದಂಬರಿಗಳಲ್ಲಿ ಗುರುತಿಸಬಹುದು. ಕುವೆಂಪುರವರ ಈ ಎರಡೂ ಕಾದಂಬರಿಗಳಲ್ಲಿ ಪ್ರಣಯ ಪ್ರಧಾನವಾಗಿದೆ. ಒಂದೆಡೆ ಸ್ವಾರ್ಥಮೂಲವಾದ ಕ್ರಿಯೆಗಳು, ಮತ್ತೊಂದೆಡೆ ತ್ಯಾಗಪೂರ್ಣ ದುಡಿಮೆ–ಹೀಗೆ ಮಾನವ ಪ್ರವೃತ್ತಿಯ ನಾನಾ ಸ್ವಭಾವಗಳಿಂದ ಆಯಾ ಸಾಮಾಜಿಕ ಪರಿಸರದಲ್ಲುಂಟಾಗುವ ಸಾಂಗತ್ಯ ಮತ್ತು ಅಸಾಂಗತ್ಯದ ಪರಿಣಾಮವನ್ನು ಲೇಖಕರು ಸಮರ್ಥವಾಗಿ ಚಿತ್ರಿಸಿದ್ದಾರೆ.

ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು ಕುವೆಂಪು ಕನ್ನಡ ಕಥಾಸಾಹಿತ್ಯಕ್ಕೆ ಕೊಟ್ಟ ಉತ್ತಮ ಕೊಡುಗೆಗಳಾಗಿವೆ.

ಕುವೆಂಪು ಅವರು ಪುರೋಹಿತಶಾಹಿಯ ವಿರುದ್ಧ, ಮೌಢ್ಯತೆಯ ವಿರುದ್ಧ, ಅಜ್ಞಾನದ ವಿರುದ್ಧ ಸಿಡಿದೆದ್ದರು. ವಿಚಾರ ಬುದ್ಧಿ ಮತ್ತು ವೈಜ್ಞಾನಿಕ ದೃಷ್ಟಿಗೆ ತಮ್ಮ ಸಾಹಿತ್ಯದಲ್ಲಿ ಪ್ರಥಮ ಸ್ಥಾನ ಒದಗಿಸಿದರು. ಸರ್ವರ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಶಭಾಷಾ ಮಾಧ್ಯಮದ ಅಗತ್ಯವನ್ನು ಒತ್ತಿ ಹೇಳಿದರು. ಷಷ್ಟಿನಮನ, ನಿರಂಕುಶ ಮತಿಗಳಾಗಿ, ವಿಚಾರ ಕ್ರಾಂತಿಗೆ ಆಹ್ವಾನ ಎಂಬ ಕೃತಿಗಳು ಈ ದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿವೆ. ಆಧ್ಯಾತ್ಮಿಕ ಮಹಾಪುರುಷರಾದ

ಶ್ರೀ ರಾಮಕೃಷ್ಣಪರಮಹಂಸ ಮತ್ತು ಸ್ವಾಮಿ ವಿವೇಕಾನಂದರನ್ನು ಕುರಿತ ಅದೇ ಹೆಸರಿನ ಜೀವನಚರಿತ್ರೆಗಳು ಕುವೆಂಪುರವರು ಕನ್ನಡದ ಅತ್ಯುತ್ತಮ ಗದ್ಯಕಾರರೆಂಬುದನ್ನೂ ಜೀವನಚರಿತ್ರಕಾರರೆಂಬುದನ್ನೂ ತೋರಿಸಿಕೊಟ್ಟಿವೆ.

ಹಿರೇ ಕೊಡಿಗೆಯಲ್ಲಿ ಇವರ ಗೌರವಾರ್ಥ ಒಂದು ಮಂದಿರವನ್ನು ನಿರ್ಮಿಸಲಾಗಿದೆ. ಪುಟ್ಟಪ್ಪನವರ ಸ್ವಂತ ಊರಾದ ಕುಪ್ಪಳಿಯಲ್ಲಿ ರಾಜ್ಯಸರ್ಕಾರ ಸಂಶೋಧನ ಕೇಂದ್ರವೊಂದನ್ನು ಸ್ಥಾಪಿಸಿ ಇವರ ಮನೆಯನ್ನು ಸ್ಮಾರಕವಾಗಿ ಪರಿವರ್ತಿಸಿ ಕವಿಶೈಲವನ್ನು ಸಂರಕ್ಷಿಸಲು ಕ್ರಮಕೈಗೊಂಡಿದೆ. ಶಿವಮೊಗ್ಗ ಜಿಲ್ಲೆಯ ಬಿ.ಆರ್. ಪ್ರಾಜೆಕ್ಟ್‌ನಲ್ಲಿ ಕುವೆಂಪು ಅವರ ಹೆಸರಿನಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ (1987). ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಕುವೆಂಪು ಅವರ ಹೆಸರಿಡಲಾಗಿದೆ (1994). ರಾಜ್ಯದ ವಿವಿಧ ನಗರ ಪಟ್ಟಣಗಳಲ್ಲಿ ವಿವಿಧ ಬಡಾವಣೆಗಳಿಗೆ ಅವರ ಹೆಸರಿಡಲಾಗಿದೆ. ಕುವೆಂಪು ಅವರ ಜೀವನ ರೀತಿಯೂ ಅವರ ಸಾಹಿತ್ಯದಷ್ಟೇ ಘನವಾಗಿದ್ದು ಅವರೊಂದು ದಂತಕಥೆಯಾಗಿ ಜನಮಾನಸದಲ್ಲಿ ಉಳಿದಿದ್ದಾರೆ. ಇವರು 1994 ನವಂಬರ್ 10ರಂದು ಮೈಸೂರಿನಲ್ಲಿ ನಿಧನರಾದರು. ಇವರ ಪ್ರಾರ್ಥಿವ ಶರೀರದ ಅಂತ್ಯಸಂಸ್ಕಾರವನ್ನು ಕವಿಶೈಲದಲ್ಲಿ ಮಾಡಲಾಯಿತು. 2004ರಲ್ಲಿ ಕುವೆಂಪು ಜನ್ಮ ಶತಮಾನೋತ್ಸವವನ್ನು ಕರ್ನಾಟಕ ರಾಜ್ಯದಾದ್ಯಂತ ಆಚರಿಸಲಾಯಿತು.

ಕುವೆಂಪು ಶತಮಾನೋತ್ಸವದ ನೆನಪಿಗಾಗಿ 'ಕುವೆಂಪು ಭಾಷಾ ಭಾರತಿ' ಎಂಬ ಸಂಸ್ಥೆಯನ್ನು ಕರ್ನಾಟಕ ಸರ್ಕಾರ ಸ್ಥಾಪಿಸಿದೆ (2005). (ಎಂ.ಸಿ.ವಿ.)

**ಪುಟ್ಟಯ್ಯ, ಬಿ.:** 1879–1944. ಕನ್ನಡ ಪ್ರವಾಸ ಸಾಹಿತ್ಯದಲ್ಲಿ ಮೊದಲನೆಯ ಗ್ರಂಥ ಎನ್ನಲಾಗಿರುವ ಅಭಿವೃದ್ಧಿ ಸಂದೇಶದ (1921) ಕರ್ತೃ. ಸಮಾಜ ಸೇವಕರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ 1903ರಲ್ಲಿ ಪದವೀಧರರಾದರು. ಚಿತ್ರದುರ್ಗದಲ್ಲಿ ಪೊಲೀಸು ಅಧಿಕಾರಿಯಾಗಿ ಸ್ವಲ್ಪಕಾಲ ಕೆಲಸ ಮಾಡಿದರು. ಬೆಂಗಳೂರಿನ ಒಕ್ಕಲಿಗರ ಸಂಘಕ್ಕೆ ಪ್ರಾರಂಭದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ, ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ, ಅದರ ಮುದ್ರಣಾಲಯದ ಮೇಲ್ವಿಚಾರಕರಾಗಿಯೂ ಕೆಲಸ ಮಾಡಿದರು. ಅನಂತರ ಇವರು ಬೆಂಗಳೂರು ಸರ್ಕಾರಿ ಮುದ್ರಣಾಲಯವನ್ನು 1908ರಲ್ಲಿ ಸೇರಿದರು. ಮುದ್ರಣ ಕಲೆಯಲ್ಲಿ ವಿಶೇಷ

ಶಿಕ್ಷಣ ಪಡೆಯಲು ಮೈಸೂರು ಸರ್ಕಾರ ಇವರನ್ನು ಲಂಡನ್ನಿಗೆ ಕಳುಹಿಸಿಕೊಟ್ಟಿತು. ಮೂರು ವರ್ಷಗಳ ಕಾಲ ಲಂಡನ್ನಿನ ಪ್ರಸಿದ್ಧ ಮುದ್ರಣಾಲಯವೊಂದರಲ್ಲಿ ಮುದ್ರಣ ಕಲೆಯ ಎಲ್ಲ ವಿಭಾಗಗಳಲ್ಲಿಯೂ ಶಿಕ್ಷಣ ಪಡೆದು ಉತ್ತಮ ಪ್ರಶಸ್ತಿ ಗಳಿಸಿ, 1915ರಲ್ಲಿ ಸ್ವದೇಶಕ್ಕೆ ಹಿಂದಿರುಗಿದರು. ಸರಕಾರಿ ಮುದ್ರಣಾಲಯದಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿಯೂ ಅನಂತರ ಸೂಪರಿಂಟೆಂಡೆಂಟರಾಗಿಯೂ ಕೆಲಸಮಾಡಿ 1934ರಲ್ಲಿ ನಿವೃತ್ತರಾದರು. ವಿದೇಶದಲ್ಲಿದ್ದಾಗ ತಮ್ಮ ಅನುಭವಗಳನ್ನು ಪತ್ರರೂಪವಾಗಿ ವಾರವಾರವೂ ಒಕ್ಕಲಿಗರ ಪತ್ರಿಕೆಗೆ ಕಳುಹಿಸುತ್ತಿದ್ದರು. ಆ ಪತ್ರಗಳೇ ಅನಂತರ ಒಟ್ಟುಗೂಡಿ 'ಅಭಿವೃದ್ಧಿ ಸಂದೇಶ' ಎಂಬ ಹೆಸರಿನಿಂದ ಪುಸ್ತಕರೂಪದಲ್ಲಿ 1921ರಲ್ಲಿ ಪ್ರಕಟವಾದವು.

ಬೆಂಗಳೂರು ನಗರದ ಪ್ರಖ್ಯಾತ ಸಂಸ್ಥೆಗಳಾದ ಕನ್ನಡ ಸಾಹಿತ್ಯ ಪರಿಷತ್ತು, ಮಿಥಿಕ್ ಸೊಸೈಟಿ, ಸಾಮಾಜಿಕ ಪೌರ ಪುರೋಭಿವೃದ್ಧಿ ಸಂಘ ಮೊದಲಾದವುಗಳ ಕಾರ್ಯಕಲಾಪಗಳಲ್ಲಿ ಪುಟ್ಟಯ್ಯನವರು ಮುಖ್ಯಪಾತ್ರ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಣಾಲಯದ ಮೇಲ್ವಿಚಾರಣೆಯನ್ನು ಇವರು ಕೆಲಕಾಲ ನೋಡಿಕೊಂಡರು. ಮಿಥಿಕ್ ಸೊಸೈಟಿ ಪತ್ರಿಕೆಯಲ್ಲಿ ಚಿಕ್ಕದೇವರಾಜ ಒಡೆಯರ ಆಡಳಿತ ವ್ಯವಸ್ಥೆ, ಕೆಂಪೇಗೌಡ ಪ್ರಭುಗಳ ಚರಿತ್ರೆ, ಮೈಸೂರು ರತ್ನಸಿಂಹಾಸನದ ಕಥೆ–ಮೊದಲಾದ ವಿಷಯಗಳ ಮೇಲೆ ಇವರು ಬರೆದ ಪ್ರಬಂಧಗಳು ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟುವಿನ ಸಮಿತಿಯ ಸದಸ್ಯರಾಗಿದ್ದ ಇವರು ಕೆಲವು ಕಾಲ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದರು.

1944ರ ಡಿಸೆಂಬರ್ ತಿಂಗಳಲ್ಲಿ ರಬಕವಿಯಲ್ಲಿ ನಡೆದ 28ನೆಯ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಿದ್ದ ಪುಟ್ಟಯ್ಯನವರು, ಹಠಾತ್ತನೆ ಅಲ್ಲಿಯೇ ತೀರಿಕೊಂಡರು. ಇವರನ್ನು ಕುರಿತು ಇವರ ಪುತ್ರ ಬಿ.ಪಿ. ರಾಧಾಕೃಷ್ಣ ಅವರು 'ನನ್ನ ತಂದೆ' ಎಂಬ ಪುಸ್ತಕವನ್ನು ಬರೆದಿದ್ದಾರೆ. (ಬಿ.ಪಿ.ಆರ್.)

**ಪುಟ್ಟರಾಜ ಗವಾಯಿ**: 1914–. ಹಿಂದುಸ್ಥಾನಿ ಮತ್ತು ಕರ್ನಾಟಕ–ಈ ಉಭಯ ಸಂಗೀತ ವಿಶಾರದರು. ಹಿಂದುಸ್ತಾನಿ ಸಂಗೀತಕ್ಕೆ ಹೊಸ ಮೆರಗು ನೀಡಿ ಹೊಸ ಚೀಜುಗಳನ್ನು ರಚಿಸಿದವರು. ಕಣ್ಣಿಲ್ಲದಿದ್ದರೂ ಕಣ್ಣಿದ್ದವರಿಗಿಂತ ಹೆಚ್ಚು ಸಾಧನೆ ಮಾಡಿದ್ದಾರೆ. 1914 ಮಾರ್ಚ್ 3ರಂದು ಇಂದಿನ ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ದೇವನಗಿರಿಯಲ್ಲಿ ಜನಿಸಿದರು. ತಂದೆ ದೇವಯ್ಯ, ತಾಯಿ ಸಿದ್ದಮ್ಮ. ಆರು ತಿಂಗಳ ಮಗುವಿದ್ದಾಗ ಒಮ್ಮೆ ಪುಟ್ಟರಾಜರಿಗೆ ಕಣ್ಣುಬೇನೆ ಬಂತು. ದನಕರುಗಳ ರಕ್ತ ಹೀರುವ ಉಣ್ಣಿ (ತೊಣಸಿ) ಕಣ್ಣಿನಲ್ಲಿ ಬಿಟ್ಟರೆ ಕಣ್ಣುವಾಸಿಯಾಗುವುದೆಂದು ಯಾರೋ ಹೇಳಿದ್ದರಿಂದ ತಾಯಿ ಎರಡೂ ಕಣ್ಣುಗಳಿಗೆ ಉಣ್ಣಿ ಬಿಟ್ಟದ್ದರಿಂದ ಎರಡು ಕಣ್ಣುಗಳನ್ನೂ ಕಳೆದುಕೊಂಡರು. ಇದೇ ದುಃಖದಿಂದ ತಂದೆ ಗತಿಸಿದರು.

ಬಾಲ್ಯದಲ್ಲಿ ಹಳ್ಳಿಯ ಹಾಡು, ಶಿವಶರಣರ ವಚನಗಳನ್ನು ಗುಣಗುಣಿಸುತ್ತಿದ್ದ ಇವರ ಕಂಠಶ್ರೀಯನ್ನು ಮನಗಂಡು ಸೋದರಮಾವ ಚಂದ್ರಶೇಖರಯ್ಯನವರು ಸಂಗೀತ ಪಾಠ ಹೇಳಿಕೊಟ್ಟರು. ಮುಂದೆ ಸಂಗೀತ ದಿಗ್ಗಜ ಪಂಡಿತ ಪಂಚಾಕ್ಷರಿ ಗವಾಯಿಗಳ ಪ್ರೀತಿಯ ಶಿಷ್ಯರಾಗಿ ಅವರ ಮಾರ್ಗದರ್ಶನದಲ್ಲಿ ಸಂಗೀತ ವ್ಯಾಸಂಗ ಮಾಡಿದರು. ಅದೇ ಹೊತ್ತಿಗೆ ಸ್ವಪ್ರಯತ್ನದಿಂದ ಹಾರ್ಮೋನಿಯಂ, ತಬಲಾ, ಸಿತಾರ್, ವಯೋಲಿನ್, ಸಾರಂಗಿ ನುಡಿಸುವುದರಲ್ಲಿ ಪ್ರಾವೀಣ್ಯ ಗಳಿಸಿದರು. ತಮ್ಮ ಸತತ ಸಾಧನೆಯಿಂದ ಕರ್ನಾಟಕ ಮತ್ತು ಹಿಂದುಸ್ತಾನಿ – ಸಂಗೀತ ಈ ಎರಡೂ ಪದ್ಧತಿಗಳಲ್ಲಿ ಅಪೂರ್ವ ಸಾಧನೆ ಮಾಡಿದರು. ಅಭಿಮಾನಿಗಳು ಇವರನ್ನು ತಮ್ಮೂರಿಗೆ ಕರೆಯಿಸಿಕೊಂಡು ಸನ್ಮಾನಿಸಿ ತುಲಾಭಾರ ಮಾಡಿದ್ದಾರೆ. ಇದುವರೆಗೆ ಇವರಿಗೆ 575 ಕ್ಕಿಂತ ಹೆಚ್ಚು ತುಲಾಭಾರಗಳೂ ನಡೆದಿವೆ.

ಇವರು ಗದಗಿನಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮ ಸ್ಥಾಪಿಸಿದ್ದಾರೆ. ಇದಕ್ಕೆ ಅಮೆರಿಕದ ರೋಟರಿ ಸಂಸ್ಥೆ ಆರ್ಥಿಕ ನೆರವು ನೀಡಿದೆ. ಈ ಆಶ್ರಮದಲ್ಲಿ 300ಕ್ಕೂ ಮಿಕ್ಕು ವಿದ್ಯಾರ್ಥಿಗಳಿದ್ದಾರೆ. ಕಣ್ಣಿಲ್ಲದವರು, ಕಣ್ಣಿದ್ದವರೂ ಗುರುಕುಲಾಶ್ರಮದಲ್ಲಿ ಸಂಗೀತ ಮತ್ತು ಶಿಕ್ಷಣ

ಪಡೆಯುತ್ತಿದ್ದಾರೆ. ಈ ಶಾಲೆಯಲ್ಲಿ ದೀನರು, ಬಡವರು, ಅಂಧರಿಗೆ, ಅವಕಾಶ ಕಲ್ಪಿಸಿ ನಿತ್ಯ ಅನ್ನದಾಸೋಹ ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಆಶ್ರಮದಲ್ಲಿ ಗುರುಗಳಾದ ಪಂಚಾಕ್ಷರಿ ಗವಾಯಿಗಳ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಒಂದು ವಾರ ಕಾಲ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಏರ್ಪಡುವ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೇರಳ, ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶಗಳಿಂದ ಗಾಯಕರು ಬರುತ್ತಾರೆ. ಗವಾಯಿಯವರು ತಮಗೆ ತುಲಾಭಾರದಲ್ಲಿ ದೊರೆತ ಹಣ ಮತ್ತು ಸಂಗೀತ ಕಛೇರಿಯಿಂದ ಬಂದ ಹಣವನ್ನು ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಭಿವೃದ್ಧಿಗೆ ಉಪಯೋಗಿಸುತ್ತಿದ್ದಾರೆ.

ಇವರು ಸಂಗೀತದಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಸಾಧನೆ ಮಾಡಿದ್ದಾರೆ ಸಂಸ್ಕೃತ, ಕನ್ನಡ, ಹಿಂದಿ ಭಾಷೆಗಳ ಮೇಲೆ ಪ್ರಭುತ್ವ ಸಾಧಿಸಿದ ಇವರನ್ನು ತ್ರಿಭಾಷಾ ಕವಿ ಎಂದೇ ಗುರುತಿಸಲಾಗುತ್ತದೆ. ಕಾವ್ಯಂ, ಅಷ್ಟಾವರಣ ಕೀರ್ತನ ಮಾಲಿಕೆ, ಶ್ರೀ ಮತ್ಕುಮಾರ ಗೀತಾ, ಶಿವಶರಣ ಚೆನ್ನಯ್ಯನ ಸಂಗೀತ ನಾಟಕ, ಸಿದ್ಧಾಂತ ಶಿಖಾಮಣಿ, ಸಂಗೀತ ಶಾಸ್ತ್ರ, ಜ್ಞಾನ ಮುಂತಾದ ಕೃತಿಗಳು ಬೆಳಕಿಗೆ ಬಂದಿವೆ. ಕಳೆದ 37 ವರ್ಷಗಳಿಂದ ಪಂಚಾಕ್ಷರವಾಣಿ ಎಂಬ ಪತ್ರಿಕೆ ನಡೆಸಿಕೊಂಡು ಬರುತ್ತಿದ್ದಾರೆ.

ಇವರ ಸಂಗೀತ, ಸಾಹಿತ್ಯ ಸಾಮಾಜಿಕ ಕಾರ್ಯಗಳನ್ನು ಗಮನಿಸಿ ಸಂಘ ಸಂಸ್ಥೆಗಳು ಮತ್ತು ಸರ್ಕಾರ ಇವರನ್ನು ಗೌರವಿಸಿವೆ. ಕೇಂದ್ರ ಸಂಗೀತನೃತ್ಯ ಅಕಾಡೆಮಿಯ ಪ್ರಶಸ್ತಿ, ಕನಕಪುರಂದರ ಪ್ರಶಸ್ತಿ, ಸಂಗೀತ ಸಾಮ್ರಾಟ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳನ್ನು ಹೆಸರಿಸಬಹುದು. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪದವಿಯನ್ನೂ ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿಯನ್ನೂ ನೀಡಿ ಗೌರವಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು ಇವರಿಗೆ ಗಾನಯೋಗಿ ಎಂಬ ಬಿರುದು ನೀಡಿ ಗೌರವಿಸಿದೆ. ಇವರ ಹಿಂದೀ ಭಾಷೆಯ ಕೃತಿಯಾದ ಬಸವ ಪುರಾಣವನ್ನು ಭಾರತದ ಪ್ರಥಮ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಮೆಚ್ಚಿ ಗೌರವಿಸಿದ್ದಾರೆ. ಸಂಘ ಸಂಸ್ಥೆಗಳು ಇವರಿಗೆ ಶ್ರೀನಿಧಿ, ಸಂಗೀತ, ಚಕ್ರವರ್ತಿ, ಪ್ರಶಸ್ತಿಗಳನ್ನು ನೀಡಿವೆ. ಕೇಂಬ್ರಿಜ್‌ನಲ್ಲಿರುವ ಇಂಟರ್ ನ್ಯಾಷನಲ್ ಬಯೋಗ್ರಫಿಕಲ್ ಸೆಂಟರ್‌ನ ಪಾರಿತೋಷಕವೂ ಇವರಿಗೆ ಲಭಿಸಿದೆ.

(ಎಸ್.ಎಂ.ಕೆ.)

**ಪುಟ್ಟಸ್ವಾಮಯ್ಯ, ಬಿ.:** 1897–1984. ಪ್ರಸಿದ್ಧ ಸಾಹಿತಿ, ನಾಟಕಕಾರ, ಕಾದಂಬರಿಕಾರ ಹಾಗೂ ಪತ್ರಿಕೋದ್ಯಮಿ. 1897 ಮೇ 27ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಬಸಪ್ಪ, ಪ್ರಸಿದ್ಧ ರೇಷ್ಮೆ ವ್ಯಾಪಾರಿ; ತಾಯಿ ಮಲ್ಲಮ್ಮ. ಪುಟ್ಟಸ್ವಾಮಯ್ಯನವರು ತಮ್ಮ ಹತ್ತನೆಯ ವಯಸ್ಸಿಗೆ ತಂದೆಯವರನ್ನು ಕಳೆದುಕೊಂಡರು. ಆಗ ಇವರು ಆರನೆಯ ಫಾರಂ (ಈಗಿನ ಒಂಬತ್ತನೆಯ ತರಗತಿ) ಓದುತ್ತಿದ್ದರು. ತಂದೆಯವರು ನಿಧನರಾದ ಮೇಲೆ ಇವರಿಗೆ ಓದು ಮುಂದುವರಿಸುವುದು ಅಸಾಧ್ಯವಾಯಿತು. ಓದನ್ನು ಬಿಟ್ಟು ದುಡಿಯಲು ಪ್ರಾರಂಭಿಸಿದರು. ಹಲವು ಕಾಲ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಇವರು ಸುಮಾರು ಇಪ್ಪತ್ತು ವರ್ಷದವರಾಗಿದ್ದಾಗ ಪತ್ರಿಕೋದ್ಯಮ ರಂಗಕ್ಕಿಳಿದರು. 1925ರ ಸುಮಾರಿನಲ್ಲಿ ನಾರಾಯಣರೆಡ್ಡಿಯವರ ಸಂಪಾದಕತ್ವದಲ್ಲಿ ಪ್ರಾರಂಭವಾದ ನ್ಯೂ ಮೈಸೂರ್ ಎಂಬ ವಾರಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದರು. ಇದೇ ಸಮಯದಲ್ಲಿ ಇವರು ಮೈಸೂರಿನಲ್ಲಿ ಪ್ರಕಟವಾಗುತ್ತಿದ್ದ ಮೈಸೂರು ಸ್ಟಾರ್ ಎನ್ನುವ ವಾರಪತ್ರಿಕೆಗೆ ಬೆಂಗಳೂರಿನ ವರದಿಗಾರರಾಗಿದ್ದರು. ಐದಾರು ವರ್ಷ ಕಳೆದ ಅನಂತರ ಒಕ್ಕಲಿಗರ ಪತ್ರಿಕೆಯ ಸಂಪಾದಕರಾದರು. ಆಮೇಲೆ ಕೆಲವು ಕಾಲ ಚಿತ್ರೋದ್ಯಮದಲ್ಲಿ ದುಡಿದರು. ಸುಭದ್ರಾ ಮತ್ತು ಜೀವನ ನಾಟಕಗಳ ಸಹನಿರ್ದೇಶಕರಾಗಿ ಕೆಲಸ ಮಾಡಿದರು. ಸುಭದ್ರಾ ಚಿತ್ರಕ್ಕೆ ಸಾಹಿತ್ಯ ಇವರದೇ. ಅನಂತರ ಅದನ್ನು ಬಿಟ್ಟು ಜನವಾಣಿಯಲ್ಲಿ ಸಂಪಾದಕೀಯ ಲೇಖಕನ ಕೆಲಸಕ್ಕೆ ನೇಮಕವಾದರು. ಜನವಾಣಿ ಒಮ್ಮೆ ನಿಂತು ಮತ್ತೆ ಪ್ರಕಟವಾಗಲು ಪ್ರಾರಂಭಿಸಿದಾಗ ಇವರೇ ಅದರ ಸಂಪಾದಕರಾದರು. ಒಂದು ವರ್ಷ ಕಳೆದ ಅನಂತರ ಪುನಃ ಈ ಪತ್ರಿಕೆ ನಿಂತು ಹೋದಾಗ ಮಾತೃಭೂಮಿಯ ಸಂಪಾದಕತ್ವವನ್ನು ವಹಿಸಿಕೊಂಡರು. ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಪ್ರಜಾವಾಣಿ ದಿನ ಪತ್ರಿಕೆಯನ್ನು ಪ್ರಾರಂಭಿಸಿದಾಗ ಅದರ ಮೊದಲ ಸಂಪಾದಕರಾಗಿ ಇವರು ಆಯ್ಕೆಯಾದರು (1948). ಒಂದು ವರ್ಷದ ಅನಂತರ ಪ್ರಜಾವಾಣಿ ಬಿಟ್ಟು ಜನ್ಮಭೂಮಿಯ ಸಂಪಾದಕರಾದರು. ಎರಡು ಮೂರು ವರ್ಷ ಕಾಲ ನಡೆದ ಜನ್ಮಭೂಮಿ ಪತ್ರಿಕೆ ಅನಂತರ ನಿಂತುಹೋಯಿತು. ಅಲ್ಲಿಗೆ ಇವರು ಈ ಉದ್ಯೋಗಕ್ಕೂ ಶರಣು ಹೊಡೆದರು. ಪುಟ್ಟಸ್ವಾಮಯ್ಯನವರು ಅನೇಕ ಪ್ರತಿಭಾವಂತರನ್ನು ಹುಡುಕಿ ಪತ್ರಿಕೋದ್ಯಮಕ್ಕೆ ಕರೆತಂದು ಪ್ರೋತ್ಸಾಹ ನೀಡಿದ್ದಾರೆ. ಪತ್ರಿಕೋದ್ಯಮಕ್ಕೆ ಇವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಜನ್ಮಭೂಮಿ ಟ್ರಸ್ಟ್ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತು (1971).

ಪುಟ್ಟಸ್ವಾಮಯ್ಯನವರಿಗೆ ಚಿಕ್ಕಂದಿನಿಂದಲೂ ಓದುವ ಗೀಳು ಬಹಳ. ತಮ್ಮ ಹದಿಮೂರು ಹದಿನಾಲ್ಕನೆಯ ವಯಸ್ಸಿಗಾಗಲೇ ಇವರು ಷೇಕ್ಸ್‌ಪಿಯರ್‌ನ ಎಲ್ಲ ನಾಟಕಗಳನ್ನೂ ಡಿಕನ್ಸ್, ಸ್ಕಾಟ್ ಮೊದಲಾದವರ ಕಾದಂಬರಿಗಳನ್ನೂ ಓದಿದ್ದರಂತೆ. ಇವರಿಗೆ ಹಿಂದೀ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಪ್ರಭುತ್ವವಿತ್ತು. ಜೊತೆಗೆ ಬಂಗಾಲಿ ಭಾಷೆಯಲ್ಲೂ ಸ್ವಲ್ಪ ಪರಿಶ್ರಮವಿತ್ತು. ಪತ್ರಿಕೋದ್ಯಮವನ್ನು ಬಿಟ್ಟ ಅನಂತರ ಇವರ ಪ್ರತಿಭೆ ಸಾಹಿತ್ಯರಂಗದತ್ತ ಹೊರಳಿತು. ನಾಟಕ ರಚನೆಗೆ ತೊಡಗಿದರು.

ಗುಬ್ಬಿ ಕಂಪನಿಯ ಜೀವಶಕ್ತಿಯಾದ ನಾಟಕರತ್ನ ಗುಬ್ಬಿ ವೀರಣ್ಣನವರು ಇವರಿಂದ ಅನೇಕ ನಾಟಕಗಳನ್ನು ಬರೆಯಿಸಿ ಪ್ರಯೋಗಿಸತೊಡಗಿದರು. ಪುಟ್ಟಸ್ವಾಮಯ್ಯನವರು ನಾಟಕಗಳನ್ನು ಬರೆಯುವುದಕ್ಕೆ ಹಿಂದೆಯೇ ವರದಾಚಾರ್ಯರಂಥ ಪ್ರತಿಭಾನ್ವಿತ ನಟರು ಕನ್ನಡ ರಂಗಭೂಮಿಯಲ್ಲಿ ಹೊಸ ಚೈತನ್ಯವನ್ನು ತುಂಬಿದ್ದರು. ಆದರೆ ಆ ನಾಟಕಗಳೆಲ್ಲ ಸಂಸ್ಕೃತ ನಾಟಕಗಳ ಅನುಕರಣೆಯಲ್ಲಿ ಹುಟ್ಟಿಬಂದುವು. ಮಾತಿಗಿಂತ ಪದ್ಯಗಳೇ ಹೆಚ್ಚು. ಸೇವಕರು ಕೂಡ ಕಂದಪದ್ಯಗಳ ಮೂಲಕವೇ ವ್ಯವಹರಿಸಬೇಕಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಗದ್ಯವನ್ನೇ ಹೆಚ್ಚಾಗಿ ಬಳಸಿ ನಾಟಕಗಳನ್ನು ಬರೆಯುವುದು ಅಗತ್ಯವಾಗಿತ್ತು. ಈ ಕೊರತೆಯನ್ನು ನೀಗಿಸಿದ ಮುಖ್ಯರಲ್ಲಿ ಪುಟ್ಟಸ್ವಾಮಯ್ಯನವರೂ ಒಬ್ಬರು. ಈ ದೃಷ್ಟಿಯಿಂದ ನಾಟಕರಂಗದಲ್ಲೂ ಇವರ ಸಾಧನೆ ಅದ್ವಿತೀಯವಾದದ್ದು. ಮೊದಮೊದಲು ಜನ ಇವರ ನಾಟಕಗಳನ್ನು ಸ್ವೀಕರಿಸಲಿಲ್ಲ. ಆದರೆ ಸ್ವಲ್ಪ ಕಾಲದಲ್ಲಿಯೇ ಇವರ ನಾಟಕಗಳ ನಿಜವಾದ ಸತ್ತ್ವ ತಿಳಿದು ರಂಗಭೂಮಿ ಇವರ ನಾಟಕಗಳಿಗೇ ಆದ್ಯತೆ ನೀಡಿತು.

ಇವರು ಬರೆದ ನಾಟಕಗಳ ಸಂಖ್ಯೆ ಹದಿನೆಂಟು. ಷಾಜಹಾನ್ ಇವರ ಮೊದಲ ನಾಟಕ. ಇದು ದ್ವಿಜೇಂದ್ರಲಾಲ್‌ರಾಯ್ ಅವರ ಬಂಗಾಲಿ ನಾಟಕದ ಅನುವಾದ. ಈ ನಾಟಕ ಕಲ್ಯಾಣಮ್ಮ ಅವರು ಸಂಪಾದಿಸುತ್ತಿದ್ದ ಸರಸ್ವತಿ ಪತ್ರಿಕೆಯಲ್ಲಿ (1926–27) ಧಾರಾವಾಹಿಯಾಗಿ ಪ್ರಕಟವಾಯಿತು. ಅನಂತರ ಲೈಟ್ ಆಫ್ ಏಷ್ಯ ಓದಿ ಅದರಿಂದ ಪ್ರಭಾವಿತರಾಗಿ ಗೌತಮ ಬುದ್ಧ ಬರೆದರು. ಈ ಎರಡೂ ನಾಟಕಗಳು ರಂಗಭೂಮಿಯಲ್ಲಿ ಪ್ರಯೋಗಗೊಂಡು ಮಹಮದ್ ಪೀರ್ ಅವರ ಅಭಿನಯ ಕೌಶಲಕ್ಕೆ ಮೆರಗು ನೀಡಿ ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದುವು; ಲೇಖಕರಿಗೆ ಖ್ಯಾತಿಯನ್ನು ತಂದವು. ಯಾಜ್ಞಸೇನಿ, ಅಕ್ಕಮಹಾ ದೇವಿ, ಸತೀತುಲಸಿ, ಪ್ರಚಂಡ ಚಾಣಕ್ಯ, ಸಂಪೂರ್ಣ ರಾಮಾಯಣ, ಜಯದೇವ–ಇವು ಇವರ ಇತರ ಮುಖ್ಯ ಕೃತಿಗಳು. ಕುರುಕ್ಷೇತ್ರ ಮತ್ತು ದಶಾವತಾರ ಹೆಚ್ಚು ಪ್ರಸಿದ್ಧಿ ಪಡೆದ ಕೃತಿಗಳು. ಕುರುಕ್ಷೇತ್ರ ನಾಟಕ ಕರ್ನಾಟಕದಲ್ಲೆಲ್ಲ ಎರಡು ಸಾವಿರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡು ಹೊಸ ದಾಖಲೆಯನ್ನು ಸ್ಥಾಪಿಸಿತು. ದಶಾವತಾರ ಕೂಡ ಹೆಚ್ಚು ಕಡಿಮೆ ಅಷ್ಟೇ ಪ್ರಯೋಗಗಳನ್ನು ಕಂಡಿದೆ. ಒಬ್ಬನೇ ನಾಟಕಕಾರನ ಹಲವು ನಾಟಕಗಳು ಇಂಥದೊಂದು ಪ್ರಮಾಣದಲ್ಲಿ ಯಶಸ್ಸು ಗಳಿಸಿರುವುದು ಅಪರೂಪ. ಕಿರಿಯರಿಗಾಗಿಯೂ ಇವರು ನಾಟಕಗಳನ್ನು ಬರೆದಿದ್ದಾರೆ. ಚಗಲೆಯ ಬಲಿದಾನ ಮತ್ತು ಶ್ರೀದುರ್ಗಾ– ಈ ದೃಷ್ಟಿಯಿಂದ ಬರೆದಂಥವು. ವರ ಚಿರಕುಮಾರಸಭಾ ರವೀಂದ್ರನಾಥ ಠಾಕೂರ್ ಅವರ ಬಂಗಾಲಿ ನಾಟಕದ ಅನುವಾದ.



ಇವರು ಕಾದಂಬರಿಗಳನ್ನೂ ರಚಿಸಿದ್ದಾರೆ. 1953ರಲ್ಲಿ ಇವರ ಪ್ರಥಮ ಕಾದಂಬರಿ ರೂಪಲೇಖಾ ಪ್ರಕಟವಾಯಿತು. ಇದು ಪ್ರೌಢದೇವರಾಯನ ಕಾಲಕ್ಕೆ ಐತಿಹಾಸಿಕ ವಸ್ತುವನ್ನು ಒಳಗೊಂಡಿದೆ. ಅಭಿಸಾರಿಕೆ, ಸುಧಾಮಯಿ, ಮಲ್ಲಮ್ಮನ ಪವಾಡ, ರತ್ನಹಾರ, ಚಾಲುಕ್ಯ ತೈಲಪ, ತೇಜಸ್ವಿನಿ, ಉದಯರವಿ, ರಾಜ್ಯಪಾಲ, ಕಲ್ಯಾಣೇಶ್ವರ, ನಾಗಬಂಧ, ಮುಗಿಯದ ಕನಸು, ಹೂವು–ಹಾವು ಮೊದಲಾದ ಕಾದಂಬರಿಗಳನ್ನು ಬರೆದರು. ಮಲ್ಲಮ್ಮನ ಪವಾಡ ಚಲನಚಿತ್ರವಾಗಿ ಪ್ರಸಿದ್ಧಿ ಪಡೆಯಿತು. ಇವರು ಕಾದಂಬರಿಕಾರರಾಗಿ ಯಶಸ್ಸು ಗಳಿಸಿರುವುದು ಐತಿಹಾಸಿಕ ಕಾದಂಬರಿಗಳಿಂದ. ಕ್ರಾಂತಿಕಲ್ಯಾಣ (1963) ಇವರ ಕೃತಿಗಳಲ್ಲೆಲ್ಲ ಅತ್ಯಂತ ಗಮನಾರ್ಹವಾದುದು. ಇದು ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಧಾರ್ಮಿಕ ಕ್ರಾಂತಿಯನ್ನು ವಸ್ತುವಾಗುಳ್ಳ ಕೃತಿ. ಈ ಕಾದಂಬರಿಗೆ (1965) ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಅದೇ ವರ್ಷ ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿತು. ನಾಟ್ಯಮೋಹಿನಿ, ಧ್ರುವಸ್ವಾಮಿನಿ ಇವರ ಕಥಾಸಂಗ್ರಹಗಳು. ಇವರಿಗೆ ಕೇಂದ್ರ ಸಂಗೀತ ನಾಟಕ ಆಕಾಡೆಮಿ ಪ್ರಶಸ್ತಿ ನೀಡಿಗೌರವಿಸಿದೆ (1978). ಕನ್ನಡ ಸಾಹಿತ್ಯ ಮತ್ತು ರಂಗಭೂಮಿಗೆ ಅಪೂರ್ವ ಕೊಡುಗೆ ನೀಡಿದ ಇವರು 1984 ಜೂನ್ 25ರಂದು ನಿಧನರಾದರು. ರಂಗಭೂಮಿಯ ಜೊತೆ ನಿಕಟ ಪರಿಚಯವಿದ್ದು ಅದರ ಏರಿಳಿತಗಳನ್ನು ಕಂಡ ಪುಟ್ಟಸ್ವಾಮಯ್ಯನವರು ಕನ್ನಡ ರಂಗಭೂಮಿ ಅಭಿವೃದ್ಧಿಯಾಗಬೇಕಾದರೆ ಹಿಂದಿನದರಲ್ಲಿ ಶ್ರೇಷ್ಠವಾದ್ದನ್ನು ಉಳಿಸಿಕೊಳ್ಳಬೇಕು, ಕನಿಷ್ಠವಾದದ್ದನ್ನು ಬಿಟ್ಟುಬಿಡಬೇಕು, ಹೊಸ ಮೌಲ್ಯಗಳನ್ನು ನಿರ್ಮಿಸಬೇಕು ಎಂಬುದು ಇವರ ಅಭಿಪ್ರಾಯವಾಗಿತ್ತು. (ಬಿ.ವಿ.ವಿ.)

**ಪುಟ್ಟೀರಮ್ಮ:** 1916– . ಹೆಸರಾಂತ ಸಮಾಜ ಸೇವಕಿ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಹಿರೇಮರಳಿ ಗ್ರಾಮದಲ್ಲಿ 1916ರಲ್ಲಿ ಜನಿಸಿದರು. ತಂದೆ ಕೆಂಚೇಗೌಡ, ತಾಯಿ ಮಂಚಮ್ಮ. ಹುಟ್ಟುವಾಗಲೇ ತಂದೆಯನ್ನು ಕಳೆದುಕೊಂಡು ಬಾಲ್ಯದಲ್ಲಿ ದಾಯಾದಿಗಳ ಕಿರುಕುಳಕ್ಕೆ ಒಳಗಾಗಿ ತಾಯಿಯ ಆರೈಕೆಯಲ್ಲಿ ಬೆಳೆದರು. ಅನಂತರ ಮೈಸೂರಿಗೆ ತೆರಳಿ ತಾಯಿ ಮಗಳು ಕೂಲಿನಾಲಿ ಮಾಡಿ ಬದುಕು ಸಾಗಿಸಿದರು. ಪುಟ್ಟೀರಮ್ಮನವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಗಾರೆ ಕೆಲಸಗಾರ ಕೆಂಚೇಗೌಡ ಎಂಬುವರನ್ನು ವಿವಾಹವಾದರು. ಸಾಮರಸ್ಯವಿರದ ದಾಂಪತ್ಯ ಜೀವನ ಒಂದೇ ವರ್ಷದಲ್ಲಿ ಕೊನೆಗೊಂಡಿತು. ಈ ಘಟನೆಯಿಂದ ಧೃತಿಗೆಡದೆ ತಾಯಿಯೊಡನೆ ಮೈಸೂರಿನ ರೇಷ್ಮೆ ಕಾರ್ಖಾನೆಯಲ್ಲಿ ದಿನಗೂಲಿ ಕೆಲಸಕ್ಕೆ ಸೇರಿದರು. ತಾಯಿಯ ಮರಣದ ಬಳಿಕ ಪುಟ್ಟೀರಮ್ಮನವರ ಆಸಕ್ತಿ ಆಧ್ಯಾತ್ಮಿಕ ಜೀವನದ ಕಡೆಗೆ, ಸಮಾಜ ಸೇವೆಯ ಕಡೆಗೆ ಒಲಿಯಿತು. ಭಜನೆ, ಪ್ರವಚನಗಳಲ್ಲಿ ಭಾಗವಹಿಸಿ ಕಾಲ ಕಳೆಯತೊಡಗಿದರು. ಅನಾಥರು ಮತ್ತು ದೀನರ ಬಗೆಗೆ ಇವರ ಹೃದಯದಲ್ಲಿ ಪ್ರೀತಿ, ಅನುಕಂಪ ಅಂಕುರಿಸಿತು. ಸ್ವತಃ ಬಡತನದ ಬವಣೆಯ ಅನುಭವವಿದ್ದ ಇವರು ತಮ್ಮ ದುಡಿಮೆಯ ಒಂದು ಭಾಗವನ್ನು ಬಡವರಿಗಾಗಿ ಮೀಸಲಿಟ್ಟರು. ಮೈಸೂರಿನಲ್ಲಿ ಅಂಗವಿಕಲ ಮಕ್ಕಳಿಗಾಗಿ ಅನಾಥಾಶ್ರಮವನ್ನು ಪ್ರಾರಂಭಿಸಿದರು (1989). ಈ ಸಂಸ್ಥೆ ಹಲವು ಸ್ವಯಂ ಸೇವಾ ಸಂಘಗಳ ನೆರವಿನೊಡನೆ ಬೆಳೆಯಿತು. ತಮ್ಮ ನಿವೃತ್ತಿಯ ಬಳಿಕ ಬಂದ 80 ಸಾವಿರ ರೂಪಾಯಿ ಹಣವನ್ನು ಅನಾಥಾಶ್ರಮಕ್ಕಾಗಿ ಮೀಸಲಿಟ್ಟರು. ಹುಟ್ಟೂರಿನಲ್ಲಿ ರಾಮಮಂದಿರವನ್ನು ನಿರ್ಮಿಸಿದರು. ಕಿವುಡ, ಮೂಗ ಮಕ್ಕಳಿಗಾಗಿ ಶಾಲೆ ಪ್ರಾರಂಭಿಸಿದರು. ಅನೇಕ ಅನಾಥ ಮಕ್ಕಳನ್ನು ಸಾಕಿ ಸಲಹಿದರು.

ಇವರ ಸಾಮಾಜಿಕ ಸೇವೆ ಹಾಗೂ ಸಾಧನೆಗಾಗಿ ಇವರಿಗೆ ಅನೇಕ ಸನ್ಮಾನ ಪ್ರಶಸ್ತಿಗಳು ಲಭ್ಯವಾಗಿದೆ. ರಾಜೀವಗಾಂಧಿ ಸಮಾಜ ಸೇವಾ ಪ್ರಶಸ್ತಿ (1997), ನವದೆಹಲಿಯ ಶ್ರೀ ರಾಮವಶೇಶ್ವರನ್ ದೇವಬಾಟಿಯ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್ ಪ್ರಶಸ್ತಿ (1997), ಕವಿತಾ ಸ್ಮಾರಕ ಸಮಾಜಸೇವಾ ಪ್ರಶಸ್ತಿ–ಇವು ಮುಖ್ಯವಾದವು. (ಜಿ.ಎಲ್.ಎಸ್.)

**ಪುತ್ತೂರು:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು. ಈ ತಾಲ್ಲೂಕು ಮತ್ತು ಇದೇ ಹೆಸರಿನ ಉಪವಿಭಾಗದ ಕೇಂದ್ರ ಪಟ್ಟಣ. ಮಂಗಳೂರಿನಿಂದ ಆಗ್ನೇಯದ ಕಡೆ ಇರುವ ಈ ತಾಲ್ಲೂಕು ದಕ್ಷಿಣದಲ್ಲಿ ಸುಳ್ಯ, ಉತ್ತರದಲ್ಲಿ ಬೆಳ್ತಂಗಡಿ, ಪಶ್ಚಿಮ ಮತ್ತು ವಾಯುವ್ಯಗಳಲ್ಲಿ ಬಂಟ್ವಾಳ ಈ ತಾಲ್ಲೂಕುಗಳೂ ನೈಋತ್ಯದಲ್ಲಿ ಕೇರಳ ರಾಜ್ಯವೂ ಸುತ್ತುವರಿದಿವೆ. ಉಪ್ಪಿನಂಗಡಿ, ಪುತ್ತೂರು ಮತ್ತು ಕಡಬ ಹೋಬಳಿಗಳು. ತಾಲ್ಲೂಕಿನಲ್ಲಿ ಒಂದು ಪಟ್ಟಣ ಮತ್ತು 66 ಗ್ರಾಮಗಳು ಇವೆ. ವಿಸ್ತೀರ್ಣ 1,004 ಚ.ಕಿಮೀ. ಜನಸಂಖ್ಯೆ 40,587.

ತಾಲ್ಲೂಕಿನ ಹೆಚ್ಚುಭಾಗ ಬೆಟ್ಟಗುಡ್ಡಗಳ ಪ್ರದೇಶ. ಪೂರ್ವಭಾಗ ಪಶ್ಚಿಮ ಘಟ್ಟದ ಇಳುಕಲು. ಇಲ್ಲಿ ಅನೇಕ ಎತ್ತರದ ಬೆಟ್ಟಗಳಿವೆ. ಅಮ್ಮೆಡಿಕಲ್ ಎಂಬ ಒಂಟಿ ಬೆಟ್ಟ ಬಹು ಎತ್ತರವಾದುದು (1,293 ಮೀ) ತಾಲ್ಲೂಕಿನಲ್ಲಿ ಪಶ್ಚಿಮಕ್ಕೆ ಬರುತ್ತಿದ್ದಂತೆ ಹೆಚ್ಚು ಮಟ್ಟಗೆ ಗುಡ್ಡಗಳು ಮಾತ್ರ ಕಂಡುಬರುತ್ತವೆ. ಆದರೂ ಏರಿಳಿತಗಳು ಹೆಚ್ಚು. ಭೂಮಿ ಬಹುತೇಕ ಜಂಬುಮಣ್ಣಿನದು. ತಾಲ್ಲೂಕಿನ ಪೂರ್ವಭಾಗದಲ್ಲಿ ಶಿರಾಡಿ

ಘಟ್ಟದ ಪ್ರದೇಶದಲ್ಲಿ ಹಾರ್ನ್‌ಬ್ಲೆಂಡ್ ಶಿಲೆ ಹೊಮ್ಮಿದೆ. ಪುತ್ತೂರು ತಾಲ್ಲೂಕಿನ ಸುಂಕದಕಟ್ಟೆ ಸುತ್ತಲ ಪ್ರದೇಶದಲ್ಲಿ ಉತ್ತಮ ದರ್ಜೆಯ ಕಬ್ಬಿಣದ ಅದಿರು (54ರಿಂದ 57% ಕಬ್ಬಿಣ) ಹರಡಿದೆ. ಉಪ್ಪಿನಂಗಡಿ–ಸುಬ್ರಹ್ಮಣ್ಯ ರಸ್ತೆಯಲ್ಲಿರುವ ಸಂಪ್ಯಾಡಿ ಬಳಿ ಕುರಂದ ಕಲ್ಲು ಮತ್ತು ಕ್ಯಾನೈಟ್ ದೊರಕುತ್ತವೆ. ಕಾವು ಗ್ರಾಮದ ಹತ್ತಿರ ನದಿ ಮೆಕ್ಕಲಿನಲ್ಲಿ ಜರಗು ಚಿನ್ನ ದೊರೆಯುತ್ತದೆ. ನೇತ್ರಾವತಿ ನದಿ ಈ ತಾಲ್ಲೂಕಿನ ವಾಯುವ್ಯದಂಚಿನಲ್ಲಿ ಉಪ್ಪಿನಂಗಡಿ ಹತ್ತಿರದಿಂದ ಸ್ವಲ್ಪದೂರ ಹರಿಯುತ್ತದೆ. ಇದರ ಉಪನದಿ ಕುಮಾರಧಾರಾ **(ನೋಡಿ)** ಮತ್ತು ಗೌರಿಹೊಳೆ ಇಲ್ಲಿಯ ಮುಖ್ಯ ನದಿಗಳು. ಕುಮಾರಧಾರಾ ತಾಲ್ಲೂಕಿನ ಆಗ್ನೇಯದಂಚಿನಿಂದ ಬಂದು ಅನಂತರ ಮಧ್ಯದಲ್ಲಿ ಹರಿದು ನೇತ್ರಾವತಿಯನ್ನು ಸೇರುತ್ತದೆ. ಗೌರಿ ಹೊಳೆ ಈಶಾನ್ಯದಲ್ಲಿ ಶಿರಾಡಿ ಘಟ್ಟದೆಡೆಯಿಂದ ಬಂದು ಕಡಬದಿಂದ ಸ್ವಲ್ಪ ಪಶ್ಚಿಮದಲ್ಲಿ ಕುಮಾರಧಾರಾ ನದಿಯನ್ನು ಸೇರುತ್ತದೆ. ತಾಲ್ಲೂಕಿನಲ್ಲಿ ಮಳೆ ಹೆಚ್ಚು. ಪುತ್ತೂರಿನಲ್ಲಿ ದಾಖಲಾಗಿರುವ ವಾರ್ಷಿಕ ಸರಾಸರಿ ಮಳೆ 4,439 ಮಿಮೀ.

ತಾಲ್ಲೂಕಿನ ಒಟ್ಟು 99,693 ಹೆಕ್ಟೇರು ಭೂಮಿಯಲ್ಲಿ ಮೂರನೆಯ ಒಂದು ಭಾಗದಷ್ಟು ಪ್ರದೇಶ (27,386 ಹೆಕ್ಟೇರು) ಅರಣ್ಯಭರಿತವಾಗಿದೆ. ಪುತ್ತೂರು ತಾಲ್ಲೂಕಿನ ಅರಣ್ಯದಲ್ಲಿ ತೇಗದ ಮರ ವಿಶೇಷ. ಕರಿಮರ, ಮತ್ತಿಮರ, ಕೀರಲ್ ಬೋಗಿ ಮುಂತಾದ ಇತರ ಉಪಯುಕ್ತ ಮರಗಳೂ ಇವೆ. ಮಳೆಗಾಲದಲ್ಲಿ ಅಗಾಧವಾಗಿ ದೊರೆಯುವ ಮಳೆನೀರು ಮತ್ತು ಝರಿಗಳಿಂದ ಕಣಿವೆ ಪ್ರದೇಶಗಳಲ್ಲಿ ಗದ್ದೆಗಳ ಸಾಗುವಳಿ ಮಾಡಲಾಗುತ್ತದೆ. ಕೆಲವು ಕಡೆ ಬಾವಿಗಳಿಂದ ನೀರೆತ್ತಿ ಸಾಗುವಳಿ ಮಾಡುವುದುಂಟು. ಬತ್ತ ಈ ಪ್ರದೇಶದ ಮುಖ್ಯ ಬೆಳೆ. ಜೊತೆಗೆ ರಾಗಿ ಮತ್ತು ದ್ವಿದಳ ಧಾನ್ಯಗಳನ್ನು ಸ್ವಲ್ಪಮಟ್ಟಿಗೆ ಬೆಳೆಯುವುದುಂಟು. ಈ ತಾಲ್ಲೂಕಿನಲ್ಲಿ ಅಡಕೆ, ತೆಂಗು, ಗೋಡಂಬಿ, ಮೆಣಸು, ಬಾಳೆ, ಹಲಸು ಮೊದಲಾದ ತೋಟದ ಬೆಳೆಗಳೂ ಇವೆ. ಈಚೆಗೆ ಕೋಕೋ ಮತ್ತು ರಬ್ಬರ್ ಬೆಳೆಗಳನ್ನು ರೂಢಿಸಲಾಗಿದೆ. ಕೈಗಾರಿಕಾ ದೃಷ್ಟಿಯಿಂದ ತಾಲ್ಲೂಕು ಅಷ್ಟೇನೂ ಮುಂದುವರಿದಿಲ್ಲ. ಬೀಡಿ ಕಟ್ಟುವ ಉದ್ಯಮ ಬೆಳೆದಿದೆ. ಪುತ್ತೂರಿನ ಮೂಲಕ ಹಾದುಹೋಗುವ ಮೈಸೂರು–ಮಂಗಳೂರು ಹೆದ್ದಾರಿ, ಪುತ್ತೂರು–ಕಾಸರಗೋಡು ರಸ್ತೆ, ಪುತ್ತೂರು–ವಿಟ್ಲ, ಪುತ್ತೂರು–ಸವಣೂರು–ಸುಬ್ರಹ್ಮಣ್ಯ, ಪುತ್ತೂರು–ಬೆಳ್ಳಾರೆ–ಸುಬ್ರಹ್ಮಣ್ಯ, ಉಪ್ಪಿನಂಗಡಿ–ಸುಬ್ರಹ್ಮಣ್ಯ ರಸ್ತೆಗಳು ಮುಖ್ಯ ಹಾದಿಗಳು. ಹಾಸನ–ಮಂಗಳೂರು ರೈಲು ರಸ್ತೆ ಪುತ್ತೂರು ತಾಲ್ಲೂಕಿನ ಮಧ್ಯದಲ್ಲಿ ಹಾದುಹೋಗಿದೆ.

ಈ ತಾಲ್ಲೂಕಿನಲ್ಲಿರುವ ಕಡಬ ಗ್ರಾಮ ವಿಜಯನಗರದ ಕಾಲದಲ್ಲಿ ಆಡಳಿತ ಕೇಂದ್ರವಾಗಿತ್ತು. ಇಲ್ಲಿ ಗಣೇಶ ಮತ್ತು ನೀಲಕಂಠ ದೇವಾಲಯಗಳಿವೆ. ಕೆಮ್ಮಾರ್ ಸರೋವರ ಈ ತಾಲ್ಲೂಕಿನ ಒಂದು ಸುಂದರ ತಾಣ. ಪುತ್ತೂರಿನಿಂದ ಸು. 19 ಕಿಮೀ ಈಶಾನ್ಯದಲ್ಲಿ ಉಪ್ಪಿನಂಗಡಿ–ಬಿಸಲೆಘಾಟ್ ರಸ್ತೆಯಲ್ಲಿರುವ ಹಿರೆಬಂಡಾಡಿ ಗ್ರಾಮದ ಒಂದು ಭಾಗವಾಗಿರುವ ಈ ಸರೋವರ ವಿಶ್ರಾಂತಿ ಮತ್ತು ಮನರಂಜನಾ ತಾಣವಾಗಿದೆ. ಪುತ್ತೂರಿನ ಈಶಾನ್ಯಕ್ಕೆ 13 ಕಿಮೀ ದೂರದಲ್ಲಿರುವ ಸವಣೂರು ಒಂದು ಕಾಲದಲ್ಲಿ ಜೈನರ ವಾಸಸ್ಥಳವಾಗಿತ್ತು. ಇಲ್ಲಿ ಹಳೆಯ ಪುಡೊತ್ತು ಚಂದ್ರನಾಥ ಬಸದಿ ಇದೆ. ಉಪ್ಪಿನಂಗಡಿ **(ನೋಡಿ)** ಹಿಂದೆ ತಾಲ್ಲೂಕು ಕೇಂದ್ರವಾಗಿತ್ತು. ಇಲ್ಲಿ ನೇತ್ರಾವತಿ–ಕುಮಾರಧಾರಾ ಸಂಗಮದ ಹತ್ತಿರ ಲಕ್ಷ್ಮೀ ವೆಂಕಟರಮಣ ಮತ್ತು ಸಹಸ್ರಲಿಂಗೇಶ್ವರ ದೇವಾಲಯಗಳಿವೆ. *

ಪುತ್ತೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ಮಂಗಳೂರಿಗೆ ಆಗ್ನೇಯ ದಿಕ್ಕಿನಲ್ಲಿ 52 ಕಿಮೀ ದೂರದಲ್ಲಿದೆ. ಜನಸಂಖ್ಯೆ 48.063. ಪುತ್ತೂರಿನಿಂದ ಮಂಗಳೂರು, ಹಾಸನ–ಮಡಿಕೇರಿ ಮತ್ತು ಕಾಸರಗೋಡು ಮುಂತಾದೆಡೆಗೆ ಉತ್ತಮ ಮಾರ್ಗಸಂಪರ್ಕವಿದ್ದು ವ್ಯಾಪಾರಕೇಂದ್ರವಾಗಿದೆ. ಹಾಸನ–ಮಂಗಳೂರು ರೈಲ್ವೆ ಮಾರ್ಗದ ಒಂದು ದೊಡ್ಡ ರೈಲ್ವೆ ನಿಲ್ದಾಣವಾಗಿ ಪುತ್ತೂರು ಇನ್ನೂ ಹೆಚ್ಚು ವಿಸ್ತಾರವಾಗಿ ವ್ಯಾಪಾರ–ವಾಣಿಜ್ಯದಲ್ಲಿ ಅಭಿವೃದ್ಧಿಯಾಗುತ್ತಿದೆ. ಇಲ್ಲಿ ತಾಮ್ರದ ಪಾತ್ರೆಗಳನ್ನು ತಯಾರುಮಾಡುವ ಉದ್ಯಮವಿದೆ. ಬೀಡಿಕಟ್ಟುವ ಕಾರ್ಖಾನೆಗಳಿವೆ. ಪುತ್ತೂರು ಪಟ್ಟಣದಲ್ಲಿ ಪುರಸಭೆ ಇದೆ.

ಪುತ್ತೂರಿನಲ್ಲಿ ಪುರಾತನ ಮಹಲಿಂಗೇಶ್ವರ ದೇವಾಲಯವಿದೆ. ಇದರಲ್ಲಿ ವಿಜಯನಗರದ ದೊರೆ ಪ್ರತಾಪದೇವರಾಯನ ಕಾಲದ ಶಕವರ್ಷ 1353ರ ಶಾಸನ ಒಂದಿದೆ. ವೆಂಕಟರಮಣ, ಮಹಾಮಾಯಾ, ರಾಧಾಕೃಷ್ಣ ಮತ್ತು ಭವಾನಿಶಂಕರ ಇಲ್ಲಿರುವ ಇತರ ದೇವಾಲಯಗಳು. ಈ ಊರಿನಲ್ಲಿ ಒಂದು ದೊಡ್ಡ ಚರ್ಚ್ ಇದೆ. **(*;ಡಿ.ಎನ್.ಕೆ.)**

**ಪುನೀತ್ ರಾಜಕುಮಾರ್**: 1975–. ಕನ್ನಡ ಚಲನಚಿತ್ರರಂಗದ ಯುವನಾಯಕ ನಟ. ಇವರ ತಂದೆ ವರನಟ ರಾಜಕುಮಾರ್, ತಾಯಿ ಪಾರ್ವತಮ್ಮ. 1975 ಮಾರ್ಚ್ 17ರಂದು ಬೆಂಗಳೂರಿನಲ್ಲಿ ಜನಿಸಿದ ಪುನೀತರ ಮೊದಲ ಹೆಸರು ಲೋಹಿತ್. ಆರನೆಯ ವಯಸ್ಸಿನಿಂದಲೇ ಚಲನಚಿತ್ರಗಳಲ್ಲಿ ಅಭಿನಯಿಸಲಾರಂಭಿಸಿದರು. ತಂದೆ ರಾಜಕುಮಾರ್‌ರೊಂದಿಗೆ ಬಾಲಪಾತ್ರಗಳಲ್ಲಿ ಅಭಿನಯಿಸುತ್ತ ಬಂದ ಇವರು ಹದಿನೈದಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಸಮರ್ಥ ಅಭಿನಯ ನೀಡಿದ್ದಾರೆ. ಭಾಗ್ಯವಂತರು(1978), ತಾಯಿಗೆ ತಕ್ಕ ಮಗ(1979), ವಸಂತಗೀತ(1981), ಚಲಿಸುವ ಮೋಡಗಳು, ಹೊಸ ಬೆಳಕು(1982), ಎರಡುನಕ್ಷತ್ರಗಳು, ಭಕ್ತಪ್ರಹ್ಲಾದ(1983), ಯಾರಿವನು(1984), ಭೂಮಿಗೆ ಬಂದ ಭಗವಂತ, ಬೆಟ್ಟದಹೂವು – ಈ ಚಿತ್ರಗಳಲ್ಲಿ ಬಾಲಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಇವರು ನಾಯಕನಾಗಿ ನಟಿಸಿದ ಮೊದಲ ಚಿತ್ರ 'ಅಪ್ಪು'. ಅನಂತರ 'ಅಭಿ' ಚಿತ್ರದಲ್ಲಿ ಅಭಿನಯಿಸಿದರು.

ಬೆಟ್ಟದ ಹೂವು ಇವರಿಗೆ ಅಂತಾರಾಷ್ಟ್ರೀಯ ಖ್ಯಾತಿ ತಂದು ಕೊಟ್ಟ ಚಿತ್ರ. ಅತ್ಯುತ್ತಮ ಸಾಮಾಜಿಕ ಕಾಳಜಿಯ ಶ್ರೇಷ್ಠಚಿತ್ರವೆಂಬ ರಾಷ್ಟ್ರೀಯ ಪುರಸ್ಕಾರ(1985) ಪಡೆದ ಹಿರಿಮೆ ಈ ಚಿತ್ರದ್ದು. ಈ ಚಿತ್ರದಲ್ಲಿನ ಅಭಿನಯಕ್ಕಾಗಿ ಇವರಿಗೆ ಶ್ರೇಷ್ಠ ಬಾಲನಟ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಸ್ವಾತಂತ್ರ್ಯ ಪೂರ್ವದ ಕಥೆಯೊಂದನ್ನು ಆಧರಿಸಿ ತಯಾರಿಸಿದ ಈ ಚಿತ್ರ ಗುಡ್ಡಗಾಡು ಪರಿಸರದ, ಬುಡಕಟ್ಟು ಜನಾಂಗದ ಜೀವನ ವಿವರಗಳನ್ನೊಳಗೊಂಡಿದೆ. ಮಾರಿಷಸ್‌ನಲ್ಲಿ ಜರುಗಿದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಆಯ್ಕೆಯಾದ ಕನ್ನಡದ ಏಕೈಕ ಚಿತ್ರವಿದು (1985). ಒರಿಸ್ಸದ ಭುವನೇಶ್ವರ್ ಹಾಗೂ ಬೆಂಗಳೂರುಗಳಲ್ಲಿ ಜರುಗಿದ ರಾಷ್ಟ್ರೀಯ ಚನಲಚಿತ್ರೋತ್ಸವಗಳಲ್ಲಿಯೂ ಕನ್ನಡದ ಶ್ರೇಷ್ಠಚಿತ್ರವೆಂದು ಪ್ರದರ್ಶನಕ್ಕೆ ಆಯ್ಕೆಯಾಗಿತ್ತು (1982–83). ಚಲಿಸುವ ಮೋಡಗಳು, ಎರಡುನಕ್ಷತ್ರಗಳು (1983–84)–ಈ ಚಲನಚಿತ್ರಗಳಲ್ಲಿನ ಭಾವಪೂರ್ಣ

ಅಭಿನಯಕ್ಕಾಗಿ ಇವರಿಗೆ ಶ್ರೇಷ್ಠ ಬಾಲನಟ ರಾಜ್ಯ ಪ್ರಶಸ್ತಿ ಲಭ್ಯವಾಗಿದೆ. ಅಪ್ಪು ಚಿತ್ರದಲ್ಲಿ ಯುವ ನಾಯಕ ನಟನಾಗಿ ಉತ್ತಮ ಅಭಿನಯ ನೀಡಿದ್ದಾರೆ. ಅಭಿನಯ, ನೃತ್ಯಗಳ ಜೊತೆಜೊತೆಗೆ ಹಾಡುಗಾರಿಕೆ ಯಲ್ಲಿಯೂ ಇವರಿಗೆ ಪರಿಶ್ರಮವಿದೆ. ಸಂಗೀತ ವಾದನಗಳಲ್ಲೂ ಪರಿಣತಿಯುಳ್ಳವ ರಾಗಿದ್ದಾರೆ. ಯೋಗಾಭ್ಯಾಸ ಇವರ ಮತ್ತೊಂದು ಆಸಕ್ತಿಯ ಕ್ಷೇತ್ರ. ಕೇವಲ ಹತ್ತನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ಪುನೀತ್ ಅವರು ಹಿಂದೀ, ಇಂಗ್ಲಿಷ್, ತೆಲುಗು, ತಮಿಳು, ಭಾಷೆಗಳನ್ನು ಬಲ್ಲವರಾಗಿದ್ದಾರೆ. ಇವರ ಭಾವಪೂರ್ಣ ಅಭಿನಯಕ್ಕಾಗಿ ಸೋವಿಯತ್ ಚಲನಚಿತ್ರ ಪ್ರಶಸ್ತಿ, ಬೆಲ್ಜಿಯಮ್ ಹಾಗೂ ಸೌದಿ ಅರೇಬಿಯ ಸರ್ಕಾರಗಳ ಚಲನಚಿತ್ರ ಪ್ರಶಸ್ತಿಗಳೂ ಇವರಿಗೆ ದೊರಕಿವೆ. ಈಗ ನಾಯಕ ನಟರಾಗಿ ಕನ್ನಡ ಚಿತ್ರರಂಗದಲ್ಲಿ ಹೆಸರುಮಾಡಿದ್ದಾರೆ. (ಸಿ.ವೈ.)

**ಪುನ್ನಾಟ:** ಪ್ರಾಚೀನ ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದ ಒಂದು ಭೌಗೋಳಿಕ ಘಟಕ. ಇದರ ವಿಸ್ತೀರ್ಣ ಅಸ್ಪಷ್ಟ. 6ನೆಯ ಶತಮಾನದ ಒಂದು ಶಾಸನದ ಪ್ರಕಾರ ಇದು ಕಾವೇರಿ-ಕಪಿನಿ ನದಿಗಳು ಹರಿಯುವ ಪ್ರದೇಶ, ಅಂದರೆ ಈಗಿನ ಮೈಸೂರು ಜಿಲ್ಲೆ, ಕಿತ್ಥಿಪುರ ಅಥವಾ ಕೀರ್ತಿಪುರ (ಹೆಗ್ಗಡದೇವನಕೋಟೆ ತಾಲ್ಲೂಕು ಕಿತ್ತೂರು) ಇಲ್ಲಿಯ ಮುಖ್ಯಪಟ್ಟಣ ಮತ್ತು ರಾಜಧಾನಿ. ಆದರೆ ಪುನ್ನಾಟದ ಎಲ್ಲೆಗಳು ಕಾಲಕಾಲಕ್ಕೆ ಹೆಚ್ಚು ಕಡಿಮೆ ಆಗಿರಬಹುದೆಂದು ತೋರುತ್ತದೆ. ಒಂದು ಕಾಲದಲ್ಲಿ ಪುನ್ನಾಟ ಇಂದಿನ ಮೈಸೂರು ಜಿಲ್ಲೆಯಲ್ಲದೆ ಸುತ್ತಣ ಕೊಯಮತ್ತೂರು, ಕೊಡಗು, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳ ಭಾಗಗಳನ್ನೂ ಒಳಗೊಂಡಿದ್ದಿರಬಹುದು.

ಒಬ್ಬ ವಿದ್ವಾಂಸರ ಪ್ರಕಾರ ಪುನ್ನಾಟವು ನದಿ ಝುರಿಗಳು ಹರಿಯುವ ಪ್ರದೇಶ ಎಂದು ಸೂಚಿಸುವ ಪುನಲ್ ಮತ್ತು ನಾಡು ಎಂಬ ಕನ್ನಡ ಪದಗಳ ಸಂಯುಕ್ತ ರೂಪ. ಪುನ್ನಾಟವನ್ನು ಪುಂರಾಷ್ಟ್ರವೆಂದು ಒಂದು ಶಾಸನದಲ್ಲಿ ಕರೆದಿದ್ದರೆ ಪೂನಾಡು, ಪುದಲ್ನಾಡು ಎಂಬ ರೂಪಗಳೂ ದೊರಕುತ್ತವೆ. ಪದಿನಾಡು ಎಂಬುದೂ ಪುನ್ನಾಡಿನ ರೂಪಾಂತರ ಇರಬಹುದೇ ಎಂಬುದಕ್ಕೆ ವಿದ್ವಾಂಸರಲ್ಲಿ ಒಮ್ಮತವಿಲ್ಲ.

ಪುನ್ನಾಟ ದೇಶಕ್ಕೆ ಬಹು ಪ್ರಾಚೀನವಾದ ಉಲ್ಲೇಖಗಳು ದೊರಕುತ್ತವೆ. ಈಜಿಪ್ಟಿನ 18ನೆಯ ರಾಜವಂಶದ ಅರಸರುಗಳ, ಪ್ರ.ಶ.ಪೂ. 15-14ನೆಯ ಶತಮಾನದ ದಾಖಲೆಗಳಲ್ಲಿ ದೊರಕುವ 'ಪುಂಟ್' ಪುನ್ನಾಟವಿರಬಹುದೆಂದು ಕೆಲವು ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲೆ ಕೆಲವು ಪುರಾತತ್ತ್ವಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಒಂದು ಪ್ರತೀತಿಯಂತೆ ಮಗಧ ರಾಜ್ಯದಿಂದ ಜೈನ ಸಂಘವು ಭದ್ರಬಾಹುವಿನ ಮುಂದಾಳತ್ವದಲ್ಲಿ ದಕ್ಷಿಣಕ್ಕೆ ವಲಸೆ ಬಂದುದಾಗಿಯೂ ಶ್ರವಣಬೆಳಗೊಳಕ್ಕೆ ಬಂದಾಗ ತನ್ನ ಅಂತ್ಯ ಸಮೀಪಿಸಿದುದನ್ನು ಅರಿತ ಭದ್ರಬಾಹು ಅಲ್ಲೇ ಉಳಿದುಕೊಂಡಂತೆಯೂ ತಿಳಿದುಬರುತ್ತದೆ. ಹರಿಷೇಣನ ಬೃಹತ್ಕಥಾಕೋಶದಲ್ಲಿ (931) ಭದ್ರಬಾಹುವಿನ ಮಾತಿನಂತೆ ಜೈನಸಂಘವು ದಕ್ಷಿಣದಲ್ಲಿದ್ದ ಪುನ್ನಾಟ ವಿಷಯಕ್ಕೆ ಹೋಯಿತು ಎಂದು ಹೇಳಿದೆ. ಇದರಂತೆ ಪುನ್ನಾಟ ರಾಜ್ಯ ಕ್ರಿ.ಪೂ. ಮೂರನೆಯ ಶತಮಾನದಲ್ಲಿಯೇ ಅಸ್ತಿತ್ವದಲ್ಲಿದ್ದಿತೆನ್ನಬಹುದು.

ಕ್ರಿಸ್ತಶಕಾರಂಭದಲ್ಲಿ ರೋಮ್ ಚಕ್ರಾಧಿಪತ್ಯಕ್ಕೂ ಈ ರಾಜ್ಯಕ್ಕೂ ವ್ಯಾಪಾರ ಸಂಬಂಧ ಬೆಳೆದು ಬಂದಿದ್ದಿರಬೇಕು. ಪ್ಲಿನಿ ಭಾರತದ ಪಚ್ಚೆಯ ಹರಳುಗಳ ಮೇಲೆ ರೋಮನ್ ಕುಶಲಕಲೆಗಾರರು ಕೆತ್ತನೆ ಮಾಡಿರುವ ವಿಷಯ ತಿಳಿಸಿದ್ದಾನೆ. ಸುಮಾರು 2ನೆಯ ಶತಮಾನದ ಟಾಲೆಮಿ ಎಂಬ ಗ್ರೀಕ್ ಭೂಗೋಳಕಾರ ಪೌನ್ನಟ ಪಚ್ಚೆಕಲ್ಲುಗಳಿಗೆ ಪ್ರಸಿದ್ಧವಾಗಿತ್ತೆಂದು ಹೇಳಿದ್ದಾನೆ. ಕೊಯಮತ್ತೂರು ಜಿಲ್ಲೆಯ ಭಾಗಗಳಲ್ಲಿ ಪಚ್ಚೆಯ ಕಲ್ಲು ಇತ್ತೀಚಿನವರೆಗೆ ದೊರೆಯುತ್ತಿದ್ದುದು ಮತ್ತು ಆ ಭಾಗದಲ್ಲಿ ಅನೇಕ ರೋಮನ್ ನಾಣ್ಯಗಳು ದೊರೆತಿರುವುದೂ ರೋಮನ್ ವ್ಯಾಪಾರಿಗಳು ಇಲ್ಲಿಂದ ಪಚ್ಚೆಯ ಕಲ್ಲುಗಳನ್ನು ಸಾಗಿಸುತ್ತಿದ್ದ ರೆಂಬುದಕ್ಕೆ ಪುಷ್ಟಿ ಕೊಡುತ್ತವೆ.

4ನೆಯ ಶತಮಾನದಲ್ಲಿ ಕದಂಬ ಮೂಲಪುರುಷ ಮಯೂರಶರ್ಮ ಇತರ ಅನೇಕ ರಾಜಮನೆತನಗಳ ಜೊತೆಗೆ ಪುನ್ನಾಟರನ್ನು ಸೋಲಿಸಿದ ನೆಂದು ಚಂದ್ರವಳ್ಳಿಯಲ್ಲಿರುವ ಶಾಸನದಿಂದ ವ್ಯಕ್ತವಾಗುತ್ತದೆ.

ಪುನ್ನಾಟ ರಾಜರೆಂದು ಪ್ರಸಿದ್ಧವಾಗಿರುವ 5-7ನೆಯ ಶತಮಾನಗಳಲ್ಲಿ ಈ ಪ್ರದೇಶದಲ್ಲಿ ಆಳಿದ ವಂಶದವರ ಮೂರು ತಾಮ್ರಶಾಸನಗಳು ಇದುವರೆಗೆ ದೊರೆತಿವೆ. ಕೊಮರಲಿಂಗಂ ತಾಮ್ರಶಾಸನದಲ್ಲಿ ಪುನ್ನಾಟ ರಾಜ ರವಿದತ್ತ ರಾಜಧಾನಿ ಕಿತ್ಥಿಪುರದಲ್ಲಿದ್ದು ದಾನ ಮಾಡಿದುದಾಗಿ ತಿಳಿಸುವುದರಿಂದ ಕಿತ್ಥಿಪುರ ಅಥವಾ ಕೀರ್ತಿಪುರ ಇವರ ರಾಜಧಾನಿಯಾಗಿ ತ್ತೆಂಬುದು ಸ್ಪಷ್ಟ. ಕಪಿನಿ ನದಿಯ ದಡದಲ್ಲಿರುವ ಈಗಿನ ಕಿತ್ತೂರು ಹಿಂದಿನ ಕೀರ್ತಿಪುರವಾಗಿತ್ತೆಂದು ಅಲ್ಲಿಯ ಒಂದು ಶಾಸನದಿಂದ ಸಿದ್ಧಪಡುತ್ತದೆ. ಈ ವಂಶದ ಮೂಲಪುರುಷ ತಾಮ್ರಕಾಶ್ಯಪ (ಇವನು ಮಿಕನೆಂಬುವನ ಮಗನೆಂದು ಒಂದು ಶಾಸನ ತಿಳಿಸುತ್ತದೆ). ಈ ತಾಮ್ರಕಾಶ್ಯಪನ ಮಗ ರಾಜಾದಿತ್ಯ. ಇವನ ವಂಶದಲ್ಲಿ ಮುಂದೆ ಕಾಣಿಸಿ ಕೊಳ್ಳುವವನು ವಿಷ್ಣುದಾಸ. ಈ ವಿಷ್ಣುದಾಸನ ಮಗ ರಾಷ್ಟ್ರವರ್ಮನು (ಸು. 475) ಕದಂಬ ವಂಶದ ಪ್ರಭಾವತಿ ಎಂಬುವಳನ್ನು ಮದುವೆಯಾಗಿದ್ದ. ಈತನಿಗೆ ಮೂವರು ಮಕ್ಕಳು-ಮಾಂಬಳ್ಳಿ ಶಾಸನವನ್ನು ಹಾಕಿಸಿದ ಪೃಥ್ವೀಪತಿ (ಸು. 520), ಸ್ಕಂದವರ್ಮ (ಸು. 525) ಮತ್ತು ಕೊಮರಲಿಂಗಂ ಶಾಸನದ ಕರ್ತೃ ರವಿದತ್ತನ ಮುತ್ತಾತನಾದ ನಾಗದತ್ತ (ಸು. 530). ಗಂಗ ಅವಿನೀತ ಮತ್ತು ದುರ್ವಿನೀತರ ಶಾಸನಗಳು, ಅವಿನೀತ ಪುನ್ನಾಟ ರಾಜ ಸ್ಕಂದವರ್ಮನ ಮಗಳನ್ನು ಮದುವೆಯಾಗಿದ್ದನೆಂದು ತಿಳಿಸುತ್ತವೆ. ಸ್ಕಂದವರ್ಮನ ಮಗಳ ಹೆಸರು ಜೇಷ್ಠಾ ಎಂದು ಒಂದು ತಾಮ್ರಶಾಸನದಲ್ಲಿ ಹೇಳಿದೆ. ಕೊಮರಲಿಂಗಂ ಶಾಸನದಲ್ಲಿ ಈ ವಂಶಾವಳಿ ಹೀಗೆ ಮುಂದು ವರೆದಿದೆ; ನಾಗದತ್ತನ ಮಗ ಭುಜಂಗಾದಿ ರಾಜ (ಸು. 575), ಅವನ ಮಗ ಸ್ಕಂದವರ್ಮ (ಸು. 625), ಆ ಸ್ಕಂದವರ್ಮನ ಮಗ ಶಾಸನ ಕರ್ತೃವಾದ ಪುನ್ನಾಟ ರಾಜ ರವಿದತ್ತ (ಸು. 650).

ಈ ಶಾಸನಗಳಿಂದ ಇವರ ಕಾಲ ಸ್ಪಷ್ಟವಾಗುವುದಿಲ್ಲ. ಆದರೆ ಗಂಗ ಅವಿನೀತನ ಸಮಕಾಲೀನನಾಗಿ ಸ್ಕಂದವರ್ಮನಿದ್ದನೆಂದು ತಿಳಿಯುವು ದರಿಂದ ಅದರ ಆಧಾರದ ಮೇಲೆ ಪುನ್ನಾಟ ರಾಜರ ಕಾಲವನ್ನೂ ಸ್ಥೂಲವಾಗಿ ಊಹಿಸಬಹುದು. ದುರ್ವಿನೀತನ ಶಾಸನಗಳಲ್ಲಿ ಅವನನ್ನು ಪೌನ್ನಾಟಾಧಿಪತಿನಾ ಎಂದಿರುವುದರಿಂದ ಅವನ ಕಾಲದಲ್ಲಿ ಈ ಪುನ್ನಾಟ ರಾಜ್ಯ ಗಂಗರಾಜ್ಯದ ಭಾಗವಾಗಿ ಹೋಗಿರಬೇಕು.

ಗಂಗ ಶಿವಮಾರನ ಶಾಸನವೊಂದರಿಂದ ಪುನ್ನಾಟ ರಾಜ್ಯ ಮೊದಲು 6000 ವಿಷಯವಾಗಿತ್ತೆಂದು ತಿಳಿದುಬರುತ್ತದೆ. ಮುಂದೆ ಅದು ಪುನ್ನಾಟ 10000 ರಾಜ್ಯವಾಗಿದ್ದುದಾಗಿ ಹಲವು ಶಾಸನಗಳಲ್ಲಿ ಕಂಡುಬರುತ್ತದೆ.

ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಂಡುಬರುವ ಪುನ್ನಾಡು 70 ಮತ್ತು ದೇವನಹಳ್ಳಿ ಶಾಸನಗಳೆರಡರಲ್ಲಿ ಬರುವ ಪುನ್ನಾಟರಸರು ಎಂಬುದಕ್ಕೂ ಈ ಪ್ರಸಿದ್ಧವಾದ ಪುನ್ನಾಟ ರಾಜ್ಯಕ್ಕೂ ಸಂಬಂಧವೇನು ಎನ್ನುವುದು ತಿಳಿಯದು. (ಎಂ.ಎಚ್.;ಪಿ.ಬಿ.ಬಿ.)

ಪುನ್ನಾಟ ದೇಶ ದಕ್ಷಿಣ ಭಾರತದಲ್ಲಿ ಜೈನಧರ್ಮದ ಮುಖ್ಯ ಕೇಂದ್ರವಾಗಿತ್ತು. ಈ ನಾಡಿನಲ್ಲಿ ಪ್ರಚಲಿತವಾಗಿದ್ದ ಒಂದು ಜೈನ

ಸಂಘವನ್ನು ರಾಜಧಾನಿ ಕಿತ್ತೂರಿನ ಹೆಸರಲ್ಲಿ ಕಿತ್ತೂರ ಸಂಘ ಎಂದು ಕರೆಯಲಾಗಿದೆ. ಇಲ್ಲಿಂದ ವಲಸೆ ಹೋಗಿ ಗುಜರಾತ್ ಮತ್ತು ಸುತ್ತಲಿನ ಪ್ರದೇಶದಲ್ಲಿ ನೆಲಸಿದ್ದ ಯತಿಗಳ ಸಂಘ ಪುನ್ನಾಟ ಸಂಘವೆಂದು ಪ್ರಸಿದ್ಧವಾಯಿತು.

ಜಿನಸೇನಾಚಾರ್ಯರು ತಮ್ಮ ಹರಿವಂಶದಲ್ಲಿ ಬೃಹತ್‌ಗಣ ಇಲ್ಲವೇ ಪುನ್ನಾಟ ಸಂಘದ ಹೆಸರನ್ನು ಉಲ್ಲೇಖಿಸಿದ್ದಾರೆ. ಈ ಸಂಘದ ಬಗ್ಗೆ ವಿಪುಲ ಸಂಗತಿಗಳು ದೊರೆಯದಿದ್ದರೂ ಜಿನಸೇನ ಮತ್ತು ಹರಿಸೇನರು ಒದಗಿಸಿದ ಸಂಗತಿಗಳು ಇದೊಂದು ಜೈನ ಯತಿಗಳ ಪವಿತ್ರ ಸಂಘವಾಗಿತ್ತೆಂದೂ ಇದು ಗುಜರಾತಿನ ವರ್ಧಮಾನಪುರ ಮತ್ತು ಅದರ ನೆರೆಹೊರೆಯ ಪ್ರದೇಶದಲ್ಲಿ 8ನೆಯ ಶತಮಾನದ ಆರಂಭದ ಕಾಲಕ್ಕೆ ಸ್ಥಾಪಿತವಾಗಿರಬಹುದೆಂದೂ ಊಹಿಸಬಹುದು. ಲಾಡಬಾಗಡ (ಲಾಟ ವರ್ಗಟ ಅಥವಾ ಲಾಟಬಾಗಟ) ಎಂಬ ಸಂಘವೂ ಕಾಲಾಂತರದಲ್ಲಿ ಪುನ್ನಾಟ ಸಂಘಕ್ಕೆ ಹೊಂದಿಕೊಂಡುಹೋದಂತೆ ತೋರುತ್ತದೆ. (ಪಿ.ಬಿ.ಬಿ.)

**ಪುರಂದರದಾಸ:** ಸು. 1484-1564. ಸಂಗೀತ ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ಅಪಾರ ಯಶಸ್ಸನ್ನು ಪಡೆದು ತಮ್ಮ ಬದುಕು ಹಾಗೂ ಕೃತಿಗಳಿಂದ ವಿದ್ವಾಂಸರ ಮತ್ತು ಜನಸಾಮಾನ್ಯರ ಮನ್ನಣೆ ಗಳಿಸಿದ ಹರಿದಾಸ ಸಾಹಿತ್ಯ ಪರಂಪರೆಯ ದಾಸಶ್ರೇಷ್ಠರಲ್ಲೊಬ್ಬರು. ಸಂಗೀತ ಕ್ಷೇತ್ರದಲ್ಲಿ ಇವರ ಸಾಧನೆ, ಸಿದ್ಧಿಗಳ ಫಲವಾಗಿ ಕರ್ಣಾಟಕ ಸಂಗೀತ ಪಿತಾಮಹ ಎಂಬ ಬಿರುದಿಗೆ ಪಾತ್ರರಾಗಿದ್ದಾರೆ.

ಪುರಂದರದಾಸರ ಬದುಕಿನ ಸುತ್ತ ಹಲವಾರು ದಂತಕಥೆಗಳು ಹರಡಿವೆ. ಒಟ್ಟಿನಲ್ಲಿ ಅವುಗಳಿಂದ ತಿಳಿಯುವ ಅಂಶಗಳಿವು: ಇವರು ಸು. 1484ರಲ್ಲಿ ಪುಣೆಯ ಸಮೀಪದ ಪುರಂದರಗಢ ಎಂಬಲ್ಲಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ಶ್ರೀನಿವಾಸನಾಯಕ. ಆಗರ್ಭ ಶ್ರೀಮಂತರಾಗಿದ್ದ ಇವರಿಗೆ ಅರ್ಥಲಾಲಸೆಯೂ ಜಿಪುಣತನವೂ ಹೆಚ್ಚಾಗಿತ್ತು. ಆದರೆ ಯಾವುದೋ ಒಂದು ಸನ್ನಿವೇಶದಲ್ಲಿ ಇವರಲ್ಲಿ ವೈರಾಗ್ಯ ಮೂಡಿತು. ಅನಂತರ ತಮ್ಮ ಸಮಸ್ತ ಐಶ್ವರ್ಯವನ್ನೂ ತ್ಯಾಗಮಾಡಿ ಹಂಪೆಗೆ ಬಂದು ವ್ಯಾಸರಾಯರಿಂದ ಹರಿದಾಸ ದೀಕ್ಷೆ ಪಡೆದರು. ಪುರಂದರದಾಸರ ಬದುಕಿನ ಈ ಪ್ರಮುಖ ತಿರುವಿಗೆ ಅವರ ಪತ್ನಿ ಸರಸ್ವತೀಬಾಯಿಯವರ ಪ್ರೇರಣೆ, ಸ್ಫೂರ್ತಿ ಇದ್ದಂತೆ ತೋರುತ್ತದೆ. ತಮ್ಮ ಜೀವನಕ್ಕೆ ಉನ್ನತ ಆದರ್ಶವನ್ನು ಒದಗಿಸಿದ ಆಕೆಯನ್ನು ನೆನೆದು ಅಂಥ 'ಹೆಂಡತಿಯ ಸಂತತಿ ಸಾವಿರವಾಗಲಿ' ಎಂದು ದಾಸರು ತಮ್ಮ ಒಂದು ಕೃತಿಯಲ್ಲಿ ಕೃತಜ್ಞತೆಯನ್ನು ಸೂಚಿಸಿದ್ದಾರೆ.

ಪುರಂದರದಾಸರ ಕಾಲ ಸ್ವಲ್ಪಮಟ್ಟಿಗೆ ಸಂದಿಗ್ಧವೇ ಆಗಿದೆ. ಇವರ ಕೆಲವು ಕೀರ್ತನೆಗಳ ಆಧಾರದ ಮೇಲೆ ಇವರು 1525ರಲ್ಲಿ ವ್ಯಾಸರಾಯರಿಂದ ದೀಕ್ಷೆ ಪಡೆದಂತೆ. 1538ರಲ್ಲಿ ವಿಜಯನಗರದಲ್ಲಿದ್ದಂತೆ ತೀರ್ಮಾನಿಸಬಹುದಾಗಿದೆ. ದಾಸರು ದಕ್ಷಿಣದಲ್ಲಿ ಮೈಸೂರು, ಉಡುಪಿ, ಕೊಚ್ಚಿ, ತಿರುಪತಿ, ತಮಿಳುನಾಡುಗಳಲ್ಲೂ ಉತ್ತರದಲ್ಲಿ ಕೇದಾರನಾಥದವರೆಗೂ ಪ್ರವಾಸ ಮಾಡಿ ಪುನಃ ಹಂಪೆಗೆ ಹಿಂದಿರುಗಿ, ಸು. 1564ರಲ್ಲಿ ದೈವಾಧೀನರಾದಂತೆ ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯದ ರಾಜಗುರುಗಳಾಗಿದ್ದ ವ್ಯಾಸರಾಯರಲ್ಲಿ ದೀಕ್ಷೆ ಪಡೆದ ಅನಂತರ ಪುರಂದರದಾಸರು ಅವರ ಆಶ್ರಯದಲ್ಲಿ ದಾಸಸಾಹಿತ್ಯ ಸೃಷ್ಟಿಗೆ ತೊಡಗಿದರು. ಆ ಕಾಲದಲ್ಲಿ ಸಂಸ್ಕೃತದಲ್ಲಿ ಉದ್ಗ್ರಂಥಗಳನ್ನು ರಚಿಸಿ ಉದ್ದಾಮ ಪಂಡಿತರಾಗಿದ್ದ ವಿದ್ವಾಂಸರು ವ್ಯಾಸಕೂಟ ಎಂಬ ಪರಂಪರೆಯನ್ನು ಬೆಳೆಸಿದ್ದರು. ಅಂಥ ಗಹನ ತತ್ತ್ವಗಳನ್ನು ಜನಸಾಮಾನ್ಯರಿಗೆ ಸರಳವಾದ ಕನ್ನಡ ಭಾಷೆಯಲ್ಲಿ ಹಾಡಿ ತಿಳಿಸುವ ಆವಶ್ಯಕತೆ ಅತ್ಯಗತ್ಯವಾಗಿತ್ತು. ಈ ಉದಾತ್ತ ಕಾರ್ಯಕ್ಕೆ ತೊಡಗಿದ ಪುರಂದರದಾಸರು ದಾಸಕೂಟ ಎಂಬ ಪಂಥವನ್ನೇ ಬೆಳೆಸಿ ಅದಕ್ಕೆ ಜನಪ್ರಿಯತೆಯನ್ನೂ ವಿದ್ವಜ್ಜನಮನ್ನಣೆಯನ್ನೂ ಗಳಿಸಿಕೊಟ್ಟರು.

(ಎಸ್.ಪಿ.ಎಸ್.)

ದಾಸರು ಸೃಷ್ಟಿಸಿದ ಪದಗಳ ಸಂಖ್ಯೆ ಅಪಾರ. ಪುರಂದರವಿಠಲ ಎಂಬುದು ಅವುಗಳ ಅಂಕಿತ. ಈವರೆಗೂ ಒಂದು ಸಾವಿರಕ್ಕೂ ಹೆಚ್ಚು ಕೀರ್ತನೆಗಳೂ ಪ್ರಕಟವಾಗಿವೆ. ಇವುಗಳಲ್ಲಿ ಕೆಲವನ್ನು ಪುರಂದರದಾಸರ ಅಂಕಿತದಲ್ಲಿ ಬೇರೆಯವರು ರಚಿಸಿರುವ ಸಾಧ್ಯತೆಯೂ ಇದೆ. ಈ ಕೀರ್ತನೆಗಳು ಸತ್ತ್ವದಲ್ಲಿ ಮಹತ್ತ್ವಪೂರ್ಣವಾಗಿದ್ದು ಆಧ್ಯಾತ್ಮಿಕ ತತ್ತ್ವಗಳ ಸಾರಸರ್ವಸ್ವವನ್ನೊಳಗೊಂಡಿವೆ. ಹಾಡುವುದಕ್ಕೆಂದೇ ರಚಿಸಿದ ಬಹುಶಃ ಹಾಡಿಕೊಂಡೇ ಸೃಷ್ಟಿಸಲ್ಪಟ್ಟ ಇವುಗಳಲ್ಲಿ ಅಪೂರ್ವ ಗೇಯ ಗುಣವಿದೆ. ಈ ಕೀರ್ತನೆಗಳು ತುಂಬ ಜನಪ್ರಿಯವಾಗಿವೆ. ಇವರು ರಚಿಸಿದ ಭಕ್ತಿಗೀತೆಗಳನ್ನು ತಮ್ಮ ತಾಯಿಯಿಂದ ಕೇಳಿ ಸ್ಫೂರ್ತಿ ಪಡೆದಂತೆ ಕರ್ಣಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರಾದ ತ್ಯಾಗರಾಜರು (1767-1847) ಸೂಚಿಸಿದ್ದಾರೆ. ಅವರು ತಮ್ಮ 'ಪ್ರಹ್ಲಾದ ಭಕ್ತವಿಜಯ' ಎಂಬ ಗೀತ ನಾಟಕಗಳಲ್ಲಿ ಪುರಂದರದಾಸರನ್ನು ಗೌರವಿಸಿದ್ದಾರೆ.

ಪುರಂದರದಾಸರ ಕೀರ್ತನೆಗಳನ್ನು ವಸ್ತುವಿಗನುಗುಣವಾಗಿ ಹರಿನಾಮ ಮಹಿಮೆ, ಹರಿಗುರುಗಳ ಸ್ತುತಿ-ಸ್ಮರಣೆ, ಅಂತರಂಗ ನಿವೇದನೆ, ಕೃಷ್ಣ ಲೀಲೆ, ಸಮಾಜವಿಮರ್ಶೆ, ಸಮಾಜ ಬೋಧನೆಗಳಿಗೆ ಸಂಬಂಧಿಸಿದವೆಂದು ಸ್ಥೂಲವಾಗಿ ವಿಭಾಗಿಸಬಹುದು. ಯಾದವ ನೀ ಬಾ ಯದುಕುಲನಂದನ; ನೀನೆ ದಯಾಳು ನಿರ್ಮಲಚಿತ್ತ; ಹೂವ ತರುವರ ಮನೆಗೆ ಹುಲ್ಲ ತರುವ; ನಾರಾಯಣ ನಿಮ್ಮ ನಾಮದ ಸ್ಮರಣೆಯ ಸಾರಾಮೃತವೆನ್ನ ನಾಲಿಗ್ಗೆ ಬರಲಿ-ಎಂಬೀ ಕೀರ್ತನೆಗಳಲ್ಲಿ ದಾಸರು ಹರಿನಾಮ ಮಹಿಮೆಯನ್ನು ಕೊಂಡಾಡಿದ್ದಾರೆ. ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ ಎಂಬ ಕೀರ್ತನೆ ಸರಳತೆ ಸಹಜಪ್ರಾಸ ಮುಂತಾದ ಗುಣಗಳಿಂದ ಮೆಚ್ಚುವಂತಿದೆ.

ಇವರ ಅಂತರಂಗದ ಕೀರ್ತನೆಗಳು ಭಕ್ತನೊಬ್ಬನ ಮನದ ಆಸೆ ಆಕಾಂಕ್ಷೆಗಳನ್ನೂ ನೋವು ನಿರಾಶೆಗಳನ್ನೂ ಪ್ರತಿಬಿಂಬಿಸುವುದರ ಜೊತೆಗೆ ಸರಳತೆಯಿಂದ ಭಾವಸಂಕೀರ್ಣತೆಯಿಂದ ಸೊಗಸನ್ನೂ ತಳೆದಿವೆ. ಕೆಲವು ಕೀರ್ತನೆಗಳಲ್ಲಿ ಭಾವಾಭಿವ್ಯಕ್ತಿ ಭಾವಗೀತೆಯ ಸತ್ತ್ವವನ್ನು ಪಡೆದುಕೊಂಡಿದೆ. ಕಂಡು ಕಂಡು ನೀ ಎನ್ನ ಕೈಬಿಡುವರೆ ರಂಗ; ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು; ಬಂದಿದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ; ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ; ಅನುಭವದಡಿಗೆಯ ಮಾಡಿ-ಈ ಮೊದಲಾದ ಕೀರ್ತನೆಗಳು ಈ ಮಾದರಿಯವು. ರಸದೃಷ್ಟಿಯಿಂದಲೂ ಈ ಕೀರ್ತನೆಗಳು ಗಮನಾರ್ಹವಾಗಿವೆ.

ಶ್ರೀಕೃಷ್ಣಲೀಲಾ ವಿನೋದಗಳನ್ನು ವರ್ಣಿಸುವ ವೈಖರಿಯಲ್ಲಿ ಪುರಂದರ ದಾಸರ ಸಿದ್ಧಿ ಅದ್ವಿತೀಯ. ಇಂಥ ಕೀರ್ತನೆಗಳಲ್ಲಿ ಭಾಗವತ ಪುರಾಣದ ಹಲವಾರು ಸನ್ನಿವೇಶಗಳೂ ವ್ಯಕ್ತಿಗಳೂ ಚಿತ್ರಿತವಾಗಿವೆ. ಶೃಂಗಾರ, ಕರುಣ, ಹಾಸ್ಯರಸಗಳು ಈ ಕೀರ್ತನೆಗಳಲ್ಲಿ ಉಕ್ಕಿ ಹರಿದಿರುವುದುಂಟು. ಬಗೆಬಗೆಯ ಆಟಗಳಲ್ಲಿ ಕಲಿತಯ್ಯ ಜಗವಮೋಹಿಪನೆ; ಆಡಿದನು ರಂಗ ಅದ್ಭುತದಿಂದಲಿ ಕಾಳಿಂಗನ ಫಣಿಯಲಿ; ಹೋಗದಿರಲೋ ರಂಗ ಬಾಗಿಲಿಂದಾಚೆಗೆ ಎಂಬ ಕೀರ್ತನೆಗಳು ಸುಂದರವಾಗಿವೆ.

ಸಮಾಜ ವಿಮರ್ಶೆಯನ್ನು ಕುರಿತ ಅಪಾರ ಕೀರ್ತನೆಗಳಲ್ಲಿ ಅನೀತಿ, ಅನಾಚಾರ, ಸುಳ್ಳು, ಕಪಟ, ಬೂಟಾಟಿಕೆ, ಡಾಂಭಿಕತೆಗಳನ್ನು ದಾಸರು ಕಟುವಾಗಿ ಟೀಕಿಸಿದ್ದಾರೆ. ಡಾಂಭಿಕ ಭಕ್ತರ ಭಕ್ತಿಯನ್ನು ಕುರಿತು ಹೇಳಿರುವ

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ; ತನುವು ನೀರೊಳಗಿದ್ದು ಫಲವೇನು, ಬೇವು ಬೆಲ್ಲದೊಳಿರಲು ಫಲವೇನು; ಉದರವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಬಕುತಿಯಿಲ್ಲ; ಹೊಲೆಯ ಹೊರಗಿಹನೆ ಊರೊಳಗಿಲ್ಲವೇ–ಈ ಮುಂತಾದ ಕೀರ್ತನೆಗಳು ವಿಚಾರವಿಮರ್ಶೆಯಿಂದ ಕೂಡಿವೆ. ಒಳಗೆ ಕಲ್ಮಷವನ್ನು ತುಂಬಿಕೊಂಡು ಹೊರಗೆ ಮಡಿಮಡಿ ಯೆಂದು ಹಾರುವ ಡಾಂಭಿಕರ ರೂಪಿಗೆ ಮರುಳಾಗಬಾರದು ಎಂಬುದನ್ನು ದಾಸರು ಗೂಟನಾಮ ಹೊಡೆದು, ಗುಂಡು ತಂಬಿಗೆ ಹಿಡಿದು, ಗೋಟಂಚು ಧೋತರ ಮಡಿಯನುಟ್ಟು, ದಾಟುಕಾಲಿಡುತ ಬರುವ ಗೊಡ್ಡುವೈದಿಕರ ಬೂಟಕತನವನು ನೋಡಿ ಭ್ರಮಿಸಬೇಡ ಎಂದು ವಿಡಂಬನಾತ್ಮಕವಾಗಿ ಹೇಳಿದ್ದಾರೆ. ಸಮಾಜಬೋಧೆಯನ್ನು ಕುರಿತ ಕೀರ್ತನೆಗಳಲ್ಲಿ ದೈವಭಕ್ತಿ, ಸತ್ಯಧರ್ಮ, ನೈಜನೀತಿ, ಜೀವನ ನಿಷ್ಠೆ, ಪ್ರಾಮಾಣಿಕತೆ ಜನರಲ್ಲಿ ಬೆಳೆಯಬೇಕು, ಅವುಗಳನ್ನು ಜನಸಾಮಾನ್ಯರು ರೂಢಿಸಿಕೊಳ್ಳಬೇಕು ಎಂಬ ಕಳಕಳಿಯಿದೆ. ಈಸಬೇಕು ಇದ್ದು ಜೈಸಬೇಕು; ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳಬೇಡಿರೊ ಹುಚ್ಚಪ್ಪಗಳಿರಾ; ಸ್ನಾನವ ಮಾಡಿರೋ ಜ್ಞಾನತೀರ್ಥದಲ್ಲಿ; ಧರ್ಮವೇ ಜಯವೆಂಬ ದಿವ್ಯಮಂತ್ರ; ಎಚ್ಚರದಲ್ಲಿ ನಡೆ ಮನವೆ; ಕಲ್ಲಾಗಿರಬೇಕು ಕಠಿಣಭವ ತೊರೆಯೊಳಗೆ ಬಿಲ್ಲಾಗಿ ಇರಬೇಕು ಬಲ್ಲವರೊಳಗೆ– ಮೊದಲಾದ ಕೀರ್ತನೆಗಳು ಈ ಗುಂಪಿಗೆ ಸೇರುತ್ತವೆ.

ಪುರಂದರದಾಸರು ಕೀರ್ತನೆಗಳನ್ನಲ್ಲದೆ ಹಲವಾರು ಸುಳಾದಿಗಳನ್ನೂ ಉಗಾಭೋಗಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ದಾಸರ ದೈವಭಕ್ತಿ, ಸಮಾಜ ಬೋಧನೆ ನಿರರ್ಗಳವಾಗಿ ಹರಿದಿದೆ. ಗೋಪಿದೇವಿಯಂತೆ ಒರಳಿಗೆ ಕಟ್ಟದೆ ಬರಿದೆ ದೈನ್ಯಪಡುವೆ ಈ ಮೊದಲಾದ ಸುಳಾದಿಗಳೂ ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜ ಬಿತ್ತಿ ಜೇನುಮಳೆಗರೆದರೆ ವಿಷ ಹೋಗುವುದೇನಯ್ಯ; ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯಾ ನಿನ್ನ ಸುತ್ತಿಹುದೆಲ್ಲ ಯೆನ್ನ ಮಾನವಯ್ಯ–ಈ ಮೊದಲಾದ ಉಗಾಭೋ ಗಗಳೂ ರಚನೆಯ ದೃಷ್ಟಿಯಲ್ಲಿ ಸರಳವಾಗಿದ್ದು ಹಿತಮಿತವಾಗಿದ್ದು ಭಾವಪೂರ್ಣವಾಗಿವೆ.

ಕೆಲವು ಕೀರ್ತನೆಗಳಲ್ಲಿ ದಾಸರು ಕೃಷ್ಣದೇವರಾಯನ ಕಾಲಾನಂತರದ ವಿಜಯನಗರದ ಸಾಮ್ರಾಜ್ಯದ ಸ್ಥಿತಿಯನ್ನು ಕುರಿತು ಹಾಡಿದ್ದಾರೆ. ಸತ್ಯವಂತ ರಿಗಿದು ಕಾಲವಲ್ಲ ದುಷ್ಟಜನರಿಗೆ ಸುಭಿಕ್ಷಕಾಲ; ಎನ್ನ ಕುಲದವರಿಲ್ಲ ಎನಗೊಬ್ಬರೂ ಹಿತವಿಲ್ಲ ಎಂಬ ಮಾತುಗಳು ಮುಸಲ್ಮಾನರ ದಾಳಿಯ ಅನಂತರದ ಬದಲಾವಣೆಯನ್ನು ಕುರಿತಿರುವಂತಿವೆ. ಗುರುವ್ಯಾಸರಾಯ ರನ್ನೂ ದಾಸರು ತಮ್ಮ ಹಲವಾರು ಕೀರ್ತನೆಗಳಲ್ಲಿ ಹಾಡಿ ಹೊಗಳಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಗುರು ವ್ಯಾಸರಾಯರು ಕರುಣದಿಂದೆನಗೆ ವರಮಹಾಮಂತ್ರಗಳ ಉಪದೇಶಿಸಿದರು ಎಂದು ಅವರನ್ನು ಕೊಂಡಾಡಿದ್ದಾರೆ. *

ಸಾಹಿತ್ಯವನ್ನು ಜನಪ್ರಿಯಗೊಳಿಸಿದಂತೆ ಪುರಂದರದಾಸರು ಸಂಗೀತವನ್ನು ಜನಸಾಮಾನ್ಯರ ಹೃದಯಕ್ಕೆ ಮುಟ್ಟಿಸಿದರು. ಸುಲಭವಾದ ಸಂಗೀತ ಶಿಕ್ಷಣ ಕ್ರಮವನ್ನು ರೂಪಿಸಿದವರೂ ಇವರೇ. ಮಾಯಾಮಾಳವಗೌಳ ರಾಗವನ್ನು ಆಧಾರವಾಗಿಸಿಕೊಂಡು ಸರಳೆ, ಜಂಟಿವರಸೆ, ಅಲಂಕಾರ, ಪದ ಇತ್ಯಾದಿ ಬಾಲ ಪಾಠಗಳನ್ನು ದಾಸರು ನಿರೂಪಿಸಿದರು. ತುಂಬ ಜಟಿಲವಾದ ನೂರೆಂಟು ತಾಳಗಳಿಗೆ ಬದಲಾಗಿ ಏಳು ತಾಳಗಳನ್ನು ಮಾತ್ರ ಉಳಿಸಿ ಶಿಕ್ಷಣ ಪದ್ಧತಿಯನ್ನು ಸರಳಗೊಳಿಸಿದರು. ವಿದ್ವಾಂಸರಿಂದ ಮನ್ನಣೆ ಪಡೆದ ಈ ಪದ್ಧತಿಯೇ ಇಂದಿಗೂ ಕರ್ನಾಟಕ ಸಂಗೀತ ಶಿಕ್ಷಣ ಪದ್ಧತಿಯಲ್ಲಿ ಪ್ರಚಲಿತವಿದೆ. ಪುರಂದರದಾಸರ ಕೀರ್ತನೆಗಳಲ್ಲಿನ ತಾತ್ತ್ವಿಕ ದೃಷ್ಟಿಯೂ ಗಮನಾರ್ಹವಾದದ್ದು. ಸುಲಭ ಪೂಜೆಯ ಕೇಳಿ ಬಲವಿಲ್ಲದವರು ಎಂಬ ಕೀರ್ತನೆ ಸಾಮಾನ್ಯಜೀವಿಗೂ ಸಾಧನಾ ಪಥ ತೆರೆದಿದೆ ಎಂಬ ತತ್ತ್ವವನ್ನು ಹೃದಯಂಗಮವಾಗಿ ತಿಳಿಸುತ್ತದೆ. ಮನುಷ್ಯ ಜೀವವನ್ನು ಕಾಡುವ ಮೋಹಮಾಯೆಗಳು, ಭಕ್ತನ ಸ್ಥೈರ್ಯ ಧೈರ್ಯಗಳು, ಭಕ್ತಿಯ ವಿವಿಧ ಭಂಗಿಗಳು ಇಂಥ ಕೀರ್ತನೆಯಲ್ಲಿ ಮೂಡಿ ಬಂದಿವೆ. ಕೃಷ್ಣ ಮೂರುತಿ ಕಣ್ಣ ಮುಂದೆ ನಿಂತಿದ್ದಂತಿದೆ ಎಂಬ ಭಾವಪೂರ್ಣ ಕೀರ್ತನೆಯಲ್ಲಿ ಅಪೂರ್ವ ಆಧ್ಯಾತ್ಮಿಕ ಅನುಭವ ಅಭಿವ್ಯಕ್ತಿ ಯಾಗಿದೆ. ಅಂತೆಯೇ ಈ ಕೀರ್ತನೆಗಳು ವ್ಯಾಸತೀರ್ಥರಿಂದ ಪುರಂದರ ರೋಪನಿಷತ್ ಎಂಬ ಪ್ರಶಂಸೆಯನ್ನು ಗಳಿಸಿವೆ. (ಎಸ್.ಪಿ.ಎ.)

**ಪುಲಕೇಶಿ I:** ಬಾದಾಮಿಯ ಚಳುಕ್ಯ ವಂಶದ ದೊರೆ (ಸು. 540–66). ರಣರಾಗನ ಮಗ. ಇವನಿಗೆ ರಣವಿಕ್ರಮ ಎಂಬ ಬಿರುದಿತ್ತು. ಈ ವಂಶದವರಲ್ಲೆಲ್ಲ ಮಹಾರಾಯ ಎಂಬ ಬಿರುದನ್ನು ಹೊಂದಿದ್ದರವ ರಲ್ಲಿ ಈತನೇ ಮೊದಲಿಗನಾದ್ದರಿಂದ ಈತನನ್ನು ಚಳುಕ್ಯ ರಾಜ್ಯದ ಸ್ಥಾಪಕ ಎಂದು ಪರಿಗಣಿಸಬಹುದು. ಚಳುಕ್ಯರಾಜರ ಶಾಸನಗಳ ಹೇಳಿಕೆ ಯಿಂದಲೂ ಈ ವಿಷಯ ಸ್ಪಷ್ಟವಾಗುತ್ತದೆ. ಅಲ್ಲದೆ ಸತ್ಯಾಶ್ರಯ, ವಲ್ಲಭ ಈ ಚಳುಕ್ಯವಂಶದವರ ಸಾಮಾನ್ಯ ಬಿರುದುಗಳು ಒಂದನೆಯ ಪುಲಕೇಶಿಯಿಂದಲೇ ಪ್ರಾರಂಭವಾಗುತ್ತದೆ. ಬಾದಾಮಿಯಲ್ಲಿರುವ ಒಂದು ಶಾಸನದ ಪ್ರಕಾರ 543–44ರಲ್ಲಿ ಈ ಚಳುಕ್ಯ ವಲ್ಲಭೇಶ್ವರ ಅಲ್ಲಿಯೇ ಕೋಟೆಯನ್ನು ಕಟ್ಟಿಸಿದ. ಆಯಕಟ್ಟಿನ ಸ್ಥಳದಲ್ಲಿ ಕೋಟೆಯನ್ನು ಕಟ್ಟಿ ಕೊಂಡು, ಅಶ್ವಮೇಧ ಯಜ್ಞವನ್ನು ಮಾಡಿ ಕದಂಬರೇ ಮೊದಲಾದ ಸುತ್ತಲ ಅರಸರನ್ನು ಗೆದ್ದು ಈತ ರಾಜ್ಯ ಸ್ಥಾಪಿಸಿರಬೇಕು. ಆದರೆ ಇವನ ರಾಜ್ಯದ ವಿಸ್ತಾರ ಎಷ್ಟು ಎಂಬುದು ತಿಳಿಯುವುದಿಲ್ಲ. ಮೊದಲು ಈತ ಜುದುಕೊಂಟದಲ್ಲಿ (ಬಹುಶಃ ಅಜಂತ) ಆಳುತ್ತಿದ್ದನೆಂದು ಒಂದು ಊಹೆ.

ಪುಲಕೇಶಿ ವೈದಿಕಧರ್ಮಾನುಯಾಯಿ, ಈತ ಅಶ್ವಮೇಧವಲ್ಲದೆ, ಹಿರಣ್ಯ ಗರ್ಭ ಮೊದಲಾದ ಮಹಾಯಜ್ಞಗಳನ್ನು ಮಾಡಿದ ವಿಷಯವನ್ನು ಚಳುಕ್ಯ ಶಾಸನಗಳು ವಿಶೇಷವಾಗಿ ಪ್ರಸ್ತಾಪಿಸುತ್ತವೆ. ರಾಮಾಯಣ, ಮಹಾಭಾರತ ಹಾಗೂ ಮನುಧರ್ಮಶಾಸ್ತ್ರದಲ್ಲಿ ಇವನಿಗೆ ವಿಶೇಷ ಪಾಂಡಿತ್ಯವಿದ್ದಿತೆಂದು ಪ್ರಶಂಸಿಸಲಾಗಿದೆ.

ಬಪ್ಪೂರ ವಂಶದ ದುರ್ಲಭದೇವಿ ಈತನ ಪತ್ನಿ (ಇಂದುಕಾಂತಿ ಎಂಬ ಮತ್ತೊಬ್ಬ ಪತ್ನಿಯೂ ಇದ್ದಳೆಂಬ ಒಂದು ಅಭಿಪ್ರಾಯ ಸಹ ಇದೆ). ಕೀರ್ತಿವರ್ಮ ಮತ್ತು ಮಂಗಲೇಶ ಈತನ ಮಕ್ಕಳು. ಪೂಗವರ್ಮ ಎಂಬ ಇನ್ನೊಬ್ಬ ಮಗನಿದ್ದನೆಂದೂ ಆತ ಪುಲಕೇಶಿಗಿಂತ ಮೊದಲು ಗತಿಸಿರಬೇಕೆಂದೂ ಅಭಿಪ್ರಾಯವಿದೆ. ಪೂಗವರ್ಮ ಕೀರ್ತಿವರ್ಮನ ಇನ್ನೊಂದು ಹೆಸರು ಎಂಬ ಹೇಳಿಕೆಯೂ ಇದೆ. ಪುಲಕೇಶಿಯ ಮರಣಾ ನಂತರ (ಸು. 566) ಕೀತಿವರ್ಮ ಚಳುಕ್ಯಾಧೀಶ್ವರನಾದ. (ಕೆ.ಪಿ.)

**ಪುಲಕೇಶಿ II:** ಬಾದಾಮಿ ಚಳುಕ್ಯ ವಂಶದ ಅತಿ ಪ್ರಬಲ ಮತ್ತು ಪ್ರಮುಖ ರಾಜ (ಸು. 610–42). 1ನೆಯ ಕೀರ್ತಿವರ್ಮನ ಮಗ. ಸತ್ಯಾಶ್ರಯ, ಪರಮೇಶ್ವರ ಎಂಬ ಬಿರುದುಗಳೂ ಈತನಿಗಿದ್ದವು. ತಂದೆ ಮರಣ ಹೊಂದಿದಾಗ ಈತ ಇನ್ನೂ ಚಿಕ್ಕವನಾಗಿದ್ದುದರಿಂದ ರಾಜ್ಯಸೂತ್ರ ಈತನ ಚಿಕ್ಕಪ್ಪ ಮಂಗಲೇಶನ ಕೈಸೇರಿತು. ಪರಾಕ್ರಮಿಯಾದ ಮಂಗಲೇಶ ಚಳುಕ್ಯ ಸಾಮ್ರಾಜ್ಯದ ವಿಸ್ತಾರಕ್ಕೆ ಕಾರಣನಾದರೂ ಅನಂತರ ತನ್ನ ಮಗನಿಗೇ ರಾಜ್ಯವನ್ನು ವಹಿಸುವ ಸನ್ನಾಹ ನಡೆಸಿದ. ರಾಜ್ಯದಲ್ಲಿ ತನ್ನ ಇರುವಿಕೆ ಆತಂಕಕಾರಿಯಾಗಿದ್ದುದರಿಂದ, ಅಲ್ಲಿಂದ ಹೊರಬಿದ್ದು ಇತರ ನಿಷ್ಠಾವಂತ ಸ್ನೇಹಿತರ (ಪ್ರಾಯಶಃ ಆಂಧ್ರಪ್ರದೇಶದ ಭಾಗಗಳನ್ನು ಆಳುತ್ತಿದ್ದ ಬಾಣರ) ನೆರವು ಪಡೆದು, ಬಲಸಂವರ್ಧನೆ ಮಾಡಿಕೊಂಡು ಮಂಗಲೇಶನನ್ನು ಎದುರಿಸಿದ. ಆಗ ನಡೆದ ಯುದ್ಧದಲ್ಲಿ ಮಂಗಲೇಶ ಹತನಾದ. ಚಳುಕ್ಯ ರಾಜ್ಯ ಪುಲಕೇಶಿಯ ವಶವಾಯಿತು. ಮಂಗಲೇಶ

ಮತ್ತು ಪುಲಕೇಶಿ ಇವರಲ್ಲಿ ನಡೆದ ಅಂತರ್ಯುದ್ಧದ ಲಾಭ ಪಡೆಯಲು ಚಳುಕ್ಯರಿಂದ ತುಳಿಯಲ್ಪಟ್ಟಿದ್ದ ಹಲವರು ಪ್ರಯತ್ನಿಸಿರ ಬೇಕು. ಮೊದಲಾಗಿ ಅಪ್ಪಾಯಿಕ ಮತ್ತು ಗೋವಿಂದ ಎಂಬ ಇಬ್ಬರು ತಮ್ಮ ಬೃಹತ್ ಸೈನ್ಯದೊಂದಿಗೆ ಯುದ್ಧಾರ್ಥವಾಗಿ ಬಂದಾಗ ಭೀಮರಥೀ ನದಿಯ ಉತ್ತರ ತಡಿಯಲ್ಲಿ ಪುಲಕೇಶಿ ಸೆಣಸಿದ. ಅವರಲ್ಲಿ ಒಬ್ಬ ಓಡಿಹೋದ, ಮತ್ತೊಬ್ಬ ಶರಣಾದ.ಈ ವಿವರಗಳನ್ನೂ ಅನಂತರದ ಇವನ ಇತರ ದಿಗ್ವಿಜಯದ ವಿವರಗಳನ್ನೂ 634ರ ಐಹೊಳೆಯ ಮೇಗುಟಿ ದೇವಾಲಯದ ಶಾಸನ ಒದಗಿಸುತ್ತದೆ. ಐಹೊಳೆ ಶಾಸನದ ಬರೆಹದ ಧಾಟಿಯಿಂದ ಅಲ್ಲಿ ಪ್ರಸ್ತಾಪಿಸಿರುವ ದಿಗ್ವಿಜಯದ ವಿವರಗಳು ಅನುಕ್ರಮವಾಗಿ ಇದೆಯೆಂದು ವಿದ್ವಾಂಸರು ಭಾವಿಸಿದ್ದಾರೆ. ಹೀಗಿದ್ದಲ್ಲಿ ಇವನ ದಿಗ್ವಿಜಯದ ಮೊದಲ ಘಟನೆ ಚಳುಕ್ಯ ರಾಜ್ಯದ ನೈಋತ್ಯದಲ್ಲಿದ್ದ ಬನವಾಸಿಯ ಕದಂಬರ ಮೇಲೆ ನಡೆದುದು. ಆಗ ಅಲ್ಲಿ ರಾಜನಾಗಿದ್ದವನು ಭೋಗಿವರ್ಮ (ಕೆಲವರ ಪ್ರಕಾರ ಅಜವರ್ಮ). ಈ ಹಿಂದೆಯೇ ಮಂಗಲೀಶ ಕದಂಬರನ್ನು ಒಮ್ಮೆ ಸೋಲಿಸಿದ್ದರೂ ಚಳುಕ್ಯ ಅಂತರ್ಯುದ್ಧ ಕಾಲದಲ್ಲಿ ಇವರು ತಮ್ಮ ರಾಜ್ಯವನ್ನು ಪುನಃ ಸಾಧಿಸಿಕೊಳ್ಳಲು ಪ್ರಯತ್ನಿಸಿರ ಬೇಕು. ಬಲಶಾಲೀ ಕದಂಬರು ಆಳಿದಮೇಲೆ ಪಕ್ಕದ ರಾಜ್ಯಗಳಲ್ಲಿದ್ದ ತಲಕಾಡಿನ ಗಂಗರೂ ತುಳುನಾಡಿನ ಆಳುಪರೂ ಪುಲಕೇಶಿಯ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ಅನಂತರ ಪುಲಕೇಶಿ ಉತ್ತರಕ್ಕೆ ನಡೆದು ಕೊಂಕಣದಲ್ಲಿದ್ದ ಮೌರ್ಯರನ್ನು ಸೋಲಿಸಿದ. ಪ್ರಾಯಶಃ ಅವರ ರಾಜಧಾನಿಯಾಗಿದ್ದ ಪುರಿಯನ್ನೂ (ಮುಂಬಯಿ ಬಳಿ ಇರುವ ಎಲಿಫೆಂಟಾ ದ್ವೀಪ) ತನ್ನ ನೌಕಾಬಲದ ಸಹಾಯದಿಂದ ಆಕ್ರಮಿಸಿದ. ಅಲ್ಲಿಂದ ಉತ್ತರದಲ್ಲಿದ್ದ ಲಾಟರೂ ಮಾಳವರೂ ಗೂರ್ಜರರೂ ಈತನಿಗೆ ತಲೆಬಾಗಿದರು. ಗುಜರಾತ್ ಪುಲಕೇಶಿಯ ಅಧೀನಕ್ಕೆ ಬಂತು. ಅಲ್ಲಿ ತನ್ನ ವಂಶೀಯನೊಬ್ಬನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಆಗ ಉತ್ತರಪಥವನ್ನೆಲ್ಲ ಆಕ್ರಮಿಸಿ ವಿರಾಜಿಸುತ್ತಿದ್ದ ಕನೂಜಿನ ಹರ್ಷವರ್ಧನ, ದಕ್ಷಿಣಾಪಥದ ಒಬ್ಬ ಅರಸು ಪ್ರವರ್ಧಮಾನಕ್ಕೆ ಬರುತ್ತಿದ್ದುದನ್ನು ಸಹಿಸಲಾರದೆ ಇವನೊಡನೆ ಯುದ್ಧಕ್ಕೆ ಬಂದಂತೆ ತೋರುತ್ತದೆ. ನರ್ಮದಾ ನದಿಯ ಬಳಿ ನಡೆದ ಯುದ್ಧದಲ್ಲಿ ಹರ್ಷ ಪರಾಜಿತನಾಗಿ ಹಿಮ್ಮೆಟ್ಟಿದ. ಯುವಾನ್ ಚಾಂಗ್ ಸಹ ಪುಲಕೇಶಿಯ ವಿರುದ್ಧ ಹರ್ಷ ಅಸಫಲನಾದುದನ್ನು ಪ್ರಸ್ತಾಪಿಸಿದ್ದಾನೆ. ಚಳುಕ್ಯರ ಅನೇಕ ಶಾಸನಗಳು ಪುಲಕೇಶಿ ಹರ್ಷನನ್ನು ಸೋಲಿಸಿ ಪರಮೇಶ್ವರ ಎಂಬ ಬಿರುದನ್ನು ಸಂಪಾದಿಸಿದನೆಂದು ತಿಳಿಸುತ್ತವೆ. ಪುಲಕೇಶಿಯ 613ರ ಹೈದರಾಬಾದ್ ತಾಮ್ರಪಟದಲ್ಲಿಯೇ ಈ ಬಿರುದು ಕಂಡುಬರುವುದರಿಂದ ಹರ್ಷನ ಮೇಲಿನ ವಿಜಯ ಸು. 611–12ರಲ್ಲಿ ಆಗಿರಬೇಕೆಂದು ಊಹಿಸಲಾಗಿದೆ. ಹರ್ಷನೊಡನೆ ನಡೆದ ಯುದ್ಧ ಅತಿ ಮುಖ್ಯವಾದ ಘಟನೆ. ಅನಂತರ ಪುಲಕೇಶಿ ನರ್ಮದಾ ನದಿಯಿಂದ ಹಿಡಿದು ದಕ್ಷಿಣ ಕರ್ನಾಟಕದವರೆಗಿನ ದಖನ್ ಪ್ರಸ್ಥಭೂಮಿ ಮತ್ತು ಕೊಂಕಣ ಪ್ರದೇಶಗಳ ಅಧಿಪತಿಯಾದ. ಐಹೊಳೆ ಶಾಸನ ಇವನನ್ನು 99000 ಗ್ರಾಮಗಳಿದ್ದ ಮೂರು ಮಹಾರಾಷ್ಟ್ರಗಳ ರಾಜ ಎಂದು ತಿಳಿಸುತ್ತದೆ. ಇಲ್ಲಿ ಹೇಳಿರುವ ಮೂರು ಮಹಾರಾಷ್ಟ್ರಗಳು ಈಗಿನ ಮಹಾರಾಷ್ಟ್ರ, ಕೊಂಕಣ ಮತ್ತು ಕರ್ನಾಟಕ ಎಂದು ಊಹಿಸಲಾಗಿದೆ.

ಅನಂತರ ತನ್ನ ರಾಜ್ಯದ ಪೂರ್ವ ಮತ್ತು ದಕ್ಷಿಣಕ್ಕಿದ್ದ ಪ್ರದೇಶಗಳ ಮೇಲೆ ಗಮನವನ್ನು ಹರಿಸಿದ. ಕೋಸಲ (ಪಾಂಡುವಂಶಿಗಳು ಆಳುತ್ತಿದ್ದ ದಕ್ಷಿಣ ಕೋಸಲ) ಮತ್ತು ಕಲಿಂಗಗಳನ್ನು ಬೆದರಿಸಿದ. ಪಿಷ್ಟಪುರದ (ಪೂರ್ವ ಗೋದಾವರಿ ಜಿಲ್ಲೆಯ ಪಿಠಾಪುರಮ್) ಕೋಟೆಯನ್ನು ನುಚ್ಚುನೂರು ಮಾಡಿದ. ಅಲ್ಲಿಂದ ದಕ್ಷಿಣದಲ್ಲಿದ್ದ ಕುನಾಲವನ್ನೂ (ಏಲೂರು ಬಳಿ ಕೊಲ್ಲೇರು ಸರೋವರದ ಪ್ರದೇಶ) ಆಕ್ರಮಿಸಿದ. ಆಗ ಆ ಪ್ರದೇಶದಲ್ಲಿ ವಿಷ್ಣುಕುಂಡಿನ್ ವಂಶದ ಮಾಧವವರ್ಮ ಅಥವಾ ಪೃಥ್ವೀಮಹಾರಾಜ ಆಳುತ್ತಿದ್ದ. ಹೀಗೆ ಪುಲಕೇಶಿಯ ವಶವಾದ ಆ ವೆಂಗಿದೇಶಕ್ಕೆ ಅವನ ತಮ್ಮ ಕುಬ್ಜ ವಿಷ್ಣುವರ್ಧನನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ (ಇವನ ವಂಶದವರು ಮುಂದೆ ವೆಂಗಿಯ ಚಾಳುಕ್ಯರು ಅಥವಾ ಪೂರ್ವಚಾಳುಕ್ಯರೆಂದು ಪ್ರಸಿದ್ಧರಾದರು). ಅಲ್ಲಿಂದ ದಕ್ಷಿಣದಲ್ಲಿದ್ದ ಪಲ್ಲವ ರಾಜ್ಯದ ಮೇಲೆ ಧಾಳಿ ಮಾಡಿದ. ಆಗ ಆಳುತ್ತಿದ್ದ 1ನೆಯ ಮಹೇಂದ್ರವರ್ಮ ಇವನ ಪ್ರತಾಪವನ್ನು ಎದುರಿಸಲಾರದೆ ಕಂಚಿಯ ಕೋಟೆಯಲ್ಲಿ ಹುದುಗಿಕೊಂಡ. ಪುಲಕೇಶಿ ಅನಂತರ ಚೋಳ, ಪಾಂಡ್ಯ, ಕೇರಳ ರಾಜರನ್ನು ತನ್ನ ಸ್ನೇಹಿತರಾಗಿ ಮಾಡಿಕೊಂಡು ಬಾದಾಮಿಗೆ ಹಿಂದಿರುಗಿದ. *

ಈ ದಿಗ್ವಿಜಯವನ್ನು ಎರಡು ಹಂತಗಳಲ್ಲಿ, ಅಂದರೆ ಕದಂಬ ರಾಜ್ಯದಿಂದ ಹರ್ಷನವರೆಗಿನ ಮೊದಲನೆಯದನ್ನು ಸು. 610–12ರಲ್ಲೂ ಅನಂತರ ಪೂರ್ವ ಕರಾವಳಿಯದನ್ನು 631ರ ಅನಂತರವೂ ಮಾಡಿರಬೇಕೆಂದು ವಿದ್ವಾಂಸರ ಊಹೆ ಇದೆ. ಈ ವಿಜಯಗಳಿಂದ ಪುಲಕೇಶಿ ಇಡೀ ದಕ್ಷಿಣಾಪಥದ ಪ್ರಭಾವೀ ರಾಜನಾದ. ಈ ಸಂದರ್ಭದಲ್ಲಿ ಇವನು ಪರ್ಷಿಯಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದನೆಂದೂ ಪ್ರತ್ಯುತ್ತರವಾಗಿ ಅಲ್ಲಿನ ರಾಜ ಖುಸ್ರು ತನ್ನ ಪ್ರತಿನಿಧಿಗಳನ್ನು ಇವನ ಆಸ್ಥಾನಕ್ಕೆ ಕಳುಹಿಸಿದನೆಂದೂ ಟಬರಿ ಎಂಬ ಪಾರಸೀ ಲೇಖಕ ತಿಳಿಸಿದ್ದಾನೆ. ಕೆಲವರು ಅಜಂತಾದ ಮೊದಲ ಗುಹೆಯಲ್ಲಿ ಈ ರಾಯಭಾರದ ಚಿತ್ರಗಳನ್ನು ಗುರುತಿಸಿದ್ದಾರೆ (ಆದರೆ ಇದು ಅನುಮಾನಾಸ್ಪದ).

ಸು. 642ರಲ್ಲಿ ಪುಲಕೇಶಿಯ ಜೀವನದ ಮಹಾದುರ್ಘಟನೆ ಒದಗಿತು. ಆಗ ಪಲ್ಲವ ಸಿಂಹಾಸನವನ್ನೇರಿದ್ದ ಮೊದಲನೆಯ ನರಸಿಂಹವರ್ಮ ಪ್ರಬಲನಾಗಿ, ಚಳುಕ್ಯರಿಗೆ ಅಧೀನರಾಗಿದ್ದ ಬಾಣರನ್ನೂ ಸಿಂಹಳದ ಮಾನವರ್ಮನನ್ನೂ ಜೊತೆಗೂಡಿಸಿಕೊಂಡು ಚಳುಕ್ಯರ ಮೇಲೆ ನುಗ್ಗಿದ. ಪರಿಯಲ, ಮಣಿಮಂಗಲ, ಸೂರಮಾರ ಎಂಬಲ್ಲಿ ನಡೆದ ಯುದ್ಧಗಳಲ್ಲಿ ಜಯಗಳಿಸಿದ್ದಲ್ಲದೆ ಬಾದಾಮಿಯನ್ನೂ ಆಕ್ರಮಿಸಿದ. ಈ ಸಂಬಂಧದ ಗ್ರಂಥಲಿಪಿಯ ಶಾಸನವೊಂದು ಬಾದಾಮಿಯಲ್ಲಿ ಇನ್ನೂ ಉಳಿದಿದೆ. ಪುಲಕೇಶಿ ಈ ಯುದ್ಧದಲ್ಲಿ ಹತನಾದನಂತೆ ತೋರುತ್ತದೆ.

ಚಳುಕ್ಯ ಮತ್ತು ಪಲ್ಲವರ ಸಂಘರ್ಷಣೆ ನಡೆಯುತ್ತಿದ್ದ ಸಮಯದಲ್ಲೇ ಚೀನದ ಯಾತ್ರಿಕ ಯುವಾನ್ ಚಾಂಗ್ ಚಳುಕ್ಯ ರಾಜ್ಯಕ್ಕೆ ಭೇಟಿಯಿತ್ತಿದ್ದ. ಅವನು ಪುಲಕೇಶಿ ಜನ್ಮತಃ ಕ್ಷತ್ರಿಯನೆಂದೂ ಆತನ ಔದಾರ್ಯ ವಿಸ್ತಾರವಾಗಿ ಹರಡಿತ್ತೆಂದು ಆತನಿಗೆ ಸಾಮಂತರು ಪೂರ್ಣ ವಿಧೇಯಕರಾಗಿದ್ದರೆಂದೂ ತಿಳಿಸಿದ್ದಾನೆ.

ದಕ್ಷಿಣಾಪಥದಲ್ಲಿ ಚಳುಕ್ಯ ಸಾಮ್ರಾಜ್ಯವನ್ನು ಪ್ರಭಾವಿಯಾಗಿ ಮಾಡಿ, ಗುಜರಾತ್ ಹಾಗೂ ವೆಂಗಿ ದೇಶಗಳಲ್ಲಿ ಚಳುಕ್ಯ ವಂಶೀಯರ ಆಳ್ವಿಕೆಯನ್ನು ನೆಲೆಗೊಳಿಸಿದ್ದು ಪುಲಕೇಶಿಯ ಮಹತ್ಸಾಧನೆ.

ಪುಲಕೇಶಿಗೆ ಆದಿತ್ಯವರ್ಮ, ಚಂದ್ರಾದಿತ್ಯ, ರಣರಾಗ, ವಿಕ್ರಮಾದಿತ್ಯ ಮತ್ತು ಜಯಸಿಂಹ ಎಂಬ ಐವರು ಮಕ್ಕಳಿದ್ದರು. ಅಂಬೇರಾ ಇವನ ಮಗಳು. ಪುಲಕೇಶಿಯ ಮರಣಾನಂತರ 13 ವರ್ಷಗಳ ಸಂಕ್ರಮಣ ಕಾಲ ಕಳೆದಮೇಲೆ ವಿಕ್ರಮಾದಿತ್ಯ ಸ್ವಶ್ರಮದಿಂದ ಪುನಃ ಚಳುಕ್ಯ ರಾಜ್ಯವನ್ನು ಸಾಧಿಸಿಕೊಂಡ. (ಕೆ.ಪಿ.)

**ಪುಲಿಗೆರೆ ಸೋಮ:** ಸು. 16ನೆಯ ಶತಮಾನದಲ್ಲಿದ್ದ ವೀರಶೈವ ಕವಿ. ಸೋಮೇಶ್ವರ ಶತಕ ಎಂಬ ಗ್ರಂಥದ ಕರ್ತೃ. ಧಾರವಾಡ ಜಿಲ್ಲೆಯ ಪುಲಿಗೆರೆ (ಈಗಿನ ಲಕ್ಷ್ಮೇಶ್ವರ) ಇವನ ಜನ್ಮಸ್ಥಳವಿದ್ದಂತೆ ತೋರುತ್ತದೆ.

ಸೋಮೇಶ್ವರ ಶತಕ ಕನ್ನಡದ ಅತ್ಯಂತ ಜನಪ್ರಿಯ ಶತಕ ಗ್ರಂಥ. ಇದರಲ್ಲಿ ನೂರಮೂರು ವೃತ್ತಗಳಿದ್ದು ಕನ್ನಡಿಗರಲ್ಲಿ ಬಳಕೆಯಲ್ಲಿದ್ದ ಹಲವು ಜಾಣ್ನುಡಿಗಳೂ ಗಾದೆಯ ಮಾತುಗಳೂ ಹಾಸುಹೊಕ್ಕಾಗಿ ಬಂದಿವೆ. ನೀತಿಬೋಧೆ ಈ ಶತಕದ ಮೂಲೋದ್ದೇಶ. ಸಂಸ್ಕೃತ ಸುಭಾಷಿತಗಳ ಛಾಯೆ ಈ ಶತಕದಲ್ಲಿ ಕಂಡುಬಂದರೂ ಸ್ವತಂತ್ರ ಲೋಕಾನುಭವ, ಸ್ವೋಪಜ್ಞ ಕವಿತಾಶಕ್ತಿ, ಮಾರ್ಮಿಕತೆ ಮೊದಲಾದ ಉನ್ನತ ಗುಣಗಳೂ ಕಂಡುಬರುತ್ತವೆ. ಶತಕದ ಭಾಷೆ ಸರಳವಾಗಿದ್ದು ಜನಸಾಮಾನ್ಯರಿಗೂ ಎಟಕುವಂತಿದೆ. ಶತಕದ ಒಂದು ಪದ್ಯ :

ಹಿತವಂ ತೋರುವನಾತ್ಮಬಂಧು ಪೊರೆವಾತಂ ತಂದೆ ಸದ್ಧರ್ಮದಾ
ಸತಿಯೇ ಸರ್ವಕೆ ಸಾಧನಂ ಕಲಿಸಿದಾತಂ ವರ್ಣಮಾತ್ರಂ ಗುರು
ಶ್ರುತಿಮಾರ್ಗಂ ಬಿಡದಾತ ಸುವ್ರತಿ ಮಹಾಸದ್ವಿದ್ಯೆಯೇ ಪುಣ್ಯದಂ
ಸುತನೇ ಸದ್ಗತಿದಾತನೈ ಹರಹರಾ ಶ್ರೀಚೆನ್ನಸೋಮೇಶ್ವರಾ

(ಬಿ.ಎಸ್.)

**ಪುಷ್ಪಗಿರಿ:** ಕೊಡಗು ಜಿಲ್ಲೆಯ ಪಶ್ಚಿಮಘಟ್ಟ ಶ್ರೇಣಿಗೆ ಸೇರಿದ ಒಂದು ಗಿರಿಶಿಖರ. ಉತ್ತರ ಕೊಡಗಿನ ಸೋಮವಾರಪೇಟೆಯ ವಾಯವ್ಯಕ್ಕೆ ಸು.36 ಕಿಮೀ ದೂರದಲ್ಲಿ ಕುಮಾರಹಳ್ಳಿಯ ಬಳಿ ಇದೆ. ಗಿರಿಯ ಪಶ್ಚಿಮದ ಕಡೆ ಪ್ರಸಿದ್ಧ ಕ್ಷೇತ್ರವಾದ ಸುಬ್ರಹ್ಮಣ್ಯ (ದಕ್ಷಿಣ ಕನ್ನಡ ಜಿಲ್ಲೆ) ಇರುವುದರಿಂದ ಇದಕ್ಕೆ ಸುಬ್ರಹ್ಮಣ್ಯ ಬೆಟ್ಟ ಎಂಬ ಹೆಸರೂ ಇದೆ. ಎತ್ತರ 1,713 ಮೀ. ಇದೇ ಈ ಸುತ್ತಿಗೆ ದೊಡ್ಡ ಶಿಖರ.

ಪುಷ್ಪಗಿರಿ ಎರಡು ಮುಡಿಗಳನ್ನು ಹೊಂದಿದೆ. ಮಡಿಕೇರಿ ಬೆಟ್ಟದ ಮೇಲೆ ನಿಂತು ಈ ಗಿರಿಯೆಡೆಗೆ ಕಣ್ಣಾಡಿಸಿದರೆ ಗಿರಿಮುಡಿ ಎತ್ತಿನ ಡುಬ್ಬದಂತೆ ತೋರುತ್ತದೆ. ಪುಷ್ಪಗಿರಿಯ ಮುಡಿ ಹುಲ್ಲಿನಿಂದ ಆಚ್ಛಾದಿತವಾಗಿರುತ್ತದೆ. ಇಳಿಜಾರುಗಳು ತೀರ ಕಡಿದಾಗಿದ್ದು ದಟ್ಟವಾದ ಅರಣ್ಯಗಳಿಂದ ತಬ್ಬಲ್ಪಟ್ಟಿವೆ. ಇಲ್ಲಿ ಕಾಡಾನೆಗಳ ಹಿಂಡುಗಳನ್ನು ನೋಡಬಹುದು. ಗಿರಿ ಅಡಿಯ ಕಣಿವೆಗಳಲ್ಲಿ ಬತ್ತದ ಗದ್ದೆಗಳು ಕಂಗೊಳಿಸುತ್ತವೆ. ಗಿರಿಯ ನೆತ್ತಿಯಿಂದ ಕೊಡಗು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಹಾಸನ ಜಿಲ್ಲೆ ಪ್ರದೇಶಗಳ ರಮಣೀಯ ದೃಶ್ಯವನ್ನು ನೋಡಬಹುದು.

ಈ ಗಿರಿಯ ಇಳಿಜಾರು ತೀರ ಕಡಿದಾಗಿರುವುದರಿಂದ ಬೆಟ್ಟವನ್ನು ಏರುವ ಕೆಲಸ ಶ್ರಮದಾಯಕ. ಗಿರಿ ಅಡಿಯಲ್ಲಿರುವ ಭಾಗತಿ ಎಂಬ ಸ್ಥಳದ ಮೂಲಕ ಗಿರಿಯನ್ನೇರಬೇಕು. ರಸ್ತೆಯುದ್ದಕ್ಕೂ ವಿಹಾರಧಾಮಗಳಿವೆ. ಗಿರಿಯ ನೆತ್ತಿಯ ಮೇಲಿರುವ ಕಲ್ಲುದಿಣ್ಣೆಗಳಲ್ಲಿ ಕೆಲವು ಪ್ರಾಚೀನಾವಶೇಷಗಳಿವೆ. ಕರೀ ಶಿಲೆಯೊಂದರ ಮೇಲೆ ಎರಡು ಪಾದಗಳ ಗುರುತುಗಳು ಇವೆ. ಇಲ್ಲಿ ಒಂದು ಈಶ್ವರ ದೇವಾಲಯವೂ ಇದ್ದು ಪ್ರತಿ ತುಲಾಸಂಕ್ರಮಣದಲ್ಲಿ ವಿಶೇಷ ಪೂಜೆ ನಡೆಯುತ್ತದೆ. (ವಿ.ಎನ್.ಎನ್.)

**ಪುಸ್ತಕ ಪ್ರಪಂಚ:** ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸುತ್ತಿದ್ದ ಒಂದು ಮಾಸಪತ್ರಿಕೆ. 1946ನೆಯ ಆಗಸ್ಟ್‌ನಲ್ಲಿ ಈ ಪತ್ರಿಕೆ ಜನ್ಮತಾಳಿತು. ಪತ್ರಿಕೆಯ ಧ್ಯೇಯಗಳಿವು: (1) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಓದುಗರಿಗೆ ಮಾಡಿಕೊಡುವುದು. (2) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪರಿಚಯಿಸುವುದು. (3) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು. (4) ಪುಸ್ತಕ ಭಂಡಾರ ವ್ಯವಸ್ಥೆಯ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು. (5) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. (6) ಗ್ರಾಮ ಜೀವನಕ್ಕೆ ಸಂಬಂಧಿಸಿದ ಕಥೆಗಳು, ಕವಿತೆಗಳು, ಪ್ರಬಂಧಗಳು ಮತ್ತು ವ್ಯಕ್ತಿಚಿತ್ರಗಳನ್ನು ಪ್ರಕಟಿಸುವುದು. (7) ಕಲಾಚಿತ್ರಗಳನ್ನು ಅಚ್ಚು ಮಾಡುವುದು. (8) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನಗಳ ಸಾರಾಂಶವನ್ನು ಪ್ರಕಟಿಸುವುದು. (9) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ನುರಿತವರೊಬ್ಬರನ್ನು ಈ ಪತ್ರಿಕೆಯ ಸಂಪಾದಕರನ್ನಾಗಿ ನೇಮಿಸಲಾಗುತ್ತದೆ. ಅವರಿಗೆ ನೆರವು, ಮಾರ್ಗದರ್ಶನ ನೀಡಲು ಸಂಪಾದಕೀಯ ಮಂಡಲಿಯೊಂದಿರುತ್ತದೆ. ಅದರಲ್ಲಿ ಅನೇಕ ಹೆಸರಾಂತ ಕನ್ನಡ ಸಾಹಿತಿಗಳೂ ಕವಿಗಳೂ ವಿಮರ್ಶಕರೂ ಅಧಿಕಾರಿಗಳೂ ಇರುತ್ತಾರೆ. ತಿಂಗಳಿಗೆ ಒಮ್ಮೆ ಸೇರಿ ಸಂಗ್ರಹಿಸಲಾದ ಲೇಖನ ಮತ್ತು ವಿಮರ್ಶೆಗಳನ್ನು ಸಂಪಾದಕ ಮಂಡಲಿ ಪರಿಶೀಲಿಸಿ ಪ್ರಕಟಣೆ ನೀಡುತ್ತದೆ. ಸಾಹಿತಿಗಳನ್ನೂ ಸಂದರ್ಭಗಳನ್ನೂ ಕೆಲವು ವಿಶೇಷ ಸಂಚಿಕೆಗಳೂ ಪ್ರಕಟವಾಗಿವೆ. ಈಗ ಪ್ರತಿಕೆಯ ಪ್ರಕಟಣೆ ನಿಂತಿದೆ. ಪತ್ರಿಕೆಯ ಪ್ರಕಟನೆಯನ್ನು ಪುನರ್‌ಜೀವನಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿವೆ. (ಎಸ್.ಆರ್.ಜಿ.)

**ಪೂಜಾಕುಣಿತ:** ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಕಂಡುಬರುವ ಜನಪದ ಧಾರ್ಮಿಕ ನೃತ್ಯ. ನರ್ತನಕ್ಕೆ ಮುಂಚಿನ ಸಿದ್ಧತೆಯಾಗಿ ತಳಿ ಕಟ್ಟುವುದು, ಪೂಜೆ ಕಟ್ಟುವುದು ಎಂಬ ಎರಡು ವಿಧಾನಗಳಿವೆ.

ಸಾಮಾನ್ಯವಾಗಿ ತಳಿಯನ್ನು ಅಡಕೆ ಮರ ಇಲ್ಲವೇ ಬಿದಿರಿನಿಂದ ಕಟ್ಟುವುದು ವಾಡಿಕೆ. ಮೊದಲಿಗೆ ತಳಭಾಗ ಮತ್ತು ಮೇಲ್ಭಾಗಗಳಲ್ಲಿ ಎರಡು ಬಿದಿರಿನ ಅಥವಾ ಅಡಕೆಯ ದುಂಡಾದ ಬೊಂಬುಗಳನ್ನಿಟ್ಟು ಇವುಗಳ ಎರಡೂ ಪಾರ್ಶ್ವಗಳಲ್ಲಿ ಒಂದೊಂದು ಅಡಕೆಯ ಅಥವಾ ಬಿದಿರು ಬೊಂಬನ್ನು ತಳ ಮತ್ತು ಮೇಲ್ಭಾಗದಲ್ಲಿರುವ ದುಂಡು ಬೊಂಬುಗಳ ನಡುವೆ ಹಾಯಿಸಿ ಕಟ್ಟುತ್ತಾರೆ. ಅನಂತರ ನೇರವಾಗಿ ಮತ್ತು ಅಡ್ಡಲಾಗಿ ಒಟ್ಟು ಏಳು ಅಥವಾ ಒಂಬತ್ತು (ಅಡಕೆ ಅಥವಾ ಬಿದಿರು) ಬೊಂಬುಗಳನ್ನಿಟ್ಟು ಬಿಗಿಯುತ್ತಾರೆ. ಮಧ್ಯದ ಬೊಂಬು ತಳದಲ್ಲಿ ಮತ್ತು ಮೇಲ್ಗಡೆ ಉದ್ದವಾಗಿರುತ್ತದೆ. ಈ ಬೊಂಬಿನ ತಳಭಾಗಕ್ಕೆ ಗಿಂಡಿಯನ್ನು ಸೇರಿಸಿದ್ದು ಇದು ಪೂಜೆ ಹೊರಲು ಅನುಕೂಲವಾಗಿರುತ್ತದೆ. ತಳದಿಂದ ಮೂಲೆ ಮೇಲೆ ಕೊಂಚ ಓರೆಯಾಗಿ ದುಂಡಾದ ಒಂದು ಬೊಂಬು ಬಲದಿಂದ ಎಡಕ್ಕೆ, ಮತ್ತೊಂದು ಎಡದಿಂದ ಬಲಕ್ಕೆ ಬಾಗಿರುತ್ತದೆ. ತಳಿಯ ಮಧ್ಯದಲ್ಲಿ ಒಂದು ಸಣ್ಣ ಮಣೆ ಕಟ್ಟಿರುತ್ತಾರೆ.

ಸಾಮಾನ್ಯವಾಗಿ ಏಳು ಅಥವಾ ಒಂಬತ್ತು ಕಳಸಗಳ ಪೂಜೆ ಕಟ್ಟುತ್ತಾರೆ. ತಳಿಗೆ (ಬೊಂಬಿನ ತುದಿಗಳಿಗೆ) ಮೊದಲು ಕಳಸಗಳನ್ನು ಜೋಡಿಸಿ ಅನಂತರ ಮಣೆಯಮೇಲೆ ಬೆಳ್ಳಿಯ ಕುದುರೆ ನಿಲ್ಲಿಸಿ, ಅದರ ಮೇಲೆ ಉತ್ಸವಮೂರ್ತಿಯ ವಿಗ್ರಹವನ್ನಿಟ್ಟು ಶೃಂಗರಿಸಿ, ದೇವರ ವಿಗ್ರಹವೂ ಸೇರಿದಂತೆ ತಳಿ ಕಾಣದ ಹಾಗೆ ವಿವಿಧ ವರ್ಣಗಳ ವಸ್ತ್ರವನ್ನುಡಿಸಿ ಒಡವೆಗಳನ್ನು ಹಾಕಿ ಅಲಂಕರಿಸುತ್ತಾರೆ. ದೇವರ ಮೇಲ್ಗಡೆ ಪ್ರಭಾವಳಿಯನ್ನು (ಸಾಮಾನ್ಯವಾಗಿ ನರಸಿಂಹಾವತಾರದ್ದು) ಇಡುವರು. ವಸ್ತ್ರಾಭರಣಗಳ ಅಲಂಕಾರವಾದ ಮೇಲೆ ಸಣ್ಣ ನೂಲಿನ ದಾರದಿಂದ ಉತ್ಸವಮೂರ್ತಿಯನ್ನು ಭದ್ರವಾಗಿ ಕಟ್ಟಿ ಹೂವಿನಿಂದ ಅಲಂಕರಿಸುವರು. ಹೀಗೆ ಸಿದ್ಧವಾದ ಕಳಸಗಳನ್ನು ಪೂಜೆ ಎನ್ನುತ್ತಾರೆ. ಮೆರವಣಿಗೆಗೆ ಸಿದ್ಧವಾದ ಈ ಪೂಜೆಯನ್ನು ದೇವರಗುಡ್ಡ ಹೊರುತ್ತಾನೆ. ಹೊರುವಾಗ ತಲೆಗೆ ವಿಶೇಷವಾಗಿ ದಪ್ಪವಾದ ಪೇಟ, ನಡುವಿಗೆ ವಸ್ತ್ರದ ನಡುಪಟ್ಟಿ

ಹಾಗೂ ಕಚ್ಚೆ, ಕಾಲಿಗೆ ಗೆಜ್ಜೆ ಧರಿಸುತ್ತಾನೆ. ಸಾಮಾನ್ಯವಾಗಿ ಪೂಜೆಯನ್ನು ತಲೆಯ ಮೇಲೆ ಹೊತ್ತು ಕುಣಿಯುವುದೇ ಹೆಚ್ಚು ರೂಢಿಯಲ್ಲಿದೆ. ತಮಟೆ, ನಗಾರಿಗಳ ಬಡಿತಕ್ಕೆ ತಕ್ಕಂತೆ ವಿಶೇಷ ಗತ್ತಿನೊಂದಿಗೆ ಪೂಜೆ ಹೊತ್ತವನು ಕುಣಿಯುತ್ತಾನೆ.



ಪೂಜೆ ಹೊತ್ತವರು ಕುಣಿಯುವಾಗ ಇಂತಿಷ್ಟೇ ಹೆಜ್ಜೆ ಕುಣಿಯುತ್ತ ಮುಂದೆ ಹೋಗಿ ಹಿಂದೆ ಬರಬೇಕು, ಗಸ್ತು ಹೊಡೆಯಬೇಕು, ಸುತ್ತು ಹೆಜ್ಜೆ ಇಡಬೇಕು ಎಂಬ ನಿಯಮ ಕುಣಿಯುವವನನ್ನು ಅವಲಂಬಿಸಿರುತ್ತದೆ. ಕುಣಿತದಲ್ಲಿ ವೈವಿಧ್ಯವೂ ಇದೆ. ಹೆಗಲ ಮೇಲೆ ಹೊತ್ತು ಉತ್ಸಾಹದಿಂದ ಕುಣಿಯುವುದು, ಪೂಜೆ ಹಿಡಿದಿದ್ದ ಕೈಗಳನ್ನು ಬಿಟ್ಟು ಕುಣಿಯುವುದು, ಕುಣಿಯುತ್ತಿದ್ದಂತೆಯೇ ತಲೆಯ ಮೇಲಿಂದ ಹೆಗಲ ಮೇಲಕ್ಕೆ ತರುವುದು, ಕುಳಿತು ಕುಣಿಯುತ್ತ ಮತ್ತೆ ತಲೆಯ ಮೇಲಕ್ಕೆ ತರುವುದು, ಅನಂತರ ಮಲಗುವಾಗ ಭುಜದ ಮೇಲೆ ತಂದು ಹಣೆಯ ಮೇಲೆ ಹಾಗೂ ಎದೆಯ ಮೇಲಿಟ್ಟು ಕುಣಿಸುವುದು ಅತ್ಯಂತ ಆಶ್ಚರ್ಯಕರವೂ ಆಕರ್ಷಕವೂ ಆಗಿರುತ್ತದೆ. ಹೀಗೆ ಪೂಜೆ ಹೊತ್ತು ಕುಣಿಯುವವನಿಗೆ ಅನುಭವ ಹಾಗೂ ಪರಿಶ್ರಮ ಹೆಚ್ಚಾಗಿದ್ದರೆ ಕುಣಿತ ಆಕರ್ಷಕವಾಗಿರುವುದಲ್ಲದೆ ಅವನ ದೈವಭಕ್ತಿ, ಶ್ರದ್ಧೆ, ಅನುಭವ, ಪರಿಶ್ರಮಕ್ಕನುಗುಣವಾಗಿ ಕುಣಿತ ಯಶಸ್ವಿಯಾಗುತ್ತದೆ. **(ಜಿ.ವಿ.ಡಿ.)**

**ಪೂಜಾರ, ಮ. ಪ್ರ.:** 1884–1954. ಹೆಸರಾಂತ ಪಂಡಿತರು. ಮಹಾದೇವ ಪ್ರಭಾಕರ ಪೂಜಾರ ಎಂಬುದು ಇವರ ಪೂರ್ಣ ಹೆಸರು. ಇವರು ಧಾರವಾಡ ಜಿಲ್ಲೆಯ ಬಂಕಾಪುರದವರು. ಧಾರವಾಡ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿ ಅಲಂಕಾರ, ನ್ಯಾಯ, ವೇದಾಂತ ಶಾಸ್ತ್ರಗಳಲ್ಲಿ ಪ್ರಾವೀಣ್ಯವನ್ನು ಪಡೆದರು. ಅನಂತರ ಆಗಿನ ಮೈಸೂರು ಸರ್ಕಾರದ ಪಂಡಿತ ಪರೀಕ್ಷೆಯಲ್ಲೂ ತೇರ್ಗಡೆಯಾದರು (1909). ಧಾರವಾಡ ಪ್ರಾಥಮಿಕ ಶಿಕ್ಷಕರ ತರಬೇತಿ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ಸು. 27 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅನಂತರ ಕೆ.ಇ. ಬೋರ್ಡ್ ಆರ್ಟ್ಸ್ ಕಾಲೇಜಿನಲ್ಲೂ ಕನ್ನಡ ಪಂಡಿತರಾಗಿ ಸ್ವಲ್ಪ ಕಾಲ ಕೆಲಸ ಮಾಡಿದರು.

ಹಲವಾರು ಸಂಘಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಇವರು ಧಾರವಾಡ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಈ ಸಂಘ ಪ್ರಕಟಿಸುತ್ತಿದ್ದ ವಾಗ್ಭೂಷಣ ಪತ್ರಿಕೆಯ ಸಂಪಾದಕ ಮಂಡಲಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ಮುಂಬಯಿ ಸರ್ಕಾರದ ಪಠ್ಯಪುಸ್ತಕ ಸಮಿತಿಯ ಸದಸ್ಯರೂ ಆಗಿದ್ದರು.

ಹಳಗನ್ನಡದಲ್ಲಿ ಒಳ್ಳೆಯ ಪಾಂಡಿತ್ಯ ಪಡೆದಿದ್ದ ಪೂಜಾರರು ಅನೇಕ ಕವಿಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಭಟ್ಟಾಕಳಂಕನ ಶಬ್ದಾನುಶಾಸನಕ್ಕೆ ವೃತ್ತಿಯನ್ನು ಬರೆದಿದ್ದಾರೆ. ಅಶೋಕ, ಪೈಗಂಬರ್ ಕುರಿತು ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಜೈನಧರ್ಮ ಪರಿಭಾಷೆ, ಜೈನ ಪದ್ಮಪುರಾಣಸಾರ, ನುಡಿಗನ್ನಡಿ, ಛಂದೋಮಂಜರಿ, ಪಂಚತಂತ್ರಸಾರ–ಇವು ಇವರ ಇತರ ಕೃತಿಗಳು. **(ಎನ್.ಕೆ.ಕೆ.)**

**ಪೂಜೆಗಳು:** ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಪೂಜಾವಿಧಾನಗಳನ್ನು ಶಿಷ್ಟ ಮತ್ತು ಜನಪದ ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. ಶಿಷ್ಟ ಪೂಜಾ ವಿಧಾನದಲ್ಲಿ ಪೌರಾಣಿಕ ಮತ್ತು ಆಗಮೋಕ್ತ ಮಾರ್ಗಗಳನ್ನು ಅನುಸರಿಸಿ ಬಹುತೇಕ ಸಂಸ್ಕೃತ ಮಂತ್ರಗಳ ಜೊತೆಯಲ್ಲಿ ಆಚರಿಸುವುದು ರೂಢಿ, ಆವಾಹನ, ಆಸನ, ಪಾದ್ಯ, ಅರ್ಘ್ಯ, ಅಚಮನೀಯ, ಸ್ನಾನ, ವಸ್ತ್ರ, ಯಜ್ಞೋಪವೀತ, ಅನುಲೇಪನ, ಪುಷ್ಪ, ಧೂಪ, ದೀಪ, ನೈವೇದ್ಯ, ನಮಸ್ಕಾರ, ಪ್ರದಕ್ಷಿಣ ಮತ್ತು ಮಂತ್ರಪುಷ್ಪ ಎಂಬ ಷೋಡಶ ಉಪಚಾರಗಳನ್ನು ದೇವರಿಗೆ ಸಮರ್ಪಿಸುವುದು ಪದ್ಧತಿ. ಇದು ಭಾರತದ ಎಲ್ಲಡೆಯಲ್ಲೂ ರೂಪಿತವಾಗಿರುವ ರೀತಿಯೇ. *

ಜನಪದರು ತಮ್ಮ ಇಷ್ಟಾರ್ಥಸಿದ್ಧಿ ಮತ್ತು ಅನಿಷ್ಟನಿವಾರಣೆಗಾಗಿ ದೇವರನ್ನು ಒಲಿಸಿಕೊಳ್ಳುವ ಮಾರ್ಗಗಳಲ್ಲಿ ಅನುಸರಿಸುವ ಪೂಜೆಗಳು ವೈಶಿಷ್ಟ್ಯಯುತವಾದುವು. ಮೇಲುನೋಟಕ್ಕೆ ಪೂಜೆ ಮತ್ತು ಸೇವೆ ಎರಡೂ ಒಂದೇ ಆಗಿ ತೋರಿದರೂ ಆಚರಣೆಯಲ್ಲಿ ಒಂದಕ್ಕೊಂದಕ್ಕೆ ವ್ಯತ್ಯಾಸವಿರುತ್ತದೆ. ಪೂಜೆಗಳಲ್ಲಿ, ಪ್ರತಿಷ್ಠಾಪಿಸಿ ದೇವರಿಗೆ ಅರಿಸಿನ ಕುಂಕುಮ ಹಚ್ಚಿ, ದೀಪ ಹತ್ತಿಸಿ, ಧೂಪ ಹಾಕಿ, ನೈವೇದ್ಯ ಮಾಡಿಸುವುದು ಒಂದು ಕ್ರಮ. ಕೆಲವು ದೇವರಿಗೆ ತಮ್ಮಡಿ, ಸಿದ್ಧ, ಜೋಗಿ, ಕೆಲವೆಡೆ ಬೆಸ್ತರು (ಮಾರಮ್ಮನಿಗೆ) ಮುಂತಾದ ನಿರ್ದಿಷ್ಟ ಜಾತಿಗೆ ಸೇರಿದ ಪೂಜೆ ಕೈಗೊಳ್ಳುವ ಜನರಿರುತ್ತಾರೆ. ಇವರ ಮೂಲಕ ದೇವರನ್ನು ಪ್ರಾರ್ಥಿಸಿ ಬಂದಿರುವ ಕೇಡಿನ ಪರಿಹಾರಕ್ಕೆ ಜನ ಪೂಜೆ ಮಾಡಿಸುತ್ತಾರೆ. ಗೊಂದಿಯಮ್ಮ, ಉಡಸಲಮ್ಮ, ಹೊನ್ನಾಲದಮ್ಮ ಮುಂತಾದ ದೇವತೆಗಳನ್ನು ಹೊಲದ ಬದುವಿನಲ್ಲಿ ಹೊಳೆ ತೀರದಲ್ಲಿ ಸ್ಥಾಪಿಸಿ ಪೂಜೆ ಮಾಡಿ ಅಲ್ಲಲ್ಲಿಯೆ ವಿಸರ್ಜನೆ ಮಾಡಿಬಿಡುತ್ತಾರೆ. ಈ ಬಗೆಬಗೆಯ ಪೂಜೆಗಳು ಬೇರೆಬೇರೆ ಉದ್ದೇಶಕ್ಕಾಗಿ ಪ್ರತಿ ಹಳ್ಳಿಯಲ್ಲೂ ನಡೆಯುತ್ತಲೇ ಇರುತ್ತವೆ.

ಪೂಜೆಗಳಲ್ಲಿ ಎರಡನೆಯ ಭಾಗ ಬಾಲಗ್ರಹ ಚಿಕಿತ್ಸೆ, ಹುಚ್ಚು ಬಿಡಿಸುವುದು, ಕಾಯಿಲೆಗಳನ್ನು ಗುಣಪಡಿಸುವುದು ಇವುಗಳಿಗೆ ಸಂಬಂಧಪಟ್ಟದ್ದು. ಇವುಗಳಲ್ಲಿ ಮುಖ್ಯವಾಗಿ ಜೋಯಿಸರಲ್ಲಿ ಅಥವಾ ಗೊತ್ತಾದ ಇತರರಲ್ಲಿ ಚೀಟು ಅಥವಾ ತಗಡು ಬರೆಸುವ ಸಂಪ್ರದಾಯವಿದೆ. ತಗಡು ಬರೆಯುವವರು ಅವರವರ ಪದ್ಧತಿಯಂತೆ ದೇವರ

ಹೆಸರು, ಒಂದು ವಿಗ್ರಹ–ಇವುಗಳನ್ನು ಬರೆದು ಸುರುಳಿ ಸುತ್ತಿ ಅದನ್ನು ಪೂಜೆ ಮಾಡಿ ಕೊಡುತ್ತಾರೆ. ಭಕ್ತ ಅದನ್ನು ತಂದು ಮಣೆಯ ಮೇಲೆ ಇಟ್ಟು ಧೂಪ ದೀಪ ಹೂವುಗಳಿಂದ ಪೂಜಿಸಿ ಕೈಗೋ ಕತ್ತಿಗೋ ರಕ್ಷೆಯಾಗಿ ಕಟ್ಟಿಕೊಳ್ಳುತ್ತಾನೆ. ಈ ಪೂಜೆಗಳು ಇಷ್ಟೇ ಎಂಬ ನಿಯಮ ವಿಲ್ಲ. ಭಕ್ತರ ತೊಂದರೆಗನುಸಾರವಾಗಿ ಅಸಂಖ್ಯಾತವಾಗಿರುತ್ತವೆ.

ದೆವ್ವಗಳನ್ನು ಬಿಡಿಸುವುದಕ್ಕಾಗಿ ಪ್ರಾರಂಭದೆಸೆಯಲ್ಲಿ ಚೀಟು ಬರೆಸಿ ಅದನ್ನು ಪೂಜಿಸಿ ದೆವ್ವ ಹಿಡಿದವರಿಗೆ ಕಟ್ಟುತ್ತಾರೆ. ಇದರಿಂದ ದೆವ್ವ ಬಿಡುಗಡೆಯಾಗದಿದ್ದರೆ ದೆವ್ವ ಬಿಡಿಸುವವರನ್ನು ಕರೆಸುತ್ತಾರೆ. ಇದಕ್ಕಾಗಿ ಅನುಸರಿಸುವ ಪೂಜೆಗಳು ನಾನಾ ವಿಧವಾಗಿದ್ದು ಬಹುಮಟ್ಟಿಗೆ ಪೂಜೆಯನ್ನು ನಡೆಸುವವನ ಮಹಿಮೆ, ಶಕ್ತಿ ಮತ್ತು ಕ್ರಮದ ಮೇಲೆ ಅವಲಂಬಿಸಿರುತ್ತದೆ. ಆದರೆ ಇವೆಲ್ಲಕ್ಕೂ ಪೂಜೆ ಎಂದೇ ಹೆಸರು. ಕೆಲವು ತೊಂದರೆಗಳು ಪೂಜಾರಿ ಅಥವಾ ಜೋಯಿಸರ ಪೂಜೆಯಿಂದ ಗುಣವಾದರೆ ಅವರಿಗೆ ಆ ಪ್ರದೇಶದಲ್ಲಿ ಪ್ರಸಿದ್ಧಿ ಬಂದು, ಅವರ ಕ್ರಮವನ್ನು ಇತರರೂ ಅನುಸರಿಸಲು ಪ್ರಯತ್ನಿಸುತ್ತಾರೆ.

ದೆವ್ವ ಬಿಡಿಸುವ ಕ್ರಿಯೆಯಲ್ಲಿ ದಾಸಯ್ಯ ಹೆಚ್ಚಾಗಿ ಭಾಗವಹಿಸುತ್ತಾನೆ. ಆತ ವಿಶಾಲವಾದ ಬಯಲಿಗೆ ದೆವ್ವ ಹಿಡಿದವರನ್ನು ಕರೆದುಕೊಂಡು ಹೋಗಿ, ನಿರ್ಜನವಾದ ಪ್ರದೇಶದಲ್ಲಿ ಪೂಜೆ ನಡೆಸುತ್ತಾನೆ. ಈ ಪೂಜೆಯಲ್ಲಿ ಅವನು ತನಗೆ ನಂಬಿಕೆ ಇರುವ ಯಾವುದೋ ಚಿತ್ರವನ್ನು (ದೆವ್ವವೆಂದು ಭಾವಿಸಿ) ನೆಲದ ಮೇಲೆ ಬರೆದು ಅದರ ನಾಲ್ಕು ಕಡೆಯೂ ನಾಲ್ಕು ಬಣ್ಣದ (ಹಳದಿ ಕೆಂಪು ಇರಲೇಬೇಕು) ಅನ್ನದ ರಾಶಿ ಹಾಕಿಸುತ್ತಾನೆ. ಆ ಸಮಯದಲ್ಲಿ ದೆವ್ವ ಹಿಡಿದಿರುವ ವ್ಯಕ್ತಿಯ ಹೊರತು ಮತ್ತಾರೂ ಅವನ ಜೊತೆ ಇರಕೂಡದು. ಅನಂತರ ದಾಸಯ್ಯ ಅನ್ನದ ರಾಶಿಗೂ ಬರೆದಿರುವ ಚಿತ್ರಕ್ಕೂ ಪೂಜೆ ಮಾಡಿ ನಾನಾ ವಿಧವಾಗಿ ಅನ್ನವನ್ನು ನೀವಾಳಿಸಿ ಹಾಂ! ಹೂಂ! ಎಂದೆಲ್ಲ ಬೊಬ್ಬೆಹಾಕಿ ಜಾಗಟೆ ಗಂಟೆ ಶಂಖಗಳ ಭಯಂಕರ ನಾದ ಮಾಡಿ, ಕೊನೆಯಲ್ಲಿ ಚಿತ್ರವನ್ನು ಬರಲಿನಿಂದ ಚೆನ್ನಾಗಿ ಹೊಡೆದು ಹೋಗು ಹೋಗು ತೊಲಗು ಎನ್ನುತ್ತಾನೆ. ದೆವ್ವ ಹಿಡಿದ ವ್ಯಕ್ತಿಯ ಬೆನ್ನಿಗೂ ಬರಲಿನಿಂದ ಒಂದೆರಡು ಏಟು ಕೊಟ್ಟು ಹಿಂದೆ ನೋಡಬೇಡ, ಓಡು ಎಂದು ಓಡಿಸುತ್ತಾನೆ. ಅಲ್ಲಿಗೆ ದೆವ್ವ ಬಿಡಿಸುವ ಕ್ರಿಯೆ ಮುಗಿಯುತ್ತದೆ.

ಹೀಗೆ ದೆವ್ವ ಬಿಡಿಸುವುದಕ್ಕೆ ಕಟ್ಟುವ ಪೂಜೆ, ಆಯಾ ವ್ಯಕ್ತಿಗಳ ಶಕ್ತಿ, ದೆವ್ವ ಹಿಡಿದಿರುವವನ ಮನಸ್ಸಿನ ಮೇಲೆ ಉಂಟುಮಾಡುವ ಭಯ ಆಶ್ಚರ್ಯ ಸಂಭ್ರಮಗಳ ಮೇಲೆ ಅವಲಂಬಿಸಿರುತ್ತದೆ. ಆದರೆ ಯಾವುದೇ ಪೂಜಾ ಕ್ರಮದಲ್ಲಿಯೂ ಅನೂಚಾನವಾಗಿ ಬಂದಿಲ್ಲದ ವಿಧಾನವನ್ನು ಅನುಸರಿಸಲು ಅವಕಾಶವಿರುವುದಿಲ್ಲ. (ಜಿ.ಆರ್.ಐ.)

**ಪೂಜ್ಯಪಾದ:** ಪ್ರಸಿದ್ಧ ಜೈನ ಆಚಾರ್ಯರು. ಇವರ ಜೀವಿತಕಾಲ ವನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲವಾಗಿದೆ. ಇವರಿಂದ ರಚಿತವಾಗಿ ರುವ ಸರ್ವಾರ್ಥಸಿದ್ಧಿಯಲ್ಲಿ ಸಿದ್ಧಸೇನ ದಿವಾಕರ ವಿರಚಿತ ದ್ವಾತ್ರಿಂಶತ್ ದ್ವಾತ್ರಿಂಶಿಕೆಯ ಪದ್ಯಭಾಗವೊಂದರಲ್ಲಿ ಉಲ್ಲೇಖವಿದೆ. ಸಿದ್ಧಸೇನ ದಿವಾಕ ರರು ನಾಲ್ಕನೆಯ ಶತಮಾನದ ಅಂತ್ಯ ಮತ್ತು ಐದನೆಯ ಶತಮಾನದ ಆದಿಯಲ್ಲಿ ರಾಜ್ಯವಾಳಿದ ವಿಕ್ರಮಾದಿತ್ಯ ಚಂದ್ರಗುಪ್ತನ ಸಮಕಾಲೀನರು. ಆದ್ದರಿಂದ ಐದನೆಯ ಶತಮಾನ ಪೂಜ್ಯಪಾದರ ಜೀವಿತಕಾಲದ ಗರಿಷ್ಠಮಿತಿ. ಏಳನೆಯ ಶತಮಾನದಲ್ಲಿ ಜೀವಿಸಿದ್ದ ಅಕಲಂಕ ದೇವರ ತತ್ತ್ವಾರ್ಥವಾರ್ತಿಕದಲ್ಲಿ ಸರ್ವಾರ್ಥಸಿದ್ಧಿಯ ಪ್ರಭಾವವನ್ನು ವಿದ್ವಾಂಸರು ಗುರುತಿಸಿದ್ದಾರೆ. ಆದ್ದರಿಂದ ಇವರು ಐದನೆಯ ಮತ್ತು ಆರನೆಯ ಶತಮಾನ ಗಳ ನಡುವಿನ ಸಮಯದಲ್ಲಿ ಜೀವಿಸಿದ್ದರೆಂದು ಹೇಳಬಹುದಾಗಿದೆ.

ಪೂರ್ವಾಚಾರ್ಯರ ಸ್ತವನಾವಸರದಲ್ಲಿ ಪ್ರಾಯಿಕವಾಗಿ ಜೈನಮತೀಯ ಕನ್ನಡ ಕವಿಗಳು ಪೂಜ್ಯಪಾದರನ್ನು ಭಕ್ತಿಪೂರ್ವಕವಾಗಿ ಸ್ಮರಿಸಿದ್ದಾರೆ. ಚಾವುಂಡರಾಯ ತನ್ನ ಮಹಾಪುರಾಣದಲ್ಲಿ ಇವರನ್ನು 'ಸುಕವಿಪ್ರಣುತರ್, ವ್ಯಾಕರಣಕರ್ತೃಗಳ್, ಗಗನಗಮನಸಾಮರ್ಥ್ಯರ್, ತಾರ್ಕಿಕತಿಳಕರ್ ಎಂದು ಪೂಜ್ಯಪಾದ ಭಟ್ಟಾರಕರಂ ಸಕಲ ಜನಂ ಪೊಗಳ್ವುದು' ಎಂಬುದಾಗಿ ಹೇಳಿದ್ದಾನೆ. ದೇವನಂದಿ ಎಂಬ ಆಚಾರ್ಯನಿಗೆ ಬುದ್ಧಿಮಹತ್ತೆಯ ನಿಮಿತ್ತದಿಂದ ಜಿನೇಂದ್ರ ಬುದ್ಧಿ ಹಾಗೂ ವನದೇವತೆಗಳಿಂದ ಪಾದಪೂಜೆ ಹೊಂದಿದ ಕಾರಣದಿಂದ ಪೂಜ್ಯಪಾದ ಎಂಬ ಹೆಸರುಗಳುಂಟಾದು ವೆಂದೂ ಇವರು ಔಷಧ ಋದ್ಧಿಯುಳ್ಳವರಾಗಿದ್ದರೆಂದೂ ಇವರ ಪಾದವನ್ನು ತೊಳೆದ ನೀರಿನ ಸ್ಪರ್ಶದಿಂದ ಕಬ್ಬಿಣ ಚಿನ್ನವಾದುದಾಗಿಯೂ ಶ್ರವಣಬೆಳ ಗೊಳದ ಸಿದ್ಧರ ಬಸದಿಯ ಶಾಸನದಲ್ಲಿ ಸ್ತುತಿಸಲಾಗಿದೆ. ಗಗನಗಮನ ಸಾಮರ್ಥ್ಯರ್ ಎಂದು ಚಾವುಂಡರಾಯ ಹೇಳಿರುವನಾದ್ದರಿಂದ 10ನೆಯ ಶತಮಾನಕ್ಕಾಗಲೇ ಇವರನ್ನು ಕುರಿತು ಅತಿಮಾನುಷ ಶಕ್ತಿಸಂಪನ್ನರಾಗಿದ್ದ ರೆಂಬ ವರ್ಣನೆಯಿಂದ ಕೂಡಿ ಕಥಾನಕಗಳಿದ್ದುವೆಂದು ಗುರುತಿಸಬಹುದು. ಪರಂಪರಾನುಗತವಾಗಿ ಬಂದ ಇಂಥ ಕಥಾನಕವನ್ನವಲಂಬಿಸಿ ಪದ್ಮರಾಜ ಹೇಳಿದ ಕಥೆಯನ್ನು ಕೇಳಿ ದೇವಚಂದ್ರ (1770–1841) ಎಂಬುವನು ಸಾಂಗತ್ಯದಲ್ಲಿ ಪೂಜ್ಯಪಾದ ಚರಿತೆಯನ್ನು ರಚನೆ ಮಾಡಿದ್ದಾನೆ. ಆದರೆ ಈ ಕಥೆಯಲ್ಲಿ ಹೇಳಲಾಗಿರುವ ಅನೇಕ ಅಂಶಗಳು ಐತಿಹಾಸಿಕ ದೃಷ್ಟಿಯಿಂದ ಅಸಂಗತವಾಗಿವೆ. ಆದ್ದರಿಂದ ಇದನ್ನು ಪೂಜ್ಯಪಾದರ ಜೀವನೇತಿಹಾಸವೆಂದು ಪರಿಗಣನೆ ಮಾಡಲಾಗುವುದಿಲ್ಲ.

ಪೂಜ್ಯಪಾದರು ಸರ್ವಾರ್ಥಸಿದ್ಧಿ, ಸಮಾಧಿಶತಕ, ಇಷ್ಟೋಪದೇಶ, ಜೈನೇಂದ್ರ ವ್ಯಾಕರಣ, ಭಕ್ತಿಪಾಠಗಳು ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಸರ್ವಾರ್ಥಸಿದ್ಧಿ, ಸಮಾಧಿಶತಕ, ಇಷ್ಟೋಪದೇಶ–ಇವು ಆಧ್ಯಾತ್ಮಕ್ಕೆ ಸಂಬಂಧಿಸಿದ ಕೃತಿಗಳಾಗಿದ್ದು ಈಗ ಉಪಲಬ್ಧವಿದೆ. ಸರ್ವಾರ್ಥಸಿದ್ಧಿ ಗೃದ್ಧ್ರಪಿಂಛಾಚಾರ್ಯವಿರಚಿತ ತತ್ತ್ವಾರ್ಥ ಸೂತ್ರದ ಟೀಕೆ. ದಿಗಂಬರ ಜೈನಪಂಥದಲ್ಲಿ ಬಹುಮಾನ್ಯತೆ ಪಡೆದಿರುವ ಈ ಗ್ರಂಥ ಹೃದಯಸ್ಪರ್ಶಿ ಯಾದ ಶೈಲಿಯುಳ್ಳದ್ದಾಗಿ ಜೈನಸಿದ್ಧಾಂತದ ಅಧ್ಯಯನಕ್ಕೆ ಪ್ರವೇಶದ್ವಾರದಂ ತಿದೆ. ಸಮಾಧಿಶತಕ ಮತ್ತು ಇಷ್ಟೋಪದೇಶಗಳು ಇವರ ಸ್ವತಂತ್ರ ಕೃತಿಗಳಾಗಿದ್ದು ಆತ್ಮಹಿತಸಾಧನೆಯನ್ನು ಸರಳವಾಗಿ, ಸುಂದರವಾಗಿ ಬೋಧಿಸುತ್ತವೆ.

ಜೈನೇಂದ್ರ ವ್ಯಾಕರಣ ಸಂಸ್ಕೃತದಲ್ಲಿ ಬರೆದ ವ್ಯಾಕರಣ ಗ್ರಂಥ. ಈ ಗ್ರಂಥ ರಚನೆಯ ಮೂಲಕ ಪೂಜ್ಯಪಾದರು ಸಂಸ್ಕೃತದ ಪ್ರಸಿದ್ಧ ಅಷ್ಟವೈಯಾಕರಣಿಗಳಲ್ಲಿ ಒಬ್ಬರೆಂದು ಖ್ಯಾತಿ ಪಡೆದಿದ್ದಾರೆ. ಪಾಣಿನಿಯ ಅಷ್ಟಾಧ್ಯಾಯೀ ವ್ಯಾಕರಣ 'ಅಕಾಲಿಕ' ಎಂಬ ವೈಶಿಷ್ಟ್ಯ ಹೊಂದಿರುವಂತೆ ಜೈನೇಂದ್ರವ್ಯಾಕರಣ 'ಅನೇಕಶೇಷ' ಎಂಬ ವೈಶಿಷ್ಟ್ಯವುಳ್ಳದಾಗಿದೆ. ಭಕ್ತಿಪಾಠಗಳು ಸಂಸ್ಕೃತ–ಪ್ರಾಕೃತ ಭಾಷೆಗಳಲ್ಲಿದ್ದು ಸ್ತೋತ್ರರೂಪದಲ್ಲಿವೆ. ಇವುಗಳಲ್ಲಿ ತಾತ್ತ್ವಿಕ ವಿಷಯ ಪ್ರರೂಪಣೆಯಿದೆ. ಇವುಗಳನ್ನು ನಿತ್ಯನೈಮಿ ತ್ತಿಕಾದಿ ಆಚಾರವಿಧಿಗಳಲ್ಲಿ ಪಠಣ ಮಾಡಬೇಕೆಂಬ ನಿಯಮವಿದೆ. ಈ ಭಕ್ತಿಪಾಠಗಳಲ್ಲಿ ಪ್ರಾಕೃತ ರಚನೆಗಳು ಕುಂದಕುಂದಾಚಾರ್ಯ ವಿರಚಿತವಾದುವುಗಳು, ಸಂಸ್ಕೃತ ರಚನೆಗಳು ಪೂಜ್ಯಪಾದರವು. ಇವರು ಸಾರ ಸಂಗ್ರಹ ಎಂಬ ಆಧ್ಯಾತ್ಮಿಕ ಕೃತಿಯನ್ನೂ ಛಂದಸ್ಸು ಮತ್ತು ವೈದ್ಯಕ್ಕೆ ಸಂಬಂಧಿಸಿದಂತೆ ಒಂದೊಂದು ಗ್ರಂಥವನ್ನೂ ರಚಿಸಿದ್ದರೆಂದು ಪ್ರಾಚೀನ ಉಲ್ಲೇಖಗಳಿಂದ ತಿಳಿದುಬರುತ್ತದೆ. (ಎಂ.ಡಿ.ವಿ)

**ಪೂಣಚ್ಚ, ಸಿ.ಎಂ.:** 1910–90. ಪ್ರಸಿದ್ಧ ರಾಜಕಾರಣಿ. ಇವರು ಚೆಪ್ಪುಡೀರ ಪೊನ್ನಪ್ಪ ದಿವಾನರ ಕುಟುಂಬದಲ್ಲಿ 1910ರ ಸೆಪ್ಟಂಬರ್

16 ರಂದು ಕೊಡಗಿನ ಗೋಣಿಕೊಪ್ಪಲು ಬಳಿಯ ಅತ್ತೂರು ಗ್ರಾಮದಲ್ಲಿ ಜನಿಸಿದರು. ಪ್ರತ್ಯೇಕ ರಾಜ್ಯವಾಗಿದ್ದ ಕೊಡಗನ್ನು 1956ರಲ್ಲಿ ವಿಶಾಲ ಮೈಸೂರು ರಾಜ್ಯದ ಸೇರ್ಪಡೆ ಮಾಡಲು ಮುಖಂಡತ್ವ ವಹಿಸಿದ್ದು ಇವರ ಮುಖ್ಯ ಕಾರ್ಯಗಳಲ್ಲೊಂದು.

1929ರವರೆಗೆ ಮಂಗಳೂರಿನ ಸೇಂಟ್ ಅಲಾಸಿಯಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವಿ ತೆಗೆದುಕೊಳ್ಳುವ ಮೊದಲೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ದುಮುಕಿದರು. ಅಂದು ದೇಶದ ಉದ್ದಗಲಕ್ಕೂ ನಡೆದ ಸೈಮನ್ ಕಮೀಷನ್ ವಿರುದ್ಧದ ಚಳವಳಿಯಲ್ಲಿ ಲಾಲಾ ಲಜಪತರಾಯರು ಲಾಠಿ ಏಟಿನಿಂದ ಸತ್ತಿದ್ದರಿಂದ ಎದ್ದ ಬಿಸಿ ವಾತಾವರಣ ಇವರನ್ನು ರಾಜಕೀಯಕ್ಕೆ ದುಮುಕುವಂತೆ ಮಾಡಿತು. ಎನ್. ಎಸ್. ಹರ್ಡೀಕರರ ಸೇವಾದಳ ಸೇರಿ ನಿಷ್ಠಾವಂತ ಸ್ವಯಂಸೇವಕರಾಗಿ 1932ರ ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರವಹಿಸಿ ದಸ್ತಗಿರಿಯಾದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಟ್ಟು ಮೂರುವರೆ ವರ್ಷ ಜೈಲುವಾಸವನ್ನು ಅನುಭವಿಸಿದರು. 1942ರಲ್ಲಿ ಮುಂಬಯಿಯಲ್ಲಿ ನಡೆದ ಕ್ವಿಟ್ ಇಂಡಿಯಾ ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಿ, ಅನಂತರ ಹಿಂದಿರುಗಿ ಬಂದು ಕೊಡಗಿನಲ್ಲೂ ಜನಜಾಗೃತಿಗೆ ಶ್ರಮಿಸಿದರು.

ಕೊಡಗು ಪ್ರಾಂತೀಯ ಕಾಂಗ್ರೆಸ್ ಕಾರ್ಯದರ್ಶಿಯಾಗಿ, ಕರ್ನಾಟಕ ಕಾಂಗ್ರೆಸ್ ಕಾರ್ಯಸಮಿತಿ ಸದಸ್ಯರಾಗಿ, ಅಖಿಲಭಾರತ ಕಾಂಗ್ರೆಸ್ ಸದಸ್ಯರಾಗಿ ದುಡಿದು 1941ರಲ್ಲಿ ಕೊಡಗು ಪ್ರಾಂತ್ಯದ ಕೌನ್ಸಿಲ್ ಸದಸ್ಯರಾಗಿ ಕಾಂಗ್ರೆಸ್ ಪಕ್ಷದ ಮುಂದಾಳಾದರು. 1946ರಲ್ಲಿ ಘಟನಾ ಸಭೆಗೆ ಸದಸ್ಯರಾದರು. 1952ರ ಹೊಸ ರಾಜ್ಯ ಘಟನೆಯಂತೆ ಚುನಾವಣೆ ನಡೆದು ಕೊಡಗು ಪ್ರಾಂತ್ಯದ ಮುಖ್ಯಮಂತ್ರಿಯಾದರು. 1956ರಲ್ಲಿ ರಾಜ್ಯಪುನರ್ವಿಂಗಡಣೆಯಾಗಿ ಕೊಡಗು ಕರ್ನಾಟಕದೊಡನೆ ಸೇರ್ಪಡೆಯಾಗಲು ಅವಿರತ ದುಡಿದರು. ಅನಂತರ ವಿಶಾಲ ಮೈಸೂರು ಮಂತ್ರಿಮಂಡಲದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯಮಂತ್ರಿಗಳಾಗಿದ್ದು 1957ರಲ್ಲಿ ಗೃಹಮಂತ್ರಿಗಳಾಗಿ ಸೇವೆ ಸಲ್ಲಿಸಿದರು. 1958ರಲ್ಲಿ ನಿಜಲಿಂಗಪ್ಪನವರ ಮಂತ್ರಿ ಮಂಡಲ ರಾಜೀನಾಮೆ ನೀಡಿದಾಗ ಪೂಣಚ್ಚನವರೂ ಹೊರಬಂದರು. 1959ರಲ್ಲಿ ಸ್ಥಾಪಿತವಾದ ರಾಜ್ಯ ವಾಣಿಜ್ಯ ಸಂಸ್ಥೆಯ ಅಧ್ಯಕ್ಷರಾಗಿ ದುಡಿದರು. 1964ರಲ್ಲಿ ರಾಜ್ಯ ಸಭೆಯ ಸದಸ್ಯರಾಗಿ, ಕೇಂದ್ರ ಸರ್ಕಾರದ ಅರ್ಥಶಾಖೆಯ ರಾಜ್ಯಮಂತ್ರಿಯಾಗಿ (1966), ಇಂದಿರಾ ಗಾಂಧೀಯವರ ಮಂತ್ರಿಮಂಡಲದಲ್ಲಿ ಸಾರಿಗೆ ಮತ್ತು ವಿಮಾನ ಖಾತೆಯ ರಾಜ್ಯ ಸಚಿವರಾಗಿ ಸೇವೆ ಮಾಡಿದರು (1966–67), 1967ರ ಚುನಾವಣೆಯಲ್ಲಿ ಮತ್ತೊಮ್ಮೆ ಲೋಕಸಭಾ ಸದಸ್ಯರಾಗಿ, ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಯಾಗಿಯೂ ತಮ್ಮ ಸೇವೆ ಸಲ್ಲಿಸಿದರು (1967–69). ಅನಂತರ ಕೆಲವು ತಿಂಗಳುಗಳವರೆಗೆ ಉಕ್ಕು ಮತ್ತು ಭಾರಿ ಎಂಜಿನಿಯರಿಂಗ್ ವಿಭಾಗದ ಮಂತ್ರಿಯಾಗಿದ್ದರು. ಕಾಂಗ್ರೆಸ್ ಒಡೆದು ಎರಡು ಭಾಗವಾದಾಗ ತಮ್ಮ ಮಂತ್ರಿಪದವಿಗೆ ರಾಜೀನಾಮೆ ಯಿತ್ತು ಸಂಸ್ಥಾ ಕಾಂಗ್ರೆಸ್ಸಿನ ಕ್ರಿಯಾಶೀಲ ಸದಸ್ಯರಾಗಿ ಕೆಲಸ ಮಾಡಿದರು. 1957ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯ ಹೈವೇ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ರಾಷ್ಟ್ರಪತಿ ಜಾಕೀರ್ ಹುಸೇನರೊಡನೆ ರಷ್ಯ ಹಾಗೂ ನೇಪಾಳಕ್ಕೆ ಭೇಟಿಯಿತ್ತಿದ್ದರು.

ಪೂಣಚ್ಚನವರು ಸರಳ ಸೌಮ್ಯ ಆದರ್ಶ ರಾಜಕಾರಣಿ ಮತ್ತು ಆಡಳಿತಗಾರರಾಗಿ ಹೆಸರು ಪಡೆದಿದ್ದರು; ಜೊತೆಗೆ ವ್ಯವಸಾಯತಜ್ಞರೆಂದೂ ಖ್ಯಾತರಾಗಿದ್ದರು. ಇವರು 1990 ಆಗಸ್ಟ್ 3 ರಂದು ನಿಧನರಾದರು. **(ಬಿ.ಡಿ.ಎಸ್.)**

**ಪೂರ್ಣಚಂದ್ರತೇಜಸ್ವಿ, ಕೆ.ಪಿ.**: 1938–2007. ಸಾಹಿತ್ಯ, ಕೃಷಿ, ಪರಿಸರ ವಿಜ್ಞಾನ, ಮಾನವಶಾಸ್ತ್ರ ಮುಂತಾದ ವಿಷಯಗಳಲ್ಲಿ ಆಸಕ್ತಿ ಹೊಂದಿದ್ದ ಮಹತ್ತ್ವದ ಲೇಖಕ; ಸಮಾಜವಾದಿ ಚಿಂತಕ. ಕುಪ್ಪಳಿ ಪುಟ್ಟಪ್ಪ ಪೂರ್ಣಚಂದ್ರ ತೇಜಸ್ವಿ ಇವರ ಪೂರ್ಣ ಹೆಸರು. ಇವರು 1938 ಸೆಪ್ಟೆಂಬರ್ 8 ರಂದು ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಜನಿಸಿದರು. ತಂದೆ ಕೆ.ವಿ.ಪುಟ್ಟಪ್ಪ (ಕುವೆಂಪು), ತಾಯಿ ಹೇಮಾವತಿ. ಶಿವಮೊಗ್ಗ, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದ ತೇಜಸ್ವಿಯವರು ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಬಿ.ಎ. (ಆನರ್ಸ್) ಹಾಗೂ ಎಂ.ಎ. ಪದವಿಗಳನ್ನು ಪಡೆದರು. 1966 ನವೆಂಬರ್ 27ರಲ್ಲಿ ರಾಜೇಶ್ವರಿ ಎಂಬುವವರನ್ನು ಸರಳವಿವಾಹವಾದರು. ಈ ದಂಪತಿಗಳಿಗೆ ಸುಸ್ಮಿತಾ ಮತ್ತು ಈಶಾನ್ಯ ಎಂಬ ಇಬ್ಬರು ಹೆಣ್ಣುಮಕ್ಕಳು. ತೇಜಸ್ವಿಯವರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಬಳಿ ನೆಲೆಸಿದ್ದರು ಕೃಷಿಯ ಜೊತೆಗೆ (ಕಾಫೀ ತೋಟ) ತಮ್ಮ ಚಿಂತನೆ ಹಾಗೂ ಸಾಹಿತ್ಯ ಕೃಷಿಯನ್ನೂ ನಿರಂತರವಾಗಿ ನಡೆಸಿಕೊಂಡು ಬಂದಿದ್ದರು.

ಲಿಂಗಬಂದ ಎಂಬ ಸಣ್ಣ ಕಥೆಯ ಮೂಲಕ ಕನ್ನಡ ಸಾರಸ್ವತ ಲೋಕವನ್ನೂ ಪ್ರವೇಶಿಸಿದ ಇವರು ಇದುವರೆಗೆ ಕವಿತೆ, ನಾಟಕ, ಸಣ್ಣಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಪ್ರವಾಸಕಥನ. ಸರಳವಿಜ್ಞಾನ, ಮಾನವಿಕ ಮೊದಲಾದ ಪ್ರಕಾರಗಳಲ್ಲಿ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ನಿಸರ್ಗ, ನಿಗೂಢತೆ, ವೈಜ್ಞಾನಿಕ ನಿಲುವು, ಹಾಸ್ಯಪ್ರಜ್ಞೆ ಇವರ ಬರೆಹದಲ್ಲಿ ಮೇಲ್ನೋಟಕ್ಕೆ ಕಾಣುವ ವೈಶಿಷ್ಟ್ಯಗಳಾಗಿವೆ.

ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಹಾಗೂ ಬಂಡಾಯ ಸಾಹಿತ್ಯ ಮಾರ್ಗ ಲಕ್ಷಣಗಳಲ್ಲಿ ಸಾಹಿತ್ಯ ರಚಿಸಿರುವ ಇವರು ನಿಖರವಾಗಿ ಯಾವ ಪಂಥಕ್ಕೂ ಸೇರದವರು; ಪಂಥಾತೀತರು.

ಇವರ ತಂದೆ ಮಹಾನ್‌ಕವಿ, ಸಾಹಿತಿಗಳಾಗಿದ್ದರೂ ಅವರ ಕಲಾತ್ಮಕ ಗುಣವೊಂದನ್ನು ಹೊರತು ಪಡಿಸಿ ಇನ್ನಾವುದೇ ಪ್ರಭಾವಕ್ಕೂ ಒಳಗಾಗದೆ ಸ್ವಂತಿಕೆಯನ್ನು ಸ್ಥಾಪಿಸಿಕೊಂಡ ತೇಜಸ್ವಿಯವರು ತಮ್ಮ ವಿಶಿಷ್ಟ ಚಿಂತನೆ ಹಾಗೂ ಹಾಸ್ಯಪ್ರಜ್ಞೆಯ ಬರೆಹಗಳಿಂದ ಕನ್ನಡ ಸಾಹಿತ್ಯದಲ್ಲಿ ಭಿನ್ನಛಾಪನ್ನು ಮೂಡಿಸಿದ್ದಾರೆ. ಚುರುಕಾದ ಕಥನಶೈಲಿ, ವೈಚಾರಿಕತೆ, ವಿಜ್ಞಾನಿಯ ನಿಖರತೆಗಳು ಇವರ ಬರೆಹದ ಇನ್ನೊಂದು ಗುಣ. ಇವರ ಸಾಹಿತ್ಯ ಸೃಷ್ಟಿ ವಿಪುಲವಾದುದು. ವ್ಯಕ್ತಿ ವಿಶಿಷ್ಟ ಸಿದ್ಧಾಂತ (1964), ಪರಿಸರದ ಕಥೆ (1991), ವಿಜ್ಞಾನ ಕೃತಿಗಳಾದ ಫ್ಲೈಯಿಂಗ್ ಸಾಸರ್ (ಭಾಗ–1, 1993) ಮತ್ತು ಭಾಗ–2 (1993), ಸಹಜ ಕೃಷಿ (1992), ಮಿಸ್ಸಿಂಗ್ ಲಿಂಕ್ (1992), ನಡೆಯುವ ಕಡ್ಡಿ, ಹಾರುವ ಎಲೆ (1993)– ಇವು ವಿಶೇಷ ಬಗೆಯ ರಚನೆಗಳು. ಈ ಬಗೆಯ ಸಾಹಿತ್ಯ ರಚನೆ ಕನ್ನಡದಲ್ಲಿ ಅತ್ಯಂತ ಕಡಿಮೆ. ತಂದೆ ಕುವೆಂಪು ಅವರನ್ನು ಕುರಿತಂತೆ ಅಣ್ಣನ ನೆನಪು ಎಂಬ ಕೃತಿಯನ್ನು ರಚಿಸಿದ್ದಾರೆ. ಮಹಾಕವಿಯೊಬ್ಬರನ್ನು ಅರಿಯಲು ಇದೊಂದು ವಿಶಿಷ್ಟ ಕೃತಿಯಾಗಿದೆ. ಹಕ್ಕಿಗಳನ್ನು ಕುರಿತ ಬರ್ಡ್ಸ್ ಆಫ್ ಸೌತ್ ಇಂಡಿಯಾ (1993), ಮಿಂಚುಳ್ಳಿ, ಕನ್ನಡ ನಾಡಿನ ಹಕ್ಕಿಗಳು ಭಾಗ–1 ಹಾಗೂ ಹೆಜ್ಜೆಮೂಡದ ಹಾದಿ, ಕನ್ನಡ ನಾಡಿನ

ಹಕ್ಕಿಗಳು ಭಾಗ-2 (1994), ಹಕ್ಕಿಪುಕ್ಕ, ವಿಸ್ಮಯ, ಭಾಗ-1, 2 ಮತ್ತು 3 (1993-94) ಹಾಗೂ ಅನುವಾದ ಕೃತಿಗಳಾದ ಲೋಹಿಯಾ, ಕಾಡಿನಕಥೆಗಳು (4 ಭಾಗಗಳು) ಹಾಗೂ ರುದ್ರಪ್ರಯಾಗದ ಭಯಂಕರ ನರಭಕ್ಷಕ (1995) ಇತ್ಯಾದಿಗಳು. ಇವು ವಿಷಯದ ದೃಷ್ಟಿ ಯಿಂದ ವೈವಿಧ್ಯವೂ ಶೈಲಿಯ ದೃಷ್ಟಿಯಿಂದ ಗಂಭೀರವೂ ಐತಿಹಾಸಿಕವೂ ಆಗಿವೆ. ವೈಜ್ಞಾನಿಕ ಮನೋಭಾವ ಹೊಂದಿರುವ ಹಾಸ್ಯಲೇಪಿತ ಚಿತ್ರಗಳೂ ಆಗಿ ಕಂಡುಬರುತ್ತವೆ. ಕನ್ನಡದಲ್ಲಿ ಅದುವರೆಗೆ ದಾಖಲಾಗ ದಿದ್ದ ವಸ್ತುವಿಷಯುಗಳು ಭಿನ್ನದೃಷ್ಟಿಕೋನದ ಅನುಭ ವಗಳು ಇವರ ಲೇಖನಿಯಲ್ಲಿ ಜೀವಂತಿಕೆ ಪಡೆದು ಕೊಂಡಿವೆ.



ಇವರಿಗೆ ಕೀರ್ತಿಯನ್ನು ತಂದುಕೊಟ್ಟ ಕೃತಿಗಳು: ಚಿದಂಬರ ರಹಸ್ಯ (1985), ಕರ್ವಾಲೋ (1980) [ಕಾದಂ ಬರಿಗಳು]; ಸ್ವಗತಲಹರಿ (ಕವನಸಂಕಲನ-1962); ನಿಗೂಢ ಮನುಷ್ಯರು (ನೀಳ್ಗ ತೆಗಳು-1976) ಕಿರಗೂರಿನ ಗೈಯ್ಯಾಳಿಗಳು (ಸಣ್ಣಕಥೆ, 1991); ಜುಗಾರಿಕ್ರಾಸ್ (ಕಾದಂಬರಿ, 1994); ಪರಿಸರದ ಕಥೆಗಳು; ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್ (ಪ್ರವಾಸ ಕಥನ, 1990); ಹಕ್ಕಿಪುಕ್ಕ; ಮಿಲನಿಯಂ ದರ್ಶನ (16ಸಂಪುಟಗಳು); ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಮಾಯಾಲೋಕ ಮೊದಲಾದವು. ಸ್ವತಂತ್ರವಾದ ಚಿಂತನೆ, ಆದರ್ಶಶೈಲಿ ಹಾಗೂ ಅಭಿವ್ಯಕ್ತಿ ಮಾರ್ಗವನ್ನು ಪಡೆದುಕೊಂಡ ತೇಜಸ್ವಿಯವರು ವಿಶಿಷ್ಟ ಬಗೆಯ ಸಾಹಿತ್ಯ ಸಂಚಲನ ವನ್ನು ಉಂಟುಮಾಡಿದರು. "ಈ ನವೀನ ಮನ್ವಂತರದ ಪ್ರತಿನಿಧಿಗಳ ಲ್ಲೊಬ್ಬರಾಗಿ ನಾನು ನನ್ನ ಜೀವನದ ಅರ್ಥವನ್ನು, ತತ್ತ್ವವನ್ನು ಮತ್ತೊಮ್ಮೆ ಹೋರಾಡಿ ಗಳಿಸಿಕೊಳ್ಳಬೇಕಾಗಿದೆ. ಪುನರನುಭವಿಸಬೇಕಾಗಿದೆ. ಪುನರ್ನಿ ರ್ಮಾಣ ಮಾಡಬೇಕಾಗಿದೆ ಅಥವಾ ಹೊಸತೊಂದನ್ನು ಸೃಜಿಸಬೇಕಾಗಿದೆ" ಎಂಬ ಇವರ ಅಭಿಪ್ರಾಯ ವ್ಯಕ್ತಿ ವಿಶಿಷ್ಟ ಸಿದ್ಧಾಂತಕ್ಕೆ ಸಾಕ್ಷಿಯಾಗಿದೆ.

ನವೋದಯ ಸಾಹಿತ್ಯದ ಆದರ್ಶ, ಬೆರಗು, ವೈಭವೀಕರಣಗಳಿಗೆ ಪ್ರತಿಯಾಗಿ ನಗರಕೇಂದ್ರಿತ ಅನಾಥಪ್ರಜ್ಞೆಯನ್ನು ಮುಖ್ಯವಾಗಿ ಇಟ್ಟು ಕೊಂಡ ನವ್ಯ ಚಳವಳಿಯ ಕಾಲಘಟ್ಟದಲ್ಲಿ ಸಾಹಿತ್ಯ ರಚನೆಗೆ ತೊಡಗಿದ ಇವರು ಪ್ರಚಲಿತ ಚಳವಳಿಯ ಚಿಂತನೆಗೆ ತಮ್ಮನ್ನು ಎಂದೂ ಈಡು ಮಾಡಿಕೊಳ್ಳದೆ ಸ್ವಂತ ಅನುಭವ, ಆಸಕ್ತಿ, ದೃಷ್ಟಿಗಳ ಶೋಧನೆಗೆ ತೊಡಗಿದರು. ಈ ಶೋಧನೆಯೇ ಇವರನ್ನು ಇತರರಿಂದ ಭಿನ್ನವಾಗಿ ನಿಲ್ಲಿಸಿತು. "ಲೋಹಿಯಾರವರ ತತ್ತ್ವಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನಲ್ಲಿನ ಪ್ರಯೋಗಶೀಲತೆ – ಈ ಮೂರೆ ನನ್ನ ಈಚಿನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮಗಳನ್ನುಂಟುಮಾಡಿರುವಂಥವು. ನನ್ನ ಜೀವನ ವಿಧಾನವನ್ನು, ಗ್ರಹಿಸುವ ಕ್ರಮವನ್ನು, ಆಲೋಚನೆಯನ್ನು, ಅಭಿವ್ಯಕ್ತಿ ವಿಧಾನವನ್ನು, ಒಟ್ಟನಲ್ಲಿ ಇಡೀ ಸಮಗ್ರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಬದಲಿಸಿಹಾಕಿದ್ದು ಲೋಹಿಯಾರವರ ತತ್ತ್ವಚಿಂತನೆ" ಎಂದು ಹೇಳಿಕೊಂಡಿದ್ದಾರೆ.

ತೇಜಸ್ವಿಯವರ ಮೊದಲ ಕವನ ಸಂಕಲನ ಸ್ವಗತ ಲಹರಿ ಹಾಗೂ ಲಿಂಗ ಬಂದ ಎಂಬ ಮೊದಲ ಕಥೆಯಿಂದ ಹಿಡಿದು ಇವರ ಎಲ್ಲ ಸೃಜನಶೀಲ ಹಾಗೂ ಚಿಂತನ ಬರೆಹಗಳಲ್ಲಿ ವಿಡಂಬನೆ, ಹಾಸ್ಯ ಗುಣಗಳು ಎದ್ದು ಕಾಣುತ್ತವೆ. 'ಬರೆವಣಿಗೆಯಲ್ಲಿ ಒಂದು ಬಗೆಯ ನಿರ್ಲಿಪ್ತತೆಯನ್ನು ಸಾಧಿಸುವಲ್ಲಿ ಅವರಿಗೆ ಈ ಗುಣ ನೆರವಾಗಿದೆ ಹಾಗೂ ಹಾಸ್ಯ, ವಿಡಂಬನೆ ಒಂದು ಮನೋಧರ್ಮ; ಕೇವಲ ತಂತ್ರ ವಿಧಾನವಲ್ಲ, ರೂಢಿಸಿಕೊಳ್ಳುವ ದೃಷ್ಟಿಕೋನವೂ ಅಲ್ಲ' ಎಂದು ಈ ಬಗ್ಗೆ ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ.

ಇವರ ನಿಗೂಢ ಮನುಷ್ಯರು, ಅಬಚೂರಿನ ಪೋಸ್ಟಾಫೀಸು ಸಂಗ್ರಹದ ಕಥೆಗಳು, ಕರ್ವಾಲೋ, ಚಿದಂಬರ ರಹಸ್ಯ ಕೃತಿಗಳಲ್ಲಿ ವಾಸ್ತವ ವಿವರ ನಿರೂಪಣೆಯ ಜೊತೆಯಲ್ಲಿ ಸಾಂಕೇತಿಕ ಧ್ವನಿಶಕ್ತಿಯೂ ರೂಪು ಪಡೆಯುತ್ತಿದೆ. ಹೀಗೆ ವಾಸ್ತವತೆಯೇ ಸಾಂಕೇತಿಕತೆಯಾಗುವ ವಿಧಾನ ಇವರಲ್ಲಿ ಅನನ್ಯವಾಗಿ ಕಾಣಿಸುತ್ತದೆ. ನಿಗೂಢ ಮನುಷ್ಯರು ಹಾಗೂ ಅನಂತರದ ಕೃತಿಗಳಲ್ಲಿ ಪತ್ತೇದಾರಿ ಅಂಶ ಢಾಳಾಗಿ ಕಂಡುಬರುತ್ತದೆ. ಇದು ಓದುಗರ ಕುತೂಹಲವನ್ನು ಕೆರಳಿಸಲು ಮಾಡಿಕೊಂಡ ಒಂದು ತಂತ್ರವೆನಿಸುತ್ತದೆ. ವಸ್ತುವಿನ ಅನ್ವೇಷಣೆಯ ಭಾಗವಾಗಿ ಕಾಣಿಸಿಕೊಳ್ಳು ವಂಥದ್ದಾಗಿರುತ್ತದೆ.

'ಹುಲಿಯೂರಿನ ಸರಹದ್ದು' ಸಂಗ್ರಹದಲ್ಲಿ ಆರು ಕಥೆಗಳಿವೆ. ಲಿಂಗ ಬಂದ, ಪಿಂಜ್ರೊಳ್ಳಿಪಿಶಾಚಿಯ ಸವಾಲು, ಗುಡುಗು ಹೇಳಿದ್ದೇನು?, ಊರ್ವಶಿ, ಹುಲಿಯೂರಿನ ಸರಹದ್ದು ಮತ್ತು ಗಾಂಧೀಜಿ ದೆಸೆಯಿಂದ- ಈ ಕಥೆಗಳಲ್ಲಿ ತೇಜಸ್ವಿಯವರ ಕಥನ ಕಲೆಯ ಆರಂಭಿಕ ಲಕ್ಷಣಗಳು, ಚಿಂತನೆಯ ಧಾಟಿಗಳು ಕಾಣಿಸುತ್ತವೆ. ಇಲ್ಲಿನ ಕಥೆಗಳಲ್ಲಿ ಪರಂಪರೆಯ ನಂಬಿಕೆಗಳು, ಸಂಪ್ರದಾಯದ ವಿರುದ್ಧ ಪ್ರತಿಭಟನೆಗಳು-ಅದರ ದೌರ್ಬಲ್ಯ ಗಳು ಚಿತ್ರಿತವಾಗಿವೆ. ನಂಬಿಕೆ ಹಾಗೂ ವಾಸ್ತವಗಳ ನಡುವಿನ ಅಂತರವನ್ನು ಪ್ರತಿಮೆಗಳ ಮೂಲಕ ಇಲ್ಲಿ ಚಿತ್ರಿಸಲಾಗಿದೆ.

'ಅಬಚೂರಿನ ಪೋಸ್ಟಾಫೀಸು' ಸಂಕಲನದಲ್ಲಿ ಅವನತಿ, ಕುಬಿ ಮತ್ತು ಇಯಾಲ ಹಾಗೂ ತಬರನ ಕಥೆ ತುಸು ದೀರ್ಘವಾದವು. ಗ್ರಾಮೀಣ ಪರಿಸರದ ಮೌಢ್ಯ, ಸಂಸ್ಕೃತಿಯ ಅವನತಿ, ಸರ್ಕಾರದ ವ್ಯವಸ್ಥೆಯ ಲೇವಡಿ ಮುಂತಾದವು ಇಲ್ಲಿ ಕಂಡುಬರುತ್ತವೆ. ಲೇಖಕರ ಸಾಮಾಜಿಕ ಕಳಕಳಿ, ಮಾನವೀಯತೆ ಹಾಗೂ ಇವನ್ನು ನಿರೂಪಿಸುವಲ್ಲಿ ಇವರು ತೋರುವ ಸಂಯಮ ಇಲ್ಲಿನ ಕಥೆಗಳ ವೈಶಿಷ್ಟ್ಯಗಳಾಗಿವೆ.

'ಸ್ವರೂಪ' ಒಂದು ನೀಳ್ಗತೆ. 'ಯಮಳ ಪ್ರಶ್ನೆ' ಒಂದು ನವ್ಯನಾಟಕ. ಇವೆರಡರಲ್ಲಿರುವ ತತ್ತ್ವ, ಚಿಂತನೆ ಹಾಗೂ ಜೀವನ ಮೌಲ್ಯಗಳು ಸಮಾನವಾದವು. ಸಮಾಜದಲ್ಲಿ ಉಂಟಾಗುವ ದುರಂತಗಳಿಗೆ ವ್ಯಕ್ತಿ ಕಾರಣನೇ ಅಥವಾ ಇಡೀ ಸಮಾಜ ಕಾರಣವೆ ಎಂಬ ಜಿಜ್ಞಾಸೆ ಇಲ್ಲಿ ಮುಖ್ಯವಾಗಿದೆ. ಯಮಳ ಪ್ರಶ್ನೆ ಇಂಥ ಜಿಜ್ಞಾಸೆಗೆ ಉತ್ತರ ಹುಡುಕು ತ್ತದೆ. 'ಸ್ವರೂಪ' ಒಂದು ಬಗೆಯ ಆತ್ಮನಿವೇದನೆ. ನಾಯಕ ಶ್ರೀನಿವಾಸ ಗೆಳೆಯ ಹೇಮಂತನನ್ನು ಶಿಕಾರಿಗೆ ಕರೆದೊಯ್ದು ತನ್ನ ಕಥೆ ಹೇಳುತ್ತಾ ವ್ಯಕ್ತಿಯ ದುರಂತಕ್ಕೆ, ಪತನಕ್ಕೆ ಸಮಾಜ ಹಾಗೂ ಇಡೀ ಮಾನವಕುಲವೇ ಹೊಣೆ ಎಂಬ ಅಭಿಪ್ರಾಯವನ್ನು ಮಂಡಿಸುತ್ತಾನೆ.

'ವ್ಯಕ್ತಿ ವಿಶಿಷ್ಟ ಸಿದ್ಧಾಂತ'ದಲ್ಲಿ ಮೂರು ಚಿಂತನ ಪ್ರಬಂಧಗಳಿವೆ. ಲೇಖಕರ ತತ್ತ್ವ, ಚಿಂತನೆ ಹಾಗೂ ಎಲ್ಲ ಕೃತಿಗಳಿಗೆ ಮೂಲವಾದ ಸೈದ್ಧಾಂತಿಕ ದೃಷ್ಟಿಕೋನಗಳು ಇಲ್ಲಿ ಹರಳುಗಟ್ಟಿವೆ. ಸಮಾಜ, ಸಂಪ್ರದಾಯ, ಪರಿಸರಗಳ ನಡುವಿನ ವ್ಯಕ್ತಿತ್ವದ ಸಂಘರ್ಷದಲ್ಲಿ ಸ್ವಂತಿಕೆ, ಸ್ವಂತ ಸಂವೇದನೆ ಯನ್ನು ಉಳಿಸಿಕೊಳ್ಳಬೇಕೆಂಬುದು ಇಲ್ಲಿನ ಬರೆಹಗಳ ಧ್ವನಿಯಾಗಿದೆ.

ನಿಗೂಢ ಮನುಷ್ಯರು, ಕರ್ವಾಲೋ, ಚಿದಂಬರ ರಹಸ್ಯ ಎಂಬ ಕಾದಂಬರಿಗಳು ಸತ್ಯಾನ್ವೇಷಣೆಯ ಜಾಡು ತುಳಿಯುವ ಕೃತಿಗಳು. ನಿಸರ್ಗದ ನಿಗೂಢತೆ ಹಾಗೂ ಇದನ್ನು ಭೇದಿಸುವ ವ್ಯಕ್ತಿಪ್ರಜ್ಞೆಯ ಸವಾಲುಗಳು ನಿಗೂಢಮನುಷ್ಯರು ಕೃತಿಯಲ್ಲಿ ಚಿತ್ರಣಗೊಂಡಿದೆ. 'ಕರ್ವಾಲೋ' ಮಿಲಿಯಾಂತರ ವರ್ಷಗಳಿಂದ ಬದಲಾಗದ 'ಹಾರುವ ಓತಿ'ಯನ್ನು ಕುರಿತ ಕಾದಂಬರಿ. ವಿಜ್ಞಾನಿ ಕರ್ವಾಲೋ ಇದರ ಅನ್ವೇಷಣೆಗೆ ತೊಡಗುತ್ತಾನೆ. ಈ ಕೃತಿಯ ಮಂದಣ್ಣ ಹಳ್ಳಿಯ ನಿರಕ್ಷರಸ್ಥ ಪ್ರಕೃತಿಶಾಸ್ತ್ರಜ್ಞ. ಕರ್ವಾಲೋ ಆಧುನಿಕ ಶಿಕ್ಷಣ ರೂಪಿಸಿದ ಒಬ್ಬ ತಜ್ಞ. ಇವರಿಬ್ಬರ ನಿಲುವಿನ ಸಾಮ್ಯ, ವೈರುಧ್ಯಗಳು ಇಲ್ಲಿ ಅನನ್ಯವಾಗಿ ತೆರೆದುಕೊಂಡಿವೆ. ಕಾದಂಬರಿಯ ಅಂತ್ಯದಲ್ಲಿ ಹಾರುವ ಓತಿ ಅವರ ಕೈಗೆ ಸಿಗುವುದಿಲ್ಲ. ಅದು ಬೆಟ್ಟದ ನೆತ್ತಿಗೆ ಹಾರುತ್ತದೆ. ಅಲ್ಲಿಂದ ಕೋಡುಗಲ್ಲಿನಾಚೆಗೆ ಪ್ರಪಾತದ ಕಡೆಗೆ ಚಿಮ್ಮಿ ಪಕ್ಕಗಳೇ ರೆಕ್ಕೆಗಳಾಗಿ ತೇಲಿತೇಲಿ ನೀಲಯ ಅಸ್ಪಷ್ಟ ಶೂನ್ಯದ ಕಡೆಗೆ ಕಣ್ಮರೆಯಾಗಿ ಹೋಗುತ್ತದೆ. ತಿಳಿದಷ್ಟೆ ಅರಿವು, ಅನ್ವೇಷಣೆಯ ಅನುಭವದಲ್ಲಿಯೇ ನಿಜವಾದ ಸಾರ್ಥಕ್ಯವಿದೆ, ಮನುಷ್ಯನ ಅನ್ವೇಷಣಾ ಶಕ್ತಿಗೂ ಮಿತಿ ಇದೆ. ನಿಸರ್ಗದ ಭಾಗವನ್ನು ಭೇದಿಸುವಲ್ಲೂ ಮಿತಿ ಇದೆ ಎಂಬುದನ್ನು ಈ ಕಾದಂಬರಿ ಅರಿವಿಗೆ ತಂದುಕೊಡುತ್ತದೆ. 'ಚಿದಂಬರ ರಹಸ್ಯ' ವಿಜ್ಞಾನ, ತತ್ತ್ವಜ್ಞಾನ, ಮೌಢ್ಯ ರಾಜಕೀಯಗಳು ತಮ್ಮಲ್ಲೇ ಅನ್ವೇಷಣೆಗೆ ತೊಡಗುವ ಚಟುವಟಿಕೆಯನ್ನು ಪ್ರಸ್ತುತ ಪಡಿಸುತ್ತದೆ. ಇಲ್ಲಿನ ಕೆಸರೂರು ಮನುಷ್ಯ ವಾಸಿಸುವ ಯಾವುದೇ ನೆಲೆಯಾಗಬಹುದು. ರಫಿ ಮತ್ತು ಜಯಂತಿ ಒಟ್ಟೂ ಮಾನವ ಸಮುದಾ ಯದ ಪ್ರತಿನಿಧಿಗಳಾಗಬಹುದು.

ಬರೆಹ, ಕೃಷಿಯ ಜೊತೆಗೆ ಇವರ ಮತ್ತೊಂದು ಮುಖ್ಯ ಹವ್ಯಾಸ ಫೋಟೋಗ್ರಫಿ. ಹಕ್ಕಿಗಳ ಚಿತ್ರಗ್ರಹಣ ಇವರ ವಿಶೇಷತೆ. ಇವರು ಅನೇಕ ಏಕವ್ಯಕ್ತಿ ಪ್ರದರ್ಶನಗಳನ್ನು ಏರ್ಪಡಿಸಿದ್ದಾರಲ್ಲದೆ ಇವರ ಛಾಯಾಚಿತ್ರ ಸಂಪುಟದ ಶುಭಾಶಯ ಪತ್ರಗಳನ್ನು ಕೂಡ ಪ್ರಕಟಿಸಿದ್ದಾರೆ.

ಇವರ ಕೆಲವು ಕೃತಿಗಳು ಚಲನಚಿತ್ರಗಳಾಗಿ ಜನಪ್ರಿಯವಾಗಿವೆ. ಅಬಚೂರಿನ ಪೋಸ್ಟಾಫೀಸು (1971), ತಬರನಕಥೆ (1988), ಕುಬಿ ಮತ್ತು ಇಯಾಲ (1990) ಇವು ಪ್ರಶಸ್ತಿ ಪಡೆದ ಚಲನಚಿತ್ರಗಳಾಗಿವೆ. ತಬರನಕಥೆಗೆ ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ ಲಭ್ಯವಾಗಿದೆ (1986). ಈ ಚಿತ್ರವನ್ನು ಗಿರೀಶ್ ಕಾಸರವಳ್ಳಿ ಅವರು ನಿರ್ದೇಶಿಸಿದ್ದಾರೆ. ಅಬಚೂರಿನ ಪೋಸ್ಟಾಫೀಸು ಎಂಬ ಚಿತ್ರಕ್ಕೆ ಪ್ರಾಂತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ (1973), ಚಿದಂಬರ ರಹಸ್ಯ ಕಾದಂಬರಿಗೆ ವರ್ಷದ ಶ್ರೇಷ್ಠಕೃತಿ ಪ್ರಶಸ್ತಿ (1985) ಲಭಿಸಿದೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1987), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1988), ರಾಜ್ಯೋತ್ಸವ ಪ್ರಶಸ್ತಿ (1988), ಭಾರತೀಯ ಭಾಷಾಪರಿಷತ್ತಿನ ಪ್ರಶಸ್ತಿ (1989), ರಾಜ್ಯ ಪರಿಸರ ಪ್ರಶಸ್ತಿ (1993), ಪಂಪ ಪ್ರಶಸ್ತಿ (2001) ದೊರೆಕಿವೆ. ಇವರು 2007 ಏಪ್ರಿಲ್ 5 ರಂದು ಮೂಡಿಗೆರೆಯಲ್ಲಿ ನಿಧನರಾದರು. (ಎಸ್.ಬಿಎಚ್ಐ.)

**ಪೂರ್ಣಯ್ಯ, ದಿವಾನ್:** 1746–1812. ಹೈದರ್ ಅಲಿಯ ಸರಬರಾಜು ಸಚಿವ, ಟಿಪ್ಪುವಿನ ಅರ್ಥಸಚಿವ, ಮೈಸೂರಿನ ದಿವಾನ (1799–1811). ಈತ ತಿರುಚಿನಾಪಳ್ಳಿ ಜಿಲ್ಲೆಯ ಕುಲಿತಲೈ ತಾಲ್ಲೂಕಿನ ತಿರುಕಂಬೂರ್ ಎಂಬ ಹಳ್ಳಿಯಲ್ಲಿ ಜನಿಸಿದ. ಇವನ ತಂದೆ ಕೃಷ್ಣಾಚಾರ್ಯ. ಸಂಸ್ಕೃತ ಪಂಡಿತನಾಗಿದ್ದ. ಪೂರ್ಣಯ್ಯ ಹನ್ನೊಂದು ವಯಸ್ಸಿನವನಿದ್ದಾಗ ತಂದೆ ನಿಧನಹೊಂದಿದ್ದರಿಂದ ತಾಯಿ ಲಕ್ಷ್ಮಿ ಅಮ್ಮ ಕೆಲವು ಮನೆಗಳಲ್ಲಿ ಕೆಲಸಮಾಡಿ, ತನ್ನ ಇಬ್ಬರು ಮಕ್ಕಳಾದ ಪೂರ್ಣಯ್ಯ ಮತ್ತು ವೆಂಕಟರಾಯರನ್ನು ಬೆಳೆಸಿದಳು. 1760ರಲ್ಲಿ ಈ ಸಂಸಾರ ಸತ್ಯಮಂಗಲಕ್ಕೆ ಹೋಗಿ ಅಲ್ಲಿ ನೆಲೆಸಿತು. ಪೂರ್ಣಯ್ಯ ಅಲ್ಲಿ ರಂಗಶೆಟ್ಟಿ ಎಂಬ ವ್ಯಾಪಾರಸ್ಥರ ಹತ್ತಿರ ಗುಮಾಸ್ತನಾಗಿ ಕೆಲಸಕ್ಕೆ ಸೇರಿಕೊಂಡ. ಆಗ ಶ್ರೀರಂಗಪಟ್ಟಣದಲ್ಲಿ ಸಗಟು ವ್ಯಾಪಾರಿಯಾಗಿದ್ದ ಅನ್ನದಾನಶೆಟ್ಟಿ ಎಂಬುವನು ಹೈದರನ ಅರಮನೆಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿದ್ದ. ರಂಗಶೆಟ್ಟಿ ವರ್ಷಕ್ಕೊಂದು ಬಾರಿ ಲೆಕ್ಕಾಚಾರದ ಸಂಬಂಧವಾಗಿ ಶ್ರೀರಂಗಪಟ್ಟಣಕ್ಕೆ ಹೋಗಿ ಬರುತ್ತಿದ್ದ. ಪೂರ್ಣಯ್ಯನೂ ಜೊತೆಯಲ್ಲಿ ಹೋಗುತ್ತಿದ್ದ. ಅನ್ನದಾನಶೆಟ್ಟಿ ಪೂರ್ಣಯ್ಯನವರ ವ್ಯಾಪಾರ ಕುಶಲತೆ ಮತ್ತು ಬುದ್ಧಿವಂತಿಕೆಗಳಿಂದ ಆಕರ್ಷಿತನಾಗಿ ಅವನನ್ನು ತನ್ನ ಹತ್ತಿರ ಕೆಲಸಕ್ಕೆ ಸೇರಿಸಿಕೊಂಡ (1764).

ಅರಮನೆಗೆ ಸಂಬಂಧಪಟ್ಟ ಲೆಕ್ಕಾಚಾರಗಳಲ್ಲಿ ವ್ಯತ್ಯಾಸ ಬಂದರೆ ಆ ವ್ಯತ್ಯಾಸಗಳನ್ನು ಸರಿಪಡಿಸಲು ಅನ್ನದಾನಶೆಟ್ಟಿ ಪೂರ್ಣಯ್ಯನನ್ನು ಕಳುಹಿಸುತ್ತಿದ್ದ. ಹೀಗೆ ಒಂದು ಸಲ ಲೆಕ್ಕಾಚಾರದಲ್ಲಿ ವ್ಯತ್ಯಾಸ ಬಂದಾಗ,

ಪೂರ್ಣಯ್ಯ: ಒಂದು ಕಲಾಕೃತಿ

ಹೈದರನ ಸಮ್ಮುಖದಲ್ಲಿ ಪೂರ್ಣಯ್ಯ ತನ್ನ ನೆನಪಿನಿಂದಲೇ ಸರಿಯಾದ ಅಂಕಿ ಅಂಶಗಳನ್ನು ಒದಗಿಸಿಕೊಟ್ಟು ಲೆಕ್ಕವನ್ನು ತೀರ್ಮಾನಿಸಿದ. ಹೈದರ್ ಇವನ ಸಾಮರ್ಥ್ಯವನ್ನು ಮೆಚ್ಚಿ ಇವನನ್ನು ಖಜಾನೆ ಗುಮಾಸ್ತನಾಗಿ ನೇಮಿಸಿದ (1770). ಖಜಾನೆ ಅಧಿಕಾರಿಯಾಗಿದ್ದ ಕೃಷ್ಣರಾಯ ಸಾರ್ವಜನಿಕ ವಿಷಯಗಳ ಸಂಬಂಧವಾಗಿ ಪೂರ್ಣಯ್ಯನನ್ನು ಹೈದರನ ಬಳಿಗೆ ಕಳುಹಿಸುತ್ತಿದ್ದ. ಸ್ವಲ್ಪ ಕಾಲಾನಂತರ ಹೈದರ್ ಪೂರ್ಣಯ್ಯನಿಗೆ ಬಡ್ತಿ ಕೊಟ್ಟು ಖಜಾನೆಯ ಮುಖ್ಯಾಧಿಕಾರಿಯಾಗಿ ಮಾಡಿದ. ರಾಜ್ಯದ ಮಂತ್ರಿಗೆ ಸಲ್ಲತಕ್ಕ ಗೌರವವನ್ನೂ ಹಕ್ಕುಗಳನ್ನೂ ಕೊಟ್ಟುದಲ್ಲದೆ ಹೆಗ್ಗಡದೇವನಕೋಟೆಯ ಮರಹಳ್ಳಿಯನ್ನು ಇವನಿಗೆ ಜಹಗೀರಾಗಿ ಬಿಟ್ಟ. 1780ರಲ್ಲಿ ಪೂರ್ಣಯ್ಯ ಹೈದರನ ಜೊತೆಯಲ್ಲಿ ಸರಬರಾಜು ಇಲಾಖೆಯ ಅಧಿಕಾರಿಯಾಗಿ ಸೈನ್ಯದೊಡನೆ ಯುದ್ಧಕ್ಕೆ ಹೋದ. ಯುದ್ಧದಲ್ಲಿ ಪೂರ್ಣಯ್ಯ ಗುಂಡೇಟಿನಿಂದ ಗಾಯಗೊಂಡರೂ ತನ್ನ ನೋವನ್ನೂ ಲಕ್ಷಿಸದೆ ತಕ್ಷಣ ಸೈನಿಕರ ಸಂಬಳದ ಹಣವನ್ನು ಒಂಟೆಗಳ ಮೇಲೆ ಶ್ರೀರಂಗಪಟ್ಟಣಕ್ಕೆ ಸಾಗಿಸಿದ್ದು, ಹೈದರ್ ಪದಚ್ಯುತಿಗೊಳಿಸಿದ್ದ ಮೈಸೂರಿನ ಹಿಂದು ರಾಜವಂಶದವರು ಇವನ ನೆರವನ್ನು ಕೋರಿದರೂ ಹೈದರನಿಗೆ ಪ್ರಾಮಾಣಿಕನಾಗಿ ತನ್ನ ನಿಷ್ಠೆಯನ್ನು ವ್ಯಕ್ತಪಡಿಸಿದ್ದು ಇವೇ ಮೊದಲಾದ ಕಾರ್ಯಗಳಿಂದ ನಂಬಿಗಸ್ಥ, ಪ್ರಾಮಾಣಿಕ ಎಂದು ಹೆಸರು ಗಳಿಸಿದ ಪೂರ್ಣಯ್ಯ ರಾಜ್ಯದ ವ್ಯವಹಾರದಲ್ಲಿ ಬಹು ಪ್ರಭಾವೀ ವ್ಯಕ್ತಿಯಾದ. ಹೈದರ್ 1782 ಡಿಸೆಂಬರ್ 7ರಂದು ಕಾಲವಾದಾಗ, ಆಗ ಸರಬರಾಜು ಮಂತ್ರಿಯಾಗಿದ್ದ ಪೂರ್ಣಯ್ಯನ ಸಲಹೆಯ ಮೇರೆಗೆ ಇತರ ಸಚಿವರು ಮತ್ತು ಅಧಿಕಾರಿಗಳು ಟಿಪ್ಪುಸುಲ್ತಾನ್ ಶ್ರೀರಂಗಪಟ್ಟಣಕ್ಕೆ ಬರುವವರೆಗೂ ಹೈದರನ ಸಾವನ್ನು ಗೋಪ್ಯವಾಗಿಟ್ಟದ್ದು ಟಿಪ್ಪುವಿನ ಅಧಿಕಾರವ್ಯಾಪ್ತಿ ಸುಗಮವಾಗಿ ನಡೆಯಲು ಕಾರಣನಾದ.

ಅನಂತರ ಪೂರ್ಣಯ್ಯ ಟಿಪ್ಪುವಿನ ಹಣಕಾಸು ಮಂತ್ರಿಯಾಗಿ ರಾಜ್ಯದ ಭಂಡಾರವನ್ನು ವರ್ಧಿಸಿದ. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಪೂರ್ಣಯ್ಯ ಟಿಪ್ಪುವಿನ ಜ್ಯೇಷ್ಠಪುತ್ರ ಫತ್ತೇ ಹೈದರ್‌ನ ಸೈನ್ಯದೊಡನೆ

ಇದ್ದುದರಿಂದ, ಟಿಪ್ಪುವಿನ ಮರಣಾನಂತರ ವೆಲ್ಲೆಸ್ಲಿ ಫತ್ತೇ ಹೈದರ್ ಮತ್ತು ಪೂರ್ಣಯ್ಯ ಶರಣಾಗತರಾಗಿ ಹೊಸ ಸರ್ಕಾರವನ್ನು ರಚಿಸಲು ಸಹಾಯ ಮಾಡಿದರೆ ಅವರಿಗೆ ರಕ್ಷಣೆ ನೀಡುವುದಾಗಿ ಕಾಗದ ಬರೆದ. ಸಂದರ್ಭವನ್ನು ಅರ್ಥಮಾಡಿಕೊಂಡ ಪೂರ್ಣಯ್ಯ ಬ್ರಿಟಿಷ್ ಸೈನ್ಯದ ದಳಪತಿ ಹ್ಯಾರಿಸನ ಭೇಟಿಮಾಡಿ ರಾಜ್ಯವ್ಯವಸ್ಥೆಯ ವಿಷಯವಾಗಿ ಸಮಾಲೋಚನೆ ನಡೆಸಿ ಟಿಪ್ಪುವಿನ ಕುಟುಂಬಕ್ಕೆ ವಿಶೇಷ ಸಂಭಾವನೆ ಕೊಡುವ ಏರ್ಪಾಡು ಮಾಡಿದ.

ಬ್ರಿಟಿಷರು ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ರಾಜ್ಯವನ್ನು ವಹಿಸಿಕೊಟ್ಟಾಗ ಬ್ರಿಟಿಷರ ಸಲಹೆಯ ಮೇರೆಗೆ ಪೂರ್ಣಯ್ಯನನ್ನು ದಿವಾನನಾಗಿ ನೇಮಿಸಲಾಯಿತು. ಪೂರ್ಣಯ್ಯ 1799ರಿಂದ 1811ರವರೆಗೆ ಮೈಸೂರು ಸಂಸ್ಥಾನದಲ್ಲಿ ದಿವಾನನಾಗಿದ್ದು ಸಮರ್ಥವಾಗಿ ಆಡಳಿತ ನಡೆಸಿದ. ತನ್ನ ಅಧಿಕಾರಾವಧಿಯ ಕಾಲದಲ್ಲಿ ಮೈಸೂರಿನ ನ್ಯಾಯಾಂಗ ವಿಭಾಗವನ್ನು ಪುನರ್‌ರಚಿಸಿದ (1805). ಹಿಂದು ಪದ್ಧತಿಯ ತೆರಿಗೆಗಳನ್ನು ಆಚರಣೆಗೆ ತಂದ. ಹಿಂದಿನ ಇನಾಂ ಭೂಮಿಗಳನ್ನು ಪುನಃ ರೂಢಿಸಿದ. ದೇವಸ್ಥಾನಗಳಿಗೆ ಮತ್ತು ಮಠಗಳಿಗೆ ದ್ರವ್ಯಸಹಾಯವನ್ನು ಏರ್ಪಡಿಸಿದ. ದುಷ್ಟ ಪಾಳೆಯಗಾರರನ್ನು ಸೆರೆಯಲ್ಲಿಟ್ಟು, ಒಡೆಯರ ಆಡಳಿತಕ್ಕೆ ಒಪ್ಪಿದ ಇತರರಿಗೆ, ಮಿಲಿಟರಿ ಅಥವಾ ಸಿವಿಲ್ ಅಧಿಕಾರಗಳನ್ನೂ ಮತ್ತು ವೇತನವನ್ನೂ ಏರ್ಪಾಡು ಮಾಡಿದ. 1809ರಲ್ಲಿ ಮೈಸೂರಿನಲ್ಲಿ ಬ್ರಿಟಿಷ್ ಸೈನಿಕರು ದಂಗೆ ಎದ್ದಾಗ, ಅವರನ್ನು ಅಡಗಿಸಲು ಬ್ರಿಟಿಷ್ ಅಧಿಕಾರಿಗಳಿಗೆ ಸಹಾಯ ಮಾಡಿದ. ಮುಮ್ಮಡಿ ಕೃಷ್ಣರಾಜ ಒಡೆಯರು 1810ರಲ್ಲಿ ಹದಿನಾರು ವರ್ಷದವರಾಗಿ ಪ್ರಾಪ್ತವಯಸ್ಕರಾಗಿ, ಆಡಳಿತವನ್ನು ತಾನೆ ವಹಿಸಿಕೊಂಡಾಗ ರಾಜರಿಗೂ ಪೂರ್ಣಯ್ಯನಿಗೂ ಮನಸ್ತಾಪ ಬೆಳೆಯಿತು. ಪೂರ್ಣಯ್ಯ ದಿವಾನ್ ಪದವಿಯನ್ನು ತನ್ನ ವಂಶಪಾರಂಪರ್ಯವಾಗಿ ಮಾಡಬೇಕೆಂದಿರುವನೆಂದೂ ರಾಜರನ್ನು ನಾಮಮಾತ್ರ ನಾಯಕರನ್ನಾಗಿ ಮಾಡುವನೆಂದೂ ಅವನ ವಿರೋಧಿಗಳನೇಕರು ರಾಜರಿಗೆ ತಿಳಿಸಿದ್ದೇ ಈ ಮನಸ್ತಾಪಕ್ಕೆ ಕಾರಣವೆಂಬ ಹೇಳಿಕೆ ಇದೆ. ಪೂರ್ಣಯ್ಯನನ್ನು 1811ರಲ್ಲಿ ದಿವಾನ್ ಪದವಿಯಿಂದ ನಿವೃತ್ತಿಗೊಳಿಸಿ, ವರ್ಷಕ್ಕೆ ಆರು ಸಾವಿರ ಕಂಠೀರಾಯ ಪಗೋಡ ವೇತನವನ್ನು ನಿಗದಿ ಮಾಡಲಾಯಿತು. 1807ರಲ್ಲಿ ಇವನಿಗೆ ಯಳಂದೂರು ತಾಲ್ಲೂಕನ್ನು ಜಹಗೀರಾಗಿ ಕೊಡಲಾಗಿತ್ತು. ಈತ ನಿವೃತ್ತನಾದ ಕೆಲದಿನಗಳಲ್ಲೇ 1812 ಮಾರ್ಚ್ 27ರಂದು ಶ್ರೀರಂಗಪಟ್ಟಣದ ಮನೆಯಲ್ಲಿ ನಿಧನನಾದ. (ಎ.ವಿ.ವಿ)

**ಪೆಮ್ಮಿಸೆಟ್ಟಿ:** ಸು. 1650. ವೀರಶೈವ ಕವಿ. ಗುರುಭಕ್ತಾಂಡಾರಿಚರಿತೆ ಎಂಬ ಗ್ರಂಥದ ಕರ್ತೃ. ಮರುಳಸಿದ್ಧೇಶ ಈತನ ಗುರು. ಕವಿಗೆ ಪ್ರಾಸ ಭೂಷಣ, ಪ್ರಾಸರತ್ನಾಕರ ಎಂಬ ಬಿರುದುಗಳಿದ್ದಂತೆ ತಿಳಿದುಬರುತ್ತದೆ. ಶಿವಕವಿಗೆ ಪ್ರಾಸವೇ ಭೂಷಣಗಳಾಗೆ ಕೈಕೊಂಡೆನಾನೀಪೆಸರನು ಎಂದು ಈತ ಹೇಳಿಕೊಂಡಿದ್ದಾನೆ.

ಗುರುಭಕ್ತಾಂಡಾರಿಚರಿತೆ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 3 ಸಂಧಿಗಳೂ 300 ಪದ್ಯಗಳೂ ಇವೆ. ಈ ಕೃತಿಗೆ ಮೂಲವನ್ನೂ ರಚನೆಗೆ ಕಾರಣವನ್ನೂ ಕುರಿತು ಅನುಪಮ ವಿಚಿತ್ರ ಕವಿ ಪಾಲ್ಕುಱಿಕೆ ಸೋಮೇಶ್ವರ ಆಂಧ್ರಭಾಷೆಯೊಳ್ ದ್ವಿಪದಿಯಿಂದ ಪೇಳ್ದ ಚಿದ್ಘನಮಹಿಮೆ ಗುರುಭಕ್ತಿಯಾಂಡಾರಿ ಚರಿತೆಯಂ ಆರಾಧ್ಯ ಚಾರಿತ್ರದೊಳಗೆ ಮನವೊಲಿದು ತೆಗೆದು ಕನ್ನಡಿಸೆಂದು ಬಸವಣ್ಣ ನೆನಹಿನೊಳು ಬಂದು ಭಸಿತವನಿಟ್ಟು ಮತಿಗೊಡಲು ವಿನಯದಿಂದ ಪ್ರಾಸಭೂಷಣ ಪೇಳ್ದನೀಕೃತಿಯ-ಎಂದು ಹೇಳಿಕೊಂಡಿದ್ದಾನೆ. ಇದು ಒಂದು ಉದಾತ್ತ ಶೃಂಗಾರಪೂರಿತ ಭಕ್ತಿಕಾವ್ಯ. ಕಥಾನಾಯಕ ಗುರುಭಕ್ತಾಂಡಾರಿ, ಕಥಾನಾಯಕಿ ಪ್ರೌಢಾವತಿ. ಇವರಿಬ್ಬರೂ ಶಿವಭಕ್ತರಾಗಿದ್ದು ಒಬ್ಬರನ್ನೊಬ್ಬರು ಕಂಡಾಗ ಮನಸೋತು ಕಾಮಕ್ಕೊಳಗಾಗಿ, ಇದೇ ರೀತಿ ಕಾಮಕ್ಕೊಳಗಾದ ಶ್ವೇತ, ಮಲುಹಣ, ಓಹಿಲ, ಕುಮಾರಪಾಲ, ಗೂರ್ಜರ ಮೊದಲಾದ ಪೂರ್ವಶರಣರ ಕಥೆಗಳನ್ನು ಕೇಳಿ ಕೊನೆಗೆ ಕಾಮವಿಮುಕ್ತರಾಗಿ ಗಣಪದವಿಯನ್ನು ಪಡೆದರು ಎಂಬುದು ಕಥಾವಸ್ತು. ಕಾವ್ಯದ ಉದ್ದಕ್ಕೂ ಚೆಲ್ಲಿ ಸೂಸಿರುವ ನಾಟಕೀಯತೆಯಿಂದ ಪಾತ್ರಗಳು ಸಜೀವವಾಗಿವೆ. ನಾನಾ ವಿಧವಾದ ಪ್ರಾಸ, ವಿಶಿಷ್ಟ ಪದಪ್ರಯೋಗ, ಸುಮಧುರ ಕಾವ್ಯಬಂಧ, ಬಳಸಿರುವ ಮನಮೋಹಕ ಶೈಲಿ-ಇವುಗಳಿಂದ ಕಾವ್ಯ ರಸಾರ್ದ್ರವಾಗಿದೆ. (ಎನ್.ಬಿ.)

**ಪೆರಡೂರು:** ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಒಂದು ಗ್ರಾಮ. ಉಡುಪಿ-ಸೋಮೇಶ್ವರ ಮಾರ್ಗದಲ್ಲಿ ಉಡುಪಿಯ ಈಶಾನ್ಯಕ್ಕೆ 19 ಕಿಮೀ ದೂರದಲ್ಲಿದೆ. ಹಿಂದೆ ಕಾರ್ಕಳ ತಾಲ್ಲೂಕಿನೊಳಗಿದ್ದ ಈ ಊರು ಈಗ ಉಡುಪಿ ತಾಲ್ಲೂಕಿಗೆ ಸೇರಿದ್ದು ತಾಲ್ಲೂಕಿನ ದೊಡ್ಡ ಗ್ರಾಮವಾಗಿದೆ.

ಪೆರಡೂರು ಹೆಚ್ಚಿನಂಶ ಗುಡ್ಡ ಮತ್ತು ಕಾಡುಗಳಿಂದ ಕೂಡಿತ್ತು. ಈಗ ಕಾಡು ಕಡಿಮೆಯಾಗಿದೆ. ಗ್ರಾಮದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿ ಸ್ವರ್ಣಾನದಿ, ಉತ್ತರದಲ್ಲಿ ಮಡಿಸಾಲು (ಭದ್ರಗಿರಿ) ನದಿ ಹರಿಯುತ್ತವೆ. ಅಕ್ಕಿ ಗಿರಣಿಗಳು, ಮುದ್ರಣಾಲಯ ಮತ್ತು ಖಾದಿ ಗ್ರಾಮೋದ್ಯೋಗದ ವತಿಯ ಜಿಲ್ಲೆಯ ಏಕಮಾತ್ರ ನೂಲುವ ಕೇಂದ್ರ ಸ್ಥಾಪಿತವಾಗಿವೆ. ಸಹಕಾರಿ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್‌ನ ಶಾಖೆ ಇವೆ. 1903ರಲ್ಲಿ ಸ್ಥಾಪಿತವಾದ ಮಿಶನ್ ಪ್ರೌಢ ಪ್ರಾಥಮಿಕ ಶಾಲೆ, ರಾಷ್ಟ್ರೀಯ ಹೋರಾಟ ಕಾಲದಲ್ಲಿ ಸ್ಥಾಪಿತವಾಗಿ ಈಗ ದೇವಸ್ಥಾನದ ಆಡಳಿತದಲ್ಲಿರುವ ಇನ್ನೊಂದು ಪ್ರೌಢ ಪ್ರಾಥಮಿಕ ಶಾಲೆ, ನಾಲ್ಕೈದು ಏಕೋಪಾಧ್ಯಾಯ ಪ್ರಾಥಮಿಕ ಶಾಲೆಗಳು, 1961ರಲ್ಲಿ ಸ್ಥಾಪಿತವಾದ ಮಣಿಪಾಲದ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆ ಇವೆ. ಇಲ್ಲಿ ವಿದ್ಯುತ್ ಪೂರೈಕೆ ಇರುವುದಲ್ಲದೆ ಅಂಚೆ, ದೂರವಾಣಿ, ಗ್ರಾಮಕೇಂದ್ರದ ಚಿಕಿತ್ಸಾಲಯ, ಕಲಾಸೇವಾ ಮಂಡಲಿ, ಯುವಕರ ಮಂಡಲಿ ಮುಂತಾದುವು ಇವೆ.

ಇಲ್ಲಿರುವ ಅನಂತಪದ್ಮನಾಭ ದೇವಾಲಯ ಪ್ರಸಿದ್ಧವಾದುದ್ದು. ಇದು ಸುಮಾರು ಹದಿನಾಲ್ಕನೆಯ ಶತಮಾನಕ್ಕೂ ಸ್ವಲ್ಪ ಹಿಂದಿನದಿರಬಹುದೆಂದು ಊಹೆ. ಸ್ಥಳಪುರಾಣದಲ್ಲಿ ಓರ್ವ ಜೈನನು ಕೊಟ್ಟ ಶಿಲೆಯೊಂದರಿಂದ ಇಲ್ಲಿಯ ಮೂರ್ತಿಯನ್ನು ಕಡೆದುದಾಗಿ ಉಲ್ಲೇಖವಿದೆ. ಗರ್ಭಗೃಹ ಮತ್ತು ತೀರ್ಥಮಂಟಪ ವಿಜಯನಗರ ಕಾಲದ ವಾಸ್ತುಶಿಲ್ಪದ ಮಾದರಿಯಲ್ಲಿವೆ. ಶಿಲಾಶಾಸನಗಳಲ್ಲಿ ಈ ದೇವರನು ಅನಂತದೇವನೆಂದು ಹೇಳಿದೆ. ದೇವಸ್ಥಾನದ ಎಂಟು ಮೂಲೆಗಳಲ್ಲೂ ಬೇರೆ ಬೇರೆ ದೇವರ ಗುಡಿಗಳೂ ಎಂಟು ಮಠಗಳೂ ಇವೆ. ಕೊಲ್ಲೂರು ಶ್ರೀ ಮೂಕಾಂಬಿಕಾ ಕ್ಷೇತ್ರವನ್ನು ಬಿಟ್ಟರೆ ಈ ಜಿಲ್ಲೆಯ ಉತ್ತರ ಭಾಗದಲ್ಲಿ ಇಷ್ಟು ಮಹತ್ತ್ವದ ದೇವಾಲಯ ಬೇರೊಂದಿಲ್ಲ. ಇಲ್ಲಿ ಪ್ರತಿ ತಿಂಗಳೂ ಸಂಕ್ರಮಣದಂದು ನಡೆಯುವ ಉತ್ಸವಕ್ಕೆ ಸಾವಿರಾರು ಜನ ಸೇರುತ್ತಾರೆ. ಸಿಂಹಮಾಸದ ಸಂಕ್ರಮಣದ ಉತ್ಸವವಂತೂ ಲಕ್ಷಾಂತರ ಜನ ಸೇರುವ ಜಾತ್ರೆ. ಭಕ್ತರು ಸಾವಿರಾರು ಬಾಳೆಯ ಹಣ್ಣುಗಳನ್ನು ದೇವರಿಗೆ ಅರ್ಪಿಸುವ ಹರಕೆ ಇಲ್ಲಿಯ ವಿಶೇಷಗಳಲ್ಲಿ ಒಂದು. ವಾರ್ಷಿಕೋತ್ಸವ ಕುಂಭ-ಮೀನಮಾಸಗಳಲ್ಲಿ ಏಳು ದಿನ ನಡೆಯುತ್ತದೆ. ಮೀನ ಸಂಕ್ರಮಣಾನಂತರದ ಎರಡನೆಯ ದಿನ ನಡೆಯುವ ರಥೋತ್ಸವ ಅತ್ಯಂತ ವಿಜೃಂಭಣೆಯದು. ಈ ದೇವಸ್ಥಾನದ ವತಿಯಿಂದ ನಡೆಸಲಾಗುವ ದಶಾವತಾರ ಮೇಳ (ಯಕ್ಷಗಾನ ಬಯಲಾಟ ಮೇಳ) ಬಹಳ ಪ್ರಾಚೀನವಾದದ್ದು.

ಪೆರಡೂರು ಹಿಂದೆ ಬಾರಕೂರು ಸಂಸ್ಥಾನಕ್ಕೆ ಸೇರಿತ್ತು. ಸುರಾಲಿನ ತೊಳಹರ ವಂಶದವರ ನೇರ ಆಡಳಿತದಲ್ಲಿತ್ತು. ಈಗ ಇಲ್ಲಿ ಜೈನರಾರೂ

ಇಲ್ಲದಿದ್ದರೂ ಜೈನರ ಆಡಳಿತಕ್ಕೊಳಪಟ್ಟುದರ ಕೆಲವು ಕುರುಹುಗಳು ಇವೆ. ಜೈನರ ಕುಂಜ, ಬಂಗರ ಬಯಲು ಎಂಬ ಹೆಸರುಗಳು ಈಗಲೂ ಇವೆ. ಆಗಿನ ಪ್ರಧಾನ ರಸ್ತೆ ಪೆರಡೂರಿನಿಂದ ಸುರಾಲಿಗೆ ಹೋಗುವ 10 ಕಿಮೀ ದೂರ ರಾಜಮಾರ್ಗ ಈಗಲೂ ಇದೆ. ಟಿಪ್ಪುಸುಲ್ತಾನನ ಕಾಲದಲ್ಲಿ ಇದೊಂದು ಸೈನ್ಯಠಾಣ್ಯವಾಗಿದ್ದಿರಬೇಕೆಂಬುದರ ಗುರುತಾಗಿ ಗ್ರಾಮದ ಪೂರ್ವಭಾಗದ ವಿಸ್ತಾರ ಪ್ರದೇಶವನ್ನು ಈಗಲೂ ಜನ ತೋರಿಸುತ್ತಾರೆ. (ಎಂ.ವಿ.)

**ಪೆರುಮಾಳೆ ದಂಡನಾಯಕ:** ಹೊಯ್ಸಳ ಮುಮ್ಮಡಿ ವೀರ ನರಸಿಂಹನ (1253–92) ಪ್ರಮುಖ ಸಚಿವ ಮತ್ತು ದಂಡನಾಯಕ. ಇವನು ಆತ್ರೇಯ ಗೋತ್ರದ ವಿಷ್ಣುದೇವ ಮತ್ತು ಅವನ ಪತ್ನಿ ಮಂಚಲದೇವಿಯರ ಮಗ. ರಾಮಕೃಷ್ಣ ಪ್ರಭು ಎಂಬುವನು ಪೆರುಮಾಳೆ ದಂಡನಾಯಕನ ಗುರು.

ಪೆರುಮಾಳೆ ದಂಡನಾಯಕ ಹೊಯ್ಸಳ ರಾಜ್ಯದ ಚಿತ್ರದುರ್ಗ ಪ್ರದೇಶದ ಪ್ರಾಂತ್ಯಾಧಿಕಾರಿಯಾಗಿದ್ದನೆಂದು ತಿಳಿದುಬರುತ್ತದೆ. ಆಗ ಹೊಯ್ಸಳರಿಗೂ ಸೇವುಣರಿಗೂ ದಖನ್ನಿನ ಮೇಲಿನ ಪ್ರಭುತ್ವಕ್ಕಾಗಿ ನಿರಂತರ ಹೋರಾಟಗಳು ನಡೆಯುತ್ತಿದ್ದವು. 1271ರ ಸುಮಾರಿನಲ್ಲಿ ಸೇವುಣ ಮಹಾದೇವ ಹೊಯ್ಸಳ ರಾಜ್ಯದ ಮೇಲೆ ದಂಡೆತ್ತಿ ಬಂದಾಗ ಈತ ಪರಾಕ್ರಮದಿಂದ ಹೋರಾಡಿ ಸೇವುಣ ಸೈನ್ಯವನ್ನು ಸೋಲಿಸಿ ಸೇವುಣರ ಕಡೆಯ ಪ್ರಖ್ಯಾತ ಯೋಧನಾಗಿದ್ದ ರತ್ನಪಾಲನನ್ನು ಕೊಂದ. ಸೇವುಣರಾಜ ಪ್ರಾಣರಕ್ಷಣೆಗಾಗಿ ರಣರಂಗದಿಂದ ಓಡಿದ. ಇದರಿಂದ ಸುಪ್ರೀತನಾದ ನರಸಿಂಹ ತನ್ನ ದಂಡನಾಯಕನಿಗೆ ಜವನಿಕೆನಾರಾಯಣ ಮತ್ತು ರಾವುತರಾಯ ಎಂಬ ಬಿರುದುಗಳನ್ನೂ ನಾಗಮಂಗಲ ತಾಲ್ಲೂಕಿನಲ್ಲಿ ವಿಶಾಲವಾದ ಭೂಮಿಯನ್ನೂ ನೀಡಿ ಗೌರವಿಸಿದ. ಪೆರುಮಾಳೆ ಆ ಸ್ಥಳದಲ್ಲಿ ಒಂದು ಅಗ್ರಹಾರವನ್ನು ಸ್ಥಾಪಿಸಿ ಉದ್ಭವ ನರಸಿಂಹಪುರ ಎಂಬ ಹೆಸರನ್ನಿಟ್ಟು, ವ್ಯವಸಾಯಕ್ಕಾಗಿ ಅಲ್ಲಿ ಕೆರೆ ಕಾಲುವೆಗಳನ್ನು ಮಾಡಿಸಿದ. ಪೆರುಮಾಳೆ ದಂಡನಾಯಕ ತಿರುಮಕೂಡಲು ನರಸೀಪುರ ತಾಲ್ಲೂಕಿನ ಮಾಲಂಗಿ ಗ್ರಾಮದ ಬಳಿಯಲ್ಲಿ ಸರ್ವಜ್ಞ ಶ್ರೀರಂಗಪುರ ಎಂಬ ಅಗ್ರಹಾರವನ್ನೂ ಜೊತೆಗೆ ಒಂದು ವಿದ್ಯಾಸಂಸ್ಥೆಯನ್ನೂ ಸ್ಥಾಪಿಸಿ ಅದರ ಏಳಿಗೆಗಾಗಿ ಭೂಮಿಯನ್ನು ದತ್ತಿಯಾಗಿ ನೀಡಿದ. ವಿದ್ಯಾಸಂಸ್ಥೆಯಲ್ಲಿ ಋಗ್ವೇದ ವ್ಯಾಸಂಗ ಹಾಗೂ ಸಂಸ್ಕೃತ ಕನ್ನಡ, ತಮಿಳು ಮತ್ತು ಮರಾಠಿ ಭಾಷೆಗಳಲ್ಲಿ ಶಿಕ್ಷಣ ನೀಡಲು ಅಧ್ಯಾಪಕರನ್ನು ನೇಮಿಸಿದ.

ಚಿತ್ರದುರ್ಗ ಬೆಟ್ಟಪ್ರದೇಶದಲ್ಲಿ ಪೆರುಮಾಳಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿ ಹತ್ತಿರದಲ್ಲಿ ಭೂಮಿಯನ್ನು ಕೊಂಡು ಅಲ್ಲಿನ ಬ್ರಾಹ್ಮಣರಿಗೆ ದಾನವಾಗಿ ನೀಡಿದ. ಅಲ್ಲಿನ ಪಾಳುಕೆರೆಯೊಂದನ್ನು ದುರಸ್ತಿಗೊಳಿಸಿ ತನ್ನ ಹೆಸರಿನಿಂದ ಪೆರುಮಾಳೆ ಸಮುದ್ರ ಎಂದು ಕರೆದ. ಪಾಂಡವರಿಂದ ಪ್ರತಿಷ್ಠಾಪಿತವೆಂದು ನಂಬಲಾಗಿರುವ ಚಿತ್ರದುರ್ಗದ ಪಂಚಲಿಂಗ ತೀರ್ಥಗಳಿಗೂ ದಾನಧರ್ಮಗಳನ್ನು ನೀಡಿದ. ವೈಷ್ಣವ ಪಂಥಾವಲಂಬಿಯಾದ ಪೆರುಮಾಳೆ ತನ್ನ ಗುರು ರಾಮಕೃಷ್ಣ ಪ್ರಭುವಿನ ಸ್ಮರಣಾರ್ಥವಾಗಿ ಅನೇಕ ದಾನಧರ್ಮಗಳನ್ನು ಮಾಡಿ ತಾನು ಸ್ಥಾಪಿಸಿದ ಅಗ್ರಹಾರದಲ್ಲಿ ತನ್ನ ಇಷ್ಟದೇವತೆಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ. ಈತ ಶೈವ ಕ್ಷೇತ್ರಗಳಿಗೂ ದಾನದತ್ತಿಗಳನ್ನು ನೀಡಿದ್ದಾನೆ. (ಜಿ.ಆರ್.ಆರ್.)

**ಪೇಜಾವರ ಸದಾಶಿವರಾವ್:** 1913–39. ಕನ್ನಡ ನವೋದಯದ ಆರಂಭ ಕಾಲದಲ್ಲಿ ಆಗಿಹೋದ ಪ್ರತಿಭಾವಂತ ಕವಿ. ದಕ್ಷಿಣ ಕನ್ನಡ ಜಿಲ್ಲೆಯ ಪೇಜಾವರದಲ್ಲಿ ಶಾಮರಾವ್–ಸೀತಮ್ಮ ದಂಪತಿಗಳ ಹಿರಿಯ ಮಗನಾಗಿ 1913 ಮಾರ್ಚ್ 8ರಂದು ಜನಿಸಿದರು. ಮಂಗಳೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅಲ್ಲಿನ ಸಾಹಿತ್ಯ ಚಟುವಟಿಕೆಗಳ ಕೇಂದ್ರವಾಗಿದ್ದ ಮಿತ್ರಮಂಡಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಕಾಶಿಯ ಹಿಂದು ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಪದವಿ ಪಡೆದು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು (ಡಾಕ್ಟರ್ ಆಫ್ ಆಟೊಮೊಬೈಲ್ ಎಂಜಿನಿಯರಿಂಗ್) 1936ರಲ್ಲಿ ಇಟಲಿಯ ಮಿಲಾನ್‌ಗೆ ಹೋದ ಇವರು 1939 ಅಕ್ಟೋಬರ್ 18ರಂದು ನಿಧನರಾದರು.

ಇವರು ಕಥೆ, ನಾಟಕ ಮತ್ತು ಕವನಗಳನ್ನು ಬರೆದಿದ್ದಾರೆ. ಸರಪಣಿ, ಬೀದಿಗಿಳಿದ ನಾರಿ, ಜೀವನ ಸಂಗೀತ ಎಂಬ ಇವರ ಮೂರು ನಾಟಕಗಳು ತ್ರಿವೇಣಿ ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ. ಅಂಧ ಶಿಲ್ಪ, ಶ್ರೀಗಂಧ–ಇವು ಇವರ ಎರಡು ಸಣ್ಣಕಥೆಗಳು. ವರುಣ (1952) ಎಂಬುದು ಇವರ ಕವನ ಸಂಕಲನ. ಇದರಲ್ಲಿ 48 ಕವನಗಳಿವೆ. ಪ್ರಕೃತಿ, ರಾಷ್ಟ್ರಭಕ್ತಿ, ಬದುಕು, ಸಾವು–ಇವು ಇವರ ಕವನಗಳ ವಸ್ತುಗಳು. ಇಟಲಿಯ ಕವಿ ಲೊರೊನೊವಿನ ತತ್ತ್ವಗಳಿಂದ ಇವರು ಪ್ರಭಾವಿತರಾಗಿರುವುದನ್ನೂ ಭಾರತೀಯ ಪಾಶ್ಚಾತ್ಯ ಸಂಸ್ಕೃತಿಗಳ ತಾಕಲಾಟವನ್ನೂ ಇವರ ಅನೇಕ ಕವನಗಳಲ್ಲಿ ಗುರುತಿಸಬಹುದು. ನವ್ಯ ದೃಷ್ಟಿಯುಳ್ಳ ವರುಣ, ನಾಟ್ಯೋತ್ಸವ ಮೊದಲಾದ ಕವನಗಳನ್ನು ಇವರು ಈ ಶತಮಾನದ ಮೂರನೆಯ ದಶಕದಲ್ಲೇ ಬರೆದಿದ್ದರೆಂಬುದು ಕುತೂಹಲದ ವಿಷಯ. (ಎಂ.ಪಿ.ಯು)

**ಪೈ,ಟಿ.ಎ.:** 1922–81. ಬ್ಯಾಂಕಿಂಗ್, ಜೀವವಿಮೆ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಹಿರಿಯ ಕೆಲಸ ಮಾಡಿದ ಮಹನೀಯರು. ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದರು. ಇವರ ಪೂರ್ಣ ಹೆಸರು ತೋನ್ಸೆ ಅನಂತ ಪೈ. ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯಲ್ಲಿ 1922 ಜನವರಿ 17ರಂದು ಜನಿಸಿದರು. ಸಿಂಡಿಕೇಟ್ ಬ್ಯಾಂಕ್ ಸ್ಥಾಪಕ ಉಪೇಂದ್ರ ಪೈಗಳು ಇವರ ತಂದೆ. ಉಡುಪಿಯಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದ ಇವರು ಅನಂತರ ಮುಂಬಯಿಯ ಸಿಡೆನ್ಹಮ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಎಕನಾಮಿಕ್ಸ್‌ನಲ್ಲಿ ಉಚ್ಚಶಿಕ್ಷಣ ಪಡೆದರು.

ಪೈಯವರು 1943ರಲ್ಲಿ ಸಿಂಡಿಕೇಟ್ ಬ್ಯಾಂಕಿನ ಡೆಪ್ಯುಟಿ ಮ್ಯಾನೇಜರ್ ಆಗಿ ಅಧಿಕಾರ ವಹಿಸಿದರು. ಮರುವರ್ಷ ಆ ಬ್ಯಾಂಕಿನ ಜನರಲ್ ಮ್ಯಾನೇಜರ್ ಆದ ಇವರು ಅನಂತರ ಮ್ಯಾನೇಜಿಂಗ್ ಡೈರೆಕ್ಟರ್ (1932–64) ಮತ್ತು ಚೇರ್‌ಮನ್ (1967–70) ಆಗಿ ಕಾರ್ಯನಿರ್ವಹಿಸಿದರು. ಸಣ್ಣ ಉಳಿತಾಯ ಠೇವಣಾತಿ, ಕೃಷಿ ಕಾರ್ಯಕ್ರಮಗಳಿಗೆ ಸಹಾಯ, ಸುಲಭ ರೀತಿಯಲ್ಲಿ ಸಾಲ ನೀಡಿಕೆ–ಈ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ, ಬ್ಯಾಂಕಿನ ಮುನ್ನಡೆಯನ್ನು ಸಾಧಿಸಿದರು.

ವಿ.ವಿ. ಬಾಳಿಗಾ ಅವರ ಪ್ರಭಾವದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಆಸಕ್ತಿವಹಿಸಿದ ಪೈಯವರು, ರಾಷ್ಟ್ರೀಯ ಕಾಂಗ್ರೆಸ್ಸಿನ ಸಕ್ರಿಯ ಸದಸ್ಯರಾಗಿ ರಾಜಕೀಯ ಕ್ಷೇತ್ರದಲ್ಲೂ ದುಡಿದಿದ್ದಾರೆ. ಮದರಾಸು ಮತ್ತು ಮೈಸೂರು ಶಾಸನಸಭೆಗಳ ಸದಸ್ಯರಾಗಿ (1952–57), ದಕ್ಷಿಣ ಕನ್ನಡ ಜಿಲ್ಲೆಯ

ಅಭಿವೃದ್ಧಿ ಕಾರ್ಯಗಳಿಗೆ ಕಾರಣರಾದರು. ಇವರ ಚಿಕ್ಕಪ್ಪ ಟಿ.ಎಂ.ಎ. ಪೈಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡಿದ್ದ ಹತ್ತೆಂಟು ಬಗೆಯ ಸಾಮಾಜಿಕ ಚಟುವಟಿಕೆಗಳಿಗೆ ಇವರು ಬೆಂಬಲವಾಗಿದ್ದರು. ಮಲ್ಪೆಯ ಫಿಶರೀಸ್ ಹೈಸ್ಕೂಲು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘ ಇತ್ಯಾದಿಗಳ ಸ್ಥಾಪನೆಯಲ್ಲಿ ಮಹತ್ಪಾತ್ರ ವಹಿಸಿದರು. 'ನಮ್ಮ ಮಕ್ಕಳಿಗೆ ಈ ದುರ್ಗತಿಯೇ' ಎಂಬುದು ಇವರು ಜನಸಂಖ್ಯಾ ಸಾಹಿತ್ಯ ಕುರಿತಂತೆ ಬರೆದ ಕಿರು ಹೊತ್ತಿಗೆ.

ಪೈಯವರು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದ ಮೊದಲ ಅಧ್ಯಕ್ಷರಾಗಿದ್ದರು (1965). ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನ ಚೇರ್ಮನ್ನರಾಗಿ (1970) ಅದರ ಸಂಪನ್ಮೂಲಗಳನ್ನು ಜನಕಲ್ಯಾಣ ಕಾರ್ಯಗಳಿಗೆ ಒದಗಿಸುವ ಕ್ರಮವನ್ನು ಸಾಧಿಸಿದರು. 1972ರಲ್ಲಿ ರಾಜ್ಯ ಸಭೆಯ ಸದಸ್ಯರಾದ ಪೈಯವರು ಕೇಂದ್ರ ಸಚಿವ ಸಂಪುಟದಲ್ಲಿ ರೈಲ್ವೆ ಸಚಿವರಾಗಿ (1972–73), ಉದ್ದಿಮೆಗಳ ಸಚಿವರಾಗಿ (1973–74), ಕೈಗಾರಿಕೆ ಮತ್ತು ನಾಗರಿಕ ಸರಬರಾಜು ಸಚಿವರಾಗಿ (1974–77) ಕೆಲಸ ಮಾಡಿದರು.

ಕರ್ನಾಟಕ ರಾಜ್ಯದ ವಿದ್ಯುತ್ ಮಂಡಲಿ, ಮಾಧ್ಯಮಿಕ ಶಿಕ್ಷಣ ಮಂಡಲಿ, ಪಠ್ಯಪುಸ್ತಕ ಸಲಹಾ ಮಂಡಲಿ, ಮತ್ಸ್ಯೋದ್ಯಮ ಸಲಹಾ ಮಂಡಲಿ ಮೊದಲಾದ ಸಮಿತಿಗಳಲ್ಲೂ ಹಾಗೂ ನ್ಯಾಷನಲ್ ಕ್ರೆಡಿಟ್ ಕೌನ್ಸಿಲ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮ್ಯಾನೇಜ್‌ಮೆಂಟ್ ಮೊದಲಾದ ಸಂಸ್ಥೆಗಳ ಸದಸ್ಯರಾಗಿ ಇವರು ಸೇವೆ ಸಲ್ಲಿಸಿದರು.

ಇವರಿಗೆ 1973ರಲ್ಲಿ ಪದ್ಮಭೂಷಣ ಪ್ರಶಸ್ತಿ ಲಭಿಸಿತು. ಕರ್ನಾಟಕ ವಿಶ್ವವಿದ್ಯಾಲಯ (1973) ಮತ್ತು ಆಂಧ್ರ ವಿಶ್ವವಿದ್ಯಾಲಯ (1975) ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿವೆ.

ಇವರು 1977ರ ಲೋಕಸಭೆಯಲ್ಲಿ ಉಡುಪಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಪೈ ಅವರು ಅಧಿಕಾರಕ್ಕಾಗಿ ಎಂದೂ ಹಂಬಲಿಸಲಿಲ್ಲ. ಅದು ತಾನಾಗಿ ಒದಗಿ ಬಂದಾಗ ಜನಸೇವೆಗಾಗಿ ತಮಗೆ ದೊರೆತ ಅವಕಾಶ ಎಂದು ಭಾವಿಸಿದರು. ಇವರೊಬ್ಬ ನಿರ್ಮಲ ಚಾರಿತ್ರ್ಯದ ರಾಜಕಾರಣಿಯಾಗಿದ್ದರು. 1981 ಮೇ 29ರಂದು ನಿಧನರಾದರು. **(ಎ.ಕೆ.ಬಿ.)**

**ಪೈ,ಟಿ.ಎಂ.ಎ.:** 1898–1979. ವೈದ್ಯಕೀಯ, ಬ್ಯಾಂಕಿಂಗ್, ಜೀವವಿಮೆ, ಉದ್ದಿಮೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಗಣ್ಯವಾದ ಕೆಲಸ ಮಾಡಿದ ಮಹನೀಯರು. ತೋನ್ಸೆ ಮಾಧವ ಅನಂತ ಪೈ ಎಂಬುದು ಇವರ ಪೂರ್ಣ ಹೆಸರು.

ದಕ್ಷಿಣ ಕನ್ನಡ ಜಿಲ್ಲೆಯ ತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿ ಅನಂತ ಪೈ–ಯಶೋದಾ ದಂಪತಿಗಳಿಗೆ ಮೂರನೆಯ ಮಗನಾಗಿ 1898 ಏಪ್ರಿಲ್ 30ರಂದು ಜನಿಸಿದರು. ಇವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಕಲ್ಯಾಣಪುರ, ಉಡುಪಿಗಳಲ್ಲಿ ನಡೆಯಿತು. ತಂದೆಯವರು ತೀರಿಕೊಂಡಾಗ (1907) ಇವರಿಗೆ ಒಂಬತ್ತು ವರ್ಷ. ಮುಂದೆ ಮಂಗಳೂರಿನ ಸೇಂಟ್ ಅಲಾಸಿಯಸ್ ಕಾಲೇಜನ್ನು ಸೇರಿದರು (1916). ದೂರದೇಶದಿಂದ ಬಂದು ಅಲ್ಲಿ ಕೆಲಸ ಮಾಡುತ್ತಿದ್ದ ಜೆಸ್ವಿಟ್ ಪಾದ್ರಿಗಳ ಕಾರ್ಯಶ್ರದ್ಧೆಯಿಂದ ಪ್ರಭಾವಿತರಾದರು. ಹುಟ್ಟೂರಿನ ಶಾಲೆ ಮುಚ್ಚುವ ಸ್ಥಿತಿ ಮುಟ್ಟಿದಾಗ ತಮ್ಮ ಓದನ್ನು ನಿಲ್ಲಿಸಿ ಆ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡಿದರು (1919–20). ಅನಂತರ ಮದರಾಸು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆದು (1920–25) ಉಡುಪಿಯಲ್ಲಿ ಚಿಕಿತ್ಸಾಲಯ ತೆರೆದರು.

ಒಮ್ಮೆ ವೈದ್ಯಕೀಯ ಚಿಕಿತ್ಸೆಯ ವೆಚ್ಚ ತೆರಲಾರದ, ಉಡಲು ಬೇರೆ ಸೀರೆಯಿಲ್ಲದ ಮಹಿಳಾ ರೋಗಿಯೊಬ್ಬಳ ಸ್ಥಿತಿ ಕಂಡು ದಾರಿದ್ರ್ಯದ ಭೀಕರ ಸಮಸ್ಯೆಯ ಬಗ್ಗೆ ಚಿಂತೆ ಮೂಡಿತು. ಆಗ ಇವರು ಯೋಜಿಸಿದ ಪರಿಹಾರ, ದುಡಿದು ಸಂಪಾದಿಸಿದ್ದರಲ್ಲಿ ಉಳಿಸುವುದು. ಅಣ್ಣ ಉಪೇಂದ್ರ ಪೈ ಯವರೊಡನೆ ಕೂಡಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟನ್ನು (ಈಗ ಸಿಂಡಿಕೇಟ್ ಬ್ಯಾಂಕ್) 1925 ಅಕ್ಟೋಬರ್ 20ರಂದು ಸ್ಥಾಪಿಸಿದರು. ಆ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಸು. 36 ವರ್ಷಗಳ ಕಾಲ ದುಡಿದ ಇವರು ಸ್ವಲ್ಪ ಕಾಲ ಬ್ಯಾಂಕಿನ ಅಧ್ಯಕ್ಷರೂ ಆಗಿದ್ದರು. ದೇಶದ ಆರ್ಥಿಕರಂಗದಲ್ಲಿ ಬಹುಮುಖ್ಯ ಪಾತ್ರ ವಹಿಸುವ ಬ್ಯಾಂಕಿಂಗ್ ಸೌಕರ್ಯವನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿದರು. ಸ್ಥಳೀಯ ಜನತೆಯ ಅನುಕೂಲಕ್ಕಾಗಿ ಕೆನರಾ ಮ್ಯುಚುವಲ್ ಏಶ್ಯೂರೆನ್ಸ್ ಕಂಪನಿಯನ್ನು 1935ರಲ್ಲಿ ಇವರು ಸ್ಥಾಪಿಸಿದರು.

ಮಣಿಪಾಲ ಗುಡ್ಡೆಯಲ್ಲಿ ಭೂ ಹರಾಜಾದಾಗ (1933) ಅಲ್ಲಿನ ಭೂ ಅಭಿವೃದ್ಧಿಗಾಗಿ ಮಣಿಪಾಲದಲ್ಲಿ 1933ರಲ್ಲಿ ಕೆನರಾ ಲ್ಯಾಂಡ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್ ಕಂಪನಿಯನ್ನು ಆರಂಭಿಸಿದರು. ಹೆಂಚು ತಯಾರಿ, ಮರದ ಮಿಲ್ಲು, ಕೈಮಗ್ಗಗಳಿಂದ ಅಲ್ಲಿ ಚಟುವಟಿಕೆ ಪ್ರಾರಂಭಿಸಿದರು. ಮುಂದೆ ಪುಸ್ತಕಕ್ಕೆ ರಟ್ಟು ಹಾಕುವ ಕೆಲಸ, ದಾದಿಯರಿಗೆ ತರಬೇತಿ, ಬ್ಯಾಂಕ್ ಮತ್ತು ಜೀವವಿಮಾ ನೌಕರರಿಗೆ ತರಬೇತಿ, ಮುದ್ರಣ ತರಬೇತಿ ಮುಂತಾದ ಕೆಲಸಗಳನ್ನು ಸಂಘಟಿಸಿದರು.



ಗ್ರಾಮಾಂತರ ಪ್ರದೇಶದಲ್ಲಿ ಉತ್ತಮ ಶಿಕ್ಷಣ ಸೌಲಭ್ಯಗಳನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ 1942ರಲ್ಲಿ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಎಂಬ ಸಂಸ್ಥೆಯನ್ನು ಆರಂಭಿಸಿದರು. ಮಣಿಪಾಲದಲ್ಲಿ ವೈದ್ಯಕೀಯ ಮತ್ತು ಎಂಜನಿಯರಿಂಗ್ ಕಾಲೇಜುಗಳು, ಉಡುಪಿ, ಕಾರ್ಕಳ, ಮೂಡಬಿದರೆ, ಕುಂದಾಪುರ, ಶೃಂಗೇರಿ ಮುಂತಾದ ಸ್ಥಳಗಳಲ್ಲಿ ವಿವಿಧ ವಿಷಯಗಳಲ್ಲಿ ಶಿಕ್ಷಣ ಕೊಡುವ 33 ಶಾಲಾ–ಕಾಲೇಜುಗಳನ್ನು ಈ ಸಂಸ್ಥೆಯ ಆಶ್ರಯದಲ್ಲಿ ಆರಂಭಿಸಿದರು.

ಉದ್ಯಮಗಳ ಬೆಳವಣಿಗೆಗೆಂದು ಮಣಿಪಾಲದಲ್ಲಿ ಪೈಯವರು ಮಣಿಪಾಲ ಇಂಡಸ್ಟ್ರೀಸ್ ಎಂಬ ಸಂಸ್ಥೆಯನ್ನು 1963ರಲ್ಲಿ ಸ್ಥಾಪಿಸಿದರು.

ಸ್ವಯಂಸೇವೆಯಲ್ಲಿ ವಿಶ್ವಾಸವಿದ್ದ ಪೈಯವರು ಉಡುಪಿ ರೋಟರಿ ಕ್ಲಬ್ಬಿನ ಸ್ಥಾಪಕ ಅಧ್ಯಕ್ಷರು (1957); ಅನಂತರ ಡಿಸ್ಟ್ರಿಕ್ಟ್ ಗವರ್ನರಾದರು

(1964–65). ಅಕಾಡೆಮಿಯಿಂದ ವಿವಿಧ ಸಾಹಿತ್ಯ ಕೃತಿಗಳ ಪ್ರಕಟಣೆ, ಮಣಿಪಾಲದ ಗೀತಾ ಮಂದಿರ ಮತ್ತು ವೇಣುಗೋಪಾಲಸ್ವಾಮಿ ದೇವಾಲಯಗಳು ಸಾಹಿತ್ಯಕ ಹಾಗೂ ಆಧ್ಯಾತ್ಮಿಕ ವಿಚಾರಗಳಲ್ಲಿ ಪೈಯವರಿಗಿದ್ದ ಒಲವನ್ನು ತೋರಿಸುತ್ತದೆ.

ಪೈಯವರಿಗೆ ದೇಶವಿದೇಶಗಳಲ್ಲಿ ಸಂದಿರುವ ಗೌರವಗಳು ಹಲವು; ಅಮೆರಿಕದ ಮಿಯಾಮಿ ಬೀಚ್ ನಗರದ ಕೀಲಿಕೈ ಅರ್ಪಣೆ (1959), ಕರ್ನಾಟಕ ಸರ್ಕಾರದಿಂದ ಎರಡು ಬಾರಿ ಸಾರ್ವಜನಿಕ ಸೇವಾ ಪ್ರಶಸ್ತಿ (1959 ಮತ್ತು 1962), ಪ್ಯಾರಿಸಿನ ಯುನೆಸ್ಕೊ ಕಚೇರಿಯಲ್ಲಿ ಅಧಿಕೃತ ಸ್ವಾಗತ (1964), ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ನಿನ ಮೈಸೂರು ಶಾಖೆಯ ಅಧ್ಯಕ್ಷ ಪದವಿ, ಭಾರತ ಸರ್ಕಾರದಿಂದ ಪದ್ಮಶ್ರೀ ಗೌರವ (1965), ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ ಪದವಿ (1974)– ಗೋಕರ್ಣಪರ್ತಗಾಳಿಮಠದಿಂದ ವಿದ್ಯಾರ್ಥಿರಾಜ ಪ್ರಶಸ್ತಿ– (1979) ಇವು ಕೆಲವು. ಇವರು 1979 ಮೇ 29ರಂದು ನಿಧನರಾದರು.

(ಎ.ಕೆ.ಬಿ)

**ಪೊನ್ನ:** ಸು. 950. ಜೈನಕವಿ. ಕನ್ನಡದ ಮಹಾಕವಿಗಳಲ್ಲೊಬ್ಬ. ಶಾಂತಿಪುರಾಣ, ಭುವನೈಕರಾಮಾಭ್ಯುದಯ, ಜಿನಾಕ್ಷರಮಾಲೆ ಎಂಬ ಕಾವ್ಯಗಳ ಕರ್ತೃ. ಈತ ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕೃಷ್ಣನ (939–67) ಆಸ್ಥಾನಕವಿಯಾಗಿದ್ದ. ಚಕ್ರವರ್ತಿಯಿಂದ ಉಭಯ ಕವಿಚಕ್ರವರ್ತಿ ಎಂಬ ಬಿರುದಿಗೂ ಪಾತ್ರನಾದ. ಈತ ವೈಯಕ್ತಿಕ ವಿಷಯಗಳನ್ನು ಹೆಚ್ಚು ಹೇಳಿಕೊಂಡಿಲ್ಲ. ಇವನು ಹುಟ್ಟಿ ಬೆಳೆದ ನಾಡು ವೆಂಗಿವಿಷಯ ಇರಬೇಕೆಂದು ತೋರುತ್ತದೆ.

ಕವಿಗೆ ತನ್ನ ಧರ್ಮ ಹಾಗೂ ಕವಿತಾಸಾಮರ್ಥ್ಯಗಳ ಬಗ್ಗೆ ತುಂಬ ಅಭಿಮಾನ. ತಾನು ಉಭಯಕವಿತಾವಿಶಾರದನೆಂದೂ ಸಕ್ಕದಂ ಕನ್ನಡಮೆಂಬೆರಡುಂ ಕವಿತೆಯ ಬಲ್ಮೆಗೆ ಬೆರಲೆತ್ತಿದನಿಳೆಯೊಳ್ ಈ ಕುರುಳ್ಗಳ ಸವಣಂ ಎಂದೂ ಮೂರೂವರೆ ಭಾಷೆಗಳನ್ನು ತಿಳಿದವನೆಂದೂ ಎರವರ ಅರ್ಥವನ್ನೂ ದೇಸೆಯನ್ನೂ ಓಜೆಯನ್ನೂ ಕಡವಾಗಿ ಕದಿಯುವ ಕಬ್ಬಿಗಗಳ್ಳನಲ್ಲವೆಂದೂ ರಾಜಸಭೆಗೆ ಉಕ್ತಿಮಂಡನನೆಂದೂ ಪೆಱಂಗಿನಿಸಿಡೆ ಗುಡದ ಅಸಹಾಯಕವೀಶ್ವರಂ ಎಂದೂ ಆತ್ಮಪ್ರಶಂಸೆ ಮಾಡಿಕೊಂಡಿದ್ದಾನೆ. ಇಷ್ಟೇ ಅಲ್ಲದೆ ಕನ್ನಡ ಕವಿತೆಯಲ್ಲಿ ಅಸಗನಿಗಿಂತ ನೂರು ಪಾಲು ಮಿಗಿಲೆಂದೂ ಸಂಸ್ಕೃತದಲ್ಲಿ ಕಾಳಿದಾಸನಿಗಿಂತ ನಾಲ್ಕುಪಾಲು ಶ್ರೇಷ್ಠನೆಂದೂ ಹೊಗಳಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಅಸಗ ಮತ್ತು ಕಾಳಿದಾಸರನ್ನು ಮಾತ್ರ ಸ್ಮರಿಸಿದ್ದಾನೆ. ಪೊನ್ನನನ್ನು ರನ್ನ 'ಜಿನಸಮಯ ದೀಪಕ'ನೆಂದು ಕೊಂಡಾಡಿದ್ದಾನೆ. ನಾಗಚಂದ್ರ, ನಯಸೇನ, ಕರ್ಣಪಾರ್ಯ, ಅಗ್ಗಳ, ರುದ್ರಭಟ್ಟ, ಆಚಣ್ಣ, ಪಾರ್ಶ್ವಪಂಡಿತ, ಜನ್ನ, ಗುಣವರ್ಮ, ಕಮಲಭವ, ಆಂಡಯ್ಯ, ಮಲ್ಲಿಕಾರ್ಜುನ, ಚೌಂಡರಸ, ನಾಗರಾಜ ಮೊದಲಾದವರು ತಮ್ಮ ಕಾವ್ಯಗಳಲ್ಲಿ ಈತನನ್ನು ಸ್ಮರಿಸಿದ್ದಾರೆ. ಪೊನ್ನ ಗತಪ್ರತ್ಯಾಗತ ಎಂಬ ಗ್ರಂಥವನ್ನೂ ಒಂದು ಅಲಂಕಾರಶಾಸ್ತ್ರವನ್ನೂ ಬರೆದಿರುವಂತೆ ವಿದ್ವಾಂಸರು ಊಹಿಸುತ್ತಾರೆ. (ಎಸ್.ಎಸ್.)

ಶಾಂತಿಪುರಾಣ ಹನ್ನೆರಡು ಆಶ್ವಾಸಗಳಿಂದ ಕೂಡಿದ ಚಂಪೂಕಾವ್ಯ. ಇದರಲ್ಲಿ ಹದಿನಾರನೆಯ ತೀರ್ಥಂಕರ ಶಾಂತಿನಾಥನ ಕಥೆ ವರ್ಣಿತವಾಗಿದೆ. ಪುಂಗನೂರಿನ ನಾಗಮಯ್ಯನ ಮಕ್ಕಳಾದ ಮಲ್ಲಪಾರ್ಯ ಮತ್ತು ಪುನ್ನಮಾರ್ಯರು ತಮ್ಮ ಗುರು ಜಿನಚಂದ್ರದೇವರ ಜ್ಞಾಪಕಾರ್ಥವಾಗಿ ಶಾಂತಿಪುರಾಣವನ್ನು ಬರೆಸಿದಂತೆ ತಿಳಿಯುತ್ತದೆ. ಅನಂತರ ಮಲ್ಲಪಾರ್ಯನ ಮಗಳಾದ ದಾನಚಿಂತಾಮಣಿ ಅತ್ತಿಮಬ್ಬೆ ಈ ಕಾವ್ಯದ ಸಾವಿರ ಪ್ರತಿಗಳನ್ನು ಮಾಡಿಸಿ ಸುವರ್ಣ ಜಿನಪ್ರತಿಮೆಯೊಡನೆ ದಾನಮಾಡಿದಳಂತೆ. ಗುಣಭದ್ರರಿಂದ ಸಂಸ್ಕೃತದಲ್ಲಿ ರಚಿತವಾದ ಉತ್ತಮ ಪುರಾಣ ಈ ಕಾವ್ಯಕ್ಕೆ ಆಕರವಿದ್ದಂತೆ ತೋರುತ್ತದೆ. ಜೈನಧರ್ಮದ ತತ್ತ್ವಗಳನ್ನೂ ಮತಪ್ರಕ್ರಿಯೆಗಳನ್ನೂ ಕವಿ ಅತಿಶಯವಾಗಿ ನಿರೂಪಿಸಿರುವನಾದುದರಿಂದ ಈ ಕಾವ್ಯ ಮುಂದಿನ ಅನೇಕ ಜೈನಧರ್ಮಪ್ರತಿಪಾದಕರ ಆಕರ ಗ್ರಂಥವಾಯಿತು. ಈ ಕಾರಣದಿಂದ ಪುರಾಣಚೂಡಾಮಣಿ ಎಂಬ ಕೀರ್ತಿಗೂ ಪಾತ್ರವಾಯಿತು. ಕಾವ್ಯದ ಒಂಬತ್ತು ಆಶ್ವಾಸಗಳನ್ನು ಶಾಂತಿನಾಥನ ಪೂರ್ವ ಭವಾವಳಿಗಳ ಕಥೆ ಆಕ್ರಮಿಸಿಕೊಂಡಿದೆ. ಇನ್ನು ಉಳಿದ ಮೂರು ಆಶ್ವಾಸಗಳಲ್ಲಿ ಶಾಂತಿನಾಥನ ಕಥೆ, ಅವನ ದಿಗ್ವಿಜಯ, ತಪಸ್ಸು, ತೀರ್ಥಂಕರನಿಗೆ ನಡೆವ ಪಂಚಕಲ್ಯಾಣ ಇತ್ಯಾದಿಗಳು ವರ್ಣಿತವಾಗಿವೆ. ಕಥೆ ಶುಷ್ಕವಾಗಿ ಯಾವೊಂದು ಭಾವೋದ್ರೇಕವೂ ಇಲ್ಲದೆ ಸಾಗುತ್ತದೆ. ಶೈಲಿ ಪಾಂಡಿತ್ಯಪೂರ್ಣವಾಗಿದೆ. ತಾನು ಅಸಹಾಯ ಕವಿಯೆಂದೂ ಕಾಳಿದಾಸನಿಗಿಂತ ನಾಲ್ಕು ಪಟ್ಟು ಅತಿಶಯನೆಂದೂ ಹೇಳಿಕೊಂಡ ಪೊನ್ನ ಶಾಂತಿನಾಥನ ದಿಗ್ವಿಜಯವರ್ಣನೆ ಮಾಡುವಾಗ ರಘುವಂಶದಲ್ಲಿ ಬರುವ ರಘುಮಹಾರಾಜನ ದಿಗ್ವಿಜಯವನ್ನು ಅದೇ ಆನುಪೂರ್ವಿಯಲ್ಲೇ ಕನ್ನಡಕ್ಕೆ ಭಾಷಾಂತರ ಮಾಡಿದ್ದಾನೆ. ಜ್ಯೋತಿಃಪ್ರಭೆಯ ಸ್ವಯಂವರವನ್ನು ವರ್ಣನೆ ಮಾಡುವಾಗಲೂ ಅಲ್ಲಿಯ ಇಂದುಮತೀಸ್ವಯಂವರ ವರ್ಣನೆಯನ್ನೇ ಅವಲಂಬಿಸಿದ್ದಾನೆ. ತಾನು ಕಬ್ಬಿಗಗಳ್ಳನಲ್ಲವೆಂದ ಕವಿ, ಕಾಳಿದಾಸನಿಂದ ಸುಮಾರು ಮುನ್ನೂರು ಪದ್ಯಗಳನ್ನು ಕನ್ನಡಕ್ಕೆ ತಂದಿದ್ದಾನೆ. ಆದರೆ ಭಾಷಾಂತರದಲ್ಲಿ ಮೂಲದ ಸೊಗಸು ಬಂದಿಲ್ಲ. ಸ್ವಂತವಾಗಿ ಬರೆದ ಭಾಗಗಳೂ ಅಷ್ಟೇನೂ ಸ್ವಾರಸ್ಯವಾಗಿಲ್ಲ. ಅಶ್ವಗ್ರೀವನ ಕಥೆ, ಮಲ್ಲಿಗೆಯನ್ನು ಕುರಿತ ಪದ್ಯ, ನರಕವರ್ಣನೆ ಇಂಥ ಒಂದೆರಡು ಸಂದರ್ಭಗಳು ಚೆನ್ನಾಗಿವೆ.

ಕಾವ್ಯಗುಣದ ದೃಷ್ಟಿಯಿಂದಲ್ಲದಿದ್ದರೂ ಜೈನಧರ್ಮತತ್ತ್ವಗಳನ್ನು ತಿಳಿಯಲು ಶಾಂತಿಪುರಾಣ ಸಾಕಷ್ಟು ಪ್ರಯೋಜನಕಾರಿಯಾಗಿದೆ. ಹಲವು ಶಾಸ್ತ್ರಗಳಲ್ಲಿ ಪರಿಗಣಿತನಾಗಿದ್ದ ಪೊನ್ನ ನಾನಾ ಶಾಸ್ತ್ರಗಳ ಪಾರಿಭಾಷಿಕ ಪದಗಳನ್ನು ಬಳಸಿರುವನಾದುದರಿಂದ ಶಾಸ್ತ್ರ ಓದುವವರಿಗೆ ಅಪೂರ್ವ ಹಳಗನ್ನಡ ಪದಗಳ ಪ್ರಯೋಗವಿರುವುದರಿಂದ ಶಬ್ದಾರ್ಥವ್ಯುತ್ಪತ್ತಿಯ ವಿಷಯಕ್ಕೆ ಇದು ಸಹಾಯಕವಾದೀತು. ವಾಸ್ತವವಾಗಿ ನೋಡಿದರೆ ಮುಂದಿನ ಕವಿಗಳಿಂದ ಈ ಕಾವ್ಯಕ್ಕೆ ಗೌರವಪ್ರಶಸ್ತಿಗಳು ದೊರಕಿರುವುದು ಅದರ ಕಾವ್ಯತ್ವದ ದೃಷ್ಟಿಗಿಂತ ಅದು ಜೈನಪುರಾಣವಾಗಿರುವುದರಿಂದ ಎಂದು ಹೇಳಬಹುದು. (ಎಸ್.ಎಸ್.;ಎಸ್.ಎಆರ್)

ಭುವನೈಕರಾಮಾಭ್ಯುದಯ ಕಾವ್ಯ ದೊರೆತಿಲ್ಲ. ಆದರೆ ಇದರಲ್ಲಿ ಹದಿನಾಲ್ಕು ಆಶ್ವಾಸಗಳಿವೆಯೆಂದೂ ಇವಕ್ಕೆ ಹದಿನಾಲ್ಕು ಲೋಕವೇ ಬೆಲೆಯೆಂದೂ ಕವಿ ತನ್ನ ಶಾಂತಿಪುರಾಣದಲ್ಲಿ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ಇದಕ್ಕೆ ರಾಮಕಥೆ ಎಂಬ ಹೆಸರೂ ಇದ್ದಂತೆ ತೋರುತ್ತದೆ. ನಾಗವರ್ಮ ತನ್ನ ಕಾವ್ಯಾವಲೋಕನದಲ್ಲಿ ಉದ್ಧರಿಸಿರುವ

> ಉದಯಾಸ್ತೋನ್ನತಶೈಲಸೇತುಹಿಮವತ್ಕುತ್ಕೀಲಪರ್ಯಂತ ಸಂ
> ಪದೆಯಂ ವಾರ್ಧಿತರತ್ತರಂಗನಿನದತ್ಕಾಂಚೀಕಳಾಪಾಂಚಿತಾ
> ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ
> ರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಱರ್ಗಕ್ಕುಮೇ

– ಎಂಬ ಪದ್ಯ ಹಾಗೂ ಕೇಶಿರಾಜ ತನ್ನ ಶಬ್ದಮಣಿದರ್ಪಣದಲ್ಲಿ ಉದಾಹರಿಸುವ ಜವನೇಱಿದ ಜಕ್ಕಂದೊವಿಲಂತೆ ಕಣ್ಗೆಸೆದುವೇಱಿದಿಭಂ ಭುವನೈಕರಾಮನಾ, ಪೆಡಂಮೆಟ್ಟದೆ ಸೂಱೆಱೆದುದೇಱೆದಿಭಂ ಭುವನೈಕರಾಮನಾ ಆನೆಯ ಮೇಲೆ ಯುಮಾಳಮೇಲೆಯುಂ ಪರಿದೊಂದೆಗಜಂ ಭುವನೈಕರಾಮನಾ ಎಂಬ ಮಾತುಗಳೂ ಆ ಕಾವ್ಯದ ಭಾಗಗಳೇ

ಇರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದನ್ನು ನೋಡಿದರೆ ಪಂಪನ ವಿಕ್ರಮಾರ್ಜುನವಿಜಯ, ರನ್ನನ ಸಾಹಸಭೀಮವಿಜಯ–ಇವುಗಳಂತೆಯೇ ಇದೂ ಒಂದು ಲೌಕಿಕ ಪ್ರೌಢಕಾವ್ಯವಾಗಿರಬೇಕೆಂದು ತೋರುತ್ತದೆ. ಅಲ್ಲದೆ ಪೊನ್ನನಿಗೆ ಮಹಾಕವಿ ಎಂಬ ಖ್ಯಾತಿಯನ್ನೂ ಕವಿಚಕ್ರವರ್ತಿ ಎಂಬ ಬಿರುದನ್ನೂ ಗಳಿಸಿಕೊಟ್ಟದ್ದು ಈ ಕೃತಿಯೇ ಇರಬೇಕು. ಜಿನಾಗಮವನ್ನು ಬೆಳಗುವುದಕ್ಕಾಗಿ ಶಾಂತಿಪುರಾಣವನ್ನು ಬರೆದು ಅನಂತರ ಪಂಪನಂತೆಯೇ ಇವನೂ ತನ್ನ ಆಶ್ರಯದಾತನನ್ನು ಕೀರ್ತಿಸುವುದಕ್ಕಾಗಿ, ಬಹುಶಃ ಭುವನೈಕರಾಮನೆಂದು ಬಿರುದಿದ್ದ ರಾಷ್ಟ್ರಕೂಟರ ಮೂರನೆಯ ಕೃಷ್ಣನ ವೈಯಕ್ತಿಕ ವಿಷಯಗಳನ್ನು ಸಮನ್ವಯಗೊಳಿಸಿ ರಾಮಕಥೆಯನ್ನು ಬರೆದಿರುವಂತೆ ತೋರುತ್ತದೆ. ಮೂರನೆಯ ಕೃಷ್ಣ ತಕ್ಕೋಲದಲ್ಲಿ ಚೋಳದೊರೆ ರಾಜಾದಿತ್ಯನನ್ನು ಸೋಲಿಸಿದ ವಿಷಯ ಈ ಕಾವ್ಯದಲ್ಲಿ ವರ್ಣಿತವಾಗಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ಆದರೆ ಮೂರನೆಯ ಕೃಷ್ಣನಿಗೆ ಭುವನೈಕ ರಾಮ ಎಂಬ ಬಿರುದಿತ್ತೆಂಬುದಕ್ಕೆ ಸಾಕಷ್ಟು ಚರಿತ್ರೆಯ ಆಧಾರವಿಲ್ಲ. ಇವನ ಮಹಾಪ್ರಧಾನರಲ್ಲಿ ಶಂಕರಗಂಡ ಎಂಬಾತನಿಗೆ ಭುವನೈಕರಾಮ ಎಂಬ ಬಿರುದಿತ್ತೆಂದು ಶಾಸನಗಳಲ್ಲಿ ತಿಳಿದುಬರುತ್ತದೆ. ಇದರಿಂದ ಪೊನ್ನ ಮೊದಲು ಶಂಕರಗಂಡನ ಆಶ್ರಯದಲ್ಲಿ ಬೆಳೆದು ಅನಂತರ ಅವನ ಮೂಲಕ ಚಕ್ರವರ್ತಿಯ ಆಸ್ಥಾನಕವಿಯಾಗಿದ್ದಿರಬಹುದು. ಉಪಕಾರ ಸ್ಮರಣೆಗಾಗಿ ರಾಮಕಥೆಯಲ್ಲಿ ಶಂಕರಗಂಡನನ್ನು ಹೊಗಳಿರಬಹುದು, ಇಲ್ಲವೆ ಆತನಿಗೆ ಕೃತಿಯನ್ನು ಅಂಕಿತಮಾಡಿರಬಹುದು ಎಂದು ಮತ್ತೊಂದು ಊಹೆಯಿದೆ. ಭುವನೈಕರಾಮಾಭ್ಯುದಯ ಸಿಕ್ಕಿದರೆ ಪೊನ್ನನ ನಿಜವಾದ ಕವಿತಾಶಕ್ತಿ ಎಂಥದು ಎಂದು ತಿಳಿಯಬಹುದು.

ಜಿನಾಕ್ಷರಮಾಲೆ ಜಿನಸ್ತುತಿಯನ್ನು ಮಾಡುವ 39 ಕಂದಪದ್ಯಗಳ ಒಂದು ಸಣ್ಣ ಸ್ತೋತ್ರಗ್ರಂಥ. ಕಕಾರದಿಂದ ಳಕಾರದವರೆಗೆ ಒಂದೊಂದು ಅಕ್ಷರದಿಂದ ಪದ್ಯ ಮೊದಲಾಗುತ್ತದೆ. ಇದರಲ್ಲಿನ ಒಂದು ಪದ್ಯವನ್ನು ಭಟ್ಟಾಕಳಂಕ ತನ್ನ ಶಬ್ದಾನುಶಾಸನದಲ್ಲಿ ಉದ್ಧರಿಸಿದ್ದಾನೆ. ಈ ಸ್ತೋತ್ರದಲ್ಲಿ ಬುದ್ಧಿಚಮತ್ಕಾರವಿದೆಯೇ ಹೊರತು ಹೃದಯಾರ್ದ್ರವಾಗುವಂಥ ಭಾವಾವೇಶವಾಗಲಿ, ಕಾವ್ಯತ್ವವಾಗಲಿ ಕಂಡುಬರುವುದಿಲ್ಲ. (ಎನ್.ಎಸ್.)

**ಪೊನ್ನಂಪೇಟೆ:** ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ಒಂದು ಪಟ್ಟಣ. ವಿರಾಜಪೇಟೆಯ ಆಗ್ನೇಯದಲ್ಲಿ ಹುದಿಕೇರಿ–ಗೋಣಿಕೊಪ್ಪ ಮಾರ್ಗದಲ್ಲಿ ವಿರಾಜಪೇಟೆಗೆ 20 ಕಿಮೀ ದೂರದಲ್ಲೂ ಮಡಿಕೇರಿಗೆ 53 ಕಿಮೀ ದೂರದಲ್ಲೂ ಇದೆ. ಈ ಪೇಟೆಯನ್ನು ಕೊಡಗಿನ ಕೊನೆಯ ರಾಜ ಚಿಕ್ಕವೀರರಾಜೇಂದ್ರ ಒಡೆಯನ ದಿವಾನರುಗಳಲ್ಲಿ ಒಬ್ಬನಾಗಿದ್ದು ಮತ್ತು ಬ್ರಿಟಿಷರ ಕಾಲದಲ್ಲೂ ಅದೇ ಹುದ್ದೆಯಲ್ಲಿ ಮುಂದುವರಿದ ಚೆಪ್ಪುಡಿರ ಪೊನ್ನಪ್ಪನ ನೆನಪಿಗೆ ಆತನ ಮಗ ಮಾದಯ್ಯ ಸು.1845–50ರಲ್ಲಿ ಕಟ್ಟಿಸಿದ. ಈ ಪೇಟೆಯ ಸುತ್ತಲೂ ಬತ್ತ ಬೆಳೆಯುವ ಗ್ರಾಮಗಳು ಇರುವುದರಿಂದ ಇದು ಬತ್ತ ವ್ಯಾಪಾರದ ಒಂದು ಮುಖ್ಯ ಕೇಂದ್ರವಾಗಿದೆ. ಇಲ್ಲಿ ಕೆಲವು ಅಕ್ಕಿಗಿರಣಿಗಳಿವೆ. ಇಲ್ಲಿ ಶ್ರೀರಾಮಕೃಷ್ಣಾಶ್ರಮದ ಶಾರದಾಮಠವಿದೆ. ಇದರ ಆಶ್ರಯದಲ್ಲಿ ಒಂದು ಆಸ್ಪತ್ರೆ ನಡೆಯುತ್ತಿದೆ. ಇಲ್ಲಿ ವಿರಾಜಪೇಟೆ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯೂ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕಚೇರಿಯೂ ಸರ್ಕಾರಿ ಮಾದರಿ ವ್ಯವಸಾಯ ಕ್ಷೇತ್ರವೂ ಇದೆ. ಒಂದು ಸರ್ಕಾರಿ ಪ್ರೌಢಶಾಲೆ ಮತ್ತು ಜೂನಿಯರ್ ಕಾಲೇಜು ಇವೆ. (ಡಿ.ಎನ್.ಕೆ)

**ಪೊಪಟ್,ಅಪರ್ಣಾ:** 1978–. ಅಂತಾರಾಷ್ಟ್ರೀಯ ಪ್ರಸಿದ್ಧ ಕರ್ನಾಟಕದ ಬ್ಯಾಡ್ಮಿಂಟನ್ ಆಟಗಾರ್ತಿ. ಅರ್ಜುನ ಪ್ರಶಸ್ತಿ ಪುರಸ್ಕೃತರು. ರಾಷ್ಟ್ರಮಟ್ಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಇವರು 1978 ಜನವರಿ 18ರಂದು ಗುಜರಾತ್‌ನಲ್ಲಿ ಜನಿಸಿದರು. ಇವರ ತಂದೆ ಲಾಲ್‌ಜಿ ಪೊಪಟ್, ತಾಯಿ ಹೇಮಾ. ಮುಂಬೈನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಮಾಧ್ಯಮಿಕ ಹಾಗೂ ಪದವಿಪೂರ್ವ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಬಂದರು. ತರುವಾಯ ಮುಂಬೈಗೆ ಮರಳಿ ವಾಣಿಜ್ಯ ವಿಷಯದಲ್ಲಿ ಪದವಿ ಪಡೆದರು. ಶಿಕ್ಷಣಕ್ಕಾಗಿ ಬೇರೆಡೆ ಹೋದರೂ ಇವರು ಕ್ರೀಡೆಗಾಗಿ ಕರ್ನಾಟಕವನ್ನೇ ಪ್ರತಿನಿಧಿಸುತ್ತಿದ್ದಾರೆ.

1998ರಿಂದ ನಿರಂತರವಾಗಿ ರಾಷ್ಟ್ರೀಯ ಸೀನಿಯರ್ ಚಾಂಪಿಯನ್ ಆಗಿ ದಾಖಲೆ ನಿರ್ಮಿಸಿರುವ ಇವರು ಬ್ಯಾಡ್ಮಿಂಟನ್ ಆಡಲು ಆರಂಭಿಸಿದ್ದು 8ನೆಯ ವಯಸ್ಸಿನಲ್ಲಿ. 13ನೆಯ ವಯಸ್ಸಿಗೆ ರಾಜ್ಯ, ರಾಷ್ಟ್ರ ಮಟ್ಟಗಳಲ್ಲಿ ಬೆಳಗತೊಡಗಿದರು. ಇವರ ಆರಂಭಿಕ ತರಬೇತುದಾರ ಅನಿಲ್ ಪ್ರಧಾನ್. 1994ರಿಂದ ಪ್ರಕಾಶ್ ಪಡುಕೋಣೆಯವರ ಬ್ಯಾಡ್ಮಿಂಟನ್ ಅಕಾಡೆಮಿ ಸೇರಿ ಅವರ ಶಿಷ್ಯೆಯಾಗಿದ್ದಾರೆ.

ಸಿಡ್ನಿ (2000) ಹಾಗೂ ಆಥೆನ್ಸ್ (2004) ಒಲಂಪಿಕ್ಸ್‌ಗಳಲ್ಲಿ ಭಾರತವನ್ನು ಇವರು ಪ್ರತಿನಿಧಿಸಿ ಗಮನಾರ್ಹ ಸಾಧನೆ ಮಾಡಿದ್ದರು. ಏಷ್ಯನ್ ಗೇಮ್ಸ್ ಹಾಗೂ ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಒಂದಲ್ಲ ಒಂದು ಪದಕಕ್ಕೆ ಭಾಜನರಾಗುವ ಇವರಿಗೆ ಅಸಂಖ್ಯ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳು ಲಭಿಸಿವೆ. ಏಷ್ಯನ್ ಟೂರ್ನ್‌ಮೆಂಟ್‌ನಲ್ಲಿ ನಾಲ್ಕುಬಾರಿ (1998, 1999, 2001, 2003) ಚಿನ್ನದ ಪದಕ ಗಳಿಸಿದ್ದರು.

ಕ್ರೀಡಾ ಜೀವನದಲ್ಲಿ ಅತ್ಯುತ್ತಮ ಎನಿಸುವ ಪ್ರಪಂಚದ 16ನೆಯ ರ್‍ಯಾಂಕಿಂಗ್‌ನಲ್ಲಿದ್ದ ಇವರು ಪ್ರಸ್ತುತ 56ನೆಯ ರ್‍ಯಾಂಕಿಂಗ್‌ನಲ್ಲಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿಗಳು ಸಂದಿವೆ. ಇವುಗಳಲ್ಲಿ ಕರ್ನಾಟಕ ಸರ್ಕಾರದ ಏಕಲವ್ಯ ಪ್ರಶಸ್ತಿ (1999), ಭಾರತ ಸರ್ಕಾರದ ಅರ್ಜುನ ಪ್ರಶಸ್ತಿ (2006) ಮುಖ್ಯವಾದವು. ಪ್ರಸ್ತುತ ಇವರು ಇಂಡಿಯನ್ ಆಯಿಲ್ ಕಾರ್ಪೊರೇಶನ್‌ನಲ್ಲಿ ಉದ್ಯೋಗಿಯಾಗಿದ್ದಾರೆ. (ಎಸ್.ಬಿಎಚ್‌ಎ.)

**ಪೊಳಲಿ:** ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಒಂದು ಗ್ರಾಮ. ಮಂಗಳೂರಿನಿಂದ ಸು. 21 ಕಿಮೀ ಪೂರ್ವಕ್ಕೆ ಫಲ್ಗುಣೀ (ಗುರುಪುರ) ನದೀತೀರದ ಹಚ್ಚನೆಯ ಹೊಲಗದ್ದೆಗಳ ನಡುವೆ ಸುಂದರ ಸನ್ನಿವೇಶದಲ್ಲಿ ಇದೆ. ಸು. 2 ಕಿಮೀ ದೂರದಲ್ಲಿರುವ ಗುರುಪುರದಿಂದ ಮತ್ತು 12 ಕಿಮೀ ದೂರದಲ್ಲಿರುವ ಬಂಟ್ವಾಳ–ಬಿ.ಸಿ.ರೋಡಿನಿಂದ ಇಲ್ಲಿಗೆ ವಾಹನ ಸೌಕರ್ಯವಿದೆ.

ಪೊಳಲಿ ಎಂಬುದು ಪುಲಿನ (ಪುಲಿನಪುರ) ಎಂಬುದರ ರೂಪಾಂತರವೆಂಬುದು ಸಾಮಾನ್ಯ ಅಭಿಪ್ರಾಯ. ಈ ಕ್ಷೇತ್ರ ಮಣ್ಣು – ಮರಳುಗಳ ಬಯಲಿನಲ್ಲಿ ಇರುವುದರಿಂದ ಈ ಹೆಸರು ಬಂದಿರಬಹುದು.

ಪೊಳಲಿಯ ಶ್ರೀರಾಜರಾಜೇಶ್ವರಿ ದೇವಾಲಯ ದಕ್ಷಿಣ ಕನ್ನಡದ ಪ್ರಾಚೀನ ಹಾಗೂ ಪ್ರಸಿದ್ಧ ದೇವಾಲಯಗಳಲ್ಲಿ ಒಂದು. ಇಲ್ಲಿಯ ವೈಶಿಷ್ಟ್ಯವೆಂದರೆ ಇಲ್ಲಿರುವ ರಾಜರಾಜೇಶ್ವರಿ, ಭದ್ರಕಾಳಿ, ಸುಬ್ರಹ್ಮಣ್ಯ ಮೊದಲಾದ ಮೂರ್ತಿಗಳೆಲ್ಲ ಸುದ್ದೆಯಿಂದ ರಚಿತವಾಗಿರುವುದು.

ಶ್ರೀದೇವಿಯ ಮೂರ್ತಿ ಸುಮಾರು ಹತ್ತು ಅಡಿಗಳಷ್ಟು ಎತ್ತರವಿದ್ದು ಕರ್ನಾಟಕದಲ್ಲೇ ಅಷ್ಟು ಎತ್ತರದ ಮೃಣ್ಮಯಮೂರ್ತಿ ಬೇರೆ ಇಲ್ಲ ಎನ್ನುವುದಿದೆ. ಈ ದೇವಾಲಯದಲ್ಲಿರುವ ಮರದ ಚಾವಣಿ ಸುಂದರವಾದ ಕೆತ್ತನೆಗಳಿಂದ ಅಲಂಕೃತವಾಗಿದೆ. ಮುಖ ಮಂಟಪ ಮತ್ತು ಗರ್ಭಗುಡಿಯ ಚಾವಣಿ, ಧ್ವಜಸ್ತಂಭ, ದೀಪಸ್ತಂಭಗಳನ್ನು ತಾಮ್ರದ ತಗಡಿನಿಂದ ಹೊದಿಸಲಾಗಿದೆ. ಈ ಪ್ರಸಿದ್ಧ ದೇವಾಲಯಕ್ಕೆ ಅಬ್ದುಲ್ ರಜಾಕ್ ಎಂಬ ಪ್ರವಾಸಿ 1448ರಲ್ಲಿ ಭೇಟಿ ಕೊಟ್ಟಿದ್ದಂತೆ ಅವನ ಬರೆಹಗಳಿಂದ ತಿಳಿಯುತ್ತದೆ. ಪೊಳಲಿ ದೇವಾಲಯ ಸು. 8ನೆಯ ಶತಮಾನದಲ್ಲಿ ನಿರ್ಮಾಣಗೊಂಡಿರ ಬಹುದೆಂಬುದಕ್ಕೆ ಶಾಸನಾಧಾರಗಳಿವೆ.

ಸುಮಾರು ಏಪ್ರಿಲ್ ತಿಂಗಳಲ್ಲಿ ಮಾಸಾವಧಿ ಪರ್ಯಂತ ನಡೆಯುವ ಪೊಳಲಿಯ ವಾರ್ಷಿಕ ಉತ್ಸವ ಜಿಲ್ಲೆಯ ಉದ್ದಗಲಗಳಿಂದ ಅಸಂಖ್ಯಾತ ಭಕ್ತ ಜನರನ್ನು ಆಕರ್ಷಿಸುತ್ತದೆ. ಉತ್ಸವವನ್ನು 'ಪೊಳಲಿಯ ಚೆಂಡು' ಎಂದೂ ಕರೆಯುವುದುಂಟು. ಉತ್ಸವಾಂತ್ಯದಲ್ಲಿ ದೇಗುಲದ ಎದುರಿನ ಬಯಲಲ್ಲಿ ಹುಲ್ಲು–ಚಕ್ಕಳಗಳಿಂದ ಮಾಡಿದ ದೊಡ್ಡ ಚೆಂಡನ್ನು ಜವ್ವನಿಗರು ಕುಟ್ಟಿ ಆಡುವುದರಿಂದ ಈ ಹೆಸರು ಬಂದಿದೆಯೆಂದೂ ಈ ಚೆಂಡು ದುಷ್ಟ ರಾಕ್ಷಸನೊಬ್ಬನ ರುಂಡದ ಪ್ರತೀಕ ಮತ್ತು ಅನಂತರ ನಡೆಯುವ ರಥೋತ್ಸವ ಅವನ ಮೇಲೆ ದೇವಿ ಸಾಧಿಸಿದ ವಿಜಯದ ಪ್ರತೀಕ ಎಂಬ ನಂಬಿಕೆ ಇದೆ. (ಎಂ.ಆರ್‌ಎ.)

**ಪೊಳಲಿಶಾಸ್ತ್ರಿ:** 1897–1972. ಪ್ರಸಿದ್ಧ ಯಕ್ಷಗಾನ ಕಲಾವಿದರು, ಲೇಖಕರು. ಇವರ ಪೂರ್ತಿ ಹೆಸರು ಪೊಳಲಿ ಶಂಕರನಾರಾಯಣ ಶಾಸ್ತ್ರಿ. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು ಮಿಜಾರು ಮಾಗಣೆಯ ಕೆಲಂಜಾರು ಗ್ರಾಮದಲ್ಲಿ 1897 ಜುಲೈ 10ರಂದು ಜನಿಸಿದರು. ತಂದೆ ಕೃಷ್ಣ ಕಾರಂತ, ತಾಯಿ ಪದ್ಮಾವತಿ. ಬಾಲ್ಯವನ್ನು ಪಣಂಬೂರಿನಲ್ಲಿ ಕಳೆದರು. ವಿದ್ಯಾಭ್ಯಾಸಕ್ಕಾಗಿ ಸುರತ್ಕಲ್, ಪೊಳಲಿ, ಮೈಸೂರು ಮತ್ತು ಚಿದಂಬರಂಗಳಿಗೆ ತೆರಳಿದರು. ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರಿಂದ ವಾರಾನ್ನ ಮಾಡಿಕೊಂಡು ಅಧ್ಯಯನ ನಡೆಸಿದರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಗಾಧ ಪಾಂಡಿತ್ಯವನ್ನು ಪಡೆದುಕೊಂಡು ಚಿದಂಬರಂನಿಂದ ಪೊಳಲಿಗೆ ಮರಳಿಬಂದು ನೆಲೆಸಿದರು.

ಅನಂತರ ಮಂಗಲಪಾಡಿಯಲ್ಲಿ ಕೆಲಕಾಲ ಅಧ್ಯಾಪಕರಾಗಿ ದುಡಿದರು (1928). ತರುವಾಯ ಪೊಳಲಿಯಲ್ಲಿ ಸಂಸ್ಕೃತ ಅಧ್ಯಾಪಕರಾದರು. 1946ರಲ್ಲಿ ಮಂಗಳೂರಿಗೆ ಬಂದು ಸೇಂಟ್ ಅಲೋಶಿಯಸ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಸೇರಿದರು. ಒಂಬತ್ತು ವರ್ಷಗಳು ಈ ವೃತ್ತಿಯಲ್ಲಿದ್ದು ನಿವೃತ್ತರಾದರು.

ಅಸಾಧಾರಣ ಪಾಂಡಿತ್ಯ ಹೊಂದಿದ್ದ ಶಾಸ್ತ್ರಿಗಳ ಪ್ರಧಾನ ಪ್ರವೃತ್ತಿ ಯಕ್ಷಗಾನ. ಯಕ್ಷಗಾನದ ತಾಳಮದ್ದಳೆ ಪ್ರಕಾರದಲ್ಲಿ ಇವರು ವಿಶೇಷ ಕೃಷಿ ಮಾಡಿದರು. 16ನೆಯ ವಯಸ್ಸಿನಿಂದಲೇ ತಾಳಮದ್ದಳೆಯ ಅರ್ಥಗಾರಿಕೆಯನ್ನು ಅಭ್ಯಾಸ ಮಾಡತೊಡಗಿದರು. ಗಿರಿಜಾಕಲ್ಯಾಣದ ದಕ್ಷ, ಕುಮಾರ ವಿಜಯದ ಬೃಹಸ್ಪತಿ, ಭೀಷ್ಮಾರ್ಜುನ ಕಾಳಗದ ಭೀಷ್ಮ–ಕೃಷ್ಣ, ಶ್ರೀ ಕೃಷ್ಣ ಸಂಧಾನದ ಕೌರವ, ಕೃಷ್ಣ ರಾಜಸೂಯಯಾಗದ ಜರಾಸಂಧ–ಕೃಷ್ಣ, ಸುಧನ್ವ ಕಾಳಗದ ಹಂಸಧ್ವಜ–ಸುಧನ್ವ, ರಾಮಾಯಣದ ರಾಮ–ರಾವಣ–ಅಂಗದ–ಪ್ರಹಸ್ತ–ವಿಭೀಷಣ–ವಾಲಿ ಮುಂತಾದ ಪಾತ್ರಗಳಿಗೆ ಹೊಸ ಚೈತನ್ಯ ತುಂಬಿ ಪ್ರಸಿದ್ಧ ಅರ್ಥಧಾರಿಗಳಾಗಿ ಮೆರೆದರು. ಅರ್ಥ ಹೇಳುವಾಗ ವೇದಿಕೆಯಲ್ಲಿ ಪದ್ಮಾಸನ ಹಾಕಿ ಕುಳಿತು ಮುಗುಳ್ನಗೆಯಿಂದ ಇವರು ಅರ್ಥ ಬಿಡಿಸುತ್ತಿದ್ದ ಪರಿ ಪ್ರೇಕ್ಷಕರನ್ನು ಮಂತ್ರ ಮುಗ್ಧಗೊಳಿಸುತ್ತಿತ್ತು. ಸ್ಪಷ್ಟತೆ, ಶುಭ್ರತೆ ಮತ್ತು ನಿಖರತೆ ಇವರ ಗುಣ. ಗಂಭೀರ ಹಾಸ್ಯ ಇವರ ವ್ಯಕ್ತಿತ್ವದ ಮತ್ತೊಂದು ಹವ್ಯಾಸವಾಗಿತ್ತು.

ಸಾಹಿತ್ಯ ಸೃಷ್ಟಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಶಾಸ್ತ್ರಿಗಳು ಭಾಮಿನೀ ಷಟ್ಪದಿಯಲ್ಲಿ ಸಂಕ್ಷಿಪ್ತ ದೇವೀಮಹಾತ್ಮ್ಯೆ ರಚಿಸಿದ್ದಾರೆ. ಪುಳಿನಾಪುರ ಕ್ಷೇತ್ರಾನುವರ್ಣನಂ, ಪೊಳಲಿಯ ಕ್ಷೇತ್ರವನ್ನು ಕುರಿತು ಬರೆದಿರುವ ಕನ್ನಡ ಗದ್ಯಕೃತಿ, ಅಪ್ರಕಟಿತ, ಸಂಸ್ಕೃತದ, ನರವು ಮಹಾಗಣಪತಿ ಮಹಾತ್ಮ್ಯೆ ಕನ್ನಡದಲ್ಲಿ ಗದ್ಯಾನುವಾದ ಮಾಡಿದ್ದಾರೆ. ತೆಕ್ಕುಂಜ ಶಂಕರಭಟ್ಟರ, ಸಂಸ್ಕೃತ ಸ್ತೋತ್ರ ಮಂಜರಿಯನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಯಕ್ಷಗಾನ ಮೇಳಗಳಿಗೆ 'ಲಲಿತೋಪಾಖ್ಯಾನ' ಗಳಂಥ ಪೌರಾಣಿಕ ಪ್ರಸಂಗಗಳನ್ನು ರಚಿಸಿದ್ದಾರೆ.

ಯಕ್ಷಗಾನದ ಪುನರುತ್ಥಾನದಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದರು. ತೆಕ್ಕುಂಜ ಗೋಪಾಲಕೃಷ್ಣ ಭಟ್, ಪೆರ್ಲ ಕೃಷ್ಣಭಟ್, ಮುಳಿಯ ಮಹಾಬಲ ಭಟ್, ಶೇಣಿ ಗೋಪಾಲಕೃಷ್ಣ ಭಟ್ ಮೊದಲಾದ ಪ್ರಸಿದ್ಧ ಅರ್ಥಧಾರಿಗಳಿಗೆ ಗುರುಗಳಾಗಿದ್ದರು. ತರುಣ ಪೀಳಿಗೆಗೆ ಇವರು ನೀಡಿದ ಪ್ರೋತ್ಸಾಹ ಮಾರ್ಗದರ್ಶನಗಳಿಂದ ಯಕ್ಷಗಾನಕ್ಕೆ ಹೊಸರೂಪ ಒದಗುವಂತಾಯಿತು. ಇವರು ಯಕ್ಷಗಾನಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಹಲವು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ಯಕ್ಷಗಾನ ವಾಚಸ್ಪತಿ, ಯಕ್ಷಗಾನ ರಸಋಷಿ, ಎಕ್ಕಲಗಾಣದೊಜ ಮುಂತಾದ ಬಿರುದುಗಳನ್ನು ಇವರಿಗೆ ನೀಡಲಾಗಿದೆ. ಇವರು 1972 ಜುಲೈ 21ರಂದು ನಿಧನರಾದರು. ಇವರ ನೆನಪಿಗಾಗಿ ಯಕ್ಷಗಾನ ವಿದ್ವಾಂಸರು, ಅಭಿಮಾನಿಗಳು ಯಕ್ಷಗಾನ ಮಕರಂದ ಎಂಬ ಸಂಸ್ಮರಣ ಗ್ರಂಥವೊಂದನ್ನು ಹೊರತಂದಿದ್ದಾರೆ (1980). (ಎಸ್.ಬಿಎಚ್‌ಎ.)

**ಪೋಲಾಳ್ವ ದಂಡನಾಥ:** ಸು. 1224. ಹರಿಚಾರಿತ್ರ ಎಂಬ ಗ್ರಂಥದ ಕರ್ತೃ. ಈತ ಹೊಯ್ಸಳ ದೊರೆ ಎರಡನೆಯ ಬಲ್ಲಾಳ (1173–1220) ಮತ್ತು ಅವನ ಮಗ ಎರಡನೆಯ ನರಸಿಂಹ (1220–35) ಇವರ ಆಳ್ವಿಕೆಯಲ್ಲಿ ಮಂತ್ರಿಯೂ ದಂಡಾಧೀಶನೂ ಆಗಿದ್ದ. ಆಂಧ್ರಪ್ರದೇಶದ ನಾರಾಯಣಪುರ ಇವನ ಜನ್ಮಸ್ಥಳ. ತಂದೆ ಅತ್ತಿರಾಜ, ತಾಯಿ ನವಿಲಾಡೆ ಯಕ್ಕ. ಸ್ವಸಾಮರ್ಥ್ಯದಿಂದ ಮೇಲೇರಿ ಅಭ್ಯುದಯ ಪರಂಪರೆಯನ್ನು ಪಡೆದ ಇವನು ದಕ್ಷಿಣದ ನಾಲ್ಕು ರಾಜರನ್ನು ಎದುರಿಸಿ ತಡೆದು, ಹೊಯ್ಸಳ ಸಾಮ್ರಾಜ್ಯವನ್ನು ಕಾಪಾಡಿ ತನ್ನ ಸ್ವಾಮಿಭಕ್ತಿಯನ್ನು ಮೆರೆದ. ವಿಷ್ಣುಭಕ್ತನೂ ಪರಾಕ್ರಮಶಾಲಿಯೂ ಎಲ್ಲಕ್ಕೂ ಮಿಗಿಲಾಗಿ ಸಾಹಿತಿಯೂ ಕೊಡುಗೈದಾನಿಯೂ ವಿದ್ವಾಂಸರಿಗೆ ಆಶ್ರಯದಾತನೂ ಆಗಿದ್ದ ಈತ ಹರಿಹರದಲ್ಲಿ ಹರಿಹರೇಶ್ವರಸ್ವಾಮಿಗಾಗಿ 115 ಹೊನ್ನಕಳಸಗಳಿಂದ ಶೋಭಿಸುತ್ತಿದ್ದ ಸುಂದರವಾದ ದೇವಾಲಯವನ್ನು 1224ರಲ್ಲಿ ಕಟ್ಟಿಸಿದ. ಇದೇ ಊರಿನ ಸಮೀಪದಲ್ಲಿರುವ ಬಾನುವಳ್ಳಿಯಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ಕಟ್ಟಿಸಿ, ಆ ಗ್ರಾಮವನ್ನು 104 ಜನ ಬ್ರಾಹ್ಮಣರಿಗೆ ಸರ್ವಸಾಮಾನ್ಯವಾಗಿ ಬಿಟ್ಟ. ದೈವಭಕ್ತಿ, ಸ್ವಾಮಿನಿಷ್ಠ ಸೇವಕ, ದಾನಿ, ಸಾಹಿತಿ ಎನಿಸಿದ್ದ ಈತನ ಉಜ್ವಲ ವ್ಯಕ್ತಿತ್ವದ ಚಿತ್ರಣ ದಾವಣಗೆರೆಯ 25ನೆಯ ಶಾಸನದಲ್ಲಿ (1224) ನಿರೂಪಿತವಾಗಿದೆ.

ಹರಿಚಾರಿತ್ರ ಷಟ್ಪದಿಯಲ್ಲಿ ರಚಿತವಾದಂತೆ ತಿಳಿದುಬರುತ್ತದೆ. ಆದರೆ ಕೃತಿ ಉಪಲಬ್ಧವಿಲ್ಲ. ಈ ಕೃತಿ ದೊರಕಿದ್ದರೆ ಕನ್ನಡದಲ್ಲಿ ಷಟ್ಪದಿ ಚರಿತ್ರೆಯ ಮೇಲೆ ಹೊಸ ಬೆಳಕು ಬೀರುತ್ತಿದ್ದಿತೆನ್ನುವುದರಲ್ಲಿ ಸಂದೇಹವಿಲ್ಲ. (ಎಚ್.ಎಂ.ಎಸ್.)

**ಪ್ರಕಟಣೋದ್ಯಮ**: ಕನ್ನಡ ಪ್ರಕಟನೋದ್ಯಮಕ್ಕೆ ಸುಮಾರು ಎರಡು ಶತಮಾನಗಳ ಸುದೀರ್ಘ ಇತಿಹಾಸವಿದೆ. ಮದರಾಸಿನ ಪೋರ್ಟ್ ಸೇಂಟ್ ಜಾರ್ಜ್‌ನಲ್ಲಿ ಒಂದು ಮುದ್ರಣಾಲಯ ಸ್ಥಾಪನೆಗೊಂಡು ತೆಲುಗು ತಮಿಳು ಕನ್ನಡ ಪುಸ್ತಕಗಳ ಮುದ್ರಣ ಕಾರ್ಯ ಪ್ರಾರಂಭವಾಯಿತು. 19ನೆಯ ಶತಮಾನದ ಆದಿಯಲ್ಲಿ ಕಲ್ಕತ್ತದ ಬಳಿಯ ಶ್ರೀರಾಂಪುರ

ಎಂಬಲ್ಲಿ ವಿಲಿಯಮ್ ಕೇರಿ ಎಂಬ ಮಿಷನರಿ ಒಂದು ಮುದ್ರಣಾಲಯವನ್ನು ಸ್ಥಾಪಿಸಿ ಭಾರತದ ಹಾಗೂ ಹೊರಗಿನ ನೂರಾರು ಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಕಟಿಸತೊಡಗಿದ. ಈತ 1817ರಲ್ಲಿ ಕನ್ನಡದ ಒಂದು ವ್ಯಾಕರಣ ಕೃತಿಯನ್ನು ಪ್ರಕಟಿಸಿದ. ಇದೇ ಕನ್ನಡದ ಮೊದಲನೆಯ ಮುದ್ರಿತ ಪುಸ್ತಕ. ಎ ಗ್ರಾಮರ್ ಆಫ್ ದಿ ಕರ್ನಾಟ ಲ್ಯಾಂಗ್‌ವೇಜ್ ಎಂದು ಇದನ್ನು ಕರೆಯಲಾಗಿದೆ.ಬಿಡಿ ಮೊಳೆಗಳಿಂದ ಅಚ್ಚಾದ ಮೊದಲ ಕನ್ನಡ ಪುಸ್ತಕ ಇದು. ಆಮೇಲೆ 1924ರಲ್ಲಿ ಮದರಾಸಿನಲ್ಲಿ ರೀವ್ ಸಂಪಾದಿಸಿದ ಇಂಗ್ಲಿಷ್ ಕನ್ನಡ ನಿಘಂಟು ಪ್ರಕಟವಾಯಿತು. ಅವನು ಲಂಡನ್ ಮಿಷನರಿ ಸೊಸೈಟಿಗೆ ಸೇರಿದ್ದವನು. 1820ರಲ್ಲಿ ಜಾನ್ ಮೆಕೆರಲ್‌ನ ಎ ಗ್ರಾಮರ್ ಆಫ್ ದಿ ಕರ್ನಾಟಿಕ್ ಲ್ಯಾಂಗ್ವೇಜ್ ಎಂಬ ಇನ್ನೊಂದು ವ್ಯಾಕರಣ ಹೊರಬಂತು. ಕನ್ನಡದ ಮುದ್ರಣಕಾರ್ಯ ಹೀಗೆ ಕಲ್ಕತ್ತ (ಕೋಲ್ಕತ), ಮದರಾಸುಗಳಲ್ಲಿ ಪ್ರಾರಂಭವಾಯಿತಾದರೂ ವಿವಿಧ ವಿನ್ಯಾಸಗಳಿಂದ ಬೇರೆ ಬೇರೆ ಅಕ್ಷರ ರೂಪಗಳು ಸಿದ್ಧವಾಗಿ ಪ್ರಚಾರವಾದ್ದು ಬಳ್ಳಾರಿ, ಮಂಗಳೂರು, ಬೆಂಗಳೂರು ಮುಂತಾದ ಸ್ಥಳಗಳಲ್ಲಿದ್ದ ಮಿಷನರಿಗಳ ಮತ್ತು ಪ್ರಕಾಶನೋದ್ಯಮಿಗಳ ಸಾಹಸದ ಫಲವಾಗಿ. ಕನ್ನಡದ ಮೊಳೆಗಳಿಗೆ ಇಂದಿನ ಸುಂದರವಾದ ರೂಪವನ್ನು ಕೊಟ್ಟವನು ಮಂಗಳೂರಿನ ಒಬ್ಬ ಅಕ್ಕಸಾಲಿಗ ಅನಂತಚಾರಿ ಎಂದು ಹೇಳುತ್ತಾರೆ. 1863ರ ವೇಳೆಗೆ ಮರದ ಮುದ್ರಣ ಯಂತ್ರಗಳ ಸ್ಥಾನದಲ್ಲಿ ಕಬ್ಬಿಣದ ಯಂತ್ರಗಳು ಬಂದುವು. ಕೈಗಳಿಂದಲೇ ಮಾತೃಕೆಗಳನ್ನು ಕೊರೆಯುವ ಕಷ್ಟಕರವಾದ ಕಲೆಯಲ್ಲಿ ಮದರಾಸಿನ ಅಕ್ಕಸಾಲಿಗಳು ಬಹಳ ಪ್ರಖ್ಯಾತರಾಗಿದ್ದರು. ಎಂದೇ ಅಲ್ಲಿ ಅಚ್ಚಾಗಿರುವ ಕನ್ನಡ ಪುಸ್ತಕಗಳಲ್ಲಿ ಕೊನೆಯ ಪಕ್ಷ ಮೂರು ಬಗೆಯ ಅಕ್ಷರ ನಮೂನೆಗಳು, ವಿವಿಧ ವಿನ್ಯಾಸಗಳಲ್ಲಿ ಮುದ್ರಣವಾಗಿರುವುದು ಕಂಡುಬರುತ್ತದೆ.

ಮಿಷನರಿಗಳ ಜೊತೆಗೆ ಇತರರೂ ಪ್ರಕಾಶನೋದ್ಯಮದ ಮಹತ್ತ್ವವನ್ನು ಕಂಡುಕೊಂಡರು. ಖಾಸಗಿ ಮುದ್ರಣಾಲಯಗಳು ಪ್ರಾರಂಭವಾಗಿ ಪುಸ್ತಕಗಳು ಪ್ರಕಟವಾಗತೊಡಗಿದುವು. ಖಗೋಳಶಾಸ್ತ್ರ, ಭೂಗೋಳ, ಧರ್ಮ, ತತ್ತ್ವಪದಗಳು, ಲಾವಣಿಗಳು, ಪ್ರದೇಶಪರಿಚಯ, ಗಣಿತ ಮೊದಲಾದ ವಿವಿಧ ವಿಷಯಗಳ ಬಗ್ಗೆ ಪುಟ್ಟ ಪುಟ್ಟ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುತ್ತಿದ್ದರು. ಬಿಡಿ ಮೊಳೆಗಳು ಜಾಲ್ತಿಗೆ ಬಂದಿದ್ದಾಗಲೇ ಕಲ್ಲಚ್ಚು ಮುದ್ರಣವೂ ರೂಢಿಯಲ್ಲಿತ್ತು. ಮುದ್ರಣಕ್ಕೆ ಅಗತ್ಯವಾದ ಮಸಿ ಇಲ್ಲೇ ತಯಾರಾಗುತ್ತಿತ್ತು. ಮೊದಲು ಲಿಥೋ ಕಲ್ಲನ್ನು ಆಮದು ಮಾಡಿಕೊಳ್ಳುತ್ತಿದ್ದರು. ಕ್ರಮೇಣ ಕರ್ನೂಲಿನ ಕಲ್ಲುಗಳು ಈ ಕೆಲಸಕ್ಕೆ ಬಹು ಉಪಯುಕ್ತವೆನಿಸಿದುವು. ಕಲ್ಲಿನ ಮುದ್ರಣ ವೆಚ್ಚ ಕಡಿಮೆಯಾಗಿರುತ್ತಿತ್ತು. ಇದು ಜನಪ್ರಿಯವಾಯಿತು. ಕಾಗದದ ಕಾರ್ಖಾನೆಗಳು ಸ್ಥಾಪಿತವಾದುವು. ಮುಂಬಯಿಯಲ್ಲಿ ನಿರ್ಣಯಸಾಗರ ಪ್ರೆಸ್ ಪ್ರಾರಂಭವಾಯಿತು. 1813ರಲ್ಲಿ ಗಣಪತ್ ಕೃಷ್ಣಾಜಿ ಸ್ವಂತದ ಒಂದು ಮುದ್ರಣಾಲಯ ಕಟ್ಟಿದ. 1931ರಲ್ಲಿ ಮರಾಠೀ ಪಂಚಾಂಗವನ್ನು ಮುದ್ರಿಸಿ ಪ್ರಕಟಿಸಿದ.

ಪ್ರಕಾಶನೋದ್ಯಮಕ್ಕೆ ಸರ್ಕಾರದ ವಿರೋಧ ಎದುರಾದದ್ದು ಆಗಿನ ಪರಿಸ್ಥಿತಿಯಲ್ಲಿ ಸಹಜ. ದೇಶಭಾಷೆಗಳನ್ನು ಅರಿಯದ ಬ್ರಿಟಿಷರು ಇಲ್ಲಿ ಪ್ರಕಟವಾಗುವ ವಾಙ್ಮಯವನ್ನು ಕುರಿತು ಸಂಶಯದೃಷ್ಟಿ ತಳೆದುದರಿಂದಾಗಿ ಪ್ರಾಂತ ಸರ್ಕಾರಗಳಲ್ಲಿ ಟ್ರಾನ್ಸ್‌ಲೇಟರ್ ಹುದ್ದೆಗಳು ಸೃಷ್ಟಿಯಾದುವು. 1867ರ ರಿಜಿಸ್ಟ್ರೇಷನ್ ಅಧಿನಿಯಮ ಜಾರಿಗೆ ಬಂತು. ಭಾರತದಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕಗಳನ್ನು ಈ ಅಧಿನಿಯಮ ದನ್ವಯ ಕಾಪಿರೈಟ್ ಗ್ರಂಥಾಲಯಗಳಿಗೆ ಕಳಿಸಿಕೊಡಲೇಬೇಕೆಂದು ಕಾನೂನು ಹೇಳಿತು. ಹಾಗೆ ಬಂದ ಪುಸ್ತಕಗಳ ಪಟ್ಟಿ ಮಾಡಿ ಮೇಲಧಿಕಾರಿಗಳಿಗೆ ಕಳುಹಿಸಲಾಗುತ್ತಿತ್ತು.

ಬಳ್ಳಾರಿ ಜೇಮ್ಸ್‌ಹಾಂಡ್ಸ್ 1816ರಲ್ಲಿ ಒಂದು ಮುದ್ರಣಯಂತ್ರವನ್ನು ಮದರಾಸಿನಲ್ಲಿ ಸ್ಥಾಪಿಸಿ (ಕಮರ್ಷಿಯಲ್ ಪ್ರೆಸ್) ಹೊಸ ಒಡಂಬಡಿಕೆಯ ಪೂರ್ವಾರ್ಧವನ್ನು ಪ್ರಕಟಿಸಿದ. ಸಂಪೂರ್ಣವಾಗಿ ಕನ್ನಡ ಭಾಷೆ ಹಾಗೂ ಲಿಪಿಯಲ್ಲಿರುವ ಮೊದಲ ಪುಸ್ತಕ (1802) ಇದೇ. ಕನ್ನಡದ ಪುಸ್ತಕಗಳು ಕರ್ನಾಟಕದಲ್ಲೇ ಪ್ರಕಟವಾಗತೊಡಗಿದ್ದು 1826ರಲ್ಲಿ ಬಳ್ಳಾರಿಗೆ ಅಚ್ಚುಕೂಟ ಬಂದನಂತರ. ಅದುವರೆಗಿನವೆಲ್ಲ ಮದರಾಸು ಕಲ್ಕತ್ತಗಳಲ್ಲಿ ಅಚ್ಚಾದವು. ಬಳ್ಳಾರಿಯ ಮಿಷನ್ 1840ರ ತನಕ ಪುಸ್ತಕಗಳನ್ನು ಪ್ರಕಟಿಸಿತು. ಬೆಂಗಳೂರು ಮೈಸೂರುಗಳಲ್ಲಿ 19ನೆಯ ಶತಕದ ಕೊನೆಯ ದಶಕದಲ್ಲಿ ಮುದ್ರಣಾಲಯಗಳು ಸ್ಥಾಪಿತವಾದವು. ವೆಸ್ಲಿಯನ್ ಮಿಷನ್ ಈ ನಿಟ್ಟಿನಲ್ಲಿ ಬಹಳ ಕೆಲಸಮಾಡಿತು. ಮಂಗಳೂರಿನ ಬಾಸೆಲ್‌ಮಿಷನ್ ಪ್ರೆಸ್ ದಾಸರಪದಗಳು, ಗಾದೆಗಳು ಮತ್ತು ಧಾರ್ಮಿಕ ಕೃತಿಗಳನ್ನು ಪ್ರಕಟಿಸಿತು. ಸುಂದರವಾದ ಅಕ್ಷರ ನಮೂನೆಗಳು ಈ ಪ್ರೆಸ್ಸಿನ ವೈಶಿಷ್ಟ್ಯವಾಗಿದ್ದುವು.

ಮೊದಲ ಪುಸ್ತಕಗಳು ಕ್ರಮಿತ ಪುಸ್ತಕಗಳು, ಬೈಬಲ್‌ಗಳು, ಖಾಸಗಿ ಪ್ರಕಾಶನದ ಆರಂಭಿಕ ಕತೆ ಸ್ವಾರಸ್ಯವಾದದ್ದು. ಬಳ್ಳಾರಿಯ ಶಿವಲಿಂಗಂ ಶೆಟ್ಟಿ ಕೋನೇರಿಶೆಟ್ಟಿ ಕನ್ನಡ ಪುಸ್ತಕ ಪ್ರಕಾಶನ ಮತ್ತು ಮಾರಾಟದಲ್ಲಿ ತುಂಬ ಹೆಸರಾದವರು. ಮದರಾಸಿನಲ್ಲಿ ಅಚ್ಚುಮಾಡಿಸಿ ಬಳ್ಳಾರಿಯಲ್ಲಿ ಪ್ರಸಿದ್ಧಿ ಪಡಿಸಿ ಪ್ರಾಂತಾದ್ಯಂತ ಪ್ರಸಾರ ಮಾಡುತ್ತಿದ್ದ ಇವರು ಪುಸ್ತಕೋದ್ಯಮಕ್ಕೆ ಸಲ್ಲಿಸಿದ ಸೇವೆ ಮಹತ್ತ್ವದ್ದು. ನಗದವರನ್ನು ನಗಿಸುವ ಕಲೆ, ಹಿತೋಪದೇಶ, ಸ್ತೋತ್ರಗಳು, ಕತೆಗಳು ಮುಂತಾದವನ್ನು ಇವರು ಪ್ರಕಟಿಸಿದರು. ಸಂಚಾರಸಾರಿಗೆ ಕಷ್ಟಕರವಾಗಿದ್ದ ಆ ಕಾಲದಲ್ಲಿ ಇವರು ಗಾಡಿಗಳಲ್ಲಿ ಪುಸ್ತಕಗಳನ್ನು ತುಂಬಿಕೊಂಡು ಸಂತೆಗಳಿಗೆ ಹೋಗಿ ಮಾರಿದರು. ಬೆಳಗಾಂವಿ ರಾಮತತ್ತ್ವ ಪ್ರಕಾಶ, ಪ್ರಕಾಶನಾಲಯದ ರಾಮಚಂದ್ರಸಾವಂತ ಅವರು ಮರಾಠಿ, ಸಂಸ್ಕೃತ, ಕನ್ನಡಗಳಲ್ಲಿ ಪ್ರಕಟಿಸುತ್ತಿದ್ದರು. ಈ ಸಂಸ್ಥೆ ಈಗಲೂ ಇದೆ. ಈ ಸಂಸ್ಥೆಯ ಉಪಯೋಗಕ್ಕೆಂದೇ ಆಗ ಒಂದು ಅಂಚೆ ಕಚೇರಿಯನ್ನು ತೆರೆಯಲಾಯಿತು ಎಂಬುದರಿಂದ ಇದರ ವಹಿವಾಟು ಎಷ್ಟಿತ್ತೆಂಬುದನ್ನು ತಿಳಿದುಕೊಳ್ಳ ಬಹುದು. ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ ಅವರು ಚಂದ್ರೋದಯ ಪ್ರೆಸ್ ಸ್ಥಾಪಿಸಿ ಮೊದಲು ಕಲ್ಲಚ್ಚಿನಲ್ಲೂ ಆಮೇಲೆ ಬಿಡಿಮೊಳೆಗಳಲ್ಲೂ ಮುದ್ರಣ ಕಾರ್ಯ ನಡೆಸಿದರು. ಚಂದ್ರೋದಯ ಎಂಬ ಪತ್ರಿಕೆಗಳಲ್ಲೂ ಮುದ್ರಣ ಕಾರ್ಯ ನಡೆಸಿದರು. ಇವರು ಮುಖ್ಯವಾಗಿ ಕಾನೂನು ಪುಸ್ತಕಗಳನ್ನು ಪ್ರಕಟಿಸಿದರು.

ಧಾರವಾಡದ ಕರ್ನಾಟಕ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮೊಳೆಗಳನ್ನು ಎರಕಹೊಯ್ಯುವ ಒಂದು ಫೌಂಡ್ರಿ ಇತ್ತು. ಈ ಮುದ್ರಣಾಲಯದಿಂದ ಅನೇಕ ಪಠ್ಯಪುಸ್ತಕಗಳು ಹೊರಬಂದುವು. ಧಾರವಾಡದ ಕರ್ನಾಟಕ ಬುಕ್ ಡಿಪೊ, ಬೆಂಗಳೂರಿನ ಟಿ.ಎನ್.ಕೃಷ್ಣಯ್ಯಶೆಟ್ಟಿಯವರ ಕಳಾನಿಧಿ ಬುಕ್ ಡಿಪೊ ಇವು ಮಹತ್ತರವಾದ ಕೆಲಸ ಮಾಡಿದುವು. ಕೃಷ್ಣಯ್ಯಶೆಟ್ಟರು ಚಾಮರಾಜೋಕ್ತಿವಿಲಾಸ, ರಾಮಾಯಣ, ವಾಣೀವಿಲಾಸಭಾರತ, ಅಮರ ಕೋಶ, ಲಕ್ಷ್ಮೀಶನ ಜೈಮಿನಿಭಾರತ, ಕುಮಾರವ್ಯಾಸಭಾರತ ಇತರ ಪ್ರಾಚೀನ ಕೃತಿಗಳು, ಇತ್ಯಾದಿ ಹಲವಾರು ಉದ್ಗ್ರಂಥಗಳನ್ನು ಪ್ರಕಟಿಸಿದರು. ಹಾಗೆಯೇ ಬೆಂಗಳೂರಿನಲ್ಲಿ ಕಾರ್ಯತತ್ಪರರಾಗಿದ್ದ ವೆಲನಾಡು ಬಿ. ಸುಬ್ಬಯ್ಯ, ವಾಜಪೇಯ ಕೃಷ್ಣಯ್ಯ ಮತ್ತು ಗೋವಿಂದಯ್ಯ ಇವರನ್ನು, ಹಾಗೆಯೇ ಮಂಗಳೂರಿನ ಬಾಲಸಾಹಿತ್ಯ ಮಂಡಲವನ್ನು ಉಲ್ಲೇಖಿಸಬಹುದು: ಈ ಪ್ರಯತ್ನಗಳು ಕನ್ನಡ ಪ್ರಕಾಶನೋದ್ಯಮದ ಎರಡನೆಯ ಹಂತವನ್ನು ಪ್ರತಿನಿಧಿಸುತ್ತವೆ. ಮೊದಲನೆಯ ಹಂತದಲ್ಲಿ ಮಿಷನರಿಗಳು ಕೆಲಸ ಮಾಡಿದರೆ ಎರಡನೆಯ ಹಂತದಲ್ಲಿ ಖಾಸಗಿ ಪ್ರಯತ್ನಗಳು ಮತ್ತು ಸರ್ಕಾರದ ವಿದ್ಯಾ ಇಲಾಖೆಯ ಪ್ರಕಟಣೆಗಳು ಮುಖ್ಯವಾದವು. ಒಂದು ಕಡೆ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಭಾಷಾಂತರಕಾರರ ನೆರವಿನಿಂದ

ಪುಸ್ತಕಗಳನ್ನು ಸಿದ್ಧಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರ ಪ್ರಕಟಿಸುತ್ತಿತ್ತು. ಇನ್ನೊಂದು ಕಡೆ ಜನಸಾಮಾನ್ಯರಿಗೆ ಬೇಕಾದ ನೂರಾರು ಬಗೆಯ ಪುಸ್ತಕಗಳನ್ನು ಖಾಸಗಿ ಪ್ರಕಾಶಕರು ಪ್ರಕಟಿಸುತ್ತಿದ್ದರು.

ಮೂರನೆಯ ಹಂತ ಈಚಿನ ಬೆಳವಣಿಗೆ. ವಿವಿಧ ಗ್ರಂಥಮಾಲೆಗಳು (ಮನೋಹರ, ಮಿಂಚಿನಬಳ್ಳಿ, ಪ್ರತಿಭಾ ಇತ್ಯಾದಿ) ಪ್ರಕಾಶನೋದ್ಯಮವನ್ನು ಕೈಗೊಂಡುವು. ಕಾದಂಬರಿಗಳು, ನಾಟಕಗಳು, ಜೀವನಚರಿತ್ರೆ, ಬಾಲಸಾಹಿತ್ಯ, ಶಾಸ್ತ್ರವಿಷಯಗಳು ಹೇರಳವಾಗಿ ಪ್ರಕಟವಾದುವು. ಸತ್ಯಶೋಧನ ಪ್ರಕಟನಾಲಯ. ಸ್ಟ್ಯಾನ್‌ಡರ್ಡ್, ಬುಕ್ ಡಿಪೋ ಮೊದಲಾದ ಕೆಲವು ಈಗ ಚಟುವಟಿಕೆಯಿಂದಿಲ್ಲವಾದರೂ ಅವುಗಳ ಪ್ರಕಟಣೆಗಳು ಅವರ ಸೇವೆಗೆ ಸಾಕ್ಷಿಯಾಗಿ ಉಳಿದಿವೆ.

ನಾಲ್ಕನೆಯ ಹಂತದಲ್ಲಿ ಪ್ರಕಾಶನ ಕೇಂದ್ರಗಳು ಬಹುಮಟ್ಟಿಗೆ ಬೆಂಗಳೂರು, ಮೈಸೂರುಗಳಿಗೆ ವರ್ಗಾವಣೆಗೊಂಡುವು. ಕಾವ್ಯಾಲಯ, ಉಷಾಸಾಹಿತ್ಯಮಾಲೆ, ಶಾರದಾಮಂದಿರ, ಡಿ. ವಿ. ಕೆ. ಮೂರ್ತಿ, ವಿದ್ಯಾನಿಧಿ, ಗೀತಾಬುಕ್ ಹೌಸ್, ತ.ವೆಂ. ಸ್ಮಾರಕ ಗ್ರಂಥಮಾಲೆ, ಉದಯರವಿ, ಸಮಾಜ ಪುಸ್ತಕಾಲಯ ಮೊದಲಾದ ಪ್ರಕಾಶನ ಸಂಸ್ಥೇಗಳು ಕಾರ್ಯಶೀಲವಾದವು. ಹಲವು ಅಲಂಕಾರ ಶಾಸ್ತ್ರಗ್ರಂಥಗಳನ್ನು, ಪ್ರಾಚೀನ ಕೃತಿಗಳನ್ನು ಶಾರದಾ ಮಂದಿರ ಪ್ರಕಟಿಸಿದೆ. ಜನಪ್ರಿಯ ಕಾದಂಬರಿ, ಕತೆ ಮತ್ತು ಸಾಮಾನ್ಯ ಆರೋಗ್ಯ ಕೃತಿಗಳು ಜೊತೆಗೆ ಹಲವು ಶಾಸ್ತ್ರಕೃತಿಗಳನ್ನು ಡಿ.ವಿ.ಕೆ. ಮೂರ್ತಿ ಸಂಸ್ಥೆ ಪ್ರಕಟಿಸಿದೆ.

ವಾಹಿನಿ ಪ್ರಕಾಶನ ಒಂದೂವರೆ ರೂಪಾಯಿಗೆ ಒಂದು ಕಾದಂಬರಿ ಕೊಡುವ ಯೋಜನೆಯನ್ನು ಪ್ರಾರಂಭಿಸಿ ಪ್ರಕಾಶನೋದ್ಯಮದಲ್ಲಿ ಹೊಸ ಚಾಲನೆ ಕೊಟ್ಟಿತು. ಸಾಮಾನ್ಯ ಕಾಗದದ ರಟ್ಟಿನ ಸುಮಾರು 250–300 ಪುಟಗಳ ಕೈಹೊತ್ತಗೆಗಳು ಪ್ರಕಟವಾದವು.

ಅನಂತರದಲ್ಲಿ ಮನೋಹರ ಗ್ರಂಥಮಾಲೆ, ಸಾಹಿತ್ಯಭಂಡಾರ, ಸಪ್ನಬುಕ್ ಹೌಸ್, ಪತ್ರಿಕೆ ಪ್ರಕಾಶನ, ಪ್ರಿಸಂ ಬುಕ್ಸ್, ಅಭಿರುಚಿ, ನವಕರ್ನಾಟಕ, ಅಂಕಿತಪುಸ್ತಕ, ಅತ್ರಿ ಬುಕ್ ಸೆಂಟರ್, ಅಕ್ಷರ ಪ್ರಕಾಶನ, ಐಬಿಎಚ್, ಲೋಹಿಯಾ ಪ್ರಕಾಶನ, ಸಂವಹನ, ಚೇತನ ಪ್ರಕಾಶನ ಮೊದಲಾದ ನೂರಾರು ಪ್ರಕಾಶನ ಸಂಸ್ಥೆಗಳು ಹುಟ್ಟಿಗೊಂಡು ವಿಪುಲವಾಗಿ ಕೃತಿಗಳನ್ನು ಪ್ರಕಟಿಸುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ತನ್ನದೇ ಆದ ಪ್ರಕಾಶನ ಉದ್ಯಮವನ್ನು ನಿರ್ವಹಿಸುತ್ತಿದೆ. 1937ರಿಂದಲೂ ಪ್ರಕಾಶನ ಕಾರ್ಯದಲ್ಲಿ ತೊಡಗಿರುವ ಇದು ಪ್ರಚಾರೋಪನ್ಯಾಸ ಪುಸ್ತಕಮಾಲೆ, ಗೃಹಸರಸ್ವತೀ ಗ್ರಂಥಮಾಲೆ, ವಿಶೇಷೋಪನ್ಯಾಸಮಾಲೆ, ಕನ್ನಡ ಗ್ರಂಥಮಾಲೆ ಮೊದಲಾದ ಹಲವು ಮಾಲೆಗಳಲ್ಲಿ ಸಾವಿರಾರು ಪುಸ್ತಕಗಳನ್ನು ಪ್ರಕಟಿಸಿದೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿವಿಧ ವಿಷಯಗಳ ಪಠ್ಯಪುಸ್ತಕಗಳನ್ನು ಮಾತ್ರವಲ್ಲದೆ ಪ್ರಾಚೀನ ಕೃತಿಗಳು, ಜನಪದ ಕೃತಿಗಳು, ಹರಿದಾಸ ಸಾಹಿತ್ಯ, ಸಾಹಿತ್ಯಚರಿತ್ರೆ, ಛಂದಸ್ಸಿನ ಚರಿತ್ರೆ ಮುಂತಾದ ಯೋಜನೆಗಳ ಅಡಿಯಲ್ಲಿ ನೂರಾರು ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಕನ್ನಡ ವಿಶ್ವಕೋಶ, ವಿಷಯ ವಿಶ್ವಕೋಶ, ಎಪಿಗ್ರಾಫಿಯ ಕರ್ನಾಟಿಕ, ಇಂಗ್ಲಿಷ್–ಕನ್ನಡ ನಿಘಂಟು ಮೊದಲಾದ ಯೋಜನೆಗಳು ಮಹತ್ತ್ವದ ಪ್ರಕಟಣೆಗಳಾಗಿವೆ. ಮುದ್ರಿತ ಕನ್ನಡ ಕೃತಿಗಳ ವಿವರಣಾತ್ಮಕ ಗ್ರಂಥಸೂಚಿ ಯೋಜನೆಯನ್ನು ಪ್ರಸಾರಾಂಗ ನಿರ್ವಹಿಸುತ್ತಿದೆ. ಕನ್ನಡ ಪ್ರಕಾಶನೋದ್ಯಮದ ಆಳ ಅಗಲಗಳನ್ನರಿಯಲು ಈ ಸೂಚಿ ಆಧಾರವಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಮಾರ್ಗವನ್ನು ಅನುಸರಿಸಿ ಕರ್ನಾಟಕ, ಬೆಂಗಳೂರು ಮತ್ತು ಕೃಷಿ ವಿಶ್ವವಿದ್ಯಾಲಯ ಪ್ರಕಟನೋದ್ಯಮವನ್ನು ಕೈಗೊಂಡಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಅನೇಕ ಉಪಯುಕ್ತ ಕೃಷಿಗಳನ್ನು ಪ್ರಕಟಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ವಿವಿಧ ಮಾಲಿಕೆಗಳಲ್ಲಿ ನೂರಾರು ಪುಸ್ತಕಗಳನ್ನು ಹೊರತರುತ್ತಿದೆ. ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಮೊದಲಾದ ಸರಕಾರಿ ಸಂಸ್ಥೆಗಳು ದೇಶ ಭಾಷೆಗಳಲ್ಲಿ ಪುಸ್ತಕ ಪ್ರಕಟಣೆಯ ಕಾರ್ಯಕ್ರಮ ಹಾಕಿಕೊಂಡು ಯಶಸ್ವಿಯಾಗಿ ನಿರ್ವಹಿಸುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಸೂಚಿಯ ಒಂದು ಅಂದಾಜಿನಂತೆ ಸು. 80,000ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿವೆ. ಈಗ ಪ್ರತಿವರ್ಷ ಕನ್ನಡದಲ್ಲಿ ಸು. 1,300 ಪುಸ್ತಕಗಳು ಪ್ರಕಟವಾಗುತ್ತಿವೆ. ಸಂಖ್ಯೆಯ ದೃಷ್ಟಿಯಿಂದ ಕಾದಂಬರಿಗಳು, ಕವಿತೆಗಳು, ಬಾಲಸಾಹಿತ್ಯ ಇವಕ್ಕೆ ಮೊದಲನೆಯ ಸ್ಥಾನ. ಅನುವಾದಗಳು ಹೇರಳವಾಗಿ ಬರುತ್ತಿವೆ. ಪುಸ್ತಕೋದ್ಯಮವನ್ನು ಪ್ರತಿಬಿಂಬಿಸುವ ಉದ್ದೇಶದಿಂದ ಎರಡು ನಿಯತಕಾಲಿಕೆಗಳು ಪ್ರಕಟವಾಗುತ್ತಿದ್ದವು. ಗ್ರಂಥಲೋಕ ಪ್ರತಿತಿಂಗಳೂ ಕನ್ನಡದ ಪ್ರಕಟಣೆಗಳನ್ನು ಸೂಚೀಕರಿಸಿ, ವಿಮರ್ಶೆಮಾಡಿಸಿ, ಪರಿಚಯ ಮಾಡಿಕೊಡುತ್ತಿದ್ದ ಪತ್ರಿಕೆಯಾಗಿತ್ತು. ಪುಸ್ತಕ ಪುರವಣಿ ಗ್ರಂಥಸೂಚೀ ವಿವರಕೊಡುವ ಸಾಹಿತ್ಯಿಕ ಪತ್ರಿಕೆಯಾಗಿತ್ತು. ಈಗ ಖಾಸಗಿ ಪ್ರಕಾಶನ ಸಂಸ್ಥೆಗಳು ಹೆಚ್ಚುತ್ತಿವೆ. ಕಾಗದ ಮುಂತಾದ ಸಾಮಗ್ರಿಗಳ ಬೆಲೆ ಹಾಗೂ ಇತರ ವೆಚ್ಚಗಳು ಏರುತ್ತಿದ್ದರೂ ಮೈಸೂರು, ಬೆಂಗಳೂರು, ಧಾರವಾಡ ಮೊದಲಾದ ಕೇಂದ್ರಗಳಿಂದ ಪುಸ್ತಕಗಳು ಹೇರಳವಾಗಿ ಪ್ರಕಟವಾಗುತ್ತಿವೆ. ಆದರೆ ವೈವಿಧ್ಯ, ಸಂಖ್ಯೆ ಹೆಚ್ಚಿದಂತೆ ಮುದ್ರಿತವಾಗುವ ಪ್ರತಿಗಳ ಸಂಖ್ಯೆ ಹೆಚ್ಚಿಲ್ಲ. ಪ್ರಸಾರ ಹೆಚ್ಚಿಲ್ಲ. ವಾಚಕಬಳಗ ಹೆಚ್ಚುತ್ತಿಲ್ಲ. ಮಾರುಕಟ್ಟೆ ಸಂಕುಚಿಸುತ್ತಿದೆ. ಇದರಿಂದಾಗಿ ಈ ಉದ್ಯಮ ಕಷ್ಟಸ್ಥಿತಿಯಲ್ಲಿದೆ. ಕನ್ನಡದಲ್ಲಿ ಪ್ರಕಾಶನವನ್ನು ಒಂದು ಕಲಾಕ್ರಿಯೆಯನ್ನಾಗಿ ನಿರ್ವಹಿಸುವ ಅಪೇಕ್ಷೆಯಿರುವ ಅನೇಕರು ಈಗ ನಷ್ಟದಲ್ಲೂ ಆಸಕ್ತಿ ಉಳಿಸಿಕೊಂಡು ಮುನ್ನಡೆದಿದ್ದಾರೆ. ಹಾಗಾಗಿ ಪ್ರಕಟಣೋದ್ಯಮ ಉಸಿರಾಡುತ್ತಿದೆ.

*

**ಪ್ರಕಾಶ್, ಪಡುಕೋಣೆ:** ಪ್ರಸಿದ್ಧ ಷಟ್ಲ್ ಬಾಡ್ಮಿಂಟನ್ ಆಟಗಾರ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ. ಸ್ಥಳ ಬೆಂಗಳೂರು. ಹದಿನಾರು ವರ್ಷ ಪ್ರಾಯದಲ್ಲಿಯೆ ಬ್ಯಾಡ್ಮಿಂಟನ್‌ನಲ್ಲಿ ರಾಷ್ಟ್ರೀಯ ಜ್ಯೂನಿಯರ್ ಮತ್ತು ಸೀನಿಯರ್ ಚಾಂಪಿಯನ್‌ಷಿಪ್ ಪಡೆದು ಕರ್ನಾಟಕಕ್ಕೆ ಕೀರ್ತಿ ತಂದವರು. ತಂದೆ ಪಡುಕೋಣೆ ರಮೇಶ್ ಉತ್ತಮ ಬ್ಯಾಂಡ್ಮಿಂಟನ್ ಆಟಗಾರರಾದರೆ, ತಾತ ನುರಿತ ಟೆನಿಸ್ ಆಟಗಾರರು. ಹಿರಿಯ ಸಹೋದರ ಪ್ರದೀಪ, ಕಿರಿಯರಾದ ಮಹೇಶ, ಹರೀಶ ಎಲ್ಲರೂ ಹೆಸರಾದ ಬ್ಯಾಡ್ಮಿಂಟನ್ ಆಟಗಾರರೇ. ಮಹೇಶ ಬೆಂಗಳೂರು ವಾರ್ಸಿಟಿ ಆಟಗಾರ. ಹರೀಶ ರಾಜ್ಯದ ಪ್ರಸಿದ್ಧ ಆಟಗಾರ. ಪ್ರಕಾಶ ಅವರು ಬೆಂಗಳೂರಿನ ಶೇಷಾದ್ರಿಪುರ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ ಪಡೆದು ಮಲ್ಲೇಶ್ವರದ ಎಂ.ಇ.ಎಸ್. ಕಾಲೇಜಿನಲ್ಲಿ ಬಿ.ಕಾಮ್ ಪದವಿ ಪಡೆದು ಬೆಂಗಳೂರಿನಲ್ಲಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿಯಾಗಿದ್ದರು (1975–86).

1978ರ ಆಗಸ್ಟ್ ಹನ್ನೊಂದನೆಯ ದಿನಾಂಕ ಭಾರತ ಬ್ಯಾಡ್ಮಿಂಟನ್ ಇತಿಹಾಸದಲ್ಲಿ ಸುವರ್ಣದಿನ. ಅಂದು ಕೆನಡದ ಎಡ್ಮಂಟನ್ನಿನಲ್ಲಿ ನಡೆದ ಹನ್ನೊಂದನೆಯ ಕಾಮನ್‍ವೆಲ್ತ್ ಕ್ರೀಡಾಕೂಟದಲ್ಲಿ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ ಫೈನಲ್ಸ್‍ನಲ್ಲಿ ಇಂಗ್ಲೆಂಡಿನ ಡೆರಿಕ್ ಟೌಲ್ಬರ್ಟ್ ಅವರನ್ನು 15–9, 15–8ರಲ್ಲಿ ಎರಡು ನೇರ ಆಟಗಳಿಂದ ಸೋಲಿಸಿ, ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ನಿನಲ್ಲಿ ಪ್ರಪ್ರಥಮ ಬಾರಿಗೆ ಸ್ವರ್ಣಪದಕ ಗಿಟ್ಟಿಸಿ ಭಾರತಕ್ಕೆ, ಕರ್ನಾಟಕಕ್ಕೆ ಕೀರ್ತಿ ತಂದು ಕೊಟ್ಟರು

ಹಲವಾರು ಅಂತಾರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಗಳಲ್ಲಿ ಪ್ರಥಮ ಶ್ರೇಣಿಯ ಆಟಗಾರರಾಗಿದ್ದರಲ್ಲದೆ, ವಿಶ್ವಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ವಿಜೇತರು ಕೂಡ. ಬ್ಯಾಡ್ಮಿಂಟನ್ ರಾಷ್ಟ್ರೀಯ ಚಾಂಪಿಯನ್ ಷಿಪ್ಪನ್ನು 1971ರಿಂದ 1978ರವರೆಗೆ ಉಳಿಸಿಕೊಂಡು ಇವರು ದಾಖಲೆ ನಿರ್ಮಿಸಿದರು. 1976ರಲ್ಲಿ ದೆಹಲಿಯಲ್ಲಿ ಮುಕ್ತಾಯ ಗೊಂಡ ನೆಹರೂ ಸ್ಮಾರಕ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಪಂದ್ಯಗಳಲ್ಲಿ ಇವರು ಇಂಡೊನೇಷ್ಯದ ನಂ.1 ಆಟಗಾರರಾದ ಸುಮಿರಾತರನ್ನು ಸೋಲಿಸಿ ಫೈನಲ್ಸ್‍ವರೆಗೆ ತಲುಪಿದ್ದರು. ಆಗ ಇಂಡೋನೇಷ್ಯ ಮ್ಯಾನೇಜರ್ ಸುವಾರ್ಸಾನೋ ಅವರು ಪ್ರಕಾಶ ವಿಶ್ವದ ಅತ್ಯುತ್ತಮ ಬ್ಯಾಡ್ಮಿಂಟನ್ ಆಟಗಾರ ಎಂದು ಹೇಳಿದ್ದು ಅತ್ಯುಕ್ತಿಯಲ್ಲ.

ಇತರ ಆಟಗಾರರಂತೆ ಪ್ರಕಾಶ ಕೋರ್ಟಿನಲ್ಲಿ ವೇಗವಾಗಿ ಚಲಿಸದೆ, ನಿಧಾನವಾಗಿ ಚಲಿಸುತ್ತ ಸದಾ ಷಟ್ಲ್ ಮೇಲೆ ಗಮನವನ್ನು ಕೇಂದ್ರೀಕರಿಸುತ್ತಾರೆ. ಷಟ್ಲನ್ನು ಕೋರ್ಟಿನಲ್ಲಿ ತ್ವರಿತವಾಗಿ ಬೇರೆ ಬೇರೆ ದಿಕ್ಕುಗಳಲ್ಲಿ ಕಳುಹಿಸಿ ಎದುರಾಳಿಯನ್ನು ಗೊಂದಲಕ್ಕೀಡುಮಾಡುವುದು ಇವರ ಆಟದ ವೈಶಿಷ್ಟ್ಯ. ಇವರ ಆಟದಲ್ಲಿ ಸಮರ್ಪಣ ಭಾವ. ಆಟದಿಂದ ಆಟಕ್ಕೆ ಕ್ರೀಡಾತಂತ್ರಗಳನ್ನು ಉತ್ತಮಗೊಳಿಸಿಕೊಳ್ಳುವ ಗುಣಗಳು ಕಾಣುತ್ತವೆ. ಇಂಡೊನೇಷ್ಯದಲ್ಲಿ ನಡೆದ ತರಬೇತಿ, ಎಡ್ಮಂಟನ್ ಕಾಮನ್‍ವೆಲ್ತ್ ಕ್ರೀಡಾಕೂಟದಲ್ಲಿ ಸುವರ್ಣಪದಕ ಪಡೆಯಲು ಪ್ರಕಾಶರಿಗೆ ತುಂಬ ನೆರವಾಯಿತು. ವಿದೇಶಗಳಲ್ಲಿ ತರಬೇತಿ ಪಡೆಯುವಾಗ ಇವರು ಷಾರ್ಟ್ ರ್‍ಯಾಲಿಸ್ ಹಾಗೂ ಲೀಪ್ ಮತ್ತು ಸ್ಮ್ಯಾಷ್ ತಂತ್ರಗಳನ್ನು ಕರಗತ ಮಾಡಿಕೊಂಡರು. ನೆಟ್ ಪ್ಲೇ ಅಲ್ಲದೆ ಹಾಫ್ ಸ್ಮ್ಯಾಷ್ ಮತ್ತು ಡ್ರೌಪ್‍ಷೌಟ್‍ಗಳಿಗೆ ಪ್ರಕಾಶ ಪ್ರಸಿದ್ಧರು.

ಇವರು ಕ್ರಿಕೆಟ್, ಬ್ಯಾಸ್ಕೆಟ್ ಬಾಲ್ ಮತ್ತು ಟೇಬಲ್ ಟೆನಿಸ್ ಕೂಡ ಆಡುತ್ತಾರೆ. 1988ರಲ್ಲಿ ಆಟದಿಂದ ನಿವೃತ್ತಿಯನ್ನು ಪಡೆದು ಬೆಂಗಳೂರಿನಲ್ಲಿ ಬ್ಯಾಡ್‍ಮಿಂಟನ್ ಅಕಾಡೆಮಿಯೊಂದನ್ನು ಸ್ಥಾಪಿಸಿದ್ದಾರೆ. ಇಲ್ಲಿ ಗೋಪಿಚಂದ್, ಅಪರ್ಣಾಪೊಪಟ್, ಸಿದ್ಧಾರ್ಥ ಜೈನ್ ಮೊದಲಾದ ಹೆಸರಾಂತ ಆಟಗಾರರು ತರಬೇತಿ ಪಡೆದಿದ್ದಾರೆ. *

**ಪ್ರಕಾಶ್ ಬೆಳವಾಡಿ:** 1961–. ಕನ್ನಡದ ಪ್ರಸಿದ್ಧ ರಂಗತಜ್ಞ ಹಾಗೂ ಕಿರುತೆರೆ ನಿರ್ದೇಶಕ. ಇವರು 1961 ಮಾರ್ಚ್ 3ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರದು ರಂಗಭೂಮಿಯ ನೇರ ಸಂಪರ್ಕ ಹೊಂದಿರುವ ಕೌಟುಂಬಿಕ ಹಿನ್ನೆಲೆ. ಇವರ ತಂದೆ ಮೇಕಪ್ ನಾಣಿ ಎಂದೇ ಹೆಸರಾಗಿದ್ದ ಬೆಳವಾಡಿ ನಂಜುಂಡಯ್ಯ ನಾರಾಯಣ್, ತಾಯಿ ಪ್ರಸಿದ್ಧ ರಂಗಭೂಮಿ ಕಲಾವಿದೆ, ಹಿರಿಯ ಕಿರುತೆರೆಯ ನಟಿ ಭಾರ್ಗವಿ ನಾರಾಯಣ್. ತಂದೆ ಪ್ರೆಸ್ಟೀಜ್ ಕುಕ್ಕರ್ ಕಂಪನಿಯಲ್ಲಿ ವ್ಯವಸ್ಥಾಪಕರಾಗಿದ್ದವರು. ತಾಯಿ ಇ.ಎಸ್.ಐ ನಲ್ಲಿ ವೃತ್ತಿಯಲ್ಲಿದ್ದವರು. ಇವರಿಬ್ಬರಿಗೂ ರಂಗಭೂಮಿ, ಸಿನಿಮಾಗಳ ನಂಟು. ಇವರ ಕಲಾಸಕ್ತಿ ಪ್ರಕಾಶರ ಮೇಲಾಯಿತು. ಎಳವೆಯಲ್ಲೇ ಸಾಹಿತ್ಯ ಸಂಗೀತಗಳ, ಗೀಳು ಅಂಟಿಕೊಂಡಿತು, ಬೆಂಗಳೂರಿನ ಮಹಿಳಾ ಸೇವಾಸಮಾಜ, ನ್ಯಾಶನಲ್ ವಿದ್ಯಾಸಂಸ್ಥೆ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಿದರು. ಮೆಕ್ಯಾನಿಕಲ್ ಇಂಜಿನಿಯರಿಂಗ್‍ನಲ್ಲಿ ಪದವಿ ಪಡೆದರು. ಅನಂತರ ಇವರು ಪೂರ್ಣಕಾಲಿಕ ರಂಗ ಕರ್ಮಿಯಾದರು.

ರಂಗಭೂಮಿಯಲ್ಲಿ ಬೆಳಕು, ನಿರ್ದೇಶನ ನಟನೆ ಹಾಗೂ ನಾಟಕರಚನೆಯಲ್ಲಿ ತೊಡಗಿರುವ ಬೆಳವಾಡಿಯವರು ದೂರದರ್ಶನ ಧಾರಾವಾಹಿ,

ಸಿನಿಮಾಗಳನ್ನು ಚಿತ್ರಕಥೆ ಬರೆದು, ನಿರ್ದೇಶಿಸಿದ್ದಾರೆ. 'ಗರ್ವ' ಇವರಿಗೆ ಖ್ಯಾತಿ ತಂದ ಧಾರಾವಾಹಿ. ಬೆಂಗಳೂರಿನಲ್ಲಿ ಸೆಂಟರ್ ಫಾರ್ ಫಿಲ್ಮ್ ಅಂಡ್ ಡ್ರಾಮ ಎಂಬ ಸಂಸ್ಥೆಯನ್ನು ಕಟ್ಟಿ ಆದರ ಸ್ಥಾಪಕ ನಿರ್ದೇಶಕರಾಗಿದ್ದಾರೆ. ಪತ್ರಿಕೋದ್ಯಮದಲ್ಲೂ ಪರಿಶ್ರಮವುಳ್ಳ ಇವರು 'ಬೆಂಗಳೂರ್ ಬೈಅಸ್' ಎಂಬ ಇಂಗ್ಲಿಷ್ ನಿತ್ಯ ಮಾಧ್ಯಾಹ್ನಿಕ ಪತ್ರಿಕೆಯ ಸ್ಥಾಪಕ ನಿರ್ದೇಶಕರೂ ಸಂಪಾದಕೀಯ ಸಲಹೆಗಾರರೂ ಆಗಿದ್ದಾರೆ.

ಇವರಿಗೆ ಹಲವು ಪ್ರಶಸ್ತಿಗಳು ಸಂದಿವೆ. 'ಸ್ಟಂಬಲ್' ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಇಂಗ್ಲಿಷ್ ಚಿತ್ರವೆಂದು ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ (2003). ಕರ್ನಾಟಕ ಪ್ರತಿಭಾ ಭೂಷಣ (2003), ರೋಟರಿ ಸೆಂಟಿನಲ್ ಅವಾರ್ಡ್ ಫಾರ್ ಎಕ್ಸಲೆನ್ಸ್ (2004)– ಇವು ಇತರ ಪ್ರಶಸ್ತಿಗಳು. (ಎಸ್.ಬಿಎಚ್ಎ.)

**ಪ್ರಗತಿಶೀಲ ಸಾಹಿತ್ಯ:** ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುಖ್ಯವಾಗಿ ನಾಲ್ಕು ಸಾಹಿತ್ಯ ಪಂಥಗಳನ್ನು ಕಾಣುತ್ತೇವೆ: ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ. ಆದರೆ ಕೆಲವೊಮ್ಮೆ ಪ್ರಗತಿಶೀಲ ಸಾಹಿತ್ಯವನ್ನು ಸ್ವತಂತ್ರ ಪ್ರಸ್ಥಾನವೆಂದು ಪರಿಗಣಿಸದೆ, ಕೇವಲ ಸಂಧಿಸ್ಥಿತಿ ಎಂದು ಭಾವಿಸುವವರೂ ಇದ್ದಾರೆ. ಸು. 1940–1950ರ ವರೆಗೆ ಪ್ರಗತಿಶೀಲ ಸಾಹಿತ್ಯದ ಹರವು ಕಂಡುಬರುತ್ತದೆ. ಇದು ನವೋದಯ ಸಾಹಿತ್ಯದ ಮುಂದಿನ ಮಜಲು; ನವೋದಯಕ್ಕೆ ಪ್ರತಿಕ್ರಿಯೆ ಮತ್ತು ಪ್ರತಿಭಟನೆಯಾಗಿ ತಲೆಯೆತ್ತಿದ್ದು. ಮುಂದೆ ಪ್ರಗತಿಶೀಲ ಸಾಹಿತ್ಯ ಎರಡು ಕವಲುಗಳಾಗಿ ಒಡೆದು, ಒಂದು ಮತ್ತೆ ನವೋದಯದಲ್ಲೂ ಇನ್ನೊಂದು ನವ್ಯದಲ್ಲೂ ವಿಲೀನವಾದುವು. ನವೋದಯ ಪಂಥ ಬಹುಮಟ್ಟಿಗೆ ಕಾವ್ಯಪ್ರಕಾರಕ್ಕೆ ಸಂಬಂಧಿಸಿದ್ದರೆ, ಪ್ರಗತಿಶೀಲ ಪಂಥ ಕತೆ, ಕಾದಂಬರಿಗಳಿಗೆ ಸೀಮಿತವಾಯಿತು ಎಂಬುದು ಗಮನಾರ್ಹ.

ಪ್ರಗತಿಶೀಲ ಸಾಹಿತ್ಯ ಕನ್ನಡದಲ್ಲೆ ಉದ್ಭವಿಸಿದ್ದಲ್ಲ; ಅಖಿಲ ಭಾರತ ಮಟ್ಟದಲ್ಲಿ ಹುಟ್ಟಿಕೊಂಡ ಚಳವಳಿಯೊಂದರ ಅಲೆಯಾಗಿ ಇದು ಕನ್ನಡಕ್ಕೆ ಬಂತು. ಆ ಚಳವಳಿ ಸು. 1928ರಲ್ಲೆ ಮೊದಲಾಯಿತೆಂದೂ ಅದಕ್ಕೊಂದು ಸುಸಂಘಟಿತ ರೂಪ ಬಂದದ್ದು 1943ರಲ್ಲೆ ಎಂದೂ ಹೇಳಲಾಗಿದೆ. ಆ ವರ್ಷ ಅಖಿಲ ಭಾರತ ಪ್ರಗತಿಶೀಲ ಬರಹಗಾರರ ಸಮ್ಮೇಳನ ಮುಂಬಯಿಯಲ್ಲಿ ನಡೆಯಿತು. ಪ್ರಗತಿಶೀಲ ಲೇಖಕರ ಸಂಘ ತನ್ನ ಪ್ರಣಾಳಿಕೆಯಲ್ಲಿ ಮುಂದಿಟ್ಟ ಕೆಲವು ಧ್ಯೇಯಗಳನ್ನು ಲಕ್ಷಿಸಿದರೆ, ಈ ಸಾಹಿತ್ಯದ ಪ್ರೇರಣೆ, ಸ್ವರೂಪಗಳು ವಿಶದವಾಗುತ್ತವೆ. (1) ಸಾಮ್ರಾಜ್ಯಶಾಹಿ ಸಂಕೋಲೆಗಳಿಂದ ಸ್ವತಂತ್ರರಾಗಲು ಐಕ್ಯತೆಯನ್ನು

ಸಾಧಿಸುವಂತೆ, ಜಪಾನಿ ಫ್ಯಾಸಿಸ್ಟರ ಆಕ್ರಮಣದಿಂದ ಭಾರತವನ್ನು ರಕ್ಷಿಸುವಂತೆ ಜನತೆಯನ್ನು ಹುರಿದುಂಬಿಸಿ ಮುನ್ನಡೆಸಲು ಸಾಧಕವಾದ ನಾಟಕ ಕತೆ ಕವನ ಕಥನಕವನ ಲಾವಣಿ ಮೊದಲಾದವುಗಳನ್ನು ಬರೆಯುವುದು. (2) ಪರರಾಷ್ಟ್ರಗಳ ಹಾಗೂ ಮುಖ್ಯವಾಗಿ ಇತ್ತೀಚೆಗಿನ ಚೀನ ಮತ್ತು ರಷ್ಯಗಳ ಸಾಹಿತ್ಯವನ್ನು ಅನುವಾದಿಸುವುದು ಮತ್ತು ಪ್ರಕಟಿಸುವುದು. (3) ಕೂಲಿಕಾರರ ಮತ್ತು ರೈತರ ನಡುವೆ ಲಾವಣಿ ಹಾಡುಗಾರಿಕೆ ಯಕ್ಷಗಾನ ಕವಿತಾಗೋಷ್ಠಿ ಮುಂತಾದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೂಟಗಳನ್ನು ನಡೆಸಿ, ಜನಪದ ಸಾಹಿತ್ಯ ಮತ್ತು ಕಲೆಗಳೊಡನೆ ಪ್ರಗತಿಶೀಲ ಬರಹಗಾರರ ಸಂಘವನ್ನು ಹೊಂದಿಸುವುದು.

ಪ್ರಗತಿಶೀಲ ಸಾಹಿತ್ಯಕ್ಕೆ ಸಾಕಷ್ಟು ರಾಜಕೀಯ ಹಿನ್ನೆಲೆಯಿದೆ. ಕಮ್ಯೂನಿಸಂ ಮಾರ್ಕ್ಸ್‌ವಾದ, ಲೆನಿನ್ ವಿಚಾರಧಾರೆ ಮತ್ತು ರಷ್ಯನ್ ಸಾಹಿತ್ಯ ಅದರ ಮೇಲೆ ಪ್ರಭಾವ ಬೀರಿವೆ. ವರ್ಗಸಂಘರ್ಷದಿಂದ ಅದು ಪ್ರಚೋದಿತ. 1942ರ ಭಾರತ ಸ್ವಾತಂತ್ರ್ಯ ಚಳವಳಿ. ಕ್ಷಾಮಪರಿಸ್ಥಿತಿಯ ದಾರುಣತೆ, ದ್ವಿತೀಯ ಮಹಾಯುದ್ಧ ಮುಂತಾದುವೂ ಪ್ರಗತಿಶೀಲ ಆಂದೋಲನದ ಪ್ರೇರಕಶಕ್ತಿಗಳು. ಸಮಗ್ರ ಭಾರತದ ಜೀವನವನ್ನು ಪ್ರತಿಬಿಂಬಿಸಬೇಕೆಂಬ ಹಂಬಲ ಮತ್ತು ಭಾರತೀಯ ಸಾಹಿತ್ಯ ಅಂತರ ರಾಷ್ಟ್ರೀಯ ಮಹತ್ತ್ವವನ್ನು ಗಳಿಸಬೇಕೆಂಬ ನಿರೀಕ್ಷೆ ಕೂಡ ಅದರ ಹುಟ್ಟಿಗೆ ಕಾರಣಗಳು.

ಮುಖ್ಯವಾಗಿ ಹಿಂದಿ ಸಾಹಿತ್ಯದಿಂದ ಹಾಗೂ ಭಾರತೀಯ ಲೇಖಕರ ಇಂಗ್ಲಿಷ್ ಸಾಹಿತ್ಯದಿಂದ ಕನ್ನಡ ಪ್ರಗತಿಶೀಲ ಸಾಹಿತ್ಯಕ್ಕೆ ಸ್ಫೂರ್ತಿಯೊದಗಿತು. ಅ.ನ.ಕೃ, ಕನ್ನಡದಲ್ಲಿ ಈ ಚಳವಳಿಯ ಮುಂದಾಳಾದರು. ತ.ರಾ.ಸು, ಬಸವರಾಜ ಕಟ್ಟೀಮನಿ, ನಿರಂಜನ, ಚದುರಂಗ, ಅರ್ಚಕ ವೆಂಕಟೇಶ, ಕುಮಾರ ವೆಂಕಣ್ಣ, ಎಸ್. ಅನಂತನಾರಾಯಣ ಮುಂತಾದವರು ಈ ಪಂಥದ ಇತರ ಲೇಖಕರು. ಇವರ ಮೇಲೆ ಮಯಕೊವಸ್ಕಿ, ಮ್ಯಾಕ್ಸಿಂಗಾರ್ಕಿ ಮುಂತಾದ ರಷ್ಯನ್ ಸಾಹಿತಿಗಳ ಮತ್ತು ವಾಲ್ಟೇರ್, ಎಮಿಲಿ ಜೋಲಾ, ಸಿಂಕ್ಲೇರ್, ಮೊಪಾಸಾ, ಕುಪ್ರಿನ್, ಇಬ್ಸನ್, ಷಾ ಇತ್ಯಾದಿ ಪಾಶ್ಚಾತ್ಯ ಲೇಖಕರ ಪ್ರಭಾವವಿದೆ. ಪ್ರಗತಿಶೀಲ ಸಾಹಿತ್ಯ ತನ್ನ ಕಾಲದಲ್ಲಿ ತುಂಬ ವಾದವಿವಾದಗಳಿಗೆ ಎಡೆಗೊಟ್ಟಿತು. ಅದರ ಮೇಲಿನ ಮೂರು ಪ್ರಮುಖವಾದ ಆರೋಪಗಳಿವು: (1) ಪ್ರಗತಿಶೀಲರು ನಾಸ್ತಿಕರು (2) ಕಮ್ಯೂನಿಸ್ಟರು (3) ಅಶ್ಲೀಲದ ಪುರಸ್ಕರ್ತರು. ಪ್ರಗತಿಶೀಲ ಪಂಥದ ಸಾಧನೆಗಳನ್ನೂ ಪರಿಮಿತಿಗಳನ್ನೂ ಇಂದು ವಸ್ತುನಿಷ್ಠವಾಗಿ ಗುರುತಿಸುವುದು ಸಾಧ್ಯ.

ಪ್ರಗತಿಶೀಲ ಸಾಹಿತ್ಯದ ಕೆಲವು ಬೀಜಗಳು ನವೋದಯ ಸಾಹಿತ್ಯದಲ್ಲಿ ಇದ್ದುವು. ನವೋದಯ ಲೇಖಕರಿಗೂ ಪ್ರಗತಿಶೀಲರಿಗೂ ಕೆಲವಂಶಗಳಲ್ಲಿ ಸಾಮ್ಯವಿದೆ. ಇಬ್ಬರಿಗೂ ಬದುಕಿನಲ್ಲಿ ಶ್ರದ್ಧೆ, ಬದುಕು ಅರ್ಥಪೂರ್ಣವೆಂಬ ನಂಬಿಕೆ ಮತ್ತು ಅದನ್ನು ಉತ್ತಮಗೊಳಿಸಬೇಕೆಂಬ ಆಕಾಂಕ್ಷೆ. ಇಬ್ಬರೂ ಆದರ್ಶವಾದಿಗಳು. ಪ್ರಗತಿಶೀಲರು ದೇವರನ್ನು ನಂಬದಿದ್ದರೂ ಮಾನವೀಯತೆಯನ್ನು ನಂಬಿದವರು. ಭಾರತೀಯ ಸಂಸ್ಕೃತಿ ಪರಂಪರೆಗಳನ್ನು ಅವರು ಮೊತ್ತದಲ್ಲಿ ತಿರಸ್ಕರಿಸಲಿಲ್ಲ (ಅದನ್ನು ಸಂಪೂರ್ಣವಾಗಿ ಅಲಕ್ಷಿಸಿದವರು ನವ್ಯರು).

ಪ್ರಗತಿಶೀಲ ಲೇಖಕರು ಸಾಹಿತ್ಯಕ್ಕೆ ಹೆಚ್ಚಿನ ವಸ್ತುವೈವಿಧ್ಯ, ವಿಸ್ತಾರಗಳನ್ನು ತಂದರು. ಮಡಿಮಂತಿಕೆಯನ್ನು ದೂರಮಾಡಿ, ಜೀವನದ ಎಲ್ಲ ಮುಖಗಳನ್ನೂ ಧೈರ್ಯದಿಂದ ವಾಸ್ತವಿಕವಾಗಿ ಚಿತ್ರಿಸಲು ಯತ್ನಿಸಿದರು. ಸಮಾಜದ, ಅದರಲ್ಲೂ ಮತಮಾನ್ಯಗಳ, ಪುರೋಹಿತಶಾಹಿಗಳ ಡಾಂಭಿಕತೆಯನ್ನು ಬಯಲುಮಾಡುವುದು ಅವರ ಉದ್ದೇಶವಾಗಿತ್ತು. ಸಮಾಜದ ಹಲಬಗೆಯ ದೋಷ, ಶೋಷಣೆಗಳಿಗೆ ಲೈಂಗಿಕ ಸಮಸ್ಯೆಗಳೆ ಮೂಲವೆಂದು ತಿಳಿದು ಅವರು ಅವುಗಳನ್ನು ಒಂದು ಮುಖ್ಯವಸ್ತುವನ್ನಾಗಿ ಸ್ವೀಕರಿಸಿದರು. ನವೋದಯ ಸಾಹಿತ್ಯ ವಿಶೇಷವಾಗಿ ನಾಗರಿಕ ಮಧ್ಯಮವರ್ಗದ ಜೀವನದ ನಿರೂಪಣೆಯಲ್ಲಿ ತೊಡಗಿತ್ತು. ಕೆಳವರ್ಗದ ಜನತೆಯ ಬಾಳನ್ನು ಅಷ್ಟಾಗಿ ಲೆಕ್ಕಿಸಿರಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣವೂ ಅದರಲ್ಲಿ ಹೆಚ್ಚಾಗಿ ಮೂಡಿರಲಿಲ್ಲ. ಪ್ರಗತಿಶೀಲ ಸಾಹಿತ್ಯ ಅದನ್ನೆಲ್ಲ ಒಳಗುಮಾಡಿಕೊಂಡಿತು. ಬಡವರು, ಕಾರ್ಮಿಕರು, ಕಷ್ಟಜೀವಿಗಳು ಕೂಲಿಕಾರರು ಮೊದಲಾದವರ ಬದುಕಿನ ನೋವು ನಲಿವುಗಳಿಗೆ ಅಭಿವ್ಯಕ್ತಿ ನೀಡಿ ಪ್ರಗತಿಶೀಲರು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನಿತ್ತರು. ಭಾಷೆಯ ಬಳಕೆಯಲ್ಲಿ –ಶಬ್ದಕೋಶಕ್ಕೆ ಸಂಬಂಧಿಸಿದಂತೆ–ಅವರು ನಿಸ್ಸಂಕೋಚ ಪ್ರವೃತಿಯನ್ನು ತೋರಿದರು ನವೋದಯ ಸಾಹಿತಿಗಳು ಮುಖ್ಯವಾಗಿ ವಿಕ್ಟೋರಿಯನ್ ಯುಗದ ಇಂಗ್ಲೆಂಡಿನಿಂದ ತಮ್ಮ ಪ್ರೇರಣೆಯನ್ನು ಪಡೆದರು. ಪ್ರಗತಿಶೀಲ ಬರೆಹಗಾರರು ವಿಶಾಲತರ ದೃಷ್ಟಿಯಿಂದ ಇಂಗ್ಲಿಷೇತರ ಯೂರೋಪಿಯನ್ ಸಾಹಿತ್ಯದ ಪ್ರಭಾವಕ್ಕೆ ತಮ್ಮ ಬುದ್ಧಿ ಭಾವಗಳನ್ನು ತೆರೆದುಕೊಂಡರು. ಒಟ್ಟಿನ ಮೇಲೆ, ಹೊಸ ಸಮಸ್ಯೆಗಳ ಪ್ರಜ್ಞೆ, ಸಾಮಾಜಿಕ ಸಂವೇದನೆ. ಇಂಗ್ಲೆಂಡೇತರ ದೇಶಗಳ ಸಾಹಿತ್ಯ, ಜೀವನಗಳ ಪರಿಚಯ ಪ್ರಗತಿಶೀಲ ಸಾಹಿತ್ಯದಲ್ಲಿ ಗೋಚರಿಸುತ್ತವೆ.

ಇವಿಷ್ಟು ಪ್ರಗತಿಶೀಲಸಾಹಿತ್ಯದ ಒಳ್ಳೆಯ ಮುಖ. ಅದಕ್ಕೆ ಇನ್ನೊಂದು ಮುಖವೂ ಇದೆ. ಈ ಚಳವಳಿಗೆ ಸೇರಿದ ಲೇಖಕರ ಜೀವನಚಿತ್ರಣದಲ್ಲಿ ಉದ್ವೇಗ,ರೊಚ್ಚು, ರಭಸಮತಿ ಎದ್ದು ಕಾಣುತ್ತವೆ. ಅದರಲ್ಲಿ ಸಂಕೀರ್ಣತೆಗಿಂತ ಸರಳತೆಯೇ ಹೆಚ್ಚು. ಪ್ರಗತಿಶೀಲರು ಪಡಿಯಚ್ಚುಗಳಂಹ ಪ್ರಾತಿನಿಧಿಕ ಪಾತ್ರಗಳನ್ನು ಸೃಜಿಸಿದರು: ವಿಷಯದ ಆಳಕ್ಕಿಳಿಯದೆ ಮೇಲೆ ಮೇಲೆ ತೇಲಾಡುವುದರಲ್ಲೆ ತೃಪ್ತರಾದರು. ಅವರ ಸಾಮಾಜಿಕ ಕಳಕಳಿಯೇನೊ ತೀವ್ರವಾದದ್ದೆ; ಆದರೆ ಅದಕ್ಕೆ ಕಲೆಯ ಮೆರುಗು ಕಡಿಮೆ. ಸಂಯಮ, ವಸ್ತುನಿಷ್ಠತೆ, ವೈಚಾರಿಕತೆಗಳಿಗಿಂತ ಭಾವಾತಿರೇಕಕ್ಕೆ ಅವರು ಪ್ರಾಶಸ್ತ್ಯ ಕೊಟ್ಟರು; ಪಾತ್ರಗಳ ಪರ ಅಥವಾ ವಿರೋಧ ಪಕ್ಷವನ್ನು ವಹಿಸಿದರು. ದುಂದುಗಾರಿಕೆಯಿಂದ ಕೂಡಿದ ಅವರ ಭಾಷೆ ಅನುಭವದ ಅನಿವಾರ್ಯ ಶರೀರವೆನಿಸುವುದಿಲ್ಲ; ಅದರ ಸಾಧ್ಯತೆಗಳೆಲ್ಲ ಅವರಿಂದ ಬಳಕೆಗೊಂಡಿಲ್ಲ. ಅನುಭವದ ಬದಲು ಹೇಳಿಕೆಗಳನ್ನೂ ಘೋಷಣೆಗಳನ್ನೂ ಪ್ರಗತಿಶೀಲ ಲೇಖಕರು ಕೊಟ್ಟರು. ಯಥಾರ್ಥತೆಯ ಹೆಸರಿನಲ್ಲಿ ಕಾಮದ ಹಸಿಹಸಿಯಾದ ನಿರೂಪಣೆಯೂ ಅವರ ಸಾಹಿತ್ಯದಲ್ಲಿ ಸ್ಥಾನ ಪಡೆಯಿತು. ಅವರು ಸಮಸ್ಯೆಗಳನ್ನು ಸಮಸ್ಯೆಗಳನ್ನಾಗಿ ಪ್ರತಿಪಾದಿಸಿದರೇ ಹೊರತು ಅನುಭವಗಳನ್ನಾಗಿ ಅಲ್ಲ, ಮನೋವಿಶ್ಲೇಷಣೆಯನ್ನಾಗಿ ಅಲ್ಲ. ಹೀಗಾಗಿ, ಪ್ರಗತಿಶೀಲ ಸಾಹಿತ್ಯದ ಬಹುಭಾಗ ಸ್ಥೂಲವಾಗಿ, ಸರಳವಾಗಿ ಪರಿಣಮಿಸಿತು (ಹಾಗೆ ನೋಡಿದರೆ, ಪ್ರಗತಿಶೀಲರು ಹೇಳಿಕೊಂಡು ಸಾಧಿಸಿದ್ದನ್ನು ನವೋದಯ ಲೇಖಕರು, ಭಾಗಶಃ ಆದರೂ ಹೇಳಿಕೊಳ್ಳದೆ ಕಲಾತ್ಮಕವಾಗಿ ಸಾಧಿಸಿದರು).

ಹೀಗಿದ್ದೂ ಪ್ರಗತಿಶೀಲ ಸಾಹಿತ್ಯಕ್ಕೆ ಚಾರಿತ್ರಿಕವಾಗಿ ಒಂದು ಗಣ್ಯವಾದ ಸ್ಥಾನವಿದೆ. ವಸ್ತುವಲಯವನ್ನು ವಿಸ್ತರಿಸಿದ್ದು ಪಾತ್ರವಲ್ಲದೆ ವಾಚಕರ ವಲಯವನ್ನೂ ವಿಸ್ತರಿಸಿದ್ದು. ಓದುವ ಅಭಿರುಚಿಯನ್ನು ಬೆಳೆಸಿದ್ದು

ಅದರ ದೊಡ್ಡ ಸಾಧನೆ. ಪ್ರಗತಿಶೀಲರು ಸಾಹಿತ್ಯದ ಮೂಲಭೂತ ತತ್ತ್ವಗಳಿಗೆ ಸವಾಲು ಹಾಕಿದರು. ಅವುಗಳನ್ನು ಬದಲಿಸುವಲ್ಲಿ ಅವರು ಯಶಸ್ವಿಯಾಗದಿದ್ದರೂ ಅವುಗಳ ಪುನರ್ವಿಮರ್ಶೆ ಅನಿವಾರ್ಯವಾಗುವಂತೆ ಮಾಡಿದರು" ಎಂಬ ಹೇಳಿಕೆಯನ್ನೂ ನೆನೆಯಬಹುದು.

ಇಂದು ಕನ್ನಡದಲ್ಲಿ ಮತ್ತೆ ಪ್ರಗತಿಶೀಲ ಸಾಹಿತ್ಯವನ್ನು ನೆನಪಿಗೆ ತರುವಂಥ ಕೃತಿಗಳ ರಚನೆಯಾಗುತ್ತಿರುವುದು ಗಮನಾರ್ಹ. ನವ್ಯಪಂಥಕ್ಕೆ ಪ್ರತಿಭಟನೆಯಾಗಿ ಅನೇಕ ಲೇಖಕರು ಉತ್ಕಟವಾದ ಸಾಮಾಜಿಕ ನಿಷ್ಠೆಯಿಂದ ಬರೆಯುತ್ತಿದ್ದಾರೆ. ಆದರೆ ಇವರು ಕಲೆಯ ಮೇಲೂ ಒಂದು ಕಣ್ಣಿಟ್ಟಿರುವುದರಿಂದ, ಪ್ರಗತಿಶೀಲ ಲೇಖಕರಿಗಿಂತ ಬೇರೆಯಾಗಿ ನಿಲ್ಲುತ್ತಾರೆ. ಈ ಹೊಸಬೆಳವಣಿಗೆ ಕನ್ನಡಕ್ಕೆ ಸಾಕಷ್ಟು ಹೊಸದನ್ನು ಗಟ್ಟಿಯಾದದ್ದನ್ನೂ ನೀಡುತ್ತಿದೆ. ದಲಿತ, ಬಂಡಾಯ ಪಂಥಗಳು ಹುಳಿಕೇರರು ಆಧುನಿಕ ಕನ್ನಡ ಸಾಹಿತ್ಯ ಸಂವೇದನೆಗೆ ಹೊಸ ಆಯಾಮ ನೀಡುತ್ತಿವೆ. ನಾವಿನ್ನೂ ಕಾದುನೋಡಬೇಕಾಗಿದೆ. *

**ಪ್ರಜಾಮತ:** ಕನ್ನಡದ ಜನಪ್ರಿಯ ಸಂಕೀರ್ಣ ವಾರಪತ್ರಿಕೆ. 1931ರ ಆಗಸ್ಟ್ 15ರಿಂದ ಪ್ರಕಟವಾಗುತ್ತಿತ್ತು. ಆಂಧ್ರ ರಾಜ್ಯದ ಚಿತ್ತೂರಿನ ಬೈಸಾನಿ ನರಸಿಂಹೇಶ್ವರ ಗುಪ್ತ ಅವರು ಈ ಪತ್ರಿಕೆಯನ್ನು ಸ್ಥಾಪಿಸಿದವರು. ಮದರಾಸಿನ ಆನಿಬೆಸೆಂಟ್ ಪತ್ರಿಕೋದ್ಯಮ ಕಾಲೇಜಿನಲ್ಲಿ ಶಿಕ್ಷಣ ಪಡೆದು ನ್ಯೂ ಇಂಡಿಯಾ ದಿನಪತ್ರಿಕೆ ಹಾಗೂ ಕಾಮನ್‌ವೀಲ್ ವಾರಪತ್ರಿಕೆಗಳ ಸಂಪಾದಕೀಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದು ಪತ್ರಿಕೋದ್ಯಮದಲ್ಲಿ ನುರಿತ ಗುಪ್ತ ಅವರಿಗೆ ಬೆಂಗಳೂರಿನಲ್ಲಿಯೇ ಪತ್ರಿಕೆ ಹೊರಡಿಸುವ ಬಯಕೆ ಇತ್ತು. ಎಚ್.ಕೆ.ವೀರಣ್ಣಗೌಡ, ಕೆ.ಚಂಗಲರಾಯ ರೆಡ್ಡಿ ಮೊದಲಾದವರ ಜೊತೆಗೆ ಪ್ರಜಾಪಕ್ಷದ ಸದಸ್ಯರಾಗಿದ್ದ ಇವರು ಸ್ವಾತಂತ್ರ್ಯ ಹೋರಾಟಕ್ಕೆ ಉತ್ತೇಜನ ನೀಡುವ ಸಲುವಾಗಿ ಪತ್ರಿಕೆ ಹೊರಡಿಸಲು ಅರ್ಜಿ ಹಾಕಿದರು. ಅಂದು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ಈ ಪತ್ರಿಕೆಯ ಉದ್ದೇಶ ಸ್ವಾತಂತ್ರ್ಯ ಚಳವಳಿ ಎಂದು ಅರಿತು ಅದರ ಪ್ರಕಟನೆಗೆ ಅನುಮತಿ ಕೊಡಲಿಲ್ಲ. ಧೃತಿಗೆಡದ ಗುಪ್ತರು ಮದರಾಸಿಗೆ ತೆರಳಿ 1931 ಆಗಸ್ಟ್ 15ರಲ್ಲಿ ಪ್ರಜಾಮತ ವಾರಪತ್ರಿಕೆಯ ಮೊದಲ ಸಂಚಿಕೆ ಪ್ರಕಟಿಸಿದರು. ಕನ್ನಡ ಜನತೆಯಲ್ಲಿ ಸ್ವಾತಂತ್ರ್ಯಪ್ರಜ್ಞೆಯುಂಟುಮಾಡಲು ತಮಿಳುನಾಡಿನಿಂದ ಹೋರಾಟ ನಡೆಸಿದರು. 1933ರಲ್ಲಿ ಮಿರ್ಜಾರಿಂದಲೇ ಒಪ್ಪಿಗೆ ದೊರೆತು ಪ್ರಜಾಮತ ಬೆಂಗಳೂರಿನಿಂದ ಪ್ರಕಟವಾಗಲು ತೊಡಗಿತು. ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ಸ್ಥಾಪನೆಗೆ ಗುಪ್ತರು ಮಾಡುತ್ತಿದ್ದ ಪ್ರಯತ್ನಗಳಿಗೆ ಪ್ರಜಾಮತ ಬೆಂಬಲವಾಯಿತು. ರಾಜಕೀಯ ಸುದ್ದಿಗಳ ಪ್ರಕಟಣೆ ಇರುತ್ತಿದ್ದುದರಿಂದ ಜನತೆಯ ಆಶೋತ್ತರಗಳಿಗೆ ತಕ್ಕ ಲೇಖನಗಳಿರುತ್ತಿದ್ದುದರಿಂದ ಪ್ರಸಾರ 10ರಿಂದ 12 ಸಾವಿರ ಇತ್ತು. ಕೆಲದಿನಗಳ ಅನಂತರ ರಾಜಕೀಯ ಚಟುವಟಿಕೆಯನ್ನು ತಡೆಗಟ್ಟಲು, ಗುಪ್ತರು ಮೈಸೂರಿನವರಲ್ಲವೆಂಬ ಕುಂಟು ನೆಪದಿಂದ 24 ಗಂಟೆಯೊಳಗೆ ಮೈಸೂರ ಸಂಸ್ಥಾನವನ್ನು ಬಿಡುವಂತೆ ಸರ್ಕಾರ ಇವರಿಗೆ ಆದೇಶ ನೀಡಿತು. ಹಾಗಾಗಿ ಪ್ರಜಾಮತದ ಬೆಂಗಳೂರು ವಾಸ ತಾತ್ಕಾಲಿವಾಗಿ ನಿಲುಗಡೆಯಾಗಿ ಹುಬ್ಬಳ್ಳಿಗೆ ವಲಸೆ ಹೋಗಬೇಕಾಯಿತು. ಸೇವಾದಳ ಸ್ಥಾಪಕರಾದ ಹರ್ಡೀಕರ್ ಅವರ ಸಹಾಯದಿಂದ ಪತ್ರಿಕೆ ಅಲ್ಲಿ ಪ್ರಕಟಗೊಳ್ಳತೊಡಗಿತು. ಆದರೆ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುತ್ತದೆಂಬ ಭಯದಿಂದ ಆಗಿನ ಮೈಸೂರು ಸಂಸ್ಥಾನಕ್ಕೆ ಹೋಗುತ್ತಿದ್ದ ಪತ್ರಿಕೆಗಳಿಗೆ ಪ್ರಜಾಮಿತ್ರ ಎಂಬ ಹೆಸರು ಹಾಕಿ ಕಳುಹಿಸುತ್ತಿದ್ದರು. ಸರ್ಕಾರ ಇದಕ್ಕೂ ಬಹಿಷ್ಕಾರ ಹಾಕಿತು. ಪತ್ರಿಕೆ ಹುಬ್ಬಳ್ಳಿಯಿಂದ ಮೈಸೂರಿಗೆ ಬರದಂತೆ ಪ್ರತಿಬಂಧಕಾಜ್ಞೆ ಹೊರಡಿಸಿತು. 1938ರಲ್ಲಿ ಮತ್ತೆ ಮೈಸೂರು ಸರ್ಕಾರ ಗುಪ್ತರನ್ನು ಬೆಂಗಳೂರಿಗೆ ಆಹ್ವಾನಿಸಿತು. 1948ರವರೆಗೆ ಪತ್ರಿಕೆ ಗುಪ್ತರ ನೇತೃತ್ವದಲ್ಲಿ ಹೊರಬರುತ್ತಿತ್ತು. ಮುಂಬಯಿಯ ಕೈಗಾರಿಕೋದ್ಯಮಿ ಬಿ.ಎಂ. ಶ್ರೀನಿವಾಸಯ್ಯ ಈ ಪತ್ರಿಕೆಯನ್ನು 1948ರಲ್ಲಿ ಕೊಂಡುಕೊಂಡು ತರುಣ ಉತ್ಸಾಹಶಾಲಿ ಎಂ.ಎಸ್. ಗುರುಪಾದಸ್ವಾಮಿಯವರನ್ನು ಸಂಪಾದಕರನ್ನಾಗಿ ನಿಯಮಿಸಿದರು. ಇವರು ಐದು ವರ್ಷಗಳ ಕಾಲ ಸಂಪಾದಕರಾಗಿದ್ದರು. 1953ನೆಯ ಸೆಪ್ಟಂಬರ್ 15ರಲ್ಲಿ ಬಿ.ಎಂ.ಶ್ರೀನಿವಾಸಯ್ಯನವರು ನಿಧನರಾದ ಮೇಲೆ ಅವರ ಮಗ ಬಿ.ಎಸ್. ನಾರಾಯಣ ಅವರು ಪತ್ರಿಕೆಯ ಒಡೆತನ ವಹಿಸಿಕೊಂಡರು. 1953ರಿಂದ ಒಂದು ವರ್ಷಕಾಲ ಜನವಾಣಿ ಸಂಪಾದಕ ನರಸಿಂಹ ಸೋಮಯಾಜಿ ಅವರೇ ಇದರ ಸಂಪಾದಕರಾಗಿದ್ದರು. ಅನಂತರ ಸ್ವಲ್ಪಕಾಲ ಕಳಸ ಸತ್ಯನಾರಾಯಣರಿದ್ದ ಮೇಲೆ 1954ರಲ್ಲಿ ಟಿ. ಸಿದ್ದಪ್ಪನವರು ಸಂಪಾದಕರಾಗಿದ್ದರು. ಇವರ ಕಾಲದಲ್ಲಿ ಪ್ರಜಾಮತದಲ್ಲಿ ಬದಲಾವಣೆಗಳಾದವು. ಸುದ್ದಿಯ ಜೊತೆಗೆ ಫೋಟೋಗಳನ್ನು ಕೊಡತೊಡಗಿ, ಪತ್ರಿಕೆ ಸಚಿತ್ರವಾಯಿತು. ಧಾರಾವಾಹಿ ಕಾದಂಬರಿ ವಿಭಾಗ ಕಾಣಿಸಿಕೊಂಡಿತು. ಈ ಕಾಲದಲ್ಲಿಯೇ ನಾಡಿಗೇರ ಕೃಷ್ಣರಾಯ, ಹ.ವೆಂ. ನಾಗರಾಜರಾವ್, ಕುಮಾರ ವೆಂಕಣ್ಣ–ಇವರು ಸಂಪಾದಕ ಮಂಡಳಿಗೆ ಸೇರಿದರು. ಕೇಳಿದ ಕಥೆ, ಸಮಾಜದರ್ಶನ ಇತ್ಯಾದಿ ಸ್ಥಿರಶೀರ್ಷಿಕೆಗಳು ಜನಪ್ರಿಯವಾದವು. ದೀಪಾವಳಿ ವಿಶೇಷಾಂಕಗಳು ಆಕರ್ಷಕವಾಗಿ ಹೊರಬರತೊಡಗಿದವು. 1958ರಲ್ಲಿ ಪ್ರಜಾಮತವನ್ನು ಟಿ. ಸಿದ್ದಪ್ಪನವರು ಬಿಟ್ಟಮೇಲೆ ಕೈಗಾರಿಕೋದ್ಯಮಿ ಕೆ. ಲಕ್ಕಯ್ಯ ಸಂಪಾದಕತ್ವ ವಹಿಸಿಕೊಂಡರು. ಇವರ ಕಾಲದಲ್ಲಿ ತಿ.ತಾ. ಶರ್ಮ, ಶ್ರೀರಂಗ, ವಿ. ಸೀತಾರಾಮಯ್ಯ, ಡಿ.ವಿ. ಗುಂಡಪ್ಪ ಮುಂತಾದ ಹಿರಿಯ ಪತ್ರಿಕೋದ್ಯಮಿಗಳು ಈ ಪತ್ರಿಕೆಗೆ ವಿಶೇಷ ಲೇಖನಗಳನ್ನು ಬರೆಯುತ್ತಿದ್ದರು. ವ್ಯವಸ್ಥಾಪಕ ಸಂಪಾದಕರಾಗಿದ್ದ ಕೆ. ಸಿದ್ದರಾಮಣ್ಣನವರೂ ಕೆಲವು ಕಾಲ ಪತ್ರಿಕೆಯ ಸಂಪಾದಕರಾಗಿದ್ದರು. ಇವರ ನಿಧನಾನಂತರ ಉಪಸಂಪಾದಕರಾಗಿದ್ದ ಹ.ವೆಂ. ನಾಗರಾಜರಾವ್ ಸಂಪಾದಕತ್ವ ವಹಿಸಿಕೊಂಡರು. ಇವರ ಕಾಲದಲ್ಲಿ ಪ್ರಜಾಮತ ಮತ್ತೊಮ್ಮೆ ಆಮೂಲಾಗ್ರ ಬದಲಾವಣೆ ಹೊಂದಿ ರೂಪಪರಿವರ್ತನೆಗೊಳಗಾಯಿತು. 1969ರಲ್ಲಿ ಈ ಪತ್ರಿಕೆಗೆ ಫೋಟೋ ಆಫ್‌ಸೆಟ್ ಮುದ್ರಣಾಲಯ ಸೌಲಭ್ಯ ದೊರೆಯಿತು. ವರ್ಣರಂಜಿತ ಮುಖಪುಟ ಅಚ್ಚುಮಾಡುವ ಅನುಕೂಲ ದೊರೆಯಿತು. ಆಕಾರ ಚಿಕ್ಕದಾಗಿ, ಪುಟಗಳ ಪ್ರವೇಶಗಳಿಂದ ಪತ್ರಿಕೆ ಜನಪ್ರಿಯವಾಗತೊಡಗಿತು. ಸ್ತ್ರೀಯರ ವಿವಿಧ ಭಂಗಿಗಳ ಮುಖಲಾಸ್ಯಗಳ ವರ್ಣಮುಖಪುಟ ಇದರ ಒಂದು ಆಕರ್ಷಣೆ. ಗುಪ್ತ ಸಮಾಲೋಚನೆ, ದಾಂಪತ್ಯ ಸಮಸ್ಯೆಗಳು ಅತ್ಯಂತ ವ್ಯಾಪಕ ಓದುಗರನ್ನು ಪಡೆದುಕೊಂಡಿದ್ದ ಸ್ಥಿರಶೀರ್ಷಿಕೆಗಳು, ರೂಪವಾಣಿ ವಿಭಾಗ, ಕುಣಿಯೋಣ ಬಾರಾ, ಸುದ್ದಿಚಿತ್ರಗಳು, ಇತರ ಜನಪ್ರಿಯ ಶೀರ್ಷಿಕೆಗಳು. ಕನ್ನಡದ ಕಾದಂಬರಿಗಾರ ಮ.ನ. ಮೂರ್ತಿ ಈ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿದ್ದರು. 1973ರ ಅಕ್ಟೋಬರ್‌ನಲ್ಲಿ ಒಂದು ಲಕ್ಷದ ಪ್ರಸಾರವನ್ನು ದಾಟಿತು. ಗುಪ್ತ ಅವರೇ ಆರಂಭಿಸಿದ ಜನವಾಣಿ ದಿನಪತ್ರಿಕೆ ಪ್ರಜಾಮತದ ಸೋದರ ಪತ್ರಿಕೆ. ಕನ್ನಡ ಪತ್ರಿಕೋದ್ಯಮದಲ್ಲಿ

ಪ್ರಸಿದ್ಧಿ ಪಡೆದ ಪ್ರಜಾಮತವನ್ನು ತೆಲುಗು ಓದುಗರಿಗಾಗಿ ತೆಲುಗು ಭಾಷೆಯಲ್ಲಿಯೂ ಮುದ್ರಿಸಲಾಗುತ್ತಿತ್ತು. ಆದರೆ ಕ್ರಮೇಣ ಈ ವಾರಪತ್ರಿಕೆಯ ಪ್ರಕಟಣೆ ತೊಡಕುಗಳನ್ನೆದುರಿಸಿತು. ಕೆಲವು ವರ್ಷಗಳ ಹಿಂದೆ ಇದರ ಪ್ರಕಟನೆ ಸ್ಥಗಿತಗೊಂಡು ಮತ್ತೆ ಪುನರಾರಂಭ ಕಂಡಿತು. ಇತ್ತೀಚೆಗೆ ಮತ್ತೆ ಸ್ಥಗಿತಗೊಂಡಿದೆ. **(ಎಸ್.ಎಸ್.ಎಂಯು.)**

**ಪ್ರಜಾವಾಣಿ:** 1948ರ ಅಕ್ಟೋಬರ್ 15ರಂದು ಪ್ರಾರಂಭವಾದ ದಿನಪತ್ರಿಕೆ. ಈ ಪತ್ರಿಕೆಯ ಪ್ರಥಮ ಸಂಪಾದಕರು ಬಿ. ಪುಟ್ಟಸ್ವಾಮಯ್ಯನವರು. 1950ರಿಂದ 1977ರವರೆಗೆ ಟಿ.ಎಸ್. ರಾಮಚಂದ್ರರಾವ್ ಸಂಪಾದಕರಾಗಿದ್ದರು. ಇವರ ನಿಧನಾನಂತರ ವೈ.ಎನ್. ಕೃಷ್ಣಮೂರ್ತಿಯವರು ಸಂಪಾದಕರಾಗಿದ್ದರು. ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್, ಬೆಂಗಳೂರು ಈ ಪತ್ರಿಕೆಯ ಮಾಲೀಕ ಸಂಸ್ಥೆ. ಮುದ್ರಣಕ್ಕೆ ಅತ್ಯಾಧುನಿಕ ಯಂತ್ರಸೌಲಭ್ಯಗಳನ್ನು ಅಳವಡಿಸಿದುದಲ್ಲದೆ ಬೆಳಗಾಗುವ ವೇಳೆಗೆ ರಾಜ್ಯದ ಇತರ ಕಡೆಗಳಲ್ಲಿಯೂ ಪತ್ರಿಕೆ ಓದುಗರ ಕೈಸೇರುವುದಕ್ಕೆ ಅನುಕೂಲವಾಗುವಂತೆ ಬೆಂಗಳೂರಿನಿಂದ ಪತ್ರಿಕೆಗಳನ್ನು ವ್ಯಾನ್‌ಗಳ ಮೂಲಕ ಸಾಗಿಸುವ ವ್ಯವಸ್ಥೆಯನ್ನು ಪ್ರಥಮವಾಗಿ ಮಾಡಿದುದು ಈ ಪತ್ರಿಕೆಯೇ. ಆರಂಭದ ವರ್ಷಗಳಲ್ಲಿ ಕೇವಲ 4,000 ಪ್ರತಿಗಳ ಪ್ರಸಾರವಿದ್ದುದು ಈಗ ಒಂದು ಲಕ್ಷಕ್ಕೂ ಮೀರಿದೆ.

ಪತ್ರಿಕೆ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತ ಬಂದಿದೆ. ರಾಜ್ಯದ ಅನೇಕ ಸಮಸ್ಯೆಗಳನ್ನು ಪ್ರಕಟಿಸಿ ಸರ್ಕಾರ ಮತ್ತು ಜನತೆಯನ್ನು ಎಚ್ಚರಿಸಿದೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ಉದಾಹರಣೆಯಂತಿರುವ ಈ ಪತ್ರಿಕೆ ನಿಖರವಾದ ಸುದ್ದಿಗಳಿಗೆ, ನಿರ್ದಾಕ್ಷಿಣ್ಯವಾದ ಸಂಪಾದಕೀಯಗಳಿಗೆ ಪ್ರಸಿದ್ಧಿ ಪಡೆದಿದೆ. ರಾಷ್ಟ್ರದ ಪ್ರಮುಖ ಕೇಂದ್ರಗಳಲ್ಲಿ ಪತ್ರಿಕೆಯ ವರದಿಗಾರರಿರುವರಲ್ಲದೆ ಕೆಲವು ಹೊರ ರಾಷ್ಟ್ರಗಳಲ್ಲೂ ಇದರ ಪ್ರತಿನಿಧಿಗಳಿದ್ದಾರೆ. ರಾಜ್ಯದ ಎಲ್ಲೆಡೆಗಳಿಂದ ಸುದ್ದಿಯನ್ನು ಸಂಗ್ರಹಿಸಲು ಈ ಪತ್ರಿಕೆಯ ವರದಿಗಾರರಿದ್ದಾರೆ.

ಪ್ರಜಾವಾಣಿ

ಎಕ್ಸೈಜ್ ಸುಂಕ, ವರಮಾನ ತೆರಿಗೆ ರಿಯಾಯಿತಿಗಳ ಬಜೆಟ್

ಸ್ನೇಹದ ಬೆಸುಗೆ

ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಸಾಹಿತ್ಯ, ಕಲೆಗಳ ಕ್ಷೇತ್ರಗಳಲ್ಲೂ ಈ ಪತ್ರಿಕೆಯ ಸೇವೆ ಸಲ್ಲಿಸಿದೆ. ನಾಟಕ, ಚಲನಚಿತ್ರ, ಸಂಗೀತ ಮತ್ತಿತರ ಲಲಿತಕಲೆಗಳಲ್ಲಿ ದುಡಿಯುತ್ತಿರುವ ಕಲಾವಿದರನ್ನು ಪರಿಚಯಮಾಡಿಕೊಟ್ಟು, ನಿಷ್ಪಕ್ಷಪಾತ ವಿಮರ್ಶೆಗಳನ್ನು ಪ್ರಕಟಿಸಿ, ಹೊಸದನ್ನು ಗುರುತಿಸಿ ಪ್ರೋತ್ಸಾಹಿಸುವುದಕ್ಕೆ ಇದರ ಸಾಪ್ತಾಹಿಕ ಪುರವಣಿ ಖ್ಯಾತಿ ಪಡೆದಿದೆ. ವರ್ಷಕ್ಕೊಮ್ಮೆ ಬರುವ ದೀಪಾವಳಿ ಸಂಚಿಕೆ ಓದುಗರಿಗೆ ವೈವಿಧ್ಯಮಯ ಸಾಹಿತ್ಯವನ್ನು ನೀಡುತ್ತದೆ. ವಾಚಕರ ವಾಣಿ ಬರಿಯ ವಾಚಕರ ದೂರುಗಳಲ್ಲದೆ, ಸಾಹಿತ್ಯ, ಸಾಮಾಜಿಕ, ರಾಜಕೀಯ ಸಮಸ್ಯೆಗಳ ಚರ್ಚೆಗೆ ವಿಚಾರವೇದಿಕೆಯಾಗಿರುವುದು ಗಮನಾರ್ಹ. ಕ್ರೀಡಾ ವಿಷಯಗಳಿಗೆ ಮೊದಲಿನಿಂದಲೂ ಈ ಪತ್ರಿಕೆ ಪ್ರಾಶಸ್ತ್ಯವನ್ನು ಕೊಟ್ಟಿದ್ದು ಈಗ ಒಂದು ಪುಟವನ್ನೇ ಅದಕ್ಕಾಗಿ ಮೀಸಲಿಟ್ಟಿದೆ. ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಛೂಬಾಣ ಲೇಖನ ಜನಪ್ರಿಯವಾಗಿತ್ತು. ಮುದ್ರಣ ಮತ್ತು ವಿನ್ಯಾಸಕ್ಕಾಗಿ ಕೇಂದ್ರ ಸರ್ಕಾರದಿಂದ ಏಳು ಬಾರಿ ಪ್ರಶಸ್ತಿ ಪಡೆದಿದೆ. ಇದಲ್ಲದೆ ವಾರದ ವಿವಿಧ ದಿನಗಳಲ್ಲಿ ಮಹಿಳೆ, ಕರ್ನಾಟಕದರ್ಶನ, ಆರೋಗ್ಯ, ಕೃಷಿ ಮೊದಲಾದ ವಿಷಯಗಳನ್ನು ಕುರಿತು ವಿಶೇಷ ಪುಟಗಳನ್ನು ಮೀಸಲಿರಿಸಲಾಗುತ್ತದೆ. ಇದರಲ್ಲಿ ಕೆ.ಎನ್. ಶಾಂತಾಕುಮಾರ್ ಈಗಿನಸಂಪಾದಕರು. **(ಬಿ.ವಿ.)**

**ಪ್ರತಿಮಾದೇವಿ**: 1933–. ಹಿರಿಯ ತಲೆಮಾರಿನ ಚಲನಚಿತ್ರ ನಟಿ. ಇವರ ಹುಟ್ಟು ಹೆಸರು ಮೋಹಿನಿ. ದಕ್ಷಿಣ ಕನ್ನಡ ಜಿಲ್ಲೆ ಕಲ್ಲಡ್ಕದಲ್ಲಿ 1933 ಏಪ್ರಿಲ್ 9ರಂದು ಜನಿಸಿದರು. ತಂದೆ ಉಪೇಂದ್ರ ಶೆಣೈ. ತಾಯಿ

ಸರಸ್ವತಿಬಾಯಿ. ಉಡುಪಿಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮಾಡಿದ ಇವರಿಗೆ ಚಿಕ್ಕವರಿದ್ದಾಗಿನಿಂದಲೇ ಕಲೆ ಮತ್ತು ಸಂಗೀತದ ಬಗ್ಗೆ ಆಸಕ್ತಿಯಿತ್ತು. ಹನ್ನೆರಡು ವರ್ಷದವರಿದ್ದಾಗ ಹಿರಣ್ಣಯ್ಯ ಮಿತ್ರ ಮಂಡಳಿ ಮತ್ತು ಬಳ್ಳಾರಿ ಲಲಿತ ಅವರ ನಾಟಕ ಕಂಪನಿ ಸೇರಿದ್ದರು. ಅನಂತರ ಸಿನಿಮಾರಂಗ ಪ್ರವೇಶಿಸಿದರು. ಆಗ ಇವರಿಗೆ ಹದಿನಾಲ್ಕು ವರ್ಷ. ಶ್ರೀ ಕೃಷ್ಣಲೀಲಾ ಇವರ ಅಭಿನಯದ ಮೊದಲ ಚಲನಚಿತ್ರ. ಇದು ಮಹಾತ್ಮ ಪಿಕ್ಚರ್ಸ್‌ರವರ ಮೊದಲ ಚಿತ್ರ.

ನಿರ್ಮಾಪಕ ಹಾಗೂ ನಿರ್ದೇಶಕ ಡಿ. ಶಂಕರ್‌ಸಿಂಗ್‌ರನ್ನು ಇವರು ವಿವಾಹವಾಗಿ (1947) ಮೈಸೂರಿನಲ್ಲಿ ನೆಲೆಸಿದರು. ವಿವಾಹದ ಅನಂತರವೂ ಇವರು ಸುಮಾರು ನಲವತ್ತಾರು ಚಲನಚಿತ್ರಗಳಲ್ಲಿ ಅಭಿನಯಿಸಿದರು. ಇವುಗಳಲ್ಲಿ ಹಲವು ಚಿತ್ರಗಳು ಇವರ ಪತಿಯೆ ನಿರ್ಮಿಸಿದುವು. ದಳ್ಳಾಳಿ, ನಾಗಕನ್ಯೆ, ಶಿವಶರಣೆ ನಂಬಿಯಕ್ಕ, ಧರ್ಮಸ್ಥಳ ಮಹಾತ್ಮೆ, ವರದಕ್ಷಿಣೆ, ಮಂಗಳಸೂತ್ರ, ಭಕ್ತಜೀತಾ, ಪ್ರಭುಲಿಂಗಲೀಲೆ–ಇವು ಇವರು ಅಭಿನಯಿಸಿದ ಕೆಲವು ಚಿತ್ರಗಳು. ಇವರು ಅಭಿನಯಿಸಿದ 'ಜಗನ್ಮೋಹಿನಿ' ಚಿತ್ರ ಕನ್ನಡ ಚಿತ್ರರಂಗದಲ್ಲಿ ದಾಖಲೆ ನಿರ್ಮಿಸಿತು. ದಾವಣಗೆರೆ, ಹುಬ್ಬಳ್ಳಿ, ಬಿಜಾಪುರಗಳಲ್ಲಿ 25 ವಾರಗಳಿಗಿಂತಲೂ ಹೆಚ್ಚು ಪ್ರದರ್ಶಿತವಾದ ಮೊದಲ ಕನ್ನಡ ಚಿತ್ರವೆಂಬ ಹೆಗ್ಗಳಿಕೆಗೆ ಇದು ಪಾತ್ರವಾಯಿತು.

1952ರ ಅನಂತರ ಇವರು ತಮ್ಮನ್ನು ಸಿನಿಮಾ ನಿರ್ಮಾಣದಲ್ಲಿ ತೊಡಗಿಸಿಕೊಂಡು ಮಹಾತ್ಮ ಫಿಲಂ ಡಿಸ್ಟ್ರಿಬ್ಯೂಟರ್ಸ್ ಎಂಬ ಹೆಸರಿನಲ್ಲಿ ವಿತರಣ ಸಂಸ್ಥೆ ಪ್ರಾರಂಭಿಸಿ ಅದರ ಪಾಲುದಾರರಾಗಿ ಹತ್ತು ಚಿತ್ರಗಳನ್ನು ವಿತರಿಸಿದರು. 1957ರಲ್ಲಿ ಮೋಹಿನಿ ಪಿಕ್ಚರ್ಸ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಮಹಾತ್ಮ ಸಂಸ್ಥೆಯೊಡನೆ ಅನೇಕ ಚಿತ್ರಗಳನ್ನು ನಿರ್ಮಿಸಿದರು. ಪತಿಗೆ ಬೆನ್ನಲುಬಾಗಿ ನಿಂತು ಪ್ರೊಡಕ್ಷನ್ ಎಕ್ಸಿಕ್ಯುಟಿವ್, ಉಡುಗೆ ತೊಡುಗೆಯ ಮೇಲ್ವಿಚಾರಣೆ ಮೊದಲಾದ ಕೆಲಸಗಳನ್ನು ನಿರ್ವಹಿಸಿದರು. 1979ರಲ್ಲಿ ಪತಿಯನ್ನು ಕಳೆದುಕೊಂಡರು.

ಇವರ ಮಕ್ಕಳಾದ ರಾಜೇಂದ್ರಸಿಂಗ್, ಸಂಗ್ರಾಮಸಿಂಗ್, ಜೈರಾಜ್ ಸಿಂಗ್, ವಿಜಯಲಕ್ಷ್ಮಿ ಸಿಂಗ್ ಚಿತ್ರರಂಗದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಮೊದಲ ಮಗ ರಾಜೇಂದ್ರ ಸಿಂಗ್ (ಬಾಬು) ಮೂವತ್ತೈದಕ್ಕೂ ಹೆಚ್ಚು ಕನ್ನಡ, ಹಿಂದೀ ಹಾಗೂ ತೆಲುಗು ಚಿತ್ರಗಳನ್ನು ನಿರ್ದೇಶಿಸಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದು ಹೆಸರಾಂತ ನಿರ್ದೇಶಕರೆನಿಸಿಕೊಂಡಿದ್ದಾರೆ.

ಪ್ರತಿಮಾದೇವಿಯವರು ಚಿತ್ರರಂಗಕ್ಕೆ ಸಲ್ಲಿಸಿರುವ ಅಪೂರ್ವ ಸೇವೆಯನ್ನು ಗೌರವಿಸಿ ಇವರಿಗೆ ಅನೇಕ ಪ್ರಶಸ್ತಿ ಸನ್ಮಾನಗಳು ಸಂದಿವೆ. ಕರ್ನಾಟಕ ಸರ್ಕಾರದ ಡಾ. ರಾಜ್ ಕುಮಾರ್ ಪ್ರಶಸ್ತಿ (2002) ಇವರಿಗೆ ದೊರೆತಿದೆ. ಮೂಡುಬಿದರೆಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಲಾಯಿತು (2002). ಚಲನಚಿತ್ರರಂಗ ದಿಂದ ನಿವೃತ್ತಿ ಪಡೆದಿರುವ ಇವರು ಈಗ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. **(ಎಸ್‌ಯು.ಎಂ.)**

**ಪ್ರಪಂಚ:** ವಾರಪತ್ರಿಕೆ. ಪಾಟೀಲ ಪುಟ್ಟಪ್ಪನವರು 1954ರಲ್ಲಿ ಹುಬ್ಬಳ್ಳಿಯಲ್ಲಿ ಈ ಪತ್ರಿಕೆಯನ್ನು ಪ್ರಾರಂಭಿಸಿದರು. ಅವರೇ ಇದರ ಸಂಪಾದಕರು, ಪ್ರಕಟಣಕಾರರು ಮತ್ತು ಮುದ್ರಕರು. ಪತ್ರಿಕಾ ಮಾಲೀಕರು ಇಂದುಮತಿ ಪಿ. ಪಾಟೀಲ. ಹುಬ್ಬಳ್ಳಿಯ ಪ್ರಪಂಚ ಪ್ರಿಂಟರಿಯಲ್ಲಿ ಮುದ್ರಿತವಾಗುತ್ತದೆ.

ಪ್ರಪಂಚದಲ್ಲಿರುವ ಸಂಪಾದಕೀಯ ಬರೆಹಗಳು ವಿಚಾರ ಪ್ರಚೋದಕಗ ಳಾಗಿರುತ್ತವೆ. ಕರ್ನಾಟಕದ ಕಥೆ, ಪ್ರಪಂಚ ಪ್ರದಕ್ಷಿಣೆ ಶೀರ್ಷಿಕೆಗಳಲ್ಲಿ ಬರುವ ವ್ಯಕ್ತಿ ಚಿತ್ರಗಳು ವಿಚಾರಪೂರ್ಣವಾಗಿರುತ್ತವೆ. ಈ ಸಂಗತಿ ತಿಳಿಯಿರಿ ಮತ್ತು ಅನುಭವವಿರುವಲ್ಲಿ ಅಮೃತತ್ತ್ವವಿದೆ–ಈ ವಿಭಾಗಗಳು ಜ್ಞಾನಾಭಿವೃದ್ಧಿಗೆ ಸಹಕಾರಿಯಾಗಿವೆ. ಕರ್ನಾಟಕದ ಪ್ರಚಲಿತ ರಾಜಕೀಯ ಕುರಿತಂಥ ಲೇಖನಗಳಿರುತ್ತವೆ. ಸತ್ಯವನ್ನು ಸ್ಪಷ್ಟವಾದ ಶಬ್ದಗಳಿಂದ ಎತ್ತಿ ಹಿಡಿಯುವಲ್ಲಿ ಪ್ರಪಂಚ ಪ್ರಖ್ಯಾತವಾಗಿದೆ. ಈ ಪತ್ರಿಕೆ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ ಮುಂತಾದವುಗಳ ಅಭಿವೃದ್ಧಿಗೆ ಸಹಕಾರಿಯಾ ಗಿದೆ. ಸೀಮಿತ ಸಂಖ್ಯೆಯಲ್ಲಿ ಪ್ರಕಟವಾದರು ಈ ಪತ್ರಿಕೆ ನಿರಂತರವಾಗಿ ಹೊರಬರುತ್ತಿರುವುದು ಅದರ ವಿಶಿಷ್ಟತೆಯಾಗಿದೆ. **(ಎಸ್.ಆರ್.ಜಿ.)**

**ಪ್ರಬುದ್ಧ ಕರ್ನಾಟಕ:** ಮೈಸೂರು ವಿಶ್ವವಿದ್ಯಾನಿಲಯು ಪ್ರಕಟಿಸುತ್ತಿರುವ, ಸಂಶೋಧನಾತ್ಮಕ ಮತ್ತು ಸೃಜನಾತ್ಮಕ ವಿಷಯಗಳಿಗೆ ಮೀಸಲಾಗಿರುವ ತ್ರೈಮಾಸಿಕ ಕನ್ನಡ ಪತ್ರಿಕೆ. ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಆಶ್ರಯದಲ್ಲಿ ಮತ್ತು ಅದರ ಅಂಗವಾಗಿ ಈ ಪತ್ರಿಕೆ 1919ರಲ್ಲಿ ಜನ್ಮತಳೆಯಿತು. ಇದರ ಸಂಸ್ಥಾಪಕರು, ಆಗ್ಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳು. ಇವರೇ ಪತ್ರಿಕೆಯ ಮೊದಲ ಸಂಪಾದಕರು ಕೂಡ. ಇವರಿಗೆ ಅಂದಿನ ಶ್ರೀರಾಮಕೃಷ್ಣಾಶ್ರಮದ ಸ್ವಾಮಿಗಳಾದ ವಿವೇಕಾನಂದರು ಧಾರ್ಮಿಕ ವಿಚಾರಗಳನ್ನು ಕನ್ನಡ ಜನರಿಗೆ ತಿಳಿಸಲು ಇಂಗ್ಲಿಷ್ ಭಾಷೆಯ ಪ್ರಬುದ್ಧ ಭಾರತ ಪತ್ರಿಕೆಯ ಮಾದರಿಯಲ್ಲಿ ಪ್ರಬುದ್ಧ ಕರ್ನಾಟಕವೆಂಬ ಕನ್ನಡ ಪತ್ರಿಕೆಯನ್ನು ಹೊರಡಿಸಬಹುದೆಂದು ಮೊದಲು ಸಲಹೆ ಮಾಡಿದ್ದರು. ಈಗ ಆ ಹೆಸರನ್ನು ಸಾಹಿತ್ಯ ಪತ್ರಿಕೆಗೆ ಬಳಸಲಾಯಿತು. ಇಂದಿಗೂ ಪತ್ರಿಕೆ ಆ ಹೆಸರಿನಲ್ಲಿಯೇ ನಡೆಯುತ್ತಿದೆ.

ಈ ಪತ್ರಿಕೆಯ ಪ್ರಥಮ ಸಂಚಿಕೆ ಪ್ರಕಟವಾದುದು ಸಿದ್ಧಾರ್ಥಿ ಸಂವತ್ಸರದ ಯುಗಾದಿ ಸಂಚಿಕೆಯಾಗಿ, 1919ರಲ್ಲಿ. ಈ ಸಂಚಿಕೆಯಲ್ಲಿ ಸಂಪಾದಕರ ಲೇಖನ, ಎನ್. ನೀಲಕಂಠಪ್ಪ, ಎಸ್.ವಿ. ರಂಗಣ್ಣ ಮತ್ತು ಸಿ.ಕೆ. ವೆಂಕಟರಾಮಯ್ಯ ಇವರ ಮುಖ್ಯ ಲೇಖನಗಳು, ಪುಸ್ತಕ ವಿಮರ್ಶೆ ಮತ್ತು ವಸ್ತುಕೋಶ–ಇವು ಪ್ರಕಟಗೊಂಡಿವೆ. 1925ರಲ್ಲಿ ಮುದ್ದಣನ ಸಂಚಿಕೆ ಪ್ರಕಟವಾಯಿತು (7–1). 1928ರಲ್ಲಿ ಒಂದು ಹೆಚ್ಚು ಸಂಚಿಕೆ ಬಂದಿತು (10–3ಎ). 1932ರಲ್ಲಿ ಪತ್ರಿಕೆಯ ಆಡಳಿತ ಮೈಸೂರು ವಿಶ್ವವಿದ್ಯಾನಿಲಯದ ವಶಕ್ಕೆ ಬಂದಿತು (14–1). ಮೊದಲ 25 ವರ್ಷಗಳಲ್ಲಿಯೇ ಅತಿ ಹೆಚ್ಚಿನ ಚಂದಾದಾರರಿದ್ದುದು (836) 1934ರಲ್ಲಿ. ಪ್ರಬುದ್ಧ ಕರ್ನಾಟಕದ ಬೆಳ್ಳಿಯ ಹಬ್ಬ 1945ರಲ್ಲಿ ಜರುಗಿತು. ಹಬ್ಬದ ನೆನಪಿಗೆ ಬೆಳ್ಳಿಯ ಸಂಚಿಕೆ ಪ್ರಕಟವಾಯಿತು (26–4). ಪತ್ರಿಕೆ 1947ರಲ್ಲಿ ತನ್ನ ಮುಖಪುಟದ ವಿನ್ಯಾಸವನ್ನು ಬದಲಿಸಿತು. ಅದೇ ವರ್ಷ ಗಾಂಧೀಜಿ ಸ್ಮರಣ ಸಂಚಿಕೆಗಳಂತೆ ಪ್ರಕಟವಾಯಿತು (29–3). 1950ರಲ್ಲಿ ಪ್ರಕಟಣೆಯ ಕಾಲಾವಧಿಯಲ್ಲಿ ಬದಲಾವಣೆಯನ್ನು ತರಲಾಯಿತು. ಮೊದಲು ವರ್ಷಕ್ಕೆ




ಮೂರು ಸಂಚಿಕೆಗಳಂತೆ ಪ್ರಕಟವಾಗುತ್ತಿದ್ದುದು, ಮೂರನೆಯ ವರ್ಷದಿಂದ ನಾಲ್ಕು ಸಂಚಿಕೆಗಳಾಗಿ ವಿನಾಯಕನ ಹಬ್ಬ, ದೀಪಾವಳಿ, ಸಂಕ್ರಾಂತಿ ಮತ್ತು ಕಾಮನ ಹಬ್ಬಗಳಲ್ಲಿ ಹೊರಬರುತ್ತಿದ್ದು, ಮುಂದೆ ಚೈತ್ರ, ಆಷಾಢ, ಆಶ್ವಯುಜ ಮತ್ತು ಪುಷ್ಯ ಸಂಚಿಕೆಗಳಾಗಿ ಬರತೊಡಗಿತು (32–1). ಈಗಲೂ (1977) ಹೀಗೆಯೇ ನಡೆಯುತ್ತಿದೆ. 1957ರಲ್ಲಿ ವಿಜ್ಞಾನ ವಿಶೇಷಾಂಕದ ಪ್ರಕಟಣೆ ಆರಂಭಗೊಂಡಿತು (38–4). 1960ರಲ್ಲಿ ಕಮ್ಮಟದ ಕಿಡಿಗಳು ವಿಭಾಗ ಸೇರಿತು (42–1). 1961ರಲ್ಲಿ ರವೀಂದ್ರಾಂಕ (43–1), 1964ರಲ್ಲಿ ವಿವೇಕಾನಂದ ಸಂಚಿಕೆ (45–4), 1965ರಲ್ಲಿ ಮೆಂಡಲ್ ವಿಶೇಷಾಂಕ (46–4) ಪ್ರಕಟವಾದುವು. 1968ರಲ್ಲಿ ಪತ್ರಿಕೆಯ ಸ್ಥಾಪಕರಾದ ಎ.ಆರ್.ಕೃಷ್ಣಶಾಸ್ತ್ರಿಗಳ ನೆನಪಿನ ಸಂಚಿಕೆಯನ್ನು ಅತ್ಯಧಿಕ ಪುಟಗಳ ಬಿಡಿಸಂಚಿಕೆಯಾಗಿ ಪ್ರಕಟಿಸಲಾಯಿತು (50–1). ಪ್ರಬುದ್ಧ ಕರ್ನಾಟಕ ಹುಟ್ಟಿ 50 ವರ್ಷಗಳಾದುದರ ಸಲುವಾಗಿ 1969ರಲ್ಲಿ ಚಿನ್ನದ ಹಬ್ಬ ನಡೆಯಿತು. ವಿಜ್ಞಾನಸಂಪುಟ ಬಿಡುಗಡೆಯಾಯಿತು.

ಪ್ರಬುದ್ಧ ಕರ್ಣಾಟಕ 1932ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಬಂದಮೇಲೆ, ಅದು ಮೊದಲು ಇಲ್ಲಿಯ ಗ್ರಂಥ ಪ್ರಕಾಶನ ಸಮಿತಿಯ, ಈಗ ಪ್ರಸಾರಾಂಗದ ಮೇಲ್ವಿಚಾರಣೆಯಲ್ಲಿ ಹಾಗೂ ಆಶ್ರಯ ದಲ್ಲಿ ನಡೆಯುತ್ತಿದೆ. ಆರಂಭದಲ್ಲಿ ಬಿ.ಎಂ. ಶ್ರೀಕಂಠಯ್ಯನವರು ಮುಖ್ಯ ಸಂಪಾದಕರಾಗಿಯೂ ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿಗಳು ಸಂಪಾದಕರಾಗಿಯೂ ತೀ.ನಂ. ಶ್ರೀಕಂಠಯ್ಯ, ಕೆ.ವಿ. ಪುಟ್ಟಪ್ಪ, ವಿ. ಸೀತಾರಾಮಯ್ಯ-ಇವರು ಸಂಪಾದಕ ಸಮಿತಿಯ ಸದಸ್ಯರಾಗಿಯೂ ಇದ್ದರು. ಈ ಬಗೆಯ ವ್ಯವಸ್ಥೆಯೇ ಈಗಲೂ ಮುಂದುವರಿಯುತ್ತಿದೆ.

ಬಿ.ಎಂ. ಶ್ರೀಕಂಠಯ್ಯ (1932-42), ಎ.ಆರ್.ಕೃಷ್ಣಶಾಸ್ತ್ರಿ (1943-46), ಕೆ.ವಿ. ಪುಟ್ಟಪ್ಪ (1946-59), ಡಿ.ಎಲ್. ನರಸಿಂಹಾಚಾರ್ (1959-62), ದೇ. ಜವರೇಗೌಡ (1962-69)-ಇವರು ಈ ಮೊದಲು ಪ್ರಧಾನ ಸಂಪಾದಕರಾಗಿದ್ದರು. ತರುವಾಯ ಹಾ.ಮಾ.ನಾಯಕ ಪ್ರಧಾನ ಸಂಪಾದಕರಾದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಇದರ ಪದನಿಮಿತ್ತ ಪ್ರಧಾನ ಸಂಪಾದಕರಾಗಿರುತ್ತಾರೆ. ಕೆ.ವಿ. ರಾಘವಾಚಾರ್, ಎನ್. ಅನಂತರಂಗಾಚಾರ್, ಟಿ.ಎಸ್. ಶಾಮರಾವ್, ಎಸ್.ವಿ. ಪರಮೇಶ್ವರ ಭಟ್ಟ, ದೇ. ಜವರೇಗೌಡ ಉ.ಕಾ. ಸುಬ್ಬರಾಯಾಚಾರ್, ಪ್ರಭುಶಂಕರ, ಎಸ್. ನಾರಾಯಣಶೆಟ್ಟಿ, ಜಿ. ವರದರಾಜರಾವ್, ಎಚ್. ಮಾನಪ್ಪನಾಯಕ, ಎಚ್. ತಿಪ್ಪೇರುದ್ರಸ್ವಾಮಿ, ಸಿ.ಪಿ. ಕೃಷ್ಣಕುಮಾರ್, ಟಿ.ವಿ. ವೆಂಕಟಾಚಲಶಾಸ್ತ್ರೀ, ಸುಧಾಕರ-ಇವರು ಸಂಪಾದಕರಾಗಿ ಶ್ರಮಿಸಿದ್ದಾರೆ. ಅನಂತರ ಎಚ್.ಎಂ. ಚನ್ನಯ್ಯ, ಪ.ವಿ. ಚಂದ್ರಶೇಖರರಾವ್ ಮುಂದೆ ಪ್ರಧಾನ ಗುರುದತ್ತ, ಜಿ.ಎಚ್. ನಾಯಕ, ರಾಗೌ ಮೊದಲಾದ ವಿದ್ವಾಂಸರು ಇದರ ಸಂಪಾದಕ ವರ್ಗದಲ್ಲಿದ್ದರು.

ಪ್ರಬುದ್ಧ ಕರ್ಣಾಟಕ, ಅದಕ್ಕಾಗಿ ದುಡಿದ ಸಂಪಾದಕವರ್ಗದ, ಲೇಖಕರ ಮತ್ತು ಓದುಗರ ಪರಿಶ್ರಮ ಪ್ರೋತ್ಸಾಹಗಳಿಂದ ಕಾಲಕಾಲಕ್ಕೆ ಬೆಳೆದು ಬಲಗೊಳ್ಳುತ್ತ ನಡೆದಿದೆ. ಕವಿತೆ, ಕಥೆ, ನಾಟಕ, ಪ್ರಬಂಧ, ವಿಮರ್ಶೆ, ಸಂಪಾದನೆ, ಸಂಶೋಧನೆ ಮತ್ತು ಸಾಹಿತ್ಯಿಕ ಇತ್ಯಾದಿ ಲೇಖನಗಳು ಈವರೆಗೆ ವಿಪುಲವಾಗಿ ಪ್ರಕಟವಾಗಿವೆ. ಚಿನ್ನದ ಹಬ್ಬದ (1969) ಹೊತ್ತಿಗೆ ಲೇಖಕರ ಸಂಖ್ಯೆ 560. ಆ ವೇಳೆಗೆ ಸಾಹಿತ್ಯ ಲೇಖನಗಳು 528, ಕವಿತೆಗಳು 884, ನಾಟಕಗಳು 49, ಸಣ್ಣ ಕಥೆ, ಪ್ರಬಂಧ ಇತ್ಯಾದಿ 244. ಇತಿಹಾಸ ಲೇಖನಗಳು 44, ವಿಜ್ಞಾನ ರಾಜನೀತಿ ಇತ್ಯಾದಿ 250, ಪುಸ್ತಕ ವಿಮರ್ಶೆ 856, ಚಿತ್ರಪಟಗಳು 291, ಕಮ್ಮಟದ ಕಿಡಿಗಳು 47 ಪ್ರಕಟವಾದುವು. ಲೇಖನಗಳು ಲೇಖನಮಾಲೆಗಳಿಂದ ಪ್ರಕಟವಾದ ಗ್ರಂಥಗಳ ಸಂಖ್ಯೆ ಸುಮಾರು 57. ಪ್ರಾಚೀನ ಸಾಹಿತ್ಯ, ಕೆಲವು ಕನ್ನಡ ಕವಿಗಳ ಜೀವನಕಾಲವಿಚಾರ, ವಿಗಡವಿಕ್ರಮರಾಯ, ವಿದ್ಯಾರಣ್ಯರ ಸಮಕಾಲೀನರು, ಗದಾಯುದ್ಧ ನಾಟಕ, ಭಕ್ತಿಭಂಡಾರಿ ಬಸವಣ್ಣನವರು, ಮೈಸೂರು ದೇಶದ ವಾಸ್ತುಶಿಲ್ಪ, ಸುಬ್ಬಣ್ಣ, ಪಂಪಾಯಾತ್ರೆ, ಅಶ್ವತ್ಥಾಮನ್, ಅಂತಿಗೊನೆ, ಮಲೆನಾಡಿನ ಚಿತ್ರಗಳು, ನಂಬಿಯಣ್ಣನ ರಗಳೆ, ಮೈಸೂರು ಮಲ್ಲಿಗೆ, ಅಹಲ್ಯೆ, ಹಗಲುಗನಸುಗಳು, ಭಾಸಕವಿ, ಜಗತ್ತುಗಳ ಹುಟ್ಟುಸಾವು, ಆನಂದವರ್ಧನನ ಕಾವ್ಯಮೀಮಾಂಸೆ-ಅವುಗಳಲ್ಲಿ ಕೆಲವು ಬಿ.ಎಂ.ಶ್ರೀ., ಮಾಸ್ತಿ, ಕೈಲಾಸಂ, ರಂತಹ ಸಾಹಿತ್ಯ ದಿಗ್ಗಜಗಳ ಬಗ್ಗೆ ವಿಶೇಷ ಸಂಸ್ಮರಣ ಸಂಚಿಕೆಗಳು ಹೊರಬಂದಿವೆ.

ಮೊದಮೊದಲು ವಿಜ್ಞಾನ ಮತ್ತು ಮಾನವಿಕ ಶಾಸ್ತ್ರಗಳಿಗೆ ಸಂಬಂದಿಸಿದ ಬರೆಹಗಳು ಸಾಹಿತ್ಯಲೇಖನಗಳ ಜೊತೆಗೇ ಅಚ್ಚಾಗುತ್ತಿದ್ದುವು. ಬಳಿಕ ವಿಜ್ಞಾನ ಮತ್ತು ಮಾನವಿಕ ವಿಷಯಗಳನ್ನು ಕನ್ನಡದಲ್ಲಿ ಕಲಿಯುವುದೂ ಬೋಧಿಸುವುದೂ ಹೆಚ್ಚಾದಂತೆ, ಮುಖ್ಯವಾಗಿ ವಿಜ್ಞಾನ ವಿಭಾಗದಲ್ಲಿ ಪ್ರತ್ಯೇಕ ಸಂಚಿಕೆಗಳೇ ಹೆಚ್ಚು-ಸಂಚಿಕೆಗಳಾಗಿ ಬರತೊಡಗಿದುವು. ಈಚೆಗೆ ಆಯಾ ವಿಭಾಗಗಳಿಗೆ ಮೀಸಲಾದ ಪ್ರತ್ಯೇಕ ಪತ್ರಿಕೆಗಳನ್ನೇ (ವಿಜ್ಞಾನ ಕರ್ಣಾಟಕ, ಮಾನವಿಕ ಕರ್ಣಾಟಕ) ಮೈಸೂರು ವಿಶ್ವವಿದ್ಯಾನಿಲಯ ನಡೆಸುತ್ತಿದೆ. ವಸ್ತುವಿನ ದೃಷ್ಟಿಯಿಂದ ಮಾತ್ರವಲ್ಲದೆ, ಆಗಾಗ ಪತ್ರಿಕೆಯ ಹೊರಮೈ ನೋಟದಲ್ಲಿಯೂ ಇತರ ಅಂಶಗಳಲ್ಲಿಯೂ ಸಣ್ಣಪುಟ್ಟ ಮಾರ್ಪಾಡುಗಳು ತಲೆದೋರಿರುವುದುಂಟು. ಈಗ ಪತ್ರಿಕೆ ಲೇಖನಗಳ ಜೊತೆಗೆ ಕಾವ್ಯವಿತಾನ, ಕಮ್ಮಟದ ಕಿಡಿಗಳು, ಕಾವ್ಯಾವಲೋಕನ, ಸಂಪಾದಕೀಯ, ಸಾದರ ಸ್ವೀಕಾರ-ಈ ಸ್ಥಿರಶೀರ್ಷಿಕೆಗಳನ್ನು ಒಳಗೊಂಡಿದೆ.

ಪ್ರಬುದ್ಧ ಕರ್ಣಾಟಕ ಕನ್ನಡಭಾಷೆ ಸಾಹಿತ್ಯಗಳಿಗೆ ಮೀಸಲಾಗಿರುವ, ಸುಸಂಸ್ಕೃತ ಅಭಿರುಚಿಯ ಓದುಗರಿಗೆ ಹಾಗೂ ವಿದ್ವಾಂಸರಿಗೆ ಪ್ರಿಯವಾಗಿರುವ ಒಂದು ಹೆಸರಾಂತ ಪ್ರೌಢಪತ್ರಿಕೆ. ಖ್ಯಾತಸಾಹಿತಿಗಳ ಬರೆಹಗಳು ಬಹಳ ಹಿಂದಿನಿಂದ ಇಲ್ಲಿ ಪ್ರಕಟಗೊಳ್ಳುತ್ತ ಬಂದಿವೆ. ಇಂಥ ಬರೆಹಗಳಿಂದ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಶ್ರೀಮಂತಿಕೆ ಮಿಗಿಲಾಗಿ ಬೆಳೆದಿದೆ. ಲೇಖಕರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಇಲ್ಲಿ ಒರೆಗೆ ಹಚ್ಚಿದ್ದಾರೆ; ಸೂಕ್ತ ಪ್ರತಿಫಲ ದೊರೆತು ಬೆಳೆದು ದೊಡ್ಡವರಾಗಿದ್ದಾರೆ. ಹೊಸಗನ್ನಡ ಕವಿತೆ, ವಿಮರ್ಶೆ, ಸಂಶೋಧನೆ, ಒಟ್ಟಾರೆ ಕನ್ನಡ ಸಾಹಿತ್ಯದ ಭಾಷೆಶೈಲಿಗಳ ಬೆಳವಣಿಗೆಯಲ್ಲಿ ಪ್ರಬುದ್ಧ ಕರ್ಣಾಟಕ ವಹಿಸಿದ ಪಾತ್ರ ಹಿರಿದಾದುದು ಎಂದು ಹೇಳಬಹುದು. ಒಳ್ಳೆಯ ಪರಂಪರೆಯನ್ನುಳ್ಳ ಈ ಪತ್ರಿಕೆ ಕನ್ನಡದ ಚಿರಕಾಲಿಕ ಪತ್ರಿಕೆಗಳಲ್ಲಿ ಅಗ್ರಗಣ್ಯವಾದುದು. ಆದರ್ಶಪ್ರಾಯವಾದುದು. ಇದುವರೆಗೂ ಇದರ 85 ಸಂಪುಟಗಳು ಮತ್ತು 335 ಸಂಚಿಕೆಗಳು ಹೊರ ಬಂದಿವೆ. (ಟಿ.ವಿ.ವಿ.)

**ಪ್ರಭು,ಉದಯ್**: ಓಟ ಸ್ಪರ್ಧೆಯ ಪ್ರಸಿದ್ಧ ಕ್ರೀಡಾಪಟು. ಉತ್ತರ ಕನ್ನಡ ಜಿಲ್ಲೆಯ ಅಂಕೋಲದಲ್ಲಿ ಜನಿಸಿದರು. 1974ರಲ್ಲಿ ಅಂಕೋಲದ ಗೋಖಲೆ ಕಾಲೇಜಿನಲ್ಲಿ ಓದುವಾಗಲೇ ಓಟದತ್ತ ಆಕರ್ಷಿತರಾದ ಇವರು ಬಿ.ಎಸ್‌ಸಿ. ಪದವಿ ಪಡೆದು ಎನ್.ಐ.ಎಸ್. ಅಥ್ಲೆಟಿಕ್ಸ್ ತರಬೇತಿಗೆ ಸೇರಿದರು. ಈ ಕ್ಷೇತ್ರದಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಸಾಧನೆಮಾಡಿದ್ದಾರೆ. ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಹದಿನೆಂಟು ಬಾರಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ 6ಚಿನ್ನದ ಪದಕ, 9ಬೆಳ್ಳಿಯ ಪದಕ ಹಾಗೂ 3ಕಂಚಿನ ಪದಕಗಳಿಸಿದ್ದಾರೆ.

ಫ್ಲೈಯಿಂಗ್ ಸಿಖ್ ಎಂದೇ ಹೆಸರಾದ ಮಿಲ್ಖಾಸಿಂಗ್‌ರ ದಾಖಲೆಯನ್ನು ಇವರು ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್‌ನ 400 ಮೀ ಓಟದಲ್ಲಿ ಮುರಿದರು (1997). ಇವರು 46.6 ಸೆಕೆಂಡ್‌ಗಳಲ್ಲಿ ಕ್ರಮಿಸಿದ ಈ ದಾಖಲೆಯನ್ನು ಅನಂತರ 1999ರಲ್ಲಿ ಪರಂಜಿತ್ ಅಳಿಸಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಇವರು ಮಾಡಿದ ಸಾಧನೆ ಗಮನಾರ್ಹ. ಏಷ್ಯನ್ ಟ್ರ್ಯಾಕ್ ಮತ್ತು ಫೀಲ್ಡ್‌ನ 4X400 ಮೀ ರಿಲೇಯಲ್ಲಿ ಸ್ವರ್ಣ ಗಳಿಸಿದರು (1975). 400ಮೀ ಓಟದಲ್ಲಿ ಹೆಚ್ಚು ಕಾಣಿಸಿಕೊಂಡ ಇವರು ಜರ್ಮನಿಯ ಕ್ರೀಡಾಕೂಟದ 400 ಮೀ ಓಟದಲ್ಲಿ ಆರನೆಯ ಸ್ಥಾನ (1977ಹಾಗೂ1979) ಗಳಿಸಿದರು. ಏಷ್ಯನ್ ಕ್ರೀಡಾಕೂಟದಲ್ಲಿ 4X400 ರಿಲೇ ಹಾಗೂ 400 ಮೀ ಓಟದಲ್ಲಿ ಬೆಳ್ಳಿ ಗಳಿಸಿದರು (1978).

1989ರಿಂದ ಎರಡು ವರ್ಷಗಳ ಕಾಲ ರಾಷ್ಟ್ರೀಯ ಸ್ಪ್ರಿಂಟ್ ತಂಡದ ತರಬೇತುದಾರರಾಗಿದ್ದ ಇವರು ಕ್ಲಿಫರ್ಡ್ ಜೋಶು. ಶಿಲ್ಪ, ಪರಮೇಶ್ ಮೊದಲಾದ ಉತ್ತಮ ಕ್ರೀಡಾಪಟುಗಳನ್ನು ರೂಪಿಸಿದ್ದಾರೆ. ಉದಯೋನ್ಮುಖ ಕ್ರೀಡಾಪಟುಗಳಿಗೆ ಸೂಕ್ತ ತರಬೇತಿ ನೀಡುವುದರಲ್ಲಿ ತೊಡಗಿಸಿಕೊಂಡಿರುವ ಇವರು ಈಗ ಬೆಂಗಳೂರಿನ ಸ್ಪೋರ್ಟ್ಸ್ ಕ್ಲಬ್ ಅಥ್ಲೆಟಿಕ್ಸ್ ಅಕಾಡೆಮಿಯ ನಿರ್ದೇಶಕರಾಗಿದ್ದಾರೆ.

ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭ್ಯವಾಗಿದೆ. ಕ್ರೀಡಾಕ್ಷೇತ್ರದ ಜೀವಮಾನ ಸಾಧನೆಗಾಗಿ ಇವರಿಗೆ ಭಾರತಸರ್ಕಾರ

'ಧ್ಯಾನಚಂದ್ ಪ್ರಶಸ್ತಿ' ನೀಡಿಗೌರವಿಸಿದೆ. ಕರ್ನಾಟಕಕ್ಕೆ ಈ ಪ್ರಶಸ್ತಿಯನ್ನು ಮೊದಲ ಬಾರಿ ತಂದುಕೊಟ್ಟ ಖ್ಯಾತಿ ಇವರದು (2006). (ಎಸ್.ಬಿಎಚ್‌ಎ.)

**ಪ್ರಭು, ಎಂ.ಎಸ್.ಕೆ.:** 1938–2000. ನಾಟಕಕಾರರು ಹಾಗೂ ಸಣ್ಣಕತೆಗಾರರು. ಹಾಸ್ಯ ಲೇಖಕರಾಗಿಯೂ ಹೆಸರಾದವರು. ವಸ್ತು–ತಂತ್ರಗಳ ಪ್ರಯೋಗಶೀಲತೆ ಹಾಗೂ ಅಪರೂಪದ ಸಂವೇದನಾಶೀಲತೆಯಿಂದ ಇವರ ರಚನೆಗಳು ಗಮನ ಸೆಳೆಯುತ್ತವೆ. ಮಂದಗೆರೆ ಸೀತಾರಾಮಯ್ಯ ಕೇಶವ ಪ್ರಭು ಇವರ ಪೂರ್ಣ ಹೆಸರು. 1938 ಜುಲೈ 15ರಂದು ಮೈಸೂರಿನಲ್ಲಿ ಜನಿಸಿದರು. ಮಂದಗೆರೆ, ಹೊಳೆನರಸೀಪುರಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ಅನಂತರ ಮೈಸೂರಿನಲ್ಲಿ ವ್ಯಾಸಂಗಮಾಡಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಎಂ. ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಗಳಿಸಿದರು. ಮೊದಲಿಗೆ ಅಕೌಂಟೆಂಟ್ ಜನರಲ್ ಅವರ ಕಚೇರಿಯಲ್ಲಿ ಆಡಿಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು (1961–77). ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕರಾಗಿ (1977) ಧಾರವಾಡ, ಭದ್ರಾವತಿ, ಬೆಂಗಳೂರು ಕೇಂದ್ರಗಳಲ್ಲಿ ಸೇವೆ ಸಲ್ಲಿಸಿ ನಿಲಯದ ಸಹಾಯಕ ನಿರ್ದೇಶಕರಾಗಿ ನಿವೃತ್ತರಾದರು (1996).

ಬಾಲ್ಯದಿಂದಲೇ ಸಾಹಿತ್ಯ, ಸಂಗೀತ, ನಾಟಕಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದ ಇವರು ಪಾಶ್ಚಾತ್ಯ ಸಾಹಿತ್ಯವನ್ನು ಆಳವಾಗಿ ಹಾಗೂ ವ್ಯಾಪಕವಾಗಿ ಅಧ್ಯಯನ ಮಾಡಿದ್ದರು. ರಾ.ಶಿ. ಅವರ 'ಕೊರವಂಜಿ'ಯಲ್ಲಿ ಹಾಸ್ಯಲೇಖನಗಳನ್ನು ಬರೆಯಲು ಪ್ರಾರಂಭಿಸಿ ಮುಂದುವರೆಸಿದರು. ಪ್ರಬುದ್ಧವಾದ ಸುಸಂಸ್ಕೃತ ಹಾಸ್ಯಕ್ಕೆ ಇವರ ಲೇಖನಗಳು ಮಾದರಿಯಾಗಿವೆ. ಸಮಕಾಲೀನ ರಾಜಕೀಯ, ಸಾಮಾಜಿಕ ಪರಿಸ್ಥಿತಿಯನ್ನು ಸೂಕ್ಷ್ಮವಾದ ವ್ಯಂಗ್ಯ – ವಿಡಂಬನೆಯ ದೃಷ್ಟಿಕೋನದಿಂದ ನೋಡಲಾಗಿದೆ. 'ವಿರೋಧ ವಿಲಾಸ' (1999) ಇವರ ಹಾಸ್ಯಲೇಖನಗಳ ಒಂದು ಸಂಕಲನ. ಸಣ್ಣಕತೆಯ ಕ್ಷೇತ್ರದಲ್ಲಿ ಇವರ ಸಾಧನೆ ವಿಶಿಷ್ಟವಾದದ್ದು. ಬದುಕಿನ ಯಾಂತ್ರಿಕತೆ, ಜಡತ್ವ, ಅಪರಿಪೂರ್ಣತೆ, ಕ್ಲೇಶಗಳಿಂದ ಬಿಡುಗಡೆ ಪಡೆಯಲು ಹಾಗೂ ಸಾಹಿತ್ಯದ ಮಿತಿಗಳನ್ನು ದಾಟಲು ಫ್ಯಾಂಟಸಿ ಒಂದು ಉತ್ತಮ ಸಾಧನ ಎಂದು ತಿಳಿದು ಈ ಪ್ರಕಾರದ ಹಲವು ರೂಪಗಳನ್ನು ತಮ್ಮ ಸಣ್ಣಕತೆಗಳಲ್ಲಿ ಪ್ರಯೋಗಿಸಿದರು. 'ಬೆತ್ತಲೆ–ಅರಸನ ರಾಜರಹಸ್ಯ' (1981), ಮುಖಾಬಿಲೆ (1991) –ಇವು ಇವರ ಎರಡು ಕಥಾಸಂಕಲನಗಳು. ಫ್ಯಾಂಟಸಿ ಪ್ರಕಾರಕ್ಕೇ ಸೇರುವ ರಷ್ಯನ್, ಜರ್ಮನ್, ಇಟಾಲಿಯನ್, ಮೆಕ್ಸಿಕನ್ ಹಾಗೂ ಜಪಾನಿ ಮೂಲದ ಎಂಟು ಕತೆಗಳನ್ನು ಇವರು 'ಕೆಲವು ವಿದೇಶಿ ಕತೆಗಳು' ಎಂಬ ಸಂಕಲನದಲ್ಲಿ ಪ್ರಕಟಿಸಿದ್ದಾರೆ (1977). 'ಕಾಣೆಯಾದ ಟೋಪಿಯ ರಹಸ್ಯ ಮತ್ತಿತರ ಕಥೆಗಳು' (2000) 42ಕತೆಗಳನ್ನೊಳಗೊಂಡ ಒರಿಯದ ಲೇಖಕ ಮನೋಜ್ ದಾಸರ ಕತೆಗಳ ಅನುವಾದಿತ ಕೃತಿ. ಮಲ್ಲಿಗೆ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ 'ಪೋಕರಿ ಪಾಪಣ್ಣನ ಪರಾಕುಗಳು' ಮಕ್ಕಳಿಗಾಗಿ ಕಾರ್ಲೊಕಲ್ಲೋಡಿ ಬರೆದ 'ಪಿನಾಕಿಯೊ'ದ ಕನ್ನಡ ರೂಪಾಂತರ. 'ಎಲ್ಲರ ಮೂಗಿನಕಥೆ' ಮೂಗಿನ ಬಗೆಗಿರುವ 6 ಕಥೆಗಳನ್ನು ಒಳಗೊಂಡಿದೆ. ಜಪಾನಿ ಮಲಯಾಳಂ, ರಷ್ಯನ್ ಮೂಲದ ಹಾಗೂ ಕನ್ನಡದ ಕಥೆಗಳ ಸಂಚಿಕೆಯೊಂದನ್ನು ಇವರು ಸಂಪಾದಿಸಿದ್ದಾರೆ. ಕನ್ನಡದ ಹತ್ತು ಪತ್ತೇದಾರಿಕಥೆಗಳ ಪ್ರಾತಿನಿಧಿಕ ಸಂಕಲನ 'ಶೋಧ' (2000) ಇವರ ಇನ್ನೊಂದು ಸಂಪಾದಿತ ಕೃತಿ. ಬಕ ಇವರು ರಚಿಸಿದ ಉತ್ತಮ ನಾಟಕಗಳಲ್ಲೊಂದು (1977). ಮಹಾಭಾರತದ ಬಕಾಸುರನ ಕತೆ ಈ ನಾಟಕದ ಮೂಲ ಹಂದರವನ್ನೊದಗಿಸಿದೆ. ತೀವ್ರ ದಾರುಣ ಪರಿಸ್ಥಿಯಲ್ಲಿ ಸಮಾಜದಲ್ಲಿ ತಾಂಡವವಾಡುವ ಶೋಷಕ–ಶೋಷಿತ ಸಂಬಂಧಗಳ ಚಿತ್ರಣ ಈ ನಾಟಕಕ್ಕೆ ಸಾರ್ವಕಾಲಿಕ ಪ್ರಸ್ತುತತೆಯನ್ನು ತಂದುಕೊಟ್ಟಿದೆ.ಭಾರತದಲ್ಲಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ರಚಿತವಾದ ನಾಟಕವಿದು. ಈ ನಾಟಕದ ರಾಜಕೀಯ ಒಳದನಿಗಳನ್ನೇ ಎತ್ತಿತೋರಿಸುವ ರಂಗ ಪ್ರದರ್ಶನಗಳು ನಾಟಕಕ್ಕೆ ಹೆಚ್ಚಿನ ಜನಪ್ರಿಯತೆ ಗಳಿಸಿಕೊಟ್ಟವು. ತಪ್ಪಿಸಿಕೊಂಡಿದ್ದಾರೆ, ಕಡೇ ಗಲ್ಲಿ ಕಡೇ ಮನೆ – ಇವೆರಡು ಇವರ ಅಸಂಗತ ಕಿರುನಾಟಕಗಳು.

ಜ್ಯೂಲಿಯಸ್ ಸೀಸರನ ಸಹವರ್ತಿ ಸಿಸಿರೊ ಎಂಬ ರಾಜಕೀಯ ವ್ಯಕ್ತಿಯ ದುರಂತ, ಹಾಗೇ ಇಡೀ ಸಂಸ್ಕೃತಿಯ ಪತನ ಸಿಸಿರೊ ನಾಟಕದಲ್ಲಿ ಚಿತ್ರಿಸಲ್ಪಟ್ಟಿದೆ (1994). ರೋಮನ್ ಚರಿತ್ರೆಯನ್ನಾಧರಿಸಿದ ಮೊದಲ ಕನ್ನಡದ ಸ್ವತಂತ್ರ ನಾಟಕವಿದು. ಸಮತೆಂತೋ ನಾಟಕ ಸ್ಪರ್ಧೆಯಲ್ಲಿ 'ಸಿಸಿರೊ' ಮೂರನೆಯ ಬಹುಮಾನ ಗಳಿಸಿತು.ಒಳ್ಳೆಯ ಸಮಯ ಮತ್ತು ಇತರ ನಾಟಕಗಳು (2002) ಎಂಬ ಕೃತಿ ನಾಲ್ಕು ಕಿರುನಾಟಕಗಳನ್ನು ಒಳಗೊಂಡಿದೆ. ಇವುಗಳಲ್ಲಿ ಎರಡು ಏಕಾಂಕ ನಾಟಕಗಳು; ಉಳಿದೆರಡು ರೇಡಿಯೊನಾಟಕಗಳು. ಪ್ರಖ್ಯಾತ ಅಸಂಗತ ನಾಟಕಕಾರ ಯೂಜೀನ್ ಅಯನೆಸ್ಕೋನ ಲರ್‍ವಾಸೆಮುರ್ ನಾಟಕದ ರೂಪಾಂತರವಾದ 'ಮಹಾಪ್ರಸ್ಥಾನ' (1980), ತೌಫಿಕ್ ಅಲ್ ಹಕೀಮನ ನಾಟಕದ ರೂಪಾಂತರವಾದ ಗುಲಾಮನ–ಸ್ವಾತಂತ್ರ್ಯಯಾತ್ರೆ (2002) ಇವೆರಡೂ ಯಶಸ್ವಿ ರಂಗ ಪ್ರಯೋಗಗಳನ್ನು ಕಂಡಿವೆ. ಒಳ್ಳೆಯ ಸಮಯ ಮತ್ತು ಇತರ ನಾಟಕಗಳು ಹಾಗೂ ಗುಲಾಮನ ಸ್ವಾತಂತ್ರ್ಯಯಾತ್ರೆ ಇವು ಇವರ ನಿಧನಾನಂತರದ ಪ್ರಕಟಣೆಗಳಾಗಿವೆ.

ಇವರ ಸಾಹಿತ್ಯಕ ಸಾಧನೆಗಾಗಿ ವರ್ಧಮಾನ ಪ್ರಶಸ್ತಿ (ಬಕ), ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು (ಬಕ,ಸಿಸಿರೊ) ದೊರೆತಿವೆ. (ಎಂ.ಎಂ.)

**ಪ್ರಭುಗ:** ಸು. 1520. ವೀರಶೈವ ಕವಿ. ಚೂಡನಾಸ್ಥಾನ, ವೈಭೋಗ ರಾಜಾಸ್ಥಾನ ಎಂಬ ಗ್ರಂಥಗಳ ಕರ್ತೃ. ಗುಬ್ಬಿಯ ಮಲ್ಲಣಾಚಾರ್ಯನ ಸಮಕಾಲೀನ. ಗುಮ್ಮಳಾಪುರದ ಶಾಂತೇಶನ ದೌಹಿತ್ರ ಮತ್ತು ಚಿಕ್ಕಾರ್‍ಯನ ಮಗ. ಈತ ತನ್ನ ಕವಿತಾ ಪ್ರೌಢಿಮೆಯನ್ನು ಅತಿಯಾಗಿ ಸ್ತುತಿಸಿಕೊಂಡಿದ್ದಾನೆ.

ಚೂಡನಾಸ್ಥಾನ ಚಂಪೂವಿನಲ್ಲಿದೆ. ಇದರಲ್ಲಿ 101 ಪದ್ಯಗಳಿವೆ. ಚೂಡೆಯ ಲಿಂಗ. ಶೌಂಡನಾಥ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನದ ವರ್ಣನೆ ಕಾವ್ಯವಸ್ತು.

ವೈಭೋಗರಾಜಾಸ್ಥಾನ ಚಂಪೂವಿನಲ್ಲಿದ್ದು 101 ಪದ್ಯಗಳನ್ನೊಳಗೊಂಡಿದೆ. ವೈಭೋಗರಾಜ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನದ ವರ್ಣನಾಕೃತಿಯಾಗಿದೆ. ಈ ಕಾವ್ಯವನ್ನು ಮಲ್ಲಣಾರ್ಯ ಮುಂತಾದವರು ನಾನಾಲಂಕಾರ ಚಿತ್ರ ಭಾವರಸಗಳಿಂದ ರಚಿಸು ಎಂದು ಹೇಳಲು ತಾನು ರಚಿಸಿದೆ ಎಂದು ಕವಿ ಹೇಳಿಕೊಂಡಿದ್ದಾನೆ. ಎರಡು ಕಾವ್ಯಗಳಲ್ಲೂ ಕವಿ ಸಾಂಪ್ರದಾಯಿಕವಾಗಿ ಕಥೆಯನ್ನು ಪ್ರಾರಂಭಿಸಿದ್ದಾನೆ. ಚೂಡನಾಸ್ಥಾನದ ಉತ್ಕೃಷ್ಟತೆಯನ್ನು ಪ್ರಸ್ತಾಪಿಸುತ್ತ ಕವಿ ಹದವಾದ ಸಂಸ್ಕೃತ–ಕನ್ನಡಗಳ ಮಿಶ್ರಣದಿಂದ ಬರೆದ ಈ ಕೃತಿ ಸರಸತಿಯರ ನೆಲೆಯಿದಾಯ್ತು ಎನ್ನುವುದು ಗಮನಾರ್ಹವಾಗಿದೆ. ಕೆಲವು ಪದ್ಯಗಳನ್ನು ಲಕ್ಷಿಸಿ ಹೇಳುವುದಾದರೆ ಇವನದು ಸರಳವಾದ, ಸ್ಫುಟವಾದ ಶೈಲಿ ಎನ್ನಬಹುದು. (ಎನ್.ಎಸ್.ಟಿ.)

**ಪ್ರಸನ್ನ, ಇ.ಎ.ಎಸ್.:** 1940–. ಭಾರತದ ಪ್ರಸಿದ್ಧ ಕ್ರಿಕೆಟ್ ಆಟಗಾರರಲ್ಲೊಬ್ಬರು. ಪ್ರಪಂಚದ ಶ್ರೇಷ್ಠ ಆಫ್ ಸ್ಪಿನ್ನರ್ ಎಂದು ಖ್ಯಾತರಾಗಿದ್ದಾರೆ. ಎರ್ರಪಲ್ಲಿ ಅನಂತರಾವ್ ಶ್ರೀನಿವಾಸಪ್ರಸನ್ನ ಎಂಬುದು ಇವರ ಪೂರ್ಣ ಹೆಸರು. 1940ರ ಮೇ 22ರಂದು ಮೈಸೂರಿನಲ್ಲಿ ಜನಿಸಿದರು. ಇವರ ವಿದ್ಯಾಭ್ಯಾಸ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಆಯಿತು. ಅನಂತರ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ

ಬಿ.ಇ. ಪದವಿ ಗಳಿಸಿದರು. ಪ್ರಸನ್ನ ಅವರು ಓದುತ್ತಿರುವಾಗಲೇ ಉತ್ತಮ ಕ್ರಿಕೆಟ್ ಪಟು ಎನಿಸಿಕೊಂಡಿದ್ದರು. ಇನ್ನೂ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಇವರ ತಂದೆ ತೀರಿಕೊಳ್ಳಲು, ಇವರ ವಿದ್ಯಾಭ್ಯಾಸಕ್ಕೆ ಮೈಸೂರು ರಾಜ್ಯ ಕ್ರಿಕೆಟ್ ಸಂಸ್ಥೆ ನೆರವು ನೀಡಿತು. ಪ್ರಸನ್ನ ಅವರು ಕುದುರೆಮುಖ ಕಬ್ಬಿಣ ಅದುರು ಕಂಪನಿಯಲ್ಲಿ ಸೀನಿಯರ್ ಇನ್ಸ್‌ಪೆಕ್ಟರ್ ಆಗಿದ್ದರು.

ಪ್ರಸನ್ನ ಅವರು ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯದಲ್ಲಿ ಮೊದಲು ಆಡಿದ್ದು ಹೈದರಾಬಾದ್ ವಿರುದ್ಧ ನಡೆದ ರಣಜಿ ಪಂದ್ಯದಲ್ಲಿ (1961). ಆಗ ಮೈಸೂರಿನ ಪರವಾಗಿ ಆಡಿದ ಇವರು 15 ರನ್‌ಗಳಿಗೆ 3 ವಿಕೆಟ್ ಪಡೆದುದಲ್ಲದೆ 26 ರನ್ನುಗಳನ್ನು ಗಳಿಸಿ ಪ್ರಥಮ ದರ್ಜೆ ಪಂದ್ಯಗಳಲ್ಲಿ ತಮ್ಮ ಸ್ಥಾನವನ್ನು ಭದ್ರಗೊಳಿಸಿಕೊಂಡರು. ಕೇರಳದ ವಿರುದ್ಧ ಇನ್ನೊಮ್ಮೆ ಒಂದೇ ಇನ್ನಿಂಗ್ಸ್‌ನಲ್ಲಿ 8 ವಿಕೆಟ್ ಪಡೆದು ಕರ್ನಾಟಕಕ್ಕೆ ಕೀರ್ತಿ ತಂದರು. 1961-62ರಲ್ಲಿ ಭಾರತಕ್ಕೆ ಬಂದ ಎಂ.ಸಿ.ಸಿ. ತಂಡದ



ವಿರುದ್ಧ ದಕ್ಷಿಣ ವಲಯದ ಪರವಾಗಿ ಆಡಿ 56 ರನ್ನುಗಳಿಗೆ 6 ವಿಕೆಟ್ ಪಡೆದು ರಾಷ್ಟ್ರದ ಹಿರಿಯ ಕ್ರಿಕೆಟ್ ಪರಿಣತರ ಗಮನ ಸೆಳೆದರು. ಅದೇ ವರ್ಷ ಮದರಾಸಿನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಪ್ರಥಮ ಟೆಸ್ಟಿನಲ್ಲಿ ಪ್ರಸನ್ನ ಅವರಿಗೆ ಪ್ರಥಮವಾಗಿ ಟೆಸ್ಟ್ ಪಂದ್ಯಗಳಲ್ಲಿ ಆಡುವ ಅವಕಾಶ ದೊರಕಿತು. ಉತ್ತಮ ಬ್ಯಾಟುಗಾರರೂ ಎನಿಸಿದ ಪ್ರಸನ್ನ ಅವರು 1965ರ ರಣಜಿ ಪಂದ್ಯಗಳಲ್ಲಿ ಮದರಾಸು ವಿರುದ್ಧ 43 ರನ್ ಗಳಿಸಿದರು. 1973ರಲ್ಲಿ ಮದರಾಸಿನಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಟೆಸ್ಟ್ ಪಂದ್ಯದಲ್ಲಿ ಇವರು 37 ರನ್ ಗಳಿಸಿದರು. ಪ್ರಸನ್ನ ಅವರು ಉತ್ತಮ ಫೀಲ್ಡರ್ ಎಂದು ಹೆಸರು ಪಡೆದವರು. ಹತ್ತಕ್ಕಿಂತಲೂ ಹೆಚ್ಚು ಕ್ಯಾಚ್‌ಗಳನ್ನು ಹಿಡಿದಿದ್ದಾರೆ. ಇವರು (ಜನವರಿ, 1976) 36 ಟೆಸ್ಟ್ ಪಂದ್ಯಗಳಲ್ಲಿ ಆಡಿ 4,674 ರನ್ ನೀಡಿ 163 ವಿಕೆಟ್‌ಗಳನ್ನು ಪಡೆದರು. ಇಂಗ್ಲೆಂಡ್, ಆಸ್ಟ್ರೇಲಿಯ, ವೆಸ್ಟ್ ಇಂಡೀಸ್ ಮೊದಲಾದ ರಾಷ್ಟ್ರಗಳ ಪ್ರಸಿದ್ಧ ಕ್ರಿಕೆಟ್ ಪಟುಗಳು ಪ್ರಸನ್ನ ಅವರ ಅದ್ಭುತ ಬೌಲಿಂಗ್ ವಿಧಾನವನ್ನು ಪ್ರಶಂಸಿಸಿದ್ದಾರೆ.

ವಿನಯಶೀಲ ಹಾಗೂ ಸರಳ ವ್ಯಕ್ತಿಯಾದ ಇವರು ರಣಜಿ ಪಂದ್ಯಗಳಲ್ಲಿ ಕರ್ನಾಟಕ ಪಂಗಡದ ನಾಯಕರಾಗಿದ್ದರು. ಇವರಿಗೆ ಭಾರತ ಸರ್ಕಾರ 1968ರಲ್ಲಿ ಅರ್ಜುನ ಪ್ರಶಸ್ತಿಯನ್ನೂ 1970ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ. (ಎಸ್.ಎಚ್.ಕೆ.)

**ಪ್ರಸನ್ನ ವೆಂಕಟದಾಸ:** ಸು. 1680-1752. ಪ್ರಸಿದ್ಧ ಹರಿದಾಸರು. ಹಿಂದಿನ ಬಿಜಾಪುರ ಜಿಲ್ಲೆಯ ಬಾಗಲಕೋಟೆ (ಈಗ ಜಿಲ್ಲೆ) ಇವರ ಜನ್ಮಸ್ಥಳ. ತಂದೆ ನರಸಪ್ಪಯ್ಯ, ತಾಯಿ ಲಕ್ಷ್ಮೀಬಾಯಿ, ವೆಂಕಟೇಶ ಎಂಬುದು ಇವರ ಜನ್ಮನಾಮ. ವೆಂಕಪ್ಪಯ್ಯ ಎಂದೂ ಇವರನ್ನು ಕರೆಯುತ್ತಿದ್ದರು. ಬಾಲ್ಯದಲ್ಲೇ ತಂದೆತಾಯಿಯರು ತೀರಿಕೊಂಡದ್ದರಿಂದ ಅಣ್ಣ-ಅತ್ತಿಗೆಯರ ಆಶ್ರಯದಲ್ಲಿ ಬೆಳೆದರು. ದನಕರುಗಳನ್ನು ಮೇಯಿಸುವ ಕೆಲಸವನ್ನು ಕೈಗೊಂಡಿದ್ದ ಇವರು ಬೇಸತ್ತು ಮನೆ ಬಿಟ್ಟು ತಿರುಪತಿಗೆ ಬಂದು ಅಲ್ಲಿ ಹರಿದಾಸರ ಪ್ರೇರಣೆ ಹಾಗೂ ವೆಂಕಟೇಶನ ಅನುಗ್ರಹದಿಂದ ಕೃತಿರಚನೆಗೆ ತೊಡಗಿದರು. ಮುದ್ಗಲ ಜನಾರ್ದನಾಚಾರ್ಯ ಎಂಬುವರಲ್ಲಿ ಭಾಗವತ, ಭಾರತ, ಸಂಸ್ಕೃತ, ದ್ವೈತಸಿದ್ಧಾಂತ ಮೊದಲಾದವುಗಳ ಅಧ್ಯಯನ ನಡೆಸಿದರು. ಅನಂತರ ಪ್ರಸನ್ನ ವೆಂಕಟೇಶ ಎಂಬ ಅಂಕಿತದೊಂದಿಗೆ ಕೀರ್ತನೆಗಳನ್ನು ರಚಿಸಿ ಪ್ರಸನ್ನವೆಂಕಟದಾಸರೆಂದು ಪ್ರಸಿದ್ಧರಾದರು. ಇದುವರೆಗೆ ಇವರ 203 ಕೀರ್ತನೆಗಳೂ 3 ಸುಳಾದಿಗಳೂ 3 ಉಗಾಭೋಗಗಳೂ ದೊರಕಿವೆ. ಹರಿನಾಮ ಮಹಿಮೆ, ಮಾಧ್ವಮತ ತತ್ತ್ವಗಳು, ಭಕ್ತಿ, ಸದಾಚಾರಗಳು, ಕೃಷ್ಣನ ಬಾಲಲೀಲೆಗಳ ವರ್ಣನೆ-ಇವು ಇವರ ಕೃತಿಗಳ ವಸ್ತು.

ಬಿಡಿರಚನೆಗಳನ್ನೇ ಅಲ್ಲದೆ ಇವರು ಕೆಲವು ದೀರ್ಘಕೃತಿಗಳನ್ನೂ ರಚಿಸಿದ್ದಾರೆ. ಸಮಸ್ತನಾಮಮಣಿಗಣಷಟ್ಚರಣ ಪದ್ಯಮಾಲಾ, ನಾರದರು ಕೊರವಂಜಿ ವೇಷ ತಾಳ್ದ ಚರಿತ್ರೆ, ನಾರಾಯಣಪಂಜರ, ಸತ್ಯಭಾಮಾವಿಲಾಸ ಅಥವಾ ಶ್ರೀಕೃಷ್ಣಪಾರಿಜಾತ, ಭ್ರಮರಗೀತೆ, ಪ್ರಸನ್ನವೆಂಕಟೇಶಭಾಗವತ-ಇವು ಮುಖ್ಯ ಕೃತಿಗಳು. ಪ್ರಥಮಸ್ಕಂದ ಭಾಗವತ, ಟಿಪ್ಪಣಿ, ಭಾಗವತ ಚತುರ್ಥಸ್ಕಂದ, ಷಷ್ಠಸ್ಕಂದ, ಮಹಾಭಾರತಸಾರನಿರ್ಣಯಟೀಕಾ, ಬ್ರಹ್ಮಸೂತ್ರಭಾಷ್ಯ, ಅಥರ್ವಣಟೀಕಾ, ತರ್ಕಭಾಷಾ ತರ್ಕಸಂಗ್ರಹ ದೀಪಿಕಾ-ಎಂಬ ಗ್ರಂಥಗಳನ್ನೂ ಇವರು ಬರೆದಿರುವಂತೆ ತಿಳಿಯುತ್ತದೆ. ಆದರೆ ಇವು ಉಪಲಬ್ಧವಿಲ್ಲ.

ಸಮಸ್ತನಾಮಮಣಿಗಣಷಟ್ಚರಣ ಪದ್ಯಮಾಲಾ ಭಾಮಿನೀ ಷಟ್ಪದಿಯಲ್ಲಿದೆ. ಇದರಲ್ಲಿ 71 ನುಡಿಗಳಿವೆ. 53ನೆಯ ನುಡಿ ಉಪಲಬ್ಧವಿಲ್ಲ. ಮೊದಲ 13 ನುಡಿಗಳಲ್ಲಿ ದೇವರ ಸ್ತೋತ್ರ ಮಾಡಿದೆ. 14ನೆಯ ನುಡಿಯಲ್ಲಿ ಸ್ವರಗಳ, ಅನುಸ್ವಾರ ವಿಸರ್ಗಗಳ ವಿಷಯ ಹೇಳಿದೆ. 15 ಮತ್ತು 16ನೆಯ ನುಡಿಗಳಲ್ಲಿ ವರ್ಗೀಯ ಅವರ್ಗೀಯ ವ್ಯಂಜನಗಳನ್ನೂ 17ರಿಂದ 47ರವರೆಗೆ ಕಾಗುಣಿತ ವಿಷಯವನ್ನೂ ಹೇಳಿದೆ. 47ರಿಂದ 57ರವರೆಗೆ ಅಂಕಿಗಳ ಪರಿಚಯ, 58ರಿಂದ 62ರವರೆಗೆ ಶಬ್ದ, ರಾಶಿಗಳ, ನಕ್ಷತ್ರಗಳ ವಿಷಯ, 67,68,69ನೆಯ ನುಡಿಗಳಲ್ಲಿ ದಶಾವತಾರ ವರ್ಣನೆ ನಿರೂಪಿತವಾಗಿದೆ. ಈ ಕೃತಿಯಿಂದ ದಾಸರಾಗಿದ್ದ ಸಂಸ್ಕೃತ-ಕನ್ನಡ ಜ್ಞಾನ ವ್ಯಕ್ತವಾಗುತ್ತದೆ.

ನಾರದರು ಕೊರವಂಜಿ ವೇಷ ತಾಳ್ದ ಚರಿತ್ರೆಯಲ್ಲಿ ರಾಗತಾಳಸಹಿತವಾದ 34 ಪದ್ಯಗಳೂ ಸೇರಿ 99 ನುಡಿಗಳಿವೆ. ಪ್ರತಿಯೊಂದು ಪದವೂ ಬೇರೆಬೇರೆ ರಾಗತಾಳಗಳಲ್ಲಿ. ನಾರದರು ಕೊರವಂಜಿ ವೇಷ ಧರಿಸಿ ರುಕ್ಮಿಣಿಯ ಬಳಿಗೆ ಹೋಗಿ ಕೃಷ್ಣನನ್ನು ವರಿಸುವಂತೆ ಆಕೆಯನ್ನು ಒಲಿಸುವುದೇ ಕೃತಿಯ ವಸ್ತು.

ನಾರಾಯಣಪಂಜರ ನಾರಾಯಣನ ಸ್ತೋತ್ರರೂಪವಾದ ಗ್ರಂಥ. ಇದರಲ್ಲಿ 40 ಪದ್ಯಗಳಿವೆ. ಪ್ರತಿ ನುಡಿಯ ಅಂತ್ಯದಲ್ಲೂ ನಾರಾಯಣ ಎಂಬ ಪದವಿದೆ.

ಸತ್ಯಭಾಮಾವಿಲಾಸ ಅಥವಾ ಶ್ರೀಕೃಷ್ಣಪಾರಿಜಾತದಲ್ಲಿ 29 ನುಡಿಗಳಿವೆ. ಈ ಗ್ರಂಥ ಒಂದು ಶ್ಲೋಕ, ಅನಂತರ ಒಂದು ಪದ-ಈ ಕ್ರಮದಲ್ಲಿ ರಚನೆಯಾಗಿದೆ. ಕೃಷ್ಣ ನಂದನವನದಿಂದ ಪಾರಿಜಾತ ವೃಕ್ಷವನ್ನು ತಂದು ಸತ್ಯಭಾಮೆಯ ಅಂಗಳದಲ್ಲಿ ನೆಡುವುದೇ ಇದರ ಕಾವ್ಯವಸ್ತು.

ಕೃಷ್ಣನ ಬಾಲಲೀಲೆಯ ವರ್ಣನೆ ಪ್ರಸನ್ನವೆಂಕಟೇಶ ಭಾಗವತದ ಉದ್ದೇಶ. ಇದು ಭಾಗವತದ ದಶಮಸ್ಕಂದದ ಮೊದಲ 43 ಅಧ್ಯಾಯಗಳನ್ನು ಆಯ್ದುಕೊಂಡು ಕನ್ನಡದಲ್ಲಿ ರಚಿಸಿದ ಗ್ರಂಥ. ನೇರವಾದ ಭಾಷಾಂತರವಲ್ಲ; ರೂಪಾಂತರವೆನ್ನಬಹುದು; ಮೂಲಕ್ಕೆ ಹೆಚ್ಚು ಸಮೀಪವಾಗಿದೆ.

ಭ್ರಮರಗೀತೆಯಲ್ಲಿ 9 ನುಡಿಗಳಿವೆ. ಭಾಗವತ ದಶಮಸ್ಕಂದ ಪೂರ್ವಾರ್ಧದ 47ನೆಯ ಅಧ್ಯಾಯದ 10-21ನೆಯ ಶ್ಲೋಕಗಳಲ್ಲಿ ಬರುವ

ಕಥೆ ಇಲ್ಲಿ ನಿರೂಪಿತವಾಗಿದೆ. ಗೋಪಿಯರು ಬೃಂದಾವನದಲ್ಲಿ ಭ್ರಮರ ವೊಂದರ ಗುಂಜಾರವ ಕೇಳಿ ತಮ್ಮ ಪ್ರಿಯಕರ ಕೃಷ್ಣನ ದೂತನೆಂದು ಭಾವಿಸಿ ಅದರ ಜೊತೆ ಸಂಭಾಷಿಸುವುದು ಇಲ್ಲಿನ ವಸ್ತು.

ದಾಸರ ಭಕ್ತಿಖ್ಯಾತಿಗಳು ಹರಡಿದಂತೆ ಇವರಿಗೆ ಆ ಕಾಲದಲ್ಲಿದ್ದ ಸರದಾರರು, ಸಾಮಂತರು, ಸುಭೇದಾರರು ಮತ್ತು ನಾಯಕರು ಹೊಲಮನೆ ಗಳನ್ನೂ ವರ್ಷಾಶನಗಳನ್ನೂ ಕೊಟ್ಟು ಸನ್ಮಾನಿಸಿದ್ದರು. ಕುರ್ಚಗೇರಿ, ಎಂಡಿಗೇರಿ, ಬಾಗಲಕೋಟೆ ಮೊದಲಾದ ಕಡೆ ಇವರಿಗೆ ಸನ್ಮಾನ ದೊರೆಯಿತು. ದಾಸರು ತಮ್ಮ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ಬಾದಾಮಿ ಯಲ್ಲಿ ನಿಧನಹೊಂದಿದರು. ಇವರ ಕಟ್ಟೆ ಬಾದಾಮಿಯಿಂದ ಪೂರ್ವಕ್ಕೆ ಇದೆ. ಪ್ರತಿವರ್ಷ ಬಾದಾಮಿಯಲ್ಲಿ ಭಾದ್ರಪದ ಶುದ್ಧ ದ್ವಾದಶಿಯಂದು ಪ್ರಸನ್ನವೆಂಕಟದಾಸರ ಆರಾಧನೆ ನಡೆಯುತ್ತದೆ. **(ಟಿ.ಎನ್.ಎನ್.)**

**ಪ್ರಸಾದ್,ಡಿ.ವಿ.**: 1962– . ಪ್ರಸಿದ್ಧ ಚದುರಂಗ ಆಟಗಾರ. 1962 ಜೂನ್ 16ರಂದು ಮದರಾಸಿನಲ್ಲಿ ಜನಿಸಿದರು. ಇವರ ತಂದೆ ಡಿ.ವಿ. ವೆಂಕಟರಮಣ್ ತಮಿಳುನಾಡಿನ ಪ್ರಸಿದ್ಧ ಆಟಗಾರರಾಗಿದ್ದರು. ತಂದೆ ಯಿಂದ ತರಪೇತು ಪಡೆದರು. ಇವರು 12ನೆಯ ವಯಸ್ಸಿನಲ್ಲಿ ಮದರಾಸಿ ನಲ್ಲಿ ಸೀನಿಯರ್ ದಕ್ಷಿಣವಲಯ ಚಾಂಪಿಯನ್‍ಷಿಪ್‍ನಲ್ಲಿ ಭಾಗವಹಿಸಿ ತಂಡದ ಶೇ. 50 ಅಂಕಗಳನ್ನು ಪಡೆದರು. ಪಟ್ಟಣದ ರಾಷ್ಟ್ರೀಯ ಬಿ. ಚಾಂಪಿಯನ್‍ಷಿಪ್‍ನ 15 ಸುತ್ತುಗಳ ಸ್ಪರ್ಧೆಯಲ್ಲಿ 4 ಒಬ್ಬ ಉತ್ತಮ ಆಟಗಾರರುಗಳಲ್ಲಿ ಒಬ್ಬರಾಗಿ ಗುರುತಿಸಲ್ಪಟ್ಟರು. ವಿಜೇತರಾಗಿ 6 ಪಂದ್ಯಗ ಳಲ್ಲಿ ಸಮಮಾಡಿಕೊಂಡು 13ನೆಯ ವಯಸ್ಸಿನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ 216 ಪಂದ್ಯಗಳಲ್ಲಿ ಭಾಗವಹಿಸಿ 105 ಪಂದ್ರಯಗಳಲ್ಲಿ ವಿಜಯ ಸಾಧಿಸಿದರು. 1978ರಲ್ಲಿ ಶ್ರೀಲಂಕ ಮುಕ್ತ ಟ್ರೋಫಿಯನ್ನು ಪಡೆದುಕೊಂಡರು.

ಅನಂತರ ಸಿಂಗಾಪುರದಲ್ಲಿ ನಡೆದ ಕಾಂಗ್ರೆಸ್‍ನಲ್ಲಿ 1980–81ರಲ್ಲಿ ದ್ವಿತೀಯ ಸ್ಥಾನಗಳಿಸಿದರು. (1980–81). ಅಂತಾರಾಷ್ಟ್ರೀಯ ಚೆಸ್ ಮಾಸ್ಟರ್ ಆಗಿ ತಮ್ಮ ಸ್ಥಾನವನ್ನು 8ರಿಂದ 6ಕ್ಕೆ ಉತ್ತಮಪಡಿಸಿಕೊಂಡರು (1984–85). 1985ರಲ್ಲಿ ಏಷ್ಯನ್ ದೆಹಲಿಯಲ್ಲಿ ನಡೆದ ಮಾಸ್ಟರ್ಸ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನೂ ಬಾಂಗ್ಲಾದೇಶದ ಏಷ್ಯನ್ ಮಾಸ್ಟರ್ ಚಾಂಪಿಯನ್‍ಷಿಪ್‍ನಲ್ಲಿ ತೃತೀಯ ಸ್ಥಾನವನ್ನೂ ಗಳಿಸಿದರು. 1986ರಲ್ಲಿ ಲಂಡನ್‍ನ ಕಾಮನ್‍ವೆಲ್ತ್ ಚಾಂಪಿಯನ್‍ಷಿಪ್‍ನ್ನು ಗೆದ್ದುಕೊಂಡರು ಅನಂತರ ತಂಡದ ನಾಯಕರಾಗಿ ಏಷ್ಯನ್ ಚಾಂಪಿಯನ್‍ಷಿಪ್‍ನ್ನು ಸಿಂಗಪೂರ್‌ನಲ್ಲಿ ಗೆದ್ದುಕೊಂಡರು.(1987) (1986,ದುಬೈ; 1988, ಯುಗೋಸ್ಲಾವಿಯ; ಗ್ರೀಸ್;1990 1992, ಮನಿಲ್ಲಾ; 1996, ಆರ್ಮೇನಿಯ) 1987ರಲ್ಲಿ ಚೆನ್ನದ 1990–91ರಲ್ಲಿ ರಾಷ್ಟ್ರೀಯ ಚಾಂಪಿಯನ್‍ಷಿಪ್ ಪಡೆದು ಕೊಂಡರು.1985 ರಿಂದ ಸತತವಾಗಿ ಚೆಸ್ ಒಲಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ಕರ್ನಾಟಕರಾಜ್ಯ ಸರ್ಕಾರ ಇವರನ್ನು ಸನ್ಮಾನಿಸಿದೆ. ಇವರಿಗೆ ನಾಲ್ಕು ಬಾರಿ ಕ್ರೀಡಾ ಪುರಸ್ಕಾರವನ್ನೂ ಏಕಲವ್ಯ ಪುರಸ್ಕಾರವನ್ನೂ ನೀಡಲಾಗಿದೆ.. ಬೆಂಗಳೂರು ಮಹಾನಗರಪಾಲಿಕೆ ಇವರಿಗೆ ಕೆಂಪೇಗೌಡ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ (1979). 1987ರಲ್ಲಿ ಭಾರತಸರ್ಕಾರ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿತು. ಇವರು ಈಗ ಇಂಡಿಯನ್ ಆಯಿಲ್ ಕಾರ್ಪೊರೇಷನ್ ನಲ್ಲಿ ಸೇಲ್ಸ್ ಅಧಿಕಾರಿಯಾಗಿದ್ದಾರೆ. **(ಎಸ್.ಆರ್.ಯು.)**

**ಪ್ರಾಗಿತಿಹಾಸ:** ಬಹುಪ್ರಾಚೀನ ಕಾಲದಲ್ಲಿದ್ದ ಜನ ಬಹುಮಟ್ಟಿಗೆ ನಿಸರ್ಗಾವಲಂಬಿಗಳಾಗಿ ಪ್ರಾಣಿಗಳನ್ನು ಬೇಟೆಯಾಡಿಕೊಂಡು ಅಲೆಮಾರಿಗ ಳಾಗಿ ಜೀವನ ಸಾಗಿಸುತ್ತಿದ್ದರು. ಈ ರೀತಿಯಲ್ಲಿ ಲಕ್ಷಾಂತರ ವರ್ಷಗಳು ಕಳೆದಮೇಲೆ ಅವರು ವ್ಯವಸಾಯ ಮತ್ತು ಪಶುಪಾಲನೆಗಳ ಮೂಲಕ ಆಹಾರ ಉತ್ಪಾದನೆಯಲ್ಲಿ ತೊಡಗಿ ಗ್ರಾಮಗಳನ್ನು ಸ್ಥಾಪಿಸಿಕೊಂಡು ಒಂದೆಡೆ ನಿಲ್ಲುವಂತಾದರು. ಕ್ರಮಕ್ರಮೇಣ ಇಂದು ನಾಗರಿಕತೆಯ ಭಾಗವಾಗಿ ಕಂಡುಬರುವ ಅನೇಕ ಸಾಂಸ್ಕೃತಿಕ ಅಂಶಗಳು ರೂಢಿಗೆ ಬರಲಾರಂಭವಾದುವು. ಈ ಸಾಂಸ್ಕೃತಿಕ ವಿಕಸನದಲ್ಲಿ ಬರವಣಿಗೆಯ ಕಲೆಯ ಆವಿಷ್ಕಾರ ಒಂದು ಮುಖ್ಯ ಘಟ್ಟ. ಯಾವುದೇ ದೇಶದ ಇತಿಹಾಸದಲ್ಲಿ ಸುಮಾರು ಆ ಘಟ್ಟದಾರಭ್ಯ ಐತಿಹಾಸಿಕ ಆಗು ಹೋಗುಗಳನ್ನು ತಿಳಿಯಲು ಲಿಖಿತ ದಾಖಲೆಗಳು ದೊರೆಯಲಾರಂಭಿಸು ತ್ತವೆ. ಯಾವ ಕಾಲದಿಂದ ಈ ರೀತಿಯ ದಾಖಲೆಗಳು ದೊರಕಲಾರಂಭ ವಾಗುತ್ತವೆಯೋ ಅಂದಿನಿಂದ ಈಚಿನ ಕಾಲವನ್ನು ಐತಿಹಾಸಿಕಯುಗ ವೆಂದೂ ವಿಂಗಡಿಸಿಕೊಳ್ಳುವುದು ರೂಢಿ. ಅಂದರೆ, ಪ್ರಾಚೀನ ಮಾನವನ ಆಗುಹೋಗುಗಳ ಪುನಾರಚನೆಗೆ ಲಿಖಿತ ಆಧಾರಗಳು ದೊರಕದೆ, ಆ ಜನ ಉಪಯೋಗಿಸುತ್ತಿದ್ದ ವಸ್ತುಗಳ ಅವಶೇಷಗಳ ಆಧಾರವನ್ನು ಮಾತ್ರ ಅವಲಂಬಿಸಿ ಯಾವ ಕಾಲದ ವಸ್ತುಸ್ಥಿತಿಗಳನ್ನು ತಿಳಿಯಬೇಕಾಗು ತ್ತದೋ ಅದನ್ನು ಪ್ರಾಗೈತಿಹಾಸಿಕ ಯುಗವೆಂದು ಕರೆಯಬಹುದು. ಆ ಯುಗದ ಅಧ್ಯಯನವೇ ಪ್ರಾಗಿತಿಹಾಸ. ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಐತಿಹಾಸಿಕ ಯುಗ ಅಶೋಕನ ಶಾಸನಗಳು ದೊರಕಿರುವುದರಾರಭ್ಯ. ಅಂದರೆ, ಕ್ರಿ.ಪೂ.ಸು. 3ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ ಎಂದು ಹೇಳಬಹುದು. ಆ ಹಿಂದಿನ ಮಾನವನ ಇತಿವೃತ್ತವೆಲ್ಲ ಪ್ರಾಗಿತಿಹಾಸದಲ್ಲಿ ಸೇರುತ್ತದೆ. *

ಅತಿ ಪ್ರಾಚೀನ ಕಾಲದಿಂದಲೂ ಸಾಮಾನ್ಯವಾಗಿ ಕರ್ನಾಟಕ ಭಾಗದಲ್ಲೆಲ್ಲಾ ನಿಸರ್ಗ ಸಂಪತ್ತು, ಅಂದರೆ ನೀರಿನ ಸೌಕರ್ಯ, ವಿವಿಧ ಸಸ್ಯ ಹಾಗೂ ಪ್ರಾಣಿಗಳ ವಿಪುಲತೆ ಮತ್ತು ಬೇಕಾದ ಸಾಧನಗಳನ್ನು ಮಾಡಿಕೊಳ್ಳಲು ಉಪಯುಕ್ತವಾದ ವಿವಿಧ ಜಾತಿಯ ಕಲ್ಲುಗಳು, ಅಲ್ಲಲ್ಲಿ ಇರುವುದರಿಂದ ಹಿಮಯುಗದ ಮಧ್ಯಭಾಗದಿಂದಲೇ ಅಂದರೆ ಸುಮಾರು 500,000 ವರ್ಷಗಳ ಹಿಂದಿನಿಂದಲೇ ಈ ಪ್ರದೇಶದಲ್ಲಿ ಮಾನವರು ಅಲ್ಲಲ್ಲಿ ಇದ್ದ ಬಗ್ಗೆ ಸೂಚನೆಗಳು ದೊರಕುತ್ತವೆ. ಅಂದಿನಿಂದ ಐತಿಹಾಸಿಕ ಯುಗದ ಪ್ರಾರಂಭದವರೆಗಿನ ಮಾನವನ ಇತಿವೃತ್ತವನ್ನು ಬೇರೆ ಬೇರೆ ಕಾಲದಲ್ಲಿದ್ದ ಸಂಸ್ಕೃತಿಯ ಸ್ವರೂಪದ ಆಧಾರದ ಮೇಲೆ, ಅದರಲ್ಲೂ ಮುಖ್ಯವಾಗಿ ವಿವಿಧ ಕಾಲಗಳಲ್ಲಿ ಆಯುಧೋಪಕರಣಗಳನ್ನು ತಯಾರಿಸಲು ವಿಶೇಷವಾಗಿ ಬಳಸಲಾಗುತ್ತಿದ್ದ ಪದಾರ್ಥದ ಹೆಸರಿನ ಮೇಲೆ, ಕ್ರಮವಾಗಿ ಶಿಲಾಯುಗ, ತಾಮ್ರಯುಗ ಮತ್ತು ಕಬ್ಬಿಣದ ಯುಗ ಎಂದೇ ವಿಂಗಡಿಸಿಕೊಳ್ಳುವ ರೂಢಿ ಇರುವುದಾದರೂ ಈಗ ಕರ್ನಾಟಕಕ್ಕೆ ಸಂಬಂಧಿಸಿದಂತೆ ಪ್ರಾಗಿತಿಹಾಸಜ್ಞರು ವಿಂಗಡಿಸುವ ಘಟ್ಟಗಳನ್ನು ಈ ರೀತಿ ನಿರ್ದೇಶಿಸಬಹುದು.

| | | |
|---|---|---|
| 1. | ಹಳೆ ಶಿಲಾಯುಗ (ಪೂರ್ವ ಶಿಲಾಯುಗ) | ಪ್ರಸಕ್ತಶಕಪೂರ್ವ ಸು. 10,00,000ದಿಂದ 10,000 ವರ್ಷಗಳವರೆಗೆ |
| 2. | ಸೂಕ್ಷ್ಮ ಶಿಲಾಯುಗ | ಪ್ರ.ಶ.ಪೂ.ಸು. 10,000–3,000 |
| 3. | ನವಶಿಲಾ–ತಾಮ್ರಶಿಲಾ ಯುಗ | ಪ್ರ.ಶ.ಪೂ.ಸು. 3,000–800 |
| 4. | ಕಬ್ಬಿಣದ ಯುಗ | ಪ್ರ.ಶ.ಪೂ. 1,500–300 |

### ಹಳೆಯ ಶಿಲಾಯುಗ

ಬ್ರಿಟಿಷ್ ಭೂವಿಜ್ಞಾನಿ ರಾಬರ್ಟ್ ಬ್ರೂಸ್‍ಫುಟ್ 19ನೆಯ ಶತಮಾನದ 7ನೆಯ ದಶಕದಲ್ಲಿ ದಕ್ಷಿಣ ಭಾರತದ ಹಲವಾರು ಸ್ಥಳಗಳಲ್ಲಿ ಮಾನವನ ಕಲ್ಲಿನ ಉಪಕರಣಗಳುಳ್ಳ ನೆಲೆಗಳನ್ನು ಮೊದಲು ಗುರುತಿಸಿದರು. ಇವರು ಕರ್ನಾಟಕದಲ್ಲಿ ತುಮಕೂರು, ಕಡೂರು, ನಿಡಘಟ್ಟ ಮತ್ತು

ಲಿಂಗದಹಳ್ಳಿ (ಚಿಕ್ಕಮಗಳೂರು ಜಿಲ್ಲೆ), ತಾಳ್ಯ (ಚಿತ್ರದುರ್ಗ ಜಿಲ್ಲೆ), ಹಳಕುಂಡಿ (ಬಳ್ಳಾರಿ ಜಿಲ್ಲೆ), ನ್ಯಾಮತಿ (ಶಿವಮೊಗ್ಗ ಜಿಲ್ಲೆ), ಖ್ಯಾಡ (ಬಿಜಾಪುರ ಜಿಲ್ಲೆ) ಈ ಸ್ಥಳಗಳಿಂದ ಸುಮಾರು 1873–80ರಲ್ಲಿ ಹಳೆಯ ಶಿಲಾಯುಗದ ಶಿಲಾಯುಧಗಳನ್ನು ಸಂಗ್ರಹಿಸಿದರು. 1924ರಲ್ಲಿ ಮೈಸೂರು ಸರ್ಕಾರದ ಭೂವಿಜ್ಞಾನ ಇಲಾಖೆಯ ಸಂಪತ್ತೈಯ್ಯಂಗಾರ್ ಅವರು ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿ ಮತ್ತು ಬಿಳಿಗೆರೆಗಳಲ್ಲಿ ಇಂಥ ಪ್ರಾಚೀನ ನೆಲೆಗಳನ್ನು ಶೋಧಿಸಿದರು. ಇತ್ತೀಚಿನ ವರ್ಷಗಳಲ್ಲಿ ಆರ್.ವಿ. ಜೋಶಿಯವರು ಮಲಪ್ರಭಾ ನದಿಯ ದಂಡೆಯಲ್ಲಿ, ಎಂ.ಎಸ್. ನಾಗರಾಜ ರಾವ್ ಅವರು ಧಾರವಾಡ ಜಿಲ್ಲೆಯ ಕೊಂಚೀಗೇರಿಯಲ್ಲಿ, ಜಡ್.ಡಿ. ಅನ್ಸಾರಿಯವರು ಬಳ್ಳಾರಿ ಜಿಲ್ಲೆಯ ನಿಟ್ಟೂರಿನಲ್ಲಿ ಅ. ಸುಂದರ ಅವರು ಸಾಲ್ವಡಗಿಯಲ್ಲಿ ಆರ್.ಎಸ್. ಪಪ್ಪು ಅವರು ಕೃಷ್ಣಾ–ಘಟಪ್ರಭಾ ದಂಡೆಯಲ್ಲಿ, ಕೆ. ಪದ್ದಯ್ಯನವರು ಭೀಮಾ–ಕೃಷ್ಣಾ ನದಿಗಳ ಸಂಗಮ ಪ್ರದೇಶವಾದ ಸುರಪುರ ಪ್ರದೇಶದಲ್ಲಿ ಎಸ್. ನಾಗರಾಜು ಅವರು ಅಮರಜಾ ನದಿ ಬಯಲಿನಲ್ಲಿ ಪರಿವೀಕ್ಷಣೆ ನಡೆಸಿ ಒಟ್ಟು ಸುಮಾರು 50ಕ್ಕೂ ಹೆಚ್ಚು ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಅಲ್ಲದೆ ಗುಲ್ಬರ್ಗ ಜಿಲ್ಲೆಯ ಹುಣಸಗಿ ಮತ್ತು ಬಿಜಾಪುರ ಜಿಲ್ಲೆಯ ಅನಗವಾಡಿಗಳಲ್ಲಿ ಉತ್ಖನನಗಳನ್ನು ನಡೆಸಲಾಗಿದೆ.

ಈ ಅನ್ವೇಷಣೆಗಳಿಂದ ಮತ್ತು ಉತ್ಖನನಗಳಿಂದ ಹಳೆಯ ಶಿಲಾಯುಗದ ಮಾನವನ ಸಂಸ್ಕೃತಿಯಲ್ಲಿ ಆದಿ, ಮಧ್ಯ ಹಾಗೂ ಅಂತ್ಯ ಹಳೆಯ ಶಿಲಾಯುಗ ಎಂದು ಮೂರು ಮುಖ್ಯ ಹಂತಗಳನ್ನು ಗುರುತಿಸಲಾಗಿದ್ದು, ಆಯಾಯ ಹಂತಗಳ ಸಂಸ್ಕೃತಿಯ ಸ್ಥೂಲ ಲಕ್ಷಣಗಳನ್ನು ಕಾಲಮಾನವನ್ನೂ ಆದಷ್ಟು ಸ್ಪಷ್ಟವಾಗಿ ಗುರುತಿಸಲಾಗಿದೆ. ಆದರೆ ಈ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಮಾನವನ ಪಳೆಯುಳಿಕೆಗಳು ದೊರೆತಿಲ್ಲ. ಕೇವಲ ಶಿಲಾಯುಧಗಳಷ್ಟೆ ದೊರೆತಿವೆ.

**ಆದಿ ಹಳೆಯ ಶಿಲಾಯುಗ:** ದಕ್ಷಿಣ ಕರ್ನಾಟಕದಲ್ಲಿ ಈ ಘಟ್ಟದ 30ಕ್ಕೂ ಹೆಚ್ಚು ನೆಲೆಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿ (ನೋಡಿ) ಮುಖ್ಯವಾದುದು. ಅಲ್ಲಿ ದೊರೆತ ಕಲ್ಲಿನ ಆಯುಧಗಳೆಲ್ಲ ಅಲ್ಲಿಯೇ ದೊರೆಯುವ ಬೆಣಚು ಉರುಟುಕಲ್ಲು ಗಳಿಂದ ಮಾಡಿದ್ದಾಗಿವೆ. ಕೆಲವೊಂದು ಆಯುಧಗಳು ಮಳೆನೀರಿನಿಂದ ಸಾಗಹಾಕಲ್ಪಟ್ಟ ಸುಮಾರು 0.60 ಮೀ–1.50ಮೀ ಆಳದಷ್ಟು ಮಣ್ಣಿನ ಪದರಿನ ಕೆಳಗೆ ಮರಳಿನ ಪದರಿನಲ್ಲಿ ದೊರೆತವು. ಅಲ್ಲಿಯ ಶಿಲಾಯುಧಗಳನ್ನು ಅವುಗಳ ಆಕಾರ ಮತ್ತು ಅವುಗಳನ್ನು ಸಿದ್ಧಮಾಡಲು ಬಳಸಿದ ತಂತ್ರ ಮತ್ತು ಸುಧಾರಣೆಗಳನ್ನು ಅನುಸರಿಸಿ ಮೂರು ತರಗತಿಗಳನ್ನಾಗಿ ವಿಂಗಡಿಸಬಹುದು; ಅಂಜೂರ ಹಣ್ಣಿನಾಕೃತಿಯ ಒರಟು ಒರಟಾದ ಅಬ್ಬೆವಿಲಿಯನ್ ರೀತಿಯ ಕೈಕೊಡಲಿಗಳು, ಸುಧಾರಿಸಿದ ಅಷೂಲಿಯನ್ ರೀತಿಯ ಕೈಕೊಡಲಿಗಳು ಮತ್ತು ದೀರ್ಘವೃತ್ತಾಕಾರದ ಚಕ್ಕೆಗಳು. ಎರಡನೆಯ ತರಗತಿಯ ಆಯುಧಗಳು ಅಷೂಲಿಯನ್ ಮಧ್ಯ ಕೊನೆ ಹಂತಗಳವಕ್ಕೆ ಸಮೀಪವಾಗಿವೆ. ಇವಲ್ಲದೆ ಮೊನಚಾದ ಚಕ್ಕೆಗಳು ಮತ್ತು ಸೀಳಲು ಉಪಯೋಗವಾಗುವಂಥ ಚಕ್ಕೆಗಳೂ ಈ ನೆಲೆಯ ಸಂಗ್ರಹದಲ್ಲಿವೆ. ಈ ಸಂಗ್ರಹದಲ್ಲಿ ಹಕ್ಕಿಯ ಕೊಕ್ಕಿನಾಕಾರದ ಒಂದು ವಿಧದ ಆಯುಧ ವಿಶಿಷ್ಟವಾದುದು. ಇದರಲ್ಲಿ ಬಳಸಿದ ತಂತ್ರ ಇಂಗ್ಲೆಂಡಿನ ಕ್ಲ್ಯಾಕ್ಟನ್–ಆನ್–ಸೀ ಸ್ಥಳದಲ್ಲಿಯ ಶಿಲಾಯುಧಗಳಲ್ಲಿಗೆ (ಕ್ಲ್ಯಾಕ್ಟೋನಿಯನ್) ಹೋಲುತ್ತದೆ. ಇವಲ್ಲದೆ, ಉರುಟುಕಲ್ಲಿನ ಒಂದು ಬದಿಯಲ್ಲಿ ಮಾತ್ರ ಚಕ್ಕೆಗಳನ್ನು ತೆಗೆದು ಮಾಡಿದ ಮಚ್ಚುಗತ್ತಿಯಂಥ ಅಯುಧಗಳೂ ಎರಡು ಬದಿಗಳಿಂದ ಕ್ರಮವಾಗಿ ಚಕ್ಕೆಗಳನ್ನು ತೆಗೆದು ಮಾಡಿದ ವರ್ತುಳಾಕಾರದ ಆಯುಧಗಳೂ ಇವೆ. ಈ ನೆಲೆಯಿಂದ



ಆದಿ ಹಳೆಯ ಶಿಲಾಯುಗದ ಆಯುಧಗಳು

ಉಂಡೆಕಲ್ಲಿನ ಆಯುಧ (1–3 ನಿಟ್ಟೂರು); ಅಬ್ಬೆವಿಲಿಯನ್ ಘಟ್ಟದ ಆಯುಧಗಳು–ಕೈಕೊಡಲಿ (5, 6, 9 ಕಿಬ್ಬನಹಳ್ಳಿ); ಕೊಕ್ಕು ತುದಿ ಆಯುಧ (4, 10 ಕಿಬ್ಬನಹಳ್ಳಿ), ವರೆಗ (11 ಕಿಬ್ಬನಹಳ್ಳಿ); ಅಷೂಲಿಯನ್ ಘಟ್ಟದ ಆಯುಧಗಳು–ಕೈಕೊಡಲಿ (7 ಕಿಬ್ಬನಹಳ್ಳಿ, 13 ಹುಣಸಗಿ); ಸೀಳುಗ (14 ಹುಣಸಗಿ); ವೃತ್ತಾಯುಧ (8 ಕಿಬ್ಬನಹಳ್ಳಿ, 15 ಹುಣಸಗಿ), ವರೆಗ (12 ಕಿಬ್ಬನಹಳ್ಳಿ)

ದೊರೆತ ಶಿಲಾಯುಧಗಳಲ್ಲಿ ಮೇಲೆ ವಿವರಿಸಿದ ಉಂಡೆ ಕಲ್ಲಿನ ತಿರುಳಿನ ಭಾಗದಿಂದ ಮಾಡಿದ ಪ್ರಕಾರಗಳ ಶಿಲಾಯುಧಗಳಲ್ಲದೆ ಅವುಗಳ ಚಕ್ಕೆಗಳಿಂದಮಾಡಿದ ಆಯುಧಗಳೂ ಇವೆ. ಇವೂ ಅಷೂಲಿಯನ್ ಪ್ರಕಾರದವೇ.

ಉತ್ತರ ಕರ್ನಾಟಕದ ಮಲಪ್ರಭಾ ನದಿ ದಂಡೆಯಲ್ಲಿ, ಸವದತ್ತಿ ತಾಲ್ಲೂಕಿನ ಕಾತರಾಳದಿಂದ ಹಿಡಿದು ಬಾದಾಮಿ ತಾಲ್ಲೂಕಿನ ಖ್ಯಾಡ–ಢಾಣಕಶಿರೂರುವರೆಗಿನ ಪ್ರದೇಶದ ಸುಮಾರು 21 ನೆಲೆಗಳಲ್ಲೂ ಕ್ರಮೇಣ ಪಟ್ಟದಕಲ್ಲಿನಲ್ಲೂ ಇತ್ತೀಚೆಗೆ ಐಹೊಳೆಯಲ್ಲಿಯೂ ಇಂಥ ನೆಲೆಗಳು ಶೋಧವಾಗಿವೆ. ಇದರಂತೆಯೇ ಕೃಷ್ಣಾ–ಘಟಪ್ರಭಾ ನದಿಗಳ ದಂಡೆ ಭಾಗಗಳಲ್ಲಿ ಕ್ರಮವಾಗಿ ಜಮಖಂಡಿ ತಾಲ್ಲೂಕಿನ ಆಸಂಗಿಯಿಂದ ಹಿಡಿದು ಯಲಿಗೂರುವರೆಗೂ ಮತ್ತು ಕೋವಳ್ಳಿಯಿಂದ ಸಾಲಗುಂಡಿಯವರೆಗೂ ಒಟ್ಟು 15 ನೆಲೆಗಳು ಶೋಧವಾಗಿವೆ. ಇವುಗಳಲ್ಲಿ ಘಟಪ್ರಭಾದ ಮೇಲಿರುವ ಅನಗವಾಡಿಯಲ್ಲಿ ಉತ್ಖನನವನ್ನೂ ಮಾಡಲಾಗಿದೆ. ಈ ನೆಲೆಗಳಲ್ಲಿ ಅತಿ ಮುಖ್ಯವಾದುವು ಖ್ಯಾಡ–ಢಾಣಕಶಿರೂರು ಮತ್ತು ಅನಗವಾಡಿ. ಈ ನೆಲೆಗಳಲ್ಲಿ ಶಿಲಾಯುಧಗಳು ಅಸಂಖ್ಯಾತವಾಗಿವೆ.

ಮೇಲೆ ಹೇಳಿದ ಘಟಪ್ರಭಾ ಮತ್ತು ಕೃಷ್ಣಾ–ಘಟಪ್ರಭಾ ಭಾಗದಲ್ಲೆಲ್ಲಾ ಕಲಾದಗಿ ಸರಣಿಯ ಗಷ್ಟು ಕಲ್ಲಿನ ಗುಡ್ಡಗಳು ಸಾಲುಸಾಲಾಗಿವೆ. ಪದರು ಪದರಾಗಿರುವ ಈ ಮರಳುಕಲ್ಲು ವಾಯುಗುಣ ವೈಪರೀತ್ಯದಿಂದ ರೂಪಾಂತರ ಹೊಂದಿ ಮೇಲ್ಭಾಗದಲ್ಲಿ ಅಲ್ಲಲ್ಲಿ ಬಿರುಕು ಬಿಟ್ಟು ಸಣ್ಣ ಸಣ್ಣ ತುಂಡುಕಲ್ಲುಗಳಾಗಿವೆ. ನದಿಗಳಂಚಿನಲ್ಲಿ ಮತ್ತು ಪಾತ್ರದಲ್ಲಿ ಅಪರಿಮಿತವಾಗಿರುವ ಈ ತುಂಡುಕಲ್ಲುಗಳು ಶಿಲಾಯುಗದ ಮಾನವನಿಗೆ ಬಹಳ ಉಪಯುಕ್ತವಾಗಿದ್ದವು. ಆದ್ದರಿಂದಲೇ ಈ ನದಿ ಬಯಲುಗಳಲ್ಲಿ ಇಂಥ ನೆಲೆಗಳ ಸಾಂಧ್ರತೆ ಹೆಚ್ಚಿದೆ.

ಶಿಲಾಯುಧಗಳಿಗೆ ಬಳಸಿದ ಕಲ್ಲುಗಳಲ್ಲಿ ಮುಖ್ಯವಾಗಿ ಎರಡು ತರಹದ್ದು; ಕಂದು ವರ್ಣದ ಮರಳುಕಲ್ಲು ಮತ್ತು ಬೆಣಚುಕಲ್ಲಿನ ರೂಪಕ್ಕೆ ಬಂದಿರುವ ಮರಳುಕಲ್ಲು. ಕೆಲವು ನೆಲೆಗಳಲ್ಲಿಯ ಆಯುಧಗಳು ನದಿಯ ಸೆಳೆತಕ್ಕೆ ಸಿಕ್ಕಿ ಮೂಲಸ್ಥಾನದಿಂದ ನೀರಿನೊಡನೆ ಸಾಗಿಬಂದಿವೆ. ಹೀಗಾಗಿ ಬಹಳಷ್ಟು ಆಯುಧಗಳು ಸವೆದುಹೋದ ಸ್ಥಿತಿಯಲ್ಲಿ ಸಿಗುತ್ತವೆ. ಮಲಪ್ರಭಾ ನದಿ ಬಯಲಿನ ನೆಲೆಗಳಲ್ಲಿ ದೊರೆತ ಆಯುಧಗಳು ಹೆಚ್ಚಾಗಿ ಚಕ್ಕೆಕಲ್ಲಿನವು. ಕಿಬ್ಬನಹಳ್ಳಿಯಲ್ಲಿರುವ ಹಾಗೆ ಉರುಟುಕಲ್ಲಿನ ಮೇಲ್ಮೈಯಿಂದ ಚಕ್ಕೆಗಳನ್ನು ಎಬ್ಬಿಸಿ ಮಾಡಿದ ಆಯುಧಗಳು ತೀರ ಕಡಿಮೆ. ಅಪರೂಪವಾಗಿ ಉರುಟುಕಲ್ಲಿನ ಆಯುಧಗಳು ಇವೆ.

ಆಯುಧಗಳಲ್ಲಿ ಕೈಗೊಡಲಿಗಳು ಹಾಗೂ ಸೀಳುವ, ಕತ್ತರಿಸುವ, ಹೆರೆಯುವ ಕೆಲಸಗಳಿಗೆ ಉಪಯೋಗವಾಗುವಂಥ ಚಕ್ಕೆಗಳು ಇವೆ. ಇವುಗಳಲ್ಲಿ ಮೊದಲನೆಯ ಎರಡು ವಿಧದ ಆಯುಧಗಳು ಹೆಚ್ಚಾಗಿವೆ. ಇವುಗಳನ್ನು ತಯಾರಿಸಲು ಅಷೂಲಿಯನ್ ತಾಂತ್ರಿಕ ವಿಧಾನವನ್ನು ಬಳಸಲಾಗಿದೆ; ಅಂದರೆ ಮೊದಲು ದೊಡ್ಡ ದೊಡ್ಡ ಚಕ್ಕೆಗಳನ್ನು ಒಂದು ದೊಡ್ಡ ಕಲ್ಲಿನಿಂದ ಎಬ್ಬಿಸುವುದು, ಮತ್ತು ಉದ್ದನೆಯ ಸಣ್ಣ ಕಲ್ಲಿನಿಂದ ಎತ್ತರದ ಉಬ್ಬುಗಳನ್ನು ಹಂತಹಂತವಾಗಿ ಹೊಡೆದು ತೆಗೆಯುವುದು, ಬಹಳ ಅಪರೂಪವಾಗಿ ಚಕ್ಕೆಕಲ್ಲಿನ ಆಯುಧಗಳ ಸಿದ್ಧತೆಯಲ್ಲಿ ಉಪಯೋಗಿಸಿದ ತಂತ್ರವು ಫ್ರಾನ್ಸಿನಲ್ಲಿಯ ಲೆವಾಲ್ವದಲ್ಲಿ ಕಲ್ಲಿನ ಆಯುಧಗಳನ್ನು ಮಾಡುವುದಕ್ಕೆ ಬಳಸಲಾದ ತಂತ್ರಕ್ಕೂ ಹೋಲುತ್ತದೆ. ಇಲ್ಲಿಯ ಆಯುಧಗಳು ಚೆನ್ನೈನ ಬಳಿಯಲ್ಲಿರುವ ಅತ್ತಿರಾಮಪಾಕ್ಕಂ, ಗೋದಾವರಿ ನದಿ ಬಯಲಿನಲ್ಲಿ ಹಾಗೂ ಆಫ್ರಿಕಾ ಖಂಡದ ವಾಲ್ ನದೀ ಬಯಲಿನ ಸ್ಟೆಲನ್‌ಬಾಷ್‌ನ 2–5ನೆಯ ಹಂತಗಳಲ್ಲಿ ಮತ್ತು ಉಗಾಂಡ ಮತ್ತು ಒಲ್ಡುವೈ ಕಣಿವೆಯಲ್ಲಿ ದೊರೆತ ಆಯುಧಗಳಿಗೆ ಬಹುಮಟ್ಟಿಗೆ ಹೋಲುತ್ತವೆ. ಒಟ್ಟಿನಲ್ಲಿ ಇಲ್ಲಿಯ ಶಿಲಾಯುಧಗಳು ಬಹುವಾಗಿ ತಾಂತ್ರಿಕತೆಯಲ್ಲಿ ಮತ್ತು ವೈವಿಧ್ಯತೆಯಲ್ಲಿ ಅಷೂಲಿಯನ್ ಶಿಲಾಯುಧಗಳಿಗೆ ಬಹಳಷ್ಟು ಹೋಲುತ್ತವೆ. ಬಹುಮಟ್ಟಿಗೆ ಇವು ಮಧ್ಯ ಮತ್ತು ಅಂತ್ಯ ಹಿಮಯುಗದ ಹಂತಗಳ ಕಾಲದ್ದಾಗಿವೆಯೆಂದು ಹೇಳಬಹುದು.

ಕೃಷ್ಣಾ–ಘಟಪ್ರಭಾದ ಬಯಲಿನಲ್ಲಿ ಅನಗವಾಡಿ ಒಂದು ಮುಖ್ಯವಾದ ನೆಲೆ. 1964ರಲ್ಲಿ ಆರ್.ಎಸ್.ಪಪ್ಪುರವರು ಈ ನೆಲೆಯಿಂದ ಸುಮಾರು 365 ಶಿಲಾಯುಧಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗಿ, ಈ ನೆಲೆಯು ಮಹತ್ತ್ವದ್ದೆಂದು ತೋರಿತು. ಆದ್ದರಿಂದ 1965ರಲ್ಲಿ ಸಣ್ಣ ಪ್ರಮಾಣದಲ್ಲಿ ಅವರು ಉತ್ಖನನ ನಡೆಸಿದರು. $1^1/_2$ ಮೀ ಚದರದ ಎರಡು ಗುಂಡಿಗಳನ್ನು ತೋಡಲಾಯಿತು. $^1/_2$ ಮೀ ಆಳದಲ್ಲಿ ಉರುಟುಕಲ್ಲು ಮರಳುಮಿಶ್ರಿತ ಪದರಿನಲ್ಲಿ ಇಂಥ ಶಿಲಾಯುಧಗಳಿದ್ದವು. ಈ ಪದರಿನ ಶುರುವಿನಿಂದ ಕೊನೆಯವರೆಗಿನ ವಿವಿಧ ಹಂತಗಳಲ್ಲಿ ದೊರೆತ ಆಯುಧಗಳು ಆಕಾರ ಮತ್ತು ತಂತ್ರಗಳಲ್ಲಿ ಒಂದೇ ರೀತಿಯದ್ದಾಗಿದ್ದು ಇವುಗಳ ತಯಾರಿಕೆಯಲ್ಲಿ ಸುಧಾರಿತ ಬದಲಾವಣೆಯೇನೂ ಕಂಡುಬರಲಿಲ್ಲ. ಎಲ್ಲವೂ ಮಲಪ್ರಭಾ ನದಿ ಬಯಲಿನ ಆಯುಧಗಳ ಹಾಗೇ ಇವೆ. ನೆಲೆಯ ಮೇಲೆ ಸೂಕ್ಷ್ಮಶಿಲಾಯುಗದ ಶಿಲಾಯುಧಗಳಿವೆ. ಕೋವಳ್ಳಿ ಮತ್ತೊಂದು ಮಹತ್ತ್ವದ ನೆಲೆ. ಇವೆರಡೂ ನೆಲೆಗಳಲ್ಲಿ ದೊರೆತ ಅಪೂರ್ಣ ಶಿಲಾಯುಧಗಳು ಮತ್ತು ಅವುಗಳನ್ನು ರೂಪಿಸುವಾಗ ತೆರೆದ ಚಕ್ಕೆಗಳೂ ಕೂಡ ಇವೆ. ಆದ್ದರಿಂದ ಇವುಗಳನ್ನು ರೂಪಿಸಿದ ಶಿಲಾಯುಗದ ಮಾನವನು ಆ ಭಾಗದಲ್ಲಿ ಜೀವಿಸುತ್ತಿದ್ದನೆಂದು ಮತ್ತು ಆಯುಧಗಳು ಅಲ್ಲಿಯೇ ಮಾಡಿದವುಗಳೆಂದೂ ಗೊತ್ತಾಗಿದೆ.

ಕೃಷ್ಣಾನದಿ ಕೆಳದಂಡೆ ಪ್ರದೇಶದಲ್ಲಿ ಹೆಚ್ಚಾಗಿ ಸುಣ್ಣಕಲ್ಲುಮಯವಾದ ಗಷ್ಟುಕಲ್ಲಿನ ಗುಡ್ಡೆಗಳಿವೆ. ಈ ಭಾಗದಲ್ಲಿರುವ ಸುರಪುರ ತಾಲ್ಲೂಕಿನ ಯಡಳ್ಳಿಯಲ್ಲಿ ಹಿಂದೆ ಒಂದೆರಡು ಶಿಲಾಯುಧಗಳನ್ನು ಬ್ರೂಸ್‌ಫುಟ್ ಅವರು ಸಂಗ್ರಹಿಸಿದ್ದರು. ಇತ್ತೀಚೆಗೆ ಬೆಳಕಿಗೆ ಬಂದ ಸುರಪುರ ತಾಲ್ಲೂಕಿನ ಹುಣಸಗಿ ಬಳಿಯ ನೆಲೆ ಕರ್ನಾಟಕದ ಪ್ರಾಗೈತಿಹಾಸಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಬಹು ಮುಖ್ಯವಾದ ನೆಲೆ. ಈ ನೆಲೆಯಲ್ಲಿ ಉತ್ಖನನವೂ ನಡೆದಿದ್ದು, ಆದಿ ಹಳೆಯ ಶಿಲಾಯುಗದಲ್ಲಿ ಅಂದರೆ ಕನಿಷ್ಠ 10 ಲಕ್ಷ ವರ್ಷಗಳಷ್ಟು ಹಿಂದೆ ಇಲ್ಲಿದ್ದ ಮಾನವರು ಮಳೆಗಾಳಿಗಳಿಂದ ರಕ್ಷಿಸಿಕೊಳ್ಳಲು ರಚಿಸಿಕೊಂಡಿದ್ದ ಒಂದು ರಚನೆಯ ಅವಶೇಷಗಳು ಬೆಳಕಿಗೆ ಬಂದುವು. ದೀರ್ಘವೃತ್ತಾಕಾರದ ಒಂದು ಆವರಣದ ಸುತ್ತ ಕಣಶಿಲೆಯ ಗುಂಡುಗಳು ಇಲ್ಲಿದ್ದುವು. ಅಲ್ಲದೆ ಈ ಆವರಣದಲ್ಲೇ ಆ ಕಾಲದ ಜನ ಆಯುಧಗಳನ್ನು ತಯಾರಿಸುತ್ತಿದ್ದರೆಂಬುದಕ್ಕೆ ಸೂಚನೆಗಳು ದೊರಕಿದುವು. ಇಲ್ಲಿ ದೊರಕಿರುವ ಆಯುಧಗಳು ಸುಣ್ಣ ಕಲ್ಲಿನದಾಗಿರುವುದೂ ಒಂದು ವಿಶೇಷ. ಆಯುಧಗಳು ವಿಶೇಷವಾಗಿ ಅಷೂಲಿಯನ್ ಪ್ರಕಾರದ ಕೈಕೊಡಲಿಗಳು. ಅಲ್ಲದೆ ಇಲ್ಲಿ ದೊರೆತ ಸಸ್ಯಪರಾಗಗಳ ಪರೀಕ್ಷೆಯಿಂದ ಆ ಕಾಲದಲ್ಲಿ ಇಲ್ಲಿದ್ದ ಸಸ್ಯವರ್ಗ ಈಗಿನ ರೀತಿಯದಕ್ಕಿಂತ ಅತಿ ಭಿನ್ನವಾಗಿರ ಲಿಲ್ಲವೆಂಬುದೂ ಬೆಳಕಿಗೆ ಬಂದಿತು. ಇದೇ ನೆಲೆಯಲ್ಲಿ ಉದ್ದಿಶ್ಯಪೂರ್ವಕ ವಾಗಿ ಬೇರೆಡೆಯಿಂದ ತಂದು ವಾಸದ ಆವರಣದಲ್ಲಿ ಶೇಖರಿಸಿದ್ದ ಕೆಂಪು ಮಣ್ಣಿನ ಹರಳುಗಳು ಸಹ ಕಂಡುಬಂದಿದ್ದು, ಇದು ಆ ಕಾಲದ ಜನ ಬಹುಶಃ ಕಲಾಭಿರುಚಿಯನ್ನೂ ಬೆಳೆಸಿಕೊಂಡಿದ್ದರೆಂಬುದಕ್ಕೂ ಸೂಚನೆಯಾಗಿದೆ. ಆದಿ ಹಳೆಯ ಶಿಲಾಯುಗಕ್ಕೆ ಸಂಬಂಧಿಸಿದಂತೆ ಪ್ರಪಂಚದ ಯಾವುದೇ ನೆಲೆಯಲ್ಲಿಯೂ ತತ್ಕಾಲೀನ ಜನಜೀವನದ ಬಗ್ಗೆ ಇಷ್ಟೊಂದು ವಿವರಗಳು ಒಟ್ಟಾಗಿ ದೊರಕಿಲ್ಲ. ಈ ರೀತಿ ಹುಣಸಗಿ ಒಂದು ವಿಶಿಷ್ಟ ಪ್ರಾಗೈತಿಹಾಸಿಕ

ನೆಲೆ. ಈ ಪ್ರದೇಶದ ಪರಿವೀಕ್ಷಣೆಯಲ್ಲಿ ಇನ್ನೂ ಕೆಲವು ನೆಲೆಗಳು ಪತ್ತೆಯಾದವು. ಅವುಗಳಲ್ಲಿ ಇಸಂಪುರ ಒಂದು. ಇಲ್ಲಿ ಉತ್ಖನನದಿಂದ ಶಿಲಾಯುಧಗಳನ್ನು ತಯಾರಿಸುವ ಪ್ರತಿಯೊಂದು ಹಂತದ ಅವಶೇಷಗಳು ದೊರೆಕಿರುವುದು ಅಪರೂಪದ ಸಂಗತಿ ಜೊತೆಗೆ ಆನೆ, ಜಿಂಕೆ, ಕುದುರೆ ಈ ಪ್ರಾಣಿಗಳ ಪಳೆಯುಳಿಕೆಗಳು ಸಿಕ್ಕಿವೆ. ಇವುಗಳ ಕಾಲಮಾನವನ್ನು ಇ.ಎಂ.ಆರ್. ವೈಜ್ಞಾನಿಕ ತಂತ್ರದಿಂದ ಗೊತ್ತು ಮಾಡಲಾಗಿದೆ. ಸುಮಾರು 10.5 ಲಕ್ಷ ವರ್ಷಗಳಷ್ಟು ಹಿಂದಿನದು ಎಂದು ನಿಷ್ಕರ್ಷಿಸಲಾಗಿದೆ. ಏಷ್ಯ ಖಂಡದಲ್ಲೆ ಇಷ್ಟು ಪ್ರಾಚೀನ ಆದಿ ಹಳೆ ಶಿಲಾಯುಗ ನೆಲೆ ಸದ್ಯಕ್ಕೆ ಇದೊಂದೆ.

ಶಿರಗುಪ್ಪ ತಾಲ್ಲೂಕಿನಲ್ಲಿ ತುಂಗಭದ್ರಾ ನದಿ ದಂಡೆಯ ಮೇಲಿರುವ ನಿಟ್ಟೂರಿನಲ್ಲಿ ಅನಿರೀಕ್ಷಿತವಾಗಿ ಹಾಗೂ ಅಪರೂಪವಾಗಿ ಮೊದಲನೆಯ ಬಾರಿಗೆ ಉರುಟುಕಲ್ಲಿನಿಂದ ಮಾಡಿದ ಮಚ್ಚಿನಂಥ ಆಯುಧಗಳು (ಚಾಪರ್) ದೊರೆತವು. ಇವು ದಕ್ಷಿಣ ಭಾರತದಲ್ಲೆಲ್ಲ ಹೆಚ್ಚಾಗಿ ಕಂಡು ಬಂದ ಕೈಕೊಡಲಿ-ಸೀಳುಗತ್ತಿ ಸಂಪ್ರದಾಯಕ್ಕೆ ಹೊಂದದೆ ಪಾಕಿಸ್ತಾನ ಪ್ರದೇಶದ ಸೋನ್ ನದೀ ಬಯಲಿನಲ್ಲಿ ಹೆಚ್ಚಾಗಿ ದೊರೆತಿರುವ ಮಚ್ಚುಗತ್ತಿ ಯಂಥ ಶಿಲಾಯುಧಗಳ ವರ್ಗ ಸೇರುತ್ತವೆ. ಈ ತಾಂತ್ರಿಕ ಪದ್ಧತಿ ದಕ್ಷಿಣ ಚೀನ, ಬರ್ಮ, ಇಂಡೋನೇಷ್ಯ, ಜಾವ ಭಾಗಗಳಲ್ಲಿ ಪ್ರಚಲಿತ ವಿತ್ತು. ದಕ್ಷಿಣ ಭಾರತದಲ್ಲೇ ಆದಿ ಹಳೆಯ ಶಿಲಾಯುಗದ ಈ ಸಾಂಸ್ಕೃತಿಕ ಸಂಪ್ರದಾಯದ ಒಂದು ನೆಲೆ ದೊರೆತದ್ದು ಇದೇ ಪ್ರಪ್ರಥಮ. ಅಲ್ಲದೆ ಇಲ್ಲಿ ಈ ಆಯುಧಗಳು ದೊರೆಯುವ ಸ್ತರದಲ್ಲೇ ಬಾಸ್ ನಮಾಡಿಕಸ್ ಎಂಬ ನಷ್ಟ ಜಾತಿಗೆ ಸೇರಿದ ದನಗೂಳಿಯ ಪಳೆಯುಳಿಕೆಗಳು ದೊರೆತುವು.

ಈ ಶೋಧನೆಗಳಿಂದ ಆದಿ ಹಳೆಯ ಶಿಲಾಯುಗದ ಮಾನವನು ಸದಾ ನೀರಿನ ಆಸರೆಯುಳ್ಳ ಹಾಗೂ ತನಗೆ ಬೇಕಾದ ಉಪಕರಣಗಳನ್ನು ಮಾಡಿಕೊಳ್ಳಲು ಸರಿಯಾದ ಕಲ್ಲುಗಳು ದೊರೆಯುವ ಪ್ರದೇಶದಲ್ಲೇ ತಿರುಗಾಡುತ್ತಿದ್ದು ಅಲ್ಲಲ್ಲಿ ವಾಸಿಸುತ್ತಿದ್ದ; ಆ ಪ್ರದೇಶಗಳಲ್ಲೆಲ್ಲ ಆ ಕಾಲದಲ್ಲಿ ಕಾಡುಗಳಿದ್ದುವು; ಪ್ರಾಣಿಗಳನ್ನು ಬೇಟೆಯಾಡುವುದು, ಗೆಡ್ಡೆಗೆಣಸು, ಬೋರೆ, ಉತ್ತುತ್ತೆ ಮುಂತಾದ ಹಣ್ಣುಗಳನ್ನು ಸಂಗ್ರಹಿಸುವುದು, ಇವು ಶಿಲಾಯುಗದ ಮಾನವನ ಆಹಾರ ಸಂಪಾದಿಸುವ ಕ್ರಮವಾಗಿತ್ತು ಎಂದು ಹೇಳಬಹುದು. ಹುಣಸಗಿಯ ಉತ್ಖನನದಿಂದ ಆ ಕಾಲದ ವಾಸ್ತವ್ಯದ ನೆಲೆಯ ಸ್ವರೂಪ, ಬಹುಶಃ ಆ ಕಾಲದ ಜನರಲ್ಲಿ ಕಲಾಪ್ರಜ್ಞೆ ಇದ್ದುದು-ಈ ವಿಷಯಗಳೂ ತಿಳಿಯುತ್ತವೆ. ಶಿಲಾಯುಧ ಅವಶೇಷಗ ಳೊಡನೆ ದೊರೆತ ಪಳೆಯುಳಿಕೆಗಳು ಹಾಗೂ ಬೇರೆ ದೇಶಗಳಲ್ಲಿ ಕಂಡುಬಂದಿರುವ ಸಾಮ್ಯ, ಸಂಸ್ಕೃತಿಗಳ ಕಾಲ ಇತ್ಯಾದಿ ಆಧಾರಗಳಿಂದ ಈ ಸಂಸ್ಕೃತಿ ಪ್ರಸಕ್ತಪೂರ್ವ ಸು. 10 ಲಕ್ಷದಿಂದ 1ಲಕ್ಷ ವರ್ಷಗಳ ಮಧ್ಯದ ಅವಧಿಯಲ್ಲಿ ಇದ್ದಿರಬೇಕೆಂದು ಊಹಿಸಲಾಗಿದೆ.

**ಮಧ್ಯ ಹಳೆಯ ಶಿಲಾಯುಗ:** ಈ ಹಂತದ ಶಿಲಾಯುಧಗಳು ಬಹಳ ಹಿಂದೆಯೇ ಶೋಧವಾಗಿದ್ದರೂ ಶಿಲಾಯುಗ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಇವುಗಳು ಯಾವ ಹಂತದ್ದೆಂದು ಆಗ ತಿಳಿದಿರಲಿಲ್ಲ.

1954-55ರಲ್ಲಿ ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ನೇವಾಸದ ಬಳಿ ಪ್ರವರಾನದಿಯ ದಂಡೆಯಲ್ಲಿ ಕಂಡುಬಂದ ಪದರಗಳಲ್ಲಿ, ಕೆಳಗಿನ ಪದರದಲ್ಲಿ ಆದಿ ಹಳೆಯ ಶಿಲಾಯುಗದ ಆಯುಧಗಳೂ ಮೇಲ್ಮಟ್ಟದಲ್ಲಿ ಸೂಕ್ಷ್ಮ ಶಿಲಾಯುಧಗಳು ದೊರೆತು, ಮಧ್ಯದ ಸಣ್ಣ ಮರಳಿನ ಪದರದಲ್ಲಿ ವಿಶಿಷ್ಟ ರೀತಿಯ ಶಿಲಾಯುಧಗಳು ದೊರೆತುವು. ಅಲ್ಲದೆ, ಈ ನದಿ ದಂಡೆಯಲ್ಲಿರುವ ಕಾಳೇಗಾಂವ್ ಎಂಬ ಗ್ರಾಮದಲ್ಲಿ ನಶಿಸಿಹೋದ ಒಂದು ಜಾತಿಯ ಎತ್ತಿನ ತಲೆಯ ಪಳೆಯುಳಿಕೆ ಮತ್ತು ಅದರಲ್ಲಿ ಸಿಕ್ಕಿಕೊಂಡಿದ್ದ ಇಂಥ ಶಿಲಾಯುಧಗಳೂ ದೊರೆತವು. ಆದ್ದರಿಂದ ಈ ಶಿಲಾಯುಧಗಳು ಶಿಲಾಯುಗದ ಒಂದು ಪ್ರತ್ಯೇಕ ಸಾಂಸ್ಕೃತಿಕ ಹಂತದ್ದೆಂದು, ಅದು ಕೊಡಲಿ-ಬಾಚಿ ಸಂಸ್ಕೃತಿ ಹಂತದ ಅನಂತರದ್ದೆಂದು ಮತ್ತು ಅದು ಹಿಮಯುಗದ ಕೊನೆಯ ಭಾಗದ ಕಾಲಕ್ಕೆ ಸೇರಿದ್ದೆಂದು ತಿಳಿಯಿತು. ಅನಂತರ ಕೆ.ಡಿ. ಬ್ಯಾನರ್ಜಿಯವರ ಅನ್ವೇಷಣೆಯಲ್ಲಿ, ಕರ್ನಾಟಕದಲ್ಲಿ ಮಲಪ್ರಭಾ ನದೀ ದಂಡೆಯಲ್ಲಿ, ತಮ್ಮಿನಹಾಳ ಬಳಿ




ಮಧ್ಯ ಹಳೆಯ ಶಿಲಾಯುಗದ ಉಪಕರಣಗಳು
ವರೆಗ (1 ತಮ್ಮಿನಹಾಳ, 3 ಬಾಗಲಕೋಟೆ), ಮೊನೆ (2 ಬಾಗಲಕೋಟೆ)

ಅದೇ ತರಹದ ಸಣ್ಣಮರಳಿನ ಪದರಿನಲ್ಲಿ ಇಂಥ ಶಿಲಾಯುಧಗಳು ದೊರೆತವು. ಈ ಸಂಸ್ಕೃತಿಯ ಅತ್ಯಂತ ವಿಸ್ತಾರವಾದ ನೆಲೆಗಳನ್ನು ಅ. ಸುಂದರ ಅವರು ಬಿಜಾಪುರ ಜಿಲ್ಲೆಯ ಸಾಲ್ವಡಗಿ ಮತ್ತು ಅದರ ಸುತ್ತಮುತ್ತಲಿನ ಮಟಕನ ದೇವನಹಳ್ಳಿ, ಕೂಚಬಾಳ ಹಳ್ಳಿಗಳಲ್ಲಿ ಶೋಧಿಸಿದರು. ಘಟಪ್ರಭಾ ಬಯಲಿನಲ್ಲಿ ಅನಗವಾಡಿ ಮತ್ತು ಕೋವಳ್ಳಿ ಅಲ್ಲದೆ ಬೇರೆ ನಾಲ್ಕು ಹಳ್ಳಿಗಳಲ್ಲಿ ಹಾಗೂ ಕೃಷ್ಣಾ ನದೀ ಬಯಲಿನಲ್ಲಿ ಸಾಲ್ವಡಗಿಯಿಂದ ಪೂರ್ವಕ್ಕೆ ಮತ್ತೆ ಏಳು ಹಳ್ಳಿಗಳಲ್ಲಿ ಇಂಥ ನೆಲೆಗಳನ್ನು ಪದ್ದಯ್ಯ ಅವರು ಶೋಧಿಸಿದ್ದಾರೆ. ಮೇಲೆ ವಿವರಿಸಿದ ನಿಟ್ಟೂರಿನ ನೆಲೆಯಲ್ಲಿಯೂ ಆದಿ ಹಳೆ ಶಿಲಾಯುಗದ ಅವಶೇಷಗಳೊಡನೆ ಈ ಮಧ್ಯ ಹಳೆಯ ಶಿಲಾಯುಗದ ಕಲ್ಲಿನ ಉಪಕರಣಗಳೂ ದೊರೆತಿವೆ.

ಮಧ್ಯ ಹಳೆಯ ಶಿಲಾಯುಗದ ನೆಲೆಗಳು ಹೆಚ್ಚಾಗಿ ಕೃಷ್ಣಾ ಬಯಲಿ ನಲ್ಲಿ ಹಾಗೂ ಭೀಮಾ-ತುಂಗಭದ್ರಾ ಕೆಳದಂಡೆಯ ಪ್ರದೇಶಗಳಲ್ಲಿವೆ. ಈ ಇಡೀ ಪ್ರದೇಶದಲ್ಲಿ ಶಿಲಾಯುಗದ ಮಾನವನಿಗೆ ನೀರಿನ ಹಾಗೂ ಇತರ ಸೌಲಭ್ಯಗಳಷ್ಟೇ ಅಲ್ಲದೆ ತನ್ನ ಉಪಕರಣಗಳನ್ನು ಮಾಡಿಕೊಳ್ಳುವು ದಕ್ಕೆ ಬೇಕಾದ ಅನುಕೂಲಕರವಾದ ಉತ್ತಮ ಜಾತಿಯ ಕಲ್ಲುಗಳು ಹೇರಳವಾಗಿ ದೊರೆಯುತ್ತಿತ್ತು. ಈ ಪ್ರದೇಶದ ಹೆಚ್ಚು ಭಾಗವು ಕಲಾದಗಿ ಮತ್ತು ಭೀಮಾ ಸರಣಿಯ ನಸುಗೆಂಪು ಮರಳುಕಲ್ಲು, ಬೂದುಸಣ್ಣಕಲ್ಲು, ಮಿಶ್ರಕಲ್ಲು, ಬೆಣಚುಕಲ್ಲುಗಳಿಂದ ಕೂಡಿದ ಗಷ್ಟುಕಲ್ಲುಮಯವಾಗಿದೆ. ಇದರಲ್ಲಿಯ ಜಾಸ್ಪರ್, ಚರ್ಟ್, ಕ್ಯಾಲ್ಸಿಡೊನಿ, ಅಗೇಟ್ ಮುಂತಾದ ಉತ್ತಮ ಜಾತಿಯ ಕಲ್ಲುಗಳಿವೆ. ತುಂಗಭದ್ರಾ ಮೇಲ್ದಂಡೆ ಮತ್ತು ಕಾವೇರಿ ಬಯಲುಗಳಲ್ಲಿ ಕಪ್ಪು ಜಾಸ್ಪರ್ ಬಿಟ್ಟು ಬೇರೆ ಕಲ್ಲುಗಳು ದೊರೆಯುವುದಿಲ್ಲ. ಆದ್ದರಿಂದಲೇ ಈ ಪ್ರದೇಶದಲ್ಲಿ ಮಧ್ಯ ಹಳೆಯ ಶಿಲಾಯುಗದ ಸಂಸ್ಕೃತಿಯ ನೆಲೆಗಳು ಅಪರೂಪ.

ಈ ಸಂಸ್ಕೃತಿಯ ಶಿಲಾಯುಧಗಳು ಮುಖ್ಯವಾಗಿ ಎರಡು ತರಹದ್ದು; ಹೆರೆಯುವ ಚಕ್ಕೆಗಳು (ಸ್ಕ್ರೇಪರ್) ಮತ್ತು ಮೊನೆಗಳು (ಪಾಯಿಂಟ್). ಇವುಗಳ ಜೊತೆಗೆ ಕೊರೆಯುವ ಉಪಕರಣವೂ (ಬೋರರ್) ಇರುತ್ತದೆ. ಹೆರೆಯುವ ಚಕ್ಕೆಗಳು ಹಲವಾರು ತರಹದ್ದಾಗಿವೆ; ದುಂಡಗಿರುವವು, ತ್ರಿಕೋಣಾಕೃತಿಯವು ಹಾಗೂ ಒಳಬಾಗು ಇದ್ದು ಒಂದು ಬದಿ ಅಗಲವೂ ಚೂಪು ಆಗಿರುವ ಚಕ್ಕೆಗಳು. ಸಾಮಾನ್ಯವಾಗಿ ಇವುಗಳನ್ನು ತಯಾರಿಸಲು ಒಂದು ಸುಧಾರಿಸಿದ ತಂತ್ರವನ್ನೇ ಬಳಸಲಾಗಿದೆ. ಈ ತಂತ್ರ ಮೇಲೆ ಹೇಳಿದಂತೆ ಫ್ರಾನ್ಸ್ ದೇಶದ ಲೆವಾಲ್ವ ಎಂಬ ನೆಲೆಯಲ್ಲಿ ಶಿಲಾಯುಧಗಳ ಸಿದ್ಧತೆಗೆ ಉಪಯೋಗಿಸಿದ ತಂತ್ರಕ್ಕೆ ಹೋಲುತ್ತದೆ. ಆದ್ದರಿಂದ ಈ ತಂತ್ರವನ್ನು ಲೆವಾಲ್ವ ತಂತ್ರವೆಂದೇ ಕರೆಯಲಾಗಿದೆ. ಅನುರೂಪವಾದ ಕೋಳಿಮೊಟ್ಟೆಯಾಕೃತಿಯ ಗುಂಡುಕಲ್ಲನ್ನು ಆರಿಸಿ ಒಂದು ತುದಿಯಲ್ಲಿ ಹದವಾದ ಸಣ್ಣಗೆ ಚಕ್ಕೆಗಳನ್ನು ತೆಗೆದು ಸಮತಲವಾಗಿ ಮಾಡಿ, ಕಲ್ಲಿನ ಒಂದು ಕಡೆ ಚಕ್ಕೆಗಳನ್ನು ಎಬ್ಬಿಸಿ ತುದಿಯ ಸಮತಲದಿಂದ ಉಳಿಯಂಥ ಒಂದು ಕಲ್ಲಿನಿಂದ ಹದವಾಗಿ ಹೊಡೆದರೆ ಆಗಬೇಕಾದ ರೀತಿಯ ಹರಿತ ಬಾಯಿಯುಳ್ಳ ಚಕ್ಕೆಗಳನ್ನು ಪಡೆಯಬಹುದು. ಇವಿಷ್ಟು ಈ ತಂತ್ರದ ವಿವಿಧ ಹಂತಗಳು. ಚಕ್ಕೆಗಳನ್ನು ತೆಗೆದಮೇಲೆ ಉಳಿದ ಭಾಗದ ತಿರುಳು ಆಮೆಯಾಕೃತಿಯಲ್ಲಿರುತ್ತದೆ. ಈ ರೀತಿ ಎಬ್ಬಿಸಿದ ಚಕ್ಕೆಗಳಲ್ಲಿ ಕೆಲಸಕ್ಕೆ ಉಪಯೋಗಿಸುವ ಅಂಚಿನ ಒಂದು ಬದಿಯಲ್ಲಿ ಒತ್ತಡದ ಪ್ರಯೋಗದಿಂದ ನೇರವಾಗಿ ಅತಿ ಸೂಕ್ಷ್ಮವಾದ ಪುಡಿ ಚಕ್ಕೆಗಳನ್ನು ಎಬ್ಬಿಸಿ ಬಾಯಿಯನ್ನು ಹರಿತಗೊಳಿಸಲಾಗುವುದು. ಇಂಥ ಚಕ್ಕೆಗಳನ್ನೂ ಮೊನೆಗಳನ್ನೂ ಅನುಕೂಲವಾದ ಮರದ ಅಥವಾ ಎಲುಬಿನ ಹಿಡಿಕೆಗಳಿಗೆ ಬಲವಾಗಿ ಕಟ್ಟಿ ಬಳಸಲಾಗುತ್ತಿತ್ತು. ಮರ ಮತ್ತು ಎಲುಬಿನ ಭಾಗ ಕಾಲಾಂತರದಲ್ಲಿ ಮಣ್ಣಿನಲ್ಲಿ ಸೇರಿಹೋಗಿ ಕೇವಲ ಚಕ್ಕೆಗಳು ಮಾತ್ರ ಉಳಿಯುವುದು ಸಹಜ.

ಈ ಯುಗದ ಆಯುಧಗಳಲ್ಲಿ ಮೊನೆಯುಳ್ಳ ಶಿಲಾಯುಧಗಳು ವಿಶೇಷವಾಗಿ ದೊರೆಯುವುದರಿಂದ ಆಗ ಪ್ರಾಣಿಗಳನ್ನು ಬೇಟೆಯಾಡಲು ಭಲ್ಲೆಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದರು ಎಂದು ಊಹಿಸಲಾಗಿದೆ. ಮೊನೆಗಳು ಒಳ್ಳೆ ಪರಿಣಾಮಕಾರಿಯಾದ ಬಾಣದ ಮೊನೆಗಳಾಗಬಹುದಾದರೂ ಈ ಜನ ಬಿಲ್ಲುಬಾಣಗಳನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಸ್ಪಷ್ಟವಾಗಿ ಆಧಾರಗಳು ದೊರೆತಿಲ್ಲ. ಇವರಿದ್ದ ನೆಲೆಗಳ ಪ್ರಸಾರತೆಯನ್ನು ಅನುಲಕ್ಷಿಸಿದಾಗ ಈ ಜನ ಸಾಮಾನ್ಯವಾಗಿ ವಿವಿಧ ವಾತಾವರಣಗಳಲ್ಲಿ ಇರಲು ಶಕ್ತರಾಗಿದ್ದರು. ಆದ್ದರಿಂದ ಚರ್ಮದ ಉಡಿಗೆಗಳನ್ನು ಮಾಡಿಕೊಳ್ಳುತ್ತಿದ್ದರೆಂದು ಊಹಿಸಬಹುದು. ಬಹುಶಃ ಮೊನೆಗಳಿಂದ ಚರ್ಮದ ಉಡಿಗೆಗಳನ್ನು ಹೊಲಿದುಕೊಳ್ಳುತ್ತಿದ್ದಂತೆ ತೋರುವುದು. ಬೇರೆ ಪ್ರದೇಶಗಳಲ್ಲಿ ದೊರೆತ ಆಧಾರಗಳಿಂದ ಇವರು ಬೆಂಕಿಯನ್ನು ಉಪಯೋಗಿಸುತ್ತಿದ್ದರೆಂದು ತಿಳಿದಿದೆ. ಭೀಮಾನದಿ ದಂಡೆಯ ಮೇಲಿರುವ ಹಗರಗುಂಡಿಗಿಯಲ್ಲಿ ಈ ಕಾಲದ ಪ್ರಾಣಿಗಳ ಎಲುಬುಗಳು ದೊರೆತಿವೆ. ಅವು ಆನೆ, ದನ ಮುಂತಾದ ಪ್ರಾಣಿಗಳದ್ದಾಗಿವೆ. ಈ ಕಾಲದಲ್ಲಿ ಈ ಪ್ರದೇಶದಲ್ಲೆಲ್ಲಾ ವಿಪುಲವಾಗಿ ಇಂಥ ಪ್ರಾಣಿಗಳಿದ್ದು ಅವು ಬೇಟೆಯಾಡಲ್ಪಟ್ಟು ಮನುಷ್ಯನಿಗೆ ಸಾಕಷ್ಟು ಆಹಾರವಾಗುತ್ತಿದ್ದವು ಎಂದು ತೋರುತ್ತದೆ.

ಈ ಸಂಸ್ಕೃತಿಯ ಜನರು ಹಿಮಯುಗದ ಕೊನೆಯ ಭಾಗದಲ್ಲಿ ಸುಮಾರು 60–70 ಸಾವಿರ ವರ್ಷಗಳ ಹಿಂದೆ ಇದ್ದಿರಬೇಕೆಂದು ಆಧಾರಬದ್ಧವಾಗಿ ತಿಳಿಯಲಾಗಿದೆ. ಆದಿ ಹಳೆಯ ಶಿಲಾಯುಗದ ಸಂಸ್ಕೃತಿಯ ಹಂತದಿಂದ ಈ ಹಂತವು ಹೇಗೆ ಬೆಳೆಯಿತು ಎಂಬುದು ಸ್ಪಷ್ಟವಾಗಿಲ್ಲ. ಪ್ರಾಯಶಃ ಕಿಬ್ಬನಹಳ್ಳಿ, ಖ್ಯಾಡಗಳಲ್ಲಿ ದೊರೆತ ಮಧ್ಯಮ ಪ್ರಮಾಣದ ಚಕ್ಕೆಕಲ್ಲಿನ ಆಯುಧಗಳ ಪುನರ್ವಿಮರ್ಶೆಯನ್ನು ಈ ದಿಶೆಯಲ್ಲಿ ಮಾಡಿದಲ್ಲಿ ವಿಕಸನದ ಹಂತ ತಿಳಿಯಬಹುದೇನೊ?

**ಅಂತ್ಯ ಹಳೆಯ ಶಿಲಾಯುಗ :** ಹಳೆಯ ಶಿಲಾಯುಗದ ಸಂಸ್ಕೃತಿಗಳ ವಿಂಗಡಣೆಯಲ್ಲಿ ಕರ್ನಾಟಕದಲ್ಲಿ ಈ ಹಂತದ ಇರವಿನ ಬಗ್ಗೆ ಸ್ಪಷ್ಟ ಮಾಹಿತಿಗಳು ದೊರೆತಿದ್ದು ಇತ್ತೀಚೆಗೆ. ಈ ಹಂತಕ್ಕೆ ಸಂಬಂಧಿಸಿದ ಆಯುಧಗಳನ್ನು ಹಿಂದೆ ಸಾಮಾನ್ಯವಾಗಿ ಮಧ್ಯ ಹಳೆಯ ಶಿಲಾಯುಗದ



ಅಂತ್ಯ ಹಳೆಯ ಶಿಲಾಯುಗದ ಆಯುಧಗಳು

ಬ್ಯೂರಿನ್ (1–2, 8–9), ಪರೆಗ (3), ಮೊನೆ (4), ಅಲಗುಳ್ಳ ನೀಳಚಕ್ಕೆ (5), ಕೊರೆಗ (6), ನೀಳಚಕ್ಕೆ ತೆಗೆದುಳಿದ ಮೂಲಶಿಲೆ (7), ಬಹೂಪಯೋಗಿ ಆಯುಧಗಳು (10–11).

ಆಯುಧಗಳೊಡನೆ ಕೂಡಿಸಿ ಇವನ್ನು ಒಟ್ಟಾಗಿ ಮಧ್ಯ ಶಿಲಾಯುಗದವೆಂದು ಪರಿಗಣಿಸಲಾಗುತ್ತಿತ್ತು. ಆದರೆ ಶೇಷಾದ್ರಿಯವರು ಸಾಲ್ವಡಗಿಯ ಶಿಲಾಯುಧಗಳನ್ನು ವಿಶ್ಲೇಷಿಸಿ ವಿಮರ್ಶಿಸಿದಾಗ, ಅವುಗಳಲ್ಲಿ ಸಾಮಾನ್ಯ ಚಕ್ಕೆ ಕಲ್ಲಿನ ಆಯುಧಗಳು ಮತ್ತು ಎರಡೂ ಕಡೆ ಹರಿತವಾದ ಅಲಗುಳ್ಳ ನೀಳವಾದ ಚಕ್ಕೆಗಳು (ಬ್ಲೇಡ್)–ಈ ರೀತಿಯ ಎರಡು ಪ್ರತ್ಯೇಕ ಶಿಲಾಯುಧ ವಿಧಗಳನ್ನು ಗುರುತಿಸಿದರು. ಎರಡನೆಯದರಲ್ಲಿ ಮೊನೆಗಳು ಇದ್ದವು. ಇವುಗಳು ಹೆಚ್ಚಾಗಿ ಯುರೋಪಿನ ಅಂತ್ಯ ಹಳೆಯ ಶಿಲಾಯುಗದ ಸಂಸ್ಕೃತಿಯೆಂದು ಸ್ಪಷ್ಟವಾಗಿ ಗುರುತಿಸಲ್ಪಟ್ಟ ಗ್ರವೆಟ್ಟಿಯದ ಸಂಸ್ಕೃತಿಯ ಶಿಲಾಯುಧಗಳಿಗೆ ಬಹಳಷ್ಟು ಹೋಲುತ್ತವೆ. ಸಾಲ್ವಡಗಿಯ ಸುತ್ತಮುತ್ತಲಿನ ನೆಲೆಗಳಲ್ಲಿಯೂ ಇದೇ ರೀತಿಯ ಶಿಲಾಯುಧಗಳಿದ್ದವು. ಹಾಗಾದರೆ ಈ ಎರಡು ಪ್ರತ್ಯೇಕ ವಿಧದ ಶಿಲಾಯುಧಗಳು ಬೇರೆ ಬೇರೆ ಸಂಸ್ಕೃತಿಯವೆ. ಅವುಗಳ ಕಾಲಾನುಕ್ರಮವೇನು ಇತ್ಯಾದಿ ಸಮಸ್ಯೆಗಳಿದ್ದುವು.

ಈ ದಿಶೆಯಲ್ಲಿ ಪದ್ದಯ್ಯನವರು ಶೋಧನೆಗಳನ್ನು ಮುಂದುವರಿಸಲು 1969ರಲ್ಲಿ ಸಾಲ್ವಡಗಿ, ಮರಲಬಾವಿ, ಬೆನಹಟ್ಟಿ, ಗುಳ್ಬಾಳ ಮತ್ತು ಹುಣಸಗಿಯಲ್ಲಿ ಅನ್ವೇಷಣೆಗಳನ್ನು ಕೈಗೊಂಡರು. ಮರಲಬಾವಿಯ ಹಳ್ಳದ ಪದರುಗಳಲ್ಲಿ ದೊರೆತ ಶಿಲಾಯುಧಗಳಿಂದ ಕರ್ನಾಟಕದಲ್ಲಿ ಪ್ರಪ್ರಥಮ ಶಿಲಾಯುಗದ ಸಂಸ್ಕೃತಿಗಳ ಅನುಕ್ರಮ ಸ್ಪಷ್ಟವಾಗಿ ತಿಳಿಯಿತು.

ಅತ್ಯಂತ ಕೆಳಮಟ್ಟದ ನೈಸರ್ಗಿಕ ಶಿಲೆಯ ಮೇಲೆ ಇದ್ದ ಮರಳು ಮತ್ತು ದೊಡ್ಡ ಕಲ್ಗುಂಡುಗಳು ಮಿಶ್ರವಾಗಿದ್ದ ಪದರದಲ್ಲಿ ಆದಿ ಹಳೆಯ ಶಿಲಾಯುಗದ ಆಯುಧಗಳು, ಅದರ ಮೇಲಿದ್ದ ಮರಳು ಮತ್ತು ಸಣ್ಣ ಕಲ್ಗುಂಡುಗಳು ಮಿಶ್ರವಾಗಿದ್ದ ಪದರದಲ್ಲಿ ಮಧ್ಯ ಹಳೆಯ ಶಿಲಾಯುಗದ ಆಯುಧಗಳೂ ಇದ್ದವು. ಅದರ ಮೇಲೆ ಇದ್ದ ಹಳದಿ–ಕಂದುಬಣ್ಣದ ರೇವುಮಣ್ಣಿನ ಪದರದಲ್ಲಿ ಅವಶೇಷಗಳೇನೂ ಇಲ್ಲದಿದ್ದರೂ ತದನಂತರದ ಮೇಲ್ಭಾಗದ ಕಪ್ಪು–ಕಂದು ಬಣ್ಣದ ರೇವುಮಣ್ಣಿನ ಪದರದಲ್ಲಿ ಅಲ್ಲಲ್ಲಿ ಸಡಿಲವಾದ ಮರಳಿನ ಶೇಖರಣೆಯಿದ್ದು ಅವುಗಳಲ್ಲಿ ನೀಳಪಟ್ಟೆಯುಳ್ಳ ಕಲ್ಲಿನ ತಿರುಳು, ಉದ್ದದ ಚಕ್ಕೆಗಳು, ಮೊನೆಗಳು ಮೊದಲಾದುವು ಇದ್ದುವು. ಇವೇ ಅಂತ್ಯ ಹಳೆಯ ಶಿಲಾಯುಗದ ಆಯುಧಗಳು. ಈ ಪದರದ ಮೇಲೆ ಸಪೂರವಾದ ನೀಳಚಕ್ಕೆಗಳಿಂದ ಮಾಡಿದ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಆಯುಧಗಳಿದ್ದುವು. ಈ ಪರೀಕ್ಷಣದಿಂದ ಅಂತ್ಯ ಹಳೆಯ ಶಿಲಾಯುಗದ ಘಟ್ಟ ಮಧ್ಯ ಹಳೆಯ ಶಿಲಾಯುಗದ ಅನಂತರದ್ದು ಮತ್ತು ಸೂಕ್ಷ್ಮ ಶಿಲಾಯುಗದ ಪೂರ್ವದ್ದು ಎಂಬ ವಿಷಯ ಸ್ಪಷ್ಟವಾಯಿತು.

ಕರ್ನಾಟಕದಲ್ಲಿ ಬಿಜಾಪುರ–ಗುಲ್ಬರ್ಗ ಜಿಲ್ಲೆಗಳ ಸಾಲ್ವಡಗಿ–ಹುಣಸಗಿ ಪ್ರದೇಶವೊಂದನ್ನು ಬಿಟ್ಟರೆ ಈ ಹಂತದ ಸಂಸ್ಕೃತಿಯ ಅವಶೇಷಗಳು ಶಿವಮೊಗ್ಗ ಜಿಲ್ಲೆಯ (ಹೊನ್ನಾಳಿ ತಾಲ್ಲೂಕಿನ) ಟಕ್ಕನಹಳ್ಳಿ ಮೊದಲಾದೆಡೆಗಳಲ್ಲಿ, ಹಾಸನ ಜಿಲ್ಲೆಯ ಹೇಮಾವತಿ ನದಿ ಪ್ರದೇಶದಲ್ಲಿ, ತುಮಕೂರು ಜಿಲ್ಲೆಯ ಪೂರ್ವ ಭಾಗದಲ್ಲಿ ಈ ಸಂಸ್ಕೃತಿಯ ನೆಲೆಗಳು 1980ರ ದಶಕದಿಂದ ಶೋಧವಾಗಿವೆ.ಮರಲಬಾವಿಯ ಒಂದನೆಯ ಪದರದ ಮರಳಿನ ಭಾಗಗಳಲ್ಲಿ ತೆಳ್ಳನೆಯ ಕಿರು ಅಗಲದ ಸ್ವಲ್ಪ ಉದ್ದವಾದ ಚಕ್ಕೆಗಳು ವಿಶೇಷವಾಗಿ ದೊರೆತಿದ್ದರೆ, ಸಾಲ್ವಡಗಿ–ಹುಣಸಗಿ ಪ್ರದೇಶದ ಕಲ್ಲಿನ ಉಪಕರಣಗಳಲ್ಲಿ ನೀಳವಾದ ಚಕ್ಕೆಗಳ ಜೊತೆಗೆ ಒಂದು ವಿಧದ ಕೊರೆಯುವ ಚಕ್ಕೆಗಳೂ ಇಂಥ ಚಕ್ಕೆಗಳನ್ನು ಎಬ್ಬಿಸಿದ ಪಟ್ಟೆಪಟ್ಟೆಯುಳ್ಳ ತಿರುಳುಗಳೂ ಇವೆ. ಇವೆಲ್ಲವೂ ಕೆಂಪೊತ್ತಿದ ಕಂದುಬಣ್ಣದ ಚರ್ಟ್ ಕಲ್ಲಿನವು.

ಮಧ್ಯಪ್ರದೇಶದ ಬಿಂಬೆಟ್ಕಾದಲ್ಲಿ ಇಂಥ ಸಂಸ್ಕೃತಿಯ ಅವಶೇಷಗಳು ದೊರೆತಿದ್ದು ಅಲ್ಲಿಯ ಮಹತ್ತ್ವದ ಗವಿ ಚಿತ್ರಗಳೂ ದೊರೆತಿವೆ. ಪಶ್ಚಿಮ ಯುರೋಪಿನ ಸ್ಪೈನ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಈ ಸಂಸ್ಕೃತಿಯ ಜನರು ಗವಿಗಳಲ್ಲಿ ರೇವುಮಣ್ಣಿನ ಕೆಂಪು ಕಪ್ಪು ಹಸುರು ಬಣ್ಣಗಳಲ್ಲಿ ಪ್ರಾಣಿ ಪಕ್ಷಿಗಳು ಮುಂತಾದ ಚಿತ್ರಗಳನ್ನು ಬಿಡಿಸಿದುದು ಶೋಧವಾಗಿದ್ದು ಅವು ಈಗಾಗಲೇ ಸುಪ್ರಸಿದ್ಧವಾಗಿವೆ. ಉತ್ತರ ಕರ್ನಾಟಕದಲ್ಲೂ ಹಲವಾರು ಕಡೆಗಳಲ್ಲಿ ಗವಿಚಿತ್ರಗಳು ಶೋಧವಾಗಿವೆ. ಆದರೆ ಇವುಗಳು ನೂತನ ಶಿಲಾಯುಗ, ಬೃಹತ್‌ಶಿಲಾಸಮಾಧಿಯುಗ ಮತ್ತು ಚಾರಿತ್ರಿಕ ಯುಗಗಳದ್ದಾಗಿವೆ. ಆದರೆ ಬಾದಾಮಿ ಬಳಿ ಇರುವ ಒಂದೆರಡು ಗವಿಚಿತ್ರಗಳು ಶೈಲಿ ಮತ್ತು ವಿಷಯ ದೃಷ್ಟಿಯಿಂದ ಈ ಸಂಸ್ಕೃತಿಗೆ ಸೇರಿದ್ದಿರಬಹುದೆಂದು ಊಹಿಸಬಹುದು. ಒಟ್ಟಿನಲ್ಲಿ ಈ ಸಂಸ್ಕೃತಿಯ ಬಗ್ಗೆ ಶಿಲಾಯುಧಗಳು ಮತ್ತು ಕಾಲಮಾನ, ಇವುಗಳ ಹೊರತು ಬೇರೇನೂ ಸ್ಪಷ್ಟವಾಗಿ ತಿಳಿದಿಲ್ಲ.

### ಮಧ್ಯಂತರ ಶಿಲಾಯುಗ (ಸೂಕ್ಷ್ಮಶಿಲಾಯುಗ)

ಈ ಸಂಸ್ಕೃತಿಯ ನೆಲೆಗಳು ಹಲವಾರು ಕಡೆಗಳಲ್ಲಿ ಶೋಧವಾಗಿವೆ. ಬೆಂಗಳೂರು ಜಿಲ್ಲೆಯ ಜಾಲಹಳ್ಳಿ, ಸೂಡಸಂದ್ರ, ರಾಗಿಗುಡ್ಡ ಮತ್ತು ದೇವನಹಳ್ಳಿ, ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿ, ಹಾಗೂ ಇನ್ನೂ ಹಲವೆಡೆಗಳಲ್ಲಿ, ಚಿತ್ರದುರ್ಗ ಜಿಲ್ಲೆ, ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ಹಾಗೂ ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು 30 ನೆಲೆಗಳು ಕಡಲ ಪ್ರದೇಶದಲ್ಲಿ ಅಂಕೋಲದಿಂದ ಮಂಗಳೂರಿನವರೆಗೆ ಮುಂತಾದ ಮುಖ್ಯ ನೆಲೆಗಳು ಸೇರಿದಂತೆ ಕರ್ನಾಟಕದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚು ನೆಲೆಗಳನ್ನು ಗುರುತಿಸಲಾಗಿದೆ. ಸಂಗನಕಲ್ಲನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಮೇಲುಮಟ್ಟದ ಮಣ್ಣಿನ ಪದರದ ಮೇಲೆಯೇ ಸಾಮಾನ್ಯವಾಗಿ ಈ ಸಂಸ್ಕೃತಿಯ ಶಿಲಾಯುಧಗಳು ಬಹಳವಾಗಿ ಹರಡಿರುತ್ತವೆ.



ಮಧ್ಯಂತರ ಶಿಲಾಯುಗದ ಆಯುಧಗಳು (ಸೂಕ್ಷ್ಮ ಶಿಲಾಯುಧಗಳು) ಮೊನೆ (1–3, 9, 13–14 ಜಾಲಹಳ್ಳಿ, 12 ಬಾಗಲಕೋಟೆ) ನೀಳಚಕ್ಕೆ ಚಾಕು (4 ಜಾಲಹಳ್ಳಿ, 11 ಬಾಗಲಕೋಟೆ), ವರೆಗ (5 ಜಾಲಹಳ್ಳಿ), ಅರ್ಧಚಂದ್ರ (6–8 ಜಾಲಹಳ್ಳಿ) ನೀಳಚಕ್ಕೆ ತೆಗೆದುಳಿದ ಮೂಲಶಿಲೆ (10 ಜಾಲಹಳ್ಳಿ).

ಶಿಲಾಯುಧಗಳೆಲ್ಲವೂ ಆಕಾರದಲ್ಲಿ ಬಹಳ ಸಣ್ಣದಾಗಿರುತ್ತವೆ. ಸಾಮಾನ್ಯವಾಗಿ ಸುಮಾರು 5 ಮಿಮೀ ನಿಂದ 5 ಸೆಂಮೀ ಉದ್ದ ಮತ್ತು 3 ಮಿಮೀ ನಿಂದ 2ಸೆಂಮೀ ಅಗಲ ಇರುತ್ತವೆ. ಸಪೂರವಾದ ನೀಳವಾದ ಚಕ್ಕೆಗಳು, ಕೊರೆಯುವ ಉಪಕರಣ, ಮೊನೆಗಳು, ಅರ್ಧಚಂದ್ರಾಕೃತಿಯ, ತ್ರಿಕೋಣಾಕೃತಿಯ ಟ್ರೆಪಿಜಿಯಮ್ ಆಕೃತಿಯ ಉಪಕರಣಗಳು, ಬಾಣದ ಮೊನೆಗಳು ಇವೇ ಮೊದಲಾದ ಮುಖ್ಯವಾದ ವಿವಿಧ ಆಯುಧಗಳಿರುತ್ತವೆ. ಸಪೂರ ನೀಳ ಚಕ್ಕೆಗಳಲ್ಲಿ ಮತ್ತು ಮೊನೆಗಳಲ್ಲಿ ಬೇರೆ ಬೇರೆ ಪ್ರಕಾರಗಳಿವೆ. ಸಪೂರ ಚಕ್ಕೆಯ ಎರಡು ಬಾಯಿಗಳು ಹರಿತವಿರುತ್ತವೆ. ಒಂದು ಬಾಯಿಯನ್ನು ಉದ್ದಕ್ಕೂ ಒತ್ತಡದಿಂದ ಚಕ್ಕೆ ಎಬ್ಬಿಸುವ ವಿಧಾನದಿಂದ ಮೊಂಡು ಮಾಡಲಾಗುತ್ತದೆ. ಇದರಂತೆಯೇ ಮೊನೆಗಳ ತುದಿಯನ್ನು ಬಲಯುತವಾಗಿ ಚೂಪಾಗಿ ಮಾಡಲು ಒಂದು ಅಥವಾ ಎರಡುಬದಿಗಳನ್ನು ಅರ್ಧಚಂದ್ರಾಕೃತಿಯ ಬಾಗಿದ ಬದಿಯನ್ನು ಮೊಂಡು ಮಾಡಲಾಗುತ್ತದೆ.

ಕಿಬ್ಬನಹಳ್ಳಿಯ ಆಯುಧಗಳೆಲ್ಲ ಬೆಣಚುಕಲ್ಲಿನವು. ಹೆಚ್ಚಾಗಿ ಪಟ್ಟೆಪಟ್ಟೆಯ ತಿರುಳಿನ ಭಾಗವುಳ್ಳ ಚಕ್ಕೆಗಳಿವೆ. ಒಂದೇ ಬದಿ ಮೊಂಡು ಮಾಡಿದ ಮೊನೆಗಳಿಲ್ಲ. ಜಾಲಹಳ್ಳಿಯ ವಿವಿಧ ಉಪಕರಣಗಳಲ್ಲಿ ಒಂದು ಬದಿ ಮೊಂಡು ಮಾಡಿದ ಸಪೂರ ಚಕ್ಕೆಗಳಲ್ಲಿ ಕೆಲವು ಸುಮಾರು 5 ಸೆಂಮೀನಷ್ಟು ಉದ್ದವಿದೆ. ಅರ್ಧಚಂದ್ರಾಕೃತಿಯ ಉಪಕರಣ, ಮೊನೆ, ಬಾಣದ ಮೊನೆ–ಇವು ಹೆಚ್ಚಾಗಿವೆ.

ಸುರಪುರ ಪ್ರದೇಶದಲ್ಲಿ ದೊರೆತ ಆಯುಧಗಳೆಲ್ಲ ಚರ್ಟ್ ಕಲ್ಲಿನವು. ಸಪೂರವಾದ ಚಕ್ಕೆಗಳು ಬಹಳ ಉದ್ದವಾಗಿರುತ್ತವೆ. ಸುಮಾರು $2^1/_2$–3 ಸೆಂಮೀ ನಿಂದ 5 ಸೆಂಮೀನಷ್ಟು. ಅರ್ಧಚಂದ್ರಾಕೃತಿಯ ಉಪಕರಣ, ಒಂದು ಬದಿ ಮೊಂಡಾದ ಸಪೂರ ಚಕ್ಕೆಗಳು, ಎರಡು ಬದಿಯೂ ಹರಿತವುಳ್ಳ ಸಪೂರ ಚಕ್ಕೆ ಮತ್ತು ಮೊನೆಗಳು ಹೆಚ್ಚಾಗಿವೆ. ಜೊತೆಗೆ ಹೆರೆಯುವ ಸಣ್ಣ ಚಕ್ಕೆಗಳು ದೊರೆಯುತ್ತವೆ.

ಬಾಗಿರುವ ಜಿಂಕೆಕೊಂಬನ್ನು ಆರಿಸಿ ಅದರ ಉದ್ದಕ್ಕೂ ಆಳವಾಗಿ ಗೀರಿ, ಅದರಲ್ಲಿ ಅರ್ಧಚಂದ್ರಾಕೃತಿಯ ಏಳೆಂಟು ಆಯುಧಗಳನ್ನು, ಮೊಂಡಾದ ಬದಿ ಒಳಗೆ ಸೇರುವಂತೆ, ಸಾಲಾಗಿ ಸಿಕ್ಕಿಸಿ ಸಸ್ಯದ ಅಂಟನ್ನು ಹಾಕಿದರೆ ಅದು ಒಳ್ಳೆ ಕುಡುಗೋಲು ಆಗುವುದು. ಹಾಗೆಯೇ ಒಂದು ಉದ್ದನೆ ಕೋಲಿನ ಅರ್ಧಭಾಗದುದ್ದಕ್ಕೂ ಗೀರಿ ಮೂರು ನಾಲ್ಕು ಸಪೂರ ಚಕ್ಕೆಗಳನ್ನು ಸಾಲಾಗಿ ಸಿಕ್ಕಿಸಿ ಅಂಟಿಸಿದರೆ ಚಾಕು ಆಗುವುದು. ಈ ರೀತಿ ಹಲವಾರು ಉಪಕರಣಗಳನ್ನು ಮಾಡಿಕೊಳ್ಳಲಾಗುತ್ತಿತ್ತು.

ಈ ಸಂಸ್ಕೃತಿಯ ಜನರಿಗೆ ಬೇಟೆಯಾಡುವುದೇ ಮುಖ್ಯ ಕಸಬಾಗಿತ್ತೆಂದು ತೋರುತ್ತದೆ. ಈ ಕಾಲದ ಸಂಸ್ಕೃತಿ ಅಂತ್ಯ ಹಳೆಯ ಶಿಲಾಯುಗ ಸಂಸ್ಕೃತಿಯಿಂದಲೇ ವಿಕಾಸ ಹೊಂದಿರಬೇಕೆಂಬುದು ಇವೆರಡು ಸಂಸ್ಕೃತಿಗಳ ಶಿಲಾಯುಧಗಳ ಪ್ರಕಾರ ಮತ್ತು ತಾಂತ್ರಿಕ ವಿಧಾನಗಳಿಂದ ಬಹುಮಟ್ಟಿಗೆ ಸ್ಪಷ್ಟವಾಗಿದೆ.

ಸಂಗನಕಲ್ಲಿನಲ್ಲಿ ಈ ಸಂಸ್ಕೃತಿಯ ಆಯುಧಗಳು ಜಿಗುಟಿನ ಕಂದುಬಣ್ಣದ ಮಣ್ಣಿನಲ್ಲಿ ದೊರೆತದ್ದರಿಂದ ಪ್ರಾಯಶಃ ಆಗ ವಾಯುಗುಣ ಈಗಿನದಕ್ಕಿಂತ ಹೆಚ್ಚು ತಂಪಾಗಿತ್ತೆಂದು ಹೇಳಬಹುದು. ಸಂಗನಕಲ್ಲಿನಲ್ಲಿ ದೊರೆತ ಆಧಾರದ ಮೇಲೆ ಈ ಸಂಸ್ಕೃತಿ ಸುಮಾರು ಪ್ರ.ಶಪೂ. 10,000–3,000 ವರ್ಷಗಳ ಅಂತರದಲ್ಲಿದ್ದಿರಬೇಕೆಂದು ತರ್ಕಿಸಲಾಗಿದೆ. ಕಾಲಮಾನ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ನದಿ ಬಯಲಿನಲ್ಲಿರುವ ಮಾಣಿ ಮತ್ತು ಉಪ್ಪಿನಂಗಡಿಯ ಸೂಕ್ಷ್ಮಶಿಲಾ ಉಪಕರಣಗಳು ಕೇರಳದ ತೆನ್‌ಮಲ್ಯೆಯ ಉಪಕರಣಗಳನ್ನು ತುಂಬ ಹೋಲುತ್ತವೆ. ತೆನ್‌ಮಲ್ಯೆಯಲ್ಲಿ ಈ ಸಂಸ್ಕೃತಿ ನೆಲೆಯ ಉತ್ಖನನದಲ್ಲಿ ದೊರೆತ ಇದ್ದಿಲಿನ ಚೂರುಗಳನ್ನು ಇಂಗಾಲ– 14 ವೈಜ್ಞಾನಿಕ ವಿಧಾನದಿಂದ ಪ್ರ.ಶ. ಪೂ 3000 ವರ್ಷಗಳಷ್ಟು ಹಿಂದಿನದೆಂದು ಗೊತ್ತಾಗಿದೆ. **(ಎ.ಎಸ್.)**

## ನವಶಿಲಾ–ತಾಮ್ರಶಿಲಾಯುಗ

ಹಳೆಯ ಹಾಗೂ ಮಧ್ಯಂತರ ಶಿಲಾಯುಗಗಳಲ್ಲಿ ಕಲ್ಲಿನ ಆಯುಧಗಳ ತಯಾರಿಕೆಗೆ ಚಕ್ಕೆಗಳನ್ನು ಎಬ್ಬಿಸಿ ರೂಪಿಸುವ ತಂತ್ರ ಮಾತ್ರ ಕಂಡುಬರುತ್ತದೆಯಾದರೆ, ಮುಂದೆ ಆಯುಧಗಳನ್ನು ಉಜ್ಜಿ ನಯಮಾಡಿ ಉಪಯೋಗಿಸುವ ತಂತ್ರ ಬಳಕೆಗೆ ಬಂದಿತು. ಈ ಹೊಸ ತಾಂತ್ರಿಕ ಘಟ್ಟವನ್ನು ನವಶಿಲಾಯುಗ ಎಂದು ಮೊದಲು ಹೆಸರಿಸಲಾಯಿತು. ಆದರೆ ಇಂದು ಇದಕ್ಕೆ ಇನ್ನೂ ವ್ಯಾಪಕವಾದ ಅರ್ಥ ಬಂದಿದೆ. ವಿಶ್ವದ ಅನೇಕ ಕಡೆಗಳಲ್ಲಿ ನಡೆದಿರುವ ಸಂಶೋಧನೆಗಳಿಂದ ಈ ಘಟ್ಟ ಕೇವಲ ತಾಂತ್ರಿಕ ಹೊಸತನವನ್ನಷ್ಟೇ ಒಳಗೊಳ್ಳದೆ, ಹಲವು ಆರ್ಥಿಕ ಸಾಮಾಜಿಕ ಬದಲಾವಣೆಗಳಿಗೂ ಕಾರಣವಾಗಿ ಮಾನವನ ಸಾಂಸ್ಕೃತಿಕ ವಿಕಾಸದಲ್ಲಿ ಕ್ರಾಂತಿಯನ್ನೇ ಸಾಧಿಸಿದ ಘಟ್ಟ ಎಂಬುದು ತಿಳಿದುಬಂದಿದೆ. ಈ ಹಿಂದಿನ ಕಾಲದಲ್ಲಿ ಜನರು ಕೇವಲ ಅಲೆಮಾರಿ ಬೇಟೆಗಾರರಾಗಿ ನಿಸರ್ಗವನ್ನೇ ಪೂರ್ಣವಾಗಿ ಅವಲಂಬಿಸಿದ್ದರೆ, ಈ ಘಟ್ಟದಲ್ಲಿ ಅವರು ಬೇಸಾಯ ಮತ್ತು ಪಶುಪಾಲನೆಯ ವಿಧಾನಗಳನ್ನು ರೂಢಿಸಿಕೊಂಡು ಸ್ವತಃ ಆಹಾರೋತ್ಪಾದನೆಯಲ್ಲಿ ತೊಡಗಿದರು. ಇವೆರಡು ಮುಖ್ಯ



ನವಶಿಲಾ–ತಾಮ್ರ ಶಿಲಾಯುಗದ ಮಣ್ಣಿನ ಪಾತ್ರೆಗಳು–ವಸ್ತುಗಳು 1–5, 7–8, 11–12 ಉಜ್ಜಿ ನಯಗೊಳಿಸಿದ ಬೂದು ರಂಗಿನವು; 9,13 ಕೆಂಪು ಮತ್ತು ಕಪ್ಪು ರಂಗಿನವು; 10 ಬಿಳಿ ಬಣ್ಣದ ಗೆರೆ ಚಿತ್ರಣವಿರುವ ಕೆಂಪು ಮತ್ತು ಕಪ್ಪು ರಂಗಿನ ಮಡಕೆ ; 6 ತಲೆಯಾಸರೆ ; 14 ಕುಂಬಾರನ ಮಟ್ಟುಗ.



ನವಶಿಲಾ–ತಾಮ್ರ ಶಿಲಾಯುಗದ ಲೋಹದ ವಸ್ತುಗಳು, ತಾಮ್ರದ ವಸ್ತುಗಳು – ಭರ್ಜಿ (1 ಪಿಕ್ಲಿಹಾಳು), ಉಂಗುರ (2 ತೇರದಾಳ), ಮಣಿಗಳು (3 ತೇರದಾಳ) ಬಳೆಚೂರು (4 ತೇರದಾಳ), ಕೊಡಲಿ (5 ತೆಕ್ಕಲಕೋಟೆ), ಪರಶು (6, 8 ಹಳ್ಳೂರು), ಮೀನುಗಾಳ (7 ಹಳ್ಳೂರು), ಚಿನ್ನದ ವಸ್ತುಗಳು (ತೆಕ್ಕಲಕೋಟೆ) – ಮಣಿಗಳು (9), ಕರ್ಣಾಭರಣ (10).

ಉದ್ಯೋಗಗಳು ಸೂಕ್ಷ್ಮ ಶಿಲಾಯುಗ ಹಂತದಲ್ಲಿಯೆ ಆರಂಭವಾದುದನ್ನು ಗಂಗಾನದಿಯ ಉಪನದಿಯಾದ ಬೇಲಾನ ನದಿ ಪ್ರದೇಶದಲ್ಲಿಯೆ ಸಹಾರ್-ನಹರ-ರಾಯ, ಮಹದಹ ಮೊದಲಾದ ಸುಮಾರು 7-9000 ವರ್ಷಗಳ ಹಿಂದಿನ ಸೂಕ್ಷ್ಮ ಶಿಲಾಯುಗ ನೆಲೆಗಳ ಉತ್ಖನನದಿಂದ ತಿಳಿದು ಬಂದಿದೆ. ಇದಕ್ಕಾಗಿ ಒಂದೆಡೆ ನೆಲೆ ಹೂಡಲಾರಂಭಿಸಿದರು. ಗ್ರಾಮ ಜೀವನ ಅಸ್ತಿತ್ವಕ್ಕೆ ಬಂತು. ಆರ್ಥಿಕ ರಂಗದಲ್ಲಿ ಆಸ್ತಿಯ ಕಲ್ಪನೆ ಬೆಳೆಯಿತು. ಅಲ್ಪಶ್ರಮದಿಂದ ಹೆಚ್ಚಿನ ಆಹಾರೋತ್ಪಾದನೆ ಸಾಧ್ಯವಾಗಿ ಸಮಾಜದ ಸಂಪತ್ತು ವರ್ಧಿಸಿತು. ಜನರ ವಿರಾಮದ ಕಾಲವೂ ಹೆಚ್ಚಿತು. ಇದಕ್ಕೆ ಹೊಂದಿಕೊಂಡಂತೆ ಶ್ರಮಜೀವಿ, ಆಸ್ತಿವಂತ, ಬುದ್ಧಿಜೀವಿ ಮುಂತಾದ ಸಾಮಾಜಿಕ ವರ್ಗಗಳು ರೂಪುಗೊಂಡವು. ಹೆಚ್ಚಿನ ಆಸ್ತಿ ಮತ್ತು ಹೆಚ್ಚಿನ ವಿರಾಮವನ್ನು ಮತ್ತಷ್ಟು ಆರ್ಥಿಕ ಮತ್ತು ಬೌದ್ಧಿಕ ಚಟುವಟಿಕೆಗಳಿಗೆ ವಿನಿಯೋಗಿಸಲು ಸಾಧ್ಯವಾಗಿ ನಾಗರಿಕತೆ ತ್ವರಿತಗತಿಯಲ್ಲಿ ಅಭಿವೃದ್ಧಿಯಾಗಲು ಅವಕಾಶವಾಯಿತು. ಇಂಥ ಕ್ರಾಂತಿಕಾರಿ ಘಟ್ಟವನ್ನು ಕರ್ನಾಟಕದಲ್ಲೂ ಗುರುತಿಸಬಹುದಾಗಿದೆ.

ಪಶ್ಚಿಮ ಏಷ್ಯ ಮೊದಲಾದೆಡೆಯಲ್ಲಿ ನಡೆದಿರುವ ಸಂಶೋಧನೆಗಳಿಂದ ಈ ನವಶಿಲಾಯುಗ ಘಟ್ಟ ಕೆಲವು ಶತಮಾನಗಳವರೆಗೆ ಮುಂದುವರಿದು, ಅನಂತರ ತಾಮ್ರದ ಬಳಕೆಯಂಥ ಮತ್ತೊಂದು ಪರಿಣಾಮಕಾರೀ ತಾಂತ್ರಿಕ ಸಾಧನೆಯಿಂದ ನಾಗರಿಕತೆಯ ಬೆಳವಣಿಗೆಯಲ್ಲಿ ಹೊಸಧಾಟಿಗೆ ಅವಕಾಶವಾಯಿತೆಂದು ತಿಳಿಯುತ್ತದೆ. ಕರ್ನಾಟಕದಲ್ಲಿ ಸಹ ತಾಮ್ರದ ಬಳಕೆ ಪ್ರಾಗೈತಿಹಾಸಿಕ ಘಟ್ಟದಲ್ಲಿ ಕಂಡು ಬಂದರೂ ಈ ಘಟ್ಟವನ್ನೂ ನವಶಿಲಾಯುಗ ಘಟ್ಟವನ್ನೂ ಸ್ಪಷ್ಟವಾಗಿ ಬೇರ್ಪಡಿಸಲು ಇದುವರೆಗಿನ ಅಧ್ಯಯನದಿಂದ ಸಾಧ್ಯವಾಗಿಲ್ಲ. ಆದ್ದರಿಂದ ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಘಟ್ಟವನ್ನು ಕೇವಲ ನವಶಿಲಾಯುಗ ಎಂದೋ ತಾಮ್ರಶಿಲಾಯುಗ ಎಂದೋ ಅಥವಾ ನವಶಿಲಾ-ತಾಮ್ರಶಿಲಾಯುಗ ಎಂದೋ ಒಟ್ಟಾರೆಯಾಗಿ ಕರೆಯುವುದು ರೂಢಿಯಲ್ಲಿದೆ. ಹೆಸರು ಯಾವುದೇ ಆದರೂ ಈ ನಾಡಿನ ಪ್ರಾಗಿತಿಹಾಸದಲ್ಲಿ ಇದು ಮಧ್ಯಂತರ ಶಿಲಾಯುಗ ಮತ್ತು ಕಬ್ಬಿಣದ ಯುಗದ ನಡುವಣ ಕಾಲದಲ್ಲಿ ಪ್ರಚಲಿತವಾಗಿದ್ದ ಸಂಸ್ಕೃತಿಯ ಕಾಲಘಟ್ಟ ಎಂಬುದು ಖಚಿತವಾಗಿದೆ.

ಸು. 1842ರಲ್ಲಿ ಲಿಯೊನಾರ್ಡ್‌ಮುನ್ ಎಂಬುವರು ಲಿಂಗಸುಗೂರಿನಲ್ಲಿ ನಯಮಾಡಿದ ಒಂದು ಕೊಡಲಿಯನ್ನು ಸಂಗ್ರಹಿಸಿದರು. ಬಹುಶಃ ಇದು ದಕ್ಷಿಣಭಾರತದಲ್ಲಿ ಅತ್ಯಂತ ಮೊದಲಿನ ಪ್ರಾಗಿತಿಹಾಸ ಸಂಶೋಧನ ಕಾರ್ಯ. ರಾಬರ್ಟ್ ಬ್ರೂಸ್‌ಫುಟ್‌ರವರು 19ನೆಯ ಶತಮಾನದ ಉತ್ತರಾರ್ಧದಲ್ಲೆ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ, ಮಂಡ್ಯ ಜಿಲ್ಲೆಯ ಪಾಂಡವಪುರ (ಫ್ರೆಂಚ್‌ರಾಕ್ಸ್) ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ನೆಲೆಗಳಲ್ಲಿ ಕರಿಯ ಟ್ರಾಪ್ ಕಲ್ಲಿನಿಂದ ತಯಾರಿಸಿದ ನಯಮಾಡಿದ ಕೊಡಲಿಗಳನ್ನು ಪತ್ತೆಹಚ್ಚಿ ಅವನ್ನು ನವಶಿಲಾಯುಗದ ಆಯುಧಗಳೆಂದು ಹೆಸರಿಸಿದ್ದರು. ಆದರೆ ಅವುಗಳ ಕಾಲ ಮತ್ತು ಅಂದಿನ ಸಾಂಸ್ಕೃತಿಕ ವೈಶಿಷ್ಟ್ಯಗಳು ಸ್ಪಷ್ಟವಾಗಿರಲಿಲ್ಲ. ಮೈಸೂರು ಪುರಾತತ್ತ್ವ ಇಲಾಖೆಯ ಎಂ.ಎಚ್. ಕೃಷ್ಣರವರು 1942ರಲ್ಲಿ ಬ್ರಹ್ಮಗಿರಿಯಲ್ಲಿ ಉತ್ಖನನ ನಡೆಸಿ ಅಲ್ಲಿನ ನವಶಿಲಾ ಸಂಸ್ಕೃತಿ ಕಬ್ಬಿಣದ ಯುಗದ ಸಂಸ್ಕೃತಿಗಿಂತ ಪ್ರಾಚೀನವಾದುದೆಂದು ಗುರುತಿಸಿದರು. 1947ರಲ್ಲಿ, ಮಾರ್ಟಿಮರ್‌ವೀಲರ್ ಬ್ರಹ್ಮಗಿರಿಯಲ್ಲಿ ಮತ್ತೆ ಉತ್ಖನನಮಾಡಿ (ವೀಲರ್ ಇದನ್ನು ನಯಗೊಳಿಸಿದ ಕೊಡಲಿ ಸಂಸ್ಕೃತಿ ಎಂದು ಹೆಸರಿಸಿದ್ದರು) ಮತ್ತಷ್ಟು ಖಚಿತವಾದ ವಿವರಗಳನ್ನು ಹೊರಗೆಡವಿದರು ಅದೇ ಸುಮಯದಲ್ಲಿ ಬಿ. ಸುಬ್ಬರಾವ್ ಗಂಗನಕಲ್ಲಿನ ನೆಲೆಯನ್ನು ಉತ್ಖನನ ಮಾಡಿದರು. ಬ್ರಹ್ಮಗಿರಿ ಮತ್ತು ಸಂಗನಕಲ್ಲಿನ ಉತ್ಖನನದಲ್ಲಿ ಕಂಡುಬಂದ ಸಾಂಸ್ಕೃತಿಕ ಘಟ್ಟಗಳ ಅನುಕ್ರಮ ಸ್ವಲ್ಪ ಹೆಚ್ಚು-ಕಡಿಮೆ ಒಂದೇಯಾಗಿದ್ದವು **(ನೋಡಿ : ಬ್ರಹ್ಮಗಿರಿ[2])**. ತದನಂತರ ಜಡ್.ಡಿ.ಅನ್ಸಾರಿ ಮತ್ತು ಎಂ.ಎಸ್. ನಾಗರಾಜರಾವ್ ಅವರಿಂದ ಸಂಗನಕಲ್ಲು (ಬಳ್ಳಾರಿ ಜಿಲ್ಲೆ), ಬಿ.ಕೆ. ಥಾಪರ್‌ರಿಂದ ಮಸ್ಕಿ (ರಾಯಚೂರು ಜಿಲ್ಲೆ), ಎಫ್.ಆರ್. ಅಲ್ಚಿನ್‌ರಿಂದ ಪಿಕ್ಲಿ ಹಾಳು (ರಾಯಚೂರು ಜಿಲ್ಲೆ), ಜಡ್.ಡಿ. ಅನ್ಸಾರಿ ಮತ್ತು ಮಜುಂದಾರ್‌ರಿಂದ ಕುಪ್ಪಗಲ್ಲು (ಬಳ್ಳಾರಿ ಜಿಲ್ಲೆ),ಎಂ.ಎಸ್. ನಾಗರಾಜರಾವ್ ಅವರಿಂದ ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ) ಮತ್ತು ಹಳ್ಳೂರು (ಧಾರವಾಡ ಜಿಲ್ಲೆ), ಕೆ. ಪದ್ದಯ್ಯನವರಿಂದ ಕೊಡೆಕಲ್ಲು (ಗುಲ್ಬರ್ಗ ಜಿಲ್ಲೆ), ಎಂ. ಹನುಮಂತರಾವ್ ಮತ್ತು ಎಸ್. ನಾಗರಾಜು ಅವರಿಂದ ಹೆಮ್ಮಿಗೆ (ಮೈಸೂರು ಜಿಲ್ಲೆ), ಕೆ.ವಿ.




ನವಶಿಲಾ-ತಾಮ್ರ ಶಿಲಾಯುಗದ ಶಿಲಾಯುಧಗಳು

ಕೊಡಲಿ (1-2 ಬ್ರಹ್ಮಗಿರಿ), ದುಂಡುಗಲ್ಲು ಬಡಿಗೆ (3 ಮಸ್ಕಿ), ಎರಡು ಬದಿ ಅಲಗುಳ್ಳ ನೀಳಚಕ್ಕೆ (4 ಮಸ್ಕಿ)

ಸೌಂದರರಾಜನ್‌ರಿಂದ ಬೂದಿತಿಟ್ಟು (ಮೈಸೂರು ಜಿಲ್ಲೆ), ಅ. ಸುಂದರ ಅವರಿಂದ ತೇರದಾಳ ಮತ್ತು ಹಳಿಂಗಳಿ (ಬಿಜಾಪುರ ಜಿಲ್ಲೆ), ಎಸ್.ಆರ್. ರಾವ್ ಅವರಿಂದ ಬನಹಳ್ಳಿ (ಕೋಲಾರ ಜಿಲ್ಲೆ)-ಈ ಸ್ಥಳಗಳಲ್ಲಿ ಉತ್ಖನನಗಳು ನಡೆದಿದ್ದು ಕರ್ನಾಟಕದ ನವಶಿಲಾ-ತಾಮ್ರಶಿಲಾ ಯುಗದ ಸಂಸ್ಕೃತಿಯ ಬಗ್ಗೆ ಸಾಕಷ್ಟು ವಿವರಗಳು ದೊರೆತಿವೆ. ಪಕ್ಕದ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಕೆಲವು ನೆಲೆಗಳಲ್ಲಿ ನಡೆದಿರುವ ಉತ್ಖನನಗಳು ಸಹ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ದಕ್ಷಿಣಭಾರತದ ಬಹುಭಾಗದಲ್ಲಿ ಈ ಸಂಸ್ಕೃತಿ ಹರಡಿದ್ದರೂ ಇದರ ಬಗ್ಗೆ ಹೆಚ್ಚಿನ ಸಂಶೋಧನ ಕೆಲಸ ನಡೆದಿರುವುದು ಕರ್ನಾಟಕದಲ್ಲೆ.

ಇದುವರೆಗೆ ನಡೆದಿರುವ ಸಂಶೋಧನೆಗಳಿಂದ ನವಶಿಲಾ-ತಾಮ್ರಶಿಲಾ ಯುಗದ ನೆಲೆಗಳನ್ನು ಬೀದರ್, ಗುಲ್ಬರ್ಗ, ರಾಯಚೂರು, ಬೆಳಗಾಂವಿ, ಧಾರವಾಡ, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ, ಕೋಲಾರ ಮತ್ತು

ಮೈಸೂರು, ತುಮಕೂರು, ಹಾಸನ, ಚಿಕ್ಕಮಗಳೂರು, ಬೆಳಗಾಂವಿ, ಉಡುಪಿ ಮೊದಲಾದ ಜಿಲ್ಲೆಗಳಲ್ಲೂ ಅಂದರೆ ಇಡಿ ಕರ್ನಾಟಕಲ್ಲೆಲ್ಲಾ ಗುರುತಿಸಲಾಗಿದೆ. ಇದು ಈ ಸಂಸ್ಕೃತಿಯ ವ್ಯಾಪ್ತಿಯನ್ನು ಸೂಚಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮತ್ತು ಮಂಡ್ಯ ಜಿಲ್ಲೆಯ ಪಾಂಡವಪುರದ ಬಳಿ ಈ ಕಾಲದ ಒಂದೆರಡು ಶಿಲಾಯುಧಗಳು ಕಂಡುಬಂದಿವೆಯಾದರೂ ಅಲ್ಲಿ ಈ ಸಂಸ್ಕೃತಿ ಹರಡಿತ್ತೆ ಎಂಬುದು ಸ್ಪಷ್ಟವಾಗಿಲ್ಲ. ಒಟ್ಟಿನಲ್ಲಿ ನವಶಿಲಾ–ತಾಮ್ರ ಶಿಲಾಯುಗದ ಸಂಸ್ಕೃತಿ ಕರ್ನಾಟಕದ ಬಯಲುನಾಡಿನಲ್ಲಿ ವಿಶೇಷವಾಗಿ ಪಸರಿಸಿತ್ತೆಂದು ಹೇಳಬಹುದು.

ಈ ಕಾಲದ ನೆಲೆಗಳಲ್ಲಿ ಎರಡು ವಿಧದವು ಇವೆ. ಅವು ಬೂದಿದಿಬ್ಬ ನೆಲೆಗಳು ಮತ್ತು ಗ್ರಾಮನೆಲೆಗಳು, ಬೂದಿದಿಬ್ಬಗಳು ಬೆಳಗಾಂವಿ, ಗುಲ್ಬರ್ಗ, ರಾಯಚೂರು ಮತ್ತು ಬಳ್ಳಾರಿ ತುಮಕೂರು (ಹಾಗೂ ಆಂಧ್ರಪ್ರದೇಶದ ಅನಂತಪುರ ಮತ್ತು ಮಹಬೂಬ್‌ನಗರ) ಜಿಲ್ಲೆಗಳಲ್ಲಿ ಮಾತ್ರ ಕಂಡುಬಂದಿವೆ. ಕುಡಚಿ, ತೇರದಾಳ, ಕಲ್ಲೊಳ್ಳಿ, ಕುಡತಿನಿ, ಕುಪ್ಪಗಲ್ಲು, ಕೊಡೆಕಲ್ಲು ಮೊದಲಾದೆಡೆಯ ದಿಬ್ಬಗಳು ಒಳ್ಳೆಯ ಉದಾಹರಣೆಗಳು. ಈ ದಿಬ್ಬಗಳು ಕಿಟ್ಟದ ರೀತಿಯಲ್ಲಿ ಗಟ್ಟಿಯಾದ ಬೂದಿಯಿಂದ ಕೂಡಿರುತ್ತವೆ. ಫುಟ್, ಜಾಯಿನರ್, ಮಜುಂದಾರ್, ರಾಜಗುರು ಮೊದಲಾದವರು ನಡೆಸಿರುವ ವಿಶ್ಲೇಷಣೆಯಿಂದ ಈ ಬೂದಿಯ ದಿಬ್ಬಗಳು ದನದ ಸಗಣಿಯನ್ನು ಸುಟ್ಟಿರುವುದರಿಂದ ಆದುವೆಂದು ತಿಳಿದುಬಂದಿದೆ. ಈ ದಿಬ್ಬಗಳು ನವಶಿಲಾಯುಗಕಾಲದ ಜನ ದೊಡ್ಡ ದನದ ಕೊಟ್ಟಿಗೆಗಳನ್ನು ಕಟ್ಟಿ ವಾಸಿಸುತ್ತಿದ್ದ ಸ್ಥಳಗಳು, ಆ ಜನ ಆಗಾಗ್ಗೆ ಆ ಪ್ರದೇಶವನ್ನು ತೆರವು ಮಾಡಿ ಬೇರೆಡೆ ಹೋಗಿ ಮತ್ತೆ ಬಂದು ನೆಲಸುತ್ತಿದ್ದರು, ಬಹುಶಃ ನೆಲೆಬಿಡುವ ಅಥವಾ ಪುನಃ ನೆಲೆಹೂಡುವ ಮೊದಲು ಅಲ್ಲಿ ಸಂಗ್ರಹವಾಗುತ್ತಿದ್ದ ಸಗಣಿಯನ್ನು ಸುಡುತ್ತಿದ್ದಿರಬೇಕು. ಇದರಿಂದ ಅಂಥ ಬೂದಿಯ ದೊಡ್ಡ ದಿಬ್ಬಗಳೇ ಎದ್ದಿವೆ–ಎಂದು ವಿದ್ವಾಂಸರು ಊಹಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಕುಪ್ಪಗಲ್ಲು, ಗುಲ್ಬರ್ಗ ಜಿಲ್ಲೆಯ ಕೊಡೆಕಲ್ಲು (ಹಾಗೂ ಆಂಧ್ರಪ್ರದೇಶದ ಉತ್ನೂರು) ಈ ಸ್ಥಳಗಳಲ್ಲಿ ನಡೆಸಿರುವ ಉತ್ಖನನಗಳಿಂದ ದೊರೆತ ಮಾಹಿತಿಗಳು ಈ ಊಹೆಗೆ ಕಾರಣ. ಕೊಡೆಕಲ್ಲಿನಲ್ಲಿ ನೆಲೆ ಹೂಡಿಕೆಯು ಮೂರು ಸಲವೂ ಸಗಣಿಯ ಸುಡುವಿಕೆಯು ಎರಡು ಸಲವೂ ಜರುಗಿರಬೇಕೆಂದು ಅಲ್ಲಿನ ಸ್ತರಪರೀಕ್ಷೆಯಿಂದ ತಿಳಿದಿದೆ. ಈ ದಿಬ್ಬಗಳಲ್ಲೂ ಬೂದಿಯ ಜೊತೆಗೆ ನವಶಿಲಾ ಯುಗಕಾಲೀನ ಆಯುಧಗಳು, ಮಡಕೆಗಳು, ಪ್ರಾಣಿ ಎಲುಬುಗಳು ಮುಂತಾದ ಅವಶೇಷಗಳು ದೊರಕಿವೆ.

ಈ ಕಾಲದ ಗ್ರಾಮಗಳನ್ನು ಸಾಮಾನ್ಯವಾಗಿ ಗುಡ್ಡಗಳ ಮೇಲೆ ವಿವಿಧ ಎತ್ತರಗಳಲ್ಲಿ ಕಂಡುಬರುವ ಸಮತಟ್ಟಿನ ಪ್ರದೇಶಗಳಲ್ಲಿ (ಉದಾ. ಸಂಗನಕಲ್ಲು, ತೆಕ್ಕಲಕೋಟೆ) ಅಥವಾ ನದಿ ತೊರೆಗಳ ದಂಡೆಗಳಲ್ಲಿ (ಉದಾ. ಹಳ್ಳೂರು, ತಿರುಮಕೂಡಲು ನರಸೀಪುರ) ನಿರ್ಮಾಣ ಮಾಡಲಾಗುತ್ತಿತ್ತು. ಗ್ರಾಮಗಳಲ್ಲಿ ಬಹುಶಃ ಪ್ರತಿ ಕುಟುಂಬಕ್ಕೂ ಒಂದೊಂದರಂತೆ ಪ್ರತ್ಯೇಕ ಗುಡಿಸಲುಗಳು ಇರುತ್ತಿದ್ದವು. ಇವೆಲ್ಲ ಒಂದೇ ಕೋಣೆಯ ಗುಡಿಸಲುಗಳು. ಹಳ್ಳೂರಿನ ಒಂದು ಗುಡಿಸಲು ವೃತ್ತಾಕಾರವಾಗಿದ್ದು 3 ಮೀ ವ್ಯಾಸವಿತ್ತು. ನೆಲವನ್ನು ಮಟ್ಟಸವಾಗಿ ದಮ್ಮಸು ಮಾಡಲಾಗಿತ್ತು. ಸುತ್ತಲ ಗೋಡೆಯ ಭಾಗದಲ್ಲಿ ಬೊಂಬಿನ ಕಂಬಗಳನ್ನು ನೆಡಲಾಗಿದ್ದುದಕ್ಕೆ ಸೂಚನೆಗಳಿರುವುದರಿಂದ ಅಲ್ಲಿ ತಡಿಕೆಗೋಡೆ ಇದ್ದಿರಬಹುದೆಂದು ಊಹಿಸಬಹುದು. ವೃತ್ತದ ನಡುಮಧ್ಯೆ ಸಹ ಒಂದು ಕಂಬದ ಗುಳಿ ಇತ್ತು. ಬಹುಶಃ ಇಲ್ಲಿದ್ದ ಕಂಬ ಸುತ್ತಲಗೋಡೆಯ ಮಟ್ಟಕ್ಕಿಂತ ಮೇಲೆದ್ದಿದ್ದು ಕಂಬದಿಂದ ಹೊರಟು ಆ ಗೋಡೆಗಳ ಮೇಲೆ ಹರಡಿದ್ದ ಇಳಿಜಾರು ಚಾವಣಿಗೆ ಆಸರೆಯಾಗಿರಬೇಕು. ಚಾವಣಿ ಬಹುಶಃ ಹುಲ್ಲಿನದು. ಸುಮಾರು ಇದೇ ರೀತಿಯ ಶಂಖಾಕೃತಿಯ ಇಳಿಜಾರು ಚಾವಣಿಯನ್ನು ಹೊಂದಿದ್ದ ವೃತ್ತಾಕಾರದ ಗುಡಿಸಲುಗಳ ಅವಶೇಷಗಳು ತೆಕ್ಕಲಕೋಟೆ, ಸಂಗನಕಲ್ಲು ಮೊದಲಾದೆಡೆಗಳಲ್ಲೂ ಬೆಳಕಿಗೆ ಬಂದಿದ್ದು, ಇದು ಆ ಕಾಲದ ವಾಸದ ಮನೆಗಳ ಸಾಮಾನ್ಯ ಸ್ವರೂಪವಾಗಿತ್ತು ಎನಿಸುತ್ತದೆ. ತೆಕ್ಕಲಕೋಟೆ ಮತ್ತು ಸಂಗನಕಲ್ಲುಗಳಲ್ಲಿ ಗುಡಿಸಲ ಹೊರಗೆ ಗೋಡೆಯ ಬುಡಕ್ಕೆ ಒತ್ತಿದಂತೆ ಕಲ್ಲುಗುಂಡುಗಳನ್ನು ವೃತ್ತಾಕಾರವಾಗಿ ಜೋಡಿಸಿದ್ದುದು ಕಂಡುಬಂದಿದೆ. ಸಂಗನಕಲ್ಲಿನ ಒಂದು ಗುಡಿಸಲು ಸು. 5ಮೀ ವ್ಯಾಸವುಳ್ಳದ್ದಾಗಿತ್ತು. ಇದನ್ನು ಹಳ್ಳತಗ್ಗಿದ್ದ ಬಂಡೆಯ ಮೇಲೆ ಕಟ್ಟಲಾಗಿದ್ದರೂ ಕಲ್ಲಿನ ಚಕ್ಕೆಗಳನ್ನು ಹರವಿ, ಜೇಡಿ ಮತ್ತು ಕೆಂಪುಮಣ್ಣಿನ ಪದರಗಳಿಂದ ಗಚ್ಚನ್ನು ಮಾಡಿ, ಮೇಲೆ ಸುಣ್ಣದ ಲೇಪಕೊಟ್ಟು ನೆಲವನ್ನು ಸರಿಮಾಡಲಾಗಿತ್ತು. ಸುತ್ತಲಿದ್ದ ತಡಿಕೆಯ ಗೋಡೆಯ, ಮತ್ತು ಹುಲ್ಲಿನ ಚಾವಣಿಯ ಅವಶೇಷಗಳೂ ಇಲ್ಲಿ ದೊರಕಿವೆ. ಹೆಮ್ಮಿಗೆಯ ಉತ್ಖನನದಲ್ಲಿ, ಆಯ ಅಥವಾ ಚೌಕಾಕಾರದ ಮನೆಗಳೂ ಆ ಕಾಲದಲ್ಲಿ ಇದ್ದಿರಬೇಕೆಂಬ ಸೂಚನೆಗಳು ದೊರಕಿವೆ. ಗುಡಿಸಲ ಒಳಗೆ ಉತ್ತರದಿಕ್ಕಿಗಿರುತ್ತಿದ್ದ ಒಲೆ, ನೀರಿನ ಪಾತ್ರೆ ಅಥವಾ ಗುಡಾಣವನ್ನು ಇಡುವುದಕ್ಕೆ ಇಟ್ಟಿದ್ದ ಮೂರು ನಾಲ್ಕು ಚಪ್ಪಟೆಕಲ್ಲುಗಳು, ಆಗ ಉಪಯೋಗದಲ್ಲಿದ್ದ ಮಡಕೆಗಳು, ಶಿಲೆ ಮತ್ತು ತಾಮ್ರದ ಆಯುಧಗಳು, ಇತ್ಯಾದಿಗಳು ಸಂಗನಕಲ್ಲು ಮೊದಲಾದೆಡೆಯ ಗುಡಿಸಲುಗಳಲ್ಲಿ ಕಂಡುಬಂದುವು. ಉತ್ಖನನಗಳಲ್ಲಿ ಆ ಕಾಲದ ಗುಡಿಸಲುಗಳ ಹರಕುಮುರುಕು ಅವಶೇಷಗಳು ಮಾತ್ರ ಸಿಗುತ್ತವೆ. ಆದರೆ ಅವುಗಳಲ್ಲಿ ಗುರುತಿಸಬಹುದಾದ ವಿಶಿಷ್ಟ ರೀತಿಯಲ್ಲೇ ಗುಡಿಸಲನ್ನು ಕಟ್ಟುವ ರೂಢಿ ಬಳ್ಳಾರಿ ಜಿಲ್ಲೆ ಮೊದಲಾದೆಡೆಯ ಬೋವ ಜನಾಂಗದವರಲ್ಲಿ ಇಂದಿಗೂ ಉಳಿದುಬಂದಿದೆ. ಇದರಿಂದ ಪ್ರಾಚೀನ ಮನೆಗಳ ಸ್ವರೂಪದ ಪೂರ್ಣಚಿತ್ರವನ್ನು ಪಡೆಯಬಹುದಾಗಿದೆ. ಹಾಗೆಯೇ ಇಂದಿನ ಪದ್ಧತಿಗೆ ಹೋಲಿಸಿ, ಬಹುಶಃ ನವಶಿಲಾ–ತಾಮ್ರಶಿಲಾಯುಗದ ಕಾಲದಲ್ಲೂ ಪ್ರತಿಗೃಹದಲ್ಲೂ ಸುಮಾರು 7–8 ಜನ ವಾಸಿಸುತ್ತಿದ್ದಿರಬೇಕು ಮತ್ತು ಒಂದು ಗ್ರಾಮದಲ್ಲಿ 10–15 ಮನೆಗಳಾದರೂ ಇದ್ದಿರಬಹುದು ಎಂದು ಊಹಿಸಬಹುದು.

ಆ ಕಾಲದ ಲೌಕಿಕ ಜೀವನದ ಬಗ್ಗೆ ತಿಳಿಯಲು ಹಾಗೂ ಆ ಸಂಸ್ಕೃತಿಯ ಸ್ವರೂಪ ಮತ್ತು ಬೆಳವಣಿಗೆಯ ಘಟ್ಟಗಳನ್ನು ಅರಿಯಲು ಅಂದು ಉಪಯೋಗದಲ್ಲಿದ್ದು ಇಂದಿಗೂ ಉಳಿದುಬಂದಿರುವ ವಸ್ತು ಅವಶೇಷಗಳು ಮುಖ್ಯಾಧಾರಗಳು. ತಿಗರಿಯನ್ನು ಉಪಯೋಗಿಸದೆ ಕೈಯಲ್ಲಿಯೇ ಮಾಡಿದ ಬೂದುಬಣ್ಣದ ಮಡಕೆಗಳು ಆ ಸಂಸ್ಕೃತಿಯ ವೈಶಿಷ್ಟ್ಯ. ಆ ಸಂಸ್ಕೃತಿಯ ಮೊದಲ ಹಂತಗಳಲ್ಲಿ ಹೆಚ್ಚು ನಯವಲ್ಲದ ಪೇಲವ ಬೂದುರಂಗಿನ ಮಡಕೆಗಳು ಬಳಕೆಯಲ್ಲಿದ್ದಂತೆ ತೋರುತ್ತದೆ (ಉದಾ : ಹಳ್ಳೂರು I, ಪಿಕ್ಲಿಹಾಳು I, ಕೊಡೆಕಲ್ಲು) ಅರೆಹಸಿಯಾಗಿ ಇರುವಾಗಲೇ ಮೇಲ್ಭಾಗವನ್ನು ಉಜ್ಜಿ ನಯಮಾಡಿದ ಮಡಕೆಗಳು ಮುಂದಿನ ಘಟ್ಟಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ (ಉದಾ : ಪಿಕ್ಲಿಹಾಳುII, ತಿರುಮಕೂಡಲು ನರಸೀಪುರ, ಬ್ರಹ್ಮಗಿರಿ, ಮಸ್ಕಿ). ಹೀಗೆ ನಯಮಾಡುವಾಗ ಕಂದು, ತಿಳಿಗೆಂಪು ಅಥವಾ ತಿಳಿಹಳದಿಯ ಮಣ್ಣಿನ ರಾಡಿಯನ್ನು ಹಚ್ಚುತ್ತಿದ್ದುದರಿಂದ ಆ ಬಣ್ಣಗಳುಳ್ಳ ಉಜ್ಜಿ ನಯಮಾಡಿದ ಮಡಕೆಗಳೂ ದೊರಕುತ್ತವೆ. ಕೆಲವೊಮ್ಮೆ ಮಡಕೆಯ ಅಂಚಿಗೆ ಕೆಮ್ಮಣ್ಣನ್ನು ಬಳಿದಿರುತ್ತಿದ್ದುದೂ ಉಂಟು. ದೊಡ್ಡ ದುಂಡುಮಡಕೆಗಳು ಮತ್ತು ಸ್ವಲ್ಪ ದೊಡ್ಡ ಪ್ರಮಾಣದ ಬಟ್ಟಲುಗಳು ಆ ಕಾಲದಲ್ಲಿ ಕಂಡುಬರುವ ಮಣ್ಣಿನ ಪಾತ್ರೆಗಳ ಸಾಮಾನ್ಯ ವಿಧಗಳು. ಅಲ್ಲದೆ

ಗಿಂಡಿ ಗೊಳವೆಗಳುಳ್ಳ ತಪ್ಪಲೆಗಳು, ಗೋಮುಖ ರೀತಿಯ ಪಾತ್ರೆಗಳೂ ಸ್ವಲ್ಪ ಪ್ರಮಾಣದಲ್ಲಿ ಉಪಯೋಗದಲ್ಲಿದ್ದುವು. ಹಲವು ರಂಧ್ರಗಳುಳ್ಳ ಬಸಿಗೆಗಳೂ ಅಪರೂಪವಾಗಿ ಕಂಡುಬರುವುದುಂಟು. ನವಶಿಲಾ–ತಾಮ್ರ ಶಿಲಾಯುಗದ ಕೊನೆಯ ಹಂತದ ಹೊತ್ತಿಗೆ (ಉದಾ : ತೆಕ್ಕಲಕೋಟೆ II, ಮಸ್ಕಿ ಪಿಕ್ಲಿಹಾಳು III) ತಿಗರಿಯ ಮೇಲೆ ಮಾಡಿದ ಮಡಕೆಗಳೂ ಬಳಕೆಗೆ ಬಂದುವು. ಇವುಗಳಲ್ಲಿ ಸಾಮಾನ್ಯ ಕೆಂಪುರಂಗಿನ ಮೈಮೇಲೆ ಕಂದುಗಪ್ಪು ಬಣ್ಣದ ವಿನ್ಯಾಸಗಳಿಂದ ಅಲಂಕರಿಸಿದ ಮಡಕೆಗಳು ಗಮನಾರ್ಹ. ಅಲ್ಲದೆ ತೆಕ್ಕಲಕೋಟೆ, ಹಳ್ಳೂರು ಮೊದಲಾದೆಡೆಗಳಲ್ಲಿ ಕೆಂಪು ಮತ್ತು ಕಪ್ಪು ದ್ವಿವರ್ಣದ ಮಡಕೆಗಳು ಹಾಗೂ ಹೊಳಪಿನ ಕಪ್ಪುಬಣ್ಣದ ಮೇಲೆ ಬಿಳಿಯ ಗೆರೆಗಳಿಂದ ಅಲಂಕರಿಸಿ ಮಾಡಿದವೂ ಕಂಡುಬಂದಿವೆ. ಬೆಳಗಾವಿ ಜಿಲ್ಲೆಯ ಕುಡಚಿ, ಸಪ್ತಸಾಗರ ಮೊದಲಾದೆಡೆಗಳಲ್ಲಿ ವಿವಿಧ ಜ್ಯಾಮಿತಿಯ ಆಕೃತಿಗಳು, ಮೀನು, ಬಾಣ, ಸಸ್ಯಗಳು ಮೊದಲಾದ ಚಿತ್ರಗಳಿಂದ ಅಲಂಕೃತವಾದ 'ಸಾವಳದಾ ಮೃತ್ಪಾತ್ರೆಗಳು' ಎಂದು ಹೆಸರಿಸುವ ವಿಶಿಷ್ಟ ರೀತಿಯ ಮಡಕೆಗಳು ಕಂಡುಬಂದಿವೆ.

ಉಜ್ಜಿ ನಯಮಾಡಿದ ಶಿಲಾಯುಧಗಳು ಈ ಘಟ್ಟದ ಸಂಸ್ಕೃತಿಯ ಹೆಗ್ಗುರುತು. ಇದರಲ್ಲಿ ವಿಶೇಷವಾಗಿ ಕಂಡುಬರುವ ಆಯುಧವೆಂದರೆ ಕೊಡಲಿ ಮತ್ತು ಬಾಚಿ; ಉಳಿ ಸಹ ಸ್ವಲ್ಪ ಸಂಖ್ಯೆಯಲ್ಲಿ ಇರುತ್ತವೆ. ಇವೆಲ್ಲಾ ಸಾಮಾನ್ಯತಃ ತ್ರಿಕೋನ ಆಕಾರದವು. ಅಡ್ಡಛೇದದಲ್ಲಿ ದುಂಡು ಅಥವಾ ದೀರ್ಘವೃತ್ತ. ಕೆಳಗಿನ ಅಲಗು ಅಗಲ ಮತ್ತು ನೇರವಾಗಿದ್ದರೆ ಮೇಲೆ ಹೋದಂತೆ ಸಣ್ಣದಾಗುತ್ತ ಚೂಪು ಅಥವಾ ಬಟ್ಟತಲೆಯನ್ನು ಹೊಂದಿರುತ್ತದೆ. ಈ ಆಯುಧಗಳನ್ನು ಕರಿಯ ಟ್ರಾಪ್ ಹಾಗೂ ಡಾಲೆರೈಟ ಡೈಕ್‌ಕಲ್ಲಿನಲ್ಲಿ ಮಾಡಲಾಗುತ್ತಿತ್ತು. ಸೂಕ್ತವಾದ ಕಲ್ಲನ್ನು ಆರಿಸಿ, ಚಕ್ಕೆಗಳನ್ನು ಎಬ್ಬಿಸಿ ಸೂಕ್ತ ಆಕಾರಕ್ಕೆ ತಂದು, ಕಲ್ಲುಮುಳ್ಳಿಕ್ಕಿ ಹದಮಾಡಿಕೊಂಡು, ಅನಂತರ ಉಜ್ಜಿ ನಯಮಾಡುವುದು–ಇವುಗಳ ತಯಾರಿಕೆಯಲ್ಲಿ ಅನುಸರಿಸುತ್ತಿದ್ದ ವಿಧಾನ. ಇವಲ್ಲದೆ ದುಂಡು ಗೋಲಗಳು, ಅರೆಯುವ ಕಲ್ಲುಗಳು ಮತ್ತು ಗುಂಡುಗಳು ಸಹ ಬಳಕೆಯಲ್ಲಿದ್ದವು. ಚರ್ಟ್ ಮೊದಲಾದ ನಯವಾದ ಕಲ್ಲಿನಿಂದ ಮಾಡಿದ ತೆಳುವಾದ ನೀಳ ಚಕ್ಕೆಗಳು ವಿಶೇಷವಾಗಿ ಬಳಕೆಯಲ್ಲಿದ್ದವು. ಬಹುಶಃ ಇಂಥ ನೀಳ ಚಕ್ಕೆಗಳನ್ನು ವಿವಿಧಾಕಾರಕ್ಕೆ ತಂದು ಬಾಣದ ಮೊನೆಗಳಾಗಿ ಅಥವಾ ಹಲವು ಚಕ್ಕೆಗಳನ್ನು ಮರದ ಹಿಡಿಗೆ ಉದ್ದುದ್ದವಾಗಿ ಕೂರಿಸಿ ಚಾಕುವಿನಂತೆ ಅಥವಾ ಬಾಗಿದ ಮರದ ಹಿಡಿಯುದ್ದಕ್ಕೂ ಅರೆವರ್ತುಲಾಕಾರವಾಗಿ ಕೂಡಿಸಿ ಕುಡುಗೋಲಿನಂತೆ ಉಪಯೋಗಿಸುತ್ತಿದ್ದಿರಬಹುದು. ಆದರೆ ಈ ರೀತಿಯ ನೀಳಚಕ್ಕೆಯ ಆಯುಧಗಳು ನವಶಿಲಾಯುಗದ ಪ್ರಾರಂಭಿಕ ಘಟ್ಟದಲ್ಲಿ ಅಷ್ಟಾಗಿ ಉಪಯೋಗದಲ್ಲಿರಲಿಲ್ಲವೆನಿಸುತ್ತದೆ. ಹಳ್ಳೂರು ಮತ್ತು ತಿರುಮಕೂಡಲು ನರಸೀಪುರದ ನೆಲೆಗಳ ಅತಿ ಕೆಳಗಿನ ಪದರಗಳಲ್ಲಿ ನವಶಿಲಾಯುಗದ ಮಿಕ್ಕ ವಿಶಿಷ್ಟ ಅಂಶಗಳಿದ್ದರೂ ಈ ರೀತಿಯ ನೀಳಚಕ್ಕೆಗಳು ಕಂಡುಬಂದಿಲ್ಲ.

ಆ ಕಾಲದಲ್ಲಿ ತಾಮ್ರದ ಬಳಕೆ ಇದ್ದರೂ ಅದು ವ್ಯಾಪಕವಾಗಿದ್ದಂತೆ ತೋರುವುದಿಲ್ಲ. ಬ್ರಹ್ಮಗಿರಿಯಲ್ಲಿ ಒಂದು ತಂತಿ, ತಿರುಮಕೂಡಲು ನರಸೀಪುರದಲ್ಲಿ ಒಂದು ಮಣಿ, ತೆಕ್ಕಲಕೋಟೆ, ಸಂಗನಕಲ್ಲು, ಹಳ್ಳೂರುಗಳಲ್ಲಿ ತೆಳುವಾದ ಎರಡೂ ಕಡೆ ಅರೆವೃತ್ತದ ಅಲಗುಳ್ಳ ಪರಶು, ಚಪ್ಪಟೆ ಕೊಡಲಿ, ಉಳಿ ಮತ್ತು ಮೀನು ಹಿಡಿಯುವ ಗಾಳಗಳು, ಇತರ ಕೆಲವೆಡೆಗಳಲ್ಲಿ ಕೆಲವು ತುಣುಕುಗಳು ಮಾತ್ರ ದೊರಕಿವೆ. ರಾಯಚೂರು ಜಿಲ್ಲೆಯ ಕಲ್ಲೂರಿನಲ್ಲಿ ಮಾತ್ರ ತಾಮ್ರದ ಕೊಡಲಿ, ಭರ್ಜಿ ಮೊದಲಾದ ವಸ್ತುಗಳು ಒಟ್ಟಾಗಿ ದೊರಕಿವೆ. ಇವೂ ಈ ಕಾಲಕ್ಕೇ ಸೇರಿದವಾಗಿರಬಹುದು. ಸಂಕನಕಲ್ಲು, ತೆಕ್ಕಲಕೋಟೆ ಮೊದಲಾದೆಡೆಗಳಲ್ಲಿ ಎಲುಬಿನಲ್ಲಿ ಮಾಡಿದ ಉಳಿ ಮತ್ತು ಮೊನೆಗಳು ಸಹ ದೊರಕಿವೆ.

ಇವಲ್ಲದೆ ನವಶಿಲಾ–ತಾಮ್ರಶಿಲಾಯುಗದ ಸ್ತರಗಳಲ್ಲಿ ಜೇಡಿ, ಎಲುಬು, ತಾಮ್ರ, ಕಾರ್ನೀಲಿಯನ್–ಇವುಗಳಿಂದ ಮಾಡಿದ ಮಣಿಗಳು, ತಾಮ್ರದ ಬಳೆ ಹಾಗೂ ಉಂಗುರ, ಚಿನ್ನದ ಕರ್ಣಾಭರಣ ಮೊದಲಾದ ಅಲಂಕರಣ ವಸ್ತುಗಳೂ ಕಂಡುಬಂದಿವೆ. ಜೇಡಿಮಣ್ಣಿನಲ್ಲಿ ಮಾಡಿದ ಗೂಳಿಯ ಬೊಂಬೆಗಳು ಅಲ್ಲಲ್ಲಿ ದೊರಕಿವೆ.

ವ್ಯವಸಾಯ ಮತ್ತು ಪಶುಪಾಲನೆ ಆ ಕಾಲದ ಮುಖ್ಯ ಜೀವನಾಧಾರಗಳಾಗಿದ್ದವು. ಅಂದಿನ ವ್ಯವಸಾಯದ ವಿಧಿವಿಧಾನಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ದೊರಕಿಲ್ಲವಾದರೂ ತತ್ಕಾಲದಲ್ಲಿ ಅನೇಕ ಸ್ಥಿರನೆಲೆಗಳು ಇದ್ದುದು ಹಾಗೂ ಕಾಡನ್ನು ಸವರಲು ಬಳಸಬಹುದಾದ ಕೊಡಲಿಗಳು ಮತ್ತು ಧಾನ್ಯವನ್ನು ಹಿಟ್ಟುಮಾಡಲು ಉಪಯೋಗಿಸುತ್ತಿದ್ದ ಬೀಸುಕಲ್ಲುಗಳು ಮತ್ತು ಗುಂಡುಗಳು ಸಾಕಷ್ಟು ಸಂಖ್ಯೆಯಲ್ಲಿ ವಾಸದ ನೆಲೆಗಳಲ್ಲಿ ದೊರಕುವುದು, ಇವು ಆ ಕಾಲದ ಜನ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದಿರಬೇಕೆಂಬುದಕ್ಕೆ ಸ್ಪಷ್ಟ ಸೂಚನೆಗಳಾಗಿವೆ. ಹಳ್ಳೂರಿನ ನೆಲೆಯಲ್ಲಿ ಕರಿಗಟ್ಟಿದ ರಾಗಿಕಾಳು ಮತ್ತು ತೆಕ್ಕಲಕೋಟೆಯಲ್ಲಿ ಹುರುಳಿ ಕಾಳು ದೊರಕಿರುವುದು ಆ ಕಾಲದ ಬೆಳೆಗಳ ಬಗ್ಗೆ ಸ್ಪಷ್ಟ ಮಾಹಿತಿಗಳಾಗಿವೆ. ಆ ಕಾಲದ ಎಲ್ಲ ನೆಲೆಗಳಲ್ಲೂ ದನ, ಕುರಿ ಮತ್ತು ಮೇಕೆಯ ಮೂಳೆಗಳೂ ಉಳಿದು ಬಂದಿವೆ. ತಿರುಮಕೂಡಲು ನರಸೀಪುರದಲ್ಲಿ ದೊರಕಿದ ಮೂಳೆ ತುಂಡುಗಳ ವಿಶ್ಲೇಷಣೆಯಿಂದ ಈ ಪ್ರಾಣಿಗಳೆಲ್ಲ ಸಾಕುಪ್ರಾಣಿಗಳು ಮತ್ತು ಇವನ್ನು ಮಾಂಸಕ್ಕಾಗಿ ಸಾಕುತ್ತಿದ್ದರು ಹಾಗೂ ದನಗಳನ್ನು ಸಾಗಾಣಿಕೆಗೂ ಸಹ ಉಪಯೋಗಿಸುತ್ತಿರಬೇಕು ಎಂದು ನಿರ್ಧರಿಸಲಾಗಿದೆ. ಇಂಥ ಪ್ರಾಣಿಗಳ ಇರುವಿಕೆಯಿಂದ ಹೈನು ಸಹ ಆ ಜನರ ಆಹಾರದ ಭಾಗವಾಗಿರಬೇಕೆಂದು ಊಹಿಸಬಹುದು. ವ್ಯವಸಾಯ ಮತ್ತು ಪಶುಪಾಲನೆಯಲ್ಲದೆ ಅಂದಿನ ಜನ ಆಹಾರಕ್ಕಾಗಿ ಸ್ವಲ್ಪಮಟ್ಟಿಗೆ ಬೇಟೆಯನ್ನು ಅವಲಂಬಿಸಿರಬೇಕು. ಉತ್ತರ ಕರ್ನಾಟಕದ ಕೆಲವು ನೆಲೆಗಳಲ್ಲಿ ದೊರಕುವ ಜಿಂಕೆಯ ಮೂಳೆಗಳು ಮತ್ತು ಬೇಟೆಗಾಗಿ ಉಪಯೋಗಿಸಬಹುದಾದ ಸೂಕ್ಷ್ಮ ಶಿಲಾಯುಧಗಳು ಈ ಊಹೆಗೆ ಆಧಾರ.

ನವಶಿಲಾ–ತಾಮ್ರಶಿಲಾಯುಗದಲ್ಲಿ ಮೃತರನ್ನು ವಾಸದ ನೆಲೆಯಲ್ಲೇ, ಬಹುಶಃ ಮನೆಗಳ ಒಳಗೇ, ಗುಳಿ ತೋಡಿ ಹೂಳುವ ಪದ್ಧತಿ ರೂಢಿಯಲ್ಲಿತ್ತು. ಚಿಕ್ಕ ಮಕ್ಕಳನ್ನು ಮಡಕೆಗಳಲ್ಲಿ ಇಟ್ಟು ಮೇಲೆ ಒಡೆದ ಮಡಕೆಯ ತಳವನ್ನು ಮುಚ್ಚಿ, ಚಿಕ್ಕ ಗುಂಡಿಗಳಲ್ಲಿ ಹೂಳುತ್ತಿದ್ದರು (ಉದಾ: ಬ್ರಹ್ಮಗಿರಿ, ತೆಕ್ಕಲಕೋಟೆ, ಹಳ್ಳೂರು, ಮಸ್ಕಿ). ವಯಸ್ಕರನ್ನು ಕಿರಿದಾದ ಗುಂಡಿ ತೋಡಿ ಅಂಗಾತನಾಗಿ ಮಲಗಿಸಲಾಗುತ್ತಿತ್ತು. (ಉದಾ: ಬ್ರಹ್ಮಗಿರಿ, ತೆಕ್ಕಲಕೋಟೆ, ಪಿಕ್ಲಿಹಾಳು, ತಿರುಮಕೂಡಲು ನರಸೀಪುರ). ಸಮಾಧಿಯಲ್ಲಿ ಒಂದು ದೊಡ್ಡ ಬಟ್ಟಲು(ದೀಪ?) ಮತ್ತು ನೀರಿನ ತಪ್ಪಲೆಯನ್ನು ಇಡಲಾಗುತ್ತಿತ್ತು. ತಿರುಮಕೂಡಲು ನರಸೀಪುರದಲ್ಲಿ ಕಂಡುಬಂದ ಒಂದು ಸಮಾಧಿಯಲ್ಲಿ ಎರಡೂ ಕೈಗಳನ್ನು ಎದೆಯ ಮೇಲೆ ಇಟ್ಟಿರುವುದಲ್ಲದೆ, ತಪ್ಪಲೆ ಮತ್ತು ಬಟ್ಟಲಿನ ಜೊತೆಗೆ, ಕೆಳಗೆ ಗಂಟೆಯಾಕಾರದ ಮತ್ತು ಮೇಲೆ ಚಪ್ಪಟೆ ಭಾಗ ಇರುವ ಒಂದು 'ತಲೆಯಾಸರೆ'ಯನ್ನು ಸಹ ಇಡಲಾಗಿತ್ತು. ತೆಕ್ಕಲಕೋಟೆಯಲ್ಲಿ ಕೆಲವು ವಿಶಿಷ್ಟ ರೀತಿಯ ಸಮಾಧಿಗಳು ಕಂಡುಬಂದುವು. ಮೊದಲು ಮೃತನ ದೇಹವನ್ನು ಬೇರೆಲ್ಲಿಯೋ ಇಟ್ಟಿದ್ದು ಅದರ ಮೃದುಭಾಗಗಳು ನಶಿಸಿದ ಅನಂತರ ಬುರುಡೆ, ಕೈಕಾಲು ಇತ್ಯಾದಿ ದೊಡ್ಡ ಮೂಳೆಗಳನ್ನು

ಮಾತ್ರ ಸಂಗ್ರಹಿಸಿ, ಅವನ್ನು ಮಾನವನ ಎಲುಬಿನ ಹಂದರದ ರೀತಿಯಲ್ಲೆ ಕ್ರಮವಾಗಿ ಜೋಡಿಸಿಟ್ಟು ಸಮಾಧಿ ಮಾಡಲಾಗಿತ್ತು. ಇಂಥ ಒಂದು ಸಮಾಧಿಯಲ್ಲಿ ಮೂರು ಬೇರೆ ಬೇರೆ ಜನರ ಅಸ್ತಿಗಳಿದ್ದುದು ಕುತೂಹಲ ಕಾರಿಯಾದ ಅಂಶ. ತೆಕ್ಕಲಕೋಟೆಯ ನವಶಿಲಾ–ತಾಮ್ರಶಿಲಾಯುಗದ ಕೊನೆಯ ಘಟ್ಟದಲ್ಲಿ ಸಾಮಾನ್ಯರೀತಿ ಶವಹೂಳಿಕೆಯಲ್ಲದೆ, ನಾಲ್ಕು ದಪ್ಪ ಮಡಕೆಗಳನ್ನು ಒಂದರ ಮೇಲೊಂದರಂತೆ ಜೋಡಿಸಿ, ಮಧ್ಯದ ಮಡಕೆಗಳ ತಳವನ್ನು ಒಡೆದು, ಮೃತನ ಶರೀರವನ್ನು ತೂರಿಸಿ, ಅದನ್ನು ಮಲಗಿಸಿದಂತೆ ಸಮಾಧಿ ಮಾಡಿರುವ ಒಂದು ರೀತಿ ಸಹ ಕಂಡುಬಂದಿದೆ. ತೆಕ್ಕಲಕೋಟೆಯ ಈ ಎಲ್ಲ ಸಮಾಧಿಗಳಲ್ಲೂ ಸುಮಾರು 1 ರಿಂದ 11 ಮಡಕೆ ಕುಡಿಕೆಗಳನ್ನು ಇಡಲಾಗಿತ್ತು.

ಈ ಸಮಾಧಿಗಳಲ್ಲಿ ದೊರಕಿರುವ ಅನೇಕ ಎಲುಬಿನ ಹಂದರಗಳನ್ನು ವಿಶ್ಲೇಷಿಸಿರುವ ಮಾನವ ಶಾಸ್ತ್ರಜ್ಞರು ಆ ಜನ ಪ್ರೋಟೊ ಆಸ್ಟ್ರಲಾಯಿಡ್ ಮತ್ತು ಮೆಡಿಟರೇನಿಯನ್ ಎಂಬ ಜನವರ್ಗಕ್ಕೆ ಸೇರಿದವರೆಂದು ಗುರುತಿಸಿದ್ದಾರೆ. ಇದೇ ಜನವರ್ಗದವರು ಇಂದಿನ ಕರ್ನಾಟಕದ ಜನಸಮೂಹದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಎಂಬುದು ಗಮನಾರ್ಹ **(ನೋಡಿ : ಜನ)**.

ಆ ಕಾಲದ ಜನರ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳ ಬಗ್ಗೆ ನೇರವಾದ ಮಾಹಿತಿಗಳು ದೊರಕಿಲ್ಲ. ಆದರೆ ಸಮಾಧಿಗಳಲ್ಲಿ ಮಡಕೆಗಳನ್ನು ಇಟ್ಟಿರುವುದನ್ನು ನೋಡಿದರೆ ಅವುಗಳಲ್ಲಿ ಮೃತರ ಪ್ರೀತ್ಯರ್ಥವಾಗಿ ಕೆಲವು ಆಹಾರ ಪಾನೀಯಗಳನ್ನು ಇಟ್ಟಿರಬೇಕೆನಿಸುತ್ತದೆ. ಹಾಗಿದ್ದರೆ ಇದು ಮರಣೋತ್ತರಕಾಲದಲ್ಲಿ ಮೃತನ ಆತ್ಮ ಉಳಿದು ಅದಕ್ಕೂ ಕೆಲವು ಆವಶ್ಯಕತೆಗಳು ಇರುತ್ತವೆ ಎಂಬ ನಂಬಿಕೆ ಇದ್ದಂತೆ ಕಾಣುತ್ತದೆ. ವಾಸದ ನೆಲೆಗಳಲ್ಲಿ ಮೃತರನ್ನು ಹೂಳುವ ಪದ್ಧತಿಯ ಹಿನ್ನೆಲೆಯಲ್ಲಿ ಮೃತರು ಕುಟುಂಬದಲ್ಲಿಯೇ ಉಳಿಯುತ್ತಾರೆ ಮತ್ತು ಬಹುಶಃ ಪುನಃ ಅಲ್ಲಿಯೇ ಹುಟ್ಟುತ್ತಾರೆ ಎಂಬ ಆಶಯ ಇರಬಹುದು. ಹಲವು ನೆಲೆಗಳಲ್ಲಿ ಗೂಳಿಯ ಬೊಂಬೆಗಳು ಯಾವುದೋ ಧಾರ್ಮಿಕ ನಂಬಿಕೆ ಮತ್ತು ಆಚರಣೆಗೆ ಸಂಬಂಧಿಸಿರಬೇಕೆನಿಸುತ್ತದೆ.

ತೆಕ್ಕಲಕೋಟೆ, ಸಂಗನಕಲ್ಲು, ಪಿಕ್ಲಿಹಾಳು, ಗೊಂಬಿಗುಡ್ಡ (ಬಿಜಾಪುರ ಜಿಲ್ಲೆ) ಇತ್ಯಾದಿ ಎಡೆಗಳಲ್ಲಿ ಬಂಡೆಗಳ ಮೇಲೆ ಕೆಮ್ಮಣ್ಣಿನಲ್ಲಿ ರೂಪಿಸಿದ ಅಥವಾ ಗೀರಿದ ಚಿತ್ರಗಳು ಇವೆ. ಇವೆಲ್ಲಾ ಬಹು ಸರಳವಾದ ರೇಖಾ ಚಿತ್ರಗಳು. ಜಿಂಕೆ ಮೊದಲಾದ ಬೇಟೆಯ ಪ್ರಾಣಿಗಳು, ದನ, ಅಪರೂಪವಾಗಿ ಮಾನವನ ಆಕೃತಿಗಳು ಈ ಚಿತ್ರದ ವಸ್ತುಗಳು. ಇಂಥ ಚಿತ್ರಗಳೂ ಕರ್ನಾಟಕದ ಅತ್ಯಂತ ಪ್ರಾಚೀನ ಕಲಾಕೃತಿಗಳು ಎಂಬುದು ಒಂದು ಮುಖ್ಯ ಅಂಶ. ಅಲ್ಲದೆ ಚಿತ್ರಿತ ಬಂಡೆಗಳು ಆ ಕಾಲದ ವಾಸದ ನೆಲೆಗಳಿಂದ ದೂರವಿದ್ದು, ಹಲವೆಡೆಗಳಲ್ಲಿ ಚಿತ್ರಕರು ಅಂಥ ಸ್ಥಳಗಳನ್ನು ಬಹು ಕಷ್ಟದಿಂದ ತಲುಪಿ ಚಿತ್ರಿಸಿರುವುದು ಕಾಣುತ್ತದೆ. ಇಷ್ಟು ಶ್ರಮದ ವ್ಯಯವನ್ನು ನೋಡಿದರೆ ಅವು ಕೇವಲ ಕಲಾದೃಷ್ಟಿಯಿಂದ ಮಾಡಿದುವಲ್ಲ; ಪ್ರಾಯಶಃ ಅಂಥ ತಾಣಗಳು ಪವಿತ್ರವೆಂಬ ಭಾವನೆ ಅಂದಿನ ಜನಗಳಲ್ಲಿದ್ದು, ಆ ಚಿತ್ರಗಳು ಯಾವುದೋ ಧಾರ್ಮಿಕ ಆಚರಣೆಯ ಭಾಗವಾಗಿರಬಹುದು ಎಂದು ಊಹಿಸಲು ಅವಕಾಶವಿದೆ.

ಕರ್ನಾಟಕದ ಅನೇಕ ನೆಲೆಗಳಲ್ಲಿ ಸಂಗ್ರಹಿಸಿದ ವಸ್ತುಗಳ ಇಂಗಾಲ–14ರ ಪರೀಕ್ಷೆಯಿಂದ ಈ ಸಂಸ್ಕೃತಿಯ ಕಾಲಿಕ ವ್ಯಾಪ್ತಿಯನ್ನು ನಿರ್ಧರಿಸ ಬಹುದು. ಕೆಲವು ಮುಖ್ಯ ಕಾಲನಿರ್ಧಾರಗಳು ಈ ರೀತಿ ಇವೆ (ಇಂಗಾಲ–14ರ ಅರ್ಧ ಕಾಲಾವಧಿ 5,570 ವರ್ಷಗಳು ಎಂದು ಇಟ್ಟುಕೊಳ್ಳಲಾಗಿದೆ.)

| | ಪ್ರಸಕ್ತಪೂರ್ವವರ್ಷಗಳು | | | ಕ್ರಿಸ್ತಪೂರ್ವ |
|---|---|---|---|---|
| ಕೊಡೆಕಲ್ಲು | 4285 | ± | 105 | 2335 |
| ತೇರದಾಳ | 3755 | ± | 95 | 1805 |
| | 3615 | ± | 120 | 1665 |
| ತಿರುಮಕೂಡಲು ನರಸೀಪುರ | 3645 | ± | 105 | 1695 |
| | 3395 | ± | 105 | 1445 |
| ತೆಕ್ಕಲಕೋಟೆ | 3625 | ± | 100 | 1675 |
| | 3460 | ± | 134 | 1510 |
| | 3395 | ± | 105 | 1445 |
| ಹಳ್ಳೂರು | 3560 | ± | 105 | 1610 |
| | 3280 | ± | 105 | 1330 |
| | 2970 | ± | 105 | 1020 |
| | 2895 | ± | 100 | 945 |
| ಸಂಗನಕಲ್ಲು | 3440 | ± | 100 | 1490 |
| | 3400 | ± | 100 | 1450 |

ಈ ಸೂಚನೆಗಳಿಂದ ಕರ್ನಾಟಕದಲ್ಲಿ ನವಶಿಲಾ–ತಾಮ್ರಶಿಲಾ ಸಂಸ್ಕೃತಿ ಪ್ರ.ಶ.ಪೂ.ಸು. 2,500ರಿಂದ ಸು. 800ರವರೆಗೆ ಪ್ರಚಲಿತವಾಗಿದ್ದಿರಬೇಕೆಂದು ತೀರ್ಮಾನಿಸಬಹುದು.

ಸು. 1,500 ವರ್ಷಗಳಿಗಿಂತಲೂ ಹೆಚ್ಚಿನ ಈ ದೀರ್ಘ ಅವಧಿಯಲ್ಲಿ ಈ ಸಂಸ್ಕೃತಿಯ ಸ್ವರೂಪ ಒಂದೇ ರೀತಿಯಲ್ಲಿ ಇದ್ದಿರುವುದು ಅಸಂಭವ. ಹಳ್ಳೂರು, ತೆಕ್ಕಲಕೋಟೆ, ಪಿಕ್ಲಿಹಾಳು ಮೊದಲಾದೆಡೆಗಳಲ್ಲಿ ವಿವಿಧ ಸ್ತರಗಳಲ್ಲಿ ದೊರಕುವ ವಸ್ತುಗಳ ವೈವಿಧ್ಯತೆಯನ್ನು ಅನುಸರಿಸಿ ಹಲವು ಸಾಂಸ್ಕೃತಿಕ ಘಟ್ಟಗಳ ಇರುವಿಕೆಯನ್ನು ಪ್ರಾಗಿತಿಹಾಸಜ್ಞರು ಗುರುತಿಸಿದ್ದಾರೆ (ಪಿಕ್ಲಿಹಾಳು I, II, III ತೆಕ್ಕಲಕೋಟೆ, I, II, ಇತ್ಯಾದಿ). ಮಡಕೆಗಳಷ್ಟನ್ನೇ ತೆಗೆದುಕೊಂಡರೆ ವಿವಿಧ ಕಾಲ ಘಟ್ಟಗಳಲ್ಲಿ ಹೇಗೆ ಬೇರೆ ಬೇರೆ ರೀತಿಯವು ಬಳಕೆಗೆ ಬಂದಿದ್ದುವು ಎಂಬುದನ್ನು ಹಿಂದೆಯೇ ಸೂಚಿಸಿದೆ. ಈ ಬದಲಾವಣೆಗೆ ಮುಖ್ಯ ಕಾರಣ ಪ್ರಾರಂಭದ ನವಶಿಲಾ ಸಂಸ್ಕೃತಿ ಉತ್ತರ ದಖನ್ ಪ್ರದೇಶದಲ್ಲಿದ್ದ ತಾಮ್ರಶಿಲಾ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾದುದು. ಇದರಿಂದಾಗಿ ಮೊದಲು ನೀಳಚಕ್ಕೆಗಳ ಆಯುಧಗಳು ಅನಂತರ ತಾಮ್ರದ ಬಳಕೆ, ತಿಗರಿಯ ಮೇಲೆ ಮಾಡಿದ ಕೆಂಪು ಬಣ್ಣದ ಮೇಲೆ ತಿಳಿನೀಲಿ ಚಿತ್ರಗಳಿರುವ ಮಡಕೆಗಳು, ಕಪ್ಪು ಮತ್ತು ಕೆಂಪಿನ ಮಡಕೆಗಳು, ಸಾಲು ಮಡಕೆಗಳಲ್ಲಿ ಮೃತದೇಹವನ್ನು ತೂರಿಸಿ ಹೂಳುವುದು–ಇವೆಲ್ಲಾ ಪ್ರಚಲಿತವಾದಂತೆ ತೋರುತ್ತದೆ. ಆದರೆ ಈ ಪ್ರಭಾವ ಜನರ ಆರ್ಥಿಕ ಸ್ಥಿತಿಗತಿಗಳಲ್ಲಿ ಹೆಚ್ಚಿನ ಬದಲಾವಣೆಯನ್ನು ತಂದಂತೆ ತೋರುವುದಿಲ್ಲ. ಅಲ್ಲದೆ ಈ ಪ್ರಭಾವ ವಿವಿಧ ಪ್ರದೇಶಗಳಲ್ಲಿ ಒಂದೇ ಪ್ರಮಾಣದಲ್ಲಿಯೂ ಇರಲಿಲ್ಲ. ಉದಾಹರಣೆಗೆ ಕಾವೇರಿ ಬಯಲಿನ ನೆಲೆಗಳಲ್ಲಿ ಈ ಕಾಲದ ಸ್ತರಗಳಲ್ಲಿ ತಿಗರಿಯ ಮೇಲೆ ಮಾಡಿದ ಮಡಕೆಗಳು ಸಿಗುವುದೇ ಅಪರೂಪ. ಒಳ್ಳೆಯ ನೀಳಚಕ್ಕೆಯ ಆಯುಧಗಳೂ ಅಷ್ಟಾಗಿ ಕಾಣುವುದಿಲ್ಲ. ಬಹು ಚಿಕ್ಕ ಮತ್ತು ಒರಟಾದ ನೀಳಚಕ್ಕೆಗಳು ಮಾತ್ರ ಅಲ್ಪಸ್ವಲ್ಪ ಸಂಖ್ಯೆಯಲ್ಲಿ ದೊರಕುತ್ತವೆ.

ಉತ್ತರ ದಖನ್‌ನ ಸಾಂಸ್ಕೃತಿಕ ಪ್ರಭಾವ ಆ ಪ್ರದೇಶದೊಡನೆ ಕರ್ನಾಟಕದ ಜನ ಹೊಂದಿದ್ದ ಸಂಪರ್ಕಕ್ಕೂ ಸೂಚನೆಯಾಗಿದೆ. ಅಲ್ಲದೆ

ಸಮಕಾಲೀನ ಹರಪ್ಪ ಸಂಸ್ಕೃತಿಯ ನೆಲೆಗಳಲ್ಲಿ ಸಿಕ್ಕಿರುವ ಚಿನ್ನದ ವಸ್ತುಗಳ ವಿಶ್ಲೇಷಣೆಯಿಂದ ಆ ಲೋಹ ಕರ್ನಾಟಕದ ಗಣಿಗಳಲ್ಲಿ ಉತ್ಪನ್ನವಾದುದಾಗಿರಬೇಕೆಂದು ತರ್ಕಿಸಲಾಗಿದೆ. ಆದರೆ ಈ ಹೊರನಾಡು ಸಂಪರ್ಕದ ವಿಧಾನದ ಬಗ್ಗೆ ಸ್ಪಷ್ಟ ವಿವರಗಳು ದೊರೆಯುವುದಿಲ್ಲ. ಕರ್ನಾಟಕದ ಹಲವು ನೆಲೆಗಳಲ್ಲಿ (ಅದರಲ್ಲೂ ಕಾವೇರಿ ಬಯಲಿನಲ್ಲಿ) ಬಹು ಸಾಮಾನ್ಯವಾಗಿ ಕಂಡುಬರುವ ಮಣ್ಣಿನಲ್ಲಿ ಮಾಡಿದ 'ತಲೆಯಾಸರೆ'ಗಳೂ ಈ ದಿಶೆಯಲ್ಲಿ ಕುತೂಹಲಕಾರಿ ವಸ್ತುಗಳು. ಇದೇ ರೀತಿಯ 'ತಲೆಯಾಸರೆ'ಗಳು ಆಫ್ರಿಕಾ ಖಂಡದ ಹಲವೆಡೆಗಳಲ್ಲಿ, ವಿಶೇಷತಃ ಈಜಿಪ್ಟಿನಲ್ಲಿ ಬಹು ಹಿಂದಿನಿಂದ ಪ್ರಚಲಿತವಾಗಿದ್ದುದು ತಿಳಿದಿದೆ. ಬಹುಶಃ ಕ್ರಿ.ಪೂ. 15–14ನೆಯ ಶತಮಾನದ ಆಸುಪಾಸಿನಲ್ಲಿ ಈಜಿಪ್ಟ್ ದೇಶದ ದೊರೆಗಳು ನಡೆಸಿದ ಸಾಗರೋತ್ತರ ವಲಸೆಯ ಕಾರಣದಿಂದ ಅಥವಾ ಇನ್ನಾವುದೋ ರೀತಿಯಿಂದ ಕರ್ನಾಟಕಕ್ಕೆ ಆ ಪ್ರದೇಶದೊಡನೆ ಸಂಪರ್ಕ ಒದಗಿಬಂದು ಈ ವಸ್ತುಗಳ ಬಳಕೆಯ ಕಲ್ಪನೆ ಹರಡಿರಬೇಕೆನಿಸುತ್ತದೆ. ಕರ್ನಾಟಕದ ನವಶಿಲಾ–ತಾಮ್ರಶಿಲಾ ಸಂಸ್ಕೃತಿ ಗ್ರಾಮಮಟ್ಟದ್ದಾದರೂ ಈ ರೀತಿಯ ಸಂಪರ್ಕಗಳನ್ನು ಹೊಂದಿದ್ದುವೆಂಬುದು ಗಮನಾರ್ಹ ಅಂಶ.

ಬಹುಶಃ ಇದೇ ರೀತಿಯ ಸಂಪರ್ಕದ ಹೆಚ್ಚಳವೇ ಕಬ್ಬಿಣವನ್ನು ಉಪಯೋಗಿಸುತ್ತಿದ್ದ ಹೊಸ ಜನಾಂಗವೊಂದು ಇಲ್ಲಿಗೆ ಬಂದು ನೆಲಸಲೂ ಕಾರಣವಾಗಿರಬೇಕು. ಆ ಜನರ ಆಗಮನದ ಹೊಸತರಲ್ಲಿ, ಹಳೆಯ ಮತ್ತು ಹೊಸ ಸಂಸ್ಕೃತಿಗಳೆರಡೂ ಕೆಲಕಾಲ ಒಂದುಗೂಡಿ ಇದ್ದಿರಬಹುದಾದರೂ ಕ್ರಮೇಣ ಹಳೆಯ ಸಂಸ್ಕೃತಿ ತನ್ನ ಸ್ವರೂಪವನ್ನು ಕಳೆದುಕೊಳ್ಳಲಾರಂಭಿಸಿತು. ಹೊಸ ಸಂಸ್ಕೃತಿ ಪ್ರವರ್ಧಮಾನವಾಯಿತು.

**(ಎಂ.ಎಸ್.ಎನ್.ಆರ್.)**

### ಕಬ್ಬಿಣ ಯುಗ

ಕಬ್ಬಿಣದ ಉಪಯೋಗ ಬಳಕೆಗೆ ಬಂದ ಕಾಲದಿಂದ ಹಿಡಿದು ಐತಿಹಾಸಿಕ ಯುಗದ ಪ್ರಾರಂಭದವರೆಗಿನ ಕಾಲವನ್ನು ಕಬ್ಬಿಣದ ಯುಗ ಎಂದು ಕರೆಯುವುದು ರೂಢಿ. ಈ ಕಾಲಕ್ಕೆ ಸಂಬಂಧಿಸಿದಂತೆ ಬೃಹತ್ ಶಿಲಾಗೋರಿಗಳು ವಿಶೇಷವಾಗಿ ಕಂಡುಬರುತ್ತವೆಯಾಗಿ ಈ ಕಾಲಘಟ್ಟದ ಸಂಸ್ಕೃತಿಯನ್ನು ಬೃಹತ್‌ಶಿಲಾಸಂಸ್ಕೃತಿ ಎಂದೂ ಕರೆಯುವುದುಂಟು. ಬೃಹತ್‌ಶಿಲಾಗೋರಿಗಳನ್ನು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಮೋರಿಯರ ಮನೆ, ಪಾಂಡವರ ಕಟ್ಟೆ ಅಥವಾ ಕಲ್ಲು, ಮುನಿವಾಸಗುಹೆ ಮುಂತಾದ ಹೆಸರುಗಳಿಂದ ಗುರುತಿಸುತ್ತಾರೆ.

ಪ್ರಪ್ರಥಮವಾಗಿ ಸುಮಾರು 1851ರಿಂದ 1862ರ ಸಮಯದಲ್ಲಿ ಗುಲ್ಬರ್ಗ ಜಿಲ್ಲೆಯ ಭಾಗದಲ್ಲಿ ಇವುಗಳನ್ನು ಶೋಧಿಸಿ, ಪರೀಕ್ಷಿಸಿ ಇವುಗಳ ನಿರ್ಮಾಣದ ಉದ್ದೇಶ, ವಿನ್ಯಾಸ, ಇವುಗಳಲ್ಲಿರುವ ಅವಶೇಷಗಳ ಬಗ್ಗೆ ಸಂಶೋಧನಾತ್ಮಕ ಸತ್ಯ ಸಂಗತಿಗಳನ್ನು ಹೊರಗೆಡಹಿದವರು ಮೆಡೋಸ್ ಟೇಲರ್ ಎಂಬುವವರು. ಇವುಗಳು ಕಬ್ಬಿಣದ ಉಪಕರಣಗಳನ್ನೂ ಆಯುಧಗಳನ್ನೂ ಉಪಯೋಗಿಸುತ್ತಿದ್ದ ಒಂದು ಜನವರ್ಗದವರ ಗೋರಿಗಳೆಂದು ಅವರು ಪ್ರಕಟಿಸಿದರು. ಅಲ್ಲಿಂದ ಕ್ರಮೇಣ 1946ರವರೆಗೆ ಕೋಲ್ (1868–73), ಮೆಕೆನ್ಜಿ (1873), ಬರ್ಜೆಸ್ (1874), ಬ್ರೂಸ್‌ಫುಟ್ (1881–96), ಮುನ್ (1935), ಎಂ.ಎಚ್. ಕೃಷ್ಣ (1931–43)–ಇವರೇ ಮೊದಲಾದವರು ಬೆಳಗಾಂವಿ, ಬಿಜಾಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಹಾಸನ, ಕೊಡಗು, ಬೆಂಗಳೂರು, ಕೋಲಾರ ಜಿಲ್ಲೆಗಳ ಕಲ್ಗುಡ್ಡಗಳಲ್ಲಿ ಇಂಥ ಹಲವಾರು ನೆಲೆಗಳನ್ನು ಶೋಧಿಸಿ, ಪರೀಕ್ಷಿಸಿ ಅವುಗಳ ಕಾಲಮಾನ, ಕರ್ತೃತ್ವ ಇವುಗಳ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದರು. ಆದರೆ ಅಂಥ ಅಭಿಪ್ರಾಯಗಳು ವಿಭಿನ್ನ ರೀತಿಯವಾಗಿದ್ದುವು. ಅಲ್ಲದೆ ಅಂದಿನ ಜನರ ನಿತ್ಯ ಜೀವನ ಕ್ರಮದ ಬಗ್ಗೆ ಏನೂ ತಿಳಿದಿರಲಿಲ್ಲ. ಆ ಜನರಿದ್ದ ವಾಸ್ತವ್ಯದ ನೆಲೆಗಳನ್ನು ಗುರುತಿಸಿರಲಿಲ್ಲ. ಬ್ರಹ್ಮಗಿರಿಯಲ್ಲಿ ಪ್ರಾಚೀನ ನೆಲೆಯನ್ನು ಶೋಧಿಸಿ 1942ರಲ್ಲಿ ಕ್ರಮಬದ್ಧವಾಗಿ ಉತ್ಖನನ ಮಾಡಿದ ಎಂ.ಎಚ್. ಕೃಷ್ಣರವರು ಇಲ್ಲಿ ಅನುಕ್ರಮವಾಗಿ ಆರು ಸಾಂಸ್ಕೃತಿಕ ಘಟ್ಟಗಳನ್ನು ಗುರುತಿಸಿದರು. ಅವು ಮೈಕ್ರೊಲಿಥಿಕ್, ನೂತನ ಶಿಲಾಯುಗ, ಆದಿ ಕಬ್ಬಿಣಯುಗ, ಮೌರ್ಯ, ಸಾತವಾಹನ ಮತ್ತು ಆದಿ ಕದಂಬ, ಮತ್ತು ಆದಿ ಕಬ್ಬಿಣ ಯುಗದ ಜನರೇ ಅಲ್ಲಿಯ ಬೃಹತ್



ಕಬ್ಬಿಣ ಯುಗದ ಮಣ್ಣಿನ ಪಾತ್ರೆಗಳು 1–6, 9–11, 16 ಬ್ರಹ್ಮಗಿರಿ; 7–8, 12–15 ಜಡಿಗೇನಹಳ್ಳಿ



ಕಬ್ಬಿಣ ಯುಗದ ಕಬ್ಬಿಣ ವಸ್ತುಗಳು 1–38 ಜಡಿಗೇನಹಳ್ಳಿ ; 4–7, 9–10 ಬ್ರಹ್ಮಗಿರಿ

ಶಿಲಾಗೋರಿಗಳ ಕಾರಣ ಕರ್ತರು ಎಂಬ ಅಂಶವನ್ನು ಗುರುತಿಸಿದರು ಮತ್ತು ಈ ಸಂಸ್ಕೃತಿಯು ನೂತನ ಶಿಲಾಯುಗದ ಕೊನೆಯ ಹಂತದಲ್ಲಿ ಕಾಣಿಸಿಕೊಂಡು ಮೌರ್ಯಹಂತದವರೆಗೂ ಅಸ್ತಿತ್ವದಲ್ಲಿದ್ದುದನ್ನೂ ಗುರುತಿಸಿದ್ದರು. 1947ರಲ್ಲಿ ಕೇಂದ್ರಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಶಾಖೆಯ ಆಗಿನ ಮುಖ್ಯ ನಿರ್ದೇಶಕರಾಗಿದ್ದ ಸರ್ ಮಾರ್ಟಿಮಾರ್‌ವೀಲರ್ ಅವರು ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ ಮತ್ತು ಚಿತ್ರದುರ್ಗ ನಗರಕ್ಕೆ ಹೊಂದಿಕೊಂಡಂತಿರುವ ಚಂದ್ರವಳ್ಳಿಯಲ್ಲಿ 1947ರಲ್ಲಿ ವೈಜ್ಞಾನಿಕ ವಿಧಾನಗಳಿಂದ ಉತ್ಖನನ ನಡೆಸಿದರು. ಮೊದಲನೆಯದರಲ್ಲಿ ಆ ಕಾಲದ ಜನ ವಾಸಿಸುತ್ತಿದ್ದ ನೆಲೆಯ ಜೊತೆಗೆ ಎರಡು ತರಹದ ಒಟ್ಟು 10 ಗೋರಿಗಳನ್ನು ಉತ್ಖನನ ಮಾಡಲಾಯಿತು. ವಾಸ್ತವ್ಯದ ನೆಲೆಯಲ್ಲಿನ ಉತ್ಖನನದಿಂದ ಉಜ್ಜಿ ನಯ ಮಾಡಿದ ಕಲ್ಲುಕೊಡಲಿ ಸಂಸ್ಕೃತಿ (ತಾಮ್ರಶಿಲಾಯುಗ), ಕಬ್ಬಿಣ ಯುಗದ ಬೃಹತ್ ಶಿಲಾಸಂಸ್ಕೃತಿ ಮತ್ತು ಕೊನೆಯ 'ಆಂಧ್ರ' ಸಂಸ್ಕೃತಿ–ಇವು ಅನುಕ್ರಮವಾಗಿ ಹರಡಿದ್ದುವೆಂದು

ಗೊತ್ತಾಗಿ ಸಂಸ್ಕೃತಿಯ ಕಾಲಿಕ ವ್ಯಾಪ್ತಿಯ ಬಗ್ಗೆ ಒಂದು ಸ್ಪಷ್ಟ ಚಿತ್ರ ಒದಗಿಬಂದಿತು. ಆಂಧ್ರ ಸಂಸ್ಕೃತಿಯ ಆರಂಭ ಕಬ್ಬಿಣದ ಯುಗದ ಬೃಹತ್‌ಶಿಲಾಸಂಸ್ಕೃತಿಯ ಕೊನೆಯ ಭಾಗದಲ್ಲಿಯೇ ಕಂಡುಬಂದಿತು. ಅಂದರೆ 'ಆಂಧ್ರಸಂಸ್ಕೃತಿ'ಯು ಮೊದಲು ಬೃಹತ್ ಶಿಲಾಸಂಸ್ಕೃತಿಯ ಕೊನೆಗಾಲದಲ್ಲಿ ಅದರ ಜೊತೆಯೇ ಅಸ್ತಿತ್ವದಲ್ಲಿದ್ದು, ಅನಂತರ ಬೃಹತ್ ಶಿಲಾಸಂಸ್ಕೃತಿ ಮರೆಯಾಗಿ ಆಂಧ್ರ ಸಂಸ್ಕೃತಿ ಮಾತ್ರ ಉಳಿದುಬಂದಿತು. 'ಆಂಧ್ರ ಸಂಸ್ಕೃತಿ'ಯ ಕಾಲಮಾನವನ್ನು ಆ ಸಂಬಂಧದ ಸ್ತರಗಳಲ್ಲಿ ದೊರೆತ ರೋಂ ದೇಶದಿಂದ ವ್ಯಾಪಾರದ ಮೂಲಕ ಪ್ರಸಾರವಾದ 'ರೌಲೆಟೆಡ್' ತಟ್ಟೆಯ ಚೂರುಗಳು ಮತ್ತು ಚಂದ್ರವಳ್ಳಿಯಲ್ಲಿ ಇದೇ ತರಹದ ಸಂಸ್ಕೃತಿಯ ಅವಶೇಷಗಳಲ್ಲಿ ಸಾತವಾಹನ ರಾಜರುಗಳಾದ ವಾಸಿಷ್ಠೀಪುತ್ರ ಪುಳುಮಾವಿ; ಯಜ್ಞಶ್ರೀ ಸಾತಕರ್ಣಿ-ಇವರ ನಾಣ್ಯಗಳು ಈ ಆಧಾರಗಳಿಂದ ಒಂದನೆಯ ಶತಮಾನದ ಮಧ್ಯಭಾಗದಿಂದ 3ನೆಯ ಶತಮಾನದ ಮಧ್ಯಭಾಗದವರೆಗೆ ಇದ್ದಿರಬೇಕೆಂದು ತರ್ಕಿಸಲಾಯಿತು.

ಆಂಧ್ರ ಸಂಸ್ಕೃತಿಯ ಕಾಲ 1ನೆಯ ಶತಮಾನದ ಮಧ್ಯಭಾಗದಿಂದ ಆರಂಭವಾಗುವುದರಿಂದ ಬೃಹತ್ ಶಿಲಾಸಂಸ್ಕೃತಿ ತತ್ಪೂರ್ವ ಸು. 200 ವರ್ಷಗಳಷ್ಟಾದರೂ ಹಿಂದಿರಬೇಕೆಂಬ ಅಂದಾಜಿನಿಂದ ಮತ್ತು ಮೌರ್ಯರ ಸಾಮ್ರಾಜ್ಯಕ್ಕೆ ಬ್ರಹ್ಮಗಿರಿಯೂ ಒಳಪಟ್ಟಿದ್ದು ಅಲ್ಲಿ ಆ ಸಾಮ್ರಾಜ್ಯದ ಅಧಿಕಾರಿಗಳಿದ್ದುದರಿಂದ ಬೃಹತ್ ಶಿಲಾ ಸಂಸ್ಕೃತಿಯ ಹೊಸ ಜನವರ್ಗದವರು ಆ ಪ್ರದೇಶಕ್ಕೆ ಇದ್ದಕ್ಕಿದ್ದ ಹಾಗೆ ಹೋಗಿ ನೆಲಸುವುದು ಅಸಂಭವ; ಅದರ ಪತನದ ಅನಂತರವೇ, ಅಂದರೆ ಪ್ರ.ಶ.ಪೂ. 2ನೆಯ ಶತಮಾನದ ಮಧ್ಯಭಾಗದಲ್ಲಿ, ಈ ಜನರು ಅಲ್ಲಿ ನೆಲಸಲು ಸಾಧ್ಯ ಎಂಬ ಊಹೆಯಿಂದ ಬೃಹತ್ ಶಿಲಾ ಸಂಸ್ಕೃತಿ ಸುಮಾರು ಪ್ರ.ಶ.ಪೂ. 2ನೆಯ ಶತಮಾನದ ಮಧ್ಯಭಾಗದಿಂದ ಕ್ರಿ.ಶ. 1ನೆಯ ಶತಮಾನದ ಮಧ್ಯಭಾಗದವರೆಗೆ ಊರ್ಜಿತವಿತ್ತೆಂದು ನಿರ್ಧರಿಸಲಾಯಿತು. ಜೊತೆಗೆ, ಈ ಸಂಸ್ಕೃತಿಯ ಜನರ ನಿತ್ಯಜೀವನದ ಸ್ವರೂಪ, ಬಳಸುತ್ತಿದ್ದ ವಸ್ತುಗಳ ವಿಶಿಷ್ಟ ಲಕ್ಷಣಗಳು, ಶವಸಂಸ್ಕಾರದ ಕ್ರಮ ಮತ್ತು ಎರಡು ಪ್ರಕಾರದ ಕಲ್ಗೋರಿಗಳ ಲಕ್ಷಣಗಳು ಇತ್ಯಾದಿಗಳನ್ನು ಸ್ಪಷ್ಟವಾಗಿ ತಿಳಿಯಲಾಯಿತು.

1954ರಲ್ಲಿ ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಶಾಖೆ ಮಸ್ಕಿಯಲ್ಲಿ ಮಾಡಿದ ಉತ್ಖನನಗಳಲ್ಲಿ ಈ ಜನರ ವಾಸ್ತವ್ಯ ನೆಲೆಯೂ ಅವರ ಐದು ಪ್ರಕಾರದ ಶವಕುಣಿಗಳೂ ಮತ್ತು ಕಲ್ಗೋರಿಗಳು ಶೋಧವಾದವು. ಮೈಸೂರು (1973ರಿಂದ ಕರ್ನಾಟಕ) ರಾಜ್ಯದ ಪುರಾತತ್ವ ಶಾಖೆಯೂ 1957ರಲ್ಲಿ ಜಡಿಗೇನಹಳ್ಳಿಯಲ್ಲಿ **(ನೋಡಿ)** ಮತ್ತು 1959-65ರಲ್ಲಿ ತಿರುಮಕೂಡಲು ನರಸೀಪುರದಲ್ಲಿ **(ನೋಡಿ)** ಉತ್ಖನನಗಳನ್ನು ನಡೆಸಿ ಕ್ರಮವಾಗಿ ಎರಡು ಪ್ರಕಾರದ ಕಲ್ಗೋರಿಗಳು ಮತ್ತು ಈ ಸಂಸ್ಕೃತಿಯ ವಾಸ್ತವ್ಯದ ನೆಲೆಯನ್ನೂ ಪರೀಕ್ಷಿಸಿ ಅವುಗಳ ವಿವರಣೆಗಳನ್ನು ಸಂಗ್ರಹಿಸಿತು. 1965 ಮತ್ತು 77ರಲ್ಲಿ ಧಾರವಾಡ ಜಿಲ್ಲೆಯ ಹಳ್ಳೂರಿನಲ್ಲಿ **(ನೋಡಿ)** ಒಂದು ವಾಸ್ತವ್ಯದ ನೆಲೆಯನ್ನೂ ಬಿಜಾಪುರ ಜಿಲ್ಲೆಯ ತೇರದಾಳ-ಹಳಿಂಗಳಿ, ಬೆಳಗಾಂವಿ ಜಿಲ್ಲೆಯ ಹೂನೂರು, ಕೊಡಗಿನ ಹೆಗ್ಗಡೆಹಳ್ಳಿ, ಮೈಸೂರು ಜಿಲ್ಲೆಯ ಕೊಪ್ಪ-ಈ ಸ್ಥಳಗಳಲ್ಲಿ ವಿವಿಧ ಪ್ರಕಾರಗಳ ಕಲ್ಗೋರಿಗಳನ್ನು ಕ್ರಮವಾಗಿ ಎಂ.ಎಸ್. ನಾಗರಾಜರಾವ್, ಅ. ಸುಂದರ, ಕೇಂದ್ರ ಪುರಾತತ್ವ ಶಾಖೆ, ಕರ್ನಾಟಕ ರಾಜ್ಯದ ಪುರಾತತ್ವ ಶಾಖೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಖೆಯವರು ಉತ್ಖನನ ಮಾಡಿದ್ದಾರೆ. ಇದುವರೆಗಿನ ಅನ್ವೇಷಣೆಗಳಿಂದ ಕರ್ನಾಟಕದಲ್ಲಿ (ಬೀದರ್ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಬಿಟ್ಟು) ಸುಮಾರು 500 ಸ್ಥಳಗಳಲ್ಲಿ ಇಂಥ ನೆಲೆಗಳಿದ್ದುದು ಗೊತ್ತಾಗಿದೆ; ಮತ್ತು ಉತ್ಖನನಗಳಿಂದ ಈ ಜನರ ನಿತ್ಯಜೀವನದ ಶವಸಂಸ್ಕಾರ ಪದ್ಧತಿಗಳ ಮತ್ತು ಈ ಸಂಸ್ಕೃತಿಯ ಕಾಲಮಾನದ ಬಗ್ಗೆ ಬಹಳಷ್ಟು ಪುನರ್ವಿಮರ್ಶೆಯಾಗಿದೆ.

ಕಲ್ಗೋರಿಗಳು ಹೆಚ್ಚಾಗಿ ಬೆಳಗಾಂವಿ-ಬಿಜಾಪುರ-ಗುಲ್ಬರ್ಗ ಜಿಲ್ಲೆಯ ದಕ್ಷಿಣ ಭಾಗದಲ್ಲಿ ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆಯ ಪೂರ್ವಭಾಗ, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳು, ಮೈಸೂರು-ಮಂಡ್ಯ ಜಿಲ್ಲೆಗಳ ಕೆಲವು ಭಾಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಇವೆ. ಕೆಲವು ನೆಲೆಗಳು ಸುಮಾರು ಮೂರು ನಾಲ್ಕು ಹಳ್ಳಿಗಳುದ್ದಕ್ಕೂ ವಿಸ್ತಾರವಾಗಿದ್ದು ಅವುಗಳಲ್ಲಿ 1,000ಕ್ಕೂ ಮಿಕ್ಕು ಬೃಹತ್ ಶಿಲಾಗೋರಿಗಳಿವೆ (ಉದಾ : ತೇರದಾಳ-ಹಳಿಂಗಳಿ-ಹನಗಂಡಿ). ಕೋಲಾರ ಜಿಲ್ಲೆಯಲ್ಲಿ ಬೃಹತ್ ಶಿಲಾಗೋರಿಗಳು ಅತ್ಯಧಿಕವಾಗಿವೆ. ಇಲ್ಲೆಲ್ಲ ಇಷ್ಟು ಅಧಿಕ ಸಂಖ್ಯೆಯಲ್ಲಿ ಬೃಹತ್ ಶಿಲಾಗೋರಿಗಳಿರುವುದಕ್ಕೆ ಮುಖ್ಯವಾಗಿ ಈ ಜನರಿಗೆ ಇವುಗಳನ್ನು ನಿರ್ಮಿಸಲು ಬೇಕಾದ ಚಪ್ಪಡಿ ಹಾಗೂ ಗುಂಡು ಕಲ್ಲುಗಳು ಈ ಪ್ರದೇಶದಲ್ಲಿ ವಿಪುಲವಾಗಿ ದೊರೆಯುವುದು ಒಂದು ಕಾರಣ. ಕೃಷ್ಣಾ, ಘಟಪ್ರಭಾ, ಮಲಪ್ರಭಾ ಮತ್ತು ಭೀಮಾ ಕೆಳದಂಡೆಯ ಬಯಲಿನ ಪ್ರದೇಶದಲ್ಲಿ ಕಲಾದಗಿ ಮತ್ತು ಭೀಮಾ ಮಾಲೆಗಳ ಮರಳುಕಲ್ಲು ಮತ್ತು ಸುಣ್ಣಕಲ್ಲು ಗುಡ್ಡಗಳ ಸಾಲುಗಳಿವೆ. ಕರ್ನಾಟಕದ ಪೂರ್ವ ಮತ್ತು ದಕ್ಷಿಣ ಭಾಗದಲ್ಲೆಲ್ಲ ಹೆಚ್ಚಾಗಿ ಪೆನಿನ್‌ಸುಲರ್ ನೈಸಿಕ್ ಕಲ್ಲುಗುಡ್ಡಗಳು ಹಾಗೂ ಶ್ರೇಣಿಗಳು ಇವೆ. ಪಶ್ಚಿಮ ಭಾಗದಲ್ಲಿ ಗ್ರಾನೈಟ್ ಗುಡ್ಡಗಳ ಸಾಲು ಮತ್ತು ಮೊರಕಲ್ಲಿನ ಬಯಲು ವಿಶೇಷವಾಗಿದೆ. ಅಲ್ಲದೆ, ಇಂಥ ಗುಡ್ಡಮಯ ಪ್ರದೇಶಗಳಲ್ಲಿ ಕಬ್ಬಿಣದ ಅದುರೂ ಹೇರಳವಾಗಿ ದೊರೆಯುತ್ತದೆ (ಉದಾ : ಹೊಸಪೇಟೆ, ಬಾಬಾಬುಡನ್ ಗಿರಿ ಪ್ರದೇಶ). ಅಲ್ಲಲ್ಲಿ ತಕ್ಕ ಪ್ರಮಾಣದಲ್ಲಿ ಒಂದೆರಡು ಕಡೆಗಳಲ್ಲಿ ವಿಶೇಷವಾಗಿ ಚಿನ್ನದ ಕಣಗಳು ಸಿಗುತ್ತವೆ. ಬೃಹತ್‌ಶಿಲಾಸಂಸ್ಕೃತಿಯ ಜನರು ಬಹಳವಾಗಿ ಕಬ್ಬಿಣದ ಉಪಕರಣಗಳನ್ನೂ ಆಯುಧಗಳನ್ನೂ ಬಳಸುತ್ತಿದ್ದರು. ಚಿನ್ನದ ಮಣಿಗಳನ್ನು ಆಭರಣವಾಗಿ ಉಪಯೋಗಿಸುತ್ತಿದ್ದರು. ಈ ರೀತಿಯ ನಿಸರ್ಗಸಂಪತ್ತು ಈ ಜನರಿಗೆ ಬಹಳ ಅನುಕೂಲವಾಗಿತ್ತು.

ಈ ಎಲ್ಲ ನೆಲೆಗಳಲ್ಲಿರುವ ಬೃಹತ್ ಶಿಲಾಗೋರಿಗಳು ವಿವಿಧ ರೀತಿಯವು. ಉತ್ಖನನ ಮಾಡಿದ ಬೃಹತ್ ಶಿಲಾಗೋರಿಗಳಲ್ಲಿ ದೊರೆತ ಅವಶೇಷಗಳೂ ಪ್ರಾದೇಶಿಕ ವೈವಿಧ್ಯತೆಯನ್ನು ತೋರಿಸುತ್ತವೆ. ಮುಖ್ಯ ಪ್ರಕಾರಗಳು ಇವು; (1) ಹಾದಿ-ಕೋಣೆ ಗೋರಿಗಳು, (2) ಕಂಡಿ-ಕೋಣೆ ಗೋರಿಗಳು, (3) ಆಯತ ಕೋಣೆ ಗೋರಿಗಳು, (4) ನೆಲ ಮಾಳಿಗೆ ಕೋಣೆ ಗೋರಿಗಳು (5) ತುಂಡುಕಲ್ಲು ದಿಣ್ಣೆಗಳು, (6) ಕಲ್ಲು ವೃತ್ತಗಳು (7) ಕಾಲುಳ್ಳ ಯತ ಅಸ್ಥಿ ಮೃತ್ ಪಾತ್ರೆಯುಳ್ಳ ಕಲ್ಲುವೃತ್ತಗಳೂ (8) ನಿಲಸು ಗಲ್ಲುಗಳು (9) ಗುಡಾಣ ಅಸ್ಥಿ ಮೃತ್ ಪಾತ್ರೆ ಕುಣಿಗಳು (10) ಶವಕುಣಿಗಳು.

ಇವುಗಳಲ್ಲಿ ಮೊದಲನೆಯ ನಾಲ್ಕರ ವೈಶಿಷ್ಟ್ಯ ಕಲ್ಲುಕೋಣೆಗಳಿರುವುದು, ಮುಂದಿನ ಐದರಲ್ಲಿ ಶವಕುಣಿಯೊಳಗೆ ಕಲ್ಲಿನ ಕೋಣೆ ಇರುವುದಿಲ್ಲ. ಕುಣಿಯ ಮೇಲೆ ಕೇವಲ ತುಂಡು ಕಲ್ಲುರಾಶಿ ಅಥವಾ ಇದನ್ನು ಸುತ್ತುವರಿಯಲ್ಪಟ್ಟ ಗುಂಡುಕಲ್ಲು ಕಟ್ಟೆ ಅಥವಾ ನಿಲ್ಲಿಸಿದ ಎತ್ತರ ಹಾಗೂ ಅಗಲವಾದ ಕಲ್ಲುಹಲಗೆ ಇರುತ್ತದೆ. ಕೊನೆಯದರಲ್ಲಿ ಯಾವ ಭಾಗವೂ ಕಲ್ಲಿನದಿರುವುದಿಲ್ಲ. ಆದರೆ ಇಂಥವುದರಲ್ಲಿರುವ ಮೃತ್ ಪಾತ್ರೆಗಳು, ಕಬ್ಬಿಣದ ಸಾಮಾನುಗಳು ಮತ್ತು ಅಸ್ಥಿ ಸಂಸ್ಕಾರದ ಕ್ರಮ ಉಳಿದ ಪ್ರಕಾರಗಳ ಕಲ್ಗೋರಿಗಳಲ್ಲಿರುವ ಹಾಗೆ ಇರುತ್ತದೆ.

ಕಲ್ಲು ಕೋಣೆಗಳು ಭೂಮಿಯ ಮೇಲೆಯೇ ಆಗಲಿ, ಇಲ್ಲವೆ ಅಗೆದ ಗುಂಡಿಯಲ್ಲಿ ಅರ್ಧ ಅಥವಾ ಪೂರ್ತಿ ಮುಚ್ಚಿದ ಹಾಗೆ

ಇರುತ್ತವೆ. ಇವು ಬೀಳದ ಹಾಗೆ ಸುತ್ತಲೂ ತುಂಡುಕಲ್ಲುಗಳನ್ನು ಒತ್ತೊತ್ತಾಗಿ ರಾಶಿ ಹಾಕಿರುತ್ತಾರೆ. ತುಂಡುಕಲ್ಲು ಚದುರಿಹೋಗದ ಹಾಗೆ ಅಂಚಿನಲ್ಲಿ ದೊಡ್ಡ ಗುಂಡುಕಲ್ಲುಗಳು ಚೌಕೋನ ಅಥವಾ ವೃತ್ತಕಟ್ಟೆಯಿರುತ್ತದೆ.

ಅಪರೂಪವಾಗಿ ಒಂದೇ ಕಡೆ 2ರಿಂದ 10ರವರೆಗೆ ಇಂಥ ಕಲ್ಲು ಕೋಣೆ ಗೋರಿಗಳಿದ್ದು ಅವುಗಳೆಲ್ಲಾ ತುಂಡುಕಲ್ಲುಗಳಿಂದ ಮುಚ್ಚಲ್ಪಟ್ಟು ಆಯತಾಕಾರದ ಒಂದು ದೊಡ್ಡ ದಿಣ್ಣೆಯ ಹಾಗೆ ಕಾಣುತ್ತದೆ. ಗೋಡೆಗೇರಿಯಲ್ಲಿ ಇಂಥ ಒಂದು ದಿಣ್ಣೆ ಸುಮಾರು 50ಮೀ ಉದ್ದ 25ಮೀ ಅಗಲವಿದೆ. ಕೋಣೆಯ ಮುಂಭಾಗದಲ್ಲಿ ಎರಡು ಕಲ್ಲುಹಲಗೆಗಳನ್ನು ನಿಲ್ಲಿಸಿ ಮಾಡಿದ ಹಾದಿಯಾಗಲಿ ಅಥವಾ ಮುಂದಿನ ಕಲ್ಲುಹಲಗೆಯ ಮಧ್ಯದಲ್ಲಿ ಒಂದು ತೂತಾಗಲಿ ಇರುತ್ತದೆ. ಈ ಲಕ್ಷಣಗಳ ಮೇಲೆ ಹಾದಿ ಅಥವಾ ಕಂಡಿ-ಕೋಣೆ ಗೋರಿಯೆಂದೂ ವಿಂಗಡಿಸಲಾಗಿದೆ. ಕಂಡಿ-ಕೋಣೆ ಗೋರಿಗಳಲ್ಲಿ ಕಂಡಿಯ ಮುಂದೆ ಒಂದು ಸಣ್ಣ ಹಾದಿಯಿರಬಹುದು (ಉದಾ : ಬ್ರಹ್ಮಗಿರಿಯ ಕಲ್ಗೋರಿಗಳು). ಆದರೆ ಹಾದಿ-ಕೋಣೆ ಗೋರಿಗಳಲ್ಲಿ ಕಂಡಿಯಿರುವುದಿಲ್ಲ. ಹಾದಿ-ಕೋಣೆ ಗೋರಿಗಳಲ್ಲಿ ಹಿಂಬದಿಯ ಕಲ್ಲುಹಲಗೆ ಒಳಗೆ ಬಾಗಿ ಬೀಳದ ಹಾಗೆ ಎರಡು ಬದಿಯ ಹಲಗೆಗಳನ್ನು ಮುಂಭಾಗದಲ್ಲಿ ಸ್ವಲ್ಪ ಒಳಗೆ ಬರುವ ಹಾಗೆ ನಿಲ್ಲಿಸಲಾಗುತ್ತದೆ. ಈ ರೀತಿ ಕಲ್ಲು ಹಲಗೆಗಳನ್ನು ನಿಲ್ಲಿಸುವುದರಿಂದ ಕೋಣೆಯ ತಳವಿನ್ಯಾಸ ಸಾಮಾನ್ಯವಾಗಿ ಟ್ರಿಪೀಜಿಯಮ್ ಹಾಗೆ ಇರುತ್ತವೆ. ಕಂಡಿ-ಕೋಣೆ ಗೋರಿಗಳಲ್ಲಿ ಪ್ರತಿಯೊಂದು ಬದಿಯ ಕಲ್ಲು ಮತ್ತೊಂದನ್ನು ಆನಿಸಿರುತ್ತದೆ. ವಿನ್ಯಾಸವು ಸ್ವಲ್ಪ ಮಟ್ಟಿಗೆ ಸ್ವಸ್ತಿಕದ ಹಾಗೆ ಕಾಣುತ್ತದೆ. ಸಾಮಾನ್ಯವಾಗಿ ಹಾದಿ-ಕೋಣೆ ಗೋರಿಗಳಲ್ಲಿ ಹಾದಿಯು ದಕ್ಷಿಣಾಭಿಮುಖವಾಗಿಯೂ ಕಂಡಿ-ಕೋಣೆ ಗೋರಿಗಳಲ್ಲಿ ಕಂಡಿಯು ಪೂರ್ವಾಭಿಮುಖವಾಗಿಯೂ ಇರುತ್ತದೆ. ಸಣ್ಣ ಹಾದಿ ಇಲ್ಲದಿರುವ ಕಂಡಿ-ಕೋಣೆ ಗೋರಿಗಳಲ್ಲಿ ಕಂಡಿಯ ಪೂರ್ವಕ್ಕಲ್ಲದೆ, ಹಾಗೆಯೇ ಮತ್ತೊಂದು ಪ್ರಕಾರದ ಹಾದಿ-ಕೋಣೆ ಗೋರಿಗಳ ಹಾದಿ ಇತರ ದಿಕ್ಕುಗಳಿಗೂ ಎದುರಾಗಿರಬಹುದು.

ಹಾದಿ-ಕೋಣೆ ಗೋರಿಗಳು ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಯಲ್ಲಿ, ಅದರಲ್ಲೂ ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣಾನದಿಗಳ ಪ್ರದೇಶಗಳಲ್ಲಿಯ ಮರಳುಕಲ್ಲಿನ ಗುಡ್ಡಗಳಲ್ಲಿ ಬಹಳ ಇವೆ. 31 ಸ್ಥಳಗಳಲ್ಲಿ ಸುಮಾರು 2500 ಹಾದಿ-ಕೋಣೆ ಗೋರಿಗಳಿವೆ. ಕೊಣ್ಣೂರು, ತೇರದಾಳ-ಹಳಿಂಗಳಿ, ಕಲಾದಗಿ ಇವುಗಳಿಗೆ ಉತ್ತಮ ನಿದರ್ಶನಗಳು. ಆಯತ-ಕೋಣೆ ಗೋರಿಗಳು ಭೀಮಾ-ಕೃಷ್ಣಾ ನದಿಗಳ ಕೆಳದಂಡೆಯ ಪ್ರದೇಶದ ಭೀಮಾ ಮಾಲೆಯ ಸುಣ್ಣಕಲ್ಲು ಗುಡ್ಡಗಳಲ್ಲಿ ಇವೆ (ಉದಾ: ಜೇವರಗಿ), ಪೆನಿನ್‌ಸುಲರ್ ನೈಸಿಕ್ ಕಲ್ಲುಗುಡ್ಡಗಳ ಸಾಲುಗಳಿರುವ ರಾಯಚೂರು-ಬಳ್ಳಾರಿ-ಚಿತ್ರದುರ್ಗ, ಕೋಲಾರ-ಬೆಂಗಳೂರು-ಮೈಸೂರು-ಕೊಡಗು ಜಿಲ್ಲೆಗಳಲ್ಲಿ ಕಂಡಿ-ಕೋಣೆ ಗೋರಿಗಳು, ಆಯತ-ಕೋಣೆ ಗೋರಿಗಳು, ನಿಲಸುಗಲ್ಲುಗಳು, ವಿವಿಧ ಕಲ್ಲುವೃತ್ತಗಳು, ಶವಕುಣಿಗಳು ಇವೆ. ಇವಕ್ಕೆ ಕ್ರಮವಾಗಿ ರಾಯಚೂರು ಜಿಲ್ಲೆಯ ಹಿರೇಬೆನಕಲ್ಲು ಮತ್ತು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಶಿವಮೊಗ್ಗ ನಿಲಸಕಲ್ಲು, ಬೆಂಗಳೂರು ಜಿಲ್ಲೆಯ ಜಡಿಗೇನಹಳ್ಳಿ ಮತ್ತು ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿರುವ ಬೃಹತ್ ಶಿಲಾಗೋರಿಗಳನ್ನು ಉದಾಹರಿಸಬಹುದು. ಕೊರೆದ ಕೋಣೆ ಗೋರಿಗಳು ಮತ್ತು ಗುಡಾಣ ಅಸ್ಥಿ ಪಾತ್ರೆ-ಕುಣಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುತ್ತೂರು, ಉಡುಪಿ ಮುಂತಾದ ಸ್ಥಳಗಳಲ್ಲಿವೆ. ಕಾಲುಳ್ಳ ಆಯತ ಅಸ್ಥಿಪಾತ್ರೆಗಳು ಜಡಿಗೇನಹಳ್ಳಿ ಕಲ್ಲುವೃತ್ತಗಳಲ್ಲಿ ಇದ್ದುವು.

ಉತ್ಖನನಗಳಿಂದ ತಿಳಿದ ಹಾಗೆ, ಈ ಬೃಹತ್ ಶಿಲಾಗೋರಿಗಳಲ್ಲಿ ಮುಖ್ಯವಾಗಿ ಮೂರು ವಿಧವಾದ ಶವಸಂಸ್ಕಾರ ಪದ್ಧತಿಗಳಿವೆ; (1) ಹೊರಗಿಟ್ಟ ಅಥವಾ ಹುಗಿದಿಟ್ಟ ಶವದ ಅಸ್ಥಿಗಳನ್ನು ಸಂಗ್ರಹಿಸಿ ಕಟ್ಟಿದ ಕಲ್ಲು ಗೋರಿಗಳಲ್ಲಿ ಅವರ ಪದ್ಧತಿಗಳ ಪ್ರಕಾರ ಇಡುವುದು, ಇಂಥ ಗೋರಿಗಳಲ್ಲಿ ಕಾಲಾನುಕ್ರಮದಲ್ಲಿ ಇಡಲ್ಪಟ್ಟ ಒಂದಕ್ಕಿಂತ ಹೆಚ್ಚಿನ ಶವಗಳ ಅಸ್ಥಿಗಳಿರಬಹುದು. ಆದ್ದರಿಂದ ಇಂಥವುಗಳನ್ನು ಕುಟುಂಬ ಗೋರಿಗಳೆಂದು ಹೇಳಬಹುದು; (2) ಶವದಹನಾನಂತರ ಅಸ್ಥಿಗಳನ್ನು ಸಂಗ್ರಹಿಸಿ ಗೋರಿಗಳಲ್ಲಿಡುವುದು; (3) ಒಂದೇ ಶವವನ್ನು ಕುಣಿಯಲ್ಲಿಡುವುದು. ಕೊನೆಯ ಎರಡು ಪದ್ಧತಿಗಳು ಬಹಳ ಅಪರೂಪವಾಗಿದ್ದು ಇದುವರೆಗೆ ಅಂಥವು ಕ್ರಮವಾಗಿ ಮಸ್ಕಿ ಮತ್ತು ಗುಲ್ಬರ್ಗ ಜಿಲ್ಲೆಯ ಚಿಕ್ಕನಹಳ್ಳಿಗಳಲ್ಲಿ ಮಾತ್ರ ಶೋಧಕವಾಗಿವೆ. ಮೊದಲನೆಯ ಪ್ರಕಾರವೇ ಸರ್ವೇ ಸಾಮಾನ್ಯ. ಇದರಲ್ಲಿ ಅಸ್ಥಿ ಸಂಗ್ರಹಗಳ ಜೊತೆಗೆ ವಿವಿಧ ಪ್ರಕಾರಗಳ ಮೃತ್ ಪಾತ್ರೆಗಳು ಕಬ್ಬಿಣದ ಉಪಕರಣಗಳು, ಆಯುಧಗಳು ಅಪರೂಪವಾಗಿ ಆಭರಣಗಳು ಹಾಗೂ ಧಾನ್ಯಗಳು ಇರುತ್ತವೆ.

ಬೃಹತ್ ಶಿಲಾಗೋರಿಗಳಿರುವ ನೆಲೆಗಳು ನೂರಾರು ಕಂಡುಬಂದರೂ ವಾಸ್ತವ್ಯ ನೆಲೆಗಳು ತೀರ ಕಡಿಮೆ. ಬ್ರಹ್ಮಗಿರಿ, ಮಸ್ಕಿ, ಸಂಗನಕಲ್ಲು ಮತ್ತು ತಿರುಮಕೂಡಲು ನರಸೀಪುರದಲ್ಲಿ ಈ ಜನರ ವಾಸ್ತವ್ಯ ನೆಲೆಗಳಿದ್ದುದು ಉತ್ಖನನಗಳಿಂದ ತಿಳಿದಿದೆ. ಹಳ್ಳೂರಿನಲ್ಲೂ ಕಬ್ಬಿಣಯುಗದ ಜನರ ವಾಸ್ತವ್ಯದ ನೆಲೆಯಿದ್ದು ಅದರಲ್ಲಿ ಈ ಸಂಸ್ಕೃತಿಯ ಅವಶೇಷಗಳೂ ಇವೆ. ಹೀಗೆ ಇವರ ವಾಸ್ತವ್ಯದ ನೆಲೆಗಳು ಅಲ್ಲೊಂದು ಇಲ್ಲೊಂದು ಕಂಡುಬಂದದ್ದರಿಂದ ಇವರು ಅಲೆಮಾರಿ ಜನವರ್ಗದವರೆಂಬ ಅಭಿಪ್ರಾಯವೂ ಇದೆ.

ಹಲವು ಪ್ರಕಾರಗಳ ಕಲ್ಗೋರಿಗಳನ್ನು ಕಟ್ಟುವುದರಲ್ಲಿ ಪರಿಸರದಲ್ಲಿ ದೊರೆಯುವ ಸವಲತ್ತುಗಳ ಉತ್ತಮ ಉಪಯೋಗ, ನಿರ್ಮಾಣಕುಶಲತೆ, ಹಲವಾರು ಜನರ ಸಂಘಟನೆ-ಇವೆಲ್ಲಾ ಕಂಡರೂ ವಾಸಕ್ಕೆ ಕೇವಲ ಗುಡಿಸಲುಗಳು ಮಾತ್ರ ಇತ್ತೆಂದು ತೋರುತ್ತದೆ. ಕೃಷಿಗೆ ಉಪಯೋಗವಾಗುವ ನೇಗಿಲಗುಳ, ಕುಡುಗೋಲು, ಚಾಕು, ಉಳಿ ಹಾಗೂ ಗೃಹೋಪಯೋಗಿ ಉಪಕರಣಗಳಾದ ಮೂರುಕಾಲಿನ ಮಣೆ, ದೀಪ, ಗಂಗಾಳ ಮತ್ತು ಆಯುಧಗಳಾದ ಉದ್ದನೆ ಕತ್ತಿ, ಈಟಿ, ಬಾಣದ ಮೊನೆ, ಭರ್ಜಿ-ಇವೇ ಮೊದಲಾದ ಕಬ್ಬಿಣದ ಸಾಮಾನುಗಳನ್ನು ಈ ಜನರು ಉಪಯೋಗಿಸುತ್ತಿದ್ದರು. ಇವರ ಕಲ್ಗೋರಿಗಳಿದ್ದ ಬಹಳಷ್ಟು ನೆಲೆಗಳ ಸಮೀಪದಲ್ಲಿಯೇ ಅತ್ಯುತ್ತಮ ತರಗತಿಯ ಕಬ್ಬಿಣದ ಅದುರು ಹೇರಳವಾಗಿ ಸುಲಭವಾಗಿ ದೊರಕುತ್ತಿದ್ದರೂ ಅದನ್ನು ತೆಗೆದು ಕಬ್ಬಿಣ ತಯಾರಿಸುವ ತಾಂತ್ರಿಕ ಕುಶಲತೆ ಇವರಲ್ಲಿ ಇತ್ತೆ ಮತ್ತು ಈ ಕೈಗಾರಿಕೆಯನ್ನು ನಡೆಸುತ್ತಿದ್ದರೆ ಎಂಬುದಕ್ಕೆ ಸ್ಪಷ್ಟ ಆಧಾರಗಳು ದೊರಕಿಲ್ಲ. ಈ ಕಾಲದಲ್ಲಿ ನಾಲ್ಕು ವಿಧದ ಮಣ್ಣಿನ ಪಾತ್ರೆಗಳು ಉಪಯೋಗದಲ್ಲಿದ್ದುವು. ಅವು ಹೊಳಪುಳ್ಳ ಅಚ್ಚಕಪ್ಪಿನವು. ಕಪ್ಪು ಮತ್ತು ಕೆಂಪು ದ್ವಿವರ್ಣದವು, ಕೆಂಪು ಬಣ್ಣದವು ಮತ್ತು ಮಸುಕು ಕೆಂಪಿನ ಒರಟಾದ ಪಾತ್ರೆಗಳು. ಮೊದಲನೆಯ ಎರಡು ವರ್ಗಗಳ ಪಾತ್ರೆಗಳು, ಸಾಮಾನ್ಯವಾಗಿ ಅತಿ ಸಣ್ಣದರಿಂದ ಹಿಡಿದು ಮಧ್ಯಮ ಗಾತ್ರದವರೆಗಿನವು. ವಿವಿಧ ಆಕಾರದ ಗಂಗಾಳಗಳು, ಮುಚ್ಚಳಗಳು, ಅರ್ಧಗೋಲಾಕೃತಿಯ ಬಟ್ಟಲುಗಳು, ಹೂಜಿಗಳು, ಕಾಲುಳ್ಳ ಬಟ್ಟಲುಗಳು, ಲಾಳಿಕೆಯಾಕಾರದ ಪಾತ್ರೆಗಳು ಮುಂತಾದವು ಈ ಬಣ್ಣಗಳದ್ದಾಗಿರುತ್ತವೆ. ಉಳಿದ ಎರಡು ತರಹಗಳಲ್ಲಿ ಸಾಮಾನ್ಯವಾಗಿ ಮಧ್ಯಮದಿಂದ ಹಿಡಿದು ದೊಡ್ಡ ಪ್ರಮಾಣದ ಪಾತ್ರೆಗಳಿರುತ್ತವೆ. ಕೊಡಗಳು, ಮೂರು ನಾಲ್ಕು ಕಾಲುಳ್ಳ ಪಾತ್ರೆಗಳು, ಕಾಲುಳ್ಳ ಆಯತ ಪೆಟ್ಟಿಗೆಗಳು, ಗುಡಾಣಗಳು, ಬಾನಿಗಳು, ಸಣ್ಣ

ಆಕಾರದ ಮುಚ್ಚಳಗಳು, ಲೋಟಗಳು ಇವೇ ಮೊದಲಾದುವು. ಈ ಕಾಲದ ಪಾತ್ರೆಗಳ ಮೇಲೆ ಅಥವಾ ಒಳಗೆ ಗೀಚಿದ ಸರಳ ರೇಖಾಕೃತಿಗಳೂ ಇರುವುದುಂಟು. ಇವು ಅಕ್ಷರಗಳೂ ಕುಂಬಾರನ ಗುರುತುಗಳು, ಧಾರ್ಮಿಕ ಚಿಹ್ನೆಗಳು ಇತ್ಯಾದಿ ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಹಳ್ಳೂರಿನ ಭಾಗದಲ್ಲಿಯ ಕಪ್ಪು ಮತ್ತು ಕೆಂಪಿನ ಪಾತ್ರೆಗಳಲ್ಲಿ ಅಪರೂಪವಾಗಿ ಗಂಜಿಯಂಥ ದಪ್ಪ ಹಾಗೂ ಮಸುಕಾದ ಬಣ್ಣದಲ್ಲಿ ಎಳೆದ ರೇಖಾಕೃತಿಗಳಿವೆ. ಹಾದಿಕೋಣೆ ಗೋರಿಗಳಲ್ಲಿ ಕಪ್ಪು ಮತ್ತು ಕಪ್ಪು ಮತ್ತು ಕೆಂಪಿನ ಪಾತ್ರೆಗಳು ತೀರಾ ಕಡಿಮೆ. ಕೆಂಪುಬಣ್ಣದವೇ ಹೆಚ್ಚು. ಬಣ್ಣದ ರೇಖಾಕೃತಿಗಳು ಇವುಗಳ ಮೇಲೆ ಕಂಡುಬಂದಿಲ್ಲ. ಹಳ್ಳೂರಿನ ಭಾಗದಲ್ಲಿ ಕಪ್ಪು, ಕಪ್ಪು–ಮತ್ತು ಕೆಂಪಿನವೇ ಹೆಚ್ಚು. ಉಳಿದೆಡೆಗಳಲ್ಲಿ ಎಲ್ಲ ತರಹದ ಪಾತ್ರೆಗಳೂ ಸ್ವಲ್ಪ ಹೆಚ್ಚು ಕಡಿಮೆ ಪ್ರಮಾಣಗಳಲ್ಲಿ ದೊರೆಯುತ್ತವೆ. ಹಾದಿಕೋಣೆ ಗೋರಿಗಳಲ್ಲಿ ಒಂದು ವಿಧದ ಮಸಕು ಬಣ್ಣದ ಮುಚ್ಚಳಗಳು, ಹೊಳಪುಳ್ಳ ಕೆಂಪುಬಣ್ಣದ ಹಿಡಿಯಲಿಕ್ಕೆ ಅನುಕೂಲವಾಗುವಂಥ ದಪ್ಪ ಅಂಚುಳ್ಳ ವಿವಿಧ ಆಕಾರಗಳ ಕೊಡಗಳು ಹೆಚ್ಚಾಗಿ ಇರುತ್ತವೆ. ಹೊಳಪುಳ್ಳ ಕಪ್ಪು ಹಾಗೂ ಕಪ್ಪು–ಮತ್ತು–ಕೆಂಪಿನ ವಿವಿಧಾಕಾರಗಳ ಅರ್ಧಗೋಲಾಕೃತಿಯ ಬಟ್ಟಲುಗಳು ಹಳ್ಳೂರಿನ ಭಾಗದಲ್ಲಿ ಹೆಚ್ಚಾಗಿವೆ. ಮಕ್ಕಳ ಆಟಿಕೆಯಂಥ ಅತಿ ಸಣ್ಣ ಮಡಿಕೆ ಕುಡಿಕೆಗಳು, ಕಾಲುಳ್ಳ ಪಾತ್ರೆಗಳು ಹೆಚ್ಚಾಗಿ ಕೊಡಗು ಮತ್ತು ಇತರ ಮಲೆನಾಡಿನ ಪ್ರದೇಶದ ನೆಲೆಗಳಲ್ಲಿವೆ. ಕೊಳವೆಯಾಕಾರದ ಕಂಠವುಳ್ಳ ಹೂಜಿಗಳು ಬೆಂಗಳೂರು ಪ್ರದೇಶದ ನೆಲೆಗಳಲ್ಲಿ ದೊರೆಯುತ್ತವೆ. ಕಾಲುಳ್ಳ ಆಯತ ಪೆಟ್ಟಿಗೆಗಳನ್ನು ಕೇವಲ ಅಸ್ಥಿಸಂಸ್ಕಾರಕ್ಕೆ ಉಪಯೋಗಿಸುತ್ತಿದ್ದರೆಂದು ತೋರುವುದು.

ಈ ಕಾಲದ ಜನ ಬತ್ತ, ರಾಗಿ, ಹುರುಳಿ–ಈ ಧಾನ್ಯಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದರು. ಕುರಿ, ಎಮ್ಮೆ, ಕುದುರೆಗಳನ್ನು ಸಾಕುತ್ತಿದ್ದರು. ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಇವರಲ್ಲಿ ಬೇಟೆಗೆ ಹೋಗುವುದಕ್ಕೆ ಮುಂಚೆ ಗುಂಪು ಕುಣಿತ ಪದ್ಧತಿಯಿತ್ತೆಂದು ತೋರುತ್ತದೆ. ಹೆಚ್ಚಾಗಿ ಸುಟ್ಟ ಮಣ್ಣಿನ ಉಂಗುರಾಕಾರದ ಕಿವಿ ಆಭರಣ, ಅಡಕೆಯಾಕಾರದ ಮಣಿಸರ, ಉತ್ತಮ ಜಾತಿಯ ಅಗೇಟ್, ಕಾರ್ನಿಲಿಯನ್ (ಸ್ಫಟಿಕ) ಮಣಿಗಳ ಸರಗಳು ಅಲಂಕಾರದ ವಸ್ತುಗಳಾಗಿದ್ದವು. ಕಾರ್ನಿಲಿಯನ್ ಮಣಿಗಳ ಮೇಲೆ ರೇಖೆಗಳನ್ನು ಕೊರೆದು ಅವುಗಳಲ್ಲಿ ಅಳಿದುಹೋಗದ ಹಾಗೆ ಬಿಳಿ ಬಣ್ಣವನ್ನು ಹಾಕಿ, ಅವುಗಳ ಚೆಲುವನ್ನು ಇನ್ನೂ ಹೆಚ್ಚು ಮಾಡುತ್ತಿದ್ದರು. ಕೆಲವೊಂದು ನೆಲೆಗಳ ಸಮೀಪದಲ್ಲಿಯ ಗವಿಗಳಲ್ಲಿ ಕೆಮ್ಮಣ್ಣಿನ ಚಿತ್ರಗಳಿವೆ. ಅವುಗಳಲ್ಲಿ ಕೈ ಕೈ ಹಿಡಿದು ಗುಂಪು–ಕುಣಿತ, ಎಮ್ಮೆ, ಹಸು, ಗೂಳಿ, ನಾಯಿ, ಜಿಂಕೆ, ಹುಲಿ, ನವಿಲು, ಕುದುರೆಸವಾರರು, ವಿವಿಧ ಆಯುಧಪಾಣಿಗಳಾದ ಮನುಷ್ಯರು, ಮೈತುಂಬ ಚಿತ್ರ ಬರೆದುಕೊಂಡ ನಗ್ನ ಮನುಷ್ಯರು ಮುಂತಾದ ಹಲವಾರು ರೇಖಾಚಿತ್ರಗಳಿವೆ. ಕೇವಲ ಬಾಹ್ಯ ರೇಖೆಗಳಿಂದಲೇ ಛಾಯೆಯ ಹಾಗೆ ಬಿಡಿಸಿದ ಈ ಚಿತ್ರಗಳಲ್ಲಿ ಎಲ್ಲ ಲಕ್ಷಣಗಳಿರಲು ಆಗದಿದ್ದರೂ ಇವು ಸರಳವಾಗಿ ಮಾರ್ಮಿಕವಾಗಿವೆ.

ಈ ಜನರ ವಿವಿಧ ರೀತಿಯ ಶವಸಂಸ್ಕಾರ ಪದ್ಧತಿಗಳಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಉಪಯೋಗಿಸಿರುವುದು ಈ ಸಂಸ್ಕೃತಿಯ ವೈಶಿಷ್ಟ್ಯ. ಹೂನೂರಿನಲ್ಲಿದ್ದ ಗುಡಿಯೆನ್ನಬಹುದಾದ ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿದ ಮನೆ. ಐಹೊಳೆಯಲ್ಲಿರುವ ಸ್ವಲ್ಪಮಟ್ಟಿಗೆ ಮನುಷ್ಯನ ಆಕೃತಿಯುಳ್ಳ ಕಲ್ಲುಹಲಗೆ, ಮೋಟೆ ಬೆನ್ನೂರಿನಲ್ಲಿರುವ ಬಹು ಎತ್ತರದ ಕಲ್ಲುಮಂಟಪ, ಕೊಡಗಿನ ಸೋಮವಾರ ಪೇಟೆಯಲ್ಲಿಯ ಕಲ್ಲುಕಟ್ಟಡ–ಇವರ ಧಾರ್ಮಿಕ ವಿಧಿಗಳಿಗೆ ಸಂಬಂಧಪಟ್ಟದ್ದಾಗಿವೆಯೆಂದು ತೋರುವುದು.

ಬ್ರಹ್ಮಗಿರಿ ಮತ್ತು ಮಸ್ಕಿಯಲ್ಲಿಯ ಕಲ್ಗೋರಿಗಳಲ್ಲಿ ದೊರೆತ ಅಸ್ಥಿ ಅವಶೇಷಗಳ ಪರೀಕ್ಷಣಗಳಿಂದ ಈ ಜನವರ್ಗದಲ್ಲಿ ಮೂರು ವಿಧದ ಜನಾಂಗಗಳನ್ನು ಗುರುತಿಸಲಾಗಿದೆ; (1) ಸ್ಥಳಿಕ ಆಸ್ಟ್ರಲಾಯಿಡ್ ಹಾಗೂ ಪ್ರೋಟೊ ಆಸ್ಟ್ರಲಾಯಿಡ್ (2) ಅಲ್–ಉಬೈದ್ ತರಹದ್ದು ಮತ್ತು (3) ಸೈಥೋಇರಾನಿಯನ್ ಜನಾಂಗದ ಮೆಸೊಬ್ರ್ಯಾಕಿ ಕ್ರೇನಿಯಲ್ ವಿಧದವರು. ಇವುಗಳಲ್ಲಿ ಮೂರನೆಯ ವಿಧದ ಜನಾಂಗದವರದ್ದು ಕೇವಲ ಬೃಹತ್ ಶಿಲಾಗೋರಿಗಳಿಂದ ಮಾತ್ರ ತಿಳಿದುಬಂದಿದೆ. ಉಳಿದೆರಡು ವಿವಿಧ ಜನರು ನೂತನ ಶಿಲಾಯುಗದಲ್ಲೂ ಇದ್ದುದು ತಿಳಿದಿದೆ. ಆದ್ದರಿಂದ ಕಲ್ಗೋರಿಯನ್ನು ಕಟ್ಟುವ ಪದ್ಧತಿಯನ್ನು ಮೂರನೆಯ ವಿಧದ ಜನರೇ ಈ ಭಾಗಕ್ಕೆ ತಂದಿರಬೇಕು ಮತ್ತು ಇದರಿಂದ ಪ್ರಭಾವಿತರಾದ ಉಳಿದವರಲ್ಲೂ ಈ ಪದ್ಧತಿ ಪ್ರಾರಂಭವಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ. ಈ ಪದ್ಧತಿ ಹೊರಗಿನಿಂದ ಬಂದದ್ದಾದರೆ, ಎಲ್ಲಿಂದ ಯಾವ ಮಾರ್ಗವಾಗಿ ಬಂದಿತೆಂಬುದು ಖಚಿತವಾಗಿಲ್ಲ.

ಇಂಗಾಲ–14 ವೈಜ್ಞಾನಿಕ ಪರೀಕ್ಷಣಗಳಿಂದ ನೂತನ ಶಿಲಾಯುಗದ ಅಂತ್ಯದಲ್ಲಿ ಈ ಸಂಸ್ಕೃತಿಯ ವ್ಯಾಪ್ತಿಯಿದ್ದುದರ ಆಧಾರಗಳಿಂದ ಮತ್ತು ಇತರ ಹೊಸ ಶೋಧನೆಗಳಿಂದ ಈ ಸಂಸ್ಕೃತಿಯ ಆರಂಭದ ಕಾಲ ಪುನರ್ವಿಮರ್ಶಿತವಾಗಿದ್ದು ಅದು ಉತ್ತರ ಕರ್ನಾಟಕದಲ್ಲಿ ಪ್ರ.ಶ.ಪೂ. ಸು.1300–1200 ಮತ್ತು ದಕ್ಷಿಣ ಕರ್ನಾಟಕದಲ್ಲಿ ಪ್ರ.ಶ.ಪೂ.ಸು. 800 ಎಂದೂ ಅಂತ್ಯ ಸು. ಕ್ರಿ.ಶ. 1ನೆಯ ಶತಮಾನವೆಂದೂ ಊಹಿಸಲಾಗಿದೆ. (ಎ.ಎಸ್.)

**ಪ್ರಾಚ್ಯವಿದ್ಯಾ ಸಂಶೋಧನಾಲಯ**: ಈಗ್ಗೆ ಸು. 115 ವರ್ಷಗಳ ಹಿಂದೆ ಆಗಿನ ಭಾರತ ಸರಕಾರದ ಕರೆಗನುಸಾರವಾಗಿ ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ಕಲೆ ಮುಂತಾದವುಗಳಿಗೆ ಸಂಬಂಧಿಸಿದ ಸಂಸ್ಕೃತ ಮತ್ತು ಕನ್ನಡದ ಹಸ್ತಪ್ರತಿಗಳ ಗ್ರಂಥರಾಶಿಯನ್ನು ಸಂಸ್ಥಾನದ ನಾನಾ ಭಾಗಗಳಿಂದ ಸಂಗ್ರಹಿಸಿ, ಸಂಪಾದಿಸಿ, ಮುದ್ರಿಸಬೇಕೆಂಬ ಮಹತ್ತರವಾದ ಧ್ಯೇಯದಿಂದ 1891 ರ ಅಕ್ಟೋಬರ್ ತಿಂಗಳಲ್ಲಿ ಓರಿಯಂಟಲ್ ಲೈಬ್ರರಿ ಎಂಬ ಹೆಸರಿನಲ್ಲಿ ಸಂಸ್ಥೆಯೊಂದನ್ನು ಚಾಮರಾಜ ಒಡೆಯರು ಸ್ಥಾಪಿಸಿದರು. ಭಾರತಕ್ಕೆ ಭೇಟಿಯಿತ್ತ ಎಲಿಜಬೆತ್‌ರಾಣಿಯವರ ಜ್ಞಾಪಕಾರ್ಥವಾಗಿ ನಿರ್ಮಾಣವಾದ ಜ್ಯೂಬಿಲಿ ಹಾಲ್ ಎಂಬ ಸೌಧದಲ್ಲಿ ಇದನ್ನು ಆರಂಭಿಸಲಾಯಿತು. ಆಗಿನ ಮೈಸೂರು ಸರಕಾರದ ಸೇವೆಯಲ್ಲಿದ್ದ ಎಂ.ಎಸ್.ಕೆ. ರಾವ್, ಎಂ.ಹಿರಿಯಣ್ಣ ಮತ್ತು ಈ ಸಂಸ್ಥೆಯ ಮೊದಲ ಕ್ಯೂರೇಟರ್ ಆದ ಎ. ಮಹದೇವಶಾಸ್ತ್ರಿಗಳು ಈ ಸಂಸ್ಥೆಯ ಪ್ರಾರಂಭ ಮತ್ತು ಅಭ್ಯುದಯಕ್ಕೆ ಕಾರಣರಾದರು. ಇವರೆಲ್ಲರ ಪ್ರಯತ್ನಗಳಿಂದ ಈ ಸಂಸ್ಥೆ ಈಗ ಪ್ರಾಚ್ಯವಿದ್ಯಾ ಸಂಶೋಧನಾಲಯ (ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಓರಿಯಂಟಲ್ ಲೈಬ್ರರಿ ಪ್ರಾರಂಭವಾದಾಗ ಇದು ಮೈಸೂರು ಸರಕಾರದ ವಿದ್ಯಾ ಇಲಾಖೆಯ ವ್ಯಾಪ್ತಿಗೊಳಪಟ್ಟ ಸ್ವತಂತ್ರ ಸಂಸ್ಥೆಯಾಗಿತ್ತು. ಎ. ಮಹದೇವಶಾಸ್ತ್ರಿ ಈ ಸಂಸ್ಥೆಯ ಮುಖ್ಯ ಅಧಿಕಾರಿಗಳಾಗಿದ್ದರು. ಗ್ರಂಥ ಸಂಕಲನ ಕಾರ್ಯಕ್ಕಾಗಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿ ವಿದ್ವಾಂಸರಾಗಿದ್ದ ಎಸ್.ಜಿ.ನರಸಿಂಹಾಚಾರ್ಯರನ್ನು ನೇಮಿಸಲಾಯಿತು. ಆಗಿನ ಸರಕಾರದ ಉದಾರ ಧನಸಹಾಯದಿಂದ ಹಸ್ತಪ್ರತಿಗಳ ಸಂಗ್ರಹ ಕಾರ್ಯ ಪ್ರಾರಂಭವಾಯಿತು. ಮೈಸೂರು ಸರಕಾರದ ಪ್ರಾಚ್ಯವಸ್ತು ಸಂಗ್ರಹಾಲಯದವರೂ ಈ ಸಂಸ್ಥೆಯ ಕಟ್ಟಡದಲ್ಲಿಯೇ ಕೆಲಸ ಮಾಡುತ್ತಿದ್ದು, ಅವರಿಂದ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳೂ ಸಂಸ್ಥೆಯ ಗ್ರಂಥಾಲಯಕ್ಕೆ ಸೇರ್ಪಡೆಯಾದವು. ಈ ಸಂಸ್ಥೆಯಲ್ಲಿ ನಡೆಯುತ್ತಿದ್ದ ಸಂಶೋಧನ ಕಾರ್ಯಕ್ಕೆ ನೆರವಾಗುವ ಕೆಲವು ಮುದ್ರಿತ ಗ್ರಂಥಗಳು

ವಿದ್ಯಾ ಇಲಾಖೆಯಿಂದ ಇಲ್ಲಿಗೆ ವರ್ಗಾಯಿಸಲ್ಪಟ್ಟು ಮುದ್ರಿತ ಗ್ರಂಥಗಳ ವಿಭಾಗ ಸೇರಿದವು.

ಮುಂದೆ ಹಸ್ತಪ್ರತಿಗಳ ಸಂಗ್ರಹ ಮತ್ತು ಮುದ್ರಿತ ಗ್ರಂಥಗಳ ಸಂಕಲನ ಪ್ರಾರಂಭವಾಗಿ, ಹೆಚ್ಚು ಹೆಚ್ಚು ಗ್ರಂಥಗಳು ಸಂಸ್ಥೆಯ ಗ್ರಂಥಾಲಯಕ್ಕೆ ಬಂದು ಸೇರಿದವು. ಮೈಸೂರು ಸಂಸ್ಥಾನದಲ್ಲಿ ಇದು ಮೊದಲನೆಯ ಸಾರ್ವಜನಿಕ ಗ್ರಂಥಾಲಯವಾಯಿತು. ಈ ಸಂಸ್ಥೆಯಲ್ಲಿ ಗ್ರಂಥಸಂಶೋಧನೆ ಮತ್ತು ಸಂಪಾದನೆ ಮಾಡಲು ವಿಖ್ಯಾತ ವಿದ್ವನ್ಮಣಿಗಳಿಗೆ ಆಹ್ವಾನ ನೀಡಲಾಯಿತು. ಕಸ್ತೂರಿ ರಂಗಾಚಾರ್ಯ, ನರಹರಿಜೋಯಿಸರು, ಆರ್. ರಾಘವೇಂದ್ರಚಾರ್ಯ, ವಿ. ಶಾಮಾಚಾರ್ಯ, ಡಿ. ಎಲ್. ನರಸಿಂಹಾಚಾರ್ಯ, ಶ್ರೀಕಂಠಯ್ಯ, ಮಹಾಮಹೋಪಾಧ್ಯಾಯ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ ಮೊದಲಾದವರು ಇವರಲ್ಲಿ ಪ್ರಮುಖರು. ಇವರೆಲ್ಲರ ಶ್ರಮದಿಂದ

ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

ಗ್ರಂಥಸಂಪಾದನಾ ಕಾರ್ಯ ತ್ವರಿತವಾಗಿ ನಡೆದು, ಸಂಪಾದಿತ ಗ್ರಂಥಗಳನ್ನು ಬಿಬ್ಲಿಯೋಥಿಕ ಸಂಸ್ಕೃತ ಮತ್ತು ಬಿಬ್ಲಿಯೋಥಿಕ ಕರ್ನಾಟಿಕ ಎಂಬ ಎರಡು ಶ್ರೇಣಿಗಳಲ್ಲಿ ಪ್ರಕಟಿಸಲಾಯಿತು. 1893ರಲ್ಲಿ ಸುದರ್ಶನಾಚಾರ್ಯರ ವ್ಯಾಖ್ಯೆಯೊಡನೆ ಆಪಸ್ತಂಬ ಗೃಹ್ಯಸೂತ್ರವೂ 1900ರಲ್ಲಿ ಪಂಪನ ಆದಿಪುರಾಣವೂ ಮೇಲೆ ಸೂಚಿಸಿರುವ ಎರಡು ಗ್ರಂಥಶ್ರೇಣಿಗಳ ಮೊದಲನೆಯ ಪುಷ್ಪಗಳಾಗಿ ಪ್ರಕಟವಾದವು. 1916ರ ವೇಳೆಗೆ ಐವತ್ತು ಸಂಸ್ಕೃತ ಗ್ರಂಥಗಳೂ ಏಳು ಕನ್ನಡ ಗ್ರಂಥಗಳೂ ಈ ಶ್ರೇಣಿಯಲ್ಲಿ ಪ್ರಕಟವಾದವು. 1909ರಲ್ಲಿ ಮೈಸೂರು ಸಂಸ್ಥಾನಕ್ಕೂ ಮತ್ತು ಭಾರತಕ್ಕೂ ಕೀರ್ತಿ ತಂದ ಕೌಟಿಲ್ಯನ 'ಅರ್ಥಶಾಸ್ತ್ರ'ವನ್ನು ಇಲ್ಲಿನ ಗ್ರಂಥಾಲಯದಲ್ಲಿಯೇ ಕೆಲಸ ಮಾಡುತ್ತಿದ್ದ ಆರ್. ಶಾಮಶಾಸ್ತ್ರಿಗಳು ಸಂಶೋಧಿಸಿ ಪ್ರಕಟಿಸಿದರು. ಈ ಕಾರಣದಿಂಲೇ ಈ ಸಂಸ್ಥೆಯಿರುವ ವೃತ್ತಕ್ಕೆ ಇಂದಿಗೂ ಕೌಟಿಲ್ಯ ವೃತ್ತ ಎಂದು ಕರೆಯಲಾಗುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯ 1916ರಲ್ಲಿ ಸ್ಥಾಪಿತವಾದಾಗ ಓರಿಯಂಟಲ್ ಲೈಬ್ರರಿ ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಗಾಯಿತು. ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ, ಸಂಸ್ಥೆಯ ಪುರೋಭಿವೃದ್ಧಿಗಾಗಿ ಸೂಕ್ತ ಸಲಹೆಗಳನ್ನು ಕೊಡಲು ಸಿ. ಆರ್. ರೆಡ್ಡಿ, ಎಂ. ಹಿರಿಯಣ್ಣ, ಬಿ. ಎಂ. ಶ್ರೀಕಂಠಯ್ಯ, ನವೀನಂ ರಾಮಾನುಜಾಚಾರ್ಯ ಈ ವಿದ್ವಾಂಸರು ಸೇರಿದ ಒಂದು ಆಡಳಿತ ಸಭೆ ಏರ್ಪಾಡಾಯಿತು. 1916ರಲ್ಲಿ ಎ. ಮಹದೇವಶಾಸ್ತ್ರಿಗಳು ನಿವೃತ್ತರಾದ ಅನಂತರ 1918ರಲ್ಲಿ ಆರ್. ಶಾಮಶಾಸ್ತ್ರಿಗಳು ಸಂಸ್ಥೆಯ ಕ್ಯೂರೇಟರ್ ಆಗಿ ಅಧಿಕಾರ ವಹಿಸಿಕೊಳ್ಳುವವರೆಗೂ ಪಂಡಿತ ಆರ್. ರಾಘವೇಂದ್ರಾಚಾರ್ಯರು ಸಂಸ್ಥೆಯ ಮುಖ್ಯಾಧಿಕಾರಿಗಳಾಗಿದ್ದರು. ಇವರ ಕಾಲದಲ್ಲಿ ಸಂಶೋಧಿತ ಎರಡು ಸಂಸ್ಕೃತ ಗ್ರಂಥಗಳು ಪ್ರಕಟವಾದವು.

1918ರ ವೇಳೆಗೆ ಸಹಸ್ರಾರು ಹಸ್ತಪ್ರತಿಗಳು ಸಂಗ್ರಹವಾಗಿ ಅರವತ್ತು ಸಂಶೋಧಿತ ಗ್ರಂಥಗಳು ಪ್ರಕಟವಾದವು. ಈ ಸಂಸ್ಥೆ ಆಡಳಿತ ವಿಭಾಗ, ಹಸ್ತಪ್ರತಿಗಳ ಸಂಗ್ರಹಾಲಯ ಮತ್ತು ಪ್ರಕಟಣಾವಿಭಾಗ, ಮುದ್ರಿತ ಗ್ರಂಥಗಳ ವಿಭಾಗ, ಸಂಶೋಧನ ವಿಭಾಗ ಎಂದು ನಾಲ್ಕುಭಾಗವಾಗಿ ವಿಂಗಡಿಸಲ್ಪಟ್ಟು ಆಯಾ ವಿಭಾಗಕ್ಕೆ ಸೂಕ್ತವಾದ ಕಾರ್ಯಗಳನ್ನು ಅಳವಡಿಸಲಾಯಿತು. ಸಂಸ್ಥೆಯಲ್ಲಿ ಸಂಗ್ರಹವಾಗಿದ್ದ ಗ್ರಂಥಗಳ ವಿವರಣಾತ್ಮಕ ಸೂಚಿಗಳೂ ಮತ್ತು ಗ್ರಂಥಸೂಚಿಗಳೂ ಹಾಗೂ ಗ್ರಂಥ ಸಂಶೋಧನೆ ಮತ್ತು ಸಂಶೋಧನಾಕಾರ್ಯವೂ ತೃಪ್ತಿಕರವಾಗಿ ನಡೆಯಿತು. 1929ರಲ್ಲಿ ಆರ್. ಶಾಮಶಾಸ್ತ್ರಿಗಳು ನಿವೃತ್ತರಾಗುವ ವೇಳೆಗೆ ಮೂರು ಭಾಗಗಳಿಂದ ಕೂಡಿದ ಅರ್ಥಶಾಸ್ತ್ರದ ಪದಸೂಚಿಯೂ ಸೇರಿ ಹತ್ತೊಂಬತ್ತು ಸಂಸ್ಕೃತ ಗ್ರಂಥಗಳೂ ಒಂಬತ್ತು ಕನ್ನಡ ಗ್ರಂಥಗಳೂ ಪ್ರಕಟವಾದವು.

1929ರಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಡಿ. ಶ್ರೀನಿವಾಸಾಚಾರ್ಯರು ಸಂಸ್ಥೆಯ ಪದನಿಮಿತ್ತ ಕ್ಯೂರೇಟರ್ ಆಗಿ ನೇಮಕಗೊಂಡರು. ಇವರಿಗೆ ಸಹಾಯಕರಾಗಿ ಒಬ್ಬ ಸಹಾಯಕ ಕ್ಯೂರೇಟರ್ ಇದ್ದರು. ಈ ಕಾಲದಲ್ಲಿ ಸಂಶೋಧಿತ ಐದು ಸಂಸ್ಕೃತ ಗ್ರಂಥಗಳೂ ಮೂರು ಕನ್ನಡ ಗ್ರಂಥಗಳೂ ಪ್ರಕಟಗೊಂಡವು. ಆಡಳಿತ ಮಂಡಳಿಯ ಹೆಸರನ್ನು ಓರಿಯಂಟಲ್ ಲೈಬ್ರರಿ ಕಮಿಟಿ ಎಂದು ಬದಲಾಯಿಸಲಾಯಿತು. ವಿಶ್ವವಿದ್ಯಾನಿಲಯದ ಕನ್ನಡ ಮತ್ತು ಪರ್ಷಿಯನ್ ಪ್ರಾಧ್ಯಾಪಕರನ್ನೂ ಮಂಡಳಿಯ ಸದಸ್ಯರುಗಳನ್ನಾಗಿ ನೇಮಿಸಲಾಯಿತು. ಡಿ. ಶ್ರೀನಿವಾಸಾಚಾರ್ಯರ ನಿವೃತ್ತಿಯ ಅನಂತರ ಎಂ.ಎಸ್. ಬಸವಲಿಂಗಯ್ಯನವರು ಕ್ಯೂರೇಟರ್ ಆದರು(1936–43). ಇವರು ಕ್ಯೂರೇಟರ್ ಆಗಿದ್ದ ಅವಧಿಯಲ್ಲಿ ನಾಲ್ಕು ಸಂಸ್ಕೃತ ಗ್ರಂಥಗಳೂ ಮೂರು ಕನ್ನಡ ಗ್ರಂಥಗಳೂ ಮತ್ತು ವೇದಗಳ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿಯೂ ಪ್ರಕಟವಾದವು. ಅನಂತರ ಎಚ್.ಆರ್. ರಂಗಸ್ವಾಮಿ ಅಯ್ಯಂಗಾರ್ ಅವರು ಕ್ಯೂರೇಟರ್ ಆದರು. ಸಂಸ್ಥೆಯ ಅಭಿವೃದ್ಧಿಗೆ ಸೂಕ್ತ ಸಲಹೆಗಳನ್ನು ಕೊಡಲು ಬಿ.ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಮಂಡಲಿ ಏರ್ಪಾಡಾಯಿತು. ಈ ಮಂಡಲಿ ಸೂಚಿಸಿದ ಸಲಹೆಗಳನ್ನು ಸರಕಾರ ಪರಿಶೀಲಿಸಿ ಒಪ್ಪಿಕೊಂಡು ಓರಿಯಂಟಲ್ ಲೈಬ್ರರಿ ಎಂಬ ಹೆಸರನ್ನು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂದು ಬದಲಾಯಿಸಲು ಅನುಮತಿ ನೀಡಿತು.

ಸರಕಾರದ ನಿರ್ದೇಶನದಂತೆ ಮಂಡಲಿ ಒಂದು ದೀರ್ಘವಾದ ವರದಿಯನ್ನು ಸರಕಾರಕ್ಕೆ ಒಪ್ಪಿಸಿತು. ಈ ವರದಿಯನ್ನು ಪರಿಶೀಲನೆ ಮಾಡಿ ಸರಕಾರ, ಸಂಸ್ಥೆಯು ತಾತ್ಕಾಲಿಕವಾಗಿ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಮುಂದುವರಿಯಬೇಕೆಂದೂ ಸಂಸ್ಥೆಯಲ್ಲಿನ ಗ್ರಂಥಗಳ ಸೂಚಿಯೂ ಆರಿಸಲ್ಪಟ್ಟ ಗ್ರಂಥಗಳ ಸಂಶೋಧನೆ ಮತ್ತು ಮುದ್ರಣ ಕಾರ್ಯಗಳೂ ಹೆಚ್ಚು ಹೆಚ್ಚಾದ ದ್ರವ್ಯಾನುಕೂಲವಾಗಿ ಮತ್ತಷ್ಟು ಚೆನ್ನಾಗಿ ನಡೆಯಬೇಕೆಂದೂ ಸಂಸ್ಕೃತದಲ್ಲಿರುವ ವೇದಾಂತ, ಸ್ಮೃತಿ, ಆಯುರ್ವೇದ ಮತ್ತು ಇತರ ಭಾಗಗಳಿಗೆ ಸಂಬಂಧಿಸಿದ ಕೆಲವು ಉತ್ತಮ ಗ್ರಂಥಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಗೆ ತರ್ಜುಮೆ ಮಾಡಬೇಕೆಂದೂ ಸಂಸ್ಥೆಗೆ ಒಬ್ಬ ನಿರ್ದೇಶಕರನ್ನು ನೇಮಿಸುವ ವಿಚಾರವನ್ನು ಪ್ರಸ್ತಾಪಿಸಿ, ಬೇಕಾಗುವ ದ್ರವ್ಯಾನುಕೂಲದ ಬಗ್ಗೆ ವಿವರವಾದ ವರದಿಯನ್ನು ಕಳುಹಿಸಿಕೊಡುವಂತೆಯೂ 1946 ಜುಲೈ 19 ರಂದು ಆದೇಶಿಸಿತು. ಅದೇ ಸಮದಲ್ಲಿಯೇ ಕ್ಯೂರೇಟರ್ ಹುದ್ದೆಯನ್ನು ಸೂಪರಿಟೆಂಡೆಂಟ್ ಹುದ್ದೆಯಾಗಿ ಬದಲಾಯಿಸುವಂತೆ ಸರಕಾರ ಸೂಚಿಸಿತು.

ಈ ಹಿನ್ನೆಲೆಯಲ್ಲಿ 1946ರ ಸೆಪ್ಟಂಬರ್ ತಿಂಗಳಿನಲ್ಲಿ ವಿ.ಎಲ್. ಡಿಸೌಜ ಅವರ ಅಧ್ಯಕ್ಷತೆಯಲ್ಲಿ ಒಂದು ಮಂಡಲಿ ನೇಮಕವಾಯಿತು.

ಈ ಮಂಡಲಿ ತನ್ನ ವರದಿಯಲ್ಲಿ ಸಂಸ್ಕೃತ, ಕನ್ನಡ ಮತ್ತು ಪರ್ಷಿಯನ್ ಈ ಮೂರು ವಿಭಾಗಗಳಿಗೂ ಬೇರೆ ಬೇರೆಯಾಗಿ ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸಬೇಕೆಂದು ಸಲಹೆ ಮಾಡಿತು. ಅಲ್ಲದೆ ಸಂಸ್ಥೆಯ ಪ್ರಾಮುಖ್ಯತೆ ದೃಷ್ಟಿಯಿಂದ ಮತ್ತು ದೇಶದಲ್ಲಿರುವ ಇತರ ಸಂಶೋಧನ ಸಂಸ್ಥೆಗಳ ಮಟ್ಟಕ್ಕೆ ಈ ಸಂಸ್ಥೆಯನ್ನೂ ತರಲು ಅನುಕೂಲವಾಗುವಂತೆ, ಸಂಸ್ಥೆಯ ಮುಖ್ಯ ಅಧಿಕಾರಿಯ ಹುದ್ದೆಯಲ್ಲಿ ನಿರ್ದೇಶಕರೊಬ್ಬರಿರುವಂತೆ ಸಲಹೆ ನೀಡಿತು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಅನಂತರ ಎಸ್. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರಕಾರದ ವಿಶ್ವವಿದ್ಯಾನಿಲಯ ಆಯೋಗ (ಯೂನಿವರ್ಸಿಟಿ ಕಮಿಷನ್) ಈ ಸಂಸ್ಥೆಗೆ ಭೇಟಿ ಇತ್ತು, ಮೈಸೂರು ಸಂಸ್ಥಾನದಲ್ಲಿ ಈ ಸಂಸ್ಥೆ ಸಂಸ್ಕೃತಾಭ್ಯಾಸದ ಪ್ರಧಾನ ಸಂಸ್ಥೆಯಾಗಬೇಕೆಂದು ಅಭಿಪ್ರಾಯಪಟ್ಟಿತು. ಸಿ.ಆರ್. ರೆಡ್ಡಿಯವರು ಸರಕಾರದ ವಿದ್ಯಾ ಇಲಾಖೆಯಲ್ಲಿ ಹಲವು ಮಾರ್ಪಾಡುಗಳನ್ನು ಕುರಿತ ತಮ್ಮ ವಿಶೇಷ ವರದಿಯಲ್ಲಿ, ಈ ಸಂಸ್ಥೆಯ ಕೆಲಸದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ಸಂಸ್ಕೃತ ಶಾಖೆ ಮತ್ತು ಮಹಾರಾಜ ಸಂಸ್ಕೃತ ಮಹಾಪಾಠಶಾಲೆ ಇವುಗಳ ಕೆಲಸದಲ್ಲಿಯೂ ಅಲ್ಪಸ್ವಲ್ಪ ಬದಲಾವಣೆ ಮಾಡಿ ಇಂಡಾಲಜಿ ಎಂಬ ಇಲಾಖೆಯನ್ನು ಸಂಘಟಿಸಬಹುದೆಂದೂ ಸೂಚಿಸಿದರು. ಅದೇ ಸಮಯದಲ್ಲಿಯೇ ಸರಕಾರವೂ ವಿಶ್ವವಿದ್ಯಾನಿಲಯದಲ್ಲಿ 'ಭಾರತೀಯ ಸಂಸ್ಕೃತಿಯ ಪೀಠ'ವನ್ನು (ಛೇರ್ ಫಾರ್ ಇಂಡಿಯನ್ ಕಲ್ಚರ್) ಸ್ಥಾಪಿಸಬೇಕೆಂದು ಆಲೋಚಿಸುತ್ತಿತ್ತು. ಆದರೆ ಇವು ಕಾರ್ಯಗತವಾಗಲಿಲ್ಲ.

1954ರಲ್ಲಿ ಈ ಸಂಸ್ಥೆಯ ಮುಖ್ಯಾಧಿಕಾರಿಯ ಹುದ್ದೆಯನ್ನು ನಿರ್ದೇಶಕ ಎಂಬುದಾಗಿ ಬದಲಾಯಿಸಲಾಯಿತು. 1956ರಲ್ಲಿ ಎಚ್. ದೇವೀರಪ್ಪನವರು ಮೊದಲನೆಯ ನಿರ್ದೇಶಕರಾಗಿ ಸಂಸ್ಥೆಗೆ ನೇಮಕ ಗೊಂಡರು. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್ ಅವರು ಸಂಸ್ಥೆಯ ಮುಖ್ಯಾಧಿಕಾರಿಗಳಾಗಿದ್ದ ಅವಧಿಯಲ್ಲಿ (1943–56) ಹನ್ನೊಂದು ಸಂಸ್ಕೃತ ಗ್ರಂಥಗಳೂ ಆರು ಕನ್ನಡ ಗ್ರಂಥಗಳೂ ಸಂಸ್ಥೆಯಲ್ಲಿನ ಹಸ್ತಪ್ರತಿಗಳ ಮೂರು ಗ್ರಂಥಸೂಚಿಗಳೂ ಪ್ರಕಟವಾಗಿದ್ದವು. 1957ರಲ್ಲಿ ಈ ಸಂಸ್ಥೆಯಲ್ಲಿನ 'ಪಂಡಿತ' ಹುದ್ದೆಯನ್ನು ರಿಸರ್ಚ್ ಅಸಿಸ್ಟೆಂಟ್ (ಸಂಶೋಧನ ಸಹಾಯಕ) ಎಂಬುದಾಗಿ ಬದಲಾಯಿಸಲಾಯಿತು.

ಸಂಸ್ಥೆಯಲ್ಲಿ ಸಂಗ್ರಹವಾದ ಓಲೆ ಮತ್ತು ಕಾಗದದ ಹಸ್ತಪ್ರತಿಗಳನ್ನು ಸುರಕ್ಷಿತವಾಗಿಡಲು 'ಮೈಕ್ರೋಫಿಲ್ಮ್' ಏರ್ಪಾಡನ್ನು 1954ರಲ್ಲಿ ಮಾಡಲಾಯಿತು. ಅಂದಿನಿಂದ ಇಂದಿನವರೆಗೆ ದೇಶದ ಬೇರೆ ಬೇರೆ ಸಂಶೋಧನ ಸಂಸ್ಥೆಗಳಲ್ಲಿರುವ ಅಮೂಲ್ಯವಾದ ಗ್ರಂಥಗಳನ್ನು ಫಿಲಂ ಮಾಡಿ ತಂದು ಸಂಸ್ಥೆಯಲ್ಲಿ ಸಂಗ್ರಹಿಸಲಾಗುತ್ತಿದೆ. ಈ ಮೈಕ್ರೋಫಿಲಂಗಳನ್ನು ಸುಲಭವಾಗಿ ಓದಲು 'ಮೈಕ್ರೋ ಫಿಲ್ಮ್ ರೀಡರು'ಗಳನ್ನು ವ್ಯವಸ್ಥೆ ಮಾಡಲಾಗಿದೆ. ಸಂಸ್ಥೆಯಲ್ಲಿ ಸಂಗ್ರಹವಾಗಿರುವ ಶಿಥಿಲವಾಗಿ ನಶಿಸಿ ಹೋಗುತ್ತಿರುವ ಹಸ್ತಪ್ರತಿಗಳನ್ನೂ ಫಿಲಂ ಮಾಡಿ ರಕ್ಷಿಸಲೂ ಸಾಧ್ಯವಾಗಿದೆ. ಹೀಗೆ ಸು. 2000 ಹಸ್ತಪ್ರತಿಗಳ ಫಿಲಂಗಳನ್ನು ಸಿದ್ಧಪಡಿಸಲಾಗಿದೆ. ನಿಗದಿತ ಶುಲ್ಕ ನೀಡಿ ಈ ಮೈಕ್ರೊ ಫಿಲಂಗಳನ್ನು ಅವಲೋಕಿಸಬಹುದಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಕೆ.ಎಂ. ಪಣಿಕ್ಕರ್ ಅವರು ಸಂಸ್ಥೆಯ ಪುರೋಭಿವೃದ್ಧಿಗಾಗಿ ಮಾಡಿದ ಅಮೂಲ್ಯವಾದ ಸಲಹೆಯಿಂದಾಗಿ ಸಂಸ್ಥೆಯಲ್ಲಿರುವ ಅತ್ಯುತ್ತಮ ಹಸ್ತಪ್ರತಿಗಳ ಗ್ರಂಥರಾಶಿಯನ್ನು ಕಂಡು ಈ ಸಂಸ್ಥೆಯನ್ನು ಸಂಸ್ಕೃತ ಗ್ರಂಥಗಳನ್ನೊಳಗೊಂಡ ಒಂದು ಭಾಗವಾಗಿಯೂ ಕನ್ನಡ ಹಸ್ತಪ್ರತಿಗಳ ಸಂಶೋಧನೆಗಾಗಿ –ಕನ್ನಡ ಅಧ್ಯಯನ ಸಂಸ್ಥೆ ಎಂಬ ಇನ್ನೊಂದು ಭಾಗವಾಗಿಯೂ 1966 ಫೆಬ್ರವರಿ 20ರಂದು ಈ ಸಂಸ್ಥೆ ಎರಡು ಬೇರೆ ಬೇರೆ ಸಂಸ್ಥೆಯಾಯಿತು. ಎಚ್. ದೇವೀರಪ್ಪನವರು ಸಂಸ್ಥೆಯ ನಿರ್ದೇಶಕರಾಗಿ ಕೆಲಸ ಮಾಡಿದ ಅವಧಿಯಲ್ಲಿ ಹದಿನೇಳು ಸಂಸ್ಕೃತ ಗ್ರಂಥಗಳೂ ಹನ್ನೆರಡು ಕನ್ನಡ ಗ್ರಂಥಗಳೂ ನಾಲ್ಕು ಸಂಪುಟಗಳಲ್ಲಿ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯೂ ಮತ್ತು ಕನ್ನಡ ಹಸ್ತಪ್ರತಿಗಳ ಅಕಾರಾದಿ ಸೂಚಿಯೂ ಗ್ರಂಥಾಲಯದಲ್ಲಿನ ಮುದ್ರಿತ ಇಂಗ್ಲಿಷ್ ಪುಸ್ತಕಗಳ ಸೂಚಿಯೂ ಪ್ರಕಟವಾದವು.

ಸಂಸ್ಕೃತ, ಅರಾಬಿಕ್ ಮತ್ತು ಪರ್ಷಿಯನ್ ವಿಭಾಗಗಳ ಕಾರ್ಯಕ್ರಮಗಳು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಂಸ್ಕೃತ ವಿಭಾಗದ ನಿರ್ದೇಶದಲ್ಲಿಯೇ ನಡೆಯುತ್ತಿವೆ. 1966ರಿಂದ ಎಂಟು ಸಂಸ್ಕೃತ ಗ್ರಂಥಗಳು ಸಂಶೋಧನೆಯಾಗಿ ಪ್ರಕಟವಾಗಿವೆ. ಎಂಟು ಸಂಸ್ಕೃತ ಗ್ರಂಥಗಳನ್ನು ಮುದ್ರಣಕ್ಕೆ ಸಿದ್ಧಗೊಳಿಸಲಾಯಿತು. ಹನ್ನೊಂದು ಸಂಸ್ಕೃತ ಗ್ರಂಥಗಳ ಸಂಶೋಧನೆ ಕಾರ್ಯ ಮುನ್ನಡೆಯಿತು. ಸಂಸ್ಥೆಯ ಮುಖವಾಣಿಯಾಗಿ ಮೈಸೂರು ಓರಿಯಂಟಲಿಸ್ಟ್ ಎಂಬ ಶಿರೋನಾಮೆಯಲ್ಲಿ ವಾರ್ಷಿಕ ಸಂಶೋಧನ ಪತ್ರಿಕೆಯೂ 1968ರಿಂದ ಹೊರಬರುತ್ತಿದೆ. ಇದುವರೆಗೆ ಹದಿನೆಂಟು ಸಂಪುಟಗಳು ಪ್ರಕಟವಾಗಿವೆ. 1968ರಲ್ಲಿ ಅಖಿಲ ಭಾರತಮಟ್ಟದ ಸಂಸ್ಕೃತ ವಿದ್ವಾಂಸರ ಸಮ್ಮೇಳನ ನಡೆದು ಸಮ್ಮೇಳನದ ಸಾರವಾಗಿ 'ಸಂಸ್ಕೃತ ಥ್ರೂ ದಿ ಏಜಸ್' ಎಂಬ ಗ್ರಂಥವನ್ನು ಪ್ರಕಟಿಸಲಾಗಿದೆ.

ಈ ಸಂಸ್ಥೆಯವತಿಯಿಂದ ಅಪೂರ್ವವಾದ ಹಸ್ತಪ್ರತಿಗಳ ಸಂಗ್ರಹ ಕಾರ್ಯ ನಿರಂತರವಾಗಿ ಸಾಗಿದೆ. ದೇಶದ ನಾನಾ ಭಾಗಗಳಲ್ಲಿರುವ ಸಂಶೋಧನ ಸಂಸ್ಥೆಗಳನ್ನು, ವಿಶ್ವವಿದ್ಯಾಲಯಗಳನ್ನು ಖಾಸಗಿ ವಿದ್ವಾಂಸರುಗಳನ್ನು ಸಂಪರ್ಕಿಸಿ, ಅವರಲ್ಲಿರುವ ಗ್ರಂಥಗಳನ್ನು ಪರೀಕ್ಷಿಸಿ ಅಪರೂಪದ ಗ್ರಂಥಗಳನ್ನು ಮೈಕ್ರೋಫಿಲಂ ಮಾಡಿ ತಂದಿಡಲಾಗಿದೆ. 1971ರಲ್ಲಿ ಈ ವಿಧವಾದ ಗ್ರಂಥಗಳು ಬಿಹಾರ್, ಹರಿಯಾಣ, ಪಶ್ಚಿಮಬಂಗಾಲ, ಪಂಜಾಬ್ ಮುಂತಾದ ಪ್ರದೇಶಗಳಿಂದ–ಮುನ್ನೂರಕ್ಕೂ ಹೆಚ್ಚಾಗಿ ಸಂಗ್ರಹಿಸಲಾಗಿದೆ. ಅಲ್ಲದೆ 1966 ರಿಂದ ಈವರೆಗೆ 70,000 ಕ್ಕೂ ಮೇಲ್ಪಟ್ಟು ಹಸ್ತಪ್ರತಿಗಳೂ 50,000 ಕ್ಕೂ ಮೇಲ್ಪಟ್ಟು ಮುದ್ರಿತ ಗ್ರಂಥಗಳೂ ಸಂಸ್ಥೆಯ ಗ್ರಂಥಾಲಯಕ್ಕೆ ಸೇರ್ಪಡೆಗೊಂಡಿವೆ. ಭಾರತ ಸರ್ಕಾರದ ನೆರವಿನಿಂದ 1975–76ರಲ್ಲಿ ಈ ಓಲೆಗಳ, ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ ತಯಾರಿಸುವ ಕಾರ್ಯನಡೆದಿದ್ದು ಇದುವರೆಗೂ ಹದಿನೆಂಟು ಸಂಪುಟಗಳು ಬಂದಿವೆ.

ಭಾರತೀಯ ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿಯಲ್ಲಿ ಆಸಕ್ತಿಯುಳ್ಳ ದೇಶವಿದೇಶಗಳ ವಿದ್ವಾಂಸರು ಇಲ್ಲಿರುವ ಗ್ರಂಥರಾಶಿಯ ಪ್ರಯೋಜನ ಪಡೆಯುತ್ತಿದ್ದಾರೆ. ಸಂಸ್ಕೃತ ವಾಙ್ಮಯದ ಸುಮಾರು ಅರವತ್ತು ವಿಭಾಗಗಳಿಗೆ ಸಂಬಂಧಿಸಿದ ಅಮೂಲ್ಯ ಗ್ರಂಥರಾಶಿ ಇಲ್ಲಿ ಶೇಖರಗೊಂಡಿವೆ. ಒಟ್ಟು 115 ವರ್ಷಗಳ ತನ್ನ ಅಸ್ತಿತ್ವದ ಅವಧಿಯಲ್ಲಿ ಈ ಸಂಸ್ಥೆ ಘನವಿದ್ವಾಂಸರನ್ನು ಹೊಂದಿದ್ದು ಹಲವರು ವಿದೇಶಿ ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿರುವುದು ಈ ಸಂಸ್ಥೆಯ ಹಿರಿಮೆಯನ್ನು ಹೆಚ್ಚಿಸಿದೆ. ಎ. ಮಹದೇವಶಾಸ್ತ್ರಿಯವರು ಕ್ಯೂರೇಟರ್ ಆಗಿದ್ದ ಅವಧಿಯಲ್ಲಿ (1891–1916) ಸುಮಾರು 50 ಸಂಸ್ಕೃತ ಶಾಸ್ತ್ರಗ್ರಂಥಗಳು 7 ಕನ್ನಡ ಕೃತಿಗಳೂ ಸಂಪಾದಿತವಾದವು. ನಂತರ ಆರ್. ರಾಘವೇಂದ್ರಾಚಾರ್ಯ(1916–18) ಅವರ ನೇತೃತ್ವದಲ್ಲಿ 2 ಕೃತಿಗಳು ಸಂಪಾದಿತವಾದವು. ಆರ್. ಶಾಮಾಶಾಸ್ತ್ರಿಗಳು ಕ್ಯೂರೇಟರ್ ಆಗಿದ್ದ ಅವಧಿ(1918–29) ಸಂಸ್ಥೆಯ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯ. ಪ್ರಪಂಚದಲ್ಲಿಯೇ ಪ್ರಥಮಬಾರಿಗೆ ಕೌಟಿಲ್ಯನ ಅರ್ಥಶಾಸ್ತ್ರವನ್ನು ಸಂಪಾದಿಸಿ ಪ್ರಕಟಿಸಿದ

ಇವರು ಈ ಕೃತಿಯ ಆಂಗ್ಲಾನುವಾದವನ್ನೂ ಸಹ ಸಿದ್ಧಪಡಿಸಿದರು. ಒಟ್ಟು ಹದಿನೆಂಟು ಸಂಸ್ಕೃತ ಕೃತಿಗಳೂ 9 ಕನ್ನಡ ಕೃತಿಗಳೂ ಇವರ ಸೇವಾವಧಿಯಲ್ಲಿ ಪ್ರಕಟಗೊಂಡವು. ಅನಂತರ ಡಿ. ಶ್ರೀನಿವಾಸಾಚಾರ್ಯ (1929–36), ಎಂ.ಎಸ್. ಬಸವಲಿಂಗಯ್ಯ (1936–43), ಎಚ್.ಆರ್. ರಂಗಸ್ವಾಮಿ ಅಯ್ಯಂಗಾರ್ (1943–54), ಎಚ್. ದೇವೀರಪ್ಪ (1954–66), ಜಿ. ಮರುಳಸಿದ್ದಯ್ಯ (1966–80), ಎಚ್.ಪಿ. ಮಲ್ಲೇದೇವರು(1980–92), ಆರ್.ಎಸ್. ಶಿವಗಣೇಶಮೂರ್ತಿ, ಎಂ.ಆರ್. ವೀರಭದ್ರಸ್ವಾಮಿ (1992–94), ಬಿ.ಎ. ದೊಡ್ಡಮನಿ(1994–96) ಈ ಸಂಸ್ಥೆಯ ನೇತೃತ್ವವಹಿಸಿದ್ದರು. ಎಚ್.ಪಿ. ದೇವಕಿ ಅವರು ಈ ಸಂಸ್ಥೆಯ ಪ್ರಪ್ರಥಮ ಮಹಿಳಾ ನಿರ್ದೇಶಕಿ. ಇವರ ಅವಧಿಯಲ್ಲಿ ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಂದ ರಚಿತವಾದ ಶ್ರೀ ತತ್ತ್ವನಿಧಿಯ ಪ್ರಥಮಸಂಪುಟ 'ಶಕ್ತಿನಿಧಿ' ಸಚಿತ್ರ ಹಸ್ತಪ್ರತಿ ಪ್ರಕಟವಾದುದಲ್ಲದೆ ಇತರ 5 ಕೃತಿಗಳು ಸಂಪಾದಿತವಾಗಿ ಪ್ರಕಟಗೊಂಡವು. ನಿರ್ದೇಶಕರಾಗಿದ್ದ ಕೆ.ವಿ. ರಮೇಶ್‌ರವರ ಅವಧಿಯಲ್ಲಿ (1998–2005) ಶ್ರೀ ತತ್ತ್ವನಿಧಿಯ 2 ಮತ್ತು 3ನೆಯ ಸಂಪುಟಗಳಾದ ವಿಷ್ಣುನಿಧಿ, ಶಿವನಿಧಿಗಳು ಪ್ರಕಟಗೊಂಡವು. ಈಗ ಸಂಸ್ಥೆಯ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಕೈಗೊಳ್ಳಲಾಗಿದೆ.

ಈ ಸಂಸ್ಥೆಯ ಕೆಲವು ಮುಖ್ಯ ಪ್ರಕಟಣೆಗಳಿವು: ಕೌಟಿಲ್ಯನ ಅರ್ಥಶಾಸ್ತ್ರ, ಸಾಯಣಾಚಾರ್ಯರ ಮಾಧವೀಯ ಧಾತುವೃತ್ತಿ, ಶಂಕರಾಚಾರ್ಯರ ಸೌಂದರ್ಯಲಹರಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ರಚಿಸಿದ ಶ್ರೀತತ್ತ್ವನಿಧಿಯ ಮೊದಲ ಮೂರು ಸಂಪುಟ.

ರಾಷ್ಟ್ರೀಯ ವಿಜ್ಞಾನ–ಇತಿಹಾಸ ಸಂಶೋಧನ ಕೇಂದ್ರ, ಭಾರತ ಸರ್ಕಾರ, ದೆಹಲಿ ಇದರ ವತಿಯಿಂದ 2002ರಲ್ಲಿ ಯು.ಜಿ.ಸಿ. ಯಿಂದ ಸುಮಾರು ಒಂದೂವರೆ ಕೋಟಿ ಧನಸಹಾಯ ದೊರೆತಿದ್ದು, ವೈಜ್ಞಾನಿಕ ಹಸ್ತಪ್ರತಿಗಳ ಅಧ್ಯಯನ ಹಾಗೂ ಅವುಗಳ ಸವಿಮರ್ಶ ಸಂಪಾದನೆಗಾಗಿ ಒಂದು ಪ್ರತ್ಯೇಕ ಕಟ್ಟಡವನ್ನು ಪ್ರಾಚ್ಯವಿದ್ಯಾ ಸಂಶೋಧನಾಲಯ ಹೊಂದಿದೆ. ಈ ನೂತನ ಕಟ್ಟಡದಲ್ಲಿ ದೇಶದ ವಿವಿಧ ವೈಜ್ಞಾನಿಕ ಸಂಶೋಧನ ಕೇಂದ್ರಗಳಿಂದ ಹಾಗೂ ವಿಶ್ವವಿದ್ಯಾಲಯಗಳಿಂದ ಆಗಮಿಸುವ ಸಂಶೋಧಕರಿಗೆ ಮತ್ತು ವಿದ್ವಾಂಸರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲಾಗುವುದು. ವಿಜ್ಞಾನಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳನ್ನು ಭಾರತದ ವಿವಿಧ ಸಂಶೋಧನ ಕೇಂದ್ರಗಳಿಂದ ಎರವಲು ಪಡೆದು ಅವುಗಳ ಸವಿಮರ್ಶೆ ಹಾಗೂ ತೌಲನಿಕ ಅಧ್ಯಯನ ಈ ಯೋಜನೆಯ ಉದ್ದೇಶವಾಗಿದೆ.

ರಾಷ್ಟ್ರೀಯ ಹಸ್ತಪ್ರತಿ ಯೋಜನೆ: ಭಾರತದ ಸಂಪತ್ತನ್ನು ಸಂರಕ್ಷಿಸುವ ಉದ್ದೇಶದಿಂದ ಭಾರತ ಸರ್ಕಾರ 2003ರಲ್ಲಿ ಒಂದು ವಿಶೇಷ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಡಿಯಲ್ಲಿ ತರುಣ ಪದವೀಧರರಿಗೆ ಹಸ್ತಪ್ರತಿಗಳಲ್ಲಿ ಬರುವ ಲಿಪಿಗಳ ಕಲಿಕೆಗೆ ತರಬೇತಿ ನೀಡಿ, ಭಾರತದ ಪ್ರಮುಖ ಹಸ್ತಪ್ರತಿಕೇಂದ್ರಗಳಲ್ಲಿ, ಮಠಗಳಲ್ಲಿ, ಸಂಪ್ರದಾಯಸ್ಥರ ಮನೆಗಳಲ್ಲಿ ಇರುವ ಹಸ್ತಪ್ರತಿಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈ ಯೋಜನೆಯ ನೆರವಿನಿಂದ ಹಸ್ತಪ್ರತಿಗಳ ಸಂಪಾದನಕಾರ್ಯದಲ್ಲಿ ಯುವಪೀಳೀಗೆಗೆ ತರಬೇತಿ ನೀಡಿ ನಮ್ಮ ದೇಶದ ಅಮೂಲ್ಯ ಜ್ಞಾನಸಂಪತ್ತಿನ ಬಗ್ಗೆ ಜನಸಾಮಾನ್ಯರಲ್ಲಿ ಅರಿವನ್ನು ಮೂಡಿಸುವ ಉದ್ದೇಶದಿಂದ ತರಬೇತಿ ಶಿಬಿರಗಳನ್ನೂ ನಡೆಸಲಾಗುತ್ತಿದೆ. ಯೋಜನೆಯಡಿಯಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಹಸ್ತಪ್ರತಿಗಳ ಮಾಹಿತಿಯ ಗಣಕೀಕರಣ ಕಾರ್ಯವೂ ನಡೆದಿದೆ.

ಹಸ್ತಪ್ರತಿಗಳ ಮೈಕ್ರೋಫಿಲ್ಮ್ ತಯಾರಿಕೆ: ಭಾರತ ಸರ್ಕಾರದ ನವದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ಮೂಲಕ ತಾಡಪತ್ರದಲ್ಲಿರುವ ಹಾಗೂ ಕಾಗದದ ಹಸ್ತಪ್ರತಿಗಳನ್ನು ಮೈಕ್ರೋಫಿಲ್ಮ್ ಮಾಡಲಾಗುತ್ತಿದೆ. ಹಸ್ತಪ್ರತಿಗಳ ಜ್ಞಾನಸಂಪತ್ತನ್ನು ಶಾಶ್ವತವಾಗಿ ಕಾಪಾಡುವುದು ಈ ಯೋಜನೆಯ ಪ್ರಧಾನ ಉದ್ದೇಶ. **(ಎಚ್.ಪಿ.ಡಿ.)**

**ಪ್ರಾಣಿಸಂಪತ್ತು:** ಕರಾವಳಿ, ಮಲೆನಾಡು, ಬಯಲುನಾಡು–ಹೀಗೆ ವೈವಿಧ್ಯಮಯ ಪ್ರಾಕೃತಿಕ ಸನ್ನಿವೇಶಗಳುಳ್ಳ ಕರ್ನಾಟಕದಲ್ಲಿ ಸಹಜವಾಗಿ ಪ್ರಾಣಿ ಸಂಪತ್ತು ಸಹ ವೈವಿಧ್ಯಮಯವಾಗಿದೆ. ಅದರಲ್ಲೂ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳು ಹಾಗೂ ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸುಮಾರು ಎಲ್ಲ ತರಹದ ಪ್ರಾಣಿಗಳನ್ನೂ ಕಾಣಬಹುದು. ಪ್ರಸಕ್ತ ಲೇಖನ ಈ ಜೀವಸಂಪತ್ತಿನ ಒಂದು ಪಕ್ಷಿನೋಟವನ್ನು ಒದಗಿಸುವ ಪ್ರಯತ್ನ. *

### ಕಶೇರುಕಗಳು

ಈ ಸಮೂಹದ ಹಲವಾರು ವರ್ಗಗಳ ಪ್ರತಿನಿಧಿಗಳನ್ನು ಕರ್ನಾಟಕದಲ್ಲಿ ಕಾಣಬಹುದು.

### ಸ್ತನಿ ವರ್ಗ

**ಪ್ರೈಮೇಟ್ ಗಣ:** ಮಾನವನನ್ನೂ (ಹೋಮೋಸೇಪಿಯನ್ಸ್) ಒಳಗೊಂಡಂತೆ ಈ ಗಣದ ಆರು ಬಗೆಯ ಪ್ರಾಣಿಗಳು ಕರ್ನಾಟಕದಲ್ಲಿವೆ. ಎಲ್ಲರಿಗೂ ಚಿರಪರಿಚಿತವಾಗಿರುವ ಕೋತಿ ಅಥವಾ ಕಪಿ (ಬಾನೆಟ್ ಮಕಾಕ್, ಮಕಾಕ ರೇಡಿಯೇಟ) ಇವುಗಳಲ್ಲೊಂದು. ಕುಳಿತುಕೊಂಡಾಗ ಇದರ ಎತ್ತರ ಸು. 60 ಸೆಂಮೀ. ಬಾಲದ ಉದ್ದವು ತಲೆ ಮತ್ತು ದೇಹದ ಉದ್ದಕ್ಕಿಂತಲೂ ಹೆಚ್ಚು. ಗಂಡಿನ ತೂಕ ಸು. 6ರಿಂದ 9 ಕೆಜಿ, ಹೆಣ್ಣಿನ ತೂಕ 3–4ಕೆಜಿ; ಇವು ಸಾಮಾನ್ಯವಾಗಿ ಮನುಷ್ಯ ವಾಸಿಸುವ ನೆಲೆಗೆ ಹತ್ತಿರವಾಗಿ ಕಂಡುಬಂದರೂ ಕಾಡಿನಲ್ಲೂ ವಾಸಿಸುತ್ತವೆ. ಎರಡನೆಯದು ಸಿಂಗಲೀಕ (ಲಯನ್ ಟೈಲ್ಡ್ ಮಕಾಕ್, ಮಕಾಕ ಸೈಲೆನಸ್). ಇದರ ತಲೆ ಮತ್ತು ದೇಹದ ಉದ್ದ ಸು. 50–60 ಸೆಂಮೀ. ಬಾಲ 10–15 ಸೆಂಮೀ ಇದ್ದು, ಸಿಂಹದ ಬಾಲದಂತಿರುತ್ತದೆ. ಹೆಣ್ಣು ಗಂಡಿಗಿಂತ ಚಿಕ್ಕದು, ಇದು ಪಶ್ಚಿಮಘಟ್ಟ ಮತ್ತು ಉತ್ತರ ಕನ್ನಡ ಜಿಲ್ಲೆಗಳ ದಟ್ಟ ಕಾಡಿನಲ್ಲಿ ವಾಸಿಸುತ್ತದೆ. ಇದರ ಗಲ್ಲ ಮತ್ತು ಕೆನ್ನೆಗಳ ಮೇಲೆ ಉದ್ದವಾದ ಕಂದುಬಣ್ಣದ ಕೂದಲುಂಟು. ದೇಹದ ಮೇಲಿನ ಕೂದಲು ಮಿರುಗುವ ಕಪ್ಪು ಬಣ್ಣದ್ದು. ನಾಚಿಕೆ ಪಡುವ ಈ ಜೀವಿಗಳ ವಾಸ ಗುಂಪು ಗುಂಪಾಗಿ, ಒಂದೊಂದು ಗುಂಪಿನಲ್ಲೂ ಸು. 12 ರಿಂದ 20 ಪ್ರಾಣಿಗಳಿರುತ್ತವೆ. ಮರಗಳ ಮೇಲೆಯೇ ಇವುಗಳ ಚಲನವಲನ. ಕೆಲವು ಸಂದರ್ಭಗಳಲ್ಲಿ ಇವು ಮರಗಳಿಂದ ಇಳಿದು ಭೂಮಿಯ ಮೇಲೂ ಓಡಾಡುತ್ತವೆ. ಇವನ್ನು ಪಳಗಿಸುವುದು ಕಷ್ಟ. ಮೂಸು, ಮುಸುವ ಅಥವಾ ಹನುಮಾನ್ ಕೋತಿ (ಕಾಮನ್ ಲಂಗೂರ್, ಪ್ರೆಸ್‌ಬೈಟಿಸ್ ಎಂಟೆಲಸ್) ಎಂಬ ಮತ್ತೊಂದು ಬಗೆಯ ವೃಕ್ಷವಾಸಿ ಕಾಡುಗಳಲ್ಲಿ ಹಳ್ಳಿಗಳ ಬಳಿ ಕಂಡುಬರುತ್ತದೆ. ಇದು ನೀಳಗಾಲಿನ ನೀಳಬಾಲದ ಕಪ್ಪು ಮುಖದ ಕೋತಿ. ಇದು ಭಾರತಾದ್ಯಂತ ಹರಡಿದೆ. ಸಾಮಾನ್ಯವಾಗಿ ಕೊಳ ಮತ್ತು ದೇವಾಲಯಗಳ ಬಳಿ ಇರುವುದು ಹೆಚ್ಚು. ಕೆಲವೆಡೆ ಹಿಂದುಗಳು ಈ ಕೋತಿಯನ್ನು ಪೂಜಿಸುವುದೂ ಉಂಟು. ಇದರ ಆಹಾರ ಹೂ ಹಣ್ಣು ಮೊಗ್ಗು ಇತ್ಯಾದಿ. ಪ್ರೆಸ್‌ಬೈಟಿಸ್ ಜಾನಿ (ನೀಲಗಿರಿ ಲಂಗೂರ್) ಎಂಬ ಇನ್ನೊಂದು ಬಗೆಯ ಕೋತಿ ಕೊಡಗು ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಕಾಡುಗಳಲ್ಲಿ ಇದೆ. ಇದರ ತಲೆ ಹಳದಿ ಮತ್ತು ಕಂದು ಬಣ್ಣದ ಮಿಶ್ರಣ. ಮೈಮೇಲಿನ ಕೂದಲು ಕಪ್ಪುಮಿಶ್ರಿತ ಬೂದು. ಹಚ್ಚ ಹಸಿರು ತುಂಬಿದ ಬೆಟ್ಟಗುಡ್ಡ ಕಾಡುಗಳೇ ಇದರ ವಾಸಸ್ಥಾನ; ಕೆಲವು ವೇಳೆ

ತೋಟ ಮತ್ತು ಸಾಗುವಳಿ ಪ್ರದೇಶಗಳಿಗೆ ನುಗ್ಗಿ ಹಾವಳಿ ಮಾಡುವುದೂ ಉಂಟು. ಇದರ ಸುಂದರವಾದ ತುಪ್ಪಳಕ್ಕಾಗಿ ಜನರು ಇದನ್ನು ನಾಯಿಗಳ ಸಹಾಯದಿಂದ ಬೇಟೆಯಾಡುವುದುಂಟು. ಲೋರಿಸ್ ಟಾರ್ಡಿಗ್ರೇಡಸ್ ಎಂಬ ಶಾಸ್ತ್ರೀಯ ಹೆಸರುಳ್ಳ ಕಾಡುಪಾಪ ಅಥವಾ ಅಡವಿ ಮನುಷ್ಯ ಕರ್ನಾಟಕದಲ್ಲೂ ಕಂಡುಬಂದಿದೆ. ಕೊಡಗು ಜಿಲ್ಲೆ ಇದರ ತವರು ಪ್ರದೇಶ. ಇದು ಕೂಡ ವೃಕ್ಷವಾಸಿಯೇ. ಒಂದೊಂದು ಸು. 280–340 ಗ್ರಾಂ ತೂಗುತ್ತದೆ. ಗಂಡಿಗಿಂತ ಹೆಣ್ಣು ಸ್ವಲ್ಪ ಚಿಕ್ಕದು. ಬಾಹುಗಳು ನೀಳ ಮತ್ತು ತೆಳು. ಬಾಲ ಇಲ್ಲ, ಮೂತಿ ಚೂಪು; ಕಿವಿಗಳು ದೊಡ್ಡವು. ರಾತ್ರಿಯ ವೇಳೆ ಸ್ವಲ್ಪ ಚಟುವಟಿಕೆಯಿಂ ದಿದ್ದು ಹಗಲಿನಲ್ಲಿ ಎಲೆಗಳ ಮರೆಯಲ್ಲಿ ವಿಶ್ರಮಿಸಿಕೊಳ್ಳುತ್ತದೆ. ಹಣ್ಣುಹಂಪಲೇ ಇದರ ಆಹಾರವಾದರೂ ಭೂಮಿಗಿಳಿದಾಗ ಕೀಟ, ಹಲ್ಲಿ, ಕಪ್ಪೆ ಮತ್ತು ಸಣ್ಣ ಸಣ್ಣ ಪಕ್ಷಿಗಳನ್ನು ಹಿಡಿದು ತಿನ್ನುತ್ತವೆ.

**ಮಾಂಸಾಹಾರಿ ಗಣ (ಕಾರ್ನಿವೊರ):** ಈ ಗಣದಲ್ಲಿ ಹಲವು ಕುಟುಂಬಗಳಿವೆ. ಇವುಗಳಲ್ಲಿ ಬೆಕ್ಕು, ಹುಲಿ ಮೊದಲಾದುವನ್ನು ಒಳಗೊಂಡ ಫೆಲಿಡೀ ಕುಟುಂಬ ಒಂದು. ದುಂಡುತಲೆ, ಒಳಕ್ಕೆ ಎಳೆದುಕೊಳ್ಳಬಹುದಾದ ಮೊನೆಯುಗುರು ಅಥವಾ ನಖಗಳು ಈ ಕುಟುಂಬದ ಪ್ರಾಣಿಗಳ ವಿಶೇಷ ಲಕ್ಷಣ. ಬಹು ಹಿಂದೆ ಸಿಂಹಗಳು ದಟ್ಟವಾದ ದಂಡಕಾರಣ್ಯದಲ್ಲಿ ವಾಸಿಸುತ್ತಿದ್ದುವೆಂದು ಹೇಳಲಾಗಿದ್ದರೂ ಈಗ ಇವು ಕನ್ನಡನಾಡಿನಲ್ಲಿ ಇಲ್ಲವೇ ಇಲ್ಲ. ಹುಲಿ (ಪ್ಯಾಂತೆರ ಟೈಗ್ರಿಸ್) ಕರ್ನಾಟಕದ ತೇವಮಿಶ್ರಿತ ಪರ್ಣಪಾತಿ ಕಾಡುಗಳಲ್ಲಿ ಕಂಡುಬರುತ್ತದೆ. ಇದು ವಾಸಿಸುವ ಕಾಡುಗಳಲ್ಲಿ ಸಾಕಷ್ಟು ಆಹಾರಜೀವಿಗಳು, ಮರಗಳು, ನೆರಳು, ಬಾಯಾರಿಕೆಯನ್ನು ನೀಗುವ ಜಲಾಶಯ ಆವಶ್ಯಕ. ಹುಲಿಯ ಮೈಮೇಲಿನ ರೋಮದ ಬಣ್ಣ ಮೋಹಕ ಹಾಗೂ ಉಜ್ವಲ. ಇದೇ

ಹುಲಿ

ಕುಟುಂಬಕ್ಕೆ ಸೇರಿದ ಚಿರತೆಗಳು (ಪ್ಯಾಂತೆರ ಪಾರ್ಡಸ್) ಗುಡ್ಡಪ್ರದೇಶಗಳಲ್ಲಿ ಹೆಚ್ಚಾಗಿ ದೊರಕುತ್ತಿದ್ದುವಂತೆ. ಇವು ಸಾಮಾನ್ಯವಾಗಿ ಮಾನವನ ನೆಲೆಯ ಸನಿಹದಲ್ಲಿಯೇ ವಾಸಿಸುತ್ತಿದ್ದು ದನ ಕುರಿ ಮೇಕೆ ಮೊದಲಾದ ಸಾಕುಪ್ರಾಣಿಗಳಿಗೆ ಉಪದ್ರವವನ್ನುಂಟುಮಾಡುತ್ತಿದ್ದುವು. ಮಾನವನ ಬೇಟೆಯಿಂದ ಇವುಗಳ ಸಂಖ್ಯೆ ಸಾಕಷ್ಟು ಕ್ಷೀಣವಾಗಿ ಈಗ ಇವು ವಿರಳವಾಗಿ ಹೋಗಿವೆ. ಚಿರತೆ ಬೆಕ್ಕು ಅಥವಾ ಕಾಡುಬೆಕ್ಕು (ಫೆಲಿಸ್ ಬೆಂಗಾಲೆನ್ಸಿಸ್) ಕರ್ನಾಟಕದ ಕಾಡುಗಳಲ್ಲಿ ಕಂಡುಬರುತ್ತದೆ. ಇದರ ಗಾತ್ರ ಸಾಕುಬೆಕ್ಕಿನಷ್ಟು. ಆದರೆ ಕಾಲುಗಳು ಮಾತ್ರ ನೀಳ. ದೇಹದ ರಚನೆಯಂತೂ ಪುಟ್ಟ ಚಿರತೆಯಂತೆಯೇ ಇರುತ್ತದೆ. ದೇಹ ಹಳದಿಬಣ್ಣ. ಮಂಟ ಬೆಕ್ಕು ಅಥವಾ ಕಾಡುಬೆಕ್ಕು (ಫೆಲಿಸ್ ಕೇಯಸ್) ಇನ್ನೊಂದು ವಿಧ. ಇದು ಕೂಡ ಸಾಕುಬೆಕ್ಕಿಗಿಂತ ದೊಡ್ಡದು. ಇದರ ಬಾಲ ಮಾತ್ರ ಚಿಕ್ಕದು. ಕಾಲುಗಳು ನೀಳ, ಕಣ್ಣುಗಳು ಮಂದಹಸಿರುಬಣ್ಣ, ಕಾಡುಗಳಲ್ಲಿ ವಾಸಿಸಿದರೂ ಕಾಡುಗಳ ಸಮೀಪದಲ್ಲಿರುವ ಹಳ್ಳಿಗಳಿಗೂ ರಾತ್ರಿವೇಳೆ ಬರುವುದುಂಟು. ಬೇಟೆಯ ಚಿರತೆ (ಆಸಿನೋನಿಕ್ಸ್ ಜೂಬೇಟಸ್) ಕನ್ನಡ ನಾಡಿನ ಉತ್ತರದ ಬಯಲಿನಲ್ಲಿ (ತುಂಗಭದ್ರಾ ನದಿಯ ಬಯಲಿನಲ್ಲಿ) ಸಾಕಷ್ಟು ಸಂಖ್ಯೆಯಲ್ಲಿ ಒಂದು ಕಾಲಕ್ಕೆ ಇತ್ತು. ಇದರ ಕಾಲುಗಳು ತೆಳು. ಇದು ನಖಗಳನ್ನು ಸಂಪೂರ್ಣವಾಗಿ ಒಳಕ್ಕೆ ಸೆಳೆದುಕೊಳ್ಳಲಾರದು. ವೇಗವಾಗಿ ಓಡುವ ಜಿಂಕೆಗಳನ್ನು ಹಿಂಬಾಲಿಸಿ ಬೇಟೆಯಾಡುವುದು ಇದಕ್ಕೆ ಪ್ರಿಯ, ಮಾನವ ಇವುಗಳ ಉಪದ್ರವವನ್ನು ತಾಳಲಾರದೆ ಇವನ್ನು ಬೇಟೆಯಾಡಿ ಬಯಲಿನಲ್ಲಿ ಸಿಗದಂತೆ ಮಾಡಿದ್ದಾನೆ. ಈಗ ಇವು ಸಂಪೂರ್ಣ ಗತವಂಶಿಗಳಾಗಿವೆ.

ವೈವೆರಿಡೀ ಕುಟುಂಬಕ್ಕೆ ಸೇರಿದ ಪುನುಗು ಬೆಕ್ಕಿನ (ವೈವರಿಕ್ಯುಲ ಇಂಡಿಕ) ವಾಸ ಕಾಡು ಮತ್ತು ಗುಡ್ಡಪ್ರದೇಶಗಳಲ್ಲಿ ಆಗಿದ್ದರೂ ಇದು ಎತ್ತರವಾಗಿ ಬೆಳೆಯುವ ಹುಲ್ಲು ಮೈದಾನದಲ್ಲಿ ಹೇರಳವಾಗಿ ದೊರೆಯುತ್ತದೆ. ಉದ್ದ ಸು. 90 ಸೆಂಮೀ. ತೂಕ ಸು. 3–4 ಕೆಜಿ. ದೇಹ ಬೂದುಬಣ್ಣ. ಬಾಲ ಸ್ವಲ್ಪಮಟ್ಟಿಗೆ ಪಟಪಟ್ಟೆ ಬಣ್ಣ. ಕೆಲವು ಸಂದರ್ಭಗಳಲ್ಲಿ ಇದನ್ನು ಹಳ್ಳಿಗಳ ಮನೆಗಳಲ್ಲೂ ಚರಂಡಿಗಳಲ್ಲೂ ಕಾಣಲಾಗಿದೆ. ಇದು ಮರವನ್ನು ಹತ್ತಬಲ್ಲದು. ಇಲಿ, ಅಳಿಲು, ಸಣ್ಣ ಸಣ್ಣ ಪಕ್ಷಿಗಳು ಇದರ ಆಹಾರ. ವೃಷಣಕೋಶ ಪ್ರದೇಶದಲ್ಲಿರುವ ಸುಗಂಧ ಗ್ರಂಥಿಗಳಿಂದ ಪುನುಗನ್ನು ಉತ್ಪಾದಿಸಿ ಇದು ಮರಗಳಿಗೆ ಒರಸುತ್ತದೆ. ಕೇರ ಬೆಕ್ಕು (ಪಾರಡಕ್ಸ್ಯೂರಸ್ ಹರ್ಮಾಫ್ರೊಡೈಟಸ್) ಇದೇ ಕುಟುಂಬಕ್ಕೆ ಸೇರಿದ್ದು. ಇದು ಕಾಡುಗಳಲ್ಲಿ ಮರಗಳ ಮೇಲೆ ಕೆಲವು ಸಂದರ್ಭಗಳಲ್ಲಿ ಹಳ್ಳಿಗಳ ಹೊರವಲಯದ ಲ್ಲಿರುವ ಮಾವಿನ ಮರ ಮತ್ತು ಈಚಲು ಮರಗಳ ಮೇಲೂ ವಾಸಿಸುತ್ತದೆ. ಅಲ್ಲದೆ ಮಾನವ ವಾಸಿಸುವ ಮನೆ ಅಥವಾ ಹಳೇಮನೆ, ಪಾಳುಬಿದ್ದ ದೇವಸ್ಥಾನ, ಮೋರಿ, ಚರಂಡಿಗಳಲ್ಲೂ ಕಂಡುಬಂದಿದೆ.

ಎರಡು ಜಾತಿಯ ಕೀರಗಳು (ಮುಂಗುಸಿ) ಕನ್ನಡ ನಾಡಿನಲ್ಲಿ ಇವೆ. ಇವು ಹರ್ಪೆಸ್ಟಿಡೀ ಕುಟುಂಬಕ್ಕೆ ಸೇರಿದವು. ಸಾಮಾನ್ಯವಾಗಿ ತಿಳಿದಿರುವ ಕೀರ (ಹರ್ಪೆಸ್ಟಿಸ್ ಎಡ್ವರ್ಸಿ) 90 ಸೆಂಮೀ ಉದ್ದವಿರುತ್ತದೆ. ದೇಹದಷ್ಟೇ ಉದ್ದದ ಬಾಲವೂ ಉಂಟು. ಇದರ ತೂಕ ಒಂದೂ ಕಾಲು ಕೆಜಿ. ಕಾಡು ಇದರ ತವರು ಪ್ರದೇಶವಾದರೂ ಕುರುಚಲು ಕಾಡುಗಳಲ್ಲಿ ಹಾಗೂ ಸಾಗುವಳಿ ಪ್ರದೇಶಗಳಲ್ಲಿ ಇದು ಸಾಮಾನ್ಯವಾಗಿ ಕಂಡುಬರುತ್ತದೆ. ಇದು ಬೆಕ್ಕುಗಳಂತೆ ಇಲಿಗಳನ್ನು ಬೇಟೆಯಾಡಿ ತಿನ್ನುತ್ತದೆ. ಅಲ್ಲದೆ ನಾಗರಹಾವು ಮೊದಲಾದ ವಿಷದ ಹಾವುಗಳೊಡನೆ ಹೋರಾಡುವ ಪ್ರವೃತ್ತಿಯೂ ಇದಕ್ಕಿದೆ. ಮತ್ತೊಂದು ಬಗೆಯ ಕೀರ ಕೆಂಪುಕೀರ (ಹರ್ಪಸ್ಟಿಸ್ ವಿಟಿಕಾಲಿಸ್). ಇಲಿ, ಹಾವು, ಚೇಳು, ಕೀಟಗಳೇ ಇದರ ಆಹಾರ. ಪಶ್ಚಿಮಘಟ್ಟದ ಕಾಡುಪ್ರದೇಶಗಳಲ್ಲಿ ಇದು ಕಂಡುಬರುತ್ತದೆ.

ಕತ್ತೆಕಿರುಬ ಅಥವಾ ನಾಯಿಹುಲಿ ಹೈನಿಡೀ ಕುಟುಂಬದ ಪ್ರತಿನಿಧಿಯಾಗಿ ಬೆಟ್ಟಗುಡ್ಡಗಳ ಗುಹೆಗಳಲ್ಲಿ ಮತ್ತು ಎತ್ತರವಾಗಿ ಬೆಳೆದಿರುವ ಹುಲ್ಲಿರುವ ಬಯಲು ಪ್ರದೇಶದಲ್ಲಿ ಸಾಮಾನ್ಯವಾಗಿ ದೊರಕುತ್ತದೆ. ಕಾಡುಪ್ರದೇಶಗಳಲ್ಲಿ ವಿರಳ. ಇದು ಹಗಲಿನಲ್ಲಿ ವಿಶ್ರಾಂತಿ ಪಡೆದು ರಾತ್ರಿಯ ವೇಳೆ ಬೇಟೆಗೆ ಹೊರಡುತ್ತದೆ.

ನಾಯಿ ಕುಟುಂಬ ಕೇನಿಡೀಗೆ ಸೇರಿದ ಪ್ರಾಣಿಗಳು ತೋಳ (ಕೇನಿಸ್ ಲೂಪಸ್), ನರಿ ಅಥವಾ ಕುಸ್ಯಾನರಿ (ಕೇನಿಸ್ ಆರಿಯಸ್), ಸಣ್ಣನರಿ ಅಥವಾ ಕೆಂಪುನರಿ (ವುಲ್ಪೆಸ್ ಬೆಂಗಾಲೆನ್ಸಿಸ್) ಮತ್ತು ಸೀಳುನಾಯಿ ಅಥವಾ ಕಾಡುನಾಯಿ (ಕ್ಯೂಆನ್ ಅಲ್ಪೈನಸ್). ತೋಳ ಕಾಡುಗಳಲ್ಲಿ

ವಾಸಿಸಿ ಜಿಂಕೆಗಳನ್ನು ತಿಂದು ಜೀವಿಸುತ್ತದೆ. ನರಿ, ಕೆಂಪುನರಿಗಳು ಮಾಂಸಾಹಾರಿಗಳಾಗಿರುವುದೇ ಅಲ್ಲದೆ ಕಬ್ಬು, ಕಾಫಿ ಮತ್ತು ನೆಲಗಡಲೆ ಫಸಲುಗಳಿಗೆ ಉಪದ್ರವವನ್ನುಂಟುಮಾಡುತ್ತವೆ. ಸೀಳುನಾಯಿಗಳು ಜಿಂಕೆ, ಮೊಲ ಮೊದಲಾದವನ್ನು ಹಿಡಿದು ತಿಂದು ಜೀವಿಸುತ್ತವೆ.

ಕರ್ನಾಟಕದ ಕರಡಿಗಳು (ಮೆಲರ್ಸಸ್ ಆರ್ಸಿನಸ್) ಕಾರ್ನಿವೊರ ಗಣದ ಇನ್ನೊಂದು ಮುಖ್ಯ ಗುಂಪನ್ನು ಪ್ರತಿನಿಧಿಸುವುವು. ಇವು ಮಂಡ್ಯ, ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಬೆಟ್ಟಗುಡ್ಡಗಳ ಗುಹೆಗಳಲ್ಲಿ ವಾಸಿಸುತ್ತವೆ. ಇವು ಕೀಟಗಳನ್ನೇ ಅಲ್ಲದೆ ಹಣ್ಣು ಮತ್ತು ಜೇನುಗೂಡಿನಿಂದ ಪಡೆದ ಜೇನುತುಪ್ಪವನ್ನೂ ತಿನ್ನುತ್ತವೆ. ಇವುಗಳ ಮೈಮೇಲೆ ನೀಳವಾದ ಕೂದಲುಂಟು.

ಮಸ್ಟೆಲಿಡೀ ಕುಟುಂಬದಲ್ಲಿ ನೀರುನಾಯಿ (ಲುಟ್ರ ಲುಟ್ರ), ಮುರ್ರನಾಯಿ (ಮಾರ್ಟೀಸ್ ಗ್ವಟ್ಕಿನ್ಸಿ), ಮೆಲಿವೊರ ಕ್ಯಾಪೆನ್ಸಿಸ್ ಮೊದಲಾದುವುಗಳಿವೆ. ಇವುಗಳ ಮುಖ್ಯ ಆಹಾರ ಮೀನು. ನೀರುನಾಯಿ ಕೊಡುಗು ಜಿಲ್ಲೆಯಲ್ಲೂ ಕಾವೇರಿ ನದಿಯಲ್ಲೂ ಕಾಣಸಿಗುತ್ತದೆ. ದೇಹ ಸ್ವಲ್ಪಮಟ್ಟಿಗೆ ಕಪ್ಪು. ಇದನ್ನು ಹಿಡಿದು ಸುಲಭವಾಗಿ ಸಾಕಬಹುದು. ಇದೇ ಜಾತಿಗೆ ಸೇರಿದ ಮತ್ತೊಂದು ಬಗೆಯ ಕೆಂಚು ನೀರುನಾಯಿಯ (ಲುಟ್ರ ಪರ್ಸ್ಪಿಸಿಲೇಟ) ದೇಹದ ಬಣ್ಣ ಕೆಂಪು. ಇದು ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೇರಳ. ಮುರ್ರನಾಯಿಯ ಮುಖ ಸ್ವಲ್ಪ ಕಪ್ಪು. ಕುತ್ತಿಗೆಯ ತಳಭಾಗ ಬಿಳುಪು ಮತ್ತು ಹಳದಿ. ದೇಹದ ಹಿಂಭಾಗ ಸ್ವಲ್ಪ ಕಪ್ಪು. ಕೊಡಗಿನ ಬೆಟ್ಟ ಗುಡ್ಡಗಳಲ್ಲಿ ವಾಸ. ಅಲ್ಲದೆ ಇದು ಮರದ ಮೇಲೂ ಹತ್ತಿ ಓಡಾಡಬಲ್ಲುದು. ನಖಗಳಿಲ್ಲದ ನೀರು ನಾಯಿ (ಅಯೋನಿಕ್ಸ್ ಸಿನರಿಯ) ಕೊಡಗಿನ ಬೆಟ್ಟಗಳಲ್ಲಿ ಹರಿಯುವ ಸಣ್ಣಸಣ್ಣ ನದಿಗಳಲ್ಲಿ ಕಂಡುಬರುತ್ತದೆ. ತಾರಕರಡಿ (ಮೆಲಿವೊರ ಕ್ಯಾಪೆನ್ಸಿಸ್) ಒಣಮೈದಾನ ಪ್ರದೇಶದಲ್ಲಿ ದೊರಕುತ್ತದೆ. ಕರಡಿಯಂತೆ ಇದರ ಕಾಲು ಮೋಟು, ದಪ್ಪ; ಬಾಲ ಚಿಕ್ಕದು, ಪಾದಗಳು ಅಗಲ. ಪಕ್ಷಿಗಳು, ಜೇನು, ಹಣ್ಣು ಸರೀಸೃಪಗಳು ಇದರ ಆಹಾರ. ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುವ ಕಾಡುಪ್ರದೇಶಗಳಲ್ಲಿ ಇದು ಕಂಡುಬರುವುದಿಲ್ಲ. (ಬಿ.ಡಿ.ಎಸ್.)

**ಕೀಟಭಕ್ಷಿ ಗಣ (ಇನ್ಸೆಕ್ಟಿವೊರ) :** ಈ ಗಣದ ಪ್ರತಿನಿಧಿಗಳೂ ಕರ್ನಾಟಕದಲ್ಲುಂಟು. ಇವುಗಳಲ್ಲಿ ಮರದ ಮುಳ್ಳಿಲಿ (ಅನತಾನ ಎಲಿಯಟಿ), ಕಂದು ಮೂಗಿಲಿ (ಪ್ಯಾರ ಎಕೈನಸ್ ಮೈಕ್ರೋಪಸ್) ಮತ್ತು ಸುಂಡಿಲಿಗಳು (ಸಂಕಸ್ ಮ್ಯುರಿನಸ್) ಪ್ರಸಿದ್ಧವಾದವು. ಮರದ ಮುಳ್ಳಿಲಿ ಒಣಪ್ರದೇಶದಲ್ಲಿ ವಾಸಿಸುತ್ತದೆ. ದೇಹದ ಉದ್ದ 18–20 ಸೆಂಮೀ. ಬಾಲ 20–23 ಸೆಂಮೀ. ಗೂಟದಂಥ ಮೂಗು, ಮೋಟುಬಾಲ ಇದರ ವೈಶಿಷ್ಟ್ಯ. ಇದರ ವಾಸ ಮೈದಾನ ಪ್ರದೇಶ. ಅಪರೂಪಕ್ಕೆ ಮನೆಗಳನ್ನೂ ಪ್ರವೇಶಿಸುವುದುಂಟು. ಸುಂಡಿಲಿ ಬಯಲಿನಲ್ಲಿಯೇ ಅಲ್ಲದೆ ಮನೆಗಳಲ್ಲಿಯೂ ವಾಸಿಸುತ್ತದೆ. ದೇಹ 15 ಸೆಂಮೀ, ಬಾಲ 8 ಸೆಂಮೀ ಉದ್ದ ಇರುತ್ತದೆ. ಮೂತಿ ನೀಳ ಮತ್ತು ಚೂಪು. ಇದು ಕೀರಲು ಧ್ವನಿ ಮಾಡುತ್ತದೆ.

**ಬಾವಲಿ ಗಣ (ಕೈರಾಪ್ಟರ):** ಕನ್ನಡ ನಾಡಿನಲ್ಲಿ ತೊಗಲ ಬಾವಲಿ (ಟಿರೋಪಸ್ ಎಡ್ವರ್ಸಿ). ಅಗಲಗಿವಿಯ ಬಾವಲಿ (ರೈನೊಲೋಪಸ್), ಹಣ್ಣು ಬಾವಲಿ ಮೊದಲಾದುವು ಇವೆ. ಬಾವಲಿಯ ಮುಂಗಾಲಿನ ಬೆರಳುಗಳು ಲಂಬವಾಗಿ ಬೆಳೆದು ಜಾಲಪಟಲದಿಂದ ಕೂಡಿರುವುದೇ ಅಲ್ಲದೆ ಈ ಪಟಲ ವಿಶಾಲವಾಗಿದೆ. ಇದು ದೇಹದ ಪಕ್ಕ ಮತ್ತು ಹಿಂಗಾಲುಗಳನ್ನು ಬಂಧಿಸಿ ಹಾರಲು ನೆರವಾಗುವುದು ಒಂದು ವೈಶಿಷ್ಟ್ಯ. ಸಾಮಾನ್ಯವಾಗಿ ಮರಗಳ ಕೊಂಬೆ, ಕೆಲವು ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಮನೆ ದೇವಾಲಯಗಳ ತೊಲೆಗಳು ಇಲ್ಲೆಲ್ಲ ಜೋಲಾಡುತ್ತಿರುತ್ತವೆ. ಇವು ಸಾಮಾನ್ಯವಾಗಿ ಹಗಲಿನಲ್ಲಿ ಒಂದೆಡೆಯಿದ್ದು ಸಂಜೆಯಾಗುತ್ತಲೇ ತಮ್ಮ ಬೀಡಿನಿಂದ ಹೊರಬಂದು ಚಟುವಟಿಕೆಯಿಂದ ಹಾರಿ ಆಹಾರವನ್ನು ಸಂಪಾದಿಸುತ್ತವೆ. ಇವುಗಳಿಗಿರುವ ಜ್ಞಾನೇಂದ್ರಿಯ ಸೂಕ್ಷ್ಮ ಹಾಗೂ ತೀಕ್ಷ್ಣತಮವಾದದ್ದು. ಇವು ಹಣ್ಣುಗಳನ್ನು ತಿನ್ನುವುದರಿಂದ ಬಾಳೆ, ಸೀಬೆ ಮೊದಲಾದ ತೋಟಗಳಿಗೆ ಇವುಗಳ ಉಪದ್ರವ ಹೆಚ್ಚು. ಬಾವಲಿಗಳಲ್ಲಿ ರಾಕ್ಷಸ ಬಾವಲಿ ದೊಡ್ಡ ಗಾತ್ರದ್ದು. ಇವುಗಳು ಅಪರೂಪವಾಗಿ ಪಶ್ಚಿಮಘಟ್ಟದ ದಟ್ಟ ಕಾಡುಗಳಲ್ಲಿ ಕಂಡುಬರುತ್ತವೆ.

**ದಂಶಕ ಗಣ (ರಾಡೆಂಶಿಯ) :** ಇದರ ಪ್ರತಿನಿಧಿಗಳೆಲ್ಲವೂ ಮಾನವನ ದವಸ ಧಾನ್ಯ ಹಣ್ಣು ಹಂಪಲು ಮೊದಲಾದುವನ್ನು ತಿಂದು ನಾಶಪಡಿಸತಕ್ಕವು. ಸಾಮಾನ್ಯವಾಗಿ ಕಂಡುಬರುವ ಅಳಿಲಿಗೆ ಬೆನ್ನಿನ ಮೇಲೆ ಮೂರು ನೀಳವಾದ ಬಿಳಿಯ ಪಟ್ಟೆಗಳಿವೆ. ಈ ಅಳಿಲು (ಫ್ಯುನಾಂಬ್ಯುಲಸ್ ಪಾಮೇರಮ್) ಸಾಗುವಳಿ ಪ್ರದೇಶದಲ್ಲಿಯೇ ಅಲ್ಲದೆ ಇತರ ಬಯಲಿನಲ್ಲೂ ಕಾಡಿನ ಸರಹದ್ದಿನಲ್ಲೂ ಮಾನವನ ವಸತಿಯ ಸನಿಹದಲ್ಲೂ ಕಂಡುಬರುತ್ತದೆ. ಇದರ ಸೋದರ ಅಳಿಲುಗಳು–ಉದಾಹರಣೆಗೆ ಪಟ್ಟೆ ಅಳಿಲು (ಫ್ಯು.ರಫ್ಸ್ಟೋನಿ) ಕೊಡಗು ಜಿಲ್ಲೆ ಮತ್ತು ಹಾಸನ ಜಿಲ್ಲೆಗಳಲ್ಲಿ ಕಂಡು ಬಂದರೆ ಕಾಡು ಅಳಿಲು (ಫ್ಯು. ನ್ಯೂಮೇರಿಯನ್) ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಕಾಡುಗಳಲ್ಲಿ ಉಂಟು. ಬೂದು ಅಳಿಲು (ಸೈಯೂರಸ್ ಇಂಡಿಕಸ್) ಎಂಬ ದೊಡ್ಡ ಅಳಿಲು ಪಶ್ಚಿಮ ಘಟ್ಟಗಳ ದಟ್ಟಡವಿಗಳಲ್ಲಿ ವಾಸಿಸುತ್ತದೆ. ಬಯಲಿನ ಇಲಿ ಅಥವಾ ಕೋಕ (ನಿಕೋಸಿಯ ಬೆಂಗಾಲೆನ್ಸಿಸ್) ಎಂಬ ಇಲಿ ಬಯಲಿನಲ್ಲಿ ಬಿಲ ತೋಡಿ ಅದರಲ್ಲಿ ವಾಸಿಸುತ್ತದೆ. ಸಾಗುವಳಿ ಪ್ರದೇಶದಲ್ಲಿ ಇದರ ಹಾವಳಿ ಹೆಚ್ಚು. ಹೆಗ್ಗಣ (ಸೆಸೋಸಿಯ ಬ್ಯಾಂಡಿಕೋಟ) ಬಿಲಗಳಲ್ಲಿ ವಾಸಿಸುತ್ತಿದ್ದು, ಕಣಜಗಳಿಗೆ ದಾಳಿ ಇಡುತ್ತದೆ. ಮನೆಯಿಲಿ (ಮಸ್ ಡೆಕುಮಾನಸ್) ಮನೆ ಬುರ್ಗಿಲಿ (ಮಸ್ ಮಸ್ಕುಲಸ್) ಮತ್ತು ಕರಿಯಿಲಿ (ಮಸ್ ರ್‍ಯಾಟ್ಟಸ್) ಮಾನವನ ವಸತಿ ಗೃಹಗಳಲ್ಲಿಯೇ ಕಂಡುಬರುತ್ತವೆ. ದವಸಧಾನ್ಯಗಳಿಗೆ ಇವುಗಳ ಹಾವಳಿ ಹೆಚ್ಚು. ಬೂದಿಬಣ್ಣದ ಕೌಲಿಲಿ (ಮಸ್ ಪ್ಲಾಟಿತ್ರಿಕ್ಸ್), ಕರಿಯಿಲಿ (ಮಸ್ ಮೆಟ್ಟಾಡ) ಸಹ ಉಂಟು. ಇವುಗಳಿಂದಲೂ ಸಾಗುವಳಿಗೆ ತೊಂದರೆ ಇದೆ. ಮರದ ಇಲಿಗೆ (ಮಸ್ ಒಲೆರೇಸಿಯಸ್) ಉದ್ದವಾದ ಬಾಲವಿದೆ. ಮುಳ್ಳುಹಂದಿ (ಹಿಸ್ಟ್ರಿಕ್ಸ್ ಲ್ಯೂಕೂರ) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇದೆ. ಇದು ಕಾಫಿ ಮತ್ತು ಕಬ್ಬಿನ ತೋಟಗಳಿಗೆ ನುಗ್ಗಿ ಹಾವಳಿ ಮಾಡುವುದುಂಟು. ಕರ್ನಾಟಕದ ಕಾಡುಗಳಲ್ಲಿ ಎರಡು ಬಗೆಯ ಮೊಲಗಳು ಮುಖ್ಯವಾದವು. ಒಂದು ಮೊಲ (ಲೀಪಸ್ ರುಫಿಕಾಡೇಟಸ್), ಇನ್ನೊಂದು ಕರಿ ಕಂಠದ ಮೊಲ (ಲೀ. ನೈಗ್ರಿಕಾಲಿಸ್), ಸಾಮಾನ್ಯವಾಗಿ ಪೊದೆಗಳಲ್ಲಿ ವಾಸಮಾಡುತ್ತವೆ. ಹಸುರುಹುಲ್ಲು, ರಾಗಿ, ಜೋಳ, ಇತರ ಧಾನ್ಯ ಸಸ್ಯಗಳ ಚಿಗುರನ್ನು ತಿಂದು ಜೀವಿಸುತ್ತವೆ.

**ಗೊರಸಿಗಳ ಗಣ (ಅಂಗ್ಯುಲೇಟ):** ಈ ಗಣದ ಆನೆ ಪ್ರೊಬಾಸಿಡೀ ಉಪಗಣಕ್ಕೆ ಸೇರಿದೆ. ಇದು ಕರ್ನಾಟಕದ ಪಶ್ಚಿಮಘಟ್ಟದ ಕಾಡುಗಳಲ್ಲಿ ಸ್ವೇಚ್ಛೆಯಾಗಿ ಜೀವಿಸುವ ಅತ್ಯಂತ ದೊಡ್ಡ ಪ್ರಾಣಿ (ಎಲಿಫಾಸ್ ಮ್ಯಾಕ್ಸಿಮಾಸ್). ಇದರ ಬೀಡು ಸಾಮಾನ್ಯವಾಗಿ ಶಿವಮೊಗ್ಗ ಜಿಲ್ಲೆಯಿಂದ ಹಿಡಿದು ಮೈಸೂರು ಜಿಲ್ಲೆಯವರೆಗೂ ಇದೆ.

ಮೆಲಕು ಹಾಕುವ ಎರಡು ಗೊರಸುಗಳುಳ್ಳ ಹಸು, ಕುರಿ, ಮೇಕೆ, ಜಿಂಕೆ ಮೊದಲಾದ ಪ್ರಾಣಿಗಳು ಅಂಗ್ಯುಲೇಟ ಗಣ ಆರ್ಟಿಯೊಡ್ಯಾಕ್ಟಿಲ ಉಪಗಣಕ್ಕೆ ಸೇರಿವೆ. ದನಕರುಗಳನ್ನು (ಬಾಸ್ ಇಂಡಿಕಸ್) ಪಳಗಿಸಿ ಬೇಸಾಯಕ್ಕೆ ಉಪಯೋಗಿಸುವುದೇ ಅಲ್ಲದೆ ಹಾಲುಮೊಸರುಗಳಿ

ಗಾಗಿಯೂ ಸಾಕುವುದು ಪುರಾತನ ಕಾಲದಿಂದಲೂ ಇದೆ. ಕುರಿ (ಓವಿಸ್) ಮತ್ತು ಆಡುಗಳನ್ನು ಮುಖ್ಯವಾಗಿ ಮಾಂಸಕ್ಕಾಗಿ ಸಾಕುತ್ತಾರೆ. ಕಾಡೆಮ್ಮೆ (ಬೈಬಾಸ್ ಗೌರುಸ್) ಪಶ್ಚಿಮಘಟ್ಟದ ಕಾಡುಗಳಲ್ಲಿ ಮಂದೆಗೂಡಿ ವಾಸಿಸುತ್ತವೆ. ಕಾಡಿನಲ್ಲಿ ಸ್ವೇಚ್ಛೆಯಾಗಿ ಜೀವಿಸುವ ಇದು ಸ್ವಭಾವತಃ ದರ್ಪ ಗಾಂಭೀರ್ಯಗಳಿಂದ ಕೂಡಿದ ಪ್ರಾಣಿ. ಸು. 180–220 ಸೆಂಮೀ ಎತ್ತರ, 210–300 ಸೆಂಮೀ ಉದ್ದ ಬೆಳೆಯುತ್ತದೆ. ಇದರೊಡನೆ ಒಡನಾಡಿದ ಸಾಕು ಎಮ್ಮೆಗಳು ಗಬ್ಬವಾಗಿರುವುದು ತಿಳಿದುಬಂದಿದೆ. ಕೊಳ್ಳೇಗಾಲದ ಕಾಡುಗಳಲ್ಲಿ ಕಾಡು ಆಡು ಅಥವಾ ಬುರ್ರೆ ಆಡುಗಳು (ಹೆಮಿಟ್ರೇಗಸ್ ಹೈಲೋಕ್ರಸ್) 4,000' ಎತ್ತರ ಪ್ರದೇಶಗಳಲ್ಲಿ ವಾಸಿಸುತ್ತವೆ.

ಚಿಗರೆ, ಹುಲ್ಲೆಕರ, ಜಿಂಕೆ, ಸಾರಂಗ ಮೊದಲಾದ ಪ್ರಾಣಿಗಳು ಸರ್ವಿಡೀ ಕುಟುಂಬಕ್ಕೆ ಸೇರಿದವು. ಈ ಕುಟುಂಬದ ಜೀವಿಗಳ ಕೊಂಬುಗಳು ಟೊಳ್ಳಾಗಿರದೆ ಗಟ್ಟಿಯಾಗಿರುತ್ತವೆ. ಕೊಂಡ ಕುರಿಗಳು (ಟ್ರ್ಯಾಸೆರಸ್ ಕ್ವಾರ್ಡಿಕಾರ್ನಿಸ್) ಕನ್ನಡ ನಾಡಿನ ಪಶ್ಚಿಮಘಟ್ಟದ ದಕ್ಷಿಣಭಾಗಗಳಲ್ಲಿ ವಾಸಿಸುತ್ತವೆ. ಇವು ಆಡಿನ ಗಾತ್ರದ ಸುಂದರ ಪ್ರಾಣಿಗಳು. ಇವುಗಳ ಕುತ್ತಿಗೆ ನೀಳ ಮತ್ತು ಸಣ್ಣ. ಕಣ್ಣುಗಳು ದೊಡ್ಡವು ಮತ್ತು ಸುಂದರವಾದವು; ಮೈಗೂದಲು ನಯ ಮತ್ತು ಬಾಲ ಮೋಟು. ಹೆಣ್ಣುಗಳಿಗೆ ಸಾಮಾನ್ಯ

ಕಾಡೆಮ್ಮೆ

ವಾಗಿ ಕೊಂಬುಗಳಿಲ್ಲ. ಆದರೆ ಕೆಲವಕ್ಕೆ ನೀಳವಾದ ಅರ್ಧಚಂದ್ರಾಕಾರವಾಗಿ ಬೆನ್ನಿನ ಭಾಗಕ್ಕೆ ಬಿಗಿದ ಕೊಂಬುಗಳ ಮೇಲೆ ಬುಡದಿಂದ ತುದಿಯವರೆಗೂ ವೃತ್ತಾಕಾರದ ದಿಬ್ಬಗಳಿರುತ್ತವೆ. ಇವಕ್ಕೆ 35 ಸೆಂಮೀ ಎತ್ತರ ಬೆಳೆಯುವ ಕೊಂಬುಗಳಿವೆ. ಹಲವಾರು ಸುತ್ತುವರಿದ ದಿಬ್ಬಗಳಿಂದ ಕೂಡಿದ ಕೊಂಬುಗಳು ನೆಟ್ಟಗಿರದೆ ಸ್ವಲ್ಪ ಸ್ವಲ್ಪ ವಂಕಿಯಾಗಿರುತ್ತವೆ. ಕೊಂಬುಗಳು ಗಂಡು ಹೆಣ್ಣುಗಳೆರಡರಲ್ಲೂ ಕಂಡುಬರುತ್ತದೆ. ಸಾಂಬಾರ್ ಅಥವಾ ಕಡವೆಗಳು (ಸರ್ವಸ್ ಯೂನಿಕಲರ್) ಜಿಂಕೆಯ ಜಾತಿಗಳಲ್ಲೆಲ್ಲ ದೊಡ್ಡವು. ಸುಮಾರು 65–70 ಸೆಂಮೀ ಎತ್ತರ, ಮೈಗೂದಲು ಒರಟು. ಇದಕ್ಕೆ ಕುತ್ತಿಗೆಯ ಬಳಿ ನೀಳವಾದ ಕೂದಲಿದೆ. ಇವು ಕಾಡಿನ ಪ್ರಾಣಿಗಳು ಸಾರಂಗ ಅಥವಾ ಚಿತ್ರಾಂಗ ಜಿಂಕೆಗಳು (ಆಕ್ಸಿಸ್ ಅಕ್ಸಿಸ್) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಮಂದೆ ಮಂದೆಯಾಗಿ ವಾಸಿಸುತ್ತವೆ. ಈ ಬಗೆಯ ಜಿಂಕೆಗಳು ಇತರ ಜಿಂಕೆಗಳಿಗಿಂತ ಚಿಕ್ಕವು. ಬೊಗಳುವ ಜಿಂಕೆಗಳೂ (ಮಂಟೈಯಕಸ್ ಮಂಟ್ಜಾಕ್) ನಮ್ಮ ನಾಡಿನ ಕಾಡುಗಳಲ್ಲಿ ದೊರಕುತ್ತವೆ. ಇವು ನಾಯಿ ಬೊಗಳಿದಂತೆಯೇ ಶಬ್ದಮಾಡುತ್ತವೆ. ಒಂದು ಕವಲಿಂದ ಕೂಡಿದ ಇವುಗಳ ಕೊಂಬು ಮೋಟು, ಬಾಲವೂ ಮೋಟು.

ಕರ್ನಾಟಕದ ಕಾಡುಹಂದಿ (ಸಸ್ ಕ್ರಿಸ್ಟೇಟಸ್) ಕಾಡುಗಳಲ್ಲಿ ಒಂಟೊಂಟಿಯಾಗಿ ಜೀವಿಸುತ್ತದೆ. ಇದರ ಮೇಲುದವಡೆಯ ಕೋರೆ ಹಲ್ಲುಗಳು ಕಮಾನಿನಂತೆ ಮೇಲ್ಮುಖವಾಗಿ ಬಾಗಿ ಬಾಯಿಂದ ಹೊರಚಾಚಿರುತ್ತವೆ. ಅಲ್ಲದೆ ಕೋರೆ ಹಲ್ಲುಗಳು ಚಿರಕಾಲ ಬೆಳೆಯತಕ್ಕವು. ಕೋರೆಹಲ್ಲುಗಳ ಸಹಾಯದಿಂದ ಗೆಡ್ಡೆ ಗೆಣಸುಗಳನ್ನು ಅಗಿದು ತಿನ್ನುತ್ತವೆ. ಇವುಗಳಿಗೆ ನಾಲ್ಕು ಬೆರಳುಗಳಿದ್ದರೂ ನಡೆಯುವಾಗ ಎರಡನ್ನು ಮಾತ್ರ ಭೂಮಿಯ ಮೇಲೆ ಊರುವುವು.

ಬರ್ಕ ಅಥವಾ ಕೂರಂದಿ (ಟ್ರ್ಯಾಗ್ಯುಲಸ್ ಮೆಮಿನ್ನ) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಕಾಣದೊರೆಯುತ್ತದೆ. ಇದರ ಎತ್ತರ ಸು. 13 ಸೆಂಮೀ. ಜಿಂಕೆಯಂಥ ಈ ಪ್ರಾಣಿಗಳ ದೇಹರಚನೆ ಜಿಂಕೆ ಮತ್ತು ಹಂದಿಗಳ ರಚನೆಯ ಮಧ್ಯವರ್ತಿಯಾಗಿದೆ.

**ಫಾಲಿಡೋಟ:** ಈ ವರ್ಗದ ಪ್ರತಿನಿಧಿಯಾಗಿ ಕರ್ನಾಟಕದಲ್ಲಿ ಚಿಪ್ಪುಹಂದಿ (ಮೇನಿಸ್ ಕ್ರಾಸಿಕಾಡೇಟ) ದೊರಕುತ್ತದೆ. ಇದಕ್ಕೆ ಮೈಮೇಲೆಲ್ಲ ಹೆಂಚಿನಂತೆ ಅಳವಡಿಸಿರುವ ಅಗಲವಾದ ಹುರುಪೆಗಳಿವೆ. ಕಾಲುಗಳು ಮೋಟು, ಐದು ಬೆರಳುಗಳಿವೆ. ಮೂತಿ ಉದ್ದ ಮತ್ತು ಚೂಪು. ಮುಂಗಾಲಿನ ಬೆರಳುಗಳಲ್ಲಿ ಬಲಯುತವಾದ ನಖಗಳಿವೆ. ಹಲ್ಲು ಇಲ್ಲ, ಇರುವೆ, ಗೆದ್ದಲು ಮೊದಲಾದ ಕೀಟಗಳೇ ಇದರ ಆಹಾರ, ನಿಶಾಚರಿಯಾದ ಈ ಪ್ರಾಣಿ ಬಿಲ ತೋಡಿ ಜೀವಿಸುತ್ತದೆ. ಅಪಾಯ ಸನ್ನಿಹಿತವಾದರೆ ದೇಹವನ್ನು ಚೆಂಡಿನಂತೆ ಮುದುರಿಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುತ್ತದೆ.

### ಪಕ್ಷಿವರ್ಗ

ಕರ್ನಾಟದ ಪಕ್ಷಿಗಳೆಲ್ಲವೂ ಹಾರುವ ಗುಂಪಿಗೆ ಸೇರಿದವು. ಇಲ್ಲಿಯೇ ವಾಸಿಸುವ ಪಕ್ಷಿಗಳಿದ್ದರೂ ಇತರ ನೆರೆಹೊರೆಯ ರಾಜ್ಯಗಳಿಗೆ ವಲಸೆ ಹೋಗುವ ಪಕ್ಷಿಗಳೂ ಇವೆ. ಅಲ್ಲದೆ ಹೊರದೇಶದಿಂದ (ಆಫ್ಘಾನಿಸ್ಥಾನ, ಸೈಬೀರಿಯ ಇತ್ಯಾದಿ) ವಲಸೆ ಬರುವ ಪಕ್ಷಿಗಳೂ ಇವೆ.

ಭಾರತದ ರಾಷ್ಟ್ರಪಕ್ಷಿಯೆಂದು ಪರಿಗಣಿಸಲಾಗಿರುವ ನವಿಲು (ಪ್ಯಾವೋಕ್ರಿಸ್ಟೇಟಸ್) ಗಾಲಿಫೀಸ್ ಕುಟುಂಬದ ಪ್ರತಿನಿಧಿ. ಇದು ಕರ್ನಾಟಕದ ಕಾಡುಗಳಲ್ಲಿ ಸಾಮಾನ್ಯವಾಗಿ ನೀರಿರುವ ಕಡೆಗಳಲ್ಲಿ ಕಂಡುಬರುತ್ತದೆ. ಹೆಣ್ಣಿಗಿಂತಲೂ ಗಂಡು ಹೆಚ್ಚು ಆಕರ್ಷಕ. ಗಂಡು ತನ್ನ ಬಾಲದ ನೀಳವಾದ ಪುಕ್ಕಗಳನ್ನು ನೆಟ್ಟಗೆ ಮಾಡಿ ನರ್ತನ ಮಾಡುವುದು ಒಂದು ವೈಶಿಷ್ಟ್ಯ. ನವಿಲಿಗೆ ಹೆಚ್ಚು ಹಾರಲು ಆಗದಿದ್ದರೂ ಮರದಿಂದ ಮರಕ್ಕೆ ಹಾರಬಲ್ಲುದು.

ಸಾಕುಕೋಳಿಗಳಿಗೆ ಪೂರ್ವಜ ಎನ್ನಿಸಿಕೊಂಡಿರುವ ಭಾರತದ ಕಾಡುಕೋಳಿ (ಗ್ಯಾಲಸ್ ಗ್ಯಾಲಸ್) ಕರ್ನಾಟಕದ ಕಾಡುಗಳಲ್ಲಿಯೂ ದೊರಕುತ್ತದೆ. ಇದರ ವಾಸ ಸಾಮಾನ್ಯವಾಗಿ ಕುರುಚಲು ಗಿಡಗಳು ಮತ್ತು ಬಿದಿರು ಮೆಳೆಗಳಲ್ಲಿ. ಇದೇ ಗುಂಪಿಗೆ ಸೇರಿದ ಕೆಂಗುಚ್ಚದ ಕೋಳಿ (ಗ್ಯಾಲೋಪೆರ್ಡಿಕ್ಸ್ ಸ್ಪ್ಯಾಡಿಸಿಯ) ಮತ್ತು ಕಂದು ಕಾಡುಕೋಳಿಗಳೂ (ಗ್ಯಾಲಸ್ ಸೊನೆರಾಟಿ) ಕಂಡುಬರುತ್ತವೆ. ಇವುಗಳ ವಾಸ ಸಾಮಾನ್ಯವಾಗಿ ಕಾಡಿನ ಪೊದರು. ಸಾಗುವಳಿ ಪ್ರದೇಶಕ್ಕೆ ಲಾವಕ್ಕಿಗಳು ಚಳಿಗಾಲದಲ್ಲಿ ಭೇಟಿ ಕೊಡುತ್ತವೆ. ಈ ಗುಂಪಿನಲ್ಲಿ ಹಲವು ಬಗೆಯ ಲಾವಕ್ಕಿಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಕಪ್ಪೆದೆಯ ಲಾವಕ್ಕಿ ಸಾಮಾನ್ಯವಾಗಿ ಹುಲುಸಾದ ಹುಲ್ಲುಗಾವಲುಗಳಲ್ಲಿ ಹಾಗೂ ಸಾಗುವಳಿ ಪ್ರದೇಶದ ಸನಿಹದಲ್ಲಿ ಕಂಡುಬರುತ್ತದೆ. ಪೊದರು ಲಾವಕ್ಕಿಗಳು ತೆರೆದ ಕಾಡುಪ್ರದೇಶಗಳಲ್ಲಿ ಮಂದೆಗೂಡಿ ಜೀವಿಸುತ್ತವೆ. ಬಿಳಿ ಎದೆಯ ನೀರಕ್ಕಿ (ಆಮೋರಾರ್ನಿಸ್ ಫೋನಿಕ್ಯೂರಸ್) ಕೆರೆಕಾಲುವೆಗಳ ದಂಡೆಗಳಲ್ಲಿ ದಟ್ಟವಾಗಿ ಬೆಳೆವ ಜೊಂಡುಗಳ ನಡುವೆ ವಾಸಿಸುತ್ತದೆ.

ಪಾರಿವಾಳ ಮತ್ತು ಕಪೋತಗಳು ತೆಳುವಾದ ಹಾಗೂ ಹೆಚ್ಚು ಬಲಯುತವಲ್ಲದ ಕೊಕ್ಕುಗಳನ್ನುಳ್ಳವು. ಕಾಳುಕಡ್ಡಿ ಹಣ್ಣುಗಳೇ ಇವುಗಳ ಆಹಾರ. ಇವು ಕೊಲಂಬಿಫಾರ್ಮೀಸ್ ಗಣಕ್ಕೆ ಸೇರಿದವು. ಪಾರಿವಾಳ (ಕೊಲಂಬ ಲೀವಿಯ) ಸಾಮಾನ್ಯವಾಗಿ ಮನೆಮಠ ಮತ್ತು ಮರಗಳ ಮೇಲೆ ವಾಸಿಸುತ್ತದೆ. ಇದನ್ನು ಕೆಲವರು ಮನೆಗಳಲ್ಲಿ ಸಾಕುವುದೂ ಉಂಟು. ದಪ್ಪಕೊಕ್ಕು, ದೊಡ್ಡ ದೇಹದ ಹಸುರು ಪಾರಿವಾಳ (ಕ್ರೋಕೋಪಸ್ ಫಿನಿಕಾಪ್ಟಿರಿಕ್ಸ್) ಕಾಡುಗಳ ಮರಗಳ ಮೇಲೆಯೇ ವಾಸಿಸುತ್ತದೆ. ಇವುಗಳ ಕಾಲುಗಳು ಭೂಮಿಯ ಮೇಲೆ ಓಡಾಡಲು ಪರಿಪೂರ್ಣತೆ ಪಡೆದಿಲ್ಲ. ಬಿಳಿಯ ಚುಕ್ಕೆಗಳಿಂದ ಕೂಡಿದ ಬೂದು ಬಣ್ಣದ ಕಪೋತಗಳು ಸಾಮಾನ್ಯವಾಗಿ ಬಯಲು ಪ್ರದೇಶದ ವಾಸಿಗಳು. ಇವು ಸಾಮಾನ್ಯವಾಗಿ ಸಾಗುವಳಿ ಪ್ರದೇಶಗಳಲ್ಲಿ ಒಂಟೊಂಟಿಯಾಗಿ ಅಥವಾ ಗುಂಪು ಗುಂಪಾಗಿ ಕಂಡುಬರುವುದೂ ಉಂಟು.

ಕರ್ನಾಟಕದಲ್ಲಿ ಊರುಕಾಗೆ (ಕಾರ್ವಸ್ ಸ್ಪ್ಲೆಂಡೆನ್ಸ್) ಮತ್ತು ಕಾಡುಕಾಗೆ (ಕಾರ್ವಸ್ ಮ್ಯಾಕ್ರೋರಿಂಕಸ್) ಎಂಬ ಎರಡು ಬಗೆಯ ಕಾಗೆಗಳಿವೆ. ಕಾಡು ಕಾಗೆಗಳು ಸಾಮಾನ್ಯವಾಗಿ ಕಾಡುಗಳಲ್ಲಿ ಕಂಡುಬಂದರೂ ಆಗಾಗ್ಗೆ ಕಾಡುಗಳ ಸಮೀಪದಲ್ಲಿರುವ ಹಳ್ಳಿ ಊರುಗಳಲ್ಲೂ ಕಂಡುಬರುತ್ತವೆ. ಎರಡು ಬಗೆಯ ಕಾಗೆಗಳ ದೇಹಗಳೂ ಕಪ್ಪು. ಆದರೆ ಊರುಕಾಗೆಯ ಕುತ್ತಿಗೆ ಬೂದು ಬಣ್ಣದ್ದಾಗಿದ್ದರೆ, ಕಾಡುಕಾಗೆಯಲ್ಲಿ ಅದು ಕಪ್ಪಾಗಿರುತ್ತದೆ.

ಕವಿಗಳ ಗಮನವನ್ನು ಅನಾದಿ ಕಾಲದಿಂದಲೂ ಸೆಳೆದಿರುವ ಭಾರತದ ಕೋಗಿಲೆಗಳು (ಯುಡೈನಮಿಸ್ ಸ್ಕೊಲೋಪೇಸಿಯ) ಕರ್ನಾಟಕದ ಕಾಡು, ತೋಟಗಳಲ್ಲಿ ಇವೆ. ಗಂಡು ಅಚ್ಚಕಪ್ಪು, ಹೆಣ್ಣುಪಕ್ಷಿ ಸ್ವಲ್ಪಮಟ್ಟಿಗೆ ಕಂದು ಬಣ್ಣದ್ದು. ಇದರ ರೆಕ್ಕೆ, ಎದೆ, ಹೊಟ್ಟೆಯ ಭಾಗಗಳಲ್ಲಿ ಬಿಳಿಯ ಚುಕ್ಕೆಗಳಿವೆ. ಇವು ಸಾಮಾನ್ಯವಾಗಿ ಕಾಗೆಗಳ ಗೂಡುಗಳಲ್ಲಿ ಮೊಟ್ಟೆಗಳನ್ನಿಟ್ಟು ಕಾಗೆಗಳ ಸಹಾಯದಿಂದ ತಮ್ಮ ಮೊಟ್ಟೆಗಳಿಗೆ ಕಾವು ಕೊಡಿಸುತ್ತವೆ. ಅಲ್ಲದೆ ಒಮ್ಮೊಮ್ಮೆ ಆ ಗೂಡಿನಲ್ಲಿ ಕಾಗೆಗಳ ಮೊಟ್ಟೆಗಳಿದ್ದರೆ ಅವನ್ನು ನಾಶಪಡಿಸುವುದೂ ಉಂಟು. ಸಾಕುತಾಯಿ ಕಾಗೆ ಆ ಮೊಟ್ಟೆಗಳನ್ನು ತನ್ನ ಮೊಟ್ಟೆಗಳೇ ಎಂದು ಭ್ರಮಿಸಿ ಕಾವು ಕೊಟ್ಟು ಮರಿಗಳು ಮೊಟ್ಟೆಯಿಂದ ಹೊರಬಂದ ಮೇಲೆ ಗುಟುಕು ಕೊಟ್ಟು ಸಾಕುತ್ತದೆ. ದೊಡ್ಡದಾಗಿ ಬೆಳೆದ ಮರಿಗಳು ಕೋಗಿಲೆಯ ಮರಿಗಳೆಂದು ತಿಳಿದ ಮೇಲೆ ಅದು ಅವನ್ನು ಓಡಿಸಿಬಿಡುತ್ತವೆ. ಈ ಕೋಗಿಲೆಗಳಿಗೆ ಸಂಬಂಧಿಸಿದಂತೆ ನಾಲ್ಕೈದು ಬಗೆಯ ಕೋಗಿಲೆ ಜೀವಪ್ರಭೇದಗಳು ಇಲ್ಲಿಯ ಕಾಡಿನಲ್ಲೂ ಇವೆ.

ಕರ್ನಾಟಕದ ಕಾಡು, ತೋಪು, ತೋಟಗಳಲ್ಲಿ ಹಲವು ಬಗೆಯ ಗಿಳಿಗಳು ಇವೆ. ಇವೆಲ್ಲ ಸಿಟ್ಟಾಸಿಫಾರ್ಮೀಸ್ ಗಣಕ್ಕೆ ಸೇರಿದವು. ಸಾಮಾನ್ಯವಾಗಿ ಕಾಣಬರುವ ಹಸಿರು ಗಿಳಿ (ಸಿಟ್ಟಾಕ್ಯುಲ ಕ್ರಾಮೆರಿ) ನಾಡಿನಾದ್ಯಂತ ಉಂಟು. ಸಿ. ಯೂಪಾತ್ರ ಜಾತಿಯ ದೊಡ್ಡ ಗಿಳಿ ಕಾಡುಗಳಿಗೆ ಸೀಮಿತವಾಗಿದೆ. ಇದು ಗೂಡು ಕಟ್ಟಲಾರದು ಮರದ ಪೊಟರೆಗಳಲ್ಲಿ ಒಂದೆರಡು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತದೆ.

ಗೂಬೆಗಳು ನಿಶಾಚರ ಪಕ್ಷಿಗಳು. ಇವು ಸ್ಟ್ರಿಂಜಿಫಾರ್ಮೀಸ್ ಗಣಕ್ಕೆ ಸೇರಿದವು. ರಾತ್ರಿವೇಳೆಯಲ್ಲಿ ಪುಟ್ಟ ಅಳಿಲು ಇಲಿ ಮುಂತಾದವನ್ನು ಹಿಡಿದು ಜೀವಿಸುತ್ತವೆ. ಇವುಗಳ ತಲೆ ದೊಡ್ಡದು. ಕಣ್ಣುಗಳು ಸಹ ದೊಡ್ಡವಾಗಿದ್ದು ಮುಮ್ಮುಖವಾಗಿ ಅಳವಡಿಕೆಗೊಂಡಿರುತ್ತವೆ. ಕೊಕ್ಕು ಚಿಕ್ಕದು, ಕೊಕ್ಕೆಯಂತೆ ಬಾಗಿದೆ. ಪಾಳುಮನೆ, ಸಮಾಧಿ, ಮಂಟಪಗಳಲ್ಲೇ ಇವುಗಳ ವಾಸ. ಮರದ ಕೊಂಬೆಗಳ ಮೇಲೆ ಕೂರುವ ಸೌಕರ್ಯವಿದೆ. ಅಥೇನಿ ಬ್ರಾಮ (ಚುಕ್ಕೆ ಗೂಬೆ) ಮತ್ತು ಸ್ಟ್ರಿಕ್ಸ್ ಅಸೆಲೇಟಮ್ (ಮರದ ಮಚ್ಚೆಗೂಬೆ) ಅಲ್ಲದೆ ಇತರ ಗೂಬೆಯ ಪ್ರಭೇದಗಳು ಕರ್ನಾಟಕದಲ್ಲಿವೆ.

ಮಾಂಸಭಕ್ಷಿಗಳಾದ ಗರುಡ, ಡೇಗೆ, ಗಿಡುಗ, ಹದ್ದು, ರಣಹದ್ದುಗಳು ಫಾಲ್ಕನಿಫಾರ್ಮೀಸ್ ಅಥವಾ ಆಕ್ಸಿಪಿಟ್ರೆಸ್ ಗಣಕ್ಕೆ ಸೇರಿದವು. ಇವುಗಳ ಕೊಕ್ಕು ಚಿಕ್ಕವು, ಹರಿತವಾದವು, ಬಲಯುತವಾದವು. ಕಾಲುಬೆರಳುಗಳಲ್ಲಿರುವ ನಖಗಳೂ ಬಲಯುತವಾದವು. ತಮ್ಮ ಆಹಾರ ಜೀವಿಯನ್ನು ಹಿಡಿದುಕೊಳ್ಳುವುದರಲ್ಲಿ ಮತ್ತು ಹರಿದು ಚಿಂದಿ ಮಾಡುವುದರಲ್ಲಿ ನೆರವಾಗತಕ್ಕವು. ಇವುಗಳ ಆಹಾರ ಇತರ ಸಣ್ಣ ಸಣ್ಣ ಪಕ್ಷಿಗಳು ಅಥವಾ ಸಸ್ತನಿಗಳು. ರಣಹದ್ದುಗಳ ಕುತ್ತಿಗೆ ಮತ್ತು ತಲೆ ಬೋಳಾಗಿವೆ. ಇವು ಸಾಮಾನ್ಯವಾಗಿ ಸತ್ತ ಪ್ರಾಣಿಗಳ ಮಾಂಸವನ್ನು ಭಕ್ಷಿಸುತ್ತವೆ. ಇವು ದೊಡ್ಡ ದೊಡ್ಡ ಮರಗಳ ಮೇಲೆ ಬೆಟ್ಟಗಳ ಶಿಖರಗಳ ಮೇಲೆ ವಾಸಿಸುವುವು. ಗರುಡಪಕ್ಷಿ ಕನ್ನಡ ನಾಡಿನಾದ್ಯಂತ ಉಂಟು.

ಆನ್ಸೆರಿಫಾರ್ಮೀಸ್ ಗಣಕ್ಕೆ ಸೇರಿದ ಬಾತು ಕೋಳಿಗಳು ಕರ್ನಾಟಕದ ಜಲಾಶಯಗಳಲ್ಲಿ ಇವೆ. ಇವುಗಳ ಕೊಕ್ಕು ಅಗಲವಾಗಿರುವುದರಿಂದ ಇವು ಮೀನುಗಳನ್ನು ಸುಲಭವಾಗಿ ಹಿಡಿಯಬಲ್ಲವು. ಒಂದು ಜಾತಿಯ ಬಾತುಕೋಳಿಯನ್ನು ಹಳ್ಳಿಗಳಲ್ಲಿ ಸಾಕುವುದೂ ಉಂಟು. ಇದರ ಮೊಟ್ಟೆ ಮನುಷ್ಯನ ಆಹಾರವೂ ಹೌದು. ಕೆಲವು ಬಗೆಯ ಬಾತುಕೋಳಿಗಳು ಈಜುವುದೇ ಅಲ್ಲದೆ ನೀರಿನಲ್ಲಿ ಮುಳುಗಿ ಮೀನುಗಳನ್ನು ಹಿಡಿಯಬಲ್ಲವು ಮತ್ತು ಒಂದೆಡೆಯಿಂದ ಮತ್ತೊಂದೆಡೆಗೆ ಹಾರಲೂಬಲ್ಲವು. ನಕ್ಟ ಅಥವಾ ಹೆಣಿಗೆ ಬಾತು (ಸಾರ್ಕಿಡಿಯಾರ್ನಿಸ್ ಮೆಲನೋಟಸ್) ಮಲೆನಾಡಿನ ಜಲಾಶಯಗಳಲ್ಲಿ ಸಾಮಾನ್ಯವಾಗಿ ಇರುವ ಪಕ್ಷಿ. ಟೇಲ್ ಅಥವಾ ಅರಳೆ ಬಾತು (ನೆಟಾಪನ್) ಕೂಡ ನಾಡಿನಾದ್ಯಂತ ದೊರಕುವ ಪಕ್ಷಿ. ಕೆಲವು ಜಾತಿಯ ಬಾತುಕೋಳಿಗಳು ಕನ್ನಡ ನಾಡಿಗೆ ಉತ್ತರದಿಂದ ಚಳಿಗಾಲದಲ್ಲಿ ವಲಸೆ ಬರುವುದು ಉಂಟು.

ಕಬ್ಬಾರೆ, ಕೊಕ್ಕರೆ, ಕ್ರೌಂಚಪಕ್ಷಿ, ನಾರಾಯಣಿಪಕ್ಷಿ ಮೊದಲಾದವು ಜಲಾಶಯದಲ್ಲಿ ಅಥವಾ ಅದರ ಬಳಿ ವಾಸಿಸತಕ್ಕ ಪಕ್ಷಿಗಳು. ಇವು ಸಿಕೋನೈಯಿಫಾರ್ಮೀಸ್ ಗಣಕ್ಕೆ ಸೇರಿದವು. ಇವುಗಳ ಹಾರುವ ಶಕ್ತಿ ಅಗಾಧ. ಕಾಲುಗಳು, ಕಾಲು ಬೆರಳುಗಳು, ಕೊಕ್ಕು ಮತ್ತು ಕುತ್ತಿಗೆ ಎಲ್ಲವೂ ಉದ್ದ. ಅನೇಕವು ವಲಸೆಗಾರ ಪಕ್ಷಿಗಳು. ಆರ್ಡೀಯ ಸಿನೇರಿಯ ಎಂಬ ಜಾತಿಯ ಕ್ರೌಂಚಪಕ್ಷಿ ನಮ್ಮ ನಾಡಿನ ಹಲವಾರು ಕಡೆ ಇದೆ. ಇದರ ಮುಖ್ಯ ಆಹಾರ ಮೀನು. ಕಬ್ಬಾರೆ ಹಕ್ಕಿಗಳು ಒಂಟೊಂಟಿಯಾಗಿ ಕೊಳ, ನದಿ, ಕೆರೆಗಳ ಬಳಿ ವಾಸಿಸುತ್ತವೆ. ಒಮ್ಮೊಮ್ಮೆ ನೀರಿನಲ್ಲಿ ಅಲುಗಾಡದೆ ನಿಂತಿರುತ್ತವೆ. ಬುಬುಲ್ಕಸ್ ಐಬಿಸ್ (ಈಗ್ರೆಟ್) ಎಂಬ ಬೆಳ್ಳಕ್ಕಿ ಸಾಮಾನ್ಯವಾಗಿ ದನಗಳ ಹಿಂಡಿನ ಮಧ್ಯೆ ಇರುತ್ತದೆ. ಇದು ದನಕರುಗಳ ಮೈಮೇಲಿನ ಉಣ್ಣೆಗಳನ್ನು ಹಿಡಿದು ತಿನ್ನುವುದನ್ನು ಕಾಣಬಹುದು. ಆರ್ಡೆಯೋಲ ಗ್ರೇಯಿ ಜಾತಿಯ ಕಬ್ಬಾರೆ ಬತ್ತದ ಗದ್ದೆಗಳಲ್ಲಿ ಇರುವುವು. ಅನಸ್ಟೋಮಸ್ ಜಾತಿಯ ಕಬ್ಬಾರೆಯನ್ನು ಜೌಗು ಪ್ರದೇಶಗಳಲ್ಲಿ, ಅದರ ಅಗಲವಾದ ಕೊಕ್ಕಿನ ಸಹಾಯದಿಂದಲೇ ಗುರುತಿಸಬಹುದು. ಪ್ಲಾಟೇಲಿಯ ಲ್ಯೂಕೋರೋಡಿಯ ಎಂಬ ಕೊಕ್ಕರೆಯೂ ಉಂಟು. ಕ್ಸಿನೋರಿಂಕಸ್ ಏಷಿಯಾಟಿಕಸ್ ಎಂಬ ಜಾತಿಯ ಕರಿಕುತ್ತಿಗೆಯ ಕೊಕ್ಕರೆಗಳು ಆಗಾಗ್ಗೆ ನದಿ, ಕೆರೆಗಳ ಬಳಿ ಕಾಣುವುದುಂಟು. ಪೋಡಿಸಿಫಾರ್ಮೀಸ್ ಗಣದ ಪ್ರತಿನಿಧಿಗಳು ಕರ್ನಾಟಕದಲ್ಲಿವೆ. ಪೋಡಿಸಿಪೆಸ್ ರುಫಿಕಾಲಿಸ್ ಎಂಬ ಜಾತಿಯ ಜಲಚರ ಪಕ್ಷಿ ಈ ರಾಜ್ಯದಲ್ಲಿ ದೊರಕುವ ಅತ್ಯಂತ ಚಿಕ್ಕ ಪಕ್ಷಿ. ನೀರ್ಗಾಲಿಕ್ಕುವ ಕೆಲವು ಪಕ್ಷಿಗಳು ಕರಾಡ್ರಯಿಫಾರ್ಮೀಸ್ ಗಣಕ್ಕೆ ಸೇರಿದವು.

ಇವು ನೀರಿನಲ್ಲಿ ಎತ್ತುಗಾಲಿಕ್ಕಿ ನಡೆಯುವುದೇ ಅಲ್ಲದೆ ಹಾರಬಲ್ಲವು. ಹೈಡ್ರೋಫೇಸಿಯಾನಸ್ ಚಿರುರ್ಗಸ್ ಕೊಳ, ಕೆರೆ ಮೊದಲಾದ ಜೌಗು ಪ್ರದೇಶಗಳಲ್ಲಿ ಕಂಡುಬರುವ ಪಕ್ಷಿ. ಲೋಬೋ ಪ್ಲುವಿಯ ಮಲಬಾರಿಕ ಎಂಬ ಹಳದಿ ಬಣ್ಣದ ದೇವನಹಕ್ಕಿಗೆ ತೆರೆದ ಒಣ ಮೈದಾನ ಪ್ರದೇಶವೇ ವಾಸ. ಟ್ರಿಂಗ ಜಾತಿಯ ಪಕ್ಷಿ ಯುರೋಪ್ ಹಾಗೂ ಉತ್ತರ ಏಷ್ಯದಲ್ಲಿ ಸಂತಾನೋತ್ಪತ್ತಿ ಮಾಡಿ ನಮ್ಮ ದೇಶಕ್ಕೂ ವಲಸೆ ಬರುವ ಪಕ್ಷಿ. ಕ್ಯಾಪೆಲ ಜಾತಿಯ ಉಲ್ಲಂಗಿ ಪಕ್ಷಿ (ಸ್ನೈಪ್) ಕಾಶ್ಮೀರದಲ್ಲಿ ತನ್ನ ಸಂತಾನವನ್ನು ಬೆಳೆಸಿ ನಮ್ಮ ನಾಡಿಗೆ ಚಳಿಗಾಲದಲ್ಲಿ ವಲಸೆ ಬರುತ್ತದೆ. ಇದರಲ್ಲಿ ಎರಡು ಪ್ರಭೇದಗಳು ಮುಖ್ಯವಾದುವು. ಒಂದು ಕ್ಯಾ.ಗಾಲಿನಾಗೊ ಮತ್ತು ಕ್ಯಾಸ್ಪೆನೂರ. ಸ್ಕೋಲೋಪಾಕ್ಸ್ ರಸ್ಟಿಕೋಲ ಎಂಬ ಜಾತಿಯ ಕಾಡುಕೋಳಿಯೂ ಪಶ್ಚಿಮಘಟ್ಟಗಳಿಗೆ ವಲಸೆ ಬರುವ ಪಕ್ಷಿ.



ಕಾರ್ಮೊರಾಂಟ್ ಪಕ್ಷಿ (ನೀರು ಕಾಗೆ)

ಕಾರಸ್ಸೈಯಿಫಾರ್ಮೀಸ್ ಗಣದ ಪ್ರತಿನಿಧಿಗಳೂ ಇಲ್ಲಿವೆ. ಈ ಬಗೆಯ ಪಕ್ಷಿಗಳಿಗೆ ಮೂರು ಕಾಲುಬೆರಳುಗಳು ಸಾಮಾನ್ಯವಾಗಿ ಒಟ್ಟಿಗೆ ಕೂಡಿರುವುದು ಒಂದು ವೈಶಿಷ್ಟ್ಯ. ಉರುಳಕ್ಕಿ (ಕೋರಾಸಿಯಸ್ ಬೆಂಗಾಲೆನ್ಸಿಸ್) ಉಜ್ವಲ ಬಣ್ಣಗಳಿಂದ ಕೂಡಿದೆ. ಬೇಸಾಯ ಪ್ರದೇಶವೇ ಇದರ ವಾಸ. ಕೀಟ ಮೊದಲಾದವು ಇದರ ಆಹಾರ. ಜೇನುಮುಕ್ಕ (ಮೆರಾಪ್ಸ್ ಓರಿಯಂಟ್ಯಾಲಿಸ್) ಸಾಮಾನ್ಯವಾಗಿ ಮಾನವನ ವಸತಿಗಳ ಸನಿಹದಲ್ಲಿ ವಾಸಿಸುತ್ತದೆ. ಇದರ ಆಹಾರ ಜೇನು ನೊಣಗಳು, ಕಣಜ ಮತ್ತು ಇತರ ಕೀಟಗಳು. ಡೈಕೋಸಿರಾಸ್ ಬೈಕಾರ್ನಿ ಜಾತಿಯ ಪಕ್ಷಿಗಳು ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕಂಡುಬರುತ್ತವೆ.

ಕರ್ನಾಟಕದ ಪಾಲಕೀ ಹಕ್ಕಿಗಳಿಗೆ (ಸ್ಯಾಂಡ್‌ಗ್ರೌಸಸ್) ಹಾರುವ ಶಕ್ತಿ ಹೆಚ್ಚಾಗಿದೆ. ಇವನ್ನು ಸಾಮಾನ್ಯವಾಗಿ ಬಯಲುಸೀಮೆಯ ಕುರುಚಲು ಕಾಡುಗಳಲ್ಲಿ ಕಾಣಬಹುದು. ಕೆಲವು ವಲಸೆಗಾರ ಪ್ರವೃತ್ತಿಯುಳ್ಳವು. ಇವುಗಳ ಆಹಾರ ದವಸ, ಧಾನ್ಯ. ಸಂಜೆ ಮತ್ತು ಬೆಳಗಿನ ಹೊತ್ತು ಮಂದೆಮಂದೆಯಾಗಿ ಸಾಗುವಳಿ ಪ್ರದೇಶಕ್ಕೆ ನುಗ್ಗಿ ದಾಳಿ ಮಾಡುವುದೂ ಉಂಟು. ಟೆರೋಕ್ಲೆಸ್ ಇಂಡಿಕಸ್ ಮತ್ತು ಟಿ. ಎಕ್ಸಸ್ಟಸ್ ಎಂಬವು ಮುಖ್ಯವಾದವು. ಗುಬ್ಬಚ್ಚಿ (ಪ್ಯಾಸರ್ ಡೊಮೆಸ್ಟಿಕಸ್) ಫ್ರಿಂಜಿಲ್ಲಿಡೀ ಕುಟುಂಬಕ್ಕೆ ಸೇರಿದ ಪಕ್ಷಿ. ಇದರ ಕೊಕ್ಕು ದಪ್ಪ, ಶಂಕಾಕೃತಿ. ಕಾಳಿನ ಸಿಪ್ಪೆ ಸುಲಭವಾಗಿ ಬಿಡಿಸಿ ತಿನ್ನುವ ವೈಶಿಷ್ಟ್ಯ ಇದರದ್ದು. ಮಾನವನ ವಸತಿಯ ಆಸುಪಾಸುಗಳಲ್ಲಿ ಇದರ ಬೀಡು. ಕಳ್ಳಿಪಿಟಕ ಅಥವಾ ದಾಸರಿ ಹಕ್ಕಿಗಳಲ್ಲಿ (ವ್ಯಾಗ್‌ಟೈಲ್) ಕೆಲವು ಪ್ರಭೇದಗಳನ್ನು ಕನ್ನಡ ನಾಡಿನಲ್ಲೂ ಕಾಣಬಹುದು. ಇವುಗಳ ಕೊಕ್ಕು ತೆಳು ಮತ್ತು ನೀಳ, ಬಾಲ ನೀಳ, ಮೋಟಸಿಲ್ಲ ಕೈನೀರಿಯ ಬಯಲು ಪ್ರದೇಶ ಮತ್ತು ವಸತಿಗೃಹದ ಬಳಿ ಕಂಡು ಬರುತ್ತದೆ. ಸಾಗುವಳಿ ಬೆಳೆಗಳು, ಕಾಳುಕಡ್ಡಿಗಳೇ ಇದರ ಆಹಾರ. ಅಂತಸ್ ರುಫುಲಸ್ ಎಂಬ ದಾಸರಿ ಹಕ್ಕಿಯೂ ಮೋಟಸಿಲ್ಲ ದಂತೆಯೇ ಜೀವನ ಸಾಗಿಸುತ್ತದೆ. ಶಿಖೆಯ ಟಿಟ್ಟಿಭಪಕ್ಷಿ (ಕ್ರೆಸ್ಟೆಡ್ ಲಾರ್ಕ್ಸ್) ದಾಸರಿ ಹಕ್ಕಿಯಂತೆಯೇ ಇರುತ್ತದೆ. ಆದರೆ ಬಾಲ ಸ್ವಲ್ಪ ಮೋಟು. ಇದು ಮುಗಿಲಿನಲ್ಲಿ ಹಾರುವಾಗ ಸಿಳ್ಳು ಹಾಕುವುದು ಒಂದು ವೈಶಿಷ್ಟ್ಯ; ಬೂದು ಕಿರೀಟದ ಟಿಟ್ಟಿಭ ಪಕ್ಷಿಗಳು ಸಾಗುವಳಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಕದಿರು ಗಿಣಿಗಳ ಕೊಕ್ಕು ನೀಳ, ಚೂಪು, ಅಲ್ಲದೆ ಸ್ವಲ್ಪ ಕಮಾನಿನಂತೆ ಬಾಗಿರುತ್ತದೆ. ಇವು ಸಾಮಾನ್ಯವಾಗಿ ಒಂಟೊಂಟಿಯಾಗಿ ಅಥವಾ ಎರಡರ ಗುಂಪಿನಲ್ಲಿ ಕಂಡು ಬರುತ್ತವೆ. ಕಾಡು ತೋಪುಗಳಲ್ಲಿ ಇವು ಸಾಮಾನ್ಯ. ಇವು ಕೀಟಗಳನ್ನು ತಿನ್ನುವುದೇ ಅಲ್ಲದೆ ಹೂವಿನ ಮಕರಂದವನ್ನು ಹೀರಲು ಆಸೆ ಪಡುತ್ತವೆ. ಭಾರತದ ಪಿಟ್ಟ (ಪಿಟ್ಟಬ್ರಾಕಿಯೂರ) ಕುರುಚಲು ಗಿಡಗಳ ಕಾಡಿನಲ್ಲಿ ವಾಸಿಸುತ್ತವೆ. ಕೀಟ ಮತ್ತು ಅವುಗಳ ಮೊಟ್ಟೆಗಳೇ ಇವುಗಳ ಮುಖ್ಯ ಆಹಾರ.

ಪಿಸಿಡೀ ಕುಟುಂಬಕ್ಕೆ ಸೇರಿದ ಮರಕುಟುಕ ಹಕ್ಕಿಗಳು ಕರ್ನಾಟಕದಾದ್ಯಂತ ಇವೆ. ಸಾಮಾನ್ಯವಾಗಿ ಕುರುಚಲು ಗಿಡಗಳ ಕಾಡುಗಳಿಗಿಂತ ದೊಡ್ಡ ಕಾಡುಗಳೇ ಇವಕ್ಕೆ ಪ್ರಿಯ. ಹೂಪೋ ಪಕ್ಷಿಗೆ (ಯೂಪ್ಯುಪ) ತಲೆಯ ಮೇಲೆ ಒಂದು ಶಿಖೆಯಿದೆ. ಇದು ಮರವನ್ನು ಕುಟುಕಿ ಗೂಡು ಮಾಡುವುದಿಲ್ಲ; ಬದಲು ಮೊದಲೇ ಇರುವ ಗೂಡು ಪೊಟರೆಗಳಲ್ಲಿ ವಾಸಿಸುತ್ತದೆ. ತಲೆಯ ಮೇಲಿರುವ ಶಿಖೆ ಬೀಸಣಿಗೆಯಂತೆ ಮುಚ್ಚಿಕೊಳ್ಳುವಂತಿದೆ. ತೋಟದ ಹೊಲಗಳಲ್ಲಿ ಬೆಳೆ ತೆನೆಗಳಿಂದ ಕೂಡಿದ ಕಾಲದಲ್ಲಿ ಸಾಮಾನ್ಯವಾಗಿ ಕಂಡುಬರುವ ಹಕ್ಕಿಗಳು ಮೈನಾಗಳು (ಪ್ಯಾಸ್ಟರ್ ರೈಸಿಯಸ್). ಕಂದು ತಲೆಯ ಮೈನ (ಸ್ಟರ್ನಿಯ ಮಲಬಾರಿಕ) ತೆರೆದ ಕಾಡು ಪ್ರದೇಶಗಳಲ್ಲಿ ಇದೆ. ಆಕ್ರಿಡೋಥೆರಿಸ್ ಟ್ರಿಸ್ಟಿಸ್ ಜಾತಿಯ ಮೈನಾ ಹಕ್ಕಿಗಳು ನಮ್ಮ ನಾಡಿನಾದ್ಯಂತ ಕಾಣಸಿಗುವ ಪಕ್ಷಿಗಳು. ಇವನ್ನು ಪಳಗಿಸಿ ಮಾತು ಕಲಿಸಬಹುದು. ಗೀಜಗನ ಹಕ್ಕಿಗಳು ಸಾಗುವಳಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಈ ಬಗೆಯ ಹಕ್ಕಿಗಳಲ್ಲಿ ನಾಲ್ಕೈದು ಪ್ರಭೇದಗಳನ್ನು ಗುರುತಿಸಬಹುದು. ಈ ಹಕ್ಕಿಗಳು ಹಳ್ಳದ ದಂಡೆಯ ಮರಗಳಲ್ಲಿ, ನೀರಿನ ಕಡೆಗೆ ಬಾಗಿದಂತಿರುವ ಕೊಂಬೆಗಳಲ್ಲಿ, ಘುಂಗಿಯಾಕಾರದ ಗೂಡುಗಳನ್ನು ಕಟ್ಟುತ್ತವೆ. ಈ ಗೂಡುಗಳ ಹೆಣಿಗೆ ಕಲಾತ್ಮಕವೂ ಸುಂದರವೂ ಆಗಿರುತ್ತದೆ. ಇಂಥ ಗೂಡುಗಳಲ್ಲಿ ಮೊಟ್ಟೆ ಇಟ್ಟು ಮರಿಮಾಡುತ್ತವೆ. ಗೀಜಗನ ಹಕ್ಕಿಯ ಗೂಡುಗಳು ಗುಂಪುಗುಂಪಾಗಿರುವುದುಂಟು. ನಮ್ಮ ನಾಡಿನ ಕುರುಚಲು ಗಿಡದ ಕಾಡುಗಳಲ್ಲಿ ದರ್ಜಿ ಹಕ್ಕಿಗಳೂ ಉಂಟು. ಇವು ಎಲೆಗಳನ್ನು ಹೊಲೆದು ಗೂಡು ಕಟ್ಟುವ ಕುಶಲತೆಯನ್ನು ಕಲಿತಿವೆ. ಕನ್ನಡನಾಡಿನ ಪಕ್ಷಿಸಂಪತ್ತು ಇನ್ನೂ ವಿಪುಲವಾಗಿದೆ.

### ಸರೀಸೃಪ ವರ್ಗ

ಕನ್ನಡ ನಾಡಿನಲ್ಲಿ ಕಾಣದೊರೆಯುವ ದೊಡ್ಡ ಸರೀಸೃಪ ಮೊಸಳೆ ಎಂದು ಹೇಳಬಹುದು (ಕ್ರಾಕೊಡೈಲಸ್ ಪಾಲುಸ್ಟ್ರಿಸ್). ಇದು ನದಿ ಕೆರೆಗಳಲ್ಲಿ ವಾಸಿಸುತ್ತದೆ. ಇದರ ಕಾಲು ಬೆರಳುಗಳು ಜಾಲಪಾದಗಳಿಂದ ಕೂಡಿವೆ. ಸಮುದ್ರವನ್ನು ಸೇರುವ ನದೀಮುಖಜ ಪ್ರದೇಶಗಳಲ್ಲಿ ಜೀವಿಸುವ ಮೊಸಳೆ ಕ್ರಾಪೋರೋಸಸ್. ಇವೇ ಕ್ರಾಕೋಡೀಲಿಯ ಗಣದ ಪ್ರತಿನಿಧಿಗಳು. ಲಾಸ್ಯರ್ಟೀಲಿಯ ಉಪಗಣದ ಪ್ರತಿನಿಧಿಗಳೂ ಸುಮಾರಾಗಿ ಕಂಡುಬರುತ್ತವೆ. ಮನೆಗಳಲ್ಲಿ ವಾಸಿಸುವ ಹಲ್ಲಿಯ (ಹೆಮಿಡ್ಯಾಕ್ಟೈಲಸ್ ಬ್ರೂಕಿ) ಕಾಲಿನ ಬೆರಳುಗಳಲ್ಲಿ ನಖಗಳಿವೆ. ಪಾದಗಳು ಗೋಡೆ ಗಾಜುಗಳ ಮೇಲೆ ಓಡಾಡಲು ಅನುಕೂಲವಾಗಿವೆ. ತೆರೆದ ಕಾಡುಗಳಲ್ಲಿ, ಬೇಲಿ, ಮೆಳೆಗಳಲ್ಲಿ ಮೈದಾನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ

ಲ್ಯಾಸೆರ್ಟೀಲಿಯ ಎಂದರೆ ಹೆಂಟೆಗೊದ್ದ (ಕ್ಯಾಲೋಟಿಸ್ ವರ್ಸಿಕೋಲಾರ್). ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದ ಕಾಡುಗಳಲ್ಲಿ ಕ್ಯಾಲೋಟಿಸ್ ಎಲ್ಲಿಯೋಟಿ ಪ್ರಭೇದದ ಹೆಂಟೆಗೊದ್ದಗಳು ವಾಸಿಸುವುವು. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಾಲಿಯ ಹಾರ್ಸಿಫೀಲ್ಡೀ ಜಾತಿಯ ಹೆಂಟೆಗೊದ್ದ ಉಂಟು. ಕರ್ನಾಟಕದ ಬಯಲು ನಾಡಿನ ಗುಡ್ಡ ಪ್ರದೇಶಗಳಲ್ಲಿ ಪ್ಯಾಮೋವಿಲಸ್ ಡಾರ್ಸಾಲಿಸ್ ಎಂಬ ಬಗೆಯ ದೊಡ್ಡ ಹಲ್ಲಿ (ಬಂಡೆ ಹಲ್ಲಿ) ಸಿಗುತ್ತದೆ. ಬಣ್ಣ ಬದಲಾಯಿಸಿಕೊಳ್ಳುವ ಗೋಸುಂಬೆ (ಊಸರವಳ್ಳಿ, ಕ್ಯಾಮೆಲಿಯಾನ್ ಜೀಲ್ಯಾನಿಕಸ್) ಕಾಡುಗಳ ಮರಗಳ ಮೇಲೆ ವಾಸಿಸುತ್ತದೆ. ಹಾವುರಾಣಿಗಳಲ್ಲಿ ನಾಲ್ಕು ಜಾತಿಗೆ ಸೇರಿದವು ನಮ್ಮ ನಾಡಿನಲ್ಲಿವೆ. ಮಬೂಯ–ಇದು ಬಯಲು, ಬೇಲಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಲೈಗೊಸೋಮ, ಸೆಫೊಫಸ್ ಮತ್ತು ರಿಸ್ಟೆಲ್ಲ–ಇವು ಇತರ ಹಾವುರಾಣಿ ಸಂಬಂಧಿಗಳು. ಉಡ (ವೆರಾನಸ್ ಮಾನಿಟರ್) ಬಯಲು ಮೈದಾನ ಪ್ರದೇಶ ಮತ್ತು ಕಾಡುಗಳಲ್ಲಿ ವಾಸಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಕಾಡುಗಳಲ್ಲಿ ಹಾರುವ ಓತಿ (ಡ್ರಾಕೋ ಡಸ್ಸಿಮೇಯರಿ) ಕಂಡುಬಂದಿದೆ.

ಕಿಲೋನಿಯದ ಪ್ರತಿನಿಧಿಗಳೇ ಆಮೆಗಳು. ಇವು ನದಿ, ಕಾಲುವೆ, ಕೆರೆಗಳಲ್ಲಿ ವಾಸಿಸುತ್ತವೆ. ಹಾಗೂ ಕೆಲವು ಬಗೆಗಳು ಭೂಮಿಯ ಮೇಲೂ ಜೀವಿಸುತ್ತವೆ. ಮತ್ತೆ ಕೆಲವಕ್ಕೆ ಸಾಗರಗಳೇ ತವರು ಪ್ರದೇಶ. ಮಲೆನಾಡಿನ ಬೆಟ್ಟಗುಡ್ಡಗಳಲ್ಲಿ ಜೀವಿಸುವ ನೆಲದ ಆಮೆ ಟೆಸ್ಟುಡೋ ಎಲೆಗಾನ್ಸ್. ನದಿ ಮತ್ತು ಚೌಗು ಪ್ರದೇಶದಲ್ಲಿ ವಾಸಿಸತಕ್ಕ ನೀರಾಮೆಗಳು ಟ್ರೈಯೊನಿಕ್ಸ್ ಲೆಯಿತಿ ಪ್ರಭೇದಕ್ಕೆ ಸೇರಿದವು. ಇವುಗಳ ಚಿಪ್ಪನ್ನು ಮೃದು ಚರ್ಮ ಮುಚ್ಚಿರುತ್ತದೆ. ಕಾಲುಬೆರಳುಗಳು ಪ್ರತ್ಯೇಕವಾಗಿರುತ್ತವೆ. ನದಿ ಕಾಲುವೆಗಳಲ್ಲಿ ವಾಸಿಸುವ ನೀರಾಮೆಗಳು ಜಿಯೋಮೈಡ ಟ್ರೈಜುಗ ಜಾತಿಗೆ ಸೇರಿವೆ. ಇವುಗಳ ಕಾಲುಬೆರಳುಗಳ ಮಧ್ಯೆ ಜಾಲ ಪಾದಗಳಿವೆ. ಚಿಪ್ಪನ್ನು ಕೊಂಬಿನ ಫಲಕಗಳನ್ನು ಮುಚ್ಚಿವೆ. ಇವು ತಮ್ಮ ತಲೆಯನ್ನು ಸಂಪೂರ್ಣವಾಗಿ ಚಿಪ್ಪಿನ ಒಳಭಾಗಕ್ಕೆ ಎಳೆದುಕೊಳ್ಳಬಲ್ಲವು. ನೂರಾರು ವರ್ಷಗಳು ಅತಿ ದೀರ್ಘಕಾಲ ಬದುಕುವ ಈ ಪ್ರಾಣಿ ಸಂಕುಲ ಈಗ ಅಪಾಯದಲ್ಲಿದೆ. ಭೂಮಿಯ ಮೇಲೆ ಈ ಜೀವಿಗಳು ಬಹು ತೆಳು ಸಂಖ್ಯೆಯಲ್ಲಿದ್ದು ಸಾಗರ ಸಮುದ್ರಗಳಿಗೆ ಇವುಗಳ ನೆಲೆಗಳು ಸೀಮಿತಗೊಂಡಿವೆ.

ಕನ್ನಡನಾಡಿನಲ್ಲಿ ಹಾವುಗಳಿಗೆ ಬರವಿಲ್ಲ–ವಿಷರಹಿತ ಮತ್ತು ವಿಷಪೂರಿತ ಹಾವುಗಳೆರಡೂ ಇವೆ. ವಿಷರಹಿತ ಹಾವುಗಳಲ್ಲಿ ಟೆಫ್ಲಾಪ್ ಬ್ರಾಮಿನಸ್ ಎಂಬುದು ಅತ್ಯಂತ ಚಿಕ್ಕ ಹಾವು. ಇದು ಬೆಂಗಳೂರು ಜಿಲ್ಲೆಯಲ್ಲಿ ಕಂಡುಬರುತ್ತದೆ. 17–18 ಸೆಂಮೀ ಉದ್ದ ಬೆಳೆಯುತ್ತದೆ. ಹೆಬ್ಬಾವು ಅಥವಾ ದಾಸರಹಾವು (ಪೈಥಾನ್ ಮಾಲ್ಯುರಸ್) ಕನ್ನಡ ನಾಡಿನ ಅತ್ಯಂತ ದೊಡ್ಡಗಾತ್ರದ ಹಾವು. ತೇವಮಯವಾದ ಬಂಡೆಗಳಿಂದ ಕೂಡಿದ ಮೈದಾನ ಪ್ರದೇಶಗಳಲ್ಲಿ ಇದು ಗರಿಷ್ಠ 700 ಸೆಂಮೀ ಉದ್ದ ಬೆಳೆಯಬಹುದು. ನೇತ್ರಗೊಡ್ಡಿ ಹಾವು (ಎರಿಕ್ಸ್ ಕೋನಿಕಸ್) ಕರ್ನಾಟಕದಾದ್ಯಂತ ಕಂಡುಬರುವ ಇನ್ನೊಂದು ಬಗೆಯ ಹಾವು. ಬೂದಿಮಿಶ್ರಿತ ಪಾಟಲ ವರ್ಣದ ಮೈಮೇಲೆ ದೊಡ್ಡದೊಡ್ಡ ಕಂದುಬಣ್ಣದ ಮಚ್ಚೆಗಳಿಂದ ಇದನ್ನು ಗುರುತಿಸಬಹುದು. ಕಣ್ಣುಗಳು ಬಲು ಚಿಕ್ಕವು. ಸಾಮಾನ್ಯವಾಗಿ ಮರಳು ತುಂಬಿದ ಭೂಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಹುದುಗಿರುತ್ತದೆ. ಬಾಲ ಮೋಟು. ಯೂರೊಪೆಲ್ಟಿಡೀ ಕುಟುಂಬಕ್ಕೆ ಸೇರಿದ ಮೆಲನೋಫೀಡಿಯಂ ಜಾತಿಯ ಎರಡು ಪ್ರಭೇದಗಳು ಕೊಡಗು ಜಿಲ್ಲೆಯಲ್ಲಿ ಸಿಗುತ್ತವೆ. ಪ್ಲೆಕ್ಟುರಸ್ ಕಾನಾರಿಕಸ್, ಯೂರೊಪೆಲ್ಟಿಡ್ ಒಸೆಲ್ಲೇಟಸ್, ಯೂ.ಅರ್ಕ್ವಿಸೆಪ್ಸ್, ಯೂ. ರೂಬ್ರೊಲೀನಿಯೇಟಸ್, ಯೂ.ಫಿಪ್ಸೋನಿ, ಯೂ. ಮೈಹೇಂದ್ರ, ಯೂ. ಮ್ಯಾಕುಲೇಟಸ್ ಜಾತಿಯ ಹಾವುಗಳು ಪಶ್ಚಿಮಘಟ್ಟದ ಕಾಡುಗಳಲ್ಲಿ ಇವೆ.

ಕೊಲಂಬ್ರಿಡೀ ಕುಟುಂಬದ ಕೇರೆ ಹಾವು (ಟೆಯಸ್ ಮೂಕೋಸಸ್) ಕರ್ನಾಟಕದಾದ್ಯಂತ ಉಂಟು. ಇದು ಮರವನ್ನು ಸ್ವಲ್ಪ ಹತ್ತಬಲ್ಲುದು. ಆಗಾಗ್ಗೆ ಇಲಿಗಳನ್ನು ತಿನ್ನಲು ಕಣಜಗಳನ್ನು ಹೊಗುವುದುಂಟು. ಪಟ್ಟೆಹಾವು–ಓಲಿಗೊಡಾನ್ ವೆನೂಸ್ಟಸ್–ಪಶ್ಚಿಮಘಟ್ಟಗಳಲ್ಲಿಯೇ ಅಲ್ಲದೆ ಮಲೆನಾಡಿನ ಜಿಲ್ಲೆಗಳಲ್ಲೂ ಇದೆ. ಇದರ ಮೈಮೇಲಿನ ಪಟ್ಟೆಗಳು ಕಟ್ಟುಹಾವಿನಂತೆ ಕಂಡುಬರುತ್ತವೆ. ಇದೇ ಜಾತಿಯಲ್ಲಿನ ನಾಲ್ಕು ಪ್ರಭೇದಗಳೂ (ಟ್ರಾವಂಕೂರನ್ಸಿಸ್, ಅಫಿನಿಸ್, ಅರ್ನೆನ್ಸಿಸ್ ಮತ್ತು ಬ್ರೆವಿಕಾಡ) ನಮ್ಮ ನಾಡಿನಲ್ಲಿ ಇವೆ. ಪಶ್ಚಿಮತೀರಕ್ಕೆ ಹರಿಯುವ ನದಿಗಳ ಅಳಿವೆಗಳಲ್ಲಿ ನರೂಲಿ ಹಾವು(ಅಕ್ರೋಕೊರ್ಡುಸ್ ಗ್ರಾನುಲೇಟಸ್) ವಾಸಿಸುತ್ತದೆ. ಇದು ನೀರಿನಲ್ಲಿ ಚೆನ್ನಾಗಿ ಈಜಲಾರದು. ಅಲ್ಲಿನ ಬೆಸ್ತರಿಗೆ ಮೀನು ಹಿಡಿಯುವ ಬಲೆಗಳಿಗೆ ಆಗಾಗ್ಗೆ ಇದು ಸಿಕ್ಕಿಹಾಕಿಕೊಳ್ಳುತ್ತಿರುತ್ತದೆ. ಇದು ಮೊಟ್ಟೆಗಳನ್ನಿಡುವುದರ ಬದಲು ಒಮ್ಮೆಗೆ 6–8 ಮರಿಗಳನ್ನು ಈಯುತ್ತದೆ. ಕರೀಹಸುರು ಹಾವು (ಕ್ರೈಸೋಪೇಲಿಯ ಓರ್‌ನಾಟ) ಎಂಬುದು ಪಶ್ಚಿಮಘಟ್ಟದ ಕಾಡುಗಳಲ್ಲಿ ಇದೆ. ತಲೆ ಸಾಮಾನ್ಯವಾಗಿ ಕಪ್ಪು ಬಣ್ಣದ್ದು. ಅದರ ಮೇಲೆ ಹಳದಿಯ ಅಥವಾ ಹಸಿರಿನ ಅಡ್ಡಾದಿಡ್ಡಿ ಮಚ್ಚೆಗೆರೆಗಳು ಉಂಟು. ಮರಗಳ ಕೊಂಬೆಗಳಿಗೆ ತನ್ನ ದೇಹವನ್ನು ಸುರುಳಿಸುತ್ತಿ ತೂಗಾಡುವುದು ಇದರ ವೈಶಿಷ್ಟ್ಯ. ಆಗಾಗ್ಗೆ ವಸತಿಗೃಹಗಳನ್ನು ಪ್ರವೇಶಿಸುವ ತೋಟದ ಹಾವಿಗೆ ಲೈಕೊಡಾನ್ ಅಲಿಕಸ್ ಎಂದು ಹೆಸರು. ಇದು ಸಾಮಾನ್ಯವಾಗಿ ನಿಶಾಚರ ಪ್ರಾಣಿ. ಮರಗಳನ್ನು ಸುಲಭವಾಗಿ ಹತ್ತಬಲ್ಲುದು. ಆದರೆ ಭೂಮಿಯ ಮೇಲೆ ಚುರುಕಿನಿಂದ ಹರಿದಾಡಲಾರದು. ಚೌಕಳಿ ಹಾವು, ಒಳ್ಳೆ ಹಾವು ಅಥವಾ ನೀರುಹಾವು (ನಾತ್ರಿಕ್ಸ್ ಪಿಸ್ಕಟಾರ್) ನೀರ ವಸತಿಯ ಬಳಿ ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಬತ್ತದ ಗದ್ದೆಗಳನ್ನು ಪ್ರವೇಶಿಸುವುದುಂಟು. ಹಸುರು ಕಟ್ಟಿಗೆ ಹಾವು (ಮ್ಯಾಕ್ರೋಪಿಸ್ತೊಡಾನ್ ಪ್ಲಂಬಿಕೊಲಾರ್) ಬೆಟ್ಟಗುಡ್ಡಗಳಿರುವ ಮೈದಾನ ಪ್ರದೇಶಗಳಲ್ಲಿ ಆಗಾಗ್ಗೆ ಕಂಡುಬರುತ್ತದೆ. ಇದನ್ನು ಕೆಣಕಿದರೆ ನಾಗರಹಾವಿನಂತೆ ಹೆಡೆ ಎತ್ತುತ್ತದೆ. ಎರಡು ಬಗೆಯ ಚೆಂಗಿ ಹಾವುಗಳು ಕನ್ನಡ ನಾಡಿನಲ್ಲಿವೆ. ಒಂದು ಬೊಯ್ಗ ಟ್ರೈಗೊನೇಟ ಮತ್ತು ಬೊಯ್ಗಸಿಲೋಸೆನ್ಸನ್. ಮೊದಲನೆಯದು ಕನ್ನಡ ನಾಡಿನಾದ್ಯಂತ ಕಂಡುಬಂದರೆ ಎರಡನೆಯದು ಪಶ್ಚಿಮಘಟ್ಟಗಳಿಗೆ ಸೀಮಿತವಾಗಿದೆ. ಹಸುರು ಎಲೆ ಹಾವು ಅಥವಾ ಹಸುರುಹಾವು (ಡ್ರೈಯೋಫಿಸ್ ನಾಸೂಟಸ್) ಎಲ್ಲ ಕಡೆಯೂ ಉಂಟು. ಇದರ ವಾಸ ಸಾಮಾನ್ಯವಾಗಿ ಹಸುರು ಬೇಲಿ, ಎತ್ತರವಾಗಿ ಬೆಳೆದ ಹುಲ್ಲುಪೊದೆ. ದೇಹ ಬಲು ಉದ್ದ, ಸು. 194 ಸೆಂಮೀ. ಇತರ ಬಗೆಯ ವಿಷರಹಿತ ಹಾವುಗಳೂ (ಕೊಲುಬೆರ್, ಲಿಯೋಪೆಲ್ಟಿಸ್, ಕೋರೋನೆಲ್ಲ ಅಹೆಟುಲ್ಲ ಇತ್ಯಾದಿ) ಈ ರಾಜ್ಯದಲ್ಲಿವೆ. ಅತ್ಯಂತ ವಿಷಪೂರಿತ ಹಾವುಗಳ ಸಂಖ್ಯೆ ಕಡಿಮೆಯಾಗಿದ್ದರೂ ಅವುಗಳ ಅಪಾಯದ ಪ್ರಭಾವ ಬಹಳ ದೊಡ್ಡದು. ನಾಡಿನ ಕಡಲ ನೀರಿನಲ್ಲಿ ವಾಸಿಸುವ ಕಡಲಹಾವು ಅತ್ಯಂತ ವಿಷಪೂರಿತವಾದದ್ದು. ಇದರ ಬಾಲ ಹುಟ್ಟಿನಂತೆ ಚಪ್ಪಟೆಯಾಗಿದ್ದು ಚಲನೆಗೆ ಬಲು ನೆರವಾಗುತ್ತದೆ. ಹೈಡ್ರೋಫಿಸ್ ಸಿರುಲೆಸೆನ್ಸ್ ಜಾತಿಯ ಕಡಲಹಾವು ಸಾಮಾನ್ಯವಾಗಿ ಬೆಸ್ತರ ಬಲೆಗೆ ಬೀಳುತ್ತದೆ. ಭೂಮಿಯ ಮೇಲೆ ಅದು ಅಸಹಾಯಕ. ಬೆಸ್ತರ ಬಲೆಗೆ ಬಿದ್ದ ಈ ಹಾವುಗಳನ್ನು ಕೈಗಳಿಂದಲೇ ಹಿಡಿದು ನೀರಿಗೋ ದಡಕ್ಕೋ ಬಿಸಾಡುತ್ತಾರೆ. ಇದೇ ಅಲ್ಲದೆ ಲಾಟಿಕೌಡ, ಪ್ರೆಸ್ಕುಟಾಟ, ಎನ್ಹೈಡ್ರಿನ, ಹೈಡ್ರೋಫಿಸ್, ಲಾಪೆಮಿಸ್, ಮೈಕ್ರೋಸೆಫಾಲೊಫಿಸ್ ಮತ್ತು ಪೆಲಾಮಿಸ್ ಜಾತಿಯ ಕಡಲಹಾವುಗಳೂ ಉಂಟು. ಕಟ್ಟುಹಾವು ಅಥವಾ ಕಡಂಬಳ (ಕ್ರೈಟ್) ನಾಡಿನಾದ್ಯಂತ ಕಂಡುಬರುತ್ತದೆ. ಇದರ ದೇಹದ

ಬಣ್ಣ ಕಪ್ಪುಮಿಶ್ರಿತ ನೀಲಿ. ಬಿಳಿಯ ಕಟ್ಟುಗಳು ದೇಹದಾದ್ಯಂತ ಹರಡಿವೆ. ನಾಗರಹಾವು (ನಾಜ ನಾಜ) ಹೆಡೆಯೆತ್ತಿ ಆಡುವ ವಿಷಸರ್ಪ. ಇದು ಸಾಕಷ್ಟು ಇದೆ. ಕೃಷ್ಣಸರ್ಪ ಅಥವಾ ಕಾಳಿಂಗಸರ್ಪ (ನಾಜಹನ್ನ) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇದೆ. ನಾಗರಹಾವಿನ ಹೆಡೆಯ ಮೇಲೆ ಕನ್ನಡಕದಂಥ ಮಚ್ಚೆಯುಂಟು. ಕೃಷ್ಣಸರ್ಪದ ತಲೆಯ ಹಿಂದಿನ ದೇಹಭಾಗದ ಸುತ್ತ 10–15 ಬಿಳಿಯ ಪಟ್ಟೆಗಳಿವೆ. ಇದು 540ಸೆಂಮೀ ವರೆಗೂ ಬೆಳೆಯಬಲ್ಲುದು.

ಮಂಡಲದ ಹಾವಿಗೆ (ರಸ್ಸೆಲ್ಸ್ ವೈಪರ್–ವೈಪೆರೆ ರಸ್ಸೇಲಿ) ಕನ್ನಡಿಹಾವು, ಬಲಿವಡಕಹಾವು ಎಂಬ ಪರ್ಯಾಯ ಹೆಸರುಗಳೂ ಇವೆ. ಇದು ನಮ್ಮ ನಾಡಿನಾದ್ಯಂತ ಸಾಮಾನ್ಯವಾಗಿ ಕಂಡುಬರುತ್ತದೆ. ದೇಹದ ಬಣ್ಣ ಬೂದು. ಜೊತೆಗೆ ಮೂರು ಸಾಲಿನಲ್ಲಿ ದೊಡ್ಡ ದೊಡ್ಡ ಮಚ್ಚೆಗಳಿವೆ. ಬೆನ್ನಿನ ಮೇಲಿರುವ ಮಚ್ಚೆಗಳು ಪಕ್ಕದ ಮಚ್ಚೆಗಳಿಗಿಂತ ಸ್ವಲ್ಪ ದೊಡ್ಡವು. ಸಾಮಾನ್ಯವಾಗಿ ಬಂಡೆಗಳ ಹಾಗೂ ಪೊದೆಗಳ ಬಳಿಯ ಪರಿಸರದ ಬಣ್ಣದಂತೆಯೇ ಕಂಡುಬರುತ್ತದೆ. ಇದು ಒಂದು ಸೂಲಿಗೆ 97 ಮರಿಗಳನ್ನು ಹೆರಬಲ್ಲುದು. ಕಲ್ಲುಹಾವು (ಎಕಿಸ್ ಕ್ಯಾರಿನೇಟಸ್) ಮಂಡಲದ ಹಾವಿನ ಹತ್ತಿರ ಸಂಬಂಧಿ; ನಾಡಿನಾದ್ಯಂತ ಹರಡಿದೆ. ತಲೆಯ ಮೇಲಿನ ಬಾಣದ ಗುರುತಿನಿಂದ ಸುಲಭವಾಗಿ ಇದನ್ನು ಗುರುತಿಸಬಹುದು. ದೇಹದ ಬಣ್ಣ ಬೂದುಮಿಶ್ರಿತವಾಗಿದೆ. ತಳಭಾಗ ಬಿಳುಪು. ದೇಹದ ಮೇಲೆ ಅಲೆಅಲೆಗಳ ವಿನ್ಯಾಸದಂತಿರುವ ಎರಡು ರೇಖೆಗಳು ತಲೆಯಿಂದ ಕಾಲಿನವರೆಗೂ ವ್ಯಾಪಿಸಿವೆ. ಇದು ಕೂಡ ಮರಿಗಳನ್ನು ಈಯುವ ಹಾವು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಆಗಾಗ್ಗೆ ಪಶ್ಚಿಮಘಟ್ಟಗಳಲ್ಲಿ ಕಂಡುಬರುವ ಹಸಿರು ಮಂಡಲದ ಹಾವು (ಟ್ರೈಮೆರೆಸುರಸ್ ಗ್ರಾಮಿನಿಯಸ್) ಸಾಮಾನ್ಯವಾಗಿ ಹುಲ್ಲು ಅಥವಾ ಬಿದಿರುಮೆಳೆಗಳಲ್ಲಿ ಆಸರೆ ಪಡೆದು ಪರಿಸರದಲ್ಲಿ ಐಕ್ಯವಾಗಿರುತ್ತದೆ. ಇದು ಕೂಡ ಮರಿಗಳನ್ನು ಈಯುತ್ತದೆ. ಟ್ರೈಮೆರೆಸುರಸ್ ಜಾತಿಗೆ ಸಂಬಂಧಿಸಿದಂತೆ ಇದರ ಇತರ ಮೂರು (ಮ್ಯಾಕ್ರೋಲೆಪಿಸ್, ಮಲಬಾರಿಕಸ್, ಸಿಟ್ರಗೇಟಸ್) ಪ್ರಭೇದಗಳು ಕಂಡುಬರುತ್ತವೆ. ಉತ್ತರ ಕರ್ನಾಟಕದ ಸರಹದ್ದಿನಲ್ಲಿರುವ ಗೂನುಮೂಗಿನ ಮಂಡಲದ ಹಾವು (ಅನ್ಸಿಸ್ಟ್ರೊಡಾನ್ ಹಿಪ್ನಾಲ್) ಕೂಡ ವಿಷಪೂರಿತ ಹಾವು.

### ದ್ವಿಚರಿವರ್ಗ (ಅಂಫೀಬಿಯ)

ಈ ವರ್ಗದ ಪ್ರತಿನಿಧಿಗಳಾಗಿ ಕಪ್ಪೆ, ನೆಲಗಪ್ಪೆ, ಇತ್ತಲೆ ಮಂಡಲ, ರಾನ, ಹೈಲ, ನನೊಬಟ್ರಾಕಸ್, ಫಿಲೊಟಸ್, ರಾಮನೆಲ್ಲ, ಮೈಕ್ರೊಹೈಲ ಮೊದಲಾದ ಜಾತಿಯ ಕಪ್ಪೆಗಳೂ ಬ್ಯೂಫೋ, ಯೂಪರೊಡಾನ್ ಮೊದಲಾದ ನೆಲಗಪ್ಪೆಯ ಜಾತಿಗಳೂ ಕಂಡುಬರುತ್ತವೆ. ಕಾಲುಗಳಿಲ್ಲದ ಭೂ ಜಲಚರಿ ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದಲ್ಲಿ ಸಿಗುವ ಇಕ್ತಿಲೆಮಂಡಲ (ಇಕ್ತಿಯಾಫಿಸ್ ಗ್ಲೂಟಿ ನೋಸಸ್). ಇದು ಜೌಗುಪ್ರದೇಶದಲ್ಲಿ ಬಿಲದಲ್ಲಿ ಹುದುಗಿ ಜೀವಿಸುತ್ತದೆ. ಸಂತಾನೋತ್ಪತ್ತಿ ಕಾಲದಲ್ಲಿ ಮೊಟ್ಟೆಗಳ ಗೊಂಚಲಿನ ಸುತ್ತ ತನ್ನ ದೇಹವನ್ನು ಸುರುಳಿಯಂತೆ ಸುತ್ತಿ ಸಂತಾನಪಾಲನೆ ಮಾಡುತ್ತದೆ.

### ಮತ್ಸ್ಯವರ್ಗ (ಪಿಸೀಸ್)

ಮೀನಿನ ಸಂಪತ್ತು ಕರ್ನಾಟಕದಲ್ಲಿ ಅಧಿಕ. ನಾನಾ ತರದ ಮೀನುಗಳು ಕಡಲು, ನದಿ, ಕೆರೆ, ಕಟ್ಟೆ ಮೊದಲಾದವುಗಳಲ್ಲಿ ದೊರಕುತ್ತವೆ. ಸಿಹಿನೀರಿನಲ್ಲಿ ಸಾಮಾನ್ಯವಾಗಿ ಬರಿಯ ಎಲುಬು ಮೀನುಗಳು ಕಂಡುಬಂದರೆ, ಕಡಲಿನ ಉಪ್ಪು ನೀರಿನಲ್ಲಿ ಎಲುಬು ಮತ್ತು ಮೆಲ್ಲೆಲುಬು ಮೀನುಗಳೆರಡೂ ಜೀವಿಸುತ್ತವೆ.

ಕಡಲಿನ ಮೆಲ್ಲೆಲುಬು ಮೀನುಗಳು ವಿವಿಧ ಬಗೆಯವು. ಇವುಗಳಲ್ಲಿ ನೇರವಾಗಿ ಮರಿಗಳನ್ನೇ ಹೆರುವಂಥ ಸೊರಮೀನು ಅಥವಾ ಚಾಟೇಮೀನು (ಸ್ಕೋಲಿ ಯೋಡಾನ್). ಕೊಡತಿಮೀನು (ಲೈಗೋನ ಬ್ಲಾಕಿ) ಮತ್ತು ಹುಲಿಮೀನು (ಸ್ಟೀಗೋಸ್ಟೋಮ) ಮೊದಲಾದುವೂ ಮೊಟ್ಟೆಗಳನ್ನಿಡುವಂಥ ಚಿಟ್ಟೆಮೀನು (ರೇ ಫಿಷ್), ನೀರುಮಂದಿ ಮೀನು (ಸ್ಕೇಟ್), ಗರಗಸ ಮೀನು (ಪ್ರಿಸ್ಟಿಸ್) ಮುಖ್ಯವಾದವು. ಇವುಗಳಲ್ಲಿ ಕೆಲವನ್ನು ಆಹಾರವಾಗಿ ಬಳಸುವರು. ಕೆಲವು ಬಗೆಯ ಮೀನುಗಳ ಈಲಿಯಿಂದ ಎಣ್ಣೆಯನ್ನು ತೆಗೆಯುವುದುಂಟು. ಎಲುಬುಮೀನುಗಳಲ್ಲಿ ಮುಖ್ಯವಾದುವು ಮ್ಯಾಕರಲ್, ಬೈಗೆ ಅಥವಾ ಬೂತಾಯಿ (ಸಾರ್ಡಿನ್) ಬಂಗುಡೆ (ಸ್ಕಾಂಬರ್ ಮೈಕ್ರೋಲೆಪಿಡೋಟಸ್), ತೇಡೆ (ಈರಿಯಸ್ ಡಸ್ಸುಮಿಯರಿ), ದೊರಸ್ (ಕೈರೋಸೆಂಟ್ರಸ್ ದೊರಸ್), ಮಲೆಟ್ (ಪಾಂಫ್ರೆಟ್ ಸ್ಟನೇಟಿಯಸ್), ಒಂದು ಬಗೆಯ ಹಾವುಮೀನು (ಒಫಿಕ್ತಿಸ್ ಬೋರೊ) ಮತ್ತು ಟ್ಯೂನ. ಇವುಗಳಲ್ಲಿ ಬಲುರುಚಿಯಾದ ಮೀನುಗಳೆಂದು ಹೆಸರಾದ ಮ್ಯಾಕರಲ್, ಬೈಗೆ, ಬಂಗುಡೆ ಮುಂತಾದವನ್ನು ಬೆಸ್ತರು ಮಾರಿಬಲೆಗಳ ಸಹಾಯದಿಂದ ರಾಶಿಗಟ್ಟಲೆಯಾಗಿ ಹಿಡಿಯುತ್ತಾರೆ. ಕಡಲುಮೀನುಗಳೆಲ್ಲ ಹೆಚ್ಚಾಗಿ ಸಮುದ್ರದ ಉಪ್ಪುನೀರಿಗೆ ಸೀಮಿತವಾಗಿದ್ದರೂ ಕೆಲವು ಬಾರಿ ನದೀಮುಖಜ ಭೂಮಿ ಪ್ರದೇಶಗಳಲ್ಲೂ ಕಂಡುಬರುವುದುಂಟು.

ನದಿಗಳಲ್ಲಿ ದೊರಕುವ ಮೀನುಗಳಲ್ಲಿ ಮುಖ್ಯವಾದವು–ಕಾರ್ಪ್, ಕಟ್ಲಮೀನು (ಕಾಟ್ಲ), ರೋಹಮೀನು ಅಥವಾ ಮಂಡಕಾರ್ಲು (ಲೇಬಿಯೋ ರೋಹಿತ), ಕೆಮ್ಮೀನು (ಲೇಬಿಯೋ ಫಿಂಬ್ರಿಯೇಟಸ್), ಕುರಿಮೀನು (ಲೇ. ಕಾಲ್ಬಸ್), ಕಮ್ಮಚ್ಚಲು (ಲೇ. ಕಲ್ಬಾಸು), ಮಷೀರ್ ಮೀನು (ಬಾರ್ಬಸ್), ಕನ್ನಡಿಮೀನು (ಮಿರರ್ ಕಾರ್ಪ್), ಗೆಂಡೆಮೀನು (ಪಂಕ್ಟಿಯಸ್ ಕರ್ನಾಟಿಕಸ್) ಮತ್ತು ಕೂರಲ ಮೀನು (ಪಂ. ಡೂಬಿಯಸ್), ಬೆಟ್ಟಗುಡ್ಡಗಳ ಝರಿಗಳಲ್ಲಿ ಅರ್ಜಮೀನು (ಸಿರಿನ ರೇಬ) ಮತ್ತು ಸುರಾಯಿ ಅಥವಾ ಮೃಗಾಲಮೀನು (ಸಿ. ಮೃಗಾಲ) ಸಿಕ್ಕುತ್ತವೆ. ಮೀಸೆ ಮೀನು (ಕ್ಯಾಟ್ ಫಿಷ್), ಬಾಳೆಮೀನು (ವಲಾಗೊ ಅಟ್ಟು), ಕೆತ್ತಲು ಮೀನು (ಮಿಸ್ಟಸ್ ಜಾತಿ) ಮೊದಲಾದ ದೊಡ್ಡ ಗಾತ್ರದ ಮೀನುಗಳೂ ಚೇಳುಮೀನು (ಹೆಟರೋನ್ಯೂಸ್ಟಸ್ ಫಾಸಿಲಿಸ್), ಅಣೆಮೀನು (ಕ್ಲೇರಿಯಸ್ ಜಾತಿ) ಮುಂತಾದ ಸಣ್ಣ ಗಾತ್ರದ ಮೀನುಗಳೂ ಕೆರೆಕಟ್ಟೆಗಳಲ್ಲಿ ಸಾಮಾನ್ಯ. ಸಣ್ಣಗಾತ್ರದ ಮೀನುಗಳು ತಮ್ಮಲ್ಲಿನ ಆನುಷಂಗಿಕ ಶ್ವಾಸನಾಂಗಗಳ ಸಹಾಯದಿಂದ ಗಾಳಿಯನ್ನೇ ನೇರವಾಗಿ ಉಸಿರಾಡಬಲ್ಲವು. ಹರಿಯುವ ನದಿತೊರೆಗಳಲ್ಲೂ ಕೆರೆಕಟ್ಟೆಗಳಲ್ಲೂ ಜೀವಿಸುವ ಮೀನುಗಳೂ ಇವೆ; ಚೌಲು ಮೀನು (ಚಾನಾ ಮರೂಲಿಯಸ್), ಕೊರವಮೀನು (ಚಾ. ಸ್ಟ್ರಯೇಟಸ್), ಕುಚ್ಚುಮೀನು (ಚಾ. ಗೌಡ), ಹೂವುಮೀನು (ಚಾ. ಪಂಕ್ಟೇಟಸ್), ಹಾವುಮೀನು (ಚೇಲ), ಅಗಸಗಿತ್ತಿ ಮೀನು (ಬಾರಿಲಿಯಸ್)–ಇವು ಮುಖ್ಯವಾದವು. ಸಿಹಿನೀರಿನ ಮೀನುಗಳಲ್ಲಿ ಬಹುಬಗೆಯವು ತಿನ್ನಲು ಯೋಗ್ಯವಾದುದಾದರೂ ಕಾರ್ಪ್, ಮೀಸೆಮೀನು, ಬಾಳೆಮೀನು, ಗೆಂಡೆಮೀನು, ಔಲುಮೀನು, ಹಾವುಮೀನು, ಮಷೀರ್‌ಮೀನುಗಳು ಬಲುರುಚಿಯಾದ ಮೀನುಗಳೆಂದು ಹೆಸರಾಗಿವೆ. ಇಂದು ನದಿಗಳಲ್ಲಿ ಮತ್ತು ತೊರೆಗಳಲ್ಲಿವಿಷಯುಕ್ತ ಮದ್ದನ್ನು ಅಥವಾ ಸಿಡಿಮದ್ದನ್ನು ಬಳಸಿ ಮೀನು ಹಿಡಿಯುವುದರಿಂದ ಬಹುತೇಕ ದೊಡ್ಡ ಜಾತಿಯ ಮೀನುಗಳ ಸಂತತಿ ನಶಿಸುತ್ತಿದೆ. ನೀರಾವರಿಗಾಗಿ ನದಿ, ತೊರೆಗಳ ನೀರಿಗೆ ಕಟ್ಟೆ ಮತ್ತು ಜಲಾಶಯಗಳನ್ನು ನಿರ್ಮಿಸುವುದರಿಂದ ನದಿ ಪಾತ್ರದಲ್ಲಿ ಬೇಸಿಗೆಯಲ್ಲಿ ನೀರಿನ ಬರದಿಂದ ದೊಡ್ಡ ತಳಿಯ ಮೀನುಗಳಿಗೆ ಆಶ್ರಯವಿಲ್ಲದೆ ನಶಿಸಿವೆ. ಹೆಚ್ಚಾಗಿ ಅರ್ಚುಪಟ್ಲೆ, ಮಳಲಿ ಮೀನಿನಂತಹ ಸಣ್ಣ ಗಾತ್ರದ ಮೀನುಗಳಷ್ಟೇ ಉಳಿದಿವೆ. ಜಲಾಶಯಗಳಲ್ಲಿ

ಮತ್ತು ಕೆರೆಗಳಲ್ಲಿ ಕಾಟ್ಲ ಮತ್ತಿತರ ಸಾಕು ಮೀನುಗಳು ಹಿಂದಿನ ಸ್ಥಳೀಯ ಮೀನು ಸಂತತಿಗಳ ಸ್ಥಾನವನ್ನಾಕ್ರಮಿಸಿವೆ.

**ಅಕಶೇರುಕಗಳು**

ಬೆನ್ನೆಲುಬಿಲ್ಲದ ಅಥವಾ ಅಕಶೇರುಕ ಪ್ರಾಣಿವಂಶದ ಪ್ರಾಣಿಗಳೂ ಕರ್ನಾಟಕದಲ್ಲಿ ವಿಪುಲವಾಗಿವೆ. ಪ್ರೋಟೋಜೋವ ವಂಶದ ಅಮೀಬ, ಯೂಗ್ಲಿನ, ಪ್ಯಾರಮೀಸಿಯಂ, ವೊರ್ಟಿಸೆಲ, ಯುಪ್ಲಾಟಿಸ್, ಸ್ಟೈಲೋನಿಕೆಯ ಮೊದಲಾದ ಹಲವು ಜೀವಜಾತಿಗಳು ಕೆರೆ ಕೊಳ ಮೊದಲಾದ ಜಲಾಶಯಗಳಲ್ಲಿ ಕಂಡು ಬರುತ್ತವೆ. ಮಲೇರಿಯ ಕಾಯಿಲೆಗೆ ಕಾರಣವಾದ ಪ್ಲಾಸ್ಮೋಡಿಯಂ ಜಾತಿಯ ಪರತಂತ್ರ ಜೀವಿಗಳೂ ಉಂಟು. ಇವೇ ಅಲ್ಲದೆ, ಇತರ ಜೀವಿಗಳ ದೇಹಗಳ ಪರತಂತ್ರ ಜೀವಿಗಳಾಗಿರುವ ಎಂಟಮೀಬ ಉಪಲೈನ, ಬ್ಯಾಲಂಟೇಡಿಯಂ, ನಿಕ್ಟೊತೀರಸ್ ಮೊದಲಾದ ಪರತಂತ್ರ ಜೀವಿಗಳೂ ಕಂಡುಬರುತ್ತವೆ. ರೇಷ್ಮೆ ಹುಳುಗಳಿಗೆ ಉಪದ್ರವ ಕಾರಿಯಾದ ಕೆಲವು ಬಗೆಯ ಏಕಕೋಶಿಕ ಜೀವಿಗಳೂ ಇವೆ.

ಕೆಲವು ಬಗೆಯ ಸ್ಪಂಜು ಪ್ರಾಣಿಗಳು ಕಡಲಿನಲ್ಲಿ ದೊರೆಯುತ್ತವೆ. ಇವು ಸಣ್ಣ ಸಣ್ಣ ಗಿಡಗಳು ಬೆಳೆಯುವಂತೆ ನೀರಿನಲ್ಲಿ ಬೆಳೆಯುತ್ತವೆ. ಸೀಲೆಂಟರೇಟ ಗುಂಪಿನ ಪ್ರಾಣಿಗಳಲ್ಲಿ ಹೈಡ್ರ ಎಂಬುದು ಕೆರೆಕೊಳಗಳಲ್ಲಿ ಕಂಡುಬರುತ್ತದೆ. ಉಳಿದೆಲ್ಲ ಬಗೆಯ ಜೀವಿಗಳು ಕಡಲಿನಲ್ಲಿ ವಾಸಿಸುತ್ತವೆ. ಬಂಡೆಗೆ ಅಂಟಿಕೊಂಡು ನೀರಿನಲ್ಲಿ ವಾಸಿಸುವ ಕಡಲ ಹೂಗಳು (ಸೀ ಆನಿಮೋನಿ) ವರ್ಣರಂಜಿತವಾಗಿವೆ. ನದಿಮುಖಗಳಲ್ಲಿ ಕಡಲ ಕರೆಗಳಲ್ಲಿ ಜೆಲ್ಲಿಫಿಷ್ ಅಥವಾ ಅಂಬಲಿಮೀನುಗಳು ತೇಲುತ್ತಿರುವುದು ಸಾಮಾನ್ಯ ದೃಶ್ಯ. ಅಲ್ಲಿಯ ಆಸುಪಾಸು ಜನರು ಇದನ್ನು ಸೂರ್ಯನ ಸಿಂಬಳ ಎಂದು ಕರೆಯುವುದುಂಟು.

ಚಪ್ಪಟೆದೇಹದ ಪ್ರಾಣಿಗಳ ಗುಂಪಿನಲ್ಲಿ ವಿವಿಧ ಜಾತಿಯ ಸ್ವತಂತ್ರಜೀವಿಗಳು ಜೌಗುಪ್ರದೇಶದಲ್ಲಿ ಕಲ್ಲುಗಳ ಕೆಳಗೆ ಹರಿದಾಡುವುದನ್ನು ಕಾಣಬಹುದು. ಪರತಂತ್ರ ಜೀವಿಗಳಾದ ಲಾಡಿಹುಳುಗಳೂ ಪಕ್ಷಿ, ಸಸ್ತನಿ ಮೊದಲಾದುವುಗಳ ಕರುಳಿನಲ್ಲೂ ಜೀವಿಸುತ್ತವೆ. ಇವನ್ನು ಕೋಲಾರ, ತುಮಕೂರು, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಕಾಣಬಹುದು. ಕುರಿಗಳ ಯಕೃತ್ತಿನಲ್ಲಿ ಪರತಂತ್ರ ಜೀವಿಗಳು ವಾಸಿಸುವುವು. ಆನೆಕಾಲುರೋಗಕ್ಕೆ ಕಾರಣವಾದ ದುಂಡುಹುಳು ಕಡಲುತೀರ ಪ್ರದೇಶಗಳ ಜಿಲ್ಲೆಗಳಲ್ಲಿ ವ್ಯಾಪಕವಾಗಿವೆ. 90.95 ಜನರ ಹೊಟ್ಟೆಯಲ್ಲಿ ಜಂತುಹುಳು, ಗುದದ ಹುಳುಗಳು ಸಾಮಾನ್ಯ ನಾರುಹುಣ್ಣಿನ ರೋಗವನ್ನುಂಟು ಮಾಡುವ ಡ್ರಾಕುಂಕ್ಯುಲಸ್ ಮೆಡಿನೆಸ್ಸಿಸ್ ಬಳ್ಳಾರಿ ಮತ್ತು ಚಿತ್ರದುರ್ಗಗಳಲ್ಲಿ ಹರಡಿವೆ. ಇದೇ ಅಲ್ಲದೆ ಸಸ್ಯವರ್ಗ ಮತ್ತು ಇತರ ಜೀವಿಗಳಲ್ಲಿ ಪರತಂತ್ರವಾಗಿರುವ ದುಂಡುಹುಳುಗಳೂ ಅನೇಕವಿವೆ.

ವಲಯವಂತ ವಂಶದ ಹುಳುಗಳ ಪ್ರತಿನಿಧಿಗಳು ಅನೇಕ ಜಾತಿಗಳಿಗೆ ಸಂಬಂಧಿಸಿವೆ. ಕಡಲಿನಲ್ಲಿರುವ ನೀರಿಸ್ ಮೊದಲಾದ ಸ್ವತಂತ್ರ ಜೀವಿಗಳು ಕಡಲತೀರದ ಬಂಡೆಗಳ ಬಿರುಕುಗಳಲ್ಲಿ ವಾಸಿಸುತ್ತವೆ. 10–15 ಬಗೆಯ ಎರೆಹುಳುಗಳಿವೆ. ಜೌಗು ಪ್ರದೇಶದಲ್ಲಿ ಹಾಗೂ ನೀರಿನ ಆಸರೆಯಲ್ಲಿ ತಾತ್ಕಾಲಿಕವಾಗಿ ಪರತಂತ್ರವಾಗಿ ಜೀವಿಸುವ ಜಿಗಣೆಗಳು ನಾಡಿನ ಹಲವೆಡೆ ದೊರೆತರೂ ಮಲೆನಾಡಿನ ಕಾಡುಗಳಲ್ಲಿ ಇವು ಅಧಿಕ. ಕಶೇರುಕಗಳ ರಕ್ತವೇ ಇವಕ್ಕೆ ಆಹಾರ. ಹಲವಾರು ಜಾತಿಯ ಜಿಗಣೆಗಳು, ಮೃದ್ವಂಗಿ ಮೊದಲಾದ ಪ್ರಾಣಿಗಳಲ್ಲಿ ಜೀವನ ಸಾಗಿಸುವುದೂ ಕಂಡುಬರುತ್ತದೆ.

ಮೃದ್ವಂಗಿಗಳ ಪ್ರತಿನಿಧಿಗಳಂತೂ ಅಪರಿಮಿತ. ಕಪ್ಪೆಚಿಪ್ಪಿನ ಪ್ರಾಣಿಗಳು ನದಿ ಮತ್ತು ದೊಡ್ಡ ಕೆರೆಗಳಲ್ಲಿ ವಾಸಿಸುತ್ತವೆ. ಪೈಲ ಜಾತಿಯ ಹಾಗೂ ಇತರ ಬಗೆಯ ಬಸವನ ಹುಳುಗಳು ಬೆಂಗಳೂರು ಮೈಸೂರು ಮಂಡ್ಯ ತುಮಕೂರು ಹಾಸನ ಜಿಲ್ಲೆಗಳ ತೋಟಗಳಲ್ಲಿ, ಕೆರೆಕಾಲುವೆಗಳಲ್ಲಿ ಸರ್ವೇ ಸಾಧಾರಣವಾಗಿ ಕಂಡುಬರುವ ಪ್ರಾಣಿಗಳು. ಸಮುದ್ರದ ದಂಡೆಯಲ್ಲಿ ಮೃದ್ವಂಗಿಗಳ ವಿವಿಧ ಜಾತಿಗಳು ವಿಪುಲವಾಗಿವೆ. ಕೈಟಾನ್ ಎಂಬ ಮೃದ್ವಂಗಿ ಕಡಲ ಬಂಡೆಗೆ ಅಂಟಿಕೊಂಡು ಜೀವಿಸುತ್ತದೆ. ವಿವಿಧ ಜಾತಿಯ ಶಂಖಪ್ರಾಣಿಗಳು ಕರ್ನಾಟಕದ ಕಡಲತೀರದಲ್ಲಿ ಬಹಳವಾಗಿವೆ. ಬೆಸ್ತರ ಬಲೆಗೆ ಲಾಲಿಗೊ ಸೆಪಿಯ ಮೊದಲಾದ ಶಿರಪಾದಿಗಳು ಬೀಳುತ್ತವೆ. ದೊಡ್ಡ ದೊಡ್ಡ ಸೆಪಿಯಗಳನ್ನು ಕಡಲ ತೀರದ ಜನರು ಆಹಾರವನ್ನಾಗಿ ಉಪಯೋಗಿಸುವುದುಂಟು. ಕಂಟಕಚರ್ಮಿಗಳು ಕಡಲ ತೀರಗಳಿಗೆ ಮಾತ್ರ ಸೀಮಿತ, ಮುಳ್ಳುಗೊಂಡೆ (ಸೀ ಅರ್ಚಿನ್) ಮತ್ತು ಪೆಡಸುನಕ್ಷತ್ರಗಳೇ (ಬ್ರಿಟಲ್ ಸ್ಟಾರ್) ನಕ್ಷತ್ರಮೀನುಗಳಿಗಿಂತ ಅಧಿಕಪ್ರಮಾಣದಲ್ಲಿ ಕಂಡುಬರುತ್ತವೆ. ಇವುಗಳ ಜಾತಿಯ ಸಂಖ್ಯೆಯೂ ಹೆಚ್ಚು. ಕಡಲ ಸೌತೆ, ಕಡಲ ಲಿಲಿಗಳೂ ಕರ್ನಾಟಕದ ಕಡಲಿನಲ್ಲಿ ದೊರೆಯುತ್ತವೆ. ಸಂಧಿಪದಿ ವಂಶದ ಪ್ರಾಣಿಸಂಪತ್ತು ಹೇರಳವಾಗಿದೆ ಮತ್ತು ವಿಭಿನ್ನವಾಗಿದೆ. ಬಗೆಬಗೆಯ ಸೀಗಡಿ, ಚಟ್ಲಿ, ಬೆಣಸ, ನಳ್ಳಿ, ಏಡಿ ಮೊದಲಾದವು ಈ ವಂಶಕ್ಕೆ ಸೇರಿದವು. ಇವು ಸಾಮಾನ್ಯವಾಗಿ ಮನುಷ್ಯನ ಆಹಾರವಾಗಿರುವುದುಂಟು.

ಕೀಟವರ್ಗದಲ್ಲಿ ಮನುಷ್ಯನ ದವಸಧಾನ್ಯಗಳಿಗೆ ಹಾಗೂ ಸಾಗುವಳಿ ಬೆಳೆಗಳಿಗೆ ಉಪದ್ರವವನ್ನುಂಟುಮಾಡುವ ಕೀಟಗಳಿವೆ. ಮಲೇರಿಯ, ಆನೆಕಾಲುರೋಗ ಮೊದಲಾದ ಕಾಯಿಲೆಗಳನ್ನು ಹರಡುವ ಸೊಳ್ಳೆಗಳಿವೆ. ಮಿಡತೆ, ಮೊರವ, ಚಿಟ್ಟೆ ಮತ್ತು ಪತಂಗ, ಕೊಡತಿಹುಳು, ಜೀರುಂಡೆ ಮೊದಲಾದ ಕೀಟಗಳಲ್ಲಿ ಹಲವು ಬಗೆಯ ಜಾತಿಗಳಿವೆ. ಮಾನವನಿಗೆ ಉಪಕಾರಿಗಳಾದ ಜೇನುನೊಣ ಮತ್ತು ರೇಷ್ಮೆಹುಳು ಕೀಟವರ್ಗಕ್ಕೆ ಸೇರಿದವು. ಮೈಸೂರು, ಕೊಳ್ಳೇಗಾಲ, ನಂಜನಗೂಡು, ಚನ್ನಪಟ್ಟಣ, ರಾಮನಗರ ಮೊದಲಾದ ಮುಖ್ಯ ಊರುಗಳ ಮತ್ತು ಅದರ ಆಸುಪಾಸು ಹಳ್ಳಿಗಳಲ್ಲಿ ರೇಷ್ಮೆಹುಳುಗಳನ್ನು ಜನರು ಸಾಕಿ ಲಾಭ ಪಡೆದರೆ, ಕೊಡಗು ಶಿವಮೊಗ್ಗಗಳನ್ನೊಳಗೊಂಡ ಮಲೆನಾಡಿನಲ್ಲಿ ಜೇನುನೊಣಗಳನ್ನು ಸಾಕಿ ಹಣ ಗಳಿಸುವ ಉದ್ಯಮ ಬೆಳೆಯುತ್ತಿದೆ. ನಿಶಾಚರಿಗಳಾದ ಜರಿ ಅಥವಾ ಶತಪದಿ (ಸ್ಕೊಲೋಪೆಂಡ್ರ) ಮನೆಮಠಗಳಲ್ಲಿ, ಬಯಲಿನಲ್ಲಿ ಕಂಡುಬರುತ್ತದೆ. ಇದು ಸಾಮಾನ್ಯವಾಗಿ ತೇವಪೂರಿತ ಶೀತಪ್ರದೇಶದಲ್ಲಿ ವಾಸಿಸುತ್ತದೆ. ಸಾವಿರಕಾಲು ಅಥವಾ ಚೆಗಟೆಗಳು (ಕಪ್ಪರಸುಂಟಿ) ಬಯಲು ಜೀವಿಗಳು, ನಿಧಾನವಾಗಿ ನಡೆಯತಕ್ಕವು; ಮತ್ತು ಮುಟ್ಟಿದರೆ ಸುರುಳಿ ಸುತ್ತಿಕೊಂಡು ಉಂಡೆಯಾಗುವ ಪ್ರವೃತ್ತಿಯುಳ್ಳವು. ಉಣ್ಣೆ, ಚೆಗಟಗಳು ನಾಯಿ ಹಸು ಮೊದಲಾದ ಸ್ತನಿಗಳ ಮೇಲೆ ಪರತಂತ್ರ ಜೀವನ ಸಾಗಿಸುವ ಜೀವಿಗಳು. ಜೇಡರ ಹುಳುಗಳ ಜೀವಜಾತಿಗಳಂತೂ ಅಧಿಕಸಂಖ್ಯೆಯಲ್ಲೇ ಕಂಡುಬರುತ್ತವೆ. ನೀಳಗಾಲಿನ ಗೋರ್ಕ ಹಾರ್ವೆಸ್ಟ್ ಮ್ಯಾನ್ ಸಿಹಿನೀರಿನ ಮೇಲೆ ಮಂದೆಗೂಡಿ ವಾಸಿಸುತ್ತವೆ. ಇವನ್ನು ಬತ್ತ ಕಬ್ಬು ಮೊದಲಾದ ಸಾಗುವಳಿ ಪ್ರದೇಶದಲ್ಲಿ ಕಾಣಬಹುದು. ಚೇಳುಗಳಲ್ಲಿ ಎರಡು ಮೂರು ಬಗೆಗಳಿವೆ. ಅಡಕೆ, ತೆಂಗು, ಬಾಳೆತೋಟಗಳಲ್ಲಿ ಚಿಟ್ಟೆಚೇಳು ಸಾಮಾನ್ಯವಾಗಿ ದೊರಕುತ್ತವೆ. ಇವು ಚೇಳಿನಂತೆಯೇ ಇರುತ್ತವೆ. ಆದರೆ ಉದರ ಚಿಕ್ಕದು, ಕೊಂಡಿಯಿರುವುದಿಲ್ಲ ಹೀಗೆ ಕರ್ನಾಟಕದ ಪ್ರಾಣಿಸಂಪತ್ತು ವೈವಿಧ್ಯ ಹಾಗೂ ವೈಪುಲ್ಯವಾಗಿದೆ.

(ಬಿ.ಎಸ್.ಬಿ;ಬಿ.ಡಿ.ಎಸ್.)

**ಪ್ರಾಣೇಶರಾವ್, ಬಿ.ಆರ್.**: 1927–2002. ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ ಹಾಗೂ ಅಂಗವಿಕಲರ ಅಭ್ಯುದಯಕ್ಕಾಗಿ ಶ್ರಮಿಸಿದವರು. ಇವರು 1927 ಆಗಸ್ಟ್ 11 ರಂದು ತುಮಕೂರು ಜಿಲ್ಲೆಯ ಬೆಳಗುಂದ

ಗ್ರಾಮದಲ್ಲಿ ಜನಿಸಿದರು. ತಂದೆ ರಂಗಪ್ಪ, ತಾಯಿ ಲಕ್ಷ್ಮೀ. ತಂದೆ ಮೈಸೂರು ಅರಮನೆಯಲ್ಲಿ ಮೊದಲು ಕೆಲಸಕ್ಕೆ ಸೇರಿ, ಅನಂತರ ಓವರ್ಸೀರ್ ಆಗಿ ಅಕಾಲ ಮರಣ ಹೊಂದಿದರು. ಆಗ ಪ್ರಾಣೇಶರಾಯರು ಒಂದು ವರ್ಷದ ಮಗು. ತೀವ್ರವಾದ ಬಡತನದಲ್ಲಿ ಬಾಲ್ಯ ಕಳೆಯಿತು. ಜೀವನ ನಿರ್ವಹಣೆಗಾಗಿ ಲಕ್ಷ್ಮೀಯವರು ತಮ್ಮ ನಾಲ್ಕು ಮಕ್ಕಳೊಂದಿಗೆ ನೆಲಮಂಗಲದ ಬಳಿಯಿದ್ದ ತಮ್ಮ ತೌರೂರು ಶ್ರೀಗಿರಿಗೆ (ಸಿರಿಗಿರಿಪುರ) ಹೋಗಿ ಸೇರಿದರು. ಅಲ್ಲೇ ಪ್ರಾಣೇಶ ರಾಯರು ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿದರು. ಮುಂದೆ ತಾಯಿಯೊಡನೆ ಬೆಂಗಳೂರು ಮತ್ತು ಮೈಸೂರುಗಳಿಗೆ ಬಂದು ಮೈಸೂರಿನಲ್ಲಿ ಪ್ರೌಢಶಾಲೆ ವಿದ್ಯಾಭ್ಯಾಸ ಪೂರೈಸಿದರು.



ಅಡುಗೆ ಮಾಡುವುದು ಇವರ ತಾಯಿಯವರ ಕಾಯಕವಾಗಿತ್ತು. 1942ರಲ್ಲಿ ಮೈಸೂರಿನ ಒಂಟಿಕೊಪ್ಪಲು ಬಡಾವಣೆಯಲ್ಲಿ ನೆಲೆನಿಂತರು. ಅಲ್ಲೇ 1942ರಲ್ಲಿ ಮೈಸೂರಿನ ಮಹಾರಾಜ ಪ್ರೌಢಶಾಲೆಗೆ ವ್ಯಾಸಂಗಕ್ಕಾಗಿ ಸೇರಿದರು. ಅಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಎಚ್. ಅನಂತರಾಮ ಎಂಬುವವರು ಇವರಿಗೆ ಅಧ್ಯಾಪಕರಾಗಿದ್ದರು. ಅವರ ಪ್ರಭಾವ ಇವರ ಮೇಲಾಯಿತು. ಮೈಸೂರಿನ ಸುಬ್ಬರಾಯನ ಕೆರೆಯಲ್ಲಿ ನಡೆಯುತ್ತಿದ್ದ ಸಭೆ ಸಮಾರಂಭಗಳಿಗೆ ವಿದ್ಯಾರ್ಥಿವೃಂದದೊಂದಿಗೆ ಮೆರವಣಿಗೆಯಲ್ಲಿ ಹೋಗಿ ಸೇರುತ್ತಿದ್ದರು. ಆ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟ ಚಳವಳಿಯ ಮುಖಂಡ ದಂಪತಿಗಳಾದ ಎಚ್. ಸಿ. ದಾಸಪ್ಪ ಮತ್ತು ಯಶೋಧರಮ್ಮ ಅವರ ಸಾಮೀಪ್ಯ ಇವರಿಗೆ ದೊರೆಯಿತು. ಮಹಾಜನ ಪ್ರೌಢಶಾಲೆಯ ವಿದ್ಯಾರ್ಥಿಗಳು ಜನರಲ್ಲಿ ರಾಷ್ಟ್ರೀಯತೆಯ ಬಗ್ಗೆ ಅರಿವು ಮೂಡಿಸುವ ಉದೇಶದಿಂದ ತಲಕ್ ಸಂಘ ಎಂಬುದನ್ನು ಪ್ರಾರಂಭಿಸಿದರು. ಈ ಸಂಘದ ಸಕ್ರಿಯ ಸದಸ್ಯರಾದ ಇವರು ವಿವಿಧ ಸಾಮಾಜಿಕ ಮತ್ತು ದೇಶ ಸೇವಾಕಾರ್ಯಗಳಲ್ಲಿ ನಿರತರಾದರು. ಮೈಸೂರು ನಗರದ ಪಡುವಾರ ಹಳ್ಳಿ ಬಡಾವಣೆಯಲ್ಲಿ ಇತರರೊಡನೆ ಸೇರಿ ಇವರು ವಯಸ್ಕರ ಶಿಕ್ಷಣ ಕೇಂದ್ರವನ್ನು ತೆರೆದರು. ದೊಡ್ಡ ನಾಯಕರ ಮತ್ತು ಸಾಹಿತಿಗಳ ಸಂಪರ್ಕ ಪಡೆದರು. ಶ್ರಮದಾನದಲ್ಲಿ ಭಾಗವಹಿಸಿ ಅಪ್ಪಟ ಗಾಂಧಿ ಅನುಯಾಯಿಗಳಾಗಿ ಪರಿವರ್ತಿತರಾದರು.

ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಓದುತ್ತಿರುವಾಗ ವಿದ್ಯಾರ್ಥಿ ಕಾಂಗ್ರೆಸ್‌ನ ಕಾರ್ಯದರ್ಶಿಯಾದರು. ಮುಂದೆ ಅಧ್ಯಕ್ಷರಾಗಿ ಅನೇಕ ಸಭೆ ಸಮ್ಮೇಳನಗಳನ್ನು ವ್ಯವಸ್ಥೆ ಮಾಡಿದರು. 1947ರಲ್ಲಿ ನಡೆದ ಜವಾಬ್ದಾರಿ ಸರ್ಕಾರ ಚಳವಳಿಯಲ್ಲಿ ಭಾಗವಹಿಸಿ, ಸೆರೆಮನೆವಾಸ ಅನುಭವಿಸಿದರು. 1948ರಲ್ಲಿ ಮತ್ತೊಮ್ಮೆ ಕಾರ್ಮಿಕ ಸಮ್ಮೇಳನವನ್ನು ಆಯೋಜಿಸಿ ಆಗಲೂ ಸೆರೆಮನೆವಾಸ ಅನುಭವಿಸಿದರು.

ಅರ್ಥಶಾಸ್ತ್ರದಲ್ಲಿ ಬಿ.ಎ. ಆನರ್ಸ್ ಪದವಿ ಪಡೆದು 1952ರಲ್ಲಿ ಯಶೋಧರಮ್ಮ ದಾಸಪ್ಪನವರ ಅರಸೀಕೆರೆ ಬಳಿಯ ಕಸ್ತೂರಿ ಬಾ ಗ್ರಾಮದ ಕಸ್ತೂರಿಬಾ ಟ್ರಸ್ಟ್‌ನಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿ ಗ್ರಾಮೀಣ ಮಹಿಳೆಯರ ಉದ್ಯೋಗ, ಸಂಘಟನೆ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ಮಯತೆಯಿಂದ ಕೆಲಸಮಾಡಿದ ಇವರು ಅಲ್ಲಿದ್ದುಕೊಂಡೇ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಗಳಿಸಿದರು. ಕಸ್ತೂರಿಬಾ ಗ್ರಾಮದಲ್ಲಿ ಎರಡು ವರ್ಷಗಳ ದುಡಿಮೆಯ ಅನಂತರ ಮೈಸೂರಿಗೆ ಬಂದು ಗಾಂಧಿ ಸ್ಮಾರಕ ನಿಧಿಯಲ್ಲಿ ಕೆಲಸಕ್ಕೆ ಸೇರಿದರು. 1956ರಲ್ಲಿ ಸೇತು ಸಾವಿತ್ರಿಯವರನ್ನೂ ಮದುವೆಯಾದರು.

ಗಾಂಧಿಸ್ಮಾರಕ ನಿಧಿಯಲ್ಲಿ ಕೆಲಸಕ್ಕಿದ್ದಾಗ ವಿದ್ವಾಂಸರಾದ ಯಾಮುನಾಚಾರ್ಯರ ಸಂಪಾದಕತ್ವದಲ್ಲಿ ಮಹಾತ್ಮಗಾಂಧಿ ಕುರಿತು ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ತರುವಲ್ಲಿ ಪರಿಶ್ರಮ ವಹಿಸಿದರು. ಅನಂತರ ಗಾಂಧಿ ವಿಚಾರ ಪರಿಷತ್ತಿನಲ್ಲೂ ದುಡಿದರು. ಈ ಸಂದರ್ಭಗಳಲ್ಲಿ ಇವರಿಗೆ ಸಂಪತ್‌ಗಿರಿರಾವ್, ಗೊರೂರು ರಾಮಸ್ವಾಮಿಅಯ್ಯಂಗಾರ್, ಸಿದ್ಧವನಹಳ್ಳಿ ಕೃಷ್ಣಶರ್ಮ, ಜಿ.ವಿ. ನಾರಾಯಣಮೂರ್ತಿ, ಖಾದ್ರಿಶಾಮಣ್ಣ, ಕೆ.ಎಸ್. ನಾರಾಯಣ ಸ್ವಾಮಿ, ನ.ಭದ್ರಯ್ಯ, ಪಟ್ಟಾಭಿರಾಮನ್ ಮೊದಲಾದವರ ಒಡನಾಟ ಲಭಿಸಿ, ಅನುಭವ ಸಂಪತ್ತು ಹೆಚ್ಚಿತು. ಇದೇ ಸಂದರ್ಭದಲ್ಲಿ ಸರ್ವೋದಯ ನೇತಾರರಾಗಿದ್ದ ವಿನೋಬಾ ಭಾವೆ ಅವರು ನಡೆಸುತ್ತಿದ್ದ ಭೂದಾನ-ಗ್ರಾಮದಾನ ಚಳವಳಿಯಲ್ಲಿ ಭಾಗವಹಿಸಿ ಅನೇಕ ಕಡೆ ಓಡಾಡಿದರು. ಇವರು ಪಿಎಚ್.ಡಿ. ಪದವಿಗಾಗಿ ಈ ಚಳವಳಿ ಕುರಿತು ಅಧ್ಯಯನದಲ್ಲಿ ತೊಡಗಿದ್ದರಾದರೂ ತಾಂತ್ರಿಕ ಕಾರಣದಿಂದ ಈ ಕೆಲಸ ಸಫಲವಾಗಲಿಲ್ಲ.

ಇವರು ಅರ್ಥಶಾಸ್ತ್ರ ಅಧ್ಯಾಪಕರಾಗಿ ಶಾರದಾವಿಲಾಸ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದರು (1961). ಗಾಂಧಿವಾದಿಯಾದ ಇವರು ಉತ್ತಮ ಅಧ್ಯಾಪಕರಾಗಿ ಸಂಘಟನಾ ಚತುರರಾಗಿ ಕೆಲಸ ನಿರ್ವಹಿಸಿದರು. ನಾಗರಿಕ ಹಕ್ಕುಗಳಿಗಾಗಿ ಜನತೆಯ ಒಕ್ಕೂಟ ಎಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಗಾಂಧಿ ಅಧ್ಯಯನ ಸಂಸ್ಥೆ ಮುಂತಾದ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

1980ರಲ್ಲಿ 'ಅಂಗವಿಕಲರ ಅಭ್ಯುದಯ ಸಂಘ'ವನ್ನು ಸ್ಥಾಪಿಸಿ, ಅಂಗವಿಕಲರಿಗೆ ಸಾರ್ವಜನಿಕ ದೂರವಾಣಿ ಕೇಂದ್ರಗಳು, ವಸತಿಸೌಲಭ್ಯ, ವೈದ್ಯಕೀಯ ಸೌಲಭ್ಯ, ವಿದ್ಯಾಭ್ಯಾಸ-ಮೊದಲಾದ ಅನುಕೂಲಗಳನ್ನು ಒದಗಿಸಿಕೊಡುವಲ್ಲಿ ಪರಿಶ್ರಮ ವಹಿಸಿದರು. ಹಾಗೆಯೇ ಮೈಸೂರುನಗರದ ಕುಕ್ಕರಹಳ್ಳಿಯ ಶಾಲಾ- ಅಭಿವೃದ್ಧಿಗಾಗಿಯೂ ಪ್ರಯತ್ನ ನಡೆಸಿದರು.

ಇವರು ಲೇಖಕರಾಗಿಯೂ ಪ್ರಸಿದ್ಧರಾಗಿದ್ದಾರೆ. ಭಾರತದ ಆಹಾರ ಸಮಸ್ಯೆ, ಕಾಶ್ಮೀರ ಸಮಸ್ಯೆ, ಲಾಲ್ ಬಹದ್ದೂರ್ ಶಾಸ್ತ್ರಿ, ರಾಜರಾಮ ಮೋಹನರಾಯ್, ಗೋಪಾಲಕೃಷ್ಣಗೋಖಲೆ, ರಾಜೇಂದ್ರ ಪ್ರಸಾದ್ ಮುಂತಾದ 12 ಕೃತಿಗಳನ್ನು ಬರೆದಿದ್ದಾರೆ. ಸರಳ ಹಾಗೂ ಸುಭಗತೆಯ ಶೈಲಿಯಿಂದ ಇವರ ಕೃತಿಗಳು ಓದುಗರನ್ನು ಆಕರ್ಷಿಸುತ್ತವೆ. ಇವರನ್ನು ಕುರಿತು 'ಗಾಂಧೀಚಿಂತನ' ಎಂಬ ಸದ್ಭಾವನಾಗ್ರಂಥ ಪ್ರಕಟವಾಗಿದೆ. ಒಬ್ಬ ಅಪ್ಪಟ ಗಾಂಧಿವಾದಿ ಮತ್ತು ದೇಶ ಪ್ರೇಮಿಯಾಗಿದ್ದ ಇವರು ಸರಳ ಜೀವನ ಮತ್ತು ಉನ್ನತ ಚಿಂತನೆಯಲ್ಲಿ ನಂಬಿಕೆ ಇಟ್ಟಿದ್ದವರು. ಕೊನೆಯವರೆಗೂ ಖಾದಿ ತೊಡುತ್ತಿದ್ದರು. ಸದಾ ಸಕ್ರಿಯರಾಗಿದ್ದ ಇವರು 2002 ಡಿಸೆಂಬರ್ 26ರಂದು ನಿಧನ ಹೊಂದಿದರು. **(ಎಚ್.ಡಿ.)**

**ಪ್ರಾಥಮಿಕಪೂರ್ವ ಶಿಕ್ಷಣ:** ಭಾರತದ ಪ್ರಾಥಮಿಕ ಪೂರ್ವ ಶಿಕ್ಷಣ ಪಾಶ್ಚಾತ್ಯ ವಿದ್ಯಾತಜ್ಞರುಗಳಾದ ಕೊಮಿನಿಯಸ್, ಫ್ರೋಬೆಲ್, ಮಾಂಟಿಸೋರಿ ಮೊದಲಾದವರಿಂದ ಪ್ರಭಾವಿತವಾಗಿ ರೂಪುಗೊಂಡದ್ದು. ಈ ಶಿಕ್ಷಣ ಭಾರತದಲ್ಲಿ 20ನೆಯ ಶತಮಾನದ ಆದಿಭಾಗದಲ್ಲಿ ಆರಂಭವಾಯಿತೆನ್ನಬಹುದು. ಈ ಶಿಕ್ಷಣ ನೀಡುವ ಶಾಲೆಗಳನ್ನು ಸ್ಥಾಪಿಸುವುದರಲ್ಲಿ ಕ್ರೈಸ್ತ ಮಿಷನರಿಗಳ ಪಾತ್ರ ಪ್ರಮುಖದಾಗಿತ್ತು. 1939ರಲ್ಲಿ ಮೇಡಂ ಮಾಂಟಿಸೋರಿಯವರು ಭಾರತಕ್ಕೆ ಪ್ರವಾಸಾರ್ಥವಾಗಿ ಭೇಟಿ ಕೊಟ್ಟಾಗಿ

ನಿಂದ ಪ್ರಾಥಮಿಕ ಪೂರ್ವ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಿತು. 1944ರ ಸಾರ್ಜೆಂಟ್ ವರದಿ ಈ ಶಿಕ್ಷಣ ಹೆಚ್ಚು ಪ್ರಖ್ಯಾತಿ ಪಡೆಯಲು ಪೋಷಕವಾಯಿತು. ಸ್ವಾತಂತ್ರ್ಯಾನಂತರ ರೂಪುಗೊಂಡ ಪಂಚವಾರ್ಷಿಕ ಯೋಜನೆಗಳು ಈ ಶಿಕ್ಷಣಕ್ಕೆ ಹಣ ಒದಗಿಸದಿದ್ದರೂ ಈ ಶಿಕ್ಷಣದ ಹೊಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿದುವು. 1961ರಲ್ಲಿ ಸೇರಿದ ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಪ್ರಾಥಮಿಕಪೂರ್ವ ಶಿಕ್ಷಣದ ಮಹತ್ತ್ವವನ್ನು ಒತ್ತಿ ಹೇಳಿತು. 3ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಹಣ ಒದಗಿಸಲಾಯಿತು. ಆದರೂ ಈ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕಲಿಲ್ಲ. ಅದು ಕೇವಲ ಖಾಸಗಿ ಸಂಸ್ಥೆಗಳ ಆಶ್ರಯದಲ್ಲಿ ನಡೆದುಕೊಂಡು ಬರುತ್ತಿದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಹಿಂದಿನ ಮೈಸೂರು ಮಹಾರಾಜರು 1906ರಲ್ಲಿ ಎಚ್.ಜೆ. ಬಾಬಾ ಎಂಬ ನಿವೃತ್ತ ಶಿಕ್ಷಣಾಧಿಕಾರಿಯನ್ನು ಪಾಶ್ಚಾತ್ಯ ದೇಶಗಳಿಗೆ ಕಳುಹಿಸಿ ಮಕ್ಕಳ ನೂತನ ಶಿಕ್ಷಣ ಕ್ರಮಗಳನ್ನು ಅಧ್ಯಯನ ಮಾಡಲು ವ್ಯವಸ್ಥೆ ಮಾಡಿದರು. ಅಲ್ಲದೆ ಲಂಡನ್ ನಗರದಲ್ಲಿ ಬಾಲೋದ್ಯಾನಕ್ರಮದ ಪ್ರತ್ಯಕ್ಷ ಅನುಭವ ಹೊಂದಿದ್ದ ಮಿಸ್ ಲ್ಯಾಟರ್ ಎನ್ನುವವರನ್ನು ಕರೆಯಿಸಿ ಉಪನ್ಯಾಸಗಳನ್ನು ಕೊಡಿಸುವುದರ ಮೂಲಕ ಪ್ರಾಥಮಿಕ ಪೂರ್ವ ಶಿಕ್ಷಣಕ್ಕೆ ಮಾರ್ಗದರ್ಶನ ನೀಡಿದರು. ಈ ಪ್ರಯತ್ನಗಳಿಂದ 1911-12ರಲ್ಲಿ ಚಿತ್ರದುರ್ಗದಲ್ಲಿ ಬಾಲೋದ್ಯಾನವೊಂದು ಪ್ರಾರಂಭವಾಯಿತು. ಅಲ್ಲಿ ಅಭ್ಯಾಸ ಮಾಡುತ್ತಿದ್ದ ಮಕ್ಕಳ ಸಂಖ್ಯೆ 10 ಮಾತ್ರ. ಅದೇ ಶಾಲೆಯಲ್ಲಿ ಇಬ್ಬರು ಶಿಕ್ಷಕರಿಗೆ ತರಬೇತಿಯನ್ನು ಕೊಡಲಾಯಿತು. ಹೀಗೆ ಪ್ರಾಥಮಿಕಪೂರ್ವ ಶಿಕ್ಷಣದ ತರಬೇತಿಯನ್ನು ಪ್ರಾರಂಭಿಸಲಾಯಿತು. 1914-15ರಲ್ಲಿ ಬೆಂಗಳೂರು ಮತ್ತು ದಾವಣಗೆರೆಗಳಲ್ಲೂ ಇನ್‌ಫೆಂಟ್ ಶಾಲೆಗಳು ಹೊಸದಾಗಿ ಆರಂಭವಾದವು. 1921ರಲ್ಲಿ ಶಿಕ್ಷಣದ ಸ್ವರೂಪವನ್ನು ಪುನರ್ರಚಿಸಿ ನಾಲ್ಕುವರ್ಷ ಅಭ್ಯಾಸಕ್ರಮವನ್ನು ರೂಪಿಸಿ ತೀರ ಕೆಳಗಿನ ತರಗತಿಗಳನ್ನು ಬಾಲೋದ್ಯಾನ ಮಾದರಿಗೆ ಪರಿವರ್ತನೆಗೊಳಿಸಬೇಕೆಂದು ನಿರ್ಧರಿಸಲಾಯಿತು. 1930ರಲ್ಲಿ ಎಂ.ವಿ. ಗೋಪಾಲಸ್ವಾಮಿಯವರು ಮೈಸೂರಿನಲ್ಲಿ ಮೊದಲನೆಯ ಶಿಶುವಿಹಾರವನ್ನು ಸ್ಥಾಪಿಸಿದರು. ಈ ಶಾಲೆಯ ಸ್ಥಾಪನೆಯಿಂದ ಶಿಶುವಿಹಾರ ಚಳವಳಿ ಪ್ರಾರಂಭವಾಯಿತೆನ್ನಬಹುದು. ಇಲ್ಲಿನ ಚಟುವಟಿಕೆಗಳನ್ನು ಶಿಶುವಿನ ಶಾರೀರಿಕ ಹಾಗೂ ಮಾನಸಿಕ ಬೆಳೆವಣಿಗೆಯ ತಳಹದಿಯ ಮೇಲೆ ಯೋಜಿಸಲಾಯಿತು. ಹೊಸದಾಗಿ ಆರಂಭವಾಗುವ ಶಿಶುವಿಹಾರಗಳಿಗೆ ಇದು ಮಾದರಿಯಾಗಿ ಪರಿಣಮಿಸಿತು. ಮೈಸೂರಿನ ಈ ಶಾಲೆಯಲ್ಲಿ ತರಬೇತಿ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಗೆ ಅವಕಾಶ ಮಾಡಿಕೊಡಲಾಯಿತು. 1936ರಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಶಿಶುವಿಹಾರ ಸಮಿತಿ ಶಾಲೆಯಲ್ಲಿ ಮಕ್ಕಳ ದಾಖಲಾತಿ, ಅನುಸರಿಸಬೇಕಾದ ಕ್ರಮ, ವ್ಯಾಪ್ತಿ, ಮಕ್ಕಳ ಆರೋಗ್ಯ, ಒದಗಿಸಬೇಕಾದ ಆಹಾರ, ಕಟ್ಟಡ, ಸಾಧನಸಾಮಗ್ರಿಗಳು, ಶಿಕ್ಷಣ ಸಿಬ್ಬಂದಿ ಮತ್ತು ಅವರ ಶೈಕ್ಷಣಿಕ ಅರ್ಹತೆ ಮುಂತಾದ ಸಮಸ್ಯೆಗಳನ್ನು ಸೂಚಿಸಿ ವರದಿ ಸಲ್ಲಿಸಿತು. 1946-47ರಲ್ಲಿ ಶಿಶುವಿಹಾರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲು ಪ್ರೋತ್ಸಾಹಿಸಲು ಸಹಾಯಧನ ನಿಯಮವನ್ನು ತಿದ್ದುಪಡಿ ಮಾಡಲಾಯಿತು. ಮೈಸೂರಿನಲ್ಲಿರುವ ಹೆಣ್ಣುಮಕ್ಕಳ ತರಬೇತಿ ಕಾಲೇಜಿನಲ್ಲಿ ನರ್ಸರಿ ಶಿಕ್ಷಕರ ತರಬೇತಿ ಕೇಂದ್ರವನ್ನು 1947ರಲ್ಲಿ ಪ್ರಾರಂಭಿಸಲಾಯಿತು. ತರಬೇತಿಯನ್ನು ಪಡೆಯುವ ಶಿಕ್ಷಣಾರ್ಥಿಗಳಿಗೆ ಸ್ಟೈಪೆಂಡ್ ಕೊಡಲಾಗುತ್ತಿತ್ತು. ಸ್ವಾತಂತ್ರ್ಯಾನಂತರ ಶಿಕ್ಷಣದ ಬಗ್ಗೆ ಹೆಚ್ಚು ಅರಿವುಂಟಾದ ಕಾರಣ ಪ್ರಾಥಮಿಕಪೂರ್ವ ಶಿಕ್ಷಣ ಕೇಂದ್ರಗಳೂ ಹೆಚ್ಚು ಹೆಚ್ಚಾಗಿ ಸ್ಥಾಪಿತವಾಗಿವೆ. ಈ ಶಿಕ್ಷಣ ಕೇಂದ್ರಗಳು ಕರ್ನಾಟಕದಲ್ಲಿ ಸರ್ಕಾರ, ಖಾಸಗಿ ಮತ್ತು ಸ್ಥಳೀಯ ಸಂಸ್ಥೆಗಳ ಆಶ್ರಯದಲ್ಲಿ ನಡೆಯುತ್ತಿವೆ. ಸರ್ಕಾರ ಗ್ರಾಮಾಂತರ ಪ್ರದೇಶದಲ್ಲಿ ಸೇ.70ರಷ್ಟು ಮತ್ತು ಪಟ್ಟಣಗಳಲ್ಲಿ ಸೇ. 50ರಷ್ಟು ಧನಸಹಾಯವನ್ನು ಕೊಡತೊಡಗಿತು.

ವಿಶಾಲ ಕರ್ನಾಟಕದ ಹೈದರಾಬಾದ್ ಪ್ರಾಂತ್ಯದಲ್ಲಿ ಪ್ರಾಥಮಿಕಪೂರ್ವ ಶಿಕ್ಷಣ ಇರಲಿಲ್ಲ. ಇನ್‌ಫೆಂಟ್ ತರಗತಿಗಳನ್ನು ಪ್ರಾಥಮಿಕ ಶಾಲೆಗಳಿಗೆ ಸೇರಿಸಲಾಗಿತ್ತು. ಹಳೆಯ ಮುಂಬಯಿ ಪ್ರಾಂತ್ಯದಲ್ಲಿ ಇನ್‌ಫೆಂಟ್ ಶಾಲೆಗಳು ಪ್ರತ್ಯೇಕವಾಗಿ ನಡೆಯುತ್ತಿದ್ದುವು. ಈ ಶಾಲೆಗಳಿಗೆ ಒಟ್ಟು ಖರ್ಚಿನ ಸೇ. 25ರಷ್ಟು ಮಾತ್ರ ಧನಸಹಾಯ ಬರುತ್ತಿತ್ತು. ಶುಲ್ಕವನ್ನು 2 ರೂ.ಗೆ ಮೀರದಂತೆ ವಿಧಿಸಲಾಗುತ್ತಿತ್ತು. ಹಿಂದಿನ ಮದರಾಸು-ಕರ್ನಾಟಕದಲ್ಲಿ ನರ್ಸರಿ ಶಾಲೆಗಳನ್ನೊಳಗೊಂಡ ಪ್ರಾಥಮಿಕ ಶಾಲೆಗಳು ಇದ್ದುವು. ಇಂಥ ಶಾಲೆಗಳಿಗೆ ವಿಶೇಷ ರೀತಿಯ ಧನಸಹಾಯ ನೀಡುವ ವ್ಯವಸ್ಥೆಯಿತ್ತು.

ಈಚೆಗೆ ಸಮಾಜಕಲ್ಯಾಣ ಇಲಾಖೆ, ಖಾಸಗಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಮಹಿಳಾ ಮಂಡಳಿಗಳು ಈ ಶಿಕ್ಷಣದ ಹೊಣೆಯನ್ನು ನಿರ್ವಹಿಸತೊಡಗಿವೆ. ಪ್ರಾಥಮಿಕಪೂರ್ವ ಶಿಕ್ಷಣ ನರ್ಸರಿ, ಮಾಂಟಿಸೋರಿ ಮುಂತಾದ ಹೆಸರುಗಳ ಶಾಲೆಗಳಲ್ಲಿ ನಡೆಯುತ್ತಿದೆ. ಈಗ ಕರ್ನಾಟಕದಲ್ಲಿ 1100ಕ್ಕೂ ಹೆಚ್ಚು ಶಾಲೆಗಳಿವೆ, ಅಲ್ಲಿ ಮಕ್ಕಳ ಮತ್ತು ಉಪಾಧ್ಯಾಯರ ಪ್ರಮಾಣ 40:1 ಇರುತ್ತದೆ. ಈ ಶಾಲೆಗಳು ಸಾಮಾನ್ಯವಾಗಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿದ್ದು, ಇತ್ತೀಚೆಗೆ ಪ್ರಮುಖ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸ್ಥಾಪಿತವಾಗಿವೆ.

ಪ್ರಾಥಮಿಕಪೂರ್ವ ಶಾಲೆಗಳಲ್ಲಿ ನಡೆಯುವ ಬೋಧನೆ ಯಾವ ಔಪಚಾರಿಕ (ಫಾರ್ಮಲ್) ಶಿಕ್ಷಣವನ್ನೂ ನೀಡುವುದಿಲ್ಲ. ಮಕ್ಕಳ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಶಕ್ತಿಗಳ ಬೆಳವಣಿಗೆಯನ್ನು ವೃದ್ಧಿಸುವುದೇ ಇವುಗಳ ಮುಖ್ಯ ಉದ್ದೇಶವಾಗಿರುತ್ತದೆ. ಅಲ್ಲಿ ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಸೇರಲು ಅಗತ್ಯ ಸಿದ್ಧತೆ ದೊರಕಿಸಿಕೊಡಲಾಗುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳು, ಆಟ, ಊಟ, ವಿಶ್ರಾಂತಿ, ಕಥೆ, ಹಾಡು, ಸಂಭಾಷಣೆ, ಕೈಕೆಲಸ, ಪ್ರಾಥಮಿಕ ಸ್ವರೂಪದ ಗಣಿತ, ಕ್ರಿಯಾತ್ಮಕ ಚಟುವಟಿಕೆಗಳು, ಓರಣ, ನಿಯಮಿತತನ, ಒಳ್ಳೆಯ ಮಾತುಗಾರಿಕೆ ಮುಂತಾದವನ್ನು ಅಭ್ಯಾಸಮಾಡಿಸಲಾಗುತ್ತದೆ. ಕಿಂಡರ್‌ಗಾರ್ಟನ್, ಮಾಂಟಿಸೋರಿ ಮಾದರಿಯ ಶಾಲೆಗಳಲ್ಲಿ ಕೆಲವು ಕಡೆ ಇಂಗ್ಲಿಷ್ ಮಾಧ್ಯಮ ಇರುತ್ತದೆ. ಉಳಿದ ಶಾಲೆಗಳಲ್ಲಿ ತಾಯ್ನುಡಿಯೇ ಮಾಧ್ಯಮವಾಗಿರುತ್ತದೆ. ಮಗುವಿನ ಜ್ಞಾನೇಂದ್ರಿಯ ಮತ್ತು ಕ್ರಿಯೇಂದ್ರಿಯಗಳ ತರಬೇತಿಗೆ ಹೆಚ್ಚು ಪ್ರಾಮುಖ್ಯ ನೀಡಲಾಗುತ್ತದೆ. ಬಣ್ಣಬಣ್ಣದ ಕಡ್ಡಿಗಳನ್ನು ಜೋಡಿಸುವುದು, ವಿವಿಧ ಗಾತ್ರದ ಮರದ ತುಂಡುಗಳಿಂದ ಆಕೃತಿ ನಿರ್ಮಿಸುವುದು. ತುಂಡುಗಳನ್ನು ಮತ್ತು ವಸ್ತುಗಳನ್ನು ಜೋಡಿಸುವುದು, ಬಣ್ಣಬಣ್ಣದ ಗೋಲಿಗಳ ಮೂಲಕ ಸಂಖ್ಯೆ ಮತ್ತು ಎಣಿಕೆ ರೂಢಿಮಾಡಿಸುವುದು, ಮಣ್ಣಿನಲ್ಲಿ ಗೋಲಿ ಮಾಡಿಸುವುದು, ಇತರ ರೀತಿಯ ಆಕೃತಿಗಳನ್ನು ಮಾಡಿಸುವುದು, ಬಣ್ಣದ ಕಾಗದದಿಂದ ವಿವಿಧ ಆಕೃತಿ ಕತ್ತರಿಸುವುದು, ಗೋಪುರ ಮಾಡಿಸುವುದು, ಮರಳಿನಲ್ಲಿ ಆಟವಾಡಿಸುವುದು, ಟೋಪಿಯಾಟ, ರೈಲಿನ ಆಟ ಆಡಿಸುವುದು, ಸರಳ ಪ್ರಾಸಬದ್ಧ ಹಾಡುಗಳನ್ನು ಹಾಡಿಸುವುದು, ಕಥೆ ಹೇಳಿಸುವುದು, ನೃತ್ಯ ಕಲಿಸುವುದು, ಚಿತ್ರಗಳನ್ನು ಬರೆಯಿಸಿ ಬಣ್ಣ ಹಚ್ಚಿಸುವುದು, ವಸ್ತುಗಳನ್ನು ಸಂಗ್ರಹಿಸಿ ಶಾಲಾ ವಸ್ತುಸಂಗ್ರಹಾಲಯ ಪ್ರಾರಂಭಿಸುವುದು, ಮಣಿಗಳಿಂದ, ಬೀಜಗಳಿಂದ ವಿವಿಧ ಆಕಾರಗಳನ್ನು ಜೋಡಿಸುವುದು, ಕಾಗದದ ರಟ್ಟುಗಳಿಂದ ವಿವಿಧ ಆಕಾರಗಳನ್ನು ಜೋಡಿಸುವುದು, ಮರದ ತುಂಡುಗಳಿಂದ ತೇರುಗಳನ್ನು ಮಾಡಿಸುವುದು,

ಮಣಿಗಳನ್ನು ಗಾತ್ರಾನುಸಾರವಾಗಿ ಪೋಣಿಸುವುದು, ದೇಹದ ಸಮತೋಲ ಕಾಪಾಡಿಕೊಳ್ಳಲು ರೈಲುಕಂಬಿಗಳನ್ನು ಶಾಲೆಯ ಆವರಣದಲ್ಲಿ ಹಾಕಿ, ಅವುಗಳ ಮೇಲೆ ನಡೆಸುವುದು ಮುಂತಾದ ಚಟುವಟಿಕೆಗಳನ್ನು ಅಲ್ಲಿ ಏರ್ಪಡಿಸಲಾಗುವುದು.

**ಸಾಧನ ಸಾಮಗ್ರಿಗಳು :** ಮಕ್ಕಳ ಆರೋಗ್ಯ ದೃಷ್ಟಿಯಿಂದ ಶಕ್ತಿದಾಯಕ ಆಹಾರವನ್ನು ಕೊಡುವ ವ್ಯವಸ್ಥೆಯು ಪ್ರಾಥಮಿಕಪೂರ್ವ ಶಾಲೆಗಳಲ್ಲಿ ರೂಢಿಯಿದೆ. ಈ ಶಾಲೆಗಳು ಸಾಮಾನ್ಯವಾಗಿ ತೋಟಗಳು, ಜಾರುವ ಬಂಡೆ, ಆಟದ ಮೈದಾನ, ಉಯ್ಯಾಲೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಗೃಹಗಳು, ಮಕ್ಕಳು ನಿರಾಯಾಸವಾಗಿ ಕುಳಿತುಕೊಳ್ಳಲು ಪೀಠೋಪ ಕರಣಗಳು, ತಿಂಡಿ ತಿನ್ನುವ ತಟ್ಟೆಗಳು, ನೀರಿನ ಲೋಟಗಳು, ಕರವಸ್ತ್ರಗಳು, ಚಾಪೆಗಳು, ಬಣ್ಣಬಣ್ಣದ ಚಿತ್ರಗಳಿಂದ ಕೂಡಿರುವ ಮಕ್ಕಳ ಪುಸ್ತಕಗಳು, ಆಟದ ಸಾಮಾನುಗಳು, ಪ್ರಥಮ ಚಿಕಿತ್ಸಾಸಾಧನೆಗಳು ಮುಂತಾದವುಗಳನ್ನು ಹೊಂದಿರುತ್ತವೆ.

**ಸಿಬ್ಬಂದಿ ವರ್ಗ:** ಈ ಶಾಲೆಗಳಲ್ಲಿ ಶಿಕ್ಷಕಿಯರು ಕೆಲಸ ಮಾಡುವರು. ಇಲ್ಲಿ ಪ್ರೌಢಶಾಲೆಯ 10ನೆಯ ವರ್ಗದವರೆಗೆ ವಿದ್ಯಾಭ್ಯಾಸ ಮತ್ತು ನರ್ಸರಿ ಉಪಾಧ್ಯಾಯರ ಶಿಕ್ಷಣ ಪಡೆದ ಉಪಾಧ್ಯಾಯರು ಮತ್ತು ಸಹಾಯಕಿಯರು ಇರುತ್ತಾರೆ.

ರಾಜ್ಯದಲ್ಲಿರುವ ನರ್ಸರಿ ಶಿಕ್ಷಕಿಯರ ತರಬೇತಿ ಶಾಲೆಗಳಲ್ಲಿಯ ಶಿಕ್ಷಣ ಒಂದು ವರ್ಷದ ಅವಧಿಯದಾಗಿದ್ದು ಮಕ್ಕಳ ಆರೋಗ್ಯ ಮತ್ತು ಪೋಷಣೆ, ಬಾಲಮನೋವಿಜ್ಞಾನ, ಶಾಲಾಸಂವಿಧಾನ, ಬೋಧನಾ ಭ್ಯಾಸ ಮತ್ತು ಬೋಧನಾ ಕ್ರಮಗಳು ಈ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಿದೆ. ಪೂರ್ವಪ್ರಾಥಮಿಕ ಶಾಲೆಗಳಲ್ಲಿ ಈ ಅಭ್ಯರ್ಥಿಗಳು ಒಂದು ವರ್ಷ ಪೂರ್ತಿ ಪ್ರಶಿಕ್ಷಣ ಪಡೆಯುತ್ತಾರೆ.

1961ರಲ್ಲಿ ಈ ಶಾಲೆಗಳ ವಿವಿಧ ಸಮಸ್ಯೆಗಳನ್ನು ಚರ್ಚಿಸಲು ಖ್ಯಾತ ಆಡಳಿತಗಾರರಾದ ಜೆ.ಬಿ. ಮಲ್ಲಾರಾಧ್ಯರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿ ಮಂಡಿಸಿದ ಮುಖ್ಯ ಸಲಹೆಗಳು ಇವು: 1. ಪ್ರಾಥಮಿಕಪೂರ್ವ ಶಿಕ್ಷಣ ಒದಗಿಸಿದರೆ ಅಪ್ರತ್ಯಕ್ಷವಾಗಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಿಸುತ್ತದೆ; 2. ಮಕ್ಕಳ ಸ್ವಾಭಾವಿಕ ಅಗತ್ಯಗಳನ್ನು ಪೂರೈಸಿ ಯೋಗ್ಯ ಅನುಭವಗಳನ್ನು ಒದಗಿಸಿಕೊಟ್ಟು ಮಕ್ಕಳು ಮುಂದೆ ಸಮಸ್ಯೆಯಾಗುವುದನ್ನು ತಪ್ಪಿಸಬಹುದು; 3. ಅಲ್ಲಿನ ಶಿಕ್ಷಕರ ಕನಿಷ್ಠ ಶೈಕ್ಷಣಿಕ ಅರ್ಹತೆ ಎಸ್.ಎಸ್.ಎಲ್.ಸಿ. ಆಗಿರಬೇಕು; 4. ಶಿಕ್ಷಕರು ನೇಮಕಗೊಳ್ಳುವ ಮೊದಲೇ ತರಬೇತಿ ಹೊಂದಿರಬೇಕು; 5. ನರ್ಸರಿ ಶಾಲೆಗಳಲ್ಲಿ ಕೆಲಸಮಾಡುವ ಸಹಾಯಕಿಯರಿಗೆ ಪ್ರಾಥಮಿಕ ಪೂರ್ವ ಶಿಕ್ಷಣ ತರಬೇತಿ ಕೇಂದ್ರಗಳಲ್ಲಿ ಒಂದು ತಿಂಗಳ ತರಬೇತಿ ನೀಡಬೇಕು; 6. ಗ್ರಾಮಾಂತರ ಪ್ರದೇಶಗಳಲ್ಲಿ ಇದರ ವ್ಯಾಪ್ತಿಯನ್ನು ಹೆಚ್ಚಿಸಬೇಕು; 7. ಪ್ರಾಥಮಿಕಪೂರ್ವ ಶಿಕ್ಷಣಕ್ಕೆ ಒಂದು ಆಡಳಿತ ಮಂಡಳಿಯನ್ನು ರಚಿಸಬೇಕು.

ಈ ಶಾಲೆಗಳಿಗೆ ಮಕ್ಕಳನ್ನು ಸಾಮಾನ್ಯವಾಗಿ 3 ವರ್ಷ ವಯಸ್ಸಿನಲ್ಲಿ ಸೇರಿಸಿ, 5 ವರ್ಷ ದಾಟಿ, ಪ್ರಾಥಮಿಕ ಶಾಲೆಗಳಿಗೆ ದಾಖಲಾಗುವ ತನಕ ಇಟ್ಟುಕೊಂಡು ತರಬೇತಿ ನೀಡುತ್ತಾರೆ. ಈ ಎರಡು ತರಗತಿಗಳಲ್ಲಿ ಪಡೆದ ವಿದ್ಯಾಭ್ಯಾಸ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಪೂರ್ಣ ಹೊಂದಾಣಿಕೆಯಿಂದ ಶಿಕ್ಷಣ ಪಡೆಯಲು ಸಹಾಯವಾಗುತ್ತದೆ. ನರ್ಸರಿ ಶಿಕ್ಷಣವಿಲ್ಲದ ಮಕ್ಕಳಿಗೂ ನರ್ಸರಿ ಶಿಕ್ಷಣ ಪಡೆದ ಮಕ್ಕಳಿಗೂ ನಿರ್ದಿಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದು. **(ಕೆ.ಎನ್.ಬಿ.)**

**ಪ್ರಾಥಮಿಕ ಶಿಕ್ಷಣ:** ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ಅದರ ಆಧುನಿಕ ಸ್ವರೂಪದಲ್ಲಿ ಸುಮಾರು ಒಂದೂಮುಕ್ಕಾಲು ಶತಮಾನದ ಹಿಂದೆ ಇಂಗ್ಲೆಂಡಿನಿಂದ ತಂದು ನಾಟಿ ಹಾಕಿದ್ದಾದರೂ ಅದಕ್ಕೆ ಎರಡೂವರೆ ಸಹಸ್ರ ವರ್ಷಗಳ ಪರಂಪರೆಯಿದೆ.

**ಪ್ರಾಚೀನ:** ವಿದ್ಯಾವಿಹೀನಃ ಪಶುಃ ಎಂಬ ಉಕ್ತಿ ಜನಜನಿತವಾಗಿದ್ದ ಪ್ರಾಚೀನ ಕರ್ನಾಟಕದಲ್ಲಿ ತಂದೆತಾಯಿಗಳಂತೆ ಸಮಾಜ, ರಾಜರು ಮತ್ತು ಧರ್ಮಪೀಠಗಳಿಂದಲೂ ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ದೊರಕುತ್ತಿತ್ತು. ಕ್ರಿ.ಪೂ. 3ನೆಯ ಶತಮಾನದ ಸುಮಾರಿಗೆ ಬರೆವಣಿಗೆ ಪ್ರಚಾರಕ್ಕೆ ಬಂದಿತ್ತು; ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಅಕ್ಷರಾಭ್ಯಾಸಕ್ಕೆ ಪ್ರಾಧಾನ್ಯ ಪ್ರಾಪ್ತವಾಗಿತ್ತು.

ಕನ್ನಡ ಲಿಪಿಯಲ್ಲಿ ಸುಮಾರು ಐದನೆಯ ಶತಮಾನದ ಶಾಸನಗಳು ದೊರಕಿವೆ. ಒಂದು ಪ್ರಾಚೀನ ಶಾಸನ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿ ಗ್ರಾಮದಲ್ಲಿ ದೊರಕಿದೆ. ಸುಮಾರು ಏಳನೆಯ ಶತಮಾನದಿಂದ ಶ್ರವಣಬೆಳಗೊಳ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮೊದಲಾದ ಗ್ರಾಮಗಳಲ್ಲಿ ಕನ್ನಡ ಲಿಪಿಯ ಶಾಸನಗಳು ದೊರಕಿವೆ. ಸಾರ್ವಜನಿಕರಿಗೆ ಕನ್ನಡ ಲಿಪಿಯ ಪರಿಚಯವಿತ್ತೆಂಬುದಕ್ಕೂ ಅನೇಕರು ಅಕ್ಷರಜ್ಞಾನವನ್ನು ಸಾರ್ವಜನಿಕವಾಗಿ ಬಳಸಿಕೊಳ್ಳುತ್ತಿದ್ದರು ಎಂಬುದಕ್ಕೂ ಇವು ನಿದರ್ಶನಗಳು. ಆಗ ಮಕ್ಕಳಿಗೆ ಪ್ರಾಥಮಿಕ ಅಭ್ಯಾಸದ ಹಂತದಲ್ಲಿ ಕನ್ನಡ ಭಾಷಾಲಿಪಿಯನ್ನು ಕಲಿಸುತ್ತಿದ್ದರು. ಬೌದ್ಧರು ಮತ್ತು ಜೈನರು ತಮ್ಮ ಮಠಗಳಲ್ಲಿ ಅಕ್ಷರ ಕಲಿಸುತ್ತಿದ್ದುದಲ್ಲದೆ ಶಾಸ್ತ್ರಗಳ ಅಭ್ಯಾಸವನ್ನೂ ದೊರೆಕಿಸಿ ಕೊಡುತ್ತಿದ್ದರು. ಅಲ್ಲಿ ವ್ಯಾಕರಣ, ಗಣಿತ, ಭಾಷಾಶಾಸ್ತ್ರ ಮುಂತಾದವನ್ನು ಕಲಿಸಲಾಗುತ್ತಿತ್ತು. ಅಕ್ಷರ ಸ್ವೀಕರಣ ಅಥವಾ ವಿದ್ಯಾರಂಭ ಸಂಸ್ಕಾರದ ಅನಂತರ ಅಕ್ಷರಾಭ್ಯಾಸ ಆರಂಭವಾಗುತ್ತಿತ್ತು. ತಂದೆ ಅಥವಾ ಕುಲಗುರುಗಳು ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಕದಂಬರು, ಗಂಗರು, ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತ ಬಂದರು. ದಾನಿಗಳ ಕೊಡುಗೆಯಿಂದ ಕರ್ನಾಟಕದ ಎಲ್ಲ ಭಾಗಗಳಲ್ಲೂ ಅಗ್ರಹಾರಗಳು ಸ್ಥಾಪಿತವಾದುವು. ಇಲ್ಲಿಯ ವಿದ್ವಾಂಸರು ಪಾಠಶಾಲೆಗಳನ್ನು ನಡೆಸುತ್ತ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದರು.

ಸಾಮಾನ್ಯವಾಗಿ 5–6ನೆಯ ವಯಸ್ಸಿನಲ್ಲಿ ಮಕ್ಕಳು ಶಾಲೆಗೆ ಸೇರುತ್ತಿದ್ದರು. ಮಠಗಳೂ ದೇವಸ್ಥಾನಗಳೂ ವಿದ್ವಾಂಸರ ಮನೆಗಳ ಜಗುಲಿಗಳೂ ಪ್ರಾಥಮಿಕ ವಿದ್ಯಾಭ್ಯಾಸದ ಶಾಲೆಗಳಾಗಿದ್ದುವು. ಗುರುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕರು ವಿದ್ಯಾಭ್ಯಾಸ ಮಾಡಿಸುವುದೇ ತಮ್ಮ ಜೀವನೋಪಾಯವನ್ನಾಗಿ ಮಾಡಿಕೊಂಡರು. ಅಂಥವರು ದೇವಸ್ಥಾನಗಳಲ್ಲಿ ಸಾಮಾನ್ಯ ಜನರ ಮನೋರಂಜನೆಗಾಗಿ ಕಥಾಕಾಲಕ್ಷೇಪ, ಪುರಾಣಶ್ರವಣ ಮುಂತಾದವುಗಳನ್ನು ನಡೆಸುತ್ತಿದ್ದರು. ಅನೇಕ ಉಪಾಧ್ಯಾಯರು ಸಾಮಾನ್ಯವಾಗಿ ಗ್ರಾಮಪ್ರಮುಖರಲ್ಲಿ ಒಬ್ಬರಾಗಿದ್ದುದರಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತಕ್ಕಷ್ಟು ಅನುಕೂಲ ಒದಗಿಸಿಕೊಳ್ಳಬಲ್ಲವರಾಗಿದ್ದರು. ಅಕ್ಷರ ಜ್ಞಾನ ಪಡೆದ ಮೇಲೆ ಕ್ಷತ್ರಿಯರು ಮತ್ತು ವೈಶ್ಯರು ತಂತಮ್ಮ ಕಸಬುಗಳಿಗೆ ಸಂಬಂಧಪಟ್ಟ ವಿದ್ಯೆಯನ್ನು ತಮ್ಮ ತಂದೆ ಅಥವಾ ಕುಲಬಾಂಧವರಲ್ಲಿ ಪಡೆಯುತ್ತಿದ್ದರು. ಸಾಧಾರಣವಾಗಿ ಅವರೆಲ್ಲರಿಗೂ ಪ್ರಾಥಮಿಕ ದರ್ಜೆಯ ಅಭ್ಯಾಸವೇ ವ್ಯವಸ್ಥಿತ ಶಾಲಾ ಅಭ್ಯಾಸವಾಗಿತ್ತು. ಶಾಸನಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಲಿಪಿಶಾಲೆಗಳೆಂದೂ ಉಪಾಧ್ಯಾಯ ರನ್ನು ದಾರಕಾಚಾರ್ಯರೆಂದೂ ಅಕ್ಕರಿಗರೆಂದೂ ಕರೆಯುತ್ತಿದ್ದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕರ್ನಾಟಕಶಿಕ್ಷೆ, ಬಾಲಶಿಕ್ಷೆ, ಕರ್ನಾಟಕ

ಬಾಲಶಿಕ್ಷೆ ಎಂದು ಕರೆಯುತ್ತಿದ್ದರು. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಪ್ರಾಥಮಿಕ ಶಾಲೆಗಳನ್ನು ಬಾಲಬೋಧೆ ಎಂದು ಕರೆಯಲಾಗುತ್ತಿತ್ತು.

**ಬೋಧನಕ್ರಮ :** ಉಪಾಧ್ಯಾಯರು ಒಂದು ಅಕ್ಷರವನ್ನು ಹಲಗೆಯ ಮೇಲೆ ಬರೆಯುತ್ತಿದ್ದರು. ವಿದ್ಯಾರ್ಥಿಗಳು ಉಪಾಧ್ಯಾಯರು ಹೇಳಿದ್ದನ್ನು ಆಲಿಸಿ ಅದರಂತೆಯೇ ಉಚ್ಚಾರ ಮಾಡುತ್ತಿದ್ದರು. ಅನಂತರ ವಿದ್ಯಾರ್ಥಿಗಳು ಅಕ್ಷರದ ಆಕಾರವನ್ನು ತಮ್ಮ ಹಲಗೆಗಳ ಮೇಲೆ ಬರೆದುಕೊಂಡಾಗಲಿ ತಮ್ಮ ಮುಂದಿದ್ದ ಮರಳಿನ ಮೇಲಾಗಲಿ ಅಕ್ಷರವನ್ನು ಉಚ್ಚಾರಮಾಡುತ್ತ ಬೆರಳುಗಳಿಂದ ತಿದ್ದುತ್ತ ಅಭ್ಯಾಸಮಾಡುತ್ತಿದ್ದರು. ಮುಂದಿನ ಹಂತದಲ್ಲಿ ಉಪಾಧ್ಯಾಯರು ಓಲೆಗರಿಯ ಮೇಲೆ ಅಥವಾ ಬಾಳೆಯ ಎಲೆಯ ಮೇಲೆ ಇಜ್ಜಲಿನ ದ್ರವದ ಮಸಿಯಲ್ಲಿ ಕಬ್ಬಿಣದ ಸಣ್ಣ ತುಂಡು (ಕಂಠ)ಗಳಿಂದ ಬರೆಯುತ್ತಿದ್ದರು. ಹೀಗೆ ಅಭ್ಯಾಸ ಮಾಡಿಸಿದ ಮೇಲೆ ಬರೆಹಗಳನ್ನು ಅಳಿಸಿ ಪುನಃ ಬರೆಯುತ್ತಿದ್ದರು.

ಉಪಾಧ್ಯಾಯರು ಸಾಮೂಹಿಕವಾಗಿ ಮಗ್ಗಿ ಹೇಳಿಸುತ್ತಿದ್ದರು. ಗಣಿತದ ಲೆಕ್ಕಗಳನ್ನು ಹೆಚ್ಚಾಗಿ ಬಾಯಿಪಾಠದ ಮೂಲಕವೇ ಮಂದಟ್ಟು ಮಾಡಿಸುತ್ತಿದ್ದರು. ಹತ್ತೊಂಬತ್ತನೆಯ ಶತಮಾನದವರೆಗೆ ಈ ರೀತಿಯ ಪ್ರಾಥಮಿಕ ಅಭ್ಯಾಸವೇ ನಡೆಯುತ್ತಿತ್ತು. ಶಾಲೆಗಳಲ್ಲಿ ಪುಸ್ತಕ, ಕಾಗದ ಇವು ಇರಲಿಲ್ಲ. ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಹಿರೇಮಾಣಿಗಳು ಕಿರಿಯ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು.

**ಆಧುನಿಕ :** ಹಿಂದೆ ಸರ್ಕಾರಗಳು ಪ್ರಾಥಮಿಕ ವಿದ್ಯಾಭ್ಯಾಸ ತಮ್ಮ ಪೂರ್ಣ ಜವಾಬ್ದಾರಿ ಎಂದು ತಿಳಿದಿರಲಿಲ್ಲ. ಭಾರತದಲ್ಲಿ 18ನೆಯ ಶತಮಾನದ ಗೊಂದಲಮಯ ರಾಜಕೀಯ ಪರಿಸ್ಥಿತಿಯಿಂದ ಯಾವ ವಿಚಾರದಲ್ಲೂ ಪ್ರಗತಿ ಸಾಧ್ಯವಿರಲಿಲ್ಲ. ಈಸ್ಟ್ ಇಂಡಿಯಾ ಕಂಪನಿಯವರ ಪ್ರಭುತ್ವ ಭಾರತದಲ್ಲಿ ಸ್ಥಾಪಿತವಾಗಿ ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಏಕಸ್ವಾಮ್ಯ ಅಧಿಕಾರ ಬಂದ ಮೇಲೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ದೊರಕಿಸಿಕೊಡುವುದು ತನ್ನ ಕರ್ತವ್ಯವೆಂದು ಭಾವಿಸಿರಲಿಲ್ಲ.

1833ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಸ್ವಂತ ಖರ್ಚಿನಿಂದ ಮೈಸೂರು ನಗರದಲ್ಲಿ ಒಂದು ಇಂಗ್ಲಿಷ್ ಶಾಲೆಯನ್ನು ಪ್ರಾರಂಭಿಸಿದರು. ಇದು ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯೆ ನೀಡುತ್ತಿತ್ತು. ಇದಲ್ಲದೆ ಸರ್ಕಾರ ಆಗಿನ ಕಾಲದ ಕ್ರೈಸ್ತ ಮಿಷನರಿಗಳಿಗೆ ಶಾಲೆಗಳನ್ನು ಸ್ಥಾಪಿಸಲು ಅನುಮತಿ ಇತ್ತು. ಉದಾರವಾಗಿ ಸಹಾಯಧನ ನೀಡಲು ಒಪ್ಪಿತು. ವೆಸ್ಲಿಯನ್ ಮಿಷನ್ ಸಂಸ್ಥೆ 1840–54ರವರೆಗೆ ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಿತು. ಇವುಗಳಲ್ಲಿ 1851ರಲ್ಲಿ ಆರಂಭವಾದ ಬೆಂಗಳೂರು ಶಾಲೆಯೂ ಒಂದು.

1854ರಲ್ಲಿ ಆಧುನಿಕ ವಿದ್ಯಾಭ್ಯಾಸದ ಪದ್ಧತಿ ಪ್ರಾರಂಭವಾಯಿತು. ಮೈಸೂರಿನ ಮುಖ್ಯ ನ್ಯಾಯಾಧೀಶರಾಗಿದ್ದ (ಜುಡಿಶಿಯಲ್ ಕಮಿಷನರ್) ಡೆವಿರೋ ಅವರು ಸರ್ಕಾರದ ಆದೇಶದಂತೆ ಮೈಸೂರು ಮತ್ತು ಕೊಡಗು ಭಾಗಗಳಿಗೆ ಆಧುನಿಕ ವಿದ್ಯಾಪದ್ಧತಿಯ ಸ್ಥಾಪನೆಗೆ ಒಂದು ಯೋಜನೆಯನ್ನು ತಯಾರಿಸಿದರು. ಇದೇ ಮುಂದಿನ ಎಲ್ಲ ಪ್ರಗತಿಗೆ ಬುನಾದಿಯಾಯಿತು. ಇದರ ಫಲವಾಗಿ 1858ರಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಪ್ರೌಢಶಾಲೆ ಸ್ಥಾಪಿತವಾಯಿತು (ಇದೇ ಅನಂತರ ಸೆಂಟ್ರಲ್ ಕಾಲೇಜ್ ಆಗಿ ಪರಿವರ್ತಿತವಾಯಿತು.) ಮಿಷನರಿಗಳು ನಡೆಸುತ್ತಿದ್ದ ತುಮಕೂರು ಶಿವಮೊಗ್ಗ ಮೈಸೂರು ಹಾಸನ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಂಡರು. ಶಾಲಾ ಉಪಾಧ್ಯಾಯರ ತರಬೇತಿಗಾಗಿ 1861ರಲ್ಲಿ ಬೆಂಗಳೂರಿನಲ್ಲಿ ಒಂದು ನಾರ್ಮಲ್ ಶಾಲೆ ಸ್ಥಾಪಿತವಾಯಿತು. ಇದೇ ಕಾಲದಲ್ಲಿ ವಿದ್ಯಾ ಇಲಾಖೆಯ ಜ್ಯುಡಿಷಿಯಲ್ ಕಮಿಷನರ ಕಛೇರಿಯಿಂದ ಬೇರ್ಪಟ್ಟು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಎಂಬ ಹೊಸ ಅಧಿಕಾರಿಯ ಮೇಲ್ವಿಚಾರಣೆಗೆ ಒಳಪಟ್ಟಿತು. ಈ ಹುದ್ದೆಯನ್ನಲಂಕರಿಸಿದ್ದ ಬಿ.ಎಲ್. ರೈಸರ ಸಲಹೆಯಂತೆ 1868ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಗತಿಗಾಗಿ ಅನೇಕ ಸುಧಾರಣೆಗಳಾದುವು. ಶಾಲಾಸ್ಥಾಪನೆಯನ್ನು ಬಯಸಿ ಶಾಲಾ ಕಟ್ಟಡ ಒದಗಿಸಿದ ಎಲ್ಲ ಹೋಬಳಿಗಳಿಗೂ ಶಾಲೆಗಳನ್ನು ನೀಡಲು ಸರ್ಕಾರ ಒಪ್ಪಿತು. ಇದರ ಪರಿಣಾಮವಾಗಿ 1871–72ರಲ್ಲಿ ಬಹುತೇಕ ಹೋಬಳಿಗಳಲ್ಲಿ ಶಾಲೆಗಳು ಪ್ರಾರಂಭವಾದುವು. ಪ್ರತಿ ತಾಲ್ಲೂಕಿನಲ್ಲೂ ಒಂದು ಸುಪೀರಿಯರ್ ವರ್ನಾಕ್ಯುಲರ್ ಶಾಲೆ ಸ್ಥಾಪಿತವಾಯಿತು. 1881ರಲ್ಲಿ ಮೈಸೂರು ರಾಜ್ಯ ಅರಸರ ಅಧೀನಕ್ಕೆ ಬಂದ ಕಾಲದಲ್ಲಿ ರಾಜ್ಯದಲ್ಲಿ 2,067 ಶಾಲೆಗಳಲ್ಲಿ 57 ಸಾವಿರ ವಿದ್ಯಾರ್ಥಿಗಳಿದ್ದರು. ಅನಂತರದ ಸರ್ಕಾರ ವಿದ್ಯಾಭ್ಯಾಸದ ಪ್ರಚಾರಕ್ಕೆ ಹೆಚ್ಚಿನ ಗಮನ ಕೊಟ್ಟಿದ್ದರಿಂದ ಶಾಲೆಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆದವು. 1911–16ರಲ್ಲಿ ಸಾಧ್ಯವಾದ ಕಡೆಗಳಲ್ಲಿ ಕಡ್ಡಾಯ ವಿದ್ಯಾಭ್ಯಾಸಕ್ಕೆ ಅವಕಾಶ ಏರ್ಪಟ್ಟಿತು. 1921ರಲ್ಲಿ ಸಹಾಯ ಪಡೆಯುತ್ತಿದ್ದ ಪ್ರಾಥಮಿಕ ಶಾಲೆಗಳನ್ನು ಸರ್ಕಾರಿ ಶಾಲೆಗಳಾಗಿ ಪರಿವರ್ತಿಸಿ, ತರಬೇತಿ ಪಡೆದ ಉಪಾಧ್ಯಾಯರನ್ನು ನೇಮಿಸಿ ಶಾಲಾ ಉಪಕರಣಗಳನ್ನು ಒದಗಿಸಲಾಯಿತು. 1927–28ರಲ್ಲಿ ಸರ್ಕಾರ ಗ್ರಾಮಪಂಚಾಯಿತಿಗಳಿಗೆ ಧನಸಹಾಯ ಮಾಡಿ ಅವುಗಳೇ ಸಂಪೂರ್ಣವಾಗಿ ಶಾಲಾವ್ಯವಸ್ಥೆಯ ಮೇಲ್ವಿಚಾರಣೆ ನಡೆಸುವಂತೆ ಅವಕಾಶ ಮಾಡಿಕೊಡಲಾಯಿತು. ಸರ್ಕಾರ ತನಿಖಾಧಿಕಾರವನ್ನು ಮಾತ್ರ ಉಳಿಸಿಕೊಂಡಿತು. ಆದರೆ ಅನುಭವದ ಅಭಾವ ಮತ್ತು ಹಲವು ಸ್ಥಳೀಯ ಕಾರಣಗಳಿಂದ ಈ ಯೋಜನೆ ಸಫಲವಾಗಲಿಲ್ಲ.

1930ರಲ್ಲಿ ಸರ್ಕಾರ ಎಲಿಮೆಂಟರಿ ಎಜ್ಯುಕೇಷನ್ ಕಾಯಿದೆಯನ್ನು ಜಾರಿಗೆ ತಂದಿತು. ಆಗಿನ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳಲ್ಲೂ ನಾಲ್ಕು ನಗರ ಆಡಳಿತ ಪ್ರದೇಶಗಳಲ್ಲೂ ಎಜ್ಯುಕೇಷನ್ ಅಥಾರಿಟಿಗಳು ಪ್ರಾಥಮಿಕ ವಿದ್ಯಾಭ್ಯಾಸದ ಹೊಣೆಯನ್ನು ವಹಿಸಿಕೊಂಡವು. ಇವುಗಳ ಸಹಾಯಕ್ಕಾಗಿ ಈ ಸ್ಥಳೀಯ ಪ್ರಾಧಿಕಾರಗಳು ತಮ್ಮ ಪ್ರದೇಶದಲ್ಲಿ ವಿಶೇಷ ತೆರಿಗೆ ವಿಧಿಸಲು ಅವಕಾಶ ಮಾಡಿಕೊಡಲಾಯಿತು. ಆದರೆ ಇದು ಅಷ್ಟು ಫಲಕಾರಿಯಾಗಲಿಲ್ಲ. ವಿದ್ಯಾಭ್ಯಾಸದ ಪ್ರಗತಿ ಕುಂಠಿತವಾಯಿತು. 1928–38ರ ಕಾಲದಲ್ಲಿ ಶಾಲೆಗಳ ಸಂಖ್ಯೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಯಿತು. ಶಾಲೆಗೆ ಹೋಗುವ ಹೆಣ್ಣುಮಕ್ಕಳ ಸಂಖ್ಯೆಯೂ ಇಳಿಯಿತು. ಶಾಲೆಗಳ ಹಾಗೂ ವಿದ್ಯಾರ್ಥಿಗಳ ಈ ದುಃಸ್ಥಿತಿಗೆ ಇತರ ಕಾರಣಗಳೊಡನೆ ಆಗಿನ ಆರ್ಥಿಕ ಮುಗ್ಗಟ್ಟೂ ಕಾರಣ. ಮೈಸೂರು ಸರ್ಕಾರ 1941ರಲ್ಲಿ ಎಲಿಮೆಂಟರಿ ಎಜ್ಯುಕೇಷನ್ ಆ್ಯಕ್ಟ್ (ಪ್ರಾಥಮಿಕ ಶಿಕ್ಷಣ ಕಾನೂನು) ಜಾರಿಗೆ ತಂದು ಪ್ರಾಥಮಿಕ ಶಾಲೆಗಳನ್ನು ತಾನೇ ವಹಿಸಿಕೊಳ್ಳಬೇಕಾಯಿತು.

ಆ ಹಿಂದಿನ 60 ವರ್ಷಗಳಲ್ಲಿ ಶಾಲೆಗಳಲ್ಲಿ ಓದುವುದು ಬರೆಯುವುದು ಮತ್ತು ಗಣಿತವನ್ನು ಬೋಧಿಸುವುದೇ ವಿದ್ಯಾಭ್ಯಾಸದ ಮುಖ್ಯ ಗುರಿಯಾಗಿತ್ತು. ಅನೇಕ ಶಾಲೆಗಳು ಕೇವಲ ಎರಡು ವರ್ಷದ ಅವಧಿಯವಾಗಿದ್ದುವು. ನಾಲ್ಕು ವರ್ಷದ ಅವಧಿಯ ಶಾಲೆಗಳನ್ನು ಅಪ್ಪರ್ ಪ್ರೈಮರಿ ಶಾಲೆಗಳೆನ್ನುತ್ತಿದ್ದರು. ಈ ಶಾಲೆಗಳಲ್ಲಿ ಮುಂದುವರಿದ ತರಗತಿಗಳಲ್ಲಿ ಮೈಸೂರು ಸಂಸ್ಥಾನದ ಭೂಗೋಳ ಮತ್ತು ಚರಿತ್ರೆಗಳನ್ನೂ ಹೇಳಿಕೊಡುತ್ತಿದ್ದರು. 1919ರಿಂದ ಆದಷ್ಟು ಹೆಚ್ಚಾಗಿ ನಾಲ್ಕು ವರ್ಷಗಳ ಪ್ರೈಮರಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಒಪ್ಪಿತು. 1923ರಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಓದುವುದು, ಬರೆಯುವುದು, ಗಣಿತದ ಪಾಠಗಳೊಡನೆ ನೀತಿಪಾಠ, ಪ್ರಕೃತಿಪಾಠ, ಡ್ರಾಯಿಂಗ್, ಕೈಕೆಲಸ,

ಚರಿತ್ರೆ, ಭೂಗೋಳಶಾಸ್ತ್ರ, ದೈಹಿಕ ಶಿಕ್ಷಣ, ಆಟಗಳು ಸಹ ಸೇರಿದ್ದುವು. ಆದರೂ ಪ್ರಾಥಮಿಕ ಶಾಲೆಗೆ ದಾಖಲಾದ ಮಕ್ಕಳಲ್ಲಿ ಹೆಚ್ಚಿನಸಂಖ್ಯೆಯ ಮಕ್ಕಳು ನಾನಾ ಕಾರಣಗಳಿಂದ ಅವಧಿಪೂರೈಸುವುದಕ್ಕೆ ಮುಂಚೆಯೇ ಶಾಲೆಯನ್ನು ಬಿಟ್ಟು ಪುನಃ ಅನಕ್ಷರಸ್ಥರಾಗುವ ದುಃಸ್ಥಿತಿ ಒದಗುತ್ತಿತ್ತು. ಇದನ್ನು ತಪ್ಪಿಸಲು ಹಾಗೂ ಶಾಲೆಯಲ್ಲಿ ಓದಿದ ಮಕ್ಕಳು ಪ್ರಪಂಚಜ್ಞಾನ ವನ್ನು ಪಡೆಯಲು 6 ವರ್ಷಗಳ ಅಥವಾ 8 ವರ್ಷಗಳ ಶಾಲಾ ಶಿಕ್ಷಣವಿರಬೇಕೆಂಬುದು ತಜ್ಞರ ಅಭಿಪ್ರಾಯವಾಗಿತ್ತು. 1946ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣದ ಮೊದಲ ನಾಲ್ಕು ವರ್ಷಗಳನ್ನು ಪ್ರಾಥಮಿಕ ಶಿಕ್ಷಣವೆಂದೂ ಕೊನೆಯ ನಾಲ್ಕು ವರ್ಷಗಳನ್ನು ಮಾಧ್ಯಮಿಕ (ಮಿಡಲ್) ಶಿಕ್ಷಣವೆಂದೂ ವಿಭಾಗಿಸಲಾಯಿತು. 1921ಕ್ಕೆ ಮುಂಚೆ, ಆಂಗ್ಲೊ-ವರ್‌ನಾಕ್ಯುಲರ್ ಶಾಲೆಗಳಲ್ಲಿ (ಹೈಯರ್ ಪ್ರೈಮರಿ, ಮಿಡಲ್ ಸ್ಕೂಲ್) ಕೊನೆಯ ಎರಡು ತರಗತಿಗಳಲ್ಲಿ ಇಂಗ್ಲಿಷ್ ಶಿಕ್ಷಣಮಾಧ್ಯಮವಾಗಿ ಬಳಕೆಯಲ್ಲಿತ್ತು. ಆ ವರ್ಷದ ಅನಂತರ ಕನ್ನಡವೆ ಶಾಲೆಗಳಲ್ಲಿ ಶಿಕ್ಷಣಮಾಧ್ಯಮವಾಗಿರಬೇಕೆಂದು ತೀರ್ಮಾನಿಸಲಾಯಿತು. ಇಂಗ್ಲಿಷ್ ಭಾಷೆ ಒಂದು ಕಡ್ಡಾಯ ಭಾಷೆಯಾಗಿ ಮುಂದುವರಿಯಿತು.

1913ರಿಂದ ಕಡ್ಡಾಯ ಶಿಕ್ಷಣದ ಕಡೆಗೆ ಸರ್ಕಾರ ಗಮನ ಹರಿಸಿ ಪ್ರತಿ ಹಳ್ಳಿಯಲ್ಲೂ ಶಾಲಾಕಮಿಟಿಗಳನ್ನು ನೇಮಿಸಿತು. ಆಯಾ ಪ್ರದೇಶದಲ್ಲಿ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳೆಲ್ಲ ಶಾಲೆಗೆ ದಾಖಲಾಗಿ ಶಾಲೆಯ ಕೊನೆಯ ಹಂತದವರೆಗೂ ಮುಂದುವರಿಯುವಂತೆ ಮಾಡುವ ಉದ್ದೇಶ ದಿಂದ ಅವನ್ನು ಸ್ಥಾಪಿಸಲಾಗಿತ್ತು. ಮಕ್ಕಳು ಶಾಲೆಗೆ ಸೇರಿದ ಮೇಲೆ ಕಡ್ಡಾಯವಾಗಿ 12 ವರ್ಷದವರೆಗೆ ಶಾಲೆಯ ಶಿಕ್ಷಣ ಪಡೆಯಬೇಕೆಂಬ ಕಾನೂನು 1941ರಲ್ಲಿ ಬಂತು. ಪ್ರತಿ ಜಿಲ್ಲೆಯ ಕೆಲವು ಭಾಗಗಳು ಈ ರೀತಿಯ ಕಡ್ಡಾಯ ಶಿಕ್ಷಣಕ್ಕೆ ಒಳಪಟ್ಟುವು. ಇದನ್ನು ಕ್ರಮೇಣ ವಿಸ್ತರಿಸಿ ಹತ್ತು ವರ್ಷಗಳ ಅವಧಿಯಲ್ಲಿ ಇಡೀ ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ಉದ್ದೇಶಿಸಲಾಯಿತು. ಆದರೆ ಶಾಲೆಗೆ ಸೇರದಿರುವ ಮಕ್ಕಳನ್ನು ಒತ್ತಾಯಪಡಿಸುವ ಕಲಮುಗಳು ಈ ಕಾನೂನಿನಲ್ಲಿರಲಿಲ್ಲವಾಗಿ ಇದು ಯಶಸ್ವಿಯಾಗಲಿಲ್ಲ.

1950ರ ಭಾರತದ ಸಂವಿಧಾನದ ಆದೇಶವನ್ನನುಸರಿಸಿ ಮೈಸೂರು ರಾಜ್ಯದಲ್ಲಿ 14ನೆಯ ವಯಸ್ಸಿನವರೆಗಿನ ಶಿಕ್ಷಣ ಕಡ್ಡಾಯವಾಯಿತು. ಆದರೆ ಅನೇಕ ಕಾರಣಗಳಿಂದ ಅದು ಅಷ್ಟಾಗಿ ಪ್ರಗತಿ ಸಾಧಿಸಲಿಲ್ಲ.

12 ವಯಸ್ಸಿನವರೆಗೆ ಮಕ್ಕಳ ಶಿಕ್ಷಣ 1961ರಿಂದ ಕಡ್ಡಾಯವಾಗಿ ಮತ್ತೆ ಆಚರಣೆಗೆ ಬಂತು. ಆ ವಯಸ್ಸಿನ ಮಕ್ಕಳನ್ನು ಇತರ ಉದ್ಯೋಗ ಗಳಿಗೆ ಸೇರಿಸುವುದೂ ಸೇರಿಸಿಕೊಳ್ಳುವುದೂ ಅಪರಾಧವಾಯಿತು. ಆದರೂ ಮಾತಾಪಿತೃಗಳ ಉದಾಸೀನತೆಯಿಂದ, ಬಡತನದಿಂದ ಕಡ್ಡಾಯ ಶಿಕ್ಷಣ ಪೂರ್ಣಫಲ ನೀಡಿದೆಯೆನ್ನಲಾಗದು.

ಮುಂಬಯಿ ಕರ್ನಾಟಕದ ಭಾಗದಲ್ಲಿ 1793ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಸರ್ಕಾರದ ಸಹಾಯದಿಂದ ಕ್ರೈಸ್ತ ಮಿಷನರಿಗಳು ಕೆಲವು ಶಾಲೆಗಳನ್ನು ನಡೆಸುತ್ತಿತ್ತೆಂದು ತಿಳಿದುಬಂದಿದೆ. 1813ರಲ್ಲಿ ಜಾರಿಗೆ ಬಂದ ಸನ್ನದಿನಂತೆ ಕಂಪನಿಯು ವಿದ್ಯಾಭ್ಯಾಸದ ವೆಚ್ಚಕ್ಕಾಗಿ 1 ಲಕ್ಷ ರೂಪಾಯಿಯನ್ನು (ಭಾರತದಲ್ಲಿದ್ದ ಇಡೀ ಕಂಪನಿಯ ಪ್ರಭುತ್ವ ಪ್ರದೇಶಗಳಿಗೆ) ನಿಗದಿಮಾಡಿತು. ಮುಂಬಯಿಯಲ್ಲಿ ವಿದ್ಯಾ ಇಲಾಖೆ 1855ರಲ್ಲಿ ಸ್ಥಾಪನೆಯಾಯಿತು. 1882ರಲ್ಲಿ ಧಾರವಾಡ ಜಿಲ್ಲೆಯಲ್ಲಿದ್ದ ಶಾಲೆಗಳ ಸಂಖ್ಯೆ 341, ಬೆಳಗಾಂವಿಯಲ್ಲಿ 177, ಬಿಜಾಪುರದಲ್ಲಿ 150. ಶಾಲಾರುಸುಮು ತಿಂಗಳಿಗೆ ಒಂದಾಣೆ ಇತ್ತು. ಸರ್ಕಾರ ಶಾಲಾಕಟ್ಟಡಗಳಿಗಾಗಿ ಖರ್ಚಿನ ಅರ್ಧಭಾಗ ಹಣವನ್ನೂ ಉಪಾಧ್ಯಾಯರ ಪಗಾರವನ್ನೂ ಕೊಡುತ್ತಿತ್ತು.

ಮುಂಬಯಿ ಸರ್ಕಾರ 1918ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಕಾನೂನನ್ನು ಆಚರಣೆಗೆ ತಂದಿತು. ಇದರಿಂದ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಕಡ್ಡಾಯ ಶಿಕ್ಷಣ ಪ್ರಾರಂಭವಾಯಿತು. ಶಾಲೆಗಳ ಸಂಖ್ಯೆ ಇಪ್ಪತ್ತು ವರ್ಷಗಳಲ್ಲಿ ದ್ವಿಗುಣವಾಯಿತು. 1922ರಲ್ಲಿ ಮುಂಬಯಿ ಕರ್ನಾಟಕದ ಭಾಗದಲ್ಲಿ 2,258 ಪ್ರಾಥಮಿಕ ಶಾಲೆಗಳಿದ್ದವು. 1947ರಲ್ಲಿ ಶಾಲೆಗಳ ಸಂಖ್ಯೆ 4,111 ಇತ್ತು. 1925ರಲ್ಲಿ ಸರ್ಕಾರದ ಆಜ್ಞೆಯಂತೆ ಪ್ರಾಥಮಿಕ ವಿದ್ಯಾಭ್ಯಾಸ ಕಡ್ಡಾಯವಾಗಿಯೂ ಉಚಿತವಾಗಿ ದೊರೆಯುವಂತೆ ಏರ್ಪಾಡು ಮಾಡಲಾಯಿತು. ಜಿಲ್ಲಾ ಶಾಲಾ ಬೋರ್ಡ್‌ಗಳೂ ಪುರಸಭೆಗಳೂ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವುದರಲ್ಲಿ ಮುಖ್ಯ ಪಾತ್ರ ವಹಿಸಿದವು. ಬ್ಯಾಡಗಿ ಪುರಸಭೆ 1920ರಲ್ಲೂ ಧಾರವಾಡ ಪುರಸಭೆ 1942ರಲ್ಲೂ ಬಿಜಾಪುರ ನಗರಸಭೆ 1944ರಲ್ಲೂ ಧಾರವಾಡ ಜಿಲ್ಲಾ ಬೋರ್ಡ್ 1943ರಲ್ಲೂ ಬೆಳಗಾಂವಿ ಜಿಲ್ಲಾ ಬೋರ್ಡ್ 1946ರಲ್ಲೂ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದವು. 1947ರಲ್ಲಿ ಮುಂಬಯಿ ಸರ್ಕಾರ ಜಾರಿಗೆ ತಂದ ಕಡ್ಡಾಯ ಶಿಕ್ಷಣ ಕಾನೂನು ಆ ಭಾಗ ಮೈಸೂರು ರಾಜ್ಯದಲ್ಲಿ ಸೇರ್ಪಡೆ ಆಗುವವರೆಗೆ (1956) ಜಾರಿಯಲ್ಲಿದ್ದುವು.

ಮದರಾಸು ಪ್ರಾಂತ್ಯದ ಭಾಗಗಳಾಗಿದ್ದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲೂ 18ನೆಯ ಶತಮಾನದಲ್ಲಿ ಅಯ್ಯಗಳ ಶಾಲೆಗಳು ಸ್ಥಳೀಯ ಶಾನುಭೋಗರಿಂದಲೋ ಜಮೀನ್ದಾರರ ಕಾರಕೂನರಿಂದಲೋ ನಡೆಸಲ್ಪಡುತ್ತಿದ್ದುವು. ಶಾಲಾ ಮಕ್ಕಳಿಗೆ ಓದುವುದು, ಬರೆವಣಿಗೆ, ಗಣಿತ ಹಾಗೂ ರಾಮಾಯಣ ಭಾಗವತ ಜೈಮಿನಿ ಭಾರತ ಓದುವುದರಲ್ಲೂ ಯಕ್ಷಗಾನ ಪ್ರಸಂಗಗಳನ್ನು ಅಭ್ಯಾಸ ಮಾಡುವುದರಲ್ಲೂ ತರಬೇತಿ ಕೊಡಲಾಗುತ್ತಿತ್ತು. ಕ್ಯಾತೊಲಿಕ್ ಪಾದ್ರಿಗಳು ಮಕ್ಕಳಿಗೆ ಓದುಬರೆಹ ಕಲಿಸಲು ಶಾಲೆಗಳನ್ನು ಸ್ಥಾಪಿಸಿದ್ದರು. ಮಂಗಳೂರು ಉಡುಪಿ ಬಳ್ಳಾರಿಗ ಳಲ್ಲಿ 1838ರಲ್ಲಿ ಅಂಥ ಶಾಲೆಗಳು ಪ್ರಾರಂಭವಾದುವು. 1822ರಲ್ಲಿಯೇ ಮದರಾಸು ಸರ್ಕಾರ ಮನ್ರೋ ಅವರ ನಿರೂಪಣೆಯಂತೆ ಶಾಲಾಶಿಕ್ಷಣಕ್ಕೆ ಗಮನ ಕೊಟ್ಟಿತು. 1836ರಲ್ಲಿ ಬೋರ್ಡ್ ಎಜ್ಯುಕೇಷನ್ ಸ್ಥಾಪಿತವಾಯಿತು. 1855–56ರಲ್ಲಿ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲೆಗಳು ಪ್ರಾರಂಭದುವು. 1855ರಲ್ಲಿ ಮದರಾಸು ಸರ್ಕಾರ ಸಹಾಯಧನ ಪದ್ಧತಿಯನ್ನು ತರುವುದರ ಮೂಲಕ ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಅನುಕೂಲ ಮಾಡಿಕೊಟ್ಟಿತು. 1836ರಲ್ಲಿ ಮದರಾಸು ಎಲಿಮೆಂಟರಿ ಎಜ್ಯುಕೇಷನ್ ಕಾನೂನು ಮತ್ತು 1871ರಲ್ಲಿ ಲೋಕಲ್ ಫಂಡ್ ಕಾನೂನು ಗಳನ್ನು ಮಾಡಿದ್ದರಿಂದ ಶಾಲೆಗಳ ಸಂಖ್ಯೆ ಹೆಚ್ಚಾಗಲು ಸಹಾಯವಾಯಿತು. 1870–71ರಿಂದ 1880–81ರವರೆಗಿನ ಅವಧಿಯಲ್ಲಿ ಶಾಲೆಗಳ ಸಂಖ್ಯೆ ಏಕಪ್ರಕಾರವಾಗಿ ಹೆಚ್ಚುತ್ತಬಂತು. 20ನೆಯ ಶತಮಾನದ ಆರಂಭದಲ್ಲಿ ನಿಧಾನವಾಗಿ ಅಭಿವೃದ್ಧಿಯಾಗುತ್ತಿದ್ದ ಶಾಲೆಗಳ ಸಂಖ್ಯೆ 1914–18ರ ಮಹಾಯುದ್ಧ ಕಾಲದಲ್ಲಿ ಕುಂಠಿತವಾಯಿತು. ಆದರೆ ಯುದ್ಧಾನಂತರ ಹೊಸ ಅನುದಾನ ಪದ್ಧತಿಯ ಅಡಿಯಲ್ಲಿ ಹಣಸಹಾಯದಿಂದ ಶಾಲೆಗಳ ಸಂಖ್ಯೆ ತೀವ್ರ ವೇಗದಿಂದ ಹೆಚ್ಚಲು ಅವಕಾಶವಾಯಿತು. 1918ರಲ್ಲಿ ಪ್ರಾಥಮಿಕ ಹಂತದ ಕೊನೆಯಲ್ಲಿದ್ದ ಏಳನೆಯ ತರಗತಿ ಪರೀಕ್ಷೆಗಳು ರದ್ದಾದುವು. ಅಭ್ಯಾಸಪತ್ರಿಕೆಯಲ್ಲಿ ಪ್ರಕೃತಿ ಪಾಠ, ಭೂಗೋಳ, ಪೌರನೀತಿಗಳು ಹೊಸದಾಗಿ ಸೇರಿಸಲ್ಪಟ್ಟವು. ಕ್ರಮೇಣ ಬಾಲಕಿಯರಿಗೂ ಆದಿದ್ರಾವಿಡರಿಗೂ ಮುಸ್ಲಿಮರಿಗೂ ಪ್ರತ್ಯೇಕ ಶಾಲೆಗಳು ಸ್ಥಾಪಿತವಾದುವು. 1920ರಲ್ಲಿ ಮದರಾಸು ಎಲಿಮೆಂಟರಿ ಎಜ್ಯುಕೇಷನ್ ಕಾಯಿದೆ ಜಾರಿಗೆ ಬಂತು. ಇದರಿಂದ ಪ್ರಾಥಮಿಕ ವಿದ್ಯಾಭ್ಯಾಸ ಜಿಲ್ಲಾ ಬೋರ್ಡ್‌ಗಳಿಂದ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿ ಬೋರ್ಡ್‌ಗಳಿಗೆ ವರ್ಗವಾಯಿತು. 1927ರಲ್ಲಿ ಬಳ್ಳಾರಿಯಲ್ಲಿ 1,341 ಶಾಲೆಗಳೂ ದಕ್ಷಿಣ

ಕನ್ನಡ ಜಿಲ್ಲೆಯಲ್ಲಿ 1,224 ಶಾಲೆಗಳೂ ಇದ್ದುವು. ಮೀನುಗಾರರ ಮಕ್ಕಳಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಶಾಲೆಗಳಿದ್ದುವು. 1938ರಲ್ಲಿ ಜಿಲ್ಲಾ ವಿದ್ಯಾಭ್ಯಾಸ ಸಮಿತಿಗಳು ವಜಾ ಆದುವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಪಿಳ್ಳೆಗಳ ಮಕ್ಕಳಿಗೂ ಬಳ್ಳಾರಿಯಲ್ಲಿ ಲಂಬಾಣಿಗರ ಮಕ್ಕಳಿಗೂ ಪ್ರತ್ಯೇಕ ಶಾಲೆಗಳು ಸ್ಥಾಪಿಸಲ್ಪಟ್ಟುವು. 1939ರಿಂದ 1956ರ ವರೆಗೆ ಎಲ್ಲ ರೀತಿಯ ಶಾಲೆಗಳ ಸಂಖ್ಯೆಯೂ ವಿದ್ಯಾರ್ಥಿ ಸಂಖ್ಯೆಯೂ ಹೆಚ್ಚುತ್ತಾಹೋದವು.

ಹೈದರಾಬಾದ್ – ಕರ್ನಾಟಕ ಭಾಗದಲ್ಲಿ 1854ರಲ್ಲಿ ಪಾಶ್ಚಾತ್ಯ ವಿದ್ಯಾಪ್ರಸಾರ ಆರಂಭವಾಯಿತು. ಅದೇ ವರ್ಷ ದರ್–ಉಲ್–ಉಲಂ ಎಂಬ ಪೌರಸ್ತ್ಯ ಪದ್ಧತಿಯ ಶಿಕ್ಷಣಶಾಲೆ ಹೈದರಾಬಾದ್ ನಗರದಲ್ಲಿ ಪ್ರಾರಂಭವಾಯಿತು. ಇದೇ ಆ ರಾಜ್ಯದಲ್ಲಿ ಆಧುನಿಕ ವಿದ್ಯಾಭ್ಯಾಸ ಪದ್ಧತಿಯ ಬುನಾದಿಯಾಯಿತು. 1859ರಲ್ಲಿ ಸರ್ಕಾರ ಒಂದು ಆಜ್ಞಾಪತ್ರ ಕಳುಹಿಸಿ ಪ್ರತಿಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲೂ ಶಾಲೆ ಪ್ರಾರಂಭವಾಗಬೇಕೆಂದು, ಅವುಗಳ ಮೇಲ್ವಿಚಾರಣೆಗೆ ಒಂದು ಸ್ಥಳೀಯ ಸಮಿತಿ ಇರಬೇಕೆಂದು ಅದರಲ್ಲಿ ಪಟೇಲರೂ ಪಟವಾರಿಗಳೂ ಸದಸ್ಯರಾಗಿರಬೇಕೆಂದು ನಿರೂಪಿಸಲಾಯಿತು. 1869ರಲ್ಲಿ ವಿದ್ಯಾಭ್ಯಾಸ ಇಲಾಖೆ ಸ್ಥಾಪಿತವಾಗಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಹುದ್ದೆ ಏರ್ಪಾಡಾಯಿತು. ಶಾಲೆಗಳಲ್ಲಿ ಇಂಗ್ಲಿಷ್ ಭಾಷಾಬೋಧನೆ 1873ರಲ್ಲಿ ಪ್ರಥಮವಾಗಿ ಪ್ರಾರಂಭಿಸಲ್ಪಟ್ಟಿತು. 1874ರಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್‌ಗಳನ್ನು ಪ್ರತಿ ಜಿಲ್ಲೆಗೂ ನೇಮಿಸಲಾಯಿತು. 1887ರಲ್ಲಿ ರಾಯಚೂರಿನಲ್ಲಿ ಸೇಂಟ್ ಮೇರಿ ಕಾನ್ವೆಂಟ್ ಶಾಲೆ ಪ್ರಾರಂಭವಾಯಿತು. ಪ್ರಾಥಮಿಕ ವಿದ್ಯಾಭ್ಯಾಸ ಉಚಿತವಾಗಿ ದೊರೆಯುತ್ತಿತ್ತು. 1890ರಲ್ಲಿ ಮಿಡಲ್ ಸ್ಕೂಲ್ ಪರೀಕ್ಷೆ ಆರಂಭವಾಯಿತು. ಪ್ರಾಥಮಿಕ ಶಾಲೆಗಳಲ್ಲಿ ಐದು ತರಗತಿಗಳಿದ್ದವು. 1903ರಲ್ಲಿ ರಾಯಚೂರು ಜಿಲ್ಲೆಯಲ್ಲಿ 31 ಪ್ರೈಮರಿ ಶಾಲೆಗಳೂ ಎರಡು ಮಿಡಲ್ ಸ್ಕೂಲುಗಳೂ 94 ಹೆಣ್ಣುಮಕ್ಕಳನ್ನೂ ಒಳಗೊಂಡಂತೆ 2,679 ವಿದ್ಯಾರ್ಥಿಗಳೂ ಇದ್ದರು. 1965ರಲ್ಲಿ ಜಿಲ್ಲೆಯ 765 ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳಿದ್ದುವು. 1968–69ರಲ್ಲಿ ಆ ಸಂಖ್ಯೆ 1,005ಕ್ಕೆ ಹೆಚ್ಚಿತು. 1903ರಲ್ಲಿ ಬಿದರೆ ಜಿಲ್ಲೆಯಲ್ಲಿ 30 ಪ್ರಾಥಮಿಕ ಶಾಲೆಗಳೂ 2 ಮಾಧ್ಯಮಿಕ ಶಾಲೆಗಳೂ ಇದ್ದವು. ಹೈದರಾಬಾದ್ ಸಂಸ್ಥಾನದ ಈ ಜಿಲ್ಲೆಗಳು ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದಿದ್ದವು. 1901ರ ಜನಗಣತಿಯಂತೆ ರಾಯಚೂರಿನಲ್ಲಿ ಸೇ. 2.1 ಜನರೂ ಗುಲ್ಬರ್ಗದಲ್ಲಿ ಸೇ. 3.8 ಜನರೂ ಅಕ್ಷರಸ್ಥರಾಗಿದ್ದರು. 1951ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಸೇ. 8.8 ಜನರೂ ಗುಲ್ಬರ್ಗ ಜಿಲ್ಲೆಯಲ್ಲಿ ಸೇ. 13.8 ಜನರೂ ಅಕ್ಷರಸ್ಥರಾಗಿದ್ದರು. ಹೆಣ್ಣು ಮಕ್ಕಳಲ್ಲಿ ಅಕ್ಷರಸ್ಥರಾಗಿದ್ದವರು ಬಹಳ ಅಲ್ಪ. ಹೈದರಾಬಾದಿನ ಜಿಲ್ಲೆಗಳಲ್ಲಿ 1953ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೆಲವೇ ಪ್ರದೇಶಗಳಿಗೆ ಸೀಮಿತವಾಗಿ ಆಚರಣೆಗೆ ಬಂತು. ಆದರೆ ಆ ಯೋಜನೆ ಅಷ್ಟು ಫಲಕಾರಿಯಾಗಲಿಲ್ಲ.

ಕೊಡಗು ಪ್ರದೇಶದಲ್ಲಿ ಅಲ್ಲಿನ ರಾಜರ ಆಡಳಿತ ಕಾಲದಲ್ಲಿ ಯಾವ ರೀತಿಯ ಪ್ರಾಥಮಿಕ ಶಾಲೆಗಳೂ ಇರಲಿಲ್ಲ. ಕಂಪನಿಯ ಆಡಳಿತ ಪ್ರಾರಂಭವಾದ ಮೇಲೆ 1834ರಲ್ಲಿ ಮಡಿಕೇರಿಯಲ್ಲಿ ಒಂದು ಪ್ರಾಥಮಿಕ ಶಾಲೆ ಆರಂಭವಾಯಿತು. ಅನಂತರ ವಿರಾಜಪೇಟೆಯಲ್ಲಿ ಸರ್ಕಾರವೂ ರೋಮನ್ ಕ್ಯಾತೊಲಿಕ್ ಮಿಷನ್ನಿನವರೂ ಶಾಲೆಗಳನ್ನು ಆರಂಭಿಸಿದರು. 1870ರಲ್ಲಿ ಕೊಡಗು ಸೀಮೆಯಲ್ಲಿ 40 ಶಾಲೆಗಳಿದ್ದವು. 1872ರಲ್ಲಿ ಸರ್ಕಾರ ಶಿಕ್ಷಣ ತೆರಿಗೆ ವಿಧಿಸಿತು. ಅಲ್ಲಿ 1893ರಲ್ಲಿ 74 ಪ್ರಾಥಮಿಕ ಶಾಲೆಗಳಿದ್ದವು. ಇವುಗಳಲ್ಲಿ ಸುಮಾರು ನಾಲ್ಕು ಸಾವಿರ ಮಕ್ಕಳು ಕಲಿಯುತ್ತಿದ್ದರು. 1910ರಲ್ಲಿ ಶಾಲೆಗಳ ಸಂಖ್ಯೆ 106ಕ್ಕೆ ಹೆಚ್ಚಿತು. ಶಿಕ್ಷಣ ಶಾಖೆ ಇಲ್ಲಿನ ಚೀಫ್ ಕಮಿಷನರ್ ನೇತೃತ್ವದಲ್ಲಿಯೇ ನಡೆಯುತ್ತಿತ್ತು. ಮದರಾಸು ರಾಜ್ಯದ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳೂ ಅವರ ಸಹಾಯಕರೂ ಕೊಡಗು ವಿದ್ಯಾಭ್ಯಾಸ ಇಲಾಖೆಗೆ ಸಲಹೆಗಾರರಾಗಿದ್ದರು. 1939ರಲ್ಲಿ ಪ್ರತ್ಯೇಕ ಜಿಲ್ಲಾಧಿಕಾರಿಗಳ ಸ್ಥಾನ ನಿರ್ಮಿತವಾಯಿತು. ಸ್ವಾತಂತ್ರ್ಯ ದೊರೆತು ರಾಜ್ಯಪುನರ್ವಿಂಗಡಣೆಯ ಕಾಲಕ್ಕೆ ಅಲ್ಲಿ ಸೇ. 60ಕ್ಕೂ ಹೆಚ್ಚಿನ ಜನ ಅಕ್ಷರಸ್ಥರಾಗಿದ್ದರು. ಅನಂತರ ಈ ಜಿಲ್ಲೆಯಲ್ಲಿ 350ಕ್ಕೂ ಹೆಚ್ಚು ಶಾಲೆಗಳಾಗಿವೆ.

1956ರ ರಾಜ್ಯ ಪುನರ್ವಿಂಗಡಣೆ ಸಂದರ್ಭದಲ್ಲಿ ಆಯಾ ಪ್ರದೇಶಗಳಲ್ಲಿ ಆಯಾ ರಾಜ್ಯದ ಭಿನ್ನ ರೀತಿಯ ವಿದ್ಯಾಭ್ಯಾಸ ಕಾನೂನು ಆಚರಣೆಯಲ್ಲಿತ್ತು. ಶಿಕ್ಷಣ ಪ್ರಗತಿಯೂ ಭಿನ್ನರೀತಿಯದಾಗಿದ್ದಿತು. 1961ರಲ್ಲಿ ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನನ್ನು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಆಚರಣೆಗೆ ತಂದಿತು. 1961–62ರಿಂದ 1965–66ರ ಅಂತರದಲ್ಲಿ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಸೇ. 90 ಭಾಗವಾದರೂ ಶಾಲೆಗೆ ದಾಖಲಾಗಲೇಬೇಕೆಂಬ ಆದೇಶ ಬಂತು. 1961–62ರಲ್ಲಿ 6–7ನೆಯ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಪ್ರಾರಂಭಿಸಿ 6–11 ವಯಸ್ಸಿನ ಮಕ್ಕಳೆಲ್ಲರೂ 1965–66ರಲ್ಲಿ ಶಾಲೆಗೆ ಹೋಗುವಂತೆ ಮಾಡಲು ಸನ್ನಾಹಗಳು ನಡೆದವು. ಇದಕ್ಕೆ ಪೂರಕವಾಗಿ ಮಕ್ಕಳಿಗೆ ಶಾಲೆಯಲ್ಲಿ ಮಧ್ಯಾಹ್ನದ ಊಟ–ಉಪಾಹಾರ ವ್ಯವಸ್ಥೆ ಏರ್ಪಾಡು ಮಾಡಲಾಯಿತು. ಇದಕ್ಕೆ ಅಮೆರಿಕದ ಕೇರ್ ಸಂಸ್ಥೆಯ ನೆರವೂ ದೊರಕಿತು.

"ಪ್ರಾಥಮಿಕ ಶಿಕ್ಷಣ" ಸಂವಿಧಾನದಲ್ಲಿ ಒದಗಿಸಿರುವ ಅವಕಾಶಗಳು ಹಾಗೂ ಪಂಚವಾರ್ಷಿಕ ಯೋಜನೆಗಳ ರೀತ್ಯ ಭಾರತದಲ್ಲಿನ ಎಲ್ಲ ಹಂತಗಳಿಗೂ ಶಿಕ್ಷಣದ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ಸಂವಿಧಾನದ 45ನೆಯ ಕಲಂ (ಆರ್ಟಿಕಲ್) ಪ್ರಕಾರ "ಸಂವಿಧಾನ ಅಸ್ತಿತ್ವಕ್ಕೆ ಬಂದ ಹತ್ತು ವರ್ಷಗಳೊಳಗೆ 14 ವರ್ಷಗಳು ತುಂಬುವುದರೊಳಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯವಾಗಿ ಶಿಕ್ಷಣವನ್ನು ಒದಗಿಸುವ ಕೆಲಸವನ್ನು ರಾಜ್ಯವು ಮಾಡುವುದಿದೆ".

ಸಂವಿಧಾನದ 93ನೆಯ ತಿದ್ದುಪಡಿಯಲ್ಲಿರುವಂತೆ ಪ್ರಾಥಮಿಕ ಶಿಕ್ಷಣ ಪಡೆಯುವುದು ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕಾಗಿದೆ. ಆದರೆ ಲಕ್ಷಾಂತರ ಮಕ್ಕಳು ಈ ಹಕ್ಕಿನಿಂದ ಶಾಲೆಗಳ ಹೊರಗೇ ಇದ್ದಾರೆ.

ಪ್ರಾಥಮಿಕ ಶಿಕ್ಷಣದ ಕ್ಷೇತ್ರದಲ್ಲಿ ಸಾಕ್ಷರತೆಯ ತೀವ್ರಗತಿ (ರೇಟ್) ಕರ್ನಾಟಕದಲ್ಲಿ ಸೇ. 67.04 ಎಂದು ವರದಿಯಾಗಿದೆ (2001ರ ಸಂಶೋಧನೆ). ಭಾರತದಾದ್ಯಂತ ಪ್ರಾಥಮಿಕ ಶಾಲೆಗಳು ಮತ್ತು ದಾಖಲೆಗಳಲ್ಲಿ ಸಾಕಷ್ಟು ಹೆಚ್ಚಳ ಕಂಡುಬಂದಿದೆ. ಇದು ಕರ್ನಾಟಕದಲ್ಲಿ 1960–61 ರಲ್ಲಿ 27,000 ವಿದ್ದದ್ದು 1997–98ರಲ್ಲಿ 46,900 ಆಗಿದ್ದು 2002–03ರಲ್ಲಿ 50,424ಕ್ಕೆ ಏರಿದೆ. ಆದರೆ ಶಾಲೆಗಳನ್ನು ಬಿಡುವವರ ಸೇ. ದರವು 51.89 (93–94) ಎಂದೂ ವರದಿಯಾಗಿದೆ.

2001ರ ಜನಗಣತಿಯಲ್ಲಿ ತಿಳಿಸಿರುವಂತೆ ಕರ್ನಾಟಕದಲ್ಲಿನ ಸಾಕ್ಷರತೆಗೆ ಸಂಬಂಧಿಸಿದ ವಿವರಗಳು ಈ ಮುಂದಿನಂತಿವೆ:

| **ಒಟ್ಟು ಜನಸಂಖ್ಯೆ** | **ಗಂಡಸರು** | **ಹೆಂಗಸರು** |
|---|---|---|
| 5,27,33,958 | 2,68,56,343 | 2,58,77,615 |

| ಸಾಕ್ಷರರು | **ಗಂಡಸರು** | **ಹೆಂಗಸರು** |
|---|---|---|
| 3,07,74,988 | 1,78,17,682 | 1,29,57,306 |
| ಸಾಕ್ಷರತೆಯ ಸೇಕಡ ದರ | | |
| 67.04 | 76.29 | 57.45 |

ರಾಷ್ಟ್ರದ ಸರಾಸರಿಗಿಂತ (65.4) ಕರ್ನಾಟಕದ ಸಾಕ್ಷರತೆಯ ಸೇಕಡ ದರವು ಹೆಚ್ಚಾಗಿರುವುದು ತಿಳಿದುಬಂದಿದೆ.

ಕರ್ನಾಟಕದಲ್ಲಿರುವ 50,000 ಶಾಲೆಗಳ ಪೈಕಿ 22,342 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 26,374 ಸರ್ಕಾರಿ ಹಿರಿಯ ಪ್ರಾಥಮಿಕಶಾಲೆಗಳೂ ಇವೆ. ವಂಚಿತ ಪರಿಸ್ಥಿತಿಗಳಲ್ಲಿ ವಾಸಿಸುತ್ತಿರುವ ಸೇ 92 ಮಕ್ಕಳಿಗೆ ಈ ಶಿಕ್ಷಣ ಒದಗಿಸಲು ಸರ್ಕಾರಿ ಶಾಲೆಗಳು ಉದ್ಯುಕ್ತವಾಗಿವೆ. ಇಷ್ಟಾದರೂ 7ನೆಯ ತರಗತಿಗೆ ಬರುವ ವೇಳೆಗೆ ಸೇಕಡ 43.71 ಮಕ್ಕಳು ಶಾಲೆಗಳನ್ನು ಬಿಟ್ಟು ಹೋಗುತ್ತಿದ್ದಾರೆ (ಎಚ್.ಆರ್.ಡಿ., ಕರ್ನಾಟಕ 1999).

2002ರ ಮಕ್ಕಳ ಗಣತಿಯಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ವರದಿ ಮಾಡಿರುವಂತೆ 6-14 ವಯಸ್ಸಿನ 6,66,000 ಮಕ್ಕಳು ಶಾಲೆಯಿಂದ ಹೊರಗೆ ಉಳಿದಿರುವರು.

ಕರ್ನಾಟಕದಲ್ಲಿರುವ ಎಲ್ಲ ಶೈಕ್ಷಣಿಕ ಬ್ಲಾಕುಗಳಲ್ಲಿ (202), 2004-05ರ ಶೈಕ್ಷಣಿಕ ವರ್ಷದಲ್ಲಿ, ಅಂದರೆ 6464 ಶಾಲೆಗಳಲ್ಲಿ (ಸು.7ಲಕ್ಷ ಮಕ್ಕಳಿಗೆ) ಕಲಿಕಾ ಭರವಸಾ ಕಾರ್ಯಕ್ರಮವನ್ನು (ಲರ್ನಿಂಗ್ ಗ್ಯಾರಂಟಿ ಪ್ರೋಗ್ರಾಮ್-ಎಲ್.ಜಿ.ಪಿ) ವಿಸ್ತರಿಸುವಂತೆ ಕರ್ನಾಟಕ ಸರ್ಕಾರವು ಮಾಡಿದೆ. ಇದಲ್ಲದೆ ಕಲಿಕಾ ಭರವಸಾ ಕಾರ್ಯಕ್ರಮವನ್ನು ಕರ್ನಾಟಕ ಶಾಲಾಗುಣಭರವಸಾ ಸಂಘಟನೆಯ ಸಮಗ್ರ ಭಾಗವನ್ನಾಗಿಸಬೇಕೆಂಬ ನಿರ್ಣಯವನ್ನು ಕರ್ನಾಟಕ ಸರ್ಕಾರ ತೆಗೆದುಕೊಂಡಿದೆ.

ಭಾರತೀಯ ಕೈಗಾರಿಕಾ ಒಕ್ಕೂಟವು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ವಲಯ ಭಾಗವಹಿಸುವಿಕೆಯ ಬಗ್ಗೆ 2004ರ ಆಗಸ್ಟ್‌ನಲ್ಲಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉತ್ಕರ್ಷಿಸುವುದಕ್ಕಾಗಿ ಇನ್ಫೋಸಿಸ್ ಪ್ರತಿಷ್ಠಾನ ಅನೇಕ ಬಗೆಯಲ್ಲಿ ನೆರವಾಗುತ್ತಿದೆ.

ಇತ್ತೀಚೆಗೆ ಪ್ರಾಥಮಿಕ ಶಾಲೆಗಳು ಕೇಂದ್ರೀಯ (ಸಿ.ಬಿ.ಎಸ್.ಇ) ಪಠ್ಯಕ್ರಮವನ್ನು ಅಳವಡಿಸಿಕೊಂಡಿರುವುದು ಗಮನಾರ್ಹ.

ಕರ್ನಾಟಕದಲ್ಲಿ ಸ್ಥಾಪಿತಗೊಂಡಿರುವ ಇಸ್ಕಾನ್ ಸಂಸ್ಥೆಯು ಕೆಲವೊಂದು ಆಯ್ದ ಸರ್ಕಾರಿ ಪ್ರಾಥಮಿಕಶಾಲಾ ಮಕ್ಕಳಿಗಾಗಿ ಮಧ್ಯಾಹ್ನದ ಬಿಸಿ ಊಟ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.

ಆರರಿಂದ ಹದಿನಾಲ್ಕು ವರ್ಷದೊಳಗಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡುವುದನ್ನು 2002ರಲ್ಲಿಯೇ ಮೂಲಭೂತ ಹಕ್ಕು ಎಂದು ಕಾಯ್ದೆಯನ್ನು ಪರಿಗಣಿಸಿದ್ದರಿಂದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಒದಗಿಸಲೆಂದು "ಸರ್ವಶಿಕ್ಷಾ ಅಭಿಯಾನ"ವನ್ನು ದೇಶದಾದ್ಯಂತ ತೆರೆಯಲಾಗಿದೆ. 2010ರ ಹೊತ್ತಿಗೆ ಈ ವಯೋಮಾನದ ಎಲ್ಲ ಮಕ್ಕಳನ್ನು ಎಂಟು ವರ್ಷಗಳ ಶಾಲಾ ಶಿಕ್ಷಣ ಯೋಜನೆಗೆ ಒಳಪಡಿಸಬೇಕೆಂಬುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ.

ಶಾಲೆ ಬಿಟ್ಟ ಮಕ್ಕಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಹಮ್ಮಿಕೊಂಡ ಕೆಲವು ಕಾರ್ಯಕ್ರಮಗಳು:

ಸ್ನೇಹ, ಚೇತನ, ಪ್ರಥಂ, ಅಕ್ಷರ, (ಬೆಂಗಳೂರಿನಲ್ಲಿ) ಪ್ರಜಾಯತ್ನ, ಶಿಕ್ಷಣ (2002 ಬೆಂಗಳೂರಿನಲ್ಲಿ)

ಪ್ರಾಥಮಿಕ ಶಿಕ್ಷಣದ ಸುಧಾರಣೆಗಾಗಿ ಕರ್ನಾಟಕದಲ್ಲಿ ಜಾರಿಗೆ ತಂದ ಕೆಲವು ಕೇಂದ್ರ ಪ್ರಾಯೋಜಿತ ಯೋಜನೆಗಳು :

ಕಪ್ಪು ಹಲಗೆ ಯೋಜನೆ (ಆಪರೇಷನ್ ಬ್ಲಾಕ್ ಬೋರ್ಡ್), ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿಸ್ಟ್ರಿಕ್ಟ್ ಪ್ರೈಮರಿ ಶಿಕ್ಷಣದ ಸುಧಾರಣೆ, ಶೈಕ್ಷಣಿಕ ತಂತ್ರಜ್ಞಾನ, 2005ರ ಶಿಕ್ಷಣ ಸಂಬಂಧಿ ಬಿಲ್ಲಿನ ಹಕ್ಕು (ರೈಟ್ ಟು ಎಜ್ಯುಕೇಷನ್ ಬಿಲ್-2005). (ಎ.ಎಸ್.ಆರ್.)

**ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ (ಆರ್.ಆರ್.ಸಿ.):** ಜಾನಪದ ಅಧ್ಯಯನಕ್ಕೆ ಅನುಕೂಲವಾಗುವಂತೆ ಸಂಗ್ರಹಿಸಿದ ಜಾನಪದ ಮಾಹಿತಿಗಳನ್ನು, ಸಾಮಗ್ರಿಗಳನ್ನು ಒಂದೆಡೆ ದಾಖಲಿಸಿ ಒದಗಿಸುವ ಅಪೇಕ್ಷೆಯಿಂದ ಉಡುಪಿಯ ಎಂ.ಜಿ.ಎಂ.ಕಾಲೇಜಿನಲ್ಲಿ ಸ್ಥಾಪಿತವಾದ ಒಂದು ಉಪಯುಕ್ತ ಮಾಹಿತಿ ಕೇಂದ್ರ (ರೀಜಿನಲ್ ರಿಸೋರ್ಸ್ ಸೆಂಟರ್). ಇದರ ರೂವಾರಿಗಳು ಕು.ಶಿ.ಹರಿದಾಸಭಟ್ಟರು. ಮಾಹಿತಿಗಳನ್ನು ದಾಖಲಿಸುವಲ್ಲಿ ವೈಜ್ಞಾನಿಕ ರೀತಿಯನ್ನು ಅನುಸರಿಸುತ್ತಿರುವುದು ಈ ಕೇಂದ್ರದ ವೈಶಿಷ್ಟ್ಯಗಳಲ್ಲಿ ಒಂದು.

ಬರವಣಿಗೆ, ಆಡಿಯೋ ರೆಕಾರ್ಡಿಂಗ್, ಫೋಟೋಗಳು, ವೀಡಿಯೋ ರೆಕಾರ್ಡಿಂಗ್, ಸ್ಲೈಡ್‌ಗಳು, ಡಾಕ್ಯುಮೆಂಟರಿ ಚಿತ್ರಗಳು ದಾಖಲಾತಿಯ ವಿವಿಧ ಬಗೆಗಳು. ಈ ಬಗೆಯ ಎಲ್ಲಾ ದಾಖಲೆಗಳನ್ನೂ ವೈಜ್ಞಾನಿಕವಾಗಿ ಸಂಗ್ರಹಿಸಿ, ಅಲ್ಲಿ ಸಂಗ್ರಹಗೊಂಡಿರುವ ಸಾಮಗ್ರಿಗೆ ಹಾಗೂ ನಿರೂಪಕರಿಗೆ ಅನ್ಯಾಯವಾಗದಂತೆ, ವ್ಯಾಪಾರಿ ದೃಷ್ಟಿಯ ಜನರಿಂದ ಶೋಷಣೆಯಾಗದಂತೆ ಕಾನೂನಿನ ರಕ್ಷಣೆಯನ್ನು ಒದಗಿಸುವ, ಅಧ್ಯಯನ ಮಾಡುವವರಿಗೆ ಅನುಕೂಲ ಮಾಡಿಕೊಡುವ ಸಂಸ್ಥೆಯನ್ನೇ ಜಾನಪದ ದಾಖಲಾತಿ ಸಂಗ್ರಹಾಲಯ ಅಥವಾ ಆರ್ಕೈವ್ ಎಂದು ಕರೆಯಲಾಗುತ್ತದೆ. ಈ ಬಗೆಯ ಆರ್ಕೈವ್‌ಗಳು ಜಾನಪದ ಅಧ್ಯಯನದಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಪಾಶ್ಚಾತ್ಯ ದೇಶಗಳಲ್ಲಿ ಲೈಬ್ರರಿಗಳನ್ನು ಉಪಯೋಗಿಸುವಂತೆಯೇ ಆರ್ಕೈವ್‌ಗಳನ್ನೂ ಜಾನಪದ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಉಪಯೋಗಿಸುತ್ತಾರೆ. ಜನಸಾಮಾನ್ಯರು ಕೂಡ ಈ ಆರ್ಕೈವ್‌ಗಳಿಗೆ ಭೇಟಿನೀಡಿ ಕುತೂಹಲದಿಂದ ಜಾನಪದ ಕ್ಷೇತ್ರದಲ್ಲಿ ತಮಗೆ ಅಗತ್ಯವಾದ ಮಾಹಿತಿಯನ್ನು ಪಡೆದು, ಜ್ಞಾನಸಂಪಾದನೆ ಮಾಡುತ್ತಾರೆ. ಇಂತಹ ಪರಂಪರೆ ಭಾರತದಲ್ಲಿ ಇರಲಿಲ್ಲ. ಇದನ್ನು ಗಮನಿಸಿದ ಅಮೆರಿಕದ ಫೋರ್ಡ್ ಫೌಂಡೇಶನ್ ಭಾರತದ ವಿವಿಧ ರಾಜ್ಯಗಳಲ್ಲಿ ಇಂತಹ ಆರ್ಕೈವ್‌ಗಳನ್ನು ಆರಂಭಿಸುವ ಸಂಸ್ಥೆಗಳಿಗೆ ನೆರವು ನೀಡಿತು. ಮಧ್ಯಪ್ರದೇಶದಲ್ಲಿ ಭೂಪಾಲ್‌ನ ರಂಗಮಂಡಲ, ಕೇರಳದ ತ್ರಿಶೂರ್‌ನಲ್ಲಿರುವ ಡ್ರಾಮಸ್ಕೂಲ್, ಮುಂಬಯಿಯ ಇಂಡಿಯನ್ ನ್ಯಾಷನಲ್ ಥಿಯೇಟರ್ ಹಾಗೂ ಹೈದರಾಬಾದಿನ ನಾಟಕ ಅಕಾಡೆಮಿ ಈ ನೆರವನ್ನು ಪಡೆದು ಕಾರ್ಯಾರಂಭ ಮಾಡಿದ್ದವು. ಕರ್ನಾಟಕದಲ್ಲಿ ಇಂಥ ಸಂಸ್ಥೆಯನ್ನು ಆರಂಭ ಮಾಡಲು ಫೋರ್ಡ್ ಫೌಂಡೇಶನ್ 88,000 ಡಾಲರ್‌ಗಳ ನೆರವನ್ನು ನೀಡಲು ಮುಂದೆ ಬಂತು (1984 ಫೆಬ್ರವರಿ 9). ಈ ಸವಾಲನ್ನು ಸ್ವೀಕರಿಸಿದ ಮಣಿಪಾಲ್ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಈ ಸಂಸ್ಥೆಗೆ ಅಗತ್ಯವಾದ ಕಟ್ಟಡ ಮೊದಲಾದ ನೆರವು ನೀಡಿತು. ಈ ಎರಡು ಸಂಸ್ಥೆಗಳು ನೆರವಿನಿಂದ ಎಂ.ಜಿ.ಎಂ.ಕಾಲೇಜಿನ ಒಂದು ಅಂಗವಾಗಿ ಕು.ಶಿ.ಹರಿದಾಸಭಟ್ಟರ ನಿರ್ದೇಶಕತ್ವದಲ್ಲಿ ಈ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆ ಕರ್ನಾಟಕದ ಆಗಿನ 20 ಜಿಲ್ಲೆಗಳಲ್ಲಿದ್ದ ಜನಪದ ರಂಗಕಲೆಗಳನ್ನು ವ್ಯವಸ್ಥಿತವಾದ

ರೀತಿಯಲ್ಲಿ ಆಡಿಯೋ ವೀಡಿಯೋ ಟೇಪ್‌ಗಳು, ಫೋಟೋಗಳು ಮತ್ತು ಸ್ಲೈಡ್‌ಗಳ ಮೂಲಕ ದಾಖಲಿಸಲು, ವರ್ಗೀಕರಿಸಲು ಕಂಕಣಬದ್ಧ ವಾಯಿತು. ಪ್ರಸ್ತುತ ಎಚ್.ಕೃಷ್ಣಭಟ್ಟ ಅವರು ಇದರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಎಸ್.ಎ.ಕೃಷ್ಣಯ್ಯ ಎಂಬುವರು ಸಂಸ್ಥೆಯು ಆರಂಭಗೊಂಡಾಗಿನಿಂದ ಸಂಶೋಧನಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಫಿನ್ಲೆಂಡಿನಲ್ಲಿ ನಾಲ್ಕು ವಾರಗಳ ಕಾಲವಿದ್ದು, ಅಲ್ಲಿನ ಫಿನ್ನಿಷ್ ಲಿಟರೇಚರ್ ಸೊಸೈಟಿ ಮತ್ತು ನಾರ್ಡಿಕ್ ಇನ್‌ಸ್ಟಿಟ್ಯೂಟ್ ಆಫ್ ಫೋಕ್ ಲೋರ್‌ನಲ್ಲಿ ಅಭ್ಯಾಸಮಾಡಿ, ಆರ್.ಆರ್.ಸಿ.ಯ ಇಂಡೆಕ್ಸ್ ಕಾರ್ಡ್‌ಗಳನ್ನು ಅವರು ಸಿದ್ಧಪಡಿಸಿದ್ದಾರೆ.

ಕರ್ನಾಟಕದಲ್ಲಿ ವೈವಿಧ್ಯಮಯವಾದ ಜನಪದ ಪ್ರದರ್ಶನಾತ್ಮಕ ಕಲೆಗಳಿವೆ. ಆದರೆ ಇವುಗಳಿಗೆ ಕರ್ನಾಟಕದ ಹೊರಗೆ ಪ್ರಚಾರ ಕಡಿಮೆ. ದೆಹಲಿಯಲ್ಲಿ ಸ್ವಾತಂತ್ರ್ಯದಿನಾಚರಣೆ, ಗಣರಾಜ್ಯೋತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಅಲ್ಲೊಂದು ಇಲ್ಲೊಂದು ಅವಕಾಶ ದೊರೆಯುತ್ತಿತ್ತು. ಆದರೆ ಭಾರತದಿಂದ ಹೊರಗೆ ಈ ಕಲಾತಂಡಗಳು ಹೋದದ್ದೇ ಇಲ್ಲ. ಯಕ್ಷಗಾನ ಮಾತ್ರವೇ ಹೊರದೇಶಗಳಿಗೆ ಹೋಗಿ, ಅಲ್ಲಿಯ ಜನರ ಮೆಚ್ಚುಗೆ ಗಳಿಸಿತ್ತು. 1984–85ರ ಕಾಲಾವಧಿಯಲ್ಲಿ ಅಮೆರಿಕ ಮತ್ತು ಫ್ರಾನ್ಸ್‌ನಲ್ಲಿ ನಡೆದ ಭಾರತ ಉತ್ಸವಗಳಲ್ಲಿ ಭಾರತದ ಜನಪದ ಕಲೆಗಳಿಗೆ ಮಹತ್ವ ದೊರೆಯಿತು. ಆದರೆ ಕರ್ನಾಟಕದ ಜನಪದ ಕಲಾತಂಡಗಳಿಗೆ ಈ ಉತ್ಸವಗಳಲ್ಲಿ ಹೆಚ್ಚಿನ ಅವಕಾಶ ದೊರೆಯಲಿಲ್ಲ. ಆರ್.ಆರ್.ಸಿ.ಯ ಕಾರ್ಯಚಟುವಟಿಕೆಗಳನ್ನು ಗಮನಿಸಿದ ದೆಹಲಿಯ ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ (ಐ.ಸಿ.ಸಿ.ಆರ್.) ಸಂಸ್ಥೆ ವಿದೇಶಗಳಲ್ಲಿ ಭಾರತ ಸರಕಾರ ನಡೆಸುವ ಉತ್ಸವಗಳಲ್ಲಿ ಭಾಗವಹಿಸಲು ಬೇಕಾಗುವ ಕಲಾವಿದರನ್ನು, ಕಲಾತಂಡಗಳನ್ನು ಆಯ್ಕೆಮಾಡುವ ಸಮಿತಿಯ ಸದಸ್ಯರನ್ನಾಗಿ ಕು.ಶಿ. ಅವರನ್ನು ನೇಮಿಸಿತು. ಇದಲ್ಲದೆ ದೆಹಲಿಯ ರಿಪಬ್ಲಿಕ್ ಡೇ ಫೋಕ್ ಫೆಸ್ಟಿವಲ್ ಕಮಿಟಿಯ ಸದಸ್ಯರನ್ನಾಗಿ ಕು.ಶಿ. ಅವರನ್ನು ನೇಮಕ ಮಾಡಲಾಯಿತು. ಇದರಿಂದ ಕರ್ನಾಟಕದ ಕೆಲವರಾದರೂ ಕಲಾವಿದರು, ಕಲಾತಂಡಗಳು ದೆಹಲಿಗೆ ಹಾಗೂ ವಿದೇಶಗಳಿಗೆ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸಲು ಅನುಕೂಲವಾಯಿತು. ಇದು ಕರ್ನಾಟಕದ ಜನಪದ ಕಲೆಗಳಿಗೆ ದೊರೆತ ಗೌರವವಾಗಿದೆ. ಆರ್.ಆರ್.ಸಿ. ವೀಡಿಯೋದಲ್ಲಿ ದಾಖಲು ಮಾಡಿದ್ದ ಕರ್ನಾಟಕದ ಜನಪದ ಕಲೆಗಳನ್ನು ಅಭ್ಯಾಸ ಮಾಡಿದ ಐ.ಸಿ.ಸಿ.ಆರ್ ಸಮಿತಿ ಅವುಗಳಲ್ಲಿ ಎರಡು ತಂಡಗಳನ್ನು ವಿದೇಶಗಳಿಗೆ ಕಳಿಸಲು ಆಗ ನಿರ್ಧಾರ ಮಾಡಿತ್ತು.

1988–89ರ ಕಾಲಾವಧಿಯಲ್ಲಿ ಫೋರ್ಡ್ ಫೌಂಡೇಶನ್ ನೆರವಿನಿಂದ ಹೈದರಾಬಾದ್‌ನ ತೆಲುಗು ವಿಶ್ವವಿದ್ಯಾಲಯದ ಮೂಲಕ ನಡೆದ ನಾಲ್ಕು ಅಂತಾರಾಷ್ಟ್ರಿಯ ಜಾನಪದ ವಿಜ್ಞಾನ ಕಮ್ಮಟಗಳು ಆರ್.ಆರ್.ಸಿ.ಯ ಮಹತ್ವಾಕಾಂಕ್ಷೆಯ ಪ್ರಯತ್ನ. ಇದು ಸಾಧ್ಯವಾದದ್ದು ಪೀಟರ್ ಜೆ. ಕ್ಲಾಸ್ ಮತ್ತು ಕು.ಶಿ.ಹರಿದಾಸಭಟ್ಟರ ಸತತವಾದ ಪ್ರಯತ್ನದಿಂದ.

20ನೆಯ ಶತಮಾನದ ಕೊನೆಯ ದಶಕದಲ್ಲಿನ ಇದರ ಸಾಧನೆ: ಕರಾವಳಿ ಕರ್ನಾಟಕದ ನಾಡ ಹುರುಂಬಿದೊಟ್ಟು, ಕೊಕ್ರಾಡಿ, ಬೆಲಾಲ್, ನೆಲ್ಲಿಪದವು, ಪುದುಬೆಟ್ಟು ಮತ್ತು ವರಾಚಾರು ಹೀಗೆ ಅನೇಕ ಗ್ರಾಮೀಣ ಪ್ರದೇಶಗಳು ಅಂತಾರಾಷ್ಟ್ರಿಯ ನೆಲೆಯಲ್ಲಿಯ ಮೌಖಿಕ ಸಾಹಿತ್ಯ ಅಧ್ಯಯನ ನಡೆಸಲು ಕನ್ನೆನೆಲವೆಂದು ತಿಳಿಸಿದ ಕೀರ್ತಿ ಲೌರಿಹಾಂಕೊ ಅವರಿಗೆ ಸಲ್ಲುವುದು. ಇದರ ಫಲಶ್ರುತಿಯೇ ಮೂರು ಬೃಹತ್ ಸಂಪುಟಗಳಲ್ಲಿ ಗೋಪಾಲನಾಯಕರ ಸಿರಿಸಂಧಿಯ ಮಹಾಕಾವ್ಯ ಅಧ್ಯಯನ. ಇದು ಒಂದು ಮಾದರಿ ರೂಪದ ಜಾನಪದ ಅಧ್ಯಯನವೆಂದು ಭಾವಿಸಲಾಗಿದೆ. ಜನಪದ ಮಹಾಕಾವ್ಯಗಳ ಅಧ್ಯಯನ ನಡೆಸಲು ಮುಂದಡಿ ಇಡುತ್ತಿದ್ದ ಕಾಲಘಟ್ಟದ ಜೊತೆಯಲ್ಲಿ ಮೌಖಿಕ ಚರಿತ್ರೆಯ ನಿರ್ಮಾಣ ಹೇಗೆ ಸಾಧ್ಯವಾಗಬಲ್ಲದೆಂದು ಅಧ್ಯಯನಕಾರರಿಗೆ ಅಭಿರುಚಿ ಬೆಳೆಸಿಕೊಳ್ಳಲು ಕಾರಣಕರ್ತರಾದವರು ಪೀಟರ್ ಜೆ.ಕ್ಲಾಸ್ (ಕ್ಯಾಲಿಫೋರ್ನಿಯ ಹೇವರ್ಡ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು).

ಗೊಂಬೆಯಾಟ ಮತ್ತು ಕಮ್ಮಟ: ಈ ಕೇಂದ್ರ ಇದುವರೆಗೆ ದಾಖಲು ಮಾಡಿದ ರಂಗಕಲೆಗಳಲ್ಲಿ ಗೊಂಬೆಯಾಟ ಅತಿ ಮುಖ್ಯವಾದ ಒಂದು ಪ್ರಕಾರ. ಗೊಂಬೆಯಾಟದಲ್ಲಿ ಎರಡು ಪ್ರಭೇದಗಳಿವೆ. ಒಂದು: ನೆರಳು ಗೊಂಬೆಯಾಟ ಅಥವಾ ತೊಗಲು ಗೊಂಬೆಯಾಟ. ಎರಡು: ಸೂತ್ರದ ಗೊಂಬೆಯಾಟ ಅಥವಾ ಮರದ ಗೊಂಬೆಯಾಟ. 1983ರಿಂದ ಈ ಗೊಂಬೆಯಾಟಗಳ ಬಗೆಗೆ ನಿರಂತರವಾಗಿ ದಾಖಲೀಕರಣ ನಡೆಯುತ್ತ ಬಂದಿದೆ. ಅನೇಕ ವಿಚಾರಸಂಕಿರಣಗಳು ನಡೆದಿವೆ ಮತ್ತು ನಡೆಯುತ್ತಲಿವೆ. ಈ ಸಂಬಂಧವಾದ ಬೌದ್ಧಿಕ ನೆರವನ್ನು ಕರ್ನಾಟಕದ ಇತರ ಸಂಘಸಂಸ್ಥೆಗಳು ಈ ಸಂಸ್ಥೆಯಿಂದ ಅಪಾರವಾಗಿ ಪಡೆದಿವೆ.

ಮೊದಲ ಬಾರಿಗೆ ಅಕ್ಟೋಬರ್ 1984ರಲ್ಲಿ ಆರ್.ಆರ್.ಸಿ. ಸಂಸ್ಥೆಯ ಸಹಯೋಗದೊಂದಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಜಂಟಿ ಆಶ್ರಯದಲ್ಲಿ ಸೂತ್ರದಗೊಂಬೆಯಾಟದ ಉತ್ಸವ ನಡೆಯಿತು. ಹೊರರಾಜ್ಯಗಳಾದ ಅಸ್ಸಾಂ, ರಾಜಸ್ತಾನ, ಪಶ್ಚಿಮ ಬಂಗಾಲ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಕರ್ನಾಟಕ–ಹೀಗೆ ಏಳು ರಾಜ್ಯಗಳ ಗೊಂಬೆಯಾಟದ ಪ್ರಾತ್ಯಕ್ಷಿಕೆ, ಸಂವಾದ, ಚರ್ಚೆ, ಪ್ರದರ್ಶನಗಳು ನೆರವೇರಿದವು. ಇವುಗಳ ಸಮಗ್ರ ದಾಖಲಾತೀಕರಣವನ್ನು ಸಂಸ್ಥೆ ಮಾಡಿಕೊಂಡಿದೆ. ಜಾನಪದ ರಂಗಕಲೆಗಳ ಬಹುಮಾಧ್ಯಮದ ದಾಖಲೀಕರಣಗಳ ಸಂಪನ್ಮೂಲಗಳು ಈ ಸಂಸ್ಥೆಯ ಆರ್ಕೈವ್ಸ್‌ನಲ್ಲಿ ವೈಜ್ಞಾನಿಕವಾಗಿ ಒಪ್ಪ ಓರಣದಲ್ಲಿ ಸಂರಕ್ಷಿಸಲ್ಪಟ್ಟಿದೆ. *

**ಪ್ರೇಮಾಕಾರಂತ:** 1936–. ಕನ್ನಡ ಹವ್ಯಾಸಿ ರಂಗಭೂಮಿಯ ಹೆಸರಾಂತ ರಂಗತಜ್ಞೆ, ನಟಿ, ನಿರ್ದೇಶಕಿ. 1936 ಆಗಸ್ಟ್ 8ರಂದು ಜನಿಸಿದರು. ದೆಹಲಿಯ ರಾಷ್ಟ್ರೀಯ ನಾಟಕಶಾಲೆ ಎನ್.ಎಸ್.ಡಿ. ಯಲ್ಲಿ ಪದವೀಧರರಾದ ಇವರು 1978ರಿಂದ ಮಕ್ಕಳ ನಾಟಕಗಳನ್ನು ನಿರ್ದೇಶಿಸುತ್ತ ಬಂದಿದ್ದಾರೆ. ಮಕ್ಕಳ ರಂಗಭೂಮಿ ಇವರ ಆಸಕ್ತಿಯ ಕ್ಷೇತ್ರ. ಅಲಿಬಾಬಾ ಮತ್ತು ನಲವತ್ತು ಕಳ್ಳರು, ನಕ್ಕಳಾ ರಾಜಕುಮಾರಿ, ಇಸ್ಪೀಟ್ ರಾಜ್ಯ, ಪಂಜರಶಾಲೆ, ಅಜ್ಜೀಕತೆ, ಕುಣಿಯೋ ಕತ್ತೆ, ಜಯಂಟ್ ಮಾಮಾ ಮೊದಲಾದ ನಾಟಕಗಳನ್ನು ನಿರ್ದೇಶಿಸಿ ಮಕ್ಕಳ ನಾಟಕಗಳ ಖ್ಯಾತ ನಿರ್ದೇಶಕಿ ಎಂಬ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಸುಮಾರು 12 ವರ್ಷಕಾಲ ಇವರು ಶಿಕ್ಷಕಿಯಾಗಿದ್ದರು. ಹಾಗಾಗಿ ಮಕ್ಕಳೊಡನೆ ಬೆರೆಯುವುದೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ. ನಾಟಕ ಕಲೆಯ ಮೂಲಕ ಶಾಲೆ ಹಾಗೂ ಶಾಲಾ ಕಲಿಕೆಯನ್ನು ಆಕರ್ಷಕಗೊಳಿಸಬಹುದು ಎಂಬುದು ಇವರ ನಿಲುವು. ಮಕ್ಕಳಲ್ಲಿ ಅದ್ಭುತ ಸೃಷ್ಟಿಶೀಲ ಶಕ್ತಿಯಿದೆ ಎಂಬ ಅಭಿಪ್ರಾಯ ಹೊಂದಿರುವ ಇವರು ಬೆಂಗಳೂರು ಘಟಕದ ಪ್ರಾದೇಶಿಕ ಸಂಪನ್ಮೂಲ ಕೇಂದ್ರದ ವತಿಯಿಂದ ಬೆಂಗಳೂರಿನಲ್ಲಿ ಶಾಲೆಗಳನ್ನು ರಂಗಶಿಕ್ಷಣಕ್ಕಾಗಿ ದತ್ತು ತೆಗೆದುಕೊಂಡು ಅಲ್ಲಿನ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ತರಬೇತಿ ನೀಡಿದ್ದಾರೆ. ಅನೇಕ ರಂಗಶಿಬಿರಗಳನ್ನು ನಡೆಸಿದ್ದಾರೆ.

ಹಿರಿಯರಿಗಾಗಿಯೂ ಇವರು ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕತ್ತಲೆ ಬೆಳಕು, ಕೊಡೆಗಳು, ಸಾಯೋ ಆಟ, ತೆರೆಗಳು, ನಾಯಿಕಥೆ ಮೊದಲಾದ ನಾಟಕಗಳಲ್ಲದೆ ಇಂಗ್ಲಿಷ್, ಹಿಂದೀ ನಾಟಕಗಳ

ಪ್ರಯೋಗಗಳನ್ನೂ ಮಾಡಿದ್ದಾರೆ. ವೇಷಭೂಷಣ ವಿನ್ಯಾಸದಲ್ಲಿಯೂ ಇವರದು ಪಳಗಿದ ಕೈ. 7 ಚಲನಚಿತ್ರ ಹಾಗೂ ನಾಟಕಗಳಿಗೆ ಇವರು ವೇಷಭೂಷಣ ವಿನ್ಯಾಸಗೊಳಿಸಿದ್ದಾರೆ. ವೇಷಭೂಷಣ ವಿನ್ಯಾಸಕ್ಕಾಗಿ ಇವರಿಗೆ ಚಮನ್ ಲಾಲ್ ಸ್ಮಾರಕ ಪುರಸ್ಕಾರ ಲಭಿಸಿದೆ.

ಇವರು ಚಲನಚಿತ್ರ ಕ್ಷೇತ್ರದಲ್ಲಿಯೂ ಹೆಸರು ಮಾಡಿದ್ದಾರೆ. ಕನ್ನಡದ ಮೊದಲ ಚಲನಚಿತ್ರ ನಿರ್ದೇಶಕಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಫಣಿಯಮ್ಮ ಇವರಿಗೆ ಖ್ಯಾತಿ ಹಾಗೂ ಗೌರವ ತಂದುಕೊಟ್ಟ ಚಲನಚಿತ್ರ, ಮಕ್ಕಳ ಚಿತ್ರಗಳನ್ನೂ ಸಾಕ್ಷ್ಯಚಿತ್ರಗಳನ್ನೂ ಪ್ರಸ್ತುತಪಡಿಸಿರುವ ಇವರನ್ನು ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. (1994). ಕುರುಡು ಕಾಂಚಾಣ, ಹಕ್ಕಿ ಹಾರುತಿದೆ ನೋಡಿದಿರಾ ಎಂಬ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ನಾಟಕಗಳು ರಂಗಭೂಮಿಯಲ್ಲಿ ಅನೇಕ ಪ್ರದರ್ಶನಗಳನ್ನು ಕಂಡಿವೆ. ಖ್ಯಾತ ರಂಗ ನಿರ್ದೇಶಕ ಬಿ.ವಿ. ಕಾರಂತ **(ನೋಡಿ)** ಇವರ ಪತಿ. **(ಎಚ್.ಕೆ.ಆರ್.ಎ.)**

**ಪ್ರೌಢಶಿಕ್ಷಣ:** ಪ್ರೌಢಶಿಕ್ಷಣ ಎಂಬ ಘಟ್ಟ ಇತ್ತೀಚಿನ ಕಲ್ಪನೆ. ಪ್ರಾಚೀನ ಕರ್ನಾಟಕದಲ್ಲಿ ಪ್ರೌಢಶಿಕ್ಷಣ ಒಂದು ಪ್ರತ್ಯೇಕ ಘಟಕವಾಗಿರಲಿಲ್ಲ. ಅದು ಉನ್ನತ ಶಿಕ್ಷಣದ ಪೂರ್ವಾರ್ಧದಲ್ಲಿ ಅಂತರ್ಗತವಾಗಿತ್ತು . ವಿದ್ಯಾರ್ಥಿಗಳು ಉಪನಯನಾನಂತರ, ಎಂದರೆ 12-13ನೆಯ ವಯಸ್ಸಿನಲ್ಲಿ ಗುರುಕುಲದಲ್ಲಿ ಆರಂಭಿಸುತ್ತಿದ್ದ ಶಿಕ್ಷಣ ಪ್ರೌಢಶಿಕ್ಷಣವೆಂದು ಪರಿಗಣಿಸುವುದು ವಾಡಿಕೆ. ಅದು ಮುಂದೆ ಉನ್ನತ ಶಿಕ್ಷಣವಾಗಿ 20-22ನೆಯ ವರ್ಷದವರೆಗೂ ಮುಂದುವರಿಯುತ್ತಿತ್ತು.

ಆಧುನಿಕ ಸ್ವರೂಪದ ಪ್ರೌಢಶಾಲೆ ಕರ್ನಾಟಕದಲ್ಲಿ ಕಳೆದ ಶತಮಾನದ ಎರಡನೆಯ ಪಾದದಲ್ಲಿ ಆರಂಭವಾಯಿತೆನ್ನಬಹುದು. ಮೊದಲು ಸರ್ಕಾರ ಅಂಥ ಶಾಲೆಯನ್ನು ಮೈಸೂರು, ಬೆಂಗಳೂರು ಮುಂತಾದ ಮುಖ್ಯ ಕೇಂದ್ರಗಳಲ್ಲಿ ಆರಂಭಿಸಿತು. ಅನಂತರ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಆರಂಭವಾಯಿತು. ಆ ವೇಳೆಗೆ ಕ್ರೈಸ್ತ ಪಾದ್ರಿಗಳೂ ಖಾಸಗಿ ಸಂಸ್ಥೆಗಳೂ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಪ್ರೌಢಶಾಲೆಗಳನ್ನು ಆರಂಭಿಸಿ ನಡೆಸುತ್ತಿದ್ದುವು. ಇಪ್ಪತ್ತನೆಯ ಶತಮಾನದ ನಾಲ್ಕನೆಯ ದಶಕದಲ್ಲಿ ಪೌರಸಭೆಗಳು ಪ್ರೌಢಶಾಲೆಗಳನ್ನು ಆರಂಭಿಸಲು ಅನುಮತಿ ಪಡೆದುವು. ಅದರ ಫಲವಾಗಿ ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ಪ್ರೌಢಶಾಲೆಗಳು ಆರಂಭವಾದುವು. 1950ರ ಸುಮಾರಿಗೆ ಜಿಲ್ಲಾ ಬೋರ್ಡುಗಳೂ ಪ್ರೌಢಶಾಲೆಗಳನ್ನು ಆರಂಭಿಸಲು ಅನುಮತಿ ಪಡೆದುವು. ಅದರ ಫಲವಾಗಿ ಅನೇಕ ಗ್ರಾಮಗಳಲ್ಲಿ ಪ್ರೌಢಶಾಲೆಗಳು ಅಸ್ತಿತ್ವಕ್ಕೆ ಬಂದುವು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಪ್ರೌಢಶಾಲಾ ಶಿಕ್ಷಣ ಅಗಾಧವಾಗಿ ವಿಸ್ತರಿಸಿದೆ.

ಈಗ ಏಳು ವರ್ಷಗಳು ಪ್ರಾಥಮಿಕ ಶಿಕ್ಷಣದ ಅನಂತರದ ಮೂರು ವರ್ಷದ ಅವಧಿಯ ಸಾಮಾನ್ಯ ಶಿಕ್ಷಣವನ್ನು ಪ್ರೌಢಶಿಕ್ಷಣವೆಂದು ಪರಿಗಣಿಸಲಾಗುವುದು. 8ನೆಯ ತರಗತಿಯಿಂದ ಆರಂಭವಾಗುವ ಈ ಶಿಕ್ಷಣ ರಾಜ್ಯದಾದ್ಯಂತ ಏಕರೀತಿಯ ಪ್ರೌಢಶಾಲೆಗಳಲ್ಲಿ ವ್ಯವಸ್ಥೆಗೊಂಡಿದೆ. ಪ್ರಾಥಮಿಕ 7ನೆಯ ತರಗತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಪ್ರೌಢ ಶಾಲೆಗೆ ಪ್ರವೇಶಾರ್ಹತೆ ಪಡೆಯುವವರು. ಮೂರು ವರ್ಷಗಳ ಶಿಕ್ಷಣದ ಅನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕೂಡುವರು. ಅದರಲ್ಲಿ ಉತ್ತೀರ್ಣರಾದವರು ಜೂನಿಯರ್ ಕಾಲೇಜಿನ ಅಥವಾ ಕೆಲವು ಸಂಯೋಜಿತ ಪ್ರೌಢಶಾಲೆಗಳಲ್ಲಿ ಏರ್ಪಟ್ಟಿರುವ ಪ್ರಿ ಯೂನಿವರ್ಸಿಟಿ ತರಗತಿಗೆ ಪ್ರವೇಶಾರ್ಹತೆ ಪಡೆಯುವರು.

ಪ್ರೌಢಶಾಲೆಗಳಲ್ಲಿ ಅಧಿಕಸಂಖ್ಯೆಯವು ಖಾಸಗಿ ಕ್ಷೇತ್ರಕ್ಕೆ ಸೇರಿವೆ. ಸರ್ಕಾರದ ಪ್ರೌಢಶಾಲೆಗಳನ್ನು ನೇರವಾಗಿ ರಾಜ್ಯ ಸರ್ಕಾರವೇ ಆರಂಭಿಸಿ ನಡೆಸುತ್ತಿದ್ದರೆ ಮಿಕ್ಕವು ಸರ್ಕಾರದ ಸಹಾಯಧನ ಪಡೆಯುತ್ತವೆ. ಪ್ರಶಿಕ್ಷಣ ಪಡೆದವರನ್ನು ಸಾಮಾನ್ಯವಾಗಿ ಅಧ್ಯಾಪಕರನ್ನಾಗಿ ಆರಿಸಿಕೊಳ್ಳಲಾಗುತ್ತಿದೆ.

1972ರ ವರೆಗೆ ಕೆಲವು ಪ್ರೌಢಶಾಲೆಗಳು ಹನ್ನೊಂದನೆಯ ತರಗತಿಯನ್ನೂ ನಡೆಸುತ್ತಿದ್ದುವು. ಹತ್ತನೆಯ ತರಗತಿಯ ಕೊನೆಯಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಹನ್ನೊಂದನೆಯ ತರಗತಿಗೆ ಸೇರುತ್ತಿದ್ದರು. ಒಂದು ವರ್ಷದ ಹನ್ನೊಂದನೆಯ ತರಗತಿ ಕಾಲೇಜುಗಳಲ್ಲಿ ಪಿ.ಯು.ಸಿ. ತರಗತಿಯೆಂಬ ಹೆಸರಿನಿಂದ ನಡೆಯುತ್ತಿತ್ತು. ಆಗ ಆ ವರ್ಷದ ಅಂತ್ಯದಲ್ಲಿ ವಿಶ್ವವಿದ್ಯಾಲಯ ನಡೆಸುತ್ತಿದ್ದ ಪದವಿಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಪದವಿ ತರಗತಿಗೆ ಪ್ರವೇಶಾರ್ಹತೆ ಪಡೆಯುತ್ತಿದ್ದರು. ಪದವಿಪೂರ್ವದ ಶಿಕ್ಷಣ ಹನ್ನೆರಡು ವರ್ಷದ್ದಾಗಿರಬೇಕೆಂಬ ಭಾರತ ಸರ್ಕಾರದ ನೀತಿಯ ಪ್ರಕಾರ 1972ರಿಂದ (ಒಂದು ವರ್ಷದ) ಪಿ.ಯು.ಸಿ. ಪದವಿಪೂರ್ವ ತರಗತಿಯನ್ನು ಎರಡು ವರ್ಷಕ್ಕೆ ವಿಸ್ತರಿಸಿ ಅದನ್ನು ಜೂನಿಯರ್ ಕಾಲೇಜುಗಳೆಂಬ ಪ್ರತ್ಯೇಕ ಸಂಸ್ಥೆಗಳಲ್ಲಿ ವ್ಯವಸ್ಥೆಗೊಳಿಸಲಾಯಿತು. ಆ ಹಂತದ ಶಿಕ್ಷಣವನ್ನು ವಿಶ್ವವಿದ್ಯಾನಿಲಯದ ಶಿಕ್ಷಣದಿಂದ ಪ್ರತ್ಯೇಕಿಸಿ ಅದರ ಆಡಳಿತಕ್ಕಾಗಿ ಪಿ.ಯು.ಸಿ. ಮಂಡಲಿಯನ್ನು ಸ್ಥಾಪಿಸಲಾಯಿತು. ಕೆಲವು ಪ್ರೌಢಶಾಲೆಗಳಲ್ಲಿ ಎರಡು ವರ್ಷದ ಶಿಕ್ಷಣವೂ ನಡೆದುಕೊಂಡು ಬರುತ್ತಿದೆ.

1972ರವರೆಗೂ ಪ್ರೌಢಶಾಲೆಗಳಲ್ಲಿ ಮಾತೃಭಾಷೆ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜಪಾಠ-ಇವು ಕಡ್ಡಾಯ ವ್ಯಾಸಂಗ ವಿಷಯಗಳಾಗಿದ್ದು ಎರಡನೆಯ ವರ್ಷದಿಂದ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳುವ ಅವಕಾಶವಿತ್ತು. ಆದರೆ ಈಚೆಗೆ ಪ್ರೌಢಶಾಲೆಯಲ್ಲಿ ಐಚ್ಛಿಕ ವಿಷಯಗಳ ಬೋಧನೆ ಅನುಚಿತವೆಂದು ಭಾವಿಸಿ ಅದನ್ನು ಪ್ರಿಯೂನಿವರ್ಸಿಟಿ ತರಗತಿಗಳಿಗೆ ವರ್ಗಾಯಿಸಲಾಗಿದೆ.

ಎಲ್ಲ ಪ್ರೌಢಶಾಲೆಗಳೂ ರಾಜ್ಯ ಸರ್ಕಾರದ ಪಠ್ಯಕ್ರಮವನ್ನು ಅನುಸರಿಸುತ್ತ, ರಾಜ್ಯದ ಸೆಕೆಂಡರಿ ಶಿಕ್ಷಣ ಮಂಡಲಿ ನಡೆಸುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುವು. ಈ ಶಾಲೆಗಳ ಜೊತೆಗೆ ರಾಜ್ಯದಲ್ಲಿ ರಕ್ಷಣಾ ಇಲಾಖೆಯವರು ನಡೆಸುತ್ತಿರುವ ಡಿಫೆನ್ಸ್ ಶಾಲೆಗಳು, ಕೇಂದ್ರ ಸರ್ಕಾರದ ಪರವಾಗಿ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಲಿ ನಡೆಸುತ್ತಿರುವ ಕೇಂದ್ರೀಯ ಪ್ರೌಢಶಾಲೆಗಳು ಅಸ್ತಿತ್ವದಲ್ಲಿವೆ. ಇವು ಕೇಂದ್ರೀಯ ಪಠ್ಯಕ್ರಮವನ್ನು ಅನುಸರಿಸುತ್ತ ವಿದ್ಯಾರ್ಥಿಗಳನ್ನು ಕೇಂದ್ರೀಯ ಪರೀಕ್ಷಾಮಂಡಳಿ ನಡೆಸುತ್ತಿರುವ ಪರೀಕ್ಷೆಗಳಿಗೆ ಸಿದ್ಧಪಡಿಸುತ್ತವೆ.

ಮೇಲಿನ ಸಾಂಸ್ಕೃತಿಕ ಶಿಕ್ಷಣದ ಪ್ರೌಢಶಾಲೆಗಳಲ್ಲದೆ ಆ ಮಟ್ಟದ ವೃತ್ತಿಶಿಕ್ಷಣವನ್ನು ವ್ಯವಸ್ಥೆಗೊಳಿಸಿರುವ ಕೆಲವು ವಿಶಿಷ್ಟ ಶಿಕ್ಷಣ ಶಾಲೆಗಳೂ ಉಂಟು. ಅಂಗವಿಕಲರ ಪಾಠಶಾಲೆ, ಕೃಷಿ ಪಾಠಶಾಲೆ, ಕೈಗಾರಿಕಾ ಪಾಠಶಾಲೆ ತೋಟಗಾರಿಕಾ ಪಾಠಶಾಲೆ- ಈ ಮುಂತಾದವು ಅಸ್ತಿತ್ವದಲ್ಲಿವೆ.

**ಬೋಧನ ಕ್ರಮ:** ಪ್ರಶಿಕ್ಷಣ ಪಡೆದ ಅಧ್ಯಾಪಕರು ತಮ್ಮತಮ್ಮ ವಿಶೇಷ ಪರಿಶ್ರಮದ ವಿಷಯಗಳನ್ನು ಬೋಧಿಸುವರು. ಪ್ರಶಿಕ್ಷಣ ಕಾಲೇಜುಗಳಲ್ಲಿ

ವಿವಿಧ ಬೋಧನ ಕ್ರಮಗಳನ್ನು ವ್ಯಾಸಂಗ ಮಾಡಿದ್ದರೂ ತರಗತಿಯಲ್ಲಿ ಬಹುಮಟ್ಟಿಗೆ ಹರ್ಬಾರ್ಷಿಯನ್ ಪಂಚಸೋಪಾನದ ಪಾಠಕ್ರಮ ಹೆಚ್ಚು ಪ್ರಚಾರದಲ್ಲಿದೆ. ಪಾಠದ ಆರಂಭದಲ್ಲಿ ವಿದ್ಯಾರ್ಥಿಗಳ ಉದ್ದೇಶವನ್ನು ರೂಪಿಸಿ ಪ್ರಶ್ನೋತ್ತರಗಳ ಮೂಲಕ ವಿದ್ಯಾರ್ಥಿಗಳು ವಿಷಯದ ವಿವರವನ್ನು ಅರಿತುಕೊಳ್ಳುವಂತೆ ಮಾಡುತ್ತ ಅಗತ್ಯವಾದಾಗ ಪ್ರದರ್ಶನ ನಿದರ್ಶನಗಳ ಮೂಲಕ ಕಲಿಕೆ ಪರಿಣಾಮಕಾರಿಯಾಗುವಂತೆ ಮಾಡುವುದು ಪ್ರಚಾರದಲ್ಲಿದೆ.

ಹದಿನಾಲ್ಕರಿಂದ ಹದಿನೆಂಟು ವಯಸ್ಸಿನ ಯುವಕರಿಗೆ ಲಭಿಸುವ ಪ್ರೌಢಶಿಕ್ಷಣವು ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣಗಳ ನಡುವಿನ ಒಂದು ಸೇತುವೆಯೋಪಾದಿಯಲ್ಲಿದೆ. 1968ರ ರಾಷ್ಟ್ರೀಯ ಶಿಕ್ಷಣನೀತಿಯನ್ನು ಅನುಸರಿಸಿ ದೇಶದಲ್ಲೆಲ್ಲ ಒಂದು ಸಾಮಾನ್ಯವಾದ ಪ್ರೌಢಶಿಕ್ಷಣದ ವಿನ್ಯಾಸವನ್ನು ಅಳವಡಿಸಿಕೊಳ್ಳಲು ಇದರಿಂದ ಸಾಧ್ಯವಾಗಿದೆ.

ಕರ್ನಾಟಕದಲ್ಲಿ ಪ್ರೌಢಶಾಲಾ ಹಂತವು 8-10 ತರಗತಿಗಳಲ್ಲಿ ಜಾರಿಯಲ್ಲಿದೆ. ಬಹುತೇಕ ಜಿಲ್ಲೆಗಳಲ್ಲಿನ ಶಾಲೆಗಳಲ್ಲಿ ರಾಜ್ಯ ಪಠ್ಯಕ್ರಮವನ್ನು (ಕೆಬಿಎಸ್‌ಇ-ಸ್ಟೇಟ್ ಸಿಲಬಸ್) ಅನುಸರಿಸಲಾಗುತ್ತಿದೆಯಾದರೂ ಕೆಲವು ಜಿಲ್ಲೆಗಳಲ್ಲಿನ ಕೆಲವು ಶಾಲೆಗಳಲ್ಲಿ ಮಾತ್ರ ಕೇಂದ್ರ ಪಠ್ಯಕ್ರಮದ (ಸೆಂಟ್ರಲ್ ಸಿಲಬಸ್-ಸಿಬಿಎಸ್‌ಇ) ರೀತ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ. ಇನ್ನೂ ಕೆಲವು ಶಾಲೆಗಳಲ್ಲಿ ಎರಡು ರೀತಿಯ ಪಠ್ಯಕ್ರಮಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಂಡು ಕಲಿಯಲು ವಿದ್ಯಾರ್ಥಿಗಳಿಗೆ ಅವಕಾಶವಿದೆ.

ಪ್ರತಿಭಾವಂತ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತ ಸರ್ಕಾರವು ಪ್ರತಿಯೊಂದು ಜಿಲ್ಲೆಯಲ್ಲಿ ಒಂದರಂತೆ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸುವ ಯೋಜನೆಯನ್ನು ಹಮ್ಮಿಕೊಂಡಿತ್ತು. ಎರಡು ರಾಜ್ಯಗಳನ್ನು ಹೊರತುಪಡಿಸಿ - ಪಶ್ಚಿಮ ಬಂಗಾಳ ಮತ್ತು ತಮಿಳುನಾಡು-30 ರಾಜ್ಯಗಳಲ್ಲಿ ಅರ್ಥಾತ್ 404 ಜಿಲ್ಲೆಗಳಲ್ಲಿ ಈ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಸಿಬಿಎಸ್‌ಇ ನಡೆಸುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ವಿದ್ಯಾರ್ಥಿಗಳನ್ನು ಈ ಶಾಲೆಗಳಿಗೆ ಸೇರಿಸಿಕೊಳ್ಳಲಾಗುತ್ತಿದೆ. ಒಂಬತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಸ್ತಿತ್ವದಲ್ಲಿರುವ 100 ಶಾಲೆಗಳ ಸಾಮರ್ಥ್ಯವನ್ನೂ ಹೆಚ್ಚಿಸಬೇಕೆಂಬ ಆಶಯವಿದೆ.

ಕೆಲವೊಂದು ಕೇಂದ್ರಿಯ ಆಯೋಜಿತ ಕಾರ್ಯಕ್ರಮಗಳು ಪ್ರೌಢಶಿಕ್ಷಣದ ವಿಕಾಸಕ್ಕೆ ಬೆಂಬಲ ನೀಡಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನೀಡಿದೆ: ಪ್ರೌಢ ಶಿಕ್ಷಣದ ವೃತ್ತೀಕರಣ, ಅಸಮರ್ಥ ಮಕ್ಕಳಿಗಾಗಿ ಸಂಯೋಜಿತ ಶಿಕ್ಷಣ (ಇಂಟಗ್ರೇಟೆಡ್ ಎಜ್ಯುಕೇಷನ್), ಗಣಕ ಸಾಕ್ಷರತೆ ಮತ್ತು ಶಾಲೆಗಳಲ್ಲಿ ಅಧ್ಯಯನ (ಕಂಪ್ಯೂಟರ್ ಲಿಟರಸಿ ಅಂಡ್ ಸ್ಟಡೀಸ್ ಇನ್ ಸ್ಕೂಲ್ -ಸಿಎಲ್‌ಎಎಸ್‌ಎಸ್), ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣದ ಸುಧಾರಣೆ.

ಎಸ್.ಎಸ್.ಎಲ್.ಸಿ: ಪರೀಕ್ಷೆಗೆ ನೂತನ ವಿನ್ಯಾಸ: ವಿವಿಧ ರೀತಿಯ ಪ್ರಯತ್ನಗಳನ್ನು ಮಾಡಿಯೂ ಎಸ್.ಎಸ್.ಎಲ್.ಸಿ. ಫಲಿತಾಂಶ 56.32% ಗಿಂತ ಹೆಚ್ಚಾಗಿಲ್ಲದಿರುವುದು ತಿಳಿದುಬಂದಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೂತನ ವಿನ್ಯಾಸವನ್ನು 2006ರಿಂದ ಪರಿಚಯಿಸಲಾಗುವುದು. ಇಲ್ಲಿ ಪ್ರತಿಯೊಂದು ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿರುತ್ತವೆ- 60 ಅಂಕಗಳಿಗೆ ಬಹು ಆಯ್ಕೆಗಳು ಮತ್ತು ಉಳಿದ 40 ಅಂಕಗಳಿಗೆ ಹ್ರಸ್ವ ಉತ್ತರಗಳು. ಈ ವಿನ್ಯಾಸದಿಂದ ವಿದ್ಯಾರ್ಥಿಗಳು ಸೌಹಾರ್ದ ಸಂತೋಷಗಳನ್ನು ಕಂಡುಕೊಳ್ಳುವರು ಎಂಬ ಅಂಶವನ್ನು ಬೆಂಗಳೂರಿನಲ್ಲಿರುವ ಡಿಎಸ್‌ಇಆರ್‌ಟಿ (ಡೆಸರ್ಟ್) ನಡೆಸಿದ ಆದಿಮ ಸಮೀಕ್ಷೆ ತಿಳಿಸಿದೆ. ಇದಲ್ಲದೆ ವಿದ್ಯಾರ್ಥಿಗಳು ವಿಶ್ಲೇಷಣಾತ್ಮಕ ವಾಗಿ ಯೋಚಿಸಲೂ ಇದು ಬಲು ಸಹಕಾರಿ ಎಂಬುದು ವೇದ್ಯವಾಗಿದೆ.

**(ಆರ್.ಎಸ್.ಆರ್.ಟಿ.)**

**ಪ್ಲಾಂಟೇಷನ್‌ಗಳು:** ಮನುಷ್ಯ ತನ್ನ ಉಪಯೋಗಕ್ಕೆ ಬರುವ ಗಿಡಮರಗಳನ್ನು ಸ್ವತಃ ಗುಂಪುಗುಂಪಾಗಿ ನೆಟ್ಟು ಬೆಳೆಸಿದ, ದೀರ್ಘಾವಧಿ ಉಳಿಯುವ ಗಿಡಮರಗಳ ಸಮೂಹಕ್ಕೆ ಪ್ಲಾಂಟೇಷನ್ ಎಂದು ಹೆಸರು. ನೆಡುತೋಪು, ತೋಟ ಪರ್ಯಾಯ ಪದಗಳು. ಉದಾಹರಣೆಗೆ ಗೋಡಂಬಿ ಪ್ಲಾಂಟೇಷನ್, ರಬ್ಬರ್ ಪ್ಲಾಂಟೇಷನ್ ಇತ್ಯಾದಿ. ಸಾರಾಂಶಯುತ ಭೂಮಿಯಲ್ಲಿ ತೇವವಿರುವ ಕಡೆ ಗಿಡಮರಗಳು ಪ್ರಾಕೃತಿಕವಾಗಿ ಬೆಳೆದುಬರುತ್ತವೆ. ಆದರೆ ಅವುಗಳ ಆಕಾರ, ಬೆಳವಣಿಗೆ ಮೊದಲಾದವುಗಳ ಬಗ್ಗೆ ಮನುಷ್ಯರಿಗೆ ಹತೋಟಿ ಇರುವುದಿಲ್ಲ. ಅಲ್ಲದೆ ಬೆಳೆಯುವ ಸಮಸ್ತ ಜಾತಿಯ ಗಿಡಮರಗಳು ಮಾನವನ ಉಪಯೋಗಕ್ಕೆ ಒದಗುವುದೂ ಇಲ್ಲ. ಇದರಿಂದ ಭೂಮಿಯನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡಂತಾಗುವುದಿಲ್ಲ. ಆದ್ದರಿಂದ ಭೂಮಿಯಿಂದ ಹೆಚ್ಚು ಹೆಚ್ಚಾಗಿ ಆದಾಯ ಅಥವಾ ಉತ್ಪನ್ನವನ್ನು ಪಡೆಯಲು ಉಪಯೋಗಕ್ಕೆ ಬರುವ ಗಿಡಮರಗಳನ್ನು ನೆಟ್ಟು ಬೆಳೆಸಬೇಕು. ಇದೇ ನೆಡುತೋಪು ಬೆಳೆಸುವುದರ ಮುಖ್ಯ ಉದ್ದೇಶ. ಉದಾಹರಣೆಗೆ ಹೇಳುವುದಾದರೆ ಮಾವಿನ ಮರಗಳು ಮಲೆನಾಡಿನಲ್ಲಿರುವ ನಿತ್ಯಹಸುರು ಕಾಡಿನಲ್ಲಿ ಸಹಜವಾಗಿ ಬೆಳೆದಿರುತ್ತವೆ. ಅವು ಇತರ ಮರಗಳೊಂದಿಗೆ ಯಾದೃಚ್ಛಿಕವಾಗಿ ಬೆಳೆದು ಒಂದು ಹೆಕ್ಟೇರಿಗೆ ಒಂದೋ ಎರಡೋ ಮರಗಳಂತೆ ಹರಡಿಕೊಂಡಿರುತ್ತವೆ. ಅವುಗಳಿಂದ ಹೆಚ್ಚಿನ ಉಪಯೋಗವಾಗುವುದಿಲ್ಲ. ಅವು ಉತ್ತಮ ಫಲವನ್ನೂ ಕೊಡುವುದಿಲ್ಲ. ಆದ್ದರಿಂದಲೇ ಸುಧಾರಿಸಿದ ಮಾವಿನ ಗಿಡಗಳನ್ನು ಗುಂಪುಗುಂಪಾಗಿ ಎಂದರೆ, ಸಾಧಾರಣ ಒಂದು ಹೆಕ್ಟೇರಿಗೆ 100-150 ಗಿಡಗಳು ಬರುವ ಅಂತರದಲ್ಲಿ ಬೆಳೆಸಿ, ಪ್ಲಾಂಟೇಷನ್ ಮಾಡುತ್ತಾರೆ. ಇದನ್ನು ಹತೋಟಿಯಲ್ಲಿ ಬೆಳೆಸಲು ಮತ್ತು ಸುಲಭವಾಗಿ ಫಲಗಳನ್ನು ಸಂಗ್ರಹಿಸಲು ಅನುಕೂಲವಾಗುತ್ತದೆ. ಬೋಳುಗುಡ್ಡ, ಸವಕಲು ಪ್ರದೇಶ ಮೊದಲಾದ ಕಡೆಗಳಲ್ಲಿ ಗಿಡಮರಗಳನ್ನು ಬೆಳೆಸಿ, ನಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಪ್ಲಾಂಟೇಷನ್ನಿನಿಂದಲೇ ಸಾಧ್ಯ. ವನ ನಿರ್ಮಾಣ ಕಾರ್ಯಕ್ರಮದಲ್ಲಿಯೂ ಪ್ಲಾಂಟೇಷನ್ನಿನ ಪಾತ್ರ ಬಲು ಮುಖ್ಯವಾದದ್ದು.

ಕರ್ನಾಟಕದಲ್ಲಿ ಬೇರೆ ಬೇರೆ ಜಾತಿಯ ಮರಗಳ ಪ್ಲಾಂಟೇಷನ್‌ಗಳನ್ನು ಬೆಳೆಸಲಾಗಿದೆ. ಮಲೆನಾಡಿನಲ್ಲಿ ವರ್ಷಕ್ಕೆ 2,000 ಮಿಮೀ ಗಿಂತ ಅಧಿಕ ಮಳೆ ಬೀಳುವ, ಸಮುದ್ರಮಟ್ಟದಿಂದ ಸಾಧಾರಣ 800 ರಿಂದ 1,200 ಮೀ ಉನ್ನತವಿರುವ ಪ್ರದೇಶಗಳಲ್ಲಿ ಕಾಫಿ ಪ್ಲಾಂಟೇಷನನ್ನು ಮಾಡಲಾಗಿದೆ. ಕೊಡಗು, ಹಾಸನ, ಚಿಕ್ಕಮಗಳೂರು ಮೊದಲಾದ ಜಿಲ್ಲೆಗಳಲ್ಲಿ ಸಾಕಷ್ಟು ಕಾಫಿ **(ನೋಡಿ)** ತೋಟಗಳನ್ನು ಕಾಣಬಹುದು. ಇವು ಕಾಫಿ ಬೋರ್ಡಿನ ಆದೇಶದಂತೆ ಖಾಸಗಿ ಜನರು ಮಾಡಿದ ಪ್ಲಾಂಟೇಷನ್‌ಗಳು. ಅಲ್ಲದೆ ನಿತ್ಯ ಹಸಿರು ಕಾಡಿನ ನೆರಳಿನಲ್ಲಿ ಖಾಸಗಿ ಜನರು ಏಲಕ್ಕಿ ಪ್ಲಾಂಟೇಷನ್ನನ್ನು ಬೆಳೆಸಿರುವರು. ದಕ್ಷಿಣ ಕರಾವಳಿ ಪ್ರದೇಶದಲ್ಲಿ ಜಂಬು ಮಣ್ಣು (ಲ್ಯಾಟರೈಟ್) ಇರುವ ಎಡೆಗಳಲ್ಲಿ ಗೋಡಂಬಿ (ಗೇರು) ಉತ್ತಮವಾಗಿ ಬೆಳೆಯುತ್ತದೆ. ಆದ್ದರಿಂದ ಕರ್ನಾಟಕ ತೋಟಗಾರಿಕೆ ಇಲಾಖೆಯವರು, ಅರಣ್ಯ ಇಲಾಖೆಯವರು ಹಾಗೂ ಇತರ ಖಾಸಗಿ ಜನರು ಗೋಡಂಬಿ ಪ್ಲಾಂಟೇಷನ್ನನ್ನು ಮಾಡಿರುವರು. ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಯ ಎಮ್ಮೆದೊಡ್ಡಿ ಪ್ರದೇಶಗಳಲ್ಲಿ ಕಿತ್ತಳೆ ಪ್ಲಾಂಟೇಷನ್‌ಗಳಿವೆ. ಇವು ಸಹ ಖಾಸಗೀ ಪ್ಲಾಂಟೇಷನ್‌ಗಳೇ.

ಅರಣ್ಯ ಇಲಾಖೆಯವರು ಕೋಕೋ ಪ್ಲಾಂಟೇಷನ್ನನ್ನು ದಕ್ಷಿಣ ಕನ್ನಡ ಜಿಲ್ಲೆಯ ಗುಂಡ್ಯ ಹಳ್ಳಿ ಸುತ್ತುಮುತ್ತುಲೂ ವೃದ್ಧಿಸಿದ್ದಾರೆ.

ಅರಣ್ಯ ಇಲಾಖೆಯವರು ಮರಮುಟ್ಟು, ಸೌದೆ ಮೊದಲಾದವನ್ನು ಪಡೆಯಲು ಪ್ಲಾಂಟೇಷನ್ನನ್ನು ಮಾಡಿರುತ್ತಾರೆ. ಇವುಗಳಲ್ಲಿ ಬಹು ಮುಖ್ಯವಾದದ್ದೆಂದರೆ ಸಾಗುವಾನಿ ಪ್ಲಾಂಟೇಷನ್, ಸಾಗುವಾನಿ ಮರಗಳು ಪರ್ಣಪಾತಿ (ಡೆಸಿಡ್ಯುವಸ್) ಅರಣ್ಯಗಳಲ್ಲಿ ಸಹಜವಾಗಿ ಬೆಳೆಯುತ್ತವೆ. ಆದರೆ ಅವುಗಳ ಸಂಖ್ಯೆ ಸಾಧಾರಣ ಸೇ. 10ರಷ್ಟು ಮಾತ್ರ. ಅಲ್ಲಿ ಅವು ಬೆಳೆವಣಿಗೆಗೆ ಸರಿಯಾದ ಅವಕಾಶ ದೊರೆಯದೆ ಅಂಕುಡೊಂಕಾಗಿ ಬೆಳೆದಿರುತ್ತವೆ. ಆದ್ದರಿಂದ ಉಪಯುಕ್ತವಾದ ರೀತಿಯಲ್ಲಿ ಅಂದರೆ ನೇರವಾಗಿ, ಗಂಟುಗಳಿಲ್ಲದ ಮರಗಳನ್ನು ಪಡೆಯಬೇಕಾದರೆ ಪ್ಲಾಂಟೇಷನ್ ರೂಪದಲ್ಲೇ ಸಾಗುವನಿಯನ್ನು ಬೆಳೆಸಬೇಕಾಗುತ್ತದೆ. ಸಾಗುವಾನಿ ಪ್ಲಾಂಟೇಷನ್ನನ್ನು ಕೊಡಗು ಜಿಲ್ಲೆಯ ನಾಗರಹೊಳೆ ಮತ್ತು ತಿತಿಮತಿಗಳಲ್ಲಿಯೂ ಚಿಕ್ಕಮಗಳೂರು ಜಿಲ್ಲೆಯ ಮುತ್ತೋಡಿ ಮತ್ತು ಲಕ್ಕವಳ್ಳಿಗಳಲ್ಲಿಯೂ ಶಿವಮೊಗ್ಗ ಜಿಲ್ಲೆಯ ಸಕ್ಕರೆಬೈಲು, ಚನ್ನಗಿರಿ ಮತ್ತು ಸಾಗರಗಳಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ದಾಂಡೇಲಿ ಇತ್ಯಾದಿಗಳಲ್ಲಿಯೂ ಬೆಳೆಸಿರುತ್ತಾರೆ. ಸಾಗುವಾನಿ ಉತ್ಕೃಷ್ಟವಾಗಿ ಬೆಳೆಯಬೇಕಾದರೆ ಮರಳು, ಜೇಡಿಮಣ್ಣು ಇದ್ದು ಸಾಧಾರಣ ವರ್ಷಕ್ಕೆ 2,000ದಿಂದ 3,000 ಮಿಮೀ ಮಳೆ ಬೀಳುವ ಪ್ರದೇಶ ಒದಗಬೇಕು. ಸಾಗುವಾನಿ ಪ್ಲಾಂಟೇಷನ್ ಮಾಡಿದ ಕಡೆಗಳಲ್ಲಿ ಬೀಟೆ ಜಾತಿಯ ಮರವನ್ನೂ ಮಿಶ್ರವಾಗಿ ಬೆಳೆಸಿದ್ದಾರೆ. ಬಡವರ ಮರಮುಟ್ಟು ಎಂದು ಹೆಸರಾದ ಬಿದಿರನ್ನು ಸಹ, ಸಹಜವಾಗಿ ಬೆಳೆದುಬಂದಿರುವ ಬಿದಿರು ಜನರ ಬೇಡಿಕೆಗಳನ್ನು ಪೂರೈಸಲು ಅಸಾಧ್ಯವಾದ್ದರಿಂದ, ನಾನಾ ಕಡೆ ನೆಡುತೋಪುಗಳಾಗಿ ಬೆಳೆಸಿರುವುದುಂಟು. ಬಿದಿರಿನಿಂದ ಕಾಗದದ ತಯಾರಿಕೆ ದಾಂಡೇಲಿ ಮತ್ತು ಭದ್ರಾವತಿಯಲ್ಲಿಯ ಕಾರ್ಖಾನೆಗಳಲ್ಲಿ ನಡೆಯುತ್ತದೆ. ಸೌದೆಯ ಬೇಡಿಕೆಗಳನ್ನು ಪೂರೈಸಲು ಮತ್ತು ರೇಯಾನ್ ಪಲ್ಪನ್ನು ತಯಾರಿಸುವ ಸಲುವಾಗಿ ಬೇಕಾಗುವ ನೀಲಗಿರಿ ಪ್ಲಾಂಟೇಷನ್ನನ್ನು ಅರಣ್ಯ ಇಲಾಖೆಯವರು ವಾರ್ಷಿಕವಾಗಿ ಸಾಧಾರಣ 1,200ರಿಂದ 2,000 ಮಿಮೀ ಮಳೆ ಬರುವ ಪ್ರದೇಶಗಳಲ್ಲಿ ಮಾಡಿರುತ್ತಾರೆ. ಇದರ ಬೆಳೆಸುವಿಕೆಗೆ ಒಂದು ಪ್ರತ್ಯೇಕ ಅರಣ್ಯ ಕಾರ್ಪೊರೇಷನ್ ಬೆಂಗಳೂರಿನಲ್ಲಿದೆ. ಹರಿಹರದಲ್ಲಿ ನೀಲಗಿರಿ ಮರದ ಕಾಂಡಗಳನ್ನು ಉಪಯೋಗಿಸಿಕೊಂಡು ರೇಯಾನ್ ಪಲ್ಪ್ ಮಾಡುವ ಕಾರ್ಖಾನೆಗಳನ್ನು ಬಿರ್ಲಾ ಕಂಪನಿಯವರು ಸ್ಥಾಪನೆ ಮಾಡಿರುತ್ತಾರೆ. ದಕ್ಷಿಣ ಕರಾವಳಿಯ ಮರಳು ಮಣ್ಣಿರುವ ಪ್ರದೇಶಗಳಲ್ಲಿ ಖಾಸಗಿ ಜನರು ಹಾಗೂ ಅರಣ್ಯ ಇಲಾಖೆಯವರು ಯಥೇಚ್ಛವಾಗಿ ಸರ್ವೆ ಮರಗಳನ್ನು ಬೆಳೆಸಿರುತ್ತಾರೆ. ಒಳನಾಡಿನಲ್ಲಿ, ಅಂದರೆ ಬೆಂಗಳೂರಿನ ಸುತ್ತಮುತ್ತ ಸಹ ಸರ್ವೆ ಮರಗಳ ಪ್ಲಾಂಟೇಷನ್ ಸಾಕಷ್ಟು ಉಂಟು. ಇವನ್ನು ಮುಖ್ಯವಾಗಿ ಸೌದೆಯಾಗಿಯೂ ಗಣಿಗಳಲ್ಲಿ ಆಧಾರಕಂಬಗಳಾಗಿಯೂ ಉಪಯೋಗಿಸುವರು.

ಫಲಕ್ಕಾಗಿ ಹಾಗೂ ಮರಮುಟ್ಟು ಸೌದೆಗಳಿಗಾಗಿ ಬೆಳೆಸಿದ ಪ್ಲಾಂಟೇಷನ್ ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ರಬ್ಬರ್ ಉತ್ಪಾದಿಸಲು ರಬ್ಬರ್ ತೋಟಗಳನ್ನು 1962 ರಿಂದ ಬೆಳೆಸಿರುತ್ತಾರೆ. ಅವುಗಳ ವಿಸ್ತೀರ್ಣ ಈಗ ಸುಮಾರು 5,000 ಹೆಕ್ಟೇರುಗಳಿಗೂ ಹೆಚ್ಚು. ಈ ಮರಗಳ ತೊಗಟೆಯನ್ನು ಸಾವಕಾಶವಾಗಿ ಗಾಯಗೊಳಿಸಿ ಹಾಲಿನ ರೂಪದಲ್ಲಿ ಬರುವ ರಬ್ಬರನ್ನು ಸಂಗ್ರಹಿಸಿ ಪಕ್ಕದಲ್ಲಿರುವ ಕಾರ್ಖಾನೆಯಲ್ಲಿ ಶುದ್ಧಿಗೊಳಿಸಿ ಮಾರಾಟ ಮಾಡುತ್ತಾರೆ. ಮೆಕ್ಸಿಕೊ ದೇಶದಿಂದ ತರಿಸಲಾದ ಬರ್ಸೆರ ಜಾತಿಯ ಗಿಡಗಳನ್ನು ಬೆಂಗಳೂರಿನ ಸುತ್ತಮುತ್ತಲೂ ಅರಣ್ಯ ಇಲಾಖೆಯವರು ಬೆಳೆಸಿ ಅದರ ಹಣ್ಣಿನ ಸಿಪ್ಪೆಯಿಂದ ಭಟ್ಟಿ ಇಳಿಸುತ್ತಾರೆ. ಸಾಬೂನು ಮೊದಲಾದ ತಯಾರಿಕೆಗಳಲ್ಲಿ ಈ ಎಣ್ಣೆಯ ಉಪಯೋಗ ಉಂಟು. ಶುಷ್ಕವನ ಅಥವಾ ಶುಷ್ಕ ಪ್ರದೇಶದಲ್ಲಿ ಶ್ರೀಗಂಧ ಸಹಜವಾಗಿ ಬೆಳೆದುಬರುತ್ತದೆ. ಆದರೆ ಅದರ ಬೇಡಿಕೆ ಅಧಿಕವಾದ್ದರಿಂದ ಕಾಯ್ದಿರಿಸಿದ ಸರ್ಕಾರಿ ಪ್ರದೇಶಗಳಲ್ಲಿ ಶ್ರೀಗಂಧದ ಬೀಜಗಳನ್ನು ಪೊದರಿನೆಡೆಗಳಲ್ಲಿ ಬಿತ್ತಿ ಪ್ಲಾಂಟೇಷನ್ನನ್ನು ಮಾಡಿರುತ್ತಾರೆ. ಇದರ ಚೇಗಿನಿಂದ ಸುವಾಸನಾಯುತವಾದ ಎಣ್ಣೆಯನ್ನು ಬಟ್ಟಿ ಇಳಿಸಿ ಅತ್ತರನ್ನು ತಯಾರಿಸಲು ಪರದೇಶಗಳಿಗೆ ರಫ್ತು ಮಾಡುವರು. ಸಾಬೂನು ತಯಾರಿಕೆಯಲ್ಲಿಯೂ ಇದರ ಉಪಯೋಗ ಉಂಟು.

ರಬ್ಬರು, ಗೋಡಂಬಿ ಮೊದಲಾದ ಪ್ಲಾಂಟೇಷನ್‌ಗಳನ್ನು ಮಾಡುವಾಗ ಉತ್ತಮ ಫಲ ಕೊಡುವ ಸುಧಾರಿತ ಸಸಿಗಳ ಮೊಗ್ಗನ್ನು ಸಾಧಾರಣ ಸಸಿಗಳಿಗೆ ಕಸಿಮಾಡಿ ಬೆಳೆಸುವ ರೂಢಿ ಇದೆ. ಮಡಿಯಲ್ಲಿ ಬೀಜ ಬಿತ್ತಿ ಬಂದ ಸಸಿಗಳ ಕಾಂಡದ ಚಕ್ಕೆ ತೆಗೆದೋ ಕಾಂಡವನ್ನು ಕತ್ತರಿಸಿಯೋ ಸುಧಾರಿತ ತಳಿಗಳ ಮೊಗ್ಗನ್ನಾಗಲಿ ರೆಂಬೆಯನ್ನಾಗಲಿ ಅನುಗುಣವಾಗಿ ಕಸಿ ಮಾಡುತ್ತಾರೆ. ಉತ್ತಮ ಬೀಜಗಳನ್ನು ಪಡೆಯಲು ಒಳ್ಳೆಯ ಬೀಜ ವೃಕ್ಷಗಳನ್ನು ಆರಿಸಿ ಕಾಪಾಡಿಕೊಂಡಿರುತ್ತಾರೆ.

ಪ್ಲಾಂಟೇಷನ್‌ನಲ್ಲಿ ಒಂದೇ ಜಾತಿಯ ಗಿಡಮರಗಳನ್ನು ಸಾಧಾರಣವಾಗಿ ನೆಟ್ಟಿರುವುದರಿಂದ ಒಮ್ಮೆ ಕ್ರಿಮಿಕೀಟಗಳೋ ಬೂಷ್ಟುಗಳೋ ಕಾಯಿಲೆಯನ್ನು ತಂದರೆ ಅವು ಬಲುಬೇಗನೆ ಹಬ್ಬಿ ಸಾಂಕ್ರಾಮಿಕವಾಗಿ ಪರಿಣಮಿಸುತ್ತದೆ. ಸಹಜವಾಗಿ ಕಾಡುಗಳಲ್ಲಾದರೆ ಅನೇಕ ಜಾತಿಯ ಗಿಡಮರಗಳಿರುವುದರಿಂದ ಕೆಲವು ಜಾತಿಯ ಗಿಡಮರಗಳಲ್ಲಿ ಪ್ರತಿರೋಧಕ ಸಾಮರ್ಥ್ಯವಿದ್ದು ರೋಗದ ಹರಡುವಿಕೆ ಬಲುಮಟ್ಟಿಗೆ ಕುಂಠಿತವಾಗುತ್ತದೆ. ಆದ್ದರಿಂದ ಪ್ಲಾಂಟೇಷನ್ನಿನಲ್ಲಿ ರೋಗಗಳು ಮತ್ತು ಕ್ರಿಮಿಕೀಟಗಳ ಹಾವಳಿಯನ್ನು ಮೊದಲೇ ತಡೆಗಟ್ಟುವ ಕಾರ್ಯಕ್ರಮಗಳನ್ನು ಹೆಪ್ಟ್‌ಕ್ಲೋರ್, ಬಿ.ಎಚ್.ಸಿ., ಬೋರ್ಡೊಮಿಶ್ರಣ, ತಾಮ್ರಮಿಶ್ರಿತ ಔಷಧಿಗಳೂ ಮೊದಲಾದವುಗಳ ಬಳಕೆಯಿಂದ ಕೈಗೊಳ್ಳುತ್ತಾರೆ. ದನಕರುಗಳ ಹಾವಳಿಯನ್ನು ತಡೆಗಟ್ಟಲು ಪ್ಲಾಂಟೇಷನ್ನಿನ ಸುತ್ತಲೂ ಭದ್ರವಾದ ಮುಳ್ಳುಬೇಲಿಯನ್ನು ಹಾಕುವುದು ಅಥವಾ ಆಳವಾದ ಕಂದಕಗಳನ್ನು ತೋಡುವುದು ರೂಢಿಯಲ್ಲಿ ಉಂಟು. ಕಳೆಗಳು ಬೆಳೆದು ಭೂಮಿಯಲ್ಲಿರುವ ತೇವವನ್ನೂ ಸಾರವನ್ನೂ ಹೀರಿ ಪ್ಲಾಂಟೇಷನ್ನನ್ನು ಸರಿಯಾಗಿ ಬೆಳೆಯಲು ಬಿಡುವುದಿಲ್ಲವಲ್ಲದೆ ಕಳೆಗಳು ಬೇಸಿಗೆಯಲ್ಲಿ ಒಣಗಿ ಕಾಡ್ಗಿಚ್ಚು ಹಬ್ಬಲು ಸಹಾಯಕವಾಗುತ್ತವೆಯಾದ್ದರಿಂದ ಪ್ಲಾಂಟೇಷನ್ ಮಾಡಿದ ಅನಂತರ ಪ್ರತಿವರ್ಷವೂ ಕಳೆ ಕೀಳುವ ಕಾರ್ಯಕ್ರಮ ಇರುತ್ತದೆ.

ಸಾಗುವಾನಿ ಮೊದಲಾದ ಜಾತಿಯ ಪ್ಲಾಂಟೇಷನ್‌ಗಳನ್ನು ಉತ್ತಮವಾದ ಕಾಂಡ ಪಡೆಯಲು ಬೆಳೆಸುತ್ತಾರೆ. ದೂರ ದೂರವಾಗಿ ಬೆಳೆಸಿದರೆ ಗಿಡಗಳು ಬಹು ಕವಲೊಡೆದು ಕಾಂಡದ ಬೆಳವಣಿಗೆ ಉತ್ತಮವಿರುವುದಿಲ್ಲ. ಆದ್ದರಿಂದ ಅವುಗಳ ಬೆಳವಣಿಗೆಗೆ ಅತಿಸ್ವಲ್ಪ ಸ್ಥಳಾವಕಾಶ ಕೊಡಬೇಕು. ಆಗ ಅವು ನೇರವಾಗಿ, ಕವಲೊಡೆಯದೆ ಬೆಳೆಯುತ್ತವೆ. ಸಾಧಾರಣ ಬೆಳೆದು ಅವು ಒಂದಕ್ಕೊಂದು ತಾಗುವಂತಾಗುವಾಗ ಒಳ್ಳೆಯ ಕಾಂಡಗಳಿರುವ ಗಿಡಗಳನ್ನು ಉಳಿಸಿಕೊಂಡು ಅವುಗಳ ಸುತ್ತ ಇರುವ ಕೀಳು ಕಾಂಡದ ಗಿಡಗಳನ್ನು ಕತ್ತರಿಸುತ್ತಾರೆ. ಹೀಗೆ ಸಾಗುವಾನಿ ಪ್ಲಾಂಟೇಷನ್‌ನಲ್ಲಿ 7,12,28,35 ವರ್ಷಗಳಿಗೊಮ್ಮೆ ಅಲ್ಪಸ್ವಲ್ಪ ಗಿಡಗಳನ್ನು ಕತ್ತರಿಸಿದರೆ ಆರಿಸಿಕೊಂಡಿರುವ ಮರಗಳು ಉತ್ತಮವಾಗಿ ಬೆಳೆಯಲು ಎಡೆಮಾಡಿಕೊಟ್ಟಂತೆ ಆಗುವುದು. ಹಣ್ಣುಗಿಡಗಳು, ರಬ್ಬರ್ ಗಿಡ ಮೊದಲಾದವುಗಳಿಗೆ ವಿಶಾಲವಾಗಿ ಬೆಳೆಯಲು ಮೊದಲಿನಿಂದಲೂ ಅವಕಾಶ ಒದಗಿಸಲಾಗಿರುತ್ತದೆ.

ಪ್ಲಾಂಟೇಷನ್‌ಗಳಲ್ಲಿ ಗಿಡಗಳನ್ನು ಅವು ಸಹಜವಾಗಿ ಸಾಯುವವರೆಗೆ ಬಿಟ್ಟರೆ ಗಿಡಗಳಿಗೆ ಗರಿಷ್ಠ ಮೊತ್ತದ ಇಳುವರಿಯನ್ನು ಪಡೆಯಲಾಗುವುದಿಲ್ಲ. ಆದ್ದರಿಂದ ಅವುಗಳಲ್ಲಿ ಗಿಡಗಳ ಸರಾಸರಿ ವಾರ್ಷಿಕ ಉತ್ಪತ್ತಿ ಇಳಿಮೊಗವಾಗಲು ತೊಡಗುವಾಗಲೇ ಕಡಿದು ಪುನಃ ಹೊಸ ಪ್ಲಾಂಟೇಷನ್ನನ್ನು ಮಾಡುವುದು ರೂಢಿ. ಸಾಗುವಾನಿ ಪ್ಲಾಂಟೇಷನ್ನನ್ನು ಸಾಧಾರಣ ಭೂಮಿಯಲ್ಲಿರುವ ಸಾರಾಂಶ ಮತ್ತು ತೇವಕ್ಕೆ ಅನುಗುಣವಾಗಿ 70–80 ವರ್ಷಗಳವರೆಗೆ ಬೆಳೆಸಿ ಕಡಿತಲೆ ಮಾಡುತ್ತಾರೆ. ಗೋಡಂಬಿ ಗಿಡಗಳು 35 ವರ್ಷಗಳವರೆಗೆ ಅಧಿಕ ಪ್ರಮಾಣದಲ್ಲಿ ಫಲ ಕೊಡುತ್ತವೆ. ರಬ್ಬರ್ ಗಿಡಗಳು ಕೂಡ ಹಾಗೆಯೇ 35 ವರ್ಷಗಳಾದ ಮೇಲೆ ಹೆಚ್ಚಾಗಿ ಫಸಲನ್ನು ಕೊಡುವುದಿಲ್ಲ. ಆಗ ಅವನ್ನು ಕಡಿದು ಹೊಸ ಪ್ಲಾಂಟೇಷನ್ನನ್ನು ಮಾಡಬೇಕು. ಅದೇ ರೀತಿ ಬರ್ಸೆರ ಪ್ಲಾಂಟೇಷನ್ನನ್ನು ಸಹ 30–35 ವರ್ಷಗಳವರೆಗೆ ಬೆಳೆಸಬಹುದು. ನೀಲಗಿರಿ ಪ್ಲಾಂಟೇಷನ್ನಾದರೆ 10 ವರ್ಷಗಳ ಮೇಲೆ ಬೆಳೆಯಲು ಬಿಟ್ಟರೆ ಲಾಭದಾಯಕವಲ್ಲ. ಆದ್ದರಿಂದ ಹತ್ತನೆಯ ವರ್ಷದಲ್ಲಿ ಮರಗಳನ್ನು ನೆಲಮಟ್ಟದಲ್ಲಿ ಕಡಿತಲೆ ಮಾಡಿದರೆ ಅದೇ ಮೋಟನಿಂದ ಪುನಃ ಚಿಗುರು ಬಂದು ಮರವಾಗಿ ಬೆಳೆಯುತ್ತದೆ. ಅವನ್ನು ಮತ್ತೆ 10 ವರ್ಷಗಳಲ್ಲಿ ಕಡಿತಲೆ ಮಾಡಿದರೆ ಪುನಃ ಚಿಗುರು ಬರುತ್ತವೆ. ಹೀಗೆ ಹತ್ತತ್ತು ವರ್ಷಗಳಿಗೊಮ್ಮೆ ಕಡಿತಲೆ ಮಾಡುತ್ತ ನಾಲ್ಕು ಬೆಳೆಗಳನ್ನು ಒಂದೇ ಮೋಟನಿಂದ ತೆಗೆಯಬಹುದು. ಕ್ರಮೇಣ ಚಿಗುರುಗಳು ಬಲಹೀನವಾಗಿ ಬರುವುದರಿಂದ ಸಂಪೂರ್ಣ ಮೋಟುಗಳನ್ನು ತೆಗೆಸಿ ಪುನಃ ಸಸಿ ನೆಟ್ಟು ಪ್ಲಾಂಟೇಷನ್ ಮಾಡಬಹುದು.

ಕರ್ನಾಟಕದಲ್ಲಿರುವ ಹಲವಾರು ಸರ್ಕಾರಿ ಪ್ಲಾಂಟೇಷನ್‌ಗಳು ಒಟ್ಟು ವಿಸ್ತೀರ್ಣದ ಬಗೆಗೆ ಮಾಹಿತಿಯನ್ನು ಕೆಳಗಿನ ಪಟ್ಟಿಯಲ್ಲಿ ಕಾಣಬಹುದು (2001–02).

| ಕ್ರಮಸಂಖ್ಯೆ | ಬೆಳೆ | ಒಟ್ಟುವಿಸ್ತೀರ್ಣ(ಹೆಕ್ಟೇರ್‌ಗಳಲ್ಲಿ) |
|---|---|---|
| 1 | ತೇಗ | 1,46,367 |
| 2 | ಗೋಡಂಬಿ | 41,086 |
| 3 | ನೀಲಗಿರಿ | 1,41,993 |
| 4 | ಮೆದುಮರ | 12,440 |
| 5 | ಉರುವಲು ಮತ್ತು ಇತರೆ | 10,20,914 |
| 6 | ಬಿದಿರು | 20,569 |
| 7 | ಲ್ಯಾವೆಂಡರ್ | 1,097 |
| 8 | ಕೆಂಪೆಣ್ಣೆ ತಾಳೆ | 9 |
| 9 | ಕೋಕೊ | 1,595 |
| 10 | ರಬ್ಬರ್ | 6,597 |
| 11 | ಸಾಂಬಾರು ಪದಾರ್ಥಗಳು | 74 |
| 12 | ಕಾಫಿ | 200000 |
| 13 | ಬೆತ್ತ | 4,310 |
| 14 | ಟೀ | 7000 |
| 15 | ಶ್ರೀಗಂಧ | 8,529 |
| 16 | ಫಲತೋಟಗಳು | 11,413 |
| 17 | ಶಾಲವನ | 15,520 |
| 18 | ರಸ್ತೆ ಬದಿ ನೆಡುತೋಪು(8ಮೀ) | 41,740 |
| 19 | ನಾಲಾಬದಿ ನೆಡುತೋಪು | 10,476 |
| 20 | ಇತರೆ | 85,852 |
| | **ಒಟ್ಟು** | **17,78,608** |

(ಕೆ.ಎ.ಕೆ.)

**ಫಕೀರಪ್ಪ ಗವಾಯ್ ಕುಂದಗೋಳ**: ಸು. 1900–69. ಸುಪ್ರಸಿದ್ಧ ಹಿಂದುಸ್ಥಾನಿ ಸಂಗೀತಗಾರರು. ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ಮಧ್ಯಮ ದರ್ಜೆಯ ವೀರಶೈವ ಕುಟುಂಬದಲ್ಲಿ ಜನಿಸಿದರು. ಇವರ ಹಿರಿಯರು ತಾಳವಾದ್ಯದಲ್ಲಿ ಪ್ರಕಾಂಡಪಂಡಿತರಾಗಿದ್ದುದರಿಂದ ಫಕೀರಪ್ಪನವರು ಸಹ ತಬಲವಾದ್ಯದಲ್ಲಿ ನಿಪುಣರೆನಿಸಿದ್ದರು. ಇವರ ತಬಲವಾದನದ ವೈಖರಿಯನ್ನೊಮ್ಮೆ ಗಮನಿಸಿದ ಗಾನ ಸಾಮ್ರಾಟ ಅಬ್ದುಲ್ ಕರೀಂಖಾನ್ ಅವರು ಇವರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ ಗಾಯನ ಕಲಿಸಿದರು.

ಉತ್ತರಾದಿ ಸಂಗೀತ ಶೈಲಿಗಳಲ್ಲಿ ಪ್ರಸಿದ್ಧವಾದ ಕಿರಾಣಾ ಘರಾಣಾದ ಜನಕರಾದ ಅಬ್ದುಲ್ ಕರೀಂಖಾನ್ ಸಾಹೇಬರೊಡನೆ ತಬಲ ನುಡಿಸುವ ಜೊತೆಗೆ ಹಿನ್ನೆಲೆ ಗಾಯಕರಾಗಿ ಇಡೀ ಭಾರತವನ್ನೆಲ್ಲಾ ಸಂಚರಿಸಿ ಗಾಯನ–ವಾದನಗಳೆರಡರಲ್ಲೂ ಮಹಾ ಆಚಾರ್ಯರೆನಿಸಿಕೊಂಡರು. ಮುಂದೆ ತಮ್ಮ ಸ್ವಂತ ಸ್ಥಳವಾದ ಕುಂದಗೋಳಕ್ಕೆ ಮರಳಿ ಸ್ವರಪ್ರಕಾಶ ಸಂಗೀತ ವಿದ್ಯಾಲಯ ಎಂಬ ಸಂಗೀತ ಶಿಕ್ಷಣಶಾಲೆಯನ್ನು ಸ್ಥಾಪಿಸಿ ಅನೇಕ ಶಿಷ್ಯರನ್ನು ತಯಾರುಮಾಡಿ ಸಂಗೀತಕಲೆಗೆ ಉತ್ತಮ ಸೇವೆಸಲ್ಲಿಸಿದರು. ಇವರ ಗಾಯನವನ್ನು ಮುಂಬಯಿ ಮತ್ತು ಧಾರವಾಡ ಆಕಾಶವಾಣಿ ಕೇಂದ್ರಗಳು ಬಿತ್ತರಿಸುತ್ತಿದ್ದವು. 1965ರಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ ಇವರಿಗೆ ಪ್ರಶಸ್ತಿಯನ್ನಿತ್ತು ಗೌರವಿಸಿತು. ಸುಮಾರು ಐವತ್ತು ವರ್ಷಕ್ಕೂ ಹೆಚ್ಚು ಕಾಲ ಕನ್ನಡನಾಡಿನ ಸಂಗೀತ ಪ್ರಪಂಚಕ್ಕೆ ಸೇವೆಸಲ್ಲಿಸಿದ ಇವರು ಕುಂದಗೋಳದಲ್ಲಿ 1969 ಮಾರ್ಚ್ 7ರಂದು ನಿಧನಹೊಂದಿದರು. ಇವರು ಸ್ಥಾಪಿಸಿದ ಸಂಗೀತ ಶಿಕ್ಷಣಸಂಸ್ಥೆ ಕುಂದಗೋಳದಲ್ಲಿ ಈಗಲೂ ಇದೆ. (ಆರ್.ವಿ.ಎಸ್.)

**ಫಕೀರವ್ವ ಗುಡಿಸಾಗರ**: 1925–2002. ಹೆಸರಾಂತ ಜನಪದ ಕಲಾವಿದೆ. ಜಾನಪದ ಶ್ರೀ ಪ್ರಶಸ್ತಿ ಪಡೆದವರು (1998). ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ಗುಡಿಸಾಗರ ಗ್ರಾಮದಲ್ಲಿ 1925 ಮಾರ್ಚ್ 10 ರಂದು ಜನಿಸಿದರು. ತಂದೆ ಮರಿಯಪ್ಪ, ತಾಯಿ ನೀಲವ್ವ ಮಾದರ. ಬಡತನದ ಕಾರಣದಿಂದ ಶಿಕ್ಷಣದ ಸೌಲಭ್ಯ ಪಡೆಯಲಾಗಲಿಲ್ಲ.ತಾರುಣ್ಯಕ್ಕೆ ಬಂದ ತಕ್ಷಣ ದೇವದಾಸಿ ವೃತ್ತಿಯನ್ನು ಸ್ವೀಕರಿಸಬೇಕಾಗಿ ಬಂತು. ಇವರು ಹಾಡುಗಾರ್ತಿಯಾಗಿ ರೂಪುಗೊಂಡದ್ದು ಆಕಸ್ಮಿಕ. ಹತ್ತು ವರ್ಷದವಳಾಗಿದ್ದಾಗ ಒಮ್ಮೆ ತಾಯಿಯ ತವರೂರಾದ ಹೆಬ್ಬಳಿಗೆ ಹೋಗಿದ್ದರು. ಅಲ್ಲಿ ಮನ್ನೀಕಟ್ಟಿ ಗಂಗೂಬಾಯಿ ಎಂಬುವವರು ಹಾಡುತ್ತಿದ್ದ ಹಾಡುಗಳಿಂದ ಪ್ರಭಾವಿತರಾದರು, ಹಾಡಲೇಬೇಕೆಂಬ ಛಲ ತೊಟ್ಟರು. ಜೊತೆಗೆ ಸೋದರಮಾವ ಹನುಮಂತಪ್ಪನವರೂ ಸ್ವತಃ ಹಾಡುಗಾರರಾಗಿದ್ದುದರಿಂದ ಫಕೀರವ್ವನವರಿಗೆ ಪ್ರೋತ್ಸಾಹ ಸಹಜವಾಗಿಯೇ ದೊರೆಕುವಂತಾಯಿತು. ಹದಿನಾರನೆಯ ವಯಸ್ಸಿನಲ್ಲಿ ಬೆಳಗಾಂವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಹುಲಗುಂದ ಗ್ರಾಮದ ಶಿವಲಿಂಗಸ್ವಾಮಿಗಳ ದರ್ಶನ ಮಾಡಿದರು. ಅವರಲ್ಲಿ ಗೀಗೀ ಪದಗಳನ್ನು ಕಲಿಯುವುದಕ್ಕೆ ಅನೇಕ ಜನ ಶಿಷ್ಯರಿದ್ದರು. ಸ್ವಾಮಿಗಳು ಇವರನ್ನು ಶಿಷ್ಯಳನ್ನಾಗಿ ಮಾಡಿಕೊಂಡರು. ಅಲ್ಲಿ ಮೂರು ನಾಲ್ಕು ವರ್ಷಗಳ ಕಾಲ ಗೀಗೀ ಪದಗಳ ಹಾಡುಗಾರಿಕೆ ಕಲಿತರು. ಮುಂದೆ ಹಳ್ಳಿಯಲ್ಲಿ ನಡೆಯುವ ಜಾತ್ರೆ ಮತ್ತು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ಬಂದರು, ಕೂಲಿ ಕೆಲಸದೊಂದಿಗೆ ಹಾಡುವುದೂ ಹವ್ಯಾಸವಾಯಿತು.

ಒಂದು ಕೈಯನ್ನು ಮೇಲಕ್ಕೆತ್ತಿ ಮತ್ತೊಂದು ಕೈಯಲ್ಲಿ ಡಪ್ಪಿನಿಂದ ದನಿ ಹೊಮ್ಮಿಸುತ್ತ ಹೆಜ್ಜೆಗಳನ್ನು ಹಿಂದಕ್ಕೆ ಮುಂದಕ್ಕೆ ಇಡುತ್ತ, ಎಡಬಲದ ಜನರಿಗೆ ಹಾಡಿನ ಮೂಲಕ ಉತ್ತರಿಸುವುದು ಫಕೀರವ್ವನ ವೈಶಿಷ್ಟ್ಯ ತಮ್ಮ ಸೋದರಮಾವನ ಜೊತೆಯಲ್ಲಿ ಹೋರಾಟದ

ಗೀತೆಗಳನ್ನು ಹಾಡಿ ಕ್ರಾಂತಿಕಾರಿ ಕಲಾವಿದೆ ಎನಿಸಿದರು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಗೀಗೀಪದಗಳನ್ನು ಹೋರಾಟದ ಮಾಧ್ಯಮವನ್ನಾಗಿ ಬಳಸಿಕೊಂಡರು ಅನಂತರದಲ್ಲಿ ಕರ್ನಾಟಕ ಸರ್ಕಾರದ ಹಲವು ಅಭಿವೃದ್ಧಿ ಕಾರ್ಯಕ್ರಮಗಳ ಸಂದೇಶವನ್ನು ತಮ್ಮ ಗೀತೆಗಳಲ್ಲಿ ಅಳವಡಿಸಿಕೊಂಡು ಹಾಡುತ್ತಿದ್ದರು. ಇಪ್ಪತ್ತು ಅಂಶಗಳ ಕಾರ್ಯಕ್ರಮ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ಹಾಗೂ ಧೂಮಪಾನದ ತೊಂದರೆಗಳು–ಮೊದಲಾದ ಸಾಮಾಜಿಕ ಪಿಡುಗುಗಳ ವಿರುದ್ಧ ಗೀತೆಗಳನ್ನು ಹಾಡುವುದರ ಮೂಲಕ ಜನರ ಗಮನಸೆಳೆದರು. ವಿದ್ಯಾಭ್ಯಾಸದಿಂದ ವಂಚಿತರಾಗಿದ್ದರೂ ಸಾಕ್ಷರತೆಯ ಮಹತ್ತ್ವವನ್ನು ತಮ್ಮ ಗೀಗೀ ಪದಗಳಲ್ಲಿ ಹಾಡಿದರು. ಎಷ್ಟು ವರ್ಷ ಹಾಡಿದರೂ ಇವರ ಆರ್ಥಿಕ ಪರಿಸ್ಥಿತಿ ಮಾತ್ರ ಸುಧಾರಿಸಲಿಲ್ಲ. ತಮ್ಮ ಜೀವಿತದ ಕೊನೆಯವರೆಗೂ ಸಹೋದರಿ ಮರಿಯಮ್ಮ ಮತ್ತು ಆಕೆಯ ಮಕ್ಕಳ ಆಶ್ರಯದಲ್ಲಿದ್ದರು. ಗೀಗೀ ಪದಗಳನ್ನು ಕಲಿಸಲು ಮತ್ತು ತರಬೇತಿ ನೀಡಲು ಕರ್ನಾಟಕ ಸರ್ಕಾರ ಫಕೀರವ್ವನವರಿಗೆ ಆರ್ಥಿಕ ನೆರವನ್ನು ನೀಡಿತ್ತು. ಸಿಮ್ಲಾ, ಹೈದರಾಬಾದ್, ದೆಹಲಿ, ಮುಂಬಯಿ–ಮುಂತಾದ ನಗರಗಳಲ್ಲಿ ಫಕೀರವ್ವನವರ ಕಂಚಿನಕಂಠದ ಮೂಲಕ ಗೀಗೀ ಪದಗಳು ಮೊಳಗಿವೆ.

ಇವರಿಗೆ ಹಲವು ಗೌರವ, ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1984), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1994), ಜಾನಪದ ಶ್ರೀ ಪ್ರಶಸ್ತಿ (1998) – ಇವು ಮುಖ್ಯವಾದವು. ನಾಡಿನಾದ್ಯಂತ ಗೀಗೀ ಪದ ಹಾಡಿಕೊಂಡು ಸುತ್ತಾಡಿ, ಅನಾರೋಗ್ಯದಿಂದ ಬಳಲಿ ಸರ್ಕಾರ ನೀಡಿದ್ದ ಬಂಗಾರದ ಪದಕವನ್ನು ಮಾರಿ ಔಷಧಿ ಪಡೆಯುವ ಪರಿಸ್ಥಿತಿ ಈ ಕಲಾವಿದೆಗೆ ಕಡೆಗಾಲದಲ್ಲಿ ಒದಗಿಬಂತು. ಇವರು 2002ರಲ್ಲಿ ನಿಧನರಾದರು. **(ಜಿ.ಆರ್.ಟಿ.)**

**ಫರ್ನಾಂಡಿಸ್, ಜಾರ್ಜ್:** 1930– . ಸಮಾಜವಾದಿ ಚಿಂತಕರು, ಪ್ರಸಿದ್ಧ ಕಾರ್ಮಿಕ ನಾಯಕರು. ಕೇಂದ್ರ ಮಾಜಿ ರಕ್ಷಣಾ ಸಚಿವರಾಗಿದ್ದವರು. 1930 ಜೂನ್ 3ರಂದು ಮಂಗಳೂರಿನಲ್ಲಿ ಸಂಪ್ರದಾಯಸ್ಥ ಕ್ರೈಸ್ತ ಕುಟುಂಬದಲ್ಲಿ ಹುಟ್ಟಿದರು. ತಂದೆ ಜಾನ್ ಫರ್ನಾಂಡಿಸ್, ತಾಯಿ ಆಲಿಸ್. ತಮ್ಮ ಮಗ ಪಾದ್ರಿಯಾಗಬೇಕೆಂಬುದು ಇವರ ತಂದೆತಾಯಿಗಳ ಇಚ್ಛೆ. ಮೆಟ್ರಿಕ್ ಪರೀಕ್ಷೆ ಮುಗಿದಮೇಲೆ ಫರ್ನಾಂಡಿಸ್ ಅವರು ಬೆಂಗಳೂರು ಸೇಂಟ್ ಪೀಟರ್ ಸೆಮಿನರಿಯಲ್ಲಿ ಧಾರ್ಮಿಕ ಶಿಕ್ಷಣ ಹಾಗೂ ತರಬೇತಿಗೆ ಹೋದರು. ಒಂದು ವರ್ಷ ತತ್ತ್ವಶಾಸ್ತ್ರವನ್ನು ವ್ಯಾಸಂಗ ಮಾಡಿದರು. ಆದರೆ ಚಿಕ್ಕಂದಿನಿಂದಲೂ ಪ್ರತಿಭಟನಾ ಮನೋಧರ್ಮ ಹೊಂದಿದ್ದ ಇವರು ಸಮಾಜವಾದಿ ತತ್ತ್ವಗಳಿಗೆ ಮನಸೋತರು. 1949ರಲ್ಲಿ ಸೋಷಿಯಲಿಸ್ಟ್ ಪಾರ್ಟಿಯ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸದಸ್ಯರಾದರು. ಅನಂತರ ಮುಂಬಯಿಗೆ ಹೋಗಿ, ಅಲ್ಲಿ ಮುದ್ರಣಾಲಯವೊಂದರಲ್ಲಿ ಕರಡು ತಿದ್ದುವ ಕೆಲಸಕ್ಕೆ ಸೇರಿಕೊಂಡು ಕಾರ್ಮಿಕನಾಗಿ ವೃತ್ತಿ ಆರಂಭಿಸಿದ ಫರ್ನಾಂಡಿಸ್ ಅವರು ಮುಂಬಯಿಯ ಟ್ರೇಡ್ ಯೂನಿಯನ್ ಅಗ್ರಗಣ್ಯ ನಾಯಕರಾದರು. ಸಂಘಟನಾಚಾತುರ್ಯ, ಮಾತುಗಾರಿಕೆಯ ಕುಶಲತೆ ಇವರ ವ್ಯಕ್ತಿತ್ವದ ವೈಶಿಷ್ಟ್ಯ. ಮುಂಬಯಿಯ ಸುಪ್ರಸಿದ್ಧ ಹಡಗುಕಟ್ಟೆ ಕಾರ್ಮಿಕ ನಾಯಕ ಡಿ ಮೆಲ್ಲೊ ಇವರ ಗುರು. ಫರ್ನಾಂಡಿಸ್ 1951ರಿಂದಲೇ ಹಡಗುಕಟ್ಟೆ, ಸಾರಿಗೆ, ನಗರ ಸಭೆ, ಹೋಟೆಲ್ ಹಾಗೂ ಇತರ ಕಾರ್ಮಿಕರ ಸಂಘಟನೆಗೆ ತೊಡಗಿ ಡಿ ಮೆಲ್ಲೊರ ಅನಂತರ ಪ್ರಮುಖ ಕಾರ್ಯದಲ್ಲಿ ಮುಖಂಡರಾದರು. 1954ರಲ್ಲಿ ಮುಂಬಯಿಯ ಪೌರಸಭಾ ಮಜ್ದೂರ್ ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಆಯ್ಕೆಗೊಂಡರು. 1958ರಲ್ಲಿ ಮುಂಬಯಿ ಕಾರ್ಮಿಕ ಸಂಘದ ಅಧ್ಯಕ್ಷರಾದರು. ಅಖಿಲ ಭಾರತ ಖ್ಯಾತಿಗೆ ಏರಿದ ಫರ್ನಾಂಡಿಸ್ 1958ರಲ್ಲಿ ಅಖಿಲಭಾರತ ಹಿಂದ್ ಮಜ್ದೂರ್ ಸಭೆಯ ಖಜಾಂಚಿಯಾದರು. ಹಿಂದ್ ಮಜ್ದೂರ್ ಪಂಚಾಯಿತ್‌ನ ಮಹಾಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದರು. ಮುಂಬಯಿಯ ವಿದ್ಯುತ್ ಪೂರೈಕೆ ಮತ್ತು ಸಾರಿಗೆ ಕಾರ್ಮಿಕರ ಸಂಘ, ಅಖಿಲ ಭಾರತ ಬಾನುಲಿ ಪ್ರಸಾರಕರ



ಮತ್ತು ದೂರದರ್ಶನ ಪ್ರಸಾರಕರ ಸಂಘ ಇವುಗಳ ಅಧ್ಯಕ್ಷಸ್ಥಾನವೂ ಇವರಿಗೆ ದೊರಕಿತು. ಭಾರತದ ಕಾರ್ಮಿಕ ಸಂಘದ ಏಕೈಕ ಸಹಕಾರಿ ಬ್ಯಾಂಕ್ ಆದ ಮುಂಬಯಿ ಕಾರ್ಮಿಕ ಸಹಕಾರ ಬ್ಯಾಂಕನ್ನು ಸ್ಥಾಪಿಸಿದರು. ಕಾರ್ಮಿಕ ಚಟುವಟಿಕೆಗಳ ನಡುವೆ ಪಕ್ಷದಲ್ಲಿದ್ದ ತಮ್ಮ ಹೊಣೆಗಾರಿಕೆಯನ್ನು ನಿರ್ಲಕ್ಷಿಸಲಿಲ್ಲ. ಇವರು 1955ರಲ್ಲಿ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರಾದರು. 1965ರಲ್ಲಿ ಖಜಾಂಚಿಯಾಗಿ ಕಾರ್ಯನಿರ್ವಹಿಸಿದರು. 1969ರಲ್ಲಿ ಆ ಪಕ್ಷದ ಮಹಾ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡರು. 1973ರಲ್ಲಿ ಸೋಷಿಯಲಿಸ್ಟ್ ಪಾರ್ಟಿಯ ಅಧ್ಯಕ್ಷರಾದರು. ಎಸ್.ಎಸ್.ಪಿ., ಪಿ.ಎಸ್.ಪಿ ಹಾಗೂ ಬಿ.ಎಸ್.ಪಿ.ಗಳು ಐಕ್ಯಗೊಂಡು ಏಕಪಕ್ಷವಾಗುವುದರಲ್ಲಿ ಇವರ ಪಾತ್ರ ಪ್ರಮುಖವಾದ್ದು. 1955ರಿಂದ ಸೋಷಿಯಲಿಸ್ಟ್ ಪಾರ್ಟಿಯ ರಾಷ್ಟ್ರೀಯ ಸಮಿತಿಯ ಸದಸ್ಯರಾದ ಫರ್ನಾಂಡಿಸ್ ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಸೋಷಿಯಲಿಸ್ಟ್ ಪಾರ್ಟಿಯನ್ನು ಆರನೆಯ ಲೋಕಸಭಾ ಚುನಾವಣೆಯಾದ ಮೇಲೆ ಜನತಾ ಪಕ್ಷದಲ್ಲಿ ವಿಲೀನಗೊಳಿಸಿದರು. ಮುಂಬಯಿ ನಗರ ಕಾರ್ಮಿಕ ಸಮಾಜದಲ್ಲಿ ಚಿರಪರಿಚಿತ ವ್ಯಕ್ತಿಯಾದ ಫರ್ನಾಂಡಿಸರ ಕಾರ್ಯಕ್ಷೇತ್ರ ಪೌರಕಾರಣಕ್ಕೂ ರಾಜಕಾರಣಕ್ಕೂ ವಿಸ್ತರಿಸಿಕೊಂಡಿತು. 1961–67ರ ವರೆಗೆ ಇವರು ಮುಂಬಯಿಯ ಮುನಿಸಿಪಲ್ ಕಾರ್ಪೊರೇಷನ್ನಿನ ಸದಸ್ಯರಾಗಿದ್ದರು. 1967ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಹಿರಿಯ ಮುಖಂಡರೂ ಮುಂಬಯಿ ದೊರೆಗಳೆಂದು ಪ್ರಸಿದ್ದರೂ ಆಗಿದ್ದ ಎಸ್.ಕೆ. ಪಾಟೀಲರನ್ನು ಸೋಲಿಸಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಹಿರಿಯ ಮುಖಂಡರೂ ಮುಂಬಯಿಯ ದೊರೆಗಳೆಂದು ಪ್ರಸಿದ್ದರೂ ಆಗಿದ್ದ ಎಸ್.ಕೆ. ಪಾಟೀಲರನ್ನು ಸೋಲಿಸಿ ಲೋಕಸಭಾ ಸದಸ್ಯರಾದರು. ಅಖಿಲಭಾರತ ರೈಲ್ವೆ ಕಾರ್ಮಿಕ ಫೆಡರೇಷನ್ನಿನ ಅಧ್ಯಕ್ಷರಾಗಿದ್ದ ಇವರ ನೇತೃತ್ವದಲ್ಲಿ 1974ರಲ್ಲಿ ರೈಲ್ವೆ ಚಳವಳಿ ನಡೆಯಿತು. 1975ರ ಜೂನ್‌ನಲ್ಲಿ ಘೋಷಿಸಲಾದ ತುರ್ತುಪರಿಸ್ಥಿತಿಯ ಸಮಯದಲ್ಲಿ ದೇಶದ್ರೋಹ ಆರೋಪಕ್ಕೆ ಗುರಿಯಾಗಿ ಭೂಗತರಾದರು. ಬರೋಡ ಡೈನಮೈಟ್ ಪ್ರಕರಣದಲ್ಲಿ ಮುಖ್ಯ ಆಪಾದಿತರಾಗಿ ಸೆರೆಸಿಕ್ಕಿದ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿತ್ತು. ಆರನೆಯ ಲೋಕಸಭಾ ಚುನಾವಣೆಗೆ (1977) ಬಿಹಾರದ ಮುಜಫರ್‌ಪುರ ಕ್ಷೇತ್ರದಿಂದ ಜನತಾ ಪಕ್ಷದ ಅಭ್ಯರ್ಥಿಯಾಗಿ ಜೈಲಿನಿಂದಲೇ ಸ್ಪರ್ಧಿಸಿದರು. ಬಂಧನಪ್ರತೀಕವಾದ ಆಳೆತ್ತರದ ಇವರ ಪಡಿರೂಪಿನ ಮೆರವಣಿಗೆಯ ವಿನೂತನ ಪ್ರಚಾರ, ವಿನ್ಯಾಸ ಭಾರತದ ಚುನಾವಣಾ ಇತಿಹಾಸದಲ್ಲಿಯೇ ಪ್ರಥಮ.

ಅಪಾರ ಜನಬೆಂಬಲದಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಇವರು ಮೂರು ಲಕ್ಷಕ್ಕೂ ಅಧಿಕ ಮತದಿಂದ ಸೋಲಿಸಿ ಗೆದ್ದರು. ಇವರ ಮೇಲಿನ ಆಪಾದನೆಗಳು ಪೂರ್ವಗ್ರಹಪೀಡಿತವೆಂದು ಅವನ್ನು ತಳ್ಳಿಹಾಕಲಾಯಿತು. ಸಂಪರ್ಕ ಮಂತ್ರಿಯಾಗಿ ಕೇಂದ್ರ ಸಂಪುಟವನ್ನು ಸೇರಿದ ಫರ್ನಾಂಡಿಸ್ ಅವರು, ಎರಡು ತಿಂಗಳ ಅನಂತರ 1990ರ ವರೆಗೂ ಆ ಅಧಿಕಾರದಲ್ಲಿ ಮುಂದುವರಿದರೂ. ಕೈಗಾರಿಕಾ ಸಚಿವರಾಗಿ 1999ರಲ್ಲಿ ಬಿಜೆಪಿ ಮತ್ತು ಇತರ ಹಲವು ಪಕ್ಷಗಳ ರಾಷ್ಟ್ರೀಯ ಮೈತ್ರಿಕೂಟದ ಸರ್ಕಾರದಲ್ಲಿ ರಕ್ಷಣಾ ಮಂತ್ರಿಯಾದರು.

ಫರ್ನಾಂಡಿಸ್ ಅವರು ಪತ್ರಿಕೋದ್ಯಮಿಗಳೂ ಹೌದು. ತಮ್ಮ ಹತ್ತೊಂಬತ್ತನೆಯ ವಯಸ್ಸಿಗೇ ಪತ್ರಿಕಾ ವ್ಯವಸಾಯಕ್ಕೆ ಕಾಲಿಟ್ಟು 'ಕೊಂಕಣ ಯುವಕ' ಎಂಬ ಪತ್ರಿಕೆಯನ್ನು ಸ್ಥಾಪಿಸಿ ಅದರ ಸಂಪಾದಕರಾಗಿದ್ದರು. 1950ರಲ್ಲಿ ರೈತವಾಣಿ ಎಂಬ ಕನ್ನಡ ಪತ್ರಿಕೆಯ ಸಂಪಾದಕರಾಗಿ ಅದನ್ನು ನಡೆಸಿದರು. 1952–53ರಲ್ಲಿ ಡಾಕ್‌ಮನ್ ಎಂಬ ಇಂಗ್ಲಿಷ್ ಭಾಷೆಯ ಕಾರ್ಮಿಕ ಪತ್ರಿಕೆ ಹಾಗೂ ನ್ಯೂ ಸೊಸೈಟಿ ಎಂಬ ಪತ್ರಿಕೆಗಳನ್ನು ನಡೆಸಿದರು. ಆಮೇಲೆ ಕಳೆದ ಶತಮಾನದ ಎಪ್ಪತ್ತರ ದಶಕದ ಆರಂಭದಲ್ಲಿ ಪ್ರತಿಪಕ್ಷ ಎಂಬ ಹಿಂದಿ ಸಾಪ್ತಾಹಿಕವನ್ನು ದೆಹಲಿಯಿಂದ ಹೊರಡಿಸುತ್ತಿದ್ದರು.

ಕೇಂದ್ರ ಸರ್ಕಾರದಲ್ಲಿ ಹಿಂದೆ ಶಿಕ್ಷಣ ಸಚಿವರಾಗಿದ್ದ ದಿವಂಗತ ಹುಮಾಯೂನ್ ಕಬೀರ್ ಅವರ ಮಗಳು ಲೈಲಾ ಇವರ ಪತ್ನಿ.

(ಎಸ್.ಎಸ್.ಎಂಯು.)

**ಫಲ ಉತ್ಪಾದನೆ ಮತ್ತು ಫಲ ಉದ್ಯಮ:** ಕರ್ನಾಟಕ ರಾಜ್ಯದಲ್ಲಿ ಫಲ ಉತ್ಪಾದನೆಗೆ ಸಹಾಯಕವಾಗುವ ಪ್ರಕೃತಿದತ್ತವಾದ ಉತ್ತಮ ವಾತಾವರಣ, ಫಲವತ್ತಾದ ಮಣ್ಣು, ಯೋಗ್ಯ ಭೂಮಿ, ಅನುಕೂಲವಾದ ಹವಾಗುಣ ಹಾಗೂ ಮಳೆ ಮತ್ತು ಇತರೆ ನೀರಾವರಿ ಸೌಲಭ್ಯಗಳಿವೆ. ಹಲವಾರು ಜಾತಿಯ ಹಣ್ಣುಗಳನ್ನು ರಾಜ್ಯದ ವಿವಿಧ ಪ್ರದೇಶಗಳಲ್ಲಿ ವರ್ಷದ ಎಲ್ಲ ಕಾಲಗಳಲ್ಲೂ ಬೆಳೆಯುವ ವೈಶಿಷ್ಟ್ಯ ಕರ್ನಾಟಕದಲ್ಲಿ ಮಾತ್ರ ಸಾಧ್ಯ. ಬಾಳೆ, ಮಾವು, ಕಿತ್ತಳೆ, ಮೂಸಂಬಿ, ಚಕ್ಕೋತ, ನಿಂಬೆ, ದ್ರಾಕ್ಷಿ, ಸಪೋಟ, ಸೀಬೆ, ಅನಾನಸ್, ಪಪಾಯಿ–ಇವು ಕರ್ನಾಟಕದ ಮುಖ್ಯ ಹಣ್ಣಿನ ಬೆಳೆಗಳು. ದಾಳಿಂಬೆ, ಅಂಜೂರ, ಸೀತಾಫಲ, ಎಲಚಿ, ಹಲಸು ಮೊದಲಾದವನ್ನು ಸಹ ವಿಶೇಷವಾಗಿ ಬೆಳೆಯಲಾಗುತ್ತಿದೆ. ಫ್ಯಾಷನ್ ಫ್ರೂಟ್, ಬಟರ್ ಫ್ರೂಟ್ (ಅವೊಕಾಡೊ), ಸ್ಟ್ರಾಬೆರಿ, ಬೋರೆ, ಕಲ್ಲಂಗಡಿ, ಕರಬೂಜ, ಮರಸೇಬು, ಕಮರಕೆ ಮೊದಲಾದವುಗಳನ್ನು ಕೂಡ ಸ್ವಲ್ಪಮಟ್ಟಿಗೆ ಬೆಳೆಯಲಾಗುವುದು. ಪಂಚವಾರ್ಷಿಕ ಯೋಜನೆಗಳಲ್ಲಿ ಹಣ್ಣು ಅಭಿವೃದ್ಧಿಗೆ ಆದ್ಯತೆ ಕೊಟ್ಟಿರುವುದರಿಂದ ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಹಣ್ಣಿನ ತೋಟಗಳು ವಿಸ್ತಾರಗೊಂಡು ಫಲ ಉತ್ಪಾದನೆ ಅಧಿಕಗೊಂಡಿದೆ. ಹಣ್ಣಿನ ತೋಟಗಳ ವಿಸ್ತೀರ್ಣ ಮತ್ತು ಹಣ್ಣುಗಳ ಉತ್ಪತ್ತಿ ಬಗ್ಗೆ ನಿಖರವಾದ ಅಂಕಿ ಅಂಶಗಳು ದೊರೆಯುವುದು ಕಷ್ಟ. ಆದರೂ ವಿವಿಧ ಮೂಲಗಳಿಂದ ಶೇಖರಿಸಿದ 2001–2002ನೆಯ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಾರ್ಷಿಕ ವರದಿ ಪ್ರಕಾರ. 1999–2000ನೆಯ ಸಾಲಿಗೆ ಕರ್ನಾಟಕ ರಾಜ್ಯದ ತೋಟಗಾರಿಕೆ ಬೆಳೆಗಳು ವಿಸ್ತೀರ್ಣ ಮತ್ತು ಉತ್ಪನ್ನದ ಬೆಳೆವಾರು ವಿವರಗಳು:

| ಕ್ರ.ಸಂ. | ಬೆಳೆಯಹೆಸರು | 1999–2000 | |
|---|---|---|---|
| | ಹಣ್ಣಿನ ಬೆಳೆಗಳು | ವಿಸ್ತೀಣ | ಉತ್ಪನ್ನ |
| 1 | ಮಾವು | 133806 | 1286224 |
| 2 | ಬಾಳೆಹಣ್ಣು | 31766 | 731474 |
| | ಪಚ್ಚಬಾಳೆ ಇತರೆ; | 26954 | 503679 |
| | ಒಟ್ಟು–ಬಾಳೆ | 58721 | 1235153 |
| 3 | ಸೀಬೆ | 11596 | 143822 |
| 4 | ಸಪೋಟ | 25682 | 253854 |
| 5 | ನಿಂಬೆ | 14094 | 193255 |
| 6 | ಮೂಸಂಬಿ | 1060 | 11277 |
| 7 | ಕಿತ್ತಳೆ | 3472 | 12327 |
| | ಒಟ್ಟು–ಹುಳಿಜಾತಿ | 18626 | 216777 |
| 8 | ಅನಾನಸ್ | 4898 | 163703 |
| 9 | ದಾಳಿಂಬೆ | 10689 | 115616 |
| I | ಹಲಸು | 11333 | 260506 |
| 11 | ಪರಂಗಿ | 6627 | 302887 |
| 12 | ಬೋರೆ | 1238 | 25188 |
| 13 | ಸೀತಾಫಲ | 2727 | 21012 |
| 14 | ಕಲ್ಲಂಗಡಿ | 8424 | 253294 |
| 15 | ಕರಬೂಜ | 467 | 3658 |
| 16 | ಮರಸೇಬು | 0 | 0 |
| 17 | ಚಕೋತ | 23 | 67 |
| 18 | ದ್ರಾಕ್ಷಿ | 12070 | 307664 |
| 19 | ಅಂಜೂರ | 284 | 917 |
| 20 | ಪನ್ನೇರಳೆ | 285 | 1683 |
| 21 | ಚಿಣ್ಣೆಹಣ್ಣು | 153 | 496 |
| 22 | ಲಿಚ್ಚಿ | 54 | 280 |
| 23 | ಸೇಬು | – | – |
| 24 | ಇತರೆ | 5765 | 47459 |

1970ರ ದಶಕದಿಂದ ಈಚೆಗೆ ವಿವಿಧ ಹಣ್ಣು ಬೆಳೆಯುವ ಪ್ರದೇಶಗಳ ವಿಸ್ತೀರ್ಣ ಬಹಳ ಹೆಚ್ಚಿದೆ. ದ್ರಾಕ್ಷಿತೋಟದ ವಿಸ್ತೀರ್ಣವೇ ಸು. 12,000 ಹೆಕ್ಟೇರುಗಳಷ್ಟು ಆಗಿದೆ. ಕರ್ನಾಟಕದ ಫಲಸಸ್ಯಗಳಲ್ಲಿ ಬಾಳೆ ಪ್ರಥಮ ಸ್ಥಾನ ಪಡೆದಿದೆ.

ರಾಜ್ಯದಲ್ಲಿ ಅನೇಕ ಜಲಾಶಯಗಳು ನಿರ್ಮಾಣಗೊಂಡಿರುವುದರಿಂದ ಹಣ್ಣು, ತರಕಾರಿ ಹಾಗೂ ವಿವಿಧ ತೋಟದ ಬೆಳೆಗಳಿಗೆ ಸು. 2.25 ಲಕ್ಷ ಹೆಕ್ಟೇರುಗಳಿಗೂ ಹೆಚ್ಚಿನ ಯೋಗ್ಯ ಭೂಮಿ ದೊರೆತಿರುವ ಅಂದಾಜಿದೆ. ಹೊಸದಾಗಿ ಹಣ್ಣಿನ ತೋಟ ಮಾಡುವುದರ ಜೊತೆಗೆ ಈಗ ಇರುವ ಹಣ್ಣಿನ ತೋಟಗಳನ್ನು ಪುನರುಜ್ಜೀವನಗೊಳಿಸಿ ಸುಧಾರಿತ ಬೇಸಾಯಕ್ರಮಗಳನ್ನು ಕೈಗೊಳ್ಳುವುದರಿಂದ ಕೂಡ ಫಲ ಉತ್ಪಾದನೆಯನ್ನು ಅಧಿಕಗೊಳಿಸಬಹುದು. ಹಣ್ಣು ಅಭಿವೃದ್ಧಿ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಲವಾರು ಯೋಜನೆಗಳು ಕಾರ್ಯ ರೂಪದಲ್ಲಿವೆ. ಕರ್ನಾಟಕದ ರಾಜ್ಯ ತೋಟದ ಇಲಾಖೆಯ ಮೂಲಕ ಪ್ರತಿವರ್ಷ 2,600 ಹೆಕ್ಟೇರ್ ಹೊಸದಾಗಿ ಹಣ್ಣಿನ ತೋಟಗಳನ್ನು ಮಾಡುವುದ ರೊಂದಿಗೆ 2,600 ಹೆಕ್ಟೇರ್ ಹಳೆಯ ಹಾಗೂ ನಿರ್ಲಕ್ಷಿಸಲ್ಪಟ್ಟ ಹಣ್ಣಿನ ತೋಟಗಳನ್ನು ಪುನರುದ್ಧಾರ ಮಾಡುವ ಮತ್ತು ಲಕ್ಷಾಂತರ ಹಣ್ಣಿನ ಗಿಡಗಳನ್ನು ಹಂಚುವ ಕಾರ್ಯಕ್ರಮವನ್ನೂ ಕೈಗೊಂಡಿದೆ. ತೋಟಗಾರಿಕೆ ಇಲಾಖೆ ರಾಜ್ಯದಾದ್ಯಂತ 415 ಫಾರಮ್ ಮತ್ತು ಸಸಿ ಕ್ಷೇತ್ರಗಳನ್ನು ಸ್ಥಾಪಿಸಿ ಜನರಿಗೆ ಗಿಡಗಳನ್ನು ಒದಗಿಸುವುದಲ್ಲದೆ ಪ್ರತ್ಯಕ್ಷ ತಾಕುಗಳ ಮೂಲಕ ಹಣ್ಣು ಬೇಸಾಯ ಕ್ರಮವನ್ನು ಪ್ರದರ್ಶಿಸಿ ರೈತರಿಗೆ ತಿಳುವಳಿಕೆ ಕೊಡುತ್ತಿದೆ. ರೈತರ ಮಕ್ಕಳಿಗೆ ಹಣ್ಣು, ತರಕಾರಿ ಮತ್ತು ಇತರೆ ತೋಟದ ಬೆಳೆಗಳ ವ್ಯವಸಾಯದ ಬಗ್ಗೆ ರಾಜ್ಯದಾದ್ಯಂತ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ಶಿಕ್ಷಣ ಕೊಡಲಾಗುತ್ತಿದೆ.

ಹಣ್ಣಿನ ತೋಟ ಮಾಡಲು ಬಂಡವಾಳ ಅನಿವಾರ್ಯ. ಹಣ್ಣಿನ ಗಿಡ ಫಲಕೊಡಲು ದೀರ್ಘಕಾಲ ಕಾಯಬೇಕು. ಆದ್ದರಿಂದ ಹಣಕಾಸಿನ ತೊಂದರೆಯಿದ್ದು ಹಣ್ಣು ಬೆಳೆಯಲು ಆಸಕ್ತಿಯಿರುವವರಿಗೆ ಕೃಷಿ ಪುನರ್ಧನ ಸಂಸ್ಥೆಯಿಂದ ಭೂ ಅಭಿವೃದ್ಧಿ ಬ್ಯಾಂಕ್ ಹಾಗೂ ಅಪೆಕ್ಸ್ ಬ್ಯಾಂಕ್ ಮುಖಾಂತರ ದೀರ್ಘಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ನೀಡಿ ಫಲ ಬಂದ ಮೇಲೆ ಸುಲಭ ಕಂತುಗಳಲ್ಲಿ ತೀರಿಸುವ ಯೋಜನೆಗಳಿವೆ. ಕಿತ್ತಳೆ, ದ್ರಾಕ್ಷಿ, ಸಪೋಟ, ನಿಂಬೆ, ಸೀಬೆ ಮತ್ತು ಅನಾನಸ್ ಹಣ್ಣು ಅಭಿವೃದ್ಧಿ ಯೋಜನೆಗಳು ಕಾರ್ಯರೂಪದಲ್ಲಿವೆ. ಮಾವು ಮೊದಲಾದ ಇತರೆ ಕೆಲವು ಹಣ್ಣುಗಳ ಅಭಿವೃದ್ಧಿ ಯೋಜನೆಗಳನ್ನು ಸಹ ಸಿದ್ಧಗೊಳಿಸಲಾಗಿದೆ.

ಇವುಗಳಲ್ಲದೆ ಪಶ್ಚಿಮ ಘಟ್ಟಗಳ ಅಭಿವೃದ್ದಿ ಯೋಜನೆ, ಬರಪೀಡಿತ ಪ್ರದೇಶಗಳ ಅಭಿವೃದ್ಧಿ ಯೋಜನೆ, ನದಿಗಳ ಹಾಗೂ ಜಲಾಶಯ ಪ್ರದೇಶಗಳ ಅಭಿವೃದ್ಧಿ ಯೋಜನೆ ಮೊದಲಾದ ಅನೇಕ ಯೋಜನೆಗಳಲ್ಲಿ ಹಣ್ಣಿನ ಗಿಡಗಳ ಅಭಿವೃದ್ಧಿಯನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೈಕೊಳ್ಳಲಾಗಿದೆ. ಬಲ್ಗೇರಿಯದ ಸರ್ಕಾರದ ನೆರವಿನೊಡನೆ ಆರಂಭಿಸಿರುವ ಕೃಷಿ ಕೈಗಾರಿಕಾ ಅಭಿವೃದ್ಧಿ ಯೋಜನೆಯ ಪ್ರಕಾರ ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳ ಎಲ್ಲ ತಾಲ್ಲೂಕುಗಳಲ್ಲಿ ಮತ್ತು ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ಹಾಸನ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಸಾವಿರಾರು ಹೆಕ್ಟೇರುಗಳಲ್ಲಿ ಅನಾನಸ್ ಬೆಳೆಯ ಯೋಜನೆ ಪ್ರಾರಂಭವಾಗುವುದು. ವಿಶ್ವಬ್ಯಾಂಕಿನ ಸಹಾಯದಿಂದ ಸುಮಾರು 21 ಸಾವಿರ ಹೆಕ್ಟೇರುಗಳಲ್ಲಿ ಹದಿಮೂರು ಜಾತಿಯ ವಿವಿಧ ಹಣ್ಣುಗಳನ್ನು ರಾಜ್ಯದಾದ್ಯಂತ ಬೆಳೆದು ಸಂಸ್ಕರಿಸಿ ವಿದೇಶಗಳಿಗೆ ರಫ್ತು ಮಾಡುವ ಒಂದು ಬೃಹತ್ ಯೋಜನೆಯನ್ನು ಸಹ ಸಿದ್ಧಪಡಿಸಲಾಗಿದೆ.

ಕರ್ನಾಟಕದ ರೈತರು ಹಣ್ಣು ಬೆಳೆಯುವುದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಅದರಲ್ಲೂ ದ್ರಾಕ್ಷಿ ಬೆಳೆಗಾರರು ಇಲಾಖೆಯ ತಾಂತ್ರಿಕ ಸಲಹೆ ಮೇರೆಗೆ ಸುಧಾರಿಸಿದ ಬೇಸಾಯಕ್ರಮ ಕೈಗೊಂಡು ಅತಿ ಹೆಚ್ಚಾಗಿ ದ್ರಾಕ್ಷಿ ಉತ್ಪನ್ನ ಪಡೆಯುತ್ತಿರುವುದನ್ನು ದೇಶವಿದೇಶಗಳ ದ್ರಾಕ್ಷಿತಜ್ಞರು ಶ್ಲಾಘಿಸಿದ್ದಾರೆ. ಹಣ್ಣು ಬೆಳೆಯುವ ಪ್ರದೇಶಗಳನ್ನು ವಿಸ್ತರಿಸುವುದರೊಂದಿಗೆ ಆಧುನಿಕ ಕೃಷಿಪದ್ಧತಿಯನ್ನನುಸರಿಸಿ ಎಕರೆವಾರು ಅಧಿಕ ಉತ್ಪನ್ನ ಪಡೆದು ಹೆಚ್ಚು ಲಾಭಗೊಳಿಸುವುದು ಬೆಳೆಗಾರರ ಹಾಗೂ ದೇಶದ ದೃಷ್ಟಿಯಲ್ಲಿ ಅಗತ್ಯ.

ಉತ್ತಮ ಹಾಗೂ ಅಧಿಕ ಫಲ ಉತ್ಪಾದನೆಗೆ ಸಂಶೋಧನೆ ಅಡಿಗಲ್ಲಿದ್ದಂತೆ ವಿವಿಧ ಬಗೆಯ ಹಣ್ಣು, ತರಕಾರಿ, ಹೂವು ಮೊದಲಾದ ತೋಟದ ಬೆಳೆಗಳ ಹೊಸ ತಳಿ ಕಂಡುಹಿಡಿಯುವುದು, ಗೊಬ್ಬರದ ಪರಿಮಾಣ, ರೋಗ ಹಾಗೂ ಕೀಟಗಳ ನಿಯಂತ್ರಣ ಉತ್ತಮ ವ್ಯವಸಾಯ ಪದ್ಧತಿ, ವೈಜ್ಞಾನಿಕ ರೀತಿಯಲ್ಲಿ ಕೊಯ್ಲು, ಶೇಖರಣೆ ಮತ್ತು ಸಂಸ್ಕರಣ ಇತ್ಯಾದಿ ವಿವಿಧ ಸಮಸ್ಯೆಗಳ ಸಂಶೋಧನಾ ಕಾರ್ಯ ಹೆಸರುಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನ ಕೇಂದ್ರದಲ್ಲಿಯೂ ಹೆಬ್ಬಾಳದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದಲ್ಲಿಯೂ ನಡೆಯುತ್ತಿದೆ. ಕಿತ್ತಳೆಗೆ ತಗಲುವ ಡೈಬ್ಯಾಕ್ ಮೊದಲಾದ ರೋಗ ಸಮಸ್ಯೆಗಳ ಬಗ್ಗೆ ಕೊಡಗಿನ ಗೋಣಿಕೊಪ್ಪ, ಚೆಟ್ಟಳ್ಳಿ ಕೇಂದ್ರಗಳಲ್ಲಿ ಸಂಶೋಧನೆ ನಡೆಯುತ್ತಿದೆ. ಹೆಸರುಘಟ್ಟದ ಸಂಶೋಧನಾಕೇಂದ್ರದಲ್ಲಿ ಮಾವು ಪ್ರತಿವರ್ಷವೂ ಸರಿಯಾಗಿ ಫಲ ನೀಡುವಂತೆ, ಕೀಟಗಳ ಹತೋಟಿ ಬಗ್ಗೆ, ಹೆಚ್ಚು ಸಕ್ಕರೆ ಅಂಶವನ್ನು ಪಡೆದು ಬೀಜರಹಿತ ಮತ್ತು ರೋಗನಿರೋಧಕ ಸಾಮರ್ಥ್ಯವನ್ನುಳ್ಳ ಮತ್ತು ಹೆಚ್ಚು ಕಾಲ ಕೆಡದಂತಿರುವ ವೈನ್ ಮತ್ತು ದ್ರಾಕ್ಷಾರಸವನ್ನು ತಯಾರಿಸಲು ಯೋಗ್ಯವಾದ ದ್ರಾಕ್ಷಿ ತಳಿಗಳ ಬಗ್ಗೆ, ಮಿಶ್ರತಳಿಯ ಕರಬೂಜ ಮೊದಲಾದ ಹಣ್ಣುಗಳ ಬಗ್ಗೆ ಸಂಶೋಧನೆ ನಡೆಯುತ್ತಿದೆ.

ಮೈಸೂರಿನಲ್ಲಿರುವ ಆಹಾರವಿಜ್ಞಾನ ಸಂಸ್ಥೆಯಲ್ಲಿ ಹಣ್ಣು ಶೇಖರಣೆ, ಸಂರಕ್ಷಣೆ ಮತ್ತು ಸಂಸ್ಕರಣೆ ಬಗ್ಗೆ ಸಂಶೋಧನೆ, ಶಿಕ್ಷಣ ಮತ್ತು ಸಲಹೆಯನ್ನು ನೀಡಲಾಗುತ್ತಿದೆ.

ಹಣ್ಣಿನ ಬೆಳೆಗಾರರು ಎದುರಿಸುತ್ತಿರುವ ತೀವ್ರ ಸಮಸ್ಯೆ ಮಾರುಕಟ್ಟೆ. ಒಂದೊಂದು ಬಗೆಯ ಹಣ್ಣುಗಳು ಒಟ್ಟಿಗೆ ಒಂದೇ ಸಾರಿಕುಯ್ಲಿಗೆ ಬಂದು ಸರಿಯಾದ ಶೇಖರಣೆ ಸಾಗಾಣಿಕೆ ವ್ಯವಸ್ಥೆಯಿಲ್ಲದೆ ಗಿರಾಕಿ ಸಿಕ್ಕದೆ ಸಂರಕ್ಷಣೆ ಸೌಲಭ್ಯವಿಲ್ಲದೆ, ಬಹು ಭಾಗ ಹಣ್ಣುಗಳು ಕೊಳೆತು ಹಾಳಾಗಿ ಹೋಗುವುದುಂಟು. ಹಣ್ಣಿನ ತೋಟಗಾರರು ತೋಟಗಳಲ್ಲಿ ಹಣ್ಣು ಬೆಳೆಯುತ್ತಿರುವಾಗಲೆ ದಳ್ಳಾಳಿ ವರ್ತಕರಿಗೆ ತೋಟದ ಫಸಲನ್ನೆಲ್ಲ ಒಪ್ಪಂದ ಅಥವಾ ಗುತ್ತಿಗೆಗೆ ವಹಿಸಿಕೊಡುವ ಪದ್ಧತಿ ಹಿಂದಿನಿಂದಲೂ ನಡೆದುಬಂದಿದೆ, ಇದರಿಂದ ಮಾರುಕಟ್ಟೆಯ ಬೆಲೆಯ ಮಾಹಿತಿಯಿಲ್ಲದ ರೈತ ದಳ್ಳಾಳಿಗಳ ಶೋಷಣೆಗೆ ಒಳಗಾಗುವ ಸಂಭವವುಂಟು. ಹಲವಾರು ಜನ ಮಧ್ಯವರ್ತಿಗಳ ಅಧಿಕ ಲಾಭದಿಂದ ಗ್ರಾಹಕನಿಗೆ ತಲಪುವ ವೇಳೆಗೆ ಬೆಲೆ ತುಟ್ಟಿಯಾಗುತ್ತದೆ. ಆದಕಾರಣ ಬೆಳೆಗಾರ ಹಾಗೂ ಬಳಕೆದಾರ ಇಬ್ಬರೂ ನಷ್ಟಕ್ಕೊಳಗಾಗುತ್ತಿದ್ದಾರೆ. ಈ ಸಮಸ್ಯೆಯನ್ನು ಪರಿಹರಿಸಲು ಹಣ್ಣು ಕೊಯ್ಲು ಮಾಡಿದ ಕೂಡಲೇ ಶೇಖರಿಸಿ ವಿಂಗಡಿಸಿ ಹವಾನಿಯಂತ್ರಿತ ವಾಹನಗಳ ಮೂಲಕ ಜಾಗ್ರತೆ ಸಾಗಿಸಿ ಅವು ಕೆಡದಂತೆ ಶೀತಾಗಾರಗಳಲ್ಲಿಟ್ಟು ಸರಿಯಾಗಿ ಗಿರಾಕಿ ದೊರೆತಾಗ ಮಾರುಕಟ್ಟೆಗೆ ವಿತರಣೆ ಮಾಡುವ ವ್ಯವಸ್ಥೆಯಾಗಬೇಕು. ಮಧ್ಯವರ್ತಿಗಳ ಶೋಷಣೆ ತಪ್ಪಲು ಹಾಗೂ ಬೆಲೆ ನಿಯಂತ್ರಿಸಲು ಉತ್ತಮ ಹಣ್ಣು ದೊರೆಯಲು ಹಣ್ಣು ಮಾರಾಟ ಮಾಡುವ ಸಹಕಾರ ಸಂಘಗಳನ್ನು ಎಲ್ಲ ಕಡೆಗಳಲ್ಲೂ ಸ್ಥಾಪಿಸಿ ಅವು ಯಶಸ್ವಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಬೆಂಗಳೂರು ಲಾಲ್‌ಬಾಗಿನಲ್ಲಿರುವ ದ್ರಾಕ್ಷಿ ಬೆಳೆಗಾರರ ಸಂಘ ತೋಟದ ಬೆಳೆಗಾರರ ಸಹಕಾರ ಮಾರುಕಟ್ಟೆ ಸಂಸ್ಕರಣಾ ಸಂಘ (ಹಾಪ್ ಕಾಮ್ಸ್) ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾರ್ಯವ್ಯಾಪ್ತಿಯನ್ನು ಹೊಂದಿದೆ. ಯಶಸ್ವಿಯಾಗಿ ಕೆಲಸ ಮಾಡುತ್ತಿದೆ. ದ್ರಾಕ್ಷಿ ಬೆಳೆಗಾರರು ಉತ್ತರ ಕರ್ನಾಟಕ ಭಾಗಕ್ಕೆ ಈ ಸಹಕಾರ ಸಂಘದ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಜಿಲ್ಲಾ ಹಣ್ಣು ಮತ್ತು ತರಕಾರಿ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ. ಅವರಿಗೆ ಬೇಕಾಗುವ ಗೊಬ್ಬರ ಸಸ್ಯಸಂರಕ್ಷಣಾ ಔಷಧಿಗಳನ್ನು ಸೊಸೈಟಿ ಮೂಲಕ ಒದಗಿಸುವುದಲ್ಲದೆ ಅವರು ಬೆಳೆದ ದ್ರಾಕ್ಷಿ ಮೊದಲಾದ ಹಣ್ಣುಗಳನ್ನು ಇದರ ಮುಖಾಂತರವೇ ನ್ಯಾಯ ಬೆಲೆಯಲ್ಲಿ ಮಾರಲಾಗುತ್ತಿದೆ. ಇದರ ಶಾಖೆಗಳು ಮೈಸೂರು, ಮಂಡ್ಯದಲ್ಲಿವೆ. ಕೆಲವು ಪ್ರದೇಶಗಳಲ್ಲಿ ಹಣ್ಣು, ತರಕಾರಿ ಮಾರಾಟ ಸಹಕಾರ ಸಂಘಗಳು ಪ್ರಾರಂಭವಾಗಿವೆ. ರೈತರಿಗೆ ಹಣ್ಣಿನ ಗಿಡಗಳನ್ನು ಒದಗಿಸಲು ಸಸಿ ತಯಾರಿಕಾದಾರರ ಸಂಘ ಲಾಲ್‌ಬಾಗಿನಲ್ಲೂ ಹಣ್ಣು ಬೆಳೆಯುವ ಬಗ್ಗೆ ಆಸಕ್ತಿ ಮೂಡಿಸಲು ಫಲಪುಷ್ಪಪ್ರದರ್ಶನಗಳನ್ನು ಬೆಂಗಳೂರಿನಲ್ಲಿ ಹಾಗೂ ಎಲ್ಲ ಜಿಲ್ಲೆಗಳಲ್ಲಿ ಅನೇಕ ತಾಲ್ಲೂಕುಗಳಲ್ಲಿ ಉದ್ಯಾನ ಕಲಾ ಸಂಘಗಳ ಮೂಲಕ ನಡೆಸಲಾಗುವುದು. ಎಲ್ಲ ಜಿಲ್ಲಾಕೇಂದ್ರಗಳಲ್ಲಿ ಹಣ್ಣು, ತರಕಾರಿ ಮಾರುವ ಸಹಕಾರ ಸಂಘಗಳನ್ನು ಪ್ರಾರಂಭಿಸಲಾಗುವುದು. ಅಂಗಾಂಶ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಕರ್ನಾಟಕದಲ್ಲಿ ಬೆಳೆಯುವ ಹಣ್ಣುಗಳಿಗೆ ಈ ರಾಜ್ಯದಲ್ಲಿ ಮಾತ್ರವಲ್ಲದೆ ಇತರೆ ರಾಜ್ಯಗಳಲ್ಲೂ ಹೊರದೇಶಗಳಲ್ಲೂ ಬೇಡಿಕೆಯಿದೆ. ಕೊಡಗಿನ ಕಿತ್ತಳೆಹಣ್ಣು ಮತ್ತು ರೊಬಸ್ಟ ಜಾತಿ ಬಾಳೆಹಣ್ಣನ್ನು ಹೊರದೇಶಗಳಿಗೆ ಕಳುಹಿಸಲಾಗುತ್ತಿದೆ. ಅನಾನಸ್ ಹಾಗೂ ಮಾವಿನಹಣ್ಣುಗಳನ್ನು ವಿವಿಧ ರೀತಿಯಲ್ಲಿ ಸಂಸ್ಕರಿಸಿ ರಷ್ಯ ಮುಂತಾದ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ವೆನಿಲಾ ಬೆಳೆ ಈಗ ಹೆಚ್ಚು ಪ್ರಚಾರ ಪಡೆದಿದೆ.

ಈಚೆಗೆ ಕೃಷಿ ಕೈಗಾರಿಕಾ ಕಾರ್ಪೊರೇಷನ್ ಆಶ್ರಯದಲ್ಲಿ ಸರ್ಕಾರ ಒಂದು ಫಲ ಸಂಸ್ಕರಣ ಕೇಂದ್ರವನ್ನು ಹೆಬ್ಬಾಳದಲ್ಲಿ ಪ್ರಾರಂಭಿಸಿದೆ. ಸಹಕಾರ ಸಂಘಗಳ ವತಿಯಿಂದ ನಡೆಯುತ್ತಿರುವ ಆರು ಫಲಸಂಸ್ಕರಣ ಕೇಂದ್ರಗಳು ಉಂಟು. ಕೊಡಗಿನ ಕುಶಾಲನಗರ ಮತ್ತು ಗೋಣಿಕೊಪ್ಪ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಇತರೆಡೆಗಳಲ್ಲೂ ಕೆಲವು ಕೇಂದ್ರಗಳಿವೆ. ಹಲವಾರು ಖಾಸಗಿ ಕೇಂದ್ರಗಳು ವಿವಿಧ ಹಣ್ಣು, ತರಕಾರಿ ಮೊದಲಾದುವನ್ನು ಸಂಸ್ಕರಿಸುತ್ತಿವೆ. ಸಂಸ್ಕರಣ ಕೇಂದ್ರಗಳಲ್ಲಿ ಬಹುಮಟ್ಟಿಗೆ ಜ್ಯಾಮ್, ಜೆಲ್ಲಿ, ಹಣ್ಣಿನ ರಸ, ಹೋಳು, ಚೂರು, ಮುರಬ್ಬ ಮೊದಲಾದುವುಗಳನ್ನು ತಯಾರಿಸಲಾಗುತ್ತಿದೆ. ಲಾಲ್‌ಬಾಗಿನಲ್ಲಿ ಪ್ರತಿ ದಿನ ಒಂದು ಟನ್ ಹಣ್ಣು, ತರಕಾರಿ ಒಣಗಿಸುವ ಯಂತ್ರ ಕೆಲಸ ಮಾಡುತ್ತಿದೆ. ಬೆಂಗಳೂರಿನಲ್ಲಿರುವ ಕರ್ನಾಟಕ ಕೋ-ಆಪರೇಟಿವ್ ಬ್ರೂವರೀಸ್‌ನಲ್ಲಿ ದ್ರಾಕ್ಷಿ ಹಣ್ಣಿನಿಂದ ವೈನ್, ಬ್ರಾಂದಿ ತಯಾರಾಗುತ್ತಿವೆ. ಅನಾನಸ್ ಎಲೆಯಿಂದ ನಾರನ್ನು ತೆಗೆಯುವ ಉದ್ಯಮ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯಲ್ಲಿ ನಡೆಯುತ್ತಿದೆ. ಬಾಳೆದಿಂಡಿನಿಂದ ನಾರು ಮತ್ತು ಕಾಗದವನ್ನೂ ಒಣಗಿಸಿದ ಎಲೆಗಳಿಂದ ದೊನ್ನೆಯನ್ನೂ ತಯಾರಿಸಲಾಗುವುದು. ಹೀಗೆ ಫಲೋತ್ಪಾದನೆಯಿಂದ ಹಣ್ಣಿನ ಸಂಸ್ಕರಣ ಜೊತೆಗೆ ಹಲವಾರು ಉಪಕಸುಬುಗಳು ಸ್ಥಾಪಿತವಾಗಿ ಹೆಚ್ಚಿನ ಉದ್ಯೋಗವಕಾಶಗಳು ದೊರೆಯುವಂತಾಗಿದೆ.

ಇಂಡೊ-ಬಲ್ಗೇರಿಯನ್ ಆಗ್ರೋ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ ಮತ್ತು ವಿಶ್ವಬ್ಯಾಂಕ್ ಯೋಜನೆಯಲ್ಲಿ ರಾಜ್ಯದ ಎಲ್ಲ ಭಾಗಗಳಲ್ಲೂ ಹಣ್ಣುಗಳ ಶೇಖರಣೆ ಹಾಗೂ ವಿಂಗಡಣೆ ಕೇಂದ್ರಗಳನ್ನು ಸ್ಥಾಪಿಸಲು, ಹವಾ ನಿಯಂತ್ರಿತ ವಾಹನಗಳ ಮೂಲಕ ಸಾಗಿಸಲು, ಶೈತ್ಯಾಗಾರ ಮತ್ತು ಸಂಸ್ಕರಣಾ ಕೇಂದ್ರಗಳನ್ನು ನಿರ್ಮಿಸಲು ಪ್ರಾಮುಖ್ಯತೆ ಕೊಡಲಾಗಿದೆ. *

**ಫಿರೋಜ್:** ಬಹಮನೀ ರಾಜ್ಯದ 8ನೆಯ ಸುಲ್ತಾನ (1397-1422). ಒಂದನೆಯ ಅಲಾಉದ್ದೀನನ ಮೊಮ್ಮಗ ಹಾಗೂ 2ನೆಯ ಮಹಮ್ಮದನ ಅಳಿಯ. 2ನೆಯ ಮಹಮ್ಮದನ ಮರಣಾನಂತರ ತಫಲ್ಚಿನ್ ಎಂಬ ತುರ್ಕಿ ಅಮೀರನೊಬ್ಬ ಪ್ರಭಾವಿಯಾಗಿ ಮೊದಲು ಮುಹಮ್ಮದನ ಹಿರಿಯ ಮಗ ತಹಂತನ್‌ನಿಗೆ ಪಟ್ಟಕಟ್ಟಿ, ಕೆಲದಿನಗಳಲ್ಲೇ ಅವನ ಕಣ್ಣು ಕಿತ್ತು ಅವನನ್ನು ಓಡಿಸಿ, ಇನ್ನೂ ಬಾಲಕನಾಗಿದ್ದ ಅವನ ತಮ್ಮ ಎರಡನೆಯ ದಾವೂದನಿಗೆ ಪಟ್ಟ ಕಟ್ಟಿ ತನ್ನನ್ನು ರಾಜ್ಯದ ಪ್ರಧಾನಿಯಾಗಿ ನೇಮಕ ಮಾಡಿಸಿಕೊಂಡಿದ್ದ. ತಫಲ್ಚಿನ್ ಒಮ್ಮೆ ಗುಲಾಮನಾಗಿದ್ದು ಬಿಡುಗಡೆಯಾಗಿದ್ದವನು. ಅವನ ದುಷ್ಟವರ್ತನೆಯಿಂದ ಸಿಡಿದೆದ್ದ ಫಿರೋಜ್ ಅಂಧನಾಗಿದ್ದ ತನ್ನ ಮೈದುನ ತಹಂತನನೊಡನೆ ಗುಲ್ಬರ್ಗಕ್ಕೆ ಹೋಗಿ ತಫಲ್ಚಿನ್‌ನನ್ನು ಕೊಂದು ದಾವೂದನ ಕಣ್ಣು ಕಿತ್ತು, ತಾನು ತಾಜುದ್ದೀನ್ ಫಿರೋಜ್ ಷಾ ಎಂಬ ಹೆಸರಿನಿಂದ ಸಿಂಹಾಸನವೇರಿದ (1397 ನವೆಂಬರ್ 16).

ಫಿರೋಜ್ ಅಧಿಕಾರಕ್ಕೆ ಬಂದಕೂಡಲೇ ತನ್ನ ಕಾರ್ಯಗಳಲ್ಲಿ ಸಹಕರಿಸಿದ್ದ ಸೋದರ ಅಹ್ಮದ್‌ನಿಗೆ ಖಾನ್-ಇ-ಖಾನಾನ್ ಪದವಿಯಿತ್ತು ಗೌರವಿಸಿದ. ತನ್ನ ಗುರು ಮೀರ್ ಫಸ್ಲುಲ್ಲಾ ಇಂಜೂವನ್ನು ಪ್ರಧಾನಿಯಾಗಿ ನೇಮಕ ಮಾಡಿದ. ಸಾಗರ್‌ನಲ್ಲಿ ಉದ್ಭವಿಸಿದ ದಂಗೆಯನ್ನು ಅಡಗಿಸಿದ. 1398ರಲ್ಲಿ ವಿಜಯನಗರದ ಎರಡನೆಯ ಹರಿಹರ ಮತ್ತು ರಾಜಮಹೇಂದ್ರಿಯ ಕಾಟಯ್ಯವೇಮ ಇವರು ಏಕಕಾಲದಲ್ಲಿ ಬಹಮನೀ ರಾಜ್ಯವನ್ನು ಆಕ್ರಮಿಸಿದರು. ಆಗ ಫಿರೋಜ್ ಶತ್ರುಸೈನ್ಯಗಳನ್ನು ಹಿಮ್ಮೆಟ್ಟಿಸಿದ. ಉತ್ತರದಲ್ಲಿ ಖೇರ್ಲದ ನರಸಿಂಗ ದಂಗೆ ಎದ್ದಾಗ ಅವನ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಅವನನ್ನು ಸದೆಬಡಿದ. 1406ರಲ್ಲಿ ಪುನಃ 1ನೆಯ ದೇವರಾಯನ ಕಾಲದಲ್ಲಿ ವಿಜಯನಗರದ ಸೈನ್ಯ ರಾಜ್ಯದ ಮೇಲೆ ದಾಳಿ ಮಾಡಿದಾಗ, ಫಿರೋಜ್ ಶತ್ರುಸೈನ್ಯವನ್ನು ವಿಜಯನಗರದ ರಾಜಧಾನಿಯವರೆಗೂ ಅಟ್ಟಿಸಿಕೊಂಡು ಹೋದ. ಆಗ ನಡೆದ ಸಂಧಾನದ ಅನಂತರ ಫಿರೋಜ್ ದೇವರಾಯನ ಮಗಳನ್ನು ಮದುವೆಯಾದನೆಂದೂ ಬಂಕಾಪುರವನ್ನು ಫಿರೋಜ್‌ನಿಗೆ ಬಳುವಳಿಯಾಗಿ ನೀಡಲಾಯಿತೆಂದೂ ಫೆರಿಸ್ತ ತಿಳಿಸುತ್ತಾನೆ. ಆದರೆ ಇದನ್ನು ಇತರ ಆಧಾರಗಳು ಸಮರ್ಥಿಸುವುದಿಲ್ಲವೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲಗಳೆದಿದ್ದಾರೆ. ಅಂತೂ ದೇವರಾಯ ಬಂಕಾಪುರವನ್ನು ಫಿರೋಜ್‌ನಿಗೆ ಬಿಟ್ಟುಕೊಡಬೇಕಾಯಿತು. 1417ರಲ್ಲಿ ಫಿರೋಜ್ ಒರಿಸ್ಸಾದವರೆಗೂ ದಂಡೆತ್ತಿ ಹೋಗಿ ನಾಲ್ಕನೆಯ ನರಸಿಂಹನನ್ನು ಸೋಲಿಸಿ ಕಪ್ಪ ವಸೂಲಿ ಮಾಡಿದ. ಇವನು ಆಗ ತೆಲಂಗಾಣದ ಮೇಲೆ ನಡೆಸಿದ ದಾಳಿ ಪೂರ್ಣ ಯಶಸ್ವಿಯಾಗಲಿಲ್ಲ. ಈ ಮಧ್ಯೆ ದೇವರಾಯ ಪಾನಗಲ್ಲನ್ನು ಆಕ್ರಮಿಸಿಕೊಂಡ. ಅದನ್ನು ಫಿರೋಜ್ ಬಿಡಿಸಿಕೊಳ್ಳಲು ಎರಡು ವರ್ಷಗಳ ಕಾಲ ಹೋರಾಡಬೇಕಾಯಿತು. ಆಗ ನಡೆದ ಯುದ್ಧಗಳಲ್ಲಿ ಇವನ ರಾಜ್ಯದ ಕೆಲವು ಭಾಗಗಳು ವಿಜಯನಗರಕ್ಕೆ ಸೇರಿದುವು.

ಈತ ಅರಮನೆಯ ಒಳಜಗಳಗಳಿಂದ ಮತ್ತು ವಯೋಮಾನದಿಂದ ತನ್ನ ಕೊನೆಗಾಲದಲ್ಲಿ ಆಡಳಿತವನ್ನು ದಕ್ಷತೆಯಿಂದ ನಿರ್ವಹಿಸಲಾರದವನಾಗಿದ್ದ. ಹೆಚ್ಚಿನ ಆಡಳಿತದ ಹೊಣೆಯನ್ನು ತನ್ನ ಮಗ ಹಸನ್‌ಖಾನನಿಗೆ ವಹಿಸಿದ. ಆದರೆ ಫಿರೋಜ್‌ನ ಸಹೋದರ ಅಹ್ಮದ್ 1422ರ ಸೆಪ್ಟೆಂಬರ್ 2ರಂದು ಫಿರೋಜ್‌ನನ್ನು ಸೈನ್ಯದ ಸಹಾಯದಿಂದ ಪದಚ್ಯುತಗೊಳಿಸಿದ. ಫಿರೋಜ್ ಅದೇ ವರ್ಷ ಅಕ್ಟೋಬರ್ ಎರಡರಂದು ಮೃತನಾದ. ಅಹ್ಮದ್ ಮುಂದೆ ರಾಜಧಾನಿಯನ್ನು ಬಿದರೆಗೆ ಬದಲಾಯಿಸಿದ್ದರಿಂದ ಫಿರೋಜ್‌ನೇ ಗುಲ್ಬರ್ಗದಲ್ಲಿ ಆಳಿದ ಕೊನೆಯ ಬಹಮನೀ ಸುಲ್ತಾನ.

ಈತ ಭೀಮಾನದಿಯ ದಡದ ಮೇಲೆ ಫಿರೋಜಾಬಾದ್ ಎಂಬ ಪಟ್ಟಣವನ್ನು ಕಟ್ಟಿಸಿದ. ಇವನು ಸ್ವತಃ ವಿದ್ವಾಂಸನಾಗಿದ್ದನಲ್ಲದೆ ಇರಾನಿನಿಂದ ಬಂದ ಅನೇಕ ವಿದ್ವಾಂಸರಿಗೆ ಆಶ್ರಯವಿತ್ತಿದ್ದ. ಖಗೋಳ ಶಾಸ್ತ್ರದ ಅಧ್ಯಯನಕ್ಕೆ ಹೆಚ್ಚು ಪ್ರೋತ್ಸಾಹ ನೀಡಿ ದೌಲತಾಬಾದಿನ ಬಳಿ ಒಂದು ವೀಕ್ಷಣಾಲಯವನ್ನು ಕಟ್ಟಿಸಿದ. ಇವನ ಕಾಲದಲ್ಲಿ ಪಶ್ಚಿಮ ತೀರದ ಚೌಲ್ ಮತ್ತು ದಾಬೋಲ್ ಬಂದರುಗಳು ಅಭಿವೃದ್ಧಿಗೊಂಡುವು. ಕೆಂಪು ಸಮುದ್ರ ಮತ್ತು ಪರ್ಷಿಯ ಕೊಲ್ಲಿಯ ದೇಶಗಳೊಂದಿಗೆ ಈ ಬಂದರುಗಳ ಮೂಲಕ ವ್ಯಾಪಾರ ಹೆಚ್ಚಿತು.

ಈತ ಅಧಿಕಾರಕ್ಕೆ ಬಂದಾಗ ಉಪಕಾರಿಯೂ ಸಹನಶೀಲನೂ ಜನಪ್ರಿಯನೂ ಆಗಿದ್ದನೆಂದು ತಿಳಿದುಬರುತ್ತದೆ. ಇವನು ಬಹಮನೀ ರಾಜರಲ್ಲೇ ಶ್ರೇಷ್ಠನೆಂದೂ ಫೆರಿಸ್ತ ತಿಳಿಸುತ್ತಾನೆ. ಆದರೆ ಇತರ ಮೂಲಗಳು ಇವನ ಭೋಗಜೀವನದ ಮೇಲೆ ಬೆಳಕು ಬೀರುತ್ತವೆ. ತನ್ನ ಆಳ್ವಿಕೆಯ ಕಾಲದಲ್ಲಿ ಇವನು ಇರಾನ್ ತುರ್ಕಿ ಮೊದಲಾದೆಡೆಗಳಿಂದ ಬಂದ ಜನರಿಗೆ ಹೆಚ್ಚಿನ ಒಲವು ತೋರಿದರೂ ಸ್ಥಳೀಯ ಜನರಿಗೂ, ಹಿಂದುಗಳಿಗೂ ಸಹ ಉತ್ತಮ ಅಧಿಕಾರ ಸ್ಥಾನಗಳನ್ನಿತ್ತು ರಾಜ್ಯದಲ್ಲಿ ಶಾಂತಿಮೂಡಿಸಲು ಪ್ರಯತ್ನ ಮಾಡಿದ. (ಡಿ.ಎಸ್.ಜಿ.)

**ಫಿರೋಜಾಬಾದ್:** ಗುಲ್ಬರ್ಗ ಜಿಲ್ಲೆ ಗುಲ್ಬರ್ಗ ತಾಲ್ಲೂಕಿನಲ್ಲಿ, ಗುಲ್ಬರ್ಗ–ಜೇವರಗಿ ರಸ್ತೆಯಲ್ಲಿ, ಗುಲ್ಬರ್ಗಕ್ಕೆ 34 ಕಿಮೀ ದೂರದ ಭೀಮಾನದಿಯ ದಂಡೆಯಲ್ಲಿರುವ ಗ್ರಾಮ. ಜನಸಂಖ್ಯೆ 4,265. ಇಲ್ಲಿ ಒಂದು ಹಳೆಯ ಕೋಟೆಯಿದೆ. ಬಹಮನೀ ರಾಜ್ಯದ ಸುಲ್ತಾನ ಫಿರೋಜ್ (1397–1422) ಗುಲ್ಬರ್ಗದಿಂದ ರಾಜಧಾನಿಯನ್ನು ವರ್ಗಾಯಿಸ ಬೇಕೆಂದು ಆಸ್ಥಾನಿಕರು ಮಾಡಿದ ಸಲಹೆಯಂತೆ ಇಲ್ಲಿ ನಗರ ಹಾಗೂ ಕೋಟೆಯನ್ನು ನಿರ್ಮಿಸಿದ. ಕೋಟೆಯೊಳಗೆ ಪಾಳುಬಿದ್ದ ದೊಡ್ಡ ಅರಮನೆ, ಒಂದು ಜಾಮಿ ಮಸೀದಿ, ತುರ್ಕೀ ಸ್ನಾನದ ಮನೆಗಳು, ಅಡುಗೆಯ ಕೋಣೆಗಳು ಮತ್ತು ಅಪೂರ್ಣವಾದ ಕಟ್ಟಡಗಳ ಅವಶೇಷಗಳು ಇವೆ. ಈ ಗ್ರಾಮದ ಸಮೀಪದಲ್ಲಿ ಖಲೀಫತ್ತುರ್ ರೆಹಮಾನ್ ಎಂಬ ಸಂತನ ಸಮಾಧಿ ಇದೆ.

ಭೀಮಾ ನದಿಯ ದಂಡೆಯ ಬಳಸಿನಲ್ಲಿ ನಿರ್ಮಿತವಾಗಿರುವ ಈ ಪ್ರಾಚೀನ ನಗರದ ದೃಶ್ಯ ಮೋಹಕವಾದದ್ದು. ಭಾರತೀಯ–ಇಸ್ಲಾಮೀ ಕಲೆಯ ಪ್ರಾರಂಭಿಕ ಸ್ಥಿತಿಯನ್ನು ಇಲ್ಲಿ ಕಾಣಬಹುದು. ಶಿಥಿಲಾವಸ್ಥೆಯಲ್ಲಿರುವ ತುರ್ಕೀ ಸ್ನಾನದ ಮನೆಗಳು, ಅರಮನೆಯ ಚಾವಣಿಯ ಅಂಚಿನ ಚಿತ್ತಾರದ ಕಲಾತ್ಮಕ ರಚನೆ, ಹೊರಗಣ ಆವರಣದ ಗೋಡೆ ಮತ್ತು ಇತರ ವಾಸ್ತುಶಿಲ್ಪ ವಿವರಗಳಿಂದ ಕೂಡಿದ ಅರಮನೆಯ ಮಸೀದಿ– ಇವೆಲ್ಲ ಕಲೆ ಮತ್ತು ಸಂಸ್ಕೃತಿಗೆ ಫಿರೋಜ್ ನೀಡಿದ ಪ್ರೋತ್ಸಾಹವನ್ನು ವ್ಯಕ್ತಪಡಿಸುತ್ತವೆ. ಫಿರೋಜ್‌ನ ಆಳ್ವಿಕೆಯಲ್ಲಿ ನವಶಿಲ್ಪ ಶೈಲಿಯೊಂದು ಪ್ರಾರಂಭವಾಯಿತು. ಇದರ ವಿಕಾಸದಲ್ಲಿ ಹಿಂದು ಶಿಲ್ಪಿಗಳ ನೆರವನ್ನು ಪಡೆದುಕೊಳ್ಳಲಾಯಿತು. ಅವರು ಇಲ್ಲಿನ ಬೃಹದಾಕಾರದ ಸಮಾಧಿಭವನಗಳನ್ನು ಮತ್ತು ಅರಮನೆಗಳನ್ನು ತಮ್ಮ ಶಿಲ್ಪಚಮತ್ಕಾರದಿಂದ ಅಲಂಕರಿಸುವಲ್ಲಿಯೂ ವಿದೇಶಿ ಶಿಲ್ಪದ ಕಟ್ಟಡದ ಕಮಾನುಗಳನ್ನು ಹಾಗೂ ಗುಮ್ಮಟಗಳನ್ನು ನಿರ್ಮಿಸುವುದರಲ್ಲಿಯೂ ತಮ್ಮ ಕೌಶಲವನ್ನು ಪ್ರಕಟಿಸಿದ್ದಾರೆ. (ಎಂ.ಎಚ್.ಎ.)

**ಫ್ಲೀಟ್, ಜೆ. ಎಫ್.:** 1847–1917. ಭರತಖಂಡಕ್ಕೂ ಕನ್ನಡನಾಡಿಗೂ ವಿಶೇಷವಾದ ಸೇವೆ ಸಲ್ಲಿಸಿದ ಪಾಶ್ಚಾತ್ಯ ವಿದ್ವಾಂಸರಲ್ಲೊಬ್ಬರು. ಜಾನ್ ಫೆಯ್ತ್‌ಫುಲ್ ಫ್ಲೀಟ್ ಇವರ ಪೂರ್ಣ ಹೆಸರು. ಇಂಗ್ಲೆಂಡಿನ ಚಿಸ್ವಿಕ್‌ನಲ್ಲಿ ಜನಿಸಿದರು. ಜಾನ್ ಜಾರ್ಜ್ ಫ್ಲೀಟ್ ಮತ್ತು ಎಸ್ತರ್ ಫೆಯ್ತ್‌ಫುಲ್ ಇವರ ತಂದೆ ತಾಯಿಗಳು. ವಿದ್ಯಾಭ್ಯಾಸ ಲಂಡನ್ ವಿಶ್ವವಿದ್ಯಾನಿಲಯದಲ್ಲಿ. ಐಚ್ಛಿಕ ಭಾಷೆಯಾಗಿ ಸಂಸ್ಕೃತವನ್ನು ಅಭ್ಯಾಸಮಾಡಿದರು. 1865ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸಿಗೆ ನೇಮಕಗೊಂಡು ಮುಂಬಯಿ ಸರ್ಕಾರದ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಯನ್ನು ನಿರ್ವಹಿಸಲು ಮೊಟ್ಟಮೊದಲು 1867ರಲ್ಲಿ ಭಾರತಕ್ಕೆ ಬಂದರು. ಕೊಲ್ಲಾಪುರ, ಸೊಲ್ಲಾಪುರ, ಬೆಳಗಾಂವಿ ಮುಂತಾದ ಸ್ಥಳಗಳಲ್ಲಿ ಕೆಲಸಮಾಡಿದರು. ಅಸಿಸ್ಟೆಂಟ್ ಕಲೆಕ್ಟರ್, ವಿದ್ಯಾಧಿಕಾರಿ, ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟ್, ಶಾಸನಶಾಸ್ತ್ರಜ್ಞ, ಜೂನಿಯರ್ ಕಲೆಕ್ಟರ್, ಸೀನಿಯರ್ ಕಲೆಕ್ಟರ್, ಕಸ್ಟಮ್ಸ್ ಕಮಿಷನರ್ ಮುಂತಾದ ಹುದ್ದೆಗಳನ್ನು ನಿರ್ವಹಿಸಿ 1897ರಲ್ಲಿ ನಿವೃತ್ತರಾದರು.

ಫ್ಲೀಟರು ಸಮರ್ಥ ಆಡಳಿತಾಧಿಕಾರಿಯಾಗಿದ್ದಂತೆಯೇ ಶ್ರೇಷ್ಠ ಸಂಶೋಧಕರೂ ಆಗಿದ್ದರು. ತಮ್ಮ ಅಧಿಕೃತ ಕರ್ತವ್ಯಗಳೊಡನೆ ವೈಯಕ್ತಿಕ ಅಧ್ಯಯನಗಳನ್ನೂ ನಿರ್ವಹಿಸುತ್ತಿದ್ದರು. ಭಾರತಕ್ಕೆ ಬಂದೊಡನೆಯೆ ಇವರು ಮುಂಬಯಿ ಪ್ರಾಂತ್ಯದ ಶಾಸನಗಳ ಸಂಶೋಧನೆಗೆ ತೊಡಗಿದರು. ಮೊದಮೊದಲು ಇವರ ಲೇಖನಗಳು ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆಯ ಪತ್ರಿಕೆಯಲ್ಲಿ ಪ್ರಕಟವಾದುವು. 1872ರಲ್ಲಿ ಇಂಡಿಯನ್ ಆಂಟಿಕ್ವೆರಿ ಪತ್ರಿಕೆ ಪ್ರಾರಂಭವಾದಾಗ ಫ್ಲೀಟ್ ಅದರಲ್ಲಿ ಬರೆಯತೊಡಗಿದರು; ಏಳು ವರ್ಷಗಳ ಕಾಲ (1885–91) ಇವರು ಇದರ ಸಂಪಾದಕರಾಗಿದ್ದರು.

ಶಾಸನಕ್ಷೇತ್ರದಲ್ಲಿ ಫ್ಲೀಟ್ ಹೆಸರು ದೊಡ್ಡದು; ಭಾರತೀಯ ಶಾಸನಶಾಸ್ತ್ರ ಪಿತಾಮಹ ಎಂದು ಇವರನ್ನು ಕರೆಯಬಹುದು. ಶಾಸನ ಶಾಸ್ತ್ರವಲ್ಲದೆ ಭೂಗೋಳ, ಖಗೋಳ, ಇತಿಹಾಸ, ಭಾಷಾ ಶಾಸ್ತ್ರ, ಲಿಪಿಶಾಸ್ತ್ರ ಮುಂತಾದವುಗಳಲ್ಲಿ ಇವರು ಪರಿಣತರಾಗಿದ್ದರು. ಸಂಸ್ಕೃತ, ಕನ್ನಡ ಸಾಹಿತ್ಯಗಳಲ್ಲಿ ಇವರಿಗೆ ಆಳವಾದ ಪರಿಶ್ರಮವಿತ್ತು.

ಫ್ಲೀಟ್‌ರ 'ಪಾಳಿ, ಸಂಸ್ಕೃತ ಮತ್ತು ಹಳಗನ್ನಡ ಶಾಸನಗಳು' ಎಂಬ ಕೃತಿ 1878ರಲ್ಲಿ ಪ್ರಕಟವಾಯಿತು. ಗುಪ್ತಯುಗದ ಪ್ರಾರಂಭವನ್ನು ನಿರ್ಣಯಿಸುವ ಮತ್ತು ಗುಪ್ತರ ಕಾಲದ ಅಧ್ಯಯನದ ಬಗ್ಗೆ ಬಹು ಉಪಯುಕ್ತವಾದ ಪ್ರಾಚೀನ ಗುಪ್ತರಾಜರು ಮತ್ತು ಅವರ ಉತ್ತರಾಧಿಕಾರಿಗಳ ಶಾಸನಗಳು ಎಂಬ ಮಹತ್ತ್ವದ ಕೃತಿ 1888ರಲ್ಲಿ ಹೊರಬಂತು. ಮುಂಬಯಿ ಪ್ರಾಂತ್ಯದ ಕನ್ನಡ ಜಿಲ್ಲೆಗಳ ರಾಜವಂಶಗಳು ಎಂಬ ಮತ್ತೊಂದು ಅಮೂಲ್ಯಗ್ರಂಥ 1895ರಲ್ಲಿ ಪ್ರಕಟವಾಯಿತು. ಫ್ಲೀಟ್ ನಿವೃತ್ತರಾಗಿ ಇಂಗ್ಲೆಂಡಿಗೆ ಮರಳಿದ ಮೇಲೂ ತಮ್ಮ ಅಧ್ಯಯನವನ್ನು ಮುಂದುವರಿಸಿ ಎಪಿಗ್ರಾಫಿಯ ಇಂಡಿಕ, ಇಂಪೀರಿಯಲ್ ಗೆಜೆಟಿಯರ್ ಮುಂತಾದ ಸಂಪುಟಗಳಿಗೆ ನಿಯತವಾಗಿ ಬರೆಯುತ್ತಿದ್ದರು. ಇಂಪೀರಿಯಲ್ ಗೆಜೆಟಿಯರ್‌ನ 2ನೆಯ ಸಂಪುಟದಲ್ಲಿ ಪ್ರಕಟಗೊಂಡಿರುವ ಶಾಸನಶಾಸ್ತ್ರ ಎಂಬ ಇವರ ದೀರ್ಘ ಲೇಖನ ಇಂದಿಗೂ ಪ್ರಮಾಣಭೂತವಾಗಿದೆ.

ಫ್ಲೀಟ್‌ರ ಕಾರ್ಯ ಅಖಿಲಭಾರತ ವ್ಯಾಪ್ತಿಯದಾದರೂ ಕರ್ನಾಟಕದೊಡನೆ ಅವರಿಗಿದ್ದ ಸಂಬಂಧ ಬಹು ನಿಕಟವೂ ಆತ್ಮೀಯವೂ ಆದುದಾಗಿತ್ತು. 1872ರಲ್ಲಿ ಇವರು ಮುಂಬಯಿ ಪ್ರಾಂತ್ಯದ ದಕ್ಷಿಣ ವಿಭಾಗದ ವಿದ್ಯಾಧಿಕಾರಿಯಾದ ಮೇಲೆ ಕನ್ನಡ ಭಾಷೆ ಸಾಹಿತ್ಯಗಳನ್ನು ಅಭ್ಯಸಿಸಿ ನೂರಾರು ಕನ್ನಡ ಶಾಸನಗಳನ್ನು ಟೀಕೆ ಟಿಪ್ಪಣಿಗಳೊಡನೆ ಪ್ರಕಟಿಸಿದರು. ಈ ರಂಗದಲ್ಲಿ ಇವರು ರೈಸರಂತೆ ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಹಳೆಯ ಮೈಸೂರು ರೈಸರ ಕಾರ್ಯಕ್ಷೇತ್ರವಾದರೆ ಫ್ಲೀಟರದು ಉತ್ತರ ಕರ್ನಾಟಕ.

ಹಲವು ಕನ್ನಡ ಲಾವಣಿಗಳನ್ನು ಸಂಗ್ರಹಿಸಿ, ಇಂಗ್ಲಿಷ್ ಅನುವಾದ ಸಹಿತ ಪ್ರಕಟಿಸಿ ಕನ್ನಡ ಜನಪದ ಸಾಹಿತ್ಯ ಸಂಗ್ರಹಕ್ಕೆ ಆದ್ಯರಾದ ಕೀರ್ತಿಯೂ ಫ್ಲೀಟರಿಗೆ ಸಲ್ಲಬೇಕು. ಕವಿರಾಜಮಾರ್ಗದ ಕರ್ತೃತ್ವದ ಬಗ್ಗೆಯೂ ಇವರು ವಿಚಾರ ಮಾಡಿದ್ದಾರೆ. ಕನ್ನಡ ಭಾಷೆ ಸಾಹಿತ್ಯಗಳ ಬಗ್ಗೆ ಇವರಿಗೆ ಬಹಳ ಅಭಿಮಾನವಿತ್ತು. (ಸಿ.ಪಿ.ಕೆ.;ಕೆ.ಆರ್.)

# ಬ

**ಬಂಕಾಪುರ:** ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲ್ಲೂಕಿನಲ್ಲಿ ಹಾವೇರಿಗೆ ವಾಯವ್ಯದಲ್ಲಿರುವ ಒಂದು ಊರು. ಹುಬ್ಬಳ್ಳಿಯ ಆಗ್ನೇಯಕ್ಕೆ ಸು. 32ಕಿಮೀ ದೂರದಲ್ಲಿದೆ. ಜನಸಂಖ್ಯೆ 20,324. 1951ರ ವರೆವಿಗೂ ಈ ಊರು ಇದೇ ಹೆಸರಿನ ತಾಲ್ಲೂಕಿನ ಮುಖ್ಯಕೇಂದ್ರವಾಗಿತ್ತು.

ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಮಾಂಡಲಿಕನಾದ ಬಂಕೆಯರಸನ ಹೆಸರಿನ ಮೇಲೆ ಈ ಊರಿಗೆ ಬಂಕೆಯಪುರ ಅಥವಾ ಬಂಕಾಪುರವೆಂದು ಹೆಸರು ಬಂದಿತೆಂದು ಗುಣಭದ್ರಾಚಾರ್ಯರ ಉತ್ತರಪುರಾಣದಿಂದ ತಿಳಿದುಬರುತ್ತದೆ. ಕನ್ನಡನಾಡಿನಿಂದ ಪಶ್ಚಿಮ ಕರಾವಳಿ ಪ್ರಾಂತ್ಯಗಳಿಗೆ ಹೋಗುವ ಹೆದ್ದಾರಿಯ ಆಯಕಟ್ಟಿನ ಪ್ರದೇಶದಲ್ಲಿರುವ ಬಂಕಾಪುರ ಕರ್ನಾಟಕದ ಇತಿಹಾಸ ಮತ್ತು ರಾಜಕೀಯಗಳಲ್ಲಿ ಬಹು ಪ್ರಮುಖಪಾತ್ರ ವಹಿಸಿದ್ದಂತೆ ಕಂಡುಬರುತ್ತದೆ. ಈ ಸ್ಥಳದ ಪ್ರಾಮುಖ್ಯವನ್ನರಿತು ಕನ್ನಡ ನಾಡಿನ ರಾಜಮನೆತನಗಳು ಇದನ್ನು ತಮ್ಮ ಸಾಮ್ರಾಜ್ಯದ ಒಂದು ಪ್ರಾಂತ್ಯವನ್ನಾಗಿ ಮಾಡಿ ಇಲ್ಲಿ ದಕ್ಷನಾದ ಪ್ರಾಂತ್ಯಾಧಿಕಾರಿಯೊಬ್ಬನನ್ನು ನಿಯಮಿಸುತ್ತಿದ್ದುವು. ಹನ್ನೊಂದನೆಯ ಶತಮಾನದಲ್ಲಿ ಈ ಊರು ಹಾನಗಲ್ಲಿನ ಕದಂಬರ ಸಾಮಂತ ಅರಿಕೇಸರಿಯ ಆಡಳಿತಕ್ಕೆ ಒಳಪಟ್ಟಿದ್ದಂತೆ ಅಲ್ಲಿಯ ಶಾಸನವೊಂದರಿಂದ ತಿಳಿದುಬರುತ್ತದೆ. 1140ರಲ್ಲಿ ಹೊಯ್ಸಳ ವಿಷ್ಣುವರ್ಧನ ಬಂಕಾಪುರವನ್ನು ಸ್ವಾಧೀನಪಡಿಸಿಕೊಂಡು ಅದನ್ನು ತನ್ನ ಸಾಮ್ರಾಜ್ಯದ ಉತ್ತರದ ರಾಜಧಾನಿಯನ್ನಾಗಿ ಮಾಡಿಕೊಂಡ. ಮಧ್ಯಯುಗದಲ್ಲಿ ವಿಜಯನಗರದ ಅರಸರಿಗೂ ಬಹುಮನೀ ಸುಲ್ತಾನರಿಗೂ ಬಂಕಾಪುರದ ಮೇಲಿನ ಒಡೆತನಕ್ಕಾಗಿ ಯುದ್ಧಗಳು ನಡೆಯುತ್ತಲೇ ಇದ್ದುವು. 16ನೆಯ ಶತಮಾನದಲ್ಲಿ ಬಿಜಾಪುರದ ದಳಪತಿ ಮುಸ್ತಾಫ್‌ಖಾನ್ ಇದನ್ನು ಆಕ್ರಮಿಸಿಕೊಂಡ. 1637ರಲ್ಲಿ ಬಿಜಾಪುರದ ಸುಲ್ತಾನ ಸವಣೂರು ನವಾಬನನ್ನು ಬಂಕಾಪುರದ ಪ್ರಾಂತ್ಯಾಧೀಶನನ್ನಾಗಿ ನಿಯಮಿಸಿದ. ಈ ನವಾಬನಿಂದ ಈ ಊರು ಮರಾಠರ ವಶವಾಗಿ 1802ರಲ್ಲಿ ಬಸ್ಸೇನ್ ಒಪ್ಪಂದದ ಪ್ರಕಾರ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು.

ಬಂಕಾಪುರ ಹಿಂದೆ ನಾಡಿನ ಒಂದು ಮುಖ್ಯ ಸಾಂಸ್ಕೃತಿಕ ಕೇಂದ್ರವೂ ಆಗಿತ್ತು. ಪೂರ್ವಪುರಾಣ ಹಾಗೂ ಉತ್ತರಪುರಾಣಗಳನ್ನು ಬರೆದ ಜಿನಸೇನಾಚಾರ್ಯರೂ ಗುಣಭದ್ರಾಚಾರ್ಯರೂ ಈ ಊರಿನ ಸ್ಥಾಪಕ ಬಂಕೆಯರಸನ ಹಾಗೂ ಅವನ ಮಗನ ಗುರುಗಳಾಗಿದ್ದರು. ಜೈನಮತಕ್ಕೆ ಈ ರಾಜರಿಂದ ಹೆಚ್ಚಿನ ಮನ್ನಣೆ ದೊರೆತಿತ್ತು. ಇದೊಂದು ಜೈನವಿದ್ಯಾ ಪೀಠವಾಗಿತ್ತು. ಇಲ್ಲಿ ಹಲವು ಶಿವದೇವಾಲಯಗಳೂ ಇದ್ದುವು. ಅವು ಪಾಶುಪತ ಪಂಥದವರ ಅಧೀನದಲ್ಲಿದ್ದುವು.

ಬಂಕಾಪುರದಲ್ಲಿ ಈಗ ಹಾಳುಬಿದ್ದಿರುವ ಒಂದು ಪ್ರಾಚೀನ ಕೋಟೆಯೂ ಸಿದ್ಧೇಶ್ವರ ಮತ್ತು ರಂಗಸ್ವಾಮಿ ನಗರೇಶ್ವರ ಎಂಬ ಎರಡು ದೇವಾಲಯಗಳೂ ಇವೆ. ಕೋಟೆ ಮೂಲತಃ ವಿಜಯನಗರ ಕಾಲದ್ದು. ಬಿಜಾಪುರದ ಸುಲ್ತಾನರ ಕಾಲದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. 14ನೆಯ ಶತಮಾನದಲ್ಲಿ ಮೂರನೆಯ ಬಹಮನೀ ಅರಸ ಮುಜಾಹಿದ್ ಆ ಕೋಟೆಯನ್ನು ಕೊಡಲು ವಿಜಯನಗರದ ಅಂದಿನ ಅರಸ ಬುಕ್ಕನನ್ನು ಕೇಳಲು ಅವನು ನಿರಾಕರಿಸಿದ. 1406ರಲ್ಲಿ 8ನೆಯ ಬಹಮನೀ ಅರಸ ಫಿರೋಜ್ ಷಾ ತನ್ನ ಸೈನ್ಯವನ್ನು ಕಳುಹಿಸಿ ಆಕ್ರಮಣ ನಡೆಸಿ ಕೋಟೆಯನ್ನು ವಶಪಡಿಸಿಕೊಂಡ. ಈ ಕೋಟೆ ಮುಂದೆ ಬಹುಕಾಲ ಬಹಮನೀ ಅರಸರ ವಶದಲ್ಲಿತ್ತು. ಅನಂತರ ಆಗಾಗ ವಿಜಯನಗರ ಮತ್ತು ಬಿಜಾಪುರ ಸುಲ್ತಾನರಲ್ಲಿ ಕೈ ಬದಲಾಯಿಸುತ್ತಿತ್ತು.

ರಂಗಸ್ವಾಮಿ ನಗರೇಶ್ವರ ದೇವಾಲಯಕ್ಕೆ ಅರವತ್ತು ಕಂಬದ ಗುಡಿ ಎಂದೂ ಹೆಸರಿದೆ. ಇದು ಕೋಟೆಯ ಪಶ್ಚಿಮ ದಿಕ್ಕಿನಲ್ಲಿದೆ. ಕೋಟೆಯನ್ನು ಕಟ್ಟುವ ಕಾಲದಲ್ಲಿ ದೇವಸ್ಥಾನದ ಸ್ವಲ್ಪಭಾಗ ಕೋಟೆಗೋಡೆಯಲ್ಲಿ ಹುದುಗಿಹೋಯಿತು. ಬಿಜಾಪುರದ ಸುಲ್ತಾನನ ಠಾಣ್ಯವಿದ್ದಾಗ ಈ ದೇವಾಲಯದ 60 ಕಂಬದ ಮಂಟಪವನ್ನು ಮಸೀದಿಯಾಗಿ ಮಾಡಲಾಗಿತ್ತು. ಇದಕ್ಕಾಗಿ ಮಾಡಲಾದ ಹಲವು ಬದಲಾವಣೆಗಳನ್ನು ಈಗಲೂ ಗುರುತಿಸಬಹುದು. ದೇವಾಲಯ ಕಲ್ಯಾಣದ ಚಾಳುಕ್ಯರ ಕಾಲದ ನಿರ್ಮಾಣ. ವಿನ್ಯಾಸದಲ್ಲಿ ಹಾನಗಲ್ಲಿನ ತಾರಕೇಶ್ವರ ದೇವಾಲಯವನ್ನು ಹೋಲುತ್ತದೆ. ದೇವಾಲಯದಲ್ಲಿರುವ ವಿಗ್ರಹಗಳು ಭಗ್ನ ಸ್ಥಿತಿಯಲ್ಲಿವೆ. ಸಿದ್ಧೇಶ್ವರ ದೇವಾಲಯ ನಗರೇಶ್ವರ ದೇವಾಲಯಕ್ಕಿಂತ ಚಿಕ್ಕದಾಗಿದ್ದು, ಇತ್ತೀಚಿನದಾಗಿದೆ. ಈ ದೇವಾಲಯ ಕಪ್ಪುಕಲ್ಲಿನಿಂದ ಕಟ್ಟಿದ್ದು ಪೂರ್ವದಿಕ್ಕಿನಲ್ಲಿ ಮೂರು ದ್ವಾರಗಳಿವೆ. ದೇವಾಲಯದ ಗೋಡೆಗಳ ಮೇಲೆ ಸುಂದರವಾದ ಕೆತ್ತನೆಯ ಕೆಲಸವಿದೆ. ಈ ದೇವಾಲಯವೂ ಬಹಳಮಟ್ಟಿಗೆ ರೂಪಾಂತರಗೊಂಡಿದೆ. ಬಂಕಾಪುರದಲ್ಲಿ ಅನೇಕ ಶಾಸನಗಳು ದೊರೆತಿವೆ. ಅವುಗಳಲ್ಲಿ ಹೆಚ್ಚಿನವು ಕಲ್ಯಾಣದ ಚಾಳುಕ್ಯರ ಕಾಲದವು. (ಎ.ಎಸ್.ಎನ್.)

**ಬಂಕಾಪುರ, ಪ.ಲೋ.**: 1918–. ಸ್ವಾತಂತ್ರ್ಯ ಹೋರಾಟಗಾರರಾಗಿ ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದ ಲೇಖಕ, ಪತ್ರಕರ್ತ. ಇವರ ಪೂರ್ಣ ಹೆಸರು ಪರ್ವತಪ್ಪ ಲೋಕಪ್ಪ ಬಂಕಾಪುರ. ನೇಕಾರ ಕುಟುಂಬದಲ್ಲಿ 1918 ಅಕ್ಟೋಬರ್ 13ರಂದು ಗದಗ–ಬೆಟಗೇರಿಯಲ್ಲಿ ಜನಿಸಿದರು. ತಾಯಿ ಕೇಮವ್ವ. ಇವರ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ಗದಗಿನ ಪುರಸಭಾ ಪ್ರೌಢಶಾಲೆಯಲ್ಲಿ ನಡೆಯಿತು. ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್‌ವರೆಗೆ ಇವರು ವ್ಯಾಸಂಗ ಮಾಡಿದರು. ಮುಂದೆ ಓದುವ ಮನಸ್ಸಿದ್ದರೂ ಮನೆಯ ಪ್ರತಿಕೂಲ ಆರ್ಥಿಕ ಸ್ಥಿತಿಯಿಂದಾಗಿ ಅಷ್ಟಕ್ಕೇ ಅದು ನಿಂತಿತು. ಇವರು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಚಳವಳಿಯಲ್ಲಿ ದುಮುಕಿ ಪಿಕೆಟಿಂಗ್‌ನಲ್ಲಿ ಭಾಗವಹಿಸಿದರು. ಗಾಂಧಿ–ನೆಹರೂ ಪ್ರಭಾವಕ್ಕೆ ಒಳಗಾದ ಇವರು 1931ರಲ್ಲಿ ನೆಹರೂ ಅವರನ್ನು ಕಾಣಲು ಹುಬ್ಬಳ್ಳಿಗೆ ಹೋಗಿದ್ದರು.

ಇವರು 1936ರಿಂದ ಸಾಹಿತ್ಯರಚನೆಯಲ್ಲಿ ತೊಡಗಿದರು. ಇವರ ಕಥೆ–ಕವನಗಳು ಕರ್ನಾಟಕ ಬಂಧು, ಉಷಾ, ಕರ್ಮವೀರ, ಸ್ವತಂತ್ರ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾದವು (1936–47). 'ಕರ್ನಾಟಕ ಬಂಧು' ಪತ್ರಿಕೆಯಲ್ಲಿ ಇವರ 'ಬೇವು ಬೆಲ್ಲ' ಅಂಕಣ ಬರೆಹ ಪ್ರಕಟವಾಗುತ್ತಿತ್ತು (1941–46).

ಗದಗ ಬೆಟಗೇರಿಯಲ್ಲಿ ಬನಶಂಕರಿ ವಾಚನಾಲಯ ಆರಂಭಿಸಿ ಅದರ ಕಾರ್ಯದರ್ಶಿಯಾಗಿಯೂ (1937–40), 'ಗೆಳೆಯರ ಬಳಗ' ಕಟ್ಟಿ ಅದರ ಅಧ್ಯಕ್ಷರಾಗಿಯೂ (1940–48) ಕಾರ್ಯನಿರ್ವಹಿಸಿದರು. ಆ ಕಾಲದ ಪ್ರಸಿದ್ಧ ಸಾಹಿತಿ ವಿದ್ವಾಂಸರನ್ನು ಗದಗಿಗೆ ಕರೆಯಿಸಿ ಉಪನ್ಯಾಸ ಏರ್ಪಡಿಸುತ್ತಿದ್ದರು. ತರುಣ ಬರೆಹಗಾರರನ್ನು ಪ್ರೋತ್ಸಾಹಿಸಲು ಕೈ ಬರೆಹ, ನಿಯತ ಕಾಲಿಕೆಗಳನ್ನೂ ಹೊರಡಿಸುತ್ತಿದ್ದರು. 1947ರ ಏಪ್ರಿಲ್‌ನಲ್ಲಿ ಇವರು 'ಗರ್ಜನೆ' ಎಂಬ ರಾಷ್ಟ್ರೀಯ ಮಾಸಿಕದ ಸಂಪಾದಕ ಪ್ರಕಾಶಕರಾಗಿ

ಕೆಲಕಾಲ ಸೇವೆಸಲ್ಲಿಸಿದರು. ಈ ಮಾಸಿಕ ಹಲವಾರು ತರುಣ ಲೇಖಕರನ್ನು ಬೆಳಕಿಗೆ ತಂದಿತು. ಅದೇ ವರ್ಷ ಹುಬ್ಬಳ್ಳಿಯ 'ವಿಶಾಲಕರ್ನಾಟಕ' ದಿನಪತ್ರಿಕೆಯ ಸುದ್ದಿ ಸಂಪಾದಕರಾಗಿ ಸೇರಿಕೊಂಡು ಮೂರುವರ್ಷ ಕೆಲಸ ಮಾಡಿದರು. ಕರ್ನಾಟಕ ಏಕೀಕರಣದಲ್ಲಿ ಈ ಪತ್ರಿಕೆ ಮಹತ್ತ್ವದ ಪಾತ್ರ ವಹಿಸಿತು. ಮುಂದೆ ಇವರು ಪ್ರಕಟಿಸಿದ ಪತ್ರಿಕೆಗಳು ಇವು: ಗದಗಿನಿಂದ ಸಿಡಿಲು ಎಂಬ ರಾಷ್ಟ್ರೀಯ ಮಾಸಪತ್ರಿಕೆ (1950), ರಂಜನೆ ವಾರಪತ್ರಿಕೆ (1951), ಗದಗ–ಮುಂಬಯಿಯಿಂದ ಚಿತ್ರಾ ಸಿನಿಮಾ ಮಾಸಿಕ (1952), ವಿಶಾಲ ಕರ್ನಾಟಕ ಸಹಾಯಕ ಸಂಪಾದಕರಾಗಿ ಎರಡು ವರ್ಷ (1953–54), 'ಪ್ರಪಂಚ' ವಾರಪತ್ರಿಕೆಯ ಸಹ ಸಂಪಾದಕರಾಗಿ ಕೆಲವು ತಿಂಗಳು (1954), ಹುಬ್ಬಳ್ಳಿಯ ನವಯುಗ ದಿನಪತ್ರಿಕೆ (1956–57) ಮತ್ತು ವಿಶಾಲ ಕರ್ನಾಟಕ ವಾರಪತ್ರಿಕೆಯ ಸಂಪಾದಕ ವರ್ಗದಲ್ಲಿಯೂ ಕೆಲಸ ಮಾಡಿದರು. ಇಷ್ಟೆಲ್ಲಾ ಪತ್ರಿಕೆಗಳಿಗೆ ಸಂಪಾದಕ ಪ್ರಕಾಶಕರಾಗಿ ನಿಷ್ಠರಾಗಿ ದುಡಿದರು.

ಕೆ.ಎಚ್. ಪಾಟೀಲರು ವಿಶಾಲ ಕರ್ನಾಟಕ ಪತ್ರಿಕೆಯ ಸ್ವಾಮ್ಯವನ್ನು ಪಡೆದುಕೊಂಡ ಮೇಲೆ ಇವರು ಅದರ ಸಹ ಸಂಪಾದಕರಾಗಿ ಸೇರಿ (1964–72) ಪತ್ರಿಕೆಗೊಂದು ಹೊಸದಾರಿ ರೂಪಿಸಿದರು. 1917ರಲ್ಲಿ ಇವರು ಮತ್ತೆ ನಟರಾಜ ಎಂಬ ಚಲನಚಿತ್ರ ಮಾಸಪತ್ರಿಕೆ ಆರಂಭಿಸಿದರು. ಪ್ರಜಾಪ್ರಭುತ್ವ ಪತ್ರಿಕೆಯಲ್ಲಿ ವಿಶೇಷ ಪ್ರತಿನಿಧಿಯಾಗಿ ಮಸಿಗುಂಡು ಎಂಬ ಅಂಕಣ ಬರೆಯುತ್ತಿದ್ದರು. ಅದೇ ಪತ್ರಿಕೆಯಲ್ಲಿ 'ಅಪ್ಪ ಅರಿಯ' ಎಂಬ ಅಂಕಣವನ್ನು ಬರೆದರು.

ಇವರು ಪತ್ರಿಕಾಧರ್ಮವನ್ನು ಬಿಟ್ಟು ಎಂದೂ ಬರೆಯಲಿಲ್ಲ. ಸತ್ಯನಿಷ್ಠೆ, ಪ್ರಾಮಾಣಿಕತೆಗಳನ್ನು ಪತ್ರಿಕೋದ್ಯಮದಲ್ಲಿ ಮೌಲ್ಯವಾಗಿ ಪ್ರತಿಷ್ಠಾಪಿಸಿದರು. ರಾಜಕಾರಣಿಗಳನ್ನು ಮಠಾಧೀಶರನ್ನು ಟೀಕಿಸುವಲ್ಲಿ ಎಂದೂ ಹಿಂಜರಿಯಲಿಲ್ಲ. ಇವರು ಚಲನಚಿತ್ರ, ನಾಟಕ, ರಂಗಭೂಮಿ, ರಾಜಕಾರಣ, ಧರ್ಮ, ಸಾಹಿತ್ಯ, ವಿಮರ್ಶೆ, ವಿಚಾರಸಾಹಿತ್ಯ –ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಲೇಖನ ಬರೆದಿದ್ದಾರೆ. ಇವರು ಬರೆದ ಮಸಿಗುಂಡು, ಮಸಿಬಿಸಿ, ಬೇವುಬೆಲ್ಲ, ನನ್ನ ಎದೆಭಾರ ಎಂಬ ಅಂಕಣಗಳು ಜನಪ್ರಿಯವಾಗಿದ್ದವು.

ಇವರು ಬರೆದಿರುವ ಎರಡು ಕಾದಂಬರಿಗಳು ಸಣ್ಣಪ್ಪ ಸತ್ತಾಗ ಮತ್ತು ನಗ್ನನೃತ್ಯ. 1975ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ವ್ಯಾಪ್ತಿಯಲ್ಲಿ ನೇಮಿತವಾದ ನೇಕಾರರ ಸ್ಥಿತಿಗತಿಗಳ ಪರಿಶೀಲನಾ ಸಮಿತಿಯ ಅಧ್ಯಕ್ಷರು, 1978ರಲ್ಲಿ ಅಖಿಲಕರ್ನಾಟಕ ನೇಕಾರರ ಸಂಘಟನೆಯ ಸಮಿತಿಯ ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರೂ (1980–83), ಶ್ರೀ ಶಕ್ತಿ ಫಿಲ್ಮ್ ಸಹಕಾರ ಸಂಘದ (ಹುಬ್ಬಳ್ಳಿ) ಮತ್ತು ಪತ್ರಕರ್ತರು ಹಾಗೂ ಗೃಹನಿರ್ಮಾಣ ಸಹಕಾರಿ ಸಂಘಗಳ ಅಧ್ಯಕ್ಷರೂ (1978) ಆಗಿ ಕಾರ್ಯ ನಿರ್ವಹಿಸಿದರು.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ಲಭ್ಯವಾಗಿವೆ. ರಾಜ್ಯೋತ್ಸವ ಪ್ರಶಸ್ತಿ (1973), ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ (1993), ಟಿ.ಎಸ್. ರಾಮಚಂದ್ರರಾವ್ ಪ್ರಶಸ್ತಿ (1996)– ಇವು ಮುಖ್ಯವಾದವು. ಧಾರವಾಡದ ಅಭಿಮಾನಿಗಳು 1996 ಜುಲೈ 28ರಂದು ಹಮ್ಮಿಣಿ ನೀಡಿ ಇವರನ್ನು ಸನ್ಮಾನಿಸಿ ಗೌರವಿಸಿದರು. (ಎಸ್.ಎಮ್.ಕೆ)

**ಬಂಕೇಶ:** ಬಂಕೆಯ ಅಥವಾ ಬಂಕೆಯರಸ ಎಂದು ಪ್ರಸಿದ್ಧನಾಗಿರುವ ಈತ ರಾಷ್ಟ್ರಕೂಟ ಒಂದನೆಯ ಅಮೋಘವರ್ಷನ (ಸು.14–78) ದಂಡ ನಾಯಕ. ಚೆಲ್ಲಕೇತನ ಮನೆತನಕ್ಕೆ ಸೇರಿದವನು. ನಿಡುಗುಂದ ಶಾಸನದಿಂದ ಇವನು ಬನವಾಸಿ 12000, ಬೆಳ್ವಲ 300, ಕುಂದರ್ಗೆ 700, ಕುಂದೂರು 500 ಮತ್ತು ಪುಲಿಗೆರೆ 300– ಈ ಪ್ರಾಂತ್ಯಗಳ ಅಧಿಪತಿಯಾಗಿದ್ದನೆಂದು ತಿಳಿದುಬರುತ್ತದೆ. ಗಂಗರು ಮತ್ತು ಗುಜರಾತ್ ರಾಷ್ಟ್ರಕೂಟ ಶಾಖೆಯೊಂದಿಗೆ ಅಮೋಘವರ್ಷ ನಡೆಸಿದ ಯುದ್ಧಗಳಲ್ಲಿ ರಾಷ್ಟ್ರಕೂಟ ದಳದ ದಂಡನಾಯಕನಾಗಿ ಪ್ರಮುಖ ಪಾತ್ರ ವಹಿಸಿದ್ದ. ಗಂಗರಾಜ ರಾಚಮಲ್ಲನನ್ನು ಶಿಕ್ಷಿಸಲು ಅಮೋಘವರ್ಷ ಉದ್ಯುಕ್ತನಾದಾಗ ಇತರ ರಾಷ್ಟ್ರಕೂಟ ಸಾಮಂತರು ಉದಾಸೀನರಾಗಿದ್ದರೂ ಬಂಕೇಶ ಧೈರ್ಯಗೆಡದೆ ಏಕಾಏಕಿಯಾಗಿ ಮುನ್ನುಗ್ಗುತ್ತಿದ್ದ. ತುಮಕೂರು ಹತ್ತಿರದ ದುರ್ಗಮವಾದ ಕೈದಾಳ ಕೋಟೆ ಇವನ ಕೈವಶವಾಯಿತು. ಅನಂತರ ಗಂಗರಾಜನನ್ನು ತಲವನಪುರದಿಂದ (ಈಗಿನ ತಲಕಾಡು) ಓಡಿಸಿ ಕಾವೇರಿ ನದಿಯನ್ನು ದಾಟಿ ಗಂಗರಾಜ್ಯವನ್ನು ಆಕ್ರಮಿಸಿದ. ಆದರೆ ಗಂಗರಾಜ್ಯ ಪೂರ್ಣವಾಗಿ ಕೈವಶವಾಗುವ ಮೊದಲೇ ಅಮೋಘವರ್ಷನ ಅನುಜ್ಞೆಯ ಮೇರೆಗೆ ಹಿಂದಿರುಗಬೇಕಾಯಿತು. ಪ್ರಾಯಶಃ ಆಗ ಅಮೋಘವರ್ಷನ ಮಗ ಇಮ್ಮಡಿ ಕೃಷ್ಣ ಬಂಡೆದ್ದುದರಿಂದ ರಾಜ್ಯದ ಸ್ಥಿತಿ ಕಲಕಿತ್ತು. ಹಿಂದಿರುಗಿ ಬಂದ ಬಂಕೇಶ ಮತ್ತೆ ಶಾಂತಿಯನ್ನು ಸ್ಥಾಪಿಸಿದ. ರಾಜಧಾನಿಯಿಂದ ಓಡಿಹೋಗಿದ್ದ ಕೃಷ್ಣನನ್ನು ಹಿಡಿದು ತಂದು ಅಮೋಘವರ್ಷನಿಗೆ ಒಪ್ಪಿಸಿ, ಅವನನ್ನು ಸಂತೋಷಗೊಳಿಸಿದ್ದಕ್ಕಾಗಿ ಅವನು ಬಂಕೇಶನ ಹೆಸರಿನಲ್ಲಿ ಬಂಕಾಪುರ ಎಂಬ ನಗರವನ್ನು ಕಟ್ಟಿಸಿದ. ಗಂಗಾರಾಜ ನೀತಿಮಾರ್ಗನ ಕಾಲದಲ್ಲಿ ನಡೆದ ರಾಜಾರಾಮಡು ಕದನದಲ್ಲಿ (ಸು.868) ಬಂಕೇಶ ಪಾಲ್ಗೊಂಡಿದ್ದನೆಂದು ತೋರುತ್ತದೆ. ಅತಿಪರಾಕ್ರಮಿಯೂ ಸ್ವಾಮಿನಿಷ್ಠನೂ ಆದ ಈತ ಅಮೋಘವರ್ಷನ ಬಲಗೈಯಂತಿದ್ದನೆಂದು ಕಣ್ಣೂರು ತಾಮ್ರಶಾಸನ ತಿಳಿಸುತ್ತದೆ. ಇವನ ಮಗ ಲೋಕಾದಿತ್ಯ. ಈತನೂ ಬಂಕಾಪುರ ಪ್ರಾಂತ್ಯದ ಆಡಳಿತವನ್ನು ನಿರ್ಮಿಸುತ್ತಿದ್ದ. (ಎಚ್.ವಿ.ಎಸ್.)

**ಬಂಗರು:** 14–19ನೆಯ ಶತಮಾನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದಲ್ಲಿ ಮೇಲ್ ಬಂಗಡಿ, ಕೆಳಬಂಗಡಿ, ಬೆಳ್ತಂಗಡಿ, ಉಪ್ಪಿನಂಗಡಿ, ಪುತ್ತೂರು, ಬಂಟ್ವಾಳ, ಮಂಜೇಶ್ವರ, ಮಂಗಳೂರು ಇತ್ಯಾದಿ ಭಾಗಗಳಲ್ಲಿ ಆಳಿಕೆ ನಡೆಸಿದ ಚಿಕ್ಕ ಅರಸು ಮನೆತನದವರು. ಇವರ ರಾಜಧಾನಿ ಮೊದಲಿಗೆ ಬೆಳ್ತಂಗಡಿ ತಾಲ್ಲೂಕಿನ ಬಂಗವಾಡಿ ಅಥವಾ ಬಂಗಡಿ. ಕಾಲಾಂತರದಲ್ಲಿ ಮಂಗಳೂರು ತಾಲ್ಲೂಕಿನ ನಂದಾವರಕ್ಕೆ ಬದಲಾಯಿತು. ಇವರು ಮೈಸೂರಿನ ಗಂಗವಾಡಿಯವರು. ಹೊಯ್ಸಳ ವಿಷ್ಣುವರ್ಧನನು ಮತಾಂತರಗೊಂಡಾಗ ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಬಂದರು ಎಂದು ಐತಿಹ್ಯ.

ಬಂಗ ಅರಸರ ಕೆಲವು ಶಾಸನಗಳಿಂದ ತಿಳಿದುಬರುವ ಆ ವಂಶದ ಪ್ರಮುಖರ ಹೆಸರುಗಳು ಇವು: ವೀರನರಸಿಂಹ ಬಂಗ (ಸು.1325), ಪಾಂಡ್ಯಪ್ಪ ಬಂಗ (ಸು.1350), ಪಾಂಡ್ಯಪ್ಪರಸ (ಸು.1411), ಕುಮಾರರಾಯ ಬಂಗ 1 (ಸು.1440), ವೀರನರಸಿಂಹ ಲಕ್ಷ್ಮಪ್ಪರಸ ಬಂಗ 1 (ಸು.1484), ವೀರನರಸಿಂಹ ಲಕ್ಷ್ಮಪ್ಪರಸ ಬಂಗ 111 (ಸು.1680).

ಹದಿನಾಲ್ಕನೆಯ ಶತಮಾನದ ಮೊದಲಿಗೆ ಆರಂಭಿಸಿರಬಹುದಾದ ಇವರ ಆಳಿಕೆ ವಿಜಯನಗರ ರಾಜ್ಯದ ಮಂಗಳೂರು ಪ್ರದೇಶದ ರಾಜ್ಯಪಾಲರ ಸ್ನೇಹವನ್ನು ಪಡೆದಿತ್ತು. ಆಡಳಿತ ವಿಚಾರಗಳಲ್ಲಿ ಇವರುಗಳ ಪರಾಮರ್ಶೆ ಪ್ರಮುಖವಾಗಿತ್ತು. ಭೈರರಸರನ್ನು ಸೋಲಿಸಿ ಭೈರರಸ ಎಂಬ ಬಿರುದನ್ನು ಕಸಿದುಕೊಂಡ 1ನೆಯ ವೀರನರಸಿಂಹ ಲಕ್ಷ್ಮಪ್ಪರಸ ಬಂಗರ ಉಚ್ಛ್ರಾಯಕಾಲದಲ್ಲಿದ್ದ. ಬ್ರಿಟಿಷರ ಆಳಿಕೆ ಬಲಗೊಂಡಾಗ ಬಂಗರು ರಾಜಕೀಯ ರಂಗದಿಂದ ಕಣ್ಮರೆಯಾದರು.

ಬಂಗರು ವಿಶೇಷವಾಗಿ ಜೈನಮತಾವಲಂಬಿಗಳು. ಆದರೂ ಹಿಂದು ಧರ್ಮವನ್ನು ಬಹಳವಾಗಿ ಆದರಿಸಿದರು. ಸೋಮನಾಥ ಇವರ ರಾಜ್ಯದ ಅಧಿದೇವತೆ. ರಾಜಮುದ್ರಿಕೆಯಲ್ಲಿ ಸೋಮನಾಥನ ಹೆಸರು

ಇರುತ್ತಿತ್ತು. ಶೃಂಗಾರಾರ್ಣವ ಚಂದ್ರಿಕಾ ಎಂಬ ಕೃತಿಯನ್ನು ಬರೆದ ಕವಿ ವಿಜಯವರ್ಣಿ ಒಂದನೆಯ ಕುಮಾರರಾಯಬಂಗನ (ಸು.1440) ಆಶ್ರಯದಲ್ಲಿದ್ದ. **(ಟಿ.ಎಸ್.ಆರ್.ಜಿ.)**

**ಬಂಗಾಡಿ:** ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಒಂದು ಗ್ರಾಮ. ಜನಸಂಖ್ಯೆ 1,270. ಬೆಳ್ತಂಗಡಿಯಿಂದ ಉತ್ತರಕ್ಕೆ 12 ಕಿಮೀ ದೂರದಲ್ಲಿದೆ. ಇದು ಬೆಟ್ಟು ಗ್ರಾಮಕ್ಕೆ ಸೇರಿದ್ದು ಬಂಗವಾಡಿಪುರ, ಬಂಗ್ವಾಡಿ ಎಂದೂ ಕರೆಯಲ್ಪಡುತ್ತಿತ್ತು. ಈ ಊರು ಇತಿಹಾಸ ಪ್ರಸಿದ್ಧ. ಇದು ಪುತ್ತೂರು ತಾಲ್ಲೂಕು ಹಾಗೂ ಮಂಗಳೂರು ತಾಲ್ಲೂಕಿನ ಕೆಲವು ಭಾಗಗಳು ಸೇರಿದ 21 ಮಾಗಣೆಗಳ ಒಡೆಯರಾಗಿದ್ದ ಬಂಗ ಅರಸರ ರಾಜಧಾನಿಯಾಗಿತ್ತು. ವಿಜಯನಗರದ ಮಂಗಳೂರು ರಾಜ್ಯದ ಸಾಮಂತರಾಗಿದ್ದ ಬಂಗ ಅರಸರು ಕ್ರಮೇಣ ಬಿದನೂರು ನಾಯಕರ ಕೈಕೆಳಗೆ ಅವರನ್ನು ಸೋಲಿಸಿದ ಹೈದರ್ ಅಲಿಯ ಕೈ ಕೆಳಗೆ ಆಳಿದರು. ಹೈದರ್ ಅಲಿಯ ಅಧಿಕಾರಿ ಆಗಿನ ಬಂಗರಸನನ್ನು ಕೊಂದು, ರಾಜ್ಯವನ್ನು ವಶಪಡಿಸಿಕೊಂಡರೂ ಬ್ರಿಟಿಷರು ಟಿಪ್ಪುವನ್ನು ಸೋಲಿಸಿದಾಗ ಸ್ಥಳೀಯರನ್ನು ಒಲಿಸಿಕೊಳ್ಳಲು ಬಂಗರಸ ವಂಶದವನನ್ನು ಮತ್ತೆ ಪಟ್ಟಕ್ಕೇರಿಸಿದರು. ಆ ಮನೆತನದ ಲಕ್ಷ್ಮರಸ ಬಂಗನನ್ನು ಆತ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದಾಗ ಬ್ರಿಟಿಷರೇ ನೇಣುಹಾಕಿದರು. ಮುಂದಿನ ಇಬ್ಬರು ಅರಸರು ನಂದಾವರದಿಂದ ಆಳಿದರು. ಬಂಗರಸರಿಗೆ ಮಂಗಳೂರು, ನಂದಾವರ, ಪುತ್ತೂರು, ಬೆಳ್ತಂಗಡಿಗಳಲ್ಲಿ ಅರಮನೆಗಳಿದ್ದವು. 1901ರಲ್ಲಿ ಈ ಅರಸರು ಬಂಗಾಡಿಗೇ ಹಿಂದಿರುಗಿದರು. ಬಂಗರಸರು ಮನೆದೇವರಾದ ಶಾಂತಿನಾಥಜಿನನಿಗೆ ನಡೆದುಕೊಳ್ಳುತ್ತಿದ್ದರು. ಶಾಂತಿನಾಥ ಬಸದಿ ಹಾಗೂ ಅರಮನೆಗಳು 1901ರಲ್ಲಿ ನವೀಕೃತಗೊಂಡವು.

ಬಂಗಾಡಿಯಿಂದ ಬೈಲಂಗಡಿಯ ಮೂಲದ ಪಾಳೇಗಾರರು ಹಿಂದೆ ಆಳಿಕೆ ನಡೆಸಿದ್ದರು. ಇಲ್ಲಿಗೆ ಕುದುರೆಮುಖ ಪರ್ವತ ಕಾಣುತ್ತದೆ; ಜಮಾಲಾಬಾದ್ ಕೋಟೆಯೂ ಕಾಣುತ್ತದೆ. ಬಂಗಾಡಿಯ ಪೂರ್ವದಲ್ಲಿ ಬಲ್ಲಾಳರಾಯನ ದುರ್ಗವೆಂಬ ಶಿಥಿಲ ಕೋಟೆ ಇದೆ. ಬಂಗರಸರು ಧರ್ಮಸಮನ್ವಯಕ್ಕೂ ಶ್ರೀಮಂತಿಕೆಗೂ ಹೆಸರಾದವರು. ಇವರು ಬಂಗಾಡಿ ಗದ್ಯಾಣವೆಂಬ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರು. ಸೋಮನಾಥೇಶ್ವರ ಇವರ ಮನೆ ದೇವರಾಗಿತ್ತು. ಆದರೆ ಸೋಮನಾಥನ ಗುಡಿ ಶಿಥಿಲವಾಗಿದೆ; ಶಾಂತಿನಾಥನ ಬಸದಿ ವಿಸ್ತಾರವಾಗಿದ್ದು, ಪದ್ಮಾವತಿ ಜಟ್ಟಿಂಗರಾಯ, ಗುಟ್ರಮಲ್ಲ, ಧರಣೇಂದ್ರ ಯಕ್ಷ, ನಾಗ, ಬ್ರಹ್ಮಯಕ್ಷ, ಉಲ್ಲಾಳಿಯರ ಸನ್ನಿಧಿಯನ್ನು ಹೊಂದಿದೆ. ಇದರ ಆವರಣದ ಒಳಗೇ ಚವ್ವೀಸತೀರ್ಥಂಕರರ ಬಸದಿಯೂ ಇದೆ. ಇಟಲಿಯ ಪ್ರವಾಸಿ ದೆಲ್ಲವಲ್ಲೆ ಮತ್ತು ಮುಸ್ಲಿಂ ಪ್ರವಾಸಿ ಇಬ್ನ್‌ಬತೂತ ಈ ಮನೆತನದ ಬಗ್ಗೆ ಉಲ್ಲೇಖಿಸಿದ್ದಾರೆ. **(ಎಚ್.ಪಿ.ವಿ.)**

**ಬಂಗಾರಪೇಟೆ:** ಕೋಲಾರ ಜಿಲ್ಲೆಯ ಆಗ್ನೇಯಭಾಗದಲ್ಲಿರುವ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಕೇಂದ್ರಪಟ್ಟಣ. ಕೋಲಾರ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕಿನ ಉತ್ತರದಲ್ಲಿ ಕೋಲಾರ, ಮುಳಬಾಗಿಲು ತಾಲ್ಲೂಕೂ ಪೂರ್ವದಲ್ಲಿ ಆಂಧ್ರ ಪ್ರದೇಶವೂ ಇದೆ. ರಾಬರ್ಟ್‌ಸನ್ ಪೇಟೆ, ಬಂಗಾರಪೇಟೆ, ಕ್ಯಾಸಂಬಳ್ಳಿ, ಬೇತಮಂಗಲ, ಕಾಮಸಂದ್ರ ಮತ್ತು ಬೂದಿಕೋಟೆ ಹೋಬಳಿಗಳು. ತಾಲ್ಲೂಕಿನಲ್ಲಿ ಎರಡು ಪಟ್ಟಣಗಳೂ 389 ಗ್ರಾಮಗಳೂ ಇವೆ. ವಿಸ್ತೀರ್ಣ 868 ಚ.ಕಿಮೀ. ಜನಸಂಖ್ಯೆ 4,21,437.

ಈ ತಾಲ್ಲೂಕಿನ ದಕ್ಷಿಣದ ಹೆಚ್ಚು ಪ್ರದೇಶ ಸಣ್ಣ ಗುಡ್ಡಗಳಿಂದ ಕೂಡಿದೆ. ಪಾಲಾರ್ ನದಿ ಈ ತಾಲ್ಲೂಕಿನಲ್ಲಿ ದಕ್ಷಿಣ ಮತ್ತು ಆಗ್ನೇಯಾಭಿಮುಖವಾಗಿ ಪ್ರವಹಿಸಿ ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ನೀರಿನ ಆಸರೆಯಾಗಿರುವ ಬೇತಮಂಗಲ ಕೆರೆಗೆ ನೀರುಣಿಸುವುದಲ್ಲದೆ ರಾಮಸಾಗರ ಕೆರೆಗೆ ನೀರಿನ ಆಸರೆಯಾಗಿ ಮುಂದುವರಿದು ಗುಂಡಲಪಳ್ಳಿ ಬಳಿ ಉತ್ತರ ಆರ್ಕಾಟ್ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕೋಲಾರ ತಾಲ್ಲೂಕಿನ ವಕ್ಕಲೇರಿ ಬೆಟ್ಟಗಳ ನೈಋತ್ಯದಲ್ಲಿ ಹುಟ್ಟುವ ಒಂದು ತೊರೆಯಾಗಿಯೂ ಮಾಲೂರು ತಾಲ್ಲೂಕಿನ ಟೇಕಲ್ ಬೆಟ್ಟಗಳಲ್ಲಿ ಹುಟ್ಟುವ ಮತ್ತೊಂದು ತೊರೆಯಾಗಿಯೂ ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಬಳಿ ಸಂಗಮಿಸಿ ಮಾರ್ಕಂಡೇಯ ನದಿಯಾಗಿ ತಾಲ್ಲೂಕಿನ ದಕ್ಷಿಣದಲ್ಲಿ ಹರಿಯುತ್ತದೆ. ವೃಷಭಾವತಿ ಈ ತಾಲ್ಲೂಕಿನ ಮತ್ತೊಂದು ಮುಖ್ಯನದಿ. ಕೋಲಾರದ ಬಳಿಯ ವಕ್ಕಲಗೇರಿ ಬೆಟ್ಟದಲ್ಲಿ ಹುಟ್ಟಿ ತಾಲ್ಲೂಕಿನಲ್ಲಿ ದಕ್ಷಿಣಾಭಿಮುಖವಾಗಿ ಹರಿದು ಸೂಲಕುಂಟೆ ಹಾಗೂ ಬಂಗಾರಪೇಟೆ ರೈಲ್ವೆ ಮಾರ್ಗವನ್ನು ದಾಟಿ ಮುಂದೆ ಕೊಪ್ಪ ದೊಡ್ಡ ಕೆರೆಗೆ ನೀರುಣಿಸಿ ಕಡನಟ್ಟ ಗ್ರಾಮದ ಬಳಿ ತಮಿಳುನಾಡನ್ನು ಪ್ರವೇಶಿಸುತ್ತದೆ.

ಈ ತಾಲ್ಲೂಕಿನಲ್ಲಿ ಜೇಡಿ ಮತ್ತು ದಪ್ಪಮರಳು ಮತ್ತು ನುರುಜಿನಿಂದ ಕೂಡಿದ ಕೆಂಪು ಭೂಮಿ ಇದೆ. ವಾರ್ಷಿಕ ಸರಾಸರಿ ಮಳೆ 689 ಮಿಮೀ. ತಾಲ್ಲೂಕಿನ ಒಟ್ಟು 2,13,058 ಎಕರೆ ಭೂಮಿಯಲ್ಲಿ ಸುಮಾರು ಕಾಲು ಭಾಗ ಅರಣ್ಯಪ್ರದೇಶ; ಉಳಿದದ್ದು ಹುಲ್ಲುಗಾವಲು ಮತ್ತು ಬೇಸಾಯದ ನೆಲ. ಈ ತಾಲ್ಲೂಕಿನ ನದಿಗಳು ಕೆರೆಕಟ್ಟೆಗಳಿಗೆ ಆಧಾರವಾಗಿದ್ದು ವ್ಯವಸಾಯಕ್ಕೆ ಬಹು ಉಪಯುಕ್ತವಾಗಿವೆ. ಪಾಲಾರ್‌ನ ಬೇತಮಂಗಲ, ರಾಮಸಾಗರ, ವೃಷಭಾವತಿ ಕಾಮಸಂದ್ರ ದೊಡ್ಡ ಕೆರೆಗಳು. ಇವಲ್ಲದೆ ಅನೇಕ ಚಿಕ್ಕ ಕೆರೆಗಳೂ ಇವೆ. ಬಾವಿಯಿಂದ ನೀರೆತ್ತಿ ಬೇಸಾಯ ಮಾಡುವುದು ರೂಢಿಯಲ್ಲಿದೆ. ರಾಗಿ, ಬತ್ತ, ನೆಲಗಡಲೆ ಮುಖ್ಯಬೆಳೆಗಳು. ಜೊತೆಗೆ ಮೆಣಸಿನಕಾಯಿ, ಈರುಳ್ಳಿ ಮತ್ತು ದ್ವಿದಳ ಧಾನ್ಯಗಳನ್ನೂ ಮಾವು, ದ್ರಾಕ್ಷಿ ಮುಂತಾದ ಹಣ್ಣುಗಳನ್ನೂ ತರಕಾರಿಗಳನ್ನೂ ಬೆಳೆಯುತ್ತಾರೆ. ಇಲ್ಲಿ ಪಶುಪಾಲನೆಯೂ ಮುಖ್ಯ ಕಸಬಾಗಿದೆ.

ತಾಲ್ಲೂಕಿನಲ್ಲಿ ಸ್ಲೇಟ್, ಪೆನ್ಸಿಲ್, ಸಿಮೆಂಟ್ ಪೈಪ್ ತಯಾರಿಸುತ್ತಾರೆ. ಸೋಪು, ಅಂಟು ಮತ್ತು ಇತರ ಬಗೆಯ ಉಪಯೋಗಕ್ಕಾಗಿ ಹುಣಿಸೆ ಬೀಜದ ಪುಡಿ ತಯಾರಿಸಲಾಗುತ್ತದೆ. ಕೈಮಗ್ಗದ ಬಟ್ಟೆ ತಯಾರಿಕೆಯೇ ಮುಂತಾದ ಸಣ್ಣ ಕೈಗಾರಿಕೆಗಳೂ ಮತ್ತು ಗೃಹಕೈಗಾರಿಕೆಗಳೂ ಉಂಟು. ಬಂಗಾರಪೇಟೆ ತಾಲ್ಲೂಕಿನಲ್ಲಿ ಬೆಂಗಳೂರು ಚೆನ್ನೈ ರೈಲುಮಾರ್ಗ ಹಾದು ಹೋಗಿರುವುದಲ್ಲದೆ ಉತ್ತಮ ರಸ್ತೆಗಳಿಂದ ಸುತ್ತಲ ಪಟ್ಟಣಗಳಿಗೆ ಸಂಪರ್ಕವಿದೆ.

ಪಾಲಾರ್ ನದಿಯ ಬಲದಂಡೆಯ ಮೇಲಿರುವ ಬೇತಮಂಗಲ **(ನೋಡಿ)** ಮತ್ತು ಬೂದಿಕೋಟೆ **(ನೋಡಿ)** ಐತಿಹಾಸಿಕ ಸ್ಥಳಗಳು. ಬಂಗಾರಪೇಟೆಯ ಈಶಾನ್ಯಕ್ಕೆ ಸು. 13ಕಿಮೀ ದೂರದಲ್ಲಿರುವ ಹುನಕುಂದ ಒಂದು ಪುರಾತನ ಸ್ಥಳ. ಇಲ್ಲಿ ಅನೇಕ ಶಾಸನಗಳು ದೊರೆತಿವೆ. ಊರಿನ ಹತ್ತಿರವಿರುವ ಪುಟ್ಟಬೆಟ್ಟದ ಮೇಲೆ ಒಂದು ಶಿವಾಲಯವಿದೆ. ನಗರಸಭೆ ಇರುವ ರಾಬರ್ಟ್‌ಸನ್ ಪೇಟೆ **(ನೋಡಿ)** ಈ ತಾಲ್ಲೂಕಿಗೆ ಸೇರಿದ್ದು. ಬಂಗಾರಪೇಟೆಯ ಉತ್ತರಕ್ಕಿರುವ ಯಲಬುರ್ಗಿಯಲ್ಲಿ ವೆಂಕಟರಮಣ ದೇವಾಲಯವಿದೆ.

ಬಂಗಾರಪೇಟೆ ಹೋಬಳಿ ಮತ್ತು ತಾಲ್ಲೂಕಿನ ಕೇಂದ್ರಪಟ್ಟಣ. ಬೆಂಗಳೂರಿನ ಪೂರ್ವಕ್ಕೆ 78ಕಿಮೀ ದೂರದಲ್ಲಿ, ಕೋಲಾರದ ದಕ್ಷಿಣಕ್ಕೆ 18ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 1,95,787. 1948ರ ವರೆಗೆ ಇದನ್ನು ಬೌರಿಂಗ್‌ಪೇಟೆ ಎಂದು ಕರೆಯುತ್ತಿದ್ದರು. ಇದು ಬೆಂಗಳೂರು–ಚೆನ್ನೈ ಹಾದಿಯಲ್ಲಿ ಒಂದು ಪ್ರಮುಖ ರೈಲ್ವೆನಿಲ್ದಾಣ. ಇಲ್ಲಿಂದ ಉರಿಗಂ ಚಿನ್ನದ ಗಣಿಗೂ ಕೋಲಾರಕ್ಕೂ ರೈಲ್ವೆ ಸಂಪರ್ಕವಿದೆ. ಸುತ್ತಲ ನಗರಗಳಿಗೆ

ರಸ್ತೆಗಳಿವೆ. ಅನೇಕ ಸಣ್ಣ ಕೈಗಾರಿಕೆಗಳಿವೆ. ಪ್ರತಿ ಭಾನುವಾರ ಇಲ್ಲಿ ಸಂತೆ ಜರುಗುವುದು. ಇದು ತಾಲ್ಲೂಕಿನ ಮುಖ್ಯ ವ್ಯಾಪಾರ ಕೇಂದ್ರ. ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ. **(ಎಂ.ಎಸ್.ಕೆ.)**

**ಬಂಗಾರಪ್ಪ, ಎಸ್.**: 1933–. ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (1990–92); ಹಿರಿಯ ರಾಜಕಾರಣಿ; ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷ

ಇವರು ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಕುಬಟೂರಿನಲ್ಲಿ 1933 ಅಕ್ಟೋಬರ್ 26ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣ ಹಂತದಲ್ಲೇ ತಮ್ಮ ಚುರುಕುತನ ಮತ್ತು ಮುಂದಾಳತ್ವ ತೋರಿಸುತ್ತಿದ್ದ ಇವರು ಉನ್ನತ ಶಿಕ್ಷಣ ವ್ಯಾಸಂಗ ಮಾಡುವ ಬಗ್ಗೆ ನಿಚ್ಚಳ ಗುರಿ ಹೊಂದಿದ್ದರು. ಬಿ.ಎ., ಬಿ.ಎಲ್. ಪದವಿಗಳನ್ನು ಪಡೆದುಕೊಂಡ ಇವರು ಆರಂಭದಲ್ಲಿ ವಕೀಲ ವೃತ್ತಿಯನ್ನು ಕೈಗೊಂಡರು. ಹಿಂದುಳಿದ ವರ್ಗದಿಂದ ಹಾಗೂ ಹಿಂದುಳಿದ ಮಲೆನಾಡು ಭಾಗದಿಂದ ಬಂದ ಇವರು ಯುವಕರಾಗಿದ್ದಾಗಲೇ ಸಾಮಾಜಿಕ ಕಳಕಳಿ ಬೆಳೆಸಿಕೊಂಡರು. ಸಮಾಜವನ್ನು ವೈಜ್ಞಾನಿಕ ದೃಷ್ಟಿಯಿಂದ ಅರಿಯುವ ಸಲುವಾಗಿ ಸಮಾಜ ವಿಜ್ಞಾನದಲ್ಲಿ ಡಿಪ್ಲೊಮಾ ಶಿಕ್ಷಣ ಪಡೆದರು. ಧೈರ್ಯ, ಹುರುಪು ಮತ್ತು ವಾಗ್ಮಿತೆ ಬೆಳೆಸಿಕೊಂಡ ಇವರು ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಗೆಳೆಯರೊಂದಿಗೆ ಬೆರೆತರು. ಕಾಗೋಡು ಸತ್ಯಾಗ್ರಹದಿಂದಾಗಿ ಸಮಾಜವಾದಿ ಅಲೆಯೇ ಎದ್ದಿತು. ಶಾಂತವೇರಿ ಗೋಪಾಲಗೌಡ, ಗಣಪತಿಯಪ್ಪ, ಜೆ. ಎಸ್. ಪಟೇಲ್ ಮೊದಲಾದ ಹಿರಿಯ ಸಮಾಜವಾದಿಗಳು ಇವರಿಗೆ ಪ್ರೇರಕರಾದರು. ಲೋಹಿಯಾ ಮೊದಲಾದ ರಾಷ್ಟ್ರಮಟ್ಟದ ಸಮಾಜವಾದಿ ನಾಯಕರು ಇವರ ಆದರ್ಶವಾಗಿದ್ದರು.

ಸ್ವತಃ ವಕೀಲರಾಗಿ ಇವರು ಗೇಣಿದಾರರಿಗೆ ಕಾನೂನು ನೆರವು ನೀಡಿದರು. ಕಾನೂನು ಅರಿಯದವರಿಗೆ ಅದರ ಬೆಂಬಲ ಒದಗಿಸಿದರು. ಬಡವರೊಂದಿಗೆ ಉದಾರವಾಗಿ ನಡೆದುಕೊಂಡು ಅವರ ನೇತಾರರಾಗಿ ಕಾಣಿಸಿಕೊಂಡರು. 1967ರ ಸಾರ್ವತ್ರಿಕ ಚುನಾವಣೆ ಇವರನ್ನು ರಾಜ್ಯದ ರಾಜಕೀಯಕ್ಕೆ ಪ್ರವೇಶಿಸಲು ಪ್ರೇರಣೆ ನೀಡಿತು. ಆಗ ಬಲಿಷ್ಠವಾಗಿದ್ದ ಕಾಂಗ್ರೆಸ್ ಪಕ್ಷದ ವಿರುದ್ಧ ಶಾಂತವೇರಿ ಗೋಪಾಲಗೌಡರ ನಾಯಕತ್ವದಲ್ಲಿ ಸೊರಬ ಕ್ಷೇತ್ರದಿಂದ ಸ್ಪರ್ಧಿಸಿ ಜಯಶೀಲರಾದರು. ಆ ಚುನಾವಣೆಯಲ್ಲಿ ಸಮಾಜವಾದಿ ಗುಂಪು ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಗಣನೀಯ ಸ್ಥಾನಗಳನ್ನು ಪಡೆಯಿತು. 1972ರ ವಿಧಾನಸಭಾ ಚುನಾವಣೆಯಲ್ಲಿ ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್‌ನ ಬಲವಾದ ಅಲೆಯ ವಿರುದ್ಧ ಸ್ಪರ್ಧಿಸಿ ಸೊರಬ ಕ್ಷೇತ್ರದಿಂದ ಮತ್ತೊಮ್ಮೆ ಗೆದ್ದು ಬಂದರು. ಶಾಸನಸಭೆಯಲ್ಲಿ ವಿರೋಧ ಪಕ್ಷ ದುರ್ಬಲವಾಗಿದ್ದಾಗ ಇವರಿಗೆ ತಮ್ಮ ಪ್ರತಿಭೆ ಪ್ರದರ್ಶಿಸುವ ಅವಕಾಶ ಹೆಚ್ಚು ದೊರೆಯಿತು.

ಹಿಂದುಳಿದ ವರ್ಗಗಳಿಗೆ ಶಕ್ತಿ ತಂದುಕೊಟ್ಟರೆಂಬ ಹೆಗ್ಗಳಿಕೆಗೆ ಬಾಧ್ಯರಾದ ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸರ ದೃಷ್ಟಿ ಯುವ ನಾಯಕರಾಗಿದ್ದ ಬಂಗಾರಪ್ಪನವರ ಕಡೆ ಹರಿಯಿತು. 1972ರಲ್ಲಿ ಇವರನ್ನು ಕಾಂಗ್ರೆಸ್‌ಗೆ ಸೆಳೆಯುವಲ್ಲಿ ಅರಸು ಅವರು ಯಶಸ್ವಿಯಾದರು. ಲೋಕೋಪಯೋಗಿ ಇಲಾಖೆಯಂತಹ ಪ್ರಮುಖ ಖಾತೆಯ ನಿರ್ವಹಣೆಯನ್ನು ಇವರಿಗೆ ವಹಿಸಲಾಯಿತು. ದೇವರಾಜ ಅರಸು ಮತ್ತು ಇಂದಿರಾಗಾಂಧಿಯವರ ನಡುವೆ ರಾಜಕೀಯ ವಿರಸ ಮೂಡಿದಾಗ ಇವರು ಇಂದಿರಾಗಾಂಧಿಯವರ ಬೆಂಬಲಕ್ಕೆ ನಿಂತರು. ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರೂ ಆದರು. ಮುಂದೆ ಅರಸು ಸರ್ಕಾರ ಪತನವಾಗಿ ಆರ್. ಗುಂಡೂರಾವ್ ಸರ್ಕಾರ ರಚಿಸಿದಾಗ ಅದರಲ್ಲಿ ಇವರು ಹಿರಿಯ ಸಚಿವರಾದರು. 1982ರ ರಾಜಕೀಯ ಸ್ಥಿತ್ಯಂತರದಲ್ಲಿ ಇವರು ಕಾಂಗ್ರೆಸ್ ತೊರೆದು ಕ್ರಾಂತಿರಂಗದ ಸಂಘಟನೆ ಮಾಡಿದರು. ಜನತಾರಂಗದ ಹೆಸರಲ್ಲಿ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರದಲ್ಲಿ (1983) ಬಂಗಾರಪ್ಪನವರು ಸೇರಲಿಲ್ಲ. ಮುಂದೆ ಇವರು ಕರ್ನಾಟಕ ರಾಜಕೀಯ ಕ್ಷೇತ್ರದ ವಿಶಿಷ್ಟ ವ್ಯಕ್ತಿಯಾಗಿ ಕಾಣಿಸಿಕೊಂಡರು. ತಾವಿರುವಲ್ಲಿ ಗೆಲುವಿದೆ ಎಂಬ ಭಾವನೆ ಅವರಲ್ಲಿ ದೃಢವಾಗಿ ಮೂಡಿತು. ಪತ್ರಿಕೆಗಳು ಇವರನ್ನು ಜನಸಮೂಹದ ನಾಯಕ, ಸೋಲಿಲ್ಲದ ಸರದಾರ ಎಂದು ಮುಂತಾಗಿ ಬಣ್ಣಿಸಿದವು. ಸೊರಬ ಕ್ಷೇತ್ರದಿಂದ ಅವಿರತವಾಗಿ ಇವರು ವಿಧಾನಸಭೆಗೆ ಆಯ್ಕೆಯಾಗುತ್ತಾ ಬಂದರು.



1989ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೇರಿ ಸ್ಪರ್ಧಿಸಿದ ಇವರು ಅದು ಅಧಿಕಾರಕ್ಕೆ ಬಂದಾಗ ಮುಖ್ಯಮಂತ್ರಿಯಾಗಿದ್ದ ಡಿ.ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಕೃಷಿ ಮತ್ತು ತೋಟಗಾರಿಕೆ ಸಚಿವರಾದರು. ಪಾಟೀಲರ ನೇತೃತ್ವ ಹೋಗಿ 1990 ಅಕ್ಟೋಬರ್ 17ರಂದು ಎಸ್. ಬಂಗಾರಪ್ಪನವರೇ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಇವರ ಕಾಲದಲ್ಲಿ ಅನೇಕ ಜನಪ್ರಿಯ ಯೋಜನೆಗಳು ಜಾರಿಗೆ ಬಂದವು. ಆಶ್ರಯ, ಆರಾಧನಾ, ವಿಶ್ವ ಮೊದಲಾದ ಆಕರ್ಷಕ ತಲೆಬರಹದಲ್ಲಿ ಈ ಯೋಜನೆಗಳು ಕಾಣಿಸಿಕೊಂಡವು. ಮುಖ್ಯವಾಗಿ ಇವೆಲ್ಲ ಗ್ರಾಮೀಣರ ವಸತಿ, ಗೃಹಕೈಗಾರಿಕೆ ಹಾಗೂ ಸಾಂಸ್ಕೃತಿಕ ಜೀವನದ ಸಂರಕ್ಷಣೆಗೆ ಸಂಬಂಧಿಸಿದ್ದವು. ಇವರು 'ಕರ್ನಾಟಕ ರತ್ನ' ಪ್ರಶಸ್ತಿ ಸ್ಥಾಪಿಸಿದರು. ಕುವೆಂಪು ಅವರ ಜನ್ಮಸ್ಥಳ ಹಿರೇಕೊಡಿಗೆಯಲ್ಲಿ ಸ್ಮಾರಕ ನಿರ್ಮಾಣ ಮತ್ತು ಕುಪ್ಪಳ್ಳಿಯಲ್ಲಿ ಸಂಶೋಧನ ಕೇಂದ್ರ ಸ್ಥಾಪನೆಗೆ ಇವರು ಆಸಕ್ತಿ ವಹಿಸಿದರು. ಇವರು 1992 ನವಂಬರ್ 19ರ ವರೆಗೆ ಮುಖ್ಯಮಂತ್ರಿಯಾಗಿದ್ದರು. ಅನಂತರದಲ್ಲಿ ಇವರು ಕರ್ನಾಟಕ ಕಾಂಗ್ರೆಸ್ ಪಕ್ಷ ಕಟ್ಟಿದರು. ಲೋಕಸಭೆಗೂ ಚುನಾಯಿತರಾದರು. ಮತ್ತೊಮ್ಮೆ ಕಾಂಗ್ರೆಸ್ ಪ್ರವೇಶಿಸಿ ಲೋಕಸಭಾ ಸದಸ್ಯರಾದರು. ಆ ಪಕ್ಷ ತೊರೆದು ಬಿ.ಜೆ.ಪಿ. ಸೇರಿ ಮತ್ತೆ ಲೋಕಸಭೆ ಪ್ರವೇಶಿಸಿದರು. ಅದರಲ್ಲೂ ಹೊಂದಾಣಿಕೆಯಾಗದೆ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ಇತ್ತರು. ಒಮ್ಮೆ ಮಾತ್ರ ಇವರು ಲೋಕಸಭಾ ಚುನಾವಣೆಯಲ್ಲಿ ಯಶಸ್ಸಾಗದ್ದನ್ನು ಬಿಟ್ಟರೆ ಸೋಲು ಕಂಡವರೇ ಅಲ್ಲ.

ಇತ್ತೀಚೆಗೆ ಮುಲಾಯಮ್ ಸಿಂಗ್ ಯಾದವ್ ಸ್ಥಾಪಿಸಿರುವ ಸಮಾಜವಾದಿ ಪಕ್ಷ ಸೇರಿ ಅದರ ರಾಜ್ಯಾಧ್ಯಕ್ಷರಾದರು. ಈ ಪಕ್ಷದಿಂದ ಸ್ಪರ್ಧಿಸಿ ಲೋಕಸಭೆ ಪ್ರವೇಶಿಸಿ ತಮ್ಮ ರಾಜಕೀಯ ವರ್ಚಸ್ಸನ್ನು ಮೆರೆದರು. ಇವರ ಪತ್ನಿ ಶಕುಂತಲಮ್ಮ. ಇವರಿಗೆ ಇಬ್ಬರು ಗಂಡು, ಮೂವರು ಹೆಣ್ಣು ಮಕ್ಕಳು. ಪುತ್ರ ಕುಮಾರ ಬಂಗಾರಪ್ಪ ಶಾಸಕರೂ ಸಚಿವರೂ ಆಗಿದ್ದರು. ಅವರು ಕನ್ನಡ ಚಲನಚಿತ್ರರಂಗದಲ್ಲಿ ನಟರಾಗಿಯೂ ಪ್ರಸಿದ್ಧರಾಗಿದ್ದಾರೆ. **(ಡಿ.ಎಸ್.ಜೆ.)**

**ಬಂಟ್ವಾಳ**: ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಕೇಂದ್ರ. ಈ ತಾಲ್ಲೂಕಿನ ದಕ್ಷಿಣಕ್ಕೆ ಕೇರಳ ರಾಜ್ಯವೂ ಪೂರ್ವ ಮತ್ತು ಈಶಾನ್ಯದಲ್ಲಿ ಪುತ್ತೂರು ಮತ್ತು ಬೆಳ್ತಂಗಡಿ, ಉತ್ತರದಲ್ಲಿ ಕಾರ್ಕಳ ಮತ್ತು ಪಶ್ಚಿಮದಲ್ಲಿ ಮಂಗಳೂರು ತಾಲ್ಲೂಕುಗಳೂ ಇವೆ. ತಾಲ್ಲೂಕಿನಲ್ಲಿ 84 ಗ್ರಾಮಗಳಿವೆ. ಪಾಣೆಮಂಗಳೂರು, ಬಂಟ್ವಾಳ ಮತ್ತು ವಿಟ್ಲ ಹೋಬಳಿಗಳು. ವಿಸ್ತೀರ್ಣ 715 ಚ.ಕಿಮೀ. ಜನಸಂಖ್ಯೆ 3,61,554.

ಪಶ್ಚಿಮಘಟ್ಟಶ್ರೇಣಿ ಮತ್ತು ಸಮುದ್ರದಂಚಿಗೆ ಮಧ್ಯದಲ್ಲಿ ಹರಡಿರುವ ಈ ತಾಲ್ಲೂಕಿನಲ್ಲಿ ಅಲ್ಲಲ್ಲಿ ಸಣ್ಣ ಬೆಟ್ಟಗುಡ್ಡಗಳೂ ವಿಶಾಲವಾದ ಮಟ್ಟಸ ಪ್ರದೇಶಗಳೂ ಇವೆ. ತಾಲ್ಲೂಕಿನ ಮಧ್ಯಭಾಗದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ನೇತ್ರಾವತಿ ನದಿ ಹರಿದು ಮಂಗಳೂರು ಮುಖಾಂತರ ಅರಬ್ಬೀಸಮುದ್ರವನ್ನು ಸೇರುತ್ತದೆ. ಬಂಟ್ವಾಳದಿಂದ ಮಂಗಳೂರಿಗೆ ದೋಣಿಗಳ ಸಂಚಾರವಿದ್ದು ಈ ಜಲಮಾರ್ಗದ ಮುಖಾಂತರ ಸರಕು ಸಾಗಣೆ ಉಂಟು. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 3,773 ಮಿಮೀ. ತಾಲ್ಲೂಕಿನಲ್ಲಿ ನೇತ್ರಾವತಿ ನದಿಗೆ ಹಂಚಿಕಟ್ಟೆ ಮತ್ತು ಬಂಟ್ವಾಳಗಳಲ್ಲಿ ಕಟ್ಟೆ ಕಟ್ಟುವ ಯೋಜನೆಗಳುಂಟು.

ತಾಲ್ಲೂಕಿನಲ್ಲಿ 6,103 ಹೆಕ್ಟೇರು ಅರಣ್ಯಪ್ರದೇಶವಿದೆ. 23,528 ಹೆಕ್ಟೇರುಗಳಲ್ಲಿ ಬೆಳೆ ಬೆಳೆಯಲಾಗುತ್ತಿದೆ. 1,915 ಹೆಕ್ಟೇರ್ ಹುಲ್ಲುಗಾವಲಿದೆ. ಬತ್ತ, ಅಡಕೆ, ತೆಂಗು, ಗೇರುಬೀಜ, ಮೆಣಸು, ಮೆಣಸಿನಕಾಯಿ, ಶುಂಠಿ ತರಕಾರಿಗಳೂ ಇಲ್ಲಿಯ ವ್ಯವಸಾಯೋತ್ಪನ್ನಗಳು. ಹಲಸು, ಮಾವು, ಪರಂಗಿ, ಬಾಳೆ ಇವನ್ನೂ ಬೆಳೆಯುತ್ತಾರೆ.

ತಾಲ್ಲೂಕಿನಲ್ಲಿ ಬೀಡಿ, ಮರದ ಪೀಠೋಪಕರಣಗಳ ಮೇಲು ಹೊದಿಕೆ, ಮಡಕೆಕುಡಿಕೆಗಳ ತಯಾರಿಕೆ, ಜೇನುಸಾಕಣೆ, ಪಶುಪಾಲನೆ ಉಂಟು.

ಈ ತಾಲ್ಲೂಕಿನ ಆಲಿಕೆ ಗ್ರಾಮ ಲೋಕಸೇವಾ ವೃಂದದ ರಚನಾತ್ಮಕ ಕಾರ್ಯ ಚಟುವಟಿಕೆಗಳಿಂದ ಪ್ರಸಿದ್ಧವಾಗಿದೆ. ಕರಂಜೆ ಗ್ರಾಮದಲ್ಲಿ ಪುರಾತನ ಶಿವಾಲಯವಿದೆ. ಬಂಟ್ವಾಳದ ದಕ್ಷಿಣಕ್ಕೆ 6ಕಿಮೀ ದೂರದಲ್ಲಿ ಪಾಣೆ ಮಂಗಳೂರು ಇದೆ. ನೇತ್ರಾವತಿಯ ದಡದಲ್ಲಿರುವ ಈ ಊರಿಗೆ ಸೇತುವೆ ಕಟ್ಟಿ ಬಂಟ್ವಾಳದೊಡನೆ ಸಂಪರ್ಕ ಕಲ್ಪಿಸಿದೆ. ಇದೊಂದು ವ್ಯಾಪಾರ ಕೇಂದ್ರ. ಇಲ್ಲಿನ ವೆಂಕಟರಮಣ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಲಕ್ಷದೀಪೋತ್ಸವ ಜರುಗುವುದು. ವಿಟ್ಲ **(ನೋಡಿ)** ಪ್ರಸಿದ್ಧ ಸ್ಥಳ. ಇಲ್ಲಿ ನಾಲ್ಕು ದೇವಾಲಯುಗಳೂ ಹಿಂದಿನ ಹೆಗ್ಗಡೆಯ ಅರಮನೆಯ ಅವಶೇಷಗಳೂ ಇವೆ.

ಬಂಟ್ವಾಳ ಈ ತಾಲ್ಲೂಕಿನ ಮುಖ್ಯಸ್ಥಳ. ನೇತ್ರಾವತಿ ನದಿಯ ಉತ್ತರ ದಂಡೆಯ ಮೇಲೆ ಮಂಗಳೂರಿನ ಪೂರ್ವಕ್ಕೆ ಸು. 25ಕಿಮೀ ದೂರದಲ್ಲಿದೆ. ಜನಸಂಖ್ಯೆ 54,820. ಈ ಊರಿನ ಮುಖಾಂತರ ಸುತ್ತಲ ಮಂಗಳೂರು, ಪುತ್ತೂರು, ಕೇರಳದಲ್ಲಿರುವ ಮಂಜೇಶ್ವರ, ಕಾಸರಗೋಡು ಮುಂತಾದ ಕಡೆಗಳಿಗೆ ಉತ್ತಮ ಮಾರ್ಗಗಳಿವೆ. ಬಂಟ್ವಾಳವು ಹಾಸನ–ಮಂಗಳೂರು ರೈಲ್ವೆಮಾರ್ಗದ ಒಂದು ಮುಖ್ಯ ರೈಲ್ವೆನಿಲ್ದಾಣ. ನೇತ್ರಾವತಿ ನದಿಯ ಮೂಲಕ ದೋಣಿಗಳಲ್ಲಿ ಮಂಗಳೂರು ಬಂದರಿಗೆ ಇಲ್ಲಿಂದ ಸರಕುಗಳನ್ನು ಸಾಗಿಸುತ್ತಾರೆ. ಇದು ಒಂದು ವ್ಯಾಪಾರ ಕೇಂದ್ರವೂ ಹೌದು. ಸರ್ಕಾರಿ ಆಸ್ಪತ್ರೆಯೂ ಶಾಲಾ ಕಾಲೇಜುಗಳೂ ಇಲ್ಲಿವೆ. ಇಲ್ಲಿ ನಗರ ಸಭೆಯ ಆಡಳಿತವಿದೆ.

ನೇತ್ರಾವತಿ ನದಿನೀರು ಪ್ರವಾಹದ ಕಾಲದಲ್ಲಿ ಊರನ್ನು ಮುಟ್ಟುವುದುಂಟು. ಊರಿನ ಕೆಲವು ಭಾಗ ಟಿಪ್ಪುವಿನ ದಾಳಿಗೆ ತುತ್ತಾಗಿ ಹಾಳಾಗಿತ್ತು. ಊರಿನಲ್ಲಿ ವೆಂಕಟರಮಣ, ಸೀತಾರಾಮ ಮತ್ತು ಮಹಾಲಿಂಗೇಶ್ವರ ದೇವಾಲಯಗಳಿವೆ. ಊರಿನ ಹತ್ತಿರವಿರುವ ನರಹರಿ ಪರ್ವತವೆಂದು ಕರೆಯುವ ಬೆಟ್ಟದ ಮೇಲೆ ಒಂದು ದೇವಾಲಯವಿದೆ. **(ಡಿ.ಎಸ್.ಕೆ.)**

**ಬಂಡಾಯ ಸಾಹಿತ್ಯ**: ಕನ್ನಡದಲ್ಲಿ ನವ್ಯದ ಅನಂತರ ಕಾಣಿಸಿಕೊಂಡ ಸಾಹಿತ್ಯ ಚಳವಳಿ. ಯಾವುದೇ ಸಾಹಿತ್ಯ ಪರಂಪರೆ ತನ್ನ ಸಾಧ್ಯತೆಗಳನ್ನು ಮುಗಿಸಿಕೊಂಡು ಸ್ಥಗಿತವಾಗುವ ಸಮಯಕ್ಕೆ ಮತ್ತೊಂದು ಸಾಹಿತ್ಯ ಪರಂಪರೆ ಹುಟ್ಟಿಕೊಳ್ಳುವುದಕ್ಕೆ ಬೇಕಾಗಿರುವ ಆಶಯಗಳನ್ನು ತನ್ನ ಗರ್ಭದಲ್ಲಿಯೇ ಅಳವಡಿಸಿಕೊಂಡಿರುತ್ತದೆ. ಬಹಳ ಮುಖ್ಯವಾದ ಈ ಆಶಯದ ಜೊತೆಗೆ ಬೇರೆ ದೇಶದ ಬೇರೆ ಕಾಲದ ಬೇರೆ ಶಿಸ್ತಿನ ಹಲವು ಸಂಗತಿಗಳು ನೂತನ ಸಾಹಿತ್ಯದ ನಿರ್ಮಾಣಕ್ಕೆ ಕಾರಣವಾಗಿರುತ್ತವೆ ಎಂಬ ಈ ಮಾತುಗಳು ಸಾಹಿತ್ಯದ ಶ್ರೇಷ್ಠತೆಯನ್ನು ಗುರುತಿಸಲು ಬೇಕಾಗುವ ಸೃಜನಶೀಲತೆಯ ನೆಲೆಯನ್ನು ಅರ್ಥಮಾಡಿಸುವುದಕ್ಕೆ ಭದ್ರವಾದ ನೆಲೆಗಟ್ಟನ್ನು ಒದಗಿಸುತ್ತದೆ. ನವೋದಯಕ್ಕೆ ಪ್ರತಿಕ್ರಿಯೆಯಾಗಿ ಪ್ರಗತಿಶೀಲ ಸಾಹಿತ್ಯ, ಪ್ರಗತಿಶೀಲಕ್ಕೆ ಪ್ರತಿಕ್ರಿಯೆಯಾಗಿ ನವ್ಯಸಾಹಿತ್ಯ, ನವ್ಯಕ್ಕೆ ಪ್ರತಿಕ್ರಿಯೆಯಾಗಿ ದಲಿತ ಬಂಡಾಯ ಸಾಹಿತ್ಯ ಹುಟ್ಟಿಕೊಂಡವು. ಪ್ರಗತಿಶೀಲದ ಮುಂದುವರಿಕೆಯಾಗಿ ಕಂಡ ಈ ಸಾಹಿತ್ಯವನ್ನು 'ನವ್ಯೋತ್ತರ ಸಾಹಿತ್ಯ'ವೆಂದೂ ಕರೆಯುವುದುಂಟು. ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಕೇಳಿಬಂದ ಈ ಸಾಹಿತ್ಯ ಎಲ್ಲ ಪ್ರಗತಿಪರ ಲೇಖಕರು, ಹಾಗೂ ದಲಿತ ಬರೆಹಗಾರರಿಂದ ಸೃಷ್ಟಿಯಾಯಿತು.

ದಲಿತ–ಬಂಡಾಯ ಸಾಹಿತ್ಯಕ್ಕಿರುವ ವ್ಯತ್ಯಾಸಗಳನ್ನು ಗಮನಿಸಿದರೆ, ಕೆಳಸ್ತರದ ಬರೆಹಗಾರರಿಂದ ರಚಿತವಾದುದು ದಲಿತಸಾಹಿತ್ಯ. ಎಲ್ಲ ಜಾತಿ, ವರ್ಗಗಳಿಂದ ಬಂದ ಬರೆಹಗಾರರಿಂದ ಶೋಷಿತರ ಪರವಾಗಿ ರಚಿತವಾದದ್ದು ಬಂಡಾಯ ಸಾಹಿತ್ಯವೆನಿಸಿದೆ. ಬಂಡಾಯ ಚಳವಳಿ ಎಲ್ಲಾ ಎಡಪಂಥೀಯ ಧೋರಣೆಯುಳ್ಳವರು ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಸೇರಿ ಒಳಗೊಂಡದ್ದು. ಎರಡೂ ಸಾಹಿತ್ಯ ಪರಂಪರೆಗಳು ಎಡಪಂಥೀಯ ಧೋರಣೆಯುಳ್ಳವು. ಅವು ಹುಟ್ಟಿಕೊಂಡ ನೆಲೆಗಳು ಬೇರೆಯಾಗಿದ್ದರೂ ಅವು ತಲುಪುವ ಗುರಿಯಲ್ಲಿ ಮಾತ್ರ ವ್ಯತ್ಯಾಸವಿಲ್ಲ. ಪ್ರತಿಭಟನೆ ಎಂಬುದು ಎರಡರಲ್ಲೂ ಕಾಣುವ ಸಾಮಾನ್ಯ ಅಂಶವಾಗಿದೆ. ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಬೇಕೆಂಬುದು ಎರಡೂ ಪರಂಪರೆಗಳ ವಾದವಾಗಿದೆ. ಆರಂಭದಲ್ಲಿ ದಲಿತ–ಬಂಡಾಯದ ಸಂಬಂಧವನ್ನು ಕುರಿತಂತೆ ಸಾಕಷ್ಟು ಚರ್ಚೆಯೇ ನಡೆಯಿತು. ಬಂಡಾಯದ ವ್ಯಾಪ್ತಿಯಲ್ಲಿ ದಲಿತಬರೆಹಗಾರರನ್ನು ಗುರುತಿಸುವ ಪ್ರಯತ್ನ ನಡೆಯಿತು. 'ಪ್ರಗತಿಗಾಮಿ ದಲಿತಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು, ಬಂಡಾಯ ಸಾಹಿತಿಗಳೆಲ್ಲರೂ ದಲಿತ ಸಾಹಿತಿಗಳಲ್ಲ' ಎಂಬ ಬರಗೂರು ರಾಮಚಂದ್ರಪ್ಪ ಅವರ ಅಭಿಪ್ರಾಯವನ್ನು ಗಮನಿಸಬೇಕು. ಅನಂತರ ಇದರಿಂದ ದಲಿತ ಬರೆಹಗಾರರು ಪ್ರತ್ಯೇಕ ಅಸ್ತಿತ್ವಹೊಂದಲು ದನಿ ಎತ್ತಿದರು. ಒಟ್ಟಾರೆ ದಲಿತಸಾಹಿತ್ಯವನ್ನು ಒಳಗೊಂಡದ್ದು ಬಂಡಾಯ ಸಾಹಿತ್ಯ ಎಂಬ ತೀರ್ಮಾನಕ್ಕೆ ಬರಲಾಯಿತು. ಸಾಹಿತ್ಯಸೃಷ್ಟಿ ಇವರಿಗೆ ಕೇವಲ ಸಂತೋಷಕ್ಕಾಗಿ ಕಾಣದೆ ಸಾಂಸ್ಕೃತಿಕ ಬದಲಾವಣೆಗಾಗಿ ಎನಿಸಿತು.

ಸಂಸ್ಕೃತಿಯ ಮೌಲ್ಯಗಳು ಸ್ಥಗಿತಗೊಂಡಾಗ, ಪ್ರತಿಗಾಮಿಯಾದಾಗ ಅಂಥವುಗಳ ವಿರುದ್ಧ ಹೋರಾಡುವುದು ಬಂಡಾಯ. ಇದೇ ಸಾಹಿತ್ಯದಲ್ಲಿ ನಿರೂಪಿತಗೊಂಡಾಗ ಬಂಡಾಯ ಸಾಹಿತ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಂಘಟಿತವಾದದ್ದು ಬಂಡಾಯ ಸಾಹಿತ್ಯ ಚಳವಳಿ. 1979ರ ಮಾರ್ಚ್ 9ರಿಂದ 11ರವರೆಗೆ ಕನ್ನಡ ಸಾಹಿತ್ಯಪರಿಷತ್ತು ಧರ್ಮಸ್ಥಳದಲ್ಲಿ ಗೋಪಾಲ ಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ಅಖಿಲಭಾರತ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿರೋಧಿಸುತ್ತ ಅದೇ ದಿನಗಳಂದು ಬೆಂಗಳೂರಿನಲ್ಲಿ ಬಂಡಾಯ ಸಾಹಿತಿಗಳು ಸಮಾವೇಶಗೊಂಡು ತಮ್ಮ ಸಂಘಟನೆಗೆ ಸ್ಪಷ್ಟರೂಪ ನೀಡಿದರು. ಯಜಮಾನ ಸಂಸ್ಕೃತಿಯನ್ನು ವಿರೋಧಿಸುವುದು, ತುಳಿತಕ್ಕೊಳಗಾದವರ ಪರವಾಗಿ ಸಾಹಿತ್ಯ

ರಚಿಸುವುದಕ್ಕಾಗಿ 'ಖಡ್ಗವಾಗಲಿ ಕಾವ್ಯ' ಎಂದದ್ದು, ಪ್ರಜಾಪ್ರಭುತ್ವದ ರಕ್ಷಣೆ ಮತ್ತು ವಿಸ್ತರಣೆಯ ಜವಾಬ್ದಾರಿ ಹೊತ್ತದ್ದು– ಇತ್ಯಾದಿ ಅಂಶಗಳು ಸಮಾವೇಶಗೊಂಡ ದಿನ ಮುಖ್ಯವಾಗಿ ಕೇಳಿಬಂದವು. ಜೊತೆಗೆ ಬಂಡಾಯ ಸಾಹಿತ್ಯದ ಮುಖ್ಯ ಜವಾಬ್ದಾರಿಯ ಬಗೆಗೂ ಅಭಿಪ್ರಾಯ ಮೂಡಿದವು. ಬಂಡಾಯ ಸಾಹಿತ್ಯ ಸೌಂದರ್ಯದ ಆರಾಧನೆಯಲ್ಲಿ ತೊಡಗುವುದಿಲ್ಲ. ಕೇವಲ ಬೌದ್ಧಿಕ ತುಡಿತವೂ ಅದರ ಉದ್ದೇಶವಾಗಿಲ್ಲ. ಸಾಮಾಜಿಕ ಹೊಣೆಗಾರಿಕೆ ಅದರ ಮುಖ್ಯಗುರಿ. ಜಾತಿ ವರ್ಗಗಳಂಥ ಅಸಮಾನತೆ, ಅನ್ಯಾಯಗಳ ವಿರುದ್ಧ ಶ್ರಮಜೀವಿಗಳನ್ನು ಕ್ರಾಂತಿಗೆ, ಹೋರಾಟಕ್ಕೆ ಸಿದ್ಧಗೊಳಿಸುವುದು ಬಂಡಾಯ ಸಾಹಿತ್ಯದ ಜವಾಬ್ದಾರಿಯಾಗಿದೆ. ಹಾಗಾಗಿ ಈ ಸಾಹಿತ್ಯ ಪರಂಪರೆಗೆ ಒಂದು ತಾತ್ತ್ವಿಕ ನೆಲೆಯೂ ಇದೆ. ಇದು ಯಾವುದೇ ಪರಂಪರೆಯ ವಿರೋಧಿಯಲ್ಲ, ಸಂಪ್ರದಾಯದೊಳಗಿನ ಜಡತ್ವವನ್ನು ವಿರೋಧಿಸುತ್ತದೆ, ಅಮಾನವೀಯತೆಯನ್ನು ಬಗ್ಗು ಬಡಿಯುತ್ತದೆ. ಪ್ರತಿಗಾಮಿತ್ವವನ್ನು ಪ್ರತಿಭಟಿಸುತ್ತಲೇ ಪರಂಪರೆಯೊಂದಿಗೆ ಸಂಬಂಧವನ್ನು ಇಟ್ಟುಕೊಂಡಿದೆ.

ನಮ್ಮ ನಾಡಿನ ಪ್ರಾಚೀನ ಸಾಹಿತ್ಯದ ಇತಿಹಾಸದುದ್ದಕ್ಕೂ ಸಾಮಾಜಿಕ ಪ್ರಜ್ಞೆಯನ್ನು, ಪ್ರತಿಭಟನಾತ್ಮಕ ಧ್ವನಿಗಳನ್ನು ಗುರುತಿಸಬಹುದು. 'ಮಾನವ ಜಾತಿ ತಾನೊಂದೆ ವಲಂ' ಎಂದ ಪಂಪಕವಿಯಿಂದ ಹಿಡಿದು ನವೋದಯ ನವ್ಯದವರೆಗೆ ಜನಪರವಾದ ಧ್ವನಿಗಳನ್ನು ಕೇಳಿಸಿಕೊಳ್ಳಬಹುದು. ಆಯಾ ಕಾಲದ ಸಾಹಿತ್ಯ ತನ್ನ ಮಿತಿಯಲ್ಲಿಯೇ ಪ್ರತಿಭಟನ ಸಾಹಿತ್ಯದ ಆಶಯವನ್ನು ವ್ಯಕ್ತಪಡಿಸಿರುವುದನ್ನು ಗುರುತಿಸಬಹುದು. ವಚನ ಚಳವಳಿ ಸೃಷ್ಟಿಸಿದ ಸಾಹಿತ್ಯ, ನಡೆಸಿದ ಪ್ರಯೋಗಗಳು ಜಾಗತಿಕ ಮಟ್ಟದ ಸಾಹಿತ್ಯವಲಯದಲ್ಲಿ ಚರ್ಚೆಯ ವಸ್ತುವಾದವು. ಅಲ್ಲಿಯವರೆವಿಗೂ ಮೂಕರಾಗಿದ್ದವರಿಗೆ ಮಾತನಾಡುವ ಅವಕಾಶ ಒದಗಿಬಂತು. ಕೆಳವರ್ಗದ ವಚನಕಾರರು ಮೊದಲಬಾರಿಗೆ ನಿರ್ಭೀತಿಯಿಂದ ಬಾಯಿಬಿಟ್ಟರು. ಇವರೆಲ್ಲ ತಮ್ಮ ವಚನಗಳ ಮೂಲಕ ಆತ್ಮ ವಿಮರ್ಶೆಯನ್ನು, ಸಮಾಜ ವಿಮರ್ಶೆಯನ್ನು ಮಾಡಿಕೊಂಡದ್ದಲ್ಲದೆ 'ಸಮಾಜೋ–ಧಾರ್ಮಿಕ ಆಂದೋಲನ'ವಾಗಿ ಪರಿವರ್ತಿತವಾದ ಈ ಚಳವಳಿಯಲ್ಲಿ ಮಾದರಚನ್ನಯ್ಯ, ಡೋಹರ ಕಕ್ಕಯ್ಯ, ಮಾದರ ದೂಳಯ್ಯ–ಮೊದಲಾದ ದಲಿತವರ್ಗದ ಅನುಭವಿಗಳು ಮುಂಚೂಣಿಯಲ್ಲಿ ನಿಂತದ್ದು ಚಾರಿತ್ರಿಕ ದಾಖಲೆಯಾಗಿದೆ. ಕರ್ನಾಟಕದಲ್ಲಿ ಜಾತಿನಿರ್ಮೂಲನೆ ಮಾಡಲು ಪಣತೊಟ್ಟು ಹೊರಟ ಮೊದಲ ಸಾಮಾಜಿಕ ಚಳವಳಿ ಇದಾಗಿದೆ. ಅನಂತರ ರಗಳೆ, ಷಟ್ಪದಿ, ಸಾಂಗತ್ಯ ಮತ್ತು ಕೀರ್ತನೆಗಳಲ್ಲಿ ಕಾವ್ಯಗಳು ರಚನೆಯಾದವು. ದೇಸಿ ಛಂದಸ್ಸಿನಲ್ಲಿ ಪ್ರಯೋಗಗೊಂಡ ಈ ಕಾವ್ಯಗಳು ಜನಭಾಷೆಗೆ ಪ್ರಾತಿನಿಧ್ಯ ನೀಡಿದವು. ವಚನಚಳವಳಿ ನೀಡಿದ ಫಲವನ್ನು ಇವು ನೀಡದಿದ್ದರೂ ಮಡಿವಂತಿಕೆಯ ವಿರೋಧವನ್ನು ವ್ಯಕ್ತಪಡಿಸಿ ಸಾಮಾನ್ಯಜನರ ಬದುಕನ್ನು ಹಸನುಗೊಳಿಸಿದವು. ಸರ್ವಜ್ಞನಂತೂ ತ್ರಿಪದಿಗಳ ಮುಖಾಂತರ ಜಡಗೊಂಡ ಸಮಾಜವನ್ನು ವಿಡಂಬಿಸಿದ, ವೈಯಕ್ತಿಕ ನೆಲೆಯಲ್ಲೇ ಸಮಾಜದ ಅನಿಷ್ಟಗಳನ್ನು ವಿರೋಧಿಸಿ ಬಂಡಾಯಗಾರ ಎನಿಸಿದ. ನವೋದಯ, ನವ್ಯಚಳವಳಿಯೂ ತಮ್ಮ ಮಿತಿಗಳಲ್ಲಿಯೇ ಸ್ಥಗಿತ ಮೌಲ್ಯಗಳನ್ನು ವಿರೋಧಿಸಿದವು. ಸಾಮಾಜಿಕ ಪ್ರಜ್ಞೆಯನ್ನು ಎತ್ತಿಹಿಡಿದವು, ಜನಪರವಾಗಿ ಮುಖಮಾಡಿತು. ಈ ಒಂದು ದೀರ್ಘ ಪರಂಪರೆಗೆ ಕಾರಣವಾದ ಬಂಡಾಯ ಸಾಹಿತ್ಯ ಇಂದು ಹೊಸ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಹೊತ್ತು ಸೃಜನಶೀಲತೆಯಲ್ಲಿ ತನ್ನ ಆಶಯವನ್ನು ಹೊಮ್ಮಿಸುತ್ತಿದೆ.

ಸಾಹಿತ್ಯಿಕ ಪ್ರೇರಣೆಗಳ ಜೊತೆಗೆ ಸಾಹಿತ್ಯೇತರ ಪ್ರೇರಣೆಗಳೂ ಕೆಲಸ ಮಾಡಿದವು. ಮುಖ್ಯವಾಗಿ ಎಡಪಂಥೀಯ ಸಿದ್ಧಾಂತಗಳೆಲ್ಲ ಬಂಡಾಯ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ಇದರ ಮೂಲಕವಾಗಿ ಈ ಪಂಥದ ಲೇಖಕರ ಸೃಜನಶೀಲ ಚಟುವಟಿಕೆಗಳಿಗೆ ಬೆಂಬಲ ಒದಗಿತು. ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್, ಕಿಷನ್ ಪಟ್ನಾಯಕ್, ರಾಮಸ್ವಾಮಿನಾಯರ್, ಜಯಪ್ರಕಾಶನಾರಾಯಣ್– ಇವರೆಲ್ಲರ ಸಿದ್ಧಾಂತಗಳ ಪ್ರಭಾವ ಈ ಸಾಹಿತ್ಯದ ಮೇಲಾಯಿತು. ಹಾಗಾಗಿ ಬಂಡಾಯ ಸಾಹಿತ್ಯ ಎಡನಿಲುವುಗಳಿಗೆ, ದಲಿತ ಕಾಳಜಿಗಳಿಗೆ ಬದ್ಧವಾಯಿತು. ಜೊತೆಗೆ ಯಥಾಸ್ಥಿತಿಯನ್ನು ವಿರೋಧಿಸುತ್ತಲೇ ಸಮಾಜ ಬದಲಾವಣೆಯ ಧೋರಣೆಗೆ ಬದ್ಧವಾಗತೊಡಗಿತು. ಎಲ್ಲ ಜನಪರ ಹೋರಾಟಗಳೊಂದಿಗೆ ಕ್ರಿಯಾತ್ಮಕ ಸಂಬಂಧ ಬೆಳೆಸಲು ಮತ್ತು ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಎಡಪಂಥೀಯ ವಿಚಾರಧಾರೆಯನ್ನು ನೆಲೆಗೊಳಿಸಲು ಬಂಡಾಯ ಸಾಹಿತಿಗಳು ಬದ್ಧರಾದರು. ಅಸಮಾನತೆ ಅನ್ಯಾಯಗಳ ವಿರುದ್ಧ ದಂಗೆ ಏಳುವುದು ಹಾಗೂ ಅಂಥ ಕ್ರಾಂತಿಯ ಹಿನ್ನೆಲೆಯಾಗಿರುವ ಪ್ರಾಮಾಣಿಕತೆಯೇ ಬಂಡಾಯ ಸಾಹಿತ್ಯದ ಮೂಲನೆಲೆ ಎಂದು ತೀರ್ಮಾನಿಸಲಾಯಿತು.

ಹೊಸ ಶತಮಾನಕ್ಕೆ ಕಾಲಿಟ್ಟಿರುವ ಸಂದರ್ಭದಲ್ಲಿ ಬಂಡಾಯ ಸಾಹಿತ್ಯ ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ. ಹಿಂದಿಗಿಂತ ಭಿನ್ನವಾದ ಹೊಸಸಮಸ್ಯೆಗಳು ಮುಂದಿವೆ. ಜಾಗತೀಕರಣ– ಉದಾರೀಕರಣಗಳ ಹೆಸರಿನಲ್ಲಿ ಹೇರುತ್ತಿರುವ ಮೌಲ್ಯಗಳು ಮೂಕ ಸಂಸ್ಕೃತಿಯ ಸಮುದಾಯದ ಸಂಕಟವನ್ನು ಸಾವಿರಪಟ್ಟು ಹೆಚ್ಚಿಸುತ್ತಿವೆ. ಪ್ರಗತಿಪರರು ಪ್ರತಿಪಾದಿಸಿಕೊಂಡು ಬಂದ ಸಮಾಜ ಬದಲಾವಣೆಯ ಚಿಂತನಾಕ್ರಮ ಮತ್ತು ಕ್ರಿಯೆಗಳು ಬಿಕ್ಕಟ್ಟಿಗೆ ಒಳಗಾಗಿವೆ. ಜಾಗತೀಕರಣ ಮತ್ತು ಸ್ವದೇಶೀಕರಣದಲ್ಲಿರುವ ಜನ ವಿರೋಧಿ ನೆಲೆಗಳು ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಸವಾಲುಗಳನ್ನು ಒಡ್ಡುತ್ತಿರುವ ಇಂದಿನ ಸನ್ನಿವೇಶದಲ್ಲಿ ಬಂಡಾಯ ಸಾಹಿತ್ಯ ಆತ್ಮಾವಲೋಕನದೊಂದಿಗೆ ಪುನಶ್ಚೇತನಗೊಳ್ಳುತ್ತಿದೆ. ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ದಲಿತ ಸಂವೇದನೆ, ಮುಸ್ಲಿಂಸಂವೇದನೆ, ಸ್ತ್ರೀಸಂವೇದನೆ, ಗ್ರಾಮೀಣ ಸಂವೇದನೆ– ಇತ್ಯಾದಿ ಹಲವಾರು ಅನುಭವಗಳು ಸಂವೇದನೆಗಳು ಅಭಿವ್ಯಕ್ತಿಗೊಳ್ಳಲು ಬಂಡಾಯ ಸಾಹಿತ್ಯ ಚಳವಳಿ ಕಾರಣವಾಯಿತು. ಈ ಸಾಹಿತ್ಯದ ಧೋರಣೆಗಳು ಉತ್ಸಾಹಗಳು ಏನೇ ಇರಲಿ ಇದರ ಮುಖಾಂತರ ಹಲವು ಮಂದಿ ದಲಿತ ಬರೆಹಗಾರರು ಸಾಹಿತ್ಯಲೋಕದಲ್ಲಿ ಪ್ರಬುದ್ಧಾವಸ್ಥೆಗೆ ಬಂದದ್ದು ಮಹತ್ತ್ವದ ಸಂಗತಿ. ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಮುಳ್ಳೂರು ನಾಗರಾಜ, ವಿ.ಮುನಿವೆಂಕಟಪ್ಪ, ಸಿ.ಪಿ.ಸಿದ್ಧಾಶ್ರಮ, ಎಲ್. ಹನುಮಂತಯ್ಯ, ಸತ್ಯಾನಂದ ಪಾತ್ರೋಟ, ಅರವಿಂದ ಮಾಲಗತ್ತಿ, ಚನ್ನಣ್ಣವಾಲೀಕಾರ, ಬರಗೂರು ರಾಮಚಂದ್ರಪ್ಪ, ಕೆ.ಬಿ.ಸಿದ್ದಯ್ಯ, ಟಿ.ಎಂ. ಭಾಸ್ಕರ್, ಮನಜ, ಅನಸೂಯ ಕಾಂಬಳೆ, ಜಂಬಣ್ಣ ಅಮರಚಿಂತ, ಸುಕನ್ಯಾ ಮಾರುತಿ, ಕೆ. ಗೋವಿಂದರಾಜು, ತೇಜಸ್ವಿನಿ ಕಟ್ಟಿಮನಿ, ಕಗ್ಗೆರೆ ಪ್ರಕಾಶ್, ಮೋಹನ ನಾಗಮ್ಮವರ, ಸಿ.ಎಂ. ಚನ್ನಬಸಪ್ಪ, ಮೂಡ್ನಾಕೂಡು ಚಿನ್ನಸ್ವಾಮಿ, ಗಂಗಾರಾಂ ಚಂಡಾಳ, ಸುಬ್ಬುಹೊಲೆಯಾರ್, ಬಿ.ಟಿ. ಲಲಿತಾ ನಾಯಕ್, ಎ.ಕೆ. ಹಂಪಣ್ಣ, ಎಸ್.ಆರ್. ಗುರುನಾಥ, ಇಂದೂಧರ ಹೊನ್ನಾಪುರ, ಜಾಹ್ನವಿ ಮೊದಲಾದ ಲೇಖಕರು ದಲಿತ ಲೋಕದ ಬದುಕನ್ನು, ಸಂಸ್ಕೃತಿಯನ್ನು, ದುಃಖ ದುಮ್ಮಾನಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದರು.

ಅದರಂತೆಯೇ ಬೊಳುವಾರು ಮಹಮದ್ ಕುಞ, ಸಾರಾ ಅಬೂಬಕರ್, ರಹಮತ್ ತರೀಕೆರೆ, ಫಕೀರ್ ಮಹಮದ್ ಕಟ್ಪಾಡಿ, ಬಾನು ಮುಷ್ತಾಕ್, ರಂಜಾನ್ ದರ್ಗಾ, ನಜೀರ ಚಂದಾವರ, ಅಬ್ದುಲ್ ರಶೀದ್, ಸೈಯದ್ ಜಮಿರುಲ್ಲಾ ಷರೀಫ್, ಕೆ.ಶರೀಫಾ ಮೊದಲಾದವರು ಬಂಡಾಯ ಚಳವಳಿಯ ಪ್ರಭಾವದಡಿಯಲ್ಲಿ ಬಂದವರಾದ್ದರಿಂದ ಮುಸ್ಲಿಂ ಸಂವೇದನೆಗಳನ್ನು ತಮ್ಮ ಬರೆಹಗಳಲ್ಲಿ ಮೂಡಿಸಲು ಸಾಧ್ಯವಾಯಿತು. ವಚನಕಾರ್ತಿಯರಿಂದಲೇ ಸ್ತ್ರೀಸಂವೇದನೆ ಆರಂಭವಾದರೂ ಅದು ಪಾಶ್ಚಾತ್ಯ ಪರಿಕಲ್ಪನೆ

ಯೊಂದಿಗೆ ಹೆಚ್ಚು ಬೆಳಕಿಗೆ ಬಂದದ್ದು ಬಂಡಾಯ ಚಳವಳಿಯ ಸಂದರ್ಭದಲ್ಲಿ. ಈ ಆಶಯದ ಬರೆಹಗಾರ್ತಿಯರನೇಕರು ಬಂಡಾಯ ಚಳವಳಿಯಲ್ಲಿ ಗುರುತಿಸಿಕೊಂಡರು, ವಿಜಯಾ ದಬ್ಬೆ, ಎಚ್.ಎಲ್.ಪುಷ್ಪ, ಆರ್.ಪೂರ್ಣಿಮಾ, ಸಾರಾಅಬೂಬಕರ್, ಬಿ.ಟಿ. ಲಲಿತಾ ನಾಯಕ, ವೈದೇಹಿ, ಮಾಲತಿ ಪಟ್ಟಣಶೆಟ್ಟಿ, ಶಶಿಕಲಾ ವೀರಯ್ಯಸ್ವಾಮಿ, ಸುಕನ್ಯಾಮಾರುತಿ, ಮುಕ್ತಾಯಕ್ಕ, ಸವಿತಾ ನಾಗಭೂಷಣ, ವಿಜಯಶ್ರೀ ಸಬರದ, ಕಮಲಾ ಹಂಪನಾ, ಶೈಲಜಾಉಡಚಣ, ಸ.ಉಷಾ, ಮಮತಾಸಾಗರ, ಪ್ರತಿಭಾ ನಂದಕುಮಾರ್, ಗೀತಾ ನಾಗಭೂಷಣ, ತೇಜಸ್ವಿನಿ ನಿರಂಜನ, ನೇಮಿಚಂದ್ರ, ಎಂ.ಆರ್. ಕಮಲ, ಸುಮಿತ್ರಾಬಾಯಿ ಮೊದಲಾದವರು. ಸ್ತ್ರೀವಾದಿ ನೆಲೆಯ ಬರೆಹಗಳು ಗಮನಾರ್ಹ ಪಾತ್ರವಹಿಸಿವೆ. ಈ ಎಲ್ಲ ರೀತಿಯ ಸಂವೇದನಾ ಶೀಲ ಬರವಣಿಗೆಯಿಂದ ಕೂಡಿ ಮೂಡಿದ ಬಂಡಾಯ ಸಾಹಿತ್ಯ ವಿವಿಧ ರೂಪಗಳಲ್ಲಿ ಬೆಳವಣಿಗೆ ಹೊಂದಿರುವುದು ಕುತೂಹಲಕಾರಿ ಸಂಗತಿ. ಕಾವ್ಯ, ಕತೆ,ಕಾದಂಬರಿ, ನಾಟಕ, ಆತ್ಮಚರಿತ್ರೆ ಇತ್ಯಾದಿ ಪ್ರಕಾರಗಳಲ್ಲಿ ಬಂಡಾಯ ಬರಹಗಾರರು ತಮ್ಮ ಅನುಭವಗಳನ್ನು ಅಭಿವ್ಯಕ್ತಿಸುವುದರ ಮೂಲಕ ಹೊಸ ಸಾಧ್ಯತೆಗಳನ್ನು ತೆರೆದು ತೋರಿದ್ದಾರೆ.

ನಿರ್ಲಕ್ಷಿತ ಶ್ರಮ ಸಂಸ್ಕೃತಿಯ ಸೂಕ್ಷ್ಮಗಳು ಬಂಡಾಯ ಕಾವ್ಯದ ಅಂತಸ್ಸತ್ವವಾದದ್ದಲ್ಲದೆ ಕನ್ನಡಕಾವ್ಯಕ್ಕೆ ಹೊಸ ಆಯಾಮ ಒದಗಿದಂತಾ ಯಿತು. ಹೊಸಭಾಷೆ ಲಯಗಾರಿಕೆಗಳು ರೂಪುಗೊಂಡವು. ಅದರ ಮುಖೇನ ಹೊಸ ವಿನ್ಯಾಸದ ಹುಡುಕಾಟ ತೀವ್ರವಾಯಿತು. 'ಬಂಡಾಯ ಕಾವ್ಯವೆಂದರೆ ಪುನರವಲೋಕನ ಪ್ರಕ್ರಿಯೆ ಮತ್ತು ಸಮಕಾಲೀನ ಸ್ಫೋಟ ಎರಡನ್ನೂ ಒಳಗೊಂಡು ಉರಿಯುವ ಕೆಂಡ'ವೆನಿಸಿತು. ಪುರಾಣ, ಚರಿತ್ರೆ ಮತ್ತು ಸಮಕಾಲೀನ ಸಂಗತಿಗಳನ್ನು ತನ್ನ ಗ್ರಹಿಕೆಯ ಹೊಸ ಒಳನೋಟಗಳಲ್ಲಿ ಪರಿಶೀಲಿಸತೊಡಗಿತು. ತಾವು ಬರೆಯುವ ಕಾವ್ಯದ ಸ್ವರೂಪ, ಪುರಾಣೇತಿಹಾಸಗಳನ್ನು ಹೊಸನೆಲೆಯಿಂದ ಪರಿಭಾವಿಸುವ ರೀತಿ, ಹೋರಾಟ ಜೀವಿಗಳ ವ್ಯಕ್ತಿತ್ವ, ಪ್ರಕೃತಿಚಿತ್ರ, ವಿವಿಧ ಜಾತಿ ಜನವರ್ಗಗಳ ಜೀವನವಿಧಾನ, ಪ್ರಾದೇಶಿಕತೆ, ದುರಂತ– ಇತ್ಯಾದಿಗಳ ವೈವಿಧ್ಯತೆ ಬಂಡಾಯ ಕಾವ್ಯದಲ್ಲಿ ಕಂಗೊಳಿಸಿತು. ಸಿದ್ಧಲಿಂಗಯ್ಯ, ಅಲ್ಲಮ ಪ್ರಭು ಬೆಟ್ಟದೂರ, ಜಿ.ಎಸ್. ಅವಧಾನಿ, ಕೇಶವಪ್ರಸಾದ್, ಜಂಬಣ್ಣ ಅಮರಚಿಂತ, ಬಂಜಗೆರೆ ಜಯಪ್ರಕಾಶ್, ಬರಗೂರು ರಾಮಚಂದ್ರಪ್ಪ, ಕೇಶವಶರ್ಮ, ಆರ್ಕೆಮಣಿಪಾಲ, ಹೊರೆಯಾಲ ದೊರೆಸ್ವಾಮಿ, ಆರ್.ಜಿ.ಹಳ್ಳಿ ನಾಗರಾಜ, ಕುಂ. ವೀರಭದ್ರಪ್ಪ, ಪುರುಷೋತ್ತಮ ಬಿಳಿಮಲೆ, ಕೆ.ಬಿ. ಸಿದ್ದಯ್ಯ, ಎಸ್.ಎಸ್. ಹಿರೇಮಠ, ಮುಳ್ಳೂರು ನಾಗರಾಜ, ಬಸವರಾಜ ಸಬರದ, ಅರವಿಂದ ಮಾಲಗತ್ತಿ, ಆರ್.ವಿ.ಭಂಡಾರಿ, ಸರಜೂ ಕಾಟ್ಕರ್, ಸತ್ಯಾನಂದ ಪತ್ರೋಟ, ನಜೀರ ಚಂದಾವರ, ಮನಜ, ಸುಬ್ಬು ಹೊಲೆಯಾರ್ ಲಕ್ಷ್ಮೀಪತಿ ಕೋಲಾರ್, ವಿ.ಮುನಿವೆಂಕಟಪ್ಪ, ರಂಗಾರೆಡ್ಡಿ ಕೋಡಿರಾಂಪುರ, ಕಾಳೇಗೌಡ ನಾಗವಾರ, ಬಿ.ಚಿನ್ನಸ್ವಾಮಿ– ಮೊದಲಾದವರು ಕಾವ್ಯದಲ್ಲಿ ವಸ್ತು, ವೈವಿಧ್ಯವನ್ನು ರೂಢಿಸಿಕೊಂಡೇ ಉತ್ತಮ ಕಾವ್ಯ ನೀಡಿದವರು. ಅಲ್ಲೇ ಕುಂತವರೆ (ಸಿದ್ದಲಿಂಗಯ್ಯ), ಮಾದಿಗರ ಹುಡುಗಿ (ಬರಗೂರು), ಕೂಲಿಜನಗಳ ಕೋಲಿನಪದ (ಚನ್ನಣ್ಣ ವಾಲೀಕಾರ), ನಮ್ಮೆಲ್ಲರ ಹಣೇಬರ ಕುಂತು ಕೇಳಿರಿ (ತೇಜಸ್ವಿ ಕಟ್ಟೀಮನಿ), ಇದಿಮಾಯಿ, ತಾಯಿಹಾಡು (ಶಂಕರಕಟಗಿ), ಕೂಲೀಕಾರರ ಗೀಗೀಪದ (ಎಸ್.ಎಸ್.ಹಿರೇಮಠ) ಮುಂತಾದ ಖಂಡಕಾವ್ಯ ಕಥನಗೀತೆ ಗಳು ಮತ್ತು ಜನಪದ ಧಾಟಿಯನ್ನು ಅಳವಡಿಸಿಕೊಂಡ ಹೊಸ ಹೊಸ ಪ್ರಯೋಗಗಳು ಬಂಡಾಯ ಕಾವ್ಯದಲ್ಲಿ ನಡೆದಿವೆ.

ಕನ್ನಡ ಪ್ರತಿಭಟನೆ ಕಾವ್ಯ (ಸಿ.ವೀರಣ್ಣ), 1981 ಅಂಬೇಡ್ಕರ್ ಕವಿತೆಗಳು (ಹನುಮಂತಯ್ಯ), ಬಂಡಾಯದ ಬಿಸಿಯುಸಿರು (ಶ್ರೀರಂಗನಾಥ), (ಮೂರ್ತೀಶ್ವರಯ್ಯ), ಕಪ್ಪು ಜನರ ಕೆಂಪುಕಾವ್ಯ (ವಿಜಯ ಪಾಟೀಲ, ಮಂಗ್ಳೂರು ವಿಜಯ) ಹೊಸ ಹೆಜ್ಜೆ (ನರಹಳ್ಳಿ ಬಾಲಸುಬ್ರಹ್ಮಣ್ಯ, ವೀಣಾ ಶಾಂತೇಶ್ವರ), ಅಗ್ನಿಸಾಕ್ಷಿ–1985 (ಜಿ.ಆರ್.ತಿಪ್ಪೇಸ್ವಾಮಿ), ಕಲ್ಯಾಣ ನಾಡಿನ ಕೆಂಪು ಕವಿತೆಗಳು (ಸಬರದ, ವಾಲೀಕಾರ), ಶತಮಾನಗಳ ಬಾಯಾರಿಕೆ (ಶ್ರೀನಿವಾಸರಾಜು, ರಘುನಂದನ, ರಂಜಾನ್ ದರ್ಗ), ಬಂಡಾಯ ಕಾವ್ಯ 1990 (ಸಂ: ಬರಗೂರು ರಾಮಚಂದ್ರಪ್ಪ) ಮೊದಲಾದ ಸಂಕಲನಗಳು ಪ್ರತಿಭಟನಾಕಾವ್ಯದ ವಿವಿಧ ಮಾದರಿಗಳಿಗೆ ಸಾಕ್ಷಿಯಾಗಿವೆ. ಹೊಲೆಮಾದಿಗರ ಹಾಡು (1975), ಕಪ್ಪು ಕಾಡಿನ ಹಾಡು (1983) ಸಾವಿರಾರು ನದಿಗಳು (1979) ಸಂಕಲನಗಳ ಮೂಲಕ ಸಿದ್ದಲಿಂಗಯ್ಯ ಕನ್ನಡ ಕಾವ್ಯಕ್ಕೆ ಈ ಚುರುಕು ಮುಟ್ಟಿಸುವ ಕಾರ್ಯ ಮಾಡಿದರು. ಅನೇಕ ಯುವ ಕವಿಗಳು ಇವರ ಕಾವ್ಯವನ್ನು ಅನುಸರಿಸಿದ್ದೂ ಉಂಟು.

ಬರಗೂರು ರಾಮಚಂದ್ರಪ್ಪ ಅವರು ಆರಂಭದಲ್ಲಿ ನವ್ಯಕಾವ್ಯದ ಪ್ರಭಾವ ರೀತಿಯಲ್ಲಿ ಕಾವ್ಯ ರಚಿಸಿದ್ದರೂ ತಮ್ಮದೇ ಆದ ಸ್ವಂತ ಆಲೋಚನಾ ಧಾಟಿಯನ್ನು ಬಿಟ್ಟುಕೊಡದೆ ಮರಕುಟಿಗ (1973) ಸಂಕಲನ ಪ್ರಕಟಿಸಿದರು. ನೆತ್ತರಲ್ಲಿ ನೆಂದ ಹೂವು (1983) ಸಂಕಲನ ಬರುವ ಹೊತ್ತಿಗಾಗಲೇ ನವ್ಯರಿಗೆ ತದ್ವಿರುದ್ಧವಾಗಿ ಬಂಡಾಯ ಸಾಹಿತ್ಯ ಜನಮುಖಿಯಾಯಿತು, ಸಮಾಜನಿಷ್ಠವಾಯಿತು. ಇಡೀ ಸಮೂಹವೇ ಮಾತನಾಡತೊಡಗಿತು. ಒಂದು ರೀತಿಯ ಭೀತಿರಹಿತ ವಾತಾವರಣವನ್ನು ಸೃಷ್ಟಿ ಮಾಡಿತು. ಹೂವು ಮತ್ತು ನೋವು ಒಂದೇ ಆಗಿ ಒಡಮೂಡಿ ಒತ್ತಡದ ಫಲವಾಗಿ ಈ ಸಂಕಲನ ಹೊರಬಂತು. ಆ ನಂತರ ಬಂದ ಗುಲಾಮಗೀತೆ(1990), ಮಗುವಿನ ಹಾಡು (1993) ಕಾಂಟೆಸಾದಲ್ಲಿ ಕಾವ್ಯ (2001) ಸಂಕಲನಗಳಲ್ಲಿ ಕವನಗಳ ಬಂಧಕ್ಕಿಂತ ಸಂಕಲನದ ಕಡೆಗೆ ವಿಶೇಷ ಗಮನ ಕೊಡಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಕಥಾವಾಹಿನಿಗೆ ಸಿಕ್ಕ ಪ್ರಾಶಸ್ತ್ಯ ಅನನ್ಯವಾದುದು. ನವೋದಯದಿಂದ ದಲಿತ–ಬಂಡಾಯದವರೆಗೆ ಆಯಾ ಪಂಥಗಳ ಆಶಯಗಳಿಗೆ ತಕ್ಕಂತೆಯೇ ಕಥಾ ಸಾಹಿತ್ಯ ಸೃಷ್ಟಿಯಾಗುತ್ತಾ ಬಂತು. ಬಂಡಾಯ ಚಳವಳಿಯ ಸಂದರ್ಭದಲ್ಲೂ ಹಲವಾರು ಕತೆ, ಕಾದಂಬರಿ ಗಳು ಪ್ರಕಟವಾದವು. ಸಾಮಾಜಿಕ ಕಾಳಜಿಯನ್ನು ಮೂಡಿಸುತ್ತಲೇ ಜನಪರವಾದ ಆಶಯವನ್ನು ವ್ಯಕ್ತಪಡಿಸುವುದು ಮುಖ್ಯವಾಯಿತು. ದೇವನೂರರ ದ್ಯಾವನೂರು (1973), ಚನ್ನಣ್ಣವಾಲೀಕಾರರ ಕಪ್ಪುಕತೆಗಳು (1978), ಕುತ್ತದಲ್ಲಿ ಕುದ್ದವರು (1979); ಬರಗೂರು ರಾಮಚಂದ್ರಪ್ಪ ಅವರ ಸುಂಟರಗಾಳಿ (1975), ಕಪ್ಪು ನೆಲದ ಕೆಂಪು ಕಾಲು (1981), ಮೊಗಳ್ಳಿ ಗಣೇಶರ ಬುಗುರಿ (1992) ಕಥನ, ಬೆಸಗರಹಳ್ಳಿ ರಾಮಣ್ಣನವರ ಕತೆಗಳು, ಕನ್ನಂಬಾಡಿ (1986), ಕುಂ.ವೀ.ಅವರ ಚೋಮ ಮತ್ತು ಇತರ ಕಥೆಗಳು, ಪೂರ್ಣಚಂದ್ರ ತೇಜಸ್ವಿಯವರ ಅಬಚೂರಿನ ಪೋಸ್ಟ್ ಆಫೀಸ್ (1997), ಕಾಳೇಗೌಡರ ಬೆಟ್ಟ ಸಾಲುಮಳೆ (1985)– ಇವೆಲ್ಲಾ ದಲಿತರ ದುಃಖದುಮ್ಮಾನಗಳನ್ನು ಗ್ರಾಮೀಣವಲಯದ ಸಂವೇದನೆಗಳನ್ನು ಅಭಿವ್ಯಕ್ತಿಸುವಲ್ಲಿ ಯಶಸ್ಸನ್ನು ಪಡೆದವು. ಶಾಂತರಸರ ಸಮಗ್ರ ಕಥೆಗಳು (1992), ರಾಜಶೇಖರ ನೀರಮಾನ್ವಿ, ಗಿರಿಜಮ್ಮ, ಕಾಳೇಗೌಡ ನಾಗವಾರ, ಗೀತಾ ನಾಗಭೂಷಣ, ಲಲಿತಾ ನಾಯಕ್ ಮೊದಲಾದವರು ಉತ್ತಮ ಕತೆಗಳನ್ನು ನೀಡಿದ್ದಾರೆ. ಅನೇಕ ಮಹತ್ವದ ಬಂಡಾಯ ಕಾದಂಬರಿಗಳೂ ಹೊರಬಂದಿವೆ. ಈ ಪ್ರಕಾರದ ಮುಖಾಂತರ ತಮ್ಮ ತಾತ್ವಿಕ ನಿಲುವುಗ ಳನ್ನು, ಭಾವನೆಗಳನ್ನು ತಾವು ತಲುಪಬೇಕಾದ ಗುರಿಯ ಬಗೆಗಿನ ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ಕೆಲವು ಕಾದಂಬರಿಗಳು ತಮ್ಮ ಆಂತರ್ಯದೊಳಗೇ ಕ್ರಾಂತಿ ಮಾಡಲು ತೊಡಗಿದ್ದರೆ ಇನ್ನು ಕೆಲವು ಬಹಿರಂಗದಲ್ಲಿ ತನ್ನ ಕೆಲಸವನ್ನು ನಿಭಾಯಿಸಿವೆ. ದೇವನೂರು ಮಹಾದೇವ

ಅವರ ಒಡಲಾಳ (1981), ಕುಸುಮಬಾಲೆ (1988), ಮನಜ ಅವರ ಮಾಗಿ (1987), ಅರವಿಂದ ಮಾಲಗತ್ತಿ ಅವರ ಕಾರ್ಯ (1988), ಬರಗೂರರ ಒಂದು ಊರಿನ ಕತೆ (1997), ಸೂರ್ಯ (1997), ಬೆಂಕಿ (1982), ಉಕ್ಕಿನ ಕೋಟೆ (1986), ಶಬರಿ (2005), ಕುಂ.ವಿ.ಅವರ ಕಪ್ಪು (1981), ಕೆಂಡದ ಮಳೆ, ಬೇಲಿ ಮತ್ತು ಹೊಲ (1993), ಲಲಿತಾ ನಾಯಕರ ನೆಲೆಬೆಲೆ, ಸಾರಾ ಅವರ ಚಂದ್ರಗಿರಿಯ ತೀರದಲ್ಲಿ, ಸಹನಾ, ಗೀತಾ ನಾಗಭೂಷಣರ ಚಿಕ್ಕಿಯ ಹರೆಯದ ದಿನಗಳು (1983), ದಂಗೆ, (1997), ಪ್ರಭಾವತಿ ಅವರ ಕುಂತಿ, ನಾಗವೇಣಿ ಅವರ ಗಾಂಧಿ ಬಂದ (1999), ವಾಲೀಕಾರರ ಕೋಟೆಬಾಗಿಲು, ಹುಲಿಗೆಮ್ಮ, ಒಂದು ಹೆಣ್ಣಿನ ಒಳಜಗತ್ತು, ಚದುರಂಗರ ಹೆಜ್ಜಾಲ (1996), ಹೊರೆಯಾಲ ದೊರೆಸ್ವಾಮಿ ಅವರ ಕೂಳೆ (1978), ಕಾ.ತ.ಚಿಕ್ಕಣ್ಣನವರ ಮುಂಜಾವು (1989), ದಂಡೆ (1999), ಬಿಳುಮನೆ ರಾಮದಾಸರ ಕರಾವಳಿ ಹುಡುಗಿ (2004) ಮುಂತಾದ ಕಾದಂಬರಿಗಳು ಪ್ರಮುಖವಾದವು.

ಬಂಡಾಯ ಚಳವಳಿಯ ಸಂದರ್ಭದಲ್ಲಿ ಬೀದಿ ನಾಟಕಗಳು ಹೆಚ್ಚು ಜನಪ್ರಿಯವಾದವು. ಜನರ ಸಮಸ್ಯೆಗಳನ್ನು ಒಳಗೊಂಡ ಹಲವು ಬೀದಿ ನಾಟಕಗಳು ಊರು, ಕೇರಿಗಳಲ್ಲೆಲ್ಲ ಪ್ರದರ್ಶನಗೊಂಡು ಜನಮನವನ್ನು ಆಕರ್ಷಿಸಿದವು. ಸಮುದಾಯ, ಚಿತ್ರಾ ಸಂಘಟನೆಗಳು, ಬೀದಿನಾಟಕಗಳ ಜನಪ್ರಿಯತೆಗೆ ಕಾರಣವಾದವು. ಚಂಪಾ ಅವರ ನಳಕವಿಯ ಮಸ್ತಕಾಭಿ ಷೇಕ (1979), ಬುರುಡೆ ಬಾಬಾನ ಪವಾಡ ಮುಂತಾದವು ವ್ಯಂಗ್ಯ ವಿಡಂಬನೆಯಿಂದ ಕೂಡಿದ್ದರಿಂದಾಗಿ ಜನರನ್ನು ಆಕರ್ಷಿಸಿದವು. ಹಾಗೆಯೇ ಸಿದ್ದಲಿಂಗಯ್ಯ ಅವರ ಕತ್ತೆ ಮತ್ತು ಧರ್ಮ, ಅಲ್ಲೆ ಕುಂತವರೆ, ಕೊಲೆಯ ಹಿಂದಿನ ರಾತ್ರಿ, ಕವಿತೆಗಳು ಉತ್ತಮ ಬೀದಿನಾಟಕಗಳಾಗಿ ಪರಿವರ್ತನೆ ಗೊಂಡವು. ಎಸ್.ಎಸ್.ಹಿರೇಮಠರ ಹಿಷ್ಮಿ ಅಮರ, ಬಸವರಾಜ ಸಬರದರ ಮೂರು ಬೀದಿನಾಟಕಗಳು, ಆರ್.ಕೆ. ಹುಡಗಿಯವರ ಅಕ್ಷರ ಮತ್ತು ಬೆಲ್ಲು, ಬೆಲ್ಚಿ, ನರಗುಂದಬಂಡಾಯ, ಅಲ್ಲೆ ಇದ್ದವರು ಮೊದಲಾದ ನಾಟಕಗಳು ಜನರ ಗಮನ ಸೆಳೆದವು. ಕತ್ತಲೆ ರಾಜ್ಯ, ಪತ್ರೆ ಸಂಗಪ್ಪನ ಕೊಲೆ, ಬಂದರೋ ಬಂದರು, ಮುಖವಿಲ್ಲದವರು, ಮಾರಿಕೊಂಡವರು, ಪಂಚಮ ನೆಲಸಮ, ಕುದುರೆ ಮೋತಿ, ಬೇನೆ, ನಾಳೆ ಯಾರಿಗೂ ಇಲ್ಲ, ಏ ನನ್ನ ಜನರೇ–ಈ ಮೊದಲಾದ ಬೀದಿ ನಾಟಕಗಳು ಬೇರೆ ಬೇರೆ ನಗರ ಹಳ್ಳಿಗಳಲ್ಲಿ ಹೆಚ್ಚು ಪ್ರಯೋಗಗಳನ್ನು ಕಂಡವು. ಕೆಲವು ಬೀದಿನಾಟಕಗಳು ಮಾತ್ರ ಉತ್ತಮ ಪರಿಣಾಮವನ್ನುಂಟುಮಾಡಿದರೆ ಅನೇಕ ಬೀದಿನಾಟಕಗಳು ಕೇಸ್ ಹಿಸ್ಟರಿ ತರಹ ವರದಿಯ ಮಾದರಿಯಲ್ಲಿ ವಾಚ್ಯವಾದವು. ಬೀದಿನಾಟಕಗಳ ಬಗೆಗೆ ಹೆಚ್ಚಿನ ವಿಮರ್ಶೆಯೂ ಬರಲಿಲ್ಲ. ಬಂಡಾಯ ಸಂದರ್ಭದಲ್ಲಿ ಸ್ವತಂತ್ರ ನಾಟಕಗಳು ರಚನೆಯಾದ ಸಂಖ್ಯೆಗಿಂತ ಅಧಿಕ ಸಂಖ್ಯೆಯಲ್ಲಿ ಅನುವಾದ ನಾಟಕಗಳು, ರೂಪಾಂತರ ನಾಟಕಗಳೇ ಪ್ರಯೋಗಗೊಂಡವು. ಬ್ರೆಕ್ಟನ ಗೆಲಿಲಿಯೊ, ತಾಯಿ, ಕಕೇಷಿಯನ್ ಚಾಕ್ ಸರ್ಕಲ್, ತ್ರಿಪೆನ್ನಿಅಪೇರದಂತಹ ಪ್ರಮುಖ ಅನುವಾದಿತ ನಾಟಕಗ ಳನ್ನಿಲ್ಲಿ ಹೆಸರಿಸಬಹುದು. ಇದರ ಜೊತೆಗೆ ಷೇಕ್‌ಸ್ಪಿಯರ್, ಆಲ್ಬರ್ಟ್ ಇಬ್ಸನ್, ಬರ್ನಾರ್ಡ್‌ಷಾ, ಬೆಕೆಟ್–ಈ ಮೊದಲಾದ ಪಾಶ್ಚಾತ್ಯ ನಾಟಕಕಾ ರರ ನಾಟಕಗಳು ಕನ್ನಡದಲ್ಲಿ ದೊರೆತವು. ಕೆ.ವಿ.ಸುಬ್ಬಣ್ಣ, ಎಸ್.ಮಾಲತಿ, ಹೇಮಾಪಟ್ಟಣಶೆಟ್ಟಿ, ಸಿದ್ದಲಿಂಗಪಟ್ಟಣಶೆಟ್ಟಿ, ಲೋಹಿತಾಶ್ವ, ಗೋಪಾಲ ವಾಜಪೇಯಿ ಈ ಮೊದಲಾದ ಲೇಖಕರು ಅನೇಕ ಮಹತ್ವದ ನಾಟಕಗಳನ್ನು ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸಿದರು. ಅನೇಕ ನಾಟಕಗಳು ಬಂಗಾಲಿ, ಮರಾಠಿ, ಹಿಂದಿಯಿಂದಲೂ ಅನುವಾದ ಗೊಂಡವು. ಎಂ.ಪಿ. ಪ್ರಕಾಶ್ ಅವರು ಅನುವಾದಿಸಿದ 'ಸೂರ್ಯಶಿಕಾರಿ' ಗಮನಸೆಳೆಯಿತು. ಕುರಿ, ಮುಖ್ಯಮಂತ್ರಿ, 'ತಾಮ್ರಪತ್ರ'ದಂತಹ ಇತರ ಭಾಷೆಯ ನಾಟಕಗಳು ರಾಜಕೀಯ ಪ್ರಜ್ಞೆಯನ್ನು ಮೂಡಿಸಿದವು.

ಇದುವರೆಗೆ ಗಮನಿಸಿದಂತೆ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಸೃಜನಶೀಲ ಪ್ರಕಾರಗಳು ಹೆಚ್ಚು ಬೆಳೆದುಬಂದವು. ಆದರೆ ಲಲಿತ ಪ್ರಬಂಧಗಳಿಗಿಂತ ವೈಚಾರಿಕ ಬರಹಗಳು ವಿಪುಲವಾಗಿಯೇ ಕಾಣಿಸಿಕೊಂ ಡವು. ನವೋದಯ ನವ್ಯ ಪ್ರಗತಿಶೀಲ ಚಳವಳಿಯ ಸಂದರ್ಭದ ಪ್ರಬಂಧಗಳಿಗಿಂತ ಮಿಗಿಲಾದ ರೀತಿಯಲ್ಲಿ ವೈಚಾರಿಕ ಪ್ರಖರತೆ ಅಭಿವ್ಯಕ್ತ ವಾದದ್ದನ್ನು ಗಮನಿಸಬಹುದು. ಸಾಹಿತ್ಯ ಮತ್ತು ರಾಜಕಾರಣ (1981), ಸಂಸ್ಕೃತಿ ಮತ್ತು ಸೃಜನಶೀಲತೆ (1991) (ಬರಗೂರು ರಾಮಚಂದ್ರಪ್ಪ), ಪ್ರತಿಸಂಸ್ಕೃತಿ (1993) (ರಹಮತ್ ತರೀಕೆರೆ), ಅವತಾರಗಳು (ಸಿದ್ದಲಿಂಗಯ್ಯ), ಸೊಲ್ಲು (ಮೊಗಳ್ಳಿಗಣೇಶ), ಮಹಿಳೆ ಬಿಡುಗಡೆಯ ಹಾದಿಯಲ್ಲಿ (ಎನ್. ಗಾಯಿತ್ರಿ), ಭಾರತೀಯ ಸ್ತ್ರೀವಾದ (ಮನುಚಕ್ರವರ್ತಿ), ದಲಿತಚಳವಳಿ ಒಂದು ಅವಲೋಕನ (ಮುನಿವೆಂಕಟಪ್ಪ), ಕನ್ನಡ ದಲಿತ ಸಾಹಿತ್ಯದ ನೆಲೆ(2001) (ಜಿ.ಆರ್. ತಿಪ್ಪೇಸ್ವಾಮಿ), ವಿಚಾರಸಂಪದ (ಸಬರದ), ದಲಿತ ಲೋಕದ ಒಳಗೆ (1990, ಎಲ್.ಹನುಮಂತಯ್ಯ), ವೇದಾಂತ ರೆಜಿಮೆಂಟ್ ಮತ್ತು ಇತರ ವೈಚಾರಿಕ ಬರೆಹಗಳು, ಪವಾಡಪರೀಕ್ಷೆ (ಬಿ.ವಿ. ವೀರಭದ್ರಪ್ಪ), ಕೋಮುವಾದ ಮತ್ತು ಜನಸಂಸ್ಕೃತಿ (ಪುರುಷೋತ್ತಮ ಬಿಳಿಮಲೆ), ರಾಮ ಅಳುತ್ತಿದ್ದಾನೆ (1992, ಹಿ.ಶಿ.ರಾ), ರಾಷ್ಟ್ರೀಯತೆ ಮತ್ತು ಮುಸ್ಲಿಮರು (ಫಕೀರ್ ಮಹಮದ್ ಕಟ್ಪಾಡಿ), ತೆರೆದ ಮನ (1992) (ಎಚ್.ನರಸಿಂಹಯ್ಯ) ಮುಂತಾದ ಹಲವಾರು ಬಂಡಾಯ ಕೃತಿಗಳು ವಿಚಾರಸಾಹಿತ್ಯಕ್ಕೆ ಕೊಡುಗೆಗಳಾದುವು. ಅಲ್ಲದೆ ಸಿದ್ದಲಿಂಗಯ್ಯ ಅವರ ಊರುಕೇರಿ (1996), ಮಾಲಗತ್ತಿಯವರ ಗೌರ್ನಮೆಂಟ್ ಬ್ರಾಹ್ಮಣ (1994), ತುಂಬಾಡಿ ರಾಮಯ್ಯ ಅವರ ಮಣೆಗಾರ, ಗೋವಿಂದ ರಾಜು ಅವರ ಮನವಿಲ್ಲದವರ ಮಧ್ಯೆ ಈ ಆತ್ಮಕಥೆಗಳು ದಲಿತಲೋಕದ ವಿಶಿಷ್ಟಾನುಭವಗಳನ್ನು ಅಭಿವ್ಯಕ್ತಿಸುವಲ್ಲಿ ಸಾರ್ಥಕತೆಯನ್ನು ಪಡೆದವು. ಬಂಡಾಯ ಸಾಹಿತ್ಯ ವಿಮರ್ಶೆಗೆ ತಮ್ಮದೇ ಆದ ವಿಶಿಷ್ಟ ಮಾನದಂಡಗಳಿವೆ ಎಂಬುದನ್ನು ಬರಗೂರು ರಾಮಚಂದ್ರಪ್ಪ ಅವರು ಬಂಡಾಯ ಸಾಹಿತ್ಯ ಮೀಮಾಂಸೆಯಲ್ಲಿ (1991) ಪ್ರಪ್ರಥಮ ಬಾರಿಗೆ ಚರ್ಚಿಸಿ ಬಂಡಾಯ ಸಾಹಿತ್ಯ ವಿಮರ್ಶೆಗೆ ಅಡಿಪಾಯ ಹಾಕಿದರು.

ಬಸವರಾಜ ಸಬರದ ಹೇಳುವಂತೆ 'ತುರ್ತು ಪರಿಸ್ಥಿತಿಯ ಕರಾಳಛಾಯೆ' ಕಳೆದು 23ವರ್ಷಗಳಾಗುತ್ತ ಬಂದವು. ಅದೇ ಸಂದರ್ಭದಲ್ಲಿ ಮೊಳಕೆ ಯೊಡೆದ ಬಂಡಾಯದ ಬೀಜ, ನಂತರದ ಮೂರು ವರ್ಷಗಳಲ್ಲಿ ಅಂದರೆ 1979ರಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಸಸಿಯಾಗಿ ಕಾಣಿಸಿಕೊಂಡಿತು. ಅಂದರೆ ಬಂಡಾಯ ಚಳವಳಿಗೆ ಈಗ ಬೆಳ್ಳಿಹಬ್ಬ ಆಚರಿಸುವ ದಿನಗಳು ಸಮೀಪಿಸಿವೆ. ಈ ಎರಡೂವರೆ ದಶಕಗಳ ಅವಧಿಯಲ್ಲಿ ಬಂಡಾಯ ಚಳವಳಿಯ ಒಳಗಡೆಯಿದ್ದ ಲೇಖಕರು ಬಂಡಾಯದ ವಕ್ತಾರರಂತೆ ಮಾತನಾಡಿದ್ದಾರೆ. ಈಗ ಬಂಡಾಯ ಸಸಿಯಲ್ಲ, ಎರಡೂವರೆ ದಶಕಗಳಲ್ಲಿ ಮರವಾಗಿ ಬೆಳೆದುನಿಂತಿದೆ. ಈ ಸಂದರ್ಭ ದಲ್ಲಿ ನಾವು ಸಂಘಟನೆ, ಸಾಹಿತ್ಯ ಕುರಿತಂತೆ ನಿಷ್ಠುರವಾಗಿ ಮಾತನಾಡದಿ ದ್ದರೆ, ಆತ್ಮವಿಮರ್ಶೆ ಮಾಡಿಕೊಳ್ಳದಿದ್ದರೆ, ಕಾಲದ ದವಡೆಯಲ್ಲಿ ಕಳೆದುಹೋಗುತ್ತೇವೆ. ಬಂಡಾಯ ಸಂಘಟನೆಯ ಹಾಗೂ ಅದರಿಂದ ಉತ್ಪತ್ತಿಯಾದ ಸಾಹಿತ್ಯದ ಸೋಲು ಗೆಲುವುಗಳನ್ನು ಗಮನಿಸದಿದ್ದರೆ, ವಿಮರ್ಶೆಗೊಳಪಡಿಸದಿದ್ದರೆ ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ. ಆದುದರಿಂದ ಈಗ ಆತ್ಮವಿಮರ್ಶೆಯ ಜತೆಗೆ ಸಾಹಿತ್ಯ –ಸಂಘಟನೆಗಳ ವಿಮರ್ಶೆಯನ್ನೂ ಮಾಡಬೇಕಾಗಿದೆ. **(ಜಿ.ಆರ್.ಟಿ.)**

**ಬಂಡಿಹಬ್ಬ:** ಒಂದು ಜನಪದ ಹಬ್ಬ. ಗ್ರಾಮದೇವತೆಯ ಹೆಸರಿನಲ್ಲಿ ನಡೆಸುವ ಈ ಹಬ್ಬವನ್ನು ಕೆಲವು ಕಡೆ ಹಸುರುಬಂಡಿ ಎಂದೂ ಕರೆಯುತ್ತಾರೆ. ಹಸುರೆಲೆಯ ತೋರಣ, ತೆಂಗಿನ ಗರಿ, ಅಡಕೆ,

ಹೊಂಬಾಳೆ ಇವುಗಳಿಂದ ಬಂಡಿಯನ್ನು (ಎತ್ತಿನಗಾಡಿ ಅಥವಾ ರಥ) ಅಲಂಕರಿಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ ಎನ್ನಲಾಗಿದೆ. ಹಬ್ಬದ ಆಚರಣೆಯಲ್ಲಿ ಸ್ಥಳದಿಂದ ಸ್ಥಳಕ್ಕೆ ಕೆಲವು ವೈಶಿಷ್ಟ್ಯಗಳಿವೆ.

ಹಳೆಯ ಮೈಸೂರು ಪ್ರದೇಶದಲ್ಲಿ ಈ ಹಬ್ಬ ನಡೆಯುವುದು ಸಾಧಾರಣವಾಗಿ ಮಂಗಳವಾರ. ಗ್ರಾಮದೇವತೆಯ ವಿಗ್ರಹವನ್ನು ತಾತ್ಕಾಲಿಕವಾಗಿ ಮಣ್ಣಿನಲ್ಲಿ ಬಹು ಸುಂದರವಾಗಿ ನಿರ್ಮಿಸಿರುತ್ತಾರೆ. ಅಕ್ಕಿ, ತೆಂಗಿನಕಾಯಿ ರಾಸಿ ರಾಸಿ ಬಿದ್ದಿರಲಾಗಿ ಗ್ರಾಮದೇವತೆ ಒಕ್ಲೂನ ಹಾಸ್ಕೊಂಡು ಒಕ್ಲೂನ ಹೊದ್ದು ಕಿವಿಯಲ್ಲಿ ಮುತ್ತಿಕ್ಕಿದ ಓಲೆ ತೊಟ್ಟು ಕಿಡಗಣ್ಣಿಯಾಗಿ ಮೆರೆಯುತ್ತಾಳೆ. ಭಕ್ತರು ಬಾಗಿಲಿಗೆ ಛತ್ರಿ ಏರಿಸುತ್ತಾರೆ. ಏಳೂರು ಸಿಡಿಗಳು ಬರುತ್ತವೆ. ಹೆಡಗೇಲಿ ಹಣ್ಣು, ಗಡಿಗೇಲಿ ತುಪ್ಪ, ಇಡಗಾಯಿ ಕುರಿಗಳ ಸಾಲು. ಮಡಲಕ್ಕಿ ಎಲ್ಲ ಬರುತ್ತವೆ. ಕೆಲವಾರು ಊರುಗಳಲ್ಲಿ ಕೊಂಡ ಸಹ ಹಾಯುತ್ತಾರೆ. ಮೆರವಣಿಗೆಯಲ್ಲಿ ದೊಡ್ಡ ದೊಡ್ಡ ಪಂಜುಗಳು ಉರಿಯುತ್ತವೆ. ಭಕ್ತರು ಭಕ್ತಿಯಿಂದ ದೇವತೆಯ ಮಹಿಮೆಯನ್ನು ಕುರಿತು ಹಾಡುತ್ತಾರೆ. ದೇವತೆಯನ್ನು ಬಂಡಿಯ ಮೇಲೆ ಮೆರವಣಿಗೆಯಲ್ಲಿ ಕೊಂಡೊಯ್ಯುವಾಗ ಅಕ್ಕಪಕ್ಕದಲ್ಲಿ ದಾಸ ಮತ್ತು ಪುರುಷ (ಧಾರ್ಮಿಕ ಪೂಜಾರಿ) ಇರುತ್ತಾರೆ. ದಾಸ ಹೆಗಲ ಮೇಲೆ ಕಿರುಗಂಟೆ ಕಟ್ಟಿದ ಒಂದು ಒನಕೆ, ಎಡಕಂಕುಳಲ್ಲಿ ಕಡಾಸು, ಬವನಾಸಿ, ಬಲ ಕಂಕುಳಲ್ಲಿ ತುತ್ತೂರಿ, ಬಾಂಕಿ, ಶಂಖ, ಎದೆಯ ಮೇಲೆ ಆನೆಯ ವಿಗ್ರಹ, ಬಲಗೈಯಲ್ಲಿ ಜಾಗಟೆ ಹಿಡಿದಿರುತ್ತಾನೆ. ಪುರುಷ ಭೈರವನ ಶಿಷ್ಯ, ಈತ ಕಬ್ಬಿಣದ ದೊಡ್ಡ ತ್ರಿಶೂಲ ಮತ್ತು ಬೆಳ್ಳಿಯ ಸಣ್ಣ ತ್ರಿಶೂಲಗಳನ್ನು ಸೇರಿಸಿದ ನವಿಲುಗರಿ ಕಂತೆಯನ್ನು ಹೆಗಲಮೇಲೆ ಇಟ್ಟುಕೊಂಡು ಕಂಕುಳಲ್ಲಿ ವಿಭೂತಿ ಚೀಲ, ಕೈಯಲ್ಲಿ ಜಿಂಕೆಯ ಕೊಂಬಿನ ವಾದ್ಯ, ತೀರ್ಥದ ಬಟ್ಟಲು ಹಿಡಿದಿರುತ್ತಾನೆ. ಸುಮಂಗಲಿಯರು ಐರಣ (ಪಂಚಕಲಶ) ಹೊತ್ತು ನಡೆಯುವರು. ಒಬ್ಬ ವ್ಯಕ್ತಿ ಬಣ್ಣ ಹಾಕಿದ ಮರದ ಕುದುರೆಯ ಕತ್ತನ್ನು ಕಂಕುಳಲ್ಲಿ ಹಿಡಿದುಕೊಂಡು ಕುಣಿಯುತ್ತಾನೆ. ಗ್ರಾಮದೇವತೆಗೆ ಹರಕೆ ಹೊತ್ತವರೆಲ್ಲ ತಮ್ಮ ತಮ್ಮ ಶಕ್ತ್ಯಾನುಸಾರ ಹರಕೆ ತಂದೊಪ್ಪಿಸುತ್ತಾರೆ; ಕುರಿ ಕೋಳಿ ಆಡುಗಳ ಬಲಿಯನ್ನು ಅರ್ಪಿಸುತ್ತಾರೆ. ಕೋಲಾಟ, ದೊಣ್ಣೆವರಸೆ, ರಮಡೋಲು, ಬಾಣಬಿರುಸಿನ ಐಭೋಗ ನಡೆಯುತ್ತದೆ. ಅನಂತರ ಬಾಡೂಟದ ಔತಣ. ಔತಣದ ಅನಂತರ ಕೊಂಬು ಕಹಳೆ, ತುತ್ತೂರಿ, ಬಾಂಕಿ ಕುಣಿಮಿಣಿ, ತಾಳ ತಮಟೆ ಮೌರಿಗಳ ಕೋಲಾಹಲದೊಂದಿಗೆ ವೀರಕುಣಿತವಿರುತ್ತದೆ. ಈ ಕುಣಿತದ ಮುಕ್ತಾಯದೊಡನೆ ಹಬ್ಬದ ಆಚರಣೆ ಕೊನೆಗೊಳ್ಳುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಸೀಮೆಯಲ್ಲಿ ಮೇ ತಿಂಗಳಲ್ಲಿ ನಡೆಯುವ ಬಂಡಿಹಬ್ಬ ವೈಶಿಷ್ಟ್ಯಪೂರ್ಣವಾದುದು. ಅದರಲ್ಲೂ ಅಂಕೋಲೆ ಸೀಮೆಯ ಬಂಡಿಹಬ್ಬ ಬಹು ಪ್ರಸಿದ್ಧ. ಇಲ್ಲಿಯ ನಾಡದೇವತೆ ಶಾಂತಾದುರ್ಗ (ಭೂಮಿ ತಾಯಿ).ಈಕೆಯ ಹೆಸರಿನಲ್ಲಿ ಈ ಹಬ್ಬದ ಆಚರಣೆ ಪ್ರತಿವರ್ಷ ಅಕ್ಷಯ ತೃತೀಯೆಯ ದಿನ ಸೇಸೆ ಹಾಕುವ ವಿಧಿಯಿಂದ ಪ್ರಾರಂಭವಾಗಿ ಹನ್ನೆರಡನೆಯ ದಿನ ಅಂದರೆ ವೈಶಾಖ ಶುದ್ಧ ಪೂರ್ಣಿಮೆಯಂದು ಮುಗಿಯುತ್ತದೆ. ಕೆಲವು ಸಂದರ್ಭಗಳಲ್ಲಿ ಹನ್ನೆರಡು ದಿನಗಳ ಹಬ್ಬದ ಬದಲು ಒಂಬತ್ತು ದಿನಗಳ ಹಬ್ಬ ಆಚರಿಸುವುದೂ ಉಂಟು.

ಊರಗಾಂವಕಾರರು, ಪೂಜಾರಿಗಳು, ದೇವಸ್ಥಾನದ ಮೊಕ್ತೇಸರರು ಸಭೆ ಸೇರಿ ಹಬ್ಬ ನಡೆಸುವ ದಿನ ನಿಶ್ಚಯಿಸಿ ಗ್ರಾಮದ ಜನರಿಗೆ ಸುದ್ದಿ ತಿಳಿಸುತ್ತಾರೆ. ಈ ಕ್ರಮಕ್ಕೆ 'ಒಂದು ಹೊತ್ತಿಗೆ ಹೇಳುವುದು' ಎನ್ನುತ್ತಾರೆ. ಆ ದಿನ ದೇವರಿಗೆ ಪೂಜೆ, ಉಪಾರ (ಉಪಾಹಾರ) ಆಗಬೇಕು. ದೇವಕಾರ್ಯಕ್ಕೆ ಸಂಬಂಧಪಟ್ಟವರಿಗೆಲ್ಲ ಆ ದಿನ ಒಂದೇ ಊಟ. ಬಂಡಿ ಹಬ್ಬ ನಡೆಯುವ ಊರುಗಳಲ್ಲಿ ಅದನ್ನು ನಡೆಸುವ ಮುನ್ನ ಪೂರ್ವಭಾವಿಯಾಗಿ ಆ ವರ್ಷದಲ್ಲಿ 'ಅವಲಹಬ್ಬ' ಎಂಬ ವಿಶೇಷ ಹಬ್ಬವೊಂದು ನಡೆಯಲೇಬೇಕೆಂಬ ಕಡ್ಡಾಯ ವಿಧಿ ಇದೆ. ಅವಲಹಬ್ಬ ಹಿಂದೆಯೇ ಮುಗಿದಿರದಿದ್ದರೆ ಒಂದು ಹೊತ್ತಿನ ಮಾರನೆಯ ದಿನ ಅಂದರೆ ಸೇಸೆ ಹಾಕುವ ಪೂರ್ವದಲ್ಲಿ ಅವಲಹಬ್ಬವನ್ನು ಆಚರಿಸಿ ಅದರ ಮಾರನೆಯ ದಿನ ಸೇಸೆ ಹಾಕುವ ವಿಧಿ ನೆರವೇರಿಸುತ್ತಾರೆ. ಸೇಸೆ ಹಾಕಿದ ದಿನದಿಂದ ಬಂಡಿಹಬ್ಬದ ಮೊದಲಿನವರೆಗೆ, ಅಂದರೆ 'ಜಾಗರ'ದ ದಿನದವರೆಗೆ ಪ್ರತಿನಿತ್ಯ ಸಾಯಂಕಾಲ ಗುನಗನ (ಪೂಜಾರಿ) ತಲೆಯ ಮೇಲೆ ಕಳಶದೇವರನ್ನು ಹೊರಿಸಿಕೊಂಡು ವಾದ್ಯ ಓಲಗಗಳೊಂದಿಗೆ ಒಯ್ಯಲಾಗುತ್ತದೆ. ಈ ಕಲಶ ಹೊರುವ ಗುನಗರು ಸಾಮಾನ್ಯವಾಗಿ ಕುಂಬಾರ, ಹಾಲಕ್ಕಿ ಒಕ್ಕಲು ಜಾತಿಗೆ ಸೇರಿದವರಾಗಿರುತ್ತಾರೆ. ವಾದ್ಯ ಓಲಗದವರು ಆಗೇರು ಮತ್ತು ಹಳ್ಳೇರ ಜಾತಿಯವರಾಗಿರುತ್ತಾರೆ. ಈ ಮೆರವಣಿಗೆಯಲ್ಲಿ ಕಟಿಗಿದಾರರು, ಮೊಕ್ತೇಸರರು, ಭಕ್ತಾದಿಗಳು ಇರುತ್ತಾರೆ. ಮೆರವಣಿಗೆ ಕಲಶ ದೇವಸ್ಥಾನದಿಂದ ಹೊರುಟು ಅಮ್ಮನವರ ದೇವಸ್ಥಾನ ಮತ್ತು ಇತರ ಮುಖ್ಯ ದೇವಸ್ಥಾನಗಳಿಗೆ ಹೋಗಿ ಆಡುಕಟ್ಟೆಗೆ ಬಂದ ಮೇಲೆ ಅಲ್ಲಿ ಕಲಶದೇವರನ್ನು ಕೂಡಿಸಿ ಪೂಜಾ ವಿಧಿಗಳನ್ನು ನಡೆಸಲಾಗುತ್ತದೆ. ಕಟ್ಟಿಗೆದಾರರು ವೃತ್ತಾಕಾರದಲ್ಲಿ ದೇವರ ಎದುರಿನಲ್ಲಿ ಚಲಿಸಿ ತಮ್ಮ ಕೈಯಲ್ಲಿರುವ ಬೆಳ್ಳಿ ಕಟ್ಟಿಗೆ ಅಥವಾ ಬೆಳ್ಳಿ ಕೋಲಿನಿಂದ ದೇವರಿಗೆ ವಂದನೆ ಸಲ್ಲಿಸುತ್ತಾರೆ. ಆಮೇಲೆ ಕಟ್ಟಿಗೆಯಿಂದ ಮಾಡಿದ ಊರದೇವತೆಗಳ ಬಣ್ಣದ ಮುಖವರ್ಣಿಕೆಗಳ ಆಕರ್ಷಕ ಮುಖವಾಡಗಳನ್ನು ಒಂದೊಂದಾಗಿ ಧರಿಸಿ ಗುನಗನೊಬ್ಬ ವಾದ್ಯದ ಹಿನ್ನೆಲೆಯಲ್ಲಿ ನಿರ್ದಿಷ್ಟ ಕ್ರಮದಲ್ಲಿ ಹೆಜ್ಜೆಯಿಟ್ಟು ಮುಂದೆ ಹಿಂದೆ ಚಲಿಸಿ ಮುಖವಾಡ ಆಡಿಸುತ್ತಾನೆ. ಅವನ ಬಲಗೈಯಲ್ಲಿ ಇರುವ ಕಿರುಕಟ್ಟಿಗೆಯನ್ನು (ಚಿಕ್ಕಬೆಳ್ಳಿ ಕೋಲು) ಆ ತಾಳಕ್ಕೆ ತಕ್ಕಂತೆ ಮುಖವಾಡದ ಚಲನೆಗೆ ಹೊಂದಿಸಿ ತಿರುಗಿಸುತ್ತಿರುತ್ತಾನೆ. ಅನಂತರ ಹಗರಣ ಪ್ರಾರಂಭವಾಗುತ್ತದೆ.

ಮೊತ್ತಮೊದಲಿನ ಹಗರಣ ಬೇಸಾಯಕ್ಕೆ ಸಂಬಂಧಿಸಿದಂತೆ ಇರುತ್ತದೆ. ನೇಗಿಲು ಕಟ್ಟಿ ಉಳುವುದು, ಬೀಜಬಿತ್ತುವುದು, ಹಕ್ಕಿಕಾಯುವುದು ಇತ್ಯಾದಿಗಳನ್ನು ಅನುಕರಣೆ ಮಾಡಲಾಗುತ್ತದೆ. ಮನುಷ್ಯರೇ ಎತ್ತುಗಳಂತೆ, ಹಕ್ಕಿಗಳಂತೆ ನಟಿಸುತ್ತಾರೆ. ಅನಂತರದ ಹಗರಣಗಳಲ್ಲಿ ಊರಿನ ವಿದ್ಯಮಾನಗಳನ್ನು ಅತಿರಂಜಿಸುವುದರ ಮೂಲಕ ಹಾಸ್ಯಪೂರ್ಣವಾಗಿಯೂ ವಿಡಂಬನಾತ್ಮಕವಾಗಿಯೂ ಅನುಕರಿಸಿ ತೋರಿಸುತ್ತಾರೆ. ಇಂಥ ಹಗರಣಗಳನ್ನು ಯಾವ ಜಾತಿಯವರು ಅಥವಾ ಯಾವ ಊರಿನವರು ಬೇಕಾದರೂ ಮಾಡುವುದಕ್ಕೆ ಅವಕಾಶವುಂಟು. ಗೇಲಿಗೆ ಕಾರಣರಾದ ವ್ಯಕ್ತಿಗಳು ಅಲ್ಲೇ ಇದ್ದರೂ ಅವರು ಕೋಪಗೊಂಡು ಜಗಳ ತೆಗೆಯುವಂತಿಲ್ಲ. ಮುಯ್ಯಿ ತೀರಿಸುವ ಛಲ ಇದ್ದರೆ ತಮ್ಮನ್ನು ಗೇಲಿಮಾಡಿದವರ ಇಲ್ಲವೆ ಅಂಥವರ ಹತ್ತಿರದ ಸಂಬಂಧಿಕರ ಬದುಕಿನ ಸಂದರ್ಭಗಳನ್ನು ಆಯ್ದುಕೊಂಡು ಅತಿರಂಜಿಸಿ, ಅನುಕರಿಸಿ ಗೇಲಿಮಾಡಬಹುದು. ಈ ಹಗರಣದ ಕಾರ್ಯಕ್ರಮ ಹೆಚ್ಚಾಗಿ ಪರಿಚಿತ ವ್ಯಕ್ತಿಗಳಿಗೆ ಸಂಬಂಧಿಸಿದಂಥದೇ ಆಗಿರುವುದು ಸಾಮಾನ್ಯವಾದ್ದರಿಂದ ಸುತ್ತಮುತ್ತಲಿನ ಊರುಗಳ ಗಂಡಸರು ಹೆಂಗಸರು ಮಕ್ಕಳು ಎಲ್ಲರೂ ಬಹುಸಂಖ್ಯೆಯಲ್ಲಿ ಸೇರುತ್ತಾರೆ. ಪೂಜಾರಿ ಆಡಿಸುವ ಮುಖವಾಡಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗುತ್ತದೆ. ಆಯಾ ದಿನಗಳಲ್ಲಿ ಆಡಿಸಬೇಕಾದಷ್ಟು ಮುಖವಾಡಗಳನ್ನು ಆಡಿಸಿ ಮುಗಿಸಿದ ಮೇಲೆ ಹಗರಣಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಒಂದು ಮುಖವಾಡ ಆಡಿಸುವುದಕ್ಕೂ ಇನ್ನೊಂದನ್ನು ಆಡಿಸುವುದಕ್ಕೂ ನಡುವೆ

ಹಗರಣಕ್ಕೆ ಅಗತ್ಯವಾದಷ್ಟು ಕಾಲಾವಕಾಶ ನೀಡಲಾಗುತ್ತದೆ. ಇನ್ನು ಅಂದಿನ ಹಗರಣಗಳೆಲ್ಲ ಮುಗಿದುವು ಎಂಬುದನ್ನು ತಿಳಿದುಕೊಂಡ ಮೇಲೆಯೇ ಆ ದಿನದ ಕೊನೆಯ ಮುಖವಾಡ ಆಡಿಸುತ್ತಾರೆ. ಈ ಹಗರಣ ಪ್ರತಿದಿನ ರಾತ್ರಿ ಅಂದರೆ ಬಂಡಿಹಬ್ಬದ ಮೊದಲನೆಯ ದಿನದ ತನಕವೂ ನಡೆಯುತ್ತದೆ. ಆ ದಿನ ಮಾತ್ರ ಇಡೀ ರಾತ್ರಿ ಜಾಗರಣೆ, ಆದ್ದರಿಂದ ಆ ದಿನವನ್ನು 'ಜಾಗರ' ಎಂದೇ ಕರೆಯುತ್ತಾರೆ. ಆ ರಾತ್ರಿ ವಿಶೇಷ ಹಗರಣ ಮತ್ತು ಮಾಸ್ತಿಕೊಂಡ ಹಾಯುವ ವಿಧಿ ನಡೆಯುತ್ತದೆ. ಆ ರಾತ್ರಿ ಹುಲಿದೇವರು ದನಮುರಿಯುವುದನ್ನು ಅಭಿನಯಿಸುತ್ತಾರೆ. ಒಬ್ಬ ವ್ಯಕ್ತಿ ದನವಾಗಿ ಅಭಿನಯಿಸುತ್ತಾ ಹುಲಿ ದನವನ್ನು ಕೊಂದು ರಕ್ತಕುಡಿದು ಹೋದ ಅಭಿನಯವಾದ ಮೇಲೆ ಇನ್ನೊಬ್ಬ ವೇಷವನ್ನು ಹಾಕಿಕೊಂಡು ಬಂದು ಆ ದನವನ್ನು ಕೊಯ್ದು ಅದರ ಮಾಂಸವನ್ನು ಒಯ್ದಂತೆ ಅಭಿನಯಿಸುತ್ತಾನೆ. ದೇವರುಗಳನ್ನು ಗೇಲಿಮಾಡುವ ಕಾರ್ಯಕ್ರಮವೂ ಇರುತ್ತದೆ. ದೇವರ ನಕಲಿ ಕಲಶವನ್ನು ಹೊತ್ತುಕೊಂಡವನೊಬ್ಬ ಮೈಮೇಲೆ ಭಾರ (ಆವೇಶ) ಬಂದವರ ಹಾಗೆ ನಟಿಸುವುದು, ಭಕ್ತಾದಿಗಳು ತಮ್ಮ ತೊಂದರೆ ತಾಪತ್ರಯಗಳನ್ನು ಆ ದೇವರೆದುರು ನಿವೇದಿಸಿಕೊಂಡು ಪ್ರಸಾದ, ಪರಿಹಾರ ಕೇಳುವುದು ಇವನ್ನು ಅತಿರಂಜಿಸಿ ಗೇಲಿಮಾಡಲಾಗುತ್ತದೆ. ಭಕ್ತರ ತೊಂದರೆ, ತಾಪತ್ರಯ, ಕೋರಿಕೆಗಳು ತೀರ ಕ್ಷುಲ್ಲಕವಾದವೂ ಹಾಸ್ಯಾಸ್ಪದವಾದವೂ ಆಗಿರುವುದೇ ಸಾಮಾನ್ಯ. ಹಾಗೆಯೇ ಅವುಗಳಿಗೆ ಪರಿಹಾರ ಸೂಚಿಸುವ ದೇವರ ಅನುಗ್ರಹ, ಅಪ್ಪಣೆ ಕೂಡ ಅಸಂಬದ್ಧವಾಗಿರುತ್ತವೆ. ಕೊನೆಯ ಕಾರ್ಯಕ್ರಮವಾಗಿ ಮಾಸ್ತಿಕೊಂಡ ಹಾಯುವ ವಿಧಿ ಇರುತ್ತದೆ. ಸತಿಯೋರ್ವಳು ಸಹಗಮನ ಮಾಡಿದ ರೀತಿಯನ್ನು ಅನುಕರಿಸಿ ತೋರಿಸಲಾಗುತ್ತದೆ. ಗಂಡಸೊಬ್ಬ ಸ್ತ್ರೀ ವೇಷಧರಿಸಿ ಬೆಂಕಿಯ ಸುತ್ತ ಆವೇಶದಿಂದ ನರ್ತಿಸುತ್ತ ಬೆಂಕಿಯಲ್ಲಿ ದುಮುಕಿದಂತೆ ತೋರಿಸುತ್ತಾನೆ. ಕೆಲವು ಕಡೆಗಳಲ್ಲಿ ಕೊಂಡದ ರಾಶಿಯ ಮೇಲೆ ಹರಕೆ ಹೊತ್ತವರು ನಡೆಯುವುದೂ ಉಂಟು.

ಜಾಗರದ ಮಾರನೆಯ ದಿನ ಬಂಡಿಹಬ್ಬ. ಆ ದಿನ ಬಗೆಬಗೆಯ ಹೂಮಾಲೆಗಳಿಂದ ಸಿಂಗರಿಸಿ ಕಟ್ಟಿಗೆದಾರರು, ಸಾಮಿಮಕ್ಕಳು ಛತ್ರಚಾಮರ ವಾದ್ಯ ಮೊದಲಾದವುಗಳೊಂದಿಗೆ ಕಲಶ ದೇವರನ್ನು ಮೆರವಣಿಗೆಯಲ್ಲಿ ಉಲಿಚಪ್ಪರಕ್ಕೆ (ಉಯ್ಯಾಲೆ ಚಪ್ಪರ) ತರಲಾಗುತ್ತದೆ. ಉಲಿಚಪ್ಪರಕ್ಕೆ ನಾಲ್ಕು ತೂಗುಮಣೆಗಳನ್ನು ಜೋಡಿಸಿರಲಾಗುತ್ತದೆ. ತೂಗುಮಣೆಯ ಮೇಲೆ ಗುನಗ ಕಲಶದೇವರನ್ನು ತೊಡೆಯ ಮೇಲಿಟ್ಟುಕೊಂಡು ಕುಳಿತು ಒಂದು ಕೈಯಲ್ಲಿ ಗಂಟೆ ಬಾರಿಸುತ್ತ ಮೇಲೇರುವ ದೃಶ್ಯ ಆಕರ್ಷಣೀಯವಾಗಿರುತ್ತದೆ. ಇನ್ನುಳಿದ ತೂಗು ಮಣೆಗಳ ಮೇಲೆ ಕಟ್ಟಿಗೆದಾರರು ಗಂಟೆ ಬಾರಿಸುತ್ತ ಕುಳಿತುಕೊಳ್ಳುತ್ತಾರೆ. ಸಾಮಿ ಮಕ್ಕಳೂ ಉಲಿ ಚಪ್ಪರ ಏರುತ್ತಾರೆ. ಸಾಮಿ ಮಕ್ಕಳು ಅಂದರೆ ದೇವರ ಮಕ್ಕಳು; ಇವರು ಮದುವೆಯಾಗದ ಬಾಲಕರು. ಕಟ್ಟಿಗೆದಾರರ ಇಲ್ಲವೆ ದೇವಸ್ಥಾನಗಳ ಮೊಕ್ತೇಸರರ ಮನೆಯ ಮಕ್ಕಳು ಮಾತ್ರ ಸಾಮಿ ಮಕ್ಕಳಾಗುತ್ತಾರೆ. ಕಟ್ಟಿಗೆದಾರರ ಇಲ್ಲವೆ ಮೊಕ್ತೇಸರರ ಮನೆಗಳಲ್ಲಿ ಆ ವಯಸ್ಸಿನ ಬಾಲಕರು ಇಲ್ಲದಿದ್ದಾಗ ಮಾತ್ರ ಬೇರೆ ಯಾರಾದರೂ ಬಾಲಕನಿಗೆ ಅವರು ತಮ್ಮ ಪ್ರತಿನಿಧಿಯಾಗಿ ಸಾಮಿಕಟ್ಟಿಸುತ್ತಾರೆ. ಈ ಸಾಮಿ ಮಕ್ಕಳೂ ಹುನಗನಂತೆ ನೇಮದಿಂದಿರಬೇಕು. ಅಂಕೋಲೆಯ ಸಮೀಪದ ಕೊಗ್ರೆ ಗ್ರಾಮದ ಬಂಡಿಹಬ್ಬದಲ್ಲಿ ಎಲ್ಲ ಊರುಗಳ ಹಬ್ಬಕ್ಕಿಂತ ಹೆಚ್ಚು ಅಂದರೆ ನಾಲ್ಕು ಕಲಶದೇವರುಗಳು ಒಂದೇ ಬಾರಿಗೆ ಉಲಿಚಪ್ಪರದ ನಾಲ್ಕೂ ತೂಗುಮಣೆಗಳಲ್ಲಿ ಕುಳಿತು ಸುತ್ತುವ ದೃಶ್ಯ ರಮ್ಯವಾಗಿರುತ್ತದೆ. ಉಲಿಚಪ್ಪರ ಏರುವುದರ ಹಿನ್ನೆಲೆ ಅಸ್ಪಷ್ಟ. ಇದೊಂದು ಸ್ವರ್ಗಾರೋಹಣ ಅಥವಾ ದೇವಲೋಕ ಗಮನ ಸೂಚಿಸುವ ಸಾಂಕೇತಿಕ ಕ್ರಿಯೆಯಾಗಿರಬಹುದೆಂದು ಊಹಿಸಬಹುದು. ದೇವರುಗಳು ಉಲಿಚಪ್ಪರ ಏರಿ ಸುತ್ತುತ್ತಿರುವಾಗ ಹರಕೆ ಕೇಳಿಕೊಂಡಿದ್ದ ಕೆಲವರು ಕಣ್ಣಿಗೆ ದಟ್ಟವಾಗಿ ಕಾಡಿಗೆ ಹಚ್ಚಿಕೊಂಡು, ಕೇದಗೆ ಹೂವಿನ ಕಿರೀಟತೊಟ್ಟು, ಕೈಯಲ್ಲಿ ಕತ್ತಿ ಹಿಡಿದು. 'ಅಯ್ಯಯ್ಯೋ' ಎಂದು ಅರುಚುತ್ತ ಬರುತ್ತಾರೆ. ಆ ವರ್ಷವೇ ಮದುವೆಯಾದವರು ಮಾತ್ರ ಇಂಥ ಹರಕೆ ಹೊತ್ತುಕೊಳ್ಳುತ್ತಾರೆ. ಈ ಆಚರಣೆಯ ಹಿನ್ನೆಲೆ ತಿಳಿಯದು.

ಬಂಡಿಹಬ್ಬದ ಮಾರನೆಯ ದಿನವೂ ಹಬ್ಬ, ಜಾತ್ರೆ ಇರುತ್ತದೆ. ಆ ದಿನವನ್ನು ಕೋಳ್‌ಕುರಿ (ಕೋಳಿಕುರಿ) ಎಂದು ಕರೆಯುತ್ತಾರೆ. ಕೋಳಿ ಕುರಿಗಳನ್ನು ಆ ದಿನ ಊರಿನ ದೇವರುಗಳಿಗೆ ಬಲಿ ಕೊಡುತ್ತಾರೆ. ಊರಿನ ಎಲ್ಲ ಮನೆಗಳೂ ಆ ದಿನ ಅತಿಥಿಗಳಿಂದ ತುಂಬಿರುತ್ತವೆ. ಕೋಳ್‌ಕುರಿಯ ದಿನ ಬೆಳಗ್ಗೆ, ದೇವರಿಗೆ ಹರಕೆ ಹೊತ್ತವರು ತೋಳಭಾರ (ತುಲಾಭಾರ) ಮಾಡಿಸಿ ಹರಕೆ ಸಲ್ಲಿಸುತ್ತಾರೆ. ಸಾಮಾನ್ಯವಾಗಿ ಹಲಸಿನ ಹಣ್ಣು, ತೆಂಗಿನಕಾಯಿ ಮುಂತಾದವನ್ನು ತುಲಾಭಾರಕ್ಕೆ ಹಾಕಲಾಗುತ್ತದೆ. ಆ ದಿನವೇ ದೇವರಿಗೆ ಕಾಣಿಕೆ ಕೊಡುವವರು ಕೊಡುತ್ತಾರೆ. ಕಲಶಹೊತ್ತ ಗುನಗನ ಸೊಂಟದಲ್ಲಿ ಒಂದು ಕತ್ತಿ ಇರುತ್ತದೆ. ಆ ಕತ್ತಿಯನ್ನು ಸಾಮಾನ್ಯವಾಗಿ ಗುನಗ ಬಳಸುವ ಪದ್ಧತಿಯೇನೂ ಇದ್ದಂತಿಲ್ಲ. ಆದರೂ ಆ ಕತ್ತಿಗೆ ಸಂಬಂಧಿಸಿದ ಪ್ರತೀತಿ ಸ್ವಾರಸ್ಯದ್ದಾಗಿದೆ. ಕಳಶ ದೇವರನ್ನು ಹೊತ್ತುಕೊಂಡಿದ್ದಾಗ ಗುನಗನೇನಾದರೂ ಎಡವಿಬಿದ್ದರೆ, ಗುನಗನಿಗೆ 'ಭಾರ' ಬಂದು ಆತನೇನಾದರೂ ಆ ಆವೇಶದ ಭರದಲ್ಲಿ ತಪ್ಪಿ ನೆಲಕ್ಕೆ ಬಿದ್ದರೆ ಅಥವಾ ಅವನು ಹೊತ್ತ ಕಲಶವೇನಾದರೂ ನೆಲಕ್ಕೆ ಬಿದ್ದು ಅಪಶಕುನವಾದರೆ ಆತ ಕೂಡಲೆ ತನ್ನ ಸೊಂಟದಲ್ಲಿರುವ ಕತ್ತಿ ತೆಗೆದು ಅದರಿಂದ ತನ್ನನ್ನು ಇರಿದುಕೊಂಡು ಸಾಯಬೇಕೆಂಬ ನಿಯಮ ಇದೆಯೆಂದು ಪ್ರತೀತಿ. *

**ಬಂಡೀಪುರ:** ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಒಂದು ಗ್ರಾಮ. ಜನಸಂಖ್ಯೆ 182. ಗುಂಡ್ಲುಪೇಟೆಯ ದಕ್ಷಿಣಕ್ಕೆ 19ಕಿಮೀ ದೂರದಲ್ಲಿದೆ. ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಮೈಸೂರು ನಗರದ ದಕ್ಷಿಣಕ್ಕೆ 80ಕಿಮೀ ದೂರದಲ್ಲಿದ್ದು ಚಾಮರಾಜನಗರಕ್ಕೆ ನೈಋತ್ಯದಲ್ಲಿದೆ. ಸಮುದ್ರಮಟ್ಟಕ್ಕಿಂತ 1,022ರಿಂದ 1,454ಮೀ ಎತ್ತರದಲ್ಲಿದೆ. ವರ್ಷದ ಸರಾಸರಿ ಮಳೆ 890 ಮಿಮೀ. ಉಷ್ಣಾಂಶ $11^0$ ಸೆಂ ನಿಂದ $38^0$ ಸೆಂ. ಇರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಅಧಿಕ ಉಷ್ಣತೆ. ಬಂಡೀಪುರ ವನ್ಯಮೃಗ ಸಂರಕ್ಷಣಾ ಕೇಂದ್ರದಿಂದಾಗಿ ಇದು ಪ್ರವಾಸಿ ಕೇಂದ್ರವಾಗಿದೆ.

ಬಂಡೀಪುರ ವನ್ಯಮೃಗ ಸಂರಕ್ಷಣಾ ಕೇಂದ್ರ ಸು. 57ಚ.ಕಿಮೀ ವಿಸ್ತಾರವಾಗಿದೆ. ಇದು 1941ರಿಂದ ವೇಣುಗೋಪಾಲ ವನ್ಯಮೃಗ ಉದ್ಯಾನವನದ ಒಂದು ಭಾಗವಾಗಿ ಪರಿಗಣಿತವಾಗಿತ್ತು. ಮಳೆ ಕಡಿಮೆಯಾದ್ದರಿಂದ ಬಂಡೀಪುರದ ಕಾಡು ದಟ್ಟವಾಗಿಲ್ಲ. ಸ್ವಾಭಾವಿಕವಾಗಿ ಎಲೆ ಉದುರುವ ಮರದ ಕಾಡು ಇಲ್ಲಿಯ ಮುಖ್ಯ ಸಸ್ಯವರ್ಗ. ಇಲ್ಲಿ ತೇಗ, ಮತ್ತಿ, ದಿಂಡಲು, ಹೊನ್ನೆ, ಜಾಲ, ಯತಿಗ, ಬೀಟೆ, ತಡಸಲು, ನೇರಳೆ, ಬೂರುಗ ಮತ್ತು ತಾರೆ ಮರಗಳು ಅಲ್ಲಲ್ಲಿ ಗುಂಪಾಗಿ ಬೆಳೆದು ಕಾಡಿನ ಬಹುಭಾಗವನ್ನು ಆಕ್ರಮಿಸಿವೆ. ಮರದ ಗುಂಪುಗಳ ಮಧ್ಯಭಾಗದಲ್ಲಿ ಅಖಂಡವಾಗಿ ಬೆಳೆದಿರುವ ಆನೆಹುಲ್ಲನ್ನು ಕಾಣಬಹುದು. ಇಲ್ಲಿ ನೀರಿನ ಸಣ್ಣಬುಗ್ಗೆಗಳು ಹೇರಳವಾಗಿವೆ. ಮುಂಗಾರುಮಳೆಗೆ ಮುನ್ನವೇ ಅವು ಬತ್ತಿಹೋಗುತ್ತವೆ. ಸದಾ ನೀರು ತುಂಬಿ ಹರಿಯುವ ಕೆಕ್ಕನಹಳ್ಳವೇ ಕಾಡಿನ ಮೃಗಗಳ ನೀರಿಗೆ ಆಧಾರ. ಈ ನದಿ ತಮಿಳುನಾಡು ಮತ್ತು ಕರ್ನಾಟಕದ ರಾಜ್ಯಗಳನ್ನು ಬೇರ್ಪಡಿಸುವ ಗಡಿರೇಖೆಯಂತಿದೆ. ಕಾಡಿನಲ್ಲಿರುವ ಕೆಸರುಗುಂಡಿ ಕಾಡಾನೆಗಳಿಗೆ ಬೇಸಗೆಯಲ್ಲಿ ಮರುಳುಗಾಡಿನ ಓಯಸಿಸ್ ಇದ್ದಹಾಗೆ. ಆದುದರಿಂದಲೇ ಕಾಡಾನೆಗಳು ಬಂಡೀಪುರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ

ವಾಸಿಸುತ್ತವೆ. ಕೆಸರುಗುಂಡಿಯ ಮತ್ತು ಸಣ್ಣ ಝರಿಗಳ ಅಂಚಿನಲ್ಲಿ ದಟ್ಟವಾಗಿ ಬೆಳೆದಿರುವ ಬಿದಿರುಮೆಳೆ ಸಣ್ಣ ಪ್ರಾಣಿಗಳ ವಾಸಸ್ಥಾನ. ವನ್ಯಮೃಗಗಳು ನೆಕ್ಕಲು ಬೇಕಾಗುವ ಉಪ್ಪು ಊರಿದ ನೆಲ ಈ ಕಾಡಿನಲ್ಲಿ ಯಥೇಚ್ಛವಾಗಿ ಕಂಡುಬರುತ್ತದೆ.

ಬಂಡೀಪುರ ಅರಣ್ಯದಲ್ಲಿ ಜಿಂಕೆಗಳು

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಮತ್ತು ಐದನೆಯ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಹುಲಿರಕ್ಷಣೆ ಯೋಜನೆಯ ಕಾರ್ಯಕ್ರಮದಲ್ಲಿ ಭಾರತದ ಒಂಬತ್ತು ಹುಲಿ ರಕ್ಷಣಾ ಕೇಂದ್ರಗಳಲ್ಲಿ ಬಂಡೀಪುರ ಅಭಯಾರಣ್ಯವೂ ಸೇರಿದೆ. ಈ ಯೋಜನೆಗೆ ಕೇಂದ್ರಸರ್ಕಾರ ಸಹ ನೆರವು ನೀಡಿದೆ. ಬಂಡೀಪುರದ ವನ್ಯಮೃಗಗಳಲ್ಲಿ ಸಾಮಾನ್ಯವಾಗಿ ನಾವು ಕಾಣುವುದು ಆನೆ, ಕಾಡುಕೋಣ, ಚುಕ್ಕೆಜಿಂಕೆ, ಬೊಗಳುವ ಜಿಂಕೆ, ಕಾಡುಹಂದಿ, ಕಾಡುನಾಯಿ, ನರಿ, ಮುಂಗುಸಿ, ಕಪಿಮುಖದ ಮುಸುವಗಳನ್ನು. ಆಗಾಗ ಕಾಣಿಸಿಕೊಳ್ಳುವ ಪ್ರಾಣಿಗಳಲ್ಲಿ ಹುಲಿ, ಚಿರತೆ, ಕಾಡುಕುರಿ, ಕರಡಿ, ಕಾಡುಬೆಕ್ಕು ಮುಖ್ಯವಾದವು. ಜೊತೆಗೆ ನವಿಲು, ಬಾತುಕೋಳಿ, ಹಸುರು ಪಾರಿವಾಳ, ಪೊದೆಯ ಮುಳ್ಳುಹಂದಿ, ಹೆಬ್ಬಾವು, ನಾಗರಹಾವು, ಮಂಡಲದ ಹಾವು, ಹಸುರುಹಾವು ಮತ್ತು ಬಂಗಾಲದ ಒಂದು ಜಾತಿಯ ತೀವ್ರ ವಿಷಸರ್ಪ ಮೊದಲಾದುವುಗಳನ್ನೂ ಕಾಣಬಹುದು.

ವನ್ಯಮೃಗಗಳನ್ನು ನೋಡುವುದಕ್ಕೆ ಮಾರ್ಚಿಯಿಂದ ಆಗಸ್ಟ್ ತಿಂಗಳು ಒಳ್ಳೆಯ ಕಾಲ. ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಹೊಂದಿರುವ ಬಂಡೀಪುರದಲ್ಲಿ ತಂಗಲು ಪ್ರವಾಸಿ ಮಂದಿರ ಇದೆ. ವನ್ಯಮೃಗಗಳನ್ನು ನೋಡಲು ಸಾರಿಗೆ ವ್ಯವಸ್ಥೆ ಮತ್ತು ಅರಣ್ಯ ಇಲಾಖೆಯ ನೆರವು ದೊರೆಯುತ್ತದೆ. **(ಎಂ.ಎನ್.ಕೆ.;*)**

**ಬಂದಣಿಕೆ:** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಕಸಬೆಯಿಂದ ಸು. 35 ಕಿಮೀ ಉತ್ತರದಲ್ಲಿರುವ ಒಂದು ಬೇಚಿರಾಕ್ ಹಳ್ಳಿ. ಬಂದಳಿಕೆ ಎಂಬ ಹೆಸರೂ ಇದಕ್ಕಿದೆ. ಒಂದಾನೊಂದು ಕಾಲಕ್ಕೆ ಇದು ನಾಗರಖಂಡ ಎಂಬ ಪ್ರಾಂತ್ಯದ ರಾಜಧಾನಿಯಾಗಿ ಮೆರೆದಿತ್ತು. 11–12ನೆಯ ಶತಮಾನಗಳಲ್ಲಿ ಇದು ಸುಂದರ ಮತ್ತು ಪ್ರಸಿದ್ಧ ಪಟ್ಟಣವಾಗಿತ್ತು. ಚಂದ್ರಗುಪ್ತ ಈ ಪಟ್ಟಣವನ್ನು ಆಳುತ್ತಿದ್ದನೆಂದು ಶಾಸನವೊಂದು ತಿಳಿಸುವುದು. ಹಳೆಯ ಪಟ್ಟಣದ ಅವಶೇಷಗಳನ್ನು ಈಗಲೂ ಇಲ್ಲಿ ಕಾಣಬಹುದು. ರಾಷ್ಟ್ರಕೂಟ, ಚಾಳುಕ್ಯ, ಕಳಚುರಿ, ಹೊಯ್ಸಳ, ಯಾದವ ಮತ್ತು ವಿಜಯನಗರದ ಅರಸುಗಳ ಕಾಲದ ಸು. 834–1369ರ ಅವಧಿಯ ಅನೇಕ ಶಾಸನಗಳು ಇಲ್ಲಿ ದೊರೆತಿವೆ. ವಿಜಯನಗರ ಸಾಮ್ರಾಜ್ಯ ಕಾಲದ ಅನಂತರ ಈ ಊರು ಹಾಳಾಗಿರಬಹುದು. ಇಲ್ಲಿ ಸುಂದರ ಕೆತ್ತನೆ ಕೆಲಸಗಳಿಂದ ಕೂಡಿದ ಶಿಥಿಲವಾದ ಅನೇಕ ದೇವಾಲಯಗಳಿವೆ. ಶಾಂತಿನಾಥ ಬಸದಿ, ಸೋಮೇಶ್ವರ, ತ್ರಿಮೂರ್ತಿ, ಬನಶಂಕರಿ ಮತ್ತು ಸಹಸ್ರಲಿಂಗ ದೇವಾಲಯಗಳು ಅವುಗಳಲ್ಲಿ ಕೆಲವು.

ಇಲ್ಲಿನ ತ್ರಿಮೂರ್ತಿ ದೇವಾಲಯ (ಸು. 1160) ಅತ್ಯಂತ ಸುಂದರ ಗುಡಿ. ದೇವಾಲಯ ತ್ರಿಕೂಟಾಚಲ. ಎಲ್ಲ ಗರ್ಭಗುಡಿಗಳೂ ಅಲಂಕೃತ ದ್ವಾರಗಳಿಂದ ಕೂಡಿವೆ. ದೇವಾಲಯ ಪೂರ್ವಾಭಿಮುಖವಾಗಿದೆ. ಸುಕನಾಸಿಯಲ್ಲಿ ಗೂಡುಗಳಿವೆ. ಪಶ್ಚಿಮ ಮತ್ತು ದಕ್ಷಿಣ ಗೂಡುಗಳಲ್ಲಿ ಲಿಂಗಗಳು, ಉತ್ತರದ ಗೂಡಿನಲ್ಲಿ ವಿಷ್ಣುವಿನ ಪ್ರತಿಮೆ ಇವೆ. ದ್ವಾರಬಂಧದ ಮೇಲೆ ಗಜಲಕ್ಷ್ಮಿಯ ಚಿತ್ರಗಳಿವೆ. ಮೇಲುಗಡೆಯ ಪ್ರಮುಖ ಗೂಡಿನಲ್ಲಿ ಸ್ತ್ರೀಚಾಮರಧಾರಿಗಳು, ಬ್ರಹ್ಮ, ವಿಷ್ಣು, ಮಹಿಷಾಸುರಮರ್ದಿನಿ, ಗಣೇಶ ಮತ್ತು ಮಕರಗಳಿಂದ ಸುತ್ತುವರಿಯಲ್ಪಟ್ಟ ಶಿವನ ಮೂರ್ತಿ ಇವೆ. ಸೋಮೇಶ್ವರ (ಆನೆಕಲ್ಲು ಸೋಮಯ್ಯ) ದೇವಾಲಯ ಸಹ ತ್ರಿಕೂಟಾಚಲ. ಇದರ ಹೊರಗೋಡೆಗಳ ಮೇಲೆ ರಾಮಾಯಣ–ಮಹಾಭಾರತಗಳ ದೃಶ್ಯಗಳನ್ನು ಸುಂದರವಾಗಿ ಕೆತ್ತಲಾಗಿದೆ. ಗ್ರಾಮದ ಉತ್ತರಕ್ಕೆ ನಾಗರಕೆರೆಯ ಬಳಿ ಇರುವ ಶಾಂತಿನಾಥ ಬಸದಿ ಒಂದು ದೊಡ್ಡ ಕಟ್ಟಡ. ಸುತ್ತಲೂ ವರಾಂಡದಿಂದ ಕೂಡಿದ ಮುಖಮಂಟಪವಿದೆ. ಸುಕನಾಸಿ ದ್ವಾರ ಸುಂದರ ಕೆತ್ತನೆಯಿಂದ ಕೂಡಿದೆ. ಗರ್ಭಗುಡಿಯಲ್ಲಿ ವಿಗ್ರಹವಿಲ್ಲ. ಆದರೆ ದೇವಾಲಯದ ಬಳಿ ಭಗ್ನ ಜೈನವಿಗ್ರಹಗಳನ್ನು ಕಾಣಬಹುದು. 1200 ಮತ್ತು 1203ರಲ್ಲಿ ಬೊಪ್ಪಸೆಟ್ಟಿ ಈ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ ಮುಂದಿನ ಮಂಟಪವನ್ನು ಕಟ್ಟಿಸಿದ. ರಸಬಾವಿ ದೇವಾಲಯದ ಬಳಿ ಸುಂದರವಾದ ಹನುಮಂತನ ವಿಗ್ರಹ ಮತ್ತು ವೀರಗಲ್ಲು ಇವೆ. ಇವಲ್ಲದೆ ಬನಶಂಕರಿ, ಸಹಸ್ರಲಿಂಗೇಶ್ವರ, ವೀರಭದ್ರ ಮತ್ತು ಇತರ ದೇವಾಲಯಗಳೂ ಇವೆ. ಇವೆಲ್ಲವೂ ಪಾಳುಬಿದ್ದಿವೆ. **(ಜಿ.ಎಂ.ಎಸ್.)**

**ಬಂದೇ ನವಾಜ್, ಖ್ವಾಜಾ:** 1317–1422. ಗುಲ್ಬರ್ಗದಲ್ಲಿದ್ದ ಪ್ರಸಿದ್ಧ ಮುಸಲ್ಮಾನ ಸಂತ, ಕವಿ. ಸೂಫಿಪಂಥಕ್ಕೆ ಅದರಲ್ಲೂ ಚಿಷ್ಟಿ ಪಂಗಡಕ್ಕೆ ಸೇರಿದವರು. ಹಜರತ್ ಗೇಸು ದರಾಜ್, ಖ್ವಾಜಾಗೇಸು ದರಾಜ್ ಎಂಬ ಹೆಸರುಗಳೂ ಇವರಿಗಿವೆ. ಸೈಯದ್ ಮಹಮ್ಮದ್ ಗೇಸು ದರಾಜ್ ಎಂಬುದು ಇವರ ಪೂರ್ಣ ಹೆಸರು. ಷಾಹ್‌ಬಾಜ್ ಎಂಬುದು ಇವರ ಕಾವ್ಯನಾಮ.

ಬಂದೇ ನವಾಜರು ದೆಹಲಿಯಲ್ಲಿ ಸೈಯದ್ ಯೂಸುಫ್ ಹುಸೇನಿ ಉರುಫ್ ಸೈಯದ್ ರಜಾ ಹಾಗೂ ಬೀಬೀರಾಣಿ ಇವರ ಎರಡನೆಯ ಮಗನಾಗಿ ಜನಿಸಿದರು. ಸೈಯದ್ ಚಂದಾ ಹುಸೇನಿ ಇವರ ಅಣ್ಣ. ಅಜ್ಜ ಹಾಗೂ ತಂದೆ ಮೊದಲಾದವರ ಮುಖದಿಂದ ಸೂಫಿ ಸಂತರ ಜೀವನಚರಿತ್ರೆ ಮತ್ತು ಕರಾಮತ್‌ಗಳ (ಪವಾಡಗಳ) ಶ್ರವಣ–ಮನನ, ಕೊರಾನ್ ಷರೀಫ್ ಮತ್ತು ಇತರ ಅನೇಕ ಧಾರ್ಮಿಕ ಗ್ರಂಥಗಳ ನಿದಿಧ್ಯಾಸನ, ರಮ್ಜಾನ್ ಮುಂತಾದ ವ್ರತಗಳ ಕಟ್ಟುನಿಟ್ಟಾದ ಪಾಲನ–ಇವುಗಳೊಡನೆ ಬಾಲ್ಯದಿಂದಲೇ ಧಾರ್ಮಿಕ ವಾತಾವರಣದಲ್ಲಿ ಬೆಳೆದರು. ಹಜರತ್ ನಿಜಾಮುದ್ದೀನ್ ಔಲಿಯಾ ಮತ್ತು ನಾಸಿರುದ್ದೀನ್ ಚಿರಾಘ್ ಮೊದಲಾದವರ ವ್ಯಕ್ತಿತ್ವ ಮತ್ತು ಬರವಣಿಗೆ ಇವರ ಜೀವನದ ಮೇಲೆ ವಿಶೇಷ ಪ್ರಭಾವವನ್ನು ಬೀರಿದ್ದುವು.

ದೆಹಲಿಯ ದೊರೆ ಮಹಮ್ಮದ್ ತುಗಲಕನ ಆಜ್ಞೆಯ ಮೇರೆಗೆ ಇವರ ತಂದೆ ತಾಯಂದಿರು ದೌಲತಾಬಾದಿಗೆ ಬಂದು ನೆಲೆಸಿದರು. ಅಲ್ಲಿ ಕೆಲವರ್ಷ ಕಳೆಯುವುದರಲ್ಲೇ ತಂದೆ ನಿಧನ ಹೊಂದಿದರು. ಅಲ್ಲಿನ ವಾತಾವರಣ ಒಗ್ಗದಿರಲು ಬೀಬೀ ರಾಣಿ ತಮ್ಮಿಬ್ಬರೂ ಮಕ್ಕಳನ್ನು ಕರೆದುಕೊಂಡು ಪುನಃ ದಿಲ್ಲಿಗೆ ಹೋದರು.ಬಂದೇ ನವಾಜರಿಗೆ ಮತ್ತೆ

ಪೂರ್ವದ ಧಾರ್ಮಿಕ ವಾತಾವರಣ ಒದಗಿತು. ನಾಸಿರುದ್ದೀನ್ ಚಿರಾಫ್ ಅಲ್ಲದೆ ಅಷರಫುದ್ದೀನ್, ಮೌಲಾನಾ ತಜುದ್ದಿನ್ ಮತ್ತು ಮೌಲಾನಾ ಕಾಜಿ ಮುಕ್ತದಿರ್– ಈ ವಿದ್ಯಾಗುರುಗಳ ಮಾರ್ಗದರ್ಶನವೂ ದೊರೆಯಿತು. 19ನೆಯ ವರ್ಷದವರೆಗೆ ವಿದ್ಯೆಯನ್ನು ಸಂಪಾದಿಸಿ ಹಜರತ್ ಪೀರ್ ನಾಸಿರುದ್ದೀನ್ ಚಿರಾಫ್‌ರ ಆದೇಶದ ಮೇರೆಗೆ ಓದನ್ನು ನಿಲ್ಲಿಸಿ ಆತ್ಮದ ಶುದ್ಧೀಕರಣ ಹಾಗೂ ಭಗವತ್ ಪ್ರಾರ್ಥನೆಯಲ್ಲಿ ತಲ್ಲೀನರಾದರು. ಕೆಲವೇ ದಿನಗಳಲ್ಲಿ ಶುದ್ಧಚರಿತರೆನಿಸಿಕೊಂಡು ಗುರುಗಳ ಅಪ್ಪಣೆಯ ಮೇರೆಗೆ ಧರ್ಮೋಪದೇಶಕಾರ್ಯವನ್ನು ಕೈಗೊಂಡು ಶಿಷ್ಯಸಂಗ್ರಹ ಮಾಡಿದರು. ಅನೇಕ ಸ್ಥಳಗಳಿಗೆ ಪ್ರಯಾಣ ಬೆಳೆಸಿ ಧರ್ಮಪ್ರಸಾರ ಮಾಡಿದರು. ನೀಳವಾದ ಕೇಶಕ್ಕೂ, ಗುರುವಿನ ಪಾಲಕಿಯನ್ನು ಹೊತ್ತಾಗ ಅದರಲ್ಲಿ ಸಿಲುಕಿ ರಕ್ತ ಸುರಿದರೂ ನೊಂದುಕೊಳ್ಳದೆ ಇದ್ದುದಕ್ಕೂ ಗುರು ನಾಸಿರುದ್ದೀನ್ ಚಿರಾಫ್, ಇವರಿಗೆ ಗೇಸು ದರಾಜ್, ಬಂದೇ ನವಾಜ್ ಎಂಬ ವಿಶೇಷಣಗಳನ್ನು ದಯಪಾಲಿಸಿದರು. ನಾಸಿರುದ್ದೀನರ ಮರಣಾನಂತರ 36ನೆಯ ವಯಸ್ಸಿನಲ್ಲಿ ಸಜಾದರಾಗಿ ಸಂತಶಿರೋಮಣಿ ಎನಿಸಿಕೊಂಡರು. 40ನೆಯ ವಯಸ್ಸಿನಲ್ಲಿ ತಾಯಿಯ ಅಪೇಕ್ಷೆ ಹಾಗೂ ಒತ್ತಾಯಕ್ಕೆ ಬೀಬೀ ರಜಾ ಖಾತೂನ್ ಎಂಬುವರನ್ನು ಮದುವೆ ಆದರು. ಈ ದಂಪತಿಗಳಿಗೆ ಸೈಯದ್ ಮಹಮ್ಮದ್ ಅಕ್ಬರ್ ಹುಸೇನಿ ಮತ್ತು ಸೈಯದ್ ಅಸ್‌ಘರ್ ಹುಸೇನಿ ಎಂಬ ಇಬ್ಬರು ಗಂಡು ಮಕ್ಕಳೂ ಬೀಬೀ ಫಾತಿಮಾ, ಬೀಬೀ ತಬೂಲ್ ಮತ್ತು ಬೀಬೀ ಅಮುದ್ದೀನ್ ಎಂಬ ಮೂವರು ಹೆಣ್ಣು ಮಕ್ಕಳೂ ಜನಿಸಿದರು.

ಬಂದೇ ನವಾಜರು ತಮ್ಮ 90ನೆಯ ವಯಸ್ಸಿನಲ್ಲಿ (1407) ಬಹಮನೀ ದೊರೆ ಫಿರೋಜ್‌ನ ಆಹ್ವಾನವನ್ನು ಮನ್ನಿಸಿ ಗುಲ್ಬರ್ಗಕ್ಕೆ ಬಂದರು. ಫಿರೋಜ್ ಹಾಗೂ ಅವನ ತಮ್ಮ ಅಹ್ಮದ್ ಇವರ ಪ್ರಿಯಶಿಷ್ಯರಾದರು. ಆದರೆ ಫಿರೋಜನ ಕೊನೆಗಾಲದಲ್ಲಿ ಅವನಿಗೂ ಬಂದೇ ನವಾಜರಿಗೂ ವಿರಸ ಉಂಟಾಯಿತು. ಫಿರೋಜ್‌ಗೆ ತನ್ನ ತರುವಾಯ ತನ್ನ ಮಗ ಹಸನ್ ಪಟ್ಟಕ್ಕೆ ಬರಬೇಕೆಂದು ಬಯಕೆ. ಆದರೆ ಆಗ ರಾಜ್ಯಾಡಳಿತದಲ್ಲಿ ಭಾಗಿಯಾಗಿದ್ದ ಫಿರೋಜ್‌ನ ತಮ್ಮ ಅಹ್ಮದ್‌ನೇ ಪಟ್ಟಕ್ಕೆ ಸೂಕ್ತ ಅಧಿಕಾರಿ ಎಂಬುದು ಬಂದೇ ನವಾಜರ ಅಭಿಮತ. ಈ ಭಿನ್ನಾಭಿಪ್ರಾಯದಿಂದ ಕ್ರುದ್ಧನಾದ ಫಿರೋಜ್ ಬಂದೇ ನವಾಜರನ್ನು ಊರಿನಿಂದ ಹೊರಕ್ಕೆ ಹಾಕಿ ಹಸನಾಬಾದದಲ್ಲಿ ಇರುವಂತೆ ಮಾಡಿದ. ತನ್ನ ಮಗ ಹಸನನಿಗೆ ಪಟ್ಟಾಭಿಷೇಕ ಮಾಡಿದ. ಆದರೆ ಅಹ್ಮದ್ ರಾಜನ ಸೈನ್ಯವನ್ನು ಮಟ್ಟಹಾಕಿ ಗುಲ್ಬರ್ಗಕ್ಕೆ ನುಗ್ಗಿ, ಮರಣಶಯ್ಯೆಯಲ್ಲಿದ್ದ ಫಿರೋಜನ ಕೈಯಿಂದಲೇ ರಾಜಚಿಹ್ನೆಗಳನ್ನು ಪಡೆದು ಸಿಂಹಾಸನವೇರಿದ. ಕೆಲವೇ ದಿನಗಳಲ್ಲಿ (1422,16 ಹಕೀದ್ 825 ಹಿ) ಬಂದೇ ನವಾಜರು ನಿಧನರಾದರು. ಅನಂತರ ದೊರೆ ಅಹ್ಮದ್ ಬಂದೇ ನವಾಜರು ನೆಲೆಸಿದ್ದ ಸ್ಥಳದಲ್ಲಿ ಒಂದು ದೊಡ್ಡ ಮಜಾರ ಹಾಗೂ ಗುಂಬಜನ್ನು ಕಟ್ಟಿಸಿದ. ಕಟ್ಟಡ ಅಹ್ಮದ್ ಷಾನ ಪುತ್ರ ಅಲಾಉದ್ದೀನನ ಕಾಲದಲ್ಲಿ ಪೂರ್ಣವಾಯಿತು. ಈ ದರ್ಗಾ ವಾಸ್ತುಕಲಾ ದೃಷ್ಟಿಯಿಂದ ವಿಶಿಷ್ಟ ಸ್ಥಾನ ಪಡೆದಿರುವುದೇ ಅಲ್ಲದೆ ಇಂದಿಗೂ ಗುಲ್ಬರ್ಗದಲ್ಲಿ ಪವಿತ್ರ ಸ್ಥಳವೆನಿಸಿ ಸಹಸ್ರಾರು ಮಂದಿ ಹಿಂದು ಹಾಗೂ ಮುಸಲ್ಮಾನ ಭಕ್ತರನ್ನು ಆಕರ್ಷಿಸುತ್ತಿದೆ.

ಬಂದೇ ನವಾಜರು ಹಿಂದು– ಮುಸ್ಲಿಂ ಏಕತೆಗಾಗಿ ಶ್ರಮಿಸಿ ಇಸ್ಲಾಮ್ ಧರ್ಮದ ಬೆಳೆವಣಿಗೆಯಲ್ಲಿ ಒಂದು ವಿಶಿಷ್ಟ ಹೆಜ್ಜೆಯಿಟ್ಟರು. ಆ ಕಾಲದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಇದೊಂದು ದಿಟ್ಟ ಹೆಜ್ಜೆ. ಇವರು ಹಾಗೂ ಇವರ ಶಿಷ್ಯ ಪರಂಪರೆಯಲ್ಲಿ ಹಿಂದುಧರ್ಮದ ಪ್ರಭಾವವೂ ಮೂಡಿನಿಂತು ಚೈತನ್ಯ ಸಂಪ್ರದಾಯವೊಂದು ಹುಟ್ಟಿಕೊಂಡಿತು. ಬಂದೇ ನವಾಜರನ್ನು ಕೇಶವ ಚೈತನ್ಯ ಎಂದೂ ಕರೆಯುತ್ತಾರೆ. ಇವರ ಗುರುಬಂಧು ಸಿದ್ಧಲಿಂಗ ಎಂಬ ಕವಿ ಬರೆದ ತತ್ವಜ್ಞಾನದ ಗ್ರಂಥವೊಂದು ದೊರೆಕಿದೆ. ಇದು ಈ ದಿಶೆಯಲ್ಲಿ ಹೊಸ ಬೆಳಕನ್ನು ಬೀರುತ್ತದೆ. ಬಂದೇ ನವಾಜರನ್ನು ಕುರಿತು ಬರೆದ ತ–ಜಕೀರ್ ಖ್ವಾಜಾ ಗೇಸು ದರಾಜ್ ಎಂಬ ಗ್ರಂಥದಲ್ಲಿ ವಿಸ್ತರಿಸಲಾಗಿರುವ ಪವಾಡಗಳೊಂದರಲ್ಲಿ ಸಿದ್ದಪ್ಪನ ಉಲ್ಲೇಖವಿದೆ. ಈ ಸಿದ್ದಪ್ಪ ಮತ್ತು ಸಿದ್ಧಲಿಂಗ ಕವಿ ಇಬ್ಬರೂ ಒಬ್ಬರೇ ಆಗಿರಬಹುದು. ಸಿದ್ಧಲಿಂಗನ ಕವಿತೆ ಇಂತಿದೆ:

ಗುರುಶೇಖ ನಸೀರುದ್ದೀನ ಚಿರಾಫ ದಿಲ್ಲಿ
ಕರಾಮತ್‌ಕಾ ಪೀರ್‌ವೊ ಪಾಕವಲ್ಲಿ (ಲಿ?)
ಕೈಲಾಖ ಬಂದೇ ನವಾಜ ನಬೀನೆ
ಕಹೆ ಸಿದ್ಧಲಿಂಗ ರಹೋ ಕದಮ್‌ಕನೇ

ಬಂದೇ ನವಾಜರ ಶಿಷ್ಯಪರಂಪರೆ ಭಾರತದ ತುಂಬ ಹರಡಿಕೊಂಡಿತ್ತು. ಅದು ಮಹಾರಾಷ್ಟ್ರದ ಸಂತ ಕವಿ ಏಕನಾಥನ ವರೆಗೆ ಬೆಳೆದುಕೊಂಡು ಬಂತೆಂದು ತಿಳಿದು ಬರುತ್ತದೆ–ಕರ್ನಾಟಕದಲ್ಲಿಯೂ ಆಳಂದ, ಮಾಯಿನಾಳ, ಮಡಿಹಾಳ, ಬಿದರೆ, ಸಾವಳಗಿ ಮುಂತಾದೆಡೆಗಳಲ್ಲಿ ಜಾತೀಭೇದವಿಲ್ಲದೆ ಬೆಳೆದುಕೊಂಡು ಬಂದಿತು. ಸಾವಳಗಿಯ ಶಿವಲಿಂಗೇಶ್ವರ ಮಠದಲ್ಲಿ ಇಂದಿಗೂ ಬಂದೇ ನವಾಜ್ ಕಿ ದೋಸ್ತ ರಾಹೋದೀನ್ ಎಂದು ದೀನ್ ಜಗಾಸುತ್ತಾರೆ.

ಬಂದೇ ನವಾಜರು ಇನ್ನೊಂದು ಕಾರಣದಿಂದಲೂ ತುಂಬ ಮಹತ್ವದ ವ್ಯಕ್ತಿ. ಇವರು ಉರ್ದು ಸಾಹಿತ್ಯಕ್ಕೆ ಬೇರು ಎನಿಸುವ ದಖನಿ ಶೈಲಿಯ ಒಬ್ಬ ಶ್ರೇಷ್ಠ ಬರೆಹಗಾರರು. ಈ ಶೈಲಿಯ ಉಪಲಬ್ಧ ಕೃತಿಗಳಲ್ಲಿ ಸದ್ಯ ಇವರ ಕೃತಿಗಳೇ ಮೊದಲವು. ಇವರು ಅರಬ್ಬೀ, ಪಾರಸೀ ಹಾಗೂ ಸಂಸ್ಕೃತ ಭಾಷೆಗಳಲ್ಲಿ ದೊಡ್ಡ ವಿದ್ವಾಂಸರಾಗಿದ್ದರು. ಇವರ ಕೃತಿಗಳೆಲ್ಲಾ ಸೂಫಿ ಪಂಥಕ್ಕೆ ಸಂಬಂಧಪಟ್ಟವೆ. ಇವರು ಸುಮಾರು 105 ಕೃತಿಗಳನ್ನು ರಚಿಸಿದುದಾಗಿ ತಿಳಿದುಬಂದಿದೆ. ಕೆಲವೇ ಪುಸ್ತಕಗಳು ಅಚ್ಚಾಗಿವೆ. 1 ಮಿರಾಜಲ್ ಆಷಿಕಾನ್, 2 ಷಿಕರ್ ನಾಮಾ, 3 ತಷರೀ–ಕಲ್ಮ–ಎ–ತಯ್ಯಬ್, 4 ಖುಲಾಸಾ–ಉಥ್– ತೌಹೀದ್, 5 ದಾರುಲ್ ಅಸ್ರರ್, ಮಿರಾಜಲ್ ಆಷಿಕಾನ್ ಇವು ಇವರ ಕೃತಿಗಳಲ್ಲಿ ಅತ್ಯಂತ ಶ್ರೇಷ್ಠವೆಂದು ಪರಿಗಣಿಸಲಾಗಿದೆ. ಇವರ ಮಗ ಅಕ್ಬರ್ ಹುಸೇನಿ ಹಾಗೂ ಮೊಮ್ಮಗ ಅಬ್ದುಲ್ ಹುಸೇನಿ ಇಬ್ಬರೂ ಪ್ರಸಿದ್ಧ ಉರ್ದು ಬರೆಹಗಾರರು. ಅಬ್ದುಲ್ ಹುಸೇನಿಯೂ ಅಬ್ದುಲ್ ಖಾದಿರ್ ಜಿಲಾನಿಯ ನಿಷಾತುಲ್ ಇಷ್ಕ್ ಗ್ರಂಥವನ್ನು ದಖನಿ ಭಾಷೆಗೆ ತರ್ಜುಮೆ ಮಾಡಿದ್ದಾನೆ.

ಬಂದೇ ನವಾಜ್ ಅವರು ದೊಡ್ಡ ಅನುಭಾವಿಗಳು. ಭಕ್ತಿಪಂಥದಲ್ಲಿ ಕಾಂತಾಭಕ್ತಿ ಹಾಗೂ ಆತ್ಮನಿವೇದನೆ ಮಾರ್ಗವನ್ನು ಇವರು ಅನುಸರಿಸಿದರು. "ಭಗವಂತನನ್ನು ಧ್ಯಾನಿಸು, ಪ್ರಾರ್ಥಿಸು ಒಳಗಣ್ಣಿನಿಂದ ಆತನನ್ನು ನೋಡು; ಸಾವು ಬರುವ ಮುನ್ನವೇ ಅದಕ್ಕೆ ಸಿದ್ಧವಾಗಿರು; ಯಾರ ಮುಂದೆಯೂ ತಲೆಬಾಗಬೇಡ, ಸದಾ ದೇವರ ಉಪಕಾರ ಸ್ಮರಣೆಯಲ್ಲಿರು. ಶ್ರೀಮಂತರ ಸಹವಾಸದಿಂದ ದೂರವಾಗಿರು. ರಾಜರ ಹತ್ತಿರ ಸುಳಿಯಬೇಡ. ಯಾರಾದರೂ ನಿನ್ನ ವಸ್ತುಗಳನ್ನು ಕಸಿದುಕೊಂಡರೆ ಅದನ್ನು ಅವರಿಗೆ ಅರ್ಪಿಸಿಬಿಡು. ನಿನ್ನ ಗಳಿಕೆ ನ್ಯಾಯದ್ದಾಗಿರಲಿ. ಲೋಕವ್ಯವಹಾರದ ಭರದಲ್ಲಿ ಭಗವಂತನನ್ನು ಮರೆತೀಯೆ, ಜೋಕೆ. ಮೌನವಾಗಿರು, ಅನಾವಶ್ಯಕವಾಗಿ ನಗೆಮಾತುಗಳಲ್ಲಿ ಹೊತ್ತು ಕಳೆಯಬೇಡ. ಯಾರ ಪರೋಕ್ಷದಲ್ಲೂ ಕೆಟ್ಟ ನುಡಿ ನುಡಿಯಬೇಡ. ಶೀಲವನ್ನು ಶುಭ್ರವಾಗಿಡು. ತಂದೆತಾಯಿಗಳನ್ನೂ ಗುರುಹಿರಿಯರನ್ನೂ ಆದರಿಸು. ಆಪ್ತೇಷ್ಟರ ಸೇವೆ ಮಾಡು. ಧಾನಧರ್ಮಗಳ ಹೊರತಾಗಿ ನಿನ್ನ ಹಿಂದೆ ಏನೂ ಬರದು. ಕೊನೆಯ ಉಸಿರಿರುವವರೆಗೂ ದೇವರನ್ನು ಮರೆಯಬೇಡ"– ಹೀಗೆ ಸಾರ್ವಕಾಲಿಕ ಸರ್ವಾದರಣೀಯ ತತ್ವವನ್ನು ಇವರು ಸಾರಿದರು.

ಹಿಂದು–ಮುಸ್ಲಿಮ್ ಧರ್ಮಗಳ ಸೌಹಾರ್ದತೆಗೆ ಸಮನ್ವಯಕ್ಕೆ ಕಂಕಣಬದ್ಧರಾಗಿ ದುಡಿದ ಕಾರಣದಿಂದಾಗಿ ಬಂದೇ ನವಾಜರು ಹಿಂದು ಹಾಗೂ ಮುಸ್ಲಿಮರಲ್ಲಿ ಇಂದಿಗೂ ಮಾನ್ಯರಾಗಿದ್ದಾರೆ. ಬಂದೇ ನವಾಜರಿಂದ ಗುಲ್ಬರ್ಗವು ಒಂದು ಆಭರಣ ಎಂದು ಕನ್ನಡ ಜನಪದ ಸಾಹಿತ್ಯದಲ್ಲಿ ಪರಿಗಣಿಸಲಾಗಿದೆ. (ಎಸ್.ಜಿಎ.)

**ಬಂಧುವರ್ಮ:** 13ನೆಯ ಶತಮಾನದ ಪ್ರಾರಂಭದಲ್ಲಿದ್ದ ಜೈನಕವಿ. ಹರಿವಂಶಾಭ್ಯುದಯ ಎಂಬ ಕಾವ್ಯದ ಕರ್ತೃ. ಈತ ತನ್ನ ಕೃತಿಗಳಲ್ಲಿ ಸ್ವವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ. ಕಮಲಭವ, ನಾಗರಾಜ, ಮಂಗರಸ–ಇವರು ಈತನನ್ನು ಸ್ತುತಿಸಿದ್ದಾರೆ. ಜೀವಸಂಬೋಧನೆ ಈತನ ಇನ್ನೊಂದು ಕೃತಿ.

ಹರಿವಂಶಾಭ್ಯುದಯ 14 ಆಶ್ವಾಸಗಳುಳ್ಳ ಚಂಪೂ ಗ್ರಂಥ. 22 ನೆಯ ತೀರ್ಥಂಕರ ನೇಮಿನಾಥನ ಚರಿತೆ ಕಾವ್ಯದ ವಸ್ತು. ಜೊತೆಗೆ ಜೈನಸಾಹಿತ್ಯದಲ್ಲಿ ಜನಪ್ರಿಯವಾದ ಹರಿವಂಶ ಮತ್ತು ಕುರುವಂಶಗಳ ಕಥೆಯೂ ಸೇರಿದೆ. ಇಲ್ಲಿ ಮಹಾಭಾರತದ ಕಥೆ ಗೌಣ. ಇಲ್ಲಿ ಬರುವ ಕೃಷ್ಣ, ಬಲರಾಮ ಮತ್ತು ನೇಮಿನಾಥ ಇವರು ಜೈನ ಶಲಾಕಾಪುರುಷರು. ಕಾವ್ಯಶೈಲಿ ಪ್ರೌಢವಾಗಿದೆ. ವಿಷಯ ಹಾಗೂ ಕಾವ್ಯರೂಪದಲ್ಲಿ ಹೊಸತನ ವೇನೂ ಕಂಡುಬರುವುದಿಲ್ಲ. ಹಿಂದಣ ಕಾವ್ಯಗಳಂತೆಯೇ ರಚಿತವಾಗಿದ್ದು ಚರ್ವಿತಚರ್ವಣವಾಗಿದ್ದರೂ ತನ್ನ ವ್ಯಕ್ತಿತ್ವವನ್ನು ತಕ್ಕಮಟ್ಟಿಗೆ ಕಾದುಕೊಂಡಿದೆ.

ಜೀವಸಂಬೋಧನೆ ಜೈನಧರ್ಮಕ್ಕೆ ಸಂಬಂಧಪಟ್ಟ ದ್ವಾದಶಾನುಪ್ರೇಕ್ಷೆಗಳನ್ನು ವಸ್ತುವಾಗುಳ್ಳ ಸ್ವತಂತ್ರ ಶಾಸ್ತ್ರ ಗ್ರಂಥ; ಚಂಪೂವಿನಲ್ಲಿದೆ. ಇದರಲ್ಲಿ ಅಧ್ರುವಾಭಿಧಾನ, ಅಶರಣಾಭಿಧಾನ, ಏಕತ್ವಾಭಿಧಾನ, ಅನ್ಯತ್ವಾಭಿಧಾನ, ಸಂವರಾಭಿಧಾನ, ನಿರ್ಜರಾಭಿಧಾನ, ಸಂಸಾರಾಭಿಧಾನ, ಬೋಧ್ಯಾಭಿಧಾನ, ಧರ್ಮಾಭಿಧಾನ ಮುಂತಾದ 12 ಅಧಿಕಾರಗಳಿವೆ. ರಚನೆಯಲ್ಲಿ ಮೊದಲಿಗೆ ಎದ್ದುಕಾಣುವ ಆಕರ್ಷಕ ಅಂಶವೆಂದರೆ ಜೀವವನ್ನು ಸಂಬೋಧಿಸಿ ಕಾವ್ಯನಿರೂಪಿಸುವ ತಂತ್ರ. ಇದರಿಂದಾಗಿ ಗ್ರಂಥದುದ್ದಕ್ಕೂ ಆತ್ಮೀಯತೆ ಕಂಡುಬರುತ್ತದೆ. ಕೃತಿಯ ಒಟ್ಟು ರಚನೆ ಜೈನಪುರಾಣಗಳಿಗೆ ಸಮೀಪವಾಗಿದೆ. ಅಜ್ಞಾನದಿಂದ ಜೀವನು ತಕ್ಕ ರೀತಿಯಲ್ಲಿ ನಿಶ್ಚಯಿಸುವ ಶಕ್ತಿಯಿಲ್ಲದೆ ಸಂಸಾರದಲ್ಲಿ ತೊಳಲುವುದನ್ನು ತಪ್ಪಿಸಿಕೊಳ್ಳುವುದು ಹೇಗೆಂಬುದನ್ನು ತಿಳಿಯುವಂತೆ ತಾನು ಕಾವ್ಯ ನಿರೂಪಿಸುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಇದರಿಂದಾಗಿ ಕಾವ್ಯ ನೀತಿಪ್ರದವೂ ವೈರಾಗ್ಯ ಬೋಧಕವೂ ಆಗಿದೆ. ತಾನು ಹೇಳುವ ತತ್ವನಿರೂಪಣೆ ನೀರಸವಾಗದಂತೆ ಸಂದರ್ಭೋಚಿತವಾಗಿ ಕಥೆಗಳನ್ನು ತಂದು ಧಾರ್ಮಿಕ ಅಂಶವನ್ನು ಮತ್ತು ಕಾವ್ಯಾಂಶವನ್ನು ಹಾಸುಹೊಕ್ಕಾಗಿ ನೇದಿದ್ದಾನೆ. ಕೃತಿ ಜೈನಮತೀಯ ಗ್ರಂಥವಾದರೂ ಪರಮತ ಸಹಿಷ್ಣುತೆ, ವಿಶಾಲದೃಷ್ಟಿ ಕಂಡುಬರುತ್ತವೆ. ವೃತ್ತ ಕಂದ ಗದ್ಯ ರಗಳೆ–ಇವುಗಳ ರಚನೆಯಲ್ಲಿ ಬಿಗಿಯಿದೆ. ಗಾದೆಗಳೂ ಪಡೆನುಡಿಗಳೂ ಹಿತಮಿತವಾಗಿ ಬೆರೆತು ಕಾವ್ಯಶೈಲಿ ಸುಲಲಿತವಾಗಿದ್ದು ಮನಸೆಳೆಯುವಂತಿದೆ. (ಜಿ.ಬಿ.;ಕೆ.ಎಚ್.)

**ಬಚಗಾಂವ್:** ಉತ್ತರಕನ್ನಡ ಜಿಲ್ಲೆ ಸಿರಸಿ ತಾಲ್ಲೂಕಿನ ಒಂದು ಗ್ರಾಮ ಮತ್ತು ಐತಿಹಾಸಿಕ ಸ್ಥಳ. ಸಿರಸಿಯಿಂದ 5ಕಿಮೀ ದೂರದಲ್ಲಿದೆ. ಜನಸಂಖ್ಯೆ 1,310. ಇಲ್ಲಿನ ಸೋಮೇಶ್ವರ ದೇವಾಲಯ ಪ್ರಾಚೀನವಾದುದು. ಇದು ಜೀರ್ಣೋದ್ಧಾರಗೊಂಡಿದೆ. ಭಿನ್ನವಾದ ಕೆಲವು ಶಿಲ್ಪಗಳು ದೇವಾಲಯದ ಸುತ್ತಮುತ್ತ ಬಿದ್ದಿವೆ. ಭೂಮಿಯಲ್ಲಿ ಭಾಗಶಃ ಹುಗಿದುಹೋಗಿರುವ ಶಿವ ದೇವಾಲಯದ ಬಳಿ ಎರಡು ವೀರಗಲ್ಲುಗಳಿವೆ. ಬಚಗಾಂವ್‌ನ ಉಪಗ್ರಾಮವಾದ ಹೊಸೂರಿನಲ್ಲಿ ಒಂದು ಪ್ರಾಚೀನ ಶಿವಾಲಯವಿದೆ. ಗುಡಿಯ ಒಳಗೆ ವಿಷ್ಣು, ಗಣಪತಿ ಮುಂತಾದ ಭಗ್ನ ವಿಗ್ರಹಗಳಿವೆ. ಇಲ್ಲಿ ಪ್ರಾಚೀನ ಪರಂಪರೆಯ ಈ ಸ್ಮಾರಕಗಳು ಸಂರಕ್ಷಣೆಯಿಲ್ಲದೆ ನಿಂತಿವೆ. (ಆರ್.ಪಿ.ಎಚ್.)

**ಬಡ:** ಉಡುಪಿ ಜಿಲ್ಲೆಯ ಅದೇ ತಾಲ್ಲೂಕಿನಲ್ಲಿ ಪಡುಬಿದರೆಯ (ವಡಸಾಲು ಗ್ರಾಮ) ಉತ್ತರಕ್ಕೆ 3 ಕಿಮೀ ದೂರದಲ್ಲಿ ಅರಬ್ಬೀ ಸಮುದ್ರದ ದಂಡೆಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಇಕ್ಕಡೆಗಳಲ್ಲಿ ಹಬ್ಬಿರುವ ಗ್ರಾಮ. ಜನಸಂಖ್ಯೆ 7,300. ಈ ಊರನ್ನು ಎರ್ಮಾಳುಬಡವೆಂದೇ ಕರೆಯುವುದು ರೂಢಿ. ಇಲ್ಲಿ ಒಂದು ಅಂಚೆ ಕಚೇರಿ, ಸರ್ಕಾರಿ ಪ್ರೌಢಶಾಲೆ, ಎರಡು ಹಿರಿಯ ಪ್ರಾಥಮಿಕ ಶಾಲೆ ಇವೆ. ಉತ್ತರ ಗಡಿಯ ಸಮೀಪ ರಾಷ್ಟ್ರೀಯ ಹೆದ್ದಾರಿಯ ಪೂರ್ವಬದಿಯಲ್ಲಿ ಮೊಗವೀರ ಸಮಾಜದವರ ಒಂದು ಮಹಾಲಕ್ಷ್ಮೀ ದೇವಾಲಯ ಕೆಲವು ದಶಕಗಳ ಹಿಂದೆ ಹೊಸತಾಗಿ ನಿರ್ಮಾಣಗೊಂಡಿದೆ. ಪಶ್ಚಿಮಕ್ಕೆ, ಸಮುದ್ರಕ್ಕೆ ಹೋಗುವ ದಾರಿಯಲ್ಲಿ ಸುಪ್ರಸಿದ್ಧವಾದ ಉಜ್ವಲ ಶ್ರೀ ಮಹಾಲಿಂಗೇಶ್ವರ ದೇವಾಲಯವಿದೆ.

ಹಿಂದೆ ಈ ಊರು ಉಡುಪಿ ತಾಲ್ಲೂಕಿನ ಆಗಿನ ಹನ್ನೊಂದು ಮಂದಿ ಬಲ್ಲಾಳರಲ್ಲಿ ಒಬ್ಬನಾದ ಎರ್ಮಾಳ (ಎರುಮಾಳ) ಮಾರಂ ಹೆಗ್ಗಡೆಯ ವಶದಲ್ಲಿ ಇತ್ತು. ಅವನ ಬೀಡು (ಅರಮನೆ) ತೆಂಕ ಎರ್ಮಾಳದಲ್ಲಿದೆ. ಇದಕ್ಕೆ ಸೇರಿದ ಚಂದ್ರನಾಥ ಬಸದಿ ಬಡ ಗ್ರಾಮದ ಗಡಿಯೊಳಗಿದೆ. ಆ ಬಸದಿ 12ನೆಯ ಶತಮಾನದ್ದೆಂದೂ ಅಲ್ಲಿರುವ ಮರಳುಶಿಲೆ ವಿಗ್ರಹ ಸಮುದ್ರದಲ್ಲಿ ದೊರೆತುದೆಂದೂ ಹೇಳಲಾಗಿದೆ. ಸೀಮೆಯ ದೇವಸ್ಥಾನವಾದ ಶ್ರೀ ಲಕ್ಷ್ಮೀಜನಾರ್ದನ ದೇವಾಲಯ ಬಡ ಗ್ರಾಮದ ತೆಂಕು ಗಡಿಯ ಸಮೀಪದಲ್ಲಿದೆ. ಈ ದೇವಸ್ಥಾನ 12ನೆಯ ಶತಮಾನದ್ದಾಗಿದ್ದು ಅಲ್ಲಿಯ ದೇವತಾವಿಗ್ರಹವನ್ನು ಶ್ರೀ ಮನ್ಮಧ್ವಾಚಾರ್ಯರು ಸ್ಥಾಪಿಸಿದರೆಂದು ಪ್ರತೀತಿ. ಹಿಂದಿನ ಕಾಲದ ಪದ್ಧತಿಯಂತೆ ಸೀಮೆಯ ಎಲ್ಲಾ ನ್ಯಾಯಗಳು ಇಲ್ಲಿ ತೀರ್ಮಾನವಾಗುತ್ತಿದ್ದವು. ಈ ದೇವಾಲಯದಲ್ಲಿ ರುವ 1402ನೆಯ ಇಸವಿಯ ಶಾಸನವೊಂದರಲ್ಲಿ ಬಲ್ಲಾಳ ಮಾರಂ ಹೆಗ್ಗಡೆಯ ಸಮ್ಮತಿ ಪಡೆದು ದೇವಾಲಯಕ್ಕೆ ದತ್ತಿ ಬಿಟ್ಟ ಉಲ್ಲೇಖವಿದೆ. ಈಗಲೂ ಇಲ್ಲಿಯ ಶ್ರೀ ಲಕ್ಷ್ಮೀಜನಾರ್ದನ ದೇವಾಲಯದ ಉತ್ಸವ ಸಮಯ ದಲ್ಲಿ ಮಾರಂ ಹೆಗ್ಗಡೆಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಅರಮನೆಯಿಂದ ನಾಲ್ವರು ಹೊತ್ತುಕೊಂಡು ದೇವಾಲಯಕ್ಕೆ ಕರೆತರುವ ಗೌರವಸೂಚಕ ಸಂಪ್ರದಾಯ ಇದೆ. (ಎಂ.ವಿ.)

**ಬಡಿಗೇರ, ಡಿ.ಜಿ.:** 1902–67. ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ್‌ನಲ್ಲಿ ಪದವಿ ಗಳಿಸಿದ ಪ್ರಥಮ ಭಾರತೀಯ ಕಲಾವಿದ. ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಮಿಶ್ರಕೋಟೆಯಲ್ಲಿ 1902ರಲ್ಲಿ ಬಡಿಗತನದ ಕುಟುಂಬದಲ್ಲಿ ಜನಿಸಿದರು. ಸಾಮಾನ್ಯ ಶಿಕ್ಷಣ ಪಡೆಯುತ್ತಿದ್ದಾಗಲೇ ಕಲಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂಬಯಿನ ಜೆ.ಜೆ. ಕಲಾಶಾಲೆ ಸೇರಿದರು (1923). ಚಿತ್ರಕಲೆಯ ಡಿಪ್ಲೊಮಾದಲ್ಲಿ ರ್‍ಯಾಂಕ್ ಪಡೆದರು. ಅದೇ ಕಲಾಶಾಲೆಯಲ್ಲಿ ಫೆಲೋ ಆಗಿ ನೇಮಕಗೊಂಡರು (1928). ಅನಂತರ ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ್‌ನಲ್ಲಿ ಪದವಿ ಗಳಿಸಿದರು (1931). ಪೂರ್ವ ಮತ್ತು ಪಶ್ಚಿಮಗಳ ಕಲಾ ಸಿದ್ಧಾಂತಗಳನ್ನು ತಮ್ಮ ಕಲಾಕೃತಿಗಳಲ್ಲಿ ಸಮರ್ಥವಾಗಿ ಬಳಸಿಕೊಂಡರು.

ದೃಶ್ಯಕಲೆಯ ಕಲಿಕೆಗಾಗಿ ಮುಂಬೈಯಲ್ಲಿ ನೂತನ ಕಲಾಮಂದಿರ ಸ್ಥಾಪಿಸಿದರು. ಬಳಿಕ ಉನ್ನತ ಕಲಾ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸಿದರು. ಕಲಾ ಪ್ರದರ್ಶನಗಳ ಜೊತೆ ಜೊತೆಗೆ ಸಂಘಟನೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡರು. ಇವರು ಮುಂಬೈ ಪ್ರಾಂತ್ಯದ ಡ್ರಾಯಿಂಗ್ ಮತ್ತು ಕ್ರಾಫ್ಟ್ ತನಿಖಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದರು. ಶಿಕ್ಷಣ ಪದ್ಧತಿಯಲ್ಲಿ ಹಲವು ಸುಧಾರಣೆಗಳನ್ನು ಜಾರಿಗೊಳಿಸಿದರು.

ಇವರು ಕರ್ನಾಟಕದ ಐತಿಹಾಸಿಕ ಪರಂಪರೆ ಹಾಗೂ ವೈಭವಗಳನ್ನು ತಮ್ಮ ಕಲಾಕೃತಿಗಳಲ್ಲಿ ಸಮರ್ಥವಾಗಿ ಬಳಸಿಕೊಂಡರು. ರೂಪದರ್ಶಿಗಳನ್ನು ಬಳಸಿ ಚಿತ್ರಿಸಿರುವ ಇವರ ಅನೇಕ ನಗ್ನಚಿತ್ರಗಳು ನೈಜವಾಗಿವೆ. ತೈಲವರ್ಣದ ಭಾವಚಿತ್ರಗಳು, ತಿಲೋತ್ತಮೆ, ಟೆಂಪ್ಟೇಷನ್ ಆಫ್ ಬುದ್ಧ, ನಳದಮಯಂತಿ, ತಾಜ್ ಮಹಲ್, ಅಜಂತ, ಎಲ್ಲೋರ ಭಿತ್ತಿಚಿತ್ರಗಳ ಪ್ರತಿಕೃತಿಗಳು ಉತ್ತಮ ಕಲಾಕೃತಿಗಳಾಗಿವೆ. *

**ಬಣಕಾರ, ಬಿ.ಜಿ.:** 1947–. ಪ್ರಸಿದ್ಧ ಸಂಸದೀಯ ಪಟು. ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಾಗಿ, ಸಚಿವರಾಗಿ, ಪತ್ರಿಕೆಗಳ ಸಂಪಾದಕರಾಗಿ, ವಕೀಲರಾಗಿ ಮನ್ನಣೆ ಗಳಿಸಿದವರು. ಇವರು 1947 ಜುಲೈ 22ರಂದು ಧಾರವಾಡ ಜಿಲ್ಲೆಯಲ್ಲಿ ಜನಿಸಿದರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗ 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದರು. ಕಾನೂನು ಶಿಕ್ಷಣ ಪಡೆದ ಅನಂತರ ಇವರು ವಕೀಲ ವೃತ್ತಿಯನ್ನು ಹಿಡಿದು ಹುಬ್ಬಳ್ಳಿ ಧಾರವಾಡಗಳನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ವಕೀಲಿಯ ಜೊತೆಗೆ ಕೃಷಿ, ಪತ್ರಿಕೆಗಳ ಸಂಪಾದನೆಯ ಕೆಲಸಗಳನ್ನು ಹಚ್ಚಿಕೊಂಡರು. ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿದ್ದ ವ್ಯವಸಾಯೋತ್ಪನ್ನ ನಿಯಂತ್ರಿತ ಮಾರುಕಟ್ಟೆ ಸಮಿತಿ ಪ್ರಕಟಿಸುತ್ತಿದ್ದ ರೈತನ ಪೇಟೆ ಎಂಬ ಪತ್ರಿಕೆಯ ಸಂಪಾದಕರಾಗಿ ದುಡಿದರು. ಇದರೊಂದಿಗೆ ಭಾರತದ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ, ಅಖಿಲ ಭಾರತ ರೈತರ ಪರಿಷತ್ತು, ಭಾರತ ಕೃಷಿಕ ಸಮಾಜಗಳ ಒಡನಾಟ ಇಟ್ಟುಕೊಂಡರು. ತರುಣ ಭಾರತ ಪತ್ರಿಕೆ ಮತ್ತು ಬೆಳಕು ಪತ್ರಿಕೆಗಳ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಂಘದೊಡನೆ ನಿಕಟ ಸಂಪರ್ಕ ಹೊಂದಿದ್ದರು.

ರಾಜಕೀಯ ಇವರ ಇನ್ನೊಂದು ಮುಖ್ಯ ಕಾರ್ಯಕ್ಷೇತ್ರ. ಕಾಂಗ್ರೆಸ್ ಪಕ್ಷದ ಸಕ್ರಿಯ ಸದಸ್ಯರಾಗಿ ಐದನೆಯ ವಿಧಾನಸಭೆಗೆ ಸ್ಪರ್ಧಿಸಿ ಚುನಾಯಿತರಾದರು. ಡಿ.ದೇವರಾಜ ಅರಸರ ಮಂತ್ರಿಮಂಡಲದಲ್ಲಿ ಪಶುಸಂಗೋಪನಾ ಹಾಗೂ ಪಶುವೈದ್ಯಕೀಯ ಖಾತೆಯ ರಾಜ್ಯ ಸಚಿವರಾದರು. ಏಳನೆಯ ವಿಧಾನಸಭೆಗೆ ಪಕ್ಷೇತರ ಅಭ್ಯರ್ಥಿಯಾಗಿ ಮತ್ತು ಎಂಟನೆಯ ವಿಧಾನಸಭೆಗೆ ಜನತಾ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಗಳಿಗೆ ನಿಂತು ಆಯ್ಕೆಯಾದರು. ಜನತಾ ಪಕ್ಷದ ಆಳಿಕೆಯಲ್ಲಿ ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾದರು (1985 ಮಾರ್ಚ್8). ವಿವಿಧ ಶಾಸಕಾಂಗ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಇವರದಾಗಿದ್ದು ದಕ್ಷ ಸಭಾಧ್ಯಕ್ಷರೆಂದು ಹೆಸರುಗಳಿಸಿದ್ದರು. ಶಾಸನ ಸಭಾಧ್ಯಕ್ಷರಾಗಿದ್ದು ಅಖಿಲ ಭಾರತ ಶಾಸನ ಸಭಾಧ್ಯಕ್ಷರ ವೇದಿಕೆಯ ಸದಸ್ಯರಾಗಿ ಆಯ್ಕೆಯಾದರು. 1985ರಲ್ಲಿ ಕೆನಡದ ಸ್ಯಾಜಾವನ್ಸ್‌ನ ಸಸ್ಕಾಟೂನ್ ಎಂಬಲ್ಲಿ ನಡೆದ ಮೂವತ್ತೊಂದನೆಯ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಆಗ ಯುರೋಪ್, ಅಮೆರಿಕ ಮತ್ತು ಜಪಾನಿನ ವಿವಿಧ ನಗರಗಳಿಗೆ ಭೇಟಿ ನೀಡಿದ್ದರು. ಸಂಘ ಸಂಸ್ಥೆಗಳೊಂದಿಗೆ ಸಂಪರ್ಕ ಹಾಗೂ ಬರವಣಿಗೆ ಇವರ ಆಸಕ್ತಿಯ ಇತರ ಕ್ಷೇತ್ರಗಳಾಗಿವೆ. (ಎಸ್.ಎನ್.ಜಿ.)

**ಬಣ್ಣದ ಮಾಲಿಂಗ**: 1913–2004. ತೆಂಕುತಿಟ್ಟು ಯಕ್ಷಗಾನದ ಹೆಸರಾಂತ ಕಲಾವಿದ. ಯಕ್ಷಗಾನದ ರಾಕ್ಷಸ ವೇಷದ ಮುಖವರ್ಣಿಕೆ, ವೇಷಭೂಷಣ, ಕುಣಿತ ಮತ್ತು ಅಭಿವ್ಯಕ್ತಿಯ ಅಬ್ಬರದಲ್ಲಿ ತನ್ನ ತನವನ್ನು ಮೆರೆದು ಬಣ್ಣದ ವೇಷ (ರಾಕ್ಷಸವೇಷ) ಎಂದರೆ ಹೇಗಿರಬೇಕು ಎಂಬ ಮಾದರಿಯನ್ನು ತೋರಿಸಿ ಕೊಟ್ಟವರು. ಕೇರಳದ ಕಾಸರಗೋಡು ಜಿಲ್ಲೆಯ ಮುಳ್ಳೇರಿಯಲ್ಲಿ 1913ರಲ್ಲಿ ಜನಿಸಿದರು. ತಂದೆ ಮಾಲಿಂಗ ಪಾಟಾಳಿ. ಮಹಾನ್ ಕಲಾವಿದ ಕೋಲುಳಿಸುಬ್ಬ ಇವರ ಮಾವ. ಮಾಲಿಂಗ ಅವರು ಮಂಜಪ್ಪ ಹಾಸ್ಯಗಾರರ ಬಳಿ ನೃತ್ಯಾಭ್ಯಾಸ ಮಾಡಿದರು. ಯಕ್ಷಗಾನದಲ್ಲಿ ಇವರಿಗೆ ಮಾರ್ಗದರ್ಶನ ನೀಡಿದವರು ಅಜ್ಜ ಪದ್ರೆಶಂಕರ ಭಾಗವತರು. ಮಾಲಿಂಗ ಅವರು ಕೊರಕ್ಕೋಡು ಮೇಳಸೇರಿ ವೃತ್ತಿಜೀವನ ಆರಂಭಿಸಿದರು. ಕೋಡಂಗಿ ವೇಷದಿಂದ ಆರಂಭಿಸಿ ಬಾಲಗೋಪಾಲ, ಷಣ್ಮುಖ, ಸುಬ್ರಾಯ ಮೊದಲಾದ ಸಣ್ಣವೇಷಗಳನ್ನು ನಿರ್ವಹಿಸಿ ಹಂತ ಹಂತವಾಗಿ ಬೆಳೆದರು. ಎರಡನೆಯ ವೇಷಧಾರಿಯಾಗಿ ರೂಪುಗೊಂಡರು.

ಇವರ ಕಂಸ, ಮಹಿಷಾಸುರ, ರಾವಣ, ನರಕಾಸುರ, ಬಾಣಾಸುರ, ಮೈರಾವಣ, ಭೀಮ, ಸಮಸಪ್ತಕ, ವೀರಭದ್ರ, ಕುಂಭಕರ್ಣ, ಹಿಡಿಂಬ, ಶೂರ್ಪನಖಿ, ಪೂತನಿ, ವೀರವರ್ಮ, ಭಗದತ್ತ ಮೊದಲಾದ ಪಾತ್ರಗಳು ವಿಶಿಷ್ಟವಾದ ನಿರ್ವಹಣೆಯಿಂದಾಗಿ ಅಚ್ಚಳಿಯದ ಪ್ರಭಾವ ಬೀರಿವೆ. ಕೊರಕ್ಕೋಡು, ಕೂಡ್ಲು, ಕದ್ರಿ, ಧರ್ಮಸ್ಥಳ, ಸುರತ್ಕಲ್ಲು ಮೊದಲಾದ ಮೇಳಗಳಲ್ಲಿ ಇವರು ಸೇವೆಸಲ್ಲಿಸಿದ್ದಾರೆ.

ರಂಗಸ್ಥಳವನ್ನು ಇಡಿಯಾಗಿ ವ್ಯಾಪಿಸುವ ಚಲನೆಗಳ ಅಬ್ಬರದ ಕುಣಿತ, ಬಣ್ಣದ ವೇಷಕ್ಕೊಪ್ಪುವ ಆಳ್ತನ, ರಂಗಸ್ಥಳವನ್ನು ಸರಿಯಾಗಿ ಬಳಸುವ ಚಲನಗಳು, ಬಣ್ಣದ ವೇಷಕ್ಕೊಪ್ಪುವ ದೊಡ್ಡ ಸ್ವರದಿಂದ ಪ್ರೇಕ್ಷಕರಲ್ಲಿ ನವಿರೇಳಿಸುವ ರಂಗಾನುಭವವನ್ನು ಇವರು ಮೂಡಿಸಿದ್ದರು. ಇವರ ಅಭಿನಯದ ಗುಣಾಂಶಗಳೆಂದರೆ ಸಂಪ್ರದಾಯದ ತಿಳಿವಳಿಕೆ ಮತ್ತು ಬಣ್ಣದ ವೇಷಕ್ಕೆ ಸರಿಯಾದ ಆಯದ ಕಲ್ಪನೆಯುಳ್ಳ ಕುಣಿತ ಮತ್ತು ನಡೆ, ಭಸ್ಮಧಾರಣೆಯಿಂದ ಹಿಡಿದು ಯುದ್ಧದ ಭಂಗಿಗಳವರೆಗೆ ದೈತ್ಯಾಕಾರವನ್ನು ಮೂರ್ತಗೊಳಿಸುವ ದೊಡ್ಡ ಆಕಾರದ ಬೀಸಿನ ಹಸ್ತಭಾವ, ಪಾತ್ರಕ್ಕೆ ತಕ್ಕ ಗಾಂಭೀರ್ಯ, ಅಭಿನಯ ಮತ್ತು ಮೂಕಾಭಿನಯದಲ್ಲಿ ಆಕಾರದಪ್ರಜ್ಞೆ. ಈ ಅಂಶಗಳೆಲ್ಲ ಸೇರಿ ಇವರನ್ನು ಯಶಸ್ಸಿನತ್ತ ಕೊಂಡೊಯ್ದವು. ವೀರಭದ್ರನ ಪಾತ್ರಕ್ಕೆ ಹೊಸಬಗೆಯ ಬಣ್ಣ ವಿನ್ಯಾಸವೊಂದನ್ನು ಇವರು ಆವಿಷ್ಕರಿಸಿದರು. ತಮಾಸುರನ ಬಣ್ಣದಲ್ಲೂ ಇವರು ತಮ್ಮದೇ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಮಹಿರಾವಣನಿಗೆ ಕುರುಡು ಬಣ್ಣ ಬಳಸುವುದು ಇವರ ವಿಶೇಷತೆ.

ಯಕ್ಷಗಾನ ರಂಗಕ್ಕೆ 50 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿರುವ ಇವರು ಸಂಪ್ರದಾಯದ ಚೌಕಟ್ಟಿನಲ್ಲೇ ವಿಶಿಷ್ಟತೆಯನ್ನೂ ಹೊಸತನವನ್ನೂ ಮೆರೆದವರು. ಇವರಿಗೆ ಬಣ್ಣ ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಲಾಗಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮುಂಬಯಿಯ ಪದವೀಧರರ ಯಕ್ಷಗಾನ ಸನ್ಮಾನ, ನೆಡ್ಲೆ ನರಸಿಂಹಭಟ್ಟ ಪ್ರಶಸ್ತಿ ಲಭಿಸಿವೆ. ದೇವಕಿ ಇವರ ಪತ್ನಿ. ಇವರಿಗೆ ಒಬ್ಬ ಪುತ್ರಿ ಮತ್ತು ಮೂವರು ಪುತ್ರರು. ಮಗ ಸುಬ್ರಾಯ ಕೂಡ ಬಣ್ಣದ ವೇಷಧಾರಿ. ಮಾಲಿಂಗ ಅವರು 2004 ಏಪ್ರಿಲ್ 25ರಂದು ನಿಧನರಾದರು. (ಪಿ.ಇ.ವಿ.)

**ಬತ್ತ:** ಕರ್ನಾಟಕದ ಅತ್ಯಂತ ಪ್ರಮುಖ ನೀರಾವರಿ ಬೆಳೆ. ಇದನ್ನು ಸು.14.26 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತದೆ (2000). ವಾರ್ಷಿಕ ಉತ್ಪಾದನೆ 36.56 ಲಕ್ಷ ಮೆಟ್ರಿಕ್ ಟನ್‌ಗಳು. ಈ ಬೆಳೆಯನ್ನು ಮುಖ್ಯವಾಗಿ ಎಲ್ಲಾ ಜಲಾಶಯಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ

ಬೆಳೆಯಲಾಗುತ್ತದೆ. ವಿಶೇಷವಾಗಿ ಶಿವಮೊಗ್ಗ, ಮಂಡ್ಯ, ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ, ಚಿಕ್ಕಮಗಳೂರು, ಮೈಸೂರು, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಇದನ್ನು ದೊಡ್ಡ ಪ್ರಮಾಣದಲ್ಲಿ ಸಾಗುವಳಿ ಮಾಡುತ್ತಾರೆ. ನೀರಾವರಿ ಸೌಲಭ್ಯ ಚೆನ್ನಾಗಿರುವಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುವುದುಂಟು.

ಕರ್ನಾಟಕದಲ್ಲಿ ಮಳೆ, ನಾಲೆ, ಕೆರೆ ಹಾಗೂ ಬಾವಿಗಳು ಬತ್ತದ ಬೆಳೆಯ ನೀರಿನ ಆಶ್ರಯಗಳಾಗಿವೆ. ತೀರ ಪ್ರದೇಶ ಹಾಗೂ ಘಟ್ಟಪ್ರದೇಶಗಳಲ್ಲಿ ನೇರ ಮಳೆಯ ನೀರಿನ ಆಶ್ರಯದಲ್ಲೇ ಇದರ ಮುಂಗಾರು ಬೆಳೆಯನ್ನೂ ಬೆಳೆಯುತ್ತಾರೆ. ಭದ್ರಾ, ತುಂಗಭದ್ರಾ, ಕೃಷ್ಣರಾಜಸಾಗರ, ಹೇಮಾವತಿ, ಆಲಮಟ್ಟಿ, ನಾರಾಯಣಪುರ, ಘಟಪ್ರಭಾ, ಮಲಪ್ರಭಾ, ವಾಣೀವಿಲಾಸ ಸಾಗರ, ಲಿಂಗನಮಕ್ಕಿ, ಕಬಿನಿ ಮುಂತಾದ ಬೃಹತ್ ಜಲಾಶಯಗಳು ಈ ಬೆಳೆಗೆ ನೀರಿನ ಮೂಲಾಧಾರ ಒದಗಿಸಿವೆ. ಕೆರೆ ಹಾಗೂ ಏತನೀರಾವರಿಗಳು ಪ್ರಾಚೀನ ಕಾಲದಿಂದಲೂ ಬತ್ತದ ಬೆಳೆಯ ನೀರಾವರಿ ಮೂಲಗಳಾಗಿದ್ದವು. ಮರಳುಭೂಮಿ, ಲಾಟರೈಟ್, ಎರೆಮಣ್ಣು ಮುಂತಾದ ವಿವಿಧ ಬಗೆಯ ಮಣ್ಣುಗಳಲ್ಲಿ ಬತ್ತ ಬೆಳೆಯಬಹುದು. ಎಲ್ಲ ಬಗೆಯ ಗುಡ್ಡಬೆಟ್ಟಗಳಲ್ಲೂ ಸಮುದ್ರಮಟ್ಟಕ್ಕೆ ಸ್ವಲ್ಪವೇ ಎತ್ತರದ ಪ್ರದೇಶಗಳಲ್ಲೂ ಈ ಬೆಳೆ ಬೆಳೆಯುತ್ತದೆ. ಇತರ ರಾಜ್ಯಗಳಲ್ಲಿ ಇಲ್ಲದಷ್ಟು ಹವಾಮಾನದ ವೈಪರೀತ್ಯಗಳಲ್ಲಿ ಬೇಸಾಯ ನಡೆಯುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು, ಹಿಂಗಾರು ಮತ್ತು ಕಾರು (ಖಾರಿಫ್, ರಬಿ, ಬೇಸಗೆ) ಅಂದರೆ ಕ್ರಮವಾಗಿ ಜೂನ್, ಅಕ್ಟೋಬರ್ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಇತರೇ ಜಿಲ್ಲೆಗಳಲ್ಲಿ ಜೂನ್ ಮತ್ತು ಜುಲೈನಲ್ಲಿ ಬಿತ್ತನೆ ಮಾಡಿ ಮಳೆಗಾಲದ (ಖಾರಿಫ್) ಬೆಳೆಯನ್ನು ಮತ್ತು ಜನವರಿ ಅಥವಾ ಫೆಬ್ರವರಿಯಲ್ಲಿ ಬಿತ್ತನೆ ಮಾಡಿ ಬೇಸಗೆ ಬೆಳೆಯನ್ನು ಪಡೆಯಲಾಗುತ್ತದೆ. ದಕ್ಷಿಣದ ಜಿಲ್ಲೆಗಳಲ್ಲಿ ಉತ್ತರದ ಜಿಲ್ಲೆಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಕೆರೆ,ಬಾವಿ ಮತ್ತು ಶ್ವಾನೆ ನೀರಿನ ಆಶ್ರಯದಲ್ಲಿ ಬೇಸಗೆ ಬೆಳೆಯನ್ನು ಬೇಸಾಯ ಮಾಡಲಾಗುತ್ತದೆ.

ಕರ್ನಾಟಕದಲ್ಲಿ ಜಿಲ್ಲಾವಾರು ಬತ್ತ ಬೆಳೆಯುವ ಪ್ರದೇಶ ಮತ್ತು ಉತ್ಪಾದನೆ (2000):

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಬೆಳೆಯುವ ಬತ್ತ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಅಕ್ಕಿ ಉತ್ಪಾದನೆ (ಮೆಟ್ರಿಕ್‌ಟನ್‌ಗಳಲ್ಲಿ) |
|---|---|---|---|
| 01 | ಬೆಂಗಳೂರು (ನಗರ) | 7,245 | 21,102 |
| 02 | ಬೆಂಗಳೂರು(ಗ್ರಾ) | 20,967 | 61,073 |
| 03 | ಚಿತ್ರದುರ್ಗ | 9,422 | 27,541 |
| 04 | ದಾವಣಗೆರೆ | 118,178 | 390,808 |
| 05 | ಕೋಲಾರ | 29,267 | 79,828 |
| 06 | ಶಿವಮೊಗ್ಗ | 158,633 | 383,617 |
| 07 | ತುಮಕೂರು | 7,48 | 136,903 |
| 08 | ಬೆಲಗಾವಿ | 62,731 | 114,147 |
| 09 | ಬಿಜಾಪುರ | 394 | 541 |
| 10 | ಬಾಗಲಕೋಟೆ | 197 | 16 |
| 11 | ಧಾರವಾಡ | 37,633 | 35,730 |
| 12 | ಗದಗ | 1,044 | 2,56 |
| 13 | ಹಾವೇರಿ | 54,375 | 83,33 |
| 14 | ಉತ್ತರಕನ್ನಡ | 89,868 | 157,039 |
| 15 | ಬಳ್ಳಾರಿ | 68,854 | 224,687 |
| 16 | ಬೀದರ್ | 9,587 | 5,825 |
| 17 | ಗುಲ್ಬರ್ಗ | 22,202 | 41,335 |
| 18 | ರಾಯಚೂರು | 117,347 | 395,453 |
| 19 | ಕೊಪ್ಪಳ | 68,847 | 23,409 |
| 20 | ಚಿಕ್ಕಮಗಳೂರು | 49,841 | 118,813 |
| 21 | ದಕ್ಷಿಣ ಕನ್ನಡ | 67,754 | 141,211 |
| 22 | ಉಡುಪಿ | 69,98 | 122,106 |
| 23 | ಹಾಸನ | 66,684 | 156,248 |
| 24 | ಕೊಡಗು | 40,666 | 85,142 |
| 25 | ಮಂಡ್ಯ | 79,892 | 245,663 |
| 26 | ಮೈಸೂರು | 109,666 | 333,026 |
| 27 | ಚಾಮರಾಜನಗರ | 18,465 | 59,350 |
| | **ರಾಜ್ಯದ ಒಟ್ಟು** | **1,426,805** | **3,656,811** |

**ವಿವಿಧ ತಳಿಗಳು :** ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಸುಮಾರು 60ಕ್ಕೂ ಹೆಚ್ಚು ತಳಿಗಳು ಬಳಕೆಯಲ್ಲಿವೆ. ಮೈದಾನ ಪ್ರದೇಶದಲ್ಲಿ ಕೊಯಮತ್ತೂರು ಸಣ್ಣ, ಬಂಗಾರಸಣ್ಣ, ಬಂಗಾರಕೋವಿ, ರತ್ನಚೂಡಿ, ಬಂಗಾರಕಡ್ಡಿ, ಚೈನಾ, ಹಾಲುಬ್ಬಲು, ಜಿ ಇ ಜಿ24, ಎಚ್ ಆರ್ 35, ದೊಡ್ಡಬೈರ, ಗಿಡ್ಡಬೈರ, ಆಲೂರುಸಣ್ಣ, ಜೇನುಗೂಡು ಮುಖ್ಯವಾದುವು. ಮಲೆನಾಡಿನಲ್ಲಿ ಕಿರುಬೆಳಿಯ, ಮುಂಬೆಳಿಯ, ಜಿಕೆಜಿ ಗರುಡಗೆಂಬೂತಿ, ಚಿಪ್ಪಿಂಗ, ಪುಟ್ಟಬತ್ತ, ಹೊಲಮುಂಡಿಗ ಪ್ರಮುಖವಾದುವು. ಕರಾವಳಿಯಲ್ಲಿ ಎಂ.ಜಿ.ಯು3, ಎಂಜಿಯು 20, ಎಂಜಿಎಲ್ (1–7), ಪಿ ಜಿ ಜಿ(9,10,20), ಕೆ 29, ಹೊನ್ನೆಕಟ್ಟು, ಆರ್ಯ–ಈ ತಳಿಗಳು ಪ್ರಚಾರದಲ್ಲಿವೆ. ಉತ್ತರಗಡಿನಾಡು ಜಿಲ್ಲೆಗಳಲ್ಲಿ ಎಲ್ಲಕೆರಿಸಾಲು, ದೊಡ್ಡಿಗ, ಎಂ 81, ಅಂತರಸಾಲು, ವಾನರ ತಳಿಗಳು, ಉಪ್ಪು ಭೂಮಿಯಲ್ಲಿ ಬಿಳಿಕಗ್ಗ, ಕರಿಕಗ್ಗ, ಒಂದೂವರೆ ಬತ್ತ ಮತ್ತು ಉಸುಳು ಭೂಮಿಯಲ್ಲಿ ಹಾಗೂ ಚಳಿಯಲ್ಲಿ ದಪ್ಪ ಬತ್ತ, ಹಾಲುಬ್ಬಲು ಮತ್ತು ಚೀನ ಬತ್ತ ಬೆಳೆಯಲಾಗುತ್ತದೆ. ಇವುಗಳಲ್ಲಿ ಸುಧಾರಿತ ತಳಿಗಳು 1950ರಿಂದ ಪ್ರಚಾರಕ್ಕೆ ಬಂದಿವೆ. 1965ರಿಂದ ಈಚೆಗೆ ಅಧಿಕ ಇಳುವರಿ ನೀಡಬಲ್ಲ ಗಿಡ್ಡ ಜಾತಿಯ ತಳಿಗಳು ಪ್ರಚಾರಕ್ಕೆ ಬಂದಿವೆ. ಮೊದಲು ತಾಯಚುಂಗ್–65, ತಾಯ್ನಾನ–3, ಟಿ ಎನ್–1–ಬಂದವು. ಈಗ ಬಹಳ ಜನಪ್ರಿಯವಾದ ತಳಿಗಳೆಂದರೆ ಐಆರ್8, ಜಯ, ಮಧು, ಐಆರ್20, ಸೋನಾ ಬತ್ತಗಳು. ಇದೀಗ ಎಂಆರ್272, ವಿಕ್ರಮ್ ಮತ್ತು ಇಂಟಾನ್ ತಳಿಗಳು 'ರಾಜ್ಯತಳಿ ಮೌಲ್ಯ ನಿರ್ಣಯ ಸಮಿತಿ'ಯ ಪರವಾನೆ ಪಡೆದು ಪ್ರಚಾರಕ್ಕೆ ಬರುತ್ತಿವೆ. ನಾಡ ತಳಿಗಳು ಎಕರೆಗೆ 5ರಿಂದ 15 ಕ್ವಿಂಟಾಲ್ ಇಳುವರಿ ಕೊಟ್ಟರೆ ಅಧಿಕ ಇಳುವರಿ ತಳಿಗಳು ಎಕರೆಗೆ 20ರಿಂದ40 ಕ್ವಿಂಟಾಲ್ ಇಳುವರಿ ಕೊಡಬಲ್ಲವಾಗಿವೆ. ಅಲ್ಲದೆ ಈ ಆಧುನಿಕ ತಳಿಗಳು ಬೇಸಗೆ, ಮಳೆಗಾಲ ಎರಡರಲ್ಲೂ ಫಸಲಾಗುತ್ತವೆ. ಹೆಚ್ಚು ಆಹಾರಾಂಶ ಒದಗಿಸಿದಂತೆಲ್ಲ ಹೆಚ್ಚು ಇಳುವರಿ ಕೊಡುವ ಸಾಮರ್ಥ್ಯ ಇವಕ್ಕೆ ಉಂಟು. ರೋಗರುಜಿನಗಳಿಗೆ ಅಷ್ಟಾಗಿ ತುತ್ತಾಗುವುದಿಲ್ಲ.

**ಸಮಸ್ಯೆಗಳು:** ಕರ್ನಾಟಕದಲ್ಲಿ ಬತ್ತ ಹೆಚ್ಚು ವೈವಿಧ್ಯಮಯ ಹವಾಮಾನಗಳಲ್ಲಿ ಬೆಳೆಯಲ್ಪಡುತ್ತಿರುವುದರಿಂದ ಸಮಸ್ಯೆಗಳೂ ಇತರ ರಾಜ್ಯಗಳಿಗಿಂತ ಹೆಚ್ಚಾಗಿವೆ. ಚಳಿಯಿಂದ ಅಂದರೆ 18ಡಿಗ್ರಿ ಸೆಂಟಿಗ್ರೇಡಿಗಿಂತಲೂ ಕಡಿಮೆ ಉಷ್ಣತೆಯಲ್ಲಿ ತೆನೆ ಸರಿಯಾಗಿ ಈಚೆ ಬಾರದೆ ಮತ್ತು ಕಾಳು ಜೊಳ್ಳಾಗಿಯೇ ಉಳಿದು ಉತ್ಪಾದನೆ ಕುಗ್ಗುತ್ತದೆ. ಅಲ್ಲದೆ ಮಣ್ಣಿನ ವ್ಯತ್ಯಾಸಗಳು ಅಂದರೆ ಉಪ್ಪುಮಣ್ಣು, ಹುಳಿಮಣ್ಣು, ಉಸುಕುಭೂಮಿ,

ಹೆಚ್ಚು ಕಬ್ಬಿಣದ ಅಂಶ, ಕಡಿಮೆ ಸತುವಿನ ಅಂಶದಿಂದಲೂ ಉತ್ಪಾದನೆ ಕ್ಷೀಣಿಸುತ್ತದೆ. ಮೇಲ್ಕಂಡ ಸಮಸ್ಯೆಗಳಿಗೆ ಪರಿಹಾರವಾಗಿ ಆಯಾ ಸಮಸ್ಯೆಯನ್ನು ಸಹಿಸಿಕೊಳ್ಳುವ ತಳಿಯನ್ನು ಕಂಡುಹಿಡಿಯುವುದರಿಂದ ಅಥವಾ ಕೊರತೆಯಿರುವ ಅಂಶವನ್ನು ಮಣ್ಣಿಗೆ ಸೇರ್ಪಡೆ ಮಾಡುವುದರಿಂದ ಮತ್ತು ಸಸ್ಯ ಸಂರಕ್ಷಣೆಯಿಂದ ಉತ್ಪಾದನೆ ಕುಗ್ಗದಂತೆ ಮಾಡುವ ದಿಸೆಯಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ. ರೋಗಗಳಲ್ಲಿ ಬೆಂಕಿ ರೋಗ, ಚುಕ್ಕೆರೋಗ, ಊದುಬತ್ತಿರೋಗ, ಬ್ಲೈಟ್‌ರೋಗ ಮತ್ತು ಕೊಳೆರೋಗ, ಕಣಿಹುಳು, ಜಿಗಿಹುಳು ಮತ್ತು ಕತ್ತರಿಹುಳುಗಳು ಅಧಿಕ ಪ್ರಮಾಣದಲ್ಲಿ ನಷ್ಟವನ್ನುಂಟುಮಾಡುತ್ತಿವೆ.

**ಇತ್ತೀಚಿನ ಸಂಶೋಧನ ಪ್ರಗತಿ ಮತ್ತು ಫಲ :** ಬತ್ತದಲ್ಲಿ 1968ರ ಅನಂತರ ದೊರೆತಿರುವ ಸಂಶೋಧನಾಫಲ ಗಮನಾರ್ಹ. ಸುಧಾರಿತ ಪದ್ಧತಿಗಳ ಅನುಸರಣೆ ಹೆಚ್ಚು ಉತ್ಪಾದನೆಗೆ ನೆರವಾಗಿದೆ. ಇದರಲ್ಲಿ ಸುಧಾರಿತ (ಅಧಿಕ ಇಳುವರಿ) ತಳಿಗಳ ಪಾತ್ರವೂ ಮಹತ್ತ್ವದ್ದಾಗಿದೆ. ಇಂಥ ವಿವಿಧ ತಳಿಗಳು ಈ ರೀತಿ ಇವೆ: ಐ.ಆರ್.–8, ಜಯ, ಮಧು, ಐ.ಆರ್.–20, ಸೋನಾ ಇತ್ಯಾದಿ.

ರಾಜ್ಯದ ಕೃಷಿ ವಿಶ್ವವಿದ್ಯಾಲಯ ಮತ್ತು ಭಾರತ ಕೃಷಿ ಅನುಸಂಧಾನ ಪರಿಷತ್ತು ಇವುಗಳ ಆಶ್ರಯದಲ್ಲಿ ಕಂಡುಹಿಡಿಯಲಾದ ಇನ್ನೂ ಅನೇಕ ಹೊಸ ತಳಿಗಳು (ಎಂಆರ್ 272, ಎಂಆರ್ 292, ಎಂಆರ್ 301, ಐಇಟಿ 2254, ಐಇಟಿ 2295, ಐಇಟಿ 1444, ಐಇಟಿ 2886) ಉತ್ಪಾದನೆಯನ್ನು ಬಹಳ ಮಟ್ಟಿಗೆ ಹೆಚ್ಚಿಸಲು ನೆರವಾಗಬಲ್ಲವೆಂಬ ನಂಬಿಕೆ ಇದೆ. ಅಲ್ಲದೆ ರಾಜ್ಯದ ಕೃಷಿ ವಿಶ್ವವಿದ್ಯಾಲಯದ ಸಂಶೋಧನೆಯಿಂದ ಫಲಿಸಿದ ನಪುಂಸಕಬತ್ತ ಎಂಬುದು ಇಂಡಿಕಾ ಗುಂಪಿನ ಬತ್ತಗಳಲ್ಲಿ ಪ್ರಪಂಚದಲ್ಲೇ ಮೊದಲನೆಯದಾಗಿದ್ದು ಇದರ ಬಹುಮುಖ ಪ್ರಯೋಜನಗಳು ಇತರ ರಾಜ್ಯಗಳಿಗೆ ಮಾತ್ರವಲ್ಲ, ಇತರ ರಾಷ್ಟ್ರಗಳಿಗೂ ದೊರೆತಿವೆ. ಹಿಂದೆ ಬಹಳ ಶ್ರಮ ಮತ್ತು ಕಾಲವನ್ನು ಅವಲಂಬಿಸಿದ್ದ ಸಂರಕ್ಷಣಾಕ್ರಮ, ಈ ನಪುಂಸಕ ಬತ್ತದಿಂದ ಬಹಳ ಸುಲಭಸಾಧ್ಯವಾಗಿದೆ. ಇದರಿಂದ ಬತ್ತದಲ್ಲಿಯೂ ಹೈಬ್ರಿಡ್ ಅಥವಾ ಶಕ್ತಿಮಾನ್ ತಳಿಗಳು ಸಂಭವನೀಯ ಎನಿಸಿವೆ. ಇತ್ತೀಚೆಗೆ ಅಲ್ಲೂ ಹನಿ ನೀರಾವರಿಯಿಂದ ಹುಡಿ ನೆಲದಲ್ಲಿ ಬತ್ತ ಬೆಳೆಯುವ ಹಾಗೂ ಅಧಿಕ ಇಳುವರಿ ಪಡೆಯುವ ಸಾಗುವಳಿ ಕ್ರಮ ರೂಢಿಗೆ ಬರುತ್ತಿದೆ. ಕರ್ನಾಟಕ ಅಕ್ಕಿಯನ್ನು ಗಣನೀಯ ಪ್ರಮಾಣದಲ್ಲಿ ಹೊರ ರಾಜ್ಯಗಳು ಹಾಗೂ ಹೊರ ದೇಶಗಳಿಗೆ ರಫ್ತು ಮಾಡುವ ಸ್ಥಿತಿಯಲ್ಲಿದೆ. (ಎಂ.ಎಂಎ.)

**ಬತ್ತಲೇಶ್ವರ**: ಸು. 17ನೆಯ ಶತಮಾನದ ಆದಿಭಾಗದಲ್ಲಿದ್ದ ಕವಿ. ವಾಲ್ಮೀಕಿ ರಾಮಾಯಣ, ಕೌಶಿಕ ರಾಮಾಯಣ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರುವ ರಾಮಾಯಣದ ಕರ್ತೃ. ಕೃತಿಯಲ್ಲಿ ಕವಿಯ ಬಗೆಗೆ ಯಾವುದೇ ವಿಚಾರ ಉಕ್ತವಾಗಿಲ್ಲ. ಉತ್ತರ ಕನ್ನಡ ಜಿಲ್ಲೆಯ ಕುಮಟ, ಶಿರಸಿ ತಾಲ್ಲೂಕುಗಳ ಸರಹದ್ದಿನಲ್ಲಿರುವ ಯಾಣದ ಸುತ್ತಮುತ್ತಣ ಪ್ರದೇಶ ಈತನ ಜನ್ಮಸ್ಥಳವಿರಬಹುದೆಂಬ ಊಹೆಯಿದೆ. ಪ್ರಹ್ಲಾದ ಚರಿತ್ರೆಯ ಕರ್ತೃ ಚೆನ್ನಿಗ (ಸು.1700) ಪೂರ್ವಕವಿಗಳನ್ನು ಸ್ಮರಿಸುವಾಗ ಈತನನ್ನು ಸ್ಮರಿಸಿದ್ದಾನೆ. ಕಾವ್ಯಶೈಲಿಯಲ್ಲಿ ಕುಮಾರವ್ಯಾಸ, ಕುಮಾರ ವಾಲ್ಮೀಕಿ–ಇವರ ಶೈಲಿಯನ್ನು ಅನುಸರಿಸುವುದರಿಂದ ಬತ್ತಲೇಶ್ವರ ಇವರಿಗಿಂತ ಈಚಿನವನೆಂದು ಹೇಳಬಹುದು.

ನೀತಿಸಾರ ಎಂಬ ಗ್ರಂಥದಲ್ಲಿ ಕಾಳಿದಾಸ, ಸುಕುಮಾರ, ಕುಮಾರವ್ಯಾಸ, ಬಾಣ, ಹರಿಹರ, ರೇಚುಗ, ದುರ್ಗಸಿಂಹ–ಇವರ ಸಾಲಿನಲ್ಲಿ 'ವರಕವಿ ಬತ್ತಲೇಶ್ವರ' ಎಂಬ ಹೆಸರಿನ ಉಲ್ಲೇಖವಿದೆ. ಆದರೆ ಈತನೇ ರಾಮಾಯಣದ ಕರ್ತೃ ಎಂದು ಹೇಳಲು ಆಧಾರವಿಲ್ಲ. ವೀರಶೈವರ 101 ವಿರಕ್ತರ ಗೋಷ್ಠಿಯಲ್ಲಿ ಬತ್ತಲೇಶ್ವರನೆಂಬ ಒಬ್ಬ ವಿರಕ್ತನಿದ್ದನೆಂಬ ಅಂಶ ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣದಿಂದ ತಿಳಿಯುತ್ತದೆ. ಈತನ ಕಾಲ ಸು. 1430. ವೀರಶೈವನಾದ ಆತನಿಗೂ ರಾಮಾಯಣದ ಕರ್ತೃ ಬತ್ತಲೇಶ್ವರನಿಗೂ ಯಾವುದೇ ಸಂಬಂಧವಿಲ್ಲ.

ಕೌಶಿಕ ರಾಮಾಯಣ ಭಾಮಿನೀ ಷಟ್ಪದಿಯಲ್ಲಿದೆ. 44 ಸಂಧಿಗಳಿಂದ ಕೂಡಿರುವ ಈ ಕಾವ್ಯ ಶ್ರೀರಾಮನ ಜನನದಿಂದ ರಾವಣವಧೆಯವರೆಗಿನ ಕಥೆಯನ್ನೊಳಗೊಂಡಿದೆ. ಕೃತಿಯಲ್ಲಿ ನಾಲ್ಕನೆಯ ಮೂರು ಭಾಗ ಯುದ್ಧ ಕಾಂಡದ ಕಥೆಯ ವರ್ಣನೆಗೆ ಮೀಸಲಾಗಿದೆ. ಶೈಲಿ ದೇಸೀಯ ಸೊಬಗಿನಿಂದ ಕೂಡಿದ್ದು ವರ್ಣನೆಗಳು ಕಣ್ಣಿಗೆ ಕಟ್ಟುವಂತಿವೆ. ಸಂಸ್ಕೃತ ಭಾಷೆಯ ಪರಿಚಯವೂ ಕವಿಗೆ ಧಾರಾಳವಾಗಿತ್ತು ಎಂಬುದು ಕಾವ್ಯದಿಂದ ವ್ಯಕ್ತವಾಗುತ್ತದೆ. ಈ ಕಾವ್ಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬಹುಹಿಂದಿನಿಂದಲೂ ಪ್ರಚಾರದಲ್ಲಿತ್ತು. ರುಂಡಭೈರನ ಕಾಳಗ ಎಂಬ ಇನ್ನೊಂದು ಕೃತಿಯನ್ನೂ ಈತನೇ ರಚಿಸಿರಬಹುದೆಂದು ಊಹೆಯಿದೆ. (ಎಸ್.ಎನ್.ಕೆ.)

**ಬನವಾಸಿ**: ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನಲ್ಲಿ ಕಸಬೆಯಿಂದ ಆಗ್ನೇಯಕ್ಕೆ ಸು.22 ಕಿಮೀ ದೂರದಲ್ಲಿ ವರದಾ ನದಿಯ ಎಡದಂಡೆಯ ಮೇಲಿರುವ ಗ್ರಾಮ. ಇತಿಹಾಸ ಪ್ರಸಿದ್ಧ ಸ್ಥಳ. ಕದಂಬರ ರಾಜಧಾನಿ. ಜನಸಂಖ್ಯೆ 6,138. ಹಿಂದೆ ಈ ಊರಿಗೆ ಜಯಂತಿ (ಜಯಂತೀಪುರ), ಸಂಜಯಂತಿ, ವೈಜಯಂತಿ ಎಂಬ ಹೆಸರುಗಳೂ ಇದ್ದವು. ಕನಕಾವತಿ ಅಥವಾ ಕನಕಪುರ ಎಂಬ ಹೆಸರೂ ಈ ಗ್ರಾಮಕ್ಕೆ ಇದ್ದಿತೆನ್ನಲು ಶಾಸನಾಧಾರಗಳಿವೆ. ಬನವಾಸಿ ಸಂಸ್ಕೃತದ ವನವಾಸಿ ಎಂಬುದರ ಕನ್ನಡ ರೂಪ.

ಇಂದಿನ ಬನವಾಸಿ ಗ್ರಾಮ ನದಿಯ ದಂಡೆಯ ಮೇಲಿರುವ ಒಂದು ಪ್ರಾಚೀನ ಕೋಟೆಯ ಮಧ್ಯದಲ್ಲಿದೆ. ಕೋಟೆಯ ಮಧ್ಯದಲ್ಲಿರುವ ಮಧುಕೇಶ್ವರ ದೇವಾಲಯ ಈಗಿನ ಗ್ರಾಮದ ಪ್ರಧಾನ ಆಕರ್ಷಣೆ. ದೇವಾಲಯ ಜಂಬುಕಲ್ಲಿನ ಪ್ರಾಕಾರದಿಂದ ಆವೃತವಾದ ವಿಶಾಲವಾದ ಪ್ರಾಂಗಣದ ಮಧ್ಯೆ ಇದೆ. ಇದರ ಗರ್ಭಗೃಹ ಮತ್ತು ಸುಕನಾಸಿಯ ಭಾಗಗಳು ಪಟ್ಟದಕಲ್ಲಿನ ಚಳುಕ್ಯ ದೇವಾಲಯಗಳ ಮಾದರಿಯಲ್ಲಿರುವುದರಿಂದ ಈ ಭಾಗ ಬಹುಶಃ 8ನೆಯ ಶತಮಾನದಲ್ಲಿ ಕಟ್ಟಿದ್ದೆಂದು ಊಹಿಸಲಾಗಿದೆ. ಇಲ್ಲಿರುವ ಮೂಲ ಲಿಂಗ ಇನ್ನೂ ಹಳೆಯದಿರಬಹುದು. ಸುಕನಾಸಿಯ ಮುಂದೆ ಒಂದು ದೊಡ್ಡ ಮಂಟಪವಿದೆ. ಇದರ ಕಂಬಗಳು ಕಲ್ಯಾಣ ಚಾಳುಕ್ಯ ಶೈಲಿಯವು. ಈ ಕಂಬಗಳು ಮತ್ತು ಮಂಟಪದ ಅಂಚಿನಲ್ಲಿ ಸುತ್ತಲೂ ಇರುವ ಕಕ್ಷಾಸನಗಳ ಮೇಲೆ ಎದ್ದಿರುವ ಚಿಕ್ಕ ಕಂಬಗಳು ಛತ್ತನ್ನು ಎತ್ತಿಹಿಡಿದಿವೆ. ಮಂಟಪದ ಮಧ್ಯದ ಚಾವಣಿ ಮಟ್ಟವಾಗಿದ್ದರೆ ಸುತ್ತಲಿನ ಕಕ್ಷಾಸನದ ಮೇಲೆ ಇರುವ ಚಾವಣಿ ಇಳಿಜಾರಾಗಿರುವುದು ಒಂದು ವೈಶಿಷ್ಟ್ಯ. ಕಕ್ಷಾಸನಗಳು ಮತ್ತು ಅವುಗಳ ಹೊರಮೈಯಲ್ಲಿರುವ ಶಿಲ್ಪಕೆತ್ತನೆಯ ವಿನ್ಯಾಸ ಸಹ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿ ಇರುವುದರಿಂದ ಈ ಮಂಟಪ ಸು.11–12ನೆಯ ಶತಮಾನದಲ್ಲಿ ರಚಿತವಾದದ್ದೆಂದು ಹೇಳಬಹುದು. ಆದರೆ ಈ ಮಂಟಪವನ್ನು ವಿಜಯನಗರದ ಒಂದನೆಯ ಹರಿಹರನ ಕಾಲದಲ್ಲಿ ಅವನ ಮಂತ್ರಿ ಚೌಂಡ ಮಾಧವ ಕಟ್ಟಿಸಿದಂತೆ ಶಾಸನೋಲ್ಲೇಖವಿದೆ. ಇವನು ಮೊದಲಿನ ಮಂಟಪವನ್ನು ಜೀರ್ಣೋದ್ಧಾರ ಮಾಡಿರಬಹುದು. ಮಂಟಪದ ಒಳಗೆ ಒಂದು ಬದಿಯಲ್ಲಿ ಬಳಪದ ಕಲ್ಲಿನಲ್ಲಿ ಮಾಡಿದ ಸು.6 ಅಡಿ ಎತ್ತರದ ಒಂದು ಮಂದಾಸನ ಇದೆ. ಇದು ಸೋದೆಯ ಅರಸರ ಕೊಡುಗೆ ಎಂದು ಊಹೆ. ಇದೊಂದು ಸುಂದರ ಕೃತಿ. ಮಹಾಶೇಷ ಮತ್ತು ಅಷ್ಟದಿಗ್ಗಜಗಳು ಭೂಲೋಕವನ್ನು ಹೊತ್ತು ನಿಂತಿರುತ್ತವೆ ಎಂಬುದನ್ನು ತಿಳಿಯಪಡಿಸುವ ರೀತಿಯಲ್ಲಿ

ಕೆಳಗೆ ಪಾತಾಳಲೋಕ, ಮಧ್ಯದಲ್ಲಿ ಭೂಲೋಕ ಮತ್ತು ಮೇಲ್ಭಾಗದಲ್ಲಿ ದೇವಲೋಕ-ಇವುಗಳ ಕೆತ್ತನೆಗಳು ಈ ಮಂದಾಸನದಲ್ಲಿವೆ. ಮಧು ಕೇಶ್ವರಾಲಯದ ಪ್ರಾಂಗಣದಲ್ಲಿಯೇ ಎಡಬಲಗಳಲ್ಲಿ ಪಾರ್ವತಿ ಮತ್ತು ಸದಾಶಿವರ ಗುಡಿಗಳಿವೆ. ಇವು ಸು.15-16ನೆಯ ಶತಮಾನದವು. ಪ್ರಾಕಾರದ ಗೋಡೆಗೆ ಸೇರಿದಂತೆ ಸುತ್ತಲೂ ಚಿಕ್ಕ ಗುಡಿಗಳಿದ್ದು ಇವುಗಳಲ್ಲಿ ಲಿಂಗ, ದಿಕ್ಪಾಲಕರು, ನಾಗ ಮೊದಲಾದ ಶಿಲ್ಪಗಳನ್ನಿಡಲಾಗಿದೆ. ಇಲ್ಲಿನ ಒಂದು ನಾಗಶಿಲ್ಪ ಕ್ರಿ.ಶ. 3ನೆಯ ಶತಮಾನದ್ದು. ಪ್ರಾಕಾರದೊಳಗೆ ದಕ್ಷಿಣದ ಗೋಡೆಗೆ ಹೊಂದಿಕೊಂಡಂತಿರುವ ಮಂಟಪವೊಂದರಲ್ಲಿ ಬನವಾಸಿಯ ಹೆಮ್ಮೆಯೆನ್ನಬಹುದಾದ ಒಂದು ಕಲ್ಲುಮಂಚ ಇದೆ. ಇದು



ಮಧುಕೇಶ್ವರ ದೇವಾಲಯ

ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಚತುರ ಶಿಲ್ಪಕೃತಿ. ಇದರ ನಾಲ್ಕು ಕಂಬಗಳು ಹಾಗೂ ಮೇಲ್ಛಾವಣಿಗಳು ಗಿಳಿಗಳು, ಸಿಂಹಗಳು ಮುಂತಾದ ಮುದ್ದಾದ ಕೆತ್ತನೆಗಳನ್ನು ಹೊಂದಿವೆ. ಈ ಕಲ್ಲಿನ ಮಂಚವನ್ನು 1629ರಲ್ಲಿ ಸೋದೆಯ ಅರಸ ರಘುನಾಥನಾಯಕ ವಸಂತ ಋತುವಿನಲ್ಲಿ ದೇವರ ಉಪಯೋಗಕ್ಕೆಂದು ಮಾಡಿಸಿಕೊಟ್ಟನೆಂದು ಅದರ ಮೇಲಿನ ಸಂಸ್ಕೃತ ಶಾಸನ ತಿಳಿಸುತ್ತದೆ. ವರ್ಷಂಪ್ರತಿ ಮಧುಕೇಶ್ವರನ ರಥೋತ್ಸವ ನಡೆಯುತ್ತದೆ. ಆಗ ಉಪಯೋಗಿಸುವ 20' ಉದ್ದಗಲದ 22' ಎತ್ತರದ ಭವ್ಯವಾದ ರಥ ಸೋದೆಯ ರಾಮಚಂದ್ರನಾಯಕ 1608ರಲ್ಲಿ ದಾನವಾಗಿ ನೀಡಿದ್ದು.

ಈ ಗ್ರಾಮದಲ್ಲಿ 10-12ನೆಯ ಶತಮಾನಗಳಲ್ಲಿ ಕಟ್ಟಿರಬಹುದಾದ ಬಸದಿಯೊಂದು ಇದೆ. 8ನೆಯ ತೀರ್ಥಂಕರ ಚಂದ್ರಪ್ರಭನ ಒಂದಡಿ ಎತ್ತರದ ಮೂರ್ತಿ ಇಲ್ಲಿದೆ. ಮೂರ್ತಿ ಹಳೆಯದು. ಕಟ್ಟಡವನ್ನು ಪೂರ್ಣವಾಗಿ ನವೀಕರಿಸಲಾಗಿದೆ. ವೀರಶೈವ ಪಂಗಡಕ್ಕೆ ಸೇರಿದ ಪ್ರಭುದೇವ ಹಾಗೂ ಬಸವೇಶ್ವರರ ಎರಡು ಗುಡಿಗಳು ಈ ಗ್ರಾಮದಲ್ಲಿವೆ. ಪ್ರಭುದೇವರ ಗುಡಿ ಸುಮಾರು 14-15ನೆಯ ಶತಮಾನದ್ದು. ಹೊಳೆಮಠ, ಹಿರಿಮಠ, ಚಿಕ್ಕಮಠ, ಚೌಕೀಮಠ ಮತ್ತು ಹಾಲುಮಠಗಳೆಂಬ ಐದು ವೀರಶೈವ ಮಠಗಳೂ ಇಲ್ಲಿವೆ. ಹೊಳೆಮಠದಲ್ಲಿ ವಿರಕ್ತಸ್ವಾಮಿಗಳು ಶಿವಾನುಭವ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಮಧುಕೇಶ್ವರಾಲಯದಿಂದ ಅರ್ಧ ಮೈಲು ದೂರದಲ್ಲಿ ಹಳೆಯ (ಆದಿ) ಬನವಾಸಿಯ ದೇವಾಲಯವಿದೆ. ಇದರಲ್ಲಿ ಶಿವ ಮತ್ತು ಪಾರ್ವತಿಯರೆನ್ನಲಾದ ಎರಡು ಗುಡಿಗಳಿವೆ. ಮಣ್ಣಿನ ದಿಬ್ಬಗಳು, ಗೋಡೆಗಳು, ಕಟ್ಟಡಗಳ ಅವಶೇಷಗಳು ಇದೆ. ಇವು ಬಹುಹಿಂದೆ ವಾಸಯೋಗ್ಯವಾಗಿತ್ತೆಂಬುದನ್ನು ಸೂಚಿಸುತ್ತವೆ. ಬನವಾಸಿಯ ಕೋಟೆಯ ಪ್ರಸ್ತಾಪ ಚಳುಕ್ಯ ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನದಲ್ಲಿಯೇ (634) ಬಂದಿದೆ. ಆದರೆ ಕೋಟೆ ಇನ್ನೂ ಪ್ರಾಚೀನವಾದುದು. ಕೆಲವೆಡೆ ಸು. 20'-30' ಎತ್ತರವಿರುವ ಈ ಕೋಟೆಯ ಗೋಡೆಯನ್ನು ಹಲವು ಹಂತಗಳಲ್ಲಿ ಕಟ್ಟಿದ್ದಿರಬೇಕು. ಅತ್ಯಂತ ಕೆಳಮಟ್ಟದ ವರಸೆಗಳಲ್ಲಿ ಕ್ರಿ.ಶ. 1-2ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ದೊಡ್ಡ ಚಪ್ಪಟೆ ಇಟ್ಟಿಗೆಗಳನ್ನು ಕಾಣಬಹುದು. ಮೇಲುಭಾಗದಲ್ಲಿರುವ ದಪ್ಪ ಜಂಬಿಟ್ಟಿಗೆಯ ಗೋಡೆ ಬಹುಶಃ ವಿಜಯನಗರದ ಕಾಲದಲ್ಲಿ ಕಟ್ಟಿದ್ದು.

ಬನವಾಸಿ ಕರ್ನಾಟಕದ ಅತ್ಯಂತ ಪ್ರಾಚೀನ ಪಟ್ಟಣಗಳಲ್ಲೊಂದು. ಇದರ ಬಗ್ಗೆ ಹಲವು ಪೌರಾಣಿಕ ಉಲ್ಲೇಖಗಳಿವೆ. ಮಧು ಮತ್ತು ಕೈಟಭರೆಂಬಿಬ್ಬರು ಸೋದರರು ವನವಾಸದಲ್ಲಿ ನೆಲೆಸಿದ್ದು, ಹಿರಿಯನಾದ ಮಧು ಮತ್ತು ಮಧುಕೇಶ್ವರಾಲಯವನ್ನು ಕಟ್ಟಿದನೆಂದೂ ಈ ಈರ್ವರನ್ನು ವಿಷ್ಣು ವನವಾಸಿಯಲ್ಲಿಯೇ ಕೊಂದನೆಂದೂ ಒಂದು ಕಥೆ ಇದೆ. ಪಂಚಪಾಂಡವರು ಇಲ್ಲಿಯೇ ತಮ್ಮ ವನವಾಸವನ್ನು ಕಳೆದರೆಂದೂ ಒಂದು ಪ್ರತೀತಿ. ಅವರಲ್ಲಿ ಒಬ್ಬನಾದ ಸಹದೇವ ತನ್ನ ದಿಗ್ವಿಜಯ ಯಾತ್ರೆಯಲ್ಲಿ ಸಂಜಯಂತೀ ನಗರವನ್ನು ಗೆದ್ದನೆಂದು ಮಹಾಭಾರತದಲ್ಲಿ ಹೇಳಿದೆ.

ಐತಿಹಾಸಿಕವಾಗಿ ಬನವಾಸಿ ಮೌರ್ಯರ ಕಾಲದಿಂದಲೂ ಖ್ಯಾತಿವೆತ್ತಿದೆ. ಅಶೋಕ ಚಕ್ರವರ್ತಿ ಬೌದ್ಧಮತ ಪ್ರಚಾರಕ್ಕೆಂದು ಕಳುಹಿಸಿದ ಬೌದ್ಧಭಿಕ್ಷುಗಳಲ್ಲಿ ಒಬ್ಬನಾದ ರಕ್ಷಿತ ವನವಾಸಿಗೆ ಬಂದು ಬೌದ್ಧ ಧರ್ಮಪ್ರಚಾರ ಮಾಡಿದನೆಂದು ಶ್ರೀಲಂಕೆಯ ದುಟ್ಟಗಾಮಣಿ (ಪ್ರ.ಶ.ಪೂ. 1ನೆಯ ಶತಮಾನ) ಎಂಬ ಅರಸ ಅನುರಾಧಪುರದಲ್ಲಿ ಕಟ್ಟಿಸಿದ ಮಹಾಸ್ತೂಪದ ಆರಂಭೋತ್ಸವಕ್ಕೆ ವನವಾಸಿಯಿಂದ ಮಹಾಥೇರ ಚಂದ್ರಗುಪ್ತ 80,000 ಬೌದ್ಧಭಿಕ್ಷುಗಳೊಡಗೂಡಿ ಹೋದನೆಂದೂ ಸಿಂಹಳದ ಮಹಾವಂಶ ಗ್ರಂಥದಿಂದ ತಿಳಿದುಬರುತ್ತದೆ. 1ನೆಯ ಶತಮಾನದಲ್ಲಿದ್ದ ಟಾಲೆಮಿ 'ಬನೌಸಿ'ಯನ್ನು ಹೆಸರಿಸಿ, ಇದನ್ನು ಗುಜರಾತಿನ ಬರಿಗಜಕ್ಕೆ (ಬ್ರೋಚ್) ಆಗ್ನೇಯಕ್ಕಿರುವ ನಗರ ಎಂದಿರುವನಾದರೂ ಅದು ಬಹುಶಃ ಬನವಾಸಿಯನ್ನು ಉದ್ದೇಶಿಸಿದ್ದಾಗಿರಬಹುದು. ನಾಗಾರ್ಜುನಕೊಂಡದಲ್ಲಿ ದೊರೆತ ಶಾಸನವೊಂದರಲ್ಲಿ ಸಿಂಹಳ ದೇಶದ ಭಿಕ್ಷುಗಳು ಬೌದ್ಧಮತ ಪ್ರಚಾರ ಮಾಡಿದ ದೇಶಗಳಲ್ಲಿ ವನವಾಸಿಯೂ ಒಂದೆಂದು ಹೇಳಿದೆ. ಇನ್ನೊಂದು ಶಾಸನದಲ್ಲಿ ಥೇರವಾದಿಗಳು ವಿಭಜವಾದಿಗಳು ಆದ ಬೌದ್ಧಮತ ಪ್ರಚಾರಕರು ಬೌದ್ಧಧರ್ಮಾವಲಂಬಿಗಳಾಗಿ ಪರಿವರ್ತಿಸಿದ ಇತರ ದೇಶಗಳ ಜನರಲ್ಲಿ ವನವಾಸದ ಜನರೂ ಉಲ್ಲೇಖಿಸಲ್ಪಟ್ಟಿದ್ದಾರೆ. ಬನವಾಸಿ ಮೌರ್ಯರ ಕಾಲದಿಂದಲೂ ವಿದೇಶಿ ವ್ಯಾಪಾರಿಗಳಿಗೆ ಆಕರ್ಷಣೆಯ ಕೇಂದ್ರವಾಗಿತ್ತು. ಹಲವಾರು ರೋಮನ್ ನಾಣ್ಯಗಳು ಇಲ್ಲಿ ದೊರೆತಿವೆ.

ಸಾತವಾಹನರ ಅರಸ ಗೌತಮೀಪುತ್ರ ಸಾತಕರ್ಣಿಯ ನೇರವಾದ ಆಡಳಿತ ಕಕ್ಷೆಗೆ ಬನವಾಸಿ ಒಳಪಟ್ಟಿತ್ತು. ಈತ ವಿಜಯ ವೈಜಯಂತಿಯಲ್ಲಿ (ಅಂದರೆ ಬನವಾಸಿ) ತನ್ನ ಸೈನ್ಯದೊಡನೆ ಬೀಡುಬಿಟ್ಟಿದ್ದನೆಂದು ನಾಸಿಕದ ಶಾಸನದಲ್ಲಿ ಹೇಳಿದೆ. ಇದರಲ್ಲಿ ಉಕ್ತನಾದ ಅಮಾತ್ಯ ಶಿವಗುಪ್ತನೂ ಬನವಾಸಿಯಲ್ಲಿ ಅಧಿಕಾರದಲ್ಲಿದ್ದಿರಬಹುದಾಗಿದೆ. ಬ್ರಾಹ್ಮೀ ಲಿಪಿಯಲ್ಲಿನ ಪ್ರಾಕೃತ ಶಾಸನವೊಂದು ಇತ್ತೀಚೆಗೆ ಬನವಾಸಿಯಲ್ಲಿ ದೊರೆತಿದೆ. ಕ್ರಿ.ಶ. ಎರಡನೆಯ ಶತಮಾನದ ಈ ಶಾಸನದಲ್ಲಿ ಇದು ವಾಸಠೀಪುತ ಸಿವಸಿರಿ ಪುಳುಮಾವಿಯ ಮಹಾದೇವಿಯ ಸ್ಮಾರಕಶಿಲೆ ಎಂದೂ ಹೇಳಿದೆ. ಈ ಸಿವಸಿರಿ ಸಾತವಾಹನ ವಾಸಿಷ್ಠೀಪುತ್ತ ಪುಳುಮಾವಿಯ ಅನಂತರ ಅಧಿಕಾರಕ್ಕೆ ಬಂದ ಶಿವಶ್ರೀ ಪುಳುಮಾವಿಯಾಗಿರಬಹುದು. ಸಾತವಾಹನರ ಸಾಮಂತರೂ ಆ ಮನೆತನದ ಶಾಖೆಯೊಂದಕ್ಕೆ ಸೇರಿದ್ದವರು ಆದ ಚುಟುಗಳ (ಚುಟ ಸಾತಕರ್ಣಿ) ನಾಣ್ಯಗಳು ಈ ಪ್ರದೇಶದಲ್ಲಿ ದೊರಕಿರುವುದು ಈ ಪ್ರದೇಶ ಚುಟುಗಳ ಆಳಿಕೆಗೊಳಪಟ್ಟಿತ್ತೆಂದು ಸೂಚಿಸುತ್ತದೆ. ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿಯ ಮಗಳಾದ ಶಿವಸ್ಕಂದನಾಗಶ್ರೀ ತನ್ನ ತಂದೆಯ ಆಳಿಕೆಯ ಹನ್ನೆರಡನೆಯ ವರ್ಷದಲ್ಲಿ ನಾಗಪ್ರತಿಮೆಯೊಂದನ್ನು ಮಾಡಿಸಿ, ಒಂದು ಕೊಳವನ್ನು ಕಟ್ಟಿಸಿ, ವಿಹಾರವೊಂದನ್ನು ಸ್ಥಾಪಿಸಿದುದಾಗಿ

ಬನವಾಸಿಯಲ್ಲೇ ಇರುವ ನಾಗಪ್ರತಿಮೆಯ ಶಾಸನ ಹೇಳಿದೆ. ಕ್ರಿ.ಶ. 278ರಲ್ಲಿ ಆಭೀರಕುಲದ ವಾಸಿಷ್ಠೀಪುತ್ರ ವಸುಷೇಣನು ಸೇಟಗಿರಿಯಲ್ಲಿ ಅಷ್ಟಭುಜಸ್ವಾಮಿಯ ಪ್ರತಿಷ್ಠಾಪನೆ ಮಾಡಿದಾಗ ಅದರಲ್ಲಿ ಬನವಾಸಿಯ ವಿಷ್ಣುರುದ್ರ ಶಿವಲಾನಂದ ಸಾತಕರ್ನಿ ಭಾಗವಹಿಸಿದ್ದ. ಇವನು ಚುಟುಕುಲದವನೇ ಆಗಿರಬಹುದು. ಕ್ರಿ.ಪೂ. 1ನೆಯ ಶತಮಾನದಲ್ಲಿ ಈ ಊರಿನವನಾದ ಭೂತಪಾಲ ಎಂಬ ಒಬ್ಬ ಶೆಟ್ಟಿ ಪುಣೆ ಜಿಲ್ಲೆಯ ಕಾರ್ಲೆಯಲ್ಲಿ ಒಂದು ಬೃಹತ್ ಚೈತ್ಯಾಲಯವನ್ನು ಕಲ್ಲಿನಲ್ಲಿ ಕೊರೆಸಿದ. ಇತ್ತೀಚಿನ ಉತ್ಖನನದಿಂದ ಸುಮಾರು ಸಾತವಾಹನರ ಕಾಲಕ್ಕೆ ಸೇರುವ ಇಟ್ಟಿಗೆಯ ಎರಡು ಚೈತ್ಯಾಲಯಗಳು, ಸುಟ್ಟ ಮಣ್ಣಿನ ಬೊಂಬೆಗಳು ಮತ್ತು ಮೃತ್ಪಾತ್ರೆಗಳು ಇಲ್ಲಿ ಕಂಡುಬಂದಿವೆ. 4-6ನೆಯ ಶತಮಾನಗಳಲ್ಲಿ



ಮಧುಕೇಶ್ವರ ದೇವಾಲಯದಲ್ಲಿರುವ ನಂದಿ

ಬನವಾಸಿ ಆದ್ಯ ಕದಂಬರ ರಾಜಧಾನಿಯಾಗಿತ್ತು. ಮಯೂರಶರ್ಮನಿಂದ ಹಿಡಿದು ಎರಡನೆಯ ಕೃಷ್ಣವರ್ಮನವರೆಗೆ (325-540) ಎರಡು ಶತಮಾನಗಳ ಕಾಲ ಕದಂಬರು ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಅವರ ಕಾಲದಲ್ಲಿ ನಿರ್ಮಿತವಾದ ಮಹಾದೇವ ದೇವಾಲಯ ಮತ್ತಿತರ ನಿರ್ಮಾಣಗಳು ಶಿಥಿಲವಾಗಿವೆ. ಚಳುಕ್ಯ ರಾಜ್ಯ ಸ್ಥಾಪನೆಯಾದೊಡನೆ ಆ ವಂಶದ ಮೊದಲ ಅರಸರ ಪರಿಶ್ರಮದಿಂದ ಬನವಾಸಿ ಅವರ ರಾಜ್ಯಕ್ಕೆ ಸೇರಿತು. ಆ ಕಾಲದಲ್ಲಿ ಅವರ ಸಾಮಂತಾಧಿಪತಿಗಳು ಇಲ್ಲಿ ಆಳುತ್ತಿದ್ದರು. ಉದಾಹರಣೆಗೆ ವಿನಯಾದಿತ್ಯನ ಮಗಳಾದ ಕುಂಕುಮ ಮಹಾದೇವಿಯನ್ನು ಲಗ್ನವಾಗಿದ್ದ ಆಳುಪ ವಂಶದ ಚಿತ್ರವಾಹನ ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ. 8ನೆಯ ಶತಮಾನದ ವೇಳೆಗೆ ಬನವಾಸಿ ಪನ್ನಿರ್ಚ್ಛಾಸಿರ ಎಂಬ ಪ್ರಾಂತ್ಯ ಕಾಣಿಸಿಕೊಳ್ಳುತ್ತದೆ. ಈ ಪ್ರಾಂತ್ಯ ತುಂಗಭದ್ರೆಯಿಂದ ವರದೆಯವರೆಗೂ ಹಬ್ಬಿತ್ತು. ಇದರ ಮುಖ್ಯಸ್ಥಳ ಬನವಾಸಿಯೇ. 10ನೆಯ ಶತಮಾನದ ಅಂತ್ಯದಲ್ಲಿ ಕಲ್ಯಾಣದ ಚಾಳುಕ್ಯರ ರಾಜ್ಯಸ್ಥಾಪನೆಯಾದಾಗ ಬನವಾಸಿಯಲ್ಲಿ ಹಾನಗಲ್ಲು ಶಾಖೆಗೆ ಸೇರಿದ ಕದಂಬರು ಸಾಮಂತರಾಗಿ ಆಳತೊಡಗಿದರು. ಆಗಾಗ್ಗೆ ಅರಸ ತನ್ನ ಅಧಿಕಾರಿಗಳನ್ನು ಅಲ್ಲಿನ ಪ್ರಾಂತಾಧಿಕಾರಿಗಳಾಗಿ, ಬಹುಶಃ ಮೇಲ್ವಿಚಾರಣೆಗೆ ನೇಮಿಸುತ್ತಿದ್ದ. ಭುವನೈಕಮಲ್ಲ ಸೋಮೇಶ್ವರ, ಅವನ ನಂತರ ಆರ್ವಡಿ ವಿಕ್ರಮಾದಿತ್ಯ ಇವರು ಯುವರಾಜರಾಗಿದ್ದಾಗ ಬನವಾಸಿ ದೇಶವನ್ನಾಳುತ್ತಿದ್ದರು. ವಿಕ್ರಮಾದಿತ್ಯ ತನ್ನ ಅಣ್ಣನನ್ನು ಸೋಲಿಸುವ ಮುನ್ನ ಬನವಾಸಿಯಲ್ಲಿ ನಿಂತು ತನ್ನ ಬಲವನ್ನು ವೃದ್ಧಿಸಿಕೊಂಡ. ಅರಸನಾದ ಬಳಿಕ ತನ್ನ ತಮ್ಮ ಯುವರಾಜ ಜಯಸಿಂಹನನ್ನು ಕೆಲಕಾಲ ಅಲ್ಲಿ ಸಾಮಂತನಾಗಿ ನಿಲ್ಲಿಸಿದ. 12ನೆಯ ಶತಮಾನದ ಅಂತ್ಯದಲ್ಲಿ ಚಾಳುಕ್ಯ ರಾಜ್ಯ ಅಸ್ತಮಿಸಿದಾಗ ಉಂಟಾದ ರಾಜಕೀಯ ಕೋಲಾಹಲದಲ್ಲಿ ಈ ಕದಂಬರು ತಮ್ಮ ವ್ಯಕ್ತಿತ್ವವನ್ನು ಕಾಪಾಡಲು ಬಹಳ ಹೆಣಗಿದರು. ಬನವಾಸಿ ಹೊಯ್ಸಳರ, ಸೇವುಣರ, ಕಲಚುರಿಗಳ ಮುತ್ತಿಗೆಗೆ ಈಡಾಯಿತು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಬನವಾಸಿಮಂಡಲ ವಿಜಯನಗರದ ಒಂದು ಪ್ರಾಂತವಾಯಿತು. ಗೋವಾ ನಗರವನ್ನು ಗೆದ್ದ ಇಮ್ಮಡಿ ಬುಕ್ಕ ಮತ್ತು ಹರಿಹರರ ಅಧೀನದಲ್ಲಿದ್ದ ಚೌಂಡಮಾಧವ ಈ ಪ್ರಾಂತದ ಅಧಿಕಾರಿಗಳಲ್ಲಿ ಒಬ್ಬ. ವಿಜಯನಗರದ ಪತನದ ಕಾಲದಲ್ಲಿ ಬೀಳಗಿ ಮತ್ತು ಸ್ವಾದಿ ಅರಸುಮನೆತನಗಳು ಪ್ರವರ್ಧಮಾನವಾದುವು. ಈ ಸ್ವಾದಿ ಮನೆತನಕ್ಕೆ ಸೇರಿದ ಅರಸಪ್ಪನಾಯಕನ ಅಧೀನದಲ್ಲಿ ಬನವಾಸಿ ಇತ್ತು. ಈತ ಬನವಾಸಿ ದೇವಾಲಯಕ್ಕೆ ದಾನಗಳನ್ನು ನೀಡಿದ. ಅನಂತರ ಬಂದ ರಘುನಾಥನಾಯಕ ದೇವಾಲಯದಲ್ಲಿನ ಕಲ್ಲುಮಂಟಪ, ಕಲ್ಲುಮಂಚಗಳನ್ನು ದೇವರಿಗಾಗಿ ಮಾಡಿಸಿಕೊಟ್ಟ. 17ನೆಯ ಶತಮಾನದಿಂದ ಬನವಾಸಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡಿತು. **(ಬಿ.ಆರ್.ಜಿ.)**

**ಬನಶಂಕರಿ**: ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಚೋಳಚಗುಡ್ಡ ಗ್ರಾಮಕ್ಕೆ ಸೇರಿದಂತಿರುವ ಒಂದು ತೀರ್ಥಕ್ಷೇತ್ರ. ಬಾದಾಮಿಯ ದಕ್ಷಿಣಕ್ಕೆ ಸು.5ಕಿಮೀ ದೂರದಲ್ಲಿದೆ. ಈ ಕ್ಷೇತ್ರದ ಅಧಿದೇವತೆಯಾದ ಬನಶಂಕರಿಗೆ ಬನದ ದೇವಿ ಅಥವಾ ಶಾಕಂಬರಿ ಎಂತಲೂ ಹೆಸರಿದೆ.

ಈ ವರೆಗೆ ಇಲ್ಲಿ ದೊರೆತ ಶಾಸನಗಳಲ್ಲಿ ಎರಡು ಕಲ್ಯಾಣ ಚಾಳುಕ್ಯ ಒಂದನೆಯ ಜಗದೇಕಮಲ್ಲನ ಕಾಲದವು. ಅವುಗಳಲ್ಲಿ ದೇವಾಲಯದ ಎಡಬದಿಯ ದೀಪಸ್ತಂಭದ ಪಕ್ಕದಲ್ಲಿ ನಿಲ್ಲಿಸಲಾಗಿರುವ ಒಂದು ದೊಡ್ಡ ಕಂಬದ ಮೇಲೆ ಇರುವ ಶಕವರ್ಷ 946ರ ಒಂದು ಶಾಸನ ಈ ಕಂಬವನ್ನು ಸಾಹಸಭೀಮಮನೆವೆರ್ಗಡೆ ಕೀರ್ತಿಮಯ್ಯ ಶ್ರೀ ಬನದೇವಿಯ ಎದುರಿನಲ್ಲಿ ನಿಲ್ಲಿಸಿದ ಎಂದು ತಿಳಿಸುತ್ತದೆ. ಮಂದಿರದ ಪ್ರಾಕಾರದಲ್ಲಿಯೇ ಇರುವ ಕೇದಾರೇಶ್ವರ ದೇವಾಲಯದ ಕಂಬದ ಮೇಲೆ ಇರುವ ಇನ್ನೊಂದು ಶಾಸನ 1019ರಂದು. ರಾಷ್ಟ್ರಕೂಟ ಮನೆತನದ ಅರಸು ಭೀಮದೇವನ ಸೇವಕರಾದ ಸೇನಬೋವ ನಾಗವರ್ಮಯ್ಯ ಮುಂತಾದ ವೀರರ ಸ್ಮಾರಕಾರ್ಥ ಈ ಕಂಬವನ್ನು ನಿಲ್ಲಿಸಲಾಗಿದೆ ಎಂದು ಈ ಶಾಸನ ತಿಳಿಸುತ್ತದೆ. ಈ ಎರಡೂ ಶಾಸನಗಳಿಂದ ಹತ್ತನೆಯ ಶತಮಾನದಲ್ಲಿ ಬನಶಂಕರಿಯ ಗುಡಿ ಇತ್ತೆಂದೂ ಆಗ ದೇವಿಯ ಹೆಸರು ಬನದೇವಿ ಎಂದು ರೂಢಿಯಲ್ಲಿತ್ತೆಂದೂ ಸಿದ್ಧವಾಗುತ್ತದೆ. ಬನಶಂಕರಿ ದೇವಿಯ ವಿಗ್ರಹದ ಅಡಿಗಲ್ಲಿನ ಮೇಲೆ ನಾಗರೀ ಲಿಪಿಯಲ್ಲಿ ಬರೆದ ಒಂದು ಶಾಸನವಿದೆ. ಅದರಲ್ಲಿ ಶಕ 603ರ ಕಾಲೋಲ್ಲೇಖವಿದೆ. ಇದು ದೇವಿಯ ಪ್ರತಿಷ್ಠೆಯ ಕಾಲವನ್ನು 681 ಎಂದು ಸೂಚಿಸಿದರೂ ಈ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಈಗಿರುವ ದೇವಾಲಯದ ಕಟ್ಟಡ ಮೂಲತಃ ವಿಜಯನಗರದ ಕಾಲದ್ದು. ಈಚೆಗೆ ಬಹಳ ರೂಪಾಂತರ ಹೊಂದಿದೆ. ದೇವಾಲಯದಲ್ಲಿ ಗರ್ಭಗುಡಿ, ಮುಖಮಂಟಪ, ವಿಜಯನಗರ ಕಾಲದ ಶೈಲಿಯ ಗೋಪುರ ಮುಂತಾದವುಗಳಿವೆ. ಈಗಿನ ಗುಡಿಯ ಎಡಮಗ್ಗುಲಲ್ಲಿ ಬಾದಾಮಿಯ ಚಳುಕ್ಯರ ದೇವಾಲಯದ ಕೆಲವು ಅವಶೇಷಗಳು ಇವೆ. ಅದೇ ಮೂಲದೇವಸ್ಥಾನವಾಗಿತ್ತೆಂದು ನಂಬಲಾಗಿದೆ. ಈ ಪ್ರಾಚೀನ ದೇವಾಲಯ ಶಿವದೇವಾಲಯವಾಗಿದ್ದಿರಬಹುದೆಂಬುದಕ್ಕೆ ಕೆಲವು ಸೂಚನೆಗಳು ದೊರೆಕಿವೆ.

ದೇವಾಲಯದಲ್ಲಿರುವ ಸಿಂಹವಾಹಿನಿ ಬನಶಂಕರಿ ಕರಿಯ ಕಲ್ಲಿನಲ್ಲಿ ಕೆತ್ತಿದ ಒಂದು ಸುಂದರಮೂರ್ತಿ. ಮೂರ್ತಿಶಿಲ್ಪದ ಶೈಲಿಯಿಂದ ಇದು ಮಧ್ಯಕಾಲೀನ ಶಿಲ್ಪ ಎಂದು ಹೇಳಬಹುದು.

ದೇವಾಲಯದ ಮುಂದೆ ಹರಿಶ್ಚಂದ್ರತೀರ್ಥ (ಹರಿದ್ರಾತೀರ್ಥ) ಎಂಬ ದೊಡ್ಡ ಹೊಂಡವಿದೆ. ಇಲ್ಲಿನ ತೀರ್ಥದಲ್ಲಿ ಜನರು ಸ್ನಾನಮಾಡಿ ದೇವತೆಗೆ ಪೂಜೆ ಸಲ್ಲಿಸುವುದು ಶ್ರೇಷ್ಠವೆಂಬ ನಂಬಿಕೆಯಿದೆ. ಇದಲ್ಲದೆ ಗುಡಿಯ ಬಲಪಕ್ಕದಲ್ಲಿ ಸರಸ್ವತಿ ನದಿ, ದಕ್ಷಿಣಕ್ಕೆ ಮಲಪ್ರಭಾ ನದಿ. ಉತ್ತರದ ಬೆಟ್ಟದ ಮೇಲೆ ರಂಗತೀರ್ಥ, ನೈಋತ್ಯಕ್ಕೆ ಪದ್ಮತೀರ್ಥ, ಪಶ್ಚಿಮಕ್ಕೆ ಭಾನುತೀರ್ಥ ಮತ್ತು ಆಗ್ನೇಯಕ್ಕೆ ತೈಲತೀರ್ಥಗಳಿವೆ.

ಇಲ್ಲಿಂದ ಉತ್ತರಕ್ಕೆ ಸುಮಾರು 6ಕಿಮೀ ಅಂತರದಲ್ಲಿ ಅಶ್ವತ್ಥಾಮತೀರ್ಥ, ಕೋಟಿತೀರ್ಥ, ವಿಷ್ಣುಪುಷ್ಕರಿಣಿ ಮತ್ತು ನಾಗೇಶತೀರ್ಥಗಳಿವೆ. ಸರಸ್ವತಿ ನದಿ ಮತ್ತು ಹರಿಶ್ಚಂದ್ರತೀರ್ಥಗಳಿಂದ ಅನೇಕ ಎಕರೆ ಭೂಮಿ ನೀರಾವರಿ ಯಾಗುತ್ತದೆ. ಈ ನೀರಾವರಿಯಿಂದ ಬರುವ ಮುಖ್ಯ ಫಸಲೆಂದರೆ ಇಲ್ಲಿಯ ಸುಪ್ರಸಿದ್ಧ ವೀಳ್ಯದೆಲೆ.

ಅನೇಕ ಮನೆತನಗಳ ಕುಲದೇವತೆಯಾಗಿರುವ ಬನಶಂಕರಿಯ ನವರಾತ್ರೋತ್ಸವ ಪ್ರತಿವರ್ಷ ಪುಷ್ಯಶುದ್ಧ ಅಷ್ಟಮಿಯಂದು ಪ್ರಾರಂಭವಾಗಿ ಪೌರ್ಣಿಮೆಯಂದು ರಥೋತ್ಸವದೊಂದಿಗೆ ಮುಕ್ತಾಯವಾಗುತ್ತದೆ. ಈ ಉತ್ಸವಕ್ಕೆ ಬಹಳ ಜನ ಸೇರುತ್ತಾರೆ.

ಶಾಕಂಬರೀ ಮಾಹಾತ್ಮ್ಯಂ ಎಂಬ ಸ್ಥಳಪುರಾಣದ ಪ್ರಕಾರ ಫಲಪ್ರದಾಯಕ ಷಟ್‌ಕ್ಷೇತ್ರಗಳಲ್ಲಿ ಬನಶಂಕರಿಯೂ (ತಿಲಕಕ್ಷೇತ್ರ) ಒಂದು. ಅಗಸ್ತ್ಯ ಮುನಿ ಲೋಪಾಮುದ್ರೆಯೊಂದಿಗೆ ದಕ್ಷಿಣ ಭಾರತದ ತೀರ್ಥಯಾತ್ರೆ ಕೈಕೊಂಡು ಕರವೀರ (ಕೊಲ್ಹಾಪುರ) ಕ್ಷೇತ್ರಕ್ಕೆ ಬಂದಾಗ ಮಹಾಲಕ್ಷ್ಮಿ ಪ್ರಸನ್ನಳಾಗಿ ಅಗಸ್ತ್ಯರಿಗೆ ತಿಲಕವನದಲ್ಲಿಯ ಬನಶಂಕರಿ ಕ್ಷೇತ್ರಕ್ಕೆ ಹೋಗಿ ತಪಸ್ಸನ್ನು ಆಚರಿಸಲು ಅಪ್ಪಣೆ ಕೊಡಿಸಿದ ಪ್ರಯುಕ್ತ ಅಗಸ್ತ್ಯ ಇಲ್ಲಿ ತಪಸ್ಸನ್ನು ಅಚರಿಸಿದ ಎಂದು ಈ ಪುರಾಣದಲ್ಲಿ ಹೇಳಿದೆ. ಇಲ್ಲಿ ಬನಶಂಕರಿಯನ್ನು ಮಹಾಲಕ್ಷ್ಮಿ, ಸರಸ್ವತಿ ಮಹಾಕಾಳಿಯ ಸ್ವರೂಪಳೆಂದೂ ಕರೆಯಲಾಗಿದೆ. ಪೂರ್ವದಲ್ಲಿ ಒಂದು ನೂರು ವರ್ಷಗಳ ಕಾಲ ಅನಾವೃಷ್ಟಿಯಿಂದ ಜಗತ್ತು ಪೀಡಿತವಾ ದಾಗ ದೇವತೆಗಳ ಪ್ರಾರ್ಥನೆಯ ಮೇರೆಗೆ ಈ ಬನಶಂಕರಿ ತನ್ನ ಶರೀರ ದಿಂದ ಉತ್ಪನ್ನವಾದ ಶಾಕಗಳಿಂದ ಜಗವನ್ನು ರಕ್ಷಿಸಿ ಶಾಕಂಬರಿ ಎಂಬ ಹೆಸರನ್ನು ಹೊಂದಿದಳು. ಈ ಕ್ಷೇತ್ರದಲ್ಲಿ ಪಾತಾಳದಿಂದ ಅಕ್ಷಯವಾದ ಜಲವನ್ನು ತುಂಬಿ ಅನೇಕ ತೀರ್ಥಗಳನ್ನು ನಿರ್ಮಿಸಿ ಇದನ್ನು ಸುಭಿಕ್ಷ ದೇಶವಾಗುವಂತೆ ಅನುಗ್ರಹಿಸಿದಳು. ನಂದನೋದ್ಯಾನದಂತೆ ತೋರುತ್ತಿದ್ದ ಆ ಪ್ರದೇಶಕ್ಕೆ ರಾಕ್ಷಸರು ನುಗ್ಗಿ ಧ್ವಂಸಗೊಳಿಸತೊಡಗಿದರು. ಆಗ ದೇವಿ ಈ ದಾನವರ ಉಪಟಳವನ್ನು ದಮನಗೊಳಿಸುವುದಕ್ಕೋಸ್ಕರ ಅನೇಕ ಆಯುಧಗಳನ್ನು ಧರಿಸಿ, ಸಿಂಹಾರೂಢಳಾಗಿ ಬಂದು ಸಕಲ ದೈತ್ಯರನ್ನು ಸಂಹರಿಸಿ ಅಂತರ್ಧಾನಳಾ ದಳು. ಇಂದ್ರಾದಿ ದೇವತೆಗಳು ಸಿಂಹಾರೂಢಳಾದ ದೇವಿಯ ಮೂರ್ತಿಯನ್ನು ಶಾಕಂಬರಿ ಎಂಬ ಹೆಸರಿನಿಂದ ಸ್ಥಾಪಿಸಿ ಪೂಜಿಸಿದರೆಂದು ಈ ಪುರಾಣ ತಿಳಿಸುತ್ತದೆ. ಬನಶಂಕರಿ ದೇವಾಲಯವು ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಗಳ ಸಲೆಯಲ್ಲೇ ಬರುವುದರಿಂದ ಯಾತ್ರಾರ್ಥಿಗಳು ಮತ್ತು ಪ್ರವಾಸಿಗರು ಇಲ್ಲಿಗೆ ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ. **(ಎ.ಎಂ.ಆರ್.)**

**ಬನ್ನೂರು**: ಮೈಸೂರು ಜಿಲ್ಲೆ ತಿರುಮಕೂಡಲುನರಸೀಪುರ ತಾಲ್ಲೂಕಿಗೆ ಸೇರಿದ ಒಂದು ಪಟ್ಟಣ. ಮೈಸೂರಿಗೆ ಪೂರ್ವದಲ್ಲಿ 23 ಕಿಮೀ ದೂರದಲ್ಲಿ ಕಾವೇರಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 23,239. ಇದು 8ನೆಯ ಶತಮಾನದ ಮಧ್ಯದಲ್ಲಿ ಗಂಗ ಅರಸ ಶ್ರೀಪುರುಷನ ರಾಜಧಾನಿಯಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ ಇದನ್ನು ವಹ್ನಿಪುರ, ವರ್ಣಿಯೂರು ಎಂದು ಕರೆಯಲಾಗಿದೆ. ಪ್ರಾಚೀನ ಕನ್ನಡ ಶಾಸನಗಳಲ್ಲಿ ಬನ್ನಿಯೂರು ಎಂಬ ಪ್ರಯೋಗವೂ ತಮಿಳು ಶಾಸನಗಳಲ್ಲಿ ವನ್ನಿಯೂರು ಎಂಬ ಪ್ರಯೋಗವೂ ಕಂಡುಬರುತ್ತದೆ. ಇದಕ್ಕೆ ಜಿನನಾಥಚತುರ್ವೇದಿಮಂಗಲ ಎಂಬ ಹೆಸರೂ ಇತ್ತು.

ಇಲ್ಲಿ ಕೋಸಲೇಶ್ವರ, ಹನುಮಂತೇಶ್ವರ, ಜನ್ಮಾಂಜನೇಯ ಮತ್ತು ಸರೋವರಾಂಜನೇಯ ಎಂಬ ನಾಲ್ಕು ದೇವಾಲಯಗಳಿವೆ. ಕೋಸಲೇಶ್ವರ ದೇವಾಲಯ ಈಗ ಪಾಳುಬಿದ್ದಿದೆ. ದೇವಾಲಯದ ದಕ್ಷಿಣಗೋಡೆಯ ಮೇಲೆ ತಮಿಳು ಶಾಸನವಿದೆ. ಹನುಮಂತೇಶ್ವರ ದೇವಾಲಯ ಇಲ್ಲಿನ ಅತ್ಯಂತ ಪ್ರಾಚೀನ ದೇವಾಲಯ. ಇದರ ತಳಪಾದಿಯ ಕಲ್ಲಿನ ಮೇಲೆ ಚೋಳ ರಾಜರಾಜನ (985–1016) ಒಂದು ತಮಿಳು ಶಾಸನವಿದೆ. ಈ ದೇವಾಲಯದಲ್ಲಿರುವ ಲಿಂಗವನ್ನು ಹನುಮಂತ ಪ್ರತಿಷ್ಠೆ ಮಾಡಿದನೆಂಬುದು ಐತಿಹ್ಯ. ಜನ್ಮಾಂಜನೇಯ ದೇವಾಲಯದ ಆಂಜನೇಯನ ವಿಗ್ರಹವನ್ನು ಮಾಧ್ವಗುರುಗಳಾದ ವ್ಯಾಸರಾಯ ಸ್ವಾಮಿಗಳು ಪ್ರತಿಷ್ಠಾಪಿಸಿದರೆಂಬ ಹೇಳಿಕೆ ಇದೆ. ಈಗ ದೇವಾಲಯವಿರುವೆಡೆಯಲ್ಲಿಯೇ ಅವರು ಜನಿಸಿದ ರೆಂದು ಹೇಳುವುದುಂಟು. ಸರೋವರದ ಬಳಿ ಆಂಜನೇಯ ದೇವಾಲಯ ವಿರುವುದರಿಂದ ಸರೋವರಾಂಜನೇಯ ಎಂಬ ಹೆಸರು ಬಂದಿದೆ. ರಾಮದೇವರ ದೇವಾಲಯ ಇಲ್ಲಿರುವ ಉಳಿದೆಲ್ಲ ದೇವಾಲಯಗಳಿಗಿಂತಲೂ ದೊಡ್ಡದು.

ಈ ಊರಿನಲ್ಲಿ ನಡೆಯುವ ಹೇಮಾದ್ರಮ್ಮನ ಜಾತ್ರೆ ಬಹು ಪ್ರಸಿದ್ಧ ವಾದುದು. ಈ ದೇವತೆಯ ವಿಗ್ರಹವನ್ನು ಚಿನ್ನದಿಂದ ಮಾಡಲಾಗಿದೆ. ಇದು ನಾಲ್ಕು ಕೈಗಳುಳ್ಳ 15' ಎತ್ತರದ ಸುಂದರ ವಿಗ್ರಹ. ಎರಡು ಕೈಗಳಲ್ಲಿ ಶಂಖ, ಚಕ್ರಗಳಿವೆ. ಉಳಿದೆರಡು ಕೈಗಳಲ್ಲಿ ಒಂದು ವರದಹಸ್ತ ಮತ್ತೊಂದು ಅಭಯಹಸ್ತ. ಮೂಲವಿಗ್ರಹವನ್ನು ವಿದ್ಯಾರಣ್ಯರು ಪೂಜಿಸು ತ್ತಿದ್ದು ಸನ್ಯಾಸಾಶ್ರಮ ಸ್ವೀಕರಿಸಿದ ಅನಂತರ ಅದನ್ನು ವಿಜಯನಗರ ರಾಜರಿಗೆ ಕೊಟ್ಟರೆಂದು ಆ ವಿಗ್ರಹ ಕೆಲವು ಶತಮಾನಗಳ ಹಿಂದೆ ಕಳುವಾಗಲಾಗಿ ಅದರ ಬದಲು ಈಗಿನ ವಿಗ್ರಹವನ್ನು ತಯಾರಿಸಲಾಯಿ ತೆಂದು ಐತಿಹ್ಯವಿದೆ. ಈ ವಿಗ್ರಹ ತಾಲ್ಲೂಕು ಖಜಾನೆಯಲ್ಲಿದ್ದು ಪ್ರತಿವರ್ಷವೂ ಜಾತ್ರೆಯ ವೇಳೆಯಲ್ಲಿ ಅದನ್ನು ಜಾತ್ರೆ ನಡೆಸುವವರ ವಶಕ್ಕೆ ಒಪ್ಪಿಸಲಾಗುವುದು. ಜಾತ್ರೆ ಮಾಘಮಾಸದ ಶುಕ್ಲಪಕ್ಷದ 13ನೆಯ ದಿನ ಪ್ರಾರಂಭವಾಗಿ 5ದಿನಗಳ ಕಾಲ ಜರುಗುತ್ತದೆ. ಈ ಜಾತ್ರೆಗೆ ಸಂಬಂಧಿಸಿದ ಒಂದು ಘಟನೆ ಕುತೂಹಲಕರವೂ ಗಮನಾರ್ಹವೂ ಆಗಿದೆ. ಸಾಮಾನ್ಯವಾಗಿ ದೇವತೆಯನ್ನು ಬ್ರಾಹ್ಮಣರು ಪೂಜಿಸಿದ್ದರೂ ಚತುರ್ದಶಿಸಿಯ ದಿನಯಾ ಮಾತ್ರ ಹರಿಜನರು ಆಹ್ವಾನಿತರಾಗಿ ಬಂದು ಹುಣ್ಣಿಮೆಯಂದು ದೇವತೆಯನ್ನು ಮೆರವಣಿಗೆಯಲ್ಲಿ ತಮ್ಮ ಕೇರಿಗೆ ಕರೆದೊಯ್ದು ಅವರೇ ತಯಾರಿಸಿದ ಶುಚಿಯಾದ ಪದಾರ್ಥಗಳನ್ನು ನೈವೇದ್ಯವಾಗಿ ಸಮರ್ಪಿಸುತ್ತಾರೆ. ಈ ಸಂಪ್ರದಾಯದ ಹಿನ್ನೆಲೆ ಹೀಗಿದೆ: ಬನ್ನೂರಿಗೆ 8ಕಿಮೀ ದೂರದಲ್ಲಿ ಈ ದೇವತೆ ತನ್ನ ನಿವಾಸಸ್ಥಾನವನ್ನು ಆಯ್ಕೆ ಮಾಡಿಕೊಂಡಿದ್ದಾಗ ಊರಿನ ಜನರು ಬನ್ನೂರಿಗೆ ಬರುವಂತೆ ಈಕೆಯನ್ನು ಆಹ್ವಾನಿಸಿದರು. ಹೆಜ್ಜೆಹೆಜ್ಜೆಗೂ ತಲೆಯನ್ನು ಅರ್ಪಿಸುವು ದಾದರೆ ಬರುವುದಾಗಿ ದೇವತೆ ಹೇಳಲು, ಈ ನಿಯಮವನ್ನು ಒಪ್ಪಲು ಜನಗಳು ಹಿಂಜರಿದರು. ಆದರೆ ಹರಿಜನರು ಸ್ವಲ್ಪವೂ ಹಿಂಜರಿಯದೆ ನಿಯಮವನ್ನು ಪಾಲಿಸಲು ಮುಂದೆ ಬಂದು ಮೊದಲನೆಯ ತಲೆಯನ್ನು ಕತ್ತರಿಸಿದ ಕೂಡಲೇ ದೇವತೆ ಅವರ ನಿಃಸ್ಪೃಹ ಭಕ್ತಿಯಿಂದ ಸಂತುಷ್ಟಳಾಗಿ ಕರುಣೆಯಿಂದ ಶಿರಗಳ ಬದಲು ತೆಂಗಿನಕಾಯಿಗಳನ್ನು ಅರ್ಪಿಸಲು ಹೇಳಿದಳು. ಈ ರೀತಿ ಆ ದೇವತೆಯನ್ನು ಬನ್ನೂರಿಗೆ ಕರೆತರಲಾಯಿತು. ವರವನ್ನು ಕೇಳುವಂತೆ ದೇವಿ ಹರಿಜನರಿಗೆ ಹೇಳಿದಾಗ ವರ್ಷಕ್ಕೊಮ್ಮೆ ತಾವು ತಯಾರಿಸಿದ ಆಹಾರವನ್ನು ಸ್ವೀಕರಿಸುವಂತೆ ಅವರು ಪ್ರಾರ್ಥಿಸಿಕೊಂಡರು. ದೇವಿ ಕೃಪೆದೋರಿ ಅದಕ್ಕೆ ಒಪ್ಪಿದಳು.

ಬನ್ನೂರು ಕುರಿಸಾಕಣೆಗೆ ಹೆಚ್ಚು ಪ್ರಸಿದ್ಧ. ಬನ್ನೂರು ತಳಿ (ಬಂಡೂರುತಳಿ) ಎಂಬ ವಿಶೇಷ ತಳಿಯ ಕುರಿಗಳಿಗೆ ಹೆಚ್ಚು ಬೇಡಿಕೆಯುಂಟು. ಈ ಊರಿನಲ್ಲಿ ಭಾನುವಾರ ಸಂತೆ ನಡೆಯುತ್ತದೆ. ಸುತ್ತಲೂ ಗದ್ದೆ ತೋಟಗಳಿಂದ ಕೂಡಿರುವ ಗ್ರಾಮವಿದು. ಈ ಊರಿನ ಬಳಿ ಕಾವೇರಿ ನದಿಗೆ ದೊಡ್ಡ ಸೇತುವೆಯನ್ನು ಕಟ್ಟಲಾಗಿದೆ. **(ಕೆ.)**

**ಬನ್ನೇರುಘಟ್ಟ:** ಬೆಂಗಳೂರು ನಗರಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಒಂದು ಗ್ರಾಮ. ಬೆಂಗಳೂರುನಗರದಿಂದ ದಕ್ಷಿಣಕ್ಕೆ 19ಕಿಮೀ ದೂರದಲ್ಲಿದೆ. ಜನಸಂಖ್ಯೆ 3,958. ಈ ಗ್ರಾಮದಲ್ಲಿರುವ ಚಂಪಕಧಾಮಸ್ವಾಮಿ ದೇವಾಲಯ ಪ್ರಸಿದ್ಧವಾದುದು. ಊರಿನ ಪ್ರಧಾನ ರಸ್ತೆಯ ಎದುರಿನಲ್ಲಿ ಬೆಟ್ಟದ ಹಿನ್ನೆಲೆಯಲ್ಲಿ ಎತ್ತರದ ಸ್ಥಳದಲ್ಲಿ ಎದ್ದು ನಿಂತಿರುವ ಚಂಪಕ ಧಾಮಸ್ವಾಮಿ ಬೃಹತ್ ದೇವಾಲಯ ಭವ್ಯವೂ ಆಕರ್ಷಕವೂ ಆಗಿದೆ. ಇದರ ಮಹಾದ್ವಾರ ದೊಡ್ಡ ಸುಂದರ ರಚನೆ. ಒಳಗಿನ ಗರ್ಭಗುಡಿಯಲ್ಲಿ ಶ್ರೀದೇವಿ ಭೂದೇವಿಯರ ಸಮೇತ ವಿಷ್ಣುವಿನ ವಿಗ್ರಹವಿದೆ. ಹಿಂದೆ ದಾಮೋದರ ದೇವಾಲಯವೆಂದು ಹೆಸರಿದ್ದ ಈ ಗುಡಿಯನ್ನು 1257ರಲ್ಲಿ ಹೊಯ್ಸಳ ಸಾಮಂತನಾಗಿದ್ದ ಪೂರ್ವಾದಿರಾಯ ಎಂಬ ತಮಿಳು ಅರಸ ಕಟ್ಟಿಸಿದ್ದಾಗಿ ಇಲ್ಲಿನ ಒಂದು ಶಾಸನದಿಂದ ತಿಳಿಯುತ್ತದೆ. ದೇವಾಲಯದ ಎದುರಿರುವ ಧ್ವಜಸ್ತಂಭದ ತಳದಲ್ಲಿಯೂ ಕೆಲವು ಶಾಸನಗಳನ್ನು ಕೆತ್ತಲಾಗಿದೆ. ಈ ಶಾಸನಗಳಲ್ಲಿ ಕೆಲವು ತಮಿಳಿನವು; 13ನೆಯ ಶತಮಾನಕ್ಕೆ ಸಂಬಂಧಿಸಿದವು. ಇವುಗಳೊಂದರಲ್ಲಿ ಇದನ್ನು 'ವನ್ನಿಯಾರ್ ಘಟ್ಟಂ' ಎಂದು ಕರೆಯಲಾಗಿದೆ. ಈ ಗ್ರಾಮದ ಹಿಂಬದಿಯಲ್ಲಿರುವ ಬನ್ನೇರುಘಟ್ಟ ಬೆಟ್ಟ 997ಮೀ ಎತ್ತರವಿದೆ. ಇಲ್ಲಿನ ಸಂಪಂಗಿರಾಮಸ್ವಾಮಿ ದೇವಾಲಯವನ್ನು ನಿತ್ಯ ಬಹಳಜನ ಸಂದರ್ಶಿಸುತ್ತಾರೆ. ಇಲ್ಲಿನ ಆನೆಗಳು ಪ್ರವಾಸಿಗರಿಗೆ ಆಕರ್ಷಕವಾಗಿವೆ. ಹೊಯ್ಸಳ ಮತ್ತು ವಿಜಯನಗರಗಳ ಕಾಲದಲ್ಲಿ ಇದೊಂದು ಜನಜಂಗುಳಿಯಿಂದ ಕೂಡಿದ ಸ್ಥಳವಾಗಿದ್ದಿತು. ಪ್ರತಿವರ್ಷವೂ ಮಾರ್ಚ್–ಏಪ್ರಿಲ್ ತಿಂಗಳಲ್ಲಿ 3 ದಿನಗಳ ಕಾಲ ಇಲ್ಲಿ ರಥೋತ್ಸವ ವೈಭವದಿಂದ ನಡೆಯುವುದು. ಆಗ ಸಾವಿರಾರು ಜನರು ಇದರಲ್ಲಿ ಭಾಗವಹಿಸುವರು.

ರಾಷ್ಟ್ರೀಯ ಉದ್ಯಾನವನದಲ್ಲಿ ಸಿಂಹ, ಬನ್ನೇರುಘಟ್ಟ

ಈಚೆಗೆ ಬನ್ನೇರುಘಟ್ಟ ಭಾರತದ ಒಂದು ಪ್ರಸಿದ್ಧ ವಿಹಾರ ಕೇಂದ್ರವಾಗಿದೆ. ಸರ್ಕಾರ ರಾಷ್ಟ್ರೀಯ ಉದ್ಯಾನ ಯೋಜನೆಯೊಂದನ್ನು ಪ್ರಾರಂಭಿಸಿ ಈ ಸ್ಥಳವನ್ನು ಆರಿಸಿಕೊಂಡು ಅಭಿವೃದ್ಧಿಪಡಿಸಿದೆ. ಇದರ ಒಟ್ಟು ಪ್ರದೇಶ ಸುಮಾರು 12,94,950 ಚ.ಕಿಮೀ. ಇದು ನಾನಾ ಜಾತಿಯ ಮರಗಿಡಗಳಿಂದ ಆವೃತವಾಗಿದೆ. ಕಾಡುಪ್ರಾಣಿಗಳನ್ನು ನಾನಾ ಭಾಗಗಳಿಂದ ತಂದು ಇಲ್ಲಿ ಸ್ವಾಭಾವಿಕ ಪರಿಸರದಲ್ಲಿ ಅವುಗಳನ್ನು ಬಿಟ್ಟು ಸಂರಕ್ಷಿಸುವುದು ಈ ಯೋಜನೆಯ ಉದ್ದೇಶ. ಈ ಉದ್ಯಾನದ ಸುತ್ತಲೂ ದೊಡ್ಡ ಹಳ್ಳವನ್ನು ತೋಡಿ ಕಾಡು ಪ್ರಾಣಿಗಳು ಆ ಸ್ಥಳವನ್ನು ಬಿಟ್ಟು ಹೊರಗೆ ಹೋಗದಂತೆ ಮಾಡಿ ಅವುಗಳಿಗೆ ನಾನಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಪ್ರಾಣಿಗಳಿಗೆ ಬೇಕಾದ ನೀರಿನ ಸೌಲಭ್ಯಕ್ಕಾಗಿ ಅಲ್ಲಿ ಹರಿಯುವ ಸಣ್ಣ ತೊರೆಗಳಿಗೆ ಅಡ್ಡಗಟ್ಟೆ ಹಾಕಿನೀರನ್ನು ಸಂಗ್ರಹಿಸಲಾಗಿದೆ. ಈ ಯೋಜನೆಯ ಗಮನಾರ್ಹ ಅಂಶವೆಂದರೆ ಸಫಾರಿಪಾರ್ಕ್ ನಿರ್ಮಾಣ. ಇಲ್ಲಿ ಕೇವಲ ಸಿಂಹ, ಹುಲಿ, ಆಫ್ರಿಕನ್ ಗೊರಿಲ್ಲಾಗಳನ್ನು ಸಂರಕ್ಷಿಸಿ ಅವುಗಳ ವಂಶಾಭಿವೃದ್ಧಿ ಕಾರ್ಯವನ್ನು ಮಾಡಲಾಗುವುದು. ಈ ವನದ ಮನಸೆಳೆಯುವ ಅಂಶವೆಂದರೆ ಮೊಸಳೆ ಕೇಂದ್ರ. ಇಲ್ಲಿ ಒಂದು ಸಣ್ಣ ಕೃತಕ ಸರೋವರವನ್ನು ನಿರ್ಮಿಸಿ ನಾನಾ ಜಾತಿಯ ಮೊಸಳೆಗಳನ್ನು ಬಿಡಲಾಗಿದೆ. ಅವುಗಳ ವಂಶಾಭಿವೃದ್ಧಿಗೆ ಸೂಕ್ತ ಪರಿಸರ ನಿರ್ಮಿಸಲಾಗಿದೆ. (ಆರ್.ಸಿ.)

**ಬಬ್ಬೂರು ರಂಗ:** ಸು.1750. ಅಂಬಿಕಾ ವಿಜಯ ಮತ್ತು ಪರಶುರಾಮ ರಾಮಾಯಣಗಳ ಕರ್ತೃ. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಸಮೀಪದಲ್ಲಿರುವ ಬಬ್ಬೂರು ಇವನ ಸ್ಥಳ. ಕುಲದೇವತೆ ರಂಗನಾಥ. ತಂದೆ ಹಿರಿಯೂರಿನ ಕರಣಿಕ ರಂಗ, ತಾಯಿ ರುಕ್ಮಿಣಿ.

ಈತ ತನ್ನ ಗ್ರಂಥದಲ್ಲಿ ಕುಮಾರವ್ಯಾಸ, ಕುಮಾರ ವಾಲ್ಮೀಕಿ ಲಕ್ಷ್ಮೀಶ ಇವರನ್ನು ನೆನೆಯುತ್ತ ತನ್ನನ್ನೂ ಅವರೊಂದಿಗೆ ಹೋಲಿಸಿಕೊಳ್ಳುತ್ತಾನಾದರೂ ಈತನ ಕೃತಿಗಳು ಅವರವಷ್ಟು ಸತ್ತ್ವಯುತವೂ ಪುಷ್ಟವೂ ಆಗಿಲ್ಲ.

ಅಂಬಿಕಾವಿಜಯ ಭಾಮಿನೀ ಷಟ್ಪದಿಯಲ್ಲಿದೆ. ಆದಿಶಕ್ತಿಯಾದ ದೇವಿ ರಕ್ತಬೀಜಾಸುರನನ್ನು ಸಂಹರಿಸಿದ ಕಥೆಯನ್ನೂ ಮಾರ್ಕಂಡೇಯ ಚರಿತವನ್ನೂ ಇಲ್ಲಿ ವಿವರಿಸಿದೆ. ಪರಶುರಾಮ ರಾಮಾಯಣ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ ಪರಶುರಾಮನ ವೃತ್ತಾಂತವಿದೆ. *

**ಬರಗಲ್ಲು:** ಕ್ಷಾಮಕಾಲದಲ್ಲಿ ಆಚರಿಸುವ ಒಂದು ಜನಪದ ಸಂಪ್ರದಾಯ. ಬರದ ನಿವಾರಣಾರ್ಥವಾಗಿ ಕಲ್ಲೊಂದನ್ನು ಪೂಜಿಸಿ, ಒಂದು ಊರಿನ ಎಲ್ಲೆಯಿಂದ ಮತ್ತೊಂದು ಊರಿನ ಎಲ್ಲೆಗೆ ವಿಸರ್ಜಿಸುವ ಸಂಪ್ರದಾಯ ಬಯಲು ಸೀಮೆಯ ಕೆಲವು ಕಡೆಗಳಲ್ಲಿ ಕಂಡುಬರುತ್ತದೆ. ಆ ಕಲ್ಲಿನ ಜೊತೆಯಲ್ಲಿ ಬರಕ್ಕೆ ಸಂಬಂಧಿಸಿದ ಅನಿಷ್ಟಗಳೂ ಕಳೆದುಹೋದವು ಎಂಬ ನಂಬಿಕೆ ಇದರ ಹಿನ್ನೆಲೆಯಲ್ಲಿ ಕಂಡುಬರುತ್ತದೆ. ಉತ್ತರ ಕನ್ನಡದ ಅಡಗೋಲಜ್ಜಿ, ಮಲೆನಾಡಿನ ಗಡಿಮಾರಿ ಸಂಪ್ರದಾಯಗಳನ್ನು ಹೋಲುವ ಬರಗಲ್ಲು ಅಥವಾ ಬರದ ಮಾರಿ ಸಂಪ್ರದಾಯ ಕ್ಷಾಮಕಾಲದಲ್ಲಿ ಮಾತ್ರ ಆಚರಿಸಲ್ಪಡತಕ್ಕುದು. ಮಳೆಯಿಲ್ಲದೆ, ಬೆಳೆಯಿಲ್ಲದೆ ಜನ ಕಂಗಾಲಾದಾಗ ಬರದ ಕಲ್ಲನ್ನು ಬಿಡಲು ಯೋಚಿಸುತ್ತಾರೆ. ಬರ ಬರುವುದಕ್ಕೆ ಗ್ರಾಮದ ಎಲ್ಲೆಯಲ್ಲಿ ಭಿನ್ನವಾಗಿ ಬಿದ್ದಿರುವ ಯಾವುದೋ ವಿಗ್ರಹ ಕಾರಣವಾಗಿರಬಹುದು, ಬೇರೆಯ ಗ್ರಾಮದವರು ತಮ್ಮ ಎಲ್ಲೆಗೆ ತಂದು ವಿಸರ್ಜಿಸಿರುವ ಬರದ ಕಲ್ಲು ಕಾರಣವಿರಬಹುದು, ತೊನ್ನು ಮೊದಲಾದ ಕೆಟ್ಟರೋಗಗಳಿಂದ ಸತ್ತವರನ್ನು ಸುಡದೆ ಹೂತದ್ದು ಕಾರಣವಾಗಿರಬಹುದು, ಗರ್ಭಿಣಿಯರನ್ನು ಸುಡದೆ ಹೂತಿರಬಹುದಾದ್ದು, ಪ್ರಕೃತಿಯ ವಿಕೋಪಕ್ಕೆ ಕಾರಣವಾಗಿರಬಹುದು–ಮುಂತಾಗಿ ಜನ ಬರದ ಕಾರಣವನ್ನು ತಾವೇ ಶೋಧಿಸಿ ನಿರ್ಧಾರಕ್ಕೆ ಬರುತ್ತಾರೆ. ಇತರ ಕಾರಣಗಳು ಏನೇ ಇರಲಿ, ಬರಗಲ್ಲು ಬಿಟ್ಟರೆ ಸಾಮಾನ್ಯವಾಗಿ ಮಳೆ ಬರುತ್ತದೆ ಎಂಬ ನಂಬಿಕೆ ಕಂಡುಬರುತ್ತದೆ.

ಬರಗಲ್ಲು ಯಾವುದೇ ಪಾಳುಗುಡಿಯಲ್ಲಿ ಬಿದ್ದಿರುವ ಭಿನ್ನವಾದ ವಿಗ್ರಹವಾಗಿರಬಹುದು. ಸಾಮಾನ್ಯವಾಗಿ ಗಣಪತಿ, ಆಂಜನೇಯ, ಬಸವಣ್ಣ ಮುಂತಾದ ಮೂರ್ತಿಗಳ 'ಬರಗಲ್ಲು'ಗಳು ಕಂಡುಬರುತ್ತವೆ. ಕೆಲವೆಡೆ ಭಿನ್ನವಾದ ವೀರಗಲ್ಲುಗಳನ್ನೂ ಇತರ ಶಿಲಾವಿಗ್ರಹಗಳನ್ನೂ ಬಳಸಲಾಗುತ್ತದೆ. ಅಂಥ ಭಿನ್ನಮೂರ್ತಿಯೊಂದನ್ನು ಹುಡುಕಿ, ಊರ ಹೊರಗೆ ಪ್ರತಿಮನೆಯವರು ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಈ ಪೂಜೆ ಬೇರೆಬೇರೆಯೇ ಆಗಬೇಕು. ಪೂಜೆಯಾದ ಅನಂತರ ನಡುರಾತ್ರಿಯಲ್ಲಿ ಮನೆಗೊಬ್ಬರಂತೆ ಹೊರಟು ಗಾಡಿಯನ್ನು ಕಟ್ಟಿಕೊಂಡು ಬರಗಲ್ಲನ್ನು

ಬೇರೆ ಊರಿನ ಎಲ್ಲೆಗೆ ಸಾಗಿಸುತ್ತಾರೆ. ಅನೇಕ ಕಡೆ ಕೂಗಿಕೊಂಡು ಗದ್ದಲ ಮಾಡಿಕೊಂಡು ಹೋಗಿ ಬರಗಲ್ಲನ್ನು ಬಿಟ್ಟು ಬರುವ ವಾಡಿಕೆ ಯುಂಟು. ಇದು ಎರಡು ಹಳ್ಳಿಗಳ ನಡುವೆ ಘರ್ಷಣೆಗೆ ಕಾರಣವಾಗುವುದ ರಿಂದ, ಕೆಲವೆಡೆ ರಹಸ್ಯವಾಗಿ ಅದನ್ನು ಸಾಗಿಸಿ ಬೇರೆ ಊರಿನ ಎಲ್ಲೆಯಲ್ಲಿ ಬಿಟ್ಟು ಬರುತ್ತಾರೆ.

ಬರಗಲ್ಲನ್ನು ಗುಪ್ತವಾಗಿ ಬೇರೆ ಊರಿನ ಗಡಿಯಲ್ಲಿ ಬಿಟ್ಟು ಬಂದರೂ ಸಾಮಾನ್ಯವಾಗಿ ಜನ ತಿರುಗಾಡುವ ದಾರಿಯ ಬದಿಯಲ್ಲಿ ಅದು ಇರುತ್ತದೆ. ಆ ಊರಿನವರಿಗೂ ಅದು ಬೇಗ ತಿಳಿದು ಅದು ಮತ್ತೆ ಮುಂದಕ್ಕೆ ಸಾಗಬೇಕು. ಎರಡನೆಯ ಹಳ್ಳಿಯವರು ಮತ್ತೆ ಅದನ್ನು ಪೂಜಿಸಿ ಇನ್ನೊಂದು ಊರಿನ ಎಲ್ಲೆಗೆ ಬಿಡುತ್ತಾರೆ. ಹೀಗೆಯೇ ಅದು ಊರಿಂದೂರಿಗೆ ಸಂಚಾರ ಮಾಡಿ ಕೊನೆಗೆ ಯಾವುದಾದರೂ ನದಿಯನ್ನೋ ದೊಡ್ಡ ಕೆರೆಯನ್ನೋ ಜಲಾಶಯವನ್ನೋ ಸೇರುತ್ತದೆ. ಅಲ್ಲಿಗೆ ಬರದ ಮಾರಿ ಕಳೆದಂತಾಯಿತೆಂದು ಜನ ನಂಬುತ್ತಾರೆ. ಇದೇ ಬಗೆಯ ಗಡಿಮಾರಿ ಎಂಬ ಜನಪದ ಸಂಪ್ರದಾಯ ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುತ್ತದೆ.

**(ಜಿ.ಎಸ್.ಪಿ.)**

**ಬರಗೂರು ರಾಮಚಂದ್ರಪ್ಪ**: 1947–. ಪ್ರಸಿದ್ಧ ಬಂಡಾಯ ಸಾಹಿತಿ, ಚಲನಚಿತ್ರ ನಿರ್ದೇಶಕರು. ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಬರಗೂರು ಗ್ರಾಮದಲ್ಲಿ 1947 ಅಕ್ಟೋಬರ್ 18ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪಡೆದರು. ತುಮಕೂರಿನಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿಯನ್ನೂ ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ (ಕನ್ನಡ) ಪದವಿಯನ್ನೂ ಪಡೆದರು. ಅದೇ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಕೇಂದ್ರದಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ಸಾಹಿತ್ಯ, ಸಂಸ್ಕೃತಿ, ಸಿನಿಮಾ–ಹೀಗೆ ಅಂತರ್ ಶಿಸ್ತೀಯ ಅಧ್ಯಯನದಲ್ಲಿ ವಿಶೇಷ ಆಸಕ್ತಿ ಹೊಂದಿರುವ ಇವರು ಭಾರತೀಯ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಒಳಸುಳಿಗಳನ್ನು ಅಭಿವ್ಯಕ್ತಿಸುವ ಕೃತಿಗಳನ್ನು ರಚಿಸಿದರು; ಚಲನಚಿತ್ರಗಳನ್ನು ನಿರ್ದೇಶಿಸಿದರು.

ಕನಸಿನ ಕನ್ನಿಕೆ (1968) ಕವನ ಸಂಕಲನವನ್ನು ಹೊರತರುವುದರ ಮೂಲಕ ಕವಿ ಎನಿಸಿದ ಇವರು ಆರಂಭದ ದಿನಗಳಲ್ಲಿ ನವ್ಯಕಾವ್ಯದ ಪ್ರಭಾವದಡಿಯಲ್ಲಿ ಕಾವ್ಯ ರಚಿಸುತ್ತಿದ್ದರೂ ಸ್ವಂತ ಆಲೋಚನಾ ಧಾಟಿಯನ್ನು ಬಿಟ್ಟುಕೊಡದೆ ಸೃಜನಶೀಲತೆಯಲ್ಲಿ ತೊಡಗಿದರು. ಮರಕುಟಿಗ (1973) ಸಂಕಲನದ ಪ್ರಧಾನ ನೆಲೆ ಇರುವುದು ಸಾಮಾಜಿಕ ವೈರುಧ್ಯಗಳನ್ನು ದಾಖಲಿಸುವುದರಲ್ಲಿ. ಸಾಮಾಜಿಕ ದೃಷ್ಟಿಯ ಒಳನೋಟ ಗಳಿಗೇ ಸಿಂಹಪಾಲು ಮೀಸಲಾಗಿರುವ ಈ ಸಂಕಲನದಲ್ಲಿ ನವ್ಯದಲ್ಲಿ ಕಂಡು ಬಂದ ವೈಯಕ್ತಿಕ ನೆಲೆಯ ಅತಿರೇಕಗಳಿಲ್ಲ. ನೆತ್ತರಲ್ಲಿ ನಂದಹೂವು (1983) ಎಂಬ ಸಂಕಲನ ಬರುವ ಹೊತ್ತಿಗಾಗಲೆ ನವ್ಯದಲ್ಲಿ ತದ್ವಿರುದ್ಧವಾಗಿ ದಲಿತ ಬಂಡಾಯ ಸಾಹಿತ್ಯ ಜನಮುಖಿಯಾ ಯಿತು. ಆ ಸಂದರ್ಭದ ಬಂಡಾಯ ಚಳವಳಿಯ ಆಶಯಗಳನ್ನು ತುಂಬ ಸಮರ್ಥವಾಗಿ ಬಿಂಬಿಸಿದ ಪ್ರಮುಖ ಬಂಡಾಯ ಕಾವ್ಯ ಸಂಕಲನ ಎಂಬ ಕೀರ್ತಿಗೆ ಇದು ಭಾಜನವಾಯಿತು.

ಗುಲಾಮಗೀತೆ ಮತ್ತು ಮಗುವಿನ ಹಾಡು (1993)– ಈ ಸಂಕಲನಗಳಲ್ಲಿ ಕಾವ್ಯ ಬಂದಕ್ಕಿಂತ ಸಂವಹನದ ಕಡೆಗೆ ವಿಶೇಷ ಗಮನ ಕೊಡಲಾಗಿದೆ. ವಸ್ತುಗಳ ರೀತಿ ಮನುಷ್ಯರನ್ನು ಮಾರಾಟ ಮಾಡುತ್ತಿದ್ದಂಥ ಕಾಲವೊಂದು ಗುಲಾಮೀ ಸಂಸ್ಕೃತಿಯ ಹಿನ್ನೆಲೆಯಲ್ಲಿ ರೂಪುಗೊಂಡ ಕವಿತೆಗಳು 'ಗುಲಾಮಗಿರಿ'ಯಲ್ಲಿವೆ. 'ಕಾಂಟೆಸ್ಸಾದಲ್ಲಿ ಕಾವ್ಯ' ಇವರ ಸಮಗ್ರ ಕವಿತೆಗಳ ಸಂಕಲನ (2001).

ಸಣ್ಣಕತೆಯ ಕ್ಷೇತ್ರದಲ್ಲಿಯೂ ಇವರು ಸಾಕಷ್ಟು ಕೃಷಿಮಾಡಿದ್ದಾರೆ. ಸುಂಟರಗಾಳಿ, ಕಪ್ಪುನೆಲದ ಕೆಂಪುಕಾಲು, ಒಂದು ಊರಿನ ಕಥೆ (ಆಯ್ದಕತೆಗಳು), ಬಯಲಾಟದ ಭೀಮಣ್ಣ ಮೊದಲಾದ ಸಣ್ಣ ಕಥಾ ಸಂಕಲನಗಳಲ್ಲಿ ಗ್ರಾಮೀಣ ಪರಿಸರದ ಸೂಕ್ಷ್ಮ ಸಂವೇದನೆಗಳನ್ನು, ಅನುಭವಗಳನ್ನು ವ್ಯಕ್ತಪಡಿಸುತ್ತ ಬಂದರು. ಮನುಷ್ಯನ ತಲ್ಲಣಗಳನ್ನು ಕತೆಗಳಲ್ಲಿ ಹಿಡಿದಿಟ್ಟ ಬರಗೂರರು ಕಾದಂಬರಿ ಕ್ಷೇತ್ರದಲ್ಲೂ ಗಣನಿಯ ಸಾಧನೆಗೆ ಹೆಸರಾದವರು. ಬದುಕನ್ನು ಭಿನ್ನ ರೀತಿಯಲ್ಲಿ ಗ್ರಹಿಸುವಲ್ಲಿ ಉಳಿದ ಕಾದಂಬರಿಕಾರರಿಗಿಂತ ಮುಖ್ಯರಾದರು. ಸೂತ್ರ, ಉಕ್ಕಿನ ಕೋಟೆ



(1986), ಬೆಂಕಿ, ಸೂರ್ಯ, ಸಂಗಪ್ಪನ ಸಾಹಸಗಳು (1982), ಸೀಳುನೆಲ (1980), ಭರತನಗರಿ (1983), ಗಾಜಿನ ಮನೆ (1997), ಸ್ವಪ್ನಮಂಟಪ – ಈ ಕಾದಂಬರಿಗಳಲ್ಲಿ ಅನ್ಯಾಯವನ್ನು ವಿರೋಧಿ ಸುವ ದಿಟ್ಟ ಪಾತ್ರಗಳು ಓದುಗರ ಮನದಲ್ಲಿ ಉಳಿಯುತ್ತವೆ. ಜನಪರ ಹೋರಾಟಗಳಲ್ಲಿಯೂ ಕಾಳಜಿಯುಳ್ಳ ಇವರ ಕಾದಂಬರಿಗಳಲ್ಲಿ ಸಿದ್ಧ ಕ್ರಾಂತಿಕಾರಿ ಮನೋಭಾವ ದಿಂದ ಹೊರಡದೆ ಪಾತ್ರಗಳು ಆಯಾ ಸನ್ನಿವೇಶಗಳ ಕಟು ವಾಸ್ತವ ದೌರ್ಜನ್ಯಗಳಿಗೆ ಒಳಗಾಗಿ ಅದರಿಂದ ಪಾಠ ಕಲಿತು ಅನುಭವದ ಅಡಿಪಾಯದ ಮೇಲೆ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಕ್ರಮಬದ್ಧ ವಾದ ಬೆಳೆವಣಿಗೆಯನ್ನು ಕಾಣುತ್ತೇವೆ.

ಯಾವುದೇ ಹುಸಿ ರಾಜಿಗೆ ಒಗ್ಗದ ಲೇಖಕರ ವ್ಯಕ್ತಿತ್ವವೇ ಇವರ ಕಾದಂಬರಿಗಳ ಪಾತ್ರಗಳಲ್ಲೂ ಹರಿದು ಬಂದಿರುವುದನ್ನು ಕೆಲವು ಕೃತಿಗಳಲ್ಲಿ ಕಾಣಬಹುದು. ಭರತನಗರಿ ತಂತ್ರದ ದೃಷ್ಟಿಯಿಂದ ಕನ್ನಡಕ್ಕೆ ಹೊಸತನವನ್ನು ನೀಡಿದ ಕಾದಂಬರಿ. ಇಲ್ಲಿ ಏಕಕಾಲದಲ್ಲಿ ಫ್ಯಾಂಟಸಿ ಮತ್ತು ಸಾಮಾಜಿಕ ವಾಸ್ತವಗಳನ್ನು ಹಿಡಿದಿಡುತ್ತ ಹೊಸ ತಂತ್ರವನ್ನೇ ಶೋಧಿಸುವ ಕೆಲಸ ಮಾಡಿದ್ದಾರೆ. ಸೃಜನಶೀಲ ಸಾಹಿತ್ಯ ಇವರಿಗೆ ಮುಖ್ಯವಾದಂತೆ ವಿಚಾರ ವಿಮರ್ಶೆಯೂ ಮುಖ್ಯವಾಯಿತು. ಸಾಹಿತ್ಯ ಮತ್ತು ರಾಜಕಾರಣ (1981), ಸಂಸ್ಕೃತಿ ಮತ್ತು ಸೃಜನಶೀಲತೆ (1991), ಬಂಡಾಯ ಸಾಹಿತ್ಯ ಮೀಮಾಂಸೆ (1996), ಇಣುಕು ನೋಟ, ಸಂಸ್ಕೃತಿ ಉಪಸಂಸ್ಕೃತಿ (1994), ವರ್ತಮಾನ (1996), ರಾಜಕೀಯ ಚಿಂತನೆ, ಸಂಸ್ಕೃತಿ; ಶ್ರಮ ಮತ್ತು ಸೃಜನಶೀಲತೆ (2001) ಪರಂಪರೆಯೊಂ ದಿಗೆ ಪಿಸುಮಾತು (2004) ಮೊದಲಾದ ಕೃತಿಗಳಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕೀಯ ಮುಂತಾದ ಹಲವು ಸಂಗತಿಗಳ ಬಗೆಗಿನ ಚಿಂತನಶೀಲತೆ ದಟ್ಟವಾಗಿ ದಾಖಲಾಗಿರುವುದನ್ನು ಕಾಣಬಹುದು. ಸಮಕಾಲಿನ ಚಿಂತಕರಿಗಿಂತ ಭಿನ್ನವಾದ ಆಲೋಚನೆಗಳು, ಪ್ರಜಾಪ್ರಭುತ್ವದ ಪ್ರತಿಪಾದನೆ ಅಭಿವ್ಯಕ್ತಿಯಾಗಿರುವುದನ್ನು ಈ ಕೃತಿಗಳಲ್ಲಿ ಗುರುತಿಸಬಹುದು.

ಬರಗೂರು ವಿಮರ್ಶಕರಾಗಿ ಸಾಮಾಜಿಕ – ಸಾಂಸ್ಕೃತಿಕ ವಿಷಯಗಳಿಗೆ ಹೊಸ ತಿರುವು ನೀಡಿದರು. ಸಾಹಿತ್ಯದಲ್ಲಿ ರಾಜಕೀಯ ಪ್ರಜ್ಞೆ ಮತ್ತು ಸಾಂಸ್ಕೃತಿಕ ದೃಷ್ಟಿಯ ಅಗತ್ಯವನ್ನು ಪ್ರತಿಪಾದಿಸಿದರು. ಇದೆಲ್ಲದರ ಫಲವಾಗಿ ಇವರ ಕೆಲವು ಮಹತ್ವದ ಕೃತಿಗಳು ಪ್ರಕಟಗೊಂಡವು. ಕಪ್ಪು ಹಲಗೆ, ಕೋಟೆ (1989) ಎಂಬ ನಾಟಕಗಳನ್ನು ಬರೆದದ್ದಲ್ಲದೆ ಸಿನಿಮಾ

ಕ್ಷೇತ್ರವನ್ನು ಪ್ರವೇಶಿಸಿ ಒಂದು ಊರಿನ ಕಥೆ (1978), ಬೆಂಕಿ (1983), ಸೂರ್ಯ (1987), ಕೋಟೆ (1989), ಕರಡಿಪುರ (1997), ಹಗಲುವೇಷ (1999), ಕ್ಷಾಮ (2003), ಶಾಂತಿ (2004) ಎಂಬ ಚಿತ್ರಗಳನ್ನು ನಿರ್ದೇಶಿಸಿದರು. ಬ್ರಿಟಿಷ್ ವಿರೋಧಿ ಬಂಡಾಯ, ಪೊಯಟ್ರಿ ಇನ್‌ಸ್ಟೋನ್ಸ್–ತುಮಕೂರು ಜಿಲ್ಲೆ, ಕರ್ನಾಟಕ ಸಾಮಾಜಿಕ ಚಳುವಳಿಗಳು, ಪಂಚಾಯತ್ ರಾಜ್ ಮತ್ತು ಮಹಿಳೆ– ಇವು ಇವರ ನಿರ್ದೇಶನದ ಸಾಕ್ಷ್ಯ ಚಿತ್ರಗಳು. ಇವರ ಚಿತ್ರಗಳಿಗೆ ಬಂದ ಬಹುಮಾನಗಳು, ಸಂದ ಪುರಸ್ಕಾರಗಳು ಹಲವಾರು. ಶ್ರೇಷ್ಠ ನಿರ್ದೇಶಕ ಪ್ರಶಸ್ತಿ (ಬೆಂಕಿ 1983; ಸೂರ್ಯ 1987; ಕ್ಷಾಮ 2003;) ಶ್ರೇಷ್ಠ ಗೀತರಚನಾಕಾರ ಪ್ರಶಸ್ತಿ (ಕೋಟೆ 1989; ಹಗಲುವೇಷ 1999;). ಬೆಂಕಿ, ಸೂರ್ಯ ಚಿತ್ರಗಳಿಗೆ ಶ್ರೇಷ್ಠ ಚಲನಚಿತ್ರ ಪ್ರಶಸ್ತಿ ದೊರೆತಿವೆ. ಸೂರ್ಯ ಚಿತ್ರ ರಷ್ಯದ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿತ್ತು (1988). 'ಕರಡಿಪುರ' ಬ್ರಿಟನ್ನಿನ ಲೀಡ್ಸ್ ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ (1998) ಆಯ್ಕೆಗೊಂಡಿತಲ್ಲದೆ ಸಾಮಾಜಿಕ ಕಾಳಜಿಗಾಗಿ ರಾಜ್ಯ ಪ್ರಶಸ್ತಿಯನ್ನು ಪಡೆದುಕೊಂಡಿತ್ತು (1997). ಅಂಬೇಡ್ಕರ್ ಪ್ರಶಸ್ತಿ, ಶ್ರೇಷ್ಠ ಕಥಾಸಂಕಲನ ಪುಸ್ತಕ ಪ್ರಶಸ್ತಿ (ಸುಂಟರಗಾಳಿ 1975), ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (1998), ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ (2002), ರಾಷ್ಟ್ರಕವಿ ಕುವೆಂಪು ಪ್ರಶಸ್ತಿ (1998), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2003) ಮೊದಲಾದವು ಬರಗೂರರ ಬಹುಮುಖ ಪ್ರತಿಭೆಗೆ ಸಂದ ಗೌರವಗಳು.

ರಾಜ್ಯಮಟ್ಟದಲ್ಲಿ ಪ್ರಸಿದ್ಧ ಬಂಡಾಯ ಸಾಹಿತ್ಯ ಸಂಘಟನೆಯ ಸ್ಥಾಪಕ ಸಂಚಾಲಕರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ (1992), ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ (2001), ತುಮಕೂರು ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಇವರು ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ಸರ್ಕಾರದ ಚಲನಚಿತ್ರ ಪ್ರಶಸ್ತಿಯ ಆಯ್ಕೆ ಸಮಿತಿ, ದೂರದರ್ಶನ, ಆಕಾಶವಾಣಿ ಆಯ್ಕೆ ಸಮಿತಿ, ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಮೊದಲಾದ ಅನೇಕ ಸಮಿತಿಗಳ ಸದಸ್ಯರಾಗಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ವಿಶಿಷ್ಟ ಯೋಜನೆಗಳನ್ನು ರೂಪಿಸಿದ ದಾಖಲೆ ಇವರದು. ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ, ಉಪಸಂಸ್ಕೃತಿಗಳ ಅಧ್ಯಯನ, ಅಂತಾರಾಷ್ಟ್ರೀಯ ಶಾಸ್ತ್ರೀಯ ಅಧ್ಯಯನ, ಜ್ಞಾನಪೀಠ ಪ್ರಶಸ್ತಿ ವಿಜೇತರು, ಮರೆಯಬಾರದ ಬರಹಗಾರರು, ಸಾಮಾಜಿಕ ಚಿಂತನಾ ಮಾಲೆ, ಹಳ್ಳಿಯ ಅಧ್ಯಯನ, ಕಮ್ಮಟದ ಕೃತಿಗಳು, ನೊಬೆಲ್ ಪ್ರಶಸ್ತಿ ವಿಜೇತರ ವಾಚಿಕೆಗಳು– ಹೀಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೂಲಕ 250 ಕೃತಿಗಳ ಪ್ರಕಟಣ ಯೋಜನೆ ರೂಪಿಸಿ, ಬರೆಸಿ, ಸಂಪಾದಿಸಿ ಪ್ರಕಟಿಸಿದ್ದು ಇವರ ದೊಡ್ಡ ಸಾಧನೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಕನ್ನಡ ಪರ ಕ್ರಿಯಾಶೀಲತೆಗೆ ಸೈದ್ಧಾಂತಿಕ ಹಾಗೂ ರಚನಾತ್ಮಕ ನೆಲೆ ಒದಗಿಸುವ ಪ್ರಯತ್ನವನ್ನು ಇವರು ಮಾಡಿದರು. ಸರ್ಕಾರದ ನೆಲೆಯಲ್ಲಿ ಕನ್ನಡ ಪರ ನೆಲೆ ನಿಲುವುಗಳು ಪ್ರಮುಖ ಸ್ಥಾನ ಪಡೆಯುವುದಕ್ಕಾಗಿ ಬೇಕಾದ ಕ್ರಿಯಾಶೀಲತೆಯನ್ನು ತೋರುವಲ್ಲೂ ಇವರ ಪ್ರಯತ್ನ ಅತ್ಯಂತ ಗಮನಾರ್ಹವಾದುದು.

(ಜಿ.ಆರ್.ಟಿ.)

**ಬರಪೊಳೆ**: ಕೊಡಗಿನ ಒಂದು ನದಿ. ಬ್ರಹ್ಮಗಿರಿ ಬೆಟ್ಟಗಳ ತಪ್ಪಲಲ್ಲಿ ಹುಟ್ಟಿ ಕಂಗನ್ ಹೊಳೆ ಮತ್ತು ಕಕ್ಕಟ್ಟು ಹೊಳೆ ಎಂಬ ಎರಡು ತೊರೆಗಳನ್ನು ಕೂಡಿಕೊಂಡು, ಬೆಟ್ಟಗಳ ಕಣಿವೆಯ ನಡುವೆ ಪಶ್ಚಿಮಾಭಿಮುಖವಾಗಿ ಕೆಲವು ಕಿಮೀವರೆಗೆ ನೇರವಾಗಿ ಹರಿದು, ಮುಂದೆ ಸಾರತ್ ಹೊಳೆಯನ್ನು ಕೂಡಿಕೊಳ್ಳುತ್ತದೆ. ಇಲ್ಲಿ ಸಾರತ್ ಹೊಳೆ ದೊಡ್ಡ ಬಂಡೆಯೊಂದರ ಮೇಲಿಂದ ದುಮುಕಿ 134 ಮೀ ಆಳದ ಸುಂದರ ಜಲಪಾತವನ್ನು ನಿರ್ಮಿಸಿದೆ. ಅನಂತರ ಕೇರಳ ರಾಜ್ಯದತ್ತ ಸಾಗುವ ಬರಪೊಳೆ ನದಿ ಗಡಿಯ ಸಮೀಪದಲ್ಲಿ ಇನ್ನೊಂದು ಜಲಪಾತವನ್ನು ನಿರ್ಮಿಸಿದೆ. ಜಲಪಾತದ ನೋಟ ರಮಣೀಯವಾದ್ದು. ಇಲ್ಲಿಂದ ಮುಂದೆ ಈ ನದಿ ಕೇರಳ–ಕೊಡಗು ಗಡಿಯಲ್ಲಿ ಸು. 3ಕಿಮೀ ಹರಿದು ಉತ್ತರದ ಹೆಗ್ಗುಲ ಕಣಿವೆಯಿಂದ ಬರುವ ಕಲ್ಲುಹೊಳೆಯನ್ನು ಕೂಡಿಕೊಂಡು ಕೇರಳ ರಾಜ್ಯವನ್ನು (ಕಣ್ಣಾನೂರು ಜಿಲ್ಲೆಯ ಕೊಟ್ಟಿಯೆನ್ ತಾಲ್ಲೂಕಿನ ಮೂಲಕ) ಪ್ರವೇಶಿಸಿ, ಬ್ರಹ್ಮಗಿರಿಯಿಂದಲೇ ಹುಟ್ಟಿ ಬರುವ ಇನ್ನೊಂದು ನದಿಯನ್ನು ಇರಿತ್ತಿ ಎಂಬಲ್ಲಿ ಕೂಡಿಕೊಂಡು ಚಿರಲ್‌ಪುಯ್ಯ ಎಂಬ ಹೆಸರನ್ನು ಹೊಂದಿ ಮುಂದೆ ಸಾಗುತ್ತದೆ. ಕಣ್ಣಾನೂರಿಗೆ ಸ್ವಲ್ಪ ಉತ್ತರಕ್ಕೆ ವಳಪಟ್ಟಿನಂ ಎಂಬಲ್ಲಿ ಬೇರೊಂದು ನದಿಯ ಜತೆಗೂಡಿ ಚಿರಕಾಲ್ ಎಂಬಲ್ಲಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಕಣ್ಣಾನೂರು ರಸ್ತೆಯಲ್ಲಿ ಈ ನದಿಗೆ ಅಡ್ಡಲಾಗಿ ಸೇತುವೆಗಳನ್ನು ಕಟ್ಟಲಾಗಿದೆ.

ಬರಪೊಳೆ ಜಲವಿದ್ಯುತ್ ಉತ್ಪಾದನ ಯೋಜನೆ: ಕೊಡಗು ಜಿಲ್ಲೆ ಮೊದಲಿಗೆ ಮದರಾಸು ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದಾಗ 1945ರಲ್ಲಿ ಮದರಾಸು ವಿದ್ಯುಚ್ಛಕ್ತಿ ಇಲಾಖೆ ಕೊಡಗಿನ ಜಲವಿದ್ಯುತ್ ಉತ್ಪಾದನೆಯ ಸ್ಥಳಗಳನ್ನು ಕುರಿತು ಸಮೀಕ್ಷೆ ನಡೆಸಿ ಅವುಗಳಲ್ಲಿ ಹೆಚ್ಚುಶಕ್ತಿ ಉತ್ಪಾದನ ಸಾಮರ್ಥ್ಯದ ಬರಪೊಳೆ ಯೋಜನೆಯನ್ನು ತಯಾರಿಸಿತು. ಆದರೆ ಯಾವುದೇ ಕೆಲಸ ನಡೆಯಲಿಲ್ಲ. ಕರ್ನಾಟಕ ಸರ್ಕಾರ ಪಂಚವಾರ್ಷಿಕ ಯೋಜನೆಯಲ್ಲಿ ಬರಪೊಳೆ ಜಲವಿದ್ಯುತ್ ಉತ್ಪಾದನಾಕೇಂದ್ರ ಸ್ಥಾಪನೆಯ ಕಾರ್ಯವನ್ನು ಕೈಗೊಂಡಿತು. ಈ ಯೋಜನೆಯಿಂದ 1,80,000 ಕಿವಾ ವಿದ್ಯುಚ್ಛಕ್ತಿ ಉತ್ಪಾದಿಸುವ ನಿರೀಕ್ಷೆಯಿದೆ. ಬರಪೊಳೆಗೆ ಅಡ್ಡಲಾಗಿ ವಿರಾಜಪೇಟೆಯಿಂದ ಆಗ್ನೇಯಕ್ಕೆ 17ಕಿಮೀ ದೂರದಲ್ಲಿ ಪೊನ್ನಂಪೇಟೆ ನಾಡಿನ ಕುಟ್ಟಾಂಡಿ ಗ್ರಾಮದಲ್ಲಿ ಅಣೆಕಟ್ಟನ್ನು ಕಟ್ಟಲಾಗಿದೆ. ಅಣೆಕಟ್ಟಿನ ಜಲಾನಯನ ಪ್ರದೇಶದ ವಿಸ್ತೀರ್ಣ 98.05 ಚ.ಕಿಮೀ. ವಿರಾಜಪೇಟೆಯಿಂದ ಈ ಯೋಜನಾಕೇಂದ್ರಕ್ಕೆ ವಾಹನಸಂಚಾರಕ್ಕೆ ಅನುಕೂಲವಾದ ರಸ್ತೆ ಸೌಲಭ್ಯವಿದೆ. ಇಲ್ಲಿನ ಪರ್ವತಾವಳಿಗಳ ಪ್ರಕೃತಿ ಸೌಂದರ್ಯ ಅತ್ಯಾಸದೃಶ್ಯವಾಗಿದೆ.

(ಎಂ.ವಿ.)

**ಬರೀದ್‌ಶಾಹೀ ಆಳ್ವಿಕೆ**: 1529–1619. ಬಹಮನೀ ರಾಜವಂಶದ ಅಡಿಯಲ್ಲಿ ಅಧಿಕಾರಿಗಳಾಗಿದ್ದ ಬರೀದ್‌ಶಾಹೀ ವಂಶದವರು ಆ ರಾಜರಿಂದ ಬಿದರೆ ಮತ್ತು ಸುತ್ತಲ ಪ್ರದೇಶಗಳನ್ನು ಕಸಿದುಕೊಂಡು ನಡೆಸಿದ ಆಳ್ವಿಕೆ. ಸುಮಾರು ಒಂದು ಶತಮಾನದ ಕಾಲ ಇವರು ಆಳಿದರು. ಇವರ ರಾಜ್ಯದ ವಿಸ್ತಾರವೂ ಆಳ್ವಿಕೆಯ ಅವಧಿಯೂ ಬಹು ಕಿರಿದಾಗಿತ್ತು.

ಖಾಸಿಂ ಬರೀದ ಈ ವಂಶದ ಜನಕ. ದಖನೀ ಮತ್ತು ವಿದೇಶಿ ಪಕ್ಷಗಳ ದ್ವೇಷಾಸೂಯೆಗಳಿಂದ, ಮಹ್ಮೂದ್ ಗಾವಾನನ ಹತ್ಯೆಯಿಂದ ಹಾಗೂ ದುರ್ಬಲ ಸುಲ್ತಾನರಿಂದ ಬಹಮನೀ ಸುಲ್ತಾನಶಾಹಿ 15ನೆಯ ಶತಮಾನದ ಕೊನೆಯ ಹೊತ್ತಿಗೆ ಅವನತಿಯ ಹೊಸ್ತಿಲಿಗೆ ಬಂದಿತ್ತು. ಆಗ ಉದ್ಭವಿಸಿದ್ದ ಅರಾಜಕತೆಯಲ್ಲಿ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಹಲವಾರು ಸಾಹಸಿಗಳು ಮುಂದಾದರು. ಅಂಥವರಲ್ಲಿ ಖಾಸಿಂ ಬರೀದನೂ ಒಬ್ಬ. ಇವನು ಬಾಲ್ಯದಲ್ಲಿ ಜಾರ್ಜಿಯಾದಿಂದ ಬಹಮನೀ ರಾಜ್ಯಕ್ಕೆ ಬಂದು 3ನೆಯ ಮಹಮ್ಮದನ ಕಾಲದಲ್ಲಿ ಸುಲ್ತಾನನ ಸೇವೆಯಲ್ಲಿ ಸೇರಿದ್ದ. ಮುಂದೆ ಶಿಹಾಬುದ್ದೀನ್ ಮಹ್ಮೂದ್ 1492ರಲ್ಲಿ ಇವನನ್ನು ಪ್ರಧಾನ ಮಂತ್ರಿಯಾಗಿ ನೇಮಿಸಿಕೊಂಡ. ಸುಲ್ತಾನ ದುರ್ಬಲನಾಗಿದ್ದುದರಿಂದ ವಾಸ್ತವವಾಗಿ ಅಧಿಕಾರವೆಲ್ಲ ಬರೀದನ ಕೈಸೇರಿತು. ಇವನು ಬಹಮನೀ ರಾಜ್ಯದ ಇತರ ಜಹಗೀರುದಾರರ ವಿರುದ್ಧ ಸೆಣಸಿ ಬಿದರೆಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಇವನು 1504ರಲ್ಲಿ ತೀರಿಕೊಂಡ.

1504ರಲ್ಲಿ ಖಾಸಿಂ ಬರೀದನ ಮಗ ಅಮೀರ್ ಬರೀದ್ ಪ್ರಧಾನಮಂತ್ರಿಯಾಗಿ ಅಧಿಕಾರವಹಿಸಿಕೊಂಡ. ಇವನೂ ತಂದೆಯಂತೆಯೇ ಸರ್ವಾಧಿಕಾರಿಯಾಗಿ ವರ್ತಿಸತೊಡಗಿದ. ಈ ಕಾಲದಲ್ಲಿ ಬಿಜಾಪುರ, ಗೋಲ್ಕೊಂಡ ಮತ್ತು ಅಹಮದ್ ನಗರಗಳ ಜಹಗೀರುದಾರರು ಸ್ವತಂತ್ರರಾಗಿದ್ದರಲ್ಲದೆ ಬರೀದನ ವಿರುದ್ಧ ಹೋರಾಡುತ್ತಿದ್ದರು. ಕೃಷ್ಣದೇವರಾಯ 1514ರಲ್ಲಿ ಬಹಮನೀ ರಾಜ್ಯದಿಂದ ರಾಯಚೂರು ದೋಅಬ್ ಮತ್ತು ಇತರ ಕೆಲವು ಪ್ರದೇಶಗಳನ್ನು ಕಿತ್ತುಕೊಂಡ. 1518ರಲ್ಲಿ ಸುಲ್ತಾನ ಮಹ್ಮೂದ್ ಷಾ ನಿಧನನಾದ. ತರುವಾಯ ನಾಲ್ಕಾರು ಸುಲ್ತಾನರು ಬಹಮನೀ ಸಿಂಹಾಸನವನ್ನೇರಿ ಇಳಿದರು. ಅಮೀರ್ ಬರೀದ್ ಪ್ರಬಲನಾಗಿದ್ದು ಇವರೆಲ್ಲರನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದ. ರಾಜ್ಯಾಧಿಕಾರವೆಲ್ಲ ಪ್ರಸ್ತುತಃ ಇವನ ಕೈಯಲ್ಲಿತ್ತು. 1538ರಲ್ಲಿ ಬಹುಮನೀ ಸುಲ್ತಾನ ಕಲೀಮುಲ್ಲಾ ಓಡಿಹೋಗಿ ಮೃತನಾದ ಮೇಲೆ ಬಹಮನೀ ಆಳಿಕೆ ಕೊನೆಗೊಂಡಿತು. 1529ರಲ್ಲಿ ಅಮೀರ್ ಬರೀದ್ ಸ್ವತಂತ್ರನಾದ.

1529ರಲ್ಲಿ ಬಿಜಾಪುರದ ಇಸ್ಮಾಯಿಲ್ ಆದಿಲ್‌ಖಾನ್ ಬಿದರೆ ಕೋಟೆಯನ್ನು ಮುತ್ತಿ ವಶಪಡಿಸಿಕೊಂಡ. ಅಮೀರ್ ಬರೀದನು ಗೋಲ್ಕಂಡ ಸುಲ್ತಾನನ ಸಹಾಯ ಪಡೆದರೂ ಕೊನೆಗೆ ಆದಿಲ್‌ಖಾನನ ಬಂದಿಯಾಗ ಬೇಕಾಯಿತು. ಆದಿಲ್‌ಖಾನ್ ತರುವಾಯ ಬರೀದನನ್ನು ಬಿಡುಗಡೆ ಮಾಡಿ ಬಿಜಾಪುರದ ಜಹಗೀರುದಾರನನ್ನಾಗಿ ಮಾಡಿದ. ರಾಯಚೂರು ಮತ್ತು ಮುದ್ಗಲ್‌ಗಳನ್ನು ಪಡೆಯಲು 1530ರಲ್ಲಿ ಬಿಜಾಪುರಕ್ಕೆ ಬರೀದ್ ಸಹಾಯ ಮಾಡಿದ ಮೇಲೆ ಅವನಿಗೆ ಬಿದರೆಯನ್ನು ಹಿಂತಿರುಗಿಸಲಾಯಿತು. ಆದರೆ ಬಿದರೆ ರಾಜ್ಯದ ಕಲ್ಯಾಣಿ ಮತ್ತು ಖಂದಾರಗಳು ಬಿಜಾಪುರಕ್ಕೆ ಸೇರಿದವು.

ಅಮೀರ್ ಬರೀದ್ ದಖನ್ನಿನ ನರಿಯೆಂದು ಹೆಸರಾಗಿದ್ದ. ಇವನು ಶಾಹೀ ಸುಲ್ತಾನರ ನಡುವಿನ ರಾಜಕೀಯ ವೈಷಮ್ಯದಲ್ಲಿ ಸೇರಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಪುನಃ ಬರೀದ್ ಬಿಜಾಪುರದೊಂದಿಗೆ ಸಖ್ಯ ಬೆಳೆಸಿ ಗೋಲ್ಕೊಂಡದ ವಿರುದ್ಧ ಅದಕ್ಕೆ ನೆರವಾದ. ಆದರೆ ಬಿಜಾಪುರ ಬಿದರೆಗೆ ಸಮೀಪದಲ್ಲಿದ್ದುದಲ್ಲದೆ ಬಿಜಾಪುರದ ಸುಲ್ತಾನನಿಗೆ ಬಿದರೆಯ ಮೇಲೆ ಕಣ್ಣು ಇದ್ದೇ ಇತ್ತು. ಆದ್ದರಿಂದ ಬರೀದ್ ಬಿಜಾಪುರದ. ವೈರಿಗಳ ಸ್ನೇಹ ಬೆಳೆಸುವುದರಲ್ಲೂ ಹಿಂದೆ ಬೀಳಲಿಲ್ಲ. ಇವನು ತರುವಾಯ ಅಹಮದ್‌ನಗರದ ಒಂದನೆಯ ಬುರ್ಹಾನ್ ಷಾನ ಪಕ್ಷ ಸೇರಿಕೊಂಡ. ಬಿಜಾಪುರ ಮತ್ತು ಬೀರಾರಿನ ಸೈನ್ಯಗಳು ಇವರ ಸಂಯುಕ್ತ ಸೈನ್ಯವನ್ನು ಸೋಲಿಸಿದವು. 1542ರಲ್ಲಿ ಅಮೀರ್ ಬರೀದ್ ನಿಧನನಾದ. ತರುವಾಯ ಇವನ ಮಗ ಆಲಿ ಬರೀದ್ ಅಧಿಕಾರಕ್ಕೆ ಬಂದ.

ಅಲ್ಲಿ ಬರೀದ್ (1542–80) ಷಾ ಎಂಬ ಸಾರ್ವಭೌಮಸೂಚಕ ಬಿರುದು ಇಟ್ಟುಕೊಂಡ ಬರೀದ್ ಶಾಹೀ ಸುಲ್ತಾನರಲ್ಲಿ ಮೊದಲಿಗ. 1543ರಲ್ಲಿ ಅಹಮದ್‌ನಗರ, ಬೀರಾರ್, ಗೋಲ್ಕೊಂಡ ಮತ್ತು ವಿಜಯನಗರ ಸೈನ್ಯಗಳ ವಿರುದ್ಧ ಇಬ್ರಾಹಿಂ ಆದಿಲ್ ಷಾ ಮತ್ತು ಅಲಿ ಬರೀದ್‌ರು ಹೋರಾಡಿದರು. ಅಲಿ ಬರೀದ್ ಅಹಮದ್‌ನಗರ ಪರೆಂಡದವರೆಗೂ ಹೋಗಿ ಯುದ್ಧ ಮಾಡಿದ. ಕೊನೆಗೂ ಅಲಿ ಬರೀದನ ಮೈತ್ರಿಸೈನ್ಯ ಸೋತಿತು. ಗೋಲ್ಕೊಂಡದೊಡನೆಯೂ ಅಲಿ ಯುದ್ಧ ಮಾಡಬೇಕಾಗಿ ಬಂತು. ಆಗ ಬಿದರೆ ರಾಜ್ಯದ ಕೌಲಾಸ್ ಮತ್ತು ನಾರಾಯಣಖೇರ ಜಿಲ್ಲೆಗಳು ಗೋಲ್ಕೊಂಡಕ್ಕೆ ಸೇರಿದವು. ಅಹಮದ್‌ನಗರ ಮತ್ತು ಬಿಜಾಪುರಗಳ ಗುಪ್ತ ಒಪ್ಪಂದಕ್ಕಾಗಿ ಅಹಮದ್‌ನಗರದವರು ಬಿದರೆಯನ್ನು ಮುತ್ತಿ ವಶಪಡಿಸಿಕೊಂಡರು. ಅಲ್ಲಿ ಬಿಜಾಪುರದ ಕುತಂತ್ರಕ್ಕೆ ಬಲಿಯಾಗಿ ಸುಲ್ತಾನನ ಬಂದಿಯಾಗಬೇಕಾಯಿತು. ಕೊನೆಗೆ ಗೋಲ್ಕೊಂಡದ ಜಮ್‌ಷೀದ್ ಕುತ್ಬ್‌ಖಾನನ ಮಧ್ಯಪ್ರವೇಶದಿಂದ 1548ರಲ್ಲಿ ಅಲಿ ಬರೀದನ ಬಿಡುಗಡೆಯಾಗಿ, ಅವನ ರಾಜ್ಯ ಅವನಿಗೆ ಪುನಃ ಪ್ರಾಪ್ತವಾಯಿತು. ತರುವಾಯ ಕಲ್ಯಾಣಿ ಅಹಮದ್‌ನಗರದ ಪಾಲಾಯಿತು. ಅಲಿ ಬರೀದ್ 1565ರಲ್ಲಿ ನಡೆದ ಇತಿಹಾಸ ಪ್ರಸಿದ್ಧ ತಾಳೀಕೋಟೆ ಯುದ್ಧದಲ್ಲಿ ದಖನ್ನಿನ ಸುಲ್ತಾನರ ಒಕ್ಕೂಟದಲ್ಲಿ ಸೇರಿದ್ದ. ಇವನು 1580ರಲ್ಲಿ ನಿಧನನಾದ. ಇವನ ದೀರ್ಘ ಆಳಿಕೆಯ ಕಾಲದಲ್ಲಿ ಬರೀದ್ ಶಾಹೀ ರಾಜ್ಯಕ್ಕೆ ಏನೂ ಪ್ರಯೋಜನವಾಗಲಿಲ್ಲ. ವಿಜಯನಗರದ ಮೇಲಿನ ವಿಜಯದ ತರುವಾಯದ ರಾಜಕೀಯ ಪರಿಸ್ಥಿತಿಯಲ್ಲೂ ಬಿದರೆ ರಾಜ್ಯಕ್ಕೆ ಹೆಚ್ಚಿನ ಲಾಭವಾಗಲಿಲ್ಲ. ಇವನ ಕಾಲದಲ್ಲಿ ಬಿದರೆ ರಾಜ್ಯ ಹಿಂದಿಗಿಂತಲೂ ದುರ್ಬಲವಾದುದಲ್ಲದೆ ತನ್ನ ಕೆಲವು ಪ್ರದೇಶಗಳನ್ನು ಕಳೆದುಕೊಂಡು ಅವನತಿ ಹೊಂದಿತು. ಬಿದರೆಯಲ್ಲಿ ಅಲಿ ಬರೀದ್ ಕಟ್ಟಿಸಿದ ರಂಗೀನ್‌ಮಹಲ್ ಶಿಲ್ಪಕ್ಕೆ ಒಂದು ಉತ್ತಮ ಕೊಡುಗೆಯಾಗಿದೆ.

1580ರಿಂದ ಅಲಿ ಬರೀದನ ಅನಂತರ ಅವನ ಮಗ ಇಬ್ರಾಹಿಂ ಬರಿದ್ (1580–87), ಅನಂತರ ಅವನ ತಮ್ಮ 2ನೆಯ ಖಾಸಿಂ ಬರೀದ್ (1587–91) ಆಳಿದರು. ಖಾಸಿಂ ಬರೀದನ ನಿಧನವಾದನಂತರ ಅವನ ಎಳೆಯ ಮಗನಿಗೆ ಪಟ್ಟವಾಯಿತಾದರೂ ಕೆಲವೇ ದಿನಗಳಲ್ಲಿ ರಾಜಸಂಬಂಧಿಯೊಬ್ಬ ಅವನನ್ನು ಪದಚ್ಯುತಗೊಳಿಸಿ 2ನೆಯ ಅಮೀರ್ ಬರೀದ್ ಷಾ ಎಂಬ ಹೆಸರಿನಿಂದ ಸುಮಾರು ಹತ್ತು ವರ್ಷಗಳ ಕಾಲ ಆಳಿದ. 1601ರಲ್ಲಿ ಮಿರ್ಜಾ ಅಲಿ ಬರೀದ್ ಎಂಬುವವನು 2ನೆಯ ಅಮೀರ್ ಬರೀದನನ್ನು ಪದಚ್ಯುತಿಗೊಳಿಸಿದ. ಇವನು 1609ರವರೆಗೂ ಆಳಿದ. ಆದರೆ ಈ ಸುಲ್ತಾನರೆಲ್ಲ ದುರ್ಬಲರಾಗಿದ್ದರಿಂದ ಬಿದರೆ ರಾಜ್ಯದ ಶಕ್ತಿ ದಿನೇ ದಿನೇ ಕುಗ್ಗುತ್ತ ಹೋಯಿತು. ಅಹಮದ್‌ನಗರ, ಬಿಜಾಪುರ, ಗೋಲ್ಕೊಂಡ ರಾಜ್ಯಗಳ ಪ್ರಾಬಲ್ಯ ಹೆಚ್ಚಿ ಬಿದರೆ ರಾಜ್ಯದ ಅಸ್ತಿತ್ವ ಅಸ್ಥಿರವಾಯಿತು.

1609ರಲ್ಲಿ ಅಧಿಕಾರಕ್ಕೆ ಬಂದ 3ನೆಯ ಅಮೀರ್ ಬರೀದ್ ಷಾ ಬರೀದ್ ಶಾಹೀವಂಶದ ಕೊನೆಯ ಸುಲ್ತಾನ. ಇವನು 1616ರಲ್ಲಿ ದಖನ್ನಿನ ಸುಲ್ತಾನರೊಡಗೂಡಿ ಮುಗಲರ ವಿರುದ್ಧ ಹೋರಾಡಿದ. ಆದರೆ 1619ರಲ್ಲಿ ಬಿಜಾಪುರದ 2ನೆಯ ಇಬ್ರಾಹಿಂ ಆದಿಲ್ ಷಾ ಬಿದರೆಯನ್ನು ವಶಪಡಿಸಿಕೊಂಡು ತನ್ನ ರಾಜ್ಯಕ್ಕೆ ಸೇರಿಕೊಂಡ. ಬರೀದ್ ಶಾಹೀ ಆಳಿಕೆ ಕೊನೆಗೊಂಡಿತು. ಬಿದರೆಯನ್ನು ಬಹಮನೀ ವಂಶದ ತರುವಾಯವೂ ರಾಜಧಾನಿಯಾಗಿ ಮುಂದುವರಿಸಿ ಅನೇಕ ಉತ್ತಮ ವಾಸ್ತುಕೃತಿಗಳನ್ನು ಅಲ್ಲಿ ನಿರ್ಮಿಸಿರುವುದು ಬರೀದ್‌ಶಾಹೀ ವಂಶದ ಮುಖ್ಯ ಕೊಡುಗೆ. (ಡಿ.ಎಸ್.ಜಿ.)

**ಬಲ್ಲಾಳ I:** ಹೊಯ್ಸಳ ರಾಜ (ಸು.1100–1108). ಎರೆಯಂಗ ಮತ್ತು ಏಚಲದೇವಿಯವರ ಮೂವರು ಪುತ್ರರಲ್ಲಿ ಹಿರಿಯ. ವಿಷ್ಣುವರ್ಧನ ಮತ್ತು ಉದಯಾದಿತ್ಯ ಇವನ ತಮ್ಮಂದಿರು. ಬಲ್ಲಾಳ ಕಲ್ಯಾಣದ ಚಾಳುಕ್ಯ ಸಾಮ್ರಾಟ 6ನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದು ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿದ್ದ. ಇವನ ಆಳಿಕೆಯ ಕಾಲದಲ್ಲಿ ದೋರಸಮುದ್ರ ಹೊಯ್ಸಳರ ರಾಜಧಾನಿಯಾಗಿತ್ತು. ಆದರೂ ತನ್ನ ಪೂರ್ವಜರ ಮೂಲ ಸ್ಥಳವಾದ ಸೊಸವೂರನ್ನು ಒಂದು ಸಾರಿ ಸಂದರ್ಶಿಸಿ ಅಲ್ಲಿನ ದೇವಾಲಯಗಳಿಗೆ ದಾನ ನೀಡಿದ. ಇವನ ಕಾಲದಲ್ಲಿ ಜಗದೇವ ಎಂಬುವವನು ಹೊಯ್ಸಳ ರಾಜಧಾನಿಯನ್ನು ಮುತ್ತಿದನೆಂದೂ ಅವನನ್ನು ಬಲ್ಲಾಳ ಮತ್ತು ವಿಷ್ಣುವರ್ಧನರು ಸೋಲಿಸಿ ಓಡಿಸಿದರೆಂದೂ ಶಾಸನಗಳಿಂದ ತಿಳಿದು ಬರುತ್ತದೆ. ಈ ಘಟನೆಯ ಕಾಲ ಸು. 1100. ಜಗದ್ದೇವ ಶಿವಮೊಗ್ಗ ಜಿಲ್ಲೆಯಲ್ಲಿ ಆಳುತ್ತಿದ್ದ ಸಾಮಂತರ ಅರಸಾಗಿರಬೇಕೆಂದು ಒಂದು ಅಭಿಪ್ರಾಯವಿತ್ತು. (ಜಿ.ಆರ್.ಆರ್.)

ಅದರೆ ಅನೇಕ ಹೊಯ್ಸಳ ಮತ್ತು ಇತರ ಶಾಸನಗಳಿಂದ ಜಗದ್ದೇವ ಪರಮಾರವಂಶದ ಮಾಳವರಾಜನೆಂದೂ ಅವನು 6ನೆಯ ವಿಕ್ರಮಾದಿತ್ಯನ ಪರಮಾಪ್ತನಾಗಿದ್ದು, ಆಂಧ್ರಪ್ರದೇಶದ ಕೊಲ್ಲಿಪಾಕೆಯಲ್ಲಿ ಚಾಳುಕ್ಯ

ಸಾಮಂತನಾಗಿ ನೆಲೆಸಿದ್ದನೆಂದೂ ಸ್ಪಷ್ಟವಾಗಿದೆ. ಅವನು ಈ ಹಿಂದೆ ಹೊಯ್ಸಳ ಎರೆಯಂಗ ಪರಮಾರನ ರಾಜಧಾನಿ ಧಾರಾನಗರವನ್ನು ಧೂಳೀಪಟ ಮಾಡಿದ್ದಕ್ಕೆ ಸೇಡನ್ನು ತೀರಿಸಲೋ ಅಥವಾ ವರ್ಧಿಸುತ್ತಿದ್ದ ಹೊಯ್ಸಳ ಬಲವನ್ನು ಹಿಡಿತದಲ್ಲಿಡಲು ಸಾಮ್ರಾಟ ವಿಕ್ರಮಾದಿತ್ಯನಿಂದ ನಿಯೋಜಿತನಾಗಿಯೋ ಹೊಯ್ಸಳ ರಾಜಧಾನಿಯ ಮೇಲೆ ಧಾಳಿಮಾಡಿರಬೇಕು. ಈ ಸಂದರ್ಭದಲ್ಲಿ ಜಗದ್ದೇವ ಅಸಫಲನಾದದ್ದಲ್ಲದೆ ಈ ಪ್ರಯತ್ನ ಹೊಯ್ಸಳ ಚಾಲುಕ್ಯ ಸಂಬಂಧದಲ್ಲಿ ಬಿರುಕನ್ನುಂಟುಮಾಡಿತ್ತು. ಬೃಹತ್ ಚಾಲುಕ್ಯ ಬಲವನ್ನು ಬಗ್ಗುಬಡಿದ ಬಲ್ಲಾಳ ತನ್ನ ತಮ್ಮ ವಿಷ್ಣುವರ್ಧನನೊಡಗೂಡಿ ಮತ್ತಷ್ಟು ರಾಜ್ಯವಿಸ್ತರಣೆಯಲ್ಲಿ ತೊಡಗಿದ. ಮೊದಲು ಕೊಡಗು ಪ್ರದೇಶದಲ್ಲಿ ಆಳುತ್ತಿದ್ದ ಚೆಂಗಾಳ್ವರನ್ನು ಸಾಮಂತರಾಗಿ ಮಾಡಿಕೊಂಡು ಪಶ್ಚಿಮಕ್ಕಿದ್ದ ಆಳ್ವಖೇಸವನ್ನೂ ಆಕ್ರಮಿಸಿದ. ಅಲ್ಲದೆ ಉತ್ತರದಲ್ಲಿದ್ದ ಚಾಳುಕ್ಯ ಸಾಮಂತರಾದ ಉಚ್ಛಂಗಿಯ ಪಾಂಡ್ಯರ ಮೇಲೂ ಜಯ ಸಾಧಿಸಿದ. ಈ ಉದ್ಧಟತನವನ್ನು ಸಹಿಸದ ಸಾಮ್ರಾಟ ವಿಕ್ರಮಾದಿತ್ಯ ತನ್ನ ದಂಡನಾಯಕ ಎರಂಬರಗೆಯ ಸಿಂದ ಆಚುಗಿಯನ್ನು ಯುದ್ಧಕ್ಕೆ ಕಳುಹಿಸಿದಾಗ ಬಲ್ಲಾಳ ಸೋತು ಚಾಳುಕ್ಯ ಸಾಮಂತತ್ವವನ್ನು ಒಪ್ಪಬೇಕಾಯಿತು.

ಇವನು ಶಿವನ ಆರಾಧಕನಾಗಿದ್ದನೆಂದು ಶಾಸನಗಳು ತಿಳಿಸುತ್ತವೆ. ಆದರೆ ಜೈನಪಂಥಕ್ಕೆ ಸೇರಿದ ಮರಿಯಾನೆ ಎಂಬ ತನ್ನ ದಂಡನಾಯಕನ ಮೂವರು ಪುತ್ರಿಯರು ಪದ್ಮಲ, ಚಾಮಲ ಮತ್ತು ಬೊಪ್ಪಲದೇವಿಯರನ್ನು ಈತ ಒಂದೇ ಮಂಟಪದಲ್ಲಿ ಮದುವೆಯಾಗಿದ್ದ. ಜೈನ ಧರ್ಮಕ್ಕೂ ಪ್ರೋತ್ಸಾಹವಿತ್ತಿದ್ದ. ತಿಪಟೂರು ತಾಲ್ಲೂಕು ಹಟ್ಣದ ಜೈನಬಸದಿ ಇವನ ಕಾಲದ ಕಟ್ಟಡ. ಬಲ್ಲಾಳ ಯಾವುದೋ ದೀರ್ಘರೋಗದಿಂದ ನರಳುತ್ತಿದ್ದನೆಂದೂ ಶ್ರವಣಬೆಳಗೊಳದ ಚಾರುಕೀರ್ತಿಪಂಡಿತನೆಂಬ ಜೈನ ಆಚಾರ್ಯ ಇವನ ರೋಗ ಗುಣಪಡಿಸಿ, ಬಲ್ಲಾಳ ಜೀವರಕ್ಷಕ ಎಂಬ ಬಿರುದನ್ನು ಪಡೆದನೆಂದೂ ಕೆಲವು ಉಲ್ಲೇಖಗಳಿವೆ.

ಬಲ್ಲಾಳ ಅಪುತ್ರಕನಾಗಿ ಮರಣಹೊಂದಿದ ಮೇಲೆ ಇವನ ತಮ್ಮ ವಿಷ್ಣುವರ್ಧನ ಪಟ್ಟವೇರಿದ. *

**ಬಲ್ಲಾಳ II:** ಹೊಯ್ಸಳ ಚಕ್ರವರ್ತಿ (1173–1220). ವೀರ ಬಲ್ಲಾಳ ಎಂದೂ ಪ್ರಸಿದ್ಧನಾದ ಈತ ಒಂದನೆಯ ನರಸಿಂಹನ ಮಗ. ಇವನ ತಾಯಿ ಏಚಲದೇವಿ. ಜನನ 1154ರಲ್ಲಿ. ಹುಟ್ಟಿದ ಕೂಡಲೇ ಇವನಿಗೆ ಯುವರಾಜ್ಯ ಅಭಿಷೇಕವನ್ನು ನೆರವೇರಿಸಲಾಯಿತು. ಹನ್ನೊಂದು ವರ್ಷ ವಯಸ್ಸನ್ನು ದಾಟುತ್ತಿದ್ದಂತೆಯೇ ರಾಜ್ಯಭಾರದಲ್ಲಿ ಇವನು ವಿಶೇಷ ಆಸಕ್ತಿ ವಹಿಸಿದ. ಕೆಲಕಾಲ ತಾಯಿಯ ಜೊತೆಯಲ್ಲೂ ಸ್ವಂತವಾಗಿಯೂ ಆಡಳಿತ ನಡೆಸಿದ. ಸುಖಲೋಲುಪನಾದ ಒಂದನೆಯ ನರಸಿಂಹನ ಆಳಿಕೆಯಲ್ಲಿ ಹೊಯ್ಸಳ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದ್ದುದನ್ನು ಮನಗಂಡ ವೀರಬಲ್ಲಾಳ ತನ್ನ ತಂದೆಯ ವಿರುದ್ಧ 1172ರಲ್ಲಿ ದಂಗೆಯೆದ್ದ. 1173ರಲ್ಲಿ ನರಸಿಂಹನ ಮರಣಾನಂತರ ಅಭಿಷಿಕ್ತನಾಗಿ ಸಿಂಹಾಸನವನ್ನೇರಿದ ಕೂಡಲೇ ರಾಜ್ಯದಲ್ಲಿ ತಲೆದೋರಿದ್ದ ಅನಾಯಕತ್ವವನ್ನು ತೊಡೆದು ಹಾಕಿ ನೆರೆಯ ರಾಜರ ಮೇಲೆ ಯುದ್ಧಹೂಡಿದ. ಮೊದಲು ಚೆಂಗಾಳ್ವರನ್ನು (1173) ಸೋಲಿಸಿ ಅವರನ್ನು ಸಾಮಂತರನ್ನಾಗಿ ಮಾಡಿಕೊಂಡ. 1174–75ರಲ್ಲಿ ಇವನ ರಾಜ್ಯದ ಒಳಗೇ ನಡೆದ ಹಲವು ದಂಗೆಗಳನ್ನು ಹತ್ತಿಕ್ಕಿದ. 1177ರಲ್ಲಿ ಉಚ್ಚಂಗಿಯನ್ನು ಮುತ್ತಿ ಅಲ್ಲಿನ ರಾಜ ಕಾಮದೇವ ಪಾಂಡ್ಯನನ್ನು ಸೋಲಿಸಿ, ಅವನು ಶರಣಾಗಲು ಅವನಿಂದ ವಿಶೇಷ ಐಶ್ವರ್ಯವನ್ನು ಕಪ್ಪವಾಗಿ ಪಡೆದು ಅವನ ರಾಜ್ಯವನ್ನು ಅವನಿಗೆ ಕೊಟ್ಟು 'ಪಾಂಡ್ಯರಾಜ ಪ್ರತಿಷ್ಠಾಪಕ' ಎಂಬ ಬಿರುದನ್ನು ಧರಿಸಿದ. ಅದೇ ವರ್ಷ ನಿಡುಗಲ್ಲು ಚೋಳರ ಮೇಲೂ ದಾಳಿಮಾಡಿದ. ಅಲ್ಲದೆ ಉತ್ತರದಲ್ಲಿ ಹೊಂಬುಚದ ರಾಜ, ಉದ್ದರೆಯ ಗಂಗವಂಶದ ರಾಜ, ಹಾನಗಲ್ಲಿನ ಕದಂಬ ಕಾಮದೇವ ಮೊದಲಾದ ಸಾಮಂತರನ್ನೂ ಸೋಲಿಸಿ ಹೊಯ್ಸಳ ಸೈನ್ಯವನ್ನು ಬೆಳ್ವೊಲನಾಡಿಗೆ ನುಗ್ಗಿಸಿದ.

1180ರಲ್ಲಿ ಕಲ್ಯಾಣದ ಕಳಚುರಿ ಸಂಕಮ ಚಕ್ರವರ್ತಿಯನ್ನು ಎದುರಿಸಿದ. ಸಂಕಮನಿಗೂ ಬಲ್ಲಾಳನಿಗೂ ಸಮಾನತೆಯ ಆಧಾರದ ಮೇಲೆ ಒಪ್ಪಂದ ವೇರ್ಪಟ್ಟಿತು. ಆ ವೇಳೆಗೆ ಚಾಳುಕ್ಯ ಆಡಳಿತವನ್ನು ಪುನಃ ಸ್ಥಾಪಿಸುವ ಯತ್ನದಲ್ಲಿದ್ದ ಸೋಮೇಶ್ವರನಿಗೆ ಬಲ್ಲಾಳ ಪ್ರೋತ್ಸಾಹ ನೀಡಿದ. 1184ರ ಸುಮಾರಿನಲ್ಲಿ ಬಲ್ಲಾಳ ತುಳುರಾಜನನ್ನು ಸೋಲಿಸಿ, ತುಳುವಬಲಬಡಬಾನಲ ಎಂಬ ಬಿರುದನ್ನು ವಹಿಸಿ ತುಳುರಾಜಕುಮಾರಿಯೊಬ್ಬಳನ್ನು ವರಿಸಿದ. 1187ರಲ್ಲಿ ಪುನಃ ಉಚ್ಚಂಗಿದುರ್ಗವನ್ನು ಮುತ್ತಿ ಕಾಮದೇವ ಪಾಂಡ್ಯನನ್ನು ಯುದ್ಧದಲ್ಲಿ ಸಂಹರಿಸಿ ನೊಳಂಬವಾಡಿ ರಾಜ್ಯವನ್ನು ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡ. ಅನಂತರ ಕುಂತಳದ ಭಾಗಗಳನ್ನು ಮುತ್ತಿದ. 4ನೆಯ ಸೋಮೇಶ್ವರ ಚಾಳುಕ್ಯ ಆಳ್ವಿಕೆಯನ್ನು ಪುನಃ ಸ್ಥಾಪಿಸಿದ್ದರೂ ಆ ರಾಜ್ಯದ ಅವನತಿಯ ಕುರುಹುಗಳನ್ನು ಕಂಡ ಬಲ್ಲಾಳ 1189ರಲ್ಲಿ ಕಲ್ಯಾಣದವರೆಗೆ ದಂಡೆತ್ತಿಹೋಗಿ ಸೋಮೇಶ್ವರನ ಪ್ರಧಾನ ದಂಡನಾಯಕನಾದ ಬ್ರಹ್ಮನನ್ನು ಸೋಲಿಸಿದ. ಸೋಮೇಶ್ವರ ತಲೆಮರೆಸಿಕೊಂಡು ಓಡಿಹೋದುದರಿಂದ ಚಾಳುಕ್ಯ ಸಂತತಿ ಕೊನೆಗೊಂಡಿತು. ವೀರಬಲ್ಲಾಳ ತನ್ನ ರಾಜ್ಯವನ್ನು ಕೃಷ್ಣಾ ನದಿಯವರೆಗೂ ವಿಸ್ತರಿಸಿದ.

ಈ ವೇಳೆಗೆ ಪ್ರಾಬಲ್ಯಕ್ಕೆ ಬಂದಿದ್ದ ದೇವಗಿರಿಯ ಸೇವುಣ ರಾಜನಾದ ಭಿಲ್ಲಮ ರಾಜ್ಯವಿಸ್ತರಣಾಕಾಂಕ್ಷೆಯಿಂದ ಬಲ್ಲಾಳನ ಮೇಲೆ ಯುದ್ಧಹೂಡಿದ. ಸೇವುಣರಿಗೂ ಹೊಯ್ಸಳರಿಗೂ 1190ರಲ್ಲಿ ಸೊರಟೂರು ಎಂಬಲ್ಲಿ ಘೋರ ಕದನ ನಡೆಯಿತು. ವೀರಬಲ್ಲಾಳ ಸೇವುಣ ಬಲವನ್ನು ಸಂಪೂರ್ಣವಾಗಿ ಸೋಲಿಸಿ ಗದಗದ ಸಮೀಪದ ಲಕ್ಕುಂಡಿಯಲ್ಲಿ ಭದ್ರಠಾಣ್ಯವನ್ನು ಸ್ಥಾಪಿಸಿದ. ಸೇವುಣ ಕಟಕಸೂರೆಕಾರ, ಹೊಯ್ಸಳರ ಚಕ್ರವರ್ತಿ, ಕುಂತಳ ಚಕ್ರವರ್ತಿ, ತೆಂಕಣ ಚಕ್ರವರ್ತಿ ಮೊದಲಾದ ಬಿರುದುಗಳನ್ನು ಧರಿಸಿದ. ಸೊರಟೂರು ಕದನ ಹೊಯ್ಸಳರ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅನಂತರ ಈ ವಿಜಯದ ಜ್ಞಾಪಕಾರ್ಥವಾಗಿ ಬಲ್ಲಾಳ ತನ್ನದೇ ಒಂದು ಶಕಗಣನೆಯನ್ನು ಸ್ಥಾಪಿಸಿದ (1129).

ಭಿಲ್ಲಮನ ಮೇಲಿನ ವಿಜಯದಿಂದ ಉತ್ತೇಜಿತನಾದ ಬಲ್ಲಾಳ ಮತ್ತಷ್ಟು ಮುನ್ನುಗ್ಗಿ ರಾಯಚೂರು ಜಿಲ್ಲೆಯ ಕುಕ್ಕನೂರು, ಮಾನ್ವಿಗಳನ್ನು ವಶಪಡಿಸಿಕೊಂಡ. ಯಲಬುರ್ಗದ ಸಿಂದರನ್ನು ಹತ್ತಿಕ್ಕಿ ರಾಯಚೂರು, ಬಳ್ಳಾರಿ ಜಿಲ್ಲೆಗಳ ಇತರ ಭಾಗಗಳನ್ನು ಆಕ್ರಮಿಸಿದ. ಆದರೂ ಆ ಪ್ರದೇಶದಲ್ಲಿ ಬಲ್ಲಾಳನ ಕಾರ್ಯಾಚರಣೆಗೆ ಸಾಕಷ್ಟು ಪ್ರತಿಭಟನೆಯೂ ಇದ್ದಿರಬೇಕು. ಇವನು ಮಲಪ್ರಭಾ ನದಿಯಿಂದ ಉತ್ತರಕ್ಕೆ ಸಾಗಿದಂತೆ ಕಾಣುವುದಿಲ್ಲ. ಆ ಪ್ರದೇಶ ಸೇವುಣರ ಗಟ್ಟಿನೆಲೆಯಾಗಿತ್ತು. ಕರಡಿಕಲ್ಲಿನ (ಲಿಂಗಸುಗೂರು ತಾಲ್ಲೂಕು) ಕದಂಬ ಪ್ರಭುಗಳು, ಮೊರಟದ (ಮಾನ್ವಿ ತಾಲ್ಲೂಕು ಮಲ್ಲಟ) ಹೈಹಯರು, ಗುತ್ತವೊಳಲಿನ (ಹಾವೇರಿ ತಾಲ್ಲೂಕು ಗುತ್ತಲ) ಗುತ್ತರು ಹೊಯ್ಸಳ ಸಾರ್ವಭೌಮತ್ವವನ್ನು ಒಪ್ಪಿಕೊಂಡಿರಲಿಲ್ಲ. ಬನವಾಸಿ ಪ್ರಾಂತ್ಯದಲ್ಲಿ ಬಲ್ಲಾಳನ ಕೆಲವು ಶಾಸನಗಳಿದ್ದರೂ ಅಲ್ಲಿದ್ದ ಕದಂಬರು ಬಲ್ಲಾಳನ ಸಾಮಂತರಾಗಿರಲಿಲ್ಲ. ಶಿವಮೊಗ್ಗ ಜಿಲ್ಲೆಯ ಬೆಳಗುತ್ತಿಯ ಸಿಂದರೂ ಮೊದಲಿನಿಂದಲೂ ಹೊಯ್ಸಳರ ವೈರಿಗಳಾಗಿದ್ದರು. ಬಲ್ಲಾಳ 1199ರ ಸುಮಾರಿನಲ್ಲಿ ಅವರನ್ನು ಸೋಲಿಸಿದ್ದರಿಂದ ಸು. 1204ರ ವರೆಗೂ ಅವರು ಹೊಯ್ಸಳರ ಸಾಮಂತರಾಗಿದ್ದರು. ಅನಂತರ ಆ ವಂಶದ 3ನೆಯ ಈಶ್ವರದೇವ ತಿರುಗಿಬಿದ್ದ. ಬಲ್ಲಾಳನ ರಾಣಿ ಉಮಾದೇವಿ ಬೆಳಗುತ್ತಿಯ ಮೇಲೆ ದಾಳಿಮಾಡಿ, ಸಿಂದರಾಜ್ಯದ

ಕೆಲವು ಭಾಗಗಳನ್ನು ಆಕ್ರಮಿಸಿದಳು. ಈಶ್ವರದೇವ ಸೇವುಣ ಸಿಂಘಣನ ಸಹಾಯವನ್ನು ಕೋರಿದ. ಅವಕಾಶವನ್ನು ಕಾಯುತ್ತಿದ್ದ ಸಿಂಘಣ ದಕ್ಷಿಣ ದಿಗ್ವಿಜಯವನ್ನು ಕೈಕೊಂಡ. 1215ರಿಂದ 1218 ರವರೆಗೆ ಬಲ್ಲಾಳನಿಗೂ ಸಿಂಘಣನಿಗೂ ಯುದ್ಧಗಳು ಜರುಗಿದುವು. ಈಶ್ವರದೇವ ಹೊಯ್ಸಳರನ್ನು ಹಿಮ್ಮೆಟ್ಟಿಸಿ ಸೇವುಣ ಸಾಮಂತನಾದ. ಇತ್ತ ಬೆಳ್ವೊಲ ಪ್ರಾಂತ್ಯ ಸಹ ಸಿಂಘಣನ ವಶವಾಯಿತು (ಸು.1212). ಬಲ್ಲಾಳನ ಕೊನೆಯ ದಿನಗಳಲ್ಲಿ ಇವನು ಉತ್ತರದಲ್ಲಿ ಆಕ್ರಮಿಸಿದ್ದ ಪ್ರದೇಶಗಳೆಲ್ಲಾ ಕೈಬಿಟ್ಟುವು. ತುಂಗಭದ್ರ ನದಿ ಅಂದಿನ ಹೊಯ್ಸಳ ರಾಜ್ಯದ ಉತ್ತರ ಮೇರೆಯಾಯಿತು. ಬಲ್ಲಾಳ ಉತ್ತರದಲ್ಲಿ ಹಿಮ್ಮೆಟ್ಟಿದರೂ ದಕ್ಷಿಣದಲ್ಲಿ ಹೊಯ್ಸಳರ ಪ್ರಭಾವವನ್ನು ಹಬ್ಬಿಸಿದ. ಈ ಹಿಂದೆಯೇ ಚೋಳ ಮಹಾದೇವಿಯನ್ನು ಮದುವೆಯಾಗಿ ಆ ವಂಶದೊಡನೆ ರಕ್ತಸಂಬಂಧವನ್ನು ಬೆಳೆಸಿದ್ದ. ಪ್ರಾಯಶಃ ತನ್ನ ಮಗಳನ್ನು ಮೂರನೆಯ ಕುಲೋತ್ತುಂಗನಿಗೆ ಮದುವೆ ಮಾಡಿಕೊಟ್ಟಿದ್ದ. ಈ ನಿಕಟತ್ವದಿಂದಾಗಿ, ತನ್ನ ಸಾಮಂತರಿಂದ ಸೋಲಿಸಲ್ಪಟ್ಟಿದ್ದ ಚೋಳ ಮೂರನೆಯ ಕುಲೋತ್ತುಂಗ ತನ್ನ ದುಃಸ್ಥಿತಿಯಿಂದ ಪಾರಾಗಲು ಇಮ್ಮಡಿ ವೀರಬಲ್ಲಾಳನ ಸಹಾಯವನ್ನು ಯಾಚಿಸಿದ (1217). ಬಲ್ಲಾಳನ ಸೈನ್ಯ ಯುವರಾಜ ಇಮ್ಮಡಿ ಪ್ರತಾಪ ನರಸಿಂಹನ ನಾಯಕತ್ವದಲ್ಲಿ ತಮಿಳುನಾಡನ್ನು ಪ್ರವೇಶಿಸಿ ಚೋಳರಾಜನ ಶತ್ರುಗಳಾದ ಪಾಂಡ್ಯರನ್ನೂ ಅವರ ಅನುಯಾಯಿಗಳನ್ನೂ ಸೋಲಿಸಿ ಮೂರನೆಯ ಕುಲೋತ್ತುಂಗನನ್ನು ಅವನ ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿತು. ಈ ವಿಜಯದಿಂದ ವೀರಬಲ್ಲಾಳ ಪಾಂಡ್ಯರಾಜ ಗಜಕೇಸರಿ ಮತ್ತು ಚೋಳರಾಜ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದುಗಳನ್ನು ವಹಿಸಿದ. ತಮಿಳುನಾಡಿನ ರಾಜಕೀಯದಲ್ಲಿ ಹೊಯ್ಸಳರ ಪ್ರವೇಶವಾಯಿತು.

ಇಮ್ಮಡಿ ವೀರಬಲ್ಲಾಳ ಹೊಯ್ಸಳ ರಾಜರಲ್ಲೆಲ್ಲಾ ಅತ್ಯಂತ ಸಮರ್ಥ. ಇವನು ತಂದೆಯ ಕಾಲದಲ್ಲಿ ಕುಂದಿದ್ದ ಹೊಯ್ಸಳ ಸಾಮ್ರಾಟ ಪದವಿಯನ್ನು ಪುನಃ ಶಕ್ತಿಯುತವಾಗಿ ಸ್ಥಾಪಿಸಿದ ಶೂರ. ಇವನ ಕಾಲದಲ್ಲಿ ಹೊಯ್ಸಳ ಮನೆತನ ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ಪ್ರಬಲವಾದ ರಾಜಮನೆತನವೆಂದು ಪ್ರಸಿದ್ಧಿಗೆ ಬಂತು. ಇವನು ಸಾಹಿತ್ಯಕ್ಕೂ ಕಲೆಗೂ ವಿಶೇಷ ಪ್ರೋತ್ಸಾಹ ನೀಡಿದ. ಅನೇಕ ಅಗ್ರಹಾರಗಳನ್ನೂ ಬ್ರಹ್ಮಪುರಿಗಳನ್ನೂ ಸ್ಥಾಪಿಸಿದ. ಜೈನ, ಶೈವ, ವೈಷ್ಣವ ಪಂಥಗಳಿಗೆ ಏಕಪ್ರಕಾರವಾಗಿ ಪ್ರೋತ್ಸಾಹ ನೀಡಿದ. ಕನ್ನಡನಾಡಿನ ಸುಪ್ರಸಿದ್ಧ ಕವಿಗಳಾದ ಜನ್ನ, ರಾಜಾದಿತ್ಯ, ರುದ್ರಭಟ್ಟ, ವಿದ್ಯಾಚಕ್ರವರ್ತಿ ಮೊದಲಾದ ಕವಿಗಳು ಇವನ ಸಮಕಾಲೀನರಾಗಿದ್ದರು. ಜನ್ನ ವೀರಬಲ್ಲಾಳನ ಆಸ್ಥಾನಕವಿಯಾಗಿದ್ದ. ಬಲ್ಲಾಳನು ಜನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ನೀಡಿದ್ದ. ಕಲಾಪ್ರೇಮಿಯಾದ ವೀರಬಲ್ಲಾಳ ಚಕ್ರವರ್ತಿಯ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸುಂದರ ದೇವಮಂದಿರಗಳು ನಿರ್ಮಾಣವಾದುವು. ಅವುಗಳಲ್ಲಿ ಅಮೃತಾಪುರದ ಅಮೃತೇಶ್ವರ, ಅರಸೀಕೆರೆಯ ಸಹಸ್ರಕೂಟ ಜಿನಾಲಯ, ಅಲ್ಲಿನ ಈಶ್ವರ ದೇವಾಲಯ, ಬೆಳವಾಡಿಯ ವೀರನಾರಾಯಣ, ಕರ್ಲಮಂಗಲದ ರಂಗನಾಥ, ಹಿರೇಮಗಳೂರಿನ ಕೋದಂಡರಾಮ ಮೊದಲಾದವು ಮುಖ್ಯವಾದವು. ತನ್ನ ರಾಣಿಯರಲ್ಲೊಬ್ಬಳಾದ ಅಭಿನವಕೇತಳದೇವಿಯ ಹೆಸರಿನಲ್ಲಿ ಬಲ್ಲಾಳ ಹಳೇಬೀಡಿನ ಕೇದಾರೇಶ್ವರ ದೇವಾಲಯವನ್ನು ಕಟ್ಟಿಸಿದ. ಜಗತ್ಪ್ರಸಿದ್ಧವಾದ ಬೇಲೂರಿನ ಚೆನ್ನಕೇಶವ ದೇವಾಲಯದ ಕಟ್ಟಡವನ್ನು ಪೂರ್ಣಗೊಳಿಸಿದ.

ಇಮ್ಮಡಿ ವೀರಬಲ್ಲಾಳನಿಗೆ ಉಮಾದೇವಿ ಚೋಳಮಹಾದೇವಿ, ಕೇತಲದೇವಿ, ತುಳುವಲದೇವಿ, ಅಭಿನವಕೇತಲದೇವಿ, ಪದ್ಮಲದೇವಿ ಮೊದಲಾದ ಹತ್ತು ಜನ ರಾಣಿಯರಿದ್ದರು. ಇವರು ಸಹ ರಾಜ್ಯಾಡಳಿತದಲ್ಲಿ ಭಾಗಿಗಳಾಗಿದ್ದರು. ಆಸಂದಿ ನಾಡಿನ ಗಂಗವಂಶದ ಬಮ್ಮರಸ ಮತ್ತು ಅವನ ಮಗ ನರಸಿಂಹ, ಹುಳಿಯೇರ ವಂಶದ ಗೋವಿದೇವ ಮತ್ತು ಅವನ ಮಗ ಬಲ್ಲಾಳ, ಹೊಳಲ್ಕೆರೆಯ ಮಾಚದೇವ– ಇವರು ಬಲ್ಲಾಳನ ಕೆಲವು ಮುಖ್ಯ ಸಾಮಂತರು. ತಂತ್ರಪಾಲ ಹೆಮ್ಮಾಡಿ, ಭರತಮಯ್ಯ, ಬಾಹುಬಲಿ, ಬಿಟ್ಟಿಮಯ್ಯ. ಚಂದ್ರಮೌಳಿ, ಎರೆಯಣ್ಣ, ಅಮಿತಯ್ಯ ಮುಂತಾದವರು ಇವನ ಮಂತ್ರಿ–ದಂಡನಾಯಕರು. ಪಟ್ಟದರಸಿ ಪದ್ಮದೇವಿಯ ಗರ್ಭದಲ್ಲಿ ಯುವರಾಜ ಇಮ್ಮಡಿ ನರಸಿಂಹ 1183ರಲ್ಲಿ ಜನಿಸಿದ. ಬಲ್ಲಾಳ ಅವನಿಗೆ ಉಚಿತವಾದ ಶಿಕ್ಷಣ ನೀಡಿ ಅವನ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿ 1220ರಲ್ಲಿ ಮರಣಹೊಂದಿದ.

ಇವನ ಮರಣವಾರ್ತೆಯನ್ನು ತಿಳಿದ ಕುವರಲಕ್ಷ್ಮನೇ ಆದಿಯಾಗಿ ಅನೇಕ ನಿಷ್ಠ ಅಂಗರಕ್ಷಕರು ಸಾವನ್ನಪ್ಪಿದರು. ಅನೇಕ ಶಾಸನಗಳು ಇಮ್ಮಡಿ ವೀರಬಲ್ಲಾಳನನ್ನು ಪೌರಾಣಿಕ ಚಕ್ರವರ್ತಿಗಳಿಗೆ ಹೋಲಿಸಿರುವುದಲ್ಲದೆ ಇವನ ಆಳ್ವಿಕೆ ಜನಾದರಣೀಯವಾಗಿಯೂ ಸುಭಿಕ್ಷವಾಗಿಯೂ ಇತ್ತೆಂದು ಸೂಚಿಸುತ್ತವೆ. (ಜಿ.ಆರ್.ಆರ್.)

**ಬಲ್ಲಾಳ III:** ಹೊಯ್ಸಳ ವಂಶದ ಕೊನೆಯ ಚಕ್ರವರ್ತಿ (1292–1342). 3ನೆಯ ನರಸಿಂಹನ ಮಗ. ವೀರಬಲ್ಲಾಳ ಎಂದೂ ಪ್ರಸಿದ್ಧ. ಇವನ ತಂದೆಯ ಕಾಲದಲ್ಲಿ ರಾಜ್ಯ ಎರಡು ಭಾಗವಾಗಿದ್ದುದರಿಂದ ಭ್ರಾತೃಕಲಹ ಬೇರೂರಿತ್ತು. ಬಲ್ಲಾಳನ ಆಳ್ವಿಕೆಯ ಪ್ರಾರಂಭದಲ್ಲಿ ಇವನ ಚಿಕ್ಕಪ್ಪನಾದ ರಾಮನಾಥ ಎರಡು ಬಾರಿ ಇವನ ರಾಜ್ಯದ ಭಾಗಗಳನ್ನು ಮುತ್ತಿದ. ಬಲ್ಲಾಳ ಅವನನ್ನು ಸೋಲಿಸಿದ. ರಾಮನಾಥನ ತರುವಾಯ ಉತ್ತರಾಧಿಕಾರಿಯಾದ ಅವನ ಮಗ ವಿಶ್ವನಾಥ ಅಶಕ್ತನಾಗಿದ್ದುದರಿಂದ ಬಲ್ಲಾಳ ತನ್ನ ಬಲವನ್ನು ವೃದ್ಧಿಸಿಕೊಂಡು ವಿಶ್ವನಾಥನ ಆಳ್ವಿಕೆಗೊಳಗಾಗಿದ್ದ ಪ್ರದೇಶದ ಮೇಲೂ 1301ರ ವೇಳೆಗೆ ತನ್ನ ಅಧಿಕಾರವನ್ನು ಸ್ಥಾಪಿಸಿದ. ಅತ್ತ ಸೇವುಣರು ಹೊಯ್ಸಳ ರಾಜ್ಯದ ಉತ್ತರದ ಗಡಿಗಳನ್ನು ಆಕ್ರಮಿಸಿಕೊಂಡಿದ್ದರಲ್ಲದೆ, ಅವರ ಉಪಟಳ ಮುಂದುವರಿಯುತ್ತಲೇ ಇತ್ತು. ಜೊತೆಯಲ್ಲಿ 1300–02ರಲ್ಲಿ ಹಾನಗಲ್ಲಿನ ಕದಂಬ ಕಾಮದೇವ ಹೊಯ್ಸಳರ ಮೇಲೆ ಯುದ್ಧ ಹೂಡಿದ್ದ. 1301ರಲ್ಲಿ ಬಲ್ಲಾಳನ ಸಾಮಂತರಾಗಿದ್ದ ಸಾಂತರರ ಮೇಲೆ ಸೇವುಣ ರಾಮಚಂದ್ರನ ದಂಡನಾಯಕ ಏಬರ ನಾಯಕ ದಾಳಿ ಮಾಡಿದ. ಸೊಡಲದೇವನ ಮೇಲೂ ಸೆಣಸಿದ. 1303ರ ಹೊಳಲ್ಕೆರೆ ಯುದ್ಧದಲ್ಲಿ ಕಂಪಿಲಿಯ ಕಂಪಿಲದೇವ ಸೇವುಣರ ಜೊತೆ ಸೇರಿ ಹೊಯ್ಸಳರ ಪ್ರಸಿದ್ಧ ದಂಡನಾಯಕನಾಗಿದ್ದ ಸೋಮಯನನ್ನು ಕೊಂದ. ಆದರೆ ಬಲ್ಲಾಳ 1306ರಲ್ಲಿ ಸೇವುಣರನ್ನು ಹಿಮ್ಮೆಟ್ಟಿಸಿದ.

1310ರಲ್ಲಿ ಅಲಾಉದ್ದೀನ್ ಖಿಲ್ಜಿಯ ದಳಪತಿಯಾದ ಮಲಿಕ್ ಕಾಫೂರ್ ದಕ್ಷಿಣ ಭಾರತದ ಮೇಲೆ ದಂಡಯಾತ್ರೆ ಕೈಗೊಂಡು ದೇವಗಿರಿಯ ಸೇವುಣರನ್ನು ಸೋಲಿಸಿ ದೋರಸಮುದ್ರದತ್ತ ದಂಡೆತ್ತಿ ಬಂದ. ಬಲ್ಲಾಳ ತಮಿಳುನಾಡಿನಲ್ಲಿ ದಂಡಯಾತ್ರೆ ಕೈಗೊಂಡಿದ್ದಾಗ ಅಲಾಉದ್ದೀನನ ಸೈನ್ಯ ದೋರ ಸಮುದ್ರವನ್ನು ಮುತ್ತಿತು. ಆಗ ಕೊಡಲೇ ಹಿಂದಿರುಗಿದ. ಬಲ್ಲಾಳನ ಸೈನ್ಯ ಅವನನ್ನು ಎದುರಿಸಿದರೂ ಗೆಲುವು ಅನಿಶ್ಚಿತವೆಂದು ಕಂಡುಬಂದುದರಿಂದ ಬಲ್ಲಾಳ ಅವನೊಡನೆ ಸಂಧಾನ ಏರ್ಪಡಿಸಿಕೊಂಡು ವಿಶೇಷ ಕಾಣಿಕೆಯನ್ನು ಅವನಿಗೆ ಒಪ್ಪಿಸಿದ್ದಲ್ಲದೆ ಅವನು ಮಾಬರ್ ಮೇಲೆ ದಂಡೆತ್ತಿ ಹೋಗಲೂ ಸಹಾಯ ನೀಡಿದ. ಮಲಿಕ್ ಕಾಫರ್ ಮಧುರೆಯವರೆಗೂ ಹೋಗಿ ವಿಶೇಷ ಐಶ್ವರ್ಯವನ್ನು ದೋಚಿಕೊಂಡು ಹಿಂದಿರುಗುವಾಗ ಬಲ್ಲಾಳನ ಕುಮಾರನಾದ ನಾಲ್ಕನೆಯ ಬಲ್ಲಾಳನನ್ನು (ವಿರೂಪಾಕ್ಷ) ಪಣವಾಗಿ ದೆಹಲಿಗೆ ಕರೆದುಕೊಂಡು ಹೋದ. ಅಲಾಉದ್ದೀನ್ ಖಿಲ್ಜಿ ಕುಮಾರ ಬಲ್ಲಾಳನಿಗೆ ರಾಜೋಚಿತವಾದ ಸನ್ಮಾನವನ್ನು ನೀಡಿ ಹೊಯ್ಸಳರಿಂದ ಪಡೆದಿದ್ದ ಕಾಣಿಕೆಯ ಒಂದು ಭಾಗವನ್ನು ಹಾಗೂ ಒಡವೆವಸ್ತ್ರಗಳನ್ನು ನೀಡಿ ಹಿಂದಕ್ಕೆ ಕಳುಹಿಸಿಕೊಟ್ಟ (1313).

ಮಲಿಕ್ ಕಾಫರ್ ಹಿಂದಿರುಗಿದ ಅನಂತರ ಬಲ್ಲಾಳ ತನ್ನ ರಾಜ್ಯದ ಆದಾಯ ಮೂಲಗಳನ್ನು ಸರಿಪಡಿಸಿಕೊಂಡು ಗಡಿಗಳ ಸಂರಕ್ಷಣೆಗೆ ಗಮನವಿತ್ತ. ಆ ವೇಳೆಗೆ ಪ್ರಬಲನಾಗಿದ್ದ ಕಂಪಿಲದೇವನನ್ನು ಸೋಲಿಸಿ (1320) ತುಂಗಭದ್ರಾ ಪ್ರದೇಶದಲ್ಲಿ ಅಭದ್ರವಾಗಿದ್ದ ಆಡಳಿತವನ್ನು ಸರಿಪಡಿಸಿದ. ಅನಂತರ ತನ್ನ ಗಮನವನ್ನು ತಮಿಳುನಾಡಿನತ್ತ ಹರಿಸಿದ. ಅಲ್ಲಿ ಮಧುರೆಯ ಸಿಂಹಾಸನಕ್ಕಾಗಿ ಸಹೋದರರಾದ ವೀರಪಾಂಡ್ಯ ಮತ್ತು ಸುಂದರಪಾಂಡ್ಯರು ಕಚ್ಚಾಡುತ್ತಿದ್ದರು. ವೀರ ಬಲ್ಲಾಳ ವೀರಪಾಂಡ್ಯನನ್ನು ಸೋಲಿಸಲು ಸುಂದರಪಾಂಡ್ಯನಿಗೆ ನೆರವಾಗಿ ಅವನಿಂದ ತಮಿಳುನಾಡಿನ ಅನೇಕ ಪ್ರದೇಶಗಳನ್ನು ಪಡೆದುಕೊಂಡು ಅರುಣ ಸಮುದ್ರವನ್ನು (ತಿರುವಣ್ಣಾಮಲೈ) ತನ್ನ ದಕ್ಷಿಣದ ರಾಜಧಾನಿಯಾಗಿ ಮಾಡಿಕೊಂಡ.

ಆ ವೇಳೆಗೆ ದೇವಗಿರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳೂ ದೆಹಲಿ ಸುಲ್ತಾನನ ಅಧೀನವಾಗಿದ್ದವು. ಮಹಮದ್ ಬಿನ್ ತುಗಲಕ್‌ನ ಕಾಲದಲ್ಲಿ 1325ರಲ್ಲಿ ಅವನ ಸಂಬಂಧಿಯಾದ ಬಹಾಉದ್ದೀನ್ ಗುರ್ಷಾಸ್ಪ್ ಎಂಬುವನು ದಖನ್ನಿನಲ್ಲಿ ದಂಗೆಯೆದ್ದು ಸ್ವತಂತ್ರನಾಗಲು ಹವಣಿಸಿದ. ತುಗಲಕ್ ಅವನನ್ನು ಶಿಕ್ಷಿಸಲು ಮಲಿಕ್ ಜಾದಾ ಎಂಬ ದಳಪತಿಯ ನೇತೃತ್ವದಲ್ಲಿ ದೊಡ್ಡ ಸೈನ್ಯವನ್ನು ಕಳುಹಿಸಿದ. ಬಹಾಉದ್ದೀನ್ ಹೆದರಿ ಆತ್ಮರಕ್ಷಣೆಗಾಗಿ ಕಂಪಿಲದೇವನ ಮರೆಹೊಕ್ಕ. ಕಂಪಿಲದೇವ ವೀರಾವೇಶದಿಂದ ತುಗಲಕನ ಸೈನ್ಯದೊಡನೆ ಹೋರಾಡಿ ಮಡಿದ. ಸಾಯುವ ಮುನ್ನ ಬಹಾಉದ್ದೀನನ್ನು ಆಶ್ರಯಕ್ಕಾಗಿ ಬಲ್ಲಾಳನಲ್ಲಿಗೆ ಕಳುಹಿಸಿದ. ಮಹಮ್ಮದೀಯರ ಸೈನ್ಯ ದೋರಸಮುದ್ರದತ್ತ ಧಾವಿಸಿತು. ತನ್ನ ರಾಜ್ಯವನ್ನು ಮಹಮ್ಮದೀಯರ ಆಕ್ರಮಣಕ್ಕೆ ಈಡು ಮಾಡಲು ಬಲ್ಲಾಳ ಸಿದ್ಧನಿರಲಿಲ್ಲವಾಗಿ ಬಹಾಉದ್ದೀನನನ್ನು ಮಲಿಕ್ ಜಾದಾನಿಗೆ ಒಪ್ಪಿಸಿದ. ಇದರಿಂದ ಹೊಯ್ಸಳ ರಾಜ್ಯಕ್ಕೆ ಹೆಚ್ಚು ಹಾನಿಯುಂಟುಮಾಡದೆ ತುಗಲಕ್‌ನ ಸೈನ್ಯ ಹಿಂದಿರುಗಿತು.

ಮುಮ್ಮಡಿ ಬಲ್ಲಾಳನ ಕಾಲದಲ್ಲಿ ದೆಹಲಿ ಸುಲ್ತಾನರ ದಂಡಯಾತ್ರೆಗಳಿಂದ ದಕ್ಷಿಣಭಾರತದ ರಾಜಕೀಯ ಪರಿಸ್ಥಿತಿ ಶೋಚನೀಯವಾಗಿತ್ತು. ದೇವಗಿರಿ, ವಾರಂಗಲ್ ಮತ್ತು ಕಂಪಿಲಿಯ ರಾಜಮನೆತನಗಳು ನಿರ್ನಾಮವಾಗಿದ್ದುವು. ಮಧುರೆಯ ಪಾಂಡ್ಯ ಮನೆತನವೂ ನಾಶವಾಗಿ ಅಲ್ಲಿ ಮಹಮ್ಮದೀಯರ ಆಡಳಿತ ಸ್ಥಾಪಿತವಾಗಿತ್ತು. ಆಗ ಇಡೀ ದಕ್ಷಿಣ ಭಾರತದ ಏಕೈಕ ರಾಜಮನೆತನವೆಂದರೆ ಹೊಯ್ಸಳರದು ಮಾತ್ರ. ದಕ್ಷಿಣ ಭಾರತವನ್ನು ಉತ್ತರದ ಮಹಮ್ಮದೀಯರ ದಾಳಿಯಿಂದ ಸಂರಕ್ಷಿಸಲೂ ಇಲ್ಲಿಂದ ಮಹಮ್ಮದೀಯರ ಪ್ರಭಾವವನ್ನು ತೊಡೆದುಹಾಕಲೂ ಬಲ್ಲಾಳ ನಿರ್ಧರಿಸಿದ. ಸೂಕ್ತವಾದ ಕಡೆಗಳಲೆಲ್ಲ ಸೈನ್ಯದ ತುಕಡಿಗಳನ್ನು ನೆಲೆಗೊಳಿಸಿದ. ಸಣ್ಣಪುಟ್ಟ ಸಾಮಂತರು ಒಗ್ಗಟ್ಟಾಗಿ ತನ್ನ ಕಾರ್ಯಕ್ಕೆ ನೆರವಾಗುವಂತೆ ಕರೆ ನೀಡಿದ. ಈ ಮಧ್ಯದಲ್ಲಿ ತುಳುನಾಡನ್ನೂ ಈತ ವಶಪಡಿಸಿಕೊಂಡಿದ್ದು ಇವನ ರಾಜ್ಯ ಪಶ್ಚಿಮ-ಪೂರ್ವ ಸಮುದ್ರಪರ್ಯಂತವೂ ಉತ್ತರದಲ್ಲಿ ತುಂಗಭದ್ರಾ ನದಿಯಿಂದ ದಕ್ಷಿಣದಲ್ಲಿ ಸುಮಾರು ಮಧುರೆಯ ಗಡಿಯವರೆಗೂ ಹಬ್ಬಿದ್ದಿತು.

ಆವಶ್ಯಕವಾದ ಸಿದ್ಧತೆಗಳನ್ನು ಮಾಡಿಕೊಂಡು 94 ವರ್ಷ ವಯಸ್ಸಿನ ವೃದ್ಧ ವೀರಬಲ್ಲಾಳ ಮಧುರೆಯನ್ನು ಮಹಮ್ಮದೀಯ ಆಡಳಿತದಿಂದ ಪಾರುಮಾಡಲು 1342ರ ಕೊನೆಯಲ್ಲಿ ಸಮಸ್ತ ಸೈನ್ಯದ ಅಖಂಡ ನಾಯಕತ್ವವನ್ನು ವಹಿಸಿ ಮುನ್ನಡೆದ. ಕಣ್ಣಾನೂರು ಕೊಪ್ಪ ಎಂಬಲ್ಲಿ ನಡೆದ ಯುದ್ಧದಲ್ಲಿ ವೀರಬಲ್ಲಾಳ ಮಧುರೆಯ ಸುಲ್ತಾನನಾದ ಗಯಾಸುದ್ದೀನನ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿದ. ಶರಣಾಗತರಾದ ಮಹಮ್ಮದೀಯರು ಅಲ್ಲಿಂದ ನಿರ್ಗಮಿಸಲು ಎರಡು ವಾರಗಳ ಅವಧಿಯನ್ನು ಬಲ್ಲಾಳ ನೀಡಿದ. ಪ್ರತ್ಯಕ್ಷದರ್ಶಿಯಾದ ಇಬ್ನ್ ಬತೂತನ ವರದಿಯ ಪ್ರಕಾರ ವಿಶ್ರಾಂತಿಯ ವೇಳೆಯಲ್ಲಿ ನಿರಾಯುಧರಾದ ಬಲ್ಲಾಳನ ಸೈನಿಕರ ಮೇಲೆ ಮಹಮ್ಮದೀಯರು ಉಗ್ರದಾಳಿ ನಡೆಸಿದರು. ವೀರ ಬಲ್ಲಾಳ ಸೆರೆಸಿಕ್ಕಿದ. ಸುಲ್ತಾನ ಅವನನ್ನು ವಧಿಸಿ ಚರ್ಮಸುಲಿದು ಹೊಟ್ಟು ತುಂಬಿ ಬೊಂತೆ ಮಾಡಿ ಮಧುರೆಯ ಕೋಟೆಯ ಮೇಲಿಟ್ಟು ಪ್ರದರ್ಶಿಸಿದ. ಈ ಘಟನೆ 1342ರಲ್ಲಿ ನಡೆದಿರಬಹುದು.

ಅಸ್ತವ್ಯಸ್ತವಾಗಿ ಸಂಕುಚಿತವಾಗಿದ್ದ ಹೊಯ್ಸಳ ರಾಜ್ಯಕ್ಕೆ ಪ್ರಭುವಾಗಿ ತನ್ನ ಬಾಹುಬಲದಿಂದ ಅದನ್ನು ಬಹುವಾಗಿ ವಿಸ್ತರಿಸಿ ದಕ್ಷಿಣ ಭಾರತದ ಪ್ರಾಚೀನ ಹಿಂದು ರಾಜಮನೆತನಗಳ ಏಕೈಕಪ್ರಭುವಾಗಿ ಮೆರೆದ ಬಲ್ಲಾಳನ ಅವಸಾನದೊಂದಿಗೆ ಹೊಯ್ಸಳರ ಆಳ್ವಿಕೆಯೂ ಕೊನೆಗೊಂಡಿತು. ಇವನು ನಡೆಸಿದ ರಾಜ್ಯ ಸಂಘಟನಾ ಕಾರ್ಯ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರಲು ಬುನಾದಿಯಾಯಿತು.

ಬಲ್ಲಾಳ ತುಳುನಾಡಿನ ಚಿಕ್ಕಾಯಿತಾಯಿ ಎಂಬುವಳನ್ನು ಮದುವೆಯಾಗಿದ್ದ. ಈಕೆ ಇವನ ಮರಣಾನಂತರವು ಆ ಪ್ರಾಂತ್ಯದಲ್ಲಿ ಕೆಲವು ಕಾಲ ಅಧಿಕಾರ ನಡೆಸುತ್ತಿದ್ದಂತೆ ತೋರುತ್ತದೆ. ವಿರೂಪಾಕ್ಷ ಬಲ್ಲಾಳನ ಮಗ. ಇವನು 3ನೆಯ ಬಲ್ಲಾಳನ ಅನಂತರ 1343ರಲ್ಲಿ ಪಟ್ಟವೇರಿದರೂ ಇವನ ಬಗ್ಗೆ ಹೆಚ್ಚೇನೂ ತಿಳಿದಿಲ್ಲ. ಆಗತಾನೇ ಉದಿಸಿದ್ದ ವಿಜಯನಗರ ಸಾಮ್ರಾಜ್ಯದ ಹೊಸ ಅಲೆಯಲ್ಲಿ ಈತನೂ ತೇಲಿಹೋಗಿರಬೇಕು. ಮಾಧವ, ಮದಿಗಿದೇವ, ಕೇತಯ, ಸಿಂಗಯ, ಮಾಚಯ, ಬಲ್ಲಪ್ಪ ಮುಂತಾದವರು ಇವನ ದಂಡನಾಯಕರಲ್ಲಿ ಮುಖ್ಯರು. ಬಲ್ಲಾಳನ ಕಾಲದ ರಾಜಕೀಯ ಪ್ರಕ್ಷುಬ್ಧತೆಯಲ್ಲಿ ಕಲಾ-ಸಾಹಿತ್ಯಕ ಕೆಲಸಗಳು ಹೆಚ್ಚೇನೂ ನಡೆದಂತೆ ತೋರುವುದಿಲ್ಲ. ಶಾಸನಗಳಲ್ಲಿ ಅವುಗಳ ಬಗ್ಗೆ ಉಲ್ಲೇಖ ದೊರಕುವುದು ಬಹಳ ಅಪರೂಪ. (ಜಿ.ಆರ್.ಆರ್.)

**ಬಲ್ಲಾಳರಾಯನ ದುರ್ಗ**: ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಮೂಡಿಗೆರೆಯಿಂದ ಸು. 44ಕಿಮೀ ಪಶ್ಚಿಮಕ್ಕೆ, ಕೆಳಗೂರಿಗೆ ಎದುರಾಗಿ ಇರುವ ಗಿರಿದುರ್ಗ. ಪಶ್ಚಿಮಘಟ್ಟ ಶ್ರೇಣಿಯ ದೊಡ್ಡ ಗಿರಿಗಳಲ್ಲೊಂದು. ಸಮುದ್ರಮಟ್ಟದಿಂದ 1,506 ಮೀ ಎತ್ತರವಿದೆ. ಬೆಟ್ಟದ ಮೇಲೆ ಮೂರು ಸುತ್ತಿನ ಒಂದು ಕೋಟೆ ಇದೆ. ಕೊಟಿಗೆಹಾರ ಘಟ್ಟ ಮಾರ್ಗವನ್ನು ನಿಯಂತ್ರಿಸುವ ಆಯಕಟ್ಟಿನ ಸ್ಥಾನದಲ್ಲಿರುವ ಈ ಕೋಟೆ ಬಹು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದಿರಬೇಕು. ಮೂಡಿಗೆರೆ-ಕಳಸ ಮಾರ್ಗದಲ್ಲಿ ಸಾಗಿ ಈ ಕೋಟೆ ಸ್ಥಳವನ್ನು ತಲುಪಬಹುದು. ಈ ದುರ್ಗದ ಒಳಗಡೆ ಹೊಯ್ಸಳರ ಕಾಲದ ಕೆಲವು ಶಾಸನಗಳು ದೊರಕಿವೆ. ಆದರೆ ಈಗ ಇರುವ ಕೋಟೆ ಸು.17-18ನೆಯ ಶತಮಾನದ ನಿರ್ಮಾಣ. ಕರಿಕಲ್ಲಿನ ಗೋಡೆಗಳು, ಬುರುಜು ಮುಂತಾದ ಅಂಗಗಳನ್ನೊಳಗೊಂಡಿದೆ. ದುರ್ಗ ಚಚ್ಚೌಕವಾಗಿದೆ. ಕೋಟೆಗೆ ಎರಡು ಪ್ರವೇಶದ್ವಾರಗಳಿವೆ. ಒಂದನ್ನು ದಿಡ್ಡಿಬಾಗಿಲು ಎಂದೂ ಮತ್ತೊಂದನ್ನು ಸಿಂಹಬಾಗಿಲು ಎಂದೂ ಕರೆಯುತ್ತಾರೆ.ಕೋಟೆಯ ಗೋಡೆ 3-6ಮೀ ದಪ್ಪವಾಗಿಯೂ 4.5ಮೀ ಎತ್ತರವಾಗಿಯೂ ಇದೆ. ದುರ್ಗದ ಪಶ್ಚಿಮ ಭಾಗದಿಂದ ಕುದುರೆಮುಖ ಪರ್ವತ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪ್ರದೇಶದ ಸುಂದರ ದೃಶ್ಯ ದೊರಕುತ್ತದೆ. ದುರ್ಗದ ಪೂರ್ವ ಭಾಗದ ಸ್ವಲ್ಪ ಮಟ್ಟಸ ಪ್ರದೇಶದಲ್ಲಿ ಅನೇಕ ಕಟ್ಟಡಗಳ ಅವಶೇಷಗಳಿವೆ. ಒಂದು ಬಹಳ ದೊಡ್ಡದು. ಇದು ಅರಮನೆಯ ಕಟ್ಟಡವಿದ್ದಂತೆ ತೋರುತ್ತದೆ. ದುರ್ಗದ ಉತ್ತರದ ಕಡೆಯ ಮಾರ್ಗ ಬಹುದ ಇಳಿಜಾರಾಗಿದೆ. ಹಿಂದೆ ಇದು ಹೆಚ್ಚು ಬಳಕೆಯಲ್ಲಿದ್ದ ಮಾರ್ಗವೆಂದು ತಿಳಿದು ಬರುತ್ತದೆ. ಈಗ ಹುಲಿಕಲ್ಲು ಎಸ್ಟೇಟ್ ಮಾರ್ಗದಿಂದ ಕೋಟೆಯನ್ನು ತಲುಪಬಹುದು. ಬಿದನೂರನ್ನು 1763ರಲ್ಲಿ ಹೈದರ್ ವಶಪಡಿಸಿಕೊಂಡಾಗ ಬಿದನೂರಿನ ರಾಣಿ ಬಲ್ಲಾಳರಾಯನ ದುರ್ಗದಲ್ಲಿ ಆಶ್ರಯ ಪಡೆದಿದ್ದಳು. ಕೊನೆಗೆ ಈ ಕೋಟೆಯೂ ಹೈದರನ ವಶವಾ

ಯಿತು. ಈ ಪ್ರದೇಶದಲ್ಲಿ ಎರಡು ಕೆರೆಗಳು ಮತ್ತು ಹಳೆಯ ಶಿಥಿಲವಾದ ಕಟ್ಟಡಗಳ ಅವಶೇಷಗಳೂ ಕಂಡುಬರುತ್ತವೆ. ಈಗ ಇಲ್ಲಿ ಗಿಡಮರಗಳು ದಟ್ಟವಾಗಿ ಬೆಳೆದಿವೆ. ಕೋಟೆ ಬಹಳ ಶಿಥಿಲವಾಗಿದೆ. *

**ಬಲ್ಲಾಳರು:** ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಈ ಹೆಸರಿನ ಅನೇಕ ತುಂಡರಸರು, ಸ್ಥಾನ ಮುಖಂಡರು ಕಂಡುಬರುತ್ತಾರೆ. ಇವರು ಒಟ್ಟಾರೆ ಯಾವುದೇ ಒಂದು ವಂಶಕ್ಕೆ ಸೇರಿದವರಲ್ಲ. ಬಲಿಷ್ಠ, ಬಲ್ಲವ, ಶ್ರೇಷ್ಠ ಮತ್ತು ಯೋಗ್ಯ ಎನ್ನುವ ಅರ್ಥ ಬಲ್ಲಾಳ ಪದದ ಮೂಲದಲ್ಲಿ ಅಡಗಿದ್ದು, ಸ್ಥಾನವಿಶೇಷತೆಯಿಂದಲೋ ದಕ್ಷತೆಯ ಪ್ರಭಾವದಿಂದಲೋ ಅಥವಾ ಅಧಿಕಾರವೇತ್ತ ಸಂತತಿಯ ಸೂಚಕವಾಗಿಯೋ ಈ ಪದ ಬೇರೆಬೇರೆಯವರಿಗೆ ಬಳಸಲಾಗಿದೆ. ಬಲ್ಲಾಳರು ಜೈನ, ಬಂಟ ಅಥವಾ ಬ್ರಾಹ್ಮಣ ವಂಶೀಯರು. ಹೆಚ್ಚಿನ ಸಂಖ್ಯೆಯಲ್ಲಿ ಜೈನ ಅಥವಾ ಬಂಟರ ಬಲ್ಲಾಳರಿದ್ದರೂ ಅಲ್ಲಲ್ಲಿ ಬ್ರಾಹ್ಮಣ ಬಲ್ಲಾಳರೂ ಕಂಡುಬರುವರು. ಉಡುಪಿಯ ಅಂಬಲಪಾಡಿಯ ಬ್ರಾಹ್ಮಣ ಮನೆತನದ ಬಲ್ಲಾಳರು ಇಂದಿಗೂ ಹೆಚ್ಚಿನ ಪ್ರಸಿದ್ಧಿ ಪಡೆದಿರುವರು. (ಆರ್.ಟಿ.ಎಸ್.)

**ಬಸತಿಪುರ:** ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಒಂದು ಗ್ರಾಮ. ಕೊಳ್ಳೇಗಾಲದಿಂದ 2ಕಿಮೀ ದೂರದಲ್ಲಿದೆ. ಇಲ್ಲಿ ಬಸದಿಗಳು ಇದ್ದಕಾರಣ ಈ ಊರಿಗೆ ಬಸತಿಪುರ ಎಂದು ಹೆಸರು ಬಂದಿದೆ. ಸುಪ್ರಸಿದ್ಧ ಜೈನಯತಿಯೊಬ್ಬ 480ರಲ್ಲಿ ಇಲ್ಲಿ ವಾಸಿಸುತ್ತಿದ್ದನೆಂದು ಪ್ರತೀತಿ. ಸ್ಥಳೀಯ ಜನರು ಆತನ ಪ್ರಭಾವದಿಂದ ಜೈನಧರ್ಮದತ್ತ ವಾಲಿದರು. ಅವನು ಅನೇಕ ಬಸದಿಗಳನ್ನು ನಿರ್ಮಿಸಿದ ಈಗಲೂ ಆ ಬಸದಿಯ ಅವಶೇಷಗಳು ಉಳಿದುಕೊಂಡಿರುವುದನ್ನು ಕಾಣಬಹುದು. ಇಲ್ಲಿ ಶೈವಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಚಿನ್ನದ ರಥದ ಉತ್ಸವ ನಡೆಯುತ್ತಿತ್ತಂತೆ. ಕಾಲಕ್ರಮೇಣ ಜೈನಧರ್ಮವು ಕಾಲೂರಿದ ನಿಮಿತ್ತ ಮತೀಯ ಘರ್ಷಣೆಯಲ್ಲಿ ಈ ರಥ ಅಲ್ಲಿಯ ಪುಷ್ಕರಣಿಯಲ್ಲಿ ಮುಳುಗಡೆಯಾಯಿತೆಂಬ ಐತಿಹ್ಯವಿದೆ.

ಈ ಊರಿನ ದಕ್ಷಿಣ ದಿಕ್ಕಿನಲ್ಲಿರುವ ಕಲ್ಲುಬಂಡೆಯ ಮೇಲೆ ಸು.7–8ನೆಯ ಶತಮಾನಕ್ಕೆ ಸೇರಿದ ಒಂದು ಶಾಸನ ಕೆತ್ತಲಾಗಿದೆ. ಇದು ಸಂಸ್ಕೃತಭಾಷೆಯಲ್ಲಿದೆ. ಆ ಶಾಸನದ ವಿವರಗಳು ಹೀಗಿವೆ: ಆಚಾರ್ಯಪುಷ್ಪನಂದಿ ಬಲದೇವ ಮುನಿಯ ಮೋಕ್ಷದ ಸಂದರ್ಭದಲ್ಲಿ ಹಾಜರಿದ್ದನೆಂದು ಆ ಗುರುವಿನ ಪರವಾಗಿ ಬಸದಿಯನ್ನು ನಿಲ್ಲಿಸಲಾಗಲಿಲ್ಲವೆಂದೂ ಆತ ಆ ಕಾರಣಕ್ಕಾಗಿ ಸಲ್ಲೇಖನ ವ್ರತವನ್ನು ಕೈಗೊಂಡು ತನ್ನ ದೇಹತ್ಯಾಗ ಮಾಡಿದನೆಂದೂ ಆ ಆಚಾರ್ಯನು ಪುರಿಮಂಡಲ ಪ್ರದೇಶವನೆಂದೂ ತಿಳಿದುಬರುತ್ತದೆ.

ಈ ಗ್ರಾಮ ಕುರುಬನಕಟ್ಟೆಯ ಚೆನ್ನಯ್ಯ, ಲಿಂಗಯ್ಯರ ಕಂಡಾಯಗಳ ತಂಗುದಾಣವಾಗಿದೆ. ಈ ಕಂಡಾಯಗಳನ್ನೂ ಮೆರೆಸುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಸಿದ್ಧಪ್ಪಾಜಿ ಗದ್ದಿಗೆ ಈಗ ಸಿದ್ದಪ್ಪಾಜಿ ದೇವಸ್ಥಾನವಾಗಿ ಪರಿವರ್ತನೆಗೊಂಡಿದೆ (1992). ಇಲ್ಲಿ ವರ್ಷಕ್ಕೊಮ್ಮೆ ಯುಗಾದಿಯ ಸಂದರ್ಭದಲ್ಲಿ ಸಿದ್ದಪ್ಪಾಜಿಕೊಂಡೋತ್ಸವ ವಿಜೃಂಭಣೆಯಿಂದ ಜರುಗುತ್ತದೆ. (ಜಿ.ಎಸ್.ಎಸ್‌ಎಚ್.)

**ಬಸಪ್ಪ, ಎಂ.ಆರ್.:** ಜನಪದ ಕಲೆಯಾದ ವೀರಗಾಸೆಯ ಹೆಸರಾಂತ ಕಲಾವಿದ. ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಅಜ್ಜಂಪುರ ಹೋಬಳಿ ಮಾಳೇನಹಳ್ಳಿಯ ಬಡಕುಟುಂಬದಲ್ಲಿ ಜನಿಸಿದರು. ತಂದೆ ರಂಗಪ್ಪ, ತಾಯಿ ನೀಲಮ್ಮ. ಕಡುಕಷ್ಟದಿಂದ ಎಸ್.ಎಸ್.ಎಲ್.ಸಿ. ಯವರೆಗೆ ಓದಿದರು. ಅನಂತರ ಆರ್ಥಿಕ ತೊಂದರೆಯಿಂದ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗದೆ ಹುಟ್ಟೂರಿಗೆ ಮರಳಿದರು. ಬದುಕಿನ ತಾಪತ್ರಯಗಳಲ್ಲಿ ಮುಳುಗಿದರೂ ಪಕ್ಕದ ನುಲೇನೂರಿನಿಂದ ಕರಡಿ–ಚಮಾಳ ವಾದ್ಯಗಳ ರಿಂಗಣ ಕೇಳಿ ಬರುತ್ತಿತ್ತು. ಇದರಿಂದ ಮನಸ್ಸು ಅತ್ತ ಕಡೆ ಸಳೆದಾಗ ಅಲ್ಲಿಗೆ ತೆರಳಿದರು. ಅಲ್ಲಿ ವೀರಗಾಸೆ ಕಲೆಯ ತರಬೇತಿ ಶಾಲೆ ನಡೆಯುತ್ತಿತ್ತು. ಕಲಿಯುವ ಆಸೆ ಇದ್ದರೂ ಕೈಯಲ್ಲಿ ಕಾಸಿರಲಿಲ್ಲ. ಹಾಗಾಗಿ ನಿತ್ಯಮೌನ ಪ್ರೇಕ್ಷಕರಾದರು. ಕೊನೆಗೆ ಏಕಲವ್ಯನಂತೆ ತನಗೆ ತಾನೇ ಗುರುವಾದರು. ಹದಿನೈದರ ಹರಯದಲ್ಲಿ ಉಕ್ಕಿದ ಈ ಬಯಕೆ ಹಗಲೂರಾತ್ರಿ ಕಾಡಿ ಇವರಲ್ಲಿ ಒಬ್ಬ ಕಲಾವಿದನನ್ನು ರೂಪಿಸಿತು. ಅವರಿವರ ಸಹಕಾರದಿಂದ ವಾದ್ಯ ಸಂಪಾದಿಸಿ ಬಡಿಯಲು ಕಲಿತು, ಕಾಲಿಗೆ ಗೆಜ್ಜೆ ಕಟ್ಟಿ ಹೆಜ್ಜೆ ಹಾಕತೊಡಗಿದರು. ಅನಂತರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹತ್ತಾರು ಪ್ರದರ್ಶನ ನೀಡಿ ಸೈ ಎನಿಸಿಕೊಂಡರು. ತಮ್ಮದೇ ವೀರಗಾಸೆ ತಂಡ ಕಟ್ಟಿ ಭಾರತದ ಉದ್ದಗಲಕ್ಕೂ ಸಂಚರಿಸಿದರು. ಹಿಂದುಳಿದ ವರ್ಗದ ಗ್ರಾಮೀಣ ಪ್ರದೇಶದ ನೂರಾರು ಕಲಾವಿದರಿಗೆ ವೀರಗಾಸೆ ಕುಣಿತದಲ್ಲಿ ತರಬೇತಿ ನೀಡಿ 40ಕ್ಕೂ ಹೆಚ್ಚು ತಂಡಗಳ ಹುಟ್ಟಿಗೆ ಕಾರಣರಾದರು.

ವೀರಗಾಸೆ ಕಲೆಯ ದಿಗಂತವನ್ನು ವಿಸ್ತರಿಸಿದ ಇವರಿಗೆ ಅನೇಕ ಪ್ರಶಸ್ತಿ–ಗೌರವಗಳು ಲಭಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1996), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2001), ಜಾನಪದಶ್ರೀ ಪ್ರಶಸ್ತಿ (2002) ಇವು ಮುಖ್ಯವಾದವು. ಹಲವಾರು ಸಂಘ–ಸಂಸ್ಥೆಗಳೂ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿವೆ. (ಎಂ.ಎಸ್‌ಎಚ್‌ಐ.)

**ಬಸರಾಳು:** ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೂಕಿನ ಒಂದು ಹೋಬಳಿ ಮತ್ತು ಅದರ ಕೇಂದ್ರ ಸ್ಥಳ. ಮಂಡ್ಯಕ್ಕೆ ಉತ್ತರದಲ್ಲಿ 24ಕಿಮೀ ದೂರದಲ್ಲಿರುವ ಈ ಗ್ರಾಮ ಹೊಯ್ಸಳ ವಾಸ್ತುಶಿಲ್ಪಕ್ಕೆ ಹೆಸರಾದ ಸ್ಥಳ. ಜನಸಂಖ್ಯೆ 3,589. ಹೊಯ್ಸಳರ ಕಾಲದಲ್ಲಿ ಇದು ಬಸುರಿವಾಳ ಎಂಬ ಹೆಸರಿನಲ್ಲಿ ಆಗ್ರಹಾರವಾಗಿತ್ತು. ಇಲ್ಲಿರುವ ಮಲ್ಲಿಕಾರ್ಜುನ ದೇವಾಲಯವನ್ನು 1234ರಲ್ಲಿ ಹೊಯ್ಸಳರ ದೊರೆ ಎರಡನೆಯ ನರಸಿಂಹನ ದಂಡನಾಯಕ ಹರಿಹರ ಸ್ಥಾಪಿಸಿದ. ಹರಿಹರ ಸೇವುಣರನ್ನು ಸೋಲಿಸಿ ಅದರ ಸ್ಮರಣಾರ್ಥವಾಗಿ, ಇದೇ ಗ್ರಾಮಕ್ಕೆ ಸೇರಿದವನಾದ ತನ್ನ ತಂದೆಯ ಹೆಸರಿನಲ್ಲಿ, ಅವನು ಈ ದೇವಾಲಯವನ್ನು ಕಟ್ಟಿಸಿದ. 1234ರಲ್ಲಿ ಎರಡನೆಯ ನರಸಿಂಹ, 1237ರಲ್ಲಿ ವೀರಸೋಮೇಶ್ವರ, 1239ರಲ್ಲಿ ಮೂರನೆಯ ನರಸಿಂಹ ಮತ್ತು 1625ರಲ್ಲಿ ಪಾಳೆಯಗಾರ ಕೆಂಪ ಭೈರರಸ ಮೊದಲಾದವರು ಈ ದೇವಾಲಯಕ್ಕೆ ದತ್ತಿಗಳನ್ನು ಬಿಟ್ಟಿದ್ದರೆಂಬುದು ಇಲ್ಲಿರುವ ಶಾಸನಗಳಿಂದ ವ್ಯಕ್ತವಾಗುತ್ತದೆ.

ಮಲ್ಲಿಕಾರ್ಜುನ ದೇವಾಲಯ ಸುಮಾರು ನಾಲ್ಕು ಅಡಿ ಎತ್ತರದ ನಕ್ಷತ್ರ ಆಕಾರದ ಜಗತಿಯ ಮೇಲೆ ನಿಂತಿದೆ. ಇದೊಂದು ತ್ರಿಕೂಟಾಚಲ. ಪಶ್ಚಿಮದ ಗರ್ಭಗೃಹದ ಮುಂದೆ ಒಂದು ಸುಕನಾಸಿಯಿದೆ. ಉತ್ತರ ಮತ್ತು ದಕ್ಷಿಣ ಗರ್ಭಗುಡಿಗಳ ಮುಂಭಾಗದಲ್ಲಿ ಪೂರ್ವಕ್ಕೆ ಚಾಚಿದಂತೆ ಒಂದು ನವರಂಗವಿದೆ. ಇದರ ಮುಂಭಾಗದಲ್ಲಿ ನಂದಿ ಗುಡಿಯಿದೆ. ಎತ್ತರದ ಲಿಂಗವಿದೆ. ದಕ್ಷಿಣದ ಗರ್ಭಗುಡಿಯ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರ ವಿಗ್ರಹಗಳಿವೆ. ಇಲ್ಲಿ ವಿಷ್ಣುವಿನ ವಿಗ್ರಹವಿದ್ದಿರಬಹುದು. ಈಗ ಸೂರ್ಯನ ವಿಗ್ರಹವನ್ನು ನಿಲ್ಲಿಸಲಾಗಿದೆ. ಉತ್ತರದ ಗರ್ಭಗುಡಿಯಲ್ಲಿ ಹಿಂದೆ ಇದ್ದಿರಬಹುದಾದ ವಿಷ್ಣುವಿನ ವಿಗ್ರಹ ಕಾಣಬರುವುದಿಲ್ಲ. ನವರಂಗದ ದ್ವಾರದ ಮೇಲೆ ತಾಂಡವೇಶ್ವರ ಮತ್ತು ಪಕ್ಕಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದ ಕಂಬಗಳು ಬಹು ಸುಂದರವಾಗಿವೆ. ನವರಂಗದ ಗೋಡೆಗಳಲ್ಲಿ ಜಾಲಂಧ್ರಗಳಿವೆ. ಗೋಡೆಗಲ್ಲಿರುವ ಗೂಡುಗಳಲ್ಲಿ ಸರಸ್ವತಿ, ಗಣೇಶ, ಮಹಿಷಾಸುರಮರ್ದಿನಿ ಮುಂತಾದ ಶಿಲ್ಪಗಳಿವೆ. ಇದರ ಮುಂದಿರುವ ಸಪ್ತಮಾತೃಕೆಯರ ಶಿಲ್ಪಸಮೂಹ ಗಮನಾರ್ಹವಾ

ದುದು. ದೇವಾಲಯದ ಹೊರಗೋಡೆಯ ಮೇಲೆ ಕೆಳಗಿನಿಂದ ಮೇಲಕ್ಕೆ ಆರು ಸಾಲು ವಿಗ್ರಹಪಟ್ಟಿಕೆಗಳಿವೆ. ಇವುಗಳಲ್ಲಿ ಅನುಕ್ರಮವಾಗಿ ಆನೆಗಳು, ಕುದುರೆಗಳು, ಸಿಂಹಗಳು, ಪೌರಾಣಿಕ ಕಥೆಗಳ ಪಟ್ಟಿಕೆಯೂ ಗಮನಾರ್ಹ ವಾದುದು. ದಕ್ಷಿಣದ ಬಾಗಿಲಿನಿಂದ ರಾಮಾಯಣದ ಕಥೆಗಳು ಪ್ರಾರಂಭ ವಾಗಿ ಅನಂತರ ಮಹಾಭಾರತದ ಕಥೆಗಳೂ ಅನಂತರ ಭಾಗವತವೂ ಅದಾದ ಮೇಲೆ ಇತರ ಪೌರಾಣಿಕ ಕಥೆಗಳೂ ಕೆತ್ತಲಾಗಿವೆ. ಪೌರಾಣಿಕ



ಮಲ್ಲಿಕಾರ್ಜುನ ದೇವಾಲಯ

ಕಥೆಗಳಲ್ಲಿ ಗಜಾಸುರಮರ್ದನ, ಕೃಷ್ಣಲೀಲೆ, ಭೀಮ–ದುರ್ಯೋಧನರ ಯುದ್ಧ, ಹಿರಣ್ಯಕಶಿಪು ಸಂಹಾರ, ರಾವಣ ಸಂಹಾರ ಮುಂತಾದವು ಬಹು ಸುಂದರವಾಗಿವೆ: ಗೋಡೆಗಳಲ್ಲಿ ಪಟ್ಟಿಕೆಗಳ ಮೇಲೆ ಶಿಲ್ಪಗಳಿವೆ. ದುರ್ಗಾ, ಅಂಧಕಾಸುರ ಸಂಹಾರ, ಯೋಗಾನರಸಿಂಹ, ಭೈರವ, ಹಲಾಯುಧ, ಮನ್ಮಥ ಮತ್ತು ರತಿ, ಬಲಿ ಮತ್ತು ವಾಮನ, ವೇಣುಗೋಪಾಲ, ಕುಮಾರ ಮುಂತಾದ ನೂರಾರು ವಿಗ್ರಹಗಳಿವೆ. ಒಟ್ಟಿನಲ್ಲಿ ಹೇಳುವುದಾದರೆ ಈ ದೇವಾಲಯ ಸಣ್ಣ ಹೊಯ್ಸಳ ದೇವಾಲಯಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಉಳಿದಿರುವ ರಮ್ಯ ಹೊಯ್ಸಳ ದೇವಾಲಯಗಳಲ್ಲಿ ಇದೂ ಒಂದು. ಈ ದೇವಾಲಯದ ಸಮೀಪದಲ್ಲೇ ಹೊಯ್ಸಳರ ಕಾಲದ್ದೇ ಆದ, ಆದರೆ ಕಲಾ ದೃಷ್ಟಿಯಿಂದ ಅಷ್ಟು ಮುಖ್ಯವಲ್ಲದ, ವಿಷ್ಣುವಿನ ದೇವಾಲಯವು ತಟಾಕವೂ ಕೆಲವು ವೀರಗಲ್ಲುಗಳೂ ಇವೆ. (ಎ.ವಿ.ಎಸ್.)

**ಬಸರೂರು:** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಒಂದು ಗ್ರಾಮ. ಕುಂದಾಪುರದ ಪೂರ್ವಕ್ಕೆ 8ಕಿಮೀ ದೂರದಲ್ಲಿದೆ. ಜನಸಂಖ್ಯೆ 6,532. ಈ ಗ್ರಾಮವನ್ನು ಕೋಟೆ ಸುತ್ತುವರಿದಿದೆ. ಹೊರಕೋಟೆಯ ಗೋಡೆಗಳು ಮತ್ತು ಒಳಕೋಟೆಯ ಸುತ್ತಲಿದ್ದ ಕಂದಕಗಳನ್ನು ಈಗಲೂ ಕಾಣಬಹುದು. ಹಿಂದೆ ವಸು ಚಕ್ರವರ್ತಿ ಎಂಬವನು ಬಸರೂರನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದು ಇಲ್ಲಿ ಅನೇಕ ದೇವಾಲಯಗಳನ್ನೂ ಕೆರೆಗಳನ್ನೂ ಕಟ್ಟಿಸಿದನೆಂದು ಪ್ರತೀತಿ. ಹಿಂದೆ ಇದಕ್ಕೆ ಬಸುರೆಪಟ್ಟಣ, ಬರ್ಕಲೂರು ಎಂಬ ಹೆಸರುಗಳಿದ್ದುವು. ಕ್ರಿಸ್ತಶಕಾರಂಭದ ರೋಮನ್ ಸಾಮ್ರಾಜ್ಯ ಕಾಲದ ವರ್ತಕರ ದಾಖಲೆಗಳಲ್ಲೂ ಈ ಊರಿನ ಉಲ್ಲೇಖ ವಿದೆ. 17 ಮತ್ತು 18ನೆಯ ಶತಮಾನಗಳ ಶಾಸನಗಳಲ್ಲಿ ಇದನ್ನು ವಸುಪುರ ಎಂದು ಉಲ್ಲೇಖಿಸಲಾಗಿದೆ. ಬಸರೂರಿಗೆ ಮಲಬಾರ್, ಓರ್ಮುಜ್, ಏಡನ್ ಮತ್ತು ಜಹೆರ್–ಇವುಗಳಿಂದ ವ್ಯಾಪಾರಿ ಹಡಗುಗಳು ಬರುತ್ತಿದ್ದು ವೆಂದು 1514ರಲ್ಲಿ ಇಲ್ಲಿಗೆ ಬಂದಿದ್ದ ಬಾರ್ಬೋಸ ಎಂಬ ಪ್ರವಾಸಿ ಹೇಳಿದ್ದಾನೆ. 1570–80ರ ಮಧ್ಯೆ ಈ ಊರನ್ನು ಗೇರುಸೊಪ್ಪೆಯ ರಾಣಿ ಬಿಜಾಪುರಕ್ಕೆ ಬಿಟ್ಟುಕೊಟ್ಟರೂ ಬಿಜಾಪುರದ ಆಳ್ವಿಕೆ ಇಲ್ಲಿ ನಡೆಯಲಿಲ್ಲ. 16ನೆಯ ಶತಮಾನದಲ್ಲಿ ಬಸರೂರು ಪೋರ್ಚುಗೀಸರಿಗೆ ಸೇರಿತು. 18ನೆಯ ಶತಮಾನದ ಆದಿಯಲ್ಲಿ ಡಚ್ಚರು ಇಲ್ಲಿ ಕೋಠಿಯೊಂದನ್ನು ಕಟ್ಟಿದ್ದರು. ಬಸರೂರಿನಲ್ಲಿ 10 ಮತ್ತು 11ನೆಯ ಶತಮಾನಕ್ಕೆ ಸೇರಿದ ನಕರೇಶ್ವರ ಮತ್ತು ತುಳುವೇಶ್ವರ ದೇವಾಲಯಗಳೂ ಇವೆ. ಇಲ್ಲಿನ ಆದಿನಾಥೇಶ್ವರ ಮತ್ತು ವೆಂಕಟರಮಣ ದೇವಾಲಯಗಳೂ ಹಳೆಯವು. ಇಲ್ಲಿನ ಕೋಟೇಶ್ವರ ಮತ್ತು ಮಹಾಲಿಂಗೇಶ್ವರ ದೇವಾಲಯಗ ಳಿಗೆ ವಿಜಯನಗರದ ಕಾಲದಲ್ಲಿ ಅನೇಕ ದತ್ತಿಗಳನ್ನು ನೀಡಲಾಗಿತ್ತು. ಈ ದೇವಾಲಯಗಳಿಗೆ ಸೇರಿದಂತಿರುವ ಮೂರು ದೊಡ್ಡ ಕೆರೆಗಳು ಈಗಲೂ ಉಪಯೋಗದಲ್ಲಿವೆ. ಬಸರೂರು ಹಿಂದೆ ನಾಥಪಂಥದ ಕೇಂದ್ರವಾಗಿತ್ತು.

ಗೋವದಿಂದ ಬಂದ ಕ್ರೈಸ್ತರು 1570ರಲ್ಲಿ ಕಟ್ಟಿದ ಒಂದು ಚರ್ಚು ಮತ್ತು ಆಸ್ಪತ್ರೆ ಇಲ್ಲಿ ಇವೆ. ಇಲ್ಲಿಯ ಗುಡಿಗಾರರ ಮರದ ಕೆತ್ತನೆಗಳು ಪ್ರಸಿದ್ಧ. (ಸಿ.ಕೆ.ವೈ.ಡಿ.)

**ಬಸವಕಲ್ಯಾಣ:** ಬೀದರ್ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ಜಿಲ್ಲೆಯ ಪಶ್ಚಿಮಕ್ಕಿರುವ ಈ ತಾಲ್ಲೂಕನ್ನು ಪೂರ್ವದಲ್ಲಿ ಹುಮನಾಬಾದ ಮತ್ತು ಭಾಲ್ಕಿ, ದಕ್ಷಿಣದಲ್ಲಿ ಗುಲ್ಬರ್ಗ, ಆಳಂದ ಉತ್ತರ ಮತ್ತು ಈಶಾನ್ಯದಲ್ಲಿ ಭಾಲ್ಕಿ– ಈ ತಾಲ್ಲೂಕುಗಳೂ ಪಶ್ಚಿಮದಲ್ಲಿ ಮಹಾರಾಷ್ಟ್ರ ರಾಜ್ಯವೂ ಸುತ್ತುವರಿದಿವೆ. 1965ರ ನವೆಂಬರ್ ತಿಂಗಳಲ್ಲಿ ಹಿಂದಿನ ಭಾಲ್ಕಿ ತಾಲ್ಲೂಕಿನಿಂದ 25 ಗ್ರಾಮಗಳನ್ನೂ ಹುಮನಾಬಾದ ತಾಲ್ಲೂಕಿನಿಂದ 89 ಗ್ರಾಮಗಳನ್ನೂ ಬಸವ ಕಲ್ಯಾಣ ಪಟ್ಟಣವನ್ನೂ ಸೇರಿಸಿ ಈ ತಾಲ್ಲೂಕನ್ನು ರಚಿಸಲಾಯಿತು. ತಾಲ್ಲೂಕಿನ ಜನಸಂಖ್ಯೆ 18,47,248.

ಈ ತಾಲ್ಲೂಕು ದಕ್ಷಿಣದ ಪ್ರಸ್ಥಭೂಮಿಯ ಭಾಗವಾಗಿದೆ. ಇದು ಘನೀಭೂತ ಲಾವಾರಸದಿಂದ ಆದ ಟ್ರ್ಯಾಪ್‌ಕಲ್ಲು ಮತ್ತು ಅದರಿಂದ ರೂಪಾಂತರವಾದ ಜಂಬುಕಲ್ಲು ಇರುವ ಪ್ರದೇಶ. ತಾಲ್ಲೂಕು ಸಾಮಾನ್ಯತಃ ಸಮುದ್ರಮಟ್ಟಕ್ಕಿಂತ ಸುಮಾರು 610 ಮೀಟರ್ ಎತ್ತರದಲ್ಲಿದೆ. ಹವಾಗುಣ ಉತ್ತಮವೆನ್ನಬಹುದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 891.76 ಮಿಮೀ.

ಈ ತಾಲ್ಲೂಕಿನ ನೈಋತ್ಯ ಭಾಗದ ಗಡಿಯನ್ನು ಬೆಣ್ಣೆತೊರೆ ನದಿ ಸ್ವಲ್ಪ ದೂರಮುಟ್ಟಿ ಹೋಗುವುದು. ದಕ್ಷಿಣದಲ್ಲಿ ಹರಿಯುವ ಗಂಡೋರಿ ನದಿ ಈ ತಾಲ್ಲೂಕಿನಲ್ಲಿ ಉತ್ತರದಿಂದ ನೇರವಾಗಿ ದಕ್ಷಿಣಾಭಿಮುಖವಾಗಿ ಹರಿದರೆ, ಮುಲ್ಲಾಮಾರಿ ಪಶ್ಚಿಮದಿಂದ ಆಗ್ನೇಯಾಭಿಮುಖವಾಗಿ ಹರಿದು ಕಾರಂಜಾ ನದಿಯನ್ನು ಭಾಲ್ಕಿ ತಾಲ್ಲೂಕಿನಲ್ಲಿ ಸೇರಿಕೊಳ್ಳುವುದು.

ಈ ತಾಲ್ಲೂಕಿನಲ್ಲಿ ಖನಿಜಸಂಪತ್ತು ಇಲ್ಲವಾದರೂ ಇಲ್ಲಿಯ ಫಲವತ್ತಾದ ಕೆಂಪುಮಿಶ್ರಿತ ಮತ್ತು ಕಪ್ಪುಮಣ್ಣಿನ ಭೂಮಿ ವ್ಯವಸಾಯ ಯೋಗ್ಯವಾಗಿದೆ. ಇಲ್ಲಿ ಬಾವಿಗಳು ಮತ್ತು ಕೆರೆಗಳು ನೀರಾವರಿಯ ಮುಖ್ಯ ಸಾಧನಗಳು. ತಾಲ್ಲೂಕಿನ ವ್ಯವಸಾಯಾಭಿವೃದ್ಧಿಗೆ ಪ್ರಥಮ ಹಂತವಾಗಿ ಮುಲ್ಲಾಮಾರಿ ನಾಲಾ ಯೋಜನೆಯನ್ನು ಕೈಗೊಳ್ಳಲಾಗಿದೆ. ತಾಲ್ಲೂಕಿನ ಒಟ್ಟು ಭೂಮಿಯಲ್ಲಿ ಸುಮಾರು 1,327 ಹೆಕ್ಟೇರ್‌ಗಳಷ್ಟು ಅರಣ್ಯವಿದೆ. ಉಳಿದ ಭೂಮಿಯಲ್ಲಿ ಜೋಳ, ಸಜ್ಜೆ, ಸೇಂಗ, ಬತ್ತ, ಕಬ್ಬು, ತೊಗರಿ, ಹತ್ತಿ ಮತ್ತು ತೈಲಬೀಜಗಳನ್ನು ಬೆಳೆಯುತ್ತಾರೆ.

ಬಸವ ಕಲ್ಯಾಣ ತಾಲ್ಲೂಕು ಕೈಮಗ್ಗದ ಬಟ್ಟೆಗಳು ಮತ್ತು ಸೀರೆಗಳಿಗೆ ಪ್ರಸಿದ್ಧ. ಸುಮಾರು 1,800 ಕೈಮಗ್ಗಗಳೂ 18 ಸಣ್ಣ ಕೈಗಾರಿಕೆಗಳೂ 1 ಖಂಡಸಾರಿ, 1 ರಾಸಾಯನಿಕ ಮತ್ತು 3 ತಾಂತ್ರಿಕ ಕೈಗಾರಿಕೆಗಳೂ

ಇವೆ. ಜೊತೆಗೆ ಸೇಂಗಾ ಎಣ್ಣೆ ಮತ್ತು ಮುದ್ದಿನ ಸಾಮಾನುಗಳ ತಯಾರಿಕೆಯೂ ಉಂಟು. ಹೈದರಾಬಾದ್– ಹುಮನಾಬಾದ–ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ಈ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಹಾದು ಹೋಗುತ್ತದೆ. ಭಾಲ್ಕಿ–ನಿಲಂಗಾ ರಸ್ತೆ ಉತ್ತರ ಭಾಗದಲ್ಲಿದೆ.

ಬಸವೇಶ್ವರ ದೇವಾಲಯ, ಬಸವ ಕಲ್ಯಾಣ

ಬಸವಕಲ್ಯಾಣದಿಂದ ಈ ರಸ್ತೆಗೆ ಸಂಪರ್ಕವುಂಟು. ಬಸವಜಯಂತಿ ಈ ತಾಲ್ಲೂಕಿನ ಮುಖ್ಯ ಉತ್ಸವ.

ಈ ತಾಲ್ಲೂಕಿನಲ್ಲಿ ಬಸವಕಲ್ಯಾಣವೇ ಬಹು ಮುಖ್ಯ ಧಾರ್ಮಿಕ ಕೇಂದ್ರ. ಬಸವಕಲ್ಯಾಣಕ್ಕೆ ನೈಋತ್ಯದಲ್ಲಿರುವ ಚಂದಕಾಪುರ ಗ್ರಾಮದಲ್ಲಿ ಒಂದು ಶಿವ ದೇವಾಲಯವೂ ಅಮೃತಕುಂಡವೆಂಬ ಕೊಳವೂ ಇವೆ. ಬಸವ ಕಲ್ಯಾಣ ದಕ್ಷಿಣಕ್ಕಿರುವ ಕಿನ್ನಿ ಗ್ರಾಮದಲ್ಲಿ ಪ್ರತಿ ವರ್ಷ ಫೆಬ್ರವರಿಯಲ್ಲಿ ಶರಣ ಬಸವೇಶ್ವರನ ಜಾತ್ರೆ 3 ದಿನಗಳ ಕಾಲ ನಡೆಯುವುದು. ತಾಲ್ಲೂಕಿನ ದಕ್ಷಿಣದಲ್ಲಿರುವ ಕೋಹಿನೂರ್ ಗ್ರಾಮದಲ್ಲಿ ಜಿಂದಷಾ ಮದರ್‌ಷಾ ದರ್ಗಾ ಇದೆ. ಬಸವ ಕಲ್ಯಾಣದ ಉತ್ತರಕ್ಕಿರುವ ಹುಲಸೂರು ಗ್ರಾಮದಲ್ಲಿ ವೀರಭದ್ರೇಶ್ವರ ದೇವಾಲಯವಿದೆ. ಇಲ್ಲಿ ಏಪ್ರಿಲ್ ತಿಂಗಳಲ್ಲಿ 3 ದಿನಗಳ ಜಾತ್ರೆ ನಡೆಯುವುದು. ಬಸವ ಕಲ್ಯಾಣದ ಈಶಾನ್ಯಕ್ಕಿರುವ ಗೋರ್ತಾ (ಬಿ) ಗ್ರಾಮದಲ್ಲಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಲಕ್ಷ್ಮೀದೇವಿಯ ಜಾತ್ರೆ ಆ ಸುತ್ತಿಗೆ ಪ್ರಸಿದ್ಧ.

ಬಸವಕಲ್ಯಾಣ ಈ ತಾಲ್ಲೂಕಿನ ಮುಖ್ಯ ಪಟ್ಟಣ. ಬೀದರ್‌ನ ಪಶ್ಚಿಮಕ್ಕೆ 80ಕಿಮೀ ದೂರದಲ್ಲೂ ಗುಲ್ಬರ್ಗಕ್ಕೆ 99ಕಿಮೀ ದೂರದಲ್ಲೂ ಭಾಲ್ಕಿಗೆ 55ಕಿಮೀ ದೂರದಲ್ಲೂ ಬೆಂಗಳೂರಿಗೆ 683ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 58,742. ಹಿಂದೆ ಹುಮನಾಬಾದ ತಾಲ್ಲೂಕಿನಲ್ಲಿದ್ದ ಈ ಪಟ್ಟಣ ಬಸವಕಲ್ಯಾಣ ತಾಲ್ಲೂಕು ರಚನೆಯಾದ ಮೇಲೆ ಅದರ ಆಡಳಿತ ಕೇಂದ್ರವಾಯಿತು.

ಬಸವಕಲ್ಯಾಣ ಐತಿಹಾಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ರಂಗಗಳಲ್ಲಿ ಖ್ಯಾತಿ ಪಡೆದಿರುವ ಪ್ರಾಚೀನ ಪಟ್ಟಣ. ಇದು ಹಿಂದೆ ಚಾಳುಕ್ಯರ ರಾಜಧಾನಿಯಾಗಿತ್ತು. ಚಾಳುಕ್ಯ ಜಯಸಿಂಹನ ಮಗ ಚಾಳುಕ್ಯ 1ನೆಯ ಸೋಮೇಶ್ವರ (1042–68) ಇದನ್ನು ರಾಜಧಾನಿಯಾಗಿ ಮಾಡಿಕೊಂಡ. ಈ ಊರಿನ ಹೆಸರಿನಿಂದಲೇ ಇವರು ಕಲ್ಯಾಣ ಚಾಳುಕ್ಯರೆಂದು ಪ್ರಸಿದ್ಧರಾದರು. ಆರನೆಯ ವಿಕ್ರಮಾದಿತ್ಯನ ಕಾಲದ ವಿಜ್ಞಾನೇಶ್ವರಕೃತ ಮಿತಾಕ್ಷರಾದಲ್ಲಿ, ಬಿಲ್ಹಣನ ವಿಕ್ರಮಾಂಕದೇವ ಚರಿತೆಯಲ್ಲಿ ಹಾಗೂ ಚಾಳುಕ್ಯ ಕಾಲದ ಅನೇಕ ಶಾಸನಗಳಲ್ಲಿ ಈ ಪಟ್ಟಣದ ವರ್ಣನೆ ದೊರಕುತ್ತದೆ. ಬಸವೇಶ್ವರ ಮತ್ತು ಇತರ ವಚನಕಾರರು ಈ ಪಟ್ಟಣವನ್ನು ಹೊಗಳಿದ್ದಾರೆ. ಈ ರಾಜಧಾನಿ 12 ಗಾವುದ ಉದ್ದವಾಗಿತ್ತೆಂದು ಹೇಳಲಾಗಿದೆ. ಈಗಿನ ನಾರಾಯಣಪುರ, ಶಿವಪುರ, ಪ್ರತಾಪಪುರ ತ್ರಿಪುರಾಂತಕಪುರ, ಉಮಾಪುರ ಎಲ್ಲವೂ ಕಲ್ಯಾಣದ ವಿಸ್ತರಣೆಗಳೆಂದು ಹೇಳಲಾಗುತ್ತದೆ. ಚಾಳುಕ್ಯರ ಅನಂತರ ಕಳಚುರಿ ಬಿಜ್ಜಳನೂ ಇದನ್ನೇ ರಾಜಧಾನಿಯನ್ನಾಗಿ ಮುಂದುವರಿಸಿದ. ಇವನ ಕಾಲದಲ್ಲೇ ಬಸವೇಶ್ವರರ ಧಾರ್ಮಿಕ ಕ್ರಾಂತಿ ನಡೆದದ್ದು. ಆ ಕ್ರಾಂತಿಗೆ ಈ ಕಲ್ಯಾಣವೇ ಮುಖ್ಯ ನೆಲೆ. ಅನಂತರ ಇದು ದೇವಗಿರಿ ಯಾದವರ ಆಳ್ವಿಕೆಗೆ ಸೇರಿದ್ದು ಮಹಮ್ಮದ್ ಬಿನ್ ತುಗಲಕನ ಕಾಲದಲ್ಲಿ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತು. ಅನಂತರ ಗುಲ್ಬರ್ಗದ ಬಹುಮನೀ ಸುಲ್ತಾನರಿಗೂ ಬಿದರೆಯ ಬರೀದ್ ಶಾಹೀ ಸುಲ್ತಾನರಿಗೂ ಬಿಜಾಪುರದ ಆದಿಲಾಶಾಹೀ ಸುಲ್ತಾನರಿಗೂ ಸೇರಿ ಮುಂದೆ ಮುಗಲರ ವಶವಾಗಿತ್ತು. ಕೊನೆಗೆ ಹೈದರಾಬಾದ್ ನಿಜಾಮರಿಗೆ ಸೇರಿ ಒಬ್ಬ ನವಾಬನ ಜಹಗೀರಿಯಾಗಿತ್ತು. ಚಾಳುಕ್ಯ ಮತ್ತು ಕಳಚುರಿ ಶಾಸನಗಳಲ್ಲಿ ಕಲ್ಯಾಣ, ಕಲ್ಯಾಣಪಟ್ಟಣ, ಕಲ್ಯಾಣಪುರಿ ಎಂದು ಕರೆಯಲಾಗಿರುವ ಈ ಪಟ್ಟಣಕ್ಕೆ ಮುಸ್ಲಿಮರ ಆಳ್ವಿಕೆಯ ಕಾಲದಲ್ಲಿ ಕಲ್ಯಾಣಿ ಎಂಬ ಹೆಸರು ಬಂದಿತು. ಇತ್ತೀಚಿನವರೆಗೆ ಈ ಹೆಸರೇ ಪ್ರಚಲಿತವಾಗಿತ್ತು. ಬಸವೇಶ್ವರರ 8ನೆಯ ಶತಮಾನೋತ್ಸವದ ನೆನೆಪಿಗಾಗಿ ಇದನ್ನು ಬಸವಕಲ್ಯಾಣ ಎಂದು ಹೆಸರಿಸಲಾಯಿತು.

ಬಸವಕಲ್ಯಾಣದಲ್ಲಿ ಕರಿಕಲ್ಲಿನಲ್ಲಿ ಕಟ್ಟಿದ ಒಂದು ದೊಡ್ಡ ಕೋಟೆ ಇದೆ. ಇದನ್ನು ಮೂಲತಃ ಚಾಳುಕ್ಯರು ನಿರ್ಮಿಸಿದರು ತರುವಾಯ ಇದು ಕಾಲಕಾಲಕ್ಕೆ ಜೀರ್ಣೋದ್ಧಾರಗೊಂಡಿದೆ.ಇದರೊಳಗೆ ಪುರಾತನ ದ್ವಾರಗಳೂ ತೋಪುಗಳೂ ತೋಪಿನ ಗುಂಡುಗಳೂ ಇವೆ. ಅವುಗಳಲ್ಲಿ ನಾಗಗಾಜೀ ತೋಪು ದೊಡ್ಡದು. ಕೋಟೆಯ ರಾಜಮಹಲಿನಲ್ಲಿ ಒಂದು ಗುಡಿ ಇದೆ. ಇದರ ಚೌಕಟ್ಟಿನ ಮೇಲೆ ಗಣಪತಿ ಇದೆ. ಇಲ್ಲಿ ಮಹಮ್ಮದ್ ಪೈಗಂಬರರ ಮೊಮ್ಮಗ ಹುಸೇನರ ಹೆಸರಿನಲ್ಲಿ ಒಂದು ಕಟ್ಟಡವನ್ನೂ ಮೋತಿಮಹಲ್, ಹೈದರಿಮಹಲ್ ಎಂಬ ಮಹಲ್‌ಗಳನ್ನೂ ಕಟ್ಟಲಾಯಿತು. ಕೋಟೆಯ ಕಟ್ಟಡದಲ್ಲಿ ಕಲ್ಯಾಣ ಚಾಳುಕ್ಯ ಕಾಲದ ದೇವಾಲಯಗಳ ಭಗ್ನಾವಶೇಷ ಭಾಗಗಳನ್ನೂ ಮೂರ್ತಿಗಳನ್ನೂ ಸೇರಿಸಲಾಗಿದೆ.

ಘನಲಿಂಗರುದ್ರಮುನಿ ದೇವಾಲಯ, ಬಸವಕಲ್ಯಾಣ

ಕೋಟೆಯ ಸಮೀಪದಲ್ಲಿರುವ ಗೋಸ್ವಾಮಿಗಳ ಮನೆಯಲ್ಲಿ ಒಂದು ಸೂರ್ಯವಿಗ್ರಹವುಂಟು. ಇದು ಕಲ್ಯಾಣ ಚಾಳುಕ್ಯರ ಕಾಲದ ಸುಂದರ ಶಿಲ್ಪ. ಊರಿನ ಮಧ್ಯದಲ್ಲಿರುವುದು ಬಸವೇಶ್ವರರ ಗುಡಿ. ಇಲ್ಲಿ ಪ್ರತಿ ವರ್ಷ ಜಾತ್ರೆ ನಡೆಯುವುದು. ಇಲ್ಲಿರುವ ಪುರುಷಕಟ್ಟೆ ಎನ್ನುವ ಕಟ್ಟೆಯ ಮೇಲೆ ಬಸವೇಶ್ವರರು ಭಕ್ತರಿಗೆ ದೀಕ್ಷೆ ಕೊಟ್ಟು ಉಪದೇಶ

ಮಾಡುತ್ತಿದ್ದರೆಂದು ಹೇಳಲಾಗಿದೆ. ಬಿಜ್ಜಳರಾಯನ ಅರಮನೆ ದಿಬ್ಬ 100' ಉದ್ದ 70' ಅಗಲ10' ಎತ್ತರವಾಗಿ ಇದೆ. ಇಲ್ಲಿ ಅರಮನೆ ಮತ್ತು ಸುತ್ತಲೂ ಕೋಟೆ ಕಂದಕಗಳು ಇದ್ದ ಕುರುಹುಗಳುಂಟು. ಈಗ ಇಲ್ಲಿ ಅತಿಥಿ ಮಂದಿರವನ್ನು ಕಟ್ಟಿದ್ದಾರೆ. ಕಲ್ಯಾಣಿ ನವಾಬರುಗಳ ಪೀರಾನ ದರ್ಗಾ ಮತ್ತು ಗೋರಿಗಳೂ ಕಂಬಳಿಮಠ, ಗಚ್ಚಿನಮಠ, ಹುಲಕಾಂತಿ ಮಠ, ಸದಾನಂದಮಠ ಮುಂತಾದ ವೀರಶೈವ ಮಠಗಳೂ ಈ ಊರಿನಲ್ಲಿವೆ. ಸುಮಾರು 5ಕಿಮೀ ದೂರದಲ್ಲಿರುವ ತ್ರಿಪುರಾಂತಕದಲ್ಲಿ ಕೆರೆ ಮತ್ತು ದೇವಾಲಯ ಇವೆ. ಇಲ್ಲಿ ಶರಣರು ವಾಸಮಾಡಿದ ಗವಿಗಳನ್ನೂ ಅನುಭವ ಮಂಟಪವಿದ್ದ ಸ್ಥಳವನ್ನೂ ನಾಗರೀ ಲಿಪಿಯ ಒಂದು ಶಿಲಾಶಾಸನವನ್ನೂ ವೀರಗಲ್ಲು ಮತ್ತು ಕೆಲವು ದೇವಮೂರ್ತಿಗಳನ್ನೂ ಕಾಣಬಹುದು. ತ್ರಿಪುರಾಂತಕ ಕೆರೆಯ ಪಶ್ಚಿಮ ದಂಡೆಯ ಮೇಲೆ ಇರುವುದು ರುದ್ರಮುನಿಗಳ (ಘನಲಿಂಗ) ಗವಿ ಇರುವುದು. ಈ ಗವಿಗೆ ಸಮೀಪದಲ್ಲೇ ವಿಜ್ಞಾನೇಶ್ವರ. ಪ್ರಭುದೇವ ಗದ್ದುಗೆ, ಮಡಿವಾಳ ಮಾಚಯ್ಯ-ಇವರ ಗುಡಿ, ಬಸವೇಶ್ವರರ ಅರಮನೆ ಇದ್ದ ಸ್ಥಳ, ಅಕ್ಕನಾಗಮ್ಮನವರ ಗವಿ, ಸಿದ್ಧೇಶ್ವರರ ಗುಡಿ,ನುಲಿಯ ಚಂದಯ್ಯನವರ ಗವಿ ಮುಂತಾದವೂ ಇಲ್ಲಿವೆ. ಬಸವಕಲ್ಯಾಣ ಒಂದು ಯಾತ್ರಾ ಸ್ಥಳ. ಇತ್ತೀಚೆಗೆ ಬಸವ ಸಮಿತಿಯ ಆಸಕ್ತಿಯಿಂದಾಗಿ ಅನುಭವಮಂಟಪವೇ ಮುಂತಾದ ಅನೇಕ ಹೊಸ ಕಟ್ಟಡಗಳು ರಚಿತವಾಗಿವೆ. ಭಕ್ತಾದಿಗಳಿಗೆ ಆಕರ್ಷಣೆಯನ್ನೂ ಸೌಕರ್ಯಗ ಳನ್ನೂ ಒದಗಿಸಲಾಗಿದೆ. ಇಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿದ ಒಂದು ಪ್ರಾಚ್ಯವಸ್ತು ಸಂಗ್ರಹಾಲಯವಿದೆ.

ಈ ಊರಿನಿಂದ ಅನತಿ ದೂರದಲ್ಲಿರುವ ಶಿವಪುರ, ನಾರಾಯಣಪುರ ಮತ್ತು ಜಲಸಂಗ್ವಿಗಳಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ದೇವಾಲಯಗಳು ಉಳಿದುಬಂದಿವೆ. ಜಲಸಂಗ್ವಿಯ ದೇವಾಲಯ ಒಂದು ಉತ್ತಮ ವಾಸ್ತುಕೃತಿ. **(ಬಿ.)**

**ಬಸವಣ್ಣ**: ಸು.1131. 12ನೆಯ ಶತಮಾನದಲ್ಲಿದ್ದ ಶಿವಶರಣ, ಪ್ರಸಿದ್ಧ ವಚನಕಾರ, ಸಮಾಜ ಸುಧಾರಕ. ಅಂದು ಕರ್ನಾಟಕದಲ್ಲಿ ನಡೆದ ಧಾರ್ಮಿಕ-ಸಾಮಾಜಿಕ ಮಹಾಕ್ರಾಂತಿಯೊಂದರ ನೇತಾರ.

ಬಸವಣ್ಣನವರಿಗೆ ಸಂಬಂಧಿಸಿದಂತೆ ಹಿರಿಯೂರು ಶಾಸನ, ಅರ್ಜುನವಾಡ ಶಾಸನ (1260) ಚೌಡದಾನಪುರ ಶಾಸನ, ಕಲ್ಲೇದೇವರಪುರ ಶಾಸನ, ಮರಡಿಪುರ ಶಾಸನ, ಹೊಯ್ಸಳ ಸೋಮೇಶ್ವರನ ಕಣ್ಣಾನೂರು ಶಾಸನ-ಇವುಗಳಲ್ಲಿ ಮಾಹಿತಿಗಳೂ ದೊರಕುತ್ತವೆ. ಅರ್ಜುನವಾಡ ಶಾಸನದಲ್ಲಿ ಬಸವಣ್ಣನವರ ವಂಶಚಿತ್ರವೂ ದೊರೆಯುತ್ತದೆ. ಆದರೆ ಈ ಶಾಸನಗಳೆಲ್ಲ ಬಸವಣ್ಣನವರ ಕಾಲಕ್ಕಿಂತ ಸುಮಾರು ಒಂದು ಶತಮಾನದಷ್ಟು ಈಚಿನವು. ಬಸವಣ್ಣನವರನ್ನು ಕುರಿತಂತೆ ಕನ್ನಡದಲ್ಲಿ ಬಸವರಾಜದೇವರ ರಗಳೆ, ಅಮಲ ಬಸವಚಾರಿತ್ರ, ಬಸವಪುರಾಣ, ವೃಷಭೇಂದ್ರವಿಜಯ ಮುಂತಾದ ಅನೇಕ ಕಾವ್ಯಗಳೂ ರಚಿತವಾಗಿವೆ. ತೆಲುಗಿನಲ್ಲಿ ಸಹ ಒಂದು ಬಸವ ಪುರಾಣವಿದೆ. ಆದರೆ ಇವುಗಳಲ್ಲಿ ಬಸವಣ್ಣನವರ ಸಮಗ್ರ ಚಿತ್ರ ಮೂಡಿಬಂದಿಲ್ಲ; ಪವಾಡಗಳಲ್ಲಿ ಅದನ್ನು ಹುಗಿಸಿಬಿಟ್ಟಿವೆ. ಆದರೆ ಇವರ ವಚನಗಳಲ್ಲಿ ಇವರ ವ್ಯಕ್ತಿತ್ವದ ಜೀವಂತ ಚಿತ್ರ ಮೂಡಿನಿಂತಿದೆ. ಆ ಹಿನ್ನೆಲೆಯಲ್ಲಿ ಪುರಾಣಗಳಲ್ಲಿ ಸೂಚಿತವಾಗಿರುವ ಚಾರಿತ್ರಿಕ ಅಂಶಗಳನ್ನೂ ಜಾಲಾಡಿ, ಅದರಿಂದ ಇವರ ಜೀವನದ ಕಥಾಚಿತ್ರವನ್ನೂ ಸಾಧನೆಗಳನ್ನೂ ಸ್ಥೂಲವಾಗಿ ಕಂಡುಕೊಳ್ಳಬಹುದು.

ಬಿಜಾಪುರ ಜಿಲ್ಲೆಯ ಬಾಗೇವಾಡಿ (ಈಗ ಬಸವನ ಬಾಗೇವಾಡಿ) ಬಸವಣ್ಣನವರ ಜನ್ಮಸ್ಥಳ. ಹಿಂದೆ ಇದು ಪ್ರಸಿದ್ಧ ಅಗ್ರಹಾರವಾಗಿತ್ತು. ಆ ಅಗ್ರಹಾರದ ಅಧಿಪತಿ ಮಾದಿರಾಜ, ಅವನ ಪತ್ನಿ ಮಾದಲಾಂಬೆ-ಇವರು ಬಸವಣ್ಣನವರ ತಂದೆತಾಯಿಗಳು. ಬಸವಣ್ಣನವರಿಗೆ ದೇವರಾಜ ಎಂಬ ಅಣ್ಣ, ನಾಗಮ್ಮ ಎಂಬ ಅಕ್ಕ ಇದ್ದರು. ಬಸವಣ್ಣನವರ ಜನನದ ಕಾಲದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಇವರ ಜೀವನವನ್ನು ಕುರಿತು ರಚಿತವಾಗಿರುವ ಗ್ರಂಥಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಒಮ್ಮತಾಭಿಪ್ರಾಯ ಕಂಡುಬರುವುದಿಲ್ಲ. ಆದರೆ ಶಿವತತ್ತ್ವಚಿಂತಾಮಣಿ ಮತ್ತು ಕಾಲಜ್ಞಾನದ ವಚನಗಳು ನೀಡುವ ಮಾಹಿತಿಗಳು ಒಂದೇ ಆಗಿದ್ದು 1131ರಲ್ಲಿ ಇವರು ಜನಿಸಿರಬೇಕೆಂಬ ಅಭಿಪ್ರಾಯಕ್ಕೆ ವಿದ್ವಾಂಸರು ಬಂದಿದ್ದಾರೆ.

ಬಸವಣ್ಣನವರ ಬಾಲ್ಯಜೀವನ ಕುತೂಹಲಕಾರಿಯಾದುದು. ಎಂಟು ವರ್ಷದ ಬಾಲಕರಾಗಿದ್ದಾಗಲೇ ಇವರಲ್ಲಿ ಸಾಮಾಜಿಕ ಧಾರ್ಮಿಕ ವಿಚಾರಗಳನ್ನು ಒರೆಗೆ ಹಚ್ಚುವ ಪ್ರೌಢ ವಿಚಾರಸರಣಿ ಗೋಚರವಾಯಿತು. ಬಸವಣ್ಣನವರು ಆ ವಯಸ್ಸಿನಲ್ಲಿ ನಡೆಯಬೇಕಾಗಿದ್ದ ಉಪನಯನವನ್ನು ಒಪ್ಪದೆ, ಅದನ್ನು ತಿರಸ್ಕರಿಸಿ ನಡೆದರೆಂದು ಕೆಲವು ಪುರಾಣಕರ್ತೃಗಳು ಹೇಳಿದರೆ, ಮೊದಲು ಉಪನಯನವಾಯಿತೆಂದೂ ಮುಂದೆ ಕೆಲವು ಕಾಲದ ಅನಂತರ ಯಜ್ಞೋಪವೀತವನ್ನು ಕಿತ್ತು ಹಾಕಿದರೆಂದೂ ಹರಿಹರ ಹೇಳುತ್ತಾನೆ. ಅದೇನೇ ಇರಲಿ ವೈದಿಕಧರ್ಮದ ಚತುರ್ವರ್ಣಗಳ ವಿಭಜನೆಯನ್ನೂ ಅದರಿಂದ ಸಮಾಜದಲ್ಲಿ ಉಂಟಾದ ಮೇಲು ಕೀಳುಗಳನ್ನೂ ಇವರು ಒಪ್ಪಿಕೊಳ್ಳಲಿಲ್ಲ ಎಂಬುದು ಸತ್ಯ. ಈ ಘಟನೆ ನಡೆದ ಅನಂತರ ಬಸವಣ್ಣನವರು ಹುಟ್ಟಿದೂರನ್ನು ಬಿಟ್ಟು ಸಂಗಮ ಕ್ಷೇತ್ರಕ್ಕೆ ಹೋದರು. ಈ ಸಂದರ್ಭದಲ್ಲಿ ಇವರ ಅಕ್ಕ ನಾಗಮ್ಮನೂ ಬಸವಣ್ಣನವರನ್ನು ಹಿಂಬಾಲಿಸಿದಳು. ಈ ವೇಳೆಗೆ ಆಕೆಗೆ ಮದುವೆಯಾಗಿದ್ದು, ಅವಳ ಪತಿ ಶಿವಸ್ವಾಮಿ ಬಹುಶಃ ಸಂಗಮದವನೇ ಆಗಿದ್ದಂತೆ ತೋರುತ್ತದೆ. ಆ ಕಾಲದಲ್ಲಿ ಸಂಗಮ ಕ್ಷೇತ್ರ ಪ್ರಸಿದ್ಧವಾಗಿತ್ತು. ಅದರ ಸ್ಥಾನ ಪತಿಗಳಾದ ಜಾತವೇದಮುನಿ ಅಥವಾ ಈಶಾನ್ಯ ಗುರುಗಳು ಸಂಗಮೇಶ್ವರ ಸ್ವಾಮಿಗಳೆಂದು ಪ್ರಸಿದ್ಧರಾಗಿದ್ದರು. ಅವರು ಬಸವಣ್ಣನವರ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟರು. ಬಸವಣ್ಣನವರು ಇಲ್ಲಿ ಸುಮಾರು ಹತ್ತು ಹನ್ನೆರಡು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿರಬೇಕು. ಕೃಷ್ಣಾ ಮಲಾಪಹಾರಿ ನದಿಗಳ ಸಂಗಮದ ಆ ಸುಂದರ ಪರಿಸರದಲ್ಲಿ ಇವರ ಹೃದಯದ ಭಾವನೆಗಳಿಗೆ ಅನುಭವದ ಶ್ರೀಮಂತಿಕೆ ದೊರೆಯಿತು. ಸಂಗಮೇಶ್ವರ ಗುರುಗಳು ಇವರ ವೈಚಾರಿಕ ಬೆಳವಣಿಗೆಗೆ ನೀರು ಗೊಬ್ಬರ ಹಾಕಿ ಅದು ತಿರುಗಬೇಕಾದ ದಿಕ್ಕನ್ನು ನಿರ್ದೇಶಿಸಿದರು. ಮಂಗಳವಾಡದಲ್ಲಿ ಕಳಚುರಿ ಬಿಜ್ಜಳನ ಬಳಿಯಲ್ಲಿ ಭಂಡಾರಿಯಾಗಿದ್ದ ಇವರ ಸೋದರಮಾವ ಬಲದೇವ ತನ್ನ ಒಬ್ಬಳೇ ಮಗಳು ಗಂಗಾಂಬಿಕೆಯನ್ನು ಬಸವಣ್ಣನವರಿಗೆ ಮದುವೆ ಮಾಡಿಕೊಡಲು ಪ್ರಯತ್ನಿಸಿದುದು ಇವರ ಜೀವನದಲ್ಲೊಂದು ತಿರುಗು ಘಟ್ಟವಾಯಿತೆನ್ನಬಹುದು; ಬಹುಶಃ ಗುರುಗಳೇ ಇವರನ್ನು ಮದುವೆಗೆ ಒಪ್ಪಿಸಿ ಸಂಗಮದಿಂದ ಮಂಗಳವಾಡಕ್ಕೆ ಕಳಿಸಲು ಕಾರಣರಾಗಿರಬೇಕು. ಬಸವಣ್ಣನವರ ಜೊತೆ ಶಿವಸ್ವಾಮಿ ನಾಗಮ್ಮರೂ ಹೊರಟು ಬಂದಂತೆ ತೋರುತ್ತದೆ. ಆ ವೇಳೆಗಾಗಲೇ ಅವರಿಗೆ ಚೆನ್ನಬಸವಣ್ಣನೆಂಬ ಮಗ ಹುಟ್ಟಿದ್ದು ಆತ ಹತ್ತುವರ್ಷದ ಬಾಲಕನಾಗಿದ್ದು ಆತನೂ ತನ್ನ ತಂದೆ ತಾಯಿಗಳ ಜೊತೆಗೆ ಬಸವಣ್ಣನವರನ್ನು ಹಿಂಬಾಲಿಸಿದಂತೆ ತೋರುತ್ತದೆ.

ಬಸವಣ್ಣನವರು ಮಂಗಳವಾಡಕ್ಕೆ ಬಂದಮೇಲೆ, ಗಂಗಾಂಬಿಕೆಯ ಜೊತೆಗೆ ನೀಲಾಂಬಿಕೆಯನ್ನೂ ಮದುವೆಯಾದರು. ಅಲ್ಲದೆ ನೀಲಾಂಬಿಕೆ ಬಹುಶಃ ಸಿದ್ಧರಸನ ಮಗಳಾಗಿದ್ದು ಚಿಕ್ಕಂದಿನಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡು ಬಿಜ್ಜಳನ ಆಶ್ರಯದಲ್ಲಿ ಬೆಳೆದು ಆತನ ಸಾಕುತಂಗಿಯಾಗಿದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗಂಗಾಂಬಿಕೆ

ನೀಲಾಂಬಿಕೆಯರು ಅಗಲಲಾರದ ಆತ್ಮೀಯ ಗೆಳತಿಯರಾಗಿ ಬೆಳೆದಿದ್ದಿರಬೇಕು. ಬಸವಣ್ಣನವರು ಬಹುಶಃ ಆ ಕಾರಣಕ್ಕಾಗಿಯೇ ನೀಲಾಂಬಿಕೆಯನ್ನು ಮದುವೆಯಾಗಬೇಕಾಗಿ ಬಂದಿರಬೇಕು: ಆದರೆ ಸ್ಪಷ್ಟ ಕಾರಣ ತಿಳಿಯದು.

ಬಿಜ್ಜಳನ ಭಂಡಾರದಲ್ಲಿ ಬಸವಣ್ಣನವರಿಗೆ ಒಂದು ಕೆಲಸವೂ ದೊರೆಯಿತು. ದುಡಿಯದೆ ತಿನ್ನುವ ಹಕ್ಕಿಲ್ಲವೆಂಬುದನ್ನು ನಿಶ್ಚಿತವಾಗಿ ನಂಬಿದ್ದ ಇವರು ರಾಜಾಸ್ಥಾನದಲ್ಲಿ ಕೆಲಸವನ್ನು ಒಪ್ಪಿಕೊಳ್ಳಲು ಹಿಂದೆ ಮುಂದೆ ನೋಡಲಿಲ್ಲ. ಮುಂದೆ ಸ್ವಲ್ಪಕಾಲದಲ್ಲಿಯೇ ಬಲದೇವ ದೈವಾಧೀನನಾಗಲು ಆತನ ಸ್ಥಾನಕ್ಕೆ ಬಸವಣ್ಣನವರನ್ನೇ ರಾಜ್ಯದ ಭಂಡಾರಿಯನ್ನಾಗಿ ಬಿಜ್ಜಳ ನೇಮಿಸಿದ. ಹೀಗೆ ರಾಜ್ಯದ ಭಂಡಾರಿಯಾದುದರ ಜೊತೆಗೆ ಇವರ ಅಂತರಂಗದ ಸಾಧನೆಯೂ ಬೆಳೆಯುತ್ತಾ ಭಕ್ತಿಭಂಡಾರಿಯೂ ಆಗಿ ಪರಿಣಮಿಸಿದರು ಮತ್ತು ತಮ್ಮ ಆಧ್ಯಾತ್ಮಿಕ ದೃಷ್ಟಿಯ ಕ್ರಾಂತಿಕಾರಕ ಭಾವನೆಗಳನ್ನು ಸಮಾಜದ ಮೇಲೂ ಬೀರತೊಡಗಿದರು. ವ್ಯಕ್ತಿಯ ಯೋಗ್ಯತೆಯನ್ನು ಹುಟ್ಟಿನಿಂದಲೇ ಅಳೆಯುವುದನ್ನು ತೊಡೆದುಹಾಕಿ ಗುಣದಿಂದ ಯೋಗ್ಯತೆಯನ್ನು ನಿರ್ಧರಿಸಬೇಕೆಂದು ಸಾರಿದರು:

> ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
> ಹಾಸನಿಕ್ಕಿ ಸಾಲಿಗನಾದ; ವೇದವನೋದಿ
> ಹಾರುವನಾದ, ಕರ್ಣದಲ್ಲಿ ಜನಿಸಿದವರುಂಟೆ
> ಜಗದೊಳಗೆ? ಇದು ಕಾರಣ ಕೂಡಲ ಸಂಗಮ ದೇವ
> ಲಿಂಗಸ್ಥಲವನರಿದವನೆ ಕುಲಜನು!

– ಎಂದು ಹೇಳುವ ಮೂಲಕ ಬಸವಣ್ಣನವರು ವೃತ್ತಿಯಿಂದ ಜಾತಿ ಬಂದುದೇ ಹೊರತು ಶ್ರೇಷ್ಠತೆಯಿಂದಲ್ಲ ಎಂದು ಸ್ಪಷ್ಟಪಡಿಸಿದರು.

ಈ ವೇಳೆಗೆ, ಬಹುಶಃ ಬಸವಣ್ಣನವರು ಮಂಗಳವಾಡಕ್ಕೆ ಬಂದ ಒಂದೆರಡು ವರ್ಷಗಳಲ್ಲಿಯೇ, ಅಂದಿನ ರಾಜಕೀಯ ಬದಲಾವಣೆ ತಲೆದೋರಿತು. ಮೂರನೆಯ ಸೋಮೇಶ್ವರನ ಕಾಲಾನಂತರ ಚಾಳುಕ್ಯರು ದುರ್ಬಲರಾದರು. ಅವರ ಸಾಮಂತನಾಗಿದ್ದ ಬಿಜ್ಜಳ, ಚಾಳುಕ್ಯ ಚಕ್ರವರ್ತಿ ಮೂರನೆಯ ತೈಲಪನನ್ನು ತಳ್ಳಿ ತಾನೇ ಸಿಂಹಾಸನವನ್ನೇರಿದ. ಅನಂತರ ಆತ ಮಂಗಳವಾಡದಿಂದ ಕಲ್ಯಾಣಕ್ಕೆ ಬರಬೇಕಾಯಿತು. ತನ್ನ ವಿಶ್ವಾಸದಿಂದ ಬಂಧಿಸಿ ಬಸವಣ್ಣನವರನ್ನೂ ಕಲ್ಯಾಣಕ್ಕೆ ಬರುವಂತೆ ಮಾಡಿ ಇಡೀ ರಾಜ್ಯದ ಮಹಾಭಂಡಾರಿಯನ್ನಾಗಿ ಇವರನ್ನು ನೇಮಿಸಿದ. ಇದರಿಂದ ಬಸವಣ್ಣನವರ ಅಧಿಕಾರ ಕ್ಷೇತ್ರ ಹಾಗು ಧಾರ್ಮಿಕ ಕ್ಷೇತ್ರ ವ್ಯಾಪಕವಾದುವು.

ಸುಮಾರು 12 ವರ್ಷಗಳ ಕಾಲ ಕಲ್ಯಾಣ ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಈ ಅಲ್ಪಾವಧಿಯಲ್ಲಿ ಇವರು ಸಾಧಿಸಿದ ಪರಿಣಾಮ, ಜನಜೀವನದ ಮೇಲೆ ಬೀರಿದ ಪ್ರಭಾವ ಅದ್ವಿತೀಯವಾದುದು. ಬಹುಶಃ ಬುದ್ಧನ ತರುವಾಯ ಹಿಂದಾವ ಧಾರ್ಮಿಕ ಪುರುಷರೂ ಪ್ರವಾದಿಗಳೂ ಸಮಾಜವನ್ನು ಇಷ್ಟೊಂದು ಮೂಲಭೂತವಾಗಿ ಪ್ರಶ್ನಿಸಿ ಪರಿವರ್ತನೆಯನ್ನುಂಟು ಮಾಡಿರಲಿಲ್ಲ. ಬಸವಣ್ಣನವರು ಇಡೀ ಯುಗವನ್ನು ಎಚ್ಚರಿಸಿದ ಯುಗಪ್ರವರ್ತಕ ಶಕ್ತಿಯಾಗಿ ಪರಿಣಮಿಸಿದರು. ಧರ್ಮ ಸಾರ್ವತ್ರಿಕಶಕ್ತಿಯಾಗಿ ಸಮಷ್ಟಿ ಮನಸ್ಸನ್ನು ಮುಟ್ಟಿತು. ಆ ಯುಗದ ಮಹಾವ್ಯಕ್ತಿಗಳೆಲ್ಲರನ್ನೂ ಬಸವಣ್ಣನವರ ವ್ಯಕ್ತಿತ್ವ ಕಲ್ಯಾಣದತ್ತ ಆಕರ್ಷಿಸಿತು; ಚುಂಬಕಗಾಳಿಯಂತೆ ಅಸಂಖ್ಯಾತ ಸಾಧಕರನ್ನೂ ಶರಣರನ್ನೂ ಸೆಳೆಯಿತು. ಅವರೆಲ್ಲರನ್ನೂ ಅನುಭವ ಮಂಟಪದಲ್ಲಿ ಸಮಾವೇಶಗೊಳಿಸಿ ಅವರ ವಿಚಾರಮಂಥನದಿಂದ ಬಸವಣ್ಣನವರು ಧರ್ಮದ ನವನೀತವನ್ನೂ ತೆಗೆದರು. ಅಲ್ಲಮ ಪ್ರಭುವಿನಂಥ ಮಹಾಮೇರು ಸದೃಶ ವ್ಯಕ್ತಿಗಳೂ ಬಸವಣ್ಣನವರ ವ್ಯಕ್ತಿತ್ವಕ್ಕೆ ಮಾರುಹೋಗಿ ಕಲ್ಯಾಣದಲ್ಲಿ ಕೆಲವು ಕಾಲ ಅನುಭವ ಮಂಟಪವನ್ನು ನಿರ್ದೇಶಿಸಿದರು.

ಹೀಗಿರುವಲ್ಲಿ ಬಸವಣ್ಣನವರ ಕ್ರಾಂತಿಕಾರಕ ಭಾವನೆಗಳು ವೈದಿಕ ಪರಂಪರೆಯನ್ನು ಕೆರಳಿಸಿದುವು. ಇವರನ್ನು ಪದಚ್ಯುತಗೊಳಿಸಲು ಆಗದವರು ಹವಣಿಸಿದರು. ಬಸವಣ್ಣನವರು ರಾಜ್ಯ ಭಂಡಾರದ ಹಣವನ್ನು ದುರ್ವಿನಿಯೋಗ ಮಾಡಿ ದಾಸೋಹ ನಡೆಸುತ್ತಿರುವರೆಂದು ಬಿಜ್ಜಳನ ಬಳಿಯಲ್ಲಿ ದೂರಿದರು. ಇನ್ನೂ ಇತರ ಅನೇಕ ಆರೋಪಗಳನ್ನೂ ಇವರ ಮೇಲೆ ಹೇರಿದರು; ಅವೆಲ್ಲಾ ವ್ಯರ್ಥವಾದುವು. ಆದರೆ ಬಸವಣ್ಣನವರು ಅಸ್ಪೃಶ್ಯರ ಹರಳಯ್ಯನ ಮಗನಿಗೂ ಬ್ರಾಹ್ಮಣರ ಮಧುವರಸನ (ಮಧುವಯ್ಯ) ಮಗಳಿಗೂ ವಿವಾಹವನ್ನು ಮಾಡಿದಾಗ ಅದನ್ನು ಅಂದಿನ ಸಮಾಜ ಅರಗಿಸಿಕೊಳ್ಳಲಾರದೆ ಹೋಯಿತು. ವರ್ಣಸಂಕರವಾಯಿತೆಂದು ಹುಯಿಲೆಬ್ಬಿಸಿದರು. ಇದರೊಡನೆ ರಾಜಕೀಯ ಪಿತೂರಿಯೂ ಸೇರಿ ಹರಳಯ್ಯ ಮಧುವರಸರಿಗೆ ಬಿಜ್ಜಳ ಮರಣದಂಡನೆ ವಿಧಿಸುವಂತಾಯಿತು. ಅದಾದ ಸ್ವಲ್ಪ ಕಾಲದಲ್ಲೇ ಬಿಜ್ಜಳನ ಕೊಲೆಯೂ ಆಯಿತು. ಆ ಅಪರಾಧವನ್ನು ಶರಣರ ತಲೆಯಮೇಲೆ ಹಾಕುವ ಕುಟಿಲ ರಾಜಕೀಯವೂ ನಡೆಯಿತು. ಇದರಿಂದಾಗಿ ಕಲ್ಯಾಣದಲ್ಲಿ ಬಸವಣ್ಣನವರ ಕಾರ್ಯಚಟುವಟಿಕೆಗೆ ಧಕ್ಕೆಯಾಯಿತು. ಬೇಸರಗೊಂಡು ಮೊದಲೇ ಕಲ್ಯಾಣವನ್ನು ಬಿಟ್ಟು ಕೂಡಲ ಸಂಗಮ ಕ್ಷೇತ್ರಕ್ಕೆ ಹೋಗಿದ್ದ ಬಸವಣ್ಣನವರು ಅಲ್ಲೇ ಐಕ್ಯರಾದರು. ಈ ಘಟನೆ 1167–68ರಲ್ಲಿ ಸಂಭವಿಸಿರಬೇಕೆಂದು ವಿದ್ವಾಂಸರು ನಿರ್ಧರಿಸಿದ್ದಾರೆ.

ಇದು ಒಂದು ರೀತಿಯಲ್ಲಿ ಬಸವಣ್ಣನವರ ಜೀವನ ಕಥೆಯ ರೂಪರೇಷೆ. ಲೌಕಿಕದ ಅಧಿಕಾರದಲ್ಲಿದ್ದೂ ಆಂತರಿಕವಾಗಿ ಮಹಾನುಭಾವಿಯಾದುದು ಇವರ ಅಂತರಂಗದ ಕಥೆ. ಇವರ ವಚನಗಳಲ್ಲಿ ಅದರ ಉಜ್ಜ್ವಲವಾದ ಚಿತ್ರಣ ಮೂಡಿ ಬಂದಿದೆ. ತ್ರಿವಿಧ ದಾಸೋಹದಿಂದ ಷಟ್ಸ್ಥಲದ ನಿಚ್ಚಣಿಕೆಯನ್ನೇರಿ ಲಿಂಗಾಂಗ ಸಾಮರಸ್ಯದ ನಿಲವಿಗೇರಿದುದನ್ನು ಅಲ್ಲಿ ಕಾಣಬಹುದು. ಅಂತೆಯೇ ಸಾಮಾಜಿಕ ಮತ್ತು ಧಾರ್ಮಿಕವಾದ ಇವರ ವಿಚಾರಧಾರೆಗಳು ಕಾಲದೇಶಗಳ ಹಂಗನ್ನು ಹರಿದು ಎಲ್ಲ ದೇಶಕಾಲಗಳಿಗೂ ಮಾನ್ಯವಾಗಿ ನಿಲ್ಲಬಲ್ಲ ಸಾರ್ವತ್ರಿಕತೆಯನ್ನು ಜೀವಂತಿಕೆಯನ್ನೂ ಪಡೆದಿವೆ. **(ಎಚ್.ಟಿ.ಎಸ್.)**

ಬಸವಣ್ಣನವರು ಕವಿಹೃದಯವುಳ್ಳ ವಚನಕಾರರು. ಇವರ ವಚನಗಳಲ್ಲಿ ಭಾವಗೀತೆಯ ತೀವ್ರತೆ ಹಾಗೂ ಮಧುರತೆಗಳು ಕಂಡುಬರುತ್ತವೆ. ಇದುವರೆಗೆ ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಇವರ ವಚನಗಳು ದೊರೆತಿವೆ. ಕೂಡಲ ಸಂಗಮದೇವ ಎಂಬುದು ಇವರ ವಚನಗಳ ಅಂಕಿತ. ಈ ವಚನಗಳು ಬಸವಣ್ಣನವರ ಸಾಮಾಜಿಕ ಹಾಗೂ ಧಾರ್ಮಿಕ ಜೀವನದ ಬಹುಮುಖ ಅನುಭವಗಳ ಮೇಲೆ ಬೆಳಕು ಚೆಲ್ಲುತ್ತವೆಯಲ್ಲದೆ ಇವರ ಜೀವನದೃಷ್ಟಿಯನ್ನೂ ಪ್ರತಿಪಾದಿಸುತ್ತವೆ. ಬಸವಣ್ಣನವರ ಮೂಲ ಉದ್ದೇಶ ಸಾಹಿತ್ಯರಚನೆಯಲ್ಲದಿದ್ದರೂ ಇವರ ವಚನಗಳು ಉತ್ತಮ ಕಾವ್ಯದ ಎಲ್ಲ ಅಂಶಗಳನ್ನೂ ಒಳಗೊಂಡಿವೆ. ತಾವು ಹೇಳಬೇಕೆಂದು ಯೋಚಿಸಿದ ವಿಷಯವನ್ನು ಸರಳಭಾಷೆಯಲ್ಲಿ ನೇರವಾಗಿ, ಸಮಯೋಚಿತ ದೃಷ್ಟಾಂತ ಹೋಲಿಕೆಗಳೊಂದಿಗೆ ಮನಮುಟ್ಟುವಂತೆ ಹೇಳುವುದು ಇವರ ವಚನಗಳ ವೈಶಿಷ್ಟ್ಯ. ಇವರ ಯಾವ ವಚನದಲ್ಲೂ ಭಾಷೆಯ ಆಡಂಬರ ಅಬ್ಬರವಾಗಲೀ ಭಾವದ ಕ್ಲಿಷ್ಟ ಹಾಗೂ ಸಂದಿಗ್ಧ ಅಭಿವ್ಯಕ್ತಿಯಾಗಲೀ ಕಂಡು ಬರುವುದಿಲ್ಲ. ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು ಎಂಬ ಬಸವಣ್ಣನವರ ಮಾತುಗಳೇ ಅವರ ವಚನಗಳಿಗೆ ಸಂಪೂರ್ಣವಾಗಿ ಅನ್ವಯವಾಗುತ್ತವೆ. ಬಸವಣ್ಣನವರ ವಚನಗಳಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಸಮಸ್ಯೆಯ ಸುಳಿಗೆ ಸಿಕ್ಕ ಸಾಧಕನೊಬ್ಬನ ಮನಸ್ಸಿನ ತೊಳಲಾಟವನ್ನೂ ಒಳತೋಟಿಯನ್ನೂ ಅಂತರಂಗದ ತಳಮಳವನ್ನೂ

ಚಂಚಲ ಸ್ವರೂಪವನ್ನೂ ಪರಿಣಾಮಕಾರಿಯಾಗಿ ಚಿತ್ರಿಸಿರುವ ರೀತಿ. ಇವರ ಸ್ವವಿಮರ್ಶೆಯ ವಚನಗಳಲ್ಲಿ ಈ ಅಂಶ ಘನೀಭೂತವಾಗಿದೆ. ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ; ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆನ್ನ ಬಾಳುವೆ; ವಿಷಯವೆಂಬ ಹಸುರನೆನ್ನ ಮುಂದೆ ಪಸರಿಸದಿರಯ್ಯಾ: ಓತಿ ಬೇಲಿ ಏರಿದಂತೆ ಎನ್ನ ಮನವಯ್ಯಾ– ಈ ಮುಂತಾದ ವಚನಗಳು ಶುದ್ಧ ಭಾವಗೀತೆಯ ಸತ್ತ್ವವನ್ನು ಒಳಗೊಂಡಿವೆ. *

ಇಹಲೋಕದ ಜೀವನವನ್ನು ಸಾಧನೆಯ ಮಾರ್ಗಕ್ಕೆ ಅಳವಡಿಸಿಕೊಳ್ಳುವುದೇ ಬಸವಣ್ಣನವರು ಬೋಧಿಸಿದ ಮುಖ್ಯ ತತ್ತ್ವ. ಅದಕ್ಕೆ ಜಾತಿ, ಮತ, ಉದ್ಯೋಗ, ವಯಸ್ಸು ಯಾವುದೂ ಅಡ್ಡಿಯಾಗಲಾರದು. ಅಂಥ ನೈತಿಕ ಜೀವನವನ್ನೂ ಸಾಮಾಜಿಕ ಸಮತೆಯನ್ನೂ ಸಾಧಿಸುವ ಸಾಹಸ ಇವರದು. ಕೊಲ್ಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ, ಕುಲವೇನೋ ಅವಂದಿರ ಕುಲವೇನೋ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೆಲ್ಲಾ ಕುಲಜರು– ಎಂದು ಹೇಳಿದುದು ಮಾತ್ರವಲ್ಲ ಅದನ್ನು ಆಚರಣೆಗೂ ತಂದರು. ಹರಳಯ್ಯ, ಮಧುವಯ್ಯ, ಡೋಹರ ಕಕ್ಕಯ್ಯ, ಶಿವನಾಗಮ್ಮಯ್ಯ ಮೊದಲಾದ ಅಸ್ಪೃಶ್ಯರು ಬಸವ ತತ್ತ್ವದ ಆಶ್ರಯವನ್ನು ಪಡೆದು ಶರಣರಾದರು, ಅನುಭಾವಿಗಳಾದರು, ವಚನಕಾರರಾದರು, ಬಸವಣ್ಣನವರ ಮಹದಾಶೆಯ ಸಾಕಾರಮೂರ್ತಿಗಳಾದರು.

ಬಸವಣ್ಣನವರ ಕಾಯಕದ ಕಲ್ಪನೆ ಸಮಗ್ರ ಜೀವನದರ್ಶನವನ್ನು ಒಳಗೊಳ್ಳುತ್ತದೆ. ವ್ಯಕ್ತಿ ಕೈಕೊಂಡ ಉದ್ಯೋಗ ಸಮಾಜದ ಆವಶ್ಯಕತೆಗಳನ್ನು ಪೂರೈಸುವಂತಿರಬೇಕು. ಅದರ ಫಲ ತನಗೆ ಮಾತ್ರವೇ ಅಲ್ಲದೆ ಸಮಾಜಕ್ಕೂ ದೊರೆಯಬೇಕು. ಆಗ ಸ್ವಾರ್ಥ ಅಳಿದು ವಿಶ್ವಶಕ್ತಿ ಅಂತರಂಗದೊಳಗೆ ಇಳಿದುಬರಲು ಸಹಾಯಕವಾಗುತ್ತದೆ. ಈ ಕಾಯಕದಲ್ಲಿ ಮೇಲು ಕೀಳುಗಳಿಲ್ಲ. ಪ್ರತಿಯೊಬ್ಬರು ತಮ್ಮ ತಮ್ಮ ಉದ್ಯೋಗಗಳನ್ನೂ ಮಾಡಲೇಬೇಕು. ಅಲ್ಲದೆ ಈ ಕಾಯಕತತ್ತ್ವದ ಇನ್ನೊಂದು ಮುಖ್ಯವಾದ ಅಂಶವೆಂದರೆ ಅಂದಂದಿನ ಕಾಯಕ ಅಂದಂದು ಮಾಡಿ ಶುದ್ಧರಾಗಬೇಕು. ಅಂದರೆ ತನಗೆ ಅಗತ್ಯವಾದುದಕ್ಕಿಂತ ಹೆಚ್ಚಾಗಿ ಶೇಖರಿಸಿಟ್ಟುಕೊಳ್ಳಬಾರದು. ಇದು ಧಾರ್ಮಿಕ ಸಮತೆಗೂ ತಳಹದಿಯಾಗಿ ಸ್ತ್ರೀಪುರುಷರೆಂಬ ಭೇದವನ್ನೂ ಅಳಿಸಿಹಾಕಿತು. ಅಕ್ಕಮಹಾದೇವಿ, ಮಹಾದೇವಮ್ಮ, ಲಕ್ಕಮ್ಮ, ಲಿಂಗಮ್ಮ, ಗಂಗಾಂಬಿಕೆ, ನೀಲಾಂಬಿಕೆ ಈ ಮೊದಲಾದ ಅನೇಕ ಶರಣೆಯರು ಇದಕ್ಕೆ ಉಜ್ಜ್ವಲ ಸಾಕ್ಷಿಯಾಗಿದ್ದಾರೆ.

ಬಸವಣ್ಣನವರ ಧಾರ್ಮಿಕ ಆಚರಣೆಯ ಇನ್ನೊಂದು ಮುಖ್ಯವಾದ ಅಂಶವೆಂದರೆ ಅವರವರ ಪೂಜೆಯನ್ನು ಅವರೇ ಮಾಡಬೇಕು; ಅವರ ಉದ್ಧಾರವನ್ನು ಅವರೇ ಕಂಡುಕೊಳ್ಳಬೇಕು ಎಂಬುದು. ತನ್ನ ಪರವಾಗಿ ಇನ್ನಾರೋ ಪೂಜೆಯನ್ನು ಮಾಡುವುದು ಧಾರ್ಮಿಕ ಶೋಷಣೆಗೆ ಕಾರಣವಾಗುತ್ತದೆ. ತಾನುಂಬ ಊಟವನ್ನು, ತನ್ನಾಶ್ರಯದ ರತಿಸುಖವನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ? ಎಂಬ ಸಾದೃಶ್ಯದಿಂದ ಬಸವಣ್ಣನವರು ಕಟುವಾಗಿ ಅದನ್ನು ನಿರಾಕರಿಸಿದ್ದಾರೆ. ಹಾಗೆಯೇ ಪ್ರಾಣಿವಧೆಗೆ ಕಾರಣವಾದ ಯಜ್ಞ ಯಾಗಾದಿಗಳನ್ನೂ ಕರ್ಮವಾದವನ್ನೂ ಅಂಧಶ್ರದ್ಧೆಯನ್ನೂ ಖಂಡಿಸಿದ್ದಾರೆ.

ಇವರ ಕೆಲವು ವಚನಗಳಲ್ಲಿ ಸಾಮಾಜಿಕ ವಿಡಂಬನೆ ಮೊನಚಾಗಿ ಬಂದಿದೆ. ಶ್ರೀಮಂತಿಕೆಯ ಮದವೇರಿದ ಲೋಲುಪರನ್ನು ಕುರಿತು ಹೇಳಿರುವ ಒಂದು ವಚನ ಹೀಗಿದೆ:

ಹಾವು ತಿಂದವರ ನುಡಿಸಬಹುದು
ಗರಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರು ಕೂಡಲ ಸಂಗಮದೇವ

ನೂರೆಂಟು ದೇವರುಗಳನ್ನು ಪೂಜಿಸುವ ಅವಿವೇಕಿಗಳನ್ನು ಕುರಿತು ಹೇಳಿರುವ ಒಂದು ವಚನ ಹೀಗಿದೆ:

ಮಡಕೆ ದೈವ ಮೊರ ದೈವ ಬೀದಿಯ ಕಲ್ಲು ದೈವ
ಹಣಿಗೆ ದೈವ ಬಿಲ್ಲನಾರಿ ದೈವ ಕಾಣಿರೋ
ಕೊಳಗ ದೈವ ಗಿಣ್ಣಿಲು ದೈವ ಕಾಣಿರೋ
ದೈವದೈವವೆಂದು ಕಾಲಿಡಲಿಂಬಿಲ್ಲಾ
ದೈವನೊಬ್ಬನೆ ಕೂಡಲ ಸಂಗಮದೇವ

ಒಟ್ಟಿನಲ್ಲಿ ಹೇಳುವುದಾದರೆ ಬಸವಣ್ಣನವರ ವೈಚಾರಿಕ ದೃಷ್ಟಿ ಬೌದ್ಧಿಕ ವಿಕಾಸಕ್ಕೆ, ಧಾರ್ಮಿಕ ಸ್ವಾತಂತ್ರ್ಯಕ್ಕೆ, ಆಧ್ಯಾತ್ಮಿಕ ಪ್ರಗತಿಗೆ ತಳಹದಿಯಾಗಿದೆ. ಕನ್ನಡ ಭಾಷೆ ಒಂದು ಅಪೂರ್ವವಾದ ಶಕ್ತಿಯನ್ನು ಶ್ರೀಮಂತಿಕೆಯನ್ನು ಇವರ ವಚನಗಳಿಂದ ಪಡೆಯಿತು. ಇವರ ಮಾತು ಮಾಣಿಕ್ಯದ ದೀಪ್ತಿಯಾಯಿತು, ನುಡಿದುದೆಲ್ಲಾ ಧರ್ಮವಾಯಿತು. ಇವರ ವ್ಯಕ್ತಿತ್ವ ಕಾಲದೇಶಗಳ ಪರಿಮಿತಿಯನ್ನು ಮೀರಿ ಮಾನವ ಜನಾಂಗ ಬೆಳೆದಂತೆ ತಾನೂ ಬೆಳೆಯುವ ಯುಗಪ್ರವರ್ತಕ ಶಕ್ತಿಯಾಗಿ ಪರಿಣಮಿಸಿದೆ. **(*;ಎಚ್.ಟಿ.ಎಸ್.)**

**ಬಸವನಬಾಗೇವಾಡಿ:** ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ಮುದ್ದೇಬಿಹಾಳ, ಉತ್ತರದಲ್ಲಿ ಬಿಜಾಪುರ ಮತ್ತು ಸಿಂದಗಿ ದಕ್ಷಿಣದಲ್ಲಿ ಬಾಗಲಕೋಟೆ, ಪಶ್ಚಿಮದಲ್ಲಿ ಬಿಜಾಪುರ ತಾಲ್ಲೂಕುಗಳು ಸುತ್ತುವರೆದಿವೆ. ಕೊಲ್ಹಾರ, ಬಸವನಬಾಗೇವಾಡಿ, ಹೂವಿನ ಹಿಪ್ಪರಗಿ ಹೋಬಳಿಗಳು. 120 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,978 ಚ.ಕಿಮೀ. ಜನಸಂಖ್ಯೆ 3,03,290. ತಾಲ್ಲೂಕಿನ ಬಹುಭಾಗ ಕೃಷ್ಣಾನದಿ ಕೊಳ್ಳದ ಪ್ರದೇಶದಲ್ಲಿ ಬರುತ್ತದೆ. ತಾಲ್ಲೂಕಿನದು ಸಾಮಾನ್ಯವಾಗಿ ಒಣಹವೆ, ಮಳೆ ಬಲುಕಡಿಮೆ ಹಾಗೂ ಅನಿಶ್ಚಿತ. ಆದ್ದರಿಂದ ತಾಲ್ಲೂಕಿನಲ್ಲಿ ಆಗಾಗ ಬರಗಾಲಕಾಣಿಸಿಕೊಳ್ಳುತ್ತದೆ. ತಾಲ್ಲೂಕಿನ ಸರಾಸರಿ ಮಳೆ 584 ಮಿಮೀ. ತಾಲ್ಲೂಕಿನ ಒಟ್ಟು ಭೌಗೋಲಿಕ ಕ್ಷೇತ್ರ 1,97,520.72 ಹೆ. ವ್ಯವಸಾಯಕ್ಕೆ ಯೋಗ್ಯವಾದ ಭೂಮಿ 1,78,047.37 ಹೆ. ಅರಣ್ಯಪ್ರದೇಶ 1143.68 ಹೆ. ಜೋಳ ಮತ್ತು ಸಜ್ಜೆ ಇಲ್ಲಿನ ಮುಖ್ಯ ಬೆಳೆಗಳು. ಗೋದಿ, ಮೆಕ್ಕೆಜೋಳ, ಕಡಲೆ, ತೊಗರಿ, ಎಳ್ಳು ಮುಂತಾದ ಎಣ್ಣೆ ಕಾಳುಗಳು ಇತರ ಬೆಳೆಗಳು. ಬೆಳ್ಳುಳ್ಳಿ ಬೆಳೆಯಲ್ಲಿ ಬಿಜಾಪುರ ಜಿಲ್ಲೆಯ ನಾಲ್ಕನೆಯ ಮೂರು ಭಾಗದಷ್ಟು ಉತ್ಪನ್ನ ಈ ತಾಲ್ಲೂಕಿನ ಕೊಡುಗೆ. ಇಲ್ಲಿನ ಸಾಗುವಳಿ ಪ್ರದೇಶದಲ್ಲಿ 71447.76 ಹೆ. ನೀರಾವರಿಗೆ ಒಳಪಟ್ಟಿದೆ. ಆಸಂಗಿ, ಅರೆಶಂಕರ, ಸುಲಖೇಡ ಮುಂತಾದ ಕಡೆಗಳಲ್ಲಿರುವ ಕೆರೆಗಳು ನೀರು ಒದಗಿಸುತ್ತವೆ. ಇಲ್ಲಿ ಎಮ್ಮೆ, ಕುರಿ, ಆಡುಗಳು ಅಧಿಕವಾಗಿ ಕಂಡುಬರುತ್ತವೆ.

ಸೊಲ್ಲಾಪುರ–ಬಿಜಾಪುರ –ರಾಯಚುರು ರಾಷ್ಟ್ರೀಯ ಹೆದ್ದಾರಿ ಹಾಗೂ ಸೊಲ್ಲಾಪುರ–ಹುಬ್ಬಳ್ಳಿ ರೈಲ್ವೆಮಾರ್ಗ– ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತವೆ. ನಿಡಗುಂದಿ, ವಂದಾಲ, ಕೂಡಗಿ, ಮುಳವಾಡ ಎಂಬ ಸ್ಥಳಗಳಲ್ಲಿ ರೈಲ್ವೆನಿಲ್ದಾಣಗಳಿವೆ. ತಾಲ್ಲೂಕಿನಲ್ಲಿ 43ಕಿಮೀ ರೈಲ್ವೆಮಾರ್ಗವಿದೆ. ಆಲಮಟ್ಟಿ, ಚಿಮ್ಮಲಗಿ, ನಿಡಗುಂದಿ, ಹೆಬ್ಬಾಳ,

ಇಂಗಳೇಶ್ವರ–ಇವು ತಾಲ್ಲೂಕಿನ ಮುಖ್ಯಸ್ಥಳಗಳು. ಆಲಮಟ್ಟಿಯಲ್ಲಿ **(ನೋಡಿ)** ಕೃಷ್ಣಾ ನದಿಗೆ ಬೃಹತ್ ಕಟ್ಟೆಯನ್ನು ಕಟ್ಟಲಾಗಿದೆ. ತಾಲ್ಲೂಕಿನ ಸಾಕ್ಷರತಾ ಪ್ರಮಾಣ ಸೇಕಡ 54.86. ಚಿಮ್ಮಲಗಿ ಒಂದು ಪ್ರಸಿದ್ಧ ತೀರ್ಥಕ್ಷೇತ್ರ. ಇಲ್ಲಿ ಕೃಷ್ಣಾ ಮತ್ತು ಘಟಪ್ರಭಾ ನದಿಗಳು ಸಂಗಮಿಸುತ್ತವೆ. ಚಿನ್ಮಯಕ್ಷೇತ್ರ ಎಂಬುದು ಈ ಊರಿಗೆ ಹಿಂದೆ ಇದ್ದ ಹೆಸರು.ನಿಡಗುಂದಿ

ಬಸವೇಶ್ವರ ದೇವಾಲಯ, ಬಸವನ ಬಾಗೇವಾಡಿ

ಪ್ರಮುಖ ವ್ಯಾಪಾರ ಕೇಂದ್ರ. ಬಸವನಬಾಗೇವಾಡಿಗೆ 16ಕಿಮೀ ದೂರದಲ್ಲಿರುವ ಹೆಬ್ಬಾಳದಲ್ಲಿ ಚಾಳುಕ್ಯ ಮಾದರಿಯ ಒಂದು ಸುಂದರ ದೇವಾಲಯವಿದೆ. ಇಂಗಳೇಶ್ವರದಲ್ಲಿ **(ನೋಡಿ)** ಪ್ರಾಚೀನ ದೇವಾಲಯಗಳುಂಟು. **(ಬಿ)**

ಬಸವನಬಾಗೇವಾಡಿ ಈ ತಾಲ್ಲೂಕಿನ ಮುಖ್ಯಪಟ್ಟಣ ಹಾಗೂ ಆಡಳಿತ ಕೇಂದ್ರ. ಬಿಜಾಪುರದ ಆಗ್ನೇಯಕ್ಕೆ 43ಕಿಮೀ ದೂರದಲ್ಲಿ, ತೆಲಗಿ ರೈಲ್ವೆ ನಿಲ್ದಾಣದ ಈಶಾನ್ಯಕ್ಕೆ 16 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 28,582. ಇದು 12ನೆಯ ಶತಮಾನದಲ್ಲಿದ್ದ ಸಮಾಜಸುಧಾರಕ ಹಾಗೂ ಶ್ರೇಷ್ಠ ವಚನಕಾರ ಬಸವಣ್ಣನವರ ಜನ್ಮಸ್ಥಳ, ಪವಿತ್ರ ಯಾತ್ರಾಸ್ಥಳ. ಮೊದಲಿಗೆ ಈ ಊರಿಗೆ ನೀಲಗಿರಿಪಟ್ಟಣ ಎಂಬ ಹೆಸರಿತ್ತು. ಅನಂತರ ಇದು ಬಾಗೋಡಿಯಾಗಿ ಅನಂತರ ಬಾಗೇವಾಡಿಯಾಯಿತೆಂದು ಹೇಳಲಾಗಿದೆ. 1968ರಲ್ಲಿ ಬಸವಣ್ಣನವರ 8ನೆಯ ಶತಮಾನೋತ್ಸವ ಜರುಗಿದಂದಿನಿಂದ ಇದನ್ನು ಬಸವನಬಾಗೇವಾಡಿ ಎಂದು ಕರೆಯಲಾಗುತ್ತಿದೆ. ಇಲ್ಲಿ ಬಸವೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ಗಣಪತಿ, ಸಂಗಮೇಶ್ವರ, ಮಲ್ಲಿಕಾರ್ಜುನ ಮತ್ತು ಬಸವಣ್ಣ– ಈ ವಿಗ್ರಹಗಳಿರುವ ನಾಲ್ಕು ಗುಡಿಗಳಿವೆ. ರಾಮೇಶ್ವರ ಮತ್ತು ವಿಠೋಬ ಇಲ್ಲಿಯ ಇನ್ನೆರಡು ದೇವಾಲಯಗಳು. ರಾಮೇಶ್ವರದ ದೇವಾಲಯ ಹಳೆಯದು. ಇದು ಚಾಳುಕ್ಯ ಮಾದರಿಯದು. ವಿಠೋಬ ದೇವಾಲಯ ಇತ್ತೀಚಿನದು. ಈ ದೇವಾಲಯದಲ್ಲಿ ರಾಧಾ, ರುಕ್ಮಿಣಿ ಮತ್ತು ವಿಠೋಬನ ವಿಗ್ರಹಗಳಿವೆ. ಊರಿನಲ್ಲಿ ಬಸವಣ್ಣನ ಬಾವಿ, ಸಾರಂಗಬಾವಿ ಎಂಬ ಎರಡು ಬಾವಿಗಳುಂಟು.ಇಲ್ಲಿ ಪ್ರತಿ ಸೋಮವಾರ ಸಂತೆ ಜರುಗುತ್ತದೆ. *

**ಬಸವನಾಳ, ಶಿ.ಶಿ.**: 1893–1951. ವಿದ್ವಾಂಸರು, ಸಮಾಜ ಸೇವಕರು. ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ ಎಂಬುದು ಇವರ ಪೂರ್ಣ ಹೆಸರು. ಹುಟ್ಟಿದ್ದು ಧಾರವಾಡದಲ್ಲಿ. ಗದಗಿನಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದ ಇವರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಓದಿ 1915ರಲ್ಲಿ ಎಂ.ಎ. ಪದವಿ ಪಡೆದರು. ಅದಕ್ಕಾಗಿ ವಿಕ್ಟೋರಿಯ ಜೂಬಿಲಿ ನಿಧಿಯ ಪಾರಿತೋಷಕವೂ ಕರ್ನಾಟಕದಿಂದ ಹೆಚ್ಚು ಅಂಕಗಳಿಸಿದ್ದವರಾದುದರಿಂದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಪದಕವೂ ಇವರಿಗೆ ದೊರೆಯಿತು. ಪದವಿ ಪಡೆದ ಮೇಲೆ ಬಸವನಾಳರು ಸರ್ಕಾರಿ ಕೆಲಸಕ್ಕೆ ಹೋಗದೆ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ಆಜೀವ ಸದಸ್ಯರಾಗಿ ಅದರ ಅಭಿವೃದ್ಧಿಗೆ ಕಂಕಣ ಕಟ್ಟಿ ನಿಂತರು. ಕರ್ನಾಟಕ ಲಿಂಗಾಯತ ಎಜುಕೇಷನಲ್ ಸೊಸೈಟಿಯನ್ನು (ಕೆಎಲ್ಇ)ಸ್ಥಾಪಿಸಿ ಅದರ ಅಂಗವಾಗಿ ಧಾರವಾಡದಲ್ಲಿ ಆರ್.ಎಲ್.ಎಸ್. ಹೈಸ್ಕೂಲ್ (1922), ಸೊಲ್ಲಾಪುರದಲ್ಲಿ ಕಾಡಾದಿ ಹೈಸ್ಕೂಲ್ ಮತ್ತು ಬೆಳಗಾಂವಿಯಲ್ಲಿ ಜಿ.ಎ. ಹೈಸ್ಕೂಲ್ ಮತ್ತು ಲಿಂಗರಾಜ ಕಾಲೇಜುಗಳ ಸ್ಥಾಪನೆಗಾಗಿ ಶ್ರಮಿಸಿದರು. ಆರ್.ಎಲ್.ಎಸ್. ಹೈಸ್ಕೂಲಿನ ಮುಖ್ಯ ಅಧ್ಯಾಪಕರಾಗಿ, ಲಿಂಗರಾಜ ಕಾಲೇಜಿನ ಇತಿಹಾಸ ಮತ್ತು ಇಂಗ್ಲಿಷ್ ಬೋಧಕರಾಗಿ ಮತ್ತು ವೈಸ್–ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. ತಾವೇ ಸ್ಥಾಪಿಸಿದ್ದ ವೀರಶೈವ ತರುಣ ಸಂಘದ ಪ್ರಬೋಧ ಮಾಸಪತ್ರಿಕೆ ಮತ್ತು ವಾರಪತ್ರಿಕೆ ಗಳ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದರು.

ಕನ್ನಡ ಇಂಗ್ಲಿಷ್ ಮರಾಠಿ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದ ಬಸವನಾಳರು ಅನೇಕ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ನಾಗವರ್ಮನ ಕಾವ್ಯಾವಲೋಕನಂ, ನಿಜಗುಣ ಶಿವಯೋಗಿಯ ಕೈವಲ್ಯಪದ್ಧತಿ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಚಾಮರಸನ ಪ್ರಭುಲಿಂಗಲೀಲೆ, ಷಡಕ್ಷರಿಯ ಶಬರ ಶಂಕರ ವಿಲಾಸ, ಬಸವಣ್ಣನವರ ವಚನಗಳು– ಇವು ಇವರ ಸಂಪಾದಿತ ಗ್ರಂಥಗಳು. ಈ ಗ್ರಂಥಗಳಿಗೆ ಇವರು ಬರೆದಿರುವ ಉಪೋದ್ಘಾತಗಳಲ್ಲಿ ಇವರ ಅಭ್ಯಾಸದ ಆಳ, ವಿಮರ್ಶಾ ವಿಚಕ್ಷಣತೆ, ಸತ್ಯಶೋಧಕದೃಷ್ಟಿ–ಇವುಗಳನ್ನು ಗುರುತಿಸಬಹುದು. ಮ್ಯೂಸಿಂಗ್ಸ್ ಆಫ್ ಬಸವ (ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಜೊತೆಯಲ್ಲಿ) ಇವರ ಒಂದು ಇಂಗ್ಲಿಷ್ ಕೃತಿ.

ಬಸವನಾಳರು ಮುಂಬಯಿ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಪರೀಕ್ಷಕರಾಗಿ ಹಲವು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. 1948ರಲ್ಲಿ ಮುಂಬಯಿ ಸರ್ಕಾರದಿಂದ ನಿಯಾಮಕವಾದ ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯ ಸಭಾಸದರಾಗಿದ್ದ ಇವರು ಅನಂತರ ಆ ವಿಶ್ವವಿದ್ಯಾಲಯದ

ಸೆನೆಟ್, ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ಗಳ ಸದಸ್ಯರೂ ಆಗಿದ್ದರು. ಅನೇಕ ವರ್ಷಗಳವರೆಗೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾಗಿದ್ದರು. ಸಿದ್ಧಗಂಗಾದಲ್ಲಿ 1926ರಲ್ಲಿ ನಡೆದ ವೀರಶೈವ ತರುಣಸಂಘಗಳ ಸಮ್ಮೇಳನ ಹಾಗೂ ಹುಬ್ಬಳ್ಳಿಯಲ್ಲಿ 1938ರಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ 13ನೆಯ ಅಧಿವೇಶನದ ಅಧ್ಯಕ್ಷರೂ ಆಗಿದ್ದರು. ರಬಕವಿಯಲ್ಲಿ 1944ರಲ್ಲಿ ನಡೆದ 28ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು 1951 ಡಿಸೆಂಬರ್ 22ರಂದು ನಿಧನರಾದರು. (ಎಂ.ಎಸ್.ಎಸ್.)

**ಬಸವಪ್ಪನಾಯಕ I:** ಕೆಳದಿ ರಾಜವಂಶದ ಹಿರಿಯ ರಾಜ (1697–1714). ಸೋಮಶೇಖರ ನಾಯಕ ಮತ್ತು ಚೆನ್ನಮ್ಮಾಜಿಯವರ ದತ್ತು ಮಗ. ಚೆನ್ನಮ್ಮಾಜಿಯ ಅನಂತರ ಈತ ಪಟ್ಟಕ್ಕೆ ಬಂದ. ಬಸವಣ್ಣ ಶೂರ ದೊರೆ. ಚೆನ್ನಬಸವಪ್ಪನೆಂಬ ಸೇನಾನಿಯೊಡನೆ ಸೈನ್ಯವನ್ನು ಕಳಿಸಿ, ಪಶ್ಚಿಮ ತೀರದಲ್ಲಿರುವ ನವಿಲೆಗಡವನ್ನು ಗೆದ್ದು ಆ ಗಡಕ್ಕೆ ಬಸವರಾಜ ದುರ್ಗವೆಂದು ತನ್ನ ಹೆಸರಿಟ್ಟು ಅದನ್ನು ಬಲಪಡಿಸಿದ. ಶೇಖಕುಂದನೆಂಬ ಮುಸಲ್ಮಾನ ನಾಯಕನನ್ನು ಸೋಲಿಸಿದ. ಅರಕಲಗೂಡಿನ ಪಾಳೆಯಗಾರರು ತಮ್ಮ ಪಾಳ್ಯವನ್ನು ಮೈಸೂರರಸರಿಗೆ ಸೋತಿದ್ದರು. ಬಸವಪ್ಪ ಮೈಸೂರವರಿಂದ ಅದನ್ನು ಗೆದ್ದು ಪಾಳೆಯಗಾರರಿಗೆ ವಾಪಸು ಕೊಟ್ಟ. ತಾಮ್ರಮುಖಿಗಳು (ಪೋರ್ಚುಗೀಸರು) ಕೃಷ್ಣಾನದಿಯ (ಪೆರ್ಬೊಳೆ) ತೀರದಲ್ಲಿರುವ ಪೊನ್ನೂರನ್ನು ವಶಪಡಿಸಿಕೊಂಡಿದ್ದರು. ಇದನ್ನು ಬಸವಪ್ಪ ಅವರಿಂದ ಗೆದ್ದ. ಮಲೆಯಾಳಿಗಳು ಮತ್ತು ಮಾಯಾವಿಗಳು (ಮೈಸೂರಿನವರು) ಕಲೆತು ಚಂದ್ರಗುತ್ತಿಗೆ ಮುತ್ತಿಗೆ ಹಾಕಿದಾಗ ಅವರನ್ನೂ ಬಸವಪ್ಪ ಸೋಲಿಸಿದ. ವಸುಧಾರೆ ಕೋಟೆಯನ್ನು ಗೆದ್ದ. ಮುಗಲರಿಂದ ಆನವಟ್ಟ, ಮಹಾದೇವಪುರ, ಒಡೆಯೂರು, ಹೊನ್ನಾಳಿ ಮತ್ತು ಮಿಡಿಚೆಕೋಟೆಗಳನ್ನು ವಶಪಡಿಸಿಕೊಂಡ. ಸವಣೂರಿನ ನವಾಬನನ್ನು ಹಿಮ್ಮೆಟ್ಟಿಸಿದ.

ಬಸವಪ್ಪ ಧರ್ಮಾತ್ಮ. ಇವನು ಮಠ ಸತ್ರಗಳನ್ನು ಸ್ಥಾಪಿಸಿದ ಪೋಷಕ. ಈತನಿಗೆ ಸೂರಿನಿಕರದ್ರುಮ ಎಂಬ ಬಿರುದಿತ್ತು. ಶಿವತತ್ತ್ವ ರತ್ನಾಕರ, ಸುಭಾಷಿತ ಸುರದ್ರುಮ ಮತ್ತು ಸೂಕ್ತಿಸುಧಾಕರವೆನ್ನುವ ಗ್ರಂಥಗಳು ಇವನವು. ಮೊದಲೆರಡು ಗ್ರಂಥಗಳು ಸಂಸ್ಕೃತದಲ್ಲೂ ಕೊನೆಯದು ಸಂಸ್ಕೃತ–ಕನ್ನಡಗಳಲ್ಲೂ ಇವೆ. ಇವರ ಗ್ರಂಥಗಳಲ್ಲಿ ಶಿವತತ್ತ್ವ ರತ್ನಾಕರ ಅತ್ಯಂತ ಪ್ರಸಿದ್ಧ. ಪ್ರಪಂಚದ ಹಿತಕ್ಕಾಗಿ ಎಲ್ಲ ಸಾಹಿತ್ಯ ಮತ್ತು ವಿಜ್ಞಾನವನ್ನು ಹಿಂಡಿ ಅದರ ಸಾರವನ್ನು ಇದರಲ್ಲಿಳಿಸಿದ್ದೇನೆ ಎಂದು ಅದರ ಮುನ್ನುಡಿಯಲ್ಲಿ ವರ್ಣಿಸಿದ್ದಾನೆ. ಇದರಲ್ಲಿ ನಮೂದಿಸಿರುವ ಎಷ್ಟೋ ಗ್ರಂಥಗಳು ಈಗ ಅಲಭ್ಯ. (ಜಿ.ಎಸ್.ಡಿ.)

ಶಿವತತ್ತ್ವ ರತ್ನಾಕರ ಪ್ರಾಚೀನಕಾಲದ ಸಕಲಶಾಸ್ತ್ರಗಳ ಮತ್ತು ವಿವಿಧ ಕಲೆಗಳ ವಸ್ತುಸಂಗ್ರಹ ಮತ್ತು ವಿವರಣೆಗಳನ್ನೊಳಗೊಂಡು ವಿಶ್ವಕೋಶದಂತಿದೆ. ಇದರಲ್ಲಿ ಒಂಬತ್ತು ಅಧ್ಯಾಯಗಳು ಮತ್ತು ಅಂತರ್ಗತವಾದ ನೂರೆಂಟು ತರಂಗಗಳು ಇವೆ. ಅನೇಕ ಶಾಸ್ತ್ರಗಳ ವಿಷಯಗಳಲ್ಲದೆ ನಾಟ್ಯಗೃಹ ನಿರ್ಮಾಣ, ನೃತ್ಯಭೇದಗಳು, ಅಭಿಯಾನದ ವಿವಿಧ ಭಂಗಿಗಳು, ಸಂಗೀತಕ್ಕೆ ಸಂಬಂಧಿಸಿದಂತೆ ರಾಗಗಳ ಜಾತಿಯೇ ಮೊದಲಾದ ಪ್ರಭೇದಗಳು, ತಾಳಪ್ರಕರಣದಲ್ಲಿ ಸಂಗೀತ ಸಮಯಸಾರದಲ್ಲಿ ಹೇಳಿರುವ ನೂರೊಂದು ತಾಳಗಳ ಸೂಚನೆ ಮತ್ತು ವಾದ್ಯ ವಿಶೇಷಗಳ ನಿರೂಪಣೆ ಮುಂತಾದವೂ ಇದರಲ್ಲಿ ಅಡಕವಾಗಿವೆ. ಅಲ್ಲದೆ ಉದ್ಯಾನ ನಿರ್ಮಾಣ, ಜಲ ಭೂಮಿ ಪರೀಕ್ಷಾವರ್ಣನ ಮುಂತಾದ ವಿಷಯಗಳೂ. ಚಿತ್ರಲಿಪಿ, ಶಿಲ್ಪ ಮತ್ತು ಕಾಮಶಾಸ್ತ್ರಗಳ ಪ್ರಕ್ರಿಯೆಗಳೂ ಇವೇ ದೇಶೀಯ ಲಲಿತಕಲಾಸ್ವರೂಪವನ್ನು ತಿಳಿಸುವ ಭಂಡಾರವಾಗಿದೆ. (ಡಿ.ಎಸ್.)

**ಬಸವಪ್ಪನಾಯಕ II:** ಕೆಳದಿ ರಾಜವಂಶದ ಅರಸು (ಸು.1739–54). ಎರಡನೆಯ ಸೋಮಶೇಖರನ ಉತ್ತರಾಧಿಕಾರಿ. ಅವನ ತಮ್ಮ ವೀರಭದ್ರನ ಮಗ. ಈತನ ವಿವೇಕ ಮತ್ತು ದೂರದೃಷ್ಟಿಯಿಂದಾಗಿ ಇವನಿಗೆ ಬುದ್ಧಿ ಬಸವಪ್ಪನಾಯಕ ಎಂದೂ ಬಿಳಿಯ ವಿಭೂತಿ ಇವನಿಗೆ ಇಷ್ಟವಾಗಿ ತ್ತೆಂಬ ಕಾರಣದಿಂದಾಗಿ ಬೂದಿ ಬಸವಪ್ಪನಾಯಕ ಎಂದೂ ಹೆಸರುಗಳು ಇದ್ದಂತೆ ತೋರುತ್ತದೆ.

ಇವನ ಆಳ್ವಿಕೆಯಲ್ಲಿ ಆರ್ಕಾಟಿನ ನವಾಬಗಿರಿಗೆ ಪೈಪೋಟಿ ನಡೆದಿತ್ತು (1748). ಇಂಗ್ಲಿಷರು ಮಹಮ್ಮದ್ ಅಲಿಯನ್ನೂ ಫ್ರೆಂಚರು ಚಂದಾಸಾಹೇಬನನ್ನೂ ತಮ್ಮ ಪಕ್ಷದವರನ್ನಾಗಿ ಆರಿಸಿದರು. ಚಂದಾಸಾಹೇಬ ಸಾತಾರಾದಿಂದ ಆರ್ಕಾಟಿಗೆ ಹೋಗುತ್ತಿದ್ದಾಗ ಚಿತ್ರದುರ್ಗದವರು ಮತ್ತು ಬಿದನೂರಿನವರೂ ಅವನ ಸ್ನೇಹವನ್ನು ಬಯಸಿದರು. ಈ ಇಬ್ಬರಿಗೂ ಈ ಸಂಬಂಧದಲ್ಲಿ ಮಾಯಕೊಂಡದಲ್ಲಿ ಕದನವಾಯಿತು. ಇದರಲ್ಲಿ ಬಿದನೂರಿನವರು ಗೆದ್ದರು. ಬಸವಪ್ಪನಾಯಕ ಚಂದಾಸಾಹೇಬನನ್ನು ಸೆರೆಹಿಡಿದ. ಆದರೆ ರಾಜಧಾನಿಗೆ ಕರೆದೊಯ್ದು ತರುವಾಗ ಅವನು ತಪ್ಪಿಸಿಕೊಂಡು ಆರ್ಕಾಟಿಗೆ ಹೋದ.

ಅನಂತರ ಬಸವಪ್ಪನಾಯಕ ತರೀಕೆರೆ ಪಾಳೆಯಗಾರನ ದಾಳಿಯನ್ನು ಹಿಮ್ಮೆಟ್ಟಿಸಿದ. ಮರಾಠರು ಮೇಲಿಂದ ಮೇಲೆ ಇವನ ರಾಜ್ಯದ ಮೇಲೆ ದಾಳಿ ಮಾಡುತ್ತಿದ್ದರು. ಅವರನ್ನೂ ಸಮರ್ಥವಾಗಿ ಎದುರಿಸಿದ. ಇವನ ಕಾಲದಲ್ಲಿ ಬಿದನೂರನ್ನು ಸಂದರ್ಶಿಸಿದ ಒಬ್ಬ ವಿದೇಶಿ ಪ್ರವಾಸಿ ಇವನ ಆಡಳಿತವನ್ನೂ ಹೊಗಳಿದ್ದಾನೆ. ಬಿದನೂರಿನ ಅರಸು ಮಲಬಾರಿನವರಿಗಿಂತ ಶಕ್ತಿವಂತ. ಅವನ ರಾಜ್ಯದಲ್ಲಿ ಅನ್ನಕ್ಕೆ ಕೊರತೆ ಇಲ್ಲ. ಬಿದನೂರು ದಕ್ಷಿಣ ಭಾರತದ ಕಣಜ. ಇಲ್ಲಿ ಗಂಧದ ಮರಗಳು ವಿಪುಲವಾಗಿವೆ. ಬಿದನೂರಿಗೆ ತೀರಪ್ರದೇಶದಿಂದ ಸೊಗಸಾದ ರಸ್ತೆಯಿದೆ. ಈ ರಸ್ತೆಯ ಸಾಲುಮರಗಳನ್ನು ಪ್ರಜೆಗಳು ರಕ್ಷಿಸಬೇಕು. ಈ ರಸ್ತೆ ಎಷ್ಟು ಭದ್ರವೆಂದರೆ ಯಾರು ಬೇಕಾದರು ಹಣವನ್ನಿಟ್ಟುಕೊಂಡು ಮಲಗಿಕೊಳ್ಳಬಹುದು. ಈ ರಸ್ತೆಯ ಪಕ್ಕದಲ್ಲಿ ಮಲಗಿದವರು ಯಾರಾದರು ಹಣ ಕಳೆದುಕೊಂಡರೆ, ಸುತ್ತಮುತ್ತಲ ಜನರು ಶಿಕ್ಷೆಗೆ ಗುರಿಯಾಗುತ್ತಾರಲ್ಲದೆ. ಕಳೆದ ಹಣವನ್ನು ಭರ್ತಿ ಮಾಡಬೇಕಾಗುತ್ತದೆ ಎಂದು ಅವನು ಹೇಳಿದ್ದಾನೆ.

ತನ್ನ ವಂಶಜರಂತೆ ಬಸವಪ್ಪನಾಯಕನೂ ಧರ್ಮಕಾರ್ಯದಲ್ಲಿ ನಿರತನಾಗಿದ್ದ. ಬಿದನೂರಿನ ಹತ್ತಿರ ಸುರುಚಿರ ಮಠವನ್ನು ಕಟ್ಟಿಸಿ ಅದರ ಸುತ್ತಲಿರುವ ಊರಿಗೆ ಭದ್ರರಾಜಪುರವೆಂದು ಹೆಸರಿಟ್ಟ. ಡಂಬಲದ ಸಿದ್ಧೇಶ್ವರ ಗದ್ದುಗೆ ತೋಟದ ಸ್ವಾಮಿಗಳಿಗೆ ಭೂಸ್ವಾಸ್ಥೆಯನ್ನು ಕಲ್ಪಿಸಿದ.

ಉಡುಪಿಯ ಬಳಿ ಮಲ್ಪೆಯ ಹತ್ತಿರ ಒಂದು ಕೋಟೆಯನ್ನೂ ಆ ತೀರಪ್ರದೇಶದಲ್ಲಿ ತೋನ್ಸೆಕೋಟೆಯನ್ನೂ ಕುಂದಾಪುರದಲ್ಲಿ ಅರಮನೆಯನ್ನೂ ಮಂಗಳೂರಿನ ಹತ್ತಿರ ಶಿವರಾಜೇಂದ್ರಗಿರಿಯೆಂಬ ಕೋಟೆಯನ್ನೂ ಸಿದ್ಧಾಪುರದ ಪೇಟೆಯ ಬಳಿ ಮಂತ್ರರಾಜಪುರವನ್ನೂ ಇವನು ನಿರ್ಮಿಸಿದ. ಇವಲ್ಲದೆ ಆನಂದಪುರ, ಸುಬ್ರಹ್ಮಣ್ಯಗಳಲ್ಲಿ ಉತ್ಸವಗಳನ್ನೇರ್ಪಡಿಸಿದ. ಲಕ್ಷಾಂತರ ಜಂಗಮರಿಗೆ ಭಕ್ಷ್ಯಭೋಜ್ಯ, ವಸ್ತ್ರ, ವಿಭೂತಿ, ರುದ್ರಾಕ್ಷಿ, ಆಗಮ ಶಿವಶಾಸ್ತ್ರ ಲಿಖಿತಪುಸ್ತಕ, ಛತ್ರ, ಪಾದುಕೆ, ಹಸ್ತಾಧಾರದಂಡ ಮುಂತಾದ ಇಚ್ಛಾ ಪದಾರ್ಥಗಳನ್ನು ಕೊಡಿಸಿದ. ವೃದ್ಧಾಪ್ಯದಲ್ಲಿ ಕೊಲ್ಲೂರು, ಕೋಟೇಶ್ವರ, ವಸುಪುರ, ಶಂಕರನಾರಾಯಣ ಮತ್ತು ಮಂತ್ರರಾಜಪುರಗಳಿಗೆ ತೀರ್ಥಯಾತ್ರೆ ಮಾಡಿದ. ಈತನಿಗೆ ಚೆನ್ನಮ್ಮಾಜಿ ಮತ್ತು ವೀರಮ್ಮಾಜಿಯರೆಂಬ ಇಬ್ಬರು ಪತ್ನಿಯರು. ಈತನಿಗೆ ಮಕ್ಕಳಿಲ್ಲದ್ದರಿಂದ ಚನ್ನಬಸವಪ್ಪನೆನ್ನುವ ಹುಡುಗನನ್ನು ದತ್ತು ತೆಗೆದುಕೊಂಡ. ಬಸವಪ್ಪ ನಾಯಕ ಸು. 1754ರಲ್ಲಿ ಮೃತನಾದ. (ಜಿ.ಎಸ್.ಡಿ.)

**ಬಸವಪ್ಪಶಾಸ್ತ್ರೀ**: 1843–91. ಕಾಳಿದಾಸನ ಶಾಕುಂತಲ ನಾಟಕವನ್ನು ಅಪೂರ್ವವಾಗಿ ಭಾಷಾಂತರಿಸಿ ಅಭಿನವಕಾಳಿದಾಸ ಎಂಬ ಬಿರುದಿಗೆ ಪಾತ್ರರಾಗಿದ್ದ ಪ್ರಸಿದ್ಧ ಕವಿ. ಮುಮ್ಮಡಿ ಕೃಷ್ಣರಾಜ ಒಡೆಯರಲ್ಲಿ ಮತ್ತು ಚಾಮರಾಜ ಒಡೆಯರಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು. ಇವರು ಜನಿಸಿದ್ದು 1843. ನಾರುಸಂದ್ರ (ಬೆಂಗಳೂರು ಜಿಲ್ಲೆ) ಗ್ರಾಮದ ರುದ್ರಾಕ್ಷಿ ಮಠಾಧ್ಯಕ್ಷರಾಗಿದ್ದ ಮುರುಡು ಬಸವಸ್ವಾಮಿ ಇವರ ಪಿತಾಮಹ. ತಂದೆ ಮಹದೇವ ಶಾಸ್ತ್ರೀ, ತಾಯಿ ಬಸವಾಂಬಿಕೆ. ಮಹದೇವ ಶಾಸ್ತ್ರಿಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದ ಪುರೋಹಿತರಾಗಿದ್ದರು. ಬಸವಪ್ಪಶಾಸ್ತ್ರಿಯವರು ಚಿಕ್ಕಂದಿನಲ್ಲೇ ತಂದೆತಾಯಿಯರನ್ನು ಕಳೆದುಕೊಂಡರು. ಆಗ ಇವರಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಅನುಗ್ರಹ ದೊರೆಯಿತು. ಕವಿ ಅಳಿಯ ಲಿಂಗರಾಜರು ಬಸವಪ್ಪಶಾಸ್ತ್ರಿಗಳಿಗೆ ಆಸ್ಥಾನ ಪಂಡಿತ ಗರಳಪುರಿ ಶಾಸ್ತ್ರಿಗಳಲ್ಲಿ ವ್ಯಾಸಂಗ ಮಾಡಲು ಅನುವು ಮಾಡಿಕೊಟ್ಟರು. ಜೊತೆಗೆ ಬಿ. ಮಲ್ಲಪ್ಪನವರ ಪ್ರೋತ್ಸಾಹವೂ ದೊರೆತು ಸಂಸ್ಕೃತ ಕನ್ನಡ ಭಾಷೆಗಳಲ್ಲಿಯೂ ಸಂಗೀತಾದಿ ಕಲೆಗಳಲ್ಲಿಯೂ ವೇದಾಂತಾದಿ ದರ್ಶನಗಳಲ್ಲಿಯೂ ಪರಿಣತ ರಾದರು. ತಮ್ಮ ಹದಿನೆಂಟನೆಯ ವಯಸ್ಸಿಗೇ ಕೃಷ್ಣರಾಜಾಭ್ಯುದಯ ಎಂಬ ಕಾವ್ಯವನ್ನು ರಚಿಸಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅರ್ಪಿಸಿದರು. ಇದರಿಂದ ಇವರು ಮಹಾರಾಜರ ಕೃಪೆಗೆ ಪಾತ್ರರಾದುದಲ್ಲದೆ ಬಿಲ್ವವೃಕ್ಷಪೂಜಾವಿಧಿಯನ್ನು ಸಂಸ್ಕೃತದಲ್ಲಿ ರಚಿಸಿಕೊಟ್ಟು ಆಸ್ಥಾನ ಪುರೋಹಿತರಾದರು. ಆಶುಕವಿತ್ವ ಕಾವ್ಯವಾಚನಗಳಿಂದ ಇವರ ಖ್ಯಾತಿ ಹರಡಿತು. ಆಸ್ಥಾನ ಕವಿಗೋಷ್ಠಿಯಲ್ಲಿಯೂ ಇವರ ಸ್ಥಾನ ಮೀಸಲಾಯಿತು.

ಇವರು ಹಳಗನ್ನಡ ಸಾಹಿತ್ಯವನ್ನೂ ಸಂಸ್ಕೃತ ಸಾಹಿತ್ಯವನ್ನೂ ಮುಖ್ಯವಾಗಿ ಸಂಸ್ಕೃತ ನಾಟಕಗಳನ್ನೂ ಆಳವಾಗಿ ಅಧ್ಯಯನ ಮಾಡಿ ಪಾಂಡಿತ್ಯ ಪಡೆದಿದ್ದರು. ದಿವಾನ್ ರಂಗಾಚಾರ್ಲು ಮತ್ತು ಅಂಬಿಲ್ ನರಸಿಂಹಯ್ಯಂಗಾರ್ಯರ ಪ್ರೋತ್ಸಾಹದಿಂದ ಅನೇಕ ಗ್ರಂಥಗಳನ್ನು ರಚಿಸಿದರು. ಇವರು ಅನೇಕ ಸಂಸ್ಕೃತ ನಾಟಕಗಳನ್ನು ಭಾಷಾಂತರಿಸಿದ್ದಾರೆ. ಶಾಕುಂತಲ, ವಿಕ್ರಮೋರ್ವಶೀಯ, ಉತ್ತರ ರಾಮಚರಿತ, ಮಾಲತಿಮಾಧವ, ರತ್ನಾವಳಿ ಮತ್ತು ಸಿ. ಸುಬ್ಬರಾಯರ ನೆರವಿನಿಂದ ಇಂಗ್ಲಿಷ್‍ನಿಂದ ಕನ್ನಡಿಸಿದ ಶೂರಸೇನ ಚರಿತ್ರ (ಷೇಕ್ಸ್‌ಪಿಯರನ ಒಥೆಲೊ)–ಇವು ಮುಖ್ಯವಾದವುಗಳು. ಭರ್ತೃಹರಿಯ ಶತಕತ್ರಯಗಳನ್ನು ಇವರು ಭಾಷಾಂತರಿಸಿದ್ದಾರೆ. ಚಂಡಕೌಶಿಕ ಎಂಬ ನಾಟಕವನ್ನು ಅನುವಾದಿಸಲು ಆರಂಭಿಸಿದರಾದರೂ ಅದು ಪೂರ್ಣಗೊಳ್ಳುವ ಮುನ್ನ ನಿಧನರಾದರು. ಈ ನಾಟಕವನ್ನು ಅನಂತರ ದೇವಶಿಖಾಮಣಿ ಅಳಸಿಂಗರಾಚಾರ್ಯರು ಪೂರ್ಣಗೊಳಿಸಿದರು.

ಬಸವಪ್ಪಶಾಸ್ತ್ರಿಯವರು ಕನ್ನಡ ಹಾಗೂ ಸಂಸ್ಕೃತದಲ್ಲಿ ಸ್ವತಂತ್ರ ಕೃತಿಗಳನ್ನೂ ರಚಿಸಿದ್ದಾರೆ. ಸಾವಿತ್ರೀ ಚರಿತ್ರೆ (ಭಾಮಿನೀ ಷಟ್ಪದಿ), ದಮಯಂತೀ ಸ್ವಯಂವರ (ಚಂಪೂ), ನೀತಿಸಾರ ಸಂಗ್ರಹ (ಕಂದ)– ಇವು ಇವರ ಕನ್ನಡ ಗ್ರಂಥಗಳು. ಆರ್ಯಾ ಶತಕಮ್, ಶಿವಭಕ್ತಿ ಸುಧಾತರಂಗಿಣೀ, ಶಿವಾಷ್ಟಕಮ್, ಶಾರದಾದಂಡಕಮ್, ತ್ರಿಷಷ್ಠಿಪುರಾತನಸ್ತವ– ಇವು ಇವರ ಸಂಸ್ಕೃತ ಗ್ರಂಥಗಳು.

1883ರಲ್ಲಿ ಪ್ರಕಟವಾದ ಶಾಕುಂತಲ ನಾಟಕದ ಭಾಷಾಂತರ ಬಸವಪ್ಪ ಶಾಸ್ತ್ರಿಗಳ ಹೆಸರನ್ನು ಕನ್ನಡ ಸಾಹಿತ್ಯಲೋಕದಲ್ಲಿ ಅಮರಗೊಳಿಸಿತು. ಮೂಲ ಕೃತಿಯ ಸೊಗಡು, ಸೌಂದರ್ಯ, ಲಾಲಿತ್ಯ, ಕಾವ್ಯಗುಣಗಳು ಸ್ವಲ್ಪವೂ ಮಂಕಾಗದಂತೆ ಯಥಾವತ್ತಾಗಿ ಭಾಷಾಂತರದಲ್ಲಿ ಮೂಡಿಬಂದುವು. ಸಾಹಿತ್ಯಜ್ಞರು ಈ ಅನುವಾದವನ್ನು ಅಪಾರವಾಗಿ ಮೆಚ್ಚಿ ಕೊಂಡಾಡಿದರು. ಆಸ್ಥಾನ ವಿದ್ವನ್ಮಂಡಳಿಯಲ್ಲಿ ಈ ಕೃತಿ ಮನ್ನಣೆ ಪಡೆದು ಇವರಿಗೆ ಅಭಿನವ ಕಾಳಿದಾಸ ಎಂಬ ಬಿರುದನ್ನು ತಂದುಕೊಟ್ಟಿತು. ಇವರು ಬರೆದ ಅನೇಕ ನಾಟಕಗಳನ್ನು ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂಬ ನಾಟಕ ಕಂಪನಿ ರಂಗಭೂಮಿಯ ಮೇಲೆ ಯಶಸ್ವಿಯಾಗಿ ಪ್ರದರ್ಶಿಸಿತು.

ಇವರು ಚಾಮರಾಜ ಒಡೆಯರಿಗೆ ಕೆಲಕಾಲ ವಿದ್ಯಾಬೋಧಕರಾಗಿದ್ದರು. ಜಟ್ಟಿತಾಯಮ್ಮನವರಿಗೂ ಇವರು ಗುರುವಾಗಿದ್ದು ಅವರಿಗೆ ಕನ್ನಡ ಜಾವಳಿಗಳನ್ನು ಕಲಿಸಿದಂತೆ ತಿಳಿದುಬರುತ್ತದೆ. ಇವರು ಒಮ್ಮೆ ವಾಯು ವಿಹಾರಕ್ಕಾಗಿ ಕುದುರೆ ಗಾಡಿಯಲ್ಲಿ ಹೊರಟಿದ್ದಾಗ ಅದು ಅಪಘಾತಕ್ಕೆ ಈಡಾಗಿ 1891ರ ಫೆಬ್ರವರಿಯಲ್ಲಿ ನಿಧನರಾದರು. (ಎಂ.ಜಿ.ಎನ್.)

**ಬಸವರಾಜದುರ್ಗ**: ಉತ್ತರಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಒಂದು ಐತಿಹಾಸಿಕ ಸ್ಥಳ. ಹಳದಿಪುರ ಕಡಲತೀರದಿಂದ 5 ಕಿಮೀ ದೂರದಲ್ಲಿರುವ ದ್ವೀಪ. ಹೊನ್ನಾವರದಿಂದ ಲಾಂಚ್ ದೋಣಿಗಳ ಮೂಲಕ ಇಲ್ಲಿಗೆ ತಲುಪಬಹುದು. ಈ ದ್ವೀಪದ ವಿಸ್ತೀರ್ಣ 19 ಹೆಕ್ಟೇರ್‌ಗಳು. ಪಾವಿನಕುರ್ವೆಯಿಂದ ಇಲ್ಲಿಗೆ ಹತ್ತಿರ. ವಿಜಯನಗರ ಅರಸರ ಕಾಲದಲ್ಲಿ ಇದು ಕೋಟೆಯಿಂದ ಕೂಡಿದ್ದಿತು. ಮೊದಲು ಇದನ್ನು ನವಿಲೆದುರ್ಗ ಎನ್ನುತ್ತಿದ್ದರು. ಬುಕನಾನ್ ಎಂಬ ಪ್ರವಾಸಿಯ ಪ್ರಕಾರ ಈ ದುರ್ಗವನ್ನು ಕೆಳದಿಯ ಶಿವಪ್ಪನಾಯಕ ಬಲಪಡಿಸಿದ್ದ. 1690ರಲ್ಲಿ ಕಾನ್ಹೋಜಿ ಆಂಗ್ರೆ ಎಂಬ ಮರಾಠ ಸೇನಾಪತಿ ಇದನ್ನು ಮುತ್ತಿದಾಗ ಕೆಳದಿ ಅರಸರು ಇದನ್ನು ಸಂರಕ್ಷಿಸಿಕೊಂಡು ಇದಕ್ಕೆ ಬಸವರಾಜದುರ್ಗ ವೆಂಬ ಹೆಸರಿಟ್ಟರು.

ಅನಂತರ ಇದು ಹೈದರನ ಆಳ್ವಿಕೆಗೆ ಬಂತು. 1799ರಲ್ಲಿ ಇದು ಬ್ರಿಟಿಷರ ಆಧಿಪತ್ಯಕ್ಕೆ ಒಳಪಟ್ಟಿತು. 1817ರ ವರೆಗೂ ಇಲ್ಲಿ ಒಂದು ರಕ್ಷಣಾ ಪಡೆಯನ್ನು ಇಡಲಾಗಿತ್ತು. ಬುಕನಾನ್ ಹೇಳುವಂತೆ ಇಲ್ಲಿ ಮನೆಗಳಿಗೆ ಉಪಯೋಗಿಸುವ ಕಾವಿಬಣ್ಣ ದೊರೆಯುತ್ತಿತ್ತು ಎಂದು ತಿಳಿದುಬರುತ್ತದೆ. ಇಲ್ಲೊಂದು ಗಣಪತಿಯ ಮಂದಿರವಿದ್ದು, ಅದು ನಾಶವಾದಾಗ ಗಣಪತಿ ಮೂರ್ತಿಯನ್ನು ಹಳದಿಪುರಕ್ಕೆ ರವಾನಿಸಲಾಯಿತು. ಹಳದಿಪುರದ ಸಭಾಹಿತ ಮನೆತನದವರು ಇದನ್ನು ಪೂಜಿಸುತ್ತಿದ್ದರು. ಇಲ್ಲಿಂದ ಸಮುದ್ರದ ರುದ್ರ ರಮಣೀಯ ದೃಶ್ಯ ಮೋಹಕವಾಗಿರುತ್ತದೆ. ಬಸವರಾಜದುರ್ಗ ಒಂದು ಉತ್ತಮ ಪ್ರವಾಸಿ ತಾಣವಾಗುವ ಎಲ್ಲ ಲಕ್ಷಣಗಳನ್ನೂ ಪಡೆದಿದೆ. (ಎಸ್.ಎಚ್.ಇ.)

**ಬಸವರಾಜಯ್ಯ, ಎಂ. ಎನ್.**: 1913–2004. ಕನ್ನಡ ಚಲನಚಿತ್ರ ರಂಗಕ್ಕೆ ಅನುಪಮ ಕಾಣಿಕೆ ಸಲ್ಲಿಸಿದ ಮೈಸೂರಿನ ಪ್ರಸಿದ್ಧ ಪ್ರೀಮಿಯರ್ ಸ್ಟುಡಿಯೊದ ಮಾಲೀಕರು. ಕನ್ನಡ ಸಿನಿಮಾಗಳ ಚಿತ್ರೀಕರಣ ಕಾರ್ಯಕ್ಕೆ ದೂರದ ಮದರಾಸು ಅಥವಾ ಮುಂಬೈಗಳ ಕಡೆಗೆ ನಿರ್ಮಾಣ ತಂಡ ತೆರಳುತ್ತಿದ್ದ ಸಂಕಷ್ಟವನ್ನು ತಪ್ಪಿಸುವ ಪ್ರಯತ್ನದಲ್ಲಿ ಯಶಸ್ವಿಯಾದವರು.

ಇವರು ಮೈಸೂರಿನ ಹಳೇ ಅಗ್ರಹಾರದಲ್ಲಿ 1913 ಏಪ್ರಿಲ್‌ನಲ್ಲಿ ಜನಿಸಿದರು. ತಂದೆ ಎಂ.ಎನ್. ನಾಗಣ್ಣ; ವಿಮೆ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದರು. ಮೈಸೂರಿನ ದಳವಾಯಿ ಶಾಲೆ, ಶಾರದಾವಿಲಾಸ ಶಾಲೆ

ಹಾಗೂ ಮದರಾಸಿನ ಕ್ರಿಶ್ಚಿಯನ್ ಕಾಲೇಜುಗಳಲ್ಲಿ ಬಸವರಾಜಯ್ಯನವರ ವಿದ್ಯಾಭ್ಯಾಸ ನಡೆಯಿತು. ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಲಾಗದೆ ಮೈಸೂರಿಗೆ ಹಿಂದಿರುಗಿದರು. ಮೈಸೂರಿನಲ್ಲಿದ್ದ ರಾಮಯ್ಯನವರ ನವಜ್ಯೋತಿ ಸ್ಟುಡಿಯೊ ಸರಿಯಾದ ಉಸ್ತುವಾರಿ ಹಾಗೂ ವಹಿವಾಟು ಇಲ್ಲದೆ ತೆವಳುತ್ತಿತ್ತು. ಈ ಸಂಗತಿಯನ್ನು ಗಮನಿಸಿದ ಇವರು ಆಧುನಿಕ ರೀತಿಯ ವ್ಯವಸ್ಥೆಯುಳ್ಳ ಸಂಪೂರ್ಣ ಸ್ಟುಡಿಯೊ ನಿರ್ಮಿಸಲು ನಿರ್ಧರಿಸಿದರು. ಪ್ರೀಮಿಯರ್ ಸ್ಟುಡಿಯೊ ಕಟ್ಟಲು ಆರಂಭಿಸಿದರು (1942–43).

ಶಿಸ್ತಿನ ವ್ಯವಹಾರ ಇವರ ಯಶಸ್ಸಿನ ಮುಖ್ಯ ಗುಣ. ಒಂದೇ ವರ್ಷದ ಅವಧಿಯಲ್ಲಿ (1942–43) ಎಂಬತ್ತಕ್ಕೂ ಹೆಚ್ಚು ಚಿತ್ರಗಳು ಇವರ ಸ್ಟುಡಿಯೊದಲ್ಲಿ ತಯಾರಾದವು. ವಿವಿಧ ಭಾಷೆಗಳ ಅಸಂಖ್ಯಾತ ಚಲನಚಿತ್ರಗಳು ಈ ಸ್ಟುಡಿಯೊದಲ್ಲಿ ತಯಾರಾದದ್ದು ಕನ್ನಡ ಚಿತ್ರರಂಗ ಇತಿಹಾಸದ ಒಂದು ಭಾಗವಾಗಿ ಉಳಿದಿದೆ. ಸಿನಿಮಾ ವ್ಯವಹಾರ ವಿಸ್ತೃತವಾಗಿ, ಅತ್ಯಾಧುನಿಕ ವಿಧಾನಗಳು ಬಳಕೆಗೆ ಬಂದಿರುವ ಕಾರಣ ಸ್ಟುಡಿಯೊಗಳನ್ನು ಅವಲಂಬಿಸಬೇಕಾದ ಪ್ರಮೇಯ ಈಗ ಅಷ್ಟಾಗಿಲ್ಲ. ಈ ಕಾರಣದಿಂದ ಪ್ರೀಮಿಯರ್ ಸ್ಟುಡಿಯೊ ಈಗ ಒಂದು ವಸ್ತುಸಂಗ್ರಹಾಲಯದಂತೆ ಉಳಿದುಕೊಂಡಿದೆ. ಮೊದಲಿನ ಯಾವ ಭವ್ಯತೆಯೂ ಈಗಿಲ್ಲ. ಸ್ಟುಡಿಯೊ ಆವರಣದ ಹತ್ತು ಎಕರೆ ಪ್ರದೇಶ ವಿವಿಧ ವಾಣಿಜ್ಯ ಉದ್ದೇಶಗಳಿಗೆ ಈಗ ಬಳಕೆಯಾಗುತ್ತಿದೆ. ಸಂಜಯ್‌ಖಾನ್ ಕಿರುತೆರೆಗಾಗಿ ನಿರ್ಮಿಸುತ್ತಿದ್ದ ಸ್ವೋರ್ಡ್ ಆಫ್ ಟಿಪ್ಪುಸುಲ್ತಾನ್ ಚಿತ್ರದ ನಿರ್ಮಾಣ ಸಂದರ್ಭದಲ್ಲಿ ಇಲ್ಲಿ ಅಗ್ನಿ ದುರಂತ ಸಂಭವಿಸಿ ಸಾವು-ನೋವುಗಳಾದವು. ಅನಂತರದ ದಿನಗಳಲ್ಲಿ ಚಿತ್ರೀಕರಣ ಚಟುವಟಿಕೆಗಳು ಕ್ಷೀಣಗೊಳ್ಳುತ್ತಾ ಬಂದು ಸಂಪೂರ್ಣವಾಗಿ ಸ್ಥಗಿತಗೊಂಡವು.

ಪ್ರೀಮಿಯರ್ ಸ್ಟುಡಿಯೊದ ಸ್ಥಾಪನೆಯೊಡನೆ ಕನ್ನಡ ಚಿತ್ರರಂಗಕ್ಕೆ ಇವರು ನೀಡಿದ ಕೊಡುಗೆಗಾಗಿ ಇವರಿಗೆ ರಾಜಕುಮಾರ್ ಪ್ರಶಸ್ತಿ ಪ್ರಾಪ್ತವಾಗಿದೆ (1992). ಇವರು 2004ರಲ್ಲಿ ನಿಧನರಾದರು. (ಎಸ್.ಬಿಎಚ್.ಎ.)

**ಬಸವರಾಜ ರಾಜಗುರು**: 1920–91. ಸುಪ್ರಸಿದ್ಧ ಸಂಗೀತಗಾರರು. ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಎಲಿವಾಳ ಗ್ರಾಮದಲ್ಲಿ 1920 ಆಗಸ್ಟ್ 20ರಂದು ಜನಿಸಿದರು. ಇವರದು ಪ್ರಸಿದ್ಧ ಮನೆತನ. ಇವರ ಪೂರ್ವಜರು ಕೆಳದಿ ನಾಯಕರಿಗೆ ಕುಲಗುರುಗಳಾಗಿದ್ದರು. ಆದ್ದರಿಂದ ಇವರ ಮನೆತನಕ್ಕೆ ರಾಜಗುರು ಎಂಬ ಹೆಸರು ಬಂತು. ಇವರ ತಾತ ಸಿದ್ದಯ್ಯಸ್ವಾಮಿಗಳು ಮೂಡಲಪಾಯ, ದೊಡ್ಡಾಟ, ದಕ್ಷಿಣಾದಿ ಗಾಯನಗಳಲ್ಲಿ ನಿಷ್ಣಾತರಾಗಿದ್ದ ರಲ್ಲದೆ ಕರ್ನಾಟಕ ಶೈಲಿಯಲ್ಲಿ ನಿಜಗುಣ ಶಿವಯೋಗಿಗಳ, ಸರ್ಪಭೂಷಣ ಶಿವಯೋಗಿಗಳ, ಬಾಲಲೀಲಾ ಮಹಾಂತ ಶಿವಯೋಗಿಗಳ ಹಾಗೂ ಶರೀಫ ಶಿವಯೋಗಿಗಳ ಪದ್ಯಗಳನ್ನು ಹಾಡುತ್ತಿದ್ದರು. ಇವರ ತಂದೆ ಮಹಾಂತಸ್ವಾಮಿಗಳೂ ಕರ್ನಾಟಕ ಸಂಗೀತ ಮತ್ತು ಪಿಟೀಲು ವಾದನದಲ್ಲಿ ಒಳ್ಳೆಯ ಪಾಂಡಿತ್ಯಗಳಿಸಿಕೊಂಡಿದ್ದರು. ತಂದೆಯವರ ಬಳಿಯಲ್ಲಿ ಬಸವರಾಜರು ತಮ್ಮ ಎಳನೆಯ ವಯಸ್ಸಿನಲ್ಲಿ ಸಂಗೀತ ಶಿಕ್ಷಣವನ್ನು ಆರಂಭಿಸಿ ಮೂರು ವರ್ಷಗಳ ಕಾಲ ಸರಳೆ, ಜಂಟಿ, ಅಲಂಕಾರ, ಗೀತ, ವರ್ಣ ಹಾಗೂ ಕೆಲವು ಕೃತಿಕೀರ್ತನೆಗಳ ಅಭ್ಯಾಸ ಮಾಡಿದರು. ಕುಂದಗೋಳದಲ್ಲಿ ಪ್ರಾಥಮಿಕ ಶಾಲೆ ಕಲಿಯುವಾಗ ಶಾಲೆ ತಪ್ಪಿಸಿ ಸವಾಯಿ ಗಂಧರ್ವರ ಗಾಯನವನ್ನು ಕೇಳಲು ಹೋಗುತ್ತಿದ್ದರಂತೆ. ಹೀಗಾಗಿ ಇವರ ವಿದ್ಯಾಭ್ಯಾಸ ಕುಂಠಿತವಾಯಿತು. ಇದನ್ನರಿತ ಇವರ ದೊಡ್ಡಪ್ಪ ಇವರನ್ನು ಹುಬ್ಬಳ್ಳಿಯ ಮೂರುಸಾವಿರ ಮಠಕ್ಕೆ ವಿದ್ಯಾಭ್ಯಾಸಕ್ಕೆಂದು ಸೇರಿಸಿದರು. ಆದರೆ ಕಲೆಯ ಬಗ್ಗೆ ಆಸಕ್ತಿ ತಾಳಿದ್ದ ಬಸವರಾಜರು ಕೆಲವೇ ದಿನಗಳಲ್ಲಿ ಮಠವನ್ನು ಬಿಟ್ಟು ಆಗ್ಗೆ ಹುಬ್ಬಳ್ಳಿಯಲ್ಲಿ ಬಿಡಾರ ಬಿಟ್ಟಿದ್ದ ವಾಮನರಾವ್ ಮಾಸ್ತರರ ವಿಶ್ವಗುಣಾದರ್ಶ ಸಂಗೀತ ನಾಟಕ ಕಂಪನಿ ಸೇರಿದರು. ಇವರ ಕಂಠಮಾಧುರ್ಯ, ತೀಕ್ಷ್ಣ ಗ್ರಹಣಶಕ್ತಿಗಳನ್ನು ಮೆಚ್ಚಿಕೊಂಡ ವಾಮನರಾವ ಮಾಸ್ತರರು ಇವರನ್ನು ಬಾಲನಟನನ್ನಾಗಿ ತಮ್ಮ ಕಂಪನಿಗೆ ಸೇರಿಸಿಕೊಂಡರು. ಕೃಷ್ಣ, ಪ್ರಹ್ಲಾದ, ಅಭಿಮನ್ಯು, ನಾರದ ಮುಂತಾದ ಪಾತ್ರಗಳಲ್ಲಿ ಇವರು ರಂಗದ ಮೇಲೆ ಕಾಣಿಸಿಕೊಂಡರು. ಈ ವಿಷಯ ತಿಳಿದ ಇವರ ದೊಡ್ಡಪ್ಪನವರು ನಾಟಕ ಕಂಪನಿಯನ್ನು ಬಿಡಿಸಿ ಮತ್ತೆ ಇವರನ್ನು ಮಠಕ್ಕೆ ಸೇರಿಸಿದರು. ಅಲ್ಲಿಗೆ ಆಗಮಿಸಿದ್ದ ಪಂಚಾಕ್ಷರಿಗವಾಯಿಗಳಿಂದ ಬಸವರಾಜರು ಪ್ರಭಾವಿತರಾದರು. ಕರ್ನಾಟಕ ಮತ್ತು ಹಿಂದುಸ್ಥಾನಿ ಉಭಯ ಗಾಯನಾಚಾರ್ಯರಾದ ಪಂಚಾಕ್ಷರಿಗವಾಯಿಗಳಿಂದ ಶಿವಯೋಗ ಮಂದಿರದಲ್ಲಿ ಸುಮಾರು



ಹನ್ನೆರಡು ವರ್ಷಗಳ ಕಾಲ ಸಂಗೀತಶಿಕ್ಷಣ ಪಡೆದು ಕರ್ನಾಟಕ ಹಾಗೂ ಹಿಂದುಸ್ಥಾನಿ ಪದ್ಧತಿಗಳೆರಡರಲ್ಲೂ ಪರಿಶ್ರಮವನ್ನು ಸಂಪಾದಿಸಿಕೊಂಡರು. ಮುಂಬಯಿ ಆಕಾಶವಾಣಿಯಲ್ಲಿ ಮುಂಜಾನೆ ಬಿಲ್‌ವಾಲ್ ಹಾಗೂ ರಾತ್ರಿ ಗೌಡಬುಲ್ಹಾರ ಹಾಡುತ್ತಿದ್ದರು (1938). ನಾಗಪುರದಲ್ಲಿ ಸಂಗೀತ ಸಮ್ಮೇಳನ ನಡೆಯುವ ವೇಳೆಗೆ ಸಂಗೀತ ಪ್ರೇಮಿಗಳಿಗೆ ಚಿರಪರಿಚಿತರಾದರು.

ಹಂಪೆಯಲ್ಲಿ 1936ರಲ್ಲಿ ಜರುಗಿದ ಚರಿತ್ರಾರ್ಹ ವಿಜಯನಗರ ಸ್ಮಾರಕೋತ್ಸವ ಸಂದರ್ಭದಲ್ಲಿ ಇವರ ಪ್ರಥಮ ಕಛೇರಿ ನಡೆಯಿತು. ಅಂದಿನಿಂದ ಇವರ ಸಂಗೀತ ಸುಧೆ ಭಾರತದ ತುಂಬೆಲ್ಲಾ ಪ್ರವಹಿಸಿತು. ಇವರ ಸಂಗೀತ ವೈವಿಧ್ಯಮಯ ಹಾಗೂ ಬಹುಶ್ರುತತ್ವವುಳ್ಳದ್ದು. ಮೂಡಲಪಾಯದಿಂದ ಕನ್ನಡ ಲಾವಣಿ, ಬಿಹಾರಿ ಗೀತೆ, ಮಾರವಾಡಿ ಲೋಕಗೀತೆ, ಮರಾಠಿ ರಂಗಗೀತೆ, ಭಾವಗೀತೆ, ಸಂಸ್ಕೃತ ಶ್ಲೋಕ, ಗಮಕ, ಕಂದಪದ್ಯ, ಶರಣ ವಚನಗಳು, ಪದಗಳು ಮತ್ತು ಕನ್ನಡನಾಟ್ಯ ಪದ್ಯಗಳವರೆಗೆ, ಲಘುಶಾಸ್ತ್ರೀಯದಿಂದ ದ್ರುಪದ್, ಧಮಾರ್, ಗಝುಲ್, ಠುಮ್ರಿ ಮತ್ತು ಶಾಸ್ತ್ರೀಯ ಸಂಗೀತದವರೆಗೆ ಇವರ ಗಾಯನ ವಿಸ್ತಾರವಾಗಿದೆ. ಶಾಸ್ತ್ರ ಪಾಂಡಿತ್ಯ, ಸುಮಧುರ ಶಾರೀರ, ಮೂರೂ ಸಪ್ತಕಗಳಲ್ಲಿ ಶ್ರುತಿಬದ್ಧವಾಗಿ ಸಂಚರಿಸಬಲ್ಲ ಸಾಮರ್ಥ್ಯ, ಅದ್ಭುತವಾದ ಆಶುಚಮತ್ಕಾರ ಶಕ್ತಿ– ಇವು ಇವರ ಸಂಗೀತಕ್ಕೆ ಹೆಚ್ಚಿನ ಮೆರುಗು ನೀಡಿದವು.

ಬಸವರಾಜ ರಾಜಗುರು ಅವರು ಭಾರತದ ನಾನಾ ಭಾಗಗಳಲ್ಲಿ ಸಂಚರಿಸಿದರು. ಇವರಿಗೆ ಕನ್ನಡದ ಜೊತೆಗೆ ಸಂಸ್ಕೃತ, ಹಿಂದಿ, ಗುಜರಾತಿ, ಕೊಂಕಣಿ, ಮರಾಠಿ ಮತ್ತು ತೆಲುಗು ಭಾಷೆಗಳಲ್ಲೂ ಇವರು ಪರಿಶ್ರಮ ಗಳಿಸಿದರು. ಕೇಂದ್ರ ಸಂಗೀತನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್, ಭಾರತಸರ್ಕಾರದ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳು ಲಭಿಸಿವೆ. ಸಂಗೀತರತ್ನ, ಸಂಗೀತ ಸುಧಾಕರ ಮುಂತಾದ ಪ್ರಶಸ್ತಿಗಳು ಇವರಿಗೆ ದೊರೆತಿದ್ದವು. ಭಾರತೀದೇವಿ ಇವರ ಬಾಳಸಂಗಾತಿಯೂ ಕಲಾಜೀವನದ ಸಂಗಾತಿಯೂ ಆಗಿದ್ದರು. (ಎಸ್.ವಿ.ಕೆ.)

**ಬಸವರಾಜು, ಎಲ್.:** 1919– . ಕನ್ನಡದ ಶ್ರೇಷ್ಠ ವಿದ್ವಾಂಸರು, ಸೃಜನಶೀಲ ಲೇಖಕರು. ಇವರು 1919 ಅಕ್ಟೋಬರ್ 7ರಂದು ಕೋಲಾರ ಜಿಲ್ಲೆಯ ಇಡಗೂರಿನಲ್ಲಿ ಜನಿಸಿದರು. ತಂದೆ ಲಿಂಗಪ್ಪ, ತಾಯಿ ಈರಮ್ಮ. ಚಿಕ್ಕವಯಸ್ಸಿನಲ್ಲಿಯೇ ತಂದೆತಾಯಿಯರನ್ನು ಕಳೆದುಕೊಂಡ ಇವರು ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಜೀವನ ನಿರ್ವಹಣೆಗಾಗಿ ಊರಿನ ಭೀಮೇಶ್ವರ ದೇವಾಲಯದಲ್ಲಿ ಅರ್ಚಕ ವೃತ್ತಿ ಹಿಡಿಯುವಂತಾಯಿತು. ಈ ವೃತ್ತಿಯಲ್ಲಿದ್ದುಕೊಂಡೇ ಇಡಗೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಇವರು ಪ್ರೌಢಶಿಕ್ಷಣವನ್ನು ಸಿದ್ಧಗಂಗೆಯಲ್ಲಿ ಪಡೆದರು. ಇಂಟರ್‌ಮೀಡಿಯಟ್ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಮುಗಿಸಿ ಕುವೆಂಪು, ತೀ.ನಂ.ಶ್ರೀ, ಡಿ.ಎಲ್.ಎನ್. ಮೊದಲಾದ ಗುರುಪರಂಪರೆಯ ಮಾರ್ಗದರ್ಶನದಲ್ಲಿ ಮೈಸೂರಿನಲ್ಲಿ ಬಿ.ಎ. ಆನರ್ಸ್ (1946) ಮತ್ತು ಕನ್ನಡ ಎಂ.ಎ. (1951) ಪದವಿಗಳನ್ನು ಗಳಿಸಿದರು. ಎಳವೆಯಲ್ಲಿಯೇ ಇವರಿಗೆ ಅಧಿಕ ಒಲವಿದ್ದದ್ದು ಆಧ್ಯಾತ್ಮಿಕ ಕ್ಷೇತ್ರದಲ್ಲಿ. ಆ ದಿನಗಳಲ್ಲಿಯೇ ಆಧ್ಯಾತ್ಮ ಸಾಧನೆಗೆ ಹೊರಟ ಇವರು ಅಪಾರ ಕಷ್ಟಗಳನ್ನನುಭವಿಸಿದರು. ಇವರ ಮೇಲೆ ಗಾಢವಾಗಿ ಪ್ರಭಾವ ಬೀರಿದ ವ್ಯಕ್ತಿತ್ವವೆಂದರೆ ಗೌತಮ ಬುದ್ಧನದು. ಇವರು ಬರೆದ ಮೊದಲ ಕವನ (1941) ಬುದ್ಧನನ್ನು ಕುರಿತದ್ದೇ ಆಗಿದೆ. ಕನ್ನಡ ಎಂ.ಎ. ಪದವಿ ಗಳಿಸಿದ ಅನಂತರ ಇವರು ದಾವಣಗೆರೆಯ ಡಿ.ಆರ್.ಎಂ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು, ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.



ಇವರು ನೇರನಡೆ–ನುಡಿಗಳಿಗೆ ಪ್ರಸಿದ್ಧರು. ಇವರ ಪ್ರಮುಖ ಕಾಳಜಿಯ ಸಾಹಿತ್ಯ ಕ್ಷೇತ್ರಗಳೆಂದರೆ ಗ್ರಂಥ ಸಂಪಾದನೆ, ಸಂಶೋಧನೆ ಹಾಗೂ ಅನುವಾದ. ಈ ಕ್ಷೇತ್ರಗಳಲ್ಲಿ ಇವರು ಸು. 50ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯನ್ನೂ ಸಾಹಿತ್ಯಕೃತಿಗಳ ಮಹತ್ವವನ್ನೂ ಸರ್ವರಿಗೂ ಪರಿಚಯಿಸುವ ಆಶಯವನ್ನು ಹೊತ್ತ ಇವರ ಕೃತಿಗಳು ಪಂಪನ ಆದಿಪುರಾಣ (ಜಿನಸೇನಾಚಾರ್ಯರ ಪೂರ್ವಪುರಾಣದೊಡನೆ ಹೋಲಿಸಿ. 1976), ಪಂಪನ ಸರಳ ಪಂಪಭಾರತ (1999), ಪಂಪನ ಸಮಸ್ತ ಭಾರತ ಕಥಾಮೃತ (2000), ಪಂಪನ ಸರಳ ಆದಿಪುರಾಣ (2002), ಪಂಪನ ಆದಿಪುರಾಣ ಕಥಾಮೃತ (2003), ರನ್ನನ ಸರಳ ಗದಾಯುದ್ಧ (2005) ಮೊದಲಾದವು. ಎಲ್ಲರೂ ಸುಲಭವಾಗಿ ಓದಿ ಅರ್ಥೈಸಿಕೊಳ್ಳಲು ಸಹಾಯಕವಾಗುವ ರೀತಿಯಲ್ಲಿ ಸಂಪಾದಿಸಿರುವ ಇವರ ಈ ಕೃತಿಗಳು ನಿಜಕ್ಕೂ ಮೌಲಿಕವಾಗಿವೆ. ಮೂಲ ಕಾವ್ಯಗಳ ಉದ್ದುದ್ದ ಪಂಕ್ತಿಗಳನ್ನು ಅರ್ಥಭಾವಗಳಿಗನುಗುಣವಾಗಿ ಚಿಕ್ಕ ಚಿಕ್ಕ ಘಟಕಗಳಾಗಿ ವಿಭಜಿಸಿ, ಕಷ್ಟವೆನಿಸಿದ ಕಡೆಗಳಲ್ಲಿ ಸಂಧಿ, ಸಮಾಸಗಳನ್ನು ಬಿಡಿಸಿ, ಸೂಕ್ತ ಲೇಖನ ಚಿಹ್ನೆಗಳನ್ನು ಬಳಕೆಮಾಡಿ, ಅಗತ್ಯವೆನಿಸಿದೆಡೆ ಪ್ರತಿಯೊಂದು ಆಶ್ವಾಸದಲ್ಲಿಯೂ ಉಪಶೀರ್ಷಿಕೆಗಳನ್ನಳವಡಿಸಿ, ಛಂದೋಬಂಧಗಳನ್ನು ಪರಿಚಯಿಸಿ, ಗ್ರಂಥಪಾಠಗಳನ್ನು ನೂತನ ವಿಧಾನದಲ್ಲಿ ಅಳವಡಿಸಿ– ಹೀಗೆ ಹಲವಾರು ವಿಧಾನಗಳನ್ನು ವಿನೂತನವಾಗಿ ಅನುಸರಿಸಿ ಓದುಗರಿಗೆ ನೀಡಿರುವುದು ಇಲ್ಲಿನ ವಿಶೇಷತೆಯಾಗಿದೆ; ಗ್ರಂಥಸಂಪಾದನೆಯನ್ನು ಸೃಜನಶೀಲತೆಯ ಮಟ್ಟಕ್ಕೆ ಒಯ್ದ ಇವರ ಅಪೂರ್ವವಿದ್ವತ್ತನ್ನೂ ಈ ಕೃತಿಗಳು ಪರಿಚಯಿಸುತ್ತವೆ. ಪಂಪನ 'ಆದಿಪುರಾಣ'ದ ಸಂಪಾದನೆ ಇವರ ಪ್ರಕಾಂಡ ವಿದ್ವತ್ತಿಗೆ ಸಾಕ್ಷಿಯಾಗಿದೆ.

ಬಸವಣ್ಣನವರ ವಚನಗಳು (1952), ಅಲ್ಲಮನ ವಚನ ಚಂದ್ರಿಕೆ (1960), ಶಿವದಾಸ ಗೀತಾಂಜಲಿ (1963), ಬಸವ ವಚನಾಮೃತ (ಭಾಗ1– 1964; ಭಾಗ2–1989), ಅಕ್ಕನ ವಚನಗಳು (1966), ಅಲ್ಲಮನ ವಚನಗಳು (1969), ಶಿವಗಣ ಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯಸಂಪಾದನೆ (1969), ಬೆಡಗಿನ ವಚನಗಳು (1998), ಪ್ರಭುದೇವರ ಷಟ್ಸ್ಥಲದ ವಚನಗಳು(2005)–ಇವೇ ಮೊದಲಾದವು ಇವರ ಅತ್ಯಮೂಲ್ಯ ಸಂಪಾದಿತ ಕೃತಿಗಳಾಗಿವೆ; ವೀರಶೈವ ಸಾಹಿತ್ಯ ಸಂಶೋಧನ ಕ್ಷೇತ್ರದಲ್ಲಿ ಅಗ್ರಗಣ್ಯವಾಗಿವೆ.

ಸರ್ವಜ್ಞನ ವಚನಗಳು (1972), ತಿರುಮಲಾರ್ಯನ ಚಿಕದೇವರಾಯ ಸಪ್ತಪದಿ (1971), ಕಲ್ಯಾಣದ ಮಾಯಿದೇವನ ಶಿವಾನುಭವ ಸೂತ್ರ (1998), ಹರಿಹರನುಕಂಡ ಜ್ಯೋತಿರ್ಲಿಂಗದ ಮೂರು ಮುಖಗಳು (ಹರಿಹರನ ಮೂರು ರಗಳೆಗಳ ಸಂಗ್ರಹ 1958), ತೊರವೆ ರಾಮಾಯಣ ಸಂಗ್ರಹ (1951), ಸರಳ ಸಿದ್ಧರಾಮ ಚರಿತೆ (2000), ರಾಘವಾಂಕನ ಸರಳ ಹರಿಶ್ಚಂದ್ರ ಕಾವ್ಯ (2001)– ಹೀಗೆ ಇವರು ವಿಶಿಷ್ಟವಾಗಿ ಸಂಪಾದಿಸಿರುವ ಕೃತಿಗಳ ಸಂಖ್ಯೆ ಅನೇಕ. ಕನ್ನಡ ಛಂದಸ್ಸಂಪುಟ ಎಂಬ ಶೀರ್ಷಿಕೆಯಲ್ಲಿ ನಾಗವರ್ಮ, ಈಶ್ವರಕವಿ, ಗುಣಚಂದ್ರ, ವೀರಭದ್ರರ ಛಂದೋಗ್ರಂಥಗಳನ್ನು ಹಲವಾರು ಅನುಬಂಧಗಳ ಜೊತೆಗೆ ಪರಿಷ್ಕರಿಸಿ ಸಂಪಾದಿಸಿದ್ದಾರೆ. ವಿಸ್ತೃತ ಪಾಠದೊಂದಿಗೆ ಪರಿಷ್ಕರಿಸಿ ಸಂಪಾದಿಸಿರುವ ಕೇಶಿರಾಜನ 'ಶಬ್ದಮಣಿ ದರ್ಪಣಂ' ವ್ಯಾಕರಣ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲಾಗಿದೆ.

ಬಹುಭಾಷಾವಿಶಾರದರಾದ ಇವರು ಅಶ್ವಘೋಷನ ಬುದ್ಧಚರಿತೆ ಮತ್ತು ಸೌಂದರನಂದ ಮಹಾಕಾವ್ಯಗಳನ್ನು ವಚನರೂಪದಲ್ಲಿ ಕನ್ನಡದಲ್ಲಿ ರೂಪಾಂತರಿಸಿ ಬುದ್ಧನ ಜೀವನ ಮತ್ತು ತತ್ತ್ವಗಳು ಕನ್ನಡಿಗರಿಗೆ ಲಭ್ಯವಾಗುವಂತೆ ಮಾಡಿರುವುದು ಶ್ಲಾಘನೀಯ ಸಂಗತಿಯಾಗಿದೆ. ಭಾಸನ ಭಾರತ ರೂಪಕ (1958)–ಇದು ಸಂಸ್ಕೃತ ನಾಟಕಕಾರ ಭಾಸನ ಏಕಾಂಕ ನಾಟಕಗಳ ಕನ್ನಡ ಅನುವಾದ. ನಾಟಕಾಮೃತ ಬಿಂದುಗಳು (1958) ಸಂಸ್ಕೃತ ನಾಟಕಗಳ ಅನುವಾದವಾಗಿದೆ. ಭಾಸನ ರಾಮಾಯಣ ಮೂಲದ ನಾಟಕಗಳನ್ನು ರಾಮಾಯಣ ನಾಟಕ ತ್ರಿವೇಣಿ ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿದ್ದಾರೆ (1958). ನಿಜಗುಣ ಶಿವಯೋಗಿಯ ಆರು ವೇದಾಂತ ಕಾವ್ಯಗಳ ಸರಳ ಗದ್ಯಾನುವಾದ ಇವರ ನಿಜಗುಣ ಶಿವಯೋಗಿಯ ತತ್ತ್ವದರ್ಶನ ಕೃತಿ (1991).

ಸೃಜನಶೀಲ ಲೇಖಕರಾಗಿಯೂ ಕವಿಯಾಗಿಯೂ ಇವರು ಗುರುತಿಸಿಕೊಂಡಿದ್ದಾರೆ. ಠಾಣಾಂತರ (1994), ಜಾಲಾರಿ (1999), ಚಾಯಿಬಾಬಾ (2005)–ಇವು ಇವರ ಕವನ ಸಂಕಲನಗಳು. ಕಲಬುರ್ಗಿಯ ಶರಣ ಬಸವ ಎಂಬುದು ಇವರು ರಚಿಸಿದ ಜೀವನ ಚರಿತ್ರೆ.

ಇವರ ಸಾಹಿತ್ಯಸೇವೆಗಾಗಿ ದೊರೆತಿರುವ ಪ್ರಶಸ್ತಿ, ಪುರಸ್ಕಾರಗಳು ಅಪಾರ. ಅವುಗಳಲ್ಲಿ ಮುಖ್ಯವಾದವು: ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1977), ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1994), ಚಿದಾನಂದ ಪ್ರಶಸ್ತಿ (1994), ಸಂ.ಶಿ. ಭೂಸನೂರುಮಠ ಪ್ರಶಸ್ತಿ (1994), ಪಂಪ ಪ್ರಶಸ್ತಿ (2000), ಚಾವುಂಡರಾಯ ಪ್ರಶಸ್ತಿ (2002), ಬಸವ ಪುರಸ್ಕಾರ

ರಾಷ್ಟ್ರೀಯ ಪ್ರಶಸ್ತಿ (2005), ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪುರಸ್ಕಾರ (2000), ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಸಮ್ಮಾನ್ (2005). (ಸಿ.ಪಿ.ಎಸ್.)

**ಬಸವಲಿಂಗ ಕವಿ**: ಸು. 1679. ವೀರಶೈವ ಕವಿ. ಕೊಟ್ಟೂರು ಬಸವೇಶ್ವರಪುರಾಣ ಎಂಬ ಗ್ರಂಥದ ಕರ್ತೃ. ಇವನ ತಂದೆಯ ಹೆಸರು ಗುರು. ಕರಣಿಕಾಗ್ರಣಿ ಭೀಮರಸನ ವಂಶೋತ್ಪನ್ನನಾದ ಬಸವಣ್ಣದಂಡನಾಥ ಇವನ ತಾತ, ಕವಿ ಕಲ್ಲಮಾಂಕ ದೊಡ್ಡಪ್ಪ. ಶಿವಗಂಗೆಯ ಮೇಲಣಗವಿಯ ಸಿಂಹಾಸನಾಧಿಪತಿ ಮಲೆಯ ಶಾಂತೇಶ್ವರ ಇವನ ಗುರು. ಶಿವಗಂಗೆ ಕವಿಯ ಸ್ಥಳವಾಗಿರಬಹುದು ಎಂಬ ಅಭಿಪ್ರಾಯವಿದೆ. ಪೂರ್ವಕವಿಗಳಲ್ಲಿ ಪಾಲ್ಕುರಿಕೆ ಸೋಮನಾಥ, ಭೀಮಕವಿ, ಹರೀಶ, ಪಂಡಿತೇಂದ್ರ, ತೋಂಟದ ಸಿದ್ಧಲಿಂಗಯತಿ, ಸಿದ್ಧನಂಜೇಶ, ಷಡಕ್ಷರದೇವ–ಇವರನ್ನು ಸ್ಮರಿಸಿದ್ದಾನೆ. ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ, ನೀಲಾಂಬಿಕೆ, ಗಂಗಾಂಬಿಕೆ ಮೊದಲಾದ ಶಿವಶರಣಶರಣೆಯ ರನ್ನೂ ಸ್ತುತಿಸಿದ್ದಾನೆ.

ಕೊಟ್ಟೂರು ಬಸವೇಶ್ವರಪುರಾಣ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 19 ಸಂಧಿಗಳಿವೆ. ಈ ಕಾವ್ಯವನ್ನು 1679ರಲ್ಲಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಶಿವನ ಮಹಿಮೆಯನ್ನು ಲೋಕದಲ್ಲಿ ಹರಡಲು ಶಿವನಾಜ್ಞೆಯಿಂದ ಭೂಲೋಕದಲ್ಲಿ ಬಂದು ನೆಲೆಸಿದ ಕೊಟ್ಟೂರು ಬಸವೇಶ್ವರ ಎಂಬ ಶಿವಭಕ್ತನ ಕಥೆ ಇದರ ವಸ್ತು. ಹಿಂದೆ ಇದೇ ಕಥೆಯನ್ನೂ ಸಿದ್ಧನಂಜೇಶ, ಗರುಣಿಯ ಮಹೇಶ, ಬಸವರಾಜ ಇವರು ವರ್ಣಕವಾಗಿ ಬರೆದಿದ್ದರು. ಅವನ್ನು ನೋಡಿ ಕವಿ ಈ ಗ್ರಂಥವನ್ನು ರಚಿಸಿದುದಾಗಿ ತಿಳಿದುಬರುತ್ತದೆ. ವರ್ಣನೆಗಳಲ್ಲಿ ಕವಿ ಸಮಯವೇ ತುಂಬಿದ್ದರೂ ಆಕರ್ಷಣೆಯಿದೆ. ಸ್ವಕಲ್ಪನೆಗಳೂ ಬಹಳವಿವೆ. ಆದರೆ ಭಾವ ನಾದಗಳ ಮೇಳಕ್ಕೆ ಭಾಷೆಯನ್ನು ಹೊಂದಿಸುವಲ್ಲಿ ಕೆಲವೆಡೆಗಳಲ್ಲಿ ಅಷ್ಟಾಗಿ ಲಾಲಿತ್ಯ ಕಂಡುಬರುವುದಿಲ್ಲ.

ಇವನಲ್ಲದೆ ಕನ್ನಡ ಸಾಹಿತ್ಯದಲ್ಲಿ ಬಸವಲಿಂಗರಾಜ, ಬಸವಲಿಂಗದೇವ ಎಂಬ ಹೆಸರಿನ ಇಬ್ಬರು ಕವಿಗಳೂ ಬಸವಲಿಂಗ ಎಂಬ ಹೆಸರಿನ ನಾಲ್ಕು ಜನ ಕವಿಗಳೂ ಕಂಡುಬರುತ್ತಾರೆ. ಸು. 1611ರಲ್ಲಿದ್ದ ಬಸವಲಿಂಗನು ಶಿವಾಧಿಕ್ಯಪುರಾಣವನ್ನು ಬರೆದಿದ್ದಾನೆ. ಸು. 1800 ರಲ್ಲಿದ್ದ ಬಸವಲಿಂಗನು ಸೌಮಿನೀಕಥೆಯೆಂಬ ಕೃತಿಯನ್ನು ರಚಿಸಿದ್ದಾನೆ. 18ನೆಯ ಶತಮಾನದಲ್ಲಿದ್ದ ಬಸವಲಿಂಗದೇವನು ಬಸವೇಶ್ವರದೇವರ ಪುರಾಣದ ಕಥಾಸಾಗರವನ್ನು ಬರೆದಿದ್ದಾನೆ. ಸು. 1830ರಲ್ಲಿದ್ದ ಬಸವಲಿಂಗನು ಶರಣಬಸವರಗಳೆ ಮತ್ತು ಶರಣಬಸವರಗಳೆಕಂದ ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. 19ನೆಯ ಶತಮಾನದಲ್ಲಿದ್ದ ಬಸವಲಿಂಗನು ಅಭಿಮನ್ಯುವಿನ ದುಂದುಮೆಯನ್ನು ರಚಿಸಿದ್ದಾನೆ. ಬಸವಲಿಂಗರಾಜನು ಮಲೆಯ ಮಾದಸ್ತೋತ್ರವನ್ನು ಬರೆದಿದ್ದಾನೆ. (ಕೆ.ಜಿ.ಎನ್.)

**ಬಸವಲಿಂಗಪ್ಪ, ಬಿ.**: 1924–92. ಕ್ರಾಂತಿಕಾರಿ ವಿಚಾರಗಳ ದಲಿತ ನಾಯಕ; ಮಾಜಿ ಸಚಿವರು. ಇವರು ಚಿತ್ರದುರ್ಗಜಿಲ್ಲೆ (ಈಗ ದಾವಣಗೆರೆ ಜಿಲ್ಲೆ) ಹರಿಹರ ನಗರದಲ್ಲಿ 1924 ಏಪ್ರಿಲ್ 21ರಂದು ಜನಿಸಿದರು. ತಂದೆ ಜವಳಿ ಬಸಪ್ಪ, ತಾಯಿ ಸಿದ್ಧಲಿಂಗಮ್ಮ.

ಇವರು ಮೈಸೂರಿನಲ್ಲಿ ಬಿ.ಎ. ಪದವಿ ಮುಗಿಸಿದ ಬಳಿಕ ಬೆಳಗಾಂವಿಯಲ್ಲಿ ಎಲ್.ಎಲ್.ಬಿ. ಪದವಿ ಪಡೆದು ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿದರು. 1949ರಲ್ಲಿ ಕಾಂಗ್ರೆಸ್ ಪಕ್ಷ ಸೇರುವುದರ ಮೂಲಕ ರಾಜಕೀಯ ಕ್ಷೇತ್ರ ಪ್ರವೇಶ ಮಾಡಿದರು. ಮೊದಲಿಗೆ ಬೆಂಗಳೂರು ನಗರ ಕಾರ್ಪೊರೇಷನ್ ಸದಸ್ಯರಾದರು (1950). ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ, ಕರ್ನಾಟಕ ಏಕೀಕರಣ ಸಮಿತಿಯ ಕಾರ್ಯದರ್ಶಿಯಾಗಿ ದುಡಿದರು. 1957ರಲ್ಲಿ ಬೆಂಗಳೂರು ದಕ್ಷಿಣದಿಂದ ಆಯ್ಕೆಯಾಗಿ ಮೊದಲ ಬಾರಿಗೆ ವಿಧಾನಸಭೆಯ ಸದಸ್ಯರಾದರು. ಭೂ ಸುಧಾರಣಾ ಸಮಿತಿಯಲ್ಲಿದ್ದ ಇವರನ್ನು ಉಪ ಗೃಹಸಚಿವರನ್ನಾಗಿ ನೇಮಿಸಲಾಯಿತು (1958–62). ಇವರ ಅಧಿಕಾರಾವಧಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಕ್ಷೀಣಿಸಿದ್ದು ಇವರ ಕಾರ್ಯದಕ್ಷತೆಗೆ ಸಾಕ್ಷಿ.

1972ರಲ್ಲಿ ನಡೆದ ಚುನಾವಣೆಯಲ್ಲಿ ವಿಧಾನಸಭೆಗೆ ಆಯ್ಕೆಯಾದ ಇವರು ವಸತಿ ಮತ್ತು ನಗರಾಡಳಿತ ಸಚಿವರಾದರು. ಈ ಅವಧಿಯಲ್ಲಿ ಅನೇಕ ಜನಪರ ಕ್ರಾಂತಿಕಾರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಗ್ರಾಮೀಣ ಪ್ರದೇಶಗಳ ಜನವಸತಿ ಯೋಜನೆಯನ್ನು ಜಾರಿಗೊಳಿಸಿದ್ದಲ್ಲದೆ ದಲಿತರಿಗೆ ಮತ್ತು ಇತರ ಬಡವರಿಗೆ ನಿವೇಶನಗಳನ್ನು ರೂಪಿಸಿ ಮನೆಕಟ್ಟಿಕೊಡುವುದು ಸರ್ಕಾರದ ಹೊಣೆಗಾರಿಕೆ ಎಂಬ ಕಾರ್ಯನೀತಿಯನ್ನು ಭದ್ರಗೊಳಿಸಿದರು. ನಗರಗಳ ಮತ್ತು ಪುರಸಭೆಗಳ ವಸತಿರಹಿತರಿಗೆ ವಸತಿ ನಿರ್ಮಿಸಲು ನಗರಾಭಿವೃದ್ಧಿ ಸಮಿತಿಗಳ 'ಸಾಮಾಜಿಕ ಬದ್ಧತೆ ತೆರಿಗೆ ನಿಧಿ'ಯನ್ನು ಸ್ಥಾಪಿಸಿದರು.

ಬಸವಲಿಂಗಪ್ಪನವರು ದಲಿತವರ್ಗದ ಕಷ್ಟಕಾರ್ಪಣ್ಯಗಳನ್ನು ಬಲ್ಲವರಾಗಿದ್ದರು. ಜೊತೆಗೆ ಅವರ ನೋವನ್ನು ಸಮಾಜದ ಮುಂದೆಯೂ ಸರ್ಕಾರದ ಮುಂದೆಯೂ ತೆರೆದಿಟ್ಟು ದಿಟ್ಟತನದಿಂದ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದರು. ಇದರಿಂದಾಗಿ ಇವರು ಇಡೀ ರಾಜ್ಯದ ಹಾಗೂ ರಾಷ್ಟ್ರದ ಗಮನ ಸೆಳೆದರು. ಅಂದು ಕೆಲವು ಪೌರಾಡಳಿತ ಪ್ರದೇಶಗಳಲ್ಲಿ ರೂಢಿಯಲ್ಲಿದ್ದ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ ಸರ್ಕಾರ ಆದೇಶ ಹೊರಡಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದರು. ಇದು ಇವರಿಗೆ ಶೋಷಿತವರ್ಗದಲ್ಲಿ ಜನಪ್ರಿಯತೆಯನ್ನೂ ರಾಜಕೀಯ ವಲಯದಲ್ಲಿ ಖ್ಯಾತಿಯನ್ನು ತಂದುಕೊಟ್ಟಿತು. ಮೂಢನಂಬಿಕೆಗಳ ಅಂಧಾನುಕರಣೆಯ ವಿರುದ್ಧ ಪ್ರತಿಭಟಿಸಿ ಭಾಷಣಗಳನ್ನು ಮಾಡಿ ಜನರಿಗೆ ವೈಚಾರಿಕ ಪ್ರಜ್ಞೆಯ ಹೊಸ ಸಂದೇಶವನ್ನೂ ತಲುಪಿಸಿದರು.

ಇವರು 1973ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಾಹಿತ್ಯ ಕುರಿತು ಮಾತನಾಡುತ್ತಾ ಅದರಲ್ಲಿರುವ ಹೆಚ್ಚಿನ ಅಂಶ 'ಬೂಸಾ' ಎಂದು ಕರೆದು ಹೊಸ ವಿವಾದಕ್ಕೆ ನಾಂದಿ ಹಾಕಿದರು. ಇದರಿಂದ ಉಂಟಾದ ಪರ–ವಿರೋಧ ಚಳವಳಿಗಳು ಅಂತಿಮವಾಗಿ ಇವರ ರಾಜೀನಾಮೆಯಲ್ಲಿ ಪರ್ಯವಸಾನಗೊಂಡಿತು. ಕನ್ನಡ ಕೃತಿಗಳ ಬಗ್ಗೆ ಪುನರಾಲೋಚಿಸುವ ಒಂದು ಪಂಥ ಬೆಳೆಯಲು ಹಾಗೂ ದಲಿತ ಪ್ರತಿಭಟನೆ ಒಂದು ಪ್ರಬಲ ಚಳವಳಿಯಾಗಿ ಬೆಳೆಯಲು ಈ ಸಂದರ್ಭ ಕಾರಣವಾಯಿತೆನ್ನಬಹುದು.

ಬಸವಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಅನುಯಾಯಿಯಾಗಿದ್ದರು. ಇವರನ್ನು 1974ರ ಏಪ್ರಿಲ್ 8ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ಅನುಸೂಚಿತ ಜಾತಿಗಳು ಮತ್ತು ಪಂಗಡಗಳ ಹಾಗೂ ಅಲ್ಪಸಂಖ್ಯಾತ ವಿಭಾಗದ ವಿಶೇಷ ಪ್ರತಿನಿಧಿಯಾಗಿ ನೇಮಿಸಿತು. ಈ ಸಮುದಾಯಗಳ ಕುಂದುಕೊರತೆಗಳನ್ನು ಕುರಿತು ವರದಿ ಸಲ್ಲಿಸುವ ಹೊಣೆಗಾರಿಕೆಯನ್ನು ಇವರಿಗೆ ವಹಿಸಿತು.

ಈ ನೇಮಕಾತಿ ಇವರು ಅಖಿಲ ಭಾರತ ವ್ಯಾಪ್ತಿಯಲ್ಲಿ ದಲಿತವರ್ಗದ ಧುರೀಣರಾಗಿ ಪ್ರತಿಬಿಂಬಿತವಾಗಲು ಅವಕಾಶ ಕಲ್ಪಿಸಿತು.

ಇವರು 1977ರ ಜುಲೈನಲ್ಲಿ ಮತ್ತೆ ರಾಜ್ಯದ ಕಂದಾಯ ಸಚಿವರಾಗಿ ನೇಮಿತರಾದರು. ಕಂದಾಯ ಸಚಿವರಾಗಿ ಬಡವರ, ದಲಿತರ ಪರವಾದ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರು. ಡಿ. ದೇವರಾಜ ಅರಸರು ರೂಪಿಸಿದ ಭೂ ಸುಧಾರಣಾ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಲಕ್ಷಾಂತರ ಗೇಣಿದಾರರಿಗೆ ಭೂ ಒಡೆತನ ದೊರಕಲು ನೆರವಾದರು. ವಸತಿ ಹೀನರಿಗಾಗಿ ಭೂ ಸ್ವಾಧೀನಪಡಿಸಿಕೊಂಡು ನಿವೇಶನಗಳನ್ನು ನೀಡಲು ಆದ್ಯತೆ ನೀಡಿದರು. ಸರ್ಕಾರಿ ದರಖಾಸ್ತು ಜಮೀನಿನಲ್ಲಿ ಶೇಕಡ 60ರಷ್ಟನ್ನು ದಲಿತ ಮತ್ತು ದುರ್ಬಲ ವರ್ಗಗಳಿಗೆ ನೀಡಲು ಕಾಯಿದೆ ಜಾರಿಗೆ ತಂದರು. ಹಿಂದೆ ದಲಿತರಿಗೆ ನೀಡಿದ್ದ ಭೂಮಿ ನಿಯಮ ಮೀರಿ ಪರಭಾರೆಯಾಗಿದ್ದಲ್ಲಿ ಅಂತಹ ಆಸ್ತಿ ವರ್ಗಾವಣೆ ರದ್ದುಮಾಡಲು ಆದೇಶ ಹೊರಡಿಸಿದರು. ತೋಟಿ, ತಳವಾರ, ಕುಳವಾಡಿ ಮೊದಲಾದ ಹಿಂದಿನ ಪಾರಂಪರಿಕ ಗ್ರಾಮ ನೌಕರರಿಗೆ ನೀಡಿದ್ದ ಇನಾಮತಿ ಜಮೀನಿನ ಪರಭಾರೆಯನ್ನು ರದ್ದುಪಡಿಸುವ ಕಾಯಿದೆಯನ್ನು ಜಾರಿಗೆ ತಂದರು (1979). ಅಂಥ ನೌಕರರಿಗೆ ಸರ್ಕಾರ ವೇತನ ನೀಡಲು ಅವಕಾಶ ಕಲ್ಪಿಸಿದರು. ಇವರ ಈ ಬಗೆಯ ಎಲ್ಲ ಕೆಲಸಗಳಿಗೆ ಅಂದು ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸರ ಬೆಂಬಲವಿದ್ದದ್ದು ಇವರಿಗೆ ಹೆಚ್ಚಿನ ಸ್ಫೂರ್ತಿಯಾಗಿತ್ತು.

1985ರಲ್ಲಿ ನಾಲ್ಕನೆಯ ಬಾರಿಗೆ ಯಲಹಂಕ ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿ ಬಂದರು. ವಿರೋಧ ಪಕ್ಷದ ಪ್ರಮುಖರಾಗಿ ಉತ್ತಮ ಸಂಸದೀಯ ನಡವಳಿಕೆಗಳಿಗೆ ಪೂರಕವಾಗಿ ಕೆಲಸ ಮಾಡಿದರು. 1989ರ ಚುನಾವಣೆಯಲ್ಲೂ ಮತ್ತೆ ಅದೇ ಕ್ಷೇತ್ರದಿಂದ ಚುನಾಯಿತರಾದರು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಡಿ. ವೀರೇಂದ್ರ ಪಾಟೀಲರ ಸಚಿವ ಸಂಪುಟದಲ್ಲಿ ಪಶುಸಂಗೋಪನೆ ಮತ್ತು ಅರಣ್ಯ ಖಾತೆ ನಿರ್ವಹಿಸಿದರು.

ಬಸವಲಿಂಗಪ್ಪನವರು ನಡೆಸಿದ ಅಧಿಕಾರಕ್ಕಿಂತ ಇವರು ಪ್ರತಿಪಾದಿಸಿದ ಮತ್ತು ಕಾರ್ಯರೂಪಕ್ಕೆ ತಂದ ವಿಚಾರಗಳು ದೂರಗಾಮಿ ಪ್ರಯೋಜನ, ಉಪಯುಕ್ತತೆ ಉಳ್ಳವಾಗಿದ್ದವು. ಇಂಗ್ಲಿಷ್ ವಿದ್ಯಾಭ್ಯಾಸ ಪ್ರತಿಯೊಬ್ಬರಿಗೂ ಅಗತ್ಯ ಎಂದು ಸಮರ್ಥಿಸಿದವರಲ್ಲಿ ಇವರು ಪ್ರಮುಖರು. ಪ್ರತಿವ್ಯಕ್ತಿಯೂ ಆತ್ಮಸ್ಥೈರ್ಯದಿಂದ, ಸ್ವತಂತ್ರ ಚಿಂತನೆಯಿಂದ ವಿಚಾರಶೀಲತೆಯಿಂದ ಬದುಕಬೇಕೆಂದು ಬಯಸಿದ ಇವರು 1992 ಡಿಸೆಂಬರ್ 27ರಂದು ನಿಧನರಾದರು. (ಎಂ.ಆರ್‌ಇ.)

**ಬಸವಲಿಂಗಯ್ಯ, ಎಂ. ಎಸ್.**: 1902–43. ಕನ್ನಡ ಸಂಸ್ಕೃತ ಭಾಷೆಗಳ ಪಂಡಿತರು, ಮೈಸೂರಿನವರು. ತಂದೆ ಶಿವಾನುಭವಿ ಸಿದ್ದಣ್ಣನವರು. ಬಸವಲಿಂಗಯ್ಯನವರು 1902 ಅಕ್ಟೋಬರ್ 23ರಂದು ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಎಂ.ಎ. ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಡೆದು ಮದರಾಸಿನಲ್ಲಿ ಬಿ.ಎಲ್. ಪದವೀಧರರಾದರು. ಕೆಲದಿನ ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಕೆಲಸ ಮಾಡಿದ ಇವರು ಅನಂತರ ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಪ್ರಧಾನ ಕ್ಯೂರೇಟರಾಗಿದ್ದರು (1936–43).

ಇವರು ವೀರಭದ್ರ ವಿಜಯ ಚಂಪೂ ಮತ್ತು ಹರಿಶ್ಚಂದ್ರ ಕಾವ್ಯ ಸಂಗ್ರಹ ಎಂಬ ಎರಡು ಗ್ರಂಥಗಳನ್ನು ಸಂಪಾದಿಸಿದ್ದಾರೆ.

ಅಹೋಬಿಲಪಂಡಿತರ ವಾಕ್ಯಾರ್ಥರತ್ನ ಎಂಬ ಮೀಮಾಂಸಾ ಗ್ರಂಥದ ಮೂರು ಪರಿಚ್ಛೇದಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಗುರಿಕಾರ್ ಮರಿಮಲ್ಲಪ್ಪನವರ ಸಂಕ್ಷಿಪ್ತ ಚರಿತ್ರೆ, ವಾಣೀವಿಲಾಸಸನ್ನಿಧಾನ ಚರಿತಮ್–ಇವು ಇವರ ಸ್ವತಂತ್ರ ಕೃತಿಗಳು. (ಜಿ.ಎಂ.)

**ಬಸವಾಪಟ್ಟಣ[1]**: ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಹೋಬಳಿಯ ಒಂದು ಗ್ರಾಮ. ಅರಕಲಗೂಡಿನ ದಕ್ಷಿಣಕ್ಕೆ ಸು. 22ಕಿಮೀ ದೂರದಲ್ಲಿದೆ. ಇಲ್ಲಿ ಹಿಂದಿನ ಕೋಟೆಯ ಅವಶೇಷಗಳಿವೆ. ಹೊಯ್ಸಳ ರಾಮನಾಥ ಮತ್ತು ನರಸಿಂಹರ ಕಾಲದಲ್ಲಿ ಇದೊಂದು ಅಗ್ರಹಾರವಾಗಿತ್ತೆನ್ನಲಾಗಿದೆ. ಶಾಂತೀಶ್ವರ, ಪ್ರಣತಾರ್ಥಿಹರೇಶ್ವರ ಮತ್ತು ಲಕ್ಷ್ಮೀಕಾಂತ ಎಂಬ ಹೊಯ್ಸಳಕಾಲದ ಮೂರು ದೇವಾಲಯಗಳಿವೆ. ಇಲ್ಲಿನ ದೇವಾಲಯಗಳಲ್ಲಿ ಕೆಲವು ವೀರಗಲ್ಲುಗಳಿದ್ದು ಆಗಿನ ಇತಿಹಾಸ ದತ್ತ ಬೆಳಕು ಚಲ್ಲುತ್ತವೆ. (ಕೆ.ಟಿ.ಆರ್.)

**ಬಸವಾಪಟ್ಟಣ[2]**: ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಒಂದು ಗ್ರಾಮ. ಚನ್ನಗಿರಿಯ ವಾಯವ್ಯಕ್ಕೆ 31ಕಿಮೀ ದೂರದಲ್ಲಿದೆ. ಈ ಗ್ರಾಮ ಕಿರಿದಾದ ಕಣಿವೆಯಲ್ಲಿದ್ದು ಸುತ್ತಲೂ ಬೆಟ್ಟಗಳಿಂದ ಆವೃತವಾಗಿದೆ. ಇದು ಹಿಂದೆ ಪಾಳೆಯಪಟ್ಟಿನ ಕೇಂದ್ರವಾಗಿತ್ತು ಆ ಪಾಳೆಯಪಟ್ಟಿನ ಮೊದಲಿಗ ಧೂಮರಾಜನ ಕಾಲದಲ್ಲಿ ಬಹುಶಃ ಇಲ್ಲಿಯ ಕೋಟೆಯನ್ನು ಕಟ್ಟಲಾಯಿತು. ಆತ ಬಸವಾಪಟ್ಟಣದ ಕೋಟೆಗೆ ಹೊರಗೋಡೆಯನ್ನು ಕಟ್ಟಿಸಿದ. ಕಾಲ ಕ್ರಮೇಣ ಊರು ಬಿದನೂರು ನಾಯಕರ ಕೈಸೇರಿತು. ಮುಂದೆ ಮುಗಲರು ಬಸವಾಪಟ್ಟಣವನ್ನು ತಮ್ಮದನ್ನಾಗಿ ಮಾಡಿಕೊಂಡರು. ಆ ಕಾಲದಲ್ಲಿ ಸಿರಾ ಪ್ರಾಂತ್ಯದ ಅಧಿಪತಿಯಾಗಿದ್ದ ದಿಲಾವರ್ ಖಾನನ ಆಳ್ವಿಕೆಯಲ್ಲಿ ಬಸವಾಪಟ್ಟಣ ಸು. 20 ವರ್ಷಗಳ ಕಾಲ ಪ್ರಗತಿಪಥದಲ್ಲಿತ್ತು.

ಹಸ್ತಾಂತರವಾಗುತ್ತಲೇ ಇದ್ದ ಬಸವಾಪಟ್ಟಣ ಒಮ್ಮೆ ಮರಾಠರ ಕೈಸೇರಿ 7ವರ್ಷಗಳ ಕಾಲ ಅವರ ಆಧಿಪತ್ಯಕ್ಕೆ ಒಳಪಟ್ಟಿತ್ತು. ಹೈದರ್ ಅಲಿ ಬಸವಾಪಟ್ಟಣದ ಕೋಟೆ ಕೊತ್ತಲಗಳನ್ನು ನಾಶಪಡಿಸಿದ. 1791ರಲ್ಲಿ ಮರಾಠರು ಪರಶುರಾಮ ಭಾವುವಿನ ನೇತೃತ್ವದಲ್ಲಿ ದಾಳಿ ನಡೆಸಿ ಬಸವಾಪಟ್ಟಣವನ್ನು ಧ್ವಂಸ ಮಾಡಿದರು. 1799ರಲ್ಲಿ ದುರ್ಗದ ಜೀರ್ಣೋದ್ಧಾರವಾದರೂ ಬಸವಾಪಟ್ಟಣ ತನ್ನ ಹಿಂದಿನ ವೈಭವವನ್ನು ಮತ್ತೆ ಪಡೆಯಲಿಲ್ಲ. 19ನೆಯ ಶತಮಾನದ ಆದಿಭಾಗದಲ್ಲಿ ಈ ಊರನ್ನು ಸಂದರ್ಶಿಸಿದ ಬುಕನಾನ್ ಎಂಬ ಪ್ರವಾಸಿ ತನ್ನ ಪ್ರವಾಸಕಥನದಲ್ಲಿ ಬಸವಾ ಪಟ್ಟಣದ ಕೋಟೆಯ ಸಮೀಪದಲ್ಲಿ ಒಂದು ಮಸೀದಿ ಇತ್ತೆಂದು ಹೇಳಿದ್ದಾನೆ. ಬಾಬಾಬುಡನ್ ಎಂಬಾತ ಮೊದಲು ಇಲ್ಲಿದ್ದನೆಂದು ಪ್ರತೀತಿ.

ಬಸವಾಪಟ್ಟಣದ ದಕ್ಷಿಣಕ್ಕೆ ಬಡೇಸಾಹೇಬರ ಕೆರೆ ಎಂಬ ತಟಾಕವಿದೆ. ಇಲ್ಲಿ ಎರಡು ಶಿಲಾಶಾಸನಗಳಿವೆ. ಅವುಗಳ ಸ್ವಲ್ಪಭಾಗ ಪಾರಸೀ ಭಾಷೆಯಲ್ಲೂ ಮತ್ತೆ ಸ್ವಲ್ಪಭಾಗ ಕನ್ನಡದಲ್ಲಿಯೂ ಇದೆ. ಆ ಶಾಸನಗಳಲ್ಲಿ ಕೆರೆಯನ್ನು ಕಟ್ಟಿಸಿದ ಬಗ್ಗೆ ಪ್ರಸ್ತಾಪವಿದೆ. (ಕೆ.ಟಿ.ಆರ್.)

**ಬಸವಾಪಟ್ಟಣದ ಪಾಳೆಯಗಾರರು**: ಸು. 1540–1636. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿರುವ ಬಸವಾಪಟ್ಟಣದಿಂದ ಆ ಸುತ್ತಣ ಪ್ರಾಂತ್ಯವನ್ನು ಆಳುತ್ತಿದ್ದ ಪಾಳೆಯಗಾರರು. ಈ ವಂಶದ ಮೂಲಪುರುಷ ವಿಜಯನಗರದಿಂದ ಬಂದ ಧೂಮರಾಜ ಎಂಬವನು. ಇವನು ಈ ಪ್ರದೇಶದಲ್ಲಿ ಬೇಟೆಯಾಡುತ್ತಿದ್ದಾಗ ಅಲ್ಲಿನ ಬೇಡನೊಬ್ಬನ ರೂಪವತಿಯಾದ ಮಗಳನ್ನು ಕಂಡು ಮೋಹಿತನಾಗಿ ಮದುವೆಯಾಗ ಬಯಸಿದನೆಂದೂ ಆದರೆ ಆ ಬೇಡ ಅನ್ಯಕುಲದವನಿಗೆ ಮಗಳನ್ನು ಕೊಡಲು ನಿರಾಕರಿಸಿದನೆಂದೂ ಆಗ ಧೂಮರಾಜ ತಾನು ಅಲ್ಲಿಯೇ ನೆಲಸುವುದಾಗಿ ಮತ್ತು ಆಕೆಯ ಮಕ್ಕಳಿಗೆ ಅಧಿಕಾರ ಕೊಡುವುದಾಗಿ ಮಾತು ಕೊಟ್ಟು, ಆತನನ್ನು ಒಪ್ಪಿಸಿ ಮದುವೆಯಾಗಿ ಧೂಮನಬೆಟ್ಟ ಎಂಬಲ್ಲಿ ನೆಲಸಿದನೆಂದೂ ಪ್ರತೀತಿ. ಇವನಿಗೆ ಇಬ್ಬರು ಗಂಡುಮಕ್ಕಳು–ಕೊಂಗಣನಾಯಕ ಮತ್ತು ರಾಮಪ್ಪನಾಯಕ. ಕೊಂಗಣನಾಯಕ ಅಧಿಕಾರಕ್ಕೆ ಬಂದ ಮೇಲೆ ಬಸವಾಪಟ್ಟಣದಲ್ಲಿ ಕೋಟೆಯನ್ನು ಕಟ್ಟಿ

ಅನಂತರಪುರದಿಂದ ಮಾಯಕೊಂಡ ಮತ್ತು ಹರಿಹರದಿಂದ ತರೀಕೆರೆವರೆಗಿನ ವಿಸ್ತಾರವಾದ ಪ್ರದೇಶವನ್ನು ವಶಪಡಿಸಿಕೊಂಡ.

ಇವನ ಅನಂತರ ಬಸವಾಪಟ್ಟಣದ ಪಾಳೆಯಪಟ್ಟಿಗೆ ಅಧಿಪತಿಯಾದ ವೀರ ಹನುಮಪ್ಪನಾಯಕ ವಿಜಯನಗರದ ಸೇನೆಯಲ್ಲಿ ದಳಪತಿಯಾಗಿದ್ದು ಮಹಮ್ಮದೀಯ ರಾಜ್ಯಗಳೊಡನೆ ನಡೆದ ಯುದ್ಧಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರಿಂದ ವಿಜಯನಗರದ ಸಾಮ್ರಾಟರು ಈ ಪಾಳೆಯಪಟ್ಟಿನ ಅಸ್ತಿತ್ವಕ್ಕೆ ಒಪ್ಪಿಗೆ ಇತ್ತುದಲ್ಲದೆ ಸಂತೆಬೆನ್ನೂರನ್ನೂ ಕೊಟ್ಟರು. ಹನುಮಪ್ಪನೂ ಸ್ವತಃ ರಾಜ್ಯವನ್ನು ವಿಸ್ತರಿಸಿದ. ಅನಂತರ ಇಮ್ಮಡಿ ಹನುಮಪ್ಪನಾಯಕ, ಹುಚ್ಚು ಹನುಮಪ್ಪನಾಯಕ ಮತ್ತು ಕೊಂಗಣನಾಯಕ ಅಧಿಪತಿಗಳಾದರು. 1636 ರಲ್ಲಿ ಬಿಜಾಪುರದ ಸುಲ್ತಾನನ ಪರವಾಗಿ ಅವನ ದಂಡನಾಯಕ ರಣದುಲ್ಲಾಖಾನ ದಂಡೆತ್ತಿಬಂದು ಬಸವಾಪಟ್ಟಣವನ್ನು ವಶಪಡಿಸಿಕೊಂಡಾಗ ಕೊಂಗಣನಾಯಕ ತರೀಕೆರೆಯಲ್ಲಿ ತಳವೂರಿದ. ಮುಂದೆ ಈತನ ವಂಶಸ್ಥರು ತರೀಕೆರೆ ಪಾಳೆಯಗಾರರು (ನೋಡಿ) ಎಂದು ಪ್ರಸಿದ್ಧರಾದರು. **(ಕೆ.ಟಿ.ಆರ್.;ಎಂ.ಕೆ.ಬಿ.)**

**ಬಹಮನೀ ವಂಶ**: 1347–1538ರ ಅವಧಿಯಲ್ಲಿ ಉತ್ತರ ಕರ್ನಾಟಕ ಮತ್ತು ದಖನ್ನಿನ ಬಹುಭಾಗದ ಮೇಲೆ ಒಡೆತನ ಹೊಂದಿದ್ದ ಪ್ರಸಿದ್ಧ ರಾಜವಂಶ. ಕರ್ನಾಟಕದಲ್ಲಿ ನೆಲೆಹೂಡಿದ ಪ್ರಪ್ರಥಮ ಇಸ್ಲಾಮೀ ರಾಜವಂಶ ಸಹ ಇದೇ. ಈ ವಂಶದ ಅರಸರ ಮೊದಲ ರಾಜಧಾನಿ ಗುಲ್ಬರ್ಗ, ಅನಂತರ ಬಿದರೆ (ಈಗಿನ ಬೀದರ್).

ಬಹಮನೀ ಸಾಮ್ರಾಜ್ಯ ತನ್ನ ಸುಮಾರು ಎರಡು ಶತಮಾನಗಳ ಅಸ್ತಿತ್ವದಲ್ಲಿ ಕರ್ನಾಟಕದ ರಾಜಕೀಯ ರಂಗದಲ್ಲಿ ಒಂದು ಪ್ರಬಲಶಕ್ತಿಯಾಗಿ ಮೆರೆಯಿತು. ಅಲ್ಲದೆ ಇಸ್ಲಾಮ್ ಧರ್ಮ ಇಲ್ಲಿ ನೆಲೆಯೂರಿ ಪ್ರಸಾರವಾಗಲೂ ಕಾರಣವಾಗಿ, ಹೊಸ ಆಡಳಿತ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ರೂಢಿಗೆ ತಂದು ದಖನೀ ಸಾಹಿತ್ಯ ಮತ್ತು ಇಸ್ಲಾಮೀ ವಾಸ್ತುಶಿಲ್ಪದ ಬೆಳೆವಣಿಗೆಯನ್ನು ಪ್ರೋತ್ಸಾಹಿಸಿತು.

**ರಾಜಕೀಯ ಇತಿಹಾಸ:** ದಕ್ಷಿಣ ಭಾರತದ ಇತಿಹಾಸದಲ್ಲಿ ಬಹುಮನೀ ರಾಜ್ಯ ಸ್ಥಾಪನೆ ಒಂದು ಪ್ರಮುಖ ಘಟ್ಟ. ಅಮೀರರೆಂಬ ಮುಸ್ಲಿಂ ಸರದಾರರು ಈ ರಾಜ್ಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ದೆಹಲಿಯ ಸುಲ್ತಾನ ಮಹಮ್ಮದ್–ಬಿನ್–ತುಗಲಕ್‌ನ ಪರವಾಗಿ ದಖನ್ನಿನಲ್ಲಿ ಅಧಿಕಾರಸ್ಥರಾಗಿದ್ದ ಇವರು ಸುಲ್ತಾನನ ವಿರುದ್ಧ ದಂಗೆಯೆದ್ದು, ಎದುರಿಸಲು ಬಂದ ಅವನ ಸೈನ್ಯವನ್ನು ನುಚ್ಚುನೂರು ಮಾಡಿದರು. ಅನಂತರ ಈ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ತಮ್ಮವರಲ್ಲಿ ಒಬ್ಬನಾಗಿದ್ದ ಹಸನ್ ಗಂಗು ಎಂಬುವನನ್ನು ಅವಿರೋಧವಾಗಿ ಮುಖಂಡನನ್ನಾಗಿ ಆಯ್ಕೆಮಾಡಿ, ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದರು.

ಹಸನ್ ಗಂಗು 1347 ಆಗಸ್ಟ್ 3ರಂದು ಅಲಾಉದ್ದೀನ್ ಹಸನ್ ಬಹಮನ್ ಷಾ ಎಂಬ ಹೆಸರಿನಲ್ಲಿ ತುಗಲಕನ ದಖನ್ ಭಾಗಕ್ಕೆಲ್ಲಾ ಸುಲ್ತಾನನೆಂದು ಘೋಷಿಸಿಕೊಂಡು ದೌಲತಾಬಾದಿನಿಂದ ರಾಜ್ಯವಾಳತೊಡಗಿದ. ಹನ್ನೊಂದು ವರ್ಷಗಳ ಕಾಲ (1347–58) ರಾಜ್ಯಭಾರ ಮಾಡಿದ ಈತ ಮಹತ್ವಾಕಾಂಕ್ಷಿಯಾಗಿದ್ದು ವಿಸ್ತರಣ ನೀತಿಯನ್ನು ಅನುಸರಿಸಿ ದಖನ್ ಪ್ರದೇಶದಲ್ಲೆಲ್ಲ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿದ. ಕೋಟಗಿರಿ, ಮರಂ, ಮಹೇಂದ್ರಿ, ಅಕ್ಕಲಕೋಟೆ, ವಾರಂಗಕಲ್,ಗುಲ್ಬರ್ಗ, ಸಾಗರ, ಜಮಖಂಡಿ, ಪ್ರದೇಶಗಳನ್ನು ವಶಪಡಿಸಿಕೊಂಡ. ವಾರಂಗಲ್ಲಿನ ಕಾಪಯನಾಯಕನೊಡನೆ ಸ್ನೇಹ ಬೆಳೆಸಿದ. ಗುಲ್ಬರ್ಗದಲ್ಲಿ ಹಾಗೂ ಕಲ್ಯಾಣಿಯಲ್ಲಿ ದಂಗೆಯೆದ್ದ ಅಧಿಕಾರಿಗಳನ್ನು ಸೋಲಿಸಿ ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿದ. ಕಲ್ಯಾಣಿಯನ್ನು ವಶಪಡಿಸಿಕೊಂಡದ್ದು ಇವನ ಸಾಧನೆಗಳಲ್ಲಿ ಮುಖ್ಯವಾದುದು. ಈ ವಿಜಯ ಇವನಿಗೆ ಎಷ್ಟು ಸಂತೋಷದ ಸಂಗತಿಯಾಗಿತ್ತೆಂದರೆ, ಇದರ ನೆನಪಿಗಾಗಿ ತನ್ನ ರಾಜಧಾನಿ ದೌಲತಾಬಾದಿಗೆ ಫತಹ್‌ಬಾದ್(ವಿಜಯದ ನಗರ) ಎಂದು ಹೆಸರಿಟ್ಟ. ಈ ಸಾಧನೆಗಳ ಅನಂತರ ಆಗ್ಗೆ ಸುಮಾರು 60 ವರ್ಷದವನಾಗಿದ್ದ ಸುಲ್ತಾನ ಗುಲ್ಬರ್ಗಕ್ಕೆ ಹೋಗಿ ನೆಲೆಸಿದ. ಅದಕ್ಕೆ ಅಹಸಾನಾಬಾದ್ ಎಂದು ಹೆಸರಿಟ್ಟ. ಮುಂದೆ ತನ್ನ ಕಾರ್ಯಾಚರಣೆಗಳನ್ನೆಲ್ಲಾ ಗುಲ್ಬರ್ಗದಿಂದ ನಡೆಸಲಾರಂಭಿಸಿದ. ದಾಬೋಲ್ ಮತ್ತು ಗೋವಗಳನ್ನು ಆಕ್ರಮಿಸಿದ್ದಲ್ಲದೆ ಉತ್ತರದಲ್ಲಿ ಮಾಂಡು ಮತ್ತು ಪೂರ್ವದಲ್ಲಿ ತೆಲಂಗಾಣದವರೆಗೆ ದಂಡೆತ್ತಿಹೋದ. 1358ರಲ್ಲಿ ಇವನು ಮರಣಹೊಂದುವ ವೇಳೆಗೆ ಬಹಮನೀ ರಾಜ್ಯ ಉತ್ತರದಲ್ಲಿ ಬೆರಾರ್‌ನಿಂದ ದಕ್ಷಿಣದಲ್ಲಿ ಕೃಷ್ಣಾನದಿಯವರೆಗೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ ಪೂರ್ವದಲ್ಲಿ ಸುಮಾರು ಹೈದರಾಬಾದಿನ ಎಲ್ಲೆಯವರೆಗೂ ವಿಸ್ತರಿಸಿತ್ತು. ಸ್ನೇಹಿತರಲ್ಲಿ ಇವನಿಗೆ ಅಪಾರ ವಿಶ್ವಾಸವಿತ್ತು. ತನ್ನ ಶತ್ರುಗಳಿಗೂ ಔದಾರ್ಯವನ್ನು ತೋರುವ ಹಿರಿಯ ಗುಣ ಇವನಲ್ಲಿತ್ತು. ತನ್ನ ರಾಜ್ಯದ ಮುಸ್ಲಿಮೇತರ ಪ್ರಜೆಗಳ ಬಗ್ಗೆ ಇವನು ಉದಾರವಾಗಿ ನಡೆದುಕೊಂಡ. ಹಿಂದುಗಳ ಮೇಲೆ ತಲೆಗಂದಾಯವನ್ನು (ಜಿಜಿಯಾ) ಹಾಕದಿದ್ದ ಭಾರತದ ಮುಸ್ಲಿಂ ಸುಲ್ತಾನರಲ್ಲಿ ಬಹಮನ್ ಷಾ ಮೊದಲಿಗ. ರಾಜ್ಯದೊಳಕ್ಕೆ ಬರುತ್ತಿದ್ದ ವ್ಯವಸಾಯೋತ್ಪನ್ನಗಳ ಮೇಲೆ ತೆರಿಗೆಗಳನ್ನು ವಿಧಿಸಿ ದೇಶದ ವ್ಯಾಪಾರಕ್ಕೆ ಪ್ರೋತ್ಸಾಹ ಕೊಟ್ಟ.

ಅನಂತರ ಸಿಂಹಾಸನವನ್ನೇರಿದ ಇವನ ಹಿರಿಯ ಮಗ ಒಂದನೆಯ ಮಹಮ್ಮದ್ (1358–75) ಬಹಮನೀ ಮನೆತನದ ಹತೋಟಿಯನ್ನು ಬಿಗಿಗೊಳಿಸಲು ಕ್ರಮಗಳನ್ನು ಕೈಗೊಂಡ. ತೆಲಂಗಾಣ ಮತ್ತು ವಿಜಯನಗರ ಸಾಮ್ರಾಜ್ಯದೊಡನೆ ಯುದ್ಧ ನಡೆಸಿದ. ತೆಲಂಗಾಣದ ಯುದ್ಧದಲ್ಲಿ ಜಯಗಳಿಸಿ ಗೋಲ್ಕೊಂಡವನ್ನೂ ವಿಜಯನಗರದ ಮೇಲೆ ಜಯಗಳಿಸಿ ಮುದ್ಗಲ್ಲನ್ನೂ ಪಡೆದ. ದೇಶದಲ್ಲಿ ಸರ್ಕಾರದ ವಿರುದ್ಧ ನಡೆಯುತ್ತಿದ್ದ ದಂಗೆಗಳನ್ನು ಅಡಗಿಸಿದ. ಆಡಳಿತದಲ್ಲಿ ಸುಧಾರಣೆಗಳನ್ನು ಜಾರಿಗೆ ತಂದ. ಸರ್ಕಾರದ ಅಧಿಕಾರಿಗಳನ್ನು ಅರ್ಹತೆಯ ಆಧಾರದ ಮೇಲೆ ಆರಿಸುವ ಪದ್ಧತಿಯನ್ನು ಅನುಷ್ಠಾನಕ್ಕೆ ತಂದ. ರಾಜ್ಯವನ್ನು ಅತ್ರಫ್‌ಗಳೆಂಬ ಪ್ರಾಂತ್ಯಗಳಾಗಿ ವಿಂಗಡಿಸಿ, ಅವುಗಳನ್ನು ನಿಷ್ಠೆಯಿಂದಿರುವ ದಂಡನಾಯಕರ ವಶಕ್ಕೆ ಒಪ್ಪಿಸಿದ. ಇದರಿಂದ ಸುಲ್ತಾನನ ಸ್ಥಾನ ಸುಭದ್ರವಾಯಿತು. 1375ರಲ್ಲಿ ಇವನು ಮರಣ ಹೊಂದಿದ. ಇವನ ಕಾಲದಲ್ಲಿ ದೇಶದಲ್ಲಿ ಶಿಸ್ತು, ಶಾಂತಿ ನೆಲಸಿತ್ತು. ದೇಶ ಸಮೃದ್ಧವಾಗಿತ್ತು.

ಮಹಮ್ಮದನ ಮರಣಾನಂತರ ದೇಶದಲ್ಲಿ ಅರಾಜಕತೆಯುಂಟಾಯಿತು. ದಂಗೆ, ಕುತಂತ್ರ, ಅಧಿಕಾರಕ್ಕಾಗಿ ಹೋರಾಟ ಸಾಮಾನ್ಯವಾಯಿತು. ಮುಜಾಹಿದ್ (1375–78), 1ನೆಯ ದಾವೂದ್ (1378), ಘಿಯಾಸುದ್ದೀನ್ ತಹಂತನ್ ಮತ್ತು ಶಂಸುದ್ದೀನ್ ದಾವುದ್ (ಇಬ್ಬರೂ 1397ರಲ್ಲಿ) ಎಂಬ ನಾಲ್ಕು ಜನ ಸುಲ್ತಾನರು ಅಲ್ಪಕಾಲ ಸಿಂಹಾಸನವೇರಿ ಹಾಗೆಯೇ ತಳ್ಳಲ್ಪಟ್ಟರು. ಈ ಮಧ್ಯೆ 2ನೆಯ ಮಹಮ್ಮದ್ ಮಾತ್ರ ಸ್ವಲ್ಪ ದೀರ್ಘ ಕಾಲ ಆಳಿದ. ಅನುಭವವುಳ್ಳ, ಸಮರ್ಥರಾದ ಇರಾನಿಯರನ್ನು ಜವಾಬ್ದಾರಿಯ ಸ್ಥಾನಗಳಿಗೆ ನೇಮಿಸಿದ್ದು ಈ ಕಾಲದ ಒಂದು ವಿಶೇಷವೆನ್ನಬಹುದು. ಆದರೆ ಬಹಮನೀ ಸುಲ್ತಾನರಿಗೆ ಇದರಿಂದ ಮುಂದೆ ತೊಂದರೆಗಳು ಸಂಭವಿಸಿದುವು.

ಮುಂದಿನ ದೊರೆ ತಾಜುದ್ದೀನ್ ಫಿರೋಜ್ (1397–1422). ಇವನ ಕಾಲದಲ್ಲಿ ಬಹಮನೀ ರಾಜ್ಯ ಉಚ್ಛ್ರಾಯಸ್ಥಿತಿಗೇರಿತು. ಈ ಕಾಲದಲ್ಲಿ ಇವನು ರಾಯಚೂರು ದೋಅಬ್ ಪ್ರಾಂತ್ಯವನ್ನು ವಿಜಯನಗರದಿಂದ ಮತ್ತೆ ಗೆದ್ದುಕೊಂಡ. ಅನೇಕ ದಂಗೆಗಳನ್ನು ಹತ್ತಿಕ್ಕಿದ. ಅಮೀರ್

## ಬಹಮನೀ ಅರಸರ ವಂಶಾವಳಿ



ತೈಮುರನ ಆಸ್ಥಾನಕ್ಕೆ ಒಂದು ಸೌಹಾರ್ದದ ರಾಯಭಾರವನ್ನು ಕಳುಹಿಸಿ ಟಾರ್ಟರರ ತೊಂದರೆಯಿಂದ ರಾಜ್ಯವನ್ನು ಕಾಪಾಡಿದ. ಇವನ ಕಾಲದಲ್ಲಿ ರಾಜ್ಯದ ಭಂಡಾರ ವರ್ಧಿಸಿತು. ರಾಜ್ಯದ ಪ್ರಗತಿಗೆ ಕೆಲವು ಸುಧಾರಣೆಗಳು ಜಾರಿಗೆ ಬಂದುವು. ದಖ್ಖನಿ ಸಂಸ್ಕೃತಿ ರೂಪುಗೊಂಡಿತು. ಗುಲ್ಬರ್ಗದ ಸಂತ ಬಂದೇ ನವಾಜರನ್ನು ಹಿಂಸೆಗೆ ಗುರಿಮಾಡಿದ ಒಂದು ಕಹಿಪ್ರಸಂಗ ವನ್ನು ಬಿಟ್ಟರೆ ಉಳಿದ ರೀತಿಯಲ್ಲಿ ಇವನ ಆಡಳಿತ ಚೆನ್ನಾಗಿತ್ತೆಂದೇ ಹೇಳಬಹುದು.

1422 ಸೆಪ್ಟೆಂಬರ್ 22ರಂದು ತಾಜುದ್ದೀನ್ ಫಿರೋಜನನ್ನು ಸಿಂಹಾಸನ ದಿಂದ ತಳ್ಳಿ ಅವನ ತಮ್ಮ ಶಿಹಾಬುದ್ದೀನ್ ಅಹ್ಮದ್ ಅಧಿಕಾರಕ್ಕೆ ಬಂದ. ಜೂನ್ 1424ರಲ್ಲಿ ರಾಜಧಾನಿಯನ್ನು ಗುಲ್ಬರ್ಗದಿಂದ ಬಿದರೆಗೆ ವರ್ಗಾಯಿಸಿದ. ಈ ಕಾರ್ಯದಿಂದ ಅದುವರೆಗೆ ಬಹಮನೀ ರಾಜ್ಯದ ಕಾರ್ಯಸ್ಥಾನವಾಗಿದ್ದ ಗುಲ್ಬರ್ಗ ಹಿನ್ನೆಲೆಗೆ ಸರಿದದ್ದಲ್ಲದೆ, ಬಹಮನೀ ರಾಜತ್ವದ ಸ್ವರೂಪವೇ ಬದಲಾಯಿತು. ರಕ್ತಪಾತ ಮತ್ತು ಆಂತರಿಕ

ಬಂದೇನವಾಜ್ ದರ್ಗಾ, ಗುಲ್ಬರ್ಗ

ಕಲಹಗಳಿಂದ ಕ್ಷುಬ್ಧವಾಗಿದ್ದ ರಾಜಪರಂಪರೆಯ ಇತಿಹಾಸ ಕೊನೆಗೊಂಡು ಮುಂದೆ ಪ್ರಭುತ್ವ ಸರಳವಾಗಿ ಹಿರಿಯ ಮಗನಿಗೆ ಬದಲಾಗುವಂತಾದುದು ಬಹು ಮುಖ್ಯ ಬದಲಾವಣೆ. ಶಿಹಾಬುದ್ದೀನ್ ಅಹ್ಮದ್ ಬಿದರೆಯಲ್ಲಿ ನೆಲೆನಿಂತಮೇಲೆ ತನ್ನ ರಾಜ್ಯದ ಭದ್ರತೆ ಮತ್ತು ವಿಸ್ತರಣೆಯತ್ತ ಗಮನ ಹರಿಸಿದ. 1425–26ರಲ್ಲಿ ವಿಜಯನಗರದ ಮೇಲೆ ದಂಡೆತ್ತಿಹೋಗಿ, ರಾಯಚೂರು ದೋಅಬ್ ಪ್ರದೇಶವನ್ನೆಲ್ಲಾ ಆಕ್ರಮಿಸಿ, ವಿಜಯನಗರದ ಸೈನ್ಯವನ್ನು ಅವರ ರಾಜಧಾನಿಯವರೆಗೆ ಒತ್ತಿ ಅಪಾರವಾದ ದ್ರವ್ಯವನ್ನು ಕಪ್ಪವಾಗಿ ಸಂಗ್ರಹಿಸಿದ. ಅದೇ ವರ್ಷ ದಂಗೆಯೆದ್ದಿದ್ದ ಮಾಹೂರ್ ಮತ್ತು ಮಾಳವದ ಸುಲ್ತಾನನೊಡನೆ ಸೇರಿದ್ದ ಖೇರ್ಲದ ನರಸಿಂಗ ಇವರನ್ನು ಸದೆಬಡೆಯಲು ಉತ್ತರಕ್ಕೆ ನಡೆದ. ನರಸಿಂಗನ ಸಹಾಯಕ್ಕೆ ಬಂದ ಮಾಳವದ ಹೋಶಂಗನನ್ನು ಹಿಮ್ಮೆಟ್ಟಿಸಿದ. ಮುಂದೆ ಅವರೊಡನೆ ಉದಾರವಾಗಿ ಸ್ನೇಹ ಬೆಳೆಸಿದ. 1429–30ರಲ್ಲಿ ಗುಜರಾತಿನ ವಿರುದ್ಧ ದಂಡೆತ್ತಿಹೋದರೂ ಅದರಲ್ಲಿ ಸಫಲನಾಗದೆ ಕೊನೆಗೆ ಶಾಂತಿಯುತ ಒಪ್ಪಂದ ಮಾಡಿಕೊಂಡ. 1433ರಲ್ಲಿ ತೆಲಂಗಾಣದತ್ತ ನಡೆದು ವಾರಂಗಲ್ ಮೊದಲಾದ ಅನೇಕ ಭಾಗಗಳನ್ನು ವಶಪಡಿಸಿಕೊಂಡ. ಈ ಎಲ್ಲ ಸಾಧನೆಗಳ ಅನಂತರ ಅಹ್ಮದ್ 1436 ಏಪ್ರಿಲ್ 17ರಂದು ನಿಧನನಾದ. ಶಿಹಾಬುದ್ದೀನ್ ಅಹ್ಮದ್ ಬಹಮನೀ ಸುಲ್ತಾನರಲ್ಲಿ ಪ್ರಸಿದ್ಧನಾದವ. ಇವನ ಕಾಲದಲ್ಲಿ ರಾಜ್ಯದಲ್ಲಿ ಪ್ರಮುಖ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಬದಲಾವಣೆಗಳುಂಟಾದವು. ಇವನ ಆಸ್ಥಾನಕ್ಕೆ ಇರಾನ್, ಇರಾಕ್, ಮತ್ತು ಅರೇಬಿಯಗಳಿಂದ ಪಂಡಿತರು ಬಂದಿದ್ದರು. ರಾಜಧಾನಿಯ ವರ್ಗಾವಣೆ, ಮಿಲಿಟರಿ ಮತ್ತು ಇತರ ಅಧಿಕಾರಗಳ ನೇಮಕ, ಹಿಂದುಗಳೊಡನೆ ಸೌಹಾರ್ದತೆ, ಸಂತರೊಡನೆ ನಿಕಟಸಂಬಂಧ ಮೊದಲಾದವು ಈ ಸುಲ್ತಾನನ ಸಾಧನೆಗಳು.

1ನೆಯ ಅಹ್ಮದನ ಅನಂತರ ಪಟ್ಟಕ್ಕೆ ಬಂದ ಅವನ ಹಿರಿಯ ಮಗ ಅಲಾಉದ್ದೀನ್ ಅಹ್ಮದ್ II (1436–58) ವಿಜಯನಗರದ ಎರಡನೆಯ ದೇವರಾಯನನ್ನು ಸೋಲಿಸಿ, ಸಂಗಮೇಶ್ವರ ಮತ್ತು ಖಾನ್‌ದೇಶದ ರಾಜರುಗ ಳನ್ನು ಹತ್ತಿಕ್ಕಿದ. ಅನೇಕ ದಂಗೆಗಳನ್ನು ಅಡಗಿಸಿದ. ಇತಿಹಾಸದಲ್ಲಿ ಪ್ರಸಿದ್ಧನಾದ ಮಹ್ಮೂದ್ ಗಾವಾನ್ ಇವನ ಕಾಲದಲ್ಲಿ ಪ್ರಗತಿಗೆ ಬಂದು ಆಡಳಿತವನ್ನು ಸಮರ್ಥವಾಗಿ ನಿರ್ವಹಿಸಿದ. ರಾಜನೂ ತನ್ನ ಆಳ್ವಿಕೆಯ ಮೊದಲ ಭಾಗದಲ್ಲಿ ಉದಾರ ನೀತಿಯನ್ನು ಅನುಸರಿಸಿ ರಾಜ್ಯದಲ್ಲಿ ಪ್ರಬಲವಾಗಿದ್ದ ದೇಶೀ ಮತ್ತು ವಿದೇಶೀ ಅಮೀರರ ಗುಂಪುಗಳಲ್ಲಿದ್ದ ವೈಷಮ್ಯವನ್ನು ತಡೆಗಟ್ಟಲು ಶ್ರಮಿಸಿದರೂ ಕೊನೆಗೆ ಅಶಕ್ತನಾಗಿ ಚಂಚಲ ಚಿತ್ತನಾಗಿ ಬಹಳಷ್ಟು ರಕ್ತಪಾತಕ್ಕೆ ಎಡೆಮಾಡಿದ. ಬಹಮನೀ ರಾಜ್ಯದ ಛಿದ್ರೀಕರಣಶಕ್ತಿಗಳು ಮೊಳಕೆಯೊಡೆಯಲಾರಂಭಿಸಿದುವು.

2ನೆಯ ಅಹಮ್ಮದನ ಹಿರಿಯ ಪುತ್ರ ಹುಮಾಯೂನ್ (1458–61) ಮುಂದಿನ ರಾಜ. ಪಟ್ಟಕ್ಕೆ ಬಂದೊಡನೆ ಮಹ್ಮೂದ್ ಗಾವಾನನನ್ನು ಮುಖ್ಯಮಂತ್ರಿಯಾಗಿ ನೇಮಿಸಿದ. ಆದರೆ ರಾಜ್ಯದ ದೇಶೀ ವಿದೇಶೀ ಅಮೀರರ ಗುಂಪುಗಳ ವೈಷಮ್ಯ ಮತ್ತಷ್ಟು ಬೆಳೆಯಿತು. ರಾಜಸಂಬಂಧಿಗಳ ದಂಗೆಗಳೂ ನಡೆದುವು. ಆದರೂ ರಾಜ್ಯವನ್ನು ಭದ್ರವಾಗಿ ಉಳಿಸಲು ಹುಮಾಯೂನ್ ಪ್ರಯತ್ನಿಸಿದ. ಕೇವಲ ಮೂರು ವರ್ಷಗಳ ಆಳ್ವಿಕೆಯ ಅನಂತರ ಮರಣಹೊಂದಿದ. ಅನಂತರ ಅವನ ಚಿಕ್ಕ ವಯಸ್ಸಿನ ಮಗ ನಿಜಾಮುದ್ದೀನ್ ಅಹ್ಮದನನ್ನು ಸಿಂಹಾಸನದಲ್ಲಿ ಕೂರಿಸಲಾಯಿತು. ಸುಲ್ತಾನ ಅಪ್ರಾಪ್ತವಯಸ್ಕನಾಗಿದ್ದರಿಂದ ಆಡಳಿತ ನೋಡಿ ಕೊಳ್ಳಲು ಮೂವರು ಸದಸ್ಯರುಳ್ಳ ಒಂದು ಸಮಿತಿಯನ್ನು ರಚಿಸಲಾಯಿತು. ಆದರೆ ಕಿರಿಯ ಸುಲ್ತಾನ ಹೆಚ್ಚು ದಿನ ಬದುಕದೆ 1463ರಲ್ಲಿ ಮರಣಹೊಂದಿದ. ಅವನ ಮರಣಾನಂತರ ಅವನ ಸಹೋದರ 3ನೆಯ ಮಹಮ್ಮದ್ ಅಧಿಕಾರಕ್ಕೆ ಬಂದ.

3ನೆಯ ಮಹಮ್ಮದನ ಆಳ್ವಿಕೆಯ ಕಾಲದಲ್ಲಿ (1463–82) ಮಹ್ಮೂದ್ ಗಾವಾನನ ಹೆಸರು ಪ್ರಸಿದ್ಧಿಗೆ ಬಂದಿತು. ಅವನ ನೇತೃತ್ವದಲ್ಲಿ ಬಹಮನೀ ರಾಜ್ಯ ಸಾಮ್ರಾಜ್ಯದ ಮಟ್ಟಕ್ಕೇರಿ ಕೀರ್ತಿ ಗಳಿಸಿತು. ರಾಜಕೀಯ, ಆಡಳಿತ, ಸಾಹಿತ್ಯ, ಪಾಂಡಿತ್ಯ, ಕಲೆ ಮತ್ತು ಸಂಸ್ಕೃತಿಗಳ ಕ್ಷೇತ್ರಗಳಲ್ಲಿ ಬಹಮನೀ ಸಾಮ್ರಾಜ್ಯ ಪ್ರಗತಿ ಸಾಧಿಸಿತು. ಗಾವಾನ್ ಬಹಮನೀ ಸಾಮ್ರಾಜ್ಯದ ಎಲ್ಲೆಯನ್ನು ಬಂಗಾಳ ಕೊಲ್ಲಿ ಮತ್ತು ಅರಬ್ಬೀ ಸಮುದ್ರಗಳವರೆಗೆ ವಿಸ್ತರಿಸಿದ. ಆಡಳಿತಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ. ಸಾಮ್ರಾಜ್ಯವನ್ನು 8 ಪ್ರಾಂತ್ಯಗಳಾಗಿ ವಿಂಗಡಿಸಿದ. ಅಫಕೀ ಮತ್ತು ದಖನೀ ಸರದಾರರ ನಡುವೆ ಸಮತೋಲನವನ್ನು ಕಾಪಾಡಲು ಶ್ರಮಿಸಿದ. ಎರಡೂ ಪಕ್ಷಗಳಿಂದ ದಕ್ಷರಾದವರನ್ನು ಆರಿಸಿ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದ. ರಾಜ್ಯದ ಗೌರವವನ್ನು ಹೆಚ್ಚಿಸಿದ. ಆದರೂ ಕೊನೆಗೆ ದಖನೀ ಸರದಾರರ ಕುತಂತ್ರಕ್ಕೆ ಬಲಿಯಾಗಿ, ರಾಜ ಇವನ ಶಿರಚ್ಛೇದ ಮಾಡಿಸಿದ. ಮಹ್ಮೂದ್ ಗಾವಾನನ ಕೊಲೆ ಬಹಮನೀ ರಾಜ್ಯದ ನಾಶಕ್ಕೆ ನಾಂದಿಯಾಯಿತು.

3ನೆಯ ಮಹಮ್ಮದನ ಅನಂತರ ಶಿಹಾಬುದ್ದೀನ್ ಮಹ್ಮೂದ್ (1482–1518) ಪಟ್ಟಕ್ಕೆ ಬಂದ. ಇವನು ಸುಖಲೋಲುಪನೂ ಅಶಕ್ತನೂ ಆಗಿದ್ದ. ತನ್ನ ಆಳ್ವಿಕೆಯ ಪರ್ಯಂತ ಸ್ವಾರ್ಥಿಗಳಾಗಿ ಕುಟಿಲ ಕಾರುಬಾರುಗಳಲ್ಲಿ ನಿರತರಾಗಿದ್ದ ಅಧಿಕಾರಿಗಳ ಕೈಗೊಂಬೆಯಾಗಿದ್ದ. ಇದರಿಂದ ರಾಜ್ಯಾಧಿಕಾರಿಗಳ ವೈಮನಸ್ಯ ಸ್ಪಷ್ಟವಾಗಿ ರೂಪುಗೊಂಡು

ಪ್ರಾಂತ್ಯಾಧಿಕಾರಿಗಳು ಹೆಚ್ಚು ಕಡಿಮೆ ಸ್ವತಂತ್ರರಾಗಿ ವರ್ತಿಸತೊಡಗಿದರು. ಶಿಹಾಬುದ್ದೀನನ ಮರಣಾನಂತರ ಬಹಮನೀ ಸಾಮ್ರಾಜ್ಯದ ವೈಭವ ಅಸ್ತವಾಯಿತು.

ಬಹಮನೀ ಸಾಮ್ರಾಜ್ಯದ ಕೊನೆಯ ನಾಲ್ವರು ದೊರೆಗಳಾದ 4ನೆಯ ಅಹ್ಮದ್ (1518–20), ಅಲಾಉದ್ದೀನ್ (1520–23), ವಲ್ಲೀಯುಲ್ಲಾ



ಫಿರೋಜ್‌ನಗೋರಿ, ಗುಲ್ಬರ್ಗ

(1523–26), ಕಲೀಮುಲ್ಲಾ (1526–38)–ಇವರು ಹೆಸರಿಗೆ ಮಾತ್ರ ಸುಲ್ತಾನರಾಗಿದ್ದರು. ಈ ಕಾಲದಲ್ಲಿ ಬೆರಾರ್, ಅಹಮದ್‌ನಗರ ಬಿಜಾಪುರ ಮತ್ತು ತೆಲಂಗಾಣದ ಪ್ರಾಂತ್ಯಾಧಿಕಾರಿಗಳು ಎಲ್ಲ ವ್ಯವಹಾರಗಳಲ್ಲೂ ಪ್ರಭುಗಳಂತೆಯೇ ವರ್ತಿಸುತ್ತಿದ್ದರು. ನೆಪಮಾತ್ರಕ್ಕೆ ಸುಲ್ತಾನರನ್ನು ಗೌರವಿಸುತ್ತಿದ್ದರು. ಈ ಸುಲ್ತಾನರಾದರೋ ಬಿದರೆಯಲ್ಲಿ ಪ್ರಧಾನಿಯಾಗಿದ್ದ ಅಮೀರ್ ಬರೀದನ ಆಶ್ರಿತರಾಗಿ ಹೋಗಿದ್ದರು. ಅವರ ಪ್ರಭುತ್ವ ವಸ್ತುತಃ ಅರಮನೆಯ ಆವರಣಕ್ಕಷ್ಟೇ ಸೀಮಿತವಾಗಿತ್ತು. ಸು. 1538ರಲ್ಲಿ ಕಲೀಮುಲ್ಲಾ ಮೃತನಾಗುತ್ತಿದ್ದಂತೆ ಬಹಮನೀ ವಂಶದ ನಾಮಮಾತ್ರ ಪ್ರಭುತ್ವವೂ ಕೊನೆಗೊಂಡಿತು. **(ಬಿ.ಎಸ್.ಎ.)**

**ಆಡಳಿತ ವ್ಯವಸ್ಥೆ** : ಒಂದನೆಯ ಅಲಾಉದ್ದೀನನ ಕಾಲದಲ್ಲಿ ರಾಜ್ಯವನ್ನು ನಾಲ್ಕು ಪ್ರಾಂತಗಳಾಗಿ ವಿಂಗಡಿಸಲಾಗಿತ್ತು. ರಾಯಚೂರು, ಮುದ್ಗಲ್‌ಗಳನ್ನೊಳಗೊಂಡ ಅಹಸಾನಾಬಾದ್ ಎಂದು ನಾಮಕರಣ ಮಾಡಲ್ಪಟ್ಟ ಗುಲ್ಬರ್ಗ; ಬೀಡ್, ಜುನ್ನರ್, ಚೌಲ್‌ಗಳನ್ನೊಳಗೊಂಡ ದೌಲತಾಬಾದ್; ಮಾಹೊರನ್ನೊಳಗೊಂಡ ಬೆರಾರ್; ಇಂದೂರ್, ಕೌಲಾಸ್‌ಗಳನ್ನೊಳಗೊಂಡ ಬಹಮನೀ ತೆಲಂಗಾಣ–ಇವು ಆ ನಾಲ್ಕು ಪ್ರಾಂತಗಳು. ಅವನ ಪ್ರಧಾನಿಯಾಗಿದ್ದ ಸೈಫುದ್ದೀನ್ ಘೋರಿ ಬರೆದಿರುವ ನಷಾ–ಇ–ಉಲ್–ಮುಲ್ಕ್ ಎಂಬ ಗ್ರಂಥದಿಂದ ಆ ಕಾಲದ ಆಡಳಿತ ವ್ಯವಸ್ಥೆ ಬಗ್ಗೆ ಮತ್ತಷ್ಟು ವಿಷಯಗಳು ದೊರಕುತ್ತವೆ. ಕಾರ್ಯಾಂಗಕ್ಕೆ ಸಂಬಂಧಿಸಿದಂತೆ ವಕೀಲ್ (ಪ್ರಧಾನಿ), ವಜೀರ್ (ಮಂತ್ರಿ), ದಬೀರ್ (ಕಾರ್ಯದರ್ಶಿ) ಈ ಮುಖ್ಯ ಅಧಿಕಾರಿಗಳೂ ಸೈನ್ಯಕ್ಕೆ ಸಂಬಂಧಿಸಿದಂತೆ ಸರ್ಹದ್ದಾರ್ (ಸೇನೆಯ ನಾಯಕ), ಖಿಲಾದಾರ್ (ಕೋಟೆಯ ಪಾಲಕ) ಮತ್ತು ಭಕ್ಷಿ (ಹಣಕಾಸಿನ ಮುಖ್ಯಸ್ಥ) ಇವರುಗಳೂ ನ್ಯಾಯಾಂಗಕ್ಕೆ ಸಂಬಂಧಿಸಿದ ಹಾಗೆ ಖಾಜಿ (ನ್ಯಾಯಾಧೀಶ), ಮುಫ್ತೀ (ಕಾನೂನಿನ ವಿಶ್ಲೇಷಕ), ಕೊತ್ವಾಲ್ (ರಕ್ಷಣಾಧಿಕಾರಿ), ಮುಹ್ತಸೀಬ್ (ಸಾರ್ವಜನಿಕ ನೀತಿಪಾಲಕ) ಇತ್ಯಾದಿ ಅಧಿಕಾರಿಗಳೂ ರಾಜ್ಯದಲ್ಲಿರಬೇಕೆಂದು ಘೋರಿ ತನ್ನ ಗ್ರಂಥದಲ್ಲಿ ಸೂಚಿಸಿದ್ದಾನೆ. ಅದರಂತೆಯೇ ಸುಲ್ತಾನನ ಸರ್ಕಾರ ಸಹ ಇತ್ತು ಎಂದು ಹೇಳಲಾಗದಾದರೂ ಇದು ಆಡಳಿತಕ್ಕೆ ಮಾದರಿಯಾಗಿದ್ದಿರಬೇಕು.

ಆಡಳಿತಾನುಕೂಲಕ್ಕಾಗಿ ಅಲಾಉದ್ದೀನ್ ಮಾಡಿದ್ದ ಪ್ರಾಂತ್ಯ ವಿಂಗಡಣೆಗೆ ಹೆಚ್ಚು ನಿರ್ದಿಷ್ಟವಾದ ಖಚಿತವಾದ ಸ್ವರೂಪವನ್ನು ನೀಡಿದವನು ಅವನ ಮಗ ಒಂದನೆಯ ಮಹಮ್ಮದ್. ಇವನು ತನ್ನ ರಾಜ್ಯವನ್ನು ದೌಲತಾಬಾದ್, ಬೆರಾರ್, ಬಿದರೆ ಮತ್ತು ಗುಲ್ಬರ್ಗ ಎಂಬ ನಾಲ್ಕು ಅತ್ರಫ್ (ಪ್ರಾಂತ್ಯ)ಗಳಾಗಿ ವಿಂಗಡಿಸಿ, ಪ್ರತಿಯೊಂದು ಅತ್ರಫ್‌ಗೂ ಕ್ರಮವಾಗಿ ಮುಸ್ನದ್–ಇ–ಅಲಿ, ಮಜ್ಲಿಸ್–ಇ–ಅಲಿ, ಅಜಮ್–ಇ–ಹುಮಾಯೂನ್ ಮತ್ತು ಮಲಿಕ್ ನಾಇಬ್ ಎಂಬ ಬಿರುದಿನ ಅಧಿಕಾರಿಗಳನ್ನು ನೇಮಿಸಿದ. ಅಮೀರುಲ್ ಉಮರಾ ರಾಜ್ಯದ ಪ್ರಮುಖ ಸೇನಾನಿ. ಬಾರಬರ್ ದಾರಾನ್ ಎಂಬ ಹೆಸರಿನ ಅಧಿಕಾರಿಗಳು ಆವಶ್ಯಕವೆನಿಸಿದಾಗ ಸೈನ್ಯವನ್ನು ಶೇಖರಿಸುವ ಹೊಣೆಹೊತ್ತಿದ್ದರು. ರಾಜನಿಗೆ ಅಂಗರಕ್ಷಕರಾಗಿ ಯಕ್ಕಾ ಜವಾನಾ ಅಥವಾ ಸಿಲಹ್‌ದಾರಾ ಎಂಬ 200 ದಕ್ಷ ಸೈನಿಕರ ತಂಡವೊಂದಿತ್ತು. ಇವರು ಅರಸನ ಆಯುಧಗಳ ರಕ್ಷಕರಾಗಿದ್ದರು. ಅಲ್ಲದೆ 1,000 ಸೈನ್ಯಬಲದ ರಕ್ಷಕದಳವೂ ಅಸ್ತಿತ್ವಕ್ಕೆ ಬಂದಿತು. ಈ ವ್ಯವಸ್ಥೆ ಮಹ್ಮೂದ್ ಗಾವಾನನ ಕಾಲದವರೆಗೂ ಇದ್ದಿತು. ಆ ವೇಳೆಗೆ ಬಹಮನೀ ರಾಜ್ಯ ಬಹು ವಿಸ್ತಾರವಾಗಿದ್ದು, ಪೂರ್ವದಲ್ಲಿ ಒರಿಸ್ಸದ ಭಾಗಗಳು, ಪಶ್ಚಿಮದಲ್ಲಿ ಗೋವ, ದಕ್ಷಿಣದಲ್ಲಿ ಕೃಷ್ಣಾ ತುಂಗಭದ್ರಾ ಪ್ರದೇಶ ಮತ್ತು ಉತ್ತರದಲ್ಲಿ ಖಾನ್ ದೇಶದವರೆಗೂ ಹಬ್ಬಿತ್ತು. ಇಂತಹ ವಿಸ್ತಾರವಾದ ರಾಜ್ಯದ ಆಡಳಿತಕ್ಕೆ ಅನುಕೂಲವಾಗುವ ಬದಲಾವಣೆಗಳನ್ನು ಗಾವಾನ್ ರೂಪಿಸಿದ. ಹಿಂದಿನ ನಾಲ್ಕು ಅತ್ರಫ್‌ಗಳನ್ನು ಎಂಟು ಸರ್‌ಲಷ್ಕರ್‌ಗಳೆಂದು ಪುನರ್ವಿಂಗಡಿಸಲಾಯಿತು. ಹಳೆಯ ಬೆರಾರ್ ಪ್ರಾಂತಕ್ಕೆ ಬದಲು ಗಾವಿಲ್ ಮತ್ತು ಮಹರ್ ಎಂಬ ಎರಡು ಪ್ರಾಂತ್ಯಗಳು ಈಗ ರೂಪುಗೊಂಡುವು. ದೌಲತಾಬಾದ್ ಜುನ್ನರ್ ಸೇರಿದಂತೆ ಒಂದು, ಬಿಜಾಪುರ ಗುಲ್ಬರ್ಗಗಳು ಸೇರಿದಂತೆ ಒಂದು, ಹಿಂದಿನ ತೆಲಂಗಾಣಕ್ಕೆ ಹೊಸದಾಗಿ ವಶಪಡಿಸಿಕೊಳ್ಳಲಾದ ಪ್ರದೇಶಗಳನ್ನು ಸೇರಿಸಿ ರಾಜ ಮಹೇಂದ್ರಿ ಮತ್ತು ವಾರಂಗಲ್‌ಗಳು ಇನ್ನೆರಡು ಪ್ರಾಂತ್ಯಗಳು ಆದುವು. ಪ್ರಾಂತ್ಯಾಧಿಕಾರಿಗಳ ಕಕ್ಷೆಗೆ ಸೇರದೆ ನೇರವಾಗಿ ಸುಲ್ತಾನನ ಆಡಳಿತಕ್ಕೊಳಪಟ್ಟಂತೆ ಖಾಸಾ–ಇ–ಸುಲ್ತಾನಿ ಎಂಬುವೂ ಅಸ್ತಿತ್ವಕ್ಕೆ ಬಂದುವು. ಇದರಿಂದ ಪ್ರಾಂತ್ಯಾಧಿಕಾರಿಗಳ ಪ್ರಾಬಲ್ಯವನ್ನು ಕಡಿಮೆ ಮಾಡಿದಂತಾಯಿತು. ಪ್ರತಿ ಪ್ರಾಂತ್ಯದಲ್ಲಿನ ಎಲ್ಲ ಕೋಟೆಗಳೂ ಪ್ರಾಂತ್ಯಾಧಿಕಾರಿಯ ಅಧೀನದಲ್ಲಿದ್ದ ವ್ಯವಸ್ಥೆಯನ್ನು ತಪ್ಪಿಸಿ, ಪ್ರತಿ ಪ್ರಾಂತ್ಯಾಧಿಕಾರಿಯೂ ಕೇವಲ ಒಂದು ಕೋಟೆಯನ್ನು ಮಾತ್ರ ತನ್ನ ಅಧೀನದಲ್ಲಿಟ್ಟುಕೊಳ್ಳುವಂತೆ ಮಾಡಿ, ರಾಜ್ಯದ ಉಳಿದ ಕೋಟೆಗಳೆಲ್ಲಾ ಸುಲ್ತಾನನ ವಶಕ್ಕೆ ಬಂದು ಆತನೇ ನೇರವಾಗಿ ದುರ್ಗಾಧಿಪತಿಗಳನ್ನು ನೇಮಿಸುವ ಹೊಸ ಪದ್ಧತಿ ಜಾರಿಗೆ ಬಂತು. ಮನ್ಸಬ್ದಾರ್ ಅಥವಾ ಜಾಗೀರ್‌ದಾರರು ತಮ್ಮ ಉತ್ಪನ್ನಗಳಿಗೆ ಅನುಗುಣವಾಗಿ ನಿಗದಿಗೊಳಿಸಲ್ಪಟ್ಟ ಸೈನಿಕರನ್ನು ರಾಜ್ಯಕ್ಕೆ ಸರಬರಾಜು ಮಾಡುವ ಪದ್ಧತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಯಿತು. ಒಂದು ಲಕ್ಷ ಹೊನ್ನನ್ನು ಪಡೆದ ಪ್ರತಿಯೊಬ್ಬನೂ 500 ಶಸ್ತ್ರಸಹಿತ ಸೈನಿಕರನ್ನು ಸಜ್ಜುಗೊಳಿಸಬೇಕೆಂದು ನಿರ್ಧಾರವಾಯಿತು. ಅದಕ್ಕೂ ಕಡಿಮೆಯ ಸಂಖ್ಯೆಯ ಸೈನಿಕರಿದ್ದಲ್ಲಿ ಅದಕ್ಕನುಗುಣವಾಗಿ ಅಷ್ಟು ಹಣವನ್ನು ಮುರಿದುಕೊಳ್ಳಲಾಗುತ್ತಿತ್ತು. ಹೆಚ್ಚಿನ ಸಂಖ್ಯೆಯ ಸೈನಿಕರಿದ್ದರೆ, ಅದಕ್ಕೆ ತಕ್ಕಂತೆ ಹೆಚ್ಚಿನ ಹಣವನ್ನು ಸಂದಾಯಮಾಡಲಾಗುತ್ತಿತ್ತು. ಈ ಲಕ್ಷ ಹೊನ್ನನ್ನು ಸ್ವಲ್ಪಕಾಲದ ಅನಂತರ ಒಂದೂಕಾಲು ಲಕ್ಷ ಹೊನ್ನಿಗೆ ಏರಿಸಲಾಯಿತು. ರಾಜ್ಯದ ಭೂಮಿಯನ್ನು ಅಳೆದು, ಗ್ರಾಮಗಳ ಮೇರೆಗಳನ್ನು ನಿರ್ಧರಿಸಿ, ಭೂಗಂದಾಯವನ್ನು ಸರಿಯಾಗಿ ನಿಗದಿಗೊಳಿಸುವ ಕೆಲಸವನ್ನೂ ಸಹ ಗಾವಾನ್ ಕೈಗೊಂಡ.

ನ್ಯಾಯಾಂಗ ಆಡಳಿತದ ಹೊಣೆ ಖಾಜಿ ಮತ್ತು ಸದರ್ ಜಹಾನರಿಗೆ ಸೇರಿತ್ತು. ಉಲೇಮಾಗಳು ಈ ಪದವಿಗೆ ಅರ್ಹರಾಗಿದ್ದರು. ಪ್ರತಿಯೊಂದು

ಪ್ರಾಂತ್ಯ, ಜಿಲ್ಲೆ, ತಾಲ್ಲೂಕುಗಳಲ್ಲಿ ಒಬ್ಬೊಬ್ಬ ಖಾಜಿ ಇದ್ದ. ಲೌಕಿಕ ವ್ಯವಹಾರಗಳ ತೀರ್ಮ ಮತ್ತು ಅಪರಾಧಗಳ ವಿಚಾರಣೆಯನ್ನು ಖಾಜಿ ನಿರ್ವಹಿಸುತ್ತಿದ್ದ. ಈತನ ತೀರ್ಪನ್ನೂ ಒಮ್ಮೊಮ್ಮೆ ಒಪ್ಪಿಗೆಗಾಗಿ ಸದರ್ ಜಹಾನ ಕಳುಹಿಸಲಾಗುತ್ತಿತ್ತು. ವಕೀಲ-ಉಸ್-ಸಲ್ತನತ್‌ನ ಅಧೀನಕ್ಕೆ ಸೇರಿದ ಸಫ್ತರಿ ಶಾಹೀ ಎಂಬ ಕಛೇರಿಯನ್ನು ಫಿರೋಜ್‌ಷಾ ಸ್ಥಾಪಿಸಿದ. ನ್ಯಾಯವಿತರಣೆಗೆ ಕೊರಾನಿನ ಉಲ್ಲೇಖಗಳೇ ಆಧಾರವಾಗಿದ್ದುವು. ಹಿಂದುಗಳು ಎಂದಿನಂತೆ ತಮ್ಮ ಗ್ರಾಮಗಳ ಪಂಚಾಯಿತಿ ಸಭೆಗಳಲ್ಲಿ ನ್ಯಾಯವಿತರಣೆ ಮಾಡಿಕೊಳ್ಳುತ್ತಿದ್ದರು.

**ಆರ್ಥಿಕ-ಸಾಮಾಜಿಕ ಸ್ಥಿತಿ:** ಈ ಕಾಲದಲ್ಲಿ ಆರ್ಥಿಕ ಸಾಮಾಜಿಕ ಸ್ಥಿತಿ ಈ ಹಿಂದಿನದಕ್ಕಿಂತ ಬಹಳಷ್ಟು ವ್ಯತ್ಯಸ್ತವಾಯಿತು. ಗ್ರಾಮಗಳ ಸ್ವಯಂ ಆಡಳಿತ ಸಭೆಗಳೂ ಸಂಸ್ಥೆಗಳೂ ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡುವು. ಅದರ ಬದಲು ಜಹಗೀರುಗಳು ಅಥವಾ ಕೇಂದ್ರೀಕೃತ ಅರಸೊತ್ತಿಗೆ ಅಸ್ತಿತ್ವಕ್ಕೆ ಬಂತು. ಇವುಗಳಿಂದ ದೇಶದ ಆರ್ಥಿಕ ಪರಿಸ್ಥಿತಿ ಬದಲಾಯಿತು. ಸಂಪತ್ತಿನ ದೃಷ್ಟಿಯಿಂದ ಹೆಚ್ಚಿನಮಟ್ಟಿಗೆ ಕುಂದುಂಟಾಗಿದಿದ್ದರೂ ಮೊದಲಿನ ಪದ್ಧತಿಗಳು ನಶಿಸಿ ಊಳಿಗಮಾನ್ಯ ಪದ್ಧತಿ ತಲೆ ಎತ್ತಿತ್ತು.

ಭಾರತಕ್ಕೆ ಬಂದ ಹಲವಾರು ಯಾತ್ರಿಕರು ಇಲ್ಲಿನ ಐಶ್ವರ್ಯಾಭಿವೃದ್ಧಿಗಳನ್ನು ವರ್ಣಿಸಿದ್ದಾರೆ. ಭಾರತದ, ಅದರಲ್ಲಿಯೂ ಮಾಲವ ಗುಜರಾತ್ ದಖನ್ ಹಾಗೂ ಬಂಗಾಲಗಳಲ್ಲಿ ವ್ಯಾಪಾರೀ ಕೇಂದ್ರಗಳನ್ನು ಕಂಡುದಾಗಿ ಇಬ್ನ್ ಬತೂತ ಹೇಳಿದ್ದಾನೆ.

ಬಹಮನೀ ರಾಜ್ಯ ದೂರದ ಪರ್ಷಿಯ, ಅರೇಬಿಯ, ಆಫ್ರಿಕ ಮತ್ತು ಯುರೋಪ್ ದೇಶಗಳೊಡನೆ ವಾಣಿಜ್ಯಸಂಬಂಧ ಬೆಳೆಸಿತ್ತು. ಇದಕ್ಕಾಗಿ ಇಲ್ಲಿನ ವರ್ತಕರು ಹಡಗುಗಳನ್ನು ಉಪಯೋಗಿಸುತ್ತಿದ್ದರು. ಜವಳಿ, ಬಿದ್ರಿ ಕುಸುರಿಕೆಲಸದ ವಸ್ತುಗಳು, ಹಿತ್ತಾಳೆಯ ಆಲಂಕಾರಿಕ ಪಾತ್ರೆಗಳು, ವಾರಂಗಲ್ಲಿನ ಜಮಖಾನೆ, ಸಕ್ಕರೆ ಮುಂತಾದವು ರಫ್ತಾಗುತ್ತಿದ್ದ ಸರಕುಗಳು. ಇವಕ್ಕೆ ಬದಲಾಗಿ ಆಮದಾಗುತ್ತಿದ್ದ ಪ್ರಮುಖ ಪದಾರ್ಥಗಳು ಚಿನ್ನ, ಸಂಬಾರ ಪದಾರ್ಥಗಳು, ಸುಗಂಧದ್ರವ್ಯಗಳು, ಚೀನದ ಪಿಂಗಾಣಿ, ಕುದುರೆಗಳು, ಮುತ್ತುಗಳು. ವಸ್ತುವಿನಿಮಯ ಪದ್ಧತಿಗೆ ಬದಲು ಹಣದ ಉಪಯೋಗ ಹೆಚ್ಚಾಯಿತು. ಈ ಕಾಲದ ನಾಣ್ಯಗಳು ಅಧಿಕ ಸಂಖ್ಯೆಯಲ್ಲಿ ಲಭಿಸಿವೆ. ಕಂದಾಯವನ್ನು ಸಹ ಹಣದ ರೂಪದಲ್ಲಿ ವಸೂಲಿ ಮಾಡಲಾಗುತ್ತಿತ್ತು.

ಫಲವತ್ತಾದ ಭೂಮಿಯಲ್ಲಿ ವರ್ಷಕ್ಕೆ ಎರಡು ಬೆಳೆಗಳನ್ನು ತೆಗೆಯುತ್ತಿದ್ದುದಾಗಿ ಇಬ್ನ್ ಬತೂತ ಹೇಳಿದ್ದಾನೆ. ಶರತ್ಕಾಲದಲ್ಲಿ ನಾಲ್ಕು ವಿಧವಾದ ಸಾವೆ, ರಾಗಿ, ಬಟಾಣಿ, ಹುರಳಿಗಳನ್ನೊಳಗೊಂಡ ಬೆಳೆಗಳನ್ನೂ ವಸಂತ ಕಾಲದಲ್ಲಿ ಗೋದಿ, ಬಾರ್ಲಿ, ಅವರೆ ಮುಂತಾದ ದ್ವಿದಳ ಧಾನ್ಯಗಳೇ ಮುಂತಾದವನ್ನೂ ಬೆಳೆಯುತ್ತಿದ್ದರು. ನೀರಾವರಿ ಇದ್ದಲ್ಲಿ ಬತ್ತದ ಮೂರು ಬೆಳೆಗಳು ಬರುತ್ತಿದ್ದುವು. ಮಾವು, ಹಲಸು, ಕಿತ್ತಲೆ, ದಾಳಿಂಬೆ ಮುಂತಾದ ಫಲಗಳು, ಶುಂಠಿ, ಮೆಣಸು ಇತರ ಉತ್ಪನ್ನಗಳು. ಗೋವ ಅಂದು ಒಂದು ಪ್ರಮುಖ ರೇವುಪಟ್ಟಣವಾಗಿತ್ತು. ಇಷ್ಟಾದರೂ ಜನಸಾಮಾನ್ಯರಲ್ಲಿ ಬಡತನವಿತ್ತು. ಜಹಗೀರುದಾರರು, ಸರ್ಕಾರಿ ಅಧಿಕಾರಿಗಳು ಮತ್ತು ಸುಲ್ತಾನರು ಬಹಳ ಶ್ರೀಮಂತರಾಗಿದ್ದರು. ಇವರ ನಡುವಣ ಅಂತರ ಎದ್ದುಕಾಣುವಂತಿತ್ತು. ಬಹಮನೀ ರಾಜ್ಯದಲ್ಲಿ ಐಶ್ವರ್ಯವಿದ್ದರೂ ಅದು ಸಮಾನವಾಗಿ ಹಂಚಿಕೆಯಾಗದೆ ಬಡವಬಲ್ಲಿದರೆಂಬ ಎರಡು ವಿಶಿಷ್ಟ ವರ್ಗಗಳು ತಲೆ ಎತ್ತಿದ್ದುವು. ಈ ಆರ್ಥಿಕ ಅಸಮತೆಯ ಪರಿಣಾಮವಾಗಿ ಜನಸಾಮಾನ್ಯರು ದಂಗೆ ಏಳುವುದು ಸಾಮಾನ್ಯವಾಗಿತ್ತು. ಅರಸ ಬಲಶಾಲಿಯಾಗಿದ್ದಾಗ ಮಾತ್ರ ರಾಜ್ಯದಲ್ಲಿ ಶಾಂತಿ ನೆಲೆಸಿರುತ್ತಿತ್ತು. ಇಷ್ಟಾದರೂ ಪ್ರಜೆಗಳ ಜೀವನಮಟ್ಟ ಸುಧಾರಿಸಿತ್ತೆಂದೇ ಹೇಳಬೇಕು.

ರಾಜ್ಯದ ಪ್ರಜೆಗಳು ಬಹುಮಟ್ಟಿಗೆ ಹಿಂದುಗಳಾಗಿದ್ದರು. ಬಹಮನೀ ರಾಜ್ಯದ ಸ್ಥಾಪನೆಯ ಮೊದಲು ತಲೆ ಎತ್ತಿದ ಅನಾಯಕ ಪರಿಸ್ಥಿತಿಯಿಂದ ಪ್ರಜೆಗಳು ಸ್ವಲ್ಪಮಟ್ಟಿಗೆ ಧೃತಿಗೆಟ್ಟದ್ದರಾದರೂ ಬಹಮನೀ ಅರಸರು ಮಾತ್ರ ತಮ್ಮ ಪ್ರಜೆಗಳನ್ನು ಒಲಿಸಿಕೊಳ್ಳಲು ಯತ್ನಿಸಿದರು. ಇಂತಹ ನೀತಿ ಆವಶ್ಯಕವೂ ಆಗಿತ್ತು. ಉದಾಹರಣೆಗೆ ಬಹಾಉದ್ದಿನ್ ಗುರ್ಷಾಸ್ಪ್ ದಂಗೆ ಎದ್ದಾಗ ಕಲ್ಯಾಣಿಯ ಮಧುಕೇಶ್ವರ ದೇವಾಲಯಕ್ಕೆ ಹಾನಿ ಉಂಟಾಗಿತ್ತು. ಆದರೆ ಬಹಮನೀ ಪ್ರಾಂತ್ಯಾಧಿಕಾರಿಯೊಬ್ಬ ಅಲ್ಲಿನ ಶಿವಲಿಂಗವನ್ನು ಹೊಸದಾಗಿ ಪ್ರತಿಷ್ಠಾಪಿಸಿ, ಪೂಜಾದಿಗಳು ಪುನರಾರಂಭವಾಗುವಂತೆ ಮಾಡಿದ. ಒಂದನೆಯ ಅಲಾವುದ್ದೀನ್ ಜಿಜಿಯಾ ತೆರಿಗೆಯನ್ನು ವಸೂಲು ಮಾಡದಿದ್ದ ಪ್ರಥಮ ಸುಲ್ತಾನ.



ಬಹಮನೀ ರಾಜವಂಶದ ನಾಣ್ಯಗಳು

ದಖನ್ ಪ್ರದೇಶದಲ್ಲಿ ಈ ವೇಳೆಗೆ ಭಕ್ತಿಮಾರ್ಗದ ಹೊಸ ಪಂಥಗಳು ತಲೆ ಎತ್ತಿ ಪ್ರಭಾವಶಾಲಿಗಳಾಗಿದ್ದುವು. ಪಂಢರಪುರದ ವಿಠಲನ ಭಕ್ತರಾದ ವಾರಕರಿಗಳೂ ನಾಥಸಂಪ್ರದಾಯದವರೂ ದತ್ತಸಂಪ್ರದಾಯದವರೂ ಸಾಮಾಜಿಕ ಧಾರ್ಮಿಕ ಸ್ಥಿತಿಗಳಲ್ಲಿ ಹಲವಾರು ಬದಲಾವಣೆಗಳನ್ನು ತರುವುದರಲ್ಲಿ ಆಸಕ್ತರಾಗಿದ್ದರು. ಸಮಾಜದಲ್ಲಿ ಬೆಳೆದು ಬಂದಿದ್ದ ಜಾತೀಯತೆಯೇ ಮುಂತಾದವನ್ನು ತೊಡೆದು ಹಾಕಿ, ಎಲ್ಲರೂ ಒಂದೇ ಎಂಬ ಏಕತಾವಾದವನ್ನು ಜ್ಞಾನೇಶ್ವರನೇ ಮುಂತಾದ ಸಂತಕವಿಗಳು ಹರಡ ತೊಡಗಿದ್ದರು. ಗಾಣಗಾಪುರದ ಸಂತ ನರಸಿಂಹ ಸರಸ್ವತಿ ಈ ಕಾಲದಲ್ಲಿದ್ದ ದತ್ತಸಂಪ್ರದಾಯದ ಪ್ರಚಾರಕರಲ್ಲೊಬ್ಬರು. ಹಿಂದುಗಳೊಡನೆ ಮುಸ್ಲಿಮರನ್ನೂ ತಮ್ಮೆಡೆಗೆ ಆಕರ್ಷಿಸಿದ್ದು ಇವರ ವೈಶಿಷ್ಟ್ಯ. ದತ್ತಾತ್ರೇಯನನ್ನು ಮುಸ್ಲಿಮರು ಷಾಫಕೀರ್ ಎಂಬ ಹೆಸರಿನಿಂದ ಆರಾಧಿಸತೊಡಗಿದರು. ದೆಹಲಿಯ ಸೂಫಿ ಸಂತ ಖ್ವಾಜಾ ನಿಜಾಮುದ್ದೀನ್ ಔಲಿಯಾರ ಆದೇಶದಂತೆ ಸು. 700 ಜನ ಸೂಫಿಗಳು ದಖನ್ ಹಾಗೂ ದಕ್ಷಿಣ ಭಾರತಗಳಿಗೆ ವಲಸೆ ಬಂದು ಇಲ್ಲೇ ನೆಲಸಿ ಸೂಫಿಧರ್ಮವನ್ನು ಪ್ರಚಾರ ಮಾಡಿದರು.

ಬಹಮನೀ ರಾಜ್ಯದಲ್ಲಿ ನೆಲಸಿದ್ದ ಮಹಮ್ಮದೀಯರಲ್ಲೇ ಎರಡು ಗುಂಪುಗಳಿದ್ದುವು. ಇದರಿಂದ ಬಹುಮಟ್ಟಿಗೆ ರಾಜ್ಯದ ಶಾಂತಿ ಕದಡಿತ್ತು. ಒಂದು ಅಫಕೀ; ದಖನ್ನಿನ ಈ ರಾಜ್ಯ ದೆಹಲಿಯ ಅಧೀನದಿಂದ ಮುಕ್ತವಾದ ಬಳಿಕ ಹೊರದೇಶಗಳಿಂದ ಬಂದು ನೆಲಸಿದ, ಹೊಸ ರಕ್ತದಿಂದ ಕೂಡಿದ, ಪರದೇಶಿ ಎನಿಸಿಕೊಂಡವರ ಗುಂಪು ಇದು. ಇವರಿಗೆ ವಿರುದ್ಧವಾಗಿ ದಖನೀಗಳು; ಇವರು ಉತ್ತರ ಭಾರತದಿಂದ ಇಲ್ಲಿ ಬಂದು ನೆಲಸಿದ ಜನ. ಇವರೊಡನೆ ಅಬಿಸೀನಿಯದ ಜನರು (ಹಬಿಷಿ) ಸೇರಿದ್ದರು. ಬಹುಮಟ್ಟಿಗೆ ಪರದೇಶಿಗಳು ಷಿಯಾ ಪಂಗಡಕ್ಕೂ

ದಖನೀಗಳು ಸುನ್ನಿ ಪಂಗಡಕ್ಕೂ ಸೇರಿದವರಾಗಿದ್ದರು. ಈ ಎರಡೂ ಗುಂಪುಗಳ ನಡುವೆ ಹೆಚ್ಚಿನ ಸೌಲಭ್ಯಗಳಿಗಾಗಿ ಪೈಪೋಟಿ ನಡೆದಿತ್ತು. ಆದರೂ ಎರಡನೆಯ ಮಹಮ್ಮದ್ ಮತ್ತು ಅನಂತರದವರ ಕಾಲದಲ್ಲಿ ಇರಾನೀ ಸಂಸ್ಕೃತಿಯ ಪ್ರಭಾವ ಬಹಮನೀ ರಾಜ್ಯದ ಮೇಲೆ ಬಹಳವಾಗಿತ್ತು. ಸ್ವತಃ ಅರಬ್ಬೀ ಮತ್ತು ಪಾರಸೀ ಭಾಷೆಗಳಲ್ಲಿ ಪರಿಣಿತನಾಗಿದ್ದ ಮಹಮ್ಮದ್ ಕವಿಯೂ ಆಗಿದ್ದು ತನ್ನ ರಾಜಧಾನಿಯನ್ನು ಸಾಂಸ್ಕೃತಿಕ ಹಾಗೂ ವಿದ್ಯಾಕೇಂದ್ರವನ್ನಾಗಿ ಪರಿವರ್ತಿಸಲು ಯತ್ನಿಸಿದ. ಅನೇಕ ಪಂಡಿತರನ್ನು ಹೊರಗಿನಿಂದ ಬರಮಾಡಿಕೊಂಡ. ಈ ಎರಡು ಗುಂಪುಗಳ ನಡುವಣ ವೈಷಮ್ಯವನ್ನು ಕಡಿಮೆ ಮಾಡಲೆನ್ನುವಂತೆ ಫಿರೋಜ್ ತನ್ನ ರಾಜ್ಯದಲ್ಲಿ ಹಿಂದುಗಳಿಗೆ ಪ್ರಾಶಸ್ತ್ಯವನ್ನು ನೀಡಿದ. ಖೇರ್ಲದ ನರಸಿಂಹ ಮುಂತಾದವರನ್ನು ರಾಜ್ಯದ ಅಮೀರರನ್ನಾಗಿ ನೇಮಿಸಿದ. ಹಿಂದು ಸ್ತ್ರೀಯರನ್ನು ಲಗ್ನ ಮಾಡಿಕೊಂಡ. ಮಹ್ಮೂದ್ ಗಾವಾನ್ ಆಡಳಿತದ ಹೊಣೆ ಹೊತ್ತಾಗ ಈ ಎರಡೂ ಗುಂಪುಗಳ ನಡುವೆ ತಾರತಮ್ಯ ಮಾಡದೆ ಎಲ್ಲರಿಗೂ ಉದ್ಯೋಗಗಳಲ್ಲಿ ಸಮಾನಾವಕಾಶ ಮಾಡಿಕೊಟ್ಟ. ಆದರೂ ಈ ವೈಷಮ್ಯ ಒಳಗಿಂದೊಳಗೇ ಹಬ್ಬಿತ್ತು. ಒಂದು ದೃಷ್ಟಿಯಲ್ಲಿ ರಾಜ್ಯದ ಅಳಿವಿಗೆ ಇದೂ ಒಂದು ಕಾರಣವಾಯಿತು.

ಮಹಮ್ಮದೀಯ ಸಮಾಜದಲ್ಲಿ ಸುಲ್ತಾನನ ಅನಂತರದ ಸ್ಥಾನ ಉಮರಾ (ಶ್ರೀಮಂತವರ್ಗ) ಹಾಗೂ ಉಲಮಾ (ಪಂಡಿತವರ್ಗ) ಇವರದ್ದು. ಇವರು ದೊಡ್ಡ ಹುದ್ದೆಗಳನ್ನು ಹೊಂದಿದ್ದು ಜಮೀನುದಾರರೂ ಆಗಿದ್ದರು. ಅರಮನೆಯಲ್ಲಿ ಗುಲಾಮರೆಂಬ ಒಂದು ವರ್ಗವಿದ್ದರೂ ಅವರ ಸ್ಥಾನ ಗೌರವಯುತವಾಗಿಯೇ ಇತ್ತು. ಸುಲ್ತಾನನ ನಿಕಟವರ್ತಿಗಳಾದ ಇವರಿಗೆ ವಿಶಿಷ್ಟವಾಗಿ ತಮಗಿಂತ ಕೆಳಮಟ್ಟದವರೊಂದಿಗಾಗಲಿ ಹಿಂದುಗಳೊಡನಾಗಲಿ ವ್ಯವಹಾರಗಳನ್ನಿಟ್ಟುಕೊಳ್ಳದೆ ಪ್ರತ್ಯೇಕವಾದ ಗುಂಪಾಗಿಯೇ ಇರುತ್ತಿದ್ದರು. ಸ್ತ್ರೀಯರು ಘೋಷಾ ಪದ್ಧತಿಯನ್ನು ಅನುಸರಿಸುತ್ತಿದ್ದರು. ಸಮಾಜದಲ್ಲಿ ಇವರಿಗೆ ಹೆಚ್ಚಿನ ಸ್ಥಾನವೇನೂ ಇರಲಿಲ್ಲ. ಮನೆಯೊಳಗಿದ್ದುಕೊಂಡು ತಂದೆ, ಸೋದರ, ಗಂಡ–ಇವರಿಗೆ ವಿಧೇಯರಾಗಿರಬೇಕಾದುದು ಇವರ ಕರ್ತವ್ಯ ಎಂಬ ಭಾವನೆ ವಿಶೇಷವಾಗಿತ್ತು. ಆದರೆ ಈ ಘೋಷಾ ಪದ್ಧತಿ ಕೆಳವರ್ಗದ, ಗ್ರಾಮೀಣ ಜನರಲ್ಲಿ ಹೆಚ್ಚಿನ ಮಟ್ಟಿಗೆ ಕಾಣಬರುತ್ತಿರಲಿಲ್ಲ. ಬಹುಪತ್ನಿತ್ವ ಶ್ರೀಮಂತ ವರ್ಗದವರಲ್ಲಿ ಮಾತ್ರ ಕಂಡುಬರುತ್ತಿತ್ತು. ಸ್ತ್ರೀಯರಿಗೇ ಪ್ರತ್ಯೇಕವಾಗಿ ಜನಾನ್‌ಖಾನಾಗಳು ಇರುತ್ತಿದ್ದುವು.

ಸಮಾಜದಲ್ಲಿ ಶ್ರೀಮಂತವರ್ಗ, ದಲಿತವರ್ಗಗಳಲ್ಲದೆ ಮಧ್ಯಮವರ್ಗವೆಂಬುದು ಸಹ ಈ ವೇಳೆಗೆ ಕಾಣಿಸಿಕೊಂಡಿತ್ತು. ರೈತರು, ಕಸಬುದಾರರು, ಕೂಲಿಗಳು ದಲಿತವರ್ಗಕ್ಕೆ ಸೇರಿದವರು. ಸಣ್ಣ ಹಿಡುವಳಿಗಳು, ಮಿತಿಮೀರಿದ ಸಾಲ, ಅಕಾಲಿಕ ಮಳೆ ಮುಂತಾದುವುಗಳಿಂದ ಇವರ ಜೀವನ ದುರ್ಭರವಾಗಿತ್ತು. ಸುಲ್ತಾನ್ ಕೃಪಾಪೋಷಿತ ವರ್ತಕರು–ಮಧ್ಯಮವರ್ಗಕ್ಕೆ ಸೇರಿದವರು. ಉನ್ನತದರ್ಜೆಯ ಅಧಿಕಾರಿಗಳು, ಸುಲ್ತಾನನ ಆಸ್ಥಾನಿಕರು, ಉಲೇಮಾಗಳು ಶ್ರೀಮಂತವರ್ಗದವರು. ಇವರಿಗೆ ಸಂಬಳಸಾರಿಗೆಗಳನ್ನು ಸುಲ್ತಾನ ಕೊಡುತ್ತಿದ್ದ. ಆಗ ವಿಶೇಷವಾಗಿ ಮಹಮ್ಮದೀಯರು ಮಾತ್ರ ಈ ವರ್ಗಕ್ಕೆ ಸೇರಿದವರಾಗಿದ್ದರು.

ಭಾರತದ ಹಲವಾರು ಪದ್ಧತಿಗಳನ್ನು ಮುಸ್ಲಿಮರು ಮೈಗೂಡಿಸಿಕೊಂಡಿದ್ದರು. ಹಿಂದು ಅರಸರಂತೆ ಇವರು ಅಲಂಕೃತವಾದ ಆನೆಗಳನ್ನೂ ರತ್ನಖಚಿತ ಆಯುಧಗಳನ್ನೂ ಬಣ್ಣಬಣ್ಣದ ಛತ್ರಿಗಳನ್ನೂ ಶ್ರೀಮಂತಿಕೆಯ, ಅರಸೊತ್ತಿಗೆಯ ಕುರುಹಾಗಿ ಪ್ರದರ್ಶಿಸುತ್ತಿದ್ದರು. ತಾಂಬೂಲಚರ್ವಣ ಇವರು ಹಿಂದುಗಳಿಂದ ಪಡೆದ ಒಂದು ಹವ್ಯಾಸ. ಸಭೆಯಲ್ಲಿ ನೆರೆದಿದ್ದವರಿಗೆ ತಾಂಬೂಲ ನೀಡುವುದು ಗೌರವ ಸೂಚಕವೆಂದು ಭಾವಿಸಲಾಗಿತ್ತು. ಆಹಾರದಲ್ಲಿಯೂ ಭಾರತದ ಪ್ರಭಾವ ಕಾಣಬಹುದು. ಮೆಣಸಿನಕಾಯಿಯ ಬಳಕೆ, ಒಗ್ಗರಣೆ ಹಾಕಿದ ಆಹಾರ, ಖಾರವಾದ ಖಾದ್ಯಗಳು ಇವರು ಭಾರತದಲ್ಲಿ ನೆಲೆಸಿದ ಮೇಲೆ ಅನುಸರಿಸತೊಡಗಿದ ಪದ್ಧತಿಗಳು. ತಲೆಗೆ ಚೀರ ಅಥವಾ ಪಾಗ್ (ರುಮಾಲು) ಸುತ್ತುವುದೂ ಭಾರತೀಯರಿಂದ ಪಡೆದ ಪದ್ಧತಿಯೇ.

ಸರ್ಕಾರಿ ಕ್ಷೇತ್ರದಲ್ಲಿ ಹಿಂದುಗಳಿಗೆ ಹೆಚ್ಚಿನ ಸ್ಥಾನವೇನೂ ಇರಲಿಲ್ಲ. ಮಹಮ್ಮದೀಯ ರಾಜ್ಯದ ರಾಜಕೀಯದಲ್ಲಿ ಹಿಂದುಗಳಿಗೆ ಪ್ರವೇಶವೇ ಇರಲಿಲ್ಲ. ಬೊಕ್ಕಸಕ್ಕೆ ತೆರಿಗೆ ತೆರುವ ಇವರನ್ನು ಜಿಮ್ಮಿಗಳೆಂದು ಭಾವಿಸಲಾಗಿತ್ತು. ಆದರೂ ಅಂದಿನ ರಾಜಕೀಯ ಪರಿಸ್ಥಿತಿಗಳನ್ನು ಅನುಸರಿಸಿ ಕೆಲವು ಸುಲ್ತಾನರು ಹಿಂದುಗಳನ್ನು ಗೌರವಿಸಿದರು. ಫಿರೋಜನು ಮುಧೋಳ ಮತ್ತು ಇತರ 48 ಗ್ರಾಮಗಳ ಜಹಗೀರಿಯನ್ನು ಭೈರಾನ್ ಸಿಂಗನಿಗೆ ಕೊಟ್ಟದ್ದನ್ನು ಇಲ್ಲಿ ಉದಾಹರಿಸಬಹುದು.

ನಾಸಿಕ, ಪೈಠಣ, ಗಂಗಾಪುರ, ನೇವಾಸಗಳು ಹಿಂದು ವಿದ್ಯಾಕೇಂದ್ರಗಳಾಗಿದ್ದುವು. ಅಮರಕೋಶ, ರೂಪಾವಳೀ, ಪಂಚತಂತ್ರ, ಹಿತೋಪದೇಶ ಮುಂತಾದ ಗ್ರಂಥಗಳಲ್ಲದೆ ದರ್ಶನಗಳೇ ಮುಂತಾದ ಎಲ್ಲ ವಿಷಯಗಳನ್ನೂ ಇಲ್ಲಿ ಕಲಿಸಲಾಗುತ್ತಿತ್ತು. ಮಹಮ್ಮದೀಯರಿಗಾಗಿ ಮಸೀದಿಗಳಿಗೆ ಸೇರಿದಂತೆ ಮದರಸಾಗಳಿದ್ದವು. ಅವುಗಳಲ್ಲಿ ಅರಬ್ಬಿ ಭಾಷೆ, ವ್ಯಾಕರಣ, ಸಾಹಿತ್ಯ, ಕೊರಾನ್, ಹದಿತ್, ಸೂಫಿ ಸಿದ್ಧಾಂತ ಇತ್ಯಾದಿಗಳನ್ನು ಕಲಿಸುತ್ತಿದ್ದರು.

ಈ ಕಾಲದ ಹಿಂದುಗಳ ಉಡಿಗೆತೊಡಿಗೆಗಳಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬರುವುದಿಲ್ಲ. ಎಂದಿನಂತೆ ಧೋತಿ (ಪಂಚೆ) ಮತ್ತು ಉತ್ತರೀಯ ಸಾಮಾನ್ಯವಾದ ಉಡುಗೆಗಳು. ರುಮಾಲು ಅಥವಾ ಟೋಪಿಯನ್ನು ಸಾರ್ವಜನಿಕ ಸಮಾರಂಭಗಳಲ್ಲಿ ಧರಿಸುತ್ತಿದ್ದರು. ಸ್ತ್ರೀಯರು ಹತ್ತಿ ನೂಲಿನ ಸೀರೆ, ರವಿಕೆಗಳನ್ನು ಧರಿಸುತ್ತಿದ್ದರಾದರೂ ವಿಶೇಷ ದಿನಗಳಲ್ಲಿ ರೇಷ್ಮೆಯ ಬಟ್ಟೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು. ಶ್ರೀಮಂತವರ್ಗದವರು ಮಾತ್ರ ಮಹಮ್ಮದೀಯರ ವೇಷಭೂಷಣಗಳನ್ನು ಅನುಕರಿಸುತ್ತಿದ್ದರು. ಬಿಗಿಯಾದ ಇಜಾರ ಹಾಗೂ ಅಂಗಿಗಳು ಸಾಮಾನ್ಯವಾಗಿ ಮಹಮ್ಮದೀಯರ ಉಡುಗೆಗಳು. ಅವರ ಸ್ತ್ರೀಯರು ಸಹ ಇಜಾರಗಳನ್ನು ಧರಿಸಿ, ಉದ್ದವಾದ ನಿಲುವಂಗಿಗಳನ್ನು ಹಾಕಿಕೊಂಡು ಮೇಲೆ ಉತ್ತಮದರ್ಜೆಯ ಹತ್ತಿಯ ಅಥವಾ ರೇಷ್ಮೆಯ ದುಪಟ್ಟಾಗಳನ್ನು ಹೊದೆಯುತ್ತಿದ್ದರು. ಹಿಂದುಗಳಲ್ಲಿ ಬಾಲ್ಯವಿವಾಹ ಮತ್ತು ಸತೀಪದ್ಧತಿಗಳು ಜಾರಿಯಲ್ಲಿದ್ದುವು. ವಿವಿಧ ಬಗೆಯ ಅನ್ನ, ಬೇಳೆಗಳು, ಚಪಾತಿ, ಪೂರಿ, ಶಾವಿಗೆ ಪಾಯಸ, ಜೋಳದ ರೊಟ್ಟಿ, ಮೊಸರು ಮತ್ತು ಮಜ್ಜಿಗೆ ಇವರ ಪ್ರಮುಖ ಆಹಾರ. ನಾನಾ ಬಗೆಯ ತರಕಾರಿಗಳನ್ನು ಸಹ ತಿನ್ನುತ್ತಿದ್ದರು. ಹಬ್ಬ–ಹರಿದಿನಗಳಲ್ಲಿ ಬೇಳೆಗಳೊಂದಿಗೆ ಬೇಯಿಸಿದ ಅನ್ನ, ಪೂರನ್‌ಪೋಳಿ, ಲಡ್ಡು ಇತರ ಸಿಹಿಖಾದ್ಯಗಳು, ಪಲ್ಯಗಳು, ಹಪ್ಪಳ,ಬಜ್ಜಿ, ವಡೆ ಇತ್ಯಾದಿಗಳನ್ನು ತಯಾರಿಸುತ್ತಿದ್ದರು. ಬ್ರಾಹ್ಮಣರೂ ಲಿಂಗವಂತರೂ ಶಾಖಾಹಾರಿಗಳು. ಇತರರು ಮಾಂಸಾಹಾರಗಳನ್ನು ಸ್ವೀಕರಿಸುತ್ತಿದ್ದರು. ಮಾದಕ ಪೇಯಗಳನ್ನು ಬ್ರಾಹ್ಮಣರು ಬಳಸುತ್ತಿರಲಿಲ್ಲ. ಮಹಮ್ಮದೀಯರಲ್ಲಿ ಇಂತಹ ಪೇಯಗಳು ನಿಷಿದ್ಧವೆಂದಿದ್ದರೂ ಸಾಮಾನ್ಯವಾಗಿ ಎಲ್ಲರೂ ಅವನ್ನು ಸ್ವೀಕರಿಸುತ್ತಿದ್ದರು.

**ಸಾಹಿತ್ಯ:** ಬಹಮನೀ ಸುಲ್ತಾನರಲ್ಲಿ ಕೆಲವರು ಸ್ವತಃ ಉತ್ತಮ ವಿದ್ವಾಂಸರಾಗಿದ್ದು ವಿದ್ಯಾಪಕ್ಷಪಾತಿಗಳಾಗಿದ್ದರು. ಉದಾಹರಣೆಗೆ ಸುಲ್ತಾನ್ ಫಿರೋಜನು ಕೊರಾನ್, ತತ್ತ್ವಶಾಸ್ತ್ರ, ಪ್ರಕೃತಿವಿಜ್ಞಾನ, ರೇಖಾಗಣಿತ ಮುಂತಾದವುಗಳಲ್ಲಿ ಪರಿಣತಿಯನ್ನು ಪಡೆದಿದ್ದು ವಾರದಲ್ಲಿ ಮೂರು ದಿನಗಳಲ್ಲಿ ನಿಗದಿಗೊಳಿಸಿದ ವೇಳೆಯಲ್ಲಿ ಈ ವಿಷಯಗಳನ್ನು ಬೋಧಿಸುತ್ತಿದ್ದನೆನ್ನಲಾಗಿದೆ. ಪರದೇಶದಿಂದ ಬಂದ ಮೌಲಾನಾ ಉತ್‌ಫುದ್ದೀನ್ ಸಬ್ಜ್‌ವಾರಿ, ಹಕೀಮ್ ಹಸನ್ ಗೀಲಾನಿ, ಸಯದ್ ಮಹ್ಮೂದ್ ಗರ್ಜೂನಿ

ಮುಂತಾದ ವಿದ್ವಾಂಸರು ಫಿರೋಜ್‍ಷಾನ ಆಸ್ಥಾನದಲ್ಲಿದ್ದರು. ಬಹಮನೀ ಅರಸರು ಆರಂಭದಲ್ಲಿ ಅರಬ್ಬೀಯರಿಗೂ ಅರಬ್ಬೀ ಭಾಷೆಗೂ ಪ್ರೋತ್ಸಾಹ ನೀಡಿದರು. ಅನಂತರ ಇವರ ಆಸಕ್ತಿ ಪಾರಸೀ ಕಡೆ ಹೊರಳಿತು. 1423ರಲ್ಲಿ ಮಹಮ್ಮದ್ ಅದ್ ದಮಾಮೀನೀ ಎಂಬ ಈಜಿಪ್ಟ್ ದೇಶದ ವಿದ್ವಾಂಸ ಗುಲ್ಬರ್ಗಕ್ಕೆ ಬಂದು ಇಲ್ಲಿ ಮನ್ಹಲುಸ್-ಸಾಫಿ ಫೀ ಶರ್‌ಹಿಲ್ ವಾಫೀ ಎಂಬ ಅರಬ್ಬೀ ವ್ಯಾಕರಣ ಗ್ರಂಥವನ್ನು ಬರೆದು ಮುಗಿಸಿದ. ಫಿರೋಜ್‍ಷಾನ ಕಾಲದಲ್ಲಿದ್ದ ಖ್ವಾಜಾ ಬಂದೇ ನವಾಜ್ ಪ್ರಸಿದ್ಧ ಗ್ರಂಥಕಾರ. ಶರ್‌ಹ್ರ್-ರಿಸಾಲತಿಲ್-ಖುಷಯ್ರಿಯ್ಯಾ ಮತ್ತು ಅರ್-ರಿಸಲಾತು ಫೀ ಮಸಾಇಲಿರುಯ್ಯತಿಲ್-ಬಾರಿತಲಾ ಇವು ಇವನ ಅರಬ್ಬೀ ಗ್ರಂಥಗಳು. ಅಲ್ಲದೆ ಇವರು ಸೂಫಿ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ನೂರಾರು ಗ್ರಂಥಗಳನ್ನು ಬರೆದಿದ್ದಾರೆ. ಇವರು ಇದರಲ್ಲಿ ಉಪಯೋಗಿಸಿರುವ ಭಾಷೆ ದಖನೀ ಎಂದು ಪ್ರಸಿದ್ಧವಾಗಿದ್ದು ಮುಂದೆ ಇದೇ ಉರ್ದು ಭಾಷೆಯ ಬೆಳೆವಣಿಗೆಗೆ ಕಾರಣವಾಯಿತು. ಫಿರೋಜ್‍ಷಾನ ರಾಜಶಾಲೆಯಲ್ಲಿ ಇದ್ದ ಮುಲ್ತಾನಿನ ಸಯದ್ ಯೂಸುಫ್ ಎಂಬ ವಿದ್ವಾಂಸ ತಖ್ಜೀಹುಲ್-ಕಲಾಮ್ ಫೀ ಶರ್ಹಿಲ್-ಮನಾರ್ ಮತ್ತು ಯೂಸುಫೀ ಶರ್ಹು ಲುಬ್ಬುಲ್-ಅಲಬಾಬ್ ಫೀ ಇಲ್ಮಿಲ್-ಇರಾಬ್ ಎಂಬ ಅರಬ್ಬೀ ಗ್ರಂಥಗಳನ್ನು ರಚಿಸಿದ್ದಾನೆ.

ಮಹ್ಮೂದ್ ಗಾವಾನ್ **(ನೋಡಿ)** ಖ್ಯಾತ ರಾಜತಂತ್ರಜ್ಞನಾಗಿದ್ದನಲ್ಲದೆ ಸ್ವತಃ ವಿದ್ವಾಂಸನೂ ವಿದ್ಯಾಪ್ರೇಮಿಯೂ ಆಗಿದ್ದ. ಈತನ ಗ್ರಂಥಗಳು ರಾಜನೀತಿ, ಕಾವ್ಯಲಕ್ಷಣ ಮುಂತಾದ ನಾನಾ ವಿಷಯಗಳ ಬಗ್ಗೆ ಇವೆ. ಗಾವಾನನ ಆಸ್ಥಾನದಲ್ಲಿದ್ದ ಹಮದಾನಿನ ಮುಲ್ಲಾ ಅಬ್ದುಲ್ ಕರೀಮ್ ಮಾಸಿರ್-ಇ-ಮಹ್ಮೂದ್ ಶಾಹೀ ಎಂಬ ಗುಜರಾತಿನ ಇತಿಹಾಸಕ್ಕೆ ಸಂಬಂಧಿಸಿದ ಗ್ರಂಥದ ಕರ್ತೃ. **(ಬಿ.ಆರ್.ಜಿ.)**

**ವಾಸ್ತು ಕಲೆ** : ಈ ಕಾಲದ ವಾಸ್ತು ಕಲೆ ಕರ್ನಾಟಕದ ವಾಸ್ತುಕಲಾ ಇತಿಹಾಸದಲ್ಲಿ ಒಂದು ಹೊಸ ಧಾಟಿಯನ್ನು ಆರಂಭಿಸಿತು. ಇದು ಸಮೃದ್ಧವಾಗಿ ಬೆಳೆದಿದ್ದ ಸ್ಥಳೀಯ ವಾಸ್ತುಸಂಪ್ರದಾಯವನ್ನು ಮೂಲೆಗೊತ್ತಿ, ದೆಹಲಿ ಸುಲ್ತಾನರ ಆಶ್ರಯದಲ್ಲಿ ಬೆಳೆದ ಮತ್ತು ಪಶ್ಚಿಮ ಏಷ್ಯದಲ್ಲಿ ಪ್ರಚಲಿತವಾಗಿದ್ದ ವಾಸ್ತುಶೈಲಿಗಳನ್ನು ಕರ್ನಾಟಕದಲ್ಲಿ ರೂಢಿಗೆ ತಂದಿತು. ಬಹಮನೀ ಅರಸರು, ಆಸ್ಥಾನಿಕರು ಹಾಗೂ ಮೊದಲ ಕುಶಲಕರ್ಮಿಗಳು ಪರದೇಶೀಯರೂ ಇಸ್ಲಾಮೀಯರೂ ಆಗಿದ್ದು, ಅವರು ವಾಸ್ತುರಚನೆಗೆ ತಮ್ಮ ಮೂಲನೆಲೆಗಳಲ್ಲಿದ್ದ ಸಂಪ್ರದಾಯದೆಡೆಗೇ ಸ್ವಾಭಾವಿಕವಾಗಿ ಒಲವು ತೋರಿದ್ದು ಇದಕ್ಕೆ ಕಾರಣ. ರಾಜಾಶ್ರಯದಲ್ಲೇ ಬೆಳೆದ ಈ ಕಾಲದ ಮುಖ್ಯ ವಾಸ್ತುಕೃತಿಗಳೆಲ್ಲಾ ಬಹುಮಟ್ಟಿಗೆ ಅವರ ರಾಜಧಾನಿಗಳಾಗಿದ್ದ ಗುಲ್ಬರ್ಗ ಮತ್ತು ಬಿಜಾಪುರ ಪಟ್ಟಣಗಳಲ್ಲಿ ಕಂಡುಬಂದಿವೆ.

ಗುಲ್ಬರ್ಗದಲ್ಲಿರುವ ಕಟ್ಟಡಗಳು ಬಹಮನೀ ಆಳ್ವಿಕೆಯ ಮೊದಲ ಘಟ್ಟದವು. ಇಲ್ಲಿರುವ ಕೋಟೆ ಬಹುಶಃ ಅತ್ಯಂತ ಪ್ರಾಚೀನ ಬಹಮನೀ ವಾಸ್ತುಕೃತಿ, ಅಲಾಉದ್ದೀನ್‍ನ (1347-58) ಕಾಲದ್ದು. ಕೋಟೆ ಅಂಥ ವಿಸ್ತಾರವಾದುದೇನೂ ಅಲ್ಲ. ಸುತ್ತಳತೆ ಸುಮಾರು 3 ಕಿಮೀಗಳಷ್ಟಾಗಬಹುದು. ಆದರೆ ಇದೊಂದು ಭದ್ರ ರಚನೆಯಾಗಿತ್ತು. ಹೊರಗೋಡೆ ದ್ವಿಭಿತ್ತಿ ರೀತಿಯದಾಗಿದ್ದು ಸುಮಾರು 50' ದಪ್ಪ ಇದೆ. ಇದರ ಸುತ್ತಲೂ ಇರುವ ಕಂದಕ ಸುಮಾರು 30'ಗಳಷ್ಟು ಅಗಲ ಇದೆ. ತಳಶಿಲೆಯನ್ನೇ ಕೊಚ್ಚಿ ಮಾಡಿರುವ ಈ ಕಂದಕ ಒಂದು ಸಾಹಸದ ವಾಸ್ತುಕಾರ್ಯ. ಕೋಟೆಗೋಡೆಗೆ ಒತ್ತಿದಂತೆ ಅಲ್ಲಲ್ಲಿ ಅರೆವೃತ್ತವಿನ್ಯಾಸದ ಅಟ್ಟಾಲಕಗಳಿವೆ. ಕೋಟೆಯ ಗೋಡೆಗಳ ಮೇಲೆ ಬೃಹತ್ ತೆನೆಗಳ ಪಂಕ್ತಿ ಇದೆ. ಕೆಲವು ತೆನೆಗಳಂತೂ 10'ಗಳಷ್ಟು ಎತ್ತರದ ಏಕಶಿಲೆಯವು. ಕೋಟೆಗೆ ಯಾವ ಸ್ಪಷ್ಟ ವಿನ್ಯಾಸವೂ ಇಲ್ಲ. ಗೋಡೆಗಳನ್ನು ತಳಶಿಲೆಯ ಏರುತಗ್ಗುಗಳನ್ನು ಅನುಸರಿಸಿ ಹಬ್ಬುವಂತೆ ಕಟ್ಟಲಾಗಿದೆ. ಹಿಂದೆ ಕೋಟೆಗೆ ಒಂದು ಮುಖ್ಯ ದ್ವಾರವೂ ಒಂದು ಉಪದ್ವಾರವೂ ಇದ್ದುವು. ಇವನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಅನುವಾಗುವಂತೆ ಚತುರತೆಯಿಂದ ಭದ್ರವಾಗಿ ಕಟ್ಟಲಾಗಿದೆ. ಗುಲ್ಬರ್ಗ ಕೋಟೆಯ ರಚನೆಯಲ್ಲಿ ಪಶ್ಚಿಮ ಏಷ್ಯ ಮತ್ತು ಐರೋಪ್ಯ ಕ್ಷಾತ್ರವಾಸ್ತುವಿನ ಪ್ರಭಾವವಿದೆ ಎನ್ನಲಾಗಿದೆ.

ಕೋಟೆಯ ಒಳಗಿದ್ದ ಅರಮನೆ ಇತ್ಯಾದಿ ಆ ಕಾಲದ ಕಟ್ಟಡಗಳೆಲ್ಲ ಈಗ ನೆಲಸಮವಾಗಿವೆ. ಆದರೆ ಇನ್ನೂ ಉತ್ತಮ ಸ್ಥಿತಿಯಲ್ಲಿರುವ ಒಂದು ಗಮನಾರ್ಹ ಕಟ್ಟಡವೆಂದರೆ ಇಲ್ಲಿನ ಜುಮ್ಮಾಮಸೀದಿ. ಒಂದನೆಯ ಮಹಮ್ಮದನ ಕಾಲದಲ್ಲಿ ಇರಾನಿನ ಕ್ವಾಜ್ವಿನ್ ಪ್ರಾಂತ್ಯದಿಂದ ಬಂದ ರಫಿ ಎಂಬ ಶಿಲ್ಪಿಯಿಂದ ರಚಿತವಾಗಿ 1367ರಲ್ಲಿ ಪೂರ್ಣಗೊಂಡ ಈ ಬೃಹತ್ ಕಟ್ಟಡ (216'X176') ವಿಶಿಷ್ಟರೀತಿಯ ವಾಸ್ತುಕೃತಿ. ಇದರಲ್ಲಿ ಮಸೀದಿಗಳ ಸಾಂಪ್ರದಾಯಿಕ ವಿನ್ಯಾಸದಂತೆ ಇರಬೇಕಾದ ತೆರೆದ ಅಂಗಳವಾಗಲಿ ನೀರಿನ ತೊಟ್ಟಿಯಾಗಲಿ ಇಲ್ಲ. ಒಳಗಿನ ಭಾಗ ಒಂದು ವಿಶಾಲ ಹಜಾರ. ಇದು ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಹಬ್ಬಿರುವ ಅನೇಕ ಕಂಬಗಳು ಮತ್ತು ಕಮಾನುಗಳಿಂದ ಕೂಡಿದೆ. ನಾಲ್ಕು ಕಂಬಗಳ ಮಧ್ಯದ ಪ್ರತಿ ಅಂಕಣದ ಮೇಲೂ ಒಂದೊಂದು ಗುಮ್ಮಟವಿದೆ. ಇಡೀ ಕಟ್ಟಡ ಪೂರ್ಣವಾಗಿ ಆಚ್ಛಾದಿತವಾಗಿದೆ. ಹಜಾರವನ್ನು ಅಂಕಣಗಳಾಗಿ ವಿಂಗಡಿಸುವ ಕಂಬಗಳನ್ನು ಕಂಬಗಳೆನ್ನುವುದಕ್ಕಿಂತ ಕಮಾನುಗಳಿಗೆ ಆಸರೆಯಾದ ಗುಜ್ಜು ಚೌಕುಗಳೆಂದು ಕರೆಯಬಹುದು. ಸಾಲುಸಾಲಾಗಿ ಹಬ್ಬಿರುವ ಈ ಕಮಾನುಗಳೂ ಹೆಚ್ಚು ಎತ್ತರವಿಲ್ಲದೆ ಒಟ್ಟು ನೋಟಕ್ಕೆ ಒಂದು ವಿಶಿಷ್ಟ ಅನುಭವವನ್ನುಂಟುಮಾಡುತ್ತವೆ. ಮುಂದುಗಡೆ ಪ್ರಾರ್ಥನಾ ಕೊಠಡಿಯಿರುವ ಪಶ್ಚಿಮ ಭಾಗದ ಕಮಾನುಗಳು ಮಾತ್ರ ಮುಂಭಾಗದ ಕಮಾನುಗಳಿಗಿಂತ ಸ್ವಲ್ಪ ಎತ್ತರವಾಗಿದೆ. ಹಾಗೆಯೇ ಮುಂಭಾಗದ ಗುಮ್ಮಟಗಳು ಬಹು ಕುಳ್ಳಾಗಿದ್ದರೆ, ಹಿಂದಿನ ಭಾಗದ ಗುಮ್ಮಟಗಳು ಇವಕ್ಕಿಂತ ಎತ್ತರವಾಗಿವೆ. ಅದರಲ್ಲೂ ಪ್ರಾರ್ಥನಾ ಕೊಠಡಿಯ ಮುಂದಣ ಅಂಕಣದ ಗುಮ್ಮಟ ಅತ್ಯಂತ ಎತ್ತರವಾಗಿದೆ. ಅದರ ಪಕ್ಕದ ಅಂಕಣಗಳು ಮಧ್ಯಸ್ಥವಾಗಿವೆ. ಕಟ್ಟಡದ ಹೊರಮೈಯಲ್ಲಿ ಹಿಂದುಗಡೆಯ ಗೋಡೆ ಮಟ್ಟಸವಾಗಿವೆ. ಇತರ ಮೂರೂ ಪಾರ್ಶ್ವಗಳಲ್ಲಿ ಕಮಾನು ಸಾಲುಗಳಿದ್ದು ಅವುಗಳ ಹಿಂಬದಿಯಲ್ಲಿ ಉದ್ದಕ್ಕೂ ಹಬ್ಬುವ ಕೈಸಾಲೆಯಿದೆ. ಪೂರ್ವಪಾರ್ಶ್ವದ ಮಧ್ಯದಲ್ಲಿ ಎತ್ತರದ ಕಮಾನಿನ ಪ್ರವೇಶದ್ವಾರವಿದೆ. ಅದರ ಚಾವಣಿಯ ಮೇಲೆ ಮೂಲೆಗಳಲ್ಲಿ ತೆಳುವಾದ ಕುಳ್ಳು ಮಿನರೆಟ್ಟುಗಳಿವೆ. ಹಜಾರದ ಛತ್ತಿನ ಮೇಲೆ ಇರುವ ಅಸಂಖ್ಯಾತವೋ ಎನ್ನುವಂತಿರುವ ಚಿಕ್ಕಚಿಕ್ಕ ಗುಮ್ಮಟಗಳು, ಪಶ್ಚಿಮದ ಕಡೆಗೆ ಪ್ರಾರ್ಥನಾ ಕೊಠಡಿ ಇರುವ ಅಂಕಣ ಸಾಲಿನ ಮೇಲೆ ಇರುವ ವಿವಿಧ ಮಟ್ಟಗಳಲ್ಲಿ ಇವಕ್ಕಿಂತ ಎತ್ತರವಿರುವ, ದೊಡ್ಡ ಗುಮ್ಮಟಗಳು-ಇವು ಒಟ್ಟಾರೆ ಗಿರಿಶ್ರೇಣಿಯೊಂದರ ಪಕ್ಷಿನೋಟವೋ ಎನ್ನುವಂತೆ ತೋರುತ್ತವೆ. ಇಲ್ಲಿನ ಕಮಾನುಗಳ ವಿನ್ಯಾಸ, ಗುಜ್ಜಾದ ಗುಮ್ಮಟಗಳ ಮಾದರಿ, ದುಂಡು ಗುಮ್ಮಟಗಳನ್ನು ಚೌಕ ಅಂಕಣಗಳ ಮೇಲೆ ಎತ್ತುವ ರೀತಿ- ಇವುಗಳಲ್ಲಿ ಪಾರಸೀ ವಾಸ್ತುಸಂಪ್ರದಾಯದ ಪ್ರಭಾವ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಆದರೆ ಇವುಗಳ ಜೊತೆಗೆ ಭಾರತೀಯ- ಇಸ್ಲಾಮೀ ವಾಸ್ತುಶೈಲಿಯ ಕೆಲವು ಅಂಶಗಳೂ ಇವೆ ಎನ್ನಲಾಗಿದೆ. ಈ ಮಸೀದಿಯ ವಿಶಿಷ್ಟ ವಿನ್ಯಾಸವನ್ನು ಆಧರಿಸಿ, ಇದು ಸ್ಪೇನಿನ ಕಾರ್ಡೊವಾ ನಗರದ ಪ್ರಸಿದ್ಧ ಮಸೀದಿಯನ್ನು ಹೋಲುತ್ತದೆ ಎಂದು ಹೇಳುವುದು ರೂಢಿ. ಆದರೆ ಇಸ್ಲಾಮೀ ವಾಸ್ತುಕಲೆಯನ್ನು ವಿಶೇಷವಾಗಿ ಅಭ್ಯಸಿಸಿರುವ ಯಾಜ್ದಾನಿಯವರ ಪ್ರಕಾರ ಈ ಹೋಲಿಕೆ ಸರಿಯಲ್ಲ. ಇರಾನಿನ ತಂಪಾದ ಬೆಟ್ಟಪ್ರದೇಶದಿಂದ (ಕ್ವಾಜ್ವಿನ್) ಬಂದ ಇದರ ಶಿಲ್ಪಿ, ಗುಲ್ಬರ್ಗದ ಬಿಸಿಲಿನ

ಹವಾಮಾನವನ್ನು ಗಮನಕ್ಕೆ ತೆಗೆದುಕೊಳ್ಳದೆ ಬಿಜಾಂಟೀನ್ ಶೈಲಿಯ ಸಮಕಾಲೀನ ತುರ್ಕಿ ಮಸೀದಿಗಳ ವಿನ್ಯಾಸವನ್ನು ಇಲ್ಲಿ ಅನುಸರಿಸಿದ್ದಾನೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಗುಲ್ಬರ್ಗ ನಗರದ ಮಧ್ಯದಲ್ಲಿರುವ ಷಾ ಬಜಾರ್ ಮಸೀದಿ ಸಹ ಒಂದನೆಯ ಮಹಮ್ಮದ್‌ನ (1358–75) ಕಾಲದ್ದೇ. ಆದರೆ ಇದಕ್ಕೂ ಇದೇ ಕಾಲದ ಜುಮ್ಮಾಮಸೀದಿಗೂ ವಿನ್ಯಾಸದಲ್ಲಿ ಬಹಳಷ್ಟು ವ್ಯತ್ಯಾಸ ವಿದೆ. ಈ ಮಸೀದಿಯ ಮುಂಭಾಗದ ಮಧ್ಯದಲ್ಲಿ ಕಮಾನಿನ ಪ್ರವೇಶ ದ್ವಾರವಿದ್ದು ಇಕ್ಕೆಡೆಗಳಲ್ಲಿ ಬಹು ಎತ್ತರದ ಎರಡು ಮಿನಾರುಗಳಿವೆ. ಒಳಗೆ ಹೋಗುತ್ತಿದ್ದಂತೆ ವಿಶಾಲವಾದ ತೆರೆದ ಅಂಗಳವಿದ್ದು ಅದರ ಹಿಂದೆ ಆಚ್ಛಾದಿತ ಪ್ರಾರ್ಥನಾ ಹಜಾರ (150'X60') ಇದೆ. ಈ ಹಜಾರ ಕಲ್ಲುಗುಂಡುಗಳಿಂದ ಕಟ್ಟಿದ ಕಂಬಗಳಿಂದ 90 ಅಂಕಣಗಳಾಗಿ ವಿಂಗಡ ವಾಗಿದೆ. ಈ ಎಲ್ಲ ಅಂಕಣಗಳ ಮೇಲೂ ಚಿಕ್ಕ ಗುಮ್ಮಟದ ಚಾವಣಿಗ ಳಿವೆ. ಈ ಹಜಾರದ ಮುಮ್ಮುಖದಲ್ಲಿ 15 ಕಮಾನುಗಳಿದ್ದು ಇದೇ ನೇರದಲ್ಲಿ ಪ್ರತಿಸಾಲಿನಲ್ಲೂ ಕಮಾನುಗಳಿವೆ. ಈ ಮಸೀದಿಯ ಗೋಡೆ ಗಳನ್ನು ಕಟ್ಟುವಲ್ಲಿ ಅವು ಮೇಲೆ ಹೋದಂತೆ ಒಳಭಾಗಕ್ಕೆ ಬಾಗಿರುವಂತೆ ಮಾಡಿರುವುದು ಇಲ್ಲಿನ ವೈಶಿಷ್ಟ್ಯ. ಈ ಅಂಶ ಹಾಗೂ ಇಲ್ಲಿ ಉಪಯೋಗಿಸಿ ರುವ ಕಮಾನುಗಳು ಮತ್ತು ಬುರಾಜುಗಳ ರೀತಿ ಇವುಗಳಲ್ಲಿ ದೆಹಲಿಯ ತುಗಲಕ್ ವಾಸ್ತುಶೈಲಿಯ ಪ್ರಭಾವ ಎದ್ದುಕಾಣುತ್ತದೆ.

ತುಗಲಕ್ ಶೈಲಿಯ ಪ್ರಾಮಾಣಿಕ ಅನುಕರಣೆಯನ್ನು ಬಹಮನೀ ವಂಶದ ಮೊದಲ ಇಬ್ಬರು ಅರಸರ ಸಮಾಧಿಗಳಲ್ಲಿ ಇನ್ನೂ ಸ್ಪಷ್ಟವಾಗಿ ಕಾಣಬಹುದು. ಗುಲ್ಬರ್ಗ ಕೋಟೆಯ ದಕ್ಷಿಣದ್ವಾರದ ಬಳಿ ಇರುವ ಈ ಸಮಾಧಿಗಳು ಎತ್ತರವಾದ ಚೌಕದ ಜಗತಿಯ ಮೇಲೆ ಕಟ್ಟಿದ ಬಹು ಸರಳವಾದ ಕಟ್ಟಡಗಳು. ಇವುಗಳಲ್ಲಿ ಗುಮ್ಮಟದಿಂದ ಆಚ್ಛಾದಿತ ವಾದ ಒಂದು ಚಿಕ್ಕ ಹಜಾರ ಮಾತ್ರ ಇರುತ್ತದೆ. ಮೇಲೆ ಹೋದಂತೆ ಒಳಬಾಗುಳ್ಳ ಗೋಡೆಗಳು, ಸುಮಾರು ಮಟ್ಟಸ ತಲೆಯ ಗುಮ್ಮಟ, ಚೌಕದ ಗೋಡೆಗಳ ಮೇಲೆ ದುಂಡುಕಮಾನನ್ನು ಎತ್ತಲು ಒಳಗಣ ಮೂಲೆಗಳಲ್ಲಿ ಸಣ್ಣ ಕಮಾನುಗಳನ್ನು ಪೇರಿಸುವುದು, ಕಟ್ಟಡದ ಮೇಲಿನ ಚಿಕ್ಕ ಗುಲ್‌ದಸ್ತಾಗಳು, ಒಳಗೋಡೆಗೆ ಹೊಳಪಿನ ನೀಲಿಯ ಎನಾಮಲ್ ಅಲಂಕರಣ ಮುಂತಾದ ಇಲ್ಲಿನ ಅಂಶಗಳೆಲ್ಲ ಮೊದಲ ತುಗಲಕ್ ಅರಸರ ಸಮಾಧಿಗಳಲ್ಲಿ ಕಂಡುಬರುವವೇ ಆಗಿವೆ. ಇದೇ ಗುಂಪಿನಲ್ಲಿರುವ 3ನೆಯ ಮಹಮ್ಮದನ (ಮರಣ 1397) ಸಮಾಧಿ ವಿನ್ಯಾಸದಲ್ಲಿ ಮೇಲಿನ ವಂತೆಯೇ ಇದ್ದರೂ ಇದರ ಗುಮ್ಮಟದ ತಳ ಸ್ವಲ್ಪ ಬೇರೆಯ ರೀತಿಯಲ್ಲಿದ್ದು ಜುಮ್ಮಾ ಮಸೀದಿಯ ಗುಮ್ಮಟದ ಸ್ವರೂಪದ ಕೆಲವಂಶಗಳನ್ನೊಳಗೊಂಡಿದೆ.

ಗುಲ್ಬರ್ಗದಲ್ಲಿರುವ ಹಫ್ತಾ ಗುಂಬಜ್ ಗುಂಪಿನ ಏಳು ಸಮಾಧಿಗಳಲ್ಲಿ ನಾಲ್ಕು ಕಟ್ಟಡಗಳು ಬಹಮನೀ ಅರಸರ ಸಮಾಧಿಗಳು. ಇವುಗಳಲ್ಲಿ ಮೊದಲನೆಯದು ಮುಜಾಹಿದನದು (ಮರಣ 1378). ಇದರಲ್ಲೂ ತುಗಲಕ್ ವಾಸ್ತುಶೈಲಿಯ ಎಲ್ಲ ಅಂಶಗಳನ್ನು ಕಾಣಬಹುದು. ಈ ಗುಂಪಿನ ಇನ್ನೂ ಮೂರು ಸಮಾಧಿಗಳು ಇದೇ ಶೈಲಿಯಲ್ಲಿವೆ. ಆದರೆ ಇವುಗಳ ವಿನ್ಯಾಸದಲ್ಲಿ ಒಂದು ಹೊಸತನ ಕಾಣುತ್ತದೆ. ಇವುಗಳಲ್ಲಿ ಜೊತೆಗೂಡಿದಂತೆ ಎರಡು ಸಮಾಧಿಗೃಹಗಳಿದ್ದು, ಒಂದನ್ನು ರಾಜನಿಗೂ ಇನ್ನೊಂದನ್ನು ಅವನ ಪರಿವಾರದವರಿಗೂ ಒದಗಿಸಲಾಗಿದೆ. ಈ ರೀತಿಯ ಜೋಡಿ ಸಮಾಧಿಗಳಲ್ಲಿ ಗುಲ್ಬರ್ಗದಲ್ಲಿ ಆಳಿದ ಕೊನೆಯ ಬಹಮನೀ ದೊರೆ ತಾಜುದೀನ್ ಫಿರೋಜನ ಸಮಾಧಿ ಭವ್ಯ ಕಟ್ಟಡ. ವಾಸ್ತುಸ್ವರೂಪ ದಲ್ಲಿ ಇದನ್ನು ತುಗಲಕ್ ಸಮಾಧಿಗಳ ವಿಕಸಿತ ಹಂತ ಎನ್ನಬಹುದು. ಈ ಬೃಹತ್ ಕಟ್ಟಡದ (158'X7') ಗೋಡೆಗಳು ಮೇಲಿನ ಕೈಪಿಡಿಯೂ ಸೇರಿದಂತೆ 42' ಎತ್ತರವಿದೆ. ಛತ್ತಿನ ಮೇಲೆ 30' ಎತ್ತರದ ಅರ್ಧಗೋಳಾ ಕಾರದ ಎರಡು ಗುಮ್ಮಟಗಳಿವೆ. ಗೋಡೆಗಳನ್ನು ಒಳಚಾಚುವ ಕಮಾನು ಸಾಲುಗಳಿಂದ ಎರಡು ಅಂತಸ್ತುಗಳಲ್ಲಿ ಇರುವಂತೆ ಕಟ್ಟಲಾಗಿದೆ. ಕೈಪಿಡಿಯ ಮೇಲೆ ಪತ್ರಾಕಾರದ ತೆನೆಗಳ ಸಾಲಿದೆ. ಒಳಭಾಗದಲ್ಲಿನ ಎರಡು ಸಮಾಧಿಗೃಹಗಳು ಚೌಕನಾಗಿದ್ದು ಅವನ್ನು ಎರಡು ಅಂತಸ್ತಿನ ಕಮಾನು ಸಾಲುಗಳಿಂದ ಅಲಂಕರಿಸಲಾಗಿದೆ. ಈ ವಿಶಿಷ್ಟಾಂಶಗಳು ಹಾಗೂ ಗೋಡೆಗಳು ಬಹು ಸುಂದರವಾಗಿ ನಿರೂಪಿಸಿರುವ ಗಚ್ಚಿನ ಅಲಂಕರಣ– ಇವು ದೆಹಲಿಯಲ್ಲಿ ಸು. 30 ವರ್ಷಗಳ ಹಿಂದೆಯೇ ರಚಿತವಾಗಿದ್ದ ಫಿರೋಜ್ ತುಗಲಕನ ಸಮಾಧಿಯನ್ನು ಜ್ಞಾಪಕಕ್ಕೆ ತರುತ್ತವೆ.

ಗುಲ್ಬರ್ಗದಿಂದ ಬಿದರೆಗೆ ರಾಜಧಾನಿ ವರ್ಗವಾದಾಗಿನಿಂದ (1424) ಬಹಮನೀ ವಾಸ್ತುಶಿಲ್ಪದ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ. ಈ ಘಟ್ಟದ ಹೆಚ್ಚಿನ ಕೃತಿಗಳೆಲ್ಲ ಬಿದರೆಯಲ್ಲೇ ಇವೆ. ಈ ಘಟ್ಟಕ್ಕೆ ಸಂಬಂಧಿಸಿದಂತೆ ಕೇವಲ ಮಸೀದಿ ಮತ್ತು ಸಮಾಧಿಗಳಲ್ಲದೆ ಅರಮನೆ, ಮದರಸಾ ಮೊದಲಾದ ಲೌಕಿಕ ವಾಸ್ತುಕೃತಿಗಳೂ ಸ್ವಲ್ಪಮಟ್ಟಿಗೆ ಉಳಿದುಬಂದಿರುವುದು ವಿಶೇಷ. ವಾಸ್ತುಶೈಲಿಯ ದೃಷ್ಟಿಯಿಂದ ಬಿದರೆ ಘಟ್ಟದ ಬಹಮನೀ ವಾಸ್ತುಕೃತಿಗಳು ಹೆಚ್ಚು ಕಡಿಮೆ ಹೊಸ ಪರಂಪರೆಗೇ ಸೇರಿದಂತಿವೆ. ಈ ಹಿಂದಿನ ಗುಲ್ಬರ್ಗದ ವಾಸ್ತುಕೃತಿಗಳಲ್ಲಿ ತುಗಲಕ್ ವಾಸ್ತುಶೈಲಿಯ ಛಾಯೆ ಸ್ಪಷ್ಟವಾಗಿ ಕಂಡುಬಂದರೆ, ಈ ಘಟ್ಟದ ವಾಸ್ತುಕೃತಿಗಳಲ್ಲಿ ಪಾರಸೀ ವಾಸ್ತುಶೈಲಿಯ ಪ್ರಭಾವ ವಿಶೇಷವಾಗಿ ಎದ್ದುತೋರುತ್ತದೆ.

ಬಿದರೆಯ ಕೋಟೆ ಗುಲ್ಬರ್ಗದ ಕೋಟೆಗಿಂತ ದೊಡ್ಡದು. ಆದರೆ ಕಟ್ಟಾಣಿಕೆಯಲ್ಲಿ ಅಳವಡಿಸಿರುವ ಮೂಲಸೂತ್ರ ಮತ್ತು ತಂತ್ರಗಳಲ್ಲಿ ಹೆಚ್ಚಿನ ವ್ಯತ್ಯಾಸಗಳೇನೂ ಇಲ್ಲ. ಕೋಟೆ ಸುಮಾರು ಸುಸ್ಥಿತಿಯಲ್ಲೇ ಇವೆ. ಅದರೊಳಗಿನ ಜನಾನಾ ಮಹಲ್, ತಖ್ತ್ ಮಹಲ್ ಮೊದಲಾದವು, ಕೊಳಗಳು, ಕಾರಂಜಿಗಳು, ಸ್ನಾನಗೃಹಗಳು (ಹಮಾಮ್) ಭಗ್ನಸ್ಥಿತಿಯಲ್ಲಿ ಉಳಿದಿವೆ. ಬಿದರೆ ಪಟ್ಟಣ ಪರ್ಷಿಯ ದೇಶದ ಒಂದು ಉಪರಾಜಧಾ ನಿಯೇ ಎನ್ನುವಷ್ಟರ ಮಟ್ಟಿಗೆ ಈ ವಾಸ್ತುಕೃತಿಯಲ್ಲಿ ಪಾರಸಿ ಪ್ರಭಾವವನ್ನು ಕಾಣಬಹುದು. ಪಾರಸೀ ವಾಸ್ತುಕಲೆಯ ವಿಶಿಷ್ಟಾಂಶವಾದ ವರ್ಣಲೇಪನ ವನ್ನು ಸಹ ಇಲ್ಲಿನ ಕೃತಿಗಳಲ್ಲಿ ಅಳವಡಿಸಲಾಗಿದೆ. ಈ ವರ್ಣರಂಜಿತ ಭಿತ್ತಿಗಳು ಮತ್ತು ವರ್ಣಪೂರಿತ ಚದರ ಬಿಲ್ಲೆಗಳ ಉಪಯೋಗದಿಂದ ಬಿದರೆಯ ಈ ಕಟ್ಟಡಗಳ ವೈಭವ ಆಹ್ಲಾದಕರವೆನಿಸಿವೆ.

ಜುಮ್ಮಾ ಮಸೀದಿ ಮತ್ತು ಸೋಲಾಕಂಬಾ ಮಸೀದಿಗಳು ಈ ಕಾಲದ ಮಸೀದಿಗಳಲ್ಲಿ ಉಲ್ಲೇಖಾರ್ಹವಾದವು. ಇವು ಬಹು ಸರಳ ಕೃತಿಗಳು. ಈ ವಾಸ್ತುಕೃತಿಗಳ ನಿರೂಪಣೆ ರಾಜಾಸ್ಥಾನದ ವೈಭವೋಪೇತ ವಾಸ್ತುಕೃತಿಗಳಿಗೆ ವಿರುದ್ಧವಾಗಿ ಇಸ್ಲಾಮ್ ಧರ್ಮದ ಶಿಸ್ತು ಮತ್ತು ಸರಳತೆಗೆ ಅನುಗುಣವಾಗಿವೆ. ಈ ಎರಡೂ ಮಸೀದಿಗಳಲ್ಲಿ ತೆರೆದ ಅಂಗಳ ಮತ್ತು ಕಂಬಯುತ ಹಜಾರಗಳಿವೆ. ಮೇಲೆ ದೊಡ್ಡ ಗುಮ್ಮಟ ಇದೆ. ಮುಂಭಾಗದಲ್ಲಿ 16 ಕಂಬಗಳಿರುವುದೂ ಮೇಲಿನ ದೊಡ್ಡ ಗುಮ್ಮಟದ ತಳದಲ್ಲಿ ಅಷ್ಟಭುಜಾಕಾರದ ಎತ್ತರದ ಆಸರೆಯನ್ನು ಒದಗಿಸಿರುವುದೂ ಸೋಲಾಕಂಬಾ ಮಸೀದಿಯ ವೈಶಿಷ್ಟ್ಯ.

ಈಗ ಮಹ್ಮೂದ್ ಗಾವಾನನ ಮದರಸಾ ಎಂದು ಪ್ರಸಿದ್ಧವಾಗಿರುವ ಕಟ್ಟಡ ಬಿದರೆಯ ವಾಸ್ತುಕೃತಿಗಳಲ್ಲೆಲ್ಲ ಅನುಪಮವಾದುದು. 1472ರಲ್ಲಿ ರಚಿತವಾದ ಈ ಬೃಹತ್ ಕಟ್ಟಡ (205'X180') ಮಧ್ಯದ ವಿಶಾಲ ಪ್ರಾಂಗಣ, ಸುತ್ತಲೂ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಣ್ಣದೊಡ್ಡ ಕೋಣೆಗಳು, ಮೇಲೆ ವಿದ್ಯೆಯ ಹಿರಿಮೆಯನ್ನು ಸಾರುವಂತಿರುವ ಎತ್ತರದ ಮಿನಾರುಗಳು ಇವುಗಳಿಂದ ಕೂಡಿತ್ತು. ಗೋಡೆಗಳು ಸೂಡುಚಿತ್ರಗಳಿಂದ

ಅಲಂಕೃತವಾಗಿದ್ದುವು. ಈಗ ಇದರ ಕೆಲವು ಭಾಗಗಳು ಮಾತ್ರ ಉಳಿದಿವೆ. ಮದರಸಾದ ವಾಸ್ತುಶೈಲಿ ಪೂರ್ಣವಾಗಿ ಪಾರಸಿ ರೀತಿಯದು. ಈ ಅನುಕರಣೆ ಎಷ್ಟು ಪ್ರಾಮಾಣಿಕವೆಂದರೆ ಮಹ್ಮೂದ್ ಗಾವಾನ್ ತನ್ನ ಬಾಲ್ಯದಲ್ಲಿ ವಿದ್ಯಾರ್ಜನೆ ಮಾಡಿದ ಪರ್ಷಿಯಾದ ಯಾವುದೋ ವಿದ್ಯಾಲಯವನ್ನೇ ಕಿತ್ತು ತಂದು ಇಲ್ಲಿ ನೆಟ್ಟಿದ್ದಾನೆನೋ ಎನಿಸುವಂತಿದೆ ಯೆಂದು ಒಬ್ಬ ಇತಿಹಾಸಕಾರ ಉದ್ಗರಿಸಿದ್ದಾನೆ.

ಬಿದರೆಯಲ್ಲಿ ಬಹಮನೀ ಕಾಲದ ಹನ್ನೆರಡು ಸಮಾಧಿಗಳಿವೆ. ಭಾರತೀಯ-ಇಸ್ಲಾಮೀ ವಾಸ್ತು ಇತಿಹಾಸದಲ್ಲಿ ಇವುಗಳದು ವಿಶಿಷ್ಟಸ್ಥಾನ. ಗುಲ್ಬರ್ಗದ ಕಟ್ಟಡಗಳಲ್ಲಿ ಹಾಗೂ ಬಿದರೆಯ ಇತರ ಕಟ್ಟಡಗಳಲ್ಲಿ ತುಗಲಕ್ ಅಥವಾ ಪಾರಸೀ ಶೈಲಿಯ ಅನುಕರಣೆ ವಿಶೇಷವಾಗಿ ಕಂಡುಬಂದರೆ, ಈ ಸಮಾಧಿಗಳಲ್ಲಿ ವಿವಿಧ ಮೂಲಗಳಿಂದ ಬಂದ ವಾಸ್ತುಸಂಪ್ರದಾಯದ ಅಂಶಗಳನ್ನು ಅಳವಡಿಸಿಕೊಂಡ ದಖನೀ ಎಂದು ಕರೆಯಬಹುದಾದ ಸ್ಥಳೀಯ ಶೈಲಿಯೊಂದು ಬೆಳೆಯಲಾರಂಭಿಸುವುದನ್ನು ಗುರುತಿಸಬಹುದು. ವಾಸ್ತುವಿನ್ಯಾಸದಲ್ಲಿ ಈ ಸಮಾಧಿಗಳು ಬಹು ಸರಳ. ಚೌಕ ತಳವಿನ್ಯಾಸದ ಒಂದು ವಿಶಾಲ ಕೋಣೆ, ಅದರ ಸುತ್ತಲೂ ಕಂಬಸಾಲಿನ ಮುಂಭಾಗವಿರುವ ಪಡಸಾಲೆ, ಮೇಲೆ ಕೈಪಿಡಿಯಲ್ಲಿ ತೆನೆಗಳು ಮತ್ತು ಮಧ್ಯದಲ್ಲಿ ಬೃಹತ್ ಗುಮ್ಮಟ- ಇದು ಇವುಗಳ ಸಾಮಾನ್ಯ ಸ್ವರೂಪ. ಆದರೆ ಗುಮ್ಮಟಗಳನ್ನು ಎತ್ತರದ ಅಷ್ಟಭುಜ ಪೀಠದ ಮೇಲೆ ಎತ್ತಲಾಗಿರುತ್ತದೆ. ಅಲ್ಲದೆ ಗುಮ್ಮಟದ ತಳದಲ್ಲಿ ಸ್ವಲ್ಪ ಒಳಬಾಗು ಸಹ ಕಾಣಿಸಿಕೊಳ್ಳುತ್ತದೆ. ಈ ಅಂಶಗಳು ಮುಂದಿನ ಭಾರತೀಯ-ಇಸ್ಲಾಮೀ ವಾಸ್ತುಕೃತಿಗಳಲ್ಲಿ ಸಾಮಾನ್ಯಾಂಶಗಳಾದುವು.

(ಎಸ್.ಎನ್.)

**ಶಾಸನಗಳು:** ಬಹಮನೀ ಅರಸರ ಶಾಸನಗಳು ಬಹುಮಟ್ಟಿಗೆ ಮಸೀದಿಗಳಲ್ಲಿ ಗೋರಿಗಳಲ್ಲಿ ಅಥವಾ ಅಂಥ ಇತರ ಧಾರ್ಮಿಕ ಕಟ್ಟಡಗಳಲ್ಲಿ ದೊರಕಿವೆ. ಸಾಮಾನ್ಯವಾಗಿ ಈ ಶಾಸನಗಳಲ್ಲಿ ಅರಸನ ಹೆಸರು, ಕಟ್ಟಡವನ್ನು ಕಟ್ಟಿಸಿರುವವನ ಹೆಸರು, ಕಟ್ಟಿಸಿದ ತೇದಿ ಮುಂತಾದ ವಿವರಗಳಿರುತ್ತವೆ. ಕೋಟೆ, ದ್ವಾರ, ಬಾವಿ ಇತ್ಯಾದಿಗಳನ್ನು ಕಟ್ಟಿಸಿದ ಅಥವಾ ಜೀರ್ಣೋದ್ಧಾರಗೊಳಿಸಿದ ಸಂದರ್ಭಗಳಲ್ಲಿಯೂ ಶಾಸನಗಳನ್ನು ಹಾಕಿಸಿರುವುದು ಕಂಡುಬಂದಿದೆ. ಅಲ್ಲದೆ ಕತ್ತಿ, ಬಂದೂಕ ಮುಂತಾದ ಶಸ್ತ್ರಾಸ್ತ್ರಗಳ ಮೇಲೂ ಮುದ್ರೆಗಳು, ಪಾತ್ರೆಗಳು ಮುಂತಾದ ಚರವಸ್ತುಗಳ ಮೇಲೂ ಈ ಕಾಲದ ಶಾಸನಕಲ್ಲುಗಳನ್ನು, ಅವುಗಳ ಸಂರಕ್ಷಣೆಗಾಗಿ ಸ್ಥಾನಪಲ್ಲಟಗೊಳಿಸಲಾಗಿರುತ್ತದೆ. ಎಂತಲೇ ಹಲವಾರು ಸಂದರ್ಭಗಳಲ್ಲಿ ಮಸೀದಿಗಳಲ್ಲಿರಬಹುದಾದ ಶಾಸನಗಳನ್ನು ಗೋರಿಗಳ ಮೇಲೂ ಗೋರಿ ಶಾಸನಗಳನ್ನು ಮಸೀದಿಗಳ ಮೇಲೂ ಕಾಣಬಹುದು.

ಈ ಕಾಲದ ಶಾಸನಗಳು ಸ್ವಲ್ಪಮಟ್ಟಿಗೆ ಅರಬ್ಬಿ ಭಾಷೆಯಲ್ಲೂ ಹೆಚ್ಚಾಗಿ ಪಾರಸಿ ಭಾಷೆಯಲ್ಲೂ ಇವೆ. ಒಮ್ಮೊಮ್ಮೆ ಪಾರಸಿಯ ಜೊತೆಗೆ ಸಂಸ್ಕೃತ, ಕನ್ನಡ, ತೆಲುಗು, ಮರಾಠಿ ಇತ್ಯಾದಿ ದೇಶೀಯ ಭಾಷೆಗಳನ್ನೊಳಗೊಂಡ ದ್ವಿಭಾಷಾ ಶಾಸನಗಳೂ ಕಂಡುಬರುತ್ತವೆ. ಅರಬ್ಬಿ ಶಾಸನಗಳೆಲ್ಲ ಗದ್ಯಶಾಸನಗಳು. ಪಾರಸಿ ಭಾಷೆ ಬಳಕೆಗೆ ಬಂದ ಆರಂಭದಲ್ಲಿ ಶಾಸನಗಳು ಗದ್ಯದಲ್ಲಿದ್ದರೂ ಕ್ರಮೇಣ ಹೆಚ್ಚುಹೆಚ್ಚಾಗಿ ಪದ್ಯಗಳನ್ನು ಬಳಸಲಾಗಿದೆ. ಆದರೂ ಭಾಷಾದೃಷ್ಟಿಯಿಂದ ಈ ಶಾಸನಗಳೂ ಯಾವ ಮಹತ್ತ್ವವನ್ನೂ ಪಡೆದಿಲ್ಲ. ವ್ಯಾಕರಣ ಹಾಗೂ ಛಂದಸ್ಸಿನ ನಿಯಮಗಳಿಗನುಗುಣವಾಗಿಲ್ಲದ ದೋಷಪೂರಿತ ಶಾಸನಗಳಿವು. ಆದರೆ ಲಿಪಿ ದೃಷ್ಟಿಯಿಂದ ಇವು ಬಹು ಸುಂದರವಾಗಿವೆ. ಅಲಂಕಾರಾಕ್ಷರಗಳನ್ನು ಉಪಯೋಗಿಸಲಾಗಿದೆ. ಕಾಗದಗಳ ಮೇಲಿನ ಬರೆಹಗಳಷ್ಟೇ ಸುಂದರವಾದ ಬರೆಹಗಳಿವು. ಕುಫಿ, ನಸ್ಖ್, ಥುಲ್ತ್, ನಸ್ತಾಲಿಕ್, ತುಘ್ರಾ ಇವು ಶಾಸನಗಳಲ್ಲಿ ಬಳಸಲಾದ ಲಿಪಿಗಳು. ನಸ್ಖ್ ಲಿಪಿಯಲ್ಲಿ ಅಲಂಕರಣವನ್ನು ಕಾಣಬಹುದು. ಬಿಲ್ಲು ಮತ್ತು ಬಾಣದ ಆಕಾರದಲ್ಲಿ ಅಥವಾ ಧ್ವಜಗಳನ್ನು ಎತ್ತಿಹಿಡಿದ ಸೈನ್ಯ ಶಿಸ್ತಿನಿಂದ ಮುಂದುವರಿಯುತ್ತಿರುವ ರೀತಿಯಲ್ಲಿ ಈ ಅಕ್ಷರಗಳನ್ನು ಜೋಡಿಸಲಾಗಿರುತ್ತದೆ. ತುಘ್ರಾ ಶೈಲಿಯಲ್ಲಿ ಅಕ್ಷರಗಳನ್ನು ಪಕ್ಷಿಗಳ ಅಥವಾ ಪ್ರಾಣಿಗಳ ಆಕಾರದಲ್ಲಿ ಜೋಡಿಸಲಾಗಿರುತ್ತದೆ. ಇವು ದೃಷ್ಟಿದೋಷ ಪರಿಹಾರಕ್ಕಾಗಿ ಕೈಗೊಂಡ ಕ್ರಮ ಎನ್ನಲಾಗಿದೆ. ಸಿಂಹ ಅಥವಾ ಹುಲಿಯ ಚಿತ್ರವನ್ನು ಹೋಲುವ ಅಕ್ಷರ ಜೋಡಣೆ ಇದರಲ್ಲಿ ಪ್ರಮುಖವಾದುದು. ದೈವಸಿಂಹವೆನಿಸಿದ ಅಲಿಯನ್ನು ಇದು ಸೂಚಿಸುತ್ತದೆ. ದಖನ್ನಿನ ಕೋಟೆಗಳ ಗೋಡೆಗಳ ಮೇಲೆ ಇಂತಹವನ್ನು ವಿಶೇಷವಾಗಿ ಕಾಣಬಹುದು. ಥುಲ್ತ್ ಮತ್ತು ನಸ್ತಾಲಿಕ್‌ಗಳು ನಸ್ಖ್ ಉಪಶೈಲಿಗಳು. ಶಾಸನ ಪಾಠಗಳು ಸಾಮಾನ್ಯವಾಗಿ ಕೊರಾನಿನಿಂದ ಉದ್ಧೃತವಾದ ಹೇಳಿಕೆಗಳೇ.

ಈ ವೇಳೆಗೆ ಬರೆವಣಿಗೆಗೆ ಕಾಗದವನ್ನು ಬಹಳಮಟ್ಟಿಗೆ ಬಳಸುತ್ತಿದ್ದ ಕಾರಣ ಶಾಸನಗಳ ಬಳಕೆ ಕಡಿಮೆಯಾಯಿತು. ಎಂತಲೇ ಈ ಶಾಸನಗಳಲ್ಲಿ ವಿಶೇಷವಾದ ಯಾವ ಐತಿಹಾಸಿಕ ಮಹತ್ತ್ವವೂ ಕಂಡುಬರುವುದಿಲ್ಲ. ಆದರೂ ಕೆಲವು ಸಂದರ್ಭಗಳಲ್ಲಿ ಅರಸರ ವಂಶಾವಳಿ ಆಳಿಕೆಯ ಕಾಲ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಲಭಿಸುವ ವಿವರಗಳು ಸಮಕಾಲೀನ ಇತಿಹಾಸಕಾರರ, ಯಾತ್ರಿಕರ ಬರೆವಣಿಗೆಗಳಲ್ಲಿನ ಹೇಳಿಕೆಗಳಿಗೆ ಪುಷ್ಟಿಯನ್ನೀಯುತ್ತವೆ, ಇಲ್ಲವೇ ಆ ಹೇಳಿಕೆಗಳನ್ನು ಅಲ್ಲಗಳೆಯುತ್ತವೆ.

**ನಾಣ್ಯಗಳು**: ಬಹಮನೀ ಸುಲ್ತಾನರ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಲಭಿಸಿವೆ. ಇವು ಹೆಚ್ಚಿನ ಮಟ್ಟಿಗೆ ದೆಹಲಿಯ ಸುಲ್ತಾನರ ನಾಣ್ಯಗಳ ಮಾದರಿಯನ್ನು ಅನುಕರಿಸಿ ಅಚ್ಚುಹಾಕಲಾದವು. ಇವರ ಟಂಕಾಗಳು ಮಹಮ್ಮದ್-ಬಿನ್-ತುಗಲಕ್ ಅಚ್ಚುಹಾಕಿಸಿದ ದೀನಾರ್‌ಗಳಷ್ಟೇ ತೂಕದ ನಾಣ್ಯಗಳು. 170ರಿಂದ 197ಗ್ರೇನ್ ತೂಕದ ಚಿನ್ನದ ನಾಣ್ಯಗಳು, ಸುಮಾರು 170 ಗ್ರೇನ್ ತೂಕದ ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ಸಾಮಾನ್ಯ. ತಾಮ್ರದ ನಾಣ್ಯಗಳಲ್ಲಿ ಅತಿ ಹೆಚ್ಚಿನದರ ತೂಕ 269 ಗ್ರೇನ್, ಅತಿ ಕಡಿಮೆಯದರ ತೂಕ 26 ಗ್ರೇನ್. ದುಂಡನೆಯ ಈ ನಾಣ್ಯಗಳ ಎರಡು ಕಡೆಗಳಲ್ಲಿ ಆಲೇಖಗಳಿರುತ್ತವೆ. ಆಯಾಕಾರದ ನಾಣ್ಯಗಳು ಅಪರೂಪ. ಅಹಸಾನಾಬಾದ್ (ಗುಲ್ಬರ್ಗ), ಮಹಮ್ಮದಾಬಾದ್ (ಬೀದರ್), ಫತಹ್‌ಬಾದ್ (ದೌಲತಾಬಾದ್)- ಈ ಸ್ಥಳಗಳಲ್ಲಿ ಇವರ ಟಂಕಸಾಲೆಗಳಿದ್ದುವು.

ಮಹಮ್ಮದ್ I, II, III, ಮುಜಾಹಿದ್, ಫಿರೋಜ್, ಅಹಮದ್ II, III, ಹುಮಾಯೂನ್, ಮಹ್ಮೂದ್- ಇವರ ಚಿನ್ನದ ನಾಣ್ಯಗಳು ದೊರೆತಿವೆ. ಸುಲ್ತಾನನ ಬಿರುದು ಕೊರಾನಿನಿಂದ ಉದ್ಧೃತವಾದ ವಾಕ್ಯಗಳು, ಸುಲ್ತಾನನ ಹೆಸರು ಸಾಮಾನ್ಯವಾಗಿ ಈ ನಾಣ್ಯಗಳ ಆಲೇಖಗಳಾಗಿರುತ್ತವೆ. ಸುಲ್ತಾನನ ತಂದೆಯ ಹೆಸರನ್ನೂ ಒಮ್ಮೊಮ್ಮೆ ಕಾಣಿಸಲಾಗಿರುತ್ತದೆ. ಮೊದಲ ಸುಲ್ತಾನನಾದ ಅಲಾ ಉದ್ದೀನ್ ಬಹಮನ್ ಷಾನ ಬೆಳ್ಳಿಯ ನಾಣ್ಯದ ಹಿಮ್ಮುಖದಲ್ಲಿ ನಾಲ್ಕು ಸಾಲುಗಳಲ್ಲಿ ಅಸ್‌ಸುಲ್ತಾನೂಲ್ ಆಜಮ್ ಅಲಾದ್‌ದುನ್ಯಾವದ್ದಿನ್ ಅಬುಲ್ ಮುಝಫರ್ ಬಹಮನ್ ಷಾ ಅಸ್ ಸುಲ್ತಾನ್ ಎಂದು ಆಲೇಖವಿರುತ್ತದೆ. ಒಂದನೆಯ ಮಹಮ್ಮದನ 196ಗ್ರೇನ್‌ಗಳಷ್ಟು ತೂಗುವ ಚಿನ್ನದ ನಾಣ್ಯವೇ ಈವರೆಗೆ ಲಭಿಸಿದ ಇಂಥ ನಾಣ್ಯಗಳಲ್ಲಿ ಹೆಚ್ಚು ಭಾರವಾದ್ದು. ಅಹಸಾನಾಬಾದಿನಲ್ಲಿ ಅಚ್ಚಾದ ಈ ನಾಣ್ಯ ಬಹುಶಃ ಈ ಸುಲ್ತಾನ ಚಲಾವಣೆಗೆ ತಂದ ನಾಣ್ಯವಲ್ಲ ಎಂದು ಕೆಲವರು ಊಹಿಸಿದ್ದಾರೆ. ನಾಣ್ಯದ ಹಿಮ್ಮುಖದಲ್ಲಿ ಮಹಮ್ಮದ್ ಹಸನ್ ಬಹಮನೀ ಎಂಬ ಹೆಸರು ಮಾತ್ರ ಇದೆ. ಬಹಮನೀ ವಂಶದ ಫಿರೋಜ್ ಚಿನ್ನ, ಬೆಳ್ಳಿ ಮತ್ತು

ತಾಮ್ರದ ನಾಣ್ಯಗಳನ್ನು ಟಂಕಿಸಿದ. ಆತನ ಚಿನ್ನದ ನಾಣ್ಯದ ಸುತ್ತಲೂ ಜುರಿಬಾಹಜದ್ ದಿನಾರ್ ದಾರುಲ್ ಮುಲ್ಕ್ ಅಹಸಾನಾಬಾದ್ ಎಂಬ ಆಲೇಖವಿದ್ದು 800 ಎಂದು ವರ್ಷವನ್ನು ಸೂಚಿಸಿದೆ. ಸಾಮಾನ್ಯವಾಗಿ ಟಂಕಸಾಲೆಗಳನ್ನು ಸೂಚಿಸುವ ಆಲೇಖ ಜುರಿಬಾಬೇ ಹಜರತ್ ಅಥವಾ ಹಿ ಫಾಜರತ್ ಅಹಸಾನಾಬಾದ್ (ಅಥವಾ ಮಹಮ್ಮದಾಬಾದ್) ಎಂದಿರುತ್ತದೆ. ಹುಮಾಯೂನ್ ಚಲಾವಣೆಗೆ ತಂದ ಎರಡು ವಿಧದ ಚಿನ್ನದ ಟಂಕಾಗಳಲ್ಲಿ ಒಂದರ ಮುಮ್ಮುಖದಲ್ಲಿ ಅಲ್ ಮುತವಕ್ಕಿಲ್ ಅಲೈಲ್ಲಾಹಿಲ್ ಖವಿಯಿಲ್ ಘನಿ ಅಬ್ದುಲ್ ಮುಫಜಿ ಎಂದೂ ಹಿಮ್ಮುಖದಲ್ಲಿ ಅಲಾದ್ದುನ್ಯವದ್ದಿನ್ ಹುಮಾಯೂನ್ ಷಾ ಬಿನ್ ಅಹ್ಮದ್ ಅಲ್ ವಲಿಯಿಲ್ ಬಹಮನೀ ಎಂದೂ ಆಲೇಖಗಳಿವೆ. ಫಿರೋಜನ ತಾಮ್ರದ ನಾಣ್ಯಗಳಲ್ಲಿ ಕೆಲವು ಆಯಾಕಾರವಾಗಿವೆ. ಮುಜಾಹಿದ್ ಚಲಾವಣೆಗೆ ತಂದ ಬೆಳ್ಳಿಯ ನಾಣ್ಯ, ಅದರ ಮೇಲಿನ ಆಲೇಖದ ಬರೆವಣಿಗೆಯ ಕಲೆಯ ದೃಷ್ಟಿಯಿಂದ ವಿಶಿಷ್ಟವಾದುದಾಗಿದೆ. 779ನೆಯ ಹಿಜಿರಾ ವರ್ಷದಲ್ಲಿ ಟಂಕಿಸಲಾದ ಈ ನಾಣ್ಯದ ತೂಕ 170 ಗ್ರೇನ್. ಮುಮ್ಮುಖದಲ್ಲಿ ಚೌಕವೊಂದರಲ್ಲಿ ಅಲ್‌ಮುವಾಯ್ಯಿದ್ ಬಿ ನಸ್ರಿಲ್ಲಾ ಯಮಿನೂಲ್ ಖಿಲಾಫತ್ ನಸಿರು ಅಮಿರಿಲ್ ಮೂಮಿನಿನ್ ಎಂಬ ಆಲೇಖ ಕಲಾತ್ಮಕವಾಗಿ ಕೆತ್ತಲ್ಪಟ್ಟಿದೆ. ಇದು ಅಹಸಾನಾಬಾದ್ ಟಂಕಸಾಲೆಯಿಂದ ಹೊರಬಂದ ನಾಣ್ಯ. 1397ರಲ್ಲಿ ಕೇವಲ ಎರಡು ತಿಂಗಳ ಕಾಲ ಆಳಿದ ಘಿಯಾಸುದ್ದೀನ್ ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿದ. ಇವನ ನಾಣ್ಯಗಳಲ್ಲಿ ಈತನಿಗೆ ತಹಂತನ್ ಷಾ ಎಂಬ ಬಿರುದಿದೆ. ಇಂಥ ಹಲವಾರು ನಾಣ್ಯಗಳು ಇತ್ತೀಚೆಗೆ ದೊರೆತಿವೆ. (ಬಿ.ಆರ್.ಜಿ.)

**ಬಹಾಉದ್ದೀನ್ ಗುರ್ಷಾಸ್ಪ್:** ಮಹಮ್ಮದ್-ಬಿನ್-ತುಗಲಕನ ಸಹೋದರಿಯ ಮಗನಾದ ಈತ 14ನೆಯ ಶತಮಾನದಲ್ಲಿ ಸೌಗರ ಪ್ರಾಂತ್ಯದಲ್ಲಿ (ಗುಲ್ಬರ್ಗ ಜಿಲ್ಲೆ) ತುಗಲಕನ ಪ್ರತಿನಿಧಿಯಾಗಿ ಆಳುತ್ತಿದ್ದ. ಕ್ರಮೇಣ ಸಿಂಹಾಸನಕ್ಕೆ ತಾನು ಹಕ್ಕುದಾರನೆಂದು ಸಾಧಿಸಿ ದಂಗೆ ಎದ್ದ. ಇವನ ದಂಗೆಯನ್ನಡಗಿಸಲು ಮಲ್ಲಿಕ್ ಜಾದನ ನಾಯಕತ್ವದಲ್ಲಿ ಒಂದು ದೊಡ್ಡ ಸೈನ್ಯವನ್ನು ಮಹಮ್ಮದ್-ಬಿನ್-ತುಗಲಕ್ ಕಳುಹಿಸಿದ. ಸುಲ್ತಾನನ ಸೈನ್ಯಕ್ಕೂ ಬಹಾಉದ್ದೀನನ ಸೈನ್ಯಕ್ಕೂ ಗೋದಾವರಿ ತಟದಲ್ಲಿ ಭೀಕರ ಯುದ್ಧ ನಡೆದು ಬಹಾಉದ್ದೀನ್ ಸೋತು ಸೌಗರಕ್ಕೆ ಹಿಂದಿರುಗಿದ. ಸುಲ್ತಾನನ ಸೈನ್ಯ ಅವನನ್ನು ಬೆನ್ನಟ್ಟಿ ಅಲ್ಲಿಗೂ ಬಂತು. ಬಹಾಉದ್ದೀನ್ ಕೂಡಲೇ ಸೌಗರವನ್ನು ತೊರೆದು ಆನೆಗೊಂದಿಯನ್ನು ತಲುಪಿ ಪ್ರತಾಪರುದ್ರನ ಮರೆಹೊಕ್ಕ. ಮಲ್ಲಿಕ್ ಜಾದ ಆನೆಗೊಂದಿಯನ್ನು ನಿರ್ನಾಮ ಮಾಡಿದ. ಆ ವೇಳೆಗೆ ಬಹಾಉದ್ದೀನ್ ಕಂಪಿಲಿಗೆ ಧಾವಿಸಿ ಕಂಪಿಲದೇವನ ಹತ್ತಿರ ರಕ್ಷಣೆ ಪಡೆದ. ಮಲ್ಲಿಕ್ ಜಾದ ಕಂಪಿಲಿಯನ್ನು ಮುತ್ತಲು ಒಂದು ದೊಡ್ಡ ಸೈನ್ಯದೊಂದಿಗೆ ಹೊರಟ. ಅನೇಕ ಸಾರಿ ಕಂಪಿಲಿ ರಾಜ್ಯದ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿದ ಮೇಲೆಯೇ ಅವನ ಆಕ್ರಮಣ ಸಫಲವಾಯಿತು. ಕುಮ್ಮಟದುರ್ಗ ನೆಲಸಮವಾಯಿತು. ಕಂಪಿಲದೇವ ತನಗೆ ಸೋಲು ತಪ್ಪಿದುದಲ್ಲವೆಂದು ತಿಳಿದ ಕೂಡಲೇ ಬಹಾಉದ್ದೀನನನ್ನು ದ್ವಾರಸಮುದ್ರದ ಮೂರನೆಯ ಬಲ್ಲಾಳನ ಹತ್ತಿರ ಕಳುಹಿಸಿಕೊಟ್ಟ. ಅನಂತರ ತನ್ನ ಪ್ರಾಣವಿರುವವರೆಗೂ ಹೋರಾಡಿ ಮಡಿದ.

ಕಂಪಿಲಿಯನ್ನು ಜಯಿಸಿದ ತರುವಾಯ ಮಲ್ಲಿಕ್ ಜಾದನು ಬಹಾಉದ್ದೀನನನ್ನು ಹಿಡಿಯುವ ಸಲುವಾಗಿ ಹೊಯ್ಸಳ ರಾಜ್ಯವನ್ನು ಆಕ್ರಮಿಸಲು ಸಿದ್ಧತೆ ಮಾಡತೊಡಗಿದ. ಆದರೆ ಬಲ್ಲಾಳ ಕಂಪಿಲ ಕಳುಹಿಸಿಕೊಟ್ಟ ಬಹಾಉದ್ದೀನನಿಗೆ ಆಶ್ರಯ ಕೊಟ್ಟು ತನ್ನ ರಾಜ್ಯಸಂಪತ್ತನ್ನು ಬಲಿಕೊಡಲು ಸಿದ್ಧನಿರಲಿಲ್ಲ. ಹಾಗಾಗಿ ಬಲ್ಲಾಳನು ಬಹಾಉದ್ದೀನನನ್ನು ಮಲ್ಲಿಕ್ ಜಾದನಿಗೆ ಒಪ್ಪಿಸಿಬಿಟ್ಟ. ಮಲ್ಲಿಕ್ ಜಾದ ಅವನ ಕೈ ಕಾಲುಗಳನ್ನು ಕಟ್ಟಿ ಸುಲ್ತಾನನ ಹತ್ತಿರ ಕಳುಹಿಸಿ ಕೊಟ್ಟ. ರೋಷದಿಂದ ಕುದಿಯುತ್ತಿದ್ದ ಮಹಮ್ಮದ್-ಬಿನ್-ತುಗಲಕ್ ಬಹಾಉದ್ದೀನನ ಚರ್ಮ ಸುಲಿಸಿ ಅವನನ್ನು ಕೊಂದುದಲ್ಲದೆ ಅವನ ಮಾಂಸವನ್ನು ಅವನ ಮಡದಿ ಮಕ್ಕಳು ತಿನ್ನುವಂತೆ ಬಲಾತ್ಕರಿಸಿದ ಎಂದು ಕೆಲವು ಗ್ರಂಥಗಳು ತಿಳಿಸುತ್ತವೆ. (ಬಿ.ಎಸ್.ಎ.)

**ಬಹುರೂಪಿ ಚೌಡಯ್ಯ:** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಶ್ರೀಧರಗಣೇಶ್ವರನ ಅವತಾರವೆನಿಸಿದ್ದ ಈತ ಗಾಯನ, ನರ್ತನ, ಜಾತಿಗಾರ ಕಲೆಗಳನ್ನು ಕಾಯಕವಾಗಿ ಮಾಡಿಕೊಂಡಿದ್ದ. ರೇಕಳಿಕೆ ಗ್ರಾಮದ ಜನವಶ್ಯ (ಜನಸೇವ್ಯ) ಧರ್ಮಪತಿ ಎಂಬ ಬ್ರಾಹ್ಮಣ ದಂಪತಿಗಳ ಮಗನಾಗಿ ಹುಟ್ಟಿದ ಈತ ರೆಕನಾಥಾಚಾರ್ಯರಿಂದ (ರೇಕಣ್ಣ) ವೀರಶೈವ ದೀಕ್ಷೆ ಪಡೆದು ಬಹುರೂಪದ ಮೇಳದೊಡನೆ ಊರೂರು ತಿರುಗುತ್ತ ಜನರನ್ನು ರಂಜಿಸುತ್ತಿದ್ದ. ಬಂದ ಹಣವನ್ನು ಶಿವಭಕ್ತರ ದಾಸೋಹಕ್ಕೆ ಧಾರೆ ಎರೆಯುತ್ತಿದ್ದ. ತನ್ನೊಡನೆ ಸ್ಪರ್ಧೆಗೆ ಬಂದ ನೀಲಗಿರಿ ಪ್ರದೇಶದ ಕೊಟ್ಟಗಿರಿ (ಕೋಟಗಿರಿ) ರಾಮದೇವ ಭೂಪಾಲನ ಆಸ್ಥಾನ ಕಲಾವಿದ ಅಚ್ಯುತನನ್ನೂ ಇನ್ನೊಬ್ಬ ಕಲಾವಿದ ಯಕ್ಷನಾಥನನ್ನೂ ಭರತನಾಟ್ಯದಲ್ಲಿ ಸೋಲಿಸಿದ. ಅನಂತರ ಅವರಿಬ್ಬರನ್ನೂ ತನ್ನ ಶಿಷ್ಯರನ್ನಾಗಿ ಮೇಳದಲ್ಲಿ ಸೇರಿಸಿಕೊಂಡ.

ಒಮ್ಮೆ ಈತನಿಗೆ ದೊಡ್ಡ ಗಣಪರ್ವ ಮಾಡಬೇಕೆಂಬ ಇಚ್ಛೆಯಾಗಿ ಅದಕ್ಕೆ ಬೇಕಾದ ಹತ್ತು ಸಾವಿರ ಹಣಕ್ಕಾಗಿ ತಾನು ಲಿಂಗಪೂಜೆಯಲ್ಲಿ ಹಾಡುತ್ತಿದ್ದ ತನ್ನ ಪ್ರೀತಿಯ ರಾಮಕ್ರಿಯಾ ರಾಗವನ್ನು ರಾಮದೇವ ಭೂಪಾಲನಲ್ಲಿ ಒತ್ತೆಯಿಟ್ಟು ದಾಸೋಹವನ್ನು ಪೂರೈಸಿದ. ನಾಗಿನಾಥ ನೆಂಬ ಜಂಗಮನ ಅನುಜ್ಞೆಯಂತೆ ಶಿವಶರಣರ ಚರಿತ್ರೆಗಳನ್ನು ನಾಟ್ಯಕ್ಕೆ ಅಳವಡಿಸಿ ಆಡಿ ಅದರಿಂದ ಸಾಕಷ್ಟು ಹಣ ಕೂಡಿಸಿ ಸಾಲ ತೀರಿಸಿದ. ಒತ್ತೆಯಿಟ್ಟು ರಾಗವನ್ನು ಬಿಡಿಸಿಕೊಂಡು ಪರಶಿವನ ಜಂಗಮರೂಪಿ ನಾಗಿನಾಥಾಚಾರ್ಯನಿಗೆ ಅವನ ಅಪೇಕ್ಷೆಯಂತೆ ಮನದಣಿಯೆ ಹಾಡಿ ತೋರಿಸಿದ. ಬಸವಾದಿ ಶರಣರ ವಿಷಯ ತಿಳಿದಿದ್ದ ಈತ ಮುಂದೆ ಕಲ್ಯಾಣಕ್ಕೆ ಹೋಗಿ ಅವರ ದರ್ಶನ ಪಡೆದು, ಶಿವಶರಣರ ಚರಿತ್ರೆಗಳನ್ನು ಉತ್ತಮವಾಗಿ ಅಭಿನಯಿಸಿ ತನ್ನ ಕಲೆಯ ಕಾಯಕದಿಂದ ಎಲ್ಲರನ್ನೂ ಸಂತೋಷಗೊಳಿಸಿದ. ಕೆಲಕಾಲದ ಬಳಿಕ ಅಲ್ಲಿಯೇ ಜೀವನ್ಮುಕ್ತನಾದ.

ಈತ ತನ್ನ ದೀಕ್ಷಾಗುರು ಹಾಗೂ ಮೋಕ್ಷಗುರು ಇಬ್ಬರ ಹೆಸರನ್ನೂ ಸೇರಿಸಿ ದೇಕಣ್ಣ ಪ್ರಿಯ ನಾಗಿನಾಥ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾನೆ. ಇದುವರೆಗೆ 51 ವಚನಗಳು ದೊರಕಿವೆ. ಶಿವಪಾರಿಜಾತ ಹಾಗೂ ರಾಮಕ್ರಿಯಾ ರಾಗ-ಇವು ಈತನ ಕೊಡುಗೆಗಳೆಂದು ಹೇಳಲಾಗಿದೆ. (ಸಿ.ಎಚ್.ಕೆ.)

**ಬಳ್ಳಾರಿ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಇವುಗಳ ಆಡಳಿತ ಕೇಂದ್ರ ಪಟ್ಟಣ.

ಜಿಲ್ಲೆ: ರಾಜ್ಯದ ಮಧ್ಯಭಾಗದಲ್ಲಿ ಪೂರ್ವದ ಕಡೆಗಿರುವ ಈ ಜಿಲ್ಲೆಯ ಪೂರ್ವದಲ್ಲಿ ಆಂಧ್ರಪ್ರದೇಶ, ಆಗ್ನೇಯ ಮತ್ತು ದಕ್ಷಿಣದಲ್ಲಿ ಚಿತ್ರದುರ್ಗ, ದಾವಣಗೆರೆ, ನೈಋತ್ಯದಲ್ಲಿ ಗದಗ, ಪಶ್ಚಿಮದಲ್ಲಿ ಕೊಪ್ಪಳ, ಉತ್ತರದಲ್ಲಿ ರಾಯಚೂರು ಜಿಲ್ಲೆಗಳು ಸುತ್ತುವರೆದಿವೆ. ಈ ಜಿಲ್ಲೆ ಪೂರ್ವಪಶ್ಚಿಮವಾಗಿ 161 ಕಿಮೀ ಉದ್ದವಾಗಿಯೂ ಉತ್ತರದಕ್ಷಿಣವಾಗಿ 83.7 ಕಿಮೀ ಅಗಲವಾಗಿಯೂ ಇದೆ. ನೈಋತ್ಯೀಶಾನ್ಯವಾಗಿ ಇದರ ಉದ್ದ 187 ಕಿಮೀ. ಜಿಲ್ಲೆ ಉತ್ತರ ಅಕ್ಷಾಂಶ $14^{0}30^{'}-15^{0}50^{'}$ ಮತ್ತು ಪೂರ್ವ ರೇಖಾಂಶ $75^{'}40^{'}-77^{'}11^{'}$ ನಡುವೆ ಇದೆ. ಜಿಲ್ಲೆಯನ್ನು ಬಳ್ಳಾರಿ ಮತ್ತು ಹೊಸಪೇಟೆ ಎಂದು ಎರಡು ಉಪವಿಭಾಗಗಳಾಗಿ



ವಿಂಗಡಿಸಲಾಗಿದೆ. ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸಿರಗುಪ್ಪ, ಸಂಡೂರು–ಇವು ತಾಲ್ಲೂಕುಗಳು. 27 ಹೋಬಳಿಗಳು, 11 ಪಟ್ಟಣಗಳು ಮತ್ತು ಒಟ್ಟು 517 ಗ್ರಾಮಗಳು ಇವೆ. ಜಿಲ್ಲೆಯ ವಿಸ್ತೀರ್ಣ 8,419 ಚ.ಕಿಮೀ. ಜನಸಂಖ್ಯೆ 20,27,140.

ಜಿಲ್ಲೆಯ ಪಶ್ಚಿಮ, ವಾಯವ್ಯ, ಉತ್ತರ ಮತ್ತು ಈಶಾನ್ಯದಲ್ಲಿ ಗಡಿಯಾಗಿ ಹರಿಯುವ ತುಂಗಭದ್ರಾ ನದಿ ಈ ಜಿಲ್ಲೆಯನ್ನು ಹಾವೇರಿ, ಗದಗ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಂದ ಬೇರ್ಪಡಿಸುತ್ತದೆ. ಈ ಜಿಲ್ಲೆಯ ಹೆಚ್ಚು ಭಾಗ ತುಂಗಭದ್ರಾ ನದಿಯ ಕಡೆಗೆ ಉತ್ತರಕ್ಕೆ ಇಳಿಜಾರಾಗಿದೆ. ಜಿಲ್ಲೆಯ ವಾಯವ್ಯದಿಂದ ಆಗ್ನೇಯದವರೆಗೂ ಹಬ್ಬಿರುವ ಸಂಡೂರು ಬೆಟ್ಟಗಳು ಜಿಲ್ಲೆಯನ್ನು ಪೂರ್ವಪಶ್ಚಿಮವಾಗಿ ಎರಡು ಮುಖ್ಯ ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಿವೆ. ಪೂರ್ವಭಾಗ ಬಳ್ಳಾರಿ ಮತ್ತು ಸಿರಗುಪ್ಪ ತಾಲ್ಲೂಕುಗಳನ್ನೊಳಗೊಂಡಿದೆ. ಈ ಪ್ರದೇಶ ಸಮತಟ್ಟಾಗಿದ್ದು ಬಹುತೇಕ ಮರಗಿಡಗಳಿಲ್ಲದ, ಹತ್ತಿ ಬೆಳೆಯುವ ಕಪ್ಪುಮಣ್ಣಿನ ಬಯಲು. ಅಲ್ಲಲ್ಲಿ ಕಲ್ಲುಬೆಟ್ಟಗಳು ಕಂಡುಬರುತ್ತವೆ. ಪಶ್ಚಿಮದಲ್ಲಿ ಕಪ್ಪುಮಣ್ಣಿನ ಬಯಲುಗಳೂ ಹೆಚ್ಚು ಭಾಗದಲ್ಲಿ ಮಿಶ್ರಿತ ಮತ್ತು ಕೆಂಪುಮಣ್ಣಿನ ಪ್ರದೇಶಗಳೂ ಇವೆ. ಈ ಪ್ರದೇಶದಲ್ಲಿ ಹಡಗಲಿ ತಾಲ್ಲೂಕನ್ನು ಬಿಟ್ಟು ಉಳಿದೆಡೆ ಅಲ್ಲಲ್ಲಿ ಕಾಡು ಮತ್ತು ಬೆಟ್ಟ ಗುಡ್ಡಗಳು ಕಂಡುಬರುತ್ತವೆ. ಪಶ್ಚಿಮ ಭಾಗ ಪೂರ್ವ ಭಾಗಕ್ಕಿಂತ ಹೆಚ್ಚು ಎತ್ತರವಾಗಿದ್ದು ಮಳೆಯೂ ಅಧಿಕ. ಸಂಡೂರು ಬೆಟ್ಟಸಾಲು ಮಲ್ಲಾಪುರಂ ಬಳಿ ತುಂಗಭದ್ರಾ ನದಿಯ ದಂಡೆಯಿಂದ ಹಿಡಿದು ಆಗ್ನೇಯದ ಕಡೆಗೆ ಸು. 48 ಕಿಮೀ ದೂರ ಹಬ್ಬಿದೆ. ಈ ಬೆಟ್ಟಸಾಲಿನ ನಡುವೆ ಒಂದು ಕಡೆ ನಾರಿಹಳ್ಳದ ಎರಡು ಕಮರಿಗಳಿವೆ. ಈ ಶ್ರೇಣಿಯ ದಕ್ಷಿಣ

ಭಾಗಕ್ಕಿರುವ ಕುಮಾರಸ್ವಾಮಿ ದೇವಾಲಯವಿರುವ ಬೆಟ್ಟದ ಎತ್ತರ 1036 ಮೀ. ಮಧ್ಯದಲ್ಲಿರುವ ರಾಮನಮಲೈ 992 ಮೀ. ತೀರ ಉತ್ತರದಲ್ಲಿರುವ ಜಂಬುನಾಥ ಶಿಖರ 908 ಮೀ ಎತ್ತರವಿದೆ. ಸಂಡೂರು ಬೆಟ್ಟ ಸಾಲಿನ ಪೂರ್ವಕ್ಕೆ ವಾಯುವ್ಯದಿಂದ ಆಗ್ನೇಯಕ್ಕೆ ಹಬ್ಬಿರುವ ಸುಗ್ಗಮಹದೇವಿಬೆಟ್ಟ ಅಥವಾ ತಾಮ್ರಪರ್ವತ ಶ್ರೇಣಿ ದರೋಜಿ ಕೆರೆಯವರೆಗೂ ಸು. 42 ಕಿಮೀ ಉದ್ದಕ್ಕೆ ವ್ಯಾಪಿಸಿದೆ. ಈ ಶ್ರೇಣಿಯ ಅತಿ ಎತ್ತರದ ಶಿಖರ ಸು. 1,002 ಮೀ ಇದೆ. ಸಂಡೂರು ಬೆಟ್ಟಸಾಲಿಗೆ ನೈಋತ್ಯಕ್ಕೆ ಸು. 48 ಕಿಮೀ ದೂರದಲ್ಲಿರುವ ಮಲ್ಲಪ್ಪನಗುಡ್ಡದ ಶ್ರೇಣಿ ಹಡಗಲಿ ಮತ್ತು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕುಗಳಲ್ಲಿ ವ್ಯಾಪಿಸಿದೆ. ಇದು ತುಂಗಭದ್ರಾ ಬಳಿ ಹೊನ್ನೂರಿನ ಹತ್ತಿರ ಪ್ರಾರಂಭವಾಗಿ ಆಗ್ನೇಯದ ಕಡೆಗೆ ಹಬ್ಬಿದೆ. ಸು. 40 ಕಿಮೀ ದೂರದಲ್ಲಿ ಇದು ಚಿಕ್ಕಹಗರಿ ಕಣಿವೆಯ ಬಳಿ ಕಡಿದು ಹೋಗಿ ಮುಂದೆ 112 ಕಿಮೀ ದೂರದಲ್ಲಿ ಕಾಣಿಸಿಕೊಂಡು ಚಿತ್ರದುರ್ಗ ಜಿಲ್ಲೆಯಲ್ಲಿ ಮುಂದುವರಿದಿದೆ. ಈ ಶ್ರೇಣಿಯ ಮಲ್ಲಪ್ಪನಗುಡ್ಡ ಶಿಖರದ ಎತ್ತರ 978 ಮೀ. ಮಲ್ಲಪ್ಪನಗುಡ್ಡ ಶ್ರೇಣಿಯ ನೈಋತ್ಯಕ್ಕೆ ಸುಮಾರು 13–16 ಕಿಮೀ ದೂರದಲ್ಲಿ ವಾಯುವ್ಯದಿಂದ ಆಗ್ನೇಯಕ್ಕೆ ಹಬ್ಬಿರುವ ಕಲ್ಲಹಳ್ಳಿ ಗುಡ್ಡದ ಶ್ರೇಣಿ ಬರುತ್ತದೆ. ಈ ಶ್ರೇಣಿಯಲ್ಲಿ ಅತ್ಯಂತ ದೊಡ್ಡದಾದ ಕಲ್ಲಹಳ್ಳಿ ಶಿಖರ 853ಮೀ ಎತ್ತರವಿದೆ. ಈ ಶ್ರೇಣಿ ಸುಮಾರು 14 ಕಿಮೀ ದೂರದಲ್ಲಿ ಕವಲೊಡೆದು ತೆಲಗಿ ಗುಡ್ಡ ಸಮೂಹವಾಗಿ ಮಾರ್ಪಟ್ಟಿದೆ. ಮುಂದೆ ಈ ಶ್ರೇಣಿಯೇ ಹರಪನಹಳ್ಳಿಯ ದಕ್ಷಿಣದ ಗುಡ್ಡಗಳ ವರೆಗೂ ಮುಂದುವರಿದಿದೆ. ಆ ಗುಡ್ಡಗಳಲ್ಲಿ ನರಸಿಂಹದೇವರ ಗುಡ್ಡ 775 ಮೀ ಎತ್ತರವಿದೆ. ಈ ಶ್ರೇಣಿ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಉಚ್ಚಂಗಿ ದುರ್ಗದ (815 ಮೀ) ವರೆಗೂ ಮುಂದುವರಿದು ಅಲ್ಲಿ ಕೊನೆಗೊಳ್ಳುತ್ತದೆ. ಕೂಡ್ಲಿಗಿ ಬೆಟ್ಟಸಾಲು ಕೂಡ್ಲಿಗಿಯ ಉತ್ತರ ಮತ್ತು ಪೂರ್ವ ಭಾಗದಲ್ಲಿ ಹಾದು ಹೋಗುತ್ತದೆ. ಈ ಶ್ರೇಣಿಯಲ್ಲಿ ಆನೇಕಲ್ಲುದುರ್ಗ (724 ಮೀ) ಮತ್ತು ಜರಮಲೆದುರ್ಗ (838 ಮೀ) ಇವೆ. ಸಂಡೂರು ತಾಲ್ಲೂಕಿನ ಚೋರನೂರಿನ ಬಳಿ ಗುಡಿಕೋಟೆದುರ್ಗದ ಉತ್ತರಕ್ಕೆ ಸಾಗಿ ಚಿನ್ನಹಗರಿ ಕಣಿವೆ ದಾಟಿ ಚಿತ್ರದುರ್ಗ ಜಿಲ್ಲೆಯ ಸೆರಗಿನಲ್ಲಿ ಹಾದು ಹೋಗುತ್ತದೆ. ಇದರ ದಕ್ಷಿಣಕ್ಕಿರುವ ಕೈಲಾಸಕೊಂಡ ಶಿಖರ 917 ಮೀ ಎತ್ತರವಿದೆ. ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಈ ಶ್ರೇಣಿ ಹಳ್ಳತಿಟ್ಟನಿಂದ ಕೂಡಿದ್ದು. ಈ ಭಾಗ ಇಡೀ ಜಿಲ್ಲೆಯಲ್ಲೇ ಹೆಚ್ಚು ಅರಣ್ಯಭರಿತ. ಜಿಲ್ಲೆಯ ಉತ್ತರ ಭಾಗದಲ್ಲಿ ಆಲೂರು ಗುಡ್ಡಗಳಿವೆ. ಇನ್ನೊಂದು ಶ್ರೇಣಿ ಕೆಂಚನಗುಡ್ಡದಿಂದ ಪ್ರಾರಂಭವಾಗಿ ಹಳೇಕೋಟೆ ಮತ್ತು ಕಂಚಗಾರ ಬೆಳಗಲ್ಲು ಶ್ರೇಣಿಯ ಸುತ್ತಮುತ್ತ ಗುಡ್ಡ ಸಮೂಹಗಳಾಗಿ ಮಾರ್ಪಟ್ಟಿದೆ. ಈ ಜಿಲ್ಲೆಯ ಇತರ ಗುಡ್ಡಗಳಲ್ಲಿ ದರೋಜಿ, ಕಂಪ್ಲಿ ಮತ್ತು ಕುರುಗೋಡು ಬಳಿಯ ಗುಡ್ಡಗಳು ಮುಖ್ಯವಾದವು.

ಬಳ್ಳಾರಿ ಜಿಲ್ಲೆಯ ನದಿಗಳಲ್ಲಿ ತುಂಗಭದ್ರಾ ಮತ್ತು ಇದರ ಉಪನದಿಗಳಾದ ಹಗರಿ ಮತ್ತು ಚಿಕ್ಕಹಗರಿಗಳು ಮುಖ್ಯವಾದವು. ತುಂಗಭದ್ರಾ **(ನೋಡಿ)** ನದಿ ಜಿಲ್ಲೆಯ ಪಶ್ಚಿಮ ಮತ್ತು ಉತ್ತರದ ಅಂಚಿನಲ್ಲಿ ಗಡಿ ರೇಖೆಯಾಗಿ ಹರಿಯುತ್ತದೆ. ಈ ನದಿ ಜಿಲ್ಲೆಯನ್ನು ಹರಪನಹಳ್ಳಿಯ ಕಡತಿ ಗ್ರಾಮದ ಬಳಿ ಪ್ರವೇಶಿಸಿ ಹರಪನಹಳ್ಳಿ, ಹಡಗಲಿ, ಹೊಸಪೇಟೆ ಮತ್ತು ಸಿರಗುಪ್ಪ ತಾಲ್ಲೂಕುಗಳ ಉತ್ತರದ ಎಲ್ಲೆಯಾಗಿ ಸು. 322 ಕಿಮೀ ದೂರ ಹರಿಯುತ್ತದೆ. ನದಿಯ ನೀರು ಸಿಹಿ. ಗಂಗಾಸ್ನಾನ ತುಂಗಾಪಾನ ಎಂಬುದು ನಾಣ್ಣುಡಿ. ಈ ನದಿಗೆ ಮಲ್ಲಾಪುರಂ ಬಳಿ ತುಂಗಭದ್ರಾ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ನದಿಯ ಮಧ್ಯದಲ್ಲಿರುವ ಅನೇಕ ದ್ವೀಪಗಳಲ್ಲಿ ದೇಶನೂರು ದ್ವೀಪದ ಉದ್ದ ಸುಮಾರು 91/2 ಕಿಮೀ. ತುಂಗಭದ್ರಾ ನದಿಯ ಉಪನದಿಯಾದ ಹಗರಿ ಹೊಳೆ ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿಯಲ್ಲಿ ಹುಟ್ಟಿ ಚಿತ್ರದುರ್ಗ ಜಿಲ್ಲೆಯಲ್ಲಿ ಹರಿದು ಆಂಧ್ರಪ್ರದೇಶದಲ್ಲಿ ಸ್ವಲ್ಪದೂರ ಸಾಗಿ ಮತ್ತೆ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿ ಬಳ್ಳಾರಿ, ಸಿರಗುಪ್ಪ ತಾಲ್ಲೂಕುಗಳಲ್ಲಿ ಹರಿದು ತುಂಗಭದ್ರಾ ನದಿಯನ್ನು ಸೇರುತ್ತದೆ. ಇದರ ಸಂಗಮಸ್ಥಳದಲ್ಲಿ ಈಗ ತುಂಗಭದ್ರಾ ಅಣೆಕಟ್ಟು ಇದೆ. ಹಗರಿನದಿಯ ಉಪಹೊಳೆಯಾದ ಚಿನ್ನಹಗರಿ ಚಿತ್ರದುರ್ಗ ಜಿಲ್ಲೆಯಲ್ಲಿ ಹುಟ್ಟಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ ಹರಿದು ಹಗರಿನದಿಯನ್ನು ಆಂಧ್ರಪ್ರದೇಶದ ರಾಯದುರ್ಗ ತಾಲ್ಲೂಕಿನ ಉತ್ತರ ಭಾಗದಲ್ಲಿ ಸೇರುತ್ತದೆ. ಇವಲ್ಲದೆ ನೀರಾವರಿಗೆ ಉಪಯುಕ್ತವಾಗಿರುವ ಹಗ್ಗನೂರು ತೊರೆ, ಹಂಪಸಾಗರ ಹೊಳೆ, ಬೆಲ್ಲಹುಣಿಸಿ ಹೊಳೆ, ಗೌರಿಪುರ ಹೊಳೆ, ನಾರಿಹಳ್ಳ ಮೊದಲಾದವು ಈ ಜಿಲ್ಲೆಯಲ್ಲಿ ಹುಟ್ಟಿ ತುಂಗಭದ್ರಾ ಮತ್ತು ಅದರ ಉಪಹೊಳೆಗಳನ್ನು ಸೇರುತ್ತವೆ. ಇವುಗಳ ಜೊತೆಗೆ ಈ ಜಿಲ್ಲೆಯಲ್ಲಿ ಸು. 22 ದೊಡ್ಡ ಮತ್ತು 170 ಸಣ್ಣ ಕೆರೆಗಳು ಇವೆ.

ಜಿಂದಾಲ್ ಕಾರ್ಖಾನೆ, ತೋರಣಗಲ್ಲು

ಈ ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳದಿರುವ ಪ್ರಯುಕ್ತ ದಟ್ಟ ಅರಣ್ಯಗಳಿಲ್ಲ. ಸಂಡೂರು ತಾಲ್ಲೂಕಿನ ಬೆಟ್ಟಪ್ರದೇಶಗಳನ್ನು ಬಿಟ್ಟರೆ ಉಳಿದೆಡೆ ಗಿಡಮರಗಳು ವಿರಳವೆಂದೇ ಹೇಳಬಹುದು. ಜಿಲ್ಲೆಯ ಒಟ್ಟು ಅರಣ್ಯಪ್ರದೇಶ ವಿಸ್ತೀರ್ಣ 97,017 ಹೆ. ಇದರಲ್ಲಿ ಸ್ವಲ್ಪಭಾಗ ಎಲೆ ಉದುರುವ ಕಾಡಿನಿಂದಲೂ ಉಳಿದ ಹೆಚ್ಚು ಭಾಗ ಕುರುಚಲು ಕಾಡಿನಿಂದಲೂ ಕೂಡಿದೆ. ಎಲೆ ಉದುರುವ ಕಾಡುಗಳು ಹೆಚ್ಚಾಗಿ ಸಂಡೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿವೆ. ಈ ಕಾಡುಗಳಲ್ಲಿ ಕಮ್ಮರ, ದಿಂಡಿಗ, ಹರಗಲು ಮತ್ತಿತರ ಸಣ್ಣ ಜಾತಿಯ ಮರಗಳುಂಟು. ಸಂಡೂರು ಶ್ರೇಣಿಯಲ್ಲಿ ಮಾತ್ರ ಶ್ರೀಗಂಧ ಮತ್ತು ಬೀಟೆ ಇವೆ. ಕೂಡ್ಲಿಗಿ ತಾಲ್ಲೂಕುಗಳಲ್ಲಿ ಈಚಲು ಗಣನೀಯ. ಜಿಲ್ಲೆಯಲ್ಲಿ ಪೂರ್ವದ ಕಡೆ ಹೋದಂತೆಲ್ಲಾ ಕುರುಚಲು ಕಾಡು ಕಂಡುಬರುತ್ತದೆ. ಇಲ್ಲಿನ ಕಾಡುಗಳಲ್ಲಿ ಹುಣಿಸೆ ಬೇವು ಮಾವು ತೂಪರ ಸೀತಾಫಲ ಮುಂತಾದವು ಬೆಳೆಯುತ್ತದೆ. ಜೇನು ಮತ್ತು ದಿಂಡಿಗದ ಅಂಟು ದೊರೆಯುವುದುಂಟು. ಇಲ್ಲಿಯ ಅರಣ್ಯಗಳಲ್ಲಿ ಕಡವೆ, ಜಿಂಕೆ, ಕಾಡುಹಂದಿ, ಚಿರತೆ ಮೊದಲಾದುವು ಕಂಡುಬರುತ್ತವೆ. ಹಿಂದೆ ಸಂಡೂರು ತಾಲ್ಲೂಕಿನಲ್ಲಿ ಹುಲಿಗಳು ಆಗಾಗ ಕಾಣಿಸಿಕೊಳ್ಳುತ್ತಿದ್ದುವು. ಇಲ್ಲಿಯ ಕಾಡುಗಳಲ್ಲಿ ಕಾಡುಕುರಿಗಳೂ ಇವೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಕರಡಿಗಳಿವೆ. ಜಿಂಕೆ, ಕಿರುಬ ಮತ್ತು ತೋಳಗಳು

ಈ ಜಿಲ್ಲೆಯ ಪಶ್ಚಿಮ ಭಾಗದಲ್ಲಿವೆ. ತುಂಗಭದ್ರಾ ನದಿಯಲ್ಲಿ ಮೊಸಳೆಗಳುಂಟು. ನವಿಲು, ಪಾರಿವಾಳ, ಕೊಕ್ಕರೆ, ಗಿಳಿ, ಗಿಡುಗ, ಹದ್ದು ಮೊದಲಾದ ಪಕ್ಷಿಗಳೂ ನಾಗರಹಾವು, ಹೆಬ್ಬಾವು, ಕಟ್ಟುಹಾವು ಮೊದಲಾದವೂ ಇವೆ.

ಈ ಜಿಲ್ಲೆಯಲ್ಲಿ ಕಬ್ಬಿಣ, ಮ್ಯಾಂಗನೀಸ್, ತಾಮ್ರ ಮತ್ತು ಸೀಸದ ಅದಿರುಗಳೂ ಜಿಪ್ಸಮ್, ಮ್ಯಾಗ್ನಸೈಟ್, ಕ್ಯಾಲ್ಸೈಟ್, ಗಾರ್ನೆಟ್, ಬೆಣಚುಕಲ್ಲು, ಕಲ್ನಾರು, ಕುರಂಗದಕಲ್ಲು, ಕಾವಿಮಣ್ಣು, ಸೋಪಿನಕಲ್ಲು, ಜೇಡಿಮಣ್ಣು ಮೊದಲಾದ ನಿಕ್ಷೇಪಗಳಿವೆ. ಸಂಡೂರು ಶ್ರೇಣಿಯಲ್ಲಿ ಬಳ್ಳಾರಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಕಬ್ಬಿಣದ ಅದಿರು ಹೆಚ್ಚಾಗಿದೆ. ಜಿಲ್ಲೆಯಲ್ಲಿ ಒಟ್ಟು 100 ರಿಂದ 125ಕೋಟಿ ಟನ್ ಕಬ್ಬಿಣದ ಅದಿರು ಇದೆ ಎಂದು ಅಂದಾಜು ಮಾಡಲಾಗಿದೆ. ಸಂಡೂರು, ಹೊಸ ಪೇಟೆ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಅದಿರು ಹೆಚ್ಚು. ಹೊಸಪೇಟೆ ತಾಲ್ಲೂಕಿನಲ್ಲಿರುವುದು ಸೀಸದ ಅದಿರು. ಹರಪನ ಹಳ್ಳಿ ತಾಲ್ಲೂಕಿನ ಚಿಗಟೇರಿ ಮತ್ತು ಕೊನಗನ ಹೊಸೂರು ಹಾಗೂ ಕಲ್ಲಹಳ್ಳಿ ಬಳಿ ಚಿನ್ನದ ಅದಿರು ಕಂಡುಬಂದಿದೆ. ತಾಮ್ರದ ಅದಿರು ಹರಪನಹಳ್ಳಿ ಪಟ್ಟಣದ ಬಳಿ ಮತ್ತು ಬಳ್ಳಾರಿ ತಾಲ್ಲೂಕಿನಲ್ಲಿ ಇದೆ.

ಈ ಜಿಲ್ಲೆಯಲ್ಲಿ ವರ್ಷದ ಹೆಚ್ಚು ಕಾಲ ಒಣ ಹವೆ. ಮಾರ್ಚಿಯಿಂದ ಮೇ ವರೆಗೆ ಬೇಸಗೆಯ ತಾಪ ಹೆಚ್ಚು. ಜೂನ್‌ನಿಂದ ನವೆಂಬರ್ ವರೆಗೆ ಮಳೆಗಾಲ. ಡಿಸೆಂಬರ್‌ನಿಂದ ಫೆಬ್ರವರಿಯವರೆಗು ಒಣಹವೆ ಇರುತ್ತದೆ. ತಂಪಾಗಿರುತ್ತದೆ. ಉಷ್ಣಾಂಶ ಕಡಿಮೆಯಿರುವ ಡಿಸೆಂಬರ್ ತಿಂಗಳಲ್ಲಿ ಮಾಧ್ಯಮ ದೈನಿಕ ಗರಿಷ್ಠ ಉಷ್ಣಾಂಶ $29.7^0$ ಸೆ ಇದ್ದರೆ ಮಾಧ್ಯಮ ದೈನಿಕ ಕನಿಷ್ಠ $39.2^0$ ಸೆ ಉಷ್ಣಾಂಶ $16.7^0$ ಸೆ ಇರುತ್ತದೆ. ಅತ್ಯಂತ ತಾಪಭರಿತ ಏಪ್ರಿಲ್ ತಿಂಗಳಲ್ಲಿ ದೈನಿಕ ಗರಿಷ್ಠ ಉಷ್ಣಾಂಶ ದೈನಿಕ ಕನಿಷ್ಠ ಉಷ್ಣಾಂಶ $25.2^0$ ಸೆ ಇರುತ್ತದೆ. ಈ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 518 ಮಿಮೀ. ಮಳೆ ಸಮಪ್ರಮಾಣದಲ್ಲಿ ಬೀಳದು. ಉದಾಹರಣೆಗೆ 1971ರಲ್ಲಿ ಸಿರಗುಪ್ಪ ತಾಲ್ಲೂಕಿನಲ್ಲಿ 743.4 ಮಿಮೀ ಮತ್ತು ಮಲ್ಲಾಪುರಂನಲ್ಲಿ 396.4 ಮಿಮೀ ಮಳೆ ಬಿದ್ದಿತ್ತು. ಕಳೆದ 37 ವರ್ಷಗಳಲ್ಲಿ ಮಳೆ 400 ಮಿಮೀಗಳಿಂದ 700 ಮಿಮೀಗಳ ವ್ಯತ್ಯಾಸದಲ್ಲಿ ಬಿದ್ದಿದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಏಳುವ ಬಂಗಾಲ ಕೊಲ್ಲಿಯ ಚಂಡಮಾರುತಗಳಿಂದ ಕೆಲವೊಮ್ಮೆ ಬಿರುಸಾದ ಮಳೆಗಾಳಿ ಉಂಟಾಗುತ್ತದೆ. ಈ ಜಿಲ್ಲೆಯಲ್ಲಿ ಸರಾಸರಿ ಬೀಳುವ ಮಳೆ 630 ಮಿಮೀ. ಆದರೆ ವಾಸ್ತವಿಕವಾಗಿ ಬಿದ್ದ ಮಳೆ 622 ಮಿಮೀ (2000).

ಈ ಜಿಲ್ಲೆಯ ಒಟ್ಟು ವಿಸ್ತೀರ್ಣದ ಅರ್ಧದಷ್ಟು ಭಾಗವನ್ನು ವ್ಯವಸಾಯಕ್ಕೆ ರೂಢಿಸಿಕೊಳ್ಳಲಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು ಬಿತ್ತನೆಯಾದ ಪ್ರದೇಶ 5,83,616.ಹೆ. ಇದರಲ್ಲಿ 68,854 ಹೆ. ನಲ್ಲಿ ಬತ್ತವನ್ನು, 6,547 ಹೆ.ನಲ್ಲಿ ರಾಗಿಯನ್ನು, 94,463 ಹೆ.ನಲ್ಲಿ ಜೋಳ, 27,215 ಹೆ.ನಲ್ಲಿ ಸಜ್ಜೆ, 32,090.ಹೆ.ನಲ್ಲಿ ಮುಸುಕಿನ ಜೋಳ, 2,382 ಹೆ.ನಲ್ಲಿ ಗೋಧಿ,24,225 ಹೆ.ನಲ್ಲಿ ಏಕದಳಧಾನ್ಯಗಳು, 9,325 ಹೆ.ನಲ್ಲಿ ಕಡಲೆ, 7,563 ಹೆ.ನಲ್ಲಿ ತೊಗರಿ, 4,807 ಹೆ.ನಲ್ಲಿ ಇತರೆ ದ್ವಿದಳ ಧಾನ್ಯಗಳನ್ನು, 93,803 ಹೆ.ನಲ್ಲಿ ನೆಲಗಡಲೆ, 7,834 ಹೆ.ನಲ್ಲಿ ಕಬ್ಬು, 66,12 ಹೆ.ನಲ್ಲಿ ಹತ್ತಿ ಬೆಳೆಯಲಾಗಿತ್ತು (1998–99). 541ಹೆ.ನಲ್ಲಿ ಹಿಪ್ಪುನೇರಳೆಯನ್ನೂ ಬೆಳೆಯಲಾಗಿತ್ತು. ಬಾಳೆಹಣ್ಣು, ಮಾವು, ನಿಂಬೆ ಮೊದಲಾದ ಹಣ್ಣು ಬೆಳೆಗಳೂ ಮೆಣಸಿನಕಾಯಿ, ಈರುಳ್ಳಿ, ಟೊಮ್ಯಾಟೋ, ಬದನೆಕಾಯಿ ಸೇರಿದಂತೆ ಕೆಲವು ತರಕಾರಿ ಬೆಳೆಗಳೂ ಉಂಟು. ತೋಟಗಾರಿಕೆ ಇಲಾಖೆ ತೆಂಗು ಮತ್ತು ಗೇರುಬೀಜ ಬೆಳೆಯುವ ಪ್ರದೇಶವನ್ನು ವಿಸ್ತರಿಸುವ ಯೋಜನೆಯನ್ನಿಟ್ಟುಕೊಂಡಿದೆ.

ಬಳ್ಳಾರಿ ಜಿಲ್ಲೆ ಅಧಿಕ ಪ್ರಮಾಣದಲ್ಲಿ ನೀರಾವರಿ ಸೌಕರ್ಯವನ್ನು ಪಡೆದಿರುವ ರಾಜ್ಯದ ಜಿಲ್ಲೆಗಳಲ್ಲಿ ಒಂದು. ತುಂಗಭದ್ರಾ ಜಲಾಶಯ ಯೋಜನೆ ಕಾರ್ಯಗತವಾದಾಗ (1953) ಈ ಜಿಲ್ಲೆಯಲ್ಲಿ ಹಸುರುಕ್ರಾಂತಿ ಪ್ರಾರಂಭವಾಯಿತು. 1970–71ರ ಹೊತ್ತಿಗೆ 1,81,30 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿತ್ತು. ಅದರಲ್ಲಿ ತುಂಗಭದ್ರಾ ಜಲಾಶಯ ಮತ್ತು ಭದ್ರಾ ಯೋಜನೆಗಳಿಂದ ಕ್ರಮವಾಗಿ 91,797 ಎಕರೆಗಳು ಮತ್ತು 10,000 ಎಕರೆಗಳು; ಹಾಗೆಯೇ ವಿಜಯನಗರ ಕಾಲದಲ್ಲಿ ನಿರ್ಮಿಸಿದ ನಾಲೆಗಳಿಂದ 17,619; ಹಗರಿಬೊಮ್ಮನಹಳ್ಳಿ ಯೋಜನೆಯಿಂದ 7,350; ಗೊಂಡಬಮ್ಮನಹಳ್ಳಿ ಯೋಜನೆಯಿಂದ 5,247; ಬಾವಿ ನೀರಾವರಿಯಿಂದ 23,150; ಹಳೆಯ ಕೆರೆಗಳಿಂದ 18,057; ಹೊಸ ಕೆರೆಗಳಿಂದ 5,113 ಮತ್ತು ಮತ್ತಿತರ ಸಾಧನಗಳಿಂದ 2,403 ಎಕರೆಗಳು. 1998–99ರ ಅಂಕಿಅಂಶದ ಪ್ರಕಾರ 98,474ಹೆ. ಕಾಲುವೆಗಳಿಂದ, 2,699ಹೆ. ಕೆರೆಗಳಿಂದ, 11,735 ಹೆ. ಬಾವಿಗಳಿಂದ, 26,853 ಹೆ. ಕೊಳವೆ ಬಾವಿಗಳಿಂದ, 10,211 ಹೆ. ಏತನೀರಾವರಿಯಿಂದ, 1,82 ಹೆ. ಇತರೇ ಜಲಮೂಲಗಳಿಂದ ಒಟ್ಟು 1,51,796 ಹೆ. ನೀರಾವರಿಗೊಳಪಟ್ಟಿತ್ತು.



ಬಳ್ಳಾರಿ ಮೆಡಿಕಲ್‌ಕಾಲೇಜಿನ ಆಸ್ಪತ್ರೆಯ ಹೊರರೋಗಿಗಳ ವಿಭಾಗ

ಹಗರಿ ಮತ್ತು ಸಿರಗುಪ್ಪ ಬಳಿ 1906 ಮತ್ತು 1937ರಷ್ಟು ಹಿಂದೆಯೇ ಮದರಾಸು ಸರ್ಕಾರ ಪ್ರಾರಂಭಿಸಿದ ವ್ಯವಸಾಯ ಸಂಶೋಧನಾ ಕೇಂದ್ರಗಳಿವೆ. ಬಳ್ಳಾರಿಯಲ್ಲಿ 1954ರಲ್ಲಿ ಕೇಂದ್ರ ಸರ್ಕಾರ ಸ್ಥಾಪಿಸಿದ ದಾಕ್ಷಿಣಾತ್ಯ ಪ್ರಾದೇಶಿಕ ಮಣ್ಣು ಸಂರಕ್ಷಣ ಸಂಶೋಧನ ಉಪಕೇಂದ್ರವಿದೆ. ಹೊಸಪೇಟೆ ತಾಲ್ಲೂಕಿನ ಕಂಪ್ಲಿಯಲ್ಲಿ ವ್ಯವಸಾಯ ತರಬೇತಿ ಶಾಲೆ ಇದೆ. ಜಿಲ್ಲೆಯ ಈ ವಿವಿಧ ಸಂಸ್ಥೆಗಳ ಜತೆಗೆ ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ಸೇರಿಕೊಂಡು ಈ ಜಿಲ್ಲೆಯ ವ್ಯವಸಾಯರಂಗದಲ್ಲಿ ವೈಜ್ಞಾನಿಕ ಸಾಗುವಳಿ ಹಾಗೂ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಲು ಸಹಾಯಕವಾಗಿವೆ. 1970–71ರಿಂದ ಒಣಭೂಮಿ ವ್ಯವಸಾಯಾಭಿವೃದ್ಧಿ ಯೋಜನೆಯನ್ನೂ ಪ್ರಾರಂಭಿಸಲಾಗಿದೆ.

ಮೀನುಗಾರಿಕೆಗೂ ಈ ಜಿಲ್ಲೆಯಲ್ಲಿ ತುಂಬಾ ಅವಕಾಶಗಳಿವೆ. ತುಂಗಭದ್ರಾ ಜಲಾಶಯದಲ್ಲೇ ವರ್ಷಕ್ಕೆ ಸು. 600 ಮೆಟ್ರಿಕ್ ಟನ್ನುಗಳಷ್ಟು ಮೀನನ್ನು ಹಿಡಿಯಲಾಗುತ್ತಿದ್ದು ಒಟ್ಟು ಮೀನಿನ ವಾರ್ಷಿಕ ಉತ್ಪಾದನೆ 10,395 (2001) ಮೆಟ್ರಿಕ್ ಟನ್ನುಗಳಿತ್ತು.

ಜಿಲ್ಲೆಯಲ್ಲಿ ಒಟ್ಟು 3 ಕೃತಕ ಗರ್ಭಧಾರಣಾ ಕೇಂದ್ರ ಸೇರಿದಂತೆ ಒಟ್ಟು 96 (2000) ಪಶುವೈದ್ಯಾಲಯ ಕೇಂದ್ರಗಳು ಇವೆ. ಕುರಿಕಪ್ಪಿಯಲ್ಲಿ 1948–49ರಲ್ಲಿ ಆಗಿನ ಮದರಾಸು ಸರ್ಕಾರ ಸ್ಥಾಪಿಸಿದ ಕುರಿ ಮತ್ತು ದನದ ಸಂಯುಕ್ತ ಫಾರಂ ಇದೆ. ಕುರಿಕಪ್ಪಿ ಫಾರಂಗೆ ಸೇರಿದಂತೆ ಕೋಳಿ ಸಾಕಣೆ ವಿಸ್ತರಣಾ ಕೇಂದ್ರವಿದೆ.

ಬಳ್ಳಾರಿ ಜಿಲ್ಲೆ ವ್ಯವಸಾಯ ಪ್ರಧಾನವಾದದ್ದಾದರೂ ಕೈಗಾರಿಕಾ ಕ್ಷೇತ್ರದಲ್ಲೂ ಗಣನೀಯ ಸ್ಥಾನ ಗಳಿಸಿದೆ. ಬಳ್ಳಾರಿ, ಹೊಸಪೇಟೆ

ಮತ್ತು ಸಂಡೂರು ತಾಲ್ಲೂಕುಗಳಲ್ಲಿ ಸುಮಾರು 21 ಗಣಿಗಳಿವೆ. ಇಲ್ಲಿ ಕಬ್ಬಿಣ, ಮ್ಯಾಂಗನೀಸ್ ಅದಿರುಗಳು ಹಾಗೂ ರೆಡ್ ಆಕ್ಸೈಡ್‌ಗಳನ್ನು ತೆಗೆಯಲಾಗುತ್ತದೆ. ಸಂಡೂರು ತಾಲ್ಲೂಕಿನಲ್ಲಿ ಅಧಿಕ ಪ್ರಮಾಣದಲ್ಲಿ ಮ್ಯಾಂಗನೀಸ್ ಅದಿರನ್ನು ತೆಗೆಯಲಾಗುತ್ತಿದೆ. ಕಾರವಾರ, ಮರ್ಮಗೋವ ಮತ್ತು ಮದರಾಸು ಬಂದರುಗಳ ಮೂಲಕ ಇಲ್ಲಿಯ ಅದಿರು ರಫ್ತಾಗುತ್ತದೆ. ಹೊಸಪೇಟೆ ಮತ್ತು ಕಂಪ್ಲಿಗಳಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಈ ಕಾರ್ಖಾನೆಗಳ ಉಪೋತ್ಪನ್ನಗಳಿಂದ ಸ್ಪಿರಿಟ್ ಮತ್ತು ಮಾದಕಪಾನೀಯಗಳನ್ನು ತಯಾರಿಸುವ ಒಂದು ಕಾರ್ಖಾನೆ ಹೊಸಪೇಟೆಯಲ್ಲಿದೆ. ಕಂಪ್ಲಿ ಸಕ್ಕರೆ ಕಾರ್ಖಾನೆ ಸಹಕಾರಿ ವ್ಯವಸ್ಥೆಯಿಂದ ಸ್ಥಾಪನೆಯಾದ ಸಕ್ಕರೆ ಕಾರ್ಖಾನೆಗಳಲ್ಲಿ ಇಡೀ ರಾಜ್ಯದಲ್ಲೇ ಪ್ರಪ್ರಥಮ. ತುಂಗಭದ್ರಾ ಉಕ್ಕಿನ ಉತ್ಪನ್ನಗಳ ಕಾರ್ಯಾಗಾರ ಹೊಸಪೇಟೆಯಲ್ಲಿದೆ. ಇದು ಕರ್ನಾಟಕ, ಆಂಧ್ರ ಮತ್ತು ಕೇಂದ್ರಸರ್ಕಾರಗಳ ಪಾಲುದಾರಿಕೆಯಲ್ಲಿ ನಡೆಯುತ್ತಿದೆ. 1969–70ರಲ್ಲಿ ಇದರ ವಾರ್ಷಿಕ ಉತ್ಪನ್ನ 3,892 ಮೆಟ್ರಿಕ್ ಟನ್ನುಗಳು. ಹೊಸಪೇಟೆ ತಾಲ್ಲೂಕಿನ ತೋರಣಗಲ್ಲಿನಲ್ಲಿ ಕೇಂದ್ರ ಸರ್ಕಾರದಿಂದ ಯೋಜಿತವಾಗಿರುವ ವಿಜಯನಗರ ಉಕ್ಕಿನ ಕಾರ್ಖಾನೆ ಜಿಲ್ಲೆಯ ಭಾರಿ ಉದ್ಯಮ. ಇದರ ಅಂದಾಜು ಬಂಡವಾಳ ಸು. 300 ಕೋಟಿ ರೂ.ಗಳು. ಎಂ.ಜಿ.ಆಟೊಮೊಬೈಲ್ಸ್ ಎಂಜಿನಿಯರಿಂಗ್ ಕಂಪನಿ (1924) ಜಿಲ್ಲೆಯ ಬೃಹತ್ ಉದ್ಯಮಗಳಲ್ಲೊಂದು. ಇದು ತಿಂಗಳಿಗೆ ಅನೇಕ ಬಸ್‌ಗಳಿಗೆ ಹೊಸ ಮೈಕಟ್ಟು ಗಳನ್ನು ನಿರ್ಮಿಸುವ ಸಾಮರ್ಥ್ಯ ಪಡೆದಿದೆ.

ಈ ಜಿಲ್ಲೆಯಲ್ಲಿ ಒಟ್ಟು 243 ನೋಂದಾಯಿಸಿದ ಸಣ್ಣಪ್ರಮಾಣದ ಕೈಗಾರಿಕೆಗಳೂ ಒಂದು ಕೈಗಾರಿಕಾ ಎಸ್ಟೇಟ್ ಮತ್ತು 6 ಷೆಡ್ಡುಗಳೂ ಹತ್ತಿ ಕೈಗಾರಿಕೆಗೆ ಸಂಬಂಧಿಸಿದ 71 ಘಟಕಗಳೂ 15 ಎಣ್ಣೆ ಗಿರಣಿಗಳೂ ಇದ್ದವು. 39 ಸಾಮಾನ್ಯ ಎಂಜಿನಿಯರಿಂಗ್ ಉದ್ಯಮಗಳು. ಆಹಾರ, ಪಾನೀಯ, ಹೊಗೆಸೊಪ್ಪು ಮೊದಲಾದವುಗಳಿಗೆ ಸಂಬಂಧಿಸಿದ ಕೈಗಾರಿಕೆಗಳಿವೆ. ಮುದ್ರಣಾಲಯಗಳು, ಚರ್ಮ ಮತ್ತು ರಬ್ಬರ್ ಉತ್ಪನ್ನ ಹಾಗೂ ಬೀಡಿಕಟ್ಟುವ ಉದ್ಯಮಗಳಿವೆ. ಬಳ್ಳಾರಿಯಲ್ಲಿ 6 ಮತ್ತು ಹೊಸಪೇಟೆಯಲ್ಲಿ 2 ರಾಸಾಯನಿಕ ಕಾರ್ಖಾನೆಗಳು, ಹತ್ತಿ, ರೇಷ್ಮೆ ಮತ್ತು ಉಣ್ಣೆ ನೇಯುವ ಸು. 600 ಮಗ್ಗಗಳು ಈ ಜಿಲ್ಲೆಯಲ್ಲಿದ್ದವು. 9 ಗಾಣದ ಎಣ್ಣೆ ಉತ್ಪಾದನಾ ಸಹಕಾರ ಸಂಘಗಳಿವೆ. ಇವುಗಳಲ್ಲದೆ ಮರಕೊಯ್ಯುವ, ಎತ್ತಿನಗಾಡಿ ಕೂಡಿಸುವ, ಪೀಠೋಪಕರಣಗಳನ್ನು ಮಾಡುವ ಸು. 24ಕ್ಕೂ ಮಿಕ್ಕಿದ ಘಟಕಗಳಿವೆ. ಮಡಕೆ, ಚಾಪೆ, ಕುಕ್ಕೆ ಮೊದಲಾದವನ್ನು ಮಾಡುವ ಪುರಾತನ ಮತ್ತು ಅಲ್ಪಾದಾಯದ ಕೈಗೆಲಸದ ಯದ್ಯಮಗಳು ಹಲವಾರಿವೆ. ಜಿಲ್ಲೆಯಲ್ಲಿ 6 ಕೈಗಾರಿಕಾ ಪ್ರದೇಶಗಳು 126 ಕೈಗಾರಿಕಾ ಷೆಡ್ಡುಗಳಿದ್ದು (2001), 45 ಬಟ್ಟೆ ಕಾರ್ಖಾನೆಗಳು, 5 ರಸಾಯನಿಕ, 21 ಎಂಜನಿಯರಿಂಗ್, ಇತರೆ ವಿಧವಾದವು 161. ಇದ್ದು ಒಟ್ಟು 232 ಕಾರ್ಖಾನೆಗಳಿದ್ದು 19,667 ಮಂದಿ ಉದ್ಯೋಗಿಗಳಿದ್ದರು. 3 ಸಕ್ಕರೆ ಕಾರ್ಖಾನೆಗಳಿದ್ದು, 2,90000, ಮೆ.ಟನ್ ಕಬ್ಬನ್ನು ನುರಿಸಿ 29,000. ಮೆ.ಟನ್ ಸಕ್ಕರೆಯನ್ನುತ್ಪಾದಿಸಲಾಗಿತ್ತು (2000).

ಈ ಜಿಲ್ಲೆಯಿಂದ ಹತ್ತಿ, ನೆಲಗಡಲೆ, ಸಕ್ಕರೆ, ಜೋಳ, ಬತ್ತ, ಈರುಳ್ಳಿ, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಜಮಖಾನಗಳು, ಉಣ್ಣೆಕಂಬಳಿ ಮೊದಲಾದವು ರಫ್ತಾಗುತ್ತವೆ. ಹತ್ತಿಬಟ್ಟೆಗಳು, ಸಿಮೆಂಟ್, ಗೋದಿ, ಮಸಾಲೆ ಸಾಮಾನುಗಳು, ಮರಮುಟ್ಟು, ಆಭರಣಗಳು, ಟೀ, ಕಾಫಿಬೀಜ, ಯಂತ್ರೋಪಕರಣಗಳು, ಔಷಧಿಗಳು, ಕಾಗದ ಮತ್ತಿತರ ವಸ್ತುಗಳು ಆಂದಾಗುತ್ತವೆ. ಆಂತರಿಕ ವ್ಯಾಪಾರಕ್ಕೆ ಬಳ್ಳಾರಿ ಹೊಸಪೇಟೆ ಮತ್ತು ಕೊಟ್ಟೂರುಗಳೂ ಮುಖ್ಯ ಕೇಂದ್ರಗಳಾಗಿವೆ. ತಾಲ್ಲೂಕು ಕೇಂದ್ರಗಳಲ್ಲೂ ಸಗಟು ವ್ಯಾಪಾರ ನಡೆಯುತ್ತವೆ. ಹತ್ತಿ, ಕಡಲೆಕಾಯಿ, ಕಡಲೆಕಾಯಿ ಎಣ್ಣೆ, ಜೋಳ, ದ್ವಿದಳಧಾನ್ಯ, ಕಂಬಳಿ ಮುಂತಾದವು ಸಗಟು ವ್ಯಾಪಾರದ ಪ್ರಮುಖ ವಸ್ತುಗಳು. ಈ ಜಿಲ್ಲೆಯಲ್ಲಿ ಸು. 40 ಸ್ಥಳಗಳಲ್ಲಿ ವಾರಕ್ಕೊಮ್ಮೆ ಸಂತೆಗಳು ನಡೆಯುತ್ತವೆ. ಈ ಸಂದರ್ಭಗಳಲ್ಲಿ ನಡೆಯುವ ಜಾನುವಾರು ವ್ಯಾಪಾರ ಪ್ರಮುಖವಾದದ್ದು. ಜಿಲ್ಲೆಯ ಅನೇಕ ಸ್ಥಳಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳಿವೆ.

ಜಿಲ್ಲೆಯ ಆರ್ಥಿಕ ಚಟುವಟಿಕೆಗೆ ನೆರವಾಗುವ 93 ವಾಣಿಜ್ಯ ಬ್ಯಾಂಕುಗಳು, 63 ಗ್ರಾಮೀಣ ಬ್ಯಾಂಕುಗಳು, 36 ಸಹಕಾರ ಬ್ಯಾಂಕುಗಳು, 204 ಸಾಲ ಸಹಕಾರ ಸಂಘಗಳೂ ಇದ್ದವು. (2001).

ಬಳ್ಳಾರಿ ಜಿಲ್ಲೆ ದಕ್ಷಿಣ ಭಾರತದ ಮಧ್ಯಮ ಪ್ರದೇಶದಲ್ಲಿದೆ. ಜಿಲ್ಲಾಕೇಂದ್ರ ಬಳ್ಳಾರಿಯಿಂದ ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಪಣಜಿ, ಮಂಗಳೂರು, ಸೊಲ್ಲಾಪುರ, ಪುಣೆ, ಮುಂಬಯಿ, ಹೈದರಾಬಾದು, ವಿಜಯವಾಡ, ಮದರಾಸು, ಮಚಲಿಪಟ್ಟಣ ಮೊದಲಾದ ಸ್ಥಳಗಳಿಗೆ ಹೆದ್ದಾರಿ ಸಂಪರ್ಕವಿದೆ. ಜಿಲ್ಲೆಯೊಳಗೆ ಬಳ್ಳಾರಿ–ಹೊಸಪೇಟೆ–ಹಂಪಸಾಗರ ರಸ್ತೆ, ಬಳ್ಳಾರಿ–ಕಂಪ್ಲಿ ರಸ್ತೆ, ಬಳ್ಳಾರಿ–ಸಿರಗುಪ್ಪ–ಆದವಾನಿ ರಸ್ತೆ, ಬಳ್ಳಾರಿ–ಆಲೂರು ರಸ್ತೆ, ಕೂಡ್ಲಿಗೆ–



ರಾಘವ ಕಲಾಮಂದಿರ, ಬಳ್ಳಾರಿ

ಸಂಡೂರು–ಕರುಗೋಡು ರಸ್ತೆ, ಹೊಸಪೇಟೆ–ಸಂಡೂರು ರಸ್ತೆ, ಮಲ್ಲಾಪುರ–ಕೂಡ್ಲಿಗೆ–ಹೊಸಹಳ್ಳಿ–ಜಗಳೂರು ರಸ್ತೆ, ಹೊಸಪೇಟೆ–ಹಗರಿಬೊಮ್ಮನಹಳ್ಳಿ–ಹರಪನಹಳ್ಳಿ ರಸ್ತೆ, ಕೂಡಿಗ್ಲಿ–ಗುಡಿಕೋಟೆ–ರಾಯದುರ್ಗ ರಸ್ತೆ, ಹರಪನಹಳ್ಳಿ–ಹಡಗಲಿ ರಸ್ತೆ, ಹೊಸಪೇಟೆ–ಸೋಮೇನಹಳ್ಳಿ ರಸ್ತೆ, ಕೂಡಿಗ್ಲಿ–ಗೌರಿಪುರ ರಸ್ತೆ, ರಾಯದುರ್ಗ–ಕಣೇಕಲ್ ರಸ್ತೆ, ಹೊಸಪೇಟೆ–ಕಂಪ್ಲಿ ರಸ್ತೆ, ತೋರಣಗಲ್–ರಾಮದುರ್ಗ ರಸ್ತೆ ಮೊದಲಾದ ಮುಖ್ಯ ರಸ್ತೆಗಳಿವೆ. ಜಿಲ್ಲೆಯ ಎಲ್ಲ ತಾಲ್ಲೂಕು ಮತ್ತು ಹೋಬಳಿ ಹಾಗೂ ಮುಖ್ಯ ಊರುಗಳಿಗೆ ಒಳ್ಳೆಯ ರಸ್ತೆ ಸಂಪರ್ಕವಿದೆ. ಈ ಜಿಲ್ಲೆಯಲ್ಲಿ 181ಕಿಮೀ ರಾಷ್ಟ್ರೀಯ ಹೆದ್ದಾರಿ, 300 ಕಿಮೀ. ರಾಜ್ಯ ಹೆದ್ದಾರಿ, 1,135 ಕಿಮೀ ಜಿಲ್ಲಾ ಮುಖ್ಯ ರಸ್ತೆ, 108ಕಿಮೀ ಇತರೇ ಜಿಲ್ಲಾ ರಸ್ತೆಗಳು, 1,750 ಕಿಮೀ ಗ್ರಾಮರಸ್ತೆಗಳು ಮತ್ತು 754 ಕಿಮೀ ಟಿ.ಡಿ.ಬಿ. ರಸ್ತೆ, 424 ನೀರಾವರಿ ಇಲಾಖಾ ರಸ್ತೆ, 15 ಕಿಮೀ ಅರಣ್ಯ ಇಲಾಖೆ ರಸ್ತೆ, 415ಕಿಮೀ ಪುರಸಭಾ ರಸ್ತೆಗಳಿದ್ದವು (1999). ಜಿಲ್ಲೆಯಲ್ಲಿ ಒಟ್ಟು 5,082 ಕಿಮೀ ರಸ್ತೆಯಿದ್ದು ಇದರಲ್ಲಿ 3,878ಕಿಮೀ ಪಕ್ಕಾ ರಸ್ತೆಯಿದ್ದಿತು.

ಈ ಜಿಲ್ಲೆಯಲ್ಲಿ 209 ಕಿಮೀ ರೈಲುಮಾರ್ಗವಿದೆ. ಗುಂತಕಲ್ಲು–ಬಳ್ಳಾರಿ–ಹೊಸಪೇಟೆ–ಹುಬ್ಬಳ್ಳಿ ಮಾರ್ಗ, ಬಳ್ಳಾರಿ–ರಾಯದುರ್ಗ ಮಾರ್ಗ, ಹೊಸಪೇಟೆ–ಕೊಟ್ಟೂರು ಮಾರ್ಗ ಹಾಗೂ ಗುಂದ ರೋಡ್

ಕೂಡುಸ್ಥಳದಿಂದ ಸಾಮೇಹಳ್ಳಿಗೆ ಹೋಗುವ ಮಾರ್ಗ- ಇವು ಈ ಜಿಲ್ಲೆಯಲ್ಲಿರುವ ರೈಲುಮಾರ್ಗಗಳು. ಇವುಗಳ ಜೊತೆಗೆ 1966ರಲ್ಲಿ ಗುಂತಕಲ್-ಹೊಸಪೇಟೆ ಬ್ರಾಡ್‌ಗೇಜ್ ಮಾರ್ಗ ನಿರ್ಮಾಣವಾಯಿತು. ಬಳ್ಳಾರಿ ಜಿಲ್ಲೆಯಲ್ಲಿ 21 ರೈಲು ನಿಲ್ದಾಣವಿದ್ದು, 240 ಕಿಮೀ ಬ್ರಾಡ್‌ಗೇಜ್, 26 ಕಿಮೀ ಮೀಟರ್ ಗೇಜ್ ರೈಲುಮಾರ್ಗವಿದ್ದು ಸಂಚಾರಕ್ಕೆ, ಸರಕು ಸಾಗಣೆಗೆ ಅನುಕೂಲವಿದೆ (2001).

ಜಿಲ್ಲೆಯಲ್ಲಿ 11 ಸರ್ಕಾರಿ ಆಸ್ಪತ್ರೆ, 10 ಭಾರತೀಯ ವೈದ್ಯಪದ್ಧತಿ ಆಸ್ಪತ್ರೆಗಳು, 54 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 17 ಪ್ರಾಥಮಿಕ ಆರೋಗ್ಯ ಘಟಕಗಳು, 17 ಕುಟುಂಬ ಕಲ್ಯಾಣ ಕೇಂದ್ರಗಳೂ 264 ಉಪಕೇಂದ್ರಗಳೂ ಔಷಧಾಲಯಗಳೂ 3 ರಕ್ತ ನಿಧಿಕೇಂದ್ರಗಳೂ ಇವೆ (2001).

ಜಿಲ್ಲೆಯಲ್ಲಿ 2001ರ ಗಣತಿಯ ಪ್ರಕಾರ ಒಟ್ಟು 58.04 ಸಾಕ್ಷರತಾ ಪ್ರಮಾಣವಿದ್ದಿತು. 1537 ಪ್ರಾಥಮಿಕಶಾಲೆಗಳೂ 211 ಪ್ರೌಢಶಾಲೆಗಳೂ 46 ಪದವಿಪೂರ್ವ, 6 ಪಾಲಿಟೆಕ್ನಿಕ್, 3 ಎಂಜನಿಯರಿಂಗ್, 1 ವೈದ್ಯಕೀಯ, 2 ಭಾರತೀಯ ವೈದ್ಯಪದ್ಧತಿಯ ಕಾಲೇಜುಗಳೂ ಇವೆ. ಕನ್ನಡ ವಿಶ್ವವಿದ್ಯಾನಿಲಯ ಹಂಪಿಯಲ್ಲಿ ಕಾರ್ಯನಿರತವಾಗಿದೆ. ಇದಲ್ಲದೆ ಕೈಗಾರಿಕಾ ತರಬೇತಿ ಸಂಸ್ಥೆ, ಜೂನಿಯರ್ ತಾಂತ್ರಿಕ ಶಾಲೆ, ಉಪಾಧ್ಯಾಯರ ತರಬೇತಿ ಸಂಸ್ಥೆಗಳು, ವಾಣಿಜ್ಯ ಶಿಕ್ಷಣ ಸಂಸ್ಥೆಗಳು ಸಹ ಇವೆ. ಒಂದು ಜಿಲ್ಲಾ ಕೇಂದ್ರ ಗ್ರಂಥಾಲಯ ಮತ್ತು 12 ಶಾಖಾಗ್ರಂಥಾಲಯಗಳು ಇವೆ. ಈ ಜಿಲ್ಲೆಯ ವೀರಶೈವ ಮಠಗಳು ಶೈಕ್ಷಣಿಕ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ಮಹತ್ತ್ವದ ಪಾತ್ರ ವಹಿಸಿವೆ.

ಸುಮಾರು 46 ಜಾತ್ರೆ ಉತ್ಸವಗಳು ಈ ಜಿಲ್ಲೆಯಲ್ಲಿ ನಡೆಯುತ್ತವೆ. ಹಂಪೆಯ ರಥೋತ್ಸವ, ಹಡಗಲಿ ತಾಲ್ಲೂಕಿನ ಮೈಲಾರದ ಕರ್ಣಿಕ, ಬಳ್ಳಾರಿಯ ಮಲ್ಲೇಶ್ವರ ರಥೋತ್ಸವ ಮೊದಲಾದವು ಬೃಹತ್ ಧಾರ್ಮಿಕ ಉತ್ಸವಗಳು.

ಈ ಜಿಲ್ಲೆಗೆ ಭವ್ಯ ಪೌರಾಣಿಕ ಪರಂಪರೆ ಇದೆ. ವಾಲಿ, ಸುಗ್ರೀವ ಮತ್ತು ಆಂಜನೇಯರು ಇಲ್ಲಿನ ಋಷ್ಯಮೂಕ ಪರ್ವತದ ಬಳಿ ಕಿಷ್ಕಿಂಧೆಯಲ್ಲಿದ್ದರೆಂದು ಪ್ರತೀತಿ. ಬ್ರಹ್ಮನ ಮಗಳು ಪಂಪಾಳ ಹೆಸರಿನಲ್ಲಿ ಪ್ರಸಿದ್ಧವಾದ ಪಂಪಾಕ್ಷೇತ್ರವೇ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪೆ. ಈ ಜಿಲ್ಲೆಯ ಇನ್ನೂ ಅನೇಕ ಸ್ಥಳಗಳು ಪೌರಾಣಿಕ ಹಿನ್ನೆಲೆ ಪಡೆದಿವೆ.

ಈ ಜಿಲ್ಲೆಯಲ್ಲಿ ನಡೆದಿರುವ ಪ್ರಾಗೈತಿಹಾಸಿಕ ಸಂಶೋಧನೆಗಳಿಂದ ಇಲ್ಲಿ ಹಳೆಯ ಶಿಲಾಯುಗದಿಂದ ಕಬ್ಬಿಣದ ಯುಗದವರೆಗಿನ ಸಂಸ್ಕೃತಿಗಳು ಪ್ರಚಲಿತವಾಗಿದ್ದುವೆನ್ನಲಾಗಿದೆ. ನಿಟ್ಟೂರು, ಕುಪ್ಪಗಲ್ಲು, ಸಂಗನಕಲ್ಲು, ಹಂಪಸಾಗರ, ತೆಕ್ಕಲಕೋಟೆ ಈ ಜಿಲ್ಲೆಯ ಮುಖ್ಯ ಪ್ರಾಗೈತಿಹಾಸಿಕ ನೆಲೆಗಳು.

ಜಿಲ್ಲೆಯ ಇತಿಹಾಸ ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ತೆಕ್ಕಲ ಕೋಟೆಯ ಬಳಿಯ ನಿಟ್ಟೂರಿನಲ್ಲಿ ಅಶೋಕನ ಎರಡು ಶಾಸನಗಳು ಬೆಳಕಿಗೆ ಬಂದಿವೆ. ಸಾತವಾಹನರು ಮೂಲತಃ ಬಳ್ಳಾರಿ ಜಿಲ್ಲೆಗೆ ಸೇರಿದವರೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಅವರ ಆಳ್ವಿಕೆಯ ಕಾಲದಲ್ಲಿ ಈ ಭಾಗಕ್ಕೆ ಸಾತವಾಹನಿಹಾರ ಎಂಬ ಹೆಸರಿತ್ತು. ಬನವಾಸಿಯ ಕದಂಬರು ಈ ಜಿಲ್ಲೆಯನ್ನು ಆಳಿದರು. ಈ ಜಿಲ್ಲೆಯ ಉಚ್ಚಂಗಿದುರ್ಗದವರೆಗಿನ ಪ್ರದೇಶ ಬನವಾಸಿ 12000 ಪ್ರಾಂತ್ಯಕ್ಕೆ ಸೇರಿತ್ತೆಂದು ಹೇಳಲಾಗಿದೆ. ಉಚ್ಚಂಗಿದುರ್ಗ ಕದಂಬರ ಒಂದು ಶಾಖೆಯ ರಾಜಧಾನಿಯಾಗಿತ್ತು. ಮುಂದೆ ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟರು, ಅವರ ಸಾಮಂತರಾಗಿದ್ದ ನೊಳಂಬರು ಮತ್ತು ಗಂಗರ ಅಧೀನದಲ್ಲಿ ಈ ಜಿಲ್ಲೆಯ ಕೆಲವು ಭಾಗಗಳು ಇದ್ದುವು. 11-12ನೆಯ ಶತಮಾನಗಳಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದ ಉಚ್ಚಂಗಿಯ ಪಾಂಡ್ಯರು ಈ ಪ್ರದೇಶದಲ್ಲಿ ಆಳುತ್ತಿದ್ದರು. ಚಾಳುಕ್ಯರ ಕಾಲದಲ್ಲಿ ಕೆಲವು ಕಾಲ ಈ ಜಿಲ್ಲೆಯ ಕಂಪ್ಲಿ ಪ್ರಾಂತೀಯ ರಾಜಧಾನಿಯಾ ಗಿತ್ತು. ಮುಂದೆ ಈ ಕಾಲದ ಕೊನೆಯಲ್ಲಿ ಪ್ರಸಿದ್ಧವಾಗಿ ಮೆರೆದ ಕುಮ್ಮಟ ಅಥವಾ ಕಂಪಿಲಿ ಸಂಸ್ಥಾನದ ರಾಜಧಾನಿ ಇದ್ದದ್ದು ಈ ಜಿಲ್ಲೆಯಲ್ಲಿಯೇ. ಮಹಮ್ಮದ್-ಬಿನ್-ತುಗಲಕನ ಕಾಲದಲ್ಲಿ ಅಂತಿಮವಾಗಿ ಇದು ಪತನವಾಯಿತು. ಮುಂದೆ ಸುಮಾರು ಮುನ್ನೂರು ವರ್ಷಗಳ ಕಾಲ ಇಡೀ ದಕ್ಷಿಣ ಭಾರತವನ್ನು ಒಳಗೊಂಡು ಆಳಿದ ವಿಜಯನಗರ ಸಾಮ್ರಾಜ್ಯದ ರಾಜಧಾನಿ



ಬಳ್ಳಾರಿಕೋಟೆಯ ದಕ್ಷಿಣ ದ್ವಾರ

ನೆಲೆಗೊಂಡಿದ್ದುದು ಈ ಜಿಲ್ಲೆಯ ಹಂಪಿಯಲ್ಲಿ. 1565ರ ರಕ್ಕಸತಂಗಡಿ ಕದನದಲ್ಲಿ ವಿಜಯನಗರದ ಅರಸರು ಸೋತಮೇಲೆ ವಿಜಯನಗರ ಹಾಳುಹಂಪೆಯಾಯಿತು. ಅನಂತರ ಈ ಜಿಲ್ಲೆ ಆದಿಲ್ ಶಾಹೀ ಸುಲ್ತಾನರ ಮತ್ತು ಹಲವು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿತು. ತರುವಾಯ ಮರಾಠರು ಮತ್ತು ಮುಗಲರು ಇಲ್ಲಿ ಆಧಿಪತ್ಯ ನಡೆಸಿದರು. ಮೈಸೂರಿನ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನ್ ಈ ಜಿಲ್ಲೆಯನ್ನು ಸಂಪೂರ್ಣವಾಗಿ ತಮ್ಮ ಅಧೀನಕ್ಕೆ ಒಳಪಡಿಸಿಕೊಂಡಿದ್ದರು. 1792ರ ಒಪ್ಪಂದದ ಪ್ರಕಾರ ಈ ಜಿಲ್ಲೆಯ ಕೆಲವು ಭಾಗಗಳನ್ನು ಟಿಪ್ಪು ನಿಜಾಮನಿಗೆ ಬಿಟ್ಟುಕೊಟ್ಟ. ಶ್ರೀರಂಗಪಟ್ಟಣದ ಪತನಾನಂತರ 1800ರ ಹೊತ್ತಿಗೆ ಈ ಜಿಲ್ಲೆ ಬ್ರಿಟಿಷರಿಗೆ ಸೇರಿ ಮದರಾಸು ಪ್ರಾಂತ್ಯದ ಭಾಗವಾ ಯಿತು. 1953ರಲ್ಲಿ ಆಂಧ್ರಪ್ರದೇಶದ ಸ್ಥಾಪನೆಯಾದಾಗ ಅಂದಿನ ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳ ವಿನಾ ಮಿಕ್ಕ ಭಾಗ ಮೈಸೂರು ಸಂಸ್ಥಾನಕ್ಕೆ ಸೇರಿತು. ಆ ಭಾಗವೇ ಇಂದು ಕರ್ನಾಟಕ ರಾಜ್ಯದಲ್ಲಿರುವ ಬಳ್ಳಾರಿ ಜಿಲ್ಲೆ.

ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ಐತಿಹಾಸಿಕ ಕೇಂದ್ರಗಳಿವೆ. ಹಂಪೆ **(ನೋಡಿ)** ಪ್ರಪಂಚ ಪ್ರಸಿದ್ಧವಾದುದು. ಉಚ್ಚಂಗಿದುರ್ಗ, ಕಂಪ್ಲಿಗಳಲ್ಲಿ ಪ್ರಾಚೀನಕಾಲದ ಕೋಟೆಗಳಿದ್ದರೆ, ಬಳ್ಳಾರಿ, ಗುಡಿಕೋಟೆ, ಕೆಂಚನಗುಡ್ಡ, ಜರಮಲೆ ಮೊದಲಾದೆಡೆಗಳಲ್ಲಿ ಟಿಪ್ಪುಸುಲ್ತಾನ್ ಮತ್ತು ಕೆಲವು ಸ್ಥಳೀಯ ಪಾಳೆಯಗಾರರು ಕಟ್ಟಿದ ಕೋಟೆಗಳು ಸುಸ್ಥಿತಿಯಲ್ಲಿ ಉಳಿದಿವೆ. ಸಂಡೂರಿನ ಬೆಟ್ಟದ ಮೇಲಿರುವ ಪಾರ್ವತಿ ದೇವಾಲಯ ರಾಷ್ಟ್ರಕೂಟರ ಕಾಲದ್ದೆನ್ನಲಾಗಿದೆ. ಅಂಬಲಿ, ಕುರುವತ್ತಿ, ನೀಲಗುಂದ, ಬಾಗಳಿ, ಮಾಗಳ, ಹಿರೇಹಡಗಲಿ, ಹೂವಿನ ಹಡಗಲಿ, ಸೋಗಿ ಮೊದಲಾದ ಸ್ಥಳಗಳಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಸುಂದರ ದೇವಾಲಯಗಳು ಇವೆ.

ವೀರಶೈವರ ಪಂಚಪೀಠಗಳಲ್ಲೊಂದಾದ ಉಜ್ಜಿನಿ ಕೂಡ್ಲಿಗಿ ತಾಲ್ಲೂಕಿನಲ್ಲಿದೆ. ಇಲ್ಲಿಯ ಮರಳು ಸಿದ್ದೇಶ್ವರ ದೇವಾಲಯ ಸುಂದರ ಕೆತ್ತನೆಯಿಂದ ಕೂಡಿದ್ದು, ಹಂಪಿಯನ್ನು ಹೊರಗೆ ನೋಡು ಉಜ್ಜಿನಿಯನ್ನು ಒಳಗೆ ನೋಡು ಎಂಬುದು ಬಳ್ಳಾರಿ ಜಿಲ್ಲೆಯಲ್ಲಿ ಮನೆಮಾತಾಗಿದೆ. ಕುರುಗೋಡು, ಕೊಟ್ಟೂರು ಮತ್ತಿತರ ಕಡೆಗಳಲ್ಲಿ ಬಸವೇಶ್ವರ ದೇವಸ್ಥಾನಗಳಿವೆ. ಕುರುಗೋಡಿನಲ್ಲಿ ನೀಲಮ್ಮನವರ ಮಠವಿದೆ. ಹಡಗಲಿ ತಾಲ್ಲೂಕಿನ ಮೈಲಾರದಲ್ಲಿರುವುದು ಪ್ರಸಿದ್ಧ ಮೈಲಾರ ದೇವಾಲಯ. ಕೊಟ್ಟೂರಿನ ಮೂರುಕಲ್ಲುಮಠ, ಬಳ್ಳಾರಿ ತಾಲ್ಲೂಕಿನ ಚೆಳ್ಳಗುರ್ಕಿಯಲ್ಲಿರುವ ಎರ್ರಿತಾತ ಶಿವಯೋಗಿಗಳ ಜೀವ ಸಮಾಧಿ, ಕೂಡ್ಲಿಗಿ ತಾಲ್ಲೂಕಿನ ಕಾನಮಡುವಿನಲ್ಲಿರುವ ಶರಣಾರ್ಯರೆಂಬ ವೀರಶೈವಸಂತರ ಸಮಾಧಿ, ಎಮ್ಮಿಗನೂರಿನಲ್ಲಿರುವ ಜಡೆ ತಾತನ ಸಮಾಧಿ ಇವೂ ಧಾರ್ಮಿಕ ಕೇಂದ್ರಗಳು.

ಕೂಡ್ಲಿಗಿ ತಾಲ್ಲೂಕಿನ ಅಮರದೇವರ ಗುಡ್ಡದಲ್ಲಿ 1 ಎಕರೆಗೂ ಹೆಚ್ಚು ಪ್ರದೇಶವನ್ನು ಆವರಿಸಿರುವ ಬೃಹತ್ ಆಲದಮರವಿದೆ. ತುಂಗಭದ್ರಾ ಅಣೆಕಟ್ಟು ಪ್ರೇಕ್ಷಣೀಯ ಸ್ಥಳ. ಕೂಡ್ಲಿಗಿ ತಾಲ್ಲೂಕಿನಲ್ಲಿ ಗುಡಿಕೋಟೆಗೆ ಮೂರು ಕಿಮೀ ದೂರದಲ್ಲಿ ಸರ್ವೋದಯ ಗ್ರಾಮ ಸ್ಥಾಪಿತವಾಗಿದೆ.

**ತಾಲ್ಲೂಕು :** ಜಿಲ್ಲೆಯ ಪೂರ್ವದಂಚಿನಲ್ಲಿ ಇರುವ ಈ ತಾಲ್ಲೂಕು ಉತ್ತರಕ್ಕೆ ಸಿರಗುಪ್ಪ, ಪಶ್ಚಿಮಕ್ಕೆ ಹೊಸಪೇಟೆ ಮತ್ತು ಸಂಡೂರು ತಾಲ್ಲೂಕುಗಳು, ನೈಋತ್ಯ ದಕ್ಷಿಣ, ಆಗ್ನೇಯ, ಪೂರ್ವ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಆಂಧ್ರಪ್ರದೇಶ ಇವುಗಳ ನಡುವೆ ಇದೆ. ತಾಲ್ಲೂಕಿನಲ್ಲಿ ಮೋಕ, ಬಳ್ಳಾರಿ, ರೂಪನಗುಡಿ, ಕೋಳೂರು, ಕುರುಗೋಡು ಈ ಹೋಬಳಿಗಳೂ ಒಟ್ಟು 104 ಗ್ರಾಮಗಳೂ ಇವೆ. ವಿಸ್ತೀರ್ಣ 1,681 ಚ.ಕಿಮೀ. ಈ ತಾಲ್ಲೂಕಿನ ಜನಸಂಖ್ಯೆ 6,25,429. ಇದರಲ್ಲಿ 3,08,429 ಮಂದಿ ಗ್ರಾಮಸ್ಥರೂ 3,17,000 ಮಂದಿ ಪಟ್ಟಣಿಗರೂ ಇದ್ದಾರೆ.

ಈ ತಾಲ್ಲೂಕಿನ ಬಹುಭಾಗದಲ್ಲಿ ಬೆಟ್ಟಗುಡ್ಡಗಳೂ ಅವುಗಳ ನಡುವೆ ವಿಶಾಲ ಕಪ್ಪುಮಣ್ಣಿನ ಬಯಲುಗಳೂ ಇವೆ. ಕೆಲವು ಭಾಗದಲ್ಲಿ ಕಲ್ಲಿನ ಬರಡಾದ ಪ್ರದೇಶವುಂಟು. ತಾಮ್ರಪರ್ವತಶ್ರೇಣಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಹಬ್ಬಿದೆ. ಬಳ್ಳಾರಿ ಪಟ್ಟಣಕ್ಕೆ 22 ಕಿಮೀ ದೂರದಲ್ಲಿರುವುದು ಕುರುಗೋಡು ಬೆಟ್ಟ ಸಮೂಹ. ಇಲ್ಲಿನ ಅತ್ಯಂತ ಎತ್ತರ ಪ್ರದೇಶ 599 ಮೀ. ಬಳ್ಳಾರಿ ಕೋಟೆ ಇರುವ ಗುಡ್ಡದ ಉತ್ತರ ಸಮುದ್ರಮಟ್ಟದಿಂದ 602 ಮೀ ಎತ್ತರ. ತುಂಗಭದ್ರಾ ನದಿ ಬಳ್ಳಾರಿ ತಾಲ್ಲೂಕಿನ ವಾಯವ್ಯ ಸರಹದ್ದಿಗೆ ಸ್ವಲ್ಪ ದೂರದಲ್ಲಿ ಹಾದುಹೋಗುತ್ತದೆ. ತಾಲ್ಲೂಕಿನ ಪೂರ್ವದಲ್ಲಿ ಹಗರಿ ನದಿ ಉತ್ತರಾಭಿಮುಖವಾಗಿ ಸ್ವಲ್ಪ ದೂರ ರಾಜ್ಯದ ಗಡಿಯಾಗಿ ಹರಿಯುತ್ತದೆ. ಈ ತಾಲ್ಲೂಕಿಗೆ ಸಂಬಂಧಿಸಿದಂತೆ ಈ ನದಿಯ ಹರಿವಿನ ಉದ್ದ 45 ಕಿಮೀ. ತಾಲ್ಲೂಕಿನ ಮಧ್ಯದಲ್ಲಿ ಹುಟ್ಟಿ ಈಶಾನ್ಯಭಿಮುಖವಾಗಿ ಹರಿದು ಸಿರಗುಪ್ಪ ತಾಲ್ಲೂಕಿನ ಬೂದಗುಪ್ಪ ಗ್ರಾಮದ ಪೂರ್ವಕ್ಕೆ ಹಗರಿಯನ್ನು ಸೇರುವ ಪೆದ್ದವಂಕ ನದಿ ಹಗರಿಯ ಮುಖ್ಯ ಉಪನದಿ. ತಾಲ್ಲೂಕಿನ ವಾಯವ್ಯದ ಕೊನೆಯಲ್ಲಿ ಉತ್ತರಾಭಿಮುಖವಾಗಿ ರಾಮಪುರವಂಕ ಹರಿದು ಹೊಸಪೇಟೆ ತಾಲ್ಲೂಕಿನ ಈಶಾನ್ಯದ ಕೊನೆಯಲ್ಲಿ ತುಂಗಭದ್ರಾ ನದಿಯನ್ನು ಸೇರುವುದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 525.4 ಮಿಮೀ. ಆದರೆ ವಾಸ್ತವವಾಗಿ ಬಿದ್ದಮಳೆ 361.4 ಮಿಮೀ (2000). ಸಸ್ಯವರ್ಗ ತೆಳು ಕುರುಚಲು ಕಾಡುಗಳು ಮಾತ್ರ ಇವೆ.

ತುಂಗಭದ್ರಾ ಜಲಾಶಯ ಈ ತಾಲ್ಲೂಕಿನ ಹಲವಾರು ಎಕರೆ ಜಮೀನಿಗೆ ನೀರೊದಗಿಸಿದೆ. ತಾಲ್ಲೂಕಿನ ಒಟ್ಟು 16,9027 ಹೆ. ಭೂಮಿಯಲ್ಲಿ 2877 ಹೆ. ಅರಣ್ಯಪ್ರದೇಶವಿದೆ. ಕಾಲುವೆ, ಕೆರೆ ಮುಂತಾದವುಗಳಿಂದ ನೀರಾವರಿಗೆ ಒಳಪಟ್ಟ ಒಟ್ಟು ಪ್ರದೇಶ 62, 680 ಹೆ.ಗಳು.ಬಿತ್ತನೆಯಾದ ಒಟ್ಟುಪ್ರದೇಶ 1,28,653. ಹೆ.ಗಳು. ಇದರಲ್ಲಿ 23,528 ಹೆ.ನಲ್ಲಿ ಬತ್ತ, 45,001 ಹೆ.ನಲ್ಲಿ. ಜೋಳ, 2835 ಹೆ.ನಲ್ಲಿ ಸಜ್ಜೆ, 351 ಹೆ.ನಲ್ಲಿ ಗೋಧಿ, 16,806 ಹೆ.ನಲ್ಲಿ ಮುಸುಕಿನ ಜೋಳ, 88,529 ಹೆ.ನಲ್ಲಿ ಏಕದಳಧಾನ್ಯಗಳು 5968 ಹೆ.ನಲ್ಲಿ ದ್ವಿದಳಧಾನ್ಯಗಳು, 933 ಹೆ.ನಲ್ಲಿ ನೆಲಗಡಲೆ 10 ಹೆ. ನಲ್ಲಿ ಕಬ್ಬು, 8830 ಹೆ.ನಲ್ಲಿ ಹತ್ತಿ, ಬೆಳೆಯಲಾಗಿತ್ತು (1999-2000).

ಈ ತಾಲ್ಲೂಕಿನಲ್ಲಿ ವ್ಯವಸಾಯ ಸಂಶೋಧನ ಕೇಂದ್ರವಿದೆ. ಬಳ್ಳಾರಿಯಲ್ಲಿ ಮಣ್ಣು ಪರೀಕ್ಷಣಾ ಉಪಕೇಂದ್ರವಿದೆ. ಮೋಕದಲ್ಲಿ ಬೀಜದ ತಳಿ ವೃದ್ಧಿಸುವ ತೋಟವಿದೆ. ಬಳ್ಳಾರಿ ಮತ್ತು ಕುಡತಿನಿಗಳಲ್ಲಿ ಪಶುವೈದ್ಯ ಶಾಲೆಗಳಿವೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, ಸಹಕಾರ ಸಂಘಶಾಖೆಗಳು, ವಾಣಿಜ್ಯ ಬ್ಯಾಂಕುಗಳು ಇಲ್ಲಿಯ ವ್ಯವಸಾಯಾಭಿವೃದ್ಧಿಗೆ ನೆರವಾಗುತ್ತಿವೆ.

ಬಳ್ಳಾರಿ ತಾಲ್ಲೂಕಿಗೆ ತುಂಗಭದ್ರಾ ಅಣೆಕಟ್ಟು ಸ್ಥಾವರದಿಂದ ಮತ್ತು ಹಂಪೆ ವಿದ್ಯುತ್ ಸ್ಥಾವರದಿಂದ ವಿದ್ಯುತ್ ಪೂರೈಕೆಯಾಗುತ್ತದೆ. ಬೆಳಗಲ್ಲು, ಹರಗನದೋಣ ಮೊದಲಾದ ಕಡೆಗಳಲ್ಲಿ ಕಬ್ಬಿಣದ ಅದಿರನ್ನು ತೆಗೆಯಲಾಗುತ್ತದೆ. ಬಳ್ಳಾರಿ ಪಟ್ಟಣದಲ್ಲಿ ಅನೇಕ ದೊಡ್ಡ ಕೈಗಾರಿಕೆಗಳುಂಟು. ಹತ್ತಿ ಎಕ್ಕುವ ಘಟಕಗಳನ್ನು ಈ ತಾಲ್ಲೂಕಿನ ವಿವಿಧ ಕಡೆಗಳಲ್ಲಿ ಸ್ಥಾಪಿಸಲಾಗಿದೆ. ಕುರುಗೋಡು, ಕುಪ್ಪಗಲ್ಲು, ಕುಡತಿನಿ, ಎಮ್ಮಿಗನೂರು ಮೊದಲಾದ ಕಡೆಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳುಂಟು. ಬಳ್ಳಾರಿಯ ಸಮೀಪದಲ್ಲಿ ಬಿಸಲಹಳ್ಳಿಯಲ್ಲಿರುವ ಕಬ್ಬಿಣೋತ್ಪನ್ನಗಳ ಕೈಗಾರಿಕೆ ಮುಖ್ಯವಾದುದು. ಮೋಕದಲ್ಲಿ ಕೈಮಗ್ಗಗಳಿವೆ. ಇವುಗಳ ಜೊತೆಗೆ ಎಣ್ಣೆಗಾಣಗಳು, ಮಣ್ಣಿನ ಪಾತ್ರೆಗಳನ್ನು ತಯಾರಿಸುವುದು, ಮರಗೆಲಸ, ಕಬ್ಬಿಣದ ಕೆಲಸ ಮುಂತಾದ ಗೃಹ ಉದ್ಯಮಗಳುಂಟು.

ಬಳ್ಳಾರಿ-ಕುಡತಿನಿ-ದರೋಜಿ ರಸ್ತೆ, ಬಳ್ಳಾರಿ-ಕೋಳೂರು-ತೆಕ್ಕಲಕೋಟೆ ರಸ್ತೆ, ಬಳ್ಳಾರಿ-ಭೈರದೇವರ ಹಳ್ಳಿ-ಆಲೂರು ರಸ್ತೆ, ಬಳ್ಳಾರಿ-ಕುರುಗೋಡು-ಎಮ್ಮಿಗನೂರು ರಸ್ತೆ, ಕುಡತಿನಿ-ಕುರುಗೋಡು-ಗಣಿಕೆಹಾಳು ರಸ್ತೆ, ಬಳ್ಳಾರಿ-ಜೋಳದರಾಶಿ-ಆಲೂರು ರಸ್ತೆ, ಬಳ್ಳಾರಿ-ಕಲ್ಯಾಣದುರ್ಗ ರಸ್ತೆ ಇವು ತಾಲ್ಲೂಕಿನ ಮುಖ್ಯ ರಸ್ತೆಗಳು. ಇವಲ್ಲದೆ ಅನೇಕ ಗ್ರಾಮಾಂತರ ರಸ್ತೆಗಳಿವೆ. ಈ ತಾಲ್ಲೂಕಿನಲ್ಲಿರುವ ರಸ್ತೆಮಾರ್ಗದ ಉದ್ದ 370.2 ಕಿಮೀ. ಗುಂತಕಲ್ಲು-ಹುಬ್ಬಳ್ಳಿ ರೈಲುಮಾರ್ಗ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತದೆ.

ಕುರುಗೋಡು ದೊಡ್ಡ ಬಸವೇಶ್ವರ , ಎಮ್ಮಿಗನೂರು ಜಡೆತಾತ ಮತ್ತು ಬಸವೇಶ್ವರ, ಮೋಕದ ಮಲ್ಲೇಶ್ವರಸ್ವಾಮಿ, ಬಳ್ಳಾರಿಯ ಮಲ್ಲೇಶ್ವರಸ್ವಾಮಿ, ಚೆಳ್ಳಗುರ್ಕಿಯ ಎರ್ರಿತಾತ, ದಮ್ಮೂರು ವೆಂಕಾವದೂತ, ಕುಡತಿನಿಯ ಅಂಜನೇಶ್ವರ- ಇವು ಈ ತಾಲ್ಲೂಕಿನಲ್ಲಿ ನಡೆಯುವ ಮುಖ್ಯ ಜಾತ್ರೆಗಳು. ಬಳ್ಳಾರಿ, ಕುಡತಿನಿ, ಕುರುಗೋಡುಗಳಲ್ಲಿ ವಾರದ ಸಂತೆಗಳು ನಡೆಯುತ್ತವೆ.

ತಾಲ್ಲೂಕಿನಲ್ಲಿ 363 ಪ್ರಾಥಮಿಕ ಶಾಲೆಗಳು, 50 ಪ್ರೌಢಶಾಲೆಗಳು, 13 ಪದವಿಪೂರ್ವ, 2 ಎಂಜಿನಿಯರಿಂಗ್, 2 ವೈದ್ಯಕೀಯ ಶಿಕ್ಷಣದ ಕಾಲೇಜುಗಳು 3 ಪಾಲಿಟೆಕ್ನಿಕ್‌ಗಳು ಇದ್ದವು.

ಈ ತಾಲ್ಲೂಕಿನ ಗ್ರಾಮಗಳಲ್ಲಿ ಬಳ್ಳಾರಿ ನಗರಕ್ಕೆ ಈಶಾನ್ಯದಲ್ಲಿ 12 ಕಿಮೀ ದೂರದಲ್ಲಿರುವ ಭೈರದೇವರಹಳ್ಳಿಯಲ್ಲಿ ಬಳ್ಳಾರಿ ನಗರದ ನೀರು ಸರಬರಾಜು ಕೇಂದ್ರವುಂಟು. ಬಳ್ಳಾರಿ-ಅನಂತಪುರ ಮಾರ್ಗದಲ್ಲಿ ಬಳ್ಳಾರಿಯಿಂದ 26 ಕಿಮೀ. ದೂರದಲ್ಲಿರುವ ಚೆಳ್ಳಗುರ್ಕಿ ಗ್ರಾಮದಲ್ಲಿ ಸಂತ ಎರ್ರಿತಾತನ ಸಮಾಧಿಯುಂಟು. ಬಳ್ಳಾರಿ ನಗರಕ್ಕೆ 17 ಕಿಮೀ.

ದೂರದಲ್ಲಿರುವ ದಮ್ಮೂರಿನಲ್ಲಿ ವೆಂಕಪ್ಪನವರ ಸಮಾಧಿ ಮತ್ತು ಗುಹಾದೇವಾಲಯವಿದೆ. ಬಳ್ಳಾರಿಯ ಸಮೀಪದಲ್ಲಿರುವ ಸಂಗನಕಲ್ಲು **(ನೋಡಿ)**, ಈಶಾನ್ಯಕ್ಕೆ 12 ಕಿಮೀ ದೂರದಲ್ಲಿರುವ ಕುಪ್ಪಗಲ್ಲು **(ನೋಡಿ)** ಮತ್ತು ವಾಯವ್ಯಕ್ಕೆ 20 ಕಿಮೀ ದೂರದಲ್ಲಿರುವ ಕುಡತಿನಿಯಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಇವೆ. ಬೆಲೆ ಬಾಳುವ ಕಂಬಳಿ ತಯಾರಿಕೆಗೆ ಕುಡತಿನಿ ಪ್ರಸಿದ್ಧ. ಕುರುಗೋಡು **(ನೋಡಿ)** ಇತಿಹಾಸ ಪ್ರಸಿದ್ಧ ಗ್ರಾಮ. ಬಳ್ಳಾರಿಯ ಈಶಾನ್ಯಕ್ಕೆ 18 ಕಿಮೀ ದೂರದಲ್ಲಿರುವ ಮೋಕ ಹೋಬಳಿ ಕೇಂದ್ರ. ಹಗರಿ ನದಿಯ ಎಡದಂಡೆಯ ಮೇಲಿರುವ ಈ ಗ್ರಾಮದಲ್ಲಿ ವಿಸ್ತಾರವಾದ ಭೂ ಪ್ರದೇಶವನ್ನು ವ್ಯವಸಾಯಕ್ಕೊಳಪಡಿಸಿರುವ ಕೃಷಿ ಕ್ಷೇತ್ರವಿದೆ. ಇಲ್ಲಿಯ ಮಲ್ಲೇಶ್ವರಸ್ವಾಮಿ ದೇವಾಲಯದ ರಥೋತ್ಸವ ಪ್ರತಿವರ್ಷವೂ ನಡೆಯುತ್ತದೆ. ಬಳ್ಳಾರಿಯ ಉತ್ತರಕ್ಕೆ 8 ಕಿಮೀ ದೂರದಲ್ಲಿರುವ ಸಿದ್ದರಗುಡ್ಡ ಗ್ರಾಮದಲ್ಲಿ ಕೇಂದ್ರ ಸರ್ಕಾರದ ಒಂದು ಮಣ್ಣು ಸಂರಕ್ಷಣೆ ಮತ್ತು ಸಂಶೋಧನ ಕೇಂದ್ರವುಂಟು. ಬಳ್ಳಾರಿ ತಾಲ್ಲೂಕಿನ ವಾಯವ್ಯದಲ್ಲಿ ಬಳ್ಳಾರಿಯಿಂದ ಸು. 46 ಕಿಮೀ ದೂರದಲ್ಲಿ ರಾಮಪುರವಂಕದ ಬಲಕ್ಕೆ ತುಂಗಭದ್ರಾ ನದಿಯ ಬಲ ದಂಡೆಯ ಕಡೆ ಇರುವ ಎಮ್ಮಿಗನೂರು ಗ್ರಾಮ ತುಂಗಭದ್ರಾ ಯೋಜನೆಯ ಕೆಳನಾಲೆಯಿಂದ ನೀರಾವರಿ ಸೌಕರ್ಯವನ್ನು ಕಲ್ಪಿಸಲಾಗಿದೆ. ಇಲ್ಲಿ ಜಡೆತಾತನ ಪವಿತ್ರ ಸಮಾಧಿ ಇದೆ.

**ಪಟ್ಟಣ:** ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರವಾಗಿರುವ ಬಳ್ಳಾರಿ ಪಟ್ಟಣ ಬೆಂಗಳೂರು–ರಾಯಚೂರು ಹೆದ್ದಾರಿಯಲ್ಲಿ ಬೆಂಗಳೂರಿನಿಂದ ಉತ್ತರಕ್ಕೆ 304 ಕಿಮೀ ದೂರದಲ್ಲಿದೆ. ಗುಂತಕಲ್ಲು–ಹುಬ್ಬಳ್ಳಿ ರೈಲುಮಾರ್ಗ ಈ ಪಟ್ಟಣದ ಮೂಲಕ ಹಾದುಹೋಗುತ್ತದೆ. ಜನಸಂಖ್ಯೆ 3,17,000.

ಜಿಲ್ಲಾ ಕೇಂದ್ರವಾಗಿ ಅನೇಕ ಸರ್ಕಾರಿ ಕಚೇರಿಗಳು ಮತ್ತು ಸಂಸ್ಥೆಗಳನ್ನು ಹೊಂದಿರುವ ಬಳ್ಳಾರಿ ಪಟ್ಟಣ ಕೈಗಾರಿಕೆ ಮತ್ತು ವಾಣಿಜ್ಯದಲ್ಲೂ ಮುಖ್ಯ ಸ್ಥಾನ ಪಡೆದಿದೆ. ಈ ಜಿಲ್ಲೆಯ ತುಂಗಭದ್ರಾ ಜಲಾಶಯ ಯೋಜನೆ, ಗಣಿ ಉದ್ಯಮಗಳು, ಉಕ್ಕಿನ ಕಾರ್ಖಾನೆಗಳು ಬಳ್ಳಾರಿಯ ಬೆಳೆವಣಿಗೆಗೆ ಸಹಾಯಕವಾಗಿವೆ. ಆಟೋಮೊಬೈಲ್, ನೂಲುವ ಮತ್ತು ನೇಯ್ಗೆ ಕಾರ್ಖಾನೆಗಳು, ಎಣ್ಣೆ ತಯಾರಿಕಾ ಘಟಕಗಳು, ಬಳೆ, ಉಡುಪು ತಯಾರಿಕೆ, ಹೊಗೆಸೊಪ್ಪು ಸಿದ್ಧಪಡಿಸುವ ಕೇಂದ್ರಗಳು, ಎಂಜಿನಿಯರಿಂಗ್ ಕಾರ್ಯಾಗಾರಗಳು, ಮರದ ಕೈಗಾರಿಕೆಗಳು, ಮುದ್ರಣ, ಚರ್ಮ ಮತ್ತು ರಬ್ಬರ್ ವಸ್ತುಗಳ ತಯಾರಿಕೆ ಕೇಂದ್ರಗಳು. ರಾಸಾಯನಿಕ ವಸ್ತುಗಳ ತಯಾರಿಕಾ ಘಟಕಗಳು, ಪ್ಲಾಸ್ಟಿಕ್ ಮತ್ತು ಕೈಮಗ್ಗ ಕೈಗಾರಿಕೆಗಳು, ಕೈಗಾರಿಕಾ ಎಸ್ಟೇಟ್ ಮೊದಲಾದವು ಈ ಪಟ್ಟಣದಲ್ಲಿವೆ. ಇಲ್ಲಿ ತಾಂತ್ರಿಕ ಕಾಲೇಜು, ವೈದ್ಯಕೀಯ ಕಾಲೇಜು, ಆಯುರ್ವೇದ ಕಾಲೇಜು, ಕಲೆ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳು, ಅನೇಕ ಪ್ರೌಢಶಾಲೆಗಳು ಇವೆ. ಸಾರ್ವಜನಿಕ ಆಸ್ಪತ್ರೆ, ಪಶುವೈದ್ಯಶಾಲೆ, ಸಹಕಾರ ಸಂಘಗಳು, ವಾಣಿಜ್ಯ ಬ್ಯಾಂಕುಗಳು, ವಿವಿಧ ಸಾಂಸ್ಕೃತಿಕ ಸಂಘಗಳು ಇಲ್ಲಿ ಸ್ಥಾಪಿತವಾಗಿವೆ. ಬಳ್ಳಾರಿ ಪಟ್ಟಣ ನಗರಸಭಾಡಳಿತಕ್ಕೆ ಒಳಪಟ್ಟಿದೆ. ಪಟ್ಟಣದ ಹಳೆಯ ಭಾಗದ ಜೊತೆಗೆ ಇಂದು ಅನೇಕ ಹೊಸ ಬಡಾವಣೆಗಳು ರೂಪುಗೊಂಡಿವೆ.

ಈ ಊರಿನ ದುರ್ಗಮ್ಮನ ಗುಡಿ ಬಹು ಹಳೆಯ ಕಾಲದ್ದು. ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಇಲ್ಲಿ ಉತ್ಸವ ನಡೆಯುತ್ತದೆ. ಶಿವಾನುಭವ ಮಂಟಪ, ಬಳ್ಳೇಶ್ವರ ದೇವಸ್ಥಾನ, ರಾಘವಾಂಕ ಸ್ವಾಮಿಗಳ ಮಠ, ಉರವಕೊಂಡ ಮಠ, ಮರಿಸ್ವಾಮಿಗಳ ಮಠ, ಕೊಟ್ಟೂರು ಸ್ವಾಮಿಗಳ ಮಠ, ಮದ್ದಾನಸ್ವಾಮಿಗಳ ಮಠ, ಬ್ರೂಸಪೇಟೆ ಮತ್ತು ಕೌಲ್ ಬಜಾರ್‌ನಲ್ಲಿರುವ ಎರಡು ಮಸೀದಿಗಳು, ಕೆಳಕೋಟೆಯ ಟ್ರಿನಿಟಿ ಚರ್ಚ್–ಇವು ಈ ಊರಿನ ಮುಖ್ಯ ಧಾರ್ಮಿಕ ಸ್ಥಾನಗಳು.

ಶಿವ ಅಥವಾ ಮಲ್ಲೇಶ ತನ್ನ ಭಕ್ತನಿಗೆ ಇಲ್ಲಿ ಬಳ್ಳದಲ್ಲಿ ಕಾಣಿಸಿಕೊಂಡಿದ್ದರಿಂದ ಬಳ್ಳಾರಿ ಎಂಬ ಹೆಸರು ಬಂತೆಂದು ಪ್ರತೀತಿ. ಬಳ್ಳಾರಿಯಲ್ಲಿರುವ ದುರ್ಗಮ್ಮ ದೇವತೆಯನ್ನು ಬಳ್ಳಾರಿ ಎಂದು ಕರೆಯುತ್ತಿದ್ದರಾದ್ದರಿಂದ ಊರಿಗೆ ಅದೇ ಹೆಸರಾಯಿತು ಎಂದೂ ಹೇಳಲಾಗಿದೆ. ಬಳ ಎಂಬ ರಾಕ್ಷಸನನ್ನು ಇಂದ್ರನು ಕೊಂದ ಸ್ಥಳ ಬಳ್ಳಾರಿ ಎಂದಾಯಿತು ಎಂಬುದು ಸ್ಥಳ ಐತಿಹ್ಯ. ಈ ಸ್ಥಳಕ್ಕೆ ಬಳ್ಳಾರಿ ಎಂಬ ಹೆಸರಿದ್ದುದು ಹನ್ನೆರಡನೆಯ ಶತಮಾನದ ಹೊಯ್ಸಳರ ಶಾಸನಗಳಿಂದ ಮತ್ತು ಇತರ ಶಾಸನಗಳಿಂದ ತಿಳಿದುಬರುತ್ತದೆ.

ಬಳ್ಳಾರಿಯಲ್ಲಿರುವ ಎರಡು ಬೃಹತ್ ಶಿಲಾಗುಡ್ಡಗಳು ಇಲ್ಲಿಯ ಭೌಗೋಳಿಕ ಪರಿಸರಕ್ಕೆ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿವೆ. ಇವುಗಳಲ್ಲಿ ಒಂದರ ಮೇಲೆ ಕೋಟೆ ಇದೆ. ಇದರ ಸುತ್ತಳತೆ ಸುಮಾರು ಎರಡೂವರೆ ಕಿಮೀ ಇದ್ದು ಸಮುದ್ರಮಟ್ಟದಿಂದ 602 ಮೀ ಮತ್ತು ನೆಲಮಟ್ಟದಿಂದ 146 ಮೀ ಎತ್ತರವಿದೆ. ಇಲ್ಲಿನ ಕೋಟೆಬೆಟ್ಟ ಕಲ್ಲುಬೆಟ್ಟಗಳೆರಡರಲ್ಲೂ ಇತಿಹಾಸ ಪೂರ್ವಕಾಲದ ಜನರು ಬಳಸಿದ ಉಪಕರಣಗಳ ಪಳೆಯುಳಿಕೆಗಳು ದೊರೆತಿವೆ. ಕೋಟೆಬೆಟ್ಟದಲ್ಲಿ ಮೇಲಿನ ಕೋಟೆ ಮತ್ತು ಕೆಳಗಿನ ಕೋಟೆಗಳಿದ್ದು ಮೇಲಿನ ಕೋಟೆಯಲ್ಲಿ ಬಂಡೆಯ ಮೇಲಿನ ದುರ್ಗವಿದೆ. ಇದರ ಸುತ್ತ ಒಂದರ ಕೆಳಗೆ ಒಂದರಂತೆ ಎರಡು ಕಾಪುಗೋಡೆಗಳುಂಟು. ಕೋಟೆ ದುರ್ಬಲವಾಗಿರುವೆಡೆಗಳಲ್ಲಿ ಮೂರು ಸುತ್ತು ಗೋಡೆಗಳಿದ್ದರೆ ಬಲವಾಗಿರುವ ಕಡೆಗಳಲ್ಲಿ ಒಂದು ಸುತ್ತು ಗೋಡೆ ಇದೆ. ಕೋಟೆಗೆ ಒಂದೇ ಕಡೆ ಮಾರ್ಗವುಂಟು. ತುದಿಯಲ್ಲಿ ದುರ್ಗದ ಹೊರಗಡೆ ಕೆಲವು ಚಿಕ್ಕ ದೇವಾಲಯಗಳೂ ನೀರಿನ ಕೊಳಗಳೂ ಇವೆ. ಆ ಕೊಳಗಳಲ್ಲಿ ಒಂದರ ಆಳ 9ಮೀ. ದುರ್ಗದ ಒಳಗಡೆ ದೃಢವಾದ ಕೆಲವು ಕಟ್ಟಡಗಳಿವೆ. ಕೆಳಕೋಟೆ ಸುಮಾರು ಐದೂವರೆ ಮೀ ಎತ್ತರವಿರುವ ಆಳುವೇರಿಯಿಂದ ಸುತ್ತುವರಿದಿದೆ. ವೃತ್ತಾಕಾರದ ಕಲ್ಲಿನ ಬುರುಜುಗಳು ಮತ್ತು 5 1/2ಮೀ ಆಳ ಹಾಗೂ 9ರಿಂದ 12 ಮೀ ಅಗಲವಿರುವ ಕಂದಕವಿದೆ.

ಹದಿನಾರನೆಯ ಶತಮಾನದಲ್ಲಿ ಹನುಮಪ್ಪನಾಯಕ ಇಲ್ಲಿ ತನ್ನ ಪಾಳೆಯಪಟ್ಟನ್ನು ಸ್ಥಾಪಿಸಿದ್ದ. 1631ರವರೆಗೂ ಇದ್ದ ಈ ಪಾಳೆಯಪಟ್ಟಿಗೆ ಬಳ್ಳಾರಿ ಕೇಂದ್ರ ಸ್ಥಳವಾಗಿತ್ತು. ಈ ಕಾಲದಲ್ಲಿಯೇ ಇಲ್ಲಿಯ ಕೋಟೆ ವ್ಯವಸ್ಥಿತವಾದಂತೆ ತೋರುತ್ತದೆ. ತರುವಾಯ ಈ ಸ್ಥಳ ಮುಸ್ಲಿಮರ ಅಧೀನಕ್ಕೊಳಪಟ್ಟಿತು. ಸು. 1678ರಲ್ಲಿ ಶಿವಾಜಿ ಇಲ್ಲಿಯ ಕೋಟೆಯನ್ನು ಆಕ್ರಮಿಸಿದ. ಇಲ್ಲಿ ಆಗ ಆಳುತ್ತಿದ್ದ ವಿಧವೆ ರಾಣಿಯೊಬ್ಬಳು ಶಿವಾಜಿಗೆ ಕಪ್ಪ ಸಲ್ಲಿಸಲು ಒಪ್ಪಿಕೊಂಡು ರಾಜ್ಯವನ್ನು ಉಳಿಸಿಕೊಂಡಳು. ಮುಂದೆ ಈ ಪ್ರದೇಶ ಔರಂಗಜೇಬನ ಅಧೀನಕ್ಕೊಳಗಾಯಿತು. 1692ರಲ್ಲಿ ಪಾಳೆಯಗಾರರು ಮತ್ತೆ ಈ ಕೋಟೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡರು. 1764ರಲ್ಲಿ ದಖನ್ನಿನ ಸುಬೇದಾರನಾಗಿದ್ದ ಸಲಾಬತ್‌ಜಂಗನ ಸಹೋದರ ಬಸಾಲತ್ ಜಂಗನಿಗೆ ಜಹಗೀರಿಯಾಗಿ ಬಿಟ್ಟಿದ್ದ ಆದವಾನಿ ಸಂಸ್ಥಾನಕ್ಕೆ ಇದು ಅಧೀನ ಸಂಸ್ಥಾನವಾಯಿತು. ಆಗ ಇಲ್ಲಿ ರಾಮಪ್ಪ ಎಂಬುವವನು ಆಳುತ್ತಿದ್ದ. ಈ ಕೋಟೆಯನ್ನು ಹೈದರ್ ಅಲಿ 1775ರಲ್ಲಿ ವಶಪಡಿಸಿಕೊಂಡ. ಹೈದರ್ ಇಲ್ಲಿರುವ ಮೇಲಿನ ಮತ್ತು ಕೆಳ ಕೋಟೆಗಳನ್ನು ಈಗಿರುವಂತೆ ಕಟ್ಟಿಸಿದ. 1792ರವರೆಗೆ ಇದು ಟಿಪ್ಪುಸುಲ್ತಾನನ

ವಶದಲ್ಲಿತ್ತು. ತರುವಾಯ ನಿಜಾಮನಿಗೂ ಅನಂತರ 1800ರಲ್ಲಿ ಈಸ್ಟ್ ಇಂಡಿಯಾ ಕಂಪನಿಗೂ ವರ್ಗಾವಣೆಯಾಯಿತು. ಕರ್ನೂಲಿನ ನವಾಬ ಮುಜಾಫರ್‌ಖಾನನನ್ನು ಇಲ್ಲಿ 1823ರಿಂದ 1864ರವರೆಗೂ ಬಂಧಿಸಿಡಲಾಗಿತ್ತು. ಬ್ರಿಟಿಷರ ಕಾಲದಲ್ಲಿ ಇಲ್ಲಿನ ಕೆಳಕೋಟೆಯಲ್ಲಿ ಅನೇಕ ಕಟ್ಟಡಗಳನ್ನು ಕಟ್ಟಲಾಯಿತು. ಇಂದು ಈ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ಚರ್ಚ್‌ಗಳಿವೆ. ಅವುಗಳಲ್ಲಿ ಟ್ರಿನಿಟಿ ಚರ್ಚ್ 1811ರಲ್ಲಿ ಕಟ್ಟಿದ್ದು. 1801ರಲ್ಲಿ ಬಳ್ಳಾರಿಯಲ್ಲಿ ಸೈನಿಕ ನೆಲೆಯನ್ನು ಸ್ಥಾಪಿಸಲಾಯಿತು. ಬ್ರೂಸ್‌ಪೇಟೆ, ಕೌಲ್ ಬಜಾರ್ ಮತ್ತು ಮೇಲಾರ್ ಪೇಟೆ ಪ್ರದೇಶಗಳು ಬ್ರಿಟಿಷರ ಕಾಲದಲ್ಲಿ ಅಭಿವೃದ್ಧಿಗೊಂಡವು. 1901ರಷ್ಟು ಹಿಂದೆಯೇ ಬಳ್ಳಾರಿಯ ಜನಸಂಖ್ಯೆ 58,247ರಷ್ಟಿತ್ತು. **(ಡಿ.ಎಸ್.ಜೆ.)**

**ಬಳ್ಳಿಗಾವೆ: ನೋಡಿ ಬೆಳಗಾಮಿ**

**ಬಳ್ಳಿಗೇರಿ**: ಬೆಳಗಾಂವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿರುವ ಐತಿಹಾಸಿಕ ಗ್ರಾಮ. ಅಥಣಿಯಿಂದ ಉತ್ತರಕ್ಕೆ 18 ಕಿಮೀ ದೂರದಲ್ಲಿದೆ. ಜನಸಂಖ್ಯೆ 4,593. ಬಳಿಗೇರಿ, ಬಾಳಿಗೇರಿ, ಬಾಳಂಗೇರಿ, ಬಳ್ಳಿಗೇರಿ ಎಂದು ಕರೆಯಲಾಗುವ ಈ ಊರಿನ ಪ್ರಾಚೀನ ನಾಮ ಬಾಳಂಗೇರಿ. ಇದರ ಮೂಲರೂಪ ಬಳ್ಳಂಗೆರೆ ಎಂದಿರಬಹುದು. ಕಲ್ಯಾಣಿ ಚಾಳುಕ್ಯರ ಮಹಾಮಂಡಳೇಶ್ವರರಾದ ಕಳಚುರಿಗಳ ಕರಹಾಡ 4000ದ ಒಂದು ವಿಭಾಗ ಕಣಂಬಡೆ 300. ಇದರಲ್ಲಿಯ ಉಂಬರವಾಣಿ (ಉಮ್ರಾಣಿ) 36 ಕಂಪಣಕ್ಕೆ ಈ ಗ್ರಾಮಸೇರಿತ್ತು. ಗ್ರಾಮದ ಪೂರ್ವದಲ್ಲಿರುವ ಚಿಕ್ಕಬೆಟ್ಟದ ಮೇಲೆ ಪ್ರಾಚೀನ ಕಾಲದ ಎರಡು ದೇವಾಲಯಗಳಿವೆ. ಚಾಳುಕ್ಯ ಶೈಲಿಯ ಈ ದೇವಾಲಯಗಳ ಪಕ್ಕದಲ್ಲಿ ಕೆರೆಯಿದೆ. ವೀರಗಲ್ಲು, ನಾಗಪ್ರತಿಮೆ, ಲಿಂಗಮುದ್ರೆ ಕಲ್ಲು ಹಾಗೂ ಭಗ್ನಶಿಲ್ಪಗಳು ದೇವಸ್ಥಾನದ ಆವರಣದಲ್ಲಿ ಚೆಲ್ಲಾಡಿವೆ.

ಬಸವಣ್ಣನ ದೇವಾಲಯ ಒಂದು ತ್ರಿಕೂಟಾಚಲ. ಮೂರೂ ಗರ್ಭಗೃಹಗಳಲ್ಲಿಯೂ ಈಗ ಶಿವಲಿಂಗಗಳಿವೆ. ಗರ್ಭಗೃಹದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ನವರಂಗದ ಕೆತ್ತನೆಯ ಕಂಬಗಳು, ಭುವನೇಶ್ವರಿ, ಜಾಲಂಧ್ರ, ಕೋಷ್ಠಶಿಲ್ಪಗಳು ಸುಂದರವಾಗಿವೆ. ನಕ್ಷತ್ರಾಕಾರದ ಜಗಲಿಯ ಮೇಲಿರುವ ದೇವಾಲಯದ ಹೊರಭಾಗ ಸಿಂಹಬಿಂಬ ಶಿಲ್ಪದಿಂದ ಭದ್ರವಾಗಿದೆ. ಈ ದೇವಾಲಯ ಮುಖಮಂಟಪದ ಹೊರಗೋಡೆಯ ಒಳಭಾಗದಲ್ಲಿರುವ ಶಾಸನ ತಿಳಿಸುವಂತೆ ಇದು ಲಕ್ಷ್ಮೀನರಸಿಂಹ ದೇವಾಲಯವಿರಬಹುದು. ಕಳಚುರಿ ತ್ರಿಭುವನಮಲ್ಲ ಬಿಜ್ಜಳ 1156ರಲ್ಲಿ ದೇವಾಲಯಕ್ಕೆ ಸಮೀಪದ ಉಮರಾಣಿ ಗ್ರಾಮವನ್ನು ದತ್ತಿಯಾಗಿ ನೀಡಿದ್ದ. ಅಥಣಿ ತಾಲ್ಲೂಕಿನ ತೋಹಳ್ಳಿ ಶಾಸನದಲ್ಲಿಯೂ ಈ ದೇವಸ್ಥಾನದ ಉಲ್ಲೇಖವಿದೆ. ಲಕ್ಷ್ಮೀನರಸಿಂಹನ ಭಿನ್ನವಿಗ್ರಹ ದೇವಸ್ಥಾನದ ಆವರಣದಲ್ಲಿದೆ.

ಬಸವಣ್ಣಗುಡಿಯ ಎದುರು ದಕ್ಷಿಣಾಭಿಮುಖಿಯಾದ ಇನ್ನೊಂದು ಭಗ್ನ ತ್ರಿಕೂಟ ದೇವಾಲಯವಿದೆ. ಸ್ಥಳೀಯರು ಇದನ್ನು ವಿರೂಪಾಕ್ಷ ದೇವಾಲಯವೆಂದು ಕರೆಯುವರು. ಹಿಂದೊಮ್ಮೆ ಜೀರ್ಣೋದ್ಧಾರಗೊಂಡು ಈಗ ಸಂಪೂರ್ಣ ಶಿಥಿಲವಾಗಿದೆ. ಮುಖ್ಯಗರ್ಭಗೃಹದಲ್ಲಿ ಭಗ್ನ ವಿಗ್ರಹಗಳ ಸಣ್ಣರಾಶಿ ಇದೆ. ಕೆತ್ತನೆಯ ಕಂಬಗಳಿಂದ ಕೂಡಿರುವ ನವರಂಗ ಚಾಳುಕ್ಯ ಶೈಲಿಯದ್ದಾಗಿದೆ. ಪ್ರಾಯಶಃ ಇದು ಇಲ್ಲಿಯ ಅತ್ಯಂತ ಪ್ರಾಚೀನ ದೇವಾಲಯವಿರಬೇಕು.

ಗ್ರಾಮದ ಮಧ್ಯದಲ್ಲಿರುವ ರಾಮಲಿಂಗೇಶ್ವರ ದೇವಾಲಯವೂ ಸಂಪೂರ್ಣ ಹಾಳಾಗಿದೆ ಗರ್ಭಗೃಹದಲ್ಲಿ ಒಂದು ಮೀಟರ್‌ಗಿಂತಲೂ ಎತ್ತರವಾಗಿರುವ ಶಿವಲಿಂಗವಿದೆ. ಗರ್ಭಗೃಹದ ಲಲಾಟದಲ್ಲಿ ಜಿನಬಿಂಬವಿದೆ. ಬಸವಣ್ಣದೇವರ ದೇವಾಲಯದ ಹೊರಗೋಡೆಯಲ್ಲಿರುವ ಮತ್ತೊಂದು ಶಾಸನ ಬಿಜ್ಜಳನ ತಮ್ಮ ಮೈಲುಗಿಯ ಮಂತ್ರಿ ಕಾಳಿದಾಸ ಚಮೂಪ ಇಲ್ಲಿ ಪಾರ್ಶ್ವನಾಥ ಜಿನಾಲಯ ನಿರ್ಮಿಸಿದ ವಿಷಯ ತಿಳಿಸುತ್ತದೆ. ಇಂದಿನ ರಾಮಲಿಂಗೇಶ್ವರ ದೇವಾಲಯವೇ ಅಂದಿನ ಜಿನಾಲಯವಾಗಿರಬಹುದು. ಅಪ್ಪಣ್ಣಾ ತಳವಾರ ಹಾಗೂ ಸಾತಯ್ಯಾ ಹಿರೇಮಠ ಎಂಬಿಬ್ಬರು ಲಾವಣಿಕವಿಗಳು ಈ ಊರಿನಲ್ಲಿದ್ದರು. ಇಲ್ಲಿ ಎಲೆ ಬಳ್ಳಿ ತೋಟಗಳು ವಿಪುಲವಾಗಿದ್ದವು. **(ವಿ.ಎಸ್.ಎಂ.)**

**ಬಾಗಲಕೋಟೆ**: ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಜಿಲ್ಲೆಯ ಆಡಳಿತ ಕೇಂದ್ರ ಪಟ್ಟಣ. ರಾಜ್ಯದ ಉತ್ತರ ಭಾಗದಲ್ಲಿರುವ ಈ ಜಿಲ್ಲೆಯನ್ನು ಪೂರ್ವದಲ್ಲಿ ರಾಯಚೂರು, ವಾಯವ್ಯ ಮತ್ತು ಪಶ್ಚಿಮದಲ್ಲಿ ಬೆಳಗಾಂವಿ, ಉತ್ತರದಲ್ಲಿ ಬಿಜಾಪುರ, ದಕ್ಷಿಣದಲ್ಲಿ ಗದಗ ಮತ್ತು ಕೊಪ್ಪಳ ಜಿಲ್ಲೆಗಳು ಸುತ್ತುವರೆದಿವೆ. ಸಮುದ್ರಮಟ್ಟದಿಂದ 450 ಮೀ ನಿಂದ 800 ಮೀ ಎತ್ತರದಲ್ಲಿರುವ ಈ ಜಿಲ್ಲೆ 6 ತಾಲ್ಲೂಕು, 18 ಹೋಬಳಿಗಳು, 608 ಗ್ರಾಮಗಳಿಂದ ಕೂಡಿದೆ. ಜಿಲ್ಲಾ ವಿಸ್ತೀರ್ಣ 6,594. ಚ.ಕಿಮೀ.

ಬಾಗಲಕೋಟೆ ಹಿಂದೆ ಒಂದು ತಾಲ್ಲೂಕಾಗಿದ್ದು ಬಿಜಾಪುರ ಜಿಲ್ಲೆಯ ಒಂದು ಭಾಗವಾಗಿತ್ತು. ಭಾರತ ಸ್ವಾತಂತ್ರ್ಯೋತ್ಸವ ಸುವರ್ಣ ಮಹೋತ್ಸವ ದಿನವಾದ 1997 ಆಗಸ್ಟ್ 15 ರಂದು ಕೆಲವು ಹೊಸ ಜಿಲ್ಲೆಗಳನ್ನು ರಚಿಸಲಾಯಿತು. ಅದರಂತೆ ಬಾಗಲಕೋಟೆ, ಬಾದಾಮಿ, ಬೀಳಗಿ, ಹುನಗುಂದ, ಜಮಖಂಡಿ ಮತ್ತು ಮುಧೋಳ ತಾಲ್ಲೂಕುಗಳನ್ನು ಸೇರಿಸಿ ಬಾಗಲಕೋಟೆ ಜಿಲ್ಲೆ ಅಸ್ತಿತ್ವಕ್ಕೆ ಬಂದಿತು. ಜಿಲ್ಲೆಯ ಒಟ್ಟು ಜನಸಂಖ್ಯೆ 16,51,892. ಜನಸಾಂದ್ರತೆ ಚ.ಕಿಮೀಗೆ 251.

**ಭೂವಿವರಣೆ** : ಈ ಜಿಲ್ಲೆ ಒಣಹವೆಯ ಬಯಲು ಸೀಮೆ. ಹೆಚ್ಚು ಭೂಪ್ರದೇಶ ಕರಿಎರೆಮಣ್ಣಿನಿಂದ ಕೂಡಿದ್ದು ಉಳಿದ ಕಡೆ ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ಇಲ್ಲಿ ಪ್ರಾಕೃತಿಕ ಸಂಪತ್ತು ಸಮೃದ್ಧವಾಗಿದೆ, ಇಲ್ಲಿ ದೊರೆಯುವ ಅಪೂರ್ವ ಶಿಲೆಗಳಿಂದಾಗಿ ಗಣಿಗಾರಿಕೆ ಇಲ್ಲಿನ ಪ್ರಮುಖ ಉದ್ಯಮಗಳಲ್ಲೊಂದಾಗಿದೆ.

ಆದಿಜೀವಿಕಲ್ಪದ ಶಿಲಾಸಮುದಾಯಗಳು ಬೆಳಗಾಂವಿ ಸಮೀಪದಿಂದ ಗುಲ್ಬರ್ಗ ಜಿಲ್ಲೆಯ ಚಿಂಚೋಳಿಯವರೆಗೂ ಕಿರಿದಾದ ಪ್ರದೇಶದಲ್ಲಿ ಹೊರಹೊಮ್ಮಿವೆ. ಈ ಜಿಲ್ಲೆಯ ಕಲಾದಗಿ ಅಕ್ಕಪಕ್ಕಗಳಲ್ಲಿ ರೂಪುಗೊಂಡಿರುವುದರಿಂದ ಇದನ್ನು ಕಲಾದಗಿ ಶಿಲಾಸ್ತೋಮವೆಂದು ಕರೆಯುತ್ತಾರೆ. ಈ ಶಿಲಾಸ್ತೋಮ ಪೆಂಟ್‌ಕಲ್ಲು, ಮರಳುಶಿಲೆ, ಸುಣ್ಣಶಿಲೆ ಇತ್ಯಾದಿಗಳಿಂದ ರಚಿತವಾದ ಜಲಜಶಿಲೆಯಾಗಿದೆ. ಈ ಶಿಲಾಸ್ತೋಮಕ್ಕೆ ಸಂಬಂಧಿಸಿದ ಮೂರು ಬೆಟ್ಟಸಾಲುಗಳನ್ನು ಜಿಲ್ಲೆಯಲ್ಲಿ ಕಾಣಬಹುದು. ಕಲಾದಗಿಯ ಆಗ್ನೇಯಕ್ಕೆ ತುಳಸಿಗೇರಿಯ ಬಳಿ ಬೆಟ್ಟ 620 ಮೀ ಎತ್ತರವಿದ್ದು ಮುಚಕಂಡಿ ಹಾಗೂ ಶಿರೂರಿನ ಬಳಿ ಇರುವ ಬೆಟ್ಟಗಳು ಅನುಕ್ರಮವಾಗಿ 630 ಮೀ ಮತ್ತು 591 ಮೀ ಎತ್ತರವಾಗಿವೆ. ಕಲಾದಗಿಯ ಈಶಾನ್ಯಕ್ಕೆ ಕೆಲವು ಗುಡ್ಡಗಳು ಎರಡು ಕವಲುಗಳಾಗಿ ತಾಲ್ಲೂಕಿನ ಉದ್ದಕ್ಕೂ ಹಬ್ಬಿವೆ. ಮೊದಲನೆಯ ಕವಲಿನಲ್ಲಿ ಇರುವ ಬೆನಕಟ್ಟಿ ಬೆಟ್ಟದ ಎತ್ತರ 58 ಮೀ. ಎರಡನೆಯ ಕವಲಿನಲ್ಲಿ ಘಟಪ್ರಭಾ ನದಿಯ ಸನಗೊಂದಿಯ ಸಮೀಪ 622 ಮೀ ಎತ್ತರದ ಹಾಗೂ ರಾಮಪುರದ ಬಳಿ 613ಮೀ ಎತ್ತರದ ಬೆಟ್ಟಗಳಿವೆ. ಹಿಂದೆ ಕಲಾದಗಿ ಶಿಲೆಗಳಿಗೆ ಪುರಾಣ ಎಂಬ ಹೆಸರಿದ್ದು ಈಗ ಅದು ಬಳಕೆಯಲಿಲ್ಲ. ಕಲಾದಗಿ ಶಿಲಾಸಮುದಾಯ



ಆರ್ಷೇಯ ನೈಸ್ ಶಿಲೆಗಳು ಮತ್ತು ಧಾರವಾಡ ಪದರುಶಿಲೆಗಳ ಮೇಲೆ ಹೊಂದಿಕೆಯಿಲ್ಲದೆ ಹರಡಿರುವ ಕಬ್ಬಿಣ ಮಿಶ್ರಿತ ಪಳೆಯುಳಿಕೆಗಳಿಲ್ಲದ ಗುಂಪು. ಇದರ ಮೇಲೆ ಪಶ್ಚಿಮ ಮತ್ತು ಉತ್ತರದಲ್ಲಿ ದಖನ್ ಪದರಕಲ್ಲುಗಳು ಮುಚ್ಚಿಕೊಂಡಿವೆ. ಕಲಾದಗಿ ಶಿಲಾಸ್ತೋಮಗಳ ಈಶಾನ್ಯಕ್ಕೆ ಕೆಲವು ಪ್ರದೇಶಗಳಲ್ಲಿ ಭೀಮ ಶಿಲಾಸ್ತೋಮಗಳೆಂಬ ಮತ್ತೊಂದು ಕಿರಿಯ ಶಿಲಾಸಮುದಾಯ ಕಂಡು ಬರುತ್ತದೆ. ಇವುಗಳನ್ನು ಆದಿಜೀವಿಕಲ್ಪದ ಕೊನೆಯ ಹಂತದಲ್ಲಿ ರೂಪುಗೊಂಡ ಪುರಾತನ ಶಿಲೆಗಳೆಂದು ಪರಿಗಣಿಸ ಲಾಗಿದೆ. ಕಲಾದಗಿ ವರ್ಗದ ಜಲಜಶಿಲೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ:

1. <u>ಬಾದಾಮಿ ವರ್ಗ :</u>
   - (ಅ) ಕಟಗೇರಿ ರಚನೆ–ಅರ್ಜಿಲ್ಲೈಟುಗಳು ಮತ್ತು ಡೋಲೋ ಮೈಟುಗಳು
   - (ಆ) ರಾಮದುರ್ಗ ರಚನೆ– ಗುಂಡು ಶಿಲೆಗಳು ಮತ್ತು ಕ್ವಾರ್ಟ್ಸ್ ಅರೆನೈಟುಗಳು
   - (ಇ) ಮುಧೋಳ ರಚನೆ– ಕ್ವಾರ್ಟ್ಸ್ ಅರೆನೈಟುಗಳು, ಡೋಲೊ ಮೈಟುಗಳು ಮತ್ತು ಅರ್ಜಿಲ್ಲೈಟುಗಳು
2. <u>ಕಲಾದಗಿ ವರ್ಗ :</u>
   - (ಅ) ಲೋಕಾಪುರ ರಚನೆ– ಡೋಲೋಮೈಟುಗಳು ಮತ್ತು ಸುಣ್ಣಕಲ್ಲುಗಳು
   - (ಆ) ಬಾಗಲಕೋಟೆ ರಚನೆ– ಗುಂಡುಶಿಲೆ, ಬೆಣಚುಕಲ್ಲುಗಳು ಮತ್ತು ಬ್ರೆಷಿಯಾ

ಬಾದಾಮಿವರ್ಗವು ನೈಸ್‌ಶಿಲೆಗಳ ಮತ್ತು ಕಲಾದಗಿ ವರ್ಗದ ಮೇಲೆ ಹೊಂದಿಕೊಳ್ಳದೆ ಪ್ರತ್ಯೇಕವಾಗಿದೆ. ಬೆಣಚುಶಿಲೆ ಕೆಂಪು ಬಣ್ಣದ್ದಾಗಿದ್ದು ಅವುಗಳ ಮಟ್ಟಸ ಸ್ಥಿತಿಯನ್ನು ಬಹುಮಟ್ಟಿಗೆ ಉಳಿಸಿಕೊಂಡಿದೆ. ಪ್ರಪಂಚ ಪ್ರಸಿದ್ಧ ಬಾದಾಮಿ ಮತ್ತು ಐಹೊಳೆ ಗುಹಾಲಯಗಳನ್ನು ಈ ಕೆಂಪು ಮರಳುಕಲ್ಲು ಬೆಟ್ಟಗಳಲ್ಲಿ ಕೊರೆಯಲಾಗಿದೆ. ಕಲಾದಗಿ ವರ್ಗದಲ್ಲಿ ಸುಣ್ಣಕಲ್ಲಿನ ಸಂಗ್ರಹ ಬಹು ಹೆಚ್ಚಾಗಿರುವುದರಿಂದ ಇದು ಆರ್ಥಿಕವಾಗಿ ಉಪಯುಕ್ತವಾಗಿದೆ. ಆದ್ದರಿಂದ ಈ ಪ್ರದೇಶದಲ್ಲಿ ಸುಣ್ಣ ಮತ್ತು ಸುಣ್ಣ ಆಧಾರಿತ ಕೈಗಾರಿಕೆಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ.

**ಖನಿಜಸಂಪತ್ತು** : ಈ ಜಿಲ್ಲೆಯಲ್ಲಿ ಲಭ್ಯವಿರುವ ಖನಿಜಸಂಪತ್ತಿನಲ್ಲಿ ಮುಖ್ಯವಾದವು ಸುಣ್ಣಕಲ್ಲು, ಕಬ್ಬಿಣದ ಅದಿರು, ಸಿಲಿಕ ಹಾಗೂ ಕಲ್ನಾರು ಸುಣ್ಣಶಿಲೆ ನಿಕ್ಷೇಪಗಳು. ಇವು ಕಲಾದಗಿ ಪ್ರದೇಶ, ಬಾಗಲಕೋಟೆ, ಹಾವೇರಿ ಬಳಿ ಇರುವ ಹದ್ದನಕೇರಿ ಪ್ರದೇಶ ಹಾಗೂ ಮುಧೋಳ ತಾಲ್ಲೂಕಿನ ಚೌದರಿಮಾನ್ಯ ಮತ್ತು ಲೋಕಾಪುರ ಪ್ರದೇಶ ಗಳಲ್ಲಿ ಪ್ರಮುಖವಾಗಿ ಕಾಣಬರುತ್ತವೆ. ಕಬ್ಬಿಣದ ಅದಿರು ಸಿಗುವ ಪ್ರಮುಖ ಸ್ಥಳಗಳು ಹುನಗುಂದ ತಾಲ್ಲೂಕಿನ ರಾಮಥಾಳ, ಬಾಗಲಕೋಟೆ ಬಳಿ ಹಾಗೂ ಬಾದಾಮಿ ತಾಲ್ಲೂಕಿನ ಮಹಾಕೂಟಪ್ರದೇಶ. ಬಾದಾಮಿ ತಾಲ್ಲೂಕಿನ ಗುಳೇದ ಗುಡ್ಡಕ್ಕೆ ಸು. 8ಕಿಮೀ ದಕ್ಷಿಣದಲ್ಲಿರುವ ಪಾರ್ವತಿ ಗುಡ್ಡ ಮತ್ತು ಮರಡಿಗುಡ್ಡಗಳ ಪ್ರದೇಶದಲ್ಲಿ ಸಿಲಿಕಾ ನಿಕ್ಷೇಪಗಳಿವೆ. ಬಾಗಲಕೋಟೆ ತಾಲ್ಲೂಕಿನ ಯಲ್ಲನಹಟ್ಟಿ ಗ್ರಾಮದ ಸಮೀಪ ಕಲ್ನಾರಿನ ಶಿಲಾನಿಕ್ಷೇಪಗಳಿವೆ. ಗಣಿಗಾರಿಕೆ ಪ್ರಮುಖ ಉದ್ಯಮವಾಗಿ ಬೆಳೆಯುತ್ತಿದೆ.

**ಜಲಸಂಪತ್ತು** : ಈ ಜಿಲ್ಲೆ ಸಮೃದ್ಧ ಜನಸಂಪತ್ತನ್ನು ಹೊಂದಿದೆ. ಇಲ್ಲಿ ಹರಿಯುವ ಕೃಷ್ಣಾ, ಘಟಪ್ರಭಾ ಮತ್ತು ಮಲ್ಲಪ್ರಭಾ ಪ್ರಮುಖ ನದಿಗಳು. ಈ ನದಿಗಳು ಫಲವತ್ತಾದ ತೀರಪ್ರದೇಶವನ್ನು ಹೊಂದಿದ್ದು ಕೃಷಿ ಹಾಗೂ ವಾಣಿಜ್ಯ ಬೆಳೆಗಳ ಚಟುವಟಿಕೆಗೆ ಉತ್ತೇಜನ ಕಾರಿಯಾಗಿವೆ.

ಕೃಷ್ಣಾ ನದಿ ಕರ್ನಾಟಕದ ಪ್ರಮುಖ ನದಿ. ಸ್ಥಳೀಯವಾಗಿ ಇದಕ್ಕೆ ಹಿರೇಹೊಳೆ ಎನ್ನುತ್ತಾರೆ. ಶಾಸನಗಳಲ್ಲಿ ಇದಕ್ಕೆ ಪೆರ್ದೊರೆ, ಸಂಸ್ಕೃತದಲ್ಲಿ ಕೃಷ್ಣವೇಣಿ ಅಥವಾ ಕೃಷ್ಣವೆಣ್ಣಾ ಎಂದು ಹೆಸರುಂಟು. ಸಹ್ಯಾದ್ರಿ ಶ್ರೇಣಿಯಲ್ಲಿರುವ ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಮಹಾಬಲೇಶ್ವರದಲ್ಲಿ ಉಗಮವಾಗುವ ಈ ನದಿ ಜಮಖಂಡಿ ತಾಲ್ಲೂಕಿನ ಮುತ್ತೂರು ಬಳಿ ಬಾಗಲಕೋಟೆ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಜಮಖಂಡಿ ಹಾಗೂ ಬೀಳಗಿ ತಾಲ್ಲೂಕುಗಳಲ್ಲಿ ಹರಿದು ಅನಂತರ ಬಿಜಾಪುರ ಜಿಲ್ಲೆಯ ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲ್ಲೂಕುಗಳು ಹಾಗೂ ಬಾಗಲ ಕೋಟೆ ಜಿಲ್ಲೆಯ ಬೀಳಗಿ, ಬಾಗಲಕೋಟೆ ಮತ್ತು ಹುನಗುಂದ ತಾಲ್ಲೂಕು ಗಳ ನಡುವಿನ ಗಡಿರೇಖೆಯಾಗಿ ಹರಿದು ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ನದಿ ಪ್ರವಹಿಸುವ ಪ್ರದೇಶದಲ್ಲಿ ವಿಶಾಲವಾದ ಎರೆ ಮಣ್ಣಿನ ಹರವಿದೆ. ಕೃಷ್ಣಾನದಿಗೆ ಮುಂಗಾರು ಮಳೆಯೇ ಪ್ರಧಾನ ನೀರಿನ ಆಸರೆಯಾಗಿದ್ದು ಜೂನ್‌ನಿಂದ ಡಿಸೆಂಬರ್‌ವರೆಗೆ ನದಿ ಪ್ರವಾಹ ಅಧಿಕ ವಾಗಿರುತ್ತದೆ. ಆದರೆ ಬೇಸಗೆಯಲ್ಲಿ ನೀರು ತಳಮಟ್ಟಕ್ಕೆ ಇಳಿಯುತ್ತದೆ.

ಕೃಷ್ಣಾ ನದಿಯ ಪ್ರಮುಖ ಉಪನದಿಯಾದ ಘಟಪ್ರಭಾ ಬೆಳಗಾಂವಿ ನಗರದಿಂದ 40 ಕಿಮೀ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿಯ ಅಂಚಿನಲ್ಲಿರುವ ರಾಮಘಟ್ಟದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುತ್ತವೆ. ಮುಧೋಳ ನಗರಕ್ಕೆ ಪಶ್ಚಿಮದಲ್ಲಿ 13 ಕಿಮೀ ದೂರದಲ್ಲಿ ಬಾಗಲ ಕೋಟೆ ಜಿಲ್ಲೆಯನ್ನು ಪ್ರವೇಶಿಸಿ ಮುಧೋಳ ಮತ್ತು ಬಾಗಲಕೋಟೆ ತಾಲ್ಲೂಕುಗಳ ಮೂಲಕ ಹರಿದು ಬಿಜಾಪುರ ಜಿಲ್ಲೆಯ ಗಿರಿಸಾಗರ ಎಂಬಲ್ಲಿ ಕೃಷ್ಣಾ ನದಿಯನ್ನು ಸೇರುತ್ತದೆ. ಈ ನದಿಗೆ ಮಲೆನಾಡಿನ ವಿಶಾಲ ಜಲಾನಯನ ಪ್ರದೇಶವಿದ್ದು ಸಮೃದ್ಧ ಜಲ ಸಂಪನ್ಮೂಲವಿದೆ. ಬೇಸಗೆಯಲ್ಲಿ ನೀರು ಕಡಿಮೆಯಾಗುವುದುಂಟು. ಜಿಲ್ಲೆಯ ಬಾಗಲಕೋಟೆ ಮುಧೋಳ ಹಾಗೂ ಚಿಮ್ಮಲಗಿ ಇದರ ದಡದ ಮೇಲಿನ ಊರುಗಳು. ಮಲಪ್ರಭಾ ನದಿ ಕೃಷ್ಣಾನದಿಯ ಮತ್ತೊಂದು ಪ್ರಮುಖ ಉಪನದಿ. ಬೆಳಗಾಂವಿ ಜಿಲ್ಲೆಯ ಕಣಕುಂಬಿ ಬಳಿ ಸಹ್ಯಾದ್ರಿ ಶಿಖರದಲ್ಲಿ ಉಗಮಿಸಿ ಬಾದಾಮಿ ಹಾಗೂ ಹುನಗುಂದ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಮುಂದೆ ಕೂಡಲಸಂಗಮದ ಬಳಿ ಕೃಷ್ಣಾ ನದಿಯನ್ನು ಸೇರುತ್ತದೆ. ಭೂವೈಜ್ಞಾನಿಕ ವಾಗಿ ನೋಡಿದರೆ ಈ ನದಿ ಉತ್ತರದ ಕಲಾದಗಿ ಮತ್ತು ದಖನ್ ಪ್ರಸ್ಥಭೂಮಿಯ ಎಲ್ಲೆಯಾಗಿ ಹರಿಯುತ್ತದೆ. ಇದರಲ್ಲಿ ಮಳೆಗಾಲದಲ್ಲಿ ಭಾರಿ ಪ್ರವಾಹವಿದ್ದು ಬೇಸಗೆಯಲ್ಲಿ ಸಣ್ಣದಾಗಿ ಹರಿಯುತ್ತದೆ. ಈ ನದಿಯ ದಂಡೆಯ ಮೇಲಿರುವ ನಂದಿಕೇಶ್ವರ, ಪಟ್ಟದಕಲ್ಲು, ಐಹೊಳೆಗಳು ಚಾಳುಕ್ಯ ವಾಸ್ತುಶಿಲ್ಪಕ್ಕೆ ಪ್ರಸಿದ್ಧಿಯಾಗಿವೆ. ಈ ನದಿ ಕೃಷ್ಣಾ ನದಿಯನ್ನು ಸೇರುವ ಕೂಡಲಸಂಗಮ ಪ್ರಸಿದ್ಧ ಯಾತ್ರಾಸ್ಥಳ.

ಜಿಲ್ಲೆಯಲ್ಲಿ ಸಾಮಾನ್ಯವಾಗಿ ಒಣಹವೆ ಇದ್ದು ಆರೋಗ್ಯಕರವಾಗಿದೆ. ಜಿಲ್ಲೆಯಲ್ಲಿ ಅರಣ್ಯಪ್ರದೇಶ ಹೆಚ್ಚಾಗಿದ್ದರೂ ಹೆಚ್ಚು ಮಳೆ ಬೀಳದ ಕಾರಣ ಇಲ್ಲಿನ ಅರಣ್ಯಗಳು ದಟ್ಟವಾಗಿಲ್ಲ. ಜಿಲ್ಲೆಯ ಅರಣ್ಯಪ್ರದೇಶವನ್ನು ಉಷ್ಣವಲಯದ ಒಣ ಮುಳ್ಳುಗಂಟಿಗಳ ವಿಭಾಗಕ್ಕೆ ಸೇರಿಸಬಹುದು. ಬೆಟ್ಟಗುಡ್ಡಗಳ ಮತ್ತು ನದಿತೀರದ ಕಾಡುಗಳಲ್ಲಿ ಕಕ್ಕೆ, ದಿಂಡಲು, ಗಂಧ ಮುಂತಾದ ಮರಗಳಿವೆ. ಮೈದಾನ ಪ್ರದೇಶದ ಕಾಡುಗಳಲ್ಲಿ ಹೆಚ್ಚಾಗಿ ಜಾಲಿಮರಗಳನ್ನು ಕಾಣಬಹುದು. ಜೊತೆಗೆ ಬೇವು, ಹುಣಿಸೆ, ನೇರಳೆ, ಆಲ ಮುಂತಾದ ಮರಗಳು ಅಲ್ಲಲ್ಲಿವೆ. ಜಮಖಂಡಿ, ಬಾದಾಮಿ, ಮುಧೋಳ ಮತ್ತು ಬೀಳಗಿ ತಾಲ್ಲೂಕುಗಳಲ್ಲಿ ಅರಣ್ಯಪ್ರದೇಶವನ್ನು ಕಾಣಬಹುದು.

**ಕೈಗಾರಿಕೆ**: ಜಿಲ್ಲೆಯಲ್ಲಿ ಪೂರ್ವಕಾಲದಿಂದಲೂ ಸಣ್ಣ ಕೈಗಾರಿಕೆಗಳಾದ ಹತ್ತಿಬಟ್ಟೆ ತಯಾರಿಕೆ, ಕೈಕಾಗದ ಉದ್ಯಮ, ನದಿಯ ಸೌಳು ನೀರಿನಿಂದ

ಕಲ್ಲುಪ್ಪು ತಯಾರಿಕೆ, ಗಾಣದ ಮೂಲಕ ವಿವಿಧ ಎಣ್ಣೆ ಉತ್ಪಾದನೆ, ಕುಂಬಾರಿಕೆ, ವ್ಯವಸಾಯ ಉಪಕರಣಗಳ ತಯಾರಿಕೆ–ಇವುಗಳು ಚಾಲ್ತಿಯಲ್ಲಿದ್ದವು. ಹಿಂದೆ ಬಾದಾಮಿಯಂತಹ ಮಹಾನಗರದಲ್ಲಿ ಎಣ್ಣೆ, ಅರಿಶಿನ, ಸಕ್ಕರೆ ಮೊದಲಾದ ವಸ್ತುಗಳ ಮಾರಾಟದ ಅಂಗಡಿಗಳಿದ್ದವೆಂದು ವಿದ್ವಾಂಸರಾದ ಎಸ್.ವಿ. ಪಾಡಿಗಾರ್ ಅಭಿಪ್ರಾಯಪಟ್ಟಿದ್ದಾರೆ. ವ್ಯಾಪಾರಸ್ಥರು ತಮ್ಮತಮ್ಮ ಹಿತರಕ್ಷಣೆಗಾಗಿ ವಾಣಿಜ್ಯ ಸಂಘ ಸಂಸ್ಥೆಗಳನ್ನು ರೂಪಿಸಿಕೊಂಡಿದ್ದರು. ತರುವಾಯ ಐಯ್ಯಾಹೊಳೆ ಐನೂರ್ವರು ಎಂಬ ದಕ್ಷಿಣ ಭಾರತದ ಪ್ರತಿಷ್ಠಿತ ವರ್ತಕರ ಸಂಸ್ಥೆಯೂ ಐಹೊಳೆಯಲ್ಲಿತ್ತು. ಕಾರಣಾಂತರದಿಂದ ಈ ಸಣ್ಣ ಕೈಗಾರಿಕೆಗಳು ದುರ್ಬಲಗೊಂಡವು. 8–11ನೆಯ ಶತಮಾನದವರೆಗೆ ವ್ಯಾಪಾರ ಶ್ರೇಣಿಗಳು ಸಹಕಾರಿ ಸಂಘಗಳಾಗಿ ರೂಪುಗೊಂಡವು. ನೇಕಾರರು, ಗಾಣಿಗರು, ಲೋಹಕಾರರು ಮುಂತಾದ ಕಸಬುದಾರರು ಹಾಗೂ ಕುಶಲಕರ್ಮಿಗಳು ತಮ್ಮದೇ ಬೇರೆ ಬೇರೆ ಸಂಘಗಳನ್ನು ರಚಿಸಿಕೊಂಡಿದ್ದರು.

ಬಾದಾಮಿ ಚಳುಕ್ಯರ ಕಾಲದಲ್ಲಿ ವಿವಿಧ ವೃತ್ತಿಗಳಿದ್ದವು. ರೇಷ್ಮೆ ನೇಯ್ಗೆ ಉದ್ಯಮ, ಕಂಚಿನ ಪಾತ್ರೆ, ವಾದ್ಯಗಳು, ಗಂಟೆಗಳು, ಕಹಳೆ, ದೀಪಗಳು, ಪ್ರತಿಮೆಗಳು ತಯಾರಾಗುತ್ತಿದ್ದವು. ಮಹಾಕೂಟ, ಬಾದಾಮಿ, ಐಹೊಳೆ ಪಟ್ಟದಕಲ್ಲುಗಳ ಶಿಲ್ಪಗಳು ಪ್ರಪಂಚಪ್ರಸಿದ್ಧವಾದವು. ಅನಂತರ ರಾಷ್ಟ್ರಕೂಟರು ಹಾಗೂ ಕಲ್ಯಾಣಿ ಚಾಳುಕ್ಯರ ಕಾಲದಲ್ಲೂ ಈ ಉದ್ಯಮಗಳಿಗೆ ಪ್ರೋತ್ಸಾಹ ಮುಂದುವರೆಯಿತು.

ಆದಿಲ್‌ಷಾಹೀಯ ಕಾಲದಲ್ಲಿ ಬಾಗಲಕೋಟೆಯಲ್ಲಿ ಕೈಗಾರಿಕೆ ಪ್ರಮುಖ ಉದ್ಯಮವಾಗಿತ್ತು. ಬಾದಾಮಿಯ ಬಳಿ ಕಬ್ಬಿಣ ತಯಾರಿಸುವ ಕಾರ್ಖಾನೆಯಿತ್ತು. 1895ರಲ್ಲಿ ಹುನಗುಂದದಲ್ಲಿ ಹತ್ತಿ ಜಿನ್ನಿಂಗ್ ಕಾರ್ಖಾನೆ ಪ್ರಾರಂಭವಾಯಿತು. 1908ರಲ್ಲಿ ಬಾಗಲಕೋಟೆಯಲ್ಲಿ ಸೃಷ್ಟಿ ಸರ್ವೋತ್ತೇಜಕ ಮಂಡಲ ಎಂಬ ಸಂಸ್ಥೆಯನ್ನು ಜಯರಾಮ ನರಗುಂದ, ಗೋವಿಂದ ಭಟ್ಟ ಮುಂತಾದವರು ಸ್ಥಾಪಿಸಿ ರೋಣ ತಾಲ್ಲೂಕಿನ ಮೆಣಸಗಿಯಲ್ಲಿ ದೇಶೀಯ ಸಕ್ಕರೆ ಕಾರ್ಖಾನೆ ಪ್ರಾರಂಭಿಸಿದರು. ಆದರೆ ಸಂಸ್ಥೆ ಹೆಚ್ಚು ಕಾಲ ಮುಂದುವರೆಯಲಿಲ್ಲ.

ಜಿಲ್ಲೆಯ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳಲ್ಲಿ ಸಿಮೆಂಟ್ ಉದ್ಯಮ ಪ್ರಮುಖವಾದದ್ದು. ಸಿಮೆಂಟ್ ತಯಾರಿಕೆಗೆ ಬೇಕಾದ ಅತ್ಯುತ್ತಮ ದರ್ಜೆಯ ಸುಣ್ಣದಕಲ್ಲು ಬಾದಾಮಿ, ಬಾಗಲಕೋಟೆ ಹಾಗೂ ಮುಧೋಳ ತಾಲ್ಲೂಕುಗಳಲ್ಲಿ ದೊರೆಯುತ್ತದೆ. ಕನೋರಿಯ ಇಂಡಸ್ಟ್ರೀಸ್ (ಹಿಂದೆ ಇದಕ್ಕೆ ಬಾಗಲಕೋಟೆ ಉದ್ಯಮ ಲಿ. ಎಂದು ಹೆಸರಿತ್ತು), ಮುಧೋಳ ತಾಲ್ಲೂಕಿನ ನಾಗನಹಳ್ಳಿಯಲ್ಲಿನ ಕಾಲ್ಸಿಟಿ ಸಿಮೆಂಟ್, ಬಾಗಲಕೋಟೆ ತಾಲ್ಲೂಕಿನ ಕವಾದಗಿ ಹಳ್ಳಿಯಲ್ಲಿನ ಕಾಟವಾ ಜಿಲ್ಲೆಯ ಉದ್ಯೋಗ ಲಿಮಿಟೆಡ್ ಹಾಗೂ ಲೋಕಾಪುರ ಸಿಮೆಂಟ್ಸ್ ಲಿಮಿಟೆಡ್–ಇವು ಪ್ರಮುಖ ಸಿಮೆಂಟ್ ತಯಾರಿಕಾ ಉದ್ಯಮಗಳು. ಬಾದಾಮಿ ತಾಲ್ಲೂಕಿನ ಕೆರಕಲ್ ಮಟ್ಟಿ, ಬಾಗಲಕೋಟೆ ತಾಲ್ಲೂಕಿನ ನೀರಲ್‌ಕೇರಿ ಹಾಗೂ ಮುಧೋಳ ತಾಲ್ಲೂಕಿನ ಮಂಬಗುಡ್ಡ, ಲೋಕಾಪುರ ಗ್ರಾಮಗಳಲ್ಲಿ ಸಿಮೆಂಟ್ ಕಾರ್ಖಾನೆಗಳನ್ನು ಪ್ರಾರಂಭಿಸುವ ಸೂಚನೆಯಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಪ್ರಮುಖ ತಾಲ್ಲೂಕುಗಳೆಂದರೆ ಜಮಖಂಡಿ ಮತ್ತು ಮುಧೋಳ. 1998ರಲ್ಲಿ ಮುಧೋಳ ತಾಲ್ಲೂಕಿನ ಅಮೀರವಾಡಿಯಲ್ಲಿ ಗೋದಾವರಿ ಷುಗರ್ ಮಿಲ್ಸ್ ಲಿ. ಎಂಬ ಸಕ್ಕರೆ ತಯಾರಿಕಾ ಘಟಕ ಪ್ರಾರಂಭವಾಯಿತು. ಜಿಲ್ಲೆಯ ಶ್ರೀ ಪ್ರಭುಲಿಂಗೇಶ್ವರ ಷುಗರ್ ವರ್ಕ್ಸ್– ಸಿದ್ಧಾಪುರ ಗ್ರಾಮ, ಜಮಖಂಡಿ ಷುಗರ್ ಪ್ರೈ.ಲಿ. ಜಮಖಂಡಿ. ಇವು ಜಿಲ್ಲೆಯ ಇತರ ಸಕ್ಕರೆ ಕಾರ್ಖಾನೆಗಳು. ರೈತರ ಸಹಕಾರ ಸಕ್ಕರೆ ಕಾರ್ಖಾನೆ (ರನ್ನನಗರ – ಮುಧೋಳ), ಇಂಡಿಯನ್ ಕೇನ್ ಪವರ್ (ರಂಜನ–ಮುಧೋಳ), ಜೆಮ್ಸ್ ಷುಗರ್ ಲಿ ಮಿಟೆಡ್ (ಕುಂದರ್ಗಿ–ಬೀಳಗಿ) ಜಿಲ್ಲೆಯ ಇತರ ಕಾರ್ಖಾನೆಗಳು.

ಜಿಲ್ಲೆಯಲ್ಲಿ ನೈಸರ್ಗಿಕ ಸಂಪನ್ಮೂಲವಾಗಿರುವ ಪಿಂಕ್ ಗ್ರಾನೈಟ್ ಪ್ರಪಂಚದಲ್ಲಿಯೇ ಸುಪ್ರಸಿದ್ಧವಾಗಿದೆ. ಇಲ್ಲಿನ ಕಲ್ಲುಗಳಿಗೆ ಚೀನ, ತೈವಾನ್, ಇಟಲಿ, ಜಪಾನ್, ಇಂಡೋನೇಷ್ಯಗಳಲ್ಲಿ ಅಧಿಕ ಮಾರುಕಟ್ಟೆಯಿದೆ. ಇಲ್ಲಿನ ಕಲ್ಲನ್ನು ವಿಶೇಷ ಯಂತ್ರೋಪಕರಣದ ಸಹಾಯದಿಂದ ಹೊಳಪು ಬರುವಂತೆ ಮಾಡಲಾಗುತ್ತದೆ. ಇಳಕಲ್ಲಿನಿಂದ ಸು.8 ಕಿಮೀ ದೂರದಲ್ಲಿನ ಬಲಕುಂದಿ ಗ್ರಾಮದ ಶಿಲೆ ಭೂವಿಜ್ಞಾನಿಗಳನ್ನು ಆಕರ್ಷಿಸಿದೆ. ಹುನಗುಂದ ತಾಲ್ಲೂಕಿನ ಗೋರಬಾಳ ಮಂಡಲಕ್ಕೆ ಸೇರಿದ ಶಿಲಾಗುಡ್ಡಗಳು ಗೂಡೂರು, ಗುಗಲ್ಮರಿ, ಬಲಗುಂದಿ, ಕೊಡಗಲಿ, ಹೊಸೂರು ಮುಂತಾದ ಗ್ರಾಮಗಳಿಗೆ ಹಬ್ಬಿವೆ. ಬಾದಾಮಿ ತಾಲ್ಲೂಕಿನ ಚಿಮ್ಮಲಗಿ, ನಾಗರಾಳ, ಎಸ್.ಪಿ. ಮಂಗಶಗುಡ್ಡ ಮೊದಲಾದ ಪ್ರದೇಶಗಳಿಗೂ ಈ ಶಿಲೆಯ ಸಂಪನ್ಮೂಲ ಹರಡಿದೆ. ಈ ಉದ್ಯಮದಲ್ಲಿರುವ ಕಂಪನಿಗಳೆಂದರೆ ಜೆಮ್ ಗ್ರಾನೈಟ್ಸ್, ಭಾರತ್ ಟಿಂಬರ್ ಕನ್‌ಸ್ಟ್ರಕ್ಷನ್ ಕಂಪನಿ, ರಾಜಶ್ರೀ ಗ್ರಾನೈಟ್ಸ್, ಗೋಮಟೇಶ್ ಗ್ರಾನೈಟ್ಸ್ ಮತ್ತು ಮೈಸೂರು ಮಿನರಲ್ಸ್.

ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಮುಖವಾಗಿ ಹತ್ತಿ ಬೆಳೆಯುವ ತಾಲ್ಲೂಕುಗಳೆಂದರೆ ಹುನಗುಂದ (1918ಹೆ) ಹಾಗೂ ಜಮಖಂಡಿ (2989ಹೆ). ಹುನಗುಂದದಲ್ಲಿ 1895ರಲ್ಲಿಯೇ ಹತ್ತಿ ಜಿನ್ನಿಂಗ್ ಕಾರ್ಖಾನೆ ಪ್ರಾರಂಭವಾಯಿತು. ಜಿಲ್ಲೆಯ ಹತ್ತಿಗಿರಣಿಗಳಲ್ಲಿ ಪ್ರಮುಖವಾದವು ಬಾಗಲಕೋಟೆ ಕೋಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್ ಹಾಗೂ ಬನಹಟ್ಟಿ ಸಹಕಾರಿ ಗಿರಣಿ ನಿಯಮಿತ. ಬನಹಟ್ಟಿಯನ್ನು ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಕ್ಯಾಂಪ್‌ಬೆಲ್ ವರ್ಣಿಸಿದ್ದಾನೆ.

ಈ ಜಿಲ್ಲೆಯ ನೇಕಾರಿಕೆ ಪ್ರಸಿದ್ಧ. ಇಳಕಲ್ಲಿನ ಸೀರೆ ಉಟ್ಟು ಗುಳೇದ ಗುಡ್ಡದ ಖಣ ತೊಟ್ಟು ಹೊರಟಾಳೆ ಎಂಬ ನಾಣ್ನುಡಿ ಈ ಭಾಗದಲ್ಲಿ ಜನಪ್ರಿಯವಾಗಿದೆ. ಇಳಕಲ್ ಸೀರೆಗಳು ಕರ್ನಾಟಕದಲ್ಲಿ ಖ್ಯಾತಿ ಪಡೆದಿವೆ. ಜಿಲ್ಲೆಯ ರಬಕವಿ ಬನಹಟ್ಟಿ, ಗುಳೇದಗುಡ್ಡ, ಕಮಟಗಿ, ಸೂಳೆಭಾವಿ, ಇಳಕಲ್ ಮುಂತಾದ ಊರುಗಳು ಕೈಮಗ್ಗದ ಸೀರೆಗಳಿಗೆ ಪ್ರಸಿದ್ಧ ಸ್ಥಳಗಳಾಗಿವೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಈ ಕ್ಷೇತ್ರದಲ್ಲಿ ನೇಕಾರರಿಗೆ ನೆರವಾಗಿದೆ. ಇಲ್ಲಿ ಅನೇಕ ಸಹಕಾರಿ ಸಂಘಗಳು ಸ್ಥಾಪಿತವಾಗಿದ್ದು ನೇಕಾರರ ಹಿತರಕ್ಷಣೆ ಕೆಲಸ ಮಾಡುತ್ತಿವೆ.

ಜಿಲ್ಲೆಯಲ್ಲಿ ಉಣ್ಣೆ ನೇಕಾರಿಕೆಯೂ ಜನಪ್ರಿಯವಾಗಿದ್ದು ಬಾಗಲಕೋಟೆ, ಹುನಗುಂದ ಹಾಗೂ ಬಾದಾಮಿ ತಾಲ್ಲೂಕುಗಳಲ್ಲಿ ಕಂಬಳಿ ನೇಯ್ಗೆ ಉದ್ಯಮವಿದೆ. ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಹಾಗೂ ಕೈಗಾರಿಕೆಗಳೂ ಇವೆ. ಬೀಡಿ ತಯಾರಿಕೆ, ಹಗ್ಗ ತಯಾರಿಕೆ, ಕುಂಬಾರಿಕೆ, ಹೈನುಗಾರಿಕೆ, ಮೀನುಗಾರಿಕೆ ಇತರ ಉದ್ಯಮಗಳು.

**ಪ್ರೇಕ್ಷಣೀಯ ಸ್ಥಳಗಳು**: ಬಾಗಲಕೋಟೆ ಚಾರಿತ್ರಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪ್ರಪಂಚ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದೆ. ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮಹಾಕೂಟ, ಬನಶಂಕರಿ ಮುಂತಾದವು ವಾಸ್ತುಶಿಲ್ಪ, ಶಿಲ್ಪಕಲೆ ಹಾಗೂ ಪ್ರಾಚ್ಯ ಅವಶೇಷಗಳಿಗೆ ಪ್ರಸಿದ್ಧವಾಗಿವೆ. ಇಳಕಲ್ಲು, ಕರಡಿ, ಕೂಡಲಸಂಗಮ, ಬನಶಂಕರಿ ಇವು ಪ್ರಸಿದ್ಧ ಯಾತ್ರಾಸ್ಥಳಗಳಾಗಿವೆ, ಬಾದಾಮಿಯಲ್ಲಿ ಬೆಟ್ಟಗಳನ್ನು ಕೊರೆದು ನಿರ್ಮಿಸಲಾಗಿರುವ ಗುಹಾದೇವಾಲಯಗಳು ಪ್ರಪಂಚ ಮಾನ್ಯತೆ ಪಡೆದಿವೆ. ಬನಶಂಕರಿ ದೇವಾಲಯ ರಾಜ್ಯದ ಅತ್ಯಂತ ಪ್ರಾಚೀನ ಪವಿತ್ರ ತೀರ್ಥ ಕ್ಷೇತ್ರಗಳಲ್ಲೊಂದು. ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಸಂಗಮವಾಗುವ ಸ್ಥಳ ಕೂಡಲಸಂಗಮ ಬಸವಣ್ಣನವರ ಐಕ್ಯ ಸ್ಥಳವೆಂದು ಪ್ರತೀತಿ. ಸಹಸ್ರಾರು ಭಕ್ತಾದಿಗಳು ಇಲ್ಲಿಗೆ ಬರುತ್ತಾರೆ.

ಬಾಗಲಕೋಟೆಗೆ ದೀರ್ಘಕಾಲದ ಇತಿಹಾಸವಿದೆ. ರಾಮಾಯಣ ಕಾಲದಿಂದಲೂ ಈ ಊರು ಪ್ರಸಿದ್ಧವಾಗಿತ್ತು ಎನ್ನಲಾಗಿದೆ. ಈ ಊರನ್ನು ಲಂಕೆಯ ಅಧಿಪತಿಯಾದ ರಾವಣನ ಭಜಂತ್ರಿಗಳಿಗೆ (ವಾದ್ಯಮೇಳದವರಿಗೆ) ಮಾನ್ಯವಾಗಿ ಕೊಡಲಾಯಿತೆಂದು ಪುರಾಣಕಥೆ. ಕಲ್ಯಾಣಿ ಚಾಳುಕ್ಯರ ಕಾಲದಲ್ಲಿ ಇದಕ್ಕೆ ಬಾಗಡಿಗೆ ಎಂದು ಕರೆಯಲಾಗುತ್ತಿತ್ತು. ಈ ಊರಿಗೆ ಸಮೀಪದಲ್ಲಿರುವ ಭೈರನಮಟ್ಟಿಯ ಹನುಮಂತ ದೇವರ ಗುಡಿ ಬಳಿ ದೊರೆತಿರುವ ಚಾಳುಕ್ಯ ದೊರೆ ಒಂದನೆಯ ಸೋಮೇಶ್ವರನ ಶಾಸನದಲ್ಲಿ ಉಕ್ತವಾಗಿರುವ ಬಾಗಡಿಗೆ ಸಿಂಧವಂಶದ ಮಾಂಡಳಿಕರ ಕೇಂದ್ರವಾಗಿದ್ದು ಬಾಗಲಕೋಟೆ ಹೆಸರಿಗೆ ಮೂಲವಿರಬಹುದೆಂದು ಹೇಳಲಾಗುತ್ತದೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯ ಅನಂತರ ಬಾಗಲಕೋಟೆ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತ್ತು (1350–1565). ಈ ಭಾಗದ ದೇಸಾಯಿಗಳು ಹಾಗೂ ದೇಶಪಾಂಡೆಗಳು ವಿಜಯನಗರದ ಅರಸರಿಂದ ದತ್ತಿದಾನಗಳನ್ನು ಸ್ವೀಕರಿಸಿರುವ ಉಲ್ಲೇಖಗಳಿವೆ.



ಕೂಡಲ ಸಂಗಮ

ಐತಿಹ್ಯದಂತೆ ಜನರಿಗೆ ಉಪಟಳ ನೀಡುತ್ತಿದ್ದ ಒಂದು ಹುಲಿಯನ್ನು ಸ್ಥಳೀಯನೊಬ್ಬ ಈ ಜಾಗದಲ್ಲಿ ಕೊಂದ ಕಾರಣ ಈ ಊರನ್ನು ಭಾಗನೂರು (ಹುಲಿಯನಗರ) ಎಂದು ಕರೆದರಂತೆ. ಇಬ್ರಾಹಿಂ ಆದಿಲ್ ಷಾನ ಕಾಲದಲ್ಲಿ (1580–1626) ಆಸಫ್‌ಖಾನ್ ಎಂಬ ಸೇನಾಧಿಪತಿ ದಕ್ಷಿಣದ ಸಾಮ್ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದು ಬಾಗಲಕೋಟೆಯಲ್ಲಿಯೇ ನೆಲಸಿದ್ದ. ಅನಂತರ ಬಾಗಲಕೋಟೆಗೆ ಬಿಜಾಪುರದ ಮಂತ್ರಿಯಾಗಿದ್ದ ಸವಣೂರಿನ ನವಾಬ ಬಹಿಲಾಲ್‌ಖಾನ್ ಆಡಳಿತ ನೋಡಿಕೊಳ್ಳಲು ನೇಮಕಗೊಂಡ. ಇದೇ ಸಮಯದಲ್ಲಿ ಬಿಜಾಪುರದ ಸುಲ್ತಾನ ಬಾಗಲಕೋಟೆ ನಗರವನ್ನು ತನ್ನ ಮಗಳಾದ ಬಲೀಮ್ ಷಾ ಬೀಬಿಗೆ ಉಡುಗೊರೆಯಾಗಿ ನೀಡಿದನೆಂದು ತಿಳಿದುಬರುತ್ತದೆ. ಈ ಉಡುಗೊರೆಯನ್ನು ತನ್ನ ಮಗಳಿಗೆ ಬಳೆಯ ವೆಚ್ಚಕ್ಕಾಗಿ ಕೊಟ್ಟನೆಂಬ ಕಾರಣದಿಂದ ಇದಕ್ಕೆ ಬಾಂಗಡಿಕೋಟಾ ಎಂಬ ಹೆಸರಾಯಿತೆಂದು ಪ್ರತೀತಿ. ಈ ಬಾಂಗಡಿಕೋಟಾ ಕ್ರಮೇಣ ಬಾಗಲಕೋಟೆ ಆಗಿದೆ ಎಂದು ಹೇಳಲಾಗಿದೆ. ಬಿಜಾಪುರದ ಆಡಳಿತದ ಅನಂತರ ಈ ಪ್ರದೇಶ ಮರಾಠಪೇಶ್ವೆ ಬಾಲಾಜಿ ಬಾಜಿರಾಯನ (1740–61) ವಶಕ್ಕೆ ಸೇರಿತು. ಪೇಶ್ವೆ ಇದರ ಆಡಳಿತವನ್ನು ಗಜೇಂದ್ರಗಡದಲ್ಲಿದ್ದ ಘೋರ್ಪಡೆಗೆ ವಹಿಸಿಕೊಟ್ಟ. 1778ರಲ್ಲಿ ಇದು ಹೈದರ್ ಅಲಿ ಪ್ರಾಂತ್ಯವಾಗಿ ಸವಣೂರು ನವಾಬನ ಅಧೀನಕ್ಕೆ ಬಂತು. ಅನಂತರ ಈ ಪ್ರದೇಶವನ್ನು ಸರ್‌ಸುಭಾ ಪ್ರಾಂತ್ಯವನ್ನಾಗಿ ಪರಿವರ್ತಿಸಿ ಆಡಳಿತ ನಡೆಸಲು ನೇಮಕವಾದ ರಾಸ್ತಿಯಾ ಕುಟುಂಬದ ಆನಂದರಾವ್ ಭಿಕಾಜಿಯು ಇಲ್ಲಿಯೇ ನೆಲಸಿ ವಾಸಕ್ಕೆ ಒಂದು ಸುಂದರ ಅರಮನೆಯನ್ನು ನಿರ್ಮಿಸಿದ್ದನೆಂದು ಹೇಳಲಾಗಿದೆ. ಸವಣೂರು ನವಾಬನ ಅಧೀನದಲ್ಲಿದ್ದಾಗ ಬಾಗಲಕೋಟೆಯ ಅತ್ಯಂತ ಪ್ರಾಚೀನ ನಿವಾಸವಾದ ಇಲ್ಲಿನ ಹಳೆಪೇಟೆಯನ್ನು ಕಟ್ಟಲಾಯಿತು. ಜೈನಪೇಟೆಯನ್ನು 1791ರ ಸುಮಾರಿಗೆ ನಿರ್ಮಿಸಲಾಯಿತೆಂದೂ ಪೇಶ್ವೆಗಳ ಕಾಲದಲ್ಲಿ ಬಾಗಲಕೋಟೆಯಲ್ಲಿ ಒಂದು ಟಂಕಸಾಲೆ ಸ್ಥಾಪಿತವಾಗಿತ್ತೆಂದೂ ಹೇಳಲಾಗಿದೆ. ಈಗಲೂ ಮರಾಠರ ಕಾಲದ ಕೋಟೆ ಮತ್ತು ಸೈನಿಕ ಶಿಬಿರಗಳ ಅವಶೇಷಗಳನ್ನು ಊರಿನ ಸುತ್ತ ಕಾಣಬಹುದು. 1818ರಲ್ಲಿ ಈ ಪ್ರದೇಶ ಸರ್ ಥಾಮಸ್ ಮನ್ರೋ ವಶವಾಯಿತು. ಬಾಗಲಕೋಟೆಯಿಂದ 48ಮೀ ದೂರದಲ್ಲಿದ್ದ ಗೋಪಾಲಪುರ ಗ್ರಾಮದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ ತಂಗಲು ಬಂಗಲೆಗಳನ್ನು ಕಟ್ಟಲಾಗಿತ್ತು. ಇದರಿಂದ ಈ ಸ್ಥಳಕ್ಕೆ ಹವೇಲಿ ಎಂಬ ಹೆಸರು ರೂಢಿಗೆ ಬಂದಿತು. ಇಲ್ಲಿ ಹನುಮಂತ ದೇವರಗುಡಿಯ ಎದುರಿನಲ್ಲಿರುವ ಶಾಸನದಲ್ಲಿ (1822) ಈಸ್ಟ್ ಇಂಡಿಯಾ ಕಂಪನಿಯ ಸುಬೇದಾರ ಅಪ್ಪೂರಾಯ ಗುಡಿಯನ್ನು ನಿರ್ಮಿಸಿದ ಬಗ್ಗೆ ಹಾಗೂ ನೀಡಿದ ದಾನದ ಬಗ್ಗೆ ಉಲ್ಲೇಖವಿದೆ. 1837ರವರೆಗೆ ಇದು ಧಾರವಾಡ ಜಿಲ್ಲೆಗೆ ಸೇರಿತ್ತು. ಅನಂತರ 1884ರ ವರೆಗೆ ಬೆಳಗಾಂವಿ ಜಿಲ್ಲೆಯಲ್ಲಿತ್ತು. ಬಿಜಾಪುರ ಜಿಲ್ಲೆ ರಚಿತವಾದಾಗ ಇದನ್ನು ಆ ಜಿಲ್ಲೆಗೆ ಸೇರಿಸಲಾಯಿತು. 1997ರಲ್ಲಿ ಇದು ಪ್ರತ್ಯೇಕ ಜಿಲ್ಲೆಯಾಯಿತು.

ಬಾಗಲಕೋಟೆಯಲ್ಲಿರುವ ಪ್ರಮುಖ ದೇವಾಲಯಗಳೆಂದರೆ ಮೋಟಿಗೆ ಬಸವಣ್ಣ, ಮಲ್ಲಿಕಾರ್ಜುನ, ಕೊತ್ತಲೇಶ, ಅಂಬಾಭವಾನಿ, ರಾಘವೇಂದ್ರ ಮಠ, ಸವಣೂರು ಸತ್ಯಬೋಧರಾಯರಮಠ, ಆನಂದೇಶ್ವರ, ದತ್ತಾತ್ರೇಯ, ಕೊತ್ತಪ್ಪ, ರಾಮೇಶ್ವರ, ವೆಂಕಟೇಶ, ಎಲ್ಲಮ್ಮ ಇತ್ಯಾದಿ. ಬಾಗಲಕೋಟೆಯ ಕೊತ್ತಲಲ್ಲಿ ಹನುಮಂತನ ಮೂರ್ತಿಯನ್ನು ಪ್ರತಿಷ್ಠಾಪಿಸಿರುವುದರಿಂದ ಈ ದೇವರಿಗೆ ಕೊತ್ತಲೇಶ ಎಂದು ಕರೆಯಲಾಗುತ್ತದೆ. ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯವರು ಇಲ್ಲಿ ಕಟ್ಟಿಸಿರುವ ಸತ್ಯಂ ಶಿವಂ ಸುಂದರಂ ದೇವಾಲಯ ಉದ್ಯಾನವನದಿಂದ ಕೂಡಿದ್ದು ಸುಂದರವಾಗಿದೆ.

ಬಾಗಲಕೋಟೆಯಲ್ಲಿನ ಪ್ರಮುಖ ಆಧ್ಯಾತ್ಮಿಕ ಮಠಗಳೆಂದರೆ ಅಡವಿಸ್ವಾಮಿ, ಚರಂತಿ, ರಾಮಾರೂಢ ಮುಂತಾದವು. ಅಂಕಲಗಿಯ ಅಡವಿಸ್ವಾಮಿಗಳು ಸ್ಥಾಪಿಸಿದ ಅಡವಿಸ್ವಾಮಿ ಮಠದಲ್ಲಿ ಅರೆಭಾವಿಯ ಶಿವಯೋಗಿಗಳು ಮತ್ತು ಮುಧೋಳದ ಮೃತ್ಯುಂಜಯ ಅಪ್ಪನವರು ಅಧ್ಯಾತ್ಮ ವ್ಯಾಸಂಗ ನಡೆಸಿ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರು. ಇಲ್ಲಿನ ಚರಂತಿಮಠ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದೆ. ಇಲ್ಲಿನ ಉತ್ತರಾದಿಮಠ ವೇದಾಂತ ಮತ್ತು ಆಧ್ಯಾತ್ಮಿಕ ಶಿಕ್ಷಣಕ್ಕೆ ಪ್ರಸಿದ್ಧವಾಗಿತ್ತು. ಈ ಊರಿನ ಪ್ರಸಿದ್ಧ ವಿದ್ವಾಂಸರುಗಳೆಂದರೆ ವೇದವ್ಯಾಸಾಚಾರ್ ಮಳಗಿ, ಕೆರೂರು ಸ್ವಾಮಿರಾಯಚಾರ್ಯ, ಕೃಷ್ಣಾಚಾರ್ ನಾಗಸಂಪಿಗೆ, ಕೇಶವಾಚಾರ್ ಕಟ್ಟಿ ಮೊದಲಾದವರು. ಪ್ರಸಿದ್ಧ ಹರಿದಾಸರಾಗಿದ್ದ ಪ್ರಸನ್ನವೆಂಕಟದಾಸರು 19ನೆಯ ಶತಮಾನದಲ್ಲಿ ಇಲ್ಲಿ ವಾಸವಾಗಿದ್ದು ಅವರ ಮನೆ ಹಾಗೂ ಅವರು ಉಪಯೋಗಿಸುತ್ತಿದ್ದ ಸಂಗೀತ ವಾದ್ಯಗಳನ್ನು ಸಂರಕ್ಷಿಸಲಾಗಿದೆ.

ನಗರದಲ್ಲಿ ಸು. 100 ವರ್ಷಗಳಿಗೂ ಹಳೆಯದಾದ ಮಸೀದಿಯಿದೆ. ಇಲ್ಲಿ ಮಹಾರಾಷ್ಟ್ರದಿಂದ ವಲಸೆ ಬಂದ ಪಿಂಡಾರಿಗಳು ವಾಸವಾಗಿದ್ದರೆಂದು ಹೇಳಲಾಗಿದೆ. ಇವರ ವಸತಿಯಲ್ಲಿ ಒಂದು ಚಿಕ್ಕ ಮಸೀದಿ ಸಹ ಇದ್ದು ವ್ಯಾಪಾರಕ್ಕಾಗಿ ಇಲ್ಲಿಗೆ ಬಂದ ಕಾಠೇವಾಡಿ ಮುಸಲ್ಮಾನರು ವಿಸ್ತರಿಸಿದರೆಂದು ತಿಳಿದುಬರುತ್ತದೆ.

ತಾಲ್ಲೂಕು: ಈ ತಾಲ್ಲೂಕನ್ನು ಪೂರ್ವದಲ್ಲಿ ಹುನಗುಂದ, ದಕ್ಷಿಣದಲ್ಲಿ ಬಾದಾಮಿ, ಪಶ್ಚಿಮದಲ್ಲಿ ಬೀಳಗಿ (ಬಿಳಗಿ) ತಾಲ್ಲೂಕುಗಳಿದ್ದು ಉತ್ತರದಲ್ಲಿ ಕೃಷ್ಣಾನದಿ ಈ ತಾಲ್ಲೂಕನ್ನು ಬಿಜಾಪುರ ಜಿಲ್ಲೆಯಿಂದ ಬೇರ್ಪಡಿಸಿದೆ. ಬಾಗಲಕೋಟೆ, ಸೀತಿಮನಿ, ಕಲಾದಗಿ ಹೋಬಳಿಗಳಿದ್ದು 92 ಗ್ರಾಮಗಳಿವೆ.

ತಾಲ್ಲೂಕಿನ ವಿಸ್ತೀರ್ಣ 936. ಚ.ಕಿಮೀ. ತಾಲ್ಲೂಕಿನ ಜನಸಂಖ್ಯೆ 2,47,870. ಇದರಲ್ಲಿ 1,56,264. ಮಂದಿ ಗ್ರಾಮಸ್ಥರು, 91,586 ಮಂದಿ ಪಟ್ಟಣವಾಸಿಗರು.

ತಾಲ್ಲೂಕಿನ ಹೆಚ್ಚಿನ ಭಾಗ ಕರಿ ಎರೆಮಣ್ಣು ಮತ್ತು ಮರಳುಮಿಶ್ರಿತ ಕೆಂಪುಮಣ್ಣು ಭೂಮಿಗಳಿಂದ ಕೂಡಿದ ಸುಮಾರು ಸಮತಟ್ಟಿನ ಪ್ರದೇಶ. ಆದರೆ ಕಲಾದಗಿ ಶಿಲಾಸಮುದಾಯಕ್ಕೆ ಸೇರಿದ ಮೂರು ಬೆಟ್ಟಶ್ರೇಣಿಗಳೂ ಅಲ್ಲಲ್ಲಿ ಕೆಲವು ಒಂಟಿಬೆಟ್ಟಗಳೂ ಇವೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಕಲಾದಗಿಯ ಪೂರ್ವದಲ್ಲಿ ಕೆಲವು ಎತ್ತರದ ಬೆಟ್ಟಗಳಿವೆ. ಇವುಗಳಲ್ಲಿ ಕಲಾದಗಿಯ ಬಳಿ ಆಗ್ನೇಯಕ್ಕೆ ತುಳಸಿಗೇರಿಯ ಬಳಿ ಇರುವ ಬೆಟ್ಟ (620 ಮೀ) ಎತ್ತರವಾದುದು. ಇಲ್ಲಿಂದ ತಾಲ್ಲೂಕಿನ ದಕ್ಷಿಣದಂಚಿನ ಉದ್ದಕ್ಕೂ ಬೆಟ್ಟಸಾಲಿದೆ. ಈ ಸಾಲಿನಲ್ಲಿ ಮುಚಕಂಡಿ ಬಳಿಯಲ್ಲಿ ಮತ್ತು ಶಿರೂರು ಬಳಿಯಲ್ಲಿ ಇರುವ ಬೆಟ್ಟಗಳು (630 ಮೀ, 591 ಮೀ) ದೊಡ್ಡವು. ಕಲಾದಗಿಯಿಂದ ಈಶಾನ್ಯಕ್ಕೆ ಕೆಲವು ಸಣ್ಣಗುಡ್ಡಗಳ ಸಾಲು ಇದ್ದು ಅದು ಬಾಗಲಕೋಟೆಯ ವಾಯವ್ಯದಲ್ಲಿನ ತಾಲ್ಲೂಕು ಎಲ್ಲೆಯವರೆಗೂ ಸಾಗಿ ಅಲ್ಲಿಂದ ಎರಡು ಶ್ರೇಣಿಗಳಾಗಿ ಕವಲೊಡೆಯುತ್ತದೆ. ಒಂದು ಕವಲು ಬಾಗಲಕೋಟೆಯ ಮುಖಾಂತರ ತಾಲ್ಲೂಕಿನ ಎಲ್ಲೆಯವರೆಗೆ ಆಗ್ನೇಯಾಭಿಮುಖವಾಗಿ ಹಬ್ಬಿದೆ. ತಾಲ್ಲೂಕಿನ ಪೂರ್ವದ ಅಂಚಿನ ಹತ್ತಿರ ಇರುವ ಬೆನಕಟ್ಟಿ ಬೆಟ್ಟ (582 ಮೀ) ಈ ಸಾಲಿನಲ್ಲಿ ಎತ್ತರವಾದುದು. ಇನ್ನೊಂದು ಸಾಲು ಬೀಳಗಿ ಮತ್ತು ಬಾಗಲಕೋಟೆ ತಾಲ್ಲೂಕಿನ ಗಡಿಯಾಗಿ ಘಟಪ್ರಭಾ ನದಿಗುಂಟ ಪೂರ್ವಾಭಿಮುಖವಾಗಿ ಹಬ್ಬಿ ಅನಂತರ ತಾಲ್ಲೂಕಿನ ಒಳಗೆ ನುಗ್ಗಿ ಮತ್ತಷ್ಟು ಪೂರ್ವಕ್ಕೆ ಅಚನೂರುವರೆಗೆ ಬಂದು ಇಲ್ಲಿಂದ ಈಶಾನ್ಯಾಭಿಮುಖವಾಗಿ ತಾಲ್ಲೂಕಿನ ಎಲ್ಲೆಯವರೆಗೆ ಸಾಗುತ್ತದೆ. ಈ ಭಾಗದ ದೊಡ್ಡ ಬೆಟ್ಟಗಳು 622 ಮತ್ತು 613 ಮೀ ಎತ್ತರವಿದ್ದು ಅವು ಕ್ರಮವಾಗಿ ಘಟಪ್ರಭಾ ನದಿಯ ಬಳಿಯ ಸನಗೊಂದಿ ಮತ್ತು ತಾಲ್ಲೂಕಿನ ಉತ್ತರದ ಎಲ್ಲೆಯ ಬಳಿ ಇರುವ ರಾಮಪುರ ಈ ಸ್ಥಳಗಳ ಸಮೀಪದಲ್ಲಿವೆ.

ಘಟಪ್ರಭಾ ಮತ್ತು ಕೃಷ್ಣಾ ತಾಲ್ಲೂಕಿನ ಮುಖ್ಯನದಿಗಳು. ಮುಧೋಳ ತಾಲ್ಲೂಕಿನಿಂದ ಹರಿದು ಬರುವ ಘಟಪ್ರಭಾ ಕಲಾದಗಿಯಿಂದ ಸ್ವಲ್ಪ ವಾಯವ್ಯದಲ್ಲಿ ತಾಲ್ಲೂಕು ಅಂಚನ್ನು ಮುಟ್ಟಿ ಅಲ್ಲಿಂದ ಪೂರ್ವಾಭಿ ಮುಖವಾಗಿ ಬೀಳಗಿ–ಬಾಗಲಕೋಟೆ ತಾಲ್ಲೂಕುಗಳ ಗಡಿರೇಖೆಯಾಗಿ ಹರಿದು ಬಾಗಲಕೋಟೆಯ ಬಳಿಯಲ್ಲಿ ಮಾತ್ರ ಸ್ವಲ್ಪದೂರ ತಾಲ್ಲೂಕಿನ ಒಳಗೆ ಹರಿಯುತ್ತದೆ. ಬಾಗಲಕೋಟೆಯಿಂದ ಈಶಾನ್ಯಗಾಮಿಯಾಗಿರುವ ನದಿ ಮುಂದೆ ಸ್ವಲ್ಪ ದೂರದಿಂದ ಮತ್ತೆ ಬೀಳಗಿ ಮತ್ತು ಬಾಗಲಕೋಟೆ ತಾಲ್ಲೂಕುಗಳನ್ನು ಬೇರ್ಪಡಿಸುವ ಗಡಿರೇಖೆಯಾಗಿ ಸಾಗಿ ಸೀತಿಮನಿಯಿಂದ ಸ್ವಲ್ಪ ಪಶ್ಚಿಮದಲ್ಲಿ ಕೃಷ್ಣಾನದಿಯನ್ನು ಸೇರುತ್ತದೆ. ಈ ಸಂಗಮ ಸ್ಥಾನ ದಿಂದ ಆಗ್ನೇಯಾಭಿಮುಖವಾಗಿ ಹರಿಯುವ ಕೃಷ್ಣಾ ನದಿಯೇ ಬಾಗಲ ಕೋಟೆ ತಾಲ್ಲೂಕಿನ ಉತ್ತರ ಗಡಿಯಾಗಿದೆ. ತಾಲ್ಲೂಕಿನ ಪಶ್ಚಿಮ ಭಾಗ ದಲ್ಲಿ ಎರಡು ಬೆಟ್ಟಶ್ರೇಣಿಗಳ ಮಧ್ಯೆ ಇರುವ ಪ್ರದೇಶದಲ್ಲಿ ಘಟಪ್ರಭಾ ನದಿಗೆ ಸೇರುವ, ಪೂರ್ವದಲ್ಲಿ ಮಲಪ್ರಭಾ ಕಣಿವೆಗೆ ಸೇರಿದ ಮತ್ತು ಈಶಾನ್ಯದಲ್ಲಿ ಕೃಷ್ಣಾನದಿಗೆ ಸೇರುವ ಅನೇಕ ಸಣ್ಣ ಹಳ್ಳಗಳಿವೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 667 ಮಿಮೀ. ತಾಲ್ಲೂಕಿನಲ್ಲಿ 11,638.76 ಹೆ ಅರಣ್ಯಪ್ರದೇಶವಿದೆ. 73,024.068 ಹೆ ಪ್ರದೇಶ ಬೇಸಾಯ ದಲ್ಲಿದೆ. ನೀರಾವರಿ ವ್ಯವಸಾಯ ಬಹಳ ಕಡಿಮೆ. ಕೆರೆ ಮತ್ತು ಬಾವಿಗಳಿಂದ ಸ್ವಲ್ಪಮಟ್ಟಿಗೆ ನೀರೊದಗುತ್ತದೆ. ಆದರೆ ಬಾಗಲಕೋಟೆ ನಗರದ ದಕ್ಷಿಣಭಾಗದ ಸ್ವಲ್ಪ ಪ್ರದೇಶದಲ್ಲಿ ಮಾತ್ರ ತಾಲ್ಲೂಕಿನ ಅತಿದೊಡ್ಡ ಕೆರೆಯಾದ ಮುಚಕಂಡಿ ಕೆರೆಯಿಂದ ನೀರಾವರಿ ಇದೆ. ಜೋಳ, ಹತ್ತಿ, ಸಜ್ಜೆ, ಸೇಂಗಾ, ದ್ವಿದಳಧಾನ್ಯಗಳು ಮತ್ತು ಗೋದಿ ತಾಲ್ಲೂಕಿನ ಮುಖ್ಯ ಬೆಳೆಗಳು.

ತಾಲ್ಲೂಕಿನ ಅನೇಕ ಕಡೆಗಳಲ್ಲಿ ಉತ್ತಮ ದರ್ಜೆಯ ಸುಣ್ಣಕಲ್ಲು ದೊರೆಯುವುದರಿಂದ ಅದರ ಗಣಿಗಾರಿಕೆ ಈ ಪ್ರದೇಶದ ಮುಖ್ಯ ಉದ್ಯಮಗಳಲ್ಲೊಂದು. ಈ ಸುಣ್ಣಕಲ್ಲನ್ನು ಉಪಯೋಗಿಸುವ ಒಂದು ದೊಡ್ಡ ಸಿಮೆಂಟ್ ಕಾರ್ಖಾನೆ ಬಾಗಲಕೋಟೆಯಲ್ಲಿದೆ. ಈ ಭಾಗದಲ್ಲಿ ಕಲ್ನಾರು ದೊರಕುವುದರಿಂದ ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳಿವೆ. ಈ ತಾಲ್ಲೂಕಿನಲ್ಲಿ ಬಾಗಲಕೋಟೆಯ ಬಳಿ ಕ್ಯಾಲ್ಸೈಟ್, ಕಲಾದಗಿಯ ಬಳಿ ಸ್ವಲ್ಪ ತಾಮ್ರ ಮತ್ತು ಬಾಗಲಕೋಟೆಯ ನೈಋತ್ಯದಲ್ಲಿ ಮ್ಯಾಂಗ ನೀಸ್ – ಇವು ದೊರಕುತ್ತವೆಯಾದರೂ ತತ್ಸಂಬಂಧಿತವಾದ ಕೈಗಾರಿಕೆಗಳು ಬೆಳೆದಿಲ್ಲ. ಸ್ಲೇಟ್, ಗಾಜಿನ ಬಳೆಗಳು, ಪಾಲಿಥಿನ್ ಚೀಲಗಳು ಮುಂತಾದ ವನ್ನು ತಯಾರಿಸುವ ಕಾರ್ಖಾನೆಗಳುಂಟು. ಬೀಗಗಳನ್ನು ತಯಾರಿಸುವುದು ಇಲ್ಲಿಯ ಮುಖ್ಯ ಕೈಗಾರಿಕೆಗಳಲ್ಲಿ ಒಂದು. ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳನ್ನೂ ತಯಾರಿಸುವರು. ಅನೇಕ ಹತ್ತಿ ಕಾರ್ಖಾನೆಗಳೂ ಇವೆ. ಹೆಚ್ಚಿನ ಕೈಗಾರಿಕೆಗಳು ಬಾಗಲಕೋಟೆ ಮತ್ತು ಅದರ ಹತ್ತಿರದಲ್ಲೇ ಕೇಂದ್ರೀಕೃತವಾಗಿವೆ. ವ್ಯವಸಾಯ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಇಲ್ಲಿರುವ ಅನೇಕ ಬ್ಯಾಂಕುಗಳು ಸಹಾಯ ನೀಡುತ್ತಿವೆ.

ಹುಬ್ಬಳ್ಳಿ–ಸೊಲ್ಲಾಪುರ ರೈಲುಮಾರ್ಗ ಈ ತಾಲ್ಲೂಕಿನ ಮಧ್ಯದಲ್ಲಿ ನೈಋತ್ಯ–ಈಶಾನ್ಯಭಿಮುಖವಾಗಿ ಹಾದುಹೋಗಿದೆ. ರಾಯಚೂರು–ಬೆಳಗಾಂವಿ ಹೆದ್ದಾರಿ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಪೂರ್ವ ಪಶ್ಚಿಮವಾಗಿ ಸಾಗಿದೆ. ಅಂಚೆ, ದೂರವಾಣಿ ಮತ್ತು ತಂತಿ ಸೌಲಭ್ಯಗಳುಂಟು. ತಾಲ್ಲೂಕಿ ನಲ್ಲಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಮತ್ತು ಪಶುವೈದ್ಯಶಾಲೆಗಳಿವೆ.

ಬೇವೂರು, ಕಲಾದಗಿ, ಬೆಣ್ಣೂರು, ಶಿರೂರು ಈ ತಾಲ್ಲೂಕಿನ ದೊಡ್ಡ ಗ್ರಾಮಗಳಲ್ಲಿ ಕೆಲವು. ಬೇವೂರಿನಲ್ಲಿ ಕಾಳಿಕಾಭವಾನಿ, ನಾರಾಯಣದೇವ ಮತ್ತು ರಾಮೇಶ್ವರ ದೇವಾಲಯಗಳಿವೆ. ಕಲಾದಗಿ **(ನೋಡಿ)** ಹಿಂದೆ ಬಿಜಾಪುರ ಜಿಲ್ಲೆಯ ಆಡಳಿತ ಕೇಂದ್ರವಾಗಿತ್ತು. ಶಿರೂರಿನಲ್ಲಿ ಐದು ದೇವಾಲಯಗಳೂ ಹಲವಾರು ಪ್ರಾಚೀನ ಶಾಸನಗಳೂ ಇವೆ. ಈ ತಾಲ್ಲೂಕಿನ ಗದ್ದನಕೇರಿ ಗ್ರಾಮದಲ್ಲಿ ಸಂತ ಮಲೆಯಪ್ಪ ಅಯ್ಯನವರ ಸಮಾಧಿ ಮತ್ತು ಹನುಮಂತ ದೇವಾಲಯ ಇವೆ. ಹಳ್ಳೂರಿ ನಲ್ಲಿ ಪ್ರಾಚೀನ ಬಸವೇಶ್ವರ ಮಂದಿರವಿದೆ. ಮಂಕಣಿ ಗ್ರಾಮದಲ್ಲಿರುವ ಶಿವದೇವಾಲಯ ದಲ್ಲಿ ದೇವಗಿರಿ ಯಾದವ ದೊರೆ ಎರಡನೆಯ ಸಿಂಘಣನ ಕಾಲದ ಕನ್ನಡ ಶಾಸನ ಒಂದಿದೆ. *

ಈ ತಾಲ್ಲೂಕಿನ ಆಡಳಿತ ಕೇಂದ್ರವಾದ ಬಾಗಲಕೋಟೆ ಜಿಲ್ಲೆಯ ದೊಡ್ಡ ಪಟ್ಟಣ. ಬಿಜಾಪುರ ದಕ್ಷಿಣಕ್ಕೆ ಸು. 90 ಕಿಮೀ ದೂರದಲ್ಲಿ ಘಟಪ್ರಭಾ ನದಿಯ ಬಲದಂಡೆಯ ಮೇಲಿದೆ. ಪಟ್ಟಣದಲ್ಲಿ 47,357 ಮಂದಿ ಪುರುಷರು, 44,239 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 91,596. ಹುಬ್ಬಳ್ಳಿ–ಸೊಲ್ಲಾಪುರ ರೈಲುಮಾರ್ಗ ಹಾಗೂ ಬೆಳಗಾಂವಿ–ರಾಯಚೂರು ಹೆದ್ದಾರಿ ಈ ಪಟ್ಟಣದ ಮೂಲಕ ಸಾಗುವುದು. ಬಿಜಾಪುರ, ಬಾದಾಮಿ, ಮುಧೋಳ, ಮುದ್ದೇಬಿಹಾಳ, ಹುನಗುಂದ ಮೊದಲಾದ ಪಟ್ಟಣಗಳೊಡನೆ ಉತ್ತಮ ರಸ್ತೆ ಸಂಪರ್ಕವನ್ನೂ ಈ ಪಟ್ಟಣ ಹೊಂದಿದೆ. ಈ ಸೌಕರ್ಯ, ನದಿಯಿಂದ ಉತ್ತಮ ನೀರು ಸರಬರಾಜು ಮತ್ತು ಸುತ್ತಲ ಪ್ರದೇಶದ ಖನಿಜಸಂಪತ್ತು ಇವುಗಳಿಂದ ಪಟ್ಟಣ ದಿನೇದಿನೇ ಔದ್ಯಮಿಕ ಮತ್ತು ವ್ಯಾಪಾರ ರಂಗದಲ್ಲಿ ಅಭಿವೃದ್ಧಿಗೊಳ್ಳುತ್ತಿದೆ. ಈ

ಸುತ್ತಲ ಪ್ರದೇಶಕ್ಕೆ ಇದೇ ಅತಿಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಒಂದು ದೊಡ್ಡ ಸಿಮೆಂಟ್ ಕಾರ್ಖಾನೆ, ಪ್ಲಾಸ್ಟಿಕ್ ಕಾರ್ಖಾನೆ, ಅನೇಕ ಹತ್ತಿ ಎಕ್ಕುವ ಕಾರ್ಖಾನೆಗಳು ಮತ್ತು ಹತ್ತಿ ಗಿರಣಿಗಳು, ಒಂದು ಸಹಕಾರಿ ನೂಲಿನ ಗಿರಣಿ ಇವೆ. ಬ್ಯಾಂಕುಗಳು, ಅಂಚೆ, ತಂತಿ, ದೂರವಾಣಿ, ವೈದ್ಯಕೀಯ ಸೌಕರ್ಯಗಳಿವೆ. ಬಸವೇಶ್ವರ ವಿದ್ಯಾವರ್ಧಕ ಸಂಘದವರು ನಡೆಸುತ್ತಿರುವ ಅನೇಕ ವಿದ್ಯಾಸಂಸ್ಥೆಗಳು ಇಲ್ಲಿದ್ದು ಈಗ ಬಾಗಲಕೋಟೆ ಶೈಕ್ಷಣಿಕ ಕೇಂದ್ರ ಸಹ ಆಗಿದೆ. ಇಲ್ಲಿ ಮೂರು ಪ್ರೌಢಶಾಲೆಗಳು, ಒಂದು ಜೂನಿಯರ್ ಕಾಲೇಜು, ಔದ್ಯಮಿಕ ತರಬೇತಿ ಕೇಂದ್ರ, ಕಲಾ ಮತ್ತು ವಿಜ್ಞಾನ ಕಾಲೇಜು ಮತ್ತು ಎಂಜಿನಿಯರಿಂಗ್ ಕಾಲೇಜು ಇವೆ. 1865ರಲ್ಲಿ ಸ್ಥಾಪಿತವಾದ ಇಲ್ಲಿನ ಪುರಸಭೆ ಕರ್ನಾಟಕದ ಹಳೆಯ ಸ್ಥಳೀಯ ಸಂಸ್ಥೆಗಳಲ್ಲೊಂದು.

ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಊರಿಗೆ ಬಾಗಡಿಗೆ ಎಂಬ ಹೆಸರಿದ್ದು, ಆಗ ಬಾಗಡಿಗೆ 70 ಎಂಬ ಪ್ರಾಂತ್ಯದ ಮುಖ್ಯಸ್ಥಳವಾಗಿತ್ತು. ಆ ಕಾಲದಲ್ಲಿ ಸಿಂದವಂಶದ ಮಹಾಮಂಡಲೇಶ್ವರರು ಈ ಪ್ರಾಂತ್ಯವನ್ನು ಆಳುತ್ತಿದ್ದರು. ಬಿಜಾಪುರದ ಆದಿಲ್‌ಶಾಹೀ ಅರಸರ ಆಡಳಿತಕ್ಕೆ ಸೇರಿದಾಗ ಇದಕ್ಕೆ ಬಾಗನೂರು ಮತ್ತು ಬಾಂಗಡಿಕೋಟ ಎಂಬ ಹೆಸರು ಬಂದು, ಮುಂದೆ ಬಾಗಲಕೋಟೆ ಎಂದು ರೂಪಾಂತರ ಹೊಂದಿತೆಂದು ಕಾಣುತ್ತದೆ. 18ನೆಯ ಶತಮಾನದಲ್ಲಿ ಪೇಶವೆಗಳು ಸವಣೂರು ನವಾಬ ರನ್ನು ಸೋಲಿಸಿ ಬಾಗಲಕೋಟೆ ಪ್ರಾಂತ್ಯವನ್ನು ಮರಾಠಾ ಸಾಮ್ರಾಜ್ಯಕ್ಕೆ ಸೇರಿಸಿಕೊಂಡರು. ಮುಂದೆ ಸ್ವಲ್ಪಕಾಲ ಹೈದರ್ ಅಲಿಯ ವಶದಲ್ಲಿತ್ತು. ಟಿಪ್ಪುಸುಲ್ತಾನನ ಮರಣಾನಂತರ ಮತ್ತೆ ಮರಾಠರ ವಶವಾಯಿತು. 1818 ಫೆಬ್ರವರಿಯಲ್ಲಿ ನಡೆದ ಇಂಗ್ಲಿಷ್ ಮರಾಠ ಯುದ್ಧದಲ್ಲಿ ಇಂಗ್ಲಿಷ್ ಸೈನ್ಯಾಧಿಕಾರಿ ಸರ್ ಥಾಮಸ್ ಮನ್ರೋ ಬಾಗಲಕೋಟೆಯನ್ನು ವಶಪಡಿಸಿ ಕೊಂಡ. ಅಲ್ಲಿಂದ ಮುಂದೆ 1956ರ ವರೆಗೂ ಇದು ಮುಂಬಯಿ ಪ್ರಾಂತ್ಯದಲ್ಲಿತ್ತು. 1837ರವರೆಗೆ ಧಾರವಾಡ ಜಿಲ್ಲೆಗೂ 1837–64ರ ಅವಧಿಯಲ್ಲಿ ಬೆಳಗಾಂವಿ ಜಿಲ್ಲೆಗೂ ಮುಂದೆ ಕಲಾದಗಿ ಜಿಲ್ಲೆಗೂ ಸೇರಿದ್ದು, ಕಡೆಗೆ 1884ರಲ್ಲಿ ಆಗತಾನೇ ರಚಿತವಾದ ಬಿಜಾಪುರ ಜಿಲ್ಲೆಗೆ ಸೇರಿತ್ತು, ಈಗ ಬಾಗಲಕೋಟೆಯ ಜಿಲ್ಲಾ ಕೇಂದ್ರವಾಗಿದೆ. ಈ ನಗರದ ಬಹುಭಾಗ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಆವೃತವಾಗಿದ್ದು ಪಟ್ಟಣದ ಜನರನ್ನು 5 ಕಿಮೀ ದೂರದಲ್ಲಿರುವ ಹೊಸನಗರಕ್ಕೆ ಸ್ಥಳಾಂತರಿಸಲಾಗುತ್ತಿದೆ. (ಜಿ.ಎಸ್.ಎಸ್.)

**ಬಾಗಲೋಡಿ ದೇವರಾಯ**: 1927–85. ಕನ್ನಡ ನವೋದಯ ಸಾಹಿತ್ಯ ಕಾಲದ ಪ್ರಸಿದ್ಧ ಕಥೆಗಾರರು. ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಕಂಬಳ ಎಂಬಲ್ಲಿ 1927 ಫೆಬ್ರವರಿ 28ರಂದು ಜನಿಸಿದರು. ತಂದೆ ಕೃಷ್ಣರಾಯ, ತಾಯಿ ಲಕ್ಷ್ಮಿ. ತಂದೆ ಕೃಷ್ಣರಾಯರು ವೃತ್ತಿಯಲ್ಲಿ ಅಧ್ಯಾಪಕರಾಗಿದ್ದರು.

ಬಾಗಲೋಡಿಯವರು ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಪಡೆದು ಅನಂತರ ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ವರೆಗೆ ಓದಿದರು. ಕಾಲೇಜಿನ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಇವರು ಸದಾ ಮುಂದಿರುತ್ತಿದ್ದರು. ಇಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತದ ವಿದ್ಯಾರ್ಥಿಯಾಗಿದ್ದರು. ಮದರಾಸಿನ ಕ್ರಿಶ್ಚಿಯನ್ ಕಾಲೇಜು ಸೇರಿ ಇಂಗ್ಲಿಷ್‌ನಲ್ಲಿ ಪ್ರಥಮ ಶ್ರೇಣಿಯಲ್ಲಿ ಬಿ.ಎ. ಆನರ್ಸ್ ಪದವಿ ಪಡೆದರು (1947). ಅದೇ ಕಾಲೇಜಿನಲ್ಲಿ ಇಂಗ್ಲಿಷ್ ಟ್ಯೂಟರ್ ಆಗಿ ಕೆಲಸ ಮಾಡಿದರು (1947–49). ಸ್ವಲ್ಪ ಸಮಯ ಕಾರೈಕುಡಿ ಅಳಗಪ್ಪ ಚೆಟ್ಟಿಯಾರ್ ಕಾಲೇಜು ಮತ್ತು ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಈ ನಡುವೆ ಅಖಿಲ ಭಾರತ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯಾದ ಭಾರತೀಯ ಆಡಳಿತ ಸೇವೆಯಲ್ಲಿ (ಐ.ಎ.ಎಸ್.) ಐದನೆಯ ಸ್ಥಾನಪಡೆದು ವಿದೇಶಾಂಗ ಸೇವೆಗೆ ನೇಮಕಗೊಂಡರು (1949). ಇಂಗ್ಲೆಂಡಿನಲ್ಲಿ ತರಬೇತಿ ಪಡೆದ ಅನಂತರ ಮಾಸ್ಕೋ ದೂತಾವಾಸದಲ್ಲಿ ನಿಯುಕ್ತರಾದರು (1951). ಬೆನ್ನೆಲುಬಿನ ಕ್ಷಯದಿಂದ ಊರಿಗೆ ಮರಳಿ ಕೆಲಕಾಲ ಮುಂಬೈ ಯಲ್ಲಿ ಚಿಕಿತ್ಸೆ ಪಡೆದು ಮತ್ತೆ ಕೆಲಸಕ್ಕೆ ಹಾಜರಾದರು (1956). ಇವರ ಪತ್ನಿ ವಿಜಯಲಕ್ಷ್ಮಿ. ಇವರಿಗೊಬ್ಬನೇ ಮಗ. ಸರಳ ಜೀವನ, ಜೀವಕಾರುಣ್ಯ, ನಿರ್ಮಲವಾದ ಅಂತಃಕರಣ, ತಿಳಿಹಾಸ್ಯ ಪ್ರವೃತ್ತಿ ಬಾಗಲೋಡಿಯವರ ವ್ಯಕ್ತಿತ್ವದ ವಿಭಿನ್ನ ಮುಖಗಳಾಗಿದ್ದವು.

ಉಗ್ರ ನಿರೀಶ್ವರವಾದಿಯಾಗಿದ್ದ ಬಾಗಲೋಡಿಯವರು ಒಮ್ಮೆ ಖಾಯಿಲೆಯಿಂದ ಗುಣಮುಖರಾದ ಅನಂತರ ಅಧ್ಯಾತ್ಮ ಚಿಂತನೆಯ ಕಡೆಗೆ ಒಲಿದರು. ಕಟೀಲು ದುರ್ಗಾಪರಮೇಶ್ವರಿಯ ಅನನ್ಯ ಭಕ್ತರಾದರು. ಆರಾಧನ ಸಂಕಲನದ ಆರಂಭದಲ್ಲಿ ತಮ್ಮ ಬದುಕಿನ ಬದಲಾದ ನಿಲುವನ್ನು ಕುರಿತು ಹೇಳಿಕೊಂಡಿದ್ದಾರೆ.

ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿರುವಾಗಲೇ ಸಣ್ಣಕತೆಗಳನ್ನು ಬರೆಯತೊಡಗಿದ ಬಾಗಲೋಡಿಯವರು ಶುದ್ಧಫಟಿಂಗ ಎಂಬ ತಮ್ಮ ಮೊದಲ ಕತೆಯನ್ನು ಮಾಸ್ತಿಯವರ ಜೀವನ ಮಾಸಪತ್ರಿಕೆಯಲ್ಲಿ ಪ್ರಕಟಿಸಿದರು. ಹುಚ್ಚಮುನಸೀಫ ಮತ್ತು ಇತರ ಕತೆಗಳು (1949), ಆರಾಧನಾ (1954), ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು (1986)– ಇವು ಇವರ ಮೂರು ಸಂಕಲನಗಳು. ಇವರ ಕತೆಗಳಲ್ಲಿ ಹೃದಯವಂತಿಕೆ, ಅಪಾರ ಅನುಭವ, ಪ್ರಬುದ್ಧತೆ, ವಾಸ್ತವ ಬದುಕಿನ ಸೊಗಡು ದಟ್ಟವಾಗಿವೆ. ನನ್ನ ಕತೆಗಳೆಲ್ಲವೂ ದೇವರು, ಧರ್ಮ, ಮನುಷ್ಯಜೀವನ ಮತ್ತು ಮರಣ ಎಂಬ ಐದು ತತ್ತ್ವಗಳ ಮೇಲೆ ನಿಂತಿರುವುವು ಎಂಬುದನ್ನು ಓದುಗರು ಮನಗಾಣಬೇಕು ಎಂದು ಆರಾಧನಾ ಸಂಕಲನದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಸಾಮಾನ್ಯವಾಗಿ ದೇವರಾಯರ ಕತೆಗಳಲ್ಲಿ ಕೊನೆಯ ಘಟ್ಟದಲ್ಲಿ ಹಠಾತ್ ತಿರುವು ಸಂಭವಿಸುತ್ತದೆ. ಬದುಕಿನ ಅನಿಶ್ಚಿತ ಸ್ಥಿತಿಯನ್ನು ಚಿತ್ರಿಸುತ್ತದೆ. ಇವರ ಕತೆಗಳು ಮನುಷ್ಯನ ಮೂಲ ಸ್ವಭಾವವನ್ನು ಗುರುತಿಸುವುದರ ಜೊತೆಗೆ ತಾವು ಬೆಳೆದ ಪರಿಸರದ ಸಾಂಸ್ಕೃತಿಕ ಜಗತ್ತನ್ನೂ ಸೂಕ್ಷ್ಮವಾಗಿ ಅನಾವರಣ ಗೊಳಿಸುತ್ತವೆ. ತುಳುನಾಡಿನಲ್ಲಿ ನಡೆಯುವ ಜಾನುವಾರು ಜಾತ್ರೆ, ಅಲ್ಲಿನ ಸಾಮಾಜಿಕ ವ್ಯವಸ್ಥೆಯ ವಿವರಗಳು, ಗೇಣಿಪದ್ಧತಿ, ಬ್ಯಾರಿಜನಾಂಗದ ಬದುಕು ಇವರ ಕತೆಗಳಲ್ಲಿ ಸಮೃದ್ಧವಾಗಿ ಚಿತ್ರಣಗೊಂಡಿದೆ.

ಇವರ ಮೊದಲ ಕತೆಯಾದ 'ಶುದ್ಧಫಟಿಂಗ'ದ ಹುಸೇನ ಫಟಿಂಗನಾ ದರೂ ಮಾನವೀಯತೆಯುಳ್ಳ ವ್ಯಕ್ತಿ. ವೀರಭೀಡು ಬಲಭೀಮ್ಮೆಯ ಅರಸು ಕತೆ ತುಳುನಾಡಿನ ಅರಸೊತ್ತಿಗೆಯ ಅಧಃಪತನದ ವಿವರಗಳನ್ನು ನೀಡುತ್ತದೆ. ವಿದ್ಯಾಭ್ಯಾಸ ಮತ್ತು ನಿರುದ್ಯೋಗದ ಚಿತ್ರ ಭೀಮಸೇನ ಹೆಂಗರುಳನ್ನು ಕಂಡುದು ಎಂಬ ಕತೆಯಲ್ಲಿದೆ. ಒಟ್ಟಿನಲ್ಲಿ ಈ ಸಂಕಲನದ ಕತೆಗಳು ವರ್ತಮಾನದ ಸಾಮಾಜಿಕ, ಆರ್ಥಿಕ ಬದುಕಿನ ಸ್ಥಿತ್ಯಂತರದ ಚಿತ್ರವನ್ನು ನೀಡುತ್ತವೆ.

ಆರಾಧನಾ ಸಂಕಲನದಲ್ಲಿರುವ ಬರ್ಲಿನಿನಿಂದ ಭಾಗೀರಥಿಗೆ ಎಂಬ ಕತೆ ಭಾರತದ ಬಗೆಗಿನ ಸೆಳೆತ, ಭಾರತದ ಆಧ್ಯಾತ್ಮಿಕತೆಯ ಬಗೆಗಿನ ಹಿರಿಮೆಯನ್ನು ವ್ಯಕ್ತಪಡಿಸುತ್ತದೆ. ಹುಲಿ ಜೋಯಿಸರ ಕತೆಯಲ್ಲಿ ನಿಷ್ಠುರ ಸತ್ಯವನ್ನು ಹೇಳುವ ಹುಲಿ ಜೋಯಿಸರಲ್ಲಿಯೂ ಇರುವ ಮಾನವೀಯತೆಯನ್ನು ಗುರುತಿಸುತ್ತದೆ. ಪವಾಡ ಪುರುಷ ಎಂಬ ಕತೆಯಲ್ಲಿ ಅಹಿಂಸೆಯ ಶೋಧನೆಯಿದೆ. ಧರ್ಮ ಮತ್ತು ಮುಗ್ಧತೆಯ

ಶೋಧನೆಯ ಕಲ್ಲುಮನಸ್ಸಿನ ರಾಜಮ್ಮ ಕತೆಯ ಅಂತಃಸ್ಸತ್ತ್ವ. ತುಳುನಾಡಿನಲ್ಲಿ ನಡೆಯುವ ದನದ ಜಾತ್ರೆಯ ವಿವರಗಳು ಹುಚ್ಚು ಮುದುಕಿ ಕತೆಯಲ್ಲಿದೆ.

ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು ಎಂಬ ಸಂಕಲನ ಇವರ ನಿಧನಾನಂತರ ಪ್ರಕಟವಾಯಿತು. ಸಾಮ್ರಾಜ್ಯವನ್ನು ಕಟ್ಟುವ ಮಾನವನ ಮಹತ್ವಾಕಾಂಕ್ಷೆ ಎಂದೂ ಮುಗಿಯದು ಎಂಬ ಸತ್ಯ ಮೃಷ್ಟಾನ್ನ ಕತೆಯಲ್ಲಿದೆ. ಶುಕ್ರಾಚಾರ್ಯ, ಅರವಿಂದ ವದನೆಯ ತೊಡಕು, ಭೀಮಸೇನ ಪಿಪೀಲಿಕ, ಮಗ್ಗದ ಸಾಹೇಬರು, ಕೃಷ್ಣಲೀಲೆ ಮೊದಲಾದ ಕತೆಗಳಲ್ಲಿ ಸಾಂಪ್ರದಾಯಿಕ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ, ಹಿರಿಯರ ಆಶಯಕ್ಕೆ ವಿರುದ್ಧವಾಗಿ ನಡೆಯುವ ಕಿರಿಯ ತಲೆಮಾರಿನ ಚಿತ್ರಣವಿದೆ. ಆಧುನಿಕತೆಯ ಅನುಸರಣೆಯಿಂದ ಉಂಟಾದ ತಲ್ಲಣಗಳೂ ಕೆಳವರ್ಗದ ಶೋಷಣೆ, ರಾಜವಂಶವನ್ನು ವೈಭವೀಕರಿಸುವ ಚರಿತ್ರೆಯ ವ್ಯಂಗ್ಯವನ್ನು ಲೇಖಕರು ಈ ಕಥೆಗಳಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇಂಗ್ಲಿಷ್ ವಿದ್ಯಾಭ್ಯಾಸ, ಪಾಶ್ಚಾತ್ಯ ಸಾಹಿತ್ಯದ ಅಧ್ಯಯನದಿಂದ ಪಡೆದ ಉದಾರವಾದಿ ನಿಲುವು ಇವರ ಕತೆಗಳಲ್ಲಿ ಮೂಡಿಬಂದಿದೆ.

ಇವರ ಎಲ್ಲ ಕತೆಗಳನ್ನೂ ಬಾಗಲೋಡಿ ದೇವರಾಯರ ಸಮಗ್ರ ಕತೆಗಳು ಎಂಬ ಹೆಸರಿನಲ್ಲಿ ಪ್ರಿಸಮ್ ಬುಕ್ಸ್ ಸಂಸ್ಥೆ ಪ್ರಕಟಿಸಿದೆ (2000). ಬಾಗಲೋಡಿ ದೇವರಾಯರನ್ನು ಕುರಿತು ದೇವಸ್ಮರಣೆ ಎಂಬ ಸ್ಮರಣ ಸಂಪುಟವೂ ಪ್ರಕಟವಾಗಿದೆ (2003). ಇವರು 1985 ಜುಲೈ 25ರಂದು ನಿಧನರಾದರು. **(ಎಸ್.ಎಚ್.ಜಿ.)**

**ಬಾಗಳಿ:** ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಪನಹಳ್ಳಿಯಿಂದ ಉತ್ತರಕ್ಕೆ ಹೊಸಪೇಟೆ ಮಾರ್ಗದಲ್ಲಿ 11 ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 3,160. 11–13ನೆಯ ಶತಮಾನಗಳಲ್ಲಿ ಇದು ಬಾಳ್ಗುಳಿ ಎಂಬ ಹೆಸರಿನ ಪ್ರಸಿದ್ಧ ಅಗ್ರಹಾರವಾಗಿತ್ತು. ಹೊಯ್ಸಳ ಇಮ್ಮಡಿ ಬಲ್ಲಾಳನ 1193–94ರ ಶಾಸನವೊಂದರಿಂದ ಇದು ಅವನ ನೆಲೆವೀಡುಗಳಲ್ಲೊಂದಾಗಿತ್ತೆಂದು ತಿಳಿದುಬರುತ್ತದೆ.

ಚಾಳುಕ್ಯರ ಕಾಲದಲ್ಲಿ ಕಟ್ಟಿರುವ ಕಲ್ಲೇಶ್ವರ ದೇವಾಲಯ ಇಲ್ಲಿನ ಪ್ರಮುಖ ಆಕರ್ಷಣೆ. ದೇವಾಲಯ ಮನಸೆಳೆಯುವ ಕಟ್ಟಡ. ಗರ್ಭಗುಡಿಯ ದ್ವಾರ ಮತ್ತು ಮಂಟಪದ ಮೇಲ್ಚಾವಣಿಗಳನ್ನು ಸುಂದರವಾಗಿ ಬಿಡಿಸಲಾಗಿದೆ. ದೇವಾಲಯದಲ್ಲಿ 59 ಕಂಬಗಳಿದ್ದು, ಒಂದೊಂದೂ ವೈವಿಧ್ಯಮಯವಾಗಿ ಸುಂದರವಾಗಿವೆ. ಕೆಲವು ಪೀಠದಿಂದ ಬೋದಿಗೆಯವರೆಗೆ ಒಂದೇ ವಿನ್ಯಾಸದಲ್ಲಿದ್ದರೆ ಮತ್ತೆ ಕೆಲವಕ್ಕೆ ಚಚ್ಚೌಕ, ವೃತ್ತಾಕಾರ, ಅಷ್ಟಾಕೃತಿಗಳ ಸಂಯೋಜನವಿದೆ. 1018ರ ಶಾಸನವೊಂದರಲ್ಲಿ ಈ ದೇವಾಲಯದ ಹೆಸರನ್ನು ಉಲ್ಲೇಖಿಸಲಾಗಿದೆ. ಅದರಲ್ಲಿ ಈ ದೇವಾಲಯದ ಸ್ಥಾಪನೆಯ ವಿಚಾರವೇನೂ ಕಂಡುಬರದಿರುವುದರಿಂದ ಇದು ಈ ಶಾಸನದ ಕಾಲಕ್ಕಿಂತಲೂ ಮುಂಚೆ ಕಟ್ಟಿರಬಹುದೆಂದು ಊಹಿಸಬಹುದಾಗಿದೆ. ಈ ದೇವಾಲಯದಲ್ಲಿ 36 ಶಾಸನಗಳೂ ಗ್ರಾಮದ ಇತರೆಡೆಗಳಲ್ಲಿ ಐದು ಶಾಸನಗಳೂ ದೊರೆಕಿವೆ. ಇವುಗಳಲ್ಲಿ 12 ಶಾಸನಗಳು ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿವೆ. **(ಎಸ್.ವಿ.ಎಸ್.;ವಿ.ಜಿ.ಕೆ.)**

**ಬಾಗೇಪಲ್ಲಿ:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯಪಟ್ಟಣ. ತಾಲ್ಲೂಕಿನ ಪೂರ್ವ, ಪಶ್ಚಿಮ ಮತ್ತು ಉತ್ತರದಲ್ಲಿರುವ ಆಂಧ್ರಪ್ರದೇಶವೂ ದಕ್ಷಿಣದಲ್ಲಿ ಗುಡಿಬಂಡೆ, ಶಿಡ್ಲಘಟ್ಟ ಮತ್ತು ಚಿಂತಾಮಣಿ ತಾಲ್ಲೂಕುಗಳೂ ಇವೆ. ತಾಲ್ಲೂಕು ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಸೇರಿದೆ. ಮಿಟ್ಟೆಮರಿ, ಬಾಗೇಪಲ್ಲಿ, ಚೇಳೂರು, ಪಾತಪಾಳ್ಯ ಮತ್ತು ಗೂಳೂರು ಇವು ಈ ತಾಲ್ಲೂಕಿನ ಹೋಬಳಿಗಳು. ಈ ತಾಲ್ಲೂಕಿನಲ್ಲಿ ಒಂದು ಪಟ್ಟಣ ಮತ್ತು 228 ಗ್ರಾಮಗಳಿವೆ. ವಿಸ್ತೀರ್ಣ 932.9 ಚ.ಕಿಮೀ. ಜನಸಂಖ್ಯೆ 1,49,570.

ತಾಲ್ಲೂಕಿನ ಹೆಚ್ಚು ಭಾಗ ಕಣಶಿಲೆಯ ಪ್ರದೇಶ. ಅಲ್ಲಲ್ಲಿ ಕಣಶಿಲೆಯ ಬೆಟ್ಟಗಳಿವೆ. ಬಾಗೇಪಲ್ಲಿಯ ಪೂರ್ವಕ್ಕೆ ಉತ್ತರ–ದಕ್ಷಿಣವಾಗಿ ಹರಡಿರುವ ದೊಂಗಲಕೊಂಡ ಬೆಟ್ಟಗಳು ಗುಮ್ಮನಾಯಕನ ಪಾಳ್ಯದಿಂದ ಹೊರಟು, ಬಾಗೇಪಲ್ಲಿ ತಾಲ್ಲೂಕಿನ ಚಿತ್ರಾವತಿ ಮತ್ತು ಪಾಪಘ್ನಿ ನದೀಕಣಿವೆಗಳನ್ನು ಬೇರ್ಪಡಿಸುತ್ತವೆ. ತಾಲ್ಲೂಕಿನ ಆಗ್ನೇಯ ಭಾಗದಲ್ಲಿ ಪಾಪಘ್ನಿನದಿ ಹರಿಯುತ್ತದೆ. ಈ ನದಿಗೆ ಅಡ್ಡಲಾಗಿ ವ್ಯಾಸ ಸಮುದ್ರ ಕೆರೆಯನ್ನು ನಿರ್ಮಿಸಲಾಗಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಚಿತ್ರಾವತಿ ನದಿ ಹರಿಯುತ್ತದೆ. ಪಾಪಘ್ನಿಯ ಉಪನದಿಯಾದ ವಂಡಮನಹೊಳೆ ಮಿಟ್ಟೆಮರಿಯ ಪೂರ್ವ ಭಾಗದಲ್ಲಿರುವ ಇತಕಲ್‌ದುರ್ಗ ಬೆಟ್ಟಗಳಲ್ಲಿ ಹುಟ್ಟಿ ತಾಲ್ಲೂಕಿನಲ್ಲಿ ಸುಮಾರು 25 ಕಿಮೀ ದೂರ ಹರಿದು ರೆಡ್ಡಿಯರ ಪಳ್ಳಿ ಗ್ರಾಮದ ಪೂರ್ವದಲ್ಲಿ ಆಂಧ್ರಪ್ರದೇಶವನ್ನು ಪ್ರವೇಶಿಸುತ್ತದೆ.

ಈ ತಾಲ್ಲೂಕಿನಲ್ಲಿ ಮಳೆ ಕಡಿಮೆ; ವಾರ್ಷಿಕ ಸರಾಸರಿ 676 ಮಿಮೀ. ಸಾಮಾನ್ಯತಃ ಸೆಖೆ ಹೆಚ್ಚು. ತಾಲ್ಲೂಕಿನ ಕೆಲವೆಡೆ ಕುರುಚಲು ಗಿಡಗಳ ಕಾಡುಗಳಿವೆ. ಈ ತಾಲ್ಲೂಕಿನಲ್ಲಿ 18444.60 ಹೆ. ಅರಣ್ಯ ಪ್ರದೇಶ, 18703.61 ಹೆ. ಹುಲ್ಲುಗಾವಲು, ವ್ಯವಸಾಯ ಯೋಗ್ಯ ಭೂಮಿ 94226.70 ಹೆ. 29675.69 ಹೆ. ಬಿತ್ತನೆಯಾಗಿತ್ತು. ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ನೀರೊದಗಿಸುವ ಅನೇಕ ಕೆರೆಗಳೂ ಬಾವಿಗಳೂ ಇವೆ. ಚಿತ್ರಾವತಿ ನದಿಯ ಆಸರೆಯುಳ್ಳ ರೆಡ್ಡಿಹಳ್ಳಿಕೆರೆ ಮತ್ತು ರಾಮಸಂದ್ರ ಕೆರೆಗಳ ನೀರಿನಿಂದ ನೀರಾವರಿ ಅನುಕೂಲವಿದೆ. ರಾಗಿ, ಬತ್ತ, ನೆಲಗಡಲೆ, ಮೆಣಸಿನಕಾಯಿ, ಈರುಳ್ಳಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ.

ಬಾಗೇಪಲ್ಲಿ ತಾಲ್ಲೂಕು ಕರ್ನಾಟಕ ರಾಜ್ಯದ ಪೂರ್ವದಂಚಿನಲ್ಲಿ ಆಂಧ್ರಪ್ರದೇಶದ ಗಡಿಗೆ ಹತ್ತಿರವಿದೆ. ಆಂಧ್ರ–ಕರ್ನಾಟಕ ರಾಜ್ಯಗಳ ಈ ಸುತ್ತಿನ ಪ್ರದೇಶಕ್ಕೆ ವ್ಯಾಪಾರಕೇಂದ್ರವಾಗಿದೆ. ತಾಲ್ಲೂಕು ಕೋಲಾರಕ್ಕೆ ಉತ್ತರದಲ್ಲಿದೆ.

ಬಾಗೇಪಲ್ಲಿಗೆ 3 ಕಿಮೀ ದೂರದಲ್ಲಿರುವ ದೇವರಗುಡಿಪಳ್ಳಿಯ ವೆಂಕಟರಮಣಸ್ವಾಮಿ ದೇವಾಲಯ ಬಹು ಪ್ರಸಿದ್ಧ. ಗುಮ್ಮನಾಯಕನ ಪಾಳ್ಯ ಸು. 1882ರವರೆಗೂ ತಾಲ್ಲೂಕು ಕೇಂದ್ರವಾಗಿತ್ತು. ಇದು ಒಂದು ಪಾಳೆಯಪಟ್ಟು ಸಹಾ ಆಗಿತ್ತು **(ನೋಡಿ : ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು)**.

ಬಾಗೇಪಲ್ಲಿ ಈ ಹೋಬಳಿ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಚಿತ್ರಾವತಿ ನದಿಯ ಬಲದಂಡೆಯ ಮೇಲೆ, ಕೋಲಾರಕ್ಕೆ ವಾಯವ್ಯದಲ್ಲಿ 110 ಕಿಮೀ ದೂರದಲ್ಲಿದೆ. ಜನಸಂಖ್ಯೆ 20,119. ಈ ಪಟ್ಟಣವನ್ನು ಬಾಗೇನಹಳ್ಳಿ ಎಂದೂ ಕರೆಯುವುದುಂಟು. ಬೆಂಗಳೂರು–ಅನಂತಪುರ ರಸ್ತೆ ಬಾಗೇಪಲ್ಲಿ ಮುಖಾಂತರ ಹಾದುಹೋಗುತ್ತದೆ. ಹಿಂದೆ ಮೂರು ನಗರಗಳು ಇಲ್ಲಿ ಇದ್ದುವೆಂದು ಹೇಳುತ್ತಾರೆ. **(ಕೆ.ಆರ್.ಆರ್.)**

**ಬಾಗೇಶಪುರ:** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ದಕ್ಷಿಣದಂಚಿನಲ್ಲಿ ಅರಸೀಕೆರೆಗೆ 18 ಕಿಮೀ ದೂರದಲ್ಲಿರುವ ಒಂದು ಗ್ರಾಮ. ಮೈಸೂರು–ಅರಸೀಕೆರೆ ರೈಲುಮಾರ್ಗದ ಒಂದು ನಿಲ್ದಾಣ. ಜನ ಸಂಖ್ಯೆ 2,228.

ಇದು ಭೂವೈಜ್ಞಾನಿಕ ಮತ್ತು ಖನಿಜಗಳ ದೃಷ್ಟಿಯಿಂದ ಮುಖ್ಯವಾದ ಸ್ಥಳ. ಅತಿ ಪುರಾತನವಾದ ಹಿರಿಯ ಪ್ರೀಕೇಂಬ್ರಿಯನ್ ಯುಗದ ಶಿಲೆಗಳಿಂದ ಸುತ್ತುವರಿಯಲ್ಪಟ್ಟ ಬಾಗೇಶಪುರದ ಪ್ರದೇಶದಲ್ಲಿ ರೂಪಾಂತರ ಶಿಲೆಗಳು (ಪದರುಶಿಲೆಗಳು ಮತ್ತು ನೈಸ್ ಶಿಲೆಗಳು) ಮತ್ತು ಪದರು

ಶಿಲೆಗಳನ್ನು ಭೇದಿಸಿರುವ ಗ್ರಾನೈಟ್ ಶಿಲೆಗಳು ವಿಪುಲವಾಗಿವೆ. ಗ್ರಾನೈಟ್ ಶಿಲೆಗಳಲ್ಲಿ ಪೆಗ್ಮಟೈಟ್ ಗೌಣಶಿಲೆಗಳು ವಕ್ರವಕ್ರವಾದ ದಿಂಡು ಅಥವಾ ಸಿರಗಳ ರೂಪದಲ್ಲಿ ಅಂತಸ್ಸರಣ ಹೊಂದಿವೆ.

ಬಾಗೇಶಪುರದ ಅತ್ಯಂತ ಮುಖ್ಯ ಖನಿಜವೆಂದರೆ ಬಿಳಿಜೇಡು ಅಥವಾ ಚೈನ ಮಣ್ಣು. ಮೂಲ ಶಿಲೆಗಳಾದ ಪೆಗ್ಮಟೈಟ್ ಮತ್ತು ಕಡಿಮೆ ಪ್ರಮಾಣ ದಲ್ಲಿ ಗ್ರಾನೈಟ್ ನೈಸುಗಳಲ್ಲಿರುವ ಫೆಲ್ಸ್‌ಪಾರ್ ಎಂಬ ಮೂಲಖನಿಜವು ಕಾಲಾಂತರದಲ್ಲಿ ನೈಸರ್ಗಿಕವಾದ ಶೀತೋಷ್ಣಗಳಿಂದ ಶಿಥಿಲವಾಗಿ, ತನ್ನಲ್ಲಿ ರುವ ನೀರಿನ ಅಂಶವನ್ನು ಕಳೆದುಕೊಂಡು ಜಲರಹಿತ ಬಿಳಿಜೇಡಾಗಿ ಪರಿವರ್ತಿತವಾಗಿದೆ. ಕರ್ನಾಟಕದ ಖನಿಜಗಳ ವರ್ಗೀಕರಣದ ಪ್ರಕಾರ, ಬಾಗೇಶಪುರದ ಬಿಳೀಜೇಡನ್ನು ಫೆಲ್ಸ್‌ಫಾರ್ ಮೂಲಾಂಶವುಳ್ಳ ಶಿಲೆಗಳ ಶಿಥಿಲೀಕರಣದಿಂದುಂಟಾಗುವ ಗೌಣ ಖನಿಜ ಅಥವಾ ಶಿಲ್ಕು ಖನಿಜ ಎಂದು ಕರೆಯಬಹುದು.

ಹಿತವಾದ ಬಿಳಿಯ ಬಣ್ಣದ ಜೇಡು ನಿಕ್ಷೇಪಗಳು ಬಾಗೇಶಪುರದ ಪೂರ್ವ ಮತ್ತು ಪಶ್ಚಿಮದಲ್ಲಿ ಕಾಣಸಿಗುತ್ತವೆ. ಬಾಗೇಶಪುರಕ್ಕೆ ಎರಡು ಕಿಮೀ ದೂರದ ಪಶ್ಚಿಮ ಜಂಬಿಟ್ಟಗೆಯ ಬಳಿಯಿರುವ ಝರಿಗಳ ತಳಗಳೂ ಸಹ ಬಿಳಿಜೇಡು ಪದರಗಳನ್ನು ಹೊಂದಿವೆ. ಅಲ್ಪಪ್ರಮಾಣ ದಲ್ಲಿ ತೊರೆಗಳ ಇಕ್ಕೆಡೆಗಳಲ್ಲಿಯೂ ಇದು ಕಾಣಸಿಗುತ್ತದೆ. ಈ ನಿಕ್ಷೇಪ ಗಳ ಗುಂಪಿಗೆ ಅಪ್ಪೇನಹಳ್ಳಿ ನಿಕ್ಷೇಪಗಳೆಂದು ಹೆಸರು. ನಂದಿಹಳ್ಳಿ ನಿಕ್ಷೇಪಗಳು ಬಾಗೇಶಪುರದ ಪೂರ್ವಕ್ಕಿವೆ. ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವರದಿಯ ಪ್ರಕಾರ ಈ ನಿಕ್ಷೇಪಗಳಲ್ಲಿ ಸುಮಾರು 2ರಿಂದ $2\ ^{1}/_{2}$ ಲಕ್ಷ ಟನ್‌ಗಳಷ್ಟು ಬಿಳಿಜೇಡು ದೊರೆಯಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಗಣಿ ಕಾರ್ಯ ಆರಂಭವಾದ ಅನಂತರ ಇನ್ನೂ ಹೆಚ್ಚು ದೊರೆಯುವ ಸಾಧ್ಯತೆ ಇದೆಯೆಂದು ನಂಬಲಾಗಿದೆ.

ಗಣಿಯಿಂದ ಹೊರತೆಗೆದ ಜೇಡಿನಲ್ಲಿ ಮರಳು ಮತ್ತು ಅಭ್ರಕದ ಸೋಂಕಿರುವುದರಿಂದ ಜೇಡನ್ನು ಬಾಗೇಶಪುರದ ಪಶ್ಚಿಮದಲ್ಲಿ ಹಾಗೂ ಇತ್ತೀಚೆಗೆ ಪೂರ್ವದಲ್ಲಿ ಎತ್ತರವಾದ ಸ್ಥಳದಲ್ಲಿ ಕಟ್ಟಿರುವ ತೊಟ್ಟಿಗಳಲ್ಲಿ ನೀರಿನ ಮಿಶ್ರಣದಿಂದ ರಾಡಿ ಮಾಡಿ, ರಾಡಿಯನ್ನು ತಗ್ಗಿಸಿ ಹರಿದು ಹೋಗುವಂತೆ ಕಾಲುವೆಗಳಲ್ಲಿ ಹರಿಸಿ ಶುದ್ಧಿ ಮಾಡುತ್ತಾರೆ. ಶುದ್ಧ ಜೇಡು ಬೆಂಗಳೂರಿನ ಸರ್ಕಾರಿ ಪಿಂಗಾಣಿ ಕಾರ್ಖಾನೆ ಹಾಗೂ ಭದ್ರಾವತಿ ಕಾಗದದ ಕಾರ್ಖಾನೆಗಳಿಗೂ ಅಶುದ್ಧ ಜೇಡು ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೂ ಸರಬರಾಜಾಗುತ್ತದೆ. ಶುದ್ಧ ಬಿಳೀಜೇಡನ್ನು ಪಿಂಗಾಣಿ ಸಾಮಾನುಗಳ ತಯಾರಿಕೆ ಹಾಗೂ ವಿದ್ಯುದ್ವಾಹಕ ತಂತಿಗಳ ಊರೆಗಳಿಗಾಗಿ ಉಪಯೋಗಿಸುವ ಪಿಂಗಾಣಿ ಊರೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. (ಎಸ್‌ಎ.ಎಸ್.)

**ಬಾಣವಂಶ:** ಕರ್ನಾಟಕದ ನಾನಾ ಕಡೆ ಮಾಂಡಲಿಕರಾಗಿ ಹಲವು ಶಾಖೆಗಳನ್ನು ಹೊಂದಿ ಆಡಳಿತ ನಡೆಸಿದ ಒಂದು ಪ್ರಾಚೀನ ರಾಜವಂಶ. ವಾಸ್ತವದಲ್ಲಿ ಇದರ ಹಳಮೆ ಇಡೀ ದಕ್ಷಿಣ ಭಾರತವನ್ನು ವ್ಯಾಪಿಸಿದೆ. ಇವರು ತಮ್ಮನ್ನು ಮಹಾವಲಿ (ಮಹಾಬಲಿ/ಬಲಿ, ಬಲಿ ಚಕ್ರವರ್ತಿ) ವಂಶದವರೆಂದು ಹೇಳಿಕೊಂಡಿದ್ದಾರೆ. ಪುರಾತನರೆಂಬ ಶೈವಧರ್ಮದ ಪುರಾತನರಲ್ಲಿ ವೈಷ್ಣವಧರ್ಮದಲ್ಲಿ ಪ್ರಾಚೀನ ಭಕ್ತರಾದ ಆಳ್ವಾರರಲ್ಲಿ ಒಬ್ಬರು. ತಿರುಪಾಣಾಳ್ವಾರ ಹಾಗೂ ತಿರುನೀಲಕಂಠಪಾಣರ್ ಎಂಬವರು ಆಗಿ ಹೋಗಿದ್ದಾರೆ; ಅರ್ಥಾತ್ ಶೈವ ಹಾಗೂ ವೈಷ್ಣವ ಎರಡೂ ಧರ್ಮ ವನ್ನು ಪಾಣರು (ಬಾಣರು–ತಮಿಳಿನಲ್ಲಿ 'ಚ'ಕಾರವಿಲ್ಲ) ಪಾಲಿಸಿಕೊಂಡು ಬಂದುದು ಕಂಡುಬರುತ್ತದೆ. ಈ ವ್ಯಕ್ತಿಗಳ ಕಾಲ ಅನಿರ್ದಿಷ್ಟ.

ಬಾಣರು ಆಂಧ್ರಮಂಡಲದ ಪಶ್ಚಿಮಕ್ಕೆ 'ಸಪ್ತಾರ್ಧಲಕ್ಷ' ಭೂಭಾಗವನ್ನು ಆಳುತ್ತಿದ್ದರೆಂಬುದು ಒಂದು ಹೇಳಿಕೆ. ಇದು ಸಂಪೂರ್ಣ ಕರ್ನಾಟಕವನ್ನು ಸೂಚಿಸುತ್ತದೆ. 'ಸಪ್ತಾರ್ಧಲಕ್ಷಕುಂತಳ/ಕರ್ನಾಟಕ/ರಟ್ಟಪಾಡಿ' ಎಂಬಂತಹ ಒಂದು ಮಾತಿಗೆ ಅನುಗುಣವಾಗಿದೆ. ಆವಾಗ ಇದು ಸಂಪೂರ್ಣ ಕರ್ನಾಟಕವನ್ನೇ ವ್ಯಾಪಿಸಿ ನಿಂತಿರುವ ಶಾಖೋಪಶಾಖೆಗಳತ್ತ ದೃಷ್ಟಿಯನ್ನು ಹರಿಯಿಸುವುದಕ್ಕೆ ಕಾರಣವಾಗುತ್ತದೆ. ಚಾಳುಕ್ಯ,ಕದಂಬ, ವೈದುಂಬ, ಬಾಣ, ಗಂಗ, ಯಾದವ, ಪಲ್ಲವ, ಗುಪ್ತ ಇತ್ಯಾದಿ ಶಾಸನಗಳಿಂದ ತಿಳಿದುಬರುವ ಬಾಣರ ವಂಶಾವಳಿ ಈ ರೀತಿ ಇದೆ:

ಮಹಾಬಲಿ
|
ಬಾಣಾಧಿರಾಜ ನಂದಿವರ್ಮನ್ ಅಥವಾ ಜಯನಂದಿವರ್ಮವ್ (ಸು. 770–795)
|
ವಿಜಯಾದಿತ್ಯ I (795–835)
|
ಮಲ್ಲದೇವ ಜಗದೇಕಮಲ್ಲ (ಸು. 835–850)
|
ವಿಕ್ರಮಾದಿತ್ಯ I ಜಯಮೇರು ಬಾಣವಿದ್ಯಾಧರ (ಸು. 850–895)
|
ವಿಜಯಾದಿತ್ಯ II ಪ್ರಭುಮೇರು (ವೀರ ಚೂಳಾಮಣಿ) (ಸು. 895–910)
|
ವಿಕ್ರಮಾದಿತ್ಯ II (ಸು. 910–916)
|
ವಿಜಯಾದಿತ್ಯ III (916)
|
ವಿಜಯಬಾಹು ವಿಕ್ರಮಾದಿತ್ಯ III (ಸು. 965)

ರಾಜಮನೆತನಗಳ ಶಾಖೋಪಶಾಖೆಗಳು ಇದನ್ನೇ ಬೆರಳಿಟ್ಟು ತೋರಿಸು ತ್ತವೆ. ಬಾಣರ ಶಾಖೆಗಳೂ ಹಲವು: ಶ್ರವಣಬೆಳಗೊಳದ ಸುತ್ತಮುತ್ತ, ತೊಂಡೈಮಂಡಲದ ಹಾಗೂ ಅದರ ಎಡಬಲದಲ್ಲಿ, ಗಂಗವಾಡಿಯಲ್ಲಿ, ಬನವಾಸಿ ಪನ್ನಿರ್ಛ್ಛಾಸಿರನಾಡಿನಲ್ಲಿ ಹಾಗೂ ಭೀಮಾನದಿಯ ಎಡಬಲ ಪ್ರದೇಶ–ಅದರಲ್ಲೂ ಚಿತ್ತಾಪುರ ತಾಲ್ಲೂಕು, ಸೇಡಂ ತಾಲ್ಲೂಕು ಮತ್ತು ಕಲ್ಬುರ್ಗಿ ಹಾಗೂ ಚಿಂಚೋಳಿ ತಾಲ್ಲೂಕುಗಳ ಮಧ್ಯದಲ್ಲಿ ಖಾಂಡವ ಮಂಡಲ ಎಂದು ಪ್ರಸಿದ್ಧವಾದ ಪ್ರದೇಶದಲ್ಲಿ ಹಲವು ಶಾಖೆಗಳನ್ನು ಹೊಂದಿದ್ದುದು ಇದೀಗ ಸ್ಪಷ್ಟವಿದೆ. ಇವರ ಶೃಂಖಲಾಬದ್ಧವಾದ ಇತಿಹಾಸವನ್ನು ಕಟ್ಟಿಕೊಡಲು ಸಾಧ್ಯವಿಲ್ಲ. ಆದರೆ ಉಪಲಬ್ಧವಾಗಿರುವ ಶಾಸನಾದಿ ದಾಖಲೆಗಳಲ್ಲಿ ಹಾಗೂ ಶಿಲಪ್ಪದಿಗಾರಂ, ಮಣಿಮೇಖಲೈ (ತಮಿಳು) ಹಾಗೂ ಲೋಕವಿಭಾಗ (ಸಂಸ್ಕೃತ) ಮೊದಲಾದ ಗ್ರಂಥಗಳಲ್ಲಿ ಬಾಣರ ಉಲ್ಲೇಖಗಳಿವೆ. (ಎಸ್.ಜಿ.ವಿ.)

**ಬಾಣಾವರ:** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಒಂದು ಪಟ್ಟಣ ಹಾಗೂ ಹೋಬಳಿ ಕೇಂದ್ರ. ಬೆಂಗಳೂರು–ಹುಬ್ಬಳ್ಳಿ ರೈಲುಮಾರ್ಗದ ಒಂದು ನಿಲ್ದಾಣ. ಬೆಂಗಳೂರು–ಹೊನ್ನಾವರ ರಸ್ತೆಯಲ್ಲಿ ಅರಸೀಕೆರೆಯಿಂದ 14 ಕಿಮೀ ಉತ್ತರಕ್ಕಿದೆ. ಜನಸಂಖ್ಯೆ 8,327.

1882ರ ವರೆಗೂ ಬಾಣಾವರ ಇದೇ ಹೆಸರಿನ ತಾಲ್ಲೂಕು ಕೇಂದ್ರ ವಾಗಿದ್ದು ಕಡೂರು ಜಿಲ್ಲೆಗೆ ಸೇರಿತ್ತು. 1886ರಲ್ಲಿ ಅರಸೀಕೆರೆ ತಾಲ್ಲೂಕಿನ ರಚನೆಯಾದಾಗ ಅರಸೀಕೆರೆ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿತು. 1924ರಲ್ಲಿ ಪುರಸಭೆ ಸ್ಥಾಪನೆಯಾಯಿತು.

ಇಲ್ಲಿ ಬಾಣೇಶ್ವರ ದೇವಾಲಯವಿರುವುದರಿಂದ ಈ ಊರಿಗೆ ಬಾಣಾವರ ಎಂಬ ಹೆಸರು ಬಂದಿರಬೇಕೆಂಬ ಅಭಿಪ್ರಾಯವಿದೆ. ಲಕ್ಷ್ಮಣ ಆಯಾಸ ದಿಂದ ಹೊರಲಾರದೆ ಕೆಳಗೆ ಹಾಕಿಹೋಗಿದ್ದ ಬಾಣಗಳನ್ನು ರಾಮ

ಇಲ್ಲಿ ಎತ್ತಿಕೊಂಡ ಕಾರಣ ಈ ಸ್ಥಳಕ್ಕೆ ಬಾಣಹೊರು ಅಥವಾ ಬಾಣಾವರ ಎಂಬ ಹೆಸರು ಬಂತೆಂದು ಐತಿಹ್ಯ. ಬಾಣ ದೊರೆಗಳಿಗೂ ಈ ಊರಿಗೂ ಏನೋ ಸಂಬಂಧವಿರಬೇಕು ಎಂಬ ಅಭಿಪ್ರಾಯವೂ ಇದೆ. ಹನ್ನೊಂದನೆಯ ಶತಮಾನದಲ್ಲಿ ಈ ಊರು ಹರಿಹರ ಸೋಮೇಶ್ವರರಾಯ ಆಳುತ್ತಿದ್ದ ಪ್ರದೇಶದ ಮುಖ್ಯಸ್ಥಳವಾಗಿತ್ತೆಂದು ಪ್ರತೀತಿ. ತರುವಾಯ ಇದು ಹೊಯ್ಸಳ ರಾಜ್ಯಕ್ಕೆ ಸೇರಿತು. ಇಲ್ಲಿರುವ ಹೊಯ್ಸಳರ ಕಾಲದ ಶಾಸನಗಳಿಂದ ಇದು ಆಗ ಪ್ರಮುಖ ಸ್ಥಳವಾಗಿದ್ದು ವ್ಯಾಪಾರಕೇಂದ್ರವಾಗಿತ್ತೆಂದು ತೋರುತ್ತದೆ. ಆ ಕಾಲದಲ್ಲಿ ಇಲ್ಲಿ ಚಟ್ಟೇಶ್ವರ ದೇವಾಲಯನ್ನು ಕಟ್ಟಿಸಲಾಯಿತೆಂದು ಶಾಸನದಿಂದ ತಿಳಿದುಬರುತ್ತದೆ. 1189ರ ಶಾಸನವೊಂದರಿಂದ ಇಲ್ಲಿ ಕಮ್ಮಟ ಚೆಟ್ಟಿಸೆಟ್ಟಿ ಎಂಬ ಪ್ರಸಿದ್ಧ ವ್ಯಾಪಾರಿ ಕೆಲವು ಕೆರೆಕಟ್ಟೆಗಳನ್ನು ಕಟ್ಟಿಸಿ ಕೆಲವನ್ನು ಜೀರ್ಣೋದ್ಧಾರ ಮಾಡಿಸಿದಂತೆ, ತನ್ನ ಮಗ ಕಲ್ಲಿದೇವನ ಹೆಸರಿನಲ್ಲಿ ಕೆರೆಯೊಂದನ್ನು ಕಟ್ಟಿಸಿ ದೇವಸ್ಥಾನಗಳಿಗೆ ದತ್ತಿಬಿಟ್ಟಂತೆ ತಿಳಿದುಬರುತ್ತದೆ. ವಿಜಯನಗರದ ಪತನಾನಂತರ ಇಕ್ಕೇರಿಯ ನಾಯಕರು ಬಾಣಾವರವನ್ನು ಆಕ್ರಮಿಸಿಕೊಂಡರು. ಅಂತಿಮವಾಗಿ 1690ರಲ್ಲಿ ಮೈಸೂರಿನ ಚಿಕ್ಕದೇವರಾಜ ಇದನ್ನು ವಶಪಡಿಸಿಕೊಂಡ. ಹಿರೇಕಲ್ ಬೆಟ್ಟಗಳ ಮೇಲೆ ನಾಗಪುರಿಯಲ್ಲಿ ಒಂದು ನಗರವನ್ನು ಸ್ಥಾಪಿಸಲು ಹೈದರ್ ಇಲ್ಲಿನ ಜನರನ್ನು ಅಲ್ಲಿಗೆ ವರ್ಗಾಯಿಸಿದ. ಆದರೆ ಆ ಹೊಸ ಸ್ಥಳ ಅನಾರೋಗ್ಯಕರವೆಂದು ಕಂಡು ಬಂದದ್ದರಿಂದ ಜನ ಪುನಃ ತಮ್ಮ ಸ್ವಂತ ಊರಿಗೆ ಮರಳಿದರು.

ಇಲ್ಲಿ ವೆಂಕಟರಮಣ, ಬಾಣೇಶ್ವರ, ಕೇಶವ ಮೊದಲಾದ ದೇವಾಲಯಗಳಿವೆ. ಕೇಶವ ದೇವಾಲಯ ಹೊಯ್ಸಳರ ಕಾಲದ ರಚನೆ. ಇದರ ಸುತ್ತಮುತ್ತ ಅನೇಕ ಭಗ್ನ ವಿಗ್ರಹಗಳಿವೆ. ಇಲ್ಲಿ ಸಿಕ್ಕಿದ್ದೆಂದು ಹೇಳಲಾದ ವೇಣುಗೋಪಾಲ ವಿಗ್ರಹವೊಂದನ್ನು ರಕ್ಷಿಸಿ ಇಡಲಾಗಿದೆ. ಇಲ್ಲಿಯ ಅನೇಕ ಮನೆಗಳಲ್ಲಿ ಜೀರ್ಣವಾದ ದೇವಾಲಯಗಳ ವಿವಿಧ ಭಾಗಗಳನ್ನು ಬೇರೆಬೇರೆ ಉಪಯೋಗಕ್ಕಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಇಲ್ಲಿ ಒಂದು ಕೋಟೆ ಇದ್ದು ಅದು ಸು. 20 ಅಡಿಗಳಷ್ಟು ಎತ್ತರವಾಗಿದ್ದಿರಬೇಕೆಂಬ ಅಭಿಪ್ರಾಯವಿದೆ. ಈಗಿರುವ ಎತ್ತರದ ಸುತ್ತುಗೋಡೆ ಹಿಂದೆ ಅರಮನೆಯನ್ನೂ ಸುತ್ತುವರಿದಿತ್ತೆಂದು ಹೇಳಲಾಗಿದೆ.

ಬಾಣಾವರ ಪ್ರಮುಖ ವ್ಯಾಪಾರ ಕೇಂದ್ರ. ತೆಂಗು ಮತ್ತು ಹತ್ತಿ ಇಲ್ಲಿನ ಮುಖ್ಯ ವಾಣಿಜ್ಯ ಬೆಳೆಗಳು. ಪ್ರತಿ ಭಾನುವಾರ ಇಲ್ಲಿ ಸಂತೆ ನಡೆಯುತ್ತದೆ.

**(ಡಿ.ಎಸ್.ಜೆ.;ಎಸ್.ಎನ್.ಜಿ.)**

**ಬಾದಾಮಿ:** ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು. ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯಪಟ್ಟಣ. ಇತಿಹಾಸ ಪ್ರಸಿದ್ಧ ಸ್ಥಳ. ತಾಲ್ಲೂಕನ್ನು ಉತ್ತರದಲ್ಲಿ ಬಿಳಗಿ, ಬಾಗಲಕೋಟೆ, ಈಶಾನ್ಯದಲ್ಲಿ ಹುನಗುಂದ, ವಾಯವ್ಯದಲ್ಲಿ ಮುಧೋಳ ತಾಲ್ಲೂಕುಗಳೂ ಆಗ್ನೇಯದಲ್ಲಿ ಕೊಪ್ಪಳ ಜಿಲ್ಲೆ ದಕ್ಷಿಣದಲ್ಲಿ ಗದಗ ಜಿಲ್ಲೆ ಪಶ್ಚಿಮದಲ್ಲಿ ಬೆಳಗಾಂವಿ ಜಿಲ್ಲೆ ಸುತ್ತುವರೆದಿವೆ. ತಾಲ್ಲೂಕಿನಲ್ಲಿ 3 ಪಟ್ಟಣಗಳೂ ಕುಲಗೇರಿ, ಬಾದಾಮಿ, ಕೆರೂರು ಮತ್ತು ಗುಳೇದಗುಡ್ಡ–ಈ ಐದು ಹೋಬಳಿಗಳೂ 156 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 1,406 ಚ.ಕಿಮೀ. ತಾಲ್ಲೂಕಿನ ಜನಸಂಖ್ಯೆ 2,14,869.

ಈ ತಾಲ್ಲೂಕು ಗುಳೇದಗುಡ್ಡ ಮತ್ತು ಬಾದಾಮಿ ಗುಂಪಿನ ಮರಳುಶಿಲೆಯ ಬೆಟ್ಟಗಳಿಂದ ಕೂಡಿದೆ. ತಾಲ್ಲೂಕಿನ ಬಹು ಭಾಗದಲ್ಲಿ ಮರಳು ಮಿಶ್ರಿತಕೆಂಪು ಭೂಮಿ ಇದೆ. ತಾಲ್ಲೂಕಿನ ಉತ್ತರಭಾಗ ಘಟಪ್ರಭಾ ನದೀಕಣಿವೆಯ ದಕ್ಷಿಣ ಭಾಗವಾದರೆ ದಕ್ಷಿಣ ಭಾಗ ಮಲಪ್ರಭಾನದಿಕಣಿವೆಯ ಉತ್ತರಭಾಗವಾಗಿದೆ. ಮಲಪ್ರಭಾ ಈ ತಾಲ್ಲೂಕಿನ ಮುಖ್ಯ ನದಿ. ಇದು ಬಹುಮಟ್ಟಿಗೆ ಈ ತಾಲ್ಲೂಕಿನ ದಕ್ಷಿಣ ಮತ್ತು ಈಶಾನ್ಯದ ಗಡಿಯಾಗಿ ಹರಿಯುತ್ತದೆ. ಆಗ್ನೇಯ ಭಾಗದಲ್ಲಿ ಸ್ವಲ್ಪಮಟ್ಟಿಗೆ ತಾಲ್ಲೂಕಿನ ಒಳಗೆ ಹರಿಯುತ್ತದೆ.

ಬಾಗಲಕೋಟೆಯನ್ನು ಬಿಟ್ಟರೆ ಬಾದಾಮಿ ತಾಲ್ಲೂಕೇ ಹೆಚ್ಚು ಉಷ್ಣತೆಯುಳ್ಳ ಪ್ರದೇಶ. ಡಿಸೆಂಬರ್ ವರ್ಷದಲ್ಲಿ ಅತಿ ಕಡಿಮೆ ಉಷ್ಣತೆ ಇರುವ ತಿಂಗಳು. ಫೆಬ್ರವರಿ ತಿಂಗಳಿಂದ ಉಷ್ಣತೆ ಏರತೊಡಗಿ ಮೇ ತಿಂಗಳಲ್ಲಿ 101.5$^{0}$ಫ್ಯಾ ವರೆಗೆ ಏರುತ್ತದೆ. ವರ್ಷಕ್ಕೆ ಸರಾಸರಿ 623 ಮಿಮೀ ಮಳೆ ಬೀಳುತ್ತದೆ.

ಈ ತಾಲ್ಲೂಕಿನಲ್ಲಿ 31264.28 ಹೆ. ಪ್ರದೇಶದಲ್ಲಿ ಅರಣ್ಯವಿದೆ. 91908.17 ಹೆ. ವ್ಯವಸಾಯಕ್ಕೆ ಒಳಪಟ್ಟಿದೆ. ವ್ಯವಸಾಯ ಬಹುಮಟ್ಟಿಗೆ ಮಳೆಯನ್ನು ಅವಲಂಬಿಸಿದೆ. ಜೋಳ ಮತ್ತು ಸಜ್ಜೆ ಈ ತಾಲ್ಲೂಕಿನ ಮುಖ್ಯಬೆಳೆಗಳು. ಹತ್ತಿ, ಗೋದಿ ಮತ್ತು ದ್ವಿದಳಧಾನ್ಯಗಳನ್ನೂ ಬೆಳೆಯುತ್ತಾರೆ.

ಈ ತಾಲ್ಲೂಕಿನಲ್ಲಿ ದೊಡ್ಡ ಕೈಗಾರಿಕೆಗಳಿಲ್ಲ. ಸೇಂಗಾ ಎಣ್ಣೆ ಮತ್ತು ಹಿಂಡಿ ತಯಾರಿಕೆ ಹಾಗೂ ಸುಣ್ಣ ಸುಡುವ ಉದ್ಯಮಗಳು ಸ್ವಲ್ಪಮಟ್ಟಿಗಿವೆ. ತಾಲ್ಲೂಕಿನ ಹಳ್ಳಿಗಳಿಗೆ ವಿದ್ಯುತ್ ಸೌಕರ್ಯ ಇದೆ.

ಹುಬ್ಬಳ್ಳಿ–ಸೊಲ್ಲಾಪುರ ರೈಲುಮಾರ್ಗ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಾದುಹೋಗುತ್ತದೆ. ಬಾದಾಮಿ–ಗುಳೇದಗುಡ್ಡ–ಶಿರೂರು ರಸ್ತೆ, ಬಾದಾಮಿ–ರಾಮದುರ್ಗ ರಸ್ತೆ, ರೋಣ–ಬಾದಾಮಿ–ಬಾಗಲಕೋಟೆ ರಸ್ತೆ, ಹುಬ್ಬಳ್ಳಿ–ಕೆರೂರು–ಅನಗವಾಡಿ ರಸ್ತೆ–ಇವು ತಾಲ್ಲೂಕಿನ ಮುಖ್ಯ ರಸ್ತೆಗಳು.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಗುಳೇದಗುಡ್ಡ **(ನೋಡಿ)** ಮತ್ತು ಕೆರೂರು **(ನೋಡಿ)** ಪಟ್ಟಣಗಳು. ಬಾದಾಮಿ ರೈಲುನಿಲ್ದಾಣಕ್ಕೆ ಆಗ್ನೇಯದಲ್ಲಿ 13 ಕಿಮೀ ದೂರದಲ್ಲಿರುವ ಬೇಲೂರು ಗ್ರಾಮದಲ್ಲಿ ಹಾಳುಬಿದ್ದಿರುವ ಕೋಟೆ, ಬೇಲೂರಪ್ಪನ ದೇವಾಲಯ ಮತ್ತು ಜಕ್ಕಣಾಚಾರ್ಯ ಕಟ್ಟಿದ್ದೆನ್ನುವ ನಾರಾಯಣ ದೇವಾಲಯ ಇವೆ. ಇಲ್ಲಿ ಪಶ್ಚಿಮ ಚಾಳುಕ್ಯ ರಾಜ ಜಯಸಿಂಹ ಜಗದೇಕಮಲ್ಲ ಮತ್ತು ಅವನ ಸಹೋದರಿ ಅಕ್ಕಾದೇವಿಯ ಶಾಸನವಿದೆ. ಬಾದಾಮಿಗೆ ದಕ್ಷಿಣದಲ್ಲಿ 5 ಕಿಮೀ ದೂರದಲ್ಲಿರುವ ಚೋಳಚಗುಡ್ಡದಲ್ಲಿ 8ನೆಯ ಶತಮಾನದ ಶಾಸನವಿದ್ದು ಬನಶಂಕರಿ ದೇವಾಲಯವಿದೆ. ಈ ಹಳ್ಳಿ ವೀಳ್ಯದ ಎಲೆಗೆ ಹೆಸರಾದುದು. ಈ ತಾಲ್ಲೂಕಿನ ನಂದಿಕೇಶ್ವರ **(ನೋಡಿ)** ಇತಿಹಾಸ ಪ್ರಸಿದ್ಧ ಸ್ಥಳ. ಪಟ್ಟದಕಲ್ಲು **(ನೋಡಿ)** ಚಾಳುಕ್ಯ ಕಾಲದ ದೇವಾಲಯಗಳನ್ನುಳ್ಳ ಪ್ರೇಕ್ಷಣೀಯ ಸ್ಥಳ.

ಬಾದಾಮಿ ಈ ತಾಲ್ಲೂಕಿನ ಮುಖ್ಯ ಪಟ್ಟಣ ಮತ್ತು ಆಡಳಿತ ಕೇಂದ್ರ. ಬಿಜಾಪುರದಿಂದ 113 ಕಿಮೀ ದಕ್ಷಿಣದಲ್ಲಿ ಹುಬ್ಬಳ್ಳಿ–ಸೊಲ್ಲಾಪುರ ರೈಲುಮಾರ್ಗದ ಬಾದಾಮಿ ನಿಲ್ದಾಣಕ್ಕೆ ಸು. 5ಕಿಮೀ ದೂರದಲ್ಲಿದೆ. ಜನಸಂಖ್ಯೆ 77,055. ಬಾದಾಮಿ ಪಟ್ಟಣದ ಸನ್ನಿವೇಶ ಬಹು ಸುಂದರವಾದುದು. ನಸುಗೆಂಪು ಮರಳುಕಲ್ಲಿನ ಗುಡ್ಡದ ಗಜಪೃಷ್ಠಾಕಾರದ ಕಣಿವೆಯ ಮಧ್ಯದಲ್ಲಿ ಇರುವ ಅಗಸ್ತ್ಯ ಸರೋವರ ಎಂಬ ವಿಶಾಲವಾದ ಕೆರೆಯ ಪಶ್ಚಿಮ ಭಾಗದಲ್ಲಿ ಈ ಪಟ್ಟಣ ಹಬ್ಬಿದೆ. ಪಟ್ಟಣ ನಗರ ಪಂಚಾಯಿತಿ ಆಡಳಿತಕ್ಕೆ ಒಳಪಟ್ಟಿದೆ. ಇಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆ. ರಕ್ಷಿತ ಕುಡಿಯುವ ನೀರು ಸರಬರಾಜು, ಅಂಚೆ, ವಿದ್ಯುತ್, ದೂರವಾಣಿ, ಪ್ರವಾಸಿ ಮಂದಿರಗಳು ಮುಂತಾದ ನಾಗರಿಕ ಸೌಲಭ್ಯಗಳಿವೆ.

ಈ ಊರು ಇತಿಹಾಸ ಪ್ರಸಿದ್ಧ ಸ್ಥಳ. ಹಿಂದೆ ಇದಕ್ಕೆ ವಾತಾಪಿ ಎಂಬ ಹೆಸರೂ ಇತ್ತು. ಇದು 6–8ನೆಯ ಶತಮಾನಗಳಲ್ಲಿ ಕರ್ನಾಟಕದ

ಹೆಮ್ಮೆಯ ಸಾಮ್ರಾಜ್ಯವಾಗಿ ಮೆರೆದ ಚಾಳುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಆ ಕಾಲದಲ್ಲಿ ಕಗ್ಗಲ್ಲಿನಲ್ಲಿ ಕೊರೆದಿರುವ ಮತ್ತು ಕಟ್ಟಿದ ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳು ಇಂದಿಗೂ ಉಳಿದುಬಂದಿದ್ದು ಪ್ರೇಕ್ಷಣೀಯ ಸ್ಥಳವಾಗಿದೆ.

ಚಾಳುಕ್ಯರ ಕಾಲಕ್ಕೂ ಪೂರ್ವದಲ್ಲಿ ಇದು ಬಹುಶಃ ಒಂದು ಸುಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿತ್ತು. ಗ್ರೀಕ್ ಭೂಗೋಳಕಾರ ಟಾಲೆಮಿ (ಸು.150) ತನ್ನ ಪುಸ್ತಕದಲ್ಲಿ ಬಾದಾಮಿಯನ್ನೂ ಉಲ್ಲೇಖಿಸಿದ್ದಾನೆ. ಇದನ್ನು ಒಪ್ಪುವ ಹಾಗೆ ಸರೋವರದ ಉತ್ತರ ಬದಿಯ ಗುಡ್ಡದ ಇಕ್ಕಟ್ಟಿನ ಸಂಧಿಗಳಲ್ಲಿ ಇತಿಹಾಸದ ಪ್ರಾರಂಭಕಾಲದ (ಪ್ರ.ಶ.ಪೂ. 3ನೆಯ ಶತಮಾನ) ಮಣ್ಣಿನ ಪಾತ್ರೆಗಳ ಚೂರುಗಳೂ ಮತ್ತು ಆ ಕಾಲದ ಅಥವಾ ಸ್ವಲ್ಪ ಅನಂತರ ಕಾಲದ ಕಟ್ಟಡಗಳ ಅವಶೇಷಗಳೂ ದೊರಕಿವೆ. ಚಳುಕ್ಯ ಚಕ್ರವರ್ತಿ ಒಂದನೆಯ ಪುಲಕೇಶಿಯು ಇಲ್ಲಿ ಮೊದಲು ಕೋಟೆ ಕಟ್ಟುವಾಗಲೇ ಇದು ದೊಡ್ಡ ಪಟ್ಟಣವಾಗಿರಬೇಕು. ಏಕೆಂದರೆ ಇವನ ಶಾಸನದಲ್ಲಿ ಈ ಊರನ್ನು ವಾತಾಪ್ಯಧಿಷ್ಠಾನವೆಂದು ವರ್ಣಿಸಲಾಗಿದೆ. ಅಧಿಷ್ಠಾನವೆಂದರೆ ರಾಜಧಾನಿ ಎಂಬ ಅರ್ಥವಷ್ಟೇ ಅಲ್ಲದೆ ದೊಡ್ಡ ಪಟ್ಟಣವೆಂದೂ ಆಗುವುದು.

ಬಾದಾಮಿ ಗುಹಾಂತರ ದೇವಾಲಯಗಳ ತಾಣ

ಬಾದಾಮಿಯ ಉತ್ತರ ಗುಡ್ಡದ ಬದಿಯಲ್ಲಿ ವಿಶಾಲ ಬಯಲಿದ್ದು, ಅದರ ಅಂಚಿನ ಗುಡ್ಡದ ಸಾಲಿನಲ್ಲಿ ಕೆಲವು ಗವಿಗಳಿವೆ. ನಾಲ್ಕು ಗವಿಗಳಲ್ಲಿ ವರ್ಣಚಿತ್ರಗಳಿವೆ. ಅವುಗಳಲ್ಲಿ ಎರಡು ಪ್ರಾಗೈತಿಹಾಸಿಕ ಕಾಲದ್ದು. ಒಂದರಲ್ಲಿ ಮುಶ್ಯದ ರೇಖಾ ಚಿತ್ರವಿದ್ದು ಮತ್ತೊಂದರಲ್ಲಿ ವಿಚಿತ್ರ ಪ್ರಾಣಿಯ ಮತ್ತು ಭೂತ ಸ್ವರೂಪದ ಮನುಷ್ಯನ ಚಿತ್ರಗಳು ಬಿಳಿ-ಕಪ್ಪು ದ್ವಿವರ್ಣಗಳಲ್ಲಿ ಮತ್ತು ಅಚ್ಚಕಪ್ಪು ಬಣ್ಣಗಳಲ್ಲಿ ಇವೆ. ಈ ಚಿತ್ರಗಳ ವಸ್ತು ಮತ್ತು ಶೈಲಿಯ ಮೇಲೆ ಇದು ಶಿಲಾಯುಗದ ಅಂತ್ಯಭಾಗದ ಕಾಲದ್ದಿರಬಹುದೆಂದು ಊಹಿಸಲಾಗಿದೆ. ಇಲ್ಲಿಂದ ಸು. 2 ಕಿಮೀ ದೂರದಲ್ಲಿ ಉತ್ತರಕ್ಕೆ, ಬಾದಾಮಿ-ಮಹಾಕೂಟದ ಒಳ ರಸ್ತೆಯ ಬಲಬದಿಯ ಒಂದು ದೊಡ್ಡ ಗವಿಯಲ್ಲಿ ಕೆಮ್ಮಣ್ಣಿನಲ್ಲಿ ಎಳೆದ ಪ್ರಾಣಿಗಳ ಹಾಗೂ ಅಸ್ಪಷ್ಟವಾದ ರೇಖಾಚಿತ್ರಗಳು ಹಾಗೂ ಬಿಳಿಬಣ್ಣದಲ್ಲಿ ಬರೆದ ಒಂದು ಸಾಲಿನ 4-5 ಶತಮಾನದ ಎರಡು ಶಾಸನಗಳೂ ಇವೆ. ಈ ಗವಿಯಿಂದ ಮತ್ತೆ 3 ಕಿಮೀ ದೂರದಲ್ಲಿ ಸ್ಥಳೀಕವಾಗಿ ಶಿಡ್ಲಫಡಿ ಎಂದು ಕರೆಯಲಾದ ಒಂದು ಗವಿಯಲ್ಲೂ ಆನೆ, ಪಕ್ಷಿ ಮುಂತಾದ ಚಿತ್ರಗಳಿವೆ ಮತ್ತು ಇಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಮೃತ್‌ಪಾತ್ರೆ ಮತ್ತು ಶಿಲಾಯುಧಗಳ ಅವಶೇಷಗಳನ್ನು, ಇದಕ್ಕೂ ಹಿಂದಿನ ಆದಿ ಹಳೆಯ ಶಿಲಾಯುಗದ ಕೆಲವು ಕಲ್ಲಿನ ಉಪಕರಣಗಳನ್ನು ಹಿಂದೆ ಶೋಧಿಸಲಾಗಿತ್ತು. ಬಾದಾಮಿಯ ನೈಋತ್ಯ ಮತ್ತು ಈಶಾನ್ಯ ದಿಕ್ಕಿಗೆ ಅನುಕ್ರಮವಾಗಿ ಸು. 8 ಮತ್ತು 18 ಕಿಮೀ ದೂರದಲ್ಲಿರುವ ಚೋಳಗುಡ್ಡ ಮತ್ತು ನಂದಿಕೇಶ್ವರದ ಬಳಿಯ ಮಲಪ್ರಭಾ ನದಿ ಪಾತ್ರದಲ್ಲಿ ಆದಿ ಹಳೆಯ ಶಿಲಾಯುಗದ ಆಯುಧಗಳು ದೊರೆತಿವೆ. ಹೀಗೆ ಬಾದಾಮಿ ಪ್ರದೇಶ ಆದಿ ಹಳೆಯ ಶಿಲಾಯುಗದಿಂದಲೂ ಮಾನವನ ನೆಲೆವೀಡಾಗಿದ್ದು, ಮುಂದೆ ಸುಸಂಸ್ಕೃತ ವಾಣಿಜ್ಯಕೇಂದ್ರವಾಗಿ ಬೆಳೆದು ಕೊನೆಯಲ್ಲಿ ಒಂದು ಮಹಾ ಸಾಮ್ರಾಜ್ಯದ ರಾಜಧಾನಿಯಾಗಿ ಕೀರ್ತಿಶಿಖರವನ್ನೇರಿತು ಎಂದು ಹೇಳಬಹುದು.

ಚಾಳುಕ್ಯರ ಕಾಲದ ಅನಂತರವೂ ಬಾದಾಮಿ ಆ ಪ್ರದೇಶದಲ್ಲಿ ಪ್ರಾಮುಖ್ಯ ಉಳಿಸಿಕೊಂಡಿದ್ದಂತೆ ತೋರುತ್ತದೆ. ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಳುಕ್ಯರ ಕಾಲದ ಅವಶೇಷಗಳು ಹೆಚ್ಚಾಗಿಲ್ಲ. ಆದರೆ 1339ರ ಒಂದು ಶಾಸನದಲ್ಲಿ ವಿಜಯನಗರದ ದೊರೆ ಮೊದಲನೆಯ ಹರಿಹರ 2,000 ಮಹಾಜನಗಳಿಗೆ ಬಾದಾಮಿಯನ್ನು ಕೊಟ್ಟು, ಉತ್ತರದ ಕಡೆಯ ಕೋಟೆಯನ್ನು ಕಟ್ಟಲು ಆಣತಿ ಮಾಡಿದಂತಿದೆ. ಕೃಷ್ಣದೇವರಾಯನ ಕಾಲದವರೆಗೂ ಬಾದಾಮಿ ವಿಜಯನಗರದ ಆಡಳಿತಕ್ಕೊಳಪಟ್ಟಿದ್ದು, ಅನಂತರ ಆದಿಲ್ ಶಾಹೀ ದೊರೆಗಳ ಕೈಸೇರಿತು. 1746ರಲ್ಲಿ ಸವಣೂರು ನವಾಬ ಮತ್ತು ಮೂರನೆಯ ಪೇಶವೆಯ ನಡುವೆ ಸಂಧಾನವಾಗಿ ಬಾದಾಮಿಯನ್ನು ಪೇಶವೆಗೆ ಕೊಡಲು ಒಪ್ಪಿಗೆಯಾದರೂ ಪೇಶವೆ ಮತ್ತು ಹೈದರಾಬಾದಿನ ನಿಜಾಮ ಇಬ್ಬರೂ ಸೇರಿ ಸವಣೂರು ನವಾಬನ ಮೇಲೆ ದಂಡೆತ್ತಿ ಬಂದಾಗ 1756ರಲ್ಲಿ ಈ ಊರು ಪೇಶವೆಗೆ ಸೇರಿತು. 1778ರಲ್ಲಿ ದಕ್ಷಿಣ ಬಿಜಾಪುರದ ಕೆಲವು ಪ್ರದೇಶಗಳೊಡನೆ ಬಾದಾಮಿಯನ್ನು ಹೈದರ್ ಪಡೆದುಕೊಂಡ. 1786ರಲ್ಲಿ ನಾನಾಫಡ್ನವೀಸನ ಕೈಕೆಳಗಿನ ಮರಾಠ ಸೈನ್ಯ ಮತ್ತು ನಿಜಾಮನ ಸೈನ್ಯ ಸೇರಿ ನಾಲ್ಕು ವಾರಗಳ ಕಾಲ ಮುತ್ತಿ ಬಾದಾಮಿಯನ್ನು ವಶಪಡಿಸಿಕೊಂಡವು. 1818ರ ಮರಾಠ ಯುದ್ಧದಲ್ಲಿ ಜನರಲ್ ಮನ್ರೋ ಬಾದಾಮಿಯನ್ನು ಮುತ್ತಿ ವಶಪಡಿಸಿಕೊಂಡ. 1840ರಲ್ಲಿ ನರಸಿಂಹ ದತ್ತಾತ್ರೇಯ (ನರಸಿಂಗರಾವ್) ಎಂಬ ಕುರುಡ ತನ್ನ 125 ಅರಬ್ಬರ ದಂಡಿನೊಡನೆ ಬಂದ ಬಾದಾಮಿಯನ್ನು ಮುತ್ತಿ ಲೂಟಿ ಹೊಡೆದು ತಾನೇ ದೊರೆಯೆಂದು ಘೋಷಿಸಿಕೊಂಡ. ಒಂದು ವಾರದ ಒಳಗೇ ಒಂದು ಚಿಕ್ಕ ಬ್ರಿಟಿಷ್ ಸೈನ್ಯ ಬಾದಾಮಿಗೆ ಬಂದು ಇವರನ್ನೆಲ್ಲಾ ಸೆರೆಹಿಡಿಯಿತು. 1845ರಲ್ಲಿ ಇಲ್ಲಿನ ಕೋಟೆಗಳು ಹಾಳುಬಿದ್ದವು. ಅನಂತರ ಈ ಊರು ಒಂದು ಸಾಮಾನ್ಯ ಸ್ಥಳವಾಯಿತು. ಇಂದು ಬಾದಾಮಿಯಲ್ಲಿ ಎರಡು ಹಾಳುಬಿದ್ದ ಕೋಟೆಗಳೂ ನಾಲ್ಕು ಗುಹಾಂತರ ದೇವಾಲಯಗಳೂ ಅನೇಕ ಭಗ್ನ ದೇವಾಲಯಗಳೂ ಕೆಲವು ಶಾಸನಗಳೂ ಉಳಿದು ಬಂದಿವೆ.

**ಕೋಟೆಗಳು :** ಬಾದಾಮಿಯ ಉತ್ತರ ಮತ್ತು ದಕ್ಷಿಣದ ಬೆಟ್ಟಗಳ ಮೇಲೆ ಎರಡು ಬಲವಾದ ಕೋಟೆಗಳಿವೆ. ಉತ್ತರದ ಕಡೆಯ ಕೋಟೆಯನ್ನು ಬಾವನ್ ಬಂಡೆ ಕೋಟೆಯೆಂದೂ ದಕ್ಷಿಣ ಕಡೆಯ ಕೋಟೆಯನ್ನು ರಣಮಂಡಲ ಕೋಟೆಯೆಂದೂ ಕರೆಯುತ್ತಾರೆ. ಎರಡೂ ಕೋಟೆಗಳ ಮಧ್ಯೆ 300 ಗಜಗಳ ಅಂತರವಿದ್ದು, ಎರಡೂ ನೆಲಮಟ್ಟದಿಂದ ಸು. 240' ಎತ್ತರದಲ್ಲಿವೆ. ಉತ್ತರದ ಕೋಟೆಗೆ ಹೋಗಲು ಊರಿನ ಒಳಗಿನಿಂದ ಮಾರ್ಗವಿದೆ. ಮೇಲೆ ಗುಡ್ಡದ ಅಂಚಿನುದ್ದಕ್ಕೂ ಅಲ್ಲಲ್ಲಿ ಹಾಳಾಗಿರುವ ಕೋಟೆಗೋಡೆ ಇದೆ. ಬಾದಾಮಿಯ ಅತ್ಯಂತ ಪ್ರಾಚೀನ ಶಾಸನ ಈ ಕೋಟೆಗೆ ಸಂಬಂಧಿಸಿದ್ದು. ಇದು ಗುಡ್ಡದಲ್ಲಿ ಒಂದು ಬಹು ಇಕ್ಕಟ್ಟಾದ ಕಣಿವೆಯಲ್ಲಿ ಎತ್ತರ ಹಾಗೂ ಕಡಿದಾದ ಬಂಡೆಯ ಮೇಲೆ ಇದೆ. ಶ್ರೌತ ವಿಧಿಗಳಿಗನುಸಾರವಾಗಿ ಅಶ್ವಮೇಧ ಮೊದಲಾದ ಯಜ್ಞಗಳನ್ನೂ ಹಿರಣ್ಯಗರ್ಭ ಮುಂತಾದ ಮಹಾ ದಾನಗಳನ್ನೂ ಮಾಡಿದ ಚಳುಕ್ಯ ವಲ್ಲಭೇಶ್ವರನು (ಒಂದನೆಯ ಪುಲಕೇಶಿ) ಅನುಕೂಲಕರವಾದ

ಈ ಗುಡ್ಡದ ಮೇಲಿರುವ ವಾತಾಪಿ ಅಧಿಷ್ಠಾನದಲ್ಲಿ ಮೇಲಿಂದಾಗಲಿ ಕೆಳಗಿಂದಾಗಲಿ ಅಭೇದ್ಯವಾದ ಕೋಟೆಯನ್ನು ಶಕವರ್ಷ 465ರಲ್ಲಿ (543) ಕಟ್ಟಿಸಿದನೆಂದು ಈ ಶಾಸನ ತಿಳಿಸುತ್ತದೆ. ಆದರೆ ಚಳುಕ್ಯರ ಕಾಲದ್ದೆಂದು ಸ್ಪಷ್ಟವಾಗಿ ಗುರುತಿಸಬಹುದಾದ ಕೋಟೆಯ ಭಾಗಗಳು ಉಳಿದು ಬಂದಿಲ್ಲವೆಂದೇ ಹೇಳಬಹುದು. ಮುಂದೆ ರಾಷ್ಟ್ರಕೂಟರ ಕಾಲದಲ್ಲೂ ವಿಜಯನಗರ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲೂ ಇದನ್ನು ವಿಸ್ತರಿಸಲಾಗಿದೆ. ದಕ್ಷಿಣ ಗುಡ್ಡದ ಮೇಲಿನ ಕೋಟೆ 18ನೆಯ ಶತಮಾನದ್ದು. ಇದು ಫಿರಂಗಿ ಹಾರಿಸಲು ಅನುಕೂಲವಿರುವ ಮತ್ತು ಫಿರಂಗಿ ಹೊಡೆತವನ್ನು ತಡೆಯಬಲ್ಲ ಭದ್ರವಾದ ಕಟ್ಟಡ. ಎರಡೂ ಕೋಟೆಗಳಿಗೆ ಅನೇಕ ಕಲ್ಲುಮೆಟ್ಟಲುಗಳೂ ಕಿರಿದಾದ ಪ್ರವೇಶದ್ವಾರಗಳೂ ಇವೆ. ಕೋಟೆಗೋಡೆಗಳ ನಿರ್ಮಾಣದ ರೀತಿ ಅವುಗಳ ಹೊರಬದಿಯಲ್ಲಿ ಕೊತ್ತಳದ ಆಕಾರ, ಗೋಡೆಯ ಮೇಲೆ ಇರುವ ರಕ್ಷಣಾ ಕಟಾಂಜನದ ಸ್ವರೂಪದಿಂದ ಆಯಾಯ ಕಾಲದ ವಿವಿಧ ಭಾಗಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಉದಾಹರಣೆಗೆ ಗೋಡೆಗಳಲ್ಲಿ ಗಾರೆಯ ಉಪಯೋಗ ಮತ್ತು ಮೇಲಿನ ರಕ್ಷಣಾ ಕಟಾಂಜನ–ಇವು ಹೈದರ್ ಟಿಪ್ಪುಸುಲ್ತಾನರ ಕಾಲದಲ್ಲಿ ಕಟ್ಟಿಸಿದ ಭಾಗಗಳ ವೈಶಿಷ್ಟ್ಯ.

**ಲಯಣಗಳು :** ದಕ್ಷಿಣ ಗುಡ್ಡದ ಕಡಿದಾದ ಉತ್ತರ ಬದಿಯಲ್ಲಿ ಎದುರಿಗೆ ಕೆಳಗಿರುವ ವಿಸ್ತಾರವಾದ ಪ್ರಶಾಂತವಾದ ಅಗಸ್ತ್ಯತೀರ್ಥದ ರಮ್ಯನೋಟ ಸಿಗುವ ಹಾಗೆ, ಮೇಣಬಸ್ತಿ ಎಂದು ಕರೆಯುವ ನಾಲ್ಕು ಲಯಣಗಳು ಇವೆ. ಇವನ್ನು ಅಸಮ ಅಂತರದಲ್ಲಿ ಒಂದಕ್ಕಿಂತ ಮತ್ತೊಂದು ಕ್ರಮವಾಗಿ ಸ್ವಲ್ಪ ಎತ್ತರದಲ್ಲಿರುವಂತೆ ಕೊರೆಯಲಾಗಿದೆ. ಈ ಲಯಣಗಳಿಗೆ ಹೋಗಲು ಗುಡ್ಡದ ಕೆಳಗಿನಿಂದ ಮೆಟ್ಟಲುಗಳಿವೆ. ಮೆಟ್ಟಲಿನಿಂದ ಏರಿಹೋದಂತೆ ಮೊದಲು ಸಿಗುವುದು ಶೈವ ಲಯಣ. ಅಲ್ಲಿಂದ ಮುಂದಿನ ಎರಡು ವೈಷ್ಣವ, ಕೊನೆಯದು ಜೈನ. ವೈಷ್ಣವ ಲಯಣಗಳ ಮಧ್ಯೆ ಒಂದು ನೈಸರ್ಗಿಕ ಗವಿಯಿದೆ. ಅದರಲ್ಲಿ ಅಭಯ ಚಿತ್ರಗಳಿಂದ ಆವೃತವಾದ ಬೋಧಿಸತ್ತ್ವ ಪದ್ಮಪಾಣಿಯ ಉಬ್ಬುಶಿಲ್ಪವಿದೆ.

ಶೈವ ಮತ್ತು ವೈಷ್ಣವ ಲಯಣಗಳು ತಳವಿನ್ಯಾಸದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಒಂದೇ ವಿಧವಾಗಿದೆ. ಪ್ರತಿಯೊಂದರಲ್ಲೂ ಮುಂದೆ ಆಯತಾಕಾರದ ಮೊಗಸಾಲೆ, ವಿಶಾಲವಾದ ಸಭಾಮಂಟಪ ಮತ್ತು ಗರ್ಭಗೃಹಗಳು ಇವೆ. ಶೈವ ಲಯಣದಲ್ಲಿ ಮಾತ್ರ ಮೊಗಸಾಲೆಯ ಮುಂದೆ, ಎಡಬದಿಯಲ್ಲಿ ಪೂರ್ವ ದಿಕ್ಕಿಗೆದುರಾಗಿ ಒಂದು ಕೋಣೆ ಇದೆ. ವಿಸ್ತಾರದಲ್ಲಿ ಮೂರನೆಯ ಲಯಣ ಅತ್ಯಂತ ದೊಡ್ಡದು. ಮುಂಬದಿಯಲ್ಲಿ ನಾಲ್ಕು ಅಥವಾ ಸಭಾಮಂಟಪದ ಮುಂಭಾಗದಲ್ಲಿ ಎರಡು ಅಥವಾ ನಾಲ್ಕು, ಮಂಟಪದೊಳಗೆ ಎಂಟು ಅಥವಾ ಹದಿನಾಲ್ಕು –ಹೀಗೆ ವಿವಿಧ ಸಂಖ್ಯೆಯಲ್ಲಿ ವಿವಿಧ ಶೈಲಿಯ ಕಂಬಗಳು ಇವೆ. ಸಭಾಮಂಟಪದ ಅಗಲವಾದ ಪ್ರವೇಶದ್ವಾರವು ಪದ್ಮದಳ, ಹೂಬಳ್ಳಿ ಇತ್ಯಾದಿ ಅಲಂಕರಣವುಳ್ಳ ಅರೆಗಂಬದ ಶಾಖೆಗಳ ಚೌಕಟ್ಟಿನಿಂದ ಅಲಂಕೃತವಾಗಿದೆ. ಈ ಶಾಖೆಗಳ ಕೆಳಭಾಗದಲ್ಲಿ ದಾನಿಗಳ, ಸ್ತ್ರೀಯರ ಅಥವಾ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗುಡಿಯ ಬಾಗಿಲು ಚೌಕಟ್ಟು ಸ್ವಲ್ಪಮಟ್ಟಿಗೆ ಇದರಂತೆಯೇ ಇದ್ದು ಅದರಲ್ಲಿ ಶಂಖ ಪದ್ಮನಿಧಿಗಳ ಉಬ್ಬುಶಿಲ್ಪಗಳಿವೆ. ಗರ್ಭಗುಡಿಯ ಬಾಗಿಲು ಚೌಕಟ್ಟು ಸ್ವಲ್ಪಮಟ್ಟಿಗೆ ಇದರಂತೆಯೇ ಇದ್ದು ಅದರಲ್ಲಿ ಶಂಖ ಪದ್ಮನಿಧಿಗಳ ಉಬ್ಬುಶಿಲ್ಪಗಳಿವೆ. ಶೈವ ಲಯಣದ ಮೊಗಸಾಲೆಯ ಮುಂಬದಿಯ ಕಂಬಗಳು ಆನೆಯ ತಲೆಯ ಮೇಲಿಟ್ಟ ಹಾಗೆ ತೋರಿಸಿರುವುದು ಒಂದು ವಿಶಿಷ್ಟ ಲಕ್ಷಣ. ಸಾಮಾನ್ಯವಾಗಿ ಈ ಎಲ್ಲ ಲಯಣಗಳಲ್ಲಿ ಅಧಿಷ್ಠಾನದ ಮುಂಬದಿಯಲ್ಲಿ ನಾನಾ ಭಂಗಿಯಲ್ಲಿರುವ ಮತ್ತು ಚೇಷ್ಟೆಗಳಲ್ಲಿ ತೊಡಗಿರುವ ಕುಬ್ಜಗಣಗಳ ಸಾಲು ಚಿತ್ರಣವಿದೆ.

ಶೈವ ಲಯಣದಲ್ಲಿ ಹೊರಾಂಗಣದ ಎರಡು ಬದಿಗಳಲ್ಲಿ ಎತ್ತರದ ಶೈವ ದ್ವಾರಪಾಲಕರು ಮುಂದಿನ ಎಡಕೋಣೆಯ ಒಳಪಕ್ಕಕ್ಕೆ ಕಡಿದಾದ ಬಂಡೆಯ ಮೇಲೆ ಕೆತ್ತಿದ ಸಂತೋಷದಿಂದ ಕುಣಿಯುತ್ತಿರುವ ದ್ವಿಭುಜ ಗಣೇಶ, ಮೃದಂಗ ಬಾರಿಸುವವರೊಡನೆ ಸಂಧ್ಯಾ ತಾಂಡವ ನೃತ್ಯಭಂಗಿಯ ಲ್ಲಿರುವ ಹದಿನೆಂಟು ಬಾಹುಗಳುಳ್ಳ ನಟರಾಜ, ಕೋಣೆಯೊಳಗೆ ದ್ವಿಭುಜ ಗಣೇಶ, ಮಹಿಷಮರ್ದಿನಿ ಮತ್ತು ನವಿಲಿನ ಮೇಲೆ ಕುಳಿತ ಕಾರ್ತಿಕೇಯನ ಸುಂದರ ಉಬ್ಬುಶಿಲ್ಪಗಳಿವೆ. ಹೊರಾಂಗಣದ ಪೂರ್ವ ಮತ್ತು ಪಶ್ಚಿಮ ಗೋಡೆಗಳಲ್ಲಿ ಕ್ರಮವಾಗಿ ಹರಿಹರ ಮತ್ತು ಅರ್ಧನಾರೀಶ್ವರರ ಭವ್ಯ ಉಬ್ಬುಶಿಲ್ಪಗಳು, ಜಂತಿಯ ಮೇಲೆ ಗಿರಿಜಾ ಕಲ್ಯಾಣ ಮತ್ತು ಗಜಲಕ್ಷ್ಮಿ, ಅಂಡಾಕಾರದ ಪೀಠದ ಮೇಲಿರುವ ಲಿಂಗ, ಭತ್ತಿನಲ್ಲಿ ನಾಗರಾಜ, ವಿದ್ಯಾಧರ ದಂಪತಿಗಳು ಮೊದಲಾದ ಸೊಗಸಾದ ಶಿಲ್ಪಗಳಿವೆ. ಕಂಬಗಳ ಮೇಲೆ ಗರುಡ ಪ್ರಹ್ಲಾದರೊಡಗೂಡಿದ ನರಸಿಂಹ, ಶಿವಲಿಂಗ ಪೂಜೆಯಲ್ಲಿ ನಿರತನಾದ ಯೋಗಿ, ಪ್ರಿಯಕರ ಪ್ರೇಯಸಿಯರು ಮೊದಲಾದ ಸಣ್ಣಸಣ್ಣ ಚಿತ್ರಗಳಿವೆ. ಗರ್ಭಗುಡಿಯಲ್ಲಿ ಕಲ್ಲಿನಲ್ಲಿ ಕೊರೆದು ರೂಪಿಸಿದ ಪೀಠದ ಮೇಲೆ ದೊಡ್ಡ ಲಿಂಗವಿದೆ.

ಎರಡನೆಯ ಲಯಣದಲ್ಲಿ ಹೊರಗೆ ಕಮಲಪುಷ್ಪಧಾರಿಗಳಾದ ದ್ವಾರಪಾಲಕ ವಿಗ್ರಹಗಳಿವೆ. ಮೊಗಸಾಲೆಯ ಪೂರ್ವ–ಪಶ್ಚಿಮ ಗೋಡೆಗಳಲ್ಲಿ ಭೂವರಾಹ ಮತ್ತು ತ್ರಿವಿಕ್ರಮರ ದೊಡ್ಡ ಮೂರ್ತಿಗಳಿವೆ. ಈ ಮೂರ್ತಿಗಳ ಮೇಲೆ ಕ್ರಮವಾಗಿ ಗರುಡವಾಹನ ವಿಷ್ಣು ಮತ್ತು ಹತ್ತು ಭುಜಗಳುಳ್ಳ ನಟರಾಜನ ಸಣ್ಣ ಉಬ್ಬು ಶಿಲ್ಪಗಳಿರುವುದು ಗಮನಾರ್ಹ. ಜಂತಿಯುದ್ದಕ್ಕೂ ಅನಂತಶಯನ, ಬ್ರಹ್ಮ, ವಿಷ್ಣು, ಶಿವ, ಅಷ್ಟದಿಕ್ಪಾಲಕರು, ಗಜಲಕ್ಷ್ಮಿ, ಸಮುದ್ರಮಥನ, ಕೃಷ್ಣ ಲೀಲೆಗಳು ಮೊದಲಾದ ಹಲವಾರು ಸಣ್ಣ ಸಣ್ಣ ಚಿತ್ರಗಳಿವೆ. ಭತ್ತಿನಲ್ಲಿ ವಿವಿಧ ರೇಖಾಚಿತ್ರಗಳು ಗರುಡವಾಹನ ವಿಷ್ಣುವಿನ ಶಿಲ್ಪಗಳಿವೆ. ಸಭಾಮಂಟಪದ ಕಂಬಗಳ ಮೇಲೆ ಸಾವಿತ್ರಿ ಮತ್ತು ಸರಸ್ವತಿಯರಿಂದ ಕೂಡಿದ ಬ್ರಹ್ಮ, ಶಿವ ಪಾರ್ವತಿ, ಲಕುಲೀಶ, ಕಾರ್ತಿಕೇಯ, ದುರ್ಗಾ ಮುಂತಾದ ಚಿತ್ರಗಳಿವೆ. ಗರ್ಭಗುಡಿಯಲ್ಲಿ ಈಗ ಮೂರ್ತಿಯಿಲ್ಲ.

ಮೂರನೆಯ ಲಯಣ ಇಲ್ಲಿರುವುದರಲ್ಲೆಲ್ಲ ದೊಡ್ಡದು. ಮೊಗಸಾಲೆಯ ಹೊರಬದಿಯಲ್ಲಿ ಅಷ್ಟಭುಜಸ್ವಾಮಿ, ವಿಷ್ಣು ಮತ್ತು ತ್ರಿವಿಕ್ರಮ, ಒಳಗೆ ಅನಂತನ ಮೇಲೆ ಕುಳಿತ ವಿಷ್ಣು, ಭೂವರಾಹ, ಹರಿಹರ ಮತ್ತು ನರಸಿಂಹ–ಈ ಶಿಲ್ಪಗಳನ್ನು ಬೃಹದಾಕಾರದಲ್ಲಿ ಭವ್ಯವಾಗಿ ಕೆತ್ತಲಾಗಿದೆ. ಜಂತಿಯುದ್ದಕ್ಕೂ ಬ್ರಹ್ಮ, ಶಿವ, ವಿಷ್ಣು, ಸಮುದ್ರಮಥನ, ಗರುಡನು ಅಮೃತಕ್ಕೋಸ್ಕರ ನಡೆಸಿದ ಹೋರಾಟ, ಆನೆ ಕುದುರೆ ಸವಾರರು, ಕೃಷ್ಣಲೀಲೆಗಳ ಸಣ್ಣ ಚಿತ್ರಪಟ್ಟಿಕೆಗಳು ಇವೆ. ಅಡ್ಡಭತ್ತಿನ ಮೇಲೆ ಗಣಗಳೊಡನೆ ವೃಷಭವಾಹನ, ಶಿವ–ಪಾರ್ವತಿ, ಅಷ್ಟದಿಕ್ಪಾಲಕರೊಡನೆ ವಿಷ್ಣು, ನಾಲ್ಕು ದಿಕ್ಪಾಲಕರು ಮತ್ತು ಋಷಿಗಳೊಡನೆ ಬ್ರಹ್ಮ ಈ ಚಿತ್ರಗಳಿವೆ. ಲಯಣದ ಒಂದು ಮೊಗಸಾಲೆಯ ಮುಂಭಾಗದ ಕಂಬಗಳ ಮೇಲ್ಭಾಗದಲ್ಲಿ ಕಾರ್ತಿಕೇಯ ಸಹಿತ ಶಿವ–ಪಾರ್ವತಿ, ಅರ್ಧನಾರೀಶ್ವರ, ರತಿ–ಮನ್ಮಥ ಶಿಲ್ಪಗಳಿವೆ. ಅಲ್ಲದೆ ಪ್ರಿಯಕರನ ನಿರೀಕ್ಷೆಯಲ್ಲಿರುವ ಪ್ರೇಯಸಿಯರು, ಅಲಂಕಾರ ಮಾಡಿಕೊಳ್ಳುತ್ತಿರುವ ಕನ್ನಿಕೆಯರು ಮತ್ತು ಕೆಲವು ಮನೋಹರವಾದ ಮದನಿಕೆ ವಿಗ್ರಹಗಳೂ ಇರುವುದು ಇಲ್ಲಿಯ ವೈಶಿಷ್ಟ್ಯ. ಮೊಗಸಾಲೆಯ ಕಪೋತದ ಮಧ್ಯದಲ್ಲಿ ಗರ್ಭಗುಡಿಗೆ ಎದುರಾಗಿ ಗರುಡನ ಶಿಲ್ಪವಿದೆ. ಸಭಾಂಗಣದ ಭತ್ತಿನಲ್ಲಿ ಕಾರ್ತಿಕೇಯ, ವರುಣ, ಯಮ, ಇಂದ್ರ ಮತ್ತು ವಿದ್ಯಾಧರರ ಉಬ್ಬು ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಈಗ ಮೂಲಮೂರ್ತಿಯಿಲ್ಲ.

ಈ ಲಯಣದಲ್ಲಿ ಗರುಡನ ಶಿಲ್ಪದ ಬಲಭಾಗಕ್ಕೆ ಕೆಲವು ವರ್ಣಚಿತ್ರಗಳೂ ಉಳಿದುಬಂದಿವೆ. ಅರಮನೆಯಲ್ಲಿ ನೃತ್ಯ ಪ್ರದರ್ಶನ,

ರಾಜನ ಸಭೆ, ಒಬ್ಬ ಭವ್ಯ ರಾಜಪುರುಷನನ್ನು ಆಕಾಶಗಾಮಿ ಅಪ್ಸರೆಯರು ನೋಡಿ ಮೆಚ್ಚಿಗೆ ಸೂಚಿಸುತ್ತಿರುವುದು ಈ ಮೂರು ದೃಶ್ಯಗಳನ್ನು (ಬಹು ಪ್ರಯಾಸದಿಂದ) ಗುರುತಿಸಬಹುದು. ಚಿತ್ರರಚನೆಗೆ ಮಣ್ಣಿನಿಂದ ಮಾಡಿದ ವಿವಿಧ ಕೆಂಪು, ಕಂದು, ಕಪ್ಪು, ನೀಲಿ, ಹಸುರು ಮತ್ತು ಹಳದಿ ಬಣ್ಣಗಳನ್ನು ಉಪಯೋಗಿಸಲಾಗಿದೆ. ಈ ವರ್ಣಚಿತ್ರಗಳು ಪ್ರಬುದ್ಧ ಶೈಲಿಯ ಶ್ರೇಷ್ಠ ಕಲಾಕೃತಿಗಳು. ಆದರೆ ಬಹಳಷ್ಟು ಹಾಳಾಗಿವೆ. ಮೊಗಸಾಲೆಯ ಛತ್ತಿನಲ್ಲಿರುವ ಶಿಲ್ಪಗಳಿಗೂ ವಿವಿಧ ಬಣ್ಣಗಳನ್ನು ಬಳಿಯಲಾಗಿದೆ.

ಮಾಲೆಗಿತ್ತಿ ಶಿವಾಲಯ

ಈ ಲಯಣದಲ್ಲಿರುವ ಸಂಸ್ಕೃತ ಶಾಸನವು ಚಳುಕ್ಯ ಚಕ್ರವರ್ತಿ ಒಂದನೆಯ ಕೀರ್ತಿವರ್ಮನ ತಮ್ಮ ಮಂಗಲೀಶ ಈ ಲಯಣವನ್ನು ಶಕವರ್ಷ 500ರಲ್ಲಿ ಮಾಡಿಸಿ ಅದರಲ್ಲಿ ವಿಷ್ಣು ಪ್ರತಿಮೆಯನ್ನು ಸ್ಥಾಪಿಸಿದ; ಆ ಸಮಯದಲ್ಲಿ 16 ಬ್ರಾಹ್ಮಣರಿಗೂ ಮತ್ತು ಪರಿವ್ರಾಜಕರಿಗೂ ಪ್ರತಿದಿನವೂ ಸತ್ರದಲ್ಲಿ ಭೋಜನಕೋಸ್ಕರ ಮತ್ತು ನಾರಾಯಣ ಬಲಿ ಎಂಬ ಧಾರ್ಮಿಕ ಕರ್ಮವನ್ನು ನಡೆಸಲು ಲಞ್ಜಿಗೇಶ್ವರ (ಈಗಿನ ನಂದಿಕೇಶ್ವರ) ಗ್ರಾಮವನ್ನು ಈ ದೇವಾಲಯಕ್ಕೆ ದಾನಮಾಡಿದ ಎಂದು ತಿಳಿಸುತ್ತದೆ. ಲಯಣದ ಮುಂಬದಿಯ ಕಪೋತದ ಒಳಬದಿಯಲ್ಲಿರುವ ಒಂದು ಗರುಡನ ಶಿಲ್ಪದ ಮೇಲೆ ಶ್ರೀ ನೆಲವಳ್ಕೆ ಎಂದಿದೆ. ಇದು ಶಿಲ್ಪಿಯ ಅಥವಾ ಶಿಲ್ಪವನ್ನು ಮಾಡಿಸಿದವರ ಹೆಸರಿರಬಹುದು. ಲಯಣದ ಹೊರಗೆ ಎಡಭಾಗದ ಬುಡದಲ್ಲಿ ದಿಂಡಿನ ಮೇಲೆ ಇರುವ ಕನ್ನಡ ಶಾಸನದಲ್ಲಿ ಮಂಗಲೀಶ ನಿರ್ಮಿಸಿದ ವಿಷ್ಣುದೇವರ ಕಲ್ಮನೆಗೆ ಹೂವನ್ನು ಪೂರೈಸುವ ಮಾಲಾಕಾರನಿಗೆ ಲಂಜಿಗೇಸರ ಹಳ್ಳಿಯಲ್ಲಿ ಅರ್ಧವೀಸ ಪ್ರಮಾಣದ ಆಯವನ್ನು ಕೊಟ್ಟ ವಿಷಯವಿದೆ.

ನಾಲ್ಕನೆಯದಾದ ಜೈನ ಲಯಣದಲ್ಲಿ ಮೊಗಸಾಲೆ, ಆಯತಾಕಾರದ ಇಕ್ಕಟ್ಟಾದ ಅಂಕಣ ಮತ್ತು ಗರ್ಭಗೃಹಗಳಿವೆ. ಅಂಕಣದ ಪ್ರವೇಶ ದ್ವಾರದಲ್ಲಿ ಎರಡು ಕಂಬಗಳಿವೆ. ಒಳಗೆ ಕಂಬಗಳಲ್ಲಿ ಮೊಗಸಾಲೆಯಲ್ಲಿ ಮುಂಬದಿಯಲ್ಲಿ ಸಿಂಹದ ತಲೆಯ ಮೇಲಿಟ್ಟ ಹಾಗೆ ನಾಲ್ಕು ಕಂಬಗಳಿವೆ. ಪ್ರವೇಶದ್ವಾರದ ಚೌಕಟ್ಟು ವಿವಿಧ ಶಾಖೆಗಳಿಂದ ಅಲಂಕೃತವಾಗಿದೆ. ಮೊಗಸಾಲೆಯ ಮುಂದಿನ ಕಪೋತದ ಮಧ್ಯದಲ್ಲಿ ಕುಬ್ಜನ (ಪ್ರಾಯಶಃ ಕುಬೇರ) ಉಬ್ಬು ಶಿಲ್ಪವಿದೆ. ಛತ್ತಿನಲ್ಲಿ ಗಂಧರ್ವ ದಂಪತಿಗಳ ಶಿಲ್ಪವಿದೆ. ಮುಂದೆ ಎಡಬದಿಗೆ, ತೀರ್ಥಂಕರ ಮತ್ತು ಒಬ್ಬ ಭಕ್ತಳ ಶಿಲ್ಪಗಳಿವೆ. ಇವುಗಳ ಕೆಳಗಿರುವ ಸು. 12ನೆಯ ಶತಮಾನದ ಕನ್ನಡ ಶಾಸನ ಅತ್ತಿಮಬ್ಬೆಯಂಥ ಸುಪ್ರಸಿದ್ಧ ಪರಮ ಜೈನ ಧರ್ಮಿಷ್ಠೆ ಜಕ್ಕವ್ವೆ ಸಲ್ಲೇಖನ ವ್ರತದಿಂದ ಮರಣ ಹೊಂದಿದಳೆಂದು ತಿಳಿಸುತ್ತದೆ.

ಮೊಗಸಾಲೆಯೊಳಗಿನ ಎದುರುಬದರಿನ ಗೋಡೆಗಳ ಮೇಲೆ ಬಾಹುಬಲಿ ಮತ್ತು ಯಕ್ಷಯಕ್ಷಿಯರ ಸಹಿತ ಸುಪಾರ್ಶ್ವನಾಥನ ಮೂರ್ತಿಗಳಿವೆ. ಇವುಗಳ ಬಲಬದಿಗೆ ಮತ್ತು ಕಂಬಗಳ ಮೇಲೂ ತೀರ್ಥಂಕರರ ಮೂರ್ತಿಗಳನ್ನು ಜಿನಬಿಂಬಗಳನ್ನೂ ಯಕ್ಷಯಕ್ಷಿಯರನ್ನೂ ಕಟೆಯಲಾಗಿದೆ. ಅಂಕಣದ ಎದುರು ಬದರಿನ ಗೋಡೆಗಳ ಮೇಲೆ ಮಹಾವೀರ ತೀರ್ಥಂಕರ ಹಾಗೂ ಇವುಗಳ ಕೆಳಗೆ ಆನೆ ವಾಹನವುಳ್ಳ ಮಾತಂಗ ಯಕ್ಷನ, ಸಿದ್ಧಾಯಿನಿ ಯಕ್ಷಿಯ ಮೂರ್ತಿಗಳಿವೆ. ಗರ್ಭಗುಡಿಯ ಬದಿಗಳಲ್ಲಿ ಹೊರಗೋಡೆಯ ಮೇಲೆ ತೀರ್ಥಂಕರ ಮತ್ತು ಕುಕ್ಕುಟ ಸರ್ಪವಾಹನವುಳ್ಳ ಪದ್ಮಾವತಿ ಯಕ್ಷಿಯರ ಮೂರ್ತಿಗಳಿವೆ. ಗರ್ಭಗುಡಿಯೊಳಗೆ, ಹಿಂಬದಿಯ ಗೋಡೆಯ ಮೇಲೆಯೇ ಕೆತ್ತಿದ ಸಿಂಹಪೀಠಸ್ಥ ಮಹಾವೀರನ ದೊಡ್ಡ ಮೂರ್ತಿಯಿದೆ.

ಮೂರನೆಯ ಲಯಣದಲ್ಲಿರುವ ಮಂಗಲೀಶನ ಶಾಸನದಲ್ಲಿ ಈ ವಿಷ್ಣುಲಯಣವನ್ನು ಶಕವರ್ಷ 500 ರಲ್ಲಿ ಮಾಡಿಸಿದನೆಂದು ಹೇಳಿರುವುದರಿಂದ ಅದರ ಕಾಲ 578. ಕಾಲಮಾನದಲ್ಲಿ ಈ ಲಯಣವೇ ಮೊದಲನೆಯದೆಂದೂ ಜೈನ ಲಯಣ ಸು. 8ನೆಯ ಶತಮಾನದ್ದಾಗಿ ಕೊನೆಯದೆಂದೂ ಅಭಿಪ್ರಾಯಪಡಲಾಗಿದೆ. ಇಲ್ಲಿನ ಶೈವ ಗುಹಾಲಯವೇ ಮೊದಲನೆಯದು; ಅನಂತರ 2,3,4ನೆಯವನ್ನು ಕ್ರಮವಾಗಿ ಮಾಡಲಾಯಿತು ಎಂಬುದು ಇನ್ನೊಂದು ಅಭಿಪ್ರಾಯ. ಜೈನ ಲಯಣವೇ ಎಲ್ಲದಕ್ಕೂ ಪ್ರಾಚೀನವಾಗಿದ್ದು ಪ್ರಾಯಶಃ 6ನೆಯ ಶತಮಾನದ್ದು ಎಂಬ ಅಭಿಪ್ರಾಯವೂ ಇದೆ. ನೈಸರ್ಗಿಕ ಗುಹೆಯಲ್ಲಿರುವ ಬೌದ್ಧ ಶಿಲ್ಪವು ಪ್ರಾಯಶಃ 5–6ನೆಯ ಶತಮಾನದ್ದು.

**ಕಟ್ಟಿದ ದೇವಾಲಯಗಳು:** ಉತ್ತರಗುಡ್ಡದ ಮೇಲೆ ಮೂರು ದೇವಾಲಯಗಳಿವೆ. ಅವು ಮಾಲೆಗಿತ್ತಿ ದೇವಾಲಯ, ಕೆಳಗಿನ ಶಿವಾಲಯ ಮತ್ತು ಮೇಲಿನ ಶಿವಾಲಯ. ಕೆಳಗಿನ ಶಿವಾಲಯದಲ್ಲಿ ಕೇವಲ ಗರ್ಭಗುಡಿ ಮಾತ್ರ ಉಳಿದಿದೆ. ಮೊದಲಿಗೆ ಇದಕ್ಕೆ ಪ್ರದಕ್ಷಿಣಾಪಥವಿದ್ದು ಅದು ಕಾಲಾಂತರದಲ್ಲಿ ಬಿದ್ದುಹೋಗಿದೆ. ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಇದರ ಮೊದಲನೆಯ ತಳವು ಗರ್ಭಗುಡಿಯಷ್ಟೇ ದೊಡ್ಡದಿರುವುದು ಮತ್ತು ಸ್ತೂಪಿಯ ನಾಲ್ಕು ಮೂಲೆಗಳಲ್ಲಿ ಎರಡೆರಡು ದೇವತೆಗಳ ಶಿಲ್ಪಗಳಿರುವುದು ಈ ದೇವಾಲಯದ ವೈಶಿಷ್ಟ್ಯ. ಬಾಗಿಲು ಚೌಕಟ್ಟಿನಲ್ಲಿ ಹೂಬಳ್ಳಿ ಮೊದಲಾದ ಚೆಲುವಾದ ಶಾಖೆಗಳಿವೆ. ಬುಡದಲ್ಲಿ ದಂಡಧಾರಿಗಳಾಗಿ ಒಬ್ಬೊಬ್ಬ ಕುಬ್ಜ ದ್ವಾರಪಾಲಕನ ಚಿತ್ರವಿದೆ. ಒಳಗೆ ಅಂಡಾಕಾರದ ಪದ್ಮಪೀಠವಿದ್ದು ಅದರಲ್ಲಿ ಮೂರ್ತಿಯನ್ನಿಡಲು ಅನುಕೂಲವಾದ ಗುಳಿ ಇದೆ. ಈ ದೇವಾಲಯ ಮೂಲತಃ ಗಣೇಶನದಾಗಿರಬಹುದೆಂದು ಶಂಕಿಸಲಾಗಿದೆ. ಇದರ ಮುಂದೆ ಸ್ವಲ್ಪ ದೂರದಲ್ಲಿ ಎರಡು ಪ್ರತ್ಯೇಕ ಕಲ್ಲುಮಂಟಪಗಳಿವೆ.

ಮೇಲಿನ ಶಿವಾಲಯದಲ್ಲಿ, ಹಿಂಭಾಗದಲ್ಲಿ ಪ್ರದಕ್ಷಿಣಾ ಪಥದಿಂದ ಸುತ್ತುವರಿದ ಗರ್ಭಗುಡಿ, ಮುಂಭಾಗದಲ್ಲಿ ಮಧ್ಯಗಂಬವುಳ್ಳ ಸಭಾಮಂಟಪ ಇವೆ. ಇದರ ಮುಂದೆ ಮುಖಮಂಟಪವಿದ್ದು ಗರ್ಭಗುಡಿಯ ಮೇಲೆ ನಾಗರಶೈಲಿಯ ಶಿಖರವಿದೆ. ಕೆಳಗಿನ ಶಿವಾಲಯದಲ್ಲಿದ್ದ ಹಾಗೆ ಇದರ ಮೊದಲನೆಯ ತಳವು ಗರ್ಭಗುಡಿಯಷ್ಟೇ ಗಾತ್ರದ ಒಂದು ಕೋಣೆಯಂತಿದೆ. ದೇವಾಲಯದ ಅಧಿಷ್ಠಾನದಲ್ಲಿ ರಾಮಾಯಣ ಮತ್ತು ಕೃಷ್ಣಲೀಲಾ ಕಥೆಗಳ ಕೆಲವು ಮುಖ್ಯ ಸನ್ನಿವೇಶಗಳನ್ನು ನಿರೂಪಿಸುವ ಉಬ್ಬುಶಿಲ್ಪಗಳಿವೆ. ಈ ಚಿತ್ರ ಪಟ್ಟಿಕೆಯ ಮೇಲೆ ಗರ್ಭಗುಡಿಯ ಹೊರಗೋಡೆಯಲ್ಲಿ ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕಿಗೆದುರಾಗಿ ಒಂದೊಂದು ದೇವಕೋಷ್ಠವಿದೆ. ಇವುಗಳಲ್ಲಿ ಕ್ರಮವಾಗಿ ಗೋವರ್ಧನಧಾರಿ ಕೃಷ್ಣ, ಕಾಳಿಂಗ ಮರ್ದನ ಮತ್ತು ಆರು ಕೈಗಳುಳ್ಳ ಉಗ್ರನರಸಿಂಹನ ಚೆಲುವಾದ ಮೂರ್ತಿಗಳಿವೆ. ಗರ್ಭಗುಡಿಯಲ್ಲಿ ಈಗ ಮೂರ್ತಿಯಿಲ್ಲ. ಬಾಗಿಲ ಚೌಕಟ್ಟು ಸರಳವಾಗಿದ್ದು ಅಲ್ಲಲ್ಲಿ ಒಡೆದುಹೋಗಿದೆ. ಸಭಾಮಂಟಪ

ಮತ್ತು ಎಡಬದಿಯ ಮತ್ತು ಮುಂಭಾಗದ ಗೋಡೆಗಳು ಮತ್ತು ಮುಖಮಂಟಪ ಬಿದ್ದುಹೋಗಿವೆ. ಇದು ಮೂಲತಃ ವೈಷ್ಣವ ದೇವಾಲಯ ವಾಗಿದ್ದಿರಬಹುದೆಂದು ತರ್ಕಿಸಲಾಗಿದೆ.

ಮಾಲೆಗಿತ್ತಿ ಶಿವಾಲಯದಲ್ಲಿ ಗರ್ಭಗುಡಿ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಶಿಖರ ದ್ರಾವಿಡಶೈಲಿಯಲ್ಲಿದೆ. ಇದರ ಅಧಿಷ್ಠಾನದಲ್ಲಿ ಜಗತಿ, ಉಪಾನ, ಕುಮುದ, ಕೂಡುವರಿ–ಹೀಗೆ ಕೆಲವು ಅಡ್ಡ ಮಡಿಕೆಗಳಿವೆ. ಇದರ ಮೇಲೆ ಉದ್ದಕ್ಕೂ ಕುಬ್ಜ ಗಣಗಳ ಚಿತ್ರ ಪಟ್ಟಿಕೆ ಇದೆ. ಸಭಾಮಂಟಪದ ಹೊರಗೋಡೆಯ ದೇವಕೋಷ್ಠಗಳಲ್ಲಿ ದ್ವಾರಪಾಲಕರ, ಶಿವನ ಮತ್ತು ವಿಷ್ಣುವಿನ ಬಲು ಚೆಲುವಾದ ಮೂರ್ತಿಗ ಳಿವೆ. ಕೆಳಭಾಗ ಕುದುರೆ, ಮೇಲ್ಭಾಗ ಹೆಣ್ಣಿನ ಆಕೃತಿಯುಳ್ಳ ಒಬ್ಬ ಕಿನ್ನರಿಯ ತಲೆಗೂದಲನ್ನು ಕೈಯಲ್ಲಿ ಹಿಡಿದು ಅವಳ ಬೆನ್ನನ್ನು ತನ್ನ ಎಡಗಾಲಿನಿಂದ ತುಳಿಯುತ್ತಿರುವ ಒಂದು ದೇವತೆಯ ಅಪರೂಪದ ಶಿಲ್ಪವೊಂದು ಗರ್ಭಗುಡಿಯ ಒಳಗೆ ಬಲಬದಿಯಲ್ಲಿದೆ. ಇದು ಸೂರ್ಯನು ಛಾಯಾದೇವಿಯನ್ನು ಛಡಿಸುತ್ತಿರುವುದೆಂದು ಅಭಿಪ್ರಾಯಪಡಲಾಗಿದೆ. ಗರ್ಭಗುಡಿಯ ಬಾಗಿಲು ಚೌಕಟ್ಟಿನ ಅಡ್ಡಶಾಖೆಯ ಮೇಲೆ ನಟರಾಜನ ಶಿಲ್ಪವಿದೆ. ಒಳಗೆ ಪೀಠಸ್ಥ ಲಿಂಗವಿದೆ. ಆದರೆ ಲಿಂಗವು ಅನಂತರ ಕಾಲದಲ್ಲಿ ಸ್ಥಾಪಿತವಾಗಿದ್ದೆಂದು ಕಾಣುತ್ತದೆ. ದ್ವಾರಪಾಲಕರು ಪ್ರಾಯಶಃ ದಂಡ, ಪಿಂಗಳರೆಂದೂ ಈ ದೇವಾಲಯವು ಮೂಲತಃ ಸೂರ್ಯನದೆಂದೂ ತರ್ಕಿಸಲಾಗಿದೆ. ಇದನ್ನು ಆರ್ಯಮಿಂಚಿ ಉಪಾಧ್ಯಾಯನು ಕಟ್ಟಿದನೆಂದು ಇದರಲ್ಲಿಯ ಒಂದು ಶಾಸನದಲ್ಲಿ ಹೇಳಿದೆ (ಮಾಲೆಗಿತ್ತಿ ಶಿವಾಲಯದ ಮುಖಮಂಟಪದ ಒಂದು ಕಂಬದ ಮೇಲೆ ವಿಜಯನಗರ ಕಾಲದ ಒಂದು ಶಾಸನವಿದ್ದು ಅದರಲ್ಲಿ ಸದಾಶಿವರಾಯನ ಕಾಲದಲ್ಲಿ ಕೃಷ್ಣನಾಯಕನು ಕೊತ್ತಳ ಕಟ್ಟಿಸಿದನೆಂದು ಹೇಳಲಾಗಿದೆ).

ಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಮೇಲಿನ ಮತ್ತು ಕೆಳಗಿನ ಶಿವಾಲಯಗಳು 6ನೆಯ ಶತಮಾನದ ಆದಿಭಾಗವು ಮತ್ತು ಮಾಲೆಗಿತ್ತಿ ಶಿವಾಲಯ 7ನೆಯ ಶತಮಾನದ ಕೊನೆಯ ಭಾಗದ್ದು ಎಂದು ತೋರುತ್ತದೆ.

ಈಗಿನ ಊರಿನ ಒಳಗೆ ಜಂಬುಲಿಂಗ ದೇವಾಲಯವಿದೆ. ಇದು ಮೂಲತಃ ಬ್ರಹ್ಮ ವಿಷ್ಣು ಮಹೇಶ್ವರ ದೇವಾಲಯ. ಈ ದೇವಾಲಯದಲ್ಲಿ ಮುಖಮಂಟಪ, ಸಭಾಮಂಟಪ ಮತ್ತು ಸಭಾಮಂಟಪದ ಮೂರು ಬದಿಗಳಲ್ಲಿ ಒಂದೊಂದು ಗರ್ಭಗೃಹ ಇವೆ. ಈಗ ತಿಳಿದಿರುವಂತೆ ಬಹುಶಃ ಇದೇ ಕರ್ನಾಟಕದ ಅತ್ಯಂತ ಪ್ರಾಚೀನ ತ್ರಿಕೂಟಾಚಲ ಮಾದರಿಯ ದೇವಾಲಯ. ಇದರ ಬಾಗಿಲು ಚೌಕಟ್ಟಿನಲ್ಲಿ ಮತ್ತು ಛತ್ತಿನ ಮೇಲೆ ಆಕರ್ಷಕ ಕೆತ್ತನೆಗಳಿವೆ. ಬಾಗಿಲು ಚೌಕಟ್ಟಿನ ಅಡ್ಡಪಟ್ಟಿಯ ಮಧ್ಯದಲ್ಲಿ ನಾಗಶಾಖೆಗಳನ್ನು ಹಿಡಿದಿರುವ ಗರುಡನ ಉಬ್ಬುಶಿಲ್ಪವೂ ಚೌಕಟ್ಟಿನ ಶಾಖೆಗಳ ಬುಡದಲ್ಲಿ ದ್ವಾರಪಾಲಕರೊಡನೆ ಗಂಗೆ–ಯಮುನೆ ಯರ ಉಬ್ಬು ಶಿಲ್ಪಗಳೂ ಇವೆ. ಗರ್ಭಗುಡಿಗಳ ಮೇಲೆ ಪ್ರಾಯಶಃ ವಿಜಯನಗರ ಕಾಲದ ಇಟ್ಟಿಗೆ–ಗಾರೆಯ ಶಿಖರವಿದೆ. ಹದಿನಾಲ್ಕು ವಿದ್ಯೆಗಳಲ್ಲಿ ಪಾರಂಗತರಾದ ಅನೇಕ ಸಾವಿರ ಬ್ರಾಹ್ಮಣರಿಂದ ಶೋಭಿಸಲ್ಪಟ್ಟ ವಾತಾಪಿ ಅಧಿಷ್ಠಾನದಲ್ಲಿ ವಿಜಯಾದಿತ್ಯ ಸತ್ಯಾಶ್ರಯನ (696–733) ತಾಯಿಯಾದ ವಿನಯವತಿಯು ಶಕವರ್ಷ 621ರ ಜೇಷ್ಠ ಹುಣ್ಣಿಮೆಯಂದು (699 ಮೇ 20) ಕಟ್ಟಿಸಿ, ಬ್ರಹ್ಮ, ವಿಷ್ಣು, ಮಹೇಶ್ವರ ಮೂರ್ತಿಗಳನ್ನೂ ಸ್ಥಾಪಿಸಿ, ಕೆಲವು ಸುಂಕಗಳನ್ನೂ ಪದಾರ್ಥಗಳನ್ನೂ ದೇವಾಲಯಕ್ಕೆ ದಾನಮಾಡಿದಳೆಂದು ಇಲ್ಲಿನ ಒಂದು ಕನ್ನಡ ಶಾಸನ ತಿಳಿಸುತ್ತದೆ. ಇದಲ್ಲದೆ ಈ ದೇವಾಲಯದಲ್ಲಿ ಸು. 8ನೆಯ ಶತಮಾನದ ಇನ್ನೆರಡು ಶಾಸನಗಳಿವೆ. ಒಂದು, ಮಹಾಚತುರ್ವಿದ್ಯೆಗಳಲ್ಲಿ ಪಾರಂಗತರಾದ ಎರಡು ಸಾವಿರ ಸಮುದಾಯವು ಅದೇ ಊರಿನ ಸಮ್ಮಗಾರರ ಕವಳ್ತೆಯನ್ನು ಬಿಟ್ಟುಕೊಟ್ಟಿರುವುದಾಗಿಯೂ ಇದನ್ನು (ಅವರ ಪ್ರಮುಖ ನಾದ) ನಿಡಿಯಮಾರ ಪಡೆದನೆಂದೂ ತಿಳಿಸುತ್ತದೆ. ಮತ್ತೊಂದರಲ್ಲಿ, ಪರದರ (ವರ್ತಕರ) ಪನ್ದೆಮಿರಿಯನನ್ನು ಯುದ್ಧದಲ್ಲಿ ಎದುರಿಸುವವನು ತನ್ನ ತಲೆಯನ್ನು ಕಳೆದುಕೊಳ್ಳುವನು ಎಂದು ಅವನ ಶೌರ್ಯವನ್ನು ಬಣ್ಣಿಸಲಾಗಿದೆ.

ಮೂರನೆಯ ಗುಹೆಯಲ್ಲಿರುವ ಶೇಷಶಾಯಿ ವಿಷ್ಣು

ಅಗಸ್ತ್ಯತೀರ್ಥದ ಪೂರ್ವದಂಡೆಯ ಮೇಲೆ ನಾಲ್ಕೈದು ಸಣ್ಣ–ದೊಡ್ಡ ದೇವಾಲಯಗಳಿವೆ. ಇವುಗಳಲ್ಲಿ ಅತ್ಯಂತ ದೊಡ್ಡದು ದ್ವಿತಳ ನಾಗರ ವಿಮಾನ ಶೈಲಿಯಲ್ಲಿದೆ. ಗರ್ಭಗುಡಿ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಮುಖಮಂಟಪವನ್ನು ಕಾಲಾಂತರದಲ್ಲಿ ವಿಸ್ತರಿಸಲಾಗಿದೆ. ಇದು ಮೂರ್ತಿ ಶಿಲ್ಪಗಳಿಲ್ಲದ ತೀರ ಸರಳ ಕಟ್ಟಡ. ದ್ವಾರಪಾಲಕರಮೂರ್ತಿಗಳನ್ನು ಅನಂತರ ಕಾಲದಲ್ಲಿ ಹೊಡೆದು ತೆಗೆಯ ಲಾಗಿದೆ. ಈ ದೇವಾಲಯ ಸು. 8ನೆಯ ಶತಮಾನದ್ದು. ಶ್ರೀ ಪೈಂಗರ ಶ್ರೀಧರ ಭೂತೇಶ್ವರ ಭಟಾರರಿಗೆ 8 ಮತ್ತರ ಭೂಮಿಯನ್ನು ಕೊಟ್ಟ

ವಿಷಯ ಇದರಲ್ಲಿಯ ಒಂದು ಶಾಸನದಲ್ಲಿ ಹೇಳಿದೆ. ಗರ್ಭಗುಡಿಯ ಮುಂಬದಿಗಳಲ್ಲಿ ಶ್ರೀಕರಿಯವರಿಯಮ್ಮನ ಸ್ಥಾನದ ದೀವಿಗೆ ಎಂದಷ್ಟೇ ಇರುವ ಇನ್ನೊಂದು ಶಾಸನವೂ ಇಲ್ಲಿದೆ. ಈ ದೇವಾಲಯದ ಈಶಾನ್ಯಕ್ಕೆ ಇರುವ ಮತ್ತೊಂದು ದೇವಾಲಯ ಮೂಲತಃ ರಾಷ್ಟ್ರಕೂಟರ ಕಾಲದ್ದು. ಅನಂತರ ಸ್ವಲ್ಪ ಅಸ್ತವ್ಯಸ್ತವಾಗಿ ಜೀರ್ಣೋದ್ಧಾರವಾಗಿದೆ. ಇದರ ಗರ್ಭಗುಡಿಯಲ್ಲಿ ಲಕುಳೀಶನ ಮೂರ್ತಿ ಇದೆ. ಇದು ಪ್ರಾಯಶಃ 7–8ನೆಯ ಶತಮಾನದ ಅಪರೂಪದ ದುಂಡುಶಿಲ್ಪ. ಉಳಿದೆಲ್ಲ ದೇವಾಲಯಗಳೂ 10–12ನೆಯ ಶತಮಾನದವು.

ಅಗಸ್ತ್ಯತೀರ್ಥದ ದಕ್ಷಿಣದಂಡೆಯ ಮೇಲೆ ಸು. 10–12ನೆಯ ಶತಮಾನದ ಎರಡು ದೊಡ್ಡ ಮತ್ತು ಎರಡು ಸಣ್ಣ ದೇವಾಲಯಗಳಿವೆ. ದೊಡ್ಡ ದೇವಾಲಯಗಳ ಶಿಖರ ಕದಂಬ ನಗರ ಶೈಲಿಯಲ್ಲಿವೆ. ಇವುಗಳಲ್ಲಿ ಒಂದು ಮೂಲತಃ ವಿಷ್ಣುದೇವಾಲಯ. ಇದರ ಮುಖಮಂಟಪ ಬಿದ್ದುಹೋಗಿದೆ. ಮತ್ತೊಂದರಲ್ಲಿ ಮುಖಮಂಟಪ, ಸಭಾಮಂಟಪ, ಅಂತರಾಳ ಮತ್ತು ಗರ್ಭಗೃಹಗಳಿವೆ. ಇದು ಶಿವದೇವಾಲಯ.

ಅಗಸ್ತ್ಯತೀರ್ಥದ ಪಶ್ಚಿಮ ದಂಡೆಯ ಮೇಲೆ ಕಲ್ಯಾಣ ಚಾಳುಕ್ಯ ಶೈಲಿಯ ಒಂದು ಹಾಳುಬಿದ್ದ ದೇವಾಲಯವಿದೆ. ಇದನ್ನು ಸ್ಥಳೀಕವಾಗಿ ಎಲ್ಲಮ್ಮ ದೇವಾಲಯವೆಂದು ಕರೆಯುತ್ತಾರೆ. ಇದರಲ್ಲಿರುವ ಚಾಳುಕ್ಯ ಜಗದೇಕಮಲ್ಲನ ಶಾಸನದಲ್ಲಿ ಇದನ್ನು ಯೋಗೀಶ್ವರ ದೇವಾಲಯವೆಂದು ಕರೆಯಲಾಗಿದೆ. ಇದರ ಮುಖಮಂಟಪ ಮತ್ತು ಸಭಾಮಂಟಪದ ಸ್ವಲ್ಪಭಾಗ ಬಿದ್ದುಹೋಗಿವೆ. ಇದರ ಶಿಖರ ನಾಗರಶೈಲಿಯಲ್ಲಿದೆ. ಇದರ ಸುಕನಾಸಿಯ ಮುಂಬದಿಯಲ್ಲಿ ಧ್ಯಾನಸ್ಥ ವಿಷ್ಣುವಿನ ಉಬ್ಬುಶಿಲ್ಪವಿದೆ. ಬಹುಶಃ ಈ ದೇವಾಲಯ ಮೂಲತಃ ಯೋಗೀಶ್ವರನೆಂದು ಕರೆಯಲಾದ ವಿಷ್ಣು ದೇವಾಲಯವಾಗಿರಬೇಕು. ಇದರ ಸಮೀಪದಲ್ಲೆ ದತ್ತಾತ್ರೇಯ, ಸ್ವಲ್ಪ ದೂರದಲ್ಲಿ ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ದೇವಾಲಯಗಳಿವೆ. ಮೊದಲನೆಯದು ಬಿಟ್ಟು ಉಳಿದೆಲ್ಲವೂ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿವೆ. ಪ್ರತಿಯೊಂದರಲ್ಲೂ ಮೊದಲು ಗರ್ಭಗುಡಿ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿದ್ದವು. ಈ ದೇವಾಲಯಗಳೆಲ್ಲಾ ಯಾವ ಮೂರ್ತಿಶಿಲ್ಪಗಳ ಅಲಂಕರಣಗಳಿಲ್ಲದೆ ತೀರಾ ಸರಳವಾಗಿವೆ. ದತ್ತಾತ್ರೇಯನ ಗರ್ಭಗುಡಿಯಲ್ಲಿ ಪೂಜೆಗೊಳ್ಳುತ್ತಿರುವ ದತ್ತಾತ್ರೇಯನ ಮೂರ್ತಿಮಾತ್ರ ಕಲ್ಯಾಣ ಚಾಳುಕ್ಯ ಮೂರ್ತಿಶಿಲ್ಪದ ಒಂದು ಉತ್ತಮ ಕಲಾಕೃತಿ. ಪದ್ಮಾಸನದಲ್ಲಿರುವ ಚತುರ್ಭುಜ ವಿಷ್ಣುಮೂರ್ತಿಯ ಕೆಳಗಿನ ಎರಡು ಕೈಗಳು ಧ್ಯಾನಮುದ್ರೆಯಲ್ಲಿವೆ. ಮೇಲಿನ ಬಲ ಎಡಗೈಗಳಲ್ಲಿ ಚಕ್ರ ಶಂಖಗಳಿವೆ. ಮಕರ ತೋರಣ ಮತ್ತು ಸಿಂಹಲಲಾಟವುಳ್ಳ ಪ್ರಭಾವಳಿಯ ಮೇಲ್ಭಾಗದಲ್ಲಿ ವಿಷ್ಣುವಿನ ಹತ್ತು ಅವತಾರಗಳ ಸಣ್ಣ ಸಣ್ಣ ಚಿತ್ರಗಳಿವೆ. ಪೀಠದ ಮುಂಬದಿಯಲ್ಲಿ ಗರುಡ, ನಂದಿ ಮತ್ತು ಹಂಸಗಳ ಚಿತ್ರಗಳಿವೆ. ಈ ಮೂರ್ತಿ ಮೂಲತಃ ಯೋಗೀಶ್ವರ ದೇವಾಲಯದ್ದಾಗಿದ್ದು, ಅದು ಹಾಳಾದ ಮೇಲೆ ಈಗಿನ ದೇವಾಲಯಕ್ಕೆ ಸ್ಥಳಾಂತರವಾಗಿರಬೇಕು.

ಮಲ್ಲಿಕಾರ್ಜುನ ದೇವಾಲಯದ ಹತ್ತಿರ ಪ್ರಸನ್ನವೆಂಕಟದಾಸರ (1680–1752) ಕಟ್ಟೆಯಿದೆ. ಇಲ್ಲಿ ಅವರು ಕುಳಿತುಕೊಳ್ಳುತ್ತಿದ್ದರೆಂಬ ನಂಬುಗೆಯಿದೆ. ಈ ದೇವಾಲಯದ ಸ್ವಲ್ಪ ದೂರದಲ್ಲಿ ವಿಜಯನಗರಕಾಲದ ಒಂದು ದೇವಾಲಯವಿದೆ. ಇದು ಕಾಲಾಂತರದಲ್ಲಿ ಮಸೀದಿಯಾಗಿ ಬದಲಾವಣೆಗೊಂಡಿದ್ದು ಈಗಲೂ ಹಾಗೆಯೇ ಉಪಯೋಗಿಸಲಾಗುತ್ತಿದೆ.

ಅಗಸ್ತ್ಯತೀರ್ಥದ ಆಗ್ನೇಯಕ್ಕೆ ಒಂದು ಬಂಡೆಯ ಮೇಲೆ ಮೊದಲಿದ್ದ ಚಾಳುಕ್ಯ ಕಾಲದ ಒಂದು ಶಾಸನದ ಮೇಲೆ ಬ್ರಹ್ಮ, ವಿಷ್ಣು, ಶಿವ, ಗಣೇಶ, ಮಹಿಷ ಮರ್ದಿನಿಯ ಮೂರ್ತಿಗಳನ್ನು ಕಡೆಯಲಾಗಿದೆ. ಇಲ್ಲಿಂದ ಸ್ವಲ್ಪ ಮುಂದೆ ಇನ್ನೊಂದು ಬಂಡೆಯ ಮೇಲೆ ಅನಂತಶಯನನ ಮೂರ್ತಿಯೊಂದಿದ್ದು ಅದಕ್ಕೆ ಒಂದು ಸಣ್ಣ ಕಲ್ಲಿನ ಗುಡಿಯನ್ನು ಕಟ್ಟಲಾಗಿದೆ. ಅದರ ಸಮೀಪದಲ್ಲೇ ಒಂದು ನೈಸರ್ಗಿಕ ಗವಿಯಲ್ಲಿ ಒಂದು ಮರದ ಬುಡದಲ್ಲಿ ಸಿಂಹಪೀಠದ ಮೇಲೆ ಧ್ಯಾನಾಸಕ್ತನಾದ ಮಹಾರಾಜನಂತಿರುವ ಮಹಾಪುರುಷನ ಭವ್ಯವಾದ ಶಿಲ್ಪವಿದೆ. ಇದರ ಬಲಕ್ಕೆ ಒಬ್ಬ ಯೋಗಿಯ ಸಣ್ಣ ಉಬ್ಬುಶಿಲ್ಪವಿದೆ. ಇದನ್ನು ಸ್ಥಳೀಕವಾಗಿ ಕೋಷ್ಠರಾಯನೆಂದು ಕರೆಯಲಾಗುತ್ತದೆ. ಇದು ಪ್ರಾಯಶಃ ಒಂದನೆಯ ಕೀರ್ತಿವರ್ಮ ಮತ್ತು ಜೈನಧರ್ಮದ ಜೀವಂತಸ್ವಾಮಿ ಇರಬಹುದೆಂದು ಅಭಿಪ್ರಾಯ ಪಡಲಾಗಿದೆ.

ಲಯಣಗಳ ಹತ್ತಿರ ಒಂದು ಎತ್ತರದ ಭವ್ಯ ಹಾಗೂ ಸರಳವಾದ ಗುಮ್ಮಟ ಇದೆ. ಇದು ಹೈದರ್–ಟಿಪ್ಪು ಕಾಲದ್ದು.

ಈ ವಾಸ್ತು ಅವಶೇಷಗಳು ಮತ್ತು ತತ್ಸಂಬಂಧಿತ ಶಾಸನಗಳಲ್ಲದೆ ಬಾದಾಮಿಯಲ್ಲಿ ಕೆಲವು ಇತರ ಶಾಸನಗಳೂ ಇವೆ. ಅಗಸ್ತ್ಯ ಸರೋವರದ ಉತ್ತರದಲ್ಲಿ ಉತ್ತರ ಗುಡ್ಡದ ಬುಡದಲ್ಲಿ ಮೇಗಣ ಕೋಟೆಗೆ ಹೋಗುವ ಬಾಗಿಲಿನ ಎದುರಿಗೆ ಸ್ವಲ್ಪದೂರದಲ್ಲಿ ಇರುವ ಒಂದು ಬಂಡೆಯ ಮೇಲೆ ಕಂಚಿಯ ಪಲ್ಲವ ಅರಸ ಮಹಾಮಲ್ಲನ (ಒಂದನೆಯ ನರಸಿಂಹವರ್ಮ) ಕಾಲದ ಗ್ರಂಥಾಕ್ಷರಗಳಲ್ಲಿ ಬರೆದ ಒಂದು ಸಂಸ್ಕೃತ ಶಾಸನವಿದೆ. ಆ ಚಕ್ರವರ್ತಿ 642ರಲ್ಲಿ ಬಾದಾಮಿಯನ್ನು ಗೆದ್ದಾಗ ಈ ಶಾಸನವನ್ನು ಬರೆಸಿದ. ಬತ್ತೇರಪ್ಪನ ಗುಡಿಯ ಹತ್ತಿರ ಬಿದ್ದಿದ್ದ ಒಂದು ಒಡೆದ ಶಾಸನದಲ್ಲಿ ಬರೆಸಿದ. ಬತ್ತೇರಪ್ಪನ ಗುಡಿಯ ಹತ್ತಿರ ಬಿದ್ದಿದ್ದ ಒಂದು ಒಡೆದ ಶಾಸನದಲ್ಲಿ ಅಶ್ವಮೇಧಯಜ್ಞವನ್ನು ನೆರವೇರಿಸಿ ಅವಭೃತಸ್ನಾನ ಮಾಡಿದ ಇಮ್ಮಡಿ ಪುಲಕೇಶಿಯ ಉಲ್ಲೇಖವಿದೆ (ಈಗ ಈ ಶಾಸನವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರಿಸಲಾಗಿದೆ). ಉತ್ತರ ಗುಡ್ಡದ ಪೂರ್ವದ ಕಡಿದಾದ ಬದಿಯಲ್ಲಿರುವ ಒಂದು ಶಾಸನ ಕಪ್ಪೆ ಅರಭಟ್ಟನ ಶಾಸನವೆಂದು ಪ್ರಸಿದ್ಧವಾಗಿದೆ. ಇದು ತ್ರಿಪದಿಯಲ್ಲಿದ್ದು ಕನ್ನಡ ಸಾಹಿತ್ಯದಲ್ಲೇ ಈ ಛಂದಸ್ಸಿಗೆ ಅತ್ಯಂತ ಪ್ರಾಚೀನ ಮಾದರಿಯಾಗಿದೆ. ಕಪ್ಪೆ ಅರಭಟ್ಟನ ಕಲಿತನ, ಸ್ವಾಭಿಮಾನ ಹಾಗೂ ಮಾನವೇ ಶೀಲವಂತನಿಗೆ ಪ್ರಾಣ ಎಂಬ ಆದರ್ಶ ಇವನ್ನು ಓದುಗನ ಮನಮುಟ್ಟುವಂತೆ ಚೆನ್ನಾಗಿ ವರ್ಣಿಸಲಾಗಿದೆ. ಪ್ರಾರಂಭದಲ್ಲಿ ಆದರ್ಶತ್ವವನ್ನು ತಿಳಿಸುವ ಎರಡುಸಾಲು ಸಂಸ್ಕೃತದಲ್ಲಿದೆ. ಪ್ರಾಯಶಃ ಈ ಶಾಸನ 7ನೆಯ ಶತಮಾನದ ಅಂತ್ಯಭಾಗದ್ದು.

ಬಾದಾಮಿಯ ಈಶಾನ್ಯದಿಕ್ಕಿಗೆ ಮಹಾಕೂಟಕ್ಕೆ ಹೋಗುವ ಹಾದಿಯಲ್ಲಿ ಸಿಬಾರ ಕಟ್ಟೆಯ ಹತ್ತಿರ ಬಂಡೆಯ ಮೇಲೆ ಮೂರು ನಾಲ್ಕು ಕನ್ನಡ ಶಾಸನಗಳಿವೆ. ಇವುಗಳ ಸಮೀಪದಲ್ಲೆ ಗಣೇಶ, ಶಿವಲಿಂಗ, ನಾಗರಾಜನ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಒಂದು ಶಾಸನದಲ್ಲಿ ವಿನ(ನಾ)ಯಕ ಮತ್ತು ಫಣೀಂದ್ರ ಶಿಲ್ಪಗಳನ್ನು ಧರ್ಮಣ್ಣನೆಂಬುವನು ಮಾಡಿಸಿದ ವಿಷಯವಿದೆ. ಮತ್ತೊಂದರಲ್ಲಿಯೂ ಇವನೇ ಗಣಪತಿ ಮತ್ತು ನಾಗಕುಮಾರ ಪ್ರತಿಮೆಗಳನ್ನು ಮಾಡಿಸಿದನೆಂದಿದೆ. ಇನ್ನೊಂದರಲ್ಲಿ ಈ ಗುಡ್ಡದ ಪ್ರಕೃತಿ ಸೌಂದರ್ಯವನ್ನು ಸುಂದರವಾಗಿ ವರ್ಣಿಸಿದೆ. ಇವಲ್ಲದೆ ಅಲ್ಲಲ್ಲಿ ಶ್ರೀಬಹುಪ್ರಿಯನ್, ಶ್ರೀಗೋಇನ್ದ, ವಿಪ್ರನ್, ಶ್ರೀಅಕ್ಷರಮೇರು, ಶ್ರೀಗುಣಪಾಲನ್, ಶ್ರೀಪ್ರಸನ್ನಬುದ್ಧಿ ಇತ್ಯಾದಿ ಕೇವಲ ವ್ಯಕ್ತಿಗಳ ಹೆಸರು ಸೂಚಿಸುವ ಒಂದೊಂದು ಸಾಲಿನ ಶಾಸನಗಳು ಹಲವಾರು ಇವೆ.

ಪೂರ್ವದಂಡೆಯ ಮೇಲಿರುವ ಭೂತನಾಥ ದೇವಾಲಯಗಳ ಗುಂಪಿನಿಂದ ಮತ್ತೆ ಪೂರ್ವಕ್ಕೆ ಗುಡ್ಡದ ಕಣಿವೆ ಮಾರ್ಗದಲ್ಲಿ ಹೋದರೆ ಮೇಲೆ ಬಲಬದಿಯಲ್ಲಿ ಒಂದು ನೈಸರ್ಗಿಕ ಗವಿ ಮತ್ತು ನೀರಿನ

ಹೊಂಡ ಇವೆ. ಈ ಸ್ಥಳಕ್ಕೆ ಅರಳೀತೀರ್ಥ ಎಂದು ಹೆಸರು. ಇದರಲ್ಲಿ ಶಿವ, ಸೂರ್ಯ, ಅನಂತಶಯನ, ನರಸಿಂಹ, ಲಕ್ಷ್ಮಿ ಮೊದಲಾದ ಉಬ್ಬುಚಿತ್ರಗಳಿದ್ದು ಸು. 15ನೆಯ ಶತಮಾನದ ಒಂದು ನಾಗರಿಲಿಪಿಯ ಶಾಸನವಿದೆ. ಹಾರಿತಿ ಗೋತ್ರದ ರವಿ ತ್ರಿದಂಡಿಗೆ ಒಲಿದು ಮಹಾಲಕ್ಷ್ಮಿಯು ಕೊಲ್ಲಾಪುರದಿಂದ ಇಲ್ಲಿಗೆ ಬಂದಳೆಂದು ಆ ಶಾಸನ ತಿಳಿಸುತ್ತದೆ.

ಬಾದಾಮಿಯಲ್ಲಿ ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಶಾಖೆ ಒಂದು ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಕಟ್ಟಿಸಿದೆ. ಇದರಲ್ಲಿ ಶಿಡ್ಲಫಡಿಯ ಪ್ರಾಗೈತಿಹಾಸಿಕ ಅವಶೇಷಗಳುಳ್ಳ ನೈಸರ್ಗಿಕ ಗವಿಯ ಒಂದು ಮಾದರಿಯನ್ನೂ ವೈಷ್ಣವ ಲಯಣದ ವರ್ಣಚಿತ್ರದ ಒಂದು ಪ್ರತಿಯನ್ನೂ ಮತ್ತು ಇಲ್ಲಿಯ ಹಾಗೂ ಪಟ್ಟದಕಲ್ಲಿನ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಭಗ್ನ ಮೂರ್ತಿಶಿಲ್ಪಗಳ ಸಂಗ್ರಹವನ್ನೂ ಇಡಲಾಗಿದೆ. ಯುನೆಸ್ಕೊ ಇಲ್ಲಿನ ದೇವಾಲಯಗಳಿಗೆ ವಿಶ್ವ ಪರಂಪರಾ ನಿರ್ಮಾಣಗಳಾಗಿ ಮನ್ನಣೆ ನೀಡಲು ಚಿಂತಿಸಿದೆ. ಇತ್ತೀಚೆಗೆ ಪ್ರವಾಸೋದ್ಯಮ ಇಲಾಖೆಯೂ ಇತ್ತ ಹೆಚ್ಚು ಗಮನಹರಿಸಿದೆ. **(ಎ.ಎಸ್.)**

**ಬಾಬಾಬುಡನ್‌ಗಿರಿ**: ಚಿಕ್ಕಮಗಳೂರು ಜಿಲ್ಲೆಯ ಅದೇ ತಾಲ್ಲೂಕಿನಲ್ಲಿರುವ ಒಂದು ಪರ್ವತ. ಪಶ್ಚಿಮಘಟ್ಟ ಶ್ರೇಣಿಯಿಂದ ಒಳಚಾಚಿರುವ ಬೆಟ್ಟಗಳ ಸಾಲಿಗೆ ಈ ಗಿರಿಯೂ ಸೇರಿದ್ದು ಚಿಕ್ಕಮಗಳೂರು ಪಟ್ಟಣದ ಉತ್ತರ ದಿಕ್ಕಿನಲ್ಲಿ ಹರಡಿಕೊಂಡಿದೆ. ಇದರ ಎತ್ತರ ಸಮುದ್ರಮಟ್ಟದಿಂದ 1,894 ಮೀ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟುವ ಅನೇಕ ನದಿಗಳನ್ನು ಬಲ್ಲಾಳರಾಯನ ದುರ್ಗ ಮತ್ತು ಬಾಬಾಬುಡನ್‌ಗಿರಿ ಪರ್ವತ ಗಳು ಇಬ್ಭಾಗವಾಗಿ ಹರಿಯುವಂತೆ ಮಾಡಿವೆ.

ಬಾಬಾಬುಡನ್ ಗಿರಿಯ ವಿಹಂಗಮ ನೋಟ

ಬಾಬಾಬುಡನ್ ಗಿರಿ ಕುದುರೆಯ ಲಾಳದ ಆಕಾರದಲ್ಲಿದ್ದು ವಾಯವ್ಯ ದಿಕ್ಕಿನ ಕಡೆಗೆ ತೆರೆದಿದೆ. ಈ ಗಿರಿಯ ಪೂರ್ವಕ್ಕೆ ಭೂಮಿಯ ಮಟ್ಟ ಥಟ್ಟನೆ ಇಳಿದಿದೆ. ಗಿರಿ ಕಡಿದಾದ ಕಣಿವೆಗಳಿಂದಲೂ ದಟ್ಟವಾದ ಮರಗಳಿಂದಲೂ ಹಾಗೂ ಹುಲ್ಲು ಮೈದಾನಗಳಿಂದಲೂ ಕೂಡಿದೆ. ಇವುಗಳ ಮಧ್ಯೆ ನೀರಿನ ಚಿಲುಮೆಗಳು ನಿರಂತರವಾಗಿ ಹರಿಯುತ್ತವೆ. ಬಾಬಾಬುಡನ್‌ಗಿರಿ ಧಾರವಾಡದ ಭಿನ್ನಸ್ತರ ಶಿಲೆಗಳಿಂದ ಕೂಡಿದ್ದು ಕಬ್ಬಿಣದ ಅದಿರಿನಿಂದ ಕೂಡಿದೆ. ಇದರ ದಕ್ಷಿಣಕ್ಕಿರುವ ವಿಶಾಲವಾದ ಬಯಲು ಪ್ರದೇಶ ಫಲವತ್ತಾದ ಕಪ್ಪುಮಣ್ಣಿನಿಂದ ಕೂಡಿದ್ದು ಕಾಫಿ ಬೆಳೆಗೆ ಅನುಕೂಲಕರವಾಗಿದೆ. ಈ ಗಿರಿಯ ಅಕ್ಕಪಕ್ಕದ ಇಳಿಜಾರು ಪ್ರದೇಶ ದಟ್ಟವಾದ ಕಾಡುಗಳಿಂದ ಕೂಡಿದೆ. ಈ ಕಾಡುಗಳ ಮಧ್ಯೆ ಕಾಫಿ ತೋಟಗಳಿವೆ. ಬಾಬಾಬುಡನ್ ಗಿರಿಯು ದಕ್ಷಿಣ ಭಾರತದ ಕಾಫಿ ಬೆಳೆಯ ತೊಟ್ಟಿಲು ಎನಿಸಿಕೊಂಡಿದೆ. ಈ ಗಿರಿ ಔಷಧೋಪಯುಕ್ತ ಗಿಡಮೂಲಿಕೆಗಳಿಗೆ ಹೆಸರಾದದ್ದು. ದೇಶದ ನಾನಾ ಕಡೆಗಳಿಂದ ವೈದ್ಯರು ಬಂದು ಗಿಡಮೂಲಿಕೆಗಳನ್ನು ಸಂಗ್ರಹಿಸಿಕೊಂಡು ಹೋಗುತ್ತಾರೆ.

ಹಿಂದು ಪುರಾಣಗಳು ಇದನ್ನು ಚಂದ್ರದ್ರೋಣ ಪರ್ವತವೆಂದು ಹೆಸರಿಸಿವೆ. ಹಿಂದೆ ಬಾಬಾಬುಡನ್ ಎಂಬ ಮುಸ್ಲಿಂ ಸಂತನೊಬ್ಬ ಇಲ್ಲಿ ವಾಸಮಾಡುತ್ತಿದ್ದು, ಆತನೇ ಮೊದಲು ಕಾಫಿಯನ್ನು ಆಫ್ರಿಕದಿಂದ ತಂದು ಇಲ್ಲಿ ನೆಟ್ಟು ಬೆಳೆಸಿದನೆಂದು ಪ್ರತೀತಿಯಿದೆ. ಇಲ್ಲಿನ ಗುಹೆಯೊಂದರಲ್ಲಿರುವ ಸಮಾಧಿಯನ್ನು ಮುಸ್ಲಿಮರು ಬಾಬಾಬುಡನ್ ಸಂತನ ಸಮಾಧಿಯೆಂದೂ ಹಿಂದುಗಳು ಅದೇ ಗುಹೆಯನ್ನು ದತ್ತಾತ್ರೇಯ ಪೀಠವೆಂದೂ ಪೂಜಿಸುತ್ತಾರೆ. ಈ ಸ್ಥಳ ಹಿಂದು ಮತ್ತು ಮುಸ್ಲಿಂ ಧರ್ಮದವರಿಬ್ಬರಿಗೂ ಪವಿತ್ರ ಯಾತ್ರಾಸ್ಥಳವಾಗಿದೆ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ಸೇರುವುದುಂಟು. ಚಿಕ್ಕಮಗಳೂರಿನಿಂದ ಬಾಬಾಬುಡನ್ ಗಿರಿಗೆ ಉತ್ತಮ ರಸ್ತೆ ಇದೆ. ಈ ಪ್ರದೇಶ ತಂಪುದಾಣವಾಗಿ ಪ್ರವಾಸಿಗಳನ್ನು ಆಕರ್ಷಿಸುತ್ತದೆ. ಸಮೀಪವೇ ಇರುವ ಮಾಣಿಕ್ಯ ಧಾರಾ ಜಲಪಾತ ಪ್ರಸಿದ್ಧ ಪ್ರವಾಸಿ ತಾಣವಾಗಿದೆ. **(ಆರ್.ಜಿ.ಎಸ್.)**

**ಬಾಬಾಸಾಹೇಬ:** ನರಗುಂದ ಸಂಸ್ಥಾನದ ಪ್ರಭು (1842–58). ಬ್ರಿಟಿಷರ ವಿರುದ್ಧದ ಸಂಗ್ರಾಮದಲ್ಲಿ ಪಾತ್ರವಹಿಸಿದ್ದ ಕರ್ನಾಟಕದ ವೀರ. ಹುಟ್ಟು ಹೆಸರು ಭಾಸ್ಕರರಾವ್ ಭಾವೆ. ಬಾಬಾಸಾಹೇಬ ಇವನ ಜನಪ್ರಿಯ ನಾಮ. ಇವನ ತಂದೆ ದಾದಾಜಿಯ ಆಡಳಿತ ಕಾಲದಲ್ಲಿ ಸಂಸ್ಥಾನ ಸಾಲದಲ್ಲಿ ಮುಳುಗಿಹೋಗಿತ್ತು. ಆದರೆ ಬಾಬಾಸಾಹೇಬ ಪಟ್ಟವೇರಿದ ತರುಣದಲ್ಲೇ ಆಡಳಿತವನ್ನು ಪುನರ್ವ್ಯವಸ್ಥೆಗೊಳಿಸಿದನಲ್ಲದೆ, ದಕ್ಷತೆಯಿಂದ ಆಳತೊಡಗಿದ, ಸಂಸ್ಥಾನದ ಸಾಲದ ಹೊರೆಯನ್ನು ಕಡಿಮೆಮಾಡಿದ; ಪ್ರಜೆಗಳ ಪ್ರೀತ್ಯಾದರ ಗಳಿಸಿದ.

ದುರದೃಷ್ಟವಶಾತ್ ಬಾಬಾಸಾಹೇಬನಿಗಿದ್ದ ಒಬ್ಬನೇ ಮಗ ತೀರಿಕೊಂಡು ಸಂಸ್ಥಾನ ಉತ್ತರಾಧಿಕಾರಿಯಿಲ್ಲದೆ ಹೋಗುವಂಥ ಪರಿಸ್ಥಿತಿಯೊದಗಿತು. ಆದ್ದರಿಂದ ಬಾಬಾಸಾಹೇಬ ಕಂಪನಿ ಸರ್ಕಾರಕ್ಕೆ ಪತ್ರ ಬರೆದು (1846) ದತ್ತು ಸ್ವೀಕಾರಕ್ಕೆ ಅನುಮತಿ ಬೇಡಿದ. ಈ ಪ್ರಶ್ನೆ ಇನಾಮ್ ಕಮಿಷನರ್ ಮ್ಯಾನ್ಸನ್ ಎಂಬುವನ ಪರಿಶೀಲನೆಗೆ ಬಂದಿತು. ಮ್ಯಾನ್ಸನ್ ಸಂಸ್ಥಾನದ ಆರ್ಥಿಕ ಪರಿಸ್ಥಿತಿ ಶೋಚನೀಯ ಸ್ಥಿತಿಯಲ್ಲಿದೆ ಎಂಬ ನೆಪವನ್ನು ಒಡ್ಡಿ ದತ್ತಕ ಸ್ವೀಕಾರಕ್ಕೆ ಅನುಮತಿ ನಿರಾಕರಿಸಿದ. ಇದರಿಂದ ರೋಷಗೊಂಡ ಬಾಬಾಸಾಹೇಬ ಮ್ಯಾನ್ಸನ್‌ನ ಮೇಲೂ ಬ್ರಿಟಿಷರ ಮೇಲೂ ಸೇಡು ತೀರಿಸಿಕೊಳ್ಳಲು ಬಯಸಿದ. ದತ್ತುಸ್ವೀಕಾರ ಸಾಧ್ಯವಲ್ಲದಿದ್ದರಿಂದ ತನ್ನ ಮರಣಾನಂತರ ರಾಜ್ಯ ಬ್ರಿಟಿಷ್ ಪ್ರಭುತ್ವಕ್ಕೆ ಒಳಪಡುವುದೆಂದೂ ತನ್ನ ವಿಧವೆಯರು ಪ್ರಭುತ್ವ ನೀಡುವ ಜೀವನಾಂಶದಿಂದಲೇ ಬದುಕಬೇಕಾಗುವುದೆಂದೂ ಅವನು ಅರಿತ. ಇದೇ ಅವನನ್ನು ಆ ಕಾಲದ ವ್ಯಾಪಕ ಆಂದೋಳನಕ್ಕೆ ನೂಕಿರಬೇಕು.

ಆ ಕಾಲದಲ್ಲಿ ಲಾರ್ಡ್ ಡಾಲ್‌ಹೌಸಿಯ ದತ್ತಕ ನಿರಾಕರಣಸೂತ್ರ ಮತ್ತು ಅದರ ಹಿಂದೆಯೇ ಬಂದ ಇನಾಮ್ ಕಮಿಷನ್‌ನ ಕಾರ್ಯಚಟುವಟಿಕೆಗಳೇ ಮೂಲಕಾರಣವಾಗಿ ಉತ್ತರ ಭಾರತಾದ್ಯಂತ ಮಹಾಕ್ರಾಂತಿ (1857) ಹತ್ತಿ ಉರಿಯುತ್ತಿತ್ತು. ಇನಾಮ್ ಕಮಿಷನ್ ಎಲ್ಲಾ ಭೂಮಾಲೀಕರ ಹಕ್ಕುಪತ್ರಗಳನ್ನೂ ಪರಿಶೀಲಿಸಲು ನೇಮಿತವಾದದ್ದು. ಯಾವುದೇ ಹಕ್ಕು ಪತ್ರಗಳಿಲ್ಲದೆ ಹೋದರೆ ಅಥವಾ ಸಂಬಂಧಪಟ್ಟ ದಾಖಲೆಗಳು ಸ್ಪಷ್ಟವಾಗಿಲ್ಲವೆಂದು ಕಂಡು ಬಂದರೆ ಅಂಥವರ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಇನಾಮ್ ಕಮಿಷನ್‌ಗೆ ಕೊಡಲಾಗಿತ್ತು. ದಕ್ಷಿಣ ಮರಾಠ ದೇಶವೊಂದರಲ್ಲೇ ಇನಾಮ್ ಕಮಿಷನ್ ಸುಮಾರು 35,000 ಜಮೀನ್ದಾರರ ಒಡೆತನದ ಹಕ್ಕುಗಳನ್ನು ಪರಿಶೀಲಿಸಿ

21,000 ಜಮೀನ್ದಾರರ ಸ್ವತ್ತನ್ನು ಸರ್ಕಾರಕ್ಕೆ ಸೇರಿಸಿಕೊಂಡಿತು. ಇದರಿಂದಾಗಿ ನಿಪ್ಪಾಣಿ, ಜಂಬೋಟಿ ಮುಂತಾದ ಕಡೆಯ ಜಮೀನ್ದಾರರು ಒಟ್ಟುಗೂಡಿ ಬಂಡಾಯವೆದ್ದರು. ಬ್ರಿಟಿಷರ ವಿರುದ್ಧ ಎದ್ದು ನಿಂತರೆ ಇವರೆಲ್ಲರ ಸಹಾನುಭೂತಿ ಸಹಾಯ ತನಗೆ ದೊರಕುವುದೆಂದು ಚತುರನಾದ ಬಾಬಾಸಾಹೇಬ ಭಾವಿಸಿದ್ದ.

ಉತ್ತರ ಭಾರತದಲ್ಲಿ ನಡೆಯುತ್ತಿದ್ದ ಸಿಪಾಯಿ ದಂಗೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದ ಪೇಶವೆ ನಾನಾಸಾಹೇಬನೊಡನೆ ಬಾಬಾಸಾಹೇಬ ಪತ್ರವ್ಯವಹಾರ ನಡೆಸಿದ. ಅನಂತರ ಸುತ್ತಮುತ್ತ ಅಸಂತುಷ್ಟ ಮುಖಂಡರ ಸಹಾಯ ಪಡೆದು ದಂಗೆ ಏಳಬೇಕೆಂದು ಯೋಚಿಸಿದ. ಅದರಂತೆಯೇ ಅವನು ಡಂಬಳದ ದೇಸಾಯಿ, ಹಮ್ಮಿಗೆಯ ದೇಸಾಯಿ ಮತ್ತು ಮುಂಡರಗಿ ಭೀಮರಾವ್ **(ನೋಡಿ)** ಇವರೊಟ್ಟಿಗೆ ರಹಸ್ಯವಾಗಿ ಸಮಾಲೋಚಿಸಿದ. ತೊರಗಲ್ ಕಡೆಯವರೂ ಇನ್ನೂ ಹಲವರೂ ತಮ್ಮ ನೆರವಿಗೆ ದೊಡ್ಡ ಬಲದೊಡನೆ ಬರಲು ಉತ್ಸುಕರಾಗಿರುವರೆಂದು ತಿಳಿದು ಅವರನ್ನು ಹುರಿದುಂಬಿಸಿದ. ಕೊನೆಗೆ, ಉತ್ತರ ಕರ್ನಾಟಕಾದ್ಯಂತ ಒಮ್ಮೆಲೆ ಬಂಡಾಯ ಹರಡಬೇಕೆಂದು ನರಗುಂದ ರಾಜನ ಕಡೆಯವರು ಧಾರವಾಡ ಮತ್ತು ಅದರ ಪಶ್ಚಿಮ ಭಾಗವನ್ನು ಮತ್ತು ಮುಂಡರಗಿ ಭೀಮರಾಯ ಕೊಪ್ಪಳವನ್ನು ವಶಪಡಿಸಿಕೊಳ್ಳಬೇಕೆಂದು ನಿಶ್ಚಯಕ್ಕೆ ಬರಲಾಯಿತು. ಬಾಬಾಸಾಹೇಬನ ಆಜ್ಞೆಯಂತೆಯೇ ಎಲ್ಲಾ ನಡೆಯಬೇಕೆಂದೂ ತೀರ್ಮಾನಿಸಲಾಯಿತು. ಇಷ್ಟೆಲ್ಲಾ ನಡೆದದ್ದು ಬಹುಶಃ 1858ರ ಮಾರ್ಚ್ ಮಾಹೆಯಲ್ಲಿ.

ಈ ಪ್ರಬಂಧಗಳೆಲ್ಲ ಬ್ರಿಟಿಷರಿಗೆ ಸ್ವಲ್ಪವಾದರೂ ತಿಳಿಯದೆ ಇರಲಿಲ್ಲ. ಆದರೆ ನರಗುಂದದ ದುರ್ಗ ಅಭೇದ್ಯವೆನಿಸಿತು. ಅಂದಿನ ಆತಂಕಕಾರಿ ಸ್ಥಿತಿಯಲ್ಲಿ ಅಪಾಯಕಾರಿ ಮುಖಂಡರೊಡನೆ ದುಡುಕಿನ ವರ್ತನೆ ಸಹಾಯಕವಲ್ಲವೆಂದು ಆಂಗ್ಲ ಅಧಿಕಾರಿಗಳು ಅರಿತಿದ್ದರು. ಮುಂದಾಗುವ ಅಪಾಯವನ್ನು ತಪ್ಪಿಸುವ ಉದ್ದೇಶದಿಂದ ಸಂಚುಗಾರರಿಗೆ ಎಚ್ಚರಿಕೆ ಕೊಡಲಾಯಿತು. ಈ ಪ್ರಾಂತ್ಯದಲ್ಲೇನಾದರೂ ದಂಗೆಯುಂಟಾದರೆ ಬ್ರಿಟಿಷ್ ಆಡಳಿತಕ್ಕೆ ನೆರವಾಗಿ ನಿಲ್ಲಬೇಕೆಂದು ಬಾಬಾಸಾಹೇಬನನ್ನು ಧಾರವಾಡ ಜಿಲ್ಲೆಯ ಮ್ಯಾಜಿಸ್ಟ್ರೇಟ್ ಥಾಮಸ್ ಒಗಿಲ್ವಿ ಕೇಳಿದ. ನನ್ನ ಸಹಾಯ, ಸಹಕಾರಗಳು ಯಾವಾಗಲೂ ಇದ್ದದ್ದೇ ಎಂದು ಬಾಬಾಸಾಹೇಬ ಸುಳ್ಳು ಆಶ್ವಾಸನೆ ನೀಡಿದ.

ಬ್ರಿಟಿಷರು ಮತ್ತೂ ಮುಂದೆ ಹೋದರು. ಶಸ್ತ್ರಾಸ್ತ್ರ ಕಾಯಿದೆಗೆ ಅನುಗುಣವಾಗಿ ಬಾಬಾಸಾಹೇಬ ತನ್ನ ಕೋಟೆಯಲ್ಲಿಟ್ಟಿದ್ದ ದೊಡ್ಡತೋಪುಗಳು, ಮದ್ದುಗುಂಡು ಇತ್ಯಾದಿಗಳನ್ನು ಆಂಗ್ಲರ ವಶಕ್ಕೊಪ್ಪಿಸಬೇಕೆಂದು ಆಜ್ಞೆ ಮಾಡಿದರು. ಆಗ ದಕ್ಷಿಣ ಮರಾಠಾ ದೇಶದ ರಾಜಕೀಯ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿದ್ದ ಮ್ಯಾನ್ಸನ್ ಅಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಈ ಶಸ್ತ್ರಾಸ್ತ್ರಗಳು ಆಂಗ್ಲರ ವಿರೋಧಿಗಳಿಗೆ ದಕ್ಕುವಂತಾಗಬಾರದೆಂಬುದೇ ಬ್ರಿಟಿಷ್ ಸರ್ಕಾರದ ಆಶಯವೆಂದು ಹೇಳಿ, ನಂಬಿಸಿ, ಬಾಬಾ ಸಾಹೇಬನಿಂದ ಶಸ್ತ್ರಾಸ್ತ್ರ ಒಪ್ಪಿಸುವ ಆಶ್ವಾಸನೆ ಪಡೆದ. ಇದು ಒಂಟೆಯ ಬೆನ್ನಿನ ಮೇಲೆ ಹೇರಿದ ಕೊನೆಯ ಹೇರು. ಇದಕ್ಕಿಂತಲೂ ಹೆಚ್ಚಿನ ಅವಮಾನವನ್ನು ಸಹಿಸಲು ಸ್ವಾಭಿಮಾನಿಯೂ ಶೂರನೂ ಸ್ವಾತಂತ್ರ್ಯ ಪ್ರೇಮಿಯೂ ಆಗಿದ್ದ ಬಾಬಾಸಾಹೇಬ ಸಿದ್ಧವಿರಲಿಲ್ಲ. ಅತಿಯಾದ ಮಳೆ ಸುರಿಯುತ್ತಿದೆಯೆಂಬ ನೆಪವೊಡ್ಡಿ ಮೂರು ತೋಪುಗಳನ್ನು ದುರ್ಗದಲ್ಲೇ ಉಳಿಸಿಕೊಂಡು ಉಳಿದೆಲ್ಲ ಸಾಮಗ್ರಿಗಳನ್ನೂ ಧಾರವಾಡದತ್ತ ಕಳುಹಿಸಿದ. ಆದರೆ, ಮಧ್ಯದಾರಿಯಲ್ಲಿ ಅವನೇ ಕಳುಹಿಸಿದ ಜನ ಸಾಗಣೆ ಸಿಬ್ಬಂದಿಯವರ ಮೇಲೆ ಬಿದ್ದು ಎಲ್ಲಾ ಶಸ್ತ್ರಾಸ್ತ್ರಗಳನ್ನೂ ದೋಚಿಕೊಂಡು ಬಂದರು.

ನಿಗದಿ ಮಾಡಿದ್ದ ದಿನಕ್ಕೆ ಮೊದಲೇ ಮುಂಡರಗಿ ಭೀಮರಾವ್ ಬಂಡಾಯವೆಬ್ಬಿಸಿದ. ಡಂಬಳದ ಖಜಾನೆಯನ್ನು ಲೂಟಿಮಾಡಿ ಕೊಪ್ಪಳ ದುರ್ಗವನ್ನಾಕ್ರಮಿಸಲು ಹೊರಟ. ಈ ವಿಷಯ ತಿಳಿದಕೂಡಲೆ ಬಾಬಾಸಾಹೇಬ ತನ್ನ ಬಳಿಯಿದ್ದ ದೊಡ್ಡ ತೋಪು ಗಳನ್ನು ದುರ್ಗದ ಮೇಲೆ ಸರಿಯಾದ ಸ್ಥಳಗಳಲ್ಲಿರಿಸಿ ಯುದ್ಧ ಸನ್ನದ್ಧನಾದ.

ನರಗುಂದದೊಡೆಯನ ಈ ಅಪಾಯಕಾರಿ ಕ್ರಮಗಳ ವಿಷಯ ಮ್ಯಾನ್ಸನ್‌ಗೆ ಕುರಂದವಾಡದಲ್ಲಿ ತಿಳಿಯಿತು. ಏನಾದರೂ ಮಾಡಿ ಬಾಬಾಸಾಹೇಬ ದಂಗೆಯೆಬ್ಬಿಸದಂತೆ, ಅದು ಸಾಧ್ಯವಾಗದಿದ್ದರೆ ರಾಮದುರ್ಗ ಸಂಸ್ಥಾನದ ಒಡೆಯನಾಗಿದ್ದ ಅವನ ಮಲತಮ್ಮ ದಂಗೆಕೋರರಿಗೆ ಸಹಾಯ ನೀಡದಂತೆ ಮಾಡಬೇಕೆಂಬ ಉದ್ದಿಶ್ಯದಿಂದ ಮ್ಯಾನ್ಸನ್ ಮೇ 25ರಂದು ಒಳದಾರಿ ಹಿಡಿದು ನರಗುಂದದ ಕಡೆಗೆ ಸಾಗಿದ. ಜೊತೆಯಲ್ಲಿ ದಕ್ಷಿಣ ಮರಾಠಾ ಅಶ್ವದಳದ 12 ಮಂದಿಯನ್ನು ಮಾತ್ರ ತನ್ನ ರಕ್ಷಣೆಗಾಗಿ ಕರೆದೊಯ್ದ. ಆದರೆ, ಕರ್ನಲ್ ಮಾಲ್ಕಂ ರಾಮದುರ್ಗದಲ್ಲಿ ದಕ್ಷಿಣ ಮರಾಠಾ ಅಶ್ವದಳದೊಡನೆ ತನ್ನನ್ನು ಸಂಧಿಸಬೇಕೆಂದು ಆಜ್ಞಾಪಿಸಿದ. ದುರದೃಷ್ಟವಶಾತ್, ಈ ಆಜ್ಞೆ ತನ್ನನ್ನು ತಲುಪುವಷ್ಟರಲ್ಲಿ, ಕರ್ನಲ್ ಮಾಲ್ಕಂ 250 ಕುದುರೆ ಸವಾರರೊಡನೆ ಡಂಬಳದ ಟ್ರೆಜರಿ ಲೂಟಿಮಾಡಿದ ಬಂಡುಕೋರರೊಡನೆ ಹೋರಾಟಕ್ಕೆ ಸಿದ್ಧನಾಗಿ ನಿಂತಿದ್ದ. ಇದರಿಂದ, ಮ್ಯಾನ್ಸನ್ ರಾಮದುರ್ಗವನ್ನು ತಲುಪಿದಾಗ ಅವನ ರಕ್ಷಣೆಗಾಗಿ ಮಾಲ್ಕಂ ಅಲ್ಲಿರಲಾಗಲಿಲ್ಲ. ರಾಮದುರ್ಗದ ಒಡೆಯನೇನೋ ಸ್ನೇಹಭಾವವನ್ನೇ ತೋರಿದ. ಬಾಬಾಸಾಹೇಬ ಬರೆದಿದ್ದ ಪತ್ರವನ್ನು ತೋರಿಸಿ ಅಲ್ಲಿಗೆ ಹೋಗಕೂಡದೆಂದು ಎಚ್ಚರಿಸಿದ. ಈ ಪತ್ರದಲ್ಲಿ ನರಗುಂದದೊಡೆಯ ಅಪಮಾನಕ್ಕಿಂತ ಸಾವೇ ಲೇಸೆಂದೂ ರಾಮದುರ್ಗ ಸಹ ದಂಗೆಯಲ್ಲಿ ಪಾಲ್ಗೊಳ್ಳಬೇಕೆಂದೂ ಒತ್ತಿ ಹೇಳಿದ್ದ. ಧಾರವಾಡಕ್ಕೆ ಹೋಗಿ ಅಲ್ಲಿ ಮಾಲ್ಕಂನ ಪಡೆಯನ್ನು ಕೂಡಿಕೊಳ್ಳುವ ಉದ್ದೇಶದಿಂದ, ಎಷ್ಟು ಹೇಳಿದರೂ ಲಕ್ಷಿಸದೆ, ಮ್ಯಾನ್ಸನ್ ಮೇ 29ರ ಮಧ್ಯಾಹ್ನ ರಾಮದುರ್ಗದಿಂದ ಹೊರಟ. ಹನ್ನೆರಡು ಮಂದಿ ಅಶ್ವಿಕರಲ್ಲದೆ ಅವನ ಜೊತೆ ಕೆಲವೇ ಪರಿಚಾರಕರಿದ್ದರು. ರಾಮದುರ್ಗದಿಂದ ಧಾರವಾಡದತ್ತ ಹೋಗುವ ದಾರಿ ನರಗುಂದದ ಸಮೀಪದಲ್ಲೇ ಹಾಯುತ್ತಿತ್ತು. ಹೀಗಾಗಿ, ಮ್ಯಾನ್ಸನ್ನನ ಸಾಹಸ ಅಪಾಯದಿಂದ ಕೂಡಿತ್ತು. ರಾತ್ರಿಯಾಗುತ್ತಲೇ ಅವನು ಸುರೆಬಾನ ಎಂಬ ಹಳ್ಳಿಯಲ್ಲಿ ತಂಗಿದ.

ಇಷ್ಟರಲ್ಲಿ ಮ್ಯಾನ್ಸನ್ ರಾಮದುರ್ಗದಿಂದ ಕಳುಹಿಸಿದ್ದ ಪತ್ರ ಓದಿ ಕೋಪೋದ್ರಿಕ್ತನಾಗಿದ್ದ ಬಾಬಾಸಾಹೇಬ ಸು. 700–800 ಸಂಖ್ಯೆಯ ಕುದುರೆ ಮತ್ತು ಕಾಲ್ದಳದೊಂದಿಗೆ ರಾಮದುರ್ಗದತ್ತ ಮಿಂಚಿನಂತೆ ಏರಿಬಂದ. ಮ್ಯಾನ್ಸನ್ ಸುರೆಬಾನದಲ್ಲಿ ತಂಗಿರುವ ವಿಷಯ ತಿಳಿದು ಕೂಡಲೇ ಅತ್ತ ಧಾವಿಸಿದ. ಮ್ಯಾನ್ಸನ್ ಮತ್ತು ಅವನ ಕಡೆಯವರು ನಿದ್ರಿಸುತ್ತಿದ್ದ ಸ್ಥಳವನ್ನು ಸುತ್ತುವರಿದು ಕಾವಲಿನವನನ್ನು ಕೊಂದು ಮುನ್ನುಗ್ಗಿದ. ಈ ಗಲಾಟೆಯಿಂದ ಎಚ್ಚೆತ್ತ ಮ್ಯಾನ್ಸನ್ ತಾನು ಮಲಗಿದ್ದ

ಪಲ್ಲಕ್ಕಿಯಿಂದಲೇ ರಿವಾಲ್ವರ್‌ನಿಂದ ಗುಂಡುಹಾರಿಸಿ ಒಬ್ಬನನ್ನು ಘಾಸಿಗೊಳಿಸಿದ. ಅಷ್ಟರಲ್ಲಿಯೇ ಬಂಡುಕೋರರು ಅವನ ತಲೆ ಕಡಿದು ಮುಂಡವನ್ನು, ಅವನ ಕಡೆಯವರೇ ಮಾಡಿದ್ದ ಬೆಂಕಿಯೊಳಕ್ಕೆಸೆದರು. ಕತ್ತಲಲ್ಲಿ ಕೇವಲ ಆರು ಸೈನಿಕರು ತಪ್ಪಿಸಿಕೊಂಡರು. ಅನೇಕ ಅನುಚರರೂ ಪಲ್ಲಕ್ಕಿ ಹೊರುವವರೂ ದಕ್ಷಿಣ ಮಹಾರಾಷ್ಟ್ರ ಅಶ್ವದಳದ ಅಧಿಕಾರಿಗಳಲ್ಲೆಲ್ಲಾ ಶ್ರೇಷ್ಠನೆಂದೆನಿಸಿದ್ದ ಪೂರ್ಣಸಿಂಗನೂ ಕೊಲ್ಲಲ್ಪಟ್ಟ. ಮ್ಯಾನ್ಸನ್ನನ ರುಂಡವನ್ನು ಕೊಂಡೊಯ್ದು ನರಗುಂದ ಪಟ್ಟಣದ ದ್ವಾರವೊಂದಕ್ಕೆ ನೇತುಹಾಕಲಾಯಿತು. ಈ ರೀತಿ, ಬಾಬಾಸಾಹೇಬ ಮ್ಯಾನ್ಸನ್ನನ ಮೇಲಿದ್ದ ಸೇಡನ್ನು ತೀರಿಸಿಕೊಂಡ.

ಮ್ಯಾನ್ಸನ್‌ನ ಬಳಿಯಿದ್ದ ಕಾಗದಪತ್ರಗಳ ಪರಿಶೀಲನೆ ನಡೆಸಿದಾಗ ಬಾಬಾಸಾಹೇಬನಿಗೆ ತನ್ನ ಅನುಚಾರರೇ ಆದ ಕೃಷ್ಣಾಜಿಪಂತ ಜೋಶಿ ಮೊದಲಾದ ದ್ರೋಹಿಗಳ ಮೂಲಕ ತನ್ನ ಗುಪ್ತ ಕಾರ್ಯಾಗಾರಗಳೆಲ್ಲಾ ಬ್ರಿಟಿಷರಿಗೆ ಗೊತ್ತಿತ್ತೆಂಬ ವಿಷಯ ಗಮನಕ್ಕೆ ಬಂದು ಗಾಬರಿಯಾಯಿತು. ಈ ದ್ರೋಹಿಗಳು ಮದ್ದಿನ ಮನೆಗೆ ಸಗಣಿ ತುಂಬಿದ್ದರು. ಇಷ್ಟಾದರೂ ಅವನು ಹೋರಾಟಕ್ಕೆ ಸಿದ್ಧನಾದ.

ಮ್ಯಾನ್ಸನ್ ಮತ್ತು ಇತರರಿಗೊದಗಿದ ಘೋರಮರಣ ವೃತ್ತಾಂತ ಧಾರವಾಡಕ್ಕೆ ಮಾರನೇ ದಿನವೇ ತಲುಪಿತು. ಕೂಡಲೇ ಧಾರವಾಡದಿಂದ ಅಮರಗೋಳಕ್ಕೆ ಸಣ್ಣ ಪಡೆಯೊಂದನ್ನು ಕಳುಹಿಸಲಾಯಿತು. ಜೂನ್ 1ರಂದು ಕರ್ನಲ್ ಮಾಲ್ಕಂ, ದಕ್ಷಿಣ ಮರಾಠಾ ಅಶ್ವದಳದ 150 ಮಂದಿ ದೇಶೀಯ ಪದಾತಿದಳದ 28ನೆಯ ರೆಜಿಮೆಂಟ್ ಮತ್ತು 74ನೆಯ ಪರ್ವತಪಡೆಯ ಎರಡು ತುಕಡಿಗಳೊಡನೆ, ನರಗುಂದವನ್ನು ತಲುಪಿದ. ಕೂಡಲೇ ಅವನು ಸುಮಾರು ನೂರು ಅಶ್ವೀಕರೊಡನೆ ಕೋಟೆಯ ಪಾಳ್ತಿನೋಡಿ ಹಿಂದೆಗೆದ. ಇದನ್ನು ತಪ್ಪಾಗಿ ತಿಳಿದ ನರಗುಂದದ ಸು. 700 ಸೈನಿಕರು ಸ್ವಲ್ಪ ಹೊತ್ತಿನಲ್ಲೇ ಕೋಟೆಯಿಂದ ಹೊರ ಬಂದು ಬ್ರಿಟಿಷ್ ಸೈನ್ಯದ ಮೇಲೆರಗಿದರು. ಇದೊಂದು ವಿನಾಶಕಾರಕ ತಪ್ಪು. ಬ್ರಿಟಿಷ್ ಅಶ್ವದಳ ಅವರೆಲ್ಲರನ್ನೂ ಕೋಟೆಯತ್ತ ಹೊಡೆದು ದಬ್ಬಿತು. ಈ ಹೋರಾಟದಲ್ಲಿ ನರಗುಂದದ 60ಕ್ಕಿಂತಲೂ ಹೆಚ್ಚು ಸೈನಿಕರು ಕೊಲ್ಲಲ್ಪಟ್ಟರು; ಪಟ್ಟಣ ಬ್ರಿಟಿಷರ ವಶವಾಯಿತು. ಮಾರನೆಯ ದಿನ ಬ್ರಿಟಿಷರು ಕೋಟೆಯನ್ನು ವಶಪಡಿಸಿಕೊಳ್ಳಲು ಹೊರಟರು. ಆದರೆ ಸುಸಜ್ಜಿತ ಬ್ರಿಟಿಷ್ ಸೇನೆಯೆದುರು ನಿಲ್ಲಲಾರದೆ ತನ್ನ ಕಡೆಯವರು ಹಿಮ್ಮೆಟ್ಟಿದಾಗಲೇ ಬಾಬಾಸಾಹೇಬನಿಗೆ ಹೋರಾಟವನ್ನು ಮುಂದುವರಿಸುವುದರಿಂದ ಪ್ರಯೋಜನವಿಲ್ಲವೆಂದು ಅರಿವಾಯಿತು. ಅಂದು ರಾತ್ರಿಯೇ ಆರು ಮಂದಿ ಆಪ್ತರೊಡನೆ ದುರ್ಗವನ್ನು ತೊರೆದು ಅವನು ಮಾಯವಾಗಿ ಹೋಗಿದ್ದ. ಬಹಳಷ್ಟು ದಂಗೆಕೋರರೂ ಹೀಗೆಯೇ ಓಡಿಹೋಗಿದ್ದು ಕೋಟೆ ಹಾಳುಸುರಿಯುತ್ತಿತ್ತು.

ಬೆಳಗಾಂವಿಯ ಪೊಲೀಸ್ ಸೂಪರಿಂಟೆಂಡೆಂಟ್ ಆಗಿದ್ದ ಫ್ರಾಂಕ್ ಸೌಟರ್ ಮಾರನೇ ದಿನವೇ ಪಂಢರಪುರಕ್ಕೆ ತೆರಳುವ ಯಾತ್ರಾರ್ಥಿಗಳಂತೆ ವೇಷ ಧರಿಸಿದ್ದ ಬಾಬಾಸಾಹೇಬ ಮತ್ತು ಅವನ ಅನುಚರರನ್ನು ತೋರಗಲ್ ಕಾಡಿನಲ್ಲಿ ಸೆರೆಹಿಡಿದು ಬೆಳಗಾಂವಿಗೆ ತಂದ. ವಿಚಾರಣೆ ನಡೆಸಿ ಬಾಬಾಸಾಹೇಬನಿಗೆ ಮರಣದಂಡನೆ ವಿಧಿಸಿದ. ಜೂನ್ 12ರಂದು ಸಾವಿರಾರು ಮಂದಿಯ ಸಮ್ಮುಖದಲ್ಲಿ ಬೆಳಗಾಂವಿಯಲ್ಲಿ ಬಾಬಾಸಾಹೇಬನನ್ನು ನೇಣು ಹಾಕಲಾಯಿತು. ಶೋಕತಪ್ತರಾದ ಅವನ ತಾಯಿ ಯಮುನಾಬಾಯಿ ಮತ್ತು ಅವನ ಹೆಂಡತಿ ಸಾವಿತ್ರಿಬಾಯಿ ಮಲಪ್ರಭಾ ನದಿಗೆ ಹಾರಿಕೊಂಡು ಸತ್ತರು.

ನರಗುಂದ ಮತ್ತು ಕೊಪ್ಪಳದಲ್ಲಿ ನಡೆದ ಹೋರಾಟಗಳಲ್ಲಿ ಸು. 200 ಜನ ಕೊಲ್ಲಲ್ಪಟ್ಟರು. ಸು. 40 ಪ್ರಭಾವಶಾಲಿ ಮುಖಂಡರುಗಳನ್ನು ನೇಣುಹಾಕಿ ಕೊಲ್ಲಲಾಯಿತು. ಸೆರೆ ಸಿಕ್ಕವರಲ್ಲಿ ಸು. 100 ಜನರನ್ನು ಮಿಲಿಟರಿ ನ್ಯಾಯಾಲಯದ ಆಜ್ಞೆಯಂತೆ ಗುಂಡಿಟ್ಟು ಕೊಲ್ಲಲಾಯಿತು. ಇಷ್ಟೇ ಅಲ್ಲದೆ, ಸು. 100 ಜನರಿಗೆ ವಿವಿಧ ಅವಧಿಗಳ ಜೈಲುಶಿಕ್ಷೆ ವಿಧಿಸಲಾಯಿತು.

ಬಾಬಾಸಾಹೇಬ ಸ್ಥಾಪಿಸಿದ್ದ, ಸು. 3–4 ಸಹಸ್ರ ಗ್ರಂಥಗಳನ್ನೊಳಗೊಂಡಿದ್ದ ಪುಸ್ತಕಭಂಡಾರವನ್ನು ಬ್ರಿಟಿಷರು ಸುಟ್ಟರು. ದಂಗೆಯಲ್ಲಿ ಪಾಲ್ಗೊಂಡಿದ್ದ ಪ್ರಮುಖರೆಲ್ಲರ ಸಮಸ್ತ ಆಸ್ತಿಪಾಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು ಅವರ ವಿಧವೆಯರು ಮತ್ತು ಮಕ್ಕಳಿಗೆ ಜೀವನಾಂಶ ನೀಡಲಾಯಿತು. ಜೂನ್ 3ರಂದೇ ಪ್ರಕಟಣೆಯೊಂದನ್ನು ಹೊರಡಿಸಿ ನರಗುಂದ ಸಂಸ್ಥಾನವನ್ನು ಬ್ರಿಟಿಷ್ ಸರ್ಕಾರಕ್ಕೆ ಸೇರಿಸಿಕೊಳ್ಳಲಾಯಿತು. ಈ ಸಮಯದಲ್ಲಿ ನರಗುಂದ ಸಂಸ್ಥಾನ 41 ಹಳ್ಳಿಗಳನ್ನೊಳಗೊಂಡಿತ್ತು. ಇದರಲ್ಲಿ 17 ಹಳ್ಳಿಗಳು ಪರಭಾರೆ ಮಾಡಲ್ಪಟ್ಟಿದ್ದವು. ಸಂಸ್ಥಾನದಲ್ಲಿ ಜನಸಂಖ್ಯೆ ಸು. 22,700 ಇತ್ತು. ಸು. 50,000 ರೂ. ವಾರ್ಷಿಕ ವರಮಾನವಿತ್ತು. ಬಾಬಾಸಾಹೇಬನ ಅತಿ ಸಮೀಪದ ಬಂಧುಗಳಿಬ್ಬರಿಗೆ 1,300 ರೂಪಾಯಿಗಳಷ್ಟು ಮೊತ್ತದ ವಾರ್ಷಿಕ ಭತ್ಯೆಯನ್ನು ನೀಡಲಾಯಿತು. (ಎಚ್.ಪಿ.ಎಸ್.)

**ಬಾರಕೂರು:** ಉಡುಪಿ ಜಿಲ್ಲೆಯ ಹಾಗೂ ಅದೇ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಜನಸಂಖ್ಯೆ 2,873. ಉಡುಪಿಯಿಂದ ಉತ್ತರಕ್ಕೆ ಸುಮಾರು 16 ಕಿಮೀ ದೂರದಲ್ಲಿದೆ. ತುಳುನಾಡಿನ ಇತಿಹಾಸ ಪ್ರಸಿದ್ಧ ಸ್ಥಳಗಳಲ್ಲಿ ಒಂದು. 10ನೆಯ ಶತಮಾನದ ಹಾಗೂ ಹೊಯ್ಸಳರ ಕಾಲದ ಶಾಸನಗಳಲ್ಲಿ ಈ ಊರಿನ ಹೆಸರು ಬಾರಕನೂರು, ಬಾರಹ ಕನ್ಯಾಪುರ ಎಂದು ಉಲ್ಲೇಖಗೊಂಡಿದೆ. ಇದು 10–13ನೆಯ ಶತಮಾನಗಳಲ್ಲಿ ಆಳಿದ ತುಳುನಾಡಿನ ಪ್ರಸಿದ್ಧ ಅರಸು ಮನೆತನವಾದ ಆಳುಪರ

ಸೋಮನಾಥೇಶ್ವರ ದೇವಸ್ಥಾನ

ರಾಜಧಾನಿಗಳಲ್ಲೊಂದಾಗಿತ್ತು. ಅನಂತರ ಸ್ವಲ್ಪಕಾಲ ಹೊಯ್ಸಳರ ಉಪರಾಜಧಾನಿಗಳಲ್ಲಿ ಒಂದಾಗಿತ್ತು. ವಿಜಯನಗರದ ಕಾಲದಲ್ಲೂ ಇದು ಮುಖ್ಯಸ್ಥಳವಾಗಿದ್ದು ಅನಂತರ ಕೆಳದಿ ನಾಯಕರ ವಶವಾಯಿತು. ಆ ಕಾಲದಲ್ಲಿ ಇದು ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತಲ್ಲದೆ ಇಲ್ಲಿ ಒಂದು ಟಂಕಸಾಲೆ ಇದ್ದು ಇಲ್ಲಿ ಅಚ್ಚಾದ ನಾಣ್ಯಕ್ಕೆ ಬಾರಕೂರು ಗದ್ಯಾಣ ಎಂಬ ಹೆಸರೇ ಇತ್ತು.

ಇಲ್ಲಿ 8–15ನೆಯ ಶತಮಾನಗಳ ನಡುವೆ ಕಟ್ಟಲಾದ ಕೋಟೆಕೇರಿ ಪಂಚಲಿಂಗೇಶ್ವರ, ವೇಣುಗೋಪಾಲ, ಮೂಡುಕೇರಿ ಸೋಮನಾಥೇಶ್ವರ, ವೇಣುಗೋಪಾಲ, ಕೃಷ್ಣ, ಗಜಪತಿ, ಬಿಟ್ಟಿಕೇರಿ ವಿನಾಯಕ, ಮಣಿಗಾರಕೇರಿ

ಸಿದ್ಧೇಶ್ವರ, ಪಾಠಶಾಲಕೇರಿ ವೀರಭದ್ರ, ಚಳಿಕೇರಿ ಗಣಪತಿ, ಶಿವ, ನಾಗರಮಠದ ಕೇಶವ–ಈ ದೇವಾಲಯಗಳಿವೆ. ಕೋಟೆಕೇರಿ ಪಂಚಲಿಂಗೇಶ್ವರ ದೇವಾಲಯ ಚಾಳುಕ್ಯ, ಹೊಯ್ಸಳ, ವಿಜಯನಗರ ಕಾಲದ ವಾಸ್ತುಶಿಲ್ಪದ ಬೆಳವಣಿಗೆಯ ಮೂರು ಘಟ್ಟಗಳನ್ನು ನಿರೂಪಿಸುತ್ತದೆ. ಸೋಮನಾಥ ದೇವಾಲಯದ ನವರಂಗದಲ್ಲಿ ಹೊಯ್ಸಳರ ಕಾಲಕ್ಕೂ ಮುಂಚಿನ ಸರಸ್ವತಿ, ಜನಾರ್ಧನ ವಿಗ್ರಹಗಳನ್ನು ಕಾಣಬಹುದಾಗಿದೆ. ಈ ದೇವಾಲಯಗಳು ಐತಿಹಾಸಿಕ ಮಹತ್ತ್ವವುಳ್ಳ ಹಲವಾರು ಶಾಸನಗಳನ್ನೊಳಗೊಂಡಿವೆ.

ಈ ಊರಿನ ಪಶ್ಚಿಮ ಮತ್ತು ಪೂರ್ವ ಭಾಗಗಳಲ್ಲಿ ಆಳುಪರ ಹಾಗೂ ವಿಜಯನಗರ ಅರಸರ ಕಾಲದಲ್ಲಿ ಕಟ್ಟಲಾದ ಎರಡು ಕೋಟೆಗಳ ಅವಶೇಷವನ್ನು ಇಂದಿಗೂ ಕಾಣಬಹುದು. ಇದೇ ಊರಿನಲ್ಲಿ ಮೂರು ಜೈನ ಬಸದಿಗಳಿವೆ. ಬಾರಕೂರಿನ ಬಳಿ ಆದಿಚಾರಿತ್ರಿಕ ಕಾಲದ ಒಂದು ನೆಲೆಯನ್ನೂ ಗುರುತಿಸಲಾಗಿದೆ. **(ಪಿ.ಜಿ.ಬಿ.)**

**ಬಾಲಕೃಷ್ಣ, ಟಿ.ಎನ್.:** 1913 – . ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ನಟ. ಕಾಲು ಶತಮಾನಕ್ಕೂ ಮಿಗಿಲಾಗಿ ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ರಂಗದಲ್ಲಿ ಸೇವೆ ಸಲ್ಲಿಸಿ ಹಾಸ್ಯಪಾತ್ರಗಳ ಅಭಿನಯಕ್ಕೆ ಹೆಸರಾಗಿದ್ದವರು.

ಅರಸೀಕೆರೆಯಲ್ಲಿ ಜನ್ಮವೆತ್ತಿದ ಬಾಲಕೃಷ್ಣ ಅವರು ಲೋಯರ್ ಸೆಕೆಂಡರಿ ಪರೀಕ್ಷೆಯ ತನಕ ವ್ಯಾಸಂಗ ಮಾಡಿ ಸಾಹಿತ್ಯ ಮತ್ತು ಬಣ್ಣದ ಗೀಳಿಗೆ ಅಂಟಿಕೊಂಡರು. ನಾಟಕದ ಗೀಳನ್ನು ಹಚ್ಚಿಕೊಂಡ ಇವರು ಅಲೆಮಾರಿ ಜೀವನ ನಡೆಸಬೇಕಾಯಿತು. ಇವರನ್ನು ಸಾಕಿ ಸಲಹಿದವರು ಇವರ ಈ ಹುಚ್ಚಿಗೆ ಕ್ರೋಧಗೊಂಡು ಮನೆಯಿಂದ ಹೊರಹಾಕಿದರು. ಆಗ ಧೃತಿಗೆಡದೆ ಅರಸೀಕೆರೆಯಲ್ಲಿಯೇ ಒಂದು ಬಾಡಿಗೆ ಕೊಠಡಿ ಹಿಡಿದು ಕಮರ್ಷಿಯಲ್ ಆರ್ಟಿಸ್ಟ್ ಕೆಲಸದಲ್ಲಿ ಅನುಭವ ಗಳಿಸಿಕೊಂಡರು. ಮೊದಮೊದಲು ಅಂಗಡಿಗಳ ಬೋರ್ಡ್‍ಗಳನ್ನು ಬರೆಯುತ್ತಿದ್ದರು. ಆಗಲೇ ಕೆಲವು ಸ್ನೇಹಿತರನ್ನು ಕಲೆಹಾಕಿ ಕೃಷ್ಣಲೀಲಾ ನಾಟಕವನ್ನು ಆಡಿಸಿದರು. ನಾಟಕ ಯಶಸ್ವಿಯಾಯಿತು. ಇದೇ ವೇಳೆಗೆ ಅರಸೀಕೆರೆಯಲ್ಲಿ ಹಾರ್ಮೋನಿಯಂ ಮಾಸ್ತರ್ ಗಿರಿಗೌಡರ ನಾಟಕ ಮಂಡಲಿ ಮೊಕ್ಕಾಂ ಮಾಡಿತ್ತು. ಬಾಲಕೃಷ್ಣ ಅವರು ರಂಗಭೂಮಿ ಪ್ರವೇಶಿಸಿದ್ದು ಈ ನಾಟಕ ಮಂಡಲಿಯ ಮೂಲಕ. ಅನಂತರ ಲಕ್ಷ್ಮಾಸಾನಿ ನಾಟಕ ಕಂಪೆನಿ, ಜಯ ಗೌರೀಶಂಕರ ನಾಟಕ ಮಂಡಲಿ, ಚಾಮುಂಡೇಶ್ವರಿ ನಾಟಕ ಮಂಡಲಿ, ಭಾರತ ಮಾತಾ ನಾಟಕ ಸಭಾ, ಭಗವತಿ ನಾಟಕ ಸಭಾ, ಕರ್ನಾಟಕ ನಾಟಕ ಸಭಾ, ಗುಬ್ಬಿ ಕಂಪನಿ–ಮುಂತಾದ ಪ್ರಸಿದ್ಧ ವೃತ್ತಿನಾಟಕ ಮಂಡಲಿಗಳಲ್ಲಿ ಸೇವೆ ಸಲ್ಲಿಸಿದರು. ರಂಗಭೂಮಿಯನ್ನು ವೃದ್ಧಿಸಬೇಕೆಂಬ ಹಂಬಲದಿಂದ ಭಾರತಲಕ್ಷ್ಮಿ, ಬೇಡರ ಕಣ್ಣಪ್ಪ ಮತ್ತು ರಾಮ–ರಾವಣ ಎಂಬ ನಾಟಕಗಳನ್ನು ಸ್ವತಃರಚಿಸಿ ರಂಗಭೂಮಿಯ ಮೇಲೆ ಪ್ರಯೋಗ ಮಾಡಿದರು. ಇವರು ಗುಬ್ಬಿ ಕಂಪನಿಯಲ್ಲಿದ್ದ ಅವಧಿಯಲ್ಲಿ ಕಾಲಚಕ್ರ ಎಂಬ ನಾಟಕವನ್ನು ರಚಿಸಿ ಆಡಿಸಿ ಕೆಲ ಸಂಪ್ರದಾಯಶೀಲರ ಕೋಪಕ್ಕೆ ತುತ್ತಾದರು. ಈ ನಾಟಕದ ಕಥಾವಸ್ತುವಿನ ಬಗ್ಗೆ ಬಹಳಷ್ಟು ಜನ ಟೀಕೆಯ ಮಳೆಯನ್ನೇ ಕರೆದರು. ಆದರೂ ಈ ನಾಟಕ ರಂಗಭೂಮಿಯ ಅಸಂಖ್ಯಾತ ಅಭಿಮಾನಿಗಳ ಮೆಚ್ಚಿಗೆ ಗಳಿಸಿಕೊಂಡಿತು. ಧಾರವಾಡದ ಆಕಾಶವಾಣಿ ಕೇಂದ್ರ ಈ ನಾಟಕ ಪ್ರಸಾರದ ಹಕ್ಕನ್ನು ಪಡೆದುಕೊಂಡಿತು.

ಬಾಲಕೃಷ್ಣ ಅವರು ಚಲನಚಿತ್ರರಂಗ ಪ್ರವೇಶಿಸಿದ್ದು ತ್ರಿಭಾಷಾ ತಾರೆ ಎಂ.ವಿ. ರಾಜಮ್ಮನವರು ನಿರ್ಮಿಸಿದ ಕನ್ನಡ ಚಿತ್ರ ‘ರಾಧಾರಮಣ’ದ (1943) ಮೂಲಕ. ಚಿತ್ರರಂಗದಲ್ಲಿ ಇವರ ಹೆಸರನ್ನು ಬೆಳಗಿಸಿದ ಚಿತ್ರ ಕನ್ಯಾದಾನ (1954). ಈ ಚಿತ್ರದಲ್ಲಿ ಸೀತಾರಾಮಯ್ಯನ ಪಾತ್ರದ ಪ್ರೌಢ ಅಭಿನಯದಿಂದ ಪ್ರೇಕ್ಷಕರನ್ನು ಬೆರಗುಗೊಳಿಸಿದರು. ಇವರ ಅಭಿನಯದ ಒಂದು ವೈಶಿಷ್ಟ್ಯ ಎಂದರೆ ಹಾಸ್ಯ ಪಾತ್ರವನ್ನೇ ಆಗಲಿ, ಗಂಭೀರ ಪಾತ್ರವನ್ನೇ ಆಗಲಿ ಏಕರೀತಿಯಾಗಿ ನಿರ್ವಹಿಸಬಲ್ಲ ಶಕ್ತಿ ಇರುವುದು. ಗಂಧದಗುಡಿ, ಪ್ರೊಫೆಸರ್ ಹುಚ್ಚುರಾಯ, ಪ್ರೇಮದಕಾಣಿಕೆ, ರಾಜಾ ನನ್ನ ರಾಜ, ಭಾಗ್ಯದ ಲಕ್ಷ್ಮಿ ಬಾರಮ್ಮ ಮೊದಲಾದ ಸುಮಾರು ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಪಾತ್ರವಹಿಸಿ ಕನ್ನಡ ಚಿತ್ರರಸಿಕರ

ಮೆಚ್ಚಿಗೆ ಗಳಿಸಿರುವ ಇವರು ಹೆಚ್ಚಾಗಿ ಜನಪ್ರಿಯರಾಗಿರುವುದು ಹಾಸ್ಯನಟನೆಂದಾದರೂ ಖಳನಾಯಕನ ಪಾತ್ರದಲ್ಲೂ ನಿಸ್ಸೀಮರು. ಇಮ್ಮಡಿ ಪುಲಿಕೇಶಿ (1967) ಇವರ ಅಭಿನಯದ ನೂರನೆಯ ಚಿತ್ರ. ಇದರಲ್ಲಿ ಇವರು ಅಭಿನಯಿಸಿರುವ ರಾಹುಲಪ್ಪನ ಪಾತ್ರ ಚಿತ್ರರಸಿಕರ ಮನ ಮೆಚ್ಚಿಸಿತು. ಬಂಗಾರದ ಮನುಷ್ಯದಲ್ಲಿ (1972) ಇವರ ರಾಚುಟಪ್ಪನ ಪಾತ್ರದ ಅಭಿನಯ ಸ್ಮರಣೀಯವಾದುದು. ಈ ಚಿತ್ರ ಬೆಂಗಳೂರಿನಲ್ಲಿ 2 ವರ್ಷಗಳ ಕಾಲ ಸತತವಾಗಿ ನಡೆಯಿತು. ಬಾಲಕೃಷ್ಣ ಅವರಿಗೆ ಚಿತ್ರರಸಿಕರ ಸಂಘಗಳಿಂದ ಅನೇಕ ಪ್ರಶಸ್ತಿಗಳು ಲಭಿಸಿವೆ. ಇವರ ಉತ್ತಮ ಅಭಿನಯಕ್ಕಾಗಿ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ನಾಟಕಕಲೆ ಜೀವಂತ ಕಲೆ, ಇದರ ಆಯಸ್ಸಿಗೆ ಮಿತಿಯಿಲ್ಲ, ಚಿತ್ರರಂಗ ಎಷ್ಟೇ ಆಕರ್ಷಕವಾದರೂ ಅದರಲ್ಲಿ ನಾಟಕ ರಂಗದಲ್ಲಿರುವ ಒಂದು ಚೇತನವಿಲ್ಲ ಎನ್ನುವುದು ಬಾಲಕೃಷ್ಣರ ಅಭಿಪ್ರಾಯ ನಾಟಕರಂಗ ಕನ್ನಡ ನಾಡಿನಲ್ಲಿ ತನ್ನ ಗತವೈಭವವನ್ನು ಪುನಃ ಪಡೆಯುವಂತಾಗಬೇಕೆಂಬುದು ಇವರ ಬಯಕೆಯಾಗಿತ್ತು. ಬೆಂಗಳೂರಿನ ಕೆಂಗೇರಿಯ ಬಳಿ ಅಭಿಮಾನ್ ಸ್ಟುಡಿಯೋ ಸ್ಥಾಪಿಸಿ ಕನ್ನಡ ಚಲನಚಿತ್ರರಂಗದ ಏಳ್ಗೆಗಾಗಿದುಡಿದರು. **(ಎಸ್.ಎಚ್.ವಿ.)**

**ಬಾಲಲೀಲಾ ಮಹಾಂತ ಶಿವಯೋಗಿ:** 1823–59. ಪ್ರಸಿದ್ಧ ಶಿವಯೋಗಿ. ಗದಗ ತಾಲ್ಲೂಕಿನ ಮುಳಗುಂದ ಇವರ ಜನ್ಮಸ್ಥಳವಿರಬಹುದೆಂದು ಊಹಿಸಲಾಗಿದೆ. ಇವರ ತಂದೆ ತಾಯಿಗಳ ವಿಷಯ ತಿಳಿಯದು. ಎಳೆಯಂದಿನಿಂದಲೂ ಇವರನ್ನು ಬಿಜಾಪುರಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಯರನಾಳ ಗ್ರಾಮದ ಚೆನ್ನಮಲ್ಲಿಕಾರ್ಜುನಯ್ಯ ಮತ್ತು ಅನ್ನಪೂರ್ಣಮ್ಮ ಎಂಬ ದಂಪತಿಗಳು ಪೋಷಣೆ ಮಾಡಿದಂತೆ ತಿಳಿದುಬರುತ್ತದೆ. ಈ ಶಿಶುವನ್ನು ಇವರಿಗೆ ಮುಳಗುಂದದ ಮಹಾಂತಲಿಂಗ ಶಿವಯೋಗಿ ಎಂಬುವರು ಕೊಟ್ಟರಂತೆ. ಎಂಟು ವರ್ಷದ ಬಾಲಕನಾಗುವವರೆಗೂ ತನ್ನ ಬಾಲಲೀಲೆಗಳಿಂದ ಆ ತಾಯಿತಂದೆಗಳನ್ನು ಆನಂದಗೊಳಿಸಿದ್ದರಿಂದ ಮುಂದೆ ಇವರಿಗೆ ಬಾಲಲೀಲಾ ಮಹಾಂತ ಶಿವಯೋಗಿ ಎಂಬ ಹೆಸರು ಬಂತು. ಎಂಟನೆಯ ವರ್ಷದಲ್ಲೇ ಬದುಕಿನಲ್ಲಿ ವೈರಾಗ್ಯವುಂಟಾಗಿ ತುಂಗಭದ್ರಾ ನದಿ ತೀರದಲ್ಲಿರುವ ಲಿಂಗನಾಯಕನ ಹಳ್ಳಿಯ ಗುರುಕುಲದಲ್ಲಿ ಚೆನ್ನವೀರ ಶಿವಯೋಗಿಗಳ ಹತ್ತಿರ ವಿದ್ಯಾಭ್ಯಾಸ ಮಾಡಿ ಜ್ಞಾನಸಂಪನ್ನರಾದರು. ಗುರು ಶಾಂತವೀರಸ್ವಾಮಿಗಳ ಮುಖಾಂತರ ಇಷ್ಟಲಿಂಗೋಪದೇಶ ಪಡೆದರು.

ಅನಂತರ ತಮ್ಮ ಅನೇಕ ಶಿಷ್ಯರಿಗೆ ತತ್ತ್ವೋಪದೇಶ ಮಾಡಿದರು. ಶ್ರೀಶೈಲದಲ್ಲಿ ಶಿವಭಕ್ತರಿಗೆ ಏಕೋತ್ತರ ಶತಸ್ಥಲದ ಅಂತರಾರ್ಥವನ್ನು ಬೋಧಿಸಿದರು. ಇವರು ಹಲವು ಪವಾಡಗಳನ್ನು ಮೆರೆದಂತೆ ತಿಳಿದುಬರುತ್ತದೆ. ಬಿದಿರುಹಳ್ಳಿಯ ಭಕ್ತ ರಾಮಲಿಂಗಪ್ಪನ ಬಾವಿಯಲ್ಲಿ ನೀರು ತರಿಸಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರಾರ್ಥನೆಯಂತೆ ಮೈಸೂರು ಮಹಾರಾಜರಿಗೆ ಬಂದಿದ್ದ ಬೇನೆಯನ್ನು ಪರಿಹರಿಸಿ ರಾಜರು ಒಪ್ಪಿಸಿದ್ದ ನವರತ್ನ ಖಚಿತ ಆಭರಣಗಳನ್ನೂ ಅಮೂಲ್ಯ ವಸ್ತುಗಳನ್ನೂ ನಿರಾಕರಿಸಿ ಕೇವಲ ಒಂದು ಸೋರೆಯ ಬುರುಡೆಯನ್ನು ಸ್ವೀಕರಿಸಿ ಅನುಗ್ರಹಿಸಿದ್ದು, ಒಮ್ಮೆ ತಮ್ಮ ಟೊಪ್ಪಿಗೆಯನ್ನು ಹರಿಗೋಲನ್ನಾಗಿ ಮಾಡಿ ಹೊಳೆ ದಾಟಿದ್ದು–ಇವು ಇವರು ನಡೆಸಿದರೆನ್ನಲಾದ ಮುಖ್ಯ ಪವಾಡಗಳು. ಇವರು ಮುಳಗುಂದ ಗ್ರಾಮದ ಕಲ್ಲುಮಠದಸ್ವಾಮಿಯೂ ಆಗಿದ್ದರು. ಕೈವಲ್ಯದರ್ಪಣ ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಅಧ್ಯಾತ್ಮಕ್ಕೆ ಸಂಬಂಧ ಪಟ್ಟ ಹಾಡುಗಳಿವೆ. ಮಹಾಂತಲಿಂಗ ಎಂಬುದು ಈ ಹಾಡುಗಳ ಅಂಕಿತ. ಇವರು ತಮ್ಮ 36ನೆಯ ವಯಸ್ಸಿನಲ್ಲಿ ಮುಳಗುಂದದಲ್ಲಿ ದೈವಾಧೀನರಾದರು. (ಒ.ಎನ್.ಎಲ್.)

**ಬಾಲಸಂಗಣ್ಣ:** 12ನೆಯ ಶತಮಾನದ ಒಬ್ಬ ವಚನಕಾರ. ಈತ ಬಸವಣ್ಣನ ಪತ್ನಿ ನೀಲಾಂಬಿಕೆಯ ಮಗನೆಂದು ಕೆಲವು ಪ್ರಾಚೀನ ಕಾವ್ಯ ಪುರಾಣಗಳಲ್ಲಿ ಹೇಳಿದೆ. ಈತನಿಗೆ ಬಾಲ ಸಂಗಯ್ಯ ಎಂಬ ಪರ್ಯಾಯನಾಮವೂ ಇದ್ದಂತೆ ತಿಳಿದುಬರುತ್ತದೆ. ಈತ ಚಿಕ್ಕವಯಸ್ಸಿನಲ್ಲಿಯೇ ಕಾಲವಾದಂತೆ ಗಂಗಾಂಬಿಕೆಯ, ನೀಲಾಂಬಿಕೆಯ ಕೆಲವು ವಚನಗಳಿಂದ, ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರದಿಂದ ವ್ಯಕ್ತಪಡುತ್ತದೆ. ಬಾಲಸಂಗಣ್ಣ ನೀಲಾಂಬಿಕೆಯ ಮಗನಲ್ಲ, ಗಂಗಾಂಬಿಕೆಯ ಮಗ ಎಂಬ ಅಭಿಪ್ರಾಯ ಕೂಡ ಇದೆ. ಈ ವಾದಕ್ಕೆ ಮುಕ್ತಿಕಂಠಾಭರಣ ಎಂಬ ಕೃತಿಯಲ್ಲಿ ಬರುವ "ಗಂಗಾಂಬಿಕೆಯರು ತಮ್ಮ ಮೋಹದ ಪುತ್ರನಾದ ಬಾಲಸಂಗಯ್ಯನನ್ನು ಬಗಲಲ್ಲಿ ಕುಳ್ಳಿರಿಸಿ ಕೊಂಡು" ಎಂಬ ಮಾತುಗಳು ಪುಷ್ಟಿ ನೀಡುತ್ತವೆ. ಸದ್ಯದಲ್ಲಿ ಈತನ ಆರು ವಚನಗಳು ಪ್ರಾಪ್ತವಾಗಿವೆ. ಕಮಠೇಶ್ವರಲಿಂಗ ಎಂಬುದು ಇವನ ವಚನಗಳ ಅಂಕಿತ. ಈ ಅಂಕಿತದ ಬಗೆಗೂ ಭಿನ್ನಾಭಿಪ್ರಾಯಗಳಿವೆ. ಇವನ ಒಂದು ವಚನ ಹೀಗಿದೆ :

ಕಾಂಬುದು ಜೀವನಲ್ಲ ಕಾಣಿಸಿಕೊಂಬುದು ಪರಮನಲ್ಲ
ಅಟ್ಟಿಮುಟ್ಟಿ ಹರಿದಾಡುವವು ಕರಣಂಗಳಲ್ಲ
ಸುಖವನನುಭವಿಸುವವು ಇಂದ್ರಿಯಂಗಳಲ್ಲ
ಇಂತೀ ಭೇದಂಗಳಲ್ಲಿ ಆರೆಂಬುದು ತಿಳಿದು
ಸಸಿವೃಕ್ಷಕ್ಕೆ ನೀರನೆರೆದಡೆ ಆ ನೀರ ಕುಡಿವುದು ಬೇರೋ ಮರವೋ
ಮೀರಿ ಬೆಳೆದ ಫಲವೋ ಎಂಬುದನರಿದು ತಿಳಿದಲ್ಲಿ
ಅರಿದರುಹಿಸಿಕೊಂಬ ನಿರಿಗೆಯ ಬಲ್ಲ
ಆತ ಕಮಠೇಶ್ವರಲಿಂಗವನೊಡಗೂಡಿದ ಶರಣಾ *

**ಬಾಲ ಸರಸ್ವತಿ:** 1880–1938. ಕನ್ನಡದಲ್ಲಿ ಸ್ವತಂತ್ರ ಪತ್ತೇದಾರಿ ಕಾದಂಬರಿಗಳನ್ನು ಬರೆದ ಮೊದಲಿಗರಲ್ಲೊಬ್ಬರು. ನರಹರಿಶರ್ಮಾ ಎಂಬುದು ಇವರ ನಿಜನಾಮ. ಬಾಲಸರಸ್ವತಿ ಕಾವ್ಯನಾಮ. ಮೈಸೂರಿನವರಾದ ಇವರು ವ್ಯಾಕರಣ ಪಂಡಿತ ಅಣ್ಣಾಚಾರ್ಯರಲ್ಲಿ ಸಂಸ್ಕೃತವನ್ನು ಕಲಿತು ಮಹಾರಾಜ ಕಾಲೇಜಿನಲ್ಲಿ ಓದಿ ಎಫ್.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಚಿತ್ರಕಲೆಯಲ್ಲಿ ಆಸಕ್ತಿವಹಿಸಿದ ಇವರು ರಾಜ ರವಿವರ್ಮರ ಬಳಿ ವ್ಯಾಸಂಗಮಾಡಿ ಚಿತ್ರಕಲೆಯಲ್ಲಿ ನೈಪುಣ್ಯಗಳಿಸಿಕೊಂಡು, ಮೈಸೂರಿನ ಪ್ರೌಢಶಾಲೆಯೊಂದರಲ್ಲಿ ಚಿತ್ರಕಲಾ ಅಧ್ಯಾಪಕರಾಗಿ ಸ್ವಲ್ಪ ಕಾಲ ಕೆಲಸ ಮಾಡಿದರು. ಸ್ವತಂತ್ರ ಪ್ರವೃತ್ತಿಯವರಾದ ಇವರು ಬೆಂಗಳೂರಿನಲ್ಲಿ ಒಂದು ಮುದ್ರಣಾಲಯವನ್ನು ಸ್ಥಾಪಿಸಿದರಲ್ಲದೆ ಚಿತ್ರಗುಪ್ತನ ದಫ್ತರ್ ತರಂಗಿಣೀ ಗ್ರಂಥಮಾಲೆ, ಬಾಲಕಥಾವಳಿ ಗ್ರಂಥಮಾಲೆ, ಬೋಧಾವಳಿ ಗ್ರಂಥಮಾಲೆ ಈ ಮುಂತಾದ ಗ್ರಂಥಮಾಲೆಗಳನ್ನು ಸ್ವಲ್ಪಕಾಲ ನಡೆಸಿದರು. ಈ ಉದ್ಯಮವನ್ನು ಮಧ್ಯೆ ಬಿಟ್ಟ ಇವರು ಮೈಸೂರಿನ ಅರಸು ಗರ್ಲ್ಸ್ ಹೈಸ್ಕೂಲು, ಅರಸು ಬೋರ್ಡಿಂಗ್ ಸ್ಕೂಲು ಮುಂತಾದ ಶಿಕ್ಷಣ ಸಂಸ್ಥೆಗಳಲ್ಲಿ ಸಂಸ್ಕೃತ–ಕನ್ನಡ ಶಿಕ್ಷಕರಾಗಿ ಕೆಲಸ ಮಾಡಿದರು. ಬೆಂಗಳೂರಿನ ಆಚಾರ್ಯ ಪಾಠಶಾಲೆಯ ಸ್ಥಾಪನೆಗಾಗಿಯೂ ಶ್ರಮಿಸಿದರು.

ಕನ್ನಡ ಸಂಸ್ಕೃತ ಇಂಗ್ಲಿಷ್ ಮತ್ತು ಬಂಗಾಲಿ ಭಾಷೆಗಳಲ್ಲಿ ಪರಿಶ್ರಮ ಹೊಂದಿದ್ದ ಇವರು ಬಂಗಾಲಿ ಭಾಷೆಯಿಂದ ಅನೇಕ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಸ್ವತಂತ್ರವಾಗಿ ಅನೇಕ ಪತ್ತೇದಾರಿ ಕಾದಂಬರಿಗಳನ್ನು ಬರೆದಿದ್ದಾರೆ. ಅದೃಷ್ಟ ಬೇಕೇ ಅದೃಷ್ಟ, ಕನ್ಯಾಕುಮಾರಿ, ಕಮಲಾಕಾಂತನ ಉಯಿಲು, ಕರ್ಮಸನ್ಯಾಸಿ, ಕಾಮಧೇನು, ಕುಮುದಿನಿ, ಗುರುತು ಕಂಡ ಕಳ್ಳ, ಚೋರ ಚಕ್ರವರ್ತಿ, ತ್ರಿಪುರಸುಂದರಿ–ಇವು ಇವರ ಕೆಲವು ಮುಖ್ಯ ಕಾದಂಬರಿಗಳು. ನೀತಿ ಪ್ರತಿಪಾದನೆ ಹಾಗೂ ಅದ್ಭುತರಮ್ಯ ವಾತಾವರಣ ನಿರ್ಮಾಣ, ಹಗಲು–ಕತ್ತಲೆ ಸ್ಪಷ್ಟ ವಿರೋಧವುಳ್ಳ ನಾಯಕ–ಖಳನಾಯಕರ ಕಲ್ಪನೆ, ಐತಿಹಾಸಿಕತೆ, ಸಾಮಾಜಿಕ ಸಾಮಗ್ರಿಗಳ ಸಂಯೋಜನೆ–ಇವು ಇವರ ಕಾದಂಬರಿಗಳ ವೈಶಿಷ್ಟ್ಯ. (ಕೆ.ಕೆ.)

**ಬಾಹುಬಲಿ ಪಂಡಿತ:** ಸು. 1352. ಜೈನಕವಿ. ಧರ್ಮನಾಥ ಪುರಾಣ ಎಂಬ ಕಾವ್ಯದ ಕರ್ತೃ. ಇವನಿಗೆ ಉಭಯಭಾಷಾಕವಿಚಕ್ರವರ್ತಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ತನ್ನನ್ನು ಪ್ರಖ್ಯಾತ ಯೋಗೀಶ್ವರಂ ಎಂದು ಕರೆದುಕೊಂಡಿರುವುದರಿಂದ ಈತ ಒಬ್ಬ ಪ್ರಸಿದ್ಧ ಯೋಗಿಯಾಗಿದ್ದಂತೆಯೂ ತೋರುತ್ತದೆ. ನಯಕೀರ್ತಿ ಇವನ ಗುರು. ಪೂರ್ವ ಕವಿಗಳಲ್ಲಿ ಗಜಾಂಕುಶ, ನಾಗವರ್ಮ, ಪಂಪ, ನೇಮಿಚಂದ್ರ, ರನ್ನ, ಜನ್ನ, ಅಗ್ಗಳ–ಇವರನ್ನು ಸ್ತುತಿಸಿದ್ದಾನೆ.

ಧರ್ಮನಾಥ ಪುರಾಣ 16 ಆಶ್ವಾಸಗಳುಳ್ಳ ಪ್ರೌಢ ಚಂಪೂಗ್ರಂಥ. 15ನೆಯ ತೀರ್ಥಂಕರ ಧರ್ಮನಾಥನ ಜೀವನ ಚರಿತೆ ಕಾವ್ಯವಸ್ತು. ಕವಿ ಇದನ್ನು 1352ರಲ್ಲಿ ಬರೆದಂತೆ ತಿಳಿದುಬರುತ್ತದೆ. ಕಾವ್ಯ ಸಂಪ್ರದಾಯ ಬದ್ಧವಾಗಿದ್ದು, ಹಿಂದಿನ ಜೈನ ಪುರಾಣಗಳ ಪಡಿಯಚ್ಚಾಗಿದೆ. ವರ್ಣನಾವೈಖರಿಯಲ್ಲಾಗಲಿ, ಸನ್ನಿವೇಶ ನಿರ್ಮಾಣದಲ್ಲಾಗಲಿ ವಿಶೇಷತೆ ಕಂಡುಬರುವುದಿಲ್ಲ. (ಕೆ.ಬಿ.ಎಸ್.ಎ.)

**ಬಾಹೂರ ಬೊಮ್ಮಣ್ಣ:** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಇವನಿಗೆ ಬಾಹೂರ ಬ್ರಹ್ಮಯ್ಯ, ಬಾಹೂರ ಬೊಮ್ಮಯ್ಯ ಎಂಬ ಹೆಸರುಗಳೂ ಇವೆ. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಬಾಹೂರು ಈತನ ಜನ್ಮಸ್ಥಳ. ಅಲ್ಲಿ ಈತ ತೋಟದ ಕಾಯಕ ಮಾಡಿಕೊಂಡಿದ್ದ. ಬ್ರಹ್ಮೇಶ್ವರಾ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ ಇವನ 45 ವಚನಗಳು ದೊರಕಿವೆ. ಈ ವಚನಗಳಲ್ಲಿ ಷಟ್‌ಸ್ಥಲದ ಮರ್ಮಗಳ ನಿರೂಪಣೆಯನ್ನು ಕಾಣಬಹುದಾಗಿದೆ.

ಗಣಸಹಸ್ರನಾಮದಲ್ಲಿ ಈತನ ಹೆಸರು ಬಂದಿದೆ. ಹರಿಹರ ಬರೆದಿರುವ ಬಾಹೂರ ಬ್ರಹ್ಮಯ್ಯನ ರಗಳೆಯಿಂದ ಈತ ಕಲ್ಯಾಣದ ತ್ರಿಪುರಾಂತಕನ ಭಕ್ತನೆಂದು ತಿಳಿದುಬರುತ್ತದೆ. ಜೋಳದ ರಾಶಿಯಲ್ಲಿ ಶಿವನನ್ನು ಓ ಎನ್ನಿಸಿದ್ದು, ಮದವೇರಿ ನಡೆದ ಆನೆಯನ್ನು ಹೋ ನಿಲ್ ಎಂದು ಹೇಳಿ ನಿಲ್ಲಿಸಿದ್ದು, ಅದನ್ನು ಕಂಡ ರಾಜ ಇದು ಮಾಯಾಮಂತ್ರದ ಶಕ್ತಿಯೆಂದು ತೆಗಳಲು, ಆನೆಯನ್ನು ನೂಕಿ ಕೊಂದು ಮತ್ತೆ ಅದನ್ನು

ಬದುಕಿಸಿದ್ದು, ಕಲ್ಲುಬಸವನಿಗೆ ಪ್ರಾಣಬರಿಸಿ ಪೇಟೆಯಲ್ಲಿದ್ದ ಕಬ್ಬನ್ನೆಲ್ಲ ತರಿಸಿ ಮೇಯಿಸಿದ್ದು, ತ್ರಿಪುರಾಂತಕ ಕೆರೆಯ ನೀರಿನಲ್ಲಿ ಅರ್ಧವನ್ನು ಒಂದೇ ಗುಟುಕಿಗೆ ಕುಡಿಸಿದ್ದು–ಇವು ಈತ ನಡೆಸಿದನೆನ್ನಲಾದ ಪವಾಡಗಳು. ಹರಿಹರ ಮತ್ತು ಪಾಲ್ಕುರಿಕೆ ಸೋಮನಾಥರ ಪ್ರಕಾರ ಈತ ಬಸವಣ್ಣನವರಿಗಿಂತ ಪ್ರಾಚೀನನೆಂದು ತೀರ್ಮಾನಿಸಲು ಆಸ್ಪದವಿದೆ. ಆದರೆ ಇವನು ತನ್ನ ವಚನಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ನಿಜಗುಣ, ಅಜಗಣ್ಣ–ಇವರನ್ನು ಹೆಸರಿಸಿರುವುದರಿಂದ ಮೇಲಿನ ಕವಿಗಳು ಹೇಳುವ ಬ್ರಹ್ಮಯ್ಯನಿಗಿಂತ ಈತ ಭಿನ್ನನೆಂದು ಹೇಳಬಹುದಾಗಿದೆ. (ಬಿ.ಎಸ್.ಎಸ್.)

**ಬಾಳಪ್ಪ ಹುಕ್ಕೇರಿ**: 1911–. ಹೆಸರಾಂತ ಸಂಗೀತಗಾರರು ಮತ್ತು ಜನಪದ ಗೀತೆಗಳ ಜನಪ್ರಿಯ ಗಾಯಕರು. ಹುಟ್ಟಿದ್ದು ಬೆಳಗಾಂವಿ ಜಿಲ್ಲೆಯ ಗೋಡಿನಲ್ಲಿ. ತಂದೆ ವೀರಭದ್ರಪ್ಪ. ತಾಯಿ ಚನ್ನವೀರಮ್ಮ.

ಹುಟ್ಟು ಹಾಡುಗಾರರಾದ ಇವರು ಎಳೆತನದಲ್ಲೇ ಹಳ್ಳಿಯ ಹಾಡುಗಳ ಬಗ್ಗೆ ಒಲವು ತೋರಿದರು. ಗರತಿಹಾಡು ಮೊದಲಾದವನ್ನು ಸುಶ್ರಾವ್ಯವಾಗಿ ಹಾಡಲು ಅನಂತರ ಶಿವಲಿಂಗಯ್ಯಸ್ವಾಮಿ, ನೀಲಕಡೆ ರಾವ್ ಶೇಡಬಾಳ ಮೊದಲಾದವರಿಂದ ಶಾಸ್ತ್ರೀಯ ಸಂಗೀತ ಅಭ್ಯಸಿಸಿದಲ್ಲದೆ ಮರಾಠಿ ರಂಗಭೂಮಿಯ ಹೆಸರಾಂತ ಬಾಲಗಂಧರ್ವ, ಪಂಡಿತ ದೀನನಾಥ ಮೊದಲಾದವರ ಜನಪ್ರಿಯ ರಂಗಶೈಲಿಯಿಂದಲೂ ಪ್ರಭಾವಿತರಾದರು. ಕೆಲಕಾಲ ಮುರುಗೋಡಿನಲ್ಲಿ ಮಹಾತ್ಮ ಸೇವಾ ಸಂಗೀತ ನಾಟಕ ಕಂಪನಿಯನ್ನು ಸ್ಥಾಪಿಸಿ ನಡೆಸಿದ್ದೂ ಇದೆ. ಈ ಎಲ್ಲ ಪ್ರಭಾವಗಳಿಂದ ಇವರ ಗಾಯನ ಶೈಲಿ ವಿಶಿಷ್ಟವಾಗಿ ರೂಪುಗೊಂ ಡಿತು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಮೊದಲು ಕಾಂಗ್ರೆಸ್ ಸಭೆಗಳಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡುತ್ತಿದ್ದರು. ಇದರಿಂದ ಬೇಗ ಜನಪ್ರಿಯರಾದರು. ತರುಣ ಬಾಳಪ್ಪನವರು ಹಾಡುತ್ತಿದ್ದ ಗೀತೆಗಳಿಂದ ಬ್ರಿಟಿಷರ ಅವಕೃಪೆಗೆ ಪಾತ್ರರಾಗಿದ್ದರು. ಜನಪದ ಗೀತೆ ಮತ್ತು ಲಾವಣಿಗಳು ಜನಸಾಮಾನ್ಯರ ಮೇಲೆ ಬೀರಿದ ಪ್ರಭಾವ ಗುರುತಿಸಿದ ಸ್ವಾತಂತ್ರ್ಯೋತ್ತರ ಮುಂಬಯಿ ಸರ್ಕಾರ ಇವರನ್ನು ಕೃಷಿ ಇಲಾಖೆಯಲ್ಲಿ ಸಹಾಯಕ ಅಧಿಕಾರಿಯಾಗಿ ನೇಮಿಸಿಕೊಂಡಿತು. ಆಧುನಿಕ ಕೃಷಿ ವಿಧಾನಗಳ ಪ್ರಚಾರದಲ್ಲಿ ಇವರ ಗಾಯನ ಕಲೆ ಉಪಯುಕ್ತವಾಯಿತು. ಅನಂತರ ಬಂದ ಯೋಜನಾ ಯುಗದಲ್ಲಿ ಶಿಕ್ಷಣ, ಸಂಸ್ಕೃತಿ, ಸಮಾಜ ವಿಕಾಸ, ವಯಸ್ಕರ ಶಿಕ್ಷಣ, ಕುಟುಂಬ ಯೋಜನೆಗಳನ್ನು ಜನಪ್ರಿಯಗೊಳಿಸುವಂತಹ ಕಾರ್ಯ ಕಲಾಪಗಳಲ್ಲಿ ಇವರು ಹಾಡುಗಳನ್ನು ಕಟ್ಟಿಹಾಡಿ ಜನಸಾಮಾನ್ಯರ ಹೃದಯಗಳನ್ನು ಗೆದ್ದರು.

ಶಾಸ್ತ್ರೀಯ ಸಂಗೀತದಲ್ಲಿ ಸಮರ್ಥರು ಎನಿಸಿದ್ದರೂ ಬಾಳಪ್ಪನವರ ಕೀರ್ತಿ ಪ್ರಧಾನವಾಗಿ ನಿಂತಿರುವುದು ಜನಪದ ಗೀತೆಗಳ ಗಾಯನದಿಂದ. ಸಾವಿರಾರು ಜನ ಸೇರಿದ ಸಭೆಗಳಲ್ಲಿ ನಿರರ್ಗಳವಾಗಿ ಹಾಡುವ ಕಂಠಶ್ರೀ ಇವರದು. ಸಭೆಯ ಒಲವು ಅರಿತು ಹಾಡುವ ಜಾಣ್ಮೆ ಮತ್ತು ಜನ ಮೆಚ್ಚಿಬೇಡುವ ಹಾಡುಗಳನ್ನು ಹಾಡುವ ವಿನಯ ಇವರಿಗಿತ್ತು. ಕರ್ನಾಟಕದಲ್ಲೆಲ್ಲ ಸಂಚರಿಸಿ ನಗರ, ಪಟ್ಟಣ ಗ್ರಾಮಗಳಲ್ಲಿ, ಸಭೆ–ಸಮ್ಮೇಳನ, ನಾಡಹಬ್ಬ, ಕಾಮನಹಬ್ಬ, ಜಾತ್ರೆ–ಉತ್ಸವಗಳಲ್ಲಿ, ಮಠ–ಮಾನ್ಯಗಳಲ್ಲಿ, ಮತ–ಪಂಥ ಭೇದವಿಲ್ಲದೆ ಸಹಸ್ರಾರು ಕಾರ್ಯಕ್ರಮಗಳನ್ನು ನೀಡಿದರು. ಮಹಾರಾಷ್ಟ್ರ, ಆಂಧ್ರ, ತಮಿಳುನಾಡುಗಳಲ್ಲದೆ ದೆಹಲಿಯಲ್ಲೂ ಇವರು ತಮ್ಮ ಉತ್ಸಾಹಪೂರ್ಣ ಹಾಡುಗಾರಿಕೆಯಿಂದ ಜನಮೆಚ್ಚಿಗೆ ಪಡೆದಿದ್ದರು.

ಗರತಿಯ ಹಾಡುಗಳು, ಲಾವಣಿ ಮೊದಲಾದ ಪರಂಪರಾಗತ ಗೀತೆಗಳೇ ಅಲ್ಲದೆ ನೂರಾರು ಶರಣರ ವಚನಗಳು, ಪದಗಳು, ಶಿಶುನಾಳ ಶರೀಫ ಸಾಹೇಬರ ಪದಗಳು ಮತ್ತು ನೀತಿ ಪದಗಳು, ದಾಸರ ದೇವರನಾಮಗಳು, ಹಿಂದೀ, ಮರಾಠಿ ಗೀತಗಳೇ ಮೊದಲಾದುವು ಇವರಿಗೆ ಕಂಠಸ್ಥವಾಗಿದ್ದುವು. ಕರ್ನಾಟಕದ ಅಗ್ರಮಾನ್ಯ ಕವಿಗಳಾದ ಬೇಂದ್ರೆ, ಕುವೆಂಪು ಮೊದಲಾದವರ ಭಾವಗೀತೆಗಳನ್ನೂ ಇವರು ಜನಮೆಚ್ಚುವಂತೆ ಹಾಡುತ್ತಿದ್ದರು. ಸಂದರ್ಭ ನೋಡಿ ನಿಂತ ಮೆಟ್ಟಿನಲ್ಲಿ ಲಾವಣಿ ಮತ್ತು ಜನಪದ ಶೈಲಿಯ ಹಾಡುಗಳನ್ನು ತಾವೇ ರಚಿಸಿಕೊಂಡು ಹಾಡುವ ಪ್ರತಿಭೆ ಇವರಲ್ಲಿತ್ತು. ಆಜಾನುಬಾಹು ವ್ಯಕ್ತಿತ್ವ, ನಗುಮೊಗದಿಂದ ಇವರು ಅಪರವಯಸ್ಸಿನಲ್ಲಿಯೂ ಜನಾಕರ್ಷಣೆ ಮಾಡಬಲ್ಲವರಾಗಿದ್ದರು. ಆಕಾಶವಾಣಿಯಲ್ಲಿ ಇವರ ಅನೇಕ ಕಾರ್ಯಕ್ರಮಗಳು ನಡೆದಿವೆ. ಇವರ ಅನೇಕ ಗಾಯನಗಳು ಧ್ವನಿಮುದ್ರಿತವಾಗಿವೆ. ಬಹಳ ಹಿಂದೆಯೇ ಉತ್ತರಾದಿಮಠದ ಸತ್ಯಧ್ಯಾನತೀರ್ಥರ ಮುಂದೆ ದೇವರನಾಮ ಹಾಡಿ ಮೆಚ್ಚಿಗೆ ಪಡೆದಿದ್ದರು. ಬೆಂಗಳೂರಿನ ಸರ್ಪಭೂಷಣ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾನಪದಾಚಾರ್ಯ ಮತ್ತು ನವಿಲುಗುಂದ ಮಠದಲ್ಲಿಯ ಕಾರ್ಯಕ್ರಮದಲ್ಲಿ ಜಾನಪದರತ್ನ ಬಿರುದುಗಳು ಇವರಿಗೆ ಲಭಿಸಿದವು. 1969ರಲ್ಲಿ ಕರ್ನಾಟಕ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯನ್ನೂ ಅನಂತರ ಅದರ ಗೌರವ ಸದಸ್ಯತ್ವವನ್ನೂ 1983ರಲ್ಲಿ ಕೇಂದ್ರ ಸಂಗೀತನಾಟಕ ಅಕಾಡೆಮಿ ಪ್ರಶಸ್ತಿಯನ್ನೂ ಪಡೆದರು. ತಮ್ಮ ಕೊನೆಗಾಲದವರೆಗೂ ಇವರ ಗಾನಕಂಠ ಮೊಳಗುತ್ತಲೇ ಇತ್ತು. *

**ಬಾಳೆಹೊನ್ನೂರು:** ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕಿನ ಒಂದು ಸ್ಥಳ ಹಾಗೂ ಹೋಬಳಿ ಕೇಂದ್ರ. ಚಿಕ್ಕಮಗಳೂರಿನಿಂದ ಸು. 51 ಕಿಮೀ ದೂರದಲ್ಲಿ ಭದ್ರಾನದಿಯ ಪಶ್ಚಿಮ ದಂಡೆಯ ಮೇಲಿದೆ. ನದಿಯ ಸಮೀಪದಲ್ಲಿರುವ ಕೆಲವು ದೊಡ್ಡ ಬಂಡೆಗಳ ಮೇಲೆ ಕೆತ್ತಿರುವ ಶಾಸನಗಳ ಆಧಾರದಿಂದ ಈ ಪ್ರದೇಶವನ್ನು ಸಾಂತರ ದೊರೆ ಎರಡನೆಯ ಮಯೂರವರ್ಮನ ಮಗ ಮಾರ ಎಂಬುವನು ಆಳುತ್ತಿದ್ದನೆಂದೂ ಈತ ವಾದೀಭಸಿಂಹ ಅಜಿತಸೇನ ಎಂಬ ಜೈನಮುನಿಯ ಶಿಷ್ಯನಾಗಿದ್ದನೆಂದೂ ತಿಳಿದುಬರುತ್ತದೆ. ಶಾಸನವಿರುವ ಬಂಡೆಯೊಂದರ ಮೇಲೆ ಜಿನಮೂರ್ತಿಯ ಚಿತ್ರವಿದೆ. ಈ ಬಂಡೆಯನ್ನು ಬೊಮ್ಮನಕಲ್ಲು ಎಂದು ಕರೆಯುತ್ತಾರೆ. ಈ ಊರಿನ ಉತ್ತರಕ್ಕೆ ಒಂದೂವರೆ ಕಿಮೀ ದೂರದಲ್ಲಿರುವ ಬಾಳೆಹಳ್ಳಿಯಲ್ಲಿ ವೀರಶೈವ ಪಂಚಾಚಾರ್ಯರಲ್ಲಿ ಪ್ರಮುಖರಾದ ರೇಣುಕಾಚಾರ್ಯರು ಸ್ಥಾಪಿಸಿದ ಮಠವಿದೆ. ಇದನ್ನು ಶ್ರೀರಂಭಾಪುರಿ ಜಗದ್ಗುರುಗಳ ಮಠ ಎಂದೂ ಬಾಳೆಹಳ್ಳಿ ಮಠ ಎಂದೂ ಕರೆಯುತ್ತಾರೆ . ಇಲ್ಲಿರುವ ಅಚಾರ್ಯರ ಪೀಠಕ್ಕೆ ವೀರ ಸಿಂಹಾಸನ ಎಂದು ಹೆಸರು. ಮಠದಲ್ಲಿ ಇಕ್ಕೇರಿ ನಾಯಕರು ಮತ್ತು ಮೈಸೂರು ಅರಸರು ನೀಡಿರುವ ಅನೇಕ ತಾಮ್ರಪಟಗಳೂ ಸನ್ನದುಗಳೂ ಇವೆ. ಮಠಕ್ಕೆ ಹೊಂದಿಕೊಂಡಂತೆ ಬಲಭಾಗದಲ್ಲಿ ವೀರಭದ್ರನ ದೇವಸ್ಥಾನವಿದೆ. ಇದು ದ್ರಾವಿಡ ಶೈಲಿಯಲ್ಲಿದೆ, ಇದಕ್ಕೆ ದೊಡ್ಡ ಪ್ರಾಕಾರ ಇದೆ. ನವರಂಗದ ಇಕ್ಕೆಲಗಳಲ್ಲೂ

ಗರ್ಭಗೃಹಗಳಿವೆ. ಬಲಭಾಗದ ಗರ್ಭಗೃಹದಲ್ಲಿ ಲಿಂಗ ಮತ್ತು ಎಡಭಾಗದ ಗರ್ಭಗೃಹದಲ್ಲಿ ಗಣಪತಿ ಹಾಗೂ ಶೂಲಬ್ರಹ್ಮನ ವಿಗ್ರಹಗಳಿವೆ. ನವರಂಗದಲ್ಲಿ ಲೋಹದಲ್ಲಿ ಮಾಡಿದ ವೀರಭದ್ರನ ಹಾಗೂ

ಕಾಫಿ ಸಂಶೋಧನ ಕೇಂದ್ರ

ಭದ್ರಕಾಳಿಯ ವಿಗ್ರಹಗಳಿವೆ. ಇವುಗಳನ್ನು ವರ್ಷಕ್ಕೊಮ್ಮೆ ಉತ್ಸವ ಸಮಯದಲ್ಲಿ ಹೊರತೆಗೆಯುತ್ತಾರೆ. ಇಲ್ಲಿ ಪ್ರತಿ ವರ್ಷ ಫಾಲ್ಗುಣ ಮಾಸದಲ್ಲಿ ವೀರಭದ್ರಸ್ವಾಮಿಯ ರಥೋತ್ಸವ ನಡೆಯುತ್ತದೆ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವೂ ಇಲ್ಲಿ ಜರುಗಿದೆ.

ಚಿಕ್ಕಮಗಳೂರು–ಕೊಟ್ಟಿಗೆಹಾರ ಹೆದ್ದಾರಿ ಬಾಳೆಹೊನ್ನೂರು ಮೂಲಕ ಹಾದುಹೋಗುತ್ತದೆ. ಈ ಊರಿನಲ್ಲಿ ಒಂದು ಕಾಫಿ ಸಂಶೋಧನ ಕೇಂದ್ರ ಸಹ ಇದೆ. (ಎಸ್.ಎಸ್.ಜಿ.)

**ಬಿಂಡಿಗನವಿಲೆ:** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಒಂದು ಹಳ್ಳಿ, ಹೋಬಳಿ ಕೇಂದ್ರ. ಶ್ರವಣಬೆಳಗೊಳದ ಹಾದಿಯಲ್ಲಿ ನಾಗಮಂಗಲದ ಪಶ್ಚಿಮಕ್ಕೆ ಸು. 19ಕಿಮೀ ದೂರದಲ್ಲಿದೆ. ಜನಸಂಖ್ಯೆ 2,019. ಇಲ್ಲಿ ಒಂದು ದೊಡ್ಡ ಕೆರೆ ಇದೆ. ಈ ಕೆರೆಯ ಹಿಂಭಾಗದ ತೆಂಗು, ಅಡಕೆ ತೋಟಗಳಲ್ಲಿ ಬಹು ಸಂಖ್ಯೆಯಲ್ಲಿ ನವಿಲುಗಳನ್ನು ಕಾಣಬಹುದು. ಇಲ್ಲಿ ದ್ರಾವಿಡ ಶೈಲಿಯಲ್ಲಿ ಕಟ್ಟಲಾಗಿರುವ ಕೇಶವ ದೇವಾಲಯವಿದೆ. ಇಲ್ಲಿರುವ ಒಂದು ಮರದ ಗರುಡ ವಿಗ್ರಹಕ್ಕೆ ವಿಶೇಷ ಶಕ್ತಿಯಿದೆ ಎಂಬ ನಂಬಿಕೆ ಇದೆ. ಹಳೆಯ ಗರುಡ ವಿಗ್ರಹ ಜೀರ್ಣವಾದ್ದರಿಂದ ಅದರಸ್ಥಳದಲ್ಲಿ ಇತ್ತೀಚೆಗೆ ಶ್ರೀಗಂಧದ ಗರುಡನನ್ನು ಸ್ಥಾಪಿಸಲಾಗಿದೆ. ಕನ್ನಡ ಕಾದಂಬರಿ ಸಾಹಿತ್ಯದ ಪ್ರಥಮ ಪುರುಷರಲ್ಲೊಬ್ಬರಾದ ಬಿ. ವೆಂಕಟಾಚಾರ್ಯರು ಈ ಊರಿನವರು. (ಕೆ.ಆರ್.ಆರ್.)

**ಬಿಂದು ಮಾಧವ ಪಾಠಕ:** 1935–2004. ಪ್ರಸಿದ್ಧ ಸಂಗೀತ ಕಲಾವಿದ, ರುದ್ರಾವೀಣಾವಾದಕ. 1935 ಏಪ್ರಿಲ್ 9ರಂದು ಹುಬ್ಬಳ್ಳಿಯಲ್ಲಿ ಜನಿಸಿದರು. ಇವರದು ಕಲಾವಿದರ ಪರಂಪರೆಗೆ ಸೇರಿದ ಮನೆತನ. ಇವರ ತಂದೆ ಪಂಡಿತ ದತ್ತೋಪಂತ ಪಾಠಕ. ಅವರು ರುದ್ರವೀಣಾವಾದಕರು. ಇವರು ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಸಂಗೀತ ಶಿಕ್ಷಣವನ್ನು ತಂದೆಯಿಂದ ಪಡೆದರು. ಇಂಗ್ಲಿಷ್, ಹಿಂದೀ, ಸಂಗೀತ ಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವೀಧರರಾದ ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದರು ಶಿರಸಿಯ ಎಂ.ಎಂ.ಕಲಾ ವಿಜ್ಞಾನ ಕಾಲೇಜಿನಲ್ಲಿ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದರು (1963–80). ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಮುಖ್ಯಸ್ಥರಾಗಿ (1985–95) ಸೇವೆಸಲ್ಲಿಸಿದರು.

ಅರ್ಧಶತಮಾನಕ್ಕೂ ಹೆಚ್ಚು ಕಾಲ ಸಂಗೀತ ಸೇವೆ ಸಲ್ಲಿಸಿದ ಇವರು ಭಾರತೀಯ ಸಂಗೀತ ಚರಿತ್ರೆ, ಪುಟ್ಟರಾಜ ಗವಾಯಿಯವರನ್ನು ಕುರಿತು ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ, ಹಿಂದೀ, ಇಂಗ್ಲಿಷ್ ಭಾಷೆಗಳಲ್ಲಿ ಸಂಗೀತ ಮತ್ತು ಕಲೆಯ ಬಗೆಗೆ ಹಲವು ವಿಚಾರಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಇವರು ಆಕಾಶವಾಣಿಯ ಹೆಸರಾಂತ ಸಂಗೀತ ಕಲಾವಿದರಾಗಿದ್ದರು. ಸಾರ್ಕ್ ಸಮ್ಮೇಳನ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಕಲಾಮೇಳಗಳಲ್ಲಿ ರುದ್ರವೀಣೆ, ಸಿತಾರ್ ನುಡಿಸಿ ಜನಮನ್ನಣೆಗಳಿಸಿದ್ದಾರೆ. ಇವರು ಉಸ್ತಾದ್ ಬಂದೇಅಲಿಖಾನ್ ಘರಾಣೆಗೆ ಸೇರಿದ ಕಲಾವಿದರು. ರಾಮಚಂದ್ರಹೆಗಡೆ ಹಳದಕೈ, ಶ್ರೀಕಾಂತಪಾಠಕ, ಜ್ಯೋತಿಹೆಗಡೆ, ಮುರಳಿಧರರಾವ್ ಮೊದಲಾದ ಬೀನ್ ವಾದಕರಿಗೆ ಇವರು ಗುರುವಾಗಿದ್ದರು.

ಇವರ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಕನಕ ಪುರಂದರ ಪ್ರಶಸ್ತಿ ನೀಡಿದೆ (1994). ರಾಜ್ಯ ಸಂಗೀತ ನಾಟಕ ಅಕಾಡೆಮಿ ಕರ್ನಾಟಕ ಕಲಾತಿಲಕ ಪ್ರಶಸ್ತಿ ನೀಡಿದೆ. ಆರ್ಯಭಟ ಸಂಸ್ಥೆ ಸಂಗೀತ ವಿದ್ಯಾ ಪ್ರಪೂರ್ಣ ಗೌರವ ಪ್ರಶಸ್ತಿ ನೀಡಿದೆ. ಯಮನ್, ದರಬಾರಿಗಳಲ್ಲಿ ಇವರು ನುಡಿಸುವ ಸಿತಾರ್‌ವಾದನ ಅತ್ಯಂತ ಮೋಹಕವಾದುದು. ಇವರು 2004 ಫೆಬ್ರವರಿ 4ರಂದು ನಿಧನರಾದರು. *

**ಬಿಂದೂರಾಯ, ಸಂ.ಗೋ:** 1876–1969. ಕರ್ನಾಟಕದ ಪ್ರಸಿದ್ಧ ಗಮಕಿ. ಕುಮಾರವ್ಯಾಸ ಭಾರತವನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದುದರಿಂದ ಭಾರತದ ಬಿಂದೂರಾಯರೆಂದೂ ಪ್ರಸಿದ್ಧರಾಗಿದ್ದರು. ಇವರು ಹಿಂದಿನ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರಿನಲ್ಲಿ 1876ರಲ್ಲಿ ಜನಿಸಿದರು; ಇವರ ತಂದೆ ಗೋವಿಂದರಾಯರು, ತಾಯಿ ರಮಾಬಾಯಿ.



ಬಿಂದೂರಾಯರು ಹೊಸದುರ್ಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಇವರಿಗೆ ಜೋಡಿದಾರ್ ಶಾಮಾಚಾರ್ಯರ ಪರಿಚಯವಾಯಿತು. ಶಾಮಾಚಾರ್ಯರು ಬಿಂದೂರಾಯರಿಗಿಂತ ಬಹಳ ಹಿರಿಯರು. ಅವರು ಕುಮಾರವ್ಯಾಸ ಭಾರತ ಜೈಮಿನಿ ಭಾರತ, ರಾಜಶೇಖರ ವಿಲಾಸಗಳನ್ನು ವಾಚನ ಮಾಡುವುದರಲ್ಲಿ ನಿಷ್ಣಾತರಾಗಿದ್ದರು. ಅವರ ಭಾರತ ವಾಚನ ಕೇಳಿ ಅದನ್ನು ಮೂದಲಿಸಿದ್ದ ಬಿಂದೂರಾಯರು ಗಮಕವಾಚನವನ್ನು ಸವಾಲಾಗಿ ತೆಗೆದುಕೊಂಡು ಸ್ವಂತ ಪರಿಶ್ರಮದಿಂದ ಆ ಕಲೆಯನ್ನು ಕರಗತಮಾಡಿಕೊಂಡರು. ಮುಂದೊಂದು ದಿನ ಸ್ವತಃ ಶಾಮಾಚಾರ್ಯರಿಂದಲೇ ಶಹಭಾಸಗಿರಿ ಪಡೆದು ತಮ್ಮ ಜೀವನದುದ್ದಕ್ಕೂ ಗಮಕ ಕಲೆಯನ್ನು ಪೋಷಿಸಿಕೊಂಡು ಬಂದರು. ಇವರು ಸಂಗೀತಗಾರರಲ್ಲದಿದ್ದರೂ ರಸಭಾವಗಳನ್ನು ಹೊರಹೊಮ್ಮಿಸಲು ಬೇಕಾದಷ್ಟು ವಿವಿಧರಾಗಗಳನ್ನು ಸಂದರ್ಭೋಚಿತವಾಗಿ ಅಳವಡಿಸಿ ವಾಚನ ಮಾಡಲು ಅಭ್ಯಾಸ ಮಾಡಿಕೊಂಡಿದ್ದರು. ಕವಿ ಹೃದಯದ ಸಹೃದಯರಿಗೆ ಮುಂದಟ್ಟಾಗುವಂತೆ, ಅವರ ಮನಮಿಡಿದು ಆನಂದಬಾಷ್ಪ ತುಳುಕುವಂತೆ, ಮೈಪುಳಕಿತವಾಗುವಂತೆ ವಾಚಿಸುವ ಕಲೆ ಇವರಿಗೆ ಸಿದ್ಧಿಸಿತ್ತು. ಇವರ ವಾಚನಶೈಲಿ

ಯನ್ನು ಟಿ.ಎಸ್. ವೆಂಕಣ್ಣಯ್ಯ, ಬಿ.ಎಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿವಿಜಿ ಮೊದಲಾದ ಸಾಹಿತ್ಯ ವಿದ್ವಾಂಸರು ಬಲುವಾಗಿ ಮೆಚ್ಚಿಕೊಂಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕ ರಾಯರಿಗೆ ದೊರಕಿದ ಮೇಲೆ (ಸು.1935) ಇವರ ವಾಚನಕ್ಕೆ ಅಖಿಲ ಕರ್ನಾಟಕ ಮಟ್ಟದ ಖ್ಯಾತಿ ದೊರೆಯಿತು. ಕೆಲಕಾಲ ಇವರು ಪರಿಷತ್ತಿನಲ್ಲಿ ಗಮಕ ಕಲೆಯ ಬೋಧಕರಾಗಿಯೂ ಕೆಲಸಮಾಡಿದರು. ಅಂದು ಬಿಂದೂರಾಯರ ಶಿಷ್ಯರಾಗಿದ್ದವರು ಅನೇಕರು ತರುವಾಯದ ದಿನಗಳಲ್ಲಿ ಉಚ್ಚಮಟ್ಟದ ಗಮಕಿಗಳಾಗಿ ಪ್ರಸಿದ್ಧರಾಗಿದ್ದಾರೆ. ಅವರುಗಳಲ್ಲಿ ಶಕುಂತಳಾಬಾಯಿ ಪಾಂಡುರಂಗರಾಯ, ರಾಜಾಮಣಿ ನಾಗರಾಜರಾಯ, ಎಂ. ಎನ್. ಚಂದ್ರ ಶೇಖರಯ್ಯ, ಎನ್. ಶ್ರೀನಿವಾಸರಾಯ, ಎಸ್. ನಾಗೇಶರಾಯ, ಎಂ. ಹರಿನಾರಾಯಣ, ಗವಾಯಿ ಗುರುರಾವ್ ದೇಶಪಾಂಡೆ ಮೊದಲಾದವರನ್ನು ಹೆಸರಿಸಬಹುದು.

ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ಲಭ್ಯವಾಗಿವೆ. 1950ರಲ್ಲಿ ಮುಂಬಯಿಯಲ್ಲಿ ನಡೆದ .34ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರು ಗಮಕ ಗೋಷ್ಠಿಯ ಅಧ್ಯಕ್ಷರಾಗಿದ್ದರು. 1967ರ ದಸರ ವಸ್ತುಪ್ರದರ್ಶನದಲ್ಲಿ ರಾಜ್ಯ ಸರ್ಕಾರ ಇವರಿಗೆ ಗಮಕ ಪ್ರಶಸ್ತಿ ನೀಡಿ ಗೌರವಿಸಿತು. ಮೈಸೂರಿನಲ್ಲಿ ನೆಲೆಸಿದ್ದ ಇವರು 1969 ಮಾರ್ಚ್ 12ರಂದು ನಿಧನಹೊಂದಿದರು.

*

**ಬಿಜಾಪುರ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ತಾಲ್ಲೂಕು ಮತ್ತು ಆಡಳಿತ ಕೇಂದ್ರ ಪಟ್ಟಣ.

ಜಿಲ್ಲೆ: ಬೆಳಗಾಂವಿ ವಿಭಾಗಕ್ಕೆ ಸೇರಿದ ಈ ಜಿಲ್ಲೆ ಕರ್ನಾಟಕ ರಾಜ್ಯದ ಉತ್ತರ ಬಯಲು ಪ್ರದೇಶದಲ್ಲಿ ಉ.ಅ. $15^0$ $19^I$ ಮತ್ತು $17^0$ $29^I$ ಹಾಗೂ ಪೂ.ರೇ. $75^0$ $19^I$ ಮತ್ತು $76^0$ $32^I$ ಇವುಗಳ ನಡುವೆ ಹಬ್ಬಿದೆ. ಈಶಾನ್ಯ ಮತ್ತು ಪೂರ್ವದಲ್ಲಿ ಗುಲ್ಬರ್ಗ ಜಿಲ್ಲೆ, ಆಗ್ನೇಯದಲ್ಲಿ ರಾಯಚೂರು ಜಿಲ್ಲೆ, ದಕ್ಷಿಣದಲ್ಲಿ ಮತ್ತು ಪಶ್ಚಿಮದಲ್ಲಿ ಬಾಗಲಕೋಟೆ ಮತ್ತು ಬೆಳಗಾಂವಿ ಜಿಲ್ಲೆ, ಉತ್ತರ ಮತ್ತು ವಾಯವ್ಯದಲ್ಲಿ ಮಹಾರಾಷ್ಟ್ರದ ಸಾಂಗಲಿ ಮತ್ತು ಸೊಲ್ಲಾಪುರ ಜಿಲ್ಲೆಗಳು ಈ ಜಿಲ್ಲೆಯನ್ನು ಸುತ್ತುವರಿದಿವೆ. ಜಿಲ್ಲೆಯಲ್ಲಿ ಬಸವನ ಬಾಗೇವಾಡಿ, ಬಿಜಾಪುರ, ಇಂಡಿ, ಮುದ್ದೇಬಿಹಾಳ ಮತ್ತು ಸಿಂದಗಿ ತಾಲ್ಲೂಕುಗಳೂ 18 ಹೋಬಳಿಗಳೂ ಇವೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 10,475 ಚ.ಕಿಮೀ. ಒಟ್ಟು ಜನಸಂಖ್ಯೆ 18,06,918.

ಈ ಜಿಲ್ಲೆ ಭೌಗೋಳಿಕವಾಗಿ ದಖನ್ ಪ್ರಸ್ಥಭೂಮಿಯ ಒಣ ಮತ್ತು ಶುಷ್ಕ ಪ್ರದೇಶದಲ್ಲಿದೆ. ಕೃಷ್ಣಾನದಿಯ ಉತ್ತರಭಾಗ ದಖನ್ ಟ್ರ್ಯಾಪ್‍ಗಳ ಪ್ರದೇಶ. ಆಗ್ನೇಯ ಭಾಗ ನೈಸ್ ಶಿಲಾಪ್ರದೇಶ. ಇವುಗಳಲ್ಲಿ ಭೀಮಾ ಕಣಿವೆ, ಮಧ್ಯದ ಪ್ರಸ್ಥಭೂಮಿ, ಡೋಣಿ ಕಣಿವೆ, ಬಿಜಾಪುರದ ನಗರ ಪ್ರದೇಶ, ಕೃಷ್ಣಾ ಕಣಿವೆ, ದಕ್ಷಿಣದ ಶ್ರೇಣಿಗಳು ಮತ್ತು ಆಗ್ನೇಯದ ಗುಡ್ಡಗಳು ಬಯಲು ಪ್ರದೇಶವೆಂದು ಪ್ರಮುಖ ಭೌಗೋಳಿಕ ವಿಭಾಗಗಳನ್ನು ಗುರುತಿಸಬಹುದು.

ಕೃಷ್ಣಾನದಿಯ ಉತ್ತರಕ್ಕಿರುವ ಜಿಲ್ಲೆಯ ಭಾಗ ಬಹುಮಟ್ಟಿಗೆ ಮಟ್ಟಸ ಬಯಲು ಪ್ರದೇಶ. ಈ ಭಾಗದಲ್ಲಿ ತಿಕೋಟ ಬಳಿಯಿಂದ ಬಿಜಾಪುರದ ಸನಿಹದವರೆಗೆ ಹಬ್ಬಿರುವ ಮಹದೇವ ಶ್ರೇಣಿಯ ಒಂದು ಚಿಕ್ಕ ಕವಲನ್ನು ಬಿಟ್ಟರೆ ಉಳಿದಂತೆ ಎಲ್ಲೋ ಅಲ್ಲಲ್ಲಿ ಕೆಲವು ಟ್ರ್ಯಾಪ್ ಕಲ್ಲಿನ ಸಣ್ಣಪುಟ್ಟ ಗುಡ್ಡಗಳು ಕಂಡುಬರುತ್ತವೆ. ಬೆಟ್ಟಗುಡ್ಡಗಳ ನಡುವೆ ವಿಶಾಲವಾದ ನದಿ ಕಣಿವೆಗಳಿದ್ದು ಅವು ಜನವಸತಿಗೆ ಅತ್ಯಂತ ಉಪಯುಕ್ತವಾಗಿದೆ.

ಭೀಮಾ, ಕೃಷ್ಣಾ, ಡೋಣಿ ಈ ಜಿಲ್ಲೆಯ ಮುಖ್ಯ ನದಿಗಳು. ಕೃಷ್ಣಾನದಿ ಜಿಲ್ಲೆಯನ್ನು ನೈಋತ್ಯದಲ್ಲಿ ಬಿಜಾಪುರ ತಾಲ್ಲೂಕಿನ ದಕ್ಷಿಣದಲ್ಲಿ ಶಿರಬೂರಿನ ಉತ್ತರದಲ್ಲಿ ಮುಟ್ಟಿ ಮುಂದೆ ಜಿಲ್ಲೆಯ ದಕ್ಷಿಣದಲ್ಲಿ ಬಾಗಲಕೋಟೆ ಜಿಲ್ಲೆಯನ್ನು ಬೇರ್ಪಡಿಸಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಬಿಜಾಪುರ, ಬಸವನ ಬಾಗೇವಾಡಿ, ಮುದ್ದೇಬಿಹಾಳ ತಾಲ್ಲೂಕುಗಳನ್ನು ಬಳಿಗಿ, ಬಾಗಲಕೋಟೆ ಮತ್ತು ಹುನಗುಂದ ತಾಲ್ಲೂಕುಗಳಿಂದ ಬೇರ್ಪಡಿಸುವ ಗಡಿಯಾಗಿ ಸಾಗುತ್ತದೆ. ಈ ಜಿಲ್ಲೆಯಲ್ಲಿ ನದಿಯ ಹರಿವಿನ ಉದ್ದ 201 ಕಿಮೀ. ಭೀಮಾ ನದಿ ಇಂಡಿ ತಾಲ್ಲೂಕಿನ ವಾಯವ್ಯದ ಕೊನೆಯಲ್ಲಿ ಜಿಲ್ಲೆಯನ್ನು ಮುಟ್ಟಿ, ಅಲ್ಲಿಂದ ಆಗ್ನೇಯಾಭಿಮುಖವಾಗಿ ಸಾಗುತ್ತದೆ. ಇದರ ಹರಿವು ಪೂರ್ಣವಾಗಿ ಜಿಲ್ಲೆಯ ಗಡಿಯಲ್ಲಿಯೇ ಮೊದಲರ್ಧ ಸೊಲ್ಲಾಪುರ ಜಿಲ್ಲೆಗೆ ತಾಗಿದಂತೆ ಮತ್ತು ಮುಂದೆ ಗುಲ್ಬರ್ಗ ಜಿಲ್ಲೆಗೆ ತಾಗಿದಂತೆ ಈ ನದಿಯ ದಕ್ಷಿಣ ದಂಡೆ ಮಾತ್ರ ಜಿಲ್ಲೆಗೆ ಸೇರಿದೆ. ಈ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು ಹರಿವಿನ ಉದ್ದ ಸು. 96 ಕಿಮೀ. ಡೋಣಿ, ಕೃಷ್ಣಾನದಿಯ ಉಪನದಿ. ಬಸವನ ಬಾಗೇವಾಡಿ, ಸಿಂದಗಿ ತಾಲ್ಲೂಕುಗಳ ಗಡಿಯಾಗಿ ಹರಿಯುವ ಡೋಣಿ ನದಿ ಬಿಜಾಪುರ, ಮುದ್ದೇಬಿಹಾಳ ತಾಲ್ಲೂಕುಗಳಲ್ಲೂ ಹರಿದು ಜಿಲ್ಲೆಯಲ್ಲಿ ಒಟ್ಟು ಸು. 161 ಕಿಮೀ ದೂರ ಸಾಗುವುದು. ಇದರ ಜಲಾನಯನ ಭೂಮಿಯನ್ನು ಧಾನ್ಯದ ಕಣಜ ಎನ್ನುವರು. ಡೋಣಿ ಬೆಳೆದರೆ ಓಣೆಲ್ಲ ಜೋಳ ಎಂಬ ನಾಣ್ನುಡಿಯೇ ಇದೆ.

ವರ್ಷದಲ್ಲಿ ಸಾಮಾನ್ಯವಾಗಿ 37 ದಿನಗಳು ಮಳೆ ಬೀಳುವ ಈ ಜಿಲ್ಲೆಯಲ್ಲಿ ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳುವರೆಗೆ ನೈಋತ್ಯ ಮಾರುತಗಳಿಂದಲೂ ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಈಶಾನ್ಯ ಮಾರುತಗಳಿಂದಲೂ ಮಳೆ ಆಗುತ್ತದೆ. ಹೆಚ್ಚು ಮಳೆ ಸೆಪ್ಟೆಂಬರಿನಲ್ಲಿ ಬೀಳುತ್ತದೆ. ವಾರ್ಷಿಕ ಸರಾಸರಿ 578 ಮಿಮೀ ಮಳೆಯಾದರೆ ಜಿಲ್ಲೆಯಲ್ಲಿ ಒಟ್ಟು 626.6 ಮಿಮೀ. ಮಳೆಯಾಗಿತ್ತು (2000). ಜಿಲ್ಲೆಯ ಹವೆ ಆರೋಗ್ಯಕರ. ಡಿಸೆಂಬರಿನಲ್ಲಿ ಅತಿ ಹೆಚ್ಚು ಚಳಿ. ಏಪ್ರಿಲ್, ಮೇ ಹೆಚ್ಚು ಸೆಕೆಕಾಲವೆನ್ನಬಹುದು.

ಈ ಜಿಲ್ಲೆಯ ಖನಿಜಸಂಪತ್ತು ಹೆಚ್ಚೇನಿಲ್ಲ. ಕೆಲವು ರೀತಿಯ ಮರಳು ಶಿಲೆಗಳು ಕಟ್ಟಡಗಳಿಗೆ ಉಪಯುಕ್ತವಾಗಿವೆ. ತಾಮ್ರ, ಕಬ್ಬಿಣ ಮತ್ತು ಲೋಹಮಂಡೂರಗಳ ಅದಿರುಗಳು ಅಲ್ಪಪ್ರಮಾಣದಲ್ಲಿ ದೊರೆಯುತ್ತವೆ.

ಹೆಚ್ಚು ಮಳೆ ಬೀಳದ ಕಾರಣ ಇಲ್ಲಿನ ಅರಣ್ಯಗಳು ದಟ್ಟವಾಗಿಲ್ಲ. ಇರುವ ಅರಣ್ಯ ವಿಸ್ತೀರ್ಣ 1977 ಹೆಕ್ಟೇರ್‍ಗಳು (2000). ಬೆಟ್ಟಗುಡ್ಡಗಳ ಮತ್ತು ನದೀತೀರದ ಕಾಡುಗಳಲ್ಲಿ ಕಕ್ಕೆ, ದಿಂಡಲು, ಗಂಧ ಮುಂತಾದ ಗಿಡಮರಗಳಿವೆ. ಮೈದಾನ ಪ್ರದೇಶದ ಕಾಡಿನಲ್ಲಿ ಹೆಚ್ಚಾಗಿ ಜಾಲಿ ಮರಗಳನ್ನು ಕಾಣಬಹುದು. ಜೊತೆಗೆ ಬೇವು, ಹುಣಿಸೆ, ನೇರಳೆ, ಆಲ-ಇವು ಬೆಳೆಯುತ್ತವೆ. ಜಿಲ್ಲೆಯ ಅರಣ್ಯಪ್ರದೇಶ ಕ್ಷೀಣವಾಗಿರುವುದರಿಂದ ಮೃಗ ಮತ್ತು ಪಕ್ಷಿಗಳ ಸಂಖ್ಯೆ ಕಡಿಮೆ. ಇಲ್ಲಿನ ಕಾಡುಗಳಲ್ಲಿ ಕಾಡುಬೆಕ್ಕು, ಕತ್ತೆಕಿರುಬ, ತೋಳ, ಕುನ್ನಿನರಿ, ಕೆಂಪುನರಿ, ಮುಳ್ಳುಹಂದಿ, ಚಿಗರೆ, ಕಾಡುಹಂದಿ, ಮೊಲ, ಮಂಗ, ನವಿಲು, ಕೌಜಗ, ಪುರಲೆಹಕ್ಕಿ, ಹಸಿರು ಪಾರಿವಾಳ, ಕಲ್ಲುಕೋಳಿ, ಪಾಸ್ಟರ್, ಕಬ್ಬಾರೆ, ಕ್ರೌಂಚ, ಹೆಬ್ಬಾವು, ಮಣ್ಣುಮುಕ್ಕ, ಕ್ಯಾರೆಹಾವು, ಚೆಂಗಿಹಾವು, ನಾಗರ, ಮಂಡಲದ ಹಾವು, ಬಾಲಪಡಕ ಮುಂತಾದ ಪ್ರಾಣಿ, ಪಕ್ಷಿ ಮತ್ತು ಹಾವುಗಳನ್ನು ಕಾಣಬಹುದು.

ಬಿಜಾಪುರ ವ್ಯವಸಾಯಪ್ರಧಾನ ಜಿಲ್ಲೆ. ಇಲ್ಲಿರುವ ಫಲವತ್ತಾದ ಮಣ್ಣು ಮತ್ತು ನೀರಿನ ಸೌಲಭ್ಯ ಇದಕ್ಕೆ ಕಾರಣ. ಇಲ್ಲಿನ ಮಣ್ಣಿನ ಗುಣವನ್ನು ಅವಲಂಬಿಸಿ ಜಿಲ್ಲೆಯನ್ನು ಪ್ರಧಾನವಾಗಿ ಎರಡು ಭಾಗವಾಗಿ ವಿಂಗಡಿಸಬಹುದು. ಒಂದು ಕಪ್ಪುಮಣ್ಣು ಅಥವಾ ಎರೆಮಣ್ಣಿನ ಪ್ರದೇಶ. ಮತ್ತೊಂದು ಕೆಂಪು ಅಥವಾ ಮಸಾರಿ ಭೂಮಿ. ಜಿಲ್ಲೆಯಲ್ಲಿ ಹೆಚ್ಚು ತೇವವನ್ನು ಹಿಡಿದಿಟ್ಟುಕೊಳ್ಳುವ ಕಪ್ಪುಮಣ್ಣಿನ ಪ್ರದೇಶವೇ ಹೆಚ್ಚು.

ಡೋಣಿ ನದಿಯ ಕಪ್ಪುಮಣ್ಣಿನ ಪ್ರದೇಶವಂತೂ ಜೋಳದ ಬೆಳೆಗೆ ಬಹಳ ಪ್ರಶಸ್ತವಾದುದು. ಜಿಲ್ಲೆಯಲ್ಲಿ ಆಧುನಿಕ ನೀರಾವರಿ ಬೆಳೆದಿಲ್ಲ.

1999–2000 ದ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ವ್ಯವಸಾಯ ಪ್ರದೇಶ 961256 ಹೆ.ಗಳಿದ್ದು ಕೆರೆಗಳಿಂದ 5409ಹೆ. ಬಾವಿಗಳಿಂದ 9374ಹೆ. ಕೊಳವೆಬಾವಿಗಳಿಂದ 4788ಹೆ. ಇತರೇ ಜಲಮೂಲಗಳಿಂದ 29,672ಹೆ. ಒಳಪಟ್ಟಂತೆ ಒಟ್ಟು 13,3669ಹೆ. ನೀರಾವರಿಗೊಳಪಟ್ಟಿತ್ತು. ಇದೇ ಸಾಲಿನಲ್ಲಿ 365ಹೆ. ನಲ್ಲಿ ಬತ್ತ, 3,34,596ಹೆ. ಜೋಳ, 114,012ಹೆ. ಸಜ್ಜೆ, 16901ಹೆ. ಮುಸುಕಿನ ಜೋಳ, 54047ಹೆ. ಗೋಧಿ, 15,680ಹೆ.ನಲ್ಲಿ ಕಬ್ಬು, 9,915ಹೆ. ಹಣ್ಣುಗಳೂ 9,766ಹೆ. ತರಕಾರಿಗಳೂ ಮತ್ತು 2655ಹೆ. ಗಳಲ್ಲಿ ಮಸಾಲೆ ಸಾಂಬಾರ ಪದಾರ್ಥಗಳನ್ನು ಬೆಳೆಯಲಾಗಿತ್ತು. 7,198ಹೆ. ಗಳಲ್ಲಿ ಹತ್ತಿಯನ್ನೂ 1,57,959 ಹೆ.ಗಳಲ್ಲಿ ಎಣ್ಣೆ ಕಾಳುಗಳನ್ನೂ 1,66,251. ಹೆ. ಗಳಲ್ಲಿ ಆಹಾರೇತರ ಬೆಳೆಗಳನ್ನು ಬೆಳೆಯಲಾಗಿತ್ತು.

ಇವುಗಳ ಜೊತೆ ತೊಗರಿ, ಹುರುಳಿ, ಹೆಸರು, ಅವರೆ, ಅಲಸಂದೆ, ಸೇಂಗಾ ಬೆಳೆಯುತ್ತಾರೆ. ಎಣ್ಣೆಕಾಳುಗಳಲ್ಲಿ ಕುಸುಬೆ, ಅಗಸೆ, ಎಳ್ಳು, ನೆಲಗಡಲೆ, ಹರಳು ಮುಖ್ಯವಾದವು. ಹೊಗೆಸೊಪ್ಪು, ವೀಳೆಯದೆಲೆ, ಮೆಣಸಿನ ಕಾಯಿ, ಅರಿಶಿನ, ಕೊತ್ತಂಬರಿ, ಬೆಳ್ಳುಳ್ಳಿ-ಇವನ್ನೂ ಬೆಳೆಯುವುದುಂಟು.

ಬಿಜಾಪುರ ಜಿಲ್ಲೆಯಲ್ಲಿನ ಪಶುಸಂಪತ್ತೂ ಗಮನಾರ್ಹವಾದದ್ದು. 2001ರ ಅಂಕಿಅಂಶದಂತೆ 7 ಪಶುವೈದ್ಯ ಆಸ್ಪತ್ರೆಗಳೂ ಸೇರಿ ಒಟ್ಟು 122 ಪಶುವೈದ್ಯಶಾಲೆಗಳಿದ್ದವು. ಇದೇ ಸಾಲಿನಲ್ಲಿ 2404 ಟನ್‍ಗಳಷ್ಟು ಮೀನನ್ನು ಹಿಡಿಯಲಾಗಿತ್ತು.

ಈ ಜಿಲ್ಲೆ ಕೈಗಾರಿಕೆಯಲ್ಲಿ ಅಷ್ಟು ಮುಂದುವರಿದಿಲ್ಲ. ಇಲ್ಲಿ ಸಣ್ಣ ಪ್ರಮಾಣದ ಗೃಹ ಕೈಗಾರಿಕೆಗಳೇ ಹೆಚ್ಚು. ಹತ್ತಿಬೀಜ ಬೇರ್ಪಡಿಸಿ ಅರಳೆ ತೆಗೆಯುವುದು ಇಲ್ಲಿನ ಒಂದು ಪ್ರಮುಖ ಕೈಗಾರಿಕೆ. ನೆಲಗಡಲೆ, ಎಳ್ಳು, ಕುಸುಬೆ, ಹರಳು, ಬೇವು ಬೀಜಗಳಿಂದ ಖಾದ್ಯ ಮತ್ತು ಅಖಾದ್ಯ ತೈಲಗಳ ತಯಾರಿಕೆ ಹಾಗೂ ಗೋಣಸಗಿ, ಎಡೆಹಳ್ಳಿ, ಸಾವಳಗಿ, ಕುರಿ ತುಪ್ಪಟದ ಕಂಬಳಿ ಮತ್ತು ಇತರ ಉಣ್ಣೆಬಟ್ಟೆಗಳ ತಯಾರಿಕೆಯುಂಟು. ರೇಷ್ಮೆ ಗೂಡುಗಳ ಉತ್ಪಾದನೆಯೂ ಇದೆ. ಬಿಜಾಪುರದ ಪಾದರಕ್ಷೆಗಳು ಮತ್ತು ಇತರ ಚರ್ಮವಸ್ತುಗಳು ಪ್ರಸಿದ್ಧ. ಈ ಉದ್ಯೋಗ ಇಲ್ಲಿ ಮನೆತನದ ಕಸಬಾಗಿ ನಡೆದು ಬಂದಿದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಧನಸಹಾಯದಿಂದ ಮರಗೆಲಸ ಮತ್ತು ಕಬ್ಬಿಣದ ಕೆಲಸ, ಬಳೆ, ಹಗ್ಗಹುರಿ, ಸುಣ್ಣ, ಮಡಿಕೆ ಕುಡಿಕೆ, ಬಿದಿರು ಬುಟ್ಟಿ, ಬೀಗ, ತಾಮ್ರ ಮತ್ತು ಹಿತ್ತಾಳೆ ಪಾತ್ರೆ ಪದಾರ್ಥಗಳು ಮುಂತಾದವುಗಳ ತಯಾರಿಕೆ ಉಂಟು. 2001ರಲ್ಲಿ ಒಟ್ಟು 62 ಬಟ್ಟೆ ಕಾರ್ಖಾನೆಗಳು, 19 ಎಂಜಿನಿಯರಿಂಗ್ ಇತರೆ 378 ವಿವಿಧ ಕಾರ್ಖಾನೆಗಳಿದ್ದು ಸು. 7206 ಮಂದಿ ಕಾರ್ಖಾನೆ ಉದ್ಯೋಗಿಗಳಿದ್ದರು.

ಜಿಲ್ಲೆಯ ವ್ಯವಸಾಯ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕ ವಾಗಿ ಒಟ್ಟು 82 ವಾಣಿಜ್ಯ ಬ್ಯಾಂಕುಗಳು, 5 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೂ 13 ಇತರೆ ಸಹಕಾರ ಬ್ಯಾಂಕುಗಳೂ ಇದ್ದವು. (ಜಿ.ಎಸ್.ಕೆ.)

ಹುಬ್ಬಳ್ಳಿ-ಸೊಲ್ಲಾಪುರ ರೈಲುಮಾರ್ಗ ಈ ಜಿಲ್ಲೆಯ ಏಕೈಕ ರೈಲುಸಂಪರ್ಕ ವ್ಯವಸ್ಥೆ. ಇದು ಜಿಲ್ಲೆಯ ಪಶ್ಚಿಮಾರ್ಧದ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಸಾಗುತ್ತದೆ. ಬಿಜಾಪುರ, ಇಂಡಿ ರೋಡ್ ಪ್ರಮುಖ ರೈಲು ನಿಲ್ದಾಣಗಳು. ಸೊಲ್ಲಾಪುರ-ಬಿಜಾಪುರ-ಚಿತ್ರದುರ್ಗ ಈ ರಾಷ್ಟ್ರೀಯ ಹೆದ್ದಾರಿ ಜಿಲ್ಲೆಯಲ್ಲಿ ಬಿಜಾಪುರ, ಬಸವನ ಬಾಗೇವಾಡಿ, ಮುದ್ದೇಬಿಹಾಳ, ಮೇಲೆ ಹಾದು ಹೋಗುವುದು. ಜಿಲ್ಲೆಯಲ್ಲಿ ಒಟ್ಟು 67 ಕಿಮೀ ಬ್ರಾಡ್ ಗೇಜ್, 63 ಕಿಮೀ ಮೀಟರ್ ಗೇಜ್ ರೈಲುಮಾರ್ಗವಿದ್ದು 20 ರೈಲುನಿಲ್ದಾಣಗಳಿವೆ. ಹಾಗೆಯೇ 175 ಕಿಮೀ ರಾಷ್ಟ್ರೀಯ ಹೆದ್ದಾರಿ, 388 ಕಿಮೀ ರಾಜ್ಯಹೆದ್ದಾರಿ ಮತ್ತು 1154 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳಿವೆ. 648 ಕಿಮೀ ಪಂಚಾಯಿತ್ತಿ ವ್ಯಾಪ್ತಿಗೊಳಪಟ್ಟ ರಸ್ತೆಗಳಿವೆ.

ಜಿಲ್ಲೆಯಲ್ಲಿ 1691 ಪ್ರಾಥಮಿಕ, 276 ಪ್ರೌಢಶಾಲೆಗಳಿದ್ದವು. 68 ಪದವಿ ಪೂರ್ವ ಕಾಲೇಜುಗಳು, 5 ಪಾಲಿಟೆಕ್ನಿಕ್, 2 ಎಂಜನಿಯರಿಂಗ್, ಒಟ್ಟು 4 ಅಲೋಪತಿ ಮತ್ತು ಭಾರತೀಯ ವೈದ್ಯಪದ್ಧತಿ ಕಾಲೇಜುಗಳು, 1 ದಂತವೈದ್ಯಕಾಲೇಜು, 101 ಗ್ರಂಥಾಲಯಗಳೂ 60 ಆಸ್ಪತ್ರೆಗಳು, 55 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದವು.

ಈ ಜಿಲ್ಲೆ ಶಿಲಾಯುಗಗಳ ಕಾಲದಿಂದಲೂ ಜನವಸತಿಯುಳ್ಳ ಪ್ರದೇಶ ವಾಗಿತ್ತು. ಆದಿ ಹಳೆಯ ಶಿಲಾಯುಗದ ಕಾಲದಿಂದ ಆದಿ ಐತಿಹಾಸಿಕ ಕಾಲದವರೆಗಿನ ನೂರಾರು ಪ್ರಾಚೀನ ನೆಲೆಗಳು ಈ ಜಿಲ್ಲೆಯಲ್ಲಿ ಬೆಳಕಿಗೆ ಬಂದಿವೆ. ಐಹೊಳೆ, ಬಾದಾಮಿ, ಬಾಗಲಕೋಟೆ, ಧೂಳಖೇಡ, ಗಲಗಲಿ, ಹಿಪ್ಪರಗಿ ಮತ್ತು ಮಹಾಕೂಟ- ಈ ಸ್ಥಳಗಳಿಗೆ ಸಂಬಂಧಿಸಿದ ಪೌರಾಣಿಕ ಕಥೆಗಳು ರಾಮಾಯಣದ ದಂಡಕಾರಣ್ಯ ಪ್ರದೇಶದ ವರ್ಣನೆಗೆ ಸರಿಹೊಂದಿ ಕೊಳ್ಳುತ್ತವೆ. 2ನೆಯ ಶತಮಾನದಲ್ಲಿದ್ದ ಸುಪ್ರಸಿದ್ಧ ಭೂಗೋಳಶಾಸ್ತ್ರಜ್ಞ ಟಾಲೆಮಿ ತನ್ನ ಬರೆಹದಲ್ಲಿ ಈ ಜಿಲ್ಲೆಯ ಬಾದಾಮಿ, ಇಂಡಿ, ಕಲಕೇರಿ, ಪಟ್ಟದಕಲ್ಲು ಇವುಗಳನ್ನು ಹೆಸರಿಸಿದ್ದಾನೆ.

5ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಜಿಲ್ಲೆಯ ಪ್ರದೇಶದಲ್ಲಿ ನಡೆದ ಐತಿಹಾಸಿಕ ಘಟನೆಗಳ ಬಗೆಗೆ ಶಾಸನಗಳು ದೊರೆತಿವೆ. 543ರ ಶಾಸನವೊಂದರಿಂದ ಚಳುಕ್ಯ ಒಂದನೆಯ ಪುಲಕೇಶಿ ಬಾದಾಮಿ ಕೋಟೆಯನ್ನು ಕಟ್ಟಿಸಿದನೆಂದು ತಿಳಿಯುತ್ತದೆ. 8ನೆಯ ಶತಮಾನದ ಮಧ್ಯದವರೆಗೆ ಸಾಗಿದ ಚಳುಕ್ಯರ ಆಳ್ವಿಕೆಯ ಅನಂತರ 10ನೆಯ ಶತಮಾನದ ಅಂತ್ಯದವರೆಗೆ ರಾಷ್ಟ್ರಕೂಟರೂ ಮುಂದೆ 12ನೆಯ ಶತಮಾನದವರೆಗೆ ಕಲ್ಯಾಣದ ಚಾಳುಕ್ಯರೂ ಮತ್ತು ಸ್ವಲ್ಪ ಕಾಲ ಕಳಚೂರಿಗಳೂ ಈ ಪ್ರದೇಶವನ್ನು ಆಳಿದರು. 13ನೆಯ ಶತಮಾನದಲ್ಲಿ ಇದು ದೇವಗಿರಿ ಯಾದವರ ವಶದಲ್ಲಿತ್ತು. 14ನೆಯ ಶತಮಾನದ ಆದಿಭಾಗದಲ್ಲಿ ದೇವಗಿರಿಯ ಪತನದೊಡನೆ ತುಗಲಕರ ಆಳ್ವಿಕೆಗೆ ಒಳಪಟ್ಟಿದ್ದು, 1347ರಲ್ಲಿ ಬಹಮನೀ ರಾಜ್ಯ ಸ್ಥಾಪನೆಯಾದಾಗ ಈ ಪ್ರದೇಶ ಆ ರಾಜ್ಯದ ಗುಲ್ಬರ್ಗ ಪ್ರಾಂತ್ಯದ ಭಾಗವಾಗಿತ್ತು. 1478ರಲ್ಲಿ ಬಿಜಾಪುರ ಪ್ರಾಂತ್ಯ ಹೊಸತಾಗಿ ನಿರ್ಮಿತವಾಗಿ ಅದನ್ನು ಬಹಮನೀ ಅರಸರ ಮಂತ್ರಿ ಮಹ್ಮೂದ್ ಗಾವಾನನಿಗೆ ವಹಿಸಿಕೊಡಲಾಯಿತು. 1481ರಲ್ಲಿ ಯೂಸುಫ್ ಆದಿಲ್ ಖಾನ್ ಈ ಪ್ರಾಂತ್ಯದ ಅಧಿಕಾರಿಯಾಗಿ ಬಂದ. 15ನೆಯ ಶತಮಾನದ ಕೊನೆಗೆ ಬಹಮನೀ ರಾಜ್ಯ ದುರ್ಬಲವಾ ದಾಗ ಇವನು ಬಿಜಾಪುರ ಪ್ರಾಂತ್ಯವನ್ನು ಸ್ವತಂತ್ರ ರಾಜ್ಯವೆಂದು ಸಾರಿದ. 1686ರಲ್ಲಿ ಔರಂಗಜೇಬ್ ಬಿಜಾಪುರವನ್ನು ಗೆದ್ದುಕೊಂಡ. ಬಳಿಕ 1723ರ ವರೆಗೆ ಇದು ಮುಗಲರ ಆಧಿಪತ್ಯಕ್ಕೊಳಗಾಗಿತ್ತು. ಅನಂತರ ಅದು ಹೈದರಾಬಾದ್ ನಿಜಾಮರ ವಶಕ್ಕೆ ಬಂತು. 1760ರಲ್ಲಿ ಮರಾಠರು ಅದನ್ನು ಪಡೆದುಕೊಂಡರು. 1778-87ರಲ್ಲಿ ಜಿಲ್ಲೆಯ ದಕ್ಷಿಣ ಭಾಗ ಹೈದರ್ ಮತ್ತು ಟಿಪ್ಪುಸುಲ್ತಾನರ ವಶದಲ್ಲಿತ್ತು. 1817ರಲ್ಲಿ ಇಂಗ್ಲಿಷರಿಗೂ ಪೇಶ್ವೆಗಳಿಗೂ ಯುದ್ಧ ನಡೆದು 1818 ಮೇ ತಿಂಗಳಲ್ಲಿ ಬಿಜಾಪುರ ಜಿಲ್ಲೆಯ ಭಾಗವೆಲ್ಲ ಬ್ರಿಟಿಷರ ವಶವಾಗಿ, ಮುಂಬಯಿ ಪ್ರಾಂತ್ಯದ ಭಾಗವಾಯಿತು. 1864ರವರೆಗೆ ಈ ಪ್ರದೇಶದ ವಿವಿಧ ಭಾಗಗಳು ಧಾರವಾಡ, ಸೊಲ್ಲಾಪುರ, ಸಾತಾರಾ ಅಥವಾ ಬೆಳಗಾಂವಿ ಕಲೆಕ್ಟೊರೇಟುಗಳ ಕಕ್ಷೆಗೆ ಒಳಪಟ್ಟಿದ್ದುವು, ವಿವಿಧ ತಾಲ್ಲೂಕುಗಳ ವಿಸ್ತಾರದಲ್ಲೂ ಆಡಳಿತ ಹತೋಟಿಯಲ್ಲೂ ಬದಲಾವಣೆಗಳಾಗುತ್ತಿದ್ದವು. 1864ರಲ್ಲಿ ಆಗ್ಗೆ ಸೊಲ್ಲಾಪುರ ಕಲೆಕ್ಟೊರೇಟಿಗೆ ಸೇರಿದ್ದ ಇಂಡಿ, ಹಿಪ್ಪರಗಿ (ಸಿಂದಗಿ), ಬಿಜಾಪುರ, ಮನಗೋಳಿ (ಬಾಗೇವಾಡಿ) ಮತ್ತು ಮುದ್ದೇಬಿಹಾಳ ತಾಲ್ಲೂಕುಗಳನ್ನೂ ಧಾರವಾಡ ಕಲೆಕ್ಟೊರೇಟಿಗೆ ಸೇರಿದ್ದ ಬಾದಾಮಿ, ಹುನಗುಂದ ಮತ್ತು ಬಾಗಲಕೋಟೆ ತಾಲ್ಲೂಕುಗಳನ್ನು ಒಂದುಗೂಡಿಸಿ ಹೊಸ ಜಿಲ್ಲೆಯನ್ನು ರಚಿಸಲಾಯಿತು. ಆ ಸಮಯಕ್ಕೆ ಕಲಾದಗಿ ಅದರ ಮುಖ್ಯ ಸ್ಥಳವಾಗಿತ್ತು. 1864ರಿಂದ ಈಚೆಗೆ 1948ರವರೆಗೆ ಜಿಲ್ಲೆಯ ಪ್ರಾದೇಶಿಕ ವ್ಯಾಪ್ತಿಯಲ್ಲಿ ಹೆಚ್ಚು ಬದಲಾವಣೆಗಳೇನೂ ಆಗಲಿಲ್ಲ. 1885ರಲ್ಲಿ ಜಿಲ್ಲಾ ಆಡಳಿತ ಕೇಂದ್ರವನ್ನು ಕಲಾದಗಿಯಿಂದ ಬಿಜಾಪುರಕ್ಕೆ ವರ್ಗಾಯಿಸಲಾಯಿತು. 1948ರಲ್ಲಿ, ಈ ಜಿಲ್ಲೆಯ ಪ್ರದೇಶದಲ್ಲಿದ್ದೂ ಅದುವರೆಗೆ ಔಂಧ್, ಕುರಂದವಾಡ, ಜಮಖಂಡಿ, ಮುಧೋಳ ಮತ್ತು ಸಾಂಗಲಿ ಸಂಸ್ಥಾನಗಳ ಆಳ್ವಿಕೆಗೆ ಸೇರಿದ್ದ ಪ್ರದೇಶಗಳನ್ನು ಬಿಜಾಪುರ ಜಿಲ್ಲೆಗೇ ಸೇರಿಸಲಾಯಿತು. 1947ರಿಂದ ಮುಂಬಯಿ ರಾಜ್ಯದ ಒಂದು ಜಿಲ್ಲೆಯಾಗಿದ್ದು 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದಾಗ

ಕರ್ನಾಟಕ ರಾಜ್ಯಕ್ಕೆ ಸೇರಿತು. ಬಿಜಾಪುರ ಜಿಲ್ಲೆ ಮೊದಲು 11 ತಾಲ್ಲೂಕುಗಳನ್ನು ಒಳಗೊಂಡಿತ್ತು. ಸ್ವಾತಂತ್ರ್ಯೋತ್ಸವ ಸುವರ್ಣ ಮಹೋತ್ಸವ ದಿನವಾದ 1997 ಆಗಸ್ಟ್ 15 ರಂದು ಈ ಜಿಲ್ಲೆಗೆ ಸೇರಿದ್ದ ಬಾಗಲಕೋಟೆ, ಬಾದಾಮಿ, ಬೀಳಗಿ, ಹುನಗುಂದ, ಜಮಖಂಡಿ ಮತ್ತು ಮುಧೋಳ ಈ ಆರು ತಾಲ್ಲೂಕುಗಳನ್ನು ಬೇರ್ಪಡಿಸಿ ಬಾಗಲ ಕೋಟೆ ಜಿಲ್ಲೆಯನ್ನು ರಚಿಸಲಾಯಿತು.



ಗೋಳಗುಮ್ಮಟ, ಬಿಜಾಪುರ

ಬಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಕೊಡುಗೆ ಗಮನಾರ್ಹವಾದುದು. ದಕ್ಷಿಣ ಭಾರತದ ಬಹುಭಾಗದ ಮೇಲೆ ಪ್ರಥಮ ಬಾರಿಗೆ ಒಡೆತನ ನಡೆಸಿದ ಕನ್ನಡ ನಾಡಿನ ರಾಜವಂಶವಾದ ಚಳುಕ್ಯರು ಆಳಿದ್ದು ಈ ಜಿಲ್ಲೆಯಿಂದ. ಅವರು ಕನ್ನಡ ಭಾಷೆಯ ಕೃಷಿಗೆ ಉತ್ತೇಜನವಿತ್ತರಲ್ಲದೆ, ಕನ್ನಡನಾಡಿನ ಸಂಸ್ಕೃತಿ ಮತ್ತು ಕೀರ್ತಿ ದೇಶವಿದೇಶಗಳಿಗೆ ಹರಡಲು ಕಾರಣರಾದರು. ಬಿಜಾಪುರದ ಆದಿಲ್‌ಶಾಹೀ ಅರಸರ ರಾಜ್ಯ ಸಮಕಾಲೀನ ಭಾರತದಲ್ಲಿ, ಅತಿ ವೈಭವಯುತವಾಗಿದ್ದು ಸಾಹಿತ್ಯ, ಸಂಗೀತ ಮತ್ತು ವಾಸ್ತುಕಲೆಗಳಿಗೆ ಪೋಷಕವಾಗಿತ್ತು. 12ನೆಯ ಶತಮಾನದಲ್ಲಿ ನಡೆದ ಸಾಮಾಜಿಕ ಕ್ರಾಂತಿಯ ನೇತಾರ ಬಸವಣ್ಣನವರು **(ನೋಡಿ)** ಈ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಜನಿಸಿದರು. ಗದಾಯುದ್ಧ ಮತ್ತು ಅಜಿತಪುರಾಣವನ್ನು ಬರೆದ ರನ್ನ, ಮಲ್ಲಿನಾಥಪುರಾಣ ಮತ್ತು ರಾಮಚಂದ್ರಚರಿತಪುರಾಣ- ಈ ಗ್ರಂಥಗಳನ್ನು ಬರೆದ ನಾಗಚಂದ್ರ, ತೊರವೆಯ ರಾಮಾಯಣವನ್ನು ಬರೆದ ಕುಮಾರ ವಾಲ್ಮೀಕಿ, ಷಡಕ್ಷರ ಕಂದವನ್ನೂ ವಚನಗಳನ್ನೂ ಬರೆದಿರುವ ಕೊಂಡಗುಳಿ ಕೇಶಿರಾಜ, ಮಡಿವಾಳ ಮಾಚಯ್ಯ, ಕೃಷ್ಣದ್ವೈಪಾಯನಾಚಾರ್ಯ, ಚಾಮರಸ, ರುಕ್ಮಾಂಗದ ಪಂಡಿತ, ಮಹಿಪತಿದಾಸ ಮೊದಲಾದ ಉದ್ದಾಮ ವ್ಯಕ್ತಿಗಳು ಇದೇ ಜಿಲ್ಲೆಯವರು. ಇತ್ತೀಚಿನ ಪ್ರಸಿದ್ಧ ವ್ಯಕ್ತಿಗಳಾದ ಕೆರೂರ ವಾಸುದೇವಾಚಾರ್ಯ, ಹರ್ಡೇಕರ ಮಂಜಪ್ಪ, ರಾಮಚಂದ್ರ ದತ್ತಾತ್ರೇಯ ರಾನಡೆ, ಫ.ಗು. ಹಳಕಟ್ಟಿ, ಬಿ.ಡಿ. ಜತ್ತಿ-ಇವರು ಕೂಡ ಬಿಜಾಪುರ ಜಿಲ್ಲೆಯವರೇ. ಜಿಲ್ಲೆಯಲ್ಲಿದ್ದ ಐಹೊಳೆ, ಪಟ್ಟದಕಲ್ಲು, ಬಾದಾಮಿ, ಗುಲ್ಬರ್ಗ, ಮಹಾಕೂಟ, ಬಿಜಾಪುರ ಮೊದಲಾದ ಸ್ಥಳಗಳಲ್ಲೂ ಇರುವ ವಾಸ್ತು ಮತ್ತು ಶಿಲ್ಪಕಲೆಯ ಕೃತಿಗಳು ಲೋಕವಿಖ್ಯಾತವಾಗಿವೆ. ಬಸವನ ಬಾಗೇವಾಡಿ, ಕೂಡಲ ಸಂಗಮ, ಯಲಗೂರು, ಚಿಮ್ಮಲಗಿ, ಶೂರ್ಪಾಲಿ, ಶಿವಯೋಗಮಂದಿರ, ಬನಶಂಕರಿ – ಇವು ಹಳೆಯ ಜಿಲ್ಲೆಯ ಪ್ರಮುಖ ಯಾತ್ರಾಸ್ಥಳಗಳಲ್ಲಿ ಕೆಲವು.

**ತಾಲ್ಲೂಕು :**ಬಿಜಾಪುರ ತಾಲ್ಲೂಕನ್ನು ಪೂರ್ವದಲ್ಲಿ ಸಿಂದಗಿ, ಬಸವನ ಬಾಗೇವಾಡಿ ತಾಲ್ಲೂಕುಗಳೂ ದಕ್ಷಿಣ ಮತ್ತು ಪಶ್ಚಿಮದಲ್ಲಿ ಬಾಗಲ ಕೋಟೆ ಜಿಲ್ಲೆಯೂ ಉತ್ತರ ಮತ್ತು ವಾಯವ್ಯದಲ್ಲಿ ಮಹಾರಾಷ್ಟ್ರ ರಾಜ್ಯವೂ ಈಶಾನ್ಯದಲ್ಲಿ ಇಂಡಿ ತಾಲ್ಲೂಕೂ ಸುತ್ತುವರೆದಿವೆ. ನಾಗಠಾಣ, ಬಿಜಾಪುರ, ತಿಕೋಟ, ಬಬಲೇಶ್ವರ ಮತ್ತು ಮಮದಾಪುರ-ಇವು ತಾಲ್ಲೂಕಿನ ಹೋಬಳಿಗಳು. ಒಟ್ಟು 108 ಗ್ರಾಮಗಳು ಮತ್ತು ಒಂದು ನಗರ ಇದೆ. ವಿಸ್ತೀರ್ಣ 2659 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 14,10,829.

ಕೃಷ್ಣಾನದಿ ಈ ತಾಲ್ಲೂಕಿನ ದಕ್ಷಿಣದ ಗಡಿಯಲ್ಲಿ ಬಾಗಲಕೋಟೆ ಜಿಲ್ಲೆಯನ್ನು ವಿಂಗಡಿಸಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಡೋಣಿನದಿ ತಾಲ್ಲೂಕಿನ ಮಧ್ಯೆ ಪೂರ್ವಾಭಿಮುಖವಾಗಿ ಹರಿದು ಮುಂದೆ ಬಸವನ ಬಾಗೇವಾಡಿ ತಾಲ್ಲೂಕನ್ನು ಪ್ರವೇಶಿಸುವುದು. ಈ ನದಿಗಳ ನೀರನ್ನು ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗಿದೆ. ಕೆಲವು ಕೆರೆ ಮತ್ತು ಬಾವಿಗಳ ನೀರನ್ನೂ ವ್ಯವಸಾಯಕ್ಕೆ ಬಳಸುವುದುಂಟು. ಬೇಸಗೆ ಕಾಲದಲ್ಲಿ ಹೆಚ್ಚು ಸೆಕೆ ಎನಿಸಿದರೂ ಉಳಿದ ಕಾಲದಲ್ಲಿ ಹವಾ ಹಿತಕರವೆನ್ನಬಹುದು. ಈ ತಾಲ್ಲೂಕಿನ ಮುಖ್ಯ ಬೆಳೆಗಳು ಜೋಳ, ಸಜ್ಜೆ, ಗೋಧಿ, ಬತ್ತ. ಇವುಗಳ ಜೊತೆಗೆ ಹೆಚ್ಚಾಗಿ ಹತ್ತಿ, ನೆಲಗಡಲೆ, ಕಬ್ಬು, ದ್ವಿದಳ ಧಾನ್ಯಗಳನ್ನೂ ಬೆಳೆಯುತ್ತಾರೆ.

ಮೊದಲಿನಿಂದಲೂ ಈ ತಾಲ್ಲೂಕು ಗೃಹಕೈಗಾರಿಕೆಗಳಿಗೆ ಪ್ರಸಿದ್ಧ. ದೊಡ್ಡ ಕೈಗಾರಿಕೆಗಳು ಅಭಿವೃದ್ಧಿಯಾಗಿಲ್ಲ. ಸೇಂಗಾ ಬೀಜಗಳನ್ನು ಸುಲಿಯುವ ಕೆಲವು ಕಾರ್ಖಾನೆಗಳೂ ಹತ್ತಿ ನೂಲುವ ಮತ್ತು ಬೀಜವನ್ನು ಬೇರ್ಪಡಿಸುವ ಕಾರ್ಖಾನೆಗಳೂ ಇವೆ. ಉಣ್ಣೆ ಮತ್ತು ಹತ್ತಿ ನೇಯ್ಗೆ ಇದ್ದು ಕಂಬಳಿ ಮುಂತಾದವುಗಳನ್ನು ತಯಾರಿಸುವರು. ಚರ್ಮ ಮತ್ತು ನಾರಿನ ವಸ್ತುಗಳ ಉತ್ಪಾದನೆಯುಂಟು. ಮರಗೆಲಸ, ಗಾಜಿನ ಬಳೆಗಳನ್ನು ತಯಾರಿಸುವುದು, ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳನ್ನು ಮಾಡುವುದು, ಬೀಡಿ ತಯಾರಿಕೆ ಇತ್ಯಾದಿ ಗೃಹಕೈಗಾರಿಕೆಗಳೂ ಉಂಟು. ವಾಣಿಜ್ಯೋದ್ಯಮಕ್ಕೆ ಸಹಕಾರಿಯಾಗಿ ಕೆಲವು ಬ್ಯಾಂಕುಗಳೂ ಸಹಕಾರ ಸಂಘಗಳೂ ತಾಲ್ಲೂಕಿನಲ್ಲಿವೆ.

ಈ ತಾಲ್ಲೂಕಿನ ಪೂರ್ವದಲ್ಲಿ ಹುಬ್ಬಳ್ಳಿ-ಸೊಲ್ಲಾಪುರ ರೈಲು ಮಾರ್ಗ ದಕ್ಷಿಣೋತ್ತರವಾಗಿ ಹಾದುಹೋಗಿದೆ. ಬಿಜಾಪುರದಿಂದ ಸಿಂದಗಿ, ಗುಲ್ಬರ್ಗ, ಹುಬ್ಬಳ್ಳಿ, ಬಸವನ ಬಾಗೇವಾಡಿ, ಬಬಲೇಶ್ವರ, ಅಥಣಿ, ಜತ್-ಈ ಸ್ಥಳಗಳಿಗೆ ಹೋಗುವ ರಸ್ತೆಗಳು ತಾಲ್ಲೂಕಿನ ಮುಖ್ಯ ಹಾದಿಗಳು.

ಈ ತಾಲ್ಲೂಕಿನಲ್ಲಿ ಚಾರಿತ್ರಿಕ ಮತ್ತು ಧಾರ್ಮಿಕ ಪ್ರಾಮುಖ್ಯತೆಯುಳ್ಳ ಅನೇಕ ಸ್ಥಳಗಳಿವೆ. ಅವುಗಳಲ್ಲಿ ಬಿಜಾಪುರದ ಪೂರ್ವಕ್ಕೆ ಸು. 16ಕಿಮೀ ದೂರದಲ್ಲಿರುವ ಕುಮಟಗಿ ಆದಿಲ್‌ಶಾಹಿಗಳ ಕಾಲದಲ್ಲಿ ರಾಜರ ಮತ್ತು ಶ್ರೀಮಂತರ ವಿಶ್ರಾಂತಿ ಮತ್ತು ಕ್ರೀಡಾವಿನೋದ ಸ್ಥಳವಾಗಿತ್ತು. ಇಲ್ಲಿ ಆ ಕಾಲದ ಒಂದು ದೊಡ್ಡ ಕೆರೆ, ಅನೇಕ ಕೊಳಗಳು, ಕಾರಂಜಿಗಳು, ಮಂಟಪಗಳು ಮತ್ತು ಬಂಗಲೆಗಳ ಅವಶೇಷಗಳು ಇವೆ. ಬಿಜಾಪುರದ ನೈಋತ್ಯಕ್ಕೆ 24 ಕಿಮೀ ದೂರದಲ್ಲಿರುವ ಬಬಲೇಶ್ವರದ ಶಾಂತವೀರಮಠ ಪ್ರಸಿದ್ಧವಾದುದು. ಇಲ್ಲಿ 1780ರಲ್ಲಿ ರಚಿತವಾದ ಸಿದ್ಧೇಶ್ವರ ದೇವಾಲಯ ಸಹ ಇದೆ. ಕಾಖಂಡಕಿ **(ನೋಡಿ)** ಮತ್ತು ಮಮದಾಪುರ **(ನೋಡಿ)** ಐತಿಹಾಸಿಕ ಪ್ರಾಮುಖ್ಯತೆಯುಳ್ಳ ಸ್ಥಳಗಳು. ಉಪ್ಪಲದಿನ್ನಿಯಲ್ಲಿ ಸಂಗಮನಾಥ ದೇವಾಲಯವಿದೆ. ಕೃಷ್ಣಾನದಿಯ ಎಡದಂಡೆಯ ಮೇಲೆ ಇರುವ ಬಬಲಾದ ಗ್ರಾಮದಲ್ಲಿ ಪ್ರಾಚೀನ ಚಂದ್ರಗಿರಿಮಠ ಇದೆ. ಅದೇ ನದಿಯ ದಂಡೆಯಲ್ಲಿರುವ ಜೈನಾಪುರ ಒಂದು ತೀರ್ಥಕ್ಷೇತ್ರ. ಬಿಜಾಪುರದ

ಪಶ್ಚಿಮದಲ್ಲಿ 22 ಕಿಮೀ ದೂರದಲ್ಲಿರುವ ತಿಕೋಟದಲ್ಲಿ ಇಬ್ರಾಹಿಂ ಆದಿಲ್‌ಷಾನ ಕಾಲದಲ್ಲಿ ಪ್ರಧಾನ ಮಂತ್ರಿಯಾಗಿದ್ದ ತಾಜ್‌ಖಾನ್ ಎಂಬುವನು ಕಟ್ಟಿಸಿದ್ದ ವಾಡೆ ಮತ್ತು ಮಸೀದಿ ಇವೆ. ಅಲ್ಲದೆ ಹಾಜಿ ಸಾಹೇಬ್ ಮತ್ತು ಭಡ್ಕಲ್ ಸಾಹೇಬರ ದರ್ಗಾಗಳು ಇವೆ. ಬಿಜಾಪುರಕ್ಕೆ 8 ಕಿಮೀ ದೂರದಲ್ಲಿರುವ ತೊರವಿಯಲ್ಲಿ ಎರಡನೆಯ ಇಬ್ರಾಹಿಂ ಆದಿಲ್ ಷಾನ ಕಾಲದಲ್ಲಿ ಕಟ್ಟಿದ ಅನೇಕ ಅರಮನೆಗಳ ಅವಶೇಷಗಳೂ ನರಸಿಂಹ ದೇವಾಲಯ, ನರಸಿಂಹತೀರ್ಥ, ಮಸೀದಿ ಮುಂತಾದವೂ ಇವೆ.

**ಪಟ್ಟಣ:** ಬಿಜಾಪುರ ಜಿಲ್ಲೆ ಮತ್ತು ತಾಲ್ಲೂಕುಗಳ ಆಡಳಿತ ಕೇಂದ್ರ ಹಾಗೂ ಮುಖ್ಯಪಟ್ಟಣವಾದ ಬಿಜಾಪುರ ಸೊಲ್ಲಾಪುರದ ದಕ್ಷಿಣಕ್ಕೆ 96 ಕಿಮೀ ದೂರದಲ್ಲೂ ಬೆಂಗಳೂರಿನಿಂದ ವಾಯವ್ಯಕ್ಕೆ 579 ಕಿಮೀ ದೂರದಲ್ಲೂ ಇದೆ. ಪಟ್ಟಣದ ವಿಸ್ತೀರ್ಣ 14,50 ಚ.ಕಿಮೀ. ಜನಸಂಖ್ಯೆ 3,96,089.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳು ಇಲ್ಲಿವೆ. ಈ ಊರು ಜಿಲ್ಲೆಯ ಮುಖ್ಯ ವ್ಯಾಪಾರ ಸ್ಥಳ. ಜೊತೆಗೆ ಇಲ್ಲಿ ಎಲ್ಲಾ ಬಗೆಯ ಶಿಕ್ಷಣಕ್ಕೆ ವಾಣಿಜ್ಯ ವಹಿವಾಟುಗಳಿಗೆ ಪೂರಕವಾಗಿ ಬ್ಯಾಂಕುಗಳೂ ಪ್ರಜಾರೋಗ್ಯಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಗಳೂ ವಿವಿಧ ಸಂಪರ್ಕಸಾಧನ ಗಳೂ ಇವೆ. ಹತ್ತಿ ಮತ್ತು ಸೇಂಗಾ ವ್ಯಾಪಾರ ಇಲ್ಲಿಯ ವಿಶೇಷ. ಹುಬ್ಬಳ್ಳಿ–ಸೊಲ್ಲಾಪುರ ರೈಲುಮಾರ್ಗದಲ್ಲಿ ಬಿಜಾಪುರ ಒಂದು ಮುಖ್ಯ ನಿಲ್ದಾಣ.

ಬಿಜಾಪುರ ಆದಿಲ್‌ಶಾಹೀ ಅರಸರ ರಾಜಧಾನಿಯಾಗಿ ವಿಶ್ವವಿಖ್ಯಾತವಾಗಿದೆ. ಜಿಲ್ಲಾಮಧ್ಯದ ಪ್ರಸ್ಥಭೂಮಿಯಲ್ಲಿ ಡೋಣಿನದಿಯ ಜಲಾನಯನ ಭೂಮಿಯ ಉತ್ತರಕ್ಕೆ ಸಮುದ್ರಮಟ್ಟದಿಂದ 594 ಮೀ ಎತ್ತರವಿರುವ ಕಿರಿಯಗಲದ ಒಂದು ಮರಡಿಯ ಮೇಲೆ, ಈ ಪಟ್ಟಣವನ್ನು ಕಟ್ಟಲಾಗಿದೆ. ಇಲ್ಲಿಂದ ಈ ಸುತ್ತಣ ಪ್ರದೇಶಗಳನ್ನು ಬಹು ದೂರದವರೆಗೆ ಸುಲಭವಾಗಿ ಪರಿಶೀಲನೆ ಮಾಡಲು ಸಾಧ್ಯವಾಗಿರುವುದು ಹಾಗೂ ಭೂಮಿಯ ಕೆಳತಳದಲ್ಲಿ ಸಮೃದ್ಧವಾಗಿ ನೀರಿರುವುದು ಆದಿಲ್‌ಶಾಹೀ ಅರಸರು ಬಿಜಾಪುರವನ್ನು ತಮ್ಮ ರಾಜಧಾನಿಯನ್ನಾಗಿ ಆರಿಸಲು ಕಾರಣಗಳಾಗಿರಬೇಕು. ಬಿಜಾಪುರದ ಮೂಲ ಹೆಸರು ವಿಜಯಪುರ. ಈ ಊರಿನ ಸಮೀಪದಲ್ಲಿ ದೊರೆತಿರುವ ಶಾಸನಗಳು 1036ರ ಸುಮಾರಿಗೆ ಈ ಹೆಸರು ಬಳಕೆಯಲ್ಲಿತ್ತೆಂಬುದನ್ನು ತೋರಿಸುತ್ತವೆ. ಸು. 1100ರಲ್ಲಿ ನಾಗಚಂದ್ರ ಬರೆದ ಮಲ್ಲಿನಾಥಪುರಾಣದಲ್ಲಿ ವಿಜಯಪುರದ ಹೆಸರು ಬರುತ್ತದೆ. ಇಲ್ಲಿ ದೊರಕಿರುವ ಶಿಲಾಸ್ತಂಭವೊಂದು ಸು.7ನೆಯ ಶತಮಾನದ್ದು. ಈ ಶಿಲಾಸ್ತಂಭಕ್ಕೂ ವಿಜಯಪುರವೆಂಬ ಹೆಸರಿಗೂ ಸಂಬಂಧ ಕಲ್ಪಿಸುವುದಾದರೆ ಈ ಊರು 7ನೆಯ ಶತಮಾನಕ್ಕೂ ಹಿಂದಿನದು ಎಂದು ಊಹಿಸಬಹುದು. ಬಹಮನೀ ರಾಜ್ಯ ಸ್ಥಾಪನೆಯಾದಾಗ (1347) ಬಿಜಾಪುರ ಅದರ ಒಂದು ಮುಖ್ಯ ಸ್ಥಳವಾಗಿದ್ದು ಗುಲ್ಬರ್ಗ ಪ್ರಾಂತ್ಯಕ್ಕೆ ಸೇರಿತ್ತು. 1478ರಲ್ಲಿ ಈ ಸುತ್ತಣ ಪ್ರದೇಶ ಸೇರಿದ ಒಂದು ಪ್ರಾಂತ್ಯ ರಚನೆಯಾಗಿ ಬಿಜಾಪುರವೇ ಅದರ ಕೇಂದ್ರವಾಯಿತು. ಇಲ್ಲಿನ ಪ್ರಾಂತ್ಯಾಧಿಕಾರಿ ಯೂಸುಫ್ ಆದಿಲ್ ಖಾನ್ ಸ್ವತಂತ್ರನಾಗಿ ಆದಿಲ್‌ಶಾಹೀ ರಾಜ್ಯ ಸ್ಥಾಪನೆಯಾದಾಗ (1489) ಇದೇ ಅದರ ರಾಜಧಾನಿಯಾಯಿತು. 1686ರಲ್ಲಿ ಔರಂಗಜೇಬ್ ಈ ಪಟ್ಟಣವನ್ನು ವಶಪಡಿಸಿಕೊಂಡ ಅನಂತರ ಇದರ ಪ್ರಾಮುಖ್ಯತೆ ಇಳಿಮುಖವಾಗಲಾರಂಭಿಸಿತು. ಮುಂದೆ ಮುಗಲರು, ಹೈದರಾಬಾದಿನ ನಿಜಾಮರು, ಪೇಶ್ವೆಗಳು–ಇವರಲ್ಲಿ ಕೈ ಬದಲಾಗುತ್ತಿದ್ದ ಪಟ್ಟಣ 1818ರಲ್ಲಿ ಬ್ರಿಟಿಷರ ವಶವಾಗಿ ಮುಂಬಯಿ ಪ್ರಾಂತ್ಯಕ್ಕೆ ಸೇರಿತು. *

ಬಿಜಾಪುರ ಇಂದು ಭಾರತದ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲೊಂದು. ಇಸ್ಲಾಮೀ ಅರಸರ ಕಾಲದಲ್ಲಿ ಕಟ್ಟಿದ ಇಲ್ಲಿನ ಅನೇಕ ಕಟ್ಟಡಗಳು, ಅವುಗಳ ವಾಸ್ತುರಚನಾಕೌಶಲ ಹಾಗೂ ಸೌಂದರ್ಯದೃಷ್ಟಿಯಿಂದ ಅನುಪಮವಾಗಿದ್ದು ಪ್ರಪಂಚದ ಅನೇಕ ಕಡೆಗಳಿಂದ ಕುತೂಹಲಿಗಳನ್ನು ಆಕರ್ಷಿಸುತ್ತದೆ. ಈ ಕಾರಣದಿಂದ ಇಲ್ಲಿ ಹಲವು ಪ್ರವಾಸಿ ಮಂದಿರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆಗಳ ಶಾಖೆಗಳು ಇಲ್ಲಿ ಕೆಲಸ ಮಾಡುತ್ತಿವೆ. ಬಿಜಾಪುರ ಮತ್ತು ಪರಿಸರದಲ್ಲಿ 300ಕ್ಕೂ ಹೆಚ್ಚು ಪ್ರಾಚೀನ ಕಟ್ಟಡಗಳೂ ಪ್ರೇಕ್ಷಣೀಯ ಸ್ಥಳಗಳೂ ಇವೆ. ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

**ಕೋಟೆ:** ಬಿಜಾಪುರದ ಕೋಟೆ ಬಹುಶಃ ಭಾರತದ ಬೃಹತ್ ಕೋಟೆಗಳಲ್ಲೊಂದು. ವಿನ್ಯಾಸದಲ್ಲಿ ಸುಮಾರು ದೀರ್ಘವೃತ್ತಾಕಾರವಾಗಿರುವ ಈ ಕೋಟೆಯ ಹೊರಸುತ್ತಿನ ಗೋಡೆಯ ಸುತ್ತಳತೆ ಸುಮಾರು $6^1/_4$ ಮೈಲಿಗಳು. ಪಶ್ಚಿಮ ಪೂರ್ವವಾಗಿ ಕೋಟೆಯ ಒಳಭಾಗದ ಉದ್ದ ಸುಮಾರು $2^3/_4$ ಮೈಲಿಗಳು (ಈಗಿನ ಬಿಜಾಪುರ ಪಟ್ಟಣದ

ಬಾರಾಕಮಾನು, ಬಿಜಾಪುರ

ಬಹುಭಾಗ ಈ ಕೋಟೆಯ ಒಳಗೇ ಇದೆ). ಕೋಟೆಯ ಗೋಡೆ ದೊಡ್ಡ ಕಲ್ಲುಗಳಿಂದ ರಚಿತವಾಗಿದ್ದು, ಕೆಲವೆಡೆ 50 ಅಡಿಗಳಷ್ಟು ದಪ್ಪವಾಗಿದೆ. ಎತ್ತರ ಸುಮಾರು 18ರಿಂದ 20 ಅಡಿಗಳು. ಈ ಗೋಡೆಗೆ ಆಸರವಾಗಿ ವಿವಿಧ ಆಕಾರದ 96 ಒತ್ತು ಅಟ್ಟಾಲಕಗಳಿವೆ. ಗೋಡೆಗಳ ಮೇಲುಭಾಗ ವಿಶಾಲವಾಗಿದ್ದು, ಅಂಚಿನಲ್ಲಿ ಚಿಕ್ಕ ಕೈಪಿಡಿ ಗೋಡೆ ಮತ್ತು ಎತ್ತರದ ತೆನೆಗಳ ಸಾಲು ಉದ್ದಕ್ಕೂ ಹಬ್ಬಿವೆ. ಕೋಟೆ ಗೋಡೆಯ ಸುತ್ತಲೂ ಸುಮಾರು 40ರಿಂದ 50 ಅಡಿ ಅಗಲದ ಕಂದಕವಿದೆ. ಅಲಿ ಆದಿಲ್ ಷಾ ತಾಳೀಕೋಟೆಯ ಯುದ್ಧದಲ್ಲಿ ವಿಜಯಿಯಾಗಿ ಹಿಂದಿರುಗಿದ ಅನಂತರ ಕೋಟೆಯ ಗೋಡೆಯನ್ನು ಈಗಿರುವಂತೆ ನಿರ್ಮಿಸಲು ಉದ್ದೇಶಿಸಿ ಪ್ರತಿ ಸರದಾರನಿಗೂ ಬೇರೆ ಬೇರೆ ಭಾಗಗಳನ್ನು ಕಟ್ಟಲು ಆಜ್ಞೆ ಮಾಡಿದ್ದನೆಂದು ಹೇಳಲಾಗಿದೆ. ಬಹುಶಃ ಈ ಕಾರಣದಿಂದ ಕೋಟೆಯ ವಿವಿಧ ಭಾಗಗಳ ಕಟ್ಟಾಣಿಕೆಯ ರೀತಿಯಲ್ಲಿ ವೈವಿಧ್ಯವನ್ನು ಕಾಣಬಹುದು. ಕೋಟೆಯ ಒಳಕ್ಕೆ ಹೋಗಲು ಪಶ್ಚಿಮದಲ್ಲಿ ಮೆಕ್ಕಾ ದರ್ವಾಜಾ, ವಾಯವ್ಯದಲ್ಲಿ ಶಾಹಪುರ ದರ್ವಾಜಾ, ಉತ್ತರದಲ್ಲಿ ಬಹಮನೀ ದರ್ವಾಜಾ, ಪೂರ್ವದಲ್ಲಿ ಅಲಿಪುರ ದರ್ವಾಜಾ, ದಕ್ಷಿಣದಲ್ಲಿ ಮನಗೋಳಿ ದರ್ವಾಜಾ–ಹೀಗೆ ಐದು ಮುಖ್ಯ ದ್ವಾರಗಳಿದ್ದುವು. ದ್ವಾರದ ಎರಡೂ ಪಕ್ಕಗಳಲ್ಲಿ ವೃತ್ತಾಕಾರದ ಗೋಪುರಗಳು, ಮೇಲೆ ತೆನೆಗಳಿಂದ ಕೂಡಿದ ಕೈಪಿಡಿ ಮತ್ತು ಅದರ ಹಿಂದೆ ಅಗಲದ ಅಟ್ಟ ಇರುವುದು ಇವುಗಳ ಸಾಮಾನ್ಯ ವಿನ್ಯಾಸ. ದ್ವಾರಗಳಿಗೆ ದಪ್ಪ ಮರದ ತೊಲೆಗಳನ್ನು

ಕಬ್ಬಿಣದ ಹಿಡಿಪಟ್ಟಿಗಳಿಂದ ಬಂಧಿಸಿ ಮಾಡಿದ ಬಾಗಿಲುಗಳು ಇದ್ದುವು. ಈ ಬಾಗಿಲುಗಳ ಮುಂಭಾಗದಲ್ಲಿ ಸುಮಾರು ಒಂದು ಅಡಿ ಉದ್ದದ ನೂರಾರು ಚೂಪು ಮೊಳೆಗಳು ಹೊರಚಾಚುವಂತೆ ಮಾಡಲಾಗಿರುತ್ತಿತ್ತು. ಈ ದ್ವಾರಗಳೆಲ್ಲ ಬಹು ಭದ್ರವಾದ ರಚನೆಗಳು. ಬಿಜಾಪುರದ ಇತಿಹಾಸದಲ್ಲಿ ಈ ದ್ವಾರಗಳನ್ನು ಒಡೆದು ಒಳನುಗ್ಗುವ ಸಾಹಸವನ್ನು ಯಾವ ಆಕ್ರಮಣಕಾರನೂ ಮಾಡಲಿಲ್ಲವೆನ್ನಲಾಗಿದೆ. ಔರಂಗಜೇಬ್ ಬಿಜಾಪುರವನ್ನು ವಶಪಡಿಸಿಕೊಂಡಾಗ ಸಹ, ಒಳಗಿನ ಭಾಗಗಳನ್ನೆಲ್ಲಾ ಬೇರೆಡೆಯಿಂದ ಆಕ್ರಮಿಸಿದ ಮೇಲೆ, ದಕ್ಷಿಣದ ಮನಗೋಳಿ ದರ್ವಾಜಾವನ್ನು ತೆರೆಯಿಸಿ ಒಳಹೊಕ್ಕನಂತೆ (ಇದರಿಂದ ಈ ದ್ವಾರಕ್ಕೆ ಫತೇ ದರ್ವಾಜಾ ಎಂದು ಅವನು ಹೆಸರಿತ್ತಿದ್ದ). ಬಿಜಾಪುರದ ಕೋಟೆಯ ದ್ವಾರಗಳಲ್ಲೆಲ್ಲಾ ಬಹು ಹಿಂದೆಯೇ ಮುಚ್ಚಲಾಗಿದ್ದ ಮೆಕ್ಕಾ ದರ್ವಾಜಾ ಅತಿ ಭದ್ರವಾದುದು.

**ಗೋಳಗುಮ್ಮಟ:** ರೈಲು ನಿಲ್ದಾಣದಿಂದ ಪಶ್ಚಿಮಕ್ಕೆ ಅನತಿ ದೂರದಲ್ಲಿ, ವಿಶಾಲವಾದ ಆವರಣದಲ್ಲಿ ಇರುವ ಈ ಕಟ್ಟಡ ಮಹಮ್ಮದ್ ಆದಿಲ್ ಷಾ ತನಗಾಗಿ ಕಟ್ಟಿಸಿಕೊಂಡ ಗೋರಿ. ಇದು ಬಿಜಾಪುರದಲ್ಲೇ ಅತ್ಯಂತ ಎತ್ತರದ ಕಟ್ಟಡವಾಗಿದ್ದು ಸುತ್ತಲ ಹಲವು ಮೈಲಿಗಳವರೆಗೆ ಎದ್ದು ಕಾಣುತ್ತದೆ. ಅಗಾಧ ಪ್ರಮಾಣ, ಅದರಲ್ಲೂ ಪ್ರಪಂಚದಲ್ಲೇ ಅತಿ ವಿಸ್ತಾರದ ಹಜಾರವನ್ನು ಕಂಬಗಳ ಆಸರೆಯಿಲ್ಲದೆ ಆಚ್ಛಾದಿಸಿರುವ ಬೃಹತ್ ಗುಮ್ಮಟ, ವಾಸ್ತು ನಿರೂಪಣೆಯಲ್ಲಿ ಕಂಡುಬರುವ ಗಂಡುಶೈಲಿ, ಒಳಗಿನ 'ಪಿಸುಗುಟ್ಟುವ ಗ್ಯಾಲರಿ' – ಈ ಅಂಶಗಳಿಂದ ಈ ಕಟ್ಟಡ ಪ್ರಪಂಚದ ಅದ್ಭುತ ವಾಸ್ತುಕೃತಿಗಳಲ್ಲಿ ಒಂದು ಎಂದು ವಿಖ್ಯಾತವಾಗಿದೆ **(ನೋಡಿ: ಗೋಳಗುಮ್ಮಟ)**. ಈಚೆಗೆ ಈ ಕಟ್ಟಡದ ಸುತ್ತ ಸುಂದರ ಉದ್ಯಾನವನ್ನು ಬೆಳೆಸಲಾಗಿದೆ. ಮುಖ್ಯ ಕಟ್ಟಡದ ಮುಂದೆ ಇರುವ ನಗರಖಾನಾ ಕಟ್ಟಡದಲ್ಲಿ ಒಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ (1912). ಈ ವಸ್ತುಸಂಗ್ರಹಾಲಯದಲ್ಲಿ ಆದಿಲ್‌ಶಾಹೀ ಕಾಲದ ಶಾಸನಗಳು, ಶಿಲ್ಪಗಳು, ವರ್ಣಚಿತ್ರಗಳು, ಹಸ್ತಪ್ರತಿಗಳು, ಸನ್ನದುಗಳು, ಪಾರಸೀ ಮತ್ತು ಅರಬ್ಬೀ ಲಿಪಿಯ ಕಲಾತ್ಮಕ ಬರೆಹಗಳು, ವಸ್ತ್ರಗಳು, ಪಿಂಗಾಣಿ ವಸ್ತುಗಳು, ಮರದ ಕೆತ್ತನೆಗಳು, ನಾಣ್ಯಗಳು, ಆಯುಧೋಪಕರಣಗಳು ಇತ್ಯಾದಿಗಳನ್ನು ಪ್ರದರ್ಶಿಸಲಾಗಿದೆ. ಅಲ್ಲದೆ ಬಿಜಾಪುರ ಮತ್ತು ಸುತ್ತ ಮುತ್ತಲ ಪ್ರದೇಶದಿಂದ ಸಂಗ್ರಹಿಸಿದ ಇಸ್ಲಾಮೀ ಆಳ್ವಿಕೆಯ ಪೂರ್ವಕಾಲದ ಕೆಲವು ಶಾಸನಗಳು ಮತ್ತು ಶಿಲ್ಪಗಳನ್ನು ಸಹ ಇಡಲಾಗಿದೆ.

**ಅರಕಿಲ್ಲಾ :** ಇದು ಪಟ್ಟಣದ ಮಧ್ಯಭಾಗದಲ್ಲಿರುವ ಒಳಕೋಟೆ. ಬಿಜಾಪುರದ ಆಸಕ್ತಿಕರ ಭಾಗಗಳಲ್ಲಿ ಒಂದು. ಕೋಟೆ ಈಗ ಉಳಿದಿರುವಂತೆ ಸುಮಾರು ವೃತ್ತಾಕಾರವಾಗಿದ್ದು ಅನೇಕ ಒತ್ತು ಅಟ್ಟಾಲಕಗಳಿಂದ ಭದ್ರಗೊಳಿಸಿರುವ ಎತ್ತರದ ಗೋಡೆ ಮತ್ತು ಸುತ್ತು ಕಂದಕದಿಂದ ಕೂಡಿದೆ. ಯೂಸುಫ್ ಆದಿಲ್‌ಖಾನ್ ಈ ಕೋಟೆಯನ್ನು ಕಟ್ಟಲು ಆರಂಭಿಸಿದನಂತೆ. ಆದರೆ ಇದು ಪೂರ್ಣಗೊಂಡಿದ್ದು ಒಂದನೆಯ ಇಬ್ರಾಹೀಂ ಆದಿಲ್‌ಷಾನ ಕಾಲದಲ್ಲಿ. ಸುತ್ತಲೂ ಕಂದಕಗಳುಳ್ಳ ಎರಡು ಸುತ್ತಿನ ಕೋಟೆಯನ್ನು ಕಟ್ಟುವುದು ಮೊದಲ ಯೋಜನೆಯಾಗಿದ್ದಂತೆ ತೋರುತ್ತದೆ. ಆದರೆ ಇದು ಪೂರ್ಣಗೊಳ್ಳಲಿಲ್ಲ. ಈಗ ಪೂರ್ವದ ಕಡೆ ಮಾತ್ರ ಮುಖ್ಯ ಗೋಡೆಯಲ್ಲದೆ ಒಂದು ಅಟ್ಟಾಲಕದಿಂದ ಇನ್ನೊಂದರವರೆಗೆ ಹಬ್ಬುವ ತೆಳು ಗೋಡೆಯನ್ನೂ ನಿರ್ಮಿಸಲಾಗಿದೆ. ಹಿಂದೆ ಈ ಒಳಕೋಟೆಗೆ ಐದು ದ್ವಾರಗಳಿದ್ದುವು. ಮೂರು ದ್ವಾರಗಳ ಸುಳುಹು ಸಹ ಇಂದು ದೊರೆಯುವುದಿಲ್ಲ. ಈಗಿನ ಪ್ರಧಾನ ಪ್ರವೇಶದ್ವಾರ ಆಗ್ನೇಯದ ಕಡೆ ಇದೆ. ಈ ಕೋಟೆಯೊಳಗಿದ್ದ ಅರಮನೆಗಳು ಭಗ್ನವಾಗಿವೆ. ಕಾರಂಜಿಗಳೆಲ್ಲಾ ಬತ್ತಿಹೋಗಿವೆ. ಆದರೂ ಇಂದೂ ಅರಕಿಲ್ಲಾ ಆದಿಲ್‌ಷಾಹೀ ಕಾಲದ ಭವ್ಯತೆಯ ಕಲ್ಪನೆಯನ್ನೂ ಒದಗಿಸುತ್ತದೆ.

**ಆನಂದ ಮಹಲ್ :** ಒಳಕೋಟೆಯ ಮಧ್ಯದಲ್ಲಿರುವ ಈ ಕಟ್ಟಡವನ್ನು ಎರಡನೆಯ ಇಬ್ರಾಹೀಂ ಆದಿಲ್‌ಷಾ 1589ರಲ್ಲಿ ಕಟ್ಟಿಸಿದ. ಇದು ಬಿಜಾಪುರದ ಸುಂದರ ಅರಮನೆಗಳಲ್ಲಿ ಒಂದು. ಆದರೆ ಈಗ ಬಹಳಷ್ಟು ಶಿಥಿಲವಾಗಿದೆ. ಕಟ್ಟಡ ಎತ್ತರದ ಜಗತಿಯ ಮೇಲೆ ಎರಡು ಅಂತಸ್ತಿನಲ್ಲಿದೆ. ಮುಂಭಾಗಕ್ಕೆ ಚಾಚಿಕೊಂಡಂತಿರುವ ಜಗತಿಗೆ ಹತ್ತಲು ಎರಡೂ ಪಕ್ಕಗಳಲ್ಲಿ ಅಗಲವಾದ ಪಾವಟಿಗೆಗಳಿವೆ. ಮೇಲಿನ ಚಾವಣಿಯನ್ನು ಗಚ್ಚಿನ ಶಿಲ್ಪಗಳಿಂದಲೂ ಪ್ರವೇಶ ದ್ವಾರದ ಎದುರಿನ ನಡುಗೋಡೆಯನ್ನು ಬಣ್ಣಬಣ್ಣದ ಕಲ್ಲುಗಳನ್ನು ಹುದುಗಿಸಿ ಮಾಡಿದ ಶಾಸನಗಳು ಮತ್ತು ಚಿತ್ರಗಳಿಂದಲೂ ಅಲಂಕರಿಸಲಾಗಿತ್ತು. ಮೇಲಿನ ಚಾವಣಿ ಮಟ್ಟಸವಾಗಿ ವಿಶಾಲವಾಗಿದ್ದು ಅರಮನೆಯ ಸ್ತ್ರೀಯರು ಹೊರ ಜಗತ್ತನ್ನು ಕಾಣುವ ಅವಕಾಶವನ್ನು ಒದಗಿಸುತ್ತಿತ್ತು. ಈಗ ಆನಂದ ಮಹಲ್‌ನ ಕೆಲವು ಭಾಗಗಳನ್ನು ಪುನರ್ನಿರ್ಮಿಸಲಾಗಿದ್ದು, ಅನೇಕ ಸರ್ಕಾರಿ ಕಛೇರಿಗಳಿಗೆ ಅವಕಾಶ ಮಾಡಿಕೊಡಲಾಗಿದೆ.



ಜಾಮೀಮಸೀದಿ, ಬಿಜಾಪುರ

**ಕರೀಮುದ್ದೀನನ ಮಸೀದಿ :** ಆನಂದಮಹಲ್‌ನಿಂದ ಸು. 200 ಗಜ ನೈಋತ್ಯದಲ್ಲಿರುವ ಈ ಮಸೀದಿ ಕುತೂಹಲಕಾರಿ ಕಟ್ಟಡ. ಹಳೆಯ ಹಿಂದು ದೇವಾಲಯಗಳ ಕಂಬಗಳು ಮತ್ತು ಚಪ್ಪಡಿಗಳನ್ನು ಉಪಯೋಗಿಸಿ ದೇವಾಲಯ ವಾಸ್ತು ಸಂಪ್ರದಾಯದಲ್ಲಿ ಕಟ್ಟಲಾಗಿರುವ ಈ ಮಸೀದಿ ಬಹುಶಃ ಬಿಜಾಪುರದ ಅತ್ಯಂತ ಪ್ರಾಚೀನ ಮಸೀದಿ. ಒಳಗಿನ ಕಂಬವೊಂದರ ಮೇಲಿರುವ ಕನ್ನಡ ಶಾಸನದಿಂದ ಕರೀಮುದ್ದೀನನ ಆಜ್ಞೆಯಂತೆ ಸಾಲೊಟಗಿಯ ಕೇವಯ್ಯ ಎಂಬ ಶಿಲ್ಪಿ 1520ರಲ್ಲಿ ಇದನ್ನು ಕಟ್ಟಿದನೆಂದು ತಿಳಿದುಬರುತ್ತದೆ. ಕರೀಮುದ್ದೀನ್ 14ನೆಯ ಶತಮಾನದ ಆದಿಭಾಗದಲ್ಲಿ ಬಿಜಾಪುರದ ಪ್ರಾಂತ್ಯಾಧಿಕಾರಿಯಾಗಿದ್ದನೆಂದು ತೋರುತ್ತದೆ.

**ಗಗನ ಮಹಲ್:** ಆನಂದ ಮಹಲ್‌ನಿಂದ ಸು. 200 ಗಜ ಪಶ್ಚಿಮದಲ್ಲಿರುವ ಈ ಕಟ್ಟಡ ಸು. 1561ರ ನಿರ್ಮಾಣ. ಹಿಂದೆ ಇದು ರಾಜ್ಯದ ನಿವಾಸ ಹಾಗೂ ಸಭಾಸದನ. ಪ್ರಸಿದ್ಧ ಚಾಂದಬೀಬಿ ಆಡಳಿತ ನಡೆಸುತ್ತಿದ್ದುದು ಇಲ್ಲಿಂದಲೇ. ಔರಂಗಜೇಬ್ ಬಿಜಾಪುರವನ್ನು ಆಕ್ರಮಿಸಿದ ಅನಂತರ ತನ್ನ ವಿಜಯದ ದರ್ಬಾರನ್ನು ನಡೆಸಿದ್ದು ಹಾಗೂ ಕೊನೆಯ ಆದಿಲ್ ಶಾಹೀ ರಾಜ ಸಿಕಂದರನಿಗೆ ಬೆಳ್ಳಿಯ ಸಂಕೋಲೆಯನ್ನು ತೊಡಿಸಿ ಔರಂಗಜೇಬನ ಎದುರು ತಂದಿದ್ದು ಈ ಸಭಾಂಗಣದಲ್ಲೇ. ಗಗನಮಹಲ್ ಈಗ ಉಳಿದಿರುವಂತೆ ಅನೇಕ ಕಮಾನುಗಳು ಮತ್ತು ಗೋಡೆಗಳು ಮಾತ್ರ ಇದ್ದು ಚಾವಣಿ ಇಲ್ಲದಿರುವ ಬೋಳು ಕಟ್ಟಡ. ಮಧ್ಯದಲ್ಲಿರುವ ಬೃಹತ್ ಕಮಾನೊಂದು 60' 9' ಅಗಲವಿದ್ದು ಇಂದಿಗೂ ಇಡೀ ಕಟ್ಟಡದ ಭವ್ಯತೆಯ ದ್ಯೋತಕವಾಗಿ ಉಳಿದುಬಂದಿದೆ.

**ಸಾತ್ ಮಂಜಿಲ್ :** ಒಳಕೋಟೆಯ ಪಶ್ಚಿಮ ಭಾಗದಲ್ಲಿರುವ ಈ ಬೃಹತ್ ಕಟ್ಟಡ ಈಗ ಸು.97ಅಡಿ ಎತ್ತರವಿದ್ದು ಐದು ಅಂತಸ್ತುಗಳಿಂದ ಕೂಡಿದೆ. ಹಿಂದೆ ಇದು ಏಳು ಅಂತಸ್ತಿನ ಕಟ್ಟಡ. ಐದನೆಯ ಅಂತಸ್ತಿನಿಂದ ಮೇಲಿನ ಅಂತಸ್ತಿಗೆ ಇದ್ದ ಮೆಟ್ಟಿಲುಗಳು ಈಗಲೂ ಉಳಿದಿವೆ.



ಅಂದಾ ಮಸೀದಿ, ಬಿಜಾಪುರ

ಪಟ್ಟಣದ ಭಾಗದಲ್ಲೆಲ್ಲಾ ಅತ್ಯಂತ ಎತ್ತರವಾಗಿ ಎದ್ದುಕಾಣುವ ಈ ಕಟ್ಟಡ ಚಿಕ್ಕದಾದರೂ ಆಕರ್ಷಕವಾಗಿದೆ. ಇದರ ಮೇಲುಮುಚ್ಚಿನಿಂದ ಇಡೀ ಪಟ್ಟಣದ ವಿಹಂಗಮ ನೋಟ ಸಿಗುತ್ತದೆ. ಈ ಕಟ್ಟಡ ಎರಡನೆಯ ಇಬ್ರಾಹೀಂ ಆದಿಲ್ ಷಾ ಕಟ್ಟಿಸಿದ ಅರಮನೆ; 1583ರ ರಚನೆ. ಕಟ್ಟಡದಲ್ಲಿ ಹಿಂದೆ ಸುಂದರ ಗಚ್ಚಿನ ಶಿಲ್ಪಗಳ ಮತ್ತು ಚಿತ್ರಗಳ ಅಲಂಕರಣವಿತ್ತು. ಈಗ ಎಲ್ಲೋ ಕೆಲವೆಡೆ ಕುರುಹುಗಳು ಮಾತ್ರ ಉಳಿದಿವೆ.

**ಜಲಮಂಜಿಲ್:** ಸಾತ್‌ಮಂಜಿಲ್‌ನ ಎದುರುಗಡೆ ಕೊಳವೊಂದರ ಮಧ್ಯದಲ್ಲಿದೆ. ಇದೊಂದು ಚಿಕ್ಕದಾದ ಆದರೂ ಸುಂದರವಾದ ಕಟ್ಟಡ. ಬಿಜಾಪುರದ ಅರಸರು ವಿಹಾರಕ್ಕಾಗಿ ಇದನ್ನು ಬಳಸುತ್ತಿದ್ದರೆಂದು ತೋರುತ್ತದೆ.

**ಮೆಕ್ಕಾ ಮಸೀದಿ:** ಒಳಕೋಟೆಯ ಸುಮಾರು ಮಧ್ಯದಲ್ಲಿ ಎತ್ತರದ ಸುತ್ತುಗೋಡೆಯ ಮಧ್ಯದಲ್ಲಿರುವ ಈ ಚಿಕ್ಕ ಮಸೀದಿ ಸುಂದರ ಕಟ್ಟಡ. ಇದನ್ನು ಮೆಕ್ಕಾದಲ್ಲಿರುವ ಮಸೀದಿಯನ್ನು ಅನುಕರಿಸಿ ಕಟ್ಟಲಾಗಿದೆ ಎನ್ನಲಾಗಿದೆ. ಮಸೀದಿಯ ಸುತ್ತಲೂ ಹಾಸುಗಲ್ಲಿನ ತೆರೆದ ಪ್ರಾಂಗಣವಿದೆ. ಅದರ ಸುತ್ತಲೂ ಕಮಾನು ಸಾಲಿನ ಕೈಸಾಲೆ ಇದೆ. ವಾಸ್ತು ರಚನಾದೃಷ್ಟಿಯಿಂದ ಇದು ಎರಡನೆಯ ಇಬ್ರಾಹೀಂ ಆದಿಲ್‌ಷಾನ ಕಾಲದಲ್ಲಿ ಕಟ್ಟಲಾಗಿರಬೇಕೆಂದು ಊಹಿಸಬಹುದು. ಇಬ್ರಾಹೀಂ ರೋಜಾವನ್ನು ಕಟ್ಟಿದ ಮಲಿಕ್ ಸಂದಲ್‌ನೇ ಇದನ್ನು ಕಟ್ಟಿರಬೇಕೆಂದು ಊಹೆ.

**ಚಿಂಚನ ದಿಡ್ಡಿ ಮಸೀದಿ:** ಒಳಕೋಟೆಯ ಪೂರ್ವದ ಗೋಡೆಗೆ ಸೇರಿದ ಅಟ್ಟಾಲಕವೊಂದರ ಮೇಲುಭಾಗದಲ್ಲಿ ಕಟ್ಟಲಾಗಿರುವ ಈ ಮಸೀದಿ ಸರಳ ಕಟ್ಟಡ. ಇದರ ಕೆಳಗೆ ಕೋಟೆಯ ಒಂದು ದಿಡ್ಡಿ ಬಾಗಿಲಿದ್ದು, ಅದರ ಸಮೀಪದಲ್ಲಿ ಹಿಂದೆ ಬಹುಶಃ ಹುಣಿಸೆಮರಗಳಿದ್ದುದರಿಂದ ಮಸೀದಿಗೆ ಈ ಹೆಸರು ಬಂದಿದೆ.

**ಎರಡನೆಯ ಅಲಿ ಆದಿಲ್ ಷಾನ ಸಮಾಧಿ:** ಒಳಕೋಟೆಯ ವಾಯವ್ಯಕ್ಕೆ ಕಂದಕದಿಂದ ಸು.100 ಗಜಗಳ ಆಚೆ ಇರುವ ಚಾವಣಿರಹಿತವಾದ ಚಚ್ಚೌಕ ಆಕಾರದ ಈ ಬೃಹತ್ ಕಟ್ಟಡವನ್ನು ಅಲಿ ತನ್ನ ತಂದೆಯ ಸಮಾಧಿ ಗೋಳಗುಮ್ಮಟವನ್ನು ಮೀರಿಸುವಂತೆ ಕಟ್ಟಲು ಉದ್ದೇಶಿಸಿ ಪಟ್ಟಕ್ಕೆ ಬಂದ ಹೊಸತರಲ್ಲೇ ಆರಂಭಿಸಿದನಂತೆ. ಆದರೆ ಇಂದೂ ಅಪೂರ್ಣವಾಗಿದೆ. ಗೋಳಗುಮ್ಮಟದ ಹೊರಗೋಡೆಯ ಅಳತೆ 156 ಅಡಿ ಇದ್ದರೆ ಇದರದು 215 ಅಡಿ ಚಚ್ಚೌಕವಿದೆ. ಜಗತಿ 20 ಅಡಿ ಎತ್ತರವಿದೆ. ನೆಲಮಾಳಿಗೆಯಲ್ಲಿ ಅಲಿಯ ಗೋರಿ ಇದೆ. ಜಗತಿಯ ಮೇಲೆ ನಾಲ್ಕೂ ಕಡೆ ಕರಿಕಲ್ಲಿನ ಬೃಹತ್ ಕಮಾನುಗಳು ಮಾತ್ರ ಇವೆ. ಮೇಲಿನ ಚಾವಣಿ ಮತ್ತು ಗುಮ್ಮಟ ಪೂರ್ಣವಾಗಿದ್ದರೆ ಇದು ಪ್ರಪಂಚದ ಅದ್ಭುತ ಕಟ್ಟಡವಾಗಬಹುದಿತ್ತು. ಆದರೂ ಈಗಿರುವ ಸ್ಥಿತಿಯಲ್ಲೂ ಇದೊಂದು ಸಾಹಸದ ವಾಸ್ತುಕೃತಿಯಾಗಿ ಬೆರಗುಗೊಳಿಸುತ್ತದೆ.

**ಆಸಾರ್ ಮಹಲ್:** ಒಳಕೋಟೆಯಿಂದ ಪೂರ್ವಕ್ಕೆ ಎತ್ತರ ಪ್ರದೇಶದಲ್ಲಿ ಇರುವ ಈ ಕಟ್ಟಡ ಆದಿಲ್ ಶಾಹೀ ಕಾಲದ ಅರಮನೆ. ಬಹುಶಃ ಹೆಚ್ಚು ಶಿಥಿಲವಾಗದೆ ಉಳಿದಿರುವ ಮಹಲ್‌ಗಳಲ್ಲಿ ಒಂದು. ಸುಲ್ತಾನ ಮಹಮ್ಮದ್ ಆದಿಲ್ ಷಾ 1646ರಲ್ಲಿ ಇದನ್ನು ಕಟ್ಟಿಸಿದ. ಆ ಕಾಲದಲ್ಲಿ ಈ ಅರಮನೆ ಅದಾಲತ್ ಮಹಲ್ ಎಂಬ ಹೆಸರಿನಲ್ಲಿ ನ್ಯಾಯಾಲಯವಾಗಿದ್ದಿತೆಂದೂ ದೊರೆ ತನ್ನ ವಾಸದ ಅರಮನೆಯಿಂದ ಇಲ್ಲಿಗೆ ನೇರವಾಗಿ ತಲುಪಲು ಕಂದಕವನ್ನು ಹಾದು ಬರುವಂತೆ ಎತ್ತರದ ಕಂಬಗಳ ಮೇಲೆ ಕಟ್ಟಿದ ಒಂದು ಪೂರ್ಣ ಆಚ್ಛಾದಿತವಾದ ಮಾರ್ಗ ಇದ್ದಿತೆಂದೂ ಹೇಳಿಕೆ. ಈ ಮಹಲಿನ ಕೋಣೆಗಳ ಗೋಡೆ ಹಾಗೂ ಚಾವಣಿಯನ್ನು ನಿಸರ್ಗದೃಶ್ಯ, ವಿವಿಧ ರೀತಿಯ ಎಲೆಗಳ ಶಿಲ್ಪಗಳಿಂದ ಅಲಂಕರಿಸಲಾಗಿದೆ. ಮಧ್ಯದ ಸಭಾಂಗಣ ಬಂಗಾರವರ್ಣದಿಂದ ಅಲಂಕೃತವಾಗಿದೆ. ಇದರ ದಕ್ಷಿಣಕ್ಕಿರುವ ಒಂದು ಕೋಣೆಯ ಗೋಡೆಗಳು ಅದ್ಭುತವಾಗಿ ಚಿತ್ರಿತವಾಗಿವೆ. ಇಲ್ಲಿ ವ್ಯಕ್ತಿಗಳನ್ನು ಚಿತ್ರಿಸಿರುವುದನ್ನು ಕಂಡ ಔರಂಗಜೇಬ್ ಕ್ರುದ್ಧನಾಗಿ ಎಲ್ಲ ಚಿತ್ರಗಳ ಮುಖಗಳನ್ನು ಅಳಿಸಿಹಾಕಲು ಆಜ್ಞೆ ಮಾಡಿದನಂತೆ. ಮಹಲಿನ ಕೆಳ ಅಂತಸ್ತಿನಲ್ಲಿರುವ ಒಂದು ಚಿಕ್ಕ ಕೋಣೆ ಕಿತಾಬ್‌ಖಾನಾ (ಗ್ರಂಥಾಲಯ) ಆಗಿತ್ತು. ಮಹಲಿನ ಮುಂಭಾಗದಲ್ಲಿ ಒಂದು ದೊಡ್ಡ ಕೊಳ ಇದೆ. ನೆಲದೊಳಗೆ ಹುದುಗಿಸಿರುವ ಕೊಳಾಯಿಗಳ ಮೂಲಕ ಬೇಗಂ ತಲಾಬ್ ಮತ್ತು ತೊರವಿಕೆರೆಗಳಿಂದ ಇಲ್ಲಿಗೆ ನೀರು ಪೂರೈಕೆಯ ವ್ಯವಸ್ಥೆ ಮಾಡಲಾಗಿದ್ದು, ಇಂದಿಗೂ ಅದು ಸುಸ್ಥಿತಿಯಲ್ಲಿದೆ.

**ಜಹಾಜ್ ಮಹಲ್:** ಮೇಲಿನ ಕಟ್ಟಡದ ಬಳಿಯಲ್ಲೇ ಇರುವ, ಈಗ ಬಹುಮಟ್ಟಿಗೆ ಶಿಥಿಲವಾಗಿರುವ ಈ ಕಟ್ಟಡ ಹಿಂದೆ ಬಿಜಾಪುರದ ನೌಕಾಪಡೆಯ ಆಡಳಿತ ಕಛೇರಿಯಾಗಿತ್ತು.

**ಜಾಮಿ ಮಸೀದಿ :** ಆದಿಲ್ ಶಾಹೀ ಕಾಲದಲ್ಲಿ ಕಟ್ಟಲಾಗಿದ್ದು ಇಂದಿಗೂ ಉಪಯೋಗದಲ್ಲಿರುವ ಬೃಹತ್ ಕಟ್ಟಡಗಳಲ್ಲೊಂದು. ಒಳ ಕೋಟೆಯ ಪೂರ್ವಕ್ಕೆ ಸು.6ಫರ್ಲಾಂಗ್ ದೂರದಲ್ಲಿ ಇದೆ. ಇದು ಬಿಜಾಪುರದಲ್ಲೇ ಅತಿ ವಿಸ್ತಾರವಾದ ಕಟ್ಟಡ. ಒಟ್ಟು ನೆಲದ ಅಳತೆ ಸು. 1,16,300

ಚದರ ಅಡಿಗಳು (**ವಾಸ್ತು ವಿವರಗಳಿಗೆ ನೋಡಿ: ಆದಿಲ್ ಶಾಹೀ ವಂಶ–ವಾಸ್ತು–ಶಿಲ್ಪ**). ತಾಳೀಕೋಟೆ ಯುದ್ಧದಲ್ಲಿ ವಿಜಯನಗರದ ಅರಸರ ಮೇಲೆ ವಿಜಯ ಗಳಿಸಿ ಅಪಾರ ಐಶ್ವರ್ಯವನ್ನು ಕೊಳ್ಳೆಹೊಡೆದು ಹಿಂದಿರುಗಿದ ಒಂದನೆಯ ಅಲಿ ಆದಿಲ್ ಷಾ ವಿಸ್ತರಿಸುತ್ತಿದ್ದ ತನ್ನ ರಾಜಧಾನಿಯ ಇಸ್ಲಾಮೀಯರ ಉಪಯೋಗಕ್ಕಾಗಿ ಈ ಮಸೀದಿಯನ್ನು ನಿರ್ಮಿಸಿದ. ಒಳಗಿನ ಪ್ರಾರ್ಥನಾ ಹಜಾರದ ಗಚ್ಚಿನ ಮೇಲೆ ಪ್ರಾರ್ಥನೆ ಸಲ್ಲಿಸಲು ಬರುವ ಪ್ರತಿವ್ಯಕ್ತಿಯೂ ನಿಲ್ಲುವ ಸ್ಥಳವನ್ನು ನಿರ್ದೇಶಿಸಲು ಕಪ್ಪುಬಣ್ಣದ ಪಟ್ಟಿಗಳಿಂದ ಆಯಾಕಾರದ ಅಂಕಣಗಳನ್ನು ವಿಂಗಡಿಸಲಾ ಗಿದೆ. ಅಂಥ ಅಂಕಣಗಳು ಒಟ್ಟು 2,286 ಇದ್ದು ಅಷ್ಟು ಜನ ಏಕಕಾಲ ದಲ್ಲಿ ಇಲ್ಲಿ ನಿಂತು ಪ್ರಾರ್ಥನೆ ಸಲ್ಲಿಸಬಹುದಾಗಿತ್ತು. ಬಂಗಾರದ ರೇಕುಗಳು ಮತ್ತು ಉಜ್ವಲ ವರ್ಣಗಳಿಂದ ಅಲಂಕೃತವಾಗಿರುವ ಮಿಹ್ರಾಬ್ ಇಲ್ಲಿನ ಸುಂದರ ಆಕರ್ಷಣೆ.



ಇಬ್ರಾಹಿಮ್ ರೋಜಾ, ಬಿಜಾಪುರ

**ಮುಸ್ತಫಾಖಾನನ ಮಸೀದಿ ಮತ್ತು ಮಹಲ್:** ಜಾಮಿ ಮಸೀದಿ ರಸ್ತೆಯಿಂದ ಉತ್ತರಕ್ಕೆ ಸು.200 ಗಜ ದೂರದಲ್ಲಿದೆ. ಮಸೀದಿ ಸು. 5 ಅಡಿ ಎತ್ತರದ ಜಗತಿಯ ಮೇಲೆ ಕಟ್ಟಿರುವ ಭವ್ಯ ಕಟ್ಟಡ. ಇದರ ಹಿಂದೆ ಮುಸ್ತಫಾಖಾನನ ಮಹಲ್‌ನ ಅವಶೇಷಗಳಿವೆ. ಈ ಅರಮನೆಯ ವಿಸ್ತಾರವಾದ ವಿವಿಧ ಭಾಗಗಳು, ದೊಡ್ಡ ಹಜಾರಗಳು, ಬೃಹತ್ ದ್ವಾರಗಳು, ಕೊಳಗಳು ಮತ್ತು ಕೋಟೆಗಳನ್ನು ಇಂದಿಗೂ ಗುರುತಿಸ ಬಹುದು. ಬಹುಶಃ ಆ ಕಾಲದಲ್ಲಿ ಇದೊಂದು ಬೃಹತ್ತಾದ ಹಾಗೂ ಸುಂದರವಾದ ವಾಸ್ತು ಸಮೂಹವಾಗಿದ್ದಿತೆಂದು ತೋರುತ್ತದೆ.

**ನವ ಗುಂಬಜ್:** ಇದು ಒಂಬತ್ತು ಗುಮ್ಮಟಗಳುಳ್ಳ ಮಸೀದಿ. ಮುಸ್ತಫಾಖಾನನ ಮಸೀದಿಯಿಂದ ಈಶಾನ್ಯಕ್ಕೆ 200 ಗಜ ದೂರದಲ್ಲಿದೆ. ಪ್ರಾರ್ಥನಾ ಹಜಾರದಲ್ಲಿ ಕಮಾನುಗಳನ್ನು ಅಳವಡಿಸಿ ಒಂಬತ್ತು ಉದ್ದ ಅಂಕಣಗಳಾಗಿ ವಿಂಗಡಿಸಲಾಗಿದೆ. ಗುಮ್ಮಟಗಳು ಹೆಚ್ಚಿನ ಸಂಖ್ಯೆಯಲ್ಲಿರುವುದೇ ಈ ಮಸೀದಿಯ ವೈಶಿಷ್ಟ್ಯ. ಕಮಾನುಗಳು ಸ್ವಲ್ಪ ಕುಳ್ಳೆನಿಸುವುದನ್ನು ಬಿಟ್ಟರೆ ಇದೊಂದು ಸುಖ ಪ್ರಮಾಣದಲ್ಲಿರುವ ಸುಂದರ ಕಟ್ಟಡ.

**ಮೆಹತರ್ ಮಹಲ್:** ಹೆಸರು ಮಹಲ್ ಎಂದಿದ್ದರೂ ಇದು ಯಾವುದೋ ಮಸೀದಿ ಅಥವಾ ಉದ್ಯಾನದ ಮಹಾದ್ವಾರ. ಜಲಗಾರನ ಅರಮನೆ ಎಂಬ ಅರ್ಥವನ್ನು ಸೂಚಿಸುವ ಈ ಹೆಸರಿಗೆ ತಕ್ಕಂತೆ ಸ್ಥಳೀಯ ಕಥೆ ಯೊಂದು ಪ್ರಚಲಿತವಾಗಿದೆ. ಇಬ್ರಾಹೀಂ ಆದಿಲ್ ಷಾ ಕುಷ್ಠರೋಗಪೀಡಿತನಾಗಿದ್ದ. ಬೆಳಿಗ್ಗೆ ಎದ್ದ ಒಡನೆ ಮೊದಲು ಅವನ ಕಣ್ಣಿಗೆ ಬೀಳುವ ವ್ಯಕ್ತಿಗೆ ಅಪಾರ ಧನವನ್ನಿತ್ತರೆ ರೋಗ ವಾಸಿಯಾಗುತ್ತದೆಂದು ಅವನಿಗೆ ಜ್ಯೋತಿಷಿಯೊಬ್ಬ ಹೇಳಿದ. ಮರುದಿನ ಅವನು ಬೇಗ ಏಳಲು ಜಲಗಾರನೊಬ್ಬನನ್ನು ಕಂಡು ಅವನಿಗೇ ಖಜಾನೆಯಿಂದ ಬಹಳಷ್ಟು ಹಣ ಕೊಡಿಸಿದ. ಆ ಹಣವನ್ನು ಖರ್ಚು ಮಾಡಲು ತೋರದ ಜಲಗಾರ ಬಿಜಾಪುರದಲ್ಲೇ ಅಪೂರ್ವವೆನಿಸುವಂಥ ಒಂದು ಮಸೀದಿಯನ್ನು ಕಟ್ಟಿಸಲು ಉದ್ದೇಶಿಸಿ ಈ ಕಟ್ಟಡವನ್ನು ಕಟ್ಟಿಸಿದ ಎಂಬುದು ಆ ಕಥೆ. ಮೆಹತರ್ ಮಹಲ್ ಬಿಜಾಪುರದ ಸುಂದರ ಕಟ್ಟಡಗಳಲ್ಲೊಂದು. ಚಿಕ್ಕದಾದರೂ ಚೊಕ್ಕವಾಗಿ ರಚಿತವಾಗಿದೆ.

**ಅದಾಲತ್ ಮಹಲ್:** ಪಟ್ಟಣದ ನಡುವೆ ಸುತ್ತಲೂ ವಿಶಾಲವಾದ ಮರಗಳ ತೋಪಿನ ಮಧ್ಯದಲ್ಲಿ ಎರಡಂತಸ್ತಿನಲ್ಲಿ ಎದ್ದಿರುವ ಈ ಭವ್ಯ ಕಟ್ಟಡ, ಮೂಲತಃ ಆದಿಲ್ ಶಾಹೀಗಳ ಕಾಲದ್ದು. ಈಗ ಜಿಲ್ಲಾಧಿಕಾರಿಗಳ ನಿವಾಸವಾಗಿ ಉಪಯೋಗವಾಗುತ್ತಿದೆ. ಹಿಂದೆಯೂ ಎರಡು ಅಂತಸ್ತುಗಳಲ್ಲಿ ಇದ್ದ ಈ ಕಟ್ಟಡದ ಸುತ್ತ ಮರದ ಕಂಬಗಳ ಮೇಲೆ ಹರವಿದ್ದ ವಿಶಾಲವಾದ ವರಾಂಡಾ ಇತ್ತು. ಕ್ರಮೇಣ ಶಿಥಿಲವಾಗುತ್ತಿದ್ದ ಇದರ ಕೆಲವು ಭಾಗಗಳನ್ನು ಸಾತಾರಾದ ರಾಜ ಕೆಡವಿಸಿದ್ದ. ಆದಿಲ್ ಶಾಹೀ ಕಾಲದ ಕಾರಂಜಿಗಳು ಮತ್ತು ಉದ್ಯಾನದ ಗೋಡೆಗಳ ಅವಶೇಷಗ ಳನ್ನು ಈ ಕಟ್ಟಡದ ಸಮೀಪದಲ್ಲಿ ಈಗಲೂ ಗುರುತಿಸಬಹುದು. ಈ ಉದ್ಯಾನಕ್ಕೆ ಸ್ವಲ್ಪ ಉತ್ತರದಲ್ಲಿ ಔರಂಗಜೇಬ್ ಕಟ್ಟಿಸಿದ್ದೆನ್ನುವ ಒಂದು ಮಸೀದಿ ಇದೆ. ಅದಾಲತ್ ಮಹಲ್‌ನ ಸಮೀಪದಲ್ಲಿದ್ದ ಶಿಥಿಲವಾಗಿದ್ದ ಸೂರಜ್ ಮಹಲನ್ನು ರಿಪೇರಿ ಮಾಡಿ ಈಗ ಸೇವಕರ ನಿವಾಸಗಳಾಗಿ ಉಪಯೋಗಿಸಲಾಗುತ್ತಿದೆ.

**ಯಾಕೂತ್ ದಾಬೂಲಿಯ ಸಮಾಧಿ ಮತ್ತು ಮಸೀದಿ :** ಅದಾಲತ್ ಮಹಲ್‌ನಿಂದ ಸ್ವಲ್ಪ ವಾಯವ್ಯದಲ್ಲಿ ತೆಳು ಮಿನರೆಟ್ಟುಗಳಿಂದ ಅಲಂಕೃತ ವಾಗಿರುವ ಒಂದು ಚೌಕ ಕಟ್ಟಡವಿದೆ. ಈ ಕಟ್ಟಡ ಚಿಕ್ಕದಾದರೂ ಸುಂದರ ವಾಗಿದೆ. ಇದು ಯಾಕೂತ್ ದಾಬೂಲಿಯ ಸಮಾಧಿ. ಇದರ ಬಳಿಯಲ್ಲೇ ಇದಕ್ಕಿಂತ ದೊಡ್ಡದಾದ ಯಾಕೂತ್ ದಾಬೂಲಿಯ ಮಸೀದಿ ಇದೆ.

**ಅರ್ಷ್ ಮಹಲ್:** ಅದಾಲತ್ ಮಹಲ್‌ನ ಆಗ್ನೇಯದಲ್ಲಿ ಇದೆ. ಇದು ಎರಡನೆಯ ಆದಿಲ್ ಷಾ 1669ರಲ್ಲಿ ತನ್ನ ವಿಹಾರಕ್ಕಾಗಿ ಕಟ್ಟಿಸಿ ಕೊಂಡ ಚಿಕ್ಕ ಅರಮನೆ. ಬಹಳ ಶಿಥಿಲವಾಗಿದ್ದ ಈ ಕಟ್ಟಡವನ್ನು ಈಚೆಗೆ ದುರಸ್ತಿ ಮಾಡಿದ್ದು, ಜಿಲ್ಲಾ ವೈದ್ಯಾಧಿಕಾರಿಗಳ ನಿವಾಸವಾಗಿ ಬಳಸಲಾಗುತ್ತಿದೆ.

**ಪಾನಿ ಮಹಲ್:** ಅರ್ಷ್ ಮಹಲ್‌ನ ಎದುರಿಗೆ ಒಳಕೋಟೆಯ ಅಟ್ಟಾಲಕವೊಂದರ ನೆತ್ತಿಯ ಮೇಲೆ ಇರುವ ಮಂಟಪ. ಬಹುಶಃ ಹಿಂದೆ ಇದೊಂದು ಉದ್ಯಾನ ಮಂಟಪವಾಗಿತ್ತು. ಕಂದಕದ ನೀರಿನ ಬಳಿಯಲ್ಲೇ ಇದ್ದುದರಿಂದ ಇದಕ್ಕೆ ಈ ಹೆಸರು ಬಂದಿರಬೇಕು. ಈಗ ಈ ಕಟ್ಟಡ ಕೆಲವು ಗೋಡೆಗಳು ಮಾತ್ರ ಉಳಿದಿದ್ದು ಅವೆಲ್ಲ ಚೊಕ್ಕವಾಗಿ ಅಲಂಕೃತವಾಗಿವೆ.

**ಚೀನೀ ಮಹಲ್ (ಫರೂಕ್ ಮಹಲ್):** ಯೂಸುಫ್ ಆದಿಲ್ ಷಾ ಕಟ್ಟಿಸಿದ ಸಭಾಮಂದಿರ. ಇದರಲ್ಲಿ ಸುತ್ತಲೂ ನಾಲ್ಕು ಕಡೆ ಕೋಣೆಗಳಿರುವ ದೊಡ್ಡ ಸಭಾಂಗಣವಿದೆ. ವಿಸ್ತಾರ ಹಾಗೂ ಭವ್ಯತೆಯಲ್ಲಿ ಈ ಸಭಾಂಗಣ ವನ್ನು ಮೀರಿಸುವ ಕಟ್ಟಡ ಬಿಜಾಪುರದಲ್ಲಿ ಬೇರೊಂದಿಲ್ಲ. ಈಗ ಈ ಕಟ್ಟಡವನ್ನು ಜಿಲ್ಲಾಧಿಕಾರಿಗಳ ಕಚೇರಿಯಾಗಿ ಉಪಯೋಗಿಸಲಾಗುತ್ತಿದೆ. ಚೀನೀ ಪಿಂಗಾಣಿ ಪಾತ್ರೆಗಳ ಚೂರುಗಳು ಅಪಾರ ಸಂಖ್ಯೆಯಲ್ಲಿ ಈ ಕಟ್ಟಡದ ಬಳಿ ದೊರೆತಿದ್ದೇ ಇದರ ಪ್ರಸಕ್ತ ಹೆಸರಿಗೆ ಕಾರಣ. ಈ ಕಟ್ಟಡದ ಛತ್ತಿನಿಂದ ಒಳಕೋಟೆಯ ಅವಶೇಷಗಳ ಹರವಿನ ನೋಟವನ್ನು ಕಾಣಬಹುದು.

**ಮಾಲಿಕ್–ಇ–ಮೈದಾನ್ :** ಇದೊಂದು ದೊಡ್ಡ ಫಿರಂಗಿ. ಕಂಚಿನದು; 55 ಟನ್ ತೂಕವಿದೆ. ಪೂರ್ಣವಾಗಿ ಎರಕಹೊಯ್ದು ಮಾಡಲಾಗಿದೆ. (ರಣ) ಅಂಗಣಕ್ಕೇ ಪ್ರಭು ಎಂದು ಹೆಸರಿಸಲಾಗಿರುವ ಈ ಫಿರಂಗಿಯ ಮೂತಿ ಸಿಂಹದ ಆಕಾರದಲ್ಲಿದ್ದು ಹೊರಮೈಯನ್ನು ಉಜ್ಜಿ ನಯಮಾಡಲಾಗಿದೆ. ಇದರ ಮೇಲೆ ಕೆತ್ತಲಾಗಿರುವ ಪಾರಸೀ ಮತ್ತು ಅರಬ್ಬೀ ಶಾಸನಗಳಿಂದ ಈ ಫಿರಂಗಿಯನ್ನು ತುರ್ಕಿದೇಶದಿಂದ ಬಂದು ನೆಲೆಸಿದ್ದ ಅಧಿಕಾರಿಯೊಬ್ಬ 1549ರಲ್ಲಿ ಅಹಮದ್ ನಗರದಲ್ಲಿ ತಯಾರಿಸಿದನೆಂದು ತಿಳಿಯುತ್ತದೆ. ಇದನ್ನು 1565ರ ತಾಳೀಕೋಟೆ ಯುದ್ಧಕ್ಕೂ ತೆಗೆದುಕೊಂಡು ಹೋಗಲಾಗಿತ್ತಂತೆ. 1632ರಲ್ಲಿ ಬಿಜಾಪುರದ ಅರಸರು ಇದನ್ನು ವಶಪಡಿಸಿಕೊಂಡು ವಿಜಯದ ಕುರುಹಾಗಿ ಇಲ್ಲಿಗೆ ತಂದರು. ಈಗ ಇದನ್ನು ಸೆರ್ಜ್ ಬುರುಜಿನ (ಸಿಂಹದ ಗೋಪುರ) ಮೇಲೆ ಇಡಲಾಗಿದೆ (ಬುರುಜಿನ ಮೇಲೆ ಏರುವ ಮೆಟ್ಟಿಲುಗಳ ಬುಡದ ಇಕ್ಕೆಲಗಳಲ್ಲಿ ಎರಡು ಸಿಂಹಶಿಲ್ಪಗಳಿರುವುದರಿಂದ ಇದಕ್ಕೆ ಸೆರ್ಜ್ ಬುರುಜ್ ಎಂದು ಹೆಸರು ಬಂದಿದೆ).

**ಲಂಡಾ ಕಸಬ್ ಫಿರಂಗಿ:** ಪಟ್ಟಣದ ದಕ್ಷಿಣ ಕೋಟೆಯ ಮಧ್ಯದಲ್ಲಿರುವ ಲಂಡಾ ಕಸಬ್ ಎಂಬ ಒತ್ತು ಅಟ್ಟಾಲಕದ ಮೇಲೆ ಇದನ್ನು ಇಡಲಾಗಿದೆ. ಇದು ಬಿಜಾಪುರದ ಅತ್ಯಂತ ದೊಡ್ಡ ಫಿರಂಗಿ. 21' 7' ಉದ್ದವಿದ್ದು ಇದರ ಮೂತಿಯ ವ್ಯಾಸ 4' 5' ಇದೆ. ತೂಕ ಸುಮಾರು $46^{1}/_{2}$ ಟನ್. ಕಬ್ಬಿಣದ ಸರಳುಗಳನ್ನು ಎರಕದಿಂದ ಒಟ್ಟಿಗೆ ಸೇರಿಸಿ ಇದನ್ನು ತಯಾರಿಸಲಾಗಿದೆ. ಫಿರಂಗಿ ಸು.300 ವರ್ಷಗಳಿಗೂ ಹೆಚ್ಚು ಕಾಲದಿಂದ ಮಳೆ ಬಿಸಿಲಲ್ಲಿ ನಿಂತಿದ್ದರೂ ತುಕ್ಕು ಅಥವಾ ಇನ್ನಾವುದೇ ರೀತಿಯಿಂದ ಶಿಥಿಲವಾಗದೆ ಸುಸ್ಥಿತಿಯಲ್ಲಿದೆ (ಇದೇ ರೀತಿಯ ಆದರೆ ಚಿಕ್ಕ ಪ್ರಮಾಣದ ಕಬ್ಬಿಣದ ಫಿರಂಗಿಗಳನ್ನು ಬಿಜಾಪುರದ ಇನ್ನೂ ಹಲವೆಡೆಗಳಲ್ಲಿ ಕಾಣಬಹುದು).

**ಒಂದನೆಯ ಅಲಿ ಆದಿಲ್ ಷಾನ ಸಮಾಧಿ :** ಪಟ್ಟಣದ ನೈಋತ್ಯ ಭಾಗದಲ್ಲಿರುವ ಈ ಸಮಾಧಿ ಬಿಜಾಪುರದ ಅರಸರ ಅತಿ ಪ್ರಾಚೀನ ಸಮಾಧಿ ಕಟ್ಟಡ. ಕಟ್ಟಡ ಸರಳ ರಚನೆ. ಸುತ್ತಲೂ ಐದೈದು ಕಮಾನುಗಳ ಹೊರಮೈ ಇದ್ದು, ಮಧ್ಯದಲ್ಲಿ ನಾಲ್ಕೂ ಕಡೆ ಮೂರು ಕಮಾನುಗಳ ಗೋಡೆಯುಳ್ಳ ಸಮಾಧಿಕೋಣೆ ಮಾತ್ರ ಇದೆ. ಸಮಾಧಿ ಕೋಣೆಯ ಮಧ್ಯದ ಕಮಾನುಗಳು ಮಾತ್ರ ತೆರೆದಂತಿವೆ. ಹಿಂದೆ ಈ ಕೋಣೆಯ ಮಧ್ಯದಲ್ಲಿದ್ದ ಗೋರಿಯಾಗಲೀ ಅದರ ಮೇಲಿದ್ದ ಮರದ ಮಂಟಪವಾಗಲೀ ಈಗ ಉಳಿದಿಲ್ಲ. ಕೋಣೆಯ ಮಧ್ಯದಲ್ಲಿ ಇರುವ ಒಂದು ಸಣ್ಣ ಮಣ್ಣಿನ ಗುಡ್ಡೆ ಬಿಜಾಪುರದ ಅತ್ಯಂತ ಯುದ್ಧೋತ್ಸಾಹಿ ರಾಜ ಅಲಿಯ ಸಮಾಧಿಸ್ಥಾನವನ್ನು ಸೂಚಿಸುತ್ತದೆ.

**ಹಸುರು ಕಲ್ಲಿನ ಸಮಾಧಿ:** ಮೇಲಿನ ಕಟ್ಟಡದಿಂದ ಸು.50 ಗಜ ದಕ್ಷಿಣದಲ್ಲಿ ಎತ್ತರವಾದ ಜಗತಿಯ ಮೇಲೆ ಸುಂದರವಾಗಿ ಕಡೆದಿರುವ ಕರಿ ಹಸುರು ಕಲ್ಲಿನ ಸಮಾಧಿಯೊಂದಿದೆ. ಇದು ಯಾರದೆಂದು ತಿಳಿದಿಲ್ಲ. ಈ ಸಮಾಧಿಶಿಲೆಯನ್ನು ಕಡೆದಿರುವ ರೀತಿ, ಇದರ ಜಗತಿಯ ಅಲಂಕರಣ ಬಹು ಮೋಹಕವಾಗಿದ್ದು, ಬಿಜಾಪುರದ ರಾಜರ ಸಮಾಧಿಗಳ ಸಹಿತವಾಗಿ ಇನ್ನಾವುದೇ ಸಮಾಧಿಯೂ ಸೌಂದರ್ಯದಲ್ಲಿ ಇದನ್ನು ಮೀರಿಸಲಾರವೆನಿಸುತ್ತದೆ.

**ಜೋಡ್ ಗುಂಬಜ್:** ಹೊರಕೋಟೆಯ ಪಶ್ಚಿಮ ಗೋಡೆಯ ಮೆಕ್ಕಾ ದರ್ವಾಜಾದಿಂದ ಸು.400 ಗಜ ಪೂರ್ವದಲ್ಲಿ ಒಂದೇ ಆಕಾರದ ಎರಡು ಸಮಾಧಿಗಳು ಒಟ್ಟಿಗೆ ಇವೆ. ಇಸ್ಲಾಮೀ ಸಮಾಧಿ ಮಂದಿರಗಳಲ್ಲಿ ಮೂಲ ಸಮಾಧಿಗಳು ನೆಲಮಾಳಿಗೆಯಲ್ಲಿ ಇರುವುದು ಸಾಮಾನ್ಯವಾದರೆ, ಈ ಸಮಾಧಿಗಳಲ್ಲಿ ಅವು ನೆಲಮಟ್ಟದಲ್ಲಿದ್ದು ಮೇಲಿನ ಕಟ್ಟಡ ಎತ್ತರದ ಜಗತಿಯ ಮೇಲೆ ಇರುವಂತೆ ತೋರುತ್ತದೆ. ಅಲ್ಲದೆ ಇದರ ಗುಮ್ಮಟಗಳ ಒಳಗೂ ಗೋಳಗುಮ್ಮಟದಲ್ಲಿರುವಂತೆ ಒಳಚಾಚಣಿಕೆ (ಗ್ಯಾಲರಿ) ಇವೆ. ಈ ಸಮಾಧಿಗಳನ್ನು ಔರಂಗಜೇಬ್ ಕಟ್ಟಿಸಿರಬೇಕೆಂಬ ಒಂದು ಊಹೆ ಇದೆ.

**ತಾಜ್ ಬಾವಡಿ:** ಮೆಕ್ಕಾ ದರ್ವಾಜಾದಿಂದ ಸು. 100 ಗಜ ಪೂರ್ವಕ್ಕಿರುವ ದೊಡ್ಡ ಕೊಳ. 223' ಚಚ್ಚೌಕವಾಗಿ ಸುಮಾರು 52' ಆಳವಿದೆ. ಕೊಳಕ್ಕೆ ಕಮಾನಿನ ಪ್ರವೇಶಮಾರ್ಗವಿದೆ. ಅಲ್ಲಿಂದ ನೀರಿನೆಡೆಗೆ ಚಾಚಣಿಕೆಯಿದ್ದು ಅದರಿಂದ ಎರಡು ಬದಿಯಲ್ಲಿ ನೀರಿಗೆ ಇಳಿಯಲು ಪಾವಟಿಗೆಗಳನ್ನು ಒದಗಿಸಲಾಗಿದೆ. ಇಬ್ರಾಹೀಂ ರೋಜಾವನ್ನು ಕಟ್ಟಿದ ಪ್ರಸಿದ್ಧ ಶಿಲ್ಪಿ ಮಲಿಕ್ ಸಂದಲ್ ಈ ಕೊಳವನ್ನು ಎರಡನೆಯ ಇಬ್ರಾಹೀಂ ಆದಿಲ್ ಷಾನ ರಾಣಿ ತಾಜ್‌ಳಿಗಾಗಿ ಕಟ್ಟಿದ.

**ಚಾಂದ್ ಬಾವಡಿ:** ಒಂದನೆಯ ಅಲಿ ಆದಿಲ್ ಷಾ 1579ರಲ್ಲಿ ತನ್ನ ಹೆಂಡತಿ ಚಾಂದಬೀಬಿಯ ಗೌರವಾರ್ಥ ಕಟ್ಟಿದ ಕೊಳ. ಮುಂದುಗಡೆ ಒಂದು ಕಮಾನಿನ ಪ್ರವೇಶದ್ವಾರವಿದ್ದು ಅಲ್ಲಿಂದ ನೀರಿನೆಡೆಗೆ ಪಾವಟಿಗೆಗಳಿವೆ. ಕೊಳದ ಸುತ್ತಲೂ ಓಡಾಡಲು ಅನುಕೂಲವಾಗಿರುವ ರೀತಿಯಲ್ಲಿ ಒಳಗೋಡೆಯ ಒಳಗೆ ಸೇರಿದಂತೆ ಹಾದಿಯನ್ನು ಮಾಡಲಾಗಿದೆ. ಈ ಹಾದಿಯ ಮಧ್ಯದಲ್ಲಿ ಮೂರು ಪಾರ್ಶ್ವಗಳಲ್ಲಿ ಒಂದೊಂದು ಕೋಣೆಯಿದ್ದು ಅದರ ಕಿಟಕಿಗಳು ನೀರಿನೆಡೆಗೆ ತೆರೆದುಕೊಂಡಿವೆ. ಈ ಕೊಳ ತಾಜ್ ಬಾವಡಿಗಿಂತ ಚಿಕ್ಕದು, ಆದರೆ ಹಳೆಯದು. ಇದರ ವಿನ್ಯಾಸವನ್ನು ಅನುಸರಿಸಿಯೇ ತಾಜ್ ಬಾವಡಿಯನ್ನು ಕಟ್ಟಿದಂತೆ ತೋರುತ್ತದೆ.

**ಉಪರಿ ಬುರುಜ್:** ಚಾಂದ್ ಬಾವಡಿಯಿಂದ ಸು. 260 ಗಜ ದಕ್ಷಿಣದಲ್ಲಿ ಇರುವ ದೊಡ್ಡ ರಕ್ಷಣಾಗೋಪುರ. ವೃತ್ತಾಕಾರವಾಗಿರುವ ಈ ಗೋಪುರ ಸುಮಾರು 80 ಅಡಿ ಎತ್ತರವಿದೆ. ಮೇಲೆ ಹೋಗಲು ಗೋಪುರವನ್ನು ಸುತ್ತಿ ಹತ್ತುವ ಪಾವಟಿಗೆ ಇದೆ. ಇದರ ಮೇಲೆ ಕಿರುನಳಿಗೆಯುಳ್ಳ, ಬಹು ಉದ್ದವಾದ ಎರಡು ಫಿರಂಗಿಗಳನ್ನು ಇಡಲಾಗಿದೆ. ಈ ರಕ್ಷಣಾಗೋಪುರದ ಆವಶ್ಯಕತೆಗೆ ತಕ್ಕಂತೆ ಮದ್ದಿನ ಕೋಣೆ ಮತ್ತು ನೀರಿನ ತೊಟ್ಟಿಗಳನ್ನೂ ಇದರಲ್ಲಿ ಅಳವಡಿಸಲಾಗಿದೆ. ಬುರುಜಿನ ನೆತ್ತಿಯ ಬಳಿ ಇರುವ ಒಂದು ಶಾಸನದ ಪ್ರಕಾರ ಇದು ಸು. 1584ರ ನಿರ್ಮಾಣ.

**ಅಫ್ಜಲ್‌ಖಾನನ ಸಮಾಧಿ ಕಟ್ಟಡ ಮತ್ತು ಮಸೀದಿ:** ಕೋಟೆಯ ಹೊರಗಡೆ ಶಹಪುರ ದರ್ವಾಜಾದಿಂದ ಸು. $2^{1}/_{2}$ ಮೈಲಿ ದೂರದಲ್ಲಿ ಇರುವ ಈ ಕಟ್ಟಡಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಸಿದ್ಧವಾದ ಅಫ್ಜಲ್‌ಖಾನ್‌ನ ಕಾರ್ಯ. ತನ್ನ ಸಮಾಧಿ ಕಟ್ಟಡವನ್ನೂ ಜೊತೆಗೆ ಒಂದು ಮಸೀದಿಯನ್ನೂ ಕಟ್ಟಿಸುವುದು ಅವನ ಉದ್ದೇಶವಾಗಿತ್ತು. ಮಸೀದಿ ಸು. 1653ರ ಹೊತ್ತಿಗೆ ಪೂರ್ಣವಾಯಿತು. ಆದರೆ ಸಮಾಧಿ ಕಟ್ಟಡ ಇನ್ನೂ ಅರೆಯಾಗಿದ್ದಾಗ ಅಫ್ಜಲ್‌ಖಾನ್ ಶಿವಾಜಿಯೊಡನೆ ಯುದ್ಧಕ್ಕೆ ಹೋಗಿ ಮೃತನಾದ. ಕಟ್ಟಡ ಅಪೂರ್ಣವಾಗಿಯೇ ಉಳಿಯಿತು. ಅವನನ್ನು ಪ್ರತಾಪಗಡದಲ್ಲೇ ಸಮಾಧಿ ಮಾಡಲಾಗಿದ್ದು, ಈ ಕಟ್ಟಡ ಈಗಲೂ ಖಾಲಿಯಾಗಿ ಉಳಿದಿದೆ. ಮಸೀದಿ ಎರಡಂತಸ್ತಿನ ಚಿಕ್ಕ ಕಟ್ಟಡ. ಮೇಲಿನ ಭಾಗ ಸ್ತ್ರೀಯರಿಗೆ ಮೀಸಲಾಗಿದ್ದಂತೆ ತೋರುತ್ತದೆ. ಇವುಗಳ ಸಮೀಪದಲ್ಲೇ ಅಫ್ಜಲ್‌ಖಾನನ ಮಹಲಿನ ಅವಶೇಷಗಳಿವೆ.

**ಅಫ್ಜಲ್‌ಖಾನನ ಪತ್ನಿಯರ ಸಮಾಧಿಗಳು:** ಅಫ್ಜಲ್‌ಖಾನನ ಸಮಾಧಿ ಕಟ್ಟಡದಿಂದ ಸುಮಾರು 6 ಫರ್ಲಾಂಗ್ ದಕ್ಷಿಣದಲ್ಲಿ ತೋಪಿನ ನಡುವೆ ಇವೆ. ಎತ್ತರದ ಜಗತಿಯ ಮೇಲೆ 11 ಸಾಲುಗಳಲ್ಲಿ ಒಟ್ಟು 63 ಸ್ತ್ರೀಯರ ಸಮಾಧಿಗಳು ಇಲ್ಲಿದ್ದು ಇನ್ನೊಂದು ಸಮಾಧಿಸ್ಥಳ ಖಾಲಿ ಇದೆ. ಅಫ್ಜಲ್

ಖಾನ್ ಶಿವಾಜಿಯೊಡನೆ ಯುದ್ಧಕ್ಕೆ ಹೊರಟಾಗ, ಅವನು ಬಿಜಾಪುರಕ್ಕೆ ಹಿಂದಿರುಗುವುದಿಲ್ಲವೆಂದು ಜ್ಯೋತಿಷಿಗಳು ಹೇಳಿದರೆಂದೂ ಅದರಿಂದ ತನ್ನ ಪತ್ನಿಯರನ್ನೆಲ್ಲ ಮುಳುಗಿಸಿ ಸಾಯಿಸಿದನೆಂದೂ ಇವೇ ಅವರ ಸಮಾಧಿಗಳೆಂದೂ ಹೇಳಿಕೆ. ಪತ್ನಿಯರಲ್ಲಿ ಒಬ್ಬಳು ಮಾತ್ರ ಸಾವಿನಿಂದ ಪಾರಾದುದರಿಂದ ಅವಳಿಗಾಗಿ ಮೀಸಲಾಗಿದ್ದ ಸ್ಥಳ ಖಾಲಿ ಇದೆ. ಸಮೀಪದಲ್ಲಿರುವ ಒಂದು ಬಾವಿಯನ್ನು ಆ ದುರಂತ ನಡೆದ ಸ್ಥಳ ಎಂದು ತೋರಿಸಲಾಗುತ್ತದೆ.

**ಇಬ್ರಾಹೀಂ ರೋಜಾ:** ಕೋಟೆಯಿಂದ ಪಶ್ಚಿಮಕ್ಕೆ ಸು.600 ಗಜ ದೂರದಲ್ಲಿ ದೊಡ್ಡ ಪ್ರಾಕಾರದ ಮಧ್ಯೆ ಇರುವ ಇಬ್ರಾಹೀಂ ರೋಜಾ ಎಂಬ ಕಟ್ಟಡಗಳ ಗುಂಪು ಎರಡನೆಯ ಇಬ್ರಾಹೀಂ ಆದಿಲ್‌ಷಾನ ಸಮಾಧಿ ಮತ್ತು ಜೊತೆಯ ಮಸೀದಿಯನ್ನೊಳಗೊಂಡಿದೆ. ಸು.1626ರಲ್ಲಿ ಪೂರ್ಣವಾದ ಈ ಕಟ್ಟಡ ತನ್ನ ಅನುಪಮ ಸೌಂದರ್ಯದಿಂದ ಕರ್ನಾಟಕದ ಇಸ್ಲಾಮೀ ವಾಸ್ತುರಚನೆಗಳಲ್ಲಿ ಅಗ್ರಸ್ಥಾನ ಪಡೆದಿದೆ (ವಾಸ್ತು ವಿವರಗಳಿಗೆ ನೋಡಿ : ಆದಿಲ್ ಶಾಹೀ ವಂಶ-ವಾಸ್ತುಶಿಲ್ಪ). ಇಬ್ರಾಹೀಂ ರೋಜಾಕ್ಕೂ ತಾಜ್‌ಮಹಲಿಗೂ ಕೆಲವು ಹೋಲಿಕೆಗಳಿವೆ. ತಾಜ್ ಮಹಲನ್ನು ಕಟ್ಟುವ ಮುನ್ನ ಪ್ರಖ್ಯಾತ ಕಟ್ಟಡಗಳನ್ನು ಪರಿಶೀಲಿಸಲಾಯಿತಂತೆ. ಈ ರೀತಿ ಪರಿಶೀಲಿಸಿದ ಭವ್ಯ ಕಟ್ಟಡಗಳಲ್ಲಿ ಇಬ್ರಾಹೀಂ ರೋಜಾ ಸಹ ಒಂದಿರಬಹುದೆಂದು ಅಭಿಪ್ರಾಯವಿದೆ.

**ಮೋತಿ ಗುಂಬಜ್:** ಇಬ್ರಾಹೀಂ ರೋಜಾದಿಂದ ವಾಯುವ್ಯಕ್ಕೆ ಸು. 2 ಫರ್ಲಾಂಗ್ ದೂರದಲ್ಲಿದೆ. ಇದರ ನುಣುಪಾದ ಬಿಳಿ ವರ್ಣದ ಗುಮ್ಮಟ ಬಹು ದೂರದವರೆಗೆ ಕಾಣುತ್ತದೆ. ಇದೂ ಒಂದು ಸಮಾಧಿಕಟ್ಟಡ. ಇದರ ಒಳ ಗೋಡೆಯ ನಯವಾದ ಬಿಳಿಯ ಲೇಪವು ಮುತ್ತನ್ನು ಪುಡಿಮಾಡಿ ಮಾಡಲಾದುದು. ಆದ್ದರಿಂದ ಈ ಗುಂಬಜ್‌ಗೆ ಈ ಹೆಸರಿದೆ ಎಂಬ ಹೇಳಿಕೆ ಇದೆ.

**ಅಮೀನ್ ದರ್ಗಾ:** ಬಿಜಾಪುರದ ಬಹು ಪವಿತ್ರ ಸ್ಥಳಗಳಲ್ಲೊಂದು. ಪಟ್ಟಣದಿಂದ ಪಶ್ಚಿಮಕ್ಕೆ ಸುಮಾರು ಒಂದು ಮೈಲಿ ದೂರದಲ್ಲಿದೆ. ಇದು ಹಜರತ್ ಖ್ವಾಜಾ ಅಮೀನುದ್ದೀನ್ ಎಂಬ ಸಂತರ ಸಮಾಧಿ. 1664ರಲ್ಲಿ ಇವರು ಮರಣಹೊಂದಿದಾಗ ಅಫ್ಜಲ್‌ಖಾನ್ ಇದನ್ನು ಕಟ್ಟಿಸಿದನೆನ್ನಲಾಗಿದೆ. ಎತ್ತರದ ಪ್ರದೇಶದಲ್ಲಿರುವ ಈ ದರ್ಗಾ ಈ ಸುತ್ತಿಗೆ ಒಂದು ಮುಖ್ಯ ಗುರುತು ತಾಣ.

**ಸಂಗೀತ ಮಹಲ್:** ಬಿಜಾಪುರದ ಸಮೀಪದಲ್ಲಿ ಎರಡನೆಯ ಇಬ್ರಾಹೀಂ ಆದಿಲ್ ಷಾ ಕಟ್ಟಿಸಿದ ನವರಸಪುರ ಪಟ್ಟಣದ ಮಧ್ಯೆ ಇರುವ ಅರಮನೆ. ವಾಸ್ತುವಿನ್ಯಾಸದಲ್ಲಿ ಗಗನಮಹಲನ್ನು ಹೋಲುವ ಈ ಕಟ್ಟಡ ಎತ್ತರದ ಸುತ್ತು ಪ್ರಾಕಾರದ ಮಧ್ಯೆ ಇದೆ. ಕಟ್ಟಡ ಬಹಳ ಶಿಥಿಲವಾಗಿದೆ. ಹಿನ್ನೆಲೆಯಲ್ಲಿ ಬೆಟ್ಟಸಾಲು, ಎರಡು ಪಕ್ಕಗಳಲ್ಲಿ ಹರಿಯುವ ಚಿಕ್ಕ ಝರಿ ಮತ್ತು ಅನೇಕ ಅರಮನೆಗಳ ಅವಶೇಷಗಳ ಮಧ್ಯೆ ಇರುವ ಈ ಕಟ್ಟಡದ ಸನ್ನಿವೇಶ ಆಕರ್ಷಕವಾಗಿದೆ.

**ಐನುಲ್‌ಮುಲ್ಕ್‌ನ ಸಮಾಧಿ ಮತ್ತು ಮಸೀದಿ:** ಪಟ್ಟಣದ ಪೂರ್ವಕ್ಕೆ ಸುಮಾರು ಒಂದೂವರೆ ಮೈಲಿ ದೂರದಲ್ಲಿ ವಿಶಾಲ ಮೈದಾನದ ಮಧ್ಯದಲ್ಲಿ ಏಕೈಕವಾಗಿ ಎದ್ದಿರುವ ಐನುಲ್ ಮುಲ್ಕ್ ಕನಾನಿ ಎಂಬುವನ ಸಮಾಧಿ. ಓರಣವಾದ ಗುಮ್ಮಟವಿರುವ ಚಚ್ಚೌಕ ವಿನ್ಯಾಸದ ಬೃಹತ್ ಕಟ್ಟಡ. ಇದರ ಸಮೀಪವಿರುವ ಮಸೀದಿಯೂ ಸುಂದರಕೃತಿ. ಐನುಲ್ ಮುಲ್ಕ್ ಕನಾನಿ ಒಂದನೆಯ ಇಬ್ರಾಹೀಂ ಆದಿಲ್‌ಷಾನ ಆಸ್ಥಾನಿಕನಾಗಿದ್ದು, ಅವನ ವಿರುದ್ಧ ದಂಗೆಯೆದ್ದು 1556ರಲ್ಲಿ ಹತನಾದ.

**ರುಕ್ಮಾಂಗದ ಪಂಡಿತರ ಸಮಾಧಿ:** ಪಟ್ಟಣದ ಆಗ್ನೇಯದಲ್ಲಿ ಕೋಟೆಯ ಹೊರಗೆ ಈ ಸಮಾಧಿಯಿದೆ. ರುಕ್ಮಾಂಗದ ಪಂಡಿತರು ಆದಿಲ್‌ಷಾಹೀ ಆಸ್ಥಾನದ ನ್ಯಾಯಾಧಿಕಾರಿಯೊಬ್ಬರ ಮಗನಾಗಿ 1610 ರಲ್ಲಿ ಜನಿಸಿದರು. ಇವರು ಒಳ್ಳೆಯ ಸಂಗೀತಗಾರರಾಗಿ, ವೈದ್ಯರಾಗಿ, ಯೋಗಿಗಳಾಗಿ, ಪವಾಡ ಪುರುಷರಾಗಿ ಪ್ರಸಿದ್ಧರಾಗಿದ್ದರಂತೆ. ಇವರ ಗೌರವಾರ್ಥ ಇಲ್ಲಿ ವರ್ಷಂಪ್ರತಿ ಉತ್ಸವ ನಡೆಯುತ್ತದೆ.

**ಇತರೆ :** ಒಂದು ಕಾಲದಲ್ಲಿ ಇಡೀ ಭಾರತದಲ್ಲೇ ವೈಭವದ ನಗರವಾಗಿ ಬೆಳೆದಿದ್ದ ಬಿಜಾಪುರದ ಎಲ್ಲೆಡೆಯಲ್ಲಿಯೂ ಇಂದು ಆ ಕಾಲದ ಭವ್ಯ ಕಟ್ಟಡಗಳ ಅವಶೇಷಗಳನ್ನು ಕಾಣಬಹುದು. ಕೇಂದ್ರ ಪುರಾತತ್ತ್ವ ಇಲಾಖೆ ಮುಖ್ಯವಾದ ಕೆಲವನ್ನು ಆರಿಸಿ ರಕ್ಷಿಸಿರುವವುಗಳ ಸಂಖ್ಯೆಯೇ ಸು. 300ರಷ್ಟು. ಮೇಲೆ ವಿವರಿಸಿರುವವುಗಳಲ್ಲದೆ ಎರಡು ಅಂತಸ್ತುಗಳಲ್ಲಿ ಕಟ್ಟಲಾಗಿರುವ ಅಂದ ಮಸೀದಿ (1608), ಔರಂಗಜೇಬ್ ಕಟ್ಟಿಸಿದ ಈದ್ಗಾ (1687), ಚಾಂದಬೀಬಿ ಕಟ್ಟಿಸಿದ ಬುಖಾರಿ ಮಸೀದಿ, ಛೋಟಾ ಆಸಾರ್ ಎಂಬ ಚಿಕ್ಕ ಮಸೀದಿ-ಇವೂ ಉಲ್ಲೇಖಾರ್ಹ. ಬಿಜಾಪುರದ ಈಗಿನ ಪ್ರವಾಸಿಮಂದಿರ ಸಹ ಮೂಲತಃ ಆದಿಲ್‌ಶಾಹೀ ಕಾಲದ ಕಟ್ಟಡ, ಯಾಕೂತ್ ದಾಬೂಲಿ ಎಂಬುವನ ಮಹಲ್.

ಈ ಪ್ರಾಚೀನ ಕಟ್ಟಡಗಳಲ್ಲದೆ ಬಿಜಾಪುರದಲ್ಲಿ ಈಚೆಗೆ ರಚಿತವಾಗಿರುವ ಬಾಲಾಜಿ ಮಂದಿರ, ಮಹಾಲಕ್ಷ್ಮಿ ದೇವಾಲಯ, ನರಸಿಂಹ ದೇವಾಲಯ, ರಾಮಮಂದಿರ, ಸಿದ್ಧೇಶ್ವರ ದೇವಾಲಯ ಮೊದಲಾದುವೂ ಸ್ಥಳೀಯವಾಗಿ ಪ್ರಸಿದ್ಧವಾಗಿವೆ. **(ಎಸ್.ಎನ್.)**

**ಬಿಜಾಪುರೆ, ಆರ್. ಕೆ.**: 1917-. ಸುಪ್ರಸಿದ್ಧ ಹಿಂದುಸ್ಥಾನಿ ಹಾರ್ಮೋನಿಯಮ್ ಕಲಾವಿದ. ಬೆಳಗಾಂವಿ ಜಿಲ್ಲೆಯ ಕಾಗವಾಡದಲ್ಲಿ 1917 ಜನವರಿ 7 ರಂದು ಜನಿಸಿದರು. ಇವರ ಪೂರ್ಣ ಹೆಸರು ರಾಂಭಾವು ಕಲ್ಲೋಪಂತ ಬಿಜಾಪುರೆ. ಇವರ ತಾಯಿ ರುಕ್ಮಿಣಿಬಾಯಿ, ತಂದೆ ಕಲ್ಲೋಪಂತ ಬಿಜಾಪುರೆಯವರು ನಾಟಕಕಾರ, ರಚನಕಾರ ಮತ್ತು ಸಂಯೋಜಕರು. ಹೆಸರಾಂತ ಪ್ರಸಿದ್ಧ ಹಾರ್ಮೋನಿಯಂ ವಾದಕರಾಗಿದ್ದ ಅಣ್ಣಿಗೇರಿ ಮಲ್ಲಯ್ಯ ಎಂಬುವರು ಕಲ್ಲೋಪಂತರ ರಚನೆಗಳನ್ನು ಹಾರ್ಮೋನಿಯಮ್ ಹಾಗೂ ಆರ್ಗನ್‌ಗಳಲ್ಲಿ ನುಡಿಸಿ, ಅವನ್ನು ಪ್ರಸಿದ್ಧಿಗೆ ತಂದರು. ಮಗ ರಾಂಭಾವು ಬಿಜಾಪುರೆಯ ಮೇಲೆ ಮನೆಯ ಸಂಗೀತ ವಾತಾವರಣ ಪ್ರಭಾವಬೀರಿತು. ಹಾರ್ಮೋನಿಯಂ ನಾದ ಮಾಧುರ್ಯ ಇವರ ಮೇಲೆ ಮೋಡಿ ಮಾಡಿ ಕಲಿಯುವ ಆಸಕ್ತಿ ಮೂಡಿಸಿತು. ಇವರು ಅಣ್ಣಿಗೇರಿಯವರಿಂದ ಹಾರ್ಮೋನಿಯಮ್‌ನಲ್ಲಿ ಬಾಲಪಾಠವನ್ನು ಕಲಿತರು. ಪಂಡಿತ ರಾಜವಾಡೆ, ಗೋವಿಂದರಾವ್ ಗಾಯಕವಾಡ್ ಮತ್ತು ಪಂಡಿತ ಹನುಮಂತರಾವ್ ವಾಲ್ವೇಕರ್ ಅವರಲ್ಲಿ ಕಲಿಕೆ ಮುಂದುವರಿಸಿದರು. ಬಿಜಾಪುರೆ ಅವರಿಗೆ ಒಳ್ಳೆಯ ಗಾಯಕರರಾಗಬೇಕೆಂಬ ಆಸೆಯಿತ್ತು. ಆದರೆ ಕಂಠದ ತೊಂದರೆಯಿಂದಾಗಿ ಆ ಆಸೆ ನೆರವೇರಲಿಲ್ಲ. ಆದರೂ ಹೆಸರಾಂತ ಪಂಡಿತ ರಾಮಕೃಷ್ಣ ಬುವಾವಾಜೆ, ಪಂಡಿತ ಶಿವರಾಂ ಬುವಾವಾಜೆ, ಪಂಡಿತ ಕಾಗಲ್‌ಕರ್ ಬುವಾ ಹಾಗೂ ಪಂಡಿತ ಉತ್ತೂಕರ್ ಬುವಾ ಅವರಿಂದ ಹಲವಾರು ವರ್ಷ ಹಾಡುಗಾರಿಕೆಯನ್ನು ಅಭ್ಯಾಸ ಮಾಡಿದರು. ಹಾಡುಗಾರಿಕೆಯಲ್ಲಿ ಪಡೆದ ಗಟ್ಟಿ ಶಿಕ್ಷಣದಿಂದ ತಮ್ಮದೇ ಆದ ಗಾಯನ ಶೈಲಿಯನ್ನು ಹಾರ್ಮೋನಿಯಮ್ ನುಡಿಸುವಲ್ಲಿ ಕಂಡುಕೊಳ್ಳಲು ಸಹಾಯವಾಯಿತು.

ಮುಂದೆ ಹಾರ್ಮೋನಿಯಮ್ ನುಡಿಸುವಿಕೆಯೇ ತಮ್ಮ ಜೀವನದ ಧ್ಯೇಯವೆಂದು ಪರಿಗಣಿಸಿದ ಇವರು ಅದಕ್ಕಾಗಿ ಹಗಲಿರುಳು ಸಾಧನೆ ಮಾಡಿದರು. ಚಿಂತನ ಮಂಥನದಿಂದ ಹೊಸಹೊಸ ಆವಿಷ್ಕಾರಗಳನ್ನು ಕಂಡುಕೊಂಡರು. ತನಿ ಹಾರ್ಮೋನಿಯಮ್ ವಾದಕರಾಗಿಯೂ ಪಕ್ಕವಾದ್ಯಗಾರರಾಗಿಯೂ ಪ್ರಸಿದ್ಧಿ ಪಡೆದರು. ಇವರ ನುಡಿಸುವಿಕೆಗೆ ರಸಿಕಜನ ಮಾರುಹೋದರು. ಬೆಂಗಳೂರು, ಕೊಲ್ಲಾಪುರ, ಹುಬ್ಬಳ್ಳಿ, ಧಾರವಾಡ,

ಪುಣೆ ಹೈದರಾಬಾದ್‌ಗಳಲ್ಲೂ ಆಕಾಶವಾಣಿ ಕೇಂದ್ರಗಳಲ್ಲೂ ಇವರು ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಭಾರತದಲ್ಲಿ ನಡೆದ ರಷ್ಯ ಉತ್ಸವದಲ್ಲಿ ರಷ್ಯದ ಪ್ರತಿನಿಧಿಗಳು ಇವರ ಕೈಚಳಕಕ್ಕೆ ಮಾರುಹೋದುದಲ್ಲದೆ ಕಾರ್ಯಕ್ರಮದ ವೀಡಿಯೋ ಚಿತ್ರಣವನ್ನೂ ಮಾಡಿಕೊಂಡರು.

ಪಕ್ಕವಾದ್ಯಗಾರರಾಗಿ ಮುಖ್ಯಗಾಯಕ, ಗಾಯಕಿಯರು ಅಥವಾ ವಾದ್ಯ ಗಾರರ ಜೊತೆಯಲ್ಲಿ ಆಯಾಯ ಕಲಾವಿದರ ಮನೋಧರ್ಮವನ್ನು ಅನುಸರಿಸಿ ಅದಕ್ಕೆ ತಕ್ಕಂತೆ ನುಡಿಸುವ ಜಾಣ್ಮೆ ಇವರದಾಗಿತ್ತು. ಮುಖ್ಯ ಘರಾನಗಳ ಎಲ್ಲ ಹೆಸರಾಂತ ಕಲಾವಿದರ ಜೋಡಿಯಾಗಿಯೂ ಇವರು ಹಾರ್ಮೋನಿಯಮ್ ನುಡಿಸಿದ್ದಾರೆ. ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಪಕ್ಕವಾದ್ಯಗಾರಗಾಗಿ ಪಂಡಿತರಾದ ರಾಮಕೃಷ್ಣ ಬುವಾ ವಾಜೆ, ಶಿವರಾಂ ಬುವಾ ವಾಜೆ, ಕಾಗತಕರ್ ಬುವಾ, ಡಿ.ವಿ. ಪ್ರಲೂಸ್ಕರ್, ಉತುರ್ ಕರ್ ಬುವಾ, ಅಮೀರ ಖಾನ್, ಗುಲಾಂ ಅಲಿ ಖಾನ್, ಗಂಗೂಬಾಯಿ ಹಾನಗಲ್, ಭೀಮಸೇನಜೋಶಿ, ಬಸವರಾಜರಾಜಗುರು, ಮಲ್ಲಿಕಾರ್ಜುನ ಮನ್ಸೂರ್, ಕುಮಾರಗಂಧರ್ವ, ಮಾಣಿಕವರ್ಮಾ, ಕಿಶನ್ ಅಮೋನ್‌ಕರ್, ಮಾಲಿನಿ ರಾಜೂರ್‌ಕರ್, ಪ್ರಭಾಅತ್ರೆ ಇವರುಗಳೊಂದಿಗೆ ಭಾಗವಹಿಸಿದ್ದಾರೆ.

ಬಿಜಾಪುರೆಯವರು ಗುರುಗಳಿಂದ ಅನೇಕ ಚೀಸ್‌ಗಳು, ಬಂದಿಶ್‌ಗಳು ಹಾಗೂ ರಚನೆಗಳನ್ನು ಕಲಿತು, ಬಯಸಿದವರಿಗೆ ಈ ಅಮೂಲ್ಯವಾದ ವಿದ್ಯೆಯ ಬೋಧಿಸಿ ಸಂಗೀತದ ಬೆಳವಣಿಗೆಗೆ ಸಹಾಯಕರಾಗಿದ್ದಾರೆ. ಇವರು 1938ರಲ್ಲಿ ಶ್ರೀರಾಮ ಸಂಗೀತ ಮಹಾವಿದ್ಯಾಲಯ ಎಂಬ ಸಂಗೀತ ಸಂಸ್ಥೆಯನ್ನು ಸ್ಥಾಪಿಸಿದರು. ಆ ಮೂಲಕ ಹಲವು ಶಿಷ್ಯರಿಗೆ ವಿದ್ಯಾದಾನ ಮಾಡಿದರು. ಬಡವರಿಗೆ ಅಂಗವಿಕಲರಿಗೆ, ನಿರ್ಗತಿಕರಿಗೆ ಹಣ ಪಡೆಯದೆ ಪಾಠ ಹೇಳಿರುವುದು ಇವರ ಹೆಚ್ಚುಗಾರಿಕೆ. ಸುಧಾಂಶೂ ಕುಲಕರ್ಣಿ, ರವೀಂದ್ರಮಾನೆ, ರವೀಂದ್ರ ಕಾಟೋಟಿ, ಶ್ರೀಧರ ಕುಲಕರ್ಣಿ, ಮಾಣಿಕ್ ಪಂಡಿತರಾವ್, ಅರ್ಚನ ಬೆಳಗುಂಡಿ, ರೋಹಿಣಿ ಕುಲಕರ್ಣಿ, ಆಶಾಜೋಶಿ ಮೊದಲಾದವರು ಇವರ ಶಿಷ್ಯವರ್ಗಕ್ಕೆ ಸೇರಿದವರು. ಇವರೆಲ್ಲ ದೂರದರ್ಶನ ಹಾಗೂ ಆಕಾಶವಾಣಿ ಕಲಾವಿದರು.

ಬಿಜಾಪುರೆ ಅವರ ಸಂಗೀತ ಸಾಧನೆಗೆ ಅನೇಕ ಗೌರವ, ಪ್ರಶಸ್ತಿಗಳು ಸಂದಿವೆ. ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ (1985), ಬೆಂಗಳೂರಿನ ಹಿಂದುಸ್ಥಾನಿ ಸಂಗೀತ ಕಲಾಕಾರ ಮಂಡಲಿಯ ನಾದಶ್ರೀ ಪುರಸ್ಕಾರ (1992), ಪುಣೆಯ ಗಂಧರ್ವ ಮಹಾವಿದ್ಯಾಲಯದ ಸಂಘಟಕರ್ ಪುರಸ್ಕಾರ (1999), ಮೈಸೂರಿನ ದಸರ ಉತ್ಸವದ ಸಂದರ್ಭದಲ್ಲಿ ನೀಡಲಾದ ರಾಜ್ಯ ಸಂಗೀತ ವಿದ್ವಾನ್ ಪುರಸ್ಕಾರ (2001), ಬೆಳಗಾಂವಿಯ ಸುಶೀಲ್ ಸಂವಾದಿನಿ ಸಂವರ್ಧನದ ಸಂವಾದಿನಿ ಸಾಧಕ ಪುರಸ್ಕಾರ (2002) ಮುಂತಾದವುಗಳನ್ನು ಹೆಸರಿಸಬಹುದು. **(ಎಚ್.ಆರ್.ಎಲ್.)**

**ಬಿಜ್ಜಳ II:** ಸು. 1130–68. ಕರ್ನಾಟಕದ ಕಳಚುರಿ ಸಾಮ್ರಾಜ್ಯದ ಸ್ಥಾಪಕ. ತರಿಕಾಡ ಬಿಜ್ಜಳ ಎಂದೂ ಇವನ ಹೆಸರು. ಚಾಳುಕ್ಯ ಸಾಮಂತನಾಗಿದ್ದ ಮಹಾಮಂಡಲೇಶ್ವರ ಪೆರ್ಮಾಡಿ ಇವನ ತಂದೆ.

ಮೊದಲು ಚಾಳುಕ್ಯ 6ನೆಯ ವಿಕ್ರಮಾದಿತ್ಯ, ಅನಂತರ ಭೂಲೋಕಮಲ್ಲ, ಇಮ್ಮಡಿ ಜಗದೇಕಮಲ್ಲ ಮತ್ತು ಮುಮ್ಮಡಿ ತೈಲರ ಸಾಮಂತತ್ವವನ್ನು ವಹಿಸಿದ್ದ ಈತ ಕೊನೆಗೆ ಸ್ವತಂತ್ರನಾದ. ಪ್ರಾಯಶಃ 1127ರ ಹೊತ್ತಿಗೆ ತನ್ನ ತಂದೆಯ ಜೀವಿತ ಕಾಲದಲ್ಲೇ ಇವನು ವಿಕ್ರಮಾದಿತ್ಯನ ಅಧೀನದಲ್ಲಿ ಅಧಿಕಾರಿಯಾಗಿದ್ದಂತೆ ತೋರುತ್ತದೆ. 1136ರ ಹೊತ್ತಿಗೆ ಮಹಾಮಂಡಲೇಶ್ವರ ಪದವಿಯನ್ನು ಗಳಿಸಿದ್ದ. 1142ರಲ್ಲಿ ಕರಹಾಡ 4000 ಪ್ರಾಂತ್ಯದ ಅಧಿಪತಿಯಾಗಿದ್ದ. ಭೂಲೋಕಮಲ್ಲನ ಸೋದರಳಿಯನಾದ ಈತ ಚಾಳುಕ್ಯ ರಾಜಕುಮಾರರಂತೆ ಮಹಾಮಂಡಲೇಶ್ವರ ಕುಮಾರ ಬಿಜ್ಜಳದೇವರಸ ಎಂದು 1147ರ ಒಂದು ಶಾಸನದಲ್ಲಿ ಕರೆದುಕೊಂಡಿದ್ದಾನೆ. ಆ ವರ್ಷದಲ್ಲಿ ತರ್ದವಾಡಿ 1000 ಪ್ರಾಂತ್ಯವೂ ಇವನ ಅಧೀನದಲ್ಲಿತ್ತು.

1149ರ ಹೊತ್ತಿಗೆ ಚಾಳುಕ್ಯ ಸಾಮ್ರಾಟ ಜಗದೇಕಮಲ್ಲ ಮೃತನಾಗಿ ಮುಮ್ಮಡಿ ತೈಲ ಪಟ್ಟಕ್ಕೆ ಬಂದಿದ್ದ. ಈ ವೇಳೆಗಾಗಲೇ ಬಲಿಷ್ಠನಾಗಿದ್ದ ಬಿಜ್ಜಳ ಸ್ವತಂತ್ರನಾಗುವ ಪ್ರಯತ್ನ ನಡೆಸಿದ. ಮೊದಲು ಚಕ್ರವರ್ತಿಗೂ ಇವನಿಗೂ ನೇರ ಘರ್ಷಣೆಯೇನೂ ನಡೆಯಲಿಲ್ಲ. ಆದರೆ ಬಿಜ್ಜಳ ಸಾಮಂತತ್ವದ ಸೂಚಕವಾದ ಮಹಾಮಂಡಲೇಶ್ವರ ಪದವನ್ನು ತನ್ನ ಪ್ರಶಸ್ತಿಯಿಂದ ಕೈಬಿಟ್ಟ. ಕ್ರಮೇಣ ಸಾಮ್ರಾಟತ್ವವನ್ನು ಮೆರೆಯುವ ಭುಜಬಲಮಲ್ಲ, ತ್ರಿಭುವನ ಮಲ್ಲ, ಭುವನೈಕವೀರ, ಭುಜಬಲ ಚಕ್ರವರ್ತಿ ಎಂಬ ಬಿರುದುಗಳನ್ನು ಧರಿಸಿದ. ಅನಂತರದ ತನ್ನ ರಾಜಕೀಯ ದಾಖಲೆಗಳಲ್ಲಿ ತನ್ನ ಆಳ್ವಿಕೆಯ ಸಂವತ್ಸರಗಳನ್ನೇ ಕಾಲಸೂಚಕವಾಗಿ ಬಳಸಲಾರಂಭಿಸಿದ. 1153ರ ಹೊತ್ತಿಗೆ ಮುಮ್ಮಡಿ ತೈಲ ಚಾಳುಕ್ಯ ಸಾಮ್ರಾಟನಾಗಿದ್ದರೂ ಬಿಜ್ಜಳ ಸ್ವತಂತ್ರನಾಗಿದ್ದ.

ದಿನದಿನಕ್ಕೆ ಅನೇಕ ಚಾಳುಕ್ಯ ಸಾಮಂತರನ್ನು ತನ್ನ ಕಡೆ ಸೇರಿಸಿಕೊಂಡು ತನ್ನ ಪ್ರಭಾವವನ್ನು ವಿಸ್ತರಿಸಿದ. ಎದುರುಬಿದ್ದ ಇತರ ಸಾಮಂತರನ್ನು ಸೋಲಿಸಿಯೋ ನಿರ್ನಾಮ ಮಾಡಿಯೋ ತನ್ನ ಆಳ್ವಿಕೆಯನ್ನು ನಿಷ್ಕಂಟವಾಗಿಸಿಕೊಂಡ. ಇವನ ಮಗ ಸೋವಿದೇವನ ಶಾಸನಗಳಲ್ಲಿ ಬಿಜ್ಜಳ ಹಲವು ಚಾಳುಕ್ಯ ರಾಜವಂಶೀಯರನ್ನು ಕೊಂದು ಸಾಮ್ರಾಜ್ಯ ಪಡೆದನೆಂದು ಹೇಳಿರುವುದರಿಂದ ಹೀಗೆ ಹತರಾದವರಲ್ಲಿ ಚಾಳುಕ್ಯ ಸಾಮ್ರಾಟ ಮುಮ್ಮಡಿ ತೈಲನೂ ಒಬ್ಬನಿರಬೇಕೆಂದು ಊಹಿಸಲಾಗಿದೆ. 1162ರ ಹೊತ್ತಿಗೆ ಚಾಳುಕ್ಯ ಸಾಮ್ರಾಜ್ಯದ ಬಹುಭಾಗ ಇವನ ಅಧೀನಕ್ಕೆ ಬಂತು.

ಹಲವು ತಂತ್ರಗಳಿಂದ ಬಿಜ್ಜಳ ಸಾಮ್ರಾಜ್ಯವನ್ನು ಸಾಧಿಸಿಕೊಂಡರೂ ಇವನ ಆಳ್ವಿಕೆ ಸುಗಮವಾಗಿರಲಿಲ್ಲ. ಕೇವಲ ಆರು ವರ್ಷಗಳಷ್ಟು ಹ್ರಸ್ವವಾಗಿದ್ದ ಇವನ ಸಾಮ್ರಾಟತ್ವದ ಕಾಲದಲ್ಲಿ ಅಧಿಕಾರ ಕಳೆದುಕೊಂಡ ಹಲವು ಚಾಳುಕ್ಯ ವಂಶೀಯರು ಮತ್ತು ಸಾಮಂತರು ತಮ್ಮ ಬಲಸಂವರ್ಧನೆಯಲ್ಲಿ ತೊಡಗಿದ್ದರು. ಇದೇ ಕಾಲದಲ್ಲಿ ವೀರಶೈವಧರ್ಮವನ್ನು ಪ್ರತಿಪಾದಿಸಿದ ಬಸವಣ್ಣನವರ ಪ್ರಭಾವವೂ ಬೆಳೆಯಿತು. ಹಲವು ಕಾರಣಗಳಿಂದ ಬಿಜ್ಜಳನಿಗೂ ಬಸವಣ್ಣನವರ ಅಸಂಖ್ಯ ಅನುಯಾಯಿಗಳಿಗೂ ವಿರಸ ಉಂಟಾಗಿ ಬಿಜ್ಜಳ ಇಕ್ಕಟ್ಟಿನ ಸ್ಥಿತಿಗೆ ಸಿಕ್ಕಿದ್ದ.

ಸು. 1167ರ ಹೊತ್ತಿಗೆ ರಾಜ್ಯಾಧಿಕಾರವನ್ನು ತನ್ನ ಮಗ ರಾಯಮುರಾರಿ ಸೋವಿದೇವನಿಗೆ ವಹಿಸಿದ. ಈತ ಸು. 1168ರಲ್ಲಿ ಮೃತನಾದನೆಂದು ತೋರುತ್ತದೆ.

ಬಿಜ್ಜಳನ ರಾಜ್ಯಸಾಧನೆಯ ಕಾರ್ಯದಲ್ಲಿ ಕಸಪಯ್ಯನೆಂಬ ದಂಡನಾಯಕ ಮುಖ್ಯಪಾತ್ರ ವಹಿಸಿದ್ದ. 1150ರ ಹೊತ್ತಿಗೆ ಬನವಾಸಿ ಪ್ರಾಂತ್ಯವನ್ನು ಆಳುತ್ತಿದ್ದ. ಅನಂತರ ಇವನ ಸಂಬಂಧಿ ಬಂದಣಿಕೆಯ ಬಮ್ಮರಸ ಇವನ ಅಧೀನದಲ್ಲೇ ಆ ಪ್ರಾಂತ್ಯದ ಅಧಿಕಾರವಹಿಸಿದ್ದ.

ಬಿಜ್ಜಳನಿಗೆ ಏಚಲದೇವಿ ಎಂಬ ಹೆಂಡತಿಯೂ ಎಂಟು ಮಕ್ಕಳೂ ಇದ್ದರು. ಒಬ್ಬ ಮಗಳು ಸಿರಿಯಾದೇವಿ ಎಂಬುವವಳು ಸಿಂದವಂಶದ

ಚಾವುಂಡನನ್ನು ಮದುವೆಯಾಗಿದ್ದಳು. ಇನ್ನೊಬ್ಬ ಮಗಳು ಬರ್ಮರಸನನ್ನು ವರಿಸಿದ್ದಳು. ಬಿಜ್ಜಳನ ಗಂಡುಮಕ್ಕಳಲ್ಲಿ ವಜ್ರದೇವ ತಂದೆಗಿಂತಲೂ ಮೊದಲೇ ಸತ್ತನೆಂದು ತೋರುತ್ತದೆ. ಈ ವಜ್ರದೇವನಿಗೆ ಕರ್ಣನೆಂಬ ಮಗನಿದ್ದ. ರಾಯಮುರಾರಿ ಸೋವಿದೇವ, ಮಲ್ಲಿಕಾರ್ಜುನ, ಸಂಕಮ, ಆಹವಮಲ್ಲ ಮತ್ತು ಸಿಂಘಣ ಬಿಜ್ಜಳನ ಇತರ ಪುತ್ರರು.

ಬಿಜ್ಜಳನ ಬಗ್ಗೆ ಅನಂತರಕಾಲದ ವೀರಶೈವ ಮತ್ತು ಜೈನಸಾಹಿತ್ಯ ಕೃತಿಗಳಲ್ಲಿ ದೊರಕುವ ಹಲವು ಮಾಹಿತಿಗಳು ಚರಿತ್ರಕಾರರಲ್ಲಿ ಬಹು ಚರ್ಚಾಸ್ಪದ ವಿಷಯಗಳಾಗಿವೆ. ಬಿಜ್ಜಳನು ಜೈನ, ಹೊಸದಾಗಿ ಬೆಳೆಯುತ್ತಿದ್ದ ವೀರಶೈವ ಮತದ ಅನುಯಾಯಿಗಳು ಈತನ ಕೊಲೆಗೈದರು ಎಂದು ಒಂದು ಹೇಳಿಕೆಯಾದರೆ, ಈತ ವೀರಶೈವ ಅನುಯಾಯಿಗಳಲ್ಲಿ ಹಲವರನ್ನು ಕೊಂದು ಆ ಮತವನ್ನು ತುಳಿಯಲು ಪ್ರಯತ್ನಿಸಿದ ಎಂದು ಇನ್ನೊಂದು ಹೇಳಿಕೆ. ಈ ಎರಡು ಹೇಳಿಕೆಗಳೂ ಬಿಜ್ಜಳ ವೀರಶೈವ ಧರ್ಮದ ವಿರೋಧಿಯಾಗಿದ್ದ ಎಂಬುದಷ್ಟನ್ನು ಮಾತ್ರ ಸ್ಥಿರಪಡಿಸುತ್ತವೆ; ವಿವರಗಳು ಪ್ರಶ್ನಾರ್ಹ. ಬಿಜ್ಜಳ ಪರಂಪರಾನುಗತ ವರ್ಣಾಶ್ರಮ ಆಚಾರಗಳಿಗೆ ಮನ್ನಣೆಯಿತ್ತಿದ್ದ. ಪಾಶುಪತ ಶೈವಸಂಪ್ರದಾಯದ ನಿಷ್ಠ ಅನುಯಾಯಿಯಾಗಿದ್ದನಾಗಿ ಬಸವಣ್ಣನವರ ನೂತನ ವೀರಶೈವ ಮತ ಪೂರ್ವಸಂಪ್ರದಾಯದ ರೀತಿನೀತಿಗಳನ್ನು ಪ್ರತಿಭಟಿಸಿದ್ದರಿಂದ, ರಾಜ್ಯಶಾಸಕನಾದ ಬಿಜ್ಜಳ ಇದನ್ನು ಸಹಿಸದವನಾಗಿ ನವಮತೀಯರನ್ನು ಶಿಕ್ಷಿಸಲು ಉದ್ಯುಕ್ತನಾದ ಎಂದು ಇತಿಹಾಸಕಾರರಾದ ಪಿ.ಬಿ. ದೇಸಾಯಿಯವರು ಅಭಿಪ್ರಾಯಪಟ್ಟಿದ್ದಾರೆ. (ಪಿ.ಬಿ.ಡಿ.)

**ಬಿಡದಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಹೋಬಳಿ ಕೇಂದ್ರ. ಬೆಂಗಳೂರು–ಮೈಸೂರು ರಸ್ತೆಯಲ್ಲಿ ರಾಮನಗರಕ್ಕೆ 16 ಕಿಮೀ ದೂರದಲ್ಲಿದೆ. ಇದು ಬೆಂಗಳೂರು–ಮೈಸೂರು ರೈಲುಮಾರ್ಗದ ಒಂದು ನಿಲ್ದಾಣ. ಈ ಊರು ಬೆಂಗಳೂರಿಗೆ ಸಮೀಪದಲ್ಲಿರುವುದರಿಂದ ಇಲ್ಲಿ ಕೈಗಾರಿಕೆಗಳು ಸ್ಥಾಪಿತವಾಗುತ್ತಿದ್ದು ಊರು ದಿನೇ ದಿನೇ ವಿಸ್ತರಿಸುತ್ತಿದೆ. ಬೆಂಗಳೂರಿನಿಂದ ನಗರ ಸಾರಿಗೆ ವ್ಯವಸ್ಥೆ ಇದೆ. ಅತಿ ಶೀಘ್ರವಾಗಿ ನಗರೀಕರಣಕ್ಕೊಳಗಾಗುತ್ತಿದೆ. ರೇಷ್ಮೆ ಸಾಕಣೆ ಇಲ್ಲಿಯ ಮುಖ್ಯ ಕಸಬು. (ಡಿಇ.ಕೆ.ಆರ್.)

**ಬಿಡಾರಂ ಕೃಷ್ಣಪ್ಪ:** 1866–1931. ಸುಪ್ರಸಿದ್ಧ ಸಂಗೀತ ವಿದ್ವಾಂಸರು. ಇವರು ಜನಿಸಿದ್ದು ಮೈಸೂರಿನಲ್ಲಿ. ತಂದೆ ವಿಶ್ವನಾಥಯ್ಯ, ತಾಯಿ ಸರಸ್ವತಮ್ಮ, ಅಣ್ಣ ಸುಬ್ಬರಾಯ. ಕೃಷ್ಣಪ್ಪನವರ ತಂದೆ ವಿಶ್ವನಾಥಯ್ಯನವರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಕ್ಷಗಾನ ತಂಡದವರ ಜೊತೆಯಲ್ಲಿ ನಂದಳಿಕೆ ಗ್ರಾಮದಿಂದ ಮೈಸೂರಿಗೆ ಬಂದು ಬಿಡಾರ ಹೂಡಿದುದರಿಂದ ಈ ತಂಡದವರಿಗೆ ಬಿಡಾರದವರೆಂದು ಹೆಸರಾಯಿತು. ಹಾಗಾಗಿ ಕೃಷ್ಣಪ್ಪ ಎಂಬ ಹೆಸರಿನ ಹಿಂದೆ ಬಿಡಾರಂ ಎಂಬ ಪದ ಸೇರಿ ಬಿಡಾರಂ ಕೃಷ್ಣಪ್ಪನವರೆಂದು ಪ್ರಸಿದ್ಧರಾದರು.

ಕೃಷ್ಣಪ್ಪನವರು ಚಿಕ್ಕ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡರು. ಅಣ್ಣ ಸುಬ್ಬರಾಯರ ಜೊತೆಯಲ್ಲಿ ಕೋಟೆಯ ಆಂಜನೇಯಸ್ವಾಮಿ ದೇವಾಲಯದ ಬಳಿ ದೇವರ ನಾಮಗಳನ್ನು ಹಾಡಿ ಭಕ್ತಾದಿಗಳು ಕೊಡುತ್ತಿದ್ದ ಹಣದಲ್ಲಿ ಜೀವನ ಸಾಗಿಸುತ್ತಿದ್ದರು. ಅನಂತರ ಇವರಿಗೆ ಮೈಸೂರು ಅರಮನೆಯ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂಬ ನಾಟಕ ಸಂಘಕ್ಕೆ 5 ರೂಪಾಯಿ ಸಂಬಳದ ಮೇಲೆ ಸೇರುವ ಅವಕಾಶ ಒದಗಿ ಬಂತು. ಕೆಲವು ಕಾಲ ಕಳೆದ ಮೇಲೆ ಆ ನಾಟಕ ಸಭೆಯ ಮುಖ್ಯಸ್ಥರಾದರು. ಇವರ ಗಾಯನಕ್ಕೆ ಮಾರು ಹೋದ ಸಾಹುಕಾರ ತಿಮ್ಮಯ್ಯನವರು ಆಸ್ಥಾನ ವಿದ್ವಾನ್ ಗಿರಿಭಟ್ಟರ ತಮ್ಮಯ್ಯನವರಲ್ಲಿ ಇವರು ಸಂಗೀತ ಕಲಿಯುವಂತೆ ಏರ್ಪಾಟು ಮಾಡಿದರು. ಅನಂತರ ಕರಿಗಿರಿರಾಯರಲ್ಲೂ ವೀಣೆ ಶೇಷಣ್ಣನವರಲ್ಲೂ ಸಂಗೀತಾಭ್ಯಾಸವನ್ನು ಮುಂದುವರೆಸಿದ ಕೃಷ್ಣಪ್ಪನವರು ಸಂಗೀತದಲ್ಲಿ ಒಳ್ಳೆಯ ಪಾಂಡಿತ್ಯವನ್ನು ಪಡೆದರು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಕೃಪೆಗೆ ಪಾತ್ರರಾಗಿ ಆಸ್ಥಾನ ವಿದ್ವಾಂಸರಾದರು. ಅನಂತರ ಗಾನವಿಶಾರದ ಎಂಬ ಬಿರುದಿನಿಂದ ಸನ್ಮಾನಿತರಾದರು.

ತಮ್ಮ ಶಾರೀರ ಸಂಪತ್ತಿನಿಂದಲೂ ಪಾಂಡಿತ್ಯದಿಂದಲೂ ಮೈಸೂರಿನಲ್ಲೇ ಅಲ್ಲದೆ ನೆರೆಯ ಪ್ರಾಂತ್ಯಗಳಾದ ತಿರುಚ್ಚಿರಾಪಳ್ಳಿ, ತಂಜಾವೂರು, ಮಧುರೆ, ಮದರಾಸು ಮೊದಲಾದೆಡೆಗಳಲ್ಲಿ ಕಚೇರಿ ನಡೆಸಿ ಕೀರ್ತಿಗಳಿಸಿದರು. ಶಂಕರಾಭರಣ, ಕಲ್ಯಾಣಿ, ತೋಡಿ, ಭೈರವಿ– ಇವರ ಅತಿಪ್ರಿಯವಾದ ರಾಗಗಳಾಗಿದ್ದವು. ನಟನ ಕಲೆಯಲ್ಲೂ ಪರಿಣತರಾಗಿದ್ದ ಇವರು ಅರಮನೆಯ ನಾಟಕ ಕಂಪನಿಯ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಕೃಷ್ಣಪ್ಪನವರು ಉದಾರ ದಾನಿಗಳೂ ಆಗಿದ್ದರು. ಮೈಸೂರಿನಲ್ಲಿ ಪ್ರಸನ್ನ ಸೀತಾರಾಮ ಮಂದಿರವನ್ನು ಕಟ್ಟಿಸಿ ಅಲ್ಲಿ ಶ್ರೀರಾಮನ ವಿಗ್ರಹವನ್ನು ಪ್ರತಿಷ್ಠಾಪಿಸಿದರು (1928). ಈ ರಾಮಮಂದಿರದಲ್ಲಿ ನಡೆಯುವ ರಾಮೋತ್ಸವ ಇಂದಿಗೂ ಪ್ರಸಿದ್ಧವಾದುದಾಗಿದೆ. ಒಂದು ಸಂಗೀತಶಾಲೆಯನ್ನು ಕಟ್ಟಿಸಬೇಕೆಂಬುದೂ ಈಡೇರಲಿಲ್ಲ.

ಕೃಷ್ಣಪ್ಪನವರ ಶಿಷ್ಯವೃಂದ ಅಪಾರವಾಗಿತ್ತು. ಟಿ. ಚೌಡಯ್ಯ, ಆರ್. ಆರ್. ಕೇಶವಮೂರ್ತಿ, ಬಿ. ದೇವೇಂದ್ರಪ್ಪ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಎ.ಕೆ. ಸುಬ್ಬರಾವ್, ಟಿ. ಗುರುರಾಜಪ್ಪ, ಟಿ. ಪುಟ್ಟಸ್ವಾಮಯ್ಯ, ಟಿ.ಎಂ. ಪುಟ್ಟಸ್ವಾಮಯ್ಯ, ಚಂದ್ರಮುಖಿ, ನಾಗಮ್ಮ, ಶಾರದಮ್ಮ ಮೊದಲಾದವರು ಇವರಲ್ಲಿ ಶಿಕ್ಷಣ ಪಡೆದ ಪ್ರಸಿದ್ಧ ಕಲಾವಿದ ಕಲಾವಿದೆಯರು. ಕೃಷ್ಣಪ್ಪನವರು ಶ್ರೀಕೃಷ್ಣ ಎಂಬ ಮುದ್ರೆಯಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಇವರು 1931 ಜುಲೈ 27ರಂದು ಮೈಸೂರಿನಲ್ಲಿ ನಿಧನರಾದರು. (ವಿ.ಆರ್.)

**ಬಿನ್ನಮಂಗಲ:** ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿ ನೆಲಮಂಗಲದಿಂದ ಸುಮಾರು 3 ಕಿಮೀ ಪೂರ್ವಕ್ಕಿರುವ ಒಂದು ಸಣ್ಣ ಗ್ರಾಮ. ಇಲ್ಲಿನ ಮುಕ್ತೇಶ್ವರ ದೇವಾಲಯ ಚೋಳರ ಕಾಲದ ಸುಂದರ ಕೃತಿ. ಒಂದನೆಯ ಕುಲೋತ್ತುಂಗ ಚೋಳ ಈ ದೇವಾಲಯಕ್ಕೆ ದತ್ತಿಯನ್ನು ಕೊಟ್ಟಂತೆ 1110ರ ಇಲ್ಲಿನ ಒಂದು ತಮಿಳು ಶಾಸನ ತಿಳಿಸುತ್ತದೆ. ಆದುದರಿಂದ ದೇವಸ್ಥಾನ ಆ ಕಾಲಕ್ಕಿಂತಲೂ ಮೊದಲೇ ನಿರ್ಮಿತವಾಗಿತ್ತೆಂದು ತಿಳಿಯಬಹುದು. ರಾಜೇಂದ್ರ ಚೋಳನ 1038ರ ಶಾಸನವೊಂದು ಬಿನ್ನಮಂಗಲವನ್ನು ಹೆಸರಿಸಿರುವುದರಿಂದ ಆ ಕಾಲದಲ್ಲಿ ಈ ದೇಗುಲವನ್ನು ಕಟ್ಟಿಸಿರಬಹುದೆಂದು ಊಹಿಸಲಾಗಿದೆ. ದೇವಾಲಯ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿದ್ದು ಗರ್ಭಗೃಹ, ಸುಕನಾಸಿ ಮತ್ತು ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹ ಮತ್ತು ಸುಕನಾಸಿಗಳಲ್ಲಿ ಪ್ರತಿಯೊಂದರಲ್ಲೂ ನಾಲ್ಕು ಕಂಬಗಳಿವೆ. ನವರಂಗದ ನಾಲ್ಕು ಕಂಬಗಳು ಸುಂದರವಾದ ಕೆತ್ತನೆಗಳಿಂದ ಅಲಂಕೃತವಾಗಿವೆ. ಎಲ್ಲ ಕಡೆಗಳಲ್ಲಿಯೂ ಮನೋಹರವಾಗಿ ಬಿಡಿಸಿರುವ ಮೂರ್ತಿಗಳಿಂದ ಕೂಡಿದ ತಳಪಾಯದ ಕಲ್ಲುಗಳ ಮೇಲಿರುವ ಈ ಕಂಬಗಳ ಮೇಲಿನ ಭಾಗದಲ್ಲಿ ಅನೇಕ ರೀತಿಯ

ಆಲಂಕಾರಿಕ ರಚನೆಗಳನ್ನು ಅಳವಡಿಸಲಾಗಿದೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ಅಂದವಾದ ಮೂರ್ತಿಗಳ ಮೇಳವಿದೆ. ನವರಂಗದ ದ್ವಾರ ಅತ್ಯಂತ ಸುಂದರವಾದ ಶಿಲ್ಪ ವಿನ್ಯಾಸದಿಂದ ಕೂಡಿದೆ. ಬಾಗಿಲುವಾಡದ ಮೇಲ್ಭಾಗದಲ್ಲಿ ಮಕರ ಹಾಗೂ ಸಿಂಹಗಳಿಂದ ಕೂಡಿದ ಗಜಲಕ್ಷ್ಮಿ ಶಿಲ್ಪವನ್ನು ಅತ್ಯಂತ ನೈಪುಣ್ಯದಿಂದ ಬಿಡಿಸಲಾಗಿದೆ. ಮಕರಗಳು ಸಿಂಹಗಳ ಕಾಲುಗಳನ್ನು ನುಂಗುತ್ತಿರುವಂತೆ ಪ್ರಾಣಿಗಳನ್ನು ಕಡೆಯಲಾಗಿದೆ. ಬಾಗಿಲುವಾಡದ ಪಕ್ಕ ನಿಲವುಗಳ ಮುಂಭಾಗದಲ್ಲಿ ಕುಬ್ಜ ಯಕ್ಷರ ಸಾಲುಗಳನ್ನು ಬಿಡಿಸಲಾಗಿದೆ. ಹೊರಗಿನ ಗೋಡೆಗಳು ಅಥವಾ ಬಾಹ್ಯ ಭಿತ್ತಿಗಳು ಚೆನ್ನಾಗಿ ಹಸನು ಮಾಡಿದ ಚಪ್ಪಡಿಗಳಿಂದ ಕಟ್ಟಲಾಗಿದೆ. ಈ ಗೋಡೆಗಳ ಕೆಳಭಾಗದಲ್ಲಿ ದೇವಾಲಯದ ಸುತ್ತಲೂ ಸಿಂಹಗಳ ಸಾಲುಗಳಿವೆ. ಅಲಂಕೃತವಾದ ತಳಪಾಯದ ಕಲ್ಲುಗಳ ಮೇಲೆ ಸಣ್ಣ ಹಾಗೂ ದೊಡ್ಡದಾದ ಮೂರ್ತಿಗಳನ್ನು ರಚಿಸಲಾಗಿದೆ. ಕೆಲವು ವಿಗ್ರಹಗಳು ಮೇಲಿನ ಕೋಷ್ಠಗಳಲ್ಲಿವೆ. ತಾಂಡವೇಶ್ವರ, ಗಣಪತಿ, ಶಿವ, ವಿಷ್ಣು, ಬ್ರಹ್ಮ, ಮಹಿಷನ ತಲೆ ಮೇಲೆ ನಿಂತಿರುವ ಮಹಿಷಾಸುರಮರ್ದಿನಿ, ಕಾಳಿಂಗ ಮರ್ದನ, ಐರಾವತದ ಮೇಲೆ ಕುಳಿತಿರುವ ಶಚೀದೇವಿ, ಜಟಾಧಾರಿಯಾದ ಒಬ್ಬ ಸನ್ಯಾಸಿ, ಭೈರವ, ವೇಣುಗೋಪಾಲ ಹಾಗೂ ಸೂರ್ಯ, ಚಂದ್ರ ಮುಂತಾದವು ಮುಖ್ಯ ಶಿಲ್ಪಗಳು. ಸೂರ್ಯಚಂದ್ರ ಮೂರ್ತಿಗಳು ದ್ವಾರದ ಇಕ್ಕೆಲಗಳಲ್ಲಿವೆ. ಸ್ತ್ರೀಮೂರ್ತಿಗಳಲ್ಲಿ ದೊಡ್ಡವುಗಳನ್ನು ಅತ್ಯಂತ ಮನೋಜ್ಞವಾಗಿ ಕೆತ್ತಲಾಗಿದೆ. ಈ ದೇವಾಲಯದ ಶಿಲ್ಪಗಳು ಸರಳ ಹಾಗೂ ಸಹಜವಾಗಿದ್ದು ಅನಂತರ ಬಂದ ಅಲಂಕಾರಾತಿರೇಕದಿಂದ ಕೂಡಿದ ಶಿಲ್ಪಗಳಿಂದ ತೀರ ಭಿನ್ನವಾಗಿವೆ. ಮುಕ್ತೇಶ್ವರ ದೇವಾಲಯದ ಶಿಲ್ಪಕಲಾ ಕೌಶಲ್ಯ ನಿಸ್ಸಂದೇಹವಾಗಿಯೂ ಉತ್ಕೃಷ್ಟವಾದುದು. **(ಎಸ್.ವಿ.ಎಸ್.ಬಿ.)**

**ಬಿಬ್ಬಿ ಬಾಚಯ್ಯ:** 12ನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಗುಲ್ಬರ್ಗ ಜಿಲ್ಲೆಯ ಗೊಬ್ಬೂರು ಈತನ ಜನ್ಮಸ್ಥಳ. ಬ್ರಾಹ್ಮಣ ಕುಲದಲ್ಲಿ ಜನಿಸಿದ ಈತ ಅನಂತರ ದೀಕ್ಷೆ ಪಡೆದು ಶೈವನಾದ. ಇವನಿಗೆ ಬಿಬ್ಬ ಬಾಚಯ್ಯ, ಗೊಬ್ಬೂರು ಬಾಚಯ್ಯ, ಬಾಚರಸ ಎಂಬ ಹೆಸರುಗಳೂ ಇವೆ. ಈತ ಶಿವಶರಣರ ಮನೆಯಲ್ಲಿ ಉಂಡು ಉಳಿದದ್ದನ್ನು ಪ್ರಸಾದವೆಂದು ತಂದು ಜಂಗಮರ ದಾಸೋಹ ಮಾಡುತ್ತಿದ್ದ. ಒಮ್ಮೆ ಈತ ತಂದ ಪ್ರಸಾದವನ್ನು ನೋಡಿದ ಬ್ರಾಹ್ಮಣರು ಎಂಜಲೆಂದು ಈತನನ್ನು ಊರ ಒಳಕ್ಕೆ ಸೇರಿಸದಿರಲು, ಆ ಪ್ರಸಾದವನ್ನು ಕೋಪದಿಂದ ಅಲ್ಲಿಯೇ ಚೆಲ್ಲಿ ಊರನ್ನು ಸುಟ್ಟುಹಾಕಿದ. ಅನಂತರ ರಕ್ಷಿಸೆಂದು ಬ್ರಾಹ್ಮಣರೆಲ್ಲ ಶರಣಾಗತರಾಗಲು ಪುರವನ್ನು ರಕ್ಷಿಸಿದ ಎಂಬುದು ಈತ ಮೆರೆದನೆನ್ನಲಾದ ಪವಾಡ. ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣದಲ್ಲಿ ಪ್ರಸಾದುಲು ಬಿಬ್ಬ ಬಾಚಯ್ಯಗಾರು (ಪ್ರಸಾದಿ ಬಿಬ್ಬಬಾಚಯ್ಯ) ಎಂಬ ಉಲ್ಲೇಖವಿದೆ. ಲಕ್ಕಣ್ಣ ದಂಡೇಶ, ಗುಬ್ಬಿಯ ಮಲ್ಲಣಾರ್ಯ, ನಂಜುಂಡ ಮೊದಲಾದವರು ತಮ್ಮ ಕಾವ್ಯಗಳಲ್ಲಿ ಈತನ ಹೆಸರನ್ನೂ ಇವನ ಪ್ರಸಾದ ಮಹಿಮೆಯನ್ನೂ ಕೊಂಡಾಡಿದ್ದಾರೆ. ಚೆನ್ನಬಸವಣ್ಣ ಈತನನ್ನು ಪ್ರಸಾದ ಪ್ರಸಾದಿ ಬಿಬ್ಬಿಬಾಚಯ್ಯ ಎಂದು ಹೊಗಳಿದ್ದಾನೆ.

ಈತ ಏಣಾಂಕಧರ ಸೋಮೇಶ್ವರಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇವನ 100 ವಚನಗಳು ದೊರೆತಿವೆ. ಇವುಗಳಲ್ಲಿ ಬೆಡಗಿನ ವಚನಗಳೂ ಸೇರಿವೆ. ಈ ವಚನಗಳಲ್ಲಿ ಉತ್ತಮ ರೀತಿಯ ತತ್ತ್ವನಿರ್ದೇಶನವಿದೆ. ಹೇಳುವ ಮಾತುಗಳನ್ನು ಹಲವಾರು ಉಪಮೆಗಳ ಮೂಲಕ ಮನಮುಟ್ಟುವಂತೆ ಹೇಳಿರುವುದು ಕಂಡುಬರುತ್ತದೆ. **(ಬಿ.ಎಸ್.ಎಸ್.)**

**ಬಿಸಲೆ ಘಾಟ್:** ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನಲ್ಲಿರುವ ಸ್ಥಳ. ಸಕಲೇಶಪುರ–ಸುಬ್ರಹ್ಮಣ್ಯ ಘಟ್ಟದ ಹಾದಿಯಲ್ಲಿ ಸಕಲೇಶಪುರದ ನೈಋತ್ಯಕ್ಕೆ 65 ಕಿಮೀ ದೂರದಲ್ಲೂ ಹಾಸನಕ್ಕೆ 105 ಕಿಮೀ ದೂರದಲ್ಲೂ ಇದೆ. ಹಾಸನ ಜಿಲ್ಲೆಯ ಪಶ್ಚಿಮ ಎಲ್ಲೆ ಈ ಘಾಟಿನಿಂದ ಜೇನುಕಲ್ಲು ಬೆಟ್ಟ (1,389 ಮೀ)ವರೆಗೂ ಹಬ್ಬಿದೆ. ಬಿಸಲೆಘಾಟ್‌ನ ಸುತ್ತ ದಟ್ಟ ಅರಣ್ಯಪ್ರದೇಶವಿದ್ದು ಪ್ರಕೃತಿ ಸೌಂದರ್ಯದಿಂದ ಕೂಡಿದೆ. ಈ ಮಾರ್ಗದ

ಪ್ರಕೃತಿ ಸೌಂದರ್ಯ ವೀಕ್ಷಣಾ ತಾಣ

ಮೂಲಕ ಶತಮಾನಗಳ ಹಿಂದಿನಿಂದಲೂ ಸಾಗಣೆ ನಡೆಯುತ್ತಿತ್ತು. ಹೊಯ್ಸಳ ಮತ್ತು ವಿಜಯನಗರ ಕಾಲದಲ್ಲಿ ಬಿಸಲೆ, ಮಂಜರಾಬಾದ್ ಮತ್ತು ಬಲ್ಲಾಳ ರಾಯನದುರ್ಗದ ಘಾಟಿಗಳು ಮಲೆನಾಡಿನಿಂದ ಕರ್ನಾಟಕದ ತೀರಪ್ರದೇಶದೊಂದಿಗೆ ಸಂಪರ್ಕಸಾಧಿಸುವ ಮುಖ್ಯ ಮಾರ್ಗಗಳಾಗಿದ್ದವು. **(ಡಿ.ಎಸ್.ಜೆ.)**

**ಬಿಳಗಿಯ ಅರಸರು:** 15ನೆಯ ಶತಮಾನದ ಕೊನೆಯಿಂದ 17ನೆಯ ಶತಮಾನದ ಕೊನೆಯವರೆಗೆ ಸಿದ್ದಾಪುರ ತಾಲ್ಲೂಕು ಹಾಗೂ ಸುತ್ತಣ ಪ್ರದೇಶಗಳನ್ನು ಆಳಿದ ಒಂದು ರಾಜಮನೆತನದವರು. ಬಿಳಗಿ (ಉತ್ತರ ಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕು) ಇವರ ರಾಜಧಾನಿ. ಇವರು ಆರಂಭದಲ್ಲಿ ವಿಜಯನಗರದ ಮಾಂಡಲಿಕರಾಗಿದ್ದು ನೆರೆಯ ಗೇರುಸೊಪ್ಪೆ ಮತ್ತು ಸೋದೆ ಅರಸರ ಜೊತೆ ಆಗಾಗ ಹೋರಾಡುತ್ತಿದ್ದರು. ವಿಜಯನಗರದ ಪತನಾನಂತರ ಕೆಳದಿಯ ಮಾಂಡಲಿಕರಾಗಿ ಮುಂದುವರಿದರು. ಸೋದೆ ಹಾಗೂ ಕೆಳದಿ ರಾಜಮನೆತನದ ಜೊತೆ ಇವರು ರಕ್ತಸಂಬಂಧ ಹೊಂದಿದ್ದ ಉಲ್ಲೇಖಗಳೂ ಇವೆ.

ಇವರು ಮೂಲತಃ ಐಸೂರಿನವರು (ಬಿಳಗಿ ಬಳಿ ಇರುವ ಹೊಸೂರು). ಈ ವಂಶದ ಮೊದಲ ದೊರೆ ಅಂಡಣ್ಣ (ಸು. 1475). ಅವನ ಮಗ ಪಾರಿಷ್ವ. ಮುಂದಿನವರು ದುಂಡಣ್ಣ, ಭೈರವ (ಪಾರಿಷ್ವನ ಸೋದರ) ಮತ್ತು ನರಸಿಂಹ I (ಸು. 1530). ನರಸಿಂಹ ವಿಜಯನಗರದ ಕೃಷ್ಣದೇವ ರಾಯನ ಮಾಂಡಲಿಕ. ಈತ ಪ್ರಾಯಶಃ ಮೊದಲಿಗೆ ಬಿಳಗಿಯಿಂದ ಆಳಲು ಪ್ರಾರಂಭಿಸಿದ. ಇವನ ಮಕ್ಕಳು ಒಂದನೆಯ ಘಂಟೆ ಒಡೆಯ ಮತ್ತು ಮುಂಡಣ್ಣ ಜೊತೆಯಾಗಿ ಆಳುತ್ತ ರಾಜ್ಯ ವಿಸ್ತಾರ ಮಾಡಿದರು. ಘಂಟೆ ಒಡೆಯನ ಕಿರಿಯ ಮಗ ನರಸ (ನರಸಿಂಹ II), ಈತನ ಮಗ ವೀರಪ್ಪ ಮತ್ತು ಈತನ ಮಗ ರಂಗರಾಜ ಅಥವಾ ನರಸಿಂಹ III (1570, 1573) ಮುಂದಿನ ಅರಸರು. ಇವನ ಮಗ ಘಂಟೆ ಒಡೆಯ II (1580, 1591). ಇವನು ವಿಜಯನಗರದ ಇಮ್ಮಡಿ ವೆಂಕಟಪತಿರಾಯನ ಮಾಂಡಲಿಕನಾಗಿದ್ದ. ಸೋದೆಯ ಅರಸಪ್ಪನ ಪುತ್ರಿ ವೀರಾಂಬೆ ಈತನ ಪತ್ನಿ. ಅನಂತರ ಇವನ ದಾಯಾದಿ ಒಂದನೆಯ ಘಂಟೆ ಒಡೆಯನ ಹಿರಿಯ ಮಗ ತಿಮ್ಮಪ್ಪನ ಪ್ರಪೌತ್ರ ಹಾಗೂ ತಿಮ್ಮಪ್ಪನ ಪುತ್ರ ಮುಮ್ಮಡಿ ಘಂಟೆ ಒಡೆಯ, ಈತನ ಸೋದರಿ ಘಂಟೆಮ್ಮ, ಇಕ್ಕೇರಿ ವಂಶದ ಭದ್ರಯ್ಯನನ್ನು ಮದುವೆಯಾಗಿದ್ದಳು. ಮುಮ್ಮಡಿ ಘಂಟೆ ಒಡೆಯನ ಮಗ ಮೌನ ಘಂಟೆ ಒಡೆಯ IV (1643, 1651), ಈತನ ದತ್ತು ಮಗ

ಶಿವಪ್ಪ II. ಈತನ ದತ್ತು ಮಗ ಸೋಮಶೇಖರ I (1678), ಅವನ ಮಗ ಇಮ್ಮಡಿ ಸೋಮಶೇಖರ, ಮುಂದೆ ಈತನ ಮಗ ವೀರಭದ್ರ (ಭದ್ರಪ್ಪ) ರಾಜ್ಯವಾಳಿದರು. ವೀರಭದ್ರ ತನ್ನ ಮಗ ಬಸವೇಂದ್ರನಿಗೆ ತಾನೇ ಸ್ವತಃ ಪಟ್ಟಕಟ್ಟಿದ. ಈತನ ಕಾಲದಲ್ಲಿ ತುರುಕರ ದಾಳಿಯಾಯಿತೆಂದೂ ಬಸವೇಂದ್ರನು ಅವರನ್ನು ಸೋಲಿಸಿದನೆಂದೂ ಬಿಳಗಿಯ ಅರಸುಗಳ ವಂಶಾವಳಿ ಎಂಬ ಒಂದು ಚಂಪೂಕಾವ್ಯ ತಿಳಿಸುತ್ತದೆ. ಸು. 1700ರ ಹೊತ್ತಿಗೆ ಬಹುಶಃ ಮುಗಲರು ಈ ವಂಶದ ಆಡಳಿತವನ್ನು ಕೊನೆಗಾಣಿಸಿರಬೇಕು.

ಮೊದಲು ಜೈನರಾಗಿದ್ದ ಈ ವಂಶದವರು ಅನಂತರ ವೀರಶೈವ ಧರ್ಮವನ್ನು ಸ್ವೀಕರಿಸಿದಂತೆ ತೋರುತ್ತದೆ. ಈ ವಂಶದ ರಂಗರಾಜ ಬಿಳಗಿಯ ರತ್ನತ್ರಯ ಚೈತ್ಯಾಲಯವನ್ನು ಕಟ್ಟಿಸಿದ. ಸಿದ್ಧಾಪುರದ ಸಿದ್ಧಿ ವಿನಾಯಕ ದೇವಾಲಯ (ರಚನೆ 1651) ಮುಮ್ಮಡಿ ಘಂಟೆ ಒಡೆಯನ ಪತ್ನಿ ಜಯಾಂಬೆಯ ಕಾಣಿಕೆ. ಇಮ್ಮಡಿ ಘಂಟೇಂದ್ರನು ಶಬ್ದಾನುಶಾಸನಂ ಕೃತಿಯನ್ನು ರಚಿಸಿದ ಭಟ್ಟಾಕಳಂಕನನ್ನು ಆದರಿಸಿದ ಎಂದು ಒಂದು ಶಾಸನ ತಿಳಿಸುತ್ತದೆ. ಕಾವ್ಯಸಾರದ ಕರ್ತೃವಾದ ವಿದ್ಯಾನಂದ ಒಂದನೆಯ ನರಸಿಂಹನ ಆಸ್ಥಾನಕ್ಕೆ ಭೇಟಿ ನೀಡಿದ್ದ. **(ಎಸ್.ಕೆ.)**

**ಬಿಳಿಗಿರಿರಂಗ**: ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ನೆಲಸಿರುವ ಜನಪದ ದೈವ. ರಂಗನಾಥಸ್ವಾಮಿಯನ್ನು ಕುರಿತ ಜನಪದ ಕಲ್ಪನೆಯ ಅನೇಕ ಬಗೆಯ ಕಥೆಗಳೂ ಕಥನ ಕಾವ್ಯಗಳೂ ಲಭ್ಯವಿವೆ. ಇವಲ್ಲದೆ ಹೆಂಗಸರ ಹಾಡ್ಗತೆಗಳೂ ಬಿಡಿಗೀತೆಗಳೂ ಇವೆ. ವೃತ್ತಿಗಾಯಕರಲ್ಲಿ ಅದರಲ್ಲೂ ಪ್ರಮುಖವಾಗಿ ನೀಲಗಾರರಲ್ಲಿ ಇಡೀ ರಾತ್ರಿ ಕಥೆ ಮಾಡುವಷ್ಟು ದೀರ್ಘ ಕಾವ್ಯ ಸಂಪತ್ತಿದೆ. ಈ ಎಲ್ಲ ಬಗೆಯ ಹಾಡು, ಕಾವ್ಯಗಳಲ್ಲಿ ಶೃಂಗಾರ ಹಾಗೂ ಹಾಸ್ಯರಸಗಳೇ ಪ್ರಧಾನ. ಇಲ್ಲಿ ಕಾಣುವ ಪ್ರಧಾನ ಅಂಶವೆಂದರೆ ದೇವರು ಎಂಬ ಶಬ್ದಕ್ಕೆ ಅಥವಾ ವ್ಯಕ್ತಿಗೆ ಅಲೌಕಿಕವಾದ ಅರ್ಥವನ್ನು ಕಲ್ಪಿಸದೆ ಆತನನ್ನು ತಮ್ಮ ಸಮೀಪದ ಬಂಧುವೋ ಸಹಚರನೋ ಆಗಿ ಮಾಡಿಕೊಂಡು ಮಾನವ ಸಹಜ ಗುಣಗಳನ್ನು ಆತನಿಗೂ ಆರೋಪಿಸಿ ತಮ್ಮ ಜೊತೆಯಲ್ಲಿಯೇ ಆತನನ್ನು ನಡೆಸಿಕೊಂಡು ಕೊನೆಯಲ್ಲಿ ಆತನ ಮೇಲ್ಮೆ ಕಂಡು ಆತನಿಗೆ ಶರಣೂ ಹೋಗುವ ಭಕ್ತಿಭಾವ ಅಥವಾ ಶರಣಾಗತಿ ಭಾವ.

ಒಂದು ಕಥೆಯ ಪ್ರಕಾರ ತಿರುಪತಿಯ ವೆಂಕಟರಮಣ, ಶ್ರೀರಂಗಪಟ್ಟಣದ ರಂಗನಾಥ (ಆದಿರಂಗ), ಶಿವಸಮುದ್ರದ ಶ್ರೀರಂಗ (ಮಧ್ಯರಂಗ), ತಿರುಚ್ಚಿರಾಪಳ್ಳಿಯ ಶ್ರೀರಂಗ (ಅಂತ್ಯರಂಗ), ಬಿಳಿಗಿರಿರಂಗ–ಈ ಐವರು ಅಣ್ಣ ತಮ್ಮಂದಿರು. ತಿರುಪತಿ ವೆಂಕಟೇಶ ಅವರಲ್ಲಿ ಹಿರಿಯುವ. ಅವನಿಗೊಮ್ಮೆ ತಲೆನೋವು ಕಾಣಿಸಿಕೊಂಡಿತು. ಸೀಗೆಕಾಯಿ ಅಂಜನದ ಪಟ್ಟು ಕಟ್ಟಿ ಸ್ನಾನ ಮಾಡಿದರೆ ಅದು ಹೋಗುವುದೆಂದು ತಿಳಿಯಿತು. ತಮ್ಮಂದಿರನ್ನು ಕರೆದು ಸೀಗೆಕಾಯಿ ತರಲು ಹೇಳಿದ. ತರಲುಹೊರಟ ನಾಲ್ವರೂ ಬೇರೆ ಬೇರೆ ಸ್ಥಳಗಳಲ್ಲಿ ನೆಲಸಿದರೇ ಹೊರತು ಸೀಗೆಕಾಯಿ ಕೊಂಡೊಯ್ಯಲಿಲ್ಲ. ವೆಂಕಟೇಶ್ವರನಾದರೂ ತಮ್ಮಂದಿರು ಸೀಗೆಕಾಯಿ ತರುತ್ತಾರೆಂಬ ನಿರೀಕ್ಷೆಯಲ್ಲೇ ಇದ್ದಾನೆ. ಅವನ ಗುಡಿಯಲ್ಲಿ ತೆಂಗಿನಕಾಯಿ ಒಡೆಯುವಂತಿಲ್ಲ. ಏಕೆಂದರೆ ಅವನಿಗೆ ತಲೆನೋವು. ವೆಂಕಟೇಶ್ವರನ ಹಣೆಯ ತುಂಬ ವ್ಯಾಪಿಸಿರುವ ನಾಮಗಳನ್ನು ತಲೆನೋವಿಗಾಗಿ ಹಾಕಿದ ಸೀಗೆಕಾಯಿ ಅಂಜನದ ಪಟ್ಟು ಎಂದು ಇಂದೂ ಜನ ನಂಬುತ್ತಾರೆ.

ಇನ್ನೊಂದು ಕಥೆಯ ಪ್ರಕಾರ, ಒಮ್ಮೆ ವೆಂಕಟೇಶ್ವರನ ಪತ್ನಿ ಅಲಮೇಲು ಮಂಗಮ್ಮ ಅಭ್ಯಂಜನ ಸ್ನಾನ ಮಾಡಲು ಇಷ್ಟಪಟ್ಟು ಸೀಗೆಕಾಯಿ ತರಲು ಪತಿದೇವರನ್ನು ಕೇಳಿಕೊಂಡಳು. ಅದರಂತೆ ವೆಂಕಟೇಶ ಸೀಗೆಕಾಯಿ ತರಲು ಶ್ವೇತಾದ್ರಿಯ ಅರಣ್ಯಕ್ಕೆ ಬಂದ. ಆಗ ಅಲ್ಲಿ ಸುಂದರಳಾದ ಸೋಲಿಗರ ಹೆಣ್ಣೊಬ್ಬಳನ್ನು ನೋಡಿ ಅವಳಲ್ಲಿ ಅನುರಕ್ತನಾಗಿ ಅಲ್ಲಿಯೇ ನೆಲಸಿದನಂತೆ. ಆದ್ದರಿಂದಲೇ ಈಗಲೂ ಈ ಬೆಟ್ಟದಲ್ಲಿ ನೆಲಸಿರುವ ಸೋಲಿಗರು ಬಿಳಿಗಿರಿ ರಂಗಸ್ವಾಮಿಯನ್ನು ತಮ್ಮ ನಂಟಭಾವನೆಂದು ಭಾವಿಸುತ್ತಾರೆ.

ಮತ್ತೊಂದು ಕಥೆಯ ಪ್ರಕಾರ, ಮಲೆಯ ಮಾದೇಶ್ವರನ ಏಳುಮಲೆಗೆ ಹೋಗುವ ದಾರಿಯಲ್ಲಿ ರಂಗನೊಡ್ಡು ಎಂಬ ಸ್ಥಳ ಸಿಕ್ಕುತ್ತದೆ. ಬಿಳಿಗಿರಿರಂಗಸ್ವಾಮಿ ಮೊದಲು ಇಲ್ಲಿ ವಾಸವಿದ್ದನಂತೆ. ಕುಂತೂರಿನಿಂದ ಹೊರಟು ನಡುಮಲೆಯಲ್ಲಿ ನೆಲೆಗೊಳ್ಳಲು ಬರುತ್ತಿದ್ದ ಮಾದೇಶ್ವರನ ಬಯಕೆಯಂತೆ ರಂಗಸ್ವಾಮಿ ಬಿಳಿಗಿರಿಯಲ್ಲಿ ನೆಲೆಗೊಂಡನಂತೆ. ಮಲೆಯ ಮಾದೇಶ್ವರ ಕಾವ್ಯದಲ್ಲಿ ಅನೇಕ ಪ್ರಸಂಗಗಳಲ್ಲಿ ಬಿಳಿಗಿರಿರಂಗನ ಪ್ರಸ್ತಾಪವಿರುವುದನ್ನು ಕಾಣಬಹುದು.

ಮಾದೇಶ್ವರ ಕೋರಣ್ಯಕ್ಕೆ ಹೋಗುವಾಗ ಮುಡುಕುತೊರೆ ಮಲ್ಲಪ್ಪನ ಜೊತೆಗೆ ಬಿಳಿಗಿರಿರಂಗಸ್ವಾಮಿಯೂ ಇರುತ್ತಾನೆ. ಬಿಳಿಗಿರಿರಂಗನ ಒಕ್ಕಲಾಗಿದ್ದ ಸರಗೂರು ಮೂಗಪ್ಪನನ್ನು ಮಾದೇಶ್ವರ ತನ್ನ ಒಕ್ಕಲಾಗಿ ಪಡೆದ ಹೃದಯಂಗಮ ಪ್ರಸಂಗ ದೀರ್ಘವಾಗಿಯೇ ಪ್ರಸ್ತಾಪಗೊಂಡಿದೆ.

ಇಕ್ಕೇರಿ ದೇವಮ್ಮನನ್ನು ಸಂಹಾರ ಮಾಡುವ ಸನ್ನಿವೇಶದಲ್ಲಿ ಬಿಳಿಗಿರಿರಂಗಸ್ವಾಮಿ ಪಂಚಾಯ್ತಿ ಪಟೇಲನ ಪಾತ್ರವಹಿಸಿ ತೀರ್ಪು ಕೊಡುತ್ತಾನೆ.

ಸಂಕಮ್ಮನ ಕಥೆಯಲ್ಲಿ ನೀಲಯ್ಯನ ಚಿತ್ರಹಿಂಸೆಯಿಂದ ಮುಕ್ತಳಾದ ಸಂಕಮ್ಮನನ್ನು ಮಾದೇಶ್ವರ ನೀನು ಕುಸುಮಾಲೆಯಾಗಿ ಹುಟ್ಟಿ ರಂಗಸ್ವಾಮಿಯನ್ನು ಸೇರು ಎಂದು ಕಳಿಸಿಕೊಡುವ ಪ್ರಸಂಗವಿದೆ.

ಬಿಳಿಗಿರಿರಂಗ ಹಾಗೂ ಕುಸುಮಾಲೆ ಇಬ್ಬರನ್ನೂ ಕುರಿತ ಕಥನಕಾವ್ಯವೊಂದು ದೀರ್ಘರೂಪದಲ್ಲಿ ದೊರೆಯುತ್ತದೆ. ಅದರ ಕಥಾಸಾರ ಹೀಗಿದೆ: ಸೋಲಿಗರ ಬೊಮ್ಮೇಗೌಡನಿಗೆ ಚಿಕ್ಕರಂಗಿ, ದೊಡ್ಡರಂಗಿ, ಚಿಕ್ಕಕಾಡಿ, ಮರಕಾಡಿ, ಕೇತಕ್ಕ, ಕುಸುಮಾಲೆ ಎಂಬ ಆರು ಜನ ಹೆಣ್ಣುಮಕ್ಕಳು. ಅವರಲ್ಲಿ ಹಿರಿಯವಳಾದ ಕುಸುಮಾಲೆ ಕಡು ಚೆಲುವೆ. ಇವಳನ್ನು ಮದುವೆಯಾಗಬೇಕೆಂದು ಬಯಸಿದ ರಂಗಸ್ವಾಮಿ ಬೊಮ್ಮೇಗೌಡನ ಪೋಡಿಗೆ ದಾಸಯ್ಯನ ವೇಷದಲ್ಲಿ ಹೋದ. ಭಿಕ್ಷೆ ಬೇಡಲು ಬಂದ ದಾಸಯ್ಯನನ್ನು ಕಂಡ ಬೊಮ್ಮೇಗೌಡ ಗೇದು ತಿನ್ನು ಬಾ ಎಂದು ಕಂಬಳಕ್ಕೆ ಕರೆದ. ಬೊಮ್ಮೇಗೌಡನ ಈ ವರ್ತನೆಯಿಂದ ಕೋಪಗೊಂಡ ರಂಗಸ್ವಾಮಿ ದೇವೇಂದ್ರನಿಗೆ ಹೇಳಿ ಮಳೆ ಬೆಳೆಯಾಗದಂತೆ ಮಾಡಿದ. ಸೋಲಿಗರು ಮನೆಯಲ್ಲಿ ಇದ್ದುದನ್ನೆಲ್ಲ ಮಾರಿ ಕೆಲವು ದಿನ ಜೀವನ ಸಾಗಿಸಿದರು. ಬೇರೆ ಮಾರ್ಗವೇ ಇಲ್ಲವೆಂಬ ಪರಿಸ್ಥಿತಿ ಬಂದಾಗ, ಹೆಣ್ಣು ಮಕ್ಕಳ ಒಡವೆಗಳನ್ನೇ ಮಾರಿ ಬದುಕಲು ಬೊಮ್ಮೇಗೌಡ ನಿರ್ಧರಿಸಿ ಒಡವೆಗಳೊಡನೆ ಪಟ್ಟಣಕ್ಕೆ ಹೊರಟ. ಆಗ ರಂಗಸ್ವಾಮಿ 'ಊಳಿಗಿ' ಯವರ ವೇಷದಲ್ಲಿ ಬಂದು, ಒಡವೆಗಳನ್ನು ಕದ್ದನೆಂಬ ಆರೋಪ ಹೊರಿಸಿ, ಗೌಡನನ್ನು ಯಳಂದೂರು ಚಾವಡಿಗೆ ನಡೆ ಎಂದ. ಭಯಗೊಂಡ ಗೌಡ ಒಡವೆಗಳನ್ನು ರಂಗಸ್ವಾಮಿಗೆ ಕೊಟ್ಟು ಬದುಕಿತು ಬಡಜೀವ ಎಂದುಕೊಳ್ಳುತ್ತ ಬರಿಗೈಯಲ್ಲಿ ಮನೆಗೆ ಬಂದ.

ಹೊಟ್ಟೆಹೊರೆದುಕೊಳ್ಳಲು ಹೆಣ್ಣುಮಕ್ಕಳು ಗೆಡ್ಡೆ ಗೆಣಸು, ಬಿದರಕ್ಕಿ ತರಲು ಕಾಡಿಗೆ ಹೋದರೆ ಗೆಡ್ಡೆ ಗೆಣಸು ಹೋಗಲಿ ಕುಡಿಯುವುದಕ್ಕೆ ಒಂದು ತೊಟ್ಟು ನೀರೂ ಸಿಕ್ಕದಂತಾಯಿತು. ಬಳಲಿ ಬೆಂಡಾಗಿ ಬರುತ್ತಿದ್ದ ಬಾಲೆಯರನ್ನು ಕಂಡು ರಂಗಸ್ವಾಮಿ ಅಕ್ಷಯವಾಗಲಿ ಎಂದ. ಕೂಡಲೆ ಅವರ ಹಸಿವು ತೃಷೆಗಳೆಲ್ಲ ಹಿಂಗಿಹೋದುವು. ತ್ರಾಣ ಬಂದ ಮೇಲೆ ಸೌದೆಯನ್ನಾದರೂ ಆರಿಸೋಣವೆಂದು ಹೋದರೆ ರಂಗಸ್ವಾಮಿ ಅರಣ್ಯ ರಕ್ಷಕನ ವೇಷದಲ್ಲಿ ಬಂದುಬಿಟ್ಟ. ಎದೆ ಒಡೆದಂತಾದ ಹೆಣ್ಣುಮಕ್ಕಳು ಬಿದ್ದಂ ಬೀಳ ಓಡಿ ದಿಕ್ಕಾಪಾಲಾದರು. ಒಬ್ಬೊಬ್ಬರು ಒಂದೊಂದು

ಕಡೆ ಆದಾಗ, ಕುಸುಮಾಲೆ ಓಡಿಬಂದು ಸೋಮರಸನ ಕೆರೆ ಬಳಿ ನಿಂತಳು. ನೋಡುತ್ತಾಳೆ, ಆ ಬರಗಾಲದಲ್ಲೂ ಕೆರೆ ತುಂಬಿ ತುಳುಕುತ್ತಿದೆ. ಎತ್ತ ಕಣ್ಣಾಡಿಸಿದರೂ ಗೆಣಸೋ ಗೆಣಸು. ಬೆರಗುಗೊಂಡ ಕುಸುಮಾಲೆ ಕಕ್ಕೆ ದಸಿಯಿಂದ ಗೆಣಸನ್ನು ಕಿತ್ತು ಕಿತ್ತು ದೊಡ್ಡ ಹೊರೆ ಕಟ್ಟಿದಳು. ಆದರೆ ಅದನ್ನು ಎತ್ತಿ ಹೊತ್ತುಕೊಳ್ಳುವುದು ಹೇಗೆಂದು ಯೋಚಿಸುತ್ತಿರುವಾಗ ಮುದಿ ದಾಸಯ್ಯನಾಗಿ ರಂಗಸ್ವಾಮಿ ಅಲ್ಲಿಗೂ ಬಂದ. ಕುಸುಮಾಲೆ ಅವನ ಸಹಾಯ ಕೇಳಿದಳು. ನನ್ನ ಕೈ ಹಿಡಿಯುವುದಾದರೆ ಹೊರೆ ಹೊರಿಸುತ್ತೇನೆ ಎಂದ ಅವನು. ಈ ಕಜ್ಜಿಪುರುಕ ಮುದಿ ದಾಸಯ್ಯನ ಸಹವಾಸವೇ ಬೇಡವೆಂದು ಅವಳು ಚಿಕ್ಕ ಹೊರೆ ಕಟ್ಟಿದಳು. ರಂಗಸ್ವಾಮಿ ಅದಕ್ಕೆ ಭೂತವನ್ನು ಕೂಡಿ ಹೊರೆ ನೆಲಕಚ್ಚುವಂತೆ ಮಾಡಿದ. ಜೊತೆಗೆ ಮಳೆ ಸುರಿಯುವಂತೆ ಮಾಡಿದ. ದುಪ್ಪಟ ಗುಡಾರ ಹಾಕಿ ಕುಸುಮಾಲೆಯನ್ನು ಕರೆದ. ಬೇರೆ ದಾರಿ ಕಾಣದ ಕುಸುಮಾಲೆ ಗುಡಾರಕ್ಕೆ ಬಂದಳು. ಸಮೀಪದಿಂದ ಅವಳ ಸೌಂದರ್ಯವನ್ನು ಕಂಡ ರಂಗಸ್ವಾಮಿ ಹುಚ್ಚಾದ. ಮನೆಯಲ್ಲಿ ಎಲ್ಲರೂ ಹಸಿದಿರುವಾಗ ಇವನಿಂದ ಗೆಣಸಿನ ಹೊರೆ ಹೊರೆಸಿಕೊಂಡರೆ ತಪ್ಪೇನು ಎಂದು ಲೆಕ್ಕ ಹಾಕಿದ ಕುಸುಮಾಲೆ ರಂಗಸ್ವಾಮಿಯ ಮಾತಿಗೆ ಒಪ್ಪಿಗೆ ಕೊಟ್ಟಳು. ಈ ಕಷ್ಟವೆಲ್ಲವೂ ನನ್ನಿಂದಲೇ ನಿಮಗೆ ಬಂದದ್ದೆಂದು ಅವಳಿಗೆ ಮನದಟ್ಟು ಮಾಡಿದ.

ಹೊರೆಹೊತ್ತು ಇಬ್ಬರೂ ಪೋಡಿಗೆ ಬಂದರು. ಈ ರಾತ್ರಿ ಇಲ್ಲೇ ತಂಗುತ್ತೇನೆಂದು ಹೇಳಿದಾಗ ಬೊಮ್ಮೇಗೌಡ ಒಪ್ಪಿದ. ರಂಗಸ್ವಾಮಿ ಗೆಣಸು ಬೇಯಿಸುತ್ತಿದ್ದ ಹೆಣ್ಣುಮಕ್ಕಳೆಡೆಗೆ ತೆವಳಿಕೊಂಡು ಹೋಗಿ ಕುಸುಮಾಲೆಯನ್ನು ಚಿವುಟಿದ. ಮುದಿಯನ ತೆವಲಿಗೆ ಬೆಚ್ಚಿದ ಬಾಲೆಯರು ತಂದೆಗೆ ದೂರುಕೊಟ್ಟರು. ಬೊಮ್ಮೇಗೌಡ ಮನೆ ಬಾಗಿಲಿಗೆ ಬೀಗ ಹಾಕಿಸಿ, ರಂಗಸ್ವಾಮಿಯನ್ನು ಕೂಡಿ ಹಾಕಿದ ಕುಲದವರನ್ನೆಲ್ಲ ಸೇರಿಸಿದ. ನ್ಯಾಯ ಪಂಚಾಯ್ತಿಗಾಗಿ ಬಾಗಿಲು ತೆರೆದಾಗ ಅಲ್ಲಿ ಮುದಿದಾಸಯ್ಯನಿಗೆ ಬದಲಾಗಿ ಹದಿನೆಂಟರ ಹರೆಯದ ಶ್ರೀಮನ್ನಾರಾಯಣ ಪ್ರತ್ಯಕ್ಷನಾದ. ಸೋಲಿಗರೆಲ್ಲ ಅವನ ಪಾದಕ್ಕೆ ಬಿದ್ದು ಕ್ಷಮೆ ಕೇಳಿದರು. ದೇವಾಧಿದೇವತೆಗಳೆಲ್ಲ ಸೇರಿ ವೈಭವದಿಂದ ರಂಗಸ್ವಾಮಿಗೂ ಕುಸುಮಾಲೆಗೂ ಮದುವೆ ಮಾಡಿದರು.

ಬಿಳಿಗಿರಿರಂಗನ ರಥೋತ್ಸವದ ಸಂದರ್ಭದಲ್ಲಿ ಸೋಲಿಗರು ಬಿಳಿಗಿರಿ ರಂಗನನ್ನು ಇಂದಿಗೂ ಭಾವಾಜಿ ಎಂದೇ ಕರೆಯುತ್ತಾ ಕೂಗುತ್ತ, ಹಾವುಮೆಕ್ಕೆ (ಕಾಡುಮೆಕ್ಕೆ) ಸೌತೆ, ಗುಡಿಮೆಕಾಯಿಗಳನ್ನು ತೇರಿಗೆ ಎಸೆಯುತ್ತಾರೆ.

ಲಕ್ಷ್ಮೀದೇವಿ, ತೊಳಸಮ್ಮ, ಕುಸುಮಾಲೆ ಮೂವರು ಹೆಂಡತಿಯರಿದ್ದರೂ ರಂಗಸ್ವಾಮಿ ಗುಪ್ತವಾಗಿ ಸೊಳೆ ರಂಗನಾಯಕಿಯ ಸಹವಾಸ ಮಾಡುವನೆಂಬ ಒಂದು ಕಥೆ ಹೀಗಿದೆ:

ಒಮ್ಮೆ ರಂಗಸ್ವಾಮಿ ರಂಗನಾಯಕಿಯ ಮನೆಗೆ ಗುಟ್ಟಾಗಿ ಹೊರಟಾಗ ಅದನ್ನು ಸೇವಕ ಹನುಮಂತ ನೋಡಿ ಆ ವಿಚಾರ ರಂಗಸ್ವಾಮಿಯ ಪತ್ನಿಯರಿಗೆ ತಿಳಿಸುತ್ತಾನೆ. ಪತ್ನಿಯರ ಆದೇಶದಂತೆ ರಂಗಸ್ವಾಮಿಯನ್ನು ಕರೆತರಲು ಹನುಮಂತ ರಂಗನಾಯಕಿಯ ಮನೆಗೆ ಬರುತ್ತಾನೆ. ಇವನ ಬರುವಿಕೆ ತಿಳಿದ ರಂಗಸ್ವಾಮಿಯು ರಂಗನಾಯಕಿ ಮನೆಯ ದೊಡ್ಡ ಗುಡಾಣ ಒಂದರಲ್ಲಿ ಬಚ್ಚಿಟ್ಟುಕೊಳ್ಳುತ್ತಾನೆ. ಈ ಸುಳಿವು ತಿಳಿದ ಹನುಮಂತ ಗುಡಾಣದ ಸಮೇತ ರಂಗಸ್ವಾಮಿಯನ್ನು ಹೊತ್ತುಕೊಂಡು ಬಂದು ಪತ್ನಿಯರ ಎದುರಿನಲ್ಲಿ ಕೆಡುವುತ್ತಾನೆ. ಇದರಿಂದಾಗಿ ಸೊಂಟಕ್ಕೆ ಪೆಟ್ಟು ಬಿದ್ದ ರಂಗಸ್ವಾಮಿ ಕೋಪದಿಂದ ಹನುಮಂತನನ್ನು ಒದೆಯುತ್ತಾನೆ. ಬೀಳುವಾಗ ಹನುಮಂತ ಮೊಕಾಡೆಯಾಗಿ ಬೀಳುತ್ತಾನೆ. ಇಂದಿಗೂ ಮೊಖಾಡೆಯಾಗಿ ಬಿದ್ದ ಹನುಮಂತನ ವಿಗ್ರಹ ಬಿಳಿಗಿರಿಯಲ್ಲಿದೆ. ಇಂಥ ಹಲವಾರು ಕಥೆಗಳು ಬಿಳಿಗಿರಿರಂಗನ ಹೆಸರಿನಲ್ಲಿ ಜನಪದರ ಕಲ್ಪನೆಯಲ್ಲಿವೆ.

*

**ಬಿಳಿಗಿರಿರಂಗನ ಬೆಟ್ಟ:** ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಆಗ್ನೇಯ ದಿಶೆಯಲ್ಲಿ ಯಳಂದೂರಿನಿಂದ ಸು. 15 ಕಿಮೀ ದೂರದಲ್ಲಿ ಇರುವ ಬೆಟ್ಟ ಹಾಗೂ ಅದರ ಮೇಲಿರುವ ಗ್ರಾಮ. ಜನಸಂಖ್ಯೆ 2,370. ಬೆಟ್ಟ ಸಮುದ್ರಮಟ್ಟದಿಂದ ಸು. 5,091[1] ಎತ್ತರವಿದೆ. ಈ ಬೆಟ್ಟವನ್ನು ಬಿಳಿಗಿರಿಬೆಟ್ಟ, ಬಿಳಿಕಲ್ಲುಬೆಟ್ಟ, ಶ್ವೇತಾದ್ರಿ ಎಂದೂ ಕರೆಯುತ್ತಾರೆ. ಬೆಟ್ಟದ ಮೇಲಿನ ದೇವಸ್ಥಾನದ ಬಳಿ ಇರುವ ಪ್ರಸಿದ್ಧವಾದ ಕಮರಿಕಲ್ಲು ಬೆಳ್ಳಗಿರುವುದರಿಂದ ಇದನ್ನು ಬಿಳಿಗಿರಿ ಎಂದು ಕರೆದರೆಂದು ಪ್ರತೀತಿ. ಈ ಬೆಟ್ಟದ ಮೇಲೆ ಬಿಳಿಗಿರಿರಂಗಸ್ವಾಮಿ ದೇವಾಲಯವಿದ್ದು ಪುಣ್ಯಕ್ಷೇತ್ರವೆನಿಸಿದೆ.

ಬೆಟ್ಟವನ್ನು ಏರಲು ಯಳಂದೂರು ಕಡೆಯಿಂದ ಎರಡು ಕಣಿವೆ (ಘಾಟ್) ರಸ್ತೆಗಳಿವೆ. ಇವುಗಳಲ್ಲಿ ಒಂದು ರಸ್ತೆ ನಾಲ್ಕೂವರೆ ಕಿಮೀ ಇದ್ದು ಅತ್ಯಂತ ಕಡಿದಾಗಿದೆ. ಈ ದಾರಿಯಲ್ಲಿ ಪಾದಚಾರಿಗಳು ಮಾತ್ರ ಹೋಗಲು ಸಾಧ್ಯ. ಇನ್ನೊಂದು ಮಾರ್ಗ ವಾಹನಗಳು ಹೋಗಲು ಅನುಕೂಲವಾಗುವಂತೆ ನಿರ್ಮಿಸಲಾಗಿದೆ. ಚಾಮರಾಜನಗರದ ಕಡೆಯಿಂದ ಕೂಡ ವಾಹನಗಳಲ್ಲಿ ಬೆಟ್ಟದ ಮೇಲಕ್ಕೆ ಹೋಗಲು ಉತ್ತಮ ರಸ್ತೆ ಸೌಲಭ್ಯವಿದೆ. ಬೆಟ್ಟದ ಇಳಿಜಾರು ಪ್ರದೇಶದಲ್ಲಿ ದಟ್ಟವಾದ ಕಾಡಿದ್ದು ತೇಗ, ಗಂಧ, ಹೊನ್ನೆ, ಮತ್ತಿ, ಬೀಟೆ, ಬನ್ನಿ ಮುಂತಾದ ಬೆಲೆಬಾಳುವ ಉಪಯುಕ್ತ ಮರಗಳು ಇವೆ. ಸು. 10ರಿಂದ 18 ಅಡಿ ಉದ್ದವಾದ ಒಂದು ರೀತಿಯ ಹುಲ್ಲು ಈ ಬೆಟ್ಟದ ಎಲ್ಲ ಕಡೆಗಳಲ್ಲಿ ವ್ಯಾಪಕವಾಗಿ ಬೆಳೆದಿರುವುದನ್ನು ಕಾಣಬಹುದು. ಇಲ್ಲಿಯ ಕಾಡಿನಲ್ಲಿ ಹುಲಿ, ಚಿರತೆ, ಕರಡಿ, ಆನೆ, ಕಾಡೆಮ್ಮೆ, ವಿವಿಧ ರೀತಿಯ ಜಿಂಕೆ ಮೊದಲಾದ ಪ್ರಾಣಿಗಳಿವೆ. ಬೆಟ್ಟದ ಸುತ್ತಮುತ್ತಣ ಪ್ರದೇಶಗಳಲ್ಲಿ ಆನೆಯ ಹಾವಳಿ ಹೆಚ್ಚು. ಇಲ್ಲಿಯ ಹವಾಗುಣ ಹಿತವಾಗಿದೆ. ಬೆಟ್ಟದ ಅತಿ ಎತ್ತರ ಪ್ರದೇಶವಾದ ದೇವಾಲಯದಿಂದ ಕಮರಿ ಕಲ್ಲಿನ ಶಿಖರದಿಂದ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯವನ್ನು ವೀಕ್ಷಿಸಬಹುದು. ಅನೇಕ ಕೆರೆಗಳು, ಬೆಟ್ಟಗಳು, ನೀಲಗಿರಿ ಬೆಟ್ಟದ ಸಾಲು, ಕಪಿಲಾ, ಕಾವೇರಿ ನದಿಗಳು ಮುಂತಾದವುಗಳ ದೃಶ್ಯ ಸುಂದರವಾಗಿ ಕಾಣುತ್ತದೆ.

ಈ ಬೆಟ್ಟಪ್ರದೇಶಗಳಲ್ಲಿ ಸೋಲಿಗರು ಹೆಚ್ಚಾಗಿ ವಾಸವಾಗಿದ್ದಾರೆ. ಬೆಟ್ಟದ ಮೇಲೆ ಕೆಲವೆಡೆ ಕಾಫಿ, ಕಿತ್ತಳೆ, ಬಾಳೆ, ಹಿಪ್ಪುನೇರಳೆ ಬೆಳೆಯುವ ಸಣ್ಣ ತೋಟಗಳಿವೆ. ಇತ್ತೀಚೆಗೆ ಕರ್ನಾಟಕ ಸರ್ಕಾರ ಈ ಬೆಟ್ಟದ ಮೇಲೆ ರೇಷ್ಮೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದೆ. ಇಲ್ಲೇ ಒಂದು ಪ್ರವಾಸಿ ಬಂಗಲೆಯಿದ್ದು ಅದರ ಸುತ್ತಲೂ ಸಿಂಕೋನ ಮರಗಳನ್ನು ಬೆಳೆಸಲಾಗಿದೆ. ಪ್ರಕೃತಿ ಸೌಂದರ್ಯದಿಂದಾಗಿ ಈ ತಾಣ ಆಕರ್ಷಕ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ.

ಬಿಳಿಗಿರಿರಂಗಸ್ವಾಮಿ ದೇವಾಲಯ ಬೆಟ್ಟದ ನೆತ್ತಿಯ ಮೇಲಿದೆ. ಇದು ಪ್ರಾಕಾರ, ನವರಂಗ ಹಾಗೂ ಮುಖಮಂಟಪ ಮೊದಲಾದವುಗಳು ಇರುವ ಸಾಮಾನ್ಯ ರೀತಿಯ ದ್ರಾವಿಡಶೈಲಿಯ ಕಟ್ಟಡ. ಬಿಳಿಗಿರಿ ರಂಗಸ್ವಾಮಿ (ಶ್ರೀನಿವಾಸ) ಸುಮಾರು ನಾಲ್ಕೂವರೆ ಅಡಿಗಳಷ್ಟು ಎತ್ತರವಿರುವ ಸುಂದರ ಶಿಲಾಮೂರ್ತಿ. ಶಂಖ, ಚಕ್ರ, ವರದ, ಕಟಿಹಸ್ತವಿರುವ ಈ ಚತುರ್ಭುಜ ಮೂರ್ತಿ ನಡುಪಟ್ಟಿ ಹಾಗೂ ಕಠಾರಿ (ಬಾಕು, ಸುರಿಗೆ)ಗಳಿಂದ ಅಲಂಕೃತವಾಗಿದೆ. ನವರಂಗದ ಬಲಭಾಗದಲ್ಲಿರುವ ಮೂರು ಗೂಡುಗಳಲ್ಲಿ ಲೋಹದಲ್ಲಿ ನಿರ್ಮಿತವಾದ ಬಿಳಿಗಿರಿರಂಗ, ಹನುಮಂತ, ಮಣವಾಳ

ಮಹಾಮುನಿಗಳ ಮೂರ್ತಿಗಳಿವೆ. ದೇವಾಲಯದ ಬಲಭಾಗದಲ್ಲಿ ಅಲರ್‌ಮೇಲ್‌ಮಂಗೈ ಎಂದು ಕರೆಯಲಾಗುವ ಅಮ್ಮನವರ ಸನ್ನಿಧಿ ಇದೆ. ನವರಂಗದ ಎಡಭಾಗದ ಗೂಡುಗಳಲ್ಲಿ ನಮ್ಮಾಳ್ವಾರ್, ಶಠಕೋಪ ಮತ್ತು ರಾಮಾನುಜರ ವಿಗ್ರಹಗಳನ್ನಿಡಲಾಗಿದೆ. ದ್ವಾರದ ಬಲಗಡೆಯ ಇನ್ನೊಂದು ಗೂಡಿನಲ್ಲಿ ವೇದಾಂತಾಚಾರ್ಯರ ವಿಗ್ರಹವಿದೆ.

ಸ್ಥಳಪ್ರತೀತಿಯ ಪ್ರಕಾರ ಇಲ್ಲಿಯ ಮೂಲದೇವರನ್ನು ವಸಿಷ್ಠರು ಪ್ರತಿಷ್ಠಾಪಿಸಿದರು. ವಿಷ್ಣುವರ್ಧನರಾಯ ಎಂಬುವನು ದೇವಾಲಯದ



ರಂಗನಾಥಸ್ವಾಮಿ ದೇವಾಲಯದ ಮುಖಮಂಟಪ

ಜೀರ್ಣೋದ್ಧಾರ ಮಾಡಿದ. ಇಲ್ಲಿನ ಬಿಳಿಕಲ್ಲು ತಿರುವೇಂಕಟನಾಥನಿಗೆ ಹದಿನಾಡಿನ ಮುದ್ದರಾಜ 1667ರಲ್ಲಿ ದತ್ತಿ ಬಿಟ್ಟ ವಿಷಯವನ್ನು ಇಲ್ಲಿರುವ ತಾಮ್ರಶಾಸನ ತಿಳಿಸುತ್ತದೆ. ದಿವಾನ್ ಪೂರ್ಣಯ್ಯನು ಈ ದೇವಾಲಯದ ಸೇವೆಗಾಗಿ ಎರಡು ಗ್ರಾಮಗಳನ್ನು ದತ್ತಿಯಾಗಿ ಬಿಟ್ಟನೆಂದು ತಿಳಿಯುತ್ತದೆ. ಬ್ರಹ್ಮಾಂಡಪುರಾಣದಲ್ಲಿ ಬಿಳಿಗಿರಿಯನ್ನು ದಕ್ಷಿಣ ತಿರುಪತಿ ಎಂದು ಕರೆಯಲಾಗಿದೆ. ಪ್ರಚಲಿತವಾಗಿರುವ ಕಥೆಯೊಂದರ ಪ್ರಕಾರ ಒಮ್ಮೆ ವೆಂಕಟೇಶ್ವರನ ಪತ್ನಿ ಅಲುಮೇಲುಮಂಗಮ್ಮ ಅಭ್ಯಂಗಸ್ನಾನ ಮಾಡಲು ಇಷ್ಟಪಟ್ಟು ಸೀಗೇಕಾಯಿ ತರಲು ಪತಿದೇವನಿಗೆ ಕೇಳಿಕೊಂಡಳು. ಅದರಂತೆ ವೆಂಕಟೇಶ ಸೀಗೆಕಾಯಿ ತರಲು ಶ್ವೇತಾದ್ರಿಯ ಅರಣ್ಯಕ್ಕೆ ಬಂದ. ಆಗ ಅಲ್ಲಿ ಸುಂದರಳಾದ ಸೋಲಿಗ ಹೆಣ್ಣೊಬ್ಬಳನ್ನು ನೋಡಿ ಅವಳಲ್ಲಿ ಅನುರಕ್ತನಾಗಿ ಅಲ್ಲಿಯೇ ನೆಲಸಿದನಂತೆ. ಆದ್ದರಿಂದಲೇ ಈಗಲೂ ಈ ಬೆಟ್ಟದಲ್ಲಿ ಸೋಲಿಗರು ಬಿಳಿಗಿರಿರಂಗಸ್ವಾಮಿಯನ್ನು ತಮ್ಮ ನೆಂಟ ಭಾವನೆಂದು ಭಾವಿಸುತ್ತಾರೆ.

ಬಿಳಿಗಿರಿರಂಗಸ್ವಾಮಿಯ ರಥೋತ್ಸವ ಪ್ರತಿ ವರ್ಷ ವೈಶಾಖಮಾಸದಲ್ಲಿ (ಏಪ್ರಿಲ್) ನಡೆಯುತ್ತದೆ. ಇಲ್ಲಿಗೆ ಸಮೀಪದಲ್ಲಿರುವ ಬೂದಿತಿಟ್ಟಿನ ಮಾದಿಗರು ಅತ್ಯಂತ ಶ್ರದ್ಧಾಭಕ್ತಿಗಳಿಂದ ಒಂದು ಜೊತೆ ದೊಡ್ಡ (ಒಂದು ಅಡಿ ಒಂಬತ್ತು ಅಂಗುಲ ಪ್ರಮಾಣದ) ಪಾದರಕ್ಷೆಗಳನ್ನು ಚರ್ಮದಿಂದ ತಯಾರಿಸಿ ಬಿಳಿಗಿರಿರಂಗಸ್ವಾಮಿಗೆ ಎರಡು ವರ್ಷಕ್ಕೊಮ್ಮೆ ಸಮರ್ಪಿಸುವ ಸಂಪ್ರದಾಯವಿದೆ.

ದೇವಸ್ಥಾನದಿಂದ ಸು. 16 ಕಿಮೀ ದೂರದಲ್ಲಿ ಭಾರ್ಗವೀ ಎಂಬ ನದಿ ಮನೋಹರವಾದ ಕಣಿವೆಯಲ್ಲಿ ಹರಿಯುತ್ತದೆ. ಪರಶುರಾಮ ಮಾತೃಹತ್ಯಾದೋಷ ಪರಿಹಾರಕ್ಕಾಗಿ ಈ ಪರ್ವತದ ಮೇಲೆ ತಪಸ್ಸನ್ನಾಚರಿಸಿ ವಿರಜಾ ನದಿಯ ನೀರಿನಿಂದ ಭಗವಂತನ ಪಾದಗಳನ್ನು ತೊಳೆದುದರಿಂದ ಆ ನೀರಿನಿಂದಲೇ ಒಂದು ಪುಣ್ಯನದಿ ಉದ್ಭವಿಸಿದುದಾಗಿಯೂ ಇದನ್ನೇ ಭಾರ್ಗವೀ ನದಿ ಎಂದು ಕರೆಯಲಾಯಿತೆಂದೂ ಐತಿಹ್ಯ. ಈ ನದೀತೀರದಲ್ಲೇ ವೈಖಾನಸ ವಾಲಖಿಲ್ಯಾದಿ ಮುನಿಪುಂಗವರು ತಪಸ್ಸನ್ನು ಆಚರಿಸಿದ ಸ್ಥಳದಲ್ಲಿ ದೊಡ್ಡಸಂಪಿಗೆ ಎಂಬ ಮಹಾವೃಕ್ಷ ಇದೆ. ಈ ಮರದ ಮೂರು ದೊಡ್ಡ ಕೊಂಬೆಗಳು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಸಂಕೇತವೆಂದು ತಿಳಿಯಲಾಗಿದೆ. ಈ ವೃಕ್ಷದ ಸಮೀಪದಲ್ಲಿಯೇ ಮಹಾದೇವನೂ ದುರ್ಗಾದೇವಿಯೂ ಸನ್ನಿಹಿತರಾಗಿರುತ್ತಾರೆಂದೂ ಪ್ರತೀತಿ. ಈ ಹೆಮ್ಮರದ ಬುಡದಲ್ಲಿ ಇರುವ ಗುಂಡಗಿರುವ ಕಪ್ಪಾದ ಕಲ್ಲುಗಳು ಸಾಲಿಗ್ರಾಮಗಳೆಂದು ನಂಬಿಕೆ. ಬೆಟ್ಟದ ಮೇಲೆ ಗಂಗಾಧರೇಶ್ವರ ಎಂಬ ಇನ್ನೊಂದು ಗುಡಿ ಇದೆ. ಭಸ್ಮಾಸುರನಿಗೆ ವರದಾನ ಮಾಡಿ, ಅವನಿಂದಲೇ ವಂಚಿತವಾದ ರುದ್ರದೇವನ ಸಂರಕ್ಷಣೆಗಾಗಿ ಶ್ವೇತಾದ್ರೀಶ ಮೋಹಿನೀ ರೂಪ ತಾಳಿ ಅಸುರನನ್ನು ಭಸ್ಮೀಭೂತನನ್ನಾಗಿ ಮಾಡಿದನೆಂದೂ ಅನಂತರ ರುದ್ರದೇವ ಗಂಗಾಧರನೆಂಬ ಹೆಸರಿನಿಂದ ಈ ಸ್ಥಳದಲ್ಲೇ ನೆಲಸಿದನೆಂದೂ ಪ್ರತೀತಿ.

ಬಿಳಿಗಿರಿರಂಗಸ್ವಾಮಿಯ ದೇವಸ್ಥಾನದಿಂದ ಸು. 19 ಕಿಮೀ ದೂರದಲ್ಲಿ ಶಿವಸಮುದ್ರದ ಗಂಗರಾಜ ತನ್ನ ಅಳಿಯನಿಗಾಗಿ ಕಂಚುಕೋಟೆಯನ್ನು ನಿರ್ಮಿಸಿದುದಾಗಿ ತಿಳಿಯುತ್ತದೆ. ಈಗಲೂ ಆ ಕೋಟೆಯ ಅವಶೇಷಗಳನ್ನು ನೋಡಬಹುದಾಗಿದೆ. ಬೆಟ್ಟದ ಬುಡದಲ್ಲಿ ಬೃಂದಾವನವೆಂಬ ತುಳಸಮ್ಮನ ಗುಡಿ ಇದೆ. ಬೆಟ್ಟದ ಮಧ್ಯಭಾಗದಲ್ಲಿ ಕನಕದಾಸರದೆಂದು ಹೇಳಲಾಗುವ ಗುಹೆ ಇದೆ. (ಎಸ್.ವಿ.ಎಸ್.ಬಿ.)

**ಬಿಳೀಕಲ್ಲು ಬೆಟ್ಟ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕಿನಲ್ಲಿ ಮರಲವಾಡಿಯ ಆಗ್ನೇಯಕ್ಕೆ ಇರುವ ಬೆಟ್ಟ. ಬೆಂಗಳೂರು ಜಿಲ್ಲೆಯ ಕೆಲವೇ ಎತ್ತರದ ಬೆಟ್ಟಗಳಲ್ಲಿ ಇದೂ ಒಂದು. ಎತ್ತರ ಸು. 3,4000'. ತಾಲ್ಲೂಕಿನ ಪೂರ್ವ ಭಾಗ ಮತ್ತು ಅರ್ಕಾವತಿ ಕಣಿವೆ ಈ ಬೆಟ್ಟದಿಂದ ಬೇರ್ಪಡುತ್ತದೆ. ಈ ಬೆಟ್ಟದಿಂದ ಪೂರ್ವಕ್ಕೆ ಹರಿಯುವ ಯಾವ ಹೊಳೆಯೂ ಅರ್ಕಾವತಿಯನ್ನು ಸೇರುವುದಿಲ್ಲ. ಬೆಟ್ಟದ ಪಶ್ಚಿಮಕ್ಕೆ ಹರಿಯುವ ಹೊಳೆಗಳು ಮಾತ್ರ ಅರ್ಕಾವತಿಯ ಉಪನದಿಗಳಾಗುತ್ತವೆ. ಬೆಟ್ಟದ ಸುತ್ತಮುತ್ತಲೂ ಇರುವ ದಟ್ಟವಾದ ಕಾಡಿನಲ್ಲಿ ಬಿದಿರು, ಶ್ರೀಗಂಧ, ಸೌದೆಯ ಮರಗಳು ಜಾಸ್ತಿ. ಕಾಡುಪ್ರಾಣಿಗಳಲ್ಲಿ ಮುಖ್ಯವಾಗಿ ಆನೆ, ಜಿಂಕೆ, ಕರಡಿ, ಸೀಳುನಾಯಿ, ಕಾಡುಹಂದಿಗಳನ್ನು ಕಾಣಬಹುದು. (ಡಿ.ಇ.ಕೆ.ಆರ್.)

**ಬಿಳಿಗಿರಿ, ಎಚ್.ಎಸ್.:** 1925–96. ಭಾಷಾವಿಜ್ಞಾನಿ, ವಿಶಿಷ್ಟ–ವಿಲಕ್ಷಣ ವ್ಯಕ್ತಿತ್ವದ ಕವಿ, ವಿದ್ವಾಂಸರು. ಇವರು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ನೆಲೆಸಿದ್ದ ಹೆಮ್ಮಿಗೆ ಮನೆತನದವರು. ತಂದೆ ಶ್ರೀನಿವಾಸರಂಗಾಚಾರ್, ತಾಯಿ ಆಂಡಾಳಮ್ಮ. ಬಿಳಿಗಿರಿಯವರ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಯ ವಿದ್ಯಾಭ್ಯಾಸ ಭದ್ರಾವತಿ, ಕುಂಸಿ, ಸಾಗರ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ನಡೆಯಿತು. ಶಿವಮೊಗ್ಗದಲ್ಲಿ ಇಂಟರ್‌ಮೀಡಿಯೆಟ್ ಮುಗಿಸಿ, ನಾಲ್ಕು ವರ್ಷ ಎಂಜಿನಿಯರಿಂಗ್ ಓದಿದರು. ಇದರಲ್ಲಿ ಆಸಕ್ತಿ ಮೂಡದೆ ಕನ್ನಡದ ಕಡೆ ಮುಖಮಾಡಿದರು. ಬಿ.ಎ. ಆನರ್ಸ್ (1952), ಕನ್ನಡ ಎಂ.ಎ (1953) ಪದವಿ ಗಳಿಸಿದರು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸಂಶೋಧನೆ ಕೈಗೊಂಡು ಪಿಎಚ್.ಡಿ. ಪದವಿ ಪಡೆದರು (1961).

ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ (1953) ತಮ್ಮ ವೃತ್ತಿ ಜೀವನ ಆರಂಭಿಸಿದರು. ತರುವಾಯ ವಿದ್ಯಾರ್ಥಿವೇತನ ಪಡೆದು ಭಾಷಾವಿಜ್ಞಾನ ವಿಷಯದಲ್ಲಿ ಸಂಶೋಧನೆಗೆಂದು ಪುಣೆಯ ಡೆಕ್ಕನ್ ಕಾಲೇಜಿಗೆ ಹೋದರು. 1956ರಲ್ಲಿ ರಾಕ್‌ಫೆಲ್ಲರ್ ವಿದ್ಯಾರ್ಥಿವೇತನ ಸಿಕ್ಕಿ, ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯಕ್ಕೆ ಉನ್ನತ ವ್ಯಾಸಂಗಕ್ಕೆ ತೆರಳಿದರು. ಅಲ್ಲಿಂದ ವಾಪಸಾದ ಬಳಿಕ ಡೆಕ್ಕನ್ ಕಾಲೇಜಿನಲ್ಲಿ ರೀಡರ್ ಆದರು (1966). 1970–72ರ ಅವಧಿಯಲ್ಲಿ ಮೈಸೂರಿನಲ್ಲಿರುವ ಕೇಂದ್ರೀಯ ಭಾಷಾಸಂಸ್ಥಾನದಲ್ಲಿ ಉಪನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. 1980–86ರ ವರೆಗೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನ ಪ್ರಾಧ್ಯಾಪಕರಾಗಿದ್ದರು.

ಬಿಳಿಗಿರಿಯವರು ಭಾಷಾವಿಜ್ಞಾನಿಯಾಗಿದ್ದರೂ ಸಾಹಿತಿಯಾಗಿ ಕನ್ನಡ ಕಾವ್ಯಾಸಕ್ತರೆಲ್ಲರಿಗೆ ಪರಿಚಿತರಾಗಿದ್ದರು. ಇವರಿಗೆ ಹಲವಾರು ವಿಷಯಗಳಲ್ಲಿ ಆಸಕ್ತಿಯಿತ್ತು. ವ್ಯಾಕರಣ, ಛಂದಸ್ಸು, ಕಾವ್ಯ, ಸಂಗೀತದ ಬಗ್ಗೆ ಇವರಿಗೆ ಆಳವಾದ ಅರಿವು ಇತ್ತು. ಇವರೊಬ್ಬ ಸೂಕ್ಷ್ಮಸಂವೇದನೆಯ ಕವಿ. ತಮಾಷೆ, ಹಾಸ್ಯ, ವ್ಯಂಗ್ಯ–ವಿಡಂಬನೆಗಳಲ್ಲಿಯೇ ಸದಾ ಮಾತನಾಡುತ್ತಿದ್ದರು. ತತ್ತ್ವಶಾಸ್ತ್ರವನ್ನೂ ಚೆನ್ನಾಗಿ ಅಭ್ಯಾಸ ಮಾಡಿದ್ದರು.

ಇವರು ರಚಿಸಿದ ಆಲೋಕ ಭಾಗ–1 (1969) ಎಂಬ ಗ್ರಂಥ ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ರಚಿತವಾದ ಗಮನಾರ್ಹ ಕೃತಿಗಳಲ್ಲೊಂದು. ಇದು ಕೇಶಿರಾಜನ (ಸು.1260) ಶಬ್ದಮಣಿದರ್ಪಣಂ ಎಂಬ ಹಳಗನ್ನಡ ವ್ಯಾಕರಣಕ್ಕೆ ಬರೆದ ಆಧುನಿಕ ವ್ಯಾಖ್ಯಾನ ಗ್ರಂಥ. ಆದರೆ ಇದು ಪೂರ್ಣವಾದುದಲ್ಲ. ಮೂಲಗ್ರಂಥದಲ್ಲಿ 342 ಸೂತ್ರಗಳಿದ್ದು 'ಆಲೋಕ'ದಲ್ಲಿ ಮೊದಲ 81 ಸೂತ್ರಗಳಿಗೆ ಮಾತ್ರ ವ್ಯಾಖ್ಯಾನ ನೀಡಲಾಗಿದೆ. ಪೀಠಿಕೆ, ಸಂಧಿಪ್ರಕರಣಗಳಿಗೆ ಇದರಲ್ಲಿ ವ್ಯಾಖ್ಯಾನವಿದೆ. ಎರಡು ಮತ್ತು ಮೂರನೆಯ ಭಾಗಗಳಲ್ಲಿ ಉಳಿದೆಲ್ಲ ಸೂತ್ರಗಳಿಗೂ ವ್ಯಾಖ್ಯಾನ ಬರೆಯುವುದು ಇವರ ಉದ್ದೇಶವಾಗಿತ್ತು. ಇದು ಕೈಗೂಡದಿದ್ದದ್ದು ವಿದ್ವತ್ ಪ್ರಪಂಚಕ್ಕಾದ ನಷ್ಟವೆಂದೇ ಹೇಳಬಹುದು.



ಇವರ ಮತ್ತೊಂದು ಪುಸ್ತಕ 'ವರ್ಣನಾತ್ಮಕ ವ್ಯಾಕರಣದ ಮೂಲ ತತ್ತ್ವಗಳು' (1970). ಬೆಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ನೀಡಿದ ಮೂರು ಉಪನ್ಯಾಸಗಳ ಸಂಕಲನ. ಭಾಷಾವಿಜ್ಞಾನದಂತಹ ಕ್ಲಿಷ್ಟವಿಷಯವನ್ನು ಕುರಿತು ಜನಸಾಮಾನ್ಯರಿಗೂ ತಿಳಿಯುವಂತೆ ಯಾವ ರೀತಿ ಬರೆಯಬಹುದು ಎಂಬುದಕ್ಕೆ ಈ ಪುಸ್ತಕ ಉತ್ತಮ ಉದಾಹರಣೆ.

ಇವರ ವರಸೆಗಳು (1970) ಎಂಬ ಪುಸ್ತಕ, ಭಾಷೆ ಮತ್ತು ಛಂದಸ್ಸುಗಳನ್ನು ಕುರಿತ ಹನ್ನೊಂದು ಲೇಖನಗಳ ಸಂಕಲನ. ಇದರಲ್ಲಿ ವರ್ಣನಾತ್ಮಕ ವ್ಯಾಕರಣದ ಮೂಲ ತತ್ತ್ವಗಳು ಎಂಬ ಪುಸ್ತಕವೂ ಪೂರ್ಣವಾಗಿ ಸೇರಿಕೊಂಡಿದೆ. ಭಾಷೆ ಎಂಬ ಆಟ ಗಮಕ ಸಮಾಸ ಸಮಾಸವೇ ? ಪ್ರಾಸಸ್ಥಾನಗಳಲ್ಲಿ ಶಬ್ದವಿಕಾರ ಎಂಬ ಲೇಖನಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾದಂಥವು. ಆಕರ್ಷಕವಾಗಿ ಓದಿಸಿಕೊಳ್ಳುವ ಗುಣವುಳ್ಳಂಥವು. ಶಾಸ್ತ್ರೀಯ ಬರೆವಣಿಗೆ ಹೇಗೆ ಸೊಗಸಾಗಿ ರೂಪುತಳೆಯಬಲ್ಲದು ಎಂಬುದಕ್ಕೆ ಈ ಪುಸ್ತಕದ ಲೇಖನಗಳು ಸಾಕ್ಷಿಯಾಗಿವೆ.

ಖಡಿಯಾ (1965) ಎಂಬುದು ಖಡಿಯಾ ಭಾಷೆಯ ವರ್ಣನಾತ್ಮಕ ವ್ಯಾಕರಣ. ಇಂಗ್ಲಿಷಿನಲ್ಲಿದೆ. ಬಿಹಾರದ ಛೋಟಾನಾಗಪುರ ವಿಭಾಗದಲ್ಲಿ ಸುಮಾರು ಎರಡು ಲಕ್ಷ ಜನರು ಮಾತನಾಡುವ ಖಡಿಯಾ ಭಾಷೆಯ ಈ ವ್ಯಾಕರಣ ಇವರಿಗೆ ಡಾಕ್ಟೊರೇಟ್ ಪದವಿಯನ್ನು ಗಳಿಸಿಕೊಟ್ಟ ಮಹಾಪ್ರಬಂಧ.

ಪೇಪರ್ಸ್ ಅಂಡ್ ಟಾಕ್ಸ್ (1971) ಸಂಪಾದಿತ ಕೃತಿ. ಕನ್ನಡದ ಅನುನಾಸಿಕಗಳನ್ನು ಕುರಿತದ್ದು 'ದಿ ನೇಸಲ್ ಫೋನಿಮ್ಸ್ ಆಫ್ ಕನ್ನಡ'. ಕನ್ನಡ ಕ್ರಿಯಾಪದಗಳ ಎರಡು ಮಾದರಿಗಳಿಗೆ ಸಂಬಂಧಿಸಿದ್ದು 'ಕನ್ನಡ ವರ್ಬ್'. ಟೂ ಮಾಡೆಲ್ಸ್ (1959) ಕನ್ನಡದ ಧಾತುರೂಪಗಳನ್ನು ನಡೆಸುವ ಕ್ರಮ ಮತ್ತು ವರ್ಗೀಕರಣವನ್ನು ಕುರಿತದ್ದು. 'ಕಾಂಜುಗೇಷನಲ್ ಸಿಸ್ಟಮ್ ಆಫ್ ಕನ್ನಡ' –ಈ ಲೇಖನಗಳು ಪ್ರಮುಖವಾದವು. ವ್ಯಾಕರಣಾತ್ಮಕ ಪ್ರಕ್ರಿಯೆಗಳನ್ನು ವಿವರಣಾತ್ಮಕ ಭಾಷಾವಿಜ್ಞಾನ ನಿಟ್ಟಿನಲ್ಲಿ ಗಮನಿಸುವ ಇವರ ಅಧ್ಯಯನ ವಿಧಾನ ಪ್ರಾರಂಭವಾದುದೇ ಈ ಹಂತದಲ್ಲಿ.

ಬಿಳಿಗಿರಿಯವರು ಬಹುಶ್ರುತರು. ಕಾವ್ಯರಚನೆಯಿಂದಲೇ ಸಾಹಿತ್ಯ ಕ್ಷೇತ್ರಕ್ಕೆ ಕಾಲಿರಿಸಿದರು. ನವೋದಯ ಕಾವ್ಯಲಕ್ಷಣದ ಕವಿತೆಗಳ ಸಂಕಲನ ನಂದನ (1952) ಇವರ ಪ್ರಥಮ ಪ್ರಕಟಣೆ. ವ್ಯಂಗ್ಯ ವಿಡಂಬನೆಗಳಿಂದ ಕೂಡಿ, ನವ್ಯದ ಕೆಲವು ಲಕ್ಷಣಗಳಿದ್ದ ನಾಯಿಕೊಡೆ (1973) ಎರಡನೆಯ ಕೃತಿ. ಕಾವ್ಯ ರಚನೆಯ ವಿವಿಧ ಪ್ರಯೋಗಗಳೇ ಈ ಕವನ ಸಂಕಲನದ ಹೆಚ್ಚುಗಾರಿಕೆ. 'ಬಿಳಿಗಿಮಿರಿಕ್ಸ್' ಮುಕ್ತಕಗಳ ಸಂಕಲನ; ಕಾಮಶಾಸ್ತ್ರ ಪದ್ಯಗಳನ್ನು ಒಳಗೊಂಡ ಸಂಗ್ರಹ 'ಸುಭಗಾನೀವಿ' ಇವೆರಡು ಸಂಕಲನಗಳು 'ಖಾಸಗಿ ಪ್ರಸಾರಕ್ಕೆ ಮಾತ್ರ' ಎಂದು ತಮ್ಮ ಆಪ್ತ ಸ್ನೇಹಿತರಿಗೆ ಮಾತ್ರ ಕಳುಹಿಸುತ್ತಿದ್ದರು.

ಬಿಳಿಗಿರಿಯವರ ಕಾವ್ಯದ ಒಂದು ಮಾದರಿ :

ನನ್ನಯ ಹೆಸರೇ? ಎಚ್. ಎಸ್. ಬಿಳಿಗಿರಿ
ಕೇಳಿಲ್ಲವೆ? ಈಗಾದರೂ ಕೇಳಿರಿ!
ಎಚ್. ಎಂದರೆ ನಾ ಹುಟ್ಟಿದ ಹೆಮ್ಮಿಗೆ
ಎಸ್. ಎಂಬುದು ಆ ತಂದಿಹ ತಂದೆಗೆ
ಬಿಳಿಗಿರಿ ಎಂಬುದು ನನ್ನಯ ಹೆಸರು
ಎಂತಹ ಹೆಸರು! ಬಾಯಿಗೆ ಮೊಸರು!
ಬೀ ಐ ಎಲ್ ಐ ಜೀ ಐ ಆರ್ ಐ –
ಶಿವನಿಗೆ ಮೂರೈ! ನನಗೋ ನಾಲ್ಕೈ!
ಐಗಳೆ ನನ್ನಯ ಹೆಸರಿನ ತುಂಬ
ಆದುದರಿಂದಲೆ ನನಗೀ ಜಂಬ!

– ಹೀಗೆ ಪದ್ಯದ ಧಾಟಿ ಮುಂದುವರಿಯುತ್ತದೆ.

ಡಿ. ಎಲ್.ನರಸಿಂಹಾಚಾರ್ ಹಾಗೂ ಎಂ. ಎಸ್. ಖತ್ರೆಯವರು ಇವರ ನೆಚ್ಚಿನ ಗುರುಗಳಾಗಿದ್ದರು. ಆದುದರಿಂದ ಇವರ ಬಹುಪಾಲು ಲೇಖನಗಳು, ಸಂಪ್ರಬಂಧಗಳು, ವ್ಯಾಕರಣಾತ್ಮಕ ಪ್ರಕ್ರಿಯೆಗಳನ್ನು ಭಾಷಾವಿಜ್ಞಾನದ ನೆಲೆಯಲ್ಲಿ ವಿವೇಚಿಸಲಾಗಿದೆ. ವ್ಯಾಕರಣ–ಭಾಷಾವಿಜ್ಞಾನ ಕ್ಷೇತ್ರಗಳು ಬೆಸೆದುಕೊಂಡಿರುವ ಇವರ ಬರೆಹಗಳಲ್ಲಿ ಹಳತು–ಹೊಸದರ ಅಪೂರ್ವ ಸಂಗಮವಿದೆ. ವಿವರಣಾತ್ಮಕ ಭಾಷಾವಿಜ್ಞಾನದ ಹೆಗಲಮೇಲೆ ಕುಳಿತು, ಅನ್ಯರಿಗೆ ಕಾಣಿಸದ ಕನ್ನಡ ವ್ಯಾಕರಣದ ವ್ಯಾಪ್ತಿಯನ್ನು ಇವರು ಕಂಡಿದ್ದಾರೆ, ಕಾಣಿಸಿದ್ದಾರೆ. ಇವರು 1996 ಮೇ 10ರಂದು ನವದೆಹಲಿಯಲ್ಲಿ ನಿಧನರಾದರು. **(ಆರ್.ಆರ್‌ಕೆ)**

**ಬೀಚಿ:** 1913–80: ಕನ್ನಡದ ಪ್ರಸಿದ್ಧ ಬರೆಹಗಾರ; ಹಾಸ್ಯ ಮತ್ತು ವಿಡಂಬನೆಗಳೆ ಪ್ರಧಾನವಾದ ಕೃತಿಗಳ ರಚನಾಕಾರ. ಇವರ ಪೂರ್ಣ ಹೆಸರು ರಾಯಸಂ ಭೀಮಸೇನರಾವ್. ಬೀಚಿ ಎಂಬುದು ಇವರ ಕಾವ್ಯನಾಮ. ಇವರು ಬಳ್ಳಾರಿ ಜಿಲ್ಲೆಯ ಹರಪನ ಹಳ್ಳಿಯಲ್ಲಿ 1913 ಏಪ್ರಿಲ್ 23 ರಂದು ಜನಿಸಿದರು. ತಂದೆ ಶ್ರೀನಿವಾಸರಾಯ, ತಾಯಿ ಭಾರತಮ್ಮ. ಶ್ರೀನಿವಾಸರಾಯರಿಗೆ ಮೂವರು ಮಕ್ಕಳಲ್ಲಿ ಬೀಚಿ ಕಿರಿಯವರು. ಇನ್ನಿಬ್ಬರು ಮಕ್ಕಳು ಲಕ್ಷ್ಮೀ ಮತ್ತು ಹಯವದನರಾವ್. ಚಿಕ್ಕಂದಿನಲ್ಲೇ ತಂದೆ, ತಾಯಿಯರನ್ನು ಕಳೆದುಕೊಂಡ ಇವರು ಇವರ ಸೋದರಮಾವ ಹನುಮಂತಾಚಾರ್ಯರು ಮಂತ್ರಾಲಯದಲ್ಲಿ ಸ್ಥಾಪಿಸಿದ್ದ ಆಶ್ರಮದಲ್ಲಿ ಬೆಳೆದರು.

ಬಳ್ಳಾರಿ ಜಿಲ್ಲೆ ಆಗ ಮದರಾಸು ಪ್ರಾಂತ್ಯದಲ್ಲಿತ್ತು. ಕನ್ನಡ, ತೆಲುಗು ಎರಡೂ ಭಾಷೆಗಳು ಅಲ್ಲಿ ಬಳಕೆಯಲ್ಲಿದ್ದರೂ ತೆಲುಗಿಗೆ ಪ್ರಾಶಸ್ತ್ಯವಿದ್ದುದರಿಂದ ಇವರು ತೆಲುಗು ಮಾಧ್ಯಮದಲ್ಲಿ ಪ್ರಾಥಮಿಕ ಹಂತದಲ್ಲಿ ಶಿಕ್ಷಣಪಡೆದರು. ಮಾಧ್ಯಮಿಕ ಹಂತದಲ್ಲಿ ಕಲಿತದ್ದು ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳು. ಇವರು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಎಂ.ಎಸ್.ಪುಟ್ಟಣ್ಣನವರ ಮಾಡಿದುಣ್ಣೋ ಮಹಾರಾಯ, ಗಳಗನಾಥರ ಈಶ್ವರಿಸೂತ್ರ ಎಂಬ ಕಾದಂಬರಿಗಳು ಪಠ್ಯಗಳಾಗಿದ್ದವು. ಇಂತಹ ಕೃತಿಗಳಿಂದ ಇವರಲ್ಲಿ ಕನ್ನಡದ ಆಸಕ್ತಿ ಬೆಳೆಯಿತು. ಎಸ್.ಎಸ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ (1930) ಮ್ಯಾಜಿಸ್ಟ್ರೇಟರ ಕಛೇರಿಯಲ್ಲಿ ಇವರು ಅಟೆಂಡರಾಗಿ ಇಪ್ಪತ್ತೈದು ರೂಪಾಯಿ ಸಂಬಳದಲ್ಲಿ ಸ್ವಲ್ಪಕಾಲ ದುಡಿದು ಅನಂತರ ಗುಮಾಸ್ತೆಯ ಹುದ್ದೆಗೆ ಏರಿದರು. ಒಂದು ಸಣ್ಣ ಕಾರಣಕ್ಕಾಗಿ ಕೆಲಸ ಕಳೆದುಕೊಂಡರು.

ಮೆಡಿಕಲ್ ಕಾಲೇಜಿಗೆ ಸೇರಿ ಎಲ್.ಎಂ.ಪಿ.ಡಿಪ್ಲೊಮ ಪಡೆಯಬೇಕೆಂಬ ಇವರ ಅಣ್ಣನ ಬಯಕೆ ಪೂರೈಸಲಿಲ್ಲ. ಇವರು 1933ರಲ್ಲಿ ಜಮಖಂಡಿಯ ಶ್ರೀನಿವಾಸಾಚಾರ್ಯರ ಮಗಳು ನೇತಾಬಾಯಿವರನ್ನು ಮದುವೆಯಾದರು. 1936ರಲ್ಲಿ ಅನಂತರ ಬಳ್ಳಾರಿಯ ಪೊಲೀಸ್ ಸೂಪರಿಂಟೆಂಡೆಂಟ್ ಕಛೇರಿಯಲ್ಲಿ ಮತ್ತೆ ಅಟೆಂಡರ್ ಕೆಲಸಕ್ಕೆ ಸೇರಿ (1936) ಮುಂದೆ ಮದರಾಸಿನ ಸಿ.ಐ.ಡಿ. ಇಲಾಖೆಗೆ ವರ್ಗವಾಗಿ ಕೆಲವು ವರ್ಷಗಳ ಅನಂತರ ಮತ್ತೆ ಬಳ್ಳಾರಿಗೆ ಬಂದರು.

ಬೀಚಿಯವರಿಗೆ ಬಾಲ್ಯದಿಂದಲೂ ಓದಿನಲ್ಲಿ ಅಪಾರ ಅಭಿರುಚಿ. ಟಾಲಸ್ಟಾಯ್, ದಾಸ್ತೋವಸ್ಕಿ, ಬರ್ಟ್ರಾಂಡ್‌ರಸೆಲ್, ಹಕ್ಸ್‌ಲೀ, ವುಡ್‌ಹೌಸ್ ಮೊದಲಾದವರ ಕೃತಿಗಳು, ಬಯಲಾಟ, ನಾಟಕ ಮುಂತಾದವು ಇವರ ಮೇಲೆ ಪ್ರಭಾವ ಬೀರಿದುವು.

ಬಳ್ಳಾರಿಯಲ್ಲಿದ್ದಾಗ ಸಿಂದಗಿ ಗವಿಸಿದ್ಧಬಸಪ್ಪನವರ ಪ್ರೋತ್ಸಾಹದಿಂದ ಜೋಳದರಾಶಿ ದೊಡ್ಡಣ್ಣಗೌಡ, ಸಿ.ವ.ಚೆನ್ನಬಸವೇಶ್ವರ, ಮಾಸ್ಟರ್ ಹಿರಣ್ಣಯ್ಯನವರ ಸಹಕಾರದಿಂದ ನಾಡಹಬ್ಬ ಆಚರಿಸಲಾಗುತ್ತಿತ್ತು. ಆಗ ನಾಡಹಬ್ಬದ ಸಮಾರಂಭಕ್ಕೆ ಬರುತ್ತಿದ್ದ ಶಂ.ಬಾ.ಜೋಶಿ, ಶಿವರಾಮಕಾರಂತ, ರಾಜರತ್ನಂ, ಅ.ನ.ಕೃಷ್ಣರಾಯ ಮೊದಲಾದವರ ಪರಿಚಯ ಬೆಳೆಯಿತು. ಕನ್ನಡ ಸಾಹಿತ್ಯ ಗ್ರಂಥಗಳ ಪರಿಚಯವೇ ಇಲ್ಲದಿದ್ದ ಇವರನ್ನು ಸಾಹಿತ್ಯ ಜಗತ್ತಿನ ಗುರುತ್ವಾಕರ್ಷಣೆಗೆ ಒಳಪಡಿಸಿದವರು ಹಾಗೂ ಇವರನ್ನು ಕನ್ನಡ ಪ್ರೇಮಿಯಾಗಿಸಿದವರು ಅ.ನ.ಕೃಷ್ಣರಾಯರು ಹಾಗೂ ಅವರ ಕೃತಿ ಸಂಧ್ಯಾರಾಗ ಎಂಬ ಮಾತುಗಳನ್ನು ಬೀಚಿಯವರೇ ಒಂದುಕಡೆ ಹೇಳಿಕೊಂಡಿದ್ದಾರೆ.

ಇವರ ಮೊದಲ ಲೇಖನ ಪ್ರಜಾಮತ ಪತ್ರಿಕೆಯಲ್ಲಿ ಪ್ರಕಟವಾಯಿತು (1930). ಸ್ವಲ್ಪಕಾಲ ಇವರು ಇಂಗ್ಲಿಷಿನಲ್ಲಿ ಬರೆದರು, ಆದರೆ ಅವು ಪ್ರಕಟವಾಗಲಿಲ್ಲ. ಹುಬ್ಬಳ್ಳಿಯಲ್ಲಿದ್ದಾಗ ಕುಲಕರ್ಣಿ ಶ್ರೀನಿವಾಸರಾಯರ ಪರಿಚಯವಾಗಿ ಅವರು ಸಂಪಾದಿಸುತ್ತಿದ್ದ ಪ್ರೇಮ ಎಂಬ ಪತ್ರಿಕೆಯಲ್ಲಿ ಇವರ ಎರಡು ಕುನ್ನಿ ಎಂಬ ಕಥೆ ಪ್ರಕಟವಾಯಿತು. ಪೊಲೀಸ್ ಇಲಾಖೆಯ ನೌಕರಿಯಲ್ಲಿ ಹೊಸ ಪೇಟೆಯಲ್ಲಿದ್ದಾಗ ನಡೆದ ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ (1938) ಇವರಿಗೆ ಬೆಟಗೇರಿ ಕೃಷ್ಣಶರ್ಮರ ಪರಿಚಯವಾಯಿತು. 'ಜಯಂತಿ' ಪತ್ರಿಕೆಯಲ್ಲಿ ಗರುಡ ಪುರಾಣ (ನಾಟಕ), ನಾನೇ ಸತ್ತಾಗ ಎಂಬ ಲೇಖನಗಳು ಪ್ರಕಟವಾದುವು. ಬೀಚಿ ಅವರಿಗೆ ಮತ್ತೆ ಮದರಾಸಿಗೆ ವರ್ಗವಾಯಿತು. ಆಗ ಬಿ.ಆರ್.ಪಂತುಲು, ಕಾಳಿಂಗರಾಯ, ಮೋಹನಕುಮಾರಿ, ಸೋಹವಕುಮಾರಿಯವರ ಪರಿಚಯವಾಯಿತು. ಅಲ್ಲಿ 'ರಾಯರಸೊಸೆ' ನಾಟಕ ಅಭಿನಯಿಸಿದರು. ಅದೇ ಕಾಲಕ್ಕೆ ಇವರು ಬರೆದ ಏಕೀಕರಣ, ಏಕೋದರರು, ಸೈಕಾಲಜಿಸ್ಟ್ ಸಾರಂಗ ಪಾಣಿ ಎಂಬ ನಾಟಕಗಳು ಬಾನುಲಿಯಿಂದ ಬಿತ್ತರಗೊಂಡವು. ಇವರು ಬರೆದ ಹಾಸ್ಯ ಲೇಖನಗಳ ಸಂಗ್ರಹ ಮಾತ್ರೆಗಳು ಮತ್ತು ರೇಡಿಯೋ ನಾಟಕಗಳನ್ನು ಸಮಾಜ ಪುಸ್ತಕಾಲಯ ಪ್ರಕಟಿಸಿತು.

'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪೊತಾನ್ ಜೋಸೆಫ್ ಅವರು ಬರೆಯುತ್ತಿದ್ದ 'ಎ ಕಪ್ ಆಫ್ ಟೀ' ಅಂಕಣದಂತೆ ಕನ್ನಡದಲ್ಲಿ ಪಾಟೀಲಪುಟ್ಟಪ್ಪನವರು ನಡೆಸುತ್ತಿದ್ದ 'ವಿಶಾಲ ಕರ್ನಾಟಕ' ದಿನಪತ್ರಿಕೆಯಲ್ಲಿ ಇವರು ಮೊಸರು ಎಂಬ ಸ್ಥಿರ ಶೀರ್ಷಿಕೆಯಡಿಯಲ್ಲಿ ನಿತ್ಯವೂ ಹರಟೆಗಳನ್ನು ಬರೆದರು. ಈ ಅಂಕಣದಲ್ಲಿ ಬಂದ ಲೇಖನಗಳು ತಿಂಮನ ತಲೆ ಸಂಗ್ರಹದಲ್ಲಿ ಪ್ರಕಟವಾಯಿತು. ಮುಂದೆ ಕೊ.ಚೆ. ಸಂಪಾದಕರಾಗಿದ್ದ 'ರೈತವಾಣಿ' ವಾರಪತ್ರಿಕೆಯಲ್ಲಿ 'ಬೇವಿನಕಟ್ಟೆ ತಿಂಮ' ಎಂಬ ಸ್ಥಿರ ಶೀರ್ಷಿಕೆಯಲ್ಲಿ ಹಾಸ್ಯ ಲೇಖನಗಳನ್ನು ಬರೆಯತೊಡಗಿದರು. ಇವರು ಬರೆದ ಪ್ರಥಮ ಕಾದಂಬರಿ 'ದಾಸಕೂಟ'. ಇದು ಕನ್ನಡದ ಮೊಟ್ಟಮೊದಲ ಹಾಸ್ಯಪ್ರಧಾನ ಕಾದಂಬರಿ. ಇದಕ್ಕೆ ಅ.ನ.ಕೃ. ಮುನ್ನುಡಿ ಬರೆದಿದ್ದಾರೆ. ಮುಂದೆ ಇವರು ಸುಧಾ, ಪ್ರಜಾಮತ, ಪ್ರಪಂಚ ಪತ್ರಿಕೆಗಳ ಅಂಕಣಕಾರರಾಗಿ ಅನೇಕ ಹಾಸ್ಯದ ತುಣುಕುಗಳನ್ನು ಬರೆದು ಜನಪ್ರಿಯರಾದರು.

1958 ರಲ್ಲಿ ಸಿ.ಐ.ಡಿ. ವಿಶೇಷ ಶಾಖೆಯ ವ್ಯವಸ್ಥಾಪಕರಾಗಿ ಇವರಿಗೆ ಬೆಂಗಳೂರಿಗೆ ವರ್ಗವಾಯಿತು. ಅದುವರೆಗೆ ಇವರ ಒಂಬತ್ತು ಕೃತಿಗಳು ಮಾತ್ರ ಪ್ರಕಟವಾಗಿದ್ದವು. ಮಿಕ್ಕ ಕೃತಿಗಳೆಲ್ಲ ಇವರು ಬೆಂಗಳೂರಿಗೆ ಬಂದ ಮೇಲೆ ಬೆಳಕಿಗೆ ಬಂದವು. ತಿಂಮನ ತಲೆ (1946) 11ಕ್ಕೂ ಹೆಚ್ಚು ಮರುಮುದ್ರಣಗಳನ್ನು ಕಂಡು ದಾಖಲೆ ನಿರ್ಮಿಸಿದೆ.

ಇವರು ಹಲವಾರು ಕಾದಂಬರಿಗಳನ್ನು, ನಗೆನಾಟಕಗಳನ್ನು, ನಗೆ ಬರೆಹಗಳನ್ನು ರಚಿಸಿದ್ದಾರೆ. ಕಾದಂಬರಿ: ದಾಸಕೂಟ (1950), ಸತೀಸೂಳೆ (1956), ಸರಸ್ವತಿ ಸಂಹಾರ(1957), ಖಾದಿಸೀರೆ (1957), ಬೆಂಗಳೂರು ಬಸ್ಸು (1959), ಸತ್ತವನು ಎದ್ದು ಬಂದಾಗ (1959), ದೇವನ ಹೆಂಡ (1960), ಏರದ ಬಳೆ (1960), ಮೇಡಮ್ಮನ ಗಂಡ (1960), ಟೆಂಟ್ ಸಿನೆಮಾ (1961), ಎಲ್ಲರೂ ಸಂಪನ್ನರೇ (1961), ಆರಿದ ಚಹಾ (1965), ಬಂಗಾರದ ಕತ್ತೆ (1961), ಎಲ್ಲಿರುವೆ ತಂದೆ ಬಾರೊ(1961), ಬ್ರಹ್ಮಚಾರಿಯ ಮಗ (1961), 3 ಹೆಂಣು 5ಜಡೆ (1962), ಮುರಿದಬೊಂಬೆ (1963), ಕಮಲಮ್ಮನ ಕುಂಕುಮ ಬಲ (1963),ಸೀತೂ ಮದುವೆ (1964), ಕತ್ತಲಲ್ಲಿ ಬಂದವಳು (1967), ಮಹಾಯುದ್ಧ (1965), ಗರತಿಯ ಗುಟ್ಟು (1969), ಬಿತ್ತಿದ್ದೇ ಬೇವು (1969), ಕಮಲೆಯ ಓಲೆಗಳು (1972), ದೇವರಿಲ್ಲದ ಗುಡಿ (1974), ಮನೆತನದ ಗೌರವ (1974) ಇತ್ಯಾದಿ.

ನಾಟಕ: ರೇಡಿಯೋ ನಾಟಕಗಳು (1946), ಹನ್ನೊಂದನೇ ಅವತಾರ (1951).

ನಗೆಬರಹ: ತಿಂಮನ ತಲೆ (1946), ಹುಚ್ಚುಹುರುಳು (1951), ಚಿನ್ನದ ಕಸ (1959), ತಿಮ್ಮರಸಾಯನ (1960), ಬೆಳ್ಳಿತಿಂಮ ನೂರೆಂಟು ಹೇಳಿದ (1962), ಅಂದನಾ ತಿಂಮ (1969), ಅಮ್ಮಾವ್ರ ಕಾಲ್ಗುಣ (1966), ಹೆಂ. ಕಾ. ಗಂ. (1959), ಹೆಂಡತಿ ನಕ್ಕಾಗ (1968), ಉತ್ತರಭೂಪ

(1974), ಮಾತ್ರೆಗಳು (1946), ಲೇವಡಿ ಟೈಪಿಸ್ಟ್ (1964), ಬೆಳ್ಳಿ ಪತ್ರಗಳು (1965), ಕಾಮಂಣ (1969). ಇತರೆ: ನನ್ನ ಬಯಾಗ್ರಫಿ (ಆತ್ಮಕಥನ) (1977), ಥರ್ಡ್‌ಕ್ಲಾಸ್ ವೇಟಿಂಗ್‌ರೂಂ; ರವೀಂದ್ರ ದರ್ಶನ, ನಾಡಿಗೇರ್ ಎಂಬ ಕೃತಿಯಲ್ಲಿ ಜೀವನದ ಅನುಭವಗಳನ್ನು ಚೌಪದಿಯಲ್ಲಿ ಭಟ್ಟಿಯಿಳಿಸಿದ್ದಾರೆ.

ಸಮಕಾಲೀನ ಸಮಾಜದ ಲೋಪದೋಷಗಳ ತೀವ್ರವಾದ ವಿಡಂಬನೆ ಇವರ ಕೃತಿಗಳ ಮುಖ್ಯ ಲಕ್ಷಣ. ರಾಜಕೀಯ ಮತ್ತು ಧರ್ಮದ ಹೆಸರಿನಲ್ಲಿ ಮೋಸಮಾಡುವವರೆಂದರೆ ಇವರಿಗೆ ಅಸಹನೆ. ಕಾವಿ, ಖಾಕಿ, ಖಾದಿಗಳನ್ನು ತೊಟ್ಟು ಸಮಾಜದ ದಾರಿ ತಪ್ಪಿಸುವವರನ್ನು ಇವರು ತೀಕ್ಷ್ಣವಾಗಿ ಖಂಡಿಸಿದ್ದಾರೆ. ನೋವಿಗೆ ಹಾಸ್ಯದ ಸಕ್ಕರೆ ಸವರಿ ಇವರು ಸಾಹಿತ್ಯವನ್ನು ಸಾದರ ಪಡಿಸುತ್ತಿದ್ದರು.

ಇವರು ಪೊಲೀಸ್ ಖಾತೆಯಲ್ಲಿ ಗುಮಾಸ್ತರಾಗಿ ಸೇರಿ ಸೂಪರಿಟೆಂಡೆಂಟರಾಗಿ ಮೂವತ್ತೆರಡು ವರ್ಷ ದುಡಿದು ನಿವೃತ್ತರಾದ ಮೇಲೆ (1968) ಬೆಂಗಳೂರಿನಲ್ಲಿ ನೆಲಸಿದರು.ತಿಂಮನ ಮನೆ ಎಂಬುದು ಇವರ ಮನೆಯ ಹೆಸರು. ಇವರಿಗೆ ಶ್ರೀನಿವಾಸಮೂರ್ತಿ ಮತ್ತು ರವೀಂದ್ರ ಎಂಬ ಇಬ್ಬರು ಗಂಡು ಮಕ್ಕಳು. ರವೀಂದ್ರ ಅಕಾಲ ಮರಣಕ್ಕೆ ತುತ್ತಾದರು. ಶ್ರೀನಿವಾಸಮೂರ್ತಿ ವೈದ್ಯರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಓದುಗರನ್ನು ಬದುಕಿನುದ್ದಕ್ಕೂ ನಗಿಸಿದ ಬೀಚಿ 1980 ಡಿಸೆಂಬರ್ 7 ರಂದು ನಿಧನರಾದರು. ಇವರಿಗೆ ಮರಣೋತ್ತರದಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲಾಗಿದೆ. **(ಎಸ್.ಎಂ.ಕೆ.)**

**ಬೀಡಿ**: ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಊರು; ಹೋಬಳಿ ಕೇಂದ್ರ. ಖಾನಾಪುರದಿಂದ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,902. ಖಾನಾಪುರ ತಾಲ್ಲೂಕು ರಚನೆಯಾಗುವ ಮೊದಲು (1868–69) ಇದು ತಾಲ್ಲೂಕು ಕೇಂದ್ರವಾಗಿತ್ತು. ಗೋವೆಯ ಕದಂಬರ ಕಾಲದಲ್ಲಿ ಪ್ರಾಚೀನ ರಾಜಧಾನಿ ಸ್ಥಳ ಕಿರುಸಂಪಗಾಡಿಯ (ಗೋಲಿಹಳ್ಳಿ) ಹತ್ತಿರದಲ್ಲಿದ್ದ ಈ ಊರನ್ನು ಆಡಿ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. 1779ರಲ್ಲಿ ಹೈದರ್‌ಅಲಿ ಈ ಊರನ್ನು ಸವಣೂರ ನವಾಬನಿಗೆ ದತ್ತಿಕೊಟ್ಟ ಬಗ್ಗೆ ಆಧಾರಗಳಿವೆ. ಅನಂತರದಲ್ಲಿ ಇದು ಕಿತ್ತೂರು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತು. ಕಿತ್ತೂರು ಸಂಸ್ಥಾನದ ಪರವಾಗಿ ಬ್ರಿಟಿಷರ ವಿರುದ್ಧ ದಂಗೆಯೆದ್ದ ಸಂಗೊಳ್ಳಿ ರಾಯಣ್ಣ ಇಲ್ಲಿನ ಮಾಮಲೇದಾರ ಕಚೇರಿಯನ್ನು ಸುಟ್ಟ. ಅಲ್ಲಿ ಜಮಾ ಆಗಿದ್ದ 19 ಸಾವಿರ ರೂಪಾಯಿಗಳನ್ನು ದೋಚಿದ ಈ ಘಟನೆ ಜರುಗಿದ್ದು 1830 ಜನವರಿ 5ರ ಮಧ್ಯರಾತ್ರಿ. ಸಂಗೊಳ್ಳಿ ರಾಯಣ್ಣನ ಮೊದಲ ದಾಳಿ ಇದು.

1844ರಲ್ಲಿ 'ಗಡಕರಿ ದಂಗೆ'ಯ ಭಯ ಬೆಳಗಾಂವಿಯನ್ನು ಆವರಿಸಿದ್ದಾಗ, ರಕ್ಷಣೆಗಾಗಿ 800 ಯೋಧರ ತುಕಡಿಯನ್ನು ಬೀಡಿಯಲ್ಲಿ ನೆಲೆಗೊಳಿಸಲಾಗಿತ್ತು ಮಲೆನಾಡ ಸೆರಗಿನಲ್ಲಿರುವ ಈ ಊರಲ್ಲಿ ಕಬ್ಬು ಮುಖ್ಯ ಬೆಳೆ. ಇಲ್ಲಿ ಚಾಳುಕ್ಯ ಶೈಲಿಯ ವೀರಭದ್ರ ದೇವಾಲಯವಿದೆ. ಇತ್ತೀಚೆಗೆ ಈ ದೇವಾಲಯ ನವೀಕರಣಗೊಂಡಿದೆ. ವೀರಭದ್ರನ ವಿಗ್ರಹ ಒಂದು ಮೀಟರ್ ಎತ್ತರವಿದೆ. ಬ್ರಹ್ಮದೇವರು, ಭಾವಕೇಶ್ವರಿ, ಕೋಟಿಲಿಂಗೇಶ್ವರ, ದತ್ತಾತ್ರೇಯ, ಮಾರುತಿ, ವಿಠೋಬಾ, ಲಕ್ಷ್ಮೀ– ಇಲ್ಲಿನ ಇತರ ಗುಡಿಗಳು.

ಕೆರೆಯ ದಡದಲ್ಲಿರುವ ಭಾವಕೇಶ್ವರಿ ಗುಡಿಯನ್ನು ಬಾಕವ್ವನ ಗುಡಿ ಎಂದು ಕರೆಯುತ್ತಾರೆ. ಶಾಸನಗಳಲ್ಲಿ ಇದನ್ನು ಕಾಳಿಕಾದೇವಿ ಎಂದು ಕರೆಯಲಾಗಿದೆ. ಕೆರೆಯ ಸಮೀಪ ಹನ್ನೆರಡನೆಯ ಶತಮಾನಕ್ಕೆ ಸೇರಿದ ಎರಡು ವೀರಗಲ್ಲುಗಳಿವೆ. ಹನುಮಣ್ಣ ಮತ್ತು ಸೂರಯ್ಯ ನಾಯಕನು ಬ್ರಹ್ಮದೇವ ಮತ್ತು ಕಾಳಿಕಾದೇವಿಯರ ಅನುಗ್ರಹ ಪಡೆದಿದ್ದು ಆತನ ಮರಣದ ವಿಷಯ ಶಾಸನದಲ್ಲಿದೆ. ಜಯಕೇಶಿಯ ಆಳ್ವಿಕೆಯ 19 ನೆಯ ವರ್ಷದ ಒಂದು ಶಾಸನ ಇಲ್ಲಿದೆ. ಇದರಲ್ಲಿ ಹಬ್ಬೆಯನಾಯಕ ಗೋವುಗಳನ್ನು ಕದ್ದೊಯ್ಯುವಾಗ ಕಾಮಯ್ಯ ದಣ್ಣಾಯಕ ಅವನನ್ನು ಸೋಲಿಸಿದ ಸಂಗತಿ ವರ್ಣಿತವಾಗಿದೆ. ಬ್ರಹ್ಮದೇವರ ಗುಡಿ ಛಾವಣಿ ಹೊಂದಿದ ಗುಡಿಸಿಲಿನ ಆಕಾರದಲ್ಲಿದೆ. ಲಕ್ಷ್ಮೀ ಮತ್ತು ಹನುಮಂತನ ಗುಡಿಗಳ ಕಲ್ಲಿನಲ್ಲಿ ನಿರ್ಮಾಣಗೊಂಡಿವೆ. ಹನುಮಂತನ ಗುಡಿಯನ್ನು ವ್ಯಾಸರಾಯ ಸ್ವಾಮಿಗಳು ಸ್ಥಾಪಿಸಿದರೆಂದು ಪ್ರತೀತಿ.

ಕೋಟಿಲಿಂಗೇಶ್ವರ ದೇವಸ್ಥಾನ ಹೆಂಚಿನ ಕಟ್ಟಡ. ಗುಡಿಯ ಬಲಕ್ಕೆ ಕೆರೆಯ ಮೆಟ್ಟಲುಗಳಿವೆ. ಈ ಊರಿನಲ್ಲಿ ಪೀರ ಧರಿನಾಯಿಕನ ದರ್ಗಾ ಮಾತ್ರ ಕೆಥೊಲಿಕ್ ಚರ್ಚ್‌ಗಳೂ ಇವೆ. ತರುವಾಯದ ಚಾಳುಕ್ಯರ ಶೈಲಿಯ ಕಲ್ಮೇಶ್ವರ ಗುಡಿಯನ್ನು ಇತ್ತೀಚೆಗೆ ಇಟ್ಟಿಗೆ ಮತ್ತು ಹೆಂಚುಗಳಿಂದ ನವೀಕರಿಸಲಾಗಿದೆ. **(ಆರ್.ಎಂ.)**

**ಬೀದರ್:** ಕರ್ನಾಟಕ ರಾಜ್ಯದ ಬೆಳಗಾಂವಿ ವಿಭಾಗಕ್ಕೆ ಸೇರಿದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಆಡಳಿತ ಕೇಂದ್ರ ಪಟ್ಟಣ.

**ಜಿಲ್ಲೆ :** ರಾಜ್ಯದ ಉತ್ತರ ತುದಿಯಲ್ಲಿರುವ ಈ ಜಿಲ್ಲೆಯ ಪೂರ್ವದಲ್ಲಿ ಆಂಧ್ರಪ್ರದೇಶದ ಮೇಡಕ್ ಮತ್ತು ನಿಜಾಮಾಬಾದ್ ಜಿಲ್ಲೆಗಳು, ಉತ್ತರ ಮತ್ತು ಪಶ್ಚಿಮದಲ್ಲಿ ಮಹಾರಾಷ್ಟ್ರ ರಾಜ್ಯದ ನಾಂದೇಡ್ ಮತ್ತು ಉಸ್ಮಾನಾಬಾದ್ ಜಿಲ್ಲೆಗಳು, ದಕ್ಷಿಣದಲ್ಲಿ ಗುಲ್ಬರ್ಗ ಜಿಲ್ಲೆಯ ಅಳಂದ, ಗುಲ್ಬರ್ಗ ಮತ್ತು ಚಿಂಚೋಳಿ ತಾಲ್ಲೂಕುಗಳು ಇವೆ. ಜಿಲ್ಲೆ $17^{0}$ $30^{'}$–$18^{0}$ $30^{'}$ ಉತ್ತರ ಅಕ್ಷಾಂಶ ಹಾಗೂ $76^{0}$ $42^{'}$–$77^{0}$ $36^{'}$ ಪೂರ್ವ ರೇಖಾಂಶ ಇವುಗಳ ನಡುವೆ ಹಬ್ಬಿದೆ. ಜಿಲ್ಲೆಯ ವಿಸ್ತೀರ್ಣ 5,451 ಚ.ಕಿಮೀ. ಜಿಲ್ಲೆಯಲ್ಲಿ ಔರಾದ, ಬಿದರೆ, ಭಾಲ್ಕಿ, ಹುಮನಾಬಾದ ಮತ್ತು ಬಸವಕಲ್ಯಾಣ ತಾಲ್ಲೂಕುಗಳೂ 622 ಗ್ರಾಮಗಳೂ ಮತ್ತು 5 ನಗರಗಳೂ ಇವೆ. ಜಿಲ್ಲೆಯ ಜನಸಂಖ್ಯೆ 15,02.373.

ಬೀದರ್ ಜಿಲ್ಲೆ ದಖನ್ ಪ್ರಸ್ಥಭೂಮಿಯ ಭಾಗ. ಹೆಚ್ಚು ಬೆಟ್ಟಗುಡ್ಡಗಳಿಲ್ಲದೆ ವಿಶಾಲ ಮಟ್ಟಸ ಪ್ರದೇಶಗಳಿಂದ ಕೂಡಿದೆ. ಔರಾದ ಹಾಗೂ ಭಾಲ್ಕಿ ತಾಲ್ಲೂಕುಗಳು ಕಪ್ಪುಮಣ್ಣಿನ ಪ್ರದೇಶ. ಹುಮನಾಬಾದ್, ಬಸವಕಲ್ಯಾಣ ಹಾಗೂ ಬೀದರ್ ತಾಲ್ಲೂಕು ಪ್ರದೇಶಗಳಲ್ಲಿ ಜಂಬುಕಲ್ಲಿನ ಮಿಶ್ರಣವಿರುವ ಭೂಮಿ ಇದೆ. ಈ ಜಿಲ್ಲೆಯ ಯಾವುದೇ ಭಾಗದಲ್ಲೂ ಖನಿಜ ನಿಕ್ಷೇಪಗಳಿಲ್ಲ. ಮಾಂಜರಾ ಈ ಜಿಲ್ಲೆಯ ಪ್ರಮುಖ ನದಿ. ಗೋದಾವರಿಯ ಉಪನದಿಯಾಗಿರುವ ಈ ನದಿ ಜಿಲ್ಲೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಭಾಲ್ಕಿ, ಔರಾದ, ಬೀದರ್ ತಾಲ್ಲೂಕುಗಳ ಗಡಿಯಲ್ಲಿ ಸಾಗಿ ಮುಂದೆ ಸ್ವಲ್ಪದೂರ ಆಂಧ್ರಪ್ರದೇಶದಿಂದ ಬೀದರ್ ಜಿಲ್ಲೆಯನ್ನು ವಿಂಗಡಿಸುವ ಗಡಿಯಾಗಿಯೂ ಹರಿಯುತ್ತದೆ. ಜಿಲ್ಲೆಯಲ್ಲಿ ಈ ನದಿಯ ಹರಿವಿನ ಉದ್ದ 97 ಕಿಮೀ. ನದಿಯ ಜಲಾನಯನ ಪ್ರದೇಶ 1,295 ಚ.ಕಿಮೀ. ಕಾರಂಜಾ ಈ ಜಿಲ್ಲೆಯ ಮತ್ತೊಂದು ಮುಖ್ಯ ನದಿ. ಇದು ಭಾಲ್ಕಿ ತಾಲ್ಲೂಕಿನಲ್ಲಿ ವಾಯವ್ಯಾಭಿಮುಖವಾಗಿ ಹರಿದು ಮಾಂಜರಾ ನದಿಯನ್ನು ಕೂಡಿಕೊಳ್ಳುವುದು. ಮುಲ್ಲಾಮಾರಿ ನದಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಹುಟ್ಟಿ ಆಗ್ನೇಯಾಭಿಮುಖವಾಗಿ ಹರಿದು ಗುಲ್ಬರ್ಗ ಜಿಲ್ಲೆಯನ್ನು ಪ್ರವೇಶಿಸುವುದು. ಚುಳಕಿ, ಗಂಡೋರಿ, ನಗರವಾಲಾ, ಹುಡಗಿ ಹಾಗೂ ಹಳ್ಳಿಖೇಡ ನಾಲಾ–ಇವು ಚಿಕ್ಕ ನದಿಗಳು. ಜಿಲ್ಲೆಯ ನೈಋತ್ಯದಲ್ಲಿ ಬೆಣ್ಣೆತೊರೆ ನದಿ ಜಿಲ್ಲೆಯ ಗಡಿಯನ್ನು ಮುಟ್ಟಿ ಹೋಗುತ್ತದೆ. ಹೆಚ್ಚಿನ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆಯಾದರೂ ಬೇಸಗೆಯಲ್ಲಿ ಬತ್ತಿಹೋಗುವುದುಂಟು.




ಸಮುದ್ರಮಟ್ಟದಿಂದ ಸರಾಸರಿ 914 ಮೀ ಎತ್ತರದಲ್ಲಿರುವ ಈ ಜಿಲ್ಲೆಯ ಹವೆ ಆರೋಗ್ಯಕರವಾಗಿದೆ. ಬೇಸಗೆಯಲ್ಲಿ ಉಷ್ಣತೆ ಹೆಚ್ಚು. ಜೂನ್‌ನಿಂದ ಅಕ್ಟೋಬರ್‌ವರೆಗೆ ಮಳೆಗಾಲ. ಈ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 907.5 ಮಿಮೀ. 2000 ದ ಸಾಲಿನಲ್ಲಾದ ಮಳೆ 959ಮಿಮೀ

ಬೀದರ್ ಕೃಷಿಪ್ರಧಾನ ಜಿಲ್ಲೆ. 1998-99 ರ ಸಾಲಿನಲ್ಲಿ ಜಿಲ್ಲೆಯಲ್ಲಿ 25,092 ಹೆ. ಅರಣ್ಯ ಪ್ರದೇಶ, 21,534 ಹೆ. ಬಂಜರುಭೂಮಿ, 14,276 ಹೆ. ಗೋಮಾಳೆ, 11,850 ಹೆ. ಪ್ರದೇಶದಲ್ಲಿ ತೋಪು ವೃಕ್ಷಗಳ ಪ್ರದೇಶವಿದ್ದಿತು. ಇದೇ ಸಾಲಿನಲ್ಲಿ 3,79,44 ಹೆ. ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಒಟ್ಟು 37,155 ಹೆ. ನೀರಾವರಿಗೆ ಒಳಪಟ್ಟಿತ್ತು. 9,587 ಹೆ. ಪ್ರದೇಶದಲ್ಲಿ ಬತ್ತವನ್ನೂ 1,15,788 ಹೆ.ನಲ್ಲಿ ಜೋಳ, 13,994 ಹೆ.ನಲ್ಲಿ ಸಜ್ಜೆಯನ್ನೂ 306 ಹೆ.ನಲ್ಲಿ ಮುಸುಕಿನ ಜೋಳ, 8,128 ಹೆ.ನಲ್ಲಿ ಗೋಧಿ, 41,721 ಹೆ.ನಲ್ಲಿ ಕಡಲೆ, 54,354 ಹೆ.ನಲ್ಲಿ ತೊಗರಿ, 3,767 ಹೆ.ನಲ್ಲಿ ನೆಲಗಡಲೆ, 24,518 ಹೆ.ನಲ್ಲಿ ಕಬ್ಬು, ಮತ್ತು 3,616 ಹೆ.ನಲ್ಲಿ ಹತ್ತಿ ಬೆಳೆಯಲಾಗಿತ್ತು. ಜಿಲ್ಲೆಯಲ್ಲಿ ಒಟ್ಟು 2,76,424 ದನಕರುಗಳಿದ್ದವು. 102 ವಿವಿಧ ಪಶುವೈದ್ಯಶಾಲೆಗಳಿದ್ದು ಕುರಿ, ಆಡು ಮುಂತಾದ ಜಾನುವಾರುಗಳ ಸಾಕಣೆಯಿದೆ. 2000-2001 ರಲ್ಲಿ 1,356 ಮೆ. ಟನ್ ಮೀನುಗಳನ್ನು ಹಿಡಿಯಲಾಗಿತ್ತು. ಇತ್ತೀಚೆಗೆ ಜಿಲ್ಲೆಯಲ್ಲಿ ಮೂರು ನೀರಾವರಿ ಯೋಜನೆಗಳು ಪ್ರಾರಂಭವಾಗಿವೆ. ಕಾರಂಜಾ, ಚುಳಕಿನಾಲಾ ಹಾಗೂ ಮುಲ್ಲಾಮಾರಿ ನದಿಗಳಿಗೆ ಅಣೆಕಟ್ಟು ಕಟ್ಟಲಾಗಿದೆ. ಹಳ್ಳಿಖೇಡದ ಹತ್ತಿರ ಕಾರಂಜಾ ನದಿಗೆ ಅಣೆಕಟ್ಟು ಕಟ್ಟಲಾಗಿದೆ. ಇದರಿಂದ ಭಾಲ್ಕಿ ಹಾಗೂ ಬೀದರ್ ತಾಲ್ಲೂಕಿನ ಒಟ್ಟು 37,155 ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯ ದೊರೆತಿದೆ.

ಈ ಜಿಲ್ಲೆಯಲ್ಲಿ ಬೃಹತ್ ಉದ್ಯಮಾಭಿವೃದ್ಧಿಗೆ ಸೌಕರ್ಯಗಳಿಲ್ಲ, ಸಣ್ಣ ಕೈಗಾರಿಕೆಗಳು ಇವೆ. ಕೃಷಿ ಉಪಕರಣ ಕಾರ್ಖಾನೆ, ಗೊಬ್ಬರ ಕಾರ್ಖಾನೆ, ಖಂಡಸಾರಿ ಕಾರ್ಖಾನೆ– ನೂಲಿನ ಗಿರಣಿ ಕುಶಲ ಕೈಗಾರಿಕೆಯಲ್ಲಿ ತರಬೇತಿ ನೀಡುವ ಕೇಂದ್ರಗಳು ಸ್ಥಾಪಿತವಾಗಿವೆ. ಬೀದರ್ ಹಾಗೂ ಬಸವ ಕಲ್ಯಾಣ ತಾಲ್ಲೂಕುಗಳಲ್ಲಿ ಕೈಗಾರಿಕಾ ಕೇಂದ್ರಗಳಿವೆ. ಬಡಗಿತನ ಕಬ್ಬಿಣದ ಕೆಲಸ ಇನ್ನಿತರ ಕಸಬುಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಇಲ್ಲಿನ ಬೀದರಿ ವಸ್ತುಗಳ ಕೈಗಾರಿಕೆ ಪ್ರಸಿದ್ಧವಾಗಿದೆ. ಕುಶಲ ಕೆಲಸಗಾರರು



ಭಗ್ನಗೊಂಡಿರುವ ಬೀದರ್ ಕೋಟೆ

ತಾಮ್ರ ಮತ್ತು ಸತು ಧಾತುಗಳನ್ನು ಮಿಶ್ರಮಾಡಿ ಸುಂದರ ಮೂರ್ತಿಗಳನ್ನೂ ತಯಾರಿಸುತ್ತಾರೆ; ಇವುಗಳ ಮೇಲೆ ಬಂಗಾರದ ಹಾಗೂ ಬೆಳ್ಳಿಯ ಕುಸುರಿಕೆಲಸವನ್ನೂ ಮಾಡುತ್ತಾರೆ. ಬೀದರ್‌ನಲ್ಲಿ ತಯಾರಾದ ಇಂಥ ವಸ್ತುಗಳಿಗೆ ವಿದೇಶಗಳಲ್ಲಿಯೂ ಬೇಡಿಕೆಯಿದೆ. ನೇಯ್ಗೆ ಒಂದು ಮುಖ್ಯ ಉದ್ಯಮ. ತೊಗಲಿನ ಮತ್ತು ಉಣ್ಣೆಯ ಅಭಿವೃದ್ಧಿ ಕೇಂದ್ರಗಳಿವೆ. ಸಹಕಾರಿ ಸಕ್ಕರೆ ಕಾರ್ಖಾನೆಯಿದೆ. 2001 ಮಾರ್ಚಿಯಲ್ಲಿ ಬೀದರ್ ಜಿಲ್ಲೆಯಲ್ಲಿ 3 ಬಟ್ಟೆ ಕಾರ್ಖಾನೆಗಳೂ 20 ರಾಸಾಯನಿಕ, 6 ಎಂಜಿನಿಯರಿಂಗ್, 65 ಇತರೆ ಕಾರ್ಖಾನೆಗಳಿದ್ದುವು. 7 ಕೈಗಾರಿಕಾ ಪ್ರದೇಶಗಳಿದ್ದು ಒಟ್ಟು 5201 ಉದ್ಯೋಗಿಗಳನ್ನೊಳಗೊಂಡ 94 ಕಾರ್ಖಾನೆಗಳಿದ್ದವು.

ಜಿಲ್ಲೆಯ ವಾಣಿಜ್ಯ ವ್ಯವಹಾರಗಳಿಗೆ ಪೂರಕವಾಗಿ 57 ವಾಣಿಜ್ಯ ಬ್ಯಾಂಕುಗಳೂ 35 ಗ್ರಾಮೀಣ ಬ್ಯಾಂಕುಗಳೂ 6 ನಗರ ಪ್ರದೇಶದ ಸಹಕಾರ ಬ್ಯಾಂಕುಗಳೂ 24 ಇತರೆ ಸಹಕಾರ ಬ್ಯಾಂಕುಗಳು ಇತರೆ ಗ್ರಾಮೀಣಾಭಿವೃದ್ಧಿ ಸಹಕಾರ ಸಂಘಗಳೂ ಇದ್ದವು.

ಈ ಜಿಲ್ಲೆಯ ಔರಾದ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಬಿಟ್ಟರೆ, ಉಳಿದಂತೆ ಜಿಲ್ಲೆಯಾದ್ಯಂತ ಉತ್ತಮ ಸಾರಿಗೆ ಸಂಪರ್ಕದ ಸೌಲಭ್ಯಗಳಿವೆ. ಔರಾದ ತಾಲ್ಲೂಕಿನಲ್ಲಿ ಕೆಲವೆಡೆ ಪ್ರಯಾಣಕ್ಕೆ ಒಂಟೆಯನ್ನು ಬಳಸುತ್ತಾರೆ. ಮುಂಬಯಿ–ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ ಹುಮನಾಬಾದ್, ಬೀದರ್, ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಹಾದುಹೋಗಿದೆ. ಬೀದರ್‌ನಿಂದ ಸುತ್ತಿನ ತಾಲ್ಲೂಕು ಮತ್ತು ಇತರ ಮುಖ್ಯ ಸ್ಥಳಗಳಿಗೆ ರಸ್ತೆ ಸಂಪರ್ಕವಿದೆ. ಕಾರಂಜಾ ಹಾಗೂ ಮಾಂಜರಾ ನದಿಗಳಿಗೆ ಸೇತುವೆಗಳಿವೆ. ಬೀದರ್ ದಕ್ಷಿಣ ಮಧ್ಯರೈಲ್ವೆಗೆ ಸೇರಿದ ಒಂದು ಮಾರ್ಗ ವಿಕಾರಾಬಾದಿನಿಂದ ಬೀದರ್, ಭಾಲ್ಕಿ ಮೇಲಿಂದ ಹಾಯ್ದು ಪರಳಿ ವೈಜನಾಥಕ್ಕೆ ಹೋಗುತ್ತದೆ. ಈ ಜಿಲ್ಲೆಯ ರೈಲು ಹಾದಿಯ ಉದ್ದ 89 ಕಿಮೀ. ಬೀದರ್‌ನಲ್ಲಿ ಒಂದು ವಿಮಾನ ನಿಲ್ದಾಣವಿದೆ. ಆದರೆ ಅದನ್ನು ನಾಗರಿಕ ಉಪಯೋಗಕ್ಕೆ ತೆರೆದಿಲ್ಲ. ಜಿಲ್ಲೆಯಲ್ಲಿ 1999 ರಲ್ಲಿ 75 ಕಿಮೀ ರಾಷ್ಟ್ರೀಯ ಹೆದ್ದಾರಿ, 276 ಕಿಮೀ ರಾಜ್ಯ ಹೆದ್ದಾರಿ, 763 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು 907 ಕಿಮೀ ತಾಲ್ಲೂಕು ಅಭಿವೃದ್ಧಿ ಮಂಡಲಕ್ಕೆ ಸೇರಿದ ರಸ್ತೆಗಳಿದ್ದವು.

ಜಿಲ್ಲೆಯ 2001ರ ಅಂಕಿಅಂಶಗಳ ಪ್ರಕಾರ ಒಟ್ಟು ಸಾಕ್ಷರತಾ ಪ್ರಮಾಣ 61.98 ಇತ್ತು. ಜಿಲ್ಲೆಯಲ್ಲಿ 1,177 ಪ್ರಾಥಮಿಕ ಶಾಲೆಗಳು, 309 ಪ್ರೌಢಶಾಲೆಗಳು (2000) ಇದ್ದವು. 74 ಪದವಿಪೂರ್ವ, 2 ಎಂಜನಿಯರಿಂಗ್, 1 ಆಯುರ್ವೇದ, 2 ದಂತಚಿಕಿತ್ಸಾ ಕಾಲೇಜುಗಳಿದ್ದವು. 5 ಪಾಲಿಟೆಕ್ನಿಕ್‌ಗಳೂ ಇದ್ದವು. ಜಿಲ್ಲೆಯಲ್ಲಿ 5 ಆಸ್ಪತ್ರೆಗಳಿದ್ದು ಜೊತೆಗೆ 3 ಆಯುರ್ವೇದ ಆಸ್ಪತ್ರೆಗಳೂ 42 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 13 ಪ್ರಾಥಮಿಕ ಆರೋಗ್ಯ ಘಟಕಗಳೂ 13 ಕುಟುಂಬಕಲ್ಯಾಣ ಕೇಂದ್ರಗಳೂ ಇದ್ದವು.

ಈ ಜಿಲ್ಲೆಯ ಪ್ರಸಿದ್ಧ ಸ್ಥಳಗಳಲ್ಲಿ ಐತಿಹಾಸಿಕ ವೈಭವದ ಬೀದರ್ ಮತ್ತು ಬಸವಕಲ್ಯಾಣ **(ನೋಡಿ)** ವಿಖ್ಯಾತವಾಗಿವೆ. ಔರಾದದಲ್ಲಿರುವ ಅಮರೇಶ್ವರ ದೇವಸ್ಥಾನ, ಹುಮನಾಬಾದಿನ ವೀರಭದ್ರ ದೇವಸ್ಥಾನ ಬಹುಪ್ರಾಚೀನ ಹಾಗೂ ಪವಿತ್ರ ತಾಣಗಳು. ಹುಮನಾಬಾದದ ಮಾಣಿಕ ಪ್ರಭುಗಳ ಮಠ, ಕರಕನಳ್ಳಿಯ ಬಕ್ಕ ಪ್ರಭುಗಳ ಮಠ, ಬಸವಕಲ್ಯಾಣದ ಸದಾನಂದಮಠ ಖ್ಯಾತವಾಗಿವೆ. ಬೀದರ್‌ನಲ್ಲಿ ಹಾಗೂ ಬಸವಕಲ್ಯಾಣಗಳಲ್ಲಿ ಬಸವಮಂಟಪಗಳು ಮತ್ತು ಮಠಗಳು ಇದ್ದು ಅವು ಜಿಲ್ಲೆಯ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾಗಿವೆ. ಈ ಜಿಲ್ಲೆಯ ಅನಂತಶಯನ ದೇವರ ಗುಡಿ, ತಾದಲಾಪುರದ ದತ್ತಾನಂದ ಮಠ, ಸಾಧೋಘಾಟ್ ವಿಠಲ ಮಂದಿರ, ಖಾನಾಪುರದ ಮಲ್ಲಾರಿ ದೇವಸ್ಥಾನ, ಬೀದರ್, ಅಷ್ಟೂರ, ಭಾಲ್ಕಿಗಳಲ್ಲಿರುವ ಕೆಲವು ಮುಸ್ಲಿಂ ದರ್ಗಾಗಳೂ ಪ್ರಸಿದ್ಧವಾದವು. **(ಎಲ್.ಆರ್.ಕೆ.)**

ಬೀದರ್ ಜಿಲ್ಲೆಯ ಕೆಲವು ಭಾಗಗಳಲ್ಲಿ ನವಶಿಲಾಯುಗದ ಕಾಲದಿಂದಲಾದರೂ ಜನವಸತಿ ಇದ್ದಿತೆಂದು ತೋರುತ್ತದೆ. ಬೀದರ್ ಪಟ್ಟಣದ ಆಸುಪಾಸಿನಲ್ಲೇ ಆ ಕಾಲದ ಶಿಲಾಯುಧಗಳು ದೊರಕಿವೆ. ಇತಿಹಾಸ ಕಾಲದಲ್ಲಿ ಈ ಜಿಲ್ಲೆ ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟರು ಮತ್ತು ಮುಂದೆ ಕಲ್ಯಾಣದ ಚಾಳುಕ್ಯರ ವಶದಲ್ಲಿತ್ತು. ಚಾಳುಕ್ಯರ ರಾಜಧಾನಿ ಇದ್ದುದು ಈ ಜಿಲ್ಲೆಯ ಬಸವಕಲ್ಯಾಣದಲ್ಲೇ. ಮುಂದೆ ದೇವಗಿರಿಯ ಯಾದವರು, ಕಾಕತೀಯರು, ಸ್ವಲ್ಪಕಾಲ ದೆಹಲಿಯ ಸುಲ್ತಾನರು ಇವರ ವಶದಲ್ಲಿದ್ದ ಜಿಲ್ಲೆ ಬಹಮನೀ ರಾಜ್ಯ ಸ್ಥಾಪನೆಯಾಗುತ್ತಿದ್ದಂತೆ ಅದರ ಕಕ್ಷೆಗೆ ಸೇರಿತು. 1424ರಲ್ಲಿ ಬಿದರೆಯೇ ಬಹಮನೀ ರಾಜ್ಯದ ರಾಜಧಾನಿಯಾಗಿ ಬರೀದ್‌ಶಾಹೀ ಆಳ್ವಿಕೆಯ ಕಾಲದಲ್ಲಿ ಹಾಗೇ ಮುಂದುವರಿಯಿತು. 1619ರ ಹೊತ್ತಿಗೆ ಈ ಪ್ರದೇಶ ಆದಿಲ್ ಶಾಹೀಗಳಿಗೆ ಸೇರಿತು. 1656ರಲ್ಲಿ ಔರಂಗಜೇಬ್ ಈ ಪ್ರದೇಶವನ್ನು ಮುಗಲ್ ಸಾಮ್ರಾಜ್ಯಕ್ಕೆ ಸೇರಿಸಿದ. 1724ರಿಂದ ಹೈದರಾಬಾದಿನ ನಿಜಾಮರ ವಶಕ್ಕೆ ಬಂತು. 1905ರಲ್ಲಿ ಈ ಜಿಲ್ಲೆ ಆ ರಾಜ್ಯದ ಗುಲ್ಬರ್ಗ ಸುಬಾಕ್ಕೆ ಸೇರಿತು. ಹೈದರಾಬಾದು ಸಂಸ್ಥಾನ ಭಾರತದಲ್ಲಿ ವಿಲೀನಗೊಂಡ ಅನಂತರ ಹೈದರಾಬಾದು ರಾಜ್ಯದಲ್ಲಿ ಇತ್ತು. 1956ರಲ್ಲಿ ರಾಜ್ಯ ಪುನರ್ವಿಂಗಡಣೆ ಆದಾಗ, ಆ ಜಿಲ್ಲೆಯ ಬೀದರ್, ಹುಮನಾಬಾದ್, ಔರಾದ ಮತ್ತು ಭಾಲ್ಕಿ ತಾಲ್ಲೂಕುಗಳು ಮಾತ್ರ ಕರ್ನಾಟಕಕ್ಕೆ ಸೇರಿದುವು.

**ತಾಲ್ಲೂಕು:** ಜಿಲ್ಲೆಯ ಪೂರ್ವಭಾಗದಲ್ಲಿರುವ ಈ ತಾಲ್ಲೂಕು ಪಶ್ಚಿಮದಲ್ಲಿ ಭಾಲ್ಕಿ ತಾಲ್ಲೂಕು, ದಕ್ಷಿಣ ಮತ್ತು ನೈಋತ್ಯದಲ್ಲಿ ಹುಮನಾಬಾದ್ ತಾಲ್ಲೂಕು, ಉತ್ತರದಲ್ಲಿ ಔರಾದ ತಾಲ್ಲೂಕು, ಪೂರ್ವದಲ್ಲಿ ಆಂಧ್ರಪ್ರದೇಶದ ನಿಜಾಮಾಬಾದ್ ಜಿಲ್ಲೆ–ಇವುಗಳಿಂದ ಸುತ್ತುವರಿದಿದೆ. ತಾಲ್ಲೂಕಿನಲ್ಲಿ ಉತ್ತರ ಮತ್ತು ದಕ್ಷಿಣ ಬೀದರ್, ಜಾನವಾಡ, ಕಮಠಾಣ, ಬಾಗದಳ ಮತ್ತು ಮನಹಳ್ಳಿ ಸರ್ಕಲ್‌ಗಳಿದ್ದು ಒಟ್ಟು 150 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 925.3 ಚ.ಕಿಮೀ. ಈ ತಾಲ್ಲೂಕಿನಲ್ಲಿ ಒಟ್ಟು ಜನಸಂಖ್ಯೆ 4,05,540.

ಈ ತಾಲ್ಲೂಕಿನ ಹೆಚ್ಚು ಭಾಗ ಜಂಬುಕಲ್ಲಿನ ಮೈದಾನ ಪ್ರದೇಶ. ತಾಲ್ಲೂಕಿನ ಉತ್ತರದಲ್ಲಿ ಮಾಂಜರಾ ನದಿ ಪೂರ್ವಾಭಿಮುಖವಾಗಿ ಹರಿದು

ಔರಾದ ತಾಲ್ಲೂಕಿನಿಂದ ಬೀದರ್ ತಾಲ್ಲೂಕನ್ನು ವಿಂಗಡಿಸಿದೆ. ತಾಲ್ಲೂಕಿನ ಅಂತರ್ಜಲ ಸಂಪತ್ತು ಗಮನಾರ್ಹವಾಗಿದೆ. ಸರಾಸರಿ ವಾರ್ಷಿಕ ಮಳೆ 907.5 ಮಿಮೀ. ಇದ್ದು 722 ಹೆಕ್ಟೇರು ಅರಣ್ಯ ಪ್ರದೇಶವಿತ್ತು. ಜೋಳ, ಕಡಲೆ, ಸೇಂಗಾ, ಕಬ್ಬು, ತೊಗರಿ-ಇವು ತಾಲ್ಲೂಕಿನ ಮುಖ್ಯ ಬೆಳೆಗಳು.

ಬೀದರ್ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕಾರ್ಖಾನೆಗಳಿವೆ. ರಾಸಾಯನಿಕ, ತಾಂತ್ರಿಕ, ಖಂಡಸಾರಿ ಘಟಕಗಳು, ಕೈಮಗ್ಗಗಳು, ಬೀದರಿ ವಸ್ತು ತಯಾರಿಕಾ ಘಟಕಗಳು ಇವೆ. ವಾಣಿಜ್ಯ, ಸಹಕಾರಿ, ಭೂಅಭಿವೃದ್ಧಿ ಬ್ಯಾಂಕುಗಳಿವೆ ಹಾಗೂ ನಿಯಂತ್ರಿತ ಮಾರುಕಟ್ಟೆಗಳಿವೆ. ಹೈದರಾಬಾದ್-ಸೊಲ್ಲಾಪುರ



ಮಹ್ಮೂದ್ ಗಾವಾನನ ಮದರಸಾ

ಮತ್ತು ಹೈದರಾಬಾದ್-ನಾಂದೇಡ್ ಹೆದ್ದಾರಿಗಳು ಈ ತಾಲ್ಲೂಕಿನ ಮೂಲಕ ಸಾಗಿವೆ. ಜಿಲ್ಲೆಯ ಎಲ್ಲ ಕಡೆಗೂ ಮೋಟಾರು ರಸ್ತೆ ಸಂಪರ್ಕವಿದೆ. ವಿಕಾರಾಬಾದ್-ಪರಳಿ ವೈಜನಾಥ ರೈಲುಮಾರ್ಗ ಈ ತಾಲ್ಲೂಕಿನ ಮುಖಾಂತರ ಹಾದು ಹೋಗುತ್ತದೆ.

ಈ ತಾಲ್ಲೂಕಿನ ನಾನಕ ಝರಾದ ಗುರುನಾನಕರ ಉತ್ಸವ, ಝರಣಿ ನರಸಿಂಹ ಕ್ಷೇತ್ರದ ನರಸಿಂಹ ಜಯಂತಿ, ಶಿವರಾತ್ರಿಯ ದಿವಸ ಪಾಪನಾಶಿನಿ ದೇವಾಲಯದಲ್ಲಿ ಜರುಗುವ ಮಹಾದೇವ ಜಯಂತಿ ಪ್ರಸಿದ್ಧವಾದ ಉತ್ಸವಗಳು. ಈ ತಾಲ್ಲೂಕಿನ ತಾದಲಾಪುರದ ದತ್ತಾನಂದ ಮಠ ಆನಂದ ಸಂಪ್ರದಾಯಕ್ಕೆ ಸೇರಿದ್ದು. ಈ ದೇವಸ್ಥಾನ ಹಿಂದು-ಮುಸ್ಲಿಂ ಬಾಂಧವ್ಯದ ಸಂಕೇತವಾಗಿದೆ.

**ಪಟ್ಟಣ:** ಬೀದರ್ ಈ ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣ. ಇದರ ಹಿಂದಿನ ಹೆಸರು ಬಿದರೆ. ಮಹಮ್ಮದಾಬಾದ್-ಬೀದರ್ ಎಂದೂ ಬಳಕೆಯಲ್ಲಿದೆ. ಬೆಂಗಳೂರಿನ ಉತ್ತರಕ್ಕೆ 670 ಕಿಮೀ ದೂರದಲ್ಲೂ ಗುಲ್ಬರ್ಗಕ್ಕೆ ಈಶಾನ್ಯದಲ್ಲಿ 122 ಕಿಮೀ ದೂರದಲ್ಲೂ ಇದೆ. ಪುರಸಭಾಡಳಿತವಿರುವ ಈ ಪಟ್ಟಣದಲ್ಲಿ ಒಟ್ಟು ಜನಸಂಖ್ಯೆ 3,44,875.

ಬೀದರ್ ಸಮುದ್ರಮಟ್ಟದಿಂದ 644 ಮೀ ಎತ್ತರದ ಪ್ರಸ್ಥಭೂಮಿಯ ಪ್ರದೇಶದಲ್ಲಿದ್ದು ಇಲ್ಲಿಯ ಹವಾಗುಣ ವರ್ಷಪೂರ್ತ ಹಿತಕರವಾಗಿರುತ್ತದೆ. ಬೇಸಗೆಯಲ್ಲಿ ಮಾತ್ರ ಸ್ವಲ್ಪ ಸೆಖೆ ಹೆಚ್ಚು. ವಾಣಿಜ್ಯ ಕೇಂದ್ರವಾದ ಬೀದರ್‌ನಲ್ಲಿ ಬ್ಯಾಂಕುಗಳೂ ಶಾಲಾ ಕಾಲೇಜುಗಳೂ ವಾಯು ಸೇನಾ ಪಡೆಯ ವಿಮಾನ ಚಾಲಕರವು ತರಬೇತಿ ಕೇಂದ್ರ ಇವೆ. ಇಲ್ಲಿ ಆಲಿವ್ ಎಣ್ಣೆ ತಯಾರಿಸುವ ಉದ್ಯಮವುಂಟು. ಬೆಲ್ಲ, ಸೇಂಗಾ ಮತ್ತು ಬೀದರಿ ವಸ್ತುಗಳು ಇಲ್ಲಿಂದ ರಫ್ತಾಗುತ್ತವೆ. ಇಲ್ಲಿಗೆ ಹೈದರಾಬಾದ್, ನಾಂದೇಡ್, ಗುಲ್ಬರ್ಗಗಳಿಂದ ಉತ್ತಮ ರಸ್ತೆ ಸಂಪರ್ಕವಿದೆ. ಇದು ವಿಕಾರಾಬಾದ್-ಪರಳಿ ವೈಜನಾಥ ರೈಲುಮಾರ್ಗದ ಮುಖ್ಯ ನಿಲ್ದಾಣಗಳಲ್ಲೊಂದು. ಇಲ್ಲಿ ಒಂದು ವಿಮಾನ ನಿಲ್ದಾಣ ಸಹ ಇದ್ದು ಇದು ರಕ್ಷಣಾ ಇಲಾಖೆಯ ವಶದಲ್ಲಿದೆ.

ಎತ್ತರವಾದ ಪ್ರಸ್ಥಭೂಮಿಯ ಮೇಲಿದ್ದು ಸುತ್ತಮುತ್ತಲ ಪ್ರದೇಶಗಳಿಗಿಂತ ಹಿತಕರವಾದ ಹವೆಯಿಂದ ಕೂಡಿ ಹಸುರು ಗಿಡಮರಗಳಿಂದಾವೃತವಾಗಿ ಈ ಸ್ಥಳಕ್ಕೆ ಬಹಳ ಹಿಂದಿನಿಂದಲೂ ಪ್ರಾಮುಖ್ಯ ದೊರೆತಿದ್ದುದು ಸ್ವಾಭಾವಿಕ. ಬಿದರೆ ಪ್ರಾಚೀನ ಪಟ್ಟಣ. ಇತಿಹಾಸಪ್ರಸಿದ್ಧ ಸ್ಥಳ. ಮಹಾಭಾರತದ ಕಾಲಕ್ಕೆ ಇದು ವಿದುರ ನಗರವೆಂದು ಪ್ರಸಿದ್ಧಿ ಪಡೆದಿತ್ತೆಂದೂ ನಳ-ದಮಯಂತಿಯರ ಪ್ರಣಯದ ಉದ್ಯಾನವೆಂದೂ ಪ್ರತೀತಿ. ರಾಜಾ ಭೀಮಸೇನನ ರಾಜಧಾನಿ ಇದೇ ಆಗಿತ್ತೆಂದು ಊಹೆ. ಇದಕ್ಕೆ ಬಿದರೂರು ಪುರವೆಂತಲೂ ಕರೆದದ್ದುಂಟು. ಬರಬರುತ್ತ ಬಿದರೆ ಅನೇಕ ಹೆಸರುಗಳನ್ನು ಹೊಂದಿ ಇಸ್ಲಾಮೀ ಸುಲ್ತಾನರ ಆಳಿಕೆಯಲ್ಲಿ ಅಹಮ್ಮದಾಬಾದ್-ಬೀದರ್ ಎಂದೂ ಕರೆಯಲಾಗಿತ್ತು. ಚಾರಿತ್ರಿಕವಾಗಿ ಈ ಪಟ್ಟಣದಲ್ಲಿಯೇ ದೊರಕಿರುವ ಕೆಲವು ನವಶಿಲಾಯುಗದ ಆಯುಧಗಳು ಈ ಪಟ್ಟಣದ ಪ್ರಾಚೀನತೆಯನ್ನು ಸೂಚಿಸುತ್ತದೆ. ಕಲ್ಯಾಣದ ಚಾಳುಕ್ಯರ ಕಾಲದಿಂದಲೂ ಇದು ತಕ್ಕಷ್ಟು ಪ್ರಸಿದ್ಧವಾಗಿತ್ತೆಂದು ಈ ಊರಿನಲ್ಲಿಯೂ ಸುತ್ತ ಮುತ್ತಲೂ ದೊರೆತಿರುವ ಅನೇಕ ಚಾಳುಕ್ಯ ರೀತಿಯ ಶಿಲ್ಪಗಳು ಮತ್ತು ಶಾಸನಗಳಿಂದ ವ್ಯಕ್ತವಾಗುತ್ತದೆ. ಚಾಳುಕ್ಯರ ಬಲ ಕುಗ್ಗಿದ ಮೇಲೆ ವಾರಂಗಲ್ಲಿನ ಕಾಕತೀಯರು ಇದರ ಮೇಲೆ ಆಧಿಪತ್ಯ ಹೊಂದಿದ್ದರು. ಮಹಮ್ಮದ್-ಬಿನ್-ತುಗಲಕ್ ಕಾಕತೀಯರ ಮೇಲೆ ದಂಡೆತ್ತಿ ಬಂದಾಗ ಬಿದರೆಯನ್ನು ಮುತ್ತಿ (ಸು. 1325) ಅದನ್ನು ಗೆದ್ದುದಾಗಿ ತಿಳಿದುಬರುತ್ತದೆ. ಇದಕ್ಕೆ ಆಗಲೇ ಒಂದು ಬಲವಾದ ಕೋಟೆಯಿತ್ತು. ಇದನ್ನು ವಶಪಡಿಸಿಕೊಳ್ಳಲು ತುಗಲಕನು ಹೆಚ್ಚು ಶ್ರಮ ಪಡಬೇಕಾಯಿತು. ಮುಂದೆ ಬೀದರ್ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತು. ಆ ಹಿಂದಿನ ಕಾಲದ ದೇವಾಲಯಗಳು, ಬಸದಿಗಳು ಮುಂತಾದವುಗಳ ಕುರುಹುಗಳನ್ನು ಇಲ್ಲಿ ದೊರೆಯುವ ಶಿಲ್ಪದ ತುಣುಕುಗಳಿಂದ ಮಾತ್ರ ಗುರುತಿಸಬಹುದು. ಇಲ್ಲಿದ್ದ ಕೋಟೆಯೂ ಮುಂದೆ ಬಹಮನೀ ಸುಲ್ತಾನರು ಕಟ್ಟಿಸಿದ ವಿಸ್ತಾರವಾದ ಕೋಟೆಯೊಳಗೆ ಸೇರಿಹೋಯಿತು.

1341ರಲ್ಲಿ ಮಹಮ್ಮದ್-ಬಿನ್-ತುಗಲಕನ ಅಧೀನದಲ್ಲಿ ನಸ್ರತ್‌ಖಾನ್ ಬೀದರ್‌ನಿಂದ ಆಳತೊಡಗಿದ. ಆದರೆ 1345ರಲ್ಲಿ ಅವನು ದಂಗೆಯೆದ್ದ. ಅದನ್ನು ಅಡಗಿಸಲು ಬಂದ ಅಮೀರ್ ಅಲಿ ತಾನೇ ಗುಲ್ಬರ್ಗ, ಬೀದರ್‌ಗಳನ್ನು ಗೆದ್ದು ಆಳಲಾರಂಭಿಸಿದ. ಕುತ್ಲೂಖಾನ ಅವನನ್ನು ಸೋಲಿಸಿ ಸೆರೆಹಿಡಿದರೂ ಮುಂದೆ 1347ರಲ್ಲಿ ಜಫರ್‌ಖಾನ ತುಗಲಕನ ಸೈನ್ಯವನ್ನು ಸೋಲಿಸಿ ದಖನ್ನಿಗೆ ತಾನೇ ಸ್ವತಂತ್ರರಾಜನಾಗಿ ಆಳತೊಡಗಿದ. ಅವನು

ತನ್ನ ರಾಜ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದಾಗ ಬಿದರೆ ಒಂದು ಪ್ರಾಂತ್ಯದ ಮುಖ್ಯ ಪಟ್ಟಣವಾಗಿ ಅಭಿವೃದ್ಧಿ ಹೊಂದತೊಡಗಿತು. ಮೊದಲು ಆಳಿದ ಬಹಮನೀ ಅರಸರ ಕಾಲದಲ್ಲಿ ಬೆಳೆಯುತ್ತ ಹೋದ ಈ ಊರು ದಕ್ಷಿಣದ ದೊಡ್ಡ ನಗರಗಳಲ್ಲಿ ಒಂದೆಂದು ಖ್ಯಾತಿಪಡೆಯಿತು. ಇಮ್ಮಡಿ ಮಹಮ್ಮದ್ ಷಾ ಇಲ್ಲಿ ಶಾಲೆಗಳನ್ನು ತೆರೆದಿದ್ದ. ಇಲ್ಲಿನ ಕೋಟೆಕೊತ್ತಲಗಳನ್ನು ಬಲಪಡಿಸಿದ. ಬಹಮನೀ ರಾಜ್ಯದ ಏಳನೆಯ ದೊರೆ ಷಂಸುದ್ದೀನನನ್ನು ಇಲ್ಲಿಯೇ ಬಂಧನದಲ್ಲಿಡಲಾಗಿತ್ತು. 1424ರಲ್ಲಿ ಬಹಮನೀ ಅರಸ ಅಹ್ಮದ್ ತನ್ನ ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರ್‌ಗೆ ಬದಲಾಯಿಸಿದ. ಅಂದಿನಿಂದ ಬೀದರ್ ಸ್ವರೂಪ ಬದಲಾಯಿತು. ವಿಸ್ತಾರವಾದ ರಾಜ್ಯದ ರಾಜಧಾನಿಯಾದ ಮೇಲೆ ಬಲವಾದ ಕೋಟೆಯನ್ನು ನಿರ್ಮಿಸಿ ಫಿರಂಗಿಗಳನ್ನಳವಡಿಸಲಾಯಿತು. ಸುಲ್ತಾನ ಕೋಟೆಯಲ್ಲಿ ಒಂದು ದೊಡ್ಡ ಅರಮನೆಯನ್ನು ಕಟ್ಟಿಸಿದ. ಇತರ ಸರದಾರರೂ ತಮತಮಗೆ ಭವ್ಯವಾದ ಕಟ್ಟಡಗಳನ್ನು ನಿರ್ಮಿಸಿಕೊಂಡರು. ಅನೇಕ ಮಸೀದಿಗಳೇ ಮುಂತಾದ ಬೃಹತ್ ಕಟ್ಟಡಗಳು ನಿರ್ಮಾಣವಾದವು. 15ನೆಯ ಶತಮಾನದ ಪ್ರಥಮಾರ್ಧದಲ್ಲಿ ಬೀದರ್ ಹಲವು ದಾಳಿಗಳಿಗೆ ಈಡಾಗಿತ್ತು. 1460–61ರ ಸುಮಾರಿನಲ್ಲಿ ಮಾಳವದ ಮಹಮ್ಮದ್ ಖಿಲ್ಜಿಯು ಬೀದರನ್ನು ಮುತ್ತಿ ಕೆಲಕಾಲ ವಶಪಡಿಸಿಕೊಂಡಿದ್ದು ಇಲ್ಲಿನ ಹಲವು ಕಟ್ಟಡಗಳನ್ನು ನಾಶಮಾಡಿದ. ಆದರೆ ಇದನ್ನು ನಿಜಾಂ ಷಾ (1461–63) ಪುನರ್ನಿರ್ಮಿಸಿದ. ಬಹಮನೀಯರ ಅನಂತರವೂ ಈ ಪಟ್ಟಣ ಬರೀದ್ ಶಾಹೀಗಳ ಆಳ್ವಿಕೆಯಲ್ಲಿ ರಾಜಧಾನಿಯಾಗಿಯೇ ಮೆರೆಯಿತು. 1619ರಲ್ಲಿ ಬೀದರ್ ಆದಿಲ್‌ಶಾಹಿಗಳ ವಶವಾಯಿತಾದರೂ ಪಟ್ಟಣದ ಪ್ರಾಮುಖ್ಯತೆ ಅಷ್ಟೇನೂ ಇಳಿಯಲಿಲ್ಲ. ಇಬ್ರಾಹೀಂ ಆದಿಲ್‌ಷಾನ ಕಾಲದಲ್ಲಿ ಅವನ ಅಧಿಕಾರಿಯಾಗಿದ್ದ ಮಲ್ಲಿಕ್ ಮರ್ಜಾನ ಬಿದರೆಯ ಕೋಟೆ ಮತ್ತು ಅರಮನೆಗಳನ್ನು ದುರಸ್ತುಪಡಿಸಿದ. 1656ರಲ್ಲಿ ಔರಂಗಜೇಬ್ ಇಲ್ಲಿಗೆ ಮುತ್ತಿಗೆ ಹಾಕಿ ಗೆದ್ದು ಇದನ್ನು ಮುಗಲ್ ಚಕ್ರಾಧಿಪತ್ಯಕ್ಕೆ ಸೇರಿಸಿಕೊಂಡ. ಆಗ ಬಿದರೆಯ ಹೆಸರು ಜಾಫರಾಬಾದ್ ಎಂದಾಯಿತು. ಅನಂತರ ಹಲವು ಮುಗಲ್ ಅಧಿಕಾರಿಗಳು ಇಲ್ಲಿ ಆಡಳಿತ ನಡೆಸಿದರು. ಕೊನೆಗೆ 1724ರಲ್ಲಿ ನಿಜಾಮ್–ಉಲ್–ಮುಲ್ಕ್ ಆಸಫ್ ಝಾ ಸ್ವತಂತ್ರನಾದಾಗ ಈ ಪಟ್ಟಣ ಅವನ ರಾಜ್ಯಕ್ಕೆ ಸೇರಿತು. ಅನಂತರ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಮುಂದೆ ಜಿಲ್ಲೆಯ ಮುಖ್ಯ ಪಟ್ಟಣವಾಗಿ ಮಾತ್ರ ಉಳಿಯಿತು. ಇಲ್ಲಿನ ಕಟ್ಟಡಗಳು ಅರಮನೆಗಳು ಕ್ರಮೇಣ ನಶಿಸುತ್ತ ಬಂದುವು.

ಬೀದರ್ ಒಂದು ಅನುಪಮ ಪ್ರೇಕ್ಷಣೀಯ ಸ್ಥಳ. ಈ ಪಟ್ಟಣದ ಸುತ್ತ ಅನೇಕ ನೀರಿನ ಝರಿಗಳಿರುವುದು ಒಂದು ವಿಶೇಷ. ಇಂಥವುಗಳಲ್ಲಿ ಒಂದಾದ ಪಾಪನಾಶಿನಿ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿನ ಬೃಹದಾಕಾರದ ಸ್ವಯಂಭೂ ಶಿವಲಿಂಗ ಯಾತ್ರಿಕರ ಭಕ್ತರ ಮನಸ್ಸನ್ನು ಆಕರ್ಷಿಸುತ್ತದೆ. ಗುಹಾಂತರ ದೇವಾಲಯವೆಂದು ಪ್ರಸಿದ್ಧವಾದ ನರಸಿಂಹ ಝರಣಿ ಇನ್ನೊಂದು ಜಾಗೃತ ಕ್ಷೇತ್ರ. ನಾಡಿನ ನಾನಾ ಕಡೆಗಳಿಂದ ಇಲ್ಲಿಗೆ ಜನರು ಬರುತ್ತಾರೆ. ಇಲ್ಲಿನ ಒಂದು ವಿಶೇಷವೆಂದರೆ ಗುಹೆಯಲ್ಲಿರುವ ನರಸಿಂಹ ದೇವರ ದರ್ಶನಕ್ಕೆ ಹೋಗಬೇಕಾದರೆ ಎದೆಮಟ್ಟದ ನೀರಿನಲ್ಲಿಯೇ ಹೋಗಬೇಕು. ನೀರಿನ ಪಾತಳಿ ಎಲ್ಲ ಕಾಲದಲ್ಲಿಯೂ ಒಂದೇ ಪ್ರಮಾಣದಲ್ಲಿರುತ್ತದೆ. ಭಕ್ತರು ಈ ಕ್ಷೇತ್ರದಲ್ಲಿ ಅನೇಕ ಮಂಗಳಕಾರ್ಯಗಳನ್ನು ಮಾಡುತ್ತಾರೆ. ಗುರುನಾನಕರು ಬೀದರ್‌ಗೆ ಬಂದ ಒಂದು ಸಂದರ್ಭದಲ್ಲಿ ಅವರ ಪಾದಸ್ಪರ್ಶದಿಂದ ಚಿಮ್ಮಿ ಬಂದದ್ದೆನ್ನುವ ನಾನಕ್ ಝರಾ ಬಹು ಪ್ರಸಿದ್ಧ. ಸಿಖ್ ಜನರಿಗೆ ಪವಿತ್ರವಾದ ಈ ಸ್ಥಳದಲ್ಲಿ ಈಗ ಸುಂದರ ಕಟ್ಟಡಗಳು ನಿರ್ಮಾಣವಾಗಿವೆ. ಶುಕ್ರಾಚಾರ್ಯರು ಅನುಷ್ಠಾನ ಮಾಡಿದ ಸ್ಥಳವೆಂದು ಶುಕ್ಲತೀರ್ಥ ಪ್ರಸಿದ್ಧಿಪಡೆದಿದೆ. ಬೀದರ್‌ನಿಂದ 2 ಕಿಮೀ ದೂರದಲ್ಲಿರುವ ಅನಂತಶಯನ ಮಂದಿರದಲ್ಲಿರುವ ಅನಂತಶಯನ ದೇವರ ಮೂರ್ತಿ ಬಹಳ ಸುಂದರವಾಗಿದೆ. ಬೀದರ್‌ನಲ್ಲಿ ಮುಸ್ಲಿಮರ ಪವಿತ್ರಕ್ಷೇತ್ರಗಳು ಹಲವಿವೆ. ಮುಲ್ತಾನಿ ಪಾಷಾ ದರ್ಗಾ, ಅಬುಲ್ ಫೈಜ ದರ್ಗಾ, ಅಷ್ಟೂರಿನ ಗುಂಬಜಗಳು ಅತ್ಯಂತ ಪ್ರಸಿದ್ಧವಾಗಿವೆ.

ಬೀದರ್‌ನಲ್ಲಿ ಅಳಿದುಳಿದಿರುವ ಅನೇಕ ಪ್ರಾಚೀನ ಕಟ್ಟಡಗಳು ಒಂದು ಕಾಲದಲ್ಲಿ ಈ ನಗರ ಮೆರೆದ ವೈಭವದ ಸ್ವರೂಪವನ್ನು ಕೆಲಮಟ್ಟಿಗೆ ಸಾರುತ್ತವೆ. ಇಲ್ಲಿನ ಕೋಟೆ ಈ ಪಟ್ಟಣದ ಬಹುಭಾಗವನ್ನು ಒಳಗೊಂಡಿದೆ. ಅನೇಕ ಹೆಬ್ಬಾಗಿಲು ಬುರುಜುಗಳಿಂದಲೂ ಎತ್ತರವಾದ ಕಲ್ಲಿನ ಗೋಡೆಗಳಿಂದಲೂ ನಿರ್ಮಿತವಾಗಿರುವ ಈ ಕೋಟೆಯ ಸುತ್ತಲೂ ಹುಟ್ಟುಬಂಡೆಯಲ್ಲಿಯೇ ಆಳವಾಗಿ ಅಗಲವಾಗಿ ಕೊರೆದ ಕಂದಕವಿದೆ.



ಸೋಲಾಕಂಭಾ ಮಸೀದಿ

ಇವೆಲ್ಲ ಹೆಚ್ಚು ಕಡಿಮೆ ಸುಸ್ಥಿತಿಯಲ್ಲಿವೆ. ಅಹ್ಮದ್ ಷಾ 1429ರಲ್ಲಿ ಈ ಕೋಟೆಯ ನಿರ್ಮಾಣಕಾರ್ಯವನ್ನು ಆರಂಭಿಸಿ 1432ರಲ್ಲಿ ಪೂರೈಸಿದ. ಮಾಳವದ ಮಹಮ್ಮದ್ ಖಿಲ್ಜಿ ಒಮ್ಮೆ ನಾಶಮಾಡಿದ ಈ ಕೋಟೆಯನ್ನು ಮೊದಲಿದ್ದಂತೆಯೇ ನಿಜಾಮ ಷಾ (1461–63) ಮತ್ತೆ ಕಟ್ಟಿಸಿದ. ಅನಂತರ ಮಹಮ್ಮದ್ ಷಾನ ಕಾಲದಲ್ಲಿ (1463–82) ಮದ್ದಿನ ಬಳಕೆ ಹೆಚ್ಚಾದುದರಿಂದ ಅದಕ್ಕನುಗುಣವಾಗಿ ಕೋಟೆಯ ರಚನೆ ಬದಲಾವಣೆ ಹೊಂದಿ ಫಿರಂಗಿಗಳನ್ನು ಅಳವಡಿಸಿದುದಲ್ಲದೆ ಗೋಡೆಗಳನ್ನು ಮತ್ತಷ್ಟು ಭದ್ರಪಡಿಸಲಾಯಿತು.

ಕೋಟೆಯ ಒಳಗಿರುವ ತಖ್ತ್‌ಮಹಲ್ ಅಹ್ಮದ್ ಷಾ ಕಟ್ಟಿಸಿದ ಅರಮನೆ. ಈ ಅರಮನೆಯ ಮುಂದೆ ವಿಶಾಲವಾದ ಭವ್ಯ ಸಭಾಂಗಣವಿದ್ದು ಅಲ್ಲಿ ಸುಲ್ತಾನನ ಪ್ರಸಿದ್ಧವಾದ ಸಿಂಹಾಸನವಿರುತ್ತಿದ್ದುದರಿಂದ ಅದಕ್ಕೆ ಈ ಹೆಸರು ಬಂದಿದೆ. ಉನ್ನತವಾದ ಜಗತಿ, ಎತ್ತರವಾದ ಕಮಾನುಗಳು, ನಡುವೆ ವಿಸ್ತಾರವಾದ ಹಜಾರ, ಅದಕ್ಕೆ ಸೇರಿದಂತೆ ಹಿಂದೆ ಸುಲ್ತಾನನ ವಾಸದ ಕೊಠಡಿ, ಆ ಕೊಠಡಿಯ ಮೇಲೆ ಬುಡದಿಂದ ನೂರು ಅಡಿ ಎತ್ತರವಾದ ಭವ್ಯವಾದ ಗುಮ್ಮಟ ಇವುಗಳಿಂದ ಕೂಡಿದ್ದ ಈ ಅರಮನೆ ತನ್ನ ಸೌಂದರ್ಯಕ್ಕೆ ಹೆಸರು ಪಡೆದಿತ್ತು. ಸಭಾಂಗಣದ ಗೋಡೆಗಳಿಗೆ ಅತಿ ಸುಂದರವಾದ ಸೂಡು (ಎನ್‌ಕಾಸ್ಟಿಕ್) ಚಿತ್ರಗಳನ್ನುಳ್ಳ ಬಿಲ್ಲೆಗಳನ್ನು ಹಲವು ಬಣ್ಣಗಳಲ್ಲಿ ಆಕೃತಿಗಳಲ್ಲಿ ಜೋಡಿಸಿತ್ತು. ಗುಮ್ಮಟದ ಒಳಭಾಗದಲ್ಲಿ ಬಳ್ಳಿಗಳು, ರೇಖಾಕೃತಿಗಳು ಮತ್ತು ಅಲಂಕಾರಾಕ್ಷರಗಳನ್ನು ಮನೋಹರವಾದ ರೀತಿಯಲ್ಲಿ ಬಿಡಿಸಿತ್ತು. ಈಗ ಕಟ್ಟಡದ ಬಹುಭಾಗ ಬಿದ್ದುಹೋಗಿದೆ. ಬಿದರೆಯಲ್ಲಿರುವ ಜಾಮಿ ಮಸೀದಿ ಮತ್ತು ಸೋಲಾಕಂಭಾ ಮಸೀದಿಗಳು ಇದೇ ಕಾಲದ ಉತ್ತಮ ನಿರ್ಮಾಣಗಳು.

ಬೀದರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಬಹಮನೀ ಅರಸ ಅಹ್ಮದ್ ಷಾನ ಗೋರಿ ಬೀದರ್‌ಗೆ ಸೇರಿದಂತೆಯೇ ಇರುವ ಅಷ್ಟೂರಿನಲ್ಲಿದೆ. ಈ ಗೋರಿಯನ್ನು ಅಹ್ಮದನ ಮಗ 2ನೆಯ

ಅಲಾಉದ್ದೀನ್ (1436–58) ಕಟ್ಟಿಸಿದ. 2ನೆಯ ಅಲಾಉದ್ದೀನನ ಗೋರಿ ಮತ್ತು ಹಜರತ್ ಖಲೀಉಲ್ಲಾನ ಗೋರಿ (ಚೌಖಂಡಿ)–ಈ ಎರಡೂ ಕಟ್ಟಡಗಳೂ ಉನ್ನತವೂ ಭವ್ಯವೂ ಆಗಿವೆ. ಇವುಗಳ ಗುಮ್ಮಟದ ಒಳಭಾಗದ ಗೋಡೆ ಮತ್ತು ಒಳಚಾವಣಿಗಳ ಮೇಲೆ ಕೊರೆದು ಬಿಡಿಸಿರುವ ಅತ್ಯಂತ ನವುರಾದ, ಚಿತ್ರವಿಚಿತ್ರವಾದ ಹೂಬಳ್ಳಿಗಳು ಮತ್ತು ರೇಖಾಕೃತಿಗಳು ಸುಂದರ ಪಟ್ಟಿಕೆಗಳು, ಬಣ್ಣಬಣ್ಣದ ಸೂಡು ಚಿತ್ರಗಳ ಬಿಲ್ಲೆಗಳು, ಅಳತೆಯರಿತು ನಿರ್ಮಿಸಿರುವ ಕಮಾನುಗಳು–ಸುಂದರವಾಗಿವೆ. ಚೌಖಂಡಿಯೂ 2ನೆಯ ಅಲಾಉದ್ದೀನನ ಕಾಲದ್ದು. ಎತ್ತರವಾದ ಜಗತಿಯ ಮೇಲಿದ್ದು ಅಷ್ಟಮುಖವಾಗಿ ಉನ್ನತವಾಗಿ ಮೇಲೆದ್ದಿದೆ. ಅಲಾಉದ್ದೀನನ ಗೋರಿಯ ಕಮಾನುಗಳು ಮುಗಲ್ ರೀತಿಗೆ ಹತ್ತಿರವಾಗಿವೆ. ಈ ಗೋರಿಯ ಪಕ್ಕದಲ್ಲಿರುವ ಹುಮಾಯೂನನ (1458–61) ಗೋರಿಯ ಕಮಾನುಗಳು ಅಗಲವಾಗಿದ್ದು ಗುಲ್ಬರ್ಗ ಕೋಟೆಯಲ್ಲಿರುವ ಜುಮ್ಮಾಮಸೀದಿಯ ಕಮಾನುಗಳನ್ನು ಹೋಲುತ್ತವೆ. ಈ ಕಟ್ಟಡದ ಹೊರಮುಖ $77^1/_2$ ಅಡಿ ಚೌಕವಿದೆ. ಗೋಡೆಗಳು ಕರಿಯ ಗಟ್ಟಿಕಲ್ಲಿನಿಂದ ನಿರ್ಮಿತವಾಗಿದ್ದು $13^1/_2$ ಅಡಿ ದಪ್ಪನಾಗಿವೆ. ಗುಮ್ಮಟವನ್ನು ಹಗುರವಾದ ನೀರಿನಲ್ಲಿ ತೇಲುವ ಇಟ್ಟಿಗೆಗಳಿಂದ ಕಟ್ಟಲಾಗಿದೆ.

ಗುಂಬಜ್ ದರ್ವಾಜಾಕ್ಕೆ ಹೊಂದಿಕೊಂಡಂತೆ ಇರುವ ಷಾ ಬರುಜು ಮಹಮ್ಮದ್ ಷಾನ ಕಾಲದ್ದು. ಅವನು ಕೊಲೆ ಸಂಚೊಂದರಿಂದ ಪಾರಗಿದ್ದರ ನೆನಪಿಗಾಗಿ ಇದನ್ನು ಕಟ್ಟಿಸಿದ. ಮಹಮ್ಮದ್‍ಷಾನ ಗೋರಿ ಸಹ ದೊಡ್ಡ ಕಟ್ಟಡ.

ಪಟ್ಟಣದ ಮಧ್ಯದಲ್ಲಿರುವ ಪ್ರಸಿದ್ಧವಾದ ಮಹ್ಮೂದ್ ಗಾವಾನನ **(ನೋಡಿ)** ಮದರಸಾ ಭಾರತದಲ್ಲಿಯೇ ಒಂದು ಅಪರೂಪ ಕಟ್ಟಡ. ಪರ್ಷಿಯ ದೇಶದ ಮದರಸಾಗಳ ಮಾದರಿಯಲ್ಲಿರುವ ಈ ಕಟ್ಟಡ ವಿಶಾಲವಾದುದಾಗಿತ್ತು. ಇದು ನಡುವೆ ಪ್ರಾಂಗಣ ಮತ್ತು ಸುತ್ತಲೂ ತರಗತಿಯ ಕೋಣೆಗಳು, ಪ್ರಾರ್ಥನೆಯ ಹಜಾರ, ಪುಸ್ತಕ ಭಂಡಾರ, ಪ್ರಾಧ್ಯಾಪಕರ ಕೋಣೆಗಳು, ವಿದ್ಯಾರ್ಥಿಗಳ ಕೋಣೆ ಇತ್ಯಾದಿಗಳೊಡನೆ ಮೂರಂತಸ್ತಿನಲ್ಲಿ ಮೇಲೆದ್ದಿರುವ ಕಟ್ಟಡ. ಇದರ ಎರಡು ಕಡೆಯೂ ಉನ್ನತವಾದ ಮಿನಾರುಗಳಿದ್ದುವು. ಈ ಕಟ್ಟಡದ ಮುಕ್ಕಾಲು ಭಾಗ ಈಗ ಬಿದ್ದುಹೋಗಿದೆ. ಮಿನಾರಿನ ಮೇಲೆ ಬಗೆಬಗೆಯ ರೀತಿಯಲ್ಲಿ ಬಣ್ಣ ಬಣ್ಣದ ಸೂಡು ಚಿತ್ರಗಳ ಬಿಲ್ಲೆಗಳಿದ್ದ ಕುರುಹನ್ನು ಈಗಲೂ ಕಾಣಬಹುದು.

ಬಹಮನೀ ಅರಸರ ಕಾಲದ ಈ ಮೇಲಿನ ಕಟ್ಟಡಗಳೆಲ್ಲಾ ಅವರ ಆಳ್ವಿಕೆಯಲ್ಲಿ ಇಲ್ಲಿ ಬೆಳೆದ ಹಿಂದು–ಮುಸ್ಲಿಂ ವಾಸ್ತುರೀತಿಯ ಉತ್ತಮ ಉದಾಹರಣೆಗಳಾಗಿವೆ. ಇವುಗಳಲ್ಲಿ ಸ್ಥೂಲತೆ ಎದ್ದುಕಾಣುತ್ತದೆ. ಅತಿ ದಪ್ಪನಾಗಿ ಭಾರವಾಗಿರುವಂತೆ ಭಾಸವಾಗುತ್ತದೆ. ಇವುಗಳಲ್ಲಿ ಅನೇಕ ಬಗೆಯ ಕಮಾನುಗಳನ್ನು ಉಪಯೋಗಿಸಲಾಗಿದೆ. ಬಣ್ಣಬಣ್ಣದ ಚಿತ್ರಕೆಲಸಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ. ಸೂಡುಚಿತ್ರಗಳ ಬಿಲ್ಲೆಗಳನ್ನು ಹೇರಳವಾಗಿ ವಿನಿಯೋಗಿಸಲಾಗಿದೆ. ಅಲಂಕರಣಕ್ಕೆ ಹಿಂದು ರೀತಿಯನ್ನು ಹೆಚ್ಚಾಗಿ ಬಳಸಲಾಗಿದೆ.

ಬರೀದ್‍ಶಾಹೀ ಸುಲ್ತಾನರು ಬೀದರ್‍ನಲ್ಲಿ ಸ್ವತಂತ್ರರಾಗಿ ಆಳಲಾರಂಭಿಸಿದ ಮೇಲೆ ಕಟ್ಟಡಗಳ ನಿರ್ಮಾಣದ ರೀತಿಯಲ್ಲಿ ನಿರ್ದಿಷ್ಟವಾದ ಬದಲಾವಣೆಗಳಾದುವು. ಆಲಿ ಬರೀದ್ ಕಟ್ಟಿಸಿದ ಕಟ್ಟಡಗಳಲ್ಲಿ ರಂಗೀನ್ ಮಹಲ್ ಮತ್ತು ಅವನು ತನಗಾಗಿ ಕಟ್ಟಿಸಿಕೊಂಡ ಗೋರಿ (1577) ಮುಖ್ಯವಾದುವು. ಬಣ್ಣ ಬಣ್ಣದ ಬಿಲ್ಲೆಗಳಿಂದ ಅಲಂಕೃತವಾಗಿದ್ದುದರಿಂದ ಅವನ ಅರಮನೆಗೆ ರಂಗೀನ್ ಮಹಲ್ ಎಂಬ ಹೆಸರು ಬಂದಿತು. ಈ ಅರಮನೆಯ ಮುಖ್ಯ ಆಕರ್ಷಣೆಯೆಂದರೆ ಅದರಲ್ಲಿರುವ ಸುಂದರವಾದ ಅತ್ಯಂತ ನಾಜೂಕಿನ ಮರದ ಕೆತ್ತನೆ ಮತ್ತು ಚಿತ್ರಗಳಿಗೆ ಧಾರಾಳವಾಗಿ ಬಳಸಿರುವ ಮುತ್ತಿನ ಚಿಪ್ಪುಗಳು. ಆದರೆ ಅದರಲ್ಲಿ ವಿಸ್ತಾರ ಅಥವಾ ಭವ್ಯತೆಯ ಅಭಾವ ಎದ್ದುಕಾಣುತ್ತದೆ. ಅದರಲ್ಲಿ ಮುಖ್ಯ ಹಜಾರ, ಅದರ ಪಕ್ಕಗಳಲ್ಲಿ ಎರಡೆರಡು ಮತ್ತು ಹಿಂದೆ ನಾಲ್ಕು ಕೋಣೆಗಳು ಇವೆ. ಮಧ್ಯದ ಹಜಾರದ ನಾಲ್ಕು ಕಂಬಗಳು ಅತಿ ಸೂಕ್ಷ್ಮವಾದ ಕೆತ್ತನೆಯಿಂದ ಕೂಡಿವೆ. ಆಲಿ ಬರೀದನ ಗೋರಿಯ ಮೇಲಿನ ಗುಮ್ಮಟ ಕಟ್ಟಡದ ಗಾತ್ರಕ್ಕೆ ತುಂಬ ದೊಡ್ಡದಾಗಿದ್ದು ಭಾರವಾಗಿರುವಂತೆ ಭಾಸವಾಗುತ್ತದೆ. ಕಟ್ಟಡ ಬಹಮನೀ ಸುಲ್ತಾನರ ಗೋರಿಗಳಂತೆ ಸ್ಥೂಲವಾಗಿ ಮೊದ್ದುಮೊದ್ದಾಗಿಲ್ಲದೆ ಅದರಲ್ಲಿ ನಾಜೂಕಿನ ಶಿಲ್ಪವನ್ನು ಕಾಣಬಹುದು. ಚೌಕಾಕೃತಿಯ ಕಟ್ಟಡದ ನಾಲ್ಕು ಕಡೆಯೂ ತೆರೆದ ಕಮಾನುಗಳಿದ್ದು ಮಂಟಪದಂತೆ ಕಾಣುವ ಅದರ ಹೊರಗೋಡೆಯ ಮೇಲಿನ ಪಟ್ಟಿಕೆಗಳ ಅಲಂಕರಣದಲ್ಲಿ ಮಧ್ಯದ ಗುಮ್ಮಟದ ಅನುಕರಣೆ ಇರುವುದು ಹಿಂದು ಶೈಲಿಯ ಪ್ರಭಾವವನ್ನು ಸೂಚಿಸುತ್ತದೆ. ಈ ಊರಿನಲ್ಲಿರುವ ಕಾಲಿ ಮಸೀದಿ ಈ ಕಾಲದ ಚಿಕ್ಕದಾದ ಸುಂದರವಾದ ಕಟ್ಟಡ. ಕರಿಯ ಕಲ್ಲಿನಿಂದ ಕಟ್ಟಿರುವುದರಿಂದ ಈ ಹೆಸರು ಬಂದಿದೆ. ಬೀದರ್ ಆದಿಲ್‍ಶಾಹೀಗಳಿಗೆ ಸೇರಿಹೋದ ಮೇಲೆ ಇಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯಲಿಲ್ಲ. ಹಜರತ್ ಮಕಾನ್ ಖಾದ್ರಿ ದರ್ಗಾ, ಖುಬಾರಿ ಮಸೀದಿಯಂತಹ ಕೆಲವು ಕಟ್ಟಡಗಳು ಈ ಕಾಲದಲ್ಲಿ ನಿರ್ಮಿತವಾದುವಾದರೂ ಅವುಗಳಿಗೆ ಯಾವ ಪ್ರಾಮುಖ್ಯವೂ ಇಲ್ಲ.

ಮುಗಲ್‍ರ ಆಳ್ವಿಕೆಯಲ್ಲಿ ಕೋಟೆಯನ್ನು ಭದ್ರಪಡಿಸಿದುದಲ್ಲದೆ ಕೆಲವು ಮಸೀದಿಗಳನ್ನು ಕಟ್ಟಲಾಯಿತು. ಝರಣಿ ನರಸಿಂಹ ಕ್ಷೇತ್ರದ ಬಳಿ ಇರುವ ಮಸೀದಿ ಅಂಥವುಗಳಲ್ಲೊಂದು. ಔರಂಗ್‍ಜೇಬ್ ಇದನ್ನು ಕಟ್ಟಿಸಿದ. ಬೀದರ್‍ನಲ್ಲಿ ಮುಗಲ್ ಅಧಿಕಾರಿಯಾಗಿದ್ದ ಹುಸಾಮುದ್ದೀನ್ ಖಾನನ ಕಾಲದಲ್ಲಿ ಒಂದು ಮಸೀದಿ ಮತ್ತು ಚಾಂದಿನೀ ಚಬೂತರಗಳನ್ನು ಕಟ್ಟಲಾಯಿತು. ಆದರೆ ಈ ಕಾಲದ ಕಟ್ಟಡಗಳು ಕಲೆಯ ದೃಷ್ಟಿಯಿಂದ ಯಾವ ಪ್ರಾಮುಖ್ಯತೆಯನ್ನೂ ಪಡೆದಿಲ್ಲ. **(ಎಂ.ಎಚ್.)**

**ಬೀದರಿ ಕಲೆ:** ಕರ್ನಾಟಕದ ಕರಕುಶಲ ಕಲೆಗಳ ಪೈಕಿ ಒಂದು. ಬೀದರ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾಣಬಹುದು. ಇದರ ಇತಿಹಾಸ ಬಹಮನೀ ಅರಸರ ಕಾಲದಿಂದ ಆರಂಭವಾಗುತ್ತದೆ. ಪಚ್‍ರಸ್ ಎಂಬ ಹೆಸರಿನ ವಿಶೇಷ ಸಂಯುಕ್ತದ ಬಳಕೆಯೊಂದಿಗೆ ಈ ಶಾಹಾದಲಿ ಬಹಮನೀ ಇರಾನ್ ದೇಶದಿಂದ ಕೆಲ ಕಲಾಕಾರರನ್ನು ಬೀದರಿನಲ್ಲಿಯ ರಂಗೀನ್ ಮಹಲ್ ಮೊದಲಾದವನ್ನು ಕಟ್ಟುವಲ್ಲಿ ಕುಸುರಿ ಮತ್ತು ಕಲಾತ್ಮಕ ಕೆಲಸಮಾಡಲು ಕರೆತಂದ. ಹೀಗೆ ಬಂದ ಜನ ಬೀದರಿನಲ್ಲಿ ದೊರೆಯುವ ವಿಶೇಷ ಜಾತಿಯ ಮಣ್ಣು, ತಾಮ್ರ, ಸತುವು ಮತ್ತು ತವರ ಧಾತುಗಳ ಮಿಶ್ರಣದಿಂದ ಪಚ್‍ರಸ್ ಸಂಯುಕ್ತವನ್ನು ಮೊದಲ ಬಾರಿಗೆ ಸಿದ್ಧ ಮಾಡಿದರು. ಇದನ್ನು ಬಳಸಿ ಪಾತ್ರೆಗಳನ್ನು, ಆಲಂಕಾರಿಕ ವಸ್ತುಗಳನ್ನು, ಹುಕ್ಕಾ, ಗುಲ್ದಾನ್ (ಹೂಬುಟ್ಟಿ) ನೀರಿನ ಹೂಜಿ, ಪಾನದಾನ್ (ಎಲೆ ಅಡಿಕೆಯ ಡಬ್ಬಾಗಳು), ತಟ್ಟೆ, ಬೂದಿಕರಂಡಕ ಮುಂತಾದವನ್ನು ತಯಾರಿಸಲಾಗುತ್ತಿತ್ತು. ಇವೆಲ್ಲವನ್ನೂ ಚಿತ್ರಗಳಿಂದ ಅಲಂಕರಿಸಲಾಗುತ್ತಿತ್ತು. ಸಾಮಾನ್ಯವಾಗಿ ಚಿತ್ರ ಬಿಡಿಸುವ ಕುಸುರಿ ಕೆಲಸವನ್ನು ಬೆಳ್ಳಿಯ ವರ್ಖ ಮತ್ತು ಬೆಳ್ಳಿಯ ತಂತಿಗಳಿಂದ ಮಾಡುತ್ತಿದ್ದರು. ಈ ಕೆಲಸ ನಾಲ್ಕು ಬಗೆಯಲ್ಲಿ ನಡೆಯುತ್ತದೆ.

1. ಪಚ್‍ರಸ್ ಸಂಯುಕ್ತದ ಪಾತ್ರೆಯ ಮೈಮೇಲೆ ಬೆಳ್ಳಿಯ ವರ್ಖನ್ನು ನಿಲ್ಲಿಸುವುದು. 2.ಬೆಳ್ಳಿಯ ವರ್ಖನ್ನು ಪಚ್‍ರಸ್ ಜೊತೆಯಲ್ಲಿ ದ್ರವವಾಗಿರುವಾಗ ಬೆರೆಸುವುದು. 3. ಬೆಳ್ಳಿಯ ವರ್ಖಕ್ಕೆ ಪ್ರತಿಯಾಗಿ ಬೆಳ್ಳಿಯ

ತಂತಿಯನ್ನು ಬಳಸುವುದು. 4. ಪಚ್‍ರಸ್ ದ್ರವವಾಗಿರುವ ಪಾತ್ರೆಯ ಹೊರ ಮೈಯನ್ನು ಸಂಪೂರ್ಣ ಬೆಳ್ಳಿಯ ವರ್ಖದಿಂದ ಅಂಟಿಸಿ ಅನಂತರ ಅದರಲ್ಲಿ ಚಿತ್ರಗಳನ್ನು ಬಿಡಿಸಿ ಸಣ್ಣ ಉಳಿಯಿಂದ ಚಿತ್ರಗಳನ್ನು ಕೊರೆಯುವುದು. ಈ ಪದ್ಧತಿಗಳಲ್ಲಿ ಒಂದಕ್ಕಿಂತ ಹೆಚ್ಚು ವಿಧಾನಗಳನ್ನು ಬಳಸಿದರೆ ದ್ವಿವಿಧಕ್ಕೆ ದುಕುರಾ, ತ್ರಿವಿಧಕ್ಕೆ ಸೆಕಾರಾ ಮತ್ತು ಚತುರ್ವಿಧಕ್ಕೆ

ಕನ್ನಡಿಗೆ ಬೀದರಿ ಕಲೆಯ ಚೌಕಟ್ಟು

ಚೌಕಾರ ಎಂದು ಹೆಸರು. ಪಚ್‍ರಸ್ ಧಾತುವಿನಲ್ಲಿ ಎರಡು ವಿಧ; ಅದನ್ನು ಕೇವಲ ತಾಮ್ರ ಮತ್ತು ಸತುವು ಮಿಶ್ರಣದಿಂದಲೇ ತಯಾರಿಸ ಬಹುದು, ಇಲ್ಲವೇ ಎಲ್ಲ ಬಗೆಯ ಲೋಹಗಳ ಮಿಶ್ರಣದಿಂದಲೂ ಮಾಡಬಹುದು. *

**ಬೀದಿನಾಟಕ:** ರಂಗಭೂಮಿ ಚಳವಳಿಯ ಹಿನ್ನೆಲೆಯಲ್ಲಿ ಕರ್ನಾಟಕ ದಲ್ಲಿ ಹುಟ್ಟಿಕೊಂಡ ಹೊಸಬಗೆಯ ಒಂದು ನಾಟಕ ಪ್ರಕಾರ. ಇದು ಸಾಂಪ್ರದಾಯಿಕ ರಂಗಭೂಮಿಗಿಂತ ಅನೇಕ ದೃಷ್ಟಿಯಲ್ಲಿ ಭಿನ್ನವಾದುದು. ಇದಕ್ಕೆ ನಿರ್ದಿಷ್ಟವಾದ ರಂಗಭೂಮಿಯ ಪರಿಕರಗಳ ಆವಶ್ಯಕತೆಯಿಲ್ಲ. ಎಲ್ಲಂದರಲ್ಲಿ ರಸ್ತೆಯಬದಿ, ನಾಲ್ಕುದಾರಿ ಸೇರುವ ಚೌಕದಲ್ಲಿ, ಸಂತೆನೆರೆಯು ವಲ್ಲಿ, ಜನಜಂಗುಳಿ ಇರುವಲ್ಲಿ ಆಡುವಂಥದ್ದು. ರಂಗಮಂದಿರದ ಭವ್ಯೋಪೇತ ಕೃತಕ ಪರಿಸರವನ್ನು ಕಿತ್ತೊಗೆದು ಜನರ ನಡುವೆ ಬೀದಿಗಿಳಿದುದರಿಂದ ಇದು ಬೀದಿ ನಾಟಕವೆನಿಸಿತು. ಜನರಲ್ಲಿ ಜಾಗೃತಿ ಉಂಟುಮಾಡುವುದು; ಅವರು ವಿಚಾರಪರರಾಗುವಂತೆ ಪ್ರೇರೇಪಿಸುವುದು; ಜಾತಿ, ಮೂಢನಂಬಿಕೆ, ದೇವರು, ಸಂಪ್ರದಾಯ ಇತ್ಯಾದಿ ಜೀವವಿರೋಧಿ ಶಕ್ತಿಗಳನ್ನು ಪ್ರತಿಭಟಿಸಿ ಶುದ್ಧ ಮಾನವೀಯವಾಗಿ ಯೋಚಿಸುವಂತೆ ಮಾಡುವುದು; ಶೋಷಣೆ, ಅನ್ಯಾಯ, ಅತ್ಯಾಚಾರಗಳ ವಿರುದ್ಧ ಬಂಡಾಯ ಹೂಡುವಂತೆ ಪ್ರೇರೇಪಿ ಸುವುದು ಮುಂತಾದವು ಬೀದಿನಾಟಕಗಳ ಮೂಲೋದ್ದೇಶವೆನ್ನಬಹುದು. ಇಲ್ಲಿ ಕಲೆಗಿಂತ ವೈಚಾರಿಕತೆ, ಸಾಂಕೇತಿಕತೆಗಿಂತ ವಾಸ್ತವಿಕತೆ ಮುಖ್ಯ. ಇದೊಂದು ಬಗೆಯ ‘ಬದ್ಧ’ ಸಾಹಿತ್ಯ. ಜನ ಸಾಮಾನ್ಯರ ಸ್ಥಿತಿಗತಿಗಳು, ಅವರ ನೋವುಯಾತನೆಗಳೆ ಇಲ್ಲಿಯ ನಾಟಕಗಳ ವಸ್ತು. ವರ್ತಮಾನದಲ್ಲಿ ಘಟಿಸಿದ, ಘಟಿಸುತ್ತಿರುವ ಪ್ರಕರಣಗಳೂ ಇಲ್ಲಿ ನಾಟಕವಾಗಬಹುದು. ಕಲ್ಪನೆಗೆ ಇಲ್ಲಿ ಕೊಂಚವೂ ಅವಕಾಶವಿಲ್ಲ; ಅದರ ಬೇರುಗಳಿರುವುದು, ಜೀವಂತಿಕೆಯಿರುವುದು ಹಸಿಹಸಿ ವಾಸ್ತವದಲ್ಲಿ. ಈ ನಾಟಕಗಳಲ್ಲಿ ಹಾಡು, ಸಂಗೀತ, ನೃತ್ಯಾಭಿನಯಗಳಿದ್ದರೂ ಅವುಗಳ ಮುಖ್ಯ ಉದ್ದೇಶ ಮನರಂಜನೆಗಿಂತ ಆ ಮೂಲಕ ವಿಚಾರವನ್ನು ತಲಪಿಸುವುದೇ ಆಗಿದೆ.

ಕನ್ನಡದಲ್ಲಿ ಅನೇಕ ಲೇಖಕರು ಲೇಖಕಿಯರು ಈ ಪ್ರಕಾರದಲ್ಲಿ ಗಟ್ಟಿ ಕೆಲಸ ಮಾಡಿದ್ದಾರೆ. ಅನೇಕ ಕಲಾತಂಡಗಳು ಕ್ರಾಂತಿಕಾರಕ ಸಂದೇಶಗಳನ್ನು ಜನಸಾಮಾನ್ಯನ ಹತ್ತಿರಕ್ಕೆ ಒಯ್ದಿವೆ. ವಿಜಯಾ, ಎ.ಎಸ್. ಮೂರ್ತಿ ಮೊದಲಾದವರು ಅನೇಕ ನಾಟಕಗಳನ್ನು ರಚಿಸಿದ್ದಾರೆ. ಸಿದ್ದಲಿಂಗಯ್ಯ ಹೊಸದಾಗಿ ನಾಟಕಗಳನ್ನು ರಚಿಸುವುದರ ಜೊತೆಗೆ ಕನ್ನಡ ಲೇಖಕರ ಹೆಸರಾಂತ ಕಥೆಗಳನ್ನು ನಾಟಕರೂಪಕ್ಕೆ ಅಳವಡಿಸಲಾಗಿದೆ. ಬಂದರೋ ಬಂದರು, ಕೇಳ್ರಪ್ಪೋ ಕೇಳ್ರೀ, ಮುಖವಿಲ್ಲದವರು, ಎಲ್ಲಿದ್ದೇವೆ ನಾವು ಎಲ್ಲಿದ್ದೇವೆ, ಉಳ್ಳವರ ನೆರಳು, ಬೆಲ್ಚಿ, ಹಂಚಿಕಾ ಪ್ರಕರಣ, ಧನ್ವಂತರಿಯ ಚಿಕಿತ್ಸೆ, ಮಾನಿಷಾದ ಮೊದಲಾದ ನಾಟಕಗಳು ಬಹುಜನರನ್ನು ಆಕರ್ಷಿಸಿವೆ. ವಿಜಯಾ ಅವರ ಬಂದರೋ ಬಂದರು ಎಂಬ ನಾಟಕ ನೂರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡಿರುವುದಷ್ಟೇ ಅಲ್ಲದೆ ಅತ್ಯುತ್ತಮ ನಾಟಕವೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನೂ ಪಡೆದಿದೆ (1980). ಇದೇ ನಾಟಕ ತಮಿಳು, ಸಂಸ್ಕೃತ, ಹಿಂದೀ ಭಾಷೆಗಳಿಗೆ ಕೂಡ ಅನುವಾದವಾಗಿದ್ದು ಅಲ್ಲಿಯೂ ಅಪಾರ ಹೆಸರು ಮಾಡಿದೆ. ಚಿತ್ರಾ ಗೆಳೆಯರ ತಂಡ 1970ರಿಂದಲೂ ಬೀದಿ ನಾಟಕಗಳನ್ನು ಆಡುತ್ತ ಬಂದಿದೆ. ಕರ್ನಾಟಕ ದಲಿತಸಂಘರ್ಷ ಸಮಿತಿ, ಸಮುದಾಯ ಮುಂತಾದ ಹವ್ಯಾಸಿ ತಂಡಗಳು ಈ ನಿಟ್ಟಿನಲ್ಲಿ ಗಮನಾರ್ಹವಾದ ಕೆಲಸ ಮಾಡಿವೆ.

ಮೈಸೂರಿನಲ್ಲಿ ನೆಲೆಗೊಂಡಿರುವ ರಂಗಾಯಣ ಬೀದಿನಾಟಕಗಳನ್ನೂ ಆಡಲು ಅಗ್ಯತವಾದ ತರಬೇತಿ ನೀಡುತ್ತಿದೆ. ವೃತ್ತಿಪರರು ಮತ್ತು ಹವ್ಯಾಸಿ ಕಲಾವಿದರು ಇದರಲ್ಲಿ ಭಾಗವಹಿಸುವುದುಂಟು. ಸಮಾಜದಲ್ಲಿ ಕಾಲಕಾಲಕ್ಕೆ ಉದ್ಭವಿಸುವ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಈ ನಾಟಕಗ ಳನ್ನು ರೂಪಿಸಿ ಅಭಿನಯಿಸುವುದುಂಟು. ವರದಕ್ಷಿಣೆ ಪದ್ಧತಿ, ನಿರುದ್ಯೋಗ, ಏಡ್ಸ್ ಖಾಯಿಲೆ, ಪರಿಸರ ಸಂರಕ್ಷಣೆ, ಸಾಮಾಜಿಕ ದೌರ್ಜನ್ಯಗಳ ಬಗ್ಗೆ ಸಹ ಈ ನಾಟಕಗಳು ಬೆಳಕು ಬೀರುತ್ತವೆ. *

**ಬೀರೂರು:** ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಒಂದು ಪಟ್ಟಣ; ಹೋಬಳಿ ಕೇಂದ್ರ. ಕಡೂರಿನ ವಾಯವ್ಯಕ್ಕೆ 7 ಕಿಮೀ ದೂರದಲ್ಲಿದೆ. ಜನಸಂಖ್ಯೆ 22,601. ಬೆಂಗಳೂರು–ಪುಣೆ ರೈಲುಮಾರ್ಗ ಈ ಊರಿನ ಮೂಲಕ ಹಾದುಹೋಗುತ್ತದೆ. ಇಲ್ಲಿಯ ರೈಲುನಿಲ್ದಾಣ ರೈಲುಮಾರ್ಗಗಳ ಕೂಡುಸ್ಥಳ (ಜಂಕ್ಷನ್). ತರೀಕೆರೆ, ಶಿವಮೊಗ್ಗಗಳಿಗೆ

ಹೋಗುವ ರೈಲುಮಾರ್ಗ ಇಲ್ಲಿ ಕವಲೊಡೆ ಯುತ್ತದೆ. ಬೆಂಗಳೂರು–ಹೊನ್ನಾವರ ರಸ್ತೆ ಈ ಊರಿನ ಮೂಲಕ ಹಾದುಹೋಗುತ್ತದೆ.

ಕಡೂರು ತಾಲ್ಲೂಕಿನ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವ ಈ ಊರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಪ್ರಾಮುಖ್ಯತೆ ಪಡೆಯುವವರೆಗೂ ಅಡಕೆ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. ಈಗಲೂ ತೆಂಗಿನಕಾಯಿ, ಅಡಕೆ, ದಿನಸಿ ಸಾಮಾನುಗಳ ವ್ಯಾಪಾರ ಗಣನೀಯವಾದ ಪ್ರಮಾಣದಲ್ಲಿ ನಡೆಯುತ್ತದೆ. ಇಲ್ಲಿ ತಯಾರಾದ ವ್ಯವಸಾಯಕ್ಕೆ ಸಂಬಂಧಿಸಿದ ಉಪಕರಣಗಳು, ಬಳೆ, ಸುಣ್ಣ ಮುಂತಾದವುಗಳನ್ನು ಬೇರೆ ಬೇರೆ ಕಡೆಗೆ ರವಾನಿಸುವುದುಂಟು. ಕಂಬಳಿ ತಯಾರಿಸುವ ಮಗ್ಗಗಳೂ ಇಲ್ಲಿವೆ.

ಊರಿನಲ್ಲಿರುವ ಕನ್ನಿಕಾಪರಮೇಶ್ವರಿ, ರಾಮದೇವರು, ಆಂಜನೇಯ, ವೀರಭದ್ರ, ಜೈನ–ಈ ದೇವಾಲಯಗಳು ಇತ್ತೀಚಿನವು. ಇಲ್ಲಿ ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ವೀರಭದ್ರ ಸ್ವಾಮಿ ಜಾತ್ರೆ ನಡೆಯುತ್ತದೆ. ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಈ ದೇವರ ಜಾತ್ರೆಯಲ್ಲಿ ಕೊಂಡ ಹಾಯುವ ಪದ್ಧತಿ ಇದೆ. ಸುಗ್ಗಿಯ ಕಾಲದಲ್ಲಿ ನಡೆಯುವ ಅಂತರಕಟ್ಟಪ್ಪನ ಜಾತ್ರೆ ರೈತರಿಗೆ ಮುಖ್ಯವಾದುದು. ದಸರ ಸಮಯದಲ್ಲಿ ಮೈಲಾರಿಲಿಂಗನ ಜಾತ್ರೆ ನಡೆಯುತ್ತದೆ.

ಐತಿಹಾಸಿಕವಾಗಿ ಬೀರೂರು ಬಹು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದುದು ಕಂಡುಬರುತ್ತದೆ. ಕದಂಬ ವಿಷ್ಣುವರ್ಮನ ಕಾಲದ (5ನೆಯ ಶತಮಾನ) ಒಂದು ತಾಮ್ರಶಾಸನ ಈ ಊರಿನಲ್ಲಿ ದೊರೆತಿದೆ. ಇದರಲ್ಲಿ ಕರ್ನಾಟ ಪ್ರದೇಶವೆಂಬ ಉಲ್ಲೇಖವಿರುವುದು ಗಮನಾರ್ಹ. ಇಲ್ಲಿರುವ ಹೊಯ್ಸಳ ಎರಡನೆಯ ವಿನಯಾದಿತ್ಯನ ಒಂದು ಶಾಸನದಿಂದ ಈ ಊರು ಹನ್ನೊಂದನೆಯ ಶತಮಾನದಲ್ಲಿ ಒಂದು ಪ್ರಮುಖ ಪಟ್ಟಣವಾಗಿತ್ತೆಂದು ತಿಳಿದುಬರುತ್ತದೆ. ಅಲ್ಲದೆ ಶಾಸನದಲ್ಲಿ ಹೊಯ್ಸಳರ ದಂಡನಾಯಕ ಪೋಚಿಮಯ್ಯ ಇಲ್ಲಿ ಪೋಚೇಶ್ವರ ದೇವಾಲಯವನ್ನು ಕಟ್ಟಿಸಿದುದರ ಬಗ್ಗೆ ಪ್ರಸ್ತಾಪವಿದೆ. ಹೊಯ್ಸಳರ ಕಾಲದಲ್ಲಿ ಇದು ಸ್ಥಳೀಯ ಆಡಳಿತದ ಮುಖ್ಯ ಸ್ಥಳವೂ ಆಗಿತ್ತು. ಹೆದ್ದಾರಿಯ ಮಧ್ಯೆ ಇರುವ ಊರಾಗಿ ಇದು ಹಿಂದಿನಿಂದಲೂ ವ್ಯಾಪಾರ ಮತ್ತು ಸಾರಿಗೆ ಸಂಪರ್ಕಕ್ಕೆ ಪ್ರಾಮುಖ್ಯತೆ ಪಡೆದಿತ್ತು. (ಎಸ್.ಎನ್.ಜಿ.;ಡಿ.ಎಸ್.ಜೆ.)

**ಬೀಳಗಿ:** ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ಬಾಗಲಕೋಟೆ, ದಕ್ಷಿಣದಲ್ಲಿ ಬಾದಾಮಿ, ಪಶ್ಚಿಮದಲ್ಲಿ ಮುಧೋಳ, ವಾಯವ್ಯದಲ್ಲಿ ಜಮಖಂಡಿ ತಾಲ್ಲೂಕುಗಳೂ ಉತ್ತರದಲ್ಲಿ ಬಿಜಾಪುರ ಜಿಲ್ಲೆಯೂ ಸುತ್ತುವರೆದಿವೆ. ಜಮಖಂಡಿ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನಲ್ಲಿ ಕಸಬೆ, ಅನಗವಾಡಿ ಹೋಬಳಿಗಳಿದ್ದು 66 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 782 ಚ.ಕಿಮೀ. ಈ ತಾಲ್ಲೂಕಿನ ಭಾಗ ಹಿಂದೆ ಉಪತಾಲ್ಲೂಕಾಗಿ ಜಮಖಂಡಿಗೆ ಒಳಪಟ್ಟಿತ್ತು. ಪ್ರತ್ಯೇಕ ತಾಲ್ಲೂಕಾದುದು 1959ರಲ್ಲಿ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 1,26,542.

ಈ ತಾಲ್ಲೂಕು ಹೆಚ್ಚಿನ ಮಟ್ಟಿಗೆ ಕರಿ ಎರೆಮಣ್ಣಿನ ಮಟ್ಟಸ ಪ್ರದೇಶ. ಆದರೆ ತಾಲ್ಲೂಕಿನ ಮಧ್ಯಭಾಗದಲ್ಲಿ ಪಶ್ಚಿಮದ ಎಲ್ಲೆಯಿಂದ ಸುಮಾರು ಬೀಳಗಿ ಪಟ್ಟಣದವರೆಗೆ ಕಣಶಿಲೆಯ ಬೆಟ್ಟ ಪ್ರದೇಶವಿದೆ. ತಾಲ್ಲೂಕಿನ ದಕ್ಷಿಣದ ಎಲ್ಲೆಯಲ್ಲಿ ಸಹ ಘಟಪ್ರಭಾನದಿಯ ದಂಡೆಗುಂಟ ಚಿಕ್ಕ ಬೆಟ್ಟಗಳ ಸಾಲಿದೆ. ತಾಲ್ಲೂಕಿನ ಉತ್ತರ ಗಡಿರೇಖೆಯಾಗಿ ಕೃಷ್ಣಾ ನದಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ಘಟಪ್ರಭಾ ನದಿ ತಾಲ್ಲೂಕಿನ ದಕ್ಷಿಣಭಾಗದಲ್ಲಿ ಪಶ್ಚಿಮ–ಪೂರ್ವವಾಗಿ ಹರಿದು ಮತ್ತೆ ನೈಋತ್ಯಾಭಿಮುಖವಾಗಿ ತಿರುಗಿ ಕೃಷ್ಣಾನದಿಯನ್ನು ಸೇರುತ್ತದೆ.

ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 784 ಮಿಮೀ. ಜೋಳ, ಹತ್ತಿ, ನೆಲಗಡಲೆ, ಗೋದಿ ಇಲ್ಲಿನ ಮುಖ್ಯ ಬೆಳೆಗಳು. ಸಜ್ಜೆ, ದ್ವಿದಳ ಧಾನ್ಯಗಳು ಮತ್ತು ಕಬ್ಬನ್ನೂ ಬೆಳೆಯುತ್ತಾರೆ. ಘಟಪ್ರಭಾ ಎಡದಂಡೆ ಯೋಜನೆಯಿಂದ ಹೆಚ್ಚು ಭೂಮಿ ವ್ಯವಸಾಯಕ್ಕೆ ಒಳಪಟ್ಟಿವೆ. ತಾಲ್ಲೂಕಿನಲ್ಲಿ ಹತ್ತಿ ಎಕ್ಕುವ ಕಾರ್ಖಾನೆಗಳಿವೆ. ಬಿಜಾಪುರ–ಹುಬ್ಬಳ್ಳಿ ಹೆದ್ದಾರಿ ಈ ತಾಲ್ಲೂಕಿನ ಮಧ್ಯದಲ್ಲಿ ಉತ್ತರ–ದಕ್ಷಿಣವಾಗಿ ಹಾದುಹೋಗಿದೆ. ಮುಧೋಳ–ಬೀಳಗಿ–ಸಂಗವ, ಮುಧೋಳ–ಕುಂದರಗಿ–ಅನಗವಾಡಿ ಹಾದಿಗಳು ಇತರ ಮುಖ್ಯ ರಸ್ತೆಗಳು.

ಗಲಗಲಿ, ಕುಂದರಗಿ, ವಜ್ರಮಟ್ಟಿ, ಮಂಟೂರು, ತೆಗ್ಗಿ, ರೊಳ್ಳಿ, ಅನಗವಾಡಿ ಈ ತಾಲ್ಲೂಕಿನ ದೊಡ್ಡ ಗ್ರಾಮಗಳಲ್ಲಿ ಕೆಲವು. ತಾಲ್ಲೂಕಿನ ವಾಯವ್ಯದಲ್ಲಿ ಕೃಷ್ಣಾ ನದಿಯ ಬಲದಂಡೆಯಲ್ಲಿರುವ ಗಲಗಲಿ ಹಿಂದೆ ಗಾಲವ ಕ್ಷೇತ್ರವೆಂದು ಪ್ರಸಿದ್ಧವಾಗಿತ್ತು. ಇಲ್ಲಿ ಗಾಲವ ಮತ್ತು ಇತರ ಋಷಿಗಳಿಗೆ ಸಂಬಂಧಿಸಿದವೆನ್ನಲಾದ ಏಳು ಗುಹೆಗಳೂ ಒಂದು ಎಲ್ಲಮ್ಮ ದೇವಾಲಯವೂ ಇವೆ. ಘಟಪ್ರಭಾ ನದಿಯ ಎಡದಂಡೆಯಲ್ಲಿರುವ ಕುಂದರಗಿ ಗ್ರಾಮದ ಕಂಬಳಿಗಳು ಹೆಸರುವಾಸಿಯಾದವು. ಇಲ್ಲಿ ಒಂದು ಹನುಮಂತ ದೇವಾಲಯವಿದೆ. ಅನಗವಾಡಿಯಲ್ಲಿ ಪ್ರಾಚೀನ ಶಿಲಾಯುಗದ ಅವಶೇಷಗಳು ಕಂಡುಬಂದಿವೆ.

ಬೀಳಗಿ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಬಾಗಲಕೋಟೆಯ ವಾಯವ್ಯಕ್ಕೆ 29 ಕಿಮೀ ದೂರದಲ್ಲಿದೆ. ಜನಸಂಖ್ಯೆ 15,454. ಈ ಊರಿನ ಮುಖ್ಯ ಆಕರ್ಷಣೆಗಳೆಂದರೆ 300–400 ವರ್ಷಗಳ ಹಿಂದಿನ ಕೊಳಗಳು ಮತ್ತು ದೇವಾಲಯಗಳು. ಊರಿನ ಉತ್ತರಬಾಗಿಲಿ ನಿಂದ 200 ಗಜಗಳ ದೂರದಲ್ಲಿ ಆರೆತ್ತಿನ ಬಾವಿ ಇದೆ. ಈ ಬಾವಿಯ ಒಳಗಡೆ ಮಹಾದೇವ ಮಂದಿರವಿದೆ. ಇಲ್ಲಿನ ಕನ್ನಡ, ಮರಾಠಿ, ಪಾರಸೀ ಮತ್ತು ಸಂಸ್ಕೃತ ಶಾಸನಗಳ ಪ್ರಕಾರ ಇದು 1708ರಲ್ಲಿ ನಿರ್ಮಿತವಾದದ್ದೆಂದು ತಿಳಿದುಬರುತ್ತದೆ. ಗ್ರಾಮದ ದಕ್ಷಿಣದಲ್ಲಿ ಸಿದ್ದೇಶ್ವರ ದೇವಾಲಯವಿದೆ. ಇದರ ಮುಂದೆ ಒಂದೇ ಕಲ್ಲಿನಲ್ಲಿ ಕಡೆದಿರುವ 30' ಎತ್ತರದ ದೀಪಸ್ತಂಭವಿದೆ. ಇದನ್ನು 1589ರಲ್ಲಿ ನಿರ್ಮಿಸಿದ್ದೆಂದು ಇಲ್ಲಿನ ಒಂದು ಶಾಸನದಲ್ಲಿ ಹೇಳಿದೆ. (ಜಿ.ಬಿ.ಎನ್.)

**ಬುಕ್ಕ I:** ವಿಜಯನಗರದ ಸಂಗಮವಂಶದ ಅರಸು (1356–77). ಒಂದನೆಯ ಹರಿಹರನ ತಮ್ಮ. ಹರಿಹರನ ಕಾಲದಲ್ಲಿ ಯುವರಾಜ ಹಾಗೂ ರಾಜ ಪ್ರತಿನಿಧಿಯಾಗಿದ್ದ ಈತ ಅವನ ಅನಂತರ 1356ರಲ್ಲಿ ಸಿಂಹಾಸನವೇರಿದ.

ಸಾಮರ್ಥ್ಯ ಮತ್ತು ಶೌರ್ಯದಲ್ಲಿ ಅಣ್ಣನಿಗೆ ಸರಿಸಮನಾಗಿದ್ದ ಈತ ಸಿಂಹಾಸನವೇರಿದ ತರುಣದಲ್ಲಿಯೇ ರಾಜ್ಯದಲ್ಲಿ ಐಕಮತ್ಯ ಸ್ಥಾಪಿಸಲು ಮತ್ತು ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳಲು ಶ್ರಮಿಸಿದ. ಉದಯಗಿರಿಯ ಪ್ರಾಂತಾಧಿಕಾರಿಯಾಗಿದ್ದ ತನ್ನ ತಮ್ಮ ಕಂಪಣ ಕಾಲವಾದ ಮೇಲೆ ಅವನ ಮಕ್ಕಳಿಬ್ಬರು ಆ ಪ್ರಾಂತವನ್ನು ವಿಭಜಿಸಿಕೊಂಡು ಆಳಲಾರಂಭಿಸಿದರು. ಅಲ್ಲಿನ ಆಡಳಿತ ಸಮರ್ಪಕವಾಗಿ ನಡೆದಿದ್ದರೂ ಮುಂದೆ ರಾಜ್ಯದ ವಿಭಜನೆಗೆ ಇದು ಕಾರಣವಾಗಬಹುದೆಂದು ಅರಿತು ತನ್ನ ಕುಮಾರನನ್ನು ಅಲ್ಲಿಗೆ ನೇಮಿಸಿದ. ಹಿಂದೆ ಹರಿಹರನ ಸಹಾಯದಿಂದ ತನ್ನ ಸಿಂಹಾಸನವನ್ನು ಗಳಿಸಿಕೊಂಡಿದ್ದ ತಮಿಳುನಾಡಿನ ರಾಜನಾರಾಯಣ ಶಂಭುವರಾಯ ಸ್ವತಂತ್ರನಾಗಲು ಪ್ರಯತ್ನಿಸಿದಾಗ ಅವನು ಮತ್ತು ಅವನ ಮಗನನ್ನು ಸೋಲಿಸಿ ವಿಜಯನಗರ ರಾಜ್ಯವನ್ನು ದಕ್ಷಿಣ ಪೆನ್ನಾರ್ ಮತ್ತು ಕೊಲ್ಲಡು

ನದಿಗಳವರೆಗೆ ವಿಸ್ತರಿಸಿದ (1362). ಆಗ ಇವನ ಮಗ ಕಂಪಣ ತಮಿಳು ನಾಡಿನ ಭಾಗಗಳಲ್ಲಿ ವಿಜಯನಗರದ ಪ್ರತಿನಿಧಿಯಾಗಿ ಆಳಲಾರಂಭಿಸಿದ. ಮಧುರೆಯ ಸುಲ್ತಾನನ ಮೇಲೆ ಮಾಡಿದ ಯುದ್ಧ ಇವನ ಆಳ್ವಿಕೆಯ ಕಾಲದಲ್ಲಿ ಮುಖ್ಯವಾದುದಾಗಿದೆ. ಈ ಯುದ್ಧದಲ್ಲಿ ಕಂಪಣನ ನಾಯಕತ್ವ ದಲ್ಲಿ ವಿಜಯನಗರ ಸೇನೆ ಸಮಯವರಂ ಎಂಬ ಸ್ಥಳದಲ್ಲಿ ಭೀಕರ ಕಾಳಗವನ್ನು ನಡೆಸಿತು. ಮಧುರೆಯ ಸುಲ್ತಾನ ಸೋತು ಮರಣವನ್ನಪ್ಪಿದ (ಸು. 1371). ಈ ವಿಜಯದಿಂದಾಗಿ ರಾಮೇಶ್ವರದವರೆಗಿನ ಮಧುರೆಯ ರಾಜ್ಯ ವಿಜಯನಗರಕ್ಕೆ ಸೇರಿತು. ಉತ್ತರದಲ್ಲಿ ಬಹಮನೀ ಸುಲ್ತಾನ ಒಂದನೆಯ ಮಹಮದನು ರಾಯಚೂರು ಮತ್ತು ಮುದ್ಗಲ್ ಕೋಟೆಗಳು ಮತ್ತು ಸುತ್ತಲಿನ ಪ್ರಾಂತಗಳಿಂದ ಹಿಂದೆ ಸರಿಯಬೇಕೆಂದು ಬುಕ್ಕನನ್ನು ಆಗ್ರಹಪಡಿಸಿ ಕದನಕ್ಕಿಳಿದ. ಈ ಕದನದ ಪರಿಣಾಮದ ಬಗ್ಗೆ ಭಿನ್ನ ರೀತಿಯ ಹೇಳಿಕೆಗಳಿವೆ. ಬಹುಶಃ ಮಹಮ್ಮದ್ ರಾಯಚೂರು ದೋಅಬ್ ಪ್ರದೇಶದ ಮೇಲಿನ ವಿಜಯನಗರದ ಒಡೆತನವನ್ನು ಒಪ್ಪಿಕೊಂಡಂತೆ ತೋರುತ್ತದೆ. ಈ ಕದನ 1365ರ ಹೊತ್ತಿಗೆ ಅಂತ್ಯವಾಯಿತು. ಅನಂತರ ಬುಕ್ಕನು ರೆಡ್ಡಿ ರಾಜ್ಯದ ಮೇಲೆ ದಂಡೆತ್ತಿಹೋಗಿ ಕೊಂಡವೀಡು ಮೊದಲಾದ ಪ್ರಾಂತ್ಯಗಳನ್ನು ವಶಪಡಿಸಿಕೊಂಡ.

ಇವನ ಕಾಲದಲ್ಲಿ ವಿಜಯನಗರ ಪಟ್ಟಣ ಸರ್ವತೋಮುಖವಾಗಿ ಬೆಳೆಯಿತು. ಕೋಟೆಕೊತ್ತಲಗಳನ್ನು ಭದ್ರಪಡಿಸಿದ್ದಲ್ಲದೆ ಹಲವು ಕಟ್ಟಡಗಳನ್ನೂ ಕಟ್ಟಲಾಯಿತು. ವ್ಯಾಪಾರ ಮತ್ತು ಜನಸಂಖ್ಯೆ ವರ್ಧಿಸಿತು. ಕೃಷ್ಣಾನದಿಯ ದಕ್ಷಿಣದ ಇಡೀ ದಕ್ಷಿಣ ಭಾರತ ಇವನ ಆಡಳಿತಕ್ಕೊಳ ಪಟ್ಟಿದ್ದಲ್ಲದೆ, ದೇಶದಲ್ಲಿ ಶಾಂತಿ ನೆಲಸಿತು. ಆಂತರಿಕ ಹಾಗೂ ಹೊರದೇಶ ಗಳೊಡನೆ ವ್ಯಾಪಾರ ಹೆಚ್ಚಿತು. ದೇಶ ಸಮೃದ್ಧವಾಯಿತು. ಪಾಶುಪತಗುರು ಕಾಶೀವಿಲಾಸ ಕ್ರಿಯಾಶಕ್ತಿಯು ರಾಜ ಗುರುವಾಗಿದ್ದರೂ ವಿದ್ಯಾರಣ್ಯರ ಪ್ರಭಾವದಿಂದ ವೈದಿಕ ಧರ್ಮದ ಪುನರುಜ್ಜೀವನದಲ್ಲಿ ಆಸಕ್ತಿ ವಹಿಸಿದ ಬುಕ್ಕ ವೇದಮಾರ್ಗಪ್ರತಿಷ್ಠಾಪಕ ಎಂಬ ಬಿರುದನ್ನು ಧರಿಸಿದ. ಮಾಧವ, ವಿದ್ಯಾರಣ್ಯ ಮತ್ತು ಅವರ ಸಹೋದರ ಸಾಯಣಾಚಾರ್ಯರ ನೇತೃತ್ವದಲ್ಲಿ ವೇದಗಳಿಗೆ ಟೀಕೆಗಳನ್ನು ಸಿದ್ಧಪಡಿಸಲು ವಿದ್ವಾಂಸರನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿದ. ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ನೀಡಿದ. ಈತ ತೆಲುಗು ಸಾಹಿತ್ಯಕ್ಕೂ ಆಶ್ರಯದಾತನಾಗಿದ್ದ. ಇವನ ಆಸ್ಥಾನದಲ್ಲಿ ಆ ಯುಗದ ಪ್ರಸಿದ್ಧ ಕವಿ ನಾಚನ ಸೋಮ ಇದ್ದ. ಈತನ ಸೊಸೆ ಗಂಗಾದೇವಿ **(ನೋಡಿ)** ಪ್ರಸಿದ್ಧ ಕವಯತ್ರಿ.

ಈತನಿಗೆ ಹೊನ್ನಾಯಿ ಎಂಬ ಪಟ್ಟದರಾಣಿಯೂ ಸುಮಾರು 11 ಜನ ಮಕ್ಕಳೂ ಇದ್ದರು. ಅವರಲ್ಲಿ ಹಲವಾರು ಪ್ರಾಂತ್ಯಾಧಿಕಾರಿಗಳಾಗಿ ದ್ದರು. ಈತ 1377ರಲ್ಲಿ ಮೃತನಾದ. **(ಎಚ್.ವಿ.ಎಸ್.)**

**ಬುಕ್ಕ II:** ವಿಜಯನಗರದ ಸಂಗಮವಂಶದ ರಾಜ (ಸು. 1404–06). ಇಮ್ಮಡಿ ಹರಿಹರನ ಜೇಷ್ಠಪುತ್ರ. ತನ್ನ ತಂದೆಯ ಕಾಲದಲ್ಲಿ ರಾಜಪ್ರತಿನಿಧಿ ಯಾಗಿದ್ದ ಇವನು 1380ರಿಂದಲೇ ಸಾರ್ವಜನಿಕವಾಗಿ ಚಕ್ರಾಧಿಪತ್ಯದ ಬಿರುದುಗಳನ್ನು ಉಪಯೋಗಿಸುತ್ತಿದ್ದ. 1390ರಲ್ಲಿ ವಾರಂಗಲ್ಲು ರಾಜ್ಯದ ಮೇಲೆ ಎರಡು ಸಲ ಅಭಿಯೋಗ ಕೈಕೊಂಡು ಎರಡು ಸಲವೂ ಪರಾಜಿತನಾದ.

ತಂದೆಯ ಮರಣಾನಂತರ ಬುಕ್ಕ ತನ್ನ ಇಬ್ಬರು ತಮ್ಮಂದಿರಾದ ವಿರೂಪಾಕ್ಷ II ಮತ್ತು ದೇವರಾಯ I– ಇವರೊಡನೆ ಸಿಂಹಾಸನಕ್ಕೆ ಕಾದಾಡಬೇಕಾಯಿತು. ಈ ಕಾದಾಟದಲ್ಲಿ ಬುಕ್ಕನಿಗೆ ತಾತ್ಕಾಲಿಕವಾಗಿ ವಿಜಯ ಲಭಿಸಿತು. ಸಿಂಹಾಸನಕ್ಕೆ ಬಂದು ಕೇವಲ 2–3 ವರ್ಷಗಳು ರಾಜ್ಯವಾಳಿದ ಅನಂತರ ವಿರೂಪಾಕ್ಷನಿಂದ ಸೋಲಿಸಲ್ಪಟ್ಟ. ಆದರೆ ಧೃತಿಗೆಡದೆ ಬುಕ್ಕ ತನ್ನ ತಮ್ಮನನ್ನು ಪುನಃ ಸೋಲಿಸಿ ರಾಜನಾದರೂ ಹೆಚ್ಚು ಕಾಲ ರಾಜನಾಗಿ ಆಳುವ ಅದೃಷ್ಟ ಇವನದಾಗಿರಲಿಲ್ಲ. ಇವನ ತಮ್ಮ ಒಂದನೆಯ ದೇವರಾಯ ಬುಕ್ಕನನ್ನು ಸೋಲಿಸಿ ಪಟ್ಟವೇರಿದ.

ದೇವರಾಯನ ಪಟ್ಟಾಭಿಷೇಕವಾದ ಮೇಲೆ ಸಹ ಹತ್ತು ವರ್ಷಗಳಿಗೂ ಹೆಚ್ಚು ಕಾಲ ಸು. 1417ರವರೆಗೆ ಬುಕ್ಕ ಜೀವಿಸಿದ್ದನೆಂದು ತಿಳಿಯುತ್ತದೆ. ಈ ಕಾಲದ ಶಾಸನಗಳಲ್ಲಿ ಬುಕ್ಕನಿಗೆ ಚಕ್ರಾಧಿಪತ್ಯದ ಬಿರುದುಗಳಿರುವುದ ರಿಂದ ದೇವರಾಯ ಪಟ್ಟಕ್ಕೆ ಬಂದಮೇಲೂ ಪ್ರಾಯಶಃ ಹಾಸನ ಭಾಗದಲ್ಲಿ ಸ್ವತಂತ್ರವಾಗಿ ಬುಕ್ಕ ಆಳುತ್ತಿದ್ದಿರಬಹುದು ಎಂದು ಊಹೆ. ಇವನು ವಿಜಯನಗರದ ಚಕ್ರವರ್ತಿಯಾಗಿ ಪ್ರಕಟಿಸಿದ ದಾನಶಾಸನಗಳೆರಡು ತೀರ್ಥಹಳ್ಳಿ ಮತ್ತು ಕೊಪ್ಪಗಳಲ್ಲಿ ದೊರಕಿವೆ. **(ಎಚ್.ವಿ.ಎಸ್.)**

**ಬುಕ್‌ನ್ಯಾನ್ ಹ್ಯಾಮಿಲ್ಟನ್, ಫ್ರ್ಯಾನ್ಸಿಸ್:** 1762–1829. ಭಾರತದಲ್ಲಿದ್ದ ಬ್ರಿಟಿಷ್ ವೈದ್ಯ. 1762ರ ಫೆಬ್ರುವರಿ 15ರಂದು ಎಡಿನ್‌ಬರೊದಲ್ಲಿ ಜನಿಸಿದ. 1783ರಲ್ಲಿ ಎಮ್.ಡಿ. ಪದವಿಯನ್ನು ಪಡೆದ. 1794ರಲ್ಲಿ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಸೇವೆಯನ್ನು ಸ್ವೀಕರಿಸಿ, ಕೋರ್ಟ್ ಆಫ್ ಆವಾ ನಿಯೋಗದ ಸದಸ್ಯನಾಗಿ, ಕಂಪನಿಯ ವಶಕ್ಕೆ ಬಂದಿದ್ದ ಪ್ರದೇಶಗಳ ವಸ್ತು–ಸ್ಥಿತಿ ಪರಿಶೀಲಕನಾಗಿ, ಕಲ್ಕತ್ತಾದ ಸಸ್ಯ ಶಾಸ್ತ್ರೀಯ ತೋಟದ ಮೇಲ್ವಿಚಾರಕನಾಗಿ, ಲಾರ್ಡ್ ವೆಲ್ಲೆಸ್ಲಿಯ ಸರ್ಜನ್ ಆಗಿ ಹೀಗೆ ಹಲವು ಕಾರ್ಯಗಳನ್ನು ನಿರ್ವಹಿಸಿದ.

ಈತ 1800–01ರಲ್ಲಿ ಮೈಸೂರು, ಕೆನರಾ (ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರದೇಶ) ಮತ್ತು ಮಲಬಾರ್‌ಗಳಲ್ಲಿ ಸಂಚಾರ ಮಾಡಿ ಈ ಪ್ರದೇಶದ ಸಸ್ಯ ಪ್ರಾಣಿ ಜನ ಸಂಪತ್ತು, ಸಾಮಾಜಿಕ ಸಾಂಸ್ಕೃತಿಕ ಸ್ಥಿತಿ, ಆಗಿನ ಆಗುಹೋಗುಗಳು ಮೊದಲಾದ ಹಲವು ವಿಷಯಗಳ ಬಗ್ಗೆ ಮಾಹಿತಿಗಳನ್ನು ಕಲೆಹಾಕಿದ. ಇವನ್ನು ಒಳಗೊಂಡ ಇವನ ಉದ್ಗ್ರಂಥ ರಿಪೋರ್ಟ್ ಆಫ್ ಎ ಜರ್ನಿ ಥ್ರೂ ಮೈಸೂರ್, ಕೆನರಾ ಅಂಡ್ ಮಲಬಾರ್ ಎಂಬುದು ಸಮಕಾಲೀನ ಕರ್ನಾಟಕದ ರಾಜಕೀಯ, ಸಾಮಾಜಿಕ, ಆರ್ಥಿಕ ಇತಿಹಾಸದ ಅಧ್ಯಯನಕ್ಕೆ ಅತ್ಯಂತ ಉಪಯುಕ್ತವಾಗಿದೆ. **(ಎಚ್.ವಿ.ಎಸ್.)**

**ಬುದ್ಧಯ್ಯ ಪುರಾಣಿಕ:** 1858–1959. ಲೇಖಕರು ಮತ್ತು ಸಮಾಜ ಸೇವಕರು. ಇವರ ಪೂರ್ಣ ಹೆಸರು ಶಿವಮೂರ್ತಿ ಬುದ್ಧಯ್ಯಸ್ವಾಮಿ ಮಗಿಪ್ರಭುದೇವರ ಪುರಾಣಿಕ. ಬಿಜಾಪುರ ಜಿಲ್ಲೆಯ ತೇರದಾಳದಲ್ಲಿ 1878 ಜೂನ್ 13ರಂದು ಜನಿಸಿದರು. ತಂದೆ ಮಗಿಪ್ರಭುದೇವರು. ತಾಯಿ ಲಿಂಗಮ್ಮ. ಇವರ ಮಾತೃಭಾಷೆ ಕನ್ನಡವಾಗಿದ್ದರೂ ಆಗ್ಗೆ ತೇರದಾಳ ಸಾಂಗಲಿ ಸಂಸ್ಥಾನದಲ್ಲಿದ್ದುದರಿಂದ ಮರಾಠಿಯಲ್ಲಿಯೇ ಇವರ ವ್ಯಾಸಂಗ ನಡೆಯಿತು. ತೇರದಾಳ, ಮುಧೋಳ, ಜಮಖಂಡಿ, ಸೊಲ್ಲಾಪುರ ಹಾಗೂ ಪುಣೆಯಲ್ಲಿ ವ್ಯಾಸಂಗಮಾಡಿದ ಇವರು, ಸ್ವಲ್ಪಕಾಲ ಉಪಾಧ್ಯಾಯರಾಗಿದ್ದರು. ಅನಂತರ ಹುನಗುಂದ, ಸೊನ್ನ, ಗಲಗಲಿ, ಕೊಲ್ಲಾಪುರ ಮೊದಲಾದ ದೇಸಾಯದಲ್ಲಿ ಕಾರಬಾರಿಗಳಾಗಿದ್ದರು.

ಬುದ್ಧಯ್ಯ ಪುರಾಣಿಕರ ಸಮಾಜ ಸೇವೆ ಗಣ್ಯವಾದುದು. ಬಿಜಾಪುರ ಜಿಲ್ಲೆಯ ಲಾಯಲ್ ಲೀಗದ ಸದಸ್ಯರಾಗಿ, ರೆಡ್‌ಕ್ರಾಸ್ ಫಂಡನ್ನು ಸಂಗ್ರಹಿಸಿ ದರು. ಕೊಲ್ಲಾಪುರದ ವೀರಶೈವ ಬೋರ್ಡಿಂಗ್ (1907) ಮತ್ತು ಬಾಗಲ ಕೋಟೆಯ ವಾರದ ಬೋರ್ಡಿಂಗ್ (1911) ಇವುಗಳ ಸ್ಥಾಪನೆಯಲ್ಲೂ ಶ್ರಮಿಸಿದರು.

1927ರಲ್ಲಿ ಇವರು ಧಾರವಾಡಕ್ಕೆ ಬಂದು ನೆಲೆಸಿ ಅಲ್ಲಿಯ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕರ್ನಾಟಕ ವಿದ್ಯಾವರ್ಧಕ ಸಂಘ ಮುಂತಾದ

ಸಂಸ್ಥೆಗಳ ಅಭಿವೃದ್ಧಿಗಾಗಿ ದುಡಿದರು. ವಿದ್ಯಾಭಿವೃದ್ಧಿ ಸಂಸ್ಥೆ ಹಾಗೂ ಕಿತ್ತೂರು ಚೆನ್ನಮ್ಮ ರಾಣಿ ಇತಿಹಾಸ ಸಂಶೋಧನ ಮಂಡಲದ ಆಜೀವ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದ ಇವರು ಕನ್ನಡ ಹಾಗೂ ಮರಾಠಿ ಭಾಷೆಗಳಲ್ಲೂ ಕೃತಿ ರಚನೆ ಮಾಡಿದ್ದಾರೆ. ಲಿಂಗನಿರೀಕ್ಷಣೆ, ಪಾದೋದಕ, ಸ್ತ್ರೀ ಶಿಕ್ಷಣ–ಮುಂತಾದ ಇವರ ಲೇಖನಗಳು ವೀರಶೈವ ಸಂಜೀವಿನಿ ಎಂಬ ಮರಾಠಿ ಪತ್ರಿಕೆಯಲ್ಲಿ ಪ್ರಕಟವಾಗಿ ಜನಪ್ರಿಯವಾದವು. ಸುಖ ಸಾಮ್ರಾಜ್ಯ ಎಂಬ ಇವರ ಮರಾಠಿ ಪುಸ್ತಕ 1913ರಲ್ಲಿ ಪ್ರಕಟವಾಯಿತು. ಅಲ್ಲಮಪ್ರಭುವನ್ನು ಕುರಿತ ಇವರ ಗ್ರಂಥ ಪ್ರಕಟವಾದದ್ದು 1936ರಲ್ಲಿ. ಅನಂತರ ಹರೀಶ್ವರ ಕೃತ ಪ್ರಭುದೇವರ ಪುರಾಣವನ್ನು ಸಂಪಾದಿಸಿ ಶಬ್ದಕೋಶ, ಟೀಕೆ ಟಿಪ್ಪಣಿಗಳೊಂದಿಗೆ ಪ್ರಕಟಿಸಿದರು. ಇವರ ಕೆಲವು ಪ್ರೌಢಲೇಖನಗಳನ್ನು ಪುರಾಣಿಕರ ವಿಚಾರ ವಾಹಿನಿ ಎಂಬ ಸಂಕಲನರೂಪದಲ್ಲಿ ಪ್ರಕಟವಾಗಿವೆ (1953).

ಇವರು 1959 ಮೇ 4ರಂದು ನಿಧನರಾದರು. (ಪಿ.ಎಚ್.ಎಂ.)

**ಬುರ್ಲಿ ಬಿಂದು ಮಾಧವ:** 1899–1981 ಹೆಸರಾಂತ ಪ್ರಕಾಶಕರು. ಮಿಂಚಿನ ಬಳ್ಳಿ ಗ್ರಂಥಮಾಲೆಯ ರೂವಾರಿ, ಸ್ವಾತಂತ್ರ್ಯ ಹೋರಾಟಗಾರರು. ಇವರದು ಆಚಾರ್ಯ ಪರಂಪರೆಯ ಮನೆತನ. ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆಯಲ್ಲಿದ್ದಾಗ (1932) ಹಿಂದಿಯ ಸಸ್ತಾ ಸಾಹಿತ್ಯ ಮಾಲೆಯ ಪುಸ್ತಕಯೋಜನೆ ಗಮನಕ್ಕೆ ಬಂದಿತು. ಗಾಂಧೀಜಿಯವರ ಪ್ರೇರಣೆಯಿಂದ ಕನ್ನಡದಲ್ಲೂ ಇಂಥ ಪುಸ್ತಕ ಪ್ರಕಟಣೆ ಮಾಡುವ ಅಭಿಲಾಷೆ ಇವರಲ್ಲಿ ಉಂಟಾಯಿತು. ಸೆರೆಮನೆಯಿಂದ ಬಿಡುಗಡೆ ಹೊಂದಿದ ಬಳಿಕ ಬೆಟಗೇರಿ ಕೃಷ್ಣಶರ್ಮ, ಶಂಬಾಜೋಶಿ, ರಂಗನಾಥ ದಿವಾಕರ, ಹರ್ಡೀಕರ, ಶ್ರೀರಂಗರ ಸಲಹೆಯಂತೆ ಕನ್ನಡದಲ್ಲಿ ವಿಚಾರ ಸಾಹಿತ್ಯದ ಪುಸ್ತಕ ಮಾಲೆ ಆರಂಭಿಸಲು ಯೋಜಿಸಿದರು. ಧಾರವಾಡದಲ್ಲಿ ಮಿಂಚಿನ ಬಳ್ಳಿ ಗ್ರಂಥಮಾಲೆ ಆರಂಭಿಸಿದರು (1937 ಆಗಸ್ಟ್ 15). ಮನೋಹರ ಗ್ರಂಥಮಾಲೆ ಕಥೆ ಕಾದಂಬರಿಗಳನ್ನು ಪ್ರಕಟಿಸಿದರೆ ಮಿಂಚಿನ ಬಳ್ಳಿ ವಿಚಾರಸಾಹಿತ್ಯ ಮಾಲೆಯಾಗಿ ಜನಪ್ರಿಯವಾಯಿತು. ಇವರು ಮೂರು ದಶಕಗಳ ಕಾಲ ಈ ಪ್ರಕಾಶನ ಸಂಸ್ಥೆಯನ್ನು ನಡೆಸಿ ಕನ್ನಡದಲ್ಲಿ ವಿಚಾರ ಸಾಹಿತ್ಯಕ್ಕೆ ಭದ್ರ ನೆಲೆಯನ್ನು ಒದಗಿಸಿದರು. ಇಲ್ಲಿಯವರೆಗೆ 114ಕ್ಕೂ ಹೆಚ್ಚು ಪುಸ್ತಕಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ರಾಷ್ಟ್ರೀಯ ಪ್ರಜ್ಞೆ, ಉದಾತ್ತ ಧ್ಯೇಯಾದರ್ಶ, ವೈಚಾರಿಕತೆಯ ಸಂಕೇತವಾದ ಈ ಪ್ರಕಾಶನ ಸಂಸ್ಥೆ ಬುರ್ಲಿಯವರ ಸಾಹಸ, ದುಡಿಮೆಯ ಫಲವಾಗಿತ್ತು. 'ಕನ್ನಡದ ಕಾಲು ಶತಮಾನ' ಈ ಪ್ರಕಾಶನ ಪ್ರಕಟಿಸಿದ ಒಂದು ಉಪಯುಕ್ತ ಆಕರ ಗ್ರಂಥ. ಈಗ ಬುರ್ಲಿ ಬಿಂದು ಮಾಧವ ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಸ್ಥಾಪಿಸಲಾಗಿದ್ದು ಮಿಂಚಿನ ಬಳ್ಳಿ ಪುಸ್ತಕ ಮಾಲೆಯನ್ನೂ ಮುಂದುವರಿಸಿಕೊಂಡು ಬರಲಾಗುತ್ತಿದೆ. ಇವರು 1981ರಲ್ಲಿ ನಿಧನರಾದರು. (ಜಿ.ಎಂ.ಎಚ್.)

**ಬೂತುಗ II:** ಗಂಗವಂಶದ ಅರಸ (936–61). ಎಱೆಗಂಗನ (886–920) ಮೂವರು ಮಕ್ಕಳಲ್ಲಿ ಕಿರಿಯವ. ಹಿರಿಯವನಾದ ನರಸಿಂಹ ತಂದೆಯ ಅನಂತರ ಸಿಂಹಾಸನಕ್ಕೆ ಬಂದ. ಆತ ಹೆಚ್ಚು ಕಾಲ ಆಳಲಿಲ್ಲ. ನರಸಿಂಹನ ಅನಂತರ ಅವನ ತಮ್ಮ ರಾಚಮಲ್ಲ ಸಿಂಹಾಸನವನ್ನೇರಿದ. ರಾಚಮಲ್ಲ ಆಡಳಿತವನ್ನು ವಹಿಸಿಕೊಂಡ ಅನಂತರ ಅವನು ರಾಷ್ಟ್ರಕೂಟರು ಮತ್ತು ನೊಳಂಬರೊಡನೆ ಯುದ್ಧಗಳನ್ನು ಮಾಡಬೇಕಾಯಿತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಬೂತುಗ ತನ್ನ ಅಣ್ಣನನ್ನು ಸಿಂಹಾಸನದಿಂದಿಳಿಸುವ ಕಾರ್ಯದಲ್ಲಿ ನಿರತನಾದ. ಬೂತುಗನಿಗೆ ಪ್ರಬಲರಾದ ರಾಷ್ಟ್ರಕೂಟರ ಬೆಂಬಲ ದೊರಕಿತು. ಇವನು ರಾಷ್ಟ್ರಕೂಟ ಮುಮ್ಮಡಿ ಅಮೋಘವರ್ಷನ ಮಗಳು ರೇವಕನಿಮ್ಮಡಿಯನ್ನು ಮದುವೆಯಾಗಿದ್ದದು ಇದಕ್ಕೆ ಮುಖ್ಯ ಕಾರಣ. ಇವನ ಭಾವ ರಾಷ್ಟ್ರಕೂಟ 3ನೆಯ ಕೃಷ್ಣ ಇವನಿಗೆ ಎಲ್ಲ ರೀತಿಯ ನೆರವು ನೀಡಿದ. ಕೊನೆಗೆ ರಾಚಮಲ್ಲನನ್ನು ಕೊಂದು ಸಮಗ್ರ ರಾಜ್ಯವನ್ನು ವಶಪಡಿಸಿಕೊಂಡ.

ಬೂತುಗನ ಕಾಲದಲ್ಲಿ ಗಂಗ ಮತ್ತು ರಾಷ್ಟ್ರಕೂಟರ ಸಂಬಂಧ ಮಧುರವಾಗಿ ಬೆಳೆಯಿತು. ರಾಷ್ಟ್ರಕೂಟ 3ನೆಯ ಕೃಷ್ಣನ ಅನೇಕ ಯುದ್ಧಗಳಲ್ಲಿ ಬೂತುಗ ಭಾಗವಹಿಸಿ ಸಹಕರಿಸಿದ. 3ನೆಯ ಕೃಷ್ಣ ಉತ್ತರ ಭಾರತದ ದಂಡಯಾತ್ರೆಗೆ ಹೋಗಿದ್ದ ಕಾಲದಲ್ಲಿ ಲಲ್ಲೆಯನೆಂಬುವನು ರಾಷ್ಟ್ರಕೂಟರ ವಿರುದ್ಧ ದಂಗೆಯೆದ್ದ. ಈ ವಿಷಮ ಸ್ಥಿತಿಯಲ್ಲಿ ಕೃಷ್ಣ ದಂಡೆಯಾತ್ರೆಯಿಂದ ಹಿಂದಿರುಗುವ ವೇಳೆಗೆ ಬೂತುಗನೇ ಲಲ್ಲೆಯನನ್ನು ಸೋಲಿಸಿ ರಾಷ್ಟ್ರಕೂಟ ರಾಜ್ಯವನ್ನು ರಕ್ಷಿಸಿದ. ಅನಂತರ ರಾಷ್ಟ್ರಕೂಟರಿಗೂ ಚೋಳರಿಗೂ ಯುದ್ಧ ಸಂಘಟಿಸಿತು. ರಾಷ್ಟ್ರಕೂಟ ಮತ್ತು ಗಂಗ ಸೈನ್ಯಗಳು ಚೋಳರಾಜ್ಯವನ್ನು ಮುತ್ತಿದವು. 949ರಲ್ಲಿ ತಕ್ಕೋಲಂ ಎಂಬಲ್ಲಿ ನಡೆದ ತೀವ್ರ ಕದನದಲ್ಲಿ ಬೂತುಗ ಚೋಳ ಯುವರಾಜನಾದ ರಾಜಾದಿತ್ಯನನ್ನು ಕೊಂದು ರಾಷ್ಟ್ರಕೂಟರ ಪ್ರತಿಷ್ಠೆಯನ್ನು ಹೆಚ್ಚಿಸಿದ. ಚೋಳರ ಮೇಲಿನ ಯುದ್ಧಗಳಲ್ಲಿ ಬೂತುಗನು ತೋರಿದ ಅಪಾರ ಸಾಹಸಕ್ಕಾಗಿ ಇವನಿಗೆ ಶೂದ್ರಕ, ಸಗರ ತ್ರಿಣೇತ್ರ ಎಂಬ ಬಿರುದುಗಳು ರಾಷ್ಟ್ರಕೂಟ ಚಕ್ರವರ್ತಿಯಿಂದ ಲಭಿಸಿದುವು. ಅಲ್ಲದೆ ವಿವಾಹ ಸಂದರ್ಭದಲ್ಲಿ ರಾಷ್ಟ್ರಕೂಟ ಚಕ್ರವರ್ತಿಯಿಂದ ಇವನಿಗೆ ಲಭಿಸಿದ್ದ ಪುರಿಗೆರೆ 300, ಬೆಳ್ವೊಲ 300, ಕಿಸುಕಾಡು 70 ಮತ್ತು ಬಾಗೆನಾಡು 70– ಈ ಪ್ರಾಂತ್ಯಗಳ ಜೊತೆಗೆ ಬನವಾಸಿ 12000 ದ ಪ್ರಾಂತ್ಯಾಧಿಕಾರವನ್ನೂ ರಾಷ್ಟ್ರಕೂಟ ಕೃಷ್ಣ ಇವನಿಗೆ ವಹಿಸಿದ. ಚೋಳರೊಡನೆ ಯುದ್ಧಮಾಡಿದ ಅನಂತರ ಹಿಂತಿರುಗುವಾಗ ಬೂತುಗ ಗಂಗ ರಾಜ್ಯದ ಶತ್ರುಗಳಾಗಿದ್ದ ಕೆಲವು ಸಾಮಂತ ಕುಲದವರನ್ನೂ ಸೋಲಿಸಿ ಅವರ ಪ್ರಾಂತ್ಯಗಳನ್ನೂ ವಶಪಡಿಸಿಕೊಂಡ. ಗಂಗರ ಪ್ರತಿಷ್ಠೆ ದ್ವಿಗುಣವಾಗಿ ರಾಜ್ಯ ವಿಸ್ತಾರಗೊಂಡಿತು.

ಇಮ್ಮಡಿ ಬೂತುಗ ಯುದ್ಧಕುಶಲಿ. ಇವನು ಗಂಗನಾರಾಯಣ, ಗಂಗಗಾಂಗೇಯ, ನನ್ನಿಯಗಂಗ ಎಂಬ ಬಿರುದುಗಳನ್ನು ಧರಿಸಿದ್ದ. ಇವನ ಮರಣಾನಂತರ ಇವನ ಹಿರಿಯ ಮಗ ಮರುಳ ಅಭಿಷಿಕ್ತನಾದ. (ಜಿ.ಆರ್.ಆರ್.)

**ಬೂದಿಕೋಟೆ:** ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ಬಂಗಾರಪೇಟೆಯಿಂದ ನೈಋತ್ಯಕ್ಕೆ 11 ಕಿಮೀ ದೂರದಲ್ಲಿ ಮಾರ್ಕಂಡೇಯ ನದಿಯ ಎರಡು ಕವಲುಗಳ ಸಂಗಮಸ್ಥಾನದಲ್ಲಿರುವ ಗ್ರಾಮ. ಇದೇ ಹೆಸರಿನ ಹೋಬಳಿಯ ಕೇಂದ್ರ. ಜನಸಂಖ್ಯೆ 3,124.

ಪ್ರಾಚೀನ ಕಾಲದಲ್ಲಿ ನಡೆದ ಮಹತ್ತಾದ ಪೂರ್ಣಾಹುತಿಯ ಪರಿಣಾಮವಾಗಿ ಈ ಸ್ಥಳಕ್ಕೆ ಬೂದಿಕೋಟೆ (ಸಂಸ್ಕೃತದಲ್ಲಿ ವಿಭೂತಿಪುರ) ಎಂಬ ಹೆಸರು ಬಂದಿರಬಹುದೆಂದು ಹೇಳುವುದುಂಟು. ಇಲ್ಲಿ 8ನೆಯ ಶತಮಾನದ ಬಾಣರ ಶಾಸನವೊಂದಿದೆ. 17ನೆಯ ಶತಮಾನದಲ್ಲಿದ್ದ ಇದು ಶಿರಾದ ಸುಬೇದಾರನ ಕೆಳಗೆ ಫೌಜುದಾರನಾಗಿ ನೇಮಕಗೊಂಡಿದ್ದ ಫತೆ ಮಹಮ್ಮದನ ಜಹಗೀರಿಯಾಗಿತ್ತು. ಅವನ ಮಗ ಪ್ರಸಿದ್ಧ ಹೈದರ್ ಅಲಿ ಜನಿಸಿದ್ದು ಇಲ್ಲಿಯೇ.

ಗ್ರಾಮದಲ್ಲಿ ಶಿಥಿಲವಾದ ಒಂದು ಕೋಟೆಯ ಅವಶೇಷಗಳಿವೆ. ಕೋಟೆಯ ಒಳಭಾಗದಲ್ಲಿ ವೇಣುಗೋಪಾಲಸ್ವಾಮಿಯ ದೇವಾಲಯವಿದೆ. ಕೋಟೆಯ ಹೊರಭಾಗದಲ್ಲಿ ವೆಂಕಟೇಶ್ವರ ದೇವಾಲಯವಿದೆ. ಊರಿನ ವಾಯವ್ಯಕ್ಕೆ ಸುಮಾರು ಒಂದೂವರೆ ಕಿಮೀ ದೂರದಲ್ಲಿ ಸೋಮೇಶ್ವರ ದೇವಾಲಯವಿದೆ. ಇದರಲ್ಲಿ ಕಪ್ಪುಶಿಲೆಯ ಶಿವಲಿಂಗ ಇದೆ. ಅದರ ಎದುರು ಮತ್ತೊಂದು ಗರ್ಭಗುಡಿಯಲ್ಲಿ ನಂದಿಯ ವಿಗ್ರಹವಿದೆ.

ಸಾಮಾನ್ಯವಾಗಿ ಶಿವದೇವಾಲಯದ ನವರಂಗದಲ್ಲಿ ಕಂಡು ಬರುವ ಚಿತ್ರಗಳು ಈ ದೇವಾಲಯದ ಪ್ರಾಕಾರದಲ್ಲಿ ಕಾಣಿಸಿಕೊಂಡು ಸಣ್ಣ ದೇವರುಗಳನ್ನೊಳಗೊಂಡ ವೀರರ ಗುಡಿಗಳಂತೆ ಕಂಡುಬರುತ್ತವೆ. ಪ್ರಾಕಾರದ ಸುತ್ತಲೂ ಎಡದಿಂದ ಕ್ರಮವಾಗಿ ವೀಣೆ ಅಥವಾ ತಂಬೂರಿ ನುಡಿಸುವ ದಕ್ಷಿಣಾಮೂರ್ತಿ, ಸಪ್ತಮಾತೃಕೆಗಳು ಮತ್ತೊಂದು ಕಡೆ ದಕ್ಷಿಣಾಮೂರ್ತಿ, ವಿಷ್ಣು, ಮಹಿಷಾಸುರಮರ್ದಿನಿ, ಬ್ರಹ್ಮ, ಚಂಡಿಕೇಶ್ವರ, ಭೈರವ ಮತ್ತು ಸೂರ್ಯ ಈ ದೇವತೆಗಳ ಶಿಲ್ಪಗಳಿವೆ. ಊರಿನ ಮಧ್ಯೆ ಕೋದಂಡರಾಮನ ದೇವಾಲಯವಿದೆ. ಕೋದಂಡಪಾಣಿ ಶ್ರೀರಾಮನ ಅಕ್ಕಪಕ್ಕದಲ್ಲಿ ಲಕ್ಷ್ಮಣಸೀತೆಯರ ವಿಗ್ರಹಗಳಿವೆ. ಇಲ್ಲಿ ಗಂಗಾಧರೇಶ್ವರ ದೇವಾಲಯ ಎಂಬ ಶಿವಾಲಯವೂ ಇದೆ.

ಮಾರ್ಕಂಡೇಯದ ಪೂರ್ವವಾಹಿನಿಯ ಎಡದಂಡೆಯ ಮೇಲೆ ಸುಮಾರು $2^1/_2{}^{'}$ ಎತ್ತರದ ಕಪ್ಪುಶಿಲೆಯ ರಾಘವೇಂದ್ರ ಸ್ವಾಮಿಗಳ ಬೃಂದಾವನ ಇದೆ. ಊರಿಗೆ ಪ್ರವೇಶಿಸುವ ಪ್ರಾರಂಭದ ಎಡಭಾಗದಲ್ಲಿ ಆಂಜನೇಯ ದೇವಾಲಯ ಮತ್ತು ಮುಂಭಾಗದಲ್ಲಿ ಕಲ್ಯಾಣಿ ಇವೆ.

ಇಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಶಾಲೆ, ಕಿರಿಯ ಉರ್ದು ಪ್ರಾಥಮಿಕ ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಚೆ ಮತ್ತು ತಂತಿ ಕಚೇರಿಗಳಿವೆ. ಈ ಊರಿನಲ್ಲಿ ಪ್ರತಿ ಮಂಗಳವಾರ ಸಂತೆ ಜರುಗುತ್ತದೆ. ಈ ಊರಿಗೆ ಸು.5 ಕಿಮೀ ದೂರದಲ್ಲಿ ಮಾರ್ಕಂಡೇಯ ಎಂಬ ಕೆರೆಯಿದ್ದು ಸುತ್ತಣ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸುತ್ತದೆ. (ಎ.ಬಿ.ಬಿ.)

**ಬೂದಿಗೆರೆ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಕಸಬೆಯಿಂದ ಆಗ್ನೇಯಕ್ಕೆ 14 ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 5,063. ಊರಿನ ಸಮೀಪದಲ್ಲಿ ದೊಡ್ಡದಾದ ಕೆರೆಯಿದೆ. ಊರಿನ ಸುತ್ತಮುತ್ತಲಿರುವ ಭೂಮಿ ಸುದ್ದೆಮಣ್ಣಿನಿಂದ ಕೂಡಿದೆ. ದಕ್ಷಿಣ ಪಿನಾಕಿನಿ ನದಿ ಈ ಊರಿನ ಪಕ್ಕದಲ್ಲಿ ಹರಿಯುತ್ತದೆ.

ಈ ಊರಿನಲ್ಲಿ ದೇಶನಾರಾಯಣಸ್ವಾಮಿ ದೇವಾಲಯವೂ ಊರಿನ ಮಧ್ಯೆ ಚಂದ್ರಮೌಳೇಶ್ವರನ ದೇವಾಲಯವೂ ಇವೆ. ಕೋಟೆಯ ಮುಂದುಗಡೆ ಧರ್ಮರಾಯಸ್ವಾಮಿ ದೇವಾಲಯವಿದೆ. ಊರಿಗೆ ಸೇರಿದಂತೆ ಸುತ್ತಲೂ ಆಳವಾದ ಕಂದಕವಿರುವ ಒಂದು ಮಣ್ಣುಗುಡ್ಡವಿದ್ದು ಇದು ಹಿಂದೆ ಇಲ್ಲಿ ಕೋಟೆಯಿದ್ದುದನ್ನು ಸೂಚಿಸುತ್ತದೆ. ಗುಡ್ಡದ ಮೇಲೆ ಯಾವ ಅವಶೇಷಗಳೂ ಇಲ್ಲ. ಊರಿನ ಸುತ್ತಲೂ ಬೂದಿಹೊಲಗಳಿರುವುದರಿಂದ ಬೂದಿಗೆರೆ ಎಂಬ ಹೆಸರು ಬಂದಿರಬಹುದೆಂದು ಪ್ರತೀತಿ.

ಶ್ರೀರಾಮನವಮಿಯಂದು ಈ ಊರಿನ ದೇಶನಾರಾಯಣಸ್ವಾಮಿ ರಥೋತ್ಸವವೂ ಚೈತ್ರಮಾಸದಲ್ಲಿ ಧರ್ಮರಾಯಸ್ವಾಮಿ ಕರಗವೂ ನಡೆಯುತ್ತದೆ. ಇಲ್ಲಿ ಸಿದ್ಧಗಂಗಾ ಮಠದವರು ನಡೆಸುತ್ತಿರುವ ಒಂದು ಪ್ರೌಢಶಾಲೆಯಿದೆ. ಸಾಹಿತಿ ವಿ.ಸೀತಾರಾಮಯ್ಯನವರು ಈ ಊರಿನವರು. (ಡಿ.ಇ.ಕೆ.ಆರ್.)

**ಬೃಹತ್ ಕರ್ನಾಟಕ:** ಪ್ರಾಚೀನ ಕಾಲದಿಂದ ಇತ್ತೀಚಿನವರೆಗೆ ಕರ್ನಾಟಕ ಪ್ರದೇಶ ಭಾರತದ ಇತರ ನಾಡುಗಳೊಡನೆ ಹಾಗೂ ಸಾಗರೋತ್ತರ ಪ್ರದೇಶಗಳೊಡನೆ ಹೊಂದಿದ್ದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸಂಬಂಧಗಳು ಮತ್ತು ಪ್ರಭಾವಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವುದು ಈ ಲೇಖನದ ಉದ್ದೇಶ. ಕನ್ನಡ ನಾಡಿನ ರಾಜಕೀಯ ಸಾಂಸ್ಕೃತಿಕ ಇತಿಹಾಸಕ್ಕೆ ನೇರವಾಗಿ ಸಂಬಂಧಪಟ್ಟ ಈ ಸಂಪುಟದ ಇತರ ಲೇಖನಗಳಲ್ಲಿ ಬಂದಿರುವ ವಿಷಯಗಳನ್ನು ಈ ಲೇಖನದಲ್ಲಿ ಸೇರಿಸಿಲ್ಲ. *

**ಕರ್ನಾಟಕದ ಹೊರಗೆ ಆಳಿದ ಕನ್ನಡ ರಾಜವಂಶಗಳು :** ಐತಿಹಾಸಿಕ ಕಾಲದಲ್ಲಿ ಕನ್ನಡಿಗರು ಕರ್ನಾಟಕದ ಹೊರಗಡೆ ವಲಸೆ ಹೋಗಿ ಅಲ್ಲಿ ತಮ್ಮವೇ ಆದ ರಾಜ್ಯಗಳನ್ನು ಕಟ್ಟಿದರು. ಕ್ರಿ.ಶ.5ನೆಯ ಶತಮಾನದ ಅಂತ್ಯದಿಂದ ಕಳಿಂಗ ದೇಶದಲ್ಲಿ (ಈಗಿನ ಒರಿಸ್ಸ) ಆಳಿದ ಗಂಗರು ಇಂಥವರಲ್ಲಿ ಪ್ರಾಚೀನರು. ತಲಕಾಡಿನ ಗಂಗರೊಡನೆ ಸಂಬಂಧವನ್ನು ಗುರುತಿಸಿಕೊಳ್ಳುವ ಇವರು ಇಕ್ಷ್ವಾಕು ವಂಶಸ್ಥರು. ಕಳಿಂಗನಗರ (ಈಗಿನ ಮುಖಲಿಂಗಮ್) ಇವರ ರಾಜಧಾನಿ. ತ್ರಿಕಳಿಂಗಾಧಿಪತಿಯೆನಿಸಿದ ಮಹಾರಾಜ ಇಂದ್ರವರ್ಮ ಈ ಮನೆತನದ ಮೂಲ ಪುರುಷ. ತ್ರಿಕಳಿಂಗ ಎಂಬುದು ಮಹಾನದಿ ಮತ್ತು ಗೋದಾವರಿಗಳ ನಡುವಣ ಪ್ರದೇಶವೆಂದೂ ಗುರುತಿಸಲಾಗಿದೆ. ಮಹೇಂದ್ರಗಿರಿಯಲ್ಲಿನ ಗೋಕರ್ಣೇಶ್ವರ ಇವರ ಆರಾಧ್ಯದೈವ. ಸು. 496–98ರಲ್ಲಿ ಈ ಗಂಗರ ಹೆಸರಿನಲ್ಲಿ ಹೊಸ ಶಕೆಯೊಂದು ಆರಂಭವಾಯಿತು.

ಈ ಪೂರ್ವಗಂಗ (ಕಳಿಂಗ ಗಂಗ) ಮನೆತನದ ಶಾಖೆ ಶ್ವೇತಕದ ಗಂಗರದು. ಇವರ ಸಾಮಂತರು ಜಯಂತ್ಯಾಪುರದ ಕದಂಬರು. ಈ ಸಾಮಂತರಲ್ಲಿ ಐದು ತಲೆಮಾರುಗಳವರ ಹೆಸರುಗಳು ಇಂತಿದೆ; ನಿಯಾರ್ಣವ, ಭೀಮಖೇಡಿ, ಧರ್ಮಖೇಡಿ. ಈ ಧರ್ಮಖೇಡಿಯ ಇಬ್ಬರು ಮಕ್ಕಳೂ ಉದಯಾದಿತ್ಯ ಮತ್ತು ಇಮ್ಮಡಿ ಭೀಮಖೇಡಿ. ಜಯಂತ್ಯಾಪುರ ಎಂಬುದು ಕರ್ನಾಟಕದ ಕದಂಬರ ರಾಜಧಾನಿಯಾದ ಬನವಾಸಿಯನ್ನು ನೆನಪಿಗೆ ತರುತ್ತದೆ.

ವೆಂಗಿಯಲ್ಲಿ ಆಳಿದ ಪೂರ್ವ ಚಾಳುಕ್ಯ ವಂಶದ ಮೂಲಪುರುಷ ಇಮ್ಮಡಿ ಪುಲಕೇಶಿಯ ಕಿರಿಯ ಸೋದರನಾದ ವಿಷ್ಣುವರ್ಧನ ಪಿಷ್ಠಪುರದ (ಗುಂಟೂರು ಜಿಲ್ಲೆಯ ಪೀಠಾಪುರಂ) ಕೋಟೆಯನ್ನು ಗೆದ್ದು ಏಲೂರಿನ ಸಮೀಪದ ಕುನಾಲ (ಕೊಲ್ಲೇರು) ಸರೋವರದ ಸುತ್ತಲಿನ ಪ್ರದೇಶವನ್ನೂ ಆಕ್ರಮಿಸಿದ. ಪುಲಕೇಶಿ ಆ ಪ್ರದೇಶದಲ್ಲಿ ತನ್ನ ತಮ್ಮ ವಿಷ್ಣುವರ್ಧನನನ್ನು ಅಧಿಪತಿಯಾಗಿ ನೆಲೆಗೊಳಿಸಿದ. 624ರಲ್ಲಿ ವೆಂಗಿಯ ಚಾಳುಕ್ಯರು ಸ್ವತಂತ್ರವಾದ ಆಳ್ವಿಕೆಯನ್ನು ಆರಂಭಿಸಿದರು. ಸುಮಾರು ನಾಲ್ಕು ಶತಮಾನಗಳಷ್ಟು ದೀರ್ಘಕಾಲ ಆಳಿದ ಇವರು ಬಹಳ ಏರುಪೇರುಗಳನ್ನು ಕಂಡರು.

ಇಮ್ಮಡಿ ಪುಲಕೇಶಿ ಮಹಾರಾಷ್ಟ್ರದ ನಾಸಿಕದ ಪ್ರದೇಶದಲ್ಲಿ ತನ್ನ ಇನ್ನೊಬ್ಬ ಸೋದರ ಧರಾಶ್ರಯ ಜಯಸಿಂಹವರ್ಮನನ್ನು ನೆಲೆಗೊಳಿಸಿದ. ಈತನ ಮಗ ಜಯಾಶ್ರಯ ತ್ರಿಭುವನಾಶ್ರಯ ನಾಗವರ್ಧನ. ಈ ಮನೆತನದ ಇತರರು ಇನ್ನೂ ಬೆಳಕಿಗೆ ಬಂದಿಲ್ಲ.

ಗುಜರಾತಿನ ನವಸಾರಿ ಪ್ರದೇಶದಲ್ಲಿ ಇಮ್ಮಡಿ ಪುಲಕೇಶಿಯ ಮಗ ಧರಾಶ್ರಯ ಜಯಸಿಂಹವರ್ಮ, ಮೊದಲನೆಯ ವಿಕ್ರಮಾದಿತ್ಯನ ಅಧೀನದಲ್ಲಿ ಪ್ರಾಂತ್ಯಾಧಿಕಾರಿಯಾಗಿ ಆಳಿದ. ಪಲ್ಲವ ಇಮ್ಮಡಿ ಮಹೇಂದ್ರವರ್ಮ ಚಳುಕ್ಯ ರಾಜ್ಯವನ್ನು ಮುತ್ತಿದಾಗ ಅರಸನ ನೆರವಿಗೆ ಧಾವಿಸಿದ. ವಲಭಿಯ ಮೈತ್ರಕ ಮನೆತನದ ವಜ್ಜಡನನ್ನು (ಇಮ್ಮಡಿ ಶೀಲಾದಿತ್ಯ) ಸೋಲಿಸಿದ. ಈತನ ಮಕ್ಕಳು ಸತ್ಯಾಶ್ರಯ ಶೀಲಾದಿತ್ಯ, ವಿನಯಾದಿತ್ಯ, ಯುದ್ಧಮಲ್ಲ, ಜಯಾಶ್ರಯ ಮಂಗಲರಸ ಮತ್ತು ಅವನಿ ಜನಾಶ್ರಯ ಪುಲಕೇಶಿ. ಈ ಅವನಿಜನಾಶ್ರಯನ ಆಳ್ವಿಕೆಯ ಕಾಲದಲ್ಲಿ ಅರಬರು ಗುಜರಾತಿನ ಮೇಲೆ ದಾಳಿ ಮಾಡಿ ದಕ್ಷಿಣದ ಕಡೆಗೂ ನುಗ್ಗಲು ಯತ್ನಿಸಿದಾಗ ಈತ ಅವರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ. ಸಂಪ್ರೀತನಾದ ಇಮ್ಮಡಿ ವಿಕ್ರಮಾದಿತ್ಯ ಈತನಿಗೆ ದಕ್ಷಿಣಾಪಥ ಸಾಧಾರಣ, ಅನಿವರ್ತಕ ನಿವರ್ತಯಿತ್ರ ಎಂಬ ಬಿರುದುಗಳನ್ನಿತ್ತು ಗೌರವಿಸಿದ.

ಖ್ಯಾತಿವೆತ್ತ ಇನ್ನೊಂದು ಚಾಳುಕ್ಯ ಮನೆತನ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ವೇಮುಲವಾಡವನ್ನು ರಾಜಧಾನಿಯಾಗಿ ಮಾಡಿಕೊಂಡಿತ್ತು. ವಿನಯಾದಿತ್ಯ ಯುದ್ಧಮಲ್ಲ (I) ಇದರ ಮೂಲಪುರುಷ. ಕನ್ನಡದ ಮಹಾಕವಿ ಪಂಪನಿಗೆ ಆಶ್ರಯವಿತ್ತಾತ ಈ ಮನೆತನದ

ಇಮ್ಮಡಿ ಅರಿಕೇಸರಿ ಸುಮಾರು 750ರಿಂದ 970ರವರೆಗೆ ಆಳಿದ. ಈ ಮನೆತನದವರು ಕರ್ನಾಟಕದಲ್ಲಿನ ರಾಷ್ಟ್ರಕೂಟರ ಸಾಮಂತರಾಗಿದ್ದರು **(ನೋಡಿ : ಅರಿಕೇಸರಿ II)**.

ಇಮ್ಮಡಿ ಪುಲಕೇಶಿ ಕಟ್ಟಿದ ಸೈನ್ಯ ಅನಂತರ ಕರ್ನಾಟ ಬಲವೆಂದು ಖ್ಯಾತಿ ಪಡೆಯಿತು. ಧೈರ್ಯ ಸ್ಥೈರ್ಯಗಳಿಗೆ ಹೆಸರಾಗಿದ್ದ ಈ ಸೇನೆ ಅರಸರಿಗೆ ಬೆಂಬಲವಾಗಿ ಅನೇಕ ದಂಡಯಾತ್ರೆಗಳಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಈ ಸೈನ್ಯದ ಹಲವಾರು ಸೈನಿಕರು ದೂರ ದೇಶಗಳಿಗೆ ದಂಡೆತ್ತಿದಾಗ ಅಲ್ಲಿಯೇ ನೆಲೆಸುವ ಸಂದರ್ಭಗಳು ಒದಗುತ್ತಿದ್ದವು. ಹಾಗೆ ನೆಲೆಸಿದ ಇವರು ಕ್ರಮೇಣ ಸ್ವಶಕ್ತಿಯಿಂದ ಕೀರ್ತಿವಂತರಾದರು. ಬಂಗಾಲದ ಪಾಲವಂಶದ ಅರಸರ ಶಾಸನಗಳಲ್ಲಿ ಅವರ ಅಧೀನದ ಅಧಿಕಾರಿಗಳಾಗಿ ಸಾಮಂತರಾಗಿ ಮೆರೆದವರಲ್ಲಿ ಕರ್ನಾಟಕರೂ ಹೆಸರಿಸಲ್ಪಟ್ಟಿದ್ದಾರೆ. ದೇವಪಾಲನಿಂದ (810–54) ಆರಂಭಿಸಿ ಮದನಪಾಲನ (1144–61) ಆಳ್ವಿಕೆಯವರೆಗಿನ ಮೂರು ಶತಮಾನಗಳ ಕಾಲದ ಶಾಸನಗಳಲ್ಲಿ ಈ ಕರ್ನಾಟರು ಕಾಣಿಸಿಕೊಂಡಿದ್ದಾರೆ. ಧರ್ಮಪಾಲನ ಪತ್ನಿ ರಣ್ಣಾದೇವಿ ರಾಷ್ಟ್ರಕೂಟ ಸಾಮಂತನಾದ ಪರಬಲನ ಮಗಳು. ಅದೇ ಮನೆತನಕ್ಕೆ ಸೇರಿದ ತುಂಗನ ಮಗಳಾದ ಭಾಗ್ಯಾದೇವಿ ರಾಜ್ಯಪಾಲನ ಪತ್ನಿ (ಈ ತುಂಗ ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ತಂದೆಯಾದ ಜಗತ್ತುಂಗನೆಂಬುದೊಂದು ಊಹೆ). ಇಮ್ಮಡಿ ಕೃಷ್ಣ ಪ್ರತೀಹಾರರನ್ನು ಸೋಲಿಸಿದ ಅನಂತರ ರಾಜ್ಯಪಾಲನ ತಂದೆ ನಾರಾಯಣಪಾಲನನ್ನು ಸೋಲಿಸಿ ಅನಂತರ ರಕ್ತಸಂಬಂಧ ಬೆಳೆಸಿದನೆನ್ನಲಾಗಿದೆ. 1055–70 ರವರೆಗೆ ಆಳಿದ ವಿಗ್ರಹಪಾಲ ಅಂಗದೇಶದ ರಾಷ್ಟ್ರಕೂಟ ಮಥನ ದೇವನ ಸೋದರಿಯನ್ನು ಲಗ್ನವಾಗಿದ್ದ. ಈಕೆಯಲ್ಲಿ ಜನಿಸಿದಾತ ರಾಮಪಾಲ. ವಿಗ್ರಹಪಾಲನ ಅನಂತರ ಪಟ್ಟಕ್ಕೆ ಬಂದ ಇಮ್ಮಡಿ ಮಹೀಪಾಲ ಕಳಚುರಿ ರಾಜಪುತ್ರಿಯಾದ ಯೌವನಶ್ರೀಯ ಮಗ. ಈತ ಮಲಸೋದರನಾದ ರಾಮಪಾಲನಿಗೆ ಕಿರುಕುಳ ಕೊಟ್ಟನಾದರೂ ಸ್ವತಃ ಆಂತರಿಕ ದಂಗೆಗೆ ತುತ್ತಾದ. ಅನಂತರ 1077ರಿಂದ ರಾಮಪಾಲ ಆಳತೊಡಗಿದ.

ರಾಮಪಾಲನ ಆಳ್ವಿಕೆಯ ಕಾಲದಲ್ಲಿ ಬಿಹಾರದ ಮಿಥಿಲೆಯಲ್ಲಿ ಕರ್ನಾಟಕ ವಂಶವೊಂದು ಸ್ಥಾಪಿತವಾಯಿತು. ರಾಮಪಾಲ ತನ್ನ ಸೋದರ ಮಾವನಾದ ಮಥನದೇವನ ನೆರವಿನಿಂದ ವರೇಂದ್ರಿಯನ್ನು ಕಸಿದುಕೊಂಡ. ಮಥನದೇವನ ಅಳಿಯ ಚಿಕ್ಕೋರವಂಶದ ದೇವರಕಿತ. ಇವನು ಬುದ್ಧ ಗಯಾದಲ್ಲಿದ್ದ ಸಾಮಂತನ ರಾಜ. ಈತನ ಮಗಳು ಕುಮಾರದೇವಿ ಗಾಹಡವಾಲ ಮನೆತನದ ಗೋವಿಂದ ಚಂದ್ರನ ಪತ್ನಿ, ಗಾಹಡವಾಲರು ರಾಷ್ಟ್ರಕೂಟ ಅಥವಾ ರಾಠೋಡರೆಂದು ಕೆಲವರು ಭಾವಿಸಿದ್ದಾರೆ.

ಉತ್ತರದ ಹಲವು ಅರಸರು ರಾಷ್ಟ್ರಕೂಟರೊಡನೆ ಸಂಬಂಧ ಬೆಳೆಸಿದ್ದರಷ್ಟೇ ಅಲ್ಲದೆ, ಕರ್ನಾಟಕದ ರಾಷ್ಟ್ರಕೂಟ ಮನೆತನಕ್ಕೆ ಸೇರಿದವರೇ ಹಲವರು ಕರ್ನಾಟಕದ ಹೊರಗೂ ಆಳಿದರು. 8–9ನೆಯ ಶತಮಾನಗಳಲ್ಲಿ ಮಧ್ಯಪ್ರದೇಶದ ಭಿಲ್ಸಾದ ಸುತ್ತಲಿನ ಪ್ರದೇಶದಲ್ಲಿ ಇಂಥ ಒಂದು ಮನೆತನ ಆಳುತ್ತಿತ್ತು. ಆದರೆ ಅದಕ್ಕೆ ಮೊದಲೇ 5–6ನೆಯ ಶತಮಾನಗಳಲ್ಲಿ ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ಮಾನಪುರವನ್ನು (ಮಾನ್) ರಾಷ್ಟ್ರಕೂಟರು ರಾಜಧಾನಿಯಾಗಿ ಮಾಡಿಕೊಂಡಿದ್ದರು. ಮಾನಾಂಕ ಈ ಮನೆತನದ ಮೊದಲ ಅರಸ. ಬೀರಾರ್ ಮತ್ತು ವತ್ಸಗುಲ್ಮದ ವಾಕಾಟಕರಿಗೆ ಸೇರಿದ್ದ ವಿದರ್ಭ ಮತ್ತು ಆಶ್ಮಕ ಪ್ರದೇಶಗಳನ್ನು ಗೆದ್ದುಕೊಂಡ. ಈತನ ಮಗ ದೇವರಾಜ. ಮೊಮ್ಮಕ್ಕಳು ಮಾನರಾಜ, ಅವಿಧೇಯ ಮತ್ತು ಭವಿಷ್ಯ ಮಾನರಾಜ (ಅಥವಾ ವಿಭುರಾಜ) ಮತ್ತು ಆತನ ಸೋದರರು ಆಳಿದ ಅನಂತರ ಕೊನೆಯ ಮಗ ಅಭಿಮನ್ಯು ಪಟ್ಟಕ್ಕೆ ಬಂದ. ಸು. 6–7ನೆಯ ಶತಮಾನದ್ದಿರಬಹುದಾದ ಗೋಕಾಕ ತಾಮ್ರಶಾಸನದಲ್ಲಿ ರಾಷ್ಟ್ರಕೂಟ ವಂಶಕ್ಕೆ ಸೇರಿದ ಒಬ್ಬ ದೆಜ್ಜಮಹಾರಾಜನ ಹೆಸರಿದೆ. 7–8ನೆಯ ಶತಮಾನಗಳಲ್ಲಿ ಅಚಲಪುರವನ್ನು (ಈಗಿನ ಎಲಿಚಪುರ) ರಾಜಧಾನಿಯಾಗಿ ಪಡೆದಿದ್ದ ಇನ್ನೊಂದು ರಾಷ್ಟ್ರಕೂಟ ಮನೆತನ ಬೇತುಲ್–ಅಮರಾವತಿ ಪ್ರದೇಶದಲ್ಲಿ ಆಳಿತು. ದುಗ್ಗರಾಜ, ಗೋವಿಂದ ರಾಜ, ಸ್ವಾಮಿಕರಾಜ ನನ್ನರಾಜ ಯುದ್ಧಾಸುರ (ನನ್ನರಾಜ) ಇವರು ಈ ವಂಶದ ನಾಲ್ಕು ತಲೆಮಾರುಗಳ ಅರಸರು. ಈ ಅರಸರು ಬಾದಾಮಿಯ ಚಳುಕ್ಯರ ಸಂಬಂಧ ಬೆಳೆಸಿದ್ದರು. ಗೋವಿಂದರಾಜ II ಬಹುಶಃ ನನ್ನರಾಜ ಯುದ್ಧಾಸುರನ ಮೊಮ್ಮಗ, ಶಿವರಾಜನ ಮಗ, ಈತ ಚಳುಕ್ಯ ಇಮ್ಮಡಿ ವಿಕ್ರಮಾದಿತ್ಯನ ಮಗಳಾದ ವಿನಯಾವತಿಯನ್ನು ಲಗ್ನವಾದಂತೆ ತೋರುತ್ತದೆ. ಕಂಚಿಯಬ್ಬೆ ಮತ್ತು ಇಂದ್ರರಾಜ ಇವರ ಮಕ್ಕಳು. ಈ ಕಂಚಿಯಬ್ಬೆ ಗಂಗ ಶ್ರೀಪುರುಷನ ಮಗನಾದ ದುಗ್ಗಮಾರನನ್ನು ಲಗ್ನವಾಗಿದ್ದಳೆಂದು ಊಹಿಸಲಾಗಿದೆ.

ಮಾನ್ಯಖೇಟದ ರಾಷ್ಟ್ರಕೂಟ ಧ್ರುವನ ಕೊನೆಯ ಮಗ ಇಂದ್ರ ಮಾಳವ ಮತ್ತು ಗುಜರಾತ್‌ಗಳ ಪ್ರಾಂತಾಧಿಕಾರಿಯಾಗಿದ್ದು, ಅನಂತರ ಈತನ ವಂಶಸ್ಥರು ಒಂದು ಶತಮಾನ ಕಾಲ ಇಲ್ಲಿ ಆಳಿದರು. ತಂದೆಯ ದಿಗ್ವಿಜಯಗಳಲ್ಲಿ ಬೆಂಬಲಿಗನಾಗಿದ್ದ ಇಂದ್ರನು ಗುರ್ಜರಪ್ರತೀಹಾರ ಕುಲದ ವತ್ಸರಾಜನ ಮೇಲೆ ದಾಳಿ ಮಾಡಿದ್ದ. ಸೋದರನಾದ ಮುಮ್ಮಡಿ ಗೋವಿಂದನು ನಾಗಭಟನ ಮೇಲೆ ನುಗ್ಗಿದಾಗ ಆತನಿಗೂ ನೆರವಾದ. ಕರ್ಕಸುವರ್ಣವರ್ಷ ಮತ್ತು ಗೋವಿಂದ ಇವನ ಮಕ್ಕಳು. ಕರ್ಕನೂ ರಾಷ್ಟ್ರಕೂಟ ಒಂದನೆಯ ಅಮೋಘವರ್ಷನಿಗೆ ಬೆಂಬಲಿಗನಾಗಿದ್ದ. ಕರ್ಕನ ಮಗ ಧ್ರುವ (i) ಧಾರಾವರ್ಷ. ವಲ್ಲಭನೆನಿಸಿದ ಒಬ್ಬಾತ ಈತನ ರಾಜ್ಯದ ಮೇಲೇರಿ ಬಂದಾಗ ನಡೆದ ಕದನದಲ್ಲಿ ಈತ ಮರಣವನ್ನಪ್ಪಿದ. ಈತನ ಮಗ ಅಕಾಲವರ್ಷ ಕೃಷ್ಣ ಎಂಬವನು ರಾಜ್ಯವನ್ನು ಕುತ್ತಿನಿಂದ ಪಾರು ಮಾಡಿದ. ಅನಂತರ ಅಧಿಕಾರಕ್ಕೆ ಬಂದ ಎರಡನೆಯ ಧ್ರುವ ಸಹ ವಲ್ಲಭನೊಡನೆ ಕಾದಾಡಬೇಕಾಯಿತು. ಈ ವಲ್ಲಭನನ್ನು ಗುರುತಿಸುವುದರಲ್ಲಿ ಭಿನ್ನಾಭಿಪ್ರಾಯಗಳಿವೆ. ಇಮ್ಮಡಿ ಧ್ರುವನ ಅನಂತರ ಅವನ ತಮ್ಮನಾದ ದಂತಿವರ್ಮನ ಮಗ ಕೃಷ್ಣರಾಜ ಅಧಿಕಾರಕ್ಕೆ ಬಂದ. ಪ್ರತೀಹಾರ ಭೋಜನೊಡನೆ ಮಾನ್ಯಖೇಟದ ಇಮ್ಮಡಿ ಕೃಷ್ಣ ಹೂಡಿದ ಕದನಗಳಲ್ಲಿ ಈತ ವಿಶಿಷ್ಟ ಪಾತ್ರವಹಿಸಿದ. ಗುಜರಾತಿನ ರಾಷ್ಟ್ರಕೂಟರಲ್ಲಿ ಈತ ಕೊನೆಯವ.

ಹನ್ನೊಂದನೆಯ ಶತಮಾನದ ಮಧ್ಯದಲ್ಲಿ ಕನೋಜಿನಲ್ಲಿ ಇನ್ನೊಂದು ರಾಷ್ಟ್ರಕೂಟ ಮನೆತನ ತಲೆ ಎತ್ತಿತು. ಚಂದ್ರ ಈ ಮನೆತನದ ಮೂಲ ಪುರುಷ. ವಿಗ್ರಹಪಾಲ, ಭುವನಪಾಲ ಇವರು ಅನಂತರ ಅನುಕ್ರಮವಾಗಿ ಆಳಿದರು. ನಾಲ್ಕನೆಯ ಅರಸನಾದ ಗೋಪಾಲನನ್ನು ಗಾಧಿಪುರದ ಅರಸನೆಂದು ಕರೆಯಲಾಗಿದೆ. ಈತನ ಕಾಲದಲ್ಲಿ ಘಜನೀಯ ಮಹ್ಮೂದ್ ದಂಡೆತ್ತಿ ಬಂದು ಕನೋಜನ್ನು ಗೆದ್ದುಕೊಂಡ. ಆಗ ಈ ರಾಷ್ಟ್ರಕೂಟರು ವೋದಾಮಯೂತವನ್ನು (ಈಗಿನ ಬದೌನ್) ರಾಜಧಾನಿಯಾಗಿ ಮಾಡಿಕೊಂಡರು. ಗೋಪಾಲನ ಅನಂತರ ಆತನ ಮೂವರು ಮಕ್ಕಳು ತ್ರಿಭುವನ, ಮದನಪಾಲ ಮತ್ತು ದೇವಪಾಲ ಆಳಿದರು. ಮದನಪಾಲ ರಾಜ್ಯವನ್ನು ಸ್ವಲ್ಪಮಟ್ಟಿಗೆ ವಿಸ್ತರಿದ. ದೇವಪಾಲನ ಅನಂತರ ಆತನ ಮಗ ಭೀಮಪಾಲ ಮತ್ತು ಕಿರಿಯ ಸೋದರ ಲಖಣಪಾಲನ ಕಾಲದಲ್ಲಿ ಕುತ್ಬುದ್ದೀನ್ ಐಬಕ್ ಅವನನ್ನು ಸೋಲಿಸಿ ಇಲ್ತುಮಷನನ್ನು ಕನೋಜಿನ ಪ್ರಾಂತಾಧಿಕಾರಿಯಾಗಿ ನೇಮಿಸಿದ. ರಾಷ್ಟ್ರಕೂಟ ಮಹಾಸಾಮಂತ ಭಾರಹದೇವನೆಂಬಾತ ಲಖಣಪಾಲನೆಂದು ಕೆಲವರು ಊಹಿಸಿದ್ದಾರೆ. ಇವನೊಂದಿಗೆ ಈ ಮನೆತನ ಅಳಿಯಿತು.

ಒರಿಸ್ಸದ ಸಂಬಾಲ್ಪುರದಲ್ಲಿ ಚಾಳುಕ್ಯ ವಿಕ್ರಮ ಶಕೆ 56ರಲ್ಲಿ (1132–33) ಇದೇ ಮನೆತನದ ಒಂದು ಶಾಖೆಗೆ ಸೇರಿದ ರಾಣಕ ಪರಚಕ್ರ ಶಲ್ಯನೆಂಬಾತ ಆಳುತ್ತಿದ್ದನೆಂದು ಈಚೆಗೆ ತಿಳಿದಿದೆ. ಈತ ಧಂಸಕನ ಮಗ. ಮಹಾಮಂಡಲೇಶ್ವರ ಮಹಾಮಾಂಡಲಿಕ ರಾಣಕ ಚಾಮರವಿಗ್ರಹನ ಮೊಮ್ಮಗ. ಲತ್ತಲೋರಾಪುರಕ್ಕೆ ಸೇರಿದವನೆಂದೂ ವರ್ಣಿಸಲಾಗಿದೆ. ಲತ್ತಲೋರಾ ಎಂಬುದು ರಾಷ್ಟ್ರಕೂಟರ ಮೂಲ ನೆಲೆಯಾದ ಲತ್ತಲೂರು.

ಚಾಳುಕ್ಯ ಆರನೆಯ ವಿಕ್ರಮಾದಿತ್ಯ ತನ್ನ ತಂದೆಯ ಪರವಾಗಿ ಉತ್ತರ ಭಾರತದಲ್ಲಿ ಹಲವಾರು ಬಾರಿ ಸೈನ್ಯಾಚರಣೆ ನಡೆಸಿದ. ಗೌಡ, ಕಾಮರೂಪ ದೇಶಗಳ ಅರಸರನ್ನು ಸೋಲಿಸಿದನೆಂದು ವರ್ಣಿತವಾಗಿರುವುದು ಉತ್ಪ್ರೇಕ್ಷೆ ಎನಿಸಿದರೂ ಆತನ ಸೈನ್ಯ ಅಲ್ಲೆಲ್ಲ ಕೀರ್ತಿವೆತ್ತಿದ್ದಲ್ಲದೆ, ಹಲವಾರು ಸೈನಿಕರು ಮತ್ತು ಸೇನಾನಾಯಕರು ದೂರದ ಆ ಪ್ರದೇಶಗಳಲ್ಲಿ ನೆಲಸಿ, ಕಾಲಾನಂತರ ಸ್ವತಂತ್ರವಾಗಿ ಆಳತೊಡಗಿದರೆಂಬುದು ನಿಜ. ಹೀಗೆ ನೆಲೆ ನಿಂತ ಕನ್ನಡಿಗರಲ್ಲಿ ಮಧ್ಯಪ್ರದೇಶದ ಬಸ್ತರ್ ಜಿಲ್ಲೆಯಲ್ಲಿ ಆಳಿದ ಛಿಂದಕನಾಗರು ಭೋಗಾವತಿಪುರದವರಾಧೀಶ್ವರರೆಂದು ಕರೆದುಕೊಂಡಿದ್ದಾರೆ. ಕರ್ನಾಟಕದಲ್ಲಿ ಸಾಮಂತರಾಗಿ ಆಳಿದ ಸಿಂದರು ಸಹ ಇದೇ ಬಿರುದನ್ನು ಹೊಂದಿದ್ದರೆಂಬುದನ್ನು ಇಲ್ಲಿ ನೆನಪಿನಲ್ಲಿಡಬೇಕು. ಈ ಛಿಂದಕರು ಚೋಳ ಒಂದನೆಯ ರಾಜೇಂದ್ರ ಹೂಡಿದ ಉತ್ತರ ದಿಗ್ವಿಜಯದ ಸಂಬಂಧದಲ್ಲಿ ಅವನ ಸೈನ್ಯದೊಡನೆ ಬಂದು ಇಲ್ಲಿ ನೆಲೆಸಿದವರಾಗಿರಬಹುದೆಂಬ ಅಭಿಪ್ರಾಯಕ್ಕೆ ಇನ್ನೂ ಖಚಿತ ಸಾಕ್ಷ್ಯಾಧಾರ ದೊರೆತಿಲ್ಲವಾದರೂ ಮೇಲೆ ಹೇಳಿದ ಇವರ ಬಿರುದು, ಧಾರಾವರ್ಷ, ಕನ್ನರ, ಸೋಮೇಶ್ವರ ಎಂಬ ಈ ವಂಶದ ಅರಸರ ಹೆಸರುಗಳು ಇವರು ಕರ್ನಾಟಕದಿಂದ ಬಂದವರೆಂಬ ಅಭಿಪ್ರಾಯಕ್ಕೆ ನೀಡುತ್ತದೆ. ಚಕ್ರಕೂಟ ಕೋಟೆಯನ್ನು ಚಾಳುಕ್ಯ ಅರಸ ಗೆದ್ದುಕೊಂಡನೆಂಬುದು ತಿಳಿದಿದೆ. ಆದ್ದರಿಂದ ಈ ಛಿಂದಕರು ಚಾಳುಕ್ಯ ಸೈನ್ಯದೊಂದಿಗೆ ಈ ಪ್ರಾಂತ ಸುಮಾರು 1045ರಲ್ಲಿ ಬಂದಿರಬೇಕು. 1060ರ ವೇಳೆಗೆ ಮಹಾರಾಜ ಧಾರಾವರ್ಷನೆನಿಸಿದ ಜಗದೇಕ ಭೂಷಣ ಬರಸೂರು (ಈಗಿನ ಬಸ್ರೂರು) ರಾಜಧಾನಿಯಿಂದ ಆಳುತ್ತಿದ್ದ. ಈತನ ಮಗ ಸೋಮೇಶ್ವರ ಜ್ಞಾತಿಯೊಬ್ಬನಾದ ಮಧುರಾಂತಕನೊಡನೆ ಉತ್ತರಾಧಿಕಾರಕ್ಕಾಗಿ ಕಾದಬೇಕಾಯಿತು. ಮಧುರಾಂತಕ ಕದನದಲ್ಲಿ ಕೊಲ್ಲಲ್ಪಟ್ಟ. ಅನಂತರ ಸೋಮೇಶ್ವರ ರಾಜ್ಯವನ್ನು ವಿಸ್ತರಿಸಿ ದಕ್ಷಿಣ ಕೋಸಲ ಪ್ರಾಂತ್ಯವನ್ನು ಆಕ್ರಮಿಸಿದ. ಸೋಮೇಶ್ವರನ ಮಗ ಕನ್ನರ 1111ರಲ್ಲಿ ಆಳುತ್ತಿದ್ದುದು ತಿಳಿದಿದೆ. ಅನಂತರ ಇತಿಹಾಸ ಸ್ಪಷ್ಟವಿಲ್ಲ. 1208ರಲ್ಲಿ ಆಳುತ್ತಿದ್ದ ರಾಜಭೂಷಣ ಸೋಮೇಶ್ವರ (ii) ಕನ್ನರ (ii) ಜಗದೇಕಭೂಷಣ ನರಸಿಂಹ (1218, 1224) ಮತ್ತು ಹರಿಶ್ಚಂದ್ರ (1334) ಈ ಮನೆತನಕ್ಕೆ ಸೇರಿದವರು. ಇವರ ಶಾಸನಗಳು ಲಭಿಸಿವೆಯಾದರೂ ಇವರ ಪರಸ್ಪರ ಸಂಬಂಧ ಮುಂತಾದ ವಿವರಗಳು ತಿಳಿದಿಲ್ಲ.

ಗಂಜಾಮ್ ಜಿಲ್ಲೆಯ ಉಪ್ಪಾಡದಲ್ಲಿ ಸಮಧಿಗತಪಂಚಮಹಾಶಬ್ದನೆನಿಸಿದ್ದ ರಾಣಕ ರಾಮದೇವನ ಶಾಸನವೊಂದು ದೊರೆತಿದೆ. ಸುಮಾರು 11–12ನೆಯ ಶತಮಾನದ ಈ ಶಾಸನದಲ್ಲಿ ಈತನನ್ನು ಅಗಿದೇವೀಲಬ್ಧವರ ಪ್ರಸಾದನೆಂದೂ ತೈಲಪವಂಶೀಯನೆಂದೂ ಕರೆಯಲಾಗಿದೆ. ಈ ತೈಲಪ ಪಶ್ಚಿಮ ಚಾಳುಕ್ಯರ ಇಮ್ಮಡಿ ತೈಲಪನೆಂದು ಹಲವರ ಊಹೆ. ಆದರೆ ಈತ 6ನೆಯ ವಿಕ್ರಮಾದಿತ್ಯನ ಮಗನಾಗಿರಬಹುದು. ಈತ ಕೊಳ್ಳಿಪಾಕೆ 7000 ಪ್ರಾಂತದ ಅಧಿಪತಿಯಾಗಿದ್ದ. ರಾಮದೇವನ ಪೂರ್ವಜರಲ್ಲಿ ಒಬ್ಬ ತನ್ನ ಈ ತೈಲಪನ ವಂಶದವನಾಗಿದ್ದಿರಬಹುದು.

ಕರ್ನಾಟಕದ ಹೊರಗೆ ಕನ್ನಡಿಗರು ಸ್ಥಾಪಿಸಿದ ಅರಸುಮನೆತನಗಳಲ್ಲಿ ಅತ್ಯಂತ ಮುಖ್ಯವಾದವು ಬಂಗಾಲದ ಸೇನೆ ಹಾಗೂ ಮಿಥಿಲೆಯ ಕರ್ನಾಟಕ ವಂಶಗಳು. ಸೇನರನ್ನು ಕರ್ನಾಟ ಕ್ಷತ್ರಿಯರೆಂದೂ ಬ್ರಹ್ಮಕ್ಷತ್ರಿಯರೆಂದೂ ಕರೆಯಲಾಗಿದೆ. ಈ ಮನೆತನದ ಮೂಲಪುರುಷನಾದ ವೀರಸೇನನನ್ನು ದಾಕ್ಷಿಣಾತ್ಯನೆಂದೂ ಸಾಮಂತಸೇನನನ್ನು (1050–75) ಬ್ರಹ್ಮಕ್ಷತ್ರಿಯ ಕುಲಾಭರಣನೆಂದೂ ವರ್ಣಿಸಲಾಗಿದೆ. ಬ್ರಹ್ಮಕ್ಷತ್ರಿಯ ವಂಶಕ್ಕೆ ಸೇರಿದ ಹಲವರು ಪಶ್ಚಿಮ ಚಾಳುಕ್ಯರ ಸಾಮಂತರಾಗಿದ್ದುದು ತಿಳಿದಿದೆ. ಇವರು ದೂರದ ಬಂಗಾಲಕ್ಕೆ ಹೋದುದು ಹೇಗೆ ಎಂಬುದು ಸ್ಪಷ್ಟವಿಲ್ಲದಿದ್ದರೂ ಬಹುಶಃ ಈ ಮನೆತನಕ್ಕೆ ಸೇರಿದ ಒಬ್ಬಾತ ಪಾಲ ಅರಸರಲ್ಲಿ ಉದ್ಯೋಗಕ್ಕೆ ಸೇರಿ ಅನಂತರ ಉನ್ನತ ಪದವಿಗೆ ಏರಿರಬಹುದು. ಇವರಲ್ಲಿ ಒಬ್ಬಾತ ರಾಢಾದಲ್ಲಿ ನೆಲಸಿದ. ಸಾಮಂತಸೇನ ಮತ್ತು ಆತನ ಮಗ ಹೇಮಂತಸೇನ ಇವರು ಪಾಲರ ಅಧೀನದಲ್ಲಿದ್ದರು. ಸಾಮಂತಸೇನ ಕರ್ನಾಟಕದ ಮೇಲೆ ದಾಳಿ ಮಾಡಿದ ಒಬ್ಬಾತನನ್ನು ಸೋಲಿಸಿದನೆಂಬ ಹೇಳಿಕೆಯನ್ನು ಗಮನಿಸಿದರೆ ಈತ ತನ್ನ ಮಾತೃಭೂಮಿಯ ಹಿತರಕ್ಷಣೆ ಮಾಡಿದನೆನ್ನಬಹುದು. ಹೇಮಂತಸೇನನ ಅನಂತರ ಆಳಿದ ವಿಜಯಸೇನ (1095–1108) ಈ ಅರಸರಲ್ಲಿ ಪ್ರಮುಖ. ಇವನು ಪಾಲರನ್ನೂ ಪೂರ್ವಬಂಗಾಲದ ವರ್ಮರನ್ನೂ ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಈತನ ಮಗ ಬಲ್ಲಾಳಸೇನ (1159–79) ಬಿಹಾರದ ಸ್ವಲ್ಪ ಭಾಗಗಳನ್ನು ತನ್ನ ರಾಜ್ಯಕ್ಕೆ ಸೇರಿಸಿದ. ಈತನ ಪತ್ನಿ ರಮಾದೇವಿ ಎಂಬುವಳು ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಮಗಳಾಗಿರಬಹುದೆಂದು ಊಹಿಸಲಾಗಿದೆಯೆಷ್ಟೆ. ಇದಕ್ಕೆ ಖಚಿತ ಆಧಾರಗಳಿಲ್ಲ. ಅನಂತರ ಆಳಿದ ಲಕ್ಷ್ಮಣಸೇನ ಇಖ್ತಿಯಾರುದ್ದಿನ್ ಮಹಮ್ಮದ್ ಭುಕ್ತಿಯಾರ್ ಖಿಲ್ಜಿಯಿಂದ ಸೋಲಿಸಲ್ಪಟ್ಟು ರಾಜ್ಯದ ಪಶ್ಚಿಮ ಭಾಗಗಳನ್ನು ಕಳೆದುಕೊಂಡ. ಅನಂತರ ಆಳಿದ ಈತನ ವಂಶಸ್ಥರು ಅಳಿದುಳಿದ ಪ್ರದೇಶಗಳನ್ನು ಮಹಮ್ಮದೀಯರಿಗೆ ಒಪ್ಪಿಸಿ ಕಣ್ಮರೆಯಾದರು.

ಬಂಗಾಲದ ಇತಿಹಾಸದಲ್ಲಿ ಸೇನರಿಗೆ ವಿಶಿಷ್ಟ ಸ್ಥಾನವಿದೆ. ಬಂಗಾಲದಲ್ಲಿ ಹಿಂದುಧರ್ಮವನ್ನು ಪುನರುಜ್ಜೀವನಗೊಳಿಸಿದ ಯಶಸ್ಸು ಇವರದು. ಸಾಹಿತ್ಯಕ್ಕೆ ಆಶ್ರಯವಿತ್ತ ಇವರಲ್ಲಿ ಕೆಲವರು ಸ್ವತಃ ಉತ್ತಮ ಕವಿಗಳು, ಪಂಡಿತರು, ಬಲ್ಲಾಳಸೇನ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ದಾನಸಾಗರ ಗ್ರಂಥದ ಕರ್ತೃ. ಅಪೂರ್ಣವಾಗಿದ್ದ ಈತನ ಇನ್ನೊಂದು ಗ್ರಂಥ ಅದ್ಭುತ ಸಾಗರವನ್ನು ಲಕ್ಷ್ಮಣಸೇನ ಬರೆದು ಮುಗಿಸಿದ. ಗೀತಗೋವಿಂದದ ಜಯದೇವ, ಪ್ರಧಾನಿಯಾಗಿದ್ದ ಹಲಾಯುಧ ಇವರು ಇವನ ಆಸ್ಥಾನದಲ್ಲಿ ಶೋಭಿಸಿದರು. ಇವರು ಶಕ ಕಾಲಗಣನೆಯನ್ನು ಬಂಗಾಲದಲ್ಲಿ ಜಾರಿಗೆ ತಂದರು.

ಗಂಡಕ್, ಕೋಸಿ ಮತ್ತು ಗಂಗಾ ನದಿಗಳಿಂದ ಆವೃತವಾಗಿದ್ದ ತೀರಭುಕ್ತಿಯಲ್ಲಿ (ತಿರ್‌ಹುತ್) ಸು.1097ರಲ್ಲಿ ಕರ್ನಾಟಕ ವಂಶದ ನಾನ್ಯದೇವ ಆಳಿದ. ಈತ ಕರ್ನಾಟಕ ಕುಲಭೂಷಣನೆಂದು ತನ್ನ ಕೃತಿಗಳಲ್ಲಿ ಕರೆದುಕೊಂಡಿದ್ದಾನೆ. ನಾನ್ಯದೇವ ಎಂಬ ಹೆಸರು ಕನ್ನಡದ ನನ್ನಿಯದೇವ, ನನ್ನಿಗದೇವ ಎಂಬುದರಿಂದ ಬಂದುದಾಗಿರಬೇಕೆಂಬುದೊಂದು ಊಹೆ. ಪಾಲರ ಅಧೀನದಲ್ಲಿ ಹಲವರು ಕನ್ನಡಿಗರಿದ್ದರು. ಅವರಲ್ಲಿ ನಾನ್ಯದೇವನೊಬ್ಬನಾಗಿರಬಹುದು. ಕೈವರ್ತದ ದಂಗೆ ಪಾಲರ ಶಕ್ತಿಯನ್ನು ಕುಗ್ಗಿಸಿದ ಸಂದರ್ಭದಲ್ಲಿ ಈತ ಸ್ವತಂತ್ರವಾಗಿ ಆಳತೊಡಗಿದನೆಂದು ತೋರುತ್ತದೆ. ನಾನ್ಯದೇವ ಸಮರ್ಥವಾದ ಆಡಳಿತ ಪದ್ಧತಿಯನ್ನು ರಾಜ್ಯದಲ್ಲಿ ಜಾರಿಗೆ ತಂದ. ಸಿಮರಾಮಪುರ (ಚಂಪಾರಣ್ ಜಿಲ್ಲೆಯ ಸಿಮರಾವ್‌ಗಢ) ಈತನ ರಾಜಧಾನಿ. 1147ರಲ್ಲಿ ಈತನ ಮಗ ಗಂಗದೇವ ಪಟ್ಟಕ್ಕೆ ಬಂದ. ಈತ ಸೋದರನಾದ ಮಲ್ಲದೇವನೊಡನೆ ಅಧಿಕಾರವನ್ನು ಹಂಚಿಕೊಂಡ. ಮಲ್ಲದೇವ ನೇಪಾಲದಲ್ಲಿ ಆಳಿದ. ಅಲ್ಲಿನ ಮಲ್ಲ ಮನೆತನದ ಅರಸರು ನಾನ್ಯದೇವ ತಮ್ಮ ವಂಶದ ಮೂಲಪುರುಷನೆಂದು ಹೇಳಿಕೊಂಡಿದ್ದಾರೆ. ಗಂಗದೇವನು ಪಾಲರನ್ನೂ ಸೇನರನ್ನೂ ಸೋಲಿಸಿ

ರಾಜ್ಯವನ್ನು ವಿಸ್ತರಿಸಿ ದರ್ಭಾಂಗಾವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಅನಂತರ ಮಿಥಿಲೆಯಲ್ಲಿ ನರಸಿಂಗದೇವ ಮತ್ತು ರಾಮಸಿಂಗದೇವರು ಆಳಿದರು. ನರಸಿಂಗದೇವ ಬಹಳ ಶ್ರಮಪಟ್ಟು, ಸುತ್ತಲೂ ತುಂಬಿದ್ದ ಮಹಮ್ಮದೀಯರಿಂದ ರಾಜ್ಯವನ್ನು ಕಾಪಾಡಿಕೊಳ್ಳಬೇಕಾಯಿತು. ಹರಿಸಿಂಹ (1285–1313) ಈ ವಂಶದ ಕೊನೆಯ ಅರಸ. ಈತನಿಗೂ ಮೊದಲು ಶಕ್ತಿಸಿಂಹ ಮತ್ತು ಭೂಪಾಲ ಸಿಂಹ ಆಳಿದರೆಂದು ಕೆಲವರು ಸೂಚಿಸಿದ್ದಾರೆ. **(ಬಿ.ಆರ್.ಜಿ.)**

**ಇತರ ಸಂಪರ್ಕಗಳು :** ಪ್ರಾಚೀನ ಕರ್ನಾಟಕದ ಶಾಸನಗಳು ಮತ್ತು ಸಾಹಿತ್ಯವನ್ನು ಪರಿಕಿಸಿದಲ್ಲಿ ಕರ್ನಾಟಕದ ಜನ ಭಾರತದ ಇತರ ನಾಡುಗಳೊಡನೆ ಸಾಕಷ್ಟು ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದರೆಂಬುದು ಖಚಿತವಾಗುತ್ತದೆ. ಉದಾಹರಣೆಗೆ ಅಯ್ಯಾವೊಳೆ ಐನೂರ್ವರು **(ನೋಡಿ)** ಎಂಬ ವಣಿಕ ಸಂಘದವರು ಭಾರತದ ಬೇರೆಬೇರೆ ದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಇದು ನಾಡಿನ ಸಾಂಸ್ಕೃತಿಕ ಕಸಿಗೆ ಸಹಾಯಕವಾಗಿರಬೇಕು. ಕರ್ನಾಟಕದ ಅನೇಕ ರಾಜರುಗಳು ಬೇರೆ ನಾಡುಗಳ ರಾಜ ವಂಶಗಳೊಡನೆ ರಕ್ತಸಂಬಂಧವನ್ನು ಬೆಳೆಸಿದ್ದುದರ ಬಗ್ಗೆ ಉಲ್ಲೇಖಗಳಿವೆ. ಹಾಗೆಯೇ ಬಿಲ್ಹಣನೇ ಮೊದಲಾದ ಬೇರೆ ಪ್ರದೇಶಗಳಿಂದ ಬಂದ ಕವಿಗಳಿಗೂ ವಿದ್ವಾಂಸರಿಗೂ ಕರ್ನಾಟಕ ಆಶ್ರಯಸ್ಥಾನವಾಗಿತ್ತು. ಆದರೆ ಭಾರತದ ವಿವಿಧ ಪ್ರದೇಶದವರೊಡನೆ ಪ್ರಾಚೀನ ಕರ್ನಾಟಕ ಬೆಳೆಸಿಕೊಂಡಿದ್ದ ಆರ್ಥಿಕ ಸಾಂಸ್ಕೃತಿಕ ಸಂಬಂಧ ಮತ್ತು ಪ್ರಭಾವಗಳ ಬಗ್ಗೆ ಇನ್ನೂ ವ್ಯವಸ್ಥಿತ ಸಂಶೋಧನೆ ನಡೆಯಬೇಕಾಗಿದೆ.

**ಹೊರದೇಶಗಳೊಡನೆ ಸಂಪರ್ಕಗಳು :** ಪ್ರಾಗೈತಿಹಾಸಿಕ ಕಾಲದಿಂದ ಕರ್ನಾಟಕದ ಭಾಗ ಅನೇಕ ಪ್ರದೇಶಗಳೊಡನೆ ಸಂಪರ್ಕ ಹೊಂದಿತ್ತು. ಕರ್ನಾಟಕದಲ್ಲಿ ಕಂಡುಬಂದಿರುವ ಶಿಲಾಯುಗದ ಬೇಟೆಗಾರ ಜನಾಂಗಗಳ ಸಂಸ್ಕೃತಿಗಳು ಯುರೋಪ್, ಆಫ್ರಿಕ, ಪಶ್ಚಿಮ ಏಷ್ಯ ಹಾಗೂ ಭಾರತದ ಕೆಲವು ಪ್ರದೇಶಗಳಲ್ಲಿ ಕಂಡುಬರುವ ಸಂಸ್ಕೃತಿಯೇ ಆಗಿದೆ. ಕರ್ನಾಟಕದ ನವಶಿಲಾಯುಗ ಸಂಸ್ಕೃತಿ ಪಶ್ಚಿಮ ಏಷ್ಯ ಪ್ರದೇಶದಿಂದ ಬಂದು ರೂಪಿತವಾಗಿದದ್ದೆಂದು ತಜ್ಞರ ಅಭಿಮತ. ಮುಂದಿನ ಕಬ್ಬಿಣದ ಯುಗದಲ್ಲಿ ಕಂಡುಬರುವ ಬೃಹತ್ ಶಿಲಾ ಸಮಾಧಿಗಳು ರಚನಾ ರೀತಿಗಳಲ್ಲಿ ಯುರೋಪ್, ಪಶ್ಚಿಮ ಏಷ್ಯ ಹಾಗೂ ಆಗ್ನೇಯ ಏಷ್ಯದಲ್ಲಿ ಕಂಡುಬಂದಿರುವ ಶಿಲಾಸಮಾಧಿಗಳನ್ನೇ ಹೋಲುತ್ತವೆ. ಪ್ರಾಗೈತಿಹಾಸಿಕ ಕಾಲದಲ್ಲಿ ಜನವಲಸೆ ಹಾಗೂ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಸಾಕಷ್ಟು ನಡೆಯುತ್ತಿರಬೇಕೆಂದೂ ಕರ್ನಾಟಕ ಈ ಸಾಮಾನ್ಯ ಪ್ರಚಲಿತ ವ್ಯವಹಾರದಿಂದ ಹೊರಗಿರಲಿಲ್ಲವೆಂದೂ ಈ ಅಂಶಗಳಿಂದ ಬಹುಶಃ ತಿಳಿಯಬಹುದು. ಕಾಲಕ್ಕೆ ಸಂಬಂಧಿಸಿದಂತೆ ಯಾವಯಾವ ಸಾಂಸ್ಕೃತಿಕ ಅಂಶಗಳು ಸ್ಥಳೀಯವಾದುವು, ಯಾವುವು ಹೊರನಾಡುಗಳಿಂದ ಬಂದು ಇಲ್ಲಿ ಪ್ರಚಲಿತವಾದುವು ಎಂಬುದನ್ನು ತೀರ್ಮಾನಿಸಲು ಸ್ಪಷ್ಟ ಆಧಾರಗಳು ದೊರಕುವುದಿಲ್ಲ. ಇತ್ತೀಚಿನ ಸಂಶೋಧನೆಗಳಿಂದ ಬಹುಶಃ ಕ್ರಿ.ಪೂ. 15–14ನೆಯ ಶತಮಾನಗಳ ಅವಧಿಯಲ್ಲಿ ಈಜಿಪ್ಟ್ ದೇಶದೊಡನೆ ಸಂಪರ್ಕ ಹೊಂದಿದ್ದ ವಿಷಯ ಬೆಳಕಿಗೆ ಬಂದಿವೆ. ಆ ಕಾಲದ ಈಜಿಪ್ಟಿನ ಶಾಸನಗಳಲ್ಲಿ ಅಂದಿನ ದೊರೆಗಳು ಏಷ್ಯ ಖಂಡದ ವಿವಿಧ ಭಾಗಗಳ ಮೇಲೆ ನೌಕಾ ದಾಳಿ ನಡೆಸಿದ್ದರೆನ್ನುವುದಕ್ಕೆ ಸೂಚನೆಗಳಿವೆ. ಆ ಸಂಬಂಧದಲ್ಲಿ ಹೆಸರಿಸಿರುವ ಒಂದು ದೇಶ ಪುನ್ಟ್. ಇದು ಕರ್ನಾಟಕದ ಪುನ್ನಾಟವಿರಬಹುದೆಂಬ ಊಹೆ ಇದೆ. ಅಲ್ಲದೆ ಈಜಿಪ್ಟ್ ದೇಶದಲ್ಲಿ ಪ್ರಚಲಿತವಾಗಿದ್ದ 'ತಲೆಯಾಸರೆಗಳು' ಎಂದು ಕರೆಯುವ ಒಂದು ರೀತಿಯ ವಸ್ತುಗಳು ಸುಮಾರು ಅದೇ ಕಾಲದಲ್ಲಿ ಕರ್ನಾಟಕದ ನವಶಿಲಾಯುಗದ ನೆಲೆಗಳಲ್ಲಿ ಕಂಡುಬರುವುದು ಗಮನಾರ್ಹ. ಬಹುಶಃ ಇದರ ಉಪಯೋಗ ಆ ದೇಶದೊಡನೆ ಕರ್ನಾಟಕ ಹೊಂದಿದ್ದ ಸಂಪರ್ಕದಿಂದ ಇಲ್ಲಿ ಪ್ರಚಲಿತವಾಗಿರಬಹುದು. ಅಲ್ಲದೆ ಕರ್ನಾಟಕದ ನವಶಿಲಾಯುಗದಲ್ಲಿ ರಾಗಿ ಮುಖ್ಯ ಆಹಾರಧಾನ್ಯವಾಗಿತ್ತೆಂದು ತಿಳಿದಿದೆ. ರಾಗಿಯ ಉಪಯೋಗ ಕರ್ನಾಟಕ ಮತ್ತು ಸುತ್ತಣ ಪ್ರದೇಶವನ್ನು ಬಿಟ್ಟರೆ ಮತ್ತೆ ಕಂಡುಬರುವುದು ಆಫ್ರಿಕದಲ್ಲಿ ಮಾತ್ರ. ಈಗ ಪಾಕಿಸ್ತಾನದಲ್ಲಿರುವ ಸಿಂಧು ಕಣಿವೆ ಸಂಸ್ಕೃತಿಗೆ ಸಂಬಂಧಿಸಿದ ಹರಪ್ಪ, ಮೊಹೆಂಜೋದಾರೋ ನಗರಗಳಲ್ಲಿ ಕಂಡುಬಂದಿರುವ ಚಿನ್ನದ ವಿಶ್ಲೇಷಣೆಯಿಂದ ಅದು ಕರ್ನಾಟಕದ ಗಣಿಗಳಿಂದ ಅಲ್ಲಿಗೆ ಹೋಗಿರಬೇಕೆಂಬ ಅಭಿಪ್ರಾಯ ಸಹ ಇದೆ. ಹೀಗಿದ್ದರೆ ನವಶಿಲಾಯುಗದ ಕಾಲದ ಹೊತ್ತಿಗೆ ಕರ್ನಾಟಕ ಹೊರನಾಡುಗಳೊಡನೆ ವ್ಯಾಪಾರ ಸಂಪರ್ಕ ಬೆಳೆಸಿತ್ತು ಎಂದು ಊಹಿಸಬಹುದು. *

ಕರ್ನಾಟಕವೂ ಸೇರಿದಂತೆ ದಕ್ಷಿಣಭಾರತದಲ್ಲಿ ಹರಡಿರುವ ದ್ರಾವಿಡ ಸಂಸ್ಕೃತಿಯೇ ಹೊರನಾಡಿನಿಂದ ಇಲ್ಲಿಗೆ ಬಂದು ಪ್ರಚಲಿತವಾದದ್ದೆಂದು ಬಹು ವಿದ್ವಾಂಸರ ಊಹೆ. ಇದರ ಮೂಲ ನೆಲೆಯನ್ನು ಕಂಡುಹಿಡಿಯುವ ಅನೇಕ ಪ್ರಯತ್ನಗಳು ಭಾಷಾಶಾಸ್ತ್ರಜ್ಞರಿಂದ ನಡೆದಿವೆ. ದ್ರಾವಿಡ ಸಂಸ್ಕೃತಿಯನ್ನು ಇಲ್ಲಿ ಪ್ರಚಾರಕ್ಕೆ ತಂದ ಜನ ಮೆಸಪೊಟೇಮಿಯ ಪ್ರದೇಶದಿಂದ ಬಂದವರಾಗಿರಬೇಕೆಂಬುದು ವ್ಯಾಪಕವಾಗಿರುವ ಅಭಿಪ್ರಾಯ. ಮೆಸಪೊಟೇಮಿಯ ಪ್ರದೇಶದ ಅನೇಕ ಸ್ಥಳನಾಮಗಳಲ್ಲೂ ಪದಸಮೂಹದಲ್ಲೂ ದ್ರಾವಿಡ ಸಮೀಪದ ಅಂಶಗಳನ್ನು ಗುರುತಿಸುವುದುಂಟು. ಬಲೂಚಿಸ್ತಾನ ಮತ್ತು ಮಧ್ಯ ಭಾರತದ ಕೆಲವೆಡೆ ಇರುವ ದ್ರಾವಿಡ ಭಾಷಾ ಗುಂಪಿಗೆ ಸೇರಿದ ನುಡಿಗಳು ದ್ರಾವಿಡರ ಈ ವಲಸೆಯ ಬಗ್ಗೆ ಸೂಚನೆ ನೀಡುತ್ತವೆ ಎನ್ನಲಾಗಿದೆ. ಉತ್ತರ ಸ್ಪೇನಿನಲ್ಲಿರುವ ಬಾಸ್ಕ್, ಹಂಗೇರಿ ಪ್ರದೇಶದ ಮಗ್ಯಾರ್ ಭಾಷೆಗಳಿಗೂ ದ್ರಾವಿಡ ಭಾಷೆಗಳಿಗೂ ಸಾಮ್ಯವಿದೆ ಎಂದು ಹೇಳಲಾಗಿದೆ. ಸಾಂಸ್ಕೃತಿಕ ದೃಷ್ಟಿಯಿಂದ ಈಜಿಪ್ಟ್, ಫಿನೀಷಿಯ, ತುರೇನಿಯ, ಬ್ಯಾಬಿಲೋನಿಯ ಮೊದಲಾದ ದೇಶಗಳಲ್ಲಿ ಪ್ರಾಚೀನ ಸಂಸ್ಕೃತಿಗಳಲ್ಲಿ ದ್ರಾವಿಡ ಸಂಸ್ಕೃತಿಯ ಕೆಲವು ಅಂಶಗಳು ಕಂಡುಬರುತ್ತವೆ. ಅವುಗಳಲ್ಲಿ ಸೂರ್ಯಪೂಜೆ, ನಾಗಪೂಜೆ, ಭೂತಾರಾಧನೆ ಇತ್ಯಾದಿ ಮುಖ್ಯವಾದವೆಂದು ಗಿಲ್ಬರ್ಟ್ ಮೊದಲಾದವರು ಪ್ರತಿಪಾದಿಸಿದ್ದಾರೆ. ಸಮುದ್ರದಾಚೆಯ ದೇಶಗಳಾದ ಮೆಸಪೊಟೇಮಿಯ, ಈಜಿಪ್ಟ್ ಮತ್ತು ಪ್ಯಾಲೆಸ್ಟೀನ್‌ಗಳೊಡನೆ ದ್ರಾವಿಡ ನಾಗರಿಕತೆ ಹೊಂದಿದ್ದ ಸಂಪರ್ಕ ಅದರ ಬೆಳವಣಿಗೆಗೆ ನೆರವಾಯಿತು. ಈ ಸಮುದ್ರಯಾನ ಸಂಪರ್ಕ ಕಡೆಯ ಪಕ್ಷ ಕ್ರಿ.ಪೂ.1200ರಷ್ಟು ಹಿಂದಿನದು ಎಂಬುದು ಪಣಿಕ್ಕರ್ ಅವರ ಅಭಿಪ್ರಾಯ. ಪರ್ಷಿಯ ಕೊಲ್ಲಿ ಮತ್ತು ಕೆಂಪುಸಮುದ್ರ ಪ್ರದೇಶ ಮತ್ತು ಭಾರತದ ಪಶ್ಚಿಮ ತೀರಗಳ ನಡುವೆ ವಾಣಿಜ್ಯ ಸಂಬಂಧವಾದ ಸಮುದ್ರಯಾನ ಇತಿಹಾಸದ ಪ್ರಾರಂಭದಿಂದಲೂ ಚೆನ್ನಾಗಿ ಬೆಳೆಯಿತು. ಪಶ್ಚಿಮ ಏಷ್ಯಕ್ಕೆ ರಫ್ತು ಮಾಡುತ್ತಿದ್ದ ಸಾಮಾನ್ಯ ಬಳಕೆಯ ವಸ್ತುಗಳಿಗೆ ಹೀಬ್ರೂ ಭಾಷೆಯಲ್ಲಿಯೂ ದಕ್ಷಿಣ ಭಾರತೀಯ ಪದಗಳನ್ನೇ ಉಪಯೋಗಿಸಿರುವುದರಿಂದ ದಕ್ಷಿಣ ಭಾರತ ಮತ್ತು ಜುಡಾಗಳ ನಡುವೆ ಡೇವಿಡ್ ಮತ್ತು ಸಾಲೋಮನ್ನರ ಕಾಲದಲ್ಲೇ ವಾಣಿಜ್ಯ ಸಂಬಂಧಗಳು ನಿಕಟವಾಗಿದ್ದವೆಂದು ತೋರುತ್ತದೆ. ಮುಘೇರದ ಚಂದ್ರನ ದೇವಾಲಯದಲ್ಲಿಯೂ ಮತ್ತು ನೆಬುಚೆಡ್‌ನೆಸ್ಸಾರನ ಅರಮನೆಯಲ್ಲಿಯೂ ತೇಗದ ದಿಮ್ಮಿಗಳು ದೊರೆತಿವೆ. ಇವು ಪಶ್ಚಿಮ ಭಾರತವೆಂದು ಹೇಳಲಾಗಿದೆ. ಭಾರತೀಯರೇ ಈಜಿಪ್ಟ್ ಮೊದಲಾದ ಕಡೆಗಳಿಗೆ ಹೋಗಿ ವಾಣಿಜ್ಯ ನಡೆಸುತ್ತಿದ್ದರೆಂದು ಪಣಿಕ್ಕರ್ ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ಕ್ರಿ.ಪೂ. ಸು.120ರಲ್ಲಿ ಘಟಿಸಿದ ಮತ್ತು ಸ್ಟ್ರಾಬೊ ಉಲ್ಲೇಖಿಸಿರುವ

ಯೂಡೊಕ್ಸಸ್‌ನಿಗೆ ಭಾರತಕ್ಕೆ ಸಮುದ್ರಮಾರ್ಗ ತೋರಿಸಿದ ಭಾರತೀಯ ನಾವಿಕನೊಬ್ಬನ ಪ್ರಸಂಗವನ್ನು ಅವರು ನಿದರ್ಶನವಾಗಿ ನೀಡಿದ್ದಾರೆ. ಈ ಸಂಬಂಧಗಳಲ್ಲಿ ಮಂಗಳೂರು, ಮಲ್ಪೆ, ಭಟ್ಕಳ, ಹೊನ್ನಾವರ ಮುಂತಾದ ಬಂದರುಗಳನ್ನುಳ್ಳ ಕರ್ನಾಟಕದ ಕರಾವಳಿಯ ಪಾತ್ರವೂ ಇರಬಹುದು. ಆದರೂ ಪ್ರಾಗೈತಿಹಾಸಿಕ ಕಾಲದಲ್ಲಿ ಹೊರನಾಡುಗಳೊಡನೆ ಕರ್ನಾಟಕ ಹೊಂದಿದ್ದ ಸಂಪರ್ಕಗಳ ಬಗ್ಗೆ ದೊರೆಯುವ ಮಾಹಿತಿಗಳು ಅಸ್ಪಷ್ಟ.

ಇತಿಹಾಸಕಾಲಕ್ಕೆ ಸಂಬಂಧಪಟ್ಟಂತೆ ದೊರೆಯುವ ಮಾಹಿತಿಗಳು ಸ್ವಲ್ಪ ಉತ್ತಮ. ಇವನ್ನು ಬೇರೆ ಬೇರೆ ದೇಶಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನಿರೂಪಿಸಬಹುದು.

**ಗ್ರೀಸ್ ಮತ್ತು ರೋಮ್:** ಗ್ರೀಕ್ ಲ್ಯಾಟಿನ್ ಭಾಷೆಗಳಲ್ಲಿ ಅಕ್ಕಿ ಮೊದಲಾದ ಪದಾರ್ಥಗಳಿಗೆ ಸಂಬಂಧಿಸಿದ ಪದಗಳು ಮೂಲತಃ ದ್ರಾವಿಡ ಭಾಷೆಯಿಂದ ಬಂದವು ಎನ್ನಲಾಗಿದೆ. ಈಜಿಪ್ಟಿನ ಆಕ್ಸಿರಿಂಕಸ್ ಎಂಬಲ್ಲಿ ದೊರೆತ, ಪ್ರ.ಶ.ಪೂ. ಸು.2ನೆಯ ಶತಮಾನಕ್ಕೆ ಸೇರಿದ ಗ್ರೀಕ್ ನಾಟಕವೊಂದರಲ್ಲಿ ಬರುವ ಕೆಲವು ಮಾತುಗಳು ಕನ್ನಡದವೆಂದು ಹುಲ್ಷ್ ಎಂಬ ವಿದ್ವಾಂಸರು ಗುರುತಿಸಿದ್ದಾರೆ. ಈ ಆಧಾರದ ಮೇಲೆ ಕನ್ನಡ ನಾಡು ಆ ದೇಶಗಳೊಂದಿಗೆ ವ್ಯಾಪಾರಸಂಬಂಧ ಹೊಂದಿತ್ತೆಂದು ಗೋವಿಂದ ಪೈ, ಶ್ರೀಕಂಠಶಾಸ್ತ್ರಿ ಮೊದಲಾದವರು ತಿಳಿಸುತ್ತಾರೆ. ಈಜಿಪ್ಟಿನ ಅಲೆಕ್ಸಾಂಡ್ರಿಯ ಪಟ್ಟಣದಲ್ಲಿ ನೆಲಸಿದ್ದ ಟಾಲೆಮಿ ಗ್ರೀಕ್‌ಭಾಷೆಯಲ್ಲಿ ಬರೆದ (ಸು.130) ಭೂಗೋಳಶಾಸ್ತ್ರ ಎಂಬ ತನ್ನ ಗ್ರಂಥದಲ್ಲಿ ಬನವಾಸಿ, ಮುದ್ಗಲ್, ನಿತ್ರೀ, ಪುನ್ನಾಟ ಮೊದಲಾದ ಸ್ಥಳಗಳನ್ನು ಹೆಸರಿಸಿದ್ದಾನೆ. 1ನೆಯ ಶತಮಾನದ ಪೆರಿಪ್ಲಸ್ ಆಫ್ ದಿ ಎರಿತ್ರೇಯಿ ಯನ್ ಸೀ ಎಂಬ ಗ್ರಂಥದ ಕರ್ತೃ ಪಶ್ಚಿಮ ಭಾರತದ ಅನೇಕ ಬಂದರುಗಳಿಗೆ ಭೇಟಿ ನೀಡಿರಬೇಕೆಂಬ ಅಭಿಪ್ರಾಯವಿದೆ. ಕರ್ನಾಟಕದ ಬಯಲಾಟ ಸಂಪ್ರದಾಯಗಳು, ಅಂದರೆ ದಕ್ಷಿಣ ಕರ್ನಾಟಕದ ಮೂಡಲಪಾಯ ಮತ್ತು ಉತ್ತರ ಕರ್ನಾಟಕದ ದೊಡ್ಡಾಟಗಳು, ಹೆಚ್ಚಾಗಿ ಗ್ರೀಕ್ ರಂಗಭೂಮಿಯ ಪ್ರಯೋಗಗಳನ್ನು ಹೋಲುತ್ತವೆ ಎಂದು ಸುಂಕಾಪುರ ಮೊದಲಾದವರು ಅಭಿಪ್ರಾಯಪಟ್ಟಿದ್ದಾರೆ.

74ರಲ್ಲಿ ಮಯೊಸ್ ಹರ್ಮೊಸ್ ಬಂದರನ್ನು ಸಂದರ್ಶಿಸಿದ ಭೂಗೋಳಶಾಸ್ತ್ರಜ್ಞ ಸ್ಟ್ರಾಬೊ ಭಾರತದ ಪಶ್ಚಿಮ ಮತ್ತು ಪೂರ್ವ ಕರಾವಳಿ ಬಂದರುಗಳಿಗೆ ಸಂಚರಿಸುವ 125ಕ್ಕೂ ಹೆಚ್ಚು ಹಡಗುಗಳಿಗಾಗಿ ಆ ಬಂದರನ್ನು ನಿರ್ಮಿಸುತ್ತಿದ್ದುದನ್ನೂ ದಕ್ಷಿಣ ಭಾರತದೊಂದಿಗಿನ ಸಂಪರ್ಕ ಮಾರ್ಗವನ್ನು ಸುರಕ್ಷಿತಗೊಳಿಸಲು ಅಗಸ್ಟಸ್ ಚಕ್ರವರ್ತಿ (ಪ್ರ.ಶ.ಪೂ. 25) ಈಡನ್ ಮತ್ತು ಕೆಂಪು ಸಮುದ್ರಗಳ ಮೇಲೆ ಹತೋಟಿ ಸ್ಥಾಪಿಸಿದ್ದನ್ನೂ ತಿಳಿಸಿದ್ದಾನೆ. ಆ ಕಾಲದಲ್ಲಿ ರೋಮ್ ಸಾಮ್ರಾಜ್ಯ ಭಾರತದೊಡನೆ ವಿಶೇಷ ವ್ಯಾಪಾರ ಸಂಪರ್ಕ ಹೊಂದಿತ್ತು. ಕ್ರಿ.ಶ. 70ರ ಸುಮಾರಿನಲ್ಲಿ ರಚಿಸಿದ ಪ್ಲಿನಿಯ ನೈಸರ್ಗಿಕ ಭೂಗೋಳಶಾಸ್ತ್ರ ಗ್ರಂಥದಲ್ಲಿ ದಕ್ಷಿಣ ಭಾರತದ ಬೆಳೆಗಳು, ಆಮದು, ರಫ್ತು ವಸ್ತುಗಳು, ಖನಿಜ ಸಂಪತ್ತು, ಹಣ್ಣು ಹಂಪಲು ಮತ್ತು ಮೃಗಪಕ್ಷಿಗಳನ್ನು ವರ್ಣಿಸಲಾಗಿದೆ. ರೋಮ್ ದೇಶದ ಸ್ತ್ರೀಯರು ದಕ್ಷಿಣ ಭಾರತದಿಂದ ಆಮದಾಗುತ್ತಿದ್ದ ಅಲಂಕಾರ ವಸ್ತುಗಳಿಗಾಗಿ ಹೆಚ್ಚು ಚಿನ್ನವನ್ನು ವ್ಯಯಮಾಡುತ್ತಿದ್ದರೆಂದೂ ಈ ದೇಶದಿಂದ ಪ್ರಶಸ್ತ ರತ್ನಗಳು, ಶ್ರೀಗಂಧ, ಏಲಕ್ಕಿ, ಮೆಣಸು, ಪಾರದರ್ಶಕಗಳು; ವಜ್ರ, ರೇಷ್ಮೆ, ಅಲಂಕಾರವಸ್ತುಗಳು, ಕೋತಿ, ನವಿಲು ಮುಂತಾದವು ರಫ್ತಾಗುತ್ತಿದ್ದು ರೋಮ್‌ನಿಂದ ತಾಮ್ರ, ಸೀಸ, ಮದ್ಯ, ಮಣ್ಣಿನ ಪಾತ್ರೆಗಳು, ಗಾಜಿನ ಸಾಮಾನುಗಳು, ಖರ್ಜೂರ, ಚಿನ್ನ ಇತ್ಯಾದಿಗಳು ಆಮದಾಗುತ್ತಿದ್ದುವೆಂದೂ ಆ ಗ್ರಂಥದಿಂದ ತಿಳಿದು ಬರುತ್ತದೆ. ರೋಮ್ ದೇಶ ಭಾರತಕ್ಕೆ ಪ್ರತಿ ವರ್ಷವೂ 550 ದಶ ಲಕ್ಷ ಸೆಸ್ಟರ್ಸ್‌ಗಳಷ್ಟು ಹಣವನ್ನು ಪಾವತಿ ಮಾಡುತ್ತಿತ್ತೆಂದೂ ಪ್ರತಿವರ್ಷವೂ ರೋಮಿಗೆ 100 ದಶಲಕ್ಷ ಸೆಸ್ಟರ್ಸ್‌ಗಳಷ್ಟು ಉಳಿತಾಯದ ನಷ್ಟ ಆಗುತ್ತಿತ್ತೆಂದೂ ಅವನು ಅಂದಾಜು ಮಾಡಿದ್ದಾನೆ. ಈ ವ್ಯಾಪಾರದಲ್ಲಿ ಕರ್ನಾಟಕದ ಪಾತ್ರವೂ ಇತ್ತೆಂಬುದಕ್ಕೆ ಯಶವಂತಪುರ, ಚಂದ್ರವಳ್ಳಿ, ಆಲೂರು, ಜಾಲಹಳ್ಳಿ ಈ ಸ್ಥಳಗಳಲ್ಲಿ ದೊರೆತ ಟೈಬೀರಿಯಸ್ ಕ್ಲಾಡಿಯಸ್, ಕ್ಯಾಲಿಗುಲ ಮೊದಲಾದ ರೋಮನ್ ರಾಜರ ನಾಣ್ಯಗಳು, ಚಂದ್ರವಳ್ಳಿ, ಬ್ರಹ್ಮಗಿರಿ ಮೊದಲಾದೆಡೆ ದೊರೆತಿರುವ ಮೆಡಿಟರೇನಿಯನ್ ಪ್ರದೇಶದಿಂದ ಬಂದ ಮಣ್ಣಿನಪಾತ್ರೆ ಇತ್ಯಾದಿ ವಸ್ತುಗಳು ಸ್ಪಷ್ಟ ಸೂಚನೆ ನೀಡುತ್ತವೆ. ಸು. 5ನೆಯ ಶತಮಾನಕ್ಕೆ ಸೇರಿದ ಗ್ರಂಥ ಒಂದರಲ್ಲಿ ದಕ್ಷಿಣ ಭಾರತದ ಭೇಟಿಯ ಕಥೆಯನ್ನು ತಿಳಿಸಲಾಗಿದೆ. ಅದರಲ್ಲಿ ಪಶ್ಚಿಮ ಭಾರತದಿಂದ ಹೇಗೆ ಮೆಣಸನ್ನು ಸಂಗ್ರಹಿಸಲಾಗುತ್ತಿತ್ತೆಂದು ತಿಳಿಸಲಾಗಿದೆ.

**ಚೀನ:** ಚಂದ್ರವಳ್ಳಿಯ ಉತ್ಖನನದಲ್ಲಿ ಸು.7ನೆಯ ಶತಮಾನಕ್ಕೆ ಸೇರಿದ ಒಂದು ಹಿತ್ತಾಳೆ ನಾಣ್ಯ ದೊರೆತಿರುವುದು ಆ ಪ್ರದೇಶದೊಡನೆ ಕರ್ನಾಟಕ ಹೊಂದಿದ್ದ ಬಾಂಧವ್ಯದ ಬಗ್ಗೆ ಮಾಹಿತಿ ನೀಡುತ್ತದೆ. ಬೌದ್ಧಧರ್ಮ ಪ್ರಸಾರ ಮಾಡಲು ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದ ಪ್ರದೇಶಗಳಿಂದ ಬೌದ್ಧ ಭಿಕ್ಷುಗಳು ಚೀನಕ್ಕೆ ಹೋಗುತ್ತಿದ್ದರು ಎನ್ನಲಾಗಿದೆ. ಪ್ರಸಿದ್ಧ ಚೀನಿ ಯಾತ್ರಿಕ ಯುವಾನ್ ಚಾಂಗ್ 641–42ರಲ್ಲಿ ಕರ್ನಾಟಕವನ್ನು ಸಂದರ್ಶಿಸಿ, ಪುಲಕೇಶಿಯ ಆಸ್ಥಾನಕ್ಕೆ ಭೇಟಿ ನೀಡಿದ್ದ. ಇವನು ಪುಲಕೇಶಿಯ ಶೌರ್ಯ ಪರಾಕ್ರಮಗಳನ್ನೂ ಕನ್ನಡಿಗರ ಉದಾತ್ತಗುಣಗಳನ್ನೂ ಹೊಗಳಿದ್ದಾನೆ. 692ರಲ್ಲಿ ಚಳುಕ್ಯ ವಿನಯಾದಿತ್ಯ ಚೀನಕ್ಕೆ ರಾಯಭಾರಿ ನಿಯೋಗವನ್ನು ಕಳುಹಿಸಿದ್ದ. ದಕ್ಷಿಣ ಭಾರತದ ರಾಜಧಾನಿಗಳಿಗೆ ಮಧ್ಯಯುಗದಲ್ಲಿ ಚೀನದ ದೊರೆಗಳು ಕಳುಹಿಸಿದ ವಿವಿಧ ರಾಯಭಾರಿ ನಿಯೋಗಗಳ ಬಗ್ಗೆ ದಾಖಲೆಗಳಿವೆ. ಸು. 6ನೆಯ ಶತಮಾನದ ಕಾಸ್ಮಾಸ್ ಪಶ್ಚಿಮ ಕರಾವಳಿಯ ಮಂಗಳೂರು, ಮಲ್ಪೆ ಮೊದಲಾದ ರೇವುಗಳನ್ನು ಹೆಸರಿಸಿದ್ದಾನಲ್ಲದೆ ಚೀನ ಮೊದಲಾದ ದೇಶಗಳಿಂದ ರೇಷ್ಮೆ, ಲವಂಗ ಮುಂತಾದ ಸರಕುಗಳು ಈ ರೇವುಗಳಿಗೆ ಬಂದು ಅಲ್ಲಿಂದ ವಿದೇಶಗಳಿಗೆ ನಿರ್ಯಾತವಾಗುತ್ತಿದ್ದವೆಂದು ಹೇಳಿದ್ದಾನೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಚೀನಿ ದಂಡನಾಯಕ ಚೆಂಗ್‌ಹೋನ ನೇತೃತ್ವದಲ್ಲಿ ಪ್ರಯಾಣ ಮಾಡಿದ ಚೀನಿ ನೌಕಾತಂಡ ಕೊಚ್ಚಿ, ಕಲ್ಲಿಕೋಟೆ ಮೊದಲಾದ ರೇವುಗಳನ್ನು ಸಂದರ್ಶಿಸಿತು. ಅದು ಸಿಂಹಳ ಮತ್ತು ಪೂರ್ವ ಆಫ್ರಿಕದವರೆಗೂ ಪ್ರಯಾಣಮಾಡಿತೆಂದು ತಿಳಿದುಬರುತ್ತದೆ. ಈ ಬಗ್ಗೆ ವಿವರಗಳನ್ನು ಸಹಪ್ರಯಾಣಿಕನಾಗಿದ್ದ ಮಾಹುಅನ್ ಎಂಬುವನು ನೀಡಿದ್ದಾನೆ (1416). ಚೀನೀಯರು ಚಿನ್ನ, ತಾಮ್ರದ ವಸ್ತುಗಳು, ನೀಲಿ, ಬಿಳಿ ಪಿಂಗಾಣಿ, ಬಣ್ಣದ ಸ್ಯಾಟಿನ್ ಬಟ್ಟೆ, ತವರ, ಪನ್ನೀರು ಮೊದಲಾದ ವಸ್ತುಗಳನ್ನು ಮಾರುತ್ತಿದ್ದರೆಂದು ಮಾಹುಅನ್ ಮತ್ತು ಪೈಗೀನ್ಸ್‌ರು ಹೇಳಿದ್ದಾರೆ.

**ಆಗ್ನೇಯ ಏಷ್ಯ :** ಸುಮಾರು ಒಂದರಿಂದ ಮೂರನೆಯ ಶತಮಾನದ ಅವಧಿಯಲ್ಲಿ ಆಗ್ನೇಯ ಏಷ್ಯ ದ್ವೀಪಗಳು ಮತ್ತು ಇಂಡೋಚೀನದಲ್ಲಿ ಭಾರತೀಯರು ನೆಲೆಗೊಂಡು ರಾಜ್ಯ ಸ್ಥಾಪಿಸಿದರೆಂದು ಸ್ಪಷ್ಟವಾಗಿದೆ. ಆದರೆ ಭಾರತದ ಯಾವ ಭಾಗದಿಂದ ಮೊದಲಿಗೆ ಅಲ್ಲಿ ಹೋಗಿ ನೆಲಸಿದರೆಂಬುದಕ್ಕೆ ನಿಖರವಾದ ಆಧಾರಗಳಿಲ್ಲ. ಕೆಲವು ಇತಿಹಾಸಕಾರರು ಬಂಗಾಲ, ಒರಿಸ್ಸ ಮತ್ತು ಆಂಧ್ರಗಳಿಂದ ಮೊದಲು ಅಲ್ಲಿಗೆ ಹೋದರೆಂದು ಅಭಿಪ್ರಾಯಪಟ್ಟಿದ್ದಾರೆ. 3ನೆಯ ಶತಮಾನದಲ್ಲಿ ಭಾರತದ ಪಶ್ಚಿಮ ಕರಾವಳಿಯ ರೇವುಗಳಿಂದ ಕಾಂಬೋಡಿಯ ದೇಶಕ್ಕೆ ವ್ಯಾಪಾರಕ್ಕಾಗಿ ವರ್ತಕರು ಹೋಗುತ್ತಿದ್ದರೆಂದು ಕೆಲವು ಚೀನಿ ಗ್ರಂಥಗಳಲ್ಲಿ ಹೇಳಿದೆ.

ಆದರೆ ಕರ್ನಾಟಕದೊಡನೆ ಈ ಪ್ರದೇಶಗಳು ಎಷ್ಟರಮಟ್ಟಿಗೆ ಸಂಬಂಧ ಪಡೆದಿದ್ದವು ಎಂದು ನಿಖರವಾಗಿ ಹೇಳುವುದು ಕಷ್ಟ. ಇದರ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಡಿ.ಸಿ. ಸರ್ಕಾರ್, ಆರ್.ಸಿ. ಮುಜುಮ್‌ದಾರ್ ಮೊದಲಾದವರು ಶಾಸನಗಳ ಆಧಾರದ ಮೇಲೆ ಕೆಲವೊಂದು ಮಾಹಿತಿಗಳನ್ನು ಒದಗಿಸಿದ್ದಾರೆ. ಎಸ್. ನಾಗರಾಜು ಅವರು ಕರ್ನಾಟಕದ ಶಾಸನಗಳಿಗೂ ಆ ಪ್ರದೇಶಗಳಲ್ಲಿನ ಶಾಸನಗಳಿಗೂ ಲಿಪಿ, ಶೈಲಿ ಮೊದಲಾದ ದೃಷ್ಟಿಗಳಿಂದ ಇರುವ ಸಾಮ್ಯತೆಯಿಂದ ಮತ್ತು ಶಾಸನಗಳಲ್ಲಿ ವ್ಯಕ್ತವಾಗುವ ರಾಜಕೀಯ ಅಂಶಗಳಿಂದ ಈ ಬಾಂಧವ್ಯದ ನಿರೂಪಣೆ ಮಾಡಿದ್ದಾರೆ.

ಚಳುಕ್ಯ ಎರಡನೆಯ ವಿನಯಾದಿತ್ಯ ಕಾಂಬೋಡಿಯದ ಮೇಲೆ ಕಪ್ಪ ವಿಧಿಸಿದ್ದನೆಂದು ಎಸ್. ನಾಗರಾಜು ಅವರು ಪ್ರತಿಪಾದಿಸಿದ್ದಾರೆ. ಶಾಸನದಲ್ಲಿ ಬರುವ ಕಮೇರ, ಪಾರಸೀಕ ಮತ್ತು ಸಿಂಹಳ ಎಂಬ ಪದಗಳು ಅನುಕ್ರಮವಾಗಿ ಕಾಂಬೋಡಿಯ, ಪರ್ಷಿಯ ಮತ್ತು ಸಿಂಹಳವನ್ನು ಕುರಿತವೆಂದು ಅಭಿಪ್ರಾಯಪಡಲಾಗಿದೆ. ಚಳುಕ್ಯರ ಆಧಿಪತ್ಯ ಕಾಂಬೋಡಿಯದ ಮೇಲೆ ಸ್ಥಾಪಿತವಾಗಲು ಅವರ ಸಾಮಂತರಾಗಿದ್ದ ಗಂಗರು ಬಹಳಮಟ್ಟಿಗೆ ಕಾರಣರಾದರು. ಕಂಬುಜದಲ್ಲಿ ದೊರೆತಿರುವ ಎರಡನೆಯ ಭವವರ್ಮನ ಶಾಸನದಲ್ಲಿ ಕೊಂಗುವರ್ಮನೆಂಬುವನ ಹೆಸರಿದೆ. ಇದು ಕರ್ನಾಟಕದ ಗಂಗ ಮತ್ತು ಕದಂಬರಲ್ಲಿ ಕಂಡುಬರುವ ಕೊಂಗಣಿವರ್ಮ, ಕಂಗವರ್ಮ ಮೊದಲಾದ ವ್ಯಕ್ತಿಗಳನ್ನು ನೆನಪಿಗೆ ತರುತ್ತದೆ. ಫುನನ್‌ನ ಪ್ರಾಚೀನ ದೊರೆಗಳು ಕದಂಬೇಶ್ವರನೆಂಬ ದೇವರನ್ನು ಪೂಜಿಸುತ್ತಿದ್ದರೆಂದು ಕಂಬುಜದ ಆಶಾನವರ್ಮನ 627ರ ಶಾಸನ ತಿಳಿಸುತ್ತದೆ. ಆ ಕಾಲದ ಅಲ್ಲಿಯ ಲಿಪಿಗಳೂ ಕರ್ನಾಟಕದ ಕದಂಬ ಶಾಸನಗಳ ಲಿಪಿಗಳಂತೆಯೇ ಇರುವುವು. ಆ ಕಾಲದಲ್ಲಿ ಭಾರತದಲ್ಲಿ ಬಾದಾಮಿಯ ಚಳುಕ್ಯರಲ್ಲಿ ಮಾತ್ರ ರೂಢಿಯಲ್ಲಿದ್ದ ಶಕಗಣನೆ ಕಂಬುಜದ ಶಾಸನಗಳಲ್ಲೂ ಕಂಡುಬಂದಿದೆ.

ಇಂದಿನ ವಿಯೆಟ್ನಾಮ್‌ನ ಬಹುತೇಕ ಭಾಗ ಚಂಪಾ ರಾಜ್ಯಕ್ಕೆ ಸೇರಿತ್ತು. ಇಲ್ಲಿ 5–6ನೆಯ ಶತಮಾನದಲ್ಲಿ ಆಳಿದ ಭದ್ರವರ್ಮನೆಂಬುವನ ಶಾಸನಗಳಿಗೂ ಕದಂಬರ ಶಿಲಾ ಮತ್ತು ತಾಮ್ರಶಾಸನಗಳಿಗೂ ಲಿಪಿಯಲ್ಲಿ ಸಾಮ್ಯ ಇರುವುದು ಕಂಡುಬರುತ್ತದೆ. ಚಂಪಾ ರಾಜ್ಯವನ್ನು ಆಳಿದ ಪ್ರಾಚೀನ ಅರಸರಲ್ಲಿ ಅನೇಕರು ತಾವು ಗಂಗ ರಾಜವಂಶಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಇಲ್ಲಿ ಆಳಿದ ಮೊದಲ ದೊರೆಯ ಹೆಸರು ಶ್ರೀಮಾರ. ತಲಕಾಡಿನ ಗಂಗರಲ್ಲೂ ಈ ತರಹದ ಹೆಸರಿರುವುದು ಗಮನಾರ್ಹ. ಶಿವಮೊಗ್ಗ ತಾಲ್ಲೂಕಿನಲ್ಲಿರುವ ಗಂಗರ ಶಾಸನದಲ್ಲಿ ಗಂಗವಂಶದ ವಿಜಯಾದಿತ್ಯನೆಂಬುವನ ಬಗ್ಗೆ ದ್ವೀಪಾಧಿಪರೊಳ್‌ನ್ರಿಪಕೋಪಾನಳ ಶಿಖೆಯೆನಿಪ್ಪ ವಿಜಯಾದಿತ್ಯಂ ಎಂದು ವರ್ಣನೆ ಇದೆ.

ಈಗಿನ ಥೈಲೆಂಡ್‌ನಲ್ಲಿರುವ ಖಾನ್ ಥೇವಡ ಎಂಬಲ್ಲಿ ದೊರಕಿರುವ ಒಂದು ಶಾಸನದ ಲಿಪಿ ಸ್ವರೂಪದಲ್ಲಿ ಬಾದಾಮಿ, ಹಲ್ಮಿಡಿ ಮತ್ತು ತಾಳಗುಂದ ಶಾಸನಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಮಲಯದಲ್ಲಿ ದೊರೆತಿರುವ 6ನೆಯ ಶತಮಾನದ ಒಂದು ಶಾಸನದಲ್ಲಿ ಶ್ರೀ ವಿಷ್ಣುವರ್ಮಸ್ಯ ಎಂಬ ಉಲ್ಲೇಖವಿದ್ದು, ಅದರ ಲಿಪಿ ಸ್ವರೂಪ ಕರ್ನಾಟಕದ ಸಮಕಾಲೀನ ಲಿಪಿಯನ್ನು ಹೋಲುತ್ತದೆ. ಎಂಟನೆಯ ಶತಮಾನದ ಹೊತ್ತಿಗೆ ಶಕಗಣನೆ ಸಹ ಇಲ್ಲಿ ಪ್ರಾರಂಭವಾಯಿತು. 1365ರಲ್ಲಿ ಜಾವದಲ್ಲಿ ರಚಿತವಾದ ನಾಗರಕೃತಾಗಮವೆಂಬ ಐತಿಹಾಸಿಕ ಕೃತಿಯಲ್ಲಿ ಜಾವದ ಮಜಪಹಿತ್ ರಾಜ್ಯ ಅನೇಕ ದೇಶಗಳೊಡನೆ ಹೊಂದಿದ್ದ ಬಾಂಧವ್ಯದ ಬಗ್ಗೆ ಪ್ರಸ್ತಾಪವಿದೆ. ಅದರಲ್ಲಿ ಕರ್ನಾಟಕ ದೇಶದೊಡನೆ ಆ ರಾಜ್ಯ ವ್ಯಾಪಾರ ಸಂಬಂಧ ಹೊಂದಿದ್ದುದು ತಿಳಿದುಬರುತ್ತದೆ. ಜಾವದಲ್ಲಿರುವ ಅತ್ಯಂತ ಪ್ರಾಚೀನ ಹಿಂದು ದೇವಾಲಯ ತುಂಗಭದ್ರಾ ತೀರದಲ್ಲಿದ್ದ ದೇವಾಲಯವೊಂದರ ಮಾದರಿಯಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಲಾಗಿದೆ. ವಿಜಯನಗರ ಕಾಲದಲ್ಲಿ ಬೋರ್ನಿಯೋ ದ್ವೀಪದಿಂದ ವಿಜಯನಗರಕ್ಕೆ ಪಚ್ಚಕರ್ಪೂರ ಬರುತ್ತಿತ್ತೆಂದು ಬಾರ್ಬೊಸಾ ಎಂಬ ಪ್ರವಾಸಿ ತಿಳಿಸಿದ್ದಾನೆ.

ಬರ್ಮಾ ದೇಶದಲ್ಲಿ ದೊರೆತಿರುವ 6–7ನೆಯ ಶತಮಾನದ ಶಾಸನಗಳು ರಚನಾಕ್ರಮದಲ್ಲಿ ಕರ್ನಾಟಕದ ಕದಂಬರ ಶಾಸನಗಳನ್ನೇ ಹೋಲುತ್ತವೆಂದು ಡಿ.ಸಿ. ಸರ್ಕಾರ್ ಅಭಿಪ್ರಾಯಪಟ್ಟಿದ್ದಾರೆ. ಬರ್ಮಾದ ಪ್ರಸಿದ್ಧ ಶಾಸನ ತಜ್ಞ ಸಿಯೆನ್‌ಕೋ ಅವರು ಅಲ್ಲಿಯ ಮುಖ್ಯ ಲಿಪಿಗಳಾದ ಪ್ಯು, ತಲೈಂಗ್, ಬರ್ಮಾ ಮತ್ತು ಶಾನ್ ಇವು ದಕ್ಷಿಣ ಭಾರತದ ಕನ್ನಡ–ತೆಲುಗು ಲಿಪಿಯಿಂದ ವಿಕಾಸಗೊಂಡವೆಂದು ಹೇಳಿದ್ದಾರೆ. ಅದರಲ್ಲಿ ಪ್ಯು ಲಿಪಿ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ಕದಂಬರ ಲಿಪಿಯಿಂದ ನೇರವಾಗಿ ಬಂದುದೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಬರ್ಮಾದ ಶ್ರೀಕ್ಷೇತ್ರಕ್ಕೆ (ಪ್ರೋಮ್) ವನವಾಸಿ ಎಂದು ಹೆಸರಿದ್ದುದೂ ಕುತೂಹಲಕಾರಿಯಾಗಿದೆ.

**ಶ್ರೀಲಂಕಾ (ಸಿಂಹಳ):** ಸಿಂಹಳ ದ್ವೀಪದೊಂದಿಗೆ ಕರ್ನಾಟಕದ ಬಾಂಧವ್ಯ ಬಹಳ ವಿಶಿಷ್ಟವಾದುದು. ಈ ವಿಷಯದ ಬಗ್ಗೆ ಅನೇಕ ವಿವರಗಳನ್ನು ಎಸ್. ನಾಗರಾಜು ನೀಡಿದ್ದಾರೆ. ಶ್ರೀಲಂಕಾದ ದುಟ್ಟಗಾಮಣಿ ಎಂಬ ಅರಸ (ಪ್ರ.ಶ.ಪೂ. 101–77) ಅನುರಾಧಪುರದ ಮಹಾಸ್ತೂಪಕ್ಕೆ ಅಸ್ತಿಭಾರ ಹಾಕಿದ ಸಮಾರಂಭಕ್ಕೆ ಆಗಮಿಸಿದ್ದ ವಿವಿಧ ದೇಶಗಳ ಬೌದ್ಧಭಿಕ್ಷುಗಳಲ್ಲಿ ವನವಾಸಿ ದೇಶದಿಂದ ಥೇರ ಚಂದ್ರಗುಪ್ತನ ನೇತೃತ್ವದಲ್ಲಿ 88,000 ಭಿಕ್ಷುಗಳು ಬಂದಿದ್ದರೆಂದು ಮಹಾವಂಸದಲ್ಲಿ ಹೇಳಿದೆ. ಚಳುಕ್ಯ ಎರಡನೆಯ ಪುಲಕೇಶಿಯ ಕಾಲದಲ್ಲಿ ಪಲ್ಲವರು ಬಾದಾಮಿಯನ್ನು ಮುತ್ತಿದಾಗ ಶ್ರೀಲಂಕಾದ ರಾಜಕುಮಾರ ಮಾನವರ್ಮ ಪಲ್ಲವರ ಪರವಾಗಿ ಯುದ್ಧದಲ್ಲಿ ಭಾಗವಹಿಸಿದ್ದ ಚಳುಕ್ಯ ವಿನಯಾದಿತ್ಯ, ರಾಷ್ಟ್ರಕೂಟ 3ನೆಯ ಗೋವಿಂದ ಮತ್ತು 3ನೆಯ ಕೃಷ್ಣರು ಶ್ರೀಲಂಕಾವನ್ನು ಗೆದ್ದಿದ್ದರೆಂದು ಐತಿಹಾಸಿಕ ಆಧಾರಗಳಿಂದ ತಿಳಿದುಬರುತ್ತದೆ. ಸಿಂಹಳದ ಶ್ರೀವಲ್ಲಭ ಮದನರಾಜ ಎಂಬ ರಾಜ ಕನ್ನರ ಅಂದರೆ ರಾಷ್ಟ್ರಕೂಟರ 3ನೆಯ ಕೃಷ್ಣನ ಆಸ್ಥಾನದಲ್ಲಿದ್ದನೆಂದು ಶಾಸನ ಒಂದರಲ್ಲಿ ತಿಳಿಸಲಾಗಿದೆ. ಗಂಗರ ಅನೇಕ ನಾಣ್ಯಗಳು ಶ್ರೀಲಂಕಾದಲ್ಲಿ ದೊರೆತಿವೆ. ಚಾಳುಕ್ಯ ಆರನೆಯ ವಿಕ್ರಮಾದಿತ್ಯ ಸಿಂಹಳದ ಮೇಲೆ ಆಧಿಪತ್ಯ ಸ್ಥಾಪಿಸಿದ್ದ. ಹೊಯ್ಸಳ ದಂಡನಾಯಕ ಗೋಪಯ್ಯ ಶತ್ರುವಿನ ಕಡೆ ಸೇರಿದ್ದ ಸಿಂಹಳದ ಪರಾಕ್ರಮ ಬಾಹುವನ್ನು ಕೊಂದನೆಂದು ಹೇಳಲಾಗಿದೆ. ಅವನಿಗೆ ಸಮುದ್ರಗೋಪಯ್ಯನೆಂಬ ಬಿರುದೂ ಇತ್ತು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ವಿರೂಪಾಕ್ಷ, 2ನೆಯ ದೇವರಾಯ, ಕೃಷ್ಣದೇವರಾಯ, ಅಚ್ಯುತರಾಯ, ರಾಮರಾಯ ಇತ್ಯಾದಿ ಸಾಮ್ರಾಟರೆಲ್ಲ ಶ್ರೀಲಂಕಾದ ಮೇಲೆ ಪರಮಾಧಿಕಾರ ಹೊಂದಿದ್ದರೆಂದು ಶಾಸನಗಳು ಸೂಚಿಸುತ್ತವೆ. ಶ್ರೀಲಂಕಾದ ವಿವಿಧ ಭಾಗಗಳಲ್ಲಿ ವಿಜಯನಗರದ ಚಿನ್ನದ ನಾಣ್ಯಗಳು ದೊರೆತಿವೆ. ಸಾಮಾನ್ಯವಾಗಿ ಕರ್ನಾಟಕದ ರಾಜರುಗಳ ತಮಿಳುನಾಡು ಮತ್ತು ಕೇರಳದ ಪ್ರದೇಶಗಳ ಮೇಲೆ ರಾಜಕೀಯ ಪ್ರಾಬಲ್ಯ ಸ್ಥಾಪಿಸಿದಾಗ ಶ್ರೀಲಂಕಾದೊಂದಿಗೆ ನೇರ ಸಂಪರ್ಕ ಏರ್ಪಡುತ್ತಿತ್ತು. ವಿಜಯನಗರ ಕಾಲದ ತರುವಾಯ ಕರ್ನಾಟಕದಲ್ಲಾದ ರಾಜಕೀಯ ಬದಲಾವಣೆಗಳಿಂದಾಗಿ ಶ್ರೀಲಂಕಾದೊಂದಿಗೆ ನೇರ ಸಂಪರ್ಕ ಕಡಿದುಹೋಯಿತು. ತರುವಾಯ ಐರೋಪ್ಯರು ಮತ್ತು ಅರಬ್ಬರ ಮೂಲಕ ವ್ಯಾಪಾರ ಸಂಬಂಧ ಮಾತ್ರ ಅಪ್ರತ್ಯಕ್ಷವಾಗಿ ನಡೆದು ಬಂದಿತು.

**ಪಶ್ಚಿಮ ಏಷ್ಯ ಮತ್ತು ಆಫ್ರಿಕ :** ಅರಬ್ಬರು ಬಹು ಹಿಂದಿನಿಂದಲೂ ಕರ್ನಾಟಕದೊಡನೆ ವ್ಯಾಪಾರಸಂಬಂಧವಿಟ್ಟುಕೊಂಡಿದ್ದರು. ಪರ್ಷಿಯ

ಕೊಲ್ಲಿ ಮತ್ತು ದಕ್ಷಿಣ ಭಾರತದ ಪಶ್ಚಿಮ ತೀರದ ನಡುವೆ ಇತಿಹಾಸದ ಆರಂಭಕಾಲದಿಂದಲೂ ವ್ಯಾಪಾರಸಂಬಂಧವಿದ್ದದ್ದು ಕಂಡುಬರುತ್ತದೆ. ಪರ್ಷಿಯ ದೇಶದ ಚಕ್ರವರ್ತಿ ಖುಸ್ರು ಇಮ್ಮಡಿ ಪುಲಕೇಶಿಯ ಆಸ್ಥಾನಕ್ಕೆ ತನ್ನ ರಾಯಭಾರಿಗಳನ್ನು ಕಳುಹಿಸಿದ್ದ. 9ನೆಯ ಶತಮಾನದಿಂದ ಅರಬ್ ಭೂಗೋಳಶಾಸ್ತ್ರಜ್ಞರು ಮತ್ತು ಬರೆಹಗಾರರು ತಮ್ಮ ಗ್ರಂಥದಲ್ಲಿ ದಕ್ಷಿಣ ಭಾರತ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ಸಂಗತಿಗಳನ್ನು ಹೆಚ್ಚುಹೆಚ್ಚಾಗಿ ವಿವರಿಸುತ್ತ ಬಂದಿದ್ದಾರೆ. ಇಬ್ನ್‌ಖುರ್ದಾಸ್‌ಬೇ ಎಂಬುವನು ದಕ್ಷಿಣ ಭಾರತದ ಹಲವು ಸಂಗತಿಗಳನ್ನು ತನ್ನ ಗ್ರಂಥದಲ್ಲಿ ಬರೆದಿದ್ದಾನೆ. ಅವನು ರಾಷ್ಟ್ರಕೂಟರ ಆಡಳಿತವನ್ನು ಪ್ರಸ್ತಾಪಿಸಿದ್ದಾನೆ. ಪ್ರಸಿದ್ಧ ಅರಬ್ ಪ್ರವಾಸಿ ಸುಲೇಮಾನ್ 851ರ ಸುಮಾರಿನಲ್ಲಿ ರಾಷ್ಟ್ರಕೂಟ ನೃಪತುಂಗನ (ಬಲ್ಹರ) ಆಸ್ಥಾನವನ್ನು ಸಂದರ್ಶಿಸಿದ. ರಾಷ್ಟ್ರಕೂಟರದು ಭಾರತದಲ್ಲೇ ಅತ್ಯಂತ ಪ್ರಬಲವಾದ ಸಾಮ್ರಾಜ್ಯವೆಂದೂ ಆ ಪ್ರಭುತ್ವವು ಪ್ರಪಂಚದ ನಾಲ್ಕು ಮುಖ್ಯ ಪ್ರಭುತ್ವಗಳಲ್ಲಿ ಒಂದೆಂದೂ ಅವನು ವರ್ಣಿಸಿದ್ದಾನೆ. 10ನೆಯ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ್ದ ಬಾಗ್ದಾದಿನ ಅಲ್ ಮಸೂದಿ ರಾಷ್ಟ್ರಕೂಟರ ಆಡಳಿತದ ಬಗ್ಗೆ ತಿಳಿಸಿದ್ದಾನೆ. ಅರಬ್ ಮೂಲದ ಸದನೊ ಎಂಬವನು ಗೋವೆಯ ಕದಂಬರ ಒಂದನೆಯ ಜಯಕೇಶಿಯ ಪ್ರಧಾನ ಮಂತ್ರಿಯಾಗಿದ್ದನೆಂದು ಹೇಳಲಾಗಿದೆ. ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಅರಬ್ಬರೊಂದಿಗೆ ವ್ಯಾಪಾರಸಂಬಂಧವಿತ್ತು. ಚಿನ್ನ, ಖರ್ಜೂರ, ತವರ, ಕುದುರೆಗಳು, ದ್ರಾಕ್ಷಿ, ಚಾಕು, ಕತ್ತಿ ಮೊದಲಾದ ವಸ್ತುಗಳನ್ನು ಅರಬ್ ವರ್ತಕರು ತಂದು ಕರ್ನಾಟಕದಲ್ಲಿ ಮಾರುತ್ತಿದ್ದರು. ದಕ್ಷಿಣ ಭಾರತದಲ್ಲಿ ಅರಬ್ಬೀ ಕುದುರೆಗಳಿಗೆ ಭಾರಿ ಬೇಡಿಕೆ ಇತ್ತು. ಇಲ್ಲಿಂದ ಸಂಬಾರ ಪದಾರ್ಥಗಳು ಮತ್ತಿತರ ವಸ್ತುಗಳನ್ನು ಕೊಂಡೊಯ್ಯುತ್ತಿದ್ದರು. ಪರ್ಷಿಯದೊಡನೆ ಇದ್ದ ವ್ಯಾಪಾರಸಂಬಂಧ ಉಲ್ಲೇಖ ಅನೇಕ ಪ್ರಾಚೀನ ಶಾಸನಗಳಲ್ಲಿ ದೊರೆಯುತ್ತದೆ.

14ನೆಯ ಶತಮಾನದಲ್ಲಿ ಭಾರತದಲ್ಲಿ ಸಂಚರಿಸಿದ ಮೊರಾಕ್ಕೋ ದೇಶದ ಟ್ಯಾಂಜೀರ್ ಪಟ್ಟಣದ ಇಬ್ನ್ ಬತೂತ ಎಂಬ ಪ್ರವಾಸಿ ಕರ್ನಾಟಕದ ಹೊನ್ನಾವರ, ಬಸರೂರು, ಬಾರಕೂರು, ಮಂಗಳೂರು ಬಂದರುಗಳನ್ನು ಸಂದರ್ಶಿಸಿದ್ದ. ಫಾರ್ಸ್ ಮತ್ತು ಎಮೆನ್ ಕಡೆಗಳಿಂದ ಹಡಗುಗಳು ಆ ಕಾಲದಲ್ಲಿ ಪಶ್ಚಿಮ ಕರಾವಳಿಗೆ ಬರುತ್ತಿದ್ದುದು ಇವನ ಬರೆವಣಿಗೆಯಿಂದ ತಿಳಿದುಬರುತ್ತದೆ. ಇವನು ಕಣ್ಣಾನೂರಿನಲ್ಲಿ ಬಾಗ್ದಾದಿನ ಪಂಡಿತನೊಬ್ಬನನ್ನು ಕಂಡುದಾಗಿ ತಿಳಿಸುತ್ತಾನೆ. ಮಾರ್ಕೊಪೋಲೊ (13ನೆಯ ಶತಮಾನ) ಚೀನದಿಂದ ಯುರೋಪಿಗೆ ಮರಳುವಾಗ ದಕ್ಷಿಣ ಭಾರತದ ಮಲಬಾರ್ ತೀರವನ್ನು ಸಂದರ್ಶಿಸಿದ. ಇಲ್ಲಿಯ ವರ್ತಕರು ಕಿಷ್, ಹೊರ್ಮೆಸ್ ದೋಫರ್, ಸೊಯರ್ (ಸೊಹಾರ್) ಮತ್ತು ಏಡನ್ನಿನ ವ್ಯಾಪಾರಿಗಳಿಂದ ಸಾವಿರಾರು ಕುದುರೆಗಳನ್ನು ಕೊಂಡುಕೊಳ್ಳುತ್ತಾರೆ ಎಂದು ಅವನು ತಿಳಿಸಿದ್ದಾನೆ. ಭಾರತದಲ್ಲಿ ಮತ್ತು ಆಫ್ರಿಕದಲ್ಲಿ ರಾಗಿ ಪ್ರಾಚೀನ ಕಾಲದಿಂದಲೂ ಮುಖ್ಯ ಆಹಾರ ಬೆಳೆಯಾಗಿರುವುದು ಈ ಸಂಪರ್ಕಗಳ ಬಗ್ಗೆ ಕುತೂಹಲ ಕೆರಳಿಸಿದೆ.

1441ರಲ್ಲಿ ಪರ್ಷಿಯದ ದೊರೆ ಷಾರುಖ್‌ನ ವಿಶೇಷ ರಾಯಭಾರಿಯಾಗಿ ಅಬ್ದುಲ್ ರಜಾಕ್ ಎಂಬವನು ವಿಜಯನಗರಕ್ಕೆ ಹೊರಟ. 1442ರಲ್ಲಿ ಕಲ್ಲಿಕೋಟೆಗೆ ಬಂದು ತಲುಪಿದ. ಕಲ್ಲಿಕೋಟೆ ರೇವಿನಲ್ಲಿ ಅಬಿಸೀನಿಯ, ಜಿರ್ಬಾದ್ ಮತ್ತು ಜಾಂಜಿಬಾರ್ ದೇಶಗಳಿಂದ ಬಂದ ವಸ್ತುಗಳನ್ನು ಹೇರಳವಾಗಿ ಕಾಣಬಹುದು. ಮೆಕ್ಕಾ ಮತ್ತು ಹಿಜಾಜಿನಿಂದಲೂ ಇಲ್ಲಿಗೆ ಹಡಗುಗಳು ಬರುತ್ತಿದ್ದುವು ಎಂದು ಅವನು ತಿಳಿಸಿದ್ದಾನೆ. ಅವನು ಮಂಗಳೂರಿನ ಮೂಲಕ ವಿಜಯನಗರಕ್ಕೆ ಬಂದ. ಸುಮೇರಿಯದಿಂದ ವಿಜಯನಗರಕ್ಕೆ ಬಂದಿದ್ದ ರಾಯಭಾರಿಯ ಬಗ್ಗೆ ಅವನು ಪ್ರಸ್ತಾಪಿಸಿದ್ದಾನೆ. 1500ರ ಸುಮಾರಿನಲ್ಲಿ ಭಾರತಕ್ಕೆ ಬಂದಿದ್ದ ಬಾರ್ಬೊಸಾ ವಿಜಯನಗರವನ್ನು ಸಂದರ್ಶಿಸಿದ. ಇವನು ಅಲೆಕ್ಸಾಂಡ್ರಿಯ ಮತ್ತು ಕೈರೋಗಳಿಂದ ದ್ರಾಕ್ಷಿ, ತಾಮ್ರ, ಪಾದರಸ, ಸಿಂಧೂರ, ಕೇಸರಿ, ಗುಲಾಬಿ ಅತ್ತರು, ಕೆಂಪು ರೇಷ್ಮೆ ಮೊದಲಾದ ವಸ್ತುಗಳು ಭಾರತದ ರೇವುಗಳಿಗೆ ಬರುತ್ತವೆಂದು ತಿಳಿಸಿದ್ದಾನೆ. ವಿಜಯನಗರದಲ್ಲಿ ಆರ್ಮೇನಿಯನ್ನರಿದ್ದುದನ್ನು ಅವನು ಉಲ್ಲೇಖಿಸಿದ್ದಾನೆ. ವಿಜಯನಗರದಿಂದ ತುರ್ಕಿಗೆ ಒಡವೆಗಳು ಮತ್ತು ಚಿನ್ನದ ಪಗೋಡಗಳು ಹೋಗುತ್ತಿದ್ದವೆಂದು 1560ರ ದಶಕದಲ್ಲಿ ವಿಜಯನಗರ, ಬಿಜಾಪುರಗಳಿಗೆ ಬಂದಿದ್ದ ಸೀಜರ್ ಫ್ರೆಡರಿಕ್ ಉಲ್ಲೇಖಿಸಿದ್ದಾನೆ.

ಆಫ್ರಿಕದ ತೀರ ಮತ್ತು ಪಶ್ಚಿಮ ಏಷ್ಯದ ಮೂಲಕ ಅನೇಕ ಐರೋಪ್ಯ ಹಾಗೂ ಮುಸ್ಲಿಂ ವ್ಯಾಪಾರಿಗಳು, ಪ್ರವಾಸಿಗಳು ಬಂದು ಹೋಗುತ್ತಿದ್ದರು. ಅವರೆಲ್ಲ ಕರ್ನಾಟಕದ ಪಶ್ಚಿಮ ತೀರದ ಬಂದರುಗಳಲ್ಲಿ ನಡೆಯುತ್ತಿದ್ದ ವಿದೇಶೀ ವ್ಯಾಪಾರದ ಬಗ್ಗೆ ವಿವರಿಸಿದ್ದಾರೆ. ಆ ವಿವರಣೆಗಳಿಂದ ತಿಳಿದುಬರುವ ಸಂಗತಿಗಳನ್ನು ಹೀಗೆ ಕ್ರೋಡೀಕರಿಸಬಹುದು. ವಿಜಯನಗರ ರಾಜ್ಯದಲ್ಲಿ ಕರ್ನಾಟಕದ ಹೊನ್ನಾವರ, ಮಂಗಳೂರು, ಬಾರಕೂರು, ಬಸರೂರು, ಭಟ್ಕಳ, ಹಾಗೂ ಬಿಜಾಪುರ ರಾಜ್ಯದಲ್ಲಿ ಗೋವ, ಚೌಲ್ ಮತ್ತು ದಾಬೋಲ್‌ಗಳು ಮುಖ್ಯ ರೇವುಗಳಾಗಿದ್ದವು. ಇವುಗಳ ಮೂಲಕ ಪರ್ಷಿಯ, ಅರೇಬಿಯ, ಇಥಿಯೋಪಿಯ, ಬರ್ಬರ, ಜರ್ಮನಿ, ಅಂಗೋಲ, ತುರ್ಕಿ, ಮೊಜಾಂಬಿಕ್, ಸ್ಪೇನ್ ಮೊದಲಾದ ಪ್ರದೇಶಗಳೊಡನೆ ವ್ಯಾಪಾರ ನಡೆಯುತ್ತಿತ್ತು. ಸಕ್ಕರೆ, ಸಂಬಾರ ಪದಾರ್ಥಗಳು, ಹತ್ತಿ ವಸ್ತುಗಳು, ಮಸ್ಲಿನ್ ಬಟ್ಟೆ ಮತ್ತು ವಜ್ರಗಳು ಇಲ್ಲಿಂದ ರಫ್ತಾಗುತ್ತಿದ್ದವು. ಆ ಕಾಲದಲ್ಲಿ ನೀಗ್ರೊ ವ್ಯಾಪಾರ ಸಹ ಇತ್ತೆಂಬುದಾಗಿ 17ನೆಯ ಶತಮಾನದಲ್ಲಿ ಮಲಬಾರ್ ಮತ್ತು ಗೋವಕ್ಕೆ ಬಂದ ಫ್ರೆಂಚ್ ಪ್ರವಾಸಿಯೊಬ್ಬ ತಿಳಿಸಿದ್ದಾನೆ. ಬಿಜಾಪುರಕ್ಕೂ ನೀಗ್ರೋಗಳನ್ನು ತಂದು ಮಾರಲಾಗುತಿತ್ತಂತೆ.

ಬಹಮನೀ ರಾಜ್ಯದ ಸೇವೆಯಲ್ಲಿ ಪರದೇಶದ ಜನರೂ ಇರುತ್ತಿದ್ದರು. ಅವರು ತುರ್ಕಿ, ಅರೇಬಿಯ, ಪರ್ಷಿಯ ಮೊದಲಾದ ದೇಶಗಳಿಂದ ಬಂದವರಾಗಿದ್ದರು. ಪರ್ಷಿಯದಿಂದ ಬಂದಿದ್ದ ಮಹ್ಮೂದ್ ಗಾವಾನ್ ಇಲ್ಲಿ ದಕ್ಷ ಪ್ರಧಾನಮಂತ್ರಿ ಹಾಗೂ ಸೇನಾಪತಿ ಎಂದು ಹೆಸರು ಪಡೆದಿದ್ದ. ಬಿಜಾಪುರ ರಾಜ್ಯದಲ್ಲಿ ನೀಲಮಣಿ, ಪದ್ಮರಾಗ, ಪಚ್ಚೆ ಮುತ್ತು ವಜ್ರಗಳು ದೊರೆಯುತ್ತಿದ್ದವು. ಇವು ವಿದೇಶೀಯರನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದವು. ಎರಡನೆಯ ಆದಿಲ್ ಷಾ (1656–72) ಹೊರಡಿಸಿದ್ದ ಲಾರಿನ್ ಎಂಬ ಬೆಳ್ಳಿಯ ನಾಣ್ಯ ಅರೇಬಿಯದ ಸಮುದ್ರವ್ಯಾಪಾರಿಗಳಲ್ಲಿ ಜನಪ್ರಿಯವಾಗಿತ್ತು. ಭಾರತದ ಮುಸ್ಲಿಮರು ಪಶ್ಚಿಮ ತೀರದ ರೇವುಗಳಿಂದ ಮೆಕ್ಕಾ ಯಾತ್ರೆ ಕೈಗೊಳ್ಳುತ್ತಿದ್ದರು.

ಪ್ರಾರಂಭದಲ್ಲಿ ಪಾರಸೀ ಹಾಗೂ ತುರ್ಕಿಭಾಷೆಗಳು ಆದಿಲ್‌ಶಾಹೀ ರಾಜರ ಆಸ್ಥಾನ ಭಾಷೆಗಳಾಗಿದ್ದವು. ತರುವಾಯ ಪಾರಸೀ ಅಧಿಕೃತ ಭಾಷೆಯಾಯಿತು. ಫೆರಿಸ್ತನೆಂದು ಪ್ರಸಿದ್ಧವಾಗಿರುವ ಮಹಮ್ಮದ್ ಕಾಸಿಂ ಎಂಬವನು ಎರಡನೆಯ ಇಬ್ರಾಹೀಂ ಆದಿಲ್‌ಷಾನ ಕಾಲದಲ್ಲಿ (1580–1627) ಬಿಜಾಪುರಕ್ಕೆ ಬಂದ. ಯೂಸುಫ್ ಆದಿಲ್ ಷಾ ಸ್ವತಃ ಕವಿಯೂ ವಿದ್ವಾಂಸನೂ ಆಗಿದ್ದ. ಅವನು ತನ್ನ ಆಸ್ಥಾನಕ್ಕೆ ಇರಾನ, ಟುರಾನ್, ಅರೇಬಿಯ ಮತ್ತು ತುರ್ಕಿಗಳಿಂದ ವಿದ್ವಾಂಸರನ್ನು ಆಹ್ವಾನಿಸಿ ಗೌರವಿಸುತ್ತಿದ್ದ. ಬಿಜಾಪುರದ ವಾಸ್ತುಶಿಲ್ಪ ಮತ್ತು ಕಲಾಲಕ್ಷಣಗಳನ್ನು ಗಮನಿಸಿದಾಗ ಅದು ಪರ್ಷಿಯ ಮತ್ತು ತುರ್ಕಿ ಕಲಾಪಂಥಗಳೊಂದಿಗೆ ನಿಕಟ ಸಂಪರ್ಕ ಪಡೆದಿದ್ದುದು ಕಂಡುಬರುತ್ತದೆ.

ಕೆಳದಿಯ ನಾಯಕರ ಕಾಲದಲ್ಲಿ ಹಾಗೂ ಮೈಸೂರಿನ ಹೈದರ್ ಅಲಿ ಮತ್ತು ಅವನ ಮಗ ಟಿಪ್ಪುಸುಲ್ತಾನರ ಕಾಲದಲ್ಲಿ ಸಹ ಅರಬ್ಬೀಯರು ಸಾಕಷ್ಟು ಪ್ರಮಾಣದಲ್ಲಿ ಕರ್ನಾಟಕದೊಡನೆ ವ್ಯಾಪಾರಸಂಪರ್ಕವಿಟ್ಟು

ಕೊಂಡಿದ್ದರು. ಟಿಪ್ಪು ಬ್ರಿಟಿಷರ ವಿರುದ್ಧ ಯುದ್ಧಮಾಡುತ್ತಿದ್ದಾಗ ತನ್ನ ನೆರವಿಗಾಗಿ ಆಫ್ಘಾನಿಸ್ತಾನ, ಅರೇಬಿಯ, ಪರ್ಷಿಯ ಮೊದಲಾದ ಅನೇಕ ದೇಶಗಳಿಗೆ ನಿಯೋಗಗಳನ್ನು ಕಳುಹಿಸಿದ್ದ. ಆಗ 1784ರಲ್ಲಿ ಕಾನ್ಸ್‌ಟ್ಯಾಂಟಿನೋಪಲ್‌ಗೆ ಮತ್ತು 1785ರಲ್ಲಿ ತುರ್ಕಿಗೆ ನಿಯೋಗಗಳನ್ನು ಕಳುಹಿಸಿದ್ದ. ತುರ್ಕಿಯ ಸುಲ್ತಾನ ಟಿಪ್ಪುವನ್ನು ಸ್ವತಂತ್ರ ರಾಜನೆಂದು ಮಾನ್ಯಮಾಡಿದ ನಿರೂಪವೊಂದನ್ನು ಶ್ರೀರಂಗಪಟ್ಟಣದ ನಿಯೋಗಿಗಳೊಂದಿಗೆ ಕಳುಹಿಸಿಕೊಟ್ಟ.

**ಯುರೋಪ್:** ಗ್ರೀಕ್, ರೋಮನ್ ಕಾಲದ ಅನಂತರವೂ ಯುರೋಪಿನೊಂದಿಗೆ ಕರ್ನಾಟಕದ ಸಂಪರ್ಕ ಮುಂದುವರಿಯಿತು. ಕಾಸ್‌ಮಾಸ್ ಆರನೆಯ ಶತಮಾನದಲ್ಲಿ ಕರ್ನಾಟಕ ಮತ್ತಿತರ ಭಾಗಗಳಲ್ಲಿ ಪ್ರವಾಸಮಾಡಿದ್ದ. ಹನ್ನೆರಡನೆಯ ಶತಮಾನದಿಂದ ಪಶ್ಚಿಮ ರಾಷ್ಟ್ರಗಳ ಅನೇಕ ವರ್ತಕರೂ ಪ್ರವಾಸಿಗಳೂ ದಕ್ಷಿಣ ಭಾರತಕ್ಕೆ ಬಂದಿರುವುದರ ದಾಖಲೆಗಳಿವೆ. ಸ್ಪೇನ್‌ದೇಶದ ಬೆಂಜಮಿನ್ ಎಂಬ ಯಹೂದಿ 12ನೆಯ ಶತಮಾನದ ಒಬ್ಬ ಪ್ರವಾಸಿ. ಅವನು ದಕ್ಷಿಣ ಭಾರತಕ್ಕೆ ಬಂದಿದ್ದರ ಬಗ್ಗೆ ಸ್ಪಷ್ಟ ದಾಖಲೆ ಇಲ್ಲದಿದ್ದರೂ ದಕ್ಷಿಣ ಭಾರತದ ಬಗ್ಗೆ ಹಲವು ವಿವರಗಳನ್ನು ತನ್ನ ಗ್ರಂಥದಲ್ಲಿ ನೀಡಿದ್ದಾನೆ. ದಕ್ಷಿಣ ಭಾರತದ ವರ್ತಕರು ಪರ್ಷಿಯ ಮತ್ತು ಕಿಷ್ ದ್ವೀಪದಲ್ಲಿ ನೆಲಸಿದ್ದು ತಮ್ಮ ದೇಶದಿಂದ ಅಮೂಲ್ಯ ವಸ್ತುಗಳನ್ನು ತರಿಸಿಕೊಂಡು ಅಲ್ಲಿನ ವರ್ತಕರಿಗೆ ವಿಕ್ರಯಿಸುತ್ತಿದ್ದುದನ್ನು ಬೆಂಜಮಿನ್ ತಿಳಿಸಿದ್ದಾನೆ.

13 ಮತ್ತು 14ನೆಯ ಶತಮಾನಗಳಲ್ಲೂ ಐರೋಪ್ಯರು ದಕ್ಷಿಣ ಭಾರತ ಹಾಗೂ ಕರ್ನಾಟಕವನ್ನು ಬಲ್ಲವರಾಗಿದ್ದರು. 13ನೆಯ ಶತಮಾನದ ಪ್ರಸಿದ್ಧ ಪ್ರವಾಸಿ ಮಾರ್ಕೊಪೋಲೊ ಚೀನದಿಂದ ಯುರೋಪಿಗೆ ಪ್ರಯಾಣ ಮಾಡುವಾಗ ಮಾರ್ಗದ ಮಧ್ಯದಲ್ಲಿ ದಕ್ಷಿಣ ಭಾರತ ತೀರದ ಪ್ರದೇಶಗಳನ್ನು ಸಂದರ್ಶಿಸಿದ. ಆಗ ಹೊಯ್ಸಳರು ದಕ್ಷಿಣ ಭಾರತದಲ್ಲಿ ಪ್ರಬಲರಾಗಿದ್ದರು. ಮಾರ್ಕೊಪೋಲೊನ ತರುವಾಯ ಅನೇಕ ಕ್ರೈಸ್ತಮತಪ್ರಚಾರಕರು ದಕ್ಷಿಣ ಭಾರತ ಮತ್ತು ಸಿಂಹಳದ ಮುಖಾಂತರ ಇತರ ಪೌರಸ್ತ್ಯ ದೇಶಗಳಿಗೆ ಪ್ರಯಾಣ ಮಾಡಿದರು. ಹೀಗೆ, ಒಂದಲ್ಲ ಒಂದು ರೀತಿಯಲ್ಲಿ, ಪ್ರಾರಂಭದಲ್ಲಿ ಪ್ರತ್ಯಕ್ಷವಾಗಿಯೂ ತರುವಾಯ ಪರೋಕ್ಷವಾಗಿಯೂ ಯುರೋಪು ಪ್ರಾಚೀನ ಮತ್ತು ಮಧ್ಯ ಯುಗದಲ್ಲಿ ಕರ್ನಾಟಕದೊಡನೆ ಸಂಪರ್ಕ ಇಟ್ಟುಕೊಂಡಿತ್ತು.

ಪೋರ್ಚುಗಲ್ಲಿನ ವಾಸ್ಕೋ ಡ ಗಾಮ ಭಾರತಕ್ಕೆ ತಲುಪಿದಂದಿನಿಂದ (1498) ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದೊಡನೆ ಐರೋಪ್ಯರ ನೇರ ಸಂಪರ್ಕ ಬೆಳೆಯಲಾರಂಭಿಸಿತು. ವಾಸ್ಕೋಡಗಾಮ ಕುಂದಾಪುರದ ಬಳಿಯಿರುವ ದ್ವೀಪಗಳಲ್ಲಿ ಹಾಗೂ ಅಂಜಿ ದ್ವೀಪಗಳಲ್ಲಿ ಕೆಲವು ದಿನಗಳ ಕಾಲ ತಂಗಿದ್ದ. 16ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿಯಲ್ಲಿ ನೆಲೆಸಲಾರಂಭಿಸಿದ್ದ ಪೋರ್ಚುಗೀಸರಿಗೂ ಬಿಜಾಪುರ ಮತ್ತು ವಿಜಯನಗರದ ಅರಸರಿಗೂ ಯುದ್ಧ ಹಾಗೂ ಒಪ್ಪಂದಗಳು, ಆಗಿ ಅವರ ಪರಸ್ಪರ ಸಂಪರ್ಕ ಹೆಚ್ಚಾಯಿತು. ಪೋರ್ಚುಗೀಸರಿಗೂ ಬಿಜಾಪುರ ಮತ್ತು ವಿಜಯನಗರದ ಅರಸರಿಗೂ ಯುದ್ಧ ಹಾಗೂ ಒಪ್ಪಂದಗಳೂ ಆಗಿ ಪರಸ್ಪರ ಸಂಪರ್ಕ ಹೆಚ್ಚಾಯಿತು. ಪೋರ್ಚುಗೀಸರಿಂದ ಅನೇಕ ಬಗೆಯ ಮಲ್ಲಿಗೆ, ಮಾವು, ಸೇಂಗಾ, ಪಪ್ಪಾಯಿ, ಮೆಣಸಿನಕಾಯಿ, ಟೊಮ್ಯಾಟೋಗಳು ಭಾರತಕ್ಕೆ ಬಂದವು. ಅವರು ಅರೇಬಿಯಾ ಮತ್ತು ಪರ್ಷಿಯದಿಂದ ಯುದ್ಧಾಶ್ವಗಳನ್ನು ವಿಜಯನಗರಕ್ಕೆ ತಂದು ಮಾರುತ್ತಿದ್ದರು. 1565ರಲ್ಲಿ ವಿಜಯನಗರ ಛಿದ್ರವಾದ ಬಳಿಕ ಪೋರ್ಚುಗೀಸರು ಮಂಗಳೂರು, ಹೊನ್ನಾವರ, ಕುಂದಾಪುರಗಳಲ್ಲಿ ಕೋಟೆ ಕಟ್ಟಿಕೊಂಡು ವ್ಯಾಪಾರ ನಡೆಸತೊಡಗಿದರು. ವಿಜಯನಗರದ ಪತನವಾದ ಮೇಲೆ ಕರ್ನಾಟಕದ ಕರಾವಳಿ ಕೆಳದಿಯ ಅರಸರ ಅಧೀನವಾಯಿತು. ಪೋರ್ಚುಗೀಸರು ಇವರೊಂದಿಗೆ ವ್ಯಾಪಾರಸಂಬಂಧವನ್ನಿಟ್ಟುಕೊಂಡಿದ್ದರು. ಕೆಲವೊಮ್ಮೆ ಅವರು ಸ್ಥಳೀಯ ರಾಜಕೀಯದಲ್ಲೂ ಭಾಗವಹಿಸುತ್ತಿದ್ದರು. ಶಿವಪ್ಪನಾಯಕನ ಕಾಲದಲ್ಲಿನ (1645–66) ಕರ್ನಾಟಕದ ಕರಾವಳಿಯಲ್ಲಿ ಪೋರ್ಚುಗೀಸರ ಚಟುವಟಿಕೆಗಳು ಸ್ತಬ್ಧಗೊಂಡಿದ್ದವು. ನಾಯಕನ ತರುವಾಯ ಬಂದ ಕೆಳದಿಯ ರಾಜರು ಪೋರ್ಚುಗೀಸರ ವ್ಯಾಪಾರಕೋಠಿಗಳಿಗೆ ಪುನಃ ಸ್ಥಳ ನೀಡಿದರು.

17ನೆಯ ಶತಮಾನದ ಪ್ರಾರಂಭದಲ್ಲಿ ಯುರೋಪಿನ ಇತರ ದೇಶಗಳೂ ಪೂರ್ವದೇಶಗಳಲ್ಲಿ ವ್ಯಾಪಾರನೆಲೆಗಳನ್ನು ಸ್ಥಾಪಿಸತೊಡಗಿದವು. ಕರ್ನಾಟಕದ ಕರಾವಳಿಯಲ್ಲಿ ಪೋರ್ಚುಗೀಸರಿಗೂ ಡಚ್ಚರಿಗೂ ಪೈಪೋಟಿ ನಡೆಯತೊಡಗಿತು. ಕುಂದಾಪುರದಲ್ಲಿ ವ್ಯಾಪಾರಕ್ಕಾಗಿ ಕೋಠಿ ಕಟ್ಟಲು ಕೆಳದಿಯ ರಾಜ ಡಚ್ಚರಿಗೆ ಅವಕಾಶ ನೀಡಿದ. ಇಂಗ್ಲಿಷರು 1637ರಲ್ಲಿ ಕಾರವಾರದಲ್ಲಿ ತಮ್ಮ ಪ್ರತಿನಿಧಿಯನ್ನು ನೆಲೆಗೊಳಿಸಿದರು. 1640ರಲ್ಲಿ ಕಂಪನಿ ಅಲ್ಲೇ ಒಂದು ಕೋಠಿಯನ್ನು ಸ್ಥಾಪಿಸಿತು. ಆ ಕಾಲದಲ್ಲಿ ಅಡಕೆ, ಅಕ್ಕಿ ಮತ್ತು ಮೆಣಸು, ಏಲಕ್ಕಿ ಮುಖ್ಯ ವ್ಯಾಪಾರ ವಸ್ತುಗಳಾಗಿದ್ದವು.

ವಿಜಯನಗರ, ಬಹಮನೀ ರಾಜ್ಯ ಮತ್ತು ಇಕ್ಕೇರಿಗೆ ಅನೇಕ ಐರೋಪ್ಯ ಪ್ರವಾಸಿಗಳು ಬರುತ್ತಿದ್ದರು. 1420 ಅಥವಾ 1421ರಲ್ಲಿ ಇಟಲಿಯ ಪ್ರವಾಸಿ ನಿಕೊಲೊ ಡಿ ಕೊಂಟಿ ವಿಜಯನಗರಕ್ಕೆ ಭೇಟಿ ನೀಡಿದ. 1470ರಲ್ಲಿ ರಷ್ಯದ ಅಥೇನೇಷಿಯನ್ ನಿಕಟಿನ್ ಎಂಬವನು ಬಿದರೆ, ಗುಲ್ಬರ್ಗಗಳನ್ನು ಸಂದರ್ಶಿಸಿದ. 1502ರಲ್ಲಿ ಯುರೋಪನ್ನು ಬಿಟ್ಟು ಪೂರ್ವದ ಕಡೆ ಹೊರಟ ದಿ ವರ್ತ್‌ಮಾ ಗೋವ, ಬಿಜಾಪುರ, ಭಟ್ಕಳ, ಅಂಕೋಲ, ಹೊನ್ನಾವರ, ಮಂಗಳೂರುಗಳನ್ನು ಸಂದರ್ಶಿಸಿದ. ಪೋರ್ಚುಗೀಸ್ ಪ್ರವಾಸಿ ಟೊಮ್ ಪೀರೆಸ್ 1510–15ರ ಅವಧಿಯಲ್ಲಿ ಗೋವ, ಬಿಜಾಪುರ, ರಾಯಚೂರುಗಳಲ್ಲಿ ಸಂಚರಿಸಿದ. 1500ರಲ್ಲಿ ಡೊಮಿಂಗೋ ಪಯೆಸ್ ವಿಜಯನಗರಕ್ಕೆ ಬಂದಿದ್ದ. ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ. ಸೀಸರ್ ಫ್ರೆಡರಿಕ್ ಎಂಬವನು ತಾಳೀಕೋಟೆಯ ಯುದ್ಧವಾದ ಕೆಲವು ವರ್ಷಗಳ ತರುವಾಯ ವಿಜಯನಗರಕ್ಕೆ ಭೇಟಿ ನೀಡಿದ್ದ. ಡಚ್ ಪ್ರವಾಸಿ ಜಾನ್ ಹುಹೆನ್ ಲಿ ಷಾಟೆನ್ 16ನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಪ್ರವಾಸ ಕೈಗೊಂಡಿದ್ದ. ಪಿಯೆತ್ರೊ ದೆಲ್ಲಾ ವಲ್ಲೆ ಎಂಬ ಇಟಲಿ ಪ್ರವಾಸಿ 1623–24ರಲ್ಲಿ ಹೊನ್ನಾವರ, ಇಕ್ಕೇರಿ, ಬಸರೂರು, ಮಂಗಳೂರು, ಉಲ್ಲಾಳಗಳಿಗೆ ಭೇಟಿ ನೀಡಿದ್ದ. ಇವನು ಸ್ಪೇನಿನ ರಾಜನ ಪತ್ರವನ್ನು ಇಕ್ಕೇರಿ ಅರಸರಿಗೆ ತಂದು ಮುಟ್ಟಿಸಿದ. ಸ್ಪೇನ್ ರಾಜನ ಸೈನ್ಯಗಳನ್ನು ನಿರ್ನಾಮ ಮಾಡಿದ್ದಕ್ಕಾಗಿ ಉಲ್ಲಾಳದ ರಾಣಿ ಯುರೋಪಿನಲ್ಲೆಲ್ಲ ಹೊಗಳಿಕೆಗೆ ಪಾತ್ರಳಾಗಿದ್ದಾಳೆಂದು ಇವನು ತಿಳಿಸಿದ್ದಾನೆ. ಹೀಗೆ ಕರ್ನಾಟಕಕ್ಕೆ ಬಂದ ಹಲವಾರು ಐರೋಪ್ಯ ಪ್ರವಾಸಿಗಳು ಮತ್ತು ವ್ಯಾಪಾರಿಗಳು ಬರೆದಿರುವ ಪ್ರವಾಸಕಥನಗಳಿಂದ ಆ ಕಾಲದ ಜನಜೀವನ, ವಿದೇಶಿ ವ್ಯಾಪಾರ, ರಾಜಕೀಯ ಸ್ಥಿತಿ, ಆಡಳಿತ ಇತ್ಯಾದಿ ಅಂಶಗಳ ಬಗ್ಗೆ ಅನೇಕ ಸಂಗತಿಗಳು ತಿಳಿದುಬರುತ್ತವೆ. ಆಗ ಹವಳ, ಪಾದರಸ, ಸೀಸ, ಸಿಂಧೂರ, ಮದ್ಯ, ಬಿಸಿನೀರಿನ ಬುಗ್ಗೆಯ ನೀರು, ಕತ್ತಿ, ಚಾಕು, ಕನ್ನಡಿ, ಮುತ್ತಿನ ಸರ, ಮಾಣಿಕ್ಯ, ಪಚ್ಚೆ, ಪ್ರಶಸ್ತಿಶಿಲೆ, ತೋಳಬಂದಿ, ಚಿತ್ರಯವನಿಕೆ, ಜರತಾರಿ ಬಟ್ಟೆ, ಕುಂಚ, ಗಂಡಸರ ಅಂಗಿ, ಕೋಟು, ಕವಚ, ಬತ್ತಳಿಕೆ, ಕೋಣ, ಕಸೂತಿಹಾಕಿದ ಮೆತ್ತೆ ಇತ್ಯಾದಿ ವಸ್ತುಗಳು ಭಾರತಕ್ಕೆ ಯುರೋಪಿನಿಂದ ಬರುತ್ತಿದ್ದವೆಂದು ಈ ಕಥನಗಳಿಂದ ತಿಳಿದುಬರುತ್ತದೆ.

ದೊಡ್ಡ ದೇವರಾಜನ ಕಾಲದಲ್ಲಿ (1659–73) ಮೈಸೂರಿನೊಡನೆ ಐರೋಪ್ಯರ ನೇರ ಸಂಪರ್ಕ ಬೆಳೆಯಿತು. ಫ್ರಾನ್ಸ್‌ನ ಫಾಲ್ಕನ್ ಎಂಬ ಪ್ರತಿನಿಧಿ ಮೈಸೂರಿನ ಅರಸರೊಡನೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು 1671ರಲ್ಲಿ ತಲಚೇರಿಯಿಂದ ಮೈಸೂರಿಗೆ ಬಂದಿದ್ದ. 1752ರಲ್ಲಿ ಫ್ರೆಂಚ್ ಸೈನ್ಯವನ್ನು ಮೈಸೂರಿನ ಸೈನ್ಯ ಸೋಲಿಸಿತು. ಹಾಗೆಯೇ 1753ರ ತರುವಾಯ ಇಂಗ್ಲಿಷರೊಂದಿಗೂ ಮೈಸೂರು ಸೈನ್ಯ ಸಣ್ಣಪುಟ್ಟ ಕದನಗಳನ್ನು ನಡೆಸಿತು. ಹೈದರ್ ಅಲಿ ಬಿದನೂರನ್ನು ವಶಪಡಿಸಿಕೊಂಡಮೇಲೆ ಕರ್ನಾಟಕದ ತೀರಪ್ರದೇಶವೂ ಮೈಸೂರು ರಾಜ್ಯಕ್ಕೆ ಸೇರಿಕೊಂಡಿತು. ಇದರಿಂದ ಪಶ್ಚಿಮ ತೀರದ ವಿದೇಶಿ ವ್ಯಾಪಾರದ ಮೇಲೂ ಮೈಸೂರಿನ ಹಿಡಿತ ಸಾಕಷ್ಟು ಹೆಚ್ಚಿತು. ಟಿಪ್ಪುವಿನ ಕಾಲದಲ್ಲಿ ಐರೋಪ್ಯ ದೇಶಗಳಲ್ಲದೆ ಚೀನ, ಪೆಗು, ಆರ್ಮೇನಿಯ, ಜೆಡ್ಡಾ, ಓರ್ಮುಜ್, ಮಸ್ಕಟ್ ಮುಂತಾದ ದೇಶಗಳೊಂದಿಗೆ ವ್ಯಾಪಾರ ನಡೆಯುತ್ತಿತ್ತು.

19ನೆಯ ಶತಮಾನದಲ್ಲಿ ಸಮಗ್ರ ಭಾರತವೇ ಬ್ರಿಟಿಷರ ಆಧಿಪತ್ಯಕ್ಕೆ ಒಳಗಾಯಿತು. ಆಗ ವಿದೇಶಾಂಗನೀತಿ ಸಂಪೂರ್ಣವಾಗಿ ಬ್ರಿಟಿಷರ ಕೈಸೇರಿತು. ಕರ್ನಾಟಕದ ಬಂದರುಗಳಿಂದ ಎಂದಿನಂತೆಯೆ ದೇಶವಿದೇಶಗಳಿಂದ ವ್ಯಾಪಾರ ವಾಣಿಜ್ಯಗಳು ನಡೆಯುತ್ತಿದ್ದವು. ಆದರೆ ಅವೆಲ್ಲ ಬ್ರಿಟಿಷರ ಹಿಡಿತದಲ್ಲೇ ಇದ್ದುವು. ಈ ಕಾಲದಲ್ಲಿ ಕರ್ನಾಟಕದ ಜನರು ಪ್ರವಾಸ, ವ್ಯಾಪಾರ, ವಿದ್ಯಾಭ್ಯಾಸಗಳಿಗಾಗಿ ವಿದೇಶಗಳಿಗೆ, ವಿಶೇಷವಾಗಿ ಇಂಗ್ಲೆಂಡಿಗೆ, ಹೋಗಿ ಬರುವ ಪರಿಪಾಠ ಪ್ರಾರಂಭವಾಯಿತು. ಬ್ರಿಟಿಷರ ಆಡಳಿತಕ್ಕೊಳಪಟ್ಟ ರಾಜ್ಯಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಇದ್ದುದರಿಂದ ಬೇರೆಬೇರೆ ಪ್ರದೇಶಗಳಿಗೆ ಭಾರತೀಯರು, ಹಾಗೆಯೇ ಕರ್ನಾಟಕದವರು, ಹೋಗಲು ಹೆಚ್ಚಿನ ಅನುಕೂಲಸ್ಥಿತಿ ಉಂಟಾಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲೂ ಈ ರೀತಿಯ ಸಂಪರ್ಕ ಮುಂದುವರಿದಿದೆ. **(ಡಿ.ಎಸ್.ಜೆ.)**

**ಬೆಂಗಳೂರು:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಬೃಹತ್‌ನಗರ ಮತ್ತು ರಾಜ್ಯದ ಆಡಳಿತಕೇಂದ್ರ, ರಾಜಧಾನಿ. ಈ ಮೊದಲು ಹನ್ನೊಂದು ತಾಲ್ಲೂಕುಗಳನ್ನೊಳಗೊಂಡಿದ್ದ ಈ ಜಿಲ್ಲೆ ಬೃಹತ್ತಾಗಿ ಬೆಳೆದುದರಿಂದ 1986 ಆಗಸ್ಟ್ 15 ರಂದು ಆಡಳಿತಾನುಕೂಲಕ್ಕಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನಾಗಿ ವಿಂಗಡಿಸಲಾಯಿತು. ಬೆಂಗಳೂರು ನಗರ ಜಿಲ್ಲೆ 3 ತಾಲ್ಲೂಕುಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ 8 ತಾಲ್ಲೂಕುಗಳಿಂದ ಕೂಡಿವೆ.

ಈ ಲೇಖನ ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ದಕ್ಷಿಣ ತಾಲ್ಲೂಕು, ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆ ಈ ಶೀರ್ಷಿಕೆಗಳಿಂದ ಕೂಡಿದೆ.

**ಬೆಂಗಳೂರು ಉತ್ತರ ತಾಲ್ಲೂಕು:** ಈ ತಾಲ್ಲೂಕನ್ನು ವಾಯವ್ಯ ಮತ್ತು ಉತ್ತರದಲ್ಲಿ ದೊಡ್ಡಬಳ್ಳಾಪುರ, ಈಶಾನ್ಯ ಮತ್ತು ಉತ್ತರದಲ್ಲಿ ದೇವನಹಳ್ಳಿ, ಪೂರ್ವದ ಸ್ವಲ್ಪ ಭಾಗದಲ್ಲಿ ಹೊಸಕೋಟೆ, ಪೂರ್ವ ಆಗ್ನೇಯ ಮತ್ತು ದಕ್ಷಿಣದಲ್ಲಿ ಬೆಂಗಳೂರು ದಕ್ಷಿಣ, ನೈಋತ್ಯದಲ್ಲಿ ಮಾಗಡಿ ಮತ್ತು ಪಶ್ಚಿಮದಲ್ಲಿ ನೆಲಮಂಗಲ ಈ ತಾಲ್ಲೂಕುಗಳು ಸುತ್ತುವರಿದಿವೆ. ಈ ತಾಲ್ಲೂಕು ಬೆಂಗಳೂರು ನಗರಸಭಾ ಪ್ರದೇಶದ ಬಹುಭಾಗ ಹಾಗೂ ಬೆಂಗಳೂರು ನಗರ ಸಮೂಹಕ್ಕೆ ಸೇರಿರುವ ಬಿಇಎಲ್, ದೇವರಜೀವನಹಳ್ಳಿ, ಎಚ್‌ಎಂಟಿ, ಜಾಲಹಳ್ಳಿ, ಕಾಡುಗೊಂಡನಹಳ್ಳಿ ಈ ಉಪನಗರಗಳನ್ನೂ ಯಲಹಂಕ ಪಟ್ಟಣವನ್ನೂ 173 ಗ್ರಾಮಗಳನ್ನೂ ಒಳಗೊಂಡಿದೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 487 ಚ.ಕಿಮೀ. ಇದರಲ್ಲಿ 340.1 ಚ.ಕಿಮೀ ಗ್ರಾಮೀಣ ಪ್ರದೇಶ. ಉಳಿದದ್ದು ನಗರ ಮತ್ತು ಕಾರ್ಖಾನೆಗಳ ಪ್ರದೇಶ. ಈ ತಾಲ್ಲೂಕಿ ಜನಸಂಖ್ಯೆ 8,30,061.

ತಾಲ್ಲೂಕಿನ ಬಹುಭಾಗ ವಿಶಾಲಬಯಲುಗಳಿಂದ ಕೂಡಿದ್ದು ಅಲ್ಲಲ್ಲಿ ಕಣಶಿಲೆಯ ಗುಡ್ಡಗಳಿವೆ. ಯಲಹಂಕದಿಂದ ಉತ್ತರದಲ್ಲಿರುವ ದೊಡ್ಡಬೆಟ್ಟ ಹಳ್ಳಿ (3158'), ಬೆಂಗಳೂರಿನ ವೈಯಾಳಿಕಾವಲ್ ದಿಣ್ಣೆ (3118') ತಾಲ್ಲೂಕಿನ ಎತ್ತರದ ಭಾಗಗಳು. ದೊಡ್ಡಬಳ್ಳಾಪುರ ತಾಲ್ಲೂಕಿನಿಂದ ಬರುವ ಅರ್ಕಾವತಿ ಈ ತಾಲ್ಲೂಕಿನ ವಾಯವ್ಯದಲ್ಲಿ ಪ್ರವೇಶಿಸಿ, ಹೆಸರಘಟ್ಟ ಜಲಾಶಯಕ್ಕೆ ನೀರುಣಿಸಿ, ಮುಂದೆ ಹರಿದು ನೆಲಮಂಗಲ ತಾಲ್ಲೂಕಿನೆಡೆಗೆ ಸಾಗುತ್ತದೆ. ಬೆಂಗಳೂರಿನ ಗವಿಪುರದ ಬಳಿ ಹುಟ್ಟುವ ವೃಷಭಾವತಿ ತೊರೆ ದಕ್ಷಿಣದತ್ತ ಪ್ರವಹಿಸುತ್ತದೆ. ತಾಲ್ಲೂಕಿನ ಬಹುಭಾಗ ಕೆಂಪು ಮಣ್ಣಿನಿಂದ ಕೂಡಿದ್ದು ರಾಗಿ, ತರಕಾರಿ ಮತ್ತು ಹಣ್ಣುಗಳ ಬೆಳೆಗಳಿಗೆ ಉಪಯುಕ್ತವಾಗಿದೆ. ಇವುಗಳ ವ್ಯವಸಾಯ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿದೆ. ನಗರ ಪ್ರದೇಶದಲ್ಲಿ ಕೈಗಾರಿಕೆಗಳು ಹೆಚ್ಚು. ಬೆಂಗಳೂರಿನಿಂದ ಹೊರಡುವ ಮುಖ್ಯ ರೈಲು ಮತ್ತು ರಸ್ತೆಮಾರ್ಗಗಳು ಈ ತಾಲ್ಲೂಕಿನ ಸ್ವಲ್ಪಭಾಗವನ್ನು ಕ್ರಮಿಸಿ ಸಾಗುತ್ತದೆ.

ಬೆಂಗಳೂರು ಮಹಾನಗರ ಪ್ರದೇಶವನ್ನು ಬಿಟ್ಟರೆ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಯಲಹಂಕ ಪ್ರಮುಖ ಪಟ್ಟಣ. ಐತಿಹಾಸಿಕ ಸ್ಥಳವಾದ ಈ ಊರು ಈಗ ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ. ಬೆಂಗಳೂರಿನ ವಾಯವ್ಯದಲ್ಲಿ ನೆಲಮಂಗಲದ ಈಶಾನ್ಯಕ್ಕೆ 10 ಕಿಮೀ ದೂರದಲ್ಲಿರುವ ಹೆಸರಘಟ್ಟ ಅಲ್ಲಿನ ಜಲಾಶಯ ಮತ್ತು ಸುಂದರ ಸನ್ನಿವೇಶದಿಂದ ವಿಹಾರಕೇಂದ್ರವಾಗಿದೆ. ಅಲ್ಲಿನ ದೇವಾಲಯದಲ್ಲಿ ದೂರ್ವಾಸಮುನಿ ಆರಾಧಿಸುತ್ತಿದ್ದನೆನ್ನಲಾದ ಲಕ್ಷ್ಮೀನರಸಿಂಹ ವಿಗ್ರಹವಿದೆ. ಆ ದೇವಾಲಯದ ಮುಂಭಾಗ ವಿಜಯನಗರದ ಅಚ್ಯುತರಾಯ ಕಟ್ಟಿಸಿದ್ದು, ನೆಲಮಂಗಲಕ್ಕೆ ಈಶಾನ್ಯದಲ್ಲಿ 13 ಕಿಮೀ ದೂರದಲ್ಲಿ, ಬೆಂಗಳೂರಿಗೆ ವಾಯವ್ಯ ದಿಕ್ಕಿನಲ್ಲಿರುವ ಐಗಂಡಪುರ **(ನೋಡಿ)** ಸಹ ಐತಿಹಾಸಿಕ ಸ್ಥಳ.

**ಬೆಂಗಳೂರು ದಕ್ಷಿಣ ತಾಲ್ಲೂಕು:** ಇದು ಪೂರ್ವ ಮತ್ತು ದಕ್ಷಿಣದಲ್ಲಿ ಆನೇಕಲ್ಲು, ಉತ್ತರದಲ್ಲಿ ಬೆಂಗಳೂರು ಉತ್ತರ, ಈಶಾನ್ಯ ಮತ್ತು ಆಗ್ನೇಯದಲ್ಲಿ ಹೊಸಕೋಟೆ, ದಕ್ಷಿಣದಲ್ಲಿ ಕನಕಪುರ, ನೈಋತ್ಯದಲ್ಲಿ ರಾಮನಗರ ಮತ್ತು ಪಶ್ಚಿಮದಲ್ಲಿ ಮಾಗಡಿ ಈ ತಾಲ್ಲೂಕುಗಳಿಂದ ಸುತ್ತುವರಿದಿದ್ದು, ಬೆಂಗಳೂರು ನಗರದ ದಕ್ಷಿಣದ ಅಂಚಿನ ಭಾಗ ಎಚ್‌ಎಎಲ್ ಮತ್ತು ಐಟಿಐ ಉಪನಗರಗಳನ್ನೂ 218 ಗ್ರಾಮಗಳನ್ನೂ ಒಳಗೊಂಡಿದೆ. ತಾಲ್ಲೂಕಿನ ಒಟ್ಟು ವಿಸ್ತೀರ್ಣ 539.4 ಚ.ಕಿಮೀ. ಇದರಲ್ಲಿ 509 ಚ.ಕಿಮೀ ಗ್ರಾಮೀಣ ಪ್ರದೇಶ, ಉಳಿದದ್ದು ಕಾರ್ಖಾನೆ ಮತ್ತು ನಗರಪ್ರದೇಶ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಜನಸಂಖ್ಯೆ 10,09,924.

ಈ ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಕಣಶಿಲೆಯ ಬೆಟ್ಟಗುಡ್ಡಗಳು ಇವೆ. ಉಳಿದ ಭಾಗ ಬಯಲು. ವೃಷಭಾವತಿ ಬೆಂಗಳೂರು ನಗರದ ಗವಿಪುರದೆಡೆಯಿಂದ ಬಂದು ಕೆಂಗೇರಿ ಮುಖಾಂತರ ದಕ್ಷಿಣಕ್ಕೆ ಹರಿಯುತ್ತದೆ. ತಾಲ್ಲೂಕಿನ ಬಹುಭಾಗದಲ್ಲಿ ಕೆಂಪುಮಣ್ಣಿನ ಭೂಮಿ ಇದೆ. ಸರಾಸರಿ ವಾರ್ಷಿಕ ಮಳೆ 923.7 ಮಿಮೀ. ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಕೆರೆಗಳಿಂದ ಸ್ವಲ್ಪಮಟ್ಟಿಗೆ ನೀರಾವರಿ ಸೌಲಭ್ಯ ಇದೆ. ರಾಗಿ, ತರಕಾರಿ, ಹಣ್ಣು, ಹೂವುಗಳನ್ನು ವಿಶೇಷವಾಗಿ ಬೆಳೆಯುತ್ತಾರೆ.

ನಗರ ಭಾಗಗಳು ಮತ್ತು ಪರಿಸರದಲ್ಲಿ ಕೈಗಾರಿಕೆಗಳಿವೆ. ಬೆಂಗಳೂರಿನಿಂದ ಮೈಸೂರು, ಚೆನ್ನೈ, ಸೇಲಂಗಳಿಗೆ ಹೋಗುವ ರೈಲುಮಾರ್ಗಗಳು

ಮತ್ತು ಚೆನ್ನೈ, ಸರ್ಜಾಪುರ, ಹೊಸೂರು, ಕನಕಪುರ ಮತ್ತು ಮೈಸೂರಿಗೆ ಹೋಗುವ ರಸ್ತೆಗಳು ಈ ತಾಲ್ಲೂಕಿನ ಮೂಲಕ ಸಾಗುತ್ತವೆ.

ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಮುಖ್ಯಸ್ಥಳಗಳಲ್ಲಿ ಬೆಂಗಳೂರಿನ ಆಗ್ನೇಯಕ್ಕೆ 13 ಕಿಮೀ ದೂರದಲ್ಲಿರುವ ಬೇಗೂರು **(ನೋಡಿ)** ಇತಿಹಾಸಪ್ರಸಿದ್ಧ ಸ್ಥಳ. ಬೆಂಗಳೂರು ನಗರದ ದಕ್ಷಿಣದ ಅಂಚಿನಲ್ಲಿರುವ ವಸಂತಪುರದಲ್ಲಿ ವಸಂತ ವಲ್ಲಭರಾಯಸ್ವಾಮಿ ದೇವಾಲಯವಿದೆ. ಇಲ್ಲಿಯ ಮೂಲವಿಗ್ರಹ 5' ಎತ್ತರವಿದೆ. ಇದು ಮಾಂಡವ್ಯ ಮುನಿಯಿಂದ ಆರಾಧಿತವಾದುದೆಂದು ಸ್ಥಳಪುರಾಣ ತಿಳಿಸುತ್ತದೆ. ಇಲ್ಲಿ ಎಂಟು ತೀರ್ಥಗಳಿವೆ. ಈ ದೇವಾಲಯದಲ್ಲಿ ವಿವಾಹ ಮಾಡುವುದು ಹೆಚ್ಚು ಶುಭವೆಂದು ಪರಿಗಣಿಸಲಾಗಿದೆ. ಬೆಂಗಳೂರಿನ ಆಗ್ನೇಯದಲ್ಲಿರುವ ಅಗರ ಗ್ರಾಮದಲ್ಲಿ 8ನೆಯ ಶತಮಾನದಲ್ಲೂ ಇದ್ದವೆಂದು ಹೇಳುವ ಕೆಲವು ದೊಡ್ಡ ಕೆರೆಗಳಿವೆ. ಈ ಗ್ರಾಮ ಆನಂದರಾಮಾಯಣವನ್ನು ರಚಿಸಿದ ತಿಮ್ಮಕವಿಯ (18ನೆಯ ಶತಮಾನ) ಜನ್ಮಸ್ಥಳ. ಬೆಂಗಳೂರು ನಗರದ ನೈಋತ್ಯಕ್ಕೆ 16 ಕಿಮೀ ದೂರದಲ್ಲಿ, ಮೈಸೂರು ಮಾರ್ಗದಲ್ಲಿ ಕೆಂಗೇರಿ (ಜನಸಂಖ್ಯೆ 42,386) ವ್ಯಾಪಾರ ಸ್ಥಳ. 1873ರವರೆಗೆ ಇದು ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಈ ಗ್ರಾಮ ಬ್ರಿಟಿಷ್ ಸೈನ್ಯಕ್ಕೆ ತಂಗುದಾಣವಾಗಬಾರದೆಂಬ ಉದ್ದೇಶದಿಂದ ಇದನ್ನು ಟಿಪ್ಪುಸುಲ್ತಾನ್ ಒಮ್ಮೆ ಹಾಳುಗೆಡವಿದ್ದ. ಇಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಒಂದು ವಿದ್ಯಾಪೀಠ, ಹತ್ತಿರದಲ್ಲೆ ಒಂದು ಚಲನಚಿತ್ರ ಸ್ಟುಡಿಯೋ ಮತ್ತು ಕೆಂಗೇರಿಯ ಪೂರ್ವಕ್ಕೆ ಸುಮಾರು ಒಂದೂವರೆ ಕಿಮೀ ದೂರದಲ್ಲಿ ಒಂದು ಆಯುರ್ವೇದ ಸಂಶೋಧನ ಕೇಂದ್ರ ಇವೆ. ಎಚ್‍ಎಎಲ್ ನಿಂದ 8 ಕಿಮೀ ದೂರದಲ್ಲಿರುವ ಬೆಳ್ಳಂದೂರಿನಲ್ಲಿ ಬೃಹತ್‍ಶಿಲಾ ಸಮಾಧಿಗಳು ಇವೆ. ಈ ತಾಲ್ಲೂಕಿನ ಬಹುಭಾಗ ಈಗ ನಗರೀಕರಣಕ್ಕೊಳಗಾಗಿದ್ದು ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ನೆಲೆ ಇಲ್ಲಿದೆ (ಮಾಹಿತಿ ತಂತ್ರಜ್ಞಾನ ಪಾರ್ಕ್).

**ನಗರ :** ಬೆಂಗಳೂರು ಕರ್ನಾಟಕ ರಾಜ್ಯದ ರಾಜಧಾನಿ. ರಾಜ್ಯದ ಅತಿ ದೊಡ್ಡ ನಗರ. ಬೆಂಗಳೂರು ಜಿಲ್ಲೆಯ ಮಧ್ಯವರ್ತಿ ತಾಣದಲ್ಲಿ, ದಕ್ಷಿಣ ಪಿನಾಕಿನಿ ಮತ್ತು ಅರ್ಕಾವತಿ ನದೀಕಣಿವೆಗಳನ್ನು ಬೇರ್ಪಡಿಸುವ ಏಣುಭೂಮಿಯ ಮೇಲೆ (ಸಮುದ್ರಮಟ್ಟದಿಂದ ಸು. 930 ಮೀ) ಮೈಸೂರಿನ ಈಶಾನ್ಯಕ್ಕೆ 138 ಕಿಮೀ ದೂರದಲ್ಲೂ ಕೆಜಿಎಫ್‍ನ ಪಶ್ಚಿಮಕ್ಕೆ 96 ಕಿಮೀ ದೂರದಲ್ಲೂ ತುಮಕೂರಿನ ಆಗ್ನೇಯಕ್ಕೆ 70 ಕಿಮೀ ದೂರದಲ್ಲೂ ಇದೆ.

ಇಂದಿನ ಬೆಂಗಳೂರು ಬೃಹನ್ನಗರ, ಮಹಾನಗರಪಾಲಿಕಾ ಕಕ್ಷೆಯಲ್ಲಿರುವ ಪ್ರದೇಶವನ್ನಲ್ಲದೆ ಇದಕ್ಕೆ ಹೊಂದಿಕೊಂಡಂತಿರುವ ಪುರಸಭೆಗಳು ಸೇರಿದ್ದು ಇಂದು ಏಷ್ಯದಲ್ಲೇ ಅತಿ ವೇಗವಾಗಿ ವಿಸ್ತರಿಸುತ್ತಿರುವ ನಗರ ಇದಾಗಿದೆ. ಭಾರತದ ಸಿಲಿಕಾನ್ ವ್ಯಾಲಿ ಎಂಬ ಕೀರ್ತಿ ಪಡೆದಿದೆ. ಇಲ್ಲಿನ ಮಹಾನಗರಪಾಲಿಕೆಯಲ್ಲಿ ಸು. 100 ವಾರ್ಡ್‍ಗಳಿವೆ. ಇಂದಿನ ಜನಸಾಂದ್ರತೆ ಚ.ಕಿಮೀಗೆ ಸು. 10,710. ಬೆಂಗಳೂರು ಮಹಾನಗರದ ಒಟ್ಟು ಜನಸಂಖ್ಯೆ 57,01,446. ಭಾರತದ ಬೃಹನ್ನಗರಗಳಲ್ಲಿ ಇದು ಐದನೆಯ ಸ್ಥಾನವನ್ನು ಪಡೆದಿದೆ.

ರಾಜ್ಯದ ರಾಜಧಾನಿಯಾಗಿರುವ ಕಾರಣ ರಾಜಭವನ, ಶಾಸನಸಭಾ ಭವನ ಮತ್ತು ಕಚೇರಿ, ಸಚಿವಾಲಯ, ರಾಜ್ಯಸರ್ಕಾರದ ಬಹುತೇಕ ಎಲ್ಲ ಇಲಾಖೆಗಳ ಮುಖ್ಯಾಧಿಕಾರಿಗಳ ಕಚೇರಿಗಳು, ಉಚ್ಚ ನ್ಯಾಯಾಲಯ, ರಾಜ್ಯ ಲೋಕಸೇವಾ ಆಯೋಗದ ಕಚೇರಿ, ರಾಜ್ಯ ಸರ್ಕಾರದಿಂದ ಸ್ಥಾಪಿತವಾಗಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ, ವಿದ್ಯುತ್ ಮಂಡಲಿ, ವ್ಯವಸಾಯೋದ್ಯಮ ಮಂಡಲಿ, ಚಲನಚಿತ್ರ ಉದ್ಯಮ ಮಂಡಲಿ, ಸಣ್ಣ ಉದ್ಯಮಗಳ ಮಂಡಲಿ, ರಸ್ತೆ ಸಾರಿಗೆ ಮಂಡಲಿ, ಹಣಕಾಸು ಮಂಡಲಿ, ಪ್ರವಾಸೋದ್ಯಮ ಮಂಡಲಿ ಮೊದಲಾದ ಸಂಸ್ಥೆಗಳ ಮುಖ್ಯ ಕಚೇರಿಗಳು ಇಲ್ಲಿವೆ. ಅಲ್ಲದೆ ರಕ್ಷಣಾಪಡೆಯ ಸಬ್ ಏರಿಯಾ ಘಟಕದ ಕೇಂದ್ರ, ವಿಮಾನದಳದ ಉಪಕೇಂದ್ರ, ಅಕೌಂಟೆಂಟ್ ಜನರಲ್‍ರವರ ಕಚೇರಿ, ರಿಸರ್ವ್ ಬ್ಯಾಂಕ್‍ನ ಶಾಖೆ ಹಾಗೂ ಕೇಂದ್ರ ಸರ್ಕಾರದ ಪುರಾತತ್ತ್ವ ಇಲಾಖೆ, ಪರಮಾಣುಶಕ್ತಿ ಇಲಾಖೆ, ಜನಗಣತಿ ಶಾಖೆ, ತನಿಖಾ ಇಲಾಖೆ, ಗುಪ್ತಚಾರ ಇಲಾಖೆ, ನಾಗರಿಕ ವಿಮಾನ ಇಲಾಖೆ, ಇಸ್ರೊ, ಹವಾಮಾನ ಇಲಾಖೆ, ಎನ್‍ಸಿಸಿ ನಿರ್ದೇಶನಾ ಇಲಾಖೆ, ರಾಷ್ಟ್ರೀಯ ಉಳಿತಾಯ ಯೋಜನಾ ಸಂಸ್ಥೆ, ಆದಾಯ ತೆರಿಗೆ ಇಲಾಖೆ, ವಾರ್ತಾ ಮತ್ತು ಪ್ರಸಾರ ಇಲಾಖೆ, ದಕ್ಷಿಣ ರೈಲ್ವೆ, ಭೂಗರ್ಭವಿಜ್ಞಾನ ಇಲಾಖೆ, ಸರ್ವೆ ಆಫ್ ಇಂಡಿಯಾ, ಅಂಚೆ ಮತ್ತು ತಂತಿ ಇಲಾಖೆ ಮೊದಲಾದವುಗಳ ಪ್ರಾದೇಶಿಕ ಕಚೇರಿಗಳೂ ಕಾಫಿ ಬೋರ್ಡ್‍ನ ಮುಖ್ಯ ಆಡಳಿತ ಕಚೇರಿಯೂ ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ, ರೇಷ್ಮೆ ಮಂಡಲಿ, ವ್ಯವಸಾಯ ಪುನರ್ಧನ ಹೂಡಿಕೆ ಸಂಸ್ಥೆ, ವ್ಯವಸಾಯೋದ್ಯಮ ಅಭಿವೃದ್ಧಿ ಮಂಡಲಿ ಮೊದಲಾದವುಗಳ ಶಾಖಾ ಕಚೇರಿಗಳೂ ಸಹ ಇಲ್ಲಿವೆ.

ಬೆಂಗಳೂರು ಕರ್ನಾಟಕದ ಪ್ರಮುಖ ಔದ್ಯಮಿಕ ಮತ್ತು ವಾಣಿಜ್ಯ ಕೇಂದ್ರ. 2001ರ ಅಂಕಿ ಅಂಶಗಳ ಪ್ರಕಾರ ನಗರದಲ್ಲಿ 4,399 ಕೈಗಾರಿಕಾ ಘಟಕಗಳಿದ್ದು 4,58,245.ಜನರಿಗೆ ಉದ್ಯೋಗ ಒದಗಿಸಲಾಗಿತ್ತು. ಬೃಹತ್ ಪ್ರಮಾಣದ ಉದ್ಯಮಗಳಲ್ಲಿ ಕೇಂದ್ರ ಸರ್ಕಾರದ ವತಿಯಿಂದ ನಡೆಯುತ್ತಿರುವ ಹಿಂದುಸ್ಥಾನ್ ಮೆಷಿನ್ ಟೂಲ್ಸ್ (ಎಚ್‍ಎಂಟಿ), ಹಿಂದುಸ್ಥಾನ್ ಏರ್ ಕ್ರಾಫ್ಟ್ ಲಿಮಿಟೆಡ್ (ಎಚ್‍ಎಎಲ್), ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (ಐಟಿಐ), ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಪ್ರಮುಖವಾದವು. ಅಲ್ಲದೆ ರೇಡಿಯೋ ಅಂಡ್ ಎಲೆಕ್ಟ್ರಿಕಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ (ಈಗ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಸಂಸ್ಥೆಯ ಭಾಗ) ಮತ್ತು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್‍ನ (ಬಿಇಎಮ್‍ಎಲ್) ಒಂದು ಘಟಕ ಸಹ ಇಲ್ಲಿ ಸ್ಥಾಪಿತವಾಗಿದೆ. ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಮತ್ತು ನ್ಯೂ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಮೈಸೂರ್ ಪೋರ್ಸೆಲಿನ್ ಲಿಮಿಟೆಡ್, ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ– ಇವು ರಾಜ್ಯ ಸರ್ಕಾರದ ವತಿಯಿಂದ ಸ್ಥಾಪಿತವಾದ ಬೃಹತ್ ಕಾರ್ಖಾನೆಗಳು. ಇಲ್ಲಿನ ಸರ್ಕಾರಿ ಡೈರಿ ಸಹ ಬೃಹತ್ ಉದ್ಯಮ. ಇಲ್ಲಿನ ಸರ್ಕಾರಿ ಮುದ್ರಣಾಲಯ ರಾಜ್ಯದ ಅತಿ ದೊಡ್ಡ ಮುದ್ರಣಾಲಯ. ಖಾಸಗಿ ಒಡೆತನದ ಬೃಹತ್ ಉದ್ಯಮಗಳಲ್ಲಿ ಬೆಂಗಳೂರು ವುಲ್ಲನ್ ಕಾಟನ್ ಮತ್ತು ಸಿಲ್ಕ್ ಕಂಪನಿ, ರಾಜಾ ಮತ್ತು ಮಿನರ್ವ– ಈ ಬಟ್ಟೆ ತಯಾರಿಕಾ ಕಾರ್ಖಾನೆಗಳು, ಕಿರ್ಲೋಸ್ಕರ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಮೋಟಾರ್ ಇಂಡಸ್ಟ್ರೀಸ್ ಕಂಪನಿ (ಮೈಕೊ), ಹೆಗ್ಗಡೆ ಅಂಡ್ ಗೋಲೆ ಗಡಿಯಾರ ಕಾರ್ಖಾನೆ ಮುಂತಾದವನ್ನು ಹೆಸರಿಸಬಹುದು. ಅಲ್ಲದೆ ಅಗರಬತ್ತಿ, ವಿವಿಧ ರೀತಿಯ ಯಂತ್ರಗಳು ಮತ್ತು ಯಂತ್ರೋಪಕರಣಗಳು, ರಾಸಾಯನಿಕ ವಸ್ತುಗಳು, ಗಾಜು ಮತ್ತು ಗಾಜಿನ ಸಾಮಾನುಗಳು, ಇಟ್ಟಿಗೆ ಮತ್ತು ಪೋರ್ಸೆಲಿನ್ ವಸ್ತುಗಳು, ಪಾತ್ರೆಗಳು, ಕುಕ್ಕರ್ ಮುಂತಾದ ಗೃಹೋಪಯೋಗಿ ಸಲಕರಣೆಗಳು, ಸಿದ್ಧ ಉಡುಪುಗಳು, ಸುಗಂಧ ದ್ರವ್ಯಗಳು, ಉಕ್ಕು, ಔಷಧಗಳು, ಸಿದ್ಧ ಆಹಾರ ಪದಾರ್ಥಗಳು, ಬೀರ್–ವಿಸ್ಕಿ ಮೊದಲಾದ ಪಾನೀಯಗಳು, ಅಲ್ಯುಮಿನಿಯಂ ಮತ್ತು ಸ್ಟೇನ್‍ಲೆಸ್ ಸ್ಟೀಲ್ ವಸ್ತುಗಳು, ಪ್ಲೈವುಡ್ ಮೊದಲಾದವುಗಳನ್ನು ತಯಾರಿಸುವ ಮತ್ತು ಹಿಟ್ಟು ರವೆ ಮುಂತಾದವನ್ನು ಉತ್ಪಾದಿಸುವುದು, ಮುದ್ರಣ ಪ್ರಕಾಶನ ಮುಂತಾದವುಗಳಲ್ಲಿ ನಿರತವಾಗಿರುವ

ಹಲವಾರು ಉದ್ಯಮಗಳು ಈ ನಗರದಲ್ಲಿವೆ. ಬೆಂಗಳೂರು ರೇಷ್ಮೆ ಬಟ್ಟೆಗಳ ಉತ್ಪಾದನೆಯಲ್ಲೂ ಪ್ರಮುಖ ಸ್ಥಾನ ಪಡೆದಿದೆ. ಕೋಳಿಸಾಕಣೆ ಒಂದು ದೊಡ್ಡ ಉದ್ಯಮವಾಗಿ ಬೆಳೆಯುತ್ತದೆ.

ಬೆಂಗಳೂರಿನ ಬೃಹತ್ ಕಾರ್ಖಾನೆಗಳಲ್ಲಿ ತಯಾರಾಗುವ ಲೇತ್ ಮೊದಲಾದ ಯಂತ್ರಗಳು, ವಿಮಾನಗಳು ಮತ್ತು ವಿಮಾನ ಸಲಕರಣೆಗಳು, ರೈಲ್ವೆಗಾಡಿಗಳು, ಟೆಲಿಫೋನ್ ಉಪಕರಣಗಳು, ಎಲೆಕ್ಟ್ರಾನಿಕ್ ಉಪಕರ

ಣಗಳು, ಗಡಿಯಾರಗಳು ಮುಂತಾದವು ಹಾಗೂ ಅಗರಬತ್ತಿ ಮೊದಲಾದವುಕ್ಕೆ ಅಂತಾರಾಷ್ಟ್ರೀಯ ಬೇಡಿಕೆ ಇದ್ದು ಇವು ತಮ್ಮದೇ ಆದ ಮಾರಾಟ ವಿಭಾಗಗಳನ್ನು ಹೊಂದಿವೆ. ಬೆಂಗಳೂರಿನ ಕೈಗಾರಿಕೋತ್ಪನ್ನಗಳು, ಮಾದಕ ಪಾನೀಯಗಳು ಮೊದಲಾದವು ಭಾರತದಾದ್ಯಂತ ವ್ಯಾಪಾರವಾಗುತ್ತವೆ. ಬೆಂಗಳೂರಿನ ವಾಣಿಜ್ಯ ರಂಗದಲ್ಲಿ ಮುಖ್ಯ ಪಾತ್ರವಹಿಸಿರುವ ಅನೇಕ ವ್ಯಾಪಾರಸಂಸ್ಥೆಗಳು ಇಲ್ಲಿರುವುದಲ್ಲದೆ, ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ವ್ಯಾಪ್ತಿಯುಳ್ಳ ಅನೇಕ ವ್ಯಾಪಾರಿಸಂಸ್ಥೆಗಳು ತಮ್ಮ ಸ್ಥಳೀಯ ಅಥವಾ ಪ್ರಾದೇಶಿಕ ವಿಭಾಗಗಳನ್ನೂ ವ್ಯಾಪಾರದ ಕೋಠಿಗಳನ್ನೂ ಇಲ್ಲಿ ಸ್ಥಾಪಿಸಿವೆ.

ವ್ಯಾಪಾರ ಮತ್ತು ಉದ್ಯಮಗಳಿಗೆ ಪೋಷಕವಾಗಿ ಇಲ್ಲಿ ಕರ್ನಾಟಕ ಫೈನಾನ್ಷಿಯಲ್ ಕಾರ್ಪೊರೇಷನ್, ಇಂಡಸ್ಟ್ರಿಯಲ್ ಫೈನಾನ್ಷಿಯಲ್ ಕಾರ್ಪೊರೇಷನ್, ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಅಪೆಕ್ಸ್ ಬ್ಯಾಂಕ್ ಮೊದಲಾದ ಹಣಕಾಸು ಸಂಸ್ಥೆಗಳೂ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬ್ಯಾಂಕುಗಳ ಶಾಖೆಗಳು ಇವೆ. ಬೆಂಗಳೂರು ಬೃಹನ್ನಗರದಲ್ಲಿ ವಿವಿಧ ಕೈಗಾರಿಕೆಗಳ ಮತ್ತು ವಿವಿಧ ಉದ್ಯಮಗಳಿಗೆ ಆರ್ಥಿಕ ಸಹಕಾರ ನೀಡುತ್ತಿರುವ 826 ವಾಣಿಜ್ಯ ಬ್ಯಾಂಕುಗಳು, 13 ಗ್ರಾಮೀಣಬ್ಯಾಂಕುಗಳು, 418 ಸಹಕಾರ ಬ್ಯಾಂಕುಗಳು, 508 ಕ್ರೆಡಿಟ್ ಸಹಕಾರ ಬ್ಯಾಂಕುಗಳು ಇವೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಕೆನರಾ ಬ್ಯಾಂಕ್, ವಿಜಯ ಬ್ಯಾಂಕ್ ಮತ್ತು ವೈಶ್ಯ ಬ್ಯಾಂಕ್– ಇವುಗಳ ಪ್ರಧಾನ ಕಚೇರಿಗಳು ಇರುವುದೂ ಬೆಂಗಳೂರಿನಲ್ಲೇ. ಅಲ್ಲದೆ ಸ್ಟಾಕ್ ಎಕ್ಸ್‌ಚೇಂಜ್, ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಮೊದಲಾದುವೂ ಇಲ್ಲಿ ಸ್ಥಾಪಿತವಾಗಿವೆ. ಜಿಲ್ಲೆಯ ಮತ್ತು ನಗರ ವ್ಯಾಪ್ತಿಯ ವ್ಯಾಪಾರ ವ್ಯವಹಾರಗಳಿಗಾಗಿ ಅನೇಕ ಸಗಟು ವ್ಯಾಪಾರದ ಮಳಿಗೆಗಳು, ರೆಗ್ಯುಲೇಟೆಡ್ ಮಾರ್ಕೆಟ್ ಮೊದಲಾದವೂ ಇವೆ. ಸಿನಿಮಾ ತಯಾರಿಕೆಗೂ ಬೆಂಗಳೂರು ಪ್ರಮುಖ ಕೇಂದ್ರವಾಗಿದೆ.

ಬೆಂಗಳೂರಿನ ಆರ್ಥಿಕ ಚಟುವಟಿಕೆಗಳಿಗೆ ಅದರ ಸನ್ನಿವೇಶವೂ ಮುಖ್ಯ ಕಾರಣ. ಎರಡೂ ಕರಾವಳಿಗಳಿಂದ ಸುಮಾರು ಸಮಾನ ದೂರದಲ್ಲಿರುವ ಈ ನಗರ ಉತ್ತಮ ಸಂಪರ್ಕಜಾಲವನ್ನು ಹೊಂದಿದೆ. ಬೆಂಗಳೂರಿನಲ್ಲಿ ನಾಗರಿಕ ವಿಮಾನ ನಿಲ್ದಾಣವಿದ್ದು ಇಲ್ಲಿಂದ ಮುಂಬಯಿ, ದೆಹಲಿ, ಚೆನ್ನೈ, ಹೈದರಾಬಾದ್, ಮಂಗಳೂರು, ಕೋಲ್ಕತ್ತ, ಕೊಚ್ಚಿ ಮೊದಲಾದೆಡೆಗೆ ವಿಮಾನಸಂಪರ್ಕ ಇದೆ. ಬೆಂಗಳೂರಿನಿಂದ ಚೆನ್ನೈ, ಗುಂತಕಲ್ಲು, ಅರಸೀಕೆರೆ, ಮೈಸೂರು, ಸೇಲಂ ಮತ್ತು ಬಂಗಾರ ಪೇಟೆಗಳಿಗೆ ರೈಲುಮಾರ್ಗಗಳು ಇವೆ. ಅಲ್ಲದೆ ಇಲ್ಲಿಂದ ಚೆನ್ನೈ, ಮುಂಬಯಿ, ಹೈದರಾಬಾದು, ನೀಲಗಿರಿ, ಸೇಲಂಗಳ ಕಡೆಗೆ ಹೋಗುವ ಹಾಗೂ ರಾಜ್ಯದ ಬಹುತೇಕ ಎಲ್ಲ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಮಾರ್ಗಗಳು ಇರುವುದಲ್ಲದೆ, ರಾಜ್ಯದ ಮುಖ್ಯ ಸ್ಥಳಗಳು ಹಾಗೂ ಚೆನ್ನೈ, ತಿರುಪತಿ, ತಿರುಚ್ಚಿರಾಪಳ್ಳಿ, ಮಧುರೆ, ಕೊಯಮತ್ತೂರು, ಕಲ್ಲಿಕೋಟೆ, ಪಣಜಿ, ಮುಂಬಯಿ, ಹೈದರಾಬಾದು ಮೊದಲಾದೆಡೆಗಳಿಗೆ ನೇರ ಬಸ್ ಸಂಪರ್ಕ ಇದೆ.

ಈ ನಗರದಲ್ಲಿ ಆಕಾಶವಾಣಿ ಕೇಂದ್ರ, ದೂರದರ್ಶನ ಕೇಂದ್ರಗಳಿವೆ. ಇಲ್ಲಿ ಪ್ರಧಾನ ಅಂಚೆಕಚೇರಿ, ಹಲವು ಶಾಖಾ ಕಚೇರಿಗಳು, ಟೆಲಿಫೋನ್ ಎಕ್ಸ್‌ಚೇಂಜ್‌ಗಳೂ ಇವೆ. ನಗರದಿಂದ ದೆಹಲಿ, ಮುಂಬಯಿ, ಹೈದರಾಬಾದು, ಕೊಯಮತ್ತೂರು ಮೊದಲಾದೆಡೆಗಳಿಗೆ ನೇರ ದೂರವಾಣಿ, ಅಂತರ್ಜಾಲ, ಅನುಸರಣ (ಫ್ಯಾಕ್ಸ್) ಮೊದಲಾದ ಆಧುನಿಕ ಸಂಪರ್ಕ ಸಾಧನಗಳಿವೆ.

ಬೆಂಗಳೂರು ನಗರದ ಅಭಿವೃದ್ಧಿ ಮತ್ತು ನಾಗರಿಕ ಸೌಲಭ್ಯಗಳ ಪೂರೈಕೆಗಾಗಿ ಮಹಾನಗರ ಪಾಲಿಕೆ ಪುರಸಭೆಗಳು, ಬೆಂಗಳೂರು ಜಲಮಂಡಲಿ ಮೊದಲಾದ ಸಂಸ್ಥೆಗಳು ಇವೆ. ವಿಶಾಲ ಹಾಗೂ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿಗೆ ಹೆಸರಘಟ್ಟ, ತಿಪ್ಪಗೊಂಡನಹಳ್ಳಿ ಕೆರೆಗಳಿಂದ ಹಾಗೂ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ವ್ಯವಸ್ಥೆ ಇದೆ.

ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳು ನಗರದ ದೊಡ್ಡ ಆಸ್ಪತ್ರೆಗಳು. ಇವೂ ಸೇರಿದಂತೆ ನಗರದಲ್ಲಿ ಸ್ಥಾಪಿತವಾಗಿರುವ 12 ಸರ್ಕಾರಿ, ಆಸ್ಪತ್ರೆಗಳ ಜೊತೆಗೆ ವಿವಿಧ ಸಂಸ್ಥೆಗಳ 41 ಆಸ್ಪತ್ರೆಗಳು, 7 ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು, 31 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 42 ಆರೋಗ್ಯ ಘಟಕಗಳು, 65 ಡಿಸ್ಪೆನ್ಸರಿಗಳು, 47 ಕುಟುಂಬ ಕಲ್ಯಾಣ ಕೇಂದ್ರಗಳ ಜೊತೆಗೆ 140 ಉಪಕೇಂದ್ರಗಳೂ ಇವೆ. ಮಕ್ಕಳ ಆಸ್ಪತ್ರೆಗಳು 2, ಕ್ಷಯರೋಗ ಆಸ್ಪತ್ರೆಗಳು 3, ಒಂದು ಮೆದುಳು ರೋಗಗಳ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆ, ಕುಷ್ಠರೋಗ ಆಸ್ಪತ್ರೆ ಸಹ ಇವೆ. ಅಲ್ಲದೆ ಅನೇಕ ಖಾಸಗಿ ಔಷಧಾಲಯಗಳೂ ಶುಶ್ರೂಷಾಗೃಹಗಳೂ ಇವೆ.

ಬೆಂಗಳೂರು ನಗರದಲ್ಲಿ ಎರಡು ವಿಶ್ವವಿದ್ಯಾಲಯಗಳೂ ವಿಶ್ವವಿದ್ಯಾಲಯದ ರೀತಿಯಲ್ಲೇ ಸ್ವತಂತ್ರವಾಗಿ ಪದವಿಗಳನ್ನು ನೀಡುವ ಇನ್ನೂ ಅನೇಕ ಸಂಸ್ಥೆಗಳೂ ಸ್ಥಾಪಿತವಾಗಿವೆ: ಬೆಂಗಳೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ವತಿಯಿಂದ ನಡೆಯುತ್ತಿರುವ ಆಡುಗೋಡಿ ಕ್ಷೀರೋದ್ಯಮ ಸಂಶೋಧನ ಕೇಂದ್ರ ಮೊದಲಾದವು. ಈ ಸಂಸ್ಥೆಗಳಲ್ಲಿ ವಿಜ್ಞಾನದ ಹಲವು ವಿಭಾಗಗಳಲ್ಲಿ ಉನ್ನತ ಶಿಕ್ಷಣದ ವ್ಯವಸ್ಥೆ ಇದೆ. ಬೆಂಗಳೂರಿನಲ್ಲಿ 2763 ಪ್ರಾಥಮಿಕ ಶಾಲೆಗಳೂ 1018 ಪ್ರೌಢಶಾಲೆಗಳೂ 209 ಪದವಿಪೂರ್ವ ಮತ್ತು 200 ಸಾಮಾನ್ಯ ಶಿಕ್ಷಣ, 52 ಪಾಲಿಟೆಕ್ನಿಕ್, 24 ಎಂಜಿನಿಯರಿಂಗ್, 9 ವೈದ್ಯಕೀಯ, ಹೋಮಿಯೋಪತಿ ಮತ್ತು 6 ಭಾರತೀಯ ವೈದ್ಯಪದ್ಧತಿ, 12 ದಂತವೈದ್ಯ ಕಾಲೇಜು 2001 ರ ಅಂಕಿಅಂಶಗಳಂತೆ ಇದ್ದು ಇವಲ್ಲದೆ ಈಗ ವಿಜ್ಞಾನ, ಕಲೆ, ವಾಣಿಜ್ಯ ಕಾಲೇಜುಗಳು ವಿವಿಧ ಬಗೆಯ ವೃತ್ತಿಶಿಕ್ಷಣ ಶಾಲಾ ಕಾಲೇಜುಗಳೊಡನೆ ಇವುಗಳ ಸಂಖ್ಯೆ ಹೆಚ್ಚಾಗಿದೆ. ಹಾಗೇ ನ್ಯಾಯಶಾಸ್ತ್ರ, ಸಂಸ್ಕೃತ, ಮನೋರೋಗ ವೈದ್ಯಕೀಯ ಕಾಲೇಜುಗಳಿವೆ. ವೃತ್ತಿನಿರತರಿಗೆ ತಮ್ಮ ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ಸಂಜೆ ಕಾಲೇಜುಗಳೂ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದ ಅಂಚೆತೆರಪಿನ ಶಿಕ್ಷಣ ಸಂಸ್ಥೆಗಳೂ ಇವೆ. ಸೆಂಟ್ರಲ್ ಕಾಲೇಜು ಈ ನಗರದ ಅತ್ಯಂತ ಹಳೆಯ ಕಾಲೇಜು (1858). ವೃತ್ತಿ ತರಬೇತಿ ಸಂಸ್ಥೆಗಳು, ಕಚೇರಿ ನಿರ್ವಹಣಾ ತರಬೇತಿ ಸಂಸ್ಥೆ, ಒಂದು ಸಹಕಾರ ತರಬೇತಿ ಕೇಂದ್ರ, ಬೆರಳಚ್ಚು ಮತ್ತು ಶೀಘ್ರಲಿಪಿ ಸಂಸ್ಥೆಗಳೂ ಇವೆ. ಕೇಂದ್ರೀಯ ವಿದ್ಯಾಲಯಗಳೂ ದೈಹಿಕ ಶಿಕ್ಷಣ ತರಬೇತಿ ಕಾಲೇಜುಗಳೂ ಇತರ ಶಾಲೆಗಳೂ ಇವೆ.

ನಗರದಲ್ಲಿ ವಿವಿಧ ಬಗೆಯ ಸಂಶೋಧನ ಸಂಸ್ಥೆಗಳು ಇವೆ. ಬೆಂಗಳೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸಸ್ ಇವು ಉನ್ನತ ಸಂಶೋಧನೆಯ ಸಂಸ್ಥೆಗಳೂ ಆಗಿವೆ. ಇಲ್ಲಿನ ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪ್ರಸಿದ್ಧ ವಿಜ್ಞಾನಿ ಸಿ.ವಿ. ರಾಮನ್‌ರವರಿಂದ ಸ್ಥಾಪಿತವಾಗಿದ್ದು, ಭೌತವಿಜ್ಞಾನರಂಗದಲ್ಲಿ ಉಚ್ಚಮಟ್ಟದ ಸಂಶೋಧನಕಾರ್ಯದಲ್ಲಿ ನಿರತವಾಗಿದೆ. ಬೃಹತ್ ಸಂಶೋಧನ ಸಂಸ್ಥೆಗಳಲ್ಲಿ ನ್ಯಾಷನಲ್ ಏರೋನಾಟಿಕಲ್ ಲ್ಯಾಬೋರೇಟರಿ, ಎಲೆಕ್ಟ್ರಿಕಲ್ ಅಂಡ್ ರಾಡಾರ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್, ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್, ಫಾರೆಸ್ಟ್ ರಿಸರ್ಚ್ ಲ್ಯಾಬೋರೇಟರಿ, ಇಂಡಿಯನ್ ವೆಟರನರಿ ರಿಸರ್ಚ್ ಇನ್‌ಸ್ಟಿಟ್ಯೂಟ್, ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರಿಸರ್ಚ್, ನ್ಯಾಷನಲ್ ಡೈರಿ

ರಿಸರ್ಚ್ ಇನ್‌ಸ್ಟಿಟ್ಯೂಟ್, ನ್ಯಾಷನಲ್ ಟ್ಯೂಬರ್‌ಕ್ಯುಲಾಸಿಸ್ ಇನ್‌ಸ್ಟಿಟ್ಯೂಟ್, ವೈರಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಪ್ರಾದೇಶಿಕ ಕೇಂದ್ರ, ಟೆಲಿಕಮ್ಯೂನಿಕೇಷನ್ಸ್ ಸರ್ವಿಸ್ ಇನ್‌ಸ್ಟಿಟ್ಯೂಟ್, ಸೆಂಟ್ರಲ್ ಮೆಡಿಸಿನಲ್ ಪ್ಲಾಂಟ್ಸ್ ಆರ್ಗನೈಸೇಷನ್, ಮೆಷಿನ್ ಟೂಲ್ಸ್ ಇನ್‌ಸ್ಟಿಟ್ಯೂಟ್, ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್ ಆಫ್ ಬಯಲಾಜಿಕಲ್ ಕಂಟ್ರೋಲ್‌ನ ಶಾಖೆ, ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ ಇವು ಪ್ರಮುಖವಾದವು. ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್, ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್, ಸ್ಮಾಲ್ ಇಂಡಸ್ಟ್ರೀಸ್ ಸರ್ವಿಸ್ ಇನ್‌ಸ್ಟಿಟ್ಯೂಟ್ ಮುಂತಾದವೂ ಔದ್ಯಮಿಕ ಮತ್ತು ವೈಜ್ಞಾನಿಕ ಸಂಶೋಧನೆಗೆ ಪೂರಕ ಸಂಸ್ಥೆಗಳಾಗಿವೆ. ಅಲ್ಲದೆ ಅನೇಕ ಔದ್ಯಮಿಕ ಸಂಸ್ಥೆಗಳು ಮತ್ತು ಕೆಲವು ಸರ್ಕಾರಿ ಇಲಾಖೆಗಳು ಸ್ವಂತವಾದ ಸಂಶೋಧನಾ ವಿಭಾಗಗಳನ್ನು ಬೆಳೆಸಿಕೊಂಡಿವೆ. ರಾಜ್ಯ ಸರ್ಕಾರದ ಕೇಂದ್ರ ಗ್ರಂಥಾಲಯ ಸೇರಿದಂತೆ 170 ಗ್ರಂಥಾಲಯಗಳಿವೆ.

ಕ್ರಮವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾಗಿರುವ ವಿಶ್ವೇಶ್ವರಯ್ಯ ಔದ್ಯಮಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ ಮತ್ತು ಸರ್ಕಾರಿ ವಸ್ತುಸಂಗ್ರಹಾಲಯ, ರಾಜ್ಯ ಸರ್ಕಾರದ ವತಿಯಿಂದ ಸ್ಥಾಪಿತವಾಗಿರುವ ಸಾಹಿತ್ಯ ಅಕಾಡೆಮಿ, ಲಲಿತಕಲಾ ಅಕಾಡೆಮಿ, ನಾಟಕ ಅಕಾಡೆಮಿ, ಸಂಗೀತ ಅಕಾಡೆಮಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಅನುವಾದ ಅಕಾಡೆಮಿ **(ನೋಡಿ: ಅಕಾಡೆಮಿಗಳು)** ಮೊದಲಾದ ಸಂಘ ಸಂಸ್ಥೆಗಳು ಬೆಂಗಳೂರಿನಲ್ಲಿವೆ. ಇವಲ್ಲದೆ ನಗರದ ಬೌದ್ಧಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರತವಾಗಿರುವವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಮಿಥಿಕ್ ಸೊಸೈಟಿ, ಭಾರತೀಯ ವಿದ್ಯಾಭವನದ ಪ್ರಾದೇಶಿಕ ಕೇಂದ್ರ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಗೋಖಲೆ ಸಾರ್ವಜನಿಕ ಸಂಸ್ಥೆ, ಅಲೈಯನ್ಸ್ ಫ್ರಾನ್ಸೈಸ್, ಮ್ಯಾಕ್ಸ್‌ಮುಲ್ಲರ್ ಭವನ, ಬೈಬಲ್ ಸೊಸೈಟಿ ಆಫ್ ಇಂಡಿಯ, ಮಹಾಬೋಧಿ ಸೊಸೈಟಿ, ಥಿಯೊಸಾಫಿಕಲ್ ಸೊಸೈಟಿ ಮೊದಲಾದವನ್ನು ಹೆಸರಿಸಬಹುದು.

ಬೆಂಗಳೂರು ನಗರ ಪತ್ರಿಕೋದ್ಯಮ ರಂಗದಲ್ಲೂ ಹೆಚ್ಚಿನ ಬೆಳೆವಣಿಗೆಯನ್ನು ಸಾಧಿಸಿದೆ. ಇಲ್ಲಿಂದ ದಿನ, ವಾರ, ಮಾಸ, ತ್ರೈಮಾಸಿಕ, ಅರ್ಧ ವಾರ್ಷಿಕ ಕನ್ನಡ ಪತ್ರಿಕೆಗಳೂ ಇಂಗ್ಲಿಷ್, ತಮಿಳು, ತೆಲುಗು, ಮಲೆಯಾಳಂ, ಹಿಂದೀ, ಮರಾಠಿ, ಉರ್ದು ಈ ಮುಂತಾದ ಭಾಷೆಗಳಲ್ಲಿ ಪತ್ರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ.

ನಗರದಲ್ಲಿ ಚಲನಚಿತ್ರ ಸ್ಟುಡಿಯೋಗಳೂ ಚಲನಚಿತ್ರ ಮಂದಿರಗಳೂ ಇವೆ. ಇಲ್ಲಿರುವ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್ ಚಲನಚಿತ್ರಕ್ಕೆ ಸಂಬಂಧಿಸಿದ ಅನೇಕ ಕ್ಷೇತ್ರಗಳಲ್ಲಿ ತರಬೇತು ನೀಡುವ ಸಂಸ್ಥೆಯಾಗಿದೆ. ರವೀಂದ್ರ ಕಲಾಕ್ಷೇತ್ರ ಮತ್ತು ಇತರ ವೃತ್ತಿ ಹಾಗೂ ಹವ್ಯಾಸಿ ಕಲಾವಿದರ ಸಂಗೀತಕಚೇರಿಗಳೂ ನಾಟಕ, ನೃತ್ಯಪ್ರದರ್ಶನಗಳೂ ಆಗಾಗ್ಗೆ ನಡೆಯುತ್ತವೆ. ಪಿಟೀಲು ಚೌಡಯ್ಯ ಸ್ಮಾರಕಭವನವಿದೆ. ಇತ್ತೀಚೆಗೆ ರಂಗಶಂಕರ ಎಂಬ ನಾಟಕ ಭವನ ಆರಂಭವಾಗಿದೆ. ಸರ್ಕಾರಿ ವಸ್ತುಸಂಗ್ರಹಾಲಯಕ್ಕೆ ಸೇರಿದಂತಿರುವ ವೆಂಕಟಪ್ಪ ಆರ್ಟ್ ಗ್ಯಾಲರಿ ಮತ್ತು ಇತರ ಕೆಲವು ಖಾಸಗಿ ಭವನಗಳಲ್ಲಿ ಚಿತ್ರಕಲಾ ಪ್ರದರ್ಶನಗಳಿಗೆ ಅವಕಾಶವಿದೆ. ಚಿತ್ರ ಹಾಗೂ ಶಿಲ್ಪಕಲೆಗೆ ಕೆನ್ ಸ್ಕೂಲ್ ಇದೆ. ಕಂಠೀರವ ಕ್ರೀಡಾಂಗಣ ಇಲ್ಲಿನ ಬೃಹತ್ ಕ್ರೀಡಾಗಾರ. ಇದಲ್ಲದೆ ಇತರ 3 ಕ್ರೀಡಾಗಾರಗಳು, ಒಂದು ಗಾಲ್ಫ್ ಕ್ಲಬ್ ಹಾಗೂ ರೇಸ್ ಕೋರ್ಸ್ (ಬಿಟಿಸಿ) ಇವೆ.

ಬೆಂಗಳೂರು ಬಹು ಪ್ರಾಚೀನ ಸ್ಥಳ. ಇಲ್ಲಿ ಗವಿಗಂಗಾಧರೇಶ್ವರ ಗುಡಿಯ ಪರಿಸರ, ಜಾಲಹಳ್ಳಿ ಪ್ರದೇಶ ಮತ್ತು ಆನೇಕಲ್ಲು ರಸ್ತೆಯಲ್ಲಿ ಸು. 12 ಕಿಮೀ ದೂರದಲ್ಲಿರುವ ಸೂಡಸಂದ್ರ, ಸಿದ್ಧಾಪುರಗಳ ಬಳಿ ಸೂಕ್ಷ್ಮಶಿಲಾಯುಧಗಳು ದೊರಕಿವೆ. ಕಬ್ಬಿಣ ಯುಗಕ್ಕೆ ಸೇರಿದ ಸಮಾಧಿಗಳ ಅವಶೇಷಗಳು ನಗರದ ಸುತ್ತಮುತ್ತಲ ಕೆಲವು ಸ್ಥಳಗಳಲ್ಲಿ ಕಂಡುಬಂದಿವೆ. ಇತಿಹಾಸ ಪ್ರಾರಂಭ ಕಾಲಕ್ಕೆ ಸಂಬಂಧಿಸಿದಂತೆ ಮೆಡಿಟರೇನಿಯನ್ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಕೆಲವು ರೀತಿಯ ಮಣ್ಣಿನ ಮಡಕೆಗಳು ಮತ್ತು ಆಗಿನ ರೋಮ್ ದೊರೆಗಳಾದ ಅಗಸ್ಟಸ್, ಟೈಬೀರಿಯಸ್, ಕ್ಲಾಡಿಯಸ್ ಮೊದಲಾದವರ ನಾಣ್ಯಗಳು ಯಶವಂತಪುರದಲ್ಲಿ ಮತ್ತು ಹಿಂದುಸ್ತಾನ್ ವಿಮಾನ ಕಾರ್ಖಾನೆಯ ಪ್ರದೇಶದಲ್ಲಿ ದೊರಕಿವೆ. ಇವು ಬೆಂಗಳೂರು ನಗರ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದಿಂದ, ಅಂದರೆ ಕ್ರಿ.ಪೂ. ಸು. 4000 ವರ್ಷಗಳಿಂದ, ಜನವಸತಿಯಿದ್ದ ಬಗ್ಗೆ ಹಾಗೂ ಈ ಪ್ರದೇಶ ದಕ್ಷಿಣ ಭಾರತದ ಇತರ ಪ್ರದೇಶಗಳಂತೆ ಹೊರನಾಡುಗಳೊಡನೆ ಹೊಂದಿದ್ದ ಸಂಪರ್ಕಗಳ ಬಗ್ಗೆ ಸ್ಪಷ್ಟಮಾಹಿತಿಗಳಾಗಿವೆ.

ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರಬಲ್ಲಾಳ (12ನೆಯ ಶತಮಾನ) ಬೇಟೆಗೆ ಹೋಗಿದ್ದಾಗ ಹಸಿವು ಬಾಯಾರಿಕೆಗಳನ್ನು ತೀರಿಸಿಕೊಳ್ಳಲು ಒಂದು ಒಂಟಿ ಗುಡಿಸಲನ್ನು ತಲುಪಿದ. ಅಲ್ಲಿ ವಾಸವಾಗಿದ್ದ ಮುದುಕಿಯೊಬ್ಬಳು ಬೆಂದ ಕಾಳನ್ನೂ ನೀರನ್ನೂ ಚಕ್ರವರ್ತಿಗೆ ಕೊಟ್ಟು ಅವನ ಬಳಲಿಕೆ ಪರಿಹರಿಸಿದಳು; ಈ ಆತಿಥ್ಯದಿಂದ ಸಂಪ್ರೀತನಾದ ಚಕ್ರವರ್ತಿ ಅವಳ ಗೌರವಾರ್ಥವಾಗಿ ಆ ಸ್ಥಳದಲ್ಲಿ ಊರೊಂದನ್ನು ಸ್ಥಾಪಿಸಿ ಅದಕ್ಕೆ ಬೆಂದಕಾಳೂರೆಂದು ಹೆಸರಿಟ್ಟ; ಅದೇ ಬೆಂಗಾಳೂರು, ಬೆಂಗಳೂರು ಆಗಿದೆ ಎಂಬುದು ಸ್ಥಳೀಯ ಐತಿಹ್ಯ. ಆದರೆ ಬೆಂಗಳೂರಿನ ಬಳಿಯ ಬೇಗೂರಿನಲ್ಲಿ ದೊರಕಿರುವ 9ನೆಯ ಶತಮಾನದ ಶಾಸನದಲ್ಲಿ ಬೆಂಗಳೂರು ಎಂಬ ಹೆಸರೇ ಕಂಡುಬಂದಿದೆ.

1537ರಲ್ಲಿ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಯಲಹಂಕ ನಾಡಿನ ಪಾಳೆಯಗಾರನಾಗಿದ್ದ ಒಂದನೆಯ ಕೆಂಪೇಗೌಡ ಬೇಟೆಗೆ ಹೋಗಿದ್ದಾಗ ಒಂದು ಮೊಲ ಬೇಟೆನಾಯಿಯ ಮೇಲೆ ತಿರುಗಿ ಬಿದ್ದುದನ್ನು ಕಂಡು ಆ ಸ್ಥಳ ಗಂಡು ಭೂಮಿಯೆಂದು ಭಾವಿಸಿ, ತನ್ನ ಚಕ್ರವರ್ತಿಯ ಅನುಮತಿ ಪಡೆದು ಆ ಸ್ಥಳದಲ್ಲಿ ಒಂದು ಗ್ರಾಮವನ್ನು ಸ್ಥಾಪಿಸಿ ಅದರ ಸುತ್ತ ಮಣ್ಣಿನ ಕೋಟೆಯನ್ನು ಕಟ್ಟಿಸಿದನೆಂದು ಇನ್ನೊಂದು ಐತಿಹ್ಯ (ಇದೊಂದು ಸಂಚಾರಿ ಆಶಯ). ಮುಂದೆ ಕೆಂಪೇಗೌಡ ತನ್ನ ರಾಜಧಾನಿಯನ್ನು ಯಲಹಂಕದಿಂದ ಇಲ್ಲಿಗೆ ವರ್ಗಾಯಿಸಿದ. ಕೆಂಪೇಗೌಡನ ಕೋಟೆ ವಿಶಾಲವಾಗಿತ್ತು. ಅದರ ಎಂಟು ಮಹಾದ್ವಾರಗಳಲ್ಲಿ ಉತ್ತರದ ಯಲಹಂಕ ದ್ವಾರ, ಪೂರ್ವದ ಅಲಸೂರು ಬಾಗಿಲು, ದಕ್ಷಿಣದ ಆನೇಕಲ್ಲು ಬಾಗಿಲು ಮತ್ತು ಪಶ್ಚಿಮದ ಕೆಂಗೇರಿ ಬಾಗಿಲುಗಳ ಸ್ಥಳಗಳನ್ನು ಈಗಲೂ ಗುರುತಿಸಬಹುದು. ಆದರೆ ಕಳೆದ ಶತಮಾನದಲ್ಲಿ ಈ ನಗರ ಅಪರಿಮಿತವಾಗಿ ಬೆಳೆದ ಕಾರಣ ಕೋಟೆಯ ಅಳಿದುಳಿದ ಭಾಗಗಳು ಪೂರ್ಣವಾಗಿ ನಾಶವಾಗಿವೆ. ಕೆಂಪೇಗೌಡನು ಈ ನಗರ ಬೆಳೆಯಬಹುದಾದ ಪರಿಮಿತಿಯನ್ನು ಸೂಚಿಸಲು ನಾಲ್ಕು ದಿಕ್ಕುಗಳಲ್ಲೂ ಗೋಪುರಗಳನ್ನು ಕಟ್ಟಿಸಿದ. ಅವು ಉತ್ತರದಲ್ಲಿ ವೈಯ್ಯಾಳಿಕಾವಲ್ ದಿಬ್ಬದ ಮೇಲೆ, ಪೂರ್ವದಲ್ಲಿ ಅಲಸೂರು ಬಳಿ, ದಕ್ಷಿಣದಲ್ಲಿ ಲಾಲ್‌ಬಾಗ್ ಬಳಿ, ಪಶ್ಚಿಮದಲ್ಲಿ ಗವಿಪುರದ (ಕೆಂಪೇಗೌಡ ನಗರ) ಬಳಿ ಇವೆ. ಆದರೆ ಈಗ ಬೆಂಗಳೂರು ಈ ಎಲ್ಲೆಗಳನ್ನು ಮೀರಿ ಬೆಳೆದು ಬೃಹನ್ನಗರವಾಗಿದೆ.

ಬೆಂಗಳೂರು ಸುತ್ತ ಕೋಟೆಯನ್ನು ಕಟ್ಟಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಅನಂತರ ಸುತ್ತಮುತ್ತಲ ಪ್ರದೇಶಗಳಿಂದ ನೇಯ್ಗೆಯವರು ಮುಂತಾದವರನ್ನು ಬೆಂಗಳೂರಿನಲ್ಲಿ ನೆಲೆಗೊಳಿಸಿದ. ಅನೇಕ ಪೇಟೆಗಳನ್ನು ಕಟ್ಟಿ ನಗರದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿದ ಕೆಂಪೇಗೌಡ, ಸುತ್ತಮುತ್ತಲ ಹಲವು ಪ್ರದೇಶಗಳನ್ನೂ ಗೆದ್ದುಕೊಂಡು ತನ್ನ ರಾಜ್ಯ ವಿಸ್ತಾರ ಮಾಡಿದ. ಈ ಉನ್ನತಿಯನ್ನು ಸಹಿಸದ ಚನ್ನಪಟ್ಟಣದ


ಬೆಂಗಳೂರು ನಗರ

ಪಾಳೆಯಗಾರ ಜಗದೇವರಾಯ ವಿಜಯನಗರದ ಅಳಿಯ ರಾಮರಾಯ ನೊಂದಿಗೆ ಸಂಚುಗೈದು ಕೆಂಪೇಗೌಡನನ್ನು ಆನೆಗೊಂದಿಯಲ್ಲಿ ಸೆರೆಹಿಡಿಸಿ, ಬೆಂಗಳೂರನ್ನು ತನ್ನ ವಶಪಡಿಸಿಕೊಂಡ. ಐದು ವರ್ಷಗಳ ಕಾಲ ಸೆರೆಯಲ್ಲಿದ್ದು ಅನಂತರ ಬಿಡುಗಡೆ ಹೊಂದಿ ಬೆಂಗಳೂರಿನಲ್ಲಿ ಮತ್ತೆ ಅಧಿಕಾರಾರೂಢನಾದ ಕೆಂಪೇಗೌಡ ಈ ಘಟನೆಯ ಸ್ಮಾರಕವಾಗಿ ಗವಿಪುರದಲ್ಲಿರುವ ಗಂಗಾಧರೇಶ್ವರ ಗುಡಿಯನ್ನು ನಿರ್ಮಿಸಿದ. ಬಸವನಗುಡಿಯ ಬಸವ ದೇವಾಲಯ, ಕೆಂಪಾಂಬುಧಿ, ಧರ್ಮಾಂಬುಧಿ ಕೆರೆಗಳು ಮತ್ತು ಅಲಸೂರಿನ ಸೋಮೇಶ್ವರನ ಗುಡಿಯ ಪ್ರಾಕಾರ ಸಹ ಇವನ ನಿರ್ಮಾಣಗಳು. ಮುಂದಿನ ಪ್ರಸಿದ್ಧ ದೊರೆ ಇಮ್ಮಡಿ ಕೆಂಪೇಗೌಡ ಬೆಂಗಳೂರಿನ ಸಂಪತ್ತು ವೈಭವಗಳನ್ನು ಹೆಚ್ಚಿಸಿದನೆಂದು ತಿಳಿದುಬರುತ್ತದೆ. ಅಲಸೂರಿನ ಸೋಮೇಶ್ವರ ಗುಡಿಯ ಜೀರ್ಣೋದ್ಧಾರ ಮಾಡಿಸಿದುದಲ್ಲದೆ, ರಂಗನಾಥ ದೇವಾಲಯ, ಸಂಪಂಗಿ ಕೆರೆ, ಕೆಂಪಾಪುರ ಅಗ್ರಹಾರದ ಕೆರೆ ಮತ್ತು ಕಾರಂಜಿ ಕೆರೆಗಳನ್ನು ಕಟ್ಟಿಸಿದ. ಆದರೆ 1638ರಲ್ಲಿ ಬಿಜಾಪುರದ ದಂಡನಾಯಕ ರಣದುಲ್ಲಾಖಾನ್ ಕೆಂಪೇಗೌಡನನ್ನು ಸೋಲಿಸಿ ಬೆಂಗಳೂರನ್ನು ಆಕ್ರಮಿಸಿದ. 1648ರಲ್ಲಿ ಬಿಜಾಪುರದ ಸುಲ್ತಾನ ಬೆಂಗಳೂರು ಮತ್ತು ಅದರ ನೆರೆಯ ಪ್ರದೇಶಗಳನ್ನು ಷಹಜಿಗೆ ಜಾಗೀರಾಗಿ ಕೊಟ್ಟ. ಕೆಲವು ಕಾಲಾನಂತರ ಬೆಂಗಳೂರು ಪ್ರಾಂತಕ್ಕೆ ಶಹಾಜಿಯನ್ನು ಸುಭಾದಾರನನ್ನಾಗಿಯೂ ನೇಮಿಸಲಾಯಿತು. 1664ರಲ್ಲಿ ಬೆಂಗಳೂರು ಶಹಾಜಿಯ ಮಗ ವೆಂಕಾಜಿಯ ಪಾಲಿಗೆ ಬಂತು. 1675ರಲ್ಲಿ ತಂಜಾವೂರು ರಾಜ ವೆಂಕಾಜಿಗೆ ಸಿಕ್ಕಿದುದರಿಂದ ಅಲ್ಲಿ ವಾಸ ಮಾಡಲಾರಂಭಿಸಿದ. ವೆಂಕಾಜಿ ಬೆಂಗಳೂರನ್ನು ಮೈಸೂರು ರಾಜ್ಯದ ಅರಸ ಚಿಕ್ಕದೇವರಾಜರಿಗೆ ಮಾರುವ ಯೋಜನೆಯಲ್ಲಿದ್ದ. ಆದರೆ ಮಾತುಕತೆಗಳು ಸಮಾಧಾನಕರವಾಗಿ ಮುಕ್ತಾಯಗೊಳ್ಳಲಿಲ್ಲ. ಪಿತ್ರಾರ್ಜಿತವಾದ ಬೆಂಗಳೂರು ತಮ್ಮ ಮನೆತನದ ಕೈಬಿಡುವುದು ಶಿವಾಜಿಗೆ ಇಷ್ಟವಿರಲಿಲ್ಲ. 1680ರಲ್ಲಿ ಶಿವಾಜಿ ಮರಣ ಹೊಂದಿದಾಗ ಅವನ ಮಗ ಸಂಭಾಜಿ ಮರಾಠಾ ಸಿಂಹಾಸನಕ್ಕೆ ಬಂದ. ತಂದೆಯ ಆಸೆಯನ್ನು ಈಡೇರಿಸುವ ಸಲುವಾಗಿ ಸಂಭಾಜಿಯ ಸೈನ್ಯ ಬೆಂಗಳೂರಿನ ಮೇಲೆ ಬಂತು. ಆ ಪ್ರಯತ್ನವನ್ನು ವಿಫಲಗೊಳಿಸುವ ಸಲುವಾಗಿ ದಕ್ಷಿಣದಲ್ಲಿ ಬೀಡುಬಿಟ್ಟಿದ್ದ ಮುಗಲ್ ಚಕ್ರವರ್ತಿ ತನ್ನ ಸೈನ್ಯವನ್ನು ದಳಪತಿ ಖಾಸಿಂ ಖಾನನ ನೇತೃತ್ವದಲ್ಲಿ 1687ರಲ್ಲಿ ಕಳಿಸಿದಾಗ ಬೆಂಗಳೂರು ಮುಗಲರ ವಶವಾಯಿತು. ಮೈಸೂರಿನ ಚಿಕ್ಕದೇವರಾಜ 1690ರಲ್ಲಿ ಶಿರಾದಲ್ಲಿ ಮುಗಲ ಸುಭಾದಾರನಾಗಿದ್ದ ಖಾಸಿಂ ಖಾನನಿಂದ ಬೆಂಗಳೂರನ್ನು ಮೂರು ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡ. ಬೆಂಗಳೂರಿನ ಸುತ್ತ ಹೊಸದಾಗಿ ಮಣ್ಣಿನ ಕೋಟೆ ಕಟ್ಟಿಸಿ ಅಲ್ಲಿ ತನ್ನ ಸೈನ್ಯವನ್ನು ನೆಲೆಗೊಳಿಸಿದ. ಅದೇ ಸಮಯದಲ್ಲಿ ಕೋಟೆಯಲ್ಲಿ ವೆಂಕಟರಮಣಸ್ವಾಮಿ ದೇವಾಲಯವನ್ನು ಕಟ್ಟಿಸಿದ. 1759ರಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶ ಹೈದರನಿಗೆ ಜಾಗೀರಾಗಿ ದೊರಕಿತು. ಅದೇ ಸಮಯದಲ್ಲಿ ಮರಾಠರ ಸೈನ್ಯ ಬೆಂಗಳೂರು ಮತ್ತು ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿದಾಗ ಹೈದರ್ ಅವರನ್ನು ಹೊಡೆದಟ್ಟಿ ರಾಜ್ಯಕ್ಕೆ ಬಂದ ಅಪಾಯವನ್ನು ನಿವಾರಿಸಿದ. 1761ರ ಹೊತ್ತಿಗೆ ಹೈದರ್ ರಾಜ್ಯದ ರಕ್ಷಣೆಗೆ ಬೆಂಗಳೂರಿನ ಪ್ರಾಮುಖ್ಯವನ್ನು ಗುರುತಿಸಿ ಅದರ ಸುತ್ತ ಹೊಸದಾಗಿ ಕಲ್ಲಿನ ಕೋಟೆಯನ್ನು ಕಟ್ಟಿಸಿದ. ಬೆಂಗಳೂರಿನ ಕಿಲ್ಲೇದಾರನಾಗಿದ್ದ ಇಬ್ರಾಹೀಂ ಖಾನ್ ಈ ಕೋಟೆಯ ನಿರ್ಮಾಣವನ್ನು ಸ್ವತಃ ಮಾಡಿಸಿದನೆಂದು ಹೇಳಲಾಗಿದೆ. ಅನಂತರದ ವರ್ಷಗಳಲ್ಲಿ ಬ್ರಿಟಿಷರು ಮತ್ತು ಮೈಸೂರು ಸುಲ್ತಾನರ ಹೋರಾಟಗಳಲ್ಲಿ ಬೆಂಗಳೂರು ಬ್ರಿಟಿಷರ ಪ್ರಮುಖ ಗುರಿಯಾಯಿತು. 1791ರ ಮಾರ್ಚ್‌ನಲ್ಲಿ ಲಾರ್ಡ್ ಕಾರನ್‌ವಾಲೀಸನ ನೇತೃತ್ವದ ಬ್ರಿಟಿಷ್ ಸೈನ್ಯ ಬೆಂಗಳೂರನ್ನು ವಶಪಡಿಸಿಕೊಂಡಿತು. ಯುದ್ಧ ಮುಗಿದು ಸಂಧಿ ಏರ್ಪಟ್ಟಾಗ ಶ್ರೀರಂಗಪಟ್ಟಣದ ಒಡಂಬಡಿಕೆಗನುಗುಣವಾಗಿ ಮತ್ತೆ ಬೆಂಗಳೂರು ಟಿಪ್ಪು ಸುಲ್ತಾನನ ವಶವಾಯಿತು. 1799ರಲ್ಲಿ ಟಿಪ್ಪುಸುಲ್ತಾನ ಮರಣ ಹೊಂದಿದ ಅನಂತರ ಬ್ರಿಟಿಷರು ಬೆಂಗಳೂರನ್ನೂ ಮೈಸೂರು ರಾಜಮನೆತನದ ವಶಕ್ಕೆ ವಹಿಸಿಕೊಟ್ಟರು.

19ನೆಯ ಶತಮಾನದ ಪ್ರಾರಂಭದಲ್ಲಿ ಬೆಂಗಳೂರು ನಗರದ ಕೋಟೆಯ ಸುತ್ತ ಆಳವಾದ ಕಂದಕ, ಮುಳ್ಳುಪೊದೆಗಳು ಇದ್ದು ಕೋಟೆಗೆ 8 ಬಾಗಿಲುಗಳಿದ್ದುವು. ಉತ್ತರದ ಯಲಹಂಕ ಬಾಗಿಲು, ಪೂರ್ವದಿಕ್ಕಿನ ಹಲಸೂರು ಬಾಗಿಲು, ದಕ್ಷಿಣದ ಕೋಟೆ ಮತ್ತು ಮೈಸೂರು ಬಾಗಿಲು, ಪಶ್ಚಿಮದ ಅಗ್ರಹಾರ ಮತ್ತು ಸೊಂಡಕೊಪ್ಪ ಬಾಗಿಲು, ವಾಯವ್ಯದಲ್ಲಿ ಬಳೆ ಬಾಗಿಲು ಮುಂತಾದವು. ಆಗಿನ ಬೆಂಗಳೂರಿನಲ್ಲಿ ಅನೇಕ ಪೇಟೆಗಳಿದ್ದು ಈಗಲೂ ಅವುಗಳ ಹೆಸರುಗಳು ರೂಢಿಯಲ್ಲಿವೆ. ಉತ್ತರದ ಯಲಹಂಕ ದ್ವಾರದಿಂದ ದಕ್ಷಿಣದ ಕೋಟೆ ಬಾಗಿಲವರೆಗೆ ದೊಡ್ಡಪೇಟೆ, ದೊಡ್ಡಪೇಟೆಯ ಪೂರ್ವಕ್ಕೆ ನಗರ್ತರ ಪೇಟೆ, ಪಶ್ಚಿಮಕ್ಕೆ ಚಿಕ್ಕಪೇಟೆ, ಅಕ್ಕಿಪೇಟೆ, ಬಳೇಪೇಟೆ, ಅರಳೇಪೇಟೆ ಮೊದಲಾದವು ಇವೆ.

1807ರ ವೇಳೆಗೆ ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣದಿಂದ ತನ್ನ ಶಿಬಿರವನ್ನು ತೆಗೆದು ಬೆಂಗಳೂರಿನ ಟಿಪ್ಪು ಅರಮನೆ ಮತ್ತು ಕೋಟೆಯ ಪ್ರದೇಶದಲ್ಲಿ ಬೀಡು ಬಿಟ್ಟಿತ್ತು. ಅಲಸೂರಿನ ಸೋಮೇಶ್ವರ ದೇವಾಲಯದ ಬಳಿ ದಂಡು ಪ್ರದೇಶ ಸ್ಥಾಪಿಸುವ ಯೋಜನೆ ಮಾಡುತ್ತಿತ್ತು. 1809ರಿಂದ ಈ ಪ್ರದೇಶದಲ್ಲಿ ಸೈನ್ಯದ ಕಚೇರಿಗಳು, ವಾಸಗೃಹಗಳು ನಿರ್ಮಾಣವಾಗಿ ಕ್ರಮೇಣ ಬೆಳೆಯುತ್ತ ಈಗಿನ ಬೆಂಗಳೂರು ದಂಡು ಪ್ರದೇಶ (ಕಂಟೋನ್ಮೆಂಟ್) ಅಸ್ತಿತ್ವಕ್ಕೆ ಬಂತು. ಈ ಪ್ರದೇಶ ದೇಶೀಯ ಆಡಳಿತಕ್ಕೆ ಸೇರದೆ ಬ್ರಿಟಿಷರ ನೇರ ಆಡಳಿತಕ್ಕೆ ಸೇರಿತ್ತು. 1831ರಲ್ಲಿ ಮೈಸೂರು ಸಂಸ್ಥಾನದ ಆಡಳಿತವನ್ನು ಬ್ರಿಟಿಷರೇ ನೇರವಾಗಿ ನಿರ್ವಹಿಸತೊಡಗಿದಾಗ ಸೈನ್ಯಪಡೆಗಳು ಸಂಪೂರ್ಣವಾಗಿ ದಂಡು ಪ್ರದೇಶದಲ್ಲಿ ನೆಲೆಗೊಂಡು, ಕೋಟೆ ನಾಗರಿಕ ಆಡಳಿತದ ವಶವಾಯಿತು. ಟಿಪ್ಪುವಿನ ಅರಮನೆ ಬ್ರಿಟಿಷ್ ಕಮೀಷನರುಗಳ ಆಡಳಿತ ಕೇಂದ್ರವಾಯಿತು. ತನ್ನ ಉತ್ತಮ ಹವಾಗುಣದಿಂದ ಬ್ರಿಟಿಷರನ್ನು ಆಕರ್ಷಿಸಿದ್ದ ಬೆಂಗಳೂರು ವೇಗವಾಗಿ ಬೆಳೆಯಲಾರಂಭಿಸಿತು. ದಂಡು ಪ್ರದೇಶ 13 1/2 ಚದರ ಮೈಲಿ ಪ್ರದೇಶವನ್ನೊಳಗೊಂಡಿತ್ತು. ಅದರ ಪಶ್ಚಿಮ ಭಾಗದಲ್ಲಿ ಕಮೀಷನರ ಬಂಗಲೆ (ಅನಂತರ ಕಾಲದ ರೆಸಿಡೆನ್ಸಿ) ನಿರ್ಮಾಣವಾಯಿತು. ಈಗಿನ ಇನ್‌ಫೆಂಟ್ರಿ ರಸ್ತೆಯ ಪ್ರದೇಶದಲ್ಲಿ ಸೈನಿಕರ ವಸತಿಗಳು ನಿರ್ಮಾಣವಾದವು. ಮಾರ್ಕ್ ಕಬ್ಬನ್ ಮೈಸೂರು ಸಂಸ್ಥಾನದ ಕಮೀಷನರ್ (1834–61) ಆಗಿದ್ದ ಕಾಲದಲ್ಲಿ ಬೆಂಗಳೂರು ಗಮನಾರ್ಹವಾಗಿ ಅಭಿವೃದ್ಧಿ ಹೊಂದಿತು. ತಂತಿ ಸಮಾಚಾರ ಸೌಲಭ್ಯ ಮತ್ತು ಬೆಂಗಳೂರು–ಜೋಲಾರಪೇಟೆ ರೈಲುಮಾರ್ಗ ನಿರ್ಮಾಣ ಕಾರ್ಯಗಳು ನಡೆದು ನಗರದ ಪ್ರಾಮುಖ್ಯ ಹೆಚ್ಚಿತು. ಅನಂತರದ ಕಮಿಷನರ್ ಎಲ್.ಬಿ. ಬೌರಿಂಗ್‌ನ (1862–70) ಕಾಲದಲ್ಲಿ ಆಡಳಿತ ಕಚೇರಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ಕಬ್ಬನ್ ಪಾರ್ಕಿನಲ್ಲಿ ಅಠಾರಾ ಕಚೇರಿಯನ್ನು ಕಟ್ಟಿಸಲಾಯಿತು (1868).

1881ರ ಮಾರ್ಚ್‌ನಲ್ಲಿ ಸಂಸ್ಥಾನದ ಆಡಳಿತ ಮತ್ತೆ ಮೈಸೂರು ರಾಜವಂಶದ ವಶಕ್ಕೆ ಬಂದಾಗ ಬೆಂಗಳೂರಿನಲ್ಲಿ ಬ್ರಿಟಿಷರ ನೇರ ಆಡಳಿತ ಕೊನೆಗೊಂಡರೂ ದಂಡು ಪ್ರದೇಶ ಮಾತ್ರ ಅವರ ಆಡಳಿತದಲ್ಲೇ ಮುಂದುವರಿಯಿತು (ಈ ರೀತಿ ಇಬ್ಭಾಗವಾದ ಬೆಂಗಳೂರಿನ ಜನಸಂಖ್ಯೆ 1,00,081 ಇತ್ತು). ಅಲ್ಲದೆ ಬೆಂಗಳೂರಿನ ಈ ವಿಭಜನೆಯಿಂದ ಮೈಸೂರು ರಾಜಮನೆತನ ಮತ್ತು ಜನತೆಗೆ ಅತೃಪ್ತಿಯಿತ್ತು. ದಂಡು ಪ್ರದೇಶ

ಬ್ರಿಟಿಷರ ಮತ್ತು ಆಂಗ್ಲೋ–ಇಂಡಿಯನ್ನರ ಪ್ರತ್ಯೇಕ ರಾಜ್ಯವೆಂಬಂತೆ ಇತ್ತು. ಲಾರ್ಡ್ ವಿಲ್ಲಿಂಗ್ಡನ್ 1933ರ ಡಿಸೆಂಬರಿನಲ್ಲಿ ಮೈಸೂರಿಗೆ ಭೇಟಿಯಿತ್ತಾಗ ನಾಲ್ಮಡಿ ಕೃಷ್ಣರಾಜ ಒಡೆಯರ್ ದಂಡು ಪ್ರದೇಶದ ನಾಗರಿಕ ಆಡಳಿತವನ್ನು ರಾಜ್ಯ ಸರ್ಕಾರಕ್ಕೆ ವಹಿಸಿಕೊಡಬೇಕೆಂದು ಒತ್ತಾಯಿಸಿದರು. ಆದರೂ ಈ ಪ್ರಶ್ನೆ ಬಗೆಹರಿಯದೆ ಉಳಿದಿದ್ದು ಅಂತಿಮವಾಗಿ ಸ್ವಾತಂತ್ರ್ಯಕ್ಕೆ ಕೆಲವು ದಿನಗಳ ಮುನ್ನ 1947ರ ಜುಲೈ 26ರಂದು ದಂಡು ಪ್ರದೇಶದ ಪೂರ್ಣ ಆಡಳಿತವನ್ನು ರಾಜ್ಯ ಸರ್ಕಾರಕ್ಕೆ ವಹಿಸಿಕೊಡಲಾಯಿತು. ಮೈಸೂರು ರಾಜಮನೆತನದ ಆಡಳಿತ ಮತ್ತೆ ಅಸ್ತಿತ್ವಕ್ಕೆ ಬಂದ ಕಾರಣ ಸಹಜವಾಗಿ ಮೈಸೂರು ರಾಜಧಾನಿಯ ಗೌರವ ಸ್ಥಾನವನ್ನು ಪಡೆದರೂ ಬೆಂಗಳೂರು ಆಡಳಿತ ಕೇಂದ್ರವಾಗಿ ಮುಂದುವರಿಯಿತು. ಹೊಸದಾಗಿ ಅಸ್ತಿತ್ವಕ್ಕೆ ಬಂದ ಪ್ರಜಾಪ್ರತಿನಿಧಿ ಸಭೆ (1881) ಬೆಂಗಳೂರಿನಲ್ಲಿ ಸೇರುತ್ತಿತ್ತು. ಇದೇ ಅವಧಿಯಲ್ಲಿ ಬೆಂಗಳೂರು ನಗರ ಹೊಸ ಹೊಸ ಬಡಾವಣೆಗಳಾಗಿ ಬೆಳೆವಣಿಗೆ ಕಂಡಿತು. ಶೇಷಾದ್ರಿಪುರ, ಮಲ್ಲೇಶ್ವರ, ಚಾಮರಾಜಪೇಟೆ, ಶಂಕರಪುರ, ಗವಿಪುರ, ಬಸವನಗುಡಿ, ಮಾವಳ್ಳಿ, ಮುಸ್ಲಿಮ್ ಬ್ಲಾಕ್ ಮೊದಲಾದುವು ಕೋಟೆಯ ಹೊರ ಭಾಗಗಳಲ್ಲಿ ನಿರ್ಮಿತವಾದವು. ಕೋಟೆಯ ಬಳಿ ಕೃಷ್ಣರಾಜೇಂದ್ರ ಮಾರ್ಕೆಟ್, ವಿಕ್ಟೋರಿಯ ಆಸ್ಪತ್ರೆಗಳು ಸ್ಥಾಪಿತವಾದವು. 1889ರಲ್ಲಿ ಚಾಮರಾಜಪೇಟೆ ಬಡಾವಣೆಗೆ ಸೇರಿದ ಹಾಗೆ ಹೊಸತರಗುಪೇಟೆ ಸ್ಥಾಪಿತವಾಯಿತು. ದ್ವಿತೀಯ ಯುದ್ಧಾನಂತರ ನಗರ ಬೃಹದಾಕಾರವಾಗಿ ಬೆಳೆದು ಬೆಂಗಳೂರು ನಗರಾಭಿವೃದ್ಧಿ ಸಂಸ್ಥೆಯಿಂದ ಹೊಸ ಬಡಾವಣೆಗಳು ನಿರ್ಮಿತವಾಗಿವೆ. ರಾಜಾಜಿನಗರ, ಹೊಸಹಳ್ಳಿ, ವಸಂತನಗರ, ವಯ್ಯಾಳಿಕಾವಲ್, ಜಯನಗರ, ಸುಬ್ರಹ್ಮಣ್ಯಪುರ, ಹನುಮಂತನಗರ, ಇಂದಿರಾನಗರ, ಆರ್.ಟಿ.ನಗರ, ಜೆ.ಪಿ.ನಗರ ಮೊದಲಾದ ಅನೇಕ ಬಡಾವಣೆಗಳು ಸ್ಥಾಪಿತವಾಗಿವೆ. 1950ರ ದಶಕದಿಂದ ನಗರದ ಔದ್ಯಮೀಕರಣ ತ್ವರಿತಗತಿಯಿಂದ ಸಾಗುತ್ತಿದ್ದು ನಗರದ ಸುತ್ತ ಬೆಳೆದಿರುವ ಅನೇಕ ಪ್ರದೇಶಗಳು ಈಗ ಬೆಂಗಳೂರು ಬೃಹನ್ನಗರಕ್ಕೆ ಸೇರಿವೆ. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಸಾರ್ವಭೌಮಾಧಿಕಾರ ಜನತಾ ಪ್ರತಿನಿಧಿಗಳಿಗೆ ದೊರೆತು ಚುನಾಯಿತ ಜನತಾ ಮಂತ್ರಿಮಂಡಲ ಅಧಿಕಾರ ವಹಿಸಿಕೊಂಡಾಗ ಬೆಂಗಳೂರು ಪೂರ್ಣ ರಾಜಧಾನಿಯ ಗೌರವವನ್ನು ಮತ್ತೆ ಪಡೆಯಿತು. ಅಂದಿನಿಂದ ಹಿಂದಿನ ಮೈಸೂರು ಅಥವಾ ಇಂದಿನ ಕರ್ನಾಟಕದ ರಾಜಧಾನಿಯಾಗಿ, ರಾಜ್ಯದ ಅತ್ಯಂತ ದೊಡ್ಡ ನಗರವಾಗಿ, ಪ್ರಮುಖ ಕೈಗಾರಿಕಾ ಮತ್ತು ವ್ಯಾಪಾರ ಕೇಂದ್ರವಾಗಿ ಪ್ರವರ್ಧಿಸುತ್ತಿದೆ.

ಬೆಂಗಳೂರು ನಗರದ ಐತಿಹಾಸಿಕ ಸ್ಮಾರಕಗಳಲ್ಲಿ ಅಲಸೂರಿನ ಸೋಮೇಶ್ವರ ದೇವಾಲಯದ ಗರ್ಭಗುಡಿಯ ಭಾಗ (ಬಹುಶಃ 11–12ನೆಯ ಶತಮಾನ) ನಗರ ಪ್ರದೇಶದಲ್ಲಿ ಈಗ ಉಳಿದಿರುವ ಅತ್ಯಂತ ಪ್ರಾಚೀನ ಕಟ್ಟಡ ಎಂದು ತೋರುತ್ತದೆ. ಕೆಂಪೇಗೌಡ ನಿರ್ಮಿಸಿದನೆಂದು ತಿಳಿದುಬರುವ ಗವೀಪುರದಲ್ಲಿರುವ ಗಂಗಾಧರೇಶ್ವರ ಗುಡಿ ನೈಸರ್ಗಿಕ ಗುಹೆಯಲ್ಲಿ ನಿರ್ಮಿತವಾಗಿದೆ. ಅದರ ಮುಂಭಾಗದಲ್ಲಿ ಮಂಟಪ, ಕಂಬಗಳಿಂದೊಡಗೂಡಿದ ವರಾಂಡ ಮತ್ತು ಶಿಖರಗಳನ್ನು ಕಟ್ಟಲಾಗಿದೆ. ಬಸವನ ಗುಡಿಯ ಬಸವದೇವಾಲಯ, ಅದರಲ್ಲಿರುವ ದೊಡ್ಡ ನಂದಿ ವಿಗ್ರಹ, ಕೆಂಪಾಂಬುಧಿ ಮತ್ತು ಧರ್ಮಾಂಬುಧಿ ಕೆರೆಗಳು ಸಹ ಕೆಂಪೇಗೌಡನ ನಿರ್ಮಾಣಗಳು. ಬಸವ ದೇವಾಲಯದ ಮುಂಭಾಗದಲ್ಲಿ ಒಂದು ಸುಂದರ ಧ್ವಜಸ್ತಂಭವಿದೆ. ದೇವಾಲಯದಲ್ಲಿ ಪ್ರಮಾಣಬದ್ಧವಾದ ಬಸವನ ವಿಗ್ರಹವನ್ನು ಕಡೆಯಲಾಗಿದೆ. ಬಸವನ ದೇವಾಲಯದ ಬಳಿಯಿರುವ ಏಕಶಿಲೆಯಲ್ಲಿ ಮಾಡಿದ ಬೃಹತ್ತಾದ ಗಣೇಶಮೂರ್ತಿ, ಇದರ ಬಳಿಯಿರುವ ಕಾಡು ಹನುಮಾನ್ ದೇವಾಲಯದ ಆಂಜನೇಯನ ಏಕಶಿಲಾಮೂರ್ತಿ ಗಮನಾರ್ಹವಾದುವು. ತರುವಾಯ ಆಳಿದ ಕೆಂಪೇಗೌಡನ ವಂಶಜರು ಮತ್ತೆ ಕೆಲವು ಕೆರೆಗಳನ್ನೂ ಅಲಸೂರಿನ ಸೋಮೇಶ್ವರ ದೇವಾಲಯದ ಗೋಪುರ ಮತ್ತು ಪ್ರಾಕಾರ, ನಗರದ ಮಧ್ಯದಲ್ಲಿ ಬಳ್ಳಾಪುರ ಪೇಟೆಯಲ್ಲಿರುವ ರಂಗನಾಥ ದೇವಾಲಯ–ಇವನ್ನು ಕಟ್ಟಿಸಿದರು. ಈ ದೇವಾಲಯಗಳು ದ್ರಾವಿಡ ಶೈಲಿಯ ವಾಸ್ತುಪದ್ಧತಿಗೆ ಸೇರಿದವು. ಇವುಗಳಲ್ಲಿ ವಿಜಯ ನಗರದ ವಾಸ್ತು ಲಕ್ಷಣಗಳನ್ನು ಸ್ವಲ್ಪಮಟ್ಟಿಗೆ ಕಾಣಬಹುದು. ಕೆಂಪೇಗೌಡ ನಗರದ ನಾಲ್ಕು ಮೂಲೆಗಳಲ್ಲಿ ಕಟ್ಟಿಸಿದ ಗೋಪುರಗಳು ಸಾಮಾನ್ಯ ರೀತಿಯ ವಾಸ್ತು ರಚನೆಗಳು.

ಈಗ ಮಲ್ಲೇಶ್ವರ ಬಡಾವಣೆಯಲ್ಲಿರುವ ಕಾಡುಮಲ್ಲೇಶ್ವರ ಗುಡಿ ಬಹುಶಃ ಕೆಂಪೇಗೌಡನ ಕಾಲದಲ್ಲಿ ನಿರ್ಮಿತವಾದುದಿರಬೇಕು. ಆ ದೇವಾಲಯದ ಸಮೀಪದಲ್ಲಿರುವ 1669ರ ಶಾಸನ ಆ ಮಲ್ಲಿಕಾರ್ಜುನ ದೇವರಿಗೆ ಮರಾಠ ರಾಜ ವೆಂಕೋಜಿ ಒಂದು ಗ್ರಾಮವನ್ನು ಮಾನ್ಯವಾಗಿ ಕೊಟ್ಟ ಸಂಗತಿಯನ್ನು ತಿಳಿಸುತ್ತದೆ.

ಬೆಂಗಳೂರಿನಲ್ಲಿರುವ ಹೆಚ್ಚು ಪ್ರಸಿದ್ಧವಾದ, ವಾಸ್ತುಶಿಲ್ಪ ದೃಷ್ಟಿಯಿಂದ ಮುಖ್ಯವಾದ ಐತಿಹಾಸಿಕ ಕಟ್ಟಡ ಕೋಟೆವೆಂಕಟರಮಣ ದೇವಸ್ಥಾನ. ಚಿಕ್ಕದೇವರಾಜ ಬೆಂಗಳೂರನ್ನು ಮುಗಲರಿಂದ 1690ರಲ್ಲಿ ಕೊಂಡ ಅನಂತರ ಕೆಂಪೇಗೌಡನ ಕೋಟೆಯಲ್ಲದೆ ಮತ್ತೊಂದು ಮಣ್ಣಿನ ಕೋಟೆಯನ್ನೂ ಅದರೊಳಗೆ ವೆಂಕಟರಮಣ ದೇವಾಲಯವನ್ನೂ ಕಟ್ಟಿಸಿದನೆಂದು ಅವನ ಮಗ ಇಮ್ಮಡಿ ಕಂಠೀರವ ನರಸರಾಜನ 1705ರ ಕೆಂಗೇರಿ ಹೋಬಳಿಯ ಕೊತ್ತನೂರು ಶಾಸನ ತಿಳಿಸುತ್ತದೆ. ದೇವಾಲಯದ ನಿರ್ಮಾಣದ ಕಾಲವನ್ನು 1695 ಎಂದು ನಿರ್ಧರಿಸಬಹುದು. ದ್ರಾವಿಡ ಶೈಲಿಯಲ್ಲಿ ವಿಜಯನಗರ–ನಾಯಕ ಕಾಲದ ವಾಸ್ತುಶೈಲಿಯ ಲಕ್ಷಣಗಳನ್ನು ಹೊಂದಿರುವ ಈ ಕಟ್ಟಡದ ಮುಂಭಾಗದಲ್ಲಿ ಏಕಶಿಲೆಯ ಅಷ್ಟಕೋನಗಳುಳ್ಳ ಗರುಡಗಂಬವಿದೆ. ಕಂಬದ ಅಡಿಭಾಗದಲ್ಲಿ ಪೂರ್ವದಲ್ಲಿ ಶಂಖ, ದಕ್ಷಿಣದಲ್ಲಿ ಅಂಜಲಿಬದ್ಧನಾದ ಗರುಡ, ಪಶ್ಚಿಮದಲ್ಲಿ ತ್ರಿಪುಂಡ್ರ ಮತ್ತು ಉತ್ತರದಲ್ಲಿ ಅಂಜಲಿಬದ್ಧ ಹನುಮಂತನ ಕೆತ್ತನೆಗಳಿವೆ. ಈ ದೇವಾಲಯದಲ್ಲಿ ಎತ್ತರವಾದ ಜಗಲಿಯ ಮೇಲೆ ನಿಂತ ಸುಂದರ ಕೆತ್ತನೆಗಳುಳ್ಳ ಕಂಬಗಳಿಂದ ಕೂಡಿದ ಒಂಬತ್ತು ಅಂಕಣಗಳ ಮುಖಮಂಟಪ, ನವರಂಗ ಸುಕನಾಸಿ ಮತ್ತು ಗರ್ಭಗುಡಿಗಳಿವೆ. ಕಂಬಗಳಿಂದ ಮುನ್‌ಚಾಚಿದಂತೆ ಇರುವ, ಆನೆಗಳ ಮೇಲೆ ನಿಂತ ಸಿಂಹಗಳ ಮೇಲೆ ಕುಳಿತಂತೆ ಕೆತ್ತಲಾಗಿರುವ ವೀರರ ಪ್ರತಿಮೆಗಳು ಸುಂದರ ಶಿಲ್ಪಗಳು. ಗರ್ಭಗುಡಿಯಲ್ಲಿ ವೆಂಕಟರಮಣ ಸ್ವಾಮಿಯ ಸುಂದರ ಮೂರ್ತಿಯನ್ನು ಪ್ರತಿಷ್ಠಾಪಿಸಿದೆ. ದೇವಾಲಯದ ಹೊರಗೋಡೆಗಳ ಮೇಲೆ ವಾಹನಾರೂಢರಾದ ವಿಷ್ಣು, ಬ್ರಹ್ಮ, ಶಿವನ ಮೂರ್ತಿಗಳಲ್ಲದೆ ಗಿರಿಜಾ ಕಲ್ಯಾಣದ ದೃಶ್ಯ, ಸಪ್ತರ್ಷಿಗಳ ಮತ್ತು ಸಪ್ತಮಾತೃಕೆಯರ ಉಬ್ಬುಶಿಲ್ಪಗಳಿವೆ.

ಬೆಂಗಳೂರಿನ ಮತ್ತೊಂದು ಪ್ರಮುಖ ಐತಿಹಾಸಿಕ ಕಟ್ಟಡವೆಂದರೆ ಟಿಪ್ಪುಸುಲ್ತಾನನ ಕೋಟೆ ಮತ್ತು ಅರಮನೆ. ಇದು ಹೈದರ್ 1761ರಲ್ಲಿ ಕಟ್ಟಿದ ಕಲ್ಲಿನ ಕೋಟೆಯ ಭಾಗ. ಕೋಟೆಯ ಎತ್ತರದ ಗೋಡೆಗಳು, ಎತ್ತರದ ದ್ವಾರಗಳು ಮತ್ತು ಒಳಗಿನ ಕೆಲವು ಭಾಗಗಳು ಮಾತ್ರ ಈಗ ಉಳಿದಿವೆ. 1791ರಲ್ಲಿ ಬ್ರಿಟಿಷರು ಈ ಕೋಟೆಯನ್ನು ಆಕ್ರಮಿಸಲು ಮಾಡಿದ ಒಂದು ಬಿರುಕಿನ ಬಳಿ ಆ ವಿಷಯವನ್ನು ತಿಳಿಸುವ ಫಲಕವೊಂದನ್ನು ಇಡಲಾಗಿದೆ. ಈಗ ಉಳಿದಿರುವ ಕೋಟೆಯ ಹೊರಭಾಗದಲ್ಲಿರುವ ಟಿಪ್ಪುಸುಲ್ತಾನನ ಅರಮನೆ ಹಿಂದೆ ಮುಖ್ಯಕೋಟೆಯ ಒಳಗೇ ಇತ್ತು. ಕೋಟೆಯ ಒಳಗೆ ಒಂದು ಅರಮನೆಯನ್ನು ಕಟ್ಟುವ ಕಾರ್ಯವನ್ನು ಹೈದರನೇ ಪ್ರಾರಂಭಿಸಿದ್ದನಂತೆ. ಆದರೆ ಅದರ ನಿರ್ಮಾಣಕಾರ್ಯ

ಮುಗಿದಿದ್ದು 1791ರಲ್ಲಿ. ಕಟ್ಟಡ ಮಣ್ಣಿನ ಗೋಡೆಗಳಿಂದ ನಿರ್ಮಿಸಿದ್ದಾದರೂ ತೇಗದ ಮರದ ಕಂಬಗಳು ಮತ್ತು ಚಾವಣಿಯಿದ್ದುದರಿಂದ ಮನೋಹರವಾಗಿತ್ತು. ಎರಡಂತಸ್ತಿನ ಕಟ್ಟಡದ ಮುಂಭಾಗದಲ್ಲಿ ವಿಶಾಲವಾದ ಆಸ್ಥಾನದ ಹಜಾರ, ಅದರ ಸುತ್ತಲೂ ಮೊಗಸಾಲೆ ಮತ್ತು ಅದರ ಮಧ್ಯದಲ್ಲಿ ವಾದ್ಯಗೋಷ್ಠಿಯವರ ಜಗಲಿಯಿತ್ತು. ಕಟ್ಟಡದ ಮೇಲಂತಸ್ತಿನಲ್ಲಿ ಸುಲ್ತಾನನ ವಾಸಗೃಹ, ಜನಾನಾದ ಕೋಣೆಗಳು, ಕೆಲವು ಮುಖ್ಯ ಕಚೇರಿಗಳೂ ಇದ್ದವು. ಮೇಲಂತಸ್ತಿನ ಎರಡು ಪಾರ್ಶ್ವಗಳಲ್ಲೂ ಇದ್ದ ವಿಸ್ತಾರವಾದ ಹಜಾರಗಳನ್ನು ರಾಜದರ್ಬಾರಿಗೂ ಅಧಿಕಾರವರ್ಗದ ಸಂದರ್ಶನಗಳಿಗೂ ಬಳಸಲಾಗುತ್ತಿತ್ತು. ಹಜಾರಗಳ ಇಬ್ಬದಿಯಲ್ಲಿದ್ದ ಉಪ್ಪರಿಗೆಯ ಮೊಗಸಾಲೆಗಳಲ್ಲಿ ಹಿರಿಯ ಮತ್ತು ಆಪ್ತ ಅಧಿಕಾರಿಗಳಿಗೂ ಕೆಳಗಿನ ಮೊಗಸಾಲೆಯಲ್ಲಿ ಕೆಳವರ್ಗದ ಅಧಿಕಾರಿಗಳಿಗೂ ಸ್ಥಾನವಿರುತ್ತಿತ್ತು. ಕೆಳಗಿನ ಹಜಾರದ ಇಬ್ಬದಿಗಳಲ್ಲಿದ್ದ ಕೋಣೆಗಳು ರಾಜಮನೆತನದ ಸ್ತ್ರೀಯರ ಮತ್ತು ದಾಸೀವರ್ಗದವರ ಉಪಯೋಗಕ್ಕೆ ಮೀಸಲಾಗಿತ್ತು. 1799ರಲ್ಲಿ ಬ್ರಿಟಿಷರು ಮೈಸೂರು ರಾಜ್ಯವನ್ನು ವಶಪಡಿಸಿಕೊಂಡ ತರುವಾಯ 32 ವರ್ಷ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡ ಮಹಲ್ 1831ರಲ್ಲಿ ಬ್ರಿಟಿಷರು ರಾಜ್ಯಾಡಳಿತವನ್ನು ಮುಮ್ಮಡಿ ಕೃಷ್ಣರಾಜರಿಂದ ತಮ್ಮ ಕೈಗೆ ತೆಗೆದುಕೊಂಡಾಗ ಮತ್ತೆ ರಾಜ್ಯದ ಆಡಳಿತ ಕೇಂದ್ರವಾಯಿತು. ಕಮಿಷನರುಗಳ ಆಳ್ವಿಕೆ ಕಾಲದಲ್ಲಿ ಆಡಳಿತ ಕಚೇರಿಗಳನ್ನು ಟಿಪ್ಪು ಸುಲ್ತಾನನ ಅರಮನೆಯಲ್ಲಿ ಸ್ಥಾಪಿಸಲಾಯಿತು. 1868ರಲ್ಲಿ ಸಂಸ್ಥಾನದ ಆಡಳಿತ ಕಚೇರಿಗಳು ಅಠಾರಾ ಕಚೇರಿಗೆ ವರ್ಗವಾದಾಗ ಈ ಅರಮನೆಯನ್ನು ನಗರಸಭೆಗೆ ಬಿಟ್ಟುಕೊಡಲಾಯಿತು. ಅನಂತರ ಕಾಲದಲ್ಲೂ ಇಲ್ಲಿ ಕೆಲವು ಸಾರ್ವಜನಿಕ ಕಚೇರಿಗಳಿದ್ದವು. ಅವುಗಳಲ್ಲಿ ಸರ್ಕಾರಿ ಮುದ್ರಣಾಲಯವೂ ಒಂದು. ಅನಂತರ ಕಟ್ಟಡದ ಬಹುಭಾಗವನ್ನು ಕೆಡವಲಾಯಿತು. ಈಗ ಉಳಿದುಬಂದಿರುವ ಭಾಗಗಳನ್ನು ರಾಷ್ಟ್ರೀಯ ಸ್ಮಾರಕವೆಂದು ಭಾರತ ಸರ್ಕಾರದ ಪುರಾತತ್ತ್ವ ವಿಭಾಗ ರಕ್ಷಿಸುತ್ತಿದೆ.

ಬೆಂಗಳೂರಿನಲ್ಲಿ ನಗರ್ತಪೇಟೆಯಲ್ಲಿರುವ ಧರ್ಮರಾಯನ ಗುಡಿ ಪ್ರಸಿದ್ಧ ದೇವಾಲಯ. ಇದು 19ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿಸಲಾದ ದ್ರಾವಿಡ ಶೈಲಿಯ ಸಾಮಾನ್ಯ ಕಟ್ಟಡ.

ಯುರೋಪಿಯನ್ನರ ನಿರ್ಮಾಣಗಳಲ್ಲಿ ಬಹಳ ಹಳೆಯದೆಂದರೆ ಪೋರ್ಚುಗಲ್ಲಿನ ಪಾದ್ರಿ ಟರ್ನರ್ 1830ರಲ್ಲಿ ಪ್ರತಿಷ್ಠಾಪಿಸಿದ ಕೋಟೆಯಲ್ಲಿರುವ ಪುಟ್ಟ ಚರ್ಚು. ತರಗುಪೇಟೆಯಲ್ಲಿರುವ ಸೇಂಟ್ ಜೋಸೆಫ್ ಚರ್ಚು ವಿಶಾಲವಾದ ಶಿಲುಬೆಯ ಆಕಾರದ ತಳಪಾಯವಿರುವ ಕಟ್ಟಡ. ಇವೆಲ್ಲವೂ ಗಾಥಿಕ್ ಶೈಲಿಯ ಕಟ್ಟಡಗಳು. ಗಾಥಿಕ್ ಶೈಲಿಯ ಇತರ ಪ್ರಮುಖ ಕಟ್ಟಡಗಳೆಂದರೆ ಅಠಾರಾ ಕಚೇರಿ, ವಸ್ತು ಸಂಗ್ರಹಾಲಯ, ಡ್ಯಾಲಿ ಮೆಮೋರಿಯಲ್ ಹಾಲ್ ಮತ್ತು ಸೆಂಟ್ರಲ್ ಕಾಲೇಜು–ಇವೆಲ್ಲ ಕಟ್ಟಡಗಳೂ 19ನೆಯ ಶತಮಾನದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ನಿರ್ಮಾಣವಾದವು. ದಂಡು ರೈಲುನಿಲ್ದಾಣದ ಬಳಿಯಿರುವ ಮಹಾರಾಜರ ಅರಮನೆ ಮತ್ತೊಂದು ಗಮನಾರ್ಹ ಕಟ್ಟಡ. ಭಾರತಾಂಗ್ಲ ವಾಸ್ತುಶೈಲಿಯ ಈ ಕಟ್ಟಡ ಇಂಗ್ಲೆಂಡ್ ಮತ್ತು ನಾರ್ಮಂಡಿಗಳ ಮಧ್ಯಯುಗದ ದುರ್ಗಗಳನ್ನು ಹೋಲುತ್ತದೆ. ವಿಂಡ್ಸರ್ ಅರಮನೆಯ ಮಾದರಿಯಲ್ಲಿ ಇದನ್ನು ಕಟ್ಟಲಾಗಿದೆ. ಇತ್ತೀಚೆಗೆ ಅಂದರೆ ಸ್ವಾತಂತ್ರ್ಯಾನಂತರ ಕಟ್ಟಿದ ಮುಖ್ಯ ಕಟ್ಟಡವೆಂದರೆ ವಿಧಾನಸೌಧ. ರಾಜ್ಯದ ಆಡಳಿತ ಕಚೇರಿಗಳಿಗೆ, ವಿಧಾನ ಸಭೆ ಸಮಿತಿಗಳಿಗೆ, ಸಚಿವಾಲಯಕ್ಕೆ ಸ್ಥಳವನ್ನೊದಗಿಸಲು ರಾಜ್ಯದ ಆಗಿನ ಮುಖ್ಯಮಂತ್ರಿ ಕೆ. ಹನುಮಂತಯ್ಯನವರ ನೇತೃತ್ವದಲ್ಲಿ ಕಟ್ಟಿಸಿದ ಆಧುನಿಕ ರೀತಿಯ ಈ ಕಟ್ಟಡದಲ್ಲಿ ದ್ರಾವಿಡ ಶೈಲಿಯ ಗೋಪುರಗಳು, ಭಾರತಾಂಗ್ಲ ಶೈಲಿಯ ವಾಸ್ತುಲಕ್ಷಣಗಳು ಮತ್ತು ಆಧುನಿಕ ವಾಸ್ತುಪ್ರಗತಿಯ ಕುರುಹುಗಳನ್ನು ಅಳವಡಿಸಲಾಗಿದೆ. ಗಾಂಭೀರ್ಯ ಮತ್ತು ಭವ್ಯತೆಗಳ ಕೇಂದ್ರದಂತಿರುವ ಈ ಕಟ್ಟಡ ಬೆಂಗಳೂರಿನ ಪ್ರಮುಖ ಆಕರ್ಷಣೆಗಳಲ್ಲಿ ಒಂದು. ಇತ್ತೀಚೆಗೆ ನಿರ್ಮಾಣವಾಗಿರುವ ಯುಟಿಲಿಟಿ ಬಿಲ್ಡಿಂಗ್ ಬೆಂಗಳೂರಿನ ಅತ್ಯಂತ ಎತ್ತರದ ಕಟ್ಟಡ. ವಿಧಾನಸೌಧದ ಮಾದರಿಯಲ್ಲೇ ನಿರ್ಮಿಸಿರುವ ವಿಕಾಸಸೌಧ ಮತ್ತೊಂದು ಪ್ರಮುಖ ಭವನ.

ಬೆಂಗಳೂರಿನ ಇತರ ಪ್ರೇಕ್ಷಣೀಯ ತಾಣಗಳಲ್ಲಿ ಕೆಂಪೇಗೌಡ ರಸ್ತೆ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಕೃಷ್ಣರಾಜೇಂದ್ರ ಮಾರುಕಟ್ಟೆ, ರಸೆಲ್ ಮಾರುಕಟ್ಟೆ, ಮಹಾತ್ಮ ಗಾಂಧೀ ರಸ್ತೆ, ಬ್ರಿಗೇಡ್ ರೋಡ್, ಕಮರ್ಷಿಯಲ್ ಸ್ಟ್ರೀಟ್ ಮೊದಲಾದ ವ್ಯಾಪಾರ ಪ್ರದೇಶಗಳನ್ನು ಹೆಸರಿಸಬಹುದು. ಹಿಂದೊಮ್ಮೆ ಬೆಂಗಳೂರು ಉದ್ಯಾನದ ನಗರ ಎಂದು ಪ್ರಸಿದ್ಧವಾಗಿತ್ತು. ಈಚೆಗೆ ನಗರ ವಿಸ್ತಾರವಾಗಿ ಬೆಳೆದಿದ್ದು ಅನೇಕ ಪ್ರದೇಶಗಳಲ್ಲಿ ಅಸಂಖ್ಯಾತ ಕಟ್ಟಡಗಳು ಹೆಚ್ಚಿದ್ದು ಇಂದಿನ ನಗರದ ಸ್ವರೂಪ ಬಹುಮಟ್ಟಿಗೆ ಬದಲಾಗಿದೆ. ಆದರೆ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳು ಸುಂದರವಾಗಿ ರೂಪಗೊಂಡಿದ್ದು ಬೆಂಗಳೂರಿನ ಪ್ರಮುಖ ಆಕರ್ಷಣೆಗಳಾಗಿವೆ **(ನೋಡಿ: ಉದ್ಯಾನಗಳು)**.

(ಬಿ.ಕೆ.ಜಿ.;*)

**ಬೆಂಗಳೂರು ಗ್ರಾಮಾಂತರ ಜಿಲ್ಲೆ**: ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಆಡಳಿತಾನುಕೂಲಕ್ಕಾಗಿ 11 ತಾಲ್ಲೂಕುಗಳನ್ನೊಳಗೊಂಡಿದ್ದ ಬೆಂಗಳೂರು ಜಿಲ್ಲೆಯನ್ನು 1986 ಆಗಸ್ಟ್ 15ರಂದು ಎರಡು ಜಿಲ್ಲೆಗಳನ್ನಾಗಿ ವಿಂಗಡಿಸಲಾಯಿತು. ಆಗ ಅಸ್ತಿತ್ವಕ್ಕೆ ಬಂದ ಈ ಜಿಲ್ಲೆ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಚನ್ನಪಟ್ಟಣ, ನೆಲಮಂಗಲ, ರಾಮನಗರ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳನ್ನೊಳಗೊಂಡಿದೆ. ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ತಾಲ್ಲೂಕುಗಳನ್ನೊಳಗೊಂಡ ಬೆಂಗಳೂರುನಗರ ಜಿಲ್ಲೆಯೂ ಅಸ್ತಿತ್ವಕ್ಕೆ ಬಂತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಆಗ್ನೇಯದಲ್ಲಿ ತಮಿಳುನಾಡಿನ ಧರ್ಮಾವರಂ ಜಿಲ್ಲೆ, ದಕ್ಷಿಣದಲ್ಲಿ ಚಾಮರಾಜನಗರ ಜಿಲ್ಲೆ, ಪೂರ್ವದಲ್ಲಿ ಮಂಡ್ಯ ಮತ್ತು ತುಮಕೂರು ಜಿಲ್ಲೆ, ಉತ್ತರ ಮತ್ತು ಈಶಾನ್ಯದಲ್ಲಿ ಕೋಲಾರ ಜಿಲ್ಲೆ, ಪೂರ್ವದಲ್ಲಿ ಬೆಂಗಳೂರುನಗರ ಜಿಲ್ಲೆ ಸುತ್ತುವರೆದಿವೆ. ಜಿಲ್ಲೆಯಲ್ಲಿ 8 ತಾಲ್ಲೂಕುಗಳಿದ್ದು ಎರಡು ಉಪವಿಭಾಗಗಳಾಗಿ ವಿಂಗಡಿಸಿದೆ. 35 ಹೋಬಳಿಗಳೂ 1713 ಗ್ರಾಮಗಳೂ 9 ಪಟ್ಟಣಗಳೂ 229 ಗ್ರಾಮ ಪಂಚಾಯಿತಿ ಇರುವ ಈ ಜಿಲ್ಲೆಯ ವಿಸ್ತೀರ್ಣ 5814 ಚ.ಕಿಮೀ. ಜಿಲ್ಲೆಯ ಒಟ್ಟು ಜನಸಂಖ್ಯೆ 18,81,514. ಜನಸಾಂದ್ರತೆ 309 ಚ.ಕಿಮೀ.

**ಭೌತಿಕ ಲಕ್ಷಣಗಳು**: ಜಿಲ್ಲೆ ಉತ್ತರ ಅಕ್ಷಾಂಶ $12^0$ $15^I$ ನಿಂದ $13^0$ $31^I$; ಪೂರ್ವ ರೇಖಾಂಶ $77^0$ $05^I$ ನಿಂದ $78^0$ ವರೆಗೆ ಹರಡಿದ್ದು ಸಮುದ್ರಮಟ್ಟದಿಂದ ಸರಾಸರಿ 600–900ಮೀ ಎತ್ತರದಲ್ಲಿದೆ. ಜಿಲ್ಲೆ ಭೌಗೋಳಿಕವಾಗಿ ಏರುತಗ್ಗುಗಳಿಂದ ಕೂಡಿದ ಪ್ರಸ್ಥಭೂಮಿ. ಜಿಲ್ಲೆಯ ಹಲವೆಡೆ ಚದುರಿದಂತೆ ಬೆಟ್ಟಗುಡ್ಡಗಳೂ ಬೆಟ್ಟಸಾಲುಗಳೂ ಇದ್ದು, ಇವುಗಳ ಮಧ್ಯೆ ಸಾಧಾರಣ ಮಟ್ಟಸ ಪ್ರದೇಶಗಳಿಂದ ಕೂಡಿದೆ. ಕನಕಪುರ ತಾಲ್ಲೂಕಿನ ಬಹುಭಾಗ ಬೆಟ್ಟಪ್ರದೇಶ. ಈ ಬೆಟ್ಟಗಳು ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಪರ್ವತ ಶ್ರೇಣಿಯಿಂದ ಮುಂದುವರಿದ ಪೂರ್ವಘಟ್ಟದ ಭಾಗವಾಗಿವೆ. ಬಾಣಂತಿಮಾರಿಬೆಟ್ಟ (1043 ಮೀ), ನರಸಿಂಹದೇವರಬೆಟ್ಟ, ಮುದಾವಾಡಿಬೆಟ್ಟ, ಬಿಳಿಕಲ್ಲುಬೆಟ್ಟ ಹಾಗೂ ಕೊಪ್ಪಬೆಟ್ಟ (870ಮೀ)–ಇವು ಕೆಲವು ಪ್ರಮುಖ ಬೆಟ್ಟಗಳು. ಇದಲ್ಲದೆ

ಕನಕಪುರದ ಹತ್ತಿರದಿಂದ ಚನ್ನಪಟ್ಟಣ, ರಾಮನಗರ, ಮಾಗಡಿ ತಾಲ್ಲೂಕುಗಳ ಮೂಲಕ ನೆಲಮಂಗಲದ ಕಡೆಗೆ ಮತ್ತೊಂದು ಪರ್ವತಶ್ರೇಣಿ ಹಬ್ಬಿದೆ. ಸಿದ್ದೇದೇವರ ಬೆಟ್ಟ, ಸಾವನದುರ್ಗ (4,025 ಮೀ), ಶಿವಗಂಗಾ (4,559ಮೀ) ಮತ್ತು ನಿಜಗಲ್ಲುಬೆಟ್ಟ– ಇಲ್ಲಿನ ಪ್ರಮುಖ ಬೆಟ್ಟಗಳು.

ಜಿಲ್ಲೆ ಪೂರ್ಣವಾಗಿ ಗ್ರ್ಯಾನೈಟ್ ಪ್ರದೇಶ. ಆದರೆ ಶಿಲೆಯ ರಚನೆಯಲ್ಲಿ ಇರುವ ಕಾಗೆ ಬಂಗಾರದ ಪ್ರಮಾಣ ಮತ್ತು ಅದು ರಚಿತವಾದ ರೂಪ ಇವುಗಳಲ್ಲಿ ವ್ಯತ್ಯಾಸಗಳಿದ್ದು, ಬೇರೆಬೇರೆ ಪ್ರದೇಶದಲ್ಲಿ ತಿಳಿಬೂದು ಬಣ್ಣದ ಶಿಲೆಗಳಿಂದ ಹಾಗೂ ವಿವಿಧ ರಂಗಿನ ಶಿಲಾಸಮೂಹಗಳನ್ನು ಕಾಣಬಹುದು. ಕನಕಪುರ– ರಾಮನಗರ–ನೆಲಮಂಗಲದ ಶ್ರೇಣಿಯ ಬೆಟ್ಟಗಳಲ್ಲಿ ಎತ್ತರದ ಕೋಡುಗಲ್ಲುಗಳಿಂದ ವಿವಿಧಾಕೃತಿಯ ರಚನೆಗಳು ಕಂಡು ಬಂದರೆ, ಇತರೆಡೆಯಲ್ಲಿ ಸಹಜ ಏರುತಗ್ಗಿನ ಬೆಟ್ಟಗುಡ್ಡರಚನೆಗಳು ಕಂಡು ಬರುತ್ತವೆ. ಈ ಪಂಕ್ತಿಗಳ ನಡುವಿನ ಸಮತಟ್ಟಾದ ಪ್ರದೇಶಗಳಲ್ಲಿ ಕೆಂಪು ಮಣ್ಣು ಪ್ರದೇಶವಿದೆ. ನದೀದಡಗಳ ಕೆಲವೆಡೆ ಮಾತ್ರ ಕಪ್ಪು ಮಣ್ಣು ಹಾಗೂ ಕೆಲವು ಭಾಗಗಳಲ್ಲಿ ಸ್ವಲ್ಪಮಟ್ಟಿಗೆ ಜಂಬು ಮಣ್ಣು ಇದೆ.

ದೊಡ್ಡ ಬಳ್ಳಾಪುರ, ಕನಕಪುರ ತಾಲ್ಲೂಕಿನ ಮರಳವಾಡಿ ಮೊದಲಾದ ಕಡೆಗಳಲ್ಲಿ ಕಟ್ಟಡಕ್ಕೆ ಯೋಗ್ಯವಾದ ಚಪ್ಪಡಿಕಲ್ಲು ದೊರಕುತ್ತದೆ. ಆವಿನ ಹಳ್ಳಿ ಹಾಗೂ ಬಿಡದಿ ಪ್ರದೇಶಗಳಲ್ಲಿ ಕಲ್ನಾರು, ಚಿಕ್ಕಬಾಣಾವರ ಮತ್ತು ಗೊಲ್ಲಹಳ್ಳಿ ಬಳಿ ಗ್ರಾಫೈಟ್ ಖನಿಜ ಸ್ವಲ್ಪಮಟ್ಟಿಗೆ ಕಂಡು ಬಂದಿದೆ. ಹೊಸಕೋಟೆ, ದೊಡ್ಡಬಳ್ಳಾಪುರ, ಗೊಲ್ಲಹಳ್ಳಿ, ನೆಲಮಂಗಲ ಮುಂತಾದೆಡೆಗಳಲ್ಲಿ ಇಟ್ಟಿಗೆ ಮತ್ತು ಹೆಂಚುಗಳ ತಯಾರಿಕೆಗೆ ಬೇಕಾದ ಉತ್ತಮದರ್ಜೆಯ ಜೇಡಿಮಣ್ಣು ಲಭಿಸುತ್ತದೆ. ಕನಕಪುರ ತಾಲ್ಲೂಕಿನ ಶಿವಾರದ ಬಳಿ ಕಬ್ಬಿಣದ ಅದಿರೂ ಸಾಲ ಹುಣಸೆ ಮತ್ತು ಮರಳಹಳ್ಳಿಗಳ ಬಳಿ ಪದ್ಮರಾಗವೂ ದೊರಕುತ್ತವೆ. ಇದೇ ತಾಲ್ಲೂಕಿನ ಉತ್ತರದಲ್ಲಿರುವ ಹಾಗೂ ಹಳ್ಳಿಂಯ ವಾಯುವ್ಯದಲ್ಲಿ ಚಾರ್ನಕೈಟ್ ಹಾಗೂ ಹಾರ್ನ್‌ಬ್ಲೆಂಡ್‌ನ ಹೊಡೆಸಾಲುಗಳು ಸ್ವಲ್ಪಮಟ್ಟಿಗೆ ಇವೆ.

**ಅರಣ್ಯ ಸಂಪತ್ತು**: ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 585,431 ಹೆಕ್ಟೇರ್ ಇದ್ದು ಇದರಲ್ಲಿ ಅರಣ್ಯಪ್ರದೇಶ 81,268 ಹೆಕ್ಟೇರ್. ಪ್ರಾಚೀನ ಕಾಲದಲ್ಲಿ ನೆಲಮಂಗಲ ಪ್ರದೇಶದಲ್ಲಿ ಅರ್ಕಾವತಿ ನದಿ ದಂಡೆಯ ಮೇಲೆ ಚಂದನಾರಣ್ಯ (ಗಂಧದ ಮರಗಳ ವನ), ದೇವನಹಳ್ಳಿಯ ಸುತ್ತಮುತ್ತ ಕುಂದಾರಣ್ಯ (ಮಲ್ಲಿಗೆಯ ಕಾಡು) ಇತ್ತೆಂದು ಪ್ರತೀತಿ. ಪ್ರಸ್ತುತ ಹೆಚ್ಚಿನ ಅರಣ್ಯಪ್ರದೇಶ ಮಾಗಡಿ, ರಾಮನಗರ ಹಾಗೂ ಕನಕಪುರ ತಾಲ್ಲೂಕುಗಳಲ್ಲಿದೆ. ಇಲ್ಲಿ ತೇಗ, ಹೊನ್ನೆ, ಬೀಟೆ, ಹೊಂಗೆ, ಕರಚಿ, ದಿಂಡಿಗ, ಜಾಲರಿ (ಅರಗು) ಮುಂತಾದ ಜಾತಿಯ ಮರಗಳು ಕಂಡುಬರುತ್ತವೆ. ಜಿಲ್ಲೆಯ ಅನೇಕ ಭಾಗಗಳಲ್ಲಿ, ಅದರಲ್ಲೂ ನೆಲಮಂಗಲ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನ ಭಾಗಗಳಲ್ಲಿ ಕುರುಚಲು ಕಾಡುಗಳಿವೆ. ಇಲ್ಲಿ ಮುತ್ತುಗ, ಕಕ್ಕೆ, ತಂಗಡಿ ಹಾಗೂ ಈಚಲುಮರಗಳು ಬೆಳೆಯುತ್ತವೆ. ಅರಳಿ, ಆಲ, ಹಲಸು, ಬೇವು, ಬೇಲ, ನೇರಳೆ, ಸೀತಾಫಲ ಮರಗಳಿವೆ. ಗಂಧದ ಮರಗಳು ಜಿಲ್ಲೆಯ ಅನೇಕ ಭಾಗಗಳಲ್ಲಿ ಬೆಳೆಯುತ್ತವೆ; ಕನಕಪುರ, ಚನ್ನಪಟ್ಟಣ, ಮಾಗಡಿ ಮತ್ತು ಬೆಂಗಳೂರು ತಾಲ್ಲೂಕುಗಳಲ್ಲಿ ವಿಶೇಷವಾಗಿವೆ. ಉರುವಲು ಹಾಗೂ ಇದ್ದಿಲು ತಯಾರಿಕೆಗೆ ಅನುಕೂಲವಾದ ಮರಗಳೂ ಕನಕಪುರದ ದಕ್ಷಿಣ ಭಾಗದಲ್ಲಿ ಹೆಚ್ಚು. ಜಿಲ್ಲೆಯ ಅರಣ್ಯಪ್ರದೇಶದಲ್ಲಿ ಜಿಂಕೆ, ಮಂಗ, ಕರಡಿ, ಕಾಡುಬೆಕ್ಕು, ನರಿ, ಮೊಲ, ವಿವಿಧ ಬಗೆಯ ಉರಗಗಳು, ನಾನಾ ನಮೂನೆಯ ಪಕ್ಷಿಗಳು ಪತಂಗಗಳು ಕಾಣಬರುತ್ತವೆ.

ಸರ್ಕಾರ ಅರಣ್ಯ ಇಲಾಖೆಯ ವತಿಯಿಂದ ಸಾಲು ಮರಗಳನ್ನು, ಸಾಮಾಜಿಕ ಅರಣ್ಯಗಳನ್ನು ಬೆಳೆಸುವ ಯೋಜನೆಯನ್ನು ಕೈಗೊಂಡಿದೆ. ಆಗಾಗ ಸಂಭವಿಸುವ ಅನಾವೃಷ್ಟಿಯಿಂದ ಅರಣ್ಯಾಭಿವೃದ್ಧಿಗೆ ತಡೆಯಾಗಿದೆ. ಬಂಜರು ಭೂಮಿಯಲ್ಲಿ ಬೆಳೆಯುವ ಹುಲ್ಲು ಜಾನುವಾರುಗಳಿಗೆ ಮೇವು ಒದಗಿಸುತ್ತದೆ. ಜಿಲ್ಲೆಯಲ್ಲಿ ಕಾಯ್ದಿಸಿರಿದ ಅರಣ್ಯಪ್ರದೇಶ 1,07,811 ಚ.ಕಿಮೀ, ಸಂರಕ್ಷಿತ ಅರಣ್ಯಪ್ರದೇಶ 827 ಚ.ಕಿಮೀ. ಉಳಿದ ಅರಣ್ಯವೆಲ್ಲ ಗ್ರಾಮಾಂತರ ಅರಣ್ಯವ್ಯಾಪ್ತಿಗೊಳಪಟ್ಟಿದೆ. ಹೊಸಕೋಟೆ, ದೊಡ್ಡಬಳ್ಳಾಪುರ, ಚನ್ನಪಟ್ಟಣ, ಸಾತನೂರು, ಕನಕಪುರ, ರಾಮನಗರ ಪ್ರದೇಶದ ಅರಣ್ಯ ಕೇಂದ್ರಾಡಳಿತಕ್ಕೊಳಪಟ್ಟಿದೆ. ದೊಡ್ಡಬಳ್ಳಾಪುರ, ನೆಲಮಂಗಲ, ರಾಮನಗರ, ಮಾಗಡಿ, ಹಾರೋಹಳ್ಳಿ ಪ್ರದೇಶ ಸಾಮಾಜಿಕ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿದೆ.

**ವ್ಯವಸಾಯ** : ಜಿಲ್ಲೆಯ ಬಹುತೇಕ ಉತ್ತರ ಭಾಗ ವ್ಯವಸಾಯಕ್ಕೆ ಉಪಯುಕ್ತವಾದ ಕೆಂಪು ಮಣ್ಣಿನಿಂದಲೂ ದಕ್ಷಿಣ ಭಾಗ ಮರಳು ಮಿಶ್ರಿತ ಕೆಂಪುಮಣ್ಣಿನ ಭೂಮಿಯಿಂದಲೂ ಕೂಡಿದೆ. ಜಿಲ್ಲೆಯ ಭೂಬಳಕೆ ಹೀಗಿದೆ; (ಹೆಕ್ಟೇರ್‌ಗಳಲ್ಲಿ) ವ್ಯವಸಾಯೇತರ ಭೂಮಿ 57,326, ಬಂಜರು ಭೂಮಿ 36,760, ಸಾಗುವಳಿಗೆ ಯೋಗ್ಯವಾದ ಬಂಜರುಭೂಮಿ 62934, ಖಾಯಂ ಗೋಮಾಳ 34,305, ವೃಕ್ಷ ಮತ್ತು ತೋಪುಗಳು 21,376 ಬಿತ್ತನೆಯಾದ ಪ್ರದೇಶ: ನಿವ್ವಳ 297,792. ಒಂದಕ್ಕಿಂತ ಹೆಚ್ಚು ಬಿತ್ತನೆಯಾದ ಪ್ರದೇಶ 25,360 (1998–99).

ರಾಗಿ, ಮುಸುಕಿನಜೋಳ, ನೆಲಗಡಲೆ ಜಿಲ್ಲೆಯ ಮುಖ್ಯ ಬೆಳೆಗಳು. ದ್ವಿದಳ ಧಾನ್ಯಗಳು, ಬತ್ತ ಮತ್ತು ಸಾಮಾನ್ಯ ಜೋಳ, ಕಬ್ಬು ಮುಂತಾದ ಬೆಳೆಗಳನ್ನು ಅಲ್ಪಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ರಾಗಿ 1,47,008 ಹೆ, ಬತ್ತ 20,967 ಹೆ, ಮುಸುಕಿನ ಜೋಳ 5,368 ಹೆ, ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು 274 ಹೆ, ಕಡಲೆ 50 ಹೆ, ತೊಗರಿ 5,522 ಹೆ. ಇತರ ದ್ವಿದಳ ಧಾನ್ಯಗಳು 5,531 ಹೆ, ನೆಲಗಡಲೆ 24,656.ಹೆ, ಕಬ್ಬು 1,018 ಹೆ, ಹಿಪ್ಪುನೇರಳೆ 21,625 ಹೆ, (1998–99). ಬರಗಾಲದ ಬವಣೆ, ಮಾರುಕಟ್ಟೆಯಲ್ಲಿ ಬೆಳೆಗಳ ಕುಸಿತ, ಸಣ್ಣ ಹಿಡುವಳಿಯು ಈ ಜಿಲ್ಲೆಯಲ್ಲಿ ರೈತರ ಋಣಭಾರ ಹೆಚ್ಚಿಸಲು ಕಾರಣವಾಗಿರುವ ಸಂಗತಿಗಳಾಗಿವೆ.

ಜಾನುವಾರುಗಳ ಪೋಷಣೆ ಮತ್ತು ಅಭಿವೃದ್ಧಿಗಾಗಿ ಪಶುವೈದ್ಯ ಶಾಲೆಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ 16 ಪಶುವೈದ್ಯ ಆಸ್ಪತ್ರೆಗಳು, 37 ಚಿಕಿತ್ಸಾಲಯಗಳು, 89 ಪ್ರಾಥಮಿಕ ಪಶುವೈದ್ಯ ಕೇಂದ್ರಗಳಿವೆ (2000). ಮೀನುಗಾರಿಕೆಯೂ ಒಂದು ಕೃಷಿ ಉದ್ಯಮವಾಗಿ ಬೆಳೆದಿದ್ದು ಕಣ್ವ ಮತ್ತು ಭೈರಮಂಗಲಗಳಲ್ಲಿ ಮೀನು ಮರಿ ಬೆಳೆಸುವ ಫಾರಂಗಳಿವೆ. ಸ್ಥಳೀಯ ಕೆರೆಗಳಲ್ಲಿ ಮೀನುಗಳನ್ನು ಬಿಟ್ಟು ಸಾಕುತ್ತಾರೆ. ವಾರ್ಷಿಕವಾಗಿ 6,382 ಮೆಟ್ರಿಕ್ ಟನ್ ಮೀನನ್ನು ಹಿಡಿಯಲಾಗಿದೆ.

ಕೆರೆಗಳು ಈ ಜಿಲ್ಲೆಯ ಮುಖ್ಯ ನೀರಾವರಿ ಸಾಧನಗಳು. ಇತ್ತೀಚೆಗೆ ಬಾವಿ ಹಾಗೂ 7 ವಿದ್ಯುತ್ ಕೊಳವೆ ಬಾವಿಗಳಿಂದ ನೀರಿನ ಸೌಲಭ್ಯ ಒದಗಿಸಿಕೊಳ್ಳಲಾಗುತ್ತಿದೆ. ಈ ಜಿಲ್ಲೆಯಲ್ಲಿ ನೀರಾವರಿಯಾದ ನಿವ್ವಳ ಪ್ರದೇಶ: ಕಾಲುವೆಗಳಿಂದ 6,229 ಹೆ, ಕೆರೆಗಳಿಂದ 1,262, ಬಾವಿಗಳಿಂದ 13,048. ರಾಮನಗರ ತಾಲ್ಲೂಕಿನ ಮಂಚನ ಬೆಲೆಯಲ್ಲಿ ಅರ್ಕಾವತಿಗೆ ಅಡ್ಡಲಾಗಿ 415 ಮೀ ಉದ್ದ, 46 ಮೀ ಎತ್ತರದ ಅಣೆಕಟ್ಟೆಯಿಂದ 3,200 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಜೊತೆಗೆ ಭೈರಮಂಗಲ ಯೋಜನೆಯಿಂದಲೂ ನೀರಾವರಿ ಪ್ರಯೋಜನ ಪಡೆಯಲಾಗುತ್ತಿದೆ. ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ: ಸಾರಜನಕ 20,842, ರಂಜಕ 8,069, ಪೊಟ್ಯಾಷ್ 6213 ಟನ್‌ಗಳು (1998–99).

**ನದಿಗಳು** : ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಜಲಸಂಪತ್ತು ಹೇರಳವಾಗಿದೆ. ಅರ್ಕಾವತಿ **(ನೋಡಿ)** ಜಿಲ್ಲೆಯ ಪ್ರಮುಖ ಉಪನದಿ.

ಇದು ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿದುರ್ಗದಲ್ಲಿ ಉಗಮಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ 195 ಕಿಮೀ ಹರಿದು ಕಾವೇರಿ ನದಿಯನ್ನು ಸೇರುತ್ತದೆ. ನೆಲಮಂಗಲದ ದಕ್ಷಿಣದ ಕಡೆಯಿಂದ ಬರುವ ಕುಮುದ್ವತಿ, ಬೆಂಗಳೂರಿನ ಕಡೆಯಿಂದ ಬರುವ ವೃಷಭಾವತಿ ಇದರ ತೊರೆಗಳು. ಸಾವನದುರ್ಗ, ರಾಮಗಿರಿ, ಶಿವಗಿರಿ ಮೊದಲಾದ ಬೆಟ್ಟಗುಡ್ಡ ಪ್ರದೇಶ ಮತ್ತು ಸಾಧಾರಣ ಕಾಡು ಪ್ರದೇಶಗಳ ಮೂಲಕ ಇದು ದಕ್ಷಿಣಕ್ಕೆ ಹರಿಯುವುದರಿಂದ ನೀರಾವರಿಗೆ ಹೆಚ್ಚು ಪ್ರಯೋಜನಕಾರಿಯಾಗಿಲ್ಲ. ಆದರೂ ಮೇಲ್ಕಣಿವೆಯಲ್ಲಿ ಹೆಸರುಘಟ್ಟ ಮೊದಲಾದ ದೊಡ್ಡಕೆರೆಗಳಿಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೊಡ್ಡಬಳ್ಳಾಪುರ, ಕಾಕೋಳು ಮುಂತಾದೆಡೆಯ ಕೆರೆಗಳಿಗೂ ನೀರನ್ನೊದಗಿಸುತ್ತದೆ. ಮುಂದುವರಿದು ನೆಲಮಂಗಲ, ಮಾಗಡಿ, ರಾಮನಗರ ಹಾಗೂ ಕನಕಪುರ ತಾಲ್ಲೂಕುಗಳ ಮೂಲಕ ಹರಿದು ಆ ತಾಲ್ಲೂಕಿನ ಅಂಚಿನಲ್ಲಿ ಸಂಗಮದ ಬಳಿ ಕಾವೇರಿಯನ್ನು ಸೇರುತ್ತದೆ. ಈ ನದಿ ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿರುವುದರಿಂದ ಬೇಸಗೆಯಲ್ಲಿ ಬಹುಮಟ್ಟಿಗೆ ಇದರ ಪಾತ್ರ ಒಣ ಮರಳಿನಿಂದ ತುಂಬಿರುತ್ತದೆಯಾದರೂ ಸಂಪೂರ್ಣವಾಗಿ ಬತ್ತಿ ಹೋಗದೆ ಮರಳು ಬಗೆದಾಗ ನೀರು ದೊರಕುತ್ತದೆ. ಮಳೆಗಾಲದಲ್ಲಿ ಅನೇಕ ತೊರೆಗಳ ನೀರು ಒದಗುವುದರಿಂದ ತುಂಬಿ ಹರಿಯುತ್ತದೆ. ಒಮ್ಮೊಮ್ಮೆ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆ ಆದಾಗ ದಿಢೀರನೆ ಪ್ರವಾಹ ಬರುವುದುಂಟು. ನೆಲಮಂಗಲ, ಮಾಗಡಿ ಮತ್ತು ರಾಮನಗರಗಳಿಂದ ಬೆಂಗಳೂರಿಗೆ ಹೋಗುವ ಮಾರ್ಗಗಳಲ್ಲಿ ನದಿಗೆ ಅಡ್ಡವಾಗಿ ದೊಡ್ಡ ಸೇತುವೆಗಳನ್ನು ನಿರ್ಮಿಸಲಾಗಿದೆ.

ಕಣ್ವ ತೊರೆ: ಬೆಂಗಳೂರು ಗ್ರಾಮಂತರ ಜಿಲ್ಲೆ ಮಾಗಡಿ ತಾಲ್ಲೂಕಿನ ಶ್ರೀಪತಿಹಳ್ಳಿ ಎಂಬಲ್ಲಿ ಹುಟ್ಟಿ ಚನ್ನಪಟ್ಟಣ ತಾಲ್ಲೂಕಿನ ನಡುವೆ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. ಇದರ ಜಲಾನಯನ ಪ್ರದೇಶ ಸು. 215 ಚ.ಕಿಮೀ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಹರಿಯುವ ಈ ನದಿಯ ಭಾಗದ ಉದ್ದ 34 ಕಿಮೀ. ಇದು ತಾಲ್ಲೂಕಿನ ಎಲ್ಲೆಯಿಂದ ಸುಮಾರು ಒಂದು ಕಿಮೀ ದೂರದಲ್ಲಿ ಸರಗೂರು ಗ್ರಾಮದ ಹತ್ತಿರ ಶಿಂಷಾ ನದಿಯನ್ನು ಸೇರುತ್ತದೆ. ಇದು ಸು. 420 ಚ.ಕಿಮೀ ವಿಸ್ತೀರ್ಣದ ತಗ್ಗು ಪ್ರದೇಶವೊಂದನ್ನು ನಿರ್ಮಿಸಿದೆ. ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರಿನ ಬಳಿ ಕಣ್ವ ನದಿಗೆ ಅಡ್ಡವಾಗಿ ಅಣೆಕಟ್ಟೆ ಕಟ್ಟಲಾಗಿದೆ (1946). ನೀರಾವರಿ ಇದರ ಪ್ರಧಾನ ಉದ್ದೇಶ. ಕಟ್ಟೆಯ ಉದ್ದ 1422 ಮೀ. ಅತ್ಯಂತ ಆಳವಾದ ಜಾಗದಲ್ಲಿ ಅದರ ಎತ್ತರ 17.98 ಮೀ. ಜಲಾಶಯದ ವಿಸ್ತೀರ್ಣ 48,156 ಚ .ಕಿಮೀ. ಭೂಮಟ್ಟದಿಂದ ಕೋಡಿ ಮಟ್ಟದವರೆಗೆ ತುಂಬುವ ಜಲದ ಘನಗಾತ್ರ 3.902 ಯೂನಿಟ್ಟುಗಳು.ಕಣ್ವ ಜಲಾಶಯದ ಜಲಾನಯನ ಪ್ರದೇಶದ ವಿಸ್ತೀರ್ಣ 133 ಚ.ಮೈಲಿ. ಇದರ ನೀರಾವರಿ ಕ್ರಮದಿಂದ 30 ಗ್ರಾಮಗಳಿಗೆ ಪ್ರಯೋಜನವುಂಟಾಗಿದೆ.

**ಕುಮುದ್ವತಿ**: ಇದು ಜಿಲ್ಲೆಯ ಮಾಕಳಿದುರ್ಗದ ಪಶ್ಚಿಮದ ಉಜನಿಬೆಟ್ಟದಲ್ಲಿ ಹುಟ್ಟುತ್ತದೆ. ಉತ್ತರ ಪಿನಾಕಿನಿಯ ಉಪನದಿಯಾದ ಇದನ್ನು ಕುಂದಾರ್ ಎಂದೂ ಕರೆಯಲಾಗುತ್ತದೆ. ದೊಡ್ಡಬಳ್ಳಾಪುರ, ಗೌರಿಬಿದನೂರು ತಾಲ್ಲೂಕುಗಳ ಮೂಲಕ ಉತ್ತರಕ್ಕೆ ಸಾಗಿ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳ ಮೂಲಕ ಅನಂತಪುರ ಜಿಲ್ಲೆಗೆ ಹರಿದು ಹಿಂದುಪುರದ ಬಳಿ ಉತ್ತರ ಪಿನಾಕಿನಿ (ಪೆನ್ನಾರ್) ನದಿಗೆ ಸೇರುತ್ತದೆ. ನದಿಯ ಉದ್ದ 72 ಕಿಮೀ. ನದಿಯ ಓಟದುದ್ದಕ್ಕೂ ಚಿಕ್ಕ ಕೆರೆಕಟ್ಟೆಗಳನ್ನು ಕಟ್ಟಿ ಬೇಸಾಯಕ್ಕೆ ಬಳಸಿಕೊಳ್ಳಲಾಗಿದೆ.

**ಕೈಗಾರಿಕೆ**: ಜಿಲ್ಲೆ ಪ್ರಾಚೀನ ಕಾಲದಿಂದಲೂ ವ್ಯಾಪಾರ ವಾಣಿಜ್ಯ ಕೈಗಾರಿಕೆಗಳಿಗೆ ಪ್ರಸಿದ್ಧ. ಇಲ್ಲಿನ ಶಾಸನಗಳಲ್ಲಿ ವರ್ತಕರು ಹಾಗೂ ವಿವಿಧ ಉಪಕಸುಬುಗಳ ಜನ ನೆಲಸಿ ದೇವಾಲಯಗಳು ಹಾಗೂ ಅನ್ನ ಛತ್ರಗಳನ್ನು ಕಟ್ಟಿಸಿದ, ವಿವಿಧ ದಾನಧರ್ಮಗಳನ್ನು ಮಾಡಿದ ವಿಚಾರಗಳು ತಿಳಿದುಬರುತ್ತವೆ. ಹಿಂದಿನಿಂದಲೂ ಜಿಲ್ಲೆ ರಾಜ್ಯದ ಹಾಗೂ ಅಂತಾರಾಜ್ಯದ ಹೆದ್ದಾರಿಯಲ್ಲಿರುವುದರಿಂದ ಕೈಗಾರಿಕೆಗೂ ಸೂಕ್ತವಾಗಿದೆ. 19 ನೆಯ ಶತಮಾನದ ಪ್ರಾರಂಭದಲ್ಲಿ (1800) ಫ್ರಾನ್ಸಿಸ್ ಬುಕ್‌ನನ್ ಎಂಬ ಪ್ರವಾಸಿ ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತಿತರ ಸ್ಥಳಗಳಿಗೆ ಭೇಟಿನೀಡಿ ಕೈಮಗ್ಗ ಹಾಗೂ ರೇಷ್ಮೆಉದ್ಯಮದ ಬಗ್ಗೆ ತನ್ನ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾನೆ. ಯಂತ್ರೋಪಕರಣಗಳು, ವಿದ್ಯುತ್ ಉಪಕರಣಗಳು, ಪಿಂಗಾಣಿ ಸಾಮಾನುಗಳು, ರೇಷ್ಮೆ ಹಾಗೂ ಹತ್ತಿಬಟ್ಟೆ ಇವುಗಳ ತಯಾರಿಕೆಗೆ ಸಂಬಂಧಿಸಿದಂತೆ ಅನೇಕ ಉದ್ಯಮಗಳು ಇಲ್ಲಿವೆ.

ದೊಡ್ಡಬಳ್ಳಾಪುರ ಬೆಂಗಳೂರು ನಗರಕ್ಕೆ ಸಮೀಪವಾಗಿದ್ದು ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ. ಇದು ಪ್ರಮುಖ ನೇಯ್ಗೆಯ ಕೇಂದ್ರವಾಗಿದ್ದು ಇಲ್ಲಿ ಸು.10,000 ಮಗ್ಗಗಳಿವೆ. 1932ರ ಅನಂತರ ಕೈಮಗ್ಗಗಳಿಗೆ ಬದಲಾಗಿ ವಿದ್ಯುತ್ ಮಗ್ಗಗಳು ಅಸ್ತಿತ್ವಕ್ಕೆ ಬಂದವು. ಇಲ್ಲಿ ತಯಾರಾದ ಅರಳೆ ಹಾಗೂ ಧರ್ಮಾವರಂ ಮಾದರಿಬಟ್ಟೆಗಳಿಗೆ ದೇಶ ವಿದೇಶಗಳಲ್ಲಿ ಉತ್ತಮ ಬೇಡಿಕೆಯಿದೆ. ಇಲ್ಲಿ ಕಾಟನ್ ರೇಯಾನ್ ಟೆಕ್ಸ್‌ಟೈಲ್ಸ್ ಸಹಕಾರಿ ಸೊಸೈಟಿ, ಆದಿನಾರಾಯಣ ಕಾರ್ಖಾನೆ ಸಂಘ ಮೊದಲಾದ ಅನೇಕ ಕಾರ್ಮಿಕ ಸಂಘಗಳಿವೆ. ಚನ್ನಪಟ್ಟಣದಲ್ಲಿ ವಿವಿಧ ಬಣ್ಣಗಳ ಆಟದ ಸಾಮಾನುಗಳನ್ನು ತಯಾರಿಸುತ್ತಾರೆ. ಇವು ಇಂದಿಗೂ ಹೊರ ದೇಶಗಳಿಗೆ ರಫ್ತಾಗುತ್ತವೆ. ವೀಣೆಯ ತಂತಿಗಳೂ ಗಾಜಿನ ಬಳೆಗಳೂ ಹಿಂದೆ ಇಲ್ಲಿ ತಯಾರಾಗುತ್ತಿದ್ದವಾದರೂ ಈಗ ಈ ಕೈಗಾರಿಕೆಗಳು ನಶಿಸಿವೆ. ಕನಕಪುರ, ರಾಮನಗರ, ಹೊಸಕೋಟೆ ಮುಂತಾದೆಡೆಗಳಲ್ಲಿ ಪ್ಲಾಸ್ಟಿಕ್ ವಸ್ತುಗಳು, ರಾಸಾಯನಿಕ ವಸ್ತುಗಳು, ಅಗರಬತ್ತಿ, ಬೀಡಿಕಟ್ಟುವುದು, ಕೈಮಗ್ಗದ ಬಟ್ಟೆಗಳು ಮುಂತಾದವನ್ನು ತಯಾರಿಸುವ ಅನೇಕ ಸಣ್ಣ ಪ್ರಮಾಣದ ಉದ್ಯಮಗಳನ್ನೂ ಗೃಹ ಕೈಗಾರಿಕೆಗೆ ಸಂಬಂಧಿಸಿದಂತೆ ಚನ್ನಪಟ್ಟಣದ ಕರಕುಶಲ ವಸ್ತುಗಳು, ನೆಲಮಂಗಲ ಕಂಚು ಹಾಗೂ ಹಿತ್ತಾಳೆ ಸಾಮಾನುಗಳ ಉದ್ಯಮಗಳನ್ನೂ ವಿಶೇಷವಾಗಿ ಹೆಸರಿಸಬಹುದು. ರಾಮನಗರ ಮುಂತಾದೆಡೆಗಳಲ್ಲಿ ಹೆಂಚಿನ ಕಾರ್ಖಾನೆಗಳಿವೆ. ಕಟ್ಟಡದ ಕಲ್ಲನ್ನು ಒಡೆದು ನಯ ಮಾಡಿ, ರಫ್ತು ಮಾಡುವ ಉದ್ಯಮ ಕನಕಪುರ, ದೊಡ್ಡಬಳ್ಳಾಪುರಗಳಲ್ಲಿ ವಿಶೇಷವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ರೇಷ್ಮೆ ಉದ್ಯಮಕ್ಕೂ ಪ್ರಸಿದ್ಧ. ಆನೇಕಲ್ಲು, ದೇವನಹಳ್ಳಿ ಚನ್ನಪಟ್ಟಣ, ಕನಕಪುರ, ರಾಮಾನಗರ, ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ರೇಷ್ಮೆ ಉತ್ಪನ್ನವಿದೆ.

ಸರ್ಕಾರಿ ಸ್ಪನ್ ಸಿಲ್ಕ್ಸ್ ಮಿಲ್ಸ್, ಚನ್ನಪಟ್ಟಣ (1936), ಸರ್ಕಾರಿ ಸಿಲ್ಕ್ ಫಿಲೇಚರ್, ಕನಕಪುರ ತಾಲ್ಲೂಕು (1943), ಸೋನಾ ಸಿಂಥೆಟಿಕ್ಸ್ ಕನಕಪುರ (1980), ವೆಲ್ಲಿಯಪ್ಪ ಟೆಕ್ಸ್‌ಟೈಲ್ಸ್ ಲಿ., ರಾಮನಗರ ತಾಲ್ಲೂಕು (1963), ಚಾಮುಂಡೇಶ್ವರಿ ಟೆಕ್ಸ್‌ಟೈಲ್ಸ್ ಅಂಡ್ ಸಿಲ್ಕ್ ಮಿಲ್ಸ್, ರಾಮನಗರ (1950), ಸೆನಾಪತಿ ವೈಟ್‌ಲೆಯ್ಸ್ ಲಿ., ರಾಮನಗರ ತಾಲ್ಲೂಕು (1960), ಲಕ್ಷ್ಮಿ ಇಸೊಲ ಲಿ., ರಾಮನಗರ ತಾಲ್ಲೂಕು (1976), ಕೆ. ಎಚ್. ಬಿ. ಬ್ರಿಕ್ ಪ್ಲಾಂಟ್, ಹೊಸಕೋಟೆ ತಾಲ್ಲೂಕು, ಜೆಮಿನಿ ಸ್ಟೀಲ್ ಟ್ಯೂಬ್ಸ್ ಲಿ., ಹೊಸಕೋಟೆ ತಾಲ್ಲೂಕು (1971), ಟಿ.ಟಿ.ಕೆ. ಫಾರ್ಮ ಲಿ., ಹೊಸ ಕೋಟೆ ತಾಲ್ಲೂಕು (1985), ಲಕ್ಷ್ಮೀ ಬಾಯ್ಲರ್ಸ್ ಲಿ., ದೊಡ್ಡಬಳ್ಳಾಪುರ ತಾಲ್ಲೂಕು (1986), ಕೋಲಾರ್ ವುಲನ್ ಅಂಡ್ ಟೆಕ್ಸ್‌ಟೈಲ್ಸ್ ಲಿ., ದೊಡ್ಡಬಳ್ಳಾಪುರ (1986) ಮುಂತಾದವು ಮುಖ್ಯ ಉದ್ಯಮಗಳಾಗಿವೆ.

**ಶಿಕ್ಷಣ**: ವಿದ್ಯಾಭ್ಯಾಸಕ್ಕೆ ಜಿಲ್ಲೆಯಲ್ಲಿ ಉತ್ತಮ ಸೌಕರ್ಯವಿದೆ. ಆದರೂ ಹೆಚ್ಚಿನ ವಿದ್ಯಾರ್ಥಿಗಳು ಬೆಂಗಳೂರು ನಗರದತ್ತ ಆಕರ್ಷಿತರಾಗಿದ್ದಾರೆ.



ಸ್ವಾತಂತ್ರ್ಯ ಪೂರ್ವದಿಂದಲೂ ಜಿಲ್ಲೆಯಲ್ಲಿ ಶಾಲಾ ಕಾಲೇಜುಗಳೂ ಅಸ್ತಿತ್ವದಲ್ಲಿದ್ದವು. ಜಿಲ್ಲೆಯ ಪ್ರಥಮ ಪ್ರೌಢಶಾಲೆ ಚನ್ನಪಟ್ಟಣದಲ್ಲಿ ಪ್ರಾರಂಭಗೊಂಡಿತ್ತು (1899). ಅನಂತರ ರಾಮನಗರದ ಮುನಿಸಿಪಲ್ ಪ್ರೌಢಶಾಲೆ (1945), ಮಾಗಡಿ ಮುನಿಸಿಪಲ್ ಪ್ರೌಢಶಾಲೆ (1945), ಹೊಸಕೋಟೆ ಮುನಿಸಿಪಲ್ ಪ್ರೌಢಶಾಲೆ (1946), ದೇವನಹಳ್ಳಿ ಪ್ರೌಢಶಾಲೆ (1954) ಮುಂತಾದವು ಅಸ್ತಿತ್ವಕ್ಕೆ ಬಂದವು.

ಜಿಲ್ಲೆಯಲ್ಲಿ ಅನೇಕ ಸರ್ಕಾರಿ ಹಾಗೂ ಖಾಸಗಿ ಶಾಲಾ ಕಾಲೇಜುಗಳಿವೆ. ವೃತ್ತಿಪರ ತರಬೇತಿ ಕೇಂದ್ರಗಳು, ನವೋದಯ ಶಾಲೆಗಳು, ಹಿಂದೀಶಿಕ್ಷಣ ಕೇಂದ್ರಗಳು, ತಾಂತ್ರಿಕ ಶಿಕ್ಷಣ ಕೇಂದ್ರಗಳು ಕೈಗಾರಿಕಾ ತರಬೇತಿ ಕೇಂದ್ರಗಳು, ಪಾಲಿಟೆಕ್ನಿಕ್ ಕಾಲೇಜುಗಳು, ವಯಸ್ಕರ ಶಿಕ್ಷಣ ಕೇಂದ್ರಗಳು, ಸಂಸ್ಕೃತ ಶಿಕ್ಷಣ ಕೇಂದ್ರಗಳು ಸುಸಜ್ಜಿತ ಗ್ರಂಥಾಲಯಗಳು ಇವೆ. ಜೊತೆಗೆ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್., ಎನ್.ಸಿ.ಸಿ. ತರಬೇತಿಯನ್ನು ನೀಡಲಾಗುತ್ತಿದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಪೊಲೀಸ್ ತರಬೇತಿ ಶಾಲೆ, ತಾಂತ್ರಿಕ ಶಿಕ್ಷಣ ಮತ್ತು ಕರಕುಶಲ ತರಬೇತಿ ಕೇಂದ್ರಗಳಿವೆ. 2714 ಪ್ರಾಥಮಿಕ ಶಾಲೆಗಳು, 298 ಪ್ರೌಢಶಾಲೆಗಳು, ಜಿಲ್ಲೆಯಲ್ಲಿವೆ (1999–2000). 60 ಪದವಿಪೂರ್ವ ಕಾಲೇಜು, 19 ಸಾಮಾನ್ಯ ಕಾಲೇಜು, 6 ಪಾಲಿಟೆಕ್ನಿಕ್ ಕಾಲೇಜು, 1 ಎಂಜಿನಿಯರಿಂಗ್ ಕಾಲೇಜು ಇವೆ. 90 ಗ್ರಾಮೀಣ ಗ್ರಂಥಾಲಯಗಳಿವೆ. ಜಿಲ್ಲೆಯಲ್ಲಿ 1,891 ಅಂಗನವಾಡಿ ಕೇಂದ್ರಗಳಿವೆ. ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯದ ಸೌಲಭ್ಯವಿದೆ. ಜಿಲ್ಲೆಯ ಸಾಕ್ಷರತೆ ಸೇ. 65. ಪುರುಷ ಸಾಕ್ಷರತೆ ಸೇ. 74.43. ಸ್ತ್ರೀ ಸಾಕ್ಷರತೆ ಸೇ. 55.12. (2001).

ಈ ಜಿಲ್ಲೆಯಲ್ಲಿ ಉತ್ತಮ ಆರೋಗ್ಯ ಸೌಲಭ್ಯಗಳಿವೆ. 4 ಸರ್ಕಾರಿ ಆಸ್ಪತ್ರೆಗಳು (210 ಹಾಸಿಗೆಗಳು), 4 ಖಾಸಗೀ ಆಸ್ಪತ್ರೆ (20 ಹಾಸಿಗೆ) ಇವೆ. ಭಾರತೀಯ ವೈದ್ಯಪದ್ಧತಿಯ 4 ಆಸ್ಪತ್ರೆಗಳು (32 ಹಾಸಿಗೆ), 73 ಪ್ರಾಥಮಿಕ ಆರೋಗ್ಯ ಕೇಂದ್ರಗಳು (777 ಹಾಸಿಗೆಗಳು), 29 ಪ್ರಾಥಮಿಕ ಅರೋಗ್ಯ ಘಟಕಗಳು (36 ಹಾಸಿಗೆ) ಇವೆ.

**ಸಾರಿಗೆ ಸಂಪರ್ಕ**: ಈ ಜಿಲ್ಲೆ ಉತ್ತಮ ಸಾರಿಗೆ ಸಂಪರ್ಕ ಸೌಲಭ್ಯಗಳನ್ನು ಪಡೆದಿದೆ. (ಚೆನ್ನೈ, ಸೇಲಂ, ಗುಂತಕಲ್ಲು, ಅರಸೀಕೆರೆ, ಮೈಸೂರು, ಬಂಗಾರಪೇಟೆ– ಈ ಸ್ಥಳಗಳಿಗೆ ಹೋಗುವ ರೈಲುಮಾರ್ಗಗಳು ಜಿಲ್ಲೆಯ ಅನೇಕ ಸ್ಥಳಗಳಿಗೆ ಸಂಪರ್ಕ ಒದಗಿಸಿವೆ. ಜಿಲ್ಲೆಯ ಹೊಸಕೋಟೆ ಮೂಲಕ ಚೆನ್ನೈಗೆ ಹೋಗುವ ಮಾರ್ಗ, ನೆಲಮಂಗಲದ ಮೂಲಕ ಪುಣೆ ಮತ್ತು ಮಂಗಳೂರಿಗೆ ಹೋಗುವ ಮಾರ್ಗಗಳು, ದೊಡ್ಡಬಳ್ಳಾಪುರದ ಮೂಲಕ ಅನಂತಪುರಕ್ಕೆ ಹೋಗುವ ಮಾರ್ಗ, ರಾಮನಗರ ಮತ್ತು ಚನ್ನಪಟ್ಟಣಗಳ ಮೂಲಕ ಮೈಸೂರಿಗೆ ಹೋಗುವ ಮಾರ್ಗಗಳು ಮುಖ್ಯವಾದವು. ಜಿಲ್ಲೆಯ ಗ್ರಾಮಾಂತರ ರಸ್ತೆ ಸಂಪರ್ಕವೂ ಉತ್ತಮವಾಗಿದೆ.

ಜಿಲ್ಲೆಯಲ್ಲಿ 288 ಕಿಮೀ ರೈಲು ಮಾರ್ಗವಿದೆ. 47 ರೈಲ್ವೆ ನಿಲ್ದಾಣಗಳಿವೆ. 276 ಕಿಮೀ ರಾಷ್ಟ್ರೀಯ ಹೆದ್ದಾರಿ, 374 ಕಿಮೀ ರಾಜ್ಯ ಹೆದ್ದಾರಿ, 1045 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳೂ 48 ಕಿಮೀ ಇತರ ಜಿಲ್ಲಾರಸ್ತೆಗಳು, 1,417 ಕಿಮೀ ಗ್ರಾಮೀಣ ರಸ್ತೆಗಳಿವೆ. 3,092 ಕಿಮೀ ಪಕ್ಕಾರಸ್ತೆ ಇದ್ದು 10 ಭಾರಿ ಸೇತುವೆಗಳಿವೆ. ಜಿಲ್ಲೆಯಲ್ಲಿ ಸಂಪರ್ಕ ಮಾಧ್ಯಮ ಜಾಲ ಚೆನ್ನಾಗಿ ಹರಡಿದೆ. ದೇವನಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ದೇಶದ ಹಾಗೂ ಕರ್ನಾಟಕದ ವಿಮಾನ ಸಾರಿಗೆ ವ್ಯವಸ್ಥೆಗೆ ದೊಡ್ಡ ಕೊಡುಗೆಯಾಗಲಿದೆ.

**ಸಂಸ್ಕೃತಿ**: ಗ್ರಾಮೀಣ ಸಂಸ್ಕೃತಿಯನ್ನು ಮೈದುಂಬಿಕೊಂಡಿರುವ ಈ ಜಿಲ್ಲೆಯಲ್ಲಿ ವ್ಯವಸಾಯ ಸಂಬಂಧವಾದ ವಿಶಿಷ್ಟ ಹಬ್ಬ, ಹರಿದಿನಗಳನ್ನು ಆಚರಿಸಲಾಗುತ್ತದೆ. ಜಿಲ್ಲೆಯಲ್ಲಿ ಒಕ್ಕಲಿಗ, ವೀರಶೈವ ಸಮುದಾಯದ ಜನಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಕಾಪಾಲಿ ಶೈವ, ವೀರಶೈವ, ಜನಪದಧರ್ಮಗಳು ಇಲ್ಲಿ ಆಚರಣೆಯಲ್ಲಿವೆ. ಒಕ್ಕಲಿಗರು ಚುಂಚನಗಿರಿ ಭೈರವನಿಗೆ ನಡೆದುಕೊಂಡರೆ, ವೀರಶೈವರು ಶಿವಗಂಗೆ, ಸಿದ್ಧಗಂಗೆ ಮಠಗಳಿಗೆ ನಡೆದುಕೊಳ್ಳುವರು. ಜಿಲ್ಲೆಯಲ್ಲಿ ಅನೇಕ ಜಾತ್ರೆ, ಉತ್ಸವ ತೇರು, ತೆಪ್ಪಗಳು ನಡೆಯುತ್ತವೆ.

ಆನೇಕಲ್ಲು ತಾಲ್ಲೂಕು ಹುಸ್ಕೂರಿನ ಮದ್ದೂರಮ್ಮ, ಹೊಸಕೋಟೆ ತಾಲ್ಲೂಕು ಉಪ್ಪಾರಳ್ಳಿ ಮದ್ದೂರಮ್ಮ, ನೆಲಮಂಗಲ ತಾಲ್ಲೂಕು ಶಿವಗಂಗೆಯ ಶಂಕರಜಯಂತಿ, ಹೊನ್ನಾದೇವಿ, ರಾವುತ್ತನಹಳ್ಳಿಯ ಜೇನುಗೂಡಮ್ಮ, ಬೂದಿಹಾಳದ ಮಾರಮ್ಮ, ಕನಕಪುರ ತಾಲ್ಲೂಕು ಕಬ್ಬಾಳದ ಕಬ್ಬಾಳಮ್ಮ, ಚನ್ನಪಟ್ಟಣ ತಾಲ್ಲೂಕು ಹುಣಸೇಮಾರನಹಳ್ಳಿ ಬಿಸಿಲಮ್ಮ ಮುಂತಾದ ನೂರಾರು ಗ್ರಾಮದೇವತೆಗಳ ಜಾತ್ರೆಗಳು ವಿಜೃಂಭಣೆಯಿಂದ ನಡೆಯುತ್ತವೆ.

ದೇವನಹಳ್ಳಿಯ ವೇಣುಗೋಪಾಲಸ್ವಾಮಿ ರಥೋತ್ಸವ, ಆನೇಕಲ್ಲಿನ ತಿಮ್ಮರಾಯಸ್ವಾಮಿಜಾತ್ರೆ, ಹೊಸಕೋಟೆಯ ಅವಿಮುಕ್ತೇಶ್ವರ ರಥೋತ್ಸವ ಮತ್ತು ಕರಗ, ರಾಮನಗರದ ರಾಮದೇವರ ರಥೋತ್ಸವ, ತಿರುಮಲೆ ಗ್ರಾಮದ ರಂಗನಾಥಸ್ವಾಮಿ ಜಾತ್ರೆ, ಮಾಗಡಿಯ ಸೋಮೇಶ್ವರ ರಥೋತ್ಸವ, ಘಾಟಿ ಸುಬ್ರಹ್ಮಣ್ಯ ಜಾತ್ರೆ, ದೊಡ್ಡಬಳ್ಳಾಪುರದ ವೆಂಕಟರಮಣಸ್ವಾಮಿ ಜಾತ್ರೆ, ಮಳೂರು ಅಪ್ರಮೇಯ ಸ್ವಾಮಿ ಜಾತ್ರೆ, ಕೆಂಗಲ್ ಹನುಮಂತರಾಯನ ಜಾತ್ರೆಗಳು ಪ್ರಸಿದ್ಧವಾದವು. ಜಿಲ್ಲೆಯಲ್ಲಿ ಶಿವಗಂಗೆ, ಮಾಗಡಿ ಸೇರಿದಂತೆ ಹಲವಾರು ಧಾರ್ಮಿಕ ಪುಣ್ಯಕ್ಷೇತ್ರಗಳೂ ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳೂ ಇವೆ.

**ಇತಿಹಾಸ**: ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯುಳ್ಳ ಪ್ರದೇಶವಾಗಿತ್ತು. ಇಲ್ಲಿನ ಅನೇಕ ಸ್ಥಳಗಳಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳು ಮತ್ತು ಕಬ್ಬಿಣಯುಗದ ಬೃಹತ್ ಶಿಲಾಸಮಾಧಿಗಳು ದೊರೆತಿವೆ. ಚನ್ನಪಟ್ಟಣ ತಾಲ್ಲೂಕಿನ ಮಕುಂದ, ಆನೇಕಲ್ಲು, ತರಬನಹಳ್ಳಿ ಮೊದಲಾದೆಡೆಗಳಲ್ಲಿ ಆದಿಚಾರಿತ್ರಿಕ ಕಾಲದ ನೆಲೆಗಳು ಕಂಡುಬಂದಿವೆ. ಜಿಲ್ಲೆಯ ಇತಿಹಾಸ ಸ್ಪಷ್ಟವಾಗಿ ಪ್ರಾರಂಭವಾಗುವುದು ತಲಕಾಡಿನ ಗಂಗರ ಕಾಲದಿಂದ. ಅವರ ಆಳ್ವಿಕೆಗೆ ಸಂಬಂಧಿಸಿದಂತೆ ಅವಿನೀತನ ಕಾಲದ ಸು. 469–520 ಒಂದು ಶಾಸನ ಈ ಪ್ರದೇಶದ ಅತ್ಯಂತ ಪ್ರಾಚೀನ ದಾಖಲೆ.

ಹಿಂದೆ ಈ ಜಿಲ್ಲೆ ಗಂಗವಾಡಿ 96,000 ಭಾಗವಾಗಿದ್ದುದಲ್ಲದೆ, ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು, ಚಿಕ್ಕಗಂಗವಾಡಿ ಪ್ರಾಂತ್ಯದ ಕೇಂದ್ರವಾಗಿತ್ತು. 7 ಹಾಗೂ 8ನೆಯ ಶತಮಾನಗಳಲ್ಲಿ ಚನ್ನಪಟ್ಟಣ ತಾಲ್ಲೂಕಿನ ಮಂಕುಂದ ಸ್ಥಳ ಭೂವಿಕ್ರಮ ಮತ್ತು ಒಂದನೆಯ ಶಿವಮಾರ ಇವರ ಉಪರಾಜಧಾನಿಯಾಗಿತ್ತು. 8ನೆಯ ಶತಮಾನದಲ್ಲಿ ಶ್ರೀಪುರುಷ ನೆಲಮಂಗಲ ತಾಲ್ಲೂಕಿನ ಮಣ್ಣೆಯನ್ನು ಕೆಲಕಾಲ ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದ. ಆದರೆ ಶತಮಾನದ ಅಂತ್ಯದಲ್ಲಿ ಈ ಜಿಲ್ಲೆಯ ಅನೇಕ ಭಾಗಗಳು ರಾಷ್ಟ್ರಕೂಟರ ವಶವಾಗಿ ಆಗ ಇಲ್ಲಿಯ ಪ್ರಾಂತ್ಯಾಧಿಕಾರಿಯಾದ ಕಂಬ ಸಹ ಮಣ್ಣೆಯಲ್ಲಿ ನೆಲಸಿದ್ದಂತೆ ತೋರುತ್ತದೆ. 9–10 ನೆಯ ಶತಮಾನಗಳಲ್ಲಿ ಜಿಲ್ಲೆಯ ಹೊಸಕೋಟೆ, ದೇವನಹಳ್ಳಿ ತಾಲ್ಲೂಕಿನ ಭಾಗಗಳು ನೊಳಂಬ ಪಲ್ಲವರ ವಶದಲ್ಲಿತ್ತಾದರೂ ಅನಂತರ ಗಂಗ ರಾಜ್ಯಕ್ಕೆ ಸೇರಿದುವು. ಸು. 1004ರ ಹೊತ್ತಿಗೆ ರಾಜರಾಜಚೋಳನ ಗಂಗಾಕ್ರಮಣದೊಡನೆ ಗಂಗವಾಡಿಯ ಇತರ ಭಾಗಗಳಂತೆ ಈ ಜಿಲ್ಲೆ ಸಹ ಚೋಳರ ವಶವಾಯಿತು. ಆಗ ಜಿಲ್ಲೆಯ ದಕ್ಷಿಣ ಭಾಗಕ್ಕೆ ಚೋಳಮಂಡಲವೆಂಬ ಹೆಸರಿತ್ತು.

12ನೆಯ ಶತಮಾನದ ಆದಿಭಾಗದಲ್ಲಿ ಜಿಲ್ಲೆಯ ಪಶ್ಚಿಮ ಭಾಗ ಹೊಯ್ಸಳರ ಅಧೀನಕ್ಕೆ ಬಂದರೂ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಚೋಳರ ಆಳ್ವಿಕೆ ಸು.1200ರ ವರೆಗಾದರೂ ಮುಂದುವರಿದಂತೆ ತೋರುತ್ತದೆ. 13ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಈ

ಗವಿಗಂಗಾಧರೇಶ್ವರ ದೇವಾಲಯ

ಭಾಗಗಳೂ ಹೊಯ್ಸಳ ರಾಮನಾಥನ ವಶಕ್ಕೆ ಬಂದಿದ್ದು, ದೇವನಹಳ್ಳಿ ತಾಲ್ಲೂಕಿನ ಕುಂದಾಣ ಅವನ ರಾಜಧಾನಿಯಾಗಿತ್ತು. ಹೊಯ್ಸಳ ನರಸಿಂಹ ಮತ್ತು ರಾಮನಾಥರ ನಡುವೆ ಕೆಲವು ಘರ್ಷಣೆಗಳು ಸಂಭವಿಸಿದುವು. 13ನೆಯ ಶತಮಾನದ ಅಂತ್ಯದ ಹೊತ್ತಿಗೆ ಜಿಲ್ಲೆ 3ನೆಯ ಬಲ್ಲಾಳನ ಆಧಿಪತ್ಯಕ್ಕೆ ಒಳಪಟ್ಟು ಅನಂತರ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಡನೆ ಅದರಲ್ಲಿ ವಿಲೀನವಾಯಿತು. 15 ನೆಯ ಶತಮಾನದ ಆರಂಭದ ಹೊತ್ತಿಗೆ ವಿಜಯನಗರದ ಸಾಮಂತರಾಗಿ ಆವತಿಯ ಪಾಳೆಯಗಾರರು ತಲೆಎತ್ತಿದರು. ಅವರ ಅನೇಕ ಶಾಖೆಗಳ ಪ್ರಭುತ್ವ ಜಿಲ್ಲೆಯ ನಾನಾ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿತ್ತು. ಆವತಿ, ದೇವನಹಳ್ಳಿ, ಯಲಹಂಕ, ದೊಡ್ಡಬಳ್ಳಾಪುರ, ಬೆಂಗಳೂರು, ಮಾಗಡಿ ಮೊದಲಾದವು ಅಂಥ ಪಾಳೆಯ ಪಟ್ಟುಗಳಲ್ಲಿ ಕೆಲವು. ತಾಳೀಕೋಟೆ ಯುದ್ಧದ ಅನಂತರವೂ ಇವು ಮುಂದುವರಿದುವು. ಆದರೆ ಚನ್ನಪಟ್ಟಣ ಮತ್ತು ಸುತ್ತಲ ಪ್ರದೇಶ ಮಾತ್ರ ಪೆನುಗೊಂಡೆಯಲ್ಲಿ ನೆಲೆಗೊಂಡಿದ್ದ ವಿಜಯನಗರ ಪ್ರಭುವಿನ ಸಂಬಂಧಿಯೊಬ್ಬನಾದ ಜಗದೇವರಾಯನ ವಶಕ್ಕೆ ಬಂದು ಅವನ ವಂಶದವರು ಸು. 1630ರ ತನಕವೂ ಆಳಿದರು. ಅನಂತರ ಮೈಸೂರಿನ ಚಾಮರಾಜ ಅದನ್ನು ವಶಪಡಿಸಿಕೊಂಡ. 1638ರಲ್ಲಿ ಬಿಜಾಪುರದ ಸರದಾರ ರಣದುಲ್ಲಾಖಾನ್ ಬೆಂಗಳೂರು ಸೇರಿದಂತೆ ಜಿಲ್ಲೆಯ ಉತ್ತರ ಭಾಗವನ್ನೆಲ್ಲಾ ವಶಪಡಿಸಿಕೊಂಡ. ಮಾಗಡಿ ಭಾಗದಲ್ಲಿ ಕೆಂಪೇಗೌಡನ ವಂಶಸ್ಥರ ಆಳ್ವಿಕೆಯೂ ಚನ್ನಪಟ್ಟಣ, ಕನಕಪುರ ಭಾಗಗಳಲ್ಲಿ ಮೈಸೂರು ಒಡೆಯರ ಆಳ್ವಿಕೆಯೂ ಮುಂದುವರಿದುವು. ಬಿಜಾಪುರದ ಆಳ್ವಿಕೆಗೆ ಸೇರಿದ ಜಿಲ್ಲೆಯ ಭಾಗಗಳು ಶಿವಾಜಿಯ ತಂದೆ ಷಹಜಿಗೆ ಜಹಗೀರಾಗಿ ದೊರೆತು ಈ ಪ್ರದೇಶದಲ್ಲಿ ಮರಾಠ ಸರದಾರರು ಬಂದು ನೆಲಸಲಾರಂಭಿಸಿದರು.

1654ರಲ್ಲಿ ಮೈಸೂರು ಕಂಠೀರವ ನರಸರಾಜ ಮಾಗಡಿಯನ್ನು ವಶಪಡಿಸಿಕೊಂಡನಲ್ಲದೇ ಬೆಂಗಳೂರನ್ನು ಷಹಜಿಯ ವಂಶದ ವೆಂಕಾಜಿಯಿಂದ ಖರೀದಿಮಾಡಿ ಈ ಜಿಲ್ಲೆಯ ಬಹು ಪ್ರದೇಶದ ಮೇಲೆ ತನ್ನ ಅಧಿಕಾರವನ್ನು ವಿಸ್ತರಿಸಿದ. ಈ ಮಧ್ಯದಲ್ಲಿ 17 ನೆಯ ಶತಮಾನದ ಕೊನೆಯ ಹೊತ್ತಿಗೆ ಹೊಸಕೋಟೆ, ದೊಡ್ಡಬಳ್ಳಾಪುರ ಪ್ರದೇಶಗಳು ಮುಗಲರ ವಶವಾಗಿದ್ದುವು. 1749ರ ಹೊತ್ತಿಗೆ ದೇವನಹಳ್ಳಿ ಪಾಳೆಯಪಟ್ಟು ಮೈಸೂರು ರಾಜ್ಯಕ್ಕೆ ಸೇರಿತಲ್ಲದೆ 1761ರಲ್ಲಿ ಹೊಸಕೋಟೆ ಮತ್ತು ದೊಡ್ಡಬಳ್ಳಾಪುರಗಳನ್ನು ಮೈಸೂರು ರಾಜ್ಯಕ್ಕೆ ಪಡೆದುಕೊಳ್ಳಲಾಯಿತು. ಮುಂದೆ ಈ ಜಿಲ್ಲೆಯ ಪ್ರದೇಶ ಹೈದರ್ ಮತ್ತು ಟಿಪ್ಪುಸುಲ್ತಾನರ ವಶದಲ್ಲಿತ್ತು. 1799ರ ಅನಂತರ ಇದು ಮೈಸೂರು ಅರಸರವಶಕ್ಕೆ ಬಂದು ಅಂದಿನಿಂದ ಮೈಸೂರು ರಾಜ್ಯದ ಭಾಗವಾಗಿ ಮುಂದುವರಿಯಿತು.

**ಬೆಂಗಳೂರು ನಗರ ಜಿಲ್ಲೆ**: ಕರ್ನಾಟಕ ರಾಜ್ಯದ ಒಂದು ಜಿಲ್ಲೆ. 1986 ಆಗಸ್ಟ್ 15 ರಂದು ಹಿಂದಿನ ಬೆಂಗಳೂರು ಜಿಲ್ಲೆಯನ್ನು ಆಡಳಿತಾನುಕೂಲಕ್ಕಾಗಿ ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನಾಗಿ ವಿಂಗಡಿಸಲಾಯಿತು. ಆಗ ಅಸ್ತಿತ್ವಕ್ಕೆ ಬಂದ ಈ ಜಿಲ್ಲೆಯಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ಲು– ಈ ಮೂರು ತಾಲ್ಲೂಕುಗಳಿದ್ದು 17 ಹೋಬಳಿಗಳೂ 681 ಗ್ರಾಮಗಳೂ ಇವೆ. 15 ಗ್ರಾಮಪಂಚಾಯಿತಿಗಳೂ 9 ಪುರಸಭೆಗಳೂ ಇವೆ. ಜಿಲ್ಲಾವಿಸ್ತೀರ್ಣ 2,190 ಚ.ಕಿಮೀ. ಜನಸಂಖ್ಯೆ 57,59,987. ರಾಜ್ಯದ ಜಿಲ್ಲೆಗಳಲ್ಲೆ ಕಿರಿದಾದ ಈ ಜಿಲ್ಲೆಯಲ್ಲಿ ಜನಸಾಂದ್ರತೆ ಹೆಚ್ಚಿನದಾಗಿದ್ದು ಚ.ಕಿಮೀಗೆ 2979 ಇದೆ.

ಈ ಜಿಲ್ಲೆ ಸಂಪೂರ್ಣವಾಗಿ ನಗರೀಕರಣಕ್ಕೆ ಒಳಪಟ್ಟಿದೆ. ಬೆಂಗಳೂರು ಉತ್ತರ ತಾಲ್ಲೂಕು ದಾಸರಹಳ್ಳಿ, ಯಲಹಂಕ, ಬ್ಯಾಟರಾಯನಪುರ ಇವುಗಳಿಗೆ ನಗರ ವಿಸ್ತರಣೆಯಲ್ಲಿ ಸುತ್ತಲ ಸು. 20 ಗ್ರಾಮಗಳು ಸೇರಿಹೋಗಿವೆ. ಹಾಗೆಯೆ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಕೆಂಗೇರಿ, ಕೃಷ್ಣರಾಜಪುರ, ಪಟ್ಟಣಗೆರೆ, ಮಹದೇವಪುರ, ಉತ್ತರಹಳ್ಳಿ, ಬೊಮ್ಮನಹಳ್ಳಿ ಇವುಗಳಿಗೆ ಸೇರಿದ ಸು. 26 ಗ್ರಾಮ ಪ್ರದೇಶಗಳು ಸೇರಿಹೋಗಿವೆ. ಆನೇಕಲ್ ತಾಲ್ಲೂಕಿನಲ್ಲಿ ಹೆಬ್ಬಗೋಡಿ, ಬೊಮ್ಮಸಂದ್ರ, ಆನೇಕಲ್, ಕೂಡ್ಲು

ವಿದ್ಯಾ ಇಲಾಖೆ, ಬೆಂಗಳೂರು

ಮತ್ತು ಬೊಮ್ಮನಹಳ್ಳಿಯ ವಿಸ್ತರಣೆ ಪ್ರದೇಶ ಸೇರಿಹೋಗಿವೆ. ಇದರಲ್ಲಿ ಬೆಂಗಳೂರು ಮಹಾನಗರ ಸಭೆಯ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆ 43,13,248. ಪಟ್ಟಣಗೆರೆ ನಗರಸಭಾ ವ್ಯಾಪ್ತಿಯ ಜನಸಂಖ್ಯೆ 95,769. ಬೆಂಗಳೂರು ಉತ್ತರ ತಾಲ್ಲೂಕಿನ. ಹತ್ತು ಗ್ರಾಮವನ್ನೊಳಗೊಂಡ ದಾಸರಹಳ್ಳಿ ನಗರ ಸಭಾವ್ಯಾಪ್ತಿಯ ಜನಸಂಖ್ಯೆ 2,9,984. ಮೂರು ಗ್ರಾಮಗಳನ್ನೊಳಗೊಂಡ ಯಲಹಂಕ ನಗರಸಭಾ ವ್ಯಾಪ್ತಿಯ ಜನಸಂಖ್ಯೆ 94,195. ಹೀಗೆಯೇ ಮೂರು ಗ್ರಾಮಗಳನ್ನೊಳಗೊಂಡು ಬೆಳೆದ ಬ್ಯಾಟರಾಯನ ಪುರ, ನಗರಸಭಾದ ವ್ಯಾಪ್ತಿಯ ಜನಸಂಖ್ಯೆ 1,85,875.

ಬೆಂಗಳೂರು ದಕ್ಷಿಣ ತಾಲ್ಲೂಕಿನ ವಿಸ್ತರಣೆಗೆ ಸೇರಿದ ಚೆಲಕೆರೆ (6647), ಹೊರಮಾವು (2394), ಅರೆಹಳ್ಳಿ (1747) ಜನಸಂಖ್ಯೆ ಇದೆ. ಬ್ಯಾಟರಾಯನಪುರಕ್ಕೆ ಸೇರಿದಂತೆ ಬೆಳೆದಿರುವ ದಾಸರಹಳ್ಳಿ (5092) ತಾನಿಸಂದ್ರದಲ್ಲಿ (6863) ಜನಸಂಖ್ಯೆಯಿದೆ. ಕೆಂಗೇರಿ ಪುರಸಭಾ ವ್ಯಾಪ್ತಿಯಲ್ಲಿ 21,899 ಮಂದಿ ಪುರುಷರು, 20,487 ಮಂದಿ ಮಹಿಳೆಯರು ಸೇರಿ ಒಟ್ಟು ಜನಸಂಖ್ಯೆ 42,386. ಇದೇ ತಾಲ್ಲೂಕಿನ ವ್ಯಾಪ್ತಿಯಲ್ಲಿ



ಬೆಂಗಳೂರು ಅರಮನೆ

ಬರುವ ಪಟ್ಟಣಗೆರೆ ನಗರಸಭಾ ವ್ಯಾಪ್ತಿಗೆ ಸೇರಿದ ವಸಂತಪುರ (1078), ವಡ್ಡರಪಾಳ್ಯ (712), ಸುಬ್ರಹ್ಮಣ್ಯಪುರ (4816), ದೊಡ್ಡಕಲ್ಲಸಂದ್ರ (2710) ಜನಸಂಖ್ಯೆಯಿಂದ ಕೂಡಿದೆ. ಕೃಷ್ಣರಾಜಪುರ ನಗರ ಸಭಾವ್ಯಾಪ್ತಿಯಲ್ಲಿ 98,107 ಮಂದಿ ಪುರುಷರು, 89,346 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 1,87,453. ಹಗದುರು, ಚನ್ನಸಂದ್ರ ಸೇರಿದ ಮಹದೇವಪುರ ನಗರ ಸಭೆಯ ವ್ಯಾಪ್ತಿಯಲ್ಲಿ 82,531 ಮಂದಿ ಗಂಡಸರು, 71,476 ಮಂದಿ ಮಹಿಳೆಯರು ಇದ್ದು ಒಟ್ಟು ಜನಸಂಖ್ಯೆ 1,87,453. ಉತ್ತರ ಹಳ್ಳಿ ಪಟ್ಟಣ ವ್ಯಾಪ್ತಿಯಲ್ಲಿ 5,488 ಮಂದಿ ಪುರುಷರು, 4979 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 10,467. ಬೊಮ್ಮನಹಳ್ಳಿ ನಗರಸಭಾ ವ್ಯಾಪ್ತಿಯ ಬೊಮ್ಮನಹಳ್ಳಿಯಲ್ಲಿ 1,08,040 ಮಂದಿ ಪುರುಷರು, 93,180 ಮಂದಿ ಮಹಿಳೆಯರು ಸೇರಿ ಒಟ್ಟು ಜನಸಂಖ್ಯೆ 2,01,220. ಬೇಗೂರು (9274), ಚಿಕ್ಕತೊಗುರು (570), ಬೆರೆಟೇನ ಅಗ್ರಹಾರ (340), ನಾಗನಾಥಪುರ (1081), ಪರಪ್ಪನ ಅಗ್ರಹಾರ (1580), ಕಾಳೇನ ಅಗ್ರಹಾರ (1481), ಚುಂಚಘಟ್ಟ (8984), ಕೋಣನಕುಂಟೆ (13,262), ಕೊತನೂರು (20,835), ಗೊಟ್ಟಿಕೆರೆ (11,149) ಜನಸಂಖ್ಯೆ ಇದೆ. ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಆನೇಕಲ್ಲು ತಾಲ್ಲೂಕಿನ ನಗರ ಸಭಾಡಳಿತಕ್ಕೆ ಹೆಬ್ಬಗೋಡಿ, ಬೊಮ್ಮಸಂದ್ರ, ಬೊಮ್ಮನಹಳ್ಳಿಯ ವಿಸ್ತರಣೆ, ಕೂಡ್ಲು ಇವೆಲ್ಲವನ್ನು ಸೇರಿಸಿ 1,59,019 ಮಂದಿ ಪುರುಷರು, 1,39,942 ಮಂದಿ ಮಹಿಳೆಯರೂ ಸೇರಿ ಒಟ್ಟು ಜನಸಂಖ್ಯೆ 2,98,961. ಮೇಲೆ ಹೇಳಿದ ನಗರ ಸಭೆ ಮತ್ತು ಪುರಸಭೆಗಳು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಸೇರಿವೆ.

ರಾಗಿ, ಮುಸುಕಿನ ಜೋಳ ಮತ್ತು ಕಡಲೆಕಾಯಿ ಜಿಲ್ಲೆಯ ಮುಖ್ಯ ಬೆಳೆಗಳು. ದ್ವಿದಳಧಾನ್ಯಗಳು, ಬತ್ತ ಮತ್ತು ಜೋಳವನ್ನು ಸ್ವಲ್ಪಮಟ್ಟಿಗೆ ಬೆಳೆಯಲಾಗುತ್ತದೆ. ಬೆಂಗಳೂರಿನ ಸುತ್ತಮುತ್ತ ತರಕಾರಿ ಮತ್ತು ಹಣ್ಣುಗಳ ಬೇಸಾಯ ಹಾಗೂ ದ್ರಾಕ್ಷಿ ಬೆಳೆ ವಿಶೇಷವಾಗಿದೆ. ಪಶುಪಾಲನೆಯೂ ಇದ್ದು ಜಾನುವಾರುಗಳ ರಕ್ಷಣೆಗಾಗಿ 38 ಪಶುವೈದ್ಯಶಾಲೆಗಳೂ 24 ಕೃತಕ ಗರ್ಭಧಾರಣಾ ಕೇಂದ್ರಗಳೂ ಇವೆ (2000). ಮೀನು ಸಾಕಣೆಯೂ ಇದ್ದು 3,990 ಮೆ. ಟನ್ನು ಮೀನನ್ನು ಹಿಡಿಯಲಾಗಿತ್ತು (2001).

ಕರ್ನಾಟಕ ರಾಜ್ಯದ ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳು ಹೆಚ್ಚು ಪ್ರಮಾಣದಲ್ಲಿ ಸ್ಥಾಪಿತವಾಗಿರುವುದು ಈ ಜಿಲ್ಲೆಯಲ್ಲಿ. ಹೆಚ್ಚಿನ ಕೈಗಾರಿಕೆಗಳು ಬೆಂಗಳೂರು ನಗರ ಮತ್ತು ಪರಿಸರದಲ್ಲಿ ಇವೆ. 2001ರ ಅಂಕಿ–ಅಂಶಗಳ ಪ್ರಕಾರ ಜಿಲ್ಲೆಯಲ್ಲಿ 767 ಬಟ್ಟೆ, 243 ರಾಸಾಯನಿಕ, 1323 ಎಂಜಿನಿಯರಿಂಗ್ ಮತ್ತು ಇತರೇ ವಿಧದ 2066 ಕಾರ್ಖಾನೆಗಳಿದ್ದು ಒಟ್ಟು 4399 ಕೈಗಾರಿಕಾ ಘಟಕಗಳಿದ್ದು 4,58,245 ಉದ್ಯೋಗಿಗಳಿದ್ದರು. 11 ಕೈಗಾರಿಕಾ ಪ್ರದೇಶಗಳೂ 1815 ಕೈಗಾರಿಕಾ ಶೆಡ್ಡುಗಳೂ ಇದ್ದವು. ವಿಮಾನ, ಗಡಿಯಾರ, ಟೆಲಿಫೋನ್, ರೇಡಿಯೋ, ಯಂತ್ರೋಪಕರಣಗಳು, ಸಿಮೆಂಟ್, ವಿದ್ಯುತ್ ಉಪಕರಣಗಳು, ಪಿಂಗಾಣಿ ಸಾಮಾನುಗಳು, ರೇಷ್ಮೆಬಟ್ಟೆ, ಹತ್ತಿಬಟ್ಟೆ–ಇವುಗಳ ತಯಾರಿಕೆಗೆ ಸಂಬಂಧಿಸಿದಂತೆ ಭಾರಿ–ಉದ್ಯಮಗಳು ಇಲ್ಲಿವೆ. ಯಂತ್ರೋಪಕರಣಗಳು, ಪ್ಲಾಸ್ಟಿಕ್ ವಸ್ತುಗಳು, ರಾಸಾಯನಿಕ ವಸ್ತುಗಳು, ಅಗರಬತ್ತಿ, ಕೈಮಗ್ಗದ ಬಟ್ಟೆಗಳು ಮುಂತಾದವನ್ನೂ ತಯಾರಿಸುವ ಅನೇಕ ಸಣ್ಣ ಪ್ರಮಾಣದ ಉದ್ಯಮಗಳೂ ಯಲಹಂಕ ಮೊದಲಾದ ಕಡೆಗಳಲ್ಲಿ ಹೆಂಚಿನ ಕಾರ್ಖಾನೆಗಳೂ ಇವೆ. ಕಟ್ಟಡದ ಕಲ್ಲನ್ನು ಎಬ್ಬಿ, ನಯಮಾಡಿ, ರಫ್ತು ಮಾಡುವ ಉದ್ಯಮ ಬೆಂಗಳೂರಿನಲ್ಲಿದೆ. ಬೆಂಗಳೂರು ಜಿಲ್ಲೆ ರೇಷ್ಮೆ ಉದ್ಯಮಕ್ಕೂ ಪ್ರಸಿದ್ಧ. 1347 ಟನ್ ರೇಷ್ಮೆ ಉತ್ಪಾದಿಸಲಾಗಿತ್ತು (2001). ಆನೇಕಲ್ಲು ತಾಲ್ಲೂಕಿನಲ್ಲಿ ರೇಷ್ಮೆ ಉತ್ಪನ್ನ ಅಧಿಕ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಉತ್ತಮವಾಗಿದೆ. ವಿವಿಧ ಮೂಲಗಳಿಂದ ದೊರಕಿರುವ ಅಂಕಿ ಅಂಶಗಳ ಪ್ರಕಾರ ಈ ಜಿಲ್ಲೆಯಲ್ಲಿರುವ ವಾಣಿಜ್ಯ ಬ್ಯಾಂಕುಗಳ ಸಂಖ್ಯೆ 826 (2001). 13 ಗ್ರಾಮೀಣ ಬ್ಯಾಂಕುಗಳು, 418 ಸಹಕಾರಿ ಬ್ಯಾಂಕುಗಳೂ ಇವುಗಳ ಜೊತೆಗೆ 8 ನಿಯಂತ್ರಿತ ಮಾರುಕಟ್ಟೆ ಇವೆ. ಇವಲ್ಲದೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಜಿಲ್ಲೆಯ ಕೈಗಾರಿಕಾ ಘಟಕಗಳಿಗೆ ಧನಸಹಾಯ ಮಾಡುತ್ತಿದೆ.

ಬೆಂಗಳೂರು ನಗರ ಜಿಲ್ಲೆ ಅತ್ಯುತ್ತಮ ಸಾರಿಗೆ ಸಂಪರ್ಕ ಸೌಲಭ್ಯಗಳನ್ನು ಪಡೆದಿದೆ. ಬೆಂಗಳೂರಿನಿಂದ ದೇಶದ ನಾನಾ ಕಡೆಗಳಿಗೆ ವಿಮಾನ ಸಂಪರ್ಕವಿದೆ. ಈಗಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬದಲು ದೇವನಹಳ್ಳಿ ಬಳಿ ಹೊಸ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯ ನಡೆಯುತ್ತಿದೆ. ಬೆಂಗಳೂರಿನಿಂದ ಚೆನ್ನೈ, ಸೇಲಂ, ಗುಂತಕಲ್ಲು, ಅರಸೀಕೆರೆ, ಮೈಸೂರು, ಬಂಗಾರಪೇಟೆ– ಈ ಸ್ಥಳಗಳಿಗೆ ಹೋಗುವ

ವಿಧಾನಸೌಧ

ರೈಲುಮಾರ್ಗಗಳು ಜಿಲ್ಲೆಯ ಅನೇಕ ಸ್ಥಳಗಳಿಗೂ ಸಂಪರ್ಕವನ್ನು ಒದಗಿಸುತ್ತವೆ. ಬೆಂಗಳೂರು ನಗರಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆ ಸೇರಿಸಿ ಒಟ್ಟು ಬ್ರಾಡ್‌ಗೇಜ್ ರೈಲುಮಾರ್ಗದ ಉದ್ದ 288 ಕಿಮೀ ಇದ್ದು 47 ರೈಲು ನಿಲ್ದಾಣಗಳಿವೆ. ಬೆಂಗಳೂರು ನಗರಕ್ಕೆ ಮೆಟ್ರೋರೈಲು ಮಾರ್ಗ ಮಂಜೂರಾಗಿದೆ. ಬೆಂಗಳೂರಿನಿಂದ ಹೊಸಕೋಟೆ ಮೂಲಕ ಚೆನ್ನೈಗೆ ಹೋಗುವ ಮಾರ್ಗ ನೆಲಮಂಗಲದ ಮೂಲಕ ಪುಣೆ ಮತ್ತು

ಮಂಗಳೂರಿಗೆ ಹೋಗುವ ಮಾರ್ಗಗಳು, ದೊಡ್ಡಬಳ್ಳಾಪುರದ ಮೂಲಕ ಅನಂತಪುರಕ್ಕೆ ಹೋಗುವ ಮಾರ್ಗ, ರಾಮನಗರ ಮತ್ತು ಚನ್ನಪಟ್ಟಣಗಳ ಮೂಲಕ ಮೈಸೂರಿಗೆ ಹೋಗುವ ಮಾರ್ಗಗಳು ಜಿಲ್ಲೆಯ ಮುಖ್ಯ ರಸ್ತೆಗಳು. ಅಲ್ಲದೆ ಬೆಂಗಳೂರಿನಿಂದ ಹೊಸೂರು, ಆನೇಕಲ್ಲು, ಕನಕಪುರ–ಮಳವಳ್ಳಿ–ಕೊಳ್ಳೇಗಾಲ, ಮಾಗಡಿ, ಸರ್ಜಾಪುರ, ಚಿಕ್ಕಜಾಲ–ದೇವನಹಳ್ಳಿ ಈ ಸ್ಥಳಗಳಿಗೆ ಹೋಗುವ ಮಾರ್ಗಗಳೂ ಇರುವುದಲ್ಲದೆ ಈ ನಗರದಿಂದ ಮೈಸೂರಿಗೆ ಚತುಷ್ಪಥ ರಸ್ತೆ ನಿರ್ಮಾಣವಾಗಿದೆ ಹಾಗೂ ಕಾರಿಡಾರ್ ಹೆದ್ದಾರಿ ಕೆಲಸ ನಡೆಯುತ್ತಿದೆ. ಅಖಿಲ ಭಾರತದ ಸುವರ್ಣಪಥದಲ್ಲಿ ಬೆಂಗಳೂರು ಪ್ರಮುಖ ಸ್ಥಾನದಲ್ಲಿದೆ. ನಗರದೊಳಗೆ ಅಸಂಖ್ಯಾತ ರಸ್ತೆಗಳು, ಮೇಲ್ ಸೇತುವೆಗಳು, ವರ್ತುಲ ರಸ್ತೆಗಳು ಇದ್ದು ಅತ್ಯಂತ ದಟ್ಟವಾಹನ ಸಂಚಾರಕ್ಕೆ ಸುಗಮ ವ್ಯವಸ್ಥೆ ಮಾಡುವ ಪ್ರಯತ್ನ ನಡೆದಿದೆ. 1999ರ ಅಂಕಿಅಂಶದಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ 153 ಕಿಮೀ ರಾಷ್ಟ್ರೀಯ ಹೆದ್ದಾರಿ, 194 ಕಿಮೀ ರಾಜ್ಯ ಹೆದ್ದಾರಿ, 381 ಕಿಮೀ ಜಿಲ್ಲಾ ಮುಖ್ಯರಸ್ತೆಗಳಿದ್ದವು. ಜಿಲ್ಲೆಯ ಎಲ್ಲಾ ಪಟ್ಟಣಗಳಿಗೆ ಹಾಗೂ ಮುಖ್ಯ ಗ್ರಾಮಗಳಿಗೆ ವಾಹನ ಸಂಪರ್ಕವಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡ, ಚಾಮರಾಜಪೇಟೆ

ಜಿಲ್ಲೆಯಲ್ಲಿ ವೈದ್ಯಕೀಯ ಸೌಲಭ್ಯ ಸಹ ಉತ್ತಮವಾಗಿದೆ. 1999–2000ದ ಅಂಕಿಅಂಶದ ಪ್ರಕಾರ 12 ಸರ್ಕಾರಿ ಆಸ್ಪತ್ರೆಗಳು, 41 ವಿವಿಧ ಸಂಸ್ಥೆಗಳ ಆಸ್ಪತ್ರೆಗಳು, 7 ಆಯುರ್ವೇದ ಆಸ್ಪತ್ರೆಗಳು, 31 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 42 ಪ್ರಾಥಮಿಕ ಆರೋಗ್ಯ ಘಟಕಗಳು, 47 ಕುಟುಂಬ ಕಲ್ಯಾಣ ಕೇಂದ್ರಗಳು ಇದ್ದವು. ಇವಲ್ಲದೆ ಕಾರ್ಮಿಕರ ಆಸ್ಪತ್ರೆಗಳು, ಕಾರ್ಖಾನೆಗಳ ಆಸ್ಪತ್ರೆಗಳೂ ಖಾಸಗಿ ನರ್ಸಿಂಗ್ ಹೋಂ ಮತ್ತು ಔಷಧಾಲಯಗಳೂ ಇವೆ.

ವಿದ್ಯಾಭ್ಯಾಸಕ್ಕೆ ಈ ಜಿಲ್ಲೆಯಲ್ಲಿರುವಷ್ಟು ಸೌಕರ್ಯ ಇತರ ಜಿಲ್ಲೆಗಳಲ್ಲಿ ಕಡಿಮೆ. ಇಡೀ ರಾಜ್ಯದಲ್ಲೆ ಹೆಚ್ಚು 83.91 (2001) ಸಾಕ್ಷರತೆ ಇರುವ ಈ ಜಿಲ್ಲೆಯಲ್ಲಿ 2,763 ಪ್ರಾಥಮಿಕ ಶಾಲೆಗಳು, 1018 ಪ್ರೌಢಶಾಲೆಗಳು, 209 ಪದವಿಪೂರ್ವ ಕಾಲೇಜುಗಳು, 200 ಸಾಮಾನ್ಯ ಶಿಕ್ಷಣ ಶಾಲೆಗಳು, 52 ಪಾಲಿಟೆಕ್ನಿಕ್, 24 ಎಂಜಿನಿಯರಿಂಗ್, 9 ವೈದ್ಯಕೀಯ, 6 ಭಾರತೀಯ ವೈದ್ಯಪದ್ಧತಿ, 12 ದಂತವೈದ್ಯಕೀಯ ಕಾಲೇಜು, 4 ವಿಶ್ವವಿದ್ಯಾಲಯಗಳೂ 170 ಗ್ರಂಥಾಲಯಗಳೂ ನ್ಯಾಯ, ವಾಣಿಜ್ಯ ಮುಂತಾದ ಕಾಲೇಜುಗಳು ಜಿಲ್ಲೆಯಲ್ಲಿವೆ. ವಿಶ್ವನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯವಿದೆ. ನೂರಾರು ಕಾಲೇಜುಗಳಲ್ಲದೆ ವಿಶೇಷ ತಜ್ಞ ಶಿಕ್ಷಣ ಸಂಸ್ಥೆಗಳಿವೆ. ಮಾಹಿತಿ ತಂತ್ರಜ್ಞಾನ ಮತ್ತು ಜೀವತಂತ್ರಜ್ಞಾನ ಶಿಕ್ಷಣದಲ್ಲಿ ಈ ನಗರ ಭಾರತದಲ್ಲೇ ಅಗ್ರಸ್ಥಾನದಲ್ಲಿದೆ.

ಬೆಂಗಳೂರು ಜಿಲ್ಲೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದೆ. ಕೈವಲ್ಯ ಕಲ್ಪವಲ್ಲರಿ ಎಂಬ ಆಧ್ಯಾತ್ಮಿಕ ಹಾಡುಗಳನ್ನು ಬರೆದಿರುವ ಸರ್ಪಭೂಷಣ ಮಠದ ಅಧಿಪತಿ ತತ್ತ್ವಜ್ಞಾನಿ ಸಣ್ಣಪ್ಪಯೋಗಿ, ಭಾರತ ರುಕ್ಮಾಂಗದ ಚರಿತ್ರೆ ಮುಂತಾದ ಗ್ರಂಥಗಳನ್ನು ರಚಿಸಿರುವ ಕನ್ನಡ ಕವೀಂದ್ರಾಭರಣ ಬಿರುದಾಂಕಿತ ಲಕ್ಷ್ಮಕವಿ, ಆನಂದ ರಾಮಾಯಣ ಅಥವಾ ರಾಮಾಭ್ಯುದಯ ಕಥಾ ಕುಸುಮ ಮಂಜರಿ ಎಂಬ ಷಟ್ಪದಿ ಕಾವ್ಯವನ್ನು ರಚಿಸಿರುವ ಕವಿತಾವಿಚಕ್ಷಣ ತಿಮ್ಮಾಮಾತ್ಯ, ಹನುಮದ್ವಿಲಾಸ ಯಕ್ಷಗಾನ ಗ್ರಂಥ ರಚಿಸಿರುವ ಗಂಗಕವಿ, ವಚನಗಳನ್ನು ಬರೆದಿರುವ ಮುದ್ದುವೀರಸ್ವಾಮಿ, ರಾಜೇಶ್ವರ ಶತಕ, ವೇಣುಗೋಪಾಲ ಶತಕ, ಅಂಬಾಸ್ತೋತ್ರ, ನಿರಾಶಗುರುಸ್ತೋತ್ರ, ಶಿವಶರಣ ವಿಲಾಸ ಮುಂತಾದ ಗ್ರಂಥಗಳ ಕರ್ತೃ ಮಹಾಂತ ದೇಶಿಕ, ಜಯದೇವನ ಗೀತಗೋವಿಂದಕ್ಕೆ ಶೃಂಗಾರ ಪ್ರಕಾಶಿಕೆ ಎಂಬ ಕನ್ನಡ ಟೀಕೆಯನ್ನು ಬರೆದಿರುವ ಅಪ್ರಮೇಯ ಶಾಸ್ತ್ರಿ, ಪದ್ಮಾವತೀ ಪರಿಣಯ, ಚಿತ್ರಾವಳಿ, ಸದ್ಬೋಧ ಪ್ರದೀಪಿಕೆ, ಸದ್ವಾಕ್ಯ ಕುಸುಮಾವಳಿ, ವೀರಶೈವ ಹಾಸ್ಯ ಕಥಾವಳಿ, ನರಸಿಂಹಾಚಾರ್ಯ ಸ್ತವನಂ, ವೀರಸಂಗಸ್ತವನಂ ಗ್ರಂಥಗಳನ್ನು ಬರೆದಿರುವ ಜೀರಗೆ ಬಸವಲಿಂಗಾರ್ಯ, ಪ್ರಭುಚರಿತ್ರೆ ಯಕ್ಷಗಾನ ಬರೆದಿರುವ ನಂದಪ್ಪ ಮೊದಲಾದವರು ಈ ಜಿಲ್ಲೆಯವರು. ಕರ್ನಾಟಕದ ಸಾಹಿತ್ಯ ಸಂಸ್ಕೃತಿಯ ಕೇಂದ್ರವಾಗಿ ಜಿಲ್ಲೆ ಬೆಳೆಯುತ್ತಿದೆ.

ಬೆಂಗಳೂರು ಕರಗ ಬಹುಪ್ರಸಿದ್ಧವಾದದ್ದು. ಹಾಗೆಯೆ ಬನ್ನೇರುಘಟ್ಟದ ಸಂಪಂಗಿ ರಾಮಸ್ವಾಮಿ ಜಾತ್ರೆ, ಆನೇಕಲ್ಲಿನ ತಿಮ್ಮರಾಯಸ್ವಾಮಿ ಜಾತ್ರೆ ಮುಂತಾದವು ಬೆಂಗಳೂರು ಜಿಲ್ಲೆಯ ಸಂಸ್ಕೃತಿಯ ಬೆಳೆವಣಿಗೆಯಲ್ಲಿ ಮುಖ್ಯವಾದವಾಗಿವೆ.

**ಬೆಂಗಳೂರು ವಿಶ್ವವಿದ್ಯಾಲಯ:** ಕರ್ನಾಟಕ ವಿಶ್ವವಿದ್ಯಾಲಯಗಳಲ್ಲೊಂದು. ಇದು 1964ರ ಅಧಿನಿಯಮದ ಪ್ರಕಾರ ನವೆಂಬರ್ 24 1964ರಂದು ಬೆಂಗಳೂರಿನಲ್ಲಿ ಆರಂಭವಾಯಿತು. ಅದುವರೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ್ದ 32 ಕಾಲೇಜುಗಳು ನೂತನ ವಿಶ್ವವಿದ್ಯಾಲಯದ ವ್ಯಾಪ್ತಿಗೆ ವರ್ಗವಾದವು. 1858ರಲ್ಲಿ ಆರಂಭ ವಾಗಿದ್ದ ಸೆಂಟ್ರಲ್ ಕಾಲೇಜೂ 1917ರಲ್ಲಿ ಆರಂಭವಾಗಿದ್ದ ಎಂಜಿನಿಯ ರಿಂಗ್ ಕಾಲೇಜೂ ಅದರ ಆಂಗಿಕ ಕಾಲೇಜುಗಳಾದವು. ಸೆಂಟ್ರಲ್ ಕಾಲೇಜು ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಮೀಸಲಾಯಿತು. ಆರಂಭದಲ್ಲಿ ಅಲ್ಲಿ 14 ಸ್ನಾತಕೋತ್ತರ ವಿಷಯ ವಿಭಾಗಗಳು ಮಾತ್ರ ಇದ್ದುವು. ಈಚೆಗೆ ವಿಷಯ ವಿಭಾಗಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ತೀವ್ರವೇಗದಲ್ಲಿ ಹೆಚ್ಚಿವೆ. ಅಂತೆಯೇ ನಗರದ ಕಾಲೇಜುಗಳ ಸಂಖ್ಯೆಯೂ ಹೆಚ್ಚಿವೆ. 1975ರ ಸೆಪ್ಟೆಂಬರ್ ತಿಂಗಳವರೆಗೆ ನಗರದ ಪ್ರಾದೇಶಿಕ ವ್ಯಾಪ್ತಿಯನ್ನು ಮಾತ್ರ ಹೊಂದಿದ್ದ ವಿಶ್ವವಿದ್ಯಾಲಯಕ್ಕೆ ಆಗ 60 ಕಾಲೇಜುಗಳೂ 23 ಸ್ನಾತಕೋತ್ತರ ವಿಷಯ ವಿಭಾಗಗಳೂ ಸೇರಿದ್ದುವು. ಕಲಾಶಾಸ್ತ್ರ, ವಿಜ್ಞಾನಶಾಸ್ತ್ರ, ಶಿಕ್ಷಣಶಾಸ್ತ್ರ, ವಾಣಿಜ್ಯಶಾಸ್ತ್ರ, ವೈದ್ಯಶಾಸ್ತ್ರ, ಶಿಲ್ಪಶಾಸ್ತ್ರ, ಕಾನೂನುಶಾಸ್ತ್ರ–ಇವು ಇಲ್ಲಿನ ಪ್ರಮುಖ ವಿದ್ವನ್ಮಂಡಲಿ (ಫ್ಯಾಕಲ್ಟಿ) ಗಳಾಗಿದ್ದುವು. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ 2000 ಸ್ನಾತಕೋತ್ತರ ವಿದ್ಯಾರ್ಥಿಗಳು ಇದ್ದರು. ಈಗ

ವಿಶ್ವವಿದ್ಯಾಲಯದ ಸ್ನಾತಕೋ ತ್ತರ ವಿಭಾಗದಲ್ಲಿ ಸು. 3000 ಸ್ನಾತಕೋತ್ತರ ವಿದ್ಯಾರ್ಥಿಗಳಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯವನ್ನು ಸಂಘಟಿಸಿದ ಅನಂತರ ಬೆಂಗಳೂರು ನಗರಕ್ಕೆ 16 ಕಿಮೀ ದೂರದಲ್ಲಿರುವ ಕೆಂಗೇರಿಯ ಬಳಿಯ ಒಂದು ಸಹಸ್ರ ಎಕರೆ ವಿಸ್ತೀರ್ಣದ ವಿಶಾಲ ಆವರಣದಲ್ಲಿ ನೂತನ ವಿಶ್ವವಿದ್ಯಾಲಯ ಕೇಂದ್ರದ (ಜ್ಞಾನಭಾರತಿ) ನಿರ್ಮಾಣವಾಯಿತು. ನೂತನ ಆವರಣದಲ್ಲಿ ವಿವಿಧ ಅಧ್ಯಯನ ಶಿಸ್ತುಗಳಿಗೆ ಸಂಬಂಧಿಸಿದಂತೆ ಅನೇಕ ಕಟ್ಟಡಗಳ ನಿರ್ಮಾಣಗೊಂಡವು ವಿವಿಧ ಆಡಳಿತ ಶಾಖೆಗಳೂ ಹದಿನೈದು ಬೋಧನ ಸಂಶೋಧನ ವಿಭಾಗಗಳೂ ಅಲ್ಲಿಗೆ ಸ್ಥಳಾಂತರ ಹೊಂದಿದವು. 1969ರಲ್ಲಿ ಗಾಂಧಿ ಭವನ ನಿರ್ಮಾಣವಾಯಿತು. ಕಲಾಶಾಸ್ತ್ರ ಮತ್ತು ಮಾನವಿಕಶಾಸ್ತ್ರ ವಿದ್ಯಾಲಯಗಳು, ಭೂವಿಜ್ಞಾನದ ನಿಲಯ, ಗ್ರಂಥಾಲಯದ ಕಟ್ಟಡ, ಮಹಿಳೆಯರ ಮತ್ತು ಪುರುಷರ ವಿದ್ಯಾರ್ಥಿನಿಲಯಗಳ ಕಟ್ಟಡಗಳು ಮತ್ತು ಸಿಬ್ಬಂದಿ, ಅಧ್ಯಾಪಕರ ವಸತಿ ಗೃಹಗಳು, ಆರೋಗ್ಯಕೇಂದ್ರ, ನಿರ್ವಸತಿ ವಿದ್ಯಾರ್ಥಿ ಕೇಂದ್ರ-ಮುಂತಾದುವೂ ನಿರ್ಮಾಣವಾದವು. ಐದನೆಯ ಯೋಜನೆಯಲ್ಲಿ ವಾಸ್ತುಶಾಸ್ತ್ರ ವಿದ್ಯಾಲಯದ (ಸ್ಕೂಲ್ ಆಫ್ ಆರ್ಕಿಟೆಕ್ಚರ್) ಕಟ್ಟಡವನ್ನು ನಿರ್ಮಿಸಲಾಯಿತು. 9ನೆಯ ಯೋಜನೆಯವರೆಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಯಿತು.

ಜ್ಞಾನಭಾರತಿ ಆಡಳಿತ ಕಛೇರಿ

ಕನ್ನಡ, ತೆಲುಗು, ಸಂಸ್ಕೃತ, ಹಿಂದಿ ವಿಭಾಗಗಳು 1973ರಲ್ಲಿ ನೂತನ ಆವರಣಕ್ಕೆ ಸ್ಥಳಾಂತರಗೊಂಡಿದ್ದವು. ಅನಂತರ ಇಂಗ್ಲಿಷ್, ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣ, ಸಿವಿಲ್ ಎಂಜಿನಿಯರಿಂಗ್ ಮತ್ತು ಗ್ರಂಥಾಲಯ ವಿಜ್ಞಾನ ಭೂಗರ್ಭಶಾಸ್ತ್ರ, ಭೂಗೋಳಶಾಸ್ತ್ರ ವಿಭಾಗಗಳು ಮತ್ತು ವಿಜ್ಞಾನಶಾಸ್ತ್ರದ ವಿಭಾಗಗಳು ಜ್ಞಾನಭಾರತಿಗೆ ಇನ್ನಿತರ ಅಧ್ಯಯನ ಶಿಸ್ತಿನ ಅನೇಕ ವಿಭಾಗಗಳು ವರ್ಗಾವಣೆ ಆದವು.

ವಿಶ್ವವಿದ್ಯಾಲಯ ನಗರದ ಬೇರೆ ಬೇರೆ ಕೇಂದ್ರಗಳಲ್ಲಿ ಸಂಜೆಯ ಸ್ನಾತಕೋತ್ತರ ತರಗತಿಗಳನ್ನೂ ನಡೆಸುತ್ತಿತ್ತು.

ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಚಾರೋಪನ್ಯಾಸ, ಕಿರುಹೊತ್ತಗೆಗಳ ಪ್ರಕಟಣೆ, ಇತರ ಕನ್ನಡ ಮತ್ತು ಇಂಗ್ಲಿಷ್ ಗ್ರಂಥಗಳ ಪ್ರಕಟಣೆ-ಇವುಗಳ ಮೂಲಕ ಜನತೆಯಲ್ಲಿ ಜ್ಞಾನ ವಿಸ್ತರಣ ಕಾರ್ಯವನ್ನು ಕೈಗೊಂಡಿದೆ. ಭಾಷೆ, ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ಪದವಿ ಮಟ್ಟದ ಅನೇಕ ಕನ್ನಡ ಪಠ್ಯಪುಸ್ತಕಗಳನ್ನು ಪ್ರಕಟಿಸಿದೆ. ತನ್ನದೇ ಆದ ಮುದ್ರಣಾಲಯವನ್ನು ಹೊಂದಿದ್ದು, ಆಧುನಿಕ ಯಂತ್ರೋಪಕರಣಗಳಿಂದ ಸಜ್ಜುಗೊಂಡಿದೆ. ಇದುವರೆಗೂ ವಿಶ್ವವಿದ್ಯಾಲಯ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ 250ಕ್ಕೂ ಮೇಲ್ಪಟ್ಟು ಪುಸ್ತಕಗಳನ್ನು ಪ್ರಕಟಿಸಿದೆ.

1972ರಲ್ಲಿ ನೂತನ ವಿಶ್ವವಿದ್ಯಾಲಯದ 60 ಕಾಲೇಜುಗಳಲ್ಲಿ ಸು. 35 ಸಾಮಾನ್ಯ ಶಿಕ್ಷಣದವು, ಮಿಕ್ಕವು 25 ವೃತ್ತಿಶಿಕ್ಷಣದವು ಆಗಿದ್ದವು. ಅವುಗಳಲ್ಲಿ ಐದು ಶಿಕ್ಷಣಶಾಸ್ತ್ರದ ಕಾಲೇಜುಗಳು, ಐದು ವಾಣಿಜ್ಯಶಾಸ್ತ್ರ ಕಾಲೇಜುಗಳು, ಐದು ಎಂಜಿನಿಯರಿಂಗ್ ಕಾಲೇಜುಗಳು, ಆರು ವೈದ್ಯಶಾಸ್ತ್ರದ ಕಾಲೇಜುಗಳು, ನಾಲ್ಕು ನ್ಯಾಯಶಾಸ್ತ್ರದ ಕಾಲೇಜುಗಳು. 60 ಕಾಲೇಜುಗಳಲ್ಲಿ ಸು. ಕಾಲುಭಾಗದಷ್ಟು ಸರ್ಕಾರದವು; ಮಿಕ್ಕವು ಖಾಸಗಿ ಸಂಸ್ಥೆಗಳವು. ಅವುಗಳಲ್ಲಿ ಒಟ್ಟು 50,000 ವಿದ್ಯಾರ್ಥಿಗಳು ಪದವಿ ಮಟ್ಟದ ಶಿಕ್ಷಣ ಪಡೆದಿದ್ದರು.

ಈ ವಿಶ್ವವಿದ್ಯಾಲಯದಲ್ಲಿ ಭಾರತೀಯ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಒಂದು ಹೊಸ ಪ್ರಯೋಗವೊಂದು ಆರಂಭವಾಗಲಿದೆ. ಪದವಿಮಟ್ಟದಲ್ಲಿ ಒಂದು ಐಚ್ಛಿಕ ವಿಷಯಕ್ಕೆ ಬದಲು ವೃತ್ತಿಯೊಂದರಲ್ಲಿ ತರಬೇತು ನೀಡುವ ಯೋಜನೆ ವಿಶ್ವವಿದ್ಯಾಲಯ ರೂಪಿಸಿತ್ತು. ಅದು ಅನಂತರ ಮಾರ್ಪಾಟು ವೃತ್ತಿಪರ (ಜಾಬ್ ಓರಿಯೆಂಟೆಡ್) ಡಿಪ್ಲೊಮ ತರಗತಿಗಳು ಆರಂಭವಾದವು. ಇದರಿಂದ ಉನ್ನತ ಶಿಕ್ಷಣ ಉದ್ದೇಶಪೂರ್ವಕದ್ದಾಗಿ ಪರಿಣಮಿಸಿದೆ. ಇಂಥ ಯೋಜನೆಯನ್ನು ಆರಂಭಿಸಿದ ಕೀರ್ತಿ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ.

ಬೇರೆ ಬೇರೆ ಅಂಗರಚನೆ, ಆಡಳಿತ ವ್ಯವಸ್ಥೆ, ಕಾನೂನು ಪದ್ಧತಿ ಮುಂತಾದವುಗಳನ್ನು ಹೊಂದಿರುವ ಕರ್ನಾಟಕದ ಎಲ್ಲ ಸಾಮಾನ್ಯ ವಿಶ್ವವಿದ್ಯಾಲ ಯಗಳಿಗೂ ಅನ್ವಯಿಸುವಂತೆ ಕರ್ನಾಟಕ ವಿಶ್ವವಿದ್ಯಾಲಯಗಳ ವ್ಯಾಪಕ ರೀತಿಯ ಅಧಿನಿಯಮವನ್ನು ಮಾಡಲಾಗಿದೆ. ಅದರಿಂದ ಬೆಂಗಳೂರು ವಿಶ್ವವಿದ್ಯಾಲಯ ಏಕ ಘಟಕ ವಿಶ್ವವಿದ್ಯಾಲಯಗಳ ಬದಲು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳೂ ಮತ್ತು ಕೋಲಾರ ಜಿಲ್ಲೆಯೂ ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿವೆ. ಹಿಂದೆ ತುಮಕೂರು ಜಿಲ್ಲೆ ಇದರ ವ್ಯಾಪ್ತಿಗೆ ಸೇರಿದ್ದು ಈಗ ಪ್ರತ್ಯೇಕ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದವರು ಮತ್ತು ಅವರ ಆಡಳಿತಾವಧಿ ಈ ಕೆಳಕಂಡಂತಿದೆ: ಪ್ರಥಮ ಕುಲಪತಿ ಬಿ.ಡಿ. ಲರೋಯ (1964-66). ಅನಂತರ ಪಿ.ಮಲ್ಲಿಕಾರ್ಜುನಪ್ಪ (ಪ್ರಭಾರ; 30-01-1966 ರಿಂದ 02-03-1966), ಟಿ.ಆರ್. ಜಯರಾಮನ್ (03-03-1966 ರಿಂದ 09-10-1966), ವಿ.ಕೆ. ಗೋಕಾಕ್ (1966-69), ಕೆ.ಆರ್. ರಾಮಚಂದ್ರನ್ (13-10-1969 ರಿಂದ 14-12-1969), ಟಿ.ಕೆ. ತುಕೋಳ್ (1969-72), ಎಚ್. ನರಸಿಂಹಯ್ಯ (1972-77), ಟಿ.ಆರ್. ಜಯರಾಮನ್ (1977-81), ಎಂ.ಎನ್. ವಿಶ್ವನಾಥಯ್ಯ (1981-84), ಡಿ.ಶಂಕರನಾರಾಯಣ (1984-87), ಡಿ.ಎಂ. ನಂಜುಂಡಪ್ಪ (1987-90), ಎಂ. ಖಾಜಾಪೀರ್ (ಪ್ರಭಾರ, 26-03-1990 ರಿಂದ 27-03-1990), ಕೆ. ಹನುಮಂತಪ್ಪ (1990-93), ಸಿ.ಇ.ಜಿ. ಜಸ್ಟೊ (ಪ್ರಭಾರ; 02-03-1993 ರಿಂದ 11-03-1993), ಎನ್.ಆರ್. ಶೆಟ್ಟಿ (1993-99), ಕೆ.ಸಿದ್ದಪ್ಪ (1999-2002), ಎಂ. ಖಾಜಾಪೀರ್ (ಪ್ರಭಾರ, 12-03-2002 ರಿಂದ 14-03-2002), ಎಂ.ಎಸ್. ತಿಮ್ಮಪ್ಪ (2002-2006), ಬಿ.ಜಿ. ಸುಧಾ (ಪ್ರಭಾರ; 15-03-2006 ರಿಂದ 28-5-2006). ಈಗಿನ ಕುಲಪತಿ ಎಚ್.ಎ. ರಂಗನಾಥ್ (29-05-2006 ರಿಂದ).

(ಎನ್.ಎಸ್.ವಿ.)

**ಬೆಂಡಿನ ಕಲೆ:** ಬೆಂಡಿನಿಂದ ಕರಕುಶಲ ವಸ್ತುಗಳನ್ನು ತಯಾರಿಸುವ ಕಲೆ ಕರ್ನಾಟಕದಲ್ಲಿ ಪ್ರಾಚೀನಕಾಲದಿಂದಲೂ ಇದೆ. ಗುಡಿಗಾರಿಕೆಯ ಕುಶಲಕರ್ಮಿಗಳು ಬೆಂಡಿನ ಸಾಮಾನುಗಳನ್ನು ತಯಾರಿಸುವುದರಲ್ಲಿ ಸಿದ್ಧಹಸ್ತರಾಗಿದ್ದು ಇವರು ಹೆಚ್ಚಾಗಿ ಸಾಗರ, ಸೊರಬ, ಶಿರಸಿ, ಕುಮುಟ, ಹೊನ್ನಾವರ ಈ ಸ್ಥಳಗಳಲ್ಲಿ ಕಂಡುಬರುತ್ತಾರೆ. ಬೆಂಡಿನ ಸಾಮಾನುಗಳನ್ನು ತಯಾರಿಸಲು ಅಗತ್ಯ ಪರಿಕರಗಳೆಂದರೆ ಬೆಂಡು, ಬಣ್ಣದ ಹುಡಿ, ದಾರ,



ಬೆಂಡಿನಿಂದ ತಯಾರಾದ ಹಾರಗಳು

ತಂತಿ, ಬಣ್ಣದತಗಡು, ಗಾಜಿನ ಮಣಿಗಳು ಮತ್ತು ಕಾಗದ. ಬೆಂಡಿನಿಂದ ಆಟದ ಸಾಮಾನು, ಹೂವುಗುಚ್ಛ, ಮಾದರಿಕಟ್ಟಡದ ಮನೆಗಳು, ಸರಗಳು, ಹೂದಂಡೆ, ಹೂವಿನ ತುರಾಯಿ, ಬಾಸಿಂಗ, ಟೋಪಿ ಮೊದಲಾದವನ್ನು ತಯಾರಿಸಲಾಗುತ್ತದೆ. ಹಿಂದೂ ಮದುವೆಗಳಲ್ಲಿ ಬಳಸುವ ಬಾಸಿಂಗಗಳು ಕಲಾದೃಷ್ಟಿಯಿಂದ ಉತ್ಕೃಷ್ಟ ರಚನೆಗಳು. ಬಾಸಿಂಗದ ಸೌಂದರ್ಯ ಅದನ್ನು ತಯಾರಿಸುವ ಕಲ್ಪನೆ ಮತ್ತು ನಮೂನೆಯ ವಿವಿಧ ವರ್ಣದ ಕೈ ಚಳಕಗಳನ್ನು ಅವಲಂಬಿಸಿರುತ್ತದೆ. ಬೆಂಡಿನಿಂದ ತಯಾರಿಸುವ ವಿವಿಧ ಹೂಗಳು, ಹಾರಗಳು ಅತ್ಯಾಕರ್ಷಕವಾಗಿರುತ್ತವೆ. ಹಾರಗಳಲ್ಲಿ ಗುಲಾಬಿ, ಮಲ್ಲಿಗೆ, ಸೇವಂತಿಗೆಯ ಹಾರಗಳು ನೈಸರ್ಗಿಕ ಪುಷ್ಪಹಾರಗಳಂತೆ ಕಂಗೊಳಿಸುತ್ತವೆ.

ಕ್ರಮಬದ್ಧ ರೀತಿಯಲ್ಲಿ ಈ ಕಲೆಯನ್ನು ರೂಢಿಸಿಕೊಂಡರೆ ಇದು ಆರ್ಥಿಕವಾಗಿಯೂ ಲಾಭದಾಯಕವಾದುದು. ಆದರೆ ಇತ್ತೀಚೆಗೆ ಪ್ಲಾಸ್ಟಿಕ್ ವಸ್ತುಗಳ ಪೈಪೋಟಿಯಿಂದಾಗಿ ಬೆಂಡಿನ ಕರಕುಶಲ ವಸ್ತುಗಳ ತಯಾರಿಕೆ ಕ್ಷೀಣಿಸುತ್ತಿದೆ.

*

**ಬೆಟಗೇರಿ[1]:** ಗದಗ ಪಟ್ಟಣದ ಉಪನಗರ. ನೇಯ್ಗೆ ಕೈಗಾರಿಕೆಗೆ ಪ್ರಸಿದ್ಧ. ಜನಸಂಖ್ಯೆ 1,54,982. ಇಲ್ಲಿರುವ ಪ್ರಾಚೀನ ಶಿಲಾಶಾಸನ, ವೀರಗಲ್ಲು, ಮಾಸ್ತಿಕಲ್ಲುಗಳನ್ನು ನೋಡಿದರೆ ಚಾಳುಕ್ಯ, ಹೊಯ್ಸಳ, ವಿಜಯನಗರ ರಾಜ್ಯಗಳ ಕಾಲದಲ್ಲಿಯೂ ಇದು ಒಂದು ಮುಖ್ಯವಾದ ಊರಾಗಿತ್ತೆಂದು ತೋರುವುದು. ಶಿಲಾಶಾಸನದಲ್ಲಿ ಇದನ್ನು ಬಟ್ಟಗೆರೆ (ವೃತ್ತತಡಾಗ) ಎಂದು ಹೆಸರಿಸಲಾಗಿದೆ. ಈ ಊರಲ್ಲಿರುವ ಮಲ್ಲರಾಯನಕಟ್ಟೆ ಎಂಬ ಸ್ಥಳದಲ್ಲಿ ಅನೇಕ ವೀರಗಲ್ಲುಗಳನ್ನು ಒಂದೆಡೆಯಲ್ಲಿ ಸೇರಿಸಿ ಇರಿಸಲಾಗಿದೆ.

(ಬಿ.ಕೆ.)

**ಬೆಟಗೇರಿ[2]:** ಧಾರವಾಡದ ವಾಯವ್ಯಕ್ಕೆ 10 ಕಿಮೀ ಅಂತರದಲ್ಲಿರುವ ಒಂದು ಗ್ರಾಮ. ಜನಸಂಖ್ಯೆ 7,581. ಕೈಮಗ್ಗದ ಉದ್ಯಮಕ್ಕೆ ಈ ಗ್ರಾಮ ಹೆಸರು ಪಡೆದಿದೆ. ಬಹಳ ವರ್ಷಗಳಿಂದಲೂ ಇಲ್ಲಿ ಖಾದಿ ಉತ್ಪಾದನೆಯ ಕೇಂದ್ರ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಹಿಂದೆ ಈ ಊರಿನ ಬಳಿ ಮಣ್ಣಿನಿಂದ ಉಪ್ಪನ್ನು ತೆಗೆಯುವ ಆಗರಗಳಿದ್ದುದರಿಂದ ಉಪ್ಪಿನ ಬೆಟಗೇರಿ ಎಂದು ಇದನ್ನು ಕರೆಯುತ್ತಾರೆ. ಹಿಂದೆ ಹಲಶಿಗೆಯ ಕದಂಬರ ಆಡಳಿತದಲ್ಲಿ ಕುಂದೂರು (ನರೇಂದ್ರ) ಮಂಡಲಕ್ಕೆ ಸೇರಿದ್ದ ಒಂದು ಪ್ರಮುಖ ಊರು ಇದು. (ಬಿ.ಕೆ.)

**ಬೆಟಗೇರಿ[3]:** ಗೋಕಾಕ ನಗರದ ಮೂಡಲಲ್ಲಿ 24 ಕಿಮೀ ದೂರದಲ್ಲಿ ಮಮದಾಪುರದ (ಕುರುಂಬೆಟ್ಟ) ಬಳಿ ಇರುವ ಹಳ್ಳಿ. ಜನಸಂಖ್ಯೆ 3,882. ವಿಜಯನಗರದ ಅರಸರು ರಾಜ್ಯದ ಬಡಗು ಗಡಿಯ ಕಾಪಿಗಾಗಿ ಇರಿಸಿದ ಕುರುಂಬೆಟ್ಟದ ಪಾಳೆಯಗಾರರ ಆಡಳಿತಕ್ಕೆ ಸೇರಿತ್ತು. ಕಾಲಾಂತರದಲ್ಲಿ ಈ ಪಾಳೆಯಗಾರರು ಬಿಜಾಪುರದ ಬಾದಶಹರ ಅಧೀನತೆಯನ್ನೊಪ್ಪಿ ದೇಸಾಯಿ ಎಂಬ ಹೆಸರನ್ನು ಪಡೆದರು. ಈ ದೇಸಾಯಿಯರ ಅರಮನೆಯೊಂದು ಈ ಹಳ್ಳಿಯಲ್ಲೂ ಇತ್ತು. ಈಗ ಅದರ ನಿವೇಶನ ಮಾತ್ರ ಉಳಿದಿದೆ. ಇಲ್ಲಿಯವರಿಗೆ ಕಿಲ್ಲೇದಾರ್, ದಳವಾಯಿ, ದಂಡಿನವರು, ಬೇಗೆಯವರು, ಬಾಣಸಿಗರು ಎಂಬ ಅಡ್ಡ ಹೆಸರುಗಳನ್ನು ನೋಡಿದರೆ ಐತಿಹಾಸಿಕವಾಗಿ ಇದೊಂದು ಚಿಕ್ಕ ದಂಡಿನ ಪಾಳೆಯವೂ ಆಗಿತ್ತೆಂದು ತೋರುತ್ತದೆ. ಪ್ರಸಿದ್ಧ ಸಾಹಿತಿ ಕೃಷ್ಣಶರ್ಮ ಈ ಊರಿನವರು. (ಬಿ.ಕೆ.)

**ಬೆಟಗೇರಿ ಕೃಷ್ಣಶರ್ಮ:** 1900–82. ಪ್ರಸಿದ್ಧ ಪತ್ರಿಕೋದ್ಯಮಿ ಮತ್ತು ಸಾಹಿತಿ. 'ಜಯಂತಿ' ಪತ್ರಿಕೆಯ ಸ್ಥಾಪಕ ಸಂಪಾದಕರು. ಆನಂದಕಂದ ಇವರ ಕಾವ್ಯನಾಮ.

ಗೋಕಾಕ ತಾಲ್ಲೂಕಿನ ಬೆಟಗೇರಿಯಲ್ಲಿ 1900 ಏಪ್ರಿಲ್ 16ರಂದು ಜನಿಸಿದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಮನೆತನದ ಹೊಣೆಯೆಲ್ಲ ತಾಯಿಯ ಹೆಗಲ ಮೇಲೆಯೇ ಬಿತ್ತು. ಸಾಲದೆಂಬಂತೆ ಹಿರಿಯ ಮಗನ ಸಾವು ಬೇರೆ. ಗಳಿಸಬಹುದೆಂಬ ಆಸೆ ಹಿಡಿದಿದ್ದ ಹಿರಿಯ ಮಗ ಕಣ್ಮರೆಯಾದಾಗ ತಾಯಿ ಧೈರ್ಯಗೆಡದೆ ಗೊತ್ತಿದ್ದಷ್ಟು ವೈದ್ಯಕೀಯ ವೃತ್ತಿಯನ್ನು ಮಾಡಿ ಸಂಸಾರ ರಥವನ್ನು ಮುನ್ನಡೆಸಿದರು. ಇಂಥ ಸನ್ನಿವೇಶದಲ್ಲಿ ಅಲ್ಪಸ್ವಲ್ಪ ಓದು ಕಲಿತ ಕೃಷ್ಣಶರ್ಮರು ತಮ್ಮ 18ನೆಯ ವಯಸ್ಸಿನಲ್ಲಿ ಪರಿವ್ರಾಜಕನಂತೆ ಮನೆ ಬಿಟ್ಟು ಹೊರಬಂದು ಅಲೆದಾಡುತ್ತ ಬದುಕಿನ ಹೋರಾಟ ನಡೆಸಬೇಕಾಯಿತು. ಈ ತರುಣನ ಬಗ್ಗೆ ಕರುಣೆದೋರಿ ಇವರ ಗುರುಗಳೊಬ್ಬರು ಹಳ್ಳಿಯೊಂದರಲ್ಲಿ ಇವರಿಗೆ ಶಿಕ್ಷಕವೃತ್ತಿ ದೊರಕಿಸಿಕೊಡಲು ಪ್ರಯತ್ನಿಸಿದರು. ಆದರೆ ಬೆಟಗೇರಿಯವರು ಆ ವೃತ್ತಿಗೆ ಅಂಟಿಕೊಳ್ಳದೆ ಧಾರವಾಡದ ಕವಿ ಕಾವ್ಯಾನಂದರ (ಪುಣೇಕರ) ಪರಿಚಯಮಾಡಿಕೊಂಡು ಅವರ ಆಶ್ರಯದಲ್ಲಿ ನಿಂತರು. ಕಾವ್ಯಾನಂದರ ಸಂಪರ್ಕದಿಂದ ಬೆಟಗೇರಿಯವರ ಜೀವನಕ್ಕೆ ಒಂದು ಗೊತ್ತು ಗುರಿ ಬಂತು. ಧಾರವಾಡದಲ್ಲಿ 1919ರಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ ಜರುಗಿದಾಗ ಕಾವ್ಯಾನಂದರ ನೇತೃತ್ವದಲ್ಲಿ ಬೆಟಗೇರಿಯವರು ಸ್ವಯಂಸೇವಕರಾಗಿ ದುಡಿದರು. ಇದರಿಂದಾಗಿ ಕೆರೂರ ವಾಸುದೇವಾಚಾರ್ಯ, ಹುಯಿಲಗೋಳ ನಾರಾಯಣರಾವ್ ಅವರಂಥ ಹಿರಿಯ ಸಾಹಿತಿ ಸಂಪಾದಕರ ಪರಿಚಯ ಇವರಿಗಾಯಿತಲ್ಲದೆ ಇವರಲ್ಲಿದ್ದ ಕನ್ನಡ ಪ್ರಜ್ಞೆಯೂ ಬೆಳೆಯಿತು. ಜೊತೆಗೆ ಇವರು ಸ್ವಾತಂತ್ರ್ಯ ಸಂಗ್ರಾಮದ ಬಿರುಗಾಳಿಗೂ ಸಿಕ್ಕಿದರು.

ಬೆಟಗೇರಿಯವರು ಬೆಂಗಳೂರಿನ ಆರ್ಯ ವಿದ್ಯಾಶಾಲೆಯಲ್ಲಿ ಶಿಕ್ಷಕರಾಗಿ ಸ್ವಲ್ಪಕಾಲ ಕೆಲಸ ಮಾಡಿದರು. ಅನಂತರ ಬೆಳಗಾಂವಿಯ ರಾಷ್ಟ್ರೀಯ ಶಾಲೆಯಲ್ಲಿಯೂ ಕೆಲವು ದಿನ ಶಿಕ್ಷಕರಾಗಿದ್ದರು. ಬೆಳಗಾಂವಿಯಲ್ಲಿ ಮರಾಠಿ ವಾತಾವರಣ ಬೆಳೆದಿದ್ದ ಆ ಕಾಲದಲ್ಲಿ ಅಲ್ಲಿಯ ಜನರಲ್ಲಿ ಕನ್ನಡ ಪ್ರಜ್ಞೆಯನ್ನು ಮೂಡಿಸಲು ಬಹುವಾಗಿ ಶ್ರಮಿಸಿದರು. ಆ ಸಮಯದಲ್ಲಿಯೇ ಕೃಷ್ಣಶರ್ಮರು 'ಎನಿತು ಇನಿದು ಈ ಕನ್ನಡನುಡಿಯು' ಎಂಬ ಚೆಲುವಾದ ಗೀತೆಯನ್ನು ರಚಿಸಿದರು.

ಬೆಟಗೇರಿಯವರು ಶಿಕ್ಷಕ ವೃತ್ತಿಗಿಂತ ಲೇಖಕ ಸಂಪಾದಕ ವೃತ್ತಿಯನ್ನೇ ಹೆಚ್ಚಾಗಿ ಮೆಚ್ಚಿದರು. ಜಯಂತಿ ಪತ್ರಿಕೆಯನ್ನು 1938ರಲ್ಲಿ ಆರಂಭಿಸಿ ಸುಮಾರು ಕಾಲು ಶತಮಾನ ಕಾಲ ನಡೆಸಿದರು. ಸ್ವಧರ್ಮ, ಜಯ ಕರ್ನಾಟಕ ಈ ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದರು. ಹೀಗೆ ಅವರು ಒಟ್ಟು ಸುಮಾರು ಮೂರು ದಶಕಗಳ ಕಾಲ ಪತ್ರಿಕಾ ಸಂಪಾದಕರಾಗಿ ನಡೆಸಿದ ಬರವಣಿಗೆ 20 ಸಾವಿರ ಪುಟಕ್ಕೂ ಮಿಕ್ಕಿ ನಿಲ್ಲಬಹುದು.



ಸಣ್ಣಕಥೆಗಾರರಾಗಿ ಆನಂದಕಂದರ ಹೆಸರು ಕನ್ನಡ ಸಾಹಿತ್ಯದಲ್ಲಿ ಪ್ರಥಮ ಪಂಕ್ತಿಯ ಕಥೆಗಾರರೊಂದಿಗೆ ನಿಲ್ಲುವಂಥದು. ಇವರು ರಚಿಸಿರುವ 50ಕ್ಕೂ ಮಿಕ್ಕ ಕಥೆಗಳು ಕಳ್ಳರ ಗುರು ಮತ್ತು ಇತರ ಕಥೆಗಳು, ಸಂಸಾರ ಚಿತ್ರಗಳು ಈ ಮುಂತಾದ ಹಲವಾರು ಸಂಕಲನಗಳಲ್ಲಿ ಪ್ರಕಟವಾಗಿವೆ. ಹಳ್ಳಿಯ ಜೀವನ, ಬಡತನದ ಬಾಳು ಇವರ ಸಣ್ಣಕಥೆಗಳ ಮುಖ್ಯವಸ್ತು.

ಕರ್ನಾಟಕ ಸಂಸ್ಕೃತಿಯ ಅಧ್ಯಯನ ಮತ್ತು ಸಂಶೋಧನ ರಂಗದಲ್ಲಿ ಬೆಟಗೇರಿಯವರು ಮಾಡಿರುವ ದುಡಿಮೆ ಗಣ್ಯವಾದುದು. ಸಂಸ್ಕೃತಿ ಪರಂಪರೆ, ಕರ್ನಾಟಕ ಜನಜೀವನ–ಇವು ಇವರ ಸಂಶೋಧನ ಗ್ರಂಥಗಳು ಮತ್ತು ಕರ್ನಾಟಕ ಜನಪದ ಜನಜೀವನದ ಬಗ್ಗೆ ಅನೇಕ ವಿವರಗಳಿವೆ.

ಕಾದಂಬರಿ ಕ್ಷೇತ್ರದಲ್ಲೂ ಬೆಟಗೇರಿಯವರು ಹಿರಿಯ ಕೆಲಸ ಮಾಡಿದ್ದಾರೆ. ರಾಜಯೋಗಿ, ಅಶಾಂತಿಪರ್ವ ಮತ್ತು ಮಲ್ಲಿಕಾರ್ಜುನ–ಇವು ಇವರು ರಚಿಸಿರುವ ಐತಿಹಾಸಿಕ ಕಾದಂಬರಿಗಳು. ಈ ಕಾದಂಬರಿಗಳಲ್ಲಿ ವಿಜಯನಗರದ ಐತಿಹಾಸಿಕ ಸಾಮಗ್ರಿಯನ್ನು ಇವರು ಬಳಸಿಕೊಂಡ ರೀತಿ, ಅದರಿಂದ ಕಥೆಯನ್ನು ರಚಿಸಿ ಪಾತ್ರಗಳನ್ನು ಚಿತ್ರಿಸಿರುವ ಸೊಗಸು ಇವರ ಇತಿಹಾಸ ಪ್ರಜ್ಞೆಗೆ ಸಾಕ್ಷಿಯಾಗಿವೆ. ಸುದರ್ಶನ ಮತ್ತು ಮಗಳ ಮದುವೆ–ಇವು ಇವರ ಎರಡು ಸಾಮಾಜಿಕ ಕಾದಂಬರಿಗಳು.

ಕಾವ್ಯರಚನೆಯಲ್ಲಿ ಆನಂದಕಂದರದು ನವೋದಯ ಮಾರ್ಗ. ಮುದ್ದನ ಮಾತು, ಒಡನಾಡಿ, ವಿರಹಿಣಿ, ಕಾರಹುಣ್ಣಿಮೆ ಮೊದಲಾದವು ಇವರ ಕವನ ಸಂಗ್ರಹಗಳು. ಇವರಿಗೆ ಸಂದಿರುವ ಗೌರವಗಳು ಹಲವು. 1937ರಲ್ಲಿ ಜಮಖಂಡಿಯಲ್ಲಿ ನಡೆದ 22ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು. 1971ರಲ್ಲಿ ನಾಗಮಂಗಲದಲ್ಲಿ ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. 1974ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿತು. ಇವರು 1982ರಲ್ಲಿ ನಿಧನರಾದರು. (ಎನ್.ಕೆ.ಕೆ.)

**ಬೆಟ್ಟದಪುರ:** ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಸಬೆಯಿಂದ ಉತ್ತರಕ್ಕೆ 16 ಕಿಮೀ ದೂರದಲ್ಲಿ ಕೃಷ್ಣರಾಜನಗರ–ಮಡಿಕೇರಿ ಹಾಗೂ ಪಿರಿಯಾಪಟ್ಟಣ ಅರಕಲಗೂಡು ರಸ್ತೆಗಳ ಸಂಧಿಸ್ಥಳದಲ್ಲಿ ಇರುವ ಗ್ರಾಮ. ಜನಸಂಖ್ಯೆ 5,887. 10ನೆಯ ಶತಮಾನದ ಸುಮಾರಿನಲ್ಲಿ ವಿಕ್ರಮರಾಯನೆಂಬ ಜೈನ ಅರಸು ಈ ಪ್ರದೇಶದಲ್ಲಿದ್ದನೆಂದೂ ಅವನ ಮಗ ಚೆಂಗಲರಾಯ ಈ ಊರನ್ನು ನಿರ್ಮಿಸಿದನೆಂದೂ ಪ್ರತೀತಿ. ಇದು ಪಿರಿಯಾಪಟ್ಟಣದ ನಂಜರಾಜನ ಕಾಲದಲ್ಲಿ ಒಂದು ಜಹಗೀರಾಗಿದ್ದು ಮುಂದೆ ಟಿಪ್ಪುವಿನ ರಾಜ್ಯಕ್ಕೆ ಸೇರಿತು. ಈ ಗ್ರಾಮ ಸಂಕೇತಿ ಬ್ರಾಹ್ಮಣ ಸಮುದಾಯದ ಒಂದು ಮುಖ್ಯ ಕೇಂದ್ರ. ಈ ಊರಿನ ಸುತ್ತಮುತ್ತ ಉತ್ತಮ ದರ್ಜೆಯ ತಂಬಾಕು, ತೆಂಗು, ಕಂಗು, ವೀಳ್ಯದೆಲೆಗಳನ್ನು ಬೆಳೆಯುತ್ತಾರೆ.

ಈ ಊರಿನ ಆಗ್ನೇಯ ಭಾಗದಲ್ಲಿರುವ ಬೆಟ್ಟ ಶಂಖಾಕೃತಿಯಲ್ಲಿದ್ದು ಸಮುದ್ರಮಟ್ಟದಿಂದ 4,389 ಎತ್ತರದಲ್ಲಿ ಇದೆ. ಬೆಟ್ಟದ ಮೇಲೆ ಸಿಡಿಲು ಮಲ್ಲಿಕಾರ್ಜುನ, ಅನ್ನದಾನಿ ಮಲ್ಲಿಕಾರ್ಜುನ ಎಂದು ಪ್ರಸಿದ್ಧವಾಗಿರುವ ಶಿವದೇವಾಲಯವಿದೆ. ಇಲ್ಲಿರುವ ಕಂಚಿನ ತಾಂಡವೇಶ್ವರ ವಿಗ್ರಹ ಕಲಾತ್ಮಕವಾದದ್ದು.

ಬೆಟ್ಟದ ಬುಡದಲ್ಲಿ ಮೆಟ್ಟಿಲು ಆರಂಭವಾಗುವ ಸ್ಥಳದಲ್ಲಿ ಎತ್ತರವಾದ ಗೋಪುರವನ್ನು ಹೊಂದಿರುವ ಪ್ರವೇಶದ್ವಾರವಿದೆ. ಇದರ ಉತ್ತರದ ಗೋಡೆಯ ಬಳಿ ಲಿಂಗವನ್ನು ಸುತ್ತಿರುವ ಏಳು ಹೆಡೆಗಳ ನಾಗಶೇಷನ ವಿಗ್ರಹವನ್ನೂ ದಕ್ಷಿಣದ ಗೋಡೆಯ ಬಳಿ ದೊಡ್ಡ ಆಮೆಯನ್ನೂ ಏಕಶಿಲೆಯಲ್ಲಿ ಬಿಡಿಸಲಾಗಿದೆ. ಈ ಪ್ರವೇಶದ್ವಾರದ ಗೋಡೆ ಮತ್ತು ಮೇಲ್ಛಾವಣಿಗಳಲ್ಲಿ ಪುರಾತನ ಕಾಲದ ಚಿತ್ರಗಳಿವೆ. ಪ್ರವೇಶದ್ವಾರದ ಎರಡೂ ಕಡೆಗಳಲ್ಲಿ ಕ್ರಮವಾಗಿ ಮಹಿಷಾಸುರ ಮರ್ದಿನಿ ಮತ್ತು ಭೈರವೇಶ್ವರ ದೇವಾಲಯಗಳಿವೆ. ಗ್ರಾಮದ ಹತ್ತಿರದಲ್ಲಿರುವ ಇನ್ನೊಂದು ಚಿಕ್ಕಬೆಟ್ಟದ ಬಳಿ ವೀರಾಂಜನೇಯನ ಗುಡಿ ಇದೆ. ಅದರ ಸಮೀಪದಲ್ಲಿ ವೀರಭದ್ರದೇವರ ಗುಹೆ, ಕನಕನ ಗವಿ, ಕುಳ್ಳು ದೇವರ ಗವಿ ಇತ್ಯಾದಿ ಸ್ವಾಭಾವಿಕ ಗವಿಗಳಿವೆ. ಶತ್ರುದಾಳಿಗಳಾದಾಗ ಬೆಟ್ಟದಪುರ ಹಾಗೂ ಸುತ್ತಮುತ್ತಲ ಪ್ರದೇಶಗಳ ಜನರು ಇಲ್ಲಿಯ ಗವಿಗಳಲ್ಲಿ ಆಶ್ರಯ ಪಡೆಯುತ್ತಿದ್ದರೆಂದು ಹೇಳಲಾಗುತ್ತದೆ. ಈ ಗ್ರಾಮದಿಂದ 4 ಕಿಮೀ ವಾಯವ್ಯದಲ್ಲಿ ಬೃಹತ್ ಶಿಲಾಸಮಾಧಿಗಳಿವೆ. (ವಿ.ಜಿ.ಕೆ; ಕೆ.ಆರ್.ಆರ್.)

**ಬೆಡಗು**: ಕರ್ನಾಟಕದ ಒಂದು ವಿಶಿಷ್ಟ ಜನಪದ ಸಾಹಿತ್ಯ ಪ್ರಕಾರ. ಈ ರೂಪವನ್ನು ಉತ್ತರ ಕರ್ನಾಟಕದಲ್ಲಿ ಒಡಪು ಎಂಬುದಾಗಿ ಕರೆಯುತ್ತಾರೆ. ಜನಪದರಲ್ಲಿ ಕಲಾವಂತಿಕೆಯಿಂದ ಸೃಷ್ಟಿಗೊಂಡ ಈ ಸಾಹಿತ್ಯ ಗಾದೆಯಂತೆ ಲೋಕಾನುಭವವನ್ನು ಒಳಗೊಂಡಿರದೆ, ಒಗಟಿನಂತೆ ಗೋಪ್ಯವಾಗಿರದೆ, ಜನಪದರ ಬದುಕಿನ ನೋವು–ನಲಿವುಗಳ ಆಳ ಅನುಭವವನ್ನು ಸ್ವಾರಸ್ಯವಾಗಿ ಪ್ರಾಸ, ಲಯ ಮತ್ತು ನೈಜತೆಯ ಮಾತಿನ ಮೋಡಿಯಲ್ಲಿ, ಚಮತ್ಕಾರ ರೀತಿಯಲ್ಲಿ ಅಭಿವ್ಯಕ್ತಗೊಳಿಸಿರುವ ಚುಟುಕ ಸಾಹಿತ್ಯ ಎಂದು ಹೇಳಬಹುದು. ಬೆಡಗು ಎಂಬ ಪದಕ್ಕೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಅರ್ಥವಿದೆ. ಈ ಪದದ ಉಲ್ಲೇಖವನ್ನು ಅನೇಕ ಲಕ್ಷಣ ಗ್ರಂಥಗಳಲ್ಲಿ ಮತ್ತು ವಚನ ಸಾಹಿತ್ಯದಲ್ಲಿ ಕಾಣುತ್ತೇವೆ. ಬೆಡಗು ಎಂಬ ಪದಕ್ಕೆ ಸುಂದರವಾದುದು, ನಿಗೂಢವಾದುದು ಎಂಬ ಅರ್ಥವೂ ಇದೆ. ತಾತ್ತ್ವಿಕ ಚಿಂತನೆಯನ್ನು ಹುರಿಗಟ್ಟಿ ಹೇಳಲು ಅನುಭಾವಿಗಳು ಈ ಪ್ರಕಾರವನ್ನು ಸಶಕ್ತವಾಗಿ ಬಳಸಿಕೊಂಡರು. ಅಲ್ಲಮಪ್ರಭು, ಚನ್ನಬಸವಣ್ಣ ಮುಂತಾದವರು ಅನೇಕ ಬೆಡಗಿನ ವಚನಗಳನ್ನು ಬರೆದಿದ್ದಾರೆ. ಜನಪದದಲ್ಲಿ ಬೆಡಗು ಎಂದಾಗ ಇಂಥ ಗಂಭೀರತೆಗಿಂತ ಹೆಚ್ಚಾಗಿ ಚತುರ ನುಡಿ, ಚಮತ್ಕಾರದ ಮಾತು ಎಂಬ ಅರ್ಥವೇ ಪ್ರಧಾನವಾಗಿರುತ್ತದೆ.

ಮದುವೆಯಲ್ಲಿ ಮುತ್ತೈದೆಯೊಬ್ಬಳು ವಧುವರರಿಗೆ ಆರತಿ ಮಾಡಿ ಕೆಳಗೆ ಇಡುವಾಗ ಸುತ್ತನೆರೆದವರು ಆಕೆಯ ಗಂಡನ ಹೆಸರು ಕೇಳಲು ಮಣೆಯನ್ನು ತೆಗೆಯುತ್ತಾರೆ ಅಥವಾ ಸೆರಗು ಹಿಡಿಯುತ್ತಾರೆ. ಅವಳು ಬರಿಹೆಸರು ಹೇಳಿದರೆ ಸಾಲದು ಬೆಡಗಿನ ಮೇಲೆ ಹೇಳು ಎಂದು ಒತ್ತಾಯಿಸುತ್ತಾರೆ. ಹೆಸರು ಹೇಳುವ ಮುಂಚೆ ವ್ಯಕ್ತಿಯ ಬಗ್ಗೆ ವಿಶೇಷಣಗಳನ್ನು ಸೇರಿಸಿ ವರ್ಣನಾತ್ಮಕವಾಗಿ ತಮ್ಮ ಅನುಭವಗಳನ್ನು ಬೆಡಗಿನಲ್ಲಿ ಹೇಳಿ ಅನಂತರ ಹೆಸರನ್ನು ಹೇಳುತ್ತಾರೆ. ಮುಖ್ಯವಾಗಿ ಮದುವೆಯಲ್ಲಿ, ಮಗುವನ್ನು ತೊಟ್ಟಲಿಗೆ ಹಾಕುವಲ್ಲಿ, ಹೆಣ್ಣು ಮೈನೆರದ ಸಂದರ್ಭದಲ್ಲಿ ಹೆಸರು ಕೇಳುವುದು, ಹೇಳುವುದು ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕಂಡುಬಂದರೆ, ಉತ್ತರ ಕರ್ನಾಟಕದಲ್ಲಿ ಇಂಥ ಮಂಗಲ ಪ್ರಸಂಗಗಳಲ್ಲಿಯೇ ಅಲ್ಲದೆ ಕೆಲವು ಹಬ್ಬಗಳಲ್ಲಿಯೂ ಸಂಪ್ರದಾಯ ರೂಪದಲ್ಲಿ ಬೆಡಗಿನ ಹೆಸರು ಹೇಳುವುದುಂಟು. ಅನುಭವಿಗಳಾದ ವಧೂವರರು ಹೇಳುವ ಬೆಡಗುಗಳು ಅನನುಭವಿಗಳು ಹೇಳುವುದಕ್ಕಿಂತ ಭಿನ್ನವಾಗಿರುತ್ತವೆ.

ಬೆಡಗು ಹೇಳುವ ಸಂಪ್ರದಾಯವನ್ನು ಪ್ರಮುಖವಾಗಿ ಮೂರು ವರ್ಗಗಳಲ್ಲಿ ಕಾಣುತ್ತೇವೆ. ಈ ಮೂರು ವರ್ಗಗಳಲ್ಲಿ ಆಯಾ ಸಂದರ್ಭಕ್ಕೆ ಮತ್ತು ಅನುಭವಕ್ಕೆ ತಕ್ಕ ಹಾಗೆ ಸಾಹಿತ್ಯ ಬಳಕೆಯಾಗುತ್ತದೆ. ಶೃಂಗಾರ, ಹಾಸ್ಯ, ಅಣಕ, ವಿಡಂಬನೆಯಿಂದ ಕೂಡಿರುವ ಅನೇಕ ಬಗೆಯ ಬೆಡಗುಗಳಿವೆ. *

**ಹೆಂಗಸರ ಬೆಡಗು**: ಈ ಗುಂಪಿಗೆ ಬೆಡಗು ಹೇಳುವವರು ಮುತ್ತೈದೆಯರು ಮಾತ್ರ. ಕುಟುಂಬ ಜೀವನದಲ್ಲಿ ಕಂಡುಂಡದ್ದನ್ನು ಭಾವಗೀತೆಯಂತೆ ಹಾಡಿಕೊಂಡ ಸೊಗಸಾದ ಸಾಹಿತ್ಯರೂಪವೊಂದು ಹೀಗಿದೆ:

ವನ್ನನಾರಿ ಮನ ಶೃಂಗಾರಿ! ಅಂಗಾರುಳ್ಳ ಬಂಗಾರ ಗೆಜ್ಜೆ! ಸಾಲು ಮುತ್ತೈದೆಯರು! ಸೆರಗು ಹಿಡಿದು ಕೇಳ್ವಾಗ! ನಾನೇನು ಹೇಳಲಿ! ನಮ್ಮರಾಯರ ಹೆಸರು! ಕಣ್ಣಾಗಿರುವರು ಕಣ್ಣವಾರಗ್ಯಾಗಿರುವರು! ದಸರಿಕಟ್ಟೆ ಮೇಲೆ ಕುತ್ಗಂಡು! ಹಸರು ವಿಳ್ಳೇವು ಹಂಚ್ತಾರೆ.

ಗರತಿಯೊಬ್ಬಳು ತನ್ನ ಗಂಡನ ಬಗ್ಗೆ ಇರುವ ಒಲವು, ಗೌರವ ಹಾಗೂ ಸಮಾಜದಲ್ಲಿ ಆತನಿಗಿರುವ ಸ್ಥಾನಮಾನವೇನು ಎಂಬುದನ್ನು ಸಾಹಿತ್ಯಕವಾಗಿ ಸುಂದರವಾಗಿ ಧ್ವನಿಸಿದ್ದಾಳೆ.

ಉದಾ: ಉದುಕ ಮುದ್ದೆ ಎಂದ್ರೆ ಊದಿಕೊಂಡು ಕುಂತಗೊಳ್ತಾನೆ ಅಂಬ್ಲಿ ಬಾನ ಎಂದ್ರೆ ಹಸಗೊಂಡುಕುಂತಗೊಳ್ತಾನೆ. ಅಕ್ಕಿಬಾನ ಬಾಡುಬಾಳ್ಳೆ ಅಂದ್ರೆ ಅವಸರದಲ್ಲಿ ಎದ್ದು ಬರ್ತಾನೆ ಭೀಮಪ್ಪಮಾವ.

**ಗಂಡಸರ ಬೆಡಗು**: ಗುಂಗುರ ಕೂದ್ಲಿನೋಳು! ಮಂಗನ ಬುದ್ಧಿಯೋಳು! ಅಂಗ್ನ್ಯಾದಾಗಳ ಕಸ! ಬಂಗಾರ್ದಂಗೆ ಹೊಡಿತಾಳೆ! ಅಕ್ಕೇಗಳ ಸಗಣಿ! ಗೋಡೆ ಮ್ಯಾಗಳಿ ತಗಣಿ! ತಿಕ್ಕಿ ನೋಡಂದ್ರೆ! ನೆಕ್ಕಿ ನೋಡ್ತಾಳೆ. ಕಂಕಣ ಕಾಲುಂಗುರ ಕರಿಯಾಕೆ ಬಂದ್ರೆ ಬರಂಗಿಲ್ಲ ಬಾರ್ಕೋಲು ತಗೊಂಡ್ರೆ ನಿಲ್ಲಂಗಿಲ್ಲ ನಿಂಗಿ. ಈ ಬಗೆಯ ಬೆಡಗುಗಳಲ್ಲಿ ಹೆಚ್ಚಾಗಿ ಕಂಡುಬರುವುದು ಪ್ರಾಸ ಮತ್ತು ಹಾಸ್ಯ.

**ವಧೂವರರ ಬೆಡಗು**: ಕೆರೆಯಾಗೆ ಸುರ ಹೊನ್ನೆಮರ! ಸರ್ವರು ಸೆರಗಿಡಿದು ಕೇಳ್ವಾಗ! ನಾನೇನು ಹೇಳಲಿ ನಮ್ಮವರ ಹೆಸರು! ನಮ್ಮತ್ತೆ ಅಡುದಾರೆ ಮುತ್ತಿನಂತ ಪುತ್ರನ ಎಂದು ವಧು ಬೆಡಗು ನುಡಿದರೆ, ಸಂಪಿಗೆ ಹೂವು ಮುಡಕಂಡು! ಕೆಂಪು ಬಣ್ಣ ಆಕ್ಕಂಡು! ಮಿಂಚಿನಂಗೆ ಕುಂತವಳೆ ಎಂದು ವರ ನುಡಿಯುತ್ತಾನೆ. ಇಂಥ ಬೆಡಗಿನಲ್ಲಿ ಹೆಸರನ್ನು ಬೆಡಗಿನ ಮೇಲೆ ಹೇಳು ಎಂದು ಒತ್ತಾಯಿಸಿದಾಗ ಆ ಕ್ಷಣಕ್ಕೆ ಏನಾದರೂ ಹೇಳಿ ಜವಾಬ್ದಾರಿಯನ್ನು ಕಳೆದುಕೊಳ್ಳುವ ಅಂಶ ಒಳಗೊಂಡಿರುವುದು ಕಂಡುಬರುತ್ತದೆ. ಸಂಚಾರಿ ಸ್ವಭಾವದ ಈ ಪ್ರಕಾರ ಊರಿಂದ ಊರಿಗೆ ಕಾಲದಿಂದ ಕಾಲಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತ ನಡೆದಿದೆ: *

**ಬೆಡಸಗಾಂವ**: ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲ್ಲೂಕಿನ ಪ್ರಾಚೀನ ಐತಿಹಾಸಿಕ ಸ್ಥಳ. ಜನಸಂಖ್ಯೆ 554. ಸಿರಸಿ–ಹುಬ್ಬಳ್ಳಿ ಹೆದ್ದಾರಿಯಲ್ಲಿ ಮಾಲ್ಲಿ ಮೂಲಕ ಈ ಊರಿಗೆ ರಸ್ತೆ ಸಂಪರ್ಕವಿದೆ. ಇಲ್ಲಿ ಭವ್ಯವಾದ ಶಿವಲಿಂಗವನ್ನು ಒಳಗೊಂಡ ಬೊಪ್ಪೇಶ್ವರ ದೇವಾಲಯವಿದೆ. ಈ ದೇವಾಲಯದ ಒಳಭಾಗದಲ್ಲಿರುವ 1163ರ ಕಳಚೂರಿ ಬಿಜ್ಜಳದೇವನ ಶಾಸನದಿಂದ ಇದು ಕೀರ್ತಿವರ್ಮ ಮಹಾಮಂಡಲೇಶ್ವರನ ಆಳ್ವಿಕೆಗೆ ಒಳಪಟ್ಟಿತೆಂದೂ ಬೆಡಸಗಾಮೆಯ ಮಹಾಪ್ರಭು ಬೊಪ್ಪಗವುಂಡನ ನೆನಪಿನಲ್ಲಿ ಇದನ್ನು ಕಟ್ಟಿರುವುದರಿಂದ ‘ಬೊಪ್ಪೇಶ್ವರ’ ಎಂದು ಕರೆಯಲಾಗಿದೆಯೆಂದೂ ತಿಳಿದುಬರುತ್ತದೆ. ಕಲ್ಯಾಣ ಚಾಳುಕ್ಯ ಶೈಲಿಯ ಈ ಶಿವಾಲಯ ಗರ್ಭಗೃಹ, ನವರಂಗ ಮತ್ತು ಮುಖ ಮಂಟಪಗಳನ್ನು ಹೊಂದಿದೆ. ದೇವಾಲಯದ ಹಿಂಭಾಗದಲ್ಲಿ ಕೆರೆಯೊಂದು ಇದ್ದು, ಈ ಕೆರೆಯಲ್ಲಿಯೂ ಶಿವಲಿಂಗಗಳಿವೆ. ಊರಿನ ಸಮೀಪದಲ್ಲಿಯೇ ಎತ್ತರವಾದ ಸ್ಥಳದಲ್ಲಿ ಪುರುಷ ಪ್ರಮಾಣದ ವೀರಭದ್ರನ ವಿಗ್ರಹವಿದೆ. ಊರಿನಲ್ಲಿ ಹನುಮಂತನ ದೇವಾಲಯವೂ ಇದೆ. ಅದರ ಸಮೀಪ ಕೆಲವು ವೀರಗಲ್ಲುಗಳಿವೆ. ರಸಬಾವಿಯೆಂದು ಕರೆಯಲಾಗುವ ಕಲ್ಲಿನಿಂದ ಮುಚ್ಚಿದ ಬಾವಿಯೊಂದಿದೆ. ಬೊಪ್ಪೇಶ್ವರ ದೇವಾಲಯದಷ್ಟೇ ದೊಡ್ಡದಾದ ತರುವಾಯದ ಕಾಲದ ಚಾಳುಕ್ಯರ ಇನ್ನೊಂದು ದೇವಾಲಯ ಇಲ್ಲಿದ್ದು ಅದನ್ನು ಪುರುದೇವರಗುಡಿ ಎಂದು ಕರೆಯಲಾಗಿದೆ ಇದರಲ್ಲಿ ಸಪ್ತಮಾತೃಕೆಯರು, ಮಹಿಷಾಸುರಮರ್ದಿನಿ, ಗಣಪತಿ, ಕಾರ್ತಿಕೇಯ ವೀರಭದ್ರ ಮತ್ತು ವಿಷ್ಣು ವಿಗ್ರಹಗಳಿವೆ. ಈ ಸ್ಥಳ ತರುವಾಯದ ಚಾಳುಕ್ಯ ಯುಗದಲ್ಲಿ ಧಾರ್ಮಿಕ ಮತ್ತು ರಾಜಕೀಯ ಕೇಂದ್ರಗಳಲ್ಲೊಂದಾಗಿದ್ದಿತೆಂದು ಹೇಳಬಹುದು. ಇಲ್ಲಿ ಶಿವರಾತ್ರಿಯಲ್ಲಿ ಜಾತ್ರೆ ನಡೆಯುತ್ತದೆ. (ಆರ್.ಪಿ.ಎಚ್.)

**ಬೆದಂಡೆ**: ಕನ್ನಡ ಭಾಷೆಯಲ್ಲಿ ಹಿಂದೆ ಪ್ರಯೋಗದಲ್ಲಿದ್ದ ದೇಶೀಕಾವ್ಯ ಪದ್ಧತಿ, ಪ್ರಾಚೀನ ಕನ್ನಡ ಕಾವ್ಯದ ಒಂದು ಬಗೆ. ನಾಗವರ್ಮನ ಕಾವ್ಯಾವಲೋಕನ, ನೃಪತುಂಗನ ಕವಿರಾಜಮಾರ್ಗ, ಕೇಶಿರಾಜನ ಶಬ್ದಮಣಿದರ್ಪಣ ಗ್ರಂಥದಲ್ಲಿ ಬೆದಂಡೆ ಕುರಿತ ಪ್ರಸ್ತಾಪವಿದೆ. ಆ ಎಲ್ಲ ಉಲ್ಲೇಖಗಳನ್ನು ಸಮಾಲೋಚಿಸಿದಲ್ಲಿ ಹಾಡಿನ ರೂಪದ ಅಲಂಕಾರ ರಸಭರಿತವಾದ ಯಾವುದಾದರೊಂದು ಕಥಾನಕವನ್ನು ಒಳಗೊಂಡ ಕನ್ನಡದ ಕಂದಪದ್ಯ, ಮಾತ್ರಾವೃತ್ತಗಳಿಂದ ಕೂಡಿದ ಖಂಡಕಾವ್ಯದಂಥ ಹಾಡುಗಬ್ಬವೇ ಬೆದಂಡೆ ಎಂದು ತಿಳಿದುಬರುತ್ತದೆ. ಇಂದು ಅಂಥ ಬೆದಂಡೆಗಬ್ಬಗಳು ಯಾವುವೂ ಉಪಲಬ್ಧವಿಲ್ಲ. ಹೀಗಾಗಿ ಕೇವಲ ಈಚಿನ ಆಕರಗಳಲ್ಲಿ ದೊರಕುವ ಉಲ್ಲೇಖಗಳನ್ನು ಆಶ್ರಯಿಸಿ ಊಹಿಸಬೇಕಾಗಿದೆ.

ಸಂದಿಸಿರೆ ಕಂದಮುಂಪೆಱ
ತೊಂದಱಿಕೆಯ ವೃತ್ತಜಾತಿಯ ಪದಮವುತ
ಳ್ತೊಂದಿರೆ ಪನ್ನೆರಡುವರಂ
ಸಂದುದು ಮೆಲ್ಪಾಡೆನಿಕ್ಕುಮದು ಕನ್ನಡದೊಳ್

ಪದನಯ್ದುಮಿರ್ಪತಯ್ದುಂ
ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್
ಪುದಿದೊದವಿ ನೆಗೞ್ದೊಡಂತದು
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ

ಪಾಡುಗಳಿಂದಂ ತಱಿಸಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರದಂದಲ್ ದಲ್ಮೆ
ಲ್ಪಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ

(ಕಾವ್ಯಾವಲೋಕನ)

ಕಂದವೂ ಬೇರೊಂದು ವೃತ್ತಜಾತಿಯೂ ಸೇರಿಕೊಂಡಿರುವುದು ಪದ, ಪದ್ಯ ೯೫೨–೫೪, ಸೂತ್ರ ೨೪೧–೪೨. ಆ ಪದ, ಹನ್ನೆರಡು

ಪರ್ಯಂತ ಸೇರಿಕೊಂಡಿರುವ ಕೃತಿ ಮೇಲ್ಪಾಡು. ಹದಿನೈದರಿಂದ ಇಪ್ಪತ್ತೈದರವರೆಗೂ ಪದಗಳು ಸೇರಿಕೊಂಡಿದ್ದು ರಸಾಲಂಕಾರಭರಿತವಾಗಿರುವುದು ಪಾಡುಗಬ್ಬ-ಆ ಪಾಡುಗಬ್ಬದಿಂದ ಮೇಲ್ಪಾಡೂ ಬೆದಂಡೆಗಬ್ಬವೂ ಆಗುವುದೆಂದು ನಾಗವರ್ಮ ನಿರೂಪಿಸುತ್ತಾನೆ. ಪದ, ಮೇಲ್ಪಾಡುಗಳಿಗೆ ಕಂದ ವೃತ್ತಜಾತಿಗಳ ಸಂಖ್ಯೆ ಮಾತ್ರ ಹೇಳಿ, ಆ ಮೇಲಿನ ಪಾಡು ಎಂಬುದಕ್ಕೆ ಅವು ಮಾತ್ರವಲ್ಲದೆ ರಸಾಲಂಕಾರಗಳಲ್ಲೂ ಕೂಡಿರುವಿಕೆಯನ್ನು ಲಕ್ಷಣದಲ್ಲಿ ನಿರೂಪಿಸಿದ್ದರಿಂದ ಪಾಡು ಯಾವುದಾದರೂ ಕಥೆಗೆ ಸಂಬಂಧಿಸಿದ ಕಾವ್ಯ ಪ್ರಕಾರವೆಂದು ತಿಳಿಯಬೇಕಾಗಿದೆ. ಅದೇ ಬೆಳೆದು ಪಾಡುಗಬ್ಬವಾಗುವುದೆಂದೂ ಅದರಿಂದ ಮೇಲ್ಪಾಡೂ ಬೆದಂಡೆಯೂ ಆಗುವುದೆಂದೂ ಹೇಳಿದ ಕಾರಣ ಬೆದಂಡೆ ಕಥಾರೂಪದ ಖಂಡಕಾವ್ಯ ಮಾದರಿಯ ಒಂದು ಕಾವ್ಯ ಪ್ರಕಾರವೆಂದು ತಿಳಿಯಲು ಆಸ್ಪದವಾಗಿದೆ.

ನಾಗವರ್ಮ ಬೆದಂಡೆಗಬ್ಬದ ಸ್ವರೂಪಲಕ್ಷಣಗಳನ್ನು ಸ್ಪಷ್ಟವಾಗಿ ತಿಳಿಸದೆ ಇದ್ದರೂ ಅವನಿಗಿಂತಲೂ ಪ್ರಾಚೀನನಾದ ಕವಿರಾಜಮಾರ್ಗಕಾರ ಕಂದವೂ ವೃತ್ತವೂ ಒಂದೊಂದಾಗಿಯೂ ಇವುಗಳ ನಡುವೆ ಜಾತಿಪದ್ಯಗಳೂ ಸುಂದರವಾಗಿ ಸೇರಿ ಮನೋಹರವಾಗಿದ್ದರೆ ಬೆದಂಡೆಗಬ್ಬವೆಂದೂ ನಿರೂಪಿಸುತ್ತಾನೆ. ಕನ್ನಡ ಛಂದಸ್ಸುಗಳಾದದ್ದುಕಂದ ಮಾತ್ರಾವೃತ್ತಗಳನ್ನು ಒಳಗೊಂಡಿರಬೇಕೆಂಬ ನಾಗವರ್ಮನ ನಿರೂಪಕ್ಕೆ ಈ ಹೇಳಿಕೆ ಹೊಂದಿಕೆಯಾಗಿಯೇ ಇದೆ; ಅಲ್ಲದೆ ಮನೋಹರವಾಗಿರಬೇಕೆಂಬುದರಿಂದ ರಸಾಲಂಕಾರಭರಿತವಾಗಿರತಕ್ಕದ್ದು ಎಂದೂ ಅರ್ಥಮಾಡಬಹುದಾಗಿದೆ.

ಕವಿರಾಜಮಾರ್ಗಕಾರ ಹೇಳುವುದನ್ನು ಗಮನಿಸಿದಾಗ ಬೆದಂಡೆಯೆಂಬ ಕಾವ್ಯ ಪದ್ಧತಿ ಆ ಕಾಲದಲ್ಲಿ ಪ್ರಖ್ಯಾತವಾಗಿತ್ತೆಂದು ತಿಳಿಯಬಹುದು. ಶಬ್ದಮಣಿದರ್ಪಣದ ಶಬ್ದಾರ್ಥ ನಿರ್ಣಯ ಪ್ರಕರಣದಲ್ಲಿ ಬೆದಂಡೆಗೆ ವೈದಂಡಿಕಂ ಎಂಬ ಶಬ್ದಾರ್ಥಕೊಟ್ಟಿದೆ. ಕಿಟ್ಟೆಲ್ ನಿಘಂಟುಕಾರ ಬೆದಂಡೆ ವೈದಂಡಿಕದತದ್ಭವವೆಂದು ತಿಳಿಸುತ್ತಾನೆ. ದಂಡಿಕಾ, ದಂಡಿಗೆ ಎನ್ನುವುದು ವೀಣೆಯ ದಂಡಕ್ಕೆ, ವಿಗತದಂಡ, ದಂಡ ಇಲ್ಲದ್ದು ಎಂದರೆ ವೀಣೆಯ ಹಿಮ್ಮೇಳವಿಲ್ಲದೆ, ಇತರ ದೇಸೀವಾದ್ಯಗಳಿಂದ ಕೂಡಿ ಹಾಡುವ ಒಂದು ಹಾಡುಗಬ್ಬದ ಪ್ರಭೇದವೇ ಬೆದಂಡೆ ಎಂದು ಊಹಿಸಬಹುದು. ಆದರೂ ಈ ಕಾವ್ಯದ ಒಂದೆರಡಾದರೂ ಮಾದರಿಗಳು ದೊರಕುವ ತನಕವೂ ಮೇಲಿನ ಲಕ್ಷಣಗಳನ್ನು ನಿರ್ಣಯವೆಂಬಂತೆ ಭಾವಿಸಲಾಗದು. *

**ಬೆನಗಲ್ ನರಸಿಂಗರಾವ್:** 1887-1953. ಭಾರತದ ಪ್ರತಿಭಾವಂತ ನ್ಯಾಯವಾದಿ ಹಾಗೂ ರಾಯಭಾರಿಗಳಲ್ಲಿ ಒಬ್ಬರು. ಭಾರತ ಸಂವಿಧಾನದ ಶಿಲ್ಪಿಗಳೂ ಆದ ಇವರು ಬಿ.ಎನ್. ರಾವ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಚಿತ್ರಾಪುರ ಸಾರಸ್ವತ ಕುಟುಂಬಗಳಲ್ಲಿ ಒಂದಾದ ಬೆನಗಲ್ ಮನೆತನದಲ್ಲಿ 1887 ಫೆಬ್ರವರಿ 26ರಂದು ಜನಿಸಿದರು. ಸ್ವಾತಂತ್ರ್ಯಪೂರ್ವದ ಮದರಾಸು ಪ್ರೆಸಿಡೆನ್ಸಿಯ ಸರ್ಕಾರಿ ವೈದ್ಯರಾದ ರಾಘವೇಂದ್ರರಾವ್ ಇವರ ತಂದೆ. ರಾಧಾಬಾಯಿ ತಾಯಿ. 1905ರಲ್ಲಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಥಮ ದರ್ಜೆಯಲ್ಲಿ ಬಿ.ಎ. ಪದವಿ ಪಡೆದ ಅನಂತರ ಭಾರತ ಸರ್ಕಾರದ ಶಿಷ್ಯವೇತನ ಪಡೆದು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿ ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಿದರು. ಐ.ಸಿ.ಎಸ್.ಗೆ ಆಯ್ಕೆಗೊಂಡು 1910ರಲ್ಲಿ ಭಾರತಕ್ಕೆ ಮರಳಿ ಬಂಗಾಲದಲ್ಲಿ 14 ವರ್ಷಗಳ ಕಾಲ ಉನ್ನತ ಅಧಿಕಾರಿಯಾಗಿ, ನ್ಯಾಯಾಧೀಶರಾಗಿ ಕೆಲಸ ಮಾಡಿದರು. ನಾಡಿನ ಪೌರ ಹಾಗೂ ಅಪರಾಧ ಕಾನೂನುಗಳೆಲ್ಲವನ್ನು ಅಭ್ಯಾಸ ಮಾಡಿದರು. ಮುರ್ಷಿದಾಬಾದ್‌ನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾಗಿಯೂ (1919-20) ಸಿಲ್ಹಟ್ ಹಾಗೂ ಕಚಾರ್‌ಗಳಲ್ಲೂ ಜಿಲ್ಲಾ ಸತ್ರ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು (1920-25). ಇವರ ಕಾನೂನು ಜ್ಞಾನವನ್ನು ಗುರುತಿಸಿದ ಅಸ್ಸಾಂ ಸರ್ಕಾರ ಪ್ರಾದೇಶಿಕ ಲೆಜಿಸ್ಲೇಟಿವ್ ಕೌನ್ಸಿಲ್‌ನ ಕಾರ್ಯದರ್ಶಿ ಹಾಗೂ ಸರ್ಕಾರದ ಕಾನೂನು ಸಲಹೆಗಾರರಾಗಲು ಇವರನ್ನು ಆಹ್ವಾನಿಸಿತು (1925). 1933 ರವರೆಗೆ ಇವರು ಈ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರು. ಸೈಮನ್ ಆಯೋಗ ಬಂದಾಗ ಸರ್ಕಾರದ ಪರವಾಗಿ ಇವರು ರಚಿಸಿದ ಬಿನ್ನವತ್ತಳೆ ಎಷ್ಟು ಪ್ರಭಾವಪೂರ್ಣವಾಗಿತ್ತೆಂದರೆ ಅಸ್ಸಾಂ ಸರ್ಕಾರ ತನ್ನ ಪರವಾಗಿ ವಾದಿಸಲು ಲಂಡನ್ನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿಗೆ ಇವರನ್ನೇ ನಿಯೋಜಿಸಿ ಕಳುಹಿಸಿತು (1933). ಭಾರತ ಸರ್ಕಾರದ ಶಾಸನ ವಿಭಾಗದಲ್ಲಿ ಕಾರ್ಯದರ್ಶಿಯಾಗಿಯೂ (1934-35) ಸ್ವಲ್ಪ ಕಾಲ ಕಲ್ಕತ್ತ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯೂ ಆಗಿದ್ದರು

(1935). 1935ರಲ್ಲಿ ಹೊಸ ಸಂವಿಧಾನ ಜಾರಿಗೆ ಬಂದದ್ದರಿಂದ ಆಗ ಅಸ್ತಿತ್ವದಲ್ಲಿದ್ದ ಕೇಂದ್ರ ಹಾಗೂ ಪ್ರಾದೇಶಿಕ ಶಾಸನಗಳೆಲ್ಲವನ್ನೂ ಪುನಃ ಪರಿಶೀಲಿಸಬೇಕಾಗಿದ್ದು ಇದಕ್ಕೆ ಅಗಾಧ ಪ್ರತಿಭೆ ಹಾಗೂ ಅನುಭವ ಅಗತ್ಯವಾಗಿತ್ತು. ಈ ಕೆಲಸವನ್ನು ಒಪ್ಪಿಕೊಂಡು ಹದಿನೆಂಟು ತಿಂಗಳಲ್ಲಿ ಮುಗಿಸಿಕೊಟ್ಟರು. 1938ರಲ್ಲಿ ಸುಧಾರಣಾ ಆಯೋಗಗಳಲ್ಲಿ ಕೆಲಸ ಮಾಡಿದರು. ಜನವರಿ 1939 ರಲ್ಲಿ ಮತ್ತೆ ಕಲ್ಕತ್ತಾ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಆಗಿ ಮುಂದುವರಿದರು. ಜಿ.ಐ.ಪಿ. ರೈಲ್ವೆ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಂಗ ವಿಚಾರಣಾ ಸಮಿತಿಗೆ ಇವರು ಅಧ್ಯಕ್ಷರಾಗಿದ್ದರು (1940). ಅನಂತರ ಹಿಂದು ಕಾನೂನನ್ನು ಪರಿಷ್ಕರಿಸಲು ಕೇಂದ್ರ ಸರ್ಕಾರ ರಚಿಸಿದ ಸಮಿತಿಗೆ ಇವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು(1941). ಇವರು 1941-42ರ ಸಿಂಧು ಆಯೋಗದಲ್ಲಿಯೂ ಸೇವೆಸಲ್ಲಿಸಿದರು. ಭಾರತೀಯ ಸಿವಿಲ್ ಸೇವೆಯಿಂದ 1941ರ ಫೆಬ್ರವರಿಯಲ್ಲಿ ನಿಯಮಾನುಗುಣವಾಗಿ ನಿವೃತ್ತಿಹೊಂದಿದರೂ ಇವರ ಕಾರ್ಯಶೀಲತೆಗೆ ತಡೆಯಾಗಲಿಲ್ಲ. ಅನಂತರ ಜಮ್ಮು ಮತ್ತು ಕಾಶ್ಮೀರದ ಪ್ರಧಾನ ಮಂತ್ರಿಯಾಗಿ, ಆ ಪ್ರದೇಶದ ಸಂದಿಗ್ಧ ಕಾಲದಲ್ಲಿಯೂ ದಕ್ಷತೆಯಿಂದ ಸೇವೆ ಸಲ್ಲಿಸಿ (18 ತಿಂಗಳು) ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು(1944). 1946ರ ಜುಲೈಯಲ್ಲಿ ಭಾರತ ಸಂವಿಧಾನ ರಚನಾಸಭೆಗೆ ಸಂವಿಧಾನ ಸಲಹೆಗಾರರಾಗಿ ನೇಮಿತರಾಗಿ ಹೊಸ ಸಂವಿಧಾನದ ರೂಪರೇಷೆಗಳು ಎಂಬ ಮೌಲಿಕ ಲೇಖನವನ್ನು ಸಿದ್ಧಪಡಿಸಿದರು. ಸಂವಿಧಾನದ ಕರಡು ಶೀಘ್ರದಲ್ಲಿ ಸಿದ್ಧವಾಗಲು ಇವರ ಕುಶಲ ಹಾಗೂ ದಕ್ಷ ನಿರ್ವಹಣೆಯೂ ಸಹಾಯಕವಾಯಿತು. ಇವರು ಬರ್ಮಾ ದೇಶದ ಸಂವಿಧಾನದ ರಚನೆಯ ಚೌಕಟ್ಟನ್ನೂ ರೂಪಿಸಿದರು. ವಿಶ್ವಸಂಸ್ಥೆಯ ಕಾನೂನು ಆಯೋಗಕ್ಕೆ ಭಾರತದ ಖಾಯಂ ಪ್ರತಿನಿಧಿಗಳಾಗಿ ಆಯ್ಕೆಯಾದರು. ವಿಶ್ವಸಂಸ್ಥೆಯ ಭದ್ರತಾಸಮಿತಿಗೆ ಭಾರತ ಆಯ್ಕೆಯಾಗಿದ್ದಾಗ ಅಲ್ಲಿ ರಾಯಭಾರಿಯಾಗಿದ್ದ ಇವರು ಕಾಶ್ಮೀರ ಸಮಸ್ಯೆ, ಪರಮಾಣು, ಆಫ್ರಿಕದಲ್ಲಿನ ಇಟಾಲಿಯನ್ ವಸಾಹತು, ಕೊರಿಯ, ಚೀನ ಮುಂತಾದ ವಿಭಿನ್ನ ವಿಷಯಗಳ ಬಗ್ಗೆ ಭಾರತದ ವಕ್ತಾರರಾಗಿ ವಾದ ಮಂಡಿಸಿದರು. ಇವರು ಹೇಗ್‌ನ ಅಂತಾ ರಾಷ್ಟ್ರೀಯ ನ್ಯಾಯಾಲಯದ

ನ್ಯಾಯಾಧೀಶರಾಗಿ ಆಯ್ಕೆಯಾದರು (1951). ಈ ಪದವಿಯಲ್ಲಿರುವಾಗಲೇ 1953 ನವೆಂಬರ್ 30ರಂದು ನಿಧನರಾದರು.

ಕಾನೂನು ಕ್ಷೇತ್ರದಲ್ಲಿ ಅಸಾಧಾರಣ ಪರಿಶ್ರಮ ಪಡೆದಿದ್ದ ಇವರು ಇತರ ಅನೇಕ ವಿಷಯಗಳಲ್ಲಿಯೂ ಅಪಾರ ಆಸಕ್ತಿ ಇತ್ತು. ವೈದ್ಯ ವಿಜ್ಞಾನ, ಶಸ್ತ್ರಚಿಕಿತ್ಸೆ ಮತ್ತು ಇತರ ವಿಜ್ಞಾನಶಾಖೆಗಳಲ್ಲಿ ಸಂಶೋಧನೆಗಳನ್ನು ನಡೆಸುವ ಸಲುವಾಗಿ ಕೇಂದ್ರ ಸಂಶೋಧನ ಸಂಸ್ಥೆಯೊಂದರ ಯೋಜನೆಯನ್ನು ಇವರು ಸಿದ್ಧಪಡಿಸಿ ಅದಕ್ಕೆ ಬೇಕಾದ ಪೂರ್ವಭಾವಿ ಸಿದ್ಧತೆಗಳನ್ನೂ ನಡೆಸಿದ್ದರು (1939). ಎರಡನೆಯ ಮಹಾಯುದ್ಧಾನಂತರ ನೇತಾಜಿ ಸುಭಾಷ್‌ಚಂದ್ರ ಬೋಸರ ದಳವನ್ನು ಸೇರಿದ್ದ ಭಾರತೀಯ ಸೈನ್ಯದ ಮೂವರು ಅಧಿಕಾರಿಗಳ ವಿರುದ್ಧ ಹೂಡಿದ ಭಾರತೀಯ ರಾಷ್ಟ್ರೀಯ ಸೈನ್ಯ ಮೊಕದ್ದಮೆಯಲ್ಲಿ ಇವರು ಆಪಾದಿತರ ಪರವಾಗಿ ನಡೆದ ವಕಾಲತ್ತಿನ ಬೆನ್ನೆಲುಬಾಗಿದ್ದರು.

ಇವರಿಗೆ ಮೂವರು ಸಹೋದರರು. ಅವರೂ ಸಾಮಾಜಿಕ ರಂಗದಲ್ಲಿ ಪ್ರಸಿದ್ಧರಾಗಿದ್ದರು. ಹಿರಿಯ ಸೋದರ ಬಿ.ಸಂಜೀವರಾವ್ ಖ್ಯಾತ ಶಿಕ್ಷಣತಜ್ಞ. ಕಿರಿಯ ಸೋದರರಲ್ಲೊಬ್ಬರು ಬಿ.ರಾಮರಾವ್ ಅವರು ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದರು. ಖ್ಯಾತ ಪತ್ರಿಕೋದ್ಯಮಿ ಹಾಗೂ ಗ್ರಂಥಕರ್ತರಾಗಿದ್ದ ಬಿ.ಶಿವರಾವ್ ಇನ್ನೊಬ್ಬ ಸೋದರ. ಸಹೋದರ ಶಿವರಾವ್ ಅವರು ನರಸಿಂಗರಾಯರ ಪತ್ರಗಳನ್ನು ಇಂಡಿಯಾಸ್ ಕಾನ್‌ಸ್ಟಿಟ್ಯೂಷನ್ ಇನ್ ದಿ ಮೇಕಿಂಗ್ ಎಂಬ ಹೆಸರಿನಲ್ಲಿ ಸಂಪಾದಿಸಿದ್ದಾರೆ. **(ಎಸ್.ಎಸ್.ಎಂಯು)**

**ಬೆನಗಲ್ ರಾಮರಾವ್:** 1876-1943. ಕನ್ನಡ ನವೋದಯ ಕಾಲದಲ್ಲಿ ಕನ್ನಡ ಭಾಷೆ-ಸಾಹಿತ್ಯಗಳ ಅಭಿವೃದ್ಧಿಗಾಗಿ, ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರು. ಕೈಫಿಯತ್‌ಗಳನ್ನು ಹೆಚ್ಚಾಗಿ ಬರೆದದ್ದರಿಂದ ಕೈಫಿಯತ್ತು ರಾಮರಾಯರು ಎಂದೂ ಜನಪ್ರಿಯರಾಗಿದ್ದರು. ಇವರು 1876 ಏಪ್ರಿಲ್ 3ರಂದು ಮಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಮಂಜುನಾಥಯ್ಯ ವಕೀಲರಾಗಿದ್ದರು. ಇವರ ಪ್ರಾಥಮಿಕ ಶಿಕ್ಷಣ ಮುಲ್ಕಿ, ಮಂಗಳೂರು ಮತ್ತು ಪುತ್ತೂರುಗಳಲ್ಲಿ ನಡೆಯಿತು. ಮಂಗಳೂರಿನ ಸರ್ಕಾರಿ ಕಾಲೇಜು ಮತ್ತು ಮದರಾಸು ಪ್ರೆಸಿಡೆನ್ಸಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಗಳಿಸಿದರು (1896). ಮೊದಲಿನಿಂದಲೂ ಕನ್ನಡದ ಬಗ್ಗೆ ಒಲವನ್ನು ಬೆಳೆಸಿಕೊಂಡಿದ್ದ ಇವರು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ಮೂರು ವರ್ಷ ಕಾಲ (1897-1900) ಕೆಲಸ ಮಾಡಿದರು. ಆ ಕೆಲಸದಲ್ಲಿ ಇದ್ದಾಗಲೇ ತೆಲುಗು ಮತ್ತು ಕನ್ನಡವನ್ನು ಪ್ರಮುಖ ವಿಷಯಗಳನ್ನಾಗಿ ಆರಿಸಿಕೊಂಡು ಅಧ್ಯಯನ ಮಾಡಿ ಮದರಾಸು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಆಮೇಲೆ ಮೈಸೂರು ನಾರ್ಮಲ್ ಸ್ಕೂಲ್‌ನಲ್ಲಿ ಕನ್ನಡ ಅಧ್ಯಾಪಕರಾಗಿ ಎರಡು ವರ್ಷ ದುಡಿದರು. ಅನಂತರ ಮುಂಬಯಿ ಸರ್ಕಾರದ ಭಾಷಾಂತರ ಶಾಖೆಯಲ್ಲಿ ಭಾಷಾಂತರಕಾರರಾಗಿ ಸುಮಾರು ಎಂಟು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು (1902). ಆ ಹುದ್ದೆಯಲ್ಲಿದ್ದಾಗಲೇ ಇವರು ಮುಂಬಯಿ ವಿಶ್ವವಿದ್ಯಾಲಯದ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ತೇರ್ಗಡೆಯಾದರು (1908). 1910ರಲ್ಲಿ ಮದರಾಸು ಸರ್ಕಾರದ ಭಾಷಾಂತರ ಶಾಖೆಯನ್ನು ಸೇರಿ 1917ರಲ್ಲಿ ಆ ಶಾಖೆಯ ಮುಖ್ಯಸ್ಥರಾದರು. ನಿವೃತ್ತಿಯವರೆಗೂ ಅದೇ ಹುದ್ದೆಯಲ್ಲಿದ್ದರು.

ರಾಮರಾಯರದು ಬಹುಮುಖ ಪ್ರತಿಭೆ. ಕನ್ನಡದ ಜೊತೆಗೆ ತೆಲುಗು, ಸಂಸ್ಕೃತ, ಬಂಗಾಲಿ, ಮರಾಠಿ ಭಾಷೆಗಳ ಪರಿಚಯ ಪಡೆದಿದ್ದ ಇವರು ಆ ಭಾಷೆಗಳಿಂದ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ತೆಲುಗಿನಿಂದ ಕಲಹಪ್ರಿಯಾ ಎಂಬ ನಾಟಕ, ಸತ್ಯರಾಜನ ಪೂರ್ವದೇಶದ ಯಾತ್ರೆಗಳು ಎಂಬ ಕಾದಂಬರಿ, ಮರಾಠಿಯಿಂದ ರಮಾ ಮಾಧವ ಎಂಬ ಕಾದಂಬರಿ, ಸಂಸ್ಕೃತದಿಂದ ದೂತಾಂಗ ಎಂಬ ನಾಟಕ, ಬಂಗಾಲಿಯಿಂದ ಕೃಷ್ಣಕುಮಾರಿ ಎಂಬ ಕಾದಂಬರಿ-ಈ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಇವರ ಸ್ವತಂತ್ರ ಕೃತಿಗಳಿವು; ಇರಾವತಿ, ಚಿಕ್ಕ ಕತೆಗಳು, ಮಹನೀಯರ ಚರಿತ್ರೆ ಮಾಲೆ. ಇತಿಹಾಸದಲ್ಲೂ ಆಸಕ್ತಿ ವಹಿಸಿದ್ದ ಇವರು ತಂಜಾವೂರು ಮನೆತನದ ಕೈಫಿಯತ್ತು, ಹಳೆಯಬೀಡು

ಕೈಫಿಯತ್ತು, ಹೊಳೆಹೊನ್ನೂರು ಕೈಫಿಯತ್ತು ಮುಂತಾದ ಅನೇಕ ಕೈಫಿಯತ್ತುಗಳನ್ನು ರಚಿಸಿದ್ದಾರೆ. ಪಾನ್ಯಂ ಸುಂದರಶಾಸ್ತ್ರಿಯವರ ಜೊತೆ ಸೇರಿ ಇವರು ಸಿದ್ಧಪಡಿಸಿದ ಪುರಾಣನಾಮ ಚೂಡಾಮಣಿ (1941) ಒಂದು ಉತ್ಕೃಷ್ಟ ಆಕರಗ್ರಂಥ.

ಪತ್ರಿಕೋದ್ಯಮ ರಾಮರಾಯರ ಆಸಕ್ತಿಯ ಮತ್ತೊಂದು ಕ್ಷೇತ್ರ. ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಸುವಾಸಿನಿ ಮಾಸಪತ್ರಿಕೆಗೆ ಎರಡು ವರ್ಷ (1900-02) ಇವರು ಸಂಪಾದಕರಾಗಿದ್ದರು. ಧಾರವಾಡದಿಂದ ಪ್ರಕಟವಾಗುತ್ತಿದ್ದ ವಾಗ್ಭೂಷಣ ಪತ್ರಿಕೆಯ ಸಹಸಂಪಾದಕರಾಗಿಯೂ ಸ್ವಲ್ಪಕಾಲ ಕೆಲಸ ಮಾಡಿದರು.

ಮದರಾಸು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಮತ್ತು ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ಇವರು ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾಗಿದ್ದ ಇವರು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಇತರ ಕನ್ನಡ ಸಂಘ ಸಂಸ್ಥೆಗಳಲ್ಲೂ ದುಡಿದರು. ಬೆಳಗಾಂವಿಯಲ್ಲಿ 1925ರಲ್ಲಿ ನಡೆದ ಹನ್ನೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇವರು 1943 ಮೇ 8ರಂದು ನಿಧನರಾದರು. **(ಬಿ.ವಿ.ವೈ.)**

**ಬೆನಗಲ್ ಶಿವರಾವ್:** 1891-1975. ಪತ್ರಿಕೋದ್ಯಮಿ ಮತ್ತು ಗ್ರಂಥಕರ್ತ. 1891 ಫೆಬ್ರವರಿ 26ರಂದು ಮಂಗಳೂರಿನಲ್ಲಿ ಜನಿಸಿದರು. ಇವರ ತಂದೆ ರಾಘವೇಂದ್ರರಾವ್. ಶಿವರಾವ್ ಅವರು ಅಲಹಾಬಾದ್‌ನಲ್ಲಿ ಎಂ.ಎ. ಪದವಿ ಪಡೆದರು. ಅನಿಬೆಸೆಂಟರ ಪ್ರಭಾವಕ್ಕೆ ಒಳಗಾಗಿ ಪತ್ರಿಕೋದ್ಯಮಕ್ಕೆ ಬಂದ ಇವರು ನ್ಯೂ ಇಂಡಿಯಾ ಪತ್ರಿಕೆಯ ಸಹಸಂಪಾದಕರಾದರು. ಮಹಾತ್ಮಾ ಗಾಂಧಿಯವರ ಯಂಗ್ ಇಂಡಿಯಾ ಪತ್ರಿಕಾಲಯದಲ್ಲಿ ಸ್ವಲ್ಪಕಾಲ ಕೆಲಸ ಮಾಡಿದರು. ಸುಮಾರು ಹದಿನೈದು ವರ್ಷಗಳ ಕಾಲ ತಮ್ಮ ಬಿಡುವಿನ ವೇಳೆಯನ್ನು ಕಾರ್ಮಿಕ ಸಂಘಟನೆಗಾಗಿ ವಿನಿಯೋಗಿಸಿದರು. ಇವರು 1931ರಲ್ಲಿ ಲಂಡನ್‌ನಲ್ಲಿ ನಡೆದ ಮೊದಲನೆಯ ಚಕ್ರಗೋಷ್ಠಿಯಲ್ಲಿ ಯಂಗ್ ಇಂಡಿಯಾ ಪತ್ರಿಕೆಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಶಿವರಾವ್ ಅವರು ಮದರಾಸಿನಲ್ಲಿದ್ದ ಸಮಯದಲ್ಲಿ ಸ್ವದೇಶಿಭಾವನೆಯನ್ನು ಜನಪ್ರಿಯಗೊಳಿಸಲು ಮತ್ತು ಗ್ರಾಮಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಅನೇಕ ಲೇಖನಗಳನ್ನು ಬರೆದರು. 1935ರಿಂದ ಸುಮಾರು ಹನ್ನೆರಡು ವರ್ಷಗಳ ಕಾಲ, ಕಸ್ತೂರಿ ಶ್ರೀನಿವಾಸನ್ ಅವರ ಅಪೇಕ್ಷೆಯಂತೆ ಹಿಂದು ಪತ್ರಿಕೆಯ ದೆಹಲಿ ಪ್ರತಿನಿಧಿಯಾಗಿ ಕೆಲಸ ಮಾಡಿದರಲ್ಲದೆ ಯುರೋಪ್ ಮತ್ತು ಇಂಗ್ಲೆಂಡ್‌ಗಳಲ್ಲಿ ಹಿಂದು ಪತ್ರಿಕೆಯ ವರದಿಗಾರರಾಗಿ

ಕೆಲಸಮಾಡಿ ಖ್ಯಾತಿ ಗಳಿಸಿದರು. ಇಂಗ್ಲೆಂಡಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಪ್ರತಿನಿಧಿಯಾಗಿಯೂ ಇವರು ಕಾರ್ಯ ನಿರ್ವಹಿಸಿದರು. 1948 ರಲ್ಲಿ ಕೆಲವರ ಜೊತೆ ಸೇರಿ ದೆಹಲಿಯಲ್ಲಿ ಗುಡಿಸಲು ಕೈಗಾರಿಕೆಗಳ ಉತ್ಪನ್ನ ಗಳ ಒಂದು ಪ್ರದರ್ಶನವನ್ನು ಏರ್ಪಡಿಸಿದರು; ಮುಂದೆ ಅದೇ ಸೆಂಟ್ರಲ್ ಕಾಟೇಜ್ ಇಂಡಸ್ಟ್ರೀಸ್ ಎಂಪೋರಿಯಮ್ ಆಗಿ ಮಾರ್ಪಾಡು ಹೊಂದಿತು.

ಇವರು ಭಾರತದ ಸಂವಿಧಾನ ರಚನಾ ಸಭೆಯ ಸದಸ್ಯರಾಗಿ (1946–50) ಮತ್ತು ಸಂಯುಕ್ತ ರಾಷ್ಟ್ರ ಸಂಘದ (ವಿಶ್ವ ಸಂಸ್ಥೆ) ಸಾಮಾನ್ಯ ಸಭೆಯಲ್ಲಿ ಪ್ರತಿನಿಧಿಯಾಗಿ (1947–52) ಸೇವೆ ಸಲ್ಲಿಸಿದರು. ಪತ್ರಿಕಾ ವ್ಯವಸಾಯದಿಂದ ನಿವೃತ್ತಿಹೊಂದಿದ ಅನಂತರ ಮಂಗಳೂರು ಮತದಾರ ಸಂಘದ ಪ್ರತಿನಿಧಿಯಾಗಿ, ಲೋಕಸಭೆಯ ಸದಸ್ಯರಾಗಿ (1952–57), ಅನಂತರ ರಾಜ್ಯಸಭೆಯ ಸದಸ್ಯರಾಗಿ (1957–60) ಸೇವೆಸಲ್ಲಿಸಿದರು. 1952 ರಿಂದ 1968ರವರೆಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಗಾಂಧೀ ಸ್ಮಾರಕ ನಿಧಿಯ ಶಾಂತಿ ನಿಯೋಗದ ಸದಸ್ಯರಾಗಿದ್ದ ಇವರು ಸಿ. ರಾಜಗೋಪಾಲಾಚಾರಿ ಮತ್ತು ಆರ್. ಆರ್. ದಿವಾಕರ ಅವರುಗಳೊಂದಿಗೆ ಅಮೆರಿಕ ಹಾಗೂ ಇಂಗ್ಲೆಂಡ್‌ಗಳಿಗೆ ತೆರಳಿ, ಅಮೆರಿಕದ ಅಧ್ಯಕ್ಷ ಜಾನ್ ಎಫ್ ಕೆನಡಿ ಮತ್ತು ಬ್ರಿಟನ್ನಿನ ಪ್ರಧಾನಿ ಹೆರಾಲ್ಡ್ ಮ್ಯಾಕ್ಮಿಲನ್‌ರನ್ನು ಸಂದರ್ಶಿಸಿ, ವಿಶ್ವಶಾಂತಿ ಸ್ಥಾಪನೆಗೆ ಶ್ರಮಿಸಬೇಕೆಂದು ಮನವಿ ಸಲ್ಲಿಸಿದರು.

ಇವರು ದಿ ಇಂಡಸ್ಟ್ರಿಯಲ್ ವರ್ಕರ್ ಇನ್ ಇಂಡಿಯಾ, ಇಂಡಿಯಾಸ್ ಫ್ರೀಡಮ್ ಸ್ಟ್ರಗಲ್–ಸಮ್ ನೋಟಬಲ್ ಫಿಗರ್ಸ್ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಬಿ.ಎನ್. ರಾವ್‌ರವರ ಕಾಗದಗಳನ್ನು ಇಂಡಿಯಾಸ್ ಕಾನ್‌ಸ್ಟಿಟ್ಯೂಶನ್ ಇನ್ ದಿ ಮೇಕಿಂಗ್ ಎಂಬ ಹೆಸರಿನಲ್ಲಿ ಸಂಪಾದಿಸಿದ್ದಾರೆ. ಫ್ರೇಮಿಂಗ್ ಆಫ್ ಇಂಡಿಯಾಸ್ ಕಾನ್‌ಸ್ಟಿಟ್ಯೂಶನ್ ಎಂಬ ಐದು ಸಂಪುಟಗಳ ಬೃಹತ್ ಪುಸ್ತಕದ ಮುಖ್ಯಸಂಪಾದಕರು ಕೂಡ ಇವರೇ.

ಭಾರತ ಸರ್ಕಾರ ಇವರ ಬಹುಮುಖ ಸೇವೆಯನ್ನು ಗಮನಿಸಿ ಇವರಿಗೆ ಪದ್ಮಭೂಷಣ ಪ್ರಶಸ್ತಿನ್ನಿತ್ತು ಗೌರವಿಸಿದೆ (1967). ಇವರು 1975 ಡಿಸೆಂಬರ್ 15ರಂದು ದೆಹಲಿಯಲ್ಲಿ ನಿಧನರಾದರು. (ಎಚ್.ಪಿ.ಎಸ್)

**ಬೆಸಗರಹಳ್ಳಿ ರಾಮಣ್ಣ**: 1938–98. ಕನ್ನಡದ ಪ್ರಸಿದ್ಧ ಕಥೆಗಾರ ಮತ್ತು ವೈದ್ಯರು. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿ ಇವರ ಹುಟ್ಟೂರು. ತಂದೆ ಚಿಕ್ಕ ಎಲ್ಲೇಗೌಡ, ತಾಯಿ ದೊಡ್ಡತಾಯಮ್ಮ. ಬೆಸಗರಹಳ್ಳಿ, ಮದ್ದೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಇವರು 1968ಲ್ಲಿ ಎಂ.ಬಿ.ಬಿ.ಎಸ್. ಪದವಿಯನ್ನೂ ಅನಂತರ ಅರಿವಳಿಕೆಯಲ್ಲಿ ಡಿಪ್ಲೊಮಾವನ್ನೂ ಪಡೆದರು (1981–82). ಸರ್ಕಾರಿ ವೈದ್ಯರಾಗಿ ಬಹುಪಾಲು ಹಳ್ಳಿಗಳಲ್ಲೇ ಸೇವೆ ಸಲ್ಲಿಸಿದ್ದ ಇವರ ವೃತ್ತಿಜೀವನದ ವಿಶಿಷ್ಟಾನುಭವದ ಕಾಲವೆಂದರೆ, ವಿಶ್ವ ಆರೋಗ್ಯ ಸಂಸ್ಥೆಯ ಒಂದು ಯೋಜನೆಯಡಿ ಸಿಡುಬು ನಿರ್ಮೂಲನಾ ಆಂದೋಲನ ಕ್ಕಾಗಿ ಬಿಹಾರದ ಭಾಗಲ್ಪುರ ಜಿಲ್ಲೆಯಲ್ಲಿ ಮೂರು ತಿಂಗಳ ಕಾಲ ಅಹರ್ನಿಶಿ ದುಡಿದದ್ದು (1974). ಈ ಅವಧಿಯಲ್ಲಿ ಇವರು ಬರೆದ 'ಬೇಲ' ಎಂಬ ಕಥೆ ಒಂದು ಹೃದಯಸ್ಪರ್ಶಿ ರಚನೆ.

ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಕಥೆಗಳನ್ನು ಬರೆಯತೊಡಗಿದ ಇವರು ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಭಾಗವಹಿಸಿ ಸುಗ್ಗಿ ಎಂಬ ಕಥೆಗೆ ಪ್ರಥಮ ಬಹುಮಾನ ಪಡೆಯುವುದರೊಂದಿಗೆ ಸಣ್ಣಕಥೆಗಾರರಾಗಿ ಗಮನಸೆಳೆದರು (1965). ನೆಲದ ಒಡಲು (1967), ಗರ್ಜನೆ (972), ಹರಕೆಯ ಹಣ (1976), ಒಂದು ಹುಡುಗನಿಗೆ ಬಿದ್ದ ಕನಸು (1979)– ಇವು ಕಥಾಸಂಕ ಲನಗಳು. ನೆಲದ ಸಿರಿ (1975), ಸುಗ್ಗಿ (1991), ಹೆತ್ತೊಡಲು (1998)– ಇವು ಆಯ್ದ ಕಥೆಗಳ ಸಂಕಲನಗಳು. ಕನ್ನಂಬಾಡಿ (1986) ಇವರ ಸಮಗ್ರ ಕಥೆಗಳ ಸಂಕಲನ. ಕನ್ನಂಬಾಡಿ ಪ್ರಕಟವಾದ ಅನಂತರ ಬರೆದ ಹನ್ನೊಂದು ಹೊಸ ಕಥೆಗಳು ಕನ್ನಂಬಾಡಿಯಿಂದ ಎತ್ತಿಕೊಂಡ ಏಳು ಕಥೆಗಳು, ಹೀಗೆ ಹದಿನೆಂಟು ಕಥೆಗಳನ್ನೊಳಗೊಂಡ 'ಕೊಳಲು ಮತ್ತು ಖಡ್ಗ' 1998ರಲ್ಲಿ ಪ್ರಕಟವಾಯಿತು. ರಕ್ತಕಣ್ಣೀರು (1974), ತೋಳಗಳ ನಡುವೆ –ಇವು ಇವರ ಎರಡು ಕಾದಂಬರಿಗಳು. ಶೋಕಚಕ್ರ (1990)

ಕವನ ಸಂಕಲನ. 'ಟಾಲ್‌ಸ್ಟಾಯ್ ಕೊನೆಯ ದಿನಗಳು' ಜೀವನಚರಿತ್ರೆ. ಕಾಡುಗಿಣಿ ಇವರ ಅಪೂರ್ಣ ಆತ್ಮಚರಿತ್ರೆ.

ಇವರ ಮೊದಲ ಕಥಾ ಸಂಕಲನ 'ನೆಲದ ಒಡಲು' ಏಳು ಕಥೆಗಳ ಗುಚ್ಛ. ಒಡೆದುಹೋದ ಮನಸ್ಸುಗಳು, ಕೌಟುಂಬಿಕ ಸಂಬಂಧಗಳು, ಒಂದಾಗಿ ಮತ್ತೆ ಬೆಸೆದುಕೊಳ್ಳುವ ಚಿತ್ರಗಳು ಇಲ್ಲಿವೆ. ಪಶ್ಚಾತ್ತಾಪದ ತೀವ್ರತೆಗಳಿವೆ. ಒಂಬತ್ತು ಕಥೆಗಳನ್ನು ಒಳಗೊಂಡ 'ಗರ್ಜನೆ'ಯಲ್ಲಿ ಪ್ರಮುಖವಾಗಿ ಬಂಡಾಯದ ಪ್ರವೃತ್ತಿ ಕಾಣಿಸಿಕೊಳ್ಳುತ್ತದೆ. ವರ್ಣಗಳ ಹಾಗೂ ವರ್ಗಗಳ ನಡುವಿನ ಸಂಘರ್ಷದ ಚಿತ್ರಗಳೂ ಈ ಸಂಕಲನದಲ್ಲಿ ಕಾಣಸಿಗುತ್ತವೆ. 'ಹರಕೆಯ ಹಣ' ಸಂಕಲನದಲ್ಲಿ ನೆಲದ ಒಡಲುವಿನಂತೆ ಗ್ರಾಮೀಣ ಬದುಕಿನ ಇನ್ನಷ್ಟು ಪರಿಣಾಮಕಾರೀ ಕಥೆಗಳಿವೆ. ನಿರ್ದಿಷ್ಟ ಪ್ರಾದೇಶಿಕ ಭಿತ್ತಿಯಲ್ಲಿ ಇಡೀ ಗ್ರಾಮೀಣ ಭಾರತವನ್ನು ತೆರೆದಿಟ್ಟಿರುವ ಪವಾಡವನ್ನು ಕಥೆಗಾರರು ಇಲ್ಲಿ ಮೆರೆದಿದ್ದಾರೆ. ಅಲಕ್ಷ್ಯಕ್ಕೀಡಾದ ಜನಾಂಗದ ಬದುಕಿನ ಸಾಂಸ್ಕೃತಿಕ ಶೋಷಣೆಯ ಸೂಕ್ಷ್ಮಗಳು, ಪಟ್ಟಭದ್ರ ಹಾಗೂ ಅಧಿಕಾರಶಾಹಿಯ ವಿರುದ್ಧ ಸೆಟೆದುನಿಲ್ಲುವ ಪ್ರಾಮಾಣಿಕ ವ್ಯಕ್ತಿತ್ವಗಳು ಇಲ್ಲಿ ಚಿತ್ರಣಗೊಂಡಿವೆ. ಇಂಥ ಚಿತ್ರಣಗಳು ಕನ್ನಡ ಕಥಾಕ್ಷೇತ್ರದಲ್ಲಿ ಇವರ ಹೆಸರನ್ನು ಗಟ್ಟಿಗೊಳಿಸಿವೆ. ನಿಸರ್ಗದೊಳಗೇ ಮಿಳಿತವಾಗಿರುವ ಒಕ್ಕಲು ಮಕ್ಕಳ ನಿತ್ಯಜೀವನದ ಸುಖದುಃಖ, ಸಣ್ಣತನ, ಅಸೂಯೆ, ಔದಾರ್ಯ, ಬಂಡಾಯ ಮುಂತಾದುವುಗಳನ್ನು ಚಿತ್ರಿಸುವ ಇವರು ತಮ್ಮ ಕೃತಿಗಳಲ್ಲಿ ಶ್ರೇಷ್ಠತೆಯನ್ನು ಮೆರೆದಿದ್ದಾರೆ.

'ಒಂದು ಹುಡುಗನಿಗೆ ಬಿದ್ದ ಕನಸು' ಸಂಕಲನದಲ್ಲಿ ಏಳು ಕಥೆಗಳಿವೆ. ತುರ್ತು ಪರಿಸ್ಥಿತಿಯ ಭಯಾನಕ ದಿನಗಳ ಚಿತ್ರಣ, ದೇಶದ ಹಲವು ಸಮಸ್ಯೆಗಳ ಮೇಲೆ ಕ್ಷಕಿರಣ ಇಲ್ಲಿನ ಬಹುಪಾಲು ಕಥೆಗಳ ಹೂರಣ. ಶೂಲ ಮತ್ತು ಬೇಲ ನಿರ್ಮಲ ಮನಸ್ಸಿನ ಸ್ನೇಹವನ್ನು ಒಳಗೊಂಡ ಕಥೆಗಳು. ಅಶ್ಲೀಲದ ಸೋಂಕು ಇಲ್ಲದ ಸುಂದರ ಶೃಂಗಾರ ಚಿತ್ರವೊಂದನ್ನು 'ಬೇಲ' ಒಳಗೊಂಡಿದೆ. ಬೇಲಾ ಎಂಬ ಬಿಹಾರದ ಹೆಣ್ಣುಮಗಳೊಬ್ಬಳ ಮನಸ್ಸನ್ನು ಚಿತ್ರಿಸಿರುವ ರೀತಿ ಓದುಗರನ್ನು ಆರ್ದ್ರಗೊಳಿಸುತ್ತದೆ. ತಮ್ಮದೇ ಆದ ತಂತ್ರಗಾರಿಕೆಯಿಂದ ಪಾತ್ರ ಘಟನೆ ವರ್ಣನೆಗಳನ್ನು ಬೇರ್ಪಡಿಸಲಾರದಂಥ ಕುಸುರಿಕಲೆ ಇವರ ಕಥೆಗಳಲ್ಲಿ ಕಂಡುಬರುತ್ತದೆ. ಗರ್ಜನೆ, ಗಾಂಧಿ, ಒಂದು ಹುಡುಗನಿಗೆ ಬಿದ್ದ ಕನಸು, ಚಲುವನ ಪರಂಗಿಗಿಡಗಳು– ಇವು ಇವರ ಕೆಲವು ಶ್ರೇಷ್ಠ ಕಥೆಗಳು.

ಇವರ ಮೊದಲ ಕಾದಂಬರಿ 'ರಕ್ತ ಕಣ್ಣೀರು'– ಚಂಬಲ್ ಕಣಿವೆಯ ದರೋಡೆಕೋರರಲ್ಲೂ ಇರಬಹುದಾದ ಪ್ರೀತಿಯ ಸೆಲೆಯನ್ನು ಗುರುತಿಸುತ್ತದೆ. ಅಂತರ್ಜಾತಿ ವಿವಾಹವನ್ನು ಬಂಡವಾಳ ಮಾಡಿಕೊಂಡು ಎರಡು ಜಾತಿಗಳ ನಡುವೆ ಬೆಂಕಿಹಚ್ಚಿ ಆ ಕಿಚ್ಚಿನಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳುವ ಪುಡಾರಿಯನ್ನು 'ತೋಳಗಳ ನಡುವೆ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಶೋಕಚಕ್ರ ಕವನ ಸಂಕಲನದ ಮೂಲಕ ಬೆಸಗರಹಳ್ಳಿಯವರು ಸಮರ್ಥ ಕವಿಯೂ ಹೌದು ಎಂದು ಸಾಬೀತುಪಡಿಸಿದ್ದಾರೆ. ಸರಳ ಸುಂದರ ನೇರ ಭಾಷೆಯ ಮೂಲಕ ರಾಜಕೀಯ, ದೇಶಪ್ರೇಮ, ಸಾಹಿತ್ಯ, ಸಂಸ್ಕೃತಿ, ದಲಿತರ ನೋವುನಲಿವುಗಳು ಇಲ್ಲಿ ಕಾವ್ಯರೂಪ ಪಡೆದುಕೊಂಡಿವೆ.

ಇವರಿಗೆ ಹಲವು ಬಹುಮಾನ ಪುರಸ್ಕಾರಗಳು ಸಂದಿವೆ. ನೆಲದ ಒಡಲು, ಗರ್ಜನೆ ಸಂಕಲನಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಒಂದು ಹುಡುಗನಿಗೆ ಬಿದ್ದ ಕನಸು ಸಂಕಲನಕ್ಕೆ ವರ್ಧಮಾನ ಪ್ರಶಸ್ತಿ ದೊರೆತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗೂ ಇವರು ಭಾಜನರಾಗಿದ್ದರು. ನಿಸರ್ಗದೊಳಗೆ ಮಿಳಿತವಾಗಿರುವ ಒಕ್ಕಲು ಮಕ್ಕಳ ನಿತ್ಯ ಜೀವನದ ಸುಖ–ದುಃಖ, ಸಣ್ಣತನ, ಅಸೂಯೆ, ಔದಾರ್ಯ, ಬಂಡಾಯ ಮುಂತಾದವುಗಳನ್ನು ಚಿತ್ರಿಸುವ ಇವರು ತಮ್ಮ ಕೃತಿಗಳಲ್ಲಿ ಶ್ರೇಷ್ಠತೆಯನ್ನು ಮೆರೆದಿದ್ದಾರೆ.

ಬೆಸಗರಹಳ್ಳಿಯವರು ಬರಹಗಾರರಷ್ಟೇ ಅಲ್ಲ; ಸಾಮಾಜಿಕ ಆಂದೋಲನಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡವರು. ಅನ್ಯಾಯ ಅಕ್ರಮಗಳನ್ನು ಪ್ರತಿಭಟಿಸುತ್ತಿದ್ದವರು. ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಚಟುವಟಿಕೆಗಳು, ಜಾತಿ ವಿನಾಶ ಸಮ್ಮೇಳನ, ಜಯಪ್ರಕಾಶ ನಾರಾಯಣರ ಆಂದೋಲನ, ದಲಿತ ಮತ್ತು ಬಂಡಾಯ ಸಾಹಿತ್ಯ ಚಳವಳಿ ಮೊದಲಾದ ಸ್ವಾತಂತ್ರ್ಯಾನಂತರ ಕರ್ನಾಟಕದಲ್ಲಿ ನಡೆದ ಎಲ್ಲ ಪ್ರಮುಖ ಸಾಮಾಜಿಕ ಮತ್ತು ರಾಜಕೀಯ ಆಂದೋಲನಗಳ ದಟ್ಟವಾದ ಪ್ರಭಾವ ಇವರ ಬದುಕು ಮತ್ತು ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ಮಡದಿ ಡಿ.ಪಿ. ರಾಜಮ್ಮ ಅದೇ ತಾಲ್ಲೂಕಿನ ದೇಶಹಳ್ಳಿಯವರು. **(ಕೆ.ಆರ್.)**

**ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್:** 1888–1936. ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ಪ್ರಸಿದ್ಧ ಸಂಗೀತ ವಿದ್ವಾಂಸರು. ಇವರ ತಂದೆ ಶ್ರೀನಿವಾಸ ರಂಗಾಚಾರ್ಯರು ಒಳ್ಳೆಯ ಸಂಗೀತಗಾರರಾಗಿದ್ದರು. ಸೋದರ ಮಾವ ವೈಣಿಕರು. ಇಂಥ ಪರಿಸರದಲ್ಲಿ ಬೆಳೆದ ಇವರು ಮೊದಲು ತಂದೆಯವರಿಂದ ಸಂಗೀತ ಕಲಿತರು. ಅನಂತರ ಕೊಳ್ಳೇಗಾಲದ ಕೃಷ್ಣಭಾಗವತರೆಂಬ ಸಂಗೀತ ವಿದ್ವಾಂಸರಲ್ಲಿ ಅಭ್ಯಾಸ ಮಾಡಿದರು. 1912ರಲ್ಲಿ ಮೈಸೂರಿಗೆ ಬಂದ ಇವರು ವೀಣೆ ಸುಬ್ಬಣ್ಣನವರಲ್ಲಿ ಶಿಷ್ಯವೃತ್ತಿ ನಡೆಸಿದರು. ತಮ್ಮ 24ನೆಯ ವಯಸ್ಸಿಗೇ ಹಲವಾರು ಸಂಗೀತ ಕಚೇರಿಗಳನ್ನು ನಡೆಸಿ ಹೆಸರು ಗಳಿಸಿದರು. ಇವರಿಗೆ ಮೂರೂವರೆ ಸ್ಥಾಯಿಗಳ ಅಂತರದ ಸುಮಧುರ ಶಾರೀರವಿತ್ತು. ಇವರು ಅಂದು ಪ್ರಸಿದ್ಧರಾಗಿದ್ದ ಅನೇಕ ಪಿಟೀಲು ಮತ್ತು ಮೃದಂಗ ವಿದ್ವಾಂಸರೊಂದಿಗೆ ಸಂಗೀತ ಕಚೇರಿಗಳನ್ನು ನಡೆಸಿ ಕೀರ್ತಿ ಗಳಿಸಿದರು. ಇವರು ಪಿಟೀಲು ಮತ್ತು ಗೋಟುವಾದ್ಯಗಳನ್ನು ಚೆನ್ನಾಗಿ ನುಡಿಸುತ್ತಿದ್ದರು. ಇವರ ಗಾನಮಾಧುರ್ಯ ಮತ್ತು ಸಂಗೀತ ಪ್ರೌಢಿಮೆಗಳನ್ನು ಮೆಚ್ಚಿ ಮೈಸೂರಿನ ಜನತೆ 1922ರಲ್ಲಿ ಇವರಿಗೆ ಬಂಗಾರದ ಹಾರವನ್ನಿತ್ತು ಸನ್ಮಾನಿಸಿದರು. ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ.ಇವರು 1936 ಸೆಪ್ಟೆಂಬರ್ 17ರಂದು ನಿಧನಹೊಂದಿದರು. **(ಎಲ್.ಆರ್.)**

**ಬೆಳಗಲಿ, ದು.ನಿಂ.:** 1931–2000. ಹೆಸರಾಂತ ಲೇಖಕ; ಭಾಷಾಂತರಕಾರ. ದುರದುಂಡೀಶ್ವರ ನಿಂಗಪ್ಪ ಬೆಳಗಲಿ ಎಂಬುದು ಇವರ ಪೂರ್ತಿ ಹೆಸರು. ಬಿಜಾಪುರ ಜಿಲ್ಲೆ ಬನಹಟ್ಟಿಯಲ್ಲಿ 1931 ಮಾರ್ಚ್ 30ರಂದು ಜನಿಸಿದರು. ಬನಹಟ್ಟಿಯ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದರು (1951–89). ಇವರು ಕಥೆ, ಕಾದಂಬರಿ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ನಗೆಬರೆಹ, ಮಕ್ಕಳ ಸಾಹಿತ್ಯ, ಅನುವಾದ ಪ್ರಕಾರಗಳಲ್ಲಿ 48 ಕೃತಿಗಳನ್ನು ರಚಿಸಿದ್ದಾರೆ.

ಉತ್ತರ ಕರ್ನಾಟಕದ ಬಯಲುಸೀಮೆಯ ಪ್ರಾದೇಶಿಕ ಸತ್ತ್ವ ಸೌಂದರ್ಯವನ್ನೂ ಆಡುನುಡಿಯ ಸೊಗಸನ್ನೂ ಜೀವಂತವಾಗಿ ಪಡಿಮೂಡಿಸಿರುವ ಇವರದು ಅಪ್ಪಟ ದೇಸಿ ಪ್ರತಿಭೆ. ಗ್ರಾಮೀಣ ಬದುಕಿನ ಕೌಟುಂಬಿಕ ಸಾಮಾಜಿಕ ಪಲ್ಲಟಗಳು, ರಾಜಕೀಯ ಒಳಸುಳಿಗಳು, ಮನುಷ್ಯ ಸಂಬಂಧಗಳ ಬಿರುಕುಗಳು, ಸಮಷ್ಟಿ ಬದುಕಿನ ವಿಘಟನೆಗಳು ಇವರ ಬಹುಪಾಲು ಕಥೆ ಕಾದಂಬರಿಗಳ ವಸ್ತು. ಸ್ತ್ರೀ ಶೋಷಣೆಯ ದುರಂತಗಳು, ವೇಶ್ಯಾಪದ್ಧತಿ, ದೇವದಾಸಿ ಪದ್ಧತಿ, ಬಡತನ, ಕುಡಿತ, ಅಸ್ಪೃಶ್ಯತೆ, ಅಂಧಶ್ರದ್ಧೆಗಳಿಂದ ಸಂಕಷ್ಟಕ್ಕೊಳಗಾಗಿರುವ ಹಳ್ಳಿಗರ ಬವಣೆಗಳು

ಇವರ ಕೃತಿಗಳಲ್ಲಿ ನೈಜವಾಗಿ ಮೂಡಿಬಂದಿವೆ. ಇವರು ಒಟ್ಟು ಹದಿನಾಲ್ಕು ಕಾದಂಬರಿಗಳನ್ನು ರಚಿಸಿದ್ದಾರೆ. ಮೊದಲ ಕಾದಂಬರಿ ಮುಳ್ಳು ಮತ್ತು ಮಲ್ಲಿಗೆ (1960). ಸ್ತ್ರೀಶೋಷಣೆಯ ಸಾಮಾಜಿಕ, ಧಾರ್ಮಿಕ, ಆರ್ಥಿಕ ನೆಲೆಗಳನ್ನು ವೈಚಾರಿಕವಾಗಿ ಬಿಂಬಿಸಿರುವ ದೇವದಾಸಿ (1991), ಕೆಳವರ್ಗದ ಗ್ರಾಮೀಣ ಮಹಿಳೆಯರ ಸಂಘರ್ಷ ಮತ್ತು ಸಮಸ್ಯೆಗಳ ಸುತ್ತ ರಚಿಸಿದ ಕಾತ್ರಾಳ ರತ್ನಿಯ ಚಾದಂಗಡಿ (1998), ಮನುಷ್ಯ ಸಂಬಂಧಗಳ ಬಿರುಕನ್ನು ಮನೋಜ್ಞವಾಗಿ ನಿರೂಪಿಸುವ ಹಡೆದವರು (1972)– ಇವು ಪ್ರಮುಖ ಕಾದಂಬರಿಗಳು. ದ್ರಾಕ್ಷಾಯಿಣಿ (1974), ಜೋಗಿಮರಡಿ (1981), ಮೌನ ಕ್ರಾಂತಿ (1992)– ಇವು ಸಾಮಾಜಿಕ ಕಾಳಜಿಯುಳ್ಳ ಇತರ ಕಾದಂಬರಿಗಳು. ಹೆಂಡತಿ ಮತ್ತು ಟ್ರಾನ್ಸಿಸ್ಟರ್ (1988), ಸಾಹಿತಿಗಳ ಸಂಘ ಮೋಜಿನ ಸಂಬಂಧ (1995), ಗಂಡ ಹೆಂಡತಿ ಮತ್ತು ಲಗೇಜ (1996)– ಇವು ನಗೆಬರಹಗಳ ಸಂಕಲನಗಳು.

ಕಥೆಗಾರರಾಗಿ ಸಾಹಿತ್ಯ ಕೃಷಿ ಆರಂಭಿಸಿದ ಇವರು ಗ್ರಾಮೀಣ ಬಡಜನರ ಮತ್ತು ದಲಿತ ಸಮಾಜದ ಜಾತಿಯ ಅವಮಾನ, ನಿಟ್ಟುಸಿರುಗಳ ತಾಪ ತಲ್ಲಣಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಮೊದಲ ಕಥಾಸಂಕಲನ ಬೆನ್ನ ಹಿಂದಿನ ಕಣ್ಣು (1957). ಮುತ್ತಿನ ತೆನೆಗಳು (1990), ಸಿಟ್ಟ್ಯಾಕೋ ರಾಯ ನನ ಮ್ಯಾಲ (1959), ಮಾಸ್ತರನ ಹೆಂಡತಿ (1962), ಗೌಡರ ಮಗಳು ಗೌರಿ (1977), ಮುಳ್ಳು ದಾರಿಯಲ್ಲಿ ಬಿರಿದ ಹೂಗಳು (1989)– ಇತರ ಕಥಾ ಸಂಕಲನಗಳು.

ಮಕ್ಕಳಿಗಾಗಿ ಸ್ವತಂತ್ರವಾಗಿ ಕಥೆ, ಚರಿತ್ರೆ, ವ್ಯಕ್ತಿಚಿತ್ರಗಳನ್ನು ರಚಿಸಿರುವ ಇವರು ಈಸೋಪನ ಕಥೆಗಳು, ಬೀರಬಲ್ಲನ ಬುದ್ಧಿವಂತಿಕೆಯ ಕಥೆಗಳು, ಜಾದುಪಕ್ಷಿ, ಮತ್ತಷ್ಟು ಈಸೋಪನ ಕಥೆಗಳು ಹಾಗೂ ಖಣದೋಕುಳಿ ಶೀರ್ಷಿಕೆಯಲ್ಲಿ ಹಿಂದೀ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಸರ್ವಜ್ಞ (1974), ಬದುಕುವ ಬಯಕೆ (1974), ಚಿಕ್ಕೋಡಿ ತಮ್ಮಣ್ಣಪ್ಪ, ಮಡಿವಾಳ ಮಾಚಿದೇವ- ಇವು ಮಕ್ಕಳ ಪುಸ್ತಕಗಳು.

ಮರಾಠಿಯ ದಲಿತ ಆತ್ಮಕಥೆಗಳಾದ ಅಕ್ರಮ ಸಂತಾನ (ಅಕ್ಕರ ಮಾಸಿ), ಗಬಾಳ ಎಂಬ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಹಾಗೆಯೇ ಪ್ರೇಮಚಂದರ ಬದುಕು ಬರೆಹಗಳನ್ನು ಯುಗಚೇತನ ಪ್ರೇಮಚಂದ್, ಪ್ರೇಮಚಂದ್ ಬದುಕು-ಬರಹ ಕುರಿತಂತೆ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಆದರ್ಶ ಶಿಕ್ಷಕ ಎಂಬ ರಾಷ್ಟ್ರಪ್ರಶಸ್ತಿ (1988) ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (1993) ಲಭ್ಯವಾಗಿವೆ. ಇವರನ್ನು ಕುರಿತಂತೆ ಬೆಳಗಲಿ ಎಂಬ ಅಭಿನಂದನ ಗ್ರಂಥ ಪ್ರಕಟವಾಗಿದೆ (1998). ಇವರು 2000 ಇಸವಿಯಲ್ಲಿ ನಿಧನರಾದರು. **(ಎಸ್‌ಎಚ್‌ಎ.ಐ)**

**ಬೆಳಗಾಂವಿ:** ಕರ್ನಾಟಕ ರಾಜ್ಯದ ಒಂದು ವಿಭಾಗ, ಜಿಲ್ಲೆ, ತಾಲ್ಲೂಕು ಹಾಗೂ ಇವುಗಳ ಆಡಳಿತ ಕೇಂದ್ರ. ಬೆಳಗಾಂವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ, ಮತ್ತು ಉತ್ತರ ಕನ್ನಡ ಜಿಲ್ಲೆಗಳು ಬೆಳಗಾಂವಿ ವಿಭಾಗದಲ್ಲಿವೆ.

**ಜಿಲ್ಲೆ :** ರಾಜ್ಯದ ವಾಯವ್ಯ ಭಾಗದಲ್ಲಿರುವ ಈ ಜಿಲ್ಲೆಯ ಈಶಾನ್ಯದ ತುದಿಯಲ್ಲಿ ಬಿಜಾಪುರ, ಪೂರ್ವದಲ್ಲಿ ಬಾಗಲಕೋಟೆ, ಗದಗ, ದಕ್ಷಿಣದಲ್ಲಿ ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳೂ ನೈಋತ್ಯದಲ್ಲಿ ಗೋವಾ, ಪಶ್ಚಿಮದಲ್ಲಿ ಮಹಾರಾಷ್ಟ್ರ ರಾಜ್ಯಗಳೂ ಸುತ್ತುವರೆದಿವೆ. ಈ ಜಿಲ್ಲೆಯಲ್ಲಿ ಅಥಣಿ, ರಾಯಬಾಗ, ಬೆಳಗಾಂವಿ, ಸವದತ್ತಿ, ಬೈಲಹೊಂಗಲ, ಖಾನಾಪುರ, ರಾಮದುರ್ಗ, ಗೋಕಾಕ, ಹುಕ್ಕೇರಿ, ಚಿಕ್ಕೋಡಿ ಈ 10 ತಾಲ್ಲೂಕುಗಳಿವೆ. ಒಟ್ಟು 35 ಹೋಬಳಿಗಳೂ ಜನವಸತಿಯುಳ್ಳ 1,180 ಗ್ರಾಮಗಳೂ 17 ಪಟ್ಟಣಗಳೂ ಇವೆ. ಜಿಲ್ಲೆಯ ವಿಸ್ತೀರ್ಣ 13,415 ಚ.ಕಿಮೀ. ಜಿಲ್ಲೆಯ ಒಟ್ಟು ಜನಸಂಖ್ಯೆ 42,14,505. ಈ ಜಿಲ್ಲೆ ಉ.ಅ. $15^0$ 23"-$16^0$ 58". ಮತ್ತು ಪೂ.ರೇ. $74^0$ 5"-$75^0$ 28" ನಡುವೆ ಇದೆ.

ಬೆಳಗಾಂವಿ ಜಿಲ್ಲೆಯ ಪಶ್ಚಿಮದ ಅಂಚು ಪಶ್ಚಿಮ ಘಟ್ಟಗಳ ಸೆರಗಿನ ಪ್ರದೇಶ. ಪೂರ್ವದ ಬಹುಭಾಗ ಮೈದಾನ. ಇಲ್ಲಿ ಅಲ್ಲಲ್ಲಿ ಒಡೆದು ಹಬ್ಬಿರುವ ಗುಡ್ಡಗಳ ಸಾಲುಗಳಿವೆ. ಬೆಳಗಾಂವಿ ಜಿಲ್ಲೆಯ ಬೆಳಗಾಂವಿ, ಖಾನಾಪುರ ತಾಲ್ಲೂಕುಗಳನ್ನು ಮಲೆನಾಡ ಪ್ರದೇಶವೆಂದೂ ಉಳಿದ ತಾಲ್ಲೂಕುಗಳನ್ನು ಬೆಳವಲ ಪ್ರದೇಶಗಳೆಂದೂ ವಿಂಗಡಿಸಬಹುದು.

ಬೆಳಗಾಂವಿ ಜಿಲ್ಲೆಯ ದಕ್ಷಿಣಭಾಗ ಆರ್ಕಿಯನ್ ನೈಸ್ ಶಿಲೆಗಳಿಂದ ಕೂಡಿದ್ದು ಅದರಲ್ಲಿ ಧಾರವಾಡ ವಿಭಾಗದ ಹೆಮಟೈಟ್ ಶಿಸ್ಟ್ ಶಿಲೆಗಳೂ ಸೇರಿವೆ. ಜಿಲ್ಲೆಯ ಮಧ್ಯಭಾಗದಲ್ಲಿ ಬೆಣಚುಕಲ್ಲು ಹಾಗೂ ಕಲಾದಗಿ ಗುಂಪಿಗೆ ಸೇರಿದ ಸುಣ್ಣದ ಶಿಲಾಸ್ತರ ಆವರಿಸಿದೆ. ಪಶ್ಚಿಮ ಹಾಗೂ ಉತ್ತರ ಭಾಗದಲ್ಲಿ ದಕ್ಷಿಣ ಪ್ರಸ್ತರಕ್ಕೆ ಸಂಬಂಧಿಸಿದ ಬೆಸಾಲ್ಟ್ ಹಾಗೂ ಲ್ಯಾಟರೈಟ್ ಶಿಲೆಗಳು ಆವೃತವಾಗಿವೆ. ನದಿ ಕೊಳ್ಳಗಳಲ್ಲಿ ಪ್ಲೀಸ್ಟೋಸೀನ್ ಯುಗಕ್ಕೆ ಸೇರಿದ ಅತ್ಯಂತ ಪುರಾತನ ರೇವೆಮಣ್ಣು, ಉಸುಗು ಹಾಗೂ ಹರಳುಗಳು ಹರಡಿಕೊಂಡಿವೆ. ಗೋಕಾಕದಿಂದ ಈಶಾನ್ಯಕ್ಕೆ 5 ಕಿಮೀ ಅಂತರದಲ್ಲಿ, ಘಟಪ್ರಭಾ ನದಿಯ ದಡದಲ್ಲಿ, ಚಿಕದೌಳಿ ಎಂಬ ಹಳ್ಳಿಯಲ್ಲಿ ಶಿಲಾ ಪಳೆಯುಳಿಕೆಗಳು ಕಂಡುಬಂದಿವೆ.

ಜಿಲ್ಲೆ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ, ಪೂರ್ವಭಾಗ ಫಲವತ್ತಾದ ಪ್ರದೇಶದಿಂದ ಕೂಡಿದೆ. ಜಿಲ್ಲೆಯ ನೈಋತ್ಯ ಭಾಗ ಅರಣ್ಯ ಪ್ರದೇಶ, ಆಗ್ನೇಯ ಭಾಗ ಸಮತಲ ಭೂಮಿ. ಫಲವತ್ತಾದ ಬಯಲು ಸೀಮೆಯ ಜೊತೆಗೆ ಚಿಕ್ಕೋಡಿ, ಅಥಣಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ತೋಟಗಾರಿಕೆಗೆ ಅನುಕೂಲವಾದ ಭೂಪ್ರದೇಶವಿದೆ. ರಾಯಭಾಗ ತಾಲ್ಲೂಕಿನಲ್ಲಿ ಮಾತ್ರ ಮರಳುಮಿಶ್ರಿತ ಭೂಭಾಗ ಹೆಚ್ಚು. ಬೆಳಗಾಂವಿ ತಾಲ್ಲೂಕು ಪ್ರದೇಶ ಮಿಶ್ರಜಾತಿಯ ಮಣ್ಣಿನಿಂದ ಕೂಡಿದ್ದರೆ ಬೈಲಹೊಂಗಲ ಪ್ರದೇಶವೆಲ್ಲ ಎರೆಸೀಮೆ ಎಂದು ಹೆಸರಾಗಿದೆ. ಜಿಲ್ಲೆಯ ಪೂರ್ವಭಾಗದ್ದು ಗಡಸು ಭೂಮಿ, ಇದು ಮಸಾರಿ ಮಣ್ಣಿನಿಂದ ಕೂಡಿದೆ. ಪಶ್ಚಿಮಕ್ಕೆ ಹೋದಂತೆ ಕಸುವಿನ ಎರೆಭೂಮಿ ವಿಸ್ತಾರಪ್ರದೇಶವನ್ನಾಕ್ರಮಿಸಿದೆ. ಜಿಲ್ಲೆಯ ಈ ಪ್ರದೇಶ ಸಾಮಾನ್ಯತಃ 700 ಮೀ ಗಿಂತ ಎತ್ತರದಲ್ಲಿರುವುದರಿಂದ ಇಲ್ಲಿ ತಂಪಾದ ವಾಯುಗುಣವಿದೆ. ಉಷ್ಣತೆ $14^0$ ಸೆ.ನಿಂದ $35^0$ ಸೆ.ವರೆಗೆ ಇರುತ್ತದೆ. ಈ ಜಿಲ್ಲೆಯ ವಾಡಿಕೆ ಮಳೆ 808 ಮಿಮೀ ವಾಸ್ತವಿಕ ಬಿದ್ದಮಳೆ 762 ಮಿಮೀ (2000). ಈ ಜಿಲ್ಲೆಯ ಖಾನಾಪುರ, ಬೆಳಗಾಂವಿ ಮತ್ತು ಹುಕ್ಕೇರಿ ತಾಲ್ಲೂಕುಗಳಲ್ಲಿ ಹೆಚ್ಚು ಮಳೆ ಬೀಳುತ್ತದೆ.

ಸಾಕಷ್ಟು ಮಳೆ ಬೀಳುವ ಬೆಳಗಾಂವಿ ಜಿಲ್ಲೆಯ ಮಲೆನಾಡ ಪ್ರದೇಶದಲ್ಲಿ ಕಾಡುಗಳಿವೆ. ಈ ಜಿಲ್ಲೆಯಲ್ಲಿ 1,90,424. ಹೆ. ಅರಣ್ಯ ಪ್ರದೇಶವಿದೆ (1998-99). ಈ ಅರಣ್ಯಗಳಲ್ಲಿ ಬೆಲೆಬಾಳುವ ಕರಿಮರ, ತೇಗ, ಹೊನ್ನೆ, ಬೀಟೆ ಮರಗಳ ಜೊತೆಗೆ ಹಳದಿ, ನೇರಳೆ, ಗೊಬ್ಬಳಿ ಮರಗಳು ಬೆಳೆಯುತ್ತವೆ. ಜಿಲ್ಲೆಯ ನೈಋತ್ಯ ಭಾಗದ ಕಾಡುಗಳಲ್ಲಿ ಬಿದಿರು, ಗಂಧ ಮತ್ತು ಎತ್ತರದ ಮರಗಳ ಕಾಡುಗಳಿವೆ. ಪಶ್ಚಿಮದಲ್ಲಿರುವ ದಟ್ಟವಾದ ಅರಣ್ಯ ಪೂರ್ವಕ್ಕೆ ಹೋದಂತೆ ವಿರಳವಾಗುತ್ತ ಹೋಗಿ ಅಲ್ಲಿ ಹೆಚ್ಚು ಕುರುಚಲು ಜಾತಿಯ ಗಿಡ ಗಂಟೆಗಳ ಕಾಡುಗಳಿವೆ. ಜಿಲ್ಲೆಯಲ್ಲಿ ಭೂಸವಕಳಿಯನ್ನು ತಡೆಗಟ್ಟುವುದಕ್ಕಾಗಿ, ಬೆಂಕಿ ಕಡ್ಡಿಪೆಟ್ಟಿಗೆ ತಯಾರಿಕೆಗೆ ಬೇಕಾಗುವ ಮೃದುತಿರುಳಿನ ಮರಗಳನ್ನೂ ಉರುವಲಿಗಾಗಿ ನಾನಾ ಜಾತಿಯ ಮರಗಳನ್ನೂ ಬೆಳೆಸುವ ಯೋಜನೆ ಕಾರ್ಯಗತವಾಗಿದೆ. ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಇಲ್ಲಿ ಅರಣ್ಯವನ್ನು ಬೆಳೆಸಲಾಗುತ್ತಿದೆ. ಬೀಳುಬಿದ್ದ ಅರಣ್ಯವನ್ನು ಪುನರುಜ್ಜೀವಿಸಿ ಅಭಿವೃದ್ಧಿ ಪಡಿಸಲಾಗಿದೆ. ತೇಗ ಮರಗಳನ್ನು ಗೋಡಂಬಿ ಗಿಡಗಳನ್ನೂ ಬೆಳಸಲಾಗುತ್ತಿದೆ.

ಕೃಷ್ಣಾ **(ನೋಡಿ)**, ಘಟಪ್ರಭಾ **(ನೋಡಿ)**, ಮಲಪ್ರಭಾ **(ನೋಡಿ)** ಮತ್ತು ಡೋಣಿ- ಇವು ಈ ಜಿಲ್ಲೆಯ ನಾಲ್ಕು ಮುಖ್ಯ ನದಿಗಳು. ಸುಮಾರು ಸಮಾನಾಂತರವಾಗಿ ಹರಿಯುವ ಈ ನದಿಗಳು ಜಿಲ್ಲೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿವೆ. ಜಿಲ್ಲೆಯ ದಕ್ಷಿಣದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಮಲಪ್ರಭಾ ನದಿ ಖಾನಾಪುರ ತಾಲ್ಲೂಕಿನ ಜಾಂಬೋಟಿಯ ಪಶ್ಚಿಮದಲ್ಲಿ ಸು. 13 ಕಿಮೀ ದೂರದಲ್ಲಿ ಹುಟ್ಟಿ ಖಾನಾಪುರ,ಬೈಲಹೊಂಗಲ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳ ಮುಖಾಂತರ ಪೂರ್ವಾಭಿಮುಖವಾಗಿ ಹರಿಯುತ್ತದೆ. ಜಿಲ್ಲೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ಘಟಪ್ರಭಾ ನದಿ ಸ್ವಲ್ಪ ದೂರ ಬೆಳಗಾಂವಿ ತಾಲ್ಲೂಕಿನ ಅಂಚಿನಲ್ಲಿ ಮತ್ತು ಹುಕ್ಕೇರಿ ತಾಲ್ಲೂಕಿನಲ್ಲಿ ಹರಿದು ಮುಂದೆ ಗೋಕಾಕ ತಾಲ್ಲೂಕಿನ ಮುಖಾಂತರ ಬಾಗಲಕೋಟೆ ಜಿಲ್ಲೆಯನ್ನು ಪ್ರವೇಶಿಸಿ ಕೃಷ್ಣಾ ನದಿಯನ್ನು ಕೂಡಿಕೊಳ್ಳುತ್ತದೆ. ಘಟಪ್ರಭಾ ನದಿಯ ಗೋಕಾಕ ಧಬಧಬೆ **(ನೋಡಿ)** ಪ್ರಸಿದ್ಧ. ಜಿಲ್ಲೆಯ ಉತ್ತರದಲ್ಲಿ ಪೂರ್ವಾಭಿಮುಖವಾಗಿ ಕೃಷ್ಣಾ ನದಿ ಹರಿಯುತ್ತದೆ. ಈ ನದಿ, ಚಿಕ್ಕೋಡಿಯ ಉತ್ತರಕ್ಕೆ ಸು. 32 ಕಿಮೀ ದೂರದಲ್ಲಿ ಗಣೇಶಪುರ ಗ್ರಾಮದ ಬಳಿ ಬೆಳಗಾಂವಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಅಲ್ಲಿಂದ ಸ್ವಲ್ಪದೂರ ಚಿಕ್ಕೋಡಿ ಮತ್ತು ಅಥಣಿ ತಾಲ್ಲೂಕುಗಳ ಹಾಗೂ ರಾಯಭಾಗ ಮತ್ತು ಅಥಣಿ ತಾಲ್ಲೂಕುಗಳ ಗಡಿಯಾಗಿ ಹರಿದು, ಮುಂದೆ ಅಥಣಿ ತಾಲ್ಲೂಕಿನ ಒಳಗೆ ಸಾಗಿ, ಮತ್ತೆ ಅದರ ಅಂಚಿನಲ್ಲಿ ಸಾಗುತ್ತದೆ. ತಾಲ್ಲೂಕನ್ನು ಈ ಜಿಲ್ಲೆಯ ಅತ್ಯಂತ ಉತ್ತರ ಭಾಗದಲ್ಲಿ ಅಥಣಿ ತಾಲ್ಲೂಕಿನ ಈಶಾನ್ಯದಲ್ಲಿ ಡೋಣಿ ನದಿ ಪೂರ್ವಾಭಿಮುಖವಾಗಿ ಹರಿದು ಬಾಗಲಕೋಟೆ ಜಿಲ್ಲೆಯನ್ನು




ಸೇರುವುದು. ಈ ನದಿಯ ಹರಿವು ಈ ಜಿಲ್ಲೆಯಲ್ಲಿ ಹೆಚ್ಚಿಲ್ಲ. ಇಡೀ ಜಿಲ್ಲೆಯೇ ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ನದಿ ಕಣಿವೆ ಪ್ರದೇಶವಾಗಿದ್ದು ಸುತ್ತಲೂ ಫಲವತ್ತಾದ ಭೂಮಿಯಿಂದ ಕೂಡಿದೆ. ಅಥಣಿ ತಾಲ್ಲೂಕಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಅಗರಣಿ ನದಿ ಹರಿದು ಐನಾಪುರಕ್ಕೆ ಪೂರ್ವದಲ್ಲಿ ಬನಜವಾಡದ ಬಳಿ ಕೃಷ್ಣಾ ನದಿಯನ್ನು ಸೇರಿಕೊಳ್ಳುವುದು. ಚಿಕ್ಕೋಡಿ ತಾಲ್ಲೂಕಿನಲ್ಲಿ ವೇದಗಂಗಾ ನದಿ ಕುರ್ಲಿ ಮುಖಾಂತರ ಗಲಟ್ಗೆವರೆಗೂ ಪೂರ್ವಾಭಿಮುಖವಾಗಿ ಹರಿದು ಅನಂತರ ಉತ್ತರಾಭಿಮುಖವಾಗಿ ಬರ್ವಾಡದ ಹತ್ತಿರ ದೂದಗಂಗಾ ನದಿಯನ್ನು ಕೂಡಿಕೊಳ್ಳುವುದು. ಚಿಕ್ಕೋಡಿ ತಾಲ್ಲೂಕಿನ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ದೂದಗಂಗಾ ತಾಲ್ಲೂಕಿನ ಉತ್ತರದಲ್ಲಿ ಸ್ವಲ್ಪದೂರ ಗಡಿಯಾಗಿ ಹರಿದು ಮಹಾರಾಷ್ಟ್ರವನ್ನು ಬೇರ್ಪಡಿಸುತ್ತದೆ. ಈ ನದಿ ಕಲ್ಲೋಳಿಯಲ್ಲಿ ಕೃಷ್ಣಾನದಿಯನ್ನು ಕೂಡಿಕೊಳ್ಳುವುದು. ಚಿಕ್ಕೋಡಿಯ ದಕ್ಷಿಣದಲ್ಲಿ

ಬಿದರಹಳ್ಳಿಯ ಬಳಿ ಹುಟ್ಟುವ ಹಿರೇಹಳ್ಳ ಗೋಕಾಕ ತಾಲ್ಲೂಕಿನ ಪುಲಗಡ್ಡಿ ಬಳಿ ಘಟಪ್ರಭಾ ನದಿಯನ್ನು ಸಂಗಮಿಸುವುದು. ಹುಕ್ಕೇರಿ ತಾಲ್ಲೂಕಿನಲ್ಲಿ ಹರಿಯುವ ಹಿರಣ್ಯಕೇಶಿ ನದಿ ಹುಕ್ಕೇರಿಯ ದಕ್ಷಿಣದಲ್ಲಿ ಪೂರ್ವಾಭಿಮುಖವಾಗಿ ಹರಿದು ಹುಕ್ಕೇರಿಯ ಆಗ್ನೇಯದಲ್ಲಿ ಸುಲ್ತಾನ ಪುರದ ಬಳಿ ಘಟಪ್ರಭಾ ನದಿಯನ್ನು ಕೂಡಿಕೊಳ್ಳುತ್ತದೆ. ಮಾರ್ಕಂಡೇಯ ನದಿ ಬೆಳಗಾಂವಿ ತಾಲ್ಲೂಕಿನಲ್ಲಿ ನೈಋತ್ಯದಿಂದ ಈಶಾನ್ಯ ದಿಕ್ಕಿಗೆ ಹರಿದು ಘಟಪ್ರಭಾ ನದಿಯನ್ನು ಕೂಡಿಕೊಳ್ಳುವುದು. ಇವಲ್ಲದೆ ಈ ಜಿಲ್ಲೆಯಲ್ಲಿ ಅನೇಕ ಹಳ್ಳ-ತೊರೆಗಳಿವೆ. ಮಳೆಗಾಲದಲ್ಲಿ ಇವು ತುಂಬಿ ಹರಿದು ಬೇಸಗೆಯಲ್ಲಿ ಬತ್ತಿಹೋಗುತ್ತವೆ. ಈ ನದಿ-ತೊರೆಗಳ ನೀರನ್ನು



ಬೆಳಗಾಂವಿ ಕೋಟೆಯ ಒಳಗೆ ಇರುವ ಕಮಲ ಬಸದಿ

ಬಳಸಲು ಅನೇಕ ನೀರಾವರಿ ಯೋಜನೆಗಳು ಜಾರಿಯಲ್ಲಿವೆ. ಅವುಗಳಲ್ಲಿ ಘಟಪ್ರಭಾ ಯೋಜನೆಯಂತೆ ಧೂಪದಾಳದ ಹತ್ತಿರ ಒಡ್ಡನ್ನು ನಿರ್ಮಿಸಿಸು. 1,20,000 ಎಕರೆ ಭೂಮಿಗೆ ನೀರನ್ನೊದಗಿಸುವ ಯೋಜನೆಯಾಗಿದೆ. ಈ ಯೋಜನೆಗೆ ಘಟಪ್ರಭಾ ಎಡದಂಡೆ ಯೋಜನೆಯನ್ನು ಸೇರಿಸಿದೆ. ಘಟಪ್ರಭಾ ನದಿಯ ನೀರನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಘಟಪ್ರಭಾ ಕೊಳ್ಳದ ಅಭಿವೃದ್ಧಿ ಯೋಜನೆ ಇದೆ. ಮಲಪ್ರಭಾ ನದಿಗೆ ರಾಮದುರ್ಗ ತಾಲ್ಲೂಕಿನ ಕೊಳಚೆ ಎಂಬಲ್ಲಿ ಅಣೆಕಟ್ಟು ಕಟ್ಟದೆ. ಮಲಪ್ರಭಾ ಯೋಜನೆಯಂತೆ ನವಿಲುತೀರ್ಥದ ಅಣೆಕಟ್ಟಿನಿಂದ ನೀರನ್ನು ಒದಗಿಸಲಾಗುವುದು. ಬೈಲ ಹೊಂಗಲ ತಾಲ್ಲೂಕಿನ ಹರಿನಾಲಾ ಯೋಜನೆ ಅಥಣಿ ತಾಲ್ಲೂಕಿನ ಕೋಹಳ್ಳ ಕೆರೆ ಯೋಜನೆ, ಖಾನಾಪುರ ತಾಲ್ಲೂಕಿನ ಸತ್ತಿ ನಾಲಾ ಯೋಜನೆ ಬಂದಿವೆ. 1998-99ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 3,26,225 ಹೆ. ನೀರಾವರಿಗೆ ಒಳಪಟ್ಟದ್ದು ಇದರಲ್ಲಿ 67,735 ಹೆ. ಕಾಲುವೆಗಳಿಂದ, 6,561 ಹೆ. ಕೆರೆಗಳಿಂದ, 102,393 ಹೆ. ಬಾವಿಗಳಿಂದ, 40,176 ಹೆ. ಏತನೀರಾವರಿಯಿಂದ, 51,443. ಹೆ, ಕೊಳವೆ ಬಾವಿಗಳಿಂದ, 57,917ಹೆ.ಗಳಿಗೆ ಇತರ ಮೂಲಗಳಿಂದ ನೀರುಣಿಸಲಾಗುತ್ತಿತ್ತು.

ಜಿಲ್ಲೆಯ ಮುಖ್ಯ ಬೆಳೆಗಳಾದ ಸಜ್ಜೆ, ಗೋಧಿ, ಬತ್ತ, ಜೋಳ, ಕಬ್ಬು, ಸೇಂಗಾ ಮತ್ತು ದ್ವಿದಳಧಾನ್ಯ, ಹತ್ತಿ, ಮೆಣಸಿನಕಾಯಿ ಮತ್ತು ತಂಬಾಕನ್ನು ಬೆಳೆಯುತ್ತಾರೆ. ನಿಪ್ಪಾಣಿಯ ತಂಬಾಕು ಶ್ರೇಷ್ಠ ದರ್ಜೆಯದೆಂದು ಹೆಸರಾಗಿದೆ. ಇಲ್ಲಿಯ ದ್ರಾಕ್ಷಿ ಉತ್ತಮ ದರ್ಜೆಯದು. ಜಿಲ್ಲೆಯಲ್ಲಿ ಹಣ್ಣುಗಳನ್ನೂ ತರಕಾರಿಗಳನ್ನೂ ಬೆಳೆಯುತ್ತಾರೆ. ಜಿಲ್ಲೆಯ ವ್ಯವಸಾಯಾಭಿವೃದ್ಧಿಗಾಗಿ ರೈತರ ತರಬೇತಿ ಕೇಂದ್ರ ಈ ಜಿಲ್ಲೆಯ ಅರಭಾವಿಯಲ್ಲಿದೆ. ಜಿಲ್ಲೆಯಲ್ಲಿ ರೇಷ್ಮೆ ಕೈಗಾರಿಕೆಗೆ ಗಮನ ನೀಡಲಾಗುತ್ತಿದೆ. ಕೆಲವೆಡೆ ಹಿಪ್ಪುನೇರಳೆಯನ್ನು ಬೆಳೆಯುತ್ತಾರೆ. 1998-99ರ ಅಂಕಿಅಂಶದ ಪ್ರಕಾರ 62,731 ಹೆ.ಗಳಲ್ಲಿ ಬತ್ತವನ್ನು, 2,625 ಹೆ.ಗಳಲ್ಲಿ ರಾಗಿ, 1,92,490 ಹೆ.ಗಳಲ್ಲಿ ಜೋಳವನ್ನು, 30,864 ಹೆ.ಗಳಲ್ಲಿ ಸಜ್ಜೆಯನ್ನು, 1,09,370 ಹೆ.ಗಳಲ್ಲಿ ಮುಸುಕಿನಜೋಳವನ್ನು, 54,399 ಹೆ.ಗಳಲ್ಲಿ ಗೋಧಿ, 6,031 ಹೆ.ಗಳಲ್ಲಿ ಇತರೆ ಏಕದಳ ಧಾನ್ಯಗಳನ್ನು, 24,199 ಹೆ.ಗಳಲ್ಲಿ ಕಡಲೆ, 8,602 ಹೆ.ಗಳಲ್ಲಿ ತೊಗರಿ, 8,076 ಹೆ.ಗಳಲ್ಲಿ ದ್ವಿದಳಧಾನ್ಯಗಳನ್ನೂ 86,020 ಹೆ.ಗಳಲ್ಲಿ ನೆಲಗಡಲೆ, 1,24,020 ಹೆ.ಗಳಲ್ಲಿ ಕಬ್ಬು, 65,829 ಹೆ.ಗಳಲ್ಲಿ ಹತ್ತಿಯನ್ನೂ 500 ಹೆ.ಗಳಲ್ಲಿ ಹಿಪ್ಪುನೇರಳೆಯನ್ನೂ ಬೆಳೆಯಲಾಗುತ್ತದೆ.

ಬೆಳಗಾಂವಿ ಕೃಷಿ ಪ್ರಧಾನ ಜಿಲ್ಲೆ. ಜಾನುವಾರು ಸಂಪತ್ತೂ ಅಪಾರವಾಗಿದೆ. ವಿವಿಧ ತಳಿಗಳ 8,76,223 ಕುರಿಗಳು, ಜಿಲ್ಲೆಯಲ್ಲಿ 14 ಪಶುವೈದ್ಯಾಲಯಗಳು, 56 ಚಿಕಿತ್ಸಾಲಯಗಳು, 126 ಪ್ರಾಥಮಿಕ ಪಶುವೈದ್ಯಕೇಂದ್ರಗಳು, 10 ಸಂಚಾರ ಚಿಕಿತ್ಸಾಲಯಗಳು, 31 ಕೃತಕ ಗರ್ಭಧಾರಣಾ ಕೇಂದ್ರಗಳು ಇದ್ದವು (2000). ಜಿಲ್ಲೆಯಲ್ಲಿ ಮತ್ಸ್ಯೋದ್ಯಮವೂ ಇದ್ದು 3003 ಮೆ. ಟನ್ನು ಮೀನನ್ನು ಹಿಡಿಯಲಾಗಿತ್ತು (2001).

ಬೆಳಗಾಂವಿ ಜಿಲ್ಲೆ ಕೃಷಿ ಪ್ರಧಾನ ಪ್ರದೇಶವಾಗಿದ್ದರೂ ಕೈಗಾರಿಕೆಯಲ್ಲೂ ಮುಂದುವರೆಯುತ್ತಿದೆ. ಜಿಲ್ಲೆಯಲ್ಲಿ ಅಲ್ಯೂಮಿನಿಯಂ ಕಾರ್ಖಾನೆ, ಬಟ್ಟೆ ಕಾರ್ಖಾನೆ ಮತ್ತು ಸಕ್ಕರೆ ಕಾರ್ಖಾನೆಗಳಿವೆ. ಯಂತ್ರೋಪಕರಣಗಳ ತಯಾರಿಕೆ, ಉಕ್ಕಿನ ಉಪಯುಕ್ತ ವಸ್ತುಗಳ ತಯಾರಿಕೆ, ಸಿಮೆಂಟ್ ಮತ್ತು ರಾಸಾಯನಿಕ ವಸ್ತುಗಳು, ಬಣ್ಣ ಮತ್ತು ಮರದ ಸಾಮಾನುಗಳ ತಯಾರಿಕೆ, ಮೋಟಾರಿನ ಬಿಡಿ ಭಾಗಗಳು, ಸಾಬೂನು, ವೈಜ್ಞಾನಿಕ ಉಪಕರಣಗಳು, ಗೃಹೋಪಯೋಗಿ ವಸ್ತುಗಳು ಮತ್ತು ಪಾತ್ರೆಗಳು, ಅಗರಬತ್ತಿ ತಯಾರಿಕೆ ಮುಂತಾದ ಅನೇಕ ಸಣ್ಣ ಕೈಗಾರಿಕೆಗಳು ಇವೆ. ಈ ಜಿಲ್ಲೆ ಕೈಮಗ್ಗದ ಬಟ್ಟೆಗಳಿಗೆ ಪ್ರಸಿದ್ಧ. ಉಣ್ಣೆ, ರೇಷ್ಮೆ, ಚರ್ಮ ಹದಗೊಳಿಸುವುದು ಮತ್ತು ಚರ್ಮವಸ್ತುಗಳ ತಯಾರಿಕೆ, ಕುಂಬಾರಿಕೆ, ಎಣ್ಣೆ ತೆಗೆಯುವುದು, ನೂಲು-ಹಗ್ಗ ತಯಾರಿಕೆ ಮುಂತಾದುವು ಸಹಕಾರಿ ಸಂಘಗಳ ಮುಖಾಂತರ ಪ್ರಗತಿ ಸಾಧಿಸುತ್ತಿವೆ. ಜಿಲ್ಲೆಯಲ್ಲಿ ದೊರೆಯುವ ಕೆಂಪು ಉಸುಕಿನ ಕಲ್ಲುಗಳನ್ನೂ ಕಲಾದಗಿ ಮಾದರಿಯ ಕರಿಕಲ್ಲುಗಳನ್ನು ಕಟ್ಟಡಕ್ಕಾಗಿಯೂ ಸ್ಲೇಟು ತಯಾರಿಕೆಗೂ ಉಪಯೋಗಿಸಿಕೊಳ್ಳುತ್ತಾರೆ. ಇವಲ್ಲದೆ ಚೀನೀ ಮಣ್ಣು ಮತ್ತು ಇಟ್ಟಿಗೆ ಮಣ್ಣು, ಬಾಕ್ಸೈಟ್ ಕೆಂಪು ಕಾವಿ, ಹಳದಿಮಟ್ಟಿ ಮುಂತಾದ ಉಪಯುಕ್ತ ಮಣ್ಣುಗಳು ಈ ಜಿಲ್ಲೆಯಲ್ಲಿ ದೊರೆಯುವುದರಿಂದ ಅಲ್ಯುಮಿನಿಯಂ ಕಾರ್ಖಾನೆ ಪಿಂಗಾಣಿ ಸಾಮಾನು ತಯಾರಿಕಾ ಕಾರ್ಖಾನೆಗಳಿವೆ. ಜಿಲ್ಲೆಯಲ್ಲಿ 113 ಬಟ್ಟೆ ಕಾರ್ಖಾನೆಗಳೂ 13 ರಾಸಾಯನಿಕ, 194 ಎಂಜಿನಿಯರಿಂಗ್ ಮತ್ತು ಇತರೇ ವಿಧದ 123 ಕಾರ್ಖಾನೆಗಳೂ ಇದ್ದು ಒಟ್ಟು 46,238 ಮಂದಿ ಉದ್ಯೋಗಿಗಳಿದ್ದರು. 11 ಕೈಗಾರಿಕಾ ಪ್ರದೇಶಗಳೂ 302 ಕೈಗಾರಿಕಾ ಶೆಡ್ಡುಗಳೂ ಇದ್ದವು (2001).

ಜಿಲ್ಲೆಯ ವಾಣಿಜ್ಯ ವ್ಯವಹಾರಗಳಿಗೆ ಕೈಗಾರಿಕಾಭಿವೃದ್ಧಿಗೆ ಅನುಕೂಲಿಸುವಂತೆ 218 ವಾಣಿಜ್ಯ ಬ್ಯಾಂಕುಗಳು, 105 ಗ್ರಾಮೀಣ ಬ್ಯಾಂಕುಗಳು, 636 ಸಹಕಾರ ಬ್ಯಾಂಕುಗಳು, 119 ಸಾಲ ಸಹಕಾರ ಸಂಘಗಳು, ಇತರೆ 1339 ವಿಧದ ಸಂಘಗಳೂ 42 ನಿಯಂತ್ರಿತ ಮಾರುಕಟ್ಟೆಗಳೂ ಇವೆ.

ಬೆಳಗಾಂವಿ ಜಿಲ್ಲೆಯ ಸಾಕ್ಷರತಾ ಪ್ರಮಾಣ ಒಟ್ಟು 64.42 ಇದ್ದು ಇದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿ 3,269 ಪ್ರಾಥಮಿಕ ಶಾಲೆಗಳು, 575 ಪ್ರೌಢಶಾಲೆಗಳು, 109 ಪದವಿಪೂರ್ವ ಕಾಲೇಜುಗಳೂ 63 ಸಾಮಾನ್ಯ ಶಿಕ್ಷಣಶಾಲೆಗಳೂ 11 ಪಾಲಿಟೆಕ್ನಿಕ್, 4 ಎಂಜನಿಯರಿಂಗ್, 1 ವೈದ್ಯಕೀಯ, 7 ಭಾರತೀಯ ವೈದ್ಯಪದ್ಧತಿ ಕಾಲೇಜು, 1 ದಂತವೈದ್ಯ ಕಾಲೇಜು ಇವೆ. ಜೊತೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವೂ ಇಲ್ಲಿದೆ.

ಜಿಲ್ಲಾ ಜನಾರೋಗ್ಯ ರಕ್ಷಣೆಗಾಗಿ ರಾಜ್ಯಸರ್ಕಾರದ 9 ಆಸ್ಪತ್ರೆಗಳೂ 5 ಭಾರತೀಯ ವೈದ್ಯಪದ್ಧತಿಯ ಆಸ್ಪತ್ರೆಗಳೂ 136 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 13 ಪ್ರಾಥಮಿಕ ಆರೋಗ್ಯ ಘಟಕಗಳೂ 16 ಚಿಕಿತ್ಸಾಲಯಗಳೂ

(ಡಿಸ್ಪೆನ್ಸರಿ) 30 ಭಾರತೀಯ ವೈದ್ಯಪದ್ಧತಿಯ ಚಿಕಿತ್ಸಾಲಯಗಳೂ 34 ಕುಟುಂಬ ಕಲ್ಯಾಣ ಕೇಂದ್ರಗಳೂ ಇವೆ. ಬೆಂಗಳೂರು-ಪುಣೆ ರೈಲ್ವೆ ಮಾರ್ಗ ಈ ಜಿಲ್ಲೆಯ ಏಳು ತಾಲ್ಲೂಕುಗಳ ಮುಖಾಂತರ, ದಕ್ಷಿಣದಿಂದ ನೇರ ಉತ್ತರಕ್ಕೆ ಹಾದುಹೋಗಿದೆ. ಲೋಂಡ, ಖಾನಾಪುರ, ಬೆಳಗಾಂವಿ, ಧೂಪದಾಳ, ಗೋಕಾಕ, ರಾಯಬಾಗ, ಕುಡಚಿ, ಶೇಡಬಾಳ ಮೊದಲಾದ

ಸಂಗೊಳ್ಳಿರಾಯಣ್ಣನ ಪ್ರತಿಮೆ

ರೈಲ್ವೆ ನಿಲ್ದಾಣಗಳಿವೆ. ಲೋಂಡ ಮೂಲಕ ಧಾರವಾಡ-ಕ್ಯಾಸಲ್‍ರಾಕ್ ರೈಲ್ವೆ ಮಾರ್ಗವಿದೆ. ಅದು ಮುಂದೆ ಗೋವಾಕ್ಕೆ ಸಂಪರ್ಕ ಕಲ್ಪಿಸಿದೆ. ಬೆಳಗಾಂವಿಯಿಂದ ಗೋವ, ಮಹಾರಾಷ್ಟ್ರ ರಾಜ್ಯಗಳಿಗೂ ಕರ್ನಾಟಕದ ಎಲ್ಲ ಮುಖ್ಯ ಸ್ಥಳಗಳಿಗೂ ಮಾರ್ಗಸಂಪರ್ಕವಿದೆ. ಜಿಲ್ಲೆಯಲ್ಲಿ 220 ಕಿಮೀ ಬ್ರಾಡ್‍ಗೇಜ್ ರೈಲುಮಾರ್ಗವಿದ್ದು 23 ರೈಲು ನಿಲ್ದಾಣಗಳಿವೆ. 201 ಕಿಮೀ ರಾಷ್ಟ್ರೀಯ ಹೆದ್ದಾರಿ, 732 ಕಿಮೀ ರಾಜ್ಯ ಹೆದ್ದಾರಿ, 2331 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳೂ 2360 ಕಿಮೀ ಗ್ರಾಮೀಣ ರಸ್ತೆಗಳೂ ಸೇರಿ ಒಟ್ಟು 9,129 ಕಿಮೀ ರಸ್ತೆಇದೆ. ಇದರಲ್ಲಿ 6,402 ಕಿಮೀ ಪಕ್ಕಾರಸ್ತೆಗಳು. ಮಾರ್ಗ ಸಂಪರ್ಕಕ್ಕೆ ಮುಖ್ಯ 38 ದೊಡ್ಡ ಸೇತುವೆಗಳಿವೆ. ಬೆಳಗಾಂವಿಯ ವಿಮಾನ ನಿಲ್ದಾಣದಿಂದ ಮಂಗಳೂರು, ಬೆಂಗಳೂರು, ಮುಂಬಯಿ ಮುಂತಾದೆಡೆಗಳಿಗೆ ವಿಮಾನ ಸಂಪರ್ಕವಿದೆ.

ಈ ಜಿಲ್ಲೆಯಲ್ಲಿ ಗಣೇಶನ ಹಬ್ಬ ಪ್ರಸಿದ್ಧ. ಅನೇಕ ಕಡೆ ಇದೊಂದು ಸಂಸ್ಕೃತಿಯ ಚಟುವಟಿಕೆಯ ಕಾಲವಾಗಿ ಕೀರ್ತನೆ, ಭಜನೆ, ಸಂಗೀತ ಮುಂತಾದವು ನಡೆಯುವುವು. ಕುಡಚಿ, ಕೊಕಟನೂರು, ಮಂಗಸುಳಿ, ಚಿಂಚಲಿ, ಸವದತ್ತಿ ಎಲ್ಲಮ್ಮನ ಗುಡ್ಡ, ಬಾಳೆಕುಂದ್ರಿ, ಅಮ್ಮಣಗಿ, ಅಂಕಲಗಿ, ತವರ, ಅರಭಾವಿ, ಕಲ್ಲೋಳಿ, ಸಾವಳಗಿ, ಗೊಡಚಿ ಮುಂತಾದ ಕ್ಷೇತ್ರಗಳಲ್ಲಿ ವರ್ಷಕ್ಕೊಮ್ಮೆ ಜಾತ್ರೆಗಳು ಮತ್ತು ಪರಿಷೆಗಳು ಸೇರುತ್ತವೆ.

ಬೆಳಗಾಂವಿ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಆದಿಶಿಲಾಯುಗದಿಂದ ಕಬ್ಬಿಣದ ಯುಗದವರೆಗಿನ ಅನೇಕ ಪ್ರಾಗೈತಿಹಾಸಿಕ ನೆಲೆಗಳಿವೆ. ಪ್ರ.ಶ.ಪೂ. 1ನೆಯ ಶತಮಾನದಲ್ಲಿ ಕಾಶ್ಯಪ ಗೋತ್ರದವನೊಬ್ಬ ಯದುಗ್ರಾಮದಲ್ಲಿ ಅನೇಕ ಯಜ್ಞಗಳನ್ನು ಮಾಡಿದನೆಂದು ಹಳೇ ಬೆಳಗಾಂವಿಯ (ವಡಗಾಂವ-ಮಾಧವಪುರ) ಶಿಲಾಲಿಪಿಯಿಂದ ತಿಳಿದುಬರುತ್ತದೆ. ಇಂದಿನ ವಡಗಾಂವ ಅಂದಿನ ಯದು ಗ್ರಾಮವೆಂಬುದು ವಿದ್ವಾಂಸರ ಅಭಿಪ್ರಾಯ. ಖಾನಾಪುರ ತಾಲ್ಲೂಕಿನ ಪುರಾತನ ಪ್ರದೇಶವಾದ ಹಲಶಿ ಗ್ರಾಮದಲ್ಲಿ ದೊರೆತಿರುವ ಏಳು ತಾಮ್ರಪಟಗಳ ಮೇರೆಗೆ ಹಲಶಿ ಗ್ರಾಮ ಆದ್ಯ ಕದಂಬರಾಜರ ಉಪರಾಜಧಾನಿಯಾಗಿತ್ತು. ಅಥಣಿಯ ಸುತ್ತಲ ಪ್ರದೇಶ ಕೂಂಡಿ ಅಥವಾ ಕುಹುಂಡಿ 3000 ಎಂದು ಹೆಸರಾಗಿದ್ದು ಕುಂತಲನಾಡಿಗೆ ಸೇರಿತ್ತು.

ಕದಂಬರು, ಚಳುಕ್ಯರು, ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು ಈ ಭಾಗದ ಮೇಲೆ ಒಡೆತನ ನಡೆಸಿದರು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಇದ್ದ ರಟ್ಟರ ಒಂದು ಸಾಮಂತ ಮನೆತನಕ್ಕೆ ಈ ಜಿಲ್ಲೆಯ ಸವದತ್ತಿ ಕೇಂದ್ರ ಸ್ಥಾನವಾಗಿತ್ತು. ಹಾಗೆಯೇ ಗೋವೆಯ ಜಯಕೇಶಿ ಹಲಶಿ 12,000 ಕೊಂಕಣ ಪ್ರದೇಶಗಳನ್ನು ಆಳುತ್ತಿದ್ದ. ಇವನ ರಾಜಧಾನಿ ಚಂದ್ರಪುರ. ಇದು ಚಿಕ್ಕೋಡಿ ತಾಲ್ಲೂಕಿನ ಚಂದೂರು ಇರಬಹುದೆಂದು ಒಂದು ಹೇಳಿಕೆ ಇದೆ. ಇದು 13ನೆಯ ಶತಮಾನದ ಪ್ರಾರಂಭದಲ್ಲಿ ರಟ್ಟ ಒಂದನೆಯ ಲಕ್ಷ್ಮೀದೇವ ವೇಣುಗ್ರಾಮವನ್ನು ಗೋವೆಯ ಕದಂಬರಿಂದ ವಶಪಡಿಸಿಕೊಂಡು ತನ್ನ ರಾಜಧಾನಿಯನ್ನು ಸುಗಂಧವರ್ತಿಯಿಂದ (ಸವದತ್ತಿ) ವೇಣುಗ್ರಾಮಕ್ಕೆ (ಬೆಳಗಾಂವಿಗೆ) ಬದಲಾಯಿಸಿದ.

ದೇವಗಿರಿಯ ಯಾದವ ಮನೆತನ ಆಳಿದ ಮೇಲೆ 1327ರಲ್ಲಿ ಮಹಮ್ಮದ್-ಬಿನ್-ತುಗಲಕ್ ಈ ಭಾಗದಲ್ಲಿ ತನ್ನ ಆಡಳಿತವನ್ನು ಸ್ಥಾಪಿಸಿ ಹುಕ್ಕೇರಿ ಮತ್ತು ರಾಯಬಾಗಗಳಲ್ಲಿ ತನ್ನ ಪ್ರತಿನಿಧಿಗಳಾಗಿ ಅಮೀರರನ್ನು ನೇಮಿಸಿದ. ಈ ಪ್ರದೇಶ ಮುಂದೆ ಬಹಮನೀ ಅರಸರ ಆಳ್ವಿಕೆ ಸೇರಿತು, ವಿಜಯನಗರ ಪತನದ ಅನಂತರ ಸಿರಸಿಂಗಿಯ ದೇಸಾಯರ ಪೂರ್ವಜ ವಿಠ್ಠಲಗೌಡ ಈ ಭಾಗದಲ್ಲಿ ಸ್ವತಂತ್ರ ರಾಜ್ಯ ಕಟ್ಟುವ ಪ್ರಯತ್ನ ಮಾಡಿದ. ಆದರೆ ಬಿಜಾಪುರದ ಆದಿಲ್ ಷಾ ಈತನ ಪ್ರಯತ್ನವನ್ನು ಭಂಗಗೊಳಿಸಿದ.

17ನೆಯ ಶತಮಾನದ ಉತ್ತರಾರ್ಧದಲ್ಲಿ ಶಿವಾಜಿಯ ಪ್ರಾಬಲ್ಯದೊಂದಿಗೆ ಬೆಳಗಾಂವಿ, ಪರಸಗಡ, ಹೂಲಿ, ಹುಕ್ಕೇರಿ, ರಾಯಬಾಗಗಳಲ್ಲಿ ಮರಾಠ ಸರದಾರರು ನೆಲಸತೊಡಗಿದರು. ಮುಂದೆ ಈ ಭಾಗದಲ್ಲಿ ಮರಾಠ ಪೇಶವೆಗಳ ಆಡಳಿತ ಪಸರಿಸಿ ಹುಕ್ಕೇರಿ, ವಂಟಮುರಿ, ಕಿತ್ತೂರು ಮೊದಲಾದ ಕಡೆ ದೇಸಾಯಿ ಆಡಳಿತ ಭದ್ರಗೊಂಡಿತು. ಆದರೆ 1818 ಮಾರ್ಚ್ 20ರಂದು ಜನರಲ್ ಮನ್ರೋ ಬೆಳಗಾಂವಿ ಕೋಟೆಯನ್ನು 22 ದಿನಗಳ ಕದನದ ಅನಂತರ ವಶಪಡಿಸಿಕೊಂಡ. ಮುಂದೆ ಬ್ರಿಟಿಷರು 1824ರ ಡಿಸೆಂಬರ್‌ನಲ್ಲಿ ಕಿತ್ತೂರನ್ನು ವಶಪಡಿಸಿಕೊಂಡರು. ಸಂಗೊಳ್ಳಿ ರಾಯಣ್ಣನನ್ನು ಬಂಧಿಸಿ ನಂದಗಡದಲ್ಲಿ ಗಲ್ಲಿಗೇರಿಸಿದರು. ಈ ಭಾಗದಲ್ಲಿ ಬ್ರಿಟಿಷರ ಆಡಳಿತ ತಳವೂರಿದ ಮೇಲೆ 1836ರಲ್ಲಿ ಧಾರವಾಡ ಜಿಲ್ಲೆಯನ್ನು ಉತ್ತರ-ದಕ್ಷಿಣ ಎಂದು ವಿಂಗಡಿಸಿ ಉತ್ತರಭಾಗಕ್ಕೆ ಬೆಳಗಾಂವಿಯನ್ನು ಕೇಂದ್ರವನ್ನಾಗಿ ಮಾಡಿದರು. 1956ರವರೆಗೂ ಮುಂಬಯಿ ಪ್ರಾಂತ್ಯದಲ್ಲಿದ್ದ ಈ ಜಿಲ್ಲೆ ಅನಂತರ ಕರ್ನಾಟಕ ರಾಜ್ಯದ ಒಂದು ಪ್ರಮುಖ ಜಿಲ್ಲೆಯಾಗಿ ಅಭಿವೃದ್ಧಿಹೊಂದುತ್ತಿದೆ. (ಎಸ್‍ಎ.ಎಸ್.;ಎಸ್.ವಿ.ಪಿ)

**ತಾಲ್ಲೂಕು:** ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಹುಕ್ಕೇರಿ, ಈಶಾನ್ಯದಲ್ಲಿ ಗೋಕಾಕ, ಪೂರ್ವದಲ್ಲಿ ಬೈಲಹೊಂಗಲ ಮತ್ತು ದಕ್ಷಿಣದಲ್ಲಿ ಖಾನಾಪುರ ತಾಲ್ಲೂಕುಗಳೂ ಪಶ್ಚಿಮದಲ್ಲಿ ಮಹಾರಾಷ್ಟ್ರ ರಾಜ್ಯವೂ ಇವೆ. ಬಾಗೇವಾಡಿ, ಬೆಳಗಾಂವಿ, ಉಚಗಾಂವ ಮತ್ತು ಕಾಕತಿ- ಇವು ಈ ತಾಲ್ಲೂಕಿನ ಹೋಬಳಿಗಳು. 136 ಗ್ರಾಮಗಳಿವೆ. ವಿಸ್ತೀರ್ಣ 10,369 ಚ.ಕಿಮೀ. ಈ ತಾಲ್ಲೂಕಿನಲ್ಲಿ 4,18,851 ಪುರುಷರೂ

3,96,262 ಮಹಿಳೆಯರೂ ಸೇರಿ ಒಟ್ಟು ಜನಸಂಖ್ಯೆ 8,15,581. ಇದರಲ್ಲಿ 3,08,878 ಗ್ರಾಮಸ್ಥರು, 5,06,235 ಪಟ್ಟಣವಾಸಿಗಳು ಇದ್ದಾರೆ.

ಪಶ್ಚಿಮ ಘಟ್ಟಗಳ ಅಂಚಿನಲ್ಲಿರುವ ಈ ತಾಲ್ಲೂಕು ಮಲೆನಾಡ ಪ್ರದೇಶ. ಇಲ್ಲಿ ತಂಪಾದ ವಾಯುಗುಣವಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 1,549.8 ಮಿಮೀ. ಖಾನಾಪುರ ತಾಲ್ಲೂಕನ್ನು ಬಿಟ್ಟರೆ ಇಡೀ ಜಿಲ್ಲೆಯಲ್ಲಿ ಇದು ಅತ್ಯಧಿಕ ಮಳೆ ಬೀಳುವ ಪ್ರದೇಶ. ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಅರಣ್ಯವಿದೆ. ಅರಣ್ಯ ಪ್ರದೇಶದಲ್ಲಿ ಬೆಲೆಬಾಳುವ ಉಪಯುಕ್ತ ಮರಗಳು ಬೆಳೆಯುತ್ತವೆ. ಈ ತಾಲ್ಲೂಕಿನ ವಾಯವ್ಯ ಭಾಗದಲ್ಲಿ ತಾಲ್ಲೂಕು ಗಡಿಯಾಗಿ ಸ್ವಲ್ಪದೂರ ಘಟಪ್ರಭಾ ನದಿ ಹರಿಯುವುದು. ತಾಲ್ಲೂಕು ಘಟಪ್ರಭಾ ಮತ್ತು ಮಲಪ್ರಭಾ ನದಿಗಳೆರಡರ ನಡುವೆ ಇದೆ. ಈ ತಾಲ್ಲೂಕಿನಲ್ಲಿ ಕೆಲವು ತೊರೆಗಳು ಮಳೆಗಾಲದಲ್ಲಿ ತುಂಬಿ ಹರಿದು ಬೇಸಗೆಯಲ್ಲಿ ಬತ್ತಿಹೋಗುತ್ತವೆ. ಹೆಸರಿಸಬಹುದಾದ ನದಿಯೆಂದರೆ ಮಾರ್ಕಂಡೇಯ. ಇದು ನೈಋತ್ಯ ದಿಂದ ಈಶಾನ್ಯಾಭಿಮುಖವಾಗಿ ಹರಿಯುವುದು. ಬೆಲಾರಿ ಮತ್ತು ಇತರ ತೊರೆಗಳು ಈ ನದಿಯನ್ನು ದಕ್ಷಿಣದಿಂದ ಕೂಡಿಕೊಳ್ಳುವುವು. ತಾಲ್ಲೂಕಿನ ಬಹುಭಾಗದಲ್ಲಿ ವ್ಯವಸಾಯಕ್ಕೆ ಅನುಕೂಲವಾದ ಕಸುವಿನ ಎರೆಭೂಮಿ ಇದೆ. ನದಿತೊರೆಗಳ ಬಯಲು ಪ್ರದೇಶವೆಲ್ಲ ಫಲವತ್ತಾಗಿದ್ದು ಬತ್ತ, ಕಬ್ಬು ಬೆಳೆಗೆ ಪ್ರಶಸ್ತವಾಗಿದೆ. ಇವುಗಳ ಜೊತೆಗೆ ಜೋಳ, ಗೋದಿ, ದ್ವಿದಳ ಧಾನ್ಯಗಳು, ಸೇಂಗಾ, ವಿವಿಧ ತರಕಾರಿಗಳನ್ನು ಬೆಳೆಯುತ್ತಾರೆ.

ಈ ತಾಲ್ಲೂಕಿನಲ್ಲಿ ಶಾಲಾಕಾಲೇಜುಗಳೂ ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುಚ್ಛಕ್ತಿ ಸೌಲಭ್ಯಗಳೂ ಉಂಟು. ಪಶುವೈದ್ಯಾಲಯ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಮುಂತಾದ ಆಧುನಿಕ ಸೌಕರ್ಯಗಳಿವೆ. ರಾಷ್ಟ್ರೀಯ ಹೆದ್ದಾರಿ, ಜಿಲ್ಲಾ ಹೆದ್ದಾರಿ ಈ ತಾಲ್ಲೂಕಿನ ಮುಖಾಂತರ ಹಾದು ಹೋಗಿದೆ, ಸುತ್ತಲ ರಾಜ್ಯ, ಪಟ್ಟಣ, ಗ್ರಾಮಗಳಿಗೆ ಉತ್ತಮ ಮಾರ್ಗ ಸಂಪರ್ಕ ಇದೆ. ಬೆಂಗಳೂರು-ಮೀರಜ್ ರೈಲ್ವೆಮಾರ್ಗ ಈ ತಾಲ್ಲೂಕಿನ ದಕ್ಷಿಣದಿಂದ ಉತ್ತರಕ್ಕೆ ಹಾದುಹೋಗಿದೆ.

ಈ ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳೆಂದರೆ ಬೆಳಗಾಂವಿಗೆ ಸು. 5 ಕಿಮೀ ದೂರದಲ್ಲಿರುವ ಕಣಬರಗಿ ಗ್ರಾಮದ ಹತ್ತಿರವಿರುವ ರಾಮತೀರ್ಥ. ಇಲ್ಲಿ ಬೆಟ್ಟದ ಬುಡದ ತೀರ್ಥದಲ್ಲಿ ಜನ ಮಿಂದು ಅಲ್ಲಿರುವ ದೇವಾಲಯ ಗಳಲ್ಲಿ ಪೂಜೆ ಸಲ್ಲಿಸುವರು. ಬೆಳಗಾಂವಿಯ ಪೂರ್ವಕ್ಕೆ ಸಾಂಬ್ರದ ಹತ್ತಿರವಿರುವ ಬಾಳೆಕುಂದ್ರಿಯಲ್ಲಿ ಪಂತಮಹಾರಾಜರ ಮಠ ಮತ್ತು ಮಂದಿರ ಇವೆ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಬೆಳಗಾಂವಿ-ಸಂಪಗಾಂವ ಮಾರ್ಗದಲ್ಲಿ ಬೆಳಗಾಂವಿಯ ಆಗ್ನೇಯಕ್ಕಿರುವ ಬಾಗೇವಾಡಿ ಹೋಬಳಿ ಕೇಂದ್ರ ಮತ್ತು ವ್ಯಾಪಾರ ಕೇಂದ್ರ.

**ಪಟ್ಟಣ:** ಬೆಳಗಾಂವಿ ಈ ಜಿಲ್ಲೆಯ ಮುಖ್ಯ ನಗರ; ತಾಲ್ಲೂಕು, ಹೋಬಳಿ ಮತ್ತು ಜಿಲ್ಲೆಯ ಆಡಳಿತ ಕೇಂದ್ರ. ಬೆಂಗಳೂರು-ಮಿರಜ್ ರೈಲುಮಾರ್ಗ ಹಾಗೂ ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿಯಲ್ಲಿ, ಧಾರವಾಡದ ವಾಯವ್ಯಕ್ಕೆ 77 ಕಿಮೀ ಮತ್ತು ಸಮುದ್ರತೀರದಿಂದ ಸು. 113 ಕಿಮೀ ದೂರದಲ್ಲಿದೆ.

ನಗರದ ಉತ್ತರದಲ್ಲಿ ಸು. 5 ಕಿಮೀ ದೂರದಲ್ಲಿ ಮಾರ್ಕಂಡೇಯ ನದಿಯೂ ನಗರದ ದಕ್ಷಿಣದಲ್ಲಿ ಸು. 3 ಕಿಮೀ ದೂರದಲ್ಲಿ ಇದನ್ನು ಸೇರುವ ಬೆಲಾರಿ ತೊರೆಯೂ ಹರಿಯುತ್ತದೆ. ನಗರದ ಸ್ವಲ್ಪ ದೂರದಲ್ಲಿ ಸುತ್ತಲೂ ಸಣ್ಣಗುಡ್ಡಗಳೂ ಮಾವಿನ ತೋಪುಗಳೂ ಇವೆ. ನಗರ ಸಮುದ್ರಮಟ್ಟದಿಂದ ಸು. 640 ರಿಂದ 688 ಮೀ ಎತ್ತರದಲ್ಲೂ ಹೆಚ್ಚು ಮಳೆ ಬೀಳುವ ಮಲೆನಾಡು ಪ್ರದೇಶದಲ್ಲೂ ಇರುವುದರಿಂದ ವರ್ಷ ಪೂರ್ತಿ ಇಲ್ಲಿ ತಂಪಾದ ವಾಯುಗುಣ ಇರುತ್ತದೆ.

ಬೆಳಗಾಂವಿ ನಗರ ನಾಗರಿಕ ಪ್ರದೇಶ ಮತ್ತು ದಂಡಿನ ಪ್ರದೇಶಗಳಿಂದ ಕೂಡಿದೆ. ಇಲ್ಲಿನ ದಂಡು ಮರಾಠಾ ಕಾಲ್ದಳದ ಕೇಂದ್ರ. ಇಲ್ಲಿಯ ನಗರಸಭೆ 1851ರಷ್ಟು ಹಿಂದೆಯೇ ಸ್ಥಾಪಿತವಾದದ್ದು. ದಂಡು ಸೇರಿದಂತೆ ವಿಶಾಲ ಬೆಳಗಾಂವಿ ನಗರದ ಒಟ್ಟು ಜನಸಂಖ್ಯೆ 5,06,480.

ಶಿಕ್ಷಣ ರಂಗದಲ್ಲಿ ಮುಂದುವರಿಯುತ್ತಿರುವ ಈ ನಗರದಲ್ಲಿ ಕಾಲೇಜು ಗಳೂ ಕೆ.ಎಲ್.ಇ. ಸೊಸೈಟಿಯೂ ಮೆಡಿಕಲ್ ಕಾಲೇಜೂ ಇವೆ. ಶಿರಸಂಗಿ ದೇಸಾಯರು ಶಿಕ್ಷಣಕ್ಕಾಗಿ ಉದಾರವಾಗಿ ದೇಣಿಗೆ ನೀಡಿ ಇಲ್ಲಿ ಅನೇಕ ಶಾಲೆ ಕಾಲೇಜುಗಳು ತಲೆಯೆತ್ತಲು ಕಾರಣರಾಗಿದ್ದಾರೆ. ಅವರ ಸ್ಮರಣಾರ್ಥ ಲಿಂಗರಾಜ ಕಾಲೇಜು ತೆರೆಯಲಾಗಿದೆ. ಮಹಿಳಾ ಶಿಕ್ಷಣಕ್ಕಾಗಿ ವನಿತಾ ವಿದ್ಯಾಲಯವಿದೆ. ಆಯುರ್ವೇದ, ಹೋಮಿಯೋಪತಿ ಕಾಲೇಜುಗಳೂ ಇವೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕೇಂದ್ರ ಬೆಳಗಾಂವಿ.

ಷೇಕ್ ಹೋಮಿಯೋಪತಿ ಕಾಲೇಜು, ಬೆಳಗಾಂವಿ

ಬೆಳಗಾಂವಿ ನಗರ ಬೆಂಗಳೂರು-ಮಿರಜ್ ರೈಲ್ವೆ ಮಾರ್ಗದ ಒಂದು ಪ್ರಮುಖ ನಿಲ್ದಾಣ. ನಗರಕ್ಕೆ ಹತ್ತಿರದಲ್ಲೆ ವಿಮಾನ ನಿಲ್ದಾಣವಿದೆ. ಈ ನಗರದಿಂದ ಜಿಲ್ಲೆಯ ಮತ್ತು ರಾಜ್ಯದ ಎಲ್ಲೆಡೆಗೆ ಉತ್ತಮ ಮಾರ್ಗ ಸಂಪರ್ಕವಿದೆ. ಇದು ಪ್ರಮುಖ ವ್ಯಾಪಾರೀ ಕೇಂದ್ರವಾಗಿ ಬೆಳೆಯುತ್ತಿದೆ. ಜೊತೆಗೆ ಅನೇಕ ಕಿರಿ ಉದ್ಯಮಗಳ ಕೇಂದ್ರವಾಗಿದೆ. ವ್ಯಾಕ್ಸಿನ್ ಇನ್‌ಸ್ಟಿಟ್ಯೂಟಿನಂಥ ಅಪೂರ್ವ ಸಂಸ್ಥೆಗಳೂ ಇಲ್ಲಿರುವುವು. ಶನಿದೇವರು ಮತ್ತು ಮಾರುತಿದೇವರ ಹಳೆಯಗುಡಿಗಳೊಂದಿಗೆ ಮಿಲಿಟರಿ ಮಹಾದೇವ ಮೊದಲಾದ ಆಧುನಿಕ ರೀತಿಯ ದೇವಾಲಯಗಳೂ ಇವೆ. ಸುಂದರ ಉದ್ಯಾನವಿರುವ ನಗರ ಬೆಳಗಾಂವಿ.

ಇಲ್ಲಿ ಗಣೇಶನ ಉತ್ಸವವನ್ನು ವೈಭವದಿಂದ ನಡೆಸುವರು. ಈ ನಗರದ ಪೂರ್ವಭಾಗದಲ್ಲಿ ಸು. 100 ಎಕರೆ ಪ್ರದೇಶವನ್ನಾಕ್ರಮಿಸಿರುವ ಕೋಟೆ ಇದೆ. ಇದರ ಸುತ್ತಲೂ ಕಂದಕವಿದೆ. ಈ ಕೋಟೆಯ ಒಳಗೆ ಶಿಲಾಲೇಖಗಳೂ ವೀರಗಲ್ಲುಗಳೂ ಇವೆ. ಈ ಕೋಟೆಯ ಅಗಸೆಯೊಂದ ರಲ್ಲಿ ದುರ್ಗಿಗುಡಿ, ಖಿಲ್ಲೇದಾರ್ ಅಸನ್‌ಖಾನನು ಕಟ್ಟಿಸಿರುವ ಒಂದು ಮಸೀದಿ ಇದೆ. ದಂಡಿನ ಪ್ರದೇಶದಲ್ಲಿ ಅಸದ್‌ಖಾನ್‌ನ ದರ್ಗಾ ಇದೆ. ಕೋಟೆಯೊಳಗಣ ಕಮಲ ಬಸದಿ ಬಹು ಸುಂದರವಾದದ್ದು. ಬೆಳಗಾಂವಿ ಪಶ್ಚಿಮದ ದಂಡಿನ ಪ್ರದೇಶದಲ್ಲಿ ಬ್ಯಾರಕ್ಕುಗಳು, ತೋಪಖಾನೆ ಇವೆ. ಇಲ್ಲಿಯ ಸೇಂಟ್ ಮೇರಿ ಚರ್ಚು ಭವ್ಯವಾದದ್ದು. ನಗರದಲ್ಲಿ ಕಿತ್ತೂರ ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಇವರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ಚಿದಂಬರೇಶ್ವರನ ಭಕ್ತರಾಗಿ ಅನೇಕ ಅಭಂಗಗಳನ್ನು ರಚಿಸಿರುವ ರಾಜಾರಾಮ ಮಹಾರಾಜರ ಮಠವಿದೆ.

ಬೆಳಗಾಂವಿಗೆ ಸೇರಿದಂತಿರುವ ವಡಗಾಂವ-ಮಾಧವಪುರದಲ್ಲಿ ಕ್ರಿಸ್ತಶಕಾರಂಭದ ಆಸುಪಾಸಿನ ಶತಮಾನಗಳ ಒಂದು ಪ್ರಾಚೀನ ಪಟ್ಟಣ ಬೆಳಕಿಗೆ ಬಂದಿದೆ. ಬಹುಶಃ ಬೆಳಗಾಂವಿ ಪಟ್ಟಣ ಆ ಕಾಲದಿಂದಲೂ

ಬೆಳೆದು ಬಂದಿರಬೇಕೆಂಬುದಕ್ಕೆ ಇದೊಂದು ಆಧಾರ. ಗೋವೆಯ ಕದಂಬರ ಕಾಲದಲ್ಲಿ ಬೆಳಗಾಂವಿ ಕೋಟೆ ಬಹಮನೀ ಅರಸರ ಆಡಳಿತಕ್ಕೆ ಸೇರಿದ್ದು ಅವರ ಪ್ರತಿನಿಧಿಯಾಗಿ ಮುಸ್ತಾಫಾ ಎಂಬುವವನೂ ಇದ್ದನೆಂದೂ ಬೆಳಗಾಂವಿಗೆ ಆಗ ಮುಸ್ತಫಾಬಾದ್ ಎಂಬ ಹೆಸರಿತ್ತೆಂದೂ ತಿಳಿದು ಬರುತ್ತದೆ. ಬಿಜಾಪುರದ ಆದಿಲ್ ಶಾಹಿಗಳು ಬೆಳಗಾಂವಿಯನ್ನು ವಶಪಡಿಸಿ ಕೊಂಡು 'ಅಜೀಂನಬರ್' ಎಂದು ಕರೆದರು. ಆಗ ಈ ಭಾಗವನ್ನಾಳಿದ ಅಸದ್‌ಖಾನ್ ಬಲಿಷ್ಠ ಸರದಾರನಾಗಿದ್ದ. 1696ರಲ್ಲಿ ಬೆಳಗಾಂವಿಯನ್ನು ಸಂದರ್ಶಿಸಿದ ಇಟಲಿಯ ಪ್ರವಾಸಿಯೊಬ್ಬ ಬೆಳಗಾಂವಿ ಒಂದು ದೊಡ್ಡ ವ್ಯಾಪಾರಕೇಂದ್ರವೆಂದೂ ಇಲ್ಲಿಯ ಮುಸಲ್ಮಾನ ಸರದಾರ ಭದ್ರವಾದ ಕೋಟೆ ಕಟ್ಟಿರುವನೆಂದೂ ಬರೆದಿದ್ದಾನೆ.

ಪಾರ್ಶ್ವನಾಥ ವಿಗ್ರಹ ಅಮ್ಮಣಗಿ, ಹುಕ್ಕೇರಿ ತಾಲ್ಲೂಕು

ಮುಂದೆ ಹೈದರ್ ಮತ್ತು ಮರಾಠರ ವಶದಲ್ಲಿದ್ದ ಈ ಊರನ್ನು 1818ರಲ್ಲಿ ಬ್ರಿಟಿಷರು ವಶಪಡಿಸಿಕೊಂಡರು. ಅನಂತರ ಮುಂಬಯಿ ಪ್ರಾಂತ್ಯಕ್ಕೆ ಸೇರಿದ ಈ ನಗರವನ್ನು 1836ರಲ್ಲಿ ಆ ಪ್ರಾಂತ್ಯದ ದಕ್ಷಿಣ ವಿಭಾಗದ ಕೇಂದ್ರವಾಗಿ ಮಾಡಲಾಯಿತು. ಬೆಳಗಾಂವಿ ಮೊದಲಿನಿಂದಲೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿತ್ತು. 1857ರ ಬಂಡಾಯದಲ್ಲಿ ಇಲ್ಲಿನ ದಂಡಿನಲ್ಲಿ ಕೆಲವು ಚಟುವಟಿಕೆಗಳು ನಡೆದಿದ್ದವೆಂದು ತಿಳಿದು ಬರುತ್ತದೆ. ಈ ಬಗ್ಗೆ ಸಂದೇಹದಿಂದ ವಹಾಬಿ ಮುನ್‌ಷಿ ಮತ್ತು 5 ಜನ ಸಿಪಾಯಿಗಳನ್ನು ಮರಣ ದಂಡನೆಗೆ ಗುರಿಪಡಿಸಿ 4 ಮಂದಿಯನ್ನು ಗಡೀಪಾರು ಮಾಡಲಾಯಿತು. ನರಗುಂದದ ಬಾಬಾಸಾಹೇಬನನ್ನು 1858ರಿಂದ ಜೂನ್ 12ರಂದು ಬೆಳಗಾಂವಿ ಹತ್ತಿರ ಗಲ್ಲಿಗೇರಿಸಲಾಯಿತು. 1888ರಿಂದ ಬೆಳಗಾಂವಿಯಲ್ಲಿ ರಾಜಕೀಯ ಚಟುವಟಿಕೆ ಮತ್ತೆ ಬಹಿರಂಗವಾಗಿ ಕಾಣಿಸಲಾರಂಭಿಸಿತು. ಅಗರಕರ, ರಾನಡೆ, ಗೋಖಲೆ, ವಾಛಾ, ಟಿಳಕರು ಇಲ್ಲಿ ಸಾರ್ವಜನಿಕ ಭಾಷಣ ಮಾಡಿ ಜನರಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯಾಭಿಲಾಷೆಯನ್ನು ಕೆರಳಿಸಿದರು. 1895ರಲ್ಲಿ ಮುಂಬಯಿ ಪ್ರಾಂತ್ಯ ಪರಿಷತ್ತು ಬೆಳಗಾಂವಿಯಲ್ಲಿ ಸಭೆ ಸೇರಿದಾಗ ಸರ್.ಡಿ.ಇ. ವಾಛಾ ಅಧ್ಯಕ್ಷರು. 1916ರಲ್ಲಿ ಮತ್ತೆ ಇಲ್ಲೇ ಸಭೆ ಸೇರಿದಾಗ ಟಿಳಕ, ಗಾಂಧೀ ಮೊದಲಾದವರು ಬಂದಿದ್ದರು. ಹೋಮ್ ರೂಲ್ ಲೀಗ್ ಚಳವಳಿ ಇಲ್ಲೇ ರೂಪುಗೊಂಡಿದ್ದು. 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂಬ ಪ್ರಸಿದ್ಧ ಹೇಳಿಕೆಯನ್ನು ಟಿಳಕರು ಪ್ರಥಮವಾಗಿ ಘೋಷಿಸಿದ್ದು ಬೆಳಗಾಂವಿಯಲ್ಲಿ. 1924ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ 39ನೆಯ ಅಧಿವೇಶನ ಬೆಳಗಾಂವಿಯಲ್ಲಿ ಮಹಾತ್ಮಾ ಗಾಂಧೀಯವರ ಅಧ್ಯಕ್ಷತೆಯಲ್ಲಿ ನಡೆದು ಚರಿತ್ರಾರ್ಹವಾದುದೆನಿಸಿತು. ಇದೇ ಕಾಲದಲ್ಲೇ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು ಇಲ್ಲಿ ಸೇರಿ ಕಾಂಗ್ರೆಸ್ ಅಧಿವೇಶನದ ಬೆಂಬಲ ಗಳಿಸಿಕೊಂಡಿತು. ಕರ್ನಾಟಕ ಏಕೀಕರಣ ಚಳವಳಿ ಯಲ್ಲಿ ಈ ಜಿಲ್ಲೆ ಪ್ರಮುಖ ಪಾತ್ರವಹಿಸಿತು. ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ ರಚನೆಯಾದಾಗ (1956) ಬೆಳಗಾಂವಿ ಜಿಲ್ಲೆ ಅಂದಿನ ಮೈಸೂರು ರಾಜ್ಯದ ಭಾಗವಾಯಿತು. *

**ಬೆಳಗಾಮಿ:** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಶಿರಾಳ ಕೊಪ್ಪಕ್ಕೆ ಎರಡು ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 3,349. ಬಳ್ಳಿಗಾಮೆ, ವಲ್ಲಿಗ್ರಾಮೆ, ಬಳ್ಳಿಗಾವೆ, ಬಲಿರಾಜಧಾನಿ ಮುಂತಾದ ಹೆಸರುಗ ಳಿಂದ ಹಿಂದೆ ಇದು ಕರ್ನಾಟಕದ ಪ್ರಸಿದ್ಧವಾಗಿದ್ದ ನಗರಗಳಲ್ಲೊಂದಾಗಿತ್ತು. ಇಲ್ಲಿ ದೊರೆತಿರುವ ನೂರಿಪ್ಪತ್ತಕ್ಕೂ ಹೆಚ್ಚು ಶಾಸನಗಳು, ಇಲ್ಲಿಯ ಅಳಿದುಳಿದ ದೇವಾಲಯಗಳು, ಇತರ ಕಟ್ಟಡಗಳ ಭಾಗಗಳು, ಎಲ್ಲೆಲ್ಲಿಯೂ ಹರಡಿರುವ ಶಿಲ್ಪಗಳು, ಶಿಲ್ಪದ ತುಣುಕುಗಳು, ವಿಸ್ತಾರವಾಗಿ ಹಬ್ಬಿರುವ ಪ್ರಾಚೀನ ನಿವೇಶನದ ಅವಶೇಷಗಳು ಇವು ಈ ನಗರದ ಒಂದು ಕಾಲದ ಸಮೃದ್ಧಿಯನ್ನೂ ವೈಭವವನ್ನೂ ನೆನಪು ಮಾಡಿಕೊಡುತ್ತವೆ.

ಏಳನೆಯ ಶತಮಾನದಲ್ಲಿಯೇ ಇದು ವಳ್ಳಿರ್ಗ್ರಾಮೆ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಾಗಿ ಶಾಸನವೊಂದರಿಂದ ತಿಳಿದುಬರುತ್ತದೆ. ಇಲ್ಲಿ ಪಾಂಡವರು ಪಂಚಲಿಂಗ ಪ್ರತಿಷ್ಠೆ ಮಾಡಿದುದಾಗಿಯೂ ಇದು ಬಲಿಯ ರಾಜಧಾನಿಯಾ ಗಿದ್ದುದರಿಂದ ಇದಕ್ಕೆ ಬಲಿಪುರವೆಂಬ ಹೆಸರು ಉಂಟೆಂದೂ ಕೆಲವು ಶಾಸನಗಳು ತಿಳಿಸುತ್ತವೆ.

ಈ ಊರು ಅತ್ಯಂತ ಉಚ್ಛ್ರಾಯ ಸ್ಥಿತಿಗೆ ಬಂದುದು 11–12ನೆಯ ಶತಮಾನಗಳಲ್ಲಿ. ಇಲ್ಲಿನ ಬಹುತೇಕ ಶಾಸನಗಳು ಈ ಕಾಲಕ್ಕೆ ಸೇರಿದುವು. ಸುಂದರವಾಗಿ ಕಂಡರಿಸಿರುವ ಈ ಶಾಸನಗಳನೇಕವು ಪ್ರೌಢವಾದ ಶೈಲಿಯ ಲ್ಲಿದ್ದು ಸಾಹಿತ್ಯಿಕ ಮೌಲ್ಯವನ್ನು ಪಡೆದಿವೆ. ಬಳ್ಳಿಗಾಮೆಯ ವರ್ಣನೆ, ಇಲ್ಲಿನ ದೇವಾಲಯಗಳ ಮಠಗಳ ವರ್ಣನೆ, ಇಲ್ಲಿನ ತಪೋಧನರು, ಅವರ ವಿದ್ವತ್ತು, ಈ ಪಟ್ಟಣದ ಜನಗಳು ಒಂದೊಂದನ್ನೂ ಶಾಸನಗಳು ಅಮೋಘವಾಗಿ ವರ್ಣಿಸಿವೆ. ಬಳ್ಳಿಗಾಮೆ ಸಜ್ಜನನಿಧಿ ಪಟ್ಟಣಂಗಳ ತವರ್ಮನೆಯಾಗಿತ್ತು. ಇದು ಅಮರಾವತಿಯಂತೆ ವಿಬುಧೈಕವಾಸವೂ ಭೋಗವತೀಪುರದಂತೆ ಅತಿಭೋಗಿಸೇವ್ಯವೂ ಅಲಕಾಪುರದಂತೆ ಧನದ ಪ್ರಸೇವ್ಯವೂ ಆಗಿತ್ತು. ಇಲ್ಲಿನ ನಾಗರಿಕರು ಪರಹಿತರೇಕವಾಕ್ಯರಟುವಿಂಗೆ ತವರ್ಮನೆ, ಧರ್ಮದಾಗರಂ, ಸರಸಕವೀಶ್ವರಾಳಿಗೆ ಕೇಳೀಗೃಹಂ ಇದು ಹರಿ ಹರ ಕಮಳಾಸನ ವೀತರಾಗ ಬೌದ್ಧಾಲಯಗಳಿಂದ ಪಂಚಮಠಗಳಿಂದ ರಾರಾಜಿಸುತ್ತಿತ್ತು–ಸಕಲ ಸೌಂದರ್ಯಕ್ಕೂ ಸಕಲ ಧರ್ಮಕ್ಕೂ ತವರುಮನೆಯಾಗಿ ಬಳ್ಳಿಗಾಮೆ ಶೋಭಿಸುತ್ತಿತ್ತು. ಇದು ಅನಾದಿಪಟ್ಟಣ, ಮಹಾಪಟ್ಟಣ ರಾಜಧಾನಿ ಎಂದೆಲ್ಲ ಹೊಗಳುತ್ತವೆ ಶಾಸನಗಳು. ಇಲ್ಲಿಯ ಮಠಗಳು ಪ್ರಸಿದ್ಧ ವಿದ್ಯಾಕೇಂದ್ರಗಳೂ ಆಗಿದ್ದುವು.

ಬನವಸೆ 12000 ಪ್ರಾಂತ್ಯಕ್ಕೆ ಬಳ್ಳಿಗಾಮೆ ರಾಜಧಾನಿಯಾಗಿತ್ತು. ಹನ್ನೊಂದನೆಯ ಶತಮಾನದ ಆದಿಯಿಂದಲೇ ಚಾಳುಕ್ಯರ ಸಾಮಂತರು ಇಲ್ಲಿಂದ ಆಳಿದರು. ತೈಲಪನ ಕಾಲದಲ್ಲಿ ಕುಂದಮರಸ ಆಳುತ್ತಿದ್ದರೆ, ಸೋಮೇಶ್ವರನ ಕಾಲದಲ್ಲಿ ಅವನ ಮಗ ವಿಕ್ರಮಾದಿತ್ಯ ಚಕ್ರವರ್ತಿಯಾಗುವು ದಕ್ಕೆ ಮೊದಲು ಚಾಳುಕ್ಯಚಕ್ರಾಧಿಪತ್ಯದ ದಕ್ಷಿಣ ದಿಶಾಭಾಗವನ್ನೆಲ್ಲ ಇಲ್ಲಿಂದ ಆಳುತ್ತಿದ್ದ. ಕಳಚುರಿ ಬಿಜ್ಜಳ ತನ್ನ ಕಾಲದಲ್ಲಿ ಈ ಭಾಗವನ್ನು ನೋಡಿಕೊಳ್ಳಲು ಅತಿ ದಕ್ಷರಾದ ದಂಡನಾಯಕರನ್ನು ನೇಮಿಸಿದ್ದ. ಇಲ್ಲಿನ ದೇವಾಲಯಗಳ, ಮಠಗಳ, ತಪೋಧನರ ಹಿರಿಮೆಯನ್ನು ಕೇಳಿ, ಕಣ್ಣಾರೆ ಕಂಡು ಈ ಚಕ್ರವರ್ತಿಗಳು ಅವುಗಳಿಗಾಗಿ ಅನೇಕ ದಾನಧರ್ಮಗಳನ್ನು ಮಾಡಿದರು. ಆದರೆ ಮುಂದೆ ಹೊಯ್ಸಳರಿಗೂ ಸೇವುಣರಿಗೂ ಆದ ತಿಕ್ಕಾಟದಲ್ಲಿ, ಹೊಯ್ಸಳರು ಈ ಭಾಗವನ್ನೆಲ್ಲ

ಗೆದ್ದಮೇಲೆ, ಇದರ ಪ್ರಾಮುಖ್ಯ ಕಡಿಮೆಯಾಗಿ ಇಲ್ಲಿನ ಪ್ರತಿಭೆ ಹೊಯ್ಸಳ ರಾಜಧಾನಿಗಳಾದ ಬೇಲೂರು, ದೋರಸಮುದ್ರಗಳ ಕಡೆ ಹರಿಯಿತು. ವಿಷ್ಣುವರ್ಧನನ ರಾಣಿ ಶಾಂತಲೆ ಇಲ್ಲಿನ ಧರ್ಮೇಶ್ವರ ದೇವರ ಪ್ರಸಾದದಿಂದ ಹುಟ್ಟಿದವಳು; ಪ್ರಸಿದ್ಧ ಹೊಯ್ಸಳ ಶಿಲ್ಪಿಗಳಾದ ದಾಸೋಜ, ಅವನ ಮಗ ಚಾವಣ ಬಳ್ಳಿಗಾಮೆಯವರು. ಬಳ್ಳಿಗಾಮೆಯ ದೇವಾಲಯಗಳ ಹಲವು ಶಿಲ್ಪಗಳಲ್ಲಿ ದಾಸೋಜನ ಕೈವಾಡವಿದ್ದಿರಬೇಕು. ಒಂದು ದೊಡ್ಡ ಶಾಸನವನ್ನಂತೂ ಇವನು ಕಂಡರಿಸಿದ್ದಾನೆ.

ಬೆಳಗಾಮಿ ಈಗ ಅತಿ ಸಾಮಾನ್ಯವಾದ ಒಂದು ಹಳ್ಳಿ. ಇಲ್ಲಿ ಹಿಂದೆ ನಿರ್ಮಿತವಾಗಿದ್ದ ಸುಂದರವಾದ ದೇವಾಲಯಗಳು, ಬಸದಿಗಳು, ವಿಹಾರಗಳು, ಮಠಗಳು ಉಳಿದಿರುವುದಕ್ಕಿಂತಲೂ ಅಳಿದಿರುವುದೇ ಹೆಚ್ಚು. ಶಾಸನಗಳಲ್ಲಿ ತಿಳಿಸಿರುವ ನಂದಿಕೇಶ್ವರ, ಕುಸುಮೇಶ್ವರ, ಗವರೇಶ್ವರ, ಜಗದೇಕ ಮಲ್ಲೇಶ್ವರ, ತ್ರಿಲೋಕೇಶ್ವರ, ಜೋಗೇಶ್ವರ, ವೀರಕೇಶವ, ನಾರಸಿಂಹ, ಅಷ್ಟೋಪವಾಸಿ ಭಟಾರರ ಬಸದಿ, ಗೊಳಪಯ್ಯನ ಬಸದಿ, ಜಯಂತಿ ಪ್ರಭಬೌದ್ಧವಿಹಾರ ಮೊದಲಾದವು ಬರಿಯ ಹೆಸರಿನಲ್ಲಿ ಮಾತ್ರ ಉಳಿದಿವೆ. ಈಗಿರುವ ಮನೆಗಳನೇಕವುಗಳ ಹಿತ್ತಿಲುಗಳು ಹಳೆಯ ದೇವಾಲಯಗಳಿದ್ದ ತಾಣಗಳಾಗಿರುವುವು. ಈ ಮನೆಗಳಿಗೆ ಉಪಯೋಗಿಸಿರುವ ಕಲ್ಲುಗಳು ದೇವಾಲಯಗಳ ಗೋಡೆಗಳ ಕಲ್ಲುಗಳು.

ಇಷ್ಟಾದರೂ ಇಲ್ಲಿ ಅಳಿದುಳಿದಿರುವ ದೇವಾಲಯಗಳು, ಶಿಲ್ಪಗಳು ಆಗಿನ ವಾಸ್ತುವಿನ, ಶಿಲ್ಪದ ಶ್ರೇಷ್ಠತೆಯ ಸೊಗಸನ್ನು ಮನವರಿಕೆ ಮಾಡಿಕೊಡುತ್ತವೆ. 1070ರಲ್ಲಿ ನಿರ್ಮಿಸಲಾದ ತ್ರಿಪುರಾಂತಕ ದೇವಾಲಯ ಕಲೆಯ ದೃಷ್ಟಿಯಿಂದ ಸುಂದರವಾದುದು. ಎರಡು ಗರ್ಭಗುಡಿಗಳಿರುವ ಈ ದೇವಾಲಯದ ಹೊರ ಗೋಡೆಗಳು ಬಿದ್ದುಹೋಗಿ ಈಚೆಗೆ ಪುನರ್ನಿರ್ಮಾಣಗೊಂಡಿವೆ. ಈ ಜೋಡಿ ದೇವಾಲಯಗಳ ಹೊರಗೋಡೆಗಳ ಅಧಿಷ್ಠಾನ ಪಟ್ಟಿಕೆಗಳ ಮೇಲೆ ಆಕರ್ಷಕವಾಗಿ ಕಂಡರಿಸಿದ್ದ ಶಿಲ್ಪಸಾಲುಗಳ ತುಂಡುಗಳನ್ನು ಗೋಡೆಗೆ ಸೇರಿಸಿರುವುದನ್ನು ನೋಡಬಹುದು. ಅದರಲ್ಲಿಯೂ ಪಂಚತಂತ್ರದ ಕಥೆಗಳನ್ನು ನಿರೂಪಿಸುವ ಆಮೆ ಮತ್ತು ಹಂಸಗಳು, ಟಗರು ಕಾಳಗ ಮತ್ತು ನರಿ, ಮೊಸಳೆ ಕೋತಿ ಮುಂತಾದುವು ತುಂಬ ಸೊಗಸಾದ ಶಿಲ್ಪಪಟ್ಟಿಕೆಗಳು. ಒಂದರಲ್ಲಿ ಶಿವಲಿಂಗ, ಇನ್ನೊಂದರಲ್ಲಿ ಕೇಶವನ ಮೂರ್ತಿಗಳುಳ್ಳ ಗರ್ಭಗುಡಿಗಳ ಮುಂದಿನ ಬಾಗಿಲುವಾಡಗಳೂ ಅವುಗಳ ಪಕ್ಕದಲ್ಲಿರುವ ಜಾಲಂಧ್ರಗಳೂ ಅತಿಸೂಕ್ಷ್ಮವಾಗಿಯೂ ಸುಂದರವಾಗಿಯೂ ಕಂಡರಿಸಲ್ಪಟ್ಟಿವೆ. ಅದರಲ್ಲಿಯೂ ಅಪರೂಪವಾದ ರೀತಿಯಲ್ಲಿ ಹೆಣೆದಿರುವ ನಾಗನಾಗಿಣಿಯರ ನಾಗಬಂಧವನ್ನುಳ್ಳ ಇಲ್ಲಿನ ಜಾಲಂಧ್ರದಂಥದು ಕರ್ನಾಟಕದಲ್ಲಿಯೇ ಮತ್ತೊಂದಿಲ್ಲವೆನ್ನುವಷ್ಟು ಚೆಲುವಾಗಿದೆ. ಈ ನಾಗಬಂಧದ ಬಾಗಿಲು ವಾಡಗಳ ಮೇಲೆ ಗಜಾಸುರಮರ್ದನನಾಗಿ ನರ್ತಿಸುತ್ತಿರುವ ಶಿವ, ಒಂದು ಕಡೆ ಬ್ರಹ್ಮ, ಕುಮಾರ ಮತ್ತು ಗಣೇಶ, ಇನ್ನೊಂದು ಕಡೆ ಕೇಶವ ಮತ್ತು ಗರುಡ, ಸುತ್ತಲೂ ಪರಿವಾರ ದೇವತೆಗಳು, ಅಷ್ಟದಿಕ್ಪಾಲಕರುಗಳಿಂದ ತುಂಬಿ ಸೂಕ್ಷ್ಮವಾದ ಕೆತ್ತನೆ, ನವುರಾದ ಕಲೆಯಿಂದ ಕೂಡಿವೆ. ಚಾಳುಕ್ಯಶಿಲ್ಪದ ಸೊಗಸನ್ನೂ ಶಿಲ್ಪಿಯ ನಿಪುಣತೆಯನ್ನೂ ಇವು ಎತ್ತಿಹಿಡಿದಿವೆ.

ಪಂಚಲಿಂಗ ದೇವಾಲಯ ಉಳಿದ ದೇವಾಲಯಗಳಿಗಿಂತ ಎತ್ತರವಾದುದು. ಈಗ ಇದರ ಗರ್ಭಗೃಹ ಸುಕನಾಸಿಗಳು ಮಾತ್ರ ಉಳಿದಿವೆ. ಮುಂದಿನ ಕಟ್ಟಡ ಪುನರ್ನಿರ್ಮಾಣಗೊಂಡಿದೆ. ಗರ್ಭಗೃಹದ ಬಾಗಿಲು ಎತ್ತರವಾಗಿದೆ. ಇಲ್ಲಿದ್ದ ಬೃಹತ್ಪ್ರಮಾಣದ ಭವ್ಯವಾದ ದ್ವಾರಪಾಲಕರ ಮೂರ್ತಿಗಳು ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿವೆ. ಹೊರಗೆ ವೈಕುಂಠ ನಾರಾಯಣ, ಕುಮಾರ, ಮಹಿಷಾಸುರಮರ್ದಿನಿ ಮತ್ತು ಶಿವಪಾರ್ವತಿಯರ ಸುಂದರವಾದ ಮೂರ್ತಿಗಳಿವೆ. ಇಲ್ಲಿದ್ದ ಸುಂದರವಾದ ಉಮಾಮಹೇಶ್ವರನ ಮೂರ್ತಿಯನ್ನು ಶಿವಮೊಗ್ಗದ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಇವಲ್ಲದೆ ಚಿಕ್ಕದಾದ ಸೋಮೇಶ್ವರ ದೇವಾಲಯ, ಸುಂದರವಾದ ಬಾಗಿಲುವಾಡವಿರುವ ಕಲ್ಲೇಶ್ವರ ದೇವಾಲಯ, ಶೇಷಶಾಯಿ ರಂಗನಾಥನ ಮೂರ್ತಿಯಿರುವ ಅನಂತಶಯನ ಗುಡಿ ಮುಂತಾದುವು ಜೀರ್ಣಾವಸ್ಥೆಯಲ್ಲಿವೆ. ಚತುರ್ಮುಖ ಬ್ರಹ್ಮೇಶ್ವರ, ತ್ರಿಮೂರ್ತಿ, ನರಸಿಂಹ, ತಾರಾಭಗವತಿ, ಜಿನ ಮುಂತಾದ ಹಲವಾರು ಮೂರ್ತಿಗಳು ತಮ್ಮ ದೇವಾಲಯಗಳನ್ನು ಕಳೆದುಕೊಂಡು ಬಯಲಿನಲ್ಲಿ ನಿಂತಿವೆ. ಚಾವುಂಡರಾಯ ನಿಲ್ಲಿಸಿದ ಭೇರುಂಡ ಸ್ತಂಭ ತನ್ನ ಮೂಲ ಗಂಡಭೇರುಂಡ ಮೂರ್ತಿಯನ್ನು ಕಳೆದುಕೊಂಡಿದೆ. ಈಗ ಇದರ ಮುಂದೆ ಇರುವ ಗಂಡಭೇರುಂಡನ ಮೂರ್ತಿ ಆಧುನಿಕ ಶಿಲ್ಪಿಯ ಕೃತಿ. **(ಎಂ.ಎಚ್.)**



ಕೇದಾರೇಶ್ವರ ದೇವಾಲಯ

ಇಲ್ಲಿನ ಕೇದಾರೇಶ್ವರ ದೇವಾಲಯವೊಂದೇ ಪೂರ್ಣವಾಗಿ ಉಳಿದು ಬಂದಿರುವ ದೇವಾಲಯವೆನ್ನಬಹುದು. ಹನ್ನೊಂದನೆಯ ಶತಮಾನದಲ್ಲಿಯೇ ಕಟ್ಟಿರಬಹುದಾದ ಈ ದೇವಾಲಯ ತ್ರಿಕೂಟಾಚಲವಾಗಿದೆ. ಇದು ಜಗತಿಯ ಮೇಲೆ ನಿರ್ಮಿತವಾಗಿದೆ. ಮೂರು ಗರ್ಭಗುಡಿಗಳ ಮೇಲೂ ಮೂರು ಗೋಪುರಗಳಿವೆ. ದೇವಾಲಯದ ಮುಂದೆ ಭವ್ಯವಾದ ಮಂಟಪವಿದೆ. ಚಾಳುಕ್ಯ ರೀತಿಯಲ್ಲಿ ನಿರ್ಮಿತವಾಗಿರುವ ಈ ದೇವಾಲಯ ಪ್ರಾಚೀನವಾದ ತ್ರಿಕೂಟಾಚಲ.

ಕೇದಾರೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಅದರ ಒಂದು ಭಾಗವಾಗಿ ಕೋಡಿಯ ಮಠ ಎಂಬ ಕಾಳಾಮುಖ ಶೈವರ ಮಠ ಇತ್ತು. 10–13ನೆಯ ಶತಮಾನಗಳಲ್ಲಿ ಇದು ಪ್ರಖ್ಯಾತವಾಗಿತ್ತು. ಇಲ್ಲಿ ತಪಸ್ವಿಗಳೂ ವಿದ್ವಾಂಸರೂ ರಾಜಪೂಜಿತರೂ ಆದ ಪ್ರಭಾವಶಾಲಿ ವ್ಯಕ್ತಿಗಳಿದ್ದರು. ಈ ಮಠದ ಅಧಿಪತಿಗಳು ಮೂವರಕೋಣೆಯ ಸಂತತಿಯ ಪರ್ವತಾವಳಿಯ ಶಕ್ತಿಪರ್ಷೆಗೆ ಸೇರಿದ್ದರು. ಈಗ ತಿಳಿದಮಟ್ಟಿಗೆ ಇವರಲ್ಲಿ ಮೊದಲಿಗನೆಂದರೆ ಕೇದಾರಶಕ್ತಿ (ಸು. 1073). ಇವನ ಶಿಷ್ಯ ಶ್ರೀಕಂಠ I (ಸು. 1100). ಮುಂದೆ ವಿದ್ಯಾಭರಣ (1128). ಇವನು ಮಠದ ಆಡಳಿತದ ಹೊಣೆಯಿಂದ ತನ್ನ ವಿದ್ಯಾವ್ಯಾಸಂಗಕ್ಕೆ ಅಡ್ಡಿಬರುತ್ತದೆ ಎಂಬ ಕಾರಣದಿಂದಾಗಿ ಆ ಹೊಣೆಯನ್ನು ತನ್ನ ಮೊದಲನೆಯ ಶಿಷ್ಯ ವಾಮನಶಕ್ತಿಗೆ ವಹಿಸಿಕೊಟ್ಟ. ಇದೇ ಪರಂಪರೆಯಲ್ಲಿ ಮುಂದೆ ಬಂದ ಎರಡನೆಯ ವಾಮಶಕ್ತಿ (1162) ಇವರಲ್ಲೆಲ್ಲ ಅತ್ಯಂತ ಪ್ರಖ್ಯಾತನಾಗಿದ್ದ. ಇವನ ವಿದ್ವತ್ತು, ತಪಸ್ಸು, ಪ್ರಭಾವಗಳನ್ನು ಶಾಸನಗಳು ಕೊಂಡಾಡಿವೆ. ಕೋಡಿಯ ಮಠ ತನ್ನ ಉಚ್ಛ್ರಾಯಸ್ಥಿತಿಯಲ್ಲಿ ಗಳಿಸಿದ್ದ ಖ್ಯಾತಿಯನ್ನು ಒಂದು ಶಾಸನ ಹೀಗೆ ವರ್ಣಿಸುತ್ತದೆ: ದಕ್ಷಿಣ ಕೇದಾರ ಸ್ಥಾನಮುಂ ಶಿವಲಿಂಗಪೂಜಾಪುಳಕ ಸಸ್ಯಸರಸಕೇದಾರ ಸ್ಥಾನಮುಂ ನೈಷ್ಠಿಕಬ್ರಹ್ಮಚರ್ಯಶಿವಮುನಿಜನಾನುಷ್ಠಾನ ನಿಷ್ಠಿತಸ್ಥಾನಮುಂ ಸಾಂಗ ಋಗ್ಯಜುಸ್ಸಾಮಾಥರ್ವಚತುರ್ವೇದಸ್ವಾಧ್ಯಾಯನ ಸ್ಥಾನಮುಂ ಕೌಮಾರಪಾಣಿನೀಯ ಶಾಕಟಾಯನಶಬ್ದಾನುಶಾಸನಾದಿ ವ್ಯಾಕರಣವ್ಯಾಖ್ಯಾನಸ್ಥಾನಮುಂ ನ್ಯಾಯವೈಶೇಷಿಕಮೀಮಾಂಸಾಸಾಂಖ್ಯ ಬೌದ್ಧಾದಿ ಷಡುದರ್ಶನವ್ಯಾಖ್ಯಾನ ಸ್ಥಾನಮುಂ ಲಾಕುಳಸಿದ್ಧಾಂತಪಾತಂಜಳಾದಿಯೋಗಶಾಸ್ತ್ರವ್ಯಾಖ್ಯಾನ ಸ್ಥಾನಮುಂ ಅಷ್ಟಾದಶ ಪುರಾಣ

ಧರ್ಮಶಾಸ್ತ್ರ ಸಕಳಕಾವ್ಯನಾಟಕ ನಾಟಕಾದಿವಿವಿಧವಿದ್ಯಾಸ್ಥಾನಮುಂ ದೀನಾನಾಥ ಪಂಗಂಧ ಬಧಿರಕಥಕಗಾಯಕವಾದಕವಾಂಶಿಕ ನರ್ತಕ ವೈತಾಳಿಕ ನಗ್ನಭಗ್ನೈಕ್ಷಪಣಕೈಕ ದಂಡಿತ್ರಿದಂಡಿ ಹಂಸಪರಮಹಂಸಾದಿ ನಾನಾದೇಶ ಭಿಕ್ಷುಕಜನಾನಿವಾರ್ಯ ಅನ್ನದಾನ ಸ್ಥಾನಮುಂ ನಾನಾನಾಥ ರೋಗಿಜನರೋಗಭೈಷಜ್ಯಸ್ಥಾನಮುಂ ಸಕಲಭೂತಾಭಯಪ್ರಧಾನಸ್ಥಾನ ಮುಮಾಗಿ ಕೋಡಿಯಮಠವಿರ್ಪುದು. ಇಷ್ಟೊಂದು ಚಟುವಟಿಕೆಗಳಿಗೆ ತೌರುಮನೆಯಾಗಿದ್ದ ಕೇಂದ್ರ ಪ್ರಾಚೀನ ಕರ್ನಾಟಕದಲ್ಲಿ ಮತ್ತೊಂದು ದೊರಕಲಾರದು. ಇಷ್ಟೆಲ್ಲ ಧಾರ್ಮಿಕ, ಸಾಹಿತ್ಯ ಮತ್ತು ಕಲಾ ಚಟುವಟಿಕೆಗ ಳಿಂದ ಈ ಸ್ಥಳ ವಿಜೃಂಭಿಸಲು ಇದು ಹೊಂದಿದ್ದ ಹೇರಳ ಸಂಪತ್ತೂ ಮುಖ್ಯ ಕಾರಣಗಳಲ್ಲಿ ಒಂದು. ಬಾದಾಮಿ ಚಳುಕ್ಯರ ಕಾಲದಲ್ಲಿ ಐಹೊಳೆಯಲ್ಲಿ ಹುಟ್ಟಿಕೊಂಡ ಐವನೂರ್ವರ ವರ್ತಕರ ಸಂಘ ಅವರ ಅಳಿವಿನ ಅನಂತರ ಬೆಳಗಾಮಿಗೆ ವರ್ಗಾಯಿಸಲ್ಪಟಿತು. ಇಲ್ಲಿ ಕೇಂದ್ರ ಸ್ಥಾನ ಹೊಂದಿದ್ದ ಈ ವರ್ತಕರು ಸಮಗ್ರ ಭಾರತ ಹಾಗೂ ಸಾಗರೋತ್ತರ ವಾಣಿಜ್ಯದಲ್ಲಿ ತೊಡಗಿದ್ದರು. ಈ ಕುರಿತ ಅಸಂಖ್ಯ ಶಾಸನಗಳು ಈ ಸ್ಥಳದಲ್ಲೂ ಬೇರೆಡೆಗಳಲ್ಲೂ ದೊರೆತಿವೆ. (ಎಂ.ಸಿ.)

**ಬೆಳಗುತ್ತಿ:** ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನಲ್ಲಿ ಹೊನ್ನಾಳಿಯ ನೈಋತ್ಯದಲ್ಲಿರುವ ಒಂದು ಗ್ರಾಮ. ನ್ಯಾಮತಿಗೆ ಸು. 8 ಕಿಮೀ ದೂರದಲ್ಲಿದೆ. ಜನಸಂಖ್ಯೆ 5,741. ಈ ಊರು ಚಾಳುಕ್ಯ ಮತ್ತು ಯಾದವರ ಸಾಮಂತರಾಗಿದ್ದ ಸಿಂದವಂಶದ ಅರಸರ ಕೇಂದ್ರವಾಗಿತ್ತು. ಹೊನ್ನಾಳಿಯಲ್ಲಿ ದೊರೆತಿರುವ ಶಾಸನದ ಆಧಾರದ ಮೇಲೆ, ಹೊಯ್ಸಳ 2ನೆಯ ವೀರಬಲ್ಲಾಳ ಬೆಳಗುತ್ತಿ ನಾಡಿನ ರಾಜ್ಯಪಾಲನಾಗಿ ದಂಡನಾಯಕ ತೋಡಪಿಳ್ಳೆಯನ್ನು 1175ರಲ್ಲಿ ನೇಮಿಸಿದನೆಂದು ತಿಳಿದುಬಂದಿದೆ. ಬೆಳಗುತ್ತಿಯಲ್ಲಿ ದೊರೆತಿರುವ 12 ಮತ್ತು 13ನೆಯ ಶತಮಾನದ ಶಾಸನಗಳ ಪ್ರಕಾರ ಇಂದಿನ ಬೆಳಗುತ್ತಿಗೆ, ಬೆಳಗವತ್ತಿ, ಬೆಳಗಾವರ್ತಿ ಎಂಬ ಹೆಸರುಗಳಿದ್ದು ವೆಂದು ಮತ್ತು ಈ ನಾಡನ್ನು 1196ರಲ್ಲಿ ಮಲ್ಲಿದೇವರಸ, 1216ರಲ್ಲಿ ಈಶ್ವರ ದೇವರಸ, 1232ರಲ್ಲಿ ಸಿಂಹಳದೇವರಸ, 1249ರಲ್ಲಿ ಬೀರದೇವರಸ ಆಳಿದರೆಂದು ತಿಳಿದುಬರುವುದು. ಇದು ಸಿಂದವಾಡಿ (ಈಗಿನ ಹೊನ್ನಾಳಿ ತಾಲ್ಲೂಕು) ರಾಜ್ಯದ ರಾಜಧಾನಿಯಾಗಿತ್ತು. 14-16ನೆಯ ಶತಮಾನಗಳಲ್ಲಿ ಇದು ಒಂದು ಪಾಳೆಯಪಟ್ಟಿನ ಕೇಂದ್ರವಾಗಿತ್ತು. ಇಲ್ಲಿ ಆ ಕಾಲದ ಕೋಟೆಯ ಕೆಲವು ಅವಶೇಷಗಳಿವೆ. ಬೆಳಗುತ್ತಿಗೆ 3 ಕಿಮೀ ದೂರದಲ್ಲಿ ರುವ ತೀರ್ಥರಾಮೇಶ್ವರ ದೇವಸ್ಥಾನ ಒಂದು ಪುಣ್ಯಕ್ಷೇತ್ರ. (ಎಂ.ಎನ್.)

**ಬೆಳಗುತ್ತಿಯ ಅರಸರು:** 14-16ನೆಯ ಶತಮಾನಗಳಲ್ಲಿ ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿಯಿಂದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹಾಗೂ ಅದರ ಮಾರ್ಗದರ್ಶನದಲ್ಲಿ ಸ್ವತಂತ್ರವಾಗಿ ಆಳಿದ ಒಂದು ಅರಸು ಮನೆತನ. ಹಲವು ಕೈಫಿಯತ್ತುಗಳು ಈ ವಂಶದ ಅರಸರ ಬಗ್ಗೆ ಬೆಳಕು ಚೆಲ್ಲುತ್ತವೆ.

ಬೆಳಗುತ್ತಿ ಅರಸರ ರಾಜಕೀಯ ಇತಿಹಾಸ ಚೆಲುವ ರಂಗಪ್ಪ ನಾಯಕ ನಿಂದ (1361-81) ಆರಂಭವಾಗುತ್ತದೆ. 'ಕುದಿರೆ ರಾಯರ ವೃತ್ತಾಂತ'ದ ಪ್ರಕಾರ ಈತ ವಿಜಯನಗರದ ಅರಸು ಸಂತತಿಗೆ ಸೇರಿದವನೆಂದು ತಿಳಿಯು ತ್ತದೆ. ಬೇಡರ ಚೆನ್ನನಾಯಕ ಎಂಬುವನು ಒಂದನೆಯ ಬುಕ್ಕರಾಯನ ಕಾಲದಲ್ಲಿ ಬೆಳಗುತ್ತಿ ಮತ್ತು ಸುತ್ತಮುತ್ತಲ ಮಲೆನಾಡು ಪ್ರಾಂತ್ಯಗಳಲ್ಲಿ ಬೇಡರ ಕೋಟೆಯನ್ನು ಕಟ್ಟಿಕೊಂಡು ಆಳುತ್ತಿದ್ದ. ಚೆಲುವ ರಂಗಪ್ಪನಾಯಕ ಬುಕ್ಕನ ಅನುಮತಿ ಪಡೆದು ಸೈನ್ಯದೊಂದಿಗೆ ಬಂದು ಈತನನ್ನು ಸೋಲಿಸಿ ಕೋಟೆಯನ್ನು ಹಾಗೂ ಬಿರುದುಗಳನ್ನೂ ಕಿತ್ತುಕೊಂಡ. ಅನಂತರ ಆ ಪ್ರದೇಶವನ್ನು ಆಳಲು ಚೆಲುವ ರಂಗಪ್ಪನಿಗೇ ಬಿಟ್ಟುಕೊಡಲಾಯಿತು. ಭಾನುವಳ್ಳಿಯಲ್ಲಿದ್ದುಕೊಂಡು ರಂಗಪ್ಪ ನಾಯಕ ಆ ಪ್ರದೇಶದ ಪುರೋಭಿವೃದ್ಧಿಗೆ ಕಾರಣನಾದ. ಕ್ರಮೇಣ ಬೆಳಗುತ್ತಿಯನ್ನು ಪ್ರಮುಖ ಕೇಂದ್ರವನ್ನಾಗಿ ಮಾಡಿದ. ಈತ ಹರಿಹರದ ಹರಿಹರೇಶ್ವರ ದೇವಸ್ಥಾನ ವನ್ನು ದುರಸ್ತಿಗೊಳಿಸಿದನಲ್ಲದೆ ತುಂಗಭದ್ರಾ ನದಿಯ ದಂಡೆಯಲ್ಲಿರುವ ರಾಮೇಶ್ವರ ದೇವಸ್ಥಾನದ ದಕ್ಷಿಣಕ್ಕೆ ದಿಡಗೂರು ಎಂಬ ಪಟ್ಟಣವನ್ನು ನಿರ್ಮಿಸಿದ (ಈಗ ಇದು ಸಣ್ಣ ಗ್ರಾಮ; ಹೊನ್ನಾಳಿ ತಾಲ್ಲೂಕಿನಲ್ಲಿದೆ). ಇವನು ಬೆಳಗುತ್ತಿ ಕೋಟೆಯನ್ನು ವಿಸ್ತರಿಸಿದನಲ್ಲದೆ ಉಡುಗಣಿ, ಕವಲೆ ದುರ್ಗ, ಹೊನ್ನಾಳಿ ಮುಂತಾದ ಕಡೆಗಳಲ್ಲಿ ಹೊಸದಾಗಿ ಕೋಟೆಗಳನ್ನು ಕಟ್ಟಿಸಿದ. ತೀರ್ಥಗಿರಿಯಲ್ಲಿನ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ. ದೇವಸ್ಥಾನಗಳ ನಿರ್ಮಾಣ, ಭೂಮಿ ಮತ್ತು ಹಳ್ಳಿಗಳನ್ನು ದತ್ತಿ ಕೊಡುವುದು, ಅಗ್ರಹಾರಗಳನ್ನು ನಿರ್ಮಿಸುವುದು-ಇವೇ ಮುಂತಾದ ಜನೋಪಯೋಗಿ ಕಾರ್ಯಗಳನ್ನು ಕೈಗೊಳ್ಳುವುದರ ಮೂಲಕ ವಿಜಯನಗರ ಅರಸರ ಮಾರ್ಗವನ್ನೇ ಈತ ಅನುಸರಿಸಿದ. ಇವನು ಭೂಕಂದಾಯವನ್ನು ನಿಗದಿಗೊಳಿಸಿದ. ಈ ಪದ್ಧತಿ ರಾಯರೇಖೆ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯಿತು. ಇವನ ಅನಂತರ ಆಳ್ವಿಕೆಗೆ ಬಂದವರು: ಭೂಪಾಲರಾಯ (ಭೂಪರಾಯ, 1382-1415), ಶೂರಭೂಪ (?), ದೇವರಾಯ (1416-30), ಆಭ್ರಮಾಧವ (1431-59), ವೆಂಕಟಾದ್ರಿ (1460-87), ರಾಮಕೋಟಿ (1488-90), ಯಲ್ಲಣ್ಣ (?) ಮತ್ತು ದಾಸಪ್ಪ (1491-1571).

ಸ್ಥಳೀಯ ಚಾರಿತ್ರಿಕ ದಾಖಲೆಗಳ ಪ್ರಕಾರ ರಾಮಕೋಟಿರಾಯನ ಕಾಲದಲ್ಲಿ ವಿಜಯನಗರದ ಪ್ರೌಢಸಿಂಗರಾಯ (ಸಾಳುವ ನರಸಿಂಗ ಅಥವಾ ಅವನ ಮಗ ಇಮ್ಮಡಿ ನರಸಿಂಹನಿರಬೇಕೆಂಬ ಅಭಿಪ್ರಾಯವಿದೆ). ತನ್ನ ಸಂಬಂಧಿಗಳು ಬೆಳಗುತ್ತಿಯನ್ನು ಪ್ರತ್ಯೇಕವಾಗಿ ಆಳುತ್ತಿದ್ದುದನ್ನು ಸಹಿಸದೆ ಹೊನ್ನಾಳಿಯನ್ನು ಮುತ್ತಿ ವಶಪಡಿಸಿಕೊಂಡು ಅನಂತರ ಬಿಟ್ಟುಕೊಟ್ಟ. ಅಳಿಯ ರಾಮರಾಯನ ಅನಂತರ ವಿಜಯನಗರದ ಸಿಂಹಾಸನವನ್ನೇರಿದ ತಿರುಮಲದೇವರಾಯನನ್ನು ಸುಲ್ತಾನರು ಸೋಲಿಸಿದಾಗ ವಿಜಯನಗರಕ್ಕೆ ದಕ್ಷ ಉತ್ತರಾಧಿಕಾರಿಯೊಬ್ಬನ ಅಗತ್ಯ ವಿತ್ತು. ಈ ಸಂದರ್ಭದಲ್ಲಿ ಬೆಳಗುತ್ತಿಯ ಅರಸು ದಾಸಪ್ಪ ತನ್ನ ಎರಡನೆಯ ಮಗ ವೀರವೆಂಕಟನನ್ನು ಅಲ್ಲಿಗೆ ರಾಜನನ್ನಾಗಿ ನೇಮಕ ಮಾಡಲು ಒಪ್ಪಿ ಮತ್ತೆ ವಿಜಯನಗರದ ಸಂಬಂಧವನ್ನು ಬೆಳೆಸಿಕೊಂಡ.

ದಾಸಪ್ಪ (1491-1571) ದಕ್ಷನೂ ಉದಾತ್ತ ಗುಣಗಳನ್ನು ಹೊಂದಿದ ವನೂ ಆಗಿದ್ದನೆಂದು ತೆಲುಗು ಪದ್ಯವೊಂದರಿಂದ ತಿಳಿಯುತ್ತದೆ. ಈತ ಹಾಲಸಿದ್ದಪ್ಪ, ಚಿನ್ನಣ್ಣನ ಬೊಮ್ಮಣ್ಣ ಮತ್ತು ಕೆಂಗೆ ಹನುಮಪ್ಪನಾಯಕ-ಇವರಿಗೆ ಜಹಗೀರುಗಳನ್ನು ಬಿಟ್ಟಿದ್ದ. ಕೆಂಗೆ ಹನುಮಪ್ಪನಾಯಕ ಈತನ ವಿರುದ್ಧ ದಂಗೆ ಎದ್ದಾಗ ದಾಸಪ್ಪ ಬಂಕಾಪುರದ ರಂಗರಾಯನ ಸಹಾಯ ವನ್ನು ಕೋರಿದ. ಆದರೆ ರಂಗರಾಯ ಕೆಂಗೆ ಹನುಮಪ್ಪನಿಂದ 5,000 ವರಾಹಗಳನ್ನು ಪಡೆದು ತಟಸ್ಥನಾದ್ದರಿಂದ ದಾಸಪ್ಪ ಬಿಜಾಪುರದ ಸುಲ್ತಾನನ ಸಹಾಯವನ್ನು ಕೇಳಿದ. ಸುಲ್ತಾನನು ಬಿಲಾನ್‌ಖಾನನನ್ನು ಸಹಾಯಕ್ಕೆ ಕಳಿಸಿದ. ಬಿಲಾನ್‌ಖಾನ್ ದಂಗೆಯನ್ನು ಅಡಗಿಸಿದನಾದರೂ ದಾಸಪ್ಪನಿಂದ ಎಲ್ಲವನ್ನೂ ಕಸಿದುಕೊಂಡು ವೆಚ್ಚಕ್ಕಾಗಿ ಕೇವಲ 86 ಹಳ್ಳಿಗಳನ್ನು ಬಿಟ್ಟ. ದಾಸಪ್ಪನ ಹಿರಿಯ ಮಗ ವೆಂಕಟರಾಯ (1572-97) ಮೀರ್ಜರಾಫುನುಲ್ಲಾ ಎಂಬುವನನ್ನು ಸೋಲಿಸಿ ಬಿಲಾನ್ ಖಾನ್ ವಶಪಡಿಸಿಕೊಂಡಿದ್ದ ಹಳ್ಳಿಗಳನ್ನೆಲ್ಲಾ ಹಿಂದಕ್ಕೆ ಪಡೆದ. ವೆಂಕಟರಾಯ ತನ್ನ ಸೂಳೆಯಲ್ಲಿ ಜನಿಸಿದ ಚೌಡಗೌಡನಿಗೆ ಕೆಳದಿಯನ್ನು ಬಳುವಳಿಯಾಗಿ ಕೊಟ್ಟು ಚೌಡಗೌಡನ ಮಗ ಸದಾಶಿವನಾಯಕನನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಿಕೊಂಡ. ಈ ಸದಾಶಿವನಾಯಕನೇ ಮುಂದೆ ಕೆಳದಿ ರಾಜ್ಯದ ಸ್ಥಾಪಕನಾದ. ಈ ಸಂದರ್ಭದಲ್ಲಿ ಬಿಲಾನ್‌ಖಾನನು ದೊಡ್ಡ ಸೈನ್ಯದೊಂ ದಿಗೆ ಬಂದು ವೆಂಕಟರಾಯನನ್ನೂ ಸದಾಶಿವನಾಯಕನನ್ನೂ ಸೋಲಿಸಿ ಬೆಳಗುತ್ತಿಯನ್ನು ವಶಪಡಿಸಿಕೊಂಡು ಮತ್ತೆ 86 ಹಳ್ಳಿಗಳನ್ನು ವೆಂಕಟ ರಾಯನಿಗೆ ಬಿಟ್ಟು ಉಳಿದುದನ್ನು ಬಿಜಾಪುರದ ಆಡಳಿತಕ್ಕೆ ಸೇರಿಸಿಕೊಂಡ. ವೆಂಕಟರಾಯನ ಮಗ ಅಪ್ರಾಪ್ತವಯಸ್ಕನಾಗಿದ್ದುದರಿಂದ ಈ ಹಳ್ಳಿಗಳನ್ನು

ನೋಡಿಕೊಳ್ಳಲು ಮತ್ತೆ ಸದಾಶಿವನಾಯಕನನ್ನೇ ನೇಮಿಸಿಕೊಂಡ. ಸದಾಶಿವನಾಯಕ ಕ್ರಮೇಣ ತನ್ನ ಸಾಮರ್ಥ್ಯದಿಂದ ಬಿದನೂರು ಹಳ್ಳಿಯನ್ನು ವಶಪಡಿಸಿಕೊಂಡು ಪ್ರಮುಖ ಆಡಳಿತ ಕೇಂದ್ರವಾಗಿ ಪರಿವರ್ತಿಸಿ ಆಳತೊಡಗಿದ. ಕ್ರಮೇಣ ಬೆಳಗುತ್ತಿಯ ಪ್ರಾಮುಖ್ಯ ಕ್ಷಯಿಸಿತು. ಮುಂದೆ ವೆಂಕಟರಾಯನ ಮಗ ಒಂದನೆಯ ತಿಮ್ಮಪ್ಪ, ಮೂರನೆಯ ವೆಂಕಟ, ರಾಜರ್ಷಿ ತಿಮ್ಮಪ್ಪ, ನಾಲ್ಕನೆಯ ವೆಂಕಟ, ವೆಂಕಟರಾಯ, ಪುಟ್ಟಸ್ವಾಮಿ–ಇವರುಗಳು ಬೆಳಗುತ್ತಿಯನ್ನು ಆಳಿದರೂ ಇವರ ಆಳ್ವಿಕೆ ಹಿಂದಿನ ಅರಸರುಗಳ ಆಳ್ವಿಕೆಗಳಷ್ಟು ಗಮನಾರ್ಹವಾಗಿರಲಿಲ್ಲ. ಇವರು ಹೈದರನಿಗೆ ಸಾಮಂತರಾಗಿದ್ದುದಲ್ಲದೆ ಅವನಿಂದ ಪರಿಹಾರ ಧನವನ್ನು ಪಡೆದು ಅವನಿಗೆ ಯುದ್ಧಗಳಲ್ಲಿ ನೆರವನ್ನು ನೀಡುತ್ತಿದ್ದರು. 1762ರಲ್ಲಿ ಎರಡನೆಯ ರಾಜರ್ಷಿ ತಿಮ್ಮಪ್ಪ ಮತ್ತು ಅವನ ಮಗ ನಾಲ್ಕನೆಯ ವೆಂಕಟಪ್ಪ ಇವರು ಹೈದರನಿಗೆ ಅನಂತಪುರ, ಕುಂಸಿ, ಶಿಕಾರಿಪುರ, ಜಡೆ, ಉಡುಗಣಿ, ಗುತ್ತಿ ಇತ್ಯಾದಿ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಸಹಾಯ ಮಾಡಿದರು.

**ವಂಶಾವಳಿ:**

(ದೇವರಾಯನಿಂದ)
|
ಮಗಳು (?)
|
ಚೆಲುವರಂಗ
|
ಮಾರಭೂಪ
|
ಶೂರಭೂಪ (?)
|
ದೇವರಾಯ
|
ಆಭ್ರಮಾಧವ
|
ವೆಂಕಟ I
|
ರಾಮಕೋಟಿ
|
ಯಲ್ಲಣ್ಣ (?)
|
ದಾಸಪ್ಪ
|
ವೆಂಕಟ II — ವೀರವೆಂಕಟ

ವೆಂಕಟ II
|
ರಾಘವ (?) — ನರಸ (?) — ದೊಡ್ಡಪ್ಪ — ತಿಮ್ಮಪ್ಪ I

ತಿಮ್ಮಪ್ಪ I
|
ವೆಂಕಟ III
|
ರಾಜರ್ಷಿ ತಿಮ್ಮಪ್ಪ II
|
ವೆಂಕಟ IV
|
ತಿಮ್ಮಪ್ಪ III
|
ವೆಂಕಟರಾಯ — ಪುಟ್ಟಸ್ವಾಮಿ

ಪುಣೆಯ ಪೇಶವೆ ಮಾಧವರಾಯನ ಮಗ ನಾನಾರಾಯ ಬೆಳಗುತ್ತಿಯನ್ನು ವಶಪಡಿಸಿಕೊಂಡಿದ್ದಾಗಲೂ ಹೈದರ್, ಟಿಪ್ಪು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೂ ಅನಂತರ ಬ್ರಿಟಿಷರ ಕಾಲದಲ್ಲೂ ಬೆಳಗುತ್ತಿಯ ಅರಸು ಸಂತತಿಯವರು ಅವರಿಂದ ಪರಿಹಾರಧನವನ್ನು ಪಡೆಯುತ್ತಿದ್ದರು.

ಬೆಳಗುತ್ತಿ ಅರಸರು ಕೊಡಿಯಾಲ ಬೈಲಿನ ಯುದ್ಧದಲ್ಲಿ ಹೈದರನಿಗೆ ಸಹಾಯ ಮಾಡಿ ಬಸವರಾಜದುರ್ಗವನ್ನು ವಶಪಡಿಸಿಕೊಳ್ಳಲು ಸಹಾಯ ಮಾಡಿದರಲ್ಲದೆ, 1778ರಲ್ಲಿ ಚಿತ್ರದುರ್ಗದ ಮುತ್ತಿಗೆಯಲ್ಲಿಯೂ ಕೊಡಗಿನ ಆಕ್ರಮಣದಲ್ಲಿಯೂ ಸಹಾಯ ಮಾಡಿದರು ಇತ್ಯಾದಿಯಾಗಿ ಹೈದರನ ಕಾಲದಲ್ಲಿ ನಡೆದ ಕೆಲವು ಘಟನೆಗಳನ್ನು ಕೈಫಿಯತ್ತಿನಲ್ಲಿ ಉಲ್ಲೇಖಿಸಿದೆ. ಆದರೆ ಈ ಮೇಲಿನ ಇತಿಹಾಸದಲ್ಲಿ ಬರುವ ಹಲವು ಅಂಶಗಳ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ದಾಖಲೆಗಳಿಂದ ದೊರೆಯುವ ಬೆಳಗುತ್ತಿ ಅರಸರ ವಂಶಾವಳಿಯನ್ನು ಈ ಲೇಖನದಲ್ಲಿ ಕೂಡಲಾಗಿದೆ. **(ಎಸ್.ಎನ್.ಜಿ.)**

**ಬೆಳಗೆರೆ ಜಾನಕಮ್ಮ:** 1912–48. ಕನ್ನಡ ಕವಯಿತ್ರಿ. ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಬೆಳಗೆರೆಯಲ್ಲಿ. ಇವರ ತಾತ ಅಪ್ಪಣ್ಣಭಟ್ಟರು ಸಂಸ್ಕೃತದಲ್ಲಿ ಪ್ರತಿಭಾನ್ವಿತ ಪಂಡಿತರಾಗಿದ್ದು ಶೃಂಗೇರಿ ಜಗದ್ಗುರುಗಳಿಂದ ಉತ್ತಮ ಕವಿಗಳೆಂದು ಸನ್ಮಾನಿತರಾಗಿದ್ದರು. ಇವರ ತಂದೆ ಬೆಳಗೆರೆ ಚಂದ್ರಶೇಖರಶಾಸ್ತ್ರಿಯವರು ಜನಪದ ಸಾಹಿತ್ಯ ಹಾಗೂ ಆಶುಕವಿತಾ ರಚನೆಯಲ್ಲಿ ಸಿದ್ಧಹಸ್ತರಾಗಿದ್ದರು. ಇವರ ಅಣ್ಣ ಸೀತಾರಾಮ ಶಾಸ್ತ್ರಿ (ಕ್ಷೀರಸಾಗರ) ಮತ್ತು ತಮ್ಮ ಕೃಷ್ಣಶಾಸ್ತ್ರಿ. ಈ ಇಬ್ಬರೂ ಉತ್ತಮ ಬರೆಹಗಾರರು ಹಾಗೂ ಉತ್ತಮ ನಾಟಕಕಾರರು. ಇವರ ತಂಗಿ ಬೆಳಗೆರೆ ಪಾರ್ವತಮ್ಮ ಉತ್ತಮ ಕವಯಿತ್ರಿ. ಇಂಥ ವಿದ್ವತ್ ಪರಿಸರದಲ್ಲಿ ಬೆಳೆದ ಜಾನಕಮ್ಮನವರು ಶಾಲೆಗೆ ಹೋಗಿ ಓದು ಕಲಿತವರಲ್ಲ. ಮನೆಯಲ್ಲೇ ಕನ್ನಡ ಭಾಷೆಯನ್ನು ಸ್ವಲ್ಪಮಟ್ಟಿಗೆ ಓದಲು, ಬರೆಯಲು ಕಲಿತಿದ್ದರು. ಇವರಿಗೆ ಎಳೆವಯಸ್ಸಿನಲ್ಲೇ ಕೃಷ್ಣಶಾಸ್ತ್ರಿ ಎಂಬ ತರುಣ ಬಂಧುವಿನೊಂದಿಗೆ ಮದುವೆಯಾಯಿತು. ಅನಂತರದಲ್ಲಿ ಇವರಿಗೆ ಇಬ್ಬರು ಗಂಡು ಮಕ್ಕಳಾದರು.

ಜಾನಕಮ್ಮನವರಿಗೆ ಚಿಕ್ಕಂದಿನಿಂದ ಕವಿತಾರಚನೆಯಲ್ಲಿ ಸಹಜವಾದ ಆಸಕ್ತಿ ಬೆಳೆದುಬಂದಿತ್ತು. ಸಂಗೀತ, ಸಾಹಿತ್ಯ, ಸತ್ಸಹವಾಸಗಳಲ್ಲಿ ಅಪಾರ ಒಲವಿತ್ತು. ಇವರು ಕವಿತೆಗಳನ್ನು ರಚಿಸುತ್ತಿದ್ದುದಲ್ಲದೆ ಇಂಪಾಗಿ ಅವುಗಳನ್ನು ಹಾಡುತ್ತಲೂ ಇದ್ದರೆಂದು ಹೇಳಲಾಗಿದೆ. ಇವರ ಕವನಗಳನ್ನು ಕೇಳಿ ಮೆಚ್ಚಿದ ಚಿತ್ರದುರ್ಗದ ಮುರುಘರಾಜೇಂದ್ರಸ್ವಾಮಿಗಳು ಇವರಿಗೆ ಸುಕವಯಿತ್ರಿ ಎಂಬ ಬಿರುದನ್ನಿತ್ತರು. ಮನ ತೆರೆದು, ಕಣ್ತೆರೆದು ನೋಡುತ್ತಿದ್ದ ಜಾನಕಮ್ಮನವರಿಗೆ ಸುತ್ತಲಿನ ಸುಖ ದುಃಖಗಳೇ ಸ್ಫೂರ್ತಿ ಒದಗಿಸಿದುವು. ಸರಳತೆ ಹಾಗೂ ಸ್ಪಷ್ಟತೆ ಇವರ ಕವನಗಳ ಮೂಲಗುಣ. ಇವರ ಕೆಲವು ಕವನಗಳು ಕಲ್ಯಾಣ ಎಂಬ ಸಂಕಲನದಲ್ಲಿ ಪ್ರಕಟಗೊಂಡಿವೆ (1948). ಈ ಸಂಕಲನದಲ್ಲಿ ಕಲ್ಯಾಣ, ವಿಶ್ವಲೀಲೆ, ಪ್ರಕೃತಿ ಮುಂತಾದ ಕವನಗಳಿವೆ. ಸಂಸಾರ ಜೀವನದ ಕಷ್ಟಸುಖಗಳು ಏರುಪೇರುಗಳು ಇಲ್ಲಿ ಚಿತ್ರಿತವಾಗಿವೆ. ವ್ಯಷ್ಟಿಯಲ್ಲಿ ಸಮಷ್ಟಿಯನ್ನು ನಿರೂಪಿಸುವುದು ಈ ಕವನಗಳ ಉದ್ದೇಶ. ಇವುಗಳಲ್ಲಿ ವಾಸ್ತವಿಕ ಪ್ರಪಂಚದ ಮೌಲ್ಯಗಳನ್ನರಿತು ನವೀನ ದೃಷ್ಟಿಯಿಂದ ವಿಚಾರ ಮಾಡುವ ರೀತಿ ಅದನ್ನು ವ್ಯಕ್ತಗೊಳಿಸುವ ಸಾಹಸ ಕಂಡುಬರುತ್ತದೆ. ಜನಕಜೆ ಎಂಬುದು ಇವರ ಕವನಗಳ ಅಂಕಿತ.

ಗಂಡ ಎಂಬ ಒಂದು ಕವನದಲ್ಲಿ ಹೆಣ್ಣಿನ ಕೌಟುಂಬಿಕ ಸ್ಥಾನಮಾನದ ವಾಸ್ತವ ಚಿತ್ರ ಸುಂದರವಾಗಿ ಪಡಿಮೂಡಿದೆ. ಇಲ್ಲಿ ಕವಯಿತ್ರಿ ಹೆಣ್ಣಿನ ಬಾಳಿನ ಒಂದೊಂದು ಹಂತದಲ್ಲಿ ಇರುವ ಕಷ್ಟಗಳನ್ನು ನಿರುಕಿಸಿ

ನೋಡಿದ್ದಾರೆ. ಜಂಬದ ಕೋಳಿ ಎಂಬ ಕವನದಲ್ಲಿ ಹೆಣ್ಣಿಗೆ ಚಂಡಶಾಸನ ವಿಧಿಸಿದ್ದಕ್ಕಾಗಿ ದೇವರನ್ನೇ ದೂರಿರುವುದುಂಟು. ಜಂಬದ ಕೋಳಿ ಎಂಬ ಕವನದಲ್ಲಿ ಕವಯಿತ್ರಿಯ ವಿನಯ ಎದ್ದು ಕಾಣುತ್ತದೆ. ಭಾವತುಂಬಿ ಹೊರಹೊಮ್ಮುವ ಸಹಜ ಕವಿತೆಯನ್ನು ತಡೆಯುವುದು ತನಗೆ ಸಾಧ್ಯವೇ? ಎಂದು ಕವಯತ್ರಿ ಕವನವೊಂದರಲ್ಲಿ ವಿನಯದಿಂದ ಹೇಳಿಕೊಂಡಿದ್ದಾರೆ.

ಜಾನಕಮ್ಮನವರ ಸಾಹಿತ್ಯಕ ಜೀವನದಲ್ಲಿ ಒಂದು ಮಹತ್ತ್ವದ ಘಟನೆ ನಡೆಯಿತು. ಅದೇ ಕವಿ ದ.ರಾ. ಬೇಂದ್ರೆಯವರೊಡನೆ ಆದ ಪರಿಚಯ. ಇವರ ಪತ್ರವ್ಯವಹಾರ ಕವನದಲ್ಲಿ ನಡೆದದ್ದು ಕುತೂಹಲದ ಸಂಗತಿಯಾಗಿದೆ. ಅವರು ಬೇಂದ್ರೆಯವರಿಗೆ ಕವನದಲ್ಲಿ ಹೀಗೆ ಪತ್ರ ಬರೆದರು:

'ದೋಷರಹಿತ್ಯದಾ ಕಲ್ಪನಾ ರಾಜ್ಯದೊಳ್ ಸಗ್ಗದೂಟವನುಣುವ ಹಿರಿಯ ಕಬ್ಬಿಗನೇ ನಿನ್ನ ಕಾಣಲು ಬಯಸಿ ಹಲವಾರು ದಿನಗಳಿಂ ಇಣಿ ಇಣಿಕಿ ನೋಡುವುದೆ ಈ ಸಣ್ಣ ಮನವು ಕವಿಯ ಬರಹವ ಕಂಡು ರಸಬಿಂದುಗಳ ಸವಿವೆ, ಸುಳಿಯುತಿದೆ ಭೃಂಗದೊಲ್ ಭಾವವರಿಯದೆಯೆ'. ಕವಿವರ್ಯರಿಂದ ಇದಕ್ಕೆ ಕವನದಲ್ಲೇ ಹೀಗೆ ಉತ್ತರ ಬಂತು :

'ತಂಗಿ ಜಾನಕಿ ವೈದೇಹದೊಲವಿನಲಿ ಓಲೆ ಬಂದಿತು ಒಂದು ಇತ್ತ ತೇಲಿ, ಯಾರಿಗಾರೋ ಎನುವ ನಾಸ್ತಿಕತೆಯ ನೂಕಿ ದಾಟಿ ದಿಕ್ಕಾಲಗಳ ಸುತ್ತ ಬೇಲಿ'. ಪರಸ್ಪರ ವಿಶ್ವಾಸದ ಕುರುಹಾಗಿ ದ.ರಾ. ಬೇಂದ್ರೆಯವರು ಜಾನಕಮ್ಮನವರ ಕಲ್ಯಾಣ ಕವನ ಸಂಕಲನಕ್ಕೆ ಮುನ್ನುಡಿ ಬರೆದಿದ್ದಾರೆ. (ಎಸ್.)

**ಬೆಳಗೊಳ:** ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಒಂದು ಗ್ರಾಮ, ಅದೇ ಹೆಸರಿನ ಹೋಬಳಿ ಕೇಂದ್ರ. ಕೃಷ್ಣರಾಜಸಾಗರಕ್ಕೆ ಸು. 6 ಕಿಮೀ ಆಗ್ನೇಯಕ್ಕಿದೆ. ಜನಸಂಖ್ಯೆ 9,216. ಈ ಊರು ಹೊಯ್ಸಳ ವಿಷ್ಣುವರ್ಧನ ಕಟ್ಟಿಸಿದ ಅಗ್ರಹಾರವೆಂದೂ ಆ ವೇಳೆಗೆ ಆತನಿಗೆ ಕೊಂಗುಕೊಂಡ ಎಂಬ ಬಿರುದಿದ್ದು ತನ್ನ ಅಣ್ಣನಾದ ಒಂದನೆಯ ಬಲ್ಲಾಳನೊಂದಿಗೆ ಯುವರಾಜನಾಗಿ ಆಳುತ್ತಿದ್ದನೆಂದೂ ಇಲ್ಲಿಯ ಜನಾರ್ದನ ದೇವಾಲಯದ ತಳಹದಿಯ ಮೇಲಿನ 1098ರ ತಮಿಳು ಶಾಸನವೊಂದರಿಂದ ತಿಳಿದುಬರುತ್ತದೆ.

ಇಲ್ಲಿ ಜನಾರ್ದನ ದೇವಾಲಯ ಹಾಗೂ ಭಕ್ತವತ್ಸಲ ಮತ್ತು ದೇವಿಯ ಗುಡಿಗಳು ಇದ್ದವು. ಈಗ ಎಲ್ಲವೂ ಶಿಥಿಲವಾಗಿವೆ. ಜನಾರ್ದನ ದೇವಾಲಯದ ವಾಸ್ತುಶೈಲಿ ಹಾಗೂ ತಳಹದಿಯ ಕಲ್ಲುಗಳ ಮೇಲೆ ಕಂಡರಿಸಿರುವ ಶಾಸನಗಳನ್ನು ಗಮನಿಸಿದರೆ ಚೋಳರ ಶೈಲಿಯ ಪ್ರಭಾವ ಕಂಡುಬರುತ್ತದೆ. ಕಟ್ಟಡ ಕಣಶಿಲೆಯದು. ವಿನ್ಯಾಸ ಸರಳವಾಗಿದ್ದು ಗರ್ಭಗೃಹ ಹಾಗೂ ಸುಕನಾಸಿಗಳನ್ನೊಳಗೊಂಡಿದೆ. ಗರ್ಭಗೃಹದ ಸುತ್ತಲೂ ವೃತ್ತಾಕಾರದ ಪ್ರಾಕಾರವಿದೆ. ಗೋಪುರಗಳ ವಿನ್ಯಾಸ ಬಿಲ್ಲಿನಂತೆ ಕಮಾನಾಗಿದ್ದು ಕಲಶಗಳನ್ನು ಹೊಂದಿವೆ. ಗೋಡೆಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಗೂಡುಗಳಿದ್ದು ಅಲ್ಲಿ ನಾಲ್ಕು ದಳಗಳನ್ನೊಳಗೊಂಡ ಹೂಗಳನ್ನು ಕೆತ್ತಲಾಗಿದೆ. ಸು. 14ನೆಯ ಶತಮಾನದಲ್ಲಿ ಈ ಪ್ರಾಕಾರ ಪುನರ್ನಿರ್ಮಾಣಗೊಂಡಿರುವಂತೆ ಅಲ್ಲಿರುವ ಕಂಬಗಳಿಂದ ತಿಳಿದುಬರುತ್ತದೆ. ಈ ಕಂಬಗಳು ಅಷ್ಟಮೂಲೆಯಿಂದ ಕೂಡಿದವಾಗಿವೆ. ಚೌಕಾಕಾರದ ತಳವನ್ನು ಹೊಂದಿವೆ. ಗರ್ಭಗೃಹದ ಮೇಲ್ಭಾಗದಲ್ಲಿದ್ದ ಇಟ್ಟಿಗೆಯ ಗೋಪುರ ಈಗ ಶಿಥಿಲವಾಗಿದೆ. ಈ ಗೋಪುರಕ್ಕೆ ಪಾಳೆಯಗಾರರ ಕಾಲದ ಇಟ್ಟಿಗೆಗಳನ್ನು ಬಳಸಲಾಗಿದೆ. ಗರ್ಭಗೃಹದ ಮೇಲ್ಛಾವಣಿಯ ಒಳಭಾಗದಲ್ಲಿ (ಭುವನೇಶ್ವರಿ) ಕಮಲದ ಚಿತ್ರವಿದೆ. ಪೀಠವೂ ಸೇರಿದಂತೆ ನಿಂತಿರುವ ಜನಾರ್ದನ ವಿಗ್ರಹದ ಎತ್ತರ 5 ಅಡಿ, ನಾಲ್ಕು ಭುಜಗಳನ್ನೊಳಗೊಂಡ ಈ ವಿಗ್ರಹ ನಾಲ್ಕು ಹಸ್ತಗಳನ್ನೊಳಗೊಂಡಿದ್ದು ಸಮಭಂಗಿಯಲ್ಲಿದೆ. ಪ್ರತಿಮೆಯ ಇಕ್ಕೆಲಗಳಲ್ಲೂ ಚಾಮರಧಾರಿಗಳಾಗಿದ್ದಾರೆ. ಸುಕನಾಸಿ ಎರಡು ಅಂಕಣಗಳನ್ನು ಹೊಂದಿದೆ. ಇದರ ದ್ವಾರ ಅನಂತರದ ಕಾಲದಲ್ಲಿ ಅಂದರೆ 17ನೆಯ ಶತಮಾನದಲ್ಲಿ ನಿರ್ಮಿತವಾಗಿರುವಂತೆ ಕಂಡುಬರುತ್ತದೆ. ಹೂವಿನ ದಳಗಳ ಕೆತ್ತನೆ ಹಾಗೂ ಗಜಲಕ್ಷ್ಮಿಯ ಪಟ್ಟಿಕೆಯನ್ನುಳಿದರೆ ಇದರಲ್ಲಿ ಇನ್ನಾವ ವಿಶೇಷ ರೀತಿಯ ಕೆತ್ತನೆಗಳೂ ಇಲ್ಲ.

ಜನಾರ್ದನ ದೇವಾಲಯದ ಹೊರಭಾಗದಲ್ಲಿ ವೃತ್ತಾಕಾರದಲ್ಲಿ ಕಟ್ಟಿರುವ ಭಕ್ತವತ್ಸಲ ಗುಡಿ ಇದೆ. ಇದನ್ನು ಎತ್ತರವಾದ ತಳಪಾದಿಯ ಮೇಲೆ ಕಟ್ಟಲಾಗಿದೆ. ಆದರೆ ಈಗ ಗರ್ಭಗೃಹದಲ್ಲಿ ಯಾವ ಪ್ರತಿಮೆಯೂ ಇಲ್ಲ. ಮೊದಲಿಗೆ ಅಲ್ಲಿ ವಿಷ್ಣುವಿನ ವಿಗ್ರಹವಿದ್ದಂತೆ ತಿಳಿದುಬರುತ್ತದೆ.

ಬೆಳಗೊಳ ಈಚಿನ ವರ್ಷಗಳಲ್ಲಿ ಕೈಗಾರಿಕಾ ಕೇಂದ್ರವಾಗಿ ಪ್ರಸಿದ್ಧಿ ಹೊಂದುತ್ತಿದೆ. ಇಲ್ಲಿ ಮೈಸೂರ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ (1937), ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ (1962), ಮೈಸೂರ್ ಕೆಮಿಕಲ್ಸ್ ಮ್ಯಾನ್ಯುಫ್ಯಾಕ್ಚರರ್ಸ್ (1941), ಅಲೈಡ್ ರೆಸಿನ್ಸ್ ಅಂಡ್ ಕೆಮಿಕಲ್ಸ್ (1965) ಎಂಬ ನಾಲ್ಕು ಪ್ರಮುಖ ಕೈಗಾರಿಕೆಗಳು ಸ್ಥಾಪಿತವಾಗಿದ್ದುವು. ಮೈಸೂರು ನಗರಕ್ಕೆ ಕಾವೇರಿ ನದಿಯ ನೀರು ಸರಬರಾಜು ಮಾಡುವ ಸಲುವಾಗಿ ಇಲ್ಲಿ ಪಂಪ್‌ಹೌಸನ್ನು ಕಟ್ಟಿದೆ. (ಕೆ.)

**ಬೆಳವಡಿ ಮಲ್ಲಮ್ಮ:** ಶಿವಾಜಿಯ ವಿರುದ್ಧ ಹೋರಾಡಿ ಖ್ಯಾತಳಾದ ಕರ್ನಾಟಕದ ಓರ್ವ ದೇಸಾಯಿತಿ. ಈಗ ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿರುವ ಬೆಳವಡಿ ಹಿಂದೆ 360 ಗ್ರಾಮಗಳ ಒಂದು ಸಂಸ್ಥಾನವಾಗಿತ್ತು. ಇಲ್ಲಿನ ದೇಸಾಯಿ ಈಶಪ್ರಭು, ಶಿರಸಿ ತಾಲ್ಲೂಕಿನ ಸೋಂದೆಯ ರಾಜಕುಮಾರಿ ಮಲ್ಲಮ್ಮಳನ್ನು ಮದುವೆಯಾಗಿದ್ದ. ಶಿವಾಜಿ ಬಿಜಾಪುರದ ವಿರುದ್ಧ ಹೂಡಿದ ಬಂಡಾಯದ ಸಂಧಿ ಸಾಧಿಸಿ ತಾನೂ ಬಿಜಾಪುರದ ವಿರುದ್ಧ ಸಿಡಿದೆದ್ದಿದ್ದ. ಶಿವಾಜಿಯ ಜೊತೆ ಒಪ್ಪಂದ ಮಾಡಿಕೊಳ್ಳಬೇಕೆಂದು ಉತ್ಸುಕನಾಗಿದ್ದ. 1678ರ ಏಪ್ರಿಲ್ ತಿಂಗಳಲ್ಲಿ ದಕ್ಷಿಣದ ದಂಡಯಾತ್ರೆಯಿಂದ ಮರಳುತ್ತಿದ್ದ ಶಿವಾಜಿಯ ಸೈನಿಕರು, ಬೆಳವಡಿ ದೇಸಗತಿಗೆ ಸೇರಿದ ಯಾದವಾಡದಲ್ಲಿ ಬೆಳವಡಿಯವರ ತುರುಗಳನ್ನು ಅಪಹರಿಸಿ ಯುದ್ಧಕ್ಕೆ ಕಾರಣರಾದರು. ಶಿವಾಜಿಯ ಸೇನಾನಿ ದಾದಾಜಿ ರಘುನಾಥ ಬೆಳವಡಿ ಕೋಟೆಯನ್ನು ಮುತ್ತಿದ. ಯುದ್ಧದಲ್ಲಿ ಈಶಪ್ರಭು ಸತ್ತ, ರಾಣಿ ಮಲ್ಲಮ್ಮ ಹೆದರದೆ ಬೆಳವಡಿಯ ಸೇನೆಯ ನಾಯಕತ್ವ ವಹಿಸಿ ಕೋಟೆಯಿಂದ ಮರಾಠರನ್ನು ಹೊರದೂಡಿದಳು. ಸೋಲಿನಿಂದ ಅವಮಾನಿತರಾದ ಶಿವಾಜಿಯ ಸೈನಿಕರು, ಕೋಟೆಯನ್ನು ತಿರುಗಿ ಮುತ್ತಿದರು. ಮೂರು ವಾರಗಳಿಗೂ ದೀರ್ಘಕಾಲ ಮುತ್ತಿಗೆ ಸಾಗಿತು. ಕಡೆಗೆ ಕೋಟೆಯಲ್ಲಿನ ಆಹಾರ ತೀರಲು, ರಾಣಿ ಬಾಗಿಲು ತೆರೆಸಿ ಹೊರಬಂದು ಹೋರಾಡಿ ಸೆರೆಸಿಕ್ಕಳು. ಶಿವಾಜಿ ವೀರರಾಣಿ ಮಲ್ಲಮ್ಮನ್ನು ಮನ್ನಿಸಿ ಗೌರವಿಸಿ ಬಿಡುಗಡೆ ಮಾಡಿದ. ಬೆಳವಡಿ ದೇಸಗತಿ ಶಿವಾಜಿಗೆ ಸಾಮಂತ ರಾಜ್ಯವಾಯಿತು. ರಾಣಿಯ ಮಗುವಿಗೆ ಶಿವಾಜಿ ಹಾಲೂಡಿಸುತ್ತಿರುವಂತೆ ಚಿತ್ರಿತವಾದ ಉಬ್ಬುಶಿಲ್ಪವೊಂದು ಯಾದವಾಡದ ದೇವಾಲಯದಲ್ಲಿ ಕೆತ್ತಲ್ಪಟ್ಟಿದೆ. ಅಲ್ಲದೆ, ಅದರ ಮೇಲ್ಗಡೆ ಕುದುರೆಯೇರಿ ಸಾಗುತ್ತಿರುವ ಶಿವಾಜಿಯ ಚಿತ್ರವೂ ಇದೆ. ಈ ಯುದ್ಧದ ನೆನಪಾಗಿ ಮಲ್ಲಮ್ಮ ತನ್ನ ರಾಜ್ಯದ ಅನೇಕ ಕಡೆ ವೀರಗಲ್ಲುಗಳನ್ನು ಸ್ಥಾಪಿಸಿದ್ದಾಳೆ. (ಎಸ್.ಕೆ.)

**ಬೆಳವಾಡಿ:** ಚಿಕ್ಕಮಗಳೂರು ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ಚಿಕ್ಕಮಗಳೂರಿನಿಂದ ಪೂರ್ವಕ್ಕೆ 29 ಕಿಮೀ ದೂರದಲ್ಲಿ ಬಾಣಾವರ ಮಾರ್ಗದಲ್ಲಿ ಇದೆ. ಜನಸಂಖ್ಯೆ 2,760. ಈಗ ಈ ಗ್ರಾಮ ಇಲ್ಲಿನ ವೀರನಾರಾಯಣ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. 1760ರಲ್ಲಿ

ಮೈಸೂರು ದೊರೆ ಇಮ್ಮಡಿ ಕೃಷ್ಣರಾಜ ಒಡೆಯರು ಈ ಗ್ರಾಮವನ್ನು ಶೃಂಗೇರಿ ಮಠಕ್ಕೆ ಜಹಗೀರಿಯಾಗಿ ನೀಡಿದ್ದರು. ಹೊಯ್ಸಳರ ಕಾಲದಲ್ಲಿ ಇದೊಂದು ಜೈನ ಕೇಂದ್ರವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಈಗ ಯಾವ ಕುರುಹೂ ಉಳಿದಿಲ್ಲ. ಗ್ರಾಮದ ಬಳಿಯಲ್ಲಿ ಮೈಲುತುತ್ತದ ಗಣಿಗಳಿವೆ. ಇಲ್ಲಿ ಹಸುರುಶಿಲೆ (ಪಚ್ಚೆಕಲ್ಲು) ಸಹ ದೊರೆಯುತ್ತದೆ.



ವೀರನಾರಾಯಣ ದೇವಾಲಯ

ವೀರನಾರಾಯಣ ದೇವಾಲಯ ಹೊಯ್ಸಳ ಶೈಲಿಯ ತ್ರಿಕೂಟಾಚಲ ಬಹುಶಃ ಕರ್ನಾಟಕದ ತ್ರಿಕೂಟಾಚಲ ದೇವಾಲಯಗಳಲ್ಲಿ ದೊಡ್ಡದು ಹಾಗೂ ಸುಂದರವಾದುದು. ಇದರ ರಚನೆಯ ಕಾಲ ತಿಳಿಯದು. ಆದರೆ 1206ರಲ್ಲಿ ಈ ದೇವಾಲಯಕ್ಕೆ ದತ್ತಿ ಬಿಟ್ಟ ವಿಷಯ ಶಾಸನವೊಂದರಿಂದ ತಿಳಿದು ಬರುವುದರಿಂದ ಆ ಕಾಲಕ್ಕಿಂತ ಮೊದಲೇ ದೇವಾಲಯದ ನಿರ್ಮಾಣವಾಯಿತೆಂಬುದು ಸ್ಪಷ್ಟ. ಮೊದಲಿಗೆ ದೇವಾಲಯದ ಪಶ್ಚಿಮ ಭಾಗವನ್ನು ರಚಿಸಿ, ಅನಂತರ ಪೂರ್ವಭಾಗವನ್ನು ಸೇರಿಸಿದಂತೆ ತೋರುತ್ತದೆ. ಪಶ್ಚಿಮ ಭಾಗದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಹಾಗೂ ಮುಖಮಂಟಪಗಳಿವೆ. ಈ ಗುಡಿಯ ಹೊರಗೋಡೆಯಲ್ಲಿ ಆರು ಪಟ್ಟಿಕೆಗಳಿವೆ; ಗೋಡೆಯ ಮೇಲೆ ಹೆಚ್ಚಿನ ಅಲಂಕಾರಗಳಿಲ್ಲ. ಮೇಲ್ಛಾವಣಿಯ ಬೋದಿಗೆಗಳಲ್ಲಿ ಮಣಿಸಾಲುಗಳನ್ನು ಕೆತ್ತಿದೆ. ಗರ್ಭಗುಡಿಯಲ್ಲಿ ಶಂಖ, ಪದ್ಮ, ಗದಾಚಕ್ರಧಾರಿಯಾದ ಸು. 6 1/2' ಎತ್ತರದ ವೀರನಾರಾಯಣನ ಸುಂದರ ಮೂರ್ತಿ ಇದೆ. ಪೂರ್ವಭಾಗದಲ್ಲಿ ನಲವತ್ತಾರು ಸ್ತಂಭಗಳುಳ್ಳ ದೊಡ್ಡ ಸಭಾಮಂಟಪವಿದೆ. ಉತ್ತರ ದಕ್ಷಿಣಗಳಲ್ಲಿ ಗರ್ಭಗುಡಿ ಮತ್ತು ಸುಕನಾಸಿಗಳಿವೆ. ದಕ್ಷಿಣ ಗರ್ಭಗುಡಿಯಲ್ಲಿ ತ್ರಿಭಂಗದಲ್ಲಿ ನಿಂತು ಕೊಳಲು ನುಡಿಸುತ್ತಿರುವ ಸು. 7' ಎತ್ತರದ ವೇಣುಗೋಪಾಲನ ಮೂರ್ತಿ ಇದೆ. ಉತ್ತರ ಗರ್ಭಗುಡಿಯಲ್ಲಿರುವ ಯೋಗಾನರಸಿಂಹ ಮೂರ್ತಿಯೂ 7' ಎತ್ತರದ್ದು. ಹಿಂದಿನ ಕೈಗಳಲ್ಲಿ ಶಂಖಚಕ್ರಗಳಿವೆ. ಮುಂದಿನ ಕೈಗಳು ಯೋಗ ಮುದ್ರೆಯಲ್ಲಿವೆ. ನಾಗತೋರಣದಲ್ಲಿ ದಶಾವತಾರವನ್ನು ಚಿತ್ರಿಸಿದೆ.

ಸಭಾಮಂಟಪದ ಪೂರ್ವಭಾಗದಲ್ಲಿ ಉಪ್ಪರಿಗೆ ಅಥವಾ ಮಹಾದ್ವಾರವಿದೆ. ಮೊದಲು ಇಲ್ಲಿಂದ ಪ್ರವೇಶವಿದ್ದಿರಬೇಕು. ದೇವಾಲಯದ ಹೊರಗೋಡೆಗಳಲ್ಲಿ ವಿಷ್ಣುವಿನ ವಿವಿಧ ರೂಪಗಳನ್ನೂ ಭಾಗವತದ ಕೆಲವು ಘಟನೆಗಳನ್ನೂ ಕೆತ್ತಿದೆ. ಭುವನೇಶ್ವರಿಗಳು ಕೆಲವು ಅರ್ಧಗೋಳಾಕೃತಿಯಲ್ಲಿಯೂ ಕೆಲವು ತಟ್ಟೆಯಾಕಾರದಲ್ಲಿಯೂ ಇವೆ. ಪ್ರತಿಗರ್ಭಗೃಹದ ಮೇಲೂ ನಕ್ಷತ್ರಾಕಾರ ವಿನ್ಯಾಸದ ಶಿಖರಗಳಿದ್ದು ಅವುಗಳ ಮೇಲೂ ವಿಷ್ಣುವಿನ ವಿವಿಧ ರೂಪಗಳು ಮತ್ತು ಯಕ್ಷಯಕ್ಷಿಣಿಯರ ಶಿಲ್ಪಗಳನ್ನು ಕೆತ್ತಲಾಗಿದೆ.

**(ಎಚ್.ಎಂ.ಎನ್.ಆರ್.)**

**ಬೆಳ್ತಂಗಡಿ:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಸ್ಥಳ. ಈ ತಾಲ್ಲೂಕನ್ನು ಉತ್ತರ, ಈಶಾನ್ಯ ಮತ್ತು ಪೂರ್ವದಲ್ಲಿ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳೂ ದಕ್ಷಿಣದಲ್ಲಿ ಪುತ್ತೂರು, ಪಶ್ಚಿಮದಲ್ಲಿ ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕುಗಳೂ ಸುತ್ತುವರೆದಿವೆ. ಈ ತಾಲ್ಲೂಕು ಅಸ್ತಿತ್ವಕ್ಕೆ ಬಂದುದು 1954ರಲ್ಲಿ. ತಾಲ್ಲೂಕಿನಲ್ಲಿ ವೇಣೂರು, ಬೆಳ್ತಂಗಡಿ ಮತ್ತು ಕೊಕ್ಕಡ ಹೋಬಳಿಗಳು. ತಾಲ್ಲೂಕಿನಲ್ಲಿ 84 ಗ್ರಾಮ ಇವೆ. ವಿಸ್ತೀರ್ಣ 1,375 ಚ.ಕಿಮೀ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 2,46,494.

ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಉತ್ತರದಿಂದ ದಕ್ಷಿಣದ ಕಡೆಗೆ ಪಶ್ಚಿಮ ಘಟ್ಟಗಳು ಹಬ್ಬಿವೆ. ಬೆಳ್ತಂಗಡಿಗೆ ಎದುರಾಗಿ ಪೂರ್ವದಲ್ಲಿ ಕುದುರೆಮುಖ ಶ್ರೇಣಿ ಇದೆ. ಚಾರ್ಮಡಿ ಘಾಟ್ ಈ ತಾಲ್ಲೂಕಿನ ಪೂರ್ವದ ಗಡಿಯಲ್ಲಿದ್ದು ಚಿಕ್ಕಮಗಳೂರಿಗೆ ಇದು ಸಂಬಂಧ ಕಲ್ಪಿಸುತ್ತದೆ. ಈ ತಾಲ್ಲೂಕಿನ ಪೂರ್ವಭಾಗದ ಪರ್ವತಶ್ರೇಣಿಗಳಲ್ಲಿ ಹುಟ್ಟುವ ನೇತ್ರಾವತಿ ನದಿ ಉತ್ತರದಿಂದ ದಕ್ಷಿಣಕ್ಕೆ ಮತ್ತು ಮುಂದೆ ನೈಋತ್ಯ ದಿಕ್ಕಿನಲ್ಲಿ ಹರಿದು ಮಂಗಳೂರಿನ ಹತ್ತಿರ ಅರಬ್ಬೀಸಮುದ್ರವನ್ನು ಸೇರುತ್ತದೆ. ಹೆಚ್ಚು ಮಳೆ ಬೀಳುವ ಪ್ರದೇಶವೆನ್ನಬಹುದಾದ ಈ ತಾಲ್ಲೂಕಿನ ಮಳೆಯ ಸರಾಸರಿ 4,058 ಮಿಮೀ. ನಾನಾ ಜಾತಿಯ ಮರಗಿಡಗಳಿರುವ ದಟ್ಟವಾದ ಕಾಡುಗಳಿಂದ ಇಲ್ಲಿನ ಘಟ್ಟಪ್ರದೇಶ ಕೂಡಿದೆ. ಈ ತಾಲ್ಲೂಕಿನ ಅರಣ್ಯಗಳ ವಿಸ್ತರಣೆ ಮತ್ತು ರಕ್ಷಣೆ ಕಾರ್ಯ ನಡೆಯುತ್ತಿದೆ. ಮುಖ್ಯ ಬೆಳೆ ಬತ್ತ ಮತ್ತು ಕಬ್ಬು. ಇವುಗಳ ಜೊತೆಗೆ ಅಡಕೆ, ತೆಂಗು, ಗೋಡಂಬಿ, ಮೆಣಸು, ಏಲಕ್ಕಿ ಬೆಳೆಯುತ್ತಾರೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಕೆಲವು ಮುಖ್ಯ ಸ್ಥಳಗಳಲ್ಲಿ ಒಂದಾದ ಆಲದಂಗಡಿ ಬೆಳ್ತಂಗಡಿಗೆ 12 ಕಿಮೀ ದೂರದಲ್ಲಿದೆ. ಇಲ್ಲಿ ರಾಣಿ ಮದರಕ್ಕ ಕಟ್ಟಿಸಿದ ಅರಮನೆ, ಅದರ ಹತ್ತಿರವೇ ಅರ್ಧನಾರೀಶ್ವರ ಮತ್ತು ಸೋಮನಾಥ ದೇವಾಲಯಗಳ ಒಂದು ಬಸದಿ ಇವೆ. ಬೈಲಂಗಡಿ ಬೆಳ್ತಂಗಡಿ 22 ಕಿಮೀ ದೂರದಲ್ಲಿದೆ. ರಾಣಿ ಸೋಮಲದೇವಿ ಮತ್ತು ಅವಳ ಪತಿಯ ಸಮಾಧಿಯೊಂದಿಗೆ ಇತರ ಕೆಲವು ಸಮಾಧಿಗಳೂ ಒಂದು ಬಸದಿಯೂ ಇಲ್ಲಿವೆ. ಬಂಗವಾಡಿ ಬೆಳ್ತಂಗಡಿಯ ಈಶಾನ್ಯಕ್ಕೆ 12 ಕಿಮೀ ದೂರದಲ್ಲಿದೆ. ಇದು ಬಂಗರಸರ ರಾಜಧಾನಿಯಾಗಿತ್ತು. ಇಲ್ಲಿಂದ ಕುದುರೆಮುಖ ಪರ್ವತಶ್ರೇಣಿಯನ್ನು ಕಾಣಬಹುದು. ಚಾರ್ಮಡಿ ಬೆಳ್ತಂಗಡಿಗೆ ಪೂರ್ವದಲ್ಲಿ 19 ಕಿಮೀ ದೂರದಲ್ಲಿರುವ ಗಡಿ ಗ್ರಾಮ. ಇಲ್ಲಿಂದ ಘಾಟ್ ಮಾರ್ಗ ಪ್ರಾರಂಭವಾಗಿ ಪಕ್ಕದ ಚಿಕ್ಕಮಗಳೂರಿನ ಮೂಡಿಗೆರೆ ತಾಲ್ಲೂಕಿಗೆ ಸಂಪರ್ಕ ಕಲ್ಪಿಸಿದೆ. ಧರ್ಮಸ್ಥಳ **(ನೋಡಿ)** ಬೆಳ್ತಂಗಡಿಗೆ 16 ಕಿಮೀ ದೂರದಲ್ಲಿರುವ ಒಂದು ಪವಿತ್ರ ಕ್ಷೇತ್ರ. ಇಲ್ಲಿ ಪ್ರಸಿದ್ಧ ಮಂಜುನಾಥ ದೇವಾಲಯವಿದೆ. ಜಮಾಲಾಬಾದ್ **(ನೋಡಿ)** ಬೆಳ್ತಂಗಡಿಗೆ 6 ಕಿಮೀ ದೂರದಲ್ಲಿದೆ. ಇಲ್ಲಿ ಟಿಪ್ಪು ತನ್ನ ತಾಯಿಯ ನೆನಪಾಗಿ ಕಟ್ಟಿದ ಕೋಟೆಯ ಅವಶೇಷವಿದೆ. ಬೆಳ್ತಂಗಡಿಗೆ 24 ಕಿಮೀ ದೂರದಲ್ಲಿರುವ ನರವಿಯಲ್ಲಿ ಸೂರ್ಯ ಮತ್ತು ಸ್ಕಂದ ದೇವಾಲಯಗಳಿವೆ. ತೋಟತೊಡಿ ಬೆಳ್ತಂಗಡಿಯ ಪೂರ್ವಕ್ಕೆ 19 ಕಿಮೀ ದೂರದಲ್ಲಿದೆ. ಇಲ್ಲೊಂದು ಸರೋವರವಿದೆ. ಬೆಳ್ತಂಗಡಿಗೆ 19 ಕಿಮೀ ದೂರದಲ್ಲಿರುವ ವೇಣೂರು **(ನೋಡಿ)** ಎಂಬಲ್ಲಿರುವ 38' ಎತ್ತರದ ಗೊಮ್ಮಟ ವಿಗ್ರಹ ಪ್ರಸಿದ್ಧವಾದದ್ದು. ಹಿಂದಿನ ಅರಮನೆಯ ಮತ್ತು ಕಟ್ಟಡಗಳ ಅವಶೇಷಗಳೂ ಇಲ್ಲಿವೆ.

ಬೆಳ್ತಂಗಡಿ ಈ ತಾಲ್ಲೂಕಿನ ಕೇಂದ್ರ. ಮಂಗಳೂರಿನ ಪೂರ್ವಕ್ಕೆ ಸು. 60 ಕಿಮೀ ದೂರದಲ್ಲಿದೆ. ಈ ಪಟ್ಟಣದ ಒಟ್ಟು ಜನಸಂಖ್ಯೆ 7,305. ಇಲ್ಲಿ ಪುರಾತನ ಸೋಮನಾಥ ದೇವಾಲಯ, ಒಂದು ಬಸದಿ ಮತ್ತು ಹಳೇಕೋಟೆಯ ಅವಶೇಷಗಳು ಉಳಿದಿವೆ.

ಬೆಳ್ತಂಗಡಿ ಪ್ರಕೃತಿ ಸೌಂದರ್ಯಕ್ಕೆ ಪ್ರಸಿದ್ಧ. ಇಲ್ಲಿನ ಪ್ರವಾಸಿ ಮಂದಿರದಲ್ಲಿ ಕುಳಿತು ಪಶ್ಚಿಮಘಟ್ಟಗಳತ್ತ ನೋಡಿದರೆ ಕುದುರೆಮುಖ ಶಿಖರ, ಬಂಡಾಜೆ ಜೋಗು ಮತ್ತು ಕುದುರೆಮುಖದ ಮರಿಯಂತಿರುವ ಗಡಾಯಿಕಲ್ಲು ಕಾಣಬರುತ್ತವೆ. ಬೆಳ್ತಂಗಡಿಯಿಂದ ಕಾರ್ಕಳ, ಮಂಗಳೂರು, ಚಿಕ್ಕಮಗಳೂರು ಮುಂತಾದೆಡೆಗಳಿಗೆ ಉತ್ತಮ ಹಾದಿಗಳಿವೆ. (*;ಡಿ.ಎಸ್.ಕೆ.)

**ಬೆಳ್ಳಾರ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಈಶಾನ್ಯದಲ್ಲಿ, ಹುಳಿಯಾರು-ಶಿರಾ ಮಾರ್ಗದಲ್ಲಿ ಬೋರನ ಕಣಿವೆ ಜಲಾಶಯದ ಪೂರ್ವಕ್ಕೆ ಇರುವ ಒಂದು ಗ್ರಾಮ. ಚಿಕ್ಕನಾಯಕನ ಹಳ್ಳಿಗೆ 82 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,166.

ಬೆಳ್ಳಾರದ ಪೂರ್ವಕ್ಕೆ 3 ಕಿಮೀ ದೂರದಲ್ಲಿ ಪುರಾತನರು ಕೆಲಸ ಮಾಡಿ ಕೈಬಿಟ್ಟ ಚಿನ್ನದ ಗಣಿಗಳಿವೆ. ಗಣಿಗಳಿಗೆ ಅರ್ಧ ಮೈಲಿ ದೂರದಲ್ಲಿ ಹರಿಯುವ ಹೊಳೆಗೆ ಸುವರ್ಣಾವತಿ ಎಂದು ಹೆಸರಿದೆ. ಬೆಳ್ಳಾರದ ಬಳಿ ಚಿನ್ನದ ಗಣಿಗಳಿರುವುದನ್ನು ಸು. 1890ರಲ್ಲಿ ಭೂವಿಜ್ಞಾನ ಇಲಾಖೆಯವರು ಗುರುತಿಸಿದರು. 1902ರಿಂದ 1905ರವರೆಗೆ ಅಲ್ಪಪ್ರಮಾಣದಲ್ಲಿ ಕೆಲಸ ನಡೆಯಿತು. ಚಿನ್ನದ ಅದಿರಿನ ನಿಕ್ಷೇಪ ಗಮನಾರ್ಹವಾಗಿರಲಿಲ್ಲವಾದ್ದರಿಂದ ಗಣಿ ಕೆಲಸ ನಿಂತಿತು. 1944ರಲ್ಲಿ ಮತ್ತೆ ಮೈಸೂರು ಭೂವಿಜ್ಞಾನ ಇಲಾಖೆಯವರು ತಮ್ಮ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಈ ಗಣಿಗಳ ಶೋಧನೆಯನ್ನು ಕೈಗೊಂಡರು. ಸುಮಾರು ಹತ್ತು ವರ್ಷಕಾಲ ಕೆಲಸ ನಡೆಯಿತು. ಲಾಭದಾಯಕವಾಗಿ ಗಣಿಗಾರಿಕೆ ನಡೆಸುವಷ್ಟು ಚಿನ್ನ ಸಿಗಲಿಲ್ಲವಾದ್ದರಿಂದ 1954ರಲ್ಲಿ ಇಲ್ಲಿನ ಕೆಲಸ ನಿಂತಿತು.

ಭೂವಿಜ್ಞಾನ ಇಲಾಖೆಯವರು ಕಟ್ಟಿದ ಕಟ್ಟಡಗಳನ್ನೂ ನೀರು ಸರಬರಾಜು ವ್ಯವಸ್ಥೆಯನ್ನೂ ಉಪಯೋಗಿಸಿಕೊಂಡು ತೋಟಗಾರಿಕೆ ಇಲಾಖೆಯವರು ಒಂದು ಸಾವಿರ ಎಕರೆ ಪ್ರದೇಶದಲ್ಲಿ ಆಧುನಿಕ ರೀತಿಯಲ್ಲಿ ತೆಂಗಿನ ವ್ಯವಸಾಯವನ್ನು ಕೈಗೊಂಡಿದ್ದಾರೆ. ಹಿಂದಿದ್ದ ಗಣಿ ಪ್ರದೇಶದಲ್ಲಿ ಈಗ ಬೆಳೆದು ನಿಂತ ತೆಂಗಿನ ವನವನ್ನು ಕಾಣಬಹುದು.

ಈ ಗ್ರಾಮದಿಂದ ಬುಕ್ಕಾಪಟ್ಟಣದವರೆಗೂ ಕಮರ ಮರಗಳ ನಿಬಿಡ ಅರಣ್ಯವಿದೆ. ಬೆಳ್ಳಾರೆ ಗ್ರಾಮದ ಬಳಿ ಅರಣ್ಯ ಇಲಾಖೆಗೆ ಸೇರಿದ ಒಂದು ವಿಶ್ರಾಂತಿ ಗೃಹ ಇದೆ. (ಬಿ.ಪಿ.ಆರ್.)

**ಬೆಳ್ಳಾರೆ:** ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಒಂದು ಗ್ರಾಮ. ಸುಳ್ಯಕ್ಕೆ 19 ಕಿಮೀ ದೂರದಲ್ಲಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿಯಲ್ಲಿದೆ. ಜನಸಂಖ್ಯೆ 4,701.

ಈ ಊರಿನ ಹತ್ತಿರ ಗೌರಿಹೊಳೆ ಎಂಬ ಸಣ್ಣ ತೊರೆ ಹರಿಯುತ್ತದೆ. ಈ ಪ್ರದೇಶ ಪ್ರಕೃತಿ ಸಂಪತ್ತಿನಿಂದ ಕೂಡಿದೆ. ಇಲ್ಲಿ ಸು. 250 ಎಕರೆ ರಬ್ಬರ್ ತೋಟವಿರುವ ಆರಕ್ಷಿತ ಅರಣ್ಯ ಪ್ರದೇಶವಿದೆ. ಶ್ರೀಲಂಕಾದಿಂದ ಬಂದ ನಿರ್ವಸಿತರಿಗೆ ಇಲ್ಲಿ ನೆಲೆಯನ್ನು ಏರ್ಪಡಿಸಲಾಗಿದೆ.

ಬೆಳ್ಳಾರೆ ಗ್ರಾಮ ಮೊದಲಿಗೆ ಬಲ್ಲಾಳವಂಶದವರ ವಾಸಸ್ಥಾನವಾಗಿದ್ದು ಜೈನ ಧಾರ್ಮಿಕ ಕೇಂದ್ರವಾಗಿತ್ತು. ಇಲ್ಲಿ ಪಾಳುಬಿದ್ದಿರುವ ಒಂದು ಜೈನ ಬಸದಿ, ಇಕ್ಕೇರಿ ವೆಂಕಟಪ್ಪನಾಯಕ ಕಟ್ಟಿಸಿದ ಕೋಟೆ ಇವೆ. (ಎಸ್.ಪಿ.ಕೆ.)

**ಬೆಳ್ಳಾವೆ ನರಹರಿಶಾಸ್ತ್ರಿ:** 1882-1961. ಪ್ರಸಿದ್ಧ ನಾಟಕಕಾರರು. ತುಮಕೂರು ಜಿಲ್ಲೆಯ ಬೆಳ್ಳಾವೆಯಲ್ಲಿ 1882 ಸೆಪ್ಟಂಬರ್ 21ರಂದು ಜನಿಸಿದರು. ಇವರ ತಂದೆ ನರಸಾವಧಾನಿಗಳು, ತಾಯಿ ವೆಂಕಟಲಕ್ಷ್ಮಮ್ಮ. ನರಹರಿಶಾಸ್ತ್ರಿಗಳು ತುಮಕೂರಿನಲ್ಲಿ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸುವುದರೊಂದಿಗೆ ಸಂಸ್ಕೃತ, ಕನ್ನಡ ಭಾಷೆಗಳಲ್ಲಿಯೂ ಕಾವ್ಯಾಲಂಕಾರಗಳಲ್ಲಿಯೂ ಪಾಂಡಿತ್ಯ ಗಳಿಸಿಕೊಂಡರು. ಅನಂತರ ಶಿಕ್ಷಣ ಇಲಾಖೆಯನ್ನು ಸೇರಿ ವೃತ್ತಿಜೀವನವನ್ನು ಆರಂಭಿಸಿದ ಇವರು ಕೋಲಾರ, ದೊಡ್ಡಬಳ್ಳಾಪುರ, ಮೇಲುಕೋಟೆ ಮುಂತಾದ ಸ್ಥಳಗಳಲ್ಲಿ ಉಪಾಧ್ಯಾಯರಾಗಿ, ಮುಖ್ಯೋಪಾಧ್ಯಾಯರಾಗಿ, ಶಾಲಾ ಪರೀಕ್ಷಕರಾಗಿ ಸು. 35 ವರ್ಷಗಳಷ್ಟು ದೀರ್ಘಕಾಲ ಸೇವೆ ಸಲ್ಲಿಸಿದರು.

ಸಾಹಿತ್ಯದಲ್ಲಿ ಒಳ್ಳೆ ಅಭಿರುಚಿ ಬೆಳೆಸಿಕೊಂಡಿದ್ದ ಇವರು ಅನೇಕ ಪ್ರಾಚೀನ ಕನ್ನಡ ಕಾವ್ಯಗಳ ಜೊತೆಗೆ ಇಂಗ್ಲಿಷ್ ಭಾಷೆಯ ಅನೇಕ ನಾಟಕಗಳನ್ನು ಗಾಢವಾಗಿ ಅಭ್ಯಾಸ ಮಾಡಿದ್ದರು. ಗುಬ್ಬಿವೀರಣ್ಣನವರ ಅಪೇಕ್ಷೆಯಂತೆ 1919ರಲ್ಲಿ ಶ್ರೀ ಕೃಷ್ಣಲೀಲಾ ಎಂಬ ನಾಟಕವನ್ನು ರಚಿಸಿದರು. ಗುಬ್ಬಿ ನಾಟಕ ಕಂಪನಿಯಿಂದ ಈ ನಾಟಕ ಪ್ರದರ್ಶನಗೊಂಡು ನಾಟಕಕಾರರಿಗೂ ನಾಟಕ ಕಂಪನಿಗೂ ಒಳ್ಳೆಯ ಹೆಸರು ಬಂತು. ಇದರಿಂದ ಉತ್ಸಾಹಗೊಂಡ ನರಹರಿಶಾಸ್ತ್ರಿಗಳು ಇನ್ನೂ ಅನೇಕ ನಾಟಕಗಳನ್ನು ರಚಿಸಿದರು. ಸದಾರಮೆ, ಗುಲೇಬಕಾವಲಿ, ಕಂಸವಧೆ, ಲಂಕಾದಹನ, ರುಕ್ಮಿಣಿ ಸ್ವಯಂವರ, ಮಹಾತ್ಮಾ ಕಬೀರದಾಸ, ಜಲಂಧರ ಈ ನಾಟಕಗಳು ಗುಬ್ಬಿ ಕಂಪನಿಯಿಂದ ಪ್ರದರ್ಶನವಾಗಿ ಜನಪ್ರಿಯವಾದವು. 1926ರಲ್ಲಿ ವೀರಣ್ಣನವರು ಆರಂಭಿಸಿದ ಬಾಲಕಲಾವರ್ಧಿನಿ ಎಂಬ ಕಿರಿಯ ನಟರ ಸಂಘಕ್ಕೂ ನರಹರಿಶಾಸ್ತ್ರಿಗಳು ಶ್ರೀಕೃಷ್ಣಪಾರಿಜಾತ, ಶ್ರೀಕೃಷ್ಣಗಾರುಡಿ ನಾಟಕಗಳನ್ನು ಬರೆದುಕೊಟ್ಟರು. ಅನಂತರ ಇವರು ಬರೆದ ಶಂಕರವಿಜಯ, ದಶಾವತಾರ, ಸತೀ ಅನಸೂಯ, ಶಾಕುಂತಲ, ಪಾರಿಜಾತ, ಹೇಮರೆಡ್ಡಿ ಮಲ್ಲಮ್ಮ, ಶ್ರೀ ಕೃಷ್ಣಲೀಲಾ, ಸದಾರಮೆ, ಪ್ರಭಾವತಿ ಮುಂತಾದ ನಾಟಕಗಳು ಕನ್ನಡನಾಡಿನ ಹೆಸರಾಂತ ಕಂಪನಿಗಳ ಮೂಲಕ ಪ್ರದರ್ಶನಗೊಂಡಿವೆ.

ಗ್ರಾಮಾಫೋನ್ ಕಂಪನಿಗಳಿಗೆ ಹಾಡುಗಳನ್ನೂ ಗ್ರಾಮಫೋನಿಗೆ ಅಳವಡುವಂತೆ ನಾಟಕಗಳನ್ನೂ ಬರೆದುಕೊಟ್ಟ ಶ್ರೇಯಸ್ಸು ಶಾಸ್ತ್ರಿಗಳದು.

ಇವರು ನಾಟಕಗಳನ್ನಲ್ಲದೆ ಕೆಲವು ಚಂಪೂಕಾವ್ಯಗಳ ವಿಮರ್ಶೆಯನ್ನು ಮಾಡಿದ್ದಾರೆ. ರುದ್ರಭಟ್ಟನ ಜಗನ್ನಾಥವಿಜಯದ ಮೇಲೆ ಇವರು ಬರೆದಿರುವ ಸುದೀರ್ಘ ವಿಮರ್ಶೆ ಕಾವ್ಯಾಭ್ಯಾಸಿಗಳಿಗೆ ಪ್ರಯೋಜನಕಾರಿಯಾಗಿದೆ. ಇವರು ಬರೆದ ರಾಜಭಕ್ತಿ ಕಾವ್ಯ ಮಹಾರಾಜರ ಮೆಚ್ಚುಗೆ ಪಡೆಯಿತು.

ಕನ್ನಡದಲ್ಲಿ ನಾಟಕಗಳ ಅಭಾವವಿದ್ದ ಕಾಲದಲ್ಲಿ ಮನೋರಂಜನೆಯ ಜನಪ್ರಿಯ ನಾಟಕಗಳನ್ನು ರಚಿಸಿದ ಕೀರ್ತಿ ಶಾಸ್ತ್ರಿಯವರಿಗೆ ಸಲ್ಲುತ್ತದೆ. ಶಾಸ್ತ್ರಿಗಳು ತಮ್ಮ ನಾಟಕಗಳಲ್ಲಿ ಜನಸಾಮಾನ್ಯರ ಭಾಷೆಯನ್ನು ಬಳಸಿದ್ದಲ್ಲದೆ, ಜೀವನದ ಮೌಲ್ಯಗಳು, ಸಾಮಾನ್ಯ ಜನಜೀವನದ ಕನಸುಗಾರಿಕೆ, ಸುಖಲೋಲುಪತೆ, ಹಾಸ್ಯ ಮುಂತಾದ ಅಂಶಗಳನ್ನು ತಂದಿದ್ದು ಇವರ ಸಾಧನೆ. ಶಾಸ್ತ್ರಿಗಳಿಗೆ ಅಷ್ಟಾವಧಾನ ವಿದ್ಯೆಯಲ್ಲೂ

ಪರಿಶ್ರಮವಿತ್ತು. 1923ರಲ್ಲಿ ಮೈಸೂರಿನಲ್ಲಿ ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯೊಂದರಲ್ಲಿ ಇವರು ಅಷ್ಟಾವಧಾನ ಕಾರ್ಯಕ್ರಮ ಕೊಟ್ಟು ವಿದ್ವಜ್ಜನರ ಗೌರವಾದರಗಳನ್ನು ಸಂಪಾದಿಸಿ ಕೊಂಡರು. ಇವರ ವಿದ್ವತ್ತು ಪ್ರತಿಭೆಗಳನ್ನು ಮನಗಂಡ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ ಆಸ್ಥಾನ ವಿದ್ವಾನ್, ಕೀರ್ತನ ಕೇಸರಿ ಎಂಬ ಬಿರುದುಗಳನ್ನು ಕೊಟ್ಟು ಸನ್ಮಾನಿಸಿದರು ಇವರು 1961 ಮೇ 21ರಂದು ನಿಧನರಾದರು. (ಎಸ್.ಆರ್.ಎನ್.)

**ಬೆಳ್ಳಾವೆ ವೆಂಕಟನಾರಣಪ್ಪ:** 1871–1943. ಹಿರಿಯ ಭಾಷಾ ಸೇವಕರು. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯದ ರಚನೆ ಮತ್ತು ಪ್ರಸಾರಗಳಿಗೆ ಶ್ರಮಿಸಿದ ಆದ್ಯರು. ಹುಟ್ಟಿದ್ದು ತುಮಕೂರು ಜಿಲ್ಲೆಯ ಬೆಳ್ಳಾವೆಯಲ್ಲಿ. ತಂದೆ ವೆಂಕಟಕೃಷ್ಣಯ್ಯ, ತಾಯಿ ಲಕ್ಷ್ಮಿದೇವಮ್ಮ. ತಂದೆಯ ಶಿಸ್ತಿನ ಜೀವನ ಮತ್ತು ತಾಯಿಯ ಧಾರ್ಮಿಕ ನಂಬಿಕೆಗಳು ಇವರ ಮೇಲೆ ಪ್ರಭಾವ ಬೀರಿದುವು. ಇವರು ಪ್ರೌಢಶಾಲೆಯ ಹಂತದ ವರೆಗಿನ ಶಿಕ್ಷಣವನ್ನು ತುಮಕೂರಿನಲ್ಲಿ ಮುಗಿಸಿದರು. ಅನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿ ಭೌತಶಾಸ್ತ್ರವನ್ನು ವ್ಯಾಸಂಗ ವಿಷಯವಾಗಿ ಅಧ್ಯಯನ ಮಾಡಿ ಬಿ.ಎ. ಪದವಿ ಪಡೆದರು. ತಮ್ಮ ಒಳ್ಳೆಯ ನಡೆನುಡಿಗಳಿಂದ, ಪ್ರತಿಭೆಯಿಂದ ಆಗ್ಗೆ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಜಾನ್ ಕುಕ್ ಅವರ ವಿಶೇಷ ಪ್ರೀತಿಗೆ ಪಾತ್ರರಾಗಿದ್ದ ಇವರು, ಪದವಿ ಪಡೆದ ಕೂಡಲೇ ಅದೇ ಕಾಲೇಜಿನಲ್ಲಿ ಭೌತ ಶಾಸ್ತ್ರದ ಅಧ್ಯಾಪಕರಾಗಿ ನೇಮಕಗೊಂಡರು. ಈ ಕೆಲಸದಲ್ಲಿದ್ದಾಗ ಖಾಸಗಿ ಯಾಗಿ ವ್ಯಾಸಂಗಮಾಡಿ ಮದರಾಸು ವಿಶ್ವವಿದ್ಯಾಲಯ ದಿಂದ ಭೌತಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದರು. ತಮ್ಮ ಅಸಾಧಾರಣ ಬೋಧನ ಕ್ರಮದಿಂದ, ಶಿಸ್ತಿನ ಜೀವನದಿಂದ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದು ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸುಮಾರು ಮೂವತ್ತು ವರ್ಷಗಳಷ್ಟು ದೀರ್ಘ ಕಾಲ ಸೆಂಟ್ರಲ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿ, ಸೇವಾವಧಿ ಮುಗಿಯುವ ಮುನ್ನವೇ ಸ್ವಂತ ಇಚ್ಛೆಯಿಂದ ಪ್ರಾಧ್ಯಾಪಕ ಹುದ್ದೆಯಿಂದ ನಿವೃತ್ತರಾದರು. ಅನಂತರದ ತಮ್ಮ ದಿನಗಳನ್ನು ಕನ್ನಡ ಭಾಷೆ ಮತ್ತು ಸಾಹಿತ್ಯ ಚಟುವಟಿಕೆಗಳಿಗೆ ಮೀಸಲಾಗಿರಿಸಿದರು.

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಿರ್ಮಾಣಕ್ಕೆ ಒಳ್ಳೆಯ ಬುನಾದಿಯನ್ನು ಹಾಕಿದ್ದು ವೆಂಕಟನಾರಣಪ್ಪನವರ ದೊಡ್ಡ ಸಾಧನೆ. ವಿಜ್ಞಾನ ಸಾಹಿತ್ಯ ರಚನೆ ಮತ್ತು ಪ್ರಚಾರಗಳಿಗೆಂದೇ ಇವರು ಮತ್ತು ನಂಗಪುರಂ ವೆಂಕಟೇಶ ಅಯ್ಯಂಗಾರ್ **(ನೋಡಿ)** ಕೂಡಿ ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯನ್ನು ಸ್ಥಾಪಿಸಿ, ಅದರ ಆಶ್ರಯದಲ್ಲಿ ವಿಜ್ಞಾನ ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿ ಸುಮಾರು ಒಂದು ವರ್ಷ ಕಾಲ ನಡೆಸಿದರು. ಆ ಪತ್ರಿಕೆಗಾಗಿ ಇವರು ಅನೇಕ ಲೇಖನಗಳನ್ನು ಬರೆದರಲ್ಲದೆ ಬರೆಯುವವರನ್ನು ಗುರುತಿಸಿ ಪ್ರೋತ್ಸಾಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಆಧಾರಸ್ತಂಭಗಳಲ್ಲಿ ಒಬ್ಬರಾಗಿದ್ದ ವೆಂಕಟನಾರಣಪ್ಪನವರು ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ (1921–26), ಗೌರವ ಕೋಶಾಧಿಕಾರಿಗಳಾಗಿ (1926–34) ಮತ್ತು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಯೋಜನೆ ಆರಂಭವಾದದ್ದು ವಿಶೇಷವಾಗಿ ಇವರ ಪ್ರಯತ್ನದಿಂದ. ಇವರೇ ಈ ಯೋಜನೆಯ ಮೊದಲ ಪ್ರಧಾನ ಸಂಪಾದಕರು.

ವೆಂಕಟನಾರಣಪ್ಪನವರು ಜೀವವಿಜ್ಞಾನ, ಗುಣಸಾಗರ ಮತ್ತು ಕನ್ನಡ ಐದನೆಯ ಪುಸ್ತಕ ಎಂಬ ಮೂರು ಸ್ವತಂತ್ರ ಕೃತಿಗಳನ್ನು ಪ್ರಕಟಿಸಿದ್ದಾರೆ. ಪಂಪ ಭಾರತ, ಪಂಪ ರಾಮಾಯಣ, ಶಬ್ದಮಣಿದರ್ಪಣ, ಸೋಮೇಶ್ವರ ಶತಕ ಮತ್ತು ಕುಸುಮಾವಳಿ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ.

ಇವರು ಸಲ್ಲಿಸಿದ ಸಾರ್ವಜನಿಕ ಸೇವೆ ಗಣ್ಯವಾದುದು. ಇವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರು ಆಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥ ಪ್ರಕಟಣ ಸಮಿತಿ, ಸರ್ಕಾರದ ಪಠ್ಯಪುಸ್ತಕ ಸಮಿತಿ ಮುಂತಾದ ಹಲವಾರು ಸಮಿತಿಗಳಲ್ಲೂ ಇವರು ಕೆಲಸಮಾಡಿದರು. ಬೆಂಗಳೂರಿನ ಬಸವನಗುಡಿ ಯೂನಿಯನ್‌ಗೆ ಅನೇಕ ವರ್ಷಗಳ ಕಾಲ ಕಾರ್ಯದರ್ಶಿಗಳಾಗಿದ್ದ ಇವರು, ಅಲ್ಲಿಯ ಮಲ್ಲಿಕಾರ್ಜುನ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಶ್ರಮಿಸಿದರು.

ಇವರು ಸಲ್ಲಿಸಿದ ಸಾಹಿತ್ಯ ಮತ್ತು ಸಾರ್ವಜನಿಕ ಸೇವೆಗೆ ಮನ್ನಣೆ ಎಂಬಂತೆ ಹಲವು ಬಗೆಯ ಪ್ರಶಸ್ತಿಗಳು ಇವರಿಗೆ ಲಭಿಸಿದುವು. ಜಮಖಂಡಿಯಲ್ಲಿ 1937ರಲ್ಲಿ ನಡೆದ ಇಪ್ಪತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. 1940ರಲ್ಲಿ ಆಗಿನ ಮಹಾರಾಜರು ಇವರಿಗೆ ರಾಜಸೇವಾಸಕ್ತ ಎಂಬ ಬಿರುದನ್ನು ನೀಡಿ ಗೌರವಿಸಿದರು. ಬೆಂಗಳೂರಿನ ನಾಗರಿಕರು 1941ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಒಂದು ಅಭಿನಂದನ ಸಭೆಯನ್ನು ಏರ್ಪಡಿಸಿ ಮಾನಪತ್ರವನ್ನು ಅರ್ಪಿಸಿದರು.

ಇವರು 1943 ಆಗಸ್ಟ್ 3ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರ ಶಿಷ್ಯರು ಮತ್ತು ಮಿತ್ರರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇವರ ಹೆಸರಿನಲ್ಲಿ ದತ್ತಿಯೊಂದನ್ನು ಸ್ಥಾಪಿಸಿದ್ದಾರೆ. ಪರಿಷತ್ತು ಇವರ ಜೀವನ ಚರಿತ್ರೆಯೊಂದನ್ನು ಪ್ರಕಟಿಸಿದೆ. *

**ಬೆಳ್ಳೂರು[1]:** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ನಾಗಮಂಗಲದ ಉತ್ತರಕ್ಕೆ 16 ಕಿಮೀ ದೂರದಲ್ಲಿರುವ ಪಟ್ಟಣ. ಜನಸಂಖ್ಯೆ 6,823. 13ನೆಯ ಶತಮಾನದ ಒಂದು ಶಾಸನದ ಪ್ರಕಾರ ಈ ಸ್ಥಳಕ್ಕೆ ಉದ್ಭವ ನರಸಿಂಹಪುರ ಎಂಬ ಹೆಸರಿತ್ತೆಂದು ತಿಳಿದುಬರುತ್ತದೆ.

ಇಲ್ಲಿ ಹಲವಾರು ಪ್ರಾಚೀನ ದೇವಾಲಯಗಳಿವೆ. ಇಲ್ಲಿರುವ ಗೌರೇಶ್ವರ ದೇವಾಲಯ 1199ರಲ್ಲೂ ಮೂಲೆ ಸಿಂಗೇಶ್ವರ ದೇವಾಲಯ 1224ರಲ್ಲೂ ಮಾಧವರಾಯ ದೇವಾಲಯ 1284ರಲ್ಲೂ ರಚಿತವಾದುವು. ಇವು ಹೊಯ್ಸಳಶೈಲಿಯವು. ಗೌರೇಶ್ವರ ದೇವಾಲಯದಲ್ಲಿ ಗರ್ಭಗುಡಿ, ಸುಕನಾಸಿ ಮತ್ತು ನವರಂಗ ಇವು ಮುಖ್ಯ ಭಾಗಗಳು. ಸುಕನಾಸಿ ಮತ್ತು ನವರಂಗದ ಭುವನೇಶ್ವರಿಗಳು ಸುಂದರ ಕೃತಿಗಳು. ಗೋಪುರದ ಮೇಲೆ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪವಿದೆ. ಮೂಲೆ ಸಿಂಗೇಶ್ವರ ತ್ರಿಕೂಟಾಚಲ. ಮೂರು ಗರ್ಭಗುಡಿಗಳಿಗೂ ಮುಂದೆ ಸುಕನಾಸಿ ಮತ್ತು ಮೇಲೆ ಶಿಖರ ಇವೆ. ಆದರೆ ಒಂದು ಶಿಖರ ಮಾತ್ರ ಚೆನ್ನಾಗಿ ಉಳಿದಿದೆ. ದೇವಾಲಯ ಜೀರ್ಣವಾಗಿದೆ. ಮಾಧವರಾಯ ದೇವಾಲಯ ಸಹ ಮೂಲೆ ಸಿಂಗೇಶ್ವರದ ಮಾದರಿಯ ತ್ರಿಕೂಟಾಚಲ. ಈಗ ಇದನ್ನೂ ದೊಡ್ಡ ಪ್ರಾಕಾರ, ಪಾತಾಳಾಂಕಣ ಮತ್ತು ಮಹಾದ್ವಾರಗಳೊಡನೆ ವಿಸ್ತರಿಸಲಾಯಿತು. ಇವು ವಿಜಯನಗರ ಕಾಲದ ರಚನೆಗಳು. ತೆರೆದ ಹೊರ ಪ್ರಾಕಾರ

ಹೊಂದಿರುವ ಕಟ್ಟಡವನ್ನು ವೇದಿಕೆಯ ಮೇಲೆ ಕಟ್ಟಲಾಗಿದೆ. ಈ ದೇವಾಲಯದಲ್ಲಿರುವ ಮೂಲ ವಿಗ್ರಹ ಆದಿಮಾಧವರಾಯನದು. ತ್ರಿಭಂಗಿಯಲ್ಲಿರುವ ಗೋಪಾಲನ ವಿಗ್ರಹ ಸುಂದರವಾಗಿದ್ದು ಅದರ ಪ್ರಭಾವಳಿಯ ಕೆತ್ತನೆ ಕೆಲಸ ಅಂದವಾಗಿದೆ. ವರದರಾಜನದು ಲಕ್ಷಣವಾದ



ಮಾಧವರಾಯ ದೇವಾಲಯ

ವಿಗ್ರಹ. ಈ ಊರಿನ ವಿಮಲನಾಥ ಬಸದಿ 17ನೆಯ ಶತಮಾನದಲ್ಲಿ ಕಟ್ಟಿದ ದ್ರಾವಿಡಶೈಲಿಯ ಕಟ್ಟಡ. ಇದರಲ್ಲಿ $2^1/_2{}'$ ಎತ್ತರದ ವಿಮಲನಾಥನ ವಿಗ್ರಹವಿದೆ. ವಿಗ್ರಹಪೀಠದ ಮೇಲೆ ಎರಡು ಶಾಸನಗಳಿವೆ. ವೀರಭದ್ರ ಮತ್ತು ಕಲ್ಲೇಶ್ವರ ದೇವಾಲಯಗಳೂ ಉಲ್ಲೇಖಾರ್ಹ. ಇವೂ ದ್ರಾವಿಡ ಶೈಲಿಯವು. ವೀರಭದ್ರ ದೇವಾಲಯದಲ್ಲಿರುವ ವೀರಭದ್ರನ ವಿಗ್ರಹ ಅಂದವಾಗಿದೆ. ಕಲ್ಲೇಶ್ವರ ದೇವಾಲಯ ಶಿಥಿಲವಾಗಿದೆ. ಬಿ.ಎಂ. ಶ್ರೀಕಂಠಯ್ಯನವರು (ಬಿ.ಎಂ.ಶ್ರೀ.) ಈ ಊರಿನವರು. **(ಕೆ.ಪಿ.)**

**ಬೆಳ್ಳೂರು²**: ಕೋಲಾರ ಜಿಲ್ಲೆಯ ಅದೇ ತಾಲ್ಲೂಕಿಗೆ ಸೇರಿದ ಗ್ರಾಮ; ಐತಿಹಾಸಿಕ ಸ್ಥಳ. ಕೋಲಾರದಿಂದ ಬೆಂಗಳೂರಿಗೆ ಹೋಗುವ ರಸ್ತೆಯಲ್ಲಿ ನರಸಾಪುರ ಎಂಬ ಊರಿನಿಂದ 2 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,085. ಹೊಯ್ಸಳರ ಕಾಲದಲ್ಲಿ ಈ ಊರು ಅಗ್ರಹಾರವಾಗಿ ಪ್ರಸಿದ್ಧವಾಗಿತ್ತು. ಕುಂತಿ ಇಲ್ಲಿಗೆ ಪಕ್ಕದಲ್ಲಿರುವ ಉರುಕುಲಗುಡ್ಡದಲ್ಲಿ ತಂಗಿದ್ದು ಆಹಾರ ಬೇಕೆಂದಾಗ ಬೆಳ್ಳೂರಿಗೆ ಬಂದು ಬಂಗಾರದ ಒನಕೆಯಿಂದ ಬತ್ತಕುಟ್ಟಿ ತೆಗೆದುಕೊಂಡು ಹೋಗುತ್ತಿದ್ದಳೆಂದು ಪ್ರತೀತಿ.

ಕೋಲಾರದಲ್ಲಿ ಚೋಳರು ಆಳ್ವಿಕೆ ನಡೆಸುತ್ತಿದ್ದ ಸಂದರ್ಭದ ಒಂದು ಪ್ರಸಂಗಕ್ಕೂ ಈ ಊರಿನ ಹೆಸರಿಗೂ ತಾಳೆ ಹಾಕಲಾಗಿದೆ. ಒಬ್ಬ ಚೋಳರಾಜ ಈ ಹಳ್ಳಿಯಲ್ಲಿ ವಿಶ್ರಾಂತಿ ಪಡೆಯುವಾಗ ಒಂದು ಬೆಳ್ಳಿಯ ಬಟ್ಟಲು ಇಲ್ಲಿನ ಕೆರೆಯಲ್ಲಿ ತೇಲುತ್ತಿತ್ತು. ಇದನ್ನು ನೋಡಿದ ರಾಜ ಇಲ್ಲಿ ಬೆಳ್ಳಿಯ ನಿಕ್ಷೇಪವಿರಬಹುದೆಂದು ಬಾವಿ ತೋಡಿಸಿದ. ಅನಂತರ ಈ ಬಾವಿಯಲ್ಲಿ ಸಿಕ್ಕಿದ ಬೆಳ್ಳಿಯಿಂದ ಪಂಚಲೋಹದ ಸೋಮಸ್ಕಂದಮೂರ್ತಿ ಹಾಗೂ ಕುಮಾರಸ್ವಾಮಿಯ ವಿಗ್ರಹಗಳನ್ನು ಮಾಡಿಸಿ ದೇಗುಲವನ್ನು ಕಟ್ಟಿಸಿದ. ಬೆಳ್ಳಿ ಸಿಕ್ಕಿದ ಊರು ಇದಾದ್ದರಿಂದ ಚೋಳರಾಜ ಈ ಊರಿಗೆ ಬೆಳ್ಳಿಯ ಊರು ಎಂದು ನಾಮಕರಣ ಮಾಡಿದನೆಂದು ಐತಿಹ್ಯ. ಚೋಳರಕಾಲದ ಕೆಲವು ವಿಗ್ರಹಗಳು ಈ ಸ್ಥಳದಲ್ಲಿ ದೊರೆತಿವೆ.

ಕಣ್ಣೇಶ್ವರ ಮತ್ತು ರಾಮನಾಥ ದೇವಾಲಯಗಳು ಈ ಊರಿನ ಹಳೆಯ ಸ್ಮಾರಕಗಳಾಗಿವೆ. ಕಣ್ಣೇಶ್ವರ ದೇವಾಲಯ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿದ್ದು ಎರಡು ಗರ್ಭಗೃಹಗಳನ್ನು ಹೊಂದಿವೆ. ಈ ಎರಡು ಗರ್ಭಗೃಹಗಳಿಗೂ ಒಂದೇ ನವರಂಗವಿದೆ. ದೇವಾಲಯದ ಮುಂಭಾಗದಲ್ಲಿ ಎರಡು ಕಂಬಗಳ ಮುಖಮಂಟಪವಿದ್ದು ಮುಖ್ಯ ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಗಳ ಗೋಪುರವಿದೆ. 12 ಮತ್ತು 13ನೆಯ ಶತಮಾನದ ಕೆಲವು ಶಾಸನಗಳು ಗೋಡೆಯ ಹೊರಭಾಗದಲ್ಲಿ ಕೆತ್ತಲ್ಪಟ್ಟಿದೆ.

ರಾಮನಾಥ ದೇವಾಲಯದಲ್ಲಿ ಚತುರಸ್ರಾಕಾರದ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ರಾಮಾನಾಥ ದೇವಾಲಯದ ಮೂಲವಿಗ್ರಹ ಈಗಿಲ್ಲ. 1124ರ ಶಾಸನದಲ್ಲಿ ಮೂಲವಿಗ್ರಹದ ಪ್ರಸ್ತಾಪ ಮಾಡಲಾಗಿದೆ. ಪೂರ್ವ ಮತ್ತು ದಕ್ಷಿಣಕ್ಕೆ ಎರಡು ಪ್ರವೇಶದ್ವಾರಗಳಿವೆ. ದಕ್ಷಿಣದ ಪ್ರವೇಶದ್ವಾರಕ್ಕೆ ಮುಖಮಂಟಪವಿದ್ದರೂ ಈಗ ಮುಚ್ಚಲಾಗಿದೆ. ಗರ್ಭಗೃಹದ ಮೇಲೆ 17ನೆಯ ಶತಮಾನದ ಗೋಪುರವಿದೆ.

ಹೊಯ್ಸಳರ ಕಾಲದಲ್ಲಿ ಈ ಊರು ವಿಷ್ಣುವರ್ಧನನ ಚತುರ್ವೇದಿ ಮಂಗಲದ ಭಾಗವಾಗಿತ್ತು. ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆದ ಯೋಗಾಚಾರ್ಯರಾದ ಪದ್ಮಭೂಷಣ ಬಿ.ಕೆ. ಸುಂದರರಾಜ ಅಯ್ಯಂಗಾರ್ ಈ ಊರಿನವರು. **(ಆರ್.ಕೆ.)**

**ಬೇಂದ್ರೆ, ದತ್ತಾತ್ರೇಯ ರಾಮಚಂದ್ರ**: 1896–1981. ಹೊಸಗನ್ನಡ ಭಾವಗೀತದ ಪ್ರವರ್ತಕರಲ್ಲೊಬ್ಬರು ಹಾಗೂ ಅದರ ಪ್ರಮುಖ ಪ್ರತಿನಿಧಿ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು. ಅಂಬಿಕಾತನಯದತ್ತ ಎಂಬುದು ಇವರ ಕಾವ್ಯನಾಮ. 1896 ಜನವರಿ 31ರಂದು ಧಾರವಾಡದಲ್ಲಿ ಜನಿಸಿದರು. ತಂದೆ ರಾಮಚಂದ್ರ, ತಾಯಿ ಅಂಬಿಕಾ. 1918ರಲ್ಲಿ ಬಿ.ಎ. ಪದವಿ ಪಡೆದ ಅನಂತರ ಸ್ವಲ್ಪಕಾಲ ಧಾರವಾಡದ ವಿಕ್ಟೋರಿಯ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಇವರು ಧಾರವಾಡದಲ್ಲಿದ್ದ ಸಂದರ್ಭದಲ್ಲಿ (1926) ಗೆಳೆಯರ ಗುಂಪು ಎಂಬ ಸಾಹಿತ್ಯ ಸಂಘವೊಂದನ್ನು ಕಟ್ಟಿ ಕಾವ್ಯವಾಚನ, ಕಾವ್ಯವಿಮರ್ಶೆ ಮುಂತಾದ ಸಾಹಿತ್ಯಕ ಚಟುವಟಿಕೆಗಳಿಗೆ ಚಾಲನೆ ನೀಡಿದರು. ಈ ಗುಂಪು ಅಂದು ಉತ್ತರ ಕರ್ನಾಟಕದಲ್ಲಿ ಈ ಚಟುವಟಿಕೆಗಳ ಕೇಂದ್ರವಾಗಿತ್ತು. ಆ ಸಂದರ್ಭದಲ್ಲಿ ಈ ಗುಂಪಿನ ಸದಸ್ಯರು ಜಯಕರ್ನಾಟಕ ಎಂಬ ಮಾಸಪತ್ರಿಕೆ ಆರಂಭಿಸಿ ಸ್ವಲ್ಪ ಕಾಲ ನಡೆಸಿದರು. ಜಯಕರ್ನಾಟಕಕ್ಕೂ ಇತರ ಕೆಲವು ಪತ್ರಿಕೆಗಳಿಗೂ ಬೇಂದ್ರೆಯವರು ಲೇಖನಗಳನ್ನು ಬರೆಯುತ್ತಿದ್ದರು. ಅನಂತರ ಬೇರೆ ಬೇರೆ ಕಾಲಗಳಲ್ಲಿ ಅನೇಕ ಕಡೆ ಉಪಾಧ್ಯಾಯರಾಗಿ ಕೆಲಸ ಮಾಡಿದರು. ಈ ಮಧ್ಯೆ 1935ರಲ್ಲಿ ಎಂ.ಎ. ಪದವೀಧರರಾದರು. ಅನಂತರ ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು (1944–56). 1956ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಸಾಹಿತ್ಯ ಸಲಹೆಗಾರರಾದರು.

ಬೇಂದ್ರೆಯವರ ದೇಶ ಪ್ರೇಮ ಅಸಾಧಾರಣ. ಇವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ಪಾತ್ರವಹಿಸಿ ಸೆರೆವಾಸ ಅನುಭವಿಸಿದರು. ಆ ಸಂದರ್ಭದಲ್ಲಿ ಇವರು ಬರೆದ ಕೆಲವು ಕವನಗಳಲ್ಲಿ ತಾಯ್ನಾಡಿನ ಬಗ್ಗೆ ಇವರಿಗಿದ್ದ ಅದಮ್ಯ ಪ್ರೇಮ, ನಾಡುನುಡಿಗಳ ಬಗ್ಗೆ ಕಳಕಳಿ ಎದ್ದುಕಾಣುತ್ತವೆ. ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಬೇಂದ್ರೆಯವರು ಅರವಿಂದರ ಪ್ರಭಾವಕ್ಕೊಳಗಾಗಿದ್ದರು. ಇದರ ಛಾಯೆಯನ್ನು ಇವರ ಜೀವನದಲ್ಲೂ ಕಾವ್ಯದಲ್ಲೂ ಕಾಣಬಹುದು. ಜೀವನದ ಬಗ್ಗೆ ಬೇಂದ್ರೆಯವರ ಧೋರಣೆ ವಿಶಿಷ್ಟವಾದದ್ದು. ರಸವೆ ಜನನ, ವಿರಸ ಮರಣ, ಸಮರಸವೆ ಜೀವನ ಎಂಬ ಈ ಮಾತುಗಳು ಇವರ ಜೀವನ ದೃಷ್ಟಿಗೆ ಕನ್ನಡಿ ಹಿಡಿಯುತ್ತವೆ.

ಬೇಂದ್ರೆಯವರು 1916ರಿಂದಲೇ ಕಾವ್ಯರಚನೆ ಪ್ರಾರಂಭಿಸಿದರು. ಕೃಷ್ಣಕುಮಾರಿ ಇವರ ಪ್ರಥಮ ಪ್ರಕಟಿತ ಕವನ (1922). ಇದು ವಾರ್ಧಕ

ಷಟ್ಪದಿಯಲ್ಲಿದೆ. ಜನಪದ ಸಾಹಿತ್ಯ, ದುಮ್‌ದುಮೆ ಪದ, ರಗಳೆ, ಸಾಂಗತ್ಯ, ತ್ರಿಪದಿ, ಲಾವಣಿ ಮುಂತಾದ ವಿವಿಧ ಸಾಹಿತ್ಯ ಪ್ರಕಾರಗಳೊಡನೆ ಇಂಗ್ಲಿಷ್, ಮರಾಠಿ, ಹಿಂದಿ ವೃತ್ತಗಳ ಸಾಮರಸ್ಯ ಇವು ಬೇಂದ್ರೆಯವರ ಕಾವ್ಯದ ವಿಪುಲತೆ ವಿದಗ್ಧತೆ, ಉಚ್ಛೃಂಖಲತೆಗಳಿಗೆ ಸಾಕ್ಷಿಗಳಾಗಿವೆ. ಭಾವೋತ್ಕಟತೆ, ಛಂದಸ್ಸಿನ ನಿರರ್ಗಳತೆ, ಭಾಷೆಯ ಸರ್ವತಂತ್ರ ಸ್ವತಂತ್ರತೆ– ಇವು ಬೇಂದ್ರೆಯವರ ಪ್ರಥಮ ಮುಖ್ಯ ಸಂಕಲನವಾದ 'ಗರಿ'ಯಲ್ಲಿಯೇ ಮೂಡಿ ಬಂದವು (1932). ಕನ್ನಡ ಕಾವ್ಯ ಇಂಗ್ಲಿಷಿನಿಂದ ಸ್ಫೂರ್ತಿ ಪಡೆದು ಸ್ವತಂತ್ರ ಗತಿ ರೀತಿಗಳನ್ನು ಪಡೆಯಬಲ್ಲುದೆಂಬುದನ್ನು ಈ ಸಂಕಲನ ಸ್ಪಷ್ಟಗೊಳಿಸಿತು. ಮೂರ್ತಿ ಮತ್ತು ಕಾಮಕಸ್ತೂರಿ (1938) ಸಂಕಲನಗಳು ಸ್ವತಂತ್ರವಾದರೂ ಇವೆರಡೂ ಒಂದೇ ಗ್ರಂಥವಾಗಿ ಬಂದವು. ಮೊದಲನೆಯದು ಕಲಾಧ ರ್ಮದ ಪ್ರತಿಪಾದನೆ; ಎರಡನೆಯದು ಕನ್ನಡದ್ದೇ ಆದ (ಇಂಗ್ಲಿಷ್ ಅಲ್ಲದ) ಕಾಮು ಜೀವನದ ಲೋಲುಪ (ಎರೋಟಿಕ್) ಗೀತಿಕೆಗಳ ಸಂಕಲನ. ಇವರ ಸಖೀಗೀತ (1937) ಅರ್ಧ ಮುಗಿದ ಆತ್ಮವೃತ್ತಾಂತ; ಜೊತೆಗೆ ಇತರ ಭಾವಗೀತೆಗಳೂ ಇಲ್ಲಿವೆ. ಉಯ್ಯಾಲೆ (1938) ಬಹುಪಾಲು ಗೆಳೆಯರ ಗುಂಪಿನ ವಾರದ ವ್ಯಾಸಂ ಗಕ್ಕಾಗಿ ಬರೆದ ಅಷ್ಟಷಟ್ಪದಿ– ಸೀಸಪದ್ಯಗಳ (ಸ್ವತಂತ್ರ ರೂಪದ್ದು) ಸಂಕಲನವಾದರೂ ಇದರಲ್ಲೂ ಕಾವ್ಯಗುಣಕ್ಕೆ ಕೊರತೆಯಿಲ್ಲ. ನಾದ ಲೀಲೆ (1938) ಗರಿಯಷ್ಟೇ ಮಹತ್ತರ ವಾದ ಸಂಕಲನ. ಇದು ರಸಸಂಪ್ರದಾ ಯದತ್ತ ಹೆಚ್ಚು ವಾಲಿದೆ. ಮೇಘದೂತ (1943) ಕಾಳಿದಾಸನ ಕಾವ್ಯದ ಅನುವಾದವಾದರೂ ಪ್ರಸ್ತಾವನಾ ಪದ್ಯಗಳಲ್ಲಿ ಹೊಸ ಸೌಂದರ್ಯ ಮೀಮಾಂಸೆ ಹೇಳುವುದಲ್ಲದೆ ಉತ್ತಾನಗಂಭೀರ ಕಾವ್ಯದಲ್ಲೂ ದೇಸಿಯ ಬಳಕೆಯಿಂದ ವಿಶಿಷ್ಟವಾಗಿದೆ. ಹಾಡುಪಾಡು (1946) ಸಂಕಲನದಲ್ಲಿ ಶೋಕಗೀತೆಗಳನ್ನು ಬಿಟ್ಟರೆ ಉಳಿದವು ತುಸು ಯಾಂತ್ರಿಕ. ಗಂಗಾವತರಣದಲ್ಲಿ (1951) ಮುಖ್ಯವಾದ ಕೆಲವು ಕವನಗಳನ್ನು ಬಿಟ್ಟರೆ ಉಳಿದವು ಯಾಂತ್ರಿಕವೇ. ಅರಳು–ಮರಳು (1955), ಆ ಸುಮಾರಿಗೇ ಪ್ರಕಟವಾದ ಸೂರ್ಯಪಾನ, ಹೃದಯ ಸಮುದ್ರ, ಮುಕ್ತಕಂಠ, ಚೈತ್ಯಾಲಯ, ಜೀವಲಹರಿ ಸಂಕಲನಗಳ ಏಕೀಕೃತ ಗ್ರಂಥ. ಇದರಲ್ಲಿ ಮುಖ್ಯತಃ ಆಧ್ಯಾತ್ಮಿಕ ಭಾವಗೀತೆಗಳಿದ್ದರೂ ಸ್ವಾತಂತ್ರ್ಯೋತ್ತರ ಸಾಮಾಜಿಕ ಪರಿಸರಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುವ ವ್ಯಂಗ್ಯರುಷ್ಟ ಕವನಗಳೂ ಸಾಕಷ್ಟು ಇವೆ. ಜೊತೆಗೆ ನವ್ಯ ಕಾವ್ಯದ ಪ್ರಭಾವಕ್ಕೆ ತಮ್ಮದೇ ಆದ ಗೂಢ ಸಂವೇದನೆಯನ್ನೂ ಭೌತಿಕತೆಯನ್ನೂ ವ್ಯಂಗ್ಯವನ್ನೂ ಹುಟ್ಟಿಸುವ ಕವನಗಳಿವೆ. ಅನಂತರದ ಅನೇಕ ಸಂಕಲನಗಳು ಹೆಚ್ಚು ಹೆಚ್ಚು ಸಮಾಜವಿಮರ್ಶೆಯತ್ತ, ಆಧ್ಯಾತ್ಮಿಕತೆಯತ್ತ ವಾಲಿದರೂ ಯಕ್ಷಯಕ್ಷಿ (1962), ನಾಕುತಂತಿ (1964) ಕವನ ಸಂಕಲನಗಳಲ್ಲಿ ಮೂಲ ಬೇಂದ್ರೆ ಗುಣಗಳು ಪುನರುಜ್ಜೀವನಗೊಂಡಿವೆ. ನಾಕುತಂತಿ ಮತ್ತು ಇದು ನಭೋವಾಣಿ (1970)ಗಳಲ್ಲಿ ಈ ಗುಣಗಳು ವಿಶೇಷವಾಗಿವೆ. ಕೊನೆ ಕೊನೆಗೆ ಸಂಖ್ಯೆಗಳ ಸಾಂಕೇತಿಕ ಸಂಬಂಧಗಳತ್ತ ಇವರ ಮನಸ್ಸು ಹೊರಳಿತು. ಅದರ ಪ್ರಭಾವ ಇವರ ಕಾವ್ಯದ ಮೇಲೂ ಹೆಚ್ಚಾಗಿ ಆಯಿತು. ಬೇಂದ್ರೆ ಕಾವ್ಯದ ವಿಪುಲತೆಗೆ ಅನುಗುಣವಾಗಿ ಅದನ್ನು ಅರ್ಥೈಸುವ ಕೆಲಸ ಅಷ್ಟೊಂದು ಆಗಿಲ್ಲ. ಅವು ಆಡುಮಾತು, ಬಳಕೆಮಾತು, ವ್ಯಂಜನ–ಗುಂಜನಗಳ ಸಮೃದ್ಧಿಯಿಂದ, ಉಚ್ಛೃಂಖಲ ಪ್ರಯೋಗಶೀಲತೆ ಮತ್ತು ಬುದ್ಧಿಭಾವಗಳ ಸಮಾಗಮದಿಂದ ಕನ್ನಡ ಕಾವ್ಯದ ಮೂಲಬುಗ್ಗೆಯ ಮಟ್ಟಕ್ಕೇರಬಲ್ಲವು. ಭಾಷೆಯ ಅರ್ಥಗೌರವವನ್ನು, ಅಭಿವ್ಯಕ್ತಿಶಕ್ತಿ ಯನ್ನು ಪೂರ್ತಿ ಬದಲುಮಾಡಿದ ಶ್ರೇಯಸ್ಸು ಬೇಂದ್ರೆ ಕಾವ್ಯಕ್ಕಿದೆ.



ಬೇಂದ್ರೆಯವರ ವಿಮರ್ಶಾಸಂಕ ಲನಗಳು: ಸಾಹಿತ್ಯ ಮತ್ತು ವಿಮರ್ಶೆ (1932), ಸಾಹಿತ್ಯ ಸಂಶೋಧನೆ (1940). ಈ ಗ್ರಂಥಗಳಲ್ಲಿ ಇವರು ಸಾಹಿತ್ಯದ ತತ್ತ್ವಗಳ ಬಗ್ಗೆ ಮೂಲ ಭೂತ ಸಮಸ್ಯೆಗಳನ್ನೆತ್ತಿ ಪರಿಹಾರ ನೀಡಿದ್ದಾರೆ. ಕೃತಿವಿಮರ್ಶೆಯಲ್ಲೂ ಇವರು ಸಮರ್ಥರು ಎಂಬುದನ್ನು ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ, ವಿಚಾರಮಂಜರಿ, ಮಹಾ ರಾಷ್ಟ್ರ ಸಾಹಿತ್ಯ, ಕಾವ್ಯೋದ್ಯೋಗ, ಮಾತೆಲ್ಲ ಜ್ಯೋತಿ, ಕನ್ನಡ ಸಾಹಿತ್ಯ ದಲ್ಲಿ ನಾಲ್ಕು ನಾಯಕರತ್ನಗಳು ಇತ್ಯಾದಿ ಬರೆಹಗಳಲ್ಲಿ ಮನಗಾಣಬಹುದು.

ಕನ್ನಡದಲ್ಲಿ ಸಾಂಕೇತಿಕ ಅಸಂಗತ ನಾಟಕಗಳನ್ನು ಬರೆದ ಕೀರ್ತಿಯೂ ಇವರಿಗೆ ಸಲ್ಲುತ್ತದೆ. ದೆವ್ವದ ಮನೆ, ಸಾಯೋ ಆಟ, ಹೊಸ ಸಂಸಾರ ನಾಟಕ ಗುಚ್ಛ ವಾಸ್ತವ ಜೀವನದ ಚಿತ್ರಣವಾದರೂ ಸಾಂಕೇತಿಕವಾಗಿದೆ. ಹಿರಿದ ಕತ್ತಿ, ಏಕಾಕಿನಿ ಇಂಥ ಕತೆಗಳಲ್ಲಿ ಮುಚ್ಚುಮನೋವ್ಯಾಪಾರವಿದ್ದರೂ ನಾಡಿನ ಜೀವನ ಸಂದರ್ಭಗಳನ್ನೇ ಬಳಸಲಾಗಿದೆ.

ಬೇಂದ್ರೆ ಅವರು ಅಣಕವಾಡುಗಳನ್ನೂ ನಗೆಬರೆಹಗಳನ್ನೂ ರಚಿಸಿದ್ದಾರೆ. ಉಪನಿಷತ್ ರಹಸ್ಯ, ಕಬೀರ ವಚನಾವಲಿ, ಭಗ್ನಮೂರ್ತಿ ಮುಂತಾದ ಅನೇಕ ಗ್ರಂಥಗಳನ್ನು ಇವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡದಲ್ಲಿ ಗ್ರಂಥರಚನೆಯನ್ನು ನಡೆಸಿರುವಂತೆಯೇ ಮರಾಠಿ ಭಾಷೆಯಲ್ಲಿಯೂ ನಡೆಸಿದ್ದಾರೆ. ಸಂವಾದ, ವಿಠ್ಠಲ ಸಂಪ್ರದಾಯ, ಶಾಂತಲಾ– ಇವು ಇವರ ಮರಾಠಿ ಕೃತಿಗಳು. ಸಂವಾದ ಎಂಬ ಗ್ರಂಥಕ್ಕೆ ಕೇಳಕರ ಪ್ರಶಸ್ತಿ ದೊರೆತಿದೆ.

ಬೇಂದ್ರೆ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಕುರಿತಂತೆ ಬೇಂದ್ರೆ ವಾಙ್ಮಯ ದರ್ಶನ, ನಮ್ಮ ಬೇಂದ್ರೆಯವರು, ದತ್ತವಾಣಿ ಮುಂತಾದ 15ಕ್ಕೂ ಹೆಚ್ಚು ವಿಮರ್ಶನಗ್ರಂಥಗಳು ಪ್ರಕಟವಾಗಿವೆ. ವಿ.ಕೃ. ಗೋಕಾಕ ಅವರು ಬೇಂದ್ರೆಯವರನ್ನು ಕುರಿತು ಬೇಂದ್ರೆ–ಪೊಯೆಟ್ ಅಂಡ್

ಸೀರ್ ಎಂಬ ಗ್ರಂಥವನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದಾರೆ. ವಾಮನ ಬೇಂದ್ರೆ ಅವರು (ಬೇಂದ್ರೆ ಅವರ ಪುತ್ರ) ಇವರ ಸು. 128 ಲೇಖನಗಳನ್ನು ಸಂಗ್ರಹಿಸಿ ಸಾಹಿತ್ಯದ ವಿರಾಟ್ ಸ್ವರೂಪ ಎಂಬ ಹೆಸರಿನಲ್ಲಿ ಪ್ರಕಟಿಸಿದರು (1974). ಇವರ ಸಮಗ್ರ ಕಾವ್ಯ ಸಂಪುಟ ಪ್ರಕಟವಾಗಿದೆ.

ಕನ್ನಡ ನಾಡಿನಲ್ಲಿ ಬೇಂದ್ರೆಯವರ ನೇರ ಪ್ರಭಾವಕ್ಕೆ ಅನೇಕ ಕವಿಗಳು ಒಳಗಾಗಿದರಲ್ಲದೆ ಇವರ ಕೃತಿಗಳ ಅಭ್ಯಾಸದಿಂದಲೇ ಸ್ಫೂರ್ತಿ ಪಡೆದ ಲೇಖಕರೂ ಅಪಾರ ಸಂಖ್ಯೆಯಲ್ಲಿದ್ದಾರೆ.

ವರಕವಿ ಎಂಬ ಹೊಗಳಿಕೆಗೆ ಪಾತ್ರರಾದ ಬೇಂದ್ರೆಯವರಿಗೆ ಹಲವು ಬಗೆಯ ಸನ್ಮಾನಗಳು ಲಭಿಸಿವೆ. 1935ರಲ್ಲಿ ಮುಂಬಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರು ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1943ರಲ್ಲಿ ಶಿವಮೊಗ್ಗದಲ್ಲಿ ನಡೆದ 27ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಕನ್ನಡನಾಡು ಇವರನ್ನು ಆರಿಸಿ ಗೌರವಿಸಿತು. 1959ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಇವರ ಅರಳು–ಮರಳು ಎಂಬ ಕವನ ಸಂಗ್ರಹಕ್ಕೆ ಪ್ರಶಸ್ತಿಯನ್ನಿತ್ತು ಗೌರವಿಸಿತು. 1968ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿತು. 1969ರಲ್ಲಿ ಇವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಗೌರವ ಫೆಲೋ ಆದರು. ಮೈಸೂರು ವಿಶ್ವವಿದ್ಯಾನಿಲಯ (1966), ಕರ್ನಾಟಕ ವಿಶ್ವವಿದ್ಯಾಲಯ (1968) ಕಾಶಿ ಹಾಗೂ ವಾರಾಣಸಿ ವಿದ್ಯಾಪೀಠ (1979) ಇವರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಿ ಗೌರವಿಸಿವೆ. ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ (1968) ನೀಡಿದೆ. ಇವರ ನಾಕುತಂತಿ ಕವನ ಸಂಗ್ರಹಕ್ಕೆ 1974ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭ್ಯವಾಯಿತು. ಕರ್ನಾಟಕ ಸರ್ಕಾರ ಬೇಂದ್ರೆ ಅವರನ್ನು ಕುರಿತಂತೆ ಸಾಕ್ಷ್ಯ ಚಿತ್ರವೊಂದನ್ನು ತಯಾರಿಸಿದೆ (1972). ಇವರು 1981 ಅಕ್ಟೋಬರ್ 21ರಂದು ನಿಧನರಾದರು. (ಎಸ್.ಎಂ.ಪಿ.)

**ಬೇಗೂರು:** ದಕ್ಷಿಣ ಬೆಂಗಳೂರು ನಗರ ಜಿಲ್ಲೆಯ ಒಂದು ಗ್ರಾಮ. ಬೆಂಗಳೂರಿನ ದಕ್ಷಿಣಕ್ಕೆ ಸು. 13 ಕಿಮೀ ದೂರದಲ್ಲಿದೆ. ನಗರ ವಿಸ್ತರಣೆಯಲ್ಲಿ ಸೇರಿಹೋಗಿರುವ ಇಲ್ಲಿ 4739 ಗಂಡಸರು, 4535 ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 9,274. ಇಲ್ಲಿ ದೊರೆತಿರುವ ಐತಿಹಾಸಿಕ ದಾಖಲೆಗಳು 9ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತವೆ. 920ರಲ್ಲಿ ಗಂಗರಾಜ ಎರೆಯಪ್ಪ ಮತ್ತು ನೊಳಂಬರಾಜ ಮಹೇಂದ್ರರ ಯುದ್ಧದಲ್ಲಿ ಮಡಿದ ಸ್ಥಳೀಯ ಪ್ರಮುಖ ನಾಗತ್ತರನ ಸ್ಮಾರಕವಾಗಿ ಕಡೆದ ಇಲ್ಲಿನ ಒಂದು ಕಲ್ಲು ಬೆಂಗಳೂರು ವಸ್ತುಸಂಗ್ರಹಾಲಯದಲ್ಲಿದೆ.

ಇಲ್ಲಿರುವ ಪ್ರಾಚೀನ ನಾಗೇಶ್ವರ ದೇವಾಲಯ ದ್ರಾವಿಡ ಶೈಲಿಯಲ್ಲಿದೆ. ಇದರಲ್ಲಿ ನಾಗೇಶ್ವರ, ನಗರೇಶ್ವರ, ಚೋಳೇಶ್ವರ, ಕರ್ಣೇಶ್ವರ ಮತ್ತು ಕಮಠೇಶ್ವರ ಎಂಬ ಪಂಚಲಿಂಗಗಳಿವೆ. ಪ್ರತಿಯೊಂದಕ್ಕೂ ಪ್ರತ್ಯೇಕ ಗುಡಿಗಳಿವೆ. ನಾಗೇಶ್ವರ ಗುಡಿಯ ನವರಂಗದಲ್ಲಿ ಎಡಕ್ಕೆ ಮಹಿಷಾಸುರ ಮರ್ದಿನಿ, ಚಂಡಿಕೇಶ್ವರ ಮತ್ತು ಸೂರ್ಯವಿಗ್ರಹಗಳಿವೆ. ಬಲಕ್ಕೆ ಭೈರವ, ಗಣಪತಿ, ಚಂದ್ರ ಹಾಗೂ ಸಪ್ತಮಾತೃಕೆಗಳ ವಿಗ್ರಹಗಳಿವೆ. ನವರಂಗದ ಮೇಲ್ಛಾವಣಿ ಐದು ಅಡಿ ಚದರವಾಗಿದೆ. ಮಧ್ಯದಲ್ಲಿ ಉಮಾಮಹೇಶ್ವರ ಮತ್ತು ಅಷ್ಟದಿಕ್ಪಾಲಕರಿದ್ದಾರೆ. ನವರಂಗದ ದ್ವಾರಗಳಲ್ಲಿ ದ್ವಾರಪಾಲಕರ ಬದಲು ಹೆಣ್ಣು ವಿಗ್ರಹಗಳಿವೆ. ಇನ್ನೊಂದು ಗುಡಿಯಲ್ಲಿ $2^1/_2{}^1$ ಅಡಿ ಎತ್ತರದ ದೇವತೆಯ ಸುಂದರ ವಿಗ್ರಹವಿದೆ. ಇದರ ಕೈಸಾಲೆಯ ಬಲಕ್ಕೆ ಗಣಪತಿ, 3 ಅಡಿ ಎತ್ತರದ ದುರ್ಗಿ ಮತ್ತು ಸೂರ್ಯ ವಿಗ್ರಹಗಳಿವೆ. ಈ ದೇವಾಲಯಗಳು ಸು. 10ನೆಯ ಶತಮಾನದವು. ಕಮಠೇಶ್ವರ ಗುಡಿಯ ಕೈಸಾಲೆಯಲ್ಲಿ ಎರಡು ತಮಿಳು ಶಾಸನಗಳು ಹಾಗೂ ಒಂದು ಹಳಗನ್ನಡ ಶಾಸನ ಇವೆ. ಆರ್. ನರಸಿಂಹಾಚಾರ್ಯರು ಈ ಕನ್ನಡ ಶಾಸನದ ಕಾಲ ಸು. 900 ಎಂದು ನಿರ್ಧರಿಸಿದ್ದಾರೆ. ಈ ಶಾಸನದಲ್ಲಿ ಬೆಂಗಳೂರಿನ ಉಲ್ಲೇಖವಿದೆ. ಬೆಂಗಳೂರಿನ ಪ್ರಾಚೀನತೆಗೆ ಇದು ಸಾಕ್ಷಿ. ಹಿಂದೆ ಇದೊಂದು ಜೈನ ಕ್ಷೇತ್ರವಾಗಿತ್ತೆಂದು ಶಾಸನಗಳ ಆಧಾರದ ಮೇಲೆ ತಿಳಿಯಬಹುದಾಗಿದೆ. ಇಲ್ಲಿ ಅಕ್ಕಸಾಲೆ ಮಠವೆಂದು ಕರೆಯುವ ಲಿಂಗಾಯಿತ ಚಿಕ್ಕಣ್ಣಯ್ಯನ ಮಠವೊಂದಿದೆ. ಇದು ಹೊಸೂರಿನ ಮಠದ ಒಂದು ಶಾಖೆ. ಈ ಮಠಕ್ಕೆ ಸೇರಿದಂತೆ ಇರುವ ದೇವಾಲಯ ವೀರಭದ್ರನದು. ಈ ಗ್ರಾಮದಲ್ಲಿರುವ ಚರ್ಚು ಸು.1850ಕ್ಕೂ ಹಿಂದಿನದು. (ಎಚ್.ವಿ.ಎಸ್.)

**ಬೇತಮಂಗಲ:** ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಒಂದು ಗ್ರಾಮ. ಕೋಲಾರದ ಆಗ್ನೇಯಕ್ಕೆ ಸು. 29 ಕಿಮೀ ದೂರದಲ್ಲಿ ಪಾಲಾರ್‌ನದಿಯ ಬಲದಂಡೆಯ ಮೇಲಿದೆ. ಜನಸಂಖ್ಯೆ 8,793. 1864ರವರೆಗೆ ಇದು ತಾಲ್ಲೂಕಿನ ಮುಖ್ಯ ಕೇಂದ್ರವಾಗಿತ್ತು. ಮೊದಲಿಗೆ ಈ ಊರಿನ ಹೆಸರು ವಿಜಯಾದಿತ್ಯ ಮಂಗಲ.

ಇಲ್ಲಿ ವಿಜಯೇಂದ್ರ, ಆಂಜನೇಯ, ಅರ್ಕೇಶ್ವರ ದೇವಾಲಯಗಳಿವೆ. ವಿಜಯೇಂದ್ರ ದೇವಾಲಯ ಗರ್ಭಗೃಹ, ನವರಂಗ, ಮುಖಮಂಟಪಗಳನ್ನೊಳಗೊಂಡದ್ದು. ಈ ದೇವಾಲಯದ ರಚನೆಯ ಬಗ್ಗೆ ಶಾಸನಗಳಿಂದ ಯಾವುದೇ ಮಾಹಿತಿ ದೊರೆಯುವುದಿಲ್ಲ. ಆದರೆ ಈ ದೇವಾಲಯ ಬಾಣ, ನೊಳಂಬ, ಪಲ್ಲವ, ಚೋಳ, ಹೊಯ್ಸಳ, ವಿಜಯನಗರದ ಅರಸರು–ಇವರ ಕಾಲದಲ್ಲಿ ಸಾಕಷ್ಟು ಅಭಿವೃದ್ಧಿಯನ್ನೂ ಬದಲಾವಣೆಗಳನ್ನೂ ಹೊಂದಿದ್ದಕ್ಕೆ ಶಾಸನಾಧಾರಗಳು ದೊರೆಯುತ್ತವೆ. 950ರಲ್ಲಿ ನೊಳಂಬ ದೊರೆ ಇರಿವನೊಳಂಬನು ಆ ಸ್ಥಳದ ದೊಡ್ಡ ಕೆರೆಯೊಂದನ್ನು ದುರಸ್ತಿ ಮಾಡಿಸಿದ ವಿಷಯ ದೇವಸ್ಥಾನದಲ್ಲಿ ದೊರೆತ ಒಂದು ಶಾಸನದಿಂದ ತಿಳಿದುಬರುತ್ತದೆ. ಇಲ್ಲಿರುವ ಆಂಜನೇಯ ದೇವಾಲಯದ ವಿಗ್ರಹ ಸು. 3.7 ಮೀ ಎತ್ತರ. ಈ ದೇವಾಲಯ ಸುಂದರವಾದದ್ದು, ಇದರ ಕಂಬಗಳು ಕುಸುರಿ ಕೆಲಸದಿಂದ ಕೂಡಿವೆ.

ಬೇತಮಂಗಲ ಒಂದು ಪ್ರವಾಸಿ ಕೇಂದ್ರ. ಇಲ್ಲಿರುವ ಒಂದು ಸರೋವರದಲ್ಲಿ ವಿಹಾರಕ್ಕೆ ದೋಣಿ ಸೌಕರ್ಯವಿದೆ. ಈ ಸರೋವರದಿಂದಲೇ ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ನೀರಿನ ಪೂರೈಕೆಯಾಗುತ್ತದೆ. (ಟಿ.ಆರ್.ಎಸ್.)

**ಬೇಲೂರು[1]:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕನ್ನು ಪಶ್ಚಿಮ ಮತ್ತು ಉತ್ತರದಲ್ಲಿ ಚಿಕ್ಕಮಗಳೂರು ಜಿಲ್ಲೆ, ಈಶಾನ್ಯದಲ್ಲಿ ಅರಸೀಕೆರೆ, ಪಶ್ಚಿಮದಲ್ಲಿ ಹಾಸನ, ದಕ್ಷಿಣ, ನೈಋತ್ಯದಲ್ಲಿ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳೂ ಸುತ್ತುವರೆದಿವೆ. ಬಿಕ್ಕೋಡು, ಬೇಲೂರು, ಅರೆಹಳ್ಳಿ, ಮಾದಿಹಳ್ಳಿ ಮತ್ತು ಹಳೇಬೀಡು ಈ ತಾಲ್ಲೂಕಿನ ಐದು ಹೋಬಳಿಗಳು. 383 ಗ್ರಾಮಗಳುಳ್ಳ ತಾಲ್ಲೂಕಿನ ವಿಸ್ತೀರ್ಣ 840.2 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 1,83,755.

ತಾಲ್ಲೂಕು ಸಮುದ್ರಮಟ್ಟದಿಂದ ಸು. 968 ಮೀ ಎತ್ತರದಲ್ಲಿದೆ. ಇದು ಜಿಲ್ಲೆಯ ಮಲೆನಾಡು ಪ್ರದೇಶಕ್ಕೆ ಸೇರಿದೆ. ತಾಲ್ಲೂಕಿನ ಪೂರ್ವ ಭಾಗವನ್ನು ಅರೆಮಲೆನಾಡು ಪ್ರದೇಶವೆಂದು ಪರಿಗಣಿಸಲಾಗುತ್ತದೆ. ಸಣ್ಣಪುಟ್ಟ ಗುಡ್ಡಗಳಿಂದ ಕೂಡಿರುವ ಈ ತಾಲ್ಲೂಕಿನ ಉತ್ತರ ಭಾಗದಲ್ಲಿ ಕಣಶಿಲೆಯ ಬೆಟ್ಟಸಾಲು ಹಾದುಹೋಗಿದೆ. ತಾಲ್ಲೂಕಿನ ಮುಖ್ಯ ನದಿ ಯಗಚಿ. ತಾಲ್ಲೂಕಿನ ಮಧ್ಯದಲ್ಲಿ ವಾಯುವ್ಯದಿಂದ ಆಗ್ನೇಯಕ್ಕೆ ಹರಿಯುವ ಈ ನದಿ ಬಾಬಾಬುಡನ್ ಬೆಟ್ಟದ ಪ್ರದೇಶದಿಂದ ಬಂದು ಸಿರಘಟ್ಟ ಗ್ರಾಮದ ಬಳಿ ಈ ತಾಲ್ಲೂಕನ್ನು ಪ್ರವೇಶಿಸುತ್ತದೆ. ಬಿರಂಜಿಹಳ್ಳ ಈ ನದಿಯನ್ನು ಪಶ್ಚಿಮ ದಿಕ್ಕಿನಿಂದ ಕೂಡಿಕೊಳ್ಳುತ್ತದೆ. ಈ ನದಿ ಬೇಲೂರು ಪಟ್ಟಣದ ಮುಖಾಂತರ ಹಾದು ಕೆಂಡೆಗೆರೆ ಹತ್ತಿರ ಈ ತಾಲ್ಲೂಕನ್ನು

ಬಿಟ್ಟು ಹಾಸನ ತಾಲ್ಲೂಕಿನಲ್ಲಿ ಪ್ರವಹಿಸುತ್ತದೆ. ಹೇಮಾವತಿ ನದಿ ಈ ತಾಲ್ಲೂಕಿನ ನೈಋತ್ಯದಲ್ಲಿ ಸ್ವಲ್ಪ ದೂರ ಸಕಲೇಶಪುರ ತಾಲ್ಲೂಕನ್ನು ಬೇರ್ಪಡಿಸುವ ಗಡಿಯಾಗಿ ಹರಿಯುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 1,030 ಮಿಮೀ.

ತಾಲ್ಲೂಕಿನ ಪಶ್ಚಿಮ ಮತ್ತು ಉತ್ತರ ಭಾಗ ಇಳಿಜಾರಾಗಿದೆ. ಇದು ಪಶ್ಚಿಮ ಘಟ್ಟ ಸೇರಿದೆ. ಇಲ್ಲಿರುವುದು ಸಾಮಾನ್ಯ ಕಾಡುಗಳು. ಬೇಲೂರಿನಲ್ಲಿ ಅರಣ್ಯ ವಿಸ್ತರಣಾ ಮತ್ತು ರಕ್ಷಣಾ ಕೇಂದ್ರವಿದೆ. ಈ ತಾಲ್ಲೂಕಿನಲ್ಲಿ ವ್ಯವಸಾಯೋಪಯೋಗಕ್ಕೆ 67 ದೊಡ್ಡ ಕೆರೆಗಳೂ ಅನೇಕ ಸಣ್ಣ



ಚನ್ನಕೇಶವ ದೇವಾಲಯದ ಪ್ರವೇಶ ದ್ವಾರ

ಕೆರೆಗಳೂ ಇವೆ. ಇಡೀ ಜಿಲ್ಲೆಯಲ್ಲೇ ಹೆಚ್ಚಿನ ನೀರಾವರಿ ಇರುವ ಪ್ರದೇಶವಿದು. ಮಲೆನಾಡು ಅರೆಮಲೆನಾಡು ಪ್ರದೇಶದಿಂದ ಕೂಡಿರುವ ಈ ತಾಲ್ಲೂಕಿನಲ್ಲಿ ಕೆಂಪುಮಣ್ಣಿನ ಮತ್ತು ಆಳದಲ್ಲಿ ಹಳದಿ ಮಣ್ಣಿನ ಭೂಮಿ ಇದೆ. ಕಾಫಿ, ಬತ್ತ, ಮೆಣಸು, ಏಲಕ್ಕಿ, ಅಡಕೆ, ಕಬ್ಬು ಬೆಳೆಗಳ ಜೊತೆಗೆ ಆಲೂಗೆಡ್ಡೆ, ನೆಲಗಡಲೆ, ರಾಗಿ, ಮೆಣಸಿನಕಾಯಿ, ತರಕಾರಿಗಳು ಮತ್ತು ಕೆಲವು ಫಲಗಳನ್ನು ಬೆಳೆಯುತ್ತಾರೆ. ಗೇರುಬೀಜ ಬೆಳೆಯುವುದು ಇಲ್ಲಿಯ ಅರಣ್ಯ ಇಲಾಖೆಯ ಯೋಜನೆಗಳಲ್ಲಿ ಒಂದು.

ಬೇಲೂರು ತಾಲ್ಲೂಕಿನ ಕೈಗಾರಿಕೆಗಳಲ್ಲಿ ಮರ ಕೊಯ್ಯುವುದು, ಅವುಗಳಿಂದ ವಿವಿಧ ವಸ್ತುಗಳ ತಯಾರಿಕೆ, ಜೇನುಸಾಕಣೆ ಮತ್ತು ಗಾಣದ ಎಣ್ಣೆ ತಯಾರಿಕೆ ಮುಖ್ಯವಾದವು. ಬಾಣಾವರ-ಬೇಲೂರು-ಮೂಡಿಗೆರೆ, ಹಾಸನ-ಬೇಲೂರು-ಚಿಕ್ಕಮಗಳೂರು, ಬಾಗೆ-ಬೇಲೂರು ಮತ್ತು ಸಕಲೇಶಪುರ-ಬೇಲೂರು ಮಾರ್ಗಗಳು ತಾಲ್ಲೂಕಿನ ಮುಖ್ಯರಸ್ತೆಗಳು.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಹಳೇಬೀಡು **(ನೋಡಿ)** ಪ್ರಸಿದ್ಧ ಐತಿಹಾಸಿಕ ಸ್ಥಳ ಹಾಗೂ ಪ್ರವಾಸಿ ಕೇಂದ್ರ. ಬೇಲೂರಿನ ಉತ್ತರಕ್ಕೆ 3 ಕಿಮೀ ದೂರದಲ್ಲಿರುವ ಶೆಟ್ಟಿಗೆರೆಯಲ್ಲಿ ದೇವೀರಮ್ಮನ ಜಾತ್ರೆ ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ನಡೆದು ಸುತ್ತಲ ಸಾವಿರಾರು ಮಂದಿಯನ್ನು ಆಕರ್ಷಿಸುವುದು. ಬೇಲೂರಿನ ಉತ್ತರದಲ್ಲಿ 10 ಕಿಮೀ ದೂರದಲ್ಲಿರುವ ಕರಗಡ ಗ್ರಾಮದಲ್ಲಿ ಲಕ್ಷ್ಮೀ ದೇವಾಲಯವಿದೆ. ಬೇಲೂರಿಗೆ ಆಗ್ನೇಯದಲ್ಲಿ 19 ಕಿಮೀ ದೂರದಲ್ಲಿರುವ ಮಾದಿಹಳ್ಳಿಯ ವಾರ್ಷಿಕ ಜಾತ್ರೆ ಪ್ರಸಿದ್ಧ, ಬೇಲೂರಿನ ಆಗ್ನೇಯದಲ್ಲಿ 16 ಕಿಮೀ ದೂರದಲ್ಲಿರುವ ಹುಲಗುಂದಿ, ಬೇಲೂರಿನ ನೈಋತ್ಯದಲ್ಲಿ 16 ಕಿಮೀ ದೂರದಲ್ಲಿರುವ ಕಣದೂರು, 13 ಕಿಮೀ ದೂರದಲ್ಲಿರುವ ಕೋಗೋಡು ಮತ್ತು 19 ಕಿಮೀ ದೂರದಲ್ಲಿರುವ ಹಿರಿಗರಜೆ ಈ ಗ್ರಾಮಗಳಲ್ಲಿ ನಡೆಯುವ ವಾರ್ಷಿಕ ಜಾತ್ರೆಗಳು ಸುತ್ತಲ ಜನರನ್ನು ಆಕರ್ಷಿಸುತ್ತವೆ. ಬೇಲೂರಿನಿಂದ ಸು. 11 ಕಿಮೀ ದೂರದಲ್ಲಿ ಬೇಲೂರು-ಸಕಲೇಶಪುರ ಮಾರ್ಗದಲ್ಲಿರುವ ಬಿಕ್ಕೋಡು ಗ್ರಾಮ ಸುತ್ತಣ ಪ್ರಕೃತಿಸೌಂದರ್ಯಕ್ಕೆ ಪ್ರಸಿದ್ಧವಾದದ್ದು. ಬೇಲೂರು-ಜಾವಗಲ್ಲು ಮಾರ್ಗದಲ್ಲಿರುವ ಚಟಚಟನಹಳ್ಳಿ **(ನೋಡಿ)** ಅಲ್ಲಿಯ ಹೊಯ್ಸಳ ದೇವಾಲಯದಿಂದ ಮುಖ್ಯವಾಗಿದೆ. ಹಳೇಬೀಡಿಗೆ ಸುಮಾರು ಒಂದು ಕಿಮೀ ದೂರದಲ್ಲಿ ಸಿದ್ದಾಪುರ ಗ್ರಾಮದಲ್ಲಿ ಪುಷ್ಪಗಿರಿ ಶ್ರೀ ಮಲ್ಲಿಕಾರ್ಜುನ ದೇವಾಲಯವಿದೆ. ಪ್ರತಿ ಕಾರ್ತಿಕದಲ್ಲಿ ಅಲ್ಲಿ ನಡೆಯುವ ರಥೋತ್ಸವ ಪ್ರಸಿದ್ಧವಾದದ್ದು.

ಬೇಲೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಪಟ್ಟಣ. ಹಾಸನ-ಚಿಕ್ಕಮಗಳೂರು ಮತ್ತು ಬಾಣಾವರ-ಮೂಡಿಗೆರೆ ಮಾರ್ಗಗಳ ಮಧ್ಯದಲ್ಲಿ ಯಗಚಿ ನದಿಯ ದಂಡೆಯ ಮೇಲಿದೆ. ಹಾಸನಕ್ಕೆ ವಾಯವ್ಯದಲ್ಲಿ 38 ಕಿಮೀ, ಮೈಸೂರಿಗೆ 158 ಕಿಮೀ ಬೆಂಗಳೂರಿಗೆ 222 ಕಿಮೀ ಮತ್ತು ಸಕಲೇಶಪುರಕ್ಕೆ 37 ಕಿಮೀ ದೂರದಲ್ಲಿದೆ. ಪಟ್ಟಣದ ಜನಸಂಖ್ಯೆ 20,228. ಸುತ್ತಲ ಗ್ರಾಮಗಳ ವ್ಯಾಪಾರ-ವಾಣಿಜ್ಯ ಕೇಂದ್ರವಾದ ಈ ಪಟ್ಟಣ ಆಸ್ಪತ್ರೆ, ಪ್ರಥಮದರ್ಜೆ ಕಾಲೇಜು, ಸುರಕ್ಷಿತ ಕುಡಿಯುವ ನೀರು ಸರಬರಾಜು, ಪ್ರವಾಸಿಮಂದಿರಗಳು ಇತ್ಯಾದಿ ಸೌಲಭ್ಯಗಳಿಂದ ಕೂಡಿದ್ದು ಪುರಸಭೆಯ ಆಡಳಿತಕ್ಕೆ ಒಳಪಟ್ಟಿದೆ.

ಬೇಲೂರು ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲೊಂದು. ಹೊಯ್ಸಳ ಕಾಲದ ಚನ್ನಕೇಶವ ದೇವಾಲಯ ಇಲ್ಲಿಯ ಮುಖ್ಯ ಆಕರ್ಷಣೆ. *

ಸ್ಥಳಪುರಾಣ ಮತ್ತು ಐತಿಹ್ಯಗಳ ಮೇರೆಗೆ ಇದಕ್ಕೆ ಮೊದಲಿಗೆ ವೇಲಾಪುರ, ವೇಲೂರು ಎಂಬ ಹೆಸರುಗಳಿದ್ದವು. ಕೆಲವು ಹೊಯ್ಸಳ ಮತ್ತು ಅನಂತರ ಕಾಲದ ಶಾಸನಗಳಲ್ಲಿ ವೇಲಾಪುರ, ಬೇಲುಹೂರು ಎಂದೂ ಕರೆಯಲಾಗಿದೆ. ಇಲ್ಲಿರುವ ಕೇಶವ ಮತ್ತಿತರ ದೇವಾಲಯಗಳ ಖ್ಯಾತಿ ಮತ್ತು ಪಾವಿತ್ರ್ಯಗಳಿಂದ ಅನಂತರ ಕಾಲದ ಶಾಸನಗಳಲ್ಲಿ ಅಭಿನವಕ್ಷೋಣಿವೈಕುಂಠ, ದಕ್ಷಿಣವಾರಣಾಸಿ ಎಂದೂ ಇದನ್ನು ವರ್ಣಿಸಲಾಗಿದೆ. ಆದರೆ ಹೊಯ್ಸಳಪೂರ್ವ ಕಾಲದ ಬೇಲೂರಿನ ಬಗ್ಗೆ ವಿಶ್ವಸನೀಯವಾದ ಮಾಹಿತಿಗಳಾವುವೂ ದೊರಕಿಲ್ಲ. ಈಗಲೂ ಬೇಲೂರಿನ ಸುತ್ತ ಇರುವ ಕೋಟೆ-ಕಂದಕ, ಇಲ್ಲಿನ ವಿಷ್ಣುಸಮುದ್ರ ಹಾಗೂ ಸುತ್ತಲ ಕೆರೆಗಳು ಮತ್ತು ದೇವಾಲಯಗಳು ಇದರ ಪ್ರಾಚೀನತೆಗೆ ಸಾಕ್ಷಿಗಳಾಗಿ ಉಳಿದಿವೆ.

ಹೊಯ್ಸಳ ಎರಡನೆಯ ವಿನಯಾದಿತ್ಯ ತನ್ನ ರಾಜಧಾನಿಯನ್ನು ಸೊಸೆವೂರಿನಿಂದ ಇಲ್ಲಿಗೆ ವರ್ಗಾಯಿಸಿದ. ಮುಂದೆ ಅವನ ಕಾಲದಲ್ಲೇ ದ್ವಾರಸಮುದ್ರ ಅಥವಾ ಹಳೇಬೀಡಿಗೆ ರಾಜಧಾನಿ ವರ್ಗಾವಣೆಯಾಯಿತು. ಆದರೆ ವಿಷ್ಣುವರ್ಧನನ ಕಾಲದವರೆಗೂ ಇವೆರಡೂ ಅವಳಿ ರಾಜಧಾನಿಗಳಾಗಿದ್ದವು. 1116ರಲ್ಲಿ ವಿಷ್ಣುವರ್ಧನ ತಲಕಾಡಿನ ಚೋಳರ ಮೇಲಿನ

ವಿಜಯದ ಸ್ಮಾರಕವಾಗಿ ರಾಜಧಾನಿ ಬೇಲೂರಿನಲ್ಲಿ ವಿಜಯ ನಾರಾಯಣ (ಕೇಶವ) ದೇವಾಲಯವನ್ನು 1117ರಲ್ಲಿ ಪ್ರತಿಷ್ಠಾಪಿಸಿದ. 1136ರ ಹೊತ್ತಿಗೆ ಬೇಲೂರು, ದೋರಸಮುದ್ರ ಮತ್ತು ವಿಷ್ಣುಸಮುದ್ರ (ಈಗಿನ ಕೆರೆಸಂತೆ) ಈ ಮೂರೂ ರಾಜಧಾನಿಗಳಾಗಿದ್ದವೆಂದು ತಿಳಿಯುತ್ತದೆ. ವಿಷ್ಣುವರ್ಧನನ

ಚನ್ನಕೇಶವ ದೇವಾಲಯದ ಹೊರನೋಟ

ಆಳ್ವಿಕೆಯ ಅಂತ್ಯದ ವೇಳೆಗೆ ದೋರಸಮುದ್ರಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕಲಾರಂಭಿಸಿತು. ಕ್ರಮೇಣ ಬೇಲೂರು ರಾಜಧಾನಿಯ ಗೌರವವನ್ನು ಕಳೆದುಕೊಂಡರೂ ಸೈನ್ಯಶಿಬಿರವಾಗಿಯೂ ಪವಿತ್ರ ವಿಷ್ಣುಕ್ಷೇತ್ರವಾಗಿಯೂ ಹೊಯ್ಸಳ ಯುಗದುದ್ದಕ್ಕೂ ತನ್ನ ಪ್ರಾಧಾನ್ಯವನ್ನು ಉಳಿಸಿಕೊಂಡಿತ್ತು. 1311ರಲ್ಲಿ ಮಲಿಕ್ ಕಾಫೂರ್ ಹೊಯ್ಸಳ ರಾಜ್ಯದ ಮೇಲೆ ದಾಳಿ ಮಾಡಿ ರಾಜಧಾನಿ ದೋರಸಮುದ್ರವನ್ನು ಪಾಳುಗೆಡವಿದಾಗ ಬೇಲೂರು ಮತ್ತೆ ರಾಜಧಾನಿಯ ಸ್ಥಾನ ಪಡೆಯಿತು. ಆದರೆ ಆಗಿನ ದೊರೆ ಮುಮ್ಮಡಿ ಬಲ್ಲಾಳ ತಿರುವಣ್ಣಾಮಲೆ ಸೇರಿದಂತೆ ಬೇರೆ ಬೇರೆ ಕಡೆಗಳಲ್ಲಿ ನೆಲೆವೀಡುಗಳನ್ನು ಮಾಡಿಕೊಂಡು ಆಳಿದ.

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಬೇಲೂರು ಪ್ರಾಂತೀಯ ಕೇಂದ್ರವಾಗಿದ್ದಂತೆ ತಿಳಿದುಬರುತ್ತದೆ. ಇದು ಮೊದಲು ಬಲಂ (ಈಗಿನ ಮಂಜರಾಬಾದ್) ಪ್ರಾಂತದಲ್ಲಿದ್ದು, ಅನಂತರ 1397ರಲ್ಲಿ ಬೇಲೂರು ನಾಯಕರ ವಶದಲ್ಲಿತ್ತು. ಕೃಷ್ಣದೇವರಾಯ ಎರ್ರ (ಯರ) ಕೃಷ್ಣಪ್ಪನಾಯಕನಿಗೆ ಬೇಲೂರು ರಾಜ್ಯವನ್ನು ಬಳುವಳಿಯಾಗಿ 1542ರಲ್ಲಿ ಕೊಟ್ಟುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಇವನ ವಂಶದವರು 1799ರವರೆಗೆ ಇಲ್ಲಿ ಆಳುತ್ತಿದ್ದರು **(ನೋಡಿ : ಬೇಲೂರು ಪಾಳೆಯಗಾರರು.)**. ಆದರೆ ಶಿವಪ್ಪನಾಯಕ ಬೇಲೂರು ರಾಜ್ಯವನ್ನು 1645ರಲ್ಲಿ ವಶಪಡಿಸಿಕೊಂಡು ವಿಜಯನಗರದ ದೇಶಭ್ರಷ್ಟದೊರೆ ಶ್ರೀರಂಗರಾಯನಿಗೆ ಕೊಟ್ಟ. 1694ರಲ್ಲಿ ಮೈಸೂರು ದೊರೆ ಚಿಕ್ಕದೇವರಾಜ ಮತ್ತು ಇಕ್ಕೇರಿಯ ನಾಯಕರಲ್ಲಿ ನಡೆದ ಒಡಂಬಡಿಕೆಯ ಪ್ರಕಾರ ಬೇಲೂರು ಪಾಳೆಯಗಾರರ ವಂಶದವರಿಗೆ ಅದನ್ನು ಹಿಂತಿರುಗಿಸಲಾಯಿತು. ಇವರು ಮುಂದೆ ಸಕಲೇಶಪುರ ತಾಲ್ಲೂಕಿನ ಐಗೂರಿನಿಂದ ಆಳತೊಡಗಿದರು. ಹೈದರ್-ಟಿಪ್ಪು ಆಳ್ವಿಕೆಯಲ್ಲಿ ಇದು ಮತ್ತೆ ಮೈಸೂರು ರಾಜ್ಯಕ್ಕೆ ಸೇರಿತು. 1799ರಲ್ಲಿ ಟಿಪ್ಪುವಿನ ಮರಣಾನಂತರ ಪಾಳೆಯಗಾರ ವಂಶದ ವೆಂಕಟಾದ್ರಿ ಸ್ವತಂತ್ರನಾಗಿರಲೆತ್ನಿಸಿ ಬ್ರಿಟಿಷರ ವಿರುದ್ಧ ಹೋರಾಡಲು 1801ರಲ್ಲಿ ಅವನನ್ನು ಸೆರೆಹಿಡಿದು ಗಲ್ಲಿಗೇರಿಸಲಾಯಿತು. ಅಂದಿನಿಂದ ಮೈಸೂರು ರಾಜ್ಯದ ಭಾಗವಾಗಿ ಉಳಿದುಬಂದಿರುವ ಬೇಲೂರು ಈಗ ತಾಲ್ಲೂಕಿನ ಮುಖ್ಯ ಸ್ಥಳವಾಗಿದೆ.

ಇಲ್ಲಿರುವ ಚನ್ನಕೇಶವ ದೇವಾಲಯ ಹೊಯ್ಸಳ ಶೈಲಿಯ ಕಟ್ಟಡಗಳಲ್ಲಿ ಅತ್ಯಂತ ಸುಂದರವಾದವುಗಳಲ್ಲೊಂದಾಗಿದೆ. ವಿಷ್ಣುವರ್ಧನ ತಲಕಾಡಿನ ಚೋಳರ ಮೇಲೆ ಗಳಿಸಿದ ವಿಜಯದ ಸಂಕೇತವಾಗಿ ತನ್ನ ರಾಜ್ಯದ ಬೇಲೂರು, ತಲಕಾಡು, ಮೇಲುಕೋಟೆ, ತೊಣ್ಣೂರು ಮತ್ತು ಗದಗಿನಲ್ಲಿ ಐದು ನಾರಾಯಣ ಮಂದಿರಗಳನ್ನು ಕಟ್ಟಿಸಿದನೆಂದು ಪ್ರತೀತಿ. ಮತ್ತೊಂದು ಪ್ರತೀತಿಯ ರೀತ್ಯ ಚೋಳ ದೊರೆಗಳ ಕಿರುಕುಳವನ್ನು ತಾಳಲಾರದೆ ಹೊಯ್ಸಳ ರಾಜ್ಯದಲ್ಲಿ ಆಶ್ರಯವನ್ನು ಪಡೆದ ರಾಮಾನುಜಾಚಾರ್ಯರ ಪ್ರಭಾವಕ್ಕೊಳಗಾಗಿ ಜೈನಮತದಿಂದ ಶ್ರೀವೈಷ್ಣವ ಮತಕ್ಕೆ ಪರಿವರ್ತನೆಗೊಂಡ ಸಂದರ್ಭದಲ್ಲಿ ಈ ಪಂಚನಾರಾಯಣ ಪ್ರತಿಷ್ಠೆಗಳನ್ನು ಮಾಡಿಸಿದನೆಂದು ಹೇಳಲಾಗಿದೆ. ಇವು ಹೇಗೇ ಇರಲಿ ತಲಕಾಡುಗೊಂಡ ವಿಷ್ಣುವರ್ಧನ ಹೇವಿಳಂಬಿ ಸಂವತ್ಸರದ ಚೈತ್ರಶುದ್ಧ ಪಂಚಮಿ ಶನಿವಾರದಂದು (ಮಾರ್ಚ್ 20,1117) ಈ ದೇವಾಲಯವನ್ನು ಪ್ರತಿಷ್ಠಾಪಿಸಿದ ಎಂದು ದೇವಾಲಯದ ಉತ್ತರ ಗೋಡೆಯ ಮೇಲೆ ಬಾಗಿಲ ಪೂರ್ವಕ್ಕಿರುವ ಒಂದು ಶಾಸನ ಹಾಗೂ ಅದೇ ದೇವಾಲಯದ ಒಂದು ತಾಮ್ರಶಾಸನ ಸ್ಪಷ್ಟವಾಗಿ ತಿಳಿಸುತ್ತವೆ. ಈ ಶಾಸನದಲ್ಲಿ ಹಾಗೂ ದೇವಾಲಯದ ಮೂಲವಿಗ್ರಹದ ಪೀಠದ ಮೇಲಿರುವ ಶಾಸನದಲ್ಲಿ ದೇವರನ್ನು ವಿಜಯನಾರಾಯಣನೆಂದು ಕರೆಯಲಾಗಿದೆ.

ಕೇಶವ ದೇವಾಲಯ ಒಂದು ಗರ್ಭಗುಡಿಯಿರುವ ನಕ್ಷತ್ರಾಕಾರದ ತಳವಿನ್ಯಾಸವಿರುವ ಸುಂದರ ದೇವಾಲಯ. $443^{1}/_{2}{}^{'}$ ಉದ್ದ, $396^{'}$ ಅಗಲದ ಪ್ರಾಂಗಣವಿರುವ ಈ ಗುಡಿಯ ಸುತ್ತ ಎತ್ತರವಾದ ಪ್ರಾಕಾರಗೋಡೆಗಳಿವೆ. ಪೂರ್ವದಿಕ್ಕಿನಲ್ಲಿರುವ ಎರಡು ಹೆಬ್ಬಾಗಿಲುಗಳಲ್ಲಿ ದಕ್ಷಿಣದ ಬಾಗಿಲನ್ನು ಆನೆಬಾಗಿಲು ಎಂದು ಕರೆಯುತ್ತಾರೆ. ಕೇಶವ ದೇವಾಲಯದ ಗರ್ಭಗುಡಿಗೆ ನೇರ ಎದುರಿಗಿರುವ ಉತ್ತರ ಬಾಗಿಲ ಮೇಲೆ ದ್ರಾವಿಡ ಶೈಲಿಯ ಎತ್ತರವಾದ ಐದು ಅಂತಸ್ತುಗಳುಳ್ಳ ಇಟ್ಟಿಗೆ ಗಾರೆಗಳಿಂದ ನಿರ್ಮಿತವಾದ ಗೋಪುರವಿದೆ. ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಪ್ರಾಂಗಣದಲ್ಲಿ ಪೂರ್ವ ಮತ್ತು ದಕ್ಷಿಣದ ಪೂರ್ವಾರ್ಧ ದಿಕ್ಕುಗಳಲ್ಲಿ ಕಂಬಗಳಿಂದ ಕೂಡಿದ ಕೈಸಾಲೆ, ಅದರ ಹಿಂಬದಿಯಲ್ಲಿ ಕೆಲವು ದೇವತೆಗಳ ಮತ್ತು ಶ್ರೀವೈಷ್ಣವ ಸಂತರ ಗುಡಿಗಳು ಇವೆ. ಉತ್ತರ ಪ್ರಾಕಾರದ ಗೋಡೆಗೆ ಹೊಂದಿದಂತೆ ಕಂಬಗಳ ಕೈಸಾಲೆಯಿದೆ. ಈಶಾನ್ಯ ಮೂಲೆಯಲ್ಲಿ



ಶಿಲ್ಪಿತ ಹೊಯ್ಸಳರ ಲಾಂಛನ

ವಾಸುದೇವ ಪುಷ್ಕರಿಣಿ ಇದೆ. ಪ್ರಾಂಗಣದಲ್ಲಿ ಕೇಶವ ದೇವಾಲಯದ ಬಲಗಡೆಗೆ ಸ್ವಲ್ಪ ಹಿಂದೆ ಸರಿದಂತೆ ಕಪ್ಪೆಚೆನ್ನಿಗರಾಯನ ಗುಡಿಯೂ ಕೇಶವ ದೇವಾಲಯದ ನೇರ ಹಿಂಭಾಗದಲ್ಲಿ ವೀರನಾರಾಯಣ ಗುಡಿಯೂ ಇವೆ. ಈ ಗುಡಿಗಳೂ ನಕ್ಷತ್ರಾಕಾರದ ತಲವಿನ್ಯಾಸದವು. ಇವನ್ನೂ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಸು. 1117ರಲ್ಲಿ ನಿರ್ಮಿಸಿದಂತೆ ತಿಳಿದು ಬರುತ್ತದೆ. ಕಪ್ಪೆಚೆನ್ನಿಗರಾಯ ಮತ್ತು ಕೇಶವ ಗುಡಿಗಳ ನಡುವೆ ಹಿಂದೆ

ಸರಿದಂತೆ, ಸೌಮ್ಯನಾಯಕಿ ಅಮ್ಮನವರ ಗುಡಿ ಮತ್ತು ಕೇಶವ ದೇವಾಲಯದ ಎಡಬದಿಯಲ್ಲಿ ಹಿಂದಕ್ಕೆ ಆಂಡಾಳ್ ಗುಡಿ ಇವೆ. ಕೇಶವ ದೇವಾಲಯದ ಮುಂದೆ ಪುಟ್ಟದಾದ ಒಂದು ಗರುಡನ ಗುಡಿ ಮತ್ತು ದೀಪಸ್ತಂಭವೂ ಸೌಮ್ಯನಾಯಕಿ ಅಮ್ಮನವರ ಗುಡಿಯ ಮುಂದೆ ನಾಲ್ಕು ಕಂಬಗಳುಳ್ಳ ಒಂದಂಕಣದ ತೆರೆದ ಮಂಟಪವೂ ಅದಕ್ಕೂ ಮುಂಭಾಗದಲ್ಲಿ, ಆನೆಬಾಗಿಲ ಎದುರಿನಲ್ಲಿ, ಒಂದು ಕಣಶಿಲೆಯ ಎತ್ತರವಾದ ಕಂಬವೂ ಇವೆ. ಈಗ ಚೆನ್ನಕೇಶವ ದೇವಾಲಯದ ವಲಯದಲ್ಲಿರುವ ಕಟ್ಟಡಗಳು ಇಷ್ಟು ಮಾತ್ರ. ಈ ಮೊದಲು ಅಲ್ಲಿದ್ದ ನಾಗಿನಾಯಕನ ಮಂಟಪ, ಯಾಗಶಾಲೆ, ವಾಹನಮಂಟಪ, ಉಗ್ರಾಣ, ಕಲ್ಯಾಣ ಮಂಟಪ ಮತ್ತಿತರ

ದರ್ಪಣ ಸುಂದರಿ

ಕಟ್ಟಡಗಳು ಶಿಥಿಲವಾಗಿದ್ದುದರಿಂದ ಇವನ್ನು ಈ ಶತಮಾನದ ಆದಿಭಾಗ ದಲ್ಲಿ ತೆಗೆದುಹಾಕಿದುದಾಗಿ ತಿಳಿದುಬರುತ್ತದೆ.

ವಿಸ್ತಾರ ಭವ್ಯತೆ ಮತ್ತೆಲ್ಲ ದೃಷ್ಟಿಗಳಿಂದಲೂ ಕೇಶವ ದೇವಾಲಯ ಪ್ರಧಾನವಾದುದು. ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ 178' ಮತ್ತು ಉತ್ತರ-ದಕ್ಷಿಣ 156'. ಈ ಗುಡಿ 3' ಎತ್ತರದ ಜಗತಿಯ ಮೇಲೆ ನಿಂತಿದೆ. ಕಟ್ಟಡದ ನಿರ್ಮಾಣದಲ್ಲಿ ಬಳಸಲಾದ ಮೃದುವಾದ ಬಳಪದ ಕಲ್ಲು ಕೆತ್ತನೆಯ ಅನುಕೂಲಕರವಾದರೂ ಹೆಚ್ಚು ಭಾರವಾದ ಎತ್ತರದ ಕಟ್ಟಡದ ನಿರ್ಮಾಣಕ್ಕೆ ಅಷ್ಟು ಉಪಯುಕ್ತವಲ್ಲ. ಇಂಥ ಪರಿಸ್ಥಿತಿಯಲ್ಲಿ ದೇವಾಲಯಕ್ಕೆ ಎತ್ತರದ ಭಾವನೆಯನ್ನುಂಟುಮಾಡುವ ಸಲುವಾಗಿ ಎತ್ತರವಾದ ಪೀಠ ಅಥವಾ ಜಗತಿಯನ್ನು ನಿರ್ಮಿಸಿರುವಂತೆ ತೋರುತ್ತದೆ. ಗರ್ಭಗುಡಿಯ ಮೇಲಿನ ಶಿಖರದ ಭಾರವನ್ನು ಹೊರುವ ಸಲುವಾಗಿ ವಿಮಾನದ ಗೋಡೆಗಳನ್ನು ಬಹಳ ದಪ್ಪನಾಗಿ ಕಟ್ಟಿದ್ದಾರೆ. ಆದರೂ ಅನೇಕ ಬಾರಿ ಕೇಶವ ದೇವಾಲಯದ ಶಿಖರ ಬಿದ್ದುದಲ್ಲದೆ 1381ರಲ್ಲಿ ನವರಂಗದ ಚಾವಣಿ ಸಹ ಶಿಥಿಲವಾಗಿದ್ದುದರಿಂದ ದುರಸ್ತಿಗೊಳಗಾಯಿತು. ಈಗ ದೇವಾಲಯದ ಮೇಲೆ ಶಿಖರವಿಲ್ಲ.

ಜಗತಿಯ ಅಡಿಯಿಂದ ಚಾವಣಿಯವರೆಗೂ ವಿಮಾನದ ಭಾಗ ನಕ್ಷತ್ರಾಕಾರದಲ್ಲಿದೆ. ಶಿಖರವಿದ್ದಾಗ ಅವರು ವಿನ್ಯಾಸ ನಕ್ಷತ್ರಾಕಾರದಲ್ಲಿದ್ದಿರ ಬೇಕೆಂದು ಊಹಿಸಲಾಗಿದೆ. ನವರಂಗ ಮತ್ತು ಅದರ ಜಗತಿಯ ವಿನ್ಯಾಸ ಚತುರಸ್ರವಾಗಿದ್ದು ಹಂತ ಹಂತವಾಗಿ ಚಿಕ್ಕದಾಗುವುದರಿಂದ ಒಂದೊಂದು ಕಡೆಯೂ ನಾಲ್ಕು ಸಮಕೋನಗಳಿವೆ.

ದೇವಾಲಯದಲ್ಲಿ ಗರ್ಭಗುಡಿ ಸುಕನಾಸಿ ಮತ್ತು ಕಂಬಗಳಿಂದ ಕೂಡಿದ ಮಂಟಪ ಅಥವಾ ನವರಂಗ ಇವೆ. ನವರಂಗಕ್ಕೆ ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಂದ ಮೂರು ಬಾಗಿಲುಗಳಿವೆ. ಪೂರ್ವದ ಬಾಗಿಲಿನ ಪಕ್ಕದ ಕಂಬಗಳ ಮೇಲೆ ರತಿ-ಮನ್ಮಥರ ಶಿಲ್ಪಗಳೂ ತೋರಣದಲ್ಲಿ ಹಿರಣ್ಯಕಶಿಪುವಿನ ಸಂಹಾರ ಮಾಡುತ್ತಿರುವ ನರಸಿಂಹನ ಶಿಲ್ಪವೂ ಅದರ ಮೇಲೆ ಮಕರಗಳ ಮಧ್ಯೆ ಇರುವ ಗರುಡನ ಶಿಲ್ಪವೂ ಇವೆ. ಶುಕ್ರವಾರದ ಬಾಗಿಲೆಂದು ಹೆಸರಾದ ದಕ್ಷಿಣ ಬಾಗಿಲಿನ ಪಕ್ಕದ ಕಂಬಗಳ ಮೇಲೆ ಹನುಮ ಗರುಡರ ಶಿಲ್ಪಗಳೂ ತೋರಣದಲ್ಲಿ ಹಿರಾಣ್ಯಕ್ಷನನ್ನು ಕೊಲ್ಲುತ್ತಿರುವ ವರಾಹನ ಶಿಲ್ಪವೂ ಇವೆ. ಸ್ವರ್ಗದ ಬಾಗಿಲೆಂದು ಹೆಸರಾದ ಉತ್ತರ ಬಾಗಿಲಿನ ಪಕ್ಕದ ಕಂಬಗಳ ಮೇಲೆ ಚಾಮರಧಾರಿಣಿಯರೂ ತೋರಣದಲ್ಲಿ ಕೇಶವ ಮೂರ್ತಿಯೂ ಇವೆ. ದಕ್ಷಿಣ ಮತ್ತು ಉತ್ತರ ಬಾಗಿಲ ತೋರಣಗಳ ಹಿಂಬದಿಯಲ್ಲೂ ಕೆತ್ತನೆಕೆಲಸ ಮಾಡಲಾಗಿದೆ.

ಜಗತಿಯಾಕಾರದಲ್ಲಿರುವ ನವರಂಗದ ಹೊರಗೋಡೆಗಳ ಮೇಲೆ ಬುಡದಿಂದ ಎಂಟು ಅಡ್ಡಪಟ್ಟಿಕೆಗಳಿವೆ. ಈ ಅಡ್ಡಪಟ್ಟಿಕೆಗಳ ಮೇಲೆ ಅನುಕ್ರಮವಾಗಿ (1) ವಿವಿಧ ಭಂಗಿಗಳಲ್ಲಿ ಚಲಿಸುತ್ತಿರುವ ಆನೆಗಳು, (2) ಮಣಿಹಾರಗಳಿಂದ ಅಲಂಕೃತವಾದ ಪಟ್ಟಿಕೆಯ ಮೇಲೆ ಸಿಂಹಮುಖಗಳು, (3) ಲತಾಬಳ್ಳಿಗಳಿಂದಾದ ವೃತ್ತಗಳ ಮಧ್ಯೆ ಇರುವ ಮಾನವ ಪ್ರಾಣಿ ಮತ್ತು ಪಕ್ಷಿಗಳ ಸಣ್ಣ ಸಣ್ಣ ಚಿತ್ರಗಳು, (4) ಮಣಿಹಾರ ಗಳಿಂದ ಅಲಂಕೃತವಾದ ಪಟ್ಟಿಕೆ, (5) ಅಲಂಕೃತವಾದ ಗೂಡುಗಳಲ್ಲಿ ನೃತ್ಯ ಸಂಗೀತ ಶೃಂಗಾರಮಗ್ನರಾದ ಹಲವು ಸ್ತ್ರೀವಿಗ್ರಹಗಳು ಮತ್ತು ಕೆಲವು ಪುರುಷವಿಗ್ರಹಗಳು ಹಾಗೂ ಗೂಡುಗಳ ಮಧ್ಯೆ ಹಿಂದೆ ಸರಿದಂತಿರುವ ಕುಳಿತಿರುವ ಯಕ್ಷರ ಪ್ರತಿಮೆಗಳು, (6) ಸಣ್ಣ ಕಂಬಗಳ ಮಧ್ಯೆ ಬಹಳ ಸೂಕ್ಷ್ಮವಾಗಿ ಕೆತ್ತಲಾದ ಅನೇಕ ಸ್ತ್ರೀ ವಿಗ್ರಹಗಳು, (7) ಮಣಿಹಾರಗಳಿಂದ ಅಲಂಕೃತವಾದ ಪಟ್ಟಿಕೆಯ ಮೇಲೆ ಇರುವ ಅಂದವಾದ ಲತೆಗಳ ಮೇಲೆ ಕೆತ್ತಲಾದ ಸಿಂಹಮುಖಗಳ ಮಧ್ಯೆ ಇರುವ ಸಣ್ಣಶಿಖರಗಳು ಮತ್ತು ಸೂಕ್ಷ್ಮ ಮಾನವಶಿಲ್ಪಗಳು ಇವೆ. ಎಲ್ಲಕ್ಕೂ ಮೇಲೆ ಇರುವ ಕಟಕಟೆಯಂತಿರುವ 8ನೆಯ ಪಟ್ಟಿಕೆಯಲ್ಲಿ ಸಣ್ಣ ಜೋಡು ಕಂಬಗಳ ಮಧ್ಯೆ ಚಿತ್ರಶಿಲ್ಪಗಳನ್ನು ಬಿಡಿಸಲಾಗಿದೆ. ಈ ಜಗತಿಯ ಮೇಲಿನ ಚಿತ್ರಿತ ಅಡ್ಡಪಟ್ಟಿಕೆಗಳ ಬಗ್ಗೆ ಹೇಳುವಾಗ ಕೆಲವು ಅಂಶಗಳನ್ನು ವಿಶೇಷ ವಾಗಿ ಗಮನಿಸಬೇಕು. ಆನೆಗಳ ಸಾಲುಗಳನ್ನೊಳಗೊಂಡ ಅಡ್ಡಪಟ್ಟಿಕೆ ಮಾತ್ರ ವಿಮಾನದ ಹೊರಗೋಡೆಗಳು ಸೇರಿದಂತೆ ದೇವಾಲಯದ ಸುತ್ತಲೂ

ಕಂಡುಬರುತ್ತದೆ. ಎರಡನೆಯದಾಗಿ, ಆನೆಗಳ ಸಾಲಿನ ಮೇಲಿರುವ ಅಡ್ಡಪಟ್ಟಿಕೆ ಕೆತ್ತನೆಗಳಿಲ್ಲದೆ ಬರಿದಾಗಿದೆ. ಮೂರನೆಯದಾಗಿ, ಕಟಕಟೆಯನ್ನು ಹೋಲುವ ಅಡ್ಡಪಟ್ಟಿಕೆಯಲ್ಲಿ, ಪೂರ್ವಬಾಗಿಲ ಬಲಗಡೆಗೆ, ಮಹಾಭಾರತದ ಪ್ರಾರಂಭದಿಂದ ಶಲ್ಯಪರ್ವದವರೆಗೆ ಆಯ್ದ ಕೆಲವು ದೃಶ್ಯಗಳನ್ನು ಕೆತ್ತಲಾಗಿವೆ. ಅದರ ಕೆಳಗಿನ 7ನೆಯ ಅಡ್ಡಪಟ್ಟಿಕೆಯಲ್ಲಿ ರಾಮಾಯಣದ ಕೆಲವು ದೃಶ್ಯಗಳನ್ನು ಸಂಗೀತವಾದ್ಯಗಳನ್ನು ನುಡಿಸುತ್ತಿರುವ ಸಣ್ಣ ಮಾನವಶಿಲ್ಪಗಳನ್ನೂ ರೂಪಿಸಲಾಗಿದೆ.

ಈ ಚಿತ್ರಿತ ಅಡ್ಡಪಟ್ಟಿಕೆಗಳ ಮೇಲೆ, ಕಂಬಗಳ ಮೇಲೆ ಆಧಾರಿತವಾಗಿರುವ ಚಾವಣಿಯ ಸೂರಿನವರೆಗೂ ದೇವಾಲಯದ ಒಳಭಾಗಕ್ಕೆ ಗಾಳಿಬೆಳಕುಗಳ ಸಲುವಾಗಿ ಗೋಡೆಗಳನ್ನು ಕಟ್ಟದೆ ತೆರಪು ಬಿಡಲಾಗಿತ್ತು. ಇಮ್ಮಡಿ ಬಲ್ಲಾಳನ ಕಾಲದಲ್ಲಿ, ಸು. 1185ರಲ್ಲಿ ದೇವಾಲಯ ಸುರಕ್ಷಿತವಾಗಿರುವಂತೆ ಕಂಬಗಳ ನಡುವೆ ತೆರೆಗಳಂತೆ ಜಾಲಂಧ್ರ ಅಥವಾ ಪೌರಾಣಿಕ ದೃಶ್ಯಗಳನ್ನೊಳಗೊಂಡ ಚಿತ್ರಫಲಕಗಳನ್ನೂ ಪೂರ್ವ, ದಕ್ಷಿಣ ಮತ್ತು ಉತ್ತರದಿಕ್ಕಿನಲ್ಲಿ ಬಾಗಿಲುಗಳನ್ನೂ ಮಾಡಿಸಲಾಯಿತು. ಇಂಥ ಜಾಲಂಧ್ರ–ಚಿತ್ರಫಲಕಗಳು ದೇವಾಲಯದ ದಕ್ಷಿಣಪಾರ್ಶ್ವದಲ್ಲಿ ಹತ್ತು ಮತ್ತು ಉತ್ತರಪಾರ್ಶ್ವದಲ್ಲಿ ಹತ್ತು ಇವೆ. ಒಂದೊಂದು ಪಾರ್ಶ್ವದಲ್ಲೂ ಐದು ಫಲಕಗಳು ಹೂವುಗಳ ಕೆತ್ತನೆಗಳಿಂದ ಕೂಡಿದ ಜಾಲಂಧ್ರಗಳಿದ್ದರೆ, ಪೌರಾಣಿಕ ದೃಶ್ಯಗಳನ್ನು ನಿರೂಪಿಸುವ ಉಳಿದ ಐದು ಫಲಕಗಳಿವೆ.

ನವರಂಗದ ಗೋಡೆಗಳಲ್ಲಿ ಚಾವಣಿಗೆ ಆಧಾರವಾಗಿರುವ 40 ಕಂಬಗಳ ಬೋದಿಗೆಗಳ ಮೇಲೆ ಮುಂಬಾಗಿದಂತೆ ನಿಂತು ಚಾವಣಿಯ ಸೂರಿಗೆ ಆಧಾರ ಎಂಬಂತೆ ಕಾಣುವ ಮದನಿಕೆ ವಿಗ್ರಹಗಳು ಹೆಸರಿಗೆ ಮಾತ್ರ ವಾಸ್ತುನಿರ್ಮಾಣದ ಅಂಗಗಳಾಗಿವೆ (ಇವನ್ನು ಮುಂದೆ ವಿವರಿಸಲಾಗಿದೆ), ಚಾವಣಿಯ ಅಂಚಿನಲ್ಲಿ ಎರಡು ಬಗ್ಗುಗಳಿಂದ ಕೂಡಿದ ಸೂರುಗಳು (ಕಪೋತ) ಗೋಡೆಯ ಮೇಲರ್ಧದಲ್ಲಿರುವ ಮದನಿಕಾ ವಿಗ್ರಹಗಳಿಗೂ ದೇವತಾಮೂರ್ತಿಗಳ ಕೆತ್ತನೆಗಳಿಗೂ ರಕ್ಷಣೆ ಒದಗಿಸುತ್ತವೆ. ಕಪೋತಗಳ ಕೆಳಪಾರ್ಶ್ವದಲ್ಲಿ ಮರದ ಅಡ್ಡದೂಲಗಳನ್ನು ತಿರುಪುಮೊಳೆ ಮತ್ತು ತಿರಪು ಗಟ್ಟಿಗಳಿಂದ ಬಿಗಿಸಿರುವಂತೆ ಕೆತ್ತಿರುವುದು ಬಹಳ ನೈಜವಾಗಿ ಕಾಣುತ್ತದೆ.

ವಿಮಾನಭಾಗದಲ್ಲಿ ಗೋಡೆಯ ಹೊರಮೈಯ ಆಕಾರ ಮತ್ತು ವಿನ್ಯಾಸ ಬೇರೆಯ ರೀತಿಯಲ್ಲಿ ಇವೆ. ಜಗತಿಯ ಮೇಲೆ ಗೋಡೆಯ ಅಡಿಭಾಗದಲ್ಲಿ ನವರಂಗದ ಗೋಡೆಯಲ್ಲಿರುವ ಆನೆಗಳ ಸಾಲುಗಳನ್ನೊಳಗೊಂಡ ಅಡ್ಡಪಟ್ಟಿಕೆ ವಿಮಾನದ ಸುತ್ತಲೂ ಮುಂದುವರಿದಿದೆ. ವಿಮಾನ ನಕ್ಷತ್ರಾಕಾರದ ತಳವಿನ್ಯಾಸದ ಪ್ರಭಾವದಿಂದಾಗಿ ಗೋಡೆಯ ಹೊರಮೈ ನೇರವಾಗಿಲ್ಲದೆ ಹಿಂದೆಮುಂದೆ ಸರಿಯುತ್ತ ವಕ್ರಗತಿಯಲ್ಲಿ ನಡೆಯುವುದರಿಂದ ನೆರಳು–ಬೆಳಕುಗಳ ಆಟಕ್ಕೆಹೆಚ್ಚಿನ ಅವಕಾಶವಿರುವುದಲ್ಲದೆ ಕೆತ್ತನೆ ಕೆಲಸಕ್ಕೆ ಹೆಚ್ಚು ಪ್ರದೇಶ ದೊರಕಿದೆ. ವಿಮಾನದ ಗೋಡೆಗಳಿಗೆ ಸೇರಿಕೊಂಡಂತೆ ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಒಂದೊಂದರಂತೆ ಎರಡು ಅಂತಸ್ತುಗಳ ರಥಗಳನ್ನು (ಸಣ್ಣಗುಡಿ ಅಥವಾ ಗೂಡು) ನಿರ್ಮಿಸಲಾಗಿದೆ. ಈ ರಥಗಳನ್ನು ಪ್ರತ್ಯೇಕ ದೇವಾಲಯಗಳಂತೆ ಪರಿಗಣಿಸಿ ಅವುಗಳ ಕೆಳಭಾಗದಲ್ಲಿ ಚಿತ್ರಿತ ಅಡ್ಡಪಟ್ಟಿಕೆಗಳನ್ನು ಕೆತ್ತಲಾಗಿದೆ. ಆನೆಗಳ, ಸಿಂಹಗಳ, ಕುದುರೆಸವಾರರ ಮತ್ತು ಗೋಪುರಗಳಿಂದೊಡಗೂಡಿದ ಕಂಬಗಳ ಸಾಲು, ಎಲ್ಲಕ್ಕೂ ಮೇಲೆ ಕಟಕಟೆಯಲ್ಲಿ ಎರಡೆರಡು ಕಂಬಗಳ ಮಧ್ಯೆ ಮಾನವ–ಸ್ತ್ರೀ ವಿಗ್ರಹಗಳು–ಇವನ್ನು ಅನುಕ್ರಮವಾಗಿ ಚಿತ್ರಪಟ್ಟಿಕೆಗಳಲ್ಲಿ ಕಾಣಬಹುದು. ದಕ್ಷಿಣದ ರಥದ ಎಡಗೋಡೆಯ ಮೇಲೆ ಕೆಳಗಡೆ ವಿಷ್ಣು, ಮೇಲೆ ಸರಸ್ವತಿ, ಬಲಗಡೆ ಕೆಳಭಾಗದಲ್ಲಿ ವಿಷ್ಣು ಮತ್ತು ಮೇಲ್ಭಾಗದಲ್ಲಿ ಗರುಡ ತನ್ನೆರಡು ಕೈಗಳಿಂದ ಎತ್ತಿಹಿಡಿದ ಕಮಲದಲ್ಲಿ ಕುಳಿತ 16 ಕೈಗಳಿರುವ ನಾರಾಯಣ ವಿಗ್ರಹ ಇವೆ. ಪಶ್ಚಿಮದ ರಥದ ಎಡಗೋಡೆಯಲ್ಲಿ ಕೆಳಗಡೆ ಎರಡು ಕೂಸುಗಳೊಂದಿಗೆ ಇರುವ ಒಂದು ಸ್ತ್ರೀಮೂರ್ತಿಯಿದೆ. ಒಂದು ಕೂಸು ಕತ್ತಿಗೆ ಹಗ್ಗ ಕಟ್ಟಿರುವ ಸಿಂಹದ ಮರಿಯನ್ನು ಹಿಡಿದುಕೊಂಡಿದೆ. ಮೇಲ್ಭಾಗದಲ್ಲಿ ಒಂದು ಸ್ತ್ರೀವಿಗ್ರಹವಿದೆ. ಬಲಗೋಡೆಯಲ್ಲಿ ಕೆಳಗಡೆ ಒಂದು ಸ್ತ್ರೀಯ ಮತ್ತು ಮೇಲೆ ದುರ್ಗೆಯ ಮೂರ್ತಿಗಳನ್ನು ಕಡೆಯಲಾಗಿದೆ.

ವಿಮಾನದ ಹೊರಗೋಡೆಗಳಲ್ಲಿ ಈ ರಥಗಳಿರುವ ಪ್ರದೇಶವನ್ನು ಬಿಟ್ಟು ಉಳಿದೆಡೆಗಳಲ್ಲಿ ಆನೆಗಳ ಸಾಲಿನ ಮೇಲೆ ಆಲಂಕಾರಿಕ ಉಬ್ಬುಗಳು, ಗೋಪುರಗಳು ಮುಂತಾದ ವಾಸ್ತುಲಕ್ಷಣಗಳನ್ನು ಕೆತ್ತಲಾಗಿದೆ. ಗೋಡೆಯ ಮೇಲರ್ಧದ ಕೆಳಭಾಗದಲ್ಲಿ ದೇವದೇವಿಯರ ವಿಗ್ರಹಗಳನ್ನು, ಒಂದೊಂದನ್ನು ಪ್ರತ್ಯೇಕ ಲತಾತೋರಣ ಅಥವಾ ಗೋಪುರಗಳ ಕೆಳಗೆ ಕಡೆಯಲಾಗಿದೆ. ಈ ವಿಗ್ರಹಗಳ ಮೇಲೆ ಕಪೋತದವರೆಗೆ ಮತ್ತೆ ಆಲಂಕಾರಿಕ ಉಬ್ಬುಗಳನ್ನೂ ಇತರ ವಾಸ್ತು ಅಂಗಗಳನ್ನು ಕೆತ್ತಲಾಗಿದೆ. ಒಟ್ಟನಲ್ಲಿ ಬುಡದಿಂದ ತುದಿಯವರೆಗೂ ವೈವಿಧ್ಯಪೂರ್ಣವಾದ ಕೆತ್ತನೆಗಳಿಂದ ಗೋಡೆಯ ಹೊರಮೈಯನ್ನು ಅಲಂಕರಿಸಲಾಗಿದೆ.

ಕೇಶವ ದೇವಾಲಯದ ಒಳಭಾಗದ ಕೆಲಸ ಹೊರಗಿನದಕ್ಕಿಂತಲೂ ಹೆಚ್ಚು ಸುಂದರವಾಗಿದೆ. ನವರಂಗದಲ್ಲಿ ಮೂರು ಬಾಗಿಲುಗಳ ಇಕ್ಕೆಲದಲ್ಲೂ ಎತ್ತರವಾದ ಜಗತಿಗಳಿವೆ. ನವರಂಗದಲ್ಲಿ ಗೋಡೆಗಳಲ್ಲಿ ಸೇರಿಕೊಂಡಿರುವುದನ್ನು ಬಿಟ್ಟು ನಲವತ್ತೆರಡು ಕಂಬಗಳಿವೆ. ಇವುಗಳಲ್ಲಿ ಭುವನೇಶ್ವರಿಗೆ ಆಧಾರವಾಗಿರುವ ಮಧ್ಯದ ನಾಲ್ಕು ಕಂಬಗಳನ್ನುಳಿದು ಉಳಿದೆಲ್ಲವೂ ಬೇರೆ ಬೇರೆ ಆಕಾರ ಮತ್ತು ಅಲಂಕರಣದಿಂದ ಕೂಡಿವೆ. ಕಂಬಗಳು ಮೂಲತಃ ಚಾಳುಕ್ಯ ಶೈಲಿಯವು. ಇವುಗಳ ಮೇಲಿನ ಉದ್ದ ಮತ್ತು ಅಡ್ಡ ಪಟ್ಟಿಕೆಗಳಲ್ಲಿ ವಿಧವಿಧವಾದ ಹೂಬಳ್ಳಿಗಳ ಜ್ಯಾಮಿತಿಯ ವಿನ್ಯಾಸಗಳನ್ನು ಬಿಡಿಸಲಾಗಿದೆ. ಹೂಬಳ್ಳಿಗಳ ವೃತ್ತಾಕಾರದ ವಿನ್ಯಾಸಗಳ ನಡುವೆ ಸೂಕ್ಷ್ಮವಾದ ಪ್ರಾಣಿಪಕ್ಷಿಗಳನ್ನು ತೋರಿಸಲಾಗಿದೆ.ಒಂದೊಂದು ಕಂಬವನ್ನು ಒಬ್ಬೊಬ್ಬ ಪ್ರಮುಖ ಶಿಲ್ಪಾಚಾರ್ಯ ಮತ್ತು ಅವನ ಸಹಾಯಕರು ಕೆತ್ತಿದ್ದು ಒಬ್ಬೊಬ್ಬರೂ ಸ್ಪರ್ಧಾಮನೋಭಾವದಿಂದ ಬೇರೆಯವರಿಗಿಂತ ತಮ್ಮ ಕೃತಿಗಳು ಅಂದವಾಗಿರಬೇಕೆಂದು ತಮ್ಮೆಲ್ಲ ಕೌಶಲವನ್ನು ಪ್ರದರ್ಶಿಸಿ ಈ ಕಂಬಗಳನ್ನು ನಿರ್ಮಿಸಿರಬೇಕು ಎನಿಸುತ್ತದೆ. ನವರಂಗದ ಎರಡು ಕಂಬಗಳು ವಿಶೇಷವಾದವು. ಮಧ್ಯದ ಭುವನೇಶ್ವರಿಯ ಆಗ್ನೇಯಕ್ಕಿರುವ ನರಸಿಂಹ ಸ್ತಂಭ ಇವುಗಳಲ್ಲೊಂದು. ಮೊದಲಿಗೆ ಈ ಕಂಬ ತನ್ನ ಅಕ್ಷದ ಮೇಲೆ ಸುತ್ತುವಂತೆ ಮಾಡಲಾಗಿತ್ತು. ಆದರೆ ನವರಂಗದ ಚಾವಣಿ ಕುಸಿದು, 1381ರಲ್ಲಿ ವಿಜಯನಗರದ ದೊರೆ ಇಮ್ಮಡಿ ಹರಿಹರನ ಆಜ್ಞೆಯ ಮೇರೆಗೆ ಅಮಾತ್ಯ ಕಂಪಣ ಚಾವಣಿ ದುರಸ್ತಿ ಮಾಡಿಸಿದಾಗ ಈ ಕಂಬ ಬಲವಾಗಿ ಕುಸಿದು ಕುಳಿತಿತೆಂದು ಶಾಸನಾಧಾರದಿಂದ ತಿಳಿದು ಬರುತ್ತದೆ. ಈ ಕಂಬದ ಸುತ್ತಲೂ ಅಡಿಯಿಂದ ತುದಿಯವರೆಗೂ ಸಣ್ಣ ಗೂಡುಗಳಲ್ಲಿ ದೇವತಾವಿಗ್ರಹಗಳನ್ನು ಕೆತ್ತಲಾಗಿದೆ. ಇವು ಕಂಬದ ಸೌಂದರ್ಯವನ್ನು ನೂರ್ಮಡಿಗೊಳಿಸಿವೆ. ಈ ವಿಗ್ರಹಗಳಲ್ಲಿ ಕಡಲೆಕಾಳಿನ ಗಾತ್ರವಿರುವ ಬಸವನ ವಿಗ್ರಹ ಅದ್ಭುತ ಕೆತ್ತನೆ. ನವರಂಗದ ನೈಋತ್ಯ ಮೂಲೆಯಲ್ಲಿರುವ ಮತ್ತೊಂದು ಕಂಬ ಸಹ ಗಮನಾರ್ಹ. ಅದರ ಎಂಟು ಮೂಲೆಗಳಲ್ಲೂ ಕಂಬದ ಉದ್ದಕ್ಕೂ ಉದ್ದ ಪಟ್ಟಿಕೆಗಳನ್ನು ಜೋಡಿಸಿದೆ. ಈ ಪಟ್ಟಿಕೆಗಳ ಮೇಲೆ ಲತೆಗಳು ವೃತ್ತಗಳಂತೆ ಸುತ್ತಿಕೊಂಡಿರುವಂತೆ ತೋರಿಸಲಾಗಿದ್ದು ಅಂಥ ವೃತ್ತಗಳಲ್ಲಿ ಸೂಕ್ಷ್ಮ ಗಾತ್ರದ ದೇವತೆಗಳು, ವಿಷ್ಣುವಿನ ದಶಾವತಾರಗಳು, ಅಷ್ಟದಿಕ್ಪಾಲಕರು, ಸಿಂಹಗಳು ಮತ್ತಿತರ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಅದರ ಪೂರ್ವ ಮುಖಕ್ಕೆ ಹೊಂದಿಕೊಂಡಂತೆ ಸುಮಾರು ಐದು ಅಡಿಗಳ ಎತ್ತರದ

ಆಕರ್ಷಕವಾದ ಸ್ತ್ರೀ ವಿಗ್ರಹವನ್ನು ಕೆತ್ತಲಾಗಿದೆ. ಪ್ರಭಾವಳಿ, ತೇಜೋವಲಯ ಮತ್ತು ಕಿರೀಟಗಳಿಂದ ಕೂಡಿದ, ವಿವಿಧ ಆಭರಣಗಳನ್ನು ಧರಿಸಿದ ಈ ಸುಂದರ ಮೂರ್ತಿ ವಿಷ್ಣುವಿನ ಸ್ತ್ರೀರೂಪವಾದ ಮೋಹಿನಿಯ ಮೂರ್ತಿ ಎಂದು ಹೇಳುವುದು ರೂಢಿ. ಇಡೀ ದೇವಾಲಯದಲ್ಲಿ ಇದು ಅತ್ಯಂತ ಸುಂದರ ಕಂಬವೆಂದೂ ನೋಡುತ್ತಾರೆ. ನವರಂಗದ ಭುವನೇಶ್ವರಿಗೆ ಆಧಾರವಾಗಿರುವ ಒಂದೇ ಮಾದರಿಯ ನಾಲ್ಕು ಕಂಬಗಳನ್ನೂ ಸುಂದರ

ಮದನಿಕಾ ವಿಗ್ರಹ

ವಾದ ಕೆತ್ತನೆಗಳಿಂದ ಅಲಂಕರಿಸಿದೆ. ಅವುಗಳ ಮೇಲೆ ಅತ್ಯುತ್ತಮವಾದ ನಾಲ್ಕು ಮದನಿಕೆ ವಿಗ್ರಹಗಳನ್ನು ಇಡಲಾಗಿದೆ. ನವರಂಗದ ಮಧ್ಯದ ಭುವನೇಶ್ವರಿ ಅತ್ಯಂತ ಸುಂದರ ಕೆತ್ತನೆಗಳಿಂದ ಕೂಡಿದ್ದು. ಗುಮ್ಮಟ ಆಕಾರದ ಈ ಭುವನೇಶ್ವರಿ 10' ಸುತ್ತಳತೆ ಮತ್ತು 6' ಆಳವುಳ್ಳದ್ದಾಗಿದೆ. ಅದರಲ್ಲಿ ಇರುವ 17 ಚಿತ್ರಪಟ್ಟಿಕೆಗಳಲ್ಲಿ ಸಂಗೀತ, ನೃತ್ಯ, ಮಲ್ಲಯುದ್ಧ, ಕೋಲಾಟಗಳ ಮತ್ತು ರಾಮಾಯಣ, ಮಹಾಭಾರತ, ಭಾಗವತದ ಕಥೆಗಳ ದೃಶ್ಯಗಳು ಮತ್ತು ವಿಷ್ಣುವಿನ ಅವತಾರಗಳ ಶಿಲ್ಪಗಳು ಇವೆ. ಹಲವು ರೀತಿಯ ಹೂಬಳ್ಳಿಗಳನ್ನು ಬಹಳ ಸುಂದರವಾಗಿ ಕೆತ್ತಲಾಗಿದೆ. ಭುವನೇಶ್ವರಿಯ ಮಧ್ಯದಲ್ಲಿ ಮಗುಚಿದಂತಿರುವ ಕಮಲದ ಪರಾಗಕೋಶ ಮೇಲಿನಿಂದ ಜೋತಾಡುತ್ತಿರುವ ಮೂರಡಿಗಳುದ್ದದ ಕಂಬವನ್ನು ಹೋಲುತ್ತದೆ. ಅದರ ಮೇಲೆ ಬ್ರಹ್ಮ, ವಿಷ್ಣು ಮತ್ತು ಶಿವ ಇವರ ವಿಗ್ರಹಗಳನ್ನೂ ಅದರ ತುದಿಯಲ್ಲಿ, ಕೆಳಕ್ಕೆ ಕಾಣುವಂತೆ ಹಿರಣ್ಯಕಶಿಪುವಿನ ಕರುಳನ್ನು ಬಗೆಯುತ್ತಿರುವ ದಶಭುಜ ನೃಸಿಂಹನ ಪ್ರತಿಮೆಯನ್ನೂ ಕಡೆಯಲಾಗಿದೆ. ನವರಂಗದ ಉಳಿದ ಅಂಕಣಗಳ ಭುವನೇಶ್ವರಿಗಳು ಚಪ್ಪಟೆಯಾಗಿವೆ. ಅವುಗಳಲ್ಲಿ ಪೂರ್ವದ್ವಾರದ ಮುಂದಿನ ಅಂಕಣದ ಚಾವಣಿಯಲ್ಲಿ ಮೂರು ಪ್ರತ್ಯೇಕ ಫಲಕಗಳಲ್ಲಿ ಅಷ್ಟದಿಕ್ಪಾಲಕರು, ಮತ್ತೊಂದು ಅಂಕಣದಲ್ಲಿ ನರಸಿಂಹ, ಇನ್ನೊಂದರಲ್ಲಿ ಹಿರಣ್ಯಾಕ್ಷನನ್ನು ವಧಿಸುತ್ತಿರುವ ಭೂವರಾಹ, ಮಗುದೊಂದರಲ್ಲಿ ಕೇಶವ ಮುಂತಾದ ಶಿಲ್ಪಗಳನ್ನು ಕೆತ್ತಲಾಗಿದೆ.

ಹೊಯ್ಸಳ ಶಿಲ್ಪಿಗಳು ಇಡೀ ದೇವಾಲಯವನ್ನೇ ತಮ್ಮ ಶಿಲ್ಪಕೌಶಲದ ನಿರೂಪಣೆಗೆ ಬಳಸಿಕೊಂಡಿದ್ದಾರೆ. ಈ ದೇವಾಲಯದ ಒಂದೊಂದು ವಾಸ್ತು ಅಂಗವನ್ನೂ ಒಂದೊಂದು ಸುಂದರ ಶಿಲ್ಪಕೃತಿಯೆಂದು ಭಾವಿಸ ಬಹುದು. ಕೇಶವ ದೇವಾಲಯದ ಗೋಡೆಗಳ ಮೇಲಿನ ಚಿತ್ರಪಟ್ಟಿಕೆಗ ಳಲ್ಲಿರುವ ಆನೆಗಳು ಲತಾವೃತ್ತಗಳ ನಡುವೆ ಇರುವ ಮಾನವ ಮತ್ತು ಪ್ರಾಣಿಗಳ ಅಂಗಾಂಗಗಳ ನಿರೂಪಣೆಯ ದೃಷ್ಟಿಯಿಂದ ಅಷ್ಟೊಂದು ಉತ್ತಮ ಶಿಲ್ಪಗಳಲ್ಲದಿದ್ದರೂ ಭಾವ ನಿರೂಪಣೆಯ ಮತ್ತು ಪರಿಸರದ ಒಟ್ಟು ಸೌಂದರ್ಯದ ದೃಷ್ಟಿಯಿಂದ ಚತುರ ಕೃತಿಗಳಾಗಿವೆ. ಐದನೆಯ ಮತ್ತು ಆರನೆಯ ಪಟ್ಟಿಕೆಗಳಲ್ಲಿ ಪ್ರತ್ಯೇಕ ಗೂಡುಗಳಲ್ಲಿ ನೃತ್ಯ ಸಂಗೀತ ಮತ್ತಿತರ ವ್ಯಾಪಾರಗಳಲ್ಲಿ ನಿರತರಾಗಿರುವ ಸ್ತ್ರೀ ಪುರುಷರ ಪ್ರತಿಮೆಗಳು ತಮ್ಮ ಶರೀರದ ಭಾವಭಂಗಿ, ಉನ್ಮಾದಪೂರ್ಣ ತೇಜಸ್ಸು ಮತ್ತು ನೈಜಶೃಂಗಾರಪ್ರಧಾನ ತೋರಿಕೆಯಿಂದ ಉನ್ನತಮಟ್ಟದ ಕೃತಿಗಳಾಗಿವೆ. ಅವುಗಳಲ್ಲಿ ಕಂಬಗಳ ಬೋದಿಗೆಗಳ ಮೇಲೆ ನಿಲ್ಲಿಸಿದ ಮದನಿಕೆ ವಿಗ್ರಹಗಳನ್ನು ಹೋಲುವ ಕೆಲವಂತೂ ಶಿಲ್ಪಿಗಳ ಕೆತ್ತನೆಯ ಕೌಶಲದ ಉತ್ತಮ ನಿದರ್ಶನಗಳೆನ್ನಲು ಯೋಗ್ಯವಾಗಿವೆ. 8ನೆಯ ಪಟ್ಟಿಕೆಯಾದ ಕಟಕಟೆಯಲ್ಲಿ ಕಂಬಗಳ ಮಧ್ಯೆ ನಿಂತ ವಿಗ್ರಹಗಳು ಸಹ ಒಟ್ಟಾರೆ ನಿರೂಪಣೆಯಲ್ಲಿ ಸುಂದರ ಶಿಲ್ಪಗಳೆನಿಸಿಕೊಳ್ಳುವಂಥವು. ಈ ಪಟ್ಟಿಕೆಗಳ ಕೆತ್ತನೆಯಲ್ಲಿ ಮೂರ್ತಿಗಳ ದೇಹದ ವಿವಿಧ ಭಾಗಗಳ ನಿರೂಪಣೆಗೆ ಶಿಲ್ಪಿ ಹೆಚ್ಚಿನ ಗಮನ ಕೊಡದೆ ಇಡೀ ಪಟ್ಟಿಕೆಯ ಅಥವಾ ಒಂದೊಂದು ಫಲಕದ ಪೂರ್ಣ ಸೌಂದರ್ಯಕ್ಕೆ ಗಮನ ಕೊಟ್ಟಿರುವುದು ಕಂಡುಬರುತ್ತದೆ.

ಆದರೆ ನವರಂಗದ ಗೋಡೆಗಳ ಮೇಲರ್ಧದಲ್ಲಿರುವ ಒಂದಂಕಣದ ವಿಸ್ತಾರದ ವಿಶಾಲ ಫಲಕಗಳಲ್ಲಿರುವ ಉಬ್ಬುಶಿಲ್ಪಗಳು ನೈಜವಾಗಿಯೂ ಪ್ರತಿಯೊಂದೂ ವಿಗ್ರಹದ ದೈಹಿಕ ನಿರೂಪಣೆಯಲ್ಲಿ ಸೌಂದರ್ಯ ಪೂರ್ಣವಾಗಿಯೂ ಉತ್ತಮ ಕೈಚಳಕವನ್ನು ಪ್ರದರ್ಶಿಸುವಂಥವಾಗಿಯೂ ಇವೆ. ಪೂರ್ವದ್ವಾರದ ಇಕ್ಕೆಲಗಳಲ್ಲಿರುವ ವಿಷ್ಣುವರ್ಧನ–ಮೊದಲನೆಯ ನರಸಿಂಹನ ಆಸ್ಥಾನದ ಶಿಲ್ಪಗಳಲ್ಲಿ ರಾಜ ಪುರುಷರ ಅಥವಾ ಪರಿವಾರ ದವರ ನಿರೂಪಣೆಯಲ್ಲಿ ಕೆಳಗಿನ ಸಾಲಿನಲ್ಲಿರುವ ಪ್ರಾಣಿಗಳ ನಿರೂಪಣೆ ಯಲ್ಲಿ ಮತ್ತು ಮೇಲಿನ ಸಾಲಿನ ಆಂಜನೇಯ–ಗರುಡರಿಂದ ಆವೃತವಾದ ಕೇಶವ ಅಥವಾ ನೃಸಿಂಹನ ನಿರೂಪಣೆಯಲ್ಲಿ ಉತ್ತಮ ಕೈಚಳಕವನ್ನು ಕಾಣಬಹುದು. ಹಾಗೆಯೇ ಬಲಿಚಕ್ರವರ್ತಿಯ ಕಥೆ, ಕಾಲಿಯ ಮರ್ದನ, ಪ್ರಹ್ಲಾದ ಚರಿತ್ರೆಯ ದೃಶ್ಯ, ಸಮುದ್ರಮಥನ, ಕಂಸವಧೆ, ಅನಂತಶಾಯಿ ರಂಗನಾಥ, ಆಂಜನೇಯ–ಗರುಡರ ಕಾದಾಟ ಇವುಗಳ ಶಿಲ್ಪಗಳು ಸಹ ಆಯಾ ದೃಶ್ಯಗಳ ನೈಸರ್ಗಿಕ ಭಾವನೆಗಳನ್ನು ಯಥಾವತ್ತಾಗಿ ರೂಪಿಸುವ ಸುಂದರ ಕೆತ್ತನೆಗಳಾಗಿವೆ.

ವಿಮಾನದ ಗೋಡೆಗಳ ಮೇಲ್ಭಾಗದಲ್ಲಿ ರೂಪಿಸಲಾಗಿರುವ ದೊಡ್ಡ ಗಾತ್ರದ ದೇವದೇವಿಯರ ಮತ್ತು ಪೌರಾಣಿಕ ವ್ಯಕ್ತಿಗಳ ಶಿಲ್ಪಗಳು ತಾಂತ್ರಿಕವಾಗಿ ಉಬ್ಬು ಶಿಲ್ಪಗಳಾದರೂ ವಾಸ್ತವವಾಗಿ ದುಂಡು ಶಿಲ್ಪಗಳ ಪ್ರತೀಕಗಳೆಂದೇ ಹೇಳುವಂತಿವೆ. ಒಟ್ಟು 80 ಶಿಲ್ಪಗಳಲ್ಲಿ 19 ಮಾತ್ರ ಸ್ತ್ರೀ ವಿಗ್ರಹಗಳು, ಪ್ರತಿಯೊಂದು ದೇವತಾಮೂರ್ತಿಯನ್ನೂ ಪ್ರತ್ಯೇಕ ಲತಾ–ತೋರಣಗಳ ಕೆಳಗೆ, ಸ್ವತಂತ್ರಗೊಂಡು ಅಥವಾ ಫಲಕದಲ್ಲಿರು ವಂತೆ ನಿರೂಪಿಸಲಾಗಿದೆ. ಅವುಗಳಲ್ಲಿ ಅರ್ಧಕ್ಕೂ ಹೆಚ್ಚು ಸಂಖ್ಯೆಯವು

ವಿಷ್ಣುವಿನ ಅಥವಾ ಅವನ ಅವತಾರಗಳ ವಿಗ್ರಹಗಳು, ಶಿವ, ಪಾರ್ವತಿ, ಗಣೇಶ, ಬ್ರಹ್ಮ, ಸರಸ್ವತಿ, ಸೂರ್ಯ, ಚಂದ್ರ, ರತಿ–ಮನ್ಮಥ ಮೊದಲಾದ ದೇವತೆಗಳ ಮತ್ತು ರಾವಣ, ಅರ್ಜುನ, ಬಲಿ, ಶುಕ್ರಾಚಾರ್ಯ, ಭೀಮ ಮೊದಲಾದ ಪೌರಾಣಿಕ ವ್ಯಕ್ತಿಗಳ ಚಿತ್ರಣಗಳೂ ಇವೆ. ಈ ದೇವ–ದೇವಿಯರ ಯಥಾಯೋಗ್ಯವಾದ ಘನತೆ ಗಾಂಭೀರ್ಯ ಸ್ಪಷ್ಟವಾಗಿ ಗೋಚರಿಸುತ್ತವೆ. ಆನೆಯ ಮೇಲಿರುವ ಭಗದತ್ತನನ್ನು ಎದುರಿಸುತ್ತಿರುವ ಭೀಮ, ಕೈಲಾಸಪರ್ವತವನ್ನು ಎತ್ತಲು ಪ್ರಯತ್ನಿಸುತ್ತಿರುವ ರಾವಣ, ಮತ್ಸ್ಯಯಂತ್ರವನ್ನು ಭೇದಿಸುತ್ತಿರುವ ಅರ್ಜುನ ಈ ದೃಶ್ಯಗಳ ನಿರೂಪಣೆ ಅದ್ಭುತವಾಗಿದೆ.

ಕೇಶವ ದೇವಾಲಯದ ಹೊರಗೋಡೆಗಳಲ್ಲಿರುವ ಹಾಗೂ ನವರಂಗದಲ್ಲಿ ಭುವನೇಶ್ವರಿಗೆ ಆಧಾರವಾದ ಕಂಬಗಳ ಮೇಲೆ ಇನ್ನೂ ಉಳಿದು ಬಂದಿರುವ 42 ಮದನಿಕೆ ವಿಗ್ರಹಗಳು ಸುಂದರವೂ ಕಲಾತ್ಮಕವೂ ವೈಶಿಷ್ಟ್ಯಪೂರ್ಣವೂ ಆಗಿವೆ. ಹೊಯ್ಸಳ ಶಿಲ್ಪಿಗಳ ಕೆತ್ತನೆಗಳಲ್ಲಿ ಸುಂದರತಮವಾದ ಈ ಶಿಲ್ಪಗಳು ಸಹಜವಾಗಿಯೆ ಜಗತ್ತಿನ ಶಿಲ್ಪಕಲೆಯಲ್ಲಿ ಒಂದು ಪ್ರತ್ಯೇಕ ಸ್ಥಾನ ಪಡೆಯಬಲ್ಲವು. ಈ ಮದನಿಕೆ ವಿಗ್ರಹಗಳನ್ನು ಮೋಹಿನಿ ಅವತಾರದ ಪ್ರತೀಕವಾಗಿರುವ ವಿಷ್ಣುವಿನ ಸ್ತ್ರೀರೂಪಗಳು ಎಂದೋ ಸಂಗೀತ ನಾಟ್ಯಕಲೆಗಳಲ್ಲಿ ನಿಷ್ಣಾತಳಾದ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲೆ ಮತ್ತಿತರ ರಾಜಪರಿವಾರದ ಸ್ತ್ರೀಯರು ಪ್ರತಿಬಿಂಬಗಳು ಎಂದೋ ಸ್ಥಳೀಯರು ಹೇಳುವುದುಂಟು. ಈ ಶಿಲಾಪುತ್ಥಳಿಗಳನ್ನು ಕೇವಲ ಲೌಕಿಕ ಸೌಂದರ್ಯ ಪ್ರತಿಪಾದನೆಯಿಂದಾಗಲಿ, ಅಲಂಕಾರಸಾಧನವೆಂದಾಗಲಿ ದೇವಾಲಯದಲ್ಲಿ ಉಪಯೋಗಿಸಿಲ್ಲ. ಒಂದೊಂದು ಶಿಲ್ಪದ ನಿರೂಪಣೆಯಲ್ಲೂ ಕಲಾವೈವಿಧ್ಯವನ್ನು ಮತ್ತು ಹಿಂದು ಜೀವನದೃಷ್ಟಿಯ ತತ್ತ್ವಸಾರವನ್ನು ಕಾಣಬಹುದೆಂದು ವಿದ್ವಾಂಸರಾದ ಡಿ.ವಿ. ಗುಂಡಪ್ಪ ಮತ್ತು ಎಸ್.ಶ್ರೀಕಂಠಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ. ಮದನಿಕೆ ವಿಗ್ರಹಗಳನ್ನು ಸುಮಾರು ಮೂರಡಿಗಳೆತ್ತರದ ಬಳಪದ ಕಲ್ಲಿನ ಫಲಕಗಳ ಮೇಲೆ ನಿರ್ಮಿಸಲಾಗಿದೆ. ಅಗಲವಾದ ಅಲಂಕೃತ ಪೀಠಗಳ ಮೇಲೆ ಪ್ರಭಾವಳಿಯಂತೆ ರೂಪಿಸಿದ ಲತಾತೋರಣಗಳ ನಡುವೆ ಪರಿವಾರವರ್ಗದವರಿಂದ ಸುತ್ತುವರಿದಿದ್ದು ಸಂಗೀತ ವಾದ್ಯಗಳ ವಾದನ, ಬೇಟೆ ಮುಂತಾದ ವೃತ್ತಿಗಳಲ್ಲಿ ನಿರತರಾಗಿ, ಅಡಿಯಿಂದ ಮುಡಿಯವರೆಗೆ ವಿವಿಧ ಆಭರಣಗಳಿಂದ ಭೂಷಿತರಾಗಿ, ಮೈಮರೆತಂತೆ ತಮ್ಮ ವಿವಿಧ ವ್ಯಾಪಾರಗಳಲ್ಲಿ ಮಗ್ನರಾಗಿರುವಂತೆ ಕಡೆದಿರುವ ಈ ಸ್ತ್ರೀಮೂರ್ತಿಗಳು ಹೊಯ್ಸಳ ಶಿಲ್ಪಕಲೆಯ ಔನ್ನತ್ಯದ ಪ್ರತೀಕಗಳು. ಈ ಶಿಲ್ಪಗಳ ದೇಹರಚನೆಯ ಬಗ್ಗೆ ಕೆಲವು ವಿದ್ವಾಂಸರು ಟೀಕಿಸಿದ್ದರೂ ಅವು ಸಾಧಾರಣವಾದುವಲ್ಲ. ಭೂಮಟ್ಟದಿಂದ 12–15 ಅಡಿಗಳ ಎತ್ತರದಲ್ಲಿ ಸು. $30^0$ ಕೋನದಲ್ಲಿ ಮುಂಬಾಗಿ ನಿಂತ ಈ ವಿಗ್ರಹಗಳನ್ನು ನೋಟಕರ ದೃಷ್ಟಿಕೋನದಿಂದ ಅವುಗಳ ಅಂಗಾಂಗಗಳ ಪ್ರಮಾಣ ಸಹಜವಾಗಿ ಕಾಣುವಂತೆ ಪ್ರದರ್ಶಿಸಲಾಗಿದೆ. ಈ ವಿಶಿಷ್ಟ ಸನ್ನಿವೇಶದಿಂದ ಅವುಗಳನ್ನು ಹೊರತೆಗೆದು, ಕಣ್ಣನೋಟಕ್ಕೆ ನೇರವಾಗಿ ನಿಲ್ಲಿಸಿ ನೋಡಿದಾಗ ಅವುಗಳ ನಡುವಿನ ಕೆಳಭಾಗ ಗುಜ್ಜಾದಂತೆ ಕಾಣುವುದು ಸಹಜ. ಆದರೆ ತಮ್ಮ ನಿರ್ದಿಷ್ಟ ಸ್ಥಾನಗಳಲ್ಲಿ ನಿಂತ ಈ ಮೂರ್ತಿಗಳು ಪ್ರಮಾಣಬದ್ಧ ಸ್ಫುರದ್ರೂಪಿ ಜೀವಂತ ಜವ್ವನೆಯರ ಅನುಪಮ ಪ್ರತಿಕೃತಿಗಳಂತಿವೆ ಎಂಬುದು ಬಹುಮಾನ್ಯವಾದ ಅಭಿಪ್ರಾಯ.

ಇವುಗಳಲ್ಲಿ ಕೆಲವು ವಿಗ್ರಹಗಳನ್ನು ಮಾತ್ರ ಆಯ್ದು ಇಲ್ಲಿ ವಿವರಿಸಲಾಗಿದೆ. ದೇವಾಲಯದ ಮುಖ್ಯದ್ವಾರದಿಂದ ಪ್ರದಕ್ಷಿಣಾಮಾರ್ಗವಾಗಿ ಹೋಗುವಾಗ ಮೊದಲನೆಯದಾದ ವಿಗ್ರಹ ಕನ್ನಡಿಯಲ್ಲಿ ತನ್ನ ಸೌಂದರ್ಯವನ್ನು ಸವಿಯುತ್ತ ತಿಲಕಧಾರನೆ ಮಾಡಲುದ್ಯುಕ್ತವಾದಂತಿರುವ ಸುರಸುಂದರಿ ವಿಶ್ವಸೌಂದರ್ಯ ದರ್ಪಣದೃಶ್ಯಮಾನಳಾಗಿದ್ದಾಳೆ. ಬಲಗಾಲ ಬಳಿ ನಿಂತ ಪರಿಚಾರಿಕೆಯ ಸೊಂಟದ ಮೇಲಿರುವ ಕಪಿ ಯುವತಿಯ ಚಿತ್ತಚಾಂಚಲ್ಯದ ಪ್ರತೀಕದಂತಿದೆ. ರೂವಾರಿ ಚಿಕ್ಕಹಂಪ ನಿರ್ಮಿಸಿದ ಮೂರನೆಯ ವಿಗ್ರಹ ಎಡಗೈಯಲ್ಲಿ ವೀಳ್ಯವನ್ನೂ ಬಲಗೈಯಲ್ಲಿ ವಸಂತದೋಕುಳಿಯಾಡಲು ಜೀರ್ಕೊಳವೆಯನ್ನೂ ಹಿಡಿದು, ಪ್ರಿಯಕರನ ನಿರೀಕ್ಷಣೆಯಲ್ಲಿರುವಂತೆ ಕಾಣುತ್ತದೆ. ಸೇವಕರಲ್ಲೊಬ್ಬ ಓಕುಳಿ ನೀರಿನ ತಂಬಿಗೆಯನ್ನು ಕೊಡುತ್ತಿದ್ದರೆ, ಮತ್ತೊಬ್ಬ ಜೀರ್ಕೊಳವೆಯನ್ನು ತುಂಬಿ ಕೊಡುತ್ತಿರುವಂತೆ ರೂಪಿಸಲಾಗಿದೆ. ಬಳ್ಳಿಗಾಮೆಯ ದಾಸೋಜನಿಂದ ನಿರ್ಮಿತವಾದ ಐದನೆಯ ಶಿಲ್ಪದಲ್ಲಿ ತರುಣಿಯ ಸೀರೆಯನ್ನು ತುಂಟ ಕಪಿಯೊಂದು ಎಳೆದು ಹಾಕಿ ಅವಳನ್ನು ವಿವಸ್ತ್ರಳನ್ನಾಗಿಸಲು ಪ್ರಯತ್ನಿಸುತ್ತಿದೆ. ಮರದ ರೆಂಬೆಯಿಂದ ಮಂಗನನ್ನು ಹೊಡೆದು ಓಡಿಸಲು ಯತ್ನಿಸುವ ಸುಂದರಿಯ ಅಂಗಸೌಷ್ಠವವನ್ನು ಪ್ರದರ್ಶಿಸಲು ಶಿಲ್ಪಿಗೆ ಇಲ್ಲಿ ಒಳ್ಳೆಯ ಅವಕಾಶ ಸಿಕ್ಕಿದೆ. ದಾಸೋಜನ ಮಗ ಚಾವಣನ ಕೃತಿಯಾದ ಇನ್ನೊಂದು ಮದನಿಕೆ ಕಿರಾತಿ. ಆಕರ್ಣಾಂತವಾಗಿ ಬಾಣವನ್ನೆಳೆದು ಲತಾ ತೋರಣದಲ್ಲಿ ಕುಳಿತ ಪಕ್ಷಿದ್ವಯದತ್ತ ಬಿಡುತ್ತಿರುವ ರಮ್ಯಶಿಲ್ಪ. ವೀರೋದ್ಯಮದಲ್ಲಿ ನಿರತಳಾದ ಆ ತರುಣಿಯ ದೇಹ ಬಿಲ್ಲಿನಂತೆ ಸೆಟೆದಿರುವುದು. ಮುಖದ ತೋರಿಕೆಯ ರೌದ್ರತೆಯೂ ಶಿಲ್ಪಿಯ ಕಲ್ಪನಾಸಾಮರ್ಥ್ಯಕ್ಕೆ ಉತ್ತಮ ನಿದರ್ಶನಗಳು. ಹದಿಮೂರನೆಯದಾಗಿ, ಜಗನ್ಮೋಹಿನಿ ನೃತ್ಯದಲ್ಲಿ ತೊಡಗಿದ ಸುಂದರಿಯ ಶರೀರ ಲತೆಯಂತೆ ನಾಲ್ಕೈದು ಬಳುಕುಗಳಿಂದ ಕೂಡಿದೆ. ನಾಟ್ಯಭಂಗಿಯನ್ನು ತೋರುತ್ತಿರುವ ಬಲಗೈ ತಲೆಯ ಮೇಲೆ ಬರುತ್ತಿದ್ದರೆ ಎಡ ಅಂಗೈ ಹೊರಕ್ಕೆ ತೋರುತ್ತಿದೆ. ಬಲಗಾಲಿನ ಸ್ನಾಯುಗಳು ಬಹಳ ನೈಜವಾಗಿ ರೂಪಿತವಾಗಿವೆ. ಹದಿನೇಳನೆಯ, ಬೇಟೆಯಾಡುತ್ತಿರುವಂತೆ ರೂಪಿತಳಾದ, ಯುವತಿಯ ದೇಹಲಾಲಿತ್ಯ ಆಕರ್ಷಣೀಯ. ಶಬರಸುಂದರಿಗೆ ತಕ್ಕಂತೆ ಅವಳು ಪರ್ಣಾಂಬರೆಯಾಗಿದ್ದಾಳೆ. ಇಪ್ಪತ್ತೈದನೆಯದು ಭಸ್ಮಾಸುರನಿಗೆ ಮಾಡುತ್ತಿರುವ ಮೋಹಿನಿಯ ನಾಟ್ಯವನ್ನು ರೂಪಿಸುವ ಸುಂದರ ಶಿಲ್ಪ. ತಲೆಯ ಮೇಲಿರುವ ಬಲಗೈ ತುದಿ, ಮೂಗಿನ ತುದಿ, ಎಡ ಸ್ತನ, ಎಡಗೈ ಹೆಬ್ಬೆರಳು ಮತ್ತು ನಾಟ್ಯಭಂಗಿಯಲ್ಲಿ ಮೇಲೆದ್ದಿರುವ ಎಡಗಾಲಿನ ಹೆಬ್ಬೆಟ್ಟುಗಳು ಇವೆಲ್ಲ ಒಂದೇ ಊರ್ಧ್ವರೇಖೆಯಲ್ಲಿವೆ. ಇಪ್ಪಾತ್ತಾರನೆಯದು ನಗ್ನಸ್ತ್ರೀಯ ಪ್ರಮಾಣಬದ್ಧ ಶರೀರದ ಸೌಂದರ್ಯವನ್ನು ಅಶ್ಲೀಲತೆಯ ಸೋಗಿಲ್ಲದೆ ನಿರೂಪಿಸುವ ಉತ್ತಮ ಶಿಲ್ಪ. ಸ್ನಾನಾನಂತರ ಧರಿಸುತ್ತಿರುವ ಸೀರೆಯ ಮಡಿಕೆಯಲ್ಲಿ ಚೇಳನ್ನು ಕಂಡ ನೀರೆ ತಾನು ಬೆತ್ತಲೆಯಾಗುವುದರ ಅರಿವೂ ಇಲ್ಲದೆ ಸೀರೆಯನ್ನು ಕೊಡವಿದ್ದಾಳೆ. ತುಂಬುಮೈಯ ಸುರಸುಂದರಿಯ ಅಂಗಗಳು ಪ್ರಮಾಣಬದ್ಧವೂ ರಂಜನೀಯವೂ ಆಗಿವೆ. ಕಾಲ ಬಳಿ ಪೀಠದ ಮೇಲೆ ಬಿದ್ದಿರುವ ಚೇಳಿನ ಮೇಲೆ ಇನ್ನೂ ಅವಳ ಗಮನ ಕೇಂದ್ರೀಕೃತವಾಗಿದೆ. ಮೂವತ್ತೇಳನೆಯ ಪ್ರತಿಮೆ ನಾಗವೀಣೆ ಬಾರಿಸುತ್ತ ನರ್ತಿಸುತ್ತಿರುವ ತರುಣಿಯ ವಿಗ್ರಹ. ಇದೂ ಸುಂದರ ಕೃತಿ. ಮೂವತ್ತೈದನೆಯ ವಿಗ್ರಹದಲ್ಲಿ, ಸುಂದರಿ ಮೇಲೆತ್ತಿಕೊಂಡ ಎಡಗಾಲ ಬೆರಳಿಗೆ ಪರಿಚಾರಿಕೆ ಉಂಗುರವನ್ನು ತೊಡಿಸುತ್ತಿರುವ ದೃಶ್ಯ ಚತುರ ಕಲಾಕೃತಿ. ಮೂವತ್ತೆಂಟನೆಯದು ಹೊರಗಂಬಗಳ ಮೇಲಿನದರಲ್ಲಿ ಕಡೆಯದಾದ ಲಾಸ್ಯ ಸುಂದರಿಯ ವಿಗ್ರಹ. ಇದರ ರಚನೆಯಲ್ಲಿ ಗದಗಿನ ನಾಗೋಜ ತನ್ನ ಅತ್ಯುನ್ನತ ಕಲಾಪ್ರೌಢಿಮೆಯನ್ನು ರೂಪಿಸಿದ್ದಾನೆ. ಕೃಶವಾದ ಆದರೆ ಆಕರ್ಷಕವಾದ ದೇಹ, ಮುಖದಲ್ಲಿನ ಸಂತೃಪ್ತ ಸೌಮ್ಯಭಾವ ರಸಿಕರ ಮನ ಸೂರೆಗೊಳ್ಳುವಂಥದು.

ನವರಂಗದ ಕಂಬಗಳ ಮೇಲಿರುವ ನಾಲ್ಕು ಮದನಿಕೆ ವಿಗ್ರಹಗಳು ಉಳಿದವುಕ್ಕಿಂತ ಹೆಚ್ಚು ಕಲಾಪೂರ್ಣವು ಸುಂದರವೂ ಆಗಿವೆ. ಆಗ್ನೇಯ ಮೂಲೆಯ ಕಂಬದ ಮೇಲಿನ ದಾಸೋಜ ನಿರ್ಮಿತ ಸುಂದರಿಯ ಶಿಲ್ಪದಲ್ಲಿ ಎಡತೋಳ ಕೈಮೇಲೆ ಕುಳಿತ ಗಿಣಿ ಅವಳ ಕಂಠಹಾರವನ್ನು ಹಿಡಿದಿದೆ. ಅವಳು ಹಣ್ಣೊಂದನ್ನು ಕೊಟ್ಟು ಹಾರವನ್ನು ಬಿಡಿಸಿಕೊಳ್ಳುತ್ತಿದ್ದಾಳೆ. ತಲೆಕೂದಲಿನಲ್ಲಿ ಧರಿಸಿದ ಅವಳ ವಿವಿಧ ಆಭರಣಗಳು

ಗಮನಾರ್ಹ. ಬಲಗೈ ಬಳೆಯನ್ನು ಹಿಂದೆಮುಂದೆ ಸರಿಸಬಹುದಾಗಿದೆ. ನೈಋತ್ಯದ ಕಂಬದ ಮೇಲಿನದು ನೃತ್ಯಮಗ್ನಳಾದ, ಮಂದಸ್ಮಿತ ವದನದಿಂದ ಕೂಡಿದ ಸುಂದರ ತರುಣಿಯ ಮೂರ್ತಿ. ಅದರ ಕರ್ತೃ ಚಾವಣ. ಆ ಮೂರ್ತಿಯನ್ನು ನೃತ್ಯಸರಸ್ವತಿಯೆಂದು ಕರೆದಿರುವುದು ಸೂಕ್ತವೆನಿಸುತ್ತದೆ. ವಾಯವ್ಯ ಮೂಲೆಯ ಕಿರೀಟಧಾರಿಯಾದ ಎರಡು ಕೈಗಳುಳ್ಳ ದೇವತೆ ನೃತ್ಯಭಂಗಿಯಲ್ಲಿದ್ದಾಳೆ. ಈಶಾನ್ಯ ಮೂಲೆಯ ಕಂಬದ ಮೇಲೆ, ದಾಸೋಜನಿಂದ ನಿರ್ಮಿತವಾದ, ತಲೆಕೂದಲನ್ನು ಹಿಂಡುತ್ತಿರುವ ಯುವತಿಯ ಭವ್ಯವಿಗ್ರಹವಿದೆ.



ಹೊಯ್ಸಳರ ಒಂದು ತಾಮ್ರಶಾಸನ

ವಿಗ್ರಹಕಲೆಯಲ್ಲಷ್ಟೇ ಅಲ್ಲದೆ ಇಡೀ ಹೊಯ್ಸಳ ಶಿಲ್ಪಕ್ಷೇತ್ರದಲ್ಲೇ ಅತ್ಯಂತ ಸುಂದರ ಮೂರ್ತಿಯೆಂದರೆ, ದೇವಾಲಯದ ಮೂಲ ವಿಗ್ರಹ. ಇದು ಕೇಶವನದು. ಇದು 9 ಅಡಿ ಎತ್ತರವಿದೆ. ವಿವಿಧ ಆಭರಣಭೂಷಿತ ನಾದ ಈ ಭವ್ಯಮೂರ್ತಿಯ ನಾಲ್ಕು ಕೈಗಳಲ್ಲಿ ಶಂಖ ಚಕ್ರ ಗದಾ ಪದ್ಮಗಳಿವೆ. ತಲೆಯ ಮೇಲೆ ಕರಂಡ ಮಕುಟವಿದೆ. ಮುಖದಲ್ಲಿ ಸೌಮ್ಯ ಕಳೆ ಇದೆ. ಭೂದೇವಿ-ಶ್ರೀದೇವಿಯರು ಬಲ-ಎಡ ಪಾದಗಳ ಬಳಿ ನಿಂತಿರುವರು. ದೇವಿಯರ ಹಿಂಬದಿಯಲ್ಲಿರುವ ಕಂಬಗಳ ಮೇಲಣ ಮಕರಗಳೂ ಅವುಗಳ ಮೇಲಿನ ಲತಾತೋರಣವೂ ಉತ್ತಮ ಕೈಚಳಕದ ಕೆತ್ತನೆಗಳಾಗಿವೆ. ಲತಾತೋರಣದಲ್ಲಿ ದಶಾವತಾರಗಳು, ಅದರ ಮೇಲೆ ದ್ವಾದಶಮೂರ್ತಿಗಳು, ಪ್ರಭಾವಳಿಯ ಅಂಚಿನಲ್ಲಿ ಅಷ್ಟದಿಕ್ಪಾಲಕರು, ಪೀಠದ ಮೇಲೆ ಅಂಜಲಿಹಸ್ತ ಗರುಡ ಇವೆ. ಈ ವಿಜಯನಾರಾಯಣ ಮೂರ್ತಿಯನ್ನು ವಿಷ್ಣುವರ್ಧನ ಪ್ರತಿಷ್ಠಿಸಿದನೆಂದು ತಿಳಿಸುವ ಶಾಸನ ಪೀಠದ ಮೇಲಿದೆ.

ಬೇಲೂರಿನ ಚೆನ್ನಕೇಶವ ದೇವಾಲಯ ಕರ್ನಾಟಕದ ಹೆಮ್ಮೆಯ ವಾಸ್ತುಶಿಲ್ಪಕೃತಿಗಳಲ್ಲೊಂದು.

ಕಪ್ಪೆಚೆನ್ನಿಗರಾಯ ಮಂದಿರ ಕೇಶವ ಮಂದಿರದ ಬಲಗಡೆ ಸ್ವಲ್ಪ ಹಿಂದೆ ಸರಿದಂತೆ ಇದೆ. ವಿಷ್ಣುವರ್ಧನನ ಪಟ್ಟದರಸಿ ಶಾಂತಲೆ ಇದನ್ನು 1117ರಲ್ಲಿ ಸ್ಥಾಪಿಸಿದಳೆಂದು ಅಲ್ಲಿನ ಶಾಸನ ತಿಳಿಸುತ್ತದೆ. 124'x 105' ವಿಸ್ತೀರ್ಣವುಳ್ಳ ಇದು ದ್ವಿಕೂಟಾಚಲ. ಈ ದೇವಾಲಯದ ತಳವಿನ್ಯಾಸ ಕೇಶವದೇವಾಲಯದ ತಳವಿನ್ಯಾಸದಂತೆಯೇ ಇದೆ. ಸುಮಾರು ನಾಲ್ಕು ಅಡಿಗಳೆತ್ತರದ ಜಗತಿಯ ಮೇಲೆ ಚತುರಸ್ರಾಕಾರದ ನವರಂಗ ಮತ್ತು ನಕ್ಷತ್ರಾಕಾರದ ವಿಮಾನಗಳಿವೆ. ನವರಂಗದ ದಕ್ಷಿಣಭಾಗದಲ್ಲಿ ಬಾಗಿಲ ಬದಲು ಚತರಸ್ರವಾದ ಗರ್ಭಗುಡಿಯೂ ಅದರ ಎದುರಿಗೆ ಉತ್ತರಭಾಗದಲ್ಲಿ ಬಾಗಿಲೂ ಇವೆ. ಈ ದೇವಾಲಯದ ಒಳಭಾಗದಲ್ಲೂ ಮುಖ್ಯದ್ವಾರದ ಎರಡು ಬದಿಗಳಲ್ಲಿ ಎತ್ತರವಾದ ಜಗಲಿಗಳಿವೆ. ಇಮ್ಮಡಿ ವೀರಬಲ್ಲಾಳ 1206ರಲ್ಲಿ, ನವರಂಗದ ತೆರೆದಿದ್ದ ಮೇಲ್ಭಾಗಗಳನ್ನು ಜಾಲಂಧ್ರಗಳಿಂದ ಮುಚ್ಚಿಸಿದ. ಇದರ ಹೊರ ಗೋಡೆಗಳ ಮೇಲೆ ಉಬ್ಬುಶಿಲ್ಪಗಳ ಅಲಂಕಾರ ವಿಲ್ಲ. ದೇವಾಲಯದ ಮುಖ್ಯ ಗರ್ಭಗುಡಿಯಲ್ಲಿರುವ ಚೆನ್ನಿಗರಾಯನ ವಿಗ್ರಹ ಆರೂವರೆ ಅಡಿ ಎತ್ತರದ ಸುಂದರ ಶಿಲ್ಪ. ಅದರ ಪ್ರಭಾವಳಿಯಲ್ಲಿ ದಶಾವತಾರ ಮತ್ತು ಅಷ್ಟದಿಕ್ಪಾಲಕರ ಕೆತ್ತನೆಗಳೂ ಪೀಠದ ಮೇಲೆ ಗರುಡನ ಶಿಲ್ಪ ಮತ್ತು ಶಾಂತಲೆಯ ಶಾಸನವೂ ಇವೆ. ದಕ್ಷಿಣದ ಗರ್ಭಗುಡಿ ಯಲ್ಲಿ ಈಚಿನ ಕಾಲದ ವೇಣುಗೋಪಾಲ ಮೂರ್ತಿ ಇದೆ. ಇಲ್ಲಿನ ಉತ್ತರ ಗೋಡೆಯ ಗೂಡಿನಲ್ಲಿರುವ ಸರಸ್ವತಿ ವಿಗ್ರಹ ಗಮನಾರ್ಹ. ಇದರ ಎದುರಿನ ಗೂಡಿನಲ್ಲಿರುವ ಮಹಿಷಮರ್ದಿನಿ ಸಹ ಬಹಳ ಅಂದವಾದ ಶಿಲ್ಪ.

ಕೇಶವ ದೇವಾಲಯದ ಹಿಂದೆ 70' x 56' ವಿಸ್ತೀರ್ಣದ ವಿಜಯ ನಾರಾಯಣ ಗುಡಿಯಿದೆ. ಇದು ಜಗಲಿಯ ಮೇಲಿದ್ದರೂ ವಿಮಾನದ ಮೂರು ದಿಕ್ಕುಗಳಲ್ಲೂ ಪಾರ್ಶ್ವಗಳು ಸ್ವಲ್ಪಮಟ್ಟಿಗೆ ಹೊರ ಉಬ್ಬಿನಿಂದ ಕೂಡಿದ್ದು ಅದರಲ್ಲಿ ನಕ್ಷತ್ರದ ಬಾಹುಗಳ ಅನುಕರಣೆ ಕಾಣುತ್ತದೆ. ಅದರ ಹೊರಗೋಡೆಗಳ ಮೇಲೆ 59 ದೊಡ್ಡ ದೇವತಾವಿಗ್ರಹಗಳ ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ಆನೆಯ ಮೇಲಿರುವ ಭಗದತ್ತನೊಡನೆ ಹೋರಾಡುತ್ತಿರುವ ಭೀಮ ಮತ್ತು ಕಿರೀಟ ಧರಿಸಿದ ಮೂರು ತಲೆಗಳ ವಿಚಿತ್ರ ವ್ಯಕ್ತಿಯ ಶಿಲ್ಪಗಳು ಗಮನಾರ್ಹವಾಗಿವೆ. ಬೇಲೂರು 58ನೆಯ ಶಾಸನದ ಪ್ರಕಾರ ಈ ಗುಡಿಯನ್ನು ಸಹ 1117ರಲ್ಲಿ ನಿರ್ಮಿಸಲಾಯಿತು.

ಕೇಶವ ದೇವಾಲಯದ ನೈಋತ್ಯ ಮೂಲೆಯಲ್ಲಿರುವ ಸೋಮನಾಯಕಿ ಅಮ್ಮನವರ ದೇವಾಲಯ ಕೇಶವದೇವಾಲಯದ ಸಮಕಾಲೀನವೆಂದು ಹೇಳಲಾಗಿದ್ದರೂ ಅದರ ಕಾಲದ ಬಗ್ಗೆ ನಿರ್ದಿಷ್ಟ ಮಾಹಿತಿಗಳೇನೂ ಇಲ್ಲ. ಗರ್ಭಗುಡಿಯ ಮೇಲೆ ಶಿಖರ ಇನ್ನೂ ಉಳಿದಿದೆ. ಈ ಗುಡಿಯ ಮುಂದಿನ ತೆರೆದ ಮಂಟಪವನ್ನು ಕಳಲೆ ಮನೆತನದ ದಳವಾಯಿಗಳು 18ನೆಯ ಶತಮಾನದಲ್ಲಿ ಕಟ್ಟಿಸಿದಂತೆ ತಿಳಿದುಬರುತ್ತದೆ.

ಕೇಶವ ದೇವಾಲಯದ ವಾಯವ್ಯ ಮೂಲೆಯಲ್ಲಿರುವ ಆಂಡಾಳ್ ಗುಡಿ ಬಹುಶಃ ಅನಂತರಕಾಲದಲ್ಲಿ ಕಟ್ಟಿದ್ದು. ಪಾಳುಬಿದ್ದ ಬೇರಾವುದೋ ಗುಡಿಯ ಕಲ್ಲುಗಳಿಂದ ಅದನ್ನು ನಿರ್ಮಿಸಿದಂತೆ ಕಾಣುತ್ತದೆ. ಅದರ ಹೊರಗೋಡೆಗಳ ಮೇಲೆ ಕೆಲವು ಸುಂದರ ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ

ಬೇಚಮ ಎಂಬ ಶಿಲ್ಪಿಯ ಕೃತಿ, ಮಧುವಣ್ಣನ ವೇಣು ಗೋಪಾಲಮೂರ್ತಿ, ಲಕ್ಷ್ಮೀನಾರಾಯಣ ಮುಂತಾದವು ಸುಂದರ ಶಿಲ್ಪಗಳು.

ಪ್ರಾಕಾರದಲ್ಲಿ ನರಸಿಂಹ, ರಾಮ, ಕೃಷ್ಣ, ರಾಮಾನುಜಾಚಾರ್ಯ, ವೇದಾಂತದೇಶಿಕ, ಜೀಯರ್, ಆಳ್ವಾರ್ ಮುಂತಾದವರ ಅನಂತರಕಾಲದ ಹಲವು ಗುಡಿಗಳಿವೆ. ಇವಲ್ಲದೆ ಅಲ್ಲಿದ್ದ ಕೆಲವು ಕಟ್ಟಡಗಳನ್ನು ಈಚೆಗೆ ತೆಗೆದುಹಾಕಲಾಗಿದೆ.

ದೇವಾಲಯದ ಮಹಾದ್ವಾರದ ಮೇಲಿನ ಗೋಪುರದ ನಿರ್ಮಾಣ ಮೊದಲಿಗೆ ಯಾರ ಕಾಲದಲ್ಲಿ ಆಯಿತೆಂಬುದು ತಿಳಿದಿಲ್ಲವದರೂ ಗುಲ್ಬರ್ಗದ ದಳಪತಿ ಗಂಗ ಸಾಲಾರ ಸುಟ್ಟ ಗೋಪುರವನ್ನು 1397ರಲ್ಲಿ ಇಮ್ಮಡಿ ಹರಿಹರನ ಆಜ್ಞೆಯಂತೆ ಅಮಾತ್ಯ ಗುಂಡದಂಡಾಧಿಪ ಪುನರ್ನಿರ್ಮಿಸಿದ ನೆಂದು ಬೇಲೂರು 3ನೆಯ ಶಾಸನ ತಿಳಿಸುತ್ತದೆ. ಇದರ ಮೇಲಿರುವ, ಇಟ್ಟಿಗೆ ಗಾರೆಗಳಿಂದ ಮಾಡಿದ, ಅನೇಕ ಶಿಲ್ಪಗಳೂ ಗಮನಾರ್ಹವಾಗಿವೆ.

ಬೇಲೂರಿನಲ್ಲಿ, ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿರುವ ಶಂಕರೇಶ್ವರ ಗುಡಿಯೂ ಹೊಯ್ಸಳರ ಕಾಲದ ನಿರ್ಮಾಣ. ಇದರಲ್ಲಿ ಗರ್ಭಗೃಹ, ಸುಕನಾಸಿ ಮತ್ತು ನಂದಿಮಂಟಪಗಳು ಉಳಿದಿವೆ. ನವರಂಗ ಹಾಳಾಗಿದೆ. ಸುಕನಾಸಿಯ ಬಾಗಿಲುವಾಡ ಸುಂದರ ಕೆತ್ತನೆಗಳಿಂದ ಕೂಡಿದೆ. ಜಾಲಂದ್ರ ಗಳು ಮತ್ತು ಬಾಗಿಲ ಮೇಲಿನ ತಾಂಡವೇಶ್ವರ ಫಲಕಗಳು ಗಮನಾರ್ಹ. ಇಲ್ಲಿರುವ ನಂಜುಂಡೇಶ್ವರ ದೇವಾಲಯದಲ್ಲಿರುವ ಆರು ಮುಖಗಳ, ನವಿಲುವಾಹನವುಳ್ಳ ಸುಬ್ರಹ್ಮಣ್ಯ ಶಿಲ್ಪ ಉತ್ತಮ ಕೆತ್ತನೆ, ಪಾತಾಳೇಶ್ವರ ದೇವಾಲಯ ಭೂಮಟ್ಟದಿಂದ ಕೆಳಕ್ಕಿದೆ. ಪ್ರಸಿದ್ಧ ಕನ್ನಡ ಕವಿ ರಾಘವಾಂಕ ನೊಂದಿಗೆ ಇದೂ ಸಂಬಂಧಿಸಿದ್ದೆಂದು ಪ್ರತೀತಿಯಿದೆ. ಇಲ್ಲಿನ ಮತ್ತೊಂದು ಗುಡಿ ಅಮೃತೇಶ್ವರ. ಊರಿನ ದಕ್ಷಿಣಕ್ಕಿರುವ ವಿಷ್ಣುಸಮುದ್ರ ಕೆರೆಯೂ ಹೊಯ್ಸಳ ಕಾಲದ ನಿರ್ಮಾಣ.

ಬೇಲೂರಿನ ಸರಹದ್ದಿನಲ್ಲಿ 85ಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿವೆ. ಈ ಶಾಸನಗಳಲ್ಲಿ ಬಹಳಷ್ಟು ಹೊಯ್ಸಳ ಕಾಲಕ್ಕೂ ಉಳಿದವು ಅನಂತರದ ಕಾಲಕ್ಕೂ ಸೇರಿದವು. ಹೊಯ್ಸಳರಿಗೂ ಹಿಂದಿನ ಶಾಸನಗಳು ಇಲ್ಲಿ ದೊರಕದಿರುವುದು ಗಮನಾರ್ಹ. ಇವುಗಳಲ್ಲಿ ಮುಖ್ಯವಾದ ಶಾಸನಗಳ ಪೈಕಿ 21 ಹೊಯ್ಸಳರ ಕಾಲಕ್ಕೆ, 19 ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ, 8 ಬೇಲೂರು ಪಾಳೆಯಗಾರರ ಕಾಲಕ್ಕೆ, 2 ಮೈಸೂರು ದೊರೆಗಳ ಕಾಲಕ್ಕೆ ಸೇರುತ್ತವೆ. ಉಳಿದ ಶಾಸನಗಳು ವಿಗ್ರಹಗಳ ಬುಡದಲ್ಲಿ ಅವನ್ನು ನಿರ್ಮಿಸಿದ ಶಿಲ್ಪಿಗಳ ಹೆಸರು ಮತ್ತಿತರ ವಿಷಯಗಳನ್ನು ತಿಳಿಸುವ, ರಾಜನ ಹೆಸರಿಲ್ಲದ ಮತ್ತು ಕಾಲಸೂಚನೆಯಿಲ್ಲದ ಬರೆಹಗಳು.

ಹೊಯ್ಸಳರ ಕಾಲದ ಶಾಸನಗಳಲ್ಲಿ ಬಹಳ ಮುಖ್ಯವಾದುದು ಬೇಲೂರು–58ನೆಯ ಶಾಸನ. ವಿಷ್ಣುವರ್ಧನ 1117ರಲ್ಲಿ ಕೇಶವ ದೇವಾಲಯವನ್ನು ಸ್ಥಾಪಿಸಿದ ಸಂಗತಿಯನ್ನು ತಿಳಿಸುವ 85 ಸಾಲುಗಳ ಈ ಶಾಸನ ಹೊಯ್ಸಳರ ಆವರೆಗಿನ ವಂಶಾವಳಿ, ಬೇರೆಬೇರೆ ರಾಜರ ಕಾಲದ ಪ್ರಮುಖ ಘಟನೆಗಳು, ಹೊಯ್ಸಳ ರಾಣಿಯರು, ಮಕ್ಕಳು, ರಾಜ್ಯದ ವಿಸ್ತಾರ ಮುಂತಾದ ವಿವರಗಳ ನ್ನೆಲ್ಲ ತಿಳಿಸುತ್ತದೆ. ಸಹಜವಾಗಿಯೇ ವಿಷ್ಣುವರ್ಧನನ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ನೀಡುತ್ತದೆ. ವಿಷ್ಣುವರ್ಧನ ತಲಕಾಡನ್ನು ವಶಪಡಿಸಿಕೊಂಡು ಚೋಳರನ್ನು ಹೊಡೆದೋಡಿಸಿ ತಲಕಾಡುಗೊಂಡನೆಂದು ಬಿರುದನ್ನು ಧರಿಸಿಕೊಂಡ ಸಂಗತಿಯನ್ನು ತಿಳಿಸುತ್ತದೆ. ಕೇಶವ ದೇವಾಲಯಕ್ಕೆ ಬಿಟ್ಟ ದತ್ತಿಗಳ ವಿವರಗಳೂ ಇಲ್ಲಿ ಪ್ರಸ್ತಾಪಿತವಾಗಿವೆ. ಕೇಶವ ವಿಗ್ರಹದ ಪೀಠದ ಮೇಲಿನ ಶಾಸನ ಅದನ್ನು ವಿಷ್ಣುವರ್ಧನ ಪ್ರತಿಷ್ಠಾಪಿಸಿದ ಸಂಗತಿ ಯನ್ನು ತಿಳಿಸುತ್ತದೆ. ಕಪ್ಪೆಚೆನ್ನಿಗರಾಯ ವಿಗ್ರಹದ ಪೀಠದ ಮೇಲಿನ ಶಾಸನದಲ್ಲಿ ಪಟ್ಟಮಹಿಷಿ ಶಾಂತಲೆ ಅದನ್ನು ಪ್ರತಿಷ್ಠಾಪಿಸಿದ ವಿಷಯ ವನ್ನು ತಿಳಿಸುತ್ತದೆ. ಮೊದಲನೆಯ ನರಸಿಂಹನ ಕಾಲದ ಎರಡು ಶಾಸನಗಳು ಅವನ ಕಾಲದಲ್ಲಿ ದೇವಾಲಯ ಪ್ರಾಕಾರದಲ್ಲಿ ಅವನು ನಿರ್ಮಿಸಿದ ಕಟ್ಟಡ ಗಳ ವಿಷಯ, ಕೇಶವದೇವಾಲಯದ ಮಂಟಪದ ಗೋಡೆಗಳಲ್ಲಿ ಜಾಲಂಧ್ರಗ ಳನ್ನು ಹಾಕಿಸಿದ್ದು, ದೇವಾಲಯಕ್ಕಾಗಿ ಬಿಟ್ಟ ದತ್ತಿಗಳು, ನೀಡಿದ ತೆರಿಗೆ ವಿನಾಯಿತಿ ಮುಂತಾದ ವಿಷಯಗಳಿವೆ. ಉಚ್ಛಂಗಿ ಕೋಟೆಯನ್ನು ಅವನು ವಶಪಡಿಸಿಕೊಂಡ ವಿಷಯವನ್ನು ಒಂದು ಶಾಸನದಲ್ಲಿ ಹೇಳಲಾಗಿದೆ. ಮುಮ್ಮಡಿ ನರಸಿಂಹನ ಒಂದು ಶಾಸನ ಚಿಕ್ಕಗೋಡು ಎಂಬ ಗ್ರಾಮವನ್ನು ಕೇಶವ ದೇವಾಲಯಕ್ಕೆ ದತ್ತಿಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಮುಮ್ಮಡಿ ಬಲ್ಲಾಳನ ಕಾಲದ 10 ಶಾಸನಗಳಲ್ಲಿ ಬೇಲೂರು 24ನೆಯ ಶಾಸನ ಸೋಮಯ ಡಣ್ಣಾಯಕ ಕೇಶವ ದೇವಾಲಯದ ಶಿಥಿಲವಾದ ಶಿಖರವನ್ನು ರಿಪೇರಿ ಮಾಡಿಸಿದ ವಿಷಯವನ್ನೂ ಉಳಿದವು ದೇವಾಲಯಕ್ಕೆ ಬಿಟ್ಟ ದಾನದತ್ತಿಗಳ ವಿಷಯಗಳನ್ನೂ ಪ್ರಸ್ತಾಪಿಸಿವೆ.

ವಿಜಯನಗರ ಕಾಲದ 20 ಶಾಸನಗಳಲ್ಲಿ ಐದು ಇಮ್ಮಡಿ ಹರಿಹರನ ಕಾಲದವು. ಬೇಲೂರು 52ನೆಯ ಶಾಸನ ಹರಿಹರನ ಅಣತಿಯ ಮೇರೆಗೆ 1381ರಲ್ಲಿ ಅಮಾತ್ಯ ಕಂಪಣ ಕೇಶವ ದೇವಾಲಯದ ಶಿಥಿಲವಾಗಿದ್ದ ಸುಕನಾಸಿಯ ಚಾವಣಿಗೆ ನಾಲ್ಕು ಕಂಬಗಳನ್ನು ಆಧಾರವಾಗಿ ಕೊಟ್ಟು ದುರಸ್ತುಮಾಡಿಸಿದ ಸಂಗತಿಯನ್ನು ತಿಳಿಸುತ್ತದೆ. ಬೇಲೂರು 63ನೆಯ ಶಾಸನದಲ್ಲಿ ಕೇಶವಗುಡಿಗೆ 1387ರಲ್ಲಿ ಚಿನ್ನದ ಕಲಶವನ್ನಿಟ್ಟ ಸಂಗತಿಯದೆ. ಬೇಲೂರು 3ನೆಯ ಶಾಸನದಲ್ಲಿ ಕೇಶವ ದೇವಾಲಯಕ್ಕೆ ವಿಷ್ಣುವರ್ಧನ ಬಿಟ್ಟದ್ದ ದತ್ತಿಗಳನ್ನು ಹರಿಹರನಾಜ್ಞೆಯಿಂದ ಗುಂಡದಂಡಾಧಿಪ ಪುನರುಜ್ಜೀ ವಿತಗೊಳಿಸಿದ ಮತ್ತು ಕಲ್ಬುರ್ಗಿಯ ಗಂಗಸಾಲಾರನಿಂದ ನಾಶವಾಗಿದ್ದ ಮಹಾದ್ವಾರದ ಮೇಲಿನ ಏಳಂತಸ್ತಿನ ಗೋಪುರವನ್ನು ದುರಸ್ತಿಮಾಡಿಸಿದ ಮತ್ತು ಅದರ ಮೇಲೆ ಚಿನ್ನದ ಕಲಶವನ್ನು ಇಡಿಸಿದ ವಿಷಯಗಳಿವೆ. ಇಮ್ಮಡಿ ಬುಕ್ಕರಾಯ ಮತ್ತು ಒಂದನೆಯ ದೇವರಾಯನ ಕಾಲದ ಶಾಸನ ಗಳು ದೇವಾಲಯಕ್ಕೊದಗಿಸಿದ ಸಲಕರಣೆಗಳ ಮತ್ತು ಸ್ಥಾಪಿಸಿದ ಕಟ್ಟಡಗಳ ವಿಷಯಗಳನ್ನು ತಿಳಿಸುತ್ತವೆ. ಲಕ್ಕಣ್ಣನಾಯಕನೆಂಬುವನ 1484ರ ಮೂರು ಶಾಸನಗಳಿಂದ, ಅಲ್ಲಿ ಅವನು ನಿರ್ಮಿಸಿದ ಯಾಗಶಾಲೆ ಮತ್ತು ಬಿಟ್ಟ ದತ್ತಿಗಳ ವಿಷಯಗಳನ್ನು ತಿಳಿಯಬಹುದು. ಕೃಷ್ಣದೇವರಾಯನ ಎರಡು ಶಾಸನಗಳಲ್ಲಿ 1518ರ ಶಾಸನ ಒಂದು ದತ್ತಿಯ ಸಂಗತಿಯನ್ನೂ 1524ರ ಶಾಸನ ತೆಪ್ಪಕೊಳ, ವಸಂತ ಮಂಟಪಗಳ ನಿರ್ಮಾಣ ಮತ್ತು ಎರಡು ಗ್ರಾಮಗಳನ್ನು ದತ್ತಿಬಿಟ್ಟ ಸಂಗತಿಗಳನ್ನೂ ತಿಳಿಸುತ್ತವೆ. ಸದಾಶಿವರಾಯನ ಕಾಲದ 1548ರ ಬೇಲೂರು 4ನೆಯ ಶಾಸನದಲ್ಲಿ ಕೇಶವ ದೇವರ ರಥೋತ್ಸವಕ್ಕಾಗಿ ಗ್ರಾಮವೊಂದನ್ನು ಉಂಬಳಿಬಿಟ್ಟ ವಿಷಯವಿದೆ. ಶ್ರೀರಂಗರಾಯನ ಕಾಲದ ಎರಡು ಶಾಸನಗಳಲ್ಲಿ 1566ರ ಶಾಸನದಲ್ಲಿ ನಾಗಿನಾಯಕನ ಮಂಟಪದ ಮುಂದೆ ಗರುಡನಿಗೆ ಗುಡಿ ನಿರ್ಮಿಸಿದ ಸಂಗತಿಯನ್ನು ತಿಳಿಸುತ್ತದೆ. 1578ರ ಶಾಸನದಲ್ಲಿ ರಾಮಾನುಜರ, ಕೇಶವ ದೇವರ ಉಯ್ಯಾಲೆ ಉತ್ಸವಕ್ಕಾಗಿ ಆನೆಬಾಗಿಲ ಮುಂದೆ 15 ಅಂಕಣಗಳ ನಿರ್ಮಾಣದ ಸಂಗತಿಯಿದೆ. 1626ರ ಬೇಲೂರು 22ನೆಯ ಶಾಸನದಲ್ಲಿ ಪ್ರಾಕಾರದ ಉತ್ತರ ಭಾಗದಲ್ಲಿ 26 ಅಂಕಣಗಳ ಕೈಸಾಲೆಯ ನಿರ್ಮಾಣವಾದ ಸಂಗತಿಯಿದೆ. ಮೈಸೂರರಸರ ಕಾಲದ ಮೂರು ಶಾಸನಗಳಲ್ಲಿ 1717ರ ಬೇಲೂರು 29ನೆಯ ಶಾಸನದಲ್ಲಿ ಒಂದನೆಯ ಕೃಷ್ಣರಾಜನ ಆಳ್ವಿಕೆಯಲ್ಲಿ ದೇವಾಲಯದ ಮುಂದೆ ವಸಂತೋತ್ಸವಕ್ಕಾಗಿ ಕೊಳವನ್ನು ಕಟ್ಟಿಸಿದ ಸಂಗತಿಯನ್ನು ತಿಳಿಸುತ್ತದೆ. 1774ರ ಬೇಲೂರು 65ನೆಯ ಶಾಸನದಲ್ಲಿ ಚಾಮರಾಜ ಮತ್ತು ಹೈದರ್ ಅಲಿ ಕಾಲದಲ್ಲಿ ಗೋಪುರದ ಮೇಲೆ ಕಲಶವನ್ನು ಸ್ಥಾಪಿಸಿದ ಸಂಗತಿಯಿದೆ. ದೇವಾಲಯದ ಪಾತ್ರೆಗಳು ಮತ್ತು ಆಭರಣಗಳ ಮೇಲಿರುವ ಶಾಸನಗಳಿಂದ ಅವುಗಳನ್ನು

ಯಾರು ದಾನಮಾಡಿದರೆಂಬ ವಿವರಗಳು ತಿಳಿದುಬರುತ್ತವೆ. ಮೂರು ಕಾಲಿನ ತಾಮ್ರದ ಪೀಠವೊಂದರ ಮೇಲೆ ಕುಮಾರಲಕ್ಷ್ಮ ಅದನ್ನು ದೇವಾಲಯಕ್ಕೆ ದಾನಕೊಟ್ಟ ವಿಷಯವಿದೆ. ಶಾಸನ ಬಹುಮುಖ್ಯವಾದುದು. ಇಂಥ ಶಾಸನಗಳಲ್ಲಿ ಬಹುಶಃ ಇತ್ತೀಚಿನದು 1840ರದು. ಕಂಠಹಾರದ ಮೇಲಿರುವ ಈ ಶಾಸನದ ಪ್ರಕಾರ ಅದನ್ನು ಕೃಷ್ಣೇ ಅರಸನ ಪತ್ನಿ ನಂಜಮ್ಮಣ್ಣಿ ದಾನಮಾಡಿದುದೆಂದು ತಿಳಿಯುತ್ತದೆ. (ಬಿ.ಕೆ.ಜಿ.)

**ಬೇಲೂರು²**: ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿ ಮಲಪ್ರಭಾ ನದಿಯ ದಡದಲ್ಲಿರುವ ಗ್ರಾಮ. ಹುಬ್ಬಳ್ಳಿ–ಸೋಲಾಪುರ ರೈಲ್ವೆ ಮಾರ್ಗದಲ್ಲಿದೆ. ಜನಸಂಖ್ಯೆ 5,080. ಹಿಂದೆ ಇದೊಂದು ಅಗ್ರಹಾರವಾಗಿತ್ತು. ಇಲ್ಲಿ ಒಂದು ಪ್ರಾಚೀನ ಕೋಟೆ ಮತ್ತು ಹನುಮಂತದೇವರ ಗುಡಿ ಇದೆ. ಈ ದೇವರನ್ನು ಬೇಲೂರಪ್ಪ ಎಂದು ಕರೆಯುವರು. ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಜಯಸಿಂಹ ಜಗದೇಕಮಲ್ಲ (1014–42) ದೊರೆಯ ಆಳ್ವಿಕೆಯಲ್ಲಿ ಬರೆಯಲಾದ ಶಿಲಾಲೇಖವೊಂದನ್ನು (1040) ಈ ದೇವಾಲಯದ ಮುಂದೆ ನೆಟ್ಟಿದ್ದಾರೆ. ಜಗದೇಕಮಲ್ಲನ ಸೋದರಿ ಅಕ್ಕಾದೇವಿಯು ಈ ಭೂಭಾಗವನ್ನು ಆಕೆಯ ಪತಿ 'ಭಾವನ ಗಂಧವಾರಣ' ಬಿರುದಿನ ವ್ಯಕ್ತಿಯೊಂದಿಗೆ ಆಳುತ್ತಿದ್ದಳು. ಕೋಟೆಯ ಉಲ್ಲೇಖ ಈ ಶಾಸನದಲ್ಲಿ ಬಂದಿರುವುದರಿಂದ ಅದು ತತ್ಪೂರ್ವದಲ್ಲೇ ಕಟ್ಟಲ್ಪಟ್ಟ ಕೋಟೆ. ಶಾಸನ ತುಂಬ ಅಳಿಸಿಹೋಗಿರುವುದರಿಂದ ವಿವರಗಳು ತಿಳಿದುಬರುವುದಿಲ್ಲ. (ಎಸ್.ಜಿಎ.)

**ಬೇಲೂರು ಕೇಶವದಾಸ:** 1885–1948. ಪ್ರಸಿದ್ಧ ಕೀರ್ತನಕಾರರು. ಹರಿದಾಸಸಾಹಿತ್ಯದ ಪುರೋಭಿವೃದ್ಧಿಗಾಗಿ ಶ್ರಮಿಸಿದವರು. ವೆಂಕಟಸುಬ್ಬದಾಸ ಮತ್ತು ಭೀಮಾಬಾಯಿ ಎಂಬ ದಂಪತಿಗಳಿಗೆ 1885ರಲ್ಲಿ ಹಿರಿಯ ಮಗನಾಗಿ (ಕಿರಿಯ ಮಗ ಹರಿಕಥಾವಿದ್ವಾನ್ ಬೇಲೂರು ರಂಗದಾಸರು) ಜನಿಸಿದರು. ಹಾಸನ, ತುಮಕೂರು ಮುಂತಾದೆಡೆಗಳಲ್ಲಿ ಇವರ ವಿದ್ಯಾಭ್ಯಾಸ ಸಾಗಿತು. ಇವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ಸಂಸ್ಕೃತವನ್ನೂ ಆಳವಾಗಿ ಅಭ್ಯಾಸಮಾಡಿದ್ದ ಕೇಶವದಾಸರು ತಮ್ಮ ತಂದೆಯವರ ಮಾರ್ಗದರ್ಶನದಲ್ಲಿ ಕೀರ್ತನ ಕ್ಷೇತ್ರ ವನ್ನು ಪ್ರವೇಶಿಸಿದರು; ಉತ್ತಮ ಕೀರ್ತನಕಾರರೆಂದು ಹೆಸರು ಗಳಿಸಿದರು.

ಒಮ್ಮೆ ಧಾರವಾಡದಲ್ಲಿ ಇವರು ಕೀರ್ತನೆ ಮಾಡುತ್ತಿದ್ದಾಗ ಮುದವೀಡು ಕೃಷ್ಣರಾಯರ ಪರಿಚಯವಾಯಿತು. ದಾಸರು ಅವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ದುಮುಕಿದರು. ಅನಂತರ ಇವರ ಹೆಚ್ಚಿನ ಕೀರ್ತನೆಗಳಿಗೆ ರಾಷ್ಟ್ರಸ್ವಾತಂತ್ರ್ಯವೇ ವಸ್ತುವಾಗಿ ಪರಿಣಮಿಸಿತು. ಕೇಶವ ದಾಸರಿಗೆ ಗಾಂಧೀಜಿಯವರೊಡನೆ ನಿಕಟಸಂಪರ್ಕವಿತ್ತು. ದಾಸರ ಕೀರ್ತನ ಕಲೆಯನ್ನು ಗಾಂಧೀಜಿ ಬಹುವಾಗಿ ಮೆಚ್ಚಿಕೊಂಡಿದ್ದರು. ಕನ್ನಡ ಪದಗಳ ಸೌಂದರ್ಯವನ್ನು ದಾಸರ ಮುಖದಿಂದ ಸವಿದ ಅವರು ಈ ವಿಷಯವನ್ನು ತಮ್ಮ ಆತ್ಮಕಥೆಯಾದ ಸತ್ಯಶೋಧನೆಯಲ್ಲಿ ಉಲ್ಲೇಖಿಸಿದ್ದಾರೆ.

ದಾಸರು ಕನ್ನಡದಲ್ಲಿ ಗ್ರಂಥರಚನೆಯನ್ನು ಮಾಡಿದ್ದಾರೆ. ಜೀವನದಲ್ಲಿ ಅಪಾರ ನೊಂದು ಐಹಿಕ ಜೀವನದಲ್ಲಿ ಆಸಕ್ತಿ ಕಳೆದುಕೊಂಡು ದೇಶಾಂತರ ಹೋಗಲು ಅವರು ನಿಶ್ಚಯಿಸಿದ್ದಾಗ, ಸುಬೋಧ ರಾಮರಾಯರ ಒಡನಾಟ ಒದಗಿ, ಅವರ ಪ್ರೇರಣೆಯ ಮೇರೆಗೆ ದಾಸರು ಗ್ರಂಥರಚನೆಯಲ್ಲಿ ತೊಡಗಿದರೆಂದು ತಿಳಿದುಬರುತ್ತದೆ. ಕರ್ಣಾಟಕ ಭಕ್ತವಿಜಯ (1932; ಎರಡು ಭಾಗಗಳಲ್ಲಿ), ಹರಿದಾಸ ಸಾಹಿತ್ಯ ವಿಮರ್ಶೆ, ಕನ್ಯಕಾಪುರಾಣ ಮತ್ತು ರಾಘವೇಂದ್ರವಿಜಯ ವಿಸ್ತಾರ–ಇವು ಇವರ ಗ್ರಂಥಗಳು. ಕರ್ಣಾಟಕ ಭಕ್ತವಿಜಯ ಅಖಂಡ ಕರ್ನಾಟಕದ ಹರಿದಾಸರ ಪ್ರೌಢಿಮೆ–ಸಾಧನೆಗಳ ನ್ನೊಳಗೊಂಡ ಉದ್ಗ್ರಂಥ. ಈ ಗ್ರಂಥರಚನೆಗಾಗಿ ದಾಸರು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಸಂಚರಿಸಿ ಹರಿದಾಸರ ಮತ್ತು ಅವರ ಕೃತಿಗಳ ಬಗ್ಗೆ ವಿಷಯಸಂಗ್ರಹ ಮಾಡಿದ್ದರು. ಈ ಗ್ರಂಥ ದಾಸಸಾಹಿತ್ಯವನ್ನು ತಿಳಿಯಬೇಕೆನ್ನುವವರಿಗೆ ಒಂದು ಉತ್ತಮ ಕೈಪಿಡಿಯಂತಿದೆ. ಸು. 40 ವರ್ಷಗಳ ಕಾಲ ಕೀರ್ತನ ಕ್ಷೇತ್ರದಲ್ಲಿ, ಸಾಹಿತ್ಯರಂಗದಲ್ಲಿ ಸೇವೆಸಲ್ಲಿಸಿದ ದಾಸರು 1948ರಲ್ಲಿ ನಿಧನರಾದರು. (ಎಸ್.ಎಚ್.ವಿ.)

**ಬೇಲೂರು ಪಾಳೆಯಗಾರರು:** 14–19ನೆಯ ಶತಮಾನಗಳ ಅವಧಿಯಲ್ಲಿ ಆಗಿದಾಂಗ್ಗೆ, ಬೇಲೂರು ಮತ್ತು ಸುತ್ತಣ ಪ್ರದೇಶವನ್ನು ಆಳಿದ ಪಾಳೆಯಗಾರರು. ಇವರನ್ನು ಬಲಂ ಪಾಳೆಯಗಾರರು ಎಂದೂ ಪಾಳೆಯಪಟ್ಟನ್ನು ಬೇಲೂರು ಅಥವಾ ವೇಲಾಪುರ ಪಾಳೆಯಪಟ್ಟು ಎಂದೂ ಕರೆಯುವುದುಂಟು. ಈ ಪಾಳೆಯಗಾರರು ಮೂಲತಃ ಬೇಲೂರಿನವರಾದ್ದರಿಂದ ಶಾಸನಗಳಲ್ಲಿ ಮಣಿನಾಗಪುರವರಾಧೀಶ್ವರ ಎಂಬ ಬಿರುದಿನ ಜೊತೆಗೆ ತಮ್ಮ ಹೆಸರಿನ ಹಿಂದೆ ಬೇಲೂರಿನವರು ಎಂದು ಹೇಳಿಕೊಳ್ಳುತ್ತಾರೆ. ಮಣಿನಾಗಪುರ ಬಹುಶಃ ಈಗಿನ ಮಂಜರಾಬಾದ್. ಈ ನಾಯಕ ವಂಶದವರು ಕಾಶ್ಯಪಗೋತ್ರದವರು, ಆಪಸ್ತಂಭ ಸೂತ್ರದವರು. ಇವರು ತಮ್ಮ ರಾಜಧಾನಿಯನ್ನು ಕಾಲಕ್ರಮದಲ್ಲಿ ಸಕಲೇಶಪುರದ ಬಳಿಯ ಐಗೂರಿಗೆ ಸ್ಥಳಾಂತರಿಸಿದ್ದರಿಂದ ಐಗೂರು ಪಾಳೆಯಗಾರರೆಂದೂ ಪರಿಚಿತರಾಗಿದ್ದಾರೆ.

1397ರಲ್ಲಿ ಈ ಪ್ರದೇಶವನ್ನು ವಿಜಯನಗರದ ಅರಸರು ಸಿಂಗಪ್ಪ ನಾಯಕನಿಗೆ ವಹಿಸಿಕೊಟ್ಟರು. ಸಿಂಗಪ್ಪನಾಯಕನ ತಂದೆ ಮಂಚಯ್ಯನಾಯಕ ವಿಜಯ ನಗರದ ಸೈನ್ಯದಲ್ಲಿ ದಂಡನಾಯಕನಾಗಿದ್ದ ಎಂಬ ಹೇಳಿಕೆ ಇದೆ. ಆದರೆ ಸಿಂಗಪ್ಪನಾಯಕನ ಅನಂತರ ಒಂದು ಶತಮಾನಕ್ಕೂ ಹೆಚ್ಚಿನ ಕಾಲ ಇವರ ಬಗ್ಗೆ ಮಾಹಿತಿಯೇನೂ ದೊರಕಿಲ್ಲ. ಗಿರಿಯಪ್ಪನಾಯಕ ಮತ್ತು ತಿಮ್ಮಪ್ಪನಾಯಕ ಎಂಬಿಬ್ಬರು ಈ ವಂಶದವರು ಎಂದು ಮಾತ್ರ ತಿಳಿದುಬರುತ್ತದೆ. ಆದರೆ ಹೆಸರುಗಳಲ್ಲಿ ಒಂದು ಕ್ರಮಬದ್ಧ ವಿನ್ಯಾಸ ಗೋಚರಿಸುವುದು ಹಡಪದ ಪೋತಪನಾಯಕನ ಮಗ ಯರ ಕೃಷ್ಣಪ್ಪ ನಾಯಕನಿಂದ. ಪೋತಪನಾಯಕ ಕೃಷ್ಣದೇವರಾಯನ ಖಾಸಾ ಸಂಚಿಯವನಾಗಿದ್ದ. ಅವನ ಮಗ ಯರಕೃಷ್ಣಪ್ಪನಾಯಕನಿಗೆ ಕೃಷ್ಣದೇವರಾಯ ಬೇಲೂರು ಭಾಗದ ಆಡಳಿತವನ್ನು ನಿಷ್ಠೆಯ ಮತ್ತು ಯುದ್ಧದಲ್ಲಿ ಷರತ್ತಿನ ಮೇಲೆ ವಹಿಸಿಕೊಟ್ಟ. 1524ರಲ್ಲಿ ನೆರವು ನೀಡಬೇಕೆಂದು ಯರಕೃಷ್ಣಪ್ಪನಾಯಕನ ಹೆಸರು ಶಾಸನಗಳಲ್ಲಿ ಮೊದಲು ಗೋಚರಿಸುತ್ತದೆ. ಅನಂತರ ದಾಖಲೆಗಳಲ್ಲಿ ಯರಕೃಷ್ಣಪ್ಪನಾಯಕನೇ ವಂಶದ ಮೂಲಪುರುಷ ಎಂದು ಹೇಳಲಾಗಿದೆ. ಈ ಪಾಳೆಯಗಾರರ ಅನುಕ್ರಮ ಈ ರೀತಿ ಇದೆ; 1.ಪೋತಪನಾಯಕ, 2.ಯರ ಕೃಷ್ಣಪ್ಪನಾಯಕ (1524), 3.ವೆಂಕಟಾದ್ರಿನಾಯಕ, 4.ಕೃಷ್ಣಪ್ಪನಾಯಕ, 5.ಚಿಕ್ಕನಾಯಕ (ಹೆಂಡತಿ. ಪದ್ಮಾಜಿ), 6.ಲಕ್ಷ್ಮಪ್ಪನಾಯಕ (1588), 7.ನರಸಿಂಹನಾಯಕ, 8.ವೆಂಕಾದ್ರಿನಾಯಕ (1637), 9.ರಂಗಪ್ಪನಾಯಕ, 10.ನಾರಸಿಂಹನಾಯಕ (1661), 11.ಕೃಷ್ಣಪ್ಪನಾಯಕ, 12.ವೆಂಕಟಾದ್ರಿನಾಯಕ (1675),

13.ಕೃಷ್ಣಪ್ಪನಾಯಕ (1691 ಮತ್ತು 1693), 14.ಕೃಷ್ಣಪ್ಪನಾಯಕ (1712), 15.ವೆಂಕಟಪ್ಪನಾಯಕ (1736 ಮತ್ತು 1751), 16.ಕೃಷ್ಣಪ್ಪನಾಯಕ (1755), 17.ವೆಂಕಟಾದ್ರಿನಾಯಕ (1790 ಮತ್ತು 1802). ಇವರಲ್ಲಿ ಎಂಟನೆಯವನಾದ ವೆಂಕಟಾದ್ರಿಯನ್ನು 1637ರ ಶಾಸನದಲ್ಲಿ ತುರಕದಳ ವಿಭಾಡ ಎಂದು ಸಂಬೋಧಿಸಲಾಗಿದೆ. ಇಕ್ಕೇರಿಯ ಶಿವಪ್ಪನಾಯಕ 1657ರಲ್ಲಿ ನಾರಸಿಂಹನಾಯಕನ ಮೇಲೆ ದಾಳಿ ಎಸಗಿದ. ಮತ್ತೆ ವೆಂಕಟಾದ್ರಿ ನಾಯಕನ ಕಾಲದಲ್ಲಿ ಶಿವಪ್ಪನಾಯಕನ ಅಳಿಯ ಶಿವಲಿಂಗನಾಯಕ ಈ ಪಾಳೆಯಪಟ್ಟಿನ ಮೇಲೆ ದಾಳಿಮಾಡಿ ಸ್ವಲ್ಪಭಾಗ ಕಿತ್ತುಕೊಂಡ. 1675ರಲ್ಲಿ ವೆಂಕಟಾದ್ರಿ ನಾಯಕ ಬೇಲೂರ ಸೀಮೆಯ ಲಕ್ಕುಂದನಾಡಿನ ಗುಮ್ಮನಹಳ್ಳಿಯನ್ನು ಪುಟ್ಟಯ್ಯನೆಂಬುವವನಿಗೆ ಉಂಬಳಿಯಾಗಿ ಕೊಟ್ಟ ಬಗ್ಗೆ ಒಂದು ಶಾಸನವಿದೆ. 1693ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯ ಈ ಪಾಳೆಯಪಟ್ಟಿನ ಕೆಲವು ಭಾಗವನ್ನು ಕೃಷ್ಣಪ್ಪನಾಯಕನಿಂದ ಗೆದ್ದುಕೊಂಡ. 1736ರಲ್ಲಿ ವೆಂಕಟಪ್ಪ ನಾಯಕ ಬೇಲೂರು ಚನ್ನಕೇಶವ ದೇವಾಲಯಕ್ಕೆ ಗೋಪುರ ನಿರ್ಮಿಸಿ ಕಲಶ ಸ್ಥಾಪಿಸಿದ. ಇವನ ಮಗ ಕೃಷ್ಣಪ್ಪನಾಯಕ ಕೈವಲ್ಯ ಎಂಬ ಯೋಗಿಗೆ ಮುದ್ರವಳ್ಳಿ ಎಂಬ ಗ್ರಾಮ ದೊಂದಿಗೆ ಆನೆಯನ್ನು ದಾನಮಾಡಿದ ಬಗ್ಗೆ ಒಂದು ಶಾಸನವಿದೆ. ಈ ಕೃಷ್ಣಪ್ಪನಾಯಕ ಕಾರನ್‌ವಾಲೀಸನ ನೆರವಿಗೆ ಬಂದಿದ್ದ ಮರಾಠಾ ಸೈನ್ಯ ದೊಂದಿಗೆ ಸೇರಿಕೊಂಡ. ಇದು ಟಿಪ್ಪುವಿನ ಕೋಪಕ್ಕೆ ಕಾರಣವಾಗಿ ಅದನ್ನು ತಿಳಿದ ನಾಯಕ ಕೊಡಗಿಗೆ ಓಡಿಹೋದ. ಬ್ರಿಟಿಷರಿಗೂ ಟಿಪ್ಪುವಿಗೂ ಒಪ್ಪಂದವಾದ ಮೇಲೆ ನಾಯಕ ಮತ್ತೆ ಪಾಳೆಯಪಟ್ಟಿಗೆ ಹಿಂದಿರುಗಿದ. ಆದರೆ ಆ ಮೊದಲಿದ್ದ ಎಲ್ಲ ಭಾಗ ಇವನಿಗೆ ದಕ್ಕಲಿಲ್ಲ. ಆದ್ದರಿಂದ ಇವನು ಐಗೂರನ್ನು ತನ್ನ ಕೇಂದ್ರವಾಗಿ ಮಾಡಿಕೊಂಡು ಆಳತೊಡಗಿದ. ಇವನ ಮಗ ವೆಂಕಟಾದ್ರಿ ನಾಯಕ 1799–1800ರಲ್ಲಿ ಬಲವಾದ ಕೋಟೆ ಕಟ್ಟಿಸಿ ಬ್ರಿಟಿಷರನ್ನು ಎದುರಿಸಿದ. ಗೆಲುವು ಸೋಲುಗಳ ತೂಗುಯ್ಯಾಲೆಯಲ್ಲಿ ಹೋರಾಟ ಸಾಗಿ, ಕಡೆಗೆ 1802ರಲ್ಲಿ ನಾಯಕ ಓಡಿಹೋಗಬೇಕಾಯಿತು. ಬ್ರಿಟಿಷರು ಇವನನ್ನು ಹಿಡಿದು ಉಗ್ಗಿಹಳ್ಳಿಯಲ್ಲಿ ನೇಣುಹಾಕಿದರು (1802). (ಸಿ.ಕೆ.ಎನ್.)

**ಬೇವೂರು**: ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಒಂದು ಗ್ರಾಮ, ಧಾರ್ಮಿಕ ಸ್ಥಳ. ಇದನ್ನು ಕುಡಿಕೆ ಬೇವೂರು ಎಂದು ಕರೆಯುತ್ತಾರೆ. ಜನಸಂಖ್ಯೆ 2,560. ಈ ಊರು ಪುರಾತನ ಸ್ಥಳವಾಗಿದ್ದು ಇಲ್ಲಿ ಜೈನಧರ್ಮ ಪ್ರಸಿದ್ಧಿ ಪಡೆದಿದ್ದಂತೆ ಕಂಡುಬರುತ್ತದೆ. ತಿಮ್ಮಪ್ಪ ಬೆಟ್ಟದಲ್ಲಿರುವ 900ರ ಅತಿ ಪ್ರಾಚೀನವಾದ ಶಾಸನದಲ್ಲಿ ಈ ಊರನ್ನು ನಿಂಬಗ್ರಾಮವೆಂದು ಕರೆದಿದೆ. ಅನಂತರದ ಹೊಯ್ಸಳ ಮೂರನೆಯ ಬಲ್ಲಾಳನ 1331ರ ಶಾಸನದಲ್ಲಿ ಇದನ್ನು ಬೆಹುರ ಎಂದು ಕರೆದಿದೆ. ಈ ಸ್ಥಳದಲ್ಲಿ ಬಹಳಷ್ಟು ಕುಂಬಾರರಿದ್ದು ಮಣ್ಣಿನ ಮಡಿಕೆ, ಆಟದ ಸಾಮಾನುಗಳನ್ನು ಇಲ್ಲಿ ತಯಾರಿಸುತ್ತಿದ್ದುದರಿಂದ ಈ ಸ್ಥಳಕ್ಕೆ ಕುಡಿಕೆ ಬೇವೂರು ಎಂಬ ಹೆಸರು ಬಂದಿರುವಂತೆ ತೋರುತ್ತದೆ. ಇಲ್ಲಿ ತಿಮ್ಮಪ್ಪನ ಬೆಟ್ಟ ಮತ್ತು ಸಿದ್ಧರಾಮೇಶ್ವರ ಬೆಟ್ಟ ಎಂಬ ಎರಡು ಬೆಟ್ಟಗಳಿವೆ. ತಿಮ್ಮಪ್ಪನ ಬೆಟ್ಟವನ್ನು ಕಿರುಗುಂದ ಎಂದು ಕರೆಯಲಾಗುತ್ತಿದ್ದು ಇದು ಪುರಾತನ ಜೈನಕ್ಷೇತ್ರವಾಗಿತ್ತು. ಎಂದು ಇದೇ ಸ್ಥಳದ ವೆಂಕಟರಮಣ ದೇವಾಲಯದ ಬಳಿಯ ಬಂಡೆಯ ಮೇಲಿರುವ ಸು. 9–10ನೆಯ ಶತಮಾನದ ಶಾಸನದಿಂದ ತಿಳಿದುಬರುತ್ತದೆ. ಬಹಳಷ್ಟು ಮುನಿಸಮೂಹ ಗಳೂ ಇಲ್ಲಿ ಸಿದ್ಧಿಯನ್ನು ಪಡೆದವೆಂದೂ ಚಂದ್ರಸೇನ ಅವರೆಲ್ಲರ ಸ್ವಾಮಿ ಎಂದೂ ಈ ಶಾಸನದಲ್ಲಿ ಹೇಳಿದೆ. ಶ್ರೀಸೇನನ ಗುರು ಶಾಂತಿ ಸೇನನ ಉಲ್ಲೇಖವೂ ಈ ಶಾಸನದಲ್ಲಿದ್ದು ಈತ ಸಂಧಿಕವಾಟ ಗ್ರಾಮದಿಂದ ಬಂದವನೆಂದೂ ಹೇಳಿದೆ. ಇದೇ ಕಾಲದ ಇನ್ನೊಂದು ಶಾಸನದಲ್ಲಿ ಚಂದ್ರಸೇನನ ಶಿಷ್ಯ ನಾಗಸೇನ ಗೊರವ ಕಿರುಕುಂದಬೆಟ್ಟದ ಮೇಲೆ ಸನ್ಯಾಸನಗೈಯ್ದುದನ್ನು ದಾಖಲಿಸಿದೆ. ಆದರೆ ಇಂದು ಇಲ್ಲಿ ಯಾವ ಜೈನ ಸ್ಮಾರಕವೂ ಉಳಿದಿಲ್ಲ. ಮಹತ್ತು ಮಲ್ಲಿಕಾರ್ಜುನ ದೇವನ ಶಿಷ್ಯ ಬೆಟ್ಟದ ಒಡೆಯನೆಂಬುವನು 16ನೆಯ ಶತಮಾನದಲ್ಲಿ ಕಟ್ಟಿಸಿದ ದೊಡ್ಡ ದಾದ ತಿಮ್ಮಪ್ಪ ಅಥವ ವೆಂಕಟರಮಣ ದೇವಸ್ಥಾನ ಇಲ್ಲಿದೆ. ಈ ವಿಷಯವನ್ನು ಇದೇ ದೇವಸ್ಥಾನದ ಉತ್ತರದ ಬಂಡೆಯ ಮೇಲಿನ ಶಾಸನ ತಿಳಿಸುವುದಲ್ಲದೆ ಮಾಧವ ದಾಸಯ್ಯನೆಂಬುವನನ್ನು ಈ ದೇವಸ್ಥಾನದ ಪೂಜೆಗೋಸ್ಕರ ನೇಮಿಸಿರುವ ವಿಷಯವೂ ಅದರಲ್ಲಿದೆ. ಈ ದೇವಸ್ಥಾನದ ದ್ವಾರಪಾಲಕರ ವಿಗ್ರಹಗಳು ಹೊಯ್ಸಳ ಶೈಲಿಯಲ್ಲಿವೆ; ಮುಖ ಮಂಟಪದ ಕಂಬಗಳಲ್ಲಿ ಮೂವರು ಪಾಳೆಯಗಾರರ ಭಕ್ತಮೂರ್ತಿ ಗಳಿವೆ. ಇದಕ್ಕೆ ಸಮೀಪ ಒಂದು ದೊಡ್ಡ ಕೊಳವಿದೆ. ಈ ಬೆಟ್ಟದ ಮೇಲೆ ವಿಶಾಲವಾದ ಸ್ಥಳವಿದೆ. ಉಯ್ಯಾಲೆ ಮಂಟಪದ ಪೂರ್ವದ ಕಡೆಯ ಕಂಬದ ಮೇಲಿನ ಶಾಸನ 1660ರದ್ದಾಗಿದ್ದು ಬಾಳೋಜಿ ಹೈಪತಿ ರಾಯನ ಮಗ ಅಧಿಕಾರಿಯಾದ ದುಂದೋಜ ಹೈಪತಿರಾಯನು ಇದನ್ನು ಕಟ್ಟಿಸಿದನೆಂದೂ ಹೇಳಿದೆ. ಇದರಲ್ಲಿ ವೆಂಕಟೇಶ್ವರ ದೇವಸ್ಥಾನಕ್ಕೆ ಕೊಟ್ಟ ದತ್ತಿಯ ಉಲ್ಲೇಖವೂ ಇದೆ. ಇಲ್ಲಿರುವ ವಿಶಾಲವಾದ ಹೊರಮಂಟಪಗ ಳಲ್ಲಿ ಮದುವೆ ಮುಂತಾದ ಶುಭಕಾರ್ಯಗಳು ನಡೆಯುತ್ತವೆ. ವಿಜಯ ದಶಮಿಯಂದು ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಸಾವಿರಾರು ಜನರು ಸೇರುತ್ತಾರೆ.

ಇಲ್ಲಿಯ ಸಿದ್ಧರಾಮೇಶ್ವರ ಬೆಟ್ಟದ ಮೇಲೆ ಸಿದ್ಧರಾಮೇಶ್ವರ ದೇವಾಲಯ, ಒಂದು ಕೊಳ ಇದೆ. ಬೆಟ್ಟದ ತುದಿಯಲ್ಲಿರುವ 1196ರ ತ್ರುಟಿತ ತಮಿಳುಭಾಷೆಯ ಶಾಸನ ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ್ದು ಕಿಳೈನಾಡಿನ ಅಧಿಕಾರಿಗಳೂ ಸೈನ್ಯದ ಸಹಾಯವನ್ನು ಪಡೆದ ವಿಷಯವನ್ನು ದಾಖಲಿಸಿದೆ.

ಈ ಊರಿನಲ್ಲಿ ಉಡಸಲಮ್ಮ, ಚೌಡೇಶ್ವರಿ, ಪಟಾಲದಮ್ಮ, ಶ್ರೀರಾಮ, ಮಾರಮ್ಮ, ಕೆಂಪಮ್ಮ ಮುಂತಾದ ದೇವರ ದೇವಾಲಯಗಳೂ ಒಂದು ವೀರಶೈವ ಮಠವೂ ಇವೆ. ಇಲ್ಲಿಯ ಉಸಲಮ್ಮ ದೇವಸ್ಥಾನದಲ್ಲಿ ಕಚ್ಚುಗಾರೆಯ ಮೂರ್ತಿ ಇದೆ. ಊರ ಹೊರಗಿನ ಮೈದಾನದಲ್ಲಿ ಬೃಹದಾಕಾರವಾದ ಮೂಲ ವಿಜಯನಗರ ಅರಸರ ಶೈಲಿಯಲ್ಲಿ ಕಟ್ಟಿದ್ದ ಚೌಡೇಶ್ವರಿ ದೇವಾಲಯವಿದೆ. ದೇವಿಯ ಪ್ರತಿಮೆ ಕುಳಿತಭಂಗಿಯಲ್ಲಿದೆ. ದೇವಾಲಯದ ಹೊರಗಡೆ ವಿಜಯನಗರ ಶೈಲಿಯ ಭೈರವ ವಿಗ್ರಹವಿದೆ. ದೇವಾಲಯದ ಪಕ್ಕದಲ್ಲಿ ಕೊಳವೊಂದಿದೆ. ಹಿಂದೆ ಇದರ ಮುಂಭಾಗದ ಲ್ಲಿರುವ ವಿಸ್ತಾರವಾದ ಮೈದಾನದಲ್ಲಿ ಜಾತ್ರೆಯು ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ವೀರಶೈವ ಮಠಕ್ಕೆ ಹತ್ತಿರ ಕೆರೆ ಕಟ್ಟೆಯ ಮೇಲುಭಾಗ ದಲ್ಲಿ ಬಹುಶಃ ಗಂಗರ ಕಾಲದ ಅರ್ಕೇಶ್ವರ ದೇವಾಲಯವಿದೆ. ಇಲ್ಲಿಯ ಹೊಲವೊಂದರಲ್ಲಿರುವ 1331ರ ಹೊಯ್ಸಳ ವೀರಬಲ್ಲಾಳನ ಕಾಲದ ಶಾಸನದಲ್ಲಿ ನಾಗರಸನೆಂಬುವನು ಬೊಮ್ಮರಸನ ಹೆಸರಲ್ಲಿ ಬೇಹೂರ ಗ್ರಾಮದ ದಕ್ಷಿಣಕ್ಕೆ ಒಂದು ಪಟ್ಟಣವನ್ನು ಕಟ್ಟಿ ಅದನ್ನು ಹರಿಬಶೆಟ್ಟಿಗೆ ದಾನಮಾಡಿದುದಾಗಿ ಹೇಳಿದೆ. ಪ್ರಸಿದ್ಧ ಸಂಗೀತಗಾರ ಭೈರವಿ ಕೆಂಪೇಗೌಡ ಈ ಗ್ರಾಮದವರೆಂದು ತಿಳಿದುಬರುತ್ತದೆ. (ಕೆ.ಎಂ.ಎಸ್.)

**ಬೈಂದೂರು:** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಒಂದು ಗ್ರಾಮ, ಹೋಬಳಿ ಕೇಂದ್ರ ಮತ್ತು ಬಂದರು. ಕುಂದಾಪುರದ ಉತ್ತರಕ್ಕೆ ಸು. 30 ಕಿಮೀ ದೂರದಲ್ಲಿದೆ. ಜನಸಂಖ್ಯೆ 4,983. ಪಶ್ಚಿಮ ಕಡಲ ತಡಿಯಿಂದ ಎರಡೂವರೆ ಕಿಮೀ ದೂರದಲ್ಲಿರುವ ಈ ಊರು ಇತಿಹಾಸಪ್ರಸಿದ್ಧವಾದದ್ದು. ಇದು ಆಳುಪ ರಾಜರ ಒಂದು ಮುಖ್ಯ

ನಗರವಾಗಿತ್ತು. ಅವರ ಆಡಳಿತ ಕೊನೆಗೊಂಡಾಗ 14ನೆಯ ಶತಮಾನದಲ್ಲಿ ಬೈಂದೂರ ನಾಡು ಎಂಬ ರಾಜಕೀಯ ಘಟಕದಲ್ಲಿ ಉಳಿದು ಜೈನ ರಾಣಿ ಬೈರಾದೇವಿಯ ಆಡಳಿತಕ್ಕೆ ಬಂತು. ಸಿಕ್ಕಿರುವ ಶಾಸನಗಳ ಪ್ರಕಾರ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಊರಿಗೆ ಹೆಚ್ಚು ಪ್ರಾಧಾನ್ಯ ಇತ್ತೆಂದು ತಿಳಿದುಬರುತ್ತದೆ. 1514ರಲ್ಲಿ ಬಂದಿದ್ದ ಪೋರ್ಚುಗೀಸ್ ಯಾತ್ರಿಕ ಬಾರ್ಬೊಸಾನ ಹೇಳಿಕೆಯ ಪ್ರಕಾರ ಇಲ್ಲಿ ಅಕ್ಕಿಯನ್ನು ಸಂಗ್ರಹಿಸಿ ಭಟ್ಕಳಕ್ಕೆ ಕಳುಹಿಸಲಾಗುತ್ತಿತ್ತು.

ಸು. 9–10ನೆಯ ಶತಮಾನದಲ್ಲಿ ಈ ಪ್ರದೇಶ ಸೇನವಾರ ಎಂಬ ಅರಸು ಮನೆತನದ ಅಧೀನಕ್ಕೊಳಪಟ್ಟಿತ್ತು. 11ನೆಯ ಶತಮಾನದ ಕಲ್ಯಾಣ ಚಾಳುಕ್ಯರ ಶೈಲಿಯನ್ನು ಪ್ರದರ್ಶಿಸುವ ಶಿಲ್ಪವುಳ್ಳ ಇಲ್ಲಿಯ ಸೇನೇಶ್ವರ ದೇವಾಲಯದಲ್ಲಿ ಹದಿನೆಂಟಕ್ಕೂ ಹೆಚ್ಚಿನ ಸಂಖ್ಯೆಯ, ಆಳೆತ್ತರದ ವಿಗ್ರಹಗಳಿವೆ. ಅವು ಮಹಿಷಮರ್ದಿನಿ, ಕೇಶವ, ಷಣ್ಮುಖ, ಲಕ್ಷ್ಮೀನಾರಾಯಣ, ಶಿವಶಕ್ತಿ, ಆದಿತ್ಯ, ಸಪ್ತಮಾತೃಕೆಗಳು, ಭೈರವ, ತ್ರಿಮೂರ್ತಿ, ನರಸಿಂಹ ಮುಂತಾದವು. ಕಲ್ಯಾಣದ ಚಾಳುಕ್ಯರ ಪರಿಶುದ್ಧ ಶಿಲ್ಪಶೈಲಿಯ ದ್ವಿಕೂಟ ರಚನೆಯಿಂದ ಕಂಗೊಳಿಸುವ ಈ ಮಾದರಿಯ ದೇವಾಲಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೊಂದೇ.

ಬೈಂದೂರು ಬಂದರು ಕರಾವಳಿ ವ್ಯಾಪಾರಕ್ಕೆ ಅನುಕೂಲಕರವಾಗಿದೆ. ಈ ಬಂದರು ಪಡುವಾರೆ ಹಳ್ಳಿಯ ಹತ್ತಿರ, ಬೈಂದೂರು ನದಿಯ ದಡದಲ್ಲಿ ರಾಷ್ಟ್ರೀಯ ಹೆದ್ದಾರಿಗೆ 4 ಕಿಮೀ ದೂರದಲ್ಲಿದೆ. ಇದರ ಉತ್ತರಕ್ಕೆ 12 ಕಿಮೀ ದೂರದಲ್ಲಿರುವ ಶಿರೂರು ಎಂಬ ಚಿಕ್ಕ ಬಂದರನ್ನು ಇದರ ಎಲ್ಲೆಗೆ ಸೇರಿಸಲಾಗಿದೆ. ಅರಣ್ಯವಸ್ತುಗಳು ಮತ್ತು ಒಣಮೀನು ಬೈಂದೂರು ಬಂದರಿನಿಂದ ರಫ್ತಾಗುತ್ತವೆ. **(ಟಿ.ಎಸ್.ಆರ್.ಜಿ.)**

ಈ ಊರಿನ ಉತ್ತರಕ್ಕೆ ಸುಮಾರು ಒಂದು ಕಿಮೀ ದೂರದಲ್ಲಿ ಪಡುವಾರೆ ಎಂಬ ಎತ್ತರವಾದ ಮಟ್ಟಪ್ರದೇಶದಲ್ಲಿ ಉತ್ತಮ ದರ್ಜೆಯ ಅಲ್ಯುಮಿನಿಯಂಯುಕ್ತ ಲ್ಯಾಟರೈಟ್ ನಿಕ್ಷೇಪವಿದೆ. ಇದು ಪೂರ್ವ–ಪಶ್ಚಿಮವಾಗಿ 8 ಕಿಮೀ, ಉದ್ದವಾಗಿಯೂ ಉತ್ತರ–ದಕ್ಷಿಣವಾಗಿ ಸರಾಸರಿ 3 ಕಿಮೀ ಅಗಲವಾಗಿಯೂ ಇದೆ. ಬಾಕ್ಸೈಟ್ ಅದಿರು ಪಡುವಾರೆ ಪ್ರದೇಶದಲ್ಲಿ ಮಟ್ಟವಾದ ಎಲ್ಲ ಗುಡ್ಡ ದಿಬ್ಬಗಳಲ್ಲಿಯೂ ಎರಡರಿಂದ ಮೂರು ಅಡಿಗಳಷ್ಟು ದಪ್ಪತೆಳು ಹೊರಕವಚದಲ್ಲಿ ಕಂಡುಬರುವುದು. ಇದು ಸಾಮಾನ್ಯವಾಗಿ ವಿಶಾಲ ಪದರದ ಆಕಾರದಲ್ಲಿ ಹರಡಿದೆ. ಅಡಿಯಲ್ಲಿ ಇದು ಲಿಥೊಮಾರ್ಜ್ ಸುದ್ದೆಯಿಂದ ಕೂಡಿದ್ದು, ಇದರ ತಳಭಾಗದಲ್ಲಿ ಗ್ರಾನಿಟಿಕ್ ನೈಸ್ ಶಿಲೆಯಿದೆ. ಅಲ್ಯುಮಿನಿಯಂಯುಕ್ತ ಲ್ಯಾಟರೈಟ್ ನಿಕ್ಷೇಪದಲ್ಲಿ ಮೇಲ್ಪದರದಿಂದ ಕೆಳಕ್ಕೆ ಹೋದಂತೆಲ್ಲ ಬಣ್ಣ ಬದಲಾಗುತ್ತದೆ. ಮೇಲಿನ ಭಾಗ ಹೆಚ್ಚು ಕಬ್ಬಿಣಾಂಶದಿಂದ ಕೂಡಿ, ಗಡುಸಾಗಿ, ಕಂದುಬಣ್ಣದ್ದಾಗಿ ಅನಂತರ ಕಡಿಮೆ ಗಡುಸಾದ ಹಳದಿ ವರ್ಣದ ಭಾಗ ಹೆಚ್ಚು ಅಲ್ಯುಮಿನಯುಕ್ತವಾದ್ದಾಗಿರುತ್ತದೆ. ಬಾಕ್ಸೈಟ್ ಅದಿರು ಹೋಗೆಕಂಡಾಗ ಗುಂಡುಗುಂಡಾಗಿ ಮುದ್ದೆಯಾಗಿ, ಅಲ್ಲಲ್ಲಿ ಬೇರ್ಪಟ್ಟ ದಿಬ್ಬಗಳಾಗಿಯೂ ಮತ್ತು ಮಸೂರಾಕಾರದಲ್ಲಿರುವುದು ಗೋಚರವಾಗುವುದು. ಈ ಅದಿರಿನಲ್ಲಿ ಕಂಡುಬರುವ ಮುಖ್ಯ ಖನಿಜಗಳೆಂದರೆ ಗಿಬ್ಸೈಟ್ (ಬಿಳಿಬಣ್ಣ), ಗೋಕೈಟ್ ಮತ್ತು ಹೆಮಟೈಟ್ (ಹೆಚ್ಚು ಬೂದುಬಣ್ಣದ್ದು). ಈ ಅದಿರು ನಿಕ್ಷೇಪ ಹೆಚ್ಚು ಸಿಲಿಕಾಂಶ ಉಳ್ಳ ಗ್ರಾನೈಟ್–ನೈಸ್ ಶಿಲೆಗಳಿಂದ ಉತ್ಪತ್ತಿಯಾಗಿರಬಹುದೆಂದು ತಿಳಿದುಬಂದಿದೆ. ಇಲ್ಲಿ ಗಣಿಕೈಗಾರಿಕೆ ತೆರೆದ ಕಂದರದ ರೀತಿಯಲ್ಲಿ ಕೆಲವು ಅಡಿಗಳವರೆಗೆ ನಡೆಯುತ್ತದೆ. ಸು. 16' ಆಳದವರೆಗೆ 7.5 ಲಕ್ಷ ಟನ್ನುಗಳಷ್ಟು ಅದಿರು ಇದೆಯೆಂದು ಅಂದಾಜು ಮಾಡಲಾಗಿದೆ. **(ಎಂ.ಎನ್.ಎಂ.)**

**ಬೈಲಂಗಡಿ:** ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಒಂದು ಗ್ರಾಮ; ಬೆಳ್ತಂಗಡಿಗೆ 22 ಕಿಮೀ ದೂರದಲ್ಲಿದೆ. ಇದು ಹಿಂದೆ ಮೂಲರು ಎಂಬ ಸಾಮಂತ ಅರಸರ ಮುಖ್ಯಸ್ಥಳವಾಗಿತ್ತು.

ಬೈಲಂಗಡಿಗೆ ಮೂರು ಕಿಮೀ ದೂರದಲ್ಲಿ ಒಂದು ಅರಮನೆಯ ಅವಶೇಷವಿದೆ. ಅರಮನೆಯ ವಾಯವ್ಯ ಭಾಗದಲ್ಲಿ ಒಂದು ಬಸದಿ ಇದೆ. ಈ ಬಸದಿಯ ಒಂದು ಕಂಬದ ಮೇಲಿರುವ ಶಾಸನದಿಂದ 1611ರಲ್ಲಿ ಬಸದಿಯ ಜೀರ್ಣೋದ್ಧಾರವಾಯಿತೆಂದು ತಿಳಿದುಬರುತ್ತದೆ. ಅರಮನೆಯ ಎದುರಿನಲ್ಲಿ ಹದಿನೈದು ಸಮಾಧಿಗಳಿವೆ. ಇವುಗಳಿಗೆ ಸ್ವಲ್ಪದೂರದಲ್ಲಿ ಕರಿಕಲ್ಲಿನಲ್ಲಿ ಮಾಡಿರುವ ಬಂಗದೊರೆ, ರಾಣಿ ಸೋಮಲದೇವಿ–ಇವರ ಎರಡು ಸಮಾಧಿಗಳಿವೆ. ಬಂಗಾಡಿಯ ನರಸಿಂಹ ಲಕ್ಷ್ಮಪ್ಪರಸ ಬಂಗರಾಜ ಸೋಮಲದೇವಿಯನ್ನು ಮದುವೆಯಾಗಿದ್ದ. ಇವರಿಬ್ಬರ ಮಧ್ಯೆ ವಿರಸವುಂಟಾಗಿ ಅದು ಯುದ್ಧಕ್ಕೆ ಕಾರಣವಾಯಿತು. ಯುದ್ಧದಲ್ಲಿ ಬಂಗರಸ ಮಡಿದನೆಂದೂ (1630) ರಾಣಿ ಹತಾಶಳಾಗಿ ಆತ್ಮಹತ್ಯೆ ಮಾಡಿಕೊಂಡಳೆಂದೂ ತಿಳಿದುಬರುತ್ತದೆ.

ಮೂಲರಸರ ಕಾಲದಲ್ಲಿ ಬೈಲಂಗಡಿ ವ್ಯಾಪಾರಕೇಂದ್ರವಾಗಿತ್ತು. ಏಲಕ್ಕಿ ವ್ಯಾಪಾರಕ್ಕೆ ಇದು ಪ್ರಸಿದ್ಧವಾಗಿತ್ತು. ಕಂಚಿನ ಪಾತ್ರೆಗಳಿಗೂ ಈ ಊರು ಹೆಸರಾಗಿತ್ತೆಂದು ಹೇಳಲಾಗಿದೆ. (ವಿ.ಬಿ.ಎಚ್.)

**ಬೈಲಹೊಂಗಲ:** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ಹಿಂದಿನ ಸಂಪಗಾಂವ ತಾಲ್ಲೂಕು ಈಗ ಈ ಹೆಸರಿನಲ್ಲಿ ಪುನರ್ರಚಿತವಾಗಿದೆ. ಈ ತಾಲ್ಲೂಕನ್ನು ಉತ್ತರದಲ್ಲಿ ಗೋಕಾಕ, ಪೂರ್ವದಲ್ಲಿ ಸವದತ್ತಿ, ದಕ್ಷಿಣದಲ್ಲಿ ಧಾರವಾಡ, ಪಶ್ಚಿಮದಲ್ಲಿ ಖಾನಾಪುರ ಮತ್ತು ಬೆಳಗಾಂವಿ ತಾಲ್ಲೂಕುಗಳು ಸುತ್ತುವರೆದಿವೆ. 125 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,122.2 ಚ.ಕಿಮೀ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 3,56,286.

ಈ ತಾಲ್ಲೂಕು ಜಿಲ್ಲೆಯ ಪಶ್ಚಿಮಘಟ್ಟಗಳ ಪೂರ್ವದ ಸೆರಗಿನಲ್ಲಿದ್ದು ಏರು ತಗ್ಗುಗಳಿಂದ ಕೂಡಿದೆ. ತಾಲ್ಲೂಕಿನ ಬಹುಭಾಗ ಕಪ್ಪು ಮತ್ತು ಕೆಂಪುಮಣ್ಣಿನದು. ತಾಲ್ಲೂಕಿನಲ್ಲಿ ಸಮಶೀತೋಷ್ಣ ವಾಯುಗುಣವಿದೆ. ವಾರ್ಷಿಕ ಮಳೆ 694.60 ಮಿಮೀ.

ಈ ತಾಲ್ಲೂಕಿನ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ಮಲಪ್ರಭಾ ನದಿ ವೀರಾಪುರದ ಬಳಿ ತಾಲ್ಲೂಕನ್ನು ಪ್ರವೇಶಿಸಿ, ಕರ್ವಿಕೊಪ್ಪ ಗ್ರಾಮದ ಬಳಿ ಸವದತ್ತಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ತಾಲ್ಲೂಕಿನ ತಿಗಡಿ ಗ್ರಾಮದ ಹತ್ತಿರ ಹರಿನಾಲಾಕ್ಕೆ ಒಡ್ಡುಕಟ್ಟಿ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತದೆ. ಅಲ್ಲದೆ ಮಲಪ್ರಭಾ ನದಿಯ ಎರಡೂ ದಂಡೆಗಳಲ್ಲಿ ರೈತರು ವಿದ್ಯುತ್ ಪಂಪು ಇತ್ಯಾದಿಗಳಿಂದ ವ್ಯವಸಾಯಕ್ಕೆ ನೀರನ್ನು ಬಳಸಿಕೊಳ್ಳುತ್ತಾರೆ. ತಾಲ್ಲೂಕಿನಲ್ಲಿ 222 ಕೆರೆಗಳಿವೆ. ಸು. 2,77,337 ಹೆಕ್ಟೇರ್‌ಗಳಷ್ಟು ಸಾಗುವಳಿ ಭೂಮಿ ಲಭ್ಯವಿದೆ. ಈ ತಾಲ್ಲೂಕು ಬೆಳವಲ ನಾಡಿನ ಮುತ್ತಿನಂತಹ ಜೋಳ, ಹವಳದಂತಹ ಗೋದಿ ಬೆಳೆಗೆ ಪ್ರಸಿದ್ಧವಾಗಿದೆ. ಜೊತೆಗೆ ಇಲ್ಲಿ ಬತ್ತ, ಕಬ್ಬು, ಹತ್ತಿ, ತೈಲಬೀಜಗಳು ಇತ್ಯಾದಿಗಳನ್ನು ಬೆಳೆಯುತ್ತಾರೆ.

ಈ ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರಗತಿ ಪ್ರಾರಂಭದ ದೆಸೆಯಲ್ಲಿದೆ. ಮುಗಟಖಾನ ಹುಬ್ಬಳ್ಳಿಯಲ್ಲಿ, ಮಲಪ್ರಭಾ ನದಿಗೆ ಹತ್ತಿರದಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಇದೆ. ಸೇಂಗಾ ಎಣ್ಣೆ, ಚರ್ಮದ ವಸ್ತುಗಳು ಮತ್ತು ಹತ್ತಿ ಈ ತಾಲ್ಲೂಕಿನ ಇತರ ಮುಖ್ಯ ಉತ್ಪನ್ನಗಳು.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಐತಿಹಾಸಿಕ ಸ್ಥಳಗಳಾದ ಕಿತ್ತೂರು **(ನೋಡಿ)**, ದೇಗಾಂವಿ **(ನೋಡಿ)** ಮತ್ತು ಸಂಪಗಾಂವ **(ನೋಡಿ)** ಪ್ರಸಿದ್ಧವಾದವು. ಈ ತಾಲ್ಲೂಕಿನ ಇಂಚಲ ಗ್ರಾಮದಲ್ಲಿ ವೀರಶೈವ ಮಠವಿದೆ. ಅಲ್ಲಿ ನಿತ್ಯವೂ ಭಜನೆ ಮತ್ತು ಅನ್ನದಾಸೋಹಗಳು ನಡೆಯುತ್ತವೆ. ಬೈಲಹೊಂಗಲಕ್ಕೆ ನೈಋತ್ಯದಲ್ಲಿ ಮಲಪ್ರಭಾ ನದಿಯ ಬಲದಂಡೆಯ ಮೇಲಿರುವ ಕಾದರೋಳಿಯಲ್ಲಿ ಗೋವೆಯ ಕದಂಬರ ಕಾಲದ ಶಂಕರಲಿಂಗ ಗುಡಿಯಿದೆ. ಇಲ್ಲಿ 1075ರ ಶಿಲಾಶಾಸನಗಳಿವೆ. ಇಲ್ಲಿನ ಅದೃಶ್ಯಪ್ಪನವರ ಮಠವೂ ಪ್ರಸಿದ್ಧ. ಮಲಪ್ರಭಾ ನದಿಯ

ಎಡದಂಡೆಯ ಮೇಲಿರುವ ಬೆಳವಡಿ ಗ್ರಾಮ ಮಲ್ಲಮ್ಮ ರಾಣಿಯಿಂದಾಗಿ ಪ್ರಸಿದ್ಧ **(ನೋಡಿ : ಬೆಳವಡಿ ಮಲ್ಲಮ್ಮ)**. ಇಲ್ಲಿ ಕಿತ್ತೂರು ದೇಸಾಯಿಗಳ ಕುಲದೇವರಾದ ವೀರಭದ್ರನ ಗುಡಿ ಇದೆ. ಇಲ್ಲಿ ಪ್ರತಿ ವರ್ಷ ಚೈತ್ರದಲ್ಲಿ ಜಾತ್ರೆ ನಡೆಯುವುದು. ಬೈಲಹೊಂಗಲಕ್ಕೆ ನೈಋತ್ಯಕ್ಕಿರುವ ಮುಗಟಖಾನ ಹುಬ್ಬಳ್ಳಿ ಮಲಪ್ರಭಾ ನದಿಗೆ ಹತ್ತಿರದಲ್ಲಿದೆ. ಇಲ್ಲಿ ನರಸಿಂಹ ದೇವಾಲಯವಿದೆ. ಪ್ರತಿವರ್ಷ ವೈಶಾಖಮಾಸದಲ್ಲಿ ನಡೆಯುವ ಇಲ್ಲಿನ ಜಾತ್ರೆ ಪ್ರಸಿದ್ಧ. ಬೈಲಹೊಂಗಲದ ದಕ್ಷಿಣಕ್ಕೆ ಇರುವ ಹಿರೇನಂದಿ ಹಳ್ಳಿಯ ಪ್ರಕೃತಿ ಸೌಂದರ್ಯ ಆಕರ್ಷಕ. ಇಲ್ಲಿ ಬಸವೇಶ್ವರ ದೇವಾಲಯವಿದೆ. ಶ್ರಾವಣಮಾಸದಲ್ಲಿ ಇಲ್ಲಿ ಜಾತ್ರೆ ಸೇರುವುದು. ಹಣ್ಣಿಕೇರಿ ಗ್ರಾಮದಲ್ಲಿ ಪುರಾತನ ಬ್ರಹ್ಮದೇವನ (ಜೈನ) ಗುಡಿ ಇದೆ. ಬೈಲಹೊಂಗಲದ ವಾಯವ್ಯಕ್ಕಿರುವ ನೇಸರ್ಗಿ ಗ್ರಾಮದಲ್ಲಿ ಹಳೆಯ ಶಿಥಿಲ ಬಸವದೇವಾಲಯ ವಿದೆ. ಬೈಲಹೊಂಗಲದ ಆಗ್ನೇಯದಲ್ಲಿ ಮಲಪ್ರಭಾ ನದಿಯು ಎಡದಂಡೆಯ ಮೇಲಿರುವ ವಕ್ಕುಂದ ಗ್ರಾಮದಲ್ಲಿ ಚಾಳುಕ್ಯ ಶೈಲಿಯ ತ್ರಿಕೂಟೇಶ್ವರ ದೇವಾಲಯವಿದೆ.

ಬೈಲಹೊಂಗಲ ಈ ತಾಲ್ಲೂಕಿನ ಮುಖ್ಯ ಪಟ್ಟಣ ಮತ್ತು ಆಡಳಿತ ಕೇಂದ್ರ. ಇದು ಬೆಳಗಾಂವಿಯ ಆಗ್ನೇಯಕ್ಕೆ 43 ಕಿಮೀ ದೂರದಲ್ಲಿ ಸವದತ್ತಿಯ ಮಾರ್ಗದಲ್ಲಿದೆ. ಪುರಸಭಾಡಳಿತಕ್ಕೆ ಸೇರಿರುವ ಬೈಲಹೊಂಗಲ ಪಟ್ಟಣದ ಜನಸಂಖ್ಯೆ 43,215. ಇದು ಈ ಸುತ್ತಿನ ವ್ಯಾಪಾರ ಕೇಂದ್ರ. ಬೆಳಗಾಂವಿ, ಧಾರವಾಡ, ಸವದತ್ತಿಗಳಿಂದ ಇಲ್ಲಿಗೆ ಉತ್ತಮ ಮಾರ್ಗ ಸಂಪರ್ಕವಿದೆ. ಇಲ್ಲಿ ಹತ್ತಿ ಎಕ್ಕುವ ಮತ್ತು ಎಣ್ಣೆ ತಯಾರಿಸುವ ಕಾರ್ಖಾನೆಗಳೂ ಕೃಷಿ ಇಲಾಖೆಯ ಒಂದು ಕೃಷಿ ಸಂಶೋಧನ ಕೇಂದ್ರವೂ ಇದೆ. ಶಾಲಾ ಕಾಲೇಜುಗಳು, ಬ್ಯಾಂಕು, ಸಹಕಾರ ಸಂಘಗಳು, ಆಸ್ಪತ್ರೆ ಮುಂತಾದ ಸೌಲಭ್ಯಗಳಿವೆ. ಹಿಂದೆ ಜೈನ ಬಸದಿಯಾಗಿತ್ತೆಂದು 12ನೆಯ ಶತಮಾನದ ರಟ್ಟಕಾರ್ತವೀರ್ಯನ ಕಾಲದ ಅಲ್ಲಿನ ಶಾಸನದಿಂದ ತಿಳಿದು ಬರುತ್ತದೆ. ಚೆನ್ನಬಸವಣ್ಣ ಸ್ಥಾಪಿಸಿದನೆನ್ನಲಾದ ಮರಡಿ ಬಸವೇಶ್ವರನ ಗುಡಿ ಊರ ಪಶ್ಚಿಮ ಭಾಗದಲ್ಲಿರುವ ಕೆರೆಯ ಹತ್ತಿರ ಇದೆ. ಕಿತ್ತೂರು ರಾಣಿ ಚೆನ್ನಮ್ಮನ ಸಮಾದಿ ಸಹ ಇಲ್ಲಿದೆ. (ವಿ.ಎಸ್.ಬಿ.)

**ಬೊಂತಾದೇವಿ**: ಹನ್ನೆರಡನೆಯ ಶತಮಾನದ ಒಬ್ಬ ವಚನಕಾರ್ತಿ. ಇವಳ ಕಥೆ ಕೆಲವು ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುತ್ತದೆ. ಈಕೆ ಕಾಶ್ಮೀರದ ಮಾಂಡವ್ಯ ಪುರದ ರಾಜಪುತ್ರಿ. ನಿಜದೇವಿ ಎಂಬುದು ಇವಳ ಹೆಸರಾಗಿತ್ತು. ವೈರಾಗ್ಯಪರಳಾದ ಈಕೆ ಸಮಸ್ತ ರಾಜಭೋಗಗಳನ್ನೂ ತೊರೆದು ದಿಗಂಬರೆಯಾಗಿ ಬಸವಾದಿ ಪ್ರಮಥರನ್ನು ಕಾಣಲು ಕಲ್ಯಾಣದತ್ತ ನಡೆದಳು. ಪರಮಸುಂದರಿಯಾಗಿದ್ದುದರಿಂದ ಅನೇಕರು ಈಕೆಯನ್ನು ಮದುವೆಯಾಗಲು ಮುಂದೆ ಬಂದರು. ಕೊನೆಗೆ ಪರಶಿವನೇ ಸುಂದರಯುವಕನಾಗಿ ಬಂದು ತನ್ನನ್ನು ಮದುವೆಯಾಗೆಂದು ಕೇಳಿಕೊಂಡರೂ ಈಕೆ ಒಪ್ಪಲಿಲ್ಲ. ಆ ವೇಳೆಗೆ ಈಕೆ ಪರಶಿವನನ್ನು ಗುರುತಿಸಿದಳು. ಪರಶಿವ ಈಕೆಗೆ ಒಂದು ಬೊಂತೆಯನ್ನು ಕೊಟ್ಟು, ಅದನ್ನು ಹೊದ್ದುಕೊಳ್ಳುವಂತೆ ತಿಳಿಸಲು ಈಕೆ ಅದನ್ನು ಹೊದ್ದುಕೊಂಡೇ ಕಲ್ಯಾಣಕ್ಕೆ ಬಂದಳು. ಪರಶಿವ ಕೊಟ್ಟ ಬೊಂತೆಯನ್ನು ಹೊದ್ದುಕೊಂಡದ್ದರಿಂದ ಈಕೆಗೆ ಬೊಂತಾದೇವಿ ಎಂಬ ಹೆಸರು ಬಂತು. ಕಲ್ಯಾಣದಲ್ಲಿ ಈಕೆಯನ್ನು ಯಾರೂ ಗಮನಿಸ ಲಿಲ್ಲ. ಕೊನೆಗೆ ಅಲ್ಲಮಪ್ರಭುವಿಗೆ ಈಕೆಯ ಮಹತ್ತ್ವದ ಅರಿವಾಗಿ ಗೌರವಿಸಿದ. ಕಲ್ಯಾಣದ ಕ್ರಾಂತಿಯ ಅನಂತರವೂ ಈಕೆ ಅಲ್ಲೇ ಉಳಿದು ಕೊಂಡಿದ್ದಳು. ಒಮ್ಮೆ ಈಕೆ ತಿಪ್ಪೆಯಲ್ಲಿ ಮಲಗಿರಲು ಅದನ್ನು ಕಂಡವರು ಹೇಸಿಗೆಪಟ್ಟುಕೊಳ್ಳಲು ತನ್ನ ಬೊಂತೆಯನ್ನು ಕೊಡುವಲು ಅದರಿಂದ ರತ್ನಗಳು ಉದುರಿದುವಂತೆ. ಈಕೆ ತನ್ನ ಬೊಂತೆಯನ್ನು ಆಕಾಶಕ್ಕೆ ಎಸೆದು ಅದರೊಡನೆ ಬಯಲಾದಳೆಂದು ಪ್ರತೀತಿ.

ಇದುವರೆಗೆ ಬೊಂತಾದೇವಿಯ ಐದು ವಚನಗಳು ಮಾತ್ರ ಸಿಕ್ಕಿವೆ. ಬಿಡಾಡಿ ಎಂಬುದು ಈಕೆಯ ವಚನಗಳ ಅಂಕಿತ. ಈಕೆಯ ವಚನಗಳಲ್ಲಿ ಏಕದೈವೋಪಾಸನೆಯ ನಿಷ್ಠೆಯನ್ನು ಕಾಣಬಹುದಾಗಿದೆ. (ಎಸ್.ಬಿ.)

**ಬೊಂಬೆಯ ಲಕ್ಕ:** ಸು. 1538. ಹರಿಶ್ಚಂದ್ರಸಾಂಗತ್ಯ ಎಂಬ ಕಾವ್ಯದ ಕರ್ತೃ. ತನ್ನ ಕೃತಿಯಲ್ಲಿ ಸ್ವಂತ ವಿಷಯಗಳನ್ನೇನೂ ಹೇಳಿಕೊಂಡಿಲ್ಲ. ಈತನ ಹೆಸರು ನೋಡಿದರೆ ಸೂತ್ರದಗೊಂಬೆಗಳನ್ನು ಆಡಿಸುತ್ತಿದ್ದುದು ಇವನ ಕಾಯಕವಾಗಿದ್ದಂತೆ ತೋರುತ್ತದೆ.

ಹರಿಶ್ಚಂದ್ರಸಾಂಗತ್ಯ ಹರಿಶ್ಚಂದ್ರನ ಕಥೆಯನ್ನು ವಸ್ತುವಾಗುಳ್ಳ ಸಾಂಗತ್ಯ ಕಾವ್ಯ. ಕವಿ ಅತ್ಯಂತ ಭಕ್ತಿ ಹಾಗೂ ಶ್ರದ್ಧೆಯಿಂದ ಈ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ 5 ಸಂಧಿಗಳೂ 570 ಪದ್ಯಗಳೂ ಇವೆ. ಇದನ್ನು 1538ರಲ್ಲಿ ಬರೆದು ಮುಗಿಸಿದಂತೆ ತಿಳಿಯುತ್ತದೆ. ಆದರೆ ಕೆಲವು ಹಸ್ತಪ್ರತಿಗಳಲ್ಲಿ ಈ ಕಾಲಸೂಚಿ ಪದ್ಯಗಳು ಕಂಡುಬರುವುದಿಲ್ಲ. ಈತ ಪೂರ್ವ ಕವಿಗಳಲ್ಲಿ ಯಾರನ್ನೂ ಸ್ತುತಿಸಿಲ್ಲ; ತನ್ನ ಕಾವ್ಯಕ್ಕೆ ಯಾವುದು ಮೂಲ ಎಂಬುದನ್ನೂ ಹೇಳಿಕೊಂಡಿಲ್ಲ. ಕೃತಿಯ ಅಭ್ಯಾಸ ಮಾಡಿದವರಿಗೆ ಇದು ರಾಘವಾಂಕನ ಹರಿಶ್ಚಂದ್ರಕಾವ್ಯವನ್ನು ಆಧರಿಸಿ ಬರೆದುದೆಂದು ವ್ಯಕ್ತವಾಗುತ್ತದೆ. ಆ ಕಾವ್ಯದ ಅನೇಕ ಪದ್ಯಗಳನ್ನು ಈತ ತನ್ನ ಕೃತಿಯಲ್ಲಿ ಧಾರಾಳವಾಗಿ ಬಳಸಿಕೊಂಡಿದ್ದಾನೆ. ಕಾವ್ಯಶೈಲಿ ಸರಳವಾಗಿದ್ದು ಜನಸಾಮಾನ್ಯರ ಮನವನ್ನು ನೇರವಾಗಿ ಮುಟ್ಟುವಂತಿದೆ. ತನ್ನ ಕಾವ್ಯ ಸತ್ಯದ ನೆಲೆ, ಮುಕ್ತಿಯ ಬೀಡು, ಪುಣ್ಯದ ಕೀರ್ತಿಯ ತಲೆವನೆ ಎಂದು ಕಾವ್ಯದ ಕೊನೆಯಲ್ಲಿ ಹೇಳಿಕೊಂಡಿದ್ದಾನೆ. ಹರಿಶ್ಚಂದ್ರ ಸಾಂಗತ್ಯಕಾರರಲ್ಲಿ ಈತನಿಗೆ ಒಂದು ಮಹತ್ತ್ವದ ಸ್ಥಾನವಿದೆ. (ಎಸ್.ಬಿ.)

**ಬೊಕ್ಕಸದ ಚಿಕ್ಕಣ್ಣ:** ಹನ್ನೆರಡನೆಯ ಶತಮಾನದ ಒಬ್ಬ ವಚನಕಾರ, ಬಸವಣ್ಣನವರ ಸಮಕಾಲೀನ. ಈತ ಬಿಜ್ಜಳನ ಬೊಕ್ಕಸದ ಅಧಿಕಾರಿಯಾಗಿ ದ್ದನೆಂದು ತಿಳಿದುಬರುತ್ತದೆ. ಇವನ ಹತ್ತು ವಚನಗಳು ಪ್ರಕಟವಾಗಿದೆ. ಇವುಗಳಲ್ಲಿ ನಾಲ್ಕು ಬೆಡಗಿನ ವಚನಗಳಿದ್ದು ಇವಕ್ಕೆ ಟೀಕು ಬರೆಯಲ್ಪಟ್ಟಿದೆ. ಬಸವಣ್ಣ ಪ್ರಿಯನಾಗರೇಶ್ವರಲಿಂಗ ಎಂಬುದು ಇವನ ವಚನಗಳ ಅಂಕಿತ. ಈತ ತನ್ನ ವಚನಗಳಲ್ಲೆಲ್ಲ ತತ್ತ್ವ ನಿಷ್ಠೆಯನ್ನೇ ಪ್ರತಿಪಾದಿಸಿದ್ದಾನೆ. ಒಂದು ಬೆಡಗಿನ ವಚನ ಹೀಗಿದೆ: ನಾನಾ ಬಹುವರ್ಣದ ಬೊಕ್ಕಸವ ಹೊತ್ತು ಮಾಡುವಲ್ಲಿ ಭಾವದ ಬಹುಚಿತ್ತವನರಿಯಬೇಕು. ನಾನಾಭರಣದ ಹದಿನೆಂಟು ಆಶ್ರಯಂಗಳ ತೊಡುವಲ್ಲಿ ದ್ರವ್ಯವ ಕೊಡುವಲ್ಲಿ ಇಂದ್ರಿಯ ಆತ್ಮನಬೆಂಬಳಿಯನರಿಯಬೇಕು. ಎಂಟು ರತ್ನದ ಕಾಂತಿ ಜೀವ ರತ್ನದ ಕಳೆ ಭಾವಿಸಿ ಏಕವಮಾಡಿ ನಡವುದು. ನೀವು ಕೊಟ್ಟ ಕಾಯಕ ತನುವಿಗೆಕ್ರೀ ಆತ್ಮಂಗರಿವು. ಆ ಅಣುವಿಗೆ ಮಹಾಬೆಳಕು ಒಡಗೂಡಿ ಕರಿಗೊಂಡಲ್ಲಿ ಬೊಕ್ಕಸದ ಮಣಿಹವನೊಪ್ಪಿಸಬೇಕು ಬಸವಣ್ಣ ಪ್ರಿಯನಾಗರೇಶ್ವರಲಿಂಗಕ್ಕೆ. (ಎಸ್.ಬಿ.)

**ಬೊಪ್ಪಣ ಪಂಡಿತ:** ಸು. 12ನೆಯ ಶತಮಾನ. ಜೈನಕವಿ. ಗೊಮ್ಮಟಸ್ತುತಿ ಎಂಬ ಕಾವ್ಯದ ಕರ್ತೃ. ನಿರ್ವಾಣಲಕ್ಷ್ಮೀಪತಿನಕ್ಷತ್ರಮಾಲಿಕೆ ಇವನ ಇನ್ನೊಂದು ಕೃತಿ. ಆಚಣ್ಣ, ಪಾರ್ಶ್ವಪಂಡಿತ, ಕೇಶಿರಾಜ ಮೊದಲಾದವರು ತಮ್ಮ ಕೃತಿಗಳಲ್ಲಿ ಈತನನ್ನು ಕೊಂಡಾಡಿದ್ದಾರೆ. ಸುಜನೋತ್ತಂಸ, ಕನ್ನಡಗವಿಬೊಪ್ಪ ಎಂಬುವು ಇವನ ಬಿರುದುಗಳು.

ಗೊಮ್ಮಟಸ್ತುತಿ 27 ವೃತ್ತಗಳನ್ನೊಳಗೊಂಡ ಒಂದು ಸುಂದರ ಭಾವಗೀತೆ. ಇದರಲ್ಲಿ ಕವಿ ಶ್ರವಣಬೆಳಗೊಳದ ಬಾಹುಬಲಿಯನ್ನು ಭಕ್ತಿಯಿಂದ ಸ್ತುತಿಸಿದ್ದಾನೆ. ಈ ಕಾವ್ಯವನ್ನು ಬಾಲಚಂದ್ರ ಕವಿ (ಸು. 1170) ಬರೆಸಿದಂತೆ ತಿಳಿಯುತ್ತದೆ. ಇದರ ಪದ್ಯಗಳು ಶ್ರವಣಬೆಳಗೊಳದ ಒಂದು ಶಾಸನದಲ್ಲಿ (ಸು. 1180) ಕಂಡುಬರುತ್ತವೆ. ನಿರ್ವಾಣಲಕ್ಷ್ಮೀಪತಿ ನಕ್ಷತ್ರಮಾಲಿಕೆ 27 ವೃತ್ತಗಳನ್ನೊಳಗೊಂಡಿದೆ. ಪ್ರತಿ ಪದ್ಯವೂ ನಿರ್ವಾಣ ಲಕ್ಷ್ಮೀಪತಿ ಎಂದು ಮುಗಿಯುತ್ತದೆ. ಜೈನಮತದ ಮತ್ತು ಜೈನ ಋಷಿಗಳ ಮಹತ್ತ್ವವನ್ನು ಕೊಂಡಾಡುವ ಈ ಕೃತಿಯಲ್ಲಿ ಕಾವ್ಯಾಂಶಗಳೂ ಉಂಟು. ಕೆಲವು ನೀತಿಕಂದಗಳನ್ನೂ ಈತ ಬರೆದಿದ್ದಾನೆ. (ಸಿ.ಪಿ.ಕೆ.)

**ಬೊಬ್ಬೂರು ರಂಗ:** ಸು. 1750. ಅಂಬಿಕಾ ವಿಜಯ, ಪರಶುರಾಮ ರಾಮಾಯಣ ಎಂಬ ಗ್ರಂಥಗಳ ಕರ್ತೃ. ವೇದಾವತಿ ತೀರದ ಘನಪುರಿಯ (ಹಿರಿಯೂರು) ಕರಣಿಕಾಗ್ರಣಿ ರಂಗ ಮತ್ತು ಅವನ ಹೆಂಡತಿ ರುಕ್ಮಿಣಿ

ಇವನ ತಂದೆತಾಯಿಗಳು. ಹಿರಿಯೂರಿನ ಹತ್ತಿರದ ಬಬ್ಬೂರು (ಬೊಬ್ಬೂರು) ಇವನ ಜನ್ಮಸ್ಥಳ. ಬಬ್ಬೂರಿನ ರಂಗನಾಥ ಇವನ ಕುಲದೈವ.

ಅಂಬಿಕಾ ವಿಜಯ ಭಾಮಿನೀಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 47 ಸಂಧಿಗಳೂ 3,051 ಪದ್ಯಗಳೂ ಇವೆ. ಪ್ರತಿಸಂಧಿಯ ಮೊದಲ ಷಟ್ಪದಿಯ ಅರ್ಧಪದ್ಯದಲ್ಲಿ ಕಥಾಸೂಚನೆ ಬರುತ್ತದೆ. ಆದಿಶಕ್ತಿಯಾದ ದೇವಿ ರಕ್ತಬೀಜಾಸುರನನ್ನು ಸಂಹರಿಸಿದ ಕಥೆ ಮತ್ತು ಮಾರ್ಕಂಡೇಯ ಚರಿತ್ರೆ ಇವು ಕಾವ್ಯವಸ್ತು. ಪ್ರಾಸಂಗಿಕವಾಗಿ ಮಹಿಷಾಸುರ ಯುದ್ಧ, ಬಲಾಸುರ ದೇವೇಂದ್ರ ಯುದ್ಧ, ಗಜಾಸುರವಧೆ, ವೀರಭದ್ರ–ಕರಾಳಮುಖರ ಯುದ್ಧ, ನಿರ್ಋತಿ–ಶಂಭಕರ ಯುದ್ಧ, ಶುಂಭ–ನಿಶುಂಭರ ಯುದ್ಧ ಮುಂತಾದ ವಿಷಯಗಳೂ ಬರುತ್ತವೆ. ವರ್ಣನೆಯಲ್ಲಿ ಕವಿಯ ಕಲ್ಪನಾಚಾತುರ್ಯ ಎದ್ದುಕಾಣುತ್ತದೆ. ಚಿತ್ರ ಕಣ್ಣಿಗೆ ಕಟ್ಟುವಂತೆ ಕವಿ ಸಂದರ್ಭಗಳನ್ನು ವರ್ಣಿಸ ಬಲ್ಲ. ತನ್ನ ಕೃತಿಯನ್ನು 'ಬೆಳಗುವಷ್ಟಾದಶ ಸುವರ್ಣದ ಲಲಿತನವರಸಯುಕ್ತಪುಷ್ಪದ ಹೊಳೆವ ನೀಲಾಲಕದ ಕೋಮಲ ಶಬ್ದ ಬಾಯ್ದೆರೆಯಸಲೆಸು ಲಕ್ಷಣನವ್ಯ ಕವಿತಾಲಲನೆ' ಎಂದು ಹೊಗಳಿಕೊಂಡಿದ್ದಾನೆ.

ಪರಶುರಾಮ ರಾಮಾಯಣ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 43 ಸಂಧಿಗಳೂ 1,543 ಪದ್ಯಗಳೂ ಇವೆ. ಪರಶುರಾಮ ತಂದೆಯ ಆಜ್ಞೆಯಂತೆ ತಾಯಿ ರೇಣುಕೆಯ ತಲೆಯನ್ನು ಕತ್ತರಿಸಿ, ಕ್ಷಿಪ್ರದಲ್ಲಿಯೇ ಅವಳಿಗೆ ಪ್ರಾಣ ಬರಿಸಿದ ಹಾಗೂ ಕಾರ್ತವೀರ್ಯನೊಡನೆ ಯುದ್ಧ ಮಾಡಿ ಕ್ಷತ್ರಿಯರನ್ನು ಕೊಂದು ಗೆದ್ದು ಭೂಮಿಯನ್ನು ವಿಪ್ರರಿಗೆ ದಾನಮಾಡಿದ ಕಥೆ ಕಾವ್ಯದ ವಸ್ತು. ಶೈಲಿಯಲ್ಲಿ ಕುಮಾರವ್ಯಾಸನ ಅನುಕರಣೆ ಕಂಡುಬರುತ್ತದೆ. **(ಕೆ.ಜಿ.ಎನ್.)**

**ಬೊಮ್ಮರಸ:** ಸು. 1450. ಸೌಂದರಪುರಾಣ ಎಂಬ ಕಾವ್ಯದ ಕರ್ತೃ. ಈತನ ಗುರು ವಿಶ್ವನಾಥಾಚಾರ್ಯ. ಕವಿ ಢೆಂಕಣಪುರವರಾಧೀಶ ತಿಪ್ಪರಸನ ಆಸ್ಥಾನದಲ್ಲಿದ್ದು ಗುಮ್ಮಳಾಪುರವರಾಧೀಶನಾದ ಚಿಕ್ಕವೀರಣಾರ್ಯನ ಅಪ್ಪಣೆಯ ಮೇರೆಗೆ ಕೃತಿರಚನೆ ಮಾಡಿದಂತೆ ತಿಳಿಯುತ್ತದೆ. ಪೂರ್ವಕವಿಗಳಲ್ಲಿ ಹರಿಹರ ಮತ್ತು ಸೋಮನಾಥರನ್ನು ಸ್ತುತಿಸಿದ್ದಾನೆ.

ಸೌಂದರಪುರಾಣ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 19 ಸಂಧಿಗಳೂ 1,205 ಪದ್ಯಗಳೂ ಇವೆ. 63 ಪುರಾತನರಲ್ಲಿ ಒಬ್ಬನಾದ ಸೌಂದರನಂಬಿಯ ಕಥೆ ಕಾವ್ಯ ವಸ್ತು. ಹರೀಶ್ವರ ಸೋಮನಾಥರು ವಿಸ್ತರಿಸಿದ ಸೌಂದರೇಂದ್ರನ ಪುಣ್ಯಚರಿತೆಯನ್ನು ತಾನು ವರ್ಣಕದಲ್ಲಿ ಹೇಳಿದ್ದೇನೆ ಎಂದು ಈತ ಹೇಳಿಕೊಂಡಿದ್ದಾನೆ. ಗ್ರಂಥ ನೀಲಕಂಠನ ಅಂಕಿತದಲ್ಲಿದೆ. ಅಷ್ಟಾದಶ ವರ್ಣನೆಗಳನ್ನು ಕಾವ್ಯದಲ್ಲಿ ಹೇರಳವಾಗಿ ತಂದಿದ್ದರೂ ಕೆಲವೊಮ್ಮೆ ವರ್ಣನೆಗಳಲ್ಲಿ ಸೊಗಸು ಕಂಡುಬರುತ್ತದೆ. ಶೈಲಿ ಸರಳವಾಗಿದೆ. **(ಎಂ.ಎಚ್.ಕೆ.)**

**ಬೊಮ್ಮಾಯಿ, ಎಸ್.ಆರ್.:** 1924–. ಕರ್ನಾಟಕದ ಮಾಜಿ ಮುಖ್ಯಮಂತ್ರಿ (1988–89); ಹಿರಿಯ ರಾಜಕಾರಣಿ. ಧಾರವಾಡ ಜಿಲ್ಲೆ ಶಿಗ್ಗಾಂವಿ ತಾಲ್ಲೂಕು ಕರಡಗಿಯಲ್ಲಿ 1924 ಜೂನ್ 6ರಂದು ಜನಿಸಿದರು. ವಿದ್ಯಾರ್ಥಿ ದಿಸೆಯಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು. ಇವರು ಯುವಕರಾಗಿದ್ದಾಗಲೇ ಎಮ್.ಎನ್. ರಾಯ್ ಅವರ ರ್‍ಯಾಡಿಕಲ್ ಡೆಮೊಕ್ರಾಟಿಕ್ ಪಕ್ಷದ ಸದಸ್ಯರಾಗಿದ್ದು ಆ ಪಕ್ಷದ ತತ್ವ, ಸಿದ್ಧಾಂತಗಳನ್ನು ರೂಢಿಸಿಕೊಂಡರು. ಬಿ.ಎ.;ಎಲ್.ಎಲ್.ಬಿ. ಪದವಿಗಳನ್ನು ಪಡೆದು ವಕೀಲವೃತ್ತಿ ಕೈಗೊಂಡರು. ಹುಬ್ಬಳ್ಳಿ–ಧಾರವಾಡಗಳಲ್ಲಿ ವಕೀಲರಾಗಿದ್ದಾಗ ಅನೇಕ ಸಂಘ ಸಂಸ್ಥೆಗಳ ಸಂಪರ್ಕ ಹೊಂದಿದರು. ಕರ್ನಾಟಕ ಲಿಬರಲ್ ಶಿಕ್ಷಣ ಸಂಸ್ಥೆ, ಕೊತ್ತಂಬರಿ ಕಾನೂನು ವಿದ್ಯಾಲಯಗಳಲ್ಲಿ ಅನುಕ್ರಮವಾಗಿ ಆಡಳಿತ ಮಂಡಳಿ ಸದಸ್ಯರಾಗಿ, ಅಧ್ಯಕ್ಷರಾಗಿ ದುಡಿದರು.ಧಾರವಾಡ ಕೇಂದ್ರ ಸಹಕಾರ ಸಗಟು ವ್ಯಾಪಾರ ಮಳಿಗೆಯ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದರು. ಹುಬ್ಬಳ್ಳಿಯಲ್ಲಿರುವ ರೋಟರಿ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಥಾಪಕ ಸದಸ್ಯರಾಗಿದ್ದರು. ಹುಬ್ಬಳ್ಳಿಯ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿದ್ದರು. ಹೀಗೆ ಅನೇಕ ಬಗೆಯಲ್ಲಿ ಜನಸಂಪರ್ಕ ಪಡೆದ ಬೊಮ್ಮಾಯಿಯವರು ಸದಾ ಕ್ರಿಯಾಶೀಲರಾಗಿದ್ದು ರಾಜಕೀಯ ರಂಗ ಪ್ರವೇಶಿಸಿದರು. ನಾಲ್ಕನೆಯ ವಿಧಾನಸಭೆಗೆ(1967) ಕುಂದಗೋಳ ಕ್ಷೇತ್ರದಿಂದ ಎಲ್.ಎಸ್.ಎಸ್. ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚುನಾಯಿತರಾದರು. ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷವಿಭಜನೆಗೊಂಡಾಗ ಇವರು ಎಸ್. ನಿಜಲಿಂಗಪ್ಪನವರ ಸಂಸ್ಥಾ ಕಾಂಗ್ರೆಸ್ಸನ್ನು ಬೆಂಬಲಿಸಿದರು. ಧಾರವಾಡ ಜಿಲ್ಲೆಯ ಸಂಸ್ಥಾ ಕಾಂಗ್ರೆಸ್ ಘಟಕದ ಅಧ್ಯಕ್ಷರಾದರು. 1972 ರಲ್ಲಿ ಧಾರವಾಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಸ್ಪರ್ಧಿಸಿ ಜಯಶೀಲರಾದರು. ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ಸೇವೆಸಲ್ಲಿಸಿದ ಇವರು ರಾಜ್ಯಮಟ್ಟದಲ್ಲಿ ಪರಿಚಿತರಾದರು. ತುರ್ತುಪರಿಸ್ಥಿತಿ ವಿರುದ್ಧ ಪ್ರತಿಭಟಿಸಿದರು. ಜನತಾ ಪಕ್ಷ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಾಗ ಆ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಉಪಾಧ್ಯಕ್ಷರಾಗಿದ್ದರು.

1978ರಲ್ಲಿ ಹುಬ್ಬಳ್ಳಿ ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದರು. ಕರ್ನಾಟಕ ಪ್ರದೇಶ ಜನತಾ ಪಕ್ಷದ ಅಧ್ಯಕ್ಷರಾಗಿ ಪಕ್ಷವನ್ನು ಸಂಘಟಿಸಿದರು. ಇವರು ನರಗುಂದ ರೈತರ ಚಳವಳಿ ವಿಚಾರಣಾ ಸಮಿತಿ ಮತ್ತು ಹೇಮಾವತಿ ಯೋಜನೆಯ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು (1979–82). 1983ರಲ್ಲಿ ಮತ್ತೆ ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದರು. ಇವರ ಪಕ್ಷವನ್ನು ಒಳಗೊಂಡಿದ್ದ ಜನತಾರಂಗ ಅಧಿಕಾರಕ್ಕೆ ಬಂದಿತು. ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಮುಖ ಸ್ಪರ್ಧಿಗಳಲ್ಲೊಬ್ಬರಾಗಿದ್ದು ಇವರಿಗೆ ಸ್ವಲ್ಪದರಲ್ಲಿ ಆ ಅವಕಾಶ ತಪ್ಪಿತು. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾದರು. ಆಗ ಇವರು ಕೈಗಾರಿಕೆ ಹಾಗೂ ವಾಣಿಜ್ಯ ಮಂತ್ರಿಗಳಾಗಿದ್ದರು. ಹಣಕಾಸು ಖಾತೆಯನ್ನೂ ನಿರ್ವಹಿಸಿದರು. 1985ರಲ್ಲೂ ವಿಧಾನಸಭೆಗೆ ಗೆದ್ದುಬಂದು ಕಂದಾಯ ಹಾಗೂ ಯೋಜನಾ ಸಚಿವರಾದರು. ಮುಂದೆ ಕಾರ್ಮಿಕ ಖಾತೆ, ಬೃಹತ್ ಮತ್ತು ಮಧ್ಯಮ ನೀರಾವರಿ ಈ ಖಾತೆಗಳನ್ನೂ ಹೊಂದಿದ್ದರು.

ಜನತಾ ಪಕ್ಷದಲ್ಲಿನ ರಾಜಕೀಯ ಸ್ಥಿತ್ಯಂತರದಿಂದಾಗಿ ಪಕ್ಷದಲ್ಲಿ ಆಂತರಿಕ ಒಡಕು ಕಾಣಿಸಿಕೊಂಡಿತು. ಆಗ ರಾಮಕೃಷ್ಣ ಹೆಗಡೆಯವರು ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ತೆರವುಗೊಳಿಸಿ ಎಸ್.ಆರ್. ಬೊಮ್ಮಾಯಿಯವರನ್ನು ಮುಖ್ಯಮಂತ್ರಿಗಳನ್ನಾಗಿ ಆರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಗ ಇವರು 1988 ಆಗಸ್ಟ್ 13 ರಿಂದ 1989 ಏಪ್ರಿಲ್ 21 ರವರೆಗೂ ಮುಖ್ಯಮಂತ್ರಿಗಳಾಗಿದ್ದರು. ಪಕ್ಷದಲ್ಲಿ ನಡೆದ ಬಂಡಾಯ ಇವರ ಬಹುಮತಕ್ಕೆ ಚ್ಯುತಿ ತಂದಿತು. ಈ ಪ್ರಸಂಗದಲ್ಲಿ ರಾಜ್ಯಪಾಲರು ಕೈಗೊಂಡ ನಿರ್ಣಯದ ಬಗ್ಗೆ ವಿವಾದ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲು ಹತ್ತಿತು. ಇವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಿಗೊಳಿಸಿದ ವಿಧಾನ ಸರ್ವೋಚ್ಚ ನ್ಯಾಯಾಲಯಕ್ಕೆ ತೃಪ್ತಿಕರವೆನಿಸಲಿಲ್ಲ. ಅದು ಒಂದು ನಿರ್ದೇಶನ ನೀಡಿ ಮುಖ್ಯಮಂತ್ರಿಯ ವಿರುದ್ಧದ ಯಾವುದೇ ಅವಿಶ್ವಾಸ ನಿರ್ಣಯ ಸದನದಲ್ಲೇ ತೀರ್ಮಾನವಾಗಬೇಕೆಂದು ಸೂಚಿಸಿತು. ಇದೊಂದು ಐತಿಹಾಸಿಕ ಕಟ್ಟಳೆಯಾಗಿ ರೂಢಿಗೆ ಬಂತು.

ಅನಂತರ ಬೊಮ್ಮಾಯಿಯವರು ರಾಜ್ಯಸಭೆಯ ಸದಸ್ಯರಾದರು. ಜನತಾದಳ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದರು. ರಾಜಕೀಯ ಏರುಪೇರುಗಳಲ್ಲಿ ರಾಮಕೃಷ್ಣ ಹೆಗಡೆಯವರ ನಿಕಟವರ್ತಿಯಾಗಿ ಸಾಗಿದರು. ಮುಂದೆ ರಾಜ್ಯ ಸಂಯುಕ್ತ ಜನತಾದಳದ ಅಧ್ಯಕ್ಷರೂ ಆಗಿದ್ದರು. ಅನಂತರ ಸಕ್ರಿಯ ರಾಜಕಾರಣದಿಂದ ದೂರಸರಿಯ ತೊಡಗಿದರು. ಅಂತಿಮವಾಗಿ ವಿದಾಯ ಹೇಳಿದರು. ಇವರ ಪುತ್ರ ಬಸವರಾಜ ಬೊಮ್ಮಾಯಿ ವಿಧಾನಸಭೆಯ ಶಾಸಕರಾಗಿದ್ದಾರೆ. **(ಡಿ.ಎಸ್.ಜಿ.)**

**ಬೋಳಾರ ಬಾಬುರಾವ್:** 1848–1919. ಕನ್ನಡದ ಪ್ರಾರಂಭದ ಸಾಮಾಜಿಕ ಕಾದಂಬರಿಗಳಲ್ಲಿ ಒಂದಾದ ವಾಗ್ದೇವಿಯ ಕರ್ತೃ, ಆಡಳಿತಗಾರರು, ಸಮಾಜಸೇವಕರು. ಹುಟ್ಟಿದ್ದು ಮಂಗಳೂರಿನ ಬೋಳಾರದಲ್ಲಿ. ಇವರ ತಂದೆ ನರಸಪ್ಪಯ್ಯ. ಬಾಬುರಾಯರು ಆರಂಭದ ವ್ಯಾಸಂಗವನ್ನು ಮಂಗಳೂರಿನ ಮಿಷನ್ ಹೈಸ್ಕೂಲಿನಲ್ಲಿ ಪಡೆದು ಅನಂತರ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕಲಿತು ಎಫ್.ಎ. ಪರಿಕ್ಷೆಯಲ್ಲಿ ತೇರ್ಗಡೆಯಾದರು. ಮಂಗಳೂರಿಗೆ ಮರಳಿದ ಇವರು ಅಲ್ಲಿಯ ಜಿಲ್ಲಾ ಕಲೆಕ್ಟರರ ಕಛೇರಿಯಲ್ಲಿ ಗುಮಾಸ್ತರಾಗಿ ವೃತ್ತಿಜೀವನವನ್ನು ಆರಂಭಿಸಿದರು. ಅನಂತರ ಅದೇ ಕಛೇರಿಯಲ್ಲಿ ಮುಖ್ಯ ಗುಮಾಸ್ತರಾಗಿ, ಆಮೇಲೆ ತಹಶೀಲ್ದಾರರ ಹುದ್ದೆಗೆ ಬಡ್ತಿ ಪಡೆದು ಕಾರ್ಕಳ, ಹೊಸದುರ್ಗ, ಉಡುಪಿ, ಪುತ್ತೂರುಗಳಲ್ಲಿ ಸೇವೆ ಸಲ್ಲಿಸಿದರು. ಇವರು ಮಂಗಳೂರು ಟೌನ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸ ಮಾಡಿದರು. ನಿವೃತ್ತರಾದಮೇಲೂ ಮಂಗಳೂರಿನ ಎರಡನೆಯ ವರ್ಗದ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಅಧ್ಯಕ್ಷರಾಗಿಯೂ ಪುರಸಭಾ ಸದಸ್ಯರಾಗಿಯೂ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿಯ ಡೈರೆಕ್ಟರರಲ್ಲೊಬ್ಬರಾಗಿಯೂ ಸೇವೆಸಲ್ಲಿಸಿದರು. ಇವರ ಏಕೈಕ ಪುತ್ರ ಬೋಳಾರ ವಿಠ್ಠಲರಾಯರು ಪೋಪ್ಯುಲರ್ ಇನ್ಷೂರೆನ್ಸ್ ಕಂಪನಿಯ ಸ್ಥಾಪಕರು.

ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಪ್ರಭುತ್ವ ಸಂಪಾದಿಸಿಕೊಂಡಿದ್ದ ಬಾಬುರಾಯರು ಕನ್ನಡದಲ್ಲಿ ವಾಗ್ದೇವಿ (1905), ಶಿವಲೀಲಾಮೃತ (1910), ಭಕ್ತಿಮಹಿಮೆ (1919) ಎಂಬ ಪುಸ್ತಕಗಳನ್ನೂ ಕೆಲವು ಲೇಖನಗಳನ್ನೂ ಬರೆದಿದ್ದಾರೆ. ವಾಗ್ದೇವಿ ಸಾಮಾಜಿಕ ಕಾದಂಬರಿ. ಇದರಲ್ಲಿ ಸಮಕಾಲೀನ ಜೀವನದ ಪ್ರಭಾವಿ ಚಿತ್ರಣವಿದೆ.

ಇವರು 1919 ಜೂನ್ 25ರಂದು ತಮ್ಮ 71ನೆಯ ವಯಸ್ಸಿನಲ್ಲಿ ಬೋಳಾರದಲ್ಲಿ ನಿಧನಹೊಂದಿದರು. **(ಟಿ.ಜಿ.ಕೆ.ಬಿ.)**

**ಬೌದ್ಧಧರ್ಮ:** ಉತ್ತರಭಾರತದಲ್ಲಿ ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಗೌತಮ ಬುದ್ಧನಿಂದ ಸ್ಥಾಪಿತವಾದ ಧರ್ಮ. ಮುಂದೆ ಬೆಳೆದು ತನ್ನ ಪಂಥೋಪಪಂಥಗಳೊಡನೆ ಕರ್ನಾಟಕದಲ್ಲೂ ಹಲವು ಕಾಲ ಇದು ಪ್ರಚಲಿತವಾಗಿತ್ತು. ಕರ್ನಾಟಕದಲ್ಲಿ ಬೌದ್ಧ ಧರ್ಮ ಪ್ರಚಾರಕ್ಕೆ ಬಂದುದು ಪ್ರ.ಶ.ಪೂ. 3ನೆಯ ಶತಮಾನದಲ್ಲಿ. ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿ ಬೌದ್ಧಧರ್ಮ ಕರ್ನಾಟಕಕ್ಕೆ ಹರಡಿತೆಂದು ಶ್ರೀಲಂಕಾದ (ಸಿಂಹಳ) ಬೌದ್ಧಧರ್ಮೀಯ ಗ್ರಂಥಗಳಾದ ದೀಪವಂಸ ಮತ್ತು ಮಹಾವಂಸ ಗ್ರಂಥಗಳಿಂದ ತಿಳಿಯುತ್ತದೆ. ಅಶೋಕ ಏರ್ಪಡಿಸಿದ್ದ ಬೌದ್ಧ ಮಹಾಸಭೆಯ ಅನಂತರ ಆ ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯನಾದ ಮೊಗ್ಗಲಿಪುತ್ತ ತಿಸ್ಸ ಧರ್ಮಪ್ರಸಾರಕ್ಕಾಗಿ ಮಹಿಷ ಮಂಡಲಕ್ಕೆ ಮಹಾದೇವ ಮತ್ತು ವನವಾಸಿಗೆ ರಕ್ಖಿತ ಎಂಬ ಭಿಕ್ಷುಗಳನ್ನು ಕಳುಹಿಸಿದನೆಂದು ಆ ಗ್ರಂಥಗಳಿಂದ ತಿಳಿಯುತ್ತದೆ. ಮಹಾದೇವ ಮಹಿಷಮಂಡಲದಲ್ಲಿ ಬುದ್ಧ ಹೇಳಿದ ದೇವದೂತ ಉಪದೇಶವನ್ನು ಬೋಧಿಸಿದ. ಇದರಿಂದ ನಲವತ್ತು ಸಾವಿರ ಜನ ಬೌದ್ಧಧರ್ಮದ ಅನುಯಾಯಿಗಳಾದರು, ಅಲ್ಲದೆ ನಲವತ್ತು ಸಾವಿರ ಜನ ಭಿಕ್ಷುಗಳಾದರು. ವನವಾಸಿಗೆ ಬಂದ ರಕ್ಖಿತನು ಅನಂತಗ್ಗವನ್ನು ಉಪದೇಶಿಸಿದ. ಅಲ್ಲಿ ಅರುವತ್ತು ಸಾವಿರ ಜನ ಬೌದ್ಧಧರ್ಮಕ್ಕೆ ಸೇರಿದರು. ಮೂವತ್ತೇಳು ಸಾವಿರ ಜನ ಭಿಕ್ಷುಗಳಾದರು. ಅಲ್ಲದೆ ರಕ್ಖಿತ 500 ವಿಹಾರಗಳನ್ನು ಕಟ್ಟಿಸಿದ. ಈ ಸಂಖ್ಯೆಗಳ ಬಗ್ಗೆ ಅನುಮಾನ ವ್ಯಕ್ತಪಡಿಸಬಹುದಾದರೂ ಈ ಕಾಲದಲ್ಲಿ ಧರ್ಮಪ್ರಸಾರವಾಗಿರುವ ಬಗ್ಗೆ ಸಂದೇಹವಿರಲಾರದು. ಈ ಗ್ರಂಥಗಳಲ್ಲದೆ ಬೌದ್ಧಧರ್ಮದ ದಾಕ್ಷಿಣಾತ್ಯ ಹಾಗೂ ಔತ್ತರೇಯ ಸಂಪ್ರದಾಯಗಳಿಗೆ ಸೇರಿದ ಥೂಪವಂಶ, ಸದ್ಧಮ್ಮಸಂಗಹ, ಮಿಲಿಂದಪಞ್ಹ, ಸಮಂತಪಾಸಾದಿಕ ಮೊದಲಾದ ಇತರ ಗ್ರಂಥಗಳಲ್ಲೂ ಈ ವಿಷಯದ ಉಲ್ಲೇಖಗಳು ದೊರಕುತ್ತವೆ. ಆದರೆ ಮೌರ್ಯರ ಕಾಲದ ಬೌದ್ಧ ವಸ್ತುವಾಸ್ತು ಅವಶೇಷಗಳಾವುವೂ ದೊರಕಿಲ್ಲ. ಅಶೋಕನ ಶಾಸನಗಳಿದ್ದರೂ ಅವುಗಳಲ್ಲಿ ಬೌದ್ಧಧರ್ಮದ ಪ್ರಸ್ತಾಪವಿಲ್ಲ. ಆದರೆ 7ನೆಯ ಶತಮಾನದಲ್ಲಿ ಕರ್ನಾಟಕವನ್ನು ಸಂದರ್ಶಿಸಿದ ಯುವಾನ್ ಚಾಂಗ್ ಕೊಂಕಣಪುರದಲ್ಲಿ ಅಶೋಕ ಕಟ್ಟಿಸಿದ ಸ್ತೂಪಗಳು ಇವೆ ಎಂದು ಹೇಳಿದ್ದಾನೆ. ಈ ಕೊಂಕಣಪುರ ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಇರಬಹುದೆಂಬುದು ಊಹೆ.

ಸಾತವಾಹನ ಯುಗದಲ್ಲಿ ಬೌದ್ಧಧರ್ಮ ಕರ್ನಾಟಕದಲ್ಲಿ ನೆಲೆಗೊಂಡಿತ್ತು ಎಂದು ಹೇಳಬಹುದು. ಈ ಕಾಲದಲ್ಲಿ ಕರ್ನಾಟಕದ ಪಕ್ಕದ ಪ್ರದೇಶಗಳಲ್ಲಿ ಈ ಧರ್ಮ ವ್ಯಾಪಕವಾಗಿತ್ತೆಂಬುದಕ್ಕೆ ಅಮರಾವತಿ, ನಾಗಾರ್ಜುನಕೊಂಡ, ಜಗ್ಗಯ್ಯಪೇಟ ಮೊದಲಾದ, ಆಂಧ್ರಪ್ರದೇಶದ ನೆಲೆಗಳಲ್ಲಿರುವ ಬೌದ್ಧಸ್ಮಾರಕಗಳೂ ಭಾಜ, ಕಾಲೆ, ಕನ್ಹೇರಿ, ನಾಸಿಕ, ಅಜಂತ, ಜುನ್ನರ್ ಮೊದಲಾದ ಮಹಾರಾಷ್ಟ್ರದ ಸ್ಥಳಗಳಲ್ಲಿರುವ ಬೌದ್ಧ ಗುಹಾಲಯಗಳೂ ಸಾಕ್ಷ್ಯಗಳಾಗಿವೆ. ಇಂದಿನ ಕರ್ನಾಟಕದ ಗಡಿಯ ಬಳಿ ಇರುವ ಬ್ರಹ್ಮಪುರಿ (ಕೊಲ್ಲಾಪುರ) ಹಾಗೂ ಬೀದರ್ ಜಿಲ್ಲೆಯ ಗಡಿಯಿಂದ ಅನತಿ ದೂರದಲ್ಲಿರುವ ತೇರ್ (ಉಸ್ಮಾನಾಬಾದ್ ಜಿಲ್ಲೆ) ಈ ಸ್ಥಳಗಳಲ್ಲಿನ ಉತ್ಖನನಗಳಿಂದ ಅಲ್ಲೆಲ್ಲ ಸಾತವಾಹನಕಾಲದ ಬೌದ್ಧಸ್ತೂಪಗಳಿದ್ದ ಬಗ್ಗೆ ಮಾಹಿತಿಗಳು ದೊರಕಿವೆ. ಕರ್ನಾಟಕದಲ್ಲಿ ಈ ರೀತಿಯಲ್ಲಿ ಹೆಚ್ಚಿನ ಅವಶೇಷಗಳು ಬೆಳಕಿಗೆ ಬಂದಿಲ್ಲದಿದ್ದರೂ ಈ ಪ್ರದೇಶದಲ್ಲೂ ಬೌದ್ಧ ಧರ್ಮದ ನೆಲೆಗಳು ಇದ್ದಿರಬೇಕೆಂಬುದಕ್ಕೆ ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿ ಗುರುತಿಸಲಾಗಿರುವ ಅವಶೇಷಗಳ ಹರಹಿನಿಂದ ಊಹಿಸಬಹುದು. ಆ ಸ್ಥಳದ ಅನ್ವೇಷಣೆಯಲ್ಲಿ ಕಂಡುಬಂದಿರುವ ಆಧಾರಗಳಿಂದ ಕಡೆಯಪಕ್ಷ ನಾಲ್ಕು ಸ್ತೂಪಗಳಾದರೂ ಅಲ್ಲಿದ್ದಿರಬೇಕೆಂದು ಹೇಳಬಹುದು. ಈ ಸ್ತೂಪಗಳ ಹೊರಮೈಗೆ ಕವಿಚಿದ್ದ ಶಿಲಾಫಲಕಗಳಲ್ಲಿ ಬುದ್ಧನನ್ನು ಸಿಂಹಾಸನ, ಪಾದ, ಕುದುರೆ, ಬೋಧಿವೃಕ್ಷ–ಈ ಚಿಹ್ನೆಗಳಿಂದ ತೋರಿಸಲಾಗಿರುವುದಲ್ಲದೆ, ಒಂದೆಡೆ ಬುದ್ಧನನ್ನು ಮಾನವರೂಪದಲ್ಲೇ ಶಿಲ್ಪಿಸಲಾಗಿದೆ. ಅನೇಕ ಶಿಲ್ಪಫಲಕಗಳಲ್ಲಿ ಬುದ್ಧನ ಜೀವಿತದ ಕಥೆಗಳು ಮತ್ತು ಜಾತಕ ಕಥೆಗಳ ನಿರೂಪಣೆ ಇದೆ. ಹೆಚ್ಚಿನ ಶಿಲ್ಪಗಳು ಬೇರೆಬೇರೆ ವ್ಯಕ್ತಿಗಳ ಕೊಡುಗೆಗಳಾಗಿದ್ದು ಅವುಗಳನ್ನು ದಾನಮಾಡಿದವರಲ್ಲಿ ರಾಜ್ಯಾಧಿಕಾರಿಗಳು ಹಾಗೂ ನಟರು, ಚರ್ಮಕಾರರು ಇಂಥ ಸಾಮಾನ್ಯ ಜನರೂ ಅನೇಕ ಮಂದಿ ಗೃಹಸ್ಥರೂ ಸ್ತ್ರೀಯರೂ ಇದ್ದಾರೆ. ಬೌದ್ಧಧರ್ಮ ಕರ್ನಾಟಕದಲ್ಲಿ ಆ ಕಾಲದ ಹೊತ್ತಿಗೆ ಕೆಲವು ಸ್ಥಳಗಳಲ್ಲಾದರೂ ಸಮಾಜದ ಎಲ್ಲ ವರ್ಗಗಳಲ್ಲೂ ಚೆನ್ನಾಗಿ ಹರಡಿರಬೇಕೆಂದು ಇವುಗಳಿಂದ ಅರಿಯಬಹುದಾಗಿದೆ. ಬವನಾಸಿ ಪ್ರಾಂತ್ಯದಲ್ಲಿ ಸಹ ಬೌದ್ಧಧರ್ಮವಿದ್ದ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ಪ್ರ.ಶ.ಪೂ. 101–77ರಲ್ಲಿ ಸಿಂಹಳದಲ್ಲಿ ಆಳಿದ ದುಟ್ಟಗಾಮಣಿ ತನ್ನ ರಾಜಧಾನಿ ಅನುರಾಧಪುರದಲ್ಲಿನ ಮಹಾಸ್ತೂಪವನ್ನು ನಿರ್ಮಿಸುವ ಮೊದಲು ಆ ಕೆಲಸದ ಪ್ರಾರಂಭೋತ್ಸವವನ್ನು ಏರ್ಪಡಿಸಿದ್ದು, ಅದಕ್ಕಾಗಿ ವಿವಿಧ ದೇಶಗಳಿಂದ ಬೌದ್ಧ ಭಿಕ್ಷುಗಳು

ಆಗಮಿಸಿದ್ದರು; ಹಾಗೆ ಬಂದಿದ್ದವರಲ್ಲಿ ಬನವಾಸಿಯ ಥೇರ ಚಂದಗುತ್ತ ಸಹ ಒಬ್ಬ; ಅವನು ಎಂಬತ್ತು ಸಾವಿರ ಭಿಕ್ಷುಗಳನ್ನು ತನ್ನೊಡನೆ ಕರೆತಂದಿದ್ದ ಎಂದು ಮಹಾವಂಸ ಗ್ರಂಥದಲ್ಲಿ ಹೇಳಿಕೆ ಇದೆ. ಈಗ ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿರುವ ಪ್ರಸಿದ್ಧವಾದ ಕಾರ್ಲೆಯ ಬೌದ್ಧ ಗುಹಾಲಯದ ಮುಂಭಾಗವನ್ನು ಮಾಡಿಸಿದವನು ಬನವಾಸಿಯ ಶ್ರೇಷ್ಠಿಯೊಬ್ಬನೆಂದು ಪ್ರ.ಶ.ಪೂ. 1ನೆಯ ಶತಮಾನದ ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಬನವಾಸಿಯಲ್ಲಿ ನಾಗನಿಕಾ ಎಂಬುವಳು ವಿಹಾರವೊಂದನ್ನು ಕಟ್ಟಿಸಿದ ವಿಷಯ ಆ ಸ್ಥಳದ ನಾಗರಕಲ್ಲಿನ ಶಾಸನದಿಂದ (ಪ್ರ.ಶ.ಪೂ. 3ನೆಯ ಶತಮಾನ) ತಿಳಿದುಬಂದಿದೆ. ಸಿಂಹಳದ ಬೌದ್ಧ ಭಿಕ್ಷುಗಳು ಬನವಾಸಿಯಲ್ಲಿ ಧರ್ಮಪ್ರಚಾರ ಮಾಡಿದರೆಂದು ಕ್ರಿ.ಶ. 3ನೆಯ ಶತಮಾನದ ನಾಗಾರ್ಜುನಕೊಂಡದ ಒಂದು ಶಾಸನದಿಂದ ತಿಳಿಯುತ್ತದೆ.



ಮಹಾಬೋಧಿ ಸೊಸೈಟಿ, ಬೆಂಗಳೂರು

ಮೌರ್ಯ-ಸಾತವಾಹನ ಕಾಲದ ಕರ್ನಾಟಕದಲ್ಲಿ ಯಾವ ಬೌದ್ಧಧರ್ಮೀಯ ಪಂಥಗಳು ಇದ್ದುವೆಂಬುದನ್ನು ತಿಳಿಯಲು ಸಾಕಷ್ಟು ಆಧಾರಗಳು ದೊರಕುವುದಿಲ್ಲ. ಅಶೋಕನ ಕಾಲದಲ್ಲಿ ಇಲ್ಲಿ ಹರಡಿದ ಬೌದ್ಧ ಪಂಥ ಹೀನಯಾನವೇ ಆಗಿರಬೇಕು. ಅದರಲ್ಲೂ ಥೇರವಾದದ ಒಂದು ಶಾಖೆಯಾದ ವೈಭಜ್ಯವಾದಿಗಳಿಗೆ ಅಶೋಕ ಹೆಚ್ಚು ಒಲವು ತೋರಿಸಿದ್ದಂತೆ ತೋರುತ್ತದೆ. ಕ್ರಿ.ಶ. 2ನೆಯ ಶತಮಾನದ ಹೊತ್ತಿಗೆ ಹುಟ್ಟಿಕೊಂಡಿರುವ ಮಹಾಯಾನ ಪಂಥ ಉತ್ತರ ಭಾರತದಲ್ಲಿ ಮತ್ತು ಆಂಧ್ರದೇಶದಲ್ಲಿ ಸುಮಾರು ಅದೇ ಕಾಲದಲ್ಲೇ ಹರಡಲಾರಂಭಿಸಿತ್ತು ಎಂಬುದಕ್ಕೆ ಆಧಾರಗಳಿವೆ. ಆದ್ದರಿಂದ ಆ ಕಾಲದಲ್ಲಿ ಕರ್ನಾಟಕದಲ್ಲೂ ಇದು ಪ್ರಚಲಿತವಾಗಿದ್ದರೆ ಆಶ್ಚರ್ಯವಿಲ್ಲ. ಸನ್ನತಿಯ ಒಂದು ಶಿಲಾಫಲಕದಲ್ಲಿ ಬುದ್ಧನನ್ನು ಮಾನವ ರೂಪದಲ್ಲಿ ಶಿಲ್ಪಿಸಿರುವುದು ಈ ಊಹೆಗೆ ಒಳ್ಳೆಯ ಆಧಾರ. ಅಲ್ಲದೆ ಈ ಕಾಲದ ಹೊತ್ತಿಗೆ ಮಹಾಯಾನ ಮತ್ತು ಹೀನಯಾನ ಈ ಎರಡು ಪಂಥಗಳಲ್ಲೂ ಕೆಲವೊಂದು ಸೂಕ್ಷ್ಮ ತಾತ್ತ್ವಿಕ ವ್ಯತ್ಯಾಸಗಳಿಂದಾಗಿ ಹಲವು ಉಪಶಾಖೆಗಳು ಹುಟ್ಟಿಕೊಂಡಿದ್ದುವು. ಮಹಾರಾಷ್ಟ್ರ ಮತ್ತು ಆಂಧ್ರದೇಶಗಳಲ್ಲಿ ಈ ಕಾಲದಲ್ಲಿ ಭದಾಯನೀಯ, (ಭದ್ರಾಯನೀಯ), ಧಮ್ಮುತ್ತರೀಯ (ಧರ್ಮೋತ್ತರೀಯ), ಚೇತಕ (ಚೈತ್ಯಕ), ಅಪರಸೇಲೀಯ (ಅಪರಶೈಲಿಯ), ಪುಬ್ಬಸೇಲೀಯ (ಪೂರ್ವಶೈಲಿಯ), ಮಹೀಶಾಸಕ, ಬಹುಸ್ಸುತೀಯ (ಬಹುಶ್ರುತೀಯ) ಈ ಬೌದ್ಧ ಶಾಖೆಗಳಿದ್ದುವು. ಒಂದೊಂದೂ ಶಾಖೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಹಾರಗಳು ಮತ್ತು ದೇವಾಲಯಗಳು, ಸ್ತೂಪ ಮುಂತಾದ ಧಾರ್ಮಿಕ ಸ್ಥಾನಗಳು ಇದ್ದುವು ಎಂಬುದಕ್ಕೆ ಶಾಸನಾಧಾರಗಳಿವೆ. ಇವುಗಳಲ್ಲಿ ಹಲವಾದರೂ ಕರ್ನಾಟಕದಲ್ಲೂ ಪ್ರಚಲಿತವಾಗಿರಬಹುದು. ಈ ಶಾಖೆಗಳಲ್ಲಿ ಧಮ್ಮುತ್ತರೀಯ, ಭದಾಯನೀಯ-ಇವು ಥೇರವಾದದ ಶಾಖೆಗಳೆಂದು ದೀಪವಂಸ ತಿಳಿಸುತ್ತದೆ. ಮಹೀಶಾಸಕ ಸಹ ಇದರ ಒಂದು ಶಾಖೆಯೇ. ಇದು ಪೂರ್ಣವಾಗಿ ಮಹಾಯಾನದ ಕಕ್ಷೆಯೊಳಗಿಲ್ಲದಿದ್ದರೂ ಆ ಪಂಥದ ತತ್ತ್ವಗಳಿಗೆ ಸಮೀಪವರ್ತಿಯಾಗಿದ್ದವು ಎಂದರೆ ಮಹಾಸಾಂಘಿಕ, ಬಹುಶ್ರುತೀಯ ಮತ್ತು ಚೈತ್ಯಕ ಶಾಖೆಗಳು. ಇವುಗಳಲ್ಲಿ ಕೊನೆಯ ಎರಡು ಹಾಗೂ ಪುಬ್ಬಸೇಲೀಯ ಮತ್ತು ಅಪರಸೇಲೀಯಗಳು ಮಹಾಸಾಂಘಿಕದ ಪ್ರಭೇದಗಳು ಎನ್ನಲಾಗಿದೆ. ನಳಿನಾಕ್ಷದತ್ತ ಎಂಬ ವಿದ್ವಾಂಸರ ಪ್ರಕಾರ ಬನವಾಸಿಯಲ್ಲಿ ಮಹೀಶಾಸಕ ಪಂಥ ಪ್ರಬಲವಾಗಿತ್ತು. ಈ ಪಂಥದ ಸಿದ್ಧಾಂತಗಳು ಥೇರವಾದಕ್ಕೆ ಬಹು ಸಮೀಪವಾಗಿದ್ದವು. ಮಹೀಶಾಸಕ ಶಾಖೆ ಮಹಿಷದೇಶದ (ಮಹಿಷಮಂಡಲ) ಅಥವಾ ಅಲ್ಲಿ ಮೊದಲು ಬೌದ್ಧಧರ್ಮ ಪ್ರಚಾರ ಮಾಡಿದ ಮಹಾದೇವನ ಹೆಸರಿನ ಮೇಲೆ ಹುಟ್ಟಿರಬಹುದು ಎಂಬ ಊಹೆ ಇದೆ. ಚುಟುವಂಶದ ಒಬ್ಬ ರಾಣಿ ನಾಗಾರ್ಜುನಕೊಂಡದಲ್ಲಿ ಮಹೀಶಾಸಕರಿಗಾಗಿ ಒಂದು ವಿಹಾರವನ್ನು ಕಟ್ಟಿಸಿದಳು ಎಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ.

ಕರ್ನಾಟಕದಲ್ಲಿ ಬೌದ್ಧಧರ್ಮ ಪ್ರಚಾರಗೊಂಡಿದ್ದರಿಂದ ಅದರ ತಾತ್ತ್ವಿಕ ಅಂಶಗಳಾದ ನಾಲ್ಕು ಮಹಾಸತ್ಯಗಳ ವಿಚಾರ ಇಲ್ಲೂ ಪ್ರಚಲಿತವಾಗಿರಬೇಕು. ಆಚರಣೆಯ ಭಾಗದಲ್ಲಿ ಪುರುಷರು ಹಾಗೂ ಸ್ತ್ರೀಯರು ಭಿಕ್ಷುಭಿಕ್ಷುಣಿಯರಾಗುವುದು, ತತ್ಸಂಬಂಧಿತವಾದ ಕಾಷಾಯ ವಸ್ತ್ರಧಾರಣೆ, ಭಿಕ್ಷಾವೃತ್ತಿ, ಅಧ್ಯಯನ, ಧರ್ಮಪ್ರಚಾರ, ಚಾತುರ್ಮಾಸ, ವಿಹಾರವಾಸ-ಇಂಥ ರೂಢಿಗಳು ಕರ್ನಾಟಕದಲ್ಲೂ ಹರಡಬಹುದು. ಅಲ್ಲದೆ ಈ ಭಿಕ್ಷುಸಂಘಗಳನ್ನು ಗೌರವಿಸಿ, ಪೋಷಿಸಿ, ಗೃಹಸ್ಥಾಶ್ರಮದಲ್ಲೇ ಇರುತ್ತಿದ್ದ ಬೌದ್ಧಧರ್ಮಾನುಯಾಯಿಗಳ ವರ್ಗ ಸಹ ಬಲಯುತವಾಗಿರಬೇಕು. ಸಹಜವಾಗಿ ಬುದ್ಧ, ಬೋಧಿವೃಕ್ಷ, ಸ್ತೂಪ, ನಾಗ ಮತ್ತು ಯಕ್ಷರ ಪೂಜೆ, ದೇವಾಲಯಗಳ ರಚನೆ, ಭಿಕ್ಷುಗಳಿಗೆ ಗೌರವ ಇತ್ಯಾದಿ ಸಂಪ್ರದಾಯಗಳು ಕರ್ನಾಟಕದಲ್ಲೂ ಇದ್ದಿರಬೇಕು. ಹಿಂದೆ ತಿಳಿಸಿದ ಬನವಾಸಿಯ ನಾಗವಿಗ್ರಹವಲ್ಲದೆ ಸನ್ನತಿಯಲ್ಲಿ ಸಹ ಸು. 5 ಅಡಿ ಎತ್ತರದ ಐದು ಹೆಡೆಗಳುಳ್ಳ ಒಂದು ದೊಡ್ಡ ನಾಗವಿಗ್ರಹ ಮತ್ತು ಇತರ ಅನೇಕ ಸಣ್ಣ ನಾಗವಿಗ್ರಹಗಳು, ಯಕ್ಷರ ಮೂರ್ತಿಗಳು ದೊರಕಿವೆ.

4ನೆಯ ಶತಮಾನದ ಹೊತ್ತಿಗೆ ಬೌದ್ಧಧರ್ಮದ ತತ್ತ್ವ, ಕಥೆ, ನಂಬಿಕೆಗಳು ಕರ್ನಾಟಕದಲ್ಲಿ ಜನಸಾಮಾನ್ಯರಲ್ಲಿ ವ್ಯಾಪಿಸಿರಬೇಕು. 338ರ ಬಾಣರಾಜನೊಬ್ಬನ ತಾಮ್ರಪಟದಲ್ಲಿ, ಆತ ಶೈವಧರ್ಮೀಯನಾದರೂ ಅವನನ್ನು ವರ್ಣಿಸುವಾಗ ಪ್ರಾಣಿನಾಂ ಪರಮಕಾರುಣಿಕತಯಾ ಬೋದಿಸತ್ತ್ವೋಪಮಾನಸ್ಯ ಎಂಬ ವರ್ಣನೆ ಇದೆ. ಆದರೂ ಕಾಲದಾರಭ್ಯ ದೊರಕುವ ಶಾಸನಗಳನ್ನು ಗಮನಿಸಿದರೆ ಹೆಚ್ಚಿನವು ಬೌದ್ಧಧರ್ಮಕ್ಕಿಂತ ಇತರ ಧರ್ಮಗಳಿಗೆ ಸಂಬಂಧಿಸಿರುವುದು ಕಾಣುತ್ತದೆ. ಕಾರಣ ಅಸ್ಪಷ್ಟವಾದರೂ ಬೌದ್ಧಧರ್ಮದ ಪ್ರಭಾವ ಇಳಿಮುಖವಾಗಿರಬೇಕು. ಆದರೆ ಅಲ್ಲಲ್ಲಿ ಬೌದ್ಧಧರ್ಮೀಯರು ಇದ್ದರೆಂಬುದಕ್ಕೆ ಸೂಚನೆಗಳಿವೆ. 4ನೆಯ ಶತಮಾನದ ಗಂಗಮಾಧವನ ಒಂದು ಶಾಸನದಲ್ಲಿ ಶಾಕ್ಯಶಿಲಾ ಎಂಬ ಪದದ ಪ್ರಯೋಗವಿದೆ. ಶಾಸನದ ಕೊನೆಯಲ್ಲಿ ಬುದ್ಧಸತ್ತ್ವಾಯ ದತ್ತಮಾ ಚಂದ್ರತಾರಕಂ ಎಂದಿರುವುದರಿಂದ ಇದು ಬೌದ್ಧರಿಗೆ ಕೊಟ್ಟ ದತ್ತಿಗೆ ಸಂಬಂಧಿಸಿದ್ದು ಎಂದು ತಿಳಿಯುತ್ತದೆ. ಶಾಸನದಲ್ಲಿ ದೊರೆಯುವ ಆಂತರಿಕ ಆಧಾರಗಳಿಂದ ಕೋಲಾರ ಜಿಲ್ಲೆಯ ಆವನಿಯ ಸಮೀಪದಲ್ಲೆಲ್ಲೊ ಈ ದತ್ತಿ ನೀಡಿದ್ದಂತೆ ತೋರುತ್ತದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಸಮೀಪದಲ್ಲಿ ಇತ್ತೀಚೆಗೆ ಸು. 4-5ನೆಯ ಶತಮಾನದ ಎರಡು ಬುದ್ಧವಿಗ್ರಹಗಳು ಬೆಳಕಿಗೆ ಬಂದಿವೆ. ಸು. 500ರ ಕಾರವಾರ ಪ್ರದೇಶದ ಒಂದು ಶಾಸನದಲ್ಲಿ ನಿಷ್ಕಾರಣವತ್ಸಲ ಬುದ್ಧನನ್ನು ಪ್ರಾರ್ಥಿಸಿ

ವಿಹಾರ ಮತ್ತು ಆರ್ಯ ಸಂಘಗಳಿಗೆ ದಾನ ಕೊಟ್ಟ ವಿವರಗಳಿವೆ. 7ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಸಂಚರಿಸಿದ ಯುವಾನ್ ಚಾಂಗ್‍ನ ಪ್ರಕಾರ ಬನವಾಸಿಯಲ್ಲಿ ನೂರು ಸಂಘಾರಾಮಗಳು ಮತ್ತು ಹೀನಯಾನ, ಮಹಾಯಾನ ಪಂಥದ ಹತ್ತು ಸಾವಿರ ಭಿಕ್ಷುಗಳು ಇದ್ದರೆಂಬ ಹೇಳಿಕೆ ಇದೆ ಎನ್ನಲಾಗಿದೆ. ಬಾದಾಮಿಯಲ್ಲಿ ಮೇಣ ಬಸದಿಗಳ ಜೊತೆಯಲ್ಲಿರುವ ಒಂದು ನೈಸರ್ಗಿಕ ಗುಹೆಯಲ್ಲಿ ದಶಬಾಧೆಗಳನ್ನು ನಿವಾರಿಸುವ ಅವಲೋಕಿತೇಶ್ವರನ ಒಂದು ಮೂರ್ತಿ ಇದೆ. ಶೃಂಗೇರಿಯಲ್ಲಿ ಶಂಕರಾಚಾರ್ಯರು ಬೌದ್ಧಧರ್ಮೀಯ ಮಂಡನಮಿಶ್ರ ಮತ್ತು ಆತನ ಪತ್ನಿಯೊಂದಿಗೆ ವಾದಮಾಡಿ ಗೆದ್ದ ವಿಷಯ ಜನಜನಿತವಾಗಿದೆ. ಇದರಿಂದ ಎಂಟು-ಒಂಬತ್ತನೆಯ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಿ ಬೌದ್ಧಧರ್ಮದ ಪ್ರಭಾವ ಕುಗ್ಗತೊಡಗಿದ್ದದ್ದು ಸ್ಪಷ್ಟಪಡುತ್ತದೆ.

ಮುಂದೆ 11-14ನೆಯ ಶತಮಾನಗಳ ಅವಧಿಯಲ್ಲಿ ಬೌದ್ಧಧರ್ಮ ಅಪರೂಪವಾಗಿ ಕೆಲವು ಸ್ಥಳಗಳಲ್ಲಿ ಉಳಿದುಕೊಂಡಿತ್ತು. ಬಳ್ಳಿಗಾಮೆಯಲ್ಲಿ ದೊರಕಿರುವ 11ನೆಯ ಶತಮಾನದ ಎರಡು ಶಾಸನಗಳಲ್ಲಿ ಬೌದ್ಧಧರ್ಮದ ಪ್ರಸ್ತಾಪವಿದೆ. ಮಹಾಪ್ರಧಾನ ರೂಪಭಟ್ಟಯ್ಯ ಎಂಬುವನು ಅಲ್ಲಿ ಜಯಂತಿ ಪ್ರಭ ಬೌದ್ಧ ವಿಹಾರವನ್ನು ಮಾಡಿಸಿ, ಅಲ್ಲಿ ಸ್ಥಾಪಿಸಿದ್ದ ತಾರಾಭಗವತಿ, ಕೇಶವ, ಲೋಕೇಶ್ವರ, ಬುದ್ಧ-ಈ ದೇವರ ಹಾಗೂ ಇತರ ಪರಿಹಾರ ದೇವತೆಗಳ ಅರ್ಚನೆಗಾಗಿ ಮತ್ತು ಅಲ್ಲಿಯ ಯೋಗಿನಿಯರು, ಕುಸಳಿಯರು ಮತ್ತು ಸನ್ಯಾಸಿಗಳು ಇವರ ಆಹಾರದಾನಕ್ಕೆ ಭೂಮಿದಾನ ಮಾಡಿದ್ದ. ನಾಗಿಯಕ್ಕ ಎಂಬುವಳು ತಾರಾಭಗವತಿಯ ದೇವಾಲಯವನ್ನು ಮಾಡಿಸಿ, ಪ್ರಭಬೌದ್ಧಭಟಾರರ ಕಾಲನ್ನು ತೊಳೆದು ದತ್ತಿ ಬಿಟ್ಟ ವಿಷಯ ಇನ್ನೊಂದು ಶಾಸನದಲ್ಲಿದೆ. ಗದಗ ತಾಲ್ಲೂಕಿನ ಡಂಬಳದಲ್ಲಿರುವ 11ನೆಯ ಶತಮಾನದ ಒಂದು ಶಾಸನ 'ನಮೋ ಬುದ್ಧಾಯ' ಎಂದು ಪ್ರಾರಂಭವಾಗುವುದಲ್ಲದೆ, ಮುಂದೆ ತಾರಾಭಗವತಿಯ ಪ್ರಾರ್ಥನೆಯೊಂದಿಗೆ ಸಂಗವಯ್ಯಸೆಟ್ಟಿ ಎಂಬುವನು ಕಟ್ಟಿಸಿದ ಆರ್ಯತಾರಾ ದೇವಿಯ ವಿಹಾರ, ಆ ಊರಿನ ಹದಿನಾರು ಶೆಟ್ಟಿಗಳು ಮಾಡಿಸಿದ ಬೌದ್ಧವಿಹಾರ ಮತ್ತು ಅವುಗಳಲ್ಲಿನ ಪೂಜಾದಿಗಳಿಗೆ ದತ್ತಿ ಕೊಟ್ಟ ಪ್ರಸ್ತಾಪ ಇರುವುದರಿಂದ ಡಂಬಳ ಒಂದು ಕಾಲದಲ್ಲಿ ಬೌದ್ಧಧರ್ಮದ ಕೇಂದ್ರವಾಗಿತ್ತೆಂದು ತಿಳಿಯಬಹುದು. ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡದಲ್ಲಿಯೂ ಒಂದು ತಾರಾವಿಗ್ರಹ ದೊರೆತಿದ್ದು, ಅದರ ಮೇಲೆಯೇ ಧರ್ಮಾ ಹೇತು ಪ್ರಭವಾ ಹೇತುಂ ತೇಷಾಂ ತಥಾಗತಾ.... ಈ ಪ್ರಸಿದ್ಧ ಬೌದ್ಧ ಚೂರ್ಣಿಯನ್ನು ಕೆತ್ತಲಾಗಿದೆ.

ಈ ಕಾಲದ ಹಲವು ಶಾಸನಗಳಲ್ಲಿ ಕೆಲವು ಅನ್ಯಮತೀಯರು ಬೌದ್ಧರನ್ನು ವಾದದಲ್ಲಿ ಸೋಲಿಸಿದರೆಂಬ ಪ್ರಸ್ತಾಪ ದೊರಕುತ್ತದೆ. 1104ರ ಒಂದು ಶಾಸನದಲ್ಲಿ ಮುಳಗುಂದದ ವೀರನಾರಾಯಣ ಮೂರು ಸ್ಥಾನಗಳನ್ನು ಆಳುತ್ತಿದ್ದ ಸಂನ್ಯಾಸಿಯೊಬ್ಬನನ್ನು ಬೌದ್ಧಮದೇಭಪಂಚೇರನ ಎಂದು ಕರೆದಿದೆ. ಶಾಸನದಂಥ ಸಾರ್ವಜನಿಕ ದಾಖಲೆಗಳಲ್ಲಿ ಬೌದ್ಧಮತದ ಖಂಡನೆಯ ಪ್ರಸ್ತಾಪವನ್ನು ನೋಡಿದರೆ ಈ ಕಾಲದಲ್ಲಿ ಬೌದ್ಧಭಿಕ್ಷುಗಳಿದ್ದರೂ ಅವರ ಅನುಯಾಯಿಗಳು ಬಹುಸಂಖ್ಯೆಯಲ್ಲಿ ಇದ್ದಿರಲಾರರು ಎಂದು ಊಹಿಸಬಹುದಾಗಿದೆ. ಬಳ್ಳಿಗಾಮೆಯ ಶಾಸನದಲ್ಲಿರುವ ಯೋಗಿನಿಯರ ಪ್ರಸ್ತಾಪದಿಂದ ಭಿಕ್ಷುಣಿಯರು ಇದ್ದರೆಂದು ತಿಳಿಯಬಹುದು. ತಾರಾಭಗವತಿಯ ಅರ್ಚನೆ, ಡಂಬಳದ ಶಾಸನದಲ್ಲಿ ಬರುವ ಪ್ರಜ್ಞಾದ ಪ್ರಸ್ತಾಪ ಇತ್ಯಾದಿ ಸಾಕ್ಷ್ಯಗಳು ಆ ಕಾಲದಲ್ಲಿ ರೂಢವಾಗಿದ್ದುದು ಬೌದ್ಧಧರ್ಮದ ವಜ್ರಯಾನ ಪಂಥ ಎಂಬುದನ್ನು ಸೂಚಿಸುತ್ತವೆ. ಇದು ವಾಮಾಚಾರ ವಿಧಾನಗಳನ್ನು ಸಾಧನಾಮಾರ್ಗದಲ್ಲಿ ಬಳಸುತ್ತಿದ್ದ ತಾಂತ್ರಿಕ ಬೌದ್ಧಪಂಥ, ಇದರ ಹೆಚ್ಚಿನ ಆಚರಣೆಗಳು ಗುಪ್ತವಾಗಿರುತ್ತಿದ್ದವು. ಪ್ರಕಟವಾಗಿ ಕಾಣುವಂತೆ ಕೇಶವ, ಲೋಕೇಶ್ವರ, ತಾರಾ ಮೊದಲಾದ ದೇವತೆಗಳ ಅರ್ಚನೆ ರೂಢಿಯಲ್ಲಿದ್ದಿತಾಗಿ ಕೆಲವು ಸಾಮಾನ್ಯ ಜನರೂ ಅದರ ಅನುಯಾಯಿಗಳಾಗಿರಬಹುದು. ಆದರೆ ಈ ಧರ್ಮದ ಪ್ರಚಾರ ಅಲ್ಪವಾಗಿರಬೇಕು.

12ನೆಯ ಶತಮಾನದ ಅನಂತರ ಬೌದ್ಧಧರ್ಮ ಕರ್ನಾಟಕದ ಭಾಗದಿಂದ ಪೂರ್ಣವಾಗಿ ಅಳಿಸಿಹೋದಂತೆ ತೋರುತ್ತದೆ.

ಪುನಃ ಇತ್ತೀಚಿನ ದಿನಗಳಲ್ಲಿ ನಡೆದ ಬೌದ್ಧ ಧಾರ್ಮಿಕ ಪ್ರಚಾರದಿಂದಾಗಿ ಕರ್ನಾಟಕದಲ್ಲೂ ಕೆಲವೆಡೆ ಬೌದ್ಧ ಧರ್ಮಾನುಯಾಯಿಗಳು ಅಲ್ಪಸಂಖ್ಯೆಯಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವುದುಂಟು. ಬೆಂಗಳೂರಿನಲ್ಲಿ ಮಹಾಬೋಧಿ ಸೊಸೈಟಿ ಎಂಬ ಸಂಸ್ಥೆಯಿದೆ. ಇತ್ತೀಚೆಗೆ ಟಿಬೆಟ್ಟಿನಿಂದ ವಲಸೆ ಬಂದ ಜನರಿಗೆ ಕೆಲವೆಡೆಗಳಲ್ಲಿ ನೆಲೆಯೊದಗಿಸಿರುವುದರಿಂದ ಅಲ್ಲಿನ ಬೌದ್ಧಧರ್ಮವೂ ಇಂದು ಕರ್ನಾಟಕದಲ್ಲಿ ಕಾಣಸಿಗುತ್ತದೆ. ಮೈಸೂರು ಜಿಲ್ಲೆಯ ಬೈಲುಕುಪ್ಪೆಯಲ್ಲಿ ಟಿಬೆಟ್ ನಿರಾಶ್ರಿತರು ದೊಡ್ಡ ಕಾಲೋನಿಯನ್ನು ರೂಪಿಸಿಕೊಂಡು ನೆಲಸಿದ್ದಾರೆ. ಅದು ಈಗ ಒಂದು ಪ್ರವಾಸಿತಾಣವೂ ಆಗಿದೆ. (ಎಸ್.ಎನ್.)

**ಬೌರಿಂಗ್, ಎಲ್.ಬಿ.:** 1824-90 ಮೈಸೂರು ಮತ್ತು ಕೊಡಗಿನ ಚೀಫ್ ಕಮಿಷನರ್ (1862-70). ಸರ್ ಜಾರ್ಜ್ ಬೌರಿಂಗ್‍ನ ಮೂರನೆಯ ಮಗ. 1824 ಜುಲೈ 15ರಂದು ಜನಿಸಿದ. ಎಕ್ಸೆಟರ್, ಲೀಪ್ಸಿಗ್ ಮತ್ತು ಹೈಲ್‍ಬರಿ (1841-43) ನಗರಗಳಲ್ಲಿ ಶಿಕ್ಷಣ ಪಡೆದ ಅನಂತರ ಸಿವಿಲ್ ಸರ್ವಿಸ್ ಅಧಿಕಾರಿಯಾಗಿ 1843ರಲ್ಲಿ ಭಾರತಕ್ಕೆ ಆಗಮಿಸಿದ. ಮೊದಲು ಪಂಜಾಬಿನ ಡೆಪ್ಯುಟಿ ಕಮಿಷನರ್ (1849-54) ಆಗಿಯೂ ಲಾರ್ಡ್ ಕ್ಯಾನಿಂಗ್ ವೈಸ್‍ರಾಯ್ ಆಗಿದ್ದಾಗ ಆತನ ಆಪ್ತ ಕಾರ್ಯದರ್ಶಿಯಾಗಿಯೂ (1858-62) ಇದ್ದ. ಅನಂತರ ಮೈಸೂರು ಸಂಸ್ಥಾನದಲ್ಲಿ ಅಧಿಕಾರ ವಹಿಸಿದ.

ಸುಸಂಸ್ಕೃತ, ವಿದ್ಯಾವಂತ, ನಿಷ್ಪಕ್ಷಪಾತಿ ಹಾಗೂ ದಕ್ಷ ಆಡಳಿತಗಾರನಾಗಿ ಬೌರಿಂಗ್ ಒಳ್ಳೆಯ ಹೆಸರು ಪಡೆದ. 1870ರಲ್ಲಿ ಈತ ಚೀಫ್ ಕಮಿಷನರ್ ಹುದ್ದೆಗೆ ರಾಜೀನಾಮೆ ಕೊಟ್ಟು ಇಂಗ್ಲೆಂಡಿಗೆ ಹೋದಾಗ ಬೆಂಗಳೂರಿನ ನಾಗರಿಕರು ಈತನನ್ನು ಸತ್ಕರಿಸಿ ಬೀಳ್ಕೊಟ್ಟರು. ಜನಪ್ರಿಯನಾಗಿದ್ದ ಇವನ ಹೆಸರಿನಲ್ಲಿ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಮತ್ತು ಬೌರಿಂಗ್ ಇನ್‍ಸ್ಟಿಟ್ಯೂಟ್ ಸ್ಥಾಪಿತವಾದವು. 1864ರಲ್ಲಿ ಸ್ಥಾಪಿತವಾದ ಈಗಿನ ಬಂಗಾರಪೇಟೆಗೆ ಹಿಂದೆ ಬೌರಿಂಗ್ ಪೇಟೆ ಎಂದು ಇವನ ಹೆಸರನ್ನು ಇಡಲಾಗಿತ್ತು. 1867ರಲ್ಲಿ ಇವನಿಗೆ ಬ್ರಿಟಿಷ್ ಸರ್ಕಾರದಿಂದ ಸಿ.ಎಸ್.ಐ. ಪ್ರಶಸ್ತಿ ದೊರಕಿತ್ತು.

ಬೌರಿಂಗ್ ವಿದ್ಯಾಭಿಮಾನಿ. ಈಸ್ಟರ್ನ್ ಎಕ್ಸ್‌ಪೀರಿಯನ್ಸಸ್, ಹೈದರ್ ಅಲಿ ಅಂಡ್ ಟಿಪ್ಪುಸುಲ್ತಾನ್ ಈತನ ಗ್ರಂಥಗಳು. ಈತ ಬಂಗಾಲದ ರಾಯಲ್ ಏಷ್ಯಾಟಿಕ್ ಸೊಸೈಟಿ ಪತ್ರಿಕೆಗೆ ಲೇಖನಗಳನ್ನು ಬರೆದಿದ್ದಾನೆ. ಬೌರಿಂಗನ ಆದೇಶದಂತೆ ಕರ್ನಲ್ ಡಿಕ್ಸನ್ 1865ರಲ್ಲಿ ಅನೇಕ ಶಾಸನಗಳ ಫೋಟೋ ಹಿಡಿದ. ಅವು ಲೂಯಿ ರೈಸರಿಂದ ಭಾಷಾಂತರವಾಗಿ ತರುವಾಯ 1879ರಲ್ಲಿ ಮೈಸೂರ್ ಇನ್‍ಸ್ಕ್ರಿಪ್ಷನ್ಸ್ ಎಂಬ ಹೆಸರಿನಲ್ಲಿ ಪ್ರಕಟವಾದವು. (ವಿ.ಜಿ.ಕೆ.)

ಬೌರಿಂಗ್ ಚೀಫ್ ಕಮಿಷನರ್ ಆಗಿದ್ದ ಕಾಲದಲ್ಲಿ ಆಡಳಿತ ಶಿಸ್ತಿನಿಂದ ನಡೆಯಿತು. ಈ ಹಿಂದೆ ಕಮಿಷನ್‍ನ ಆಡಳಿತ ಕಾಲದಲ್ಲಿ ದೇಶದ ಕೋಶ ಸಾಕಷ್ಟು ತುಂಬಿತ್ತು. ಈ ಸಂಪತ್ತನ್ನು ಉಪಯೋಗಿಸಿ ದೇಶದ ಪುರೋಭಿವೃದ್ಧಿಯನ್ನು ಸಾಧಿಸುವ ಕೆಲಸವನ್ನು ಬೌರಿಂಗ್ ಕೈಕೊಂಡ. ಈ ಉದ್ದಿಶ್ಯಕ್ಕಾಗಿ ಆಡಳಿತ ವ್ಯವಸ್ಥೆಯ ಬಹುಮುಖ ಬದಲಾವಣೆ ಆವಶ್ಯಕವಾಗಿತ್ತು. ಅದುವರೆಗೆ ಹೈದರ್ ಮತ್ತು ಟಿಪ್ಪು ಕಾಲದಿಂದ ನಡೆದುಬಂದು ಉಳಿದುಕೊಂಡಿದ್ದ ಅನೇಕ ಆಡಳಿತ ರೀತಿ ವಿಧಾನಗಳಿಗೆ ಬದಲಾಗಿ ಬ್ರಿಟಿಷ್ ಪ್ರಾಂತ್ಯಗಳಲ್ಲಿದ್ದ ಆಡಳಿತ ರೀತಿಗಳನ್ನು ಮೈಸೂರು

ಸಂಸ್ಥಾನದಲ್ಲಿ ರೂಢಿಗೆ ತರಲು ಬೌರಿಂಗ್ ಕ್ರಮಕ್ರಮವಾಗಿ ಪ್ರಯತ್ನಿಸಿದ. ಸಂಸ್ಥಾನದಲ್ಲಿ ಆಂಗ್ಲ ರೀತಿಯ ಆಡಳಿತ ಕ್ರಮಕ್ಕೆ ಪ್ರಾಶಸ್ತ್ಯ ದೊರೆಯಿತು. ಆದರೆ ಆಡಳಿತ ನಿರ್ವಹಣೆಗೆ ಸ್ಥಳೀಯ ಜನರನ್ನು ಹೆಚ್ಚು ಸಂಖ್ಯೆಯಲ್ಲಿ ನೇಮಿಸುವ, ಅವರಿಗೆ ತರಬೇತಿ ಕೊಡುವ ಕೆಲಸವೂ ನಡೆಯಿತು. 1862ರಲ್ಲಿ ಸಂಸ್ಥಾನವನ್ನು ಜಿಲ್ಲೆಗಳಾಗಿ ಮಾಡಿ ಅವನ್ನು ಮೂರು ವಿಭಾಗಗಳಾಗಿ ವಿಂಗಡಿಸಿದ. ಪ್ರತಿ ಜಿಲ್ಲೆಗೆ ಒಬ್ಬ ಸೂಪರಿಂಟೆಂಡೆಂಟ್, ಡೆಪ್ಯುಟಿ ಸೂಪರಿಂಟೆಂಡೆಂಟ್ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ನಿಯಮಿತರಾದರು. ರಾಜ್ಯದ ಹಣಕಾಸು ವ್ಯವಹಾರದ ರೀತಿಯಲ್ಲಿ ಮಾರ್ಪಾಡುಗಳಾದವು. ಅಧಿಕಾರಿಗಳು ಇಚ್ಛಾವರ್ತಿಯಾಗಿ ಹಣಕಾಸಿನ ವಿನಿಯೋಗವನ್ನು ಮಾಡುತ್ತಿದ್ದ ಪದ್ಧತಿಯನ್ನು ರದ್ದುಮಾಡಿ ಬಜೆಟ್ ವಿಧಾನವನ್ನೂ ಲೆಕ್ಕ ತನಿಖಾ ವಿಧಾನವನ್ನೂ ಜಾರಿಗೆ ತಂದ. ಸಂಸ್ಥಾನದ ಹೆಚ್ಚುವರಿ ಆದಾಯವನ್ನು ಸುಮ್ಮನೆ ಸಂಗ್ರಹಿಸಿಡದೆ ಅದನ್ನು ಪುನಃ ಜನೋಪಯೋಗಿ ಕೆಲಸಗಳಿಗೆ ವಿನಿಯೋಗಿಸುವ ವ್ಯವಸ್ಥೆ ಮಾಡಿದ. 1863ರಲ್ಲಿ ಭೂ ಮತ್ತು ಕಂದಾಯ ನಿಗದಿಗಾಗಿ ಸಂಸ್ಥಾನಾದ್ಯಂತ ಹೊಸದಾಗಿ ಭೂ ಅಳತೆ ಮತ್ತು ಭೂಸ್ವಾಮಿತ್ವವನ್ನು ನಿಷ್ಕರ್ಷಿಸಲು ಕ್ರಮ ತೆಗೆದುಕೊಂಡ. ಭೂಮಿಯ ಕಂದಾಯವನ್ನು ಹಿಂದಿನ 30 ವರ್ಷಗಳ ಉತ್ಪನ್ನ ಆಯವ್ಯಯಗಳ ಸರಾಸರಿಯನ್ನು ಅನುಸರಿಸಿ ನಿಷ್ಕರ್ಷಿಸಲಾಯಿತು. ಇನಾಮ್ ಕಮಿಷನ್ ಸ್ಥಾಪನೆಯಾಗಿ ಸಂಸ್ಥಾನದ ಎಲ್ಲ ವ್ಯಕ್ತಿಗಳ ಮತ್ತು ಧಾರ್ಮಿಕ ಸಂಸ್ಥೆಗಳ ಇನಾಂಗಳ ಸಿಂಧುತ್ವವನ್ನು ನಿಷ್ಕರ್ಷಿಸಲಾಯಿತು. ಅರಣ್ಯ ಸಂಪತ್ತನ್ನೂ ನೀರಾವರಿ ವ್ಯವಸ್ಥೆಯನ್ನೂ ಸಂರಕ್ಷಿಸುವ ಏರ್ಪಾಡಾಯಿತು. ನ್ಯಾಯವಿತರಣೆಯ ಕೆಲಸ ದಿನೇದಿನೇ ಅಭಿವೃದ್ಧಿಯಾಗುತ್ತಿದ್ದುದರಿಂದ ಪ್ರತಿ ಜಿಲ್ಲೆಗೂ ಸಿವಿಲ್ ಮೊಕದ್ದಮೆಗಳನ್ನು ನೋಡಿಕೊಳ್ಳಲು ಒಬ್ಬೊಬ್ಬ ಉಪನ್ಯಾಯಾಧೀಶನನ್ನು ನೇಮಿಸಲಾಯಿತು. ವಿದ್ಯಾಭ್ಯಾಸದ ಬಹುಮುಖ ಬೆಳೆವಣಿಗೆ ಆಯಿತು. ನೂರಾರು ಮೈಲಿಗಳ ರಸ್ತೆಗಳನ್ನು ನಿರ್ಮಿಸಲಾಯಿತು. ಹೊಸ ಸೇತುವೆಗಳು, ಸಾರ್ವಜನಿಕ ಕಛೇರಿ ಕಟ್ಟಡಗಳು ನಿರ್ಮಾಣವಾದವು. ನಗರ ನೈರ್ಮಲ್ಯದೆಡೆಗೆ ಗಮನ ನೀಡಲು ಅನೇಕ ನಗರ ಸಭೆಗಳು ಸ್ಥಾಪಿತವಾದುವು. ಸೆರೆಮನೆಗಳ ಆಡಳಿತವನ್ನು ವ್ಯವಸ್ಥಿತಗೊಳಿಸಲಾಯಿತು. ಬೆಂಗಳೂರು ಕೇಂದ್ರ ಸೆರೆಮನೆಯನ್ನು ಮಾದರಿ ಸಂಸ್ಥೆಯಾಗಿ ರೂಪಿಸಲಾಯಿತು. ಈ ಎಲ್ಲ ಕಾರ್ಯಕ್ರಮಗಳಿಂದ ಸಂಸ್ಥಾನದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿತವಾಯಿತು. ಉದ್ಯಮಗಳಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಕಾಣಿಸಿಕೊಳ್ಳಲಾರಂಭಿಸಿತು. ವಿಸ್ತಾರ ಪ್ರದೇಶದಲ್ಲಿ ಕಾಫಿ ತೋಟಗಳು ಹುಟ್ಟಿಕೊಂಡವು. ಗಣಿಗಾರಿಕೆಯ ಅಭಿವೃದ್ಧಿಯಾಯಿತು. ಮೈಸೂರು ಸಂಸ್ಥಾನದಲ್ಲಿ ಐರೋಪ್ಯ ಆಡಳಿತ ಪದ್ಧತಿ, ವಿದ್ಯಾಭ್ಯಾಸ, ಜೀವನ ರೀತಿನೀತಿಗಳು ನೆಲೆಗೊಳ್ಳುವುದರಲ್ಲಿ ಬೌರಿಂಗನ ಕಾರ್ಯಕ್ರಮಗಳು ಬಹುಮುಖ್ಯ ಪಾತ್ರವಹಿಸಿದವು. *

ಮೈಸೂರಿಗೆ ಸಂಬಂಧಿಸಿದ ಅನೇಕ ಅಮೂಲ್ಯ ವಿಷಯಗಳನ್ನು ಈತ (ಪತ್ನಿ ಲೇಡಿ ಬೌರಿಂಗ್ ಸಹಯೋಗದೊಡನೆ) 'ಈಸ್ಟರ್ನ್ ಎಕ್ಸ್‌ಪೀರಿಯನ್ಸಸ್' ಗ್ರಂಥದಲ್ಲಿ ಸಂಗ್ರಹಿಸಿದ್ದಾನೆ. ಆ ಗ್ರಂಥದಿಂದ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಬೌರಿಂಗನ ಅಭಿಪ್ರಾಯಗಳನ್ನು ತಿಳಿಯಬಹುದು. ಕರ್ನಲ್ ವಿಲ್ಕ್ಸನ ಕೈಕೆಳಗೆ ಸೇವೆ ಸಲ್ಲಿಸುತ್ತಿದ್ದ ಟ್ರಿಪ್ಲಿಕೇನ್ ರಾಮಸ್ವಾಮಿ ಮೊದಲಿಯಾರ್ ಶಿವಸಮುದ್ರದಲ್ಲಿ ಕಟ್ಟಿಸಿದ ಸೇತುವೆಗಳ ಬಗ್ಗೆ ಬರೆಯುತ್ತ ಭಾರತೀಯ ಕಲಾತ್ಮಕ ರಚನೆಗೆ ಈ ಸೇತುವೆಗಳ ಕಟ್ಟಡ ನಿದರ್ಶನ ಎಂದು ಬೌರಿಂಗ್ ಅಭಿಪ್ರಾಯಪಟ್ಟಿದ್ದಾನೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತ ಕಾಲದಲ್ಲಿ ಹಣ ಪೋಲಾಗಿ ಬ್ರಿಟಿಷರಿಗೆ ಸಲ್ಲಬೇಕಾಗಿದ್ದ ಪೊಗದಿ ಸಂದಾಯವಾಗುತ್ತಿರಲಿಲ್ಲವೆಂಬ ವಿಷಯವನ್ನು ವಿಮರ್ಶಿಸಿ, ಮಹಾರಾಜರು ಎಂದೂ ಬ್ರಿಟಿಷರಿಗೆ ಸಂದಾಯವಾಗಬೇಕಾಗಿದ್ದ ಪೊಗದಿಯನ್ನು ಸಂದಾಯ ಮಾಡಲು ತಪ್ಪಿದವರಲ್ಲ ಎಂದಿದ್ದಾನೆ. ಅಕ್ರಮ ತೆರಿಗೆಗಳಿಂದ ಜನ ರೋಸಿದ ಕಾರಣ ನಗರ ಪ್ರಾಂತ್ಯದಲ್ಲಿ ಬೂದಿ ಬಸವನ ದಂಗೆಗೆ ಅವಕಾಶವಾಯಿತು. ಇಂಥ ಪರಿಸ್ಥಿತಿಯಲ್ಲಿ ಕಂದಾಯ ವಸೂಲಾಗದೆ ಕಪ್ಪ ಸಂದಾಯ ಸಾಧ್ಯವಾಗದೆ ಹೋಗಿದ್ದ ಸಂದರ್ಭದಲ್ಲಿ ಮಹಾರಾಜರಿಂದ ಅಧಿಕಾರಗಳನ್ನು ಹಿಂದಕ್ಕೆ ಪಡೆದುಕೊಂಡು, ಕಮಿಷನ್ ಆಡಳಿತವನ್ನು ಸ್ಥಾಪಿಸಿದ್ದು ಸಮಂಜಸವಲ್ಲವೆಂಬುದು ಬೌರಿಂಗನ ನಿಲವು. ಶರಾವತಿ (ಜೋಗ್) ಜಲಪಾತದ ಬಗ್ಗೆ ಆತನ ಶ್ಲಾಘನೆ ಹೀಗಿದೆ: ಇದು ಪ್ರಪಂಚದ ಅದ್ಭುತಗಳಲ್ಲೊಂದು. ಕಾವೇರಿ ನದಿಯ ಹರಿವಿಗಿಂತ ಈ ನದಿಯ ಜಲದ ಘನಪ್ರಮಾಣ ಕಡಮೆಯಾದರೂ ಜಲಪಾತದ ಈ ದುಮುಕಿನ ಎತ್ತರಕ್ಕೆ ಸಾಟಿಯಾದ ಎತ್ತರದ ಅರ್ಧಪಾತ ಮತ್ತಾವುದೂ ಇಲ್ಲ.

ಮುಮ್ಮಡಿ ಕೃಷ್ಣರಾಜ ಒಡೆಯರು 27ನೆಯ ಮಾರ್ಚಿ 1868ರಂದು ರಾತ್ರಿ 11 ಗಂಟೆಗೆ ಮೃತರಾಗಲು ಬೆಂಗಳೂರಿನಲ್ಲಿದ್ದ ಚೀಫ್ ಕಮಿಷನರ್ ಬೌರಿಂಗನಿಗೆ ಮೈಸೂರಿನಿಂದ ತಂತಿ ಬಂತು. ಸಂಜೆ ಮೃತರಾದ ಮಹಾರಾಜರಿಗೆ ಅಂತಿಮ ಗೌರವ ಸಲ್ಲಿಸಲು ಬೌರಿಂಗ್ ಮಾರನೆಯ ದಿನ ಸೈನಿಕರ ಕವಾಯಿತು (ಪೆರೇಡ್) ನಡೆಸಿ ಬಾವುಟವನ್ನು ಅರ್ಧ ಸ್ತಂಭಕ್ಕಿಳಿಸಿ ಹಾರಿಸಿದ. ಚಾಮರಾಜ ಒಡೆಯರಿಗೆ ಪಟ್ಟಾಭಿಷೇಕ ಮಾಡುವ ಬಗ್ಗೆ ಗವರ್ನರ್ ಜನರಲ್ ಹೊರಡಿಸಿದ ಘೋಷಣೆ ಸಕಾಲದಲ್ಲಿ ತಲುಪುವಂತೆ ಎಲ್ಲ ಜಿಲ್ಲೆಗಳಿಗೂ ಈತ ಪರಿಪತ್ರಗಳ ಮೂಲಕ ಕಳುಹಿಸಿದ. ಏಪ್ರಿಲ್ 4ರಂದು ಮೈಸೂರಿಗೆ ಹೋಗಿ ದುಃಖಿತರಾದ ರಾಜಮನೆತನದವರನ್ನು ಸಂತೈಸಿದ. ಬಾಲಕರಾಗಿದ್ದ ಚಾಮರಾಜ ಒಡೆಯರ ಪಟ್ಟಾಭಿಷೇಕ 1868 ಸೆಪ್ಟೆಂಬರ್ 23ರಂದು ನಡೆಯಿತು. 'ನಾನು ಮತ್ತು ಮೇಜರ್ ಎಲಿಯಟ್, ಬಾಲಕ ಚಾಮರಾಜ ಒಡೆಯರನ್ನು ಬೆಳ್ಳಿಯ ಮೆಟ್ಟಿಲುಗಳ ಮೇಲೆ ಹತ್ತಿಸಿ ಸಿಂಹಾಸನದ ಮೇಲೆ ಕೂರಿಸಿದೆವು. ಜೋಯಿಸರು ಮಂತ್ರಗಳನ್ನು ಹೇಳಿದರು. ಜಯಘೋಷಗಳಾದವು. ರಾಜರ ಬಂಧುಗಳು ಹಾಗೂ ಅಧಿಕಾರಿಗಳು ಮಹಾರಾಜರಿಗೆ ನಜರನ್ನೊಪ್ಪಿಸಿದರು. ಮಧ್ಯಾಹ್ನ ಪ್ರಜೆಗಳ ದರ್ಶನಕ್ಕಾಗಿ ಮಹಾರಾಜರು ಅರಮನೆಯ ಉಪ್ಪರಿಗೆಯ ಮುಂದಿನ ಸಾಲೆಯಲ್ಲಿ ಸಿಂಹಾಸನಾರೂಢರಾದರು' ಇತ್ಯಾದಿ ವಿವರಗಳು ಈತನ ಈಸ್ಟರ್ನ್ ಎಕ್ಸ್‌ಪೀರಿಯನ್ಸಸ್ ಗ್ರಂಥದಲ್ಲಿ ದೊರಕುತ್ತವೆ. **(ವಿ.ಜಿ.ಕೆ.;*)**

**ಬ್ಯಾಂಕಿಂಗ್ ಉದ್ಯಮ:** ಕರ್ನಾಟಕ ರಾಜ್ಯದ ಬ್ಯಾಂಕಿಂಗ್ ಉದ್ಯಮದ ಪ್ರಾರಂಭ 19ನೆಯ ಶತಮಾನದ ಉತ್ತರಾರ್ಧದಲ್ಲಿ ಮೈಸೂರು ಸಂಸ್ಥಾನದಲ್ಲಾಯಿತು. ರಾಜ್ಯದಲ್ಲಿ ಮೊತ್ತಮೊದಲಿಗೆ ಸ್ಥಾಪನೆಯಾದದ್ದು ಚಿತ್ರದುರ್ಗ ಉಳಿತಾಯ ಬ್ಯಾಂಕು (1870). ಆದರೆ ಕೆಲವಾರು ಕಾರಣಗಳಿಂದ ಅದು ಮುಚ್ಚಲ್ಪಟ್ಟಿತು. 20ನೆಯ ಶತಮಾನದ ಪೂರ್ವಾರ್ಧದಲ್ಲಿ ಸ್ಥಾಪನೆಯಾದ 44 ಬ್ಯಾಂಕುಗಳ ಪೈಕಿ ಏಳು ಬ್ಯಾಂಕುಗಳು ಮಾತ್ರ ಈಗ ಬದುಕಿವೆ. ಮಿಕ್ಕವು ಕೆಲವು ದೊಡ್ಡ ಬ್ಯಾಂಕುಗಳಲ್ಲಿ ವಿಲೀನಗೊಂಡರೆ, ಕೆಲವು ಅವಸಾನಗೊಂಡಿವೆ. ಪ್ರಾರಂಭದ ದೆಸೆಯಲ್ಲಿ ಸಣ್ಣ ಪ್ರಮಾಣದಲ್ಲಿ ಚಿಕ್ಕ ಪಟ್ಟಣಗಳಲ್ಲಿ ಉದ್ಯಮ ನಡೆಯುತ್ತಿತ್ತು. ರಾಜ್ಯದಲ್ಲಿ ಪ್ರಥಮ ಬಾರಿಗೆ ಸ್ಥಾಪಿತವಾದ ಬ್ಯಾಂಕುಗಳಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು ಮುಖ್ಯವಾದುವು. ಬ್ಯಾಂಕು ಎಂದರೆ ಸಾಲದ ಮತ್ತು ನಂಬಿಕೆಯ ಪ್ರತಿನಿಧಿ ಎಂಬ ತಿಳುವಳಿಕೆಯ ಪ್ರಕಾರ ಒಂದು ಜಾತಿಯ, ಕೋಮಿನ ಅಥವಾ ಗುಂಪಿನ ಪ್ರತಿನಿಧಿಗಳು ತಮ್ಮ ಅನುಕೂಲತೆಗಾಗಿ, ಉಳಿತಾಯ ಸಾಧನೆಗಾಗಿ, ಅಥವಾ ತಮ್ಮ ತಮ್ಮ

ಕೈಗಾರಿಕೆ ಅಥವಾ ವ್ಯಾಪಾರ ಉದ್ಯಮಗಳ ಪೋಷಣೆಗಾಗಿ ಸ್ಥಾಪಿಸಿಕೊಂಡ ದ್ರವ್ಯ ಸಂಸ್ಥೆಗಳು ಬ್ಯಾಂಕಿಂಗ್ ಉದ್ಯಮದ ಪ್ರಥಮ ಹೆಜ್ಜೆಗಳು. ಅವುಗಳ ಪ್ರಥಮೋದ್ದೇಶ ಬೇರೆಯಾಗಿದ್ದರೂ ಅನಂತರದ ಬೆಳವಣಿಗೆಯಲ್ಲಿ ಅವುಗಳ ಮೂಲಭೂತ ಉದ್ದೇಶಗಳು ಹಿಂದೆ ಬಿದ್ದು, ಸಾಮಾಜಿಕ ಪ್ರಜ್ಞೆ ಮೂಡಿ, ಅದಕ್ಕೆ ತಕ್ಕಂತೆ ಅವುಗಳ ಬೆಳೆವಣಿಗೆಯಾದವು.

**ವಾಣಿಜ್ಯ ಬ್ಯಾಂಕುಗಳು :** ಚಿತ್ರದುರ್ಗ ಉಳಿತಾಯ ಬ್ಯಾಂಕು (1870) ಅಂದಿನ ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ಪ್ರಾರಂಭವಾದ ಸಂಸ್ಥೆ. ಇದು 94 ವರ್ಷಗಳ ಮಹತ್ತ್ವಪೂರ್ಣ ಸೇವೆಯ ಅನಂತರ

ರಿಸರ್ವ್‌ಬ್ಯಾಂಕ್ ಆಫ್ ಇಂಡಿಯ, ಬೆಂಗಳೂರು

1964ರಲ್ಲಿ ಕರ್ನಾಟಕ ಬ್ಯಾಂಕಿನಲ್ಲಿ ವಿಲೀನಗೊಂಡಿತು. 1885ರಲ್ಲಿ ನಂಜನಗೂಡಿನಲ್ಲಿ ಸ್ಥಾಪನೆಯಾದ ಶ್ರೀಕಂಠೇಶ್ವರ ಬ್ಯಾಂಕ್ ರಾಜ್ಯದಲ್ಲಿ ನಿಯಮಿತವಾಗಿ ಪ್ರಾರಂಭಿಸಲ್ಪಟ್ಟ ಎರಡನೆಯ ಬ್ಯಾಂಕಿಂಗ್ ಸಂಸ್ಥೆ. ಇದು 80 ವರ್ಷ ಬದುಕಿ 1965ರಲ್ಲಿ ಅವಸಾನ ಹೊಂದಿತು. ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಉಡುಪಿಯಲ್ಲಿಯೂ ಕೆನರಾ ಬ್ಯಾಂಕ್ ಮಂಗಳೂರಿನಲ್ಲಿಯೂ 1906ರಲ್ಲಿ ಪ್ರಾರಂಭವಾದವು. ಈ ಎರಡು ಬ್ಯಾಂಕುಗಳೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಹಿಂದಿನ ಮದರಾಸು ಪ್ರಾಂತ್ಯ) ಸ್ಥಾಪಿತವಾದರೂ ಅವುಗಳ ಹೆಚ್ಚಿನ ಚಟುವಟಿಕೆ ಹಿಂದಿನ ಮೈಸೂರು ಸಂಸ್ಥಾನದಲ್ಲಿ ವಿಶೇಷವಾಗಿ ವಿಸ್ತರಿಸಿತ್ತು. ಇವುಗಳ ಜೊತೆಗೆ ಕರ್ನಾಟಕ ಬ್ಯಾಂಕ್ (1924), ಸಿಂಡಿಕೇಟ್ ಬ್ಯಾಂಕ್ (1925; ಹಿಂದಿನ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್), ವಿಜಯಾ ಬ್ಯಾಂಕ್ (1931)– ಇವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಪ್ರಾರಂಭವಾದವು. ಈ ಬೆಳೆವಣಿಗೆಯನ್ನು ನೋಡಿದರೆ ರಾಜ್ಯದ ಬ್ಯಾಂಕಿಂಗ್ ಉದ್ಯಮಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಕೊಡುಗೆ ಅಧಿಕ. 1930ರಲ್ಲಿ ಪ್ರಾರಂಭವಾದ ಬೆಳಗಾಂ ಬ್ಯಾಂಕ್–ಇವು ಮತ್ತು ವೈಶ್ಯ ಬ್ಯಾಂಕ್ ರಾಜ್ಯದ ಇತರೆಡೆಗಳಲ್ಲಿ ಸ್ಥಾಪಿತಗೊಂಡು ಬೆಳೆದ ಇತರ ಬ್ಯಾಂಕಿಂಗ್ ಸಂಸ್ಥೆಗಳು.

ಹಿಂದಿನ ಮೈಸೂರು ಸಂಸ್ಥಾನದಲ್ಲಿ ಬೃಹತ್ ಬ್ಯಾಂಕಿಂಗ್ ಉದ್ಯಮದ ನಾಂದಿ ಮೈಸೂರು ಬ್ಯಾಂಕಿನ ಸ್ಥಾಪನೆಯಾದೊಡನೆ ಆಯಿತು. ಈಗಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ಬ್ಯಾಂಕು, ನಿಯಮಿತ ಎಂಬ ಹೆಸರಿನಿಂದ 1913ರಲ್ಲಿ ಸ್ಥಾಪಿತವಾಯಿತು. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಇದರ ಸ್ಥಾಪಕರು. ಅನೇಕ ವರ್ಷಗಳ ಕಾಲ ಇಡೀ ಮೈಸೂರು ರಾಜ್ಯಕ್ಕೆ ಅದು ಒಂದು ಜನಪ್ರಿಯ ಏಕಸ್ವಾಮ್ಯ ಬ್ಯಾಂಕಿಂಗ್ ಸಂಸ್ಥೆಯಾಗಿತ್ತು.

1930ರಿಂದ ಈಚಿನ ವರ್ಷಗಳಲ್ಲಿ ಕೆಲವಾರು ಸಣ್ಣಪುಟ್ಟ ಬ್ಯಾಂಕುಗಳು ಪ್ರಾರಂಭವಾದರೂ ಈ ಉದ್ಯಮದ ಹೆಚ್ಚು ಬೆಳೆವಣಿಗೆಯನ್ನು 1938ರ ಅನಂತರದ ವರ್ಷಗಳಲ್ಲಿ ಕಾಣಬಹುದು. 1938ರಲ್ಲಿ ಸಂಸ್ಥಾನಕ್ಕೆ ಆಗಮಿಸಿದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನಿಯಮಿತ ಮತ್ತು ಕೆಲವು ವರ್ಷಗಳ ಅನಂತರ ಬಂದ ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ನಿಯಮಿತ ಈ ಬೆಳೆವಣಿಗೆಗೆ ಮೂಲವಾದವು. ಮೈಸೂರು ಬ್ಯಾಂಕಿನ ಜೊತೆಗೆ ಈ ಎರಡು ಬ್ಯಾಂಕುಗಳೂ ಸೇರಿ ಉಳಿತಾಯ ಠೇವಣಿಗಳನ್ನು ಆಕರ್ಷಿಸುವುದರಲ್ಲಿ, ಕೈಗಾರಿಕೆ, ವಾಣಿಜ್ಯ ಮತ್ತು ಸಾರಿಗೆಗೆ ಧನಸಹಾಯ ಮಾಡುವುದರಲ್ಲಿ ಪ್ರಪ್ರಥಮವಾದುವು.

ಸ್ವಾತಂತ್ರ್ಯಪೂರ್ವದಲ್ಲಿ ಈ ಬ್ಯಾಂಕುಗಳು ರಾಜ್ಯದ ಅಭಿವೃದ್ಧಿಗೆ ಎಷ್ಟರ ಮಟ್ಟಿಗೆ ನೆರವಾದುವು ಎಂಬ ಅಂಶವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಆದರೆ ಸ್ವಾತಂತ್ರ್ಯಾನಂತರದಲ್ಲಿ ರಾಜ್ಯದ ಅಭಿವೃದ್ಧಿಗೆ ಬ್ಯಾಂಕಿಂಗ್ ಉದ್ಯಮ ಅನೇಕ ರೀತಿಯಲ್ಲಿ ಸಹಾಯ ಮಾಡಿದೆ. ಅದರಲ್ಲೂ 1956ರ ಅನಂತರ ಈ ಉದ್ಯಮಕ್ಕೆ ಒಂದು ವಿಶೇಷ ರೀತಿಯ ಚಾಲನೆ ಮತ್ತು ಚೇತನ ಬಂತು. ಮೈಸೂರು ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್ ಆ ಸಂದರ್ಭದಲ್ಲಿ ರಾಜ್ಯದಲ್ಲಿದ್ದ ಮುಖ್ಯ ಬ್ಯಾಂಕಿಂಗ್ ಸಂಸ್ಥೆಗಳು, ಈ ಮೂರು ಬ್ಯಾಂಕುಗಳೂ ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಪ್ರಗತಿಯಲ್ಲಿ ಗಮನಾರ್ಹ ಪಾತ್ರವಹಿಸಿವೆ. 1969ರಲ್ಲಿ ಭಾರತದ ಅತಿ ದೊಡ್ಡ ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣವಾದ ಅನಂತರ ಈ ಕ್ಷೇತ್ರದಲ್ಲಿ ಬೆಳೆವಣಿಗೆ ತೀವ್ರವಾಯಿತೆನ್ನಬಹುದು.

1956ರಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಸಂಖ್ಯೆ 356 ಇದ್ದರೆ 1975ರಲ್ಲಿ ಅವುಗಳ ಸಂಖ್ಯೆ 1750ಕ್ಕೆ ಏರಿತು. ಶಾಖೆಗಳಲ್ಲಿ ಅತಿಹೆಚ್ಚಿನ ವೇಗವರ್ಧನೆಯಾದದ್ದು ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ. ಮೂರನೆಯ ಯೋಜನೆಯ ಕಾಲದಲ್ಲಿ ಈ ವೇಗಕ್ಕೆ ಮತ್ತಷ್ಟು ಚಾಲನೆಯುಂಟಾಯಿತು. ಆದರೆ ಈ ಪ್ರಗತಿ ಕರ್ನಾಟಕ ರಾಜ್ಯಕ್ಕಿಂತ ಬೇರೆಡೆ ತ್ವರಿತವಾಗಿತ್ತು. ವಾಣಿಜ್ಯ ಬ್ಯಾಂಕುಗಳ ಪ್ರಗತಿಯ ಮತ್ತೊಂದು ಸೂಚನೆ ಅವುಗಳ ಲೇವಾದೇವಿಯ ವಿವರಗಳು. ಠೇವಣಿ ಸಂಗ್ರಹ, ಸಾಲ ನೀಡಿಕೆ ಗಮನಾರ್ಹವಾಗಿ ಹೆಚ್ಚಿದವು. ಕೈಗಾರಿಕೆಗಳ ಅಭಿವೃದ್ಧಿಗೆ ಕಾರ್ಖಾನೆಗಳ ಸ್ಥಾಪನೆಗೆ, ಕೃಷಿ ಮತ್ತು ಕೃಷಿ ಸಂಬಂಧದ ಚಟುವಟಿಕೆಗಳಿಗೆ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗೆ ನಿರ್ಮಾಣ ಕಾರ್ಯಗಳಿಗೆ ಮತ್ತು ಗಣಿ ಉದ್ಯಮಗಳಿಗೆ ಬ್ಯಾಂಕುಗಳು ಹೆಚ್ಚುಹೆಚ್ಚಾಗಿ ಸಾಲ ನೀಡತೊಡಗಿದವು.

1972ರ ವೇಳೆಗೆ ರಾಜ್ಯದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಅದರ ಉಪಸಂಸ್ಥೆಗಳ ಶಾಖೆಗಳು 279, ರಾಷ್ಟ್ರೀಕೃತ 14 ಬ್ಯಾಂಕುಗಳ ಶಾಖೆಗಳು 617 ಮತ್ತು ಇತರ ವಾಣಿಜ್ಯ ಬ್ಯಾಂಕುಗಳ ಶಾಖೆಗಳು 396 ಆಗಿದ್ದುವು.

ಕರ್ನಾಟಕ ರಾಜ್ಯದ ತಮ್ಮ ಪ್ರಧಾನ ಕಛೇರಿಗಳನ್ನು ಹೊಂದಿರುವ ಬ್ಯಾಂಕುಗಳು ಇವು–

ಕರ್ನಾಟಕ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಕೆನರಾ ಬ್ಯಾಂಕ್, ಬೆಳಗಾಂ ಬ್ಯಾಂಕ್, ವಿಜಯಾ ಬ್ಯಾಂಕ್, ವೈಶ್ಯ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (2001ರ ಮಾರ್ಚ್ ಅಂತದ ವೇಳೆಗೆ ರಾಜ್ಯದಲ್ಲಿ ವಿವಿಧ ವಾಣಿಜ್ಯ ಬ್ಯಾಂಕ್‌ಗಳ 3,652 ಶಾಖೆಗಳಿದ್ದವು).

**ಸಹಕಾರಿ ಬ್ಯಾಂಕುಗಳು:** ಸಹಕಾರಿ ರಂಗದಲ್ಲಿ ಎರಡು ಬಗೆಯ ಬ್ಯಾಂಕುಗಳು ಇವೆ. (1)ಸದಸ್ಯರಿಗೆ ಅಲ್ಪಾವಧಿ ಅಥವಾ ದೀರ್ಘಾವಧಿ ಸಾಲಗಳನ್ನು ವಿವಿಧೋದ್ದೇಶಗಳಿಗೆ, ನೀಡುವ ಗ್ರಾಮಾಂತರ ಅಭಿವೃದ್ಧಿಗೆ ದುಡಿಯುವ ಬ್ಯಾಂಕುಗಳು. ಇವು ಸಹಕಾರಿ ತತ್ತ್ವದ ಮೇಲೆ ರೂಪಿತಗೊಂಡರೂ ಇವುಗಳ ವ್ಯವಸ್ಥಾಪನೆ ವಾಣಿಜ್ಯ ಬ್ಯಾಂಕುಗಳನ್ನೇ ಹೋಲುತ್ತದೆ.

(2)ಕೃಷಿ ಸಾಲ ನೀಡುವಿಕೆ, ಕೃಷಿ ಅಭಿವೃದ್ಧಿಗೆ ಅತ್ಯಗತ್ಯವಾದ ಸಹಾಯ ಮತ್ತು ಸಹಕಾರ ಒದಗಿಸುವುದು ಮತ್ತು ಆ ಮೂಲಕ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯೇ ಮುಖ್ಯೋದ್ದೇಶವಾಗಿ ಉಳ್ಳ ಜಿಲ್ಲಾಮಟ್ಟದ ಸಹಕಾರಿ ಬ್ಯಾಂಕುಗಳು. ಈ ಉದ್ದೇಶ ಸಾಧನೆಗೆ ಅನುವಾಗುವಂತೆ ಇವು ಅಲ್ಪಾವಧಿ ಸಾಲಗಳು, ಮಧ್ಯಮಾವಧಿ ಸಾಲಗಳು ಅಥವಾ ಅವೆರಡರ ಮಿಶ್ರಣ ರೀತಿಯ ಸಾಲಗಳನ್ನು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಮೂಲಕ ಕೃಷಿಕರಿಗೆ ಒದಗಿಸುತ್ತವೆ.



ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಆಡಳಿತ ಕಛೇರಿ, ಬೆಂಗಳೂರು

ರಾಜ್ಯದಲ್ಲಿ ಮೊತ್ತಮೊದಲನೆಯದಾಗಿ ಬೆಂಗಳೂರು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ 1909-10ರಲ್ಲಿ ಪ್ರಾರಂಭವಾಯಿತು. ರಾಜ್ಯದ ಕೃಷಿ ಅಭಿವೃದ್ಧಿಯ ಮತ್ತು ಅಧಿಕ ಕೃಷಿ ಉತ್ಪಾದನೆಯ ಅಗತ್ಯವನ್ನು ಪೂರೈಸಲು ರಾಜ್ಯ ಸಹಕಾರ ಬ್ಯಾಂಕ್ 1915-16ರಲ್ಲಿ ಸ್ಥಾಪಿತವಾಯಿತು. ಮೂಲೋದ್ದೇಶ ಸಾಧನೆಗೆ ಅನುವಾಗುವಂತೆ 1922ರಲ್ಲಿ ಈ ಬ್ಯಾಂಕಿನ ಪುನರ್ ವ್ಯವಸ್ಥೆಯಾಯಿತು. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಜಿಲ್ಲಾಮಟ್ಟದ ಸಹಕಾರಿ ಬ್ಯಾಂಕುಗಳ ಸ್ಥಾಪನೆ 1953ರಲ್ಲಿ ಪ್ರಾರಂಭವಾಗಿ 1956ರ ಹೊತ್ತಿಗೆ ಪೂರ್ಣಗೊಂಡಿತು.

**ಭೂ ಅಭಿವೃದ್ಧಿ ಬ್ಯಾಂಕುಗಳು :** ಇವು ಸಹಕಾರಿ ತತ್ತ್ವದ ಮೇಲೆ ಕೆಲಸ ಮಾಡುತ್ತವೆ. ನೀರಾವರಿ ಸೌಲಭ್ಯ, ನಾನಾ ರೀತಿಯಲ್ಲಿ ಭೂ ಅಭಿವೃದ್ಧಿ, ಕೃಷಿಯ ಯಾಂತ್ರೀಕರಣ ಮುಂತಾದವುಗಳ ಮೂಲಕ ಹೆಚ್ಚಿನ ಕೃಷಿ ಉತ್ಪಾದನೆ ಸಾಧಿಸಲು ದೀರ್ಘಾವಧಿ ಸಾಲ ಒದಗಿಸುವುದು ಈ ಬ್ಯಾಂಕುಗಳ ಮುಖ್ಯೋದ್ದೇಶ. ಕರ್ನಾಟಕ ರಾಜ್ಯಕ್ಕೆ ಅನ್ವಯಿಸಿದಂತೆ ಬಾವಿ ತೋಡುವಿಕೆ ಮತ್ತು ಪಂಪು ಸೆಟ್ಟು ಜೋಡಿಸಿ ನೀರಾವರಿ ಅನುಕೂಲ ಒದಗಿಸುವಿಕೆಗೆ ಅಧಿಕ ಪ್ರಮಾಣದ ದೀರ್ಘಾವಧಿ ಸಾಲ ವಿನಿಯೋಗವಾಗಿದೆ.

1922ರಲ್ಲಿ ರಾಜ್ಯ ಸಹಕಾರಿ ಬ್ಯಾಂಕಿನ ಒಂದು ಅಂಗವಾಗಿ ಭೂ ಅಭಿವೃದ್ಧಿ ವಿಭಾಗ ವ್ಯವಸ್ಥಿತವಾಗಿತ್ತು. ಕೆಲವು ವರ್ಷಗಳ ಅನಂತರ ಭೂ ಅಭಿವೃದ್ಧಿಗೆ ಒಂದು ಪ್ರತ್ಯೇಕ ಸಂಸ್ಥೆ ಇರಬೇಕೆಂಬ ಅಭಿಪ್ರಾಯದ ಮೇಲೆ 1929ರಲ್ಲಿ ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕ್ ಸಹಕಾರಿ ಕ್ಷೇತ್ರದ ಒಂದು ಪ್ರತ್ಯೇಕ ಅಂಗವಾಗಿ ಸ್ಥಾಪಿತವಾಯಿತು. ಈಗ ರಾಜ್ಯದಲ್ಲಿ ರಾಜ್ಯಮಟ್ಟದ ಬ್ಯಾಂಕ್, ಜಿಲ್ಲಾಮಟ್ಟದ ಕಚೇರಿಗಳು ಮತ್ತು ತಾಲ್ಲೂಕುಮಟ್ಟದ ಭೂ ಅಭಿವೃದ್ಧಿ ಶಾಖೆಗಳಿವೆ.

ಕೃಷಿ ಕುಟುಂಬಗಳಿಗೆ ಬಾವಿಗಳನ್ನು ತೋಡಲು ಮತ್ತು ಪಂಪುಸೆಟ್ಟುಗಳನ್ನು ಜೋಡಿಸಲು ಸಾಲ ದೊರಕಿದೆ. ಸಣ್ಣ ಪ್ರಮಾಣದ ನೀರಾವರಿ ಯೋಜನೆಯ ಅಂಗವಾಗಿ ಜಮೀನಿನ ಅಭಿವೃದ್ಧಿಯನ್ನು ಸಾಧಿಸಲಾಗಿದೆ. ಈ ಸಾಧನೆಯಿಂದಾಗಿ ರಾಜ್ಯದಲ್ಲಿ 35 ಕೋಟಿ ರೂ. ಮೌಲ್ಯದ 3.5 ಲಕ್ಷ ಟನ್ನುಗಳಷ್ಟು ಕೃಷಿ ಉತ್ಪಾದನೆ ಹೆಚ್ಚಾಗಿದೆ.

ನಗರ ಸಹಕಾರಿ ಬ್ಯಾಂಕುಗಳು, ಕೈಗಾರಿಕಾ ಸಹಕಾರಿ ಬ್ಯಾಂಕುಗಳು ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾದ ಸಾಲ ನೀಡುತ್ತವೆ. ವಿಶೇಷವಾಗಿ ಸಹಕಾರಿ ರಂಗದಲ್ಲಿ ಸ್ಥಾಪಿತವಾಗುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಅಗತ್ಯವಾದ ಸಾಲ ಮತ್ತು ಧನ ಸಹಾಯವನ್ನು ನೀಡುವುದು ಈ ಬ್ಯಾಂಕುಗಳ ಮುಖ್ಯೋದ್ದೇಶ. ರಾಜ್ಯದಲ್ಲಿ 1998ರ ಮಾರ್ಚ್ ಅಂತ್ಯದ ವೇಳೆಗೆ 277 ಪ್ರಧಾನ ಸಹಕಾರ ಬ್ಯಾಂಕ್ ಕಛೇರಿಗಳು ಮತ್ತು 523 ಶಾಖೆಗಳೂ ಇದ್ದವು ಇವುಗಳ ಮೂಲಕ 2552 ಕೋಟಿ ರೂ. ಗಳ ಸಾಲನೀಡಲಾಗಿದೆ.

**ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು :** ಕೇಂದ್ರ ಸರ್ಕಾರ 1975ರಲ್ಲಿ ಆಚರಣೆಗೆ ತಂದ ಆರ್ಥಿಕ ಕಾರ್ಯಕ್ರಮದ ಪ್ರಕಾರ ದೇಶಾದ್ಯಂತ ಪ್ರಾದೇಶಿಕ ಬ್ಯಾಂಕುಗಳನ್ನು ಸ್ಥಾಪಿಸಲು ಅವಕಾಶವಾಯಿತು. ಪ್ರಾಂತೀಯ ಅಭಿವೃದ್ಧಿ, ಬಡಕೃಷಿಕರು ಮತ್ತು ಕೃಷಿಕಾರ್ಮಿಕರ ಏಳಿಗೆ, ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ, ಗ್ರಾಮಾಂತರ ಋಣಪರಿಹಾರ, ಜೀತಪದ್ಧತಿಯಿಂದ ವಿಮುಕ್ತಿಗೊಂಡ ಜೀತದಾಳುಗಳು ಪುನರ್ವಸತಿ, ಕೃಷಿ ಅಭಿವೃದ್ಧಿಗೆ ಸಹಕಾರಿ ಸಂಘಗಳಿಂದ ಅನುವಾದ ಸಾಲ ದೊರಕದ ಪರಿಸ್ಥಿತಿಯಲ್ಲಿ ಅಗತ್ಯವಾದ ಸಾಲದ ಸರಬರಾಜು ಮುಂತಾದ ಕಾರ್ಯಕ್ರಮಗಳಿಗೆ ಅನುವಾಗುವಂತೆ ಅಗತ್ಯವಾದ ಸಾಲ ಮತ್ತು ಸಹಾಯಧನದ ನೀಡಿಕೆ ಈ ಬ್ಯಾಂಕುಗಳ ಮುಖ್ಯೋದ್ದೇಶ. ಒಟ್ಟಿನಲ್ಲಿ ಬ್ಯಾಂಕು ಸ್ಥಾಪಿತವಾಗುವ ಪ್ರದೇಶದ ಅಥವಾ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿ ಈ ಬ್ಯಾಂಕುಗಳ ಧ್ಯೇಯ. ಆದ್ದರಿಂದ ಪ್ರತಿಯೊಂದು ಬ್ಯಾಂಕಿನ ಚಟುವಟಿಕೆ ಒಂದು ಜಿಲ್ಲೆಗೆ ಅಥವಾ ಎರಡು ಜಿಲ್ಲೆಗಳಿಗೆ ಸೀಮಿತವಾಗಿರುತ್ತದೆ. ಅನುಕೂಲಕ್ಕೆ ತಕ್ಕಂತೆ ಪ್ರತಿಯೊಂದು ಬ್ಯಾಂಕೂ ಹಲವಾರು ಶಾಖೆಗಳನ್ನು ತೆರೆಯಬಹುದು. ವಾಣಿಜ್ಯ ಬ್ಯಾಂಕುಗಳು ಇವನ್ನು ಪ್ರಾಯೋಜಿಸುತ್ತವೆ. ರಾಜ್ಯದಲ್ಲಿ 2001 ಮಾರ್ಚ್ ಅಂತ್ಯದ ಹೊತ್ತಿಗೆ 1,106 ಗ್ರಾಮೀಣ ಬ್ಯಾಂಕುಗಳಿದ್ದವು.

ಕರ್ನಾಟಕದಲ್ಲಿ ಬ್ಯಾಂಕಿಂಗ್ ಉದ್ಯಮ ತನ್ನ ಹಸ್ತವನ್ನು ಎಲ್ಲೆಡೆಗಳಿಗೆ ಚಾಚಿ ರಾಜ್ಯದ ಆರ್ಥಿಕ ಪ್ರಗತಿ ಹಾಗೂ ಬ್ಯಾಂಕಿಂಗ್ ಉದ್ಯಮದ ಪ್ರಗತಿಗೆ ಸಹಾಯ ಮಾಡಿದೆ. ರಾಷ್ಟ್ರದ ಬ್ಯಾಂಕಿಂಗ್ ಉದ್ಯಮದಲ್ಲಿ ಮುಂದುವರಿದ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಷ್ಟ್ರದ ಬ್ಯಾಂಕಿಂಗ್ ಬ್ಯಾಂಕುಗಳ ಉದಾರೀಕರಣ ನೀತಿಯಿಂದಾಗಿ ರಾಷ್ಟ್ರದ ಇತರ ರಾಜ್ಯಗಳಂತೆ ಕರ್ನಾಟಕದಲ್ಲೂ ವಿದೇಶಿ ಬ್ಯಾಂಕುಗಳ ಹಾಗೂ ದೇಶಿಯ ಖಾಸಗಿ ವಲಯದಲ್ಲಿ ಸ್ಥಾಪಿತವಾದ ಆಧುನಿಕ ಬ್ಯಾಂಕುಗಳ ಶಾಖೆಗಳನ್ನು ಹೊಂದಿವೆ.

(ಸಿ.ಎಂ.ಎಂ.)

**ಬ್ಯಾಡಗಿ:** ಹಾವೇರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಮುಖ್ಯಸ್ಥಳ. ಜಿಲ್ಲೆಯ ಮಧ್ಯದಲ್ಲಿರುವ ಈ ತಾಲ್ಲೂಕನ್ನು ಪೂರ್ವದಲ್ಲಿ ರಾಣೆಬೆನ್ನೂರು, ದಕ್ಷಿಣದಲ್ಲಿ ಹಿರೆಕೆರೂರು ಪಶ್ಚಿಮದಲ್ಲಿ ಹಾನಗಲ್ಲು ಮತ್ತು ಉತ್ತರದಲ್ಲಿ ಹಾವೇರಿ ತಾಲ್ಲೂಕುಗಳು ಸುತ್ತುವರೆದಿವೆ. ಈ ತಾಲ್ಲೂಕಿನ ಹೋಬಳಿಗಳು ಕಾಗಿನೆಲೆ ಮತ್ತು ಬ್ಯಾಡಗಿ. ಒಟ್ಟು 63 ಗ್ರಾಮಗಳೂ ಒಂದು ಪಟ್ಟಣವೂ ಇರುವ ಈ ತಾಲ್ಲೂಕಿನ ವಿಸ್ತೀರ್ಣ 436 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 1,27,879.

ಕೆಲವೇ ಸಣ್ಣಗುಡ್ಡಗಳನ್ನು ಬಿಟ್ಟರೆ ತಾಲ್ಲೂಕಿನ ಬಹುಭಾಗ ಸುಮಾರು ಸಮತಟ್ಟಾದ ಪ್ರದೇಶ. ಈ ತಾಲ್ಲೂಕಿನ ಪಶ್ಚಿಮ ಮತ್ತು ಮಧ್ಯಭಾಗ ಮಸಾರಿ ಹಾಗೂ ಎರೆಮಣ್ಣಿನಿಂದ ಕೂಡಿದೆ. ಎರೆಭೂಭಾಗ ಮಾತ್ರ ಫಲವತ್ತಾಗಿದೆ. ಉಳಿದ ಭಾಗ ವ್ಯವಸಾಯಯೋಗ್ಯವಲ್ಲ. ರೈತರು ವ್ಯವಸಾಯಕ್ಕೆ ಮಳೆಯನ್ನೇ ಅವಲಂಬಿಸಿಕೊಂಡಿದ್ದಾರೆ. ಈ ತಾಲ್ಲೂಕಿನಲ್ಲಿ ದೊಡ್ಡ ನದಿಗಳಿಲ್ಲ. ಸಣ್ಣ ಹಳ್ಳಗಳು ಮಳೆಗಾಲದಲ್ಲಿ ತುಂಬಿ ಹರಿದು ಬೇಸಗೆಯಲ್ಲಿ ಬತ್ತಿಹೋಗುತ್ತವೆ. ಕೆರೆ ಮತ್ತು ಬಾವಿ ಇಲ್ಲಿನ ವ್ಯವಸಾಯಕ್ಕೆ ಆಧಾರ. ಕಾಗಿನೆಲೆಯ ಕೆರೆ, ಚಿಕ್ಕಬಾಸೂರ ಕೆರೆ ಮತ್ತು ತುಂಮೂರ ಕೆರೆಗಳಿಂದ ಬ್ಯಾಡಗಿ ತಾಲ್ಲೂಕಿಗೆ ನೀರೊದಗುವುದು. ವಾರ್ಷಿಕ ಸರಾಸರಿ ಮಳೆ 654 ಮಿಮೀ ಮತ್ತು ಇಲ್ಲಿ ಆಹಾರೇತರ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಸಕಾಲದಲ್ಲಿ ಮಳೆ ತಪ್ಪದೆ ಆದರೆ ಮೆಣಸಿನಕಾಯಿ, ಹತ್ತಿ, ರಾಗಿ, ಬಿಳಿ ಜೋಳ, ಸೇಂಗಾ, ಸಾವೆ ಹಾಗೂ ಅಲ್ಪ ಪ್ರಮಾಣದಲ್ಲಿ ಬತ್ತ ಬೆಳೆಯುತ್ತಾರೆ. ಈ ತಾಲ್ಲೂಕಿನ ಮೆಣಸಿನಕಾಯಿ ಉತ್ತಮವೆಂದು ಪ್ರಸಿದ್ಧ.

ತಾಲ್ಲೂಕಿನ ಮುಖಾಂತರ ಬೆಂಗಳೂರು–ಧಾರವಾಡ ರೈಲುಮಾರ್ಗ ಹಾದುಹೋಗಿದೆ. ಕದರಮಂಡಲಗಿ, ಕಾಗಿನೆಲೆ, ಮೋಟೆಬೆನ್ನೂರು ಈ ತಾಲ್ಲೂಕಿನ ಕೆಲವು ಮುಖ್ಯ ಗ್ರಾಮಗಳು. ರಾಣೆಬೆನ್ನೂರಿಗೆ ಪಶ್ಚಿಮದಲ್ಲಿ ಸು. 14 ಕಿಮೀ ದೂರದಲ್ಲಿರುವ ಕದರಮಂಡಲಗಿಯಲ್ಲಿ ಪುರಾಣ ಪ್ರಸಿದ್ಧ ಜನಮೇಜಯ ಮಹಾರಾಜ ಕಟ್ಟಿಸಿದ್ದೆನ್ನಲಾದ ಮಾರುತಿ ದೇವಾಲಯವಿದೆ. ಕಾಗಿನೆಲೆ ಕನಕದಾಸರಿಂದ ಸ್ಥಾಪಿಸಲ್ಪಟ್ಟ ಆದಿಕೇಶವ ದೇವಾಲಯದಿಂದ ಪ್ರಸಿದ್ಧ. ಮೋಟೆಬೆನ್ನೂರು ಒಂದು ದೊಡ್ಡ ಗ್ರಾಮ. ಬ್ಯಾಡಗಿ ರೈಲ್ವೆ ನಿಲ್ದಾಣಕ್ಕೆ ಸುಮಾರು ಎರಡೂವರೆ ಕಿಮೀ ದೂರದಲ್ಲಿರುವ ಈ ಗ್ರಾಮದ ಮಲ್ಲಿಕಾರ್ಜುನ ದೇವಾಲಯದಲ್ಲಿ 1051ರ ಒಂದು ಶಾಸನವಿದೆ. ಈ ಸ್ಥಳ ಜೈನಮುನಿಗಳ ವಾಸಸ್ಥಾನವಾಗಿತ್ತೆಂದು ತಿಳಿದುಬರುವುದು.

ಬ್ಯಾಡಗಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಇದು ಬೆಂಗಳೂರು–ಪುಣೆ ರೈಲ್ವೆ ಹಾದಿಯಲ್ಲಿ ಹುಬ್ಬಳ್ಳಿಯ ಆಗ್ನೇಯಕ್ಕೆ 88 ಕಿಮೀ ದೂರದಲ್ಲಿದೆ. ಜನಸಂಖ್ಯೆ 25,658. ರೈಲ್ವೆ ನಿಲ್ದಾಣವಿದ್ದು ಬ್ಯಾಡಗಿ ಒಂದು ವ್ಯಾಪಾರ ಕೇಂದ್ರ. ಪುರಸಭಾಡಳಿತವಿದೆ. (ಜಿ.ಬಿ.ಎನ್.)

**ಬ್ಯಾನರ್ಜಿ, ಆಲ್ಬಿಯನ್ ರಾಜ್‌ಕುಮಾರ್:** ಮೈಸೂರು ಸಂಸ್ಥಾನದ ದಿವಾನರು (1922–26). ಕಲ್ಕತ್ತದ ಬಾರಾನಗರದಲ್ಲಿ 1871ರಲ್ಲಿ ಸೇವಾವ್ರತ ಬ್ರಹ್ಮರ್ಷಿ ಶಶಿಪಾದ ಬ್ಯಾನರ್ಜಿಯವರ ಮಗನಾಗಿ ಜನಿಸಿದ ಇವರು ಮೊದಲು ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ, ಅನಂತರ ಆಕ್ಸ್‌ಫರ್ಡ್‌ನಲ್ಲಿ 1891ರಲ್ಲಿ ಬಿ.ಎ. ಮತ್ತು 1892ರಲ್ಲಿ ಎಂ.ಎ. ಪದವಿಗಳನ್ನು ಪಡೆದು 1895ರಲ್ಲಿ ಐ.ಸಿ.ಎಸ್. ಅಧಿಕಾರಿಯಾಗಿ ನೇಮಕಗೊಂಡರು. 1907ರಿಂದ 1914ರವರೆಗೆ ಕೊಚ್ಚಿ ಸಂಸ್ಥಾನದ ದಿವಾನರಾಗಿದ್ದರು. 1917ರಲ್ಲಿ ಇವರನ್ನು ಮೈಸೂರು ಸರ್ಕಾರ ಮೆಂಬರ್ ಆಫ್ ಕೌನ್ಸಿಲ್ ಆಗಿ ನೇಮಿಸಿತು. ಆ ಕಾಲದಲ್ಲಿ ಇವರು ಸ್ಥಳೀಯ ಸಂಸ್ಥೆಗಳ ಮೇಲೆ ಸರ್ಕಾರದ ಹತೋಟಿ ತಗ್ಗಿಸಿ ಅವನ್ನು ಸ್ವಯಮಾಡಳಿತ ವ್ಯವಸ್ಥೆಯುಳ್ಳಂತೆ ರೂಪಿಸಲು ಪ್ರಯತ್ನಿಸಿದರು. ಇದಕ್ಕಾಗಿ ನ್ಯಾಯ ವಿಧಾಯಕ ಸಭೆಯಲ್ಲಿ ಒಂದು ವಿಧೇಯಕ ಮಂಡಿಸಿದರು. ಅದು ಸೆಲೆಕ್ಟ್ ಕಮಿಟಿಗೆ ಹೋಯಿತು. ಆ ಕಮಿಟಿಯ ಕೆಲವು ಸದಸ್ಯರು ಅದಕ್ಕೆ ಜಾತಿವಾರು ಪ್ರಾತಿನಿಧ್ಯ ಬೇಕು ಎಂದು ವಾದಿಸಿದರು. ಬ್ಯಾನರ್ಜಿ ಅದನ್ನು ವಿರೋಧಿಸಿದರು. ಕೆಲವು ಬದಲಾವಣೆಗಳೊಂದಿಗೆ ಅದು 1918ರಲ್ಲಿ ಕಾನೂನಾಗಿ ಅಸ್ತಿತ್ವಕ್ಕೆ ಬಂತು. ಆಗ 1918ರಲ್ಲಿ ಎಂ. ವಿಶ್ವೇಶ್ವರಯ್ಯನವರು ನಿವೃತ್ತರಾದ ಮೇಲೆ ದಿವಾನರಾಗಿ ನೇಮಿತರಾದ ಸರ್ದಾರ್ ಎಂ. ಕಾಂತರಾಜ ಅರಸು ಅವರು ಅನಾರೋಗ್ಯ ಪೀಡಿತರಾಗಿದ್ದರಿಂದ ಬ್ಯಾನರ್ಜಿಯವರೇ ಆಗಾಗ್ಗೆ ಅಂದರೆ ಡಿಸೆಂಬರ್ 1918 ಮತ್ತು ಜುಲೈ 1919, ಆಗಸ್ಟ್–ಸೆಪ್ಟೆಂಬರ್ 1920, ನವೆಂಬರ್ 1921, ಮಾರ್ಚ್–ಏಪ್ರಿಲ್ 1922– ಈ ಅವಧಿಯಲ್ಲಿ ಹಂಗಾಮಿ ದಿವಾನರಾಗಿ ಕೆಲಸ ಮಾಡಿದರು. ಆಡಳಿತ ವಿಷಯಗಳ ಅಧ್ಯಯನಕ್ಕಾಗಿ 1919–20ರಲ್ಲಿ ಇಂಗ್ಲೆಂಡಿಗೆ ತೆರಳಿದರು. ಅಲ್ಲಿಂದ ಮರಳಿ ಬಂದ ಅನಂತರ 1–5–1922ರಲ್ಲಿ ಖಾಯಂ ದಿವಾನರಾಗಿ ನೇಮಕಗೊಂಡು 1926ರಲ್ಲಿ ನಿವೃತ್ತರಾದರು. ಇವರ ದಿವಾನ್‌ಗಿರಿಯ ಕಾಲದಲ್ಲಿ ಕಾವೇರಿ ನೀರಿನ ಬಗ್ಗೆ ಮದರಾಸು ಸರ್ಕಾರದೊಂದಿಗೆ ವಿವಾದ ಹುಟ್ಟಿತ್ತು. ಮದರಾಸಿನ ಗವರ್ನರ್ ಆಗಿದ್ದ ಲಾರ್ಡ್ ವೆಲಿಂಗ್‌ಟನ್ ಅವರೊಂದಿಗೆ 1923ರ ನವೆಂಬರ್‌ನಲ್ಲಿ ಚರ್ಚಿಸಿದ ಫಲವಾಗಿ ಫೆಬ್ರವರಿ 1924ರಲ್ಲಿ ಎರಡೂ ಸರ್ಕಾರಗಳ ನಡುವೆ ಒಪ್ಪಂದವಾಯಿತು. ಈ ಒಪ್ಪಂದ ಮೈಸೂರಿಗೆ ಅನುಕೂಲಕರವಾಗಿರಲಿಲ್ಲವೆಂಬ ಅಭಿಪ್ರಾಯವಿದೆ. ಇವರ ಕಾಲದಲ್ಲಿ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯ ವಿಧೇಯಕ ಸಭೆಗಳ ರಚನೆಯ ಪರಿಷ್ಕರಣ ನಡೆಯಿತು. ಪರಿಷ್ಕೃತ ಸಭೆಗಳು 1924ರಲ್ಲಿ ಅಸ್ತಿತ್ವಕ್ಕೆ ಬಂದುವು. ಮೈಸೂರಿನ ದಿವಾನ್ ಪದವಿಯಿಂದ ನಿವೃತ್ತರಾದ ಅನಂತರ ಇವರು ಸ್ವಲ್ಪ ಕಾಲ ಕಾಶ್ಮೀರ ಸಂಸ್ಥಾನದಲ್ಲಿ ಹಿರಿಯ ಮಂತ್ರಿಗಳಾಗಿದ್ದರು.

ಮೈಸೂರು ಮಹಾರಾಜರು ಇವರಿಗೆ 1924ರಲ್ಲಿ ರಾಜತಂತ್ರಧುರೀಣ ಎಂಬ ಬಿರುದನಿತ್ತು ಗೌರವಿಸಿದರು. ಬ್ರಿಟಿಷ್ ಸರ್ಕಾರ ಸಿ.ಐ.ಇ. (1919) ಮತ್ತು ಸಿ.ಎಸ್.ಐ (1922) ಪ್ರಶಸ್ತಿಗಳನ್ನೂ 1925ರಲ್ಲಿ ನೈಟ್ ಬ್ಯಾಚೆಲರ್ ಪ್ರಶಸ್ತಿಯನ್ನೂ ನೀಡಿ ಗೌರವಿಸಿತು. ಇವರು ಸ್ವಲ್ಪಕಾಲ ಮಿಥಿಕ್ ಸೊಸೈಟಿಯ ಉಪಾಧ್ಯಕ್ಷರಾಗಿದ್ದರು. (ಸಿ.ಕೆ.ಎನ್.)

**ಬ್ಯಾನರ್ಜಿ, ಎ.ಎನ್.**: 1917–. ಕರ್ನಾಟಕದ ಮಾಜಿ ರಾಜ್ಯಪಾಲರು (1983–88), ಆಡಳಿತ ತಜ್ಞರು. ಇವರು 1917 ಡಿಸೆಂಬರ್ 17ರಂದು



ಬನಾರಸ್‌ನಲ್ಲಿ ಜನಿಸಿದರು. ವಿಜ್ಞಾನ ಹಾಗೂ ಕಾನೂನು ವಿಷಯಗಳಲ್ಲಿ ಪದವಿಯನ್ನು ಪಡೆದರು. 1941 ರಲ್ಲಿ ಸೇನೆಗೆ ಸೇರಿದರು. ಅಲ್ಲಿ ಮೇಜರ್ ಪದವಿಗೇರಿದರು. 1947ರಲ್ಲಿ ಭಾರತೀಯ ಆಡಳಿತ ಸೇವೆ (ಐ.ಎ.ಎಸ್.)ಗೆ ಸೇರಿದರು (1952–53). ದುರ್ಗಾಪುರ ಸ್ಟೀಲ್ ಪ್ಲಾಂಟ್‌ನ ಜನರಲ್ ಮ್ಯಾನೇಜರ್ (1956), ಭಾರತದ ಕಬ್ಬಿಣ ಮತ್ತು ಉಕ್ಕು ನಿಯಂತ್ರಣಾಧಿಕಾರಿ–(1961–63),

ರೂರ್ಕೆಲ ಉಕ್ಕು ಕಾರ್ಖಾನೆಯ ಜನರಲ್ ಮ್ಯಾನೇಜರ್ (1964–67), ಹಿಂದುಸ್ಥಾನ್ ಸ್ಟೀಲ್‌ನ ಉಪಾಧ್ಯಕ್ಷ (1967–69), ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ ಡೈರೆಕ್ಟರ್ ಜನರಲ್ (1969), ಕೈಗಾರಿಕ ಅಭಿವೃದ್ಧಿ ಸಚಿವಾಲಯದ ವಿಶೇಷ ಕಾರ್ಯದರ್ಶಿ (1973) ಮೊದಲಾದ ವಿವಿಧ ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. ವಕೀಲರಾಗಿ ಸೇವೆ ಸಲ್ಲಿಸಿದ ಇವರು 1976ರಲ್ಲಿ ಗುಜರಾತ್‌ನ ರಾಜ್ಯಪಾಲರಿಗೆ (ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದ್ದಾಗ) ಸಲಹೆಗಾರರಾಗಿ ಕಾರ್ಯನಿರ್ವಹಿಸಿದರು. ಕೇಂದ್ರ ಸರ್ಕಾರದ ಸೇವೆಯಿಂದ ನಿವೃತ್ತರಾದ ಮೇಲೆ ಸರ್ವೋಚ್ಚ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಕೈಗೊಂಡರು. 1980ರಲ್ಲಿ ಮಹಾರಾಷ್ಟ್ರದ ರಾಜ್ಯಪಾಲರಿಗೆ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದರು. ಮುಂದೆ ಇವರು ಕರ್ನಾಟಕದ ರಾಜ್ಯಪಾಲರಾಗಿ (1983–88) ಕಾರ್ಯ ನಿರ್ವಹಿಸಿದರು. ವಿವಿಧ ಭಾರತೀಯ ನಿಯೋಗಗಳ ನೇತೃತ್ವವಹಿಸಿ ವಿದೇಶಗಳಲ್ಲಿನ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಇವರದು ಮೃದುಮಾತಿನ ಸರಳವ್ಯಕ್ತಿತ್ವ. **(ಟಿ.ಜಿ.)**

**ಬ್ರಹ್ಮಗಿರಿ[1]:** ಮಡಿಕೇರಿ ತಾಲ್ಲೂಕಿನಲ್ಲಿರುವ ಒಂದು ಗಿರಿಶಿಖರ. ಕೊಡಗು ಜಿಲ್ಲೆಯನ್ನು ನಾಲ್ಕು ದಿಕ್ಕುಗಳಿಂದ ಆವರಿಸಿರುವ ಪಶ್ಚಿಮಘಟ್ಟದ ಪರ್ವತಾವಳಿಯ ಶಾಖೆಗಳಲ್ಲಿ ಬ್ರಹ್ಮಗಿರಿ ತುಂಬ ಮಹತ್ತ್ವದ್ದಾಗಿದೆ. ಬೇಂಗುನಾಡ್ ಪರ್ವತ ಶ್ರೇಣಿ ಮಡಿಕೇರಿಯ ಸಮೀಪದಲ್ಲಿ ಆರಂಭವಾಗಿ, ಪಶ್ಚಿಮಾಭಿಮುಖವಾಗಿ ಸಾಗಿ, ಮಡಿಕೇರಿ ತಾಲ್ಲೂಕಿನ ತಾವುನಾಡ್ ಸಮೀಪದಲ್ಲಿ ಪಶ್ಚಿಮ ಘಟ್ಟವನ್ನು ಸೇರುತ್ತದೆ. ಈ ಸ್ಥಳದಲ್ಲಿ ಬ್ರಹ್ಮಗಿರಿ ಇದೆ. ಇದರ ಎತ್ತರ ಸು. 1,745 ಮೀ. ಅಧಿಕ ಮಳೆ ಹಾಗೂ ಖನಿಜಮಿಶ್ರಿತ ಜಂಬುಮಣ್ಣಿನಿಂದಾಗಿ ಇಲ್ಲಿ ಕಾಡು ದಟ್ಟವಾಗಿದೆ. ನಿತ್ಯಹರಿದ್ವರ್ಣ ಅರಣ್ಯದ ಮುಖ್ಯ ಸಸ್ಯವರ್ಗಗಳಲ್ಲೊಂದಾದ ಬಿದಿರು ಈ ಬೆಟ್ಟದಲ್ಲಿ ವಿಪುಲವಾಗಿ ಬೆಳೆಯುತ್ತದೆ.

ಬ್ರಹ್ಮಗಿರಿಯು ಕಾವೇರಿ ಮತ್ತು ಕನ್ನಿಕಾ ನದಿಗಳ ಉಗಮಸ್ಥಾನ. ಈ ಗಿರಿಯ ನೆತ್ತಿಯ ಮೇಲೆ ನಿಂತು ಸುತ್ತಲೂ ಕಣ್ಣಾಡಿಸಿದರೆ ಕುದುರೆಮುಖ, ಬೆಟ್ಟದಪುರ, ಹಾಗೂ ನೀಲಗಿರಿಬೆಟ್ಟಗಳ ಸೊಬಗನ್ನು ಕಾಣಬಹುದು.

ಈ ಗಿರಿ ಪೂರ್ವದಿಂದ ಪಶ್ಚಿಮದೆಡೆಗೆ ಇಳಿಜಾರಾಗಿದೆ. ಕಿಗ್ಗಟ್ಟನಾಡಿನ ಕಡೆಗೆ ಅನೇಕ ಕವಲುಗಳು ಒಡೆದಿವೆ. ಈ ಕವಲುಗಳಲ್ಲಿ ವಿರಾಜಪೇಟೆಯ ಅಂಬಟಿಬೆಟ್ಟ, ಬೆಟ್ಟಂಗಾಲದ ಬೆಟ್ಟ, ಹಾತೂರಿನ ಕುಂದದಬೆಟ್ಟ, ಸಿದ್ದೇಶ್ವರಬೆಟ್ಟ ಹಾಗೂ ಮಾಕಲ್ ಬೆಟ್ಟಗಳು ಮುಖ್ಯವಾದವು. ಇವು ತೀರ ಕಡಿದಾಗಿದೆ. ಇಳಿಜಾರುಗಳನ್ನು ಹೊಂದಿವೆ. **(ವಿ.ಎಸ್.ಎಸ್.)**

**ಬ್ರಹ್ಮಗಿರಿ[2]:** ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಿದ್ದಾಪುರ ಗ್ರಾಮದ ಬಳಿ ಇರುವ ಒಂದು ಚಿಕ್ಕ ಬೆಟ್ಟ. ಇದರ ಸುತ್ತಲೂ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಅವಶೇಷಗಳಿವೆ. ಇಲ್ಲಿ ಅಶೋಕನ ಒಂದು ಶಾಸನ ದೊರಕಿದೆ. ಇದರ ಸಮೀಪದಲ್ಲೆ ಇರುವ ಪ್ರಾಚೀನ ನೆಲೆಯುನ್ನು ಶಾಸನದಲ್ಲಿ ಉಕ್ತವಾಗಿರುವ ಇಸಿಲ ಪಟ್ಟಣವೆಂದು ಗುರುತಿಸಲಾಗಿದೆ.

ಬ್ರಹ್ಮಗಿರಿ ಬೆಟ್ಟ ಮೊಳಕಾಲ್ಮೂರು ಮತ್ತು ನುಂಕೆಭೈರವ ಬೆಟ್ಟಗಳ ಉತ್ತರಕ್ಕೆ ಉತ್ತರ–ದಕ್ಷಿಣವಾಗಿ ಸುಮಾರು 2 ಕಿಮೀಗಳಷ್ಟು ದೂರ ಹಬ್ಬಿದೆ. ಸುತ್ತಲ ಪ್ರದೇಶಕ್ಕಿಂತ ಸು. 180 ಮೀ ಎತ್ತರವಿದೆ. ಇದರ ಪಶ್ಚಿಮಕ್ಕೆ ಸಿದ್ದಾಪುರ ಗ್ರಾಮ ಮತ್ತು ಗುಡ್ಡ, ಉತ್ತರಕ್ಕೆ ಸುಮಾರು 2 ಕಿಮೀ ದೂರದಲ್ಲಿ ಜಟಿಂಗರಾಮೇಶ್ವರ ಬೆಟ್ಟ ಇವೆ (ಇವೆರಡು ಸ್ಥಳಗಳಲ್ಲೂ ಅಶೋಕನ ಶಾಸನಗಳಿವೆ). ಜಟಿಂಗರಾಮೇಶ್ವರ ಮತ್ತು ಬ್ರಹ್ಮಗಿರಿ ಬೆಟ್ಟಗಳ ನಡುವೆ ಮಟ್ಟಸವಾದ ಪ್ರದೇಶವಿದೆ. ಅಲ್ಲಿ ಚಿನ್ನಹಗರಿ ನದಿ ಹರಿಯುತ್ತದೆ. ಕಣಶಿಲೆಯ ಸ್ತೋಮವಾದ ಬ್ರಹ್ಮಗಿರಿ ಬೆಟ್ಟದಲ್ಲಿ ಅಲ್ಲಲ್ಲಿ ಉರುಳಿ ಬಿದ್ದ ದೊಡ್ಡದೊಡ್ಡ ಬಂಡೆಗಳ ಪಕ್ಕದಲ್ಲಿ ಮತ್ತು ಇತರೆಡೆಗಳಲ್ಲಿ ಅನೇಕ ಸ್ವಾಭಾವಿಕ ಗವಿಗಳೂ ಇರುವುವಲ್ಲದೆ ವರ್ಷಪೂರ್ತಿ ನೀರೊದಗಿಸುವ ಅನೇಕ ದೊಣೆಗಳಿವೆ. ಈ ಸೌಲಭ್ಯದಿಂದಾಗಿ ಇದು ಬಹು ಪ್ರಾಚೀನ ಕಾಲದಿಂದಲೂ ಮಾನವನಿಗೆ ಒಳ್ಳೆಯ ನೆಲೆಯಾಗಿ ಮುಂದುವರಿದುಕೊಂಡು ಬಂದಿದೆ.



ಪ್ರಾಗಿತಿಹಾಸ ಅವಶೇಷಗಳು

ಅಶೋಕನ ಶಾಸನ ಬೆಟ್ಟದ ಉತ್ತರದಂಚಿನಲ್ಲಿ ಎತ್ತರದ ಬಂಡೆಯ ಮೇಲೆ ಇದೆ. ಇದರ ಪೂರ್ವಕ್ಕೆ ಒಂದು ತಂಪುಗವಿಯಲ್ಲಿ ಹುಟ್ಟುವ ಉಡುವಲ ದೊಣೆ ಬೆಟ್ಟದ ಇಳಿಜಾರಿನಲ್ಲಿ ಹರಿಯುತ್ತದೆ. ಸ್ವಲ್ಪ ಮುಂದೆ ಕಟ್ಟೆ ಹಾಕಿ ಚೌಡೇಶ್ವರೀ ಕುಂಟೆಯನ್ನು ನಿರ್ಮಿಸಲಾಗಿದೆ. ಇದರ ಬಳಿಯಲ್ಲಿ

ಚಾಳುಕ್ಯರ ಕಾಲದ ಒಂದು ದುರ್ಗಾ ವಿಗ್ರಹ ನಿಂತಿದೆ. ಈ ಸುತ್ತಲ ವಿಶಾಲ ಪ್ರದೇಶದಲ್ಲಿ ಅನೇಕ ಬೃಹತ್ ಶಿಲಾಸಮಾಧಿಗಳು ಹರಡಿವೆ. ಅಲ್ಲದೆ ಅಶೋಕನ ಶಾಸನದ ಬುಡದಲ್ಲಿ ಹಾಗೂ ಬೆಟ್ಟದ ಪೂರ್ವದ ಪಾದದಲ್ಲಿ ಉದ್ದಕ್ಕೂ ಬೃಹತ್ ಶಿಲಾಸಮಾಧಿ ಮತ್ತು ಆದಿ ಚಾರಿತ್ರಿಕ ಕಾಲದ ನೆಲೆಗಳ ಅವಶೇಷಗಳು ಹರಡಿವೆ. ಪೂರ್ವ ಇಳಿಜಾರಿನಲ್ಲಿ ಸ್ವಲ್ಪ ದಕ್ಷಿಣಕ್ಕೆ ಕೊಪ್ಪ ಗ್ರಾಮವಿದೆ. ಅದರಿಂದ ಮತ್ತಷ್ಟು ದಕ್ಷಿಣಕ್ಕೆ ಪಲ್ಲಕ್ಕಿ ಚಿಲುಮೆಯೂ ಅಲ್ಲಿಂದ ಸ್ವಲ್ಪ ದಕ್ಷಿಣಕ್ಕೆ ನವಶಿಲಾಯುಗದ ನೆಲೆಯೂ ಇವೆ. ಬೆಟ್ಟದ ಪಶ್ಚಿಮ ಪಾರ್ಶ್ವದಲ್ಲಿ ಅಶೋಕನ ಶಾಸನವಿರುವ ಉತ್ತರಾಗ್ರದ ಬಳಿಯಲ್ಲಿ ಮತ್ತಷ್ಟು ಬೃಹತ್ ಶಿಲಾಸಮಾಧಿಗಳಿವೆ. ಅಲ್ಲಿಂದ ಮತ್ತಷ್ಟು ದಕ್ಷಿಣದಲ್ಲಿ ಹೊಯ್ಸಳರ ಕಾಲದಲ್ಲಿ ಪ್ರಸಿದ್ಧ ಪಟ್ಟಣವಾಗಿದ್ದ ಹಾನೆಯದ ಅವಶೇಷಗಳಿವೆ. ಪಶ್ಚಿಮ ಪಾರ್ಶ್ವದ ಬುಡದಲ್ಲಿರುವ ಅಕ್ಕತಂಗಿಯರ ಗುಡಿ, ಪಗಡೆ ಸಾಲು ಗುಡ್ಡದ ಗುಡಿ, ಜೈನ ದೇವಾಲಯ ಈ ಕಾಲದವು. ಇದೇ ಕಾಲಕ್ಕೆ ಸೇರಿದ ವಿಸ್ತಾರವಾಗಿ ಹಬ್ಬಿರುವ ಕೋಟೆಯ ಗೋಡೆಗಳು ಇವೆ. ಕೋಟೆಯ ಗೋಡೆಯ ಬಳಿಯಲ್ಲಿ ಇಮ್ಮಡಿ ವೀರಬಲ್ಲಾಳನ 1190ರ ಒಂದು ಶಾಸನವಿದೆ. ಅದರಲ್ಲಿ ಬಲ್ಲಾಳ ಹಾನೆಯ ಕೋಟೆಯನ್ನು ಹಿಡಿದು ವಿಜಯನಗರಿ ಪಟ್ಟಣವನ್ನು ಸ್ಥಾಪಿಸಿದ ವಿಷಯವಿದೆ. ಬೆಟ್ಟದ ಮೇಲಕ್ಕೆ ಸಾಗುವ ಕಲ್ಲುಹಾದಿ, ಶ್ರೀಕಂಠೇಶ್ವರ ದೇವಾಲಯ, ಕೆಲವು ದೊಡ್ಡ ವಾಸಗೃಹಗಳ (ಅರಮನೆ) ಅಡಿಪಾಯಗಳು, ಭಾಗ್ಯಲಕ್ಷ್ಮಿದೇವಾಲಯ, ಬೆಟ್ಟದ ಮೇಲಿನ ಹುಲಿಕುಂಟೆ–ಇವು ಆ ಕಾಲದ ಪಟ್ಟಣಕ್ಕೆ ಸೇರಿದ್ದುವು. ಮುಂದೆ ವಿಜಯ ನಗರದ ಅರಸರ ಕಾಲದಲ್ಲಿ ಹಾನೆಯ ಮತ್ತೆ ಸ್ವಲ್ಪಕಾಲ ಪ್ರವರ್ಧಮಾನ ಸ್ಥಿತಿಯಲ್ಲಿದ್ದಂತೆ ತೋರುತ್ತದೆ. ಇಂದು ಇಲ್ಲಿಯ ಅವಶೇಷಗಳೆಲ್ಲ ಬಹಳಮಟ್ಟಿಗೆ ಹಾಳಾಗಿವೆ. *

ಅಶೋಕನ ಶಾಸನ 1874ರಲ್ಲಿ ಬೆಳಕಿಗೆ ಬಂತು. ಈ ಶಾಸನ ಬ್ರಾಹ್ಮೀ ಲಿಪಿಯಲ್ಲಿದೆ. ಇದನ್ನು ಕೊರೆದವನ ಹೆಸರು ಚಪಡನೆಂದು ಶಾಸನದ ಕೊನೆಯಲ್ಲಿ ಖರೋಷ್ಠೀ ಲಿಪಿಯಲ್ಲಿ ಬರೆದಿದೆ. ಶಾಸನ ಎರಡು ಭಾಗವುಳ್ಳದ್ದಾಗಿದೆ. ಮೊದಲನೆಯ ಭಾಗದಲ್ಲಿ ಅಶೋಕ ತಾನು ಎರಡೂವರೆ ವರ್ಷಗಳಿಂದೀಚೆಗೆ ಧರ್ಮಾಚರಣೆಯಲ್ಲಿದ್ದರೂ ಒಂದು ವರ್ಷದಿಂದೀಚೆಗೆ ಸಂಘವನ್ನು ಸೇರಿ ಈ ದಿಶೆಯಲ್ಲಿ ಹೆಚ್ಚು ಪ್ರಯತ್ನಿಸುತ್ತಿರುವುದಾಗಿಯೂ ಈ ಪ್ರಯತ್ನದ ಫಲವಾಗಿ ಜಂಬೂದ್ವೀಪದಲ್ಲಿರುವ ಜನರು ಹೆಚ್ಚುಹೆಚ್ಚು ನೀತಿವಂತರಾಗುತ್ತಿದ್ದಾರೆಂದೂ ಕೇವಲ ಉತ್ತಮನು ಮಾತ್ರವಲ್ಲದೆ ತೀರ ಸಾಮಾನ್ಯನೂ ಪ್ರಯತ್ನಪೂರ್ವಕವಾಗಿ ಒಳ್ಳೆಯವನಾದರೆ ಅವನೂ ಸದ್ಗತಿಯನ್ನು ಪಡೆಯ ಬಹುದು ಎಂದೂ ತಿಳಿಸಿದ್ದಾನೆ. ಅಲ್ಲದೆ, ತನ್ನ ಸಾಮ್ರಾಜ್ಯದ ನೆರೆಹೊರೆಯವರೂ ಈ ವಿಷಯವನ್ನು ತಿಳಿಸಬೇಕೆಂದು ಇಚ್ಛಿಸಿದ್ದಾನೆ. ಧರ್ಮ ಪ್ರಚಾರಕ್ಕೆ ತಾನು ಕೈಕೊಂಡ 256 ದಿವಸಗಳ ಪ್ರವಾಸದ ಅನಂತರ ಈ ರೀತಿ ಅಪ್ಪಣೆಮಾಡಿದ್ದಾನೆ. ಮಕ್ಕಳಿಂದ ತಂದೆ ತಾಯಿಗಳ ಸೇವೆ, ಗುರುಗಳಲ್ಲಿ ವಿಧೇಯತೆ, ಹಿರಿಯರಿಗೆ ಗೌರವ, ಪ್ರಾಣಿದಯೆ, ಸತ್ಯಸಂಧತೆ ಮುಂತಾದ ನೀತಿಗಳು ಬಹಳ ಪ್ರಾಚೀನ ಕಾಲದಿಂದಲೂ ದೀರ್ಘ ಸುಖಜೀವನಕ್ಕೆ ಅನುಕೂಲವಾಗಿದ್ದು, ಅವುಗಳನ್ನು ಎಲ್ಲರೂ ಅನುಸರಿಸ ಬೇಕೆಂದು ಎರಡನೆಯ ಭಾಗದಲ್ಲಿ ಉಪದೇಶಿಸಿದ್ದಾನೆ. ಶಾಸನದಲ್ಲಿ ಈ ವಿಷಯಗಳನ್ನು ಸುವರ್ಣಗಿರಿಯ ಮಹಾಮಾತ್ರರ ಮೂಲಕ ಇಸಿಲದ ಮಹಾಮಾತ್ರರಿಗೆ ತಿಳಿಸಿದಂತೆ ಹೇಳಲಾಗಿದೆ. ಇಸಿಲ ಬಹುಶಃ ಎಯಿಲ್ ನಿಂದ ವ್ಯುತ್ಪತ್ತಿ ಹೊಂದಿದ, ಅತ್ಯಂತ ಪ್ರಾಚೀನ ಶಾಸನೋಲ್ಲೇಖಿತ ದ್ರಾವಿಡ ಪದ ಎಂಬ ಅಭಿಪ್ರಾಯವಿದೆ.

ಕರ್ನಾಟಕದ ಪುರಾತತ್ವ ಶಾಖೆಯ ನಿರ್ದೇಶಕರಾಗಿದ್ದ ಎಂ.ಎಚ್. ಕೃಷ್ಣ ಅವರು ಇಸಿಲ ಪಟ್ಟಣದ ಅವಶೇಷಗಳನ್ನು ಶೋಧಿಸಲು 1940ರಲ್ಲಿ ಬ್ರಹ್ಮಗಿರಿಯ ಸುತ್ತಮುತ್ತಲೂ ಕೂಲಂಕಷವಾಗಿ ಪರೀಕ್ಷಿಸಿದರು. ಇದರಿಂದ ಇತಿಹಾಸ ಪ್ರಾರಂಭದ ಕಾಲದ ಜನವಸತಿಯ ಅವಶೇಷಗಳು ದೊರಕಿದುವಲ್ಲದೆ ಇದಕ್ಕೂ ಪೂರ್ವ ಕಾಲದಲ್ಲಿಯ ಕಬ್ಬಿಣಯುಗದ ಮತ್ತು ಇದರ ಹಿಂದಿನ ನೂತನ ಶಿಲಾಯುಗದ ಜನವರ್ಗಗಳ ವಸತಿಯ ಅವಶೇಷಗಳು ದೊರೆತು ಕರ್ನಾಟಕದ ಪ್ರಾಗಿತಿಹಾಸದ ಬಗ್ಗೆ ಕೆಲವೊಂದು ಹೆಚ್ಚಿನ ವಿಷಯಗಳು ತಿಳಿದುಬಂದವು. ಕೃಷ್ಣ ಅವರು ಇತಿಹಾಸ ಪ್ರಾರಂಭಕಾಲದ ಜನವಸತಿಯ ಗುರುತುಗಳೇ ಇಸಿಲ ಊರಿನದು ಎಂದು ಅಭಿಪ್ರಾಯಪಟ್ಟಿದ್ದಾರೆ. (ಎ.ಎಸ್.)

ಅನಂತರ 1947ರಲ್ಲಿ ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಶಾಖೆಯ ನಿರ್ದೇಶಕರಾಗಿದ್ದ ಮಾರ್ಟಿಮಾರ್ ವ್ಹೀಲರ್ ಅವರ ನೇತೃತ್ವದಲ್ಲಿ ಇಲ್ಲಿ ಮತ್ತೆ ಉತ್ಖನನ ನಡೆಯಿತು. ಏಳು ಗುಂಡಿಗಳನ್ನು ಮತ್ತು ಹತ್ತು ಬೃಹತ್‌ಶಿಲಾ ಯುಗದ ಗೋರಿಗಳನ್ನು ಅಗೆಯಲಾಯಿತು. ಇಲ್ಲಿ ಮೂರು ವಿಧವಾದ ಸಂಸ್ಕೃತಿಗಳನ್ನು ಗುರುತಿಸಲಾಗಿದೆ. ಮೇಲಿನ ಒಂದರಿಂದ ಆರರವರೆಗಿನ ಸ್ತರಗಳಲ್ಲಿ ಗೋಡೆಯ ಅವಶೇಷಗಳು, ಇಟ್ಟಿಗೆ ಚೂರುಗಳು, ಕಬ್ಬಿಣದ ಮತ್ತು ಇತರ ಲೋಹದ ವಸ್ತುಗಳು, ದಂತದ ಮತ್ತು ಲೋಹದ ಬಳೆಗಳು, ಮಣ್ಣಿನ ಮಡಕೆ ಇದ್ದವು. ಈ ಮಡಕೆಗಳಲ್ಲಿ ಬಿಳಿ ಬಣ್ಣದ ರೇಖಾಚಿತ್ರಗಳನ್ನುಳ್ಳ ಕಪ್ಪು, ಕೆಂಪು ಮಡಕೆಗಳು ವಿಶೇಷವಾಗಿದ್ದುವು. ಈ ರೀತಿಯ ಮಡಕೆಗಳು ಸಾತವಾಹನರ ಕಾಲಕ್ಕೆ ಸೇರಬಹುದಾದ ಸಾಂಸ್ಕೃತಿಕ ಸ್ತರಗಳಲ್ಲಿ ಇತರ ಕಡೆಗಳಲ್ಲಿ ದೊರಕಿದ್ದುದರಿಂದ, ಈ ರೀತಿಯ ಮಡಕೆಗಳುಳ್ಳ ಸಂಸ್ಕೃತಿಯನ್ನು ವ್ಹೀಲರ್‌ರವರು ಆಂಧ್ರ ಸಂಸ್ಕೃತಿ ಎಂದು ಕರೆದರು. ಇತ್ತೀಚೆಗೆ ಈ ಸಂಸ್ಕೃತಿಯನ್ನು ಆದಿ ಚಾರಿತ್ರಿಕ ಕಾಲದ ಸಂಸ್ಕೃತಿ ಎಂದು ಕರೆಯುತ್ತಾರೆ. ಈ ಸಂಸ್ಕೃತಿಯ ಸ್ತರಗಳ ಕೆಳಭಾಗದಲ್ಲಿನ ಏಳು ಮತ್ತು ಎಂಟನೆಯ ಪದರಗಳಲ್ಲಿ ವಿಶೇಷ ಹೊಳಪುಳ್ಳ ಕಪ್ಪು–ಕೆಂಪು ಮತ್ತು ಕೆಂಪಿನ ವಿವಿಧರೂಪದ ಮಡಕೆಗಳು ಹಾಗೂ ಕಬ್ಬಿಣದ ವಸ್ತುಗಳು ದೊರೆತವು. ಇದನ್ನು ಕಬ್ಬಿಣಯುಗದ ಬೃಹತ್ ಶಿಲಾಯುಗದ ಸಂಸ್ಕೃತಿಯೆಂದು ನಿರ್ಧರಿಸಲಾಯಿತು. ಈ ಸಂಸ್ಕೃತಿಯ ಕೆಳಭಾಗದಲ್ಲಿನ 9ರಿಂದ 18ರವರೆಗಿನ ಪದರಗಳಲ್ಲಿ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿಗಳು, ಕಲ್ಲಿನ ಚಕ್ಕೆಗಳು, ತಾಮ್ರ ಮತ್ತು ಕಂಚಿನ ಕೆಲವೇ ವಸ್ತುಗಳು ಮತ್ತು ಶವಗುಣಿಗಳು ಇದ್ದವು. ಇವುಗಳ ಜೊತೆಯಲ್ಲಿ ಕೈಯಿಂದ ಮಾಡಿದ ಬೂದುಬಣ್ಣದ ಮಡಕೆಯ ಚೂರುಗಳು ವಿಶೇಷವಾಗಿ ದೊರಕಿದವು. ಇಲ್ಲಿ ದೊರಕಿದ ಉಜ್ಜಿದ ಕರಿಯಕಲ್ಲಿನ ಕೊಡಲಿಗಳ ಆಧಾರದ ಮೇಲೆ ಈ ಸಂಸ್ಕೃತಿಯನ್ನು ಉಜ್ಜಿದ ಕೊಡಲಿ ಸಂಸ್ಕೃತಿ ಎಂದು ಕರೆಯಲಾಯಿತು. ಈಗ ಇದನ್ನು ನವಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತಿದೆ. ಕೆಲವು ಮಾಹಿತಿಗಳ ಆಧಾರದ ಮೇಲೆ ವ್ಹೀಲರ್‌ರವರು ಇಲ್ಲಿನ ಸಂಸ್ಕೃತಿಗಳ ಕಾಲನಿರ್ಣಯವನ್ನು ಈ ರೀತಿ ಮಾಡಿದರು: ಆಂಧ್ರ ಸಂಸ್ಕೃತಿ ಕ್ರಿಸ್ತಶಕದ ಮೊದಲನೆಯ ಶತಮಾನದ ಮಧ್ಯಭಾಗದಿಂದ ಮೂರನೆಯ ಶತಮಾನದವರೆಗೆ, ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಕಾಲ ಪ್ರಶ..ಪೂ.200ರಿಂದ ಕ್ರಿಸ್ತಶಕ ಒಂದನೆಯ ಶತಮಾನದವರೆಗೆ, ಉಜ್ಜಿದ ಕೊಡಲಿಯ ಸಂಸ್ಕೃತಿಯ ಕಾಲ ಪ್ರ.ಶ.ಪೂ. ಮೊದಲನೆಯ ಸಹಸ್ರಮಾನದ ಆದಿಭಾಗದಿಂದ ಪ್ರ.ಶ.ಪೂ. ಎರಡನೆಯ ಶತಮಾನದವರೆಗೆ, ಈ ಕಾಲಮಾನಗಳು ಅಷ್ಟು ಸಮರ್ಪಕವಾಗಿಲ್ಲವೆಂದು ತಿಳಿದುಬಂದಿದೆ. ಇತ್ತೀಚಿನ ಅನೇಕ ಉತ್ಖನನಗಳ ಫಲಿತಾಂಶದಿಂದ ಆದಿಚಾರಿತ್ರಿಕ ಕಾಲದ ಸಂಸ್ಕೃತಿ ಪ್ರ.ಶ.ಪೂ. 3ನೆಯ ಶತಮಾನದಿಂದಲೇ ಅಸ್ತಿತ್ವದಲ್ಲಿದ್ದು ಕ್ರಿ.ಶ. 2–3ನೆಯ ಶತಮಾನದವರೆಗೆ ಊರ್ಜಿತವಾಗಿತ್ತು; ಬೃಹತ್ ಶಿಲಾಸಮಾಧಿ ಸಂಸ್ಕೃತಿ ಅದಕ್ಕೆ ಮುಂಚೆ ಪ್ರ.ಶ.ಪೂ. 1ನೆಯ ಸಹಸ್ರಮಾನದಾರಭ್ಯವೂ ತತ್ಪೂರ್ವದಲ್ಲಿ ನವಶಿಲಾಯುಗ ಸಂಸ್ಕೃತಿಯು ಇದ್ದುವು ಎಂದು ತಿಳಿದುಬಂದಿದೆ.

ಆದಿಚಾರಿತ್ರಿಕ ಕಾಲದ ಜನ ಸುಟ್ಟ ಇಟ್ಟಿಗೆಗಳ ಕಟ್ಟಡಗಳಲ್ಲಿ ವಾಸಿಸುತ್ತಿದ್ದರು. ಇವರಲ್ಲಿ ಬಿಳಿ ಬಣ್ಣದ ರೇಖಾಚಿತ್ರಗಳಿಂದ ಅಲಂಕೃತವಾದ ಕಪ್ಪು ಕೆಂಪು ದ್ವಿವರ್ಣದ ಮಣ್ಣಿನ ಪಾತ್ರೆಗಳ ಉಪಯೋಗ, ನಾಣ್ಯ ಚಲಾವಣೆ ಇದ್ದಿತ್ತು. ಈ ಕಾಲದ ಗಜಪೃಷ್ಠಾಕೃತಿಯ ಒಂದು ಇಟ್ಟಿಗೆಯ ಕಟ್ಟಡದ ಅವಶೇಷ ಸಹ ಬ್ರಹ್ಮಗಿರಿಯಲ್ಲಿ ಕಂಡುಬಂದಿದೆ.

ಬ್ರಹ್ಮಗಿರಿಯಲ್ಲಿ ಕಂಡುಬಂದ ಬೃಹತ್‌ಶಿಲಾಗೋರಿಗಳನ್ನು ಕಟ್ಟಿದ ಜನಗಳ ಶವಸಂಸ್ಕಾರ ಪದ್ಧತಿ ಗಮನಾರ್ಹವಾದುದು. ಗೋರಿಗಳ ನಿರ್ಮಾಣದಲ್ಲಿ ಎರಡು ಪದ್ಧತಿಗಳಿದ್ದವು; ಅವು ಕಲ್ಗೋರಿಗಳು ಮತ್ತು ದುಂಡುಕಟ್ಟೆಯ ಶವಕುಣಿಗಳು, ಬೇಕಾದ ಅಳತೆಗೆ ಗುಂಡಿಯನ್ನು ಅಗೆದು, ಅದರ ನಾಲ್ಕು ಬದಿಗಳಲ್ಲಿ ಕಲ್ಲಿನ ಹಲಗೆಗಳನ್ನು ನಿಲ್ಲಿಸಿ, ಪೂರ್ವದ ಕಲ್ಲಿನಲ್ಲಿ ಒಂದು ದುಂಡಾದ ಕಂಡಿಯನ್ನು ಮಾಡಿ, ಮೇಲ್ಭಾಗವನ್ನು ಅಡ್ಡನಾಗಿ ದಪ್ಪ ಕಲ್ಲುಗಳಿಂದ ಮುಚ್ಚಿರುವುದು ಕಲ್ಗೋರಿ. ಇನ್ನೊಂದು ದುಂಡುಕಟ್ಟೆ ಶವಕುಣಿ. ಇದರಲ್ಲಿ ನೆಲದ ಮೇಲೆ ಕಾಣುವಂತೆ, 18ರಿಂದ 55 ಅಡಿಗಳವರೆಗಿನ ವ್ಯಾಸದ ಒಂದು ಅಥವಾ ಎರಡು ಕಲ್ಲಿನ ಕಟ್ಟೆಗಳನ್ನು ಕಟ್ಟಿ ಇದರ ಮಧ್ಯದಲ್ಲಿ ದುಂಡಾದ ಅಥವಾ ಕೋಳಿಮೊಟ್ಟೆ ಆಕಾರದ ಗುಣಿಯನ್ನು ತೋಡಿ, ಅಲ್ಲಿ ಶವಸಂಸ್ಕಾರ ಮಾಡಿರಲಾಗುತ್ತದೆ.

ನವಶಿಲಾಯುಗದ ಸಂಸ್ಕೃತಿ ಇದ್ದ ಕಾಲದಲ್ಲಿ ಜನ ಬೇಸಾಯ ನಿರತರಾಗಿದ್ದರಲ್ಲದೆ ಉಜ್ಜಿದ ಕಲ್ಲಿನ ಕೊಡಲಿಗಳು, ಚಿಕ್ಕ ಆಯುಧಗಳು ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದರು. ಜೋಪಡಿಗಳಲ್ಲಿ ವಾಸಿಸುತ್ತಿದ್ದರು. ಈ ಘಟ್ಟದ ಅಂತ್ಯದಲ್ಲಿ ತಾಮ್ರದ ಉಪಯೋಗವೂ ಇತ್ತು.

ದಕ್ಷಿಣ ಭಾರತದ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಕಾಲ ಮತ್ತು ಅನುಕ್ರಮದ ಬಗ್ಗೆ ಸ್ಪಷ್ಟ ಚಿತ್ರ ಮೊದಲು ದೊರೆತದ್ದು ಈ ಬ್ರಹ್ಮಗಿರಿಯ ಉತ್ಖನನದಿಂದಲೇ. ಆದ್ದರಿಂದ ಈ ಉತ್ಖನನ ಭಾರತೀಯ ಪುರಾತತ್ವ ಇತಿಹಾಸದಲ್ಲಿ ಪ್ರಾಮುಖ್ಯ ಗಳಿಸಿದೆ. ಇದು ಇಂದೂ ಪ್ರಾಕ್ತನಶಾಸ್ತ್ರಜ್ಞರ ಆಸಕ್ತಿಯ ಕೇಂದ್ರವಾಗಿದೆ. (ಎ.ವಿ.ಎನ್.)

**ಬ್ರಹ್ಮಣಾಂಕ:** ಸು. 1800. ಜಿನಭಾರತ, ಕಂದರ್ಪಕೊರವಂಜಿ ಎಂಬ ಗ್ರಂಥಗಳ ಕರ್ತೃ. ಬ್ರಹ್ಮಯ್ಯರಚಿತ ದ್ವಾದಶಾನುಪ್ರೇಕ್ಷೆ ಎಂಬ ವೃತ್ತರೂಪದ ಪುಟ್ಟ ಗ್ರಂಥವು ಈತನದೇ ಇರಬಹುದೆಂದು ಕೆಲವರ ಊಹೆ. ತೋವಿನಕೆರೆ ಕವಿಯ ಜನ್ಮಸ್ಥಳ. ತನ್ನ ಪೂರ್ವಜರು ತುಂಗಭದ್ರಾ ನದಿ ತೀರದ ಹುಲಿಗೆರೆಯವರೆಂದೂ ಇಕ್ಷ್ವಾಕುವಂಶಜರೆಂದೂ ಈತ ಹೇಳಿಕೊಂಡಿದ್ದಾನೆ. ಚಂದ್ರನಾಥ ಈತನ ಅಜ್ಜ, ತಂದೆ ಚಂದಣ್ಣ, ತಾಯಿ ಪೊಂಬುಜೆ, ಚಂದ್ರನಾಥ, ಬ್ರಹ್ಮ, ಪದ್ಮ–ಇವರು ಸಹೋದರರು.

ಜಿನಭಾರತ ಭಾಮಿನೀ ಷಟ್ಪದಿಯಲ್ಲಿದೆ. ಇದರಲ್ಲಿ 84 ಸಂಧಿಗಳೂ 4,628 ಪದ್ಯಗಳೂ ಇವೆ. ಇದಕ್ಕೆ ಪಾಂಡವ ಕೌರವರ ಚರಿತ್ರೆ ಎಂಬ ಹೆಸರೂ ಇದೆ. ಮಹಾಭಾರತದ ಕಥೆಯನ್ನು ಜೈನಸಂಪ್ರದಾಯಾನುಸಾರವಾಗಿ ಹೇಳಿದೆ. ಇದನ್ನು ಮಂಗರಸನ (ಸು. 1508) ಕೃತಿಯ ಆಧಾರದ ಮೇಲೆ ತಾನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. (ಎಂ.ಜಿ.ಎನ್.)

**ಬ್ರಹ್ಮಪ್ಪ, ಜಿ.**: 1922–. ಕನ್ನಡ ಲೇಖಕರು, ಜೈನದರ್ಶನ ಸಾಹಿತ್ಯಗಳ ವಿದ್ವಾಂಸರು. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಅರಸಾಪುರ ಗ್ರಾಮದಲ್ಲಿ 1922 ಸೆಪ್ಟಂಬರ್ 28ರಂದು ಜನಿಸಿದರು. ಅರಸಾಪುರ, ಅಕ್ಕಿರಾಂಪುರ ಮತ್ತು ಮಧುಗಿರಿಯಲ್ಲಿ ಅನುಕ್ರಮವಾಗಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣ ಪಡೆದರು. ತುಮಕೂರಿನಲ್ಲಿ ಇಂಟರ್ ಮೀಡಿಯಟ್ ಓದಿ, ಮೈಸೂರಿನಲ್ಲಿ ಕನ್ನಡ ಬಿ.ಎ. (ಆನರ್ಸ್) ಮತ್ತು ಎಂ.ಎ. ಪದವಿ ಗಳಿಸಿದರು. ಕುವೆಂಪು, ಡಿ.ಎಲ್. ನರಸಿಂಹಚಾರ್, ತ.ಸು. ಶಾಮರಾವ್, ವಿ. ಸೀತಾರಾಮಯ್ಯ, ಎಸ್.ವಿ. ಪರಮೇಶ್ವರಭಟ್ಟ, ರಾಘವಾಚಾರ್, ದೇಜಗೌ ಮೊದಲಾದವರು ಇವರ ಗುರುಗಳು. ಜಿ.ಎಸ್. ಶಿವರುದ್ರಪ್ಪನವರು ಇವರ ಸಹಪಾಠಿ. ಬಿ.ಎ. (ಆನರ್ಸ್) ಪದವಿ ಪಡೆದ ಮೇಲೆ ಮಧುಗಿರಿ ಪ್ರೌಢಶಾಲೆಯಲ್ಲಿ ಕೆಲವು ತಿಂಗಳುಗಳು ಶಿಕ್ಷಕರಾಗಿ ಸೇವೆ ಸಲ್ಲಿಸಿ ಅನಂತರ, ಮೈಸೂರಿನ, ಮಹಾರಾಜ ಕಾಲೇಜು, ಬೆಂಗಳೂರಿನ



ಇಂಟರ್ ಮೀಡಿಯೇಟ್ ಕಾಲೇಜು, ದಾವಣಗೆರೆ, ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು, ಮಡಿಕೇರಿ, ಶ್ರವಣಬೆಳಗೊಳ, ಕೊಳ್ಳೇಗಾಲಗಳ ಕಾಲೇಜುಗಳಲ್ಲಿ ಸೇವೆಸಲ್ಲಿಸಿದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಅನಂತರ ಕೆಲಕಾಲ ಕೊಳ್ಳೇಗಾಲದ ಜೆ.ಎಸ್.ಎಸ್. ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸಮಾಡಿದರು. ಅನಂತರ 1988ರ ವರೆಗೆ ಯು.ಜಿ.ಸಿ. ಪ್ರಾಧ್ಯಾಪಕರಾಗಿ (1983–88) ಇವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನೆಯಲ್ಲಿ ತೊಡಗಿ ಜೈನ ಮತ್ತು ವೈದಿಕ ಪುರಾಣಗಳ ತೌಲನಿಕ ಅಧ್ಯಯನ ಕೈಗೊಂಡರು.

ಜೈನ ಪುರಾಣ ಮತ್ತು ಜೈನ ಇತಿಹಾಸ ವಸ್ತುಗಳನ್ನಾಧರಿಸಿದ ಇವರ ಕೃತಿಗಳ ಸಂಖ್ಯೆ ಸು. 50. ಭರತೇಶನ ಬಾಳ್ಗಬ್ಬ (1952) ಎಂಬ ಗೀತನಾಟಕ ಇವರ ಮೊದಲ ಸೃಜನಶೀಲ ಕೃತಿ. ದಾನಚಿಂತಾಮಣಿ, ರತ್ನಾಕರ, ಚೇಳಿನಿ, ಚಕ್ರೇಶ್ವರಿ, ಸಾಮ್ರಾಟ್ ಖಾರವೇಲ, ಮಂತ್ರಿಯ ಮಕ್ಕಳು, ಗಂಧದವನೊಡನೆ ಗುದ್ದಾಟ– ಇವು ಇವರ ಕಾದಂಬರಿಗಳು. ರತ್ನಾಕರನ ಶತಕ ಸಾಹಿತ್ಯ ಮತ್ತು ರನ್ನ ವಿಮರ್ಶಾಕೃತಿಗಳು. ನಯಸೇನನ ಧರ್ಮಾಮೃತ, ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಪಂಪನ ಆದಿಪುರಾಣ, ಚಾವುಂಡರಾಯನ ಚಾವುಂಡರಾಯ ಪುರಾಣ, ಅಗ್ಗಳನ ಚಂದ್ರಪ್ರಭಪುರಾಣ, ಕಮಲಭವನ ಶಾಂತೀಶ್ವರ ಪುರಾಣ, ರವಿಷೇಣನ ರಾಮಾಯಣ, ಕರ್ಣಪಾರ್ಯನ ನೇಮಿನಾಥ ಪುರಾಣ, ರತ್ನಾಕರವರ್ಣಿಯ ಭರತೇಶ ವೈಭವ, ರತ್ನಾಕರ ವೈಭವ ಮೊದಲಾದವುಗಳನ್ನು ಹೊಸಗನ್ನಡಕ್ಕೆ ಅನುವಾದಿಸಿದ್ದಾರೆ. ಕರ್ನಾಟಕ ಸಂಸ್ಕೃತಿ, ಶ್ರವಣಬೆಳಗೊಳ ಮೊದಲಾದ ಹತ್ತು ಪುಸ್ತಕಗಳು ಐ.ಬಿ.ಎಚ್. ಮಾಲಿಕೆಯಲ್ಲಿ ಪ್ರಕಟವಾಗಿವೆ. ಇವರ ರತ್ನಾಕರ ಕಾದಂಬರಿಗೆ ಕರ್ನಾಟಕ ಸರ್ಕಾರದ ಪ್ರಶಸ್ತಿ, ರತ್ನಾಕರನ ಶತಕ ಸಾಹಿತ್ಯ ವಿಮರ್ಶಾ ಕೃತಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಭರತೇಶರನ ಬಾಳ್ಗಬ್ಬ ಕೃತಿಗೆ ಶ್ರವಣಬೆಳಗೊಳದ ಗೊಮ್ಮಟೇಶ್ವರ ಪ್ರಶಸ್ತಿ ದೊರೆಕಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಚಾವುಂಡರಾಯ ಪ್ರಶಸ್ತಿ, ಒರಿಸ್ಸ ಸರ್ಕಾರದಿಂದ ಒಂದು ಲಕ್ಷರೂಪಾಯಿ ನಗದಿನೊಡನೆ ಇತಿಹಾಸರತ್ನ ಎಂಬ ಬಿರುದು ಮತ್ತು ಸಾಮ್ರಾಟ್ ಖಾರವೇಲ ಪ್ರಶಸ್ತಿ ಇವರಿಗೆ ಸಂದ ಇತರ ಗೌರವಗಳು. ಬ್ರಹ್ಮಾಯಣ ಇವರ ಆತ್ಮಕಥೆ. ಇವರು ಶ್ರವಣಬೆಳಗೊಳ ಮತ್ತು ಕೊಳ್ಳೇಗಾಲಗಳಲ್ಲಿದ್ದಾಗ ಜ್ಯೋತಿಷ್ಯವನ್ನು ಗುರುಮುಖೇನ ಕಲಿತರು. ಸಾಹಿತ್ಯ ಕೃಷಿಯೊಂದಿಗೆ ಜಾತಕ ಬರೆಯುವ ಹಾಗೂ ನೋಡುವ ಹವ್ಯಾಸದಲ್ಲೂ ತೊಡಗಿದ್ದರು. ಮೈಸೂರಿನಲ್ಲಿ ನೆಲಸಿರುವ ಬ್ರಹ್ಮಪ್ಪನವರು ಹಾಸ್ಯ ಪ್ರಿಯರು. ಚುರುಕು

ಚಟುಕು ಮಾತುಗಾರಿಕೆಯಲ್ಲಿ ನಿಸ್ಸೀಮರು, ಸತ್ಯುತ್ಪನ್ನ ಮತಿಗಳು. ಈಗ ಇವರು ಮೈಸೂರಿನಲ್ಲಿ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ. ತಮ್ಮ ಕೃತಿಗಳ ಮಾರಾಟದ ಹೊಣೆಯನ್ನು ತಾವೇ ಹೊತ್ತುಕೊಂಡವರು. ಓದುಗರಲ್ಲಿ ವಾಚನಾಭಿರುಚಿಯನ್ನು ಇವರು ಬೆಳೆಸಲೆತ್ನಿಸಿದ ರೀತಿ ಅತ್ಯಂತ ಸ್ವಾರಸ್ಯಕರವಾದುದು. (ಪಿ.ಎಸ್‌ಎಚ್.)

**ಬ್ರಹ್ಮಶಿವ:** ಸು 1190. ಜೈನಕವಿ. ಸಮಯಪರೀಕ್ಷೆ ಎಂಬ ಕಾವ್ಯದ ಕರ್ತೃ. ಈತನಿಗೆ ಬ್ರಹ್ಮ, ಬ್ರಹ್ಮದೇವ ಎಂಬ ಹೆಸರುಗಳೂ ಇದ್ದಂತೆ ತೋರುತ್ತದೆ. ಪೊಟ್ಟಳಗೆರೆ ಕವಿಯ ಜನ್ಮಸ್ಥಳ. ಇದು ಈಗಿನ ಹೈದರಾಬಾದ್ ಹತ್ತಿರವಿರುವ ಪಟ್ಟಣಚೆರುವು ಆಗಿರಬೇಕೆಂದು ಊಹಿಸಲಾಗಿದೆ. ಈತನ ತಂದೆ ಸಿಂಗರಾಜ, ಗುರು ವೀರಣಂದಿ ಕವಿ ತಾನು ಅಗ್ಗಳದೇವನ ಕೆಳೆಯಂ ಎಂದು ಹೇಳಿಕೊಂಡಿರುವುದರಿಂದ ಅಗ್ಗಳ ಎಂಬುವನು ಕವಿಯ ಪ್ರಿಯಸ್ನೇಹಿತನಾಗಿದ್ದು ಈತ ಚಂದ್ರಪ್ರಭ ಪುರಾಣವನ್ನು ಬರೆದ ಅಗ್ಗಳನೇ (ಸು. 1189) ಇರಬಹುದೆಂಬ ಊಹೆ ಇದೆ. ಕವಿ ತನ್ನನ್ನು ಸುಕವಿ ಪಂಪರಾಜನ ಮೊಮ್ಮಂ ಎಂದು ಕರೆದು ಕೊಂಡಿದ್ದಾನೆ. ಈ ಪಂಪರಾಜ ರಾಮಚಂದ್ರಚರಿತಪುರಾಣವನ್ನು ಬರೆದ ನಾಗಚಂದ್ರನಿರಬೇಕೆಂದು ಅಭಿಪ್ರಾಯಪಡಲಾಗಿದೆ. ಕವಿ ಮೊದಲು ಶೈವಧರ್ಮಾವಲಂಬಿಯಾಗಿದ್ದು ಅನಂತರ ಜೈನನಾದಂತೆ ಕಂಡುಬರುತ್ತದೆ. ಪೂರ್ವಕವಿಗಳಲ್ಲಿ ಪಂಪ, ರನ್ನ, ಅಸಗ, ನಾಗಚಂದ್ರ, ಬಂಧುವರ್ಮ ಮೊದಲಾದವರನ್ನು ಈತ ಸ್ಮರಿಸಿದ್ದಾನೆ. ವಚನಕಾರರಲ್ಲಿ ಜೇಡರದಾಸಿಮಯ್ಯನನ್ನು ಉಲ್ಲೇಖಿಸಿದ್ದಾನೆ. ಚಾಳುಕ್ಯ ತ್ರೈಲೋಕ್ಯಮಲ್ಲನ ಮಗ ಕೀರ್ತಿವರ್ಮನನ್ನು (ಸು. 1100– ಗೋವೈದ್ಯದ ಕರ್ತೃ) ಸ್ತುತಿಸಿರುವುದರಿಂದ ಕವಿ ಈತನ ಸಮಕಾಲೀನನಾಗಿರಬೇಕೆಂಬ ಅಭಿಪ್ರಾಯವೂ ಇದೆ. ಪುಣ್ಯವಶದಿಂದಾರಾಜ್ಯಪೂಜ್ಯಾಸ್ಪದಂಬಡೆದಾಗಳ್ ಕವಿಚಕ್ರವರ್ತಿ ಪೆಸರಂ ತ್ರೈಲೋಕ್ಯಚೂಡಾಮಣೀ ಎಂದು ಹೇಳಿಕೊಂಡಿರುವುದರಿಂದ ಈತ ರಾಜ ಮರ್ಯಾದೆಯನ್ನೂ ಕವಿಚಕ್ರವರ್ತಿಯೆಂಬ ಬಿರುದನ್ನೂ ಪಡೆದಿದ್ದಂತೆ ತಿಳಿಯುತ್ತದೆ. ತಾನು ಅಖಿಲ ವೇದಸ್ಮೃತಿ ಪುರಾಣಗಳಲ್ಲಿ ಬಲ್ಲಿದನೆಂದು ಹೇಳಿಕೊಂಡಿದ್ದಾನೆ. ತ್ರೈಲೋಕ್ಯಚೂಡಾಮಣಿ ಸ್ತೋತ್ರ ಈತನ ಇನ್ನೊಂದು ಕೃತಿ.

ಸಮಯಪರೀಕ್ಷೆ ಕಂದವೃತ್ತಗಳಲ್ಲಿ ರಚಿತವಾಗಿದೆ. ಇದರಲ್ಲಿ 15 ಅಧಿಕಾರಗಳಿವೆ. ಇದು ಸಮಕಾಲೀನ ಜನಜೀವನವನ್ನು ಚಿತ್ರಿಸುವ ವಿಡಂಬನ ಕಾವ್ಯ. ಜೈನಧರ್ಮಪ್ರಚಾರ ಕವಿಯ ಮುಖ್ಯ ಉದ್ದೇಶ. ಕಥೆಗಾಗಲಿ, ಪಾತ್ರಚಿತ್ರಣಕ್ಕಾಗಲಿ, ವರ್ಣನೆಗಳಿಗಾಗಲಿ ಇಲ್ಲಿ ಹೆಚ್ಚಿನ ಅವಕಾಶವಿಲ್ಲ. ಸ್ವಮತಮಂಡನೆ ಪರಮತ ವಿಡಂಬನೆ ಕಾವ್ಯದುದ್ದಕ್ಕೂ ಎದ್ದು ಕಾಣುತ್ತದೆ. ಈತನಿಗೆ ಜೈನೇತರ ಧರ್ಮಗಳ ಪರಿಚಯ, ಅವುಗಳ ಆಳವಾದ ಜ್ಞಾನ ಸಾಕಷ್ಟು ಇದ್ದುದರಿಂದ ಆ ಎಲ್ಲ ಧರ್ಮಗಳ ಹುಳುಕನ್ನು ಎತ್ತಿತೋರಿಸಿ, ವಿಡಂಬಿಸಿ, ಗೇಲಿಮಾಡಿ ಜೈನಧರ್ಮವೊಂದೇ ನಿಜವಾದ ಧರ್ಮ, ಇಂಥ ಧರ್ಮವನ್ನು ಎಲ್ಲರೂ ಆಶ್ರಯಿಸಿ ಎಂದು ಹೇಳಿದ್ದಾನೆ. ಶೈವ, ವೈದಿಕ, ಸೌರ, ಕೌಳ ಮೊದಲಾದ ಧರ್ಮಗಳ ತತ್ತ್ವಗಳನ್ನು ಸಾಕಷ್ಟು ಉಗ್ರವಾಗಿ ವಿರೋಧಿಸಿದ್ದಾನೆ. ಇದರಿಂದ ಅಂದಿನ ಕಾಲದ ಜನಜೀವನವನ್ನು ಸ್ವಲ್ಪಮಟ್ಟಿಗಾದರೂ ಅರಿತುಕೊಳ್ಳಲು ಸಾಧ್ಯವಾಗಿದೆ. ಜೈನ ಧರ್ಮ ಕ್ಷೀಣಿಸುತ್ತಿದ್ದ ಅವಧಿಯಲ್ಲಿ ಮತಾಂತರಹೊಂದಿದ ಬ್ರಹ್ಮಶಿವ ಆವೇಶಭರಿತನಾಗಿದ್ದುದರ ಜೊತೆಗೆ ತನ್ನ ಸುತ್ತಮುತ್ತಣ ಸಮಾಜದ ವ್ಯವಸ್ಥೆಯನ್ನು ಕಂಡು ಸಿಡಿದೆದ್ದಿದ್ದಾನೆ. ಇವನ ವಿಡಂಬನ ಶೈಲಿ ಅಪೂರ್ವವಾದದ್ದು. ಸೃಷ್ಟಿ ಸ್ಥಿತಿ ಲಯಗಳನ್ನು ಕುರಿತು –ಓರ್ವ್ವಂ ಜಗವಂ ಮಾಡುವನೋರ್ವ್ವಂ ಮತ್ತದನೆ ಕಾವನಲ್ಲದನೇಂ ಮತ್ತೋರ್ವ್ವಂ ಕಿಡಿಸುವನನಿಬರುಮೋರ್ವ್ವನೆಗಡ ಕಡೆಯೊಳಿನ್ನುಮಘಟಿತ ಮೊಳವೇ ಎಂದು ಹಾಸ್ಯ ಮಾಡುತ್ತಾನೆ. ಬ್ರಹ್ಮ ತನ್ನ ಒಂದು ತಲೆಯನ್ನು ಕಳೆದುಕೊಂಡದ್ದನ್ನು ಕುರಿತು–ಜಗಮಂ ಮಾಳ್ಪಂ ಗಡ ಪದ್ಮಗರ್ಭನಂತನಿತುಶಕ್ತಿಯುಳ್ಳಂ ತಾನೇಕೆ ಗಡಂ ನಿಜಶಿರಮಂ ಕಿತ್ತೆಗೆಯೆತ್ತಿದ–ಮೃಡನನಿನಿಸುಮಾಣಿಸಲಾಱಿಂ ಎನ್ನುತ್ತಾನೆ. ಕವಿಗೆ ಪರಮತ ಸಹಿಷ್ಣುತೆ ಇಲ್ಲ. ಆದರೂ ಇವನ ವಿಡಂಬನವಾದ ಹಿತವಾಗಿ ತೋರುತ್ತದೆ. ತರ್ಕ ಮನರಂಜಕವಾಗಿರುತ್ತದೆ. ಅರ್ಧನಾರೀಶ್ವರ ಕಲ್ಪನೆಯನ್ನು ಕುರಿತು ತನ್ನ ಒಡಲಿನ ಅರ್ಧಭಾಗವನ್ನು ಶಂಭು ಕಾಂತೆಗೆ ಕೊಟ್ಟ, ಪಾರ್ವತಿ ತನ್ನೊಡಲಿನ ಅರ್ಧವನ್ನು ಶಂಭುವಿಗೆ ಕೊಟ್ಟಳು. ಮಿಕ್ಕ ಎರಡು ಅರ್ಧ ದೇಹಗಳನ್ನು ಅವರು ಯಾರಿಗೆ ಕೊಟ್ಟರು–ಎನ್ನುವುದು ಇವನು ವಿಡಂಬನೆ ಮಾಡುವ ರೀತಿ. ಕವಿಗೆ ತರ್ಕಜ್ಞಾನ ಮತ್ತು ಶಾಸ್ತ್ರಜ್ಞಾನ ಎರಡೂ ಇವೆ. ಕಾವ್ಯಶೈಲಿ ಸರಳವಾಗಿದೆ. ಬಂಧ ಲಲಿತವಾಗಿದೆ. ಕವಿ ಅಲ್ಲಲ್ಲಿ ಬಳಸಿರುವ ನಾಣ್ನುಡಿಗಳಿಂದ ಶೈಲಿಗೆ ಮೆರಗು ಬಂದಿದೆ. ಸಮಯಪರೀಕ್ಷೆ ಸಮಕಾಲೀನ ಜೀವನವನ್ನು ಚಿತ್ರಿಸುತ್ತಿರುವ ಕೃತಿಯಾದರೂ ಇದರಲ್ಲಿ ವೀರಶೈವ ಧರ್ಮದ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ವೀರಶೈವ ಧರ್ಮಕ್ಕೆ ಸಂಬಂಧಪಟ್ಟ ಷಟ್ಸ್ಥಲಸಿದ್ಧಾಂತ, ಅಷ್ಟಾವರಣ ಮೊದಲಾದವು ಗಳ ಉಲ್ಲೇಖ ಇಲ್ಲಿ ಕಂಡುಬರುವುದಿಲ್ಲ. ವೀರಶೈವಧರ್ಮವನ್ನು ಪುನರು ಜ್ಜೀವಿಸಿದ ಬಸವಣ್ಣನವರ ಬಗ್ಗೆಯಾಗಲೀ ಅವರ ಸಮಕಾಲೀನ ಶಿವಶರಣರ ಬಗ್ಗೆಯಾಗಲೀ ಯಾವುದೇ ಸಂಗತಿ ಈ ಕಾವ್ಯದಿಂದ ತಿಳಿದುಬರುವುದಿಲ್ಲ. ಕನ್ನಡದ ಮೊದಲ ಸ್ವತಂತ್ರ ವಿಡಂಬನ ಕಾವ್ಯವೆನ್ನುವ ದೃಷ್ಟಿಯಿಂದ ಈ ಕೃತಿಗೆ ಮನ್ನಣೆ ದೊರಕಿದೆ. ಕವಿ ತಾನು ಮಹಾಕವಿ ಎಂದು ಹೇಳಿಕೊಂಡಿದ್ದರೂ ಮಹಾಕವಿಯಲ್ಲಿರಬೇಕಾದ ಪ್ರತಿಭೆ ಇವನಲ್ಲಿ ಕಂಡು ಬರುವುದಿಲ್ಲ. ಸಮಯಪರೀಕ್ಷೆ ಒಂದು ಮಧ್ಯಮ ದರ್ಜೆಯ ಕಾವ್ಯ ಎನ್ನಬಹುದು.

ತ್ರೈಲೋಕ್ಯಚೂಡಾಮಣಿ ಸ್ತೋತ್ರದಲ್ಲಿ ಮೂವತ್ತಾರು ವೃತ್ತಗಳಿವೆ. ಇದಕ್ಕೆ ಛತ್ತೀಸರತ್ನಮಾಲೆ ಎಂಬ ಹೆಸರೂ ಇದೆ. ಪ್ರತಿ ಪದ್ಯವೂ ತ್ರೈಲೋಕ್ಯ ಚೂಡಾಮಣೀ ಎಂದು ಮುಗಿಯುತ್ತದೆ. ಹರಿ ಹರ ಇಂದ್ರ ಸೂರ್ಯ ಗಣಪತಿ ನದಿ ಮರ ಸಮುದ್ರ ಮೊದಲಾದವುಗಳನ್ನು ದೇವರೆಂದು ತಿಳಿಯುವಲ್ಲಿ ಅರ್ಥವಿಲ್ಲ. ಜಿನಮಾರ್ಗದಲ್ಲಿ ನಡೆದು ಜಿನಪತಿಯನ್ನು ಪೂಜಿಸಿ ಜನ್ಮಸಾರ್ಥಕ ಮಾಡಿಕೊಳ್ಳಬೇಕು ಎಂದು ತಿಳಿಸುವುದೇ ಈ ಕೃತಿಯ ಉದ್ದೇಶ. *

**ಬ್ರಹ್ಮಸಮುದ್ರ:** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿ ಕಡೂರಿನ ನೈಋತ್ಯಕ್ಕೆ 11 ಕಿಮೀ ದೂರದಲ್ಲಿ ಬಾಣಾವರ–ಕಡೂರುಗಳ ನಡುವೆ ಇರುವ ಪುರಾಣ ಪ್ರಸಿದ್ಧ ಸ್ಥಳ. ಜನಸಂಖ್ಯೆ 310.

ಈ ಗ್ರಾಮ ಮಲ್ಲಿಕಾರ್ಜುನ ಬೆಟ್ಟದ ತಪ್ಪಲಿನಲ್ಲಿದೆ. ಬೆಟ್ಟದ ಮೇಲೆ ಮೈ ತೂರಿ ಹೋಗುವಷ್ಟು ಚಿಕ್ಕ ದ್ವಾರವುಳ್ಳ ಗುಡಿಯ ಒಳಗಡೆ ಲಿಂಗವಿದೆ. ಅನೇಕ ಗವಿಗಳು, ಶಿಲಾಲೇಖಗಳು ಅಲ್ಲಲ್ಲಿ ಕಂಡುಬರುತ್ತವೆ. ಬೆಟ್ಟದ ಕೆಳಭಾಗದಲ್ಲಿ ಮಹಾಲಕ್ಷ್ಮಿಯ ದೇವಸ್ಥಾನವಿದೆ. ಬೆಟ್ಟದ ತಪ್ಪಲಿನಲ್ಲಿ ಕೆರೆ ಇದೆ. ಸಂತೆಯೂ ಸೇರುವುದರಿಂದ ಇದನ್ನು ಕೆರೆಸಂತೆ ಎಂದು ಕರೆಯುತ್ತಾರೆ. ಇಲ್ಲಿ ವರ್ಷಕ್ಕೆ ಒಮ್ಮೆ ಜಾತ್ರೆ ಸೇರುವುದು.

ಬೆಟ್ಟದ ಸ್ವಲ್ಪ ಬಲಗಡೆಗೆ ಬಹಳ ಆಳವಿರುವ ಅಗಾಧ ನೀರಿನ ತಾಣವೇ ಬ್ರಹ್ಮಸಮುದ್ರ. ತೆಂಗಿನಮರಗಳಿಂದ ಸುತ್ತುವರಿಯಲ್ಪಟ್ಟು 5ಚ.ಕಿಮೀ ಇರುವ ಈ ಪ್ರದೇಶ ನಯನ ಮನೋಹರವಾಗಿದೆ. ಕೇವಲ ಋಷಿಮುನಿಗಳಲ್ಲದೆ ಕವಿಗಳಿಗೂ ಸ್ಫೂರ್ತಿಯನ್ನೂ ನೀಡುವ ಸ್ಥಳವಿದು. ಕವಿ ಲಕ್ಷ್ಮೀಶ ತನ್ನ ಜೈಮಿನಿ ಭಾರತದಲ್ಲಿ ಬ್ರಹ್ಮಸಮುದ್ರದ ವರ್ಣನೆ ಮಾಡಿದ್ದಾನೆ. ಬೆಟ್ಟದ ಮಲ್ಲಿಕಾರ್ಜುನನನ್ನು ಎರಡನೆಯ ಶ್ಲೋಕದಲ್ಲಿ ಸ್ಮರಿಸಿದ್ದಾನೆ. (ಆರ್.ಟಿ.ಎಸ್.)

**ಬ್ರಹ್ಮಾವರ:** ಉಡುಪಿ ತಾಲ್ಲೂಕಿನ ಒಂದು ಹಳ್ಳಿ. ಉಡುಪಿಯ ಉತ್ತರಕ್ಕೆ 13 ಕಿಮೀ ದೂರದಲ್ಲಿ ಕುಂದಾಪುರಕ್ಕೆ ಹೋಗುವ ಹೆದ್ದಾರಿಯಲ್ಲಿದೆ. ಇದೊಂದು ಅಗ್ರಹಾರವಾಗಿತ್ತು. ಬ್ರಹ್ಮಪುರ ಎಂಬ ಹೆಸರಿನ ಉಲ್ಲೇಖ 12–13ನೆಯ ಶತಮಾನಗಳ ಶಾಸನಗಳಲ್ಲಿ ದೊರೆಯುತ್ತದೆ.

ಇಲ್ಲಿ ಮಹಾಲಿಂಗೇಶ್ವರ, ಜನಾರ್ದನ, ಗೋಪಿನಾಥ ದೇವಾಲಯಗಳಿವೆ. ಮಹಾಲಿಂಗೇಶ್ವರ ದೇವಾಲಯದ ನವರಂಗದಲ್ಲಿ ಚತುರ್ಭುಜಗಳುಳ್ಳ, ಕೈಗಳಲ್ಲಿ ಅಂಕುಶ ಪಾಶ ಪದ್ಮಜಗಳನ್ನು ಹಿಡಿದಿರುವ ಗಜಗೌರಿಯ ವಿಗ್ರಹವಿದೆ. ಈ ದೇವಾಲಯದ ರಚನೆಯ ಕಾಲ 9ನೆಯ ಶತಮಾನವೆಂದು ತೋರುತ್ತದೆ. ಗೋಪಿನಾಥ ದೇವಾಲಯದ ಉಲ್ಲೇಖ 1296ರ ಶಾಸನವೊಂದರಲ್ಲಿ ದೊರೆಯುತ್ತದೆ. ದೇವಾಲಯದಲ್ಲಿರುವ ಹಲವಾರು ವಿಗ್ರಹಗಳು ಹೊಯ್ಸಳರ ಕಾಲದವು.

ಬ್ರಹ್ಮಾವರದ ಆಸುಪಾಸಿನಲ್ಲಿ ಕಾಮೇಶ್ವರ ಮತ್ತು ಕಪಿಲೇಶ್ವರ ದೇವಾಲಯಗಳೂ ವಿಜಯನಗರ ಕಾಲದ ಒಂದು ಅಗ್ರಹಾರವೂ ಕೆಳದಿನಾಯಕರ ಕಾಲದ ಒಂದು ಅಗ್ರಹಾರವೂ ಇವೆ. ಈ ಊರಿನ ಉತ್ತರ ಮತ್ತು ಪೂರ್ವ ಭಾಗದಲ್ಲಿ ಸೀತಾನದಿ ಹರಿಯುತ್ತದೆ. (ಪಿ.ಜಿ.ಬಿ.)

**ಬ್ರಿಗ್ಸ್ , ಜಾನ್:** 1785–1875. ಮೈಸೂರು ಸಂಸ್ಥಾನದ ಆಳ್ವಿಕೆಯನ್ನು ಈಸ್ಟ್ ಇಂಡಿಯಾ ಕಂಪನಿ ವಹಿಸಿಕೊಂಡಾಗ ನೇಮಿತನಾದ ಪ್ರಥಮ ಸೀನಿಯರ್ ಕಮಿಷನರ್ (1831–32)

1801ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮದರಾಸು ಸೈನ್ಯಕ್ಕೆ ಸೇರಿದ ಬ್ರಿಗ್ಸ್ ಮರಾಠ ಯುದ್ಧದಲ್ಲಿ ಭಾಗವಹಿಸಿದ್ದ. ಅದೇ ವರ್ಷ ಸರ್ ಜೆ. ಮಾಲ್ಕಂನೊಂದಿಗೆ ಸಹಾಯಕನಾಗಿ ಪರ್ಷಿಯಕ್ಕೆ ಹೋಗಿದ್ದ. ಹಿಂತಿರುಗಿದ ಮೇಲೆ ಸಾತಾರದ ರೆಸಿಡೆಂಟ್ ಆಗಿ ನೇಮಕಗೊಂಡ. ಮೈಸೂರು ಸಂಸ್ಥಾನದ ಆಡಳಿತ ಸರಿಯಿಲ್ಲವೆಂದು ಬ್ರಿಟಿಷ್ ಸರ್ಕಾರ ಕಮಿಷನರ್‌ಗಳನ್ನು ನೇಮಿಸಲು ತೀರ್ಮಾನಿಸಿ ಬ್ರಿಗ್ಸ್‌ನನ್ನು ಪ್ರಪ್ರಥಮ ಸೀನಿಯರ್ ಕಮಿಷನರ್ ಆಗಿ ನೇಮಿಸಿತು. ಬ್ರಿಗ್ಸ್ ಡಿಸೆಂಬರ್ 1831ರಲ್ಲಿ ಅಧಿಕಾರ ವಹಿಸಿಕೊಂಡ. ಇವನ ಜೊತೆಯಲ್ಲಿ ಆಡಳಿತಗಾರರಾಗಿ ಅನುಕ್ರಮವಾಗಿ ಸಿ.ಎಂ. ಲುಶಿಂಗ್‌ಟನ್ ಮತ್ತು ಜೆ.ಡಿ. ಡ್ರೂರಿ ಜೂನಿಯರ್ ಕಮಿಷನರ್‌ಗಳಾಗಿದ್ದರು. ಬ್ರಿಗ್ಸ್‌ಗಿಂತ ಎರಡು ತಿಂಗಳ ಮುಂಚೆ ಅಧಿಕಾರಕ್ಕೆ ಬಂದಿದ್ದ ಲುಶಿಂಗ್‌ಟನ್ ಸಂಸ್ಥಾನದ ಆಡಳಿತದಲ್ಲಿ ಹಲವು ಬದಲಾವಣೆಗಳನ್ನು ಮಾಡಿದ್ದ. ಪೂರ್ಣಯ್ಯನವರ ಕಾಲದಿಂದ ಇದ್ದ ಬಾರ್ಗೀರ್ ಸಿಪಾಯಿ ತುಕಡಿಯನ್ನು ಮತ್ತು ಸದ್ದರ್ ನ್ಯಾಯಾಲಯವನ್ನು ರದ್ದು ಮಾಡಿದ್ದು, ಧಾರ್ಮಿಕ ಸಂಸ್ಥೆಗಳಿಗೆ ಸೇರಿದ್ದ ಎಲ್ಲ ದತ್ತಿಗಳನ್ನೂ ಅವುಗಳ ಹಕ್ಕನ್ನು ತೀರ್ಮಾನಿಸುವುದಕ್ಕೆಂಬ ಉದ್ದೇಶದಿಂದ ಹಿಂತೆಗೆದುಕೊಂಡದ್ದೂ ಅವನ ಕಾರ್ಯಗಳು. ಆದರೆ ಬ್ರಿಗ್ಸ್ ಅಧಿಕಾರ ವಹಿಸಿಕೊಂಡ ಕೂಡಲೆ ಲುಶಿಂಗ್‌ಟನ್‌ನ ಈ ಎಲ್ಲ ಕ್ರಮಗಳನ್ನೂ ರದ್ದುಪಡಿಸಿದ. ದೇಶದ ಆಡಳಿತವನ್ನು ವ್ಯವಸ್ಥಿತಗೊಳಿಸಲು 1832ರ ಮೇ ತಿಂಗಳಲ್ಲಿ ಅನೇಕ ಸುಧಾರಣೆಗಳನ್ನು ತರಲಾಯಿತು. ಆಗಿನ ಆರ್ಥಿಕ ಅವ್ಯವಸ್ಥೆಗೆ ಕಾರಣನಾಗಿದ್ದನೆನ್ನಲಾದ ದಿವಾನ್ ವೆಂಕಟರಮಣಯ್ಯನಿಗೆ ಅವನ ಕಾಲದಲ್ಲಾದ ಆದಾಯ ವೆಚ್ಚದ ಬಗ್ಗೆ ಪೂರ್ಣ ವಿವರಗಳನ್ನು ನೀಡಬೇಕೆಂದು ತಾಕೀತು ಮಾಡಲಾಯಿತಲ್ಲದೆ, ಅವನಿಂದ ರಾಜೀನಾಮೆ ಕೊಡಿಸಿ ಹಿಂದೆ ದಿವಾನನಾಗಿದ್ದ ಬಾಬುರಾಯನನ್ನು ಪುನಃ ನೇಮಿಸಲಾಯಿತು. ಫರ್ಯದ್ ಕಛೇರಿಯ ಮುಖ್ಯಸ್ಥನಾಗಿದ್ದ ಹಿಂದಿನ ದಿವಾನರ ಅಳಿಯನಾಗಿದ್ದ ಮೊರಾರಿರಾವ್‌ನನ್ನೂ ಕೆಲಸದಿಂದ ತೆಗೆದು ಲಾಲ್‌ಸಿಂಗ್ ಎಂಬುವನನ್ನು ನೇಮಿಸಲಾಯಿತು. ಪೂರ್ಣಯ್ಯನವರ ಮೈದುನ ಕುಪ್ಪಣ್ಣನನ್ನು ಖಜಾನೆಯ ಅಧಿಕಾರಿಯಾಗಿ ನೇಮಿಸಲಾಯಿತು. ಹುಜೂರ್ ಅದಾಲತ್ ಎಂಬ ನ್ಯಾಯಾಲಯವನ್ನು (ಇಂದಿನ ಮುಖ್ಯ ನ್ಯಾಯಾಲಯದ ಮೂಲ ರೂಪ) ಹೊಸದಾಗಿ ಸ್ಥಾಪಿಸಿ ರಾಮ್‌ರಾಜ್ ಎಂಬ ಪ್ರತಿಭಾವಂತರನ್ನು ನ್ಯಾಯಾಧೀಶರಾಗಿ ನೇಮಿಸಲಾಯಿತು. ಅಮೀಲರು ಮತ್ತು ಫೌಜುದಾರರ ಹಕ್ಕು ಕರ್ತವ್ಯಗಳನ್ನು ನಿರ್ದಿಷ್ಟಪಡಿಸಲಾಯಿತು. ಸರ್ಕಾರದ ಇಲಾಖೆಗಳ ಕರ್ತವ್ಯಗಳನ್ನು ನಿರ್ದಿಷ್ಟಪಡಿಸಿ, ಪ್ರತಿ ಇಲಾಖೆ ಹಾಗೂ ಜಿಲ್ಲಾ ಮುಖ್ಯಾಧಿಕಾರಿಗಳ ಜವಾಬ್ದಾರಿಯನ್ನೂ ಹೆಚ್ಚಿಸಲಾಯಿತು. ಕಮಿಷನ್ ಆಡಳಿತ ಹತೋಟಿಯನ್ನು ಚೆನ್ನಾಗಿ ಹೊಂದಿರಲು ಹುಜೂರ್ ಕಛೇರಿಯನ್ನು (ಇಂದಿನ ಸೆಕ್ರೆಟೇರಿಯೆಟ್‌ನ ಮೂಲ ರೂಪ) ಸ್ಥಾಪಿಸಲಾಯಿತು. ಅಲ್ಲದೆ ರಾಜ್ಯದ ಎಲ್ಲ ವ್ಯವಹಾರಗಳನ್ನು ಇಂಗ್ಲಿಷ್ ತಿಂಗಳು ತಾರೀಕುಗಳ ಪ್ರಕಾರ ನಡೆಸುವಂತೆ ವ್ಯವಸ್ಥೆ ಮಾಡಲಾಯಿತು.

ನಗರ ಸೀಮೆಯ ಪಾಳೆಯಗಾರರ ಬಂಡಾಯವನ್ನು ಕೊನೆಗೊಳಿಸಿದ್ದು ಬ್ರಿಗ್ಸ್‌ನ ಮುಖ್ಯ ರಾಜಕೀಯ ಸಾಧನೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಅವರ ವರ್ತನೆಗಳನ್ನೆಲ್ಲ ಕ್ಷಮಿಸುವಂತೆ ಘೋಷಣೆ ಹೊರಡಿಸಿ ಶಾಂತಿ ಸ್ಥಾಪಿಸಬೇಕೆಂಬುದು ಇವನ ಉದ್ದೇಶವಾಗಿತ್ತು. ಆದರೆ ಮದರಾಸಿನ ಗವರ್ನರ್ ಇದಕ್ಕೆ ಒಪ್ಪಲಿಲ್ಲ. ಕೊನೆಗೆ ಬ್ರಿಗ್ಸ್ ಸ್ವತಃ ನಗರ ಸೀಮೆಗೆ ಹೋಗಿ ಅಲ್ಲಿಯ ಪಾಳೆಯಗಾರರನ್ನು ಸಾಂತ್ವನಗೊಳಿಸಲು ಪ್ರಯತ್ನಿಸಿದ. ಮೊದಲು ಆ ಪ್ರದೇಶದ ಫೌಜುದಾರ ಅಪ್ಪಣ್ಣ ಪಾಳೆಯಗಾರರ ವಿರುದ್ಧ ತನ್ನ ಅಧಿಕಾರವನ್ನು ಮೀರಿ ವರ್ತಿಸಿದನೆಂದು ಘೋಷಿಸಿ, ಅವನನ್ನು ಕೆಲಸದಿಂದ ತೆಗೆದುಹಾಕಿದ, ಅನೂಚಾನವಾಗಿ ಆಳುತ್ತಿದ್ದ ಪಾಳೆಯಗಾರರಿಗೆ, ಹಳೆಯ ಒಪ್ಪಂದಗಳಂತೆ ಸಲ್ಲುತ್ತಿದ್ದ ನಿವೃತ್ತಿವೇತನವನ್ನು ಮುಂದುವರಿಸಿದ. ಇದರಿಂದ ತರೀಕೆರೆ ಮೊದಲಾದೆಡೆಯ ಪಾಳೆಯಗಾರರು ರಾಜ್ಯವಿರುದ್ಧ ಕಾರ್ಯಾಚರಣಗಳನ್ನು ನಿಲ್ಲಿಸಿದರು. ಆದರೆ ಕೆಳದಿ ವಂಶದವನೆಂದು ಸಾರಿಕೊಳ್ಳುತ್ತಿದ್ದ ಬೂದಿ ಬಸವಪ್ಪ ಆ ವಂಶಕ್ಕೆ ಸೇರಿದವನಲ್ಲನೆಂಬುದನ್ನು ಮನಗಂಡು ಉಪಾಯದಿಂದ ಅವನನ್ನು ನಿಗ್ರಹಿಸಿದ. ನಗರ ಸೀಮೆಯಲ್ಲಿದ್ದ ಬಂಡಾಯದ ಸ್ಥಿತಿ ರಕ್ತಪಾತವಿಲ್ಲದೆ ಕೊನೆಗೊಂಡಿತು.

ಈ ಮಧ್ಯದಲ್ಲಿ ಬ್ರಿಗ್ಸ್ ಮತ್ತು ಇವನ ಜೂನಿಯರ್ ಕಮಿಷನರ್ ನಡುವೆ ಅಧಿಕಾರಗಳ ಹಂಚಿಕೆ ಮತ್ತು ಹೊಣೆಗಾರಿಕೆಯ ಬಗ್ಗೆ ಅಭಿಪ್ರಾಯ ಭೇದ ಬೆಳೆದಿತ್ತು. ಇದರಿಂದಾಗಿ 1832ರ ಕೊನೆಯ ಹೊತ್ತಿಗೆ ಬ್ರಿಗ್ಸ್ ರಾಜೀನಾಮೆ ನೀಡಿದ. ಅನಂತರ ನಾಗಪುರದಲ್ಲಿ ರೆಸಿಡೆಂಟ್ ಆಗಿ ನೇಮಕಗೊಂಡು 1835ರ ವರೆಗೆ ಅಲ್ಲಿದ್ದ. 1838ರಲ್ಲಿ ಮೇಜರ್ ಜನರಲ್ ಆದ. ನಿವೃತ್ತಿಯ ಅನಂತರ ಈಸ್ಟ್ ಇಂಡಿಯಾ ಕಂಪನಿಯ ಕೋರ್ಟ್ ಆಫ್ ಪ್ರೊಪ್ರೈಟರ್ಸ್ ಸದಸ್ಯನಾಗಿದ್ದ. ಭಾರತದ ಉಳಿವಿಗೆ ದೇಶೀಯ ಸಂಸ್ಥಾನಗಳ ಅಸ್ತಿತ್ವವೇ ಮೂಲಶಕ್ತಿ ಎಂದು ನಂಬಿದ್ದ ಈತ ಡಾಲ್‌ಹೌಸಿಯ ರಾಜನೀತಿಯನ್ನು ವಿರೋಧಿಸಿದ.

ಈತ 'ಸಿಯಾರ್ ಉಲ್ ಮುತಾನ್ ಆಖಿರಿನ್' ಮತ್ತು ಫೆರಿಸ್ತನ 'ಭಾರತದಲ್ಲಿ ಮುಸಲ್ಮಾನರ ಪ್ರಭುತ್ವ' ಪಾರಸೀ ಗ್ರಂಥಗಳನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿದ್ದಾನೆ. ಅಲ್ಲದೆ ಭಾರತದ ತೆರಿಗೆ ವಿಧಾನದ ಮೇಲೆ ಒಂದು ಗ್ರಂಥ ರಚಿಸಿದ್ದಾನೆ. ರಾಯಲ್ ಏಷ್ಯಾಟಿಕ್ ಸೊಸೈಟಿಯ ಫೆಲೋ ಆಗಿದ್ದ ಇವನು 1875 ಏಪ್ರಿಲ್ 27ರಂದು ನಿಧನನಾದ.

ಇವನ ಸೋದರ ಸಂಬಂಧಿ ಮೇಜರ್ ಬ್ರಿಗ್ಸ್ ಎಂಬುವನೊಬ್ಬ ಮೈಸೂರಿನಲ್ಲಿ 1867ರಲ್ಲಿ ನಗರ ಮ್ಯಾಜಿಸ್ಟ್ರೇಟ್ ಆಗಿದ್ದ. (*;ಸಿ.ಕೆ.ಎನ್.)

**ಬ್ರಿಟಿಷರ ಆಳ್ವಿಕೆ:** ಕೇವಲ ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದ ಬ್ರಿಟಿಷರು, ಸು. 18ನೆಯ ಶತಮಾನದ ಹೊತ್ತಿಗೆ ಇಲ್ಲಿನ ರಾಜಕೀಯ ಅವಾಂತರ ಪರಿಸ್ಥಿತಿಯ ಲಾಭ ಪಡೆದು, ನೆಲದಾಹವನ್ನು ಬೆಳೆಸಿಕೊಂಡರು. ಸೈನಿಕ ಹಾಗೂ ರಾಜತಾಂತ್ರಿಕ ಚಟುವಟಿಕೆಗಳಿಂದ ವಿವಿಧ ಪ್ರದೇಶಗಳ ಮೇಲೆ ಸ್ವಲ್ಪಸ್ವಲ್ಪವಾಗಿ ತಮ್ಮ ಅಧಿಕಾರವನ್ನು ವಿಸ್ತರಿಸತೊಡಗಿದರು. ದಿನೇ ದಿನೇ ಬೆಳೆಯುತ್ತಿದ್ದ ಈ ರಾಜ್ಯವಿಸ್ತರಣ

ಕಾರ್ಯಕ್ಕೆ ಪ್ರಬಲವಾದ ವಿರೋಧಿಗಳಾಗಿ ಸೆಟೆದು ನಿಂತ ದಕ್ಷಿಣಭಾರತದ ಎರಡು ಪ್ರಮುಖ ಶಕ್ತಿಗಳೆಂದರೆ ಮೊದಲು ಮೈಸೂರು ಸುಲ್ತಾನರು, ಅನಂತರ ಮರಾಠರು. 1799ರಲ್ಲಿ ಟಿಪ್ಪುವಿನ ಮರಣದೊಡನೆ ಮೈಸೂರಿನ ಪ್ರತಿರೋಧ ಕೊನೆಗೊಂಡುದಲ್ಲದೆ 1818ರ ಹೊತ್ತಿಗೆ ಮರಾಠರ ಸೋಲಿನಿಂದ ಅವರ ಶಕ್ತಿ ನಿರ್ನಾಮವಾಯಿತಾಗಿ, ಅನಂತರ ಕರ್ನಾಟಕವೂ ಸೇರಿದಂತೆ ಇಡೀ ದಕ್ಷಿಣ ಭಾರತ ಬ್ರಿಟಿಷರ ನೇರ ಆಡಳಿತಕ್ಕೋ ಅಥವಾ ಅವರ ಭದ್ರಮುಷ್ಟಿಯ ಹಿಡಿತಕ್ಕೋ ಸಿಕ್ಕಿತು. ಈ ರಾಜಕೀಯ ಬೆಳವಣಿಗೆಯಿಂದ ಅವರ ಆಡಳಿತ ಕಾಲದಲ್ಲಿ ಸ್ಥಳೀಯ ರೀತಿನೀತಿಗಳು ಹಿಂದೆ ಸರಿದು ಪಾಶ್ಚಾತ್ಯ ಸಂಪ್ರದಾಯಗಳು, ಭಾವನೆಗಳು, ತಾಂತ್ರಿಕ ಸಾಧನೆಗಳು ಇತ್ಯಾದಿಗಳೆಲ್ಲ ಕ್ರಮೇಣ ನೆಲೆಯೂರಿದುವು. ಈ ನಾಡು ಪ್ರಸಕ್ತ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಯೆಡೆಗೆ ಪರಿವರ್ತನೆಗೊಳ್ಳಲಾರಂಭಿಸಿತು. 1947ರಲ್ಲಿ ಭಾರತ ಸ್ವಾತಂತ್ರ್ಯವನ್ನು ಗಳಿಸುವವರೆಗೂ ಅವರ ಆಳ್ವಿಕೆಯ ಪ್ರಭಾವ ಇಲ್ಲಿ ಗಟ್ಟಿಯಾಗಿ ಬೇರೂರಿತ್ತು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕ ಆಡಳಿತ ದೃಷ್ಟಿಯಿಂದ ಹಲವು ವಿಭಾಗಗಳಾಗಿ ಒಡೆದಿತ್ತು. ಬಹುಕಾಲ ಬೆಳಗಾಂವಿ, ಧಾರವಾಡ, ಉತ್ತರಕನ್ನಡ ಜಿಲ್ಲೆಯ ಪ್ರದೇಶಗಳು ಮುಂಬಯಿ ಪ್ರಾಂತ್ಯದಲ್ಲೂ ದಕ್ಷಿಣ ಕನ್ನಡ, ಬಳ್ಳಾರಿ ಮತ್ತು ಕೊಳ್ಳೇಗಾಲ ತಾಲ್ಲೂಕಿನ ಪ್ರದೇಶಗಳು ಮದರಾಸು ಪ್ರಾಂತ್ಯದಲ್ಲೂ ಕೊಡಗು ಪ್ರತ್ಯೇಕ ಘಟಕವಾಗಿಯೂ ಇದ್ದು, ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟಿದ್ದವು. ಇಡೀ ಮೈಸೂರು ಸಂಸ್ಥಾನ, ಹೈದರಾಬಾದು ಸಂಸ್ಥಾನಕ್ಕೆ ಸೇರಿದ್ದ ರಾಯಚೂರು, ಬಿದರೆ, ಗುಲ್ಬರ್ಗ ಜಿಲ್ಲೆಗಳ ಪ್ರದೇಶಗಳು ಮತ್ತು ಕೆಲವು ಚಿಕ್ಕಪುಟ್ಟ ಸಂಸ್ಥಾನಗಳು ಸಂಸ್ಥಾನಿಕರ ವಶದಲ್ಲಿದ್ದರೂ ಈ ಸಂಸ್ಥಾನಗಳು ಬ್ರಿಟಿಷರ ಕೃಪಾಛತ್ರದಡಿಯಲ್ಲಿ ಆಡಳಿತ ನಿರ್ವಹಿಸಬೇಕಾಗಿತ್ತು. ಈ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ ಈ ಕಾಲದ ಆಗುಹೋಗುಗಳನ್ನು ಇಲ್ಲಿ ಸ್ಥೂಲವಾಗಿ ಚಿತ್ರಿಸಲಾಗಿದೆ. ಇತಿಹಾಸ, ಆಡಳಿತ ವ್ಯವಸ್ಥೆ, ಶಿಕ್ಷಣ, ಸಾಹಿತ್ಯ, ವಾಸ್ತುಕಲೆ, ಶಿಲ್ಪಕಲೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿರುವ ಇತರ ಅನೇಕ ಲೇಖನಗಳಲ್ಲಿ ಮತ್ತಷ್ಟು ಸಾಂದರ್ಭಿಕ ವಿವರಗಳನ್ನು ಒದಗಿಸಲಾಗಿದೆ.

**ಮೈಸೂರು ಸಂಸ್ಥಾನ :** ಹಿಂದಿನ ಮೈಸೂರು ರಾಜ್ಯದ ಅಳಿದುಳಿದ ಭಾಗ ಮೈಸೂರು ಸಂಸ್ಥಾನವಾಗಿ ಪರಿಣಮಿಸಿತು. ಮೈಸೂರು ರಾಜ್ಯ ಮತ್ತು ಬ್ರಿಟಿಷರ ಸಂಪರ್ಕ, ಹೈದರ್ ಅಲಿ ಮತ್ತು ಬ್ರಿಟಿಷರ ನಡುವೆ ನಡೆದ ಒಂದನೆಯ ಮೈಸೂರು ಯುದ್ಧದಿಂದ ಪ್ರಾರಂಭವಾಯಿತೆಂದು ಹೇಳಬಹುದು.

**ಒಂದನೆಯ ಮೈಸೂರು ಯುದ್ಧ (1767–69):**ಹೈದರ್ ಅಲಿ **(ನೋಡಿ)** ಹಿಂದಿನ ರಾಜಮನೆತನವನ್ನು ತೆರೆಮರೆಗೊತ್ತರಿಸಿ 1761 ರಿಂದ ಮೈಸೂರು ರಾಜ್ಯದ ಸೂತ್ರಗಳನ್ನು ವಹಿಸಿಕೊಂಡ ಸರ್ವಾಧಿಕಾರಿಯಾಗಿ 1763ರ ಹೊತ್ತಿಗೆ ಪ್ರಬಲ ರಾಜ್ಯ ಕಟ್ಟಿದ ಈತನನ್ನು ಮಣಿಸಲು ಬ್ರಿಟಿಷರು ಹೈದರಾಬಾದಿನ ನಿಜಾಮ ಹಾಗೂ ಪೇಶ್ವೆ ಮಾಧವರಾಯ ಇವರೊಡಗೂಡಿ ಹೈದರನ ವಿರುದ್ಧ ಒಂದು ತ್ರಿಪಕ್ಷ ಒಪ್ಪಂದವನ್ನು ಮಾಡಿಕೊಂಡರು. ಆದರೆ ಹೈದರ್ ಈ ಕುಟಿಲ ತಂತ್ರವನ್ನು ಚಾಕಚಕ್ಯತೆಯಿಂದ ಮುರಿದಿಕ್ಕಿದ. ಆಗ ಬ್ರಿಟಿಷರು ನಿಜಾಮ ಹಾಗೂ ಹೈದರನೊಡನೆ ಒಮ್ಮೆಲೇ ಕಾದಬೇಕಾಯಿತು. ಕರ್ನಲ್ ಸ್ಮಿತ್‌ನ ನೇತೃತ್ವದಲ್ಲಿ ಜಂಗಮ ಮತ್ತು ತಿರುವಣ್ಣಾಮಲೈಗಳ ಸಮೀಪದಲ್ಲಿ ನಡೆದ ಯುದ್ಧದಲ್ಲಿ ಇಂಗ್ಲಿಷರು ಮೊದಲು ಜಯ ಗಳಿಸಿದರೂ ಕೊನೆಗೆ ಹೈದರ್ ಇಡೀ ಕರ್ನಾಟಕ ಪ್ರದೇಶವನ್ನು ಸೂರೆ ಮಾಡಿದ (1769). ಮದರಾಸಿನ ಹೆಬ್ಬಾಗಿಲಿನ ಬಳಿ ಬಂದು ಬೀಡುಬಿಟ್ಟ. ಇದರಿಂದ ಹೆದರಿದ ಬ್ರಿಟಿಷರು 1769ರ ಏಪ್ರಿಲ್ 3ರಂದು ಹೈದರನೊಡನೆ ಶಾಂತಿ ಒಪ್ಪಂದಕ್ಕೆ ಬರಬೇಕಾಯಿತು. ಈ ಮದರಾಸು ಒಪ್ಪಂದದ ಪ್ರಕಾರ ಇಂಗ್ಲಿಷರಿಗೆ ಅಪಾಯ ಸಂಭವಿಸಿದ ಸಂದರ್ಭದಲ್ಲಿ ಹೈದರ್ ಸಹಾಯ ನೀಡುವುದು, ಹೈದರನಿಗೆ ತೊಂದರೆಯಾದ ಪಕ್ಷದಲ್ಲಿ ಇಂಗ್ಲಿಷರು ಹೈದರನಿಗೆ ನೆರವು ನೀಡುವುದು ಎಂದು ತೀರ್ಮಾನವಾಯಿತು. ಆದರೆ 1770ರಲ್ಲಿ ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದಾಗ ಬ್ರಿಟಿಷರು ತಮ್ಮ ವಾಗ್ದಾನವನ್ನು ಗಾಳಿಗೆ ತೂರಿ ಹೈದರನನ್ನು ವಂಚಿಸಿದರು. ಹೈದರ್ ಮರಾಠರಿಗೆ ಅಪಾರ ಐಶ್ವರ್ಯವನ್ನು ಕೊಟ್ಟು ಅವರನ್ನು ಹಿಂದಕ್ಕೆ ಕಳಿಸಬೇಕಾಯಿತು. ಈ ಘಟನೆಯಿಂದ ನೊಂದ ಹೈದರ್ ತನ್ನ ಆಜೀವಪರ್ಯಂತ ಬ್ರಿಟಿಷರಿಗೆ ವಿರೋಧಿಯಾಗಲು ಕಾರಣವಾಯಿತಲ್ಲದೆ, ಇವನ ಮಗ ಟಿಪ್ಪುವೂ ಬ್ರಿಟಿಷರ ವಿರುದ್ಧ ವೈರತ್ವ ಮುಂದುವರಿಸುವಂತಾಯಿತು.

**ಎರಡನೆಯ ಮೈಸೂರು ಯುದ್ಧ (1780–84):** 1780ರ ಹೊತ್ತಿಗೆ ಬ್ರಿಟಿಷರು ಫ್ರೆಂಚರಿಗೆ ಸೇರಿದ್ದ ವಸಾಹತುಗಳನ್ನೆಲ್ಲ ಒಂದಾದ ಮೇಲೊಂದರಂತೆ ಆಕ್ರಮಿಸುತ್ತಾ ಬಂದರು. ಮಾಹೆ ಪಟ್ಟಣದ ಬಗ್ಗೆ ಯಾವುದೇ ಹಸ್ತಕ್ಷೇಪವನ್ನೂ ಸಹಿಸುವುದಿಲ್ಲವೆಂದು ಹೈದರ್ ಬ್ರಿಟಿಷರಿಗೆ ಎಚ್ಚರಿಕೆಯಿತ್ತಿದ್ದನಾದರೂ ಅವರು ಇದನ್ನು ಗಣಿಸಲಿಲ್ಲ. ಭಾರತದ ರಾಜಕೀಯದಲ್ಲಿ ಕುಟಿಲ ರೀತಿಯಿಂದ ದಾಂದಲೆ ನಡೆಸುತ್ತಿದ್ದ ಬ್ರಿಟಿಷರ ಕಪಿಮುಷ್ಟಿಯಿಂದ ಭರತ ಖಂಡವನ್ನು ವಿಮುಕ್ತಿಗೊಳಿಸುವ ಛಲ ಆತನಲ್ಲಿ ಅಂಕುರಿಸಿತು. ಬ್ರಿಟಿಷರನ್ನು ಭಾರತದಿಂದ ಓಡಿಸಲು ನಿಜಾಮ, ನಾನಾ ಫಡ್ನವೀಸ್, ಸಿಂಧ್ಯ, ಮಾಧೋಜಿ, ಬೌನ್ಸ್ಲೆ ಮತ್ತು ಹೈದರ್ ಇವರು 1780ರಲ್ಲಿ ಒಂದು ಕೂಟವನ್ನು ರಚಿಸಿಕೊಂಡರು. ಮರಾಠರು ಮುಂಬಯಿ ಮತ್ತು ಅದಕ್ಕೆ ಸೇರಿದ ಪ್ರದೇಶಗಳಿಗೆ ಮುತ್ತಿಗೆ ಹಾಕುವುದೆಂದೂ ಸಿಂಧ್ಯ ಮತ್ತು ಬೌನ್ಸ್ಲೆ ಬಂಗಾಳವನ್ನು ಮುತ್ತುವುದೆಂದೂ ನಿಜಾಮ ಉತ್ತರ ಸರ್ಕಾರ್ ಜಿಲ್ಲೆಗಳನ್ನು ಹಿಡಿದುಕೊಳ್ಳುವುದೆಂದೂ ಹೈದರ್ ದಕ್ಷಿಣ ಪ್ರದೇಶಗಳನ್ನು ಆಕ್ರಮಿಸತಕ್ಕದ್ದೆಂದೂ ತೀರ್ಮಾನವಾಯಿತು. ಇದೇ 2ನೆಯ ಮೈಸೂರು ಯುದ್ಧಕ್ಕೆ ನಾಂದಿ. ಈ ಕೂಟದಲ್ಲಿದ್ದ ಇನ್ನಿತರರು ಯೋಜನೆಯಂತೆ ನಡೆಯಲಿಲ್ಲವಾದರೂ ಬ್ರಿಟಿಷರೊಂದಿಗೆ ಈ ಶಕ್ತಿಗಳು ಸೇರುವುದನ್ನು ತಡೆಗಟ್ಟಿದಂತಾಯಿತು. ಹೈದರ್ ಹಾಗೂ ಟಿಪ್ಪು ಕರ್ನಾಟಿಕ್ ಪ್ರದೇಶಗಳ ಮೇಲೆ ನುಗ್ಗಿದರು. ಹೈದರ್ ಪೋಲಿಯೂರ್ ಬಳಿ ನಡೆದ ಕದನದಲ್ಲಿ ಕರ್ನಲ್ ಬೇಲಿಯ ಕೈಕೆಳಗಿದ್ದ ನಾಲ್ಕು ಸಾವಿರ ಸೈನಿಕರನ್ನು ತರಿದಟ್ಟಿದ. 1780ರ ಅಕ್ಟೋಬರ್ ತಿಂಗಳಿನಲ್ಲಿ ಕರ್ನಾಟಿಕ್‌ನ ರಾಜಧಾನಿ ಆರ್ಕಾಟ್ ಹೈದರನ ವಶವಾಯಿತು. 1781ರ ಜುಲೈ 1ರಂದು ಪೋರ್ಟೋನೋವೋ ಬಳಿ ಜನರಲ್ ಐರ್‌ಕೂಟನು ಹೈದರನನ್ನು ಸೋಲಿಸಿದರೂ ಮುಂದೆ ಟಿಪ್ಪು ವೀರಾವೇಶದಿಂದ ಹೋರಾಡಿ ಬ್ರೈತ್‌ವೇಟನನ್ನು ಪರಾಜಯಗೊಳಿಸಿದ. ಫ್ರೆಂಚರೊಂದಿಗೆ ಸೇರಿ ಹೈದರ್ ಬ್ರಿಟಿಷರ ವಿರುದ್ಧ ಕಾದಾಡಿ ಕಡಲೂರನ್ನು ಗೆದ್ದ. ಆರ್ಕಾಟಿನಲ್ಲಿ ನೆಲೆಯೂರಿ ಬ್ರಿಟಿಷರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದ. ಆದರೆ 1782ರ ಡಿಸೆಂಬರ್‌ನಲ್ಲಿ ಹೈದರ್ ಬೆನ್ನು ಹುಣ್ಣಿನ ಬೇನೆಯಿಂದ ಮೃತನಾದ. ಈ ಸಂದರ್ಭದಲ್ಲಿ ಪರಿಸ್ಥಿತಿ ಹದಗೆಡಲು ಬಿಡದೆ ಟಿಪ್ಪು ಯುದ್ಧವನ್ನು ಮುಂದುವರಿಸಿದ. ಕೊನೆಗೆ ಇಂಗ್ಲಿಷರು ಮಂಗಳೂರು ಒಪ್ಪಂದಕ್ಕೆ ಒಡಂಬಡಬೇಕಾಯಿತು. ಆಕ್ರಮಿತ ಪ್ರದೇಶಗಳನ್ನು ಇಬ್ಬರೂ ಅವರವರಿಗೇ ಬಿಟ್ಟುಕೊಡುವುದು ಮತ್ತು ಸೆರೆಹಿಡಿದಿದ್ದ ಸೈನಿಕರನ್ನು ಎರಡೂ ಕಡೆಯವರೂ ವಿಮೋಚನೆಗೊಳಿಸುವುದು, ಅಂದರೆ ಯುದ್ಧಪೂರ್ವದಲ್ಲಿದ್ದ ಸ್ಥಿತಿಗೆ ಬರುವುದೇ ಈ ಕರಾರಿನ ಮೂಲ ವಿಷಯವಾಗಿತ್ತು. 1784 ಮಾರ್ಚ್ 11ರಂದು ಮಾಡಿಕೊಂಡ ಈ ಮಂಗಳೂರು ಒಪ್ಪಂದ ಟಿಪ್ಪುವಿಗೆ ಅನುಕೂಲಕರವಾಗಿತ್ತು.

**ಮೂರನೆಯ ಮೈಸೂರು ಯುದ್ಧ (1790–92) :** ಬ್ರಿಟಿಷರೊಡನೆಯ ವೈರದ ಕಿಡಿ ಪುನಃ ಭುಗಿಲ್ಲನೆ ಹೊತ್ತಿಕೊಂಡಿತು. ಯುದ್ಧಕ್ಕೆ ಕಾಲು ಕೆರೆಯುತ್ತಿದ್ದ ಬ್ರಿಟಿಷರಿಗೆ ಟಿಪ್ಪು ತಿರುವಾಂಕೂರಿನ ರಾಜನೊಡನೆ ಮಾಡಿದ ವ್ಯವಹಾರ ಯುದ್ಧಕ್ಕೆ ಕಾರಣವಾಯಿತು. ತಿರುವಾಂಕೂರು ರಾಜ ವಾದಗ್ರಸ್ತ ದುರ್ಗಗಳನ್ನು ಡಚ್ಚರಿಂದ ಕೊಂಡುಕೊಂಡೊಡನೆ ಟಿಪ್ಪು ಕ್ರೋಧೋದ್ದೀಪಿತನಾಗಿ 1789ರಲ್ಲಿ ಯುದ್ಧ ಸಾರಿದ. ಆಗ ಬ್ರಿಟಿಷರು ಟಿಪ್ಪುವಿನ ಮೇಲೆ ಎರಗಲು ಸನ್ನದ್ಧರಾದರು. ಭಾರತದ ಗವರ್ನರ್–ಜನರಲ್ ಆಗಿದ್ದ ಕಾರನ್‍ವಾಲೀಸ್ ನಿಜಾಮ ಮತ್ತು ಮರಾಠರು ಸೇರಿದಂತೆ ಒಂದು ಕೂಟವನ್ನು ರಚಿಸಿದ. ಕಾರನ್‍ವಾಲೀಸ್ ಘಟ್ಟಗಳ ಮೂಲಕ ಮೈಸೂರು ದೇಶವನ್ನು ಪ್ರವೇಶಿಸಿ 1791ರಲ್ಲಿ ಬೆಂಗಳೂರು ನಗರವನ್ನು ಹಿಡಿದ. ಆದರೆ ಈ ವೇಳೆಗೆ ಬ್ರಿಟಿಷರ ಬಳಿಯಿದ್ದ ಆಹಾರ ಸಾಮಗ್ರಿಗಳು ಮುಗಿದುಹೋಗಿದ್ದರಿಂದ ಶ್ರೀರಂಗಪಟ್ಟಣವನ್ನು ಮುತ್ತುವ ಯೋಜನೆಯನ್ನು ಮುಂದಕ್ಕೆ ಹಾಕಿದ. ಮರುವರ್ಷವೇ ಮತ್ತೆ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ. ಇದರ ಪರಿಣಾಮವಾಗಿ 1792ರ ಮಾರ್ಚ್ 19ರಂದು ಟಿಪ್ಪು ಅಪಮಾನಕರವಾದ ಶಾಂತಿ ಒಪ್ಪಂದಕ್ಕೆ ಸಹಿ ಹಾಕಬೇಕಾಯಿತು. ಈ ಒಪ್ಪಂದದಂತೆ ಟಿಪ್ಪು ಬ್ರಿಟಿಷರಿಗೆ ಮೂರು ಕೋಟಿ ರೂಪಾಯಿ ತೆರಬೇಕಾಯಿತು. ನಿಗದಿ ಮಾಡಿದಷ್ಟು ಹಣ ಟಿಪ್ಪುವಿನ ಬಳಿ ಇರಲಿಲ್ಲವಾಗಿ, ಆ ಹಣ ಪಾವತಿಯಾಗುವವರೆಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಡಬೇಕಾದ ದುಃಸ್ಥಿತಿ ಒದಗಿತು. ಅಲ್ಲದೆ ತನ್ನ ರಾಜ್ಯದಲ್ಲಿ ಅರ್ಧದಷ್ಟನ್ನು ಟಿಪ್ಪು ಬ್ರಿಟಿಷರಿಗೆ ಬಿಟ್ಟುಕೊಡಬೇಕಾಯಿತು. ಇದರ ಪರಿಣಾಮವಾಗಿ ಹೈದರ್ ಮತ್ತು ಟಿಪ್ಪು ತಮ್ಮ ಸ್ವಸಾಹಸದಿಂದ ಗಳಿಸಿದ ಹೆಚ್ಚಿನ ಪ್ರದೇಶವೆಲ್ಲ ಮೈಸೂರಿನ ಕೈತಪ್ಪಿತು. ಕರ್ನಾಟಕಕ್ಕೆ ಸಂಬಂಧಿಸಿದಂತೆ ತುಂಗಭದ್ರಾ ನದಿಯ ಉತ್ತರಭಾಗ ಮರಾಠರಿಗೆ ಸೇರಿತು. ಕೊಡಗು ಅಲ್ಲಿನ ರಾಜನಿಗೆ ಹಿಂದಿರುಗಿತು. ಮಂಗಳೂರು ಸೇರಿದಂತೆ ತೀರಪ್ರದೇಶಗಳೂ ಮೈಸೂರಿನ ಕೈತಪ್ಪಿದವು.

**ನಾಲ್ಕನೆಯ ಮೈಸೂರು ಯುದ್ಧ (1799):** 1792ರಲ್ಲಿ ತನಗಾದ ಅವಮಾನವನ್ನು ಟಿಪ್ಪು ಮರೆಯಲಿಲ್ಲ. ಬ್ರಿಟಿಷರ ವಿರುದ್ಧ ಫ್ರಾನ್ಸ್ ಮೊದಲಾದ ವಿದೇಶಗಳ ನೆರವನ್ನು ಪಡೆಯಲು ಪ್ರಯತ್ನಿಸಿದ. ಆದರೆ ಆ ವೇಳೆಗೆ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವೆಲ್ಲೆಸ್ಲಿ ಫ್ರೆಂಚರ ಸಹಾಯವನ್ನು ಹಾಗೂ ಸ್ನೇಹವನ್ನು ತ್ಯಜಿಸಬೇಕೆಂದು ಟಿಪ್ಪುವಿಗೆ ಹೇಳಿದ. ಇದು ವಿರಸಕ್ಕೆ ನಾಂದಿಯಾಯಿತು. ಬ್ರಿಟಿಷರ ಸೈನ್ಯದ ಮುಖ್ಯಭಾಗ ಜನರಲ್ ಹ್ಯಾರಿಸ್ಸನ ಕೈಕೆಳಗೆ ಮದರಾಸಿನಿಂದ ಘಟ್ಟಗಳನ್ನು ದಾಟಿ ಮೈಸೂರು ಕಡೆಗೆ ಹರಿಯಿತು. ಸಿದ್ದೇಶ್ವರ ಮತ್ತು ಮಳವಳ್ಳಿಗಳ ಬಳಿ ನಡೆದ ಕದನದಲ್ಲಿ ಟಿಪ್ಪುವಿಗೆ ಅಪಜಯವಾಯಿತು. ಕಡೆಗೆ ಟಿಪ್ಪು ಶ್ರೀರಂಗಪಟ್ಟಣದ ಕೋಟೆಗೆ ಬಂದು ಸೇರಿದ. ಬ್ರಿಟಿಷರು ಕೋಟೆಯನ್ನು ಭೇದಿಸಿ ಒಳನುಗ್ಗಿದರು. ಈ ಸಂದರ್ಭದ ಹೋರಾಟದಲ್ಲಿ ಟಿಪ್ಪು ಮೃತನಾದ (1799 ಮೇ 4). ಬ್ರಿಟಿಷರಿಗೆ ತಮ್ಮ ಅಧಿಕಾರವನ್ನು ವಿಸ್ತರಿಸಲು ಅಡ್ಡಿಯಾಗಿದ್ದ ಏಕೈಕ ಬೃಹತ್ ಶಕ್ತಿಯೂ ಕಣ್ಮರೆಯಾಯಿತು. ಕರ್ನಾಟಕದಲ್ಲಿ ಬ್ರಿಟಿಷರ ಧ್ವಜ ಹಾರಾಡಲಾರಂಭಿಸಿತು. **(ಎ.ವಿ.ವಿ.)**

1799ರ ಯುದ್ಧದ ತರುವಾಯ ಬ್ರಿಟಿಷರು ಟಿಪ್ಪುವಿನ ಆಳ್ವಿಕೆಯಲ್ಲಿದ್ದ ಪ್ರದೇಶವನ್ನುವಿಭಜಿಸಿ, ಕರಾವಳಿ ಜಿಲ್ಲೆಗಳನ್ನು ತಮ್ಮ ನೇರ ಆಡಳಿತಕ್ಕೆ ವಹಿಸಿಕೊಂಡು ಉತ್ತರ ಕರ್ನಾಟಕದ ಭಾಗಗಳನ್ನು ನಿಜಾಮ ಮತ್ತು ಮರಾಠರಿಗೆ ಹಂಚಲು ಉದ್ದೇಶಿಸಲಾಯಿತು. ಮುಂದೆ ಮೈಸೂರು ಸಂಸ್ಥಾನವೆಂದು ಪ್ರಸಿದ್ಧವಾದ ಭಾಗ ಹಿಂದಿನ ಮೈಸೂರು ರಾಜವಂಶದವರಿಗೆ ಹಿಂದಿರುಗಿಸುವ ತೀರ್ಮಾನವಾಗಿ, ಆಗ ಕೇವಲ ಐದು ವರ್ಷದ ಬಾಲಕರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟಕಟ್ಟಲಾಯಿತು. ಅದೇ ಸಂದರ್ಭದಲ್ಲಿ ಜಾರಿಗೆ ತಂದ ಒಪ್ಪಂದದ್ದಂತೆ ಮೈಸೂರು ಬ್ರಿಟಿಷರ ಸಾರ್ವಭೌಮತ್ವವನ್ನು ಅಂಗೀಕರಿಸಿ, ಒಂದು ದೇಶೀಯ ರಾಜ್ಯವಾಗಿ ಉಳಿಯಿತು. ಮೈಸೂರು ಅರಸರು ಆಂತರಿಕ ಆಡಳಿತಕ್ಕೆ ಮಾತ್ರ ಪೂರ್ಣವಾಗಿ ಜವಾಬ್ದಾರರಾಗಿದ್ದರು. ದೇಶದ ಆಗುಹೋಗುಗಳು ಅಸ್ತವ್ಯಸ್ತವಾದಲ್ಲಿ ರಾಜ್ಯವನ್ನು ಪುನಃ ವಹಿಸಿಕೊಳ್ಳುವ ಅಧಿಕಾರವನ್ನು ಬ್ರಿಟಿಷರು ಉಳಿಸಿಕೊಂಡರು. ದೇಶದಲ್ಲಿ ಶಾಂತಿಯನ್ನು ಕಾಪಾಡಲು ಬ್ರಿಟಿಷರು ಸೂಕ್ತವಾದ ಸ್ಥಳಗಳಲ್ಲಿ ತಮ್ಮ ಸೈನ್ಯವನ್ನು ಕಾದಿಡುವ ಹಕ್ಕನ್ನು ಉಳಿಸಿಕೊಂಡರು. ಆದರೆ ಅದರ ಖರ್ಚಿನ ಬಾಬತ್ತನ್ನು ಇಲ್ಲಿಯ ಅರಸರು ಕೊಡಬೇಕಾಗಿತ್ತು. ರಾಜ್ಯದ ಎಲ್ಲ ವ್ಯವಹಾರಗಳ ಮೇಲ್ವಿಚಾರಣೆಗೆ ರೆಸಿಡೆಂಟ್ ಒಬ್ಬನನ್ನು ನೇಮಿಸಲಾಯಿತು.

1799ರಲ್ಲಿ ಪೂರ್ಣಯ್ಯ ದಿವಾನನಾಗಿ, ಬ್ಯಾರಿ ಕ್ಲೋಸ್ ರೆಸಿಡೆಂಟ್ ಆಗಿ ನೇಮಿತರಾದರು. ಬೆಂಗಳೂರು, ಚಿತ್ರದುರ್ಗ, ನಂದಿದುರ್ಗ, ಹರಿಹರ, ನಗರ, ಮೊದಲಾದೆಡೆಗಳಲ್ಲಿ ಬ್ರಿಟಿಷ್ ಠಾಣ್ಯಗಳು ಇದ್ದುವು. ಶ್ರೀರಂಗಪಟ್ಟಣ ಮತ್ತು ಪಶ್ಚಿಮವಾಹಿನಿ ಪ್ರದೇಶ ಬ್ರಿಟಿಷ್ ದಂಡಿನ ಕೇಂದ್ರವಾಯಿತು. ಅದಕ್ಕೆ ಉಪಯುಕ್ತವಾದ ಸೌಕರ್ಯಗಳನ್ನು ಒದಗಿಸುವುದು ಮೈಸೂರು ಆಡಳಿತದ ಜವಾಬ್ದಾರಿಯಾಗಿತ್ತು. ಮೈಸೂರು ಸಂಸ್ಥಾನದಲ್ಲಿದ್ದ ಬ್ರಿಟಿಷ್ ದಂಡಿನ ನೇತೃತ್ವವನ್ನು ಕರ್ನಲ್ ಆರ್ಥರ್ ವೆಲ್ಲೆಸ್ಲಿಯೇ ವಹಿಸಿದ್ದ, ಈತ ಶ್ರೀರಂಗಪಟ್ಟಣದ ಗವರ್ನರ್ ಆಗಿದ್ದ (1799–1805). ಈ ಸಂದರ್ಭದಲ್ಲಿ ಇವನು ಸಂಸ್ಥಾನದ ಉತ್ತರಭಾಗವನ್ನು ಕೊಳ್ಳೆಹೊಡೆಯುತ್ತಿದ್ದ ಧೊಂಡಿಯಾವಾಘನನ್ನು ಹತ್ತಿಕ್ಕಿದನಲ್ಲದೆ ಉತ್ತರದಲ್ಲಿ ಬಳ್ಳಾರಿ ಜಿಲ್ಲೆಯ ಭಾಗಗಳನ್ನು ತಹಬಂದಿಗೆ ತಂದ. 1803ರಲ್ಲಿ ಮರಾಠ ಪ್ರಾಂತ್ಯಗಳಿಗೆ ನಡೆದು ಪುಣೆಯನ್ನು ವಶಪಡಿಸಿಕೊಂಡ. ಮರಾಠರಿಂದ ಅಹಮದ್‍ನಗರ ಮತ್ತು ಸುತ್ತಲ ಪ್ರದೇಶಗಳನ್ನೆಲ್ಲ ಗೆದ್ದು ಈಸ್ಟ್ ಇಂಡಿಯಾ ಕಂಪನಿಗೆ ಒಪ್ಪಿಸಿ ಪುನಃ ಶ್ರೀರಂಗಪಟ್ಟಣಕ್ಕೆ ವಾಪಸಾದ (1804). ವೆಲ್ಲೆಸ್ಲಿಯ ಯುದ್ಧಗಳಲ್ಲೆಲ್ಲ ಮೈಸೂರು ಸಂಸ್ಥಾನದ ಸೇನೆಯೂ ಭಾಗವಹಿಸಿತ್ತು. ಅಲ್ಲದೆ ಬ್ರಿಟಿಷರೊಡನೆ ಆಗಿದ್ದ ಒಪ್ಪಂದಗಳ ಪ್ರಕಾರ ಮೈಸೂರು ಸಂಸ್ಥಾನದ ಸೈನ್ಯ ವೆಲ್ಲೂರಿನ ದಂಗೆ ಮತ್ತು ಶ್ರೀರಂಗಪಟ್ಟಣದಲ್ಲಿ ನಡೆದ ಬ್ರಿಟಿಷ್ ದಂಡಿನ ಅಧಿಕಾರಿಗಳ ದಂಗೆ–ಇವುಗಳನ್ನು ಅಡಗಿಸುವಲ್ಲೂ ಬ್ರಿಟಿಷ್ ಸಾರ್ವಭೌಮರಿಗೆ ನೆರವು ನೀಡಬೇಕಾಯಿತು. ಮೈಸೂರು ಸಂಸ್ಥಾನದ ಆಳ್ವಿಕೆಯ ಮೊದಲ ದಿನಗಳಲ್ಲಿ ಸಂಸ್ಥಾನದ ಬೇರೆಬೇರೆಡೆಗಳಲ್ಲಿ ಕೆಲವು ಪಾಳೆಯಗಾರರು ದಂಗೆಯೆದ್ದಿದ್ದರು. ಇವರನ್ನು ಹತ್ತಿಕ್ಕಲು ಪೂರ್ಣಯ್ಯ, ಆರ್ಥರ್ ವೆಲ್ಲೆಸ್ಲಿ ಮತ್ತು ಬ್ಯಾರಿ ಕ್ಲೋಸ್ ಬಹುವಾಗಿ ಶ್ರಮಿಸಿದರು. ಐಗೂರು ಪಾಳೆಯಗಾರ ವೆಂಕಟಾದ್ರಿನಾಯಕನನ್ನು ಸೆರೆಹಿಡಿದರು. ಸು. 1811ರವರೆಗೆ, ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಾಪ್ತವಯಸ್ಕರಾಗುವವರೆಗೆ ಮೈಸೂರು ಸಂಸ್ಥಾನದ ಆಡಳಿತ ಬ್ರಿಟಿಷ್ ರೆಸಿಡೆಂಟರ ನೇತೃತ್ವದಲ್ಲೇ ನಡೆಯುತ್ತಿತ್ತೆಂದು ಹೇಳಬಹುದು.

ಬ್ಯಾರಿ ಕ್ಲೋಸ್‍ನ ಅನಂತರ ಜೋಸೈಯ ವೆಬ್ (1801–03), ಜಾನ್ ಮಾಲ್ಕಂ (1803–04), ಮಾರ್ಕ್ ವಿಲ್ಕ್ಸ್ (1804–09), ಎ. ಎಚ್. ಕೋಲ್ (1809–27), ಎ.ಜೆ. ಕ್ಯಾಸಾಮೇಜರ್ (1827–34) ಇವರು ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದರು. ಈ ಕಾಲದಲ್ಲಿ ಬೆಂಗಳೂರು ಬ್ರಿಟಿಷರ ದಂಡಿನ ಪ್ರಧಾನ ಠಾಣ್ಯವಾಯಿತು (1809). ಅಲ್ಲದೆ ಶ್ರೀರಂಗಪಟ್ಟಣದಲ್ಲಿದ್ದ ದಂಡನ್ನು ಕ್ರಮಕ್ರಮವಾಗಿ ಕಡಿಮೆಮಾಡಿ, 1830ರಲ್ಲಿ ಅದನ್ನು ತೆರವು ಮಾಡಲಾಯಿತು. ಬ್ರಿಟಿಷರೊಡನೆ ಆಗಿದ್ದ ಒಪ್ಪಂದದ ಪ್ರಕಾರ ಮೈಸೂರು ಅಶ್ವದಳ ಬ್ರಿಟಿಷ್ ಕಂಪನಿಗೆ ಸರ್ಕಾರ ಕೈಗೊಂಡಿದ್ದ ಪಿಂಡಾರಿಗಳನ್ನು ಅಡಗಿಸುವ ಕಾರ್ಯಾಚರಣೆ (1812–17), ಮರಾಠರ ವಿರುದ್ಧ ಮಾಳವ, ರಜಪುಟಾಣ ಮೊದಲಾದೆಡೆಯಲ್ಲಿ ನಡೆದ ಯುದ್ಧಗಳು

(1817–18)–ಇವುಗಳಲ್ಲಿ ಭಾಗವಹಿಸಿ ವಿಜಯಿಯಾಗಿ 1820ರಲ್ಲಿ ಸಂಸ್ಥಾನಕ್ಕೆ ಹಿಂದಿರುಗಿತು.

ಈ ಮಧ್ಯೆ ರೆಸಿಡೆಂಟ್ ಆಗಿದ್ದ ಕೋಲ್ ಮತ್ತು ಮಹಾರಾಜ ಕೃಷ್ಣರಾಜ ಒಡೆಯರ್ ಅವರ ನಡುವೆ ಆಡಳಿತ ವಿಷಯದಲ್ಲಿ ತೀವ್ರವಾದ ಭಿನ್ನಾಭಿಪ್ರಾಯ ಉಂಟಾಗಿ ರಾಜ್ಯದ ಆಡಳಿತ ವ್ಯವಸ್ಥೆಯ ಬದಲಾವಣೆಗೆ ಸನ್ನಾಹ ನಡೆಸಲಾಯಿತು. ಆಗ ಮದರಾಸಿನ ಗವರ್ನರ್ ಆಗಿದ್ದ ಮನ್ರೋ ಸತತ ಪ್ರಯತ್ನ ನಡೆಸಿದರೂ ಭಿನ್ನಾಭಿಪ್ರಾಯಗಳನ್ನು ನೇರ್ಪಡಿಸಲಾಗಲಿಲ್ಲ.

ಪಿಂಡಾರಿಗಳು ಮತ್ತು ಮರಾಠರ ವಿರುದ್ಧ ಯುದ್ಧಗಳಲ್ಲಿ ಮೈಸೂರು ಸೈನ್ಯ ಭಾಗವಹಿಸಿದ್ದು, 1816 ಮತ್ತು 1823–24ರಲ್ಲಿ ಸಂಸ್ಥಾನದಲ್ಲಿ ಕ್ಷಾಮ ಎರಗಿದ್ದು – ಈ ಕಾರಣಗಳಿಂದ ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿ ಕೆಟ್ಟಿತು. ಗವರ್ನರ್ ಜನರಲ್ ಬೆಂಟಿಂಕನಿಗೆ ಮೈಸೂರಿನ ರೆಸಿಡೆಂಟ್ ಕಳುಹಿಸಿದ ವರದಿಯಲ್ಲಿ ರಾಜರ ದುಂದುವೆಚ್ಚ ಮತ್ತು ಹಣದ ಪೋಲು ಆರ್ಥಿಕ ಪರಿಸ್ಥಿತಿ ಹದಗೆಡಲು ಕಾರಣಗಳೆಂದು ತಿಳಿಸಿದ. ಅಲ್ಲದೆ 1830ರ ಆಗಸ್ಟ್‌ನಲ್ಲಿ ನಗರ (ಬಿದನೂರು), ಚಿತ್ರದುರ್ಗ ಮತ್ತು ಬೆಂಗಳೂರು ಫೌಜುದಾರಿಗಳಲ್ಲಿ ಪಾಳೆಯಗಾರರ ದಂಗೆಗಳು ತಲೆದೋರಿದವು. ಮೈಸೂರು ಫೌಜುದಾರರಿಗೆ ಸೇರಿದ ಕೃಷ್ಣರಾಜಕಟ್ಟೆ ಮತ್ತು ಅರಕಲಗೂಡು ಸ್ಥಳಗಳಲ್ಲಿ ದಂಗೆಗಳುಂಟಾದುವು. ಹಲವೆಡೆ ಜಿಲ್ಲಾ ಖಜಾನೆಗಳ ದರೋಡೆಯಾಯಿತು. ಮಹಾರಾಜರ ಕೋರಿಕೆಯ ಮೇರೆಗೆ ಕಂಪನಿಯ ಸೈನ್ಯ ಶಿವಮೊಗ್ಗ, ಹೊನ್ನಾಳಿ, ನಗರ, ಚಂದ್ರಗುತ್ತಿ ಮುಂತಾದ ಸ್ಥಳಗಳನ್ನು ಆಕ್ರಮಿಸಿಕೊಂಡಿತು. ಈ ಪರಿಸ್ಥಿತಿಯಲ್ಲಿ ಮೈಸೂರು ರಾಜರು ಆಳಲು ಅಸಮರ್ಥರೆಂಬ ಆಪಾದನೆಯನ್ನು ಮದರಾಸು ಗವರ್ನರ್ ಮನ್ರೋ, ಗವರ್ನರ್ ಜನರಲ್ ಬೆಂಟಿಂಕನಿಗೆ ತಿಳಿಸಿದ. ಮೈಸೂರು ರಾಜ್ಯದ ಆಡಳಿತವನ್ನು ಬ್ರಿಟಿಷರು ವಶಪಡಿಸಿ ಕೊಳ್ಳಬೇಕೆಂಬ ಬೆಂಟಿಂಕನ ಸಲಹೆಯನ್ನು ಕಂಪನಿ ಅಂಗೀಕರಿಸಿತು. ಮಹಾರಾಜರಿಗೆ ವರ್ಷಕ್ಕೆ ಒಂದು ಲಕ್ಷ ವರಹಗಳ ವಿಶ್ರಾಂತಿ ವೇತನವನ್ನು ಕೊಡುವ ನಿರ್ಧಾರವಾಯಿತು. 1831ರಲ್ಲಿ ಗವರ್ನರ್ ಜನರಲ್ ಬೆಂಟಿಂಕ್ 1799ರಲ್ಲಿ ಆದ ಒಪ್ಪಂದದ ಹಲವು ಕಲಮುಗಳನ್ನು ಜಾರಿ ಮಾಡಿ, ರಾಜ್ಯದ ಆಡಳಿತವನ್ನು ಕಂಪನಿಯೇ ವಹಿಸಿಕೊಳ್ಳುವುದಾಗಿ ಘೋಷಿಸಿದ. ಈ ಆಜ್ಞೆ ಮೈಸೂರಿನಲ್ಲಿ ದಸರ ಉತ್ಸವಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಕೃಷ್ಣರಾಜ ಒಡೆಯರಿಗೆ ತಲುಪಿತು. ರಾಜರು ತಕ್ಷಣವೇ ಆಡಳಿತವನ್ನು ಬಿಟ್ಟು ಕೊಟ್ಟರು. ಮೈಸೂರು ಸಂಸ್ಥಾನದ ಆಡಳಿತ ಪೂರ್ಣವಾಗಿ ಬ್ರಿಟಿಷರ ಕೈಸೇರಿತು.

**ಕಮಿಷನ್ ಆಡಳಿತ :** 1831ರಿಂದ 50 ವರ್ಷಗಳ ಕಾಲ ಬ್ರಿಟಿಷರು ಕಮಿಷನರ್‌ಗಳನ್ನು ನೇಮಿಸಿ ಮೈಸೂರು ಸಂಸ್ಥಾನದ ಆಡಳಿತವನ್ನು ನಡೆಸಿದರು. ಈ ಅವಧಿಯಲ್ಲಿ ಈ ಮುಂದಿನವರು ಕಮಿಷನರ್ ಹುದ್ದೆಯನ್ನು ನಿರ್ವಹಿಸಿದರು.

1. ಕರ್ನಲ್ ಬ್ರಿಗ್ಸ್ (1831–32)
2. ಲೆಫ್ಟಿನೆಂಟ್ ಕರ್ನಲ್ ಮಾರಿಸನ್ (1832–34)
3. ಕರ್ನಲ್ ಮಾರ್ಕ್ ಕಬ್ಬನ್ (1834–61)
4. ಲೂಯಿ ಬೆನ್ಥಾಮ್ ಬೌರಿಂಗ್ (1862–70)
5. ಕರ್ನಲ್ ರಿಚರ್ಡ್ ಮೀಡ್ (1870–75, ಮೀಡ್‌ನ ಗೈರುಹಾಜರಿಯಲ್ಲಿ ಆರ್. ಡ್ಯಾಲೈಲ್)
6. ಸಿ.ಬಿ. ಸ್ಯಾಂಡರ್ಸ್ (1875–78)
7. ಜೆ.ಬಿ. ಗೋರ್ಡನ್ (1878–81)

1831ರಿಂದ 34ರವರೆಗೆ ಕಮಿಷನರುಗಳ ಆಡಳಿತದ ಮೊದಲ 3 ವರ್ಷಗಳ ಕಾಲ ಹಿರಿಯ ಮತ್ತು ಕಿರಿಯ ಕಮಿಷನರ್‌ಗಳೆಂಬ ಇಬ್ಬರು ಜಂಟಿ ಆಡಳಿತ ನಡೆಸುತ್ತಿದ್ದರು. ಮೊದಲು ಕರ್ನಲ್ ಬ್ರಿಗ್ಸನ್ನು ಹಿರಿಯ ಕಮಿಷನರನ್ನಾಗಿಯೂ ಮತ್ತು ಸಿ.ಎಂ. ಲುಷಿಂಗ್‌ಟನನ್ನು ಕಿರಿಯ ಕಮಿಷನರನ್ನಾಗಿಯೂ ನೇಮಿಸಲಾಯಿತು. ಆದರೆ ಬ್ರಿಗ್ಸ್ ಅಧಿಕಾರ ವಹಿಸಿಕೊಂಡಮೇಲೆ ಲುಷಿಂಗ್‌ಟನ್ ಬೆಂಗಳೂರಿನಲ್ಲಿ ಕೇವಲ 15 ದಿನಗಳ ಕಾಲ ಕಿರಿಯ ಕಮಿಷನರ್ ಆಗಿದ್ದು ಮದರಾಸಿಗೆ ಹಿಂದಿರುಗಿದ. ಅನಂತರ ಅವನ ಸ್ಥಾನದಲ್ಲಿ ಜಿ.ಡಿ. ಡ್ರೂರಿ, ಜೆ.ಎಂ. ಮೆಕ್ಲಿಯಡ್ ಕಿರಿಯ ಕಮಿಷನರಾಗಿದ್ದರು. ಮುಂದೆ ಮದರಾಸು ಸರ್ಕಾರದೊಡನೆ ಭಿನ್ನಾಭಿಪ್ರಾಯ ಉಂಟಾಗಿ ಬ್ರಿಗ್ಸ್ ರಾಜೀನಾಮೆ ನೀಡಬೇಕಾಯಿತು. ಬ್ರಿಗ್ಸ್ ಆಡಳಿತದಲ್ಲಿ ಅನೇಕ ಬದಲಾವಣೆಗಳು ಆಚರಣೆಗೆ ಬಂದವು. ನ್ಯಾಯಾಸ್ಥಾನದ ಪುನರ್ವ್ಯವಸ್ಥೆಯಾಯಿತು. 1832 ಜೂನ್ ಒಂದರಿಂದ ಸರ್ಕಾರದ ಲೆಕ್ಕಾಚಾರಗಳನ್ನು ಇಂಗ್ಲಿಷ್ ಕ್ಯಾಲೆಂಡರಿನ ತಿಂಗಳುಗಳಿಗೆ ಅನುಸಾರವಾಗಿ ಇಡುವ ಪದ್ಧತಿ ಜಾರಿಗೆ ಬಂತು. ಮೊದಲ ಮೂರು ವರ್ಷಗಳ ಕಾಲ ಹಣಕಾಸಿನ ಇಲಾಖೆ ಕಮಿಷನರ ಹತೋಟಿಯಲ್ಲಿದ್ದ ದಿವಾನರ ಕೈಯಲ್ಲಿತ್ತು. ಕಮಿಷನರ ಕೇಂದ್ರ ಆಡಳಿತ ಕಾರ್ಯಾಲಯ ಸ್ಥಾಪನೆಯಾಗಿ ಕಾರ್ಯಾಲಯ ಕೊನೆಗೊಂಡಿತು. ಅನೇಕ ಅನವಶ್ಯಕ ಹುದ್ದೆಗಳನ್ನು ರದ್ದು ಮಾಡಿ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡಲಾಯಿತು. ಪಾಳೆಯಗಾರರ ಅತೃಪ್ತಿಯನ್ನು ಕಡಿಮೆ ಮಾಡಲು ಉದಾರ ನೀತಿಯ ಧೋರಣೆಯನ್ನು ಅನುಸರಿಸಲಾಯಿತು. ಪ್ರಜಾಹಿಂಸೆ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ– ಇವುಗಳಲ್ಲಿ ತೊಡಗುವ ಅಧಿಕಾರಿಗಳು ಶಿಕ್ಷೆಗೆ ಒಳಗಾಗುತ್ತಿದ್ದರು. ಇಬ್ಬರು ಕಮಿಷನರುಗಳ ಜಂಟಿ ಆಡಳಿತದಲ್ಲಿ ನ್ಯೂನತೆಗಳು ವಿಶೇಷವಾಗಿದ್ದುದರಿಂದ ಫೆಬ್ರುವರಿ 1834ರಲ್ಲಿ ಸರ್ ಮಾರ್ಕ್ ಕಬ್ಬನ್ ಎಂಬವರೊಬ್ಬರೇ ಕಮಿಷನರ್ ಆಗಿ ನೇಮಿಸಲ್ಪಟ್ಟರು. 1843ರಲ್ಲಿ ರೆಸಿಡೆಂಟರ ಹುದ್ದೆಯೂ ರದ್ದಾಯಿತು.

ಸರ್ ಮಾರ್ಕ್ ಕಬ್ಬನ್ 1834–61ರ ವರೆಗೆ 27 ವರ್ಷಗಳ ಕಾಲ ಕಮಿಷನರಾಗಿದ್ದರು. ಇವರು ಸರ್ಕಾರದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿದರು. ರಾಜ್ಯವನ್ನು ಆರು ಫೌಜುದಾರಿಗಳ ಬದಲು, ನಾಲ್ಕು ವಿಭಾಗಗಳನ್ನಾಗಿ ಮಾಡಿ, ತಾಲ್ಲೂಕುಗಳ ಸಂಖ್ಯೆಯನ್ನು ಕಡಿಮೆ ಮಾಡಿದರು. ಪ್ರತಿ ತಾಲ್ಲೂಕು ಕಛೇರಿಯಲ್ಲೂ ಅಧಿಕೃತ ಪತ್ರ ವ್ಯವಹಾರ ಮರಾಠಿ ಮತ್ತು ಕನ್ನಡ ಈ ಎರಡರಲ್ಲೂ ನಡೆಯುತ್ತಿತ್ತು. ಮುಂದೆ ಮರಾಠಿ ಅಥವಾ ಕನ್ನಡದಲ್ಲಿ ನಡೆಯಬೇಕೆಂದು ಆಜ್ಞೆ ಮಾಡಲಾಯಿತು. 1835ರಲ್ಲಿ ಬೆಂಗಳೂರಿನಲ್ಲಿ ಮೊದಲನೆಯ ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯಲಾಯಿತು. 1840ರಲ್ಲಿ ರಾಜ್ಯದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಪ್ರಾರಂಭವಾಗಿ ಮೈಸೂರು ನಗರದಲ್ಲಿ ಮೊದಲನೆಯ ಇಂಗ್ಲಿಷ್ ಶಾಲೆ ಸ್ಥಾಪಿತವಾಯಿತು. 1853ರವರೆಗೆ ಕಂಠೀರಾಯ ಪಗೋಡ ಎಂಬ ನಾಣ್ಯ ಜಾರಿಯಲ್ಲಿತ್ತು. ಅನಂತರ ರೂಪಾಯಿ ಚಲಾವಣೆಗೆ ಬಂದಿತು. 1853ರಲ್ಲಿ ತಂತಿ ವ್ಯವಸ್ಥೆ ಪ್ರಾರಂಭವಾಯಿತು. 1856ರಲ್ಲಿ ಲೋಕೋಪಯೋಗಿ ಇಲಾಖೆ ಆರಂಭವಾಯಿತು. 1859ರಲ್ಲಿ ಬೆಂಗಳೂರಿನಿಂದ ಜೋಲಾರಪೇಟೆಗೆ ಮೈಸೂರು ಸಂಸ್ಥಾನದ ಮೊದಲನೆಯ ರೈಲುಮಾರ್ಗದ ನಿರ್ಮಾಣವಾಯಿತು. ಭೂಕಂದಾಯವ್ಯವಸ್ಥೆ, ವಿದ್ಯಾಭ್ಯಾಸ, ಲೋಕೋಪಯೋಗಿ ಇಲಾಖೆ, ನೀರಾವರಿ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಕೆಲಸಗಳನ್ನು ಪ್ರಾರಂಭಿಸಲಾಯಿತು. ಕಾಲೇಜು ಶಿಕ್ಷಣಕ್ಕೆ ಚಾಲನೆ ದೊರೆಯಿತು. ಆರ್ಥಿಕ ವಿಷಯಗಳಲ್ಲಿ ವೆಂಕಟರಾವ್ ಎಂಬ ಸಮರ್ಥ ಅಧಿಕಾರಿ ಕಬ್ಬನ್‌ಗೆ ನೆರವಾದರು. ದುಂದುವೆಚ್ಚ, ಹಣದ ದುರುಪಯೋಗ ಕಡಿಮೆಯಾಗಿ ಮಿತವ್ಯಯ ಜಾರಿಗೆ ಬಂತು. ಸರ್ಕಾರದ 85 ಲಕ್ಷ ರೂಪಾಯಿಗಳಷ್ಟು

ಸಾಲ ತೀರಿಸಿ 45 ಲಕ್ಷ ರೂಪಾಯಿ ಆಪದ್ಧನವನ್ನು ಕೂಡಿಡಲಾಯಿತು. ಕಂದಾಯ ಪದ್ಧತಿಯಲ್ಲಿ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದದ್ದು ರೈತರಿಗೆ ಅನುಕೂಲವಾಯಿತು. ಸರ್ಕಾರದ ಕಾನೂನುಕಟ್ಟಲೆಗಳನ್ನು ಮೀರುತ್ತಿದ್ದ ಶಕ್ತಿಗಳ ಮೇಲೆ ಕಠಿಣ ಕ್ರಮಕೈಗೊಂಡು ಕಾನೂನಿನ ಆಡಳಿತಕ್ಕೆ ಒತ್ತು ನೀಡಲಾಯಿತು. ಒಟ್ಟಿನಲ್ಲಿ ಕಬ್ಬನ್ ಮೈಸೂರು ಸಂಸ್ಥಾನದ ಕ್ಷೇಮಾಭ್ಯುದಯಕ್ಕೆ ಶ್ರಮಿಸಿದರು.

ಎಲ್.ಬಿ. ಬೌರಿಂಗ್ 1862–70ರವರೆಗೆ ಕಮಿಷನರಾಗಿ ಕೆಲಸ ಮಾಡಿದರು. ಈ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ಪ್ರಾಂತ್ಯಗಳ ಆಡಳಿತ ಪದ್ಧತಿಯನ್ನು ಪೂರ್ಣವಾಗಿ ಜಾರಿಗೆ ತರಲಾಯಿತು. ಆರ್ಥಿಕ ಕ್ಷೇತ್ರದಲ್ಲಿ ಸುಧಾರಣೆಗಳು ಬಂದುವು. ಅರಣ್ಯ ಸಂಪತ್ತನ್ನು ಕಾಪಾಡಲು ಏರ್ಪಾಡಾಯಿತು. ನ್ಯಾಯಾಸ್ಥಾನಗಳ ಹೆಚ್ಚಳ, ಸೆರೆಮನೆಗಳ ಸುಧಾರಣೆ, ವಿದ್ಯಾಭ್ಯಾಸ, ಪುರಸಭೆಗಳ ವ್ಯವಸ್ಥೆ, ರಸ್ತೆ ಮತ್ತು ಸೇತುವೆಗಳ ನಿರ್ಮಾಣ ಪ್ರಾರಂಭವಾದುವು. ಕಬ್ಬನ್ ಮತ್ತು ಬೌರಿಂಗ್ ಇಬ್ಬರೂ ಕಾಫಿ ಬೆಳೆಗೆ ಪ್ರೋತ್ಸಾಹ ನೀಡಿದರು.

1870–81ರಲ್ಲಿ ಸರ್ ರಿಚರ್ಡ್ ಮೀಡ್, ಡ್ಯಾಲೈಲ್ (ಮೀಡ್ ಗೈರುಹಾಜರಿಯಲ್ಲಿ), ಸಿ.ಬಿ. ಸ್ಯಾಂಡರ್ಸ್ ಮತ್ತು ಜೆ.ಬಿ. ಗೋರ್ಡನ್ ಅನುಕ್ರಮವಾಗಿ ಪ್ರಧಾನ ಕಮಿಷನರ್ ಆಗಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ 1868ರಲ್ಲಿ ಮೃತರಾದರು. ಅವರು 1865 ಜೂನ್‌ನಲ್ಲಿ ಚಾಮರಾಜ ಒಡೆಯರ್ ಅವರನ್ನು ದತ್ತು ತೆಗೆದುಕೊಂಡಿದ್ದು, ಬ್ರಿಟಿಷ್ ಸರ್ಕಾರ ಅವರನ್ನು ಉತ್ತರಾಧಿಕಾರಿಯಾಗಲು ಒಪ್ಪಿತು. ಆದರೆ ಚಾಮರಾಜ ಒಡೆಯರ್ ಪ್ರಾಪ್ತವಯಸ್ಕರಾಗುವವರೆಗೂ ಅವರ ಪರವಾಗಿ ಬ್ರಿಟಿಷ್ ಪ್ರಭುತ್ವವೇ ನ್ಯಾಸಾಧಾರಿಯಾಗಿ 1881 ಮಾರ್ಚ್ 25ರವರೆಗೂ ಆಡಳಿತ ನಡೆಸಿತು. ಬೌರಿಂಗ್ 1870ರಲ್ಲಿ ರಾಜೀನಾಮೆ ನೀಡಿದ ಅನಂತರ ಮೈಸೂರನ್ನು 1881ರಲ್ಲಿ ಚಾಮರಾಜ ಒಡೆಯರಿಗೆ ಒಪ್ಪಿಸುವವರೆಗಿನ ಅವಧಿಯಲ್ಲಿ ಕರ್ನಲ್ ರಿಚರ್ಡ್ ಮೀಡ್, ಸಿ.ಬಿ. ಸ್ಯಾಂಡರ್ಸ್ ಮತ್ತು ಜೆ.ಬಿ. ಗೋರ್ಡನ್ ಚೀಫ್ ಕಮಿಷನರಾಗಿದ್ದರು. ಮೀಡ್ ಸ್ವದೇಶಿ ಆಡಳಿತ ಯಂತ್ರ ನಿರ್ಮಾಣ ಮಾಡುವುದಕ್ಕೆ ಮಾರ್ಚ್ 1873ರಲ್ಲಿ ಮೇಲ್ಮಟ್ಟದ ಹುದ್ದೆಗಳಿಗೆ ತರಬೇತಿ ಕೊಡುವ ಯೋಜನೆಯ ಕ್ರಮಗಳನ್ನು ಕೈಗೊಂಡರು. ಪೂರ್ತಿ ಸಿವಿಲ್ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಮುನ್ಸಿಫ್ ಕೋರ್ಟುಗಳನ್ನು ಸ್ಥಾಪಿಸಿದರು. ಸ್ಯಾಂಡರ್ಸ್‌ರ ಅಧಿಕಾರಾವಧಿಯಲ್ಲಿ ದಕ್ಷಿಣ ಭಾರತದಲ್ಲಿ ಭಾರೀ ಕ್ಷಾಮದಿಂದಾಗಿ ವರಮಾನಗಳು ನಶಿಸಿದ್ದವು. ಜನಸಂಖ್ಯೆ ಹತ್ತು ಲಕ್ಷದಷ್ಟು ಕಡಿಮೆಯಾಗಿತ್ತು. ಮುಂದೆ ಗೋರ್ಡನರ ಕಾಲದಲ್ಲಿ ಉನ್ನತ ನ್ಯಾಯಾಂಗಕ್ಕೆ ಸಂಬಂಧಿಸಿದ ಕಾರ್ಯಾಂಗ ಮತ್ತು ನ್ಯಾಯಾಂಗಗಳ ಎಲ್ಲಾ ಕಾರ್ಯಕ್ರಮಗಳೂ ಪ್ರತ್ಯೇಕವಾದುವು. ಅವರು ಮಹಾರಾಜರ ಅಧೀನಕ್ಕೆ ದಕ್ಷ ಆಡಳಿತವನ್ನು ಬಿಟ್ಟುಹೋದರು.

ಸಂಸ್ಥಾನ ಕಾರ್ಯದರ್ಶಿ 1880 ಆಗಸ್ಟ್ 12ರಂದು ಗವರ್ನರ್ ಜನರಲ್ ಮಾರ್ಕ್ವಿಸ್ ರಿಪ್ಪನ್‌ಗೆ ಬರೆದ ಪತ್ರದಲ್ಲಿ ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್‌ಗೆ ಅಂಗೀಕಾರ ನೀಡಿದ್ದರು. ಶ್ರೀರಂಗಪಟ್ಟಣ ದ್ವೀಪವನ್ನು ಮೈಸೂರಿಗೆ ಸೇರಿಸುವಂತೆಯೂ ಆ ಪತ್ರ ತಿಳಿಸಿತು. ಬ್ರಿಟಿಷ್ ಸರ್ಕಾರದ ಮುಖಾಂತರವಲ್ಲದೆ, ಮಹಾರಾಜರು ಬೇರಾವ ರಾಜರೊಡನೆಯೂ ರಾಜಕೀಯ ಸಂಬಂಧ ಹೊಂದಿರಬಾರದೆಂದು ಸೂಚನೆ ನೀಡಲಾಗಿತ್ತು. ಮೈಸೂರಿನ ಅರಮನೆಯಲ್ಲಿ ರಾಜ್ಯದ ವರ್ಗಾವಣೆಯಾಗಿ ದರ್ಬಾರನ್ನು ನಡೆಸಲಾಯಿತು. ಮದರಾಸಿನ ಗವರ್ನರಾಗಿದ್ದ ಡಬ್ಲ್ಯೂ.ಪಿ ಆಡಮ್ಸ್ 1881 ಮಾರ್ಚ್ 25ರ ಬೆಳಿಗ್ಗೆ ಮೈಸೂರಿನ ಆಡಳಿತವನ್ನು ಚಾಮರಾಜ ಒಡೆಯರರಿಗೆ ವಹಿಸಿಕೊಟ್ಟರು. ಜೆ.ಬಿ. ಗೋರ್ಡನ್ ಪ್ರಪ್ರಥಮ ರೆಸಿಡೆಂಟರಾಗಿ ನೇಮಕವಾದರು. ಬೆಂಗಳೂರಿನ ಕಂಟೋನ್‌ಮೆಂಟ್ (ದಂಡು) ಪ್ರದೇಶವನ್ನು ಆಡಳಿತ ಕಾರ್ಯಗಳಿಗಾಗಿ ಬ್ರಿಟಿಷ್ ಸರ್ಕಾರಕ್ಕೆ ವರ್ಗಾಯಿಸಲಾಯಿತು. ಮಹಾರಾಜರಿಗೆ ಪ್ರಜಾಭ್ಯುದಯ ಆಡಳಿತಕ್ಕಾಗಿ ವರ್ಷಕ್ಕೆ 13 ಲಕ್ಷ ರೂಪಾಯಿಗಳನ್ನು ಕೊಡುವಂತೆ ನಿಗದಿ ಮಾಡಲಾಯಿತು. ಚಾಮರಾಜ ಒಡೆಯರು ಪ್ರಜಾಕಲ್ಯಾಣದ ದೃಷ್ಟಿಯಿಂದ ರಾಜ್ಯದ ಆಡಳಿತ ನಡೆಸುವುದಾಗಿ ಅವರು ಭರವಸೆ ನೀಡಿದರು. ಅಲ್ಲಿಂದ ಮುಂದೆ ಮೈಸೂರು ಸಂಸ್ಥಾನದ ಆಡಳಿತ ವಿದೇಶ ವ್ಯವಹಾರ ಮತ್ತು ಮಿಲಿಟರಿ ವ್ಯವಹಾರಗಳ ಹೊರತು ಮಿಕ್ಕ ವಿಷಯಗಳಲ್ಲಿ ಹೆಚ್ಚು ಕಡಿಮೆ ಸ್ವತಂತ್ರವಾಗಿಯೇ ವರ್ತಿಸುವ ಅಧಿಕಾರ ಹೊಂದಿತ್ತು. ಸಂಸ್ಥಾನದ ವ್ಯವಹಾರಗಳನ್ನು ಪರಿಶೀಲಿಸುವ ಅಧಿಕಾರವನ್ನು ಇಲ್ಲಿದ್ದ ಬ್ರಿಟಿಷ್ ರೆಸಿಡೆಂಟರು ಹೊಂದಿದ್ದರೂ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಜಯಚಾಮರಾಜ ಒಡೆಯರ್ ಅವರ ಕಾಲದಲ್ಲಿ ಸಮರ್ಥ ದಿವಾನರ ಸಹಕಾರದೊಡನೆ ಇಲ್ಲಿನ ಸರ್ಕಾರ ಉತ್ತಮವಾಗಿ ಆಡಳಿತ ನಿರ್ವಹಿಸಿ ಮೈಸೂರು ಮಾದರಿ ಸಂಸ್ಥಾನವೆಂದು ಹೆಸರು ಗಳಿಸಿದ್ದರಿಂದ ರೆಸಿಡೆಂಟರು ಇಲ್ಲಿನ ವ್ಯವಹಾರದಲ್ಲಿ ಹೆಚ್ಚಿನ ಕೈವಾಡ ನಡೆಸುವ ಅವಕಾಶ ಒದಗಿ ಬರಲಿಲ್ಲ. 1947ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿದಾಗ ಬ್ರಿಟಿಷರು ಸಂಸ್ಥಾನದ ಮೇಲಿನ ತಮ್ಮ ಹಕ್ಕನ್ನು ಬಿಟ್ಟುಕೊಟ್ಟರು.

**ದಕ್ಷಿಣ ಕನ್ನಡ ಜಿಲ್ಲೆ :** 1768ಕ್ಕಿಂತ ಮೊದಲು ಬ್ರಿಟಿಷರು ದಕ್ಷಿಣ ಕನ್ನಡ ಜಿಲ್ಲೆಯ ಆಡಳಿತದಲ್ಲಿ ಹೆಚ್ಚು ಪ್ರವೇಶಿಸಿರುವುದು ಕಂಡುಬರುವುದಿಲ್ಲ. ಆದರೆ 1737ರಲ್ಲಿ ಮಂಗಳೂರಿನಲ್ಲಿದ್ದ ಬಿದನೂರು ಪ್ರಾಂತಾಧಿಕಾರಿಯೊಂದಿಗಿನ ಒಪ್ಪಂದವೊಂದರಲ್ಲಿ ಬ್ರಿಟಿಷರು ಜಿಲ್ಲೆಯ ಆಡಳಿತದಲ್ಲಿ ಒಮ್ಮೆ ಕೈಹಾಕಿದ್ದರು. ಬಿದನೂರಿನ ಎರಡನೆಯ ಸೋಮಶೇಖರ ನಾಯಕ ನೀಲೇಶ್ವರ ಹಾಗೂ ಕಾವ್ಯೆನದಿ ಸುತ್ತಣ ಪ್ರದೇಶಗಳನ್ನು ಆಕ್ರಮಿಸಿದಾಗ ಅದು ತಲಚೇರಿಯಲ್ಲಿನ ಈಸ್ಟ್ ಇಂಡಿಯಾ ಕಂಪೆನಿಯೊಂದಿಗೆ ಜಗಳಕ್ಕೆ ಕಾರಣವಾಯಿತು. 1736ರಲ್ಲಿ ಮಲೆಯಾಳದವರು ಬ್ರಿಟಿಷರ ಸಹಾಯದಿಂದ ಕಾವ್ಯೆ ನದಿಯ ಮುಖದ ಆಲಿಕಣ್ಣು ಕೋಟೆ ಮತ್ತು ನದಿಯ ದಕ್ಷಿಣಕ್ಕಿರುವ ಉಳಿದ ಮೂರು ಕೋಟೆಗಳನ್ನು ಮತ್ತೆ ವಶಪಡಿಸಿಕೊಂಡರು. ಆ ಬಳಿಕ ಬ್ರಿಟಿಷ್ ಪ್ರತಿನಿಧಿ ಲಿಂಚ್ ಮಂಗಳೂರಿಗೆ ಬಂದು, 1737ರಲ್ಲಿ ಬಿದನೂರು ಪ್ರಾಂತಾಧಿಕಾರಿಯಾದ ಸುರಪ್ಪಯ್ಯನೊಡನೆ ಒಪ್ಪಂದ ಮಾಡಿಕೊಂಡ. ಆ ಒಪ್ಪಂದದ ಪ್ರಕಾರ ಬ್ರಿಟಿಷರು ಕೊಲ್ಲತಿರಿ ಪ್ರದೇಶದಲ್ಲಿ ಏಲಕ್ಕಿ ಹಾಗೂ ಕಾಳುಮೆಣಸಿನ ವ್ಯಾಪಾರದ ಏಕಸ್ವಾಮ್ಯವನ್ನು ಹಾಗೂ ವ್ಯಾಪಾರೀ ಸೌಲಭ್ಯಗಳನ್ನು ಹೊಂದಿದರು. ಬ್ರಿಟಿಷರು ಆಲಿಕಣ್ಣು ಕೋಟೆಯನ್ನು ಬಿಟ್ಟುಕೊಟ್ಟರು. ಬಳಿಕ ಅದನ್ನು ಬಿದನೂರಿನ ಅಧಿಕಾರಿಗಳು ವಶಪಡಿಸಿಕೊಂಡರು.

1766ರಲ್ಲಿ ಬ್ರಿಟಿಷರು ಅಡ್ಮಿರಲ್ ವಾಟ್ಸನ್‌ನ ನೇತೃತ್ವದಲ್ಲಿ ಮುಂಬಯಿಯಿಂದ ಸೈನ್ಯವೊಂದನ್ನು ಕಳುಹಿಸಿದರು. 1768ರ ಫೆಬ್ರವರಿಯಲ್ಲಿ ಮಂಗಳೂರಿನಲ್ಲಿ ಬಂದಿಳಿದ ಬ್ರಿಟಿಷ್ ಸೇನೆ ಆಗ ಅಲ್ಲಿ ಹೈದರನ ಪ್ರತಿನಿಧಿಯಾಗಿದ್ದ ಲತೀಫ್ ಅಲಿ ಬೇಗ್‌ನನ್ನು ಸೋಲಿಸಿ ಮಂಗಳೂರನ್ನು ವಶಪಡಿಸಿಕೊಂಡಿತು. ಆದರೆ ಕೆಲವು ದಿನಗಳಲ್ಲಿ ಟಿಪ್ಪು ಮಂಗಳೂರು ಕೋಟೆಯನ್ನು ವಶಪಡಿಸಿಕೊಂಡ. ಬ್ರಿಟಿಷರು ತಮ್ಮ ಕಡೆಯ 80 ಜನ ಐರೋಪ್ಯರನ್ನೂ 180 ಇತರ ಸಿಪಾಯಿಗಳನ್ನೂ ಎಲ್ಲಾ ಯುದ್ಧ ಸಾಮಗ್ರಿಗಳನ್ನೂ ಅಲ್ಲಿಯೇ ಬಿಟ್ಟು ಮಂಗಳೂರನ್ನು ತ್ಯಜಿಸಿದರು. 1770ರ ಸೆಪ್ಟೆಂಬರ್‌ನಲ್ಲಿ ಬ್ರಿಟಿಷರಿಗೂ ಹೈದರ್ ಅಲಿಗೂ ಒಂದು ಒಪ್ಪಂದವೇರ್ಪಟ್ಟಿತು. ಮಂಗಳೂರು ಹಾಗೂ ಇತರ ಬಂದರುಗಳಿಂದ ಮುಂಬಯಿಗೆ ಅಕ್ಕಿಯನ್ನು ಸಾಗಿಸಲು ಈ ಒಪ್ಪಂದ ಅನುವು ಮಾಡಿಕೊಟ್ಟಿತು.

ಎರಡನೆಯ ಮೈಸೂರು ಯುದ್ಧದ ಸಮಯದಲ್ಲಿ ಹೈದರನ ಮರಣದ ಸುದ್ದಿ ತಿಳಿದು (1782) ಜನರಲ್ ಮ್ಯಾಥ್ಯೂಸ್ ಜನವರಿ 1783ರಲ್ಲಿ ಮುಂಬಯಿಯಿಂದ ಸೇನೆ ಸಹಿತ ಕುಂದಾಪುರದಲ್ಲಿ ಬಂದಿಳಿದ. ಬಳಿಕ 3 ದಿನಗಳಲ್ಲಿ ಹೊಸಂಗಡಿ ಕಣಿವೆಯ ಹತ್ತಿರದ ಕೋಟೆಯೊಂದನ್ನು ಸುಲಭವಾಗಿ ವಶಪಡಿಸಿಕೊಂಡ. ಕರ್ನಲ್ ಮಾಕ್ಲಿಯೊಡ್ ಹೈದರ್‌ಗಡ್ ಕೋಟೆಯನ್ನು ಸ್ವಾಧೀನ ಪಡಿಸಿಕೊಂಡ. ಜನರಲ್ ಮ್ಯಾಥ್ಯೂಸ್ ಬಿದನೂರನ್ನು ಹಿಡಿದ. ಆದರೆ ಮಾರ್ಚ್ 1783ರಲ್ಲಿ ಟಿಪ್ಪು ಪ್ರಬಲ ಸೈನ್ಯದೊಡನೆ ಆಗಮಿಸಿದಾಗ ಬ್ರಿಟಿಷರು ಕೌಲು ಮಾಡಿಕೊಳ್ಳಬೇಕಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶ ಟಿಪ್ಪುವಿನ ವಶದಲ್ಲೇ ಉಳಿಯಿತು

1799ರ ಶ್ರೀರಂಗಪಟ್ಟಣದ ಪತನದ ಬಳಿಕ ಪಶ್ಚಿಮ ಕರಾವಳಿ ಬ್ರಿಟಿಷರ ವಶವಾಯಿತು. 1799ರ ಜೂನ್‌ನಲ್ಲಿ ಕ್ಯಾಪ್ಟನ್ ಮನ್ರೋ (ಸರ್ ಥಾಮಸ್) ಜಿಲ್ಲೆಯ ಕಲೆಕ್ಟರ್ ಆಗಿ ನೇಮಕಗೊಂಡ. 1800ರ ಫೆಬ್ರವರಿಯ ಆಜ್ಞೆಯ ಪ್ರಕಾರ ಈ ಜಿಲ್ಲೆಯ ಕಲೆಕ್ಟರ್ ಮದರಾಸ್ ಬೋರ್ಡ್ ಆಫ್ ರೆವಿನ್ಯೂವಿನ ಅಧೀನಕ್ಕೊಳಗಾದ. ಆದರೆ ರಾಜಕೀಯ ವಿಷಯಕ್ಕೆ ಮೈಸೂರಿನ ರೆಸಿಡೆಂಟ್ ಕ್ಲೋಸ್‌ನೊಡನೆ ವ್ಯವಹರಿಸಬೇಕಾಗಿತ್ತು.

ಈ ಜಿಲ್ಲೆಯಲ್ಲಿ ಬ್ರಿಟಿಷರ ಆಡಳಿತದ ಮೊದಲ ದಿನಗಳಲ್ಲಿ ಅಲ್ಲಲ್ಲಿ ಸ್ವಲ್ಪ ಪ್ರತಿರೋಧವಿತ್ತು. ಕುಂದಾಪುರ ತಾಲ್ಲೂಕಿನ ಕೆಲವು ಭಾಗಗಳನ್ನು ಬಿದನೂರಿನ ಧೋಂಡಿಯಾ ವಾಘನ ಕಡೆಯವರು ಆಕ್ರಮಿಸಿದರು. ಇದೊಂದನ್ನು ಬಿಟ್ಟರೆ ಜಿಲ್ಲೆಯ ಉತ್ತರಭಾಗ ಶಾಂತವಾಗಿತ್ತು. ಆದರೆ ದಕ್ಷಿಣ ಭಾಗದಲ್ಲಿ ಕುಂಬಳೆಯ ಹಾಗೂ ನೀಲೇಶ್ವರ ಪ್ರದೇಶಗಳ ರಾಜರುಗಳು ವಿರೋಧಿಗಳಾಗಿದ್ದರು. 1799ರ ಅಕ್ಟೋಬರ್‌ನಲ್ಲಿ ಜಮಾಲಾಬಾದಿನ ಕೋಟೆ ಬ್ರಿಟಿಷರ ವಶವಾಗಿದ್ದರೂ ಮತ್ತೊಮ್ಮೆ ಅದು ಟಿಪ್ಪುವಿನ ಅನುಯಾಯಿಗಳ ಕೈಸೇರಿತು. ಇವೆಲ್ಲವನ್ನೂ ಮನ್ರೋ ಹತ್ತಿಕ್ಕಿದ. ವಿಟ್ಲದ ಹೆಗ್ಗಡೆ ಕೊನೆಯ ಮೈಸೂರು ಕದನದಲ್ಲಿ ಭಾಗವಹಿಸಿದಾಗ ತಾನು ಕಳೆದುಕೊಂಡ ಪ್ರದೇಶವನ್ನು ಪುನಃ ಗಳಿಸಲು ಡಿಸೆಂಬರ್ 1799ರಲ್ಲಿ ತನ್ನ ಅಳಿಯನೊಡಗೂಡಿ ಸೈನ್ಯವನ್ನು ಬಲಪಡಿಸಿಕೊಳ್ಳತೊಡಗಿದ. ಮನ್ರೋ ಕೂಡಲೇ ಪ್ರಾಂತ್ಯಾಧಿಕಾರಿಯಾದ ಹರ್ಟ್‌ನನ್ನು ಕರೆಸಿ ಹೆಗ್ಗಡೆಯ ವಿರುದ್ಧ ಕಳುಹಿಸಿದ. ಹೆಗ್ಗಡೆಯ ಜೊತೆ ಸೇರಿದ ಕೊಯಮತ್ತೂರಿನ ಮಾಜಿ ಶಿರಸ್ತೇದಾರನಾದ ಸುಬ್ಬರಾವ್ 1800 ಮೇ 7ರಂದು ಕಡಬದ ತಹಶೀಲದಾರನ ಕಚೇರಿಯ ದಾಳಿ ಮಾಡಿದ. ಅಲ್ಲಿನ ತಹಶೀಲದಾರ ಹಾಗೂ ಉಳಿದ ಅಧಿಕಾರಿಗಳು ಸುರಕ್ಷಿತವಾಗಿ ತಪ್ಪಿಸಿಕೊಂಡರೂ ಸುಬ್ಬರಾವ್ ಬಳಿಕ ಬಂಟ್ವಾಳಕ್ಕೆ ಸಾಗಿ ಅಲ್ಲಿ ಸೂರೆಮಾಡತೊಡಗಿದ. ಕೊನೆಗೆ ಆತ ಪುತ್ತೂರಿಗೆ ಹೋಗಿ ಅಲ್ಲಿ ಕಾರ್ಯಾಚರಣೆ ನಡೆಸಿದ. ಕ್ಯಾಪ್ಟನ್ ಮನ್ರೋ ಹಿಂದೆ ಜಮಾಲಾಬಾದಿನ ಕೋಟೆಯನ್ನು ವಶಪಡಿಸಿಕೊಳ್ಳುವಾಗ ಸಹಕರಿಸಿದ್ದ ಧರ್ಮಸ್ಥಳದ ಕುಮಾರ ಹೆಗ್ಗಡೆಯನ್ನು 200 ಜನ ಸೈನಿಕರೊಂದಿಗೆ ಆತನ ವಿರುದ್ಧ ಕಳುಹಿಸಿದ. ಆತ 1800 ಮೇ 11ರಂದು ಸುಬ್ಬರಾವ್‌ನನ್ನು ಸೋಲಿಸಿದ. ಆದರೆ ತಾನೂ ಗುಂಡಿನೇಟಿಗೆ ಬಲಿಯಾದ. ಬಳಿಕ ಕಡಬದ ತಹಶೀಲದಾರ ಸೈನ್ಯವನ್ನು ಮುನ್ನಡೆಸಿ ಸಿಸಿಲ ಘಾಟಿನ ದಂಗೆಯನ್ನು ಹುಟ್ಟಡಗಿಸಿದ. ಜುಲೈ ಪ್ರಾರಂಭದಲ್ಲಿ ವಿಟ್ಲದ ಹೆಗ್ಗಡೆಯನ್ನು ಸೋಲಿಸಿ ಆತನ ಅಳಿಯನೊಡಗೂಡಿ 9 ಜನರನ್ನು ಬಂಧಿಸಿದ. ಜಮಾಲಾಬಾದಿನ ಕೋಟೆ ಮೂರು ತಿಂಗಳ ಬಳಿಕ ಪುನಃ ಬ್ರಿಟಿಷರ ವಶವಾಯಿತು. ಕುಂಬಳೆಯ ಹಾಗೂ ನೀಲೇಶ್ವರ ರಾಜರುಗಳು ಸೋಲೊಪ್ಪಿ ಮಾಸಾಶನವನ್ನು ಒಪ್ಪಿಕೊಂಡರು.

ಹೀಗೆ ಜಿಲ್ಲೆ ಬ್ರಿಟಿಷರ ಆಳ್ವಿಕೆಗೆ ಸಂಪೂರ್ಣವಾಗಿ ಒಳಪಟ್ಟಿತು. 1860ರವರೆಗೆ ಕರಾವಳಿಯ ಕನ್ನಡ ಪ್ರದೇಶ ಒಂದೇ ಆಡಳಿತಕ್ಕೊಳಪಟ್ಟಿತ್ತು. 1860ರಲ್ಲಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳೆಂದು ಅದನ್ನು ವಿಭಾಗಿಸಲಾಯಿತು. 1862ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮದರಾಸು ಪ್ರೆಸಿಡೆನ್ಸಿಯ ಅಧಿಕಾರಕ್ಕೊಳಗಾಯಿತು.

ದಕ್ಷಿಣ ಕನ್ನಡ ಜಿಲ್ಲೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟು ಆರಂಭದ ವರ್ಷಗಳಲ್ಲಿ ಜಿಲ್ಲೆಯ ಪರಿಸ್ಥಿತಿ ಹದಗೆಟ್ಟಿತ್ತು. ಮನ್ರೋವಿನ ಬಳಿಕಬಂದ ಅಧಿಕಾರಿಗಳು ಹೆಚ್ಚಿನ ಕಂದಾಯ ವಸೂಲು ಮಾಡತೊಡಗಿದರು. ವ್ಯಾಪಾರ, ವ್ಯವಸಾಯಗಳು ಆರ್ಥಿಕ ಮುಗ್ಗಟ್ಟನ್ನೆದುರಿಸಿದವು. 1831ರ ಸುಮಾರಿಗೆ ಪರಿಸ್ಥಿತಿ ತೀರ ಹದಗೆಟ್ಟಿತ್ತು. ಬಳಿಕ ಇದನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಜಿಲ್ಲೆಯ ಅಭಿವೃದ್ಧಿಗಾಗಿ ಅನೇಕ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿತು. ಈ ಕಾಲದಲ್ಲಿ ಅನೇಕ ಕೈಗಾರಿಕೆಗಳು ಪ್ರಾರಂಭಗೊಂಡವು. 1865ರಲ್ಲಿ ಬಾಸೆಲ್ ಮಿಷನಿನ ಕಾರ್ಯದಿಂದಾಗಿ ಮಂಗಳೂರಿನ ಹೆಂಚಿನ ಕೈಗಾರಿಕೆ ಆರಂಭವಾಯಿತು. 1889ರಲ್ಲಿ ದಿ ಸೇಂಟ್ ಜೋಸೆಪ್ಸ್ ಅಸೆಲಮ್ ಇಂಡಸ್ಟ್ರಿಯಲ್ ವರ್ಕ್‌ಶಾಪ್ ಎಂಬ ಸಂಸ್ಥೆಯು ಸ್ಥಾಪನೆಯಾಯಿತು. ನೇಯ್ಗೆ ಕಾರ್ಖಾನೆಗಳೂ ಪ್ರಾರಂಭವಾಯಿತು. ಬ್ಯಾಂಕ್ ಉದ್ಯಮ ಈ ಕಾಲದಲ್ಲಿ ಅತ್ಯಂತ ಹೆಚ್ಚು ಪ್ರಗತಿ ಸಾಧಿಸಿತು. ಮಂಗಳೂರಲ್ಲಿ ಮದರಾಸ್ ಪ್ರೆಸಿಡೆನ್ಸಿ ಬ್ಯಾಂಕ್ ಪ್ರಾರಂಭವಾದದ್ದು 1868ರಲ್ಲಿ. ಬಳಿಕ ಉಡುಪಿಯಲ್ಲಿ ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಷನ್ (ಮೇ, 1906), ಮಂಗಳೂರಿನಲ್ಲಿ ಕೆನರಾ ಬ್ಯಾಂಕ್ (ಜುಲೈ, 1920), ಉಡುಪಿಯಲ್ಲಿ ಪಾಂಗಾಳ ನಾಯಕ್ ಬ್ಯಾಂಕ್ (ಏಪ್ರಿಲ್, 1920), ಮಂಗಳೂರಿನಲ್ಲಿ ಜಯಲಕ್ಷ್ಮಿ ಬ್ಯಾಂಕ್ ಲಿ. (1923, ಅಕ್ಟೋಬರ್), ಕರ್ಣಾಟಕ ಬ್ಯಾಂಕ್ (ಫೆಬ್ರವರಿ, 1924), ಉಡುಪಿಯಲ್ಲಿ ಉಡುಪಿ ಬ್ಯಾಂಕ್ (1925, ಮೇ), 1925ರಲ್ಲಿ ಮಂಗಳೂರಿನಲ್ಲಿ ಕ್ಯಾತೊಲಿಕ್ ಬ್ಯಾಂಕ್, ಉಡುಪಿಯಲ್ಲಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ (ಇದೇ ಈಗಿನ ಸಿಂಡಿಕೇಟ್ ಬ್ಯಾಂಕ್) ಹೀಗೆ ಜಿಲ್ಲೆಯಲ್ಲಿ ಅನೇಕ ಬ್ಯಾಂಕುಗಳ ಪ್ರಾರಂಭವಾದುವು.

ಸಹಕಾರ ಚಳವಳಿಯೂ ಯಶಸ್ವಿಯಾಯಿತು. 1904ರ ಸಹಕಾರಿ ಪತ್ತಿನ ಸಂಘಗಳ ಅಧಿನಿಯಮದ ಪ್ರಕಾರ ಪುತ್ತೂರಿನ ಸಹಕಾರಿ ಸಂಸ್ಥೆಯೊಂದು ತನ್ನ ನೋಂದಾವಣಿ ಮಾಡಿಸಿಕೊಂಡಿತು. 1926–27ರ ಸುಮಾರಿಗೆ ಜಿಲ್ಲೆಯಲ್ಲಿ 1806 ಸದಸ್ಯರುಳ್ಳ 80 ಸಹಕಾರಿ ಸಂಸ್ಥೆಗಳು ಇದ್ದುವು.

ಸಾರಿಗೆ ಸಂಪರ್ಕದ ವ್ಯವಸ್ಥೆ ಅಭಿವೃದ್ಧಿ ಹೊಂದಿತು. 1837–43ರವರೆಗೆ ಹೊಸ ರಸ್ತೆಗಳ ನಿರ್ಮಾಣ ಹಾಗೂ ರಿಪೇರಿ ಬರದಿಂದ ಸಾಗಿತು. 1936ರ ಸುಮಾರಿಗೆ ಜಿಲ್ಲೆಯಲ್ಲಿ ಸಾಧಾರಣ 1,467 ಮೈಲು ಉದ್ದದಷ್ಟು ರಸ್ತೆ ಇತ್ತು. ಮಂಗಳೂರು, ಮಲ್ಪೆ ಮೊದಲಾದ ಬಂದರುಗಳೂ ಉತ್ತಮ ಪಾತ್ರವಹಿಸಿದವು.

ಅನೇಕ ಸ್ಥಳೀಯ ಸಂಸ್ಥೆಗಳೂ ಸ್ಥಾಪಿತವಾದುವು. ಮದರಾಸು ಪ್ರೆಸಿಡೆನ್ಸಿಯ 1865ರ ಪಟ್ಟಣ ಅಭಿವೃದ್ಧಿ ಅಧಿನಿಯಮ ಮತ್ತು 1871ರ ಸ್ಥಳೀಯ ನಿಧಿಗಳ ಅಧಿನಿಯಮ ಸ್ಥಳೀಯ ಸರ್ಕಾರದ ಆಡಳಿತದ ಪ್ರಮುಖ ಕಾಯಿದೆಗಳಾದವು. ಮೊದಲ ಕಾಯಿದೆಯಿಂದ ಪೌರಸಂಸ್ಥೆಗಳು ಸ್ಥಾಪನೆಗೊಂಡವು. ಎರಡನೆಯ ಕಾಯಿದೆಯ ಪ್ರಕಾರ ಜಿಲ್ಲೆಯನ್ನು ಅನೇಕ ವೃತ್ತಗಳಾಗಿ ವಿಂಗಡಿಸಿ ಅದಕ್ಕೆ ಸ್ಥಳೀಯ ನಿಧಿ ಬೋರ್ಡನ್ನು ನೇಮಿಸಿ, ಅವು ಕಂದಾಯ ಸಂಗ್ರಹಣೆ ಹಾಗೂ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳಲು ಏರ್ಪಡಿಸಲಾಯಿತು. 1884ರಲ್ಲಿ ಸ್ಥಳೀಯ ಮಂಡಲಿಗಳ ಅಧಿನಿಯಮ ಜಾರಿಗೆ ಬಂತು, ಸ್ಥಳೀಯ ನಿಧಿ ಅಧಿನಿಯಮ ರದ್ದಾಯಿತು. ವಜಾ ಮಾಡಲಾಯಿತು. ಹೊಸ ಸ್ಥಳೀಯ ಸಂಸ್ಥೆಯೊಂದು ರೂಪುಗೊಂಡಿತು. ಅದಕ್ಕೆ ಕಂದಾಯದ ವಿಷಯದಲ್ಲಿ ಹೆಚ್ಚಿನ ಅಧಿಕಾರ

ನೀಡಲಾಯಿತು. ಜಿಲ್ಲಾ, ತಾಲ್ಲೂಕು, ಪಂಚಾಯತ್ ಬೋರ್ಡುಗಳು ಅಸ್ತಿತ್ವಕ್ಕೆ ಬಂದವು. 1920ರಲ್ಲಿ ಈ ಅಧಿನಿಯಮ ಜಾರಿಗೆ ಬಂದು ಸ್ಥಳೀಯ ಸಂಸ್ಥೆಗಳ ಅಧಿಕಾರ ಇನ್ನಷ್ಟು ಹೆಚ್ಚಿತು. 8ನೆಯ ಮದ್ರಾಸ್ ಪ್ರಾಥಮಿಕ ಶಿಕ್ಷಣ ಕಾಯಿದೆ ಸಹ ಜಾರಿಗೆ ಬಂದು ತಾಲ್ಲೂಕು ಮತ್ತು ಪೌರಸಂಸ್ಥೆಗಳಿಗೆ ವಿದ್ಯಾಭ್ಯಾಸದ ಕುರಿತು ಹೆಚ್ಚಿನ ಅಧಿಕಾರ ದೊರಕಿತು. ಅದೇ ವರ್ಷ ಗ್ರಾಮ ಪಂಚಾಯತ್ ಅಧಿನಿಯಮ ಮತ್ತು ಗ್ರಾಮ ಪಂಚಾಯತಿಗಳ ದೋಷಗಳು ಪರಿಹಾರವಾಯಿತು. ಇನ್ನೂ ಅನೇಕ ಕಾಯಿದೆಗಳಿಂದ ಸ್ಥಳೀಯ ಸರ್ಕಾರ ಪ್ರಾಬಲ್ಯ ಹೆಚ್ಚಿತು.

ಈ ಜಿಲ್ಲೆ ಬ್ರಿಟಿಷರ ವಶವಾದ ಬಳಿಕ ಸರ್ ಥಾಮಸ್ ಮನ್ರೋ, ಜಿಲ್ಲೆಯ ವಿದ್ಯಾಭ್ಯಾಸದ ಸಮೀಕ್ಷೆ ನಡೆಸಲು ಆಜ್ಞಾಪಿಸಿ ವಿದ್ಯಾಭ್ಯಾಸದ ಯೋಜನಾಕ್ರಮ ತಯಾರಿಸಿದ. ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ 1836ರಲ್ಲಿ ಮದರಾಸಿನಲ್ಲಿ ಶಿಕ್ಷಣ ಮಂಡಳಿ ಸ್ಥಾಪಿತವಾಯಿತು. ಅಸ್ತಿತ್ವದಲ್ಲಿದ್ದ ಶಾಲೆಗಳು ಕ್ರಮಬದ್ಧವಾಗಿ ಮುಂದುವರಿದುವಲ್ಲದೆ ಸರ್ಕಾರಿ ಶಾಲೆಗಳೂ ಆರಂಭವಾದವು. ಕ್ರಿಶ್ಚಿಯನ್ ಮಿಷನರಿ ಸಂಸ್ಥೆಗಳು ಈ ನಿಟ್ಟಿನಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿ 1838ರಲ್ಲಿ ಮಂಗಳೂರು ಮತ್ತು ಉಡುಪಿಯಲ್ಲಿ ಶಾಲೆಗಳನ್ನು ಸ್ಥಾಪಿಸಿದವು. 1844ರಲ್ಲಿ ಮಂಗಳೂರು ಜೆಸ್ವಯಿಟ್ ಮಿಷನ್ ಶಾಲೆಯೊಂದನ್ನು ಆರಂಭಿಸಿತು. 1867ರಲ್ಲಿ ಮಂಗಳೂರಲ್ಲಿ ಸರ್ಕಾರಿ ಶಾಲೆ ಆರಂಭವಾಯಿತು. ಕ್ರಮಬದ್ಧ ವಿದ್ಯಾಭ್ಯಾಸವನ್ನು ಎಲ್ಲಾ ಶಾಲೆಗಳಲ್ಲೂ ಅಳವಡಿಸಲಾಯಿತು. 1857ರಲ್ಲಿ ಮದರಾಸು ವಿಶ್ವವಿದ್ಯಾನಿಲಯ ಸ್ಥಾಪಿತವಾಗಿ ಮೆಟ್ರಿಕ್ಯುಲೇಶನ್ ಮತ್ತು ಪದವಿ ಪರೀಕ್ಷೆಗಳನ್ನು ನಡೆಸತೊಡಗಿದರು. ಮಂಗಳೂರಿನ ಸರ್ಕಾರಿ ಶಾಲೆಯನ್ನು 1869ರಲ್ಲಿ ಎರಡನೆಯ ಗ್ರೇಡ್ ಕಾಲೇಜಿಗೆ ಏರಿಸಲಾಯಿತು. ಬಳಿಕ ಜಸ್ವುಯಿಟ್ ಮಿಷನ್ ಮಂಗಳೂರಲ್ಲಿ ಕಾಲೇಜೊಂದನ್ನು ಕೂಡ ತೆರೆಯಿತು. ಸರ್ಕಾರ ಶಾಲೆಗಳಿಗೆ ಸಹಾಯಧನ ನೀಡತೊಡಗಿತು. 1863ರ ಮದರಾಸು ಪ್ರಾಥಮಿಕ ಶಿಕ್ಷಣ ಅಧಿನಿಯಮ ಮತ್ತು 1871ರ ಸ್ಥಳೀಯ ನಿಧಿ ಅಧಿನಿಯಮಗಳಿಂದ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸ್ಥಿರವಾಗಿ ಸ್ಥಾಪಿಸಲು ನೆರವಾಯಿತು.

ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯದೆಡೆಗೂ ಸರ್ಕಾರ ಗಮನ ಹರಿಸದೆ ಇರಲಿಲ್ಲ. ಮೆಡಿಕಲ್ ಮತ್ತು ಸ್ಯಾನಿಟರಿ ಅಧಿಕಾರಿಗಳಾಗಿ ಜಿಲ್ಲಾ ಸರ್ಜನ್ 1883ರಲ್ಲಿ ನೇಮಕಗೊಂಡರು. 1899ರಲ್ಲಿ ಪ್ರತ್ಯೇಕ ವಿಭಾಗ ಸ್ಥಾಪಿತವಾಯಿತು.

ಪತ್ರಿಕೋದ್ಯಮವೂ ಬೆಳೆವಣಿಗೆ ಸಾಧಿಸಿತು. 1843ರಲ್ಲಿ ಮಂಗಳೂರ ಸಮಾಚಾರ, 1869ರಲ್ಲಿ ಕ್ರಿಸ್ತಸಭಾ ಪತ್ರ, 1887ರಲ್ಲಿ ಸುದರ್ಶನ, 1869ರಲ್ಲಿ ಸತ್ಯದೀಪಿಕಾ, 1900ರಲ್ಲಿ ಸುವಾಸಿನಿ, 1910ರಲ್ಲಿ ವೈದಿಕಮಿತ್ರ– ಇವು ಆಗ ಆರಂಭವಾದ ಪತ್ರಿಕೆಗಳಲ್ಲಿ ಪ್ರಮುಖವಾದವು.

ಅನೇಕ ಧಾರ್ಮಿಕ, ಸಾಮಾಜಿಕ ಸುಧಾರಣಾ ಸಂಸ್ಥೆಗಳೂ ಸ್ಥಾಪಿತಗೊಂಡವು. 1870ರಲ್ಲಿ ಮಂಗಳೂರಲ್ಲಿ ಉಪಾಸನಾ ಸಮಾಜ ಅಸ್ತಿತ್ವಕ್ಕೆ ಬಂದು, 1903ರಲ್ಲಿ ಅದು ಬ್ರಹ್ಮಸಮಾಜವಾಗಿ ಪರಿವರ್ತನೆಗೊಂಡಿತು.

20ನೆಯ ಶತಮಾನದ ಆದಿಭಾಗದಲ್ಲಿ ಇಲ್ಲಿ ಸ್ವಾತಂತ್ರ್ಯ ಸಂಗ್ರಾಮವೂ ಸಾಕಷ್ಟು ಮಟ್ಟಿಗೆ ನೆಲೆಗೊಂಡಿತ್ತು. ಸ್ವಾತಂತ್ರ್ಯ ಬಂದು ಬ್ರಿಟಿಷರ ಆಳ್ವಿಕೆ ಕೊನೆಗೊಂಡು, ಜಿಲ್ಲೆ ಮದರಾಸು ರಾಜ್ಯದಲ್ಲಿ ಉಳಿಯಿತು **(ನೋಡಿ : ದಕ್ಷಿಣ ಕನ್ನಡ ಜಿಲ್ಲೆ)**.

**ಬಳ್ಳಾರಿ:** 1799ರ ಶ್ರೀರಂಗಪಟ್ಟಣದ ಯುದ್ಧದ ಅನಂತರದ ಒಪ್ಪಂದದಂತೆ ಬಳ್ಳಾರಿ ಜಿಲ್ಲೆ ಹೈದರಾಬಾದ್ ನಿಜಾಮರ ವಶಕ್ಕೆ ಹೋದರೂ 1800ರಲ್ಲಿ ಮತ್ತೊಂದು ಒಪ್ಪಂದವಾಗಿ ಜಿಲ್ಲೆ ಈಸ್ಟ್ ಇಂಡಿಯಾ ಕಂಪನಿಯ ವಶಕ್ಕೆ ಬಂತು. ಕಂಪನಿ ಸರ್ ಥಾಮಸ್ ಮನ್ರೋನನ್ನು ಕಲೆಕ್ಟರ್ ಆಗಿಯೂ ಬಳ್ಳಾರಿಯಲ್ಲಿ ಇಟ್ಟಿದ್ದ ಬ್ರಿಟಿಷ್ ಸೈನ್ಯಕ್ಕೆ ಕ್ಯಾಂಪ್‌ಬೆಲ್ಲನನ್ನು ಸೈನ್ಯಾಧಿಕಾರಿಯನ್ನಾಗಿಯೂ ನೇಮಿಸಿತು. ಮನ್ರೋನ ಅಧೀನದಲ್ಲಿ ನಾಲ್ಕು ಅಧೀನ ಕಲೆಕ್ಟರುಗಳು ಇದ್ದರು. ಹಡಗಲಿ, ಹರಪನಹಳ್ಳಿ ಮತ್ತು ಕೂಡ್ಲಿಗಿ ತಾಲ್ಲೂಕುಗಳಿಗೆ ಜೇಮ್ಸ್ ಕೋಕ್ರೇನ್ ಕಲೆಕ್ಟರ್ ಆಗಿದ್ದ. 1800ರಲ್ಲಿ ಮನ್ರೋ ಅಧಿಕಾರ ವಹಿಸಿಕೊಂಡ ಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಕಡೆ ಪಾಳೆಯಗಾರರ ದಂಗೆ ತಲೆದೋರಿತು. ಇವರಲ್ಲಿ ಅನೇಕರು ಸೈನಿಕ ಸೇವೆಯ ಷರತ್ತಿಗೆ ಒಳಪಟ್ಟು ಅವರ ಅಧಿಪತಿಗಳಿಂದ ಭೂಮಿ ಹೊಂದಿದ್ದರು. ಈ ಪಾಳೆಯಗಾರರು ನಿಜಾಮ ಅಥವಾ ಹೈದರ್ ಅಲಿಗೆ ಕೊಡುತ್ತಿದ್ದಂತೆ ದುಬಾರಿ ಕಪ್ಪವನ್ನು ಬ್ರಿಟಿಷರಿಗೂ ಕೊಡಬೇಕೆಂದು ಮನ್ರೋ ತೀರ್ಮಾನಿಸಿದ. ಅವರು ಒಪ್ಪದಿದ್ದರೆ ಅಥವಾ ಉದಾಸೀನರಾಗಿದ್ದರೆ ಕ್ಯಾಂಪ್‌ಬೆಲ್‌ನು ತನ್ನ ಸೈನಿಕರನ್ನು ಕಳುಹಿಸಿ ವಸೂಲು ಮಾಡುತ್ತಿದ್ದ. ಹೀಗೆ ಒಂದು ವರ್ಷದಲ್ಲಿ ಅವರನ್ನೆಲ್ಲಾ ಹತೋಟಿಗೆ ತಂದ. 1818ರಲ್ಲಿ 500 ಮಂದಿ ಪಿಂಡಾರಿಗಳು ತುಂಗಭದ್ರಾ ನದಿಯನ್ನು ದಾಟಿ ಹರಪನಹಳ್ಳಿಗೆ ಬಂದು ಖಜಾನೆಯನ್ನು ಲೂಟಿ ಮಾಡಿ ಪಟ್ಟಣವನ್ನು ಕೊಳ್ಳೆ ಹೊಡೆದರು. ಹರಪನಹಳ್ಳಿಯಿಂದ ಕೊಟ್ಟೂರು ಮತ್ತು ಕೂಡ್ಲಿಗಿ ತಾಲ್ಲೂಕಿಗೆ ಹೋದರು. ಕೂಡ್ಲಿಗಿಯ ತಹಶೀಲ್ದಾರ ಅವರನ್ನು ಸೋಲಿಸಿದುದಕ್ಕೆ ಬ್ರಿಟಿಷ್ ಸರ್ಕಾರ ಅವನನ್ನು ಸನ್ಮಾನಿಸಿತು.

1858ರಲ್ಲಿ ಹರಪನಹಳ್ಳಿ ಮತ್ತು ಬಳ್ಳಾರಿಯ ಮಾಮಲೆದಾರನಾಗಿದ್ದ ಮುಂಡರಗಿ ಭೀಮರಾಯ ಬ್ರಿಟಿಷರ ವಿರುದ್ಧ ದಂಗೆಯೆದ್ದ. ಆತನನ್ನು ಬ್ರಿಟಿಷರು ಸೇವೆಯಿಂದ ವಜಾ ಮಾಡಿದುದೇ ಅವನ ದಂಗೆಗೆ ಕಾರಣವಾಯಿತು. ಭೀಮರಾಯ ಬ್ರಿಟಿಷರ ವಿರುದ್ಧ ನಡೆಸಿದ ಸಮರದಲ್ಲಿ ಬ್ರಿಟಿಷರ ಕೈ ಮೇಲಾಯಿತು. ಭೀಮರಾಯ ಯುದ್ಧದಲ್ಲಿ ಮಡಿದ (1–6–1858). ಬ್ರಿಟಿಷರು ಅವನ ಕಡೆಯ ಸುಮಾರು 150 ಜನರನ್ನು ಸೆರೆಹಿಡಿದು 77 ಜನರನ್ನು ಮರಣ ದಂಡನೆಗೆ ಈಡುಮಾಡಿದರು. ಅವನ ಮತ್ತು ಅವನ ಸಂಗಡಿಗರ ಸ್ವತ್ತನ್ನು ವಶಪಡಿಸಿಕೊಂಡರು. ಹೀಗೆ ಬ್ರಿಟಿಷರು 1858ರಲ್ಲಿ ಬಳ್ಳಾರಿಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ಅದುಮಿ ಹಾಕಿದರು. 1885ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದಾಗ ಅದರ ಪ್ರಭಾವ ಬಳ್ಳಾರಿ ಜಿಲ್ಲೆಯಲ್ಲೂ ಹಬ್ಬಿತು.

ಬ್ರಿಟಿಷರ ಆಡಳಿತದಲ್ಲಿ ಬಳ್ಳಾರಿ ಜಿಲ್ಲೆ ಮದರಾಸು ಪ್ರಾಂತ್ಯಕ್ಕೆ ಸೇರಿತು. 1810ರಲ್ಲಿ ಬಳ್ಳಾರಿಯಲ್ಲಿ ಲಂಡನ್ ಮಿಷನರಿ ಸೊಸೈಟಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿತು **(ನೋಡಿ: ಬಳ್ಳಾರಿ)**. 1822ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಲವು ಸರ್ಕಾರಿ ಶಾಲೆಗಳನ್ನು ಸ್ಥಾಪಿಸಲಾಯಿತು. ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ ರಚನೆಯಾದರು ಈ ಜಿಲ್ಲೆ ಹಿಂದಿನ ಮೈಸೂರು ರಾಜ್ಯಕ್ಕೆ ಸೇರಿತು.

**ಉತ್ತರ ಕರ್ನಾಟಕ :** ಪೇಶ್ವೆ ಬಾಜಿರಾಯನ (1813–18) ಆಡಳಿತದ ಅಂತ್ಯದಲ್ಲಿ ದಕ್ಷಿಣ ಮರಾಠ ಮುಖ್ಯಸ್ಥರು ಅರ್ಧ ಸ್ವಾತಂತ್ರ್ಯ ಪಡೆದ ಮನೋಭಾವ ಹೊಂದಿದ್ದರು. 1814ರಲ್ಲಿ ದೇಶದ ಪರಿಸ್ಥಿತಿ ಹೇಗಿತ್ತೆಂದರೆ, ಪೇಶ್ವೆಯು ಕಳುಹಿಸಿದ 1818 ಜೂನ್ 13ರಲ್ಲಿ ನಡೆದ ಪುಣೆ ತ್ರಿಯಂಬಕ ಜೀಗೆ ಕೋಟೆಯನ್ನು ಬಿಟುಕೊಡಬೇಕೆಂದು ಧಾರವಾಡದಿಂದ ಕಮ್ಯಾಂಡೆಂಟ್ ಅವನೊಂದಿಗೆ ಹೇಳಿ ಕಳುಹಿಸಿದ್ದಂತೆ ನಡೆದುಕೊಳ್ಳಲು ಪೇಶ್ವೆ ನಿರಾಕರಿಸಿದ. ಒಪ್ಪಂದದ ಪ್ರಕಾರ ಪೇಶ್ವೆ ಧಾರವಾಡ ಮತ್ತು ಅಲ್ಲಿಂದ 15 ಮೈಲಿ ಪೂರ್ವಕ್ಕಿರುವ ಕುಸುಗಲ್ ಪ್ರದೇಶ. ದಕ್ಷಿಣದ ವರದಾ ಪ್ರದೇಶ ಇವುಗಳನ್ನು ಬಿಟ್ಟುಕೊಡಲು ಒಪ್ಪಿದ. ಕರ್ನಲ್ ಥಾಮಸ್ ಮನ್ರೋ ಮಿಲಿಟರಿ ಮತ್ತು ನಾಗರಿಕ ವಿಭಾಗಗಳಿಗೆ ಅಧಿಕಾರಿಯಾಗಿ ಈ ಹೊಸ

ಪ್ರದೇಶಕ್ಕೆ ನೇಮಿತನಾದ. ಆಗ ಈ ಭಾಗ ಮದರಾಸು ಪ್ರಾಂತ್ಯಕ್ಕೆ ಸೇರಿತ್ತು. 1826ರಲ್ಲಿ ಧಾರವಾಡ ಪ್ರದೇಶವನ್ನು ಮುಂಬಯಿ ಅಥವಾ ಮದರಾಸು ಪ್ರಾಂತ್ಯಗಳಲ್ಲಿ ಯಾವುದಕ್ಕೆ ಸೇರಿಸಬೇಕು ಎಂಬ ಬಗ್ಗೆ ಎರಡು ಸರ್ಕಾರಗಳ ಮಧ್ಯೆ ದೀರ್ಘ ವ್ಯವಹಾರ ನಡೆಯಿತು. ಈ ಸಮಸ್ಯೆಯನ್ನು ಕುರಿತು ಈಸ್ಟ್ ಇಂಡಿಯಾ ಕಂಪನಿಯ ಡೈರೆಕ್ಟರುಗಳು 1830ರಲ್ಲಿ ಒಂದು ತೀರ್ಮಾನವನ್ನು ಹೊರಡಿಸಿದರು. ಇದರ ಪ್ರಕಾರ ಕರ್ನಾಟಕ ಜಿಲ್ಲೆಯನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಬೇಕೆಂದು ತೀರ್ಮಾನವಾಯಿತು. ಮುಂಬಯಿ ಸರ್ಕಾರ 1830 ಮಾರ್ಚ್ 17ರಂದು ಆ ಪ್ರದೇಶವನ್ನು ತನ್ನ ಹತೋಟಿಗೆ ತೆಗೆದುಕೊಂಡಿತು. ಧಾರವಾಡ ಜಿಲ್ಲೆಯು ಒಂದು ಆಡಳಿತ ವಿಭಾಗವಾಯಿತು. ಆ ವಿಭಾಗಕ್ಕೆ ಬೆಳಗಾಂವಿ, ಸೊಲ್ಲಾಪುರ ಮತ್ತು ಬಿಜಾಪುರಗಳನ್ನು ಸೇರಿಸಲಾಯಿತು. 1836ರಲ್ಲಿ ಬೆಳಗಾಂವಿ ಪ್ರದೇಶವನ್ನು ಪ್ರತ್ಯೇಕ ಕಲೆಕ್ಟರೇಟನ್ನಾಗಿ ವಿಭಾಗಿಸಲಾಯಿತು. ಧಾರವಾಡದ ಜಿಲ್ಲಾಧಿಕಾರಿಯನ್ನೇ ಅದರ ಅಧಿಕಾರದಲ್ಲಿ ಮುಂದುವರಿಸಿದರು. 1839ರಲ್ಲಿ ಅಣ್ಣಿಗೇರಿ ಪ್ರದೇಶದ 13 ಗ್ರಾಮಗಳನ್ನು ಧಾರವಾಡಕ್ಕೆ ಸೇರಿಸಲಾಯಿತು. ಭಾರತದ ಸ್ವಾತಂತ್ರ್ಯಾ ನಂತರ ಉತ್ತರ ಕರ್ನಾಟಕದ ಭಾಗ ಮುಂಬಯಿ ಪ್ರಾಂತ್ಯದಲ್ಲೇ ಉಳಿದಿತ್ತು. ಸು. 1836ರಿಂದ ಮುಂಬಯಿ ಪ್ರಾಂತ್ಯದಲ್ಲಾದ ಸಾಮಾನ್ಯ ಆಡಳಿತ ವ್ಯವಸ್ಥೆಯ ಬದಲಾವಣೆಗಳೆಲ್ಲ ಮುಂಬಯಿ ಕರ್ನಾಟಕದ ಭಾಗದಲ್ಲೂ ಜಾರಿಗೆ ಬಂದುವು. **(ಎ.ವಿ.ವಿ.)**

**ಕೊಡಗು:** ಸು. 1790ರ ಹೊತ್ತಿಗೆ ಕೊಡಗಿನೊಡನೆ ಬ್ರಿಟಿಷರು ಸಂಪರ್ಕ ಸಾಧಿಸಿದರು. ಟಿಪ್ಪುಸುಲ್ತಾನನ ದಾಳಿಗಳಿಂದ ನೊಂದಿದ್ದ ಆಗಿನ ರಾಜ ವೀರ ರಾಜೇಂದ್ರನಿಗೆ ತಲಚೇರಿಯಲ್ಲಿದ್ದ ಬ್ರಿಟಿಷ್ ಪ್ರತಿನಿಧಿ ರಾಬರ್ಟ್ ಟೇಲರ್‌ನಿಂದ ಪರಸ್ಪರ ಸಹಾಯದ ಒಪ್ಪಂದಕ್ಕೆ ಬರಲು ಆಹ್ವಾನ ಬಂತು. ಟಿಪ್ಪುವಿನ ವಿರುದ್ಧ ಬ್ರಿಟಿಷ್ ಸೇನೆ ಕೊಡಗಿನ ಮೂಲಕ ಹಾದು ಹೋಗಲು ಹಾಗೂ ಅದಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಲು ವೀರರಾಜೇಂದ್ರ ಒಪ್ಪಿದ. 1791ರಲ್ಲಿ ಮುಂಬಯಿಯ ಗವರ್ನರ್ ಅಬೆರ್‌ಕ್ರಾಂಬಿ ತನ್ನ ಸೈನ್ಯವನ್ನು ಕೊಡಗಿನ ಮೂಲಕ ಶ್ರೀರಂಗಪಟ್ಟಣದತ್ತ ಒಯ್ಯುವಾಗ ಹಾಗೂ 1799ರಲ್ಲಿ ಬ್ರಿಟಿಷರು ಸಿದ್ದೇಶ್ವರದಲ್ಲಿ ಟಿಪ್ಪುವನ್ನು ಸೋಲಿಸಿದಾಗ ಸಹಾಯ ನೀಡಿದ. ಇದರಿಂದ ಸಂತುಷ್ಟರಾದ ಬ್ರಿಟಿಷರು ವೀರರಾಜೇಂದ್ರನನ್ನು ಕೊಡಗಿನ ಪ್ರಭುವೆಂದು ಒಪ್ಪಿದ್ದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿದ್ದ ಪಂಜೆ, ಬೆಳ್ಳಾರೆ, ಪುತ್ತೂರುಗಳನ್ನು ಕೊಡಗಿನ ರಾಜನಿಗೆ ಬಿಟ್ಟುಕೊಟ್ಟರು. ಆದರೆ ಪಿರಿಯಾಪಟ್ಟಣದ ಭಾಗ ಇವನ ಕೈಬಿಟ್ಟಿತು.

ವೀರರಾಜೇಂದ್ರ ಟಿಪ್ಪುವಿಗೆ ಕೊಡಬೇಕಾಗಿದ್ದ ಕಪ್ಪದ ಬದಲಾಗಿ ಅವನ್ನು ಬ್ರಿಟಿಷರಿಗೆ ಒಪ್ಪಿಸುವಂತೆಯೂ ಬ್ರಿಟಿಷರು ವೀರರಾಜೇಂದ್ರನಿಗೆ ವಿಶೇಷ ರಕ್ಷಣೆ ಒದಗಿಸುವುದಾಗಿಯೂ 1791ರಲ್ಲಿ ಒಂದು ಕೌಲು ಆಯಿತು. ಇದರಿಂದ ಬ್ರಿಟಿಷರ ಕಷ್ಟದ ಸಮಯದಲ್ಲಿ ಕೊಡಗಿನ ದೊರೆ ಉದಾರವಾಗಿ ಸಹಾಯ ಹಸ್ತ ನೀಡಿದ್ದರೂ ಕೊಡಗು ಬ್ರಿಟಿಷರ ಅಧೀನ ಸಂಸ್ಥಾನ ಎಂಬುದು ಮಾತ್ರ ಸ್ಥಿರವಾಯಿತು. ಕೊಡಗಿನ ಆಗುಹೋಗುಗಳ ಮೇಲ್ವಿಚಾರಣೆಗೆ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟನೇ ಜವಾಬುದಾರನಾಗಿದ್ದ.

19ನೆಯ ಶತಮಾನದ ಪ್ರಥಮಾರ್ಧದಲ್ಲಿ ತಾವು ಅನುಸರಿಸುತ್ತಿದ್ದ ಆಕ್ರಮಣ ನೀತಿಗೆ ಅನುಗುಣವಾಗಿ ಸ್ವತಂತ್ರ ಸಂಸ್ಥಾನವಾಗಿದ್ದ ಕೊಡಗನ್ನೂ ಕಬಳಿಸಲು ಬ್ರಿಟಿಷರು ಸನ್ನಾಹ ನಡೆಸಿದರು. ಆಗಿನ ಕೊಡಗಿನ ದೊರೆ ಚಿಕ್ಕ ವೀರರಾಜೇಂದ್ರ ದುಷ್ಟ, ಕೊಡಗಿನ ಜನರನ್ನು ವಿನಾಕಾರಣ ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದಾನೆ, ತನ್ನ ವಿರೋಧಿ ಸಂಬಂಧಿಕರನ್ನು ಗುಟ್ಟಾಗಿ ಕೊಲ್ಲಿಸುತ್ತಿದ್ದಾನೆ ಎಂದು ಮುಂತಾಗಿ ಬ್ರಿಟಿಷರು ಪುಕಾರು ಎಬ್ಬಿಸಿ ಅದಕ್ಕೆ ಸರಿಯಾಗಿ ದಾಖಲೆಗಳನ್ನೂ ಸೃಷ್ಟಿ ಮಾಡಿದರು. ಈ ಕಾರ್ಯದಲ್ಲಿ ಕೊಡಗಿನ ಕೆಲವು ದುಷ್ಟ ಜನರೂ ಬ್ರಿಟಿಷರಿಗೆ ನೆರವಿತ್ತರು. 1832ರ ಹೊತ್ತಿಗೆ ಚಿಕ್ಕವೀರರಾಜೇಂದ್ರ ಮತ್ತು ಬ್ರಿಟಿಷರ ನಡುವೆ ಬಿರುಕು ಏರ್ಪಟ್ಟಿತು. ಬ್ರಿಟಿಷರ ದಂಡು ಕೊಡಗಿನ ಮೇಲೆ ನಡೆಯಿತು. 1834ರ ಏಪ್ರಿಲ್ 6ರಂದು ಚಿಕ್ಕವೀರರಾಜೇಂದ್ರ ರಾಜ್ಯತ್ಯಾಗ ಮಾಡಿದ. ಕೊಡಗು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿತು. ಅದೇ ವರ್ಷ ದೇಶನಿಷ್ಕ್ರಾರಾಗಿದ್ದ ಕಲ್ಯಾಣಸ್ವಾಮಿ ಮತ್ತು ಇತರರು ಬ್ರಿಟಿಷರ ವಿರುದ್ಧ ದಂಗೆ ಎದ್ದರೂ ಅದು ಸಫಲವಾಗಲಿಲ್ಲ.

1834ರಿಂದ ಕೊಡಗು ಬ್ರಿಟಿಷ್ ಭಾರತ ಸರ್ಕಾರದ ವಿದೇಶ ಮತ್ತು ರಾಜತಾಂತ್ರಿಕ ಇಲಾಖೆಯ ಕಕ್ಷೆಗೆ ಬಂತು. ಮೈಸೂರಿನ ಕಮಿಷನರನ್ನು ಕೊಡಗಿನ ಕಮಿಷನರಾಗಿಯೂ ನೇಮಿಸಲಾಯಿತು. ಕೊಡಗಿನಲ್ಲಿ ರಾಜಕೀಯ ಪ್ರತಿನಿಧಿ ಇರುತ್ತಿದ್ದ. ಮಿಲಿಟರಿ ಭದ್ರತೆಗಾಗಿ ಮಡಿಕೇರಿಯಲ್ಲಿ ಮದರಾಸು ಕಾಲ್ದಳದ ಒಂದು ತುಕಡಿಯನ್ನು 1837ರಲ್ಲಿ ನೆಲೆಗೊಳಿಸಲಾಯಿತು (1885ರಲ್ಲಿ ಇದನ್ನು ಹಿಂತೆಗೆದುಕೊಳ್ಳಲಾಯಿತು).

1834ರಲ್ಲಿ ನೇಮಿತನಾದ ರಾಜಕೀಯ ಪ್ರತಿನಿಧಿ ಕರ್ನಲ್ ಫ್ರೇಸರ್, ಇವನ ಕಾಲದಲ್ಲಿ ಕೊಡಗಿನ ಆಡಳಿತದಲ್ಲಿ ಹೊಸ ವ್ಯವಸ್ಥೆಯನ್ನು ತರಲಾಯಿತು. ಗುಲಾಮಗಿರಿ ರದ್ದಾಯಿತು. ಶಾಲೆ ಮತ್ತು ವೈದ್ಯಕೀಯ ಸೌಲಭ್ಯಗಳು ಒದಗಿತು. ರಸ್ತೆಗಳು ನಿರ್ಮಾಣವಾದುವು. ಭೂಕಂದಾಯ ಪರಿಷ್ಕೃತವಾಯಿತು.

19ನೆಯ ಶತಮಾನದ ಉತ್ತರಾರ್ಧದಿಂದ ಅಲ್ಲಿನ ಸ್ಥಿತಿ ಬಹುಮಟ್ಟಿಗೆ ಬದಲಾಯಿಸಿತು. ಕಾಫಿ ಪ್ಲಾಂಟೇಷನ್‌ಗಳು ತಲೆಯೆತ್ತಿದುವು. ಕೊಡಗಿನಲ್ಲಿ ಮೊದಲ ಸೂಪರಿಂಟೆಂಡೆಂಟಾಗಿ ನೇಮಿತನಾಗಿದ್ದ ಕ್ಯಾಪ್ಟನ್ ಲೇಹಾರ್ಡಿ ಇದಕ್ಕೆ ಉತ್ತೇಜನ ನೀಡಿದ. 1854ರಲ್ಲಿ ಮೊದಲ ಯುರೋಪಿಯನ್ ಕಾಫಿ ತೋಟ ಶುರುವಾಯಿತು. 1870ರ ಹೊತ್ತಿಗೆ ಅನೇಕ ಕಾಫಿ ತೋಟಗಳು ಕೊಡಗಿನಲ್ಲೆಲ್ಲ ಹರಡಿದ್ದುವು.

1857ರಲ್ಲಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸಾರ್ವಭೌಮರು ಭಾರತ ಸರ್ಕಾರವನ್ನು ವಹಿಸಿಕೊಂಡ ಅನಂತರ 1861–62ರಲ್ಲಿ ಇಂಡಿಯನ್ ಪೀನಲ್ ಕೋಡ್ ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್, 1865ರಲ್ಲಿ ಅರಣ್ಯ ಕಾನೂನುಗಳು–ಹೀಗೆ ಭಾರತ ಸರ್ಕಾರ ಹೊರಡಿಸಿದ ಅನೇಕ ಕಾನೂನುಗಳು ಕೊಡಗಿನಲ್ಲೂ ಜಾರಿಗೆ ಬಂದುವು.

1869ರಲ್ಲಿ ಕೊಡಗಿನ ಕಮಿಷನರನನ್ನು ಚೀಫ್ ಕಮಿಷನರ್ ಎಂದೂ ಸೂಪರಿಂಟೆಂಡೆಂಟನನ್ನು ಕಮಿಷನರ್ ಎಂದೂ ಕರೆಯಲಾಯಿತು. 1890ರವರೆಗೆ ವಿದ್ಯೆ, ಅರಣ್ಯ, ಲೋಕೋಪಯೋಗಿ, ಜೈಲು, ನೋಂದಣಿ ಇವುಗಳಿಗೆ ಸಂಬಂಧಿಸಿದ ಇಲಾಖೆಗಳನ್ನು ಮೈಸೂರು ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರೇ ನೋಡಿಕೊಳ್ಳುತ್ತಿದ್ದರು. 1870ರ ಹೊತ್ತಿಗೆ ಮಡಿಕೇರಿ ಮತ್ತು ವಿರಾಜಪೇಟೆ ಪುರಸಭೆಗಳು ಅಸ್ತಿತ್ವಕ್ಕೆ ಬಂದುವು. 1901ರಲ್ಲಿ ಜಿಲ್ಲಾ ಬೋರ್ಡ್ ರಚಿತವಾಯಿತು. 1919ರ ಭಾರತ ಸರ್ಕಾರದ ಕಾನೂನಿನಂತೆ ಕೊಡಗು ಚೀಫ್ ಕಮಿಷನರನ ಪ್ರಾಂತ್ಯವಾಗಿ, 15 ಜನ ಚುನಾಯಿತ ಮತ್ತು 5 ಜನ ನೇಮಿತ ಸದಸ್ಯರುಳ್ಳ ವಿಧಾನಸಭೆ ರಚಿತವಾಯಿತು. ಇದು 1924ರಲ್ಲಿ ತನ್ನ ಕಾರ್ಯಾರಂಭ ಮಾಡಿತು. 1940ರಲ್ಲಿ ಮೈಸೂರು ರೆಸಿಡೆಂಟ್ ಕೊಡಗಿನ ಚೀಫ್ ಕಮಿಷನರಾಗಿಯೂ ನಿರ್ವಹಿಸುತ್ತಿದ್ದನ್ನು ರದ್ದುಗೊಳಿಸಿ, ಪ್ರತ್ಯೇಕ ಚೀಫ್ ಕಮಿಷನರನ್ನು ನೇಮಕ ಮಾಡಿ ಅವನ ಕಛೇರಿಯನ್ನು ಮಡಿಕೇರಿಗೆ ವರ್ಗಾಯಿಸಲಾ ಯಿತು. 1947ರಲ್ಲಿ ಬ್ರಿಟಿಷ್ ಆಳ್ವಿಕೆ ಕೊನೆಗೊಂಡು ಕೊಡಗು ಸ್ವತಂತ್ರ ಭಾರತ ಸರ್ಕಾರದ ಗೃಹಾಡಳಿತ ವಿಭಾಗದ ಆಡಳಿತಕ್ಕೆ ಬಂತು. ಅನಂತರ ಮೈಸೂರು ರಾಜ್ಯಕ್ಕೆ ಸೇರಿ ಕರ್ನಾಟಕದ ಒಂದು ಜಿಲ್ಲೆಯಾಯಿತು. **(*;ಎ.ವಿ.ವಿ.)**

**ಭಟ್ಕಳ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಈ ತಾಲ್ಲೂಕು ಉತ್ತರದಲ್ಲಿ ಹೊನ್ನಾವರ ತಾಲ್ಲೂಕು, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು, ದಕ್ಷಿಣದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಇವೆ. ತಾಲ್ಲೂಕಿನಲ್ಲಿ 4 ಹೋಬಳಿಗಳೂ ಒಟ್ಟು 63 ಗ್ರಾಮಗಳೂ ಇವೆ. ವಿಸ್ತೀರ್ಣ ಸು. 411 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 1,49,338.

ಉತ್ತರ ಕನ್ನಡ ಜಿಲ್ಲೆಯ ದಕ್ಷಿಣ ತುದಿಯ ಈ ತಾಲ್ಲೂಕಿನಲ್ಲಿ ವೆಂಕಟಪುರ ಮತ್ತು ಭಟ್ಕಳ ನದಿಗಳು ಮತ್ತು ಅನೇಕ ಸಣ್ಣ ತೊರೆಗಳೂ ಇವೆ. ಸಮುದ್ರತೀರಪ್ರದೇಶ ಮರಳಿನಿಂದ ಕೂಡಿದೆ. ಉಳಿದ ಪ್ರದೇಶ ಫಲವತ್ತಾದ ಜಂಬು ಮಣ್ಣು. ತಾಲ್ಲೂಕಿನಲ್ಲಿ ಮಳೆ ಸಮೃದ್ಧಿಯಾಗಿ ಬೀಳುತ್ತದೆ. ಭಟ್ಕಳ ಕಣಿವೆ ಪ್ರದೇಶದಲ್ಲಿ ಬತ್ತದ ಗದ್ದೆಗಳು ಹಬ್ಬಿವೆ. ತಾಲ್ಲೂಕಿನ ಹೆಚ್ಚು ಜಮೀನು ವ್ಯವಸಾಯಕ್ಕೊಳಪಟ್ಟಿದೆ. ಇಲ್ಲಿ ತೆಂಗಿನ, ಅಡಕೆಯ ತೋಟಗಳು ಹೆಚ್ಚು ಬತ್ತ, ಅಡಕೆ, ತೆಂಗು ಇಲ್ಲಿಯ ಮುಖ್ಯ ಕೃಷಿಉತ್ಪನ್ನಗಳು.

ತಾಲ್ಲೂಕಿನಲ್ಲಿ ಹಲವು ಬಂದರುಗಳಿವೆ. ಅವುಗಳಲ್ಲಿ ಭಟ್ಕಳ ಬಂದರು ಮುಖ್ಯವಾದದ್ದು. ಉತ್ತರ ಕನ್ನಡ ಜಿಲ್ಲೆಯ ದಕ್ಷಿಣಭಾಗದಲ್ಲಿ ಉಡುಪಿ ಜಿಲ್ಲೆಯ ಉತ್ತರಕ್ಕೂ ಉಡುಪಿ ಜಿಲ್ಲೆಗಳೆರಡರ ಮಧ್ಯೆ ಇರುವುದರಿಂದ ಈ ತಾಲ್ಲೂಕು ಎರಡೂ ಜಿಲ್ಲೆಗಳ ವ್ಯಾಪಾರಕೇಂದ್ರದಂತಿದೆ. ಇಲ್ಲಿ ಉತ್ತಮ ಮಾರ್ಗಗಳಿವೆ. ದೋಣಿ ಸಂಚಾರ ಮತ್ತು ಸರಕು ಸಾಗಣೆಯ ಸೌಲಭ್ಯವಿದೆ.

ಈ ತಾಲ್ಲೂಕಿನ ಹಾಡುವಳ್ಳಿ ಭಟ್ಕಳಕ್ಕೆ ಈಶಾನ್ಯದಲ್ಲಿ ಸು. 13 ಕಿಮೀ ದೂರದಲ್ಲಿದೆ. ಇಲ್ಲಿ ಅನೇಕ ಶಾಸನಗಳಿವೆ. ಜೈನರ ಮುಖ್ಯಪಟ್ಟಣ ವಾಗಿತ್ತೆಂದು ತಿಳಿದುಬರುತ್ತದೆ. ಭಟ್ಕಳಕ್ಕೆ ವಾಯವ್ಯದಲ್ಲಿ ಸುಮಾರು 6 ಕಿಮೀ ದೂರದಲ್ಲಿರುವ ಜಾಲಿ ಕುಂಡ ಅಥವಾ ಹಾಗ್ ದ್ವೀಪ ಸುಮಾರು 91 ಮೀ ಎತ್ತರವಿದೆ. ಮುರ್ಡೇಶ್ವರ ಭಟ್ಕಳದ ಉತ್ತರಕ್ಕಿರುವ ಒಂದು ಬಂದರು. ಹೊನ್ನಾವರ ಮತ್ತು ಭಟ್ಕಳದ ಮಧ್ಯದಲ್ಲಿರುವ ಕಂದುಗಿರಿ ಗುಡ್ಡದಮೇಲೆ ಮುರ್ಡೇಶ್ವರ ದೇವಾಲಯವಿದೆ. ಇದರ ಸುತ್ತ ಪ್ರಕೃತಿ ಮನೋಹರವಾಗಿದೆ. ಭಟ್ಕಳಕ್ಕೆ ಉತ್ತರದಲ್ಲಿ ಸು. 6 ಕಿಮೀ ದೂರದಲ್ಲಿ ಶಿರಾಳಿ ಬಂದರಿದೆ. ವೆಂಕಟಪುರ ನದಿ ಇಲ್ಲಿ ಸಮುದ್ರವನ್ನು ಸೇರುತ್ತದೆ.

ಭಟ್ಕಳ ಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಕಾರವಾರಕ್ಕೆ ಆಗ್ನೇಯದಲ್ಲಿ 126 ಕಿಮೀ ದೂರದಲ್ಲೂ ಹೊನ್ನಾವರಕ್ಕೆ ದಕ್ಷಿಣದಲ್ಲಿ 19 ಕಿಮೀ ದೂರದಲ್ಲೂ ಇದೆ. ಭಟ್ಕಳ ವಿಸ್ತರಿತ ಪಟ್ಟಣ ಒಟ್ಟು ಜನಸಂಖ್ಯೆ 42,142. ಭಟ್ಕಳ ಪುರಸಭಾವ್ಯಾಪ್ತಿಯ ಒಟ್ಟು ಜನಸಂಖ್ಯೆ 36,203. ಭಟ್ಕಳ ನದಿಯ ಮುಖಜಭೂಮಿಯಲ್ಲಿ ಈ ಊರು ಹರಡಿದೆ. ಇದೊಂದು ಬಂದರು. ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಗಡಿಯಿಂದ ಇಲ್ಲಿಗೆ ಸು. 26 ಕಿಮೀ ದೂರವಿದೆ. ಊರು ಸಮುದ್ರದಿಂದ ಪೂರ್ವಕ್ಕೆ ಸು. 5 ಕಿಮೀ ದೂರದಲ್ಲಿದೆ. ಇದರ ಬದಿಯಲ್ಲೇ ಶಂಕರಿಹೊಳೆ ಎಂಬ ಚಿಕ್ಕಹೊಳೆ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಈ ಹೊಳೆಗೆ ದೀವತ್ ಕೊಲ್ಲಿ ಎಂದೂ ಹೆಸರಿದೆ. ಈ ಹೊಳೆಯ ಮೂಲಕ ನಾಡುದೋಣಿಗಳು ಸಮುದ್ರತೀರದಲ್ಲಿರುವ ಹಡಗುಗಳಿಂದ ಸರಕನ್ನು ಭಟ್ಕಳ ಪಟ್ಟಣಕ್ಕೆ ತರುತ್ತವೆ. ಈಗ ಸಮುದ್ರತೀರಕ್ಕೆ ರಸ್ತೆ ಮಾರ್ಗವೂ ಇದೆ.

ಭಟ್ಕಳ ಪಟ್ಟಣ ಮಂಗಳೂರು–ಮುಂಬಯಿ ಹೆದ್ದಾರಿಯಲ್ಲಿರುವುದರಿಂದ ಇಲ್ಲಿಂದ ಮುಂಬಯಿಗೆ ತೆಂಗಿನಕಾಯಿ, ಒಣಗಿದ ಮತ್ತು ಶೈತ್ಯೀಕರಿಸಿದ ಹಸಿ ಮೀನು ಲಾರಿಗಳಲ್ಲೂ ಹಡಗುಗಳಲ್ಲೂ ಹೇರಳವಾಗಿ ಸಾಗುವುದು. ಮೀನನ್ನು ಕೆಡದಂತೆ ಶೈತ್ಯೀಕರಿಸಲು ಇಲ್ಲಿ ಒಂದು ಶೈತ್ಯೀಕರಿಸುವ ಕಾರ್ಖಾನೆಯಿದೆ. (*;ಡಿ.ಎನ್.ಕೆ.)

ಇಲ್ಲಿ ವಾಸವಾಗಿದ್ದ ಭಟ್ಟ ಅಕಲಂಕ ಎಂಬ ಜೈನಮುನಿಯಿಂದ (9ನೆಯ ಶತಮಾನ) ಭಟ್ಕಳ ಎಂಬ ಹೆಸರು ಬಂತೆನ್ನುವರು. ಇಲ್ಲಿನ ಭೂಸ್ವರೂಪದಿಂದ ಈ ಹೆಸರು ಬಂತೆನ್ನುವರು. ಭಟ್ಕಳ ವೃತ್ತಾಕಾರವಾಗಿದ್ದು


ರಾಮದೇವಾಲಯದ ಗರ್ಭಗೃಹದ ಗೋಪುರ

ಸುತ್ತಲೂ ಬೆಟ್ಟಗಳಿಂದ ಆವೃತವಾಗಿದ್ದುದರಿಂದ ಬಟ್ಟಕಲ ಎಂದು ಕರೆಯಲಾಗಿತ್ತೆನ್ನುವರು. 1414ರ ಒಂದು ಶಾಸನದಲ್ಲಿ ಭಟ್ಟಕಲ ಎಂದಿದ್ದು 1545ರ ದಾಖಲೆಯಲ್ಲಿ ಇದಕ್ಕೆ ವೃತ್ತಪುರ ಎಂದು ಕರೆದಿದೆ. 1321ರಲ್ಲಿ ಭಟ್ಕಳವನ್ನು ಒಬ್ಬ ಮುಸಲ್ಮಾನ ರಾಜ ಆಳುತ್ತಿದ್ದನೆಂದು ಜೋರ್ಡಾನಸ್ ಎಂಬ ಪಾದ್ರಿ ಬರೆದಿದ್ದಾನೆ.

14–15ನೆಯ ಶತಮಾನಗಳಲ್ಲಿ ಭಟ್ಕಳ ಪಶ್ಚಿಮ ಏಷ್ಯದ ಓರ್ಮುಜ್‌ನಿಂದ ಆಮದಾದ ಅರಬ್ಬೀ ಕುದುರೆಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. 1498ರಲ್ಲಿ ವಾಸ್ಕೋ ಡ ಗಾಮ ಭಟ್ಕಳದ ಬಳಿಯ ಒಂದು ದ್ವೀಪದಲ್ಲಿ ತಂಗಿದ್ದು ಅದಕ್ಕೆ ಪಾದ್ರೂ ಡಿ ಸಾರಿಕ್ವಾ ಮರಿಯ ಎಂದು ಹೆಸರಿಟ್ಟು ಅಲ್ಲಿ ಒಂದು ಶಿಲುಬೆಯನ್ನು ಸ್ಥಾಪಿಸಿದ. 1503ರಲ್ಲಿ ವಾಸ್ಕೋ ಡ

ಗಾಮ ಭಟ್ಕಳವನ್ನು ಆಕ್ರಮಿಸಿದ. ಅಲ್ಲಿದ್ದ ನಾಯಕ ಇವನೊಡನೆ ಶಾಂತಿ ಒಪ್ಪಂದ ಮಾಡಿಕೊಂಡ. 1505ರಲ್ಲಿ ವಿಜಯ ನಗರದ ನರಸಿಂಹ ಪೋರ್ಚುಗೀಸರಿಗೆ ಭಟ್ಕಳದಲ್ಲಿ ಕೋಟೆಯನ್ನು ಕಟ್ಟಿಕೊಳ್ಳಲು ಅನುಮತಿ ಇತ್ತ. ಅಂದಿನಿಂದ ಈ ಊರು ಪೋರ್ಚುಗೀಸರ ಒಂದು ಮುಖ್ಯ ವ್ಯಾಪಾರ ಸ್ಥಳವಾಯಿತು. ಇಲ್ಲಿನ ಬಂದರಿನಿಂದ ಕಬ್ಬಿಣ, ಸಂಬಾರ ಪದಾರ್ಥಗಳು, ಅಕ್ಕಿ ಮತ್ತು ಸಕ್ಕರೆ ರಫ್ತಾಗುತ್ತಿದ್ದುವು. 1542ರ ಸುಮಾರಿನಲ್ಲಿ ಈ ಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಕಾರ್ಕಳದ ಭೈರರಸ ವಂಶದ ರಾಣಿ ಪೋರ್ಚುಗೀಸರಿಗೆ ಹಿಂದಿನ ಒಪ್ಪಂದದಂತೆ ಕಪ್ಪ ಒಪ್ಪಿಸಲಿಲ್ಲವಾಗಿ ಭಟ್ಕಳ ಪೋರ್ಚುಗೀಸ್ ಸೈನ್ಯದ ದಾಳಿಗೆ

ಚಂದ್ರನಾಥ ಬಸದಿ

ತುತ್ತಾಯಿತು. 1554ರ ಹೊತ್ತಿಗೆ ಮತ್ತೆ ಒಪ್ಪಂದವಾಯಿತು. 1637ರಲ್ಲಿ ಬ್ರಿಟಿಷರು ಇಲ್ಲಿ ಒಂದು ವ್ಯಾಪಾರಕೋಠಿಯನ್ನು ಸ್ಥಾಪಿಸಿದರು. ಭೈರರಸ ಒಡೆಯರ ಅನಂತರ ಈ ಭಾಗ ಹಾಡುವಳ್ಳಿಯ ಮತ್ತು ಮುಂದೆ ಬಿದನೂರು ನಾಯಕರ ವಶವಾಯಿತು. ಅನಂತರ ಹೈದರನ ಅಧೀನಕ್ಕೆ ಬಂದು 1799ರ ಅನಂತರ ಬ್ರಿಟಿಷರ ಕೈಸೇರಿತು.

ಭಟ್ಕಳದಲ್ಲಿ ಹದಿಮೂರು ದೇವಾಲಯಗಳಿವೆ. ಇವೆಲ್ಲ ಸುಮಾರು 15-16ನೆಯ ಶತಮಾನಗಳಲ್ಲಿ ಕಟ್ಟಿದ ಸುಂದರ ದೇವಾಲಯಗಳು. ಇವುಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಸಭಾಮಂಟಪ, ಮುಂದೆ ಧ್ವಜಸ್ತಂಭ ಇರುತ್ತವೆ. ಇವುಗಳಲ್ಲಿ ಒಂದಾದ ಅಡಕೆ ನಾರಾಯಣ ದೇವಾಲಯ ಚಿಕ್ಕ ಕಲ್ಲು ಕಟ್ಟಡ. ಇದರ ಭುವನೇಶ್ವರಿಯಲ್ಲಿ ಕೆತ್ತಿರುವ ಅಷ್ಟದಿಕ್ಪಾಲಕ ವಿಗ್ರಹ ಸುಂದರ ಶಿಲ್ಪ. ಕಾಮಾಟಿ ನಾರಾಯಣ ದೇವಾಲಯ ಸುಮಾರು. 1550ರಲ್ಲಿ ರಚಿತವಾದುದು. ಚೋಳೇಶ್ವರ ದೇವಾಲಯ ಎರಡು ಅಂತಸ್ತಿನಲ್ಲಿ ಕಟ್ಟಿರುವ ಕರಿಕಲ್ಲಿನ ಕಟ್ಟಡ. ಮೇಲಿನ ಅಂತಸ್ತಿಗೆ ಮಾತ್ರ ಹೆಂಚಿನ ಹೊದಿಕೆ ಇದೆ. ಇಲ್ಲಿ ಎರಡು ತಮಿಳು ಶಾಸನಗಳಿವೆ. ಚೋಳ ದೇಶದ ರಾಜನೊಬ್ಬನ ಮಕ್ಕಳೆಲ್ಲರೂ ಸರ್ಪದಂಶದಿಂದ ಸಾಯುತ್ತಿದ್ದರೆಂದೂ ಕೊನೆಗೆ ಇಲ್ಲಿನ ಬ್ರಾಹ್ಮಣನೊಬ್ಬನ ಅನುಗ್ರಹದಿಂದ ಒಬ್ಬ ಮಗ ಬದುಕಿಕೊಂಡನೆಂದೂ ಅದರ ನೆನಪಿಗಾಗಿ ಈ ದೇವಾಲಯವನ್ನು ಕಟ್ಟಿಸಿದನೆಂದೂ ಪ್ರತೀತಿ. ಜಟ್ಟಪ್ಪನಾಯಕನ ಚಂದ್ರನಾಥೇಶ್ವರ ಬಸದಿ ಒಂದು ದೊಡ್ಡ ಜೈನ ದೇವಾಲಯ. ಇದರಲ್ಲಿ ಗರ್ಭಗೃಹ, ಅಗ್ರಶಾಲಾ ಮತ್ತು ಭೋಗ ಮಂಟಪ ಇದೆ. ಇದು ಒಟ್ಟು 112' ಉದ್ದ ಮತ್ತು 50' ಅಗಲ ಇದೆ. ಎರಡು ಅಂತಸ್ತಿರುವ ಈ ಬಸದಿಯಲ್ಲಿ ಅಂತಸ್ತಿಗೆ ಮೂರರಂತೆ ಆರು ಗರ್ಭಗೃಹಗಳಿವೆ. ಇವುಗಳಲ್ಲಿ ಅರ, ಮಲ್ಲಿ, ಮುನಿಸುವ್ರತ, ನಮ, ನೇಮಿ ಮತ್ತು ಪಾರ್ಶ್ವನಾಥರ ವಿಗ್ರಹಗಳಿದ್ದುವು. ಈಗ ಎಲ್ಲ ಹಾಳಾಗಿವೆ. ಅಗ್ರಶಾಲೆಯ ಎರಡು ಅಂತಸ್ತುಗಳಲ್ಲೂ ಎರಡೆರಡು ಕೋಣೆಗಳಿವೆ. ಅವುಗಳಲ್ಲಿ ವೃಷಭನಾಥ, ಅಕಲಶಾಂಭವ, ಅಭಿನಂದ ಮತ್ತು ಚಂದ್ರನಾಥರ ವಿಗ್ರಹಗಳಿದ್ದು, ಭೋಗಮಂಟಪದಲ್ಲಿ ಸುಂದರವಾದ ಜಾಲಂಧ್ರಗಳ ಕೆತ್ತನೆ ಇದೆ. ದೇವಾಲಯದ ಮುಂದೆ 14' ಎತ್ತರದ ಕಟ್ಟೆಯ ಮೇಲೆ ನಿಂತಿರುವ 21' ಎತ್ತರದ ಸುಂದರ ಧ್ವಜಸ್ತಂಭವಿದೆ. ದೇವಾಲಯದ ಹಿಂಭಾಗದಲ್ಲಿ 19' ಎತ್ತರದ ಯಕ್ಷಬ್ರಹ್ಮನ ಕಂಬವಿದೆ. ಈ ದೇವಾಲಯದಲ್ಲಿ ಹಲವು ಶಾಸನಗಳೂ ಇವೆ.

ಜೋಶಿ ಶಂಕರನಾರಾಯಣ ದೇವಾಲಯ 1554ರಲ್ಲಿ ರಚಿತವಾದ ಸರಳವಾದ ಚಿಕ್ಕ ಕಟ್ಟಡ. ಇದರಲ್ಲಿ ಗರ್ಭಗೃಹ, ಸಭಾಮಂಟಪ (ಅಗ್ರಶಾಲಾ) ಮತ್ತು ಮುಂದೆ ತೆರೆದ ಮುಖ್ಯಮಂಟಪ (ಸಂಧ್ಯಾ ಮಂಟಪ) ಇವೆ. ಮಾಡಿನ ಕಲ್ಲುಗಳನ್ನು ಇಳಿಜಾರಾಗಿ ಜೋಡಿಸಲಾಗಿದೆ. ದೇವಾಲಯದ ಮುಂದೊಂದು ಧ್ವಜಸ್ತಂಭವಿದೆ. *

**ಭಟ್ಟ,ವಿ.ಜಿ.:** 1923-91. ಪ್ರಸಿದ್ಧ ನವ್ಯಕವಿ. ಇವರ ಪೂರ್ತಿ ಹೆಸರು ವಿಷ್ಣುಗೋವಿಂದ ಭಟ್ಟ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಕಡತೋಕಾ ಗ್ರಾಮದ ಸಂಪ್ರದಾಯಸ್ಥ ಹವ್ಯಕ ಕುಟುಂಬದಲ್ಲಿ 1923 ಡಿಸೆಂಬರ್ 2 ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕೆಕ್ಕಾರು, ಹೊನ್ನಾವರಗಳಲ್ಲಿ ಮುಗಿಸಿದರು. ಮಾಧ್ಯಮಿಕ ಶಿಕ್ಷಣ ಜಮಖಂಡಿಯಲ್ಲಿ ಪಡೆದರು. ಬಡತನದಿಂದಾಗಿ ಜಮಖಂಡಿಯಲ್ಲಿ ಓದುವಾಗ ವಾರಾನ್ನ ಮಾಡಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಅಂದಿನ ಜಮಖಂಡಿ ಸಂಸ್ಥಾನಕ್ಕೇ ಮೊದಲಿಗರಾಗಿ, ವಿಶ್ವವಿದ್ಯಾನಿಲಯಕ್ಕೆ ಮೂರನೆಯವರಾಗಿ ಉತ್ತೀರ್ಣರಾದರು. ಮುಂದಿನ ಓದಿಗೆ ಸಾಂಗಲಿಗೆ ತೆರಳಿದರು. ಅಲ್ಲಿ ವಿ.ಕೃ.ಗೋಕಾಕರ ಶಿಷ್ಯರಾಗಿ ಅವರಿಂದ ಸಾಹಿತ್ಯ ರಚನೆಗೆ ಸ್ಫೂರ್ತಿ ಪಡೆದರು. ವಿದ್ಯಾರ್ಥಿ ವೇತನ ಪಡೆದು ಪುಣೆಯಲ್ಲಿ ಇಂಟರ್‌ಮಿಡಿಯೇಟ್‌ವರೆಗೆ ಓದಿದರು. ಪದವಿ ಶಿಕ್ಷಣಕ್ಕೆ ಕೊಲ್ಲಾಪುರಕ್ಕೆ ಬಂದರು. ಪದವೀಧರರಾದೊಡನೆ ತಾವು ಓದಿದ ಹೊನ್ನಾವರ ಹೈಸ್ಕೂಲಿನಲ್ಲಿ ಒಂದು ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಅನಂತರ ಕೊಲ್ಲಾಪುರಕ್ಕೆ ಮರಳಿ ಹೋಗಿ ಕನ್ನಡ ಮತ್ತು ಇಂಗ್ಲಿಷ್ ವಿಷಯಗಳನ್ನು ಪ್ರಮುಖವಾಗಿ ಆಯ್ಕೆ ಮಾಡಿಕೊಂಡು ಸ್ನಾತಕೋತ್ತರ ಪದವಿ ಪಡೆದರು.

ಹೊನ್ನಾವರದಲ್ಲಿ ಪ್ರಾರಂಭವಾದ (1937) ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯಾಗಾರದಲ್ಲಿ ಹಗ್ಗ ಹೊಸೆಯುವುದು, ಅಂಗಿಗುಂಡಿ (ಬಟನ್) ತಯಾರಿಸುವ ತರಬೇತಿ ಪಡೆದುಕೊಂಡರು. ಮುಂಬಯಿ ರಾಜ್ಯದಲ್ಲಿ ಬಿ.ಜಿ. ಖೇರ ಮಂತ್ರಿಮಂಡಲ ಆರಂಭಿಸಿದ ಸಮಿತಿಯ ಧಾರವಾಡ ಕಚೇರಿಯ ಕಾರ್ಯದರ್ಶಿಯಾಗಿ ನೇಮಕಗೊಂಡರು. ಅದರ ಪ್ರಾದೇಶಿಕ ಸಂಘಟಕರಾಗಿ ದುಡಿದರು. ಈ ಸಂಸ್ಥೆ ಬೆಳೆದು ಮುಂಬಯಿ ಖಾದಿ ಗ್ರಾಮೋದ್ಯೋಗ ಮಂಡಳಿ ಎಂಬ ಅಭಿದಾನ ಪಡೆಯಿತು. ಈ ಮಧ್ಯೆ ಧಾರವಾಡದಲ್ಲಿ ಕೆಲಕಾಲ ಶಿಕ್ಷಕರಾಗಿಯೂ ಕೆಲಸಮಾಡಿ ಕೆಲಸಕ್ಕೆ ರಾಜಿನಾಮೆ ನೀಡಿ (1956) ಒಂದು ಮುದ್ರಣಾಲಯದ ಪಾಲುದಾರರಾದರು. ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಕಮಿಷನ್ ಸ್ಥಾಪನೆಯಾದಾಗ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡು ಮುಂಬಯಿಗೆ ಹೋದರು. ಅಲ್ಲಿ ನಾರಿನ ಕೈಗಾರಿಕಾ ನಿರ್ದೇಶಕರಾಗಿ, ಕಾಗದ ತಯಾರಿಕೆ, ಬಡಿಗತನ, ಕಮ್ಮಾರಿಕೆಗಳ ಮೇಲ್ವಿಚಾರಕರಾಗಿ, ಭಾರತದಾದ್ಯಂತ ಸಂಚರಿಸಿ ಗ್ರಾಮೋದ್ಯೋಗಗಳ ಪ್ರಸಾರ ಸಂಘಟನೆಯಲ್ಲಿ ದುಡಿದರು. ಈ ಹುದ್ದೆಯಿಂದ 1981 ಡಿಸೆಂಬರ್‌ನಲ್ಲಿ ನಿವೃತ್ತರಾದರು.

ಮೊದಲಿನಿಂದಲೂ ಕಾವ್ಯಾಸಕ್ತಿಯನ್ನು ಬೆಳೆಸಿಕೊಂಡ ಭಟ್ಟರು 1914 ರಿಂದಲೂ ಬರೆಯಲಾರಂಭಿಸಿದರು. ಆ ಕಾಲದಲ್ಲಿ ಪಲಾಯನ, ರಕ್ತಾಂಜಲಿ ಎಂಬ ಕವನ ಸಂಕಲನಗಳು ಹೊನ್ನಾವರದಲ್ಲಿ ಮುದ್ರಣಗೊಂಡು ಪ್ರಕಟವಾದುವು. ಸು.ರಂ.ಎಕ್ಕುಂಡಿ ಮತ್ತು ಎನ್.ಡಿ. ಕುಲಕರ್ಣಿ ಯವರೊಂದಿಗೆ ಪರ್ಣಕುಟಿ ಗ್ರಂಥಮಾಲೆ ಆರಂಭಿಸಿ ಹೊನ್ನಾವರ-ಧಾರವಾಡಗಳಿಂದ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ಬಸವನಾಳರೊಂದಿಗೆ ಜಯಕರ್ನಾಟಕ ಪತ್ರಿಕೆಯಲ್ಲಿ ಸಹಾಯಕ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದರು. ಉತ್ತರಕನ್ನಡ ಜಿಲ್ಲೆಯ ನಾಗರಿಕ ಪತ್ರಿಕೆಯಲ್ಲಿ 'ವೆಂಕಬಾವನ ಪದಗಳು' ಬರೆದರು. ಮುಂಬಯಿಯಲ್ಲಿ ನೆಲೆಸಿದ ಬಳಿಕ 1976ರವರೆಗೆ ಬರೆಯು ತ್ತಿದ್ದ ಭಟ್ಟರು 1983 ವರೆಗೆ ಬರೆಯುವುದನ್ನು ನಿಲ್ಲಿಸಿದರು. ಈ ಕಾಲದಲ್ಲಿ ಆಚಾರ್ಯ ರಜನೀಶರ ಸಾಹಿತ್ಯ ಓದಿದರು. ಮುಂದಿನ ಕೃತಿಗಳಲ್ಲಿ ಆಧ್ಯಾತ್ಮಿಕ ದೃಷ್ಟಿಕೋನ ಹೊಸ ತಿರುವು ಪಡೆದು ಮಾತಿನ ಮೊನಚು ಕಡಿಮೆಯಾಗಿ ಕಾವ್ಯ ಹೊಸಗರಿ ಬಿಚ್ಚಿತು.



ಇವರು ಸವಿನೆನವು (1943), ಪಲಾಯನ (1946), ರಕ್ತಾಂಜಲಿ (1947), ಚುಟುಕ (ಮಕ್ಕಳಪದ್ಯಗಳು, 1948), ತುಂಟನ ಪದಗಳು (1951), ಕಾವ್ಯವೇದನೆ (1951), ಅರಣ್ಯರೋದನ (1957), ಕಿಷ್ಕಿಂದೆ (1958), ಜಡಿಮಳೆ (ಮಕ್ಕಳ ಪದ್ಯಗಳು, 1958), ಮೂರ್ತಿ (1964), ಆತ್ಮಗೀತೆ (1970), ಉತ್ತರಕಾಂಡ ಮತ್ತು ಇತರ ಕವನಗಳು (1984), ಧ್ಯಾನಪೀಠ (1985), ಬಿಂದು ಬಿಂದು ಸಾರ (1985), ಮರಳಿಬಂದ ಕವಿತೆ (1985), ಸ್ವಾಗತಂ (1985), ಕತ್ತೆಯಕನಸು (1986), ರಚನೆಯಿಂದ ವಿಸರ್ಜನೆಗೆ (1986), ಅರಿಯುತ್ತೇನೆ ನಡೆ (1988), ಉತ್ಥಾನ (1992), ಪ್ರಾರ್ಥನೆ (1992) ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಹ್ಯಾದ್ರಿ (1947), ಬುರುಕಿ (1947), ಉತ್ತರ ಕನ್ನಡದ ಜೀವನ ಚಿತ್ರಗಳು (1948), ಪೆದ್ದಂಕಥೆಗಳು (1952), ದ್ರುವನ ದೋಸ್ತ- ಇವು ಇವರು ರಚಿಸಿದ ಜೀವನ ಚಿತ್ರ ಹಾಗೂ ಕಿರುಕಥೆಗಳು. ಖಾದಿ ಗ್ರಾಮೋದ್ಯೋಗ (1971) ಎಂಬುದು ಅನುವಾದ ಕೃತಿ.

ಸುಮಾರು ಐವತ್ತು ವರ್ಷ ಸಾಹಿತ್ಯ ಕೃಷಿ ಮಾಡಿದ ಭಟ್ಟರು ನವ್ಯಕಾವ್ಯ ರಚನೆಯಲ್ಲಿ ತಮ್ಮ ವಿಶಿಷ್ಟ ವಿಡಂಬನ ಪ್ರತಿಭೆಯನ್ನು ಮೆರೆದರು. ವ್ಯಂಗ್ಯ ವಿಡಂಬನೆಯ ಮೂಲಕ ಬದುಕಿನ ವಾಸ್ತವತೆಯನ್ನು ಗುರುತಿಸಿದರು. ಇವರು 1991 ಏಪ್ರಿಲ್ 6ರಂದು ನಿಧನರಾದರು. (ಎಸ್.ಎಂ.ಕೆ.)

**ಭಟ್ಟ, ಪ.ಸು.:** 1931-81. ಸಾಹಿತಿ, ಪತ್ರಿಕೋದ್ಯಮಿ ಪೂರ್ಣ ಹೆಸರು ಪರಮೇಶ್ವರ ಸುಬ್ರಾಯಭಟ್ಟ. ಉತ್ತರ ಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನ ಹೊಲನಗದ್ದೆ ಗ್ರಾಮದಲ್ಲಿ 1931 ಜೂನ್ 3ರಂದು ಜನನ. ತಂದೆ ಸುಬ್ರಾಯ ಭಟ್ಟ, ತಾಯಿ ಸರಸ್ವತಿ. ತಾಯಿ ಹೇಳುತ್ತಿದ್ದ ಗೋವಿನ ಹಾಡು ಕಥೆ ಮತ್ತು ಯಕ್ಷಗಾನ ಪ್ರಸಂಗಗಳು ಚಿಕ್ಕಂದಿನಲ್ಲಿ ಭಟ್ಟರ ಮೇಲೆ ಪ್ರಭಾವ ಬೀರಿದುವು.

ಶಿರಸಿಯಲ್ಲಿ ಪ್ರೌಢಶಾಲೆ ಮತ್ತು ಶಿವಮೊಗ್ಗೆಯಲ್ಲಿ ಕಾಲೇಜು ವ್ಯಾಸಂಗ ನಡೆಸಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಎಂ.ಎ. ಪದವಿಗಳಿಸಿದರು. ಸಾಹಿತ್ಯದಲ್ಲಿ ಆಸಕ್ತರಾದ ಭಟ್ಟರಿಗೆ ಮೈಸೂರಿನಲ್ಲಿ ಇಂಟರ್ ಮೀಡಿಯೆಟ್ ಓದುವಾಗ ಹಾ.ಮಾ. ನಾಯಕ, ಯು.ಆರ್.ಅನಂತಮೂರ್ತಿ ಯವರ ಸಾಹಚರ್ಯ ಮತ್ತು ಎಸ್.ವಿ. ಪರಮೇಶ್ವರಭಟ್ಟರ ಮಾರ್ಗದರ್ಶನ, ಧಾರವಾಡದಲ್ಲಿ ವಿ.ಕೃ.ಗೋಕಾಕ ಹಾಗೂ ಸ.ಸ.ಮಾಳವಾಡರ ಪ್ರೋತ್ಸಾಹ ದೊರಕಿದುವು.

ಭಟ್ಟರು ಹದಿನೇಳನೆಯ ವಯಸ್ಸಿನಲ್ಲಿ (1948) ಉತ್ತರ ಕನ್ನಡ ಜಿಲ್ಲೆಯ ಜನಜೀವನಕ್ಕೆ ಸಂಬಂಧಪಟ್ಟ ಕತೆಗಳನ್ನೊಳಗೊಂಡ ಪಡುವಣ ಎಂಬ ಕಥಾಸಂಕಲನ ಹೊರತಂದರು. ಈ ಸಾಹಿತ್ಯ ಕೃಷಿ ಅವರ ಬದುಕಿನುದ್ದಕ್ಕೂ ಮುಂದುವರಿಯಿತು. ಹಕ್ಕಿನ ಹೋರಾಟ ಇವರ ಎರಡನೆಯ ಕಥಾಸಂಕಲನ, 1948ರಿಂದ 1969ರ ತನಕ ಬರೆದ ಕಥೆಗಳ ಸಂಕಲನ ಅಂಗೇಲಾ. ಇವರ ಮೊದಲ ಕಾದಂಬರಿ ಜಾರುಬಂಡೆ ವೇಶ್ಯಾಜೀವನದ ಸಮಸ್ಯೆಗಳನ್ನೊಳಗೊಂಡ ಕಾದಂಬರಿ. ಸಂಕ್ರಮಣ ಪ್ರಕಟವಾದದ್ದು 1970ರಲ್ಲಿ. ಆತ್ಮಾರ್ಪಣೆ ಎಂಬ ಕಾದಂಬರಿಗೆ (1966) ಭಗತ್‌ಸಿಂಗ್‌ರ ಆತ್ಮಾರ್ಪಣೆಯೆ ಮೂಲ. 'ಕಪ್ಪುಚಿರತೆ' ಇವರ ಮರಣದ ಅನಂತರ ಪ್ರಕಟಗೊಂಡ ಕಾದಂಬರಿ. ಕಿಷನ್‌ಚಂದರ್ ಅವರ ಏಕ್ ಔರತ್ ಔರ್ ಹಜಾರ್ ದಿವಾನೆ ಎಂಬ ಕಾದಂಬರಿಯನ್ನು ಸಾವಿರ ಪ್ರಣಯಿಗಳು ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿದ್ದಾರೆ. ಗಾಂಧೀಜಿಯವರನ್ನು ಕುರಿತು ಕನ್ನಡ ಕವಿಗಳು ಬರೆದ ಕವಿತೆಗಳು ಸಂಗ್ರಹವಾದ ಅಮರನಾದೈತಂದೆ ಮತ್ತು ಸೌಭಾಗ್ಯ ಇವರಿಂದ ಸಂಪಾದನೆಗೊಂಡ ಕೃತಿಗಳು. ಜಾನ್ ಕೆನಡಿ (ಜೀವನ ಚರಿತ್ರೆ), ವೀಣೆ ನುಡಿಯಿತು (ನೀಳ್ಗತೆ), ಮಾತನಾಡಿದ ಗಿಣಿ (ಮಕ್ಕಳ ಕತೆ), ಸಹಕಾರ ಚಳವಳಿ ಮತ್ತು ಸಹಕಾರೀ ಗೃಹನಿರ್ಮಾಣ ಸಂಘಗಳು (ಪ್ರಬಂಧ) ಇವುಗಳಲ್ಲದೆ ಕನ್ನಡನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಸುಮಾರು 500ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದ ಭಟ್ಟರಿಗೆ ಪತ್ರಿಕೋದ್ಯಮ ವಿಶೇಷ ಆಸಕ್ತಿಯ ಕ್ಷೇತ್ರವಾಗಿತ್ತು. ಇವರು ಜ್ಞಾನ ಗಂಗೋತ್ರಿಯ (ಕಿರಿಯರ ವಿಶ್ವಕೋಶ) ಏಳು ಸಂಪುಟಗಳ ವ್ಯವಸ್ಥಾಪಕ ಸಂಪಾದಕರಾಗಿದ್ದರು. ಶಿರಸಿ ಸಮಾಚಾರ ವಾರಪತ್ರಿಕೆಯ ಸಂಸ್ಥಾಪಕರಲ್ಲೊಬ್ಬರು. ಸಮನ್ವಯ ಸಾಪ್ತಾಹಿಕವನ್ನೂ ಸೌರಭ ಮಾಸಪತ್ರಿಕೆಯನ್ನೂ ಸ್ವಂತವಾಗಿ ಪ್ರಕಟಿಸಿದರು. ಕಸ್ತೂರಿ, ಸಂಯುಕ್ತ ಕರ್ನಾಟಕ ಮತ್ತು ಪ್ರಜಾಪ್ರಭುತ್ವ ಪತ್ರಿಕೆಗಳ ಸಂಪಾದಕರಾಗಿದ್ದರು. ರಾಜ್ಯ ಪಿ.ಯು.ಸಿ. ಮಂಡಳಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ಕರ್ನಾಟಕದ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಉಪಾಧ್ಯಾಯರಾಗಿ ಶಿಕ್ಷಣಕ್ಷೇತ್ರದಲ್ಲಿಯೂ ಕೆಲವು ಬ್ಯಾಂಕುಗಳ ನಿರ್ದೇಶಕರಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲಿಯೂ ವಿವಿಧ ಸಹಕಾರಿ ಸಂಘಸಂಸ್ಥೆಗಳಲ್ಲಿ ಕಾರ್ಯದರ್ಶಿ, ಅಧ್ಯಕ್ಷ ಮುಂತಾದ ಮಟ್ಟದಲ್ಲಿ ಸೇವೆಸಲ್ಲಿಸಿದರು. ಇವರು 1981 ಜೂನ್ 24ರಂದು ಚಿತ್ರದುರ್ಗದ ಬಳಿ ಬಸ್ ಅಪಘಾತದಲ್ಲಿ ನಿಧನರಾದರು. *

**ಭಟ್ಟ, ಪಿ. ಗುರುರಾಜ:** 1924–78 ಇತಿಹಾಸ ಹಾಗೂ ಪುರಾತತ್ತ್ವ ಸಂಶೋಧಕರು ಮತ್ತು ಸಾಹಿತಿ. ಉಡುಪಿ ತಾಲ್ಲೂಕಿನ ಪಾದೂರಿನಲ್ಲಿ 1924 ಜೂನ್ 15 ರಂದು ಜನಿಸಿದರು. ಕಾರ್ಕಳದ ಅತ್ತೂರು ಪ್ರಾಥಮಿಕ ಶಾಲೆ ಮತ್ತು ಮೂಡಬಿದರೆಯ ಜೈನ ಪ್ರೌಢಶಾಲೆಯಲ್ಲಿ ಅಧ್ಯಾಪಕ ವೃತ್ತಿ ಆರಂಭಿಸಿದ ಇವರು ವಿದ್ಯಾಭ್ಯಾಸದ ಹಂತಗಳನ್ನೆಲ್ಲ ದಾಟಿದ್ದು ವೃತ್ತಿಯ ಜೊತೆಯಲ್ಲಿಯೇ. 1952ರಲ್ಲಿ ಮದರಾಸು ವಿಶ್ವವಿದ್ಯಾಲಯದ ಬಿ.ಎ. ಪದವಿ ಹಾಗೂ 1953ರಲ್ಲಿ ಶೈಕ್ಷಣಿಕ ತರಬೇತಿ ಪದವಿ, 1956 ರಲ್ಲಿ ಬನಾರಸ್ ಹಿಂದು ವಿಶ್ವವಿದ್ಯಾಲಯದ ಎಂ.ಎ. (ಇತಿಹಾಸ) ಪದವಿ ಗಳಿಸಿ ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ನೇಮಕಗೊಂಡು ಅಲ್ಲಿ 11 ವರ್ಷಗಳ ಕಾಲ ಸೇವೆಸಲ್ಲಿಸಿದರು. ಕಲ್ಯಾಣಪುರದಲ್ಲಿ ಮಿಲಾಗ್ರೆಸ್ ಕಾಲೇಜು ಆರಂಭವಾದಾಗ (1967) ಆಹ್ವಾನದ ಮೇರೆಗೆ ಆ ಕಾಲೇಜಿನ ಪ್ರಥಮ ಪ್ರಾಂಶುಪಾಲರಾಗಿ ಹುದ್ದೆ ವಹಿಸಿಕೊಂಡರು. 1976ರಲ್ಲಿ ಹುದ್ದೆಯಿಂದ ಸ್ವಇಚ್ಛೆಯಿಂದ ನಿವೃತ್ತಿ ಹೊಂದಿದರು.

ಇವರು ಇತಿಹಾಸ–ಸಂಸ್ಕೃತಿಗಳ ಸಂಶೋಧನೆಗಳ ಕಡೆಗೆ 1960 ರಿಂದಲೇ ಆಸಕ್ತಿ ತೋರಿದ್ದರು. ತುಳುನಾಡಿನ ರಾಜಕೀಯ ಮತ್ತು ಸಂಸ್ಕೃತಿ ಚರಿತ್ರೆ: ಆದಿಕಾಲದಿಂದ 600ರ ತನಕ (1968) ಎಂಬ ಕೃತಿಗೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿದೆ. ಶಿಲ್ಪಗಳ ಶೈಲಿ, ಕಾಲಮಾನಗಳನ್ನು ಗುರುತಿಸುವಲ್ಲಿ ಇವರದು ವಿಶೇಷ ಪ್ರೌಢಿಮೆ. ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 2000ಕ್ಕೂ ಮಿಕ್ಕಿ ದೇಗುಲಗಳನ್ನು ಸಂಶೋಧಿಸಿದ್ದಾರೆ. ಜಿಲ್ಲೆಯಲ್ಲಿ ಪ್ರಥಮವಾಗಿ ಬೃಹತ್ ಶಿಲಾಗೋರಿಗಳ ಅನ್ವೇಷಣೆ, ಕನ್ನಡದ ಪ್ರಾಚೀನತಮ ಬೆಳ್ಮಣ್ಣು ತಾಮ್ರ ಶಾಸನದ ಸಂಶೋಧನೆ ಹಾಗೂ 25ಕ್ಕೂ ಮಿಕ್ಕಿ ಅಪೂರ್ವ ಶಾಸನಗಳ ಸಂಶೋಧನೆ ನಡೆಸಿದ್ದಾರೆ. ನಾಡಿನ ಪತ್ರಿಕೆಗಳಲ್ಲಿ ಹಾಗೂ ನಿಯತಕಾಲಿಕೆಗಳಲ್ಲಿ 700ಕ್ಕೂ ಮಿಕ್ಕಿ ಇವರ ಲೇಖನಗಳು ಪ್ರಕಟಗೊಂಡಿವೆ. ತುಳುನಾಡು ಎಂಬ ಇವರ ಪ್ರಥಮ ಗ್ರಂಥಕ್ಕೆ ದೇವರಾಜ ಬಹದ್ದೂರ್ ದತ್ತಿ ಬಹುಮಾನ ನೀಡಲಾಗಿದೆ. 'ತುಳುನಾಡಿನ ಸಂಸ್ಥಾನಿಕರು' ಉತ್ತಮ ಸಂಶೋಧನ ಕೃತಿ ಎಂಬ ಪ್ರಶಂಸೆಗೆ ಪಾತ್ರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಅವಶೇಷಗಳ ಕ್ರಮಬದ್ಧ ವಿಂಗಡನೆ ಹಾಗೂ ಅವುಗಳ ಕುರಿತ ಆ್ಯಂಟಿಕ್ವಿಟೀಸ್ ಆಫ್ ಸೌತ್ ಕೆನರ (ದಕ್ಷಿಣಕನ್ನಡ ಪುರಾತತ್ತ್ವ) ಕೃತಿಯನ್ನೂ ಇವರು ಪ್ರಕಟಿಸಿದ್ದಾರೆ (1968–69). ಇವರ ಅವಿರತ ಸಂಶೋಧನೆಯ ಮೇರುಕೃತಿ ತುಳುವ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನ (1975). ಇದು ಪ್ರಾದೇಶಿಕ ಇತಿಹಾಸಕ್ಕೊಂದು ಅಪೂರ್ವ ಕೊಡುಗೆ. ಈ ಗ್ರಂಥದಲ್ಲಿ 1000ಕ್ಕೂ ಮಿಕ್ಕಿ ಅಪೂರ್ವ ಛಾಯಾಚಿತ್ರಗಳಿವೆ.

ಇವರು ಕರ್ನಾಟಕ ಸರಕಾರದ ಪುರಾತತ್ತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆಯ ಸಲಹಾ ಸಮಿತಿಯ ಸದಸ್ಯರೂ ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರದ ಅಭಿವೃದ್ಧಿ ಮಂಡಲಿಯ ಸದಸ್ಯರೂ ಆಗಿ ಸೇವೆ ಸಲ್ಲಿಸಿದ್ದರು. ಭಾರತೀಯ ಜ್ಞಾನಪೀಠ ನಿಯೋಜಿತ ಸಂಶೋಧಕರಾಗಿ ದಕ್ಷಿಣ ಭಾರತದ ಜೈನ ಸ್ಮಾರಕಗಳ ಅನ್ವೇಷಣೆ ಮತ್ತು ಸಂಶೋಧನೆಗಳಲ್ಲಿ ತೊಡಗಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಸುವರ್ಣಮಹೋತ್ಸವ ಪ್ರಶಸ್ತಿ ನೀಡಿದೆ. ಇವರು 1978 ಆಗಸ್ಟ್ 17ರಂದು ಆಕಸ್ಮಿಕವಾಗಿ ನಿಧನರಾದರು.

*

**ಭಟ್ಟಾಕಳಂಕ:** 1604. ಪ್ರಸಿದ್ಧ ವ್ಯಾಕರಣಶಾಸ್ತ್ರಕಾರ. ಕರ್ಣಾಟಕ ಶಬ್ದಾನುಶಾಸನ ಎಂಬ ಗ್ರಂಥದ ಕರ್ತೃ. ಬಿಳಿಗಿಯ ಅರಸರಾದ ಶ್ರೀರಂಗರಾಜ ಮತ್ತು ಅವನ ಮಗ ಘಂಟೇಂದ್ರ ಈತನ ಶಿಷ್ಯರೂ ಆಗಿದ್ದರು. ಎರಡನೆಯ ಘಂಟೇಂದ್ರನ ಮಾವ ಸೋಂದದ (ಸ್ವಾದಿಯ) ಎರಡನೆಯ ಅರಸಪ್ಪನಾಯಕನು ಭಟ್ಟಾಕಳಂಕ ಹಾಗೂ ಆತನ ಗುರು ಎರಡನೆಯ ಅಕಳಂಕ ಇವರ ಶಿಷ್ಯನಾಗಿದ್ದು ಇವರಿಗೆ ಸೋಂದದಲ್ಲಿ ಒಂದು ಜೈನ ಬಸದಿಯನ್ನೂ ಮಠವನ್ನೂ ಕಟ್ಟಿಸಿಕೊಟ್ಟ. ಗುರು ಅಕಳಂಕ ಮರಣ ಹೊಂದಿದ ಮೇಲೆ ಭಟ್ಟಾಕಳಂಕ ಮಠದ ಅಧಿಪತಿಯಾದ (1607). ಅನಂತರ ಇಲ್ಲಿ ಸು. 48 ವರ್ಷಗಳ ಕಾಲ ಬಾಳಿ 1655ರಲ್ಲಿ ನಿಧನ ಹೊಂದಿದ. ಸೋಂದದಲ್ಲಿರುವ ಎರಡು ನಿಷಧಿ ಶಾಸನಗಳು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತವೆ. ಬಿಳಿಗಿಯ ಶಾಸನಗಳು (1581, 1593) ಇವನ ಜೀವನದ ಪೂರ್ವಭಾಗದ ಮೇಲೆ ಬೆಳಕು ಬೀರುತ್ತವೆ. ಈತ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಪ್ರವೀಣನಾಗಿದ್ದನೆಂದೂ ಶಬ್ದಾಗಮ ತರ್ಕ ನಾಟಕ ಅಲಂಕಾರ ಭರತ ಜ್ಯೋತಿಷ ಮಂತ್ರ ತಂತ್ರ ವಿಧಿ ಶಿಲ್ಪ ನ್ಯಾಯ ವೇದ ಸ್ಮೃತಿ ಅಧ್ಯಾತ್ಮ ಪುರಾಣ ವೈದ್ಯ ಗಣಿತ ಮೊದಲಾದ ಶಾಸ್ತ್ರಗಳಲ್ಲಿ ಪಂಡಿತನಾಗಿದ್ದನೆಂದೂ ಈ ಶಾಸನಗಳಲ್ಲಿ ವರ್ಣಿಸಿದೆ. ಈತನಿಗೆ ಆರು ಭಾಷೆಗಳಲ್ಲಿ ಪಾಂಡಿತ್ಯವಿತ್ತೆಂದೂ ವ್ಯಾಕರಣ ರಚನೆಯಿಂದ ಜಗತ್ಪ್ರಸಿದ್ಧನಾಗಿದ್ದನೆಂದೂ ದೇವಚಂದ್ರ ತನ್ನ ರಾಜಾವಳೀ ಕಥೆಯಲ್ಲಿ ಹೇಳಿದ್ದಾನೆ. ಸ್ವತಃ ಶಾಸ್ತ್ರಕಾರನಾದ ಭಟ್ಟಾಕಳಂಕ ತಾನು ನಾನಾ ಬಗೆಯ ತರ್ಕಗಳಲ್ಲಿ ನಿಷ್ಣಾತನೆಂದೂ ಮಹಾ ವ್ಯಾಖ್ಯಾನಪಟುವೆಂದೂ ಹಲವು ರಾಜರ ಅಸ್ಥಾನಗಳಲ್ಲಿ ಜೈನಧರ್ಮದ ಮಹತ್ತ್ವವನ್ನು ಎತ್ತಿ ಹಿಡಿದವನೆಂದೂ ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲಿಯೂ ದಿಗ್ದಂತಿಯೆಂದೂ ಸಾಧುಜನಪ್ರಿಯನೆಂದೂ ಹೇಳಿಕೊಂಡಿದ್ದಾನೆ.

ಕರ್ಣಾಟಕ ಶಬ್ದಾನುಶಾಸನ ಸಂಸ್ಕೃತದಲ್ಲಿ ರಚಿತವಾದ ಕನ್ನಡ ವ್ಯಾಕರಣ ಗ್ರಂಥ. ರಚನೆಯ ಕಾಲ 1604. ಇದರಲ್ಲಿ ನಾಲ್ಕು ಪಾದಗಳೂ 592 ಸೂತ್ರಗಳೂ ಇವೆ. ಮೊದಲನೆಯ ಪಾದದಲ್ಲಿ ವರ್ಣಮಾಲೆ, ಪಾರಿಭಾಷಿಕ ಸಂಜ್ಞೆಗಳು, ಅವ್ಯಯಗಳು, ಸಂಧಿ ನಿಪಾತಗಳೂ ಎರಡನೆಯದರಲ್ಲಿ ಲಿಂಗ, ತದ್ಭವ ಶಬ್ದಗಳು, ವಿಭಕ್ತಿ ಪ್ರತ್ಯಯಗಳೂ ಮೂರನೆಯದರಲ್ಲಿ ಸಮಾಸ, ಸರ್ವನಾಮವಚನಗಳು, ಸಂಖ್ಯಾವಾಚಕ, ತದ್ಧಿತಗಳೂ ನಾಲ್ಕನೆಯದರಲ್ಲಿ ಕ್ರಿಯಾರೂಪ ಹಾಗೂ ಆಖ್ಯಾತ ಪ್ರತ್ಯಯಗಳೂ ಕೂಲಂಕಷವಾಗಿ ವಿವೇಚಿತವಾಗಿವೆ.

ಶಬ್ದಾನುಶಾಸನದ ವ್ಯಾಖ್ಯಾನದ ಪ್ರಸ್ತಾವನಾ ಭಾಗದಲ್ಲಿ ಶಬ್ದಾನುಶಾಸನದ ರಚನೆಯ ಉದ್ದೇಶ ಮತ್ತು ಹೆಗ್ಗುರಿಗಳೇನೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ಕನ್ನಡವನ್ನು ಕೀಳುಗಾಣುವ ಟೀಕಾಕಾರನೊಬ್ಬನನ್ನು ಸೃಷ್ಟಿಸಿಕೊಂಡು ಆತ ಕನ್ನಡವನ್ನೂ ತೆಗಳಿದಂತೆ ವರ್ಣಿಸಿದ್ದಾನೆ. ಕನ್ನಡ ಭಾಷೆ ಸಂಸ್ಕೃತದಂತೆ ಎಲ್ಲ ದೇಶಗಳಲ್ಲಿಯೂ ಗೌರವಿಸಲ್ಪಡುತ್ತಿಲ್ಲ. ಎಲ್ಲ ಶಾಸ್ತ್ರಗಳೂ ಅದರಲ್ಲಿ ಇಲ್ಲ. ಅದು ಪಂಡಿತರಿಂದ ಮಾನ್ಯವಾಗಿಲ್ಲ. ಅದೊಂದು ಆಡುಭಾಷೆ ಮಾತ್ರ. ಇಂಥ ಭಾಷೆಗೆ ಯಾವುದೇ ವ್ಯಾಕರಣ ನಿಯಮದ ಅಗತ್ಯವಿಲ್ಲ. ಪಂಡಿತರಿಗೆ ಅಗತ್ಯವಲ್ಲದ, ಮನಸ್ಸಿಗೆ ಸಂಸ್ಕಾರ ನೀಡದ, ಮಹತ್ತಾದ ಕೀರ್ತಿಗೆ ಪಾತ್ರವಾಗದ ಕ್ಷುದ್ರವಾದ ಈ ಕನ್ನಡ

ಭಾಷೆಗೆ ವ್ಯಾಕರಣವೇಕೆ? ಎಂದು ಅವನಿಂದ ಹೇಳಿಸಿ, ಅದಕ್ಕೆ ಉತ್ತರವಾಗಿ, ಯಾವ ಕಾರಣಕ್ಕಾಗಿ ಸಂಸ್ಕೃತ ಭಾಷೆಯನ್ನು ಆಳವಾಗಿ ಅಭ್ಯಾಸ ಮಾಡಬೇಕೋ ಅದೇ ಕಾರಣಕ್ಕಾಗಿ ಕನ್ನಡವನ್ನೂ ಆಳವಾಗಿ ಅಭ್ಯಾಸ ಮಾಡಬೇಕು. ಇತರ ಭಾಷೆಗಳಂತೆಯೇ ಕನ್ನಡವೂ ದೇವವಾಣಿಯೇ; ಅಷ್ಟೇ ಅಲ್ಲ, ಮಹಾವಿದ್ವಾಂಸರು ಈ ಹಿಂದೆಯೇ ಒಂದಲ್ಲದೆ ಹಲವಾರು ವ್ಯಾಕರಣಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ; ಕನ್ನಡವೇನೂ ಬರಡಾದ ಭಾಷೆಯಲ್ಲ, ಅದಕ್ಕೆ ಶ್ರೀಮಂತವಾದ ಸಾಹಿತ್ಯವಿದೆ; ತತ್ತ್ವಾರ್ಥ ಮಹಾಶಾಸ್ತ್ರದ ಭಾಷ್ಯವಾದ ಚೂಡಾಮಣಿ ಗ್ರಂಥ 96 ಸಾವಿರ ಗ್ರಂಥ ಪರಿಮಿತಿಯನ್ನು ಹೊಂದಿದೆ; ಶಬ್ದಾಗಮ, ಯುಕ್ತ್ಯಾಗಮ, ಪರಮಾಗಮಗಳ ಮೇಲಿನ ಗ್ರಂಥಗಳೂ ಕಾವ್ಯ, ನಾಟಕ, ಅಲಂಕಾರ ಮತ್ತು ವಿವಿಧ ಕಲೆಗಳನ್ನು ಕುರಿತು ಅಸಂಖ್ಯಾತ ಗ್ರಂಥಗಳೂ ಕನ್ನಡದಲ್ಲಿ ರಚನೆಯಾಗಿವೆ; ಪುಸ್ತಕಗಳು ರಚಿತವಾಗಿರುವುದು ಮಾತ್ರವಲ್ಲ, ಯಾವ ಪಂಡಿತರೇ ಆಗಲಿ ಮೆಚ್ಚಿ ತಲೆದೂಗುವಂಥ ಗ್ರಂಥಗಳು ಹುಟ್ಟಿವೆ. ಆದುದರಿಂದ ಸಂಸ್ಕೃತದಂತೆ ಕನ್ನಡಕ್ಕೂ ವ್ಯಾಕರಣ ಅತ್ಯಗತ್ಯ, ಅವಿದ್ಯಾವಂತರಾದ ಅಜ್ಞಾನಿಗಳು ಶುದ್ಧವಾದ ಭಾಷೆಯನ್ನು ಕುಲಗೆಡಿಸಬಹುದು. ಅದನ್ನು ತಪ್ಪಿಸುವುದಕ್ಕಾಗಿಯೂ ಪಂಡಿತರ ಮಾರ್ಗದರ್ಶನಕ್ಕಾಗಿಯೂ ನಿಷ್ಕೃಷ್ಟವಾದ ವ್ಯಾಕರಣ ನಿಯಮಗಳನ್ನು ರಚಿಸುವುದು ಅಗತ್ಯ; ಕನ್ನಡಿಗರು ಸರಸ ಪರಿಷತ್ತುಗಳಲ್ಲಿ ಭಾಗವಹಿಸಬಲ್ಲ ಸರಸ ವಿದ್ವಾಂಸರು, ಪ್ರೌಢರಾದ ವಿದ್ವತ್ಕವಿಗಳ ಕಾವ್ಯಗಳು ಜನರ ಆದರ ಗೌರವಗಳಿಗೆ ಪಾತ್ರವಾದವುಗಳು– ಎಂದು ಹೇಳಿರುವುದನ್ನು ನೋಡಿದರೆ ಈತನಿಗೆ ಕನ್ನಡ ಭಾಷೆ ಸಾಹಿತ್ಯಗಳಲ್ಲಿದ್ದ ವಿಶೇಷ ಒಲವು ವ್ಯಕ್ತವಾಗುತ್ತದೆ.

ಶಬ್ದಾನುಶಾಸನ ತನ್ನ ಹಿಂದಿನ ವ್ಯಾಕರಣಗಳಿಗಿಂತ ವಿವರವಾಗಿದೆ, ವಿಸ್ತೃತವಾಗಿದೆ, ಸಮಗ್ರವೂ ಶಾಸ್ತ್ರೀಯವೂ ಪ್ರೌಢವೂ ಅಧಿಕೃತವೂ ಆಗಿದೆ. ಭಟ್ಟಾಕಳಂಕ ಸಾಮಾನ್ಯವಾಗಿ ತನ್ನ ಹಿಂದಿನ ವ್ಯಾಕರಣಕಾರರ ಮಾರ್ಗವನ್ನನುಸರಿಸಿರುವನಾದರೂ ಅಂಧಾನುಕರಣೆಯನ್ನೇನೂ ಮಾಡಿಲ್ಲ. ವಿಷಯ ಪ್ರತಿಪಾದನೆಯಲ್ಲಿ ಹಿಂದಿನ ವೈಯಾಕರಣವನ್ನು ಅನುಸರಿಸಿದ್ದರೆ ನಿರೂಪಣ ವಿಧಾನದಲ್ಲಿ ಸಂಸ್ಕೃತ ವೈಯಾಕರಣವನ್ನು ಅನುಸರಿಸಿದ್ದಾನೆ. ಜೊತೆಗೆ ಸ್ವತಂತ್ರವಾಗಿ ಆಲೋಚಿಸಿ ಪ್ರತಿಪಾದಿಸಹೊರಟಿದ್ದಾನೆ. ನಾಗವರ್ಮ ಮತ್ತು ಕೇಶಿರಾಜರ ಗ್ರಂಥದಲ್ಲಿನ ಪ್ರಯೋಗಗಳನ್ನು ಅನೇಕ ಕಡೆ ಧಾರಾಳವಾಗಿ ಸ್ವೀಕರಿಸಿದ್ದಾನೆ. ಅಲ್ಲದೆ ಅವರಿಗಿಂತ ಭಿನ್ನವಾದ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾನೆ. ಈತನ ಪ್ರತಿಪಾದನೆ ಹಲವು ಕಡೆಗಳಲ್ಲಿ ಹಿಂದಿನವರೆಲ್ಲರಿಗಿಂತ ಹೆಚ್ಚು ವಿಸ್ತಾರವೂ ವಿವರಪೂರ್ಣವೂ ತರ್ಕಬದ್ಧವೂ ಆಗಿದೆ. ಸಂಸ್ಕೃತ ವ್ಯಾಕರಣಗಳನ್ನು ಅನುಸರಿಸಿ, ನಾಗವರ್ಮ ಮತ್ತು ಕೇಶಿರಾಜರಲ್ಲಿ ಇಲ್ಲದ ಪರಿಭಾಷಾ ಸೂತ್ರಗಳನ್ನು ಮಾಡಿಕೊಂಡಿದ್ದಾನೆ. ಪ್ರಯೋಗ ಪ್ರಾಮಾಣ್ಯದಲ್ಲಿ ಶಬ್ದಮಣಿದರ್ಪಣ ಅದ್ವಿತೀಯವೆನಿಸಿರುವಂತೆ ಶಾಸ್ತ್ರಪ್ರೌಢಿಮೆಯಲ್ಲಿ ಶಬ್ದಾನುಶಾಸನ ಅದ್ವಿತೀಯವೆನಿಸಿದೆ.

ಶಬ್ದಾನುಶಾಸನದಲ್ಲಿ ಉದಾಹರಣೆಗಳನ್ನು ಆದಿಪುರಾಣ, ವಿಕ್ರಮಾರ್ಜುನ ವಿಜಯ, ಜಿನಾಕ್ಷರಮಾಲೆ, ಸಾಹಸಭೀಮವಿಜಯ, ಪಂಚತಂತ್ರ, ರಾಮಚಂದ್ರ ಚರಿತ ಪುರಾಣ, ಧರ್ಮಾಮೃತ, ಜಗನ್ನಾಥವಿಜಯ, ಚಂದ್ರಪ್ರಭ ಪುರಾಣ, ನೇಮಿನಾಥಪುರಾಣ, ಲೀಲಾವತಿ, ಪುಷ್ಪದಂತಪುರಾಣ, ಕಬ್ಬಿಗರಕಾವ, ಧರ್ಮನಾಥಪುರಾಣ, ಗುಮ್ಮಟಸ್ತುತಿ, ಕಾವ್ಯಸಾರ ಮೊದಲಾದ ಕನ್ನಡ ಗ್ರಂಥಗಳಿಂದಲೂ ಅನೇಕ ಸಂಸ್ಕೃತ ಗ್ರಂಥಗಳಿಂದಲೂ ಉಲ್ಲೇಖಿಸಲಾಗಿದೆ. ನಾಗವರ್ಮನ ಭಾಷಾಭೂಷಣಕ್ಕಿಂತ ಐದು ಪಟ್ಟು ವಿಸ್ತಾರವಾಗಿರುವ ಈ ಗ್ರಂಥಕ್ಕೆ ಭಟ್ಟಾಕಳಂಕರಚಿತವೇ ಆದ ಭಾಷಾಮಂಜರೀ ಎಂಬ ವೃತ್ತಿ, ಮಂಜರೀಮಕರಂದ ಎಂಬ ವ್ಯಾಖ್ಯಾನಗ್ರಂಥಗಳು ಸಂಸ್ಕೃತದಲ್ಲಿ ರಚಿತವಾಗಿವೆ. ಇತ್ತೀಚೆಗೆ ಈ ಗ್ರಂಥಕ್ಕೆ ಕುಂಡಲಗಿರಿಯಾಚಾರ್ಯ, ಡಿ.ಪದ್ಮನಾಭಶರ್ಮ ಮುಂತಾದವರ ನೂತನ ವಿವರಣೆಗಳು ರಚಿತವಾಗಿವೆ. ಕನ್ನಡಭಾಷಾಪಂಡಿತರಿಗೆ ಶಬ್ದಮಣಿದರ್ಪಣದ ಅನಂತರ ಶಬ್ದಾನುಶಾಸನ ಮಹತ್ತ್ವದ ಪ್ರಮಾಣಗ್ರಂಥವಾಗಿದೆ.

ವಿದ್ವಾಂಸರಲ್ಲಿ ಶಬ್ದಾನುಶಾಸನದ ಸೂತ್ರಕಾರ, ವೃತ್ತಿಕಾರ ಮತ್ತು ವ್ಯಾಖ್ಯಾನಕಾರರು ಏಕವ್ಯಕ್ತಿ ಎಂಬ ಅಭಿಪ್ರಾಯವಿರುವಂತೆಯೂ ಮೂವರೂ ಭಿನ್ನ ವ್ಯಕ್ತಿಗಳು ಎಂಬ ಅಭಿಪ್ರಾಯವೂ ಇದೆ. (ಕೆ.ಕೆ.;ಎಚ್.ಎಸ್.)

**ಭದ್ರಗಿರಿ ಅಚ್ಯುತದಾಸ**: 1932–. ಹೆಸರಾಂತ ಹರಿಕಥಾ ವಿದ್ವಾಂಸರು. ಇಂದಿನ ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಬೈಕಾಡಿ ನೆರೆಯಲ್ಲಿಯ ಗ್ರಾಮದ ಭದ್ರಗಿರಿಯಲ್ಲಿ 1932 ಫೆಬ್ರವರಿ 23ರಂದು ಜನಿಸಿದರು. ತಂದೆ ಭದ್ರಗಿರಿ ವೆಂಕಟರಮಣ ಪೈ, ತಾಯಿ ರುಕ್ಮಿಣಿ. ಐದು ಗಂಡು

ಮಕ್ಕಳಲ್ಲಿ ಇವರು ಎರಡನೆಯವರು. ಭದ್ರಗಿರಿ ಕೇಶವದಾಸರು ಇವರ ತಮ್ಮ. ಅಂದಿನ ದಿನಗಳಲ್ಲಿ ಊರಿನಲ್ಲಿ ಶಿಕ್ಷಣ ಪಡೆಯುವ ಸೌಲಭ್ಯವಿಲ್ಲದ್ದರಿಂದ ಪ್ರಾಥಮಿಕ ಶಿಕ್ಷಣ ಪಡೆದು ಯಕ್ಷಗಾನ ಬಯಲಾಟದಲ್ಲಿ ಆಸಕ್ತಿ ತೋರಿದರು. ಇವರ ಅಜ್ಜ ಅಣ್ಣಪ್ಪ ನಾಯಕ ಯಕ್ಷಗಾನದಲ್ಲಿ ಮದ್ದಳೆಗಾರರಾಗಿ, ಭಾಗವತರಾಗಿ ಹೆಸರು ಪಡೆದವರು. ತಾಯಿಯಿಂದ ಕೇಳಿದ ಕಥೆಗಳು, ತಂದೆಯ ಆಧ್ಯಾತ್ಮಿಕ ಸಾಧನೆ, ಅಜ್ಜನ ಯಕ್ಷಗಾನದ ಒಲವು ಹಾಗೂ ಅಂದಿನ ಹೆಸರಾಂತ ಯಕ್ಷಗಾನ ಕಲಾವಿದರ ಪ್ರಭಾವ ಇವರನ್ನು ಕೀರ್ತನ ಕ್ಷೇತ್ರಕ್ಕೆ ಬರುವಂತೆ ಮಾಡಿದುವು.

ಭದ್ರಗಿರಿಯ ಕಾಮೇಶ್ವರ ದೇವಾಲಯದಲ್ಲಿ ಇವರ ಪ್ರಥಮ ಹರಿಕಥೆ ಗಿರಿಜಾಕಲ್ಯಾಣ ಜರುಗಿತು (1951). ಅದಕ್ಕೂ ಮುನ್ನ ಇವರು ಯಕ್ಷಗಾನ, ತಾಳಮದ್ದಳೆ, ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. 1956ರಲ್ಲಿ ಉಡುಪಿಯಲ್ಲಿ ಕಾಶಿ ಮಠಾಧೀಶರಾದ ಸುಧೀಂದ್ರತೀರ್ಥರು ಇವರಿಗೆ ಮೂಲನಾರಾಯಣ ಎಂಬ ಅಂಕಿತ ನೀಡಿ ಅನುಗ್ರಹಿಸಿ ಕೀರ್ತನಾಗ್ರೇಸರ ಎಂಬ ಬಿರುದು ಹಾಗೂ ಸ್ವರ್ಣಪದಕ ನೀಡಿದರು. ಗೋಕರ್ಣ ಪರ್ತಗಾಳಿ ಮಠದ ದ್ವಾರಕಾನಾಥ ತೀರ್ಥರು ಇವರಿಗೆ ವೇದಾಂತ ವಿಚಾರದ ಬೋಧನೆ ಮಾಡಿದರು.

ಕನ್ನಡ, ಮರಾಠಿ, ಹಿಂದಿ, ಸಂಸ್ಕೃತ ಸಾಹಿತ್ಯದ ಅಧ್ಯಯನವನ್ನೂ ದಾಸರು. ಸಂತರು, ಶಿವಶರಣರು, ಕವಿಗಳು, ಆಳ್ವಾರರುಗಳ ಸಾಹಿತ್ಯವನ್ನೂ ರಾಮಾಯಣ, ಮಹಾಭಾರತ, ಭಾಗವತ, ಉಪನಿಷತ್ತು, ಪುರಾಣಗಳ ಆಳ ಅಭ್ಯಾಸವನ್ನೂ ಮಾಡಿರುವ ಇವರು ಹರಿಕಥೆಯ ಹದ ಅರಿತುಕೊಂಡವರು. ಕನ್ನಡ, ಕೊಂಕಣಿ, ಹಿಂದಿ, ತುಳು, ಮರಾಠಿಗಳಲ್ಲಿ ಲೀಲಾಜಾಲವಾಗಿ ಹರಿಕಥೆ ನಡೆಸಿಕೊಟ್ಟು ಜನಪ್ರಿಯರಾಗಿದ್ದಾರೆ. ಆಧ್ಯಾತ್ಮಿಕ ವಿಚಾರಗಳ ಪ್ರಚಾರಕ್ಕಾಗಿ ಇವರು ದಾಸಬಂಧು ಎಂಬ ಮಾಸಪತ್ರಿಕೆ ಆರಂಭಿಸಿ (1960) ಮೂರು ವರ್ಷ ನಡೆಸಿದರು. ದಾಸವಾಣಿ ದಿನಪತ್ರಿಕೆಯಲ್ಲಿ ಅಂಕಣಕಾರರಾಗಿದ್ದರು.

ಬೆಂಗಳೂರಿನ ರಾಜಾಜಿನಗರದಲ್ಲಿ ದಾಸಾಶ್ರಮ ಕಟ್ಟಿದರು. ಇದರ ಮೂಲಕ ಕೀರ್ತನ ಕಲೆಗೆ ಮೀಸಲಾದ ಕಾಲೇಜು ಪ್ರಾರಂಭಿಸಿದರು. ಅನಂತರ ಕೀರ್ತನ ಪರಿಷತ್ತು ಸ್ಥಾಪಿಸಿ ನೂರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ದಾಸವಾಙ್ಮಯ ಪ್ರಚಾರ ಕೈಗೊಂಡರು.

ಕರ್ನಾಟಕದ ಹರಿಕಥಾದಾಸರನ್ನು ಸೇರಿಸಿ ಕರ್ನಾಟಕ ಕೀರ್ತನ ಸಮ್ಮೇಳನವನ್ನೂ (1964) ಭಾರತದ ಕೀರ್ತನ ಕಲಾವಿದರನ್ನು ಸೇರಿಸಿ ಅಖಿಲ ಭಾರತ ಹರಿಕಥಾ ಸಮ್ಮೇಳನವನ್ನೂ ಮಾಡಿದರು (1965).

ಇವರು ಬರೆದ ಮೊದಲ ನಾಟಕ 'ಪರಿವರ್ತನ' ಇದು ಕೊಂಕಣಿ ಭಾಷೆಯಲ್ಲಿದೆ. ಭಕ್ತಿ ಗೀತಾಂಜಲಿ, ಭಕ್ತಿ ಮಂಜರಿ, ಪುರಂದರದಾಸರ ಒಗಟು, ಪರಾಕು ಹಾಗೂ ಅಕ್ಷಯಾಂಬರದ ಹಾಡುಗಳು, ಶ್ರೀ ಗೋಪಿಕಾ ಗೀತೆ, ಗುರುಭಜನನಾಮೃತ, ಹರಿಕಥೆಗಳು, ನೀತಿಕಥೆಗಳು, ಶ್ರೀವೆಂಕಟೇಶ ಮಹಾತ್ಮ್ಯ (ಅನುವಾದ)- ಇವು ಇವರ ಮುಖ್ಯ ಕೃತಿಗಳು. ಮನಾಚೆ ಶ್ಲೋಕ (ಮರಾಠಿಯಿಂದ ಕನ್ನಡಕ್ಕೆ ಅನುವಾದ) ಕರುಣಾಷ್ಟಕಗಳಲ್ಲಿದೆ. ಹರಿಕಥಾ ಪೂರ್ವರಂಗ, ಹರಿಕಥಾಮೃತ ಸಿಂಧು (ಎರಡು ಭಾಗ) ಇವರ ವಿದ್ವತ್‌ಪೂರ್ಣ ಬೃಹದ್ ಗ್ರಂಥಗಳು. ಗುರುಚರಿತಾಮೃತ (ಓವೀಬದ್ಧ ಅನುವಾದ) ಹರಿಕಥಾ ಪಂಚಕ ಎಂಬ ಕೊಂಕಣಿ ಗ್ರಂಥಗಳೂ ಇವರ ವಿದ್ವತ್ತನ್ನು ಸಾರುತ್ತಿವೆ.

ಇವರಿಗೆ ಕೈವಲ್ಯಪುರ (ಗೋವ) ಮಠದ ಶ್ರೀಗಳು ಕೀರ್ತನ ರತ್ನ, ಗೋಕರ್ಣ ಪರ್ತಗಾಳಿ ಮಠದ ಶ್ರೀಗಳು ಕೀರ್ತನಾಚಾರ್ಯ (1973), ಅದಮಾರು ಮಠಾಧೀಶರು ಹರಿಕಥಾ ಕುಲಭೂಷಣ (1969) ಎಂಬ ಬಿರುದುಗಳನ್ನು ನೀಡಿ ಗೌರವಿಸಿದ್ದಾರೆ. ಧಾರವಾಡದಲ್ಲಿ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಇವರಿಗೆ ಕೀರ್ತನ ಕೇಸರಿ ಎಂಬ ಬಿರುದು ಸಂದಿದೆ. ಪೇಜಾವರ ಮಠಾಧೀಶರು ಕೃಷ್ಣಾನುಗ್ರಹ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಮುಂಬಯಿ ಗೌಡ ಸಾರಸ್ವತ ಸಮಾಜವು ಕೀರ್ತನ ಸಮ್ರಾಟ ಎಂಬ ಬಿರುದು ನೀಡಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1977), ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ (1990), ಕೊಂಕಣಿ ಅಕಾಡೆಮಿ ಪ್ರಶಸ್ತಿ (1997), ಕಾಶಿ ಮಠದ ಶ್ರೀ ಸುಧೀಂದ್ರ ಪುರಸ್ಕಾರ-ಇವು ಇವರಿಗೆ ಬಂದ ಕೆಲವು ಪ್ರಶಸ್ತಿ-ಗೌರವಗಳು.

ನೂರಾರು ತರುಣರಿಗೆ ತರಬೇತು ನೀಡಿ ಹರಿಕಥೆಯ ಸಾಧ್ಯತೆಗಳನ್ನು ವಿಸ್ತರಿಸಿದ್ದು ಇವರು ಈ ಕ್ಷೇತ್ರಕ್ಕೆ ಸಲ್ಲಿಸಿದ ಬಹುದೊಡ್ಡ ಕೊಡುಗೆ. ಮಹಿಳೆಯರನ್ನೂ ಇವರು ಹರಿಕಥಾಕ್ಷೇತ್ರಕ್ಕೆ ಪರಿಚಯಿಸಿದರು; ಧ್ವನಿಸುರುಳಿಗಳ ಮೂಲಕ ಹರಿಕಥೆಯನ್ನು ಮನೆ ಮನೆಗೆ ಮುಟ್ಟಿಸಿದ್ದಾರೆ. **(ಎಸ್.ಎಂ.ಕೆ.)**

**ಭದ್ರಗಿರಿ ಕೇಶವದಾಸ**: 1934-97. ಹೆಸರಾಂತ ಹರಿಕಥಾ ವಿದ್ವಾಂಸ, ಲೇಖಕ. ಇಂದಿನ ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಬೈಕಾಡಿ ಗ್ರಾಮದ ನೆರೆಯಲ್ಲಿರುವ ಭದ್ರಗಿರಿಯಲ್ಲಿ 1934 ಜುಲೈ 22ರಂದು ಜನಿಸಿದರು. ತಂದೆ ವೆಂಕಟರಮಣ ಪೈ, ತಾಯಿ ರುಕ್ಮಿಣಿ. ಇವರದು ಸಂಪ್ರದಾಯಸ್ಥ ಮನೆತನ. ತಾಯಿ ಜನಪದ ಕಥನಗೀತೆಗಳ ಖಜಾನೆಯಾಗಿದ್ದರು; ತಂದೆ ಆಧ್ಯಾತ್ಮಿಕ ಪ್ರವೃತ್ತಿಯವರು; ಅಜ್ಜ ಅಣ್ಣಪ್ಪ ನಾಯಕರು, ಹೆಸರಾಂತ ಯಕ್ಷಗಾನದ ಭಾಗವತರು; ಅಣ್ಣ ಅಚ್ಯುತದಾಸರು ಸಂಗೀತ ಪ್ರಿಯರೂ ಹರಿಕಥಾ ವಿದ್ವಾಂಸರೂ ಆಗಿದ್ದರು.

ಕೇಶವದಾಸರು ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ಯಕ್ಷಗಾನ-ಹರಿಕಥೆಗಳಲ್ಲಿ ಒಲವು ತೋರಿದರು. ಅನಂತರ ವೇಣುವಾದನ ಮತ್ತು ಹಾರ್ಮೋನಿಯಂ ನುಡಿಸುವುದನ್ನು ಕಲಿತರು. ತಾಯಿಯಿಂದ ಮತ್ತು ಶಿಕ್ಷಕಿ ನಾಗವೇಣಿಯಮ್ಮನವರಿಂದ ರಾಮಾಯಣ, ಮಹಾಭಾರತ, ಭಾಗವತದ ಕಥೆಗಳನ್ನೂ ಜನಪದ ಕಥೆಗಳನ್ನೂ ತಿಳಿದುಕೊಂಡರು. ಹರಿಕಥೆ, ಯಕ್ಷಗಾನ, ತಾಳಮದ್ದಲೆಗಳನ್ನು ಆಲಿಸಲು ತಪ್ಪದೇ ಹೋಗುತ್ತಿದ್ದರು. ಇವು ಬಾಲಕ ಕೇಶವನ ಮೇಲೆ ಆಧ್ಯಾತ್ಮಿಕ ಪರಿಣಾಮ ಬೀರಿದುವು. ಭದ್ರಗಿರಿ ಬ್ರಹ್ಮಾವರಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಮುಗಿಸಿದರು. ಉಡುಪಿಯ ಎಂ.ಜಿ.ಎಂ. ಕಾಲೇಜಿನಿಂದ ಪದವೀಧರರಾದರು.

ಇವರು ಮೊಟ್ಟ ಮೊದಲು ಹರಿಕಥೆ ಮಾಡಿದ್ದು ಭದ್ರಗಿರಿಯ ಕಾಮೇಶ್ವರ ದೇವಾಲಯದಲ್ಲಿ. ಅದೇ ಸಮಯ ಇವರು ನಾಟಕ, ಯಕ್ಷಗಾನಗಳಲ್ಲಿಯೂ ತಮ್ಮ ಸಹೋದರರಾದ ಅಚ್ಯುತದಾಸ, ಸರ್ವೋತ್ತಮದಾಸ, ವಿಠ್ಠಲದಾಸರೊಂದಿಗೆ ಪಾತ್ರ ವಹಿಸುತ್ತಿದ್ದರು. ಮೊದಲ ಹರಿಕಥೆಯಿಂದಲೇ ಪ್ರಸಿದ್ಧರಾದರು. ಉತ್ತರ ಕನ್ನಡ, ದಕ್ಷಿಣಕನ್ನಡದ ಅನೇಕ ಹಳ್ಳಿ-ಪಟ್ಟಣಗಳಲ್ಲಿ ಹರಿಕಥೆ ಮಾಡಿದರು. ಇವರು ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಕಾಶಿ ಮಠದ ಸುಧೀಂದ್ರತೀರ್ಥ



ಸ್ವಾಮೀಜಿಯವರು ಕೀರ್ತನ ಕೇಸರಿ ಎಂಬ ಬಿರುದು ನೀಡಿದ್ದರು.

ಇವರು 1959ರಲ್ಲಿ ಬೆಂಗಳೂರಿಗೆ ಬಂದು ನೆಲೆಸಿದರು. ದಾಸಾಶ್ರಮ ಮತ್ತು ದಾಸ ಕೀರ್ತನ ಮಂಡಳಿಗಳನ್ನು ಸ್ಥಾಪಿಸಿದರು. ಕೀರ್ತನ ಕಾಲೇಜು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು. ದಾಸವಾಣಿ ಎಂಬ ದಿನಪತ್ರಿಕೆ ಮೂರು ವರ್ಷ ನಡೆಸಿ (1960-63) ಅನಂತರ ಅದನ್ನು ಮಾಸಪತ್ರಿಕೆ ಮಾಡಿ 35 ವರ್ಷಗಳ ಕಾಲ ನಡೆಸಿದರು. ಇದರ ಜೊತೆಯಲ್ಲಿ ದಾಸಜ್ಯೋತಿ ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನೂ ನಡೆಸಿದರು. ಈ ಪತ್ರಿಕೆಯನ್ನೂ 38 ವರ್ಷ ನಡೆಸಿದರು. ಈ ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆದರು. ಕರ್ನಾಟಕ ಕೀರ್ತನಕಾರರ ಸಮ್ಮೇಳನ (1964), ಅಖಿಲ ಭಾರತ ಮಟ್ಟದ ಕೀರ್ತನ ಸಮ್ಮೇಳನ (1965) ನಡೆಸಿದರು. ಪುರಂದರದಾಸ, ಕನಕದಾಸರನ್ನು ಕುರಿತಂತೆ ನಾಟಕ ರಚಿಸಿ ಪ್ರದರ್ಶಿಸಿದರು. ಇವರು ಬರೆದ ಸಂತ ನರಸೀ ಮೆಹತಾ ಎಂಬ ಹಿಂದೀ ನಾಟಕ ದೇಶ ವಿದೇಶಗಳಲ್ಲಿ ಪ್ರದರ್ಶನಗೊಂಡಿತು. ಇವರು ಕನ್ನಡ, ಹಿಂದಿ, ಕೊಂಕಣಿ, ಭಾಷೆಗಳಲ್ಲಿ ರಚಿಸಿದ ಮೂರು ಸಾವಿರಕ್ಕೂ ಮಿಕ್ಕ ಭಜನೆಗಳು ಐದು ಸಂಪುಟಗಳಲ್ಲಿ ಪ್ರಕಟವಾಗಿವೆ.

1966ರಿಂದ ಇವರು ಅನೇಕ ಪ್ರಪಂಚಪರ್ಯಟನ ಕೈಗೊಂಡು ಹರಿಕಥೆ, ಪ್ರವಚನ, ಭಾಷಣಗಳನ್ನು ಮಾಡುತ್ತ ಜಗತ್ತಿನ ಎಲ್ಲೆಡೆ ದಾಸ ಸಾಹಿತ್ಯ ಸಂದೇಶ ತಲುಪಿಸಿದ್ದಾರೆ. ಕೇವಲ ಹಿಂದು ಧರ್ಮದ ಸಂತರ ಶರಣರ ಜೀವನಗಳನ್ನಷ್ಟೇ ಹರಿಕಥೆಗೆ ಅಳವಡಿಸಿಕೊಳ್ಳದೆ ಮಹಮ್ಮದ್ ಪೈಗಂಬರ್, ಏಸುಕ್ರಿಸ್ತ ಮೊದಲಾದ ಅನ್ಯ ಧರ್ಮದ ಸಂತರು ಹಾಗೂ ಪವಿತ್ರ ಗ್ರಂಥಗಳ ಮೇಲೂ ವ್ಯಾಖ್ಯಾನ ಮಾಡಿದ್ದಾರೆ.

ಇವರು ಕನ್ನಡ, ಕೊಂಕಣಿ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ವೇಣುನಾದ, ಭಕ್ತಿಯೋಗ (ಎರಡು ಭಾಗಗಳಲ್ಲಿ), ಪುರಂದರೋಪನಿಷತ್, ವಿಶ್ವವಿಜಯ ವಿಠ್ಠಲ ಕೀರ್ತನೆಗಳು, ಪರಮಾತ್ಮ ಲೀಲಾಮೃತ, ಪರಂಜ್ಯೋತಿ, ಕನಕದಾಸ, ಪುರಂದರದಾಸ ಇವು ಮುಖ್ಯವಾದವು. ಅಮರನಾಥ ಬದರಿನಾಥ ಯಾತ್ರೆಯ ಕೀರ್ತನೆಗಳು (ನಾಲ್ಕು ಭಾಗಗಳು), ಭಜನ ಭಾಗೀರಥಿ (ಎರಡು ಭಾಗಗಳು), ಸದ್ಗುರು ಶ್ರೀದತ್ತಾತ್ರೇಯ ಗೀತೆಗಳು, ಸದ್ಗುರು ಉಪದೇಶಾಮೃತ, ನಾರದ ಭಕ್ತಿಸೂತ್ರ, ಹರಿಭಕ್ತಿ ಸಾರ, ಭಜನಸುಧಾ, ಕೇಶವ ನಾಮಾಮೃತ,

ಗಾಯತ್ರಿ, ಭಗವದ್ಗೀತೆ, ಹೋಲಿ ಈಸ್ಟ್‌ಲಾರ್ಡ್ ಪಾಂಡುರಂಗ, ಸಾಂಗ್ಸ್ ಆಫ್ ದಿ ಫ್ಲೂಟ್, ವಿಶ್ವಶಾಂತಿ ಭಜನ್ಸ್ ಪ್ರೇಮ ಯೋಗ, ವಾಯ್ಸ ಆಫ್ ಭದ್ರಗಿರಿ, ಡಾಕ್ಟ್ರಿನ್ ಆಫ್ ರಿ ಇನ್ಕಾರ್ನೇಶನ್, ದಸ್ ಸಂಗ್ ಲಾರ್ಡ್ ಕೃಷ್ಣ, ಸದ್ಗುರು ಸ್ಪೀಕ್ಸ್ ಮೊದಲಾದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಭಾರತೀಯ ಸಂತ–ಶರಣ–ದಾಸರ ಕುರಿತ ಹರಿಕಥೆಗಳು, ವೇದಾಂತ, ಭಗವದ್ಗೀತೆ, ಪುರಾಣ, ಉಪನಿಷತ್ತುಗಳ ಕುರಿತು ಕನ್ನಡ ಮತ್ತು ಇಂಗ್ಲಿಷ್ ಹಾಗೂ ಕೊಂಕಣಿ ಭಾಷೆಗಳಲ್ಲಿ ಧ್ವನಿಸುರುಳಿಗಳು, ವೀಡಿಯೊಗಳು, ಸಿ.ಡಿ.ಗಳು ಬಿಡುಗಡೆಯಾಗಿವೆ.

ಇವರನ್ನು ಅನೇಕ ಸಂಘ ಸಂಸ್ಥೆಗಳು ಗೌರವಿಸಿದೆ. ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು 1997 ಡಿಸೆಂಬರ್ 4ರಂದು ನಿಧನರಾದರು. **(ಎಸ್.ಎಂ.ಕೆ.)**

**ಭದ್ರಬಾಹು:** ಪ್ರ.ಶ.ಪೂ. ಸು. 300. ಪ್ರಸಿದ್ಧ ಜೈನ ಆಚಾರ್ಯರು. ಅಂತಿಮ ಶ್ರುತಕೇವಲಿಗಳು. ಮಗಧ ದೇಶದಲ್ಲಿ 12 ವರ್ಷಗಳ ದುರ್ಭಿಕ್ಷ ತಲೆದೋರಿದಾಗ ದೊಡ್ಡ ಸಂಘದೊಡನೆ ದಕ್ಷಿಣ ದೇಶಕ್ಕೆ ಬಂದರು. ಇವರೊಡನೆ ಮೌರ್ಯ ಸಾಮ್ರಾಟ ಚಂದ್ರಗುಪ್ತನೂ ತನ್ನ ಮಗನಿಗೆ ರಾಜ್ಯವನ್ನು ಒಪ್ಪಿಸಿ ದಕ್ಷಿಣಕ್ಕೆ ಬಂದ. ತಮ್ಮ ಕಾಲ ಸಮೀಪಿಸಿದ್ದನ್ನು ತಿಳಿದ ಭದ್ರಬಾಹು ಶ್ರವಣಬೆಳಗೊಳದಲ್ಲಿ (ಕರ್ನಾಟಕ) ನೆಲೆನಿಂತರು; ಇವರ ಸಂಘ ಮುಂದೆ ಕಳಿಸಲ್ಪಟ್ಟಿತು. ಇವರ ಸೇವೆಗಾಗಿ ಚಂದ್ರಗುಪ್ತನೂ ಅಲ್ಲಿಯೇ ನೆಲೆಸಿದ. ಇವರ ದೇಹೋತ್ಸರ್ಗವಾದ ಸ್ಥಾನ ಚಂದ್ರಗಿರಿ ಪರ್ವತದ ಮೇಲೆ ಭದ್ರಬಾಹು ಗುಹೆಯೆಂದು ಪ್ರಸಿದ್ಧವಾಗಿದೆ. ಇಲ್ಲಿ ಇವರ ಚರಣ ಚಿಹ್ನೆಗಳು ಅಂಕಿತವಾಗಿವೆ. ದಕ್ಷಿಣದಲ್ಲಿಯೇ ಜೈನರ ಇತಿಹಾಸ ದಲ್ಲಿ ಇದೊಂದು ಮಹತ್ತ್ವದ ಸಂಗತಿ ಎಂಬುದು ಇತಿಹಾಸಕಾರರ ಅಭಿಪ್ರಾಯ. ಕುಂದಕುಂದಾಚಾರ್ಯರು ತಾವು ಭದ್ರಬಾಹುಗಳ ಶಿಷ್ಯನೆಂದು ಬೋಧಪಾಹುಡದಲ್ಲಿ ಹೇಳಿದ್ದಾರೆ. ಇದು ಪರಂಪರಾ ಶಿಷ್ಯತ್ತ್ವವಿರಬೇಕು. ಮತ್ತೊಂದು ಐತಿಹ್ಯದಂತೆ ಸ್ಥೂಲಭದ್ರ ಮತ್ತು ಭದ್ರಬಾಹು ಇವರು ಪ್ರಾಚೀನ ಗೋತ್ರದ ಯಶೋಭದ್ರನ ಶಿಷ್ಯರು. ಭದ್ರಬಾಹು ರಾಜಗೃಹ ದಿಂದ ಮಹಾಪ್ರಾಣ ಧ್ಯಾನಕ್ಕಾಗಿ ನೇಪಾಳಕ್ಕೆ ಹೋದಾಗ ಸ್ಥೂಲಭದ್ರ ಅವರಲ್ಲಿಗೆ ಹೋಗಿ ದೃಷ್ಟಿವಾದವನ್ನು ಕಲಿತ. ಆದರೆ ಕೊನೆಯ ನಾಲ್ಕು ಪೂರ್ವಗಳ ಜ್ಞಾನ ಅವನಿಗೆ ಪ್ರಾಪ್ತವಾಗಲಿಲ್ಲ. ಈ ಭದ್ರಬಾಹು ದಶಾ, ಕಲ್ಪ ಮತ್ತು ವ್ಯವಹಾರ–ಎಂಬ ಪ್ರಾಕೃತ ಗ್ರಂಥಗಳ ಕರ್ತೃವೆಂದು ಹೇಳಿದೆ. ಈತ ಶ್ರುತಕೇವಲಿ ಭದ್ರಬಾಹುವಿನಿಂದ ಭಿನ್ನನಾಗಿರಬಹುದು. ನಿರ್ಯುಕ್ತಿ ಟೀಕೆಗಳನ್ನು ಬರೆದ ಭದ್ರಬಾಹು ಇವರಿಬ್ಬರಿಂದ ಭಿನ್ನನಾಗಿರ ಬೇಕೆಂದು ತೋರುತ್ತದೆ. ಈ ನಿರ್ಯುಕ್ತಿಕಾರ ವರಾಹಮಿಹಿರನ ಸಮಕಾ ಲೀನನೆಂದು ಐತಿಹ್ಯವಿದೆ. ಕದಾಚಿತ್ ಈ ಮೂವರು ಭದ್ರಬಾಹುಗಳ ಭಿನ್ನ ವ್ಯಕ್ತಿಗಳೂ ಆಗಿರಬಹುದು. **(ಎ.ಎನ್.ಯು.)**

**ಭದ್ರಯ್ಯ,ನ.**: 1912–88. ಕರ್ನಾಟಕದಲ್ಲಿ ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ ಚಳವಳಿಯ ಆದ್ಯ ಪ್ರವರ್ತಕರಲ್ಲೊಬ್ಬರು. ಅನೇಕ ಹೊರ ರಾಷ್ಟ್ರಗಳಲ್ಲಿ ಸೇವೆ ಸಲ್ಲಿಸಿ ಅಂತಾರಾಷ್ಟ್ರೀಯ ಮನ್ನಣೆಗೂ ಪಾತ್ರರಾದವರು. ನಭ ಎಂಬ ಹೆಸರಿನಲ್ಲಿ ಜನಪ್ರಿಯರಾಗಿದ್ದ ಇವರು 1912 ಸೆಪ್ಟೆಂಬರ್ 9ರಂದು ಮಂಡ್ಯ ಜಿಲ್ಲೆ ಪಾಂಡಪುರ ತಾಲ್ಲೂಕಿನ ನೀಲನಹಳ್ಳಿಯಲ್ಲಿ ಜನಿಸಿದರು. ತಂದೆ ನಡ್ಲೇಗೌಡ, ತಾಯಿ ತಾಯಮ್ಮ. ದೊಡ್ಡ ಕುಟುಂಬದಲ್ಲಿ ಹುಟ್ಟಿದ ಇವರು ಬಡತನದಲ್ಲೇ ಶಿಕ್ಷಣ ಕಲಿತರು. ತಮ್ಮ ಊರಿನ ಸಮೀಪದ ಲಕ್ಷ್ಮೀಸಾಗರದಲ್ಲಿ ವಿದ್ಯಾಭ್ಯಾಸ ಪ್ರಾರಂಭಿಸಿ ಮೈಸೂರಿನಲ್ಲಿ ಇಂಟರ್‌ಮೀಡಿಯೆಟ್‌ವರೆಗೆ ವ್ಯಾಸಂಗ ಮಾಡಿದರು. ಗಾಂಧೀ ಚಳವಳಿಗೆ ಓಗೊಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದರು. ಖಾದಿ ಧಾರಣೆ ಮೈಗಂಟಿತು. ಸ್ವತಃ ಖಾದಿನೂತರು. ಹಲವು ಸಾರಿ ಜೈಲುವಾಸ ಅನುಭವಿಸಿದರು. ಗಾಂಧೀಜಿ ಮತ್ತು ಕುವೆಂಪು ಇವರಿಗೆ ಆದರ್ಶವಾಗಿದ್ದರು.

ಹಳ್ಳಿಗಳ ಪುನರುತ್ಥಾನ ಇವರ ಜೀವನ ಧ್ಯೇಯವಾಯಿತು. ಗ್ರಾಮ ಸೇವೆ ಎಂಬ ಮಾಸಪತ್ರಿಕೆ ಹೊರತಂದರು. ಹಳ್ಳಿಯ ಮಕ್ಕಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಗ್ರಾಮಸೇವಾನಿಲಯ ಎಂಬ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಹಾಗೆಯೇ ಸಾಕ್ಷರತಾ ಪ್ರಸಾರಕ್ಕಾಗಿ



'ಗ್ರಾಮ ಮುದ್ರಣಾಲಯ' ಸ್ಥಾಪಿಸಿದರು. ಇವರ ಸಹೋದರ ಶ್ರೀಕಂಠಯ್ಯನವರು ಸಾಹಿತ್ಯ ಭಂಡಾರ ಎಂಬ ಪ್ರಕಾಶನ ಸಂಸ್ಥೆ ತೆರೆದು ಅಣ್ಣನಿಗೆ ಸಹಕರಿಸಿದರು. 1914ರಲ್ಲಿ ಸರ್ಕಾರ ಬಿ.ಎಂ. ಶ್ರೀಕಂಠಯ್ಯನವರ **(ನೋಡಿ)** ಅಧ್ಯಕ್ಷತೆಯಲ್ಲಿ ಅಕ್ಷರ ಪ್ರಚಾರ ಸಮಿತಿಯನ್ನು ನೇಮಿಸಿತು. ಈ ಸಮಿತಿಯ ಮೂಲ ಸದಸ್ಯರಲ್ಲಿ 'ನಭ' ಅವರು ಒಬ್ಬರು. ಇವರು ವಯಸ್ಕರ ಶಿಕ್ಷಣವನ್ನು ಕಾರ್ಯಗತಗೊಳಿಸಲು ಕಂಕಣಬದ್ಧರಾದರು. ಅಹೋರಾತ್ರಿ ಸಮಿತಿಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅದೇ ವರ್ಷ ಕೃಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿಯಲ್ಲಿ ಮೊದಲ ಪುಸ್ತಕ ಭಂಡಾರ ಅಸ್ತಿತ್ವಕ್ಕೆ ಬಂತು. ಮುಂದೆ ಇವರು ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ದೀರ್ಘಕಾಲ ಕಾರ್ಯನಿರ್ವಹಿಸಿದರು. ದೇಜಗೌ ಅವರು ಹೇಳಿರುವಂತೆ ವಯಸ್ಕರ ಶಿಕ್ಷಣ ಸಮಿತಿಯೇ ಅವರ ಮನೆ, ಗುಡಿ, ತಪೋನಂದನ, ಕಾರ್ಯಕ್ಷೇತ್ರ ಎಲ್ಲವೂ ಆಯಿತು.

ಇವರು ಈ ಸಮಿತಿಯ ಆಶ್ರಯದಲ್ಲಿ ವಿಚಾರಸಂಕಿರಣಗಳು, ಉಪನ್ಯಾಸಗಳನ್ನು ಏರ್ಪಡಿಸಿ ಸಮಿತಿಯ ಕಾರ್ಯಕ್ರಮಗಳನ್ನು ಪ್ರಚಾರಗೊಳಿಸಲು ತೊಡಗಿದರು. ಅದಕ್ಕೆ ಪೂರಕವಾದ ಸಾಹಿತ್ಯವನ್ನು ತಾವೇ ರಚಿಸಿದರು; ಇತರರಿಂದ ಬರೆಸಿದರು. ಹೀಗೆ ವಯಸ್ಕರ ಶಿಕ್ಷಣ ಸಾಹಿತ್ಯ ಪ್ರಕಾರವನ್ನೇ ಸೃಷ್ಟಿಸಲು ನೆರವಾದರು. ಅನೇಕ ವಿದ್ಯಾಪೀಠಗ ಳನ್ನು ಸ್ಥಾಪಿಸಿದರು. ಹಳೇ ಮೈಸೂರು ಪ್ರದೇಶದಲ್ಲಿ ದೇಶದಲ್ಲೇ ಹೊಸ ಪರಂಪರೆಯೊಂದಕ್ಕೆ ನಾಂದಿ ಹಾಕಿದರು. ಈ ವಿದ್ಯಾಪೀಠಗಳ ಮೂಲಕ ಗ್ರಾಮೀಣ ಕಲೆಗಳ ಪ್ರಚಾರ, ಆಧುನಿಕ ವ್ಯವಸಾಯ, ಗೃಹವಾರ್ತೆ ಆರೋಗ್ಯ, ಗ್ರಾಮ ನೈರ್ಮಲ್ಯ ಮೊದಲಾದ ವಿಷಯಗಳ ಬಗ್ಗೆ ಶಿಬಿರಗ ಳನ್ನು ಏರ್ಪಡಿಸಿ ಗ್ರಾಮೀಣ ಯುವಕರಿಗೆ ತರಬೇತಿ ನೀಡಿದರು.

1949ರಲ್ಲಿ ಮೈಸೂರು ನಗರದಲ್ಲಿ ಅನಕ್ಷರಸ್ಥ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾವರ್ಧಕ ಸಂಸ್ಥೆ ಸ್ಥಾಪನೆಯಾಯಿತು. ಸಾಹುಕಾರ ಚನ್ನಯ್ಯನವರು ಇದರ ಅಧ್ಯಕ್ಷರಾಗಿದ್ದರು. ನಭ ಅವರು ಇದರ ಮೊದಲ ಸಹ ಕಾರ್ಯದರ್ಶಿಯಾಗಿ ತರುವಾಯ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದರು. ಈಗ ಈ ಸಂಸ್ಥೆ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯೆ ನೀಡುವ ಹಲವಾರು ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದು ಮೈಸೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲೊಂದಾಗಿದೆ. ಇವರ ಸೇವಾಕೀರ್ತಿ ರಾಷ್ಟ್ರಮಟ್ಟ

ದವರೆಗೂ ಹಬ್ಬಿತು. ವಿಶ್ವಸಂಸ್ಥೆಯ ಸಾಂಸ್ಕೃತಿಕ ಮತ್ತು ಶಿಕ್ಷಣ ಅಂಗವಾದ ಯುನೆಸ್ಕೊ ಸಂಸ್ಥೆ ಹಿಂದುಳಿದ ರಾಷ್ಟ್ರಗಳಲ್ಲಿ ಸಾಕ್ಷರತೆಯ ಬೆಳಕು ಹರಿಸಲು ನಭ ಅವರನ್ನು ಆಹ್ವಾನಿಸಿತು. 1962ರಲ್ಲಿ ಯುನೆಸ್ಕೊ ಸೇವೆ ಒಪ್ಪಿಕೊಂಡು ವಿದೇಶಗಳಿಗೆ ತೆರಳಿದರು ಒಂದೂವರೆ ದಶಕದ ವಿದೇಶೀ ಸೇವಾ ಅವಧಿಯಲ್ಲಿ ಇವರು ಇಂಡೊನೇಷ್ಯ, ಇರಾನ್, ಕೆನ್ಯ, ನೈರೋಬಿ, ಕ್ಯಾಮರೂನ್, ಅರಬ್ ರಾಷ್ಟ್ರಗಳು ಮೊದಲಾದ ದೇಶಗಳಲ್ಲಿ ಸೇವೆಸಲ್ಲಿಸಿದರು. ಯುನೆಸ್ಕೊ ಸಂಸ್ಥೆಯ ಮೆಚ್ಚುಗೆಗಳಿಸಿದರು. ಇಂಡೊನೇಷ್ಯದಲ್ಲಿದ್ದಾಗ ವಯಸ್ಕರ ಶಿಕ್ಷಣ ತಜ್ಞೆ ಎಲ್.ಎಚ್. ಇವಾನ್ಸ್ ಎಂಬ ವಿದೇಶಿ ಮಹಿಳೆಯನ್ನು ವಿವಾಹವಾದರು. ಅವರಿಗೆ ಭಾರತೀಯ ಸಂಸ್ಕೃತಿಯಂತೆ ಶಾಂತಿ ಎಂದು ನಾಮಕರಣ ಮಾಡಿದರು. ದಂಪತಿಗಳಿಬ್ಬರೂ ಒಟ್ಟಿಗೆ ವಿದೇಶಗಳಲ್ಲಿ ಸೇವೆಸಲ್ಲಿಸಿದರು.

ನಭಅವರ ಸಾಹಿತ್ಯ ಸೃಷ್ಟಿಯೂ ಅಪಾರವಾಗಿದೆ. ಮಹಾತ್ಮಗಾಂಧಿ, ಪ್ರಪಂಚದ ಕತೆ, ಅಶೋಕ ಚಕ್ರವರ್ತಿ, ಕುಮಾರವ್ಯಾಸನ ಕರ್ಣ, ಸಾಗರ ಸಂಶೋಧನೆ, ನಾ ಕಂಡ ಇಂಡೋನೇಷಿಯಾ, ನಡೆದುನೋಡು ಕೊಡಗಿನ ಬೆಡಗ, ಜೀವ ಸಂತಾನ ಸಾಗಿದ ಬಗೆ, ನಿಮ್ಮ ದೇಹ, ಆಕಾಶಲೋಕ ಅಥವಾ ಬ್ರಹ್ಮಾಂಡ, ಧೃವಗಳ ಸಂಶೋಧನೆ, ಪ್ರಪಂಚಪರ್ಯಟನೆ, ಕ್ಯಾಮರೂನ್ ಬಣಗಳೊಡನೆ, ಯುನೆಸ್ಕೊ ಸೇವೆಯಲ್ಲಿ ಮುಂತಾದ ಹಲವನ್ನೂ ಹೆಸರಿಸಬಹುದು.

ಸಾಮಾಜಿಕ ಪರಿಸರ ಹಾಗೂ ಭೌತಿಕ ಪರಿಸರದ ಬಗ್ಗೆ ನಭ ಅವರದ್ದು ವಿಶಿಷ್ಟ ಕಾಳಜಿ. ಪರಿಸರಪ್ರಿಯರಾಗಿದ್ದ ಇವರಿಗೆ ಈ ಅಂಶವೇ ಇವರ ಜೀವನದಲ್ಲಿ ವಿಶಾಲ ಮನೋಭಾವ ಬೆಳೆಸಿಕೊಳ್ಳಲು ಸಹಾಯವಾಗಿರಬಹುದು. ಬಡ ಬಂಧುವರ್ಗದ ವಿದ್ಯಾರ್ಥಿಗಳಿಗೆ ನೆರವಾಗಲು ಸದಾ ಸಹಾಯ ಹಸ್ತ ಚಾಚುತ್ತಿದ್ದರು. ಇವರಿಂದ ಸಹಾಯ ಪಡೆದು ಸಮಾಜದಲ್ಲಿ ಮುಂದೆ ಬಂದವರು ಅನೇಕರು. ಸದಾ ಗಾಂಧಿ ಚಿಂತನೆಗೆ ಮಾದರಿಯಾಗಿದ್ದರು. ಇವರನ್ನು ಕುರಿತು ಕುವೆಂಪು ಅವರು "ಯಾವುದು ನನ್ನ ಜೀವನದ ಧ್ಯೇಯವಾಗಿದೆಯೋ ಯಾವುದನ್ನು ನನ್ನ ಅಂತಿಮ ಸಂದೇಶವೆಂದು ಸಾರುತ್ತಿದ್ದೇನೆಯೋ ಆ ವಿಶ್ವಮಾನವ ಪ್ರಜ್ಞೆಯನ್ನು ನಭ ಅವರು ತಮ್ಮ ಬದುಕಿನಲ್ಲಿ ಸಾಧಿಸಿ ಕೃತಕೃತ್ಯರಾಗಿದ್ದಾರೆ" ಎಂದು ಹೇಳಿರುವುದು ಇವರ ಸಾರ್ಥಕ ಬದುಕಿಗೆ ಸಂದ ಗೌರವವಾಗಿದೆ.

ನಭ ದಂಪತಿಗಳು ತಮ್ಮ ನಿವೃತ್ತಿ ಜೀವನವನ್ನು ಮೈಸೂರಿನಲ್ಲಿ ಕಳೆದರು. ಇವರಿಗೆ ಶುಭ ಎಂಬ ಮಗಳಿದ್ದು ವಿವಾಹವಾಗಿದೆ. ನಭ ಅವರು 1988 ಮೇ 16ರಂದು ನಿಧನರಾದರು. ಇವರ ಪತ್ನಿ ಶಾಂತಿ ಅಮೆರಿಕದಲ್ಲಿ ನೆಲೆಸಿದ್ದಾರೆ. **(ಡಿ.ಎಸ್.ಜೆ.)**

**ಭದ್ರಾ:** ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹರಿಯುವ ಈ ನದಿ ತುಂಗಭದ್ರಾ ನದಿಯ ಮೂಲನದಿಗಳಲ್ಲಿ ಒಂದು. ಮೂಡಿಗೆರೆ ತಾಲ್ಲೂಕಿನ ಕಳಸದಿಂದ ಸು. 25 ಕಿಮೀ ಪಶ್ಚಿಮದಲ್ಲಿ, ಪಶ್ಚಿಮಘಟ್ಟದ ನೆತ್ತಿ ಭಾಗದಲ್ಲಿರುವ ವರಾಹ ಪರ್ವತದ ಗಂಗಾಮೂಲದಲ್ಲಿ ಇದರ ಉಗಮ (ತುಂಗಾ ಹುಟ್ಟುವುದೂ ಇಲ್ಲಿಯೇ). ಉಗಮಸ್ಥಾನದಿಂದ ಕಳಸದವರೆಗೆ ಸುಮಾರು ಪೂರ್ವಾಭಿಮುಖವಾಗಿ ಹರಿದು, ಮುಂದೆ ಸಂಗಮೇಶ್ವರದ ಬಳಿಯಲ್ಲಿ ಉತ್ತರ-ಈಶಾನ್ಯ ದಿಶೆಯಲ್ಲಿ ಖಾಂಡ್ಯ, ನರಸಿಂಹರಾಜಪುರಗಳ ಮೂಲಕ ಲಕ್ಕವಳ್ಳಿಯತ್ತ ಸಾಗುತ್ತದೆ. ಲಕ್ಕವಳ್ಳಿಯಿಂದ ಮುಂದೆ ಸುಮಾರು ಉತ್ತರಗಾಮಿಯಾಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸಿ, ಭದ್ರಾವತಿ, ಹೊಳೆಹೊನ್ನೂರುಗಳ ಮೂಲಕ ಹರಿದು ಮುಂದೆ ಶಿವಮೊಗ್ಗದ ಈಶಾನ್ಯದಲ್ಲಿರುವ ಕೂಡಲಿಯ ಬಳಿಯಲ್ಲಿ ತುಂಗಾನದಿಯನ್ನು ಕೂಡುತ್ತದೆ. ಈ ಎರಡೂ ನದಿಗಳು ಸೇರಿ ತುಂಗಭದ್ರಾ **(ನೋಡಿ)** ಎಂಬ ಹೆಸರನ್ನು ಗಳಿಸಿ ಮುಂದೆ ಸಾಗಿ ಕೃಷ್ಣಾ ನದಿಯನ್ನು ಸೇರುತ್ತದೆ.

ಭದ್ರಾ ಹೆಚ್ಚು ಕಡಿಮೆ ಮಲೆನಾಡು ಪ್ರದೇಶದಲ್ಲೇ ಹರಿಯುವ ನದಿ. ಸಹಜವಾಗಿ ಅಸಂಖ್ಯಾತ ಸಣ್ಣಪುಟ್ಟ ಝರಿಗಳು, ಹಳ್ಳಗಳು ಇದನ್ನು ಕೂಡುತ್ತವೆ. ಹೆಸರಿಸಬಹುದಾದ ಭದ್ರಾ ನದಿಯ ಮುಖ್ಯ ಉಪನದಿಗಳಲ್ಲಿ ಹೇಳಬಹುದಾದದ್ದು ಮೊದಲನೆಯದಾಗಿ ಆನೆಬಿದ್ದ ಹಳ್ಳ. ಮೂಡಿಗೆರೆ ತಾಲ್ಲೂಕಿನಲ್ಲಿ ದಕ್ಷಿಣದಿಂದ ಬರುವ ಈ ನದಿ ಸಂಗಮೇಶ್ವರದಲ್ಲಿ ಭದ್ರಾ ನದಿಯನ್ನು ಸೇರುತ್ತದೆ. ಮುಂದೆ ಚಿಕ್ಕಮಗಳೂರು ತಾಲ್ಲೂಕಿನ ಜಾಗರ್ ಕಣಿವೆಯಿಂದ ಹರಿದುಬರುವ ಸೋಮವಾಹಿನಿ ಹೆಬ್ಬೆಯ ಬಳಿಯಲ್ಲಿ ಭದ್ರ ನದಿಯನ್ನೂ ಕೂಡುತ್ತದೆ. ಲಕ್ಕವಳ್ಳಿಯಲ್ಲಿ ಕಲ್ಹತ್ತಗಿರಿ ಮತ್ತು ಕಲ್ಲುದುರ್ಗದ ಹೊಳೆಗಳು ಕೂಡುತ್ತವೆ.

ಈ ನದಿ ದಟ್ಟವಾದ ಕಾಡುಗಳಲ್ಲಿ ಹರಿಯುವುದರಿಂದ ತುಂಗಾನದಿಯ ನೀರಿನಷ್ಟು ಈ ನದಿಯ ನೀರು ಆರೋಗ್ಯಕರವಾಗಿಲ್ಲವೆಂದು ಹೇಳುವರು. ನದಿಯ ದಡಗಳು ತುಂಬ ಕಡಿದಾಗಿರುವುದರಿಂದ ಇದರ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಲು ಅಷ್ಟಾಗಿ ಅನುಕೂಲಕರವಾಗಿಲ್ಲ. ಆದರೂ ಈ ನದಿಗೆ ಸುಮಾರು 18 ಚಿಕ್ಕ ಚಿಕ್ಕ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಬೆಂಗಳೂರು-ಶಿವಮೊಗ್ಗ ರಸ್ತೆ ಮಾರ್ಗದಲ್ಲಿ, ಬಾಳೆಹೊನ್ನೂರು ಮತ್ತು ಭದ್ರಾವತಿಗಳಲ್ಲಿ ಈ ನದಿಗೆ ಸೇತುವೆಗಳನ್ನು ಕಟ್ಟಿದ್ದಾರೆ. ಲಕ್ಕವಳ್ಳಿಯ ಬಳಿ ನಿರ್ಮಿತವಾಗಿರುವ ಭದ್ರಾ ಅಣೆಕಟ್ಟು ಕರ್ನಾಟಕದ ಬೃಹತ್ ನೀರಾವರಿ ಯೋಜನೆಗಳಲ್ಲಿ ಒಂದು. ಇದರಿಂದ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಒದಗಿದೆ.

ಭದ್ರಾವತಿ, ಲಕ್ಕವಳ್ಳಿ ಮತ್ತು ನರಸಿಂಹರಾಜಪುರ-ಈ ನದಿಯ ದಡದಲ್ಲಿರುವ ದೊಡ್ಡ ಊರುಗಳು. ನದಿಯ ಉಗಮಸ್ಥಾನವಾದ ಗಂಗಾಮೂಲ, ನದಿಯ ಬಲದಂಡೆಯಲ್ಲಿರುವ ಕಳಸ **(ನೋಡಿ)**, ಖಾಂಡ್ಯ **(ನೋಡಿ)** ಇವು ಪವಿತ್ರ ಕ್ಷೇತ್ರಗಳು, ಎಡದಂಡೆಯಲ್ಲಿರುವ ಬಾಳೆಹೊನ್ನೂರು **(ನೋಡಿ)** ಪ್ರಸಿದ್ಧ ವೀರಶೈವ ಕೇಂದ್ರ (ಈ ನದಿಯ ಪೌರಾಣಿಕ ಐತಿಹ್ಯದ ಬಗ್ಗೆ **ನೋಡಿ : ತುಂಗಾ**). **(ಎಂ.)**

**ಭದ್ರಾವತಿ:** ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕನ್ನು ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು, ಪಶ್ಚಿಮಕ್ಕೆ ಶಿವಮೊಗ್ಗ, ಉತ್ತರ ವಾಯವ್ಯದಲ್ಲಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ಪೂರ್ವಕ್ಕೆ ಚನ್ನಗಿರಿ ಈ ತಾಲ್ಲೂಕುಗಳು ಸುತ್ತುವರಿದಿವೆ. ತಾಲ್ಲೂಕಿನಲ್ಲಿ ಭದ್ರಾವತಿ ಪ್ರಥಮ ಮತ್ತು ದ್ವಿತೀಯ ವೃತ್ತಗಳು, ಹೊಳೆಹೊನ್ನೂರು ಪ್ರಥಮ, ದ್ವಿತೀಯ ಮತ್ತು ತೃತೀಯ ವೃತ್ತಗಳು ಮತ್ತು ಕೂಡ್ಲಿಗೆರೆ ಈ ಹೋಬಳಿಗಳಿವೆ. ಒಟ್ಟು 161 ಗ್ರಾಮಗಳಿವೆ. ವಿಸ್ತೀರ್ಣ 687 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,38,989.

ಭದ್ರಾ ನದಿ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಕಾರೇಹಳ್ಳಿಯ ಬಳಿ ಪ್ರವೇಶಿಸಿ ಭದ್ರಾವತಿ, ಹೊಳೆಹೊನ್ನೂರು ಮಾರ್ಗವಾಗಿ ಉತ್ತರಾಭಿಮುಖವಾಗಿ ಹರಿದು ಶಿವಮೊಗ್ಗ ತಾಲ್ಲೂಕಿನ ಕೂಡಲಿ ಹತ್ತಿರ ತುಂಗೆಯನ್ನು ಸೇರಿಕೊಳ್ಳುತ್ತದೆ. ಕೂಡಲಿಯ ಈಚೆಗೆ ಸ್ವಲ್ಪ ದೂರ ಭದ್ರಾನದಿ ಮತ್ತು ಸಂಗಮದಿಂದ ಮುಂದೆ ತುಂಗಭದ್ರಾನದಿ ಇವೆ. ತಾಲ್ಲೂಕಿನ ಪಶ್ಚಿಮ ಭಾಗ ಈ ನದಿಯಿಂದಾಗಿ ಸಸ್ಯ ಸಮೃದ್ಧ ಪ್ರದೇಶವಾಗಿದೆ. ಅರೆಮಲೆನಾಡು ಪ್ರದೇಶಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ ಉತ್ತಮ ವಾಯುಗುಣವಿದೆ. ಸರಾಸರಿ ವಾರ್ಷಿಕ ಮಳೆ 1,090.57 ಮಿಮೀ. ಈ ತಾಲ್ಲೂಕಿನ ಭೂಮಿ ಕೆಂಪುಜೇಡಿಮಣ್ಣಿನದು. ಈ ತಾಲ್ಲೂಕಿನಲ್ಲಿ 137 ಕೆರೆಗಳೂ ತಾಲ್ಲೂಕು ಅಭಿವೃದ್ಧಿಮಂಡಳಿಗೆ ಸೇರಿದ 162 ಕೆರೆಗಳೂ

270 ಬಾವಿಗಳೂ ಇವೆ. ಭದ್ರಾ ಯೋಜನೆಯ ಎಡನಾಲೆ ಮತ್ತು ವಿದ್ಯುದಾಗಾರ ಈ ತಾಲ್ಲೂಕಿನಲ್ಲಿವೆ. ನದಿ ಮತ್ತು ಕಾಲುವೆಗಳಿಂದ ಒಟ್ಟು 19,484 ಹೆಕ್ಟೇರ್ ಭೂಮಿ ನೀರಾವರಿಗೆ ಒಳಪಟ್ಟಿದೆ. ತಾಲ್ಲೂಕಿನಲ್ಲಿ

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಭದ್ರಾವತಿ

4,113 ಹೆಕ್ಟೇರ್ ಅರಣ್ಯ ಪ್ರದೇಶ, 23,992 ಹೆಕ್ಟೇರ್ ಗೋಮಾಳ, 789 ಹೆಕ್ಟೇರ್ ಬೀಳುಭೂಮಿ, 3,805 ಹೆಕ್ಟೇರ್ ಉಪಯೋಗಿಸದಿರುವ ವ್ಯವಸಾಯಯೋಗ್ಯ ಭೂಮಿ ಇದೆ. 27,215 ಹೆಕ್ಟೇರ್‌ಗಳಲ್ಲಿ ಬಿತ್ತನೆ ಮಾಡಲಾಗಿತ್ತು. ಬತ್ತ, ಜೋಳ, ನೆಲಗಡಲೆ, ಮೆಣಸಿನಕಾಯಿ, ರಾಗಿ, ದ್ವಿದಳಧಾನ್ಯಗಳು, ಕಬ್ಬು ಮತ್ತು ಹತ್ತಿ ಇಲ್ಲಿಯ ಬೆಳೆಗಳು. ವಿವಿಧ ಹಣ್ಣು ತರಕಾರಿಗಳನ್ನೂ ಬೆಳೆಯುತ್ತಾರೆ. ಪಶುಪಾಲನೆ ಜೊತೆಗೆ ಕುರಿ, ಎಮ್ಮೆ ಮುಂತಾದವುಗಳ ಸಾಕಣೆಯಿದೆ. ಅಡಕೆ ತೆಂಗಿನ ವ್ಯವಸಾಯವೂ ಇದೆ. ಪಶುವೈದ್ಯಾಲಯ ಸುಧಾರಿತ ಬೀಜ ಬೆಳೆಯು ಕೇಂದ್ರ ಮುಂತಾದವುಗಳಿವೆ.

ಈ ತಾಲ್ಲೂಕು ಕೈಗಾರಿಕೆಯಲ್ಲಿ ಮುಂದುವರಿದಿದೆ. ಭದ್ರಾವತಿಯಲ್ಲೇ ಇರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಸಿಮೆಂಟ್ ಮತ್ತು ಕಾಗದದ ಕಾರ್ಖಾನೆ ದೊಡ್ಡ ಉದ್ಯಮಗಳು. ಬತ್ತ ಮತ್ತು ತೈಲ ಗಿರಣಿಗಳೂ ಮರಕೊಯ್ಯುವ ಕಾರ್ಖಾನೆಗಳೂ ಇವೆ. ಮರಗೆಲಸ ಮತ್ತು ಖಾದಿ ಗ್ರಾಮೋದ್ಯೋಗ ಮುಂತಾದ ಗೃಹಕೈಗಾರಿಕೆಗಳೂ ಇವೆ.

ಈ ತಾಲ್ಲೂಕಿನಲ್ಲಿ 352 ಕಿಮೀ ರಸ್ತೆ ಇದೆ. ಭದ್ರಾವತಿ-ಕೆಮ್ಮಣ್ಣು ಗುಂಡಿ, ಭದ್ರಾವತಿ-ಜೋಳದಾಳು ಮತ್ತು ಭದ್ರಾವತಿ-ಅಗಸನಹಳ್ಳಿ ಟ್ರಾಂ ಮಾರ್ಗಗಳಿದ್ದು ಕಾರ್ಖಾನೆಗೆ ಅದಿರು ಸಾಗಣೆಗೆ ಅನುಕೂಲವಾಗಿವೆ. ಭದ್ರಾವತಿಯಿಂದ ಶಿವಮೊಗ್ಗ, ಚಿತ್ರದುರ್ಗ, ಬೆಂಗಳೂರು ಮುಂತಾದ ಕಡೆಗಳಿಗೆ ಉತ್ತಮ ಮಾರ್ಗ ಸಂಪರ್ಕವಿದೆ. ಅರಸೀಕೆರೆ-ತಾಳಗುಪ್ಪ ರೈಲುಮಾರ್ಗ ಈ ತಾಲ್ಲೂಕಿನಲ್ಲಿ ಹಾದು ಹೋಗುತ್ತದೆ.

ಈ ತಾಲ್ಲೂಕಿನ ಸುಣ್ಣದಹಳ್ಳಿಯಲ್ಲಿ ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ಜರುಗುವ ವೀರಾಂಜನೇಯ ಜಾತ್ರೆ, ಭದ್ರಾವತಿಯಲ್ಲಿ ಅಕ್ಟೋಬರ್ ತಿಂಗಳಲ್ಲಿ ನಡೆಯುವ ನರಸಿಂಹಸ್ವಾಮಿ ಜಾತ್ರೆ, ಮಾರ್ಚ್ ತಿಂಗಳಲ್ಲಿ ನಡೆಯುವ ಹಾಲದಮ್ಮ ಜಾತ್ರೆಗಳು ಪ್ರಸಿದ್ಧವಾದವು.

ಆನವೇರಿ ಗ್ರಾಮ ಭದ್ರಾವತಿ ನಗರದ ಆಗ್ನೇಯಕ್ಕೆ ಸು. 30 ಕಿಮೀ ದೂರದಲ್ಲಿದೆ. ಇಲ್ಲಿ ನವಶಿಲಾಯುಗದ ಮತ್ತು ಅನಂತರಕಾಲದ ಕೆಲವು ವಸ್ತುಗಳು ದೊರೆತಿವೆ. ಮೊದಲು ಇದಕ್ಕೆ ಆನೆ ಏರಿ ಎಂಬ ಹೆಸರಿತ್ತು. ಆನೆಗಳನ್ನು ಇಲ್ಲಿ ಹಿಡಿಯುತ್ತಿದ್ದರೆಂದು ತಿಳಿದುಬರುತ್ತದೆ. ಚನ್ನಗಿರಿ-ಹೊಳೆಹೊನ್ನೂರು ಮಾರ್ಗದಲ್ಲಿ ಭದ್ರಾವತಿಯಿಂದ ಸು. 24 ಕಿಮೀ ದೂರದಲ್ಲಿ ಎಡೆಹಳ್ಳಿಗೆ ಸೇರಿದಂತೆ ಅಶೋಕನಗರವಿದೆ. ಶರಾವತಿ ಯೋಜನೆಯಿಂದ ಮುಳುಗಡೆಯಾದ ಗ್ರಾಮಸ್ಥರಿಗೆ ಇಲ್ಲಿ ವಸತಿ ಕಲ್ಪಿಸಲಾಗಿದೆ. *

ಭದ್ರಾವತಿ ಈ ತಾಲ್ಲೂಕು ಮತ್ತು ಹೋಬಳಿಯ ಆಡಳಿತ ಕೇಂದ್ರ ಮತ್ತು ದೊಡ್ಡ ಕೈಗಾರಿಕಾ ನಗರ. ಶಿವಮೊಗ್ಗ ನಗರದ ಆಗ್ನೇಯಕ್ಕೆ 18 ಕಿಮೀ ದೂರದಲ್ಲಿದೆ. ಭದ್ರಾ ನದಿಯ ಎರಡೂ ದಡಗಳ ಮೇಲೆ ಈ ಪಟ್ಟಣ ಹರಡಿದೆ. ನಗರದ ಒಟ್ಟು ಜನಸಂಖ್ಯೆ 1,60,662.

ಅರಸೀಕೆರೆ-ತಾಳಗುಪ್ಪ ರೈಲುಮಾರ್ಗದಲ್ಲಿ ಭದ್ರಾವತಿ ಒಂದು ಪ್ರಮುಖ ನಿಲ್ದಾಣ. ಈ ಪಟ್ಟಣದಿಂದ ಶಿವಮೊಗ್ಗ, ಬೆಂಗಳೂರು, ಚಿತ್ರದುರ್ಗ ಮುಂತಾದೆಡೆಗೆ ಉತ್ತಮ ರಸ್ತೆ ಸಂಪರ್ಕವಿದೆ. ಇಲ್ಲಿ ಭಾರಿ ಕೈಗಾರಿಕೆ ಉದ್ಯಮಗಳಾದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ (1923), ಮೈಸೂರು ಪೇಪರ್ ಮಿಲ್ಸ್ (1936), ಸಿಮೆಂಟ್ ಕಾರ್ಖಾನೆ (1938) ಸ್ಥಾಪಿತವಾಗಿವೆ. ಈ ಕಾರ್ಖಾನೆಗಳಿಂದ ಭದ್ರಾವತಿ ಒಂದು ಕೈಗಾರಿಕಾ ಮತ್ತು ವ್ಯಾಪಾರ ಕೇಂದ್ರವಾಗಿ ಬೆಳೆದಿದೆ. ಪೇಪರ್ ಟೌನ್ ಎಂದು ಕರೆಯುವ ಹೊಸ ಬಡಾವಣೆಯನ್ನು ಆಧುನಿಕ ರೀತಿಯಲ್ಲಿ ಕಟ್ಟಿ ಕೈಗಾರಿಕಾ ನಗರವೊಂದರಲ್ಲಿರುವಂಥ ಉತ್ತಮ ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗಿದೆ.

ಭದ್ರಾ ನದಿ ಇಲ್ಲಿ ಒಂದು ತಿರುವನ್ನು ಪಡೆದು ಮುಂದೆ ಹರಿಯುವುದು. ಸಂಸ್ಕೃತದಲ್ಲಿ ತಿರುವು ಪದಕ್ಕೆ ವಂಕಿ ಎನ್ನುತ್ತಾರೆ. ಆದ್ದರಿಂದ ವಂಕಿಪುರ (ಬಂಕಿಪುರ), ಬೆಂಕಿಪುರ ಎಂಬ ಹೆಸರು ಇದಕ್ಕಿತ್ತು. ಮುಂದೆ ಕಬ್ಬಿಣ ಕಾರ್ಖಾನೆ ಸ್ಥಾಪನೆಯಾದ ಅನಂತರ ಭದ್ರಾವತಿ ಎಂದು ಕರೆಯಲಾಯಿತು. 1413ರಲ್ಲಿ ದುಮ್ಮಿ ಮತ್ತು ಬಾಣೂರು ನಾಡುಗಳ ನಾಯಕನಾದ ಎರೆಲಕ್ಕನಾಯಕ ಬಂಕಿಪುರದ ಸುತ್ತಲ ಕಾಡನ್ನು ಕಡಿಸಿ ನರಸಿಂಹಪುರ ಮತ್ತು ಲಕ್ಷ್ಮೀಪುರ ಎಂಬ



ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ

ಎರಡು ಗ್ರಾಮಗಳನ್ನು ಸ್ಥಾಪಿಸಿದನೆಂದು 1413ರ ಒಂದು ಶಾಸನ ತಿಳಿಸುತ್ತದೆ. ಆದರೆ ಈ ಊರು ಇನ್ನೂ ಪ್ರಾಚೀನವಾದುದು. ಹಳೆಯ ಊರು ಎಂದು ಕರೆಯುವ ಭಾಗ ಹೊಯ್ಸಳರ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ಇಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯ ಆ ಕಾಲದ ಒಂದು ಸುಂದರ ವಾಸ್ತುಕೃತಿ. ಈ ದೇವಾಲಯ ತ್ರಿಕೂಟಾಚಲ. ಪ್ರತಿ ಗರ್ಭಗೃಹಕ್ಕೂ ಸುಕನಾಸಿ ಮತ್ತು ಶಿಖರ ಇವೆ. ಮುಖ್ಯ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹ, ದಕ್ಷಿಣದಲ್ಲಿ ವೇಣುಗೋಪಾಲ ಮತ್ತು ಉತ್ತರದಲ್ಲಿ ಚೆನ್ನಕೇಶವ ಮೂರ್ತಿಗಳಿವೆ. ಸುಕನಾಸಿ ಮತ್ತು ನವರಂಗದ ಕಂಬಗಳು ಹಾಗೂ ಭುವನೇಶ್ವರಿಗಳು ಬಹು ನಾಜೂಕಾದ ಕೆತ್ತನೆಗಳು. **(ಕೆ.ಆರ್.ಆರ್.;*)**

**ಭರತನಾಟ್ಯ**: ಭಾರತದ ಪ್ರಾಚೀನ ನಾಟ್ಯ ಪದ್ಧತಿ. ಇದು ಮನರಂಜನೆಯ ಮಾಧ್ಯಮ ಮಾತ್ರವಾಗಿರದೆ ಸಂಗೀತ, ಶಿಲ್ಪಾದಿ ಕಲೆಗಳಂತೆ ಮೋಕ್ಷಸಾಧನೆಯ ಪರಮೋದ್ದೇಶವುಳ್ಳದ್ದು. ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತವಾಗಿದ್ದು ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದ ಅರಮನೆಗಳು ಮತ್ತು ದೇವಾಲಯಗಳು ಹೆಚ್ಚಾಗಿ ಈ ನಾಟ್ಯಕಲೆಯನ್ನು ಪೋಷಿಸಿ ಬೆಳಸಿದವು. ಭಾರತೀಯ ನೃತ್ಯದ ಅಧಿದೇವತೆ ನಟರಾಜ (ಶಿವ). ನೃತ್ಯದಲ್ಲಿ ತಾಂಡವ, ಲಾಸ್ಯಗಳೆಂಬ ಎರಡು ಪ್ರಮುಖ ಪ್ರಕಾರಗಳಿವೆ. ಶಿವನ ಮುಖ್ಯಗಣಗಳಲ್ಲೊಬ್ಬನಾದ ತಂಡುವಿನಿಂದ ಶಿವನ ಆಜ್ಞಾನುಸಾರ ಪ್ರಕಟಗೊಂಡ ನೃತ್ಯಪ್ರಕಾರ 'ತಾಂಡವ' ನೃತ್ಯವೆನಿಸಿತು. ಕೃಷ್ಣನ ಮೊಮ್ಮಗ

ಶೃಂಗಾರ ಅಭಿನಯದ ಒಂದು ಭಂಗಿ

ಅನಿರುದ್ಧನ ಹೆಂಡತಿ ಉಷೆಗೆ ಪಾರ್ವತಿ ಬೋಧಿಸಿದ ನೃತ್ಯಪ್ರಕಾರ 'ಲಾಸ್ಯ' ನೃತ್ಯವೆನಿಸಿತು. ಈ ರೀತಿಯ ಹಲವಾರು ಐತಿಹ್ಯಗಳು ಭರತನಾಟ್ಯದ ಉಗಮಕ್ಕೆ ಸಂಬಂಧಿಸಿದಂತೆ ಇವೆ.

ಭರತನಾಟ್ಯಕ್ಕೆ ಸಂಬಂಧಿಸಿದಂತೆ ಇದುವರೆಗೂ ಉಪಲಬ್ಧವಿರುವ ಕೃತಿಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಭರತಮುನಿಯ 'ನಾಟ್ಯಶಾಸ್ತ್ರ'. ಭರತ ನಾಟ್ಯ ಪದ್ಧತಿಯ ಪ್ರಾಚೀನತೆಯನ್ನು ಸು. 3,000 ವರ್ಷಕ್ಕೂ ಹಿಂದಿನಿಂದ ಗುರುತಿಸುವ ಪ್ರಯತ್ನಗಳಾಗಿವೆ. ಭರತಮುನಿಯ ನಾಟ್ಯಶಾಸ್ತ್ರದ ರಚನೆಯ ಕಾಲವನ್ನು ಕ್ರಿಸ್ತಶಕದ ಆರಂಭ ಅಥವಾ ಅದಕ್ಕಿಂತ ಸ್ವಲ್ಪ ಅನಂತರದ್ದು ಎಂದು ವಿದ್ವಾಂಸರು ಗುರುತಿಸಿರುತ್ತಾರೆ. ಮೂವತ್ತಾರು ಅಧ್ಯಾಯಗಳಿರುವ ಈ ಕೃತಿಯಲ್ಲಿ ನಾಟ್ಯ, ಸಂಗೀತ, ಕಾವ್ಯ, ಅಲಂಕಾರಾದಿ ಹಲವು ವಿಷಯಗಳು ಚರ್ಚೆಗೊಂಡಿವೆ. ನಾಲ್ಕನೆಯ ಅಧ್ಯಾಯ 'ತಾಂಡವಲಕ್ಷಣ'ವೇ ಭರತನಾಟ್ಯಪದ್ಧತಿಗೆ ಆಕರ. ಇದರಲ್ಲಿ ನೂರೆಂಟು 'ಕರಣ'ಗಳನ್ನೂ ಅಭಿನಯದ ಸಂದರ್ಭ, ಶೈಲಿ, ಅಂಗಹಾರಗಳು, ರೇಚಕಗಳು ಇತ್ಯಾದಿ ವಿಷಯಗಳನ್ನೂ ಪ್ರಸ್ತಾಪಿಸಲಾಗಿದೆ. ಈ ಕೃತಿಯ ಅನಂತರದಲ್ಲಿ ಬಂದ ನಂದಿಕೇಶ್ವರನ 'ಅಭಿನಯ ದರ್ಪಣ', ಶುಭಂಕರ ಕವಿಯ 'ಹಸ್ತಮುಕ್ತಾವಲಿ' ಮೊದಲಾದ ಹಲವು ಕೃತಿಗಳು ನಾಟ್ಯಶಾಸ್ತ್ರದ ವಿಚಾರಗಳನ್ನು ಪ್ರಸ್ತಾಪಿಸಿವೆ.

ಭರತನಾಟ್ಯ ಪ್ರಾಚೀನವಾದದ್ದಾದರೂ ಈಗಿರುವ ಪದ್ಧತಿಗೆ 'ಭರತನಾಟ್ಯ' ವೆಂಬ ಹೆಸರು ಬಂದದ್ದು 100 ವರ್ಷಗಳ ಹಿಂದೆ. ಈಗೀಗ ಈ ಹೆಸರು ಬಹಳ ಬಳಕೆಗೆ ಬರುತ್ತಿದೆ. ಮೊದಲಿಗೆ ಇದನ್ನು ಸಾದಿರ್‌ನಾಟ್ಯ ಎಂದು ಕರೆಯಲಾಗುತ್ತಿತ್ತು. ಇದಕ್ಕೆ ದಾಸೀ ಆಟ್ಟಂ, ಚಿನ್ನಮೇಳಂ, ತಂಜಾವೂರು ನಾಚ್, ತಾಫೆ ಎಂಬ ಮೊದಲಾದ ಹೆಸರುಗಳಿದ್ದವು.

ಭರತನಾಟ್ಯ ಶಾಸ್ತ್ರಗಳನ್ನು ಆಧರಿಸಿದ್ದರೂ ಕಲ್ಪನೆ ಮತ್ತು ಹೊಸಹುಟ್ಟುಗಳಿಗೆ ಇದರಲ್ಲಿ ಅವಕಾಶ ಹೆಚ್ಚು. ಕಲಾವಿದ ತನ್ನ ಕಲ್ಪನೆ ಹಾಗೂ ಮನೋಭಾವಗಳಿಗನುಗುಣವಾಗಿ ತನ್ನದೇ ಮೂರ್ತರೂಪವನ್ನು ನೀಡಲು ಹೆಚ್ಚು ಅವಕಾಶ ಈ ಕಲೆಯಲ್ಲಿದೆ. ಈ ಕಲೆಯಲ್ಲಿ ತಾಳ, ಹೆಜ್ಜೆಯ ವಿನ್ಯಾಸ, ಹಸ್ತಗಳ ವಿನಿಯೋಗ ಮತ್ತು ಮುಖಭಾವಗಳಿಗೆ ಹೆಚ್ಚು ಪ್ರಾಮುಖ್ಯ ಇದೆ. ಭರತನಾಟ್ಯದಲ್ಲಿ ನೃತ್ಯಮಾತ್ರವೇ ಅಲ್ಲ ರಂಗಸಜ್ಜಿಕೆ, ಸಂಗೀತ, ನಾಟಕ, ಕವಿತ್ವ, ಲಯ, ಬಣ್ಣಗಳ ಜೋಡಣೆ ಎಲ್ಲವನ್ನೂ ಅಳವಡಿಸಲಾಗಿರುತ್ತದೆ. ಭಾವ, ರಾಗ, ತಾಳಗಳು ಒಂದಕ್ಕೊಂದು ಹೆಣೆದುಕೊಂಡಿರುತ್ತವೆ. ಆಂತರಿಕ ಭಾವಸ್ಫುರಣೆಗೆ ಮುಖ ಹಾಗೂ ಇತರ ಅವಯವಗಳನ್ನು ಬಳಸಲಾಗುತ್ತದೆ.

ಈ ನಾಟ್ಯದಲ್ಲಿ ನೃತ್ಯ, ನೃತ್ತ, ನಾಟ್ಯ ಎಂಬ ಮೂರು ವಿಭಾಗಗಳಿವೆ. ಈ ಮೂರು ಶಬ್ದಗಳ ಧಾತು 'ನಟ್' ಎಂಬುದು. 'ನೃತ್ತ'ವೆಂದರೆ ರಸ-ಭಾವಗಳಿಲ್ಲದ ತಾಳ-ಲಯ ಪ್ರಧಾನವಾದ ಕುಣಿತ. 'ನೃತ್ಯ'ವು ಸಂಗೀತ ಮತ್ತು ಅಭಿನಯಗಳನ್ನು ಹೊಂದಿದ್ದು ರಸಭಾವಗಳಿಂದ ಶೋಭಿಸುತ್ತದೆ. ಈ ನೃತ್ಯದ ವಿಸ್ತೃತರೂಪವೇ ನಾಟ್ಯ. ಅಭಿನಯದ ಅಂಶಗಳು, ವೇಷ-ಭೂಷಣ, ಮಾತುಗಾರಿಕೆ, ಸಂಗೀತಾದಿಗಳು ನಾಟ್ಯವನ್ನು ಪ್ರಭಾವಶಾಲಿಯಾಗಿಸುವ ಅಂಶಗಳಾಗಿವೆ.

ನಾಟ್ಯದ ಭಂಗಿಗಳಿಗೆ ಸಂಬಂಧಿಸಿದಂತೆ ಸಮಭಂಗ, ಅಭಂಗ, ಅತಿಭಂಗ, ತ್ರಿಭಂಗ ಎಂಬ ಮುಖ್ಯವಾದ ಭಂಗಿಗಳಿವೆ. ಇವು ಮುಖ್ಯವಾಗಿ ನೃತ್ಯಮಾಡುವಾಗ ಯಾವ ಪ್ರತಿರೂಪದ ಸ್ವಭಾವಾದಿಗಳನ್ನು ನರ್ತಕ/ನರ್ತಕಿ ಪ್ರಕಟಿಸಬೇಕಿರುತ್ತದೋ ಅದಕ್ಕನುಗುಣವಾಗಿರುತ್ತದೆ. ಭಂಗಿಗಳಂತೆಯೇ ಪ್ರಮುಖವಾಗಿರುವ ಅಂಶವೆಂದರೆ 'ರೇಚಕಗಳು'. ಅಂಗದ ವರ್ತುಲಾಕಾರದ ಚಲನೆಯೇ ರೇಚಕ, ಇದರಲ್ಲಿ ಪಾದ, ಕಟಿ, ಹಸ್ತ ಮತ್ತು ಕತ್ತಿನ ರೇಚಕಗಳು ಅಧಿಕವಾಗಿರುತ್ತವೆ.

ಆಂಗಿಕ, ವಾಚಿಕ, ಆಹಾರ್ಯ, ಸಾತ್ತ್ವಿಕ ಎಂಬ ನಾಲ್ಕು ಬಗೆಯ ಅಭಿನಯಗಳನ್ನು ನಾಟ್ಯದಲ್ಲಿ ಗುರುತಿಸಲಾಗಿದೆ. ಆಂಗಿಕಾಭಿನಯದಲ್ಲಿ ಮತ್ತೆ ಅಂಗ, ಉಪಾಂಗ, ಪ್ರತ್ಯಂಗಗಳೆಂಬ ಮೂರು ಒಳಪ್ರಭೇದಗಳಿವೆ. ಅವಯವಗಳ ಚಲನೆಯಿಂದ ಸ್ಫುರಿಸುವ ಭಾವ-ರಸಗಳು ಆಂಗಿಕಾಭಿನಯವೆನಿಸುತ್ತದೆ. ಸಂಗೀತ ಸಾಹಿತ್ಯದ ಸಹಾಯದಿಂದ ಅಭಿನಯಗೊಳ್ಳುವುದು ವಾಚಿಕಾಭಿನಯ. ಆಹಾರ್ಯಾಭಿನಯದಲ್ಲಿ ಉಡುಪು, ವೇಷ-ಭೂಷಣಗಳು ಪ್ರಧಾನವಾಗುತ್ತವೆ. ಆಂತರಿಕ ಭಾವನೆ ಅಥವಾ ಇಂಗಿತಗಳಿಂದ ಮುಖಭಾವದಲ್ಲಿ ಪ್ರದರ್ಶಿಸುವ ಸ್ತಬ್ಧತೆ, ಬೆದರಿಕೆ, ರೋಮಾಂಚನ, ಕಣ್ಣೀರು, ಆನಂದ, ಕೋಪ, ಆಶ್ಚರ್ಯಾದಿ ಭಾವಗಳ ಅಭಿನಯವೇ ಸಾತ್ತ್ವಿಕಾಭಿನಯ.

ಭರತನಾಟ್ಯದ ವಿಶಿಷ್ಟವಾದ ಅಂಶಗಳೆಂದರೆ 'ಹಸ್ತಮುದ್ರೆ'ಗಳು. ಇವು ನಾಟ್ಯಕ್ಕಾಗಿಯೇ ಬಳಸುವ 'ಸ್ವಹಸ್ತಭಾಷೆ'. ಇವುಗಳ ಒಟ್ಟು ಸಂಖ್ಯೆಯ ಬಗೆಗೆ ಶಾಸ್ತ್ರಕಾರರಲ್ಲಿ ಒಮ್ಮತವಿಲ್ಲದಿದ್ದರೂ ಭರತ ತನ್ನ ಕೃತಿಯಲ್ಲಿ ಒಟ್ಟು 64 ಮುದ್ರೆಗಳನ್ನು, ಅವುಗಳ ಲಕ್ಷಣ, ವಿನಿಯೋಗಗಳನ್ನು ಹೇಳಿದ್ದಾನೆ. ಹಸ್ತಪ್ರಯೋಗದಲ್ಲಿಯೂ ಅಸಂಯುತಹಸ್ತ, ನೃತ್ತಹಸ್ತ, ಸಂಯುತಹಸ್ತ ಹೀಗೆ ಹಲವು ಪ್ರಭೇದಗಳನ್ನು ಗಮನಿಸಬಹುದು.

ಚಾರಿಗಳು, ಮಂಡಲಗಳು, ನಡೆಗಳು, ಸ್ಥಾನಕಗಳು, ಕರಣಗಳು, ಅಂಗಹಾರ, ಅಡವುಗಳು, ಅಂಗಶುದ್ಧ– ಈ ಎಲ್ಲವೂ ಕ್ರಮವಾಗಿ ನೃತ್ಯದ ಪರಿಭಾಷೆಗಳಾಗಿದ್ದು ನಾಟ್ಯದಲ್ಲಿ ನೃತ್ಯಗಾರ/ಗಾರ್ತಿ ಅನುಸರಿಸಬೇಕಾದ ಅಂಗಾಂಗಳ ಚಲನೆ ಹಾಗೂ ಭಂಗಿಗಳ ವಿಷಯಕ್ಕೆ ಸಂಬಂಧಿಸಿವೆ.

ಭರತನಾಟ್ಯದಲ್ಲಿ ಎಂಟುರಸಗಳನ್ನು ಗುರುತಿಸಲಾಗಿದೆ. ಶೃಂಗಾರ, ಹಾಸ್ಯ,ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ ಮತ್ತು ಅದ್ಭುತ. ನಾಟ್ಯಶಾಸ್ತ್ರದಲ್ಲಿ ಶಾಂತರಸವನ್ನು ಸೂಚಿಸಿಲ್ಲವಾದರೂ ಇಂದಿನ ನಾಟ್ಯ ಪದ್ಧತಿಯಲ್ಲಿ ಶಾಂತವನ್ನೂ ರಸವೆಂದು ಪರಿಗಣಿಸಿ ರಸಗಳನ್ನು ನವರಸಗಳೆಂದು ಪರಿಗಣಿಸಲಾಗಿದೆ. ಪ್ರತಿಯೊಂದು ಸ್ಥಾಯೀಭಾವದಿಂದ ಒಂದೊಂದು ರಸಕ್ಕೆ ಒಂದೊಂದು ಅಧಿದೇವತೆ ಹಾಗೂ ಒಂದೊಂದು ಬಣ್ಣವನ್ನು ಸೂಚಿಸಲಾಗಿದೆ. ಉದಾಹರಣೆಗೆ: ಶೃಂಗಾರಕ್ಕೆ ಸ್ಥಾಯೀಭಾವ ರತಿ, ಪ್ರೇಮ; ದೇವತೆ ವಿಷ್ಣು; ಬಣ್ಣ ಹಸುರು ಇತ್ಯಾದಿ.

ಸಾಂಪ್ರದಾಯಿಕವಾಗಿ ಭರತನಾಟ್ಯ ಪ್ರದರ್ಶನದಲ್ಲಿ ಅಲರಿಪು, ಜತಿಸ್ವರ, ಶಬ್ದಂ, ವರ್ಣ, ಪದಗಳು, ತಿಲ್ಲಾನ ಮತ್ತು ಒಂದೆರಡು ಶ್ಲೋಕಗಳಿರುತ್ತವೆ. ಅಂದರೆ ಭರತನಾಟ್ಯ ಕಲೆಯಲ್ಲಿ ಇಷ್ಟೇ ಕಾರ್ಯಕ್ರಮವೆಂದು ಅರ್ಥವಲ್ಲ. ನೃತ್ಯ ಮತ್ತು ನಾಟ್ಯಕ್ಕೆ ಯೋಗ್ಯವಾದಂಥ ಯಾವುದೇ ಹಾಡನ್ನಾಗಲೀ ಕಥೆಯನ್ನಾಗಲೀ ನಿರೂಪಿಸಬಹುದು.

ಅಲರಿಪು ಎಂಬುದು ಒಂದು ಚಿಕ್ಕ ನೃತ್ತ. ಇದು ಪ್ರಾರ್ಥನಾ ಶೈಲಿಯದು. ದೇವತೆಗಳ ಆರಾಧನೆ ಮತ್ತು ಸಭಾಮರ್ಯಾದೆಯಾಗಿ ನರ್ತಿಸುವಂತಹದ್ದು. ಜತಿಸ್ವರವು ಕಾರ್ಯಕ್ರಮದ ಎರಡನೆಯ ನೃತ್ತ. ಇದು ಕಷ್ಟಕರವಾದ ಕಾಲ್ಚಲನೆ ಹಾಗೂ ತಾಳ ವೈಚಿತ್ರ್ಯಗಳಿಂದ ಕುಣಿಯುವ ನೃತ್ಯ. ಶಬ್ದಂ ಎಂಬುದು ಮೂರನೆಯ ನೃತ್ಯ. ಮೊದಲ ಬಾರಿಗೆ ಪ್ರೇಕ್ಷಕನಿಗೆ ಅಭಿನಯದ ಪರಿಚಯ ಮಾಡಿಕೊಡುತ್ತದೆ. ವರ್ಣವೆಂಬುದು ಭರತನಾಟ್ಯ ಕಾರ್ಯಕ್ರಮದ ಅತಿಪ್ರಮುಖ ನರ್ತನ. ಇದು ಜಟಿಲವಾಗಿಯೂ ಪರಿಷ್ಕಾರವಾಗಿಯೂ ಇರುತ್ತದೆ. ಇದರಲ್ಲಿ ಅಭಿನಯವೂ ನೃತ್ತವೂ ಮಿಳಿತವಾಗಿ ನೃತ್ಯ ಎನಿಸಿಕೊಳ್ಳುತ್ತದೆ. ಇದರಲ್ಲಿ ಕಲಾವಿದನ ಸಾಧನೆ, ಸಾಮರ್ಥ್ಯ, ಗ್ರಹಣಶಕ್ತಿ, ಯೋಗ್ಯತೆ, ಅರ್ಹತೆ, ಚಾತುರ್ಯ ಮತ್ತು ದೇಹದಾರ್ಢ್ಯದ ಸ್ಪಷ್ಟ ಅರಿವಾಗುತ್ತದೆ. 'ವರ್ಣ'ಗಳಲ್ಲಿ ಚೌಕ, ತಾನ, ಪದ ಮತ್ತು ಜತಿಸ್ವರಗಳೆಂಬ 4 ವಿಧಗಳಿವೆ. ಪದಂ ಎಂಬುದು ವರ್ಣದ ಅನಂತರ ಪ್ರದರ್ಶನಗೊಳ್ಳುವಂತಹುದು. ಇವು ಹಲವು ರಾಗಗಳಲ್ಲೂ, ರಾಗಮಾಲಿಕೆಯಲ್ಲಿಯೂ ಹಲವು ತಾಳ ಜಾತಿಗಳಲ್ಲಿಯೂ ಇರುತ್ತದೆ. ನೃತ್ಯ ಹೆಚ್ಚಾಗಿಲ್ಲದ ಅಭಿನಯಕ್ಕೆ ಮಾತ್ರ ಪ್ರಾಮುಖ್ಯ ಇರುವ ಹಲವು ಹಾಡುಗಳನ್ನು ಇದು ಒಳಗೊಂಡಿರುತ್ತದೆ. ತಿಲ್ಲಾನ ಎಂಬುದು ಭರತನಾಟ್ಯದ ಕೊನೆಯ ಪ್ರದರ್ಶನ ಭಾಗವಾಗಿದ್ದು ಕಲಾವಿದನ ತಾಳಜ್ಞಾನ, ಪ್ರಜ್ಞಾಶಕ್ತಿಗಳಿಗೆ ಸವಾಲಾಗಿರುತ್ತದೆ. ಇದಕ್ಕೆ ಸಂವಾದಿಯಾಗಿ ಉತ್ತರ ಭಾರತದ ಕಥಕ್ ಸಂಪ್ರದಾಯದಲ್ಲಿ 'ಕವಿತಾ' ಎಂಬುದಾಗಿಯೂ ಆಂಧ್ರ ಭಾಗದ ಕೂಚಿಪುಡಿ ಸಂಪ್ರದಾಯದ ಶಾಸ್ತ್ರೀಯ ನೃತ್ಯ ಕಲೆಯಲ್ಲಿ 'ದರು' ಎಂಬ ಪ್ರದರ್ಶನ ಭಾಗಗಳನ್ನು ಗಮನಿಸಬಹುದು. ಭರತನಾಟ್ಯದ ಅತ್ಯಂತ ಕಡೆಯ ಪ್ರದರ್ಶನ ಶ್ಲೋಕ. ಶೃಂಗಾರ ರಸದಿಂದ ಕೂಡಿ ವಿನೋದವಾಗಿ, ರಮ್ಯವಾಗಿ ಚಿತ್ರಿತವಾಗಿರುವ ಸಾಹಿತ್ಯಭಾಗಗಳನ್ನೊಳಗೊಂಡ ಶ್ಲೋಕಗಳನ್ನು ಈ ಪ್ರದರ್ಶನಕ್ಕೆ ಆರಿಸಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಜಯದೇವ ಕವಿಯ ಗೀತಗೋವಿಂದದ ಅಷ್ಟಪದಿಗಳು ಹೆಚ್ಚು ಪ್ರದರ್ಶನಗೊಳ್ಳುತ್ತವೆ.

ತಂಜಾವೂರಿನ ಅಚ್ಯುತಪ್ಪನಾಯಕನ ಆಳಿಕೆಯ ಕಾಲದಿಂದ (1572–1614) ಭರತನಾಟ್ಯದ ಪುನರುಜ್ಜೀವನ ಕಾಲವನ್ನು ಗುರುತಿಸಬಹುದು.

ನಾಯಿಕಾಭಾವ–ವಿಪ್ರಲಂಬೆ

ಇವನ ಅನಂತರ ರಘುನಾಥನಾಯಕ, ವಿಜಯರಾಘವನಾಯಕ, ಪ್ರತಾಪಸಿಂಹ, ತುಳಜಾಜಿ (1741–87)– ಈ ರಾಜರುಗಳ ಕಾಲದಲ್ಲಿಯೂ ಈ ಕಲೆ ಸಾಕಷ್ಟು ಬೆಳವಣಿಗೆ ಕಂಡಿತು. ತಂಜಾವೂರಿನ ಮಹಾದೇವಿ ಅಣ್ಣವಿ, ಸುಬ್ಬರಾಯ ನಟ್ಟುವನಾರ್ (ಪ್ರಸಿದ್ಧ ನಾಟ್ಯಾಚಾರ್ಯ) ಮತ್ತು ತಂಜಾವೂರು ಸೋದರರೆಂದೇ ಪ್ರಸಿದ್ಧರಾದ ಅವನ ನಾಲ್ವರು ಮಕ್ಕಳು ಚಿನ್ನಯ್ಯ, ಪೊನ್ನಯ್ಯ, ವಡಿವೇಲು, ಶಿವಾನಂದಂ ಎಂಬುವರು ನೃತ್ತ,

ಅಭಿನಯ, ನೃತ್ಯಗಳನ್ನು ಬೆರೆಸಿ, ಕರ್ನಾಟಕ ಸಂಗೀತವನ್ನು ಅದಕ್ಕೆ ಅಳವಡಿಸಿ ಈ ನಾಟ್ಯ ಸಂಪ್ರದಾಯವನ್ನು ಬೆಳೆಸಲು ಕಾರಣಕರ್ತರಾದರು. ವೆಂಕಟಮಖಿ, ಕ್ಷೇತ್ರಯ್ಯ, ನಾರಾಯಣ ತೀರ್ಥಯತಿ, ಮೇಲತ್ತೂರು ವೆಂಕಟರಾಮಾಶಾಸ್ತ್ರಿ, ದೀಕ್ಷಿತರು, ಶ್ಯಾಮಾಶಾಸ್ತ್ರಿ, ಮೊದಲಾದ ವಾಗ್ಗೇಯ ಕಾರರೂ ಈ ಸಂಪ್ರದಾಯದ ಊರ್ಧ್ವಮುಖತೆಗೆ ನೆರವಾಗಿದ್ದಾರೆ. ಅಲರಿಪು, ಜತಿಸ್ವರ, ಶಬ್ದ, ವರ್ಣ, ತಿಲ್ಲಾನಗಳನ್ನೊಳಗೊಂಡ ಭರತನಾಟ್ಯ ನಿರೂಪಣೆ ಈ ಕಾಲದಲ್ಲಿಯೇ ಪ್ರಾರಂಭವಾಯಿತು.

ಸು. 700 ವರ್ಷಗಳಿಗೂ ಹಿಂದೆ ಇಡೀ ದೇಶವ್ಯಾಪಿಯಾಗಿದ್ದ ಈ ನಾಟ್ಯಪದ್ಧತಿ ಉತ್ತರ ಭಾರತದಲ್ಲಾದ ರಾಜಕೀಯ ಗೊಂದಲಗಳ ಪ್ರಭಾವದಿಂದ ಅಲ್ಲಿ ಕಣ್ಮರೆಗೊಂಡು ದಕ್ಷಿಣ ಭಾರತದಲ್ಲಿ ಮಾತ್ರ ಉಳಿಯುವಂತಾಯಿತು. ಇಲ್ಲಿಯೂ 1930 ದಶಕದ ವರೆಗೆ ದೇವದಾಸಿ ಸಂಪ್ರದಾಯದ ಆಸರೆಯಲ್ಲಿ ಬೆಳವಣಿಗೆ ಕಂಡು ಜನರ ತಿರಸ್ಕಾರಭಾವನೆಗೆ ಪಕ್ಕಾಗಿತ್ತು. ಕುಲೀನ ಮನೆತನದ ಹೆಣ್ಣುಮಕ್ಕಳು ನರ್ತನವನ್ನು ಕಲಿಯುತ್ತಿರಲಿಲ್ಲ. 1933ರಲ್ಲಿ ಮದರಾಸು ಸಂಗೀತ ಅಕಾಡೆಮಿಯ ಆಶ್ರಯದಲ್ಲಿ ಕಲ್ಯಾಣಿ ಸಹೋದರಿಯರ ಭರತನಾಟ್ಯ ಪ್ರದರ್ಶನಗೊಂಡು ಅನಂತರದಲ್ಲಿ ಈ ನೃತ್ಯಕಲೆಗೆ ತಮಿಳುನಾಡಿನಲ್ಲಿ ಗೌರವ ಪ್ರಾಪ್ತವಾಯಿತು. 1934ರಲ್ಲಿ ಕಾಶಿಯಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದ ಸಂದರ್ಭದಲ್ಲಿ ನಡೆದ ಬಾಲಸರಸ್ವತಿಯವರ ನಾಟ್ಯಪ್ರದರ್ಶನದಿಂದ ಮುಂದೆ ಉತ್ತರ ಭಾರತದಲ್ಲಿಯೂ ಈ ಕಲೆಗೆ ಮನ್ನಣೆ ಪ್ರಾಪ್ತವಾಯಿತು. ಹೀಗೆ ಭರತನಾಟ್ಯ ಸಂಪ್ರದಾಯಕ್ಕೆ ಗೌರವವನ್ನು ಗಳಿಸಿಕೊಟ್ಟವರಲ್ಲಿ ಪಂದನಲ್ಲೂರು ಮೀನಾಕ್ಷಿ ಸುಂದರಂಪಿಳ್ಳೆಯವರ ಹೆಸರೂ ಬಹಳ ದೊಡ್ಡದು. ಇವರ ಮಕ್ಕಳಾದ ಮುತ್ತಯ್ಯಪಿಳ್ಳೆ, ಪೊನ್ನಯ್ಯಪಿಳ್ಳೆ ಹಾಗೂ ಶಿವಾನಂದಂ ನಟ್ಟುವನಾರ್ ವಂಶದಲ್ಲಿ ಬಂದ ಕಿಟ್ಟಪ್ಪ, ವಷವೂರ್ ರಾಮಯ್ಯಪಿಳ್ಳೆ ಮೊದಲಾದವರು ಭರತನಾಟ್ಯದ ಪ್ರಸಿದ್ಧ ಗುರುಗಳು.

ಭರತನಾಟ್ಯವನ್ನು ಗುರುಗಳಿಂದ ವಿಧಿವತ್ತಾಗಿ ಕಲಿತು ಸಾಧನೆಯಿಂದ ವಿದ್ಯೆಯನ್ನು ಸಾಕ್ಷಾತ್ಕರಿಸಿಕೊಂಡು ಅಪಾರ ಜನಮನ್ನಣೆಗೆ ಪಾತ್ರರಾಗಿ ಈ ಕಲೆಯ ಬೆಳವಣಿಗೆಗೆ ಶ್ರಮಿಸಿದ ಹಲವಾರು ಪ್ರಸಿದ್ಧ ವಿದ್ವಾಂಸರಿದ್ದಾರೆ. ಇವರಲ್ಲಿ ಅಭಿನಯಕ್ಕೆ ಹೆಸರಾದ ಬಾಲಸರಸ್ವತಿಯವರು ಪ್ರಮುಖರು. ಅಡಿಯಾರಿನ ಕಲಾಕ್ಷೇತ್ರವನ್ನು ನಡೆಸುತ್ತ ವಿಶ್ವಖ್ಯಾತರಾಗಿರುವ ರುಕ್ಮಿಣೀದೇವಿಯವರು ಹಳ್ಳಿಹಳ್ಳಿಗಳನ್ನು ಸುತ್ತಿ ಈ ಕಲೆಯನ್ನು ಹಿರಿಯಗುರುಗಳಿಂದ ಕಲಿತವರು. ಅಷ್ಟೇ ಅಲ್ಲ ಭರತ ನಾಟ್ಯಪದ್ಧತಿಯ ಪುನರುಜ್ಜೀವನಕ್ಕಾಗಿ ಮುಂಚೂಣಿಯಲ್ಲಿ ಶ್ರಮಿಸಿದವರು. ದೇವದಾಸಿ ಸಂಪ್ರದಾಯದ ಆಸರೆಯಿಂದ ಈ ಕಲೆಗೆ ಮುಕ್ತಿ ದೊರಕಿಸಿ ಈ ಕಲೆಯ ಬಗೆಗಿನ ಕೀಳು ಭಾವನೆಗಳನ್ನು ಅಳಿಸಲು, ಗೌರವವನ್ನು ಈ ಕಲೆಗೆ ತಂದುಕೊಡಲು ಗಣನೀಯವಾಗಿ ಶ್ರಮಿಸಿದವರು ಇವರು. ರಾಧಾ ಶ್ರೀರಾಮ್, ಶಾರದಾ, ವೈಜಯಂತಿಮಾಲಾ, ಯಾಮಿನೀಕೃಷ್ಣಮೂರ್ತಿ, ಶಾಂತಾರಾಮ್, ಕಮಲಾ ಲಕ್ಷ್ಮಣ್, ಮೃಣಾಲಿನಿ ಸಾರಾಬಾಯಿ, ಇಂದ್ರಾಣಿ ರೆಹಮಾನ್, ರೀತಾಚಟರ್ಜಿ, ಚಂದ್ರಲೇಖಾ, ರೋಷನ್ ವಜೀಫ್ ದಾರ್, ಜಟ್ಟಿತಾಯಮ್ಮ, ಚಂದ್ರಭಾಗಾ ದೇವಿ, ರಾಮಗೋಪಾಲ್, ಯು.ಎಸ್. ಕೃಷ್ಣರಾವ್ ಇಂತಹ ಇನ್ನೂ ಹಲವಾರು ವಿದ್ವಾಂಸರು ಭರತನಾಟ್ಯದ ಹಿರಿಮೆಯನ್ನು ಗುರುಮುಖೇನ ಪ್ರಪಂಚಕ್ಕೆ ಸಾರಿದರು.

ಮೈಸೂರು ಸಂಸ್ಥಾನದಲ್ಲಿ ಸು. 200 ವರ್ಷಗಳಿಗೂ ಹೆಚ್ಚು ಕಾಲದಿಂದ ಭರತನಾಟ್ಯ ಒಂದು ವಿಶಿಷ್ಟರೂಪ ತಾಳಿ ಅಭಿವೃದ್ಧಿ ಪಡೆಯಿತು. ಇದರಲ್ಲಿ ಅರಮನೆಯ ಪ್ರೋತ್ಸಾಹ ಹಾಗೂ ದೇವಾಲಯಗಳ ಪಾತ್ರ ಬಹಳ ದೊಡ್ಡದು. ಕವೀಶ್ವರ ಗಿರಿಯಪ್ಪ ಮತ್ತು ಕಾಶಿಗುರು ಎಂಬುವರು ಅಭಿನಯ ಕಲೆಯಲ್ಲಿ ಧುರೀಣರಾಗಿದ್ದರು. ಅನಂತರ ಅಮೃತಪ್ಪ, ಅಪ್ಪಯ್ಯ, ದಾಸಪ್ಪ, ಕಿಟ್ಟಪ್ಪ, ಜಟ್ಟಿತಾಯಮ್ಮ ಮೊದಲಾದವರು ನಾಟ್ಯರಂಗದ ಪ್ರಖ್ಯಾತ ಕಲಾವಿದರೆನಿಸಿದರು. ಈ ನಾಟ್ಯಗುರುಗಳ ಶಿಷ್ಯಂದಿರು ಪರಂಪರೆಯಾಗಿ ಇಂದಿಗೂ ನಾಟ್ಯಕಲೆಯನ್ನು ಅಭ್ಯಾಸ ಮಾಡುತ್ತ ಶಿಷ್ಯವೃಂದವನ್ನು ತರಬೇತಿಗೊಳಿಸಿ ಬೆಳೆಸುತ್ತ ಬಂದಿದ್ದಾರೆ.ಮೈಸೂರಿನ ಜಟ್ಟಿತಾಯಮ್ಮ ಹಾಗೂ ಕೋಲಾರ ಕಿಟ್ಟಪ್ಪ ಮತ್ತು ಇವರ ಶಿಷ್ಯರಾಗಿದ್ದ ಕೋಲಾರಪುಟ್ಟಪ್ಪ ಇಂಥವರ ಹೆಸರುಗಳು ಇಂದಿಗೂ ಚಿರಸ್ಮರಣೀಯವಾಗಿದೆ. ಕೋಲಾರ ಕಿಟ್ಟಪ್ಪನವರ ಶಿಷ್ಯರಾಗಿದ್ದ ಗುಂಡಪ್ಪನವರು 12 ವರ್ಷಗಳ ಕಾಲ ತರಬೇತಿ ಪಡೆದು ಪ್ರಖ್ಯಾತ ನರ್ತಕ ಮನೆತನದ ನಟುವನಾರ್ ಎಂದು ಪ್ರಖ್ಯಾತರಾಗಿದ್ದರು. ಇವರ ಮುತ್ತಜ್ಜಿ ರಂಗನಾಯಕಮ್ಮ, ಅಜ್ಜಿ ರಂಗಮ್ಮ ಇವರುಗಳೂ ನಾಟ್ಯನಿಪುಣೆಯರೆನಿಸಿದ್ದರು. ಇಂದಿಗೂ ಇವರ ಶಿಷ್ಯಂದಿರಿದ್ದಾರೆ. ಇವರೆಲ್ಲರ ಕಾರ್ಯಸಾಧನೆಗಳು ಭರತನಾಟ್ಯದಲ್ಲಿ ವಿಶಿಷ್ಟವಾದ ಮೈಸೂರು ಶೈಲಿಯ ಹುಟ್ಟು ಮತ್ತು ಬೆಳವಣಿಗೆಗೆ ಕಾರಣಭೂತವಾಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿದ್ದ ದಾಸಪ್ಪನವರ ಮಗಳಾದ ಜಟ್ಟಿತಾಯಮ್ಮ ನಾಟ್ಯಕಲೆಯಲ್ಲಿ ದೈವವನ್ನು ಕಂಡವರು. ಇವರ ಶಿಷ್ಯರಾದ ವೆಂಕಟಲಕ್ಷ್ಮಮ್ಮ ಸುಮಾರು ಎರಡುದಶಕಗಳ ಕಾಲ ಶಿಕ್ಷಣ ಪಡೆದು ಕಲಾಸೇವೆ ಮಾಡಿ ಬೆಳೆದ ಕಲಾವಿದೆ. ಭಾವಾಭಿನಯಕ್ಕೆ ಪ್ರಸಿದ್ಧರಾಗಿದ್ದು ಸಂಗೀತ ಕ್ಷೇತ್ರದಲ್ಲೂ ಪ್ರಸಿದ್ಧರಾಗಿದ್ದವರು ಕಲಾವಿದೆ ಚಂದ್ರಮ್ಮ. ಪ್ರಸಿದ್ಧನಾಟ್ಯಗುರುಗಳೆನಿಸಿದ್ದ ಅಮೃತಪ್ಪ ಮತ್ತು ಅಪ್ಪಯ್ಯ ಇವರ ಶಿಷ್ಯೆ ಪುಟ್ಟದೇವಮ್ಮ ಈಕೆಯ ಮಗಳು ಚಿಕ್ಕದೇವಮ್ಮ. ಇವರೆಲ್ಲರೂ ಭರತನಾಟ್ಯದ ಕಲಾಭಿವೃದ್ಧಿಗೆ ಅಪಾರವಾಗಿ ಶ್ರಮಿಸಿದ ಕರ್ನಾಟಕದ ಕಲಾವಿದರು.

ಬೆಂಗಳೂರಿನಲ್ಲಿ ನಾಟ್ಯಗುರುಗಳಾಗಿ ಪ್ರಖ್ಯಾತರಾಗಿದ್ದ ಕೋಲಾರ ಪುಟ್ಟಪ್ಪನವರ ಶಿಷ್ಯರಾಗಿದ್ದ ನಾಗರತ್ನ ಮತ್ತು ವರಾಲು, ನಾಟ್ಯಕಲೆಯಲ್ಲಿ ಪ್ರಪಂಚಪ್ರಸಿದ್ಧರಾಗಿರುವ ರಾಮಗೋಪಾಲ್ ಮತ್ತು ಯು.ಎಸ್. ಕೃಷ್ಣರಾವ್ ಇವರು ನಾಟ್ಯಕಲೆಯ ಅಭಿವೃದ್ಧಿಗಾಗಿ ನಾಟ್ಯ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಸರ್ವಸ್ವವನ್ನೂ ಮುಡುಪಾಗಿಟ್ಟು ಈ ಕಲೆಯ ಪ್ರಸಾರ ಕಾರ್ಯ ಮಾಡಿದಂತಹವರು. ಯು.ಎಸ್.ಕೃಷ್ಣರಾವ್ ಅವರ ಪತ್ನಿ ಚಂದ್ರಭಾಗಾದೇವಿಯವರೂ ಸುಶಿಕ್ಷಿತರೂ ಕುಲೀನ ಮನೆತನದವರೂ ಆಗಿದ್ದು ಸ್ವತಃ ನರ್ತಿಸಿ, ಉಪನ್ಯಾಸಗಳನ್ನು ನೀಡಿ ನಾಡಿನಾದ್ಯಂತ ಪ್ರಯಾಣಿಸಿ ಜನತೆಗೆ ಈ ಕಲೆಯ ಬಗೆಗೆ ಗೌರವ ಭಾವನೆ, ಆಸಕ್ತಿ ಶ್ರದ್ಧೆಗಳನ್ನು ಮೂಡಿಸಿ ಮೈಸೂರು ಭರತನಾಟ್ಯ ಸಂಪ್ರದಾಯಕ್ಕೆ ಒಂದು ವಿಶೇಷ ಗೌರವ ಸ್ಥಾನಮಾನಗಳನ್ನು ತಂದುಕೊಡುವಲ್ಲಿ ಯಶಸ್ವಿಯಾದರು. ಶಾಸ್ತ್ರೀಯ ಭರತನಾಟ್ಯ ವಿದ್ಯೆಯ ತಳಹದಿಯ ಮೇಲೆ ಹೊಸ ಪ್ರಯೋಗಗಳನ್ನು ಮಾಡಿರುವುದು, ಕನ್ನಡ ಭಾಷೆಯಲ್ಲಿ 'ಪದ'ಗಳನ್ನು ಭರತನಾಟ್ಯಕ್ಕೆ ಅಳವಡಿಸಿರುವುದು ಇವರ ಹೆಗ್ಗಳಿಕೆ.

ಪಂದನಲ್ಲೂರು ಸಂಪ್ರದಾಯವನ್ನು ಕನ್ನಡಿಗರಿಗೆ ಹೇಳಿಕೊಡುವ ಸಲುವಾಗಿ ಮೀನಾಕ್ಷಿ ಸುಂದರಂ ಪಿಳ್ಳೆಯವರ ಪುತ್ರರಾದ ವಿದ್ವಾನ್ ಮುತ್ತಯ್ಯಪಿಳ್ಳೆ ಮತ್ತು ಮೊಮ್ಮಕ್ಕಳಾದ ವಿದ್ವಾನ್ ಕಿಟ್ಟಪ್ಪನವರು ಬೆಂಗಳೂರಿನಲ್ಲೇ ಬಂದು ವಾಸವಾದರು. ಇವರ ವಂಶದವರೆಲ್ಲ 1965ರಿಂದ ಕರ್ನಾಟಕದ ಕಲಾವಿದರಿಗೆ ಭರತನಾಟ್ಯ ಹೇಳಿಕೊಡುತ್ತಿದ್ದಾರೆ. ಸು. 1972ರಲ್ಲಿ ಬೆಂಗಳೂರಿನಲ್ಲಿ ಮೀನಾಕ್ಷಿಸುಂದರಂ ಪಿಳ್ಳೆಯವರ ಹೆಸರಿನಲ್ಲಿ ಲೀಲಾ ರಾಮನಾಥನ್ ಅವರ ನೇತೃತ್ವದಲ್ಲಿ ಒಂದು ಭರತನಾಟ್ಯಶಾಲೆ ಸ್ಥಾಪಿತವಾಯಿತು. ಇದು ಬೆಂಗಳೂರಿನಲ್ಲಿ ಬಹಳ ಪ್ರಸಿದ್ಧವಾದ ನಾಟ್ಯಸಂಸ್ಥೆ. ಇಲ್ಲಿ ತರಬೇತಿ ಪಡೆದ ಆಶಾ, ರೇವತಿ ಮೊದಲಾದ ಹಲವಾರು ನೃತ್ಯಕಲಾವಿದರು ಪ್ರಪಂಚಪ್ರಸಿದ್ಧಿ ಪಡೆದಿದ್ದಾರೆ.

ಯು.ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿಯವರು 1942ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದ ನೃತ್ಯಪೀಠ, ಮಹಾಮಾಯಾನೃತ್ಯಪೀಠ (1973) ಹಲವಾರು ಕಲಾವಿದರನ್ನು ನಿರಂತರವಾಗಿ ತರಬೇತಿಗೊಳಿಸಿವೆ. ಇಂದ್ರಾಣಿ ರೆಹಮಾನ್, ಸೋನಾಲ್ ಮಾನಸಿಂಗ್, ಸುಧಾರಾಣಿ ಮೊದಲಾದವರು ಕೃಷ್ಣರಾವ್ ದಂಪತಿಗಳಿಂದ ತರಬೇತಿ ಪಡೆದವರು. ಭಾರತೀಯ ವಿದ್ಯಾಭವನದ ನೃತ್ಯಕೇಂದ್ರ (1969), ನಟುವನಾರ್ ಗುಂಡಪ್ಪನವರ ಶಿಷ್ಯರಾದ ಎಚ್.ಆರ್. ಕೇಶವಮೂರ್ತಿಯವರ ಕೇಶವ ನೃತ್ಯಶಾಲಾ (1949), ವಿ.ಎಸ್. ಕೌಶಿಕ್ ನಡೆಸುತ್ತಿದ್ದ ಸನಾತನ ಕಲಾಕ್ಷೇತ್ರ (1946), ಮಾಣಿಕ್ಯಂ ಅವರ ಭರತನಾಟ್ಯಕಲಾಶಾಲೆ, ಲಲಿತಾದೊರೆ ಅವರ ಗಣೇಶ ನೃತ್ಯಶಾಲೆ, ಟಿ.ಎಸ್. ಭಟ್ಟರ ಮೇನಕ ನೃತ್ಯಶಾಲೆ (1957) ಮೊದಲಾದವು ಪ್ರಸಿದ್ಧವಾಗಿದ್ದ ಬೆಂಗಳೂರಿನ ನೃತ್ಯಪೀಠಗಳು. ಇತ್ತೀಚಿನ ದಿನಗಳಲ್ಲಿ ಭರತನಾಟ್ಯ ಅತ್ಯಂತ ಬೇಡಿಕೆಯ ಕಲೆಯಾಗಿ ಗಣನೀಯವಾಗಿ ಅಭಿವೃದ್ಧಿ ಹೊಂದಿದೆ. ಕರ್ನಾಟಕದಲ್ಲಿ ಇಂದು ಕಥಕ್, ಕಥಕ್ಕಳಿ, ಮಣಿಪುರಿ ಮೊದಲಾದ ನೃತ್ಯಸಂಪ್ರದಾಯಗಳ ಬೆಳೆವಣಿಗೆಯನ್ನೂ ಕಾಣಬಹುದು. ಮಂಗಳೂರಿನಲ್ಲಿ ಯು.ಎಸ್.ಕೃಷ್ಣರಾಯರ ನೃತ್ಯವಿದ್ಯಾನಿಲಯ ಭರತನಾಟ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದೆ. ಇಲ್ಲಿ ಹಲವಾರು ವಿದ್ಯಾರ್ಥಿಗಳು ಭರತನಾಟ್ಯ ಹಾಗೂ ಕಥಕ್ಕಳಿ ಶಾಸ್ತ್ರೀಯ ನೃತ್ಯಕಲೆಯನ್ನು ಉಚಿತವಾಗಿ ಅಭ್ಯಾಸ ಮಾಡಿದ್ದಾರೆ. ಉತ್ತರಕರ್ನಾಟಕದಲ್ಲಿ ಹಲವಾರು ನೃತ್ಯಸಂಸ್ಥೆಗಳಿದ್ದರೂ ಹಂಸಭಾವಿಯಲ್ಲಿ ಶ್ರೀನಿವಾಸಕುಲಕರ್ಣಿಯವರು ಸ್ಥಾಪಿಸಿದ್ದ ನೃತ್ಯಭಾರತಿ ನೃತ್ಯಶಾಲೆ ಬಹಳ ಪ್ರಸಿದ್ಧಿ ಪಡೆದಿದೆ.

ಸದ್ಯದಲ್ಲಿ ಮೈಸೂರಿನಲ್ಲಿ ವಸುಂಧರಾ ದೊರೆಸ್ವಾಮಿಯವರು ಸ್ಥಾಪಿಸಿರುವ ನೃತ್ಯಶಾಲೆ ಹಾಗೂ ತುಳಸಿ ರಾಮಚಂದ್ರ ಅವರು ಸ್ಥಾಪಿಸಿರುವ ನೃತ್ಯಾಲಯ ಮೊದಲಾದ ನೃತ್ಯಶಾಲೆಗಳು ಬಹಳಷ್ಟು ಅಭಿವೃದ್ಧಿಗೊಂಡು ಭರತನಾಟ್ಯಕ್ಷೇತ್ರಕ್ಕೆ ಹೊಸಹೊಸ ಪ್ರಯೋಗಗಳನ್ನು ನೀಡುತ್ತ ಹಲವಾರು ವಿದ್ಯಾರ್ಥಿಗಳನ್ನು ತರಬೇತುಗೊಳಿಸುವಲ್ಲಿ ಗಣನೀಯವಾಗಿ ಯಶಸ್ವಿಯಾಗಿವೆ.

*

**ಭಾಗಮಂಡಲ:** ಮಡಿಕೇರಿ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಮಡಿಕೇರಿಗೆ ಪಶ್ಚಿಮದಲ್ಲಿ 40 ಕಿಮೀ ದೂರದಲ್ಲಿ ಕಾವೇರಿ ನದಿಯ ದಡದಲ್ಲಿದೆ. ಸಮುದ್ರಮಟ್ಟದಿಂದ ಸು.350' ಎತ್ತರದಲ್ಲಿದೆ. ಸುತ್ತಲೂ ದಟ್ಟವಾದ ಅರಣ್ಯವಿದ್ದು ಪ್ರಕೃತಿ ಸೌಂದರ್ಯದಿಂದ ಶೋಭಿಸುತ್ತಿದೆ. ಜನಸಂಖ್ಯೆ 2,149.

ತಲಕಾವೇರಿ: ಕಾವೇರಿಯ ಉಗಮಸ್ಥಾನ

ಭಾಗಮಂಡಲ ಜೇನುಸಾಕಣೆಗೆ ಪ್ರಸಿದ್ಧ. ಇಲ್ಲಿ ಜೇನುಸಾಕಣೆ ಮತ್ತು ತರಬೇತಿ ಕೇಂದ್ರವಿದೆ. ಗ್ರಾಮಾಂತರ ಪಶುವೈದ್ಯಶಾಲೆ ಇದೆ. ಶಾಲೆಗಳು, ಆಸ್ಪತ್ರೆ, ವಿದ್ಯುತ್, ಅಂಚೆ, ತಂತಿ ಮುಂತಾದ ಸೌಲಭ್ಯಗಳೂ ಇಲ್ಲಿವೆ. ಭಾಗಮಂಡಲದಿಂದ ಇತರ ಕಡೆಗಳಿಗೆ ಉತ್ತಮ ರಸ್ತೆಗಳಿವೆ.

ಭಗಂಡೇಶ್ವರನೆಂಬ ಮುನಿ ಇಲ್ಲಿ ತಪಸ್ಸು ಮಾಡುತ್ತಿದ್ದುದರಿಂದ ಈ ಸ್ಥಳಕ್ಕೆ ಭಾಗಮಂಡಲವೆಂದು ಹೆಸರು ಬಂತೆಂಬುದು ಐತಿಹ್ಯ. ಬ್ರಹ್ಮಗಿರಿ ಶಿಖರದ ಮಧ್ಯದಿಂದ ಹರಿದು ಬರುವ ಕನ್ನಿಕೆ ತೊರೆ ಕಾವೇರಿ ನದಿಯನ್ನು ಭಾಗಮಂಡಲದ ಸಮೀಪದಲ್ಲಿ ಸೇರುತ್ತದೆ. ಅಲ್ಲದೆ ಸುಜ್ಯೋತಿ ಎಂಬ ಗುಪ್ತಗಾಮಿನಿಯೂ ಇಲ್ಲಿ ಸೇರುವುದೆಂದು ನಂಬಿಕೆಯಿದೆ. ಇದು ತ್ರಿವೇಣಿ ಸಂಗಮವಾಗಿ ಪುಣ್ಯಕ್ಷೇತ್ರವಾಗಿ ಪರಿಗಣಿತವಾಗಿದೆ. ಕೊಡಗಿನ ಜನ ಬಹುಸಂಖ್ಯೆಯಲ್ಲಿ ಪರ್ವ ದಿನಗಳಲ್ಲಿ ಇಲ್ಲಿ ಸೇರುತ್ತಾರೆ.

ಇಲ್ಲಿ ಭಗಂಡೇಶ್ವರ ದೇವಾಲಯವಿದೆ. ದೇವಾಲಯದಲ್ಲಿ ತಮಿಳುಭಾಷೆ ಮತ್ತು ಗ್ರಂಥಲಿಪಿಯಲ್ಲಿರುವ ಒಂದು ಶಾಸನವಿದೆ. 1785–90ರವರೆಗೆ ಟಿಪ್ಪುಸುಲ್ತಾನ ದೇವಾಲಯವನ್ನು ಕೋಟೆಯನ್ನಾಗಿ ಪರಿವರ್ತಿಸಿ ಇಲ್ಲಿ ಒಂದು ಸೈನ್ಯವನ್ನು ಇಟ್ಟಿದ್ದ. ಭಾಗಮಂಡಲವನ್ನು ಅಫಜಲಾಬಾದ್ ಎಂದು ಹೆಸರಿಸಿದ್ದ. 1790ರಲ್ಲಿ ಕೊಡಗಿನ ದೊಡ್ಡ ವೀರರಾಜೇಂದ್ರ ಭಾಗಮಂಡಲವನ್ನು ಗೆದ್ದುಕೊಂಡ. ಯುದ್ಧಕಾಲದಲ್ಲಿ ನಾಶವಾದ ದೇವಾಲಯದ ಮೂರು ತಾಮ್ರದ ಚಾವಣಿಗಳ ಬದಲಾಗಿ ದೊರೆ ನಾಲ್ಕು ಬೆಳ್ಳಿಯ ಹೆಂಚುಗಳನ್ನು ಹೊದಿಸಿದನಂತೆ.

ಕಾವೇರಿಯ ಉಗಮಸ್ಥಾನವಾದ ತಲಕಾವೇರಿ ಇಲ್ಲಿಂದ 16 ಕಿಮೀ ದೂರದಲ್ಲಿದೆ.

(ಎಸ್.ಪಿ.ಕೆ.)

**ಭಾಗವಂತಿಕೆ ಮೇಳ:** ಮಂಡ್ಯ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಹಾಗೂ ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡುಬರುವ ಒಂದು ಜನಪದ ಮೇಳ. ದೀವಳಿಗೆಯ ಸಂದರ್ಭದ ಒಂದು ಸಂಪ್ರದಾಯವಾಗಿ ಉಳಿದು ಬಂದಿದೆ. ವೈಷ್ಣವ ಸಂಪ್ರದಾಯದ ದೈವಗಳಾದ ಬೇಟೆರಾಮ, ರಂಗಸ್ವಾಮಿ, ಗರುಡಪ್ಪ, ಹನುಮಂತರಾಯ, ನರಸಿಂಹಸ್ವಾಮಿ ಮೊದಲಾದವರ ಒಕ್ಕಲುಗಳವರು ಈ ಸಂಪ್ರದಾಯವನ್ನು ನಡೆಸಿಕೊಂಡು ಬಂದಿದ್ದಾರೆ. ಭಾಗವಂತಿಗೆ ಭಾಗವಂತಿಕೆ ಶಬ್ದಗಳು ಭಾಗವತ ಸಂಪ್ರದಾಯವನ್ನೇ ಸೂಚಿಸುತ್ತದೆ. ರಾಮಾನುಜರ ಕಾಲಕ್ಕಿಂತ ಈಚಿನದು ಎಂದು ಊಹಿಸಲಾಗಿರುವ ಈ ಸಂಪ್ರದಾಯದ ಮೂಲ ನೆಲೆ ಚೆಲುವರಾಯಸ್ವಾಮಿಯ ನೆಲೆವೀಡಾದ ಮೇಲುಕೋಟೆ ಕ್ಷೇತ್ರ ಎಂದೂ ಭಾವಿಸಲಾಗುತ್ತದೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿದ್ದ ತಿರುಮಲಾರ್ಯ ಭಾಗವಂತಿಕೆ ಪದಗಳನ್ನು ರಚಿಸಿ, ಆ ಸಂಪ್ರದಾಯವನ್ನು ಬೆಳಸಿದರೆಂದು ಸಿ. ಹಯವದನರಾಯರು ಮೈಸೂರು ಗೆಜೆಟಿಯರ್‌ನಲ್ಲಿ ಬರೆಯುತ್ತಾರೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ನಲ್ಕುಂದಿ ಎಂಬ ಗ್ರಾಮದ ಒಂದು ಭಾಗವಂತಿಕೆ ಮೇಳವನ್ನು ನೋಡಿ, ಅಲ್ಲಿ ಅವರು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ಈ ತೀರ್ಮಾನಕ್ಕೆ ಅವರು ಬಂದಂತೆ ತೋರುತ್ತದೆ. ಆದರೆ ಭಾಗವಂತಿಗೆ ಸಾಹಿತ್ಯವನ್ನು ತಿರುಮಲಾರ್ಯನೇ ರಚಿಸಿದನೆಂಬುದಕ್ಕೆ ಖಚಿತವಾದ ಆಧಾರ ಯಾವುದೂ ಇಲ್ಲ.

ಭಾಗವಂತಿಗೆ ಸಂಪ್ರದಾಯ ಒಂದು ವಿಶಿಷ್ಟ ಜನಪದ ಕಲೆ. ಇಲ್ಲಿ ಹಾಡುಗಾರಿಕೆ ಮತ್ತು ನೃತ್ಯ ಎರಡೂ ಬೆರೆಯುವುದರಿಂದ, ಇದೊಂದು ಸಾಮೂಹಿಕ ಗೀತ ಸಂಪ್ರದಾಯವಾದ್ದರಿಂದ ಇದನ್ನೊಂದು ಮೇಳ ಎನ್ನಬಹುದು. ಹಾಡುಗಾರರು ಸಾಮಾನ್ಯವಾಗಿ ಒಂದೇ ಊರಿನವರು. ವಿಶೇಷ ಸಂದರ್ಭಗಳಲ್ಲಿ ಮನೆಗೊಬ್ಬರಂತೆ ಭಾಗವಹಿಸುತ್ತಾರೆ. ಸಾಮಾನ್ಯವಾಗಿ ಇವರ ವೇಷಭೂಷಣಗಳಲ್ಲಿ ವೈಶಿಷ್ಟ್ಯಗಳೇನೂ ಕಾಣುವುದಿಲ್ಲ. ಕಚ್ಚೆಯ ಪಂಚೆ, ತಲೆಗೆ ರುಮಾಲು, ಹಣೆಯಲ್ಲಿ ವೈಷ್ಣವ ಸಂಕೇತದ ನಾಮ–ಇದು ಪದಗಳನ್ನು ಹೇಳುವವರ ವೇಷ. ಇವರನ್ನು ಭಾಗವತರು

ಎಂದೂ ಕರೆಯುತ್ತಾರೆ. ಎರಡು ಸಾಲುಗಳಲ್ಲಿ ಭಾಗವತರು ಪರಸ್ಪರ ಅಭಿಮುಖವಾಗಿ ನಿಲ್ಲುತ್ತಾರೆ. ಪ್ರತಿಯೊಬ್ಬರ ಕೈಯಲ್ಲೂ ತಾಳ ಇರುತ್ತದೆ. ಒಂದು ತಂಡದವರು ಮುಮ್ಮೇಳವನ್ನೂ ಇನ್ನೊಂದು ತಂಡದವರು ಹಿಮ್ಮೇಳವನ್ನೂ ಹಾಡುತ್ತಾ ಸಾಗುತ್ತಾರೆ. ಈ ಹಾಡಿನ ವೈಖರಿಗೆ, ತಾಳದ ಗತ್ತಿಗೆ ಒಬ್ಬ ಕೋಡಂಗಿ ಕುಣಿಯುತ್ತಾನೆ.

ಭಾಗವಂತಿಗೆ ಮೇಳದ ಕೋಡಂಗಿಗೆ ವಿಶೇಷವಾದ ಅರ್ಥವಿದ್ದಂತೆ ತೋರುತ್ತದೆ. ತಲೆಯ ಮೇಲೆ ಒಣ ಅಡಕೆಪಟ್ಟೆಯ ಚೂಪಾದ ಕುಲಾವಿ, ಸೆಣಬಿನ ಗಡ್ಡ ಮೀಸೆಗಳು, ಕಾಲಿಗೆ ಚಲ್ಲಣ, ನಡುಪಟ್ಟಿ ಇವುಗಳ ವೇಷದ ಕೋಡಂಗಿ ಕಂಕುಳಲ್ಲಿ ಒಂದು ಕೃಷ್ಣಾಜಿನವನ್ನು



ಇಟ್ಟುಕೊಂಡು, ಒಂದು ಕೈಯಲ್ಲಿ ಬಿಲ್ಲು, ಮತ್ತೊಂದು ಕೈಯಲ್ಲಿ ಹಸಿರನ್ನು ಹಿಡಿದು ಭಾಗವತರ ಎರಡು ಸಾಲುಗಳ ನಡುವೆ ಕುಣಿಯುತ್ತಾನೆ. ಈ ಕೋಡಂಗಿಯೇ ವೈಷ್ಣವಧರ್ಮಪ್ರಸಾರಕರಾದ ರಾಮಾನುಜರ ಪ್ರತೀಕ ಎಂದು ಹೇಳಲಾಗುತ್ತದೆ. ಚೆಲುವರಾಯಸ್ವಾಮಿ ದಿಲ್ಲಿಯ ಸುಲ್ತಾನನ ಮಗಳು ವರನಂದಿಯನ್ನು ತರಲು ಹೋದಾಗ, ಈ ವೇಷವನ್ನು ಧರಿಸಿ ಹೋಗಿದ್ದ ಇಂದು ಹೇಳಲಾಗುತ್ತದೆ. ಕೋಡಂಗಿಯ ಪಾದಕ್ಕೆ ಜನ ಶರಣು ಮಾಡಿಕೊಳ್ಳುವುದು, ಅವನ ಕೃಷ್ಣಾಜಿನವನ್ನು ಮಕ್ಕಳು ಮರಿಗಳಿಗೆ ಮುಟ್ಟಿಸುವುದು ಮುಂತಾದುವನ್ನು ಗಮನಿಸಿದರೆ ಪರಮ ಭಾಗವತ ಆಂಜನೇಯನ ನೆನಪೂ ಇಲ್ಲಿ ಬರುತ್ತದೆ. ಅತ್ತಿತ್ತ ಒನೆಯುತ್ತ, ಭಾಗವತರ ಗೀತಮಾಧುರ್ಯಕ್ಕೆ ತಲೆದೂಗುತ್ತ, ಅವರಿವರ ನಡುವೆ ಅತ್ತ ಇತ್ತ ನುಗ್ಗಿ ನುಸುಳಿ ಕುಣಿಯುವ ಕೋಡಂಗಿಯ ಕುಣಿತ ಲಲಿತವಾಗಿದ್ದು ನೋಡಲು ಹಿತವಾಗಿರುತ್ತದೆ. ಇವನ ಜೊತೆಯ ಭಾಗವತರು ಮಾತ್ರ ಕುಣಿಯದೆ ನಿಂತೇ ಹಾಡುತ್ತಾರೆ.

ಭಾಗವತ ಮೇಳದವರು ಕೆಲವೆಡೆ ವೈಷ್ಣವ ಸಂಪ್ರದಾಯದ ಪಟಗಳನ್ನು ಕುಣಿತಕ್ಕಾಗಿ ಬಳಸುವುದೂ ಕಂಡುಬಂದಿದೆ. ಹತ್ತಾರು ಮಾರು ಉದ್ದನೆಯ ಬಿದಿರು ಗಳುವಿಗೆ ಬಣ್ಣಬಣ್ಣದ ವಸ್ತ್ರಗಳನ್ನು ಸುತ್ತಿ, ಅದರ ನೆತ್ತಿಗೊಂದು ಲೋಹದ ಛತ್ರಿಯನ್ನು ಅಳವಡಿಸಿ ಅಲಂಕರಿಸಿಕೊಂಡ ಸಾಧನವೇ ಪಟ. ಈ ಪಟ ಭಾಗವತ ಸಂಪ್ರದಾಯದ ಧ್ವಜ. ಇದು ಶೈವ ಸಂಪ್ರದಾಯದ ನಂದಿಕೋಲಿನಂತೆ ಇದೂ ದೇವರ ಉತ್ಸವಾದಿಗಳಲ್ಲಿ ನೃತ್ಯಕ್ಕಾಗಿ ಬಳಸತಕ್ಕುದೇ ಆಗಿದೆ. ಎಡಭುಜದಿಂದ ಇಳಿಬಿದ್ದ ಅಡ್ಡಪಟ್ಟಿಗೆ ಅಳವಡಿಸಿದ ಒಂದು ಚೀಲದಲ್ಲಿ ಪಟದ ತಳವನ್ನು ಊರಿ, ಎರಡು ಕೈಗಳಲ್ಲೂ ಅದನ್ನು ಮೇಲಕ್ಕೆತ್ತಿ ಸಾಲಾಗಿ ಭಾಗವತರು ಕುಣಿಯುವ ವೈಖರಿ ಮೋಹಕವಾದುದು. ಆದರೆ ಈ ಕುಣಿತದ ಸಂದರ್ಭದಲ್ಲಿ ಹಾಡುಗಾರಿಕೆ ಇರುವುದಿಲ್ಲ. ಹಾಡು ಇದರ ಮುಂದಿನ ಭಾಗ. ಪಟಗಳನ್ನು ಕೆಳಗಿಟ್ಟು ಭಾಗವತರು ಮೇಳವನ್ನು ಆರಂಭಿಸುತ್ತಾರೆ; ಇದು ಕೆಲವೆಡೆ ಸಮಗ್ರ ರಾತ್ರಿ ಆಗಬಹುದು.

ಚನ್ನಪಟ್ಟಣ, ಮಾಗಡಿ, ರಾಮನಗರ, ಕನಕಪುರ, ಕುಣಿಗಲ್, ನಾಗಮಂಗಲ, ಚನ್ನರಾಯಪಟ್ಟಣ, ತುರುವೇಕೆರೆ ಈ ತಾಲ್ಲೂಕುಗಳು ವಿಶೇಷವಾಗಿ ಭಾಗವಂತಿಕೆ ಸಂಪ್ರದಾಯವನ್ನು ಉಳಿಸಿಕೊಂಡು ಬಂದ ಪ್ರದೇಶಗಳಾಗಿವೆ. ಈಗ ಅನೇಕ ಕಡೆಗಳಲ್ಲಿ ಮೇಳಗಳು ಮರೆತುಹೋಗಿವೆ. ಸಾಮಾನ್ಯವಾಗಿ ದೀವಳಿಗೆಯನ್ನು ಆಚರಿಸುವ ದಿನಗಳಲ್ಲಿ, ಆಶ್ವಯುಜ–ಕಾರ್ತಿಕಗಳಲ್ಲಿ ಒಂದು ಒಳ್ಳೆಯ ದಿನವನ್ನು ಆರಿಸಿಕೊಂಡು ಮೇಳವನ್ನು ಆರಂಭಿಸಲಾಗುತ್ತದೆ. ಮೊದಲಿಗೆ ದೀವಳಿಗೆಗೆ ಎರಡು ವಾರಗಳ ಮುಂಚೆಯೇ ಊರಾಡಲು ಹೋಗುವ ಸಂಪ್ರದಾಯವಿತ್ತು. ಊರಾಡಲು ಹೊರಡುವ ಭಾಗವತರ ಗುಂಪನ್ನು ದೀವಳಿಗೆ ದಂಡು ಎಂದು ಕರೆಯಲಾಗುತ್ತದೆ. ತಮ್ಮ ಊರ ದೇವರೊಡನೆ ತಮ್ಮಟೆ, ನಗಾರಿ, ಕೊಂಬು, ಕಹಳೆಗಳನ್ನೂ ಇವರು ಒಯ್ಯುತ್ತಾರೆ. ಕಾವಿಯ ಬಾವುಟ ಹಾಗೂ ಪಟಗಳನ್ನು ಹೊತ್ತು ಇವರು ಊರಾಡಲು ಹೋಗುವುದು ತಮ್ಮ ದೇವರ ಒಕ್ಕಲುಗಳಿರುವ ಊರುಗಳಿಗೆ ಮಾತ್ರ. ತಮ್ಮ ಹೆಣ್ಣುಮಕ್ಕಳನ್ನು ಕೊಟ್ಟ ಊರುಗಳಿಗೂ ಹೋಗುತ್ತಾರೆ. ದೀವಳಿಗೆಗೆ ಮುಂಚೆ ಗೊತ್ತಾದ ಒಂದು ದಿನ ಪಟಗಳನ್ನೂ ತಾಳಗಳನ್ನೂ ಹೊರ ತೆಗೆದು, ಉತ್ಸವ ಮೂರ್ತಿಯನ್ನು ಅಲಂಕರಿಸಿ, ದೇವರ ಸಮ್ಮುಖದಲ್ಲಿಯೇ ಭಾಗವಂತಿಕೆ ಮೇಳವನ್ನು ಕಟ್ಟುತ್ತಾರೆ. ದೇವರ ಎದುರಿನಲ್ಲಿ ಮೊದಲು ಹಾಡುವುದೇ ಮೇಳ ಕಟ್ಟುವ ಸಂಪ್ರದಾಯ. ಅನಂತರ ಊರಿನ ಕೆಲವು ಮನೆಗಳ ಮುಂದೆ ಪದಗಳನ್ನು ಹಾಡಿ ಅನಂತರ ಪರ ಊರುಗಳಿಗೆ ಯಾತ್ರೆ ಹೊರಡುತ್ತಾರೆ. ಹೀಗೆ ಹೊರಡುವ ಮುನ್ನ ತಮ್ಮ ಆಗಮನದ ಸಂಕೇತವಾದ ಹಿಟ್ಟಿನಪಟವನ್ನು ಅಟ್ಟುತ್ತಾರೆ. ಒಬ್ಬ ಪಟವನ್ನು ಹೊತ್ತು ತಂದು ಭಾಗವತರು ಬರುವ ಊರಿನ ದೇವಾಲಯದ ಬಳಿ ನಿಲ್ಲಿಸುತ್ತಾನೆ. ಅದನ್ನು ಕಂಡಕೂಡಲೇ ಊರ ಜನ ತಮ್ಮ ದೈವಗಳನ್ನೂ ಅವನ್ನು ಹಿಂಬಾಲಿಸಿ ಬರುವ ಭಾಗವತರನ್ನೂ ಸ್ವಾಗತಿಸಿ ಅವರ ಊಟದ ವ್ಯವಸ್ಥೆಯ ಜವಾಬ್ದಾರಿ ಹೊರುತ್ತಾರೆ. ಆಮೇಲೆ ಬಂದ ಭಾಗವತರ ಹಾಡುಗಳನ್ನು ಕೇಳಿ ಮನೆಗೊಂದರಂತೆ ಮೊರತುಂಬ ಅಮೃತಪಡಿಯನ್ನು ಕೊಟ್ಟು ಭಾಗವತರನ್ನು ಬೀಳ್ಕೊಡುತ್ತಾರೆ. ಹೀಗೆ ಹಲವಾರು ಹಳ್ಳಿಗಳನ್ನು ಸುತ್ತಿ ಸಾಕಷ್ಟು ದವಸಧಾನ್ಯ ಕಾಣಿಕೆಗಳನ್ನು ಸ್ವೀಕರಿಸಿ ಭಾಗವತರು ದೀವಳಿಗೆಯ ದಿನ ಊರಿಗೆ ಮರಳುತ್ತಾರೆ. ಊರಿನಲ್ಲಿ ದೇವರ ಉತ್ಸವವನ್ನು ನಡೆಸಿ ಹರಿಸೇವೆಯನ್ನು ಮಾಡಿ ಸಾಮೂಹಿಕ ಭೋಜನ ನಡೆಸುತ್ತಾರೆ.

ಭಾಗವಂತಿಕೆ ತಂಡಗಳು ಊರಾಡಲು ಹೋದಾಗ ಕೆಲವು ಕಡೆ ಎರಡು ತಂಡಗಳು ಪರಸ್ಪರ ಅಭಿಮುಖವಾಗುತ್ತವೆ. ಅಂಥ ಕಡೆಗಳಲ್ಲಿ ಈ ತಂಡಗಳ ನಡುವೆ ಒಂದು ಬಗೆಯ ಸವಾಲ್–ಜವಾಬ್ ಮಾದರಿಯಲ್ಲಿ ಹಾಡಿನ ಮೇಲಾಟ ನಡೆಯುತ್ತದೆ. ಯಾರು ಹೆಚ್ಚುಸಂಖ್ಯೆಯ ಹಾಡುಗಳ ಕಣಜವನ್ನು ಹೊಂದಿರುತ್ತಾರೊ ಅವರು ಗೆದ್ದಂತೆ. ಸೋತವರು ತಮ್ಮ ಬಿರುದನ್ನು ಗೆದ್ದವರಿಗೆ ಅರ್ಪಿಸಿ ಮರಳಿರುವುದೂ ಉಂಟು.

ಭಾಗವಂತಿಕೆ ಮೇಳದಲ್ಲಿ ನೃತ್ಯ ಒಂದು ಭಾಗವಾದರೆ, ಅದರ ಸಾಹಿತ್ಯ ಇನ್ನೊಂದು ಭಾಗ. ಈ ಮೇಳಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತಗಳಂಥ ಸುದೀರ್ಘ ರಚನೆಗಳನ್ನು ಹಾಡುವುದುಂಟು. ಬಿಡಿ ಹಾಡುಗಳೂ ಭಾಗವಂತಿಕೆ ಪದಗಳು ಎಂಬ ಹೆಸರಿನಲ್ಲಿ ಸಾಕಷ್ಟು ದೊರೆಯುತ್ತವೆ. ಈ ಸಾಹಿತ್ಯ ಮೌಖಿಕ ಸಂಪ್ರದಾಯದಲ್ಲಿಯೇ ಹರಿದು ಬಂದಿದೆ. ಹಿರಿಯ ತಲೆಮಾರಿನ ಗಾಯಕರು ಹಾಡಿಕೊಂಡು ಬಂದ ಈ ಹಾಡುಗಳನ್ನು ಇತ್ತೀಚೆಗೆ ಪ್ರತಿಗಳಲ್ಲಿ ಬರೆದಿಟ್ಟುಕೊಳ್ಳುವ ವಾಡಿಕೆ

ಬಂದಿದೆ. ಸು. 50–60 ವರ್ಷಗಳ ಹಿಂದಿನ ಕಾಗದದ ಹಸ್ತಪ್ರತಿಗಳು ದೊರೆಯುತ್ತವೆ. ಭಾಗವಂತಿಕೆ ಸಂಪ್ರದಾಯದ ಓಲೆಗರಿಯ ಗ್ರಂಥವಾವುದೂ ಈವರೆಗೆ ದೊರೆತಿಲ್ಲ.

ಭಾಗವಂತಿಕೆ ಸಂಪ್ರದಾಯದಲ್ಲಿ ಮಹಾಭಾರತ ಮತ್ತು ಭಾಗವತಗಳೂ ಇದ್ದುವೆಂದು ತಿಳಿದುಬರುತ್ತದೆ. ಆದರೆ ಎಲ್ಲಿಯೂ ಅವು ಸಂಗ್ರಾಹಕರ ಕಣ್ಣಿಗೆ ಬಿದ್ದಿಲ್ಲ. 1961ರಲ್ಲಿ ಲಿಂಗಮ್ಮನವರು ಪ್ರಕಟಿಸಿದ ಭಾಗವಂತಿಕೆ ಪುಸ್ತಕದಲ್ಲಿ ಜೀ.ಶಂ. ಪರಮಶಿವಯ್ಯನವರು ಪ್ರಕಟಿಸಿದ ಭಾಗವಂತಿಕೆ ಮೇಳ ಎಂಬ ಸಂಗ್ರಹದಲ್ಲಿ, ಹಿರಿಯಣ್ಣ ಮೇಟಿಕೆರೆ ಅವರು ಪ್ರಕಟಿಸಿದ ಭಾಗವಂತಿಕೆ ಪದಗಳ ರಾಮಾಯಣ ಮಾತ್ರ ಪ್ರಕಟವಾಗಿದೆ. ಭಾಗವತದ ಒಂದೆರಡು ಭಾಗಗಳು ಮಾತ್ರ ಕೊನೆಯ ಎರಡು ಸಂಕಲನಗಳಲ್ಲಿ ಬೆಳಕು ಕಂಡಿವೆ; ಮಹಾಭಾರತದ ಬಗ್ಗೆ ಇನ್ನೂ ಶೋಧ ನಡೆಯಬೇಕಾಗಿದೆ.

ಭಾಗವಂತಿಕೆ ರಾಮಾಯಣ, ಪ್ರಹ್ಲಾದ ಚರಿತ್ರೆ – ಇಂಥ ಕಥನಾತ್ಮಕ ರಚನೆಗಳನ್ನು ಬಿಟ್ಟರೆ ಉಳಿದ ಭಾಗವಂತಿಕೆ ಸಾಹಿತ್ಯವೆಲ್ಲ ಗೀತೆಗಳಿಂದ ಕೂಡಿದೆ. ನಾನಾರೀತಿಯ ಭಕ್ತಿಗೀತೆಗಳಲ್ಲಿ ಮೇಳದ ವಿವಿಧ ಸಂದರ್ಭಗಳಲ್ಲಿ ಹಾಡುವ ಪದಗಳೇ ಹೆಚ್ಚು. ಕೆಲವು ನೀತಿ ಪದ್ಯಗಳೂ ಬರುತ್ತವೆ. ಈ ಎಲ್ಲ ಸಾಹಿತ್ಯವೂ ವೈಷ್ಣವ ಪರವಾದುದೇ ಆಗಿದೆ. ಭಾಗವಂತಿಕೆ ಮೇಳ ರಾಮಾಯಣದ ಮೌಖಿಕ ಸಂಪ್ರದಾಯದಲ್ಲಿ ಸಾಗಿಬಂದ ಕಾರಣದಿಂದ ಅದರಲ್ಲಿ ಸಾಕಷ್ಟು ಶೈಥಿಲ್ಯ ಕಂಡುಬರುತ್ತದೆ. ಮೂಲ ಕಾವ್ಯದಲ್ಲಿ ಆದಿಪ್ರಾಸ ಇದ್ದಿರಬಹುದಾದರೂ ಈಗ ಪ್ರಾಸ ನಿಚ್ಚಳವಾಗಿ ಉಳಿದಿಲ್ಲ. ಸಾಂಗತ್ಯ ಛಂದಸ್ಸಿನಲ್ಲಿ ರಚಿತವಾದ ಈ ಕಾವ್ಯದ ಛಂದಸ್ಸಿನಲ್ಲಿಯೂ ಸಾಕಷ್ಟು ಏರುಪೇರುಗಳು ಕಾಣುತ್ತವೆ. ಆದರೂ ಪದ್ಯಗಳು ಸರಳವಾಗಿ, ಸುಂದರವಾಗಿ ಸಾಗುತ್ತವೆ.

ಭಾಗವಂತಿಕೆ ರಾಮಾಯಣದ ಶೈಲಿಯ ಶಿಷ್ಟಮೂಲಕ್ಕೆ ಹತ್ತಿರವಾದಂತೆ ತೋರಿದರೂ ಕಥೆಯಲ್ಲಿನ ಬೆಳೆವಣಿಗೆಯನ್ನು ಗಮನಿಸಿದರೆ ಸಾಕಷ್ಟು ಜನಪದ ಆಗಮಗಳೂ ಇಲ್ಲಿ ಬೆರೆತು ಬಂದಿರುವುದು ಗೋಚರಿಸುತ್ತದೆ. ಮೂಲರಾಮಾಯಣದ ಕಥೆಯನ್ನೇ ಇಲ್ಲಿಯ ಕಥೆ ಅನುಸರಿಸಿದ್ದರೂ ನಡುನಡುವೆ ಸಾಕಷ್ಟು ಜನಪದ ಅಂಶಗಳೂ ಸಮರಸಗೊಂಡು ಈ ಕಾವ್ಯಕ್ಕೆ ವಿಶಿಷ್ಟತೆಯನ್ನು ತಂದುಕೊಡುತ್ತದೆ. ರಾಮಾಯಣದ ಪ್ರಮುಖ ಪಾತ್ರಗಳನ್ನು ಮಾತ್ರ ಹೆಸರಿಸಿ ಕವಿ ಉಳಿದ ಪಾತ್ರಗಳನ್ನು ಕೈಬಿಟ್ಟದ್ದಾನೆ; ಕೆಲವೆಡೆ ರಕ್ಕಸ, ರಕ್ಕಸಿ ಎಂಬ ವರ್ಗಸೂಚಕ ಶಬ್ದಗಳನ್ನು ಮಾತ್ರ ಬಳಸುತ್ತಾನೆ. ಕಥೆಯ ಸಂಗ್ರಹದಲ್ಲಿ ಕವಿ ಅಪಾರ ಚಮತ್ಕಾರವನ್ನು ತೋರಿದ್ದಾನೆ.

ಏಳು ಅಧ್ಯಾಯಗಳ ಸು. 300–400 ಪದ್ಯಗಳಲ್ಲಿ ಸಮಗ್ರ ರಾಮಾಯಣದ ಕಥೆಯನ್ನು ಸಂಗ್ರಹಿಸಿ ಹೇಳಿರುವುದು ಆಶ್ಚರ್ಯಕರವಾದುದು. ಕಥೆಯ ಸಂಗ್ರಹದ ಭರದಲ್ಲಿ ಕಾವ್ಯ ಅನೇಕ ಕಡೆಗಳಲ್ಲಿ ನೀರಸವೆನಿಸಿದರೂ ಕೆಲವು ಸ್ವಾರಸ್ಯಕರ ಭಾಗಗಳು ಕಾವ್ಯದ ಸತ್ತ್ವವನ್ನು ಉಳಿಸುತ್ತವೆ. ಅನೇಕ ವರ್ಣನೆಗಳು ಆಕರ್ಷಕವಾಗಿ ಮೂಡಿ ಬಂದಿವೆ.

ಭಾಗವಂತಿಕೆ ಸಂಪ್ರದಾಯದ ಪ್ರಧಾನವಾದ ಈ ಕಾವ್ಯವನ್ನು ಬಿಟ್ಟರೆ ಉಳಿದ ಹಾಡುಗಳು ತಮ್ಮ ತಮ್ಮ ಚೌಕಟ್ಟಿನಲ್ಲಿ ರಂಜಿಸುತ್ತವೆ. ದಾಸರ ಕೀರ್ತನೆಗಳನ್ನು ನೆನಪಿಗೆ ತಂದುಕೊಡುವ ಈ ಹಾಡುಗಳು ಛಂದಸ್ಸಿನ ದೃಷ್ಟಿಯಿಂದ, ವಿವಿಧ ಮಟ್ಟುಗಳ ದೃಷ್ಟಿಯಿಂದ ಗಮನಾರ್ಹ ರಚನೆಗಳಾಗಿವೆ. ಸೀತಾಪತಿ ಪದ, ಸೇರ್ವೆಪದ, ಮುದ್ರಿಕೆ, ಪಯಣಗತಿ, ಸರಳು ಮುಂತಾದ ಗೀತ ಶೀರ್ಷಿಕೆಗಳು ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಇವು ಪದ್ಯಜಾತಿಯನ್ನೋ ಆ ಸಂಪ್ರದಾಯದ ವಿಶಿಷ್ಟ ಸಂದರ್ಭಗಳನ್ನೋ ಸೂಚಿಸುತ್ತವೆ. ಭಾಗವಂತಿಕೆ ಪದಗಳ ಸಾಹಿತ್ಯಕ ಮೌಲ್ಯ ಅಷ್ಟೇನೂ ಪ್ರಧಾನವಲ್ಲದಿದ್ದರೂ ಅವುಗಳ ಸಂಗೀತದ ಅಂಶ ಅಭ್ಯಾಸಯೋಗ್ಯವಾಗಿದೆ.

(ಜಿ.ಎಸ್.ಪಿ.)

**ಭಾನು ಪ್ರತಾಪ್ ಸಿಂಗ್:** ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರು (1990 –91). ಇವರು 1917 ಆಗಸ್ಟ್ 10ರಂದು ಬುಲಂದ್ ಶಹರ್‌ನಲ್ಲಿ ಜನಿಸಿದರು. ಸಂತ ಬಹಾದ್ದೂರ್ ಹಾಗೂ ಕರ್ಮಾವತಿ ಇವರ ತಂದೆ ತಾಯಿಯರು. ಸಿಂಗ್ ಅವರು ವಿಜ್ಞಾನದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದರು. 1962ರಲ್ಲಿ ಉತ್ತರಪ್ರದೇಶದ ವಿಧಾನಸಭೆಗೆ ಚುನಾಯಿತರಾಗಿ ಅಲ್ಲಿನ ರಾಜಕೀಯದಲ್ಲಿ ಬೆರೆತರು. 1967ರಲ್ಲಿ ಪುನಃ ಚುನಾಯಿತರಾದರು. ಆದರೆ 1974ರಲ್ಲಿ ರಾಜಕೀಯ ಕ್ಷೇತ್ರವನ್ನು ಪರಿತ್ಯಕ್ತ ಮಾಡಿ ಸಮಾಜಸೇವೆಯಲ್ಲಿ ತೊಡಗಿದರು. ತುರ್ತುಪರಿಸ್ಥಿತಿ ಕಾಲದಲ್ಲಿ ಅದನ್ನು ಪ್ರತಿಭಟಿಸಿ ಬಂಧಿತರಾದರು. ಇವರ ಸೇವಾ ಹಿರಿತನ ಮತ್ತು ರಾಜಕೀಯ ನಿಲುವುಗಳು ಇವರು 1977ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಲು ಸಹಕಾರಿಯಾದವು. ಕೇಂದ್ರ ಸರ್ಕಾರದ ಮಂತ್ರಿಮಂಡಲದಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಖಾತೆಯ ರಾಜ್ಯ ಸಚಿವರಾಗಿದ್ದರು. ಅನಂತರ ಕೆಲಕಾಲ ಕರ್ನಾಟಕ ಸರ್ಕಾರದ ರಾಜ್ಯ ಪಾಲರಾಗಿ ಕಾರ್ಯ ನಿರ್ವಹಿಸಿದರು. (1990 ಮೇ 8 ರಿಂದ 1991 ಜನವರಿ 6) ಫಾರ್ಮರ್ಸ್ ವಾಯ್ಸ್ ಗಾಂವ್ ಕಿ ಪುಕಾರ್ ಎಂಬ ಪತ್ರಿಕೆಗಳ ಸಂಪಾದಕರಾಗಿಯೂ ಇವರು ದುಡಿದಿದ್ದಾರೆ.

(ಟಿ.ಜಿ.)

**ಭಾರತಿ:** ಕನ್ನಡ ಚಲನಚಿತ್ರ ತಾರೆ. ಮಹಾರಾಷ್ಟ್ರದಿಂದ ಬೆಂಗಳೂರಿಗೆ ವಲಸೆ ಬಂದ ಸಂಪ್ರದಾಯಸ್ಥ ಮನೆತನದಲ್ಲಿ ಜನಿಸಿದರು. ಆಗಸ್ಟ್ 15ರಂದು ಜನಿಸಿದ್ದರಿಂದ ಇವರಿಗೆ ಭಾರತಿ ಎಂದು ನಾಮಕರಣವಾಯಿತು. ಅದೇ ಹೆಸರು ಚಿತ್ರತಾರೆಯಾದಾಗಲೂ ಉಳಿದು ಖ್ಯಾತವಾಯಿತು. ಬಾಲ್ಯದಿಂದಲೂ ಸಂಗೀತ ಮತ್ತು ನೃತ್ಯದಲ್ಲಿ ಅಭ್ಯಾಸ, ಆಸಕ್ತಿ ಇದ್ದ ಇವರಿಗೆ ಸೊಬಗಿನ ಶರೀರ, ಸೊಗಸಾದ ಶಾರೀರವೂ ಇತ್ತು. ಆದರೂ

ಚಿತ್ರರಂಗದಲ್ಲಿ ಅವಕಾಶ ಪಡೆಯುವ ಮೊದಲ ಪ್ರಯತ್ನಗಳು ವಿಫಲವಾದವು. 1966ರಲ್ಲಿ ನಟ ಕಲ್ಯಾಣ್ ಕುಮಾರ್ ಜೊತೆ ಲವ್ ಇನ್ ಬೆಂಗಳೂರು ಎಂಬ ಕನ್ನಡ ಚಿತ್ರದಲ್ಲಿ ಮೊದಲ ಬಾರಿಗೆ ನಾಯಕಿಯಾಗಿ ತೆರೆಯ ಮೇಲೆ ಕಾಣಿಸಿಕೊಂಡರು. ಗಾಯಕಿಯಾಗುವ ಆಸೆ ಹೊತ್ತ ಇವರು ನಾಯಕಿ ಯಾದರು. ಬಳಕುವ ಮೈಕಟ್ಟಿನ ಆಕರ್ಷಕ ಮೊಗದ ತಾರೆಯರಿಲ್ಲದೆ ಬರಿದಾಗಿದ್ದ ಕನ್ನಡ ಚಿತ್ರರಂಗದಿಂದ ಇವರಿಗೆ ಅಪಾರ ಬೇಡಿಕೆ ಬಂತು. ಜೊತೆಗೆ ತೆಲುಗು, ತಮಿಳು, ಮಲೆಯಾಳಂ, ಹಿಂದೀ ಚಿತ್ರರಂಗಗಳಿಂದಲೂ ಇವರಿಗೆ ಆಹ್ವಾನಗಳು ಬಂದವು. ಇವರು ನೂರಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಇವುಗಳಲ್ಲಿ 41 ಕನ್ನಡ ಚಿತ್ರಗಳು, 27 ತೆಲುಗು, 20 ತಮಿಳು, 11 ಹಿಂದೀ, 2 ಮಲೆಯಾಳಂ. ಚಿತ್ರಗಳು. ಭಾಗ್ಯಜ್ಯೋತಿ ಇವರು ನಟಿಸಿದ ನೂರನೆಯ ಚಿತ್ರ. ಆಗ ಕನ್ನಡ ನಾಯಕಿ ನಟಿಯರಲ್ಲಿ ಬಿ. ಸರೋಜಾದೇವಿಯವರನ್ನು ಬಿಟ್ಟರೆ ಶತಚಿತ್ರದ ನಟಿಯಾಗಿ ಕಾಣಿಸಿಕೊಂಡವರು ಇವರೇ. ಕನ್ನಡ ಚಿತ್ರಗಳಲ್ಲೆಲ್ಲ ಇವರು ನಾಯಕಿಯ ಪಾತ್ರವನ್ನೇ ವಹಿಸಿದ್ದರೂ ಇತರ ಭಾಷಾಚಿತ್ರಗಳಲ್ಲಿ ಎರಡನೆಯ ದರ್ಜೆಯ

ಪಾತ್ರಗಳನ್ನು ಒಪ್ಪಿಕೊಂಡದ್ದುಂಟು. ಸೌಮ್ಯಮೊಗದ ಗಂಭೀರವಾದ ಇವರು ಚೆಲ್ಲುಪಾತ್ರಗಳಲ್ಲಿ ಅಭಿನಯಿಸಿದ್ದರೂ ಇವರನ್ನು ಸಾಂಪ್ರದಾಯಿಕ ಮುಗ್ಧಪಾತ್ರಗಳಲ್ಲಿಯೇ ಚಿತ್ರರಸಿಕರು ನಿರೀಕ್ಷಿಸುತ್ತಾರೆ. ಹಾಗಾಗಿ ಹಿಂದೀ ತೆರೆ ಇವರಿಗೆ ಒಗ್ಗಿಬರಲಿಲ್ಲ. ಕನ್ನಡ ಚಲನಚಿತ್ರರಂಗದಲ್ಲಿ ಅತ್ಯಂತ ಜನಪ್ರಿಯತೆ ಗಳಿಸಿದ ತಾರಾಜೋಡಿ ರಾಜಕುಮಾರ್–ಭಾರತಿ. ಭಲೇ ಜೋಡಿ, ಬಾಳು ಬೆಳಗಿತು, ದೂರದ ಬೆಟ್ಟ, ನೂರು ವಾರ ಸತತವಾಗಿ ಓಡಿ ದಾಖಲೆ ನಿರ್ಮಿಸಿದ ಬಂಗಾರದ ಮನುಷ್ಯ ಮೊದಲಾದವು ಈ ತಾರಾಜೋಡಿಯನ್ನುಳ್ಳವು. ಇವರ ಅಭಿನಯಕ್ಕೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಸಂಧ್ಯಾರಾಗದ ಅಭಿನಯಕ್ಕೆ 1966ರಲ್ಲಿ ರಾಷ್ಟ್ರಪ್ರಶಸ್ತಿ, 1970ರಲ್ಲಿ ಶ್ರೀಕೃಷ್ಣದೇವರಾಯ ವರ್ಣಚಿತ್ರದಲ್ಲಿ ಚಿನ್ನಾದೇವಿಯ ಪಾತ್ರಾಭಿನಯಕ್ಕೆ ರಾಜ್ಯಪ್ರಶಸ್ತಿ ಲಭಿಸಿದುವು.

ಮನೆ ಬೆಳಗಿದ ಸೊಸೆ ಚಿತ್ರದಲ್ಲಿ ತನ್ನೊಡನೆ ನಾಯಕ ಪಾತ್ರವಹಿಸಿದ ನಟ ವಿಷ್ಣುವರ್ಧನರೊಡನೆ 1975ರಲ್ಲಿ ಇವರು ವಿವಾಹವಾದರು. ತರುವಾಯ ಇವರು ಸಿನಿಮಾಗಳಲ್ಲಿ ನಟಿಸುವುದು ಕಡಿಮೆಯಾದರೂ ಪೂರ್ತಿಯಾಗಿ ನಟನೆಯನ್ನು ಕೈಬಿಡಲಿಲ್ಲ. ಅನಂತರದಲ್ಲಿ ದೂರದರ್ಶನದ ಧಾರಾವಾಹಿಗಳಲ್ಲೂ ಇವರು ಪಾತ್ರವಹಿಸಿದ್ದಾರೆ. **(ಎಸ್.ಎಸ್.ಎಂಯು.)**

**ಭಾರತೀಸುತ:** 1915–76. ಪ್ರಸಿದ್ಧ ಕಾದಂಬರಿಕಾರರು. ನಿಜನಾಮ ಎಸ್. ಆರ್. ನಾರಾಯಣರಾವ್. ಭಾರತೀಸುತ ಇವರ ಕಾವ್ಯನಾಮ. ಇವರು ಮಡಿಕೇರಿ ಬಳಿಯ ಬಿಳಿಗಿರಿ ಗ್ರಾಮದಲ್ಲಿ 1915 ಮೇ 15ರಂದು ಜನಿಸಿದರು. ಶ್ಯಾನುಭೋಗರ ಮನೆ ರಾಮಯ್ಯ ಇವರ ತಂದೆ. ತಮ್ಮ ಎಳನೆಯ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಚಿಕ್ಕಪ್ಪನ ಆಶ್ರಯದಲ್ಲಿದ್ದು, ಮೆಟ್ರಿಕ್ಯುಲೇಷನ್ ತನಕದ ವಿದ್ಯಾಭ್ಯಾಸವನ್ನು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಸಾಗಿಸಿದರು. ಪ್ರಸಿದ್ಧ ಸಾಹಿತಿ ಪಂಜೆ ಮಂಗೇಶರಾಯರು ಮುಖ್ಯೋಪಾಧ್ಯಾಯರಾಗಿದ್ದ ಆ ಶಾಲೆಯಲ್ಲಿ ಇವರಿಗೆ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಳ್ಳುವ ಸದವಕಾಶ ದೊರೆಯಿತು. ಆದರೆ ಮೆಟ್ರಿಕ್ಯುಲೇಷನ್ ತಲಪುವ ಹೊತ್ತಿಗೆ ಬೀಸಿ ಬಂದ ಸ್ವಾತಂತ್ರ್ಯ ಹೋರಾಟದ ಸುಳಿಗಾಳಿಗೆ ಸಿಕ್ಕಿ ಶಾಲಾ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತರು (1930). ವೈನಾಡಿನ ಚಳವಳಿಯಲ್ಲಿ ಭಾಗವಹಿಸಿ ಎರಡು ಸಲ ಸೆರೆಮನೆಯ ವಾಸ ಅನುಭವಿಸಿದರು (1932–33). ಗಾಂಧೀ ತತ್ತ್ವವನ್ನು ಮೈಗೂಡಿಸಿಕೊಂಡರು. ಎ.ಕೆ. ಗೋಪಾಲನ್ನರಂಥ ಸೆರೆಮನೆಯ ಸಹವಾಸಿಗಳಿಂದ ಲೆನಿನರ ಸಿದ್ಧಾಂತವನ್ನು ಹೃದ್ಗತ ಮಾಡಿಕೊಂಡರು. ಜೊತೆಗೆ ಕಲ್ಲಿಕೋಟೆಯಲ್ಲಿ ಸಾಗಿಸಿದ ಬಂದರು ಕಾರ್ಮಿಕ ಜೀವನ (1934–36), ವೈನಾಡಿನ ಕಾಫಿ ತೋಟಗಳ ನೌಕರ ಜೀವನ (1936–42) ಇವುಗಳಿಂದಾಗಿ ಆ ತತ್ತ್ವಗಳನ್ನು ಬುದ್ಧಿಗತವನ್ನಾಗಿ ಮಾಡಿಕೊಂಡರು. ಭಾರತೀಸುತರು ಸತ್ಯಾಗ್ರಹಿಯಾದರೂ ರಾಜಕೀಯ ವ್ಯಕ್ತಿಯಾಗಿ ಉಳಿಯಲಿಲ್ಲ. ಕೊಡಗಿಗೆ ಮತ್ತೆ ಹಿಂದಿರುಗಿ ಉಪಾಧ್ಯಾಯ ವೃತ್ತಿಯನ್ನವಲಂಬಿಸಿದರು (1942). ಮೊದಲು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿ, ಅನಂತರ ಮದರಾಸು ವಿಶ್ವವಿದ್ಯಾನಿಲಯದ ವಿದ್ವಾನ್ (ಕನ್ನಡ) ಪದವಿ ಪಡೆದು ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾಗಿ ದುಡಿದು (1973) ಸೇವೆಯಿಂದ ನಿವೃತ್ತರಾದರು.

ಬಂಗಾರದ ಬಳೆ (1928) ಎಂಬ ಕಥೆಯಿಂದ ಇವರು ಸಾಹಿತ್ಯ ಪ್ರಪಂಚಕ್ಕೆ ಪರಿಚಿತರಾದರು. ಆರು ಕಥಾಸಂಕಲನಗಳನ್ನೂ ಸುಮಾರು ಇಪ್ಪತ್ತೈದು ಮಕ್ಕಳ ಕಥೆಗಳನ್ನೂ ಇಪ್ಪತ್ತೇಳು ಸ್ವತಂತ್ರ ಕಾದಂಬರಿಗಳನ್ನೂ ರಚಿಸಿದ್ದಾರೆ. ನಾಲ್ಕು ಕಾದಂಬರಿಗಳನ್ನು ಅನ್ಯಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರು ಕನ್ನಡ ಸಾಹಿತ್ಯವನ್ನು, ಮಾತ್ರವಲ್ಲದೆ ಪಾಶ್ಚಾತ್ಯ ಸಾಹಿತ್ಯವನ್ನು, ಅದರಲ್ಲಿಯೂ ರಷ್ಯನ್ ಸಾಹಿತ್ಯವನ್ನು ಸಾಕಷ್ಟು ಅಧ್ಯಯನ ಮಾಡಿಕೊಂಡಿದ್ದರು. ಇವರ ಪ್ರಾರಂಭದ ಕಾದಂಬರಿಗಳಲ್ಲಿ ಗಳಗನಾಥರ ಅನುಕರಣೆ ಇದ್ದರೆ ಮುಂದಿನ ಕೆಲವು ಕಾದಂಬರಿಗಳಲ್ಲಿ ಪಾಶ್ಚಾತ್ಯ ಸಾಹಿತ್ಯದ ಛಾಯೆ ಗೋಚರಿಸುತ್ತದೆ.

ವೈನಾಡು ಕೊಡಗುಗಳ ಜನಜೀವನ ಭಾರತೀಸುತರ ಬಹುಪಾಲು ಕಥೆ ಕಾದಂಬರಿಗಳ ಕಥಾವಸ್ತು. ಇವುಗಳಲ್ಲಿ ನಾಯರರ, ಪಣಿಯರ,



ಕುರುಬರ, ಕೊಡವರ ಜೀವನದ ರೀತಿನೀತಿಗಳನ್ನು, ರೂಢಿಪದ್ಧತಿಗಳನ್ನು, ಒಳ ಹೊರಗುಗಳನ್ನು ಪದರಪದರವಾಗಿ ಬಿಡಿಸಿ ತೋರಿಸಲು ಯತ್ನಿಸಿದ್ದಾರೆ. ಗಾಳ ಹಿಡಿದ ಮೀನು ಮುಂತಾದ ಕಥೆಗಳಲ್ಲಿ ಮಲೆನಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುವ ಮಣ್ಣಿನ ಮಕ್ಕಳ ಜೀವಂತ ವರ್ಣನೆಯಿದ್ದರೆ, ಬೆಳ್ಳಿ ಮೂಡಿತು, ಚಿಗುರುಹಾಸಿಗೆ, ಗಿರಿಕನ್ನಿಕೆ, ಕೊಳಲಿನ ಕರೆ ಕಾದಂಬರಿಗಳಲ್ಲಿ ಕೊಡಗು, ವೈನಾಡು ಜನಜೀವನದ ಪಡಿನೆಳಲಿದೆ.

ದಾಂಪತ್ಯ ಜೀವನದ ಸಮಸ್ಯೆಗಳನ್ನೂ ಭಾರತೀಸುತರು ಆಳವಾಗಿ ವಿವೇಚಿಸಿದ್ದಾರೆ. ಹೆಣ್ಣಿನ ಬಗೆಗೆ ಭಾರತೀಸುತರದು ಅನುಕಂಪೆಯ ದೃಷ್ಟಿ. ಎಡಕಲ್ಲು ಗುಡ್ಡದ ಮೇಲೆ, ಸಂತಾನ ಭಿಕ್ಷೆ ಮೊದಲಾದ ಕಾದಂಬರಿಗಳಲ್ಲಿ ಇವರು ಮಾನವೀಯ ದೃಷ್ಟಿ ಮತ್ತು ಸಮಾಜದ ರೂಢಿಗಳ ಬಗೆಗಿನ ತಿಕ್ಕಾಟದ ಮೇಲೆ ಬೆಳಕು ಬೀರಿದ್ದಾರೆ. ಬಂಗಾರದ ಕುಲುಮೆ, ಶತದ್ರು ದಂಡೆಯಲ್ಲಿ ಮೊದಲಾದ ಕಾದಂಬರಿಗಳಲ್ಲಿ ರಾಜಕೀಯ, ರಾಷ್ಟ್ರಭಕ್ತಿ, ದೇಶಪ್ರೇಮ ಇತ್ಯಾದಿ ವಿಷಯಗಳು ಹೃದಯಸ್ಪರ್ಶಿಯಾಗಿ ನಿರೂಪಿತವಾಗಿವೆ. ಇವರ ಕಾದಂಬರಿಗಳಲ್ಲಿ ಎದ್ದುಕಾಣುವ ಸಾಮಾನ್ಯ ಗುಣವೆಂದರೆ ಅಲ್ಲಿನ ಪ್ರಕೃತಿಯ ವಿಶ್ವರೂಪದರ್ಶನ. ಪ್ರಕೃತಿಯನ್ನು ಕುರಿತ ವರ್ಣನೆಗಳು ಓದುಗರನ್ನು ಸೆರೆಹಿಡಿಯುತ್ತವೆ. ಆದರೂ ಕೆಲವು ಕಾದಂಬರಿಗಳಲ್ಲಿ ಸನ್ನಿವೇಶಗಳು, ಘಟನೆಗಳು ಒಂದೇ ಬಗೆಯಾಗಿವೆ ಎಂದು ವಿಮರ್ಶಕರು ಇವರ ಸಾಹಿತ್ಯದ ಬಗ್ಗೆ ಅಭಿಪ್ರಾಯಪಟ್ಟಿರುವುದೂ ಉಂಟು.

ಕೊಡಗಿನ ಜನಜೀವನದ ನರನಾಡಿಗಳನ್ನು ಮಿಡಿದು ತೋರಿಸಬಲ್ಲ ಹುಲಿಯ ಹಾಲಿನ ಮೇವು ಇವರ ಕಾದಂಬರಿಗಳಲ್ಲಿ ಶೈಲಿಯ ದೃಷ್ಟಿಯಿಂದ, ವರ್ಣನೆಯ ಸೊಗಸಿನ ದೃಷ್ಟಿಯಿಂದ, ಕಥಾಸಂವಿಧಾನದ ದೃಷ್ಟಿಯಿಂದ ಮಹತ್ತ್ವದ ಕೃತಿ. ಈ ಕಾದಂಬರಿಯಲ್ಲಿ ಕೊಡಗಿನ ಇತಿಹಾಸವೊಂದನ್ನು ಜೀವಂತಗೊಳಿಸಿದ್ದಾರೆ.

ಇವರು ಕಿರು ಕಾದಂಬರಿಗಳನ್ನೂ ಬರೆದಿದ್ದಾರೆ. ವಲ್ಮೀಕ ಎಂಬ ಇಂಥ ಒಂದು ಕಾದಂಬರಿ ಇವರಿಗೆ ಅಪಾರ ಯಶಸ್ಸನ್ನು ತಂದುಕೊಟ್ಟಿತು. ಉತ್ತಮ ಕಾದಂಬರಿಕಾರ, ಕಥೆಗಾರ ಎಂದು ಹೆಸರು ಗಳಿಸಿರುವ ಇವರು ಕನ್ನಡಕ್ಕಾಗಿ ತನುಮನಗಳನ್ನು ಅರ್ಪಿಸಿ ದುಡಿದವರು. ಇವರಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಅನೇಕ ಕಾದಂಬರಿಗಳು ಸ್ಪರ್ಧೆಯಲ್ಲಿ ಬಹುಮಾನ ಗಳಿಸಿವೆ. ಎಡಕಲ್ಲು ಗುಡ್ಡದ ಮೇಲೆ, ಗಿರಿಕನ್ನಿಕೆ (ಗಿರಿಕನ್ಯೆ), ಹುಲಿಯ ಹಾಲಿನ ಮೇವು, ಬಯಲುದಾರಿ–

ಈ ಕಾದಂಬರಿಗಳು ರಜತಪರದೆಯ ಮೇಲೆ ಬಂದು ಚಿತ್ರರಸಿಕರ ಮನಸ್ಸನ್ನು ರಂಜಿಸಿವೆ. ಇವರು 1976ರಲ್ಲಿ ನಿಧನರಾದರು. *

**ಭಾರದ್ವಾಜ, ಡಿ.ಕೆ.:** 1891–1953. ಸ್ವಾತಂತ್ರ್ಯ ಹೋರಾಟಗಾರರು, ಪತ್ರಿಕೋದ್ಯಮಿ, ಸಾಹಿತಿ ಮತ್ತು ಆಯುರ್ವೇದ ಪಂಡಿತರು. ತಮ್ಮ ಮನೆತನದ ಗೋತ್ರವನ್ನೇ ಅಡ್ಡಹೆಸರಿನಂತೆ ಬಳಸುತ್ತಿದ್ದ ಇವರ ನಿಜವಾದ ಹೆಸರು ದತ್ತಾತ್ರೇಯ. ಹುಟ್ಟಿದ್ದು ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ. ಅಲ್ಲಿಯ ಜೋಯಿಸರ ಮನೆತನಕ್ಕೆ ಸೇರಿದವರಾದ ಇವರ ತಂದೆ ಕೃಷ್ಣರಾಯರು ಸರ್ಕಾರಿ ನೌಕರಿಗಾಗಿ ಬೆಂಗಳೂರಿಗೆ ಬಂದು ನೆಲೆಸಿದ್ದರು. ಬೆಂಗಳೂರು, ಧಾರವಾಡ, ಪುಣೆ, ಕಾಶಿ ಮತ್ತು ಮದರಾಸು ನಗರಗಳಲ್ಲಿ ಶಿಕ್ಷಣ ಪಡೆದ ಭಾರದ್ವಾಜರು ಸಂಸ್ಕೃತ, ಕನ್ನಡ, ಇಂಗ್ಲಿಷ್, ಹಿಂದೀ, ಬಂಗಾಲಿ, ಮರಾಠಿ, ತೆಲುಗು ಭಾಷೆಗಳಲ್ಲಿ ಪರಿಶ್ರಮವನ್ನು ಸಂಪಾದಿಸಿಕೊಂಡರು. ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಒಕ್ಕಲಿಗ ಮಾಸಪತ್ರಿಕೆಯ ಉಪಸಂಪಾದಕರೆಂದು ನೇಮಕಗೊಂಡು ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದ ಇವರು ಅನಂತರ ಸಂಸ್ಕೃತ ರಿಸರ್ಚ್, ಒಕ್ಕಲಿಗ, ಭಕ್ತಿಸಂದೇಶ, ತಿಲಕ್ ಸಂದೇಶ, ರಂಗಭೂಮಿ, ಮಕ್ಕಳ ಪುಸ್ತಕ ಮೊದಲಾದ ಪತ್ರಿಕೆಗಳಿಗೆ ಬೇರೆ ಬೇರೆ ಕಾಲಗಳಲ್ಲಿ ಸಂಪಾದಕರಾಗಿದ್ದರು. ಮದರಾಸಿನಲ್ಲಿ ಅನಿಬೆಸೆಂಟರು ಸ್ಥಾಪಿಸಿದ್ದ ರಾಷ್ಟ್ರೀಯ ಶಿಕ್ಷಕಿಯರ ಕಾಲೇಜಿನಲ್ಲಿ ಸುಮಾರು ಎರಡು ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆಸಲ್ಲಿಸಿದ ಇವರು, ಸ್ವಾತಂತ್ರ್ಯ ಸಂಗ್ರಾಮದಲ್ಲೂ ಭಾಗವಹಿಸಿ, ಅಸಹಕಾರ ಎಂಬ ರಾಜಕೀಯ ಸಾಪ್ತಾಹಿಕ ಪತ್ರಿಕೆಯನ್ನು ಸ್ವಲ್ಪ ಕಾಲ ನಡೆಸಿದರು. ಬೆಳಗಾಂವಿಯಲ್ಲಿ 1924ರ ಡಿಸೆಂಬರ್‌ನಲ್ಲಿ ಜರುಗಿದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ಬೆಳಗಾಂವಿಯ ಮುಖ್ಯ ಕಛೇರಿಯಲ್ಲಿ ಕಾರ್ಯದರ್ಶಿಗಳಾಗಿದ್ದರು. ಆಗ ಇವರು ಕನ್ನಡನಾಡಿನ ಕೈಪಿಡಿಯನ್ನು ಸಂಪಾದಿಸಿ ಪ್ರಕಟಿಸಿದರು. ಆಯುರ್ವೇದ ಪಂಡಿತರೂ 'ವೈದ್ಯ ಗುರು'ಗಳೂ ಆಗಿದ್ದ ಇವರು ಬೆಂಗಳೂರಿನಲ್ಲಿ ರಾಮಕೃಷ್ಣ ಚಿಕಿತ್ಸಾಲಯ ಎಂಬ ಆಯುರ್ವೇದ ಔಷಧಾಲಯವನ್ನು ಸ್ಥಾಪಿಸಿ ತಮ್ಮ ಬದುಕಿನ ಕೊನೆಯವರೆಗೂ ಅದನ್ನು ನಡೆಸಿದರು.

ಭಾರದ್ವಾಜರ ಸಾಹಿತ್ಯ ಸೇವೆ ಬಹುಮುಖವಾದುದು. ಸ್ವತಂತ್ರ ಕೃತಿಗಳಲ್ಲದೆ ಭಾಷಾಂತರವೂ ಸೇರಿದಂತೆ ಸುಮಾರು ಐವತ್ತು ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಪತ್ರಿಕೆಯಲ್ಲಿ ಸುಮಾರು ಮೂವತ್ತು ಮಂದಿ ಖ್ಯಾತ ಕನ್ನಡ ಲೇಖಕರನ್ನು ಕುರಿತ ಪರಿಚಯುಲೇಖನಗಳನ್ನು ಪ್ರಕಟಿಸಿದ್ದಾರೆ. ಮಹಾತ್ಮ ಗಾಂಧೀಜಿಯವರ ಹಿಂದೀ ಸ್ವರಾಜ್ಯ, ಅನಾಸಕ್ತಿ ಯೋಗ, ನೀತಿಧರ್ಮ ಅಥವಾ ಧರ್ಮನೀತಿ, ಬ್ರಹ್ಮಚರ್ಯೆಯೋ ಕಾಮಸಾಧನೆಯೋ ಮುಂತಾದ ಕೃತಿಗಳನ್ನು ಪ್ರಥಮ ಬಾರಿಗೆ ಕನ್ನಡಕ್ಕೆ ತಂದ ಕೀರ್ತಿ ಇವರದು. ಬಂಗಾಲಿ ಭಾಷೆಯಿಂದ ದ್ವಿಜೇಂದ್ರಲಾಲ ಬಸು ಅವರ ಭೀಷ್ಮ, ಸೀತಾದೇವಿ ಎಂಬ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಆಹಾರ ವಿಜ್ಞಾನ, ದಾಂಪತ್ಯವಿಜ್ಞಾನ, ಜನನಿಯಂತ್ರಣ ಎಂಬವು ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಇವರ ಸ್ವತಂತ್ರ ಕೃತಿಗಳು. ಇವರು ಪ್ರಕಟಿಸಿರುವ ಇಂಗ್ಲಿಷ್–ಕನ್ನಡ ನಿಘಂಟು ತುಂಬ ಜನಪ್ರಿಯವಾಗಿದೆ.

ಬೆಳಗಾಂವಿಯಲ್ಲಿ 1924ರಲ್ಲಿ ಚಿತ್ತರಂಜನದಾಸರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಗ್ರಂಥಾಲಯ ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದ ಭಾರದ್ವಾಜರು ಮೈಸೂರು ಹಿಂದೀ ಪ್ರಚಾರ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸಮಾಡಿದ್ದಾರೆ.

ಇವರು 1953 ಫೆಬ್ರವರಿ 2ರಂದು ನಿಧನ ಹೊಂದಿದರು. (ಬಿ.ಕೆ.)

**ಭಾಲ್ಕಿ:** ಬೀದರ್ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತಕೇಂದ್ರ ಪಟ್ಟಣ. ತಾಲ್ಲೂಕಿನ ಪೂರ್ವದಲ್ಲಿ ಬೀದರ್, ದಕ್ಷಿಣದಲ್ಲಿ ಹುಮನಾಬಾದ್ ಮತ್ತು ಬಸವಕಲ್ಯಾಣ, ಉತ್ತರದಲ್ಲಿ ಔರಾದ ತಾಲ್ಲೂಕುಗಳು, ಪಶ್ಚಿಮ ಮತ್ತು ವಾಯವ್ಯದಲ್ಲಿ ಮಹಾರಾಷ್ಟ್ರ ರಾಜ್ಯ ಸುತ್ತುವರೆದಿವೆ. ಭಾಲ್ಕಿ, ಹಲಬರ್ಗ, ಕಟಕ್ ಚಿಂಚೋಳಿ, ಲಖನಗಾಂವ್ ನಿಟ್ಟೂರು ಸಾಯ್‌ಗಾಂವ್ ಸರ್ಕಲ್‌ಗಳಿದ್ದು 121 ಗ್ರಾಮಗಳಿಂದ ಕೂಡಿದೆ. ಈ ತಾಲ್ಲೂಕಿನ ವಿಸ್ತೀರ್ಣ 11,138 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,57,042.

ಈ ತಾಲ್ಲೂಕಿನ ಮುಖ್ಯ ನದಿಗಳು ಮಾಂಜರಾ ಮತ್ತು ಕಾರಂಜಾ. ಮಾಂಜರಾ ನದಿ ತಾಲ್ಲೂಕಿನ ಪಶ್ಚಿಮದಲ್ಲಿ ಸ್ವಲ್ಪ ದೂರ ಗಡಿಯಾಗಿ ಹರಿದು ಮಹಾರಾಷ್ಟ್ರ ರಾಜ್ಯವನ್ನು ಬೇರ್ಪಡಿಸಿದೆ. ಮುಂದೆ ತಾಲ್ಲೂಕಿನಲ್ಲಿ ಸ್ವಲ್ಪ ದೂರ ಈಶಾನ್ಯಾಭಿಮುಖವಾಗಿಯೂ ಅಲ್ಲಿಂದ ಮುಂದೆ ತಾಲ್ಲೂಕಿನ ಉತ್ತರಗಡಿಯಾಗಿ ಹರಿಯುತ್ತದೆ. ಕಾರಂಜಾ ನದಿ ತಾಲ್ಲೂಕಿನ ಆಗ್ನೇಯದಿಂದ ವಾಯವ್ಯಾಭಿಮುಖವಾಗಿ ಹರಿದು ಮಾಂಜರಾ ನದಿಯನ್ನು ಸೇರಿಕೊಳ್ಳುತ್ತದೆ. ಇದಕ್ಕೆ ಉಪನದಿಯಾದ ಚುಳಕಿ ತೊರೆ ಬಸವಕಲ್ಯಾಣ ತಾಲ್ಲೂಕಿನಿಂದ ಹರಿದು ಬಂದು ಕಾರಂಜಾ ನದಿಯನ್ನು ಸೇರಿಕೊಳ್ಳುವುದು. ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ 919 ಮಿಮೀ. ಈ ತಾಲ್ಲೂಕಿನಲ್ಲಿ ಕಪ್ಪುಮಣ್ಣಿನಭೂಮಿ ಹೆಚ್ಚು. ಕೆಲವೆಡೆ ಕೆಂಪು ಮಿಶ್ರಿತ ಕಪ್ಪು ಮಣ್ಣಿನ ಫಲವತ್ತಾದ ಭೂಮಿ ಇದೆ. ಸುಮಾರು. 817 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಕಾರಂಜಾ ನದಿ ಯೋಜನೆಯಿಂದ ಈ ತಾಲ್ಲೂಕಿನ ಕೃಷಿ ಕ್ಷೇತ್ರದಲ್ಲಿ ಪ್ರಗತಿಯಾಗುತ್ತಿದೆ. ನೀರಾವರಿ ಬಾವಿಗಳು ವ್ಯವಸಾಯಕ್ಕೆ ಆಧಾರವಾಗಿವೆ. ಇಲ್ಲಿನ ಮುಖ್ಯ ಬೆಳೆಗಳು ಜೋಳ, ಸೇಂಗಾ, ಕಡಲೆ, ತೊಗರಿ, ಬತ್ತ ಮತ್ತು ಹತ್ತಿ.

ಈ ತಾಲ್ಲೂಕು ಕೈಗಾರಿಕೆಯಲ್ಲಿಯೂ ಪ್ರಗತಿಪಥದಲ್ಲಿದ್ದು ಇಲ್ಲಿ ತಾಂತ್ರಿಕ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳೂ ಕೈಮಗ್ಗಗಳೂ ಇವೆ. ತಾಲ್ಲೂಕಿನಲ್ಲಿ ಹೈದರಾಬಾದ್–ಬಿದರೆ–ಪರಲಿ ವೈಜನಾಥ ರೈಲುಮಾರ್ಗ ಹಾದುಹೋಗಿವೆ. ಇಲ್ಲಿ ಮೂರು ರೈಲುನಿಲ್ದಾಣಗಳಿವೆ. ತಾಲ್ಲೂಕಿನಲ್ಲಿ ಒಟ್ಟು 282 ಕಿಮೀ ಉದ್ದ ರಸ್ತೆಗಳಿವೆ. ಪರಲಿ–ಬಿದರೆ ರಸ್ತೆ ಈ ತಾಲ್ಲೂಕಿನ ರಸ್ತೆಗಳಲ್ಲಿ ಮುಖ್ಯವಾದುದು.

ಭಾಲ್ಕಿಯ ಆಗ್ನೇಯಕ್ಕೆ ತಾಲ್ಲೂಕಿನ ಅಂಚಿನಲ್ಲಿ ಇರುವ ಖಾನಾಪುರ ಗ್ರಾಮದಲ್ಲಿರುವ ಖಂಡೋಬ ದೇವಾಲಯ ಈ ಸುತ್ತಿನಲ್ಲಿ ಪ್ರಸಿದ್ಧ. ಡಿಸೆಂಬರ್ ತಿಂಗಳಲ್ಲಿ 15 ದಿನಗಳ ಕಾಲ ಇಲ್ಲಿ ಜಾತ್ರೆ ಸೇರುವುದು. ಭಾಲ್ಕಿಯ ನೈಋತ್ಯದಲ್ಲಿ ತಾಲ್ಲೂಕಿನ ಅಂಚಿನಲ್ಲಿರುವ ನಾವದಗಿ ಗ್ರಾಮದಲ್ಲಿ ಶ್ರಾವಣಮಾಸದಲ್ಲಿ ಎರಡು ದಿನ ರೇವಣಸಿದ್ದಯ್ಯನ ಜಾತ್ರೆ ನಡೆಯುತ್ತದೆ. ಭಾಲ್ಕಿಯ ದಕ್ಷಿಣಕ್ಕೆ ತಾಲ್ಲೂಕಿನ ಅಂಚಿನ ಚಲ್ಕಾಪುರ ಗ್ರಾಮದಲ್ಲಿರುವ ಹನುಮಜಯಂತಿ ಬಹು ಜನರನ್ನು ಆಕರ್ಷಿಸುತ್ತದೆ. ಭಾಲ್ಕಿಯ ವಾಯವ್ಯಕ್ಕೆ ತಾಲ್ಲೂಕಿನ ಅಂಚಿನಲ್ಲಿರುವ ತೂಗಾಂವ್ (ಹಲಸಿ) ಮಾಂಜರಾ ನದಿಯ ಎಡದಂಡೆಯ ಮೇಲಿದೆ. ಇಲ್ಲಿ ಲಕ್ಷ್ಮೀ ದೇವಾಲಯವಿದ್ದು, ಡಿಸೆಂಬರ್ ತಿಂಗಳಲ್ಲಿ ಮೂರು ದಿನಗಳ ಜಾತ್ರೆ ಸೇರುವುದು. ಭಾಲ್ಕಿಯ ವಾಯವ್ಯಕ್ಕಿರುವ ಅಲವಾಯ್ ಗ್ರಾಮದಲ್ಲೂ ಒಂದು ಲಕ್ಷ್ಮೀದೇವಾಲಯವಿದೆ. ಅಲ್ಲಿ ಜನವರಿಯಲ್ಲಿ ಐದು ದಿನಗಳ ಜಾತ್ರೆ ನಡೆಯುವುದು. ಇವಲ್ಲದೆ ಹುಲಕುಂಟೆ ಮಠ, ಭಾಲಕೇಶ್ವರ ಮತ್ತು ಹಿರೇ ಮಠಗಳು ತಾಲ್ಲೂಕಿನ ಧಾರ್ಮಿಕ ಕೇಂದ್ರಗಳಾಗಿವೆ. (*;ಬಿ.)

ಭಾಲ್ಕಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಪಟ್ಟಣ. ಬೀದರ್‌ನ ವಾಯುವ್ಯಕ್ಕೆ 45 ಕಿಮೀ ದೂರದಲ್ಲಿದೆ. ಸಮುದ್ರಮಟ್ಟದಿಂದ ಸು. 579 ಮೀ ಎತ್ತರದಲ್ಲಿ ಇದೆ. ಉತ್ತಮ ಹವಾಗುಣವಿದೆ. ಭಾಲ್ಕಿ ಪಟ್ಟಣದ ಒಟ್ಟು ಜನಸಂಖ್ಯೆ 35,093. ಇದು ಹೈದರಾಬಾದ್–ಬೀದರ್–ಪರಲಿ ವೈಜನಾಥ ರೈಲುಮಾರ್ಗದ ಒಂದು ನಿಲ್ದಾಣ. ವ್ಯಾಪಾರಕೇಂದ್ರ. ಇಲ್ಲಿ ಬ್ಯಾಂಕುಗಳು, ಶಾಲೆಗಳು, ಔಷಧಾಲಯ, ಅಂಚೆ, ತಂತಿ, ವಿದ್ಯುತ್ ಸೌಲಭ್ಯಗಳು ಇವೆ. ಒಂದು ಕಲೆ ಮತ್ತು ವಿಜ್ಞಾನ ಕಾಲೇಜು ಇದೆ. ಪಟ್ಟಣ ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ. **(ಬಿ.)**

**ಭಾಷ್ಯಂ, ಕೆ.ಟಿ.:** 1895–1956. ಆಡಳಿತಗಾರ, ದೇಶಭಕ್ತ ಮತ್ತು ಕಾರ್ಮಿಕ ಮುಖಂಡ. ಕೆ. ತುಪ್ಪಲ್ ನರಸಿಂಹ ಅಯ್ಯಂಗಾರ್ ಭಾಷ್ಯಂ ಇವರ ಪೂರ್ಣ ಹೆಸರು. 1895 ಏಪ್ರಿಲ್ 12ರಂದು ಜನಿಸಿದರು. 1917ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಮತ್ತು 1919ರಲ್ಲಿ ಮದರಾಸು ವಿಶ್ವವಿದ್ಯಾಲಯದಲ್ಲಿ ಬಿ.ಎಲ್. ಪದವಿಗಳನ್ನು ಪಡೆದರು. ಮುಂದೆ ಮೈಸೂರು ಸಂಸ್ಥಾನದ ಉಚ್ಚ ನ್ಯಾಯಾಲಯದ ಅಡ್ವೊಕೇಟ್ ಆಗಿ, ನಿಷ್ಣಾತರೆಂದು ಖ್ಯಾತರಾದರು. 1938ರಲ್ಲಿ ಮಂಡ್ಯದಲ್ಲಿ ಸೇರಿದ್ದ ಮೈಸೂರು ಸಂಸ್ಥಾನದ ವಕೀಲರ ಸಮ್ಮೇಳನಾಧ್ಯಕ್ಷತೆಯ ಗೌರವಕ್ಕೆ ಪಾತ್ರರಾದರು.

ಭಾಷ್ಯಂ ಅವರು 1921ರಿಂದಲೇ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಲಾರಂಭಿಸಿದರು. 1926ರಲ್ಲಿ ಮೈಸೂರಿನ ಪ್ರಜಾಪ್ರತಿನಿಧಿ ಸಭೆಗೆ ಚುನಾಯಿತರಾಗಿ 1939ರ ವರೆಗೂ ಸದಸ್ಯರಾಗಿದ್ದ ಇವರು 1928ರಲ್ಲಿ ಹಿಂದೂ ಕಾನೂನಿನಲ್ಲಿ ಮಹಿಳೆಯರು ಎಂಬ ಪುಸ್ತಕ ಬರೆದು ಭಾರತೀಯ ಮಹಿಳೆಯರ ಹಕ್ಕುಬಾಧ್ಯತೆಗಳನ್ನು ಪರಿಶೀಲಿಸಲು ಸರ್ಕಾರ ಒಂದು ಸಮಿತಿ ರಚಿಸುವಂತೆ ಮಾಡಿದರು. 1929ರಲ್ಲಿ ಬಿನ್ನಿ ಮಿಲ್ ಕಾರ್ಮಿಕ ಸಂಘ ಸ್ಥಾಪನೆಯಾಯಿತು. ಭಾಷ್ಯಂ ಅವರು ಅದರ ಅಧ್ಯಕ್ಷರಾಗಿ ಆಯ್ಕೆಯಾದರು. ಅಲ್ಲದೆ ಮೈಸೂರು ಸಂಸ್ಥಾನ ಕಾರ್ಮಿಕ ಒಕ್ಕೂಟದ ಅಧ್ಯಕ್ಷರಾಗಿ ಕಾರ್ಮಿಕರನ್ನು ಸಂಘಟಿಸಿದರು, ಕಾರ್ಮಿಕ ಸಂಘಗಳಿಗೆ ಸರ್ಕಾರ ಮನ್ನಣೆ ನೀಡಬೇಕೆಂದು ಪ್ರತಿಪಾದಿಸಿದರು. ಇವರ ಸತತ ಪ್ರಯತ್ನದಿಂದಾಗಿ ಮೈಸೂರು ಸಂಸ್ಥಾನದ ಕಾರ್ಮಿಕ ಕಾನೂನು ಜಾರಿಗೆ ಬಂತು.

1930ರಲ್ಲಿ ಮೈಸೂರು ಸಂಸ್ಥಾನದ ಯುವಕ ಸಮ್ಮೇಳನದ ಉಪಾಧ್ಯಕ್ಷರಾಗಿ ವಿದ್ಯಾರ್ಥಿಗಳ ಮಾರ್ಗದರ್ಶಕರಾಗಿದ್ದರು. ಇವರು ವಿದ್ಯಾರ್ಥಿಗಳಲ್ಲಿ ಬಹು ಪ್ರಿಯರಾಗಿದ್ದರೆಂಬುದಕ್ಕೆ ಸಾಕ್ಷಿಯಾಗಿ, ಇದೇ ಕಾಲದಲ್ಲಿ ಇವರಿಗೆ 3 ತಿಂಗಳು ಸೆರೆಮನೆವಾಸದ ಶಿಕ್ಷೆಯಾದಾಗ ವಿದ್ಯಾರ್ಥಿಗಳೆಲ್ಲ ಮುಷ್ಕರ ಹೂಡಿ ಬೆಂಗಳೂರು ಬಂದ್ ಆಚರಿಸಿದರು. ಭಾಷ್ಯಂ ಅವರು 1930–39ರವರೆಗೆ ಬೆಂಗಳೂರು ಪುರಸಭೆಯ ಸದಸ್ಯರಾಗಿ ಅಲ್ಲಿನ ನಾಗರಿಕ ಹಿತಕ್ಕಾಗಿ ದುಡಿದರು.

ಭಾಷ್ಯಂ ಅವರು 1940ರಲ್ಲಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಮೈಸೂರು ಸಂಸ್ಥಾನದ ಜನತೆಯ ರಾಜಕೀಯ ಆಕಾಂಕ್ಷೆಗಳನ್ನು ಕ್ರೋಢೀಕರಿಸಿ ಕಾಂಗ್ರೆಸನ್ನು ಶಕ್ತಿಯುತವನ್ನಾಗಿ ಮಾಡಿ ಜನಪ್ರಿಯಗೊಳಿಸಿ, 1940ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ 173 ಸ್ಥಾನಗಳ ಪೈಕಿ ಸುಮಾರು ಕಾಂಗ್ರೆಸ್ಸಿಗೆ 119 ಸ್ಥಾನಗಳು ದೊರಕುವ ಹಾಗೆ ಮಾಡಿದ್ದು, ಅದೇ ವರ್ಷ ಮಿರಜದಲ್ಲಿ ಪ್ರಜಾಪರಿಷತ್ತಿನ ಅಧಿವೇಶನ ನಡೆದಾಗ ಭಾಷ್ಯಂ ಅದರ ಅಧ್ಯಕ್ಷರಾಗಿದ್ದರು.

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ನಡದ ಚಳವಳಿಯಲ್ಲಿ ಅಗ್ರಪಾತ್ರವಹಿಸಿ ಹಲವು ಬಾರಿ ಸೆರೆಮನೆ ಸೇರಿದ್ದರು. 1947ರಲ್ಲಿ ಸಂಸ್ಥಾನದಲ್ಲಿ ನಡೆದ ಜವಾಬ್ದಾರಿ ಸರ್ಕಾರ ಸ್ಥಾಪಿತವಾಗಿ ಕೆ.ಸಿ. ರೆಡ್ಡಿಯವರ ನಾಯಕತ್ವದ ಮಂತ್ರಿಮಂಡಲದ ರಚನೆಯಾದಾಗ ಭಾಷ್ಯಂ ಕಾನೂನು ಮತ್ತು ಕಾರ್ಮಿಕ ಖಾತೆಗಳ ಮಂತ್ರಿಯಾದರು. 1952ರವರೆಗೂ ಆ ಹುದ್ದೆಯಲ್ಲಿದ್ದರು. 1948ರ ಜೂನ್ ತಿಂಗಳಲ್ಲಿ ಸಾನ್‌ಫ್ರಾನ್ಸಿಸ್ಕೊ ನಗರದಲ್ಲೂ 1949ರ ಜೂನ್ ತಿಂಗಳಲ್ಲಿ ಜಿನೋವದಲ್ಲೂ ನಡೆದ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. 1952ರಲ್ಲಿ ಮೈಸೂರು ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾಗಿ ಪರಿಷತ್ತಿನ ಎಲ್ಲ ಪಕ್ಷಗಳ ಸದಸ್ಯರ ಗೌರವ ಪ್ರೀತಿ ಗಳಿಸಿಕೊಂಡಿದ್ದರು.

ರಾಷ್ಟ್ರದ ಪ್ರಗತಿಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ಇವರು ವಿಧಾನ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲೇ 1956 ಮೇ 24ರಂದು ನಿಧನರಾದರು. **(ಟಿ.ಟಿ.ಎಸ್.)**

**ಭಾಷ್ಯಂ ತಿರುಮಲಾಚಾರ್ಯ:** – 1877. ಖ್ಯಾತ ಪತ್ರಿಕೋದ್ಯಮಿ ಮತ್ತು ವಿದ್ವಾಂಸರು. ಇವರು 1865ರಲ್ಲಿ ಕರ್ನಾಟಕ ಪ್ರಕಾಶಿಕಾ ಎಂಬ ಕನ್ನಡ–ಇಂಗ್ಲಿಷ್ ದ್ವಿಭಾಷಾ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯಲ್ಲಿ ಇವರು ಬರೆಯುತ್ತಿದ್ದ ಸಾಮಾಜಿಕ, ರಾಜಕೀಯ ರಂಗಗಳಿಗೆ ಸಂಬಂಧಿಸಿದ ಲೇಖನಗಳು ಉಪಯುಕ್ತವಾಗಿದ್ದು ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದ್ದವು. ಪತ್ರಿಕೆ 1868ರವರೆಗೆ ನಡೆದು ನಿಂತಿತು. ಮತ್ತೆ 1873ರಲ್ಲಿ ಕರ್ನಾಟಕ ಪ್ರಕಾಶಿಕಾ ಪ್ರಕಟಣೆ ಪ್ರಾರಂಭವಾದಾಗ ಟಿ.ಸಿ. ಶ್ರೀನಿವಾಸಾಚಾರ್ಯರು ಯಾಜಮಾನ್ಯ ಹೊತ್ತರು; ತಿರುಮಲಾಚಾರ್ಯರೇ ಸಂಪಾದಕರಾದರು. ಈ ಪತ್ರಿಕೆಯ ಸಂಪಾದಕೀಯ ಲೇಖನಗಳ ಶೈಲಿ ಪ್ರೌಢವೆಂದೂ ಚಂಪೂ ರೀತಿಯ ಗದ್ಯ ಶೈಲಿಯೆಂದೂ ಅನೇಕರು ಹೇಳುತ್ತಾರೆ. ಈ ಪತ್ರಿಕೆಯ ನೀತಿ ನಿರ್ಮಲ, ವಾಣಿ ಗಂಭೀರ; ಇದರ ಕೆಲಸ ಭದ್ರ. ತಿರುಮಲಾಚಾರ್ಯರು 1877ರಲ್ಲಿ ನಿಧನರಾದರೂ ಅವರು ಸ್ಥಾಪಿಸಿದ ಪತ್ರಿಕೆ 1898ರವರೆಗೆ ನಡೆದು ಕಾಲು ಶತಮಾನಕ್ಕೂ ಮೀರಿ ನಾಡಿನ ಸೇವೆ ಸಲ್ಲಿಸಿತು. **(ಬಿ.ಎಸ್.ವಿ.ಇ.)**

**ಭಾಷ್ಯಂ ಭಾಷ್ಯಾಚಾರ್ಯ**: 1833–1884. ಖ್ಯಾತ ಪತ್ರಿಕೋದ್ಯಮಿ ಮತ್ತು ವಿದ್ವಾಂಸರು. ಭಾಷ್ಯಂ ತಿರುಮಲಾಚಾರ್ಯರ ಪುತ್ರರು. ಜನನ 1833ರಲ್ಲಿ. ಬೆಂಗಳೂರು ವೆಸ್ಲಿಯನ್ ಮಿಷನ್ ಶಾಲೆಯಲ್ಲಿ ಅನಂತರ ಮದರಾಸಿನ ಪ್ರೌಢಶಾಲೆಯೊಂದರಲ್ಲೂ ವ್ಯಾಸಂಗ ಮುಗಿಸಿ ಚತುರ್ವೇದಿ ಶ್ರೀನಿವಾಸಾಚಾರ್ಯರಲ್ಲಿ ಸಂಸ್ಕೃತ ವ್ಯಾಸಂಗ ಮಾಡಿದರು. ಕನ್ನಡ, ತೆಲುಗು, ತಮಿಳು ಭಾಷೆ ಮತ್ತು ಸಾಹಿತ್ಯಗಳನ್ನು ಅಭ್ಯಾಸ ಮಾಡಿದ್ದ ಇವರು ಮರಾಠಿ,ಇಂಗ್ಲಿಷ್, ಪರ್ಷಿಯನ್ ಮತ್ತು ಉರ್ದುಭಾಷೆಗಳನ್ನೂ ಬಲ್ಲವರಾಗಿದ್ದರು. ರಾಷ್ಟ್ರೀಯವಾದಿಗಳಾಗಿದ್ದ ಇವರು ಸಾರ್ವಜನಿಕ ಜೀವನವನ್ನು ಅಭಿವೃದ್ಧಿಗೊಳಿಸಲು ಮತ್ತು ಜನತೆಯಲ್ಲಿ ಸ್ವಾತಂತ್ರ್ಯ ಪ್ರಜ್ಞೆಯನ್ನು ಮೂಡಿಸಲು ಸಾಹಸಪ್ರವೃತ್ತಿಯಿಂದ 1859 ಜುಲೈನಲ್ಲಿ,

ತಮ್ಮ 26ನೆಯ ವಯಸ್ಸಿನಲ್ಲಿ ಅಂದಿನ ಮೈಸೂರು ಸಂಸ್ಥಾನದ ಮೊದಲ ಕನ್ನಡ ವಾರಪತ್ರಿಕೆಯಾದ ಮೈಸೂರು ವೃತ್ತಾಂತ ಬೋಧಿನಿಯನ್ನು ಆರಂಭಿಸಿದರು. ಭಾಷ್ಯಾಚಾರ್ಯರ ಮನೆ ವಿದ್ವಾಂಸರ, ಕಲಾವಿದರ ರಾಜಕಾರಣಿಗಳ ಸ್ವಾತಂತ್ರ್ಯಪ್ರೇಮಿಗಳ ಭೇಟಿಯ ಸ್ಥಾನವಾಗಿತ್ತು ಮತ್ತು ಮನೆಯೇ ಪತ್ರಿಕಾ ಕಛೇರಿಯೂ ಆಗಿತ್ತು.

ದೇಶಭಾಷಾ ಪತ್ರಿಕೆಗಳಿಗೆ ಉತ್ತೇಜನವಿಲ್ಲದ ಆ ಕಾಲದಲ್ಲಿ ಆಳರಸರ ದುರಾಗ್ರಹಕ್ಕೆ ಪಾತ್ರರಾಗಿದ್ದ ಪರಿಸ್ಥಿತಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಭಾಷ್ಯಂ ಭಾಷ್ಯಾಚಾರ್ಯರ ಮೈಸೂರು ವೃತ್ತಾಂತ ಬೋಧಿನಿ ಪತ್ರಿಕೆಯ ಪ್ರಕಟಣೆಗೆ ಧನಸಹಾಯ ನೀಡಿ ಪ್ರೋತ್ಸಾಹಿಸಿದರು. ರಾಜರಿಂದ ಧನಸಹಾಯ ಪಡೆಯುತ್ತಿದ್ದರೂ ಪತ್ರಿಕೆ ತನ್ನ ಸ್ವತಂತ್ರ ನಿಲುವನ್ನು ಉಳಿಸಿಕೊಂಡಿತ್ತು. ನಾವು ನಿಜವನ್ನು ನುಡಿಯುತ್ತೇವೆ, ನಿಜವನ್ನು ಕೇಳಲು ಅಪೇಕ್ಷಿಸುತ್ತೇವೆ, ಇದರಿಂದ ಅನ್ಯರು ನಿಜ ನುಡಿದಾರೆಂದು ಭಾವಿಸುತ್ತೇವೆ–ಎನ್ನುವುದು ಪತ್ರಿಕೆಯ ನೀತಿಯಾಗಿತ್ತು. ಈ ಪತ್ರಿಕೆ ಕಡಿಮೆ ಪುಟಸಂಖ್ಯೆಗಳನ್ನುಳ್ಳದ್ದಾಗಿದ್ದರೂ ಬಹು ಪ್ರಭಾವಶಾಲಿಯಾಗಿತ್ತು. ಸುಮಾರು ಆರು ವರ್ಷಗಳ ಕಾಲ ನಡೆದು ಜನಮನದ ಮೇಲೆ, ರಾಜ್ಯದ ರಾಜಕೀಯ, ಆರ್ಥಿಕ, ಸಾಮಾಜಿಕ ನೀತಿಯ ಸಾಕಷ್ಟು ಪ್ರಭಾವ ಬೀರಿತ್ತು. ಸತ್ಯ ಶೋಧಕರಾಗಿ, ಸತ್ಯ ಸಾಧಕರಾಗಿ, ಸತ್ಯ ಸೇವಕರಾಗಿ ಬಾಳುವ ಸಂಕಲ್ಪದಿಂದ ಕೂಡಿ ಪತ್ರಿಕೆಯನ್ನು ಹೊರಡಿಸಿದ ಭಾಷ್ಯಾಚಾರ್ಯರು ತಮ್ಮದೇ ಆದ ಪ್ರಭಾವಯುತ ಸ್ಥಾನಗಳಿಸಿಕೊಂಡು ಎಲ್ಲರ ವಿಶ್ವಾಸ ಗೌರವಗಳಿಗೆ ಪಾತ್ರರಾಗಿದ್ದರು.

ಭಾಷ್ಯಾಚಾರ್ಯರು ತಮ್ಮ ತಂದೆಯವರಾದ ತಿರುಮಲಾಚಾರ್ಯರು ಆರಂಭಿಸಿದ ಕರ್ನಾಟಕ ಪ್ರಕಾಶಿಕಾ ಪತ್ರಿಕೆಯನ್ನು ಅವರ ನಿಧನದ ಅನಂತರ 1877ರಲ್ಲಿ ತಾವೇ ವಹಿಸಿಕೊಂಡು ಸ್ವಲ್ಪ ಕಾಲ ನಡೆಸಿದರು. 1869ರಲ್ಲಿ ಮೈಸೂರು ಸರ್ಕಾರ ಗೆಜ಼ೆಟ್ ಪ್ರಕಟಣೆಯನ್ನು ಆರಂಭಿಸಿದಾಗ ಭಾಷ್ಯಂ ಭಾಷ್ಯಾಚಾರ್ಯ ಕನ್ನಡ ಅನುವಾದಕರಾಗಿ ನೇಮಕಗೊಂಡರು. ಆ ಹುದ್ದೆಯಲ್ಲಿ 18 ವರ್ಷ ಸೇವೆಸಲ್ಲಿಸಿ ತಮ್ಮ 51ನೆಯ ವಯಸ್ಸಿನಲ್ಲಿ 1884 ರಲ್ಲಿ ನಿಧನರಾದರು. (ಬಿ.ಎಸ್.ವಿಇ;ಕೆ.ಪಿಯು.)

**ಭಾಸ್ಕರ:** ಸು. 1424. ಜೈನಕವಿ. ಜೀವಂಧರಚರಿತೆ ಎಂಬ ಕಾವ್ಯದ ಕರ್ತೃ. ಈತನ ತಂದೆ ಬಸವಾಂಕ. ಪೆನುಗೊಂಡೆಯ ಸುಶಾಂತೀಶ್ವರನ ಜಿನವಾಸದಲ್ಲಿ ಜೀವಂಧರನ ಚರಿತೆಯ ರಚಿಸಿದನು ಜಾಣ್ಮೆಯಲ್ಲಿ ಭಾಸ್ಕರನು ಎಂದು ಹೇಳಿಕೊಂಡಿರುವುದರಿಂದ ಪೆನುಗೊಂಡೆ ಈತನ ಸ್ಥಳವೆಂದೂ ಅಲ್ಲಿಯ ಶಾಂತಿನಾಥ ಬಸದಿಯಲ್ಲಿ ಕಾವ್ಯ ಬರೆದನೆಂದೂ ತಿಳಿಯುತ್ತದೆ. ಇವನು ಪೂರ್ವಕವಿಗಳಲ್ಲಿ ಪೊನ್ನ, ವಿಜಯ, ಗಜಾಂಕುಶ, ಅಗ್ಗಳ, ನೇಮಿಚಂದ್ರ, ಗುಣವರ್ಮ, ನಾಗವರ್ಮ ಮೊದಲಾದವರನ್ನು ಸ್ತುತಿಸಿದ್ದಾನೆ.

ಜೀವಂಧರಚರಿತೆ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 18 ಸಂಧಿಗಳೂ 957 ಪದ್ಯಗಳೂ ಇವೆ. ಕೃತಿರಚನೆಯ ಕಾಲ 1424. ಸಂಸ್ಕೃತದಲ್ಲಿ ವಾದೀಭಸಿಂಹಸೂರಿ ಬರೆದಿರುವ ಜೀವಂಧರಚರಿತೆಯನ್ನು ತಾನು ಕನ್ನಡದಲ್ಲಿ ಬರೆದಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ರಾಜಪುರಿಯ ಸತ್ಯಂಧರರಾಜನ ಕುಮಾರ ಜೀವಂಧರನ ಚರಿತೆ ಕಾವ್ಯದ ವಸ್ತು. ಈ ಕಥೆ ಭಾರತದಲ್ಲಿ ಹಲವಾರು ಭಾಷೆಗಳಲ್ಲಿ ಪ್ರಚಲಿತವಿದೆ. ಇದನ್ನು ಕನ್ನಡದಲ್ಲಿ ಷಟ್ಪದಿಯಲ್ಲಿ ಮೊದಲ ಬಾರಿಗೆ ರಚಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಕವಿ ತನಗಿಂತ ಹಿಂದಿನ ಕವಿಗಳ ಪ್ರಭಾವಕ್ಕೆ ಒಳಗಾಗಿದ್ದನೆಂಬುದಕ್ಕೆ ಕೃತಿಯಲ್ಲಿ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ರಾಘವಾಂಕ ಹಾಗೂ ಕುಮಾರವ್ಯಾಸರ ಪ್ರಭಾವ ಈತನ ಮೇಲೆ ಆಗಿರುವುದು ಕಾವ್ಯದಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಆದರೂ ಕವಿಯಲ್ಲಿ ಪ್ರತಿಭಾ ಸ್ವೋಪಜ್ಞತೆ ಇರುವುದು ಕಾಣುತ್ತದೆ. ಕೃತಿ ಮುಖ್ಯವಾಗಿ ನೀತಿಬೋಧಕ ಜೈನ ಧಾರ್ಮಿಕ ಕಾವ್ಯ. ಪರಮತ ವಿಡಂಬನೆಯ ಸೋಂಕು ಸ್ವಲ್ಪವಾದರೂ ಕಂಡುಬಾರದಿರುವುದು ಮೆಚ್ಚಬೇಕಾದ ಸಂಗತಿ. ಕಾವ್ಯಾಂಶಗಳು ಕಡಿಮೆ ಕೆಲವೊಮ್ಮೆ ವರ್ಣನೆಗಳು ಸೊಗಸಾಗಿವೆ. ಶೈಲಿ ಸರಳವೂ ಸುಂದರವೂ ಆಗಿದೆ. ಒಮ್ಮೊಮ್ಮೆ ಅಲ್ಲಲ್ಲಿ ಕಂಡುಬರುವ ರೂಪಕಗಳು, ಸುಂದರ ಕಲ್ಪನಾಯುಕ್ತ ಪದ್ಯಗಳು, ಲೋಕೋಕ್ತಿಗಳು, ಇವೆಲ್ಲವನ್ನೂ ಕಾವ್ಯಮಯವಾಗಿ ಬಳಸಿಕೊಳ್ಳುವ ಭಾಷಾ ಪ್ರಭುತ್ವ–ಈ ದೃಷ್ಟಿಯಿಂದ ನೋಡಿದಾಗ ಈತ ಉತ್ತಮ ಕವಿ ಎಂಬ ಅಂಶ ವ್ಯಕ್ತವಾಗುತ್ತದೆ. (ಎನ್.ಬಿ.)

**ಭಾಸ್ಕರಾಚಾರ್ಯ:** 12ನೆಯ ಶತಮಾನದಲ್ಲಿದ್ದ ಪ್ರಸಿದ್ಧ ಗಣಿತಶಾಸ್ತ್ರಜ್ಞ, ಖಗೋಳವಿಜ್ಞಾನಿ. ಸಹ್ಯಾದ್ರಿ ಪರ್ವತಶ್ರೇಣಿಯ ಸನಿಹದ ಬಿಜ್ಜಡಬಿಡದಲ್ಲಿ (ಈಗಿನ ಬಿಜಾಪುರ) 1114ರಲ್ಲಿ ಜನಿಸಿದ. ಕೌಂಡಿನ್ಯ ಗೋತ್ರದ ಮಹೇಶ್ವರೋಪಾಧ್ಯಾಯ ಇವನ ಪಿತ ಹಾಗೂ ವಿದ್ಯಾಗುರು. ಈತ ತನ್ನ 36 ನೆಯ ವಯಸ್ಸಿನಲ್ಲಿ (1150) ಪ್ರಸಿದ್ಧ ಗ್ರಂಥವಾದ ಸಿದ್ಧಾಂತಶಿರೋಮಣಿ ಯನ್ನು ರಚಿಸಿದ. ಕರ್ಣಾಟಕ ಕುತೂಹಲ ಎಂಬ ಗ್ರಂಥ ಸಹ ಇವರ ರಚನೆಯೇ.

ಸಿದ್ಧಾಂತ ಶಿರೋಮಣಿ ಸಂಸ್ಕೃತದಲ್ಲಿದೆ. ಇದರಲ್ಲಿ ಲೀಲಾವತಿ, ಬೀಜಗಣಿತ, ಗ್ರಹಗಣಿತ ಮತ್ತು ಗೋಳಗಳೆಂಬ ನಾಲ್ಕು ಭಾಗಗಳು ಇವೆ. ಇದರಲ್ಲಿ ಪ್ರಸಿದ್ಧವಾದ ಭಾಗ ಲೀಲಾವತಿ, ಭಾಸ್ಕರಾಚಾರ್ಯನ ಮುದ್ದುಮಗಳು ಮದುವೆಯಾದ ವರ್ಷದಲ್ಲಿ ವಿಧವೆಯಾದ್ದರಿಂದ ಅವಳ ಕೋಮಲ ಮನಸ್ಸನ್ನು ಮುದಗೊಳಿಸಲು, ಆಗಿನ ಪಾಠಕ್ರಮಗಳನ್ನ ನುಸರಿಸಿ, ಮನೋರಂಜಕ ರೀತಿಯಲ್ಲಿ, ಪ್ರತಿಸೂತ್ರ ಹಾಗೂ ಪ್ರಶ್ನೆಯ ಮೂಲಕ ಕಿವಿಗೆ ಇಂಪಾಗುವಂತೆ ರಮಣೀಯ ವೃತ್ತಗಳಲ್ಲಿ ಮಗಳಿಗೆ ಬೋಧಿಸಲು ಇದನ್ನು ರಚಿಸಿ, ಆ ಗ್ರಂಥಕ್ಕೆ ಮಗಳ ಹೆಸರನ್ನು (ಲೀಲಾವತಿ) ಇಟ್ಟನೆಂದು ಪ್ರತೀತಿ. ಲೀಲಾವತಿ ಅಂಕಗಣಿತದ ವಿಷಯವನ್ನು ಕುರಿತಿದ್ದು ಬ್ರಹ್ಮಗುಪ್ತ ಮತ್ತು ಶ್ರೀಧರ–ಇವರ ಕೃತಿಗಳ ಆಧಾರದ ಮೇಲೆ ರಚಿತವಾಗಿದೆ. ಇಲ್ಲಿನ ಕೆಲವು ಲೆಕ್ಕಗಳು ಬೀಜಗಣಿತ ಮತ್ತು ರೇಖಾಗಣಿತ ಗಳ ಸೂತ್ರಗಳಲ್ಲಿ ಉಲ್ಲೇಖಿತವಾಗಿವೆ. ಬೀಜಗಣಿತದ ಭಾಗ, ಬೀಜಗಣಿತ ದಲ್ಲಿ ಒಂದು ಸಮಗ್ರವಾದ ಮತ್ತು ಕ್ರಮಬದ್ಧವಾದ ಕೃತಿಯಾಗಿದೆ. ಸಿದ್ಧಾಂತ ಶಿರೋಮಣಿಯ ಉಳಿದೆರಡು ಭಾಗಗಳು ಖಗೋಳವಿಜ್ಞಾನದ ಅಮೂಲ್ಯ ಬರೆಹಗಳಾಗಿವೆ.

ಭಾರತದ ಗಣಿತಶಾಸ್ತ್ರದ ಮತ್ತು ಖಗೋಳ ವಿಜ್ಞಾನಗಳ ಚರಿತ್ರೆಯಲ್ಲಿ ಭಾಸ್ಕರಾಚಾರ್ಯ ಮಹತ್ತರವಾದ ಸ್ಥಾನ ಹೊಂದಿದ್ದಾನೆ. ಕನ್ನಡ ನಾಡಿನವನೂ ಜಗದ್ವಿಖ್ಯಾತನೂ ಆದ ಈತನ ಕೃತಿ ಪ್ರಕೃತ ಭಾರತೀಯ ಖಗೋಳವಿಜ್ಞಾನ ಸಂಪ್ರದಾಯಕ್ಕೆ ಮುಖ್ಯ ಆಧಾರವಾಗಿದೆ. ನಮ್ಮ ಪಂಚಾಂಗಗಳೂ ಸೂರ್ಯ ಚಂದ್ರಗ್ರಹಣಗಳೂ ಅವನು ಅಂದು ವಿಧಿಸಿದ ಆಧಾರದ ಮೇಲೆ ನಿರ್ಣಯಿ ಸಲ್ಪಡುತ್ತಿವೆ. ಭಾರತೀಯ ಗಣಿತಶಾಸ್ತ್ರ ಹಾಗೂ ಖಗೋಳವಿಜ್ಞಾನಗಳಿಗೆ ಭಾಸ್ಕರಾಚಾರ್ಯನ ಅನಂತರ ವಿದ್ವಾಂಸರ ಕೊಡುಗೆ ಅತ್ಯಲ್ಪ.

ಯಾದವರಾಜ ಸಿಂಘಣದ ಕಾಲದಲ್ಲಿ ಒಬ್ಬ ಜ್ಯೋತಿರ್ವಿಜ್ಞಾನಿ ಭಾಸ್ಕರಾ ಚಾರ್ಯ ಗಣಿತದ ಅಧ್ಯಯನಕ್ಕೆ 1207ರಲ್ಲಿ ಒಂದು ಮಠವನ್ನು ಸ್ಥಾಪಿಸಿದ್ದ. (ಎಚ್.ವಿ.ಎಸ್.)

**ಭಿಲ್ಲಮ I:** ಸೇವುಣ ವಂಶದ ರಾಜ ಧಡಿಯಪ್ಪನ ಮಗ. ಇವನ ಕಾಲ ಸುಮಾರು ಹತ್ತನೆಯ ಶತಮಾನದ ಆದಿಭಾಗ. (ಎ.ವಿ.ಎನ್.)

**ಭಿಲ್ಲಮ II:** ಸೇವುಣ ವಂಶದ ವಡ್ಡಿಗನ ಮಗ. ಇವನು ಚಾಳುಕ್ಯ ತೈಲಪನ ಸಾಮಂತನಾಗಿದ್ದ (ಸು. (975–1000). ತೈಲಪನು ಪರಮಾರ ಮುಂಜನ ಮೇಲೆ ಮಾಡಿದ ಯುದ್ಧದಲ್ಲಿ ಅವನಿಗೆ ಸಹಾಯ ಮಾಡಿದ. ಇದರಿಂದ ಸಂತೋಷಗೊಂಡ ತೈಲಪ ಇವನಿಗೆ ಮಹಾಸಾಮಂತನೆಂಬ ಬಿರುದನ್ನೂ ಅಹಮದ್‌ನಗರದ ಸುತ್ತಮುತ್ತಲ ಪ್ರದೇಶಗಳನ್ನೂ ಕೊಟ್ಟ. ಸೇವುಣ ರಾಜ್ಯಕ್ಕೆ ಬುನಾದಿಯನ್ನು ಹಾಕಿದ ಕೀರ್ತಿ ಈತನದು. ಲಚ್ಚಿಯವ್ವ ಈತನ ಪತ್ನಿ. **(ಎ.ವಿ.ಎನ್.)**

**ಭಿಲ್ಲಮ III:** ಸೇವುಣ ವಂಶದ ವೇಸುಗಿಯ ಮಗ. ಚಾಳುಕ್ಯರ ಸಾಮಂತ (ಸು. 1025–55). ಚಾಳುಕ್ಯ ದೊರೆ ಅಹವಮಲ್ಲ ಸೋಮೇಶ್ವರನ ಸಹೋದರಿಯೂ ಜಯಸಿಂಹನ ಪುತ್ರಿಯೂ ಆದ ಅವ್ವಲದೇವಿಯನ್ನು ಇವನು ವಿವಾಹವಾಗಿದ್ದ. **(ಎ.ವಿ.ಎನ್.)**

**ಭಿಲ್ಲಮ V:** ಸೇವುಣ ವಂಶದ ಸಮರ್ಥ ದೊರೆ (ಸು. 1173–92). ಮಲ್ಲುಗಿಯ ಮಗ. ಇವನ ತಂದೆ ಕರ್ಣ. ಮಲ್ಲುಗಿ ಇವನ ತಾತ ಎಂದೂ ಅಭಿಪ್ರಾಯವಿದೆ. ಭಿಲ್ಲಮ ತನ್ನ ದಾಯಾದಿಗಳನ್ನು ಸೋಲಿಸಿ ರಾಜ್ಯಲಕ್ಷ್ಮಿಯನ್ನು ತನ್ನದಾಗಿ ಮಾಡಿಕೊಂಡ. ಇವನ ಶಾಸನವೊಂದು ಕಳಚುರಿ ರಾಜವಂಶಕ್ಕೆ ಸೇರಿದುದರಿಂದ ಇವನು ಕಳಚುರಿಗಳ ಸಾಮಂತನಾಗಿ 1173ರಿಂದಲೇ ಅಧಿಕಾರದಲ್ಲಿದ್ದನೆಂದು ತಿಳಿದರೂ ಇವನ ಸ್ವತಂತ್ರ ಆಳ್ವಿಕೆಯ ಪ್ರಾರಂಭ ಯಾವಾಗ ಎಂದು ಹೇಳುವುದು ಕಷ್ಟ. ಇವನ ಸ್ವಂತ ಶಾಸನಗಳು 1187ರಿಂದ ಕಾಣಬರುತ್ತವೆ. ಆದರೆ 1183 ರಿಂದಲೇ ರಾಜನಾಗಿದ್ದನೆಂದು ತಿಳಿಸುವ ಶಾಸನಗಳೂ ದೊರಕುತ್ತವೆ.

ಇವನು ರಾಜ್ಯಕ್ಕೆ ಬಂದ ಸಮಯದಲ್ಲಿ ದಕ್ಷಿಣಾಪಥದಲ್ಲಿ ಗಮನಾರ್ಹ ರಾಜಕೀಯ ಚಟುವಟಿಕೆ ನಡೆಯುತ್ತಿತ್ತು. ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಪ್ರಾಬಲ್ಯ ಕಡಿಮೆಯಾಗಿ ಹೊಯ್ಸಳರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಇದೇ ಸಮಯದಲ್ಲಿ ಭಿಲ್ಲಮನೂ ಹೊಂಚುಹಾಕುತ್ತಿದ್ದ. ಭಿಲ್ಲಮನಿಗೂ ಚಾಳುಕ್ಯರಿಗೂ ಕುಪ್ಪ ಎಂಬಲ್ಲಿ ಯುದ್ಧನಡೆಯಿತು. ಅನಂತರ ಇವನು ಹೊಯ್ಸಳ ಇಮ್ಮಡಿ ಬಲ್ಲಾಳ ಕಲ್ಯಾಣ ನಗರವನ್ನು ತನ್ನ ವಶಮಾಡಿಕೊಳ್ಳುವುದನ್ನು ತಪ್ಪಿಸಲು ಅವನೊಡನೆ ಯುದ್ಧ ಮಾಡಿದ. ಈ ಯುದ್ಧದಲ್ಲಿ ಭಿಲ್ಲಮ ಬಲ್ಲಾಳನನ್ನು ಸೋಲಿಸಿ ಕಲ್ಯಾಣವನ್ನು ಪಡೆದ. ಬಲ್ಲಾಳ ಸೋತು ಹಿಂದಿರುಗಲು ಭಿಲ್ಲಮ ಉತ್ತರ ಕರ್ನಾಟಕದ ಬಹುಭಾಗಗಳನ್ನು ವಶಪಡಿಸಿಕೊಂಡು 1189ರ ಸಮಯಕ್ಕೆ ಬಹು ಪ್ರಭಾವಿಯಾದ. ಇದನ್ನು ಸಹಿಸದ ಬಲ್ಲಾಳ 1191ರಲ್ಲಿ ಭಿಲ್ಲಮನ ಮೇಲೆ ಸೊರಟೂರು ಎಂಬಲ್ಲಿ ಯುದ್ಧ ಮಾಡಿದ. ಈ ಘೋರ ಯುದ್ಧದಲ್ಲಿ ಹೊಯ್ಸಳರು ಜಯಶಾಲಿಗಳಾದರು. ಸೇವುಣ ಸೈನ್ಯ ಸೋತು ಲೊಕ್ಕಿಗುಂಡಿಗೆ ಓಡಿಹೋಯಿತು. ಬಲ್ಲಾಳ 1192ರಲ್ಲಿ ಲೊಕ್ಕಿಗುಂಡಿಯನ್ನೂ ತನ್ನ ವಶಮಾಡಿಕೊಂಡ. ಭಿಲ್ಲಮ ಪೂರ್ಣವಾಗಿ ಸೋತ. ಭಿಲ್ಲಮ ಈ ಯುದ್ಧದಲ್ಲಿ ಬಲ್ಲಾಳನಿಂದ ಹತನಾದ ಎಂದೂ ಕೆಲವರ ಅಭಿಪ್ರಾಯ. ಅನಂತರವೂ ಈತ ಜೀವಿಸಿದ್ದನೆಂದು ಹೇಳಲು ಆಧಾರಗಳಿವೆ.

ಭಿಲ್ಲಮ ಕೊನೆಯಲ್ಲಿ ಹೊಯ್ಸಳರಿಂದ ಸೋತರೂ ಈ ಹಿಂದೆ ಹಲವು ವಿಜಯಗಳನ್ನು ಸಾಧಿಸಿದ್ದ. ಕಳಚುರಿ ದೊರೆ ವೀರಬಿಜ್ಜಳನ ಮಗ ಮೈಲುಗಿಯನ್ನು ಬಗ್ಗಿಸಿದ್ದ. ಮಂಗಳವೇಷ್ಟಕದ ರಾಜನಾದ ಬಿಲ್ಲಣ್ಣನನ್ನು (ಪ್ರಾಯಶಃ ಕಳಚುರಿ ವಂಶದ ವೀರ ಬಿಜ್ಜಳ) ಭಿಲ್ಲಮ ಕೊಂದನೆಂದು ಹೇಮಾದ್ರಿಯ ರಾಜ ಪ್ರಶಸ್ತಿ ತಿಳಿಸುತ್ತದೆ. ಪುಣೆಯ ಸಮೀಪದಲ್ಲಿರುವ ಅಂಸಲ ರಾಜ್ಯದ ರಾಜನನ್ನು ಸೋಲಿಸಿ ಅವನಿಂದ ಶ್ರೀವರ್ಧನ ಎಂಬ ನಗರವನ್ನು ವಶಮಾಡಿಕೊಂಡಿದ್ದ. ಪ್ರತ್ಯಾಂಡಕ ರಾಜನ ಮೇಲೂ ಭಿಲ್ಲಮ ವಿಜಯಿಯಾಗಿದ್ದ. ತನ್ನ ಸೇನಾಧಿಪತಿ ಜಲ್ಹನ ಸಹಾಯದೊಡನೆ ಮಾಳವ ದೇಶಕ್ಕೆ ನುಗ್ಗಿ ಅಲ್ಲಿಯ ದೊರೆಯನ್ನು ಸೋಲಿಸಿದ್ದ. ಚಾಳುಕ್ಯ ಎರಡನೆಯ ಭೀಮನನ್ನೂ ಸೋಲಿಸಿ ಉತ್ತರ ದಿಕ್ಕಿನಲ್ಲಿಯೂ ತನ್ನ ಪ್ರಭಾವವನ್ನು ಭಿಲ್ಲಮ ಬೀರಿದ್ದ. ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಭಾಗಗಳು ಭಿಲ್ಲಮನ ಆಳ್ವಿಕೆಗೆ ಒಳಪಟ್ಟಿದ್ದುವು. ಇವನು ದೇವಗಿರಿ ನಗರವನ್ನು ನಿರ್ಮಿಸಿ ಅದನ್ನು ಸೇವುಣರ ರಾಜಧಾನಿಯನ್ನಾಗಿ ಮಾಡಿದ.

ಈತ ಶೈವ ದೇವಾಲಯಗಳಿಗೆ ಅನೇಕ ದತ್ತಿಗಳನ್ನು ಕೊಟ್ಟಿದ್ದ. ಈತ ಶೂರ, ಧೀರ, ಸಾಹಸಿ. ಸಾಮಂತರಾಗಿದ್ದ ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿದ ಕೀರ್ತಿ ಈತನದು. ಇವನೇ ನಿಜವಾದ ಸೇವುಣ ಸಾಮ್ರಾಜ್ಯದ ಸ್ಥಾಪಕ.

ಈತ 1192ರಲ್ಲಿ ಮರಣ ಹೊಂದಲು ಇವನ ಮಗ ಜೈತುಂಗಿ ದೊರೆಯಾದ. **(ಎ.ವಿ.ಎನ್.)**

**ಭೀಮಕವಿ:** ಸುಮಾರು ಹದಿನಾಲ್ಕನೆಯ ಶತಮಾನದ ಕಡೆಯಲ್ಲಿದ್ದ ವೀರಶೈವ ಕವಿ. ಬಸವಪುರಾಣವೆಂಬ ಕಾವ್ಯದ ಕರ್ತೃ. ಭೀಮಕವೀಶ್ವರ ರಗಳೆ ಈತನ ಇನ್ನೊಂದು ಕೃತಿ. ಭೃಂಗಿದಂಡಕವೆಂಬ ಗ್ರಂಥವನ್ನೂ ಈತ ಬರೆದಿರುವಂತೆ ಸಿದ್ಧನಂಜೇಶನ (ಸು. 1650) ರಾಘವಾಂಕಚಾರಿತ್ರ್ಯದಿಂದ ತಿಳಿಯುತ್ತದೆ. ಈ ಕೃತಿ ಉಪಲಬ್ಧವಿಲ್ಲ. ಪೂರ್ವಕವಿಗಳಲ್ಲಿ ಹರಿಹರ, ರಾಘವಾಂಕ–ಇವರನ್ನು ಸ್ತುತಿಸಿದ್ದಾನೆ. ಇವನನ್ನು ಇವನು ಪದ್ಮಣಾಂಕ, ವಿರೂಪಾಕ್ಷಪಂಡಿತ, ಸಿದ್ಧನಂಜೇಶ, ಷಡಕ್ಷರದೇವ ಮೊದಲಾದ ವೀರಶೈವ ಕವಿಗಳು ತಮ್ಮ ಕಾವ್ಯಗಳಲ್ಲಿ ಉಲ್ಲೇಖಿಸಿದ್ದಾರೆ. ತಾನು ಉಭಯಕವಿತ್ವಸಮರ್ಥನೆಂದು ಕವಿ ಹೇಳಿಕೊಂಡಿದ್ದಾನೆ.

ಬಸವಪುರಾಣ ಬಸವಣ್ಣನವರನ್ನು ಕುರಿತ ಪ್ರಪ್ರಥಮ ಪುರಾಣಕಾವ್ಯ. ಭಾಮಿನೀಷಟ್ಪದಿಯಲ್ಲಿ ಬರೆದ ಮೊತ್ತಮೊದಲ ಅತಿದೊಡ್ಡ ಗ್ರಂಥ. ಇದರಲ್ಲಿ 8 ಕಾಂಡಗಳೂ 63 ಸಂಧಿಗಳೂ 3,568 ಪದ್ಯಗಳೂ ಇವೆ. ಈತ ತನ್ನ ಗ್ರಂಥದಲ್ಲಿ ಕವಿಸೋಮನಾಥಂ ರಸಮೊಸರೆ ಮುನ್ನುಸಿರ್ದುದನೆ ಕನ್ನಡಿಸಿ ಪೇಳ್ವೆಂ ಎಂದು ಹೇಳಿಕೊಂಡಿರುವುದರಿಂದ ಇದು ಹದಿಮೂರನೆಯ ಶತಮಾನದ ಸುಪ್ರಸಿದ್ಧ ತೆಲುಗು ಕವಿ ಪಾಲ್ಕುರಿಕೆ ಸೋಮನಾಥನ ಬಸವಪುರಾಣಮು ಎಂಬ ತೆಲುಗು ಗ್ರಂಥದ ಅನುವಾದವೆಂದು ತಿಳಿಯುತ್ತದೆ. ಕವಿ ತಾನೆಂತು ಬಸವರಾಜನ ಚರಿತ್ರೆಯನ್ನು ರಚಿಸಲಿ ಎಂದು ಶಿವಯೋಗನಿದ್ರಾಮುದ್ರಿತದೊಳಿರಲು ಕನಸಿನಲ್ಲಿ ಪಾಲ್ಕುರಿಕೆ ಸೋಮನಾಥ ಮತ್ತು ಅನಘದೇವಾರ್ಯರು ಬಂದು ನಿನ್ನಾತ್ಮದೊಳಗಲದಿರ್ದು ನಾವು ರಚಿಸುವೆವೆಸೆವ ಬಸವಕಥಾವಿರಸರಮಂ ಬರೆದುಕೋ ಎಂದದ್ದರಿಂದ ಬರೆದೆನೆಂದು ಹೇಳಿಕೊಂಡಿದ್ದಾನೆ. ಅಲ್ಲದೆ ಕೊಂಡಗುಳಿ ಕೇಶಿರಾಜ, ಸಿರಿಪತಿಪಂಡಿತ, ಶಿವಲೆಂಕ ಮಂಚಣ್ಣಪಂಡಿತ, ಗುರುಮಲ್ಲಿಕಾರ್ಜುನಪಂಡಿತ–ಇವರ ಕೃಪೆಯೂ ಕೃತಿರಚನೆಗೆ ಕಾರಣವೆಂದಿದ್ದಾನೆ.

ಕಾವ್ಯದಲ್ಲಿ ಬಸವಣ್ಣನವರ ಚರಿತ್ರೆ ಹಾಗೂ ಅವರು ನಡೆಸಿದ ಪವಾಡಗಳಲ್ಲದೆ ಅನೇಕ ಶಿವಭಕ್ತರ ಕಥೆಗಳು ಸೇರಿಕೊಂಡಿವೆ. ಈ ಕಾರಣದಿಂದ ಗ್ರಂಥವಿಸ್ತಾರವಾಗಿ ಬೆಳೆದುಕೊಂಡಿದೆ. ಕವಿ ಪುರಾಣಕರ್ತನಾದುದರಿಂದ ಕಥೆಯ ಏಕಸೂತ್ರತೆಗಿಂತ ಶಿವಶರಣರ ಕಥೆಗಳಿಗೆ ಹೆಚ್ಚು ಅವಕಾಶ ಕಲ್ಪಿಸಿದ್ದಾನೆ. ಇದರಿಂದ ಬಸವಣ್ಣನವರ ವ್ಯಕ್ತಿಚಿತ್ರ ಸ್ಫುಟವಾಗದೆ ಇತರ ಕಥೆಗಳೇ ಎದ್ದು ಕಾಣುತ್ತವೆ. ಇಲ್ಲಿ ಬಸವಣ್ಣನವರ ವ್ಯಕ್ತಿತ್ವದ ಚಿತ್ರಣಕ್ಕಿಂತ ಮುಖ್ಯವಾಗಿ ಅವರ ಪವಾಡ ಕಾರ್ಯಗಳು ವರ್ಣನಾಪ್ರಧಾನವಾಗಿವೆ. ಚಾರಿತ್ರಿಕ ಸಾಮಗ್ರಿ, ಕಥನಕ್ರಮ, ಪವಾಡಗಳ ವರ್ಣನೆ, ಭಕ್ತರ ಚರಿತ್ರೆ ಮೊದಲಾದವುಗಳಲ್ಲಿ ಈ ಕಾವ್ಯ ತೆಲುಗು

ಬಸವಪುರಾಣಕ್ಕನುಗುಣವಾಗಿದ್ದರೂ ಸ್ವಶಕ್ತಿ ಸಾಕಷ್ಟು ಹೊಮ್ಮಿದೆ. ವರ್ಣನೆಗಳು ಹೃದಯಂಗಮವಾಗಿವೆ. ಕೃತಿ ಷಟ್ಪದಿಯಾದರೂ ಮಾರ್ಗೀಯ ಶೈಲಿಯ ಪ್ರಭಾವದಿಂದ ಮುಕ್ತವಾಗಿಲ್ಲ. ದೇಸಿಯಲ್ಲಿಯೂ ಮಾರ್ಗೀಯ ಲಕ್ಷಣವನ್ನು ಇರಿಸುವ ಸಂಪ್ರದಾಯಕ್ಕೆ ಈತ ಮೊದಲಿಗನಾಗಿದ್ದಾನೆ. ಬಸವಣ್ಣನವರನ್ನು ಕುರಿತು ಬರೆದವರಲ್ಲಿ ಹರಿಹರ ಮೊದಲಿಗ. ಜೊತೆಗೆ ಅವನದು ಬಸವಣ್ಣನವರಿಗೆ ಅತಿ ಸಮೀಪದ ಚಾರಿತ್ರಿಕ ಕೃತಿ. ಆದರೆ ಭೀಮಕವಿಯ ಈ ಕಾವ್ಯ ಬಸವಣ್ಣನವರಿಗೆ ಅತಿ ಸಮೀಪದ ಚಾರಿತ್ರಿಕ ಕೃತಿಯಾಗದೆ ಅವರನ್ನು ಅತಿಮಾನುಷತೆಗೆತ್ತುವ ಪುರಾಣಕಾವ್ಯವಾಯಿತು. ವಸ್ತುಕದ ಮುಂದೆ ವಿಳಾಸಮೇ ಸಾಮಾನ್ಯಮೀ ವರ್ಣಕಕವಿತೆಯೆಂದು ಓಸರಿದಿರಿ ಎಂಬ ಮಾತು ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ. ಈ ಕಾವ್ಯ ಮುಂದಿನ ವೀರಶೈವಪುರಾಣಕರ್ತೃಗಳಿಗೆ ಪ್ರಿಯವೂ ಆಕರವೂ ಆದ ಗ್ರಂಥವಾಯಿತು.

ಭೀಮಕವೀಶ್ವರ ರಗಳೆ ನೂರೆಂಟು ಚರಣಗಳುಳ್ಳ ಚಿಕ್ಕ ಸ್ತೋತ್ರಗ್ರಂಥ. ರಗಳೆ ಛಂದಸ್ಸಿನಲ್ಲಿ ರಚಿತವಾಗಿದೆ. (ಆರ್.ಜಿ.)

**ಭೀಮಸೇನ ಜೋಶಿ:** 1922– . ಅಂತಾರಾಷ್ಟ್ರೀಯ ಖ್ಯಾತಿಯ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತಗಾರರು; ಹಿಂದುಸ್ಥಾನಿ ಸಂಗೀತ ಪದ್ಧತಿಯಲ್ಲಿ ಅಪ್ರತಿಮ ಜನಪ್ರಿಯತೆ ಪಡೆದ ಸಂಗೀತರತ್ನ ಅಬ್ದುಲ್ ಕರೀಮಖಾನರ ಕಿರಾಣಾ ಸಂಪ್ರದಾಯದ ಗಾಯಕರಲ್ಲಿ ಪ್ರಮುಖರು. ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರು. 1922 ಇವರು ಫೆಬ್ರವರಿ 14 ರಂದು ಧಾರವಾಡ ಜಿಲ್ಲೆಯ ರೋಣದಲ್ಲಿ ಜನಿಸಿದರು. ತಂದೆ ಗುರುರಾಜ ಜೋಶಿ. ಮನೋಹರ ಗ್ರಂಥಮಾಲೆಯ ಸಂಪಾದಕ ಪ್ರಕಾಶಕರಾದ ಜಿ.ಬಿ. ಜೋಶಿ ಇವರ ಚಿಕ್ಕಪ್ಪ. ಭೀಮಸೇನ ಜೋಶಿಯವರಿಗೆ ಬಾಲ್ಯದಲ್ಲಿಯೇ ಸಂಗೀತದಲ್ಲಿ ಹೆಚ್ಚಿನ ಒಲವಿದ್ದುದರಿಂದ, ಸುಮಾರು ಹತ್ತು ವರ್ಷ ವಯಸ್ಸಾಗಿದ್ದಾಗ ಗದಗಿನಲ್ಲಿ ಪಂಚಾಕ್ಷರ ಗವಾಯಿಗಳ ಶಿಷ್ಯ ಕುರ್ತಕೋಟಿ ಅಗಸರ ಚನ್ನಪ್ಪನವರಲ್ಲಿ ಇವರ ಶಾಸ್ತ್ರೋಕ್ತ ಸಂಗೀತ ಅಭ್ಯಾಸ ಆರಂಭವಾಯಿತು. ಮುಂದೆ ಜೋಶಿಯವರು ತಮ್ಮ ಸಂಗೀತದ ವಾಂಛೆಯನ್ನು ಪೂರ್ಣಗೊಳಿಸಿ ಕೊಳ್ಳಲು ಹೆಚ್ಚಿನ ಕಲಿಕೆಗಾಗಿ ಮನೆಬಿಟ್ಟು ಮುಂಬಯಿಗೆ ಹೋದರು. ಆದರೆ ಅಲ್ಲಿ ಯಾರ ನೆರವೂ ದೊರಕದೆ ಅನಾಥ ಸ್ಥಿತಿಯಲ್ಲಿದ್ದಾಗ ತಂದೆಯವರ ಒತ್ತಾಯದ ಮೇರೆಗೆ ಮನೆಗೆ ಬರಬೇಕಾಯಿತು. ಇನ್ನೊಮ್ಮೆ, ಒಂದು ವರ್ಷದೊಳಗೇ ಜೋಶಿಯವರು ಮನೆ ಬಿಟ್ಟು ಹೋಗಿ ಉತ್ತರ ಭಾರತವನ್ನು ಅಲೆದು ಪಾಡುಪಟ್ಟು ಯಾವ ಉಪಯೋಗವೂ ಆಗದೇ ಊರಿಗೆ ಹಿಂದಿರುಗಿದರು. ಅನಂತರ ತಮ್ಮ ತಂದೆಯವರ ಮಾರ್ಗದರ್ಶನದ ಮೇರೆಗೆ ಸವಾಯಿ ಗಂಧರ್ವರಲ್ಲಿ (ರಾಮಭಾವು ಗಣೇಶ ಕುಂದಗೋಳಕರ) ಸಂಗೀತ ಕಲಿಕೆ ಪ್ರಾರಂಭಿಸಿದರು. ಸುಮಾರು ನಾಲ್ಕೈದು ವರ್ಷಗಳ ತರಬೇತಿಯ ಅನಂತರ ಸವಾಯಿ ಗಂಧರ್ವರು ಭೀಮಸೇನ ಜೋಶಿಯವರಿಗೆ ಹಠಾತ್ತನೆ ಬೇರೆ ಗುರುವನ್ನು ಹುಡುಕಿಕೊಳ್ಳುವಂತೆ ಹೇಳಿಬಿಟ್ಟರು. ಈ ವೇಳೆಗೆ ಇವರಿಗೆ ಮಿಯಾಮಲ್ಹಾರ್, ಮುಲ್ತಾನಿ, ಭೈರವಿ ಹಾಗೂ ಪೂರಿಯಾ ರಾಗಗಳಲ್ಲಿ ಸಿದ್ಧಿಯಾಗಿತ್ತು. ಹೆಚ್ಚಿನ ಸಾಧನೆಗಾಗಿ ಮಂತ್ರಾಲಯಕ್ಕೆ ಹೋಗಿ ಸ್ವಲ್ಪ ಕಾಲ ಗುರುರಾಘವೇಂದ್ರರನ್ನು ಪ್ರಾರ್ಥಿಸಿ ಸಂಗೀತಾಭ್ಯಾಸ ನಡೆಸಿದರು. ಆಗಿನ್ನೂ ಇವರಿಗೆ ಸುಮಾರು ಇಪ್ಪತ್ತರ ಪ್ರಾಯ. ಅನಂತರ ಇವರು ಜೀವನ ನಿರ್ವಹಣೆಗಾಗಿ ಸ್ವಲ್ಪಕಾಲ ಸಂಗೀತ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಹೀಗಿರುವಾಗಲೇ ಪುಣೆಯಲ್ಲಿ ವತ್ಸಲಾ ಮುಧೋಳಕರ ಅವರನ್ನು ಪ್ರೇಮಿಸಿ ವಿವಾಹವಾದರು. ಇಲ್ಲಿಂದ ಇವರ ಜೀವನಗತಿ ಬದಲಾಯಿಸಿತು.

ಭೀಮಸೇನ ಜೋಶಿ ಅವರಿಗೆ ಸವಾಯಿ ಗಂಧರ್ವರ ಅರವತ್ತನೆಯ ಜನ್ಮದಿನೋತ್ಸವ ಸಂದರ್ಭದಲ್ಲಿ ಮತ್ತೆ ತಮ್ಮ ಗುರುವನ್ನು ಭೇಟಿಯಾಗುವ ಸುಯೋಗ ಒದಗಿ ಬಂತು. ಆಗ ಜೋಶಿ ಅವರಿಗೆ ತಮ್ಮೊಡನೆ ಕುಳಿತು ಹಾಡಲು ಸವಾಯಿ ಅವರು ಅನುಮತಿ ನೀಡಿದರು. ಆ ಬಾರಿ ಜೋಶಿ ಅವರಿಗೆ ಆಲಾಪ್, ಮೀಂಡ್, ಬಡತ್, ಘಸೀಟ್, ತಾನ್, ಪಲಟಾ, ಬೋಲ್‌ತಾನ್, ಖಟಿಕಾ ಮುರಕಿ, ಮೂರ್ಛನಾ–ಇವುಗಳಲ್ಲಿ ಪ್ರೌಢಿಮೆಗೆ ಅವಕಾಶ ದೊರೆಯಿತಲ್ಲದೆ ಸವಾಯಿ ಗಂಧರ್ವರ ವೈಶಿಷ್ಟ್ಯವಾದ ಕಿರಾಣಾ ಘರಾಣದಲ್ಲಿ ಅವರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಆಶೀರ್ವಾದವೂ ಲಭಿಸಿತು. ಹಾಗೆಯೇ ಇಂದು ಈ ಸಂಪ್ರದಾಯಕ್ಕೆ ಒಂದು ಹೊಸ ಆಯಾಮ ಒದಗಿಸಿ ಅದ್ಭುತತೆಯನ್ನು ಮೂಡಿಸಿರುವ ಕೀರ್ತಿ ಇವರದಾಗಿದೆ.

1952ರಲ್ಲಿ ಭೀಮಸೇನ ಜೋಶಿಯವರು ಪುಣೆಗೆ ಬಂದು ನೆಲಸಿ ಸ್ವತಂತ್ರ ಜೀವನವನ್ನಾರಂಭಿಸಿದರು. ಭಾವಗೀತೆ, ಭಜನ, ಅಭಂಗ, ಠುಮರಿಗಳ ಗಾಯನ ಸಂಗೀತ ರಸಿಕರ ಮೆಚ್ಚುಗೆಗೆ ಪಾತ್ರವಾದವು. ಪುರಂದರದಾಸ, ವಿಜಯ ದಾಸ, ಜಗನ್ನಾಥ, ತುಕಾರಾಮ, ನಾಮದೇವ, ಜ್ಞಾನೇಶ್ವರ,



ದ.ರಾ.ಬೇಂದ್ರೆ, ಕುವೆಂಪು, ಗೋವಿಂದರಾವ್ ಟೇಂಬೆ, ಕಾನಿಟಕರ್ ಮುಂತಾದವರ ಕೃತಿಗಳು ಜೋಶಿಯವರ ರಾಗಮಾಧುರ್ಯದಿಂದ ಇನ್ನಷ್ಟು ಪ್ರಖ್ಯಾತಿ ಪಡೆದುವು. ಇದೇ ಸಂದರ್ಭದಲ್ಲಿ ಇವರಿಗೆ ಅನೇಕ ಕನ್ನಡ ಹಿಂದಿ ಮರಾಠಿ ಚಿತ್ರಗಳಿಗೆ ಹಿನ್ನೆಲೆ ಗಾಯನವನ್ನೊದಗಿಸುವ ಅವಕಾಶವೂ ಲಭಿಸಿತು. ಅ.ನ. ಕೃಷ್ಣರಾಯರ ಕಾದಂಬರಿ ಆಧರಿಸಿ ತೆರೆಕಂಡ ಸಂಧ್ಯಾರಾಗ, ಪು.ಲ. ದೇಶಪಾಂಡೆಯವರ ಗುಳಾಚಾ ಗಣಪತಿ, ತ.ರಾ. ಸುಬ್ಬರಾಯರ ಹಂಸಗೀತೆ ಕಾದಂಬರಿಯನ್ನಾಧರಿಸಿ ಹಿಂದೀಯಲ್ಲಿ ತಯಾರಾದ ಬಸಂತ್ ಬಹಾರ್, ಮೀ ತುಳಸ್ ತುಝ್ಯಾ ಅಂಗಣಿ ಈ ಮೊದಲಾದ ಚಿತ್ರಗಳಲ್ಲಿ ಇವರು ಹಾಡಿದ್ದಾರೆ.

ಹಿಂದುಸ್ಥಾನಿ ಸಂಗೀತ ಪ್ರಪಂಚದಲ್ಲಿ ಗಾಯನ ವೈಶಿಷ್ಟ್ಯದಿಂದ ಜೋಶಿಯವರು ತಮ್ಮದೇ ಆದ ಸ್ಥಾನವನ್ನು ಸ್ಥಾಪಿಸಿಕೊಂಡಿದ್ದಾರೆ. ಭಾರತದ ಪ್ರಮುಖ ನಗರಗಳಾದ ದೆಹಲಿ, ಮುಂಬಯಿ, ಮದರಾಸು, ಕಲ್ಕತ್ತ, ಬೆಂಗಳೂರು ಮುಂತಾದೆಡೆಗಳಲ್ಲಿ ಇವರ ಸಂಗೀತ ಕಚೇರಿಗಳು ಪ್ರಚಂಡ ಯಶಸ್ಸು ಗಳಿಸಿವೆ. ಇವರು ಹಾಡುವ ರಾಗಗಳಲ್ಲಿ ಯಮನ್ ಪೂರಿಯಾ, ಪೂರಿಯಾ ಕಲ್ಯಾಣಿ, ಪೂರಿಯಾ ಧನಾಶ್ರೀ, ಭೀಮ್‌ಪಲಾಸ್, ಜೋಗಿಯಾ, ಮಿಯಾಮಲ್ಹಾರ್ ಮುಂತಾದುವು ಜನಪ್ರಿಯವಾಗಿವೆ. ಜೋಶಿಯವರ ಸಂಗೀತ ಸೇವೆಗೆ ಅನೇಕ ಸನ್ಮಾನಗಳು ದೊರಕಿವೆ. ವಿದೇಶಗಳಲ್ಲೂ ಖ್ಯಾತಿಗಳಿಸಿದ್ದಾರೆ. ಅನೇಕ ಸಾರಿ ಇಟಲಿ, ಅಮೆರಿಕ, ಕಾಬೂಲ್, ಇಂಗ್ಲೆಂಡ್, ಕೆನಡಗಳಿಗೆ ಭೇಟಿ ನೀಡಿ ಸಂಗೀತ ಕಛೇರಿ ನಡೆಸಿದ್ದಾರೆ. ಭೀಮಸೇನ್ ಸಂಗೀತಕ್ಕೆ ಮಾರು ಹೋದ ಎಂ. ಲೂಯಿನ್ ಎಂಬ ಚಲನಚಿತ್ರ ತಯಾರಕ ಇವರ ಸಂಗೀತ ಕುರಿತ ಚಲನಚಿತ್ರ ತಯಾರಿಸಿದ್ದಾರೆ (1965). ಕೆನಡದ ಜೇಮ್ಸ್ ಬೆವರಿಜ್ ಇಪ್ಪತ್ತು ನಿಮಿಷಗಳ ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ. ಮಯಮಲ್ಹಾರ ಎಂಬುದು ಸಾಕ್ಷ್ಯಚಿತ್ರದ ಹೆಸರು. ಭೀಮಸೇನಜೋಶಿಯವರು ಕಲಾಶ್ರೀ ಎಂಬ ರಾಗವನ್ನು

ರಚಿಸಿದ್ದಾರೆ. ಖ್ಯಾಲ್ ನಾಟ್ಯಗೀತ (ಕನ್ನಡ, ಮರಾಠಿ), ಚಿತ್ರಗೀತ, ಸಂತವಾಣಿ, ಭಾವಗೀತೆ, ಅಭಂಗ ಎಲ್ಲವೂ ಇವರಿಗೆ ವಾಚೋವಿಧೇಯ, ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ದೊರಕಿವೆ. ರಾಜ್ಯ ಸಂಗೀತ, ನೃತ್ಯ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ (1972), ಪದ್ಮ ಭೂಷಣ (1984), ಕರ್ನಾಟಕ ರತ್ನ ಪ್ರಶಸ್ತಿ (2004), ತಾನ ಸೇನ ಪ್ರಶಸ್ತಿ, ಕಾಳಿದಾಸ ಸಮ್ಮಾನ ಪ್ರಶಸ್ತಿ ಹಾಗೂ ಕೊಲ್ಹಾಪುರ ಮತ್ತು ಗುಲ್ಬರ್ಗ ವಿಶ್ವವಿದ್ಯಾಲಯಗಳ ಗೌರವ ಡಾಕ್ಟೊರೇಟ್ ಮೊದಲಾದವುಗಳನ್ನು ಹೆಸರಿಸಬಹುದು.

ಜೋಶಿಯವರ ಶಿಷ್ಯಸಂಪತ್ತಿಯೂ ಅಪಾರವಾದುದು. ಇಂದು ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳೆರಡರಲ್ಲೂ ನೆಲಸಿರುವ ಇವರ ಶಿಷ್ಯರಲ್ಲಿ ಪ್ರಮುಖರಾದವರು ಧಾರವಾಡದ ಮಾಧವ ಗುಡಿ, ಹುಬ್ಬಳ್ಳಿಯ ಶ್ರೀಪತಿ ಪಡಿಗಾರ, ಪುಣೆಯ ಶ್ರೀಕಾಂತ ದೇಶಪಾಂಡೆ (ಸವಾಯಿ ಗಂಧರ್ವರ ಮೊಮ್ಮಗ), ಮುಂಬಯಿಯ ನಾರಾಯಣ ದೇಶಪಾಂಡೆ ಹಾಗೂ ರಾಮಕೃಷ್ಣ ಪಟವರ್ಧನ. ಜೋಶಿಯವರು ಈಗ ಪುಣೆಯಲ್ಲಿ ನೆಲೆಸಿದ್ದಾರೆ. ಒಂದು ಜೀವಮಾನದಲ್ಲಿ ಒಬ್ಬ ಕಲಾವಿದ ಎಷ್ಟು ಸಾಧಿಸ ಬಹುದೋ ಅಷ್ಟನ್ನು ಮೀರಿ ಸಾಧಿಸಿದ ಕೀರ್ತಿ ಇವರದಾಗಿದೆ. ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಪರಂಪರೆಗೆ ಅದ್ಭುತ ಸೃಜನಶೀಲತೆಯನ್ನು ತುಂಬಿದ ಗಾನ ಗಾರುಡಿಗ ಇವರಾಗಿದ್ದಾರೆ. (ಸಿ.ಎಸ್.ಐ.)

**ಭೀಮಸೇನರಾವ್, ಡಿ.ಕೆ.:** 1904–69. ವಿದ್ವಾಂಸರು. ಹಿಂದಿನ ಹೈದರಾಬಾದು ಸಂಸ್ಥಾನದ ಕನ್ನಡ ಪ್ರದೇಶದಲ್ಲಿ ಕನ್ನಡದ ಜಾಗೃತಿಗಾಗಿ ಶ್ರಮಿಸಿದವರು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ದಿದ್ದಗಿ ಗ್ರಾಮದಲ್ಲಿ ಜನಿಸಿದ ಇವರು ಅಲ್ಲಿಯೇ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮುಗಿಸಿದರು. ಮುಂದಿನ ವ್ಯಾಸಂಗ ಹೈದರಾಬಾದಿನಲ್ಲಿ. 1922ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿ, 1926ರಲ್ಲಿ ಬಿ.ಎ. ಪಡೆದರು. ಇವರ ಶಿಕ್ಷಣ ಮಾಧ್ಯಮ ಉರ್ದುವಾಗಿದ್ದು ದರಿಂದ ಕನ್ನಡ ಎಂ.ಎ. ತರಗತಿಗೆ ಸೇರಲು ಇವರಿಗೆ ತೊಂದರೆಯಾಯಿತು; ಆದರೆ

ಮೈಸೂರು ವಿಶ್ವವಿದ್ಯಾಲಯ ಈ ತೊಡಕಿನಿಂದ ಇವರನ್ನು ಪಾರುಮಾಡಿ 1927ರಲ್ಲಿ ಪ್ರಾರಂಭವಾದ ತನ್ನ ಕನ್ನಡ ಎಂ.ಎ. ತರಗತಿಗಳ ಮೊತ್ತ ಮೊದಲ ವರ್ಷಕ್ಕೇ ಪ್ರವೇಶಕ್ಕೆ ಅನುಮತಿ ನೀಡಿತು. ಭೀಮಸೇನರಾಯರು ಎಂ.ಎ. ಪದವಿಯನ್ನು 1929ರಲ್ಲಿ ಪಡೆದು ಹೈದರಾಬಾದಿಗೆ ತೆರಳಿದರು. ಅಲ್ಲಿಯ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಸಂಶೋಧಕರೆಂದು ನೇಮಕ ಗೊಂಡು ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಭೀಮಸೇನರಾಯರು ತರುವಾಯ 1933ರಲ್ಲಿ ಅಲ್ಲಿಯೇ ಕನ್ನಡ ಅಧ್ಯಾಪಕರಾದರು. ಅನಂತರ ಕನ್ನಡ ಪ್ರಾಧ್ಯಾಪಕರೂ ಇಲಾಖೆಯ ಮುಖ್ಯಸ್ಥರೂ ಆಗಿ ಸೇವೆಸಲ್ಲಿಸಿದರು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ತರಗತಿಗಳು ಮತ್ತು ಸಂಶೋಧನ ವಿಭಾಗಗಳು ಆರಂಭವಾಗಿದ್ದು ಇವರ ಪ್ರಯತ್ನದಿಂದ ಅಲ್ಲಿಯ ಕರ್ನಾಟಕ ಸಂಘದ ಚಟುವಟಿಕೆಗಳನ್ನು ಇವರು ತೀವ್ರಗೊಳಿಸಿದರು.

ಭೀಮಸೇನರಾಯರಿಗೆ ಕನ್ನಡದ ಜೊತೆಗೆ ತೆಲುಗು, ಉರ್ದು, ಮರಾಠಿ, ಪರ್ಷಿಯನ್, ಸಂಸ್ಕೃತ ಭಾಷೆ ಸಾಹಿತ್ಯಗಳಲ್ಲಿ ವಿಶೇಷ ಪರಿಶ್ರಮವಿತ್ತು. ಇವರು ಬರೆದಿರುವ ಅನೇಕ ಪ್ರೌಢ ಲೇಖನಗಳು ಬಿಡಿಬಿಡಿಯಾಗಿ ಪ್ರಕಟವಾಗಿವೆ. ಹದಿಮೂರನೆಯ ಶತಮಾನದ ಕರ್ಣಾಟಕಾಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ ಎಂಬುದು ಇವರ ಪ್ರೌಢ ಗ್ರಂಥ, ಇದು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಶಬ್ದಮಣಿದರ್ಪಣದ ಪಾಠಾಂ ತರಗಳು ಎಂಬುದು ಇವರ ಸಂಪಾದಿತ ಗ್ರಂಥ ಇದು ಕನ್ನಡ ವ್ಯಾಕರಣ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿದೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿ 1943ರಲ್ಲಿ ಇವರು ಮಾಡಿದ ಮೂರು ಉಪನ್ಯಾಸಗಳು ಅನುಭವಾಮೃತವೂ ಹರಿಕಥಾಮೃತವೂ ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಪಂಚತಂತ್ರ, ಕನ್ನಡದ ಹೂಮಾಲೆ–ಇವು ಇವರ ಇತರ ಗ್ರಂಥಗಳು.

ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸತತವಾಗಿ ದುಡಿದ ಭೀಮಸೇನ ರಾಯರಿಗೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯೂ ಆಂಧ್ರಪ್ರದೇಶದ ರಚನೆಯಾದಮೇಲೆ ಆಂಧ್ರ–ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯೂ ಪ್ರಾಪ್ತವಾದುವು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟಿನ ಸಂಪಾದಕ ಮಂಡಲಿಯ ಸದಸ್ಯರಾಗಿದ್ದರು. ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ 1968ರಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. (ಕೆ.ಎಸ್.ಎನ್.ಎ.)

**ಭೀಮಾ:** ಉತ್ತರ ಕರ್ನಾಟಕದ ದೊಡ್ಡ ನದಿಗಳಲ್ಲೊಂದು. ಕೃಷ್ಣಾ ನದಿಯ ಒಂದು ಉಪನದಿ. ಉಗಮ ಮಹಾರಾಷ್ಟ್ರದ ಪಶ್ಚಿಮಘಟ್ಟಗಳ ಭೀಮಾ ಶಂಕರದಲ್ಲಿ. ಮಹಾರಾಷ್ಟ್ರದ ಪುಣೆ, ಸೊಲ್ಲಾಪುರ ಜಿಲ್ಲೆಗಳಲ್ಲಿ ಹರಿದು ಬರುವ ಈ ನದಿ ಬಿಜಾಪುರ ಜಿಲ್ಲೆಯ ಉತ್ತರ ತುದಿಯಲ್ಲಿರುವ ದಸೂರಿನ ಬಳಿ ಕರ್ನಾಟಕದ ಎಲ್ಲೆಯನ್ನು ಮುಟ್ಟುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಹಲವು ಅಂಕು ಡೊಂಕುಗಳೊಡನೆ ಬಿಜಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳ ಗಡಿರೇಖೆಯಾಗಿ ಹರಿಯುತ್ತದೆ. ಇಂಡಿ ತಾಲ್ಲೂಕಿನ ಅಗರಖೇಡದ ಬಳಿಯಿಂದ, ಕೆಲವು ಬಳಸುಗಳೊಡನೆ ಸುತ್ತಿ ಸಿಂದಗಿ ತಾಲ್ಲೂಕಿನ ಮಾದನಹಳ್ಳಿಯವರೆಗೆ ಆಗ್ನೇಯಾಭಿಮುಖ ವಾಗಿಯೂ ಅಲ್ಲಿಂದ ಅಫಜಲಪುರದವರೆಗೆ ಪೂರ್ವಾಭಿಮುಖವಾಗಿಯೂ ಹರಿದು ಮತ್ತೆ ಕೆಲವು ಬಳಸುಗಳೊಡನೆ ಆ ತಾಲ್ಲೂಕಿನ ಘಟ್ಟರಗಿಯ ವರೆಗೆ ದಕ್ಷಿಣಕ್ಕೆ ಕ್ರಮಿಸುತ್ತದೆ. ಸುಮಾರು ಇಲ್ಲಿಯವರೆಗೆ ಇದು ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳ ಗಡಿರೇಖೆಯಾಗಿದೆ. ನದಿಯ ಮುಂದಿನ ಗಮನ ಪೂರ್ಣವಾಗಿ ಗುಲ್ಬರ್ಗ ಜಿಲ್ಲೆಯ ಒಳಗೆ. ಘಟ್ಟರಗಿಯಿಂದ ಹಲವು ಬಳಸುಗಳೊಡನೆ ಅಫಜಲಪುರ ತಾಲ್ಲೂಕಿನಲ್ಲಿ ಬಂದರವಾಡದವರೆಗೆ ಈಶಾನ್ಯಾಭಿಮುಖವಾಗಿ ಹರಿದು ಅಲ್ಲಿಂದ ಇದ್ದಕ್ಕಿದ್ದಂತೆ ನೈಋತ್ಯಕ್ಕೆ ತಿರುಗಿ ಮತ್ತೆ ಹಂಚನಾಳದ ಬಳಿ ಪೂರ್ವಕ್ಕೆ ತಿರುಗಿ ಹಲವು ಬಳಸುಗಳೊಡನೆ ಜೇವರಗಿ ತಾಲ್ಲೂಕಿನ ಹರವಾಳದವರೆಗೆ ಬರುತ್ತದೆ. ಅಲ್ಲಿಂದ ಗುಲ್ಬರ್ಗ ತಾಲ್ಲೂಕಿನ ಹಗರಗುಂಡಗಿಯವರೆಗೆ ಈಶಾನ್ಯಾಭಿಮುಖವಾಗಿ ಸಾಗಿ ಮತ್ತು ದಕ್ಷಿಣಕ್ಕೆ ತಿರುಗಿ ಜೇವರಗಿ ತಾಲ್ಲೂಕಿನ ಕಟ್ಟಿಸಂಗವಿಯಿಂದ ಪೂರ್ವಕ್ಕೂ ಮತ್ತೆ ದಕ್ಷಿಣಕ್ಕೂ ಹರಿದು ಚಿತ್ತಾಪುರ ತಾಲ್ಲೂಕಿನ ಸನ್ನತಿಯವರೆಗೆ ಬರುತ್ತದೆ. ಆ ಸ್ಥಳದಿಂದ ನದಿಯ ಗಮನ ಸಾಮಾನ್ಯತಃ ಆಗ್ನೇಯಾಭಿಮುಖವಾಗಿ. ಇದುವರೆಗೆ ಜೇವರಗಿ ತಾಲ್ಲೂಕಿನ ಉತ್ತರ ಮತ್ತು ಪೂರ್ವ ಗಡಿಯಾಗಿ ಹರಿಯುವ

ಈ ನದಿ ಮುಂದೆ ಶಾಹಪುರ ತಾಲ್ಲೂಕನ್ನು ಚಿತ್ತಾಪುರ ಮತ್ತು ಯಾದಗಿರಿ ತಾಲ್ಲೂಕುಗಳಿಂದ ಬೇರ್ಪಡಿಸುವಂತೆ ಹರಿದು ಗುಲ್ಬರ್ಗ ಜಿಲ್ಲೆಯ ಆಗ್ನೇಯದ ಅಂಚಿನಲ್ಲಿ ಶಾಹಪುರ ತಾಲ್ಲೂಕಿನ ಸಂಗಮದ ಬಳಿ ಕೃಷ್ಣಾ ನದಿಯನ್ನು ಕೂಡುತ್ತದೆ. ಭೀಮಾ ನದಿ ತನ್ನ ಒಟ್ಟು ಹರಿವಿನ 856 ಕಿಮೀನಲ್ಲಿ 520 ಕಿಮೀ ಮಹಾರಾಷ್ಟ್ರದಲ್ಲೂ 48 ಕಿಮೀ ಕರ್ನಾಟಕ-ಮಹಾರಾಷ್ಟ್ರ ಗಡಿಯಾಗಿಯೂ ಮುಂದಿನ 48 ಕಿಮೀ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳ ಗಡಿಯಾಗಿಯೂ ಇದ್ದು ಉಳಿದ 240 ಕಿಮೀ ಪೂರ್ತಿ ಗುಲ್ಬರ್ಗ ಜಿಲ್ಲೆಯಲ್ಲಿಯೇ ಹರಿಯುತ್ತದೆ.

ಕರ್ನಾಟಕದಲ್ಲಿ ಈ ನದಿಯ ಹರಿವಿನ ಉದ್ದಕ್ಕೂ ಅನೇಕ ನದಿ ಹಳ್ಳಗಳು ಬಂದು ಸೇರುತ್ತವೆ. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಉತ್ತರದಲ್ಲಿ ಬೋರಿ ಹಳ್ಳವೂ ಪೂರ್ವದಲ್ಲಿ ರೋಡಗಿಯ ಸಮೀಪ ಸತ್ನಾಳ ಹೊಳೆಯೂ ಭೀಮಾನದಿಯನ್ನು ಬಲದಂಡೆಯ ಮೂಲಕ ಸೇರುತ್ತದೆ. ಗುಲ್ಬರ್ಗ ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ ಎರಡು ನದಿಗಳು ಈ ನದಿಯನ್ನು ಎಡದಂಡೆಯಲ್ಲಿ ಸೇರುತ್ತವೆ. ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ಹುಟ್ಟಿ ದಕ್ಷಿಣಕ್ಕೆ ಹರಿದ ಬೋರಿನದಿ ಅಫಜಲಪುರದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಭೀಮಾನದಿಯನ್ನು ಸೇರುತ್ತದೆ. ಅಮರಜ **(ನೋಡಿ)** ನದಿ ಗಾಣಗಾಪುರದ ಸಮೀಪ ಇದನ್ನು ಕೂಡಿಕೊಳ್ಳುತ್ತದೆ. ಚಿತ್ತಾಪುರ ತಾಲ್ಲೂಕಿನ ಹುನಗುಂಟದ ಬಳಿ ಕಾಗಿಣಾ **(ನೋಡಿ)** ನದಿ ಎಡದಂಡೆಯ ಮೂಲಕ ಸೇರುತ್ತದೆ.

ಭೀಮಾನದಿ ಹರಿಯುವ ಪ್ರದೇಶ ಬಹುಪಾಲು ಡಖ್ಖನ್ ಟ್ರ್ಯಾಪ್‍ನದು. ಇಲ್ಲೆಲ್ಲ ಅಡಿಯಲ್ಲಿ ಕರಿಕಲ್ಲು ಹೆಚ್ಚಾಗಿದ್ದು. ಅದರ ಮೇಲೆ ದಪ್ಪನೆಯ ಫಲವತ್ತಾದ ಕಪ್ಪುಮಣ್ಣಿನ ಪದರ ಇರುವುದು. ಪ್ರತಿವರ್ಷ ಪ್ರವಾಹ ಕಾಲದಲ್ಲಿ ನದಿ ಹೊತ್ತು ತಂದ ಫಲವತ್ತಾದ ಮಣ್ಣು ಕೆಲವು ಕಡೆ ನದಿಯ ಇಕ್ಕೆಲದಲ್ಲಿ ಹರಡುತ್ತಿರುತ್ತದೆ. ಈ ಪ್ರದೇಶದ ಮಣ್ಣು ಫಲವತ್ತಾಗಿರುವಂತೆಯೇ ನೀರಿನ ಅಂಶವನ್ನು ಬಹುಕಾಲ ಹಿಡಿದಿಟ್ಟುಕೊಳ್ಳಬಲ್ಲುದು. ಎಂತಲೇ ಸಕಾಲದಲ್ಲಿ ಸ್ವಲ್ಪ ಮಳೆಯಾದರೂ ಬೆಳೆ ಚೆನ್ನಾಗಿ ಆಗುತ್ತದೆ. ಈ ನದಿಯ ಇಕ್ಕೆಲದಲ್ಲಿ ಬಹುಪಾಲು ಜೋಳ, ಗೋದಿ, ಸಜ್ಜೆ, ಹತ್ತಿ ಮತ್ತು ತಂಬಾಕನ್ನು ಬೆಳೆಯುತ್ತಾರೆ. ನೀರಾವರಿಗಾಗಿ ಭೀಮಾನದಿಯನ್ನು ಬಳಸಿಕೊಂಡಿರುವುದು ಬಹು ಕಡಿಮೆ. ಆಫಜಲಪುರದ ಸಮೀಪ ಒಂದು ಅಡ್ಡಕಟ್ಟೆ ಕಟ್ಟಿ ಕೊಳಾಯಿಗಳ ಮೂಲಕ ನೀರನ್ನು ಬಳಸುವ ಯೋಜನೆ ಈಗಾಗಲೆ ಬಳಕೆಯಲ್ಲಿದೆ. ಶಾಹಪುರ ತಾಲ್ಲೂಕಿನಲ್ಲಿ ತಂಗಡಿಯ ಬಳಿ ಭೀಮಾನದಿಗೆ ಅಣೆಕಟ್ಟನ್ನು ನಿರ್ಮಿಸುವ ಯೋಜನೆ ಇದೆ. ಈ ಯೋಜನೆಯ ಪ್ರಕಾರ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕಬಹುದೆಂದು ಅಂದಾಜು. ಬಿಜಾಪುರ ಜಿಲ್ಲೆಯ ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಈ ನದಿಯ ನೀರನ್ನು ತೋಟಗಾರಿಕೆಗೆ ಹೆಚ್ಚಾಗಿ ಬಳಸುತ್ತಿದ್ದಾರೆ. ಈ ಪ್ರದೇಶದಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಬಿಜಾಪುರ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ಜಳಕಿಯು ಭೀಮಾನದಿಯನ್ನು ದಾಟುತ್ತದೆ. ಅಫಜಲಪುರದ ಸಮೀಪ ಗುಲ್ಬರ್ಗ-ಬಿಜಾಪುರ ರಸ್ತೆಯಲ್ಲಿ, ಜೇವರಗಿಯ ಸಮೀಪ ಗುಲ್ಬರ್ಗ-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಮತ್ತು ಯಾದಗಿರಿಯ ಸಮೀಪ ಯಾದಗಿರಿ-ಸುರಪುರ ರಸ್ತೆಯಲ್ಲಿ ಭೀಮಾನದಿಗೆ ಸೇತುವೆಗಳನ್ನು ಕಟ್ಟಲಾಗಿದೆ. ಬಿಜಾಪುರ-ಸೊಲ್ಲಾಪುರ ರೈಲ್ವೆಮಾರ್ಗ ಲಚ್ಯಾಣದಿಂದ ಮುಂದೆ ಭೀಮಾನದಿಯನ್ನು ಹಾದುಹೋಗುತ್ತದೆ.

ಈ ನದಿಯ ಪ್ರದೇಶದಲ್ಲಿ ಉತ್ತಮವಾದ ಕರಿಕಲ್ಲು, ಕಾರ್ನಿಲಿಯನ್, ಅಗೇಟ್ ಮುಂತಾದ ಶಿಲೆಗಳು ಸಿಗುತ್ತವೆಯಾಗಿ ಪ್ರಾಗೈತಿಹಾಸಿಕ ಕಾಲದ ಶಿಲಾ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳು ಈ ನದಿಯ ಪ್ರದೇಶದಲ್ಲಿ ಅನೇಕ ಕಡೆ ಕಂಡುಬಂದಿವೆ. (ಎ.ಎಸ್.)

ಗುಲ್ಬರ್ಗ ಜಿಲ್ಲೆಯ ಅಫಜಲಪುರ, ಜೇವರಗಿ ಮತ್ತು ಯಾದವಗಿರಿಗಳು ಭೀಮಾನದಿಗೆ ಸುಮಾರು ಸಮೀಪದಲ್ಲಿರುವ ದೊಡ್ಡ ಊರುಗಳು. ಭೀಮಾ ನದಿಯ ದಂಡೆಗುಂಟ ತೀರ್ಥಕ್ಷೇತ್ರಗಳಿಗೂ ಕೊರತೆ ಇಲ್ಲ. ಇಂಡಿ ತಾಲ್ಲೂಕಿನ ಅಗರಖೇಡ **(ನೋಡಿ)** ಧೂಳಖೇಡ ಮತ್ತು ಮಿರಗಿ ಪ್ರಸಿದ್ಧ ಕ್ಷೇತ್ರಗಳು. ಧೂಳಖೇಡದಲ್ಲಿ ದಕ್ಷಪ್ರಜಾಪತಿ ಯಜ್ಞಮಾಡಿದನೆಂದು ಸ್ಥಳಪುರಾಣದ ಹೇಳಿಕೆ. ಇಲ್ಲಿ ಒಂದು ಶಂಕರಲಿಂಗ ದೇವಾಲಯವಿದೆ. ಮಿರಗಿಯಲ್ಲಿ ಸಂಗಮೇಶ್ವರ ದೇವಾಲಯವಿದೆ. ರಮಾನಂದ ಸ್ವಾಮಿಗಳು ತಪಸ್ಸು ಮಾಡಿದ ಸ್ಥಳವೆಂದೂ ಇದು ಪ್ರಸಿದ್ಧವಾಗಿದೆ. ಸಿಂದಗಿ ತಾಲ್ಲೂಕಿನ ದೇವನಗಾಂವವು ಕಮಲೇಶ್ವರ, ಮಲ್ಲಿಕಾರ್ಜುನ ಮತ್ತು ಶಂಕರಲಿಂಗ ದೇವಾಲಯಗಳಿಗಾಗಿ ಪ್ರಸಿದ್ಧವಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಅಮರಜ-ಭೀಮಾ ಸಂಗಮದ ಬಳಿ ಇರುವ ಗಾಣಗಾಪುರ **(ನೋಡಿ)** ಒಂದು ಪ್ರಸಿದ್ಧವಾದ ತೀರ್ಥಕ್ಷೇತ್ರ. ಚಿತ್ತಾಪುರ ತಾಲೂಕಿನ ಸನ್ನತಿ **(ನೋಡಿ)** ಚಂದಲಾ ಪರಮೇಶ್ವರಿ ದೇವಾಲಯವಿರುವ ಕ್ಷೇತ್ರ.

ಮತ್ಸ್ಯ, ಬ್ರಹ್ಮ ಮತ್ತು ವಾಮನ ಪುರಾಣಗಳಲ್ಲಿ ಹಾಗೂ ಮಹಾಭಾರತದಲ್ಲಿ ಭೀಮಾ ನದಿಯ ಉಲ್ಲೇಖ ಬಂದಿದೆ. ಪುರಾಣಗಳಲ್ಲಿ ಪವಿತ್ರ ನದಿಗಳ ಸಾಲಿನಲ್ಲಿ ಎಣಿಸಿದ ಇದನ್ನು ಮಹಾನದಿ ಎಂದೂ ಉಲ್ಲೇಖಿಸಿದೆ. ಭಾರತದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಭೀಮಾಶಂಕರಲಿಂಗ ಭೀಮಾನದಿಯ ಉಗಮಸ್ಥಾನದಲ್ಲಿದೆ.

ತ್ರಿಪುರಾಸುರನನ್ನು ಸೋಲಿಸಿ ದಣಿದ ಶಿವ ವಿಶ್ರಾಂತಿಗೆಂದು ಸಹ್ಯಾದ್ರಿಗೆ ಬಂದನಂತೆ. ಆಗ ಇಬ್ಬರು ಋಷಿಗಳನ್ನು ಕೊಂದ ಅಯೋಧ್ಯೆಯ ರಾಜ ಭೀಮಕನು ಪಾಪಪರಿಹಾರಕ್ಕಾಗಿ ತಪಸ್ಸಿಗೆಂದೇ ಇಲ್ಲಿಗೆ ಬಂದ. ಈತನ ತಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷನಾಗಿ ವರ ನೀಡುವ ಕೃಪೆ ಮಾಡಿದ. ಆಗ ಶಿವನ ಹಣೆ ಬೆವರುತ್ತಿತ್ತಂತೆ. ಅದನ್ನು ಕಂಡ ಭೀಮಕ ಆ ಹಣೆಯ ಬೆವರೇ ನದಿಯಾಗಿ ಪ್ರವಹಿಸಲಿ ಎಂದು ಕೇಳಿದನಂತೆ. ಈ ರೀತಿ ಭೀಮಕನ ಪ್ರಾರ್ಥನೆಯಂತೆ ಮೂಡಿಬಂದ ನದಿ ಭೀಮಾನದಿ ಎನಿಸಿಕೊಂಡಿತೆಂದು ಪೌರಾಣಿಕ ಐತಿಹ್ಯ. **(ಎಸ್.ವಿ.ಪಿ.)**

**ಭೂತಾರಾಧನೆ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುವ ಒಂದು ವಿಶಿಷ್ಟರೀತಿಯ ಜನಪದ ದೈವಾರಾಧನೆ.

ಭೂತಾರಾಧನೆ ಭಾರತದ ಎಲ್ಲೆಡೆ ಒಂದಲ್ಲ ಒಂದು ರೀತಿಯಲ್ಲಿ ಕಂಡುಬರುವುದಾದರೂ ತುಳುನಾಡಿನ ಭೂತಗಳಲ್ಲಿಯೂ ಅವುಗಳ ಆರಾಧನೆಯಲ್ಲಿ ಕೆಲವು ವೈಶಿಷ್ಟ್ಯಗಳನ್ನು ಕಾಣಬಹುದು. ಭೂತಗಳನ್ನು ಕುರಿತು ಹೇಳುವ ಸತ್ಯೊಳು ಸತ್ಯದ ಚಿತ್ತ ಎಂಬ ಮಾತುಗಳು ಸತ್ಯದ ಪ್ರತ್ಯಕ್ಷ ರೂಪವೆಂದು ಅವರು ನಂಬಿ ಪೂಜಿಸುವುದನ್ನು ಸೂಚಿಸುತ್ತದೆ. ಇಲ್ಲಿ ಸಾಮಾನ್ಯವಾಗಿ ಪೂಜೆಗೊಳ್ಳುವ ಭೂತಗಳನ್ನು ಸ್ಥೂಲವಾಗಿ ಮೂರು ರೀತಿಯಲ್ಲಿ ವರ್ಗೀಕರಿಸಬಹುದು.

1. ಪ್ರಾಣಿರೂಪದಲ್ಲಿರುವ ಭೂತ
2. ಮನುಷ್ಯನ ಮರಣಾನಂತರ ದೈವೀಕೃತವಾದ ಭೂತ
3. ಪುರಾಣದಿಂದ ಆಯ್ದುಕೊಂಡ ವ್ಯಕ್ತಿಗಳ ಭೂತ

ಹುಲಿ, ಹಂದಿ, ನಂದಿ, ಕೋಣ ಇತ್ಯಾದಿ ಪ್ರಾಣಿಗಳು ಮೊದಲನೆಯ ವರ್ಗದ ರೂಪದಲ್ಲಿ ಆರಾಧನೆಗೊಳ್ಳುತ್ತವೆ (ನಂದಿಕೇಶ್ವರ, ಹುಲಿದೈವ, ಹಾಯಿಗುಳಿ, ಪಂಜುರ್ಲಿ, ನಂದಿಕೋಣ ಇತ್ಯಾದಿ).

ಕೋಟಿಚೆನ್ನಯ್ಯ, ಅಬ್ಬಕ್ಕ-ದಾರಕ್ಕ, ಕೋಟೇದಬಬ್ಬು, ಕೋಟಿಪುಂಜ-ದೇವಪುಂಜ, ಕಲ್ಕುಡ-ಕಲ್ಕುರ್ಚಿ, ಕುಜುಂಬ-ಕಂಜ, ಕಾಂತಾಬಾರೆ-

ಬೂದಾಬಾರೆ ಮೊದಲಾದ ವ್ಯಕ್ತಿಗಳು ಮಾನವರಾಗಿದ್ದಾಗ ವೀರ ಕೆಲಸವನ್ನು ಮಾಡಿ ಅಕಾಲಮರಣಕ್ಕೆ ತುತ್ತಾಗಿ ಅನಂತರ ಭೂತಗಳಾಗಿ ದೈವತ್ವವನ್ನು ಹೊಂದಿ ಪೂಜೆಗೊಳ್ಳುತ್ತವೆ. ಈ ದೈವಗಳು ಎರಡನೆಯ ವರ್ಗಕ್ಕೆ ಸೇರುತ್ತವೆ. ಕೊಡಮಂತಾಯ, ಕಿಕ್ಕುಣಂತಾಯ, ಮಗ್ರಂದಾಯ, ಶಿವತ್ತಾಯ, ಅಣ್ಣಪ್ಪ, ಅಡ್ಕತ್ತಾಯ ಮೊದಲಾದ ದೈವಗಳನ್ನೂ ಈ ಗುಂಪಿಗೇ ಸೇರಿಸಬಹುದು. ಅನೇಕ ಭೂತಗಳು ಸನಾತನ ಧರ್ಮದಿಂದ ಬಂದುವು. ಇಂಥವೂ ದೈವದ ರೂಪದಲ್ಲಿ ಆರಾಧನೆಗೊಳ್ಳುತ್ತವೆ. ಇವುಗಳಲ್ಲಿ ಬೇತಾಳ, ವೀರಭದ್ರ, ಭೈರವ, ಜುಮಾದಿ (ಧೂಮಾವತಿ), ಕಾಳಭೈರವಿ, ಚಾವುಂಡಿ (ಚಾಮುಂಡಿ), ಮಹಾಮಾಯೆ, ಭಗವತಿ,

ಭೂತನೃತ್ಯ

ಕನ್ಯಾಕುಮಾರಿ, ವನದುರ್ಗೆ ಪ್ರಮುಖವಾದುವು. ಮಲ್ಲರಾಯ, ಉಳ್ಳಾಳ್ತಿ, ಕರ್ನಪಾಡಿತಾಯ, ಕೊಡಮಣತಾಯ, ದೇಯಿ ಮೊದಲಾದುವು ದೇವಿಯ ಅಂಶಗಳೆಂಬ ನಂಬಿಕೆಯಿದೆ. ತುಳುನಾಡಿನಲ್ಲಿ ಬೆರ್ಮೆ ಎಂಬ ದೈವ ಬ್ರಹ್ಮನ ಪ್ರತಿರೂಪವೇ ಆಗಿದೆ. ವೇದಬ್ರಹ್ಮನ ನಿರ್ದೇಶನದ ಒಂದು ಕ್ರಮದಲ್ಲಿದ್ದರೆ ಬೆರ್ಮೆ ಎಂಬ ದೈವ ಭೂತಬ್ರಹ್ಮವಾಗಿ ಇನ್ನೊಂದು ರೀತಿಯಲ್ಲಿ ಪೂಜೆಗೊಳ್ಳುತ್ತದೆ. ಇವನಿಗೆ ನಾಲ್ಕು ಮುಖ ಮತ್ತು ನಾಲ್ಕು ಕೈಗಳು. ಕೈಗಳಲ್ಲಿ ಖಡ್ಗ, ಡಮರು, ಕಪಾಲ ಮತ್ತು ಕುಠಾರ ಮೊದಲಾದ ಆಯುಧಗಳಿವೆ. ತುಳುನಾಡಿನ ಎಲ್ಲ ಕಡೆ ಕಂಡುಬರುವ ಆಲಡೆಗಳಲ್ಲಿ, ಬ್ರಹ್ಮಸ್ಥಾನಗಳಲ್ಲಿ ಈ ಬ್ರಹ್ಮ ಪ್ರಧಾನ ದೈವವಾಗಿದ್ದು ಇವನೊಡನೆ ನಾಗ, ನಂದಿ, ಕ್ಷೇತ್ರಪಾಲ ಮತ್ತು ರಕ್ತೇಶ್ವರಿ ಎಂಬ ನಾಲ್ಕು ದೈವಗಳೂ ಸೇರಿಕೊಂಡಿರುತ್ತವೆ. ಮೇಲೆ ಹೇಳಿದ ಈ ಎಲ್ಲವೂ ಮೂರನೆಯ ವರ್ಗಕ್ಕೆ ಸೇರುತ್ತವೆ.

ಭೂತನೆಲೆಯ ಸ್ಥಳವನ್ನು ಭೂತಸ್ಥಾನ, ಭೂತಸಾನ ಎಂದು ಕರೆಯುತ್ತಾರೆ. ಭೂತಸ್ಥಾನಕ್ಕೆ ಆಲಡೆ, ಗರಡಿ, ಭೂತದ ಕೊಟ್ಟಿಗೆ ಎಂಬ ಹೆಸರುಗಳು ಇವೆ. ಇವು ಸಾಮಾನ್ಯವಾಗಿ 4 ಗಜ ಉದ್ದ 3 ಗಜ ಅಗಲ 4 ಗಜ ಎತ್ತರದ ಸಾಧಾರಣ ಗುಡಿಗಳಾಗಿರುತ್ತವೆ. ಇವಕ್ಕೆ ಕಿಟಕಿಗಳಿರುವುದಿಲ್ಲ. ಜನಪ್ರಿಯ ಭೂತಗಳಿಗೆ ಇದಕ್ಕೂ ದೊಡ್ಡದಾದ ಭೂತಸ್ಥಾನಗಳಿರುವುದುಂಟು. ಸಾನದ ಒಳಗೆ ಮನುಷ್ಯರಂತೆ, ಪ್ರಾಣಿಗಳಂತೆ ರೂಪವಿರುವ ಹಿತ್ತಾಳೆಯ ಹಲವಾರು ಗೊಂಬೆಗಳಿರುತ್ತವೆ. ಜೊತೆಗೆ ತೂಗುಮಂಚ ಅಥವಾ ಕಾಲುಳ್ಳ ಮಂಚವಿರುತ್ತದೆ. ಇದನ್ನು ಭೂತದ ಮಂಚ ಎನ್ನುತ್ತಾರೆ. ಇದರ ಮೇಲೆ ಭೂತದ ಖಡ್ಗ ಹಾಗೂ ಗಂಟೆ ಇರುತ್ತವೆ. ಭೂತಸಾನದಲ್ಲಿ ಕಂಡುಬರುವ ಹುಲಿ, ಹಂದಿ, ಕೋಣ, ಎತ್ತು ಮೊದಲಾದವುಗಳ ವಿಗ್ರಹಗಳನ್ನು ಭೂತವಾಹನಗಳಾಗಿ ಉಪಯೋಗಿಸುವುದರ ಜೊತೆಗೆ, ಅವುಗಳನ್ನು ಭೂತಗಳ ಪರಿವಾರವೆಂದು ಕರೆದು ವಿಶೇಷ ಸಂದರ್ಭಗಳಲ್ಲಿ ಪೂಜಿಸುವುದೂ ಉಂಟು. ಹೀಗೆ ಪೂಜಿಸುವಾಗ ಭೂತದ ಬಳಿ ಒಂದು ಕತ್ತಿ, ಕಂಚಿನ ಕಳಸದಲ್ಲಿ ನೀರು, ಒಂದು ದೀಪ ಇಟ್ಟಿರುತ್ತಾರೆ.

ಪೂಜೆಯ ರೀತಿಯಲ್ಲಿ ಆಯಾ ಭೂತದ ರೌದ್ರಭಾವನೆಗನುಗುಣವಾಗಿ ಕುಣಿತದ ಮೂಲಕ ಪೂಜೆಯಾಗುತ್ತದೆ. ಭೂತವನ್ನು ಪ್ರತಿನಿಧಿಸುವ ವ್ಯಕ್ತಿಯನ್ನು ಪಾತ್ರಿ ಎನ್ನುತ್ತಾರೆ. ಒಂದೊಂದು ಭೂತಕ್ಕೂ ಅದಕ್ಕೊಪ್ಪುವ ಅಲಂಕಾರ, ವೇಷ, ಮುಖವರ್ಣಿಕೆ ಇರುತ್ತವೆ. ಮೈಗೆ ಕೆಂಪುಬಟ್ಟೆ, ನಡುವಿಗೆ ನೆರಿಗೆಯುಳ್ಳ ಲಂಗ, ತಲೆಗೆ ಕಿರೀಟ (ಅಣಿ), ಕಾಲಿಗೆ ಗಗ್ಗರ, ಸೊಂಟಕ್ಕೆ ದಟ್ಟಿ, ತೋಳಿಗೆ ವಂಕಿ, ಕೈಗೆ ಬಳೆ, ಎದೆಗೆ ಕಂಚಿನ ರಕ್ಷೆ, ಕಿವಿಗೆ ಮತ್ತು ಹಣೆಗೆ ಅಲಂಕಾರ ಇರುತ್ತದೆ. ಒಮ್ಮೊಮ್ಮೆ ಆಯಾ ಭೂತದ ಮುಖವಾಡ ಧರಿಸಿ ಕುಣಿಯುವುದೂ ಉಂಟು. ಭೂತಾರಾಧನೆ ಕೆಲವೊಮ್ಮೆ ಸಾರ್ವಜನಿಕವಾಗಿಯೂ ಒಂದೊಂದೆ ಮನೆಯಲ್ಲಿಯೂ ನಡೆಯುತ್ತದೆ. ಬತ್ತ, ಅಕ್ಕಿ, ಬತ್ತದ ಅರಳು, ಎಳನೀರು, ತೆಂಗಿನಕಾಯಿ, ಅಡಕೆ, ಹೊಂಬಾಳೆ, ತೆಂಗಿನಗರಿ–ಇವು ಭೂತಾರಾಧನೆಯ ಮುಖ್ಯವಸ್ತುಗಳು. ಎಲ್ಲ ರೀತಿಯ ಭೂತ ಕಟ್ಟುವಾಗಲೂ ಕೈಯಲ್ಲಿ ದೀವಟಿಗೆಯಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ತುಳು ಮಾತನಾಡುವ ಪ್ರದೇಶದ ಭೂತಾರಾಧನೆಗೂ ಕನ್ನಡ ಮಾತನಾಡುವ ಪ್ರದೇಶದ ಭೂತಾರಾಧನೆಗೂ ಕೆಲವು ವೈಶಿಷ್ಟ್ಯಗಳೂ ವ್ಯತ್ಯಾಸಗಳೂ ಕಂಡುಬರುತ್ತವೆ. ತುಳು ಮಾತನಾಡುವಲ್ಲಿ ಕೆಲವೇ ನಿಶ್ಚಿತ ಜಾತಿಗೆ ಸೇರಿದ–ಮುಖ್ಯವಾಗಿ ಬೈದ್ಯ, ನಲಿಕೆ, ಪರವ, ಪಂಬರ, ಪಾಣಾರ–ಜನ ಮಾತ್ರ ಭೂತಾರಾಧನೆಯಲ್ಲಿ ಭಾಗವಹಿಸುತ್ತಾರೆ. ಇಲ್ಲಿ ಒಂದು ಭೂತವನ್ನು ಇಂಥವನೇ ಪೂಜಿಸಬೇಕೆಂಬ ನಿಯಮವಿದೆ. ಆತ ಆಯಾ ದೈವಗಳ ವೇಷಕಟ್ಟಿ ಕುಣಿಯುತ್ತಾನೆ. ಭಕ್ತರು ಆತನಲ್ಲಿ ತಮ್ಮ ಅಭೀಷ್ಟಗಳನ್ನು ಕೇಳಿಕೊಂಡು ಅವುಗಳನ್ನು ನೆರವೇರಿಸಿಕೊಳ್ಳುತ್ತಾರೆ. ಕನ್ನಡ ಮಾತನಾಡುವ ಪ್ರದೇಶದಲ್ಲಿ ಭೂತಗಳಿಗೆ ಪೂಜೆ ಸಲ್ಲಿಸುವವರು ವೈದ್ಯರೆಂಬ ಬ್ರಾಹ್ಮಣರಲ್ಲಿ ಒಂದು ಒಳಪಂಗಡಕ್ಕೆ ಸೇರಿದ ಜನ. ಪೂಜೆಗೊಳ್ಳುವ ಪ್ರಮುಖ ಭೂತಗಳೆಂದರೆ ಬೊಬ್ಬರ್ಯ, ಮಾಣಿ, ಜಟ್ಟಿಗ. ಇಲ್ಲಿ ಪಾತ್ರಿಗೆ ಯಾವುದೇ ವಿಶೇಷ ರೀತಿಯ ವೇಷಭೂಷಣಗಳಿರುವುದಿಲ್ಲ. ಒಂದೇ ಗುಡಿಯಲ್ಲಿ ಅನೇಕ ದೈವಗಳ ಗೊಂಬೆಗಳಿರುತ್ತವೆ. ಈ ಭೂತಗಳಿಗೆ ಪಾಡ್ದನಗಳಿಲ್ಲ; ಸರಿಯಾದ ಕಥೆಯಿಲ್ಲ. ಈ ದೈವಗಳಿಗೆ ವರ್ಷಕ್ಕೊಂದು ಸಲ ಅಥವಾ ವಿಶಿಷ್ಟ ಸಂದರ್ಭದಲ್ಲಿ ಕೋಲ, ನೇಮ, ಬಲಿ, ಆಗಲು, ತಂಬಿಲ, ಬಂಡಿ ಮೊದಲಾದ ವಿವಿಧ ರೀತಿಯ ಉತ್ಸವ ಹಾಗೂ ಸೇವೆ

ಜರುಗುತ್ತವೆ. ಕೋಲ ಮತ್ತು ನೇಮ ದೈವದ ನೃತ್ಯಸಹಿತ ಉತ್ಸವದ ರೂಪದಲ್ಲಿ ನಡೆಯುತ್ತವೆ. ನೇಮ ಹೆಚ್ಚಾಗಿ ರಾತ್ರಿ ನಡೆಯುತ್ತದೆ. ಹಗಲು ಸಾಮಾನ್ಯವಾಗಿ ಕೋಲದ ಹಿಂದಿನ ರಾತ್ರಿ ನಡೆಯುತ್ತದೆ. ಕೋಲವನ್ನು ಹೆಚ್ಚಾಗಿ ಪಂಬದವರು, ಪರವರು, ನಲಿಕೆಯವರು ಕಟ್ಟುತ್ತಾರೆ. 'ಪರ್ವ' ಭೂತಗಳಿಗೆ ಇನ್ನೊಂದು ರೀತಿಯಲ್ಲಿ ನಡೆಯುವ ಪೂಜೆ. ಇತ್ತೀಚೆಗೆ ಕೆಲವು ಭೂತಸ್ಥಾನಗಳು ದೇವಾಲಯದ ರೂಪ ತಾಳಿವೆ. ಸಾಮಾನ್ಯವಾಗಿ ಎಲ್ಲ ಭೂತಸ್ಥಾನಗಳಲ್ಲೂ ಏಪ್ರಿಲ್, ಮೇ, ಜೂನ್ ತಿಂಗಳಿನಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತದೆ. ಕೆಲವು ಜಾತ್ರೆಗಳು ಒಂದು ವಾರದವರೆಗೂ ನಡೆಯುವುದುಂಟು. ದೈವಕ್ಕೆ ಸಂಬಂಧಪಟ್ಟ ಹಾಡುಗಳನ್ನು ಪಾಡ್ದನಗಳು **(ನೋಡಿ)** ಎನ್ನುತ್ತಾರೆ. ಇವು ಸಾಮಾನ್ಯವಾಗಿ ಭೂತದ ಸಾಂಪ್ರದಾಯಿಕ ಇತಿಹಾಸವನ್ನು ನಿರೂಪಿಸುವ ಹಾಡುಗಳಾಗಿರುತ್ತವೆ. ಬ್ರಾಹ್ಮಣರು ಭೂತಾರಾಧನೆ ಮಾಡುವುದಿಲ್ಲವಾದರೂ ಅದರ ಪೌರೋಹಿತ್ಯ ಮುಂತಾದ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. **(ಪಿ.ಜಿ.ಬಿ.)**

**ಭೂ ಲಕ್ಷಣ:** ಕರ್ನಾಟಕ ರಾಜ್ಯ ಭಾರತ ಪರ್ಯಾಯದ್ವೀಪ ಪಶ್ಚಿಮ ಭಾಗದಲ್ಲಿ ದಖನ್ ಪ್ರಸ್ಥಭೂಮಿಯ ದಕ್ಷಿಣ ತುದಿಯಲ್ಲಿದೆ. ಬೇರೆ ಬೇರೆ ಕಾಲಗಳಲ್ಲಾದ ವಿವಿಧ ರೀತಿಯ ಶಿಲಾರಚನೆಗಳಿಂದಲೂ ಸಮುದ್ರ ತೀರದ ಮೈದಾನ, ಪ್ರಸ್ಥಭೂಮಿ ಹಾಗೂ ಬೆಟ್ಟಗಳಿಂದಲೂ ಪಶ್ಚಿಮ ಹಾಗೂ ಪೂರ್ವದೆಡೆಗೆ ಇಳಿಜಾರಾಗಿರುವ ಭೂಪ್ರದೇಶಗಳಿಂದಲೂ ಕಾಲಿಕ ಹಾಗೂ ಜೀವ ನದಿಗಳಿಂದಲೂ ಕೂಡಿರುವ ಈ ರಾಜ್ಯ ವೈವಿಧ್ಯ ಮಯ ಪ್ರಾಕೃತಿಕ ಸನ್ನಿವೇಶವನ್ನು ಹೊಂದಿದೆ. ಇಂಥ ವೈವಿಧ್ಯ ಕರ್ನಾಟಕ ವನ್ನು ಬಿಟ್ಟರೆ ಭಾರತದ ಒಂದೆರಡು ರಾಜ್ಯಗಳಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಕಾಣಸಿಗುತ್ತದೆ.

**ಭೂಗರ್ಭರಚನೆ:** ಸು. 300 ಕೋಟಿ ವರ್ಷಗಳ ಹಿಂದೆ ಅನೇಕ ವಿಭಾಗಗಳಾದ ಪ್ಯಾಂಗಿಯಾ ಎಂಬ ಪುರಾತನ ಭೂಭಾಗದ ಒಂದು ಭಾಗವೇ ಕರ್ನಾಟಕ ರಾಜ್ಯ. ಈ ಭಾಗದ ಶಿಲಾರಚನೆ ಆರ್ಷೇಯ (ಆರ್ಕೇಯಿಯನ್) ಯುಗದಲ್ಲುಂಟಾಗಿದ್ದು, ಕರ್ನಾಟಕದಲ್ಲಿನ ಮೂಲ ಭೂಪ್ರಸ್ತರ ನಿರ್ಮಾಣವು ಸಹ ಆ ಯುಗದ್ದೇ ಆಗಿದೆ. ಆರ್ಷೇಯ ಯುಗದಲ್ಲಿ ಅಂದರೆ ಸು. 300–270 ಕೋಟಿ ವರ್ಷಗಳ ಹಿಂದೆ ಗ್ರ್ಯಾನೈಟ್ ನೈಸ್ ಮುಂತಾದವೂ ಮುಂದಿನ ಆದಿಜೀವಿ ಯುಗದಲ್ಲಿ (ಪ್ರೊಟೆರೋಜೋಯಿಕ್) ಅಂದರೆ 270–210 ಕೋಟಿ ವರ್ಷಗಳ ಹಿಂದೆ ಧಾರವಾಡ ಶಿಲಾವರ್ಗವೂ ಉಂಟಾದವು. ಇದಾದ ಅನಂತರ ಸು. 100 ಕೋಟಿ ವರ್ಷಗಳ ಹಿಂದೆ ಕಲಾದಗಿ ಮತ್ತು ಭೀಮಾಸರಣಿಯ ಸಂಚಯನಗಳುಂಟಾಗಿ ಇಂದು ಅವು ರೂಪಾಂತರ ಶಿಲೆಗಳಾಗಿ ಮಾರ್ಪಾಡಾಗಿವೆ. ಕ್ರಿಟೇಷಸ್ ಯುಗದಲ್ಲಿ (55–12 ಕೋಟಿ ವರ್ಷಗಳ ಹಿಂದೆ) ದಖನ್ ಟ್ರಾಪ್ ಪ್ರಸ್ತರಗಳುಂಟಾದುವು. ಈಚಿನ ಕಾಲದಲ್ಲಿ (ಪ್ಲೈಸ್ಟೋಸೀನ್) ಸಮುದ್ರ ಮತ್ತು ನದಿಗಳ ತೀರಪ್ರದೇಶದಲ್ಲಿ ಮಣ್ಣಿನ ಸಂಚಯನವಾಗಿರುವುದಲ್ಲದೆ ಪಶ್ಚಿಮಕರೆ ಮತ್ತು ಬೀದರ್ ಪ್ರದೇಶಗಳಲ್ಲಿ ಅಲ್ಲಿಯ ಶಿಲೆಗಳು ಜಂಬಿಟ್ಟಿಗೆಯಾಗಿ (ಲ್ಯಾಟರೈಟ್) ರೂಪಾಂತರವಾಗಿವೆ.

**ಪರ್ವತ ಶ್ರೇಣಿಗಳು :** ಕರ್ನಾಟಕ ರಾಜ್ಯದ ದಕ್ಷಿಣ ಗಡಿಯಲ್ಲಿ ನೀಲಗಿರಿಯಿಂದ ಪ್ರಾರಂಭವಾಗಿರುವ ಶ್ರೇಣಿ ಇದೆ. ಇದೇ ಮುಂದೆ ಎರಡು ಭಾಗಗಳಾಗಿ ಪಶ್ಚಿಮ ಹಾಗೂ ಪೂರ್ವಘಟ್ಟಗಳು ಎಂಬ ಹೆಸರಿನಲ್ಲಿ ಒಂದು ಈಶಾನ್ಯ ಹಾಗೂ ಮತ್ತೊಂದು ವಾಯವ್ಯ ದಿಕ್ಕಿನೆಡೆಗೆ ಹಬ್ಬಿವೆ. ಇವೆರಡರ ನಡುವೆ ಕರ್ನಾಟಕ ಪ್ರಸ್ಥಭೂಮಿ ಅಥವಾ ಮೈದಾನ ಇದೆ. ಇದರ ನಡುವೆ ಸಹ ಅನೇಕ ಬೆಟ್ಟಗಳ ಶ್ರೇಣಿಗಳು ಇದ್ದು ಮೈದಾನವನ್ನು ಛಿದ್ರ ಮಾಡಿವೆ.

**ಪಶ್ಚಿಮಘಟ್ಟಗಳು:** ಪಶ್ಚಿಮಘಟ್ಟಗಳು ಪರ್ವತಶ್ರೇಣಿಗಳಲ್ಲ. ಇವು ಮುಖ್ಯವಾಗಿ, ಪರ್ಯಾಯದ್ವೀಪದ ಪಶ್ಚಿಮಗಡಿಯ ಭಾಗಗಳನ್ನು ಮೇಲೆತ್ತಲ್ಪಡುವಿಕೆಯಿಂದ ಉಂಟಾದವುಗಳು. ಇವುಗಳ ಪರ್ವತಗಳಲ್ಲದ ಲಕ್ಷಣಗಳನ್ನು ಘಟ್ಟಗಳು ಎಂಬ ಪದವೇ ಸೂಚಿಸುತ್ತದೆ. ಈ ಘಟ್ಟಗಳು ರಾಜ್ಯದಲ್ಲಿ ಅರಬ್ಬೀ ಸಮುದ್ರದ ತೀರಪ್ರದೇಶಕ್ಕೆ ಸಮಾನಾಂತರವಾಗಿ ಸು. 400 ಕಿಮೀಗಳ ಉದ್ದಕ್ಕೂ ವಿಸ್ತರಿಸಿವೆ.

ಪಶ್ಚಿಮಘಟ್ಟಗಳ ಶಿಲಾಸಮೂಹ ವಿವಿಧ ನೈಸ್ ಹಾಗೂ ರೂಪಾಂತರ ಶಿಲೆಗಳ ಹೊಂದಾಣಿಕೆಯಿಂದ ಉಂಟಾಗಿದೆ. ಇವುಗಳಲ್ಲಿ ಮುಖ್ಯವಾದವು ಗಳೆಂದರೆ ಹಸುರು–ಶಿಸ್ಟ್ ಮತ್ತು ಅಧಿಕ ಕಬ್ಬಿಣ ಅದಿರುನ್ನೊಳಗೊಂಡ ಶಿಲಾವರ್ಗಗಳು. ಈ ಘಟ್ಟಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀರಪ್ರದೇಶ ದಿಂದ ಸು. 60–80 ಕಿಮೀ ದೂರದಲ್ಲಿದೆ. ಆದರೆ ಶಿವಮೊಗ್ಗ ಜಿಲ್ಲೆಯ ಸಾಗರದ ಹತ್ತಿರ, ಅಂದರೆ ಗೋವರ್ಧನಗಿರಿ ಹಾಗೂ ದೇವಕೊಂಡಗಳ ನಡುವೆ ಈ ಘಟ್ಟಗಳು ಸಮುದ್ರದಿಂದ ಕೇವಲ 15 ಕಿಮೀಗಳ ಅಂತರದಲ್ಲಿ ಇವೆ. ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಕುದುರೆಮುಖ (ಸು. 1894 ಮೀ) ಹಾಗೂ ಕೊಡಗು ಜಿಲ್ಲೆಯಲ್ಲಿರುವ ಪುಷ್ಪಗಿರಿ (1713 ಮೀ) ಮುಂತಾದವು ಪಶ್ಚಿಮಘಟ್ಟದ ಪ್ರಮುಖ ಶಿಖರಗಳು. ಉತ್ತರದಲ್ಲಿನ ಪುಷ್ಪಗಿರಿ ಮತ್ತು ದಕ್ಷಿಣದಲ್ಲಿನ ಬ್ರಹ್ಮಗಿರಿ ಇವೆರಡು ಶಿಖರಗಳ ನಡುವೆ ಚಾರ್ನೋಕೈಟ್ ಶಿಲೆ (100 ಕಿಮೀ ಉದ್ದ) ಕಂಡುಬರುತ್ತದೆ. ಈ ಭಾಗ ನೀಲಗಿರಿಯ ದೊಡ್ಡಬೆಟ್ಟ ಹಾಗೂ ಮಾಕುರ್ತಿ ಶಿಖರಗಳ ವಾಯವ್ಯ ದಿಕ್ಕಿನ ಮುಂದುವರಿಯುವಿಕೆಯೇ ಆಗಿದೆ. ಇಲ್ಲಿಂದ ಕೊಡಗಿನ ಮುಖಾಂತರ ಅನೇಕ ಶ್ರೇಣಿಗಳು ಪೂರ್ವಾಭಿ ಮುಖವಾಗಿ ಹರಡಿವೆ.

ಪಶ್ಚಿಮಘಟ್ಟ ಶ್ರೇಣಿ ನೇರ ಹಾಗೂ ಕಡಿದಾದ ಇಳಿಜಾರುಗಳನ್ನು ತೀರ ಪ್ರದೇಶದ ಕಡೆಗೆ ಹೊಂದಿದ್ದು, ಪೂರ್ವದಲ್ಲಿ ಸಾಮಾನ್ಯ ಇಳಿಜಾರನ್ನು ಹೊಂದಿದೆ. ಈ ವೈಪರೀತ್ಯ ಟರ್ಷಿಯರಿ ಯುಗದಲ್ಲುಂಟಾದ ವಿಶಾಲ ಘಟ್ಟಪ್ರದೇಶಗಳ ಸ್ತರಭಂಗದಿಂದುಂಟಾದದ್ದು. ಇತ್ತೀಚಿನ ಸವಕಳಿಯೂ ಇದಕ್ಕೆ ಸ್ವಲ್ಪಮಟ್ಟಿಗೆ ಸಹಾಯಕವಾಗಿದೆ. ಪಶ್ಚಿಮದಲ್ಲಿನ ಖಂಡಾಂತರ ಪ್ರದೇಶದ ಅಂತ್ಯಭಾಗ ಪ್ಲೈಯೋಸೀನ್ ಯುಗದ ಸ್ತರಭಂಗದಿಂದುಂಟಾದುದೆಂದು ಹಾಗೂ ಪಶ್ಚಿಮಘಟ್ಟಗಳ ಪಶ್ಚಿಮ ಭೂಪ್ರದೇಶ ಸ್ತರಭಂಗಗಳ ಜೊತೆಯಲ್ಲೇ ಅರಬ್ಬೀ ಸಮುದ್ರಕ್ಕೆ ಕುಸಿದಿದೆ ಎಂದು ಸಹ ನಂಬಲಾಗಿದೆ. ಅಂತ್ಯ ಮೈಯೋಸೀನ್ ಹಾಗೂ ಪ್ಲೈಯೋಸೀನ್ ಯುಗದಲ್ಲುಂಟಾದ ಭೂ ಉದ್ಭವಿಸುವಿಕೆಯಿಂದಾಗಿ ಈ ಭೂಪ್ರದೇಶವು ಪೂರ್ವಾಭಿಮುಖವಾಗಿ ಓರೆಯಾಗಿದೆ.

**ಪೂರ್ವ ಘಟ್ಟಗಳು:** ಈಶಾನ್ಯಾಭಿಮುಖವಾಗಿ ಹಬ್ಬಿರುವ ಚದರಿದಂತಿ ರುವ ಬೆಟ್ಟಗಳನ್ನೇ ಪೂರ್ವಘಟ್ಟಗಳೆಂದು ಕರೆಯಲಾಗಿದೆ. ಬಹಳ ಹಿಂದೆ ಈ ಶ್ರೇಣಿಗಳು ಹಿಂದೆ ಅವಿಚ್ಛಿನ್ನ ಶ್ರೇಣಿಗಳಾಗಿದ್ದು ಕಾಲಕ್ರಮೇಣ ನೈಸರ್ಗಿಕ ಶಿಥಿಲೀಕರಣದಿಂದ, ಅದರಲ್ಲೂ ಮುಖ್ಯವಾಗಿ ಹರಿಯುವ ನೀರಿನ ನಿರಂತರ ಕೊರೆಯುವಿಕೆಯಿಂದ, ಇಂದು ಕೆಲವೇ ಭಾಗಗಳಲ್ಲಿ ಮಾತ್ರ ಅಳಿದುಳಿದ ಬೆಟ್ಟಗಳು ಕಂಡುಬರುತ್ತವೆ. ಈ ಶ್ರೇಣಿಯಲ್ಲಿ ಪ್ರಮುಖವಾದವುಗಳೆಂದರೆ ಕೋಲಾರದಲ್ಲಿನ ಚಿಂತಾಮಣಿ ಮತ್ತು ಟೇಕಲ್ ಬೆಟ್ಟಗಳು, ಯರ್ರಕೊಂಡ (1,040 ಮೀ) ಹಾಗೂ ಮಲ್ಲಪ್ಪನ ಕೊಂಡಗಳ ಬೆಟ್ಟಗಳು.

**ಮಧ್ಯಭಾಗದಲ್ಲಿ ಕಂಡುಬರುವ ಶ್ರೇಣಿಗಳು :** ರಾಜ್ಯದ ಮಧ್ಯಭಾಗದಲ್ಲಿ ಉತ್ತರ–ದಕ್ಷಿಣಾಭಿಮುಖವಾಗಿ ಹಬ್ಬಿರುವ ಬೆಟ್ಟಗಳನ್ನು ಕೇಂದ್ರೀಯ ಶ್ರೇಣಿಗಳೆಂದು ಪರಿಗಣಿಸಲಾಗಿದೆ. ಇವುಗಳನ್ನು ರಾಮನಗರ–ರಾಯದುರ್ಗ

ಶ್ರೇಣಿ ಎಂದು ಸಹ ಕರೆಯಲಾಗುತ್ತದೆ. ಈ ಶ್ರೇಣಿಗಳು ದಕ್ಷಿಣದಲ್ಲಿ ಶಿವಸಮುದ್ರದಿಂದ ಪ್ರಾರಂಭವಾಗಿ ಉತ್ತರದಲ್ಲಿನ ಮೊಳಕಾಲ್ಮೂರುವರೆಗೆ ಅಂದರೆ ಸುಮಾರು 400 ಕಿಮೀ ದೂರದವರೆಗೆ ಹಬ್ಬಿವೆ. ಇವುಗಳಲ್ಲಿ ಅತ್ಯಂತ ಎತ್ತರದ ಪ್ರದೇಶವೆಂದರೆ ಸು. 1,600 ಮೀ ಎತ್ತರದ್ದು. ರಾಮನಗರ, ಸಾವನದುರ್ಗ, ಶಿವಗಂಗೆ, ದೇವರಾಯನದುರ್ಗ, ಮಧುಗಿರಿ, ಪಾವಗಡ, ಮೊಳಕಾಲ್ಮೂರು ಹಾಗೂ ಬ್ರಹ್ಮಗಿರಿ ಬೆಟ್ಟಗಳು ಇಲ್ಲಿನ ಪ್ರಮುಖ ಬೆಟ್ಟಗಳು. ಇವುಗಳ ಜೊತೆಗೆ ಅನೇಕ ಚದರಿದ ಬೆಟ್ಟಗಳೂ ಕಂಡುಬರುತ್ತವೆ. ರಾಜ್ಯದ ಮಧ್ಯಭಾಗದಲ್ಲಿ ಚಿತ್ರದುರ್ಗ, ಹೊಸದುರ್ಗ, ಅರಸೀಕೆರೆ ಮತ್ತು ಬಾಣಾವರ ಬೆಟ್ಟಗಳು, ದಕ್ಷಿಣದಲ್ಲಿ ಚಾಮುಂಡಿ, ಸಿಂದಘಟ್ಟ, ಗೋಪಾಲಸ್ವಾಮಿಬೆಟ್ಟ, ಬಿಳಿಗಿರಿರಂಗನಬೆಟ್ಟ ಮತ್ತು ಮಹದೇಶ್ವರ ಬೆಟ್ಟಗಳು ಹಾಗೂ ಆಗ್ನೇಯ ದಿಕ್ಕಿನಲ್ಲಿ ನಂದಿಬೆಟ್ಟ ಕಂಡುಬರುತ್ತವೆ.

**ಪ್ರಾಕೃತಿಕ ಪ್ರದೇಶಗಳು:** ಕರ್ನಾಟಕದ ಭೂಪ್ರದೇಶವನ್ನು ಪ್ರಾಕೃತಿಕವಾಗಿ (1) ತೀರ ಮೈದಾನ (2) ಮಲೆನಾಡು (3) ಮೈದಾನ ಎಂದು ವಿಂಗಡಿಸಬಹುದು.

**1. ತೀರ ಮೈದಾನ :** ತೀರ ಮೈದಾನವು ಕರ್ನಾಟಕ ರಾಜ್ಯದ ಪಶ್ಚಿಮ ಭಾಗದ ಅಂಚಿನಲ್ಲಿ ಕಂಡುಬಂದು, ದಕ್ಷಿಣದ ಮಂಗಳೂರಿನಿಂದ ಉತ್ತರ ಕಾರವಾರದವರೆಗೆ, ಸು. 320 ಕಿಮೀ ದೂರದವರೆಗೆ ಹರಡಿದೆ. ಈ ತೀರಪ್ರದೇಶದ ಅಗಲ 12-64 ಕಿಮೀಗಳಷ್ಟು ವ್ಯತ್ಯಾಸವಾಗುತ್ತ, ದಕ್ಷಿಣದಲ್ಲಿ ವಿಶಾಲವಾಗಿದ್ದು ಉತ್ತರಕ್ಕೆ ಹೋದಂತೆಲ್ಲ ಕಿರಿದಾಗುತ್ತ ಹೋಗುತ್ತದೆ. ಈ ಮೈದಾನ ಅಲೆಗಳ ಕಾರ್ಯ ಹಾಗೂ ಶೀಘ್ರವಾಗಿ ಹರಿಯುವ ನದಿಗಳ ಸಂಚಯನದಿಂದ ಉಂಟಾಗಿದೆ. ಕೆಲವೆಡೆಗಳಲ್ಲಿ ಮಾತ್ರ ತೀರ ಮೈದಾನ ತೀರ ಮೈದಾನದ ಎತ್ತರ 120 ಮೀಗಿಂತ ಹೆಚ್ಚಾಗಿದೆ. ತೀರ ಮೈದಾನ ವಿವಿಧ ಲಕ್ಷಣಗಳನ್ನೊಳಗೊಂಡು, ಹೆಚ್ಚು ಸೌಂದರ್ಯದಿಂದ ಕೂಡಿದೆ. ಇದರ ಭೂವಿನ್ಯಾಸ, ಉತ್ತಮ ಸಮುದ್ರತೀರ, ಮರಳು ದಿಣ್ಣೆಗಳು, ತೆಂಗಿನ ಮರಗಳು, ಏತದ ಸಹಾಯದಿಂದ ನೀರೊದಗಿಸಿ ಬತ್ತ ಬೆಳೆಯುವ ವಿಶಾಲ ಗದ್ದೆಗಳು, ಕೆಂಪು ಹೆಂಚುಗಳನ್ನು ಹೊಂದಿರುವ ದೇವಸ್ಥಾನಗಳು ಹಾಗೂ ಮನೆಗಳು, ಅನತಿದೂರದಲ್ಲಿರುವ ಅರಣ್ಯ ಹಾಗೂ ಕಾಡುಗಳಿಂದ ಆವೃತವಾದ ಸುಂದರ ಕಣಿವೆಗಳ ಇಳಿಜಾರುಗಳ ಹಿನ್ನೆಲೆ ಮುಂತಾದವುಗಳು ಈ ಪ್ರದೇಶವನ್ನು ಹೆಚ್ಚು ರಮ್ಯವಾಗಿಸುವಲ್ಲಿ ಸಹಕಾರಿಯಾಗಿವೆ.

**2. ಮಲೆನಾಡು:** ಕರ್ನಾಟಕ ರಾಜ್ಯದ ಎಲ್ಲ ಪ್ರದೇಶಗಳಿಗಿಂತ ಮಲೆನಾಡು ಅತಿ ರಮ್ಯವಾದ ವೈವಿಧ್ಯವನ್ನು ಹೊಂದಿರುವ ಪ್ರದೇಶ. ಇದು ಪ್ರಮುಖವಾಗಿ ಬೆಟ್ಟಗುಡ್ಡಗಳ ಪ್ರದೇಶವಾಗಿದ್ದು ತೀರ ಮೈದಾನದ ಪೂರ್ವಗಡಿಯಾಗಿದೆ. ಇದು ರಾಜ್ಯದ ಉತ್ತರದಿಂದ ದಕ್ಷಿಣ ತುದಿಯವರೆಗೂ ಹಬ್ಬಿದ್ದು ಪೂರ್ವ-ಪಶ್ಚಿಮವಾಗಿ ಇದರ ಅಗಲ 45-100 ಕಿಮೀವರೆಗೆ ಇದೆ. ಈ ಪ್ರದೇಶದ ಉತ್ತರ ಭಾಗದ ಕೆಲವೆಡೆಗಳಲ್ಲಿ ಇತರೇ ಪ್ರಸ್ಥಭೂಮಿಯಂತೆ ಇದ್ದು, ಹೆಚ್ಚು ಎತ್ತರವಾಗಿಲ್ಲ. ದಕ್ಷಿಣಾರ್ಧ ಭಾಗ ಪ್ರಾಕೃತಿಕ ಲಕ್ಷಣಗಳಲ್ಲಿ ಪ್ರಸ್ಥಭೂಮಿಗಿಂತ ವಿಭಿನ್ನವಾಗಿದ್ದು, ಸಮುದ್ರಮಟ್ಟದಿಂದ 940-1,250 ಮೀಗಳ ಎತ್ತರದವರೆಗೂ ಕಂಡು ಬರುತ್ತದೆ. ಬಾಬಾಬುಡನ್ ಶ್ರೇಣಿಯಲ್ಲಿ 1,950 ಮೀಗಳಷ್ಟು ಎತ್ತರ ಪ್ರದೇಶ ಕಂಡುಬರುತ್ತದೆ.

ಅಂಕುಡೊಂಕಾದ ಕಣಿವೆಗಳು, ಬೆಟ್ಟಗುಡ್ಡ ಪ್ರದೇಶಗಳು, ದಟ್ಟವಾದ ಅರಣ್ಯ, ಹಂತಹಂತವಾಗಿ ಸಮಮಾಡಿದ ಗದ್ದೆಗಳು, ಕಿತ್ತಳೆ ಹಾಗೂ ಕಾಫಿ ತೋಟಗಳು, ಮೆಣಸು ಹಾಗೂ ವೀಳ್ಯದೆಲೆ ಬಳ್ಳಿಗಳನ್ನೊಳಗೊಂಡ ತೆಂಗು ಮತ್ತು ಅಡಕೆ ಮರಗಳನ್ನು ಹೊಂದಿರುವ ಮಲೆನಾಡು ಸುಂದರ ಪ್ರದೇಶವಷ್ಟೇ ಅಲ್ಲದೆ ಅನೇಕ ಪ್ರಕೃತಿ ಸಂಪನ್ಮೂಲಗಳನ್ನು ಹೊಂದಿದೆ.

**3. ಮೈದಾನ ಪ್ರದೇಶ :** ಹೆಸರೇ ಸೂಚಿಸುವಂತೆ ಇದು ಸಂಪೂರ್ಣ ಮೈದಾನವೇನಲ್ಲ. ಅಂಕುಡೊಂಕು ಪ್ರಸ್ಥಭೂಮಿಯಾದ ಈ ಬಯಲುಸೀಮೆ ಅನೇಕ ಮಳೆಯಾಶ್ರಿತ ನದಿಗಳನ್ನೊಳಗೊಂಡಿದೆ. ಇವುಗಳ ಮಧ್ಯೆ ಕೊರೆಯುವಿಕೆಯಿಂದ ಅಳಿದುಳಿದ ಎತ್ತರ ಮೈದಾನ ಪ್ರದೇಶಗಳು ಕಾಣಸಿಗುತ್ತವೆ. ಈ ಲಕ್ಷಣಗಳು ಸಾಮಾನ್ಯವಾಗಿ ರಾಜ್ಯದ ದಕ್ಷಿಣ ತುದಿಯಿಂದ ಉತ್ತರ ತುದಿಯವರೆಗಿನ ಮೈದಾನ ಪ್ರದೇಶದಲ್ಲೆಲ್ಲ ಕಂಡುಬಂದರೂ ದಕ್ಷಿಣ ಹಾಗೂ ಉತ್ತರ ಮೈದಾನ ಪ್ರದೇಶಗಳ ಮೇಲ್ಮೈಲಕ್ಷಣ, ವಾಯುಗುಣ ಹಾಗೂ ಮಾನವ ಚಟುವಟಿಕೆಗಳಲ್ಲಿ ಗಮನಾರ್ಹ ವ್ಯತ್ಯಾಸಗಳಿವೆ.

**ಉತ್ತರದ ಮೈದಾನ:** ಇದು ಸರಾಸರಿ 625 ಮೀ ಎತ್ತರವುಳ್ಳ ಪ್ರಸ್ಥಭೂಮಿ. ಈ ಮೈದಾನವನ್ನು ಇಲ್ಲಿನ ಕೃಷ್ಣಾ, ಭೀಮಾ ಮತ್ತು ತುಂಗಭದ್ರಾ ಮತ್ತು ಅವುಗಳ ಉಪನದಿಗಳ ಮೇರೆಗೆ ಅನೇಕ ಉಪಪ್ರದೇಶಗಳನ್ನಾಗಿ ವಿಂಗಡಿಸಬಹುದು. ಈ ಪ್ರದೇಶ ಒಣಬೇಸಗೆ, ಬೆಚ್ಚನೆಯ ಚಳಿಗಾಲ ಹಾಗೂ ಅನಿಶ್ಚಿತ ಮಳೆಗಾಲವನ್ನು ಹೊಂದಿದೆ. ಇಲ್ಲಿ ಮಳೆಯ ಅನಿಶ್ಚಿತತೆಯ ಕಾರಣ ಬರಗಾಲ ಹಾಗೂ ಅನಾವೃಷ್ಟಿ ಲಕ್ಷಣಗಳು ಸರ್ವೇಸಾಮಾನ್ಯವಾಗಿದೆ. ಇತ್ತೀಚೆಗೆ ನೀರಾವರಿ ಸೌಲಭ್ಯಗಳನ್ನೊಳಗೊಂಡ ಕೆಲವು ಭಾಗಗಳನ್ನು ಉಳಿದರೆ ಉಳಿದೆಲ್ಲ ಭಾಗಗಳಲ್ಲಿ ಒಣಬೇಸಾಯ ಹೆಚ್ಚಾಗಿದೆ.

**ದಕ್ಷಿಣದ ಮೈದಾನ:** ಇದು ಹಿಂದಿನ ಮೈಸೂರು ಸಂಸ್ಥಾನದ ಒಂಬತ್ತು ಜಿಲ್ಲೆಗಳನ್ನು ಒಳಗೊಂಡ ಪ್ರದೇಶ. ಉತ್ತರ ಮೈದಾನ ಕಪ್ಪು ಮಣ್ಣಿನಿಂದ ಕೂಡಿದ್ದರೆ ಇದು ಕಡಿಮೆ ಫಲವತ್ತಾದ ಕೆಂಪುಮಣ್ಣನ್ನು ಹೊಂದಿದೆ. ಕಾವೇರಿ ಹಾಗೂ ಅದರ ಉಪನದಿಗಳು ಇಲ್ಲಿನ ಪ್ರಮುಖ ನದಿಗಳು. ಈ ಪ್ರದೇಶದ ಉತ್ತರ ಭಾಗ ದಕ್ಷಿಣಕ್ಕಿಂತ ಹೆಚ್ಚು ಸಮತಟ್ಟಾಗಿದ್ದು ಸು. 690 ಮೀ ಎತ್ತರದಲ್ಲಿ ಕಂಡುಬರುತ್ತದೆ. ಪಶ್ಚಿಮ ಹಾಗೂ ದಕ್ಷಿಣದ ಕೆಲವು ಭಾಗಗಳು ಸರಾಸರಿ 905-1,125 ಮೀ ಎತ್ತರವಿದ್ದು ಕೆಲವೆಡೆಗಳಲ್ಲಿ 1,800 ಮೀ ಎತ್ತರ ಭಾಗಗಳೂ ಕಂಡುಬರುತ್ತವೆ. ಮಳೆಯ ಸರಾಸರಿ ಪ್ರಮಾಣ ಉತ್ತರ ಭಾಗದಲ್ಲಿ 325-625 ಮಿಮೀ ಇದ್ದರೆ ದಕ್ಷಿಣ ಹಾಗೂ ಪಶ್ಚಿಮದ ಎತ್ತರ ಪ್ರದೇಶದಲ್ಲಿ 750 ಮಿಮೀ ಇದೆ. ಈ ಪ್ರದೇಶದ ಬಹು ಭಾಗದಲ್ಲಿ ರಾಗಿ, ಜೋಳ, ಕಡಲೇಕಾಯಿ ಮುಂತಾದ ಬೆಳೆಗಳಿಂದ ಹೊಲಗಳನ್ನೂ ನೀರಾವರಿ ಇರುವ ಭಾಗಗಳಲ್ಲಿ ಬತ್ತ ಕಬ್ಬಿನ ಗದ್ದೆಗಳನ್ನೂ ಕಂದರ ಹಾಗೂ ಹಳ್ಳಪ್ರದೇಶಗಳಲ್ಲಿ ತೆಂಗು, ಅಡಕೆ ತೋಟಗಳನ್ನೂ ಕಾಣಬಹುದು.

**ನೀರೋಟದ ವ್ಯವಸ್ಥೆ :** ರಾಜ್ಯದ ಒಟ್ಟು ಪ್ರದೇಶವನ್ನು ಪಶ್ಚಿಮಕ್ಕೆ ಹರಿಯುವ ನದಿಗಳ ಪ್ರದೇಶ, ಕಾವೇರಿ ಕಣಿವೆ, ಕೃಷ್ಣಾ-ತುಂಗಭದ್ರಾ ಕಣಿವೆ, ಗೋದಾವರಿ ಕಣಿವೆ ಮತ್ತು ಪಾಲಾರ್-ಪೆನ್ನಾರ್ ಕಣಿವೆ ಎಂದು ಐದು ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮ ಘಟ್ಟಗಳು, ಪಶ್ಚಿಮಕ್ಕೆ ಹರಿಯುವ ನದಿಗಳು ಮತ್ತು ಕಾವೇರಿ-ಕೃಷ್ಣಾ ಕಣಿವೆಗಳ ನೀರು ಬೇರ್ಪಡೆಯ ಬೆನ್ನು. ಇದೇರೀತಿ ನಂದಿದುರ್ಗದಿಂದ ಬಲ್ಲಾಳರಾಯನದುರ್ಗದ ವರೆಗೆ ಹಬ್ಬಿರುವ ಶ್ರೇಣಿಗಳು ಕಾವೇರಿ ಮತ್ತು ಕೃಷ್ಣಾ ಕಣಿವೆಗಳನ್ನು ಬೇರ್ಪಡಿಸುತ್ತವೆ. ಬೀದರ್ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಗೋದಾವರಿ-ಕೃಷ್ಣಾ ನೀರು ಬೇರ್ಪಡೆಯ ಹರವು ಇದೆ. ನಂದಿದುರ್ಗ ಶ್ರೇಣಿ ಪಾಲಾರ್-ಪೆನ್ನಾರ್ ಕಣಿವೆಯನ್ನು ತುಂಗಭದ್ರಾ ಮತ್ತು ಕಾವೇರಿ ಕಣಿವೆಗಳಿಂದ ಬೇರ್ಪಡಿಸುತ್ತದೆ **(ನೋಡಿ : ನದೀವ್ಯವಸ್ಥೆ ಮತ್ತು ಜಲಸಂಪತ್ತು)**.

**(ಪಿ.ಬಿ.)**

**ಭೂ ವಿಕ್ರಮ:** ತಲಕಾಡಿನ ಗಂಗವಂಶದ ದೊರೆ (ಸು. 654-79). ಶ್ರೀವಿಕ್ರಮನ ಮಗ. ಶ್ರೀವಲ್ಲಭ, ಮನೋವಿನೀತ ಎಂಬುವು ಇವನ ಬಿರುದುಗಳು. ಕಾವೇರಿ ನದಿಗೆ ಕಟ್ಟೆಯನ್ನು ಕಟ್ಟಿ ಪ್ರಸಿದ್ಧನಾದ ಕರಿಕಾಲನ ವಂಶಜನಾದ ಚೋಳರಾಜನೊಬ್ಬನ ಪುತ್ರಿ ಇವನ ತಾಯಿ ಎಂದು ಒಂದು ಶಾಸನದ ಹೇಳಿಕೆ. ಇವನು ವಿಳಂದೆ ಎಂಬಲ್ಲಿ ನಡೆದ ಯುದ್ಧದಲ್ಲಿ ಪಲ್ಲವರನ್ನು ಹಿಮ್ಮೆಟ್ಟಿಸಿದನೆಂದು ಕೆಲವು ಶಾಸನಗಳು ತಿಳಿಸುತ್ತವೆ. ಈತ ಸೋಲಿಸಿದ ಪಲ್ಲವ ದೊರೆ ಪರಮೇಶ್ವರವರ್ಮ ಎಂದೂ ಈ ಯುದ್ಧವನ್ನು ಚಳುಕ್ಯ ಒಂದನೆಯ ವಿಕ್ರಮಾದಿತ್ಯನ ಪರವಾಗಿ ಕೈಕೊಂಡಿದ್ದ ಎಂದೂ ಅಭಿಪ್ರಾಯಗಳಿವೆ. ಭೂವಿಕ್ರಮ ಸು. 625-70ರಲ್ಲಿ ಆಳುತ್ತಿದ್ದ, ಚಳುಕ್ಯ ಪುಲಕೇಶಿಯ ಕಾಲದಲ್ಲಿ ಪಲ್ಲವ ನರಸಿಂಹ ವರ್ಮನೊಡನೆ ವಿಳಂದೆಯಲ್ಲಿ ಸೆಣಸಿದ ಎಂಬ ಊಹೆಯೂ ಇದೆ. ಇವನು ಗಂಗವಂಶದ ಶೂರ ದೊರೆ, ಬಾದಾಮಿಯ ಚಳುಕ್ಯರ ಮಿತ್ರ ಮತ್ತು ಪಲ್ಲವರ ವೈರಿ ಎಂಬ ವಿಷಯವಷ್ಟೇ ಸ್ಪಷ್ಟ. **(ಎಂ.ಎಲ್.ಎಸ್.)**

**ಭೂಸನೂರಮಠ, ಸಂ.ಶಿ.:** 1910- . ಕನ್ನಡದ ಪ್ರಸಿದ್ಧ ವಿದ್ವಾಂಸರು. ಸಂಗಯ್ಯ ಶಿವಮೂರ್ತಯ್ಯ ಭೂಸನೂರಮಠ ಎಂಬುದು ಇವರ ಪೂರ್ಣ ಹೆಸರು. ಹುಟ್ಟಿದ್ದು ರೋಣ ತಾಲ್ಲೂಕಿನ ನಿಡಗುಂದಿಯಲ್ಲಿ. ಆರಂಭದ ವ್ಯಾಸಂಗವನ್ನು ನಿಡಗುಂದಿ, ಗದಗ ಮತ್ತು ಹುಬ್ಬಳ್ಳಿಗಳಲ್ಲಿ ಮುಗಿಸಿ 1931ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗಮಾಡಿ 1935ರಲ್ಲಿ ಬಿ.ಎ. (ಆನರ್ಸ್) ಪದವಿಯನ್ನು ವಿದ್ಯಾರಣ್ಯ ಬಹುಮಾನದೊಂದಿಗೆ ಗಳಿಸಿದರಲ್ಲದೆ, ಕರ್ನಾಟಕ ಕಾಲೇಜಿನ 'ದಕ್ಷಿಣ ಫೆಲೊ' ಕೂಡ ಆದರು. 1937ರಲ್ಲಿ ಎಂ.ಎ. (ಕನ್ನಡ) ಪದವಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೇ ಮೊದಲಿಗರಾಗಿ ತೇರ್ಗಡೆಯಾದರು.

ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದ (1939-42) ಇವರು ಅನಂತರ ಬೆಳಗಾಂವಿಯ ಲಿಂಗರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದರು (1943-66). ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠದಲ್ಲಿ ವೀರಶೈವ ಸಾಹಿತ್ಯ ಮತ್ತು ಧರ್ಮದ ಪ್ರಾಧ್ಯಾಪಕರಾಗಿ (1966-71), ಯು.ಜಿ.ಸಿ. ಪ್ರಾಧ್ಯಾಪಕರಾಗಿ (1971-76) ಸೇವೆಸಲ್ಲಿಸಿದರು.

ವಚನಸಾಹಿತ್ಯದಲ್ಲಿ ವಿಶೇಷ ಪರಿಶ್ರಮ ಪಡೆದಿರುವ ಭೂಸನೂರಮಠರು ಕನ್ನಡ ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆಗಳು ಗಣ್ಯವಾದುವು. ಘನಮಠದ ಶಿವಯೋಗಿಗಳ ಭಕ್ತಿಸುಧಾಸಾರ (1945), ಸಿದ್ಧನಂಜೇಶನ ಗುರುರಾಜ ಚಾರಿತ್ರ (1950), ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯಮ್ಮನವರ ವಚನಗಳು (1950), ಗೌರಾಂಕನ ಮೋಳಿಗೆಯ್ಯನ ಪುರಾಣ (1951), ಅದೃಶ್ಯಕವಿಯ ಪ್ರೌಢರಾಯನ ಕಾವ್ಯ (1957), ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆ (1958), ಮಹಾಲಿಂಗದೇವರ ಏಕೋತ್ತರಶತಸ್ಥಲ (1974)-ಈ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಕರ್ನಾಟಕ ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಗಾಗಿ ವಚನಸಾಹಿತ್ಯ ಸಂಗ್ರಹವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ (1965). ಕಲ್ಲಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ (1956) ಇವರ ಇನ್ನೊಂದು ಸಂಕಲಿತ ಗ್ರಂಥ.

ಶೂನ್ಯ ಸಂಪಾದನೆಯ ಪರಾಮರ್ಶೆ (1969), ಕಲ್ಯಾಣದಿಂದ ಕಾಶ್ಮೀರಕ್ಕೆ (1971)-ಇವು ಇವರ ಸ್ವತಂತ್ರ ಗ್ರಂಥಗಳು. ಸುಮಾರು ಒಂದು ಸಾವಿರ ಪುಟಗಳುಳ್ಳ ಶೂನ್ಯಸಂಪಾದನೆಯ ಪರಾಮರ್ಶೆ ಒಂದು ಮಹದ್ಗ್ರಂಥ. ವೀರಶೈವಧರ್ಮ ಮತ್ತು ದರ್ಶನದ ಒಂದು ಸಮಗ್ರ ವಿವೇಚನೆಯಿರುವ ಈ ಗ್ರಂಥದಲ್ಲಿ ಹಲವಾರು ಪ್ರಾಚ್ಯ ಪಾಶ್ಚಾತ್ಯ ತಾತ್ತ್ವಿಕ ಗ್ರಂಥಗಳ ಸಮೀಕ್ಷೆ ಇದೆಯಲ್ಲದೆ ಆಧುನಿಕ ವೈಜ್ಞಾನಿಕ ವಿಚಾರಗಳನ್ನೂ ಅಳವಡಿಸಿಕೊಳ್ಳಲಾಗಿದೆ. ಈ ಗ್ರಂಥ ಭಾರತೀಯ ತತ್ತ್ವಸಾಹಿತ್ಯಕ್ಕೆ ಕರ್ನಾಟಕ ನೀಡಿರುವ ವಿಶೇಷ ಕೊಡುಗೆ.

ಶೂನ್ಯ ಸಂಪಾದನೆಯನ್ನು ಲಿಪ್ಯಂತರ ಮತ್ತು ಇಂಗ್ಲಿಷ್ ಭಾಷಾಂತರಗಳೊಂದಿಗೆ ಪ್ರಕಟಿಸುವ ಕರ್ನಾಟಕ ವಿಶ್ವವಿದ್ಯಾಲಯದ ಯೋಜನೆಯಲ್ಲಿ ಇವರು ನಾಲ್ಕು ಸಂಪುಟಗಳನ್ನು ಹೊರತಂದಿದ್ದಾರೆ. ಐದನೆಯ ಸಂಪುಟದ ಕಾರ್ಯವನ್ನು ಮುಗಿಸುವ ವೇಳೆಗೆ ತಮ್ಮ ಪ್ರಾಧ್ಯಾಪಕ ಹುದ್ದೆಯಿಂದ ನಿವೃತ್ತರಾದರು. ಈ ಸಂಪುಟಗಳಿಗೆ ಅಮೂಲ್ಯವಾದ



ಪೀಠಿಕೆಯನ್ನೂ ಉಪಯುಕ್ತ ಅನುಬಂಧಗಳನ್ನೂ ಕೊಡಲಾಗಿದೆ. ಶೂನ್ಯ ಸಂಪಾದನೆಯ ಮಹತ್ತ್ವವನ್ನು ಕನ್ನಡೇತರರೂ ಪಾಶ್ಚಾತ್ಯರೂ ಕಂಡುಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗಿದೆ.

ಭೂಸನೂರಮಠರು ಕರ್ನಾಟಕ, ಮುಂಬಯಿ, ಪುಣೆ, ಶಿವಾಜಿ, ಮೈಸೂರು, ಬೆಂಗಳೂರು, ಉಸ್ಮಾನಿಯಾ ಮತ್ತು ಕೇರಳ ವಿಶ್ವವಿದ್ಯಾಲಯಗಳ ಬೋರ್ಡ್ ಆಫ್ ಸ್ಟಡೀಸ್‌ನ ಅಧ್ಯಕ್ಷರಾಗಿ, ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಕಲಾವಿಭಾಗದ ಡೀನ್ ಆಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ಪರಿಷ್ಕೃತ ನಿಘಂಟಿನ ಸಂಪಾದಕ ಸಮಿತಿಯ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದರು.

ಭೂಸನೂರಮಠ ಅವರಿಗೆ 1969ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರ ಶೂನ್ಯಸಂಪಾದನೆಯ ಪರಾಮರ್ಶೆ ಗ್ರಂಥಕ್ಕೆ 1971ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿದೆ. **(ಎಸ್.ಬಿ.)**

**ಭೈರಪ್ಪ, ಎಸ್.ಎಲ್.:** 1934- . ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರು. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇಶಿವರ ಗ್ರಾಮದಲ್ಲಿ 1934 ಜುಲೈ 26ರಂದು ಜನಿಸಿದರು. ಇವರ ತಂದೆ ಲಿಂಗಣ್ಣಯ್ಯ, ತಾಯಿ ಗೌರಮ್ಮ.

ಭೈರಪ್ಪನವರು ತಮ್ಮ ಹುಟ್ಟೂರಿನ ಸುತ್ತಮುತ್ತಿನ ಅನೇಕ ಹಳ್ಳಿಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಮೈಸೂರಿಗೆ ಬಂದು ಶಾರದಾ ವಿಲಾಸ ಪ್ರೌಢಶಾಲೆ ಇತ್ಯಾದಿಗಳಲ್ಲಿ ಓದಿ, ಮಹಾರಾಜ ಕಾಲೇಜಿನಿಂದ ತತ್ತ್ವಶಾಸ್ತ್ರದಲ್ಲಿ ಬಿ.ಎ. (ಆನರ್ಸ್, 1957) ಮತ್ತು ಎಂ.ಎ. (1958) ಪದವಿ ಪಡೆದರು. ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನದೊಂದಿಗೆ ಉತ್ತೀರ್ಣರಾಗಿ, ಎರಡು ಸುವರ್ಣ ಪದಕಗಳನ್ನು ಗಳಿಸಿದರು. ಬರೋಡದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯ ಇವರ ಸತ್ಯ ಮತ್ತು ಸೌಂದರ್ಯ ಎಂಬ ನಿಬಂಧಕ್ಕೆ 1962ರಲ್ಲಿ ಪಿಎಚ್.ಡಿ ಪದವಿ ನೀಡಿದೆ.

ಭೈರಪ್ಪನವರು ಮೊದಲು ಹುಬ್ಬಳಿಯ ಕಾಡುಸಿದ್ದೇಶ್ವರ ಕಾಲೇಜಿನಲ್ಲಿ ತರ್ಕಶಾಸ್ತ್ರ ಮತ್ತು ಮನಶ್ಶಾಸ್ತ್ರದ ಅಧ್ಯಾಪಕರಾಗಿ ಎರಡು ವರ್ಷ ಕೆಲಸಮಾಡಿದರು (1958-60). ಅನಂತರ ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ಆರು ವರ್ಷಗಳ ಕಾಲ ತತ್ತ್ವಶಾಸ್ತ್ರದ ಉಪನ್ಯಾಸಕರಾಗಿದ್ದು (1960-66) ಮುಂದೆ ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ನಾಲ್ಕು ವರ್ಷಗಳ ಕಾಲ ಶಿಕ್ಷಣ ಮೀಮಾಂಸೆಯಲ್ಲಿ ರೀಡರ್ ಆಗಿದ್ದರು (1967-71). ಅನಂತರ ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನಲ್ಲಿ ತತ್ತ್ವಶಾಸ್ತ್ರ ಮತ್ತು ಶಿಕ್ಷಣಶಾಸ್ತ್ರದ ರೀಡರ್ ಆಗಿ, ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದರು.



ಕನ್ನಡದ ಮಹತ್ತ್ವಪೂರ್ಣ ಕಾದಂಬರಿಕಾರರಲ್ಲಿ ಭೈರಪ್ಪನವರೂ ಒಬ್ಬರಾಗಿದ್ದಾರೆ. ಇದುವರೆಗೆ ಇವರು 27 ಕಾದಂಬರಿಗಳನ್ನು ಬರೆದಿದ್ದಾರೆ. ಧರ್ಮಶ್ರೀ (1961), ದೂರಸರಿದರು (1962), ನಿರಾಕರಣ, ಮತದಾನ (1965), ವಂಶವೃಕ್ಷ (1965), ಜಲಪಾತ (1967), ನಾಯಿನೆರಳು (1968), ತಬ್ಬಲಿಯು ನೀನಾದೆ ಮಗನೆ (1968), ಗೃಹಭಂಗ (1970), ಗ್ರಹಣ (1972), ದಾಟು (1973), ಅನ್ವೇಷಣೆ (1976), ಪರ್ವ (1979), ನೆಲೆ (1983), ಸಾಕ್ಷಿ (1986), ಅಂಚು (1990), ತಂತು (1993), ಸಾರ್ಥ (1998), ಮಂದ್ರ ಮೊದಲಾದ ಕಾದಂಬರಿಗಳು ಗಮನಾರ್ಹವಾಗಿವೆ.

ಇವರ ಬಹುಪಾಲು ಕಾದಂಬರಿಗಳ ಕೇಂದ್ರ ಕ್ರಿಯೆ ಮೌಲ್ಯಗಳ ಸಂಘರ್ಷ. ಹಳೆಯ ಮತ್ತು ಹೊಸತರ, ಹಳಬರು ಮತ್ತು ಆಧುನಿಕರ ಭಿನ್ನ ಭಿನ್ನ ನಿಲವುಗಳ ಮೂಲಕ ಪಾತ್ರಗಳ ಅನುಭವದ ಸೀಮಾವಲಯ ತೆರೆದುಕೊಳ್ಳುತ್ತ, ಸನ್ನಿವೇಶಗಳು ರೂಪುಗೊಳ್ಳುತ್ತ, ಕಾದಂಬರಿಗಳು ಬೆಳೆಯುತ್ತ ಹೋಗುತ್ತವೆ. ಹೀಗಾಗಿ ಇವರ ಕಾದಂಬರಿಗಳಲ್ಲಿ ವಿಚಾರವಂತಿಕೆಯ ಹೊಳಹು ಹಿನ್ನೆಲೆಯಾಗಿ ಉದ್ದಕ್ಕೂ ಹರಡಿಕೊಳ್ಳುತ್ತದೆ. ಕಾದಂಬರಿಕಾರರ ನಿಯಂತ್ರಕ ಪ್ರಜ್ಞೆ ಎಲ್ಲ ಕಾದಂಬರಿಗಳಲ್ಲಿಯೂ ಆರ್ಷೇಯ ತತ್ತ್ವಗಳ ಪರ ನಿಲ್ಲುವುದರಿಂದ ಇವರ ಎಲ್ಲ ಕಾದಂಬರಿಗಳ ಹಿಂದೆಯೂ ಒಂದು ನಿರ್ದಿಷ್ಟ ಚಿಂತನದ ಕ್ರಮವಿದೆ.

ಭಾರತೀಯ ಮಾನಸಿಕ ಆವರಣಕ್ಕೆ ಧಾರ್ಮಿಕ ಚೌಕಟ್ಟು ಚರಿತ್ರೆಯುದ್ದಕ್ಕೂ ಬೆಸೆದುಕೊಂಡಿದೆ. ಪಾಶ್ಚಾತ್ಯರಲ್ಲಿ ರೂಪುಗೊಂಡಂತೆ ಧರ್ಮ ಮತ್ತು ಬದುಕು ಭಾರತೀಯನಲ್ಲಿ ಎಂದೂ ಭಿನ್ನವಾಗಿಲ್ಲ. ಭೈರಪ್ಪನವರ ಧರ್ಮಶ್ರೀಯಲ್ಲಿ ಇಂಥ ಸಮಸ್ಯೆಯೊಂದು ಸನ್ನಿವೇಶಗಳ ಹರಹಿನಲ್ಲಿ ಮೂಡಿದೆ. ವೈಯಕ್ತಿಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಧರ್ಮಾಂತರ ಹೊಂದಿದ ವ್ಯಕ್ತಿಯೊಬ್ಬ ಎದುರಿಸಬೇಕಾದ ಸಾಮಾಜಿಕ ಸಮಸ್ಯೆಗಳು ಮಾತ್ರವಲ್ಲ, ವೈಯಕ್ತಿಕ ದ್ವಂದ್ವವೇನೆಂಬುದನ್ನು ಈ ಕಾದಂಬರಿಯಲ್ಲಿ ಕಾದಂಬರಿಕಾರರು ಚಿತ್ರಿಸಿದ್ದಾರೆ. ನಿರ್ದಿಷ್ಟ ಧಾರ್ಮಿಕ ಚೌಕಟ್ಟಿನಲ್ಲಿ ಬೆಳೆದ ವ್ಯಕ್ತಿಗೆ ಅನ್ಯಧರ್ಮವೊಂದು ಹೇಗೆ ಪರಕೀಯವಾಗುತ್ತದೆ, ತನ್ಮೂಲಕ ವ್ಯಕ್ತಿ ತನಗೆ ತಾನೇ ಹೇಗೆ ಪರಕೀಯನಾಗುತ್ತಾನೆ ಎಂಬುದನ್ನು ಧರ್ಮಶ್ರೀ ಹಿಡಿದಿರಿಸಿದೆ.

ಜನ್ಮಾಂತರ ಸಮಸ್ಯೆಯೂ ಭಾರತೀಯ ತಾತ್ತ್ವಿಕ ವಲಯದಲ್ಲಿ ಅಷ್ಟೇ ಗಹನವಾದದ್ದು. ಆಯಾ ವ್ಯಕ್ತಿಯ ಕರ್ಮವಿಶೇಷಕ್ಕನುಗುಣವಾಗಿ ಹುಟ್ಟು ಸಾವುಗಳ ನಿರಂತರ ಚಕ್ರಗತಿಯಲ್ಲಿ ಜನ್ಮಪುನರ್ಜನ್ಮಗಳನ್ನು ಪಡೆಯುತ್ತ ಹೋಗುತ್ತಾನೆ ಎಂಬುದನ್ನು ಹಿಂದುಧರ್ಮ ಪ್ರತಿಪಾದಿಸುತ್ತದೆ. ಹಿಂದಿನ ಜನ್ಮದಲ್ಲಿ ವಿಶ್ವೇಶ್ವರನಾಗಿದ್ದು ಈ ಜನ್ಮದಲ್ಲಿ ಕ್ಷೇತ್ರಪಾಲನಾಗಿ ಹುಟ್ಟಿದ ಮತ್ತು ಪೂರ್ವ ಜನ್ಮದ ನೆನಪನ್ನು ಉಳ್ಳ ಚೇತನವೊಂದು ಉಂಟುಮಾಡುವ ವಿಚಿತ್ರ ಸನ್ನಿವೇಶಗಳನ್ನು ನಾಯಿ ನೆರಳು ಕಾದಂಬರಿ ಚಿತ್ರಿಸುತ್ತದೆ. ಕಾಲಾತೀತವಾದ ಆತ್ಮ, ಕಾಲಕ್ಕೆ ಬದ್ಧವಾದ ದೇಹ ಇವೆರಡರ ಸಮ್ಮಿಲನದ ಮೂಲಕ ಉಂಟಾಗುವ ಪುನರ್ಜನ್ಮ ಸೃಷ್ಟಿಸುವ ಸಂದಿಗ್ಧ ಸನ್ನಿವೇಶಗಳನ್ನೂ ಕಾದಂಬರಿ ಚಿತ್ರಿಸಿದೆ.

ಸಂಸಾರವನ್ನು ನಿರಾಕರಿಸಿ ವ್ಯಕ್ತಿಯು ಸಮಾಜದ ಎಲ್ಲ ಸಂಬಂಧಗಳನ್ನೂ ಕಳಚಿಕೊಂಡು ಒಂಟಿಯಾಗುವ, ವಿರಕ್ತಜೀವನವನ್ನು ಬೋಧಿಸುವ ಭಾರತೀಯ ತತ್ತ್ವದ ಮುಖವೊಂದನ್ನು ವಿಶ್ಲೇಷಿಸುವ ಯತ್ನ ನಿರಾಕರಣ ಕಾದಂಬರಿಯದು. ಈ ಕಾದಂಬರಿಯ ನಾಯಕ ನರಹರಿಯ ವಾಸ್ತವ ಹಾಗೂ ಆದರ್ಶ ಜೀವನದ ನಿರಂತರ ಭ್ರಮಣೆಯೇ ಇಲ್ಲಿನ ಕಥಾವಸ್ತು. ವ್ಯಕ್ತಿ ಹಾಗೂ ಸಮಾಜಕ್ಕಿರುವ ಅಭೇದ್ಯ ಸಂಬಂಧವನ್ನು ಕಾದಂಬರಿ ಪ್ರತಿಪಾದಿಸುತ್ತದೆ.

ತಬ್ಬಲಿಯು ನೀನಾದೆ ಮಗನೆ, ಪಾಶ್ಚಾತ್ಯ ಪೌರ್ವಾತ್ಯ ಸಂಸ್ಕೃತಿಗಳ ಕರ್ಷಣ ಕೇಂದ್ರದಲ್ಲಿ ಒಂಟಿಯಾಗಿ ನಿಲ್ಲುವ ತಪ್ತಚೇತನದ ಚಿತ್ರಣವಾಗಿದೆ. ಗೋವಿನ ಹಾಡಿನ ಆಶಯದ ಚೌಕಟ್ಟಿನಲ್ಲೇ ಸನ್ನಿವೇಶ, ಪಾತ್ರಗಳನ್ನು ಸೃಷ್ಟಿಸಿಕೊಳ್ಳುತ್ತ ಹೋಗುವ ಈ ಕಾದಂಬರಿಯ ಕಾಳಿಂಗೇಗೌಡ ಪುಣ್ಯಕೋಟಿ, ಲಿಡಿಯಾ ಮುಂತಾದ ಹೆಸರುಗಳು ಸಾಂಕೇತಿಕವಾಗುತ್ತವೆ.

ವಂಶನಿಷ್ಠೆ ಹಾಗೂ ಅದಕ್ಕೆ ಧಕ್ಕೆಯೊದಗಬಹುದಾದ ಸಂದರ್ಭದಲ್ಲಿಯ ಮಾನಸಿಕ ಆಂದೋಳನ ವಂಶವೃಕ್ಷದ ಕಾದಂಬರಿಯ ಕೇಂದ್ರಕ್ರಿಯೆಯಾಗಿದೆ. ವಂಶನಿಷ್ಠೆಯನ್ನು ಪ್ರತಿಪಾದಿಸುವ ಶ್ರೀನಿವಾಸ ಶ್ರೋತ್ರಿ ಕಾದಂಬರಿಯ ಕೇಂದ್ರ ಪಾತ್ರವಾಗುತ್ತಾರೆ.

ಭೈರಪ್ಪನವರ ಬಹುಪಾಲು ಕಾದಂಬರಿಗಳು ತಾತ್ತ್ವಿಕ ಸಮಸ್ಯೆಯೊಂದರ ಗರ್ಭದಿಂದಲೇ ರೂಪು ತಾಳುತ್ತವೆ. ಸಮಸ್ಯೆಗಳನ್ನು ಎದುರು ಹಾಕಿಕೊಳ್ಳುತ್ತವೆ. ಬೌದ್ಧಿಕ ಅಳವಡಿಕೆಗಿಂತಲೂ ಜೀವನವನ್ನು ಇದ್ದಂತೆಯೇ ನಿರ್ಲಿಪ್ತವಾಗಿ ಚಿತ್ರಿಸುವ ಕಾದಂಬರಿಗಳಲ್ಲಿ ಮತದಾನ, ಗೃಹಭಂಗ ಮುಖ್ಯವಾಗುತ್ತವೆ. ಗ್ರಾಮೀಣ ಬದುಕಿನ ನೈಜವಿವರಗಳನ್ನು ನಿರುದ್ದೇಶಿತವೋ ಎನ್ನುವಂತೆ ಸಾವಧಾನವಾಗಿ ಚಿತ್ರಿಸುತ್ತ ಹೋಗುವ ಗೃಹಭಂಗ ಈ ದೃಷ್ಟಿಯಿಂದ ಗಮನಾರ್ಹ. ವಿವರಗಳಿಗೆ ತಕ್ಕಂತೆ ಕಾದಂಬರಿಯ ಚಲನಗತಿಯೂ ನಿಧಾನವಾಗುತ್ತದೆ. ಗೃಹಭಂಗ ಕಾದಂಬರಿಯ ಉತ್ತರಾರ್ಧವೆನ್ನುವಂತೆ ಆದರೂ ಸ್ವತಂತ್ರ ವಾಗಿ ನಿಲ್ಲಬಹುದಾದ ಭೈರಪ್ಪನವರ ಇನ್ನೊಂದು ಕಾದಂಬರಿ ಅನ್ವೇಷಣೆ. ಗೃಹಭಂಗದಲ್ಲಿ ಕೇವಲ ಒಂದು ಪಾತ್ರವಾಗಿ ಬರುವ ವಿಶ್ವನಾಥ ಈ ಕಾದಂಬರಿಯ ನಾಯಕ. ಅವನು ಬಿಟ್ಟುಹೋದ ಬದುಕಿನ ಹೆಜ್ಜೆಗಳನ್ನು ಹುಡುಕುತ್ತ ಹೊರಡುವ ಕಂಠಿ ಜೋಯಿಸರಾದಿ ಅನೇಕ ಪಾತ್ರಗಳು ಅಂತರಂಗವೀಕ್ಷಣೆಯಲ್ಲಿ ತೊಡಗಿಕೊಳ್ಳುತ್ತ ವಿಶ್ವನಾಥನ ಜೀವನಚಿತ್ರವನ್ನು ರೇಖಿಸುತ್ತವೆ. ಕಾದಂಬರಿಯ ತಾಂತ್ರಿಕ ನಾವೀನ್ಯವೂ ವಿಶ್ವನಾಥನ ಆಗಂತುಕ ಬಗೆಯ ಬದುಕಿಗೆ ಅನುಗುಣವಾಗಿದೆ.

ಸಮಕಾಲೀನ ರಾಜಕೀಯ ಸಮಸ್ಯೆಯನ್ನು ಮತದಾನ ಎಂಬ ಕಾದಂಬರಿ ವಿಶ್ಲೇಷಿಸುತ್ತದೆ. ಈ ಕಾದಂಬರಿಯ ನಾಯಕ ಡಾಕ್ಟರ್ ಶಿವಪ್ಪ ರಾಜಕೀಯಕ್ಕೆ ಇಳಿದು ಸೋಲನ್ನೊಪ್ಪಿ ಕೊನೆಗೆ ನಿಸ್ವಾರ್ಥ ಸೇವೆಯಿಂದ ಹಳ್ಳಿಯ ಬಡಜನತೆಗಾಗಿ ದುಡಿಯುವುದನ್ನು ಕಾದಂಬರಿ

ಚಿತ್ರಿಸುತ್ತದೆ. ರಾಜಕೀಯಕ್ಕೂ ಬೌದ್ಧಿಕ ಕ್ಷೇತ್ರಕ್ಕೂ ಇರುವ ಅಂತರವನ್ನು ಈ ಕಾದಂಬರಿ ಗುರುತಿಸುತ್ತದೆ.

ದೂರ ಸರಿದರು ಕಾದಂಬರಿಯಲ್ಲಿ ಭಾವನಾತ್ಮಕವಾಗಿ ಸಮೀಪವರ್ತಿಗಳಾದರೂ ಬೌದ್ಧಿಕ ಅಂತರದಿಂದ ಒಂದಾಗಲಾರದ, ವಾದದಲ್ಲಿ ಕಾದು ಸೋಲನ್ನೊಪ್ಪಿದ ವಿವಾಹಪೂರ್ವ ತರುಣ-ತರುಣಿಯರ ಚಿತ್ರಣವಿದೆ, ಜಲಪಾತದಲ್ಲಿ ವಿವಾಹಾನಂತರದ ದಾಂಪತ್ಯವೈಷಮ್ಯ, ಗ್ರಾಮೀಣ ಹಾಗೂ ನಾಗರಿಕ ಜೀವನದ ಸಮಸ್ಯೆಗಳು ಹಾಗೂ ಅಂತರಂಗ-ಬಹಿರಂಗ ಬದುಕಿನ ಸಂಘರ್ಷವನ್ನು ಒಬ್ಬ ಚಿತ್ರಕಲಾವಿದ ಹಾಗೂ ಅವನ ಹಾಡುಗಾರ್ತಿ ಪತ್ನಿಯ ಮೂಲಕ ಚಿತ್ರಿಸಲಾಗಿದೆ.

ಗಂಡು-ಹೆಣ್ಣುಗಳ ಪ್ರಾಕೃತಿಕ ಸೆಳೆತದ ಎದುರು ಮಾನವ ಕಲ್ಪಿತ ಸಂಪ್ರದಾಯ, ಆಚಾರವಿಚಾರ, ನಂಬಿಕೆಗಳು ಗ್ರಹಣ ಕಾದಂಬರಿಯಲ್ಲಿ ಮುಖಾಮುಖಿಯಾಗುತ್ತವೆ. ಮಠದ ಸ್ವಾಮಿಗಳು ಹಾಗೂ ಊರಿನ ಲೇಡಿ ಡಾಕ್ಟರು-ಇವರ ನಡುವಿನ ಆಕರ್ಷಣೆ-ವಿಕರ್ಷಣೆಗಳ ಕಥೆಯನ್ನು ಇದು ಒಳಗೊಂಡಿದೆ.

ದಾಟು ಮುಖ್ಯವಾಗಿ ಭಾರತದಲ್ಲಿ ನಿತ್ಯನಿರಂತರವಾಗಿ ಹರಿದು ಬಂದಿರುವ ಇಂದಿಗೂ ಪ್ರಖರವಾಗಿ ಕಾಡುತ್ತಿರುವ ಜಾತಿಸಮಸ್ಯೆಯನ್ನು ಕುರಿತ ಕಾದಂಬರಿ. ಇದಕ್ಕೆ ಪೂರಕವಾಗಿ ಶ್ರದ್ಧೆ ಸಂಪ್ರದಾಯಗಳು, ಆಚರಣೆಗಳು, ಸಾಮಾಜಿಕ, ಧಾರ್ಮಿಕ, ರಾಜಕೀಯ ಸಮಸ್ಯೆಗಳು, ದೈವಿಕ ನಂಬಿಕೆಗಳು ಕಾದಂಬರಿಯ ಕ್ರಿಯಾವರ್ತುಲದಲ್ಲಿ ಬರುತ್ತವೆ. ಕಾದಂಬರಿಯ ಕೇಂದ್ರ ಪಾತ್ರವಾದ ಸತ್ಯಭಾಮೆಯ ಸುತ್ತ ಉಳಿದ ಪಾತ್ರಗಳು ಅನಾವರಣಗೊಳ್ಳುತ್ತವೆ. ಹರಿಜನ ಸಮಸ್ಯೆ ಈ ಕಾದಂಬರಿಯ ಮುಖ್ಯ ವಿಷಯವಾಗಿದೆ.

ಭೈರಪ್ಪನವರ ಕಾದಂಬರಿ ಪರ್ವ ಒಂದು ಗದ್ಯ ಮಹಾಕಾವ್ಯವೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಇದು ತಮಗೆ ಮರುಹುಟ್ಟು ದೊರಕಿಸಿ ಕೊಟ್ಟಿತು ಎನ್ನುವುದು ಲೇಖಕರ ನಂಬಿಕೆ. ಭಾರತ ಕಥಾ ಪರಂಪರೆಯ ಕವಿಗಳು ನಡೆದಿರುವ ಮಾರ್ಗವನ್ನು ಬಿಟ್ಟು ಇವರು ಇಲ್ಲಿ ಭಿನ್ನಮಾರ್ಗ ಅನುಸರಿಸಿದ್ದಾರೆ. ಪುರಾಣಾಂಶದ ಪ್ರಭಾವಲಯದಿಂದ ಮಹಾಭಾರತ ಕಥೆಯನ್ನು ಬಿಡಿಸಿದ್ದಾರೆ; ಮಾನವ ನೆಲೆಯಲ್ಲಿ ಚಿತ್ರಿಸಿದ್ದಾರೆ. ಸ್ತ್ರೀಸಂವೇದನೆ ಮತ್ತು ಸ್ತ್ರೀಜಾಗೃತಿ ಸೂಕ್ಷ್ಮವಾಗಿ ಚಿತ್ರಿತವಾಗಿವೆ. ಕುಂತಿ, ಮಾದ್ರಿ ಗಾಂಧಾರಿ, ದ್ರೌಪದಿ-ಇವು ಈ ದೃಷ್ಟಿಯಿಂದ ವಿಶಿಷ್ಟ ಪಾತ್ರಗಳು. ಇದು ಬಹಳ ಚರ್ಚೆಗೆ ಒಳಗಾದ ಕೃತಿ. ಇಂಗ್ಲಿಷ್‍ಗೆ ಅನುವಾದಿತವಾಗಿದೆ.

ನೆಲೆ ಕಾದಂಬರಿಯಲ್ಲಿ ಸತ್ತ ಅನಂತರದ ಸ್ಥಿತಿಗತಿಯ ಚಿತ್ರಣವಿದೆ. ಸಾಕ್ಷಿ ಪುರಾಣ ಮತ್ತು ಇಂದ್ರಿಯದ ವಾಸ್ತವ ಜಗತ್ತು ಇವನು ಜೋಡಿಸಿ ಮನುಷ್ಯನ ನೀತಿಯ ಮೂಲಗಳನ್ನು ಶೋಧಿಸುವ ಆಕಾಂಕ್ಷೆ ಉಳ್ಳ ಕೃತಿ. ತೆಂಗಿನ ಸೀಮೆಯ ಜನಜೀವನ, ಕಾಮ ಇದರ ಕೇಂದ್ರಪ್ರಜ್ಞೆ. ಅಂಚು ಕಾದಂಬರಿಯಲ್ಲಿ ಜೀವನ ಪ್ರೀತಿ ಮತ್ತು ಸಾವಿನ ಪ್ರಪಾತದ ಅಂಚಿನಲ್ಲಿರುವ ಮಹಿಳೆಯ ಚಿತ್ರವಿದೆ. ಇದರ 'ತಂತ್ರ' ಹೊಸದು. 'ತಂತು' ಕಾದಂಬರಿಯಲ್ಲಿ ಸ್ವಾತಂತ್ರೋತ್ತರ ಭಾರತದ ಜೀವನಾಡಿಯ ಮಿಡಿತವಿದೆ. 'ಸಾರ್ಥ' ಎಂಟನೆಯ ಶತಮಾನದ ವಿದ್ಯಮಾನಗಳನ್ನು ಕುರಿತದ್ದು.

ಭೈರಪ್ಪನವರ ಕೆಲವು ಕಾದಂಬರಿಗಳು ಭಾರತದ ಇತರ ಭಾಷೆಗಳಿಗೆ ಅನುವಾದಗೊಂಡಿವೆ. ವಂಶವೃಕ್ಷ ಹಿಂದೀ ಹಾಗೂ ತೆಲುಗು ಭಾಷೆಗಳಿಗೆ ಅನುವಾದವಾಗಿದೆ. ನಾಯಿನೆರಳು ಹಿಂದಿಗೆ ಅನುವಾದವಾಗಿದೆ. ಇವರ ಗೃಹಭಂಗ ಕಾದಂಬರಿಯನ್ನು ನ್ಯಾಷನಲ್ ಬುಕ್ ಟ್ರಸ್ಟ್‍ನವರು ಭಾರತದ ಎಲ್ಲ ಅಧಿಕೃತ ಭಾಷೆಗಳಲ್ಲಿಯೂ ಅನುವಾದಿಸಿ ಪ್ರಕಟಿಸಿದ್ದಾರೆ. ವಂಶವೃಕ್ಷ, ಪರ್ವ, ಸಾಕ್ಷಿ ಇಂಗ್ಲಿಷಿಗೆ ಅನುವಾದವಾಗಿವೆ. ಇವರ ಕೃತಿಗಳ ಅನುವಾದ ಕ್ರಿಯೆ ನಡೆಯುತ್ತಲೇ ಇದೆ. ಭೈರಪ್ಪನವರ ಕಾದಂಬರಿಗಳನ್ನು ಕುರಿತಂತೆ ಕನ್ನಡದ ಅನೇಕ ಪ್ರಮುಖ ಸಾಹಿತ್ಯಕ ಪತ್ರಿಕೆಗಳಲ್ಲಿ ವಿಪುಲವಾದ ವಿಮರ್ಶೆ ಬಂದಿದೆ. ಇವರ ಸಮಗ್ರ ಕಾದಂಬರಿಗಳನ್ನು ಕುರಿತಂತೆ ಸಹಸ್ಪಂದನ ಎಂಬ ವಿಮರ್ಶಾಲೇಖನಗಳ ಸಂಕಲನವೊಂದು ಪ್ರಕಟವಾಗಿದೆ (1979).

ಭೈರಪ್ಪನವರು ಕಾದಂಬರಿಕಾರರಷ್ಟೇ ಮಾತ್ರವಲ್ಲ; ಸೌಂದರ್ಯತತ್ತ್ವ ಮೀಮಾಂಸಕರೂ ಆಗಿದ್ದಾರೆ. ಇವರ ಸತ್ಯ ಮತ್ತು ಸೌಂದರ್ಯ, ಸೌಂದರ್ಯ ಮೀಮಾಂಸೆಯ ದೃಷ್ಟಿಯಿಂದ ಒಂದು ಗಮನಾರ್ಹ ಗ್ರಂಥ. ಕಥೆ ಮತ್ತು ಕಥಾ ವಸ್ತು, ಸಾಹಿತ್ಯ ಮತ್ತು ಪ್ರತೀಕ-ಇವು ಸಾಹಿತ್ಯಕ ಸಮಸ್ಯೆಗಳನ್ನು ಕುರಿತು ಚರ್ಚಿಸುವ ಪುಸ್ತಕಗಳು.

ಭೈರಪ್ಪನವರು ಇಂಗ್ಲಿಷಿನಲ್ಲಿಯೂ ಕೃತಿರಚನೆ ಮಾಡಿದ್ದಾರೆ. ಸತ್ಯ ಮತ್ತು ಸೌಂದರ್ಯ, ಭಾರತೀಯ ಶಿಕ್ಷಣದಲ್ಲಿ ಮೌಲ್ಯಗಳ ಸ್ಥಾನ, ವ್ಯಕ್ತಿತ್ವ ಮತ್ತು ಚಾರಿತ್ರ್ಯವಿಕಾಸದಲ್ಲಿ ತತ್ತ್ವಶಾಸ್ತ್ರ, ವಿದ್ಯಾಭ್ಯಾಸದಲ್ಲಿ ಸಮಾನಾವಕಾಶ-ಇವು ಇವರ ಇಂಗ್ಲಿಷ್ ಕೃತಿಗಳು.

ಭೈರಪ್ಪನವರ ಹದಿಮೂರು ಸಂಶೋಧನ ಲೇಖನಗಳು ಫಿಲಾಸಫಿಕಲ್ ಕ್ವಾರ್ಟರ್ಲಿ, ದರ್ಶನ, ಮರಾಠಿ ವಿಶ್ವಕೋಶ ಮುಂತಾದ ಕಡೆಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಬಹುಪಾಲು ತತ್ತ್ವಶಾಸ್ತ್ರ, ಸೌಂದರ್ಯ ತತ್ತ್ವಶಾಸ್ತ್ರ ಹಾಗೂ ಶಿಕ್ಷಣತತ್ತ್ವಶಾಸ್ತ್ರಕ್ಕೆ ಸಂಬಂಧಿಸಿವೆ.

ಭೈರಪ್ಪನವರು ತಾತ್ತ್ವಿಕ ಚಿಂತನೆಗಳನ್ನು ಕಾದಂಬರಿಯಂಥ ಸೃಜನಾತ್ಮಕ ಪ್ರಕಾರದಲ್ಲಿ ತೊಡಗಿಸಿದ ಆಧುನಿಕ ಲೇಖಕರಲ್ಲಿ ಪ್ರಮುಖರಾದವರು. ಇವರು ಅನೇಕ ವಿಷಯಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದಾರೆ. ಇವರಿಗೆ ಅನೇಕ ಸನ್ಮಾನಗಳು ಲಭಿಸಿವೆ. ಇವರ ವಂಶವೃಕ್ಷ ಕಾದಂಬರಿಗೆ 1966 ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. 1975ರಲ್ಲಿ ದಾಟು ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿವೆ. 'ಸಾಕ್ಷಿ' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ (1987). ಇವರಿಗೆ ಮಾಸ್ತಿ ಪ್ರಶಸ್ತಿ, ಕಲ್ಕತ್ತೆಯ ಭಾರತೀಯ ಭಾಷಾ ಪ್ರಶಸ್ತಿಗಳೂ ದೊರೆತಿವೆ. ಇವರ ವಂಶವೃಕ್ಷ ಹಾಗೂ ತಬ್ಬಲಿಯು ನೀನಾದೆ ಮಗನೆ, ನಾಯಿ ನೆರಳು ಚಲನಚಿತ್ರಗಳಾಗಿವೆ. ಭೈರಪ್ಪನವರು 2002ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಭಿತ್ತಿ (1996) ಭೈರಪ್ಪನವರ ಆತ್ಮಕಥೆ. ಆವರಣ ಇತ್ತೀಚಿನ ಕಾದಂಬರಿ (2007) (ಎಂ.ಎಸ್.ಎನ್.)

**ಭೈರರಸರು:** 12-17ನೆಯ ಶತಮಾನಗಳ ಅವಧಿಯಲ್ಲಿ ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಭಾಗಗಳ ಮೇಲೆ ಒಡೆತನ ನಡೆಸಿದ ಅರಸರು. ಇವರು ಮೂಲತಃ ಸಾಂತರ ವಂಶಕ್ಕೆ ಸೇರಿದವರು. 12ನೆಯ ಶತಮಾನದಲ್ಲಿ ಆ ವಂಶ ವಿಭಜನೆಗೊಂಡಾಗ ಇವರ ಶಾಖೆ ಉದ್ಭವವಾಯಿತು ಎನ್ನಲಾಗಿದೆ. ಇವರಿಗೆ ಪಟ್ಟಿ ಪೊಂಬುಚ್ಚಪುರವರೇ ಶ್ವರಾಧೀಶ್ವರ, ಪದ್ಮಾವತೀಲಬ್ಧವರಪ್ರಸಾದ ಮುಂತಾದ ಸಾಂತರ ಅರಸರು ಧರಿಸುತ್ತಿದ್ದ ಬಿರುದುಗಳಿದ್ದುವು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದ ಕೆರೆವಸೆ ಇವರ ರಾಜಧಾನಿಗಳಾಗಿದ್ದವು. ಇವರನ್ನು ಕಳಸ-ಕಾರ್ಕಳದ ಅಧಿಪರೆಂದೂ ಕರೆಯುತ್ತಾರೆ.

ಈ ವಂಶದ ಮೂಲಪುರುಷ ನನ್ನಿಶಾಂತನೆಂದು ಶಾಸನವೊಂದರಲ್ಲಿ ಹೇಳಿದೆ. 1154ರಲ್ಲಿ ಶಾಂತಮರುದೇವನೆಂಬಾತ ಆಳುತ್ತಿದ್ದ. ಅನಂತರ ಜಾಕಲದೇವಿ, ಕಾಳಲಮಹಾದೇವಿ, ಬಾಲದೇವ, ವೀರಪಾಂಡ್ಯ ಮೊದಲಾದವರು ರಾಜ್ಯವಾಳಿದರು. ಹೊಯ್ಸಳರ ಪ್ರಾಬಲ್ಯದಿಂದಾಗಿ ಇವರು ತಮ್ಮ ರಾಜಧಾನಿಯನ್ನು ಕಳಸದಿಂದ ಕೆಳಗಿನ ಕಾರ್ಕಳದ ಕೆರವಸೆಗೆ ಬದಲಾಯಿಸಿಕೊಳ್ಳಬೇಕಾಯಿತು. ವೀರಪಾಂಡ್ಯ ಎಂಬಾತ 1432ರಲ್ಲಿ ತನ್ನ ಗುರು ಲಲಿತಕೀರ್ತಿಯ ಆದೇಶದಂತೆ ಕಾರ್ಕಳದಲ್ಲಿ ಗೊಮ್ಮಟ ವಿಗ್ರಹವನ್ನು ಪ್ರತಿಷ್ಠಾಪಿಸಿ ಅದರ ಮುಂದೆ ಬ್ರಹ್ಮಸ್ತಂಭವನ್ನು ಸ್ಥಾಪಿಸಿ ಅಭಿನವಚಾಮುಂಡರಾಯ ಎಂಬ ಬಿರುದನ್ನು ಧರಿಸಿದ.

ಜ್ಞಾನಚಂದ್ರಾಭ್ಯುದಯ, ಕಾಮನ ಕಥೆ ಮುಂತಾದ ಕನ್ನಡ ಕಾವ್ಯಗಳನ್ನು ರಚಿಸಿದ ಕಲ್ಯಾಣಕೀರ್ತಿ ಈತನಿಂದ ಸನ್ಮಾನಿತನಾದ ಜೈನಯತಿ. ಕಲ್ಯಾಣ ಕೀರ್ತಿಯ ಶಿಷ್ಯ ಬಾಹುಬಲಿ ನಾಗಕುಮಾರಚರಿತೆಯನ್ನು ಕಾರ್ಕಳದಲ್ಲೇ ಬರೆದದ್ದು. ಅದನ್ನು ಅವನ ಮಗ ವರ್ಧಮಾನ ಪೂರ್ಣಗೊಳಿಸಿದ. ಮುಂದೆ ಅಧಿಕಾರಕ್ಕೆ ಬಂದ ಇಮ್ಮಡಿ ಪಾಂಡ್ಯನ ಅಳಿಯ ಪಾಂಡ್ಯದೇವ ಒಡೆಯ 1557ರಲ್ಲಿ ಕಾರ್ಕಳದ ನೇಮೀಶ್ವರ ಬಸದಿಯ ಮುಂದೆ ಮಾನಸ್ತಂಭವನ್ನು ಮಾಡಿಸಿದ. ಈತ ಬಂಗರಸರೊಡನೆ ಪರಸ್ಪರ ಸಹಾಯಕವಾದ ಶಾಂತಿ ಒಪ್ಪಂದವೊಂದನ್ನು ಮಾಡಿಕೊಂಡ. ಅನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಭೈರವನಿಗೆ ಸಂಗೀತ ಸಾಹಿತ್ಯಗಳಲ್ಲಿ ವಿಶೇಷ ಆಸಕ್ತಿ ಇತ್ತು.ವಿಜಯನಗರದ ಅರಸ ಕೃಷ್ಣದೇವರಾಯ 1516 ರಲ್ಲಿ ತುಳನಾಡಿಗೆ ದಂಡೆತ್ತಿಬಂದು ಹಿಂದಿರುಗಿದಾಗ ಭೈರರಸ ತನ್ನ ಹರಕೆಯ ಪ್ರಕಾರ ಕಳಸದ ಕಳಸನಾಥ ದೇವಾಲಯ ಜೀರ್ಣೋದ್ಧಾರ ಮಾಡಿಸಿದ. ಅವನ ಅನಂತರ ಅಧಿಕಾರಕ್ಕೆ ಬಂದ ಮೂರನೆಯ ವೀರಪಾಂಡ್ಯ ಕಾರ್ಕಳದ ಪಾಂಡ್ಯನಗರಿಯಲ್ಲಿ 1545ರಲ್ಲಿ ಚತುರ್ಮುಖ ಬಸದಿಯನ್ನು ಕಟ್ಟಿಸಿದ. ವರ್ಧಮಾನ ಕವಿ ಉಲ್ಲೇಖಿಸುವ ಪಾಂಡ್ಯನೃಪ ಇವನೇ. 1573ರಲ್ಲಿ ಕಾಣಿಸುವ ನಾಲ್ಕನೆಯ ಭೈರರಸ ಚಿತ್ರದುರ್ಗ ಜಿಲ್ಲೆಯ ಹರಿಹರದವರೆಗೂ ಒಡೆತನ ಹೊಂದಿದ್ದ. ಈತ 1586ರಲ್ಲಿ ಕಾರ್ಕಳದ ಪ್ರಸಿದ್ಧ ಚತುರ್ಮುಖ ಬಸದಿಯನ್ನು ಕಟ್ಟಿಸಿದ. ಕಾರ್ಕಳದ ಅನಂತಶಯನ ದೇವಾಲಯವನ್ನೂ ಇವನೇ ಕಟ್ಟಿಸಿದನೆನ್ನಲಾಗಿದೆ. ನಾಲ್ಕನೆಯ ವೀರಪಾಂಡ್ಯ ಮತ್ತು ಐದನೆಯ ಭೈರವರು ಈ ವಂಶದ ಕೊನೆಯ ಅರಸರು. ನಮಗೆ ದೊರೆಯುವ ಇವರ ಶಾಸನಗಳ ಕೊನೆಯ ಕಾಲ ಕ್ರಮವಾಗಿ 1592 ಹಾಗೂ 1610. ಕಾರ್ಕಳದ ಗೊಮ್ಮಟೇಶ್ವರಚರಿತ್ರೆ ಎಂಬ ಕಾವ್ಯದ ಕರ್ತೃ ಚಂದ್ರಮನು ಭೈರರಸನ ಆಸ್ಥಾನದಲ್ಲಿದ್ದ (1646).

**ಭೈರಸರ ವಂಶಾವಳಿ**




ವಿಜಯನಗರದ ಪತನಾನಂತರ ಕೆಳದಿಯ ಅರಸರಿಗೂ ಇವರಿಗೂ ತಿಕ್ಕಾಟ ಆರಂಭವಾಗಿ ಅಂತಿಮವಾಗಿ ಕೆಳದಿಯರಸರು ಇವರ ಮೇಲೆ ಜಯಗಳಿಸಿ ಇವರನ್ನು ಸುಮಾರು 1650ರ ಹೊತ್ತಿಗೆ ಪದಚ್ಯುತಿಗೊಳಿಸಿದರು.

ಭೈರರಸರು ಜೈನಧರ್ಮೀಯರಾದರೂ ಕಳಸನಾಥನ ಭಕ್ತರಾಗಿದ್ದರು. ಇವರ ಕಾಲದಲ್ಲಿ ಸ್ತ್ರೀಯರೂ ಕೆಲವು ಪ್ರದೇಶಗಳನ್ನಾಳುತ್ತಿದ್ದುದುಂಟು. ನಾಲ್ಕನೆಯ ಭೈರವನ ಸೋದರಿ ಕಾಳಲದೇವಿ ಎಂಬವಳು ಬಗ್ಗುಂಜಿ ಸೀಮೆಯನ್ನಾಳುತ್ತಿದ್ದಳು. (ಎಚ್.ಎಂ.ಎನ್.ಆರ್.)

**ಭೈರವಿ ಕೆಂಪೇಗೌಡ:** ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಪ್ರಸಿದ್ಧ ಸಂಗೀತಗಾರರು. ಇವರ ಜನನ ಮರಣಗಳ ಬಗ್ಗೆ ಯಾವ ಖಚಿತ ವಿವರವೂ ತಿಳಿಯದು. ಭೈರವಿ ರಾಗವನ್ನು ಆಲಾಪನೆ ಮಾಡುವುದರಲ್ಲಿಯೂ ಆ ರಾಗದಲ್ಲಿ ಪಲ್ಲವಿ ಮತ್ತು ಕೀರ್ತನೆಗಳನ್ನು ಹಾಡುವುದರಲ್ಲಿಯೂ ಅದ್ವಿತೀಯರಾಗಿದ್ದುದರಿಂದ ಇವರಿಗೆ ಭೈರವಿ ಕೆಂಪೇಗೌಡರು ಎಂದೇ ಹೆಸರಾಯಿತು. ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಬೇವೂರು ಗೌಡರ ಜನ್ಮಸ್ಥಳ. ಅವರದು ಅಪ್ಪಟ ಬೇಸಾಯಗಾರ ಕುಟುಂಬವಾದ್ದರಿಂದ ಕೆಂಪೇಗೌಡರಿಗೆ ಸಂಗೀತ ದೈವದತ್ತ ಕಲೆಯಾಗಿ ಬಂದಂತೆ ಕಾಣುತ್ತದೆ. ಪ್ರಾರಂಭದಲ್ಲಿ ಹಳ್ಳಿಯ ಹಾಡುಗಳನ್ನು ಇವರು ರಾಗವಾಗಿ ಹಾಡುತ್ತಿದ್ದುದುಂಟು. ಪ್ರಾಪ್ತ ವಯಸ್ಸಿನವರಾದ ತರುವಾಯ ಗೌಡರು ಮೈಸೂರಿಗೆ ಬಂದು ಅನೇಕ ಪ್ರಸಿದ್ಧ ಸಂಗೀತಗಾರರನ್ನು ಕಂಡು ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸುವಂತೆ ಕೇಳಿದರೆಂದೂ ಶೂದ್ರರಾಗಿದ್ದರಿಂದ ಇವರಿಗೆ ಪಾಠ ಹೇಳಲು ಯಾರೂ ಒಪ್ಪಲಿಲ್ಲವೆಂದೂ ತಿಳಿದುಬರುತ್ತದೆ. ಕಡೆಗೆ ಅಭಿಮಾನಿಯೊಬ್ಬರ ಸಲಹೆಯ ಮೇರೆಗೆ ಗೌಡರು ತಮಿಳುನಾಡಿನ ಕೊಯಮತ್ತೂರಿಗೆ ಪ್ರಯಾಣಮಾಡಿ ಅಲ್ಲಿದ್ದ ತಮ್ಮ ಬಂಧುಗಳೊಡನೆ ಸಮಾಲೋಚನೆ ನಡೆಸಿ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಶಿಷ್ಯರಾದರು.

ತ್ಯಾಗರಾಜರ ಜನ್ಮಸ್ಥಳವಾದ ತಿರುವಾರಿಯೂರಿನಲ್ಲಿ ಪಟ್ಣಂ ಅವರಂಥ ಗುರುಗಳು ದೊರೆತದ್ದು ಕೆಂಪೇಗೌಡರ ಭಾಗ್ಯ. ಗೌಡರ ಜೊತೆಯಲ್ಲಿಯೇ ವಾಸುದೇವಾಚಾರ್ಯರೂ ಅಯ್ಯರ್ ಅವರಲ್ಲಿ ಸಂಗೀತ ಕಲಿತರೆಂದೂ ಅನಂತರ ಚಾಮರಾಜ ಒಡೆಯರ ಆಳ್ವಿಕೆಯ ಕಡೆಯ ದಿನಗಳಲ್ಲಿ ಆಸ್ಥಾನ ವಿದ್ವಾಂಸರಾಗಿ ಅರಮನೆ ಸೇರಿದರೆಂದೂ ತಿಳಿದುಬರುತ್ತದೆ. ಶಿಷ್ಯನ ಪಾತ್ರಾಪಾತ್ರತೆಯನ್ನು ತಿಳಿಯುವ ಸಲುವಾಗಿ ಗುರುಗಳು ಗೌಡರಿಗೆ ತಮ್ಮ ಹಸು ಕಾಯುವ ಕೆಲಸ ವಹಿಸಿದರಂತೆ. ಸದಾ ಘನವಿದ್ವಾಂಸರಿಂದ ತುಂಬಿರುತ್ತಿದ್ದ ಗುರುಗೃಹದಲ್ಲಿ ಅಪೂರ್ವ ರಾಗಸಂಯೋಜನೆ, ಚರ್ಚೆ ಮತ್ತು ಕಛೇರಿಗಳು ನಿರಂತರವಾಗಿ ನಡೆಯುತ್ತಿದ್ದುವಾದ್ದರಿಂದ ಈ ಎಲ್ಲವನ್ನೂ ಹೊರನಿಂತು ಕೇಳುವ ಅವಕಾಶ ಗೌಡರಿಗೆ ದೊರೆತುದೊಂದು ಅಪೂರ್ವ ಸಂಗತಿ. ಇದನ್ನು ಇವರು ತಮ್ಮ ಭಾಗ್ಯವೆಂದೇ ತಿಳಿದರಂತೆ.

ಒಂದು ದಿನ ರಾತ್ರಿ ಅಯ್ಯರ್ ಅವರ ಮಹಡಿಯಲ್ಲಿ ದೊಡ್ಡ ದೊಡ್ಡ ಸಂಗೀತಗಾರರೆಲ್ಲ ಸೇರಿದ್ದರು. ಅಯ್ಯರ್ ಅವರು ತಮಗೆ ಬಹು ಪ್ರಿಯವಾದ ಭೈರವಿಯನ್ನು ಆರಂಭಿಸಿದ್ದರು. ಅದು ಎಷ್ಟು ಹೊತ್ತಾದರೂ ಮುಗಿಯುವಂತಿರಲಿಲ್ಲ. ರಾತ್ರಿ ಊಟದ ಸಮಯ ಮೀರುತ್ತಿತ್ತು. ಊಟ ಮಾಡಿ ಅನಂತರ ಕಛೇರಿಯನ್ನು ಮುಂದುವರಿಸುವಂತೆ ಗುರುಗಳಿಗೆ ಸೂಚನೆ ಕೊಡುವಂತೆ ಗುರುಪತ್ನಿ ಗೌಡರಿಗೆ ಬಿನ್ನಯಿಸಿಕೊಂಡರಂತೆ. ಗೌಡರಾದರೋ ಹೆದರುತ್ತ ಸಮಯ ಕಾದು ಗುರುಗಳ ಕಿವಿಯಲ್ಲಿ ವಿಷಯವನ್ನು ಹಾಕಿದರಲ್ಲದೆ ಗುರುಗಳು ಊಟ ಮುಗಿಸಿ ಬರುವವರೆಗೆ ಕಛೇರಿ ಮುಂದುವರಿಸುವುದಾಗಿಯೂ ಹೇಳಿದರು. ಈ ಮಾತುಗಳನ್ನು

ಕೇಳಿದ ಗುರುಗಳಿಗೆ ಅಸಾಧ್ಯ ಕೋಪ ಬಂತಾದರೂ ಶಿಷ್ಯನನ್ನು ಪರೀಕ್ಷಿಸಿಯೇ ಬಿಡುವ ತೀರ್ಮಾನಕ್ಕೆ ಬಂದು ಶಿಷ್ಯನಿಗೆ ಕಛೇರಿ ವಹಿಸಿ ತಾವು ಊಟಕ್ಕೆ ಎದ್ದರು. ಗೌಡರು ಕಛೇರಿಯನ್ನು ಮುಂದುವರೆಸಿದರು. ಶಿಷ್ಯನ ಕಛೇರಿ ಮುಗಿಯುವ ಹೊತ್ತಿಗೆ ಗುರುಗಳಿಗೆ ಬಹಳ ಸಂತೋಷವಾಯಿತು. ತಾವು ಹೊದ್ದಿದ್ದ ಜರತಾರಿಯ ಶಾಲನ್ನೇ ತಮ್ಮ ಶಿಷ್ಯನಿಗೆ ಅದೇ ವೇದಿಕೆಯ ಮೇಲೆ ಹೊದಿಸಿ ಸನ್ಮಾನಿಸಿ ಅಪ್ಪಿಕೊಂಡರಂತೆ. ಅಲ್ಲಿಂದ ಮುಂದೆ ಗೌಡರಿಗೆ ಕ್ರಮವಾಗಿ ಪಾಠ ಆರಂಭವಾಯಿತು. ಗೌಡರಿಗೆ ಗುರುಕರುಣೆ ಮತ್ತು ಆಶೀರ್ವಾದಗಳು ಸಂಪೂರ್ಣವಾಗಿದ್ದುವು. ದೈವದತ್ತವಾಗಿ ಬಂದ ಅಪಾರ ಪ್ರತಿಭೆಯಿತ್ತು. 'ಕೆಂಪೇಗೌಡ ಭೈರವಿಯಲ್ಲಿ ನಿನ್ನ ಮೀರಿಸುವವರು ಮತ್ತೊಬ್ಬರಿಲ್ಲ, ಮತ್ತೆ ಬರಲಾರರು' ಎಂದು ಗುರುಗಳೇ ಹೊಗಳಿದ್ದುಂಟು. ಇದರಿಂದ ಎಂದೂ ಕೆಂಪೇಗೌಡರು ಅಹಂಕಾರಪಟ್ಟವರಲ್ಲ. ಇವರದು ತುಂಬ ಸರಳ ಮತ್ತು ವಿನೀತ ವ್ಯಕ್ತಿತ್ವವೆಂದು ಇವರನ್ನು ಕಂಡವರೆಲ್ಲ ಹೇಳಿದ್ದಾರೆ. ಇಷ್ಟಾದರೂ ಇವರ ಜೀವನ ಮಾತ್ರ ಇವರು ಸಂಗೀತದಲ್ಲಿ ಮೇಲೇರಿದಂತೆಲ್ಲ ದುರಂತದತ್ತ ಜರಗುತಿದ್ದಂತೆ ಕಂಡುಬರುತ್ತದೆ.

ಗೌಡರು ಆಗಿನ ಕಾಲಪದ್ಧತಿಯಂತೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗಿದ್ದರು. ಸಂಗೀತದ ಅಭ್ಯಾಸಕ್ಕೆ ಹೊರಡುವ ಕಾಲಕ್ಕೆ ಇವರಿಗೆ ಒಂದು ಗಂಡು ಮಗು ಇತ್ತು. ಗೌಡರು ತಿರುವಾಯೂರಿನಲ್ಲಿ ಸಂಗೀತಾಭ್ಯಾಸವನ್ನು ಭರದಿಂದ ನಡೆಸಿದ್ದ ಕಾಲದಲ್ಲಿಯೇ ಇವರ ಪತ್ನಿ ತಮ್ಮ ಏಕಮಾತ್ರ ಪುತ್ರನನ್ನು ಬಿಟ್ಟು ಅಕಾಲಮರಣಕ್ಕೆ ತುತ್ತಾದರು. ಈ ಘಟನೆ ಕೆಂಪೇಗೌಡರ ಬದುಕಿನ ಮೇಲೆ ಮಹತ್ತರವಾದ ಪರಿಣಾಮ ವನ್ನುಂಟು ಮಾಡಿತು. ಹೆಂಡತಿಯ ಮುಖ ನೋಡಲು ಕಾತರರಾಗಿ ಊರಿಗೆ ಹಿಂದಿರುಗಿದ ಗೌಡರು ಕೆಲವು ದಿನಗಳ ಕಾಲ ಮಗುವಿನೊಂದಿಗೆ ತಮ್ಮ ಹಳ್ಳಿಯಲ್ಲಿಯೇ ಇದ್ದುಬಿಟ್ಟರು.

ಈ ಹೊತ್ತಿಗಾಗಲೇ ಗೌಡರ ಕೀರ್ತಿ ಕನ್ನಡ ನಾಡಿಗೆಲ್ಲ ಹರಡಿತ್ತು. ಇವರಿಗೆ ಅರಮನೆಯಿಂದ ಆಹ್ವಾನ ಬಂತು. ದುಃಖಭಾರದಲ್ಲಿದ್ದ ಗೌಡರು ಅದನ್ನು ನಿರಾಕರಿಸಲು ಯೋಚಿಸಿದ್ದರಂತೆ. ಆದರೆ ಹಿರಿಯರನೇಕರು ಅರಮನೆಯ ಕರೆಯನ್ನು ನಿರಾಕರಿಸಬಾರದೆಂದೂ ದುಃಖವನ್ನು ಮರೆಯಲೂ ಸಂಗೀತವನ್ನು ಅಭಿವೃದ್ಧಿಪಡಿಸಿಕೊಳ್ಳಲೂ ಇದೊಂದು ಒಳ್ಳೆಯ ಅವಕಾಶವೆಂದೂ ಒತ್ತಾಯಿಸಿದುದರಿಂದ ಗೌಡರು ಅರಮನೆಯ ಕರೆಯನ್ನು ಒಪ್ಪಿ ಮೈಸೂರಿಗೆ ಬಂದರು. ಪ್ರಭುಗಳ ಎದುರಿಗೆ ಕೆಂಪೇಗೌಡರ ಕಛೇರಿ ನಡೆಯಿತು. ಗೌಡರ ಸಂಗೀತವನ್ನು ಬಹಳ ಮೆಚ್ಚಿಕೊಂಡ ಪ್ರಭುಗಳು ಇವರನ್ನು ಆಸ್ಥಾನವಿದ್ವಾಂಸರನ್ನಾಗಿ ನೇಮಿಸಿಕೊಂಡು ಸತ್ಕರಿಸಿದರು. ಅರಮನೆಯಲ್ಲಿ ಗೌಡರ ಕೀರ್ತಿ ಬೆಳೆಯತೊಡಗಿತು. ಹಿಂದುಳಿದ ವರ್ಗದವರ ಬಗ್ಗೆ ಅಪಾರ ಕರುಣೆಯಿದ್ದ ಯುವರಾಜ ಕಂಠೀರವ ನರಸರಾಜ ಒಡೆಯರು ಕೆಂಪೇಗೌಡರೇ ಆಸ್ಥಾನದ ಮುಖ್ಯ ವಿದ್ವಾಂಸರಾಗಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರಂತೆ. ಈ ವಿಚಾರ ಕೇಳಿದ ಅನೇಕ ಪಟ್ಟಭದ್ರ ಹಿತಾಸಕ್ತ ಆಸ್ಥಾನ ವಿದ್ವಾಂಸರು ಗೌಡರ ಬಗ್ಗೆ ಅಸೂಯೆಯ ಕೆಂಡ ಕಾರತೊಡಗಿದರು. ಅಷ್ಟರಲ್ಲಿ ಗೌಡರ ಬದುಕಿನ ಏಕಮಾತ್ರ ಆಶೆಯಾಗಿದ್ದ ಇವರ ಮಗ ತೀರಿಕೊಂಡನಂತರ ಗೌಡರ ಬದುಕು ಶೂನ್ಯಮಯವಾಗತೊಡಗಿತು. ಯಾವುದರಲ್ಲಿಯೂ ಆಸಕ್ತಿ ಉಳಿಯಲಿಲ್ಲ. ದುಃಖದ ತೀವ್ರತೆಯನ್ನು ಮರೆಯಲು ಗೌಡರು ಮದ್ಯಪಾನ ಮಾಡತೊಡಗಿದರು.

ಹೀಗೆ ಮನಸ್ಸು ಸಂಪೂರ್ಣವಾಗಿ ಹದಗೆಟ್ಟಿದ್ದಾಗ ಒಂದು ದಿನ ಅರಮನೆಯ ಅತಿಥಿಯಾಗಿ ಬಂದಿದ್ದವರೊಬ್ಬರ ಮುಂದೆ ಗೌಡರು ಹಾಡಬೇಕಾಗಿ ಬಂತು. ಇದನ್ನರಿತ ಅಸೂಯಾಪರರು ರಾಜನಿರೂಪ ಗೌಡರನ್ನು ಸೇರದಂತೆ ಸಂಚು ಹೂಡಿ, ಮಿತ್ರರಂತೆ ನಟಿಸಿ, ಅವರಿಗೆ ಚೆನ್ನಾಗಿ ಕುಡಿಸಿ, ಅನಂತರ ನಿರೂಪವನ್ನು ತೋರಿಸಿದರು. ಆದರೂ ಧೈರ್ಯಗುಂದದೆ ಗೌಡರು ಕಛೇರಿಯನ್ನು ಆರಂಭಿಸಿಯೇ ಬಿಟ್ಟರು. ಆದರೆ ಇವರಿಗೆ ಕುಡಿಸಿದ್ದ ಮದ್ಯ ಬಹಳ ಪ್ರಖರವಾದುದರಿಂದ ಹಾಡುಗಾರಿಕೆ ಹಿಡಿತ ತಪ್ಪಿತು. ಇದಕ್ಕೆಲ್ಲ ಕಾರಣವೇನು ಎಂಬುದನ್ನು ತಿಳಿಯುವ ನಿಗೂಢ ವಿವೇಕ ಪ್ರಭುಗಳಿಗಿತ್ತಾಗಿ ಅವರು ಗೌಡರನ್ನು ಅಪಾರ್ಥ ಮಾಡಿಕೊಳ್ಳಲಿಲ್ಲ. ಈ ಎಲ್ಲ ಘಟನೆಗಳು ಕೆಂಪೇಗೌಡರಲ್ಲಿ ಮಾನವನ ಒಳ್ಳೆಯತನದ ಬಗೆಗಿನ ನಂಬಿಕೆಯನ್ನೇ ಅಳಿಸಿಹಾಕಿದವೆಂದು ತೋರುತ್ತದೆ. ಅನಂತರ ಇವರು ಮನುಷ್ಯರ ಮುಂದೆ ಹಾಡುವುದಿಲ್ಲ ಎಂದು ಶಪಥ ಮಾಡಿ, ಅರಮನೆಯ ತಮ್ಮ ಪದವಿ ತ್ಯಜಿಸಿ ದೇಶಾಂತರ ಹೊರಟರೆಂದು ತಿಳಿದುಬರುತ್ತದೆ. ಇವರಿಗೆ ಹಾಡಬೇಕೆನಿಸಿದರೆ ಯಾವುದಾದರೂ ದೇವಾಲಯದಲ್ಲಿ ದೇವರ ಎದುರಿಗೆ ಕುಳಿತು ಹಾಡುತ್ತಿದ್ದರಂತೆ. ಕೆಲವು ಸಾರಿ ಆಪ್ತರೆಂದು ತಿಳಿದವರ ಎದುರಿಗೆ ಮಾತ್ರ ಹಾಡಿದ್ದುಂಟು. ಇಂಥ ಒಂದು ಸಂದರ್ಭದಲ್ಲಿಯೇ ಡಿ.ವಿ.ಗುಂಡಪ್ಪನವರು ಇವರ ಸಂಗೀತ ಕೇಳಿ ಪ್ರಶಂಸೆಯ ಮಾತುಗಳನ್ನಾಡಿದರಂತೆ.

ಆ ಕಾಲದಲ್ಲಿ ಶ್ರೀಮಂತ ರಸಿಕರು ಗೌಡರ ಭೈರವಿಯನ್ನು ಒತ್ತೆಯಿಟ್ಟುಕೊಂಡು ಸಾವಿರಾರು ರೂಪಾಯಿ ಸಾಲ ಕೊಡುತ್ತಿದ್ದರಂತೆ. ಒಮ್ಮೆ ಬಡವನೊಬ್ಬನಿಗೆ ಸಹಾಯ ಮಾಡಲು ಗೌಡರು ಸೇಲಂನ ಚೆಟ್ಟಿಯಾರ್ ಒಬ್ಬನಲ್ಲಿ ಮೂರು ಸಾವಿರ ರೂಪಾಯಿ ಸಾಲ ಮಾಡಿದರಂತೆ. ಅದೇ ಸಮಯದಲ್ಲಿ ಕಂಚಿಯಲ್ಲಿ ಇವರು ಹಾಡುತ್ತಿದ್ದ ಕಛೇರಿಯೊಂದರಲ್ಲಿ ಭೈರವಿ ಹಾಡುವಂತೆ ಕೋರಿಕೆ ಬಂದಾಗ ತಾವು ಏಕೆ ಅದನ್ನು ಹಾಡುವುದಿಲ್ಲವೆಂಬ ನಿಜಸಂಗತಿಯನ್ನು ಸಭೆಗೆ ತಿಳಿಸಲಾಗಿ ಸಾಹುಕಾರರೊಬ್ಬರು ಮೂರು ಸಾವಿರ ತಂದು ದೇವರೆದುರಿಗಿಟ್ಟು ಭೈರವಿ ಹಾಡುವಂತೆ ಪ್ರಾರ್ಥಿಸಿದರಂತೆ. ಗೌಡರು ಆ ಹಣವನ್ನು ಸೇಲಂ ಚೆಟ್ಟಿಯಾರರಿಗೆ ಮನಿಆರ್ಡರ್ ಮಾಡಿಸಿ ಭೈರವಿ ಹಾಡಿ ಸಭಿಕರನ್ನು ಸಂತುಷ್ಟಿಗೊಳಿಸಿದರಂತೆ. ಕೆಂಪೇಗೌಡರ ಬಗ್ಗೆ ಇಂಥ ಅನೇಕ ಘಟನೆಗಳ ಉಲ್ಲೇಖವಿದೆ.

ಅರಮನೆಯನ್ನು ಬಿಟ್ಟು ಹೊರಟ ಕೆಂಪೇಗೌಡರು ಮೈಸೂರು ಮತ್ತು ತಮಿಳುನಾಡಿನ ಅನೇಕ ಕಡೆ ಸುತ್ತಿದರೆಂದು ತಿಳಿದುಬರುತ್ತದೆ. ಕಾಲಕಾಲಕ್ಕೆ ಊಟನಿದ್ರೆಗಳಿಲ್ಲದೆ ಅಲೆದುದರಿಂದ ಅವರ ದೇಹಶಕ್ತಿ ಕುಂದುತ್ತ ಬಂತು. ಇದರ ಜೊತೆಗೆ ಅಪಾರವಾದ ಮದ್ಯಸೇವನೆಯೂ ಇವರ ಆಯುಷ್ಯವನ್ನು ಕ್ಷೀಣಗೊಳಿಸುತ್ತಿತ್ತು. ಅಂಥ ಕಾಲದಲ್ಲಿ ಕನ್ನಡನಾಡಿನ ಮುಖಂಡರಲ್ಲೊಬ್ಬರಾದ ಎಚ್.ಕೆ. ವೀರಣ್ಣಗೌಡರು ಬಹಳ ಒತ್ತಾಯಮಾಡಿ ಕೆಂಪೇಗೌಡರನ್ನು ತಮ್ಮ ಜೊತೆಯಲ್ಲಿರಿಸಿಕೊಂಡಿದ್ದರಂತೆ. ಚನ್ನಪಟ್ಟಣದಲ್ಲಿದ್ದ ವೀರಣ್ಣಗೌಡರ ಕೊಠಡಿಯಲ್ಲಿ ಗೌಡರು ಐದಾರು ತಿಂಗಳಿದ್ದರೆಂದು ತಿಳಿದುಬರುತ್ತದೆ.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಅಸ್ಸಾಮಿನ ಗಿರಿಕಂದರಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ ಕೆಂಪೇಗೌಡರು ಅವರೊಂದಿಗೆ ಸ್ವಲ್ಪ ಕಾಲ ಸಂಚಾರ ಮಾಡುತ್ತ ತಮ್ಮ ಸಂಗೀತಸುಧೆಯಿಂದ ಸ್ವಾಮೀಜಿಯವರನ್ನು ತೃಪ್ತಿಪಡಿಸಿದರಂತೆ. ಅದರ ನೆನಪಾಗಿ ವಿವೇಕಾನಂದರು ಗೌಡರಿಗೆ ತಮ್ಮ ನಿಲುವಂಗಿಯೊಂದನ್ನು ದಯಪಾಲಿಸಿದರೆಂದೂ ಗೌಡರು ಅದನ್ನು ಕಡೆಯುವರೆಗೂ ಪೂಜ್ಯಭಾವನೆಯಿಂದ ತಮ್ಮ ಬಳಿ ಇಟ್ಟುಕೊಂಡಿದ್ದರೆಂದೂ ಪ್ರತೀತಿ.

ಗೌಡರು ಘನವಿದ್ವಾಂಸರು; ಎಂದೂ ಯಾವ ಹಂಗಿಗೆ ಒಳಪಟ್ಟವರಲ್ಲ. ಎತ್ತರದ ಆಳು. ತೇಜಸ್ವಿಯಾದ ಮುಖ. ಅವರು ಸ್ವಲ್ಪ ಕಾಲ ನನ್ನ ಜೊತೆಗಿದ್ದು ನನ್ನ ಅಲ್ಪಸೇವೆ ಸ್ವೀಕರಿಸಿದ್ದು ನನ್ನ ಪುಣ್ಯ ಎಂದು ವೀರಣ್ಣಗೌಡರು ಕೃತಜ್ಞತಾಪೂರ್ವಕವಾಗಿ ಕೆಂಪೇಗೌಡರನ್ನು ನೆನೆದಿದ್ದಾರೆ.

ಚನ್ನಪಟ್ಟಣಕ್ಕೆ ಬರುವ ಹೊತ್ತಿಗೆ ಗೌಡರಿಗೆ ಹಲ್ಲುಗಳು ಬಿದ್ದುಹೋಗಿದ್ದವಂತೆ. ಹಲ್ಲು ಕಟ್ಟಿಸಿಕೊಳ್ಳಲು ಅನೇಕರು ಒತ್ತಾಯಿಸಿದರೂ ಇವರು ಒಪ್ಪುತ್ತಿರಲಿಲ್ಲವೆಂದು ಹೇಳಲಾಗಿದೆ. ಕಡೆಗೆ ವೀರಣ್ಣಗೌಡರ ಒತ್ತಾಯಕ್ಕೆ ಮಣಿದು, ಇದಕ್ಕಾಗಿ ಅವರು ಕೊಟ್ಟ ಹಣವನ್ನು ತೆಗೆದುಕೊಂಡು ಗೌಡರು ಬೆಂಗಳೂರು ರೈಲು ಹತ್ತಿದರು. ಆದರೆ ಮತ್ತೆ ಚನ್ನಪಟ್ಟಣಕ್ಕೆ ಹಿಂತಿರುಗಲಿಲ್ಲ. ಇವರಿಗಾಗಿ ವೀರಣ್ಣಗೌಡರು ಬೆಂಗಳೂರೆಲ್ಲ ಅಲೆದರೂ ಯಾವ ಪ್ರಯೋಜನವೂ ಆಗಲಿಲ್ಲವೆನ್ನಲಾಗಿದೆ. ಮತ್ತೆ ಇವರನ್ನು ಕಂಡವರು ಯಾರೂ ಇಲ್ಲ. (ಎಚ್.ಕೆ.ಆರ್.ಜಿ.)

**ಭೈರಾಪುರ:** ಹಾಸನ ಜಿಲ್ಲೆಯ ಭೈರಾಪುರ ಹಿರಿಯ ಪ್ರೀಕೇಂಬ್ರಿಯನ್ ಯುಗಕ್ಕೆ ಸೇರಿದ ಅತಿಪುರಾತನ ಶಿಲಾಸ್ತೋಮದಿಂದ ಸುತ್ತುವರಿದ ಕ್ರೋಮೈಟ್ ಅದುರನ್ನು ಹೊಂದಿರುವ ಪ್ರದೇಶ. ಮಹತ್ ಕ್ಷಾರಶಿಲೆಗಳಾದ ಡನೈಟ್, ಪೆರಡೊಡೈಟ್ ಹಾಗೂ ಅವುಗಳ ರೂಪಾಂತರಗಳಾದ ಟಾಲ್ಕ್–ಸರ್ಪೆಂಟೈನ್ ಪದರುಶಿಲೆಗಳೊಡನೆ ಹಾಸುಹೊಕ್ಕಾದ ಮತ್ತು ಸಮಾನಾಂತರವಾದ ಸಿರಗಳ ರೂಪದಲ್ಲಿ ಕ್ರೊಮೈಟ್ ಅದುರು ದೊರೆಯುತ್ತದೆ. ಜನಸಂಖ್ಯೆ 978.

ಕ್ರೋಮೈಟ್ ಅದುರಿನ ನಿಕ್ಷೇಪಗಳು ಹರಡಿಕೊಂಡಿರುವ ಶಿಲಾಪಟ್ಟಿಯೊಂದು ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿಗೆ ಪಶ್ಚಿಮದಲ್ಲಿ ಆಗ್ನೇಯ ವಾಯವ್ಯಾಭಿಮುಖವಾಗಿ, 32 ಕಿಮೀ ಉದ್ದ ಮತ್ತು ಸುಮಾರು ಒಂದು ಕಿಮೀ ಅಗಲವಾಗಿ ಹರಡಿಕೊಂಡಿದೆ. ರೂಪಾಂತರಗೊಂಡ ಮಹತ್ ಕ್ಷಾರಶಿಲೆಗಳಾದ ಟಾಲ್ಕ್–ಸರ್ಪೆಂಟೈನ್ ಯುಕ್ತವಾಗಿರುವ ಈ ಶಿಲಾಪಟ್ಟಿಕೆಯಲ್ಲಿ ಕ್ರೋಮೈಟ್ ನಿಕ್ಷೇಪಗಳು ದೊಡ್ಡ ದೊಡ್ಡ ಮಸೂರಾಕೃತಿಯ ಸಿರ ಯಾ ದಿಂಡುಗಳ ರೂಪದಲ್ಲಿ ಶೇಖರವಾಗಿವೆ. ಸೇ. 42 ರಷ್ಟು ಕ್ರೋಮಿಯಂ ಇರುವ ನಿಕ್ಷೇಪಗಳು ಕೆಳದರ್ಜೆಯವು. ಸೇ 47ರಿಂದ 52 ರವರೆಗೆ ಕ್ರೋಮಿಯಂ ಆಕ್ಸೈಡ್‌ವಂಥವು ಉತ್ತಮ ಅಥವಾ ಮೇಲ್ದರ್ಜೆಯ ಅದುರುಗಳುಳ್ಳವು. ಇವು ಭೈರಾಪುರ ಮತ್ತು ಭಕ್ತರಹಳ್ಳಿಯ ನಿಕ್ಷೇಪಗಳಲ್ಲಿವೆ. ಈ ನಿಕ್ಷೇಪಗಳು ಕ್ರೋಂ ಉಕ್ಕನ್ನು ತಯಾರಿಸಲು ಯೋಗ್ಯವಾಗಿವೆ. ಇದಲ್ಲದೆ, ದಕ್ಷಿಣದಿಂದ ಉತ್ತರಕ್ಕೆ ಇನ್ನೂ ಅನೇಕ ಕ್ರೋಮೈಟ್ ಗಣಿಗಳು ಅನುಕ್ರಮವಾಗಿ ಜಂಬೂರು, ತಗಡೂರು, ರಂಗಪ್ಪನ ಹಳ್ಳಿ, ಗೊಳ್ಳಹಳ್ಳಿ, ಕುಳ್ಳನಗೆರೆ ಮತ್ತು ಪೆನ್ನಸಮುದ್ರಗಳಲ್ಲಿ ಕಾಣಸಿಗುತ್ತವೆ. (ಎಸ.ಎ.ಎಸ್.)

ಚನ್ನಪಟ್ಟಣಕ್ಕೆ ಬರುವ ಹೊತ್ತಿಗೆ ಗೌಡರಿಗೆ ಹಲ್ಲುಗಳು ಬಿದ್ದುಹೋಗಿದ್ದವಂತೆ. ಹಲ್ಲು ಕಟ್ಟಿಸಿಕೊಳ್ಳಲು ಅನೇಕರು ಒತ್ತಾಯಿಸಿದರೂ ಇವರು ಒಪ್ಪುತ್ತಿರಲಿಲ್ಲವೆಂದು ಹೇಳಲಾಗಿದೆ. ಕಡೆಗೆ ವೀರಣ್ಣಗೌಡರ ಒತ್ತಾಯಕ್ಕೆ ಮಣಿದು, ಇದಕ್ಕಾಗಿ ಅವರು ಕೊಟ್ಟ ಹಣವನ್ನು ತೆಗೆದುಕೊಂಡು ಗೌಡರು ಬೆಂಗಳೂರು ರೈಲು ಹತ್ತಿದರು. ಆದರೆ ಮತ್ತೆ ಚನ್ನಪಟ್ಟಣಕ್ಕೆ ಹಿಂತಿರುಗಲಿಲ್ಲ. ಇವರಿಗಾಗಿ ವೀರಣ್ಣಗೌಡರು ಬೆಂಗಳೂರೆಲ್ಲ ಅಲೆದರೂ ಯಾವ ಪ್ರಯೋಜನವೂ ಆಗಲಿಲ್ಲವೆನ್ನಲಾಗಿದೆ. ಮತ್ತೆ ಇವರನ್ನು ಕಂಡವರು ಯಾರೂ ಇಲ್ಲ. (ಎಚ್.ಕೆ.ಆರ್.ಜಿ.)

**ಭೈರಾಪುರ:** ಹಾಸನ ಜಿಲ್ಲೆಯ ಭೈರಾಪುರ ಹಿರಿಯ ಪ್ರೀಕೇಂಬ್ರಿಯನ್ ಯುಗಕ್ಕೆ ಸೇರಿದ ಅತಿಪುರಾತನ ಶಿಲಾಸ್ತೋಮದಿಂದ ಸುತ್ತುವರಿದ ಕ್ರೋಮೈಟ್ ಅದುರನ್ನು ಹೊಂದಿರುವ ಪ್ರದೇಶ. ಮಹತ್ ಕ್ಷಾರಶಿಲೆಗಳಾದ ಡನೈಟ್, ಪೆರಡೊಡೈಟ್ ಹಾಗೂ ಅವುಗಳ ರೂಪಾಂತರಗಳಾದ ಟಾಲ್ಕ್–ಸರ್ಪೆಂಟೈನ್ ಪದರುಶಿಲೆಗಳೊಡನೆ ಹಾಸುಹೊಕ್ಕಾದ ಮತ್ತು ಸಮಾನಾಂತರವಾದ ಸಿರಗಳ ರೂಪದಲ್ಲಿ ಕ್ರೋಮೈಟ್ ಅದುರು ದೊರೆಯುತ್ತದೆ. ಜನಸಂಖ್ಯೆ 978.

ಕ್ರೋಮೈಟ್ ಅದುರಿನ ನಿಕ್ಷೇಪಗಳು ಹರಡಿಕೊಂಡಿರುವ ಶಿಲಾಪಟ್ಟಿಯೊಂದು ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿಗೆ ಪಶ್ಚಿಮದಲ್ಲಿ ಆಗ್ನೇಯ ವಾಯವ್ಯಾಭಿಮುಖವಾಗಿ, 32 ಕಿಮೀ ಉದ್ದ ಮತ್ತು ಸುಮಾರು ಒಂದು ಕಿಮೀ ಅಗಲವಾಗಿ ಹರಡಿಕೊಂಡಿದೆ. ರೂಪಾಂತರಗೊಂಡ ಮಹತ್ ಕ್ಷಾರಶಿಲೆಗಳಾದ ಟಾಲ್ಕ್–ಸರ್ಪೆಂಟೈನ್ ಯುಕ್ತವಾಗಿರುವ ಈ ಶಿಲಾಪಟ್ಟಿಕೆಯಲ್ಲಿ ಕ್ರೋಮೈಟ್ ನಿಕ್ಷೇಪಗಳು ದೊಡ್ಡ ದೊಡ್ಡ ಮಸೂರಾಕೃತಿಯ ಸಿರ ಯಾ ದಿಂಡುಗಳ ರೂಪದಲ್ಲಿ ಶೇಖರವಾಗಿವೆ. ಸೇ 42 ರಷ್ಟು ಕ್ರೋಮಿಯಂ ಇರುವ ನಿಕ್ಷೇಪಗಳು ಕೆಳದರ್ಜೆಯವು. ಸೇ 47ರಿಂದ 52 ರವರೆಗೆ ಕ್ರೋಮಿಯಂ ಆಕ್ಸೈಡ್‌ವಂಥವು ಉತ್ತಮ ಅಥವಾ ಮೇಲ್ದರ್ಜೆಯ ಅದುರುಗಳುಳ್ಳವು. ಇವು ಭೈರಾಪುರ ಮತ್ತು ಭಕ್ತರಹಳ್ಳಿಯ ನಿಕ್ಷೇಪಗಳಲ್ಲಿವೆ. ಈ ನಿಕ್ಷೇಪಗಳು ಕ್ರೋಂ ಉಕ್ಕನ್ನು ತಯಾರಿಸಲು ಯೋಗ್ಯವಾಗಿವೆ. ಇದಲ್ಲದೆ, ದಕ್ಷಿಣದಿಂದ ಉತ್ತರಕ್ಕೆ ಇನ್ನೂ ಅನೇಕ ಕ್ರೋಮೈಟ್ ಗಣಿಗಳು ಅನುಕ್ರಮವಾಗಿ ಜಂಬೂರು, ತಗಡೂರು, ರಂಗಪ್ಪನ ಹಳ್ಳಿ, ಗೊಳ್ಳಹಳ್ಳಿ, ಕುಳ್ಳನಗೆರೆ ಮತ್ತು ಪೆನ್ನಸಮುದ್ರಗಳಲ್ಲಿ ಕಾಣಸಿಗುತ್ತವೆ. **(ಎಸ್.ಎ.ಎಸ್.)**

# ಮ

**ಮಂಗರಸ[1]:** ಸು.1350. ಜೈನಕವಿ. ಖಗೇಂದ್ರಮಣಿದರ್ಪಣ ಎಂಬ ವೈದ್ಯಗ್ರಂಥದ ಕರ್ತೃ. ಹೊಯ್ಸಳ ರಾಜ್ಯದಲ್ಲಿಯ ದೇವಳಿಗೆ ನಾಡಿನ ಮುಗುಳಿಪುರದ ರಾಜನಾಗಿದ್ದ ಮಂಗವಿಭು ಇವನ ತಂದೆ, ತಾಯಿ ಪೆರ್ಮಲೆ, ಹೆಂಡತಿ ಕಾಮಲತೆ, ಗುರು ಪೂಜ್ಯಪಾದಮುನಿ. ಕವಿಗೆ ಮೂವರು ಮಕ್ಕಳಿದ್ದಂತೆ ತಿಳಿಯುತ್ತದೆ. ಸುಲಲಿತಕವಿಪಿಕವಸಂತ, ಅಖಿಲವಿದ್ಯಾಜಲನಿಧಿ, ಸಾಹಿತ್ಯ ವೈದ್ಯವಿದ್ಯಾನಿಧಿ ಮುಂತಾದವು ಇವನ ಬಿರುದುಗಳು. ಧರೆಗನುರಾಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ ಎಂಬುದರಿಂದ ಈತ ವಿಜಯನಗರದ ರಾಜ ಒಂದನೆಯ ಹರಿಹರನ (1336–56) ಕಾಲದಲ್ಲಿದ್ದಂತೆ ತಿಳಿದುಬರುತ್ತದೆ. ಪೂರ್ವಕವಿಗಳಲ್ಲಿ ಕೇಶವವರ್ಣಿಯನ್ನು (ಸು. 1359) ಇವನು ಸ್ಮರಿಸಿದ್ದಾನೆ.

ಖಗೇಂದ್ರಮಣಿದರ್ಪಣ ವಿಷವೈದ್ಯಗ್ರಂಥ. ಕಂದ ವೃತ್ತಗಳಲ್ಲಿ ರಚಿತವಾಗಿದೆ. ಇದರಲ್ಲಿ ಸ್ಥಾವರ, ಜಂಗಮ, ಕೃತಕ ಎಂಬ ಮೂರು ವಿಷವರ್ಗಗಳಲ್ಲಿ ಅಡಕವಾಗುವ ನಾನಾ ಬಗೆಯ ವಿಷಗಳ ಲಕ್ಷಣಗಳನ್ನೂ ಮಂತ್ರ ತಂತ್ರ ಔಷಧ ಪ್ರಯೋಗಗಳಿಂದ ವಿಷಾಪಹಾರ ಮಾಡುವ ವಿಧಾನಗಳನ್ನೂ ಹದಿನಾರು ಅಧಿಕಾರಗಳಲ್ಲಿ ವಿವರಿಸಿದೆ. ನಡುನಡುವೆ ಗದ್ಯರೂಪದಲ್ಲಿ ವಿವರಣೆಗಳಿವೆ. ಸ್ಥಾವರ ವಿಷಪ್ರಕ್ರಿಯೆಯ ಭಾಗವನ್ನು ತಾನು ಪೂಜ್ಯಪಾದನ ವೈದ್ಯಗ್ರಂಥದಿಂದ ಸಂಗ್ರಹಿಸಿರುವಂತೆ ಹೇಳಿಕೊಂಡಿದ್ದಾನೆ. ಕೆಲವು ಕಡೆ ಕಾಶ್ಯಪಸಂಹಿತೆ ಅಥವಾ ಗರುಡ ಪಂಚಾಕ್ಷರೀಕಲ್ಪ ಎಂಬ ಗ್ರಂಥಕ್ಕೂ ಇದಕ್ಕೂ ಹೋಲಿಕೆ ಕಂಡುಬರುತ್ತದೆ. ಇತರ ಕವಿಗಳಂತೆ ಮರಗಾಳಿಧೂಳಿ ರಜನಿನೀರಾಟಬೇಟ ಸುರೆಸೂಳೆಯರು ಎಂದು ಕೊಂಡಾಡಿ ಬೆಂಡಾಗದೆ ಸರ್ವಜನೋಪಕಾರಿಯಾದ ಮಂತ್ರೌಷಧಿಗಳನ್ನು ಹೇಳುವವನೇ ದೇವಸಮಾನವೆಂದು ಭಾವಿಸಿ, ಈ ಗ್ರಂಥವನ್ನು ಹೇಳಲು ತೊಡಗಿದುದಾಗಿಯೂ ವೈದ್ಯ ಮೋಕ್ಷಸಾಧನವೆಂದೂ ಕವಿ ತಿಳಿಸುತ್ತಾನೆ. ಸರ್ವವಿಷಾಪಹಾರಕ್ಕೆ ಇವನು ನೀಡುವ ಒಂದು ಚಿಕಿತ್ಸೆಯಿದು :

ಮದನಫಲಲೋಧ್ರಮೆಂಬಿವನುದಕದೊಳಂ ಕುಡಿಯೆಕುಡುವುದಂತಲ್ಲ
ದೊಡೀವುದು ಬಜೆಯೊಳುಪ್ಪುಮಂಬೆರಸದುವಮನಮದಾಗೆ ಸರ್ವವಿಷ
ಸಂಹರಣಂ

ಖಗೇಂದ್ರಮಣಿದರ್ಪಣ ಶಾಸ್ತ್ರಗ್ರಂಥವಾದರೂ ಪದ್ಯಗಳು ಲಲಿತವಾಗಿದ್ದು ಮಂಗರಸ ಒಳ್ಳೆಯ ಕವಿಯೆಂಬುದಕ್ಕೆ ಸಾಕ್ಷಿಯಾಗಿವೆ. ಇಲ್ಲಿಯ ಭಾಷೆ ಶಾಸ್ತ್ರಗ್ರಂಥಕ್ಕೆತಕ್ಕುದಾಗಿ ಸ್ಪಷ್ಟವೂ ಆಗಿದೆ. ಕನ್ನಡದ ಪ್ರಪ್ರಥಮ ಸ್ವತಂತ್ರ ವಿಷವೈದ್ಯಗ್ರಂಥ ಎಂಬ ಪ್ರಾಮುಖ್ಯ ಈ ಗ್ರಂಥಕ್ಕೆ ಸಂದಿದೆ.

**(ಕೆ.ಎಂ.ಎಸ್‌ಎ:ಎಂ.ವಿ.ಎಸ್.)**

**ಮಂಗರಸ[2]:** ಸು.1398. ಬ್ರಾಹ್ಮಣ ಕವಿ. ಅಭಿನವ ನಿಘಂಟು ಎಂಬ ಗ್ರಂಥದ ಕರ್ತೃ. ಇವನಿಗೆ ಅಭಿನವಮಂಗರಾಜ ಎಂಬ ಹೆಸರೂ ಇದೆ. ಚಿಂತಾಮಣಿ ಪ್ರತಿಪದವೆಂಬ ಗ್ರಂಥವನ್ನೂ ಬರೆದಿರುವುದಾಗಿ ಪ್ರತೀತಿಯಿದೆ. ಆದರೆ ಕೃತಿ ಉಪಲಬ್ಧವಿಲ್ಲ. ಇವನ ತಂದೆ ರೆಮ್ಮಾರ್ಯ ರಾಮರಸ.

ಅಭಿನವ ನಿಘಂಟು ವಾರ್ಧಕಷಟ್ಪದಿ(ಉದ್ದಂಡ)ಯಲ್ಲಿದೆ. ಇದಕ್ಕೆ ಕವಿ ಮಂಗಾಭಿದಾನ ಎಂಬ ಹೆಸರೂ ಇದೆ. ಮಂಗರಾಜ ನಿಘಂಟು ಎಂದೂ ಪ್ರಸಿದ್ಧಿ ಪಡೆದಿದೆ. ಇದನ್ನು 1398ರಲ್ಲಿ ಬರೆದಂತೆ ತಿಳಿಯುತ್ತದೆ. ಇದರಲ್ಲಿ ಸ್ವರ್ಗ, ಭೂ, ಪಾತಾಳ, ಸಾಮಾನ್ಯ, ನಾನಾರ್ಥ ಎಂಬ 5 ಕಾಂಡಗಳೂ 539 ಪದ್ಯಗಳೂ ಒಂದೊಂದು ಕಾಂಡದಲ್ಲಿ ಅನೇಕ ವರ್ಗಗಳೂ ಇವೆ. ತನಗಿಂತ ಹಿಂದಣ ವರರುಚಿ, ಹಲಾಯುಧ, ಗೋಪಾಲಕ, ಭಾಗುರಿ, ಧನಂಜಯ, ಸುರಹರಿ, ನಾಗವರ್ಮ ಮೊದಲಾದವರನ್ನು ಅನುಸರಿಸಿ ತಾನು ಈ ಕೃತಿಯನ್ನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಹಲಾಯುಧ ಮತ್ತು ಎರಡನೆಯ ನಾಗವರ್ಮ (ಸು. 1145) ಇವರನ್ನು ಇವನು ಅನುಸರಿಸಿದ್ದಾನೆ. ಗ್ರಂಥದಲ್ಲಿ ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಕೊಡಲಾಗಿದೆ. ಕೆಲವು ಅಪರೂಪದ ಕನ್ನಡ ಪದಗಳನ್ನೂ ಅನ್ಯದೇಶ್ಯ ಪದಗಳನ್ನೂ ಇಲ್ಲಿ ಕಾಣಬಹುದು. ಶಬ್ದಾರ್ಥಗಳ ಜೊತೆಗೆ ಇಲ್ಲಿ ವಿವಿಧ ಕಲೆ ಮತ್ತು ಶಾಸ್ತ್ರಗಳ ಅಲ್ಪ ಪರಿಚಯವನ್ನೂ

ಮಾಡಿಕೊಟ್ಟಿದ್ದಾನೆ. ಕುದುರೆಗಳು, ಸೇನಾವಿಭಾಗಗಳು, ಆಯುಧಗಳು, ಒಡವೆ, ಅಳತೆ ಮುಂತಾದ ವಿಷಯಗಳೂ ಇಲ್ಲಿ ಪ್ರಾಸಂಗಿಕವಾಗಿ ನಿರೂಪಿತವಾಗಿವೆ. ನಿಘಂಟಿನ ಒಂದು ಪದ್ಯ ಹೀಗಿದೆ:

ಕೈಕಾಲು ಮಾಟನಾದಂ ಕುಣಿಕನೆನಿಸಿರ್ಕುಂ
ಕೈಕಾಲು ಕಿಱುದಾಗೆ ವಾಮನನೆಸಿರ್ಕುಮಾ
ಕೈಕಿತಂ ಪ್ರಶ್ನಿಯೆನೆ ಸೂಕ್ಷ್ಮದವನಕ್ಕು ಕುಬ್ಜಂ ಗುಡ್ಡನೆಂದೆನಿಕ್ಕುಂ
ಏಕಹಸ್ತಂ ವಿಕಳಪಾಣಿಯೊಕ್ಕೈಯನ
ಕ್ಕೇಕಾಂಘ್ರೀಯೆನೆ ಕುಂಟನಕ್ಕುಂ ಗತನಾಸಿಕಂ
ಮೂಕೊಱೆಯನಕ್ಕುಂ ಕಿವಿಯಿಲ್ಲದವ ಮೂಱನಕ್ಕದ್ವಿಜಂ ಬೊಡನಕ್ಕುಂ

(ಎಂ.ಆರ್.;ಕೆ.ಎಂ.ಎಸ್‌ಐ.)

**ಮಂಗರಸ[3]:** ಸು.1508. ಜೈನಕವಿ. ನೇಮಿಜಿನೇಶಸಂಗತಿ, ಪ್ರಭಂಜನ ಚರಿತೆ, ಶ್ರೀಪಾಲಚರಿತೆ, ಸಮ್ಯಕ್ತ್ವಕೌಮುದಿ, ಸೂಪಶಾಸ್ತ್ರ ಎಂಬ ಗ್ರಂಥಗಳ ಕರ್ತೃ. ಈತ ಧಾತುಪುರ (ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ) ಎಂಬಲ್ಲಿ ದೊರೆಯಾಗಿದ್ದ. ಈತನ ಅಜ್ಜ ಮಾಧವ, ತಂದೆ ಧಾತುಪುರದ ಪ್ರಭುವಾಗಿದ್ದ ವಿಜಯರಾಜ, ತಾಯಿ ದೇವಿಲೆ, ಗುರು ಚಿಕ್ಕಪ್ರಭೇಂದು. ಕವಿಗೆ ಪ್ರಭುರಾಜ, ಪ್ರಭುಕುಲರತ್ನದೀಪ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ. ಪೂರ್ವಕವಿಗಳಲ್ಲಿ ಪಂಪ, ಪೊನ್ನ, ರನ್ನ, ಶ್ರೀವಿಜಯ, ಗುಣವರ್ಮ, ಜನ್ನ, ಮಧುರ, ನಾಗಚಂದ್ರ, ಕರ್ಣಪಾರ್ಯ, ನೇಮಿಚಂದ್ರ, ಬಂಧುವರ್ಮ–ಇವರನ್ನು ಸ್ತುತಿಸಿದ್ದಾನೆ.

ನೇಮಿಜಿನೇಶಸಂಗತಿ ಅಥವಾ ಹರಿವಂಶ ಪುರಾಣ ಸಾಂಗತ್ಯದಲ್ಲಿ ರಚಿತವಾದ ಧಾರ್ಮಿಕ ಕಾವ್ಯ. ಇದರಲ್ಲಿ 35 ಸಂಧಿಗಳೂ 5,138 ಪದ್ಯಗಳೂ ಇವೆ. 22ನೆಯ ತೀರ್ಥಂಕರ ನೇಮಿನಾಥನ ಕಥೆ ಕಾವ್ಯವಸ್ತು. ಇದರ ಜೊತೆಗೆ ಕುರುವಂಶದ ಮತ್ತು ಹರಿವಂಶದ ಕಥೆಗಳೂ ಸೇರಿಕೊಂಡಿವೆ. ಕವಿ ಕಥೆಗೆ ಆಕರವಾಗಿ ಚಾವುಂಡರಾಯಪುರಾಣವನ್ನು ಅನುಸರಿಸುವಂತೆಯೂ ಕಾಣುತ್ತದೆ. ಕೆಲವು ವರ್ಣನೆಗಳು ರಸವತ್ತಾಗಿವೆ. ಕಥನ ಗತಿಯಲ್ಲಿ ನಿರರ್ಗಳತೆಯಿದೆ, ಪಾತ್ರಚಿತ್ರಣ ಜೀವಂತವೆನಿಸುತ್ತದೆ. ಸಾಂಗತ್ಯಶೈಲಿಯಲ್ಲಿ ಲಾಲಿತ್ಯ, ಸರಳತೆ, ರಮ್ಯತೆ ಕಂಡುಬರುತ್ತವೆ.

ಪ್ರಭಂಜನಚರಿತೆಯೂ ಸಾಂಗತ್ಯದಲ್ಲಿದೆ. ಇದರಲ್ಲಿ ಶಂಭುದೇಶದ ಭಂಭಾಪುರದ ರಾಜ ದೇವಸೇನನ ಮಗ ಪ್ರಭುಂಜನನ ಕಥೆ ನಿರೂಪಿತವಾಗಿದೆ. ಇದರೊಂದಿಗೆ ಎಂಟು ಜನ ಮುನಿಗಳ ಕಥೆಯೂ ಸೇರಿದೆ. ದೊರೆತ ಅಸಮಗ್ರ ಪ್ರತಿಯಲ್ಲಿ 5 ಸಂಧಿಗಳೂ 606 ಪದ್ಯಗಳೂ ಇವೆ. ಕಥಾತಂತ್ರ ಸ್ವಾರಸ್ಯವಾಗಿದೆ. ಶೃಂಗಾರ ವರ್ಣನೆ ಕೆಲವೊಮ್ಮೆ ಅತಿಯಾಗಿದೆ. ಹೆಣ್ಣು ಗರತಿಯಾಗದೆ ಅಡ್ಡಹಾದಿ ಹಿಡಿದಾಗ ಒದಗುವ ದುಷ್ಪರಿಣಾಮವನ್ನು ಚಿತ್ರಿಸುವುದು ಕವಿಯ ಮುಖ್ಯ ಉದ್ದೇಶ.

ಶ್ರೀಪಾಲಚರಿತೆಯೂ ಸಾಂಗತ್ಯದಲ್ಲಿದೆ. ಇದರಲ್ಲಿ 14 ಸಂಧಿಗಳೂ 1527 ಪದ್ಯಗಳೂ ಇವೆ. ಪುಂಡರೀಕಿಣೀಪುರದ ದೊರೆ ಗುಣಪಾಲನ ಮಗ ಶ್ರೀಪಾಲನ ಕಥೆ ಕಾವ್ಯವಸ್ತು. ವರ್ಣನೆಗಳಲ್ಲಿ ನಾವೀನ್ಯವಿದೆ. ಸ್ತ್ರೀವರ್ಣನೆಗಳು ಅಧಿಕವಾಗಿವೆ.

ಸೂಪಶಾಸ್ತ್ರ ವಾರ್ಧಕ ಷಟ್ಪದಿಯಲ್ಲಿ ರಚಿತವಾದ, ಅಡಿಗೆಯ ವಿಧಿವಿಧಾನಗಳನ್ನು ತಿಳಿಸುವ ಗ್ರಂಥ. ಕನ್ನಡ ದೇಸಿ ಛಂದಸ್ಸಿನಲ್ಲಿ ಪಾಕಶಾಸ್ತ್ರವನ್ನು ಕುರಿತು ಬರೆದ ಮೊತ್ತಮೊದಲ ಕೃತಿ. ಇದು ಸಂಸ್ಕೃತ ಗ್ರಂಥವೊಂದರ ಅನುವಾದವೆಂದು ತಿಳಿಯುತ್ತದೆ. ಇದರಲ್ಲಿ 6 ಅಧ್ಯಾಯಗಳೂ 450 ಪದ್ಯಗಳೂ ಇವೆ. ತನ್ನ ಗ್ರಂಥ ನಳ, ಭೀಮ ಮುಂತಾದ ಬಾಣಸ ವಿದ್ಯಾನಿಪುಣರ ಮತಾನುಸಾರವಾಗಿದೆಯೆಂದೂ ಇದು ಹೆಣ್ಣುಮಕ್ಕಳಿಗೆ ಬಹಳ ಪ್ರಿಯವಾದ ಗ್ರಂಥವೆಂದೂ ಇದರಿಂದ ಓದುಗರಿಗೆ ಇಹಪರಗಳು ಲಭಿಸುವವೆಂದೂ ಕವಿ ಹೇಳಿಕೊಂಡಿದ್ದಾನೆ. ಇಲ್ಲಿ ಪಿಷ್ಟ, ಪಾಕ, ಪಾನಕ, ಕಳಮಾನ್ನಪಾಕ, ಶಾಕಪಾಕ ಇತ್ಯಾದಿ ಷಡ್ರಸಗಳ ವಿಷಯ ಪ್ರತಿ ಪಾದಿತವಾಗಿದ್ದು, ಘರಿವಿಳಂಗಾಯಿ, ಹಾಲಗಾರಿಕೆ, ಸವಡುರೊಟ್ಟಿ, ಹಿಮಾಂಬುಪಾನ ಮೊದಲಾದವುಗಳನ್ನು ತಯಾರಿಸಲು ಹೇಳಿರುವ ವಿಧಾನಗಳು ಆಕರ್ಷಕವಾಗಿವೆ.

ಜಯನೃಪಕಾವ್ಯ ಪರಿವರ್ಧಿನೀ ಷಟ್ಪದಿಯಲ್ಲಿದೆ. ಇದರಲ್ಲಿ 16 ಸಂಧಿ, 1,145 ಪದ್ಯ ಇವೆ. ಕುರುಜಾಂಗಣ ವಿಷಯದ ರಾಜನಾದ ರಾಜಪ್ರಭದೇವನ ಮಗ ಜಯನೃಪನ ಕಥೆ ಕಾವ್ಯವಸ್ತು. ಪೂರ್ವದಲ್ಲಿ ಜಿನಸೇನರು ರಚಿಸಿದ್ದನ್ನು ತಾನು ಸಂಸ್ಕೃತದಲ್ಲಿ ಕನ್ನಡ ಮಾತು ಬೆರಸಿ ಇನಿಯಾಗುವಂತೆ ರಚಿಸುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಕಾವ್ಯ ಶೃಂಗಾರಪೂರಿತವಾಗಿದೆ; ಶೈಲಿ ಲಲಿತವಾಗಿದೆ.

ಸಮ್ಯಕ್ತ್ವಕೌಮುದಿ ಉದ್ದಂಡ ಷಟ್ಪದಿಯಲ್ಲಿದೆ. 12 ಸಂಧಿಗಳನ್ನೂ 792 ಪದ್ಯಗಳನ್ನೂ ಇದು ಒಳಗೊಂಡಿದೆ. ಇದನ್ನು 1508ರಲ್ಲಿ ಬರೆದು ಮುಗಿಸಿದಂತೆ ತಿಳಿಯುತ್ತದೆ. ಅರ್ಹದ್ದಾಸನೆಂಬ ವೈಶ್ಯವಿಭುವಿನ ಸ್ತ್ರೀಯರು ಹೇಳಿದ ಕಥೆಯನ್ನು ಕೇಳಿ, ಉದಿತೋದಯ ರಾಜ, ಸಂಯುಕ್ತ ಧರಿಸಿ, ದೀಕ್ಷೆವಹಿಸಿ ಸ್ವರ್ಗಸ್ಥನಾದ ಎಂಬುದು ಕಾವ್ಯವಸ್ತು. ಇದೊಂದು ಧಾರ್ಮಿಕ ಗ್ರಂಥ. ಸಮ್ಯಗ್ದರ್ಶನದ ಮಹತ್ವವನ್ನು ನಿರೂಪಿಸುವುದು ಕೃತಿಯ ಮುಖ್ಯ ಉದ್ದೇಶ. (ಕೆ.ಎಂ.ಎಸ್‌ಐ;ಎಂ.ಆರ್.)

**ಮಂಗರಸ[4]:** ಸು. 1755. ಕನ್ನಡದಲ್ಲಿ ಮನ್ಮಥಮಣಿದರ್ಪಣ ಎಂಬ ಗ್ರಂಥವನ್ನು ಬರೆದಿರುವ ಕವಿ. ಇವನ ಬಗ್ಗೆ ಹೆಚ್ಚು ವಿವರಗಳನ್ನು ಮೊದಲಬಾರಿಗೆ ನೀಡಿದವರು ಡಿ.ಎಲ್.ನರಸಿಂಹಾಚಾರ್ಯರು. ಈತನಿಗೆ ಅಭಿನವ ಮಂಗರಸ ಎಂಬ ಬಿರುದೂ ಇದೆ. ನಿಜವಾದ ಹೆಸರು ರಾಯಣ್ಣ. ಈತ ತನ್ನ ಕಾವ್ಯದಲ್ಲಿ ಶ್ರೀರಂಗಪಟ್ಟಣದ ದೊರೆ ಕೃಷ್ಣರಾಜನನ್ನು ಹೆಸರಿಸಿದ್ದಾನೆ. ಈ ಕೃಷ್ಣರಾಜ 1735–67ರ ನಡುವೆ ಇದ್ದ ಇಮ್ಮಡಿ ಕೃಷ್ಣರಾಜ ಇರಬೇಕು. ಆದ್ದರಿಂದ ರಾಯಣ್ಣನ ಕಾಲ ಸು. 1755 ಎಂದು ಊಹಿಸಲಾಗಿದೆ. ಈತನ ಸ್ಥಳ ವೇಣಿಪುರಿ. ಇದು ಬಿದರೂರು ಆಗಿರಬಹುದೆಂದು ಡಿ.ಎಲ್.ನರಸಿಂಹಾಚಾರ್ಯರ ಅಭಿಪ್ರಾಯ. ಅಭಿನವವಾಣಿ ಎಂಬ ಬಿರುದುಳ್ಳ ಕವಿ ಬೊಮ್ಮಣ್ಣ ಈತನ ತಂದೆ. ಆತ ಫಣಿಸುತ ಚರಿತೆ ಎಂಬ ಕಾವ್ಯವನ್ನು ಷಟ್ಪದಿಯಲ್ಲಿ ಬರೆದಿದ್ದಾನೆ. ಗುರು ಅಭಿನವ ಲಕ್ಷ್ಮೀಸೇನ. ರಾಯಣ್ಣ ತನ್ನ ಕಾವ್ಯದಲ್ಲಿ ಪೂರ್ವಕವಿಗಳ ಪೈಕಿ ರತ್ನತ್ರಯರನ್ನು ಸ್ಮರಿಸಿದ್ದಾನೆ. ಮಿಕ್ಕ ಪೂರ್ವಕವಿ ಗಳಾರನ್ನೂ ಹೆಸರಿಸದೆ ಈತನಿಗಿಂತ ಹಿಂದೆ ನೇಮಿಜಿನೇಶಸಂಗತಿ ಎಂಬ ಹರಿವಂಶವನ್ನು ಸಾಂಗತ್ಯದಲ್ಲಿ ಬರೆದ ಮೂರನೆಯ ಮಂಗರಸನನ್ನು ಮಾತ್ರ ಸ್ತುತಿಸಿದ್ದಾನೆ.

ಮನ್ಮಥಮಣಿದರ್ಪಣ ಭಾಮಿನೀ ಷಟ್ಪದಿಯಲ್ಲಿದೆ. 60 ಸಂಧಿ, 1312 ಪದ್ಯಗಳಿವೆ. ಕೃತಿ ಅಸಮಗ್ರ. ಹರಿವಂಶವೆಂಬ ಚರಿತೆಯಲ್ಲಿ ಹೇಳಿದ ಕಥೆಯನ್ನು ಷಟ್ಪದಿಯಲ್ಲಿ ಹೇಳು ಎಂದು ಶ್ರಾವಕರು ಪ್ರಾರ್ಥಿಸಲು ರಾಯಣ್ಣ ಬಲ್ಲನಿತೊರೆದನು. ತನ್ನ ಗ್ರಂಥಾರಂಭದಲ್ಲಿ ಮತ್ತು ಪ್ರತಿಸಂಧಿಯ ಕೊನೆಯ ಗದ್ಯದಲ್ಲಿ ವೇಣುಪುರಿಯ ಪಾರ್ಶ್ವಜಿನನನ್ನು ಸ್ಮರಿಸಿದ್ದಾನೆ. ತಾನು ಯತಿಪ್ರಾಸ ಗಣಭೇಧವನು ಅರಿಯನೆಂದು, ಸುಜನರು ಮುದದಿ ತಿದ್ದುವುದೆಂದು ಹೇಳಿ ವಿನಯ ತೋರಿದ್ದಾನೆ. *

**ಮಂಗಲೀಶ:** ಬಾದಾಮಿ ಚಳುಕ್ಯ ವಂಶದ ದೊರೆ (596–610). ಒಂದನೆಯ ಪುಲಕೇಶಿಯ ಮಗ, ಒಂದನೆಯ ಕೀರ್ತಿವರ್ಮನ ತಮ್ಮ. ಇವನಿಗೆ ಮಂಗರಾಜ, ಮಂಗಲೀಶ, ಮಂಗಲಾರ್ಣವ, ಮಂಗಲೇಶ್ವರ ಎಂಬ ಹೆಸರುಗಳಿದ್ದುವೆಂದೂ ರಣವಿಕ್ರಾಂತ, ಉರುರಣಪರಾಕ್ರಮ ಎಂಬ ಬಿರುದುಗಳಿದ್ದುವೆಂದೂ ಇವನ ಶಾಸನಗಳಿಂದ ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಇವನನ್ನು ಪರಮಭಾಗವತನೆಂದೂ ಶಾಸನಗಳಲ್ಲಿ ವರ್ಣಿಸಲಾಗಿದೆ.

ಒಂದನೆಯ ಕೀರ್ತಿವರ್ಮ ಸು. 596ರಲ್ಲಿ ಮರಣ ಹೊಂದಿದಾಗ, ಅವನ ಮಕ್ಕಳು ಇನ್ನೂ ಬಾಲಕರಾಗಿದ್ದುದರಿಂದ ರಾಜ್ಯಾಡಳಿತ ಮಂಗಲೀಶನ ಕೈಸೇರಿತು. ಇವನು ಪಟ್ಟಕ್ಕೆ ಬಂದ ಅನಂತರ ಕಳಚುರಿಗಳ ದೊರೆ ಶಂಕರಗಣನ ಮಗ ಬುದ್ಧರಾಜ ಎಂಬವನನ್ನು 602ರ ಸುಮಾರಿನಲ್ಲಿ ಸೋಲಿಸಿದ. ಈ ಯುದ್ಧದಲ್ಲಿ ದೊರೆತ ಧನಕನಾದಿಗಳನ್ನು ಬಾದಾಮಿಯ ಸಮೀಪದಲ್ಲಿರುವ ಮಕುಟೇಶ್ವರ ದೇವಾಲಯಕ್ಕೆ ದಾನವಾಗಿ ಕೊಟ್ಟುದಲ್ಲದೆ, ತನ್ನ ವಿಜಯದ ಗುರುತಾಗಿ ದೇವಾಲಯದ ಮುಂದೆ ಒಂದು ಜಯಸ್ತಂಭವನ್ನು ನಿರ್ಮಿಸಿದ. ಹದಿನೆಂಟು ಕದನಗಳಲ್ಲಿ ವಿಜಯಿಯಾಗಿದ್ದ ಸ್ವಾಮಿರಾಜ ಎಂಬ ಕೊಂಕಣದ ಬಲಿಷ್ಠ ಸಾಮಂತನನ್ನು ಮಂಗಲೀಶ ಸಂಹರಿಸಿದನೆಂದು ಇವನ ನೆರೂರು ಶಾಸನ ತಿಳಿಸುತ್ತದೆ. ಇವನು ಪಶ್ಚಿಮ ಸಮುದ್ರದಲ್ಲಿದ್ದ ರೇವತೀದ್ವೀಪವನ್ನು (ಈಗಿನ ಗೋವ) ಗೆದ್ದುಕೊಂಡ. ಈ ಭಾಗವನ್ನು ಧ್ರುವರಾಜ ಇಂದ್ರವರ್ಮನ ಅಧಿಕಾರಕ್ಕೆ ವಹಿಸಿದ. ಮಂಗಲೀಶ ಬಾದಾಮಿಯ ಬೆಟ್ಟದಲ್ಲಿನ ವೈಷ್ಣವ ಗುಹಾದೇವಾಲಯ ಕಾರ್ಯವನ್ನು ಪೂರೈಸಿ, ಲಂಜೀಶ್ವರ (ಈಗಿನ ನಂದಿಕೇಶ್ವರ) ಎಂಬ ಗ್ರಾಮವನ್ನು ವಿಷ್ಣುವಿಗ್ರಹದ ಪ್ರತಿಷ್ಠಾಪನೆಯ ಆ ದೇವಾಲಯಕ್ಕೆ ಪುದುವಟ್ಟಾಗಿ ಕೊಟ್ಟಂತೆ ತಿಳಿದುಬರುತ್ತದೆ.

ಮಂಗಲೀಶ ಚಳುಕ್ಯ ರಾಜ್ಯದ ವಿಸ್ತಾರಕ್ಕೆ ಬಹುಮಟ್ಟಿಗೆ ಕಾರಣನಾಗಿದ್ದಿರಬೇಕು. ಇವನ ಸೈನ್ಯ ಪೂರ್ವಪಶ್ಚಿಮ ಸಮುದ್ರಗಳವರೆಗೆ ಕಾರ್ಯನಿರತವಾಗಿತ್ತು ಎಂಬ ಸೂಚನೆ ಶಾಸನಗಳಲ್ಲಿ ದೊರಕುತ್ತದೆ. ಮಂಗಲೀಶನ ರಾಜಕೀಯ ಪ್ರಭಾವ ಹೆಚ್ಚಿದಂತೆಲ್ಲ ಇವನ ರಾಜ್ಯದಾಹವೂ ಅಧಿಕವಾಗಿ ತನ್ನ ಅನಂತರ ತನ್ನ ಮಗನಿಗೆ ಅರಸೊತ್ತಿಗೆಯನ್ನು ಉಳಿಸಿಕೊಡಲು ಪ್ರಯತ್ನಿಸಿದ. ಈ ಹೊತ್ತಿಗೆ ಕೀರ್ತಿವರ್ಮನ ಹಿರಿಯ ಮಗ ಎರಡನೆಯ ಪುಲಕೇಶಿ ಪ್ರಾಪ್ತವಯಸ್ಕನಾಗಿ ಸಿಂಹಾಸನವನ್ನು ಬಯಸಿದುದರಿಂದ ಅವನಿಗೂ ಮಂಗಲೀಶನಿಗೂ ಯುದ್ಧ ಅನಿವಾರ್ಯವಾಯಿತು. ಈ ಯುದ್ಧದಲ್ಲಿ ಮಂಗಲೀಶ ಮಡಿದ (ಸು. 610). ಚಳುಕ್ಯ ಸಿಂಹಾಸನಾಧಿಕಾರ ಇಮ್ಮಡಿ ಪುಲಕೇಶಿಯ ವಶವಾಯಿತು. ಈ ಅಂಶ ಪುಲಕೇಶಿಯ ಐಹೊಳೆ ಶಾಸನದಿಂದ ಸ್ಪಷ್ಟಪಡುತ್ತದೆ. (ಬಿ.ಎನ್.ಎಸ್.)

**ಮಂಗಳಗೌರಿಯ ಹಾಡು:** ಮಂಗಳಗೌರಿ ವ್ರತದ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹಾಡುವ ಹಾಡು. ಹೆಣ್ಣುಮಕ್ಕಳು ಮಂಗಳಗೌರಿಯನ್ನು ಪೂಜಿಸುವುದರ ಹಿಂದಿರುವ ಉದ್ದೇಶವೆಂದರೆ ತಮಗೂ ಅವಳಂಥದೇ ಸೌಭಾಗ್ಯ ದೊರೆಯಲಿ ಎಂಬುದಾಗಿದೆ. ಈ ವ್ರತಸಂಪ್ರದಾಯ ಅನೇಕ ವರ್ಗಗಳಲ್ಲಿ ಆಚರಣೆಯಲ್ಲಿದೆ. ಶ್ರಾವಣಮಾಸದಲ್ಲಿ ಐದು ಮಂಗಳವಾರಗಳ ಕಾಲ ಇದು ನಡೆಯುತ್ತದೆ. ಅಂದು ಮನೆಯಲ್ಲಿ ಸಾರಿಸಿ, ರಂಗವಲ್ಲಿಯಿಂದ ಅಲಂಕರಿಸಿ, ನಂದಾದೀಪವನ್ನು ಬೆಳಗಿಸಿ ಬೆಲ್ಲದ ಅಚ್ಚಿನ ಮೇಲೆ ಅರಿಶಿನದಿಂದ ತಯಾರಿಸಿದ ಮಂಗಳಗೌರಿ ಯನ್ನಿಟ್ಟು ಅರಿಶಿನ, ಕುಂಕುಮ ಮುಂತಾದ ಮಂಗಳ ದ್ರವ್ಯಗಳಿಂದ, ಐದು ವೀಳ್ಯದೆಲೆ, ಐದು ಅಡಕೆ, 2 ಕೊಬ್ಬರಿ ಬಟ್ಟಲು, ಐದು ರೇಷ್ಮೆ ವಸ್ತ್ರಗಳಿಂದ ಅಲಂಕರಿಸಿ ದರ್ಪಣವನ್ನಿಟ್ಟು, ಫಲಪುಷ್ಪ ಗುಡಪಿಷ್ಟವೇ ಮೊದಲಾದ ನೈವೇದ್ಯಗಳಿಂದ ಪೂಜಿಸುವರು. ಪೂಜೆಯ ಸಂದರ್ಭದಲ್ಲಿ ಮಂಗಳಗೌರಿಯ ಹಾಡನ್ನು ಹಾಡುತ್ತಾರೆ. ಪೂಜೆ ನೈವೇದ್ಯಗಳಾದ ಮೇಲೆ ಹದಿನಾರು ಗುಡಪಿಷ್ಟ ಜ್ಯೋತಿಗಳಿಂದ ಮಂಗಳಗೌರಿಯ ಕಥೆಯನ್ನು ಕೇಳುತ್ತ ಕಾಡಿಗೆ ಹಿಡಿಯುತ್ತಾರೆ. ಹರನರಸಿ ಮಂಗಳಗೌರಿಯನೆ ಪೂಜಿಸಿ ಶಿರಸಿನಲಿ ತಂದು ಅಕ್ಷತೆ ತಳಿದಳು. ತಳಿದ ಅಕ್ಷತೆಯು ಸರ್ಪನ ಮೇಲೆ ಬೀಳಲು ಅದರಾಯುಷ್ಯವು ಕ್ಷೀಣವಾಯಿತು. ಹರನರಸಿ ಮಂಗಳಗೌರಿಯ ದಯದಿಂದ ಚಿರಂಜೀವಿ ಆಯ್ತು ಕೇಳೆಂದ ಹರಿಯು ಎಂದೂ ಹದಿನಾರು ವರ್ಷ ಅಲ್ಪಾಯುಷ್ಯದ ಕಂಟಕವು ಪರಿಹಾರವಾಗಲೆಂದು ಸುಶೀಲೆಯ ಹದಿನಾರು ಗುಡಪಿಷ್ಟ ಜ್ಯೋತಿ, ಹದಿನಾರು ಎಳ್ಳಿನ ಉಂಡೆಯನ್ನು ಮಾಡಿ ಪೂಜಿಸಿದಳು ಎಂದೂ ಹಾಡುವರು. ಬೆಳ್ಳಿಯ ಕಳಸದಲ್ಲಿ ಹದಿನಾರು ಎಳ್ಳಿನ ಉಂಡೆ ಮಾಡಿಟ್ಟು ಕಂಚುಕದಿಂದ ಅವರ ಬಾಯಿಕಟ್ಟಿ ಅದನ್ನು ತಾಯಿಗೆ ಬಾಗಿನವಾಗಿ ಕೊಡುವರು. ಪುತ್ರ ಬದುಕಿದನು ಕೇಳಮ್ಮ ತಾಯಿ, ಅಲ್ಪಾದಾಯುಷ್ಯ ಹೋಗಿ ಚಿರಂಜೀವಿಯಾಯ್ತವನ, ಮುತ್ತೈದೆತನ ಉಂಟಾಯಿತು. ಸೃಷ್ಟಿಗೀಶ್ವರನರಸಿ ಗೌರಿಯನೆ ಪೂಜಿಸಿ ಮುತ್ತೈದೆತನವನು ಪಡೆದಳು, ಮುತ್ತೈದೆತನವನು ಪುತ್ರ ಸಂತಾನವನು ಕೊಟ್ಟು ರಕ್ಷಿಸುವ ಮಂಗಳಗೌರಿಗೆ ಮಂಗಳ ಎಂಬ ಸೊಲ್ಲಿನೊಂದಿಗೆ ಹಾಡು ಕೊನೆಗೊಳ್ಳುತ್ತದೆ. (ಎಂ.ಎಸ್.ಎಸ್‌ಎ.)

**ಮಂಗಳದ್ರವ್ಯಗಳು:** ಒಳ್ಳೆಯದಾಗಲಿ ಎಂಬ ನಂಬಿಕೆಗೆ ಪೂರಕವಾಗಿ ಜನಪದರು ಬಳಸುವ ಅನೇಕ ಪರಿಕರಗಳೇ ಮಂಗಳದ್ರವ್ಯಗಳು. ಇವುಗಳನ್ನು ಬಳಸುವ ಸಂದರ್ಭಗಳಿಗನುಗುಣವಾಗಿ ಸ್ಥೂಲವಾಗಿ ದೈನಂದಿನ ಜೀವನದ, ಹಬ್ಬಹರಿದಿನಗಳ, ಮದುವೆ ಮುಂಜಿಗಳ ಮಂಗಳದ್ರವ್ಯಗಳೆಂದು ವಿಂಗಡಿಸಬಹುದು. ಅರಿಶಿನ, ಕುಂಕುಮ, ಹೂವು, ಗಂಧ, ಅಕ್ಷತೆ, ಬಳೆ, ರಂಗೋಲಿ, ಧೂಪ, ದೀಪ, ತೋರಣ ಇತ್ಯಾದಿಗಳನ್ನು ನಿತ್ಯಜೀವನದಲ್ಲಿಯೂ ಹಬ್ಬಹರಿದಿನಗಳಲ್ಲಿಯೂ ಮದುವೆ ಮುಂಜಿಗಳಲ್ಲಿಯೂ ಬಳಸುತ್ತಾರೆ. ಇವುಗಳೊಂದಿಗೆ ಆಯಾ ಹಬ್ಬಗಳ ಆಚರಣೆಗೆ ಅನುಗುಣವಾಗಿ ಕೆಲವು ವಿಶೇಷ ವಸ್ತುಗಳನ್ನೂ ಬಳಸುವುದುಂಟು. ಉದಾಹರಣೆಗೆ, ಸ್ವರ್ಣಗೌರೀ ವ್ರತದಲ್ಲಿ ಸಾಮಾನ್ಯವಾಗಿ ಬಳಸುವ ಪೂಜಾ ವಸ್ತುಗಳೊಂದಿಗೆ ಕಳಸ-ಕನ್ನಡಿ, ಬಳೆ-ಬಿಚ್ಚೋಲೆ, ಹದಿನಾರು ಸೊಡರು, ಧಾನ್ಯಗಳು, ಕುಪ್ಪುಸದ ಕಣ, ಬೆಲ್ಲದ ಅಚ್ಚು ಇತ್ಯಾದಿಗಳಿಂದ ಅಣಿಮಾಡಿದ ಮರದ ಬಾಗಿನ-ಇವುಗಳನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ನೀರು, ತೆಂಗಿನಕಾಯಿ, ಮಾವಿನಕೊನೆ-ಇವುಗಳಿಂದ ಕಳಸವನ್ನು ನಿರ್ಮಿಸಿ ದೇವರನ್ನು ಪೂಜಿಸುವುದು ಸಾಮಾನ್ಯವಾಗಿ ವ್ರತಗಳ ಆಚರಣೆಯಲ್ಲಿ ಮಾತ್ರ. ಗಣಪತಿ ಹಬ್ಬದಲ್ಲಿ ಗರಿಕೆಹುಲ್ಲು, ಶಿವರಾತ್ರಿಯಲ್ಲಿ ಬಿಲ್ವಪತ್ರೆ, ನಾಗಲಿಂಗ ಪುಷ್ಪಗಳು, ಮಾರಿಹಬ್ಬದಲ್ಲಿ ಕೆಂಪು ದಾಸವಾಳ ಮತ್ತು ಕಣಿಗಲೆ ಹೂವುಗಳು ಮಂಗಳ ವಸ್ತುಗಳಾಗುತ್ತವೆ. ಕಳಸ-ಕನ್ನಡಿಗೆ ಕೆಲವರು ಹೊಂಬಾಳೆಯನ್ನೂ ಇನ್ನು ಕೆಲವರು ವೀಳ್ಯದೆಲೆಯನ್ನೂ ಬಳಸುತ್ತಾರೆ. ಬಾಸಿಂಗ, ಕಂಕಣ, ಮಾಂಗಲ್ಯ, ಅರಿಸಿನದ ಬಟ್ಟೆ ಇತ್ಯಾದಿಗಳು ಮದುವೆ ಮುಂಜಿಗಳ ಸಂದರ್ಭದಲ್ಲಿ ಮಂಗಳದ್ರವ್ಯಗಳೆನಿಸಿಕೊಳ್ಳುತ್ತವೆ. ಹಸುರು ಚಪ್ಪರವನ್ನು ಅಂದು ವಿಶೇಷವಾಗಿ ಬಗನಿತಾರು, ಬಾಳೆಕಂಬ, ಮಾವಿನ ಸೊಪ್ಪು, ತೆಂಗಿನಗರಿಗಳನ್ನು ಬಳಸಿ ನಿರ್ಮಿಸುತ್ತಾರೆ. ಫಲಪುಷ್ಪಗಳ ಗೊಂಚಲುಗಳಿಂದ ಅವುಗಳನ್ನು ಅಲಂಕರಿಸುವುದೂ ಉಂಟು. ಇದೇ ಸಂದರ್ಭದಲ್ಲಿ ಹೊಸಸೀರೆ ಬಟ್ಟೆಗಳನ್ನು ಅರಿಶಿನದ ನೀರಿನಲ್ಲಿ ಅದ್ದಿ ಉಡಿಸುವುದು, ಐದು ಇಕ್ಕಲುಗಳುಳ್ಳ ಅರಿಶಿನದ ಕೊನೆಯನ್ನು ಹಸಿದಾರ ಮತ್ತು ಕಂಬಳಿದಾರಗಳಲ್ಲಿ ಬಂಧಿಸಿ ವಧೂವರರ ಕೈಗೆ ಕಂಕಣವೆಂದು ಕಟ್ಟುವುದು ಶುಭವೆಂದು ನಂಬಿಕೆಯಿದೆ. ಧಾರೆ ಎರೆಯುವುದಕ್ಕೆ ಬಳಸುವ ನೀರು ಅಕ್ಕಿಗಳೂ ಇಲ್ಲಿ ಮಂಗಳದ್ರವ್ಯಗಳೆಂದು ಪರಿಗಣಿತವಾಗುತ್ತವೆ. ಮದುವೆಯ ಹೆಣ್ಣುಮಕ್ಕಳು ದಿನಬಳಕೆಯ ಪರಿಕರಗಳೊಂದಿಗೆ ಮಾಂಗಲ್ಯ, ಮೂಗುತಿ, ಓಲೆ, ಕಾಲುಂಗುರ ಇತ್ಯಾದಿ ಆಭರಣಗಳನ್ನು ಧರಿಸುತ್ತಾರೆ. ಚೊಚ್ಚಲ ಗರ್ಭಿಣಿ ಸ್ತ್ರೀಯರಿಗೆ ನಡೆಸುವ ಸೀಮಂತದ ಬಳೆ ತೊಡಿಸುವ ಸಂದರ್ಭದಲ್ಲಿ, ಹಿರಿಮಗನ ಮದುವೆಯ ಸಂದರ್ಭದಲ್ಲಿ, ತಾಯಿಗೆ ನೇಮ ಬಿಡಿಸುವ ಸಮಯದಲ್ಲಿ ಹಸುರು ಸೀರೆ, ಹಸುರು ಬಳೆಗಳಿಗೆ ವಿಶೇಷ ಮಾನ್ಯತೆ ಉಂಟು. ವೀಳ್ಯದೆಲೆ ಅಡಕೆಗಳಿಗೆ ಮಾತ್ರ ಎಲ್ಲ ಸಂದರ್ಭಗಳಲ್ಲೂ ಪ್ರಾಶಸ್ತ್ಯವಿರುವುದು ಕಂಡುಬರುತ್ತದೆ. (ಟಿ.ಎನ್.ಎನ್.)

**ಮಂಗಳೂರ ಸಮಾಚಾರ**: 1843ರ ಜುಲೈ 1ರಿಂದ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಕನ್ನಡದ ಮೊಟ್ಟಮೊದಲ ಪಕ್ಷಪತ್ರಿಕೆ. ಜರ್ಮನ್ ಇವ್ಯಾಂಜಿಲಿಕಲ್ ಮಿಷನ್ (ಬಾಸೆಲ್ ಮಿಷನ್) ಈ ಪತ್ರಿಕೆಯನ್ನು ಆರಂಭಿಸಿತು. ಬಾಸೆಲ್ ಮುದ್ರಣಾಲಯದಲ್ಲಿ ಕಲ್ಲಚ್ಚಿನಲ್ಲಿ ಮುದ್ರಣಗೊಳ್ಳುತ್ತಿದ್ದ ನಾಲ್ಕು ಪುಟಗಳ ಈ ಸಂಚಿಕೆಯ ಮೊದಲ ಸಂಪಾದಕ ಹರ್ಮನ್ ಮೋಗ್ಲಿಂಗ್ (1811–81). ಇದರ ಬೆಲೆ ಒಂದು ದುಡ್ಡಾಗಿದ್ದು ಅಂಚೆ

ಮಂಗಳೂರ ಸಮಾಚಾರ

ಹಾಸಲು ಇದರಲ್ಲಿ ಸೇರಿರುತ್ತಿತ್ತು. ಕನ್ನಡ ನಾಡಿನ ಜನರಿಗೆ ಹೊರಜಗತ್ತಿನ ಪರಿಚಯ ಮಾಡಿಕೊಡುವುದರೊಂದಿಗೆ ಕ್ರೈಸ್ತಮತ ಪ್ರಚಾರವೂ ಇದರ ಪ್ರಧಾನ ಉದ್ದೇಶವಾಗಿತ್ತು. ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ವಿಷಯಗಳ ಪಟ್ಟಿಯಲ್ಲಿ ವೂರವರ್ತಮಾನಗಳು, ಸರ್ಕಾರದವರ ನಿರೂಪಗಳು, ಸರ್ವರಾಜ್ಯವರ್ತಮಾನಗಳು, ನೂತನವಾದ ಆಶ್ಚರ್ಯಸುದ್ದಿಗಳು, ಆಂಗ್ಲರನಡತೆಗಳು, ಸುಬುದ್ಧಿಗಳು, ಕಥೆಗಳು ಇತ್ಯಾದಿ ಸಂಗತಿಗಳಿರುತ್ತಿದ್ದವು. ಪತ್ರಿಕೆಯ ಹೆಸರೇ ಮಂಗಳೂರ ಸಮಾಚಾರವಾದ್ದರಿಂದ ಸ್ವಾಭಾವಿಕವಾಗಿ ಸ್ಥಳೀಯ ಸುದ್ದಿಗಳಿಗೆ ಆದ್ಯತೆ ಕೊಡಲಾಗುತ್ತಿತ್ತು. ಸ್ವದೇಶಿ ಸುದ್ದಿಗಳಲ್ಲದೆ ಚೀನಾ ದೇಶದ ವರ್ತಮಾನಗಳು, ಕಾಬೂಲ್ ದೇಶದ ವರ್ತಮಾನಗಳು, ಆ ದೇಶದ ಯುದ್ಧ ವಿವರಗಳು ಇತ್ಯಾದಿ ವಿಷಯಗಳು ಈ ಪತ್ರಿಕೆಯಲ್ಲಿ ನಿರೂಪಿತವಾಗಿವೆ. ಬಿ. ರೈಸನ 'ಲೋಕದ ಚರಿತ್ರೆ' ಎಂಬ ಪ್ರಪಂಚದ ಇತಿಹಾಸವನ್ನು ಒಳಗೊಂಡ ಕೃತಿ ಮೊಟ್ಟಮೊದಲಿಗೆ ಕನ್ನಡದಲ್ಲಿ ಈ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಕೆಲವು ಬೈಬಲ್ ಉಕ್ತಿಗಳನ್ನು ದಾಸರ ಪದಕ್ಕೆ ಹೋಲಿಸುವ ಸಲುವಾಗಿ ಪುರಂದರದಾಸರ ಪದಗಳು ಪ್ರಥಮತಃ ಇದರಲ್ಲಿ ಪ್ರಕಟವಾದವು.

ಪತ್ರಿಕೆಯ ಬರೆವಣಿಗೆ ಸಂಪೂರ್ಣವಾಗಿ ಸಂಪಾದಕರದ್ದೇ ಆಗಿದ್ದರೂ ಕೆಲವೊಮ್ಮೆ ಇತರರು ಬರೆದು ಕಳುಹಿಸಿದ ಸುದ್ದಿಗಳನ್ನೂ ಪ್ರಕಟಿಸಲಾಗುತ್ತಿತ್ತು. ಮಂಗಳೂರ ಸಮಾಚಾರಕ್ಕೆ ಎಷ್ಟು ಮಂದಿ ಚಂದಾದಾರರಿದ್ದರು, ಎಷ್ಟು ಪ್ರತಿಗಳು (ಪಕ್ಷಕ್ಕೆ) ಅಚ್ಚಾಗುತ್ತಿದ್ದವು ಎಂಬ ಪೂರ್ಣ ವಿವರಗಳು ಪತ್ರಿಕೆಯಲ್ಲಿ ಎಲ್ಲೂ ದೊರೆಯುವುದಿಲ್ಲ. ಈ ಪತ್ರಿಕೆಗೆ ಮೈಸೂರು, ಬಳ್ಳಾರಿ, ತುಮಕೂರು, ಶಿವಮೊಗ್ಗ, ಹುಬ್ಬಳ್ಳಿ, ಶಿರಸಿ, ಹೊನ್ನಾವರ ಮೊದಲಾದ ಕಡೆಗಳಲ್ಲಿ ಚಂದಾದಾರರಿರುತ್ತಿದ್ದರು. ಕಲ್ಲಚ್ಚಿನಲ್ಲಿ ಮುದ್ರಣಗೊಳ್ಳುತ್ತಿದ್ದ ಈ ಪತ್ರಿಕೆ ಅನಂತರ ಅಕ್ಷರ ಛಾಪಾಖಾನೆಯಲ್ಲಿ ಮುದ್ರಣಗೊಳ್ಳತೊಡಗಿತಲ್ಲದೆ, ಬಳ್ಳಾರಿಯಿಂದ 1844ರ ಮಾರ್ಚ್1ರಿಂದ ಕಂನಡ ಸಮಾಚಾರವೆಂಬ ಹೆಸರಿನಲ್ಲಿ ಪ್ರಕಟವಾಗತೊಡಗಿತು. ಪತ್ರಿಕೆಯ ಬಿಡಿ ಸಂಚಿಕೆಯ ಬೆಲೆ ಒಂದು ದುಡ್ಡಿನಿಂದ ಎರಡು ದುಡ್ಡಿಗೆ ಏರಿತು. ವಿಲಿಯಂ ಥಾಮ್ಸನ್ ಎಂಬುವವ ಪತ್ರಿಕೆಯ ಮೇಲ್ವಿಚಾರಕನಾದ. ಆದರೆ ಅನೇಕ ಕಾರಣಗಳಿಂದಾಗಿ ಪತ್ರಿಕೆ ಬಹಳ ಕಾಲ ಬದುಕಲಿಲ್ಲ. 1844 ನವೆಂಬರ್ 15ರಂದು ನಿಂತುಹೋಯಿತು.

ಮಂಗಳೂರು ಸಮಾಚಾರ ಕೇವಲ 17 ತಿಂಗಳುಗಳ ಕಾಲ ನಡೆದರೂ ಕನ್ನಡ ಪತ್ರಿಕೋದ್ಯಮ ರಂಗದಲ್ಲಿ ಇದು ಛಾಪಿಸಿದ ಮುದ್ರೆ ಬಹಳ ವಿಶಿಷ್ಟವಾದುದು. ಆಧುನಿಕ ಪತ್ರಿಕೋದ್ಯಮದ ಧ್ಯೇಯ ಧೋರಣೆಗಳೆಲ್ಲ ಈ ಪತ್ರಿಕೆಯಲ್ಲಿ ಹೊಳಹು ಹಾಕಿರುವುದು ಗಮನಿಸಬೇಕಾದ ಇನ್ನೊಂದು ಅಂಶ. ಮುಂದೆ ಸ್ಥಳೀಯರು ಈ ರಂಗದಲ್ಲಿ ಧುಮುಕಲು ಈ ಪತ್ರಿಕೆ ಸ್ಫೂರ್ತಿಯನ್ನೊದಗಿಸಿತು. ಈ ಪತ್ರಿಕೆಯ ಭಾಷೆ, ಶೈಲಿ ಈ ವಿಚಾರಗಳನ್ನು ಗಮನಿಸಿದಾಗ ಇಲ್ಲಿನ ಭಾಷೆ ಅರ್ಧವಿರಾಮ, ಪೂರ್ಣವಿರಾಮ ಇತ್ಯಾದಿ ಯಾವುದೇ ಬರೆಹದ ನಿಯಮಗಳನ್ನು ಅನುಸರಿಸಿಲ್ಲ, ಆದರೂ ಅದರಿಂದ ಓದಿಗೆ ಯಾವುದೇ ತೊಡಕುಂಟಾಗಿಲ್ಲ. ಬರೆವಣಿಗೆಯಲ್ಲಿ ಸಹಜತೆ, ಸರಳತೆ ಎದ್ದು ಕಾಣುವ ಅಂಶಗಳಾಗಿವೆ. ವಿಷಯಗಳನ್ನು ನೇರವಾಗಿ, ಯಾವುದೇ ಸುತ್ತುಬಳಸಿನ ದೊಂಬರಾಟವಿಲ್ಲದೆ ನಿರೂಪಿಸಿರುವುದು ಈ ಪತ್ರಿಕೆಯ ಸಾಧನೆಗಳಲ್ಲೊಂದು. ಕನ್ನಡಿಗರಿಗೆ 'ವರ್ತಮಾನ ಪತ್ರಿಕೆ'ಯ ಗಂಧ–ಗಾಳಿ ತಿಳಿಯದ ಹೊತ್ತಿನಲ್ಲಿ, 'ಕಗ್ಗತ್ತಲ ಯುಗ'ದಲ್ಲಿ ಹೊಸ ಸಾಧ್ಯತೆಗಳನ್ನು ಅರಿವು ಮಾಡಿಕೊಟ್ಟದ್ದು ಈ ಪತ್ರಿಕೆಯ ಇನ್ನೊಂದು ಸಾಧನೆಯಾಗಿದೆ.*

**ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಜಿಲ್ಲೆಯ ಹಾಗೂ ತಾಲ್ಲೂಕಿನ ಆಡಳಿತ ಕೇಂದ್ರನಗರ. ತಾಲ್ಲೂಕನ್ನು ಪೂರ್ವದಲ್ಲಿ ಬೆಳ್ತಂಗಡಿ ಮತ್ತು ಬಂಟ್ವಾಳ ತಾಲ್ಲೂಕುಗಳೂ ದಕ್ಷಿಣದಲ್ಲಿ ಕೇರಳ ರಾಜ್ಯ ಹಾಗೂ ಬಂಟ್ವಾಳ ತಾಲ್ಲೂಕೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರವೂ ಉತ್ತರದಲ್ಲಿ ಉಡುಪಿಜಿಲ್ಲೆಯ ಕಾರ್ಕಳ ಮತ್ತು ಉಡುಪಿ ತಾಲ್ಲೂಕುಗಳೂ ಸುತ್ತುವರೆದಿವೆ. ತಾಲ್ಲೂಕಿನಲ್ಲಿ ಗುರುಪುರ, ಮಂಗಳೂರು–ಎ, ಮಂಗಳೂರು–ಬಿ, ಸುರತ್ಕಲ್ಲು ಮತ್ತು ಮುಲ್ಕಿ ಹೋಬಳಿಗಳು, 7 ಪಟ್ಟಣಗಳು ಹಾಗೂ 102 ಗ್ರಾಮಗಳು ಇವೆ. ಈ ತಾಲ್ಲೂಕಿನ ವಿಸ್ತೀರ್ಣ 560 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 8,82,856.

ತಾಲ್ಲೂಕು ಪಶ್ಚಿಮಘಟ್ಟ ಮತ್ತು ಅರಬ್ಬೀ ಸಮುದ್ರಗಳ ನಡುವಿನ ಪಶ್ಚಿಮದ ಕಡೆಯ ಇಳಿಜಾರು ಮೈದಾನ ಪ್ರದೇಶದಲ್ಲಿದೆ. ತಾಲ್ಲೂಕಿನ ಬಹುಭಾಗ ವಿಶಾಲ ಮಟ್ಟಸ ಪ್ರದೇಶಗಳು ಮತ್ತು ಮಧ್ಯೆಮಧ್ಯೆ ಗುಡ್ಡಗಳು ಇರುವ ಪ್ರದೇಶ. ನದಿಯ ದಡಗಳನ್ನು ಬಿಟ್ಟು ಇತರ ಕಡೆಗಳಲ್ಲಿ ಜಂಬುಮಣ್ಣಿನ ಭೂಮಿ ಕಂಡುಬರುತ್ತದೆ. ಗುರುಪುರ ಹೊಳೆ ಮೊದಲು ತಾಲ್ಲೂಕಿನ ಪೂರ್ವದ ಗಡಿಯಲ್ಲಿ ಸ್ವಲ್ಪದೂರ ಹರಿದು ಅನಂತರ ವಾಯವ್ಯಕ್ಕೆ ತಿರುಗಿ ತಾಲ್ಲೂಕಿನ ಮಧ್ಯೆ ಅಡ್ಡವಾಗಿ ಹಾದು ಅನಂತರ ಇದ್ದಕ್ಕಿದ್ದಂತೆ ದಕ್ಷಿಣಾಭಿಮುಖವಾಗಿ ಕರಾವಳಿಗೆ ಸಮಾನಾಂತರವಾಗಿ ಮಂಗಳೂರಿನ ದಕ್ಷಿಣ ತುದಿಯವರೆಗೂ ಹರಿದು ಅರಬ್ಬೀಸಮುದ್ರವನ್ನು ಸೇರುತ್ತದೆ. ನೇತ್ರಾವತಿ ನದಿ ಬಂಟ್ವಾಳ ತಾಲ್ಲೂಕಿನಿಂದ ಹರಿದು ಬಂದು ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ತಾಲ್ಲೂಕನ್ನು ಅಡ್ಡವಾಗಿ ಹಾದು ಮಂಗಳೂರಿನ ದಕ್ಷಿಣ ಭಾಗದಲ್ಲಿ ಗುರುಪುರ ಹೊಳೆಯನ್ನು ಸೇರುತ್ತದೆ. ಮುಲ್ಕಿ ನದಿ ಈ ತಾಲ್ಲೂಕನ್ನು ಉಡುಪಿ ಮತ್ತು ಕಾರ್ಕಳ ತಾಲ್ಲೂಕುಗಳಿಂದ ಬೇರ್ಪಡಿಸುವ ಉತ್ತರದ ಗಡಿಯಾಗಿ ಇದೆ. ಕೆಲವು ಸಣ್ಣಪುಟ್ಟ ತೊರೆಗಳು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀಸಮುದ್ರವನ್ನು ಸೇರುತ್ತವೆ. ಈ ನದಿ ಮತ್ತು ತೊರೆಗಳ ಹರವು ಸಮುದ್ರವನ್ನು ಸೇರುವೆಡೆ ವಿಶಾಲವಾಗಿರುತ್ತದೆ. ನದಿಗಳ ಮಧ್ಯೆ ಅಲ್ಲಲ್ಲೆ ನೀರಿನಮಟ್ಟದಿಂದ ಕೆಲವೇ ಅಡಿಗಳ ಎತ್ತರವಿರುವ ಫಲವತ್ತಾದ ಕುದುರುಗಳು ಇವೆ.

ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 3,398 ಮಿಮೀ. ನೈಋತ್ಯ ಮಾರುತದಿಂದ ವಿಶೇಷ ಮಳೆಯಾಗುತ್ತದೆ. ಆಗ ನದಿ ಝರಿಗಳೆಲ್ಲ ತುಂಬಿ ಹರಿಯುತ್ತವೆ. ಆದರೆ ಬೇಸಗೆಯಲ್ಲಿ ಕೆಲವೆಡೆ ಜಲಾಭಾವ ತೋರುವುದೂ ಉಂಟು. ತಾಲ್ಲೂಕಿನ ಒಟ್ಟು 55,380 ಹೆಕ್ಟೇರು ಪ್ರದೇಶ

ಸಿಮೆಂಟ್ ಕಾರ್ಖಾನೆ, ಮಂಗಳೂರು

ದಲ್ಲಿ 9,835 ಹೆಕ್ಟೇರ್ ಬಂಜರು ಭೂಮಿ, 1,076 ಹೆಕ್ಟೇರ್ ಹುಲ್ಲುಗಾವಲು, 23,838 ಹೆಕ್ಟೇರ್ ಬೇಸಾಯ ಭೂಮಿ ಇದೆ. ಅರಣ್ಯಪ್ರದೇಶವಿಲ್ಲ. ಬತ್ತ ಇಲ್ಲಿನ ಮುಖ್ಯ ಆಹಾರ ಬೆಳೆ. ಕುದುರುಗಳ ಹಾಗೂ ನದಿ ಝರಿಗಳ ದಂಡೆಗಳಲ್ಲಿ ಮಳೆಯ ನೀರಿನ ಆಸರೆಯಿಂದ ಬತ್ತವನ್ನು ಬೆಳೆಯುತ್ತಾರೆ. ತೆಂಗು ಈ ತಾಲ್ಲೂಕಿನ ಇನ್ನೊಂದು ಮುಖ್ಯ ಬೆಳೆ. ಅಡಕೆ, ಗೇರುಬೀಜ, ಮೆಣಸು, ತರಕಾರಿಗಳು, ಮೆಣಸಿನಕಾಯಿ, ಶುಂಠಿ, ಮಾವು, ಬಾಳೆ, ಹಲಸು ಮುಂತಾದವನ್ನೂ ಬೆಳೆಯುತ್ತಾರೆ. ಮತ್ಸ್ಯೋದ್ಯಮ ಈ ತಾಲ್ಲೂಕಿನ ಒಂದು ಪ್ರಮುಖ ಕಸಬು.

ಈ ತಾಲ್ಲೂಕಿನ ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿಯ ಸಂಪರ್ಕವಿದೆ. ಇಡೀ ಜಿಲ್ಲೆಯಲ್ಲೇ ಈ ತಾಲ್ಲೂಕು ಕೈಗಾರಿಕೆಯಲ್ಲಿ ಮುಂದುವರಿದಿದೆ. ಗೇರುಬೀಜದ ಸಂಸ್ಕರಣ ಕಾರ್ಖಾನೆಗಳು, ಹೆಂಚು, ಎಣ್ಣೆ ಮತ್ತು ಸಾಬೂನು ತಯಾರಿಕಾ ಕಾರ್ಖಾನೆಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಬೃಹತ್ಪ್ರಮಾಣದ ರಸಗೊಬ್ಬರ ಕಾರ್ಖಾನೆಯೊಂದು ಕಾರ್ಯನಿರತವಾಗಿವೆ. ಸ್ಥಾಪಿತವಾಗಿದೆ. ಕೈಮಗ್ಗದ ಬಟ್ಟೆ, ಮರದ ವಸ್ತುಗಳು, ತೆಂಗಿನನಾರಿನ ವಸ್ತುಗಳು, ಚಾಪೆ, ಚರ್ಮ ವಸ್ತುಗಳು ಮೊದಲಾದವನ್ನು ತಯಾರಿಸುವ ಉದ್ಯಮಗಳು ಇವೆ. ಹಲವು ಕಾಫಿ ಸಂಸ್ಕರಣ ಕೇಂದ್ರಗಳಿವೆ. ತಾಲ್ಲೂಕಿನ ವ್ಯವಸಾಯ ಮತ್ತು ಕೈಗಾರಿಕೋದ್ಯಮಗಳ ಅಭಿವೃದ್ಧಿಗೆ ಇಲ್ಲಿರುವ ಅನೇಕ ವಾಣಿಜ್ಯ ಬ್ಯಾಂಕುಗಳು ಸಹಕಾರಿಗಳಾಗಿವೆ.

ಮಂಗಳೂರಿನಿಂದ ದಕ್ಷಿಣಕ್ಕೆ ಶೋರನೂರು ಕಡೆಗೆ ಹೋಗುವ ರೈಲುಮಾರ್ಗ ಈ ತಾಲ್ಲೂಕಿನಲ್ಲಿ ಕೆಲವೇ ಕಿಮೀಗಳಷ್ಟು ದೂರ ಮಾತ್ರ ಸಾಗುತ್ತದೆ. ಮಂಗಳೂರು-ಹಾಸನ ರೈಲುಮಾರ್ಗವಿದೆ. ತಾಲ್ಲೂಕಿನ ಎಲ್ಲ ಸ್ಥಳಗಳಿಗೂ ಉತ್ತರ ರಸ್ತೆ ಜಾಲವಿದೆ. ಮಂಗಳೂರಿನಿಂದ ಕಾಸರಗೋಡು, ಬಂಟ್ವಾಳ, ಕಾರ್ಕಳ, ಉಡುಪಿ ಈ ಸ್ಥಳಗಳಿಗೆ ಹೋಗುವ ಮಾರ್ಗಗಳು ಈ ತಾಲ್ಲೂಕಿನ ಮುಖ್ಯರಸ್ತೆಗಳು. ಕೊಂಕಣ ರೈಲ್ವೆಮಾರ್ಗ ಮಂಗಳೂರನ್ನು ಹಾಯ್ದು ಹೋಗುತ್ತದೆ. ಮಂಗಳೂರಿನ ಬಂದರು ನೌಕಾಸಂಪರ್ಕಕ್ಕೂ ವಿದೇಶ ವಾಣಿಜ್ಯಕ್ಕೂ ಉಪಯುಕ್ತವಾಗಿದೆ.

ದೇರೆಬೈಲು, ಪಡವು, ಕಂಕನಾಡಿ, ಮಂಗಳೂರು, ಉಲ್ಲಾಳ, ಮುಲ್ಕಿ ಮತ್ತು ಸೋಮೇಶ್ವರ ಇವು ಈ ತಾಲ್ಲೂಕಿನ ಪಟ್ಟಣಗಳು. ಈ ತಾಲ್ಲೂಕಿನ ಅತ್ತೂರಿನಲ್ಲಿ ಪ್ರಸಿದ್ಧ ಸುರಗಿರಿ ಮಹಾಲಿಂಗೇಶ್ವರ ದೇವಾಲಯವಿದೆ. ಮಂಗಳೂರಿಗೆ 25 ಕಿಮೀ ದೂರದಲ್ಲಿರುವ ಬಜ್ಪೆಯಲ್ಲಿ ವಿಮಾನ ನಿಲ್ದಾಣವಿದೆ. ಇಲ್ಲಿಯ ಬಜ್ಪೆ ಜಲಪಾತ ಬಹು ರಮ್ಯ. ಗುರುಪುರ ನದಿಯ ದಡದಲ್ಲಿರುವ ಗುರುಪುರ **(ನೋಡಿ)** ಒಂದು ಮುಖ್ಯಸ್ಥಳ. ಮಂಗಳೂರಿನ ದಕ್ಷಿಣಕ್ಕೆ 19 ಕಿಮೀ ದೂರದಲ್ಲಿರುವ ಹರೆಕಲ ಗ್ರಾಮದ ಬಳಿಯ ನರಹರಿ ಪರ್ವತದ ಮೇಲೆ ನರಸಿಂಹ ಮತ್ತು ಶಾರದಾಂಬ ದೇವಾಲಯಗಳಿವೆ. ಸಮುದ್ರದಂಡೆಯಲ್ಲಿರುವ ಈ ಪ್ರದೇಶ ಒಂದು ಆರೋಗ್ಯಧಾಮದಂತಿದೆ. ಮಂಗಳೂರಿನಿಂದ 27ಕಿಮೀ ಪೂರ್ವದಲ್ಲಿ ನಂದಿನಿ ನದೀ ತೀರದಲ್ಲಿರುವ ಕಟೀಲು ಗ್ರಾಮದಲ್ಲಿ ಪ್ರಸಿದ್ಧ ದುರ್ಗಾಪರಮೇಶ್ವರಿ ದೇವಾಲಯವಿದೆ. ಮಂಗಳೂರಿನ ಈಶಾನ್ಯಕ್ಕೆ 19ಕಿಮೀ ದೂರದಲ್ಲಿರುವ ಕಿನ್ನಿಗೋಳಿ ಗ್ರಾಮದ ಶ್ರೀರಾಮದೇವಾಲಯ ಹೆಸರಾದದ್ದು. ಮಂಗಳೂರಿನಿಂದ 22ಕಿಮೀ ದೂರದಲ್ಲಿರುವ ಮಳಲಿ ಗ್ರಾಮದ ಬಳಿ ಪ್ರಸಿದ್ಧವಾದ ಪೊಳಲಿ ರಾಜರಾಜೇಶ್ವರಿ ದೇವಾಲಯವಿದೆ. ಮಂಗಳೂರಿನಿಂದ 5ಕಿಮೀ ದೂರದಲ್ಲಿರುವ ಪಡವು ಗ್ರಾಮದಲ್ಲಿ ಕಾಫಿ ಸಂಸ್ಕರಣ ಕೇಂದ್ರ. ಗೇರುಬೀಜದ ಕಾರ್ಖಾನೆ ಇವೆ. ಇಲ್ಲಿನ ಶಕ್ತಿನಗರದಲ್ಲಿರುವ ರಾಮಶಕ್ತಿ ಮಿಷನ್ ಅನೇಕರನ್ನು ಆಕರ್ಷಿಸುತ್ತಿದೆ. ಮಂಗಳೂರಿನ ಉತ್ತರಕ್ಕೆ 9ಕಿಮೀ ದೂರದಲ್ಲಿರುವ ಪಣಂಬೂರು ಫಲ್ಗುಣಿ ನದಿಯ ದಡದಲ್ಲಿರುವ ಒಂದು ವ್ಯಾಪಾರ ಕೇಂದ್ರ. ಪಣಂಬೂರಿನಲ್ಲಿ ದೊಡ್ಡ ಸರ್ವಋತು ಬಂದರು ಮತ್ತು ಗೊಬ್ಬರ ಕಾರ್ಖಾನೆ ನಿರ್ಮಾಣವಾಗಿವೆ. ಸುರತ್ಕಲ್ಲು **(ನೋಡಿ)** ಒಂದು ವ್ಯಾಪಾರ ಮತ್ತು ವಿದ್ಯಾ ಕೇಂದ್ರ. ಉಲ್ಲಾಳ **(ನೋಡಿ)** ಇತಿಹಾಸ ಪ್ರಸಿದ್ಧ ಸ್ಥಳ ಹಾಗೂ ವ್ಯಾಪಾರಕೇಂದ್ರ.

ಮಂಗಳೂರು ಈ ತಾಲ್ಲೂಕು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಆಡಳಿತ ಕೇಂದ್ರ. ಪಶ್ಚಿಮ ಕರಾವಳಿಯ ಒಂದು ಮುಖ್ಯ ರೇವುಪಟ್ಟಣ. ಇದು ಬೆಂಗಳೂರಿಗೆ ಪಶ್ಚಿಮದಲ್ಲಿ 363 ಕಿಮೀ ದೂರದಲ್ಲೂ ಮುಂಬಯಿಯ ದಕ್ಷಿಣಕ್ಕೆ 673ಕಿಮೀ ದೂರದಲ್ಲೂ ಇದೆ. ವಿಸ್ತರಿತ ವಿಶಾಲ ಮಂಗಳೂರು ನಗರದಲ್ಲಿ 2,69,176. ಮಂದಿ ಪುರುಷರು, 2,69,384. ಮಂದಿ ಮಹಿಳೆಯರು ಇದ್ದು ಒಟ್ಟು ಜನಸಂಖ್ಯೆ 5,38,560. ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 2,08,665 ಮಂದಿ ಪುರುಷರು, 2,06,784 ಮಂದಿ ಮಹಿಳೆಯರು ಇದ್ದು ಒಟ್ಟು ಜನಸಂಖ್ಯೆ 4,15,449. ದೇರೆಬೈಲು, ಕಂಕನಾಡಿ, ಸೋಮೇಶ್ವರ ಮತ್ತು ಉಲ್ಲಾಳಗಳನ್ನು ನಗರಸಮಿತಿಗೆ ಸೇರಿಸಿಕೊಳ್ಳಲಾಗಿದೆ.

ಮಂಗಳೂರು ನಗರ ಕರ್ನಾಟಕದ ಪಶ್ಚಿಮ ಕರಾವಳಿಯ ಸುಂದರ ನಗರವೆಂದು ಪ್ರಸಿದ್ಧ. ಈ ಪಟ್ಟಣ ಗುರುಪುರ ಮತ್ತು ನೇತ್ರಾವತಿ ನದಿಗಳು ಕೂಡಿ ಏಕಮುಖವಾಗಿ ಸಮುದ್ರ ಸೇರುವೆಡೆ ಇದ್ದು ಪಶ್ಚಿಮ ಮತ್ತು ದಕ್ಷಿಣದಲ್ಲಿ ಹರಡಿರುವ ಈ ನದಿಗಳ ಹಿನ್ನೀರ ಹರವಿನಿಂದಲೂ ಆಗ್ನೇಯ ದಿಕ್ಕಿನಲ್ಲಿ ಫಲವತ್ತಾದ ಕೃಷಿ ಪ್ರದೇಶಗಳಿಂದಲೂ ಉತ್ತರ ಮತ್ತು ಈಶಾನ್ಯಗಳ ನಡುವೆ ಹಬ್ಬಿರುವ ಸಾಮಾನ್ಯ ಬೆಟ್ಟಗಳು ಮತ್ತು ಅವುಗಳ ಮಧ್ಯದ ಹಸುರು ತುಂಬಿದ ಸುಂದರ ಕಣಿವೆಗಳಿಂದಲೂ ಕೂಡಿದ್ದು ಎಲ್ಲೆಡೆ ತೆಂಗು, ಅಡಕೆ ಮತ್ತು ಇತರ ಮರಗಳಿಂದ ಆವೃತವಾಗಿ ಕಂಗೊಳಿಸುತ್ತದೆ. ಇಲ್ಲಿ ಸಾಮಾನ್ಯವಾಗಿ ಉತ್ತಮ ಹವಾಗುಣವಿದೆಯಾದರೂ ಬೇಸಗೆಯಲ್ಲಿ ಸೆಖೆ ಹೆಚ್ಚು. ಇದು ವ್ಯಾಪಾರ, ವಾಣಿಜ್ಯ ಹಾಗೂ ಕೈಗಾರಿಕಾ ನಗರವಾಗಿದೆ. ಇಲ್ಲಿ ಮಂಗಳೂರು ಹೆಂಚನ್ನು ತಯಾರಿಸುವ ಕಾರ್ಖಾನೆಗಳಿವೆ. ಶ್ರೀಲಂಕಾ, ಮಯನ್ಮಾರ್, ಪೂರ್ವ ಆಫ್ರಿಕ ಮತ್ತು ಆಸ್ಟ್ರೇಲಿಯಗಳಿಗೆ ಇಲ್ಲಿಂದ ಹೆಂಚು ರಫ್ತಾಗುತ್ತದೆ. ಗೋಡಂಬಿ ಕಾರ್ಖಾನೆಗಳೂ ಇಲ್ಲಿವೆ. ಬೀಡಿ ತಯಾರಿಕೆಗೂ ಮಂಗಳೂರು ಪ್ರಸಿದ್ಧ. ಮೋಟಾರ್ ಸ್ಪ್ರಿಂಗ್ಸ್, ತಂತಿ ತಯಾರಿಕೆ, ಚಿಕ್ಕ ದೋಣಿಗಳನ್ನೂ ನಾಡದೋಣಿಗಳನ್ನೂ

ಕಟ್ಟುವುದು, ಕೈಮಗ್ಗದ ಲುಂಗಿ, ಗುಂಡಿ, ಬೆತ್ತದ ಕುರ್ಚಿ, ಪ್ಲಾಸ್ಟಿಕ್ ಸಾಮಾನುಗಳ ತಯಾರಿಕೆ, ತೆಂಗುನಾರಿನ ಉತ್ಪಾದನೆಗಳು, ಸಾಬೂನು ಮತ್ತು ಕೊಬ್ಬರಿ ಎಣ್ಣೆ ಉತ್ಪಾದನೆ ಈ ಊರಿನ ಇತರ ಉದ್ಯಮಗಳು. ಬ್ಯಾಂಕ್ ಉದ್ಯಮಕ್ಕೆ ಮಂಗಳೂರು ಹೆಸರಾದದ್ದು. ಇಲ್ಲಿ ಕೆನರಾ, ವಿಜಯ, ಸಿಂಡಿಕೇಟ್ ಮುಂತಾದ ಬ್ಯಾಂಕುಗಳಿವೆ. ನಾಡಿನ ಹಲವು ಬ್ಯಾಂಕುಗಳ ಜನ್ಮಸ್ಥಾನ ಈ ಊರೆಂಬುದು ಇಲ್ಲಿನ ಹೆಗ್ಗಳಿಕೆ.

ಮಂಗಳೂರಿನ ಒಂದು ಕತೀಡ್ರಿಲ್

ಮಂಗಳೂರು ಇಂದು ವಿಶೇಷವಾಗಿ ಬೆಳೆಯುತ್ತಿರುವ ಪಟ್ಟಣವಾಗಿದ್ದು ನಾಡಿನ ನಾನಾ ಕಡೆಗಳಿಗೂ ಜಿಲ್ಲೆಯ ಅನೇಕ ಸ್ಥಳಗಳಿಗೂ ಉತ್ತಮ ಮಾರ್ಗ ಸಂಪರ್ಕ ಹೊಂದಿದೆ. ಮುಂಬಯಿ, ಬೆಂಗಳೂರು, ಪಣಜಿಗಳಿಂದ ಇಲ್ಲಿಗೆ ವಿಮಾನ ಸೌಕರ್ಯವಿದೆ. ಇದುವರೆಗೆ ಇಲ್ಲಿದ್ದ ಬಂದರು ಮಧ್ಯಮವರ್ಗದ್ದು. ಇಡೀ ಜಿಲ್ಲೆಯಲ್ಲಿ ಬೆಳೆಯುವ ಅಡಕೆ, ತೆಂಗು ಮತ್ತು ತೆಂಗಿನ ಉತ್ಪಾದನೆಗಳು, ಹಾಸನ ಮತ್ತು ಕೊಡಗು ಜಿಲ್ಲೆಗಳಿಂದ ಬರುವ ಕಾಫಿ, ಏಲಕ್ಕಿ, ಮೆಣಸು ಇಲ್ಲಿಂದ ರಫ್ತಾಗುತ್ತಿದ್ದುವು. ಆದರೆ ಈ ಬಂದರನ್ನು ಮಳೆಗಾಲದಲ್ಲಿ ಉಪಯೋಗಿಸಲು ಆಗುತ್ತಿರಲಿಲ್ಲವಾದ್ದರಿಂದ ಈಚೆಗೆ ಮಂಗಳೂರಿನಿಂದ 9ಕಿಮೀ ದೂರದಲ್ಲಿ ಗುರುಪುರ ನದಿಯ ಉತ್ತರದಲ್ಲಿ ಪಣಂಬೂರು ಗ್ರಾಮದ ಹತ್ತಿರ ಸರ್ವಋತು ಬಂದರು ನಿರ್ಮಾಣವಾಗಿದೆ. ಇಲ್ಲಿ ಸಾಮಾನ್ಯ ನೌಕಾಸಂಪರ್ಕಗಳಿಗಲ್ಲದೆ, ಕುದುರೆಮುಖದ ಕಬ್ಬಿಣದ ಅದಿರನ್ನು ವಿದೇಶಗಳಿಗೆ ರಫ್ತು ಮಾಡಲೂ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಈ ಹೊಸ ಬಂದರು ಪಟ್ಟಣದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಚೆನ್ನೈನಿಂದ ಕೊಯಮತ್ತೂರು, ಶೋರನೂರುಗಳ ಮುಖಾಂತರ ಈ ಊರಿಗೆ ಬ್ರಾಡ್‌ಗೇಜ್ ರೈಲು ಸಂಪರ್ಕವಿದೆ. ಆ ಮಾರ್ಗದಲ್ಲಿ ಇದೇ ಅಂತಿಮ ನಿಲ್ದಾಣ. ಈಗ ಮಂಗಳೂರು-ಹಾಸನ ರೈಲ್ವೆಮಾರ್ಗ ಸಹ ನಿರ್ಮಾಣವಾಗಿದೆ. ಕೊಂಕಣ ರೈಲುಮಾರ್ಗ ಮಂಗಳೂರಿನ ಮೂಲಕ ಸಾಗುತ್ತದೆ. ಪಶ್ಚಿಮ ಕರಾವಳಿಯ ಬೃಹನ್ಮಾರ್ಗ ಈ ಊರಿನ ಮೂಲಕ ಹಾದು ಹೋಗುವುದಲ್ಲದೆ, ಇಲ್ಲಿಂದ ಬೆಂಗಳೂರು, ಮೈಸೂರು, ಶಿವಮೊಗ್ಗ ಮೊದಲಾದೆಡೆಗಳಿಗೂ ಜಿಲ್ಲೆಯ ಅನೇಕ ಸ್ಥಳಗಳಿಗೂ ಉತ್ತಮ ರಸ್ತೆಗಳಿವೆ. ಮಂಗಳೂರು-ಪಾಣೆ ಮಂಗಳೂರು, ಮಂಗಳೂರು-ಗುರುಪುರ ಜಲಮಾರ್ಗ ಸಹ ಉಪಯುಕ್ತವಾಗಿದೆ.

ಮಂಗಳೂರಿನಲ್ಲಿ ಸೇಂಟ್ ಅಲೋಸಿಯಸ್, ಸೇಂಟ್ ಆಗ್ನೆಸ್ ಮತ್ತು ಸರ್ಕಾರಿ ಕಾಲೇಜುಗಳ ಜೊತೆಗೆ, ಒಂದು ಉಪಾಧ್ಯಾಯ ತರಬೇತಿ ಕಾಲೇಜು, ಕೈಗಾರಿಕಾ ತರಬೇತಿ ಕೇಂದ್ರ ಮತ್ತು ಸಮಾಜ ಕಾರ್ಯಕರ್ತರ ತರಬೇತಿ ಸಂಸ್ಥೆ ಇವೆ. ಮೈಸೂರು ವಿಶ್ವವಿದ್ಯಾನಿಲಯ 1968ರಲ್ಲಿ ಮಂಗಳೂರಿನ ಕೊಣಾಜೆಯಲ್ಲಿ ಮಂಗಳ ಗಂಗೋತ್ರಿ ಎಂಬ ಸ್ನಾತಕೋತ್ತರ ಕೇಂದ್ರ ತೆರೆಯಿತು. ಇದೇ ಮುಂದೆ ಮಂಗಳೂರು ವಿಶ್ವವಿದ್ಯಾಲಯವಾಗಿ ಪರಿವರ್ತನೆಗೊಂಡಿದೆ. ಕಾರ್ನಾಡ ಸದಾಶಿವರಾಯ ಕೇಂದ್ರ ಗ್ರಂಥಾಲಯ, ಸರ್ಕಾರಿ ವಸ್ತುಸಂಗ್ರಹಾಲಯ ಮೊದಲಾದ ಸಂಸ್ಥೆಗಳಿವೆ. ಇಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಕಚೇರಿಗಳೂ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳೂ ಒಂದು ಪೋಲಿಸ್ ತರಬೇತಿ ಕೇಂದ್ರವೂ ಇವೆ. ಗೃಹರಕ್ಷಕದಳ, ಅಗ್ನಿಶಾಮಕದಳ, ವೈದ್ಯಕೀಯ ಮತ್ತು ಇತರ ನಾಗರಿಕ ಸೌಕರ್ಯಗಳು ವ್ಯವಸ್ಥಿತವಾಗಿವೆ.

ಮಂಗಳೂರಿನಲ್ಲಿ ಅನೇಕ ದೇವಾಲಯ, ಮಸೀದಿ ಮತ್ತು ಇಗರ್ಜಿಗಳು ಇವೆ. ಇವುಗಳಲ್ಲಿ ಪ್ರಸಿದ್ಧವಾದ ಮಂಗಳಾದೇವಿಯ ದೇವಾಲಯವನ್ನು ಅತ್ತಾವರದ ಬಲ್ಲಾಳರು ಕಟ್ಟಿಸಿದರೆಂದೂ ಮತ್ಸ್ಯೇಂದ್ರನಾಥನ ಶಿಷ್ಯನಾದ ಗೋರಖನಾಥ ಈ ದೇವಾಲಯದ ಉದ್ಘಾಟನೆ ಮಾಡಿದನೆಂದೂ ಪ್ರತೀತಿ. ಆಳುಪ ವಂಶದ ದೊರೆ ಎರಡನೆಯ ಕುಂದವರ್ಮ 968ರಲ್ಲಿ ಈ ದೇವಾಲಯವನ್ನು ಮತ್ತೆ ಕಟ್ಟಿಸಿದ. ಈಗಿರುವ ದೇವಾಲಯವನ್ನು ಬಿದನೂರಿನ ನಾಯಕರು ಕಟ್ಟಿಸಿದರೆಂದು ತಿಳಿದುಬಂದಿದೆ. *

ಈಗ ಮಂಗಳೂರಿಗೇ ಸೇರಿರುವ ಕದ್ರಿಯಲ್ಲಿ ಪ್ರಸಿದ್ಧ ಮಂಜುನಾಥ ದೇವಾಲಯವೂ ನಾಥಪಂಥದವರ ಜೋಗಿಮಠವೂ ಇವೆ. ಮತ್ಸ್ಯೇಂದ್ರನಾಥ ಮತ್ತು ಗೋರಖನಾಥ ಇಬ್ಬರೂ ಈ ಸ್ಥಳಕ್ಕೆ ಬಂದಿದ್ದರೆಂದು ಪ್ರತೀತಿ. ಇಲ್ಲಿ ಸ್ವಾಭಾವಿಕ ಚಿಲುಮೆಯನ್ನೊಳಗೊಂಡಿರುವ ಒಂಬತ್ತು ಕೊಳಗಳಿವೆ. ಇಲ್ಲಿ ಕೆಲವು ಗುಹೆಗಳೂ ಇವೆ. ಅವನ್ನು ಪಾಂಡವ ಗುಹೆಗಳೆಂದು ಕರೆಯುತ್ತಾರೆ. ಮಂಜುನಾಥ ದೇವಾಲಯ ಮೂಲತಃ ಸು. 10ನೆಯ ಶತಮಾನದಲ್ಲಿ ಕಟ್ಟಲಾದುದು. ಈಗ ಈ ಭಾಗಕ್ಕೆ

ಕದ್ರಿ ಮಂಜುನಾಥ ದೇವಸ್ಥಾನದ ದೀಪಸ್ತಂಭ

ಕೆಲವು ಸೇರ್ಪಡೆಗಳಾಗಿವೆ. ಇಲ್ಲಿನ ಮೂಲ ಲಿಂಗವನ್ನು ವಾದಿರಾಜರು ಧರ್ಮಸ್ಥಳಕ್ಕೆ ಒಯ್ದರೆನ್ನಲಾಗಿದ್ದು, ಈಗ ಸ್ವಾಭಾವಿಕ ಕುಳಿಯೊಂದಕ್ಕೆ ಅರ್ಚನೆ ನಡೆಯುತ್ತಿದೆ. ಈ ದೇವಾಲಯದಲ್ಲಿರುವ ಪಂಚಲೋಹದ ಲೋಕೇಶ್ವರ ವಿಗ್ರಹದ ಪೀಠದ ಮೇಲೆ ಗ್ರಂಥಲಿಪಿಯಲ್ಲಿ ಬರೆದಿರುವ ಸಂಸ್ಕೃತ ಶಾಸನದ ಪ್ರಕಾರ ಇದು ಸು. 968ರಲ್ಲಿ ಆಳುಪ ದೊರೆ ಎರಡನೆಯ ಕುಂದವರ್ಮನಿಂದ ಪ್ರತಿಷ್ಠಾಪಿತವಾದದ್ದೆಂದು ತಿಳಿದುಬರುವುದು. ವಿಗ್ರಹ 150 ಸೆಂಮೀ ಎತ್ತರವಿದ್ದು ಮೂರು ಶಿರಗಳಿಂದಲೂ ಆರು ಬಾಹುಗಳಿಂದಲೂ ಕೂಡಿದೆ. ಇಲ್ಲಿ 90 ಸೆಂಮೀ ಎತ್ತರವುಳ್ಳ ಪಂಚಲೋಹದ ಮಂಜುನಾಥ ಮೂರ್ತಿ ಇದೆ.

ದೇವಾಲಯದಲ್ಲಿ ಗಣಪತಿ, ಪಾರ್ವತಿ, ಸುಬ್ರಹ್ಮಣ್ಯ ಹಾಗೂ ಅಣ್ಣಪ್ಪ ಮತ್ತು ಪಂಜುರ್ಲಿ ಭೂತವಿಗ್ರಹಗಳು ಇವೆ. ನಾಥಪಂಥಕ್ಕೆ ಸೇರಿದ ಕೆಲವು ಶಾಸನಗಳೂ ವಿಜಯನಗರ ಕಾಲದ ಕೆಲವು ದತ್ತಿಶಾಸನಗಳೂ ಇಲ್ಲಿವೆ. **(ಡಿ.ಎನ್.ಕೆ.;ಆರ್.ಟಿ.ಎಸ್.)**

ಮಂಗಳೂರಿನ ಚರ್ಚುಗಳಲ್ಲಿ ಬೋಳಾರದ ರೋಸರಿ (ರೊಸೇರಿಯ) ಚರ್ಚು 1526ರಲ್ಲಿ ಕಟ್ಟಿದ್ದು. ಇದನ್ನು 1910ರಲ್ಲಿ ವಿಸ್ತರಿಸಲಾಗಿದೆ. ಸೇಂಟ್ ಅಲೋಸಿಯಸ್ ಕಾಲೇಜಿನ ಚರ್ಚುನ್ನು 1885ರಲ್ಲಿ ಕೆ. ಜೋಸೆಫ್ ವಿಲ್ಲಿ ಎಂಬಾತ ಕಟ್ಟಿಸಿದ. ಇದು ರೋಮನ್ ಸೇಂಟ್ ಫಿಲಿಫ್ ನೇರಿ ಚರ್ಚಿನ ಮಾದರಿಯಲ್ಲಿದೆ. ಈ ಚರ್ಚಿನಲ್ಲಿ 1880ರಲ್ಲಿ ಇಟಲಿಯಿಂದ ಬಂದ ಪೋಷೆಮಿ ಎಂಬುವನು 1902 ರಿಂದ 1904ರಲ್ಲಿ ಚಿತ್ರಿಸಿದ ಅಮೋಘ ವರ್ಣಚಿತ್ರಗಳಿವೆ. ಬಲ್ಮಠದ ಶಾಂತಿ ಚರ್ಚನ್ನು 1862ರಲ್ಲಿ ಕಟ್ಟಲಾಯಿತು. ಇದು ಸ್ವಿಟ್ಜರ್ಲೆಂಡಿನ ಬಾಸೆಲ್‌ನ ಮಿಶನ್ ಹೌಸ್‌ನ ಮಾದರಿಯಲ್ಲಿ ಇದೆ. ಇದೂ 1962ರಲ್ಲಿ ನವೀಕೃತವಾಗಿದೆ. ಇವುಗಳ ಜೊತೆಗೆ ಕಾಂತಿ ಚರ್ಚ್ ಮತ್ತು ವಿಶ್ರಾಂತಿ ಚರ್ಚ್‌ಗಳನ್ನೂ ಹೆಸರಿಸಬಹುದು.

ಮಂಗಳೂರಿನ ಬಂದರು ಪ್ರದೇಶಕ್ಕೆ ಸೇರಿದ ಹಾಗೆ ಇರುವ ಜೀನತ್‌ಭಕ್ಷ್ ಜುಮ್ಮಾ ಮಸೀದಿ ಪ್ರಸಿದ್ಧವಾದದ್ದು. ಇದನ್ನು ಹಿಂದೆ ಮಲಿಕ್ ದೀನಾರ್ ಎಂಬ ಸಂತನ ನೇತೃತ್ವದಲ್ಲಿ ಮಂಗಳೂರಿಗೆ ಬಂದ ಅರಬ್ಬೀ ಜನ ಕಟ್ಟಿಸಿದರೆಂದು ಪ್ರತೀತಿ. ಆದರೆ ಈಗಿನ ಕಟ್ಟಡ ಹೊಸದು. ಈ ಮಸೀದಿಯ ಮರದ ಕಂಬಗಳು ಮತ್ತು ಪ್ರಾರ್ಥನಾ ಜಗತಿಗಳು ಆಕರ್ಷಕ ಕೆತ್ತನೆಗಳಿಂದ ಕೂಡಿವೆ. ಲೈಟ್‌ಹೌಸ್ ಬೆಟ್ಟದಲ್ಲಿರುವ ಈದ್ಗಾ ಮಸೀದಿಯನ್ನು ಟಿಪ್ಪುಸುಲ್ತಾನ್ ಕಟ್ಟಿಸಿದನೆಂದು ಪ್ರತೀತಿ. ಡೊಂಗರಕೇರಿಯಲ್ಲಿರುವ ಷಾ ಅಮೀರರ ಮಸೀದಿ ಸು.200 ವರ್ಷಗಳಷ್ಟು ಹಳೆಯದು. ಇದರ ಸಮೀಪದಲ್ಲೇ ಷಾ ಅಮೀರ ಎಂಬ ಸಂತನ ದರ್ಗಾ ಸಹ ಇದೆ.

ಇಂದಿನ ಮಂಗಳೂರು ನಗರಮಿತಿಯೊಳಗೆ ವಿವಿಧ ಕಾಲದಲ್ಲಿ ನಾಲ್ಕು ಕೋಟೆಗಳಿದ್ದವೆಂದು ಹೇಳುವರು. ಮೊದಲನೆಯದು ಬಿದನೂರಿನ (ಇಕ್ಕೇರಿ) ಬಸವಪ್ಪನಾಯಕ (1730–54) ಕಟ್ಟಿಸಿದ ಮಂಗಳೂರು ಕೋಟೆ. ಇದನ್ನು ಸು. 1784ರಲ್ಲಿ ಟಿಪ್ಪುಸುಲ್ತಾನ್ ಕೆಡವಿಸಿದ. ಎರಡನೆಯದು 1568ರಲ್ಲಿ ಪೋರ್ಚುಗೀಸರು ಕಟ್ಟಿದ ಸೇಂಟ್ ಸೆಬಾಸ್ಟಿಯನ್ ಕೋಟೆ. ಮೂರನೆಯದು ಕೆಲವು ಹಳೆಯ ದಾಖಲೆಗಳ ಆಧಾರದ ಮೇಲೆ ಇತ್ತೆಂದು ಹೇಳುವ ಲೈಟ್‌ಹೌಸ್ ಹಿಲ್ ಕೋಟೆ. ಇದನ್ನು ಇಕ್ಕೇರಿಯ ವೆಂಕಟಪ್ಪನಾಯಕ ಕೆಡವಿದನೆಂದು ಹೇಳುವರು. ಇಂದು ಮಂಗಳೂರು ಕೋಟೆ ಮತ್ತು ಸೆಬಾಸ್ಟಿಯನ್ ಕೋಟೆಗಳ ಅವಶೇಷಗಳು ಮಾತ್ರ ಉಳಿದಿವೆ. ಗುರುಪುರ ಹೊಳೆಗೆ ಶತ್ರುಗಳ ದೋಣಿಗಳು ಪ್ರವೇಶಿಸದಂತೆ ನೋಡಿಕೊಳ್ಳಲು ಟಿಪ್ಪುಸುಲ್ತಾನ ಕಟ್ಟಿಸಿದ ಸುಲ್ತಾನ್ ಬತೇರಿ ಇದೆ.

ಮಂಗಳೂರಿನ ವಿಹಾರ ಕೇಂದ್ರಗಳಲ್ಲಿ ಕೋರ್ಟ್‌ಹಿಲ್ ಬಹು ಸುಂದರ ಪ್ರದೇಶ. ಈ ಬೆಟ್ಟದ ಮೇಲೆ ನಿಂತು ಇಡೀ ಮಂಗಳೂರು ನಗರವನ್ನೂ ಸಮುದ್ರದ ಹಿನ್ನೀರನ್ನೂ ನೋಡಬಹುದು. ಇದರಂತೆ ಕೇಂದ್ರ ಮೈದಾನ ಮತ್ತು ಉರ್ವ ಮೈದಾನ ಪ್ರದೇಶಗಳು ವಿಹಾರಕ್ಕೆ ಮೀಸಲಾಗಿವೆ. ನಗರ ಮಧ್ಯದಲ್ಲಿರುವ ಬಾವುಟಗುಡ್ಡದ ಮೇಲೆ ಹಳೆಯ ಲೈಟ್‌ಹೌಸ್ ಇದ್ದು, ಅದರ ಸುತ್ತಲೂ ಸುಂದರ ಉದ್ಯಾನವನವಿದೆ. ಹೊಸ ಲೈಟ್‌ಹೌಸ್ ಅನ್ನು 1900ರಲ್ಲಿ ಕಟ್ಟಲಾಯಿತು. ಇದರ ಗೋಪುರ 48' ಎತ್ತರವಿದ್ದು 17ಕಿಮೀ ವರೆಗೂ ಬೆಳಕು ಬೀರಬಲ್ಲದಾಗಿದೆ.

ಈ ಊರಿಗೆ ಮಂಗಳೂರು ಎಂಬ ಹೆಸರು ಇಲ್ಲಿರುವ ಪ್ರಸಿದ್ಧ ಮಂಗಳಾದೇವಿ ದೇವಾಲಯದಿಂದ ಬಂತೆಂದು ಹೇಳಲಾಗಿದೆ. ಈ ಊರಿಗೆ ಕೊಡಿಯಾಲ ಬಂದರು ಎಂಬ ಹೆಸರೂ ಸ್ಥಳೀಯವಾಗಿ ಪ್ರಚಲಿತವಾಗಿದೆ. ನದಿಗಳ ಸಂಗಮ ಸ್ಥಳದಲ್ಲಿರುವುದರಿಂದ ತುಳುಭಾಷೆಯಲ್ಲಿ ಈ ನಗರವನ್ನು ಕುಡಾಲ ಎಂದು ಕರೆಯುತ್ತಿದ್ದರು. ಕುಡಾಲವೆಂದರೆ ಕೂಡಲವೆಂದು ಅರ್ಥ. ರೋಮನ್ ಇತಿಹಾಸಕಾರ ಪ್ಲಿನಿ (1ನೆಯ ಶತಮಾನ) ಹೆಸರಿಸಿರುವ 'ನಿಟ್ರಿಯಾಸ್', ಗ್ರೀಕ್ ಭೂಗೋಳಶಾಸ್ತ್ರಜ್ಞ ಟಾಲೆಮಿ ಹೆಸರಿಸಿರುವ ನಿಟ್ರಿಯಾಸ್, ನಿತ್ರೆ ಎಂಬ ಪದಗಳು ನೇತ್ರಾವತಿ ನದಿಯ ದಡದ ಮಂಗಳೂರಿಗೆ ಅನ್ವಯವಾಗುವುದು ಎನ್ನಲಾಗಿದೆ. ರೋಮನ್ ಗ್ರಂಥಕರ್ತೃ ಅರಿಯನ್ ಮಂಗಳೂರನ್ನು ಮುಂಡೆಗೋರ ಎಂದು ಕರೆದಿದ್ದಾನೆ. ಪ್ರಾಚೀನ ಕ್ರಿಶ್ಚಿಯನ್ ಭೂಗೋಳದಲ್ಲಿ ಮಂಗಳೂ ರನ್ನು ಮಂಗರೌತ್ ಎಂದು ಕರೆಯಲಾಗಿದೆ. 7ನೆಯ ಶತಮಾನದ ಒಂದು ತಾಮ್ರ ಶಾಸನದಲ್ಲಿ ಮಂಗಳೂರನ್ನು ಮಂಗಳಾಪುರ ಎಂದು ಹೆಸರಿಸಲಾಗಿದೆ. ಅರಬ್ಬರು ಈ ಊರನ್ನು ಮಂಜದೂರ್ ಎಂದು ಕರೆಯುತ್ತಿದ್ದರು.

ಮಂಗಳೂರಿನ ಪ್ರಾಚೀನ ಇತಿಹಾಸ ಅಸ್ಪಷ್ಟ. ಇದು 10–12ನೆಯ ಶತಮಾನದ ಸುಮಾರಿಗೆ ಆಳುಪ ಅರಸರಿಗೆ ಸೇರಿತ್ತೆನಿಸುತ್ತದೆ. 1342ರಲ್ಲಿ ಮಂಗಳೂರಿಗೆ ಭೇಟಿ ಇತ್ತಿದ್ದ ಇಬ್ನ್ ಬತೂತ ಇಲ್ಲಿ ಪರ್ಷಿಯ ಮತ್ತು ಯೆಮನ್ ವರ್ತಕರಿದ್ದರೆಂದು ಹೇಳಿದ್ದಾನೆ. 1448ರಲ್ಲಿ ವಿಜಯನಗರಕ್ಕೆ ಹೋಗುವ ಮಾರ್ಗದಲ್ಲಿ ಪರ್ಷಿಯದ ರಾಯಭಾರಿ ಅಬ್ದುಲ್ ರಜಾಕ್ ಮಂಗಳೂರಿಗೆ ಬಂದಾಗ ಭವ್ಯ ದೇವಾಲಯವೊಂದನ್ನು ಕಂಡನೆಂದು ತಿಳಿದುಬಂದಿದೆ. 1505ರಲ್ಲಿ ವಿಜಯನಗರದ ಅರಸರು ಪೋರ್ಚುಗೀಸರಿಗೆ ಕೋಠಿ ಕಟ್ಟಿಕೊಳ್ಳಲು ಅನುಮತಿ ಕೊಟ್ಟರು. 1526ರಲ್ಲಿ ಮಂಗಳೂರು ಪೋಚುಗೀಸರ ವಶವಾಯಿತು. 1555ರಲ್ಲಿ ಮಂಗಳೂರನ್ನು ಹೊಸದಾಗಿ ಕಟ್ಟಿದರು. ಬಿದನೂರಿನ ನಾಯಕರಿಗೂ ಪೋರ್ಚುಗೀಸರಿಗೂ ಆದ ಒಪ್ಪಂದದಂತೆ 1670ರಲ್ಲಿ ಪೋರ್ಚುಗೀಸರು ಮಂಗಳೂರಿನಲ್ಲಿ ಒಂದು ಕೋಠಿಯನ್ನು ಕಟ್ಟಿದರು. ಅರಬ್ಬರ ವ್ಯಾಪಾರಕ್ಕೆ ಇವರು ತಡೆಯೊಡ್ಡಿದಾಗ ಅರಬ್ಬರು 1695ರಲ್ಲಿ ಮಂಗಳೂರನ್ನು ಸುಟ್ಟರು. ಬಿದನೂರಿನ ನಾಯಕರ ಅಪ್ಪಣೆ ಪಡೆದು ಪೋರ್ಚುಗೀಸರು ಮತ್ತೆ 1714ರಲ್ಲಿ ಕೋಠಿ ಕಟ್ಟಿಕೊಂಡರು. 1763ರಲ್ಲಿ ಹೈದರ್‌ಅಲಿಯ ವಶವಾಗಿದ್ದ ಮಂಗಳೂರು 1768ರಲ್ಲಿ ಇಂಗ್ಲಿಷರ ವಶವಾಯಿತು. 1784ರಲ್ಲಿ ಟಿಪ್ಪುಸುಲ್ತಾನ್ ಮಂಗಳೂರನ್ನು ವಶಪಡಿಸಿಕೊಂಡ. ಆದರೆ ಶ್ರೀರಂಗಪಟ್ಟಣದ ಪತನದೊಂದಿಗೆ 1799ರಲ್ಲಿ ಮಂಗಳೂರು ಮತ್ತೆ ಬ್ರಿಟಿಷರ ವಶವಾಯಿತು. ಅಂದಿನಿಂದ ಮದರಾಸು ಪ್ರಾಂತ್ಯದಲ್ಲಿದ್ದ ಈ ಊರು 1956ರಲ್ಲಿ ಕರ್ನಾಟಕ ರಾಜ್ಯಕ್ಕೆ ಸೇರಿತು. *

**ಮಂಗಳೂರು ವಿಶ್ವವಿದ್ಯಾಲಯ:** 1980ರಲ್ಲಿ ರೂಪಿತವಾದ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲೊಂದು. ಮೈಸೂರು ವಿಶ್ವವಿದ್ಯಾನಿಲಯ ಮಂಗಳೂರಿನಲ್ಲಿ 1968ರಲ್ಲಿ ಒಂದು ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ತೆರೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಆಗಿನ ಕುಲಪತಿಗಳಾಗಿದ್ದ ಶಿಕ್ಷಣ ತಜ್ಞರಾದ ಶ್ರೀಮಾಲಿಯವರು ಇದಕ್ಕೆ ಪ್ರೋತ್ಸಾಹ ನೀಡಿದರು. ಅನಂತರ ಪ್ರಾರಂಭದಲ್ಲಿ ಮಂಗಳೂರಿನ ವಿವಿಧ ಕಾಲೇಜುಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಎಡೆ ಮಾಡಲಾಗಿತ್ತು. ಮಂಗಳಗಂಗೋತ್ರಿ ಎಂಬ ಹೆಸರಿನ ಈ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಥಮವಾಗಿ ಕನ್ನಡ, ಭೌತಶಾಸ್ತ್ರ, ಗಣಿತ, ವಾಣಿಜ್ಯಶಾಸ್ತ್ರ ಮತ್ತು ಜೀವವಿಜ್ಞಾನಶಾಸ್ತ್ರ ಇವುಗಳ ಬೋಧನೆಯನ್ನೂ ಪ್ರಾರಂಭಿಸಲಾಯಿತು. 1972ರಲ್ಲಿ ಈ ವಿಷಯಗಳಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಒಟ್ಟು 255. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿತ ಪುಸ್ತಕಗಳ ಮಾರಾಟದ ವಿಭಾಗವನ್ನೂ ಇಲ್ಲಿ ತೆರೆಯಲಾಗಿತ್ತು. ಈ ಸ್ನಾತಕೋತ್ತರ ಕೇಂದ್ರವೇ ಮುಂದೆ ಬೆಳೆದು ಮಂಗಳೂರು ವಿಶ್ವವಿದ್ಯಾಲಯವಾಗಿ ರೂಪುಪಡೆಯಿತು. ಈಗಿನ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸರ್ಕಾರಿ ಮತ್ತು ಖಾಸಗಿ– ಹೀಗೆ ಒಟ್ಟು

120 ಕಾಲೇಜುಗಳು ಸೇರಿವೆ. ವಿಶ್ವವಿದ್ಯಾಲಯ 25 ವಿಭಾಗಗಳನ್ನು ಹೊಂದಿದ್ದು 33 ವಿಷಯಗಳಲ್ಲಿ ಶಿಕ್ಷಣ ನೀಡುತ್ತಿದೆ. 41,870 ಮಂದಿ ಸ್ನಾತಕ ವಿದ್ಯಾರ್ಥಿ, 3332 ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ (2006). ಶೀಘ್ರಗತಿಯಲ್ಲಿ ವಿಶ್ವವಿದ್ಯಾಲಯ

ಮಂಗಳೂರು ವಿಶ್ವವಿದ್ಯಾಲಯ ಆಡಳಿತ ಕಛೇರಿ

ಬೆಳೆವಣಿಗೆ ಹೊಂದುತ್ತಿದೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ನಿಯೋಜಿತ ರಾಷ್ಟ್ರೀಯ ಶೈಕ್ಷಣಿಕ ಮೌಲ್ಯಮಾಪನ ಸಮಿತಿ (ನ್ಯಾಕ್) 2000ದಲ್ಲಿ ಈ ವಿಶ್ವವಿದ್ಯಾಲಯವನ್ನು ಚತುರ್ತಾರಾ ದರ್ಜೆಯದೆಂದು ಪರಿಗಣಿಸಿದೆ.

ಮಂಗಳೂರು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅನೇಕ ಕುಲಪತಿಗಳು ದುಡಿದಿದ್ದಾರೆ. ಬಿ. ಷೇಕ್‌ಅಲಿ (1980–85) ಈ ವಿಶ್ವವಿದ್ಯಾಲಯದ ಮೊದಲ ಕುಲಪತಿ. ಅನಂತರ ಕೆ.ಎಂ.ಶಫಿಯುಲ್ಲಾ (1985–89), ಎಂ.ಪಿ. ಸುಬ್ರಮಣಿಯನ್ (ಪ್ರಭಾರ, 1989 ಅಕ್ಟೋಬರ್ 13–26), ಎಂ.ಐ. ಸವದತ್ತಿ (1989–95), ಎಸ್. ಗೋಪಾಲ್ (1995–2001), ಬಿ. ಹನುಮಯ್ಯ (2001–2005), ಬಿ. ತಿಮ್ಮೇಗೌಡ (ಕಾರ್ಯಭಾರ, 2005–06). ಈಗಿನ ಕುಲಪತಿ ಕೆ.ಎಂ. ಕಾವೇರಿಯಪ್ಪ (2006 ಜನವರಿ 12 ರಿಂದ). *

**ಮಂಗೇಶರಾವ್, ಉಗ್ರಾಣ**: 1893–1973. ಹೊಸಗನ್ನಡ ಅರುಣೋದಯ ಕಾಲದ ಲೇಖಕರು, ಶಿಕ್ಷಕರು, ಕವಿಗಳು, ಸಂಶೋಧಕರು. ಇವರು ಹುಟ್ಟಿದ್ದು ಕುಂದಾಪುರದಲ್ಲಿ. ಇವರ ತಂದೆ ಉಗ್ರಾಣ ಶಿವರಾಯರು. ಇವರ ಮನೆತನದ ಹಿರಿಯರು ವಿಜಯನಗರ ಸಂಸ್ಥಾನದ ಉಗ್ರಾಣಿಗಳಾಗಿದ್ದುದರಿಂದ ಇವರ ಮನೆತನಕ್ಕೆ ಈ ಹೆಸರು ಬಂತೆನ್ನಲಾಗಿದೆ. ಮಂಗೇಶರಾಯರ ಶಿಕ್ಷಣ ಮಂಗಳೂರಿನಲ್ಲಿ ನಡೆಯಿತು. ಎಸ್.ಎಸ್.ಎಲ್.ಸಿ. ಮುಗಿದ ಅನಂತರ ಶಿಕ್ಷಕ ತರಬೇತಿ ಪಡೆದು ಮಂಗಳೂರಿನ ಸೇಂಟ್ ಅಲೋಸಿಯಸ್ ಕಾಲೇಜಿನಲ್ಲಿ

ಕನ್ನಡ ಪಂಡಿತರಾಗಿ ಮೂರು ವರ್ಷ ಕೆಲಸ ಮಾಡಿದರು. ಅನಂತರ ಪುತ್ತೂರಿನ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇರಿ ಸುಮಾರು 32 ವರ್ಷಗಳಷ್ಟು ದೀರ್ಘಕಾಲ ಸೇವೆ ಸಲ್ಲಿಸಿ ನಿವೃತ್ತರಾದರು.

ಕನ್ನಡ ಸಂಸ್ಕೃತಗಳ ಜೊತೆಗೆ ಇಂಗ್ಲಿಷ್‌ನಲ್ಲೂ ಒಳ್ಳೆಯ ಪಾಂಡಿತ್ಯಗಳಿಸಿದ್ದ ಮಂಗೇಶರಾಯರು ಹಲವಾರು ಪ್ರೌಢಲೇಖನಗಳನ್ನೂ ಕೆಲವು ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ಹಿಂದೆ ದಕ್ಷಿಣಕನ್ನಡಜಿಲ್ಲೆಯಿಂದ ಪ್ರಕಟವಾಗುತ್ತಿದ್ದ ಸಹಕಾರ ಪತ್ರಿಕೆ, ಕನ್ನಡ ಕೋಗಿಲೆ, ಕರ್ನಾಟಕ ಕೇಸರಿ, ರಾಷ್ಟ್ರಬಂಧು–ಈ ಮುಂತಾದ ಪತ್ರಿಕೆಗಳಲ್ಲಿ ಇವರ ಅನೇಕ ಬರೆಹಗಳು ಪ್ರಕಟವಾಗಿವೆ. ರತ್ನಾಕರವರ್ಣಿಯ ಭರತೇಶವೈಭವವನ್ನು ಸಮಗ್ರವಾಗಿ ಪರಿಶೋಧಿಸಿ, ಸಂಪಾದಿಸಿ ಪ್ರಕಟಿಸಿದ್ದಾರೆ. ನಾರಾಯಣ ಕವಿಯ ಉತ್ತರರಾಮಚರಿತೆಯನ್ನು ಕುರಿತು ಸಂಶೋಧನೆ ಮಾಡಿದ್ದಾರೆ. ಕೌಶಿಕ ರಾಮಾಯಣವನ್ನು ಕಾರಂತರ ಜೊತೆಯಲ್ಲಿ ಸಂಪಾದಿಸಿದ್ದಾರೆ. ಭಾರತದ ತುಂಬೆಲ್ಲ ಮಾಡಿದ ತಮ್ಮ ಪ್ರವಾಸದ ಅನುಭವಗಳನ್ನು ತಂದೆ ಮಗಳಿಗೆ ಬರೆದ ಪತ್ರಗಳು ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಬಾಲವ್ಯಾಕರಣ, ಶಾಲಾ ವ್ಯಾಕರಣ – ಇವು ಇವರ ಇತರ ಕೃತಿಗಳು.

ಮಂಗಳೂರಿನ ಬಾಲಸಾಹಿತ್ಯ ಮಂಡಳ, ಬಾಸೆಲ್ ಮಿಶನ್, ಮೆಕ್ಮಿಲನ್ ಮುಂತಾದ ಸಂಸ್ಥೆಗಳಿಂದ ದಾಮೋದರ ಬಾಳಿಗರಿಂದ – ಪ್ರಕಟವಾಗಿರುವ ಕನ್ನಡ ಪುಸ್ತಕಗಳಲ್ಲಿ ಮಂಗೇಶರಾಯರ ಅನೇಕ ಪದ್ಯಗಳೂ ಗದ್ಯ ಬರೆಹಗಳೂ ಸೇರಿವೆ. ಇವರ ಸಮಗ್ರ ಕೃತಿಗಳನ್ನು ಸಂಗ್ರಹಿಸಿ ಉಗ್ರಾಣ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ (ಸಂ: ಲೀಲಾಭಟ್). (ಎಲ್.ವಿ.ಪಿ.)

**ಮಂಗೇಶರಾವ್, ಉಳ್ಳಾಲ**: 1878–1942. ಹೆಸರಾಂತ ಭಾಷಾ ಸೇವಕರು; ಶಿಕ್ಷಣತಜ್ಞರು. ಇವರು ಜನಿಸಿದ್ದು ಮಂಗಳೂರಿನಲ್ಲಿ, ಕೊಂಕಣಿ ಸಾರಸ್ವತ ಬ್ರಾಹ್ಮಣ ಕುಟುಂಬವೊಂದರಲ್ಲಿ. ಮಂಗಳೂರಿನಲ್ಲಿ ವ್ಯಾಸಂಗ ಮಾಡಿ ಬಿ.ಎ., ಎಲ್.ಟಿ. ಪದವೀಧರರಾಗಿ ಅಂದಿನ ಮದರಾಸು ಸರ್ಕಾರದ ವಿದ್ಯಾ ಇಲಾಖೆಯಲ್ಲಿ ನೌಕರಿಗೆ ಸೇರಿದರು. 1924ರಲ್ಲಿ ಮಂಗಳೂರಿನ ಗೌರ್ನಮೆಂಟ್ ಹೈಯರ್ ಎಲಿಮೆಂಟರಿ ಟ್ರೇನಿಂಗ್ ಶಾಲೆಯ ಮುಖ್ಯಾಧ್ಯಾಪಕರಾದರು. ಅನಂತರ ಧಾರವಾಡ, ಬೆಳಗಾಂವಿ, ಕಾರವಾರ, ಬಿಜಾಪುರ ಜಿಲ್ಲೆಗಳಲ್ಲಿ ಎಜುಕೇಶನ್ ಇನ್ಸ್‌ಪೆಕ್ಟರರಾಗಿ ದುಡಿದು 1930ರಲ್ಲಿ ನಿವೃತ್ತರಾದರು.

ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಕನ್ನಡ ಸಹಕಾರಿ ಹಾಗೂ ಉಡುಪಿಯಿಂದ ಪ್ರಕಟವಾಗುತ್ತಿದ್ದ ಬಾಲಚಂದ್ರ ಎಂಬ ಮಾಸಪತ್ರಿಕೆಗಳಿಗೆ ಮಂಗೇಶರಾಯರು ಸ್ವಲ್ಪಕಾಲ ಸಂಪಾದಕರಾಗಿ ಕೆಲಸಮಾಡಿದ್ದಾರೆ. ಇವರಿಗೆ ಯಕ್ಷಗಾನ ಕಲೆಯಲ್ಲೂ ಒಳ್ಳೆಯ ಅಭಿರುಚಿ ಇತ್ತು. ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಖಗೋಳ ವೈಚಿತ್ರ್ಯ (1930) ಎಂಬ ಪುಸ್ತಕವನ್ನು ಬರೆದಿದ್ದಾರೆ. ಶಿಕ್ಷಣ (1933) ಎಂಬುದು ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದ ಇವರ ಒಂದು ಗ್ರಂಥ. ನಿಷ್ಕಾಮ ಪ್ರೇಮ (1936) ಇವರ ಒಂದು ಕಾದಂಬರಿ. ಶಶಿಕಾಂತನ ವುಯಿಲು (1933), ಸಮಾಜದ್ರೋಹಿ (1932)– ಇವು ಇವರ ಎರಡು ಭಾಷಾಂತರ ಕೃತಿಗಳು. (ಎಲ್.ವಿ.ಪಿ.)

**ಮಂಚೇನಹಳ್ಳಿ**: ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಗೌರಿಬಿದನೂರಿನ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿ ಉತ್ತರ ಪಿನಾಕಿನಿ ನದಿಯ ಬಲದಂಡೆಯ ಮೇಲಿರುವ ಪಟ್ಟಣ ಹಾಗೂ ಹೋಬಳಿಯ ಆಡಳಿತ ಕೇಂದ್ರ. ಜನಸಂಖ್ಯೆ 1,010.

ಊರಿನಲ್ಲಿ ಒಂದು ಖಾಸಗಿ ಪ್ರೌಢಶಾಲೆ, ಸರ್ಕಾರಿ ಹಿರಿಯ ಕನ್ನಡ ಮತ್ತು ಉರ್ದು ಪ್ರಾಥಮಿಕ ಶಾಲೆ, ಸರ್ಕಾರ ಆಸ್ಪತ್ರೆ, ಪಶುವೈದ್ಯಶಾಲೆ ಇದ್ದು, ಅಂಚೆ ತಂತಿ, ವಿದ್ಯುಚ್ಛಕ್ತಿ ಮುಂತಾದ ಸೌಲಭ್ಯವಿದೆ. ಒಂದು ಬ್ಯಾಂಕು ಮತ್ತು ಖಾಸಗಿ ಬೀಜ ಸಂಸ್ಕರಣ ಕೇಂದ್ರಗಳಿವೆ. ಇಲ್ಲಿ ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ. ಈ ಪಟ್ಟಣ 1947ರಿಂದ ಪುರಸಭಾಡಳಿತಕ್ಕೆ ಸೇರಿದೆ.

ಇಲ್ಲಿಯ ಶ್ರೀರಾಮ, ವೆಂಕಟೇಶ್ವರ, ಆಂಜನೇಯ, ಬಸವಣ್ಣ, ಕನ್ನಿಕಾ ಪರಮೇಶ್ವರಿ ಮತ್ತು ಬ್ರಹ್ಮದೇವರ ದೇವಾಲಯಗಳು ಪ್ರಮುಖವಾದವು.

ಶ್ರೀ ರಾಮದೇವರ ಹೆಸರಿನಲ್ಲಿ ಆ ದೇವಾಲಯವನ್ನು ಕರೆಯುತ್ತಿದ್ದರೂ ಅಲ್ಲಿಯ ಪ್ರಮುಖ ವಿಗ್ರಹ ಸು. 3' ಎತ್ತರದ ಆಂಜನೇಯ. ಆಂಜನೇಯನ

ಶಿರದ ಮೇಲೆ ಸು. 8' ಎತ್ತರದ ಕೋದಂಡಪಾಣಿ ಶ್ರೀರಾಮನ ವಿಗ್ರಹವನ್ನು ಒಂದೇ ಕಲ್ಲಿನಲ್ಲಿ ಬಿಡಿಸಲಾಗಿದೆ. ಶ್ರೀರಾಮ ಮತ್ತು ವೆಂಕಟರಮಣರ ಉತ್ಸವದ ಮೂರ್ತಿಗಳಿವೆ. ಮೂರು ದೇವರುಗಳು ಇರುವುದರಿಂದ ವೆಂಕಟರಮಣ ರಾಮಾಂಜನೇಯ ದೇವಾಲಯವೆಂದೂ ಹೇಳುವುದುಂಟು. ದೇವಾಲಯದ ಮುಂಭಾಗದಲ್ಲಿ ಸುಮಾರು ಮೂರುವರೆ ಅಡಿ ಎತ್ತರದ ಬೃಂದಾವನವಿದೆ.

ಇಲ್ಲಿ ಪ್ರಸನ್ನವೆಂಕಟೇಶ್ವರ ಸ್ವಾಮಿಯ ಗುಡಿಯೂ ಇದೆ. ವೆಂಕಟೇಶ್ವರನ ಹೆಸರಿನಲ್ಲಿ ವೈಶಾಖ ಶುದ್ಧದಲ್ಲಿ 15 ದಿನಗಳು ವಿಶೇಷ ಪೂಜೆ, ಐದನೆಯ ದಿನ ಬ್ರಹ್ಮ ರಥೋತ್ಸವ ನಡೆಯುತ್ತವೆ. ದೇವಾಲಯದ ಕಪ್ಪು ಕಲ್ಲಿನ ಕನ್ನಿಕಾಪರಮೇಶ್ವರಿ ವಿಗ್ರಹ ಜಿಲ್ಲೆಗೆ ವಿಶಿಷ್ಟವಾದುದು. ಊರಿನ ಪೂರ್ವಕ್ಕಿರುವ ಕೆರೆಯ ಕೋಡಿ ಹತ್ತಿರ ಜೈನರ ಬ್ರಹ್ಮದೇವಾಲಯವಿದೆ. ಸು. 6' ಎತ್ತರದ ಕಲ್ಲುಗುಂಡಿನಲ್ಲಿ ಕುದುರೆಯ ಮೇಲೆ ಕುಳಿತಿರುವ ಬ್ರಹ್ಮದೇವರನ್ನು ಕೆತ್ತಲಾಗಿದೆ. ಪ್ರತಿಗುರುವಾರ ನಡೆಯುವ ವಿಶೇಷಪೂಜೆಗೆ ಜೈನ ಯಾತ್ರಾರ್ಥಿಗಳು ಗಣನೀಯ ಪ್ರಮಾಣದಲ್ಲಿ ಆಗಮಿಸುತ್ತಾರೆ. (ಎ.ಬಿ.ಬಿ.)

**ಮಂಜರಾಬಾದ್**: ಹಾಸನ ಜಿಲ್ಲೆಯಲ್ಲಿ ಸಕಲೇಶಪುರಕ್ಕೆ ನೈಋತ್ಯದಲ್ಲಿ ಸು. 6ಕಿಮೀ ದೂರದಲ್ಲಿರುವ ಕೋಟೆ. ಬೆಂಗಳೂರು–ಮಂಗಳೂರು ಮಾರ್ಗ ಮಧ್ಯದಲ್ಲಿದೆ. ಈ ಕೋಟೆಯನ್ನು ಟಿಪ್ಪುಸುಲ್ತಾನ್ 1792ರಲ್ಲಿ ಕಟ್ಟಿಸಿದ. ಅವನು ಕೋಟೆಯನ್ನು ನೋಡಲು ಬಂದಾಗ ಸುತ್ತ ಕವಿದಿದ್ದ ಮಂಜು ಮತ್ತು ಅಲ್ಲಿನ ಸುಂದರ ವಾತಾವರಣದಿಂದ ಆಕರ್ಷಿತನಾಗಿ ಅದನ್ನು ಮಂಜರಾಬಾದ್ (ಸುಂದರ ಪ್ರದೇಶ) ಎಂಬುದಾಗಿ ಕರೆದನಂತೆ. ಕೋಟೆ ಕಲ್ಲುಕಟ್ಟಡ. ತಳವಿನ್ಯಾಸದಲ್ಲಿ ಅಷ್ಟಕೋನದ ನಕ್ಷತ್ರಾಕಾರದಲ್ಲಿದೆ.

ಹಿಂದೆ ಮಂಜರಾಬಾದು ಸಕಲೇಶಪುರ ಪ್ರದೇಶ ಆಡಳಿತ ಕೇಂದ್ರವಾಗಿದ್ದುದರಿಂದ ತಾಲ್ಲೂಕನ್ನು ಮಂಜರಾಬಾದ್ ತಾಲ್ಲೂಕು ಎಂದು ಕರೆಯಲಾಗುತ್ತಿತ್ತು. ಈಗ ಮಂಜರಾಬಾದ್ ಬೇಚಿರಾಕ್ ಪ್ರದೇಶ. ಇಲ್ಲಿನ ಕೋಟೆಯೂ ಬಹಳಷ್ಟು ಶಿಥಿಲವಾಗಿದೆ. *

**ಮಂಜುಗುಣಿ[1]**: ಉತ್ತರಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಒಂದು ಗ್ರಾಮ. ಕುಮಟ ಮತ್ತು ಶಿರಸಿ ಮಧ್ಯೆ ಶಿರಸಿಯಿಂದ 26 ಕಿಮೀ ದೂರದಲ್ಲಿದೆ. ಜನಸಂಖ್ಯೆ 554. ಇಲ್ಲಿನ ಮುಖ್ಯರಸ್ತೆಯಿಂದ 4ಕಿಮೀ ಒಳಗೆ ಮಂಜುಗುಣಿ ಗ್ರಾಮವಿದೆ. ಚಳಿಗಾಲದಲ್ಲಿ ಈ ಊರನ್ನು ಮಂಜು ಮುಸುಕುವುದರಿಂದ ಮಂಜುಗುಣಿ ಎಂಬ ಹೆಸರು ಬಂದಿದೆಯೆಂದು ಪ್ರತೀತಿ. ವಾದಿರಾಜರು ತೀರ್ಥಪ್ರಬಂಧ ಕೃತಿಯಲ್ಲಿ ಈ ಊರನ್ನು ಉಲ್ಲೇಖಿಸಿದ್ದಾರೆ. ಇಲ್ಲಿ ವೆಂಕಟರಮಣ ದೇವಸ್ಥಾನವಿದೆ. ಈ ದೇವರನ್ನು ಬೇಟಿ ವೆಂಕಟರಮಣ ಎಂದು ಕರೆಯಲಾಗುತ್ತದೆ. ಇದನ್ನು ವಿಜಯನಗರ ಶೈಲಿಯಲ್ಲಿ ಕಟ್ಟಲಾಗಿದೆ. ಸೋದೆ ಅರಸರು ಇದನ್ನು ಪುನರುಜ್ಜೀವನಗೊಳಿಸಿದರು. ದೇವಸ್ಥಾನದಲ್ಲಿ ಮುಖಮಂಟಪ, ನವರಂಗ, ಅರ್ಧಮಂಟಪ ಮತ್ತು ಗರ್ಭಗೃಹಗಳಿವೆ. ಮುಖಮಂಟಪ ಇತ್ತೀಚಿನದು. ನವರಂಗ ಸುಂದರವಾಗಿದೆ. ಇದರಲ್ಲಿ ಅನೇಕ ಪೌರಾಣಿಕ ಚಿತ್ರಗಳಿವೆ. ನವರಂಗದ ಹೊರಗೋಡೆಗಳ ಮೇಲೆ ರಾಮಾಯಣ, ಮಹಾಭಾರತದ ಅನೇಕ ಚಿತ್ರಗಳಿವೆ. ಇದರಲ್ಲಿ ಶೇಷಶಯನ, ಗೋಪಾಲಕೃಷ್ಣ, ಗಣಪತಿ, ನರಸಿಂಹ, ಮಾರುತಿ, ಅನ್ನಪೂರ್ಣೆ ಮೊದಲಾದ ಚಿತ್ರಗಳು ಆಕರ್ಷಕವಾಗಿವೆ. ನವರಂಗಕ್ಕೆ ಪ್ರವೇಶ ಮಾಡುವಲ್ಲಿ ಗರುಡ ಹಾಗೂ ಮಾರುತಿಯ ಚಿತ್ರಗಳಿವೆ. ಎಡಭಾಗದಲ್ಲಿ ನವಗ್ರಹಗಳಿವೆ. ವೆಂಕಟೇಶನಮೂರ್ತಿ ಕಪ್ಪುಕಲ್ಲಿನದ್ದಾಗಿದ್ದು ಕೈಗಳಲ್ಲಿ ಶಂಖ, ಚಕ್ರ, ಧನಸ್ಸು ಮತ್ತು ಬಾಣಗಳಿವೆ. ಈ ಮೂರ್ತಿ ವಾದಿರಾಜರ ಪ್ರಕಾರ 'ತಿರುಮಲಯೋಗಿ' ಭಂಗಿಯನ್ನು ಹೋಲುತ್ತದೆ. ಮುಖಮಂಟಪದ ಕಂಬಗಳ ಮೇಲೆ ಕುಳಿತ ಭಂಗಿಯ ವೈಷ್ಣವ ಸಂತರ ಶಿಲ್ಪಗಳಿವೆ. ಪದ್ಮಾವತಿ ಗುಡಿಯು ದೇವಾಲಯದ ಆಗ್ನೇಯ ಮೂಲೆಯಲ್ಲಿದೆ.

ಈ ಗ್ರಾಮದ ಊರ ಬಾಗಿಲಿನಲ್ಲಿ ಆದಿ ಮಂಜುಗುಣಿ ಎಂಬ ಸ್ಥಳವಿದೆ. ಅಲ್ಲಿ ದೊಡ್ಡ ಕೆರೆ ಇದೆ. ಚೈತ್ರಪೂರ್ಣಿಮೆಯಂದು ಇಲ್ಲಿ ತೆಪ್ಪೋತ್ಸವ ನಡೆಯುತ್ತದೆ. ಇಲ್ಲಿ ಅಘನಾಶಿನಿ ನದಿ ಉಗಮವಾಗುತ್ತದೆಂದು ನಂಬಿಕೆ. ವೆಂಕಟರಮಣ ದೇವಾಲಯದಲ್ಲಿರುವ 7ಮೀ ಎತ್ತರದ ಮರದ ದೊಡ್ಡ ರಥ ಸುಂದರವಾದ ಕೆತ್ತನೆಗಳಿಂದ ಕೂಡಿದೆ. ಚೈತ್ರಮಾಸದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಬೇರೆ ಬೇರೆ ಕಡೆಗಳಿಂದ ಸಾವಿರಾರು ಭಕ್ತರು ಬಂದು ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. (ಎಸ್.ಎಚ್.ಇ.)

**ಮಂಜುಗುಣಿ[2]**: ಉತ್ತರ ಕನ್ನಡ ಜಿಲ್ಲೆ ಅಂಕೋಲ ತಾಲ್ಲೂಕಿನ ಒಂದು ಗ್ರಾಮ. ಅಂಕೋಲದಿಂದ 7 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,512. ಗಂಗಾವಳಿ ನದಿಯ ತಟದಲ್ಲಿ ನದಿಮುಖವಾಗಿದೆ. ಮೊದಲಿಗೆ ಈ ಊರನ್ನು ಮಂಜುಗುಣಲಿ ಎಂದು ಕರೆಯುತ್ತಿದ್ದರು. ಇಲ್ಲಿ ಗಣಪತಿ, ಜಟ್ಟಿಗ ಮತ್ತು ಕನ್ನಮ್ಮ ದೇವಾಲಯಗಳಿವೆ. ಇಲ್ಲೊಂದು ಶಾಸನವಿದ್ದು (16ನೆಯ ಶತಮಾನ) ಇದು ಗೇರುಸೊಪ್ಪೆ ರಾಜ ಕೃಷ್ಣದೇವನದು. ಇಲ್ಲಿಗೆ ಸಮೀಪದಲ್ಲಿ ಸುಂದರವಾದ 'ಕುರ್ವೆ' ದ್ವೀಪ ಗಂಗಾವಳಿ ನದಿಯಲ್ಲಿದೆ. (ಎಸ್.ಎಚ್.ಇ.)

**ಮಂಜುನಾಥ,ಡಿ.**: 1928– . ಹಿರಿಯ ರಾಜಕಾರಣಿ. ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಅಧ್ಯಕ್ಷರು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಜಾಜೂರು ಗ್ರಾಮದಲ್ಲಿ 1928 ಆಗಸ್ಟ್ 26ರಂದು ಜನಿಸಿದರು. ತಂದೆ ಕಾಮಸಮುದ್ರದ ಮರುಗಪ್ಪ, ತಾಯಿ ಎಲ್ಲಮ್ಮ.

ಬಡ ಕಾರ್ಮಿಕ ಕುಟುಂಬದಿಂದ ಬಂದಂತಹ ಇವರು ಪ್ರಾಥಮಿಕ ಶಿಕ್ಷಣವನ್ನು ಜಾಜೂರುಗ್ರಾಮದಲ್ಲೂ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಣವನ್ನು ಚಿತ್ರದುರ್ಗದಲ್ಲೂ ಇಂಟರ್ ಮೀಡಿಯಟ್ ಶಿಕ್ಷಣವನ್ನು ದಾವಣಗೆರೆಯಲ್ಲೂ ಮುಗಿಸಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ



ಬಿ.ಎಸ್ಸಿ ಪದವಿ ಪಡೆದರು. ಬೆಂಗಳೂರಿನಲ್ಲಿ ಸರ್ಕಾರಿ ಕಾನೂನು ವಿದ್ಯಾಲಯದಲ್ಲಿ ಬಿ.ಎಲ್. ಪದವಿಯನ್ನು ಗಳಿಸಿದರು. ಅನಂತರ ಚಿತ್ರದುರ್ಗದಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು (1959).

ಇವರ ಆಸಕ್ತಿ ಸಮಾಜ ಸೇವೆಯ ಕಡೆ ವಾಲಿತು. ಚಿತ್ರದುರ್ಗದಲ್ಲಿದ್ದಾಗ ಹಲವಾರು ವಿದ್ಯಾರ್ಥಿನಿಲಯಗಳ ಸಮಿತಿಗಳ ಸದಸ್ಯರಾಗಿದ್ದರು. ಚಳ್ಳಕೆರೆ ತಾಲ್ಲೂಕಿನ ಶ್ರೀ ಬಸವೇಶ್ವರ ವ್ಯವಸಾಯ ಒಕ್ಕೂಟದ ಸಂಘಕ್ಕೆ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. 1967ರಲ್ಲಿ ಸಕ್ರಿಯ ರಾಜಕೀಯ ಪ್ರವೇಶಿಸಿದರು. ಹಿರಿಯೂರು ವಿಧಾನ ಸಭಾಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾದರು. ಅನಂತರ ವಿಧಾನಸಭೆಯ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು. ಸುಮಾರು ಎರಡು ವರ್ಷಗಳು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿದ್ದರು (1972–80). ಕಾಂಗ್ರೆಸ್

ಪಕ್ಷವನ್ನು ತೊರೆದ ಬಳಿಕ ಜನತಾ ಪಕ್ಷವನ್ನು ಸೇರಿದರು (1977). ಜಿಲ್ಲಾಧ್ಯಕ್ಷರಾಗಿ ಮೂರು ವರ್ಷಗಳು ಸೇವೆ ಸಲ್ಲಿಸಿದರು. ಅನಂತರ ರಾಜ್ಯ ಜನತಾ ಪಕ್ಷದ ಕಾರ್ಯದರ್ಶಿಯಾಗಿ ನೇಮಕಗೊಂಡರು. 1983ರಲ್ಲಿ ಕರ್ನಾಟಕ ಸರ್ಕಾರ ಇವರನ್ನು ವಿಧಾನ ಪರಿಷತ್ತಿಗೆ ನಾಮಕರಣ ಮಾಡಿತು. ಅನಂತರ ಕರ್ನಾಟಕ ಪ್ರದೇಶ ಜನತಾ ಪಕ್ಷದ ಅಧ್ಯಕ್ಷರಾದರು (1984). ಜನತಾ ಪಕ್ಷದ ಸರ್ಕಾರದಲ್ಲಿ ಸಚಿವರಾಗಿ ಹಲವಾರು ಖಾತೆಗಳನ್ನು ನಿರ್ವಹಿಸಿದರು. ಯೋಜನೆ-ಸಾಂಖ್ಯಿಕ ಹಣಕಾಸು ಸಚಿವರಾಗಿ (1983-84), ಕಾರ್ಮಿಕ ಸಚಿವರಾಗಿ (1985), ಉನ್ನತಶಿಕ್ಷಣ ಸಚಿವರಾಗಿ (1986-87), ಅರಣ್ಯ ಸಚಿವರಾಗಿ (1996-99), ಕರ್ನಾಟಕ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ (1987-1992). 2004ರ ಏಪ್ರಿಲ್‌ನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಹಿರಿಯೂರು ಕ್ಷೇತ್ರದಿಂದ ಜಾತ್ಯಾತೀತ ಜನತಾದಳ ಪಕ್ಷದ ಅಭ್ಯರ್ಥಿಯಾಗಿ ಜಯಗಳಿಸಿದರು. ಅನಂತರ ಕೆಲಕಾಲ ಉನ್ನತ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದರು. ಹಾಲಿ ಜಾತ್ಯಾತೀತ ಜನತಾದಳ ಪಕ್ಷದ ಸಂಸದೀಯ ಮಂಡಲಿ ಅಧ್ಯಕ್ಷರಾಗಿದ್ದಾರೆ. (ಎಂ.ಆರ್‌ಇ.)

**ಮಂಟೇಸ್ವಾಮಿ**: ಕೆಲವು ಶತಮಾನಗಳ ಹಿಂದೆ ಧರ್ಮಕ್ರಾಂತಿಯನ್ನೆಸಗಿ ತನ್ನದೇ ಆದ ಪರಂಪರೆಯನ್ನು ನಿರ್ಮಿಸಿದ ಒಬ್ಬ ಧಾರ್ಮಿಕ ಪವಾಡಪುರುಷ. ಕನ್ನಡದ ಧಾರ್ಮಿಕ ಜನಪದ ಕಾವ್ಯವೊಂದರ ಕಥಾನಾಯಕ. ಕರ್ನಾಟಕದ ಧಾರ್ಮಿಕ ವೃತ್ತಿಗಾಯಕರಲ್ಲಿ ಪ್ರಮುಖರೆನಿಸುವ ನೀಲಗಾರರ ಮತ್ತು ಆ ಸಂಪ್ರದಾಯವನ್ನು ಒಪ್ಪಿಕೊಂಡವರ ಆರಾಧ್ಯದೈವ, ಆದಿಗುರು.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಈತ ಚಾರಿತ್ರಿಕ ವ್ಯಕ್ತಿ ಎನ್ನುವುದಕ್ಕೆ ಮುಟ್ಟನಹಳ್ಳಿ ಶಾಸನ, ವೀರಸಂಗಯ್ಯನ 'ನಂದಿ ಆಗಮ ಲೀಲೆ' (1589), ಚೀಲಾಳಸ್ವಾಮಿ ಷಟ್ಸ್ಥಲ ಶಿವಾಯಣ (1615), ದೇವಚಂದ್ರನ ರಾಜಾವಳೀ ಕಥೆ (1782)- ಈ ಮೊದಲಾದವುಗಳಲ್ಲಿರುವ ಇವನ ಕುರಿತ ಕೆಲವು ಉಲ್ಲೇಖಗಳು ಪ್ರಮುಖ ಆಕರಗಳಾಗಿವೆ. ಮಂಟೇಸ್ವಾಮಿಯ ಕಾವ್ಯ ಎಂಬ ಜನಪದ ಕಾವ್ಯವೊಂದು ಉಳಿದು ಬಂದಿದೆ. ಈ ಕಾವ್ಯದಲ್ಲಿ ಮಂಟೇಸ್ವಾಮಿಯನ್ನು ಧರೆಗೆ ದೊಡ್ಡವರು, ಪ್ರಭುದೇವರು ಎಂದು ಕರೆಯಲಾಗಿದೆ. ಆದರೆ 12ನೆಯ ಶತಮಾನದ ಅಲ್ಲಮಪ್ರಭುವಿಗೂ ಮಂಟೇಸ್ವಾಮಿಯವರಿಗೂ ಯಾವುದೇ ರೀತಿಯ ಸಂಬಂಧ ಇದ್ದಂತೆ ತೋರುವುದಿಲ್ಲ. ಮಂಟೇಸ್ವಾಮಿ ಕಾವ್ಯದಲ್ಲಿ ಧರೆಗೆ ದೊಡ್ಡವರನ್ನು ಪರಶಿವನೆಂದೇ ಪರಿಗಣಿಸಲಾಗಿದೆ. ಇದೇ ಕಾವ್ಯದಲ್ಲಿ ಇವರನ್ನು 'ಕೈಲಾಸದಲ್ಲಿದ್ದಾಗ ನಮ್ಮ ಸ್ವಾಮಿಗೆ ಭೂತಲದಲ್ಲಿ ಎಂಬತ್ನಾಲ್ಕು ಲಕ್ಷ ವನಾಚರದಲ್ಲಿ ಎಂಬತ್ನಾಲ್ಕು ಲಕ್ಷ ಅಡಿಯ ನೋಡಿ ಸ್ವಾಮಿಪಾದವನ್ನು ಕೃಷ್ಣನೂ ನೋಡಲಿಲ್ಲ, ಬ್ರಹ್ಮನೂ ತಿಳಿಯಲಿಲ್ಲ'- ಇತ್ಯಾದಿಯಾಗಿಯೂ 'ಪರಾತ್ಪರವಸ್ತು, ಪರಂಜ್ಯೋತಿಸ್ವರೂಪ, ಸಾಕ್ಷಾತ್ ಪರಶಿವಮೂರ್ತಿ' ಎಂದೂ ವರ್ಣಿಸಲಾಗಿದೆ. ಪರಶಿವ ಕಲ್ಯಾಣದ ಬಸವೇಶ್ವರರ ದೃಢವನ್ನು ಪರಿಕಿಸಲೋಸುಗ ಭೂತಲಕ್ಕೆ ಬಂದನೆಂದೂ ಇಲ್ಲಿ ಚಿತ್ರಿಸಲಾಗಿದೆ.

ಪ್ರಭುದೇವರನ್ನು ಕುರಿತ ಕಲ್ಪನೆ ಶಿಷ್ಟಕಾವ್ಯಗಳಲ್ಲಿ ಒಬ್ಬೊಬ್ಬ ಕವಿಗೂ ಭಿನ್ನವಾಗಿ ತೋರುತ್ತದೆ. ಹರಿಹರ ನಿರ್ಮಾಯನೆಂಬವನು ಸುರಸತಿಯರಲ್ಲಿ ಒಬ್ಬಳನ್ನು ಕಾಮಿಸಿ ನೋಡಿದ್ದರಿಂದ ಭೂಲೋಕದಲ್ಲಿ ಅವರಿಬ್ಬರೂ ಹುಟ್ಟಬೇಕಾಯಿತೆಂದು ಚಿತ್ರಿಸಿದರೆ, ಎಳಂದೂರು ಹರೀಶ್ವರ ಗಿರಿಜೆಯ ಆಗ್ರಹಕ್ಕೆ ಪಾತ್ರನಾಗಿ ಪ್ರಭುದೇವ ಭೂಲೋಕಕ್ಕೆ ಬರಬೇಕಾಯಿತೆಂದು ಹೇಳುತ್ತಾನೆ. ಚಾಮರಸ 'ತನ್ನ ನಿಜದ ಸ್ವರೂಪನಾದ ಅಲ್ಲಮನು ಸುಜ್ಞಾನಿಯೆನಿಸಿ ಮಹಾಮಹಿಮನೆನಿಸಿ ಭೂಲೋಕದಲ್ಲಿ ನಿಜವನ್ನು ಬೋಧಿಸುವನು' ಎಂದು ಪರಶಿವನು ಪಾರ್ವತಿಗೆ ಹೇಳಿದಂತೆ ಚಿತ್ರಿಸಿದ್ದಾನೆ. ಮಂಟೇಸ್ವಾಮಿ ಕಾವ್ಯದ ಧರೆಗೆ ದೊಡ್ಡವರ ಕಲ್ಪನೆಗೂ ಚಾಮರಸನ ಪ್ರಭುಲಿಂಗಲೀಲೆಯ ಕಲ್ಪನೆಗೂ ಸ್ವಲ್ಪಮಟ್ಟಿನ ಸಾಮ್ಯವನ್ನು ಗುರುತಿಸಬಹುದಾಗಿದೆ. ಆದರೆ ಈ ಯಾವ ಕಾವ್ಯವೂ ಪ್ರಭುವಿನ ಮೂಲವನ್ನಾಗಲೀ ಧರೆಗೆ ದೊಡ್ಡವರ ಮೂಲವನ್ನಾಗಲೀ ಐತಿಹಾಸಿಕವಾಗಿ ಸ್ಥಾಪಿಸಲು ವಿಫಲವಾಗಿವೆ.

ಕಲ್ಯಾಣದ ಶರಣರ ಪ್ರಸ್ತಾಪ ಮಂಟೇಸ್ವಾಮಿ ಕಾವ್ಯದಲ್ಲಿ ಬರುವುದರಿಂದ ಬಸವೇಶ್ವರರ ಕಾಲಕ್ಕೇ ಮಂಟೇಸ್ವಾಮಿಯ ಕಾಲವನ್ನೂ ಒಯ್ಯಬಹುದಾಗಿದೆ. ಕಲ್ಯಾಣದಲ್ಲಿ ಬಸವೇಶ್ವರರ ದೃಢವನ್ನು ಪರೀಕ್ಷಿಸಿ ಮಂಟೇಸ್ವಾಮಿ 'ಧರೆಗೆ ದೊಡ್ಡವರು' ಎಂಬ ಅಂಕಿತದಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರು ಕಲ್ಯಾಣದ ಹರಳಯ್ಯನ ಬೂದಿಗುಡ್ಡೆಯ ಮೇಲೆ ವಿಲಕ್ಷಣ ರೂಪಿನಲ್ಲಿ ಕಾಣಿಸಿಕೊಂಡ ಪರಿಯನ್ನು ಜನಪದ ಕಾವ್ಯ ಹೀಗೆ ಬಣ್ಣಿಸಿದೆ: 'ಕೈಯುವೆ ಸೊತ್ತುಗಳು ಕಾಲುವೆ ಕುಂಟುಗಳು ಕಣ್ಣುವೆ ಕುರುಡುಗಳು ಕಿವೀಲಿ ಭಂಗಿ ಸೊಪ್ಪು ಕೈಲಿ ಸುರಿಗಡಿಗೆ ಸತ್ತೆಮ್ಮೆ ಕರವ ಹೆಗಲ ಮ್ಯಾಲೆ ಹೊತ್ತುಕೊಂಡು ಕೈಲಾಸದಿಂದ ಕಲ್ಯಾಣಕ್ಕೆ ದಯಮಾಡುತ್ತಾರೆ........ ಮೂಗಂಡುಗ ಕಜ್ಜಿ ಮೂಗಂಡುಗ ನೊಣ ಗತಗತನೆ ನಾರ‍್ತ ಇದ್ರು' ಇಂಥ ವಿಚಿತ್ರ ರೂಪಿನಲ್ಲಿ ಕಾಣಿಸಿಕೊಂಡ ಧರೆಗೆ ದೊಡ್ಡವರನ್ನು ಬಸವೇಶ್ವರರು ಭಕ್ತಿಗೌರವಗಳಿಂದ ಕರೆದೊಯ್ದು ಇವರ ಕರುಣೆಗೆ ಪಾತ್ರರಾದರು. ಅಲ್ಲಿ ನೆರೆದಿದ್ದ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರ ಆಗ್ರಹಕ್ಕೆ ಗುರಿಯಾದರು ಎಂಬ ಸಂದರ್ಭ ಇಲ್ಲಿ ಬರುತ್ತದೆ. ಧರೆಗೆ ದೊಡ್ಡವರು ಕಲ್ಯಾಣವನ್ನು ಬಿಟ್ಟು ದಕ್ಷಿಣಾಭಿಮುಖವಾಗಿ ಹೊರಟರು ಎಂದು ಮುಂದೆ ಚಿತ್ರಿಸಲಾಗಿದೆ. ಈ ಕಾವ್ಯದ ಪ್ರಕಾರ ಧರೆಗೆ ದೊಡ್ಡವರು ಐಕ್ಯವಾದುದು ಮಳವಳ್ಳಿಯ ತಾಲ್ಲೂಕಿನ ಬೊಪ್ಪಗೌಡನಪುರದಲ್ಲಿ.

ಮಂಟೆಸ್ವಾಮಿ ಮಠ, ಬೊಪ್ಪಗೌಡನಪುರ

ಮಂಟೇಸ್ವಾಮಿ ಕಾವ್ಯದ ಈ ಕೆಲವು ಪ್ರಸಂಗಗಳು ಪ್ರಭುದೇವರನ್ನು ಕುರಿತ ಕೆಲವು ಕಾವ್ಯಗಳಲ್ಲಿ ಸ್ವಲ್ಪ ಸಾಮ್ಯವನ್ನು ಪಡೆದಿವೆ. ತುಸು ವ್ಯತ್ಯಾಸದೊಡನೆ ಪ್ರಭುಲಿಂಗಲೀಲೆ, ಪ್ರಭುದೇವರ ಪುರಾಣ ಮತ್ತು ನಿರಂಜನವಂಶ ರತ್ನಾಕರ ಮೊದಲಾದ ಗ್ರಂಥಗಳಲ್ಲಿ ಇದನ್ನು ಕಾಣಬಹುದು. ಆದರೆ ಪ್ರಭು ಐಕ್ಯವಾದ ನೆಲೆ ಶ್ರೀಶೈಲದ ಕದಳಿಬನವೆಂದು ಪ್ರೌಢಕಾವ್ಯಗಳು ಸಾರುತ್ತವೆ. ಮಂಟೇಸ್ವಾಮಿಯ ಕಾವ್ಯದಲ್ಲಿ ಈ ಅಂಶ ಸಂಪೂರ್ಣವಾಗಿ ಬದಲಾಗಿದೆ.

ಮೇಲಿನ ಅಂಶಗಳನ್ನು ಗಮನಿಸಿದರೆ ಮಂಟೇಸ್ವಾಮಿಯವರಿಗೂ ಅಲ್ಲಮಪ್ರಭುವಿಗೂ ಸಂಬಂಧವನ್ನು ಕಲ್ಪಿಸಲು ಆಧಾರಗಳು ಸಾಲವು ಎಂಬುದು ಸ್ಪಷ್ಟವಾಗುತ್ತದೆ. ಮಂಟೇಸ್ವಾಮಿ ವೀರಶೈವ ಸಂಪ್ರದಾಯದ ಶರಣರಾಗಿ ಎಲ್ಲಿಯೂ ತೋರುವುದಿಲ್ಲ. ತಮ್ಮದೇ ಆದ ಜನಪದ

ಧರ್ಮವೊಂದನ್ನು ನೆಮ್ಮಿ ತಮ್ಮ ಮಹಿಮೆಯಿಂದ, ಪವಾಡಶಕ್ತಿಯಿಂದ ಅನೇಕ ಶಿಷ್ಯರನ್ನು ಪಡೆದುಕೊಂಡು ಮಂಟೇಸ್ವಾಮಿ ಪರಂಪರೆಯನ್ನು ಸ್ಥಾಪಿಸಿದಂತೆ ತೋರುತ್ತದೆ. ಏಕೆಂದರೆ ಮಂಟೇಸ್ವಾಮಿ ಸಂಪ್ರದಾಯದ ಮಠಗಳಿಗೆ ನಡೆದುಕೊಳ್ಳುವವರು ವೀರಶೈವೇತರ ಜನಾಂಗದವರು.

ಮಂಟೇಸ್ವಾಮಿ ಎಂಬ ಹೆಸರಿನ ಬಗೆಗೆ ವಿವರಣೆ ಮಂಟೇಸ್ವಾಮಿ ಕಾವ್ಯದಲ್ಲಿಯೇ ದೊರೆಯುತ್ತದೆ. ತಮ್ಮ ಶಿಷ್ಯರೊಡಗೂಡಿ ದಕ್ಷಿಣಾಭಿಮುಖವಾಗಿ ಹೊರಟ ಮಂಟೇಸ್ವಾಮಿ ಮಳವಳ್ಳಿ ಬಳಿಯ ಆದಿಹೊನ್ನಾಯಕನ ಹಳ್ಳಿಗೆ ಬರುತ್ತಾರೆ. ಅಲ್ಲಿ ತಮ್ಮ ಶಿಷ್ಯರನ್ನೆಲ್ಲ ಒಂದೆಡೆ ಬಿಟ್ಟು ಬಳೆ ಮುದ್ದಮ್ಮ ಎಂಬಾಕೆಯ ಮನೆಯ ಮುಂದೆ 'ಕೋರಣ್ಯದ ಭಿಕ್ಷ'ಕ್ಕಾಗಿ ಬರುತ್ತಾರೆ. ಮುದ್ದಮ್ಮ ಹಟ್ಟಿಯಲ್ಲಿ ಆಗ ಹಾಲು ಕರೆಯುತ್ತಿರುತ್ತಾಳೆ. ಕಾಲಲ್ಲಿ ಜಂಗು, ಕೈಯಲ್ಲಿ ಕಂಡಾಯ ಹಿಡಿದು ಝುಗ್ ಝುಗ್ ಎಂದು ಶಬ್ದಮಾಡಿಕೊಂಡು ಬಂದ ಧರೆಗೆ ದೊಡ್ಡವರನ್ನು ನೋಡಿ ಹಸು ಬೆದರಿ ಹಾಲಿನ ತಂಬಿಗೆಯನ್ನು ಒದೆಯುತ್ತದೆ. ಮುದ್ದಮ್ಮ ಸಿಟ್ಟಾಗಿ ಹಾಳಾದ ಮಂಟೇದಯ್ಯ ಮುಂದೆ ಹೋಗು ಎಂದು ನುಡಿಯುತ್ತಾಳೆ. ಮಂಟುಕೊ ಶಬ್ದ ಬಿದ್ದುಹೋಗು, ಉರುಳು ಎಂಬ ಅರ್ಥದಲ್ಲಿ ಪ್ರಯೋಗದಲ್ಲಿದೆ. ಧರೆಗೆ ದೊಡ್ಡವರು ಅಲ್ಲಿಂದಾಚೆಗೆ ಮಂಟೇದಯ್ಯ ಎಂಬ ಹೆಸರನ್ನೇ ಸ್ವೀಕರಿಸಿದರು.

ಮಂಟೇಸ್ವಾಮಿಯ ಬಗೆಗೆ ಅನೇಕ ವಿವರಗಳು ನೀಲಗಾರರ **(ನೋಡಿ)** ಧಾರ್ಮಿಕ ಕಾವ್ಯವಾದ 'ಮಂಟೇಸ್ವಾಮಿ ಕಾವ್ಯ'ದಲ್ಲಿ ದೊರೆಯುತ್ತವೆಯಾದರೂ 'ಮಂಟೇಸ್ವಾಮಿಯವರ ಮೂಲದ ಬಗ್ಗೆ ಈ ಕಾವ್ಯದಲ್ಲಿ ಯಾವ ಸುಳಿವುಗಳೂ ದೊರೆಯುವುದಿಲ್ಲ. ಈ ಕಾವ್ಯದಲ್ಲಿ ಇವರು ನೇರವಾಗಿ ಕೈಲಾಸದಿಂದ ಬಂದವರು ಎಂಬಂತೆ ಒಂದು ಕಾಲ್ಪನಿಕ ಹಿನ್ನೆಲೆಯನ್ನು ಆರೋಪಿಸಲಾಗಿದೆ. ಒಂದು ಪಾಠದ ಪ್ರಕಾರ ಮಾದೇಶ್ವರ, ಕೊಂಗಳ್ಳಿ ಮಲ್ಲೇಶ್ವರ ಹಾಗೂ ಮಂಟೇಸ್ವಾಮಿಯವರು ಏಕಕಾಲದಲ್ಲಿ ಭೂಲೋಕಕ್ಕೆ ಬಂದವರು ಎಂದು ವರ್ಣಿಸಲಾಗಿದೆ. ಜನಪದ ಕಾವ್ಯಗಳ ಪ್ರಕಾರ ಮಂಟೇಸ್ವಾಮಿಯವರು ಧರೆಗೆ ದೊಡ್ಡವರು, ಪರಂಜ್ಯೋತಿ ಎನಿಸಿ ಮೊದಲು ಕಾಣಿಸಿಕೊಳ್ಳುವುದು ಕಲ್ಯಾಣ ಪಟ್ಟಣದ ಹರಳಯ್ಯ ಬೂದಿಗುಡ್ಡೆಯ ಮೇಲೆ. ಬಸವೇಶ್ವರ, ನೀಲಮ್ಮ ಅವರನ್ನು ಹರಸಿ ಕಲ್ಯಾಣದಲ್ಲಿ ರಾಚಪ್ಪಾಜಿ, ಅವರ ತಂಗಿ ಚೆನ್ನಾಜಮ್ಮ ಮತ್ತು ಫಲಾಹಾರದಯ್ಯ ಎಂಬ ಶಿಷ್ಯರನ್ನು ಬಸವೇಶ್ವರರಿಂದ ಸ್ವೀಕರಿಸಿ ತಮ್ಮ ತಪಸ್ಸಿಗೆ ಯೋಗ್ಯವಾದ ನೆಲೆಯನ್ನು ಅರಸಿ ಹೊರಡುತ್ತಾರೆ. ಕಲ್ಯಾಣದ ಬಾಗಿಲಲ್ಲಿ ವೀರಭದ್ರನ ಹಲಗೆಯನ್ನು ಗೇಯುತ್ತಿದ್ದ ಬಾಚಿ ಬಸವಯ್ಯನೂ ಇವರ ಶಿಷ್ಯನಾಗಿ ಬರುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಆದರೆ ಮುಂದೆ ಮಳವಳ್ಳಿಯ ಬಳಿಯ ನಿಡುಗಟ್ಟದಲ್ಲಿ ಹುಟ್ಟಿ ತಮ್ಮ ಶಿಷ್ಯನಾಗಬೇಕೆಂದು ಹರಸಿ ಇವರು ಮುಂದೆ ಹೊರಡುತ್ತಾರೆ. ಮುಂದೆ ಈ ಬಾಚಿಬಸವಯ್ಯನೇ ಬಾಲಕೆಂಪಣ್ಣ ಎಂಬ ಅಭಿಧಾನದಲ್ಲಿ ಹುಟ್ಟಿ ಮಂಟೇಸ್ವಾಮಿಯ ಶಿಷ್ಯನಾಗಿ ಸಿದ್ಧಪ್ಪಾಜಿ ಎಂಬ ಹೆಸರನ್ನು ಪಡೆಯುತ್ತಾನೆ.

ಮಂಟೇಸ್ವಾಮಿ ದಕ್ಷಿಣಕ್ಕೆ ಹೊರಟುದು ತಮಗೆ ಯೋಗ್ಯವಾದ ಒಂದು ದಿವ್ಯನೆಲೆಯನ್ನು ಅರಸಿ ಕಲ್ಯಾಣದಿಂದ ಹೊರಬಿದ್ದ ಇವರು ವೀರಶೈವ ಧರ್ಮವನ್ನು ಸ್ವೀಕರಿಸಿದ್ದರೆ ಎಂಬುದರ ಬಗ್ಗೆ ಸಂದೇಹವಿದೆ. ಮುಂದೆ ಇವರು ಸ್ಥಾಪಿಸಿದ ಮಠಗಳು ವೀರಶೈವ ಧರ್ಮಕ್ಕೆ ಯಾವ ರೀತಿಯಲ್ಲೂ ಸಂಬಂಧಪಡುವುದಿಲ್ಲ. ಇವರ ಶಿಷ್ಯಪರಂಪರೆಯೂ ತನ್ನದೇ ಆದ ಜನಪದ ಧರ್ಮವೊಂದನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಇದನ್ನು ಗಮನಿಸಿದರೆ ಮಂಟೇಸ್ವಾಮಿ ಸ್ವತಂತ್ರವಾದ ಜನಪದ ಧರ್ಮವೊಂದನ್ನು ಪ್ರತಿಪಾದಿಸಿದ ಒಬ್ಬ ಧಾರ್ಮಿಕ ಪುರುಷರಾಗಿ ತೋರುತ್ತಾರೆ; ಅಥವಾ ಕಲ್ಯಾಣದಲ್ಲಿ ವೀರಶೈವವನ್ನು ನಿರಾಕರಿಸಿ ದಕ್ಷಿಣ ಕರ್ನಾಟಕದ ದಾರಿಯನ್ನು ಹಿಡಿದ ಕ್ರಾಂತಿಕಾರಿಯಾಗಿಯೂ ಇವರ ಹಿನ್ನೆಲೆಯನ್ನು ಕಾಣಬೇಕಾಗುತ್ತದೆ. ಎಲ್ಲ ಜಾತಿಮತದವರನ್ನೂ ತಮ್ಮ ಧರ್ಮದ ವ್ಯಾಪ್ತಿಗೆ ಒಳಪಡಿಸುತ್ತ, ಅವರನ್ನು ಶಿಷ್ಯರನ್ನಾಗಿ ಪಡೆಯುತ್ತ, ಪವಾಡಗಳನ್ನು ಮೆರೆಯುತ್ತ ಕರ್ನಾಟಕದ ಆ ತುದಿಯಿಂದ ಈ ತುದಿಯವರೆಗೆ ಸಂಚರಿಸಿ ಧರ್ಮಪ್ರಸಾರ ಮಾಡಿದ ಮಹಿಮಾನ್ವಿತ ಪುರುಷ ಮಂಟೇಸ್ವಾಮಿ.

ಮಂಟೇಸ್ವಾಮಿಯವರು ಕಲ್ಯಾಣವನ್ನು ಬಿಟ್ಟಾಗ ಮೂರು ಮಂದಿ ಶಿಷ್ಯರನ್ನು ಮಾತ್ರ ಪಡೆದಿದ್ದರು. ತಮ್ಮ ಪುಟ್ಟ ಪರಿವಾರದೊಡನೆ ಹೊರಟ ಇವರು ಮೊದಲು ಕೊಡೇಕಲ್ಲಿನ ಸಮೀಪಕ್ಕೆ ಬರುತ್ತಾರೆ. ಇವರ ಹಿರಿಯ ಶಿಷ್ಯ ರಾಚಪ್ಪಾಜಿ ಅಲ್ಲಿಂದ ವಿಜಯನಗರಕ್ಕೆ ಹೋಗಿ ಅಲ್ಲಿನ ಗಾರುಡಿಗರನ್ನು ಪವಾಡದ ಮೂಲಕ ಸೋಲಿಸುತ್ತಾನೆ. ಅಲ್ಲಿಂದ ಮುಂದೆ ಅವರೆಲ್ಲ ಮಂಟೇಸ್ವಾಮಿಯವರ ಶಿಷ್ಯರಾಗಿ ಉಳಿಯುತ್ತಾರೆ. ಮುಂದೆ ಕಾಗಿನೆಲೆಗೆ ಬಂದ ಮಂಟೇಸ್ವಾಮಿಯವರು ದೊಡ್ಡಮ್ಮ ಎಂಬ ಹೆಣ್ಣುಮಗುವನ್ನು ಶಿಷ್ಯೆಯನ್ನಾಗಿ ಪಡೆಯಲು ಪ್ರಯತ್ನಿಸುತ್ತಾರೆ. ರಾಚಪ್ಪಾಜಿಗೆ ಮುಂದೆ ಮದುವೆ ಮಾಡುವ ದೃಷ್ಟಿಯಿಂದ ದೊಡ್ಡಮ್ಮನನ್ನು ತಮ್ಮ ಪವಾಡದ ಮೂಲಕವೇ ಪಡೆದುಕೊಳ್ಳುತ್ತಾರೆ. ಅಲ್ಲಿಂದ ಸಕುರಾಯ ಪಟ್ಟಣಕ್ಕೆ ಬಂದು ಅಲ್ಲಿನ ಇಬ್ಬರು ರಾಜಕುಮಾರರನ್ನು ಪವಾಡದ ಮೂಲಕವೇ ತಮ್ಮ ಶಿಷ್ಯರನ್ನಾಗಿ ಪಡೆದು ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೊರಡುತ್ತಾರೆ. ಅನಂತರ ಚನ್ನಪಟ್ಟಣದ ಕೂರ್ಮಗೆರೆ ರಾಜಪ್ಪ ಇವರ ಶಿಷ್ಯನಾಗುತ್ತಾನೆ. ಮಳವಳ್ಳಿಗೆ ಬಂದು ಹೆಗ್ಗಡೇಗೌಡನೊಬ್ಬನನ್ನು ಶಿಷ್ಯನನ್ನಾಗಿ ಪಡೆಯುತ್ತಾರೆ. ಹೀಗೆಯೇ ಊರಿಂದ ಊರಿಗೆ ಧರ್ಮಯಾತ್ರೆಯನ್ನು ನಡೆಸುತ್ತಾ ಬಂದ ಇವರು ಕೊನೆಗೆ ಮಳವಳ್ಳಿಯ ಪೂರ್ವದಿಕ್ಕಿನಲ್ಲಿ ಕುಂದೂರು ಬೆಟ್ಟದ ಸಮೀಪದಲ್ಲಿರುವ ಬೊಪ್ಪಗೌಡನಪುರವನ್ನು ತಮ್ಮ ತಪೋಭೂಮಿಯಾಗಿ ಆರಿಸಿಕೊಳ್ಳುತ್ತಾರೆ. ಬೊಪ್ಪನಗೌಡನಪುರ ಮೊದಲಿಗೆ ಕಾಡಂಕನಹಳ್ಳಿ ಎನಿಸಿತ್ತು. ನೀಲಗಾರರ ಪ್ರಕಾರ ಮಂಟೇಸ್ವಾಮಿ ಆ ಊರನ್ನು ಒಪ್ಪಿಕೊಂಡದ್ದರಿಂದ ಅದು ಒಪ್ಪಿಕೊಂಡಪುರವಾಗಿ ಕ್ರಮೇಣ ಬೊಪ್ಪಗೊಂಪುರವೆನಿಸಿತು. ಆದರೆ ಜನಪದ ಐತಿಹ್ಯಗಳ ಪ್ರಕಾರ ಕಾಡಂಕನಹಳ್ಳಿಯ ಕುರುಬ ಬೊಪ್ಪೇಗೌಡ ಆ ಊರಿನ ಗೌಡ. ದೊಡ್ಡ ಸಿರಿವಂತನಾಗಿ ಬದುಕಿದ್ದವನು. ಅವನು ಮಂಟೇಸ್ವಾಮಿಯವರಿಗೆ ಶಿಷ್ಯನಾಗಿ ಮಠಮಾನ್ಯಗಳನ್ನು ಕಟ್ಟಿಸಿಕೊಟ್ಟವನು. ಅತ್ಯಂತ ಪ್ರಭಾವಶಾಲಿಯಾಗಿ ಬಾಳಿದ ಇವನಿಂದಲೂ ಊರಿಗೆ ಬೊಪ್ಪನಗೌಡನಪುರ ಎಂಬ ಹೆಸರು ಬಂದಿರಲು ಸಾಧ್ಯ.

ಮಂಟೇಸ್ವಾಮಿ ಬೊಪ್ಪಗೌಡನಪುರದಲ್ಲಿ ನೆಲಸಿದ ಮೇಲೆ ಕಲ್ಯಾಣದ ಬಾಗಿಲಲ್ಲಿದ್ದ ಬಾಚಿ ಬಸವಯ್ಯನ ನೆನಪಾಗುತ್ತದೆ. ಆತ ನಿಡುಗಟ್ಟದ ಮುದ್ದೋಜಿ ಮತ್ತು ಲಿಂಗಮ್ಮ ಎಂಬ ಪಾಂಚಾಳ ದಂಪತಿಗಳಿಗೆ ಏಳನೆಯ ಮಗನಾಗಿ ಹುಟ್ಟಿರುತ್ತಾನೆ. ಅಪಾರವಾದ ಸಿರಿಸಂಪತ್ತಿನಲ್ಲಿ ದರ್ಪದಿಂದ ಬಾಳುತ್ತಿದ್ದ ಆ ಮನೆಯಿಂದ ತನ್ನ ಶಿಷ್ಯನನ್ನು ಪಡೆಯಲು ಮಂಟೇಸ್ವಾಮಿ ಅಪಾರ ಸಾಹಸವನ್ನೇ ಮಾಡಬೇಕಾಗುತ್ತದೆ. ಅವರ ಐಶ್ವರ್ಯವನ್ನೆಲ್ಲ ಮಣ್ಣುಗೂಡಿಸಿ ಬಾಲಕೆಂಪಣ್ಣನಿಗೆ (ಸಿದ್ಧಪ್ಪಾಜಿ) ಹುಚ್ಚು ಬೆಪ್ಪು ಬರಿಸಿ ಕುಂದೂರು ಬೆಟ್ಟದ ಕಾಳಿಂಗನ ಗವಿಯಲ್ಲಿ ಹನ್ನೆರಡು ವರ್ಷ ಕೂಡಿಹಾಕುತ್ತಾನೆ. ಮುಂದೆ ಬಾಲಕೆಂಪಣ್ಣ ಸಂಪೂರ್ಣವಾಗಿ ಪರಿವರ್ತಿತನಾಗಿ ಹನ್ನೆರಡು ವರ್ಷದ ದೀರ್ಘ ನಿದ್ದೆಯಿಂದ ಹೊಸವ್ಯಕ್ತಿಯಾಗಿ ಮಹಿಮಾಪುರುಷನಾಗಿ ಕಾಣಿಸಿಕೊಳ್ಳುತ್ತಾನೆ. ಸಿದ್ಧಪ್ಪಾಜಿ ಎಂಬ ಹೆಸರಿನಲ್ಲಿ ಗುರು ಅವನನ್ನು ಕರೆದು ದೀಕ್ಷೆಯನ್ನು ನೀಡುತ್ತಾನೆ. ಸಿದ್ಧಪ್ಪಾಜಿ ಮಂಟೇಸ್ವಾಮಿಯ ದಳವಾಯಿಯಾಗಿ, ಮುಖ್ಯ ಶಿಷ್ಯನಾಗಿ, ಇವರ ಮಹಿಮೆಯನ್ನು ಪ್ರಸಾರ ಮಾಡುವ ಮೊದಲ ನೀಲಗಾರನಾಗಿ ಅಭಿವ್ಯಕ್ತನಾಗುತ್ತಾನೆ.

ಬೊಪ್ಪಗೌಡನ ಪುರದಲ್ಲಿ ಒಮ್ಮೆ ಕಂಡ ವಿಚಿತ್ರ ದೃಶ್ಯದಿಂದಾಗಿ ಕಲಿಯುಗ ಸಮೀಪಿಸಿದ್ದನ್ನು ಮಂಟೇಸ್ವಾಮಿ ಗುರುತಿಸುತ್ತಾರೆ. ಮುಂದೆ ಪಾತಾಳ ಬಾವಿಯೊಂದರಲ್ಲಿ ಪವಡಿಸಬೇಕೆಂದು ಯೋಚಿಸುತ್ತಾರೆ. ಬಾವಿಯನ್ನು ತೋಡಲು ಆಯುಧಮುಟ್ಟುಗಳು ಬೇಕು. ಅದರಲ್ಲಿ ತೂಗಿ ಬಿಡಲು ಚಿನ್ನದ ತೊಟ್ಟಿಲು, ಚಿನ್ನದ ನೇಕೆ ಬೇಕು. ಅವನ್ನು ಹಲಗೂರಿನ ಪಾಂಚಾಳರಿಂದ ಪಡೆದುಬರಲು ಸಿದ್ಧಪ್ಪಾಜಿಯನ್ನು ಕಳಿಸುತ್ತಾರೆ. ಹಲಗೂರು ಆ ದಿನಗಳಲ್ಲಿ ಪಾಂಚಾಳರ ಕೇಂದ್ರವಾಗಿದ್ದು ಎಲ್ಲ ಬಗೆಯ ಲೋಹದ ಕೆಲಸಕ್ಕೆ ಹೆಸರಾಗಿತ್ತು. ಸೊಕ್ಕಿನಿಂದ ಮೆರೆಯುತ್ತಿದ್ದ ಹಲಗೂರು ಪಾಂಚಾಳರು ಸಿದ್ಧಪ್ಪಾಜಿಗೆ ಅಪಾರ ಕಿರುಕುಳವನ್ನು ಕೊಡುತ್ತಾರೆ. ಕೊನೆಗೆ ಸಿದ್ದಪ್ಪಾಜಿ ಪವಾಡಗಳ ಮೂಲಕ ಅವರ ಸೊಕ್ಕನ್ನು ಮುರಿದು ಶರಣಾಗತರನ್ನಾಗಿ ಮಾಡಿ ಅವರನ್ನೆಲ್ಲ ಕರೆತಂದು ಮಂಟೇಸ್ವಾಮಿಯ ಶಿಷ್ಯರನ್ನಾಗಿ ಒಪ್ಪಿಸುತ್ತಾನೆ. ಮಂಟೇಸ್ವಾಮಿ ಶಾಶ್ವತವಾಗಿ ಪಾತಾಳಬಾವಿಯಲ್ಲಿ ಪವಡಿಸುವ ಮುನ್ನ ತಮ್ಮ ಎಲ್ಲ ಶಿಷ್ಯರಿಗೂ ಒಂದೊಂದು ನೆಲೆಯನ್ನು ತೋರುತ್ತಾರೆ. ಸಕುರಾಯಪಟ್ಟಣದ ರಾಜಕುಮಾರರು ಬೊಪ್ಪಗೌಡನಪುರ ಮತ್ತು ಮಳವಳ್ಳಿಗಳ ಮಠಾಧಿಪತಿಗಳಾಗಿ ಪಟ್ಟವನ್ನು ಸ್ವೀಕರಿಸುತ್ತಾರೆ.

ರಾಚಪ್ಪಾಜಿ ದೊಡ್ಡಮ್ಮನನ್ನು ಮದುವೆಯಾದರೂ ಅವಳನ್ನು ಮುಟ್ಟನಹಳ್ಳಿಯಲ್ಲಿ ಉಳಿಸಿ ಕಪ್ಪಡಿ ಕ್ಷೇತ್ರದಲ್ಲಿ ಬಂದು ನೆಲಸುತ್ತಾನೆ. ಸಿದ್ಧಪ್ಪಾಜಿ ಪೂರ್ವಘಟ್ಟಗಳಲ್ಲಿನ ಚಿಕ್ಕಲ್ಲೂರಿಗೆ ಹೋಗಿ ನೆಲಸುತ್ತಾನೆ. ಈಗಲೂ ಮಂಟೇಸ್ವಾಮಿ ಮಠ ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನ ಪುರದಲ್ಲಿದೆ. ಈ ಸಂಪ್ರದಾಯದ ಮತ್ತೊಂದು ಮಠ ಮಳವಳ್ಳಿಯಲ್ಲಿದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಾಚೆ ಪೂರ್ವಘಟ್ಟಗಳಲ್ಲಿ ಚಿಕ್ಕಲ್ಲೂರು ಕ್ಷೇತ್ರ ಮತ್ತು ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿಗೆ ಸೇರಿದ ಕಪ್ಪಡಿ ಕ್ಷೇತ್ರಗಳು ಈ ಸಂಪ್ರದಾಯಕ್ಕೆ ಸಂಬಂಧಪಡುತ್ತವೆ. ಬೊಪ್ಪಗೌಡನಪುರದಲ್ಲಿ ಆದಿಗುರು ಮಂಟೇಸ್ವಾಮಿಯವರ ಗದ್ದಿಗೆಯೂ ಚಿಕ್ಕಲ್ಲೂರಿನಲ್ಲಿ ಇವರ ದಳವಾಯಿ ಸಿದ್ಧಪ್ಪಾಜಿಯ ಗದ್ದಿಗೆಯೂ ಕಪ್ಪಡಿಯಲ್ಲಿ ಮಂಟೇಸ್ವಾಮಿಯ ಮತ್ತೊಬ್ಬ ಮುಖ್ಯಶಿಷ್ಯ ರಾಚಪ್ಪಾಜಿಯ ಗದ್ದಿಗೆಯೂ ಇವೆ. ಈ ಮೂರು ಕ್ಷೇತ್ರಗಳೂ ಯಾತ್ರಾಸ್ಥಳಗಳಾಗಿ ಪರಿಣಮಿಸಿವೆ. ಬೊಪ್ಪಗೌಡನಪುರದ ಮಠ ಮತ್ತು ಮಳವಳ್ಳಿಯ ಮಠಗಳಲ್ಲಿ ಅರಸು ಮನೆತನದ ಪೀಠಾಧ್ಯಕ್ಷರ ಪರಂಪರೆ ನಡೆದು ಬಂದಿದೆ. ಇವರು ಸಂಸಾರಿಗಳಾಗಿಯೂ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುವ ವಾಡಿಕೆ ಇದೆ.

ಮಂಟೇಸ್ವಾಮಿ ಹಬ್ಬವನ್ನು ಜುಲೈ ತಿಂಗಳಲ್ಲಿ ಆಚರಿಸಲಾಗುತ್ತದೆ. ಇದು ಸಿದ್ಧಪ್ಪಾಜಿಗೆ ಹೆಚ್ಚಾಗಿ ಸಂಬಂಧಪಡುವ ಹಬ್ಬ. ಸಿದ್ಧಪ್ಪಾಜಿಯನ್ನು ಮಾರೀರ ಮಸಣೀರ ಗಂಡ ಎಂದು ಕರೆಯಲಾಗಿದೆ. ಅಂಟುಜಾಡ್ಯಗಳಾದ ಕಾಲರ, ಪ್ಲೇಗು ಮುಂತಾದುವನ್ನು ಗೆದ್ದುಕೊಳ್ಳುವ ದೇವರು ಎಂದು ಭಾವಿಸಲಾಗಿದೆ.

ಮಂಟೇಸ್ವಾಮಿ ಸಂಪ್ರದಾಯಕ್ಕೆ ಸಂಬಂಧಿಸಿದ ದೇವಾಲಯಗಳು ಅನೇಕ ಊರುಗಳಲ್ಲಿ ಕಂಡುಬರುತ್ತವೆ. ಮಂಟೇಸ್ವಾಮಿಯ ಒಕ್ಕಲುಗಳೂ ಅಪಾರವಾಗಿವೆ. ತಮ್ಮ ದೇವರ, ಕುಲಗುರುವಿನ ಕಾಣಿಕೆಯನ್ನು ಜಾತ್ರೆಗಳಲ್ಲಿ, ಉತ್ಸವಗಳಲ್ಲಿ ಜನ ಮಠಗಳಿಗೆ ಅರ್ಪಿಸುತ್ತಾರೆ. ನೀಲಗಾರ ಅಥವಾ ನೀಲಗಾತಿಯರನ್ನಾಗಿ ದೇವರ ಹೆಸರಿನಲ್ಲಿ ದೀಕ್ಷೆ ಕೊಡಿಸುವವರು ಮಠಗಳಿಗೆ ಬರಬೇಕಾಗುತ್ತದೆ; ಇಲ್ಲವೆ ಜಾತ್ರೆಯ ಸಂದರ್ಭಗಳಲ್ಲಿ ಗುರುವಿನ ಕೈಯಿಂದ ಮಣಿಯನ್ನು ಕಟ್ಟಿಸಿಕೊಳ್ಳಬೇಕಾಗುತ್ತದೆ. ಕಪ್ಪಡಿ ಮತ್ತು ಚಿಕ್ಕಲ್ಲೂರಿನ ಜಾತ್ರೆಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ. ಮಂಟೇಸ್ವಾಮಿಯವರನ್ನು ಕುರಿತಂತೆ ದೊರೆಯುವ ಜನಪದ ಕಾವ್ಯಗಳನ್ನು ಜೀ.ಶಂ.ಪರಮಶಿವಯ್ಯ ಮತ್ತು ಚೌಡೇಗೌಡ ಬೀಡನಹಳ್ಳಿ ಇವರು ಪ್ರತ್ಯೇಕವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಜೀ.ಶಂ. ಪರಮಶಿವಯ್ಯ ಅವರ ಮಂಟೇಸ್ವಾಮಿ ಕಾವ್ಯ (1973), ಟಿ.ಎಂ. ಪರಶಿವಮೂರ್ತಿ ಅವರ ಧರೆಗೆ ದೊಡ್ಡವರ ಕಾವ್ಯ (1980), ರಾ. ವೆಂಕಟೇಶ ಇಂದ್ವಾಡಿಯವರ ಧರೆಗೆ ದೊಡ್ಡವರ ಕಥೆ (1996), ಹಿ.ಚಿ. ಬೋರಲಿಂಗಯ್ಯ ಅವರ ಮಂಟೇಸ್ವಾಮಿ (1997) ಮೊದಲಾದ ಹಲವು ಸಾಹಿತ್ಯಕ ರಚನೆಗಳು ಮಂಟೇಸ್ವಾಮಿಯನ್ನು ಕುರಿತಂತೆ ಪ್ರಕಟಗೊಂಡಿವೆ. **(ಜಿ.ಎಸ್.ಪಿ.)**

**ಮಂಡ್ಯ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಇದೇ ಹೆಸರಿನ ತಾಲ್ಲೂಕು ಮತ್ತು ಆಡಳಿತ ಕೇಂದ್ರ ಪಟ್ಟಣ.

**ಜಿಲ್ಲೆ** : ರಾಜ್ಯದ ದಕ್ಷಿಣ ಭಾಗದಲ್ಲಿರುವ ಈ ಜಿಲ್ಲೆ ಮೈಸೂರು ವಿಭಾಗಕ್ಕೆ ಸೇರಿದೆ. ಈ ಜಿಲ್ಲೆಯ ಉ.ಅ. $12^0$ 15'–$13^0$ 15' ಪೂ.ರೇ. $76^0$ 15'–$77^0$ 20' ನಡುವೆ ಹರಡಿದೆ. ಗ್ರಾಮಾಂತರ ಮತ್ತು ಈ ಜಿಲ್ಲೆಯನ್ನು ಪೂರ್ವದಲ್ಲಿ ಬೆಂಗಳೂರು ಗ್ರಾಮಾಂತರ, ದಕ್ಷಿಣದಲ್ಲಿ ಮೈಸೂರು, ಆಗ್ನೇಯದಲ್ಲಿ ಚಾಮರಾಜನಗರ, ಪಶ್ಚಿಮದಲ್ಲಿ ಹಾಸನ, ಉತ್ತರದಲ್ಲಿ ತುಮಕೂರು ಜಿಲ್ಲೆಗಳು ಸುತ್ತುವರೆದಿವೆ. ಕೃಷ್ಣರಾಜಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ಈ ಜಿಲ್ಲೆಯ ತಾಲ್ಲೂಕುಗಳು. ಒಟ್ಟು 31 ಹೋಬಳಿಗಳೂ 10 ಪಟ್ಟಣಗಳೂ 1,483 ಗ್ರಾಮಗಳೂ ಇವೆ. ಜಿಲ್ಲೆಯ ವಿಸ್ತೀರ್ಣ 4,958 ಚ.ಕಿಮೀ. ಮಂಡ್ಯ ಜಿಲ್ಲೆಯ ಒಟ್ಟು ಜನಸಂಖ್ಯೆ 17,63,705.

ಜಿಲ್ಲೆಯ ಬಹುಭಾಗ ಮಟ್ಟಸ ಬಯಲುಗಳಿಂದ ಕೂಡಿದೆ. ಸಣ್ಣಬೆಟ್ಟಗಳೂ ಹೆಚ್ಚು ಎತ್ತರವಲ್ಲದ ಶ್ರೇಣಿಗಳೂ ಅಲ್ಲಲ್ಲಿ ಇವೆ. ಸಾಮಾನ್ಯತಃ ಈ ಪ್ರದೇಶ ಸಮುದ್ರಮಟ್ಟದಿಂದ ಸು. 762ರಿಂದ 914 ಮೀಟರ್ ಎತ್ತರದಲ್ಲಿದೆ. ಮಳವಳ್ಳಿ ತಾಲ್ಲೂಕಿನ ಪೂರ್ವದ ಅಂಚಿನಲ್ಲಿ ಬಿಳಿಗಿರಿರಂಗನಬೆಟ್ಟದ ಸಾಲಿನಿಂದ ಮುಂದುವರಿದ ಕೆಲವು ಬೆಟ್ಟಗಳು, ಜಿಲ್ಲೆಯ ದಕ್ಷಿಣದ ಅಂಚಿನಲ್ಲಿ ಹುಲಿಕೆರೆ ಮತ್ತು ಕರಿಘಟ್ಟ ಬೆಟ್ಟಗಳ ಸಾಲು ಇವೆ. ಕೃಷ್ಣರಾಜಪೇಟೆ, ನಾಗಮಂಗಲ ಇವುಗಳ ಸುತ್ತ ಕೆಲವು ಬೆಟ್ಟಗಳುಂಟು. ಇವುಗಳಲ್ಲಿ ಮುಖ್ಯವಾದದ್ದು ಆದಿಚುಂಚನಗಿರಿ ಬೆಟ್ಟ. ಮಳವಳ್ಳಿ ತಾಲ್ಲೂಕಿನ ಕಬ್ಬಾಳದುರ್ಗ (1059 ಮೀ), ಶ್ರೀರಂಗಪಟ್ಟಣದ ಬಳಿಯ ಕರಿಘಟ್ಟ (974 ಮೀ), ಮೇಲುಕೋಟೆ (1,246 ಮೀ), ನಾರಾಯಣದುರ್ಗ (1,246 ಮೀ) ಇವು ಇತರ ಮುಖ್ಯ ಬೆಟ್ಟಗಳು.

ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ, ವೀರವೈಷ್ಣವಿ ಈ ಜಿಲ್ಲೆಯ ನದಿಗಳು. ಕಾವೇರಿ ಈ ಜಿಲ್ಲೆಯನ್ನು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಕೃಷ್ಣರಾಜ ಸಾಗರದ ಮೇಲುಗಡೆ ಪ್ರವೇಶಿಸಿ, ಮುಂದೆ ರಂಗನತಿಟ್ಟು ಮತ್ತು ಶ್ರೀರಂಗಪಟ್ಟಣ ದ್ವೀಪಗಳನ್ನು ಬಳಸಿ ಮೈಸೂರು ಜಿಲ್ಲೆಯತ್ತ ಸಾಗುತ್ತದೆ. ಪುನಃ ಈ ನದಿ ಜಿಲ್ಲೆಯ ಆಗ್ನೇಯ ಅಂಚಿನಲ್ಲಿ ಮಳವಳ್ಳಿ ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಗಡಿಯಾಗಿ ಹರಿಯುತ್ತದೆ. ಈ ಭಾಗದಲ್ಲಿ ಶಿವಸಮುದ್ರ ದ್ವೀಪವನ್ನು ಬಳಸಿರುವುದಲ್ಲದೆ, ಅದರ ಸಮೀಪದಲ್ಲಿ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳಾಗಿ ಧುಮುಕುತ್ತದೆ. ಹೇಮಾವತಿ ಈ ಜಿಲ್ಲೆಯ ಪಶ್ಚಿಮದ ಅಂಚಿನಲ್ಲಿ ಸ್ವಲ್ಪದೂರ ಹಾಸನ, ಮಂಡ್ಯ ಜಿಲ್ಲೆಗಳ ಗಡಿಯಾಗಿ ದಕ್ಷಿಣಾಭಿಮುಖವಾಗಿ ಹರಿದು ಜಿಲ್ಲೆಯನ್ನು ಕೃಷ್ಣರಾಜಪೇಟೆ ತಾಲ್ಲೂಕಿನ ಗುಡ್ಡೆಹೊಸಹಳ್ಳಿಯ ಬಳಿ ಪ್ರವೇಶಿಸಿ ಮುಂದೆ ಕೃಷ್ಣರಾಜಸಾಗರದ ಉತ್ತರದಲ್ಲಿ ಕಾವೇರಿಯನ್ನು

ಕೂಡಿಕೊಳ್ಳುತ್ತದೆ. ಲೋಕಪಾವನಿ ನಾಗಮಂಗಲ ತಾಲ್ಲೂಕಿನ ಹೊಣಕೆರೆ ಹೋಬಳಿಯಲ್ಲಿ ಹುಟ್ಟಿ, ಪಾಂಡವಪುರಕ್ಕೆ ಪೂರ್ವದಲ್ಲಿ ದಕ್ಷಿಣಾಭಿಮುಖ ವಾಗಿ ಹರಿದು, ಮೋತಿ ತಲಾಬ್‌ನಿಂದ ಹರಿಯುವ ಹಳ್ಳವನ್ನು ಸೇರಿಸಿ ಕೊಂಡು, ಶ್ರೀರಂಗಪಟ್ಟಣ ತಾಲ್ಲೂಕಿನ ಕರಿಘಟ್ಟದ ತಪ್ಪಲ ಬಳಿ ಕಾವೇರಿ ನದಿಯನ್ನು ಸೇರುತ್ತದೆ. ಶಿಂಷಾ ನದಿ ಜಿಲ್ಲೆಯ ಉತ್ತರ ಅಂಚಿನಲ್ಲಿ ಸ್ವಲ್ಪದೂರ ತುಮಕೂರು–ಮಂಡ್ಯ ಜಿಲ್ಲೆಗಳ ಗಡಿಯಾಗಿ ಆಗ್ನೇಯಾಭಿ ಮುಖವಾಗಿ ಹರಿದು ಮದ್ದೂರು ತಾಲ್ಲೂಕಿನ ವಾಯವ್ಯದಲ್ಲಿ ಕಿರಂಗೂರು ಬಳಿ ಈ ಜಿಲ್ಲೆಯನ್ನು ಪ್ರವೇಶಿಸುವುದು. ಇವಲ್ಲದೆ ಬಿಂಡೇನಹಳ್ಳಿ ತೊರೆ, ಹಂದಿಹಳ್ಳ, ಹೆಬ್ಬಳ್ಳ ಮತ್ತು ಭೀಮಾ ಮೊದಲಾದ ತೊರೆಗಳು ಈ ಜಿಲ್ಲೆಯಲ್ಲಿ ಹರಿಯುತ್ತವೆ.

ಜಿಲ್ಲೆಯ ಬಹುಭಾಗ ನೈಸ್ ಶಿಲಾಪ್ರದೇಶ. ಸಾಮಾನ್ಯವಾಗಿ ಈ ಶಿಲೆ ಬೂದುಬಣ್ಣದಾಗಿದ್ದು ಪದರಯುತವಾಗಿ ಇರುತ್ತದೆ. ಚಿನಕುರುಳಿಯ ಬಳಿ ಇಂಥ ಶಿಲೆಯ ಸ್ವರೂಪ ಸ್ಪಷ್ಟವಾಗಿ ಕಾಣುತ್ತದೆ. ಕೃಷ್ಣರಾಜಪೇಟೆ, ಮೇಲುಕೋಟೆ, ಸಿಂದಘಟ್ಟ ಮುಂತಾದೆಡೆಗಳಲ್ಲಿ ಸ್ವಲ್ಪ ಭಿನ್ನರೀತಿಯ ನೈಸ್ ಶಿಲೆಗಳಿವೆ. ಧಾರವಾಡ ಶಿಲಾವರ್ಗದ ಶಿಸ್ಟ್ ಕಲ್ಲುಗಳ ಹೆಚ್ಚು ಅಗಲವಿಲ್ಲದ ಪಟ್ಟೆಗಳು ಉದ್ದುದ್ದವಾಗಿ ಜಿಲ್ಲೆಯ ಹಲವೆಡೆ ಸಾಗಿವೆ. ಬೆಳ್ಳಿಬೆಟ್ಟ ಮತ್ತು ಹದನೂರು ಪಟ್ಟೆ ಕೃಷ್ಣರಾಜಪೇಟೆ ಚಿನಕುರಳಿಗಳ ಮಧ್ಯದಲ್ಲಿರುವ ಪಟ್ಟೆಗಳು ಇವುಗಳಲ್ಲಿ ಮುಖ್ಯವಾದುವು. ಬೆಳ್ಳಿಬೆಟ್ಟದ ಸಮೀಪದಿಂದ ಸು. 25 ಕಿಮೀ ದೂರ ದಕ್ಷಿಣಾಭಿಮುಖವಾಗಿ ಕಾವೇರಿ ನದಿಯವರೆಗೆ ಹಬ್ಬಿದೆ. ಇದರ ಅಗಲ ಸಾಮಾನ್ಯ 5 ಕಿಮೀಗಳಷ್ಟು ಮಾತ್ರ. ಆದರೆ ಕಾವೇರಿ ಬಳಿಗೆ ಸಾಗುತ್ತಿದ್ದಂತೆ ಕಿರಿದಾಗುತ್ತ ಹೋಗುತ್ತದೆ. ಹದನೂರು ಪಟ್ಟೆ ಕೃಷ್ಣರಾಜಪೇಟೆ ಮತ್ತು ಚಿನಕುರಳಿಗಳ ಮಧ್ಯದಲ್ಲಿ ರುವ ಹದನೂರು ಗ್ರಾಮದ ಬಳಿ ಇದೆ. ಇದು ನುಗ್ಗೇಹಳ್ಳಿಯಿಂದ ಮುಂದೆ ಸಾಗಿ ಬಂದಿರುವ ಪಟ್ಟೆ. ಮತ್ತೊಂದು ಪಟ್ಟೆ ಎಡೆಯೂರಿನಿಂದ

ಕರಿಘಟ್ಟದವರೆಗೆ ಸಾಗುತ್ತದೆ. ಕಪ್ಪು ಹಾರ್ನ್‌ಬ್ಲೆಂಡ್ ಇವುಗಳಲ್ಲಿ ಕಂಡುಬರುವ ಶಿಲೆ. ಕಬ್ಬಿಣದ ಅದಿರಿನಿಂದ ಕೂಡಿದ ಒಂದು ಪಟ್ಟೆ ಮದ್ದೂರು-ಚನ್ನಪಟ್ಟಣದ ನಡುವೆ ಹಾದುಹೋಗಿದೆ. ಈ ಪಟ್ಟೆಗಳ ಮಧ್ಯದಲ್ಲಿ ಅಲ್ಲಲ್ಲಿ ಬೆಣಚು ಪಟ್ಟೆಗಳೂ ಇವೆ. ವಿಠಲಾಪುರ ಮತ್ತು ಕರೀಘಟ್ಟದ ಬಳಿ ಅಂಥ ಪಟ್ಟೆಗಳಲ್ಲಿ ಸ್ವಲ್ಪಾಂಶ ಚಿನ್ನವೂ ಕಂಡುಬರುತ್ತದೆ. ಪಾರ್ಫಿರಿ ಜಾತಿಯ ಉತ್ತಮ ಕಲ್ಲುಗಳ ಹರವುಗಳು ಈ ಜಿಲ್ಲೆಯ ತಳಗವಾದಿ, ಸಿದ್ದಲಿಂಗಪುರ, ಕನಗಟ್ಟ, ನಾರಣಕೆರೆ, ತುರಗನೂರು ಮೊದಲಾದೆಡೆಗಳಲ್ಲಿ ಇವೆ.

ಉಪಯುಕ್ತ ಖನಿಜಗಳು ಹೆಚ್ಚಿಲ್ಲ. ಹದನೂರು ಮತ್ತು ಬೆಳ್ಳಿ ಬೆಟ್ಟ ಶ್ರೇಣಿಗಳಲ್ಲಿ ಕಲ್ನಾರು, ಕೃಷ್ಣರಾಜಸಾಗರಕ್ಕೆ ಉತ್ತರದಲ್ಲಿ ನೀಲ-ಹಸುರಿನ ಬೆರಿಲ್ ಶಿಲೆಗಳೂ ಶೀಳನೆರೆ ಸರಹದ್ದಿನಲ್ಲಿ ಸಾಮಾನ್ಯ ದರ್ಜೆಯ ಕ್ರೋಮೈಟ್ ಖನಿಜ, ಮದ್ದೂರು, ಮಳವಳ್ಳಿ ಹಾಗೂ ಹಲಗೂರು ಬಳಿ ಕಬ್ಬಿಣದ ಅದಿರು, ಮೇಲುಕೋಟೆಯ ಬಳಿ ಬಿಳಿ ಜೇಡಿಮಣ್ಣು, ಹಬ್ಬಳ್ಳದ ದಂಡೆಗಳಲ್ಲಿ ಸುಣ್ಣ ಕಂಕರು, ವೇದಸಮುದ್ರದ ಬಳಿ ಕಾಗೆಬಂಗಾರ ಸ್ವಲ್ಪಮಟ್ಟಿಗೆ ಸಿಗುವುವು.

ಇತರ ಜಿಲ್ಲೆಗಳಂತೆಯೇ ಇಲ್ಲೂ ಮಾರ್ಚಿಯಿಂದ ಮೇ ವರೆಗೆ ಬೇಸಗೆ. ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಮುಂಗಾರು ಮಳೆಗಾಲ. ನವೆಂಬರ್-ಜನವರಿ ಚಳಿಗಾಲ. ಜಿಲ್ಲೆಯ ಉಷ್ಣಾಂಶದಲ್ಲಿ ಅತ್ಯಧಿಕ ವ್ಯತ್ಯಾಸಗಳಿಲ್ಲದೆ ವರ್ಷಪೂರ್ತ ಹವಾಗುಣ ಹಿತಕರವಾಗಿರುವುದು, ವರ್ಷಕ್ಕೆ ಸರಾಸರಿ 45 ಮಳೆ ದಿನಗಳಿರುತ್ತವೆ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 691 ಮಿಮೀ.

ಮಂಡ್ಯ ಜಿಲ್ಲೆಯ ಉತ್ತರ, ಪಶ್ಚಿಮ ಹಾಗೂ ಪೂರ್ವಭಾಗಗಳು ಮೈದಾನ ಪ್ರದೇಶ. ದಕ್ಷಿಣ ಭಾಗದಲ್ಲಿ ಕಾವೇರಿ ನದಿ ಹರಿವಿನುದ್ದಕ್ಕೂ ಗಿಡಮರಗಳ ಕಾಡು ಹಾಗೂ ಪೊದೆಗಳು ಕಂಡುಬರುವುವು. ಜಿಲ್ಲೆಯಲ್ಲಿ ಒಟ್ಟು 101.01 ಚ.ಕಿಮೀ ಅರಣ್ಯಪ್ರದೇಶವಿದೆ. ಅದರಲ್ಲಿ ಜಾಲರಿ, ಅಳಲೆ, ದಿಂಡಿಗ, ಹೊಂಗೆ, ದೇವದಾರು, ಚುಜ್ಜಲು, ಚುನ್ನಂಗಿ, ಬುರುಗುಲು, ಬಿಳ್ಮತ್ತಿ, ಹುಣಿಸೆ ಮೊದಲಾದ ಮರಗಳು ಬೆಳೆಯುತ್ತವೆ.

ಕಾವೇರಿ ನದಿಯ ಅಂಚಿನ ಬೆಟ್ಟ ಮತ್ತು ಕಾಡುಗಳಲ್ಲಿ ಚಿರತೆ, ನರಿ, ಕಾಡುನಾಯಿ, ಕಾಡುಹಂದಿ, ನವಿಲು, ಜಿಂಕೆ, ಮೊಲ, ಮುಳ್ಳುಹಂದಿ, ನಾಗರಹಾವು ಮತ್ತು ಹೆಬ್ಬಾವುಗಳೂ ಮೈನ, ಕವುಜುಗ, ಕಾಡುಪಾರಿವಾಳ, ಕಾಡುಕೋಳಿ, ಗಿಳಿ, ಕೋಗಿಲೆ ಹಾಗೂ ನೀರುಹಕ್ಕಿಗಳೂ ಕಂಡುಬರುವುವು.

ಕೃಷ್ಣರಾಜಸಾಗರದ ವಿಶ್ವೇಶ್ವರಯ್ಯ ನಾಲೆ ತನ್ನ ಅನೇಕ ಶಾಖಾನಾಲೆಗಳೊಡನೆ ಮಂಡ್ಯ ಜಿಲ್ಲೆಯ ವಿಸ್ತಾರ ಪ್ರದೇಶಕ್ಕೆ ನೀರೊದಗಿಸುತ್ತಿದ್ದು, ಅದು ಜಿಲ್ಲೆಯ ಜೀವ ನಾಡಿಯಾಗಿದೆ. ಇದಲ್ಲದೆ ಸೀತಾಪುರದ ಬಳಿ ಇರುವ ಮಾಡದಕಟ್ಟೆಯಿಂದ ಹೊರಡುವ ದೇವರಾಯನಾಲೆ, ಇದರ ಸಮೀಪದಲ್ಲೇ ಇರುವ ದೇವರಾಯನಕಟ್ಟೆಯಿಂದ ಹೊರಡುವ ದೇವರಾಯನಾಲೆ, ಮಂಡ್ಯ ತಾಲ್ಲೂಕಿನ ಹುಲಿಕೆರೆ ಬಳಿಯ ಸುರಂಗನಾಲೆ, ಬೆಳಗೊಳದ ಸಮೀಪದಲ್ಲಿರುವ ಬಲಮುರಿಯ ಅಣೆಕಟ್ಟಿನಿಂದ ಹೊರಟಿರುವ ವಿರಜಾನದಿ ನಾಲೆ, ಪಶ್ಚಿಮವಾಹಿನಿ ಹತ್ತಿರವಿರುವ ಬಂಗಾರದೊಡ್ಡಿ ನಾಲೆ ಇವು ಇತರ ಮುಖ್ಯ ನಾಲೆಗಳು. ಇವಲ್ಲದೆ ಮದ್ದೂರು ಅಣೆಕಟ್ಟು, ಕೆಮ್ಮಣ್ಣು ನಾಲೆ, ವೈದ್ಯನಾಥಪುರ ನಾಲೆ, ಭೈರನನಾಲೆ, ಚಾಮನಹಳ್ಳಿ, ಮಂದಗೆರೆ, ಹೇಮಗಿರಿ, ಅಕ್ಕಿಹೆಬ್ಬಾಳ ನಾಲೆಗಳನ್ನೂ ಹೆಸರಿಸಬಹುದು. ಕೃಷ್ಣರಾಜಸಾಗರ ನಿರ್ಮಿಸಿರುವುದಕ್ಕಿಂತ ಮೊದಲಿನಿಂದಲೂ ಜಿಲ್ಲೆಯಲ್ಲಿ ಕಾವೇರಿ ಮತ್ತು ಅದರ ಉಪನದಿಗಳ ನೀರನ್ನು ಚಿಕ್ಕ ಅಣೆಕಟ್ಟುಗಳ ಮೂಲಕ ಕೃಷಿಗೆ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಅವುಗಳಲ್ಲಿ ಹೇಮಾವತಿ ನದಿಗೆ ಮಂದಗೆರೆ ಬಳಿ ಕಟ್ಟಿರುವ ಮಂದಗೆರೆ ಅಣೆಕಟ್ಟು, ಶಿಂಷಾನದಿಗೆ ಕಟ್ಟಿರುವ ತಗ್ಗಳ್ಳಿ ಅಣೆಕಟ್ಟು ಮತ್ತು ಬೋಳೇನಹಳ್ಳಿ ಬಳಿ ಲೋಕಪಾವನಿ ನದಿಗೆ ಕಟ್ಟಿರುವ ಉಯ್ಯನಹಳ್ಳಿ ಅಣೆಕಟ್ಟು, ದುಮ್ಮಸಂದ್ರದ ಬಳಿ ವೀರವೈಷ್ಣವಿ ನದಿಗೆ ಕಟ್ಟಿರುವ ದುಮ್ಮಸಂದ್ರ ಅಣೆಕಟ್ಟು, ಭೀಮಾತೊರೆಗೆ ದಳವಾಯಿ ಕೋಡಿಹಳ್ಳಿ ಬಳಿ ಕಟ್ಟಿರುವ ಒಂದು ಅಣೆಕಟ್ಟು ಈಚಿನ ನಿರ್ಮಾಣಗಳು, ಕೆರೆಗಳಲ್ಲಿ ಮೋತಿತಲಾಬ್, ಹೆರಗೋನಹಳ್ಳಿ ಕೆರೆ, ಸಿಂದಘಟ್ಟದ ಕೆರೆಗಳನ್ನು ಹೆಸರಿಸಬಹುದು.

ಈ ಜಿಲ್ಲೆಯ ವ್ಯವಸಾಯಯೋಗ್ಯ ಭೂಮಿ ಕೆಂಪು ಜೇಡಿಮಣ್ಣು ಮತ್ತು ಮರಳುಮಿಶ್ರಿತ ಕೆಂಪು ಜೇಡಿಮಣ್ಣಿನಿಂದ ಕೂಡಿದ್ದು ವ್ಯವಸಾಯಕ್ಕೆ ಸಾಮಾನ್ಯತಃ ಅನುಕೂಲಕರವಾಗಿದೆ. ಜಿಲ್ಲೆಯ ಪೂರ್ವ ಮತ್ತು ದಕ್ಷಿಣದ ಭಾಗದಲ್ಲಿ ನೀರಾವರಿ ಬೇಸಾಯ ವಿಶೇಷ. ಪಶ್ಚಿಮ ಮತ್ತು ಉತ್ತರದ ತಾಲ್ಲೂಕುಗಳಲ್ಲಿ ಹೆಚ್ಚುಮಟ್ಟಿಗೆ ಒಣ ಬೇಸಾಯವಿದೆ. ಜಿಲ್ಲೆಯಲ್ಲಿ ಖಾಯಂ ಗೋಮಾಳ 38,020 ಹೆ. ವೃಕ್ಷ ಮತ್ತು ತೋಪುಗಳು 3,165 ಹೆ.ಇದೆ (1998-99). ಇದೇ ಸಾಲಿನಲ್ಲಿ 2,97,491 ಹೆ.ಗಳಲ್ಲಿ ಬಿತ್ತನೆ ಮಾಡಲಾಗಿತ್ತು. ನಾನಾ ಜಲಮಾರ್ಗಗಳನ್ನು ಬಳಸಿಕೊಂಡು ನೀರಾವರಿ ಮಾಡಿದ ಒಟ್ಟು ಪ್ರದೇಶ 1,16,901 ಹೆ. ಇದರಲ್ಲಿ 79,892 ಹೆ.ನಲ್ಲಿ ಬತ್ತ, 85,467 ಹೆ.ನಲ್ಲಿ ರಾಗಿ , 3536 ಹೆ,ನಲ್ಲಿ ಜೋಳ, 1,68,992 ಹೆ.ನಲ್ಲಿ ವಿವಿಧ ಏಕದಳ ಧಾನ್ಯಗಳನ್ನೂ 41,678 ಹೆ.ನಲ್ಲಿ ವಿವಿಧ ದ್ವಿದಳ ಧಾನ್ಯಗಳನ್ನೂ 8,982 ಹೆ.ನಲ್ಲಿ ನೆಲಗಡಲೆ, 30,630 ಹೆ.ನಲ್ಲಿ ಕಬ್ಬನ್ನೂ ಬೆಳೆಯಲಾಗಿತ್ತು. ಒಟ್ಟು ಕ್ಷೇತ್ರ 2,72,267 ಹೆಕ್ಟೇರುಗಳು. ನೀರಾವರಿ ಕ್ಷೇತ್ರ 86,569 ಹೆಕ್ಟೇರುಗಳು. 1970-71ರಲ್ಲಿ ಈ ಜಿಲ್ಲೆಯಲ್ಲಿ 2,54,443 ಹೆಕ್ಟೇರುಗಳಲ್ಲಿ ಆಹಾರ ಬೆಳೆಗಳನ್ನೂ 38,797 ಹೆಕ್ಟೇರುಗಳಲ್ಲಿ ಆಹಾರೇತರ ಬೆಳೆಗಳನ್ನೂ ಬೆಳೆಯಲಾಗಿತ್ತು. ಜಿಲ್ಲೆಯ ಮುಖ್ಯ ಬೆಳೆಗಳು ಬತ್ತ ಮತ್ತು ಕಬ್ಬು, ರಾಗಿ, ದ್ವಿದಳ ಧಾನ್ಯಗಳು, ಜೋಳ, ತೆಂಗು, ಕಡಲೆಕಾಯಿ ಇವನ್ನು ಬೆಳೆಯುತ್ತಾರೆ.

ಈ ಜಿಲ್ಲೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಸರ್ಕಾರದ ಕಡೆಯಿಂದ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಅಭಿವೃದ್ಧಿಕಾರ್ಯಗಳು ಜರುಗುತ್ತಿವೆ. ಇವಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಗ್ರಾಮಾಭಿವೃದ್ಧಿ ತರಬೇತು ಕೇಂದ್ರ ಮತ್ತು ವ್ಯವಸಾಯ ಶಾಲೆ ಇವೆ. ಈ ಜಿಲ್ಲೆಯಲ್ಲಿ ಪಶುಸಂಪತ್ತು ಹೇರಳವಾಗಿವೆ. ಈ ಜಿಲ್ಲೆಯ ಬಂಡೂರು, ನಾಗಮಂಗಲ, ಕೃಷ್ಣರಾಜಪೇಟೆ ಇವು ಕುರಿಸಾಕಣೆಗೂ ನಾಗಮಂಗಲದ ಕರಡಿಹಳ್ಳಿ ಹಳ್ಳಿಕಾರ ರಾಸುಗಳಿಗೂ ಪ್ರಸಿದ್ಧ. ಜಿಲ್ಲೆಯಲ್ಲಿ 4 ಕೃತಕ ಗರ್ಭಧಾರಣಾ ಕೇಂದ್ರಗಳೂ ಸೇರಿ ಒಟ್ಟು 194 ವಿವಿಧ ಪಶುವೈದ್ಯಶಾಲೆಗಳಿದ್ದವು (2000). ಜಿಲ್ಲೆಯಲ್ಲಿ ನದಿ, ಕೆರೆಗಳಿರುವುದರಿಂದ ಮತ್ಸ್ಯೋದ್ಯಮವೂ ಸಾಕಷ್ಟಿದೆ. 2000-2001ರಲ್ಲಿ 8,591 ಮೆಟ್ರಿಕ್ ಟನ್ನು ಮೀನನ್ನು ಹಿಡಿಯಲಾಗಿತ್ತು.

ಮಂಡ್ಯ ಜಿಲ್ಲೆ ಮೊದಲಿನಿಂದಲೂ ಹತ್ತಿಬಟ್ಟೆ, ಕಂಬಳಿ, ಹಿತ್ತಾಳೆ ಪಾತ್ರೆಗಳು, ಬೆಲ್ಲ ಇವುಗಳಿಗೆ ಹೆಸರಾದದ್ದು. ಈ ಜಿಲ್ಲೆಯ ಪಾಲಹಳ್ಳಿಯಲ್ಲಿ 1847ರಲ್ಲಿ ಅಷ್ಟಗ್ರಾಮ ಶುಗರ್ ವರ್ಕ್ಸ್ ಸ್ಥಾಪಿತವಾಗಿತ್ತು. ಈ ಕಾರ್ಖಾನೆಯ ಹರಳು ಸಕ್ಕರೆಯ ಉತ್ಪಾದನೆ ಬಹು ಉತ್ತಮವೆಂದು 1851 ಮತ್ತು 1861ರ ಲಂಡನ್ ವಸ್ತು ಪ್ರದರ್ಶನಗಳಲ್ಲಿ ಬಹುಮಾನ ಮತ್ತು ಪದಕಗಳನ್ನು ಗಳಿಸಿತ್ತು. ಅಷ್ಟಗ್ರಾಮದ ಸಕ್ಕರೆ ಕಾರ್ಖಾನೆ 1867ರಲ್ಲಿ ಪ್ಯಾರಿಸ್‌ನ ವಿಶ್ವಮೇಳದಲ್ಲೂ ಉತ್ತಮವೆಂದು ಪರಿಗಣಿಸಿ ಗೌರವಸ್ಥಾನ ಪಡೆದಿತ್ತು. ಇಷ್ಟಾದರೂ ಈ ಕಾರ್ಖಾನೆ 1894ರಲ್ಲಿ ನಿಂತು ಹೋಯಿತು. ಈ ಉದ್ಯಮದ ಉಪಾಂಗವಾಗಿ ಮದ್ಯಸಾರ ತಯಾರಿಸುತ್ತಿದ್ದರು. ನಾಗಮಂಗಲದ ಹಿತ್ತಾಳೆಯ ವಿಗ್ರಹ, ಪಾತ್ರೆ, ದೀಪಸ್ತಂಭ ಮುಂತಾದವು ಬಹು ಪ್ರಸಿದ್ಧವಾದವು. ಹಿಂದಿನಿಂದಲೂ ಗಂಜಾಂ, ಸಿಂದಘಟ್ಟ ರೇಷ್ಮೆನೇಯ್ಗೆ ಬಟ್ಟೆಗಳಿಗೆ ಹೆಸರಾದವು.

ಜಿಲ್ಲೆಯಲ್ಲಿ 1 ಬಟ್ಟೆ ಕಾರ್ಖಾನೆ, 9 ರಾಸಾಯನಿಕ, 6 ಎಂಜಿನಿಯರಿಂಗ್, 22 ವಿವಿಧ ಬಗೆಯ ಕಾರ್ಖಾನೆಗಳು ಸೇರಿ ಒಟ್ಟು 38 ಕಾರ್ಖಾನೆಗಳಿದ್ದು, 10,168 ಮಂದಿ ಉದ್ಯೋಗಿಗಳಿದ್ದರು (2001). ಮಂಡ್ಯ ಜಿಲ್ಲೆಯ ಬೃಹತ್ ಕೈಗಾರಿಕೆ 1933ರಲ್ಲಿ ಮೈಸೂರು ಶುಗರ್ ಕಂಪನಿಯ ಪ್ರಾರಂಭ ದೊಡನೆ ಆಯಿತೆನ್ನಬಹುದು. ಇದು ಕರ್ನಾಟಕದ ಹಳೆಯ ಮತ್ತು ದೊಡ್ಡ ಸಕ್ಕರೆ ಕಾರ್ಖಾನೆಗಳಲ್ಲೊಂದು. ಪಾಂಡವಪುರದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆ 1959 ಸೆಪ್ಟೆಂಬರ್ 14ರಿಂದ ತನ್ನ ಕೆಲಸವನ್ನಾರಂಭಿಸಿತು. ಮದ್ದೂರು ತಾಲ್ಲೂಕಿನ ಕಾಳಮುದ್ದನದೊಡ್ಡಿಯಲ್ಲಿ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ (1974) ಇದೆ. 1,765 ಮೆ.ಟನ್ ಕಬ್ಬನ್ನು ನುರಿಸಿ 168 ಮೆ.ಟನ್ ಸಕ್ಕರೆ ಉತ್ಪಾದಿಸಲಾಗಿದೆ (2001). ಈ ಕಾರ್ಖಾನೆಗಳಲ್ಲಿ ನಾನಾ ಬಗೆಯ ಆಲ್ಕೊಹಾಲ್, ಅಸಿಟಿಕ್ ಆಸಿಡ್, ಬ್ರಾಂದಿ, ಬೀರು, ವ್ಹಿಸ್ಕಿ, ರಮ್, ಜಿನ್ ಮುಂತಾದ ಮಾದಕ ಪಾನೀಯಗಳೂ ತಯಾರಾಗು ತ್ತಿವೆ. ಮಂಡ್ಯ ಮತ್ತು ನಗುವನಹಳ್ಳಿಯಲ್ಲಿ ಖಂಡಸಾರಿ ಉತ್ಪಾದನೆಯುಂಟು. ಕಬ್ಬಿನಸಿಪ್ಪೆಯ ಉಪಯೋಗದಿಂದ ಕಾಗದವನ್ನು ಜಿಲ್ಲೆಯ ಬೆಳಗೊಳದ ಲ್ಲಿರುವ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ತಯಾರಿಸುತ್ತಿತ್ತು. ಈ ಕಾರ್ಖಾನೆ ಈಗ ಮುಚ್ಚಿದೆ. ಬೆಳಗೊಳದಲ್ಲಿರುವ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆ 1940ರಲ್ಲಿ ಕಾರ್ಯಾರಂಭ ಮಾಡಿತು. ಕಾಪರ್ ಸಲ್ಫೇಟನ್ನು ಭಾರತದಲ್ಲೆ ಮೊದಲು ತಯಾರಿಸಿದ್ದು ಈ ಕಾರ್ಖಾನೆಯೇ. ಇಲ್ಲಿ ರಾಸಾಯನಿಕ ಗೊಬ್ಬರ ತಯಾರಿಕೆಯೂ ನಡೆಯುತ್ತಿತ್ತು. ಅಲೈಡ್ ರೆಸಿನ್ಸ್ ಅಂಡ್ ಕೆಮಿಕಲ್ಸ್ ಎಂಬ ಕಾರ್ಖಾನೆ 1965ರಲ್ಲಿ ಬೆಳಗೊಳದಲ್ಲಿ ಪ್ರಾರಂಭವಾಯಿತು. ಛಾಯಾಚಿತ್ರ ಉದ್ಯಮಕ್ಕೆ ಬೇಕಾದ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ, ಮಂಡ್ಯದಲ್ಲಿದೆ. ಮಂಡ್ಯದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಇನ್ನೊಂದು. ಬತ್ತ ಹೆಚ್ಚು ಬೆಳೆಯುವ ಈ ಜಿಲ್ಲೆಯಲ್ಲಿ ಅಕ್ಕಿ ಗಿರಣಿಗಳೂ ಹೆಚ್ಚಾಗಿವೆ. ಇವುಗಳಲ್ಲಿ ಹಲವು ಉದ್ಯಮಗಳು ಅಸ್ವಸ್ಥ ಸ್ಥಿತಿಯಲ್ಲಿವೆ ಅಥವಾ ಮುಚ್ಚಿವೆ. ಮಂಡ್ಯ, ಮದ್ದೂರು, ಮಳವಳ್ಳಿ ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ರೇಷ್ಮೆ ಉತ್ಪಾದನೆ, ಮಳವಳ್ಳಿ ಮತ್ತು ಮದ್ದೂರುಗಳಲ್ಲಿ ರೇಷ್ಮೆ ಕೋರಿ ಇವೆ. ಒಂದು ಸರ್ಕಾರಿ ಹಿಪ್ಪುನೇರಳೆ ಸಸಿ ಪೋಷಣೆ ಮತ್ತು ತರಬೇತಿ ಕೇಂದ್ರ ಮದ್ದೂರಿನಲ್ಲಿದೆ. ಇಲ್ಲಿಯ ರೇಷ್ಮೆಗೂಡುಗಳನ್ನು ಮೈಸೂರು, ಚನ್ನಪಟ್ಟಣಗಳಿಗೆ ಸಾಗಿಸುತ್ತಾರೆ. ಈ ಜಿಲ್ಲೆ ಕೈಮಗ್ಗದ ಬಟ್ಟೆಗೂ ಪ್ರಸಿದ್ಧ. ಮೇಲುಕೋಟೆ, ತಳಗವಾದಿ, ಕೊಡಿಯಾಲ, ಹೊಸಹೊಳಲು, ಕಿಕ್ಕೇರಿ ಮೊದಲಾದೆಡೆಗಳಲ್ಲಿ ತಯಾರಾಗುವ ಕೈಮಗ್ಗದ ಹತ್ತಿ ಮತ್ತು ರೇಷ್ಮೆ ಉತ್ಪನ್ನಗಳು ಉತ್ತಮವಾದವೆಂದು ಪರಿಗಣಿತವಾಗಿವೆ. ಈ ಜಿಲ್ಲೆಯಲ್ಲಿ ಸು. 1,000ಕ್ಕೂ ಮೀರಿ ಬೆಲ್ಲದ ಗಾಣಗಳಿವೆ. ಈ ಜಿಲ್ಲೆಯ ನಿಡಘಟ್ಟದ ಬಳಿ ತೆಂಗಿನ ನಾರಿನ ಕೈಗಾರಿಕಾ ಕೇಂದ್ರವಿದೆ. ಮಂಡ್ಯ ಮತ್ತು ಶ್ರೀರಂಗಪಟ್ಟಣಗಳಲ್ಲಿ ಜೇನುಸಾಕಣೆ ಕೇಂದ್ರಗಳಿವೆ. ಈ ಜಿಲ್ಲೆಯ ಮುಖ್ಯ ಗೃಹಕೈಗಾರಿಕೆಗಳೆಂದರೆ ಪಾದರಕ್ಷೆ, ಮಣ್ಣಿನ ವಸ್ತುಗಳು, ಹಿತ್ತಾಳೆ ಪಾತ್ರೆ, ವಿಗ್ರಹ ಮುಂತಾದವುಗಳ ತಯಾರಿಕೆ, ಚಾಪೆ ನೇಯ್ಗೆ, ಮರಗೆಲಸ, ಕಬ್ಬಿಣಗೆಲಸ ಮುಂತಾದವುಗಳು.

ಜಿಲ್ಲೆಯ ಕೈಗಾರಿಕೆಗಳಿಗೆ ಮತ್ತು ಇತರ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ವಿದ್ಯುತ್ ಸರಬರಾಜಿದೆ. ಇಡೀ ಭಾರತ ಮತ್ತು ಏಷ್ಯದಲ್ಲೇ ಪ್ರಥಮವಾಗಿ (1902) ಜಲವಿದ್ಯುತ್ ಉತ್ಪಾದಿಸಿದ್ದು ಈ ಜಿಲ್ಲೆಗೇ ಸೇರಿರುವ ಶಿವಸಮುದ್ರದಲ್ಲಿ. ಪ್ರಾರಂಭದಲ್ಲಿ 4,500 ಕಿವಾ. ವಿದ್ಯುತ್ ಉತ್ಪಾದನೆ ಇದ್ದದ್ದು, 1939ರಲ್ಲಿ 42,000 ಕಿವಾ.ಗೆ ಏರಿತು. ಶಿಂಷಾ ವಿದ್ಯುದಾಗರ 17,200 ಕಿ.ವಾ. ವಿದ್ಯುತ್ ಉತ್ಪಾದನೆಯೊಂದಿಗೆ 1940ರಲ್ಲಿ ಪ್ರಾರಂಭವಾಯಿತು.

ಮಂಡ್ಯ ಜಿಲ್ಲೆ ಉತ್ತಮ ಸಾರಿಗೆ ಸಂಪರ್ಕ ಹೊಂದಿದೆ. ಮೈಸೂರು–ಬೆಂಗಳೂರು ರೈಲುಮಾರ್ಗ ಈ ಜಿಲ್ಲೆಯಲ್ಲಿ ಹಾದುಹೋಗಿದ್ದು ಶ್ರೀರಂಗ ಪಟ್ಟಣ, ಪಾಂಡವಪುರ, ಮಂಡ್ಯ, ಮದ್ದೂರು ಮುಖ್ಯ ನಿಲ್ದಾಣಗಳಾಗಿವೆ. ಮೈಸೂರು–ಬೆಂಗಳೂರು ರಾಜ್ಯ ಹೆದ್ದಾರಿ ಸಂಖ್ಯೆ 7 ಈ ಜಿಲ್ಲೆಯ ಮೂಲಕ ಹಾದುಹೋಗುತ್ತದೆ. ಅಲ್ಲದೆ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಿಗೂ ಎಲ್ಲ ಗ್ರಾಮಗಳಿಗೂ ರಸ್ತೆ ಸಂಪರ್ಕವಿದೆ. ಜಿಲ್ಲೆಯಲ್ಲಿ 73 ಕಿಮೀ ರಾಷ್ಟ್ರೀಯ ಹೆದ್ದಾರಿ, 244 ಕಿಮೀ ರಾಜ್ಯಹೆದ್ದಾರಿ, 1340 ಕಿಮೀ ಜಿಲ್ಲಾ ಮುಖ್ಯ ಹೆದ್ದಾರಿ, 4549 ಕಿಮೀ ಗ್ರಾಮಾಂತರ ರಸ್ತೆಗಳೂ ಇವೆ. 14 ಭಾರಿ ಸೇತುವೆಗಳುಳ್ಳ ಈ ಜಿಲ್ಲೆಯ ಒಟ್ಟು ಪಕ್ಕಾರಸ್ತೆಗಳು 5,787 ಕಿಮೀ. ಜಿಲ್ಲೆಯಲ್ಲಿ 14 ರೈಲ್ವೆ ನಿಲ್ದಾಣಗಳಿದ್ದು 83 ಕಿಮೀ ಬ್ರಾಡ್‌ಗೇಜ್ ರೈಲುಮಾರ್ಗವಿದೆ (2001).

ಈ ಜಿಲ್ಲೆಯ ನಾಲ್ಕು ಸ್ಥಳಗಳಲ್ಲಿ ವಾರದ ಸಂತೆಗಳೂ ಸು. 13 ಸ್ಥಳಗಳಲ್ಲಿ ವಾರ್ಷಿಕ ಜಾತ್ರೆಗಳೂ ನಡೆಯುತ್ತವೆ. ಜಿಲ್ಲೆಯಲ್ಲಿ 327 ಅಂಚೆಕಚೇರಿಗಳೂ 9 ದೂರವಾಣಿ ಕೇಂದ್ರಗಳು ಇವೆ (1977). ಜಿಲ್ಲೆಯಲ್ಲಿ 6 ಸರ್ಕಾರಿ ಆಸ್ಪತ್ರೆಗಳು, 4 ಆಯುರ್ವೇದ ಆಸ್ಪತ್ರೆಗಳು, 72 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಘಟಕಗಳು, 15 ಕುಟುಂಬ ಕಲ್ಯಾಣ ಕೇಂದ್ರಗಳು ಇವೆ.

ಈ ಜಿಲ್ಲೆ ಶಿಕ್ಷಣಕ್ಷೇತ್ರದಲ್ಲೂ ತ್ವರಿತವಾಗಿ ಮುನ್ನಡೆದಿದೆ. ಇಲ್ಲಿ ಸರ್ಕಾರವಲ್ಲದೆ ಖಾಸಗಿಯವರೂ ಹಲವಾರು ವಿದ್ಯಾ ಸಂಸ್ಥೆಗಳನ್ನು ಕಟ್ಟಿದ್ದಾರೆ. ಜಿಲ್ಲೆಯಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಕಾಲೇಜುಗಳು ಅಸ್ತಿತ್ವಕ್ಕೆ ಬಂದಿವೆ. ಜಿಲ್ಲೆಯ ಸಾಕ್ಷರತಾ ಪ್ರಮಾಣ ಒಟ್ಟು 61.21 (2001) ಇದೆ. 2087 ಪ್ರಾಥಮಿಕ ಶಾಲೆಗಳೂ 313 ಪ್ರೌಢಶಾಲೆಗಳೂ 74 ಪದವಿಪೂರ್ವ ಕಾಲೇಜುಗಳೂ 3 ಪಾಲಿಟೆಕ್ನಿಕ್, 1 ಎಂಜನಿಯರಿಂಗ್ ಕಾಲೇಜು ಇವೆ. ವಿ.ಸಿ. ಫಾರಂ ಬೇಸಾಯಕ್ಷೇತ್ರದಲ್ಲಿ ತಜ್ಞರಿಂದ ಆಧುನಿಕ ಬೇಸಾಯ ಕ್ರಮದಲ್ಲಿ ರೈತರಿಗೆ ಮಾರ್ಗದರ್ಶನ ನೀಡುತ್ತದೆ. ಈ ಜಿಲ್ಲೆಯ ಆದಿಚುಂಚನಗಿರಿ ಒಂದು ದೊಡ್ಡ ವಿದ್ಯಾಕೇಂ ದ್ರವೂ ಆಗಿದೆ. ಇಲ್ಲಿ ಅನೇಕ ಮಂದಿ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ ಸೌಲಭ್ಯವಿದೆ. ಗೃಹ ಕೈಗಾರಿಕೆಗಳಲ್ಲಿ ತರಬೇತಿ ನೀಡಲು ನಾಗಮಂಗಲ ಮತ್ತು ಮಳವಳ್ಳಿಗಳಲ್ಲಿ ತರಬೇತಿ ಕೇಂದ್ರಗಳಿವೆ. 1959ರ ಅಕ್ಟೋಬರ್‌ನಲ್ಲಿ ಪ್ರಾರಂಭವಾದ ನಾಗಮಂಗಲ ಕೇಂದ್ರದಲ್ಲಿ ಕಬ್ಬಿಣ ಮತ್ತು ಮರಗೆಲಸ, ಹತ್ತಿ ಮತ್ತು ಉಣ್ಣೆ ನೇಯ್ಗೆ, ಬಟ್ಟೆ ಹೊಲಿಯುವುದು, ಹಿತ್ತಾಳೆ ಪಾತ್ರೆಗಳನ್ನು ಮಾಡುವುದು ಮತ್ತು ಕುಸುರಿಕೆಲಸಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಮಳವಳ್ಳಿ ತರಬೇತಿ ಕೇಂದ್ರದಲ್ಲಿ ಚರ್ಮ ಹದಮಾಡುವುದೇ ಮುಂತಾದ ಚರ್ಮೋದ್ಯೋಗಕ್ಕೆ ಬೇಕಾದ ತರಬೇತಿ ನೀಡಲಾಗುತ್ತಿದೆ.

ಸಾಂಸ್ಕೃತಿಕ ರಂಗದಲ್ಲಿ ಈ ಜಿಲ್ಲೆಯ ಸಾಧನೆ ಸಾಕಷ್ಟಿದೆ. ಈ ಜಿಲ್ಲೆಯ ಜನ ಅನೂಚಾನವಾಗಿ ಬಂದ ಜನಪದ ಸಾಹಿತ್ಯ ಕಲೆಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ದೊಡ್ಡಾಟ, ಪೂಜಾಕುಣಿತ, ಸೋಮನ ಕುಣಿತ ಮೊದಲಾದುವು ಈ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಪ್ರಚಲಿತವಾಗಿವೆ. ಇತ್ತೀಚಿನ ದಿನಗಳಲ್ಲಿ ಅನೇಕ ಹವ್ಯಾಸಿ ಕಲಾತಂಡಗಳು ಜಿಲ್ಲೆಯ ವಿವಿಧೆಡೆ ಕಾರ್ಯನಿರತವಾಗಿವೆ. ಶಿಷ್ಟಸಾಹಿತ್ಯ ಕ್ಷೇತ್ರದಲ್ಲೂ ಈ ಜಿಲ್ಲೆಯದು ಗಣ್ಯಸ್ಥಾನ. ಷಡಕ್ಷರದೇವ, ಚಿಕ್ಕದೇವರಾಜ, ತಿರುಮಲಾರ್ಯ, ಸಿಂಗರಾರ್ಯ, ಚಿಕುಪಾಧ್ಯಾಯ, ಸಂಚಿಹೊನ್ನಮ್ಮ, ಶೃಂಗಾರಮ್ಮ, ಸ್ವತಂತ್ರ ಸಿದ್ಧಲಿಂಗೇಶ್ವರ, ಬೊಮ್ಮೂರು ರುದ್ರ, ಕಿಕ್ಕೇರಿಯಾರಾಧ್ಯ ನಂಜುಂಡ, ದೇಪರಾಜ, ಮೇಲುಕೋಟೆ ರಾಜಮ್ಮ, ಹಲಗೂರು ಗುರುಸಿದ್ಧ ಕವಿ, ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ, ಚಿನ್ಮಯಕವಿ ಮೊದಲಾದವರು

ಈ ಜಿಲ್ಲೆಯ ಪ್ರಾಚೀನ ಸಾಹಿತಿಗಳು. ಎಸ್.ಜಿ. ನರಸಿಂಹಚಾರ್ಯ, ದೇವಶಿಖಾಮಣಿ ಅಳಸಿಂಗರಾಚಾರ್ಯ, ಬಿ. ವೆಂಕಟಾಚಾರ್ಯ, ಎಂ.ಎಲ್. ಶ್ರೀಕಂಠೇಶಗೌಡ, ಎಂ.ಎ. ರಾಮಾನುಜಯ್ಯಂಗಾರ್, ಬಿ.ಎಂ. ಶ್ರೀಕಂಠಯ್ಯ, ಎಂ.ಆರ್. ಶ್ರೀನಿವಾಸಮೂರ್ತಿ, ವೀರಕೇಸರಿ ಸೀತಾರಾಮಶಾಸ್ತ್ರಿ, ಎ.ಎನ್. ಮೂರ್ತಿರಾವ್, ಪು.ತಿ. ನರಸಿಂಹಾಚಾರ್ಯ, ಕೆ.ಎಸ್. ನರಸಿಂಹಸ್ವಾಮಿ, ಎಚ್.ಎಲ್. ನಾಗೇಗೌಡ, ಜಿ. ವೆಂಕಟಯ್ಯ, ಕೆ. ಗುಂಡಣ್ಣ, ಡಿ.ಆರ್. ರಾಮಯ್ಯ, ತ್ರಿವೇಣಿ, ಆರ್ಯಾಂಬ ಪಟ್ಟಾಭಿ, ವಾಣಿ, ಜಿ. ವೆಂಕಟಸುಬ್ಬಯ್ಯ, ಜಿ. ನಾರಾಯಣ, ಕೆ.ವಿ. ಶಂಕರಗೌಡ, ಬೆಸಗರಹಳ್ಳಿ ರಾಮಣ್ಣ, ರಮೇಶ್ ಹುಲ್ಲುಕೆರೆ, ಎಚ್.ಎಲ್. ಕೇಶವಮೂರ್ತಿ, ಜವರನಹಳ್ಳಿ ಸಿದ್ದಪ್ಪ, ಕೃಷ್ಣಪ್ಪಗೌಡ ಮೊದಲಾದವರೂ ಈ ಜಿಲ್ಲೆಯವರೇ.



ಪಂಚಕೂಟ ಬಸದಿ, ಕಂಬದಹಳ್ಳಿ

ಈ ಜಿಲ್ಲೆಯ ಕಲಾವಿದರಲ್ಲಿ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ ಮತ್ತು ವರದರಾಜ ಅಯ್ಯಂಗಾರ್ (ಗಾಯನ), ಮಳವಳ್ಳಿ ಸುಬ್ಬಣ್ಣ ಮತ್ತು ಮಳವಳ್ಳಿ ಸುಂದರಮ್ಮ (ಸಂಗೀತ ಮತ್ತು ನಾಟಕ ಕಲೆ), ವೈಜಯಂತಿಮಾಲಾ (ನೃತ್ಯ) ಇವರನ್ನು ಹೆಸರಿಸಬಹುದು.

ಮಂಡ್ಯ ಜಿಲ್ಲೆ ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯಿದ್ದ ಪ್ರದೇಶ. ಈ ಜಿಲ್ಲೆಯ ಬೆಳಕವಾಡಿ, ಮುತ್ತತ್ತಿ, ಪಾಂಡವಪುರ ಮೊದಲಾದೆಡೆಗಳಲ್ಲಿ ನವಶಿಲಾಯುಗ, ಕಬ್ಬಿಣದ ಯುಗ ಮತ್ತು ಆದಿಚಾರಿತ್ರಿಕ ಕಾಲದ ನೆಲೆಗಳು ಕಂಡುಬಂದಿವೆ. ಈ ಜಿಲ್ಲೆಯ ಇತಿಹಾಸ ಪ್ರಾರಂಭವಾಗುವುದು ಸು. 4ನೆಯ ಶತಮಾನದಿಂದ. ಆಗ ಈ ಜಿಲ್ಲೆಯ ಬಹುಭಾಗ ತಲಕಾಡಿನ ಗಂಗರಿಗೆ ಸೇರಿದ್ದು, ಶಿಂಷಾ ಕಣಿವೆಯ ಪ್ರದೇಶಕ್ಕೆ ಚಿಕ್ಕಗಂಗವಾಡಿ ಎಂಬ ಹೆಸರಿತ್ತು. 9ನೆಯ ಶತಮಾನದಲ್ಲಿ ಈ ಪ್ರದೇಶ ರಾಷ್ಟ್ರಕೂಟರ ವಶವಾಯಿತು. ಮತ್ತೆ 10ನೆಯ ಶತಮಾನದಲ್ಲಿ ಗಂಗರ ಆಳ್ವಿಕೆ ಇಲ್ಲಿ ನೆಲೆಗೊಂಡರೂ 1004ರಲ್ಲಿ ಚೋಳರ ಕೈಸೇರಿತು. ಆಗ ಈ ಜಿಲ್ಲೆ ಚೋಳ ರಾಜ್ಯದ ಮುಡಿಕೊಂಡ ಚೋಳಮಂಡಲ ಪ್ರಾಂತ್ಯದ ಭಾಗವಾಗಿತ್ತು. ಶಿವಸಮುದ್ರ ಹಾಗೂ ಮಳವಳ್ಳಿ ಭಾಗಗಳಿಗೆ ರಾಜೇಂದ್ರ ಚೋಳವಳನಾಡು ಎಂಬ ಹೆಸರಿತ್ತು. ಹೊಯ್ಸಳ ವಿಷ್ಣುವರ್ಧನ ತಲಕಾಡನ್ನು ಗೆದ್ದಮೇಲೆ ಮಂಡ್ಯ ಜಿಲ್ಲೆಯ ಪ್ರದೇಶ ಹೊಯ್ಸಳ ರಾಜ್ಯಕ್ಕೆ ಸೇರಿತು. ಈ ಜಿಲ್ಲೆಯಲ್ಲಿರುವ ಮೇಲುಕೋಟೆಯ ಬಳಿ ಇರುವ ತೊಣ್ಣೂರು ಹೊಯ್ಸಳರ ಅನಂತರ ಈ ಭಾಗ ವಿಜಯನಗರದ ಅರಸರಿಗೆ ಸೇರಿತು. ಆಗ ಈ ಜಿಲ್ಲೆಯ ಹೆಚ್ಚು ಭಾಗ ವಿಜಯನಗರದ ಸಾಮಂತರಾಗಿದ್ದ ನಾಗಮಂಗಲ ಮತ್ತು ಚನ್ನಪಟ್ಟಣದ ಪಾಳೆಯಗಾರರ ಅಧೀನದಲ್ಲಿತ್ತೆಂದು ತೋರುತ್ತದೆ. 1454ರಲ್ಲಿ ನಾಗಮಂಗಲದ ತಿಮ್ಮ ಒಡೆಯ ವಿಜಯನಗರದ ಅರಸರ ಅಪ್ಪಣೆ ಪಡೆದು ಶ್ರೀರಂಗಪಟ್ಟಣದ ಕೋಟೆಯನ್ನು ಕಟ್ಟಿಸಿದ. ಅಂದಿನಿಂದ ಈ ಪಟ್ಟಣ ಅಭಿವೃದ್ಧಿ ಹೊಂದಿ 16ನೆಯ ಶತಮಾನದಲ್ಲಿ ಇಲ್ಲಿ ವಿಜಯನಗರದ ರಾಜಪ್ರತಿನಿಧಿಗಳೂ ನೆಲೆಸಿದ್ದರು. 1610ರಲ್ಲಿ ಮೈಸೂರಿನ ರಾಜ ಒಡೆಯ ಶ್ರೀರಂಗಪಟ್ಟಣವನ್ನು ಆಕ್ರಮಿಸಿ ಅದನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದಲ್ಲದೆ ಜಿಲ್ಲೆಯ ಬಹು ಭಾಗವನ್ನೂ ತನ್ನ ರಾಜ್ಯಕ್ಕೆ ಸೇರಿಸಿದ. ಅಂದಿನಿಂದ ಈ ಜಿಲ್ಲೆಯ ಪ್ರದೇಶ ಮೈಸೂರು ಸಂಸ್ಥಾನದಲ್ಲಿ ಮುಂದುವರಿಯಿತು. ಆದರೆ ಸಂಸ್ಥಾನದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣ, ಟಿಪ್ಪುವಿನ ಮರಣಾನಂತರ ಮೈಸೂರಿಗೆ ವರ್ಗಾಯಿಸಲಾಗಿ ಅದು ತನ್ನ ಪ್ರತಿಷ್ಠೆಯನ್ನು ಕಳೆದುಕೊಂಡಿತು.

19ನೆಯ ಶತಮಾನದ ಆದಿಭಾಗದಲ್ಲಿ ಮೈಸೂರು ಸಂಸ್ಥಾನದಲ್ಲಿ 6 ಫೌಜುದಾರಿ ವಿಭಾಗಗಳಿದ್ದವು. ಈಗಿನ ಮಂಡ್ಯ ಜಿಲ್ಲೆಯ ಭಾಗ ಅಷ್ಟಗ್ರಾಮ ಫೌಜುದಾರರಿಗೆ ಸೇರಿತ್ತು. ಬ್ರಿಟಿಷ್ ಕಮಿಷನ್ ಆಡಳಿತದ ಕಾಲದಲ್ಲಿ ಸಂಸ್ಥಾನವನ್ನು ಜಿಲ್ಲೆಗಳಾಗಿ ವಿಂಗಡಿಸಿದ್ದಾಗ ಈಗಿನ ಮಂಡ್ಯ ಜಿಲ್ಲೆಯ ಪ್ರದೇಶ ಮೈಸೂರು ಜಿಲ್ಲೆಗೇ ಸೇರಿತ್ತು. ಮುಂದೆ ಮೈಸೂರು ಜಿಲ್ಲೆಯಿಂದ ಕೆಲವು ತಾಲ್ಲೂಕುಗಳನ್ನು ಪ್ರತ್ಯೇಕಿಸಿ ಈಗಿನ ಮಂಡ್ಯಜಿಲ್ಲೆಯನ್ನು 1939ರ ಜುಲೈ 1ರಂದು ರಚಿಸಲಾಯಿತು.

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಈ ಜಿಲ್ಲೆ ಗಣನೀಯ ಪಾತ್ರ ವಹಿಸಿತ್ತು. ಏಪ್ರಿಲ್ 1938ರಲ್ಲಿ ಮದ್ದೂರಿನ ಬಳಿಯ ಶಿವಪುರದಲ್ಲಿ ಕಾಂಗ್ರೆಸ್ ಸಭೆಸೇರಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಡಲು ನಿರ್ಧರಿಸಿತು (ಅದರ ಜ್ಞಾಪಕಾರ್ಥವಾಗಿ ಈಗ ಅಲ್ಲಿ ಒಂದು ಸ್ಮಾರಕ ನಿರ್ಮಿತವಾಗಿದೆ). 1942ರ ಕ್ವಿಟ್ ಇಂಡಿಯ ಚಳವಳಿಯಲ್ಲಿ ಅನೇಕ ಕಾಂಗ್ರೆಸ್ ಸದಸ್ಯರು ಮಂಡ್ಯ ಜಿಲ್ಲೆಯಲ್ಲಿ ಬಂಧಿತರಾದರು. 1944–45ರಲ್ಲಿ ಕಾಂಗ್ರೆಸ್ ಮತ್ತೆ ಮಂಡ್ಯ ಬಳಿಯ ಉಮ್ಮಡಹಳ್ಳಿ ಬಳಿ ಸಭೆಸೇರಿತ್ತು. ಸ್ವರಾಜ್ಯ ಸಾಧನೆಗೆ ದುಡಿಯಲು ಪಣ ತೊಟ್ಟಿದ್ದ ಈ ಜಿಲ್ಲೆಯ ಜನ ಸ್ವಾತಂತ್ರ್ಯಸಾಧನೆಗೆ ತಮ್ಮ ಅಮೂಲ್ಯ ಕಾಣಿಕೆ ಸಲ್ಲಿಸಿರುವರು. ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ನೇತಾರರಲ್ಲಿ ಎಚ್.ಹೊನ್ನಯ್ಯ, ಎಚ್.ಕೆ. ವೀರಣ್ಣಗೌಡ, ಸಾಹುಕಾರ ಎಸ್. ಚನ್ನಯ್ಯ ಮತ್ತು ಕೆ.ವಿ. ಶಂಕರಗೌಡ ಮೊದಲಾದವರು ಪ್ರಸಿದ್ಧರಾಗಿದ್ದಾರೆ.



ಅನಂತಪದ್ಮನಾಭ ದೇವಾಲಯ, ಹೊಸಬೂದನೂರು

ಈ ಜಿಲ್ಲೆಯ ಮುಖ್ಯಸ್ಥಳಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲದೆ ಬೆಳಕವಾಡಿ, ಬೆಳ್ಳೂರು ಮತ್ತು ಮೇಲುಕೋಟೆ ಇವು ಪಟ್ಟಣಗಳೆಂದು ಪರಿಗಣಿತವಾಗಿವೆ. ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಮತ್ತು ಇತಿಹಾಸ ಪ್ರಸಿದ್ಧ ಸ್ಥಳಗಳಿವೆ. 1610ರಿಂದ 1799ರವರೆಗೆ ಮೈಸೂರು ಸಂಸ್ಥಾನದ ರಾಜಧಾನಿಯಾಗಿ ಮೆರೆದು ಹೈದರ್ ಮತ್ತು ಟಿಪ್ಪುಸುಲ್ತಾನರ ಭದ್ರನೆಲೆಯಾಗಿದ್ದ ಶ್ರೀರಂಗಪಟ್ಟಣ, ಕಾವೇರಿಯ ಗಗನಚುಕ್ಕಿ ಮತ್ತು

ಭರಚುಕ್ಕಿ ಜಲಪಾತಗಳಿರುವ ಶಿವಸಮುದ್ರ, ಸುಂದರ ಉದ್ಯಾನದಿಂದ ಕಂಗೊಳಿಸುವ ಕೃಷ್ಣರಾಜಸಾಗರ–ಇವು ಪ್ರಪಂಚಪ್ರಸಿದ್ಧವಾಗಿವೆ. ಶ್ರೀರಂಗ ಪಟ್ಟಣದ ಬಳಿ ಇರುವ ರಂಗನತಿಟ್ಟು ಪ್ರಸಿದ್ಧ ಪಕ್ಷಿಧಾಮ. ರಾಮಾನುಜಾಚಾರ್ಯರು ನೆಲೆಸಿದ್ದರೆನ್ನಲಾದ ಅನೇಕ ದೇವಾಲಯಗಳಿಂದ ಕಂಗೊಳಿಸುವ ಮೇಲುಕೋಟೆ ಮತ್ತು ತೊಣ್ಣೂರು ಹಾಗೂ ಶ್ರೀರಂಗಪಟ್ಟಣ ಯಾತ್ರಾಸ್ಥಳ

ಜುಮ್ಮಾಮಸೀದಿ, ಶ್ರೀರಂಗಪಟ್ಟಣ

ಗಳು. ಗಂಗರ ಕಾಲದ ಸುಂದರ ಬಸದಿಗಳನ್ನುಳ್ಳ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿ ಜೈನರಿಗೆ ಪವಿತ್ರ ಸ್ಥಳವೂ ಆಗಿದೆ. ಕೃಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿ, ಅಘಲಯ, ಹೊಸಹೊಳಲು, ಕಿಕ್ಕೇರಿ, ಮಾದಾಪುರ ಮತ್ತು ತೆಂಗಿನಘಟ್ಟ, ನಾಗಮಂಗಲ ತಾಲ್ಲೂಕಿನ ಬೆಳ್ಳೂರು, ದೊಡ್ಡ ಜಟಕ ಮತ್ತು ನಾಗಮಂಗಲ, ಮಂಡ್ಯ ತಾಲ್ಲೂಕಿನ ಬಸರಾಳು–ಈ ಸ್ಥಳಗಳಲ್ಲಿ ಹೊಯ್ಸಳ ಕಾಲದ ಸುಂದರ ದೇವಾಲಯಗಳಿವೆ. ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿನ ಮಾರೇಹಳ್ಳಿಗಳಲ್ಲಿ ಚೋಳರ ಕಾಲದ ದೇವಾಲಯಗಳಿವೆ. ನಾಗಮಂಗಲ ಮತ್ತು ಪಾಲಗ್ರಹಾರಗಳಲ್ಲಿ ಪಾಳೆಯಗಾರರ ಕಾಲದ ದೇವಾಲಯಗಳಿವೆ.

**ತಾಲ್ಲೂಕು:** ಮಂಡ್ಯ ತಾಲ್ಲೂಕನ್ನು ಪೂರ್ವದಲ್ಲಿ ಮದ್ದೂರು, ಉತ್ತರದಲ್ಲಿ ನಾಗಮಂಗಲ, ಪಶ್ಚಿಮದಲ್ಲಿ ಪಾಂಡವಪುರ, ದಕ್ಷಿಣದಲ್ಲಿ ಶ್ರೀರಂಗಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕುಗಳು ಸುತ್ತುವರೆದಿವೆ. ಮೈಸೂರು ಜಿಲ್ಲೆಯ ಒಂದು ಗ್ರಾಮದ ಅಂಚು ಸಹ ಈ ತಾಲ್ಲೂಕಿನ ದಕ್ಷಿಣ ಭಾಗದಲ್ಲಿದೆ. ಮಂಡ್ಯ ತಾಲ್ಲೂಕನ್ನು ಶ್ರೀರಂಗಪಟ್ಟಣ, ಪಾಂಡವಪುರ, ತಿರುಮಕೂಡಲು ನರಸೀಪುರ ಮತ್ತು ಮಳವಳ್ಳಿ ತಾಲ್ಲೂಕುಗಳೂ ಸುತ್ತುವರಿದಿವೆ. ಕೆರೆಗೋಡು, ಮಂಡ್ಯ, ಬಸರಾಳು, ದುದ್ದ ಮತ್ತು ಕೊತ್ತತ್ತಿ ಹೋಬಳಿಗಳು. ಒಂದು ಪಟ್ಟಣ ಮತ್ತು 183 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 715.1 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 4,05,612.

ತಾಲ್ಲೂಕು ಸಾಮಾನ್ಯವಾಗಿ ಮೈದಾನ ಪ್ರದೇಶ. ಹೆಸರಿಸುವಂತಹ ಬೆಟ್ಟಗುಡ್ಡಗಳಿಲ್ಲ. ಲೋಕಪಾವನಿ ನದಿ ತಾಲ್ಲೂಕಿನ ಪಶ್ಚಿಮಭಾಗದಲ್ಲಿ ಸ್ವಲ್ಪದೂರ ಹರಿದು ಅನಂತರ ತಾಲ್ಲೂಕಿನ ಅಂಚಿನಲ್ಲಿ ಪಾಂಡವಪುರ ತಾಲ್ಲೂಕನ್ನು ಬೇರ್ಪಡಿಸುವ ಗಡಿಯಾಗಿ ದಕ್ಷಿಣಾಭಿಮುಖವಾಗಿ ಹರಿಯುವುದು. ಈ ತಾಲ್ಲೂಕಿನಲ್ಲಿ ಹೆಚ್ಚಾಗಿ ಮರುಳು ಮಿಶ್ರಿತ ಕೆಂಪು ಜೇಡಿಮಣ್ಣಿನ ಭೂಮಿ ಇದೆ. ವಾರ್ಷಿಕ ಮಳೆ 859.80 ಮಿಮೀ. ತಾಲ್ಲೂಕಿನಲ್ಲಿ ಅರಣ್ಯಪ್ರದೇಶವಿಲ್ಲ.

ವಿಶ್ವೇಶ್ವರಯ್ಯ ನಾಲೆಯಿಂದ ಈ ತಾಲ್ಲೂಕಿಗೆ ನೀರೊದಗಿದ್ದು ಕೃಷಿ ಪ್ರಗತಿದಾಯಕವಾಗಿದೆ. ಹುಲಿಕೆರೆ ಬಳಿ ಕರಿಘಟ್ಟ ಶ್ರೇಣಿಯ ಬೆಟ್ಟಕ್ಕೆ 9,200" ಉದ್ದದ ಸುರಂಗವನ್ನು ಕೊರೆದು ವಿಶ್ವೇಶ್ವರಯ್ಯ ನಾಲೆಯ ನೀರನ್ನು ಹರಿಯಬಿಟ್ಟಿದೆ. ಈ ಸುರಂಗದ ಆಳ ನೆಲದಮಟ್ಟದಿಂದ ಕೆಳಗೆ 67"ಗಳಿಂದ 150"ಗಳವರೆಗೆ ಇದೆ. ಪ್ರಪಂಚದ ಅತ್ಯಂತ ಉದ್ದವಾದ ನೀರಾವರಿ ಸುರಂಗಗಳಲ್ಲಿ ಇದೂ ಒಂದು. ಬತ್ತ, ರಾಗಿ, ಜೋಳ, ಕಬ್ಬು, ನೆಲಗಡಲೆ, ತೆಂಗು ಮುಖ್ಯ ಬೆಳೆಗಳು. ತಾಲ್ಲೂಕಿನಲ್ಲಿ ಕೃಷಿಗೆ ಸಂಬಂಧಿಸಿದಂತೆ ಹೊಸ ಪ್ರಯೋಗಗಳಾಗುತ್ತಿವೆ. ಇಲ್ಲಿ ಇಂಡೊ–ಜಪಾನೀಸ್ ಕೃಷಿ ಪ್ರದರ್ಶನ ಕ್ಷೇತ್ರವಿದೆ. ತರುಣ ಕೃಷಿಗಾರರಿಗೆ ಮಾರ್ಗದರ್ಶನ ನೀಡುತ್ತಿದೆ. ಇದಲ್ಲದೆ ಕೆಲವು ಸರ್ಕಾರಿ ವ್ಯವಸಾಯಾಭಿವೃದ್ಧಿ ಕಾರ್ಯಕ್ರಮಗಳೂ ನಡೆಯುತ್ತಿವೆ.

ಮಂಡ್ಯ ತಾಲ್ಲೂಕು ಕೈಗಾರಿಕೆಯಲ್ಲಿ ಜಿಲ್ಲೆಯಲ್ಲೇ ಪ್ರಥಮಸ್ಥಾನ ಪಡೆದಿದೆ. ಹೆಚ್ಚು ಕೈಗಾರಿಕೆಗಳು ಮಂಡ್ಯ ಪಟ್ಟಣ ಮತ್ತು ಅದರ ಪರಿಸರದಲ್ಲಿ ಇವೆ. 1933ರಲ್ಲಿ ಪ್ರಾರಂಭವಾದ ಮೈಸೂರು ಶುಗರ್ ಕಂಪನಿ ಜಿಲ್ಲೆಯ ದೊಡ್ಡ ಕೈಗಾರಿಕೆಗಳಲ್ಲೇ ಪ್ರಥಮವಾದದ್ದು. ಈ ತಾಲ್ಲೂಕಿನಲ್ಲಿ ಬೆಲ್ಲದ ತಯಾರಿಕೆ ಉಂಟು. ರಾಸಾಯನಿಕ ಮತ್ತು ಉಪಯುಕ್ತ ವಸ್ತುಗಳ ತಯಾರಿಕೆಯೂ ಇದೆ. ಅಕ್ಕಿಗಿರಣಿಗಳು ಇವೆ. ರೇಷ್ಮೆ ಸಾಕಣೆ ಈ ತಾಲ್ಲೂಕಿನಲ್ಲೂ ಪ್ರಚಲಿತ. ಇಲ್ಲಿಂದ ಅಕ್ಕಿ, ಸಕ್ಕರೆ, ಮದ್ಯ ಇವು ಹೆಚ್ಚಾಗಿ ರಫ್ತಾಗುತ್ತವೆ. ಸಿಮೆಂಟ್, ಬಟ್ಟೆ, ಯಂತ್ರೋಪಕರಣಗಳು ಹೆಚ್ಚಾಗಿ ಆಮದಾಗುವ ಪದಾರ್ಥಗಳು. ವ್ಯಾಪಾರ ವಾಣಿಜ್ಯಕ್ಕೆ ಆರ್ಥಿಕ ಸಹಕಾರ ನೀಡಲು ತಾಲ್ಲೂಕಿನಲ್ಲಿ ನಾನಾಬಗೆಯ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ.

ಮೈಸೂರು–ಬೆಂಗಳೂರುಗಳ ನಡುವೆ ಇರುವ ಮಂಡ್ಯ ತಾಲ್ಲೂಕು ವ್ಯಾಪಾರ ವಾಣಿಜ್ಯದಲ್ಲಿ ಮುಂದುವರಿಯಲು ಅದರ ಭೌಗೋಳಿಕ ಸನ್ನಿವೇಶವೂ ಮುಖ್ಯವಾಗಿದೆ. ತಾಲ್ಲೂಕಿನ ದಕ್ಷಿಣದಲ್ಲಿ ನೈಋತ್ಯ–ಈಶಾನ್ಯವಾಗಿ ಮೈಸೂರು–ಬೆಂಗಳೂರು ರೈಲುದಾರಿ ಮತ್ತು ರಾಜ್ಯ ಹೆದ್ದಾರಿ ಹಾದುಹೋಗಿವೆ. ಮಂಡ್ಯದಿಂದ ಬನ್ನೂರು, ನಾಗಮಂಗಲ, ಶಿವಳ್ಳಿ ಮತ್ತು ಕೆರೆಗೋಡುಗಳಿಗೆ ಹೋಗುವ ರಸ್ತೆಗಳು ತಾಲ್ಲೂಕಿನ ಮುಖ್ಯಹಾದಿಗಳು.

ರೈತರ ವಿವಿಧೋದ್ದೇಶ ಸಹಕಾರ ಸಂಘ, ಮಂಡ್ಯ

ಈ ತಾಲ್ಲೂಕಿನ ಕೆಲವು ಮುಖ್ಯ ಊರುಗಳಲ್ಲಿ ಮಂಡ್ಯದಿಂದ ಸು. 10 ಕಿಮೀ ವಾಯವ್ಯಕ್ಕೆ ಗಾಣದಾಳು ಗ್ರಾಮದ ಬಳಿ ಇರುವ ವಿಶ್ವೇಶ್ವರಯ್ಯ ಫಾರಂನಲ್ಲಿ ಒಂದು ವ್ಯವಸಾಯ ಸಂಶೋಧನ ಕೇಂದ್ರ ಹಾಗೂ ಇಂಡೊ–ಜಪಾನೀಸ್ ವ್ಯವಸಾಯ ಪ್ರದರ್ಶನ ಕೇಂದ್ರ ಮತ್ತು ಗ್ರಾಮಸೇವಕರ ತರಬೇತಿ ಕೇಂದ್ರ ಇವೆ. ಮಂಡ್ಯಕ್ಕೆ ಈಶಾನ್ಯದಲ್ಲಿ 8 ಕಿಮೀ ದೂರದಲ್ಲಿರುವ ಬೆಳ್ಳಂಡಗೆರೆಯ ಬಳಿ ಪ್ರತಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಕಾಡುಬಸವೇಶ್ವರ ಜಾತ್ರೆ ಬಹು ಪ್ರಸಿದ್ಧ. ಮಂಡ್ಯದ ನೈಋತ್ಯದಲ್ಲಿ 7 ಕಿಮೀ ದೂರದಲ್ಲಿರುವ ಸುಂಡಹಳ್ಳಿಯಲ್ಲಿ ಪ್ರತಿವರ್ಷ ದೀಪಾವಳಿಯ ಕಾಲದಲ್ಲಿ ನಡೆಯುವ ಮಹದೇಶ್ವರಸ್ವಾಮಿ ರಥೋತ್ಸವ ನಡೆಯುತ್ತದೆ.

ಬಸರಾಳು **(ನೋಡಿ)** ಈ ತಾಲ್ಲೂಕಿನ ಒಂದು ಮುಖ್ಯ ಗ್ರಾಮ. ಮಂಡ್ಯದಿಂದ 14 ಕಿಮೀ ದೂರದಲ್ಲಿರುವ ಕೆರೆಗೋಡಿನಲ್ಲಿ ಪ್ರತಿ ಫೆಬ್ರವರಿ ತಿಂಗಳಿನಲ್ಲಿ ನಡೆಯುವ ಪಂಚಲಿಂಗೇಶ್ವರ ಜಾತ್ರೆ ತಾಲ್ಲೂಕಿನ ಮುಖ್ಯ ಜಾತ್ರೆಗಳಲ್ಲೊಂದು. ಮಂಡ್ಯದ ಈಶಾನ್ಯಕ್ಕೆ 16 ಕಿಮೀ ದೂರದಲ್ಲಿರುವ ಶಿವಾರ ಗ್ರಾಮದ ಬಳಿ ಇರುವ ವಿದ್ಯಾಪೀಠದಲ್ಲಿ ಕ್ಷೀರೋದ್ಯಮ ಶಿಕ್ಷಣ ತರಬೇತಿ ನೀಡಲಾಗುತ್ತದೆ. ಅಲ್ಲದೆ ಇಲ್ಲಿ ಗಂಗಾಧರೇಶ್ವರಸ್ವಾಮಿ ಜಾತ್ರೆ ನಡೆಯುತ್ತದೆ.

**ಪಟ್ಟಣ:** ಮಂಡ್ಯ ಈ ಜಿಲ್ಲೆಯ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯಪಟ್ಟಣ. ಮೈಸೂರು–ಬೆಂಗಳೂರು ರೈಲು ಮತ್ತು ರಾಜ್ಯ ಹೆದ್ದಾರಿಯಲ್ಲಿ ಮೈಸೂರು ನಗರದ ಈಶಾನ್ಯಕ್ಕೆ 42 ಕಿಮೀ ದೂರದಲ್ಲೂ ಬೆಂಗಳೂರಿನ ನೈಋತ್ಯಕ್ಕೆ 100 ಕಿಮೀ ದೂರದಲ್ಲೂ ಇದೆ. ಮಂಡ್ಯ ಪಟ್ಟಣದಲ್ಲಿ 66,630 ಮಂದಿ ಪುರುಷರು, 64,581. ಮಂದಿ ಮಹಿಳೆಯರು ಇದ್ದು ಒಟ್ಟು ಜನಸಂಖ್ಯೆ 1,31,179. ಪಟ್ಟಣ ಸಮುದ್ರಮಟ್ಟದಿಂದ 671 ಮೀ. ಎತ್ತರದಲ್ಲಿದ್ದು ಹಿತಕರವಾದ ವಾಯುಗುಣ ಪಡೆದಿದೆ.

ನಗರ ಪಾಲಿಕೆ ಕಟ್ಟಡ, ಮಂಡ್ಯ

ಇದು ಜಿಲ್ಲೆಯ ಪ್ರಮುಖ ಔದ್ಯಮಿಕ ಮತ್ತು ವ್ಯಾಪಾರ ಕೇಂದ್ರ. ಇಲ್ಲಿ ಪ್ರಸಿದ್ಧ ಮಂಡ್ಯ ಸಕ್ಕರೆ ಕಾರ್ಖಾನೆ (ಮೈಸೂರು ಶುಗರ್ ಕಂಪನಿ). ಅದಕ್ಕೆ ಹೊಂದಿಕೊಂಡಂತೆಯೇ ಇರುವ ಮದ್ಯಸಾರದ ಮತ್ತು ಮದ್ಯ ತಯಾರಿಕಾ ಕಾರ್ಖಾನೆ ಇವೆ. ಇವೆರಡೂ ಭಾರತದಲ್ಲಿ ಆ ಬಗೆಯ ಪ್ರಥಮ ಆಧುನಿಕ ಕಾರ್ಖಾನೆಗಳು. ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಫ್ಯಾಕ್ಟರಿ, ಒಂದು ಆಧುನಿಕ ಅಕ್ಕಿಗಿರಣಿ, ಒಂದು ಉಪಕರಣ ಕಾರ್ಖಾನೆ, ಸಣ್ಣ ಪ್ರಮಾಣದ ಮೈಸೂರು ಮೆಟಲ್ ಇಂಡಸ್ಟ್ರೀಸ್, ಮಂಡ್ಯ ಎಂಜಿನಿಯರಿಂಗ್ ವರ್ಕ್ಸ್, ಮೈಸೂರು ಮಿನರಲ್ಸ್ ಅಂಡ್ ಗ್ಯಾಸ್ ಕಂಪನಿ ಮುಂತಾದವುಗಳಿವೆ. ಮಂಡ್ಯದಿಂದ ಜಿಲ್ಲೆಯ ಎಲ್ಲ ಪಟ್ಟಣ, ಗ್ರಾಮಗಳಿಗೂ ಮತ್ತು ರಾಜ್ಯದ ಇತರ ಜಿಲ್ಲಾ ಕೇಂದ್ರಗಳಿಗೂ ಉತ್ತಮ ಮಾರ್ಗ ಸಂಪರ್ಕವಿದೆ. ಇಲ್ಲಿ ರೈಲ್ವೆ ನಿಲ್ದಾಣವಿದ್ದು ವ್ಯಾಪಾರ ವಾಣಿಜ್ಯದ ಪ್ರಗತಿಗೆ ನೆರವಾಗಿದೆ.

ಜಿಲ್ಲೆಯ ಮುಖ್ಯ ಪಟ್ಟಣವಾಗಿರುವುದರಿಂದ ಇಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಡಳಿತಾಂಗವಾಗಿ ಕೆಲವು ಕಚೇರಿಗಳಿವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ಸಹಕಾರ ಸಂಘಗಳೂ ನಿಯಂತ್ರಿತ ಮಾರುಕಟ್ಟೆ, ಸರ್ಕಾರಿ ಆಸ್ಪತ್ರೆ ಮತ್ತು ಔಷಧಾಲಯ, ಅಂಚೆ ತಂತಿ, ದೂರವಾಣಿ ಮತ್ತು ವಿದ್ಯುತ್ತಿನ ಸೌಲಭ್ಯಗಳೂ ಇವೆ. ಶಿಕ್ಷಣ ಸಂಸ್ಥೆಗಳು, ಪದವಿ ಕಾಲೇಜುಗಳು, ಒಂದು ಎಂಜಿನಿಯರಿಂಗ್ ಕಾಲೇಜು ಇರುವುದಲ್ಲದೆ ಈಗ ಸರ್ಕಾರಿ ವೈದ್ಯಕೀಯ ಕಾಲೇಜು ಸಹ ಪ್ರಾರಂಭವಾಗುತ್ತಿದೆ.

ಮಂಡ್ಯ ಪಟ್ಟಣ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಕೈಗಾರಿಕೆಗಳು ಬೆಳೆದಂತೆ ಜನಸಂಖ್ಯೆಯೂ ಬೆಳೆಯುತ್ತಿದೆ. ಪಟ್ಟಣಕ್ಕೆ ಹೊಸ ಬಡಾವಣೆಗಳು ಸೇರಿವೆ. ಅಭಿವೃದ್ಧಿ ಮಂಡಲಿಯ ಯೋಜನೆಯಂತೆ ಪಟ್ಟಣದ ಸುತ್ತಲೂ ಹೊಸ ವಿಸ್ತರಣೆಗಳಾಗುತ್ತಿವೆ. ಮೈಸೂರು ಜಿಲ್ಲೆಗೇ ಸೇರಿದ್ದ ಮಂಡ್ಯ ಪಟ್ಟಣ ಕೃಷ್ಣರಾಜಸಾಗರದ ನಿರ್ಮಾಣವಾದ ಅನಂತರ ಹೆಚ್ಚು ಪ್ರಾಮುಖ್ಯ ಪಡೆಯಿತು. 1939 ಜುಲೈ 1 ರಿಂದ ಮಂಡ್ಯ ಜಿಲ್ಲೆಯ ನಿರ್ಮಾಣದೊಂದಿಗೆ ಇದು ಜಿಲ್ಲಾ ಆಡಳಿತ ಕೇಂದ್ರವಾಯಿತು. ಮಂಡ್ಯದಲ್ಲಿ ನಗರಸಭಾ ಆಡಳಿತವಿದೆ.

ಇಲ್ಲಿನ ಜನಾರ್ದನಸ್ವಾಮಿ ದೇವಾಲಯ ಸ್ಥಳೀಯವಾಗಿ ಪ್ರಸಿದ್ಧವಾದುದು. ಪ್ರತಿವರ್ಷ ಏಪ್ರಿಲ್–ಮೇ ತಿಂಗಳಲ್ಲಿ ಇಲ್ಲಿ ರಥೋತ್ಸವ ನಡೆಯುತ್ತದೆ. ವರ್ಷಂಪ್ರತಿ ಈ ಊರಿನಲ್ಲಿ ಗಣೇಶನ ಉತ್ಸವ ವೈಭವದಿಂದ ನಡೆಯುತ್ತದೆ.

ಸ್ಥಳಪುರಾಣದ ಪ್ರಕಾರ ಈ ಊರು ಕೃತಯುಗದಲ್ಲಿ ವೇದಾರಣ್ಯ, ದ್ವಾಪರಯುಗದಲ್ಲಿ ಇಂದ್ರವರ್ಮನೆಂಬ ರಾಜ ಇಲ್ಲಿಗೆ ಬಂದು ತಪಸ್ಸು ಮಾಡಿದ. ಅದರ ಫಲವಾಗಿ ಜನಿಸಿದ ಅವನ ಮಗ ಸೋಮವರ಼್್ಮ ಇಲ್ಲಿ ಕೋಟೆ ಮತ್ತು ಅಗ್ರಹಾರವನ್ನು ಕಟ್ಟಿಸಿ ಇದಕ್ಕೆ ಮಂಡೇವೇಮು ಎಂದು ಹೆಸರಿಟ್ಟ. ಇದೇ ಮುಂದೆ ಮಂಡ್ಯವಾಯಿತು ಎಂದು ಪ್ರತೀತಿ. *

**ಮಂದರ್ತಿ:** ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಹೆಗ್ಗುಂಜೆ ಗ್ರಾಮಕ್ಕೆ ಸೇರಿದ ಒಂದು ಚಿಕ್ಕ ಹಳ್ಳಿ. ಉಡುಪಿಯ ಉತ್ತರದಲ್ಲಿ 25 ಕಿಮೀ ದೂರದಲ್ಲಿದೆ. ಇಲ್ಲಿರುವ ದುರ್ಗಾಪರಮೇಶ್ವರಿ ದೇವಾಲಯ ಹಿಂದಿನಿಂದಲೂ ಶಕ್ತಿಪೂಜಾ ಸ್ಥಳ. ದೇವಾಲಯವನ್ನು ಇತ್ತೀಚೆಗೆ ದುರಸ್ತಿಮಾಡಲಾಗಿದೆ. ಶಕ್ತಿದುರ್ಗ ಮಹಿಷಮರ್ಧಿನಿ ಮತ್ತು ಚಾಮುಂಡೇಶ್ವರಿ ಆರಾಧ್ಯ ವಿಗ್ರಹಗಳಿವೆ. ಮಂದರ್ತಿಯ ಶ್ರೀದುರ್ಗಾ ಪರಮೇಶ್ವರಿ ಯಕ್ಷಗಾನ ಮೇಳ ಸುತ್ತಲ ಊರುಗಳಲ್ಲಿ ಹೆಸರಾದುದು. **(ವಿ.ಬಿ.ಎಚ್.)**

**ಮಗ್ಗೆಯ ಮಾಯಿದೇವ:** ಸು. 1430. ವೀರಶೈವ ಕವಿ. ಅನುಭವ ಸೂತ್ರ, ಪ್ರಭುಗೀತೆ, ಏಕೋತ್ತರಶತಸ್ಥಲ ಷಟ್ಪದಿ, ಷಟ್‌ಸ್ಥಲ ಗದ್ಯ, ಶತಕತ್ರಯ, ಮಗ್ಗೆಯ ಮಾಯಿದೇವ ವಚನ ಎಂಬ ಗ್ರಂಥಗಳನ್ನು ಬರೆದಂತೆ ತಿಳಿಯುತ್ತದೆ. ಅನುಭವಸೂತ್ರ, ಶತಕತ್ರಯವನ್ನುಳಿದು ಇತರ ಗ್ರಂಥಗಳು ಲಭ್ಯವಿಲ್ಲ. ಅನುಭವಸೂತ್ರ ಸಂಸ್ಕೃತದಲ್ಲಿದೆ. ಮಲಪ್ರಹಾರಿ ನದಿಯ ತೀರದಲ್ಲಿರುವ ಏಮರಿ ಇವನ ಸ್ಥಳ. ಇಲ್ಲಿನ ಸೋಮನಾಥ ಇವನ ಇಷ್ಟದೈವ. ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣ, ಶಾಂತಲಿಂಗದೇಶಿಕನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ – ಈ ಗ್ರಂಥಗಳಲ್ಲಿ ಇವನ ವಿಷಯ ನಿರೂಪಿತವಾಗಿದೆ. ವೀರಶೈವ ಗ್ರಂಥಗಳು ಇವನನ್ನು ಪ್ರಭುವಿಭು ಎಂದು ಸ್ತುತಿಸುವುದನ್ನು ಗಮನಿಸಿದರೆ ಈತ ಉನ್ನತ ಪದವಿಯಲ್ಲಿದ್ದಂತೆ ತೋರುತ್ತದೆ.

ಶತಕತ್ರಯ ಶಿವಾಧವಶತಕ, ಶಿವಾವಲ್ಲಭಶತಕ, ಏಮರೀಶ್ವರ ಶತಕ ಎಂಬ ಮೂರು ಶತಕಗಳನ್ನೊಳಗೊಂಡಿದೆ. ಇವು ವೃತ್ತದಲ್ಲಿ ರಚಿತವಾಗಿವೆ. ಶಿವಾಧವಶತಕದಲ್ಲಿ 101 ವೃತ್ತಗಳಿವೆ. ಪ್ರತಿ ಪದ್ಯವೂ ಶಿವಾಧವ ಎಂದು ಕೊನೆಗೊಳ್ಳುತ್ತದೆ. ಶಿವಾವಲ್ಲಭಶತಕದಲ್ಲಿ 103 ವೃತ್ತಗಳಿವೆ. ಪ್ರತಿಪದ್ಯವೂ ಶಿವಾವಲ್ಲಭ ಎಂದು ಕೊನೆಗೊಳ್ಳುತ್ತದೆ. ಏಮರೀಶ್ವರ ಶತಕದಲ್ಲಿ 113 ವೃತ್ತಗಳಿವೆ. ಪ್ರತಿ ಪದ್ಯವೂ ಮಹದೈಮರೀಶ್ವರಾ ಎಂದು ಕೊನೆಗೊಳ್ಳುತ್ತದೆ. ಈ ಮೂರೂ ಶತಕಗಳು ವೀರಶೈವ ಸಿದ್ಧಾಂತದ ಪ್ರಕಾರ ಭಕ್ತಿ ಜ್ಞಾನ ವೈರಾಗ್ಯಗಳನ್ನು ನಿರೂಪಿಸುತ್ತವೆ. ಈ ಶತಕಗಳನ್ನು ಕುರಿತು ವಿರಕ್ತ ತೋಂಟಾದಾರ್ಯ (ಸು. 1560) ಎಂಬುವವನು ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ. *

**ಮಚೇರಿ:** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಒಂದು ಹಳ್ಳಿ. ಕಡೂರಿನ ಆಗ್ನೇಯಕ್ಕೆ 6 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,742. ಮಹಾಭಾರತದಲ್ಲಿ ಉಲ್ಲೇಖವಾಗಿರುವ ವಿರಾಟನ ರಾಜಧಾನಿ ಮತ್ಸ್ಯಪುರಿ ಕಾಲಕ್ರಮೇಣ ಮಚೇರಿಯಾಯಿತೆಂಬ ಸ್ಥಳಪುರಾಣವಿದೆ.

ಇಲ್ಲಿ ಯೋಗಾನರಸಿಂಹ ದೇವಾಲಯವಿದೆ. ದೇವಾಲಯದ ಹೊರ ಪ್ರಾಕಾರ ಬಿದ್ದುಹೋಗಿದ್ದರೂ ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪ ಮತ್ತು ಕೈಸಾಲೆ ಮುಂತಾದ ಕೆಲಭಾಗಗಳು ಇನ್ನೂ ಉಳಿದಿವೆ. ದೇವಾಲಯದಲ್ಲಿ ಯೋಗಾನರಸಿಂಹ ವಿಗ್ರಹವಿದೆ.

ಗ್ರಾಮಕ್ಕೆ ಪೂರ್ವದಲ್ಲಿ ಸುಮಾರು ಒಂದೂವರೆ ಕಿಮೀ ದೂರದಲ್ಲಿ ರುವ ವೇದಾವತಿ ನದಿ ಭಾಗವನ್ನು ಸ್ಥಳೀಕರು ಕುಂತಿಹೊಳೆ ಎಂದು ಕರೆಯುತ್ತಾರೆ (ಅಜ್ಞಾತವಾಸದಲ್ಲಿದ್ದ ಪಾಂಡವರನ್ನು ಕುಂತಿ ಈ ಸ್ಥಳದಲ್ಲಿ ಭೇಟಿಯಾದಳೆಂದು ಕಥೆ). ಇಲ್ಲಿ ಪಾಳೆಯಗಾರರ ಕಾಲಕ್ಕೆ ಸೇರುವ ಕೋದಂಡರಾಮ ದೇವಾಲಯವಿದೆ.

ಇದರಿಂದ ಸ್ವಲ್ಪ ಮುಂದೆ ಕೀಚಕನ ಗುಡ್ಡ ಇದೆ. ಇದು ಕೀಚಕನ ವಾಸಸ್ಥಾನವಾಗಿತ್ತೆಂದು ಹೇಳಲಾಗಿದೆ. ಇಲ್ಲಿರುವ ಗುಹೆಯೊಂದರಲ್ಲಿ ಕೀಚಕನ ಕುಲದೇವತೆಯಾದ ಮೈಲಾರದೇವರು ಅಥವಾ ಮಲ್ಲಿದೇವನ ಶಿಲೆಯಿದೆ. ಇಲ್ಲಿರುವ ಹಳ್ಳಿಯನ್ನು ಮಲ್ಲಿದೇವನಹಳ್ಳಿ ಎಂದು ಕರೆಯುತ್ತಾರೆ.

ಮಚೇರಿಯಿಂದ ಉತ್ತರಕ್ಕೆ ಎರಡು ಕಿಮೀ ದೂರದಲ್ಲಿ ತುರುವನಹಳ್ಳಿ ಎಂಬ ಗ್ರಾಮವಿದೆ. ಉತ್ತರ ಗೋಗ್ರಹಣ ಕಾಲದಲ್ಲಿ ಅರ್ಜುನ ಗೋವುಗಳನ್ನು ರಕ್ಷಿಸಿದುದು ಈ ಸ್ಥಳದಲ್ಲಿಯೇ ಎಂಬ ಪ್ರತೀತಿಯಿದೆ. **(ಎಚ್.ಎಂ.ಎಸ್.ಆರ್.)**

**ಮಠಗಳು:** ಮಠ ಎಂಬ ಪದಕ್ಕೆ ಇರುವ ಮೂಲ ಅರ್ಥ ಸಂನ್ಯಾಸಿಗಳು ವಾಸಿಸುವ ಕುಟೀರ. ಇದು ತಪಸ್ಸಿನ, ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ. ಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ, ಕಾಲ ಉರುಳಿದಂತೆ ಮಠಗಳು ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತಪ್ರಚಾರ ಕೇಂದ್ರಗಳಾಗಿ ಬೆಳೆದಿವೆ.

ಕರ್ನಾಟಕದ ಇತಿಹಾಸದಲ್ಲಿ ಈ ಮಠ ಸಂಸ್ಥೆಯ ಬೆಳೆವಣಿಗೆಯನ್ನು ಗುರುತಿಸುವ ಪ್ರಯತ್ನಗಳು ನಡೆದಿಲ್ಲ. ಭಾರತದಲ್ಲಿ ಕ್ರಿ.ಪೂ. ಐದನೆಯ ಶತಮಾನದಷ್ಟು ಪುರಾತನಕಾಲದಲ್ಲಿ ಗುರುಕುಲಗಳಿದ್ದುವು. ರಾಮಾಯಣ ದಲ್ಲಿ ಕರ್ನಾಟಕದ ನಾನಾ ಸ್ಥಳಗಳಲ್ಲಿ ಋಷಿ ಮುನಿಗಳು ತಪಸ್ಸು ಮಾಡಿಕೊಂಡಿದ್ದರೆಂದು ತಿಳಿದುಬರುತ್ತದೆ. ಇವುಗಳ ಜೊತೆಗೆ ಬೌದ್ಧ ವಿಹಾರಗಳು, ಸಂಘಾರಾಮಗಳು, ಜೈನವಸತಿಗಳೂ (ಬಸದಿ) ಇದ್ದುವು. ಬೌದ್ಧ ಮತ್ತು ಜೈನರ ವಿಹಾರಗಳು ಸುಮಾರು ಇಂದಿನ ಮಠದ ಸ್ವರೂಪ ವನ್ನೇ ಹೊಂದಿದ್ದವು. ಕ್ರಿಸ್ತಶಕ ಆರಂಭದ ಆಸುಪಾಸಿನ ಶತಮಾನಗಳಲ್ಲಿ ಶ್ರವಣಬೆಳಗೊಳ ಜೈನಧಾರ್ಮಿಕ ಕೇಂದ್ರವಾಗಿತ್ತೆಂದು ಜೈನ ಗ್ರಂಥಗಳಿಂ ದಲೂ ಕ್ರಿ.ಪೂ. 3ನೆಯ ಶತಮಾನದಲ್ಲಿಯೇ ಅಶೋಕ ಮಹಿಷಮಂಡಲಕ್ಕೆ ಧರ್ಮಪ್ರಚಾರಕರನ್ನು ಕಳುಹಿಸಿದನೆಂದು ಬೌದ್ಧ ಮೂಲಗಳಿಂದಲೂ ತಿಳಿದುಬರುತ್ತದೆಯಾದ್ದರಿಂದ ಈ ಕಾಲದಲ್ಲಿ ಅವರ ವಿಹಾರ ಮಠಗಳು ಇದ್ದಿರಬೇಕೆಂದು ಊಹಿಸಬಹುದು **(ನೋಡಿ : ಜೈನಧರ್ಮ, ಬೌದ್ಧಧರ್ಮ)**.

10–12ನೆಯ ಶತಮಾನಗಳಲ್ಲಿ ಪಾಶುಪತ ಶೈವಪಂಥದ ಅನೇಕ ದೇವಾಲಯಗಳು, ಮಠಗಳು ಕರ್ನಾಟಕದ ನಾನಾ ಭಾಗಗಳಲ್ಲಿ ಹರಡಿದ್ದುದಕ್ಕೆ ಶಾಸನಾಧಾರಗಳಿವೆ. ಅವುಗಳಲ್ಲಿ ಬಹು ಪ್ರಸಿದ್ಧವಾದುದು ಬಳ್ಳಿಗಾಮೆಯ ಕೋಡಿಮಠ **(ನೋಡಿ : ಬೆಳಗಾಮಿ)**.

ಇಂದಿನ ಮಠಗಳ ಸ್ವರೂಪ ಹೆಚ್ಚು ಕಡಿಮೆ ಅನೂಚಾನವಾಗಿ ನಡೆದುಬಂದ ರೀತಿಯಲ್ಲೇ ಉಳಿದು ಬಂದಿವೆ. ಪ್ರತಿ ಮಠಕ್ಕೂ ಒಬ್ಬ ಅಧಿಪತಿ ಇರುತ್ತಾರೆ. ಇವರಿಗೆ ಆಚಾರ್ಯ, ಕುಲಪತಿ, ಗುರು, ಜಗದ್ಗುರು, ಸ್ವಾಮಿ, ಯತಿ, ಯತೀಂದ್ರ, ದೇಶಿಕ, ದೇಶಿಕೇಂದ್ರ ಇತ್ಯಾದಿ ಹೆಸರುಗಳು ಇರುತ್ತವೆ. ಮಠಾಧಿಪತಿಗೆ ನಿಯತವಾದ ವೇಷಭೂಷಣಗಳುಂಟು. ಸಾಮಾನ್ಯವಾಗಿ ಕಾವಿ (ಕಷಾಯ) ವಸ್ತ್ರಧಾರಣೆ ಅನೇಕ ಪಂಥಗಳಲ್ಲಿ ವಾಡಿಕೆಯಾಗಿದೆ. ಹಳದಿ, ಕೇಸರಿ ಅಥವಾ ಬಿಳಿಯ ವಸ್ತ್ರಗಳನ್ನು ಕೆಲವು ಪಂಥದವರು ಧರಿಸುತ್ತಾರೆ. ಮೊದಮೊದಲು ಬಟ್ಟೆಗೆ ಪ್ರಾಧಾನ್ಯವಿರಲಿಲ್ಲ. ದಿಗಂಬರ ಜೈನರಲ್ಲಿ ನಿಷ್ಠುರವ್ರತಿಗಳಾದ ಮುನಿಗಳು ನಗ್ನಮೂರ್ತಿಗಳು. ಸ್ಮಾರ್ತ, ಶ್ರೀವೈಷ್ಣವ, ಮಾಧ್ವ ಮುಂತಾದ ಪಂಥಗಳಲ್ಲಿ ಉಡುವ ವಸ್ತ್ರ ಮಾತ್ರ ಉಂಟು; ಹೊರಸಂಚಾರದಲ್ಲಿ ಕೆಲವು ವೇಳೆ ಉತ್ತರೀಯ ಇರುತ್ತದೆ. ವೀರಶೈವರಲ್ಲಿ ಕೆಲವು ಮಠಗಳಲ್ಲಿ ಶಿರೋವೇಷ್ಟನ (ರುಮಾಲು), ಉದ್ದನೆಯ ನಿಲುವಂಗಿ, ಕತ್ತಿನ ಸುತ್ತ ಕೆಳಗೆ ಇಳಿಬೀಳು ವಂತಹ ಉತ್ತರೀಯ ಮೈಮೇಲೆ ಇರುತ್ತವೆ. ಆಯಾಪಂಥಕ್ಕೆ ಅನುಗುಣ ವಾಗಿ ಮಾಮೂಲಾಗಿ ಹಣೆ, ಭುಜಗಳು, ಮುಂಗೈಗಳು, ಎದೆ ಮುಂತಾದ ಕಡೆ ಭಸ್ಮ, ತ್ರಿಪುಂಡ್ರ, ನಾಮ, ಗಂಧ, ಗಂಧದ ಮುದ್ರೆ, ತಿಲಕ ಇತ್ಯಾದಿಗಳನ್ನು ಲಾಂಛನಗಳಾಗಿ ಇಟ್ಟುಕೊಳ್ಳುತ್ತಾರೆ. ಕೊರಳಲ್ಲಿ ರುದ್ರಾಕ್ಷಿ, ಜಪಸರ, ಕಂಕುಳಲ್ಲಿ ಕೃಷ್ಣಾಜಿನ, ಕೈಯಲ್ಲಿ ಕಮಂಡಲು, ದಂಡ (ಆಷಾಢ), ಎಡಭುಜದ ಮೇಲಿಂದ ಬಲ ಮಗ್ಗುಲಿಗೆ ಬರುವಂಥ ಯಜ್ಞೋಪವೀತ ಅಥವಾ ಲಿಂಗ, ಇಲ್ಲವೇ ಕೊರಳಿಗೆ ಇಳಿಬಿಟ್ಟಂಥ ರುದ್ರಾಕ್ಷಿಮಾಲೆ, ಜಪಸರ ಅಥವಾ ಲಿಂಗ ಇರುತ್ತವೆ. ಕಾಲಿಗೆ ಮರದ ಹಾವುಗೆ ಇರುವುದೂ ಉಂಟು. ಗುರುಗಳು ಭಕ್ತಾದಿಗಳಿಗೆ ದರ್ಶನಕ್ಕೆ ಕುಳಿತುಕೊಳ್ಳುವ ಜಾಗ ಗುರುಪೀಠ. ಇದನ್ನು ಸಿಂಹಾಸನ, ಗಾದಿ ಎನ್ನುವುದೂ ಉಂಟು. ಅದರ ಮೇಲೆ ಜಿಂಕೆ ಅಥವಾ ಹುಲಿಯ ಚರ್ಮ, ಕಾವಿಯ ಅಥವಾ ಬಿಳಿಯವಸ್ತ್ರ ಹಾಸಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಪೀಠಾರೂಢರಾದಾಗ ರತ್ನಖಚಿತ ಸುವರ್ಣ ಕಿರೀಟಗಳನ್ನು ಆದಿಚುಂಚನಗಿರಿ, ಚಿತ್ರದುರ್ಗ ಮುರುಘಾಮಠ, ಶೃಂಗೇರಿ, ರಂಭಾಪುರಿ ಮುಂತಾದ ಸ್ವಾಮಿಗಳು ಧರಿಸಿಕೊಂಡು ಜರತಾರಿ ಅಥವಾ ರೇಷ್ಮೆಯ ಉತ್ತರೀಯ ಹೊದಿಯುವುದುಂಟು.

ಪ್ರತಿಮಠದಲ್ಲೂ ಇಷ್ಟದೇವತಾಪೂಜೆ ಇರುತ್ತದೆ. ವೀರಶೈವ ಮಠಗಳಲ್ಲಿ ಹಿಂದಿನ ಗುರುಗಳ ಸಮಾಧಿಪೂಜೆಗೆ ಪ್ರಾಶಸ್ತ್ಯವಿದೆ. ವೈದಿಕ ಪಂಥದ ಮೈಸೂರಿನ ಪರಕಾಲಮಠ, ಉಡುಪಿಯ ಶ್ರೀಕೃಷ್ಣಮಠ, ಆದಿಚುಂಚನಗಿರಿಯ ಮಠ ಇತ್ಯಾದಿಗಳಲ್ಲೂ ಇಷ್ಟದೇವತಾರ್ಚನೆಯ ಜೊತೆಗೆ ಪೂರ್ವದ ಸ್ವಾಮಿಗಳ ಸಮಾಧಿಗೆ ಪೂಜೆ ಸಲ್ಲುತ್ತದೆ. ಇವುಗಳೆಲ್ಲಾ ಮಠದ ಆವರಣ ದಲ್ಲೇ ಇರುತ್ತವೆ. ಪ್ರತಿಮಠದಲ್ಲೂ ಸಾಮಾನ್ಯವಾಗಿ ಪೀಠಾಧ್ಯಕ್ಷರೇ ಪೂಜೆ ಸಲ್ಲಿಸುತ್ತಾರೆ. ಮಠಾಧಿಪತಿಗಳು ಪ್ರವಾಸದ ಕಾಲದಲ್ಲಿ ತಮ್ಮ ಇಷ್ಟದೇವತಾ ವಿಗ್ರಹಗಳನ್ನು ಸಾಮಾನ್ಯವಾಗಿ ಸಂಗಡವೇ ಒಯ್ಯುತ್ತಾರೆ.

ಮಠಾಧಿಪತಿಯ ಮುಖ್ಯ ಕೆಲಸ ಜ್ಞಾನಾನ್ವೇಷಣೆ ಮತ್ತು ಜ್ಞಾನಪ್ರಸಾರ. ಇದಕ್ಕಾಗಿ ಸ್ವಾಧ್ಯಾಯ, ಶ್ರವಣ, ಮನನ ಮತ್ತು ನಿದಿಧ್ಯಾಸನ ಮೊದಲ ಹಂತಗಳು. ಆಮೇಲೆ ತೀವ್ರ ತಪಸ್ಸು. ಲೌಕಿಕ ವ್ಯವಹಾರವನ್ನೆಲ್ಲ ಬಿಟ್ಟ ಸಮಾಧಿಸ್ಥಿತಿ, ಗಹನವಾದ ತಾತ್ತ್ವಿಕ ವಿಚಾರಗಳ ಅನ್ವೇಷಣೆ, ಆರ್ಜನೆ ಅಂತರ್ಮುಖಿಯಾದಾಗ ಮಾತ್ರ ಸಾಧ್ಯ. ಇಂಥ ಅಲೌಕಿಕ ಉದ್ದೇಶಕ್ಕೆ ಪಾತಂಜಲ ಯೋಗಸೂತ್ರಗಳಲ್ಲಿ ಹೇಳಿರುವ ಅಷ್ಟಾಂಗಯೋಗ ಮುಖ್ಯ ಮಾರ್ಗ. ಇಂಥ ಸ್ಥಿತಿಯನ್ನು ಸಿದ್ಧಿಸಿಕೊಂಡವರು ಮತ್ತೆ ಬಹಿರ್ಮುಖರಾಗಿ ಲೌಕಿಕಕ್ಕೆ ಹಿಂತಿರುಗಿ ಬೋಧನೆ ಪ್ರವಚನಾದಿಗಳಿಂದ ಆ ಜ್ಞಾನವನ್ನು ಸತ್ಪಾತ್ರರಾದ ಶಿಷ್ಯರಿಗೆ ಪ್ರದಾನ ಮಾಡಬೇಕಾಗುತ್ತದೆ.

ಮಠಾಧಿಪತಿಗೆ ಸಹಾಯಮಾಡಲು ಉತ್ತರಾಧಿಕಾರಿ, ಚರಮೂರ್ತಿ, ಪ್ರತಿನಿಧಿಗಳು ಇರುತ್ತಾರೆ. ಉತ್ತರಾಧಿಕಾರಿಯ ಆಯ್ಕೆ ಸ್ವಾಮಿಗಳಿಗೆ ಸೇರಿ ದ್ದರೂ ಕೆಲವು ವೇಳೆ ಚುನಾವಣೆ ನಡೆದಿರುವುದೂ ಉಂಟು. ಕೆಲವು ವೀರಶೈವ ಮಠಗಳಲ್ಲಿ (ಪಟ್ಟದ ಮಠಗಳು) ವಂಶಪಾರಂಪರ್ಯವಾಗಿ

ಉತ್ತರಾಧಿಕಾರಿಗಳಾಗುತ್ತಾರೆ. ಮಠದ ಸ್ವಾಮಿ ಸಾಮಾನ್ಯವಾಗಿ ವಿರಕ್ತ, ಬ್ರಹ್ಮಚಾರಿ. ಆದರೆ ಮೈಸೂರಿನ ಪರಕಾಲ ಮಠ, ಕೆಲವು ವೀರಶೈವ ಮಠಗಳು, ಆದಿಚುಂಚನಗಿರಿಯ ಮಠ ಇತ್ಯಾದಿಗಳಲ್ಲಿ ಗೃಹಸ್ಥರೂ ಸಂನ್ಯಾಸಿಗಳಾಗಿ ಸ್ವಾಮಿಗಳಾಗಿದ್ದಾರೆ.

ಮಠಾಧಿಪತಿ ನಿಧನರಾದ ಮೇಲೆ ಅವರ ಉತ್ತರಕ್ರಿಯೆಯಲ್ಲೂ ವೈಶಿಷ್ಟ್ಯ ವಿದೆ. ಅವರ ಶರೀರವನ್ನು ಸಾಮಾನ್ಯವಾಗಿ ಹೂಳುತ್ತಾರೆ. ವೈದಿಕ ಹಾಗೂ ವೀರಶೈವ ಪಂಥಗಳಲ್ಲಿ ಕುಳಿ ತೋಡಿ, ತತ್ಕಾಲಕ್ಕಾಗಿ ಹೊಲಿದ ವಸ್ತ್ರಗಳ ಚೀಲದಲ್ಲಿ ಸ್ವಾಮಿಯ ಶರೀರವನ್ನಿಟ್ಟು ಅದರೊಡನೆ ವಿಭೂತಿ, ತುಲಸಿ, ಬಿಲ್ವಪತ್ರೆ ಇತ್ಯಾದಿ ವಸ್ತುಗಳನ್ನಿಟ್ಟು ಚೀಲಗಳನ್ನು ಕಟ್ಟಿ ಕುಳಿಯಲ್ಲಿ ಕುಳಿತಿರುವಂತೆ ಸ್ಥಾಪಿಸುತ್ತಾರೆ. ಕೆಲವು ಪಂಥಗಳಲ್ಲಿ ತೆಂಗಿನ ಕಾಯಿ ಇತ್ಯಾದಿಗಳಿಂದ ಅವರ ತಲೆಯ ಮೇಲುಭಾಗ (ಬ್ರಹ್ಮರಂಧ್ರ)ವನ್ನು ಘಾಸಿಗೊಳಿಸುವುದುಂಟು. ಕುಳಿಮುಚ್ಚಿ ಅದರ ಮೇಲೆ ಬೃಂದಾವನ ಗದ್ದಿಗೆ ಇಲ್ಲವೇ ಸಮಾಧಿಯನ್ನು ಕಟ್ಟಿ ಪೂಜೆಗೆ ಏರ್ಪಾಟು ಮಾಡಲಾಗುತ್ತದೆ.

ಮಠಗಳು ಪ್ರಥಮತಃ ಆಧ್ಯಾತ್ಮ ಕೇಂದ್ರಗಳು, ಧರ್ಮಬೋಧನೆ ಹಾಗೂ ಪ್ರಸಾರದ ಕೇಂದ್ರಗಳು. ಈ ಉದ್ದೇಶದ ಜೊತೆಗೆ ಇವು ಸ್ವಪಂಥದ ಕೇಂದ್ರಸ್ಥಾನಗಳೂ ಆಗಿದ್ದು ಸಾಕಷ್ಟು ಶಿಷ್ಯಸಂಪತ್ತನ್ನು ಹೊಂದಿರುತ್ತವೆ.

ಈ ಮಠಗಳಿಗೆ ನಡೆದುಕೊಳ್ಳುವ ಶಿಷ್ಯವರ್ಗಕ್ಕೆ ಮಠದ ಅಧಿಪತಿಗಳ ತೀರ್ಮಾನಗಳು ಎಲ್ಲ ಧಾರ್ಮಿಕ ಲೌಕಿಕ ವ್ಯವಹಾರಗಳಲ್ಲಿ ಪರಮ ಗಣ್ಯವಾಗಿರುತ್ತವೆ. ಮಠಗಳ ಶಿಷ್ಯವ್ಯಾಪ್ತಿ ಆಯಾ ಪಂಥ ಜಾತಿಗಳಿಗೆ ಸಂಬಂಧಿಸಿದಂತೆ ಇರುತ್ತದೆ. ಅಪರೂಪವಾಗಿ ಸೀಮಿತ ಭೌಗೋಳಿಕ ವ್ಯಾಪ್ತಿ ಇರುವುದೂ ಉಂಟು. ಈಗಿನ ಅನೇಕ ಮಠಗಳು ಧರ್ಮ ಪ್ರಚಾರ ಕಾರ್ಯ ಮಾತ್ರವಲ್ಲದೆ ವಿದ್ಯಾಪ್ರಸಾರ ಇತ್ಯಾದಿ ಸಮಾಜ ಕಲ್ಯಾಣ ಕಾರ್ಯಗಳಲ್ಲಿಯೂ ಆಸಕ್ತಿ ವಹಿಸುತ್ತಿವೆ.

ಕರ್ನಾಟಕದಲ್ಲಿ ನಾನಾ ಮತ–ಪಂಥಗಳಿಗೆ ಸಂಬಂಧಿಸಿದ ಸಹಸ್ರಾರು ಮಠಗಳು ಇವೆ. ಅನೇಕ ಮಠಗಳು ಹಿಂದಿನ ರಾಜರು, ಶ್ರೀಮಂತರಿಂದ ಪ್ರೋತ್ಸಾಹ ಗಳಿಸಿಯೋ ಶಿಷ್ಯಸಮೂಹದ ನೆರವಿನಿಂದಲೋ ಸಾಕಷ್ಟು ಚರ–ಸ್ಥಿರ ಆಸ್ತಿಯನ್ನು ಹೊಂದಿವೆ. ಆದರೆ ಈ ವಿವಿಧ ಮಠಗಳಿಗೆ ಸಂಬಂಧಿಸಿದ ಐತಿಹಾಸಿಕ ಮತ್ತು ಸಾಮಾಜಿಕ ಅಧ್ಯಯನ ಅಷ್ಟಾಗಿ ನಡೆದಿಲ್ಲ. ಹೆಚ್ಚಿನ ಮಠಗಳ ಬಗ್ಗೆ ಪ್ರಕಟಿತ ಮಾಹಿತಿಗಳೂ ಸಾಕಷ್ಟು ದೊರೆಯುವುದಿಲ್ಲ. ಆದರೂ ಪ್ರಸಿದ್ಧವಾಗಿರುವ ಕೆಲವು ಮಠಗಳನ್ನು ಹೆಸರಿಸಬಹುದು:

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿರುವ ಆದಿಚುಂಚನ ಗಿರಿ ಮಹಾಸಂಸ್ಥಾನ ಪ್ರಾಚೀನ ಮಠಗಳಲ್ಲೊಂದು. ಇದರ ಗುರುಪರಂಪರೆಯ ಪ್ರಕಾರ ಈಗಿರುವ ಸ್ವಾಮಿಗಳು ಎಪ್ಪತ್ತೊಂದನೆಯವರು. ಈ ಮಠಕ್ಕೆ ಸಂಬಂಧಿಸಿದ ಸ್ಥಳಾಧಿದೇವತೆ ಭೈರವೇಶ್ವರ, ಗಂಗಾಧರೇಶ್ವರನೂ ಅರ್ಚಾಧಿದೇವತೆ. ಹರಿಜನರು, ಒಕ್ಕಲಿಗರು, ಲಿಂಗಾಯತರು, ಮಹಮ್ಮದೀಯರು, ನೇಕಾರರು ಇತ್ಯಾದಿ ಇಲ್ಲಿಯ ಭಕ್ತಕೋಟಿಗೆ ಸೇರಿದ್ದಾರೆ. ಈ ಮಠ ಅನೇಕ ಪ್ರೌಢಶಾಲೆ, ಕಾಲೇಜು, ವೈದ್ಯಕೀಯ ಕಾಲೇಜು, ಆಸ್ಪತ್ರೆ ಮೊದಲಾದ ಸಂಘಸಂಸ್ಥೆಗಳನ್ನು ನಡೆಸುತ್ತಿದೆ. ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನದಾನ ನಡೆಸುತ್ತಿದೆ. ಶಿವಮೊಗ್ಗ ಜಿಲ್ಲೆಯ ಹುಮಚದ ಜೈನಮಠ ಎಂಟನೆಯ ಶತಮಾನದಲ್ಲಿ ಜಿನದತ್ತರಾಯನೆಂಬುವನು ಸ್ಥಾಪಿಸಿದ್ದೆಂದು ಪ್ರತೀತಿ. ಇಲ್ಲಿಯ ಸ್ವಾಮಿಗಳಿಗೆ ದೇವೇಂದ್ರಕೀರ್ತಿ ಭಟ್ಟಾರಕರೆಂಬ ಸಾಮಾನ್ಯ ನಾಮಾಂಕಿತವಿದೆ. ಈಗಿನ ಶ್ರವಣಬೆಳಗೊಳದ ಮಠವನ್ನು ಗಂಗರಸರ ಮಂತ್ರಿ ಚಾವುಂಡರಾಯ 983ರಲ್ಲಿ ಸ್ಥಾಪಿಸಿದ. 1117ರಿಂದ ಇಲ್ಲಿಯ ಪೀಠಾಧಿಕಾರಿಗಳಿಗೆ ಚಾರುಕೀರ್ತಿ ಪಂಡಿತಾಚಾರ್ಯರೆಂಬ ಹೆಸರಿದೆ. ಶಂಕರಾಚಾರ್ಯರು ಭಾರತದ ನಾಲ್ಕು ಮೂಲೆಗಳಲ್ಲೂ ಸ್ಥಾಪಿಸಿದ ನಾಲ್ಕು ಪ್ರಸಿದ್ಧ ಪೀಠಗಳಲ್ಲಿ ಶೃಂಗೇರಿ ಶಾರದಾಪೀಠವೂ ಒಂದು. ಈ ಮಠ ಸು. 834ರಲ್ಲಿ ಸ್ಥಾಪಿಸಲ್ಪಟ್ಟಿತು. ಈ ಮಠಕ್ಕೆ ವಿಜಯನಗರ, ಕೆಳದಿ, ಹೈದರ್, ಟಿಪ್ಪು ಹಾಗೂ ಮೈಸೂರಿನ ಒಡೆಯರು ರಾಜಾಶ್ರಯವಿತ್ತಿದ್ದಾರೆ. ಇದರ ಶಾಖೋಪಶಾಖೆಗಳು ಕರ್ನಾಟಕದ ಹಾಗೂ ಭಾರತದ ನಾನಾ ತೀರ್ಥಕ್ಷೇತ್ರಗಳಲ್ಲಿ ಮತ್ತು ನಗರಗಳಲ್ಲಿ ಇವೆ. ಶೃಂಗೇರಿಯಲ್ಲಿ ಸಂಸ್ಕೃತ ಕಾಲೇಜು, ವಿದ್ಯಾರ್ಥಿನಿಲಯ ಇತ್ಯಾದಿಗಳಿವೆ. ಈ ಮಠಕ್ಕೆ ಸೇರಿದಂತೆ ಶಾರದಾಂಬ, ಚಂದ್ರಮೌಳೀಶ್ವರ, ಗಣಪತಿ ಮೊದಲಾದ ದೇವಾಲಯಗಳು ಶೃಂಗೇರಿಯಲ್ಲಿವೆ. ಇಲ್ಲಿಯ ಸ್ವಾಮಿಗಳೆಲ್ಲಾ ತಮ್ಮ ವೇದಾಂತ ಶಾಖೆಯಲ್ಲಿ ಪ್ರಕಾಂಡ ಪಂಡಿತರೂ ಗ್ರಂಥಕರ್ತರೂ ತಪಸ್ವಿಗಳೂ ಆಗಿದ್ದವರು. ಅಖಿಲ ಭಾರತ ವ್ಯಾಪ್ತಿಯಿರುವ ಮಠಗಳಲ್ಲಿ ಇದಕ್ಕೆ ಪ್ರಥಮಸ್ಥಾನ ಸಲ್ಲುತ್ತದೆ. ಶ್ರೀವೈಷ್ಣವ ಮಠಗಳಲ್ಲಿ ಮೈಸೂರು ನಗರದ ಶ್ರೀ ಬ್ರಹ್ಮಸ್ಥಾನ ಸ್ವತಂತ್ರ ಪರಕಾಲ ಮಠ ಪ್ರಸಿದ್ಧವಾದುದು. ಶ್ರೀ ರಾಮಾನುಜ ವೇದಾಂತ ದೇಶಿಕ ಮೂಲದ ಇದು 1360ರಲ್ಲಿ ಕಂಚಿಯಲ್ಲಿ ಸ್ಥಾಪಿತವಾಯಿತು. ಯದುರಾಯರು ಮತ್ತು ಕೃಷ್ಣರಾಯರ ಕಾಲದಲ್ಲಿ ಶ್ರೀರಂಗ ಪಟ್ಟಣದ ಹತ್ತಿರ ಸ್ಥಾಪಿತವಾಗಿ ಇತ್ತೀಚೆಗೆ ಮೈಸೂರಿಗೆ ವರ್ಗವಾಯಿತು. ಈ ಮಠದ ಯತಿಗಳು ಮೈಸೂರು ಒಡೆಯರಿಗೆ ದೀಕ್ಷಾ ಗುರುಗಳು. ಇದರ ಚಟುವಟಿಕೆಗಳ ವ್ಯಾಪ್ತಿಯು ತತ್ತ್ವಾನ್ವೇಷಣೆ, ಗ್ರಂಥರಚನೆ, ಶ್ರೀವೈಷ್ಣವಮತ ಪ್ರಚಾರ, ಧಾರ್ಮಿಕ ದಿಗ್ವಿಜಯಪ್ರವಾಸ, ಶಿಷ್ಯರಿಗೆ ದರ್ಶನ ಇತ್ಯಾದಿಗಳಿಗೆ ಸೀಮಿತವಾಗಿದೆಯೆನ್ನ ಬಹುದು. ಮೈಸೂರಿನ ಮುಖ್ಯಮಠದಲ್ಲಿ ಶ್ರೀ ವೈಷ್ಣವ ವಿದ್ಯಾರ್ಥಿಗಳಿಗೆ ಅನ್ನದಾನ, ಸಂಸ್ಕೃತಾಭ್ಯಾಸ, ಪಂಡಿತರಿಗೆ ಪ್ರೋತ್ಸಾಹ ಇತ್ಯಾದಿಗಳೂ ನಡೆಯುತ್ತವೆ. ಲಕ್ಷ್ಮೀಹಯಗ್ರೀವ ಇಲ್ಲಿಯ ಆರಾಧ್ಯದೇವತೆ. ಹದಿಮೂರನೆಯ ಶತಮಾನದಲ್ಲಿ ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀಕೃಷ್ಣ ಮಠವನ್ನು ಸ್ಥಾಪಿಸಿದರು. ಮಧ್ವಾಚಾರ್ಯರಿಗೆ ಮಲ್ಪೆಯ ಸಮುದ್ರದ ಹತ್ತಿರ ಮುಳುಗಡೆಯಾಗಿ ನಿಂತಿದ್ದ ಹಡಗೊಂದರಲ್ಲಿ ಕೃಷ್ಣವಿಗ್ರಹ ದೊರೆಯಿತೆಂದೂ ಅದನ್ನು ಅವರು ಈಗಿರುವ ಮಂದಿರದಲ್ಲಿ ಸ್ಥಾಪಿಸಿದರೆಂದೂ ಐತಿಹ್ಯವಿದೆ. ಉಡುಪಿಯಲ್ಲಿರುವ ಕೇಂದ್ರಮಠಕ್ಕೆ ಎಂಟು ಬೇರೆ ಬೇರೆ ಮಠಗಳಿದ್ದು (ಅಷ್ಟಮಠಗಳು) ಅವುಗಳೆಲ್ಲಕ್ಕೂ ಪರ್ಯಾಯವಾಗಿ (ಸರದಿ) ಎರಡು ವರ್ಷಕ್ಕೊಮ್ಮೆ ಶ್ರೀಕೃಷ್ಣಪೂಜೆಯ ಜವಾಬ್ದಾರಿಯಿದೆ. ಮಾಧ್ವ ಪಂಥಕ್ಕೆ ಸಂಬಂಧಿಸಿದಂತೆ ಸೋಸಲೆ, ನಂಜನಗೂಡು, ಹೊಸಪೇಟೆ (ಉತ್ತರಾದಿ) ಮತ್ತು ಮಂತ್ರಾಲಯ ಇಲ್ಲಿಯ ಮಠಗಳೂ ಪ್ರಸಿದ್ಧವಾಗಿವೆ.

ವೀರಶೈವ ಮಠಗಳ ಇತಿಹಾಸ ಬಹು ಪ್ರಾಚೀನ ಮೂಲ ಪಡೆದಿದೆ. ಅದರ ಪಂಚಮಠಗಳು ವೇದಕಾಲೀನವೆಂದು ಪ್ರತಿಪಾದಿಸಲಾಗಿದೆ. ಅಂತಹ ಮಠಗಳಲ್ಲೊಂದನ್ನು ಪಡೆದ ಕೀರ್ತಿ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿಗೆ ಸಲ್ಲುತ್ತದೆ. ಬಸವೇಶ್ವರರ ಕಾಲದಲ್ಲಿ ಕಲ್ಯಾಣದಲ್ಲಿದ್ದ ಅನುಭವಮಂಟಪ ವೀರಶೈವ ಮಠಗಳಿಗೆ ಮೊದಲ ಚಿಲುಮೆ. ವೀರಶೈವ ಧಾರ್ಮಿಕ ಕ್ರಾಂತಿ ರಾಜಕೀಯ ಆಂದೋಳನಕ್ಕೆ ಕಾರಣವಾಗಿ ಅನೇಕ ಶರಣರು ಕಲ್ಯಾಣವನ್ನು ಬಿಟ್ಟರು. ಇಂಥ ಮೂರು ಸಾವಿರ ಶರಣರು ಮಾಡಿಕೊಂಡ ಧಾರ್ಮಿಕ ಕೇಂದ್ರ ಈಗಿನ ಹುಬ್ಬಳ್ಳಿಯ ಮೂರುಸಾವಿರ ಮಠವಾಯಿತೆನ್ನಲಾಗಿದೆ. ಚಿತ್ರದುರ್ಗದ ಚಿನ್ಮೂಲಾದ್ರಿ ಬೃಹನ್ಮಠವು ಮೊದಲು ಸುಮಾರು ಇಪ್ಪತ್ತೈದು ಜನ ಸ್ವಾಮಿಗಳ ಕಾಲದಲ್ಲಿ ನಿಗದಿಯಾದ ಸ್ಥಳದಲ್ಲಿ ನಿಲ್ಲಲಾಗದೆ ಚರಮಠವಾಗಿದ್ದದ್ದು ಚಿತ್ರದುರ್ಗದ

ಭರಮನಾಯಕನ ಕಾಲದಲ್ಲಿ ಪ್ರೋತ್ಸಾಹ ಸಿಕ್ಕಿ ಅಲ್ಲಿ ನೆಲೆಯಾಗಿ ನಿಂತಿತೆನ್ನಲಾಗಿದೆ. ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳು ಮಹಾಮಹಿಮವಂತರಾಗಿ ಅದರ ಶ್ರೇಯಸ್ಸಿಗೆ ಕಾರಣರಾದರೆನ್ನಬಹುದು. ವೀರಶೈವ ಮಠಗಳ ಬಗ್ಗೆ ನಡೆಸಿರುವ ಸಂಶೋಧನೆಯ ಪ್ರಕಾರ ಇದಕ್ಕೆ ಸು. 2,000 ಶಾಖೆಗಳಿವೆ. ಅದರಲ್ಲಿ ಬಹಳ ಶಾಖೆಗಳು ಉತ್ತರ ಕರ್ನಾಟಕದಲ್ಲಿವೆ. ಈ ಮಠ ಅನೇಕ ಸ್ಥಳಗಳಲ್ಲಿ ಕಾಲೇಜು, ಪ್ರೌಢಶಾಲೆ, ವಿದ್ಯಾರ್ಥಿನಿಲಯ ಇತ್ಯಾದಿಗಳನ್ನು ಸ್ಥಾಪಿಸಿದೆ. ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆ ಮಠವೂ ಅನ್ನದಾಸೋಹ, ಜ್ಞಾನದಾಸೋಹಗಳ ಚಟುವಟಿಕೆಯಿಂದ ಕಾರ್ಯೋನ್ಮುಖವಾಗಿದೆ. ಕೇವಲ ಇಪ್ಪತ್ತು-ಮೂವತ್ತು ವರ್ಷಗಳಿಂದ ಈ ಪೀಠ ಈಗಿನ ಹಿರಿಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಅಸಾಧಾರಣ ಪ್ರಗತಿ ಸಾಧಿಸಿದೆ. ಇದರ ಮೂಲಸ್ಥಾಪಕ ವಿಶ್ವಬಂಧು ಮರುಳಸಿದ್ಧದೇವರು. ಇವರು ದಲಿತವರ್ಗದಿಂದ ಮೇಲೆ ಬಂದು ದಲಿತೋದ್ಧಾರಕ್ಕಾಗಿ ಕಷ್ಟದ ಪರಂಪರೆಯನ್ನೇ ಎದುರು ಹಾಕಿಕೊಂಡು ಸೆಣಸಿ ಕ್ರಾಂತಿಪುರುಷರಾದ ಧೀಮಂತರು. ಐತಿಹ್ಯದ ಪ್ರಕಾರ ಚಿತ್ರದುರ್ಗದ ಚಿನ್ಮೂಲಾದ್ರಿಯಲ್ಲಿದ್ದ ರೇವಣಸಿದ್ಧೇಶ್ವರರ ಅನುಗ್ರಹ ಪಡೆದು, ಹಂಪೆಗೆ ದಕ್ಷಿಣದಲ್ಲಿದ್ದ ಕಗ್ಗಲ್ಲುಪುರದಲ್ಲಿ ತಮ್ಮ ಸಾಕುತಂದೆ ಪಾಳೆಯಗಾರ ಬಾಚಿಗೌಡನಿಂದ ಸ್ವಲ್ಪ ಜಮೀನು ಪಡೆದು ಉಜ್ಜಯಿನೀ ಸದ್ಧರ್ಮಪೀಠ ವೆಂಬ ಮಠವನ್ನು ಸ್ಥಾಪಿಸಿದರು. ತಮ್ಮ ಪ್ರಿಯಶಿಷ್ಯ ತೆಲುಗುಬಾಳಿನ ಸಿದ್ಧರಾಮನಿಗೆ 'ತರಳ ಬಾಳು' ಎಂದು ಹರಸಿ ಉತ್ತರಾಧಿಕಾರವನ್ನು ವಹಿಸಿದರು. ಕಾಲಾಂತರದಲ್ಲಿ ಸ್ಥಳೀಯ ರಾಜಕೀಯ ಗೊಂದಲದಿಂದ ಇದು ಈಗಿರುವ ಸಿರಿಗೆರೆಗೆ ವರ್ಗವಾಯಿತು. ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಮಠದ ಪ್ರಭಾವ ವ್ಯಾಪಕವಾಗಿದೆ. ಇಂದು ಅನೇಕ ಪ್ರೌಢಶಾಲೆ, ಕಾಲೇಜು, ಸಂಸ್ಕೃತ ಪಾಠಶಾಲೆ, ವಿದ್ಯಾರ್ಥಿ ನಿಲಯಗಳು ಈ ಮಠದ ವತಿಯಿಂದ ನಡೆಯುತ್ತಿವೆ. ತುಮಕೂರಿಗೆ ಸುಮಾರು 5ಕಿಮೀ ದೂರದ ಕ್ಯಾತಸಂದ್ರದ ಬಳಿಯ ಸಿದ್ಧಗಂಗಾ ಮಠ ಮತ್ತೊಂದು ಸುಪ್ರಸಿದ್ಧ ವೀರಶೈವ ಪೀಠ. 1935ರಿಂದ ಸಂಸ್ಕೃತ ಪಾಠಶಾಲೆ, ಉಚಿತ ಅನ್ನದಾಸೋಹ ನಡೆಯಲು ಪ್ರಾರಂಭವಾಗಿ ಇಂದು ಬೃಹತ್ತಾಗಿ ಬೆಳೆದು ಜನಾದರಣೆ ಗಳಿಸಿದೆ. ಸಿದ್ಧಗಂಗಾ ಮಠದ ಆವರಣ ದಲ್ಲೇ ಒಂದು ವೇದ ಪಾಠಶಾಲೆ, ಸಂಸ್ಕೃತ ಕಾಲೇಜು, ಪ್ರೌಢಶಾಲೆ ಇವೆ. ತುಮಕೂರಿನಲ್ಲಿ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜು, ಸಂಜೆ ಕಾಲೇಜು ಇತ್ಯಾದಿಗಳೂ ಮಾಗಡಿ ಶಿರಾ ದೊಡ್ಡಬಳ್ಳಾಪುರ ಮುಂತಾದ ಕಡೆಗಳಲ್ಲಿ ಪ್ರೌಢಶಾಲೆಗಳೂ ಪ್ರಸಾದ ನಿಲಯಗಳೂ ಈ ಮಠದಿಂದ ಸ್ಥಾಪಿತವಾಗಿವೆ. ನಂಜನಗೂಡು ತಾಲ್ಲೂಕು ಸುತ್ತೂರು ಮತ್ತೊಂದು ಪ್ರಸಿದ್ಧ ವೀರಶೈವ ಪೀಠದ ಕೇಂದ್ರ. ಇಲ್ಲಿಯ ಮಠಕ್ಕೆ ಸು. 700 ವರ್ಷಗಳ ಇತಿಹಾಸವಿದೆ. ಅನೇಕ ಸಿದ್ಧಪುರುಷರು ಈ ಗುರುಪರಂಪರೆಯಲ್ಲಿ ಆಗಿಹೋಗಿದ್ದಾರೆ. ಸದ್ಯಕ್ಕೆ ಈ ಮಠದ ಪ್ರಮುಖ ಕೇಂದ್ರ ಮೈಸೂರು ನಗರ. ಈ ಮಠದ ವತಿಯಿಂದ ಶಿವರಾತ್ರೀಶ್ವರರ ಹೆಸರಿನ ಭದ್ರಬುನಾದಿಯ ಮೇಲೆ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಬಹುತೇಕ ಎಲ್ಲ ಮುಖ್ಯ ವಿಷಯಗಳ ಕಾಲೇಜುಗಳೂ ಶಾಲೆಗಳೂ ತರಬೇತಿ ಕೇಂದ್ರಗಳನ್ನೂ ಈ ಮಠ ಸ್ಥಾಪಿಸಿದೆ. ಅನೇಕ ವಿದ್ಯಾರ್ಥಿನಿಲಯಗಳು ನಡೆಯುತ್ತಿವೆ. ಸಂಖ್ಯೆಯಲ್ಲಿ ವೀರಶೈವ ಮಠಗಳು ಇತರ ಎಲ್ಲ ಮಠಗಳಿಗೂ ಮಿಗಿಲಾಗಿವೆ. ಕೆಲವಂತೂ ತಮ್ಮ ತಮ್ಮ ಚಟುವಟಿಕೆಗಳಲ್ಲಿ ಸುಪ್ರಸಿದ್ಧವಾಗಿವೆ. ಬೆಟ್ಟದಪುರ, ರಂಭಾಪುರಿ, ನಿಡುಮಾಮಿಡಿ, ಧಾರವಾಡ, ಹುಬ್ಬಳ್ಳಿ, ಬೆಂಗಳೂರು ನಗರದಲ್ಲಿರುವ ಅನೇಕ ಮಠಗಳೂ ಅನ್ನ ದಾಸೋಹ, ಜ್ಞಾನದಾಸೋಹ ನಡೆಸುತ್ತಿವೆ. ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲೂ ಚಿಕ್ಕ ಪುಟ್ಟ ಮಠಗಳಿದ್ದು ಯಥೋಚಿತವಾಗಿ ಕಾರ್ಯೋನ್ಮುಖವಾಗಿದೆ. 19ನೆಯ ಶತಮಾನದಿಂದ ಲಂಡನ್ ಮಿಷನ್, ಬಾಸೆಲ್ ಮಿಷನ್, ಮೆಥಾಡಿಸ್ಟ್ ಮಿಷನ್, ವೆಸ್ಲಿಯನ್ ಮಿಷನ್, ಚರ್ಚ್ ಆಫ್ ಸೌತ್ ಇಂಡಿಯಾ ಇತ್ಯಾದಿ ಕ್ರೈಸ್ತ ಸಂಸ್ಥೆಗಳು ವ್ಯವಸ್ಥಿತವಾಗಿ ಧರ್ಮಪ್ರಚಾರ ಮತ್ತು ಸಾರ್ವಜನಿಕ ಸೇವೆಯನ್ನು ಮಾಡುತ್ತಿವೆ (ನೋಡಿ : ಕ್ರೈಸ್ತಧರ್ಮ). ರಾಮಕೃಷ್ಣ ಮಿಷನ್ ಮೈಸೂರು, ಮಂಗಳೂರು, ಬೆಂಗಳೂರುಗಳಲ್ಲಿ ಕಾರ್ಯೋನ್ಮುಖವಾಗಿದೆ. ಅಖಿಲ ಭಾರತ ಮಟ್ಟದ ವೇದಾಂತ ಮಹಾವಿದ್ಯಾಲಯ, ಆರ್ಯಸಮಾಜವೂ ತಕ್ಕಮಟ್ಟಿಗೆ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಮಂಗಳೂರುಗಳಲ್ಲಿ ಸಕ್ರಿಯ ಪಾತ್ರ ವಹಿಸಿತ್ತು. ಕೆಂಗೇರಿಯ ಗುರುಕುಲ ಆರ್ಯಸಮಾಜದ ಮೂಲವೆನ್ನಬೇಕು. ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಚುಂಚನಕಟ್ಟೆಯ ಗುರುರಾಮ ಮಿಷನ್ (ಸೇವಾ ಸಮಿತಿ) ಗುರುಕುಲವೂ ಸಹ ಆರ್ಯಸಮಾಜದ ಕೆಲವು ಉದ್ದೇಶಗಳನ್ನು ಅಳವಡಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಮಠಗಳು ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲೂ ಆಸಕ್ತಿವಹಿಸಿವೆ. ಅನೇಕ ಹಿಂದುಳಿದ ಸಮುದಾಯಗಳೂ ತಮ್ಮ ಸಂಘಟನೆಗೆ ಪುಷ್ಟಿ ನೀಡಲು ಮಠಗಳನ್ನು ಸ್ಥಾಪಿಸಿವೆ. ಕಾಗಿನೆಲೆಯಲ್ಲಿ ಸ್ಥಾಪಿತವಾದ ಕುರುಬ ಸಮುದಾಯದ ಕನಕ ಮಹಾಸಂಸ್ಥಾನ ಮಠ ಬೇಗ ಅಭಿವೃದ್ಧಿ ಕಾಣುತ್ತಿದೆ. ಮಠಗಳು ವಿಸ್ತಾರವಾದ ಮತ್ತು ಸೀಮಿತವಾದ ಅರ್ಥಗಳೆರಡರಲ್ಲೂ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಪುರೋಭಿವೃದ್ಧಿ ಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. (ಸಿ.ಜಿ.ಪಿ.)

**ಮಡಿಕೇರಿ**: ಕೊಡಗು ಜಿಲ್ಲೆಯ ಒಂದು ತಾಲ್ಲೂಕು; ತಾಲ್ಲೂಕಿನ ಹಾಗೂ ಕೊಡಗು ಜಿಲ್ಲೆಯ ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕನ್ನು ಉತ್ತರದಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಪೂರ್ವದಲ್ಲಿ ಸೋಮವಾರಪೇಟೆ ಮತ್ತು ವೀರಾಜಪೇಟೆ ತಾಲ್ಲೂಕುಗಳೂ ದಕ್ಷಿಣ ಮತ್ತು ಪಶ್ಚಿಮದಲ್ಲಿ ಕೇರಳ ರಾಜ್ಯವೂ ಸುತ್ತುವರೆದಿವೆ. ತಾಲ್ಲೂಕಿನಲ್ಲಿ ಒಟ್ಟು 74 ಗ್ರಾಮಗಳಿವೆ. ಭಾಗಮಂಡಲ, ಮಡಿಕೇರಿ ಮತ್ತು ನಾಪೋಕ್ಲು ಹೋಬಳಿಗಳು (ನಾಡು) ಇವೆ. ತಾಲ್ಲೂಕಿನ ವಿಸ್ತೀರ್ಣ 1,526 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 1,42,012. ಇದರಲ್ಲಿ 1,09,516 ಮಂದಿ ಗ್ರಾಮಸ್ಥರು, 32,496 ಮಂದಿ ಪಟ್ಟಣವಾಸಿಗಳು.

ಮಡಿಕೇರಿ ಪಶ್ಚಿಮಘಟ್ಟಗಳಿಗೆ ಸೇರಿದ ಪ್ರದೇಶ. ಈ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿರುವ ಬ್ರಹ್ಮಗಿರಿ ಶ್ರೇಣಿ ಕೊಡಗು ಜಿಲ್ಲೆಯನ್ನು ವೈನಾಡಿನಿಂದ ಬೇರ್ಪಡಿಸಿರುವ ಪರ್ವತಶ್ರೇಣಿಯಾಗಿದೆ. ಈ ಶ್ರೇಣಿಗೆ ಸೇರಿದಂತೆ ಹನುಮಾನ್‌ಬೆಟ್ಟ, ಕಂಡಗಮಲೆ ಮತ್ತು ಪೆರುಮಾಳಮಲೆ ಬೆಟ್ಟಗಳಿವೆ. ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಕೊಡಗು ಜಿಲ್ಲೆಗೇ ದೊಡ್ಡದಾದ 1,745 ಮೀ ಎತ್ತರವಿರುವ ತಡಿಯಂಡಮೋಳ್ ಬೆಟ್ಟ ಇದೆ. ಬೆಟ್ಟಸಾಲು ಪೂರ್ವಕ್ಕೆ ಮುಂದುವರಿದು ಮಡಿಕೇರಿ ಸಮೀಪಿಸುತ್ತಿದ್ದಂತೆ ವಾಯವ್ಯಕ್ಕೆ ತಿರುಗುತ್ತದೆ. ಇಲ್ಲಿ ಸಂಪಾಜೆ ಕಣಿವೆಯಿದೆ. ಮಡಿಕೇರಿಯ ಉತ್ತರಕ್ಕೆ 14ಕಿಮೀ ದೂರದಲ್ಲಿ ಸುಬ್ರಹ್ಮಣ್ಯ ಪರ್ವತಶ್ರೇಣಿಗೆ ಸೇರಿದ ಕೋಟಿ ಬೆಟ್ಟವಿದೆ. ಇಡೀ ತಾಲ್ಲೂಕು ಪರ್ವತಮಯವಾಗಿದ್ದು ಗಿರಿಕಂದರಗಳಿಂದ, ಹಸುರು ಕಾಡುಗಳಿಂದ ಮತ್ತು ಹುಲ್ಲುಗಾವಲುಗಳಿಂದ ತುಂಬಿದೆ.

ಕೊಡಗು ಜಿಲ್ಲೆಯ ಮುಖ್ಯನದಿ ಕಾವೇರಿ. ಇದರ ಉಗಮ ಈ ತಾಲ್ಲೂಕಿನ ಬ್ರಹ್ಮಗಿರಿಯ ತಲಕಾವೇರಿಯಲ್ಲಿ. ಈ ನದಿಗೆ ಭಾಗಮಂಡಲದ ಹತ್ತಿರ ಕನ್ನಿಕೆ ಎಂಬ ನದಿ ಸೇರುವುದು. ಸುಜ್ಯೋತಿ ಎಂಬ ಮತ್ತೊಂದು

ಗುಪ್ತಗಾಮಿನಿಯೂ ಕೂಡಿಕೊಳ್ಳುವುದೆಂದು ಪ್ರತೀತಿ. ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವ ತೊರೆಗಳೂ ಸೇರಿದಂತೆ ಇಲ್ಲಿಯ ಬೆಟ್ಟಗಳಿಂದ ಅನೇಕ ಸಣ್ಣತೊರೆಗಳು ಹುಟ್ಟಿ ಹರಿಯುತ್ತವೆ. ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 3,237 ಮಿಮೀ. ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಹೆಚ್ಚು ಮಳೆ ಬೀಳುತ್ತದೆ. ಈ ತಾಲ್ಲೂಕಿನಲ್ಲಿ ಅತ್ಯಂತ ಹೆಚ್ಚು ಮಳೆ ಬೀಳುವ ಪ್ರದೇಶ ಭಾಗಮಂಡಲ (6,032 ಮಿಮೀ). ತಾಲ್ಲೂಕಿನಲ್ಲಿ ಜಂಬುಮಣ್ಣು ಮತ್ತು ಪಶ್ಚಿಮ ಭಾಗದಲ್ಲಿ ತೆಳು ಜೇಡಿಮಣ್ಣಿನ ಭೂಮಿ ಇದೆ. ಸಂಪದ್ಯುಕ್ತ ಅರಣ್ಯಗಳಿದ್ದು ಬೆಲೆಬಾಳುವ ಮರಗಳಿವೆ. ರಕ್ಷಿತ ಅರಣ್ಯ ಪ್ರದೇಶಗಳೂ ಉಂಟು. ಉಳಿದ ಭಾಗದಲ್ಲಿ ವ್ಯವಸಾಯ ಪ್ರಧಾನವಾಗಿದೆ. ಬತ್ತ,ಕಾಫಿ,ಕಿತ್ತಳೆ, ಏಲಕ್ಕಿ, ಮೆಣಸು ವಿಶೇಷವಾಗಿ ಬೆಳೆಯುತ್ತಾರೆ. ಇವುಗಳಲ್ಲಿ ಬತ್ತ, ಕಾಫಿ, ಮತ್ತು ಕಿತ್ತಳೆ ಹೆಚ್ಚು ಪ್ರದೇಶವನ್ನಾಕ್ರಮಿಸಿಕೊಂಡಿವೆ. ವ್ಯವಸಾಯದ ಜೊತೆಗೆ ಪಶುಪಾಲನೆಯಿದೆ. ಈ ತಾಲ್ಲೂಕಿನಲ್ಲಿ ಗ್ರಾಮ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಪಶುವೈದ್ಯಶಾಲೆಗಳಿವೆ. ಜೇನುಸಾಕಣೆ ವಿಶೇಷ.

ಮಡಿಕೇರಿ ತಾಲ್ಲೂಕಿನಲ್ಲಿ ಬತ್ತದ ಗಿರಣಿಗಳು, ಮರಕೊಯ್ಯುವ ಕಾರ್ಖಾನೆ, ಸಣ್ಣಪ್ರಮಾಣದ ಎಂಜನಿಯರಿಂಗ್ ಘಟಕಗಳು, ಜೇನುಸಾಕಣೆ ಮತ್ತು ತರಬೇತಿ ಕೇಂದ್ರಗಳು ಇವೆ. ಗೃಹಕೈಗಾರಿಕೆಗಳಾದ ಚಾಪೆ ಹೆಣೆಯುವುದು, ಮಡಕೆ ಮಾಡುವುದು, ಕಬ್ಬಿಣದ ಕೆಲಸ ಮುಂತಾದವೂ ಇವೆ. ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳೂ ತಾಲ್ಲೂಕಿನಲ್ಲಿವೆ.

ತಾಲ್ಲೂಕಿನ ಉತ್ತರದಲ್ಲಿ ವಾಯವ್ಯಾಭಿಮುಖವಾಗಿ ಮಡಿಕೇರಿ–ಮಂಗಳೂರು ಮಾರ್ಗ ಹಾದು ಹೋಗಿದೆ. ಮಡಿಕೇರಿ–ಸಿದ್ದಾಪುರ, ಮಡಿಕೇರಿ–ಮೂರ್ನಾಡು, ನಾಪೋಕ್ಲು–ಕಕ್ಕಬೆ–ಮಡಿಕೇರಿ–ಭಾಗಮಂಡಲ ಮುಂತಾದ ಮುಖ್ಯ ರಸ್ತೆಗಳಿದ್ದು ಜಿಲ್ಲೆಯ ಎಲ್ಲಾ ಮುಖ್ಯ ಊರುಗಳಿಗೆ ಇಲ್ಲಿಂದ ಮಾರ್ಗ ಸಂಪರ್ಕವುಂಟು.

ಈ ತಾಲ್ಲೂಕಿನಲ್ಲಿ ಅನೇಕ ಪ್ರಕೃತಿದತ್ತ ಸೌಂದರ್ಯ ತಾಣಗಳಿವೆ. ಪ್ರವಾಸಿಗಳ ಆಕರ್ಷಣೆಯ ಕೇಂದ್ರವೂ ಆಗಿದೆ. ಇಲ್ಲಿಯ ಕೈಲ್ ಮುಹೂರ್ತ, ಹುತ್ತರಿ ಹಬ್ಬಗಳ ಜೊತೆಗೆ ತುಲಾ ಸಂಕ್ರಮಣದ ಕಾವೇರಿಸ್ನಾನ ಪ್ರಸಿದ್ಧವಾದದ್ದು. ಮಡಿಕೇರಿಗೆ 5ಕಿಮೀ ದೂರದಲ್ಲಿ ಸುಂದರವಾದ ಅಬ್ಬಿ ಜಲಪಾತವಿದೆ. ಮಡಿಕೇರಿಯ ದಕ್ಷಿಣಕ್ಕೆ 21ಕಿಮೀ ದೂರದಲ್ಲಿರುವ ಬಲಮುರಿ ಕಾವೇರಿ ನದಿಯ ದಂಡೆಯಲ್ಲಿದೆ. ಇದೊಂದು ಯಾತ್ರಾಸ್ಥಳ. ದೊಡ್ಡವೀರರಾಜೇಂದ್ರ ಕಟ್ಟಿಸಿದ ಇಲ್ಲಿನ ಒಂದು ವಿಶ್ರಾಂತಿ ಗೃಹ ಈಗಲೂ ಉಪಯೋಗದಲ್ಲಿದೆ. ಭಾಗಮಂಡಲ **(ನೋಡಿ)** ಒಂದು ಪ್ರಸಿದ್ಧ ಯಾತ್ರಾಸ್ಥಳ. ಮಡಿಕೇರಿಗೆ 16ಕಿಮೀ ದೂರದಲ್ಲಿರುವ ಚೆಟ್ಟಳ್ಳಿಯಲ್ಲಿ ಕಾಫಿ ಮತ್ತು ಕಿತ್ತಳೆ ಸಂಶೋಧನ ಕೇಂದ್ರಗಳಿವೆ. ಮಡಿಕೇರಿಗೆ 10ಕಿಮೀ ದೂರದಲ್ಲಿರುವ ಹಾಲೇರಿ ಐತಿಹಾಸಿಕ ಸ್ಥಳ. ಇದು ಕಾಫಿ ತೋಟಗಳಿಗೂ ಪ್ರಸಿದ್ಧ. ತಾಲ್ಲೂಕಿನ ದಕ್ಷಿಣದಂಚಿನಲ್ಲಿರುವ ಯುವಕಪಾಡಿ ಗ್ರಾಮದ ಬಳಿ ದೊಡ್ಡವೀರರಾಜೇಂದ್ರ 1792ರಲ್ಲಿ ಕಟ್ಟಿಸಿದ ನಾಲ್ಕುನಾಡು ಅರಮನೆ ಇದೆ. ಮಡಿಕೇರಿಯ ನೈಋತ್ಯದಲ್ಲಿ ಸು. 22 ಕಿಮೀ ದೂರದಲ್ಲಿರುವ ನಾಪೋಕ್ಲು ಕಾವೇರಿ ನದಿಯ ಬಲದಂಡೆಯ ಮೇಲಿದ್ದು, ಬತ್ತ ಮತ್ತು ಏಲಕ್ಕಿ ಬೆಳೆಗೆ ಪ್ರಸಿದ್ಧವಾಗಿದೆ. *

ಮಡಿಕೇರಿ ಈ ತಾಲ್ಲೂಕು ಹಾಗೂ ಕೊಡಗು ಜಿಲ್ಲೆಯ ಮುಖ್ಯ ಪಟ್ಟಣ ಮತ್ತು ಆಡಳಿತ ಕೇಂದ್ರ. ಮೈಸೂರಿಗೆ ಪಶ್ಚಿಮದಲ್ಲಿ 121ಕಿಮೀ ದೂರದಲ್ಲೂ ಮಂಗಳೂರಿನ ಆಗ್ನೇಯದಲ್ಲಿ 135ಕಿಮೀ ದೂರದಲ್ಲೂ ಇದೆ. ಮಡಿಕೇರಿ ಪಟ್ಟಣದಲ್ಲಿ 16,356 ಮಂದಿ ಗಂಡಸರೂ 15,930 ಮಂದಿ ಹೆಂಗಸರೂ ಇದ್ದು ಒಟ್ಟು ಜನಸಂಖ್ಯೆ 32,286. ಮಡಿಕೇರಿಯಿಂದ ಜಿಲ್ಲೆಯ ಎಲ್ಲ ಭಾಗಗಳಿಗೂ ಸಾರಿಗೆ ಸಂಚಾರಕ್ಕೆ ಉತ್ತಮವಾದ ರಸ್ತೆಗಳಿವೆ. ಮಡಿಕೇರಿಗೆ ರೈಲುಸಂಪರ್ಕವಿಲ್ಲ. ಎಲ್ಲ ನಾಗರಿಕ ಸೌಲಭ್ಯಗಳಿವೆ. ಶಾಲಾ ಕಾಲೇಜುಗಳೂ ಸರ್ಕಾರಿ ಕಚೇರಿಗಳೂ ಸಾರ್ವಜನಿಕ ಸಂಸ್ಥೆಗಳೂ ಬ್ಯಾಂಕುಗಳೂ ಇವೆ. ಸರ್ಕಾರಿ ಆಸ್ಪತ್ರೆ, ಪಶುವೈದ್ಯಾಲಯಗಳಿವೆ. ಜೇನು ಸಾಕಣೆ ತರಬೇತಿ ಕೇಂದ್ರ, ಕೈಗಾರಿಕಾ ತರಬೇತಿ ಕೇಂದ್ರ ಮುಂತಾದವು ಇವೆ. ವ್ಯಾಪಾರ ಕೇಂದ್ರವಾಗಿ ಪಟ್ಟಣ ಬೆಳೆಯುತ್ತಿದೆ. ಈ ಪಟ್ಟಣ ಸಮುದ್ರಮಟ್ಟದಿಂದ ಸು. 1,189 ಮೀ ಎತ್ತರದಲ್ಲಿದೆ. ಇಲ್ಲಿ ವರ್ಷಪೂರ್ತ ತಂಪಾದ ಹವೆ ಇರುವುದರಿಂದ ಹಾಗೂ ಸುಂದರ ಪ್ರಾಕೃತಿಕ ಸನ್ನಿವೇಶದಲ್ಲಿರುವುದರಿಂದ ಈ ಊರು ಪ್ರವಾಸಿಗಳನ್ನು ಆಕರ್ಷಿಸುತ್ತದೆ.



ಮಡಿಕೇರಿಯ ವಿಹಂಗಮ ನೋಟ

ಈಗಿನ ಮಡಿಕೇರಿಯನ್ನು 1681ರಲ್ಲಿ ಕೊಡಗಿನ ಹಾಲೇರಿ ಮನೆತನದ ರಾಜರಲ್ಲಿ ಮೂರನೆಯವನಾದ ಮುದ್ದುರಾಜ ಕಟ್ಟಿಸಿ ಹಾಲೇರಿಯಿಂದ ಇಲ್ಲಿಗೆ ತನ್ನ ರಾಜಧಾನಿಯನ್ನು ವರ್ಗಾಯಿಸಿದ. ಇವನ ಹೆಸರಿನಲ್ಲಿ ಮುದ್ದುರಾಜಕೇರಿಯೆಂದು ಕರೆಯಲ್ಪಟ್ಟ ಈ ಪಟ್ಟಣ ಮಡಿಕೇರಿಯೆಂಬ ಹೆಸರನ್ನು ಕ್ರಮೇಣ ಪಡೆಯಿತು. ಮುಂದೆ ಮಡಿಕೇರಿ ಟಿಪ್ಪುಸುಲ್ತಾನನ ವಶವಾದಾಗ ಮಣ್ಣಿನ ಗೋಡೆಯನ್ನು ಬೀಳಿಸಿ ಅದರ ಸ್ಥಳದಲ್ಲಿ ಕಲ್ಲಿನ ಕೋಟೆಯನ್ನು ಕಟ್ಟಿಸಿದ. ಟಿಪ್ಪು ಇದಕ್ಕೆ ಜಾಫರಾಬಾದ್ ಎಂದು ಹೆಸರಿಟ್ಟಿದ್ದ. ಕೊಡಗಿನ ಕೋಟೆಗಳಲ್ಲಿ ಇದೇ ಗಣ್ಯವಾದ ಕೋಟೆ. ಎತ್ತರದಾದ ಪ್ರದೇಶದಲ್ಲಿ ಕಟ್ಟಲಾಗಿರುವ ಈ ಕೋಟೆ ಸ್ಥೂಲವಾದ ಷಟ್ಕೋನಾಕೃತಿಯದಾಗಿದ್ದು ಅದರ ಆರು ಕೋನಗಳಲ್ಲಿ ಕೊತ್ತಲಗಳನ್ನು ಹೊಂದಿದೆ. ಪೂರ್ವದಲ್ಲಿರುವ ದ್ವಾರ ಅರ್ಧವೃತ್ತಾಕಾರದ ಕಮಾನನ್ನು ಹೊಂದಿದ್ದು ಅದರ ಮೇಲ್ಗಡೆ ಗಾರೆಯ ಕಟಾಂಜನವುಳ್ಳ ಬಿಸಿಲು ಮಾಳಿಗೆ (ಟೆರೇಸ್) ಇದೆ. ಕೋಟೆಯನ್ನು ಪ್ರವೇಶಿಸಿದಂತೆ ನಿಜಾಕೃತಿಯ ಗಾರೆಯ ಎರಡು ಆನೆಗಳು ಕಾಣಬರುತ್ತವೆ. ಕೋಟೆಯ ಒಳಗಡೆ ಲಿಂಗರಾಜ (1811–20) ಕಟ್ಟಿದ ಅರಮನೆ ಮತ್ತು 1855ರಲ್ಲಿ ಕಟ್ಟಲಾದ ಆಂಗ್ಲಿಕನ್ ಸಂಪ್ರದಾಯದವರ ಒಂದು ಇಗರ್ಜಿ ಇವೆ. ಈ ಇಗರ್ಜಿ ಗಾಥಿಕ್ ಶೈಲಿಯ ಒಂದು ಪುಟ್ಟಸುಂದರ ರಚನೆ. ಈ ಇಗರ್ಜಿ ಇದ್ದಲ್ಲಿ ಹಿಂದೆ ಒಂದು ವೀರಭದ್ರ ದೇವಾಲಯ ಇತ್ತೆಂದು ಹೇಳಲಾಗುತ್ತದೆ. ಅರಮನೆ ಒಂದು ಭವ್ಯ ಕಟ್ಟಡವಾಗಿದೆ. ಈಗ ಅಲ್ಲಿ ಜಿಲ್ಲಾಧಿಕಾರಿಯವರ ಕಚೇರಿ ಇದೆ. ಎರಡು ಮಾಳಿಗೆಗಳ ಈ ಕಟ್ಟಡದ ಮುಂಭಾಗ ಐರೋಪ್ಯ ಶೈಲಿಯದಾಗಿದ್ದು ಒಳಗಡೆ ವಿಶಾಲವಾದ ಒಂದು ತೆರೆದ ಅಂಗಳವಿದೆ. ಇದನ್ನು 1812–14ರಲ್ಲಿ ಕಟ್ಟಲಾಯಿತು. ಕೆಲವು ವರ್ಣಚಿತ್ರಗಳೂ ಲಿಂಗರಾಜೇಂದ್ರ ಒಡೆಯರ ಮುದ್ರಿಕೆಯ ಪ್ರತಿಕೃತಿಯೂ ಇದರ ಗೋಡೆಗಳನ್ನು ಅಲಂಕರಿಸಿದೆ. ಅವು ಸುಸ್ಥಿತಿಯಲ್ಲಿವೆ.

ಮಡಿಕೇರಿಯ ಓಂಕಾರೇಶ್ವರ ದೇವಾಲಯ ಕೊಡಗಿನ ಗಣ್ಯ ದೇವಸ್ಥಾನಗಳಲ್ಲೊಂದು. ಇದನ್ನು ದೊರೆ ಎರಡನೆಯ ಲಿಂಗರಾಜ 1820ರಲ್ಲಿ

ಕಟ್ಟಿಸಿದ. ಹಿಂದು ದೇವಾಲಯವಾದರೂ ಕಟ್ಟಡ ಭಾರತೀಯ-ಮುಸ್ಲಿಂ ಶೈಲಿಯಲ್ಲಿದೆ. ಚೌಕಾಕಾರದಲ್ಲಿರುವ ದೇವಾಲಯದಲ್ಲಿ, ಕೇಂದ್ರದಲ್ಲಿ ಒಂದು ಗುಮಟವೂ ನಾಲ್ಕು ಮೂಲೆಗಳಲ್ಲಿ ನಾಲ್ಕು ಕಿರುಗುಮ್ಮಟಗಳನ್ನು ಹೊತ್ತಿರುವ ಸ್ಥಂಭಕಗಳೂ (ಮಿನರೆಟ್) ಇವೆ. ಗುಮ್ಮಟಗಳ ಮೇಲೆ ಲೋಹದ ಕಳಶವಿದೆ. ಮುಂಭಾಗದಲ್ಲಿ ಒಂದು ತಟಾಕವಿದ್ದು ಅದರ ಮಧ್ಯಭಾಗದಲ್ಲಿ ಒಂದು ಚೌಕಾಕಾರದ ಮಂಟಪವಿದೆ. ಮಂಟಪದ ಛಾವಣಿಯ ನಡುವೆ ಒಂದು ಉಬ್ಬಿದ ಗುಮ್ಮಟವಿದ್ದು ಅದರ ಮೇಲ್ಗಡೆ ಕಳಶವೂ ತುದಿಯಲ್ಲಿ ಒಂದು ಲೋಹದ ಧ್ವಜವೂ ಇವೆ. **(ಎಸ್.ಕೆ.)**

ರಾಜಾ ಸೀಟ್, ಮಡಿಕೇರಿ

ಈ ದೇವಾಲಯವನ್ನೇ ಹೋಲುವ, ಆದರೆ ಇದಕ್ಕೂ ಸುಂದರವಾಗಿರುವ ಕೊಡಗಿನ ರಾಜರ ಎರಡು ಸಮಾಧಿಗಳು ಮಡಿಕೇರಿಯಲ್ಲಿವೆ. ಇವು ಇಟ್ಟಿಗೆ, ಗಾರೆಯ ಕಟ್ಟಡಗಳು. ಈ ಸಮಾಧಿಗಳ ಕಿಟಕಿಗಳು ಕಂಚಿನ ಕೆತ್ತನೆಯುಳ್ಳ ಆಕರ್ಷಣೀಯ ಕಲಾಕೃತಿಗಳಾಗಿವೆ. ಇವುಗಳಲ್ಲಿ ಒಂದು ವೀರರಾಜೇಂದ್ರ ಒಡೆಯನ ಸಮಾಧಿ, ಇನ್ನೊಂದು ಲಿಂಗರಾಜ ಒಡೆಯನದು. ಮೊದಲನೆಯದು ಹತ್ತೊಂಬತ್ತನೆಯ ಶತಮಾನದ ಆರಂಭದ ದಶಕದ ರಚನೆಯಾಗಿದ್ದು, ಎರಡನೆಯದು 1820ರಲ್ಲಿ ಪೂರ್ತಿಯಾಯಿತು. ರಾಜರ ಪುರೋಹಿತ ರುದ್ರಪ್ಪ ಎಂಬುವನು 1834ರಲ್ಲಿ ಕಟ್ಟಿದ ಇಂಥದೇ ಒಂದು ಸಣ್ಣ ಸಮಾಧಿ ಹಾಗೂ ಇನ್ನು ಕೆಲವು ಪುಟ್ಟ ರಚನೆಗಳು ಈ ಸಮಾಧಿಗಳ ಪರಿಸರದಲ್ಲಿವೆ. ಮಡಿಕೇರಿಯಿಂದ ಮಹಾದೇವಪೇಟೆಯನ್ನು ಕೊಡಗಿನ ಹಾಲೇರಿ ಮನೆತನದ ಅರಸರಲ್ಲಿ ಪ್ರಖ್ಯಾತನಾದ ದೊಡ್ಡವೀರರಾಜೇಂದ್ರ ತನ್ನ ಪಟ್ಟದ ರಾಣಿ ಮಹಾದೇವಮ್ಮಾಜಿಯ ಹೆಸರಿನಲ್ಲಿ ಕಟ್ಟಿಸಿದ. ಈ ರಾಜನೇ ಮಡಿಕೇರಿ ಕೋಟೆಯ ನೈಋತ್ಯ ಭಾಗದ ಮೈದಾನದ ತುದಿಯಲ್ಲಿ ಈಗ ರಾಜಾ ಸೀಟು ಎಂದು ಕರೆಯುವ ಚಿಕ್ಕ ಮಂಟಪವನ್ನು ಕಟ್ಟಿಸಿದ. ಈ ಸ್ಥಳದಿಂದ ಮಡಿಕೇರಿಯ ಪಶ್ಚಿಮಘಟ್ಟದ ಕೆಳಗಿನ ನಿಸರ್ಗದ ಸೌಂದರ್ಯವನ್ನು ಸವಿಯಬಹುದು.

ಮಡಿಕೇರಿಯಲ್ಲಿ ಒಂದು ಚಿಕ್ಕ ವಸ್ತುಸಂಗ್ರಹಾಲಯವಿದೆ. 1933ರಲ್ಲಿ ಮಹಾತ್ಮ ಗಾಂಧೀಯವರು ಭಾಷಣಮಾಡಿದ ಸ್ಥಳದಲ್ಲಿ ಒಂದು ಚಿಕ್ಕ ಮಂಟಪವನ್ನು ಕಟ್ಟಿ ಅದಕ್ಕೆ ಗಾಂಧೀ ಮಂಟಪವೆಂದು ಹೆಸರಿಟ್ಟಿದ್ದಾರೆ. ಆ ಮಂಟಪದಲ್ಲಿ ಗಾಂಧೀಯವರ ಚಿತಾಭಸ್ಮವಿದೆ. **(ಎಸ್.ಕೆ.;ಡಿ.ಎಸ್.ಕೆ.)**

**ಮಡಿಲು ತುಂಬುವುದು**: ಮದುವೆ ಆಚರಣೆಗೆ ಸಂಬಂಧಿಸಿದ ಒಂದು ಜನಪದ ಸಂಪ್ರದಾಯ. ಹಲವಾರು ಸಂದರ್ಭಗಳಲ್ಲಿ ಮಡಿಲು ತುಂಬುವ ಕಾರ್ಯ ನಡೆಯುತ್ತದೆ. ಗಂಡಿನ ಮನೆಯವರು ಹೆಣ್ಣಿನ ಮನೆಗೆ ವೀಳ್ಯಶಾಸ್ತ್ರಕ್ಕೆ ಬಂದಾಗ ಹೆಣ್ಣನ್ನು ಹಸೆಮೇಲೆ ಕೂರಿಸಿ ಮಡಿಲು ತುಂಬುವರು. ಹೆಣ್ಣಿನ ಮುಂದೆ ಒಂದು ಬಿಳಿ ಬಟ್ಟೆ ಹಾಸಿ (ಕೆಲವು ಸಂಪ್ರದಾಯದ ಪ್ರಕಾರ ಅರಿಶಿನದ ಬಟ್ಟೆ), ಅದಕ್ಕೆ ಒಂದು ಚಿಪ್ಪು ಬಾಳೆಹಣ್ಣು, ಒಂದು ಕಟ್ಟು ಎಲೆ, ಒಂದು ಹಿಡಿ ಅಡಕೆ, ಒಂದು ಅಚ್ಚು ಬೆಲ್ಲ, ಒಂದು ಕೊಬ್ಬರಿ, ಸ್ವಲ್ಪ ಅಕ್ಕಿ, ಹುರಿಗಡಲೆ, ಅರಿಶಿನ, ಕುಂಕುಮ, ಹೂವುಗಳನ್ನು ಇಡುವರು. ಕೆಲವು ಸಂಪ್ರದಾಯದ ಪ್ರಕಾರ ಕರಿಮಣಿ, ಬಳೆ, ಬಿಚ್ಚೋಲೆ, ಬಾಚಣಿಗೆ, ಕನ್ನಡಿಗಳನ್ನೂ ಇಡುವುದುಂಟು. ಹಸೆ ಮೇಲೆ ಕೂತ ಹೆಣ್ಣಿಗೆ ಅಕ್ಷತೆ ಇಡುವ ಕೆಲಸವನ್ನು ಮುತ್ತೈದೆಯರು ಮಾಡುವರು. ಮೊದಲು ಯಾರಾದರೊಬ್ಬಳು ಮುತ್ತೈದೆ ಹೆಣ್ಣಿನ ಮಡಿಲಿಗೆ ಹೂವು, ಹಣ್ಣು, ಕಾಯಿಬೆಲ್ಲಗಳನ್ನು ತುಂಬುವಳು. ಐದು ಜನ ಅಥವಾ ಒಂಬತ್ತು ಜನ ಮುತ್ತೈದೆಯರು ಮಡಿಲು ತುಂಬಿ ಶಾಸ್ತ್ರ ಮಾಡಿ ಅನಂತರ ಅದನ್ನೆಲ್ಲ ಗಂಟುಕಟ್ಟಿ ಹೆಣ್ಣನ್ನು ಹಸೆಯಿಂದ ಏಳಿಸುವರು. ಕೆಲವು ಸಂಪ್ರದಾಯದ ಪ್ರಕಾರ ಇದನ್ನೆಲ್ಲ ಅರಿಶಿನದ ಬಟ್ಟೆಯಲ್ಲಿರಿಸಿ ಮುತ್ತೈದೆಯರು ಹೆಣ್ಣಿನ ಸೊಂಟಕ್ಕೆ ಕಟ್ಟಬಹುದು. ಇಂಥ ಸಂದರ್ಭದಲ್ಲಿ ಹೆಣ್ಣನ್ನು ದೇವರ ಮುಂದೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿ ಗಂಟು ಕಟ್ಟಿದ ಮುತ್ತೈದೆಯರೇ ಅದನ್ನು ಬಿಚ್ಚುವ ಕೆಲಸವನ್ನೂ ಮಾಡುವರು. ಮಡಿಲು ತುಂಬಿದ ವಸ್ತುಗಳನ್ನು ಸಿಹಿತಿಂಡಿಗೆ ಉಪಯೋಗಿಸಬಹುದು. ಕರಿಮಣಿ, ಬಿಚ್ಚೋಲೆ, ಬಳೆ, ಬಾಚಣಿಗೆ ಕನ್ನಡಿಗಳನ್ನು ಮಾತ್ರ ಯಾರಾದರೂ ಮುತ್ತೈದೆಯರಿಗೆ ಕೊಡುತ್ತಾರೆ ಅಥವಾ ಗಂಗೆಯಲ್ಲಿ ಬಿಡುತ್ತಾರೆ.

ಮದುವೆ ಮೂರು ದಿವಸ ಅಥವಾ ಐದು ದಿವಸ ಇದೆ ಅನ್ನುವ ಹಾಗೆ ತಾಯಿಮನೆ ಹಸೆ ಎಂಬ ಕಾರ್ಯ ನಡೆಯುತ್ತದೆ. ಈ ಸಂದರ್ಭದಲ್ಲಿಯೂ ಇದೇ ಬಗೆಯಲ್ಲಿ ಶಾಸ್ತ್ರ ನಡೆಯುತ್ತದೆ. ಕೆಲವರಲ್ಲಿ ಧಾರೆ ದಿವಸವೂ ಮಡಿಲು ತುಂಬುವುದುಂಟು. ಇಲ್ಲಿನ ವಿಶೇಷವೆಂದರೆ ಮಡಿಲಿಗೆ ಒಂದು ರವಿಕೆ ಕಣ ಮತ್ತು ಒಂದು ಬೆಳ್ಳಿ ಬಟ್ಟಲು ಹಾಕುವರು. ರವಿಕೆ ಕಣವನ್ನು ಹೆಣ್ಣಿಗೆ ಹೊಲಿಸಿಕೊಡಬೇಕು. ಬಟ್ಟಲನ್ನು ಮಾತ್ರ ಗಂಡಿನ ತಂಗಿಗೆ ಕೊಡಬೇಕು ಎಂಬ ನಿಯಮವಿದೆ. ಮೊದಲ ಬಾರಿಗೆ ಗಂಡನ ಮನೆಗೆ ಹೋಗುವಾಗಲೂ ಹೆಣ್ಣಿನ ಸೆರಗಿಗೆ ಮಡಿಲುತುಂಬಿದ ವಸ್ತುಗಳನ್ನು ಕಟ್ಟಿ ಕಜ್ಜಾಯದ ತಪ್ಪಲೆ ಹೊರಿಸಿಕೊಂಡು ಹೋಗುವುದುಂಟು. ದೇವರ ಮುಂದೆ ಪೂಜೆ ಮಾಡಿಸಿ ಗಂಟು ಬಿಚ್ಚಿದ ಅನಂತರ ಮಡಿಲು ತುಂಬಿದ ವಸ್ತುಗಳನ್ನು ಸಿಹಿ ತಿಂಡಿಗೆ ಉಪಯೋಗಿಸಿಕೊಳ್ಳುತ್ತಾರೆ.

ಶೋಭನದ ದಿನ ಮಡಿಲು ತುಂಬುವುದು ಅತ್ಯಂತ ಪ್ರಮುಖವಾದುದು. ಒಂದು ಸಂಪ್ರದಾಯದ ಪ್ರಕಾರ ಹೆಣ್ಣನ್ನು ಹಾಸಿಗೆ ಮೇಲೆ ಕೂರಿಸಿ ಗಂಡಿನ ಕೈಯಲ್ಲಿ ಮಡಿಲು ತುಂಬಿಸುತ್ತಾರೆ. ಇಲ್ಲಿ ಗಂಡು ಹೆಣ್ಣಿನ ಸೆರಗಿಗೆ ಬಾಳೆಹಣ್ಣು, ವೀಳ್ಯದೆಲೆ, ಬೆಲ್ಲ, ಕೊಬ್ಬರಿ ಮೊದಲಾದವುಗಳನ್ನು ಇಡುವನು. ಅನಂತರ ಮೂರು ಜನ ಮುತ್ತೈದೆಯರು ಶಾಸ್ತ್ರೋಕ್ತವಾಗಿ ಅದನ್ನು ಗಂಟು ಕಟ್ಟಿಸಿ ತೆಗೆದಿಟ್ಟುಕೊಂಡಿದ್ದು, ಹೆಣ್ಣು ಗಂಡಿನ ಮನೆಗೆ ಹೋಗುವಾಗ ಕೊಟ್ಟು ಕಳುಹಿಸುವರು. ದೊನ್ನೆಸೆಟ್ಟರಲ್ಲಿ ಒಸಗೆಯ ಮಡಿಲು ತುಂಬುವ ಶಾಸ್ತ್ರ ಒಂದು ವಿಶೇಷ ರೀತಿಯಲ್ಲಿ ಜರುಗುತ್ತದೆ. ಹೆಣ್ಣುಗಂಡುಗಳನ್ನೂ ಹಸೆಯ ಮೇಲೆ ಕೂರಿಸುವುದಕ್ಕೆ ಮುನ್ನ ಐದು ಜನ ಮುತ್ತೈದೆಯರು ಹೆಣ್ಣೂ ಸೇರಿದಂತೆ ಹೊಸಲಿನ ಆಚೆ ಹೆಣ್ಣಿನ ಸೆರಗು ಹಿಡಿದು ನಿಲ್ಲುತ್ತಾರೆ. ಹೊಸಲಿಗೆ ಈಚೆ ಗಂಡನ್ನು ನಿಲ್ಲಿಸಿ ಗಂಡಸರು ನಿಂತಿರುತ್ತಾರೆ. ಮಧ್ಯೆ ಹೆಣ್ಣು ಗಂಡು ನೋಡದ ಹಾಗೆ ತೆರೆ ಹಾಕುವರು. ಅನಂತರ ಗಂಡಿನ ಮನೆಯವರು ತಂದಿದ್ದ ಪದಾರ್ಥಗಳನ್ನೆಲ್ಲ ಗಂಡಸರು ತೆರೆಯ ಆಚೆ ನಿಂತಿರುವ ಹೆಣ್ಣಿನ ಮಡಿಲಿಗೆ ಗಂಡಿನ ಕೈಯಲ್ಲಿ ಹಾಕಿಸುವರು. ಅಲ್ಲದೆ ಒಂದು ಕನ್ನಡಿ ಮತ್ತು ಒಂದು ಚೊಂಬು ನೀರು ತರಿಸಿ ತೆರೆ ಸರಿಸಿ ಕನ್ನಡಿಯಲ್ಲಿ ಹೆಣ್ಣಿನ ಮುಖ ಗಂಡಿಗೆ ತೋರಿಸಿ ಚೊಂಬಿನ ನೀರನ್ನು ಹೆಣ್ಣಿನ ಕೈಯಿಂದ ಗಂಡಿಗೆ ಕೊಡಿಸುವರು. ಮಡಿಲಿಗೆ ಹಾಕಿಸಿದ್ದ ನ್ನೆಲ್ಲಾ ದೇವರ ಮುಂದಿರಿಸಿ ಪೂಜೆ ಮಾಡಿಸಿ, ಹೆಣ್ಣು ಗಂಡುಗಳನ್ನು

ಹಸೆ ಮೇಲೆ ಕೂರಿಸಿ ಶಾಸ್ತ್ರ ನಡೆಸುವರು. ಅನಂತರ ಮಲಗುವ ಮನೆಗೆ ಬಿಡುವರು. ಮಡಿಲು ತುಂಬಿದ ಪದಾರ್ಥಗಳನ್ನು ಗಂಡಿನ ಮನೆಗೆ ಸ್ವಲ್ಪ ಕೊಟ್ಟು, ಉಳಿದುದನ್ನು ಹೆಣ್ಣಿನವರು ಉಪಯೋಗಿಸಿಕೊಳ್ಳಬಹುದು.

ಮೈನೆರೆದಾಗ ಮಡಿಲು ತುಂಬುವ ಪದ್ಧತಿ ಕೆಲವೆಡೆ ಕಾಣಬರುತ್ತದೆ. ಈ ಸಮಯದಲ್ಲಿ ಮಡಿಲಿಗೆ ಅರಿಶಿನದ ಕೊನೆ, ಸೀಗೆಕಾಯಿ, ಚಿಗಳಿ, ತಂಬಿಟ್ಟು, ಕೊಬ್ಬರಿ, ಬೆಲ್ಲ ಮೊದಲಾದವುಗಳನ್ನು ವಿಶೇಷವಾಗಿ ತುಂಬುತ್ತಾರೆ.

ಮಡಿಲು ತುಂಬುವ ಪ್ರತಿಯೊಂದು ಸಂದರ್ಭದಲ್ಲೂ ಹಾಡುಗಳನ್ನು ಹಾಡುವುದುಂಟು. ಇವುಗಳನ್ನು ಮಡಿಲು ತುಂಬುವ ಹಾಡುಗಳೆಂದೇ ಕರೆಯಬಹುದು. ಸಾಮಾನ್ಯವಾಗಿ ಇಂಥ ಹಾಡುಗಳ ಪಲ್ಲವಿ 'ಮಡಲುದುಂಬಿರೇ ಕಡಲ ಸೈವಾಗಿ; ರಾಧಾರುಕ್ಮಿಣಿ ಸೀತಾದೇವಿಗೆ' ಎಂಬ ರೀತಿಯದಾಗಿರುತ್ತವೆ. ಈ ಹಾಡುಗಳಲ್ಲಿ ಮಡಿಲು ತುಂಬುವ ಶಾಸ್ತ್ರದ ಕ್ರಮ ಮತ್ತು ತರಬೇಕಾದ ಪದಾರ್ಥಗಳ ಪಟ್ಟಿ, ಹಾಸ್ಯಕ್ಕಾಗಿ ಬೀಗರ ಜೊತೆ ಅಣಕವಾಡುವುದು, ಗೆಳೆಯ ಗೆಳತಿಯರನ್ನು ಮತ್ತು ಹೆಣ್ಣುಗಂಡನ್ನು ಹಂಗಿಸುವುದು ಮಾದಲಾದ ಹಾಸ್ಯ ಸನ್ನಿವೇಶಗಳು ಕಂಡುಬರುತ್ತವೆ. **(ಆರ್.ಜಿ.)**

**ಮಡಿವಾಳ ಮಾಚಯ್ಯ**: ಸು. 1131. ಶಿವಶರಣ ಹಾಗೂ ವಚನಕಾರ. ಬಸವಣ್ಣನವರ ಹಿರಿಯ ಸಮಕಾಲೀನ. ಇವನಿಗೆ ಮಡಿವಾಳಯ್ಯ ಎಂಬ ಹೆಸರೂ ಇದೆ. ಬಿಜಾಪುರ ಜಿಲ್ಲೆಯ ಹಿಪ್ಪಲಿಗೆ (ಈಗಿನ ದೇವರ ಹಿಪ್ಪರಗಿ) ಇವನ ಜನ್ಮಸ್ಥಳ. ಇವನ ತಂದೆ ಪರ್ವತಯ್ಯ, ಮಲ್ಲಿಕಾರ್ಜುನ ಮತ್ತು ಲಿಂಗನಾರ್ಯ ಗುರುಗಳು, ಕಲ್ಲಿನಾಥ ಇಷ್ಟದೈವ. ಈತ ಗೃಹ ಸ್ಥಜೀವನ ನಡೆಸಿದವನೆಂದು ಹಂತಿಯ ಹಾಡೊಂದರಿಂದ ತಿಳಿಯುತ್ತದೆ. ವೃತ್ತಿಯಲ್ಲಿ ಮಡಿವಾಳನಾಗಿದ್ದರೂ ಧರ್ಮ, ತತ್ತ್ವಜ್ಞಾನ ಹಾಗೂ ಅನುಭಾವ ವಿದ್ಯೆಯಲ್ಲಿ ನುರಿತವನಾಗಿದ್ದ. ಬಸವಣ್ಣನವರ ಕೀರ್ತಿಯನ್ನು ಕೇಳಿ ಕಲ್ಯಾಣಕ್ಕೆ ಧಾವಿಸಿದ ಈತ ದಾರಿಯಲ್ಲಿ ತುಂಬಿದ ಹೊಳೆ ಭೀಮರತಿ ಯನ್ನು ಈಸಿ ದಾಟಿದನಂತೆ. ಅನುಭವ ಮಂಟಪದ ಶರಣರ ಸಂಗದಲ್ಲಿ ಶಿವಭಕ್ತಿ, ಶಿವಜ್ಞಾನಾನುಭವದೊಡನೆ ಶಿವಭಕ್ತರ ಬಟ್ಟೆಗಳನ್ನು ಒಗೆಯುವ ಕಾರ್ಯದಲ್ಲಿ ನಿರತನಾಗಿದ್ದ. ಶರಣರ ಮಡಿಬಟ್ಟೆಗಳನ್ನು ಯಾರೂ ಮುಟ್ಟದಂತೆ ಎಚ್ಚರ ನೀಡಲು ಕಾಲಿಗೆ ವೀರಗಂಟೆ ಕಟ್ಟಿಕೊಂಡು ಗಣಾಚಾರವನ್ನು ಮೆರೆದ ಈತನನ್ನು ವೀರಭದ್ರನ ಅವತಾರವೆಂದೂ ಭಾವಿಸಲಾಗಿದೆ.

ಇವನ ಏಕಾಗ್ರಭಕ್ತಿ, ಸತ್ಯಶುದ್ಧಕಾಯಕ, ವೀರಶ್ರೀ, ನ್ಯಾಯಪರತೆ, ಸಮರ್ಪಣಭಾವ-ಇವುಗಳಿಗೆ ನಿದರ್ಶನವಾಗಿ ಹಲವಾರು ಕಥೆಗಳು ಕಾವ್ಯ, ಪುರಾಣಗಳಲ್ಲಿ ಕಂಡುಬರುತ್ತವೆ. ಪಾಲ್ಕುರಿಕೆ ಸೋಮನಾಥ, ಭೀಮಕವಿ, ವಿರೂಪಾಕ್ಷ ಪಂಡಿತ, ಸಿಂಗಿರಾಜ, ಚೆನ್ನಪ್ಪಕವಿ ಮೊದಲಾದವರು ಇವನನ್ನು ಸ್ತುತಿಸಿದ್ದಾರೆ. ಮಡಿಬಟ್ಟೆಗಳನ್ನು ಮುಟ್ಟಿ ಸತ್ತ ಭವಿಯನ್ನೂ ತನ್ನೊಡನೆ ಹೋರಾಡಲು ಬಂದು ಸತ್ತ ಆನೆಯನ್ನೂ ಬಿಜ್ಜಳ ರಾಜನ ಬಿನ್ನಹದ ಮೇರೆಗೆ ಜೀವಂತಗೊಳಿಸಿದ್ದು, ಶರಣ ಎಂದಿಗೂ ಬಡವನಲ್ಲ ವೆಂಬುದಕ್ಕೆ ತಾನು ಬಟ್ಟೆ ಒಗೆಯುತ್ತಿದ್ದ ಕೆರೆಯ ನೀರನ್ನು ಚಿಮ್ಮಿ, ನೀರ ಹನಿಗಳನ್ನು ಮುತ್ತುಗಳನ್ನಾಗಿ ಮಾಡಿ ಬಸವಣ್ಣನವರಿಗೆ ತೋರಿಸಿ ದುದು ಮೊದಲಾದವು ಇವನು ನಡೆಸಿದನೆನ್ನಲಾದ ಪವಾಡಗಳು.

ಸು. 1167ರ ಹೊತ್ತಿಗೆ ಚೆನ್ನಬಸವಣ್ಣಾದಿ ಶರಣರ ಜೊತೆಗೆ ಅವರ ಬೆನ್ನರಕ್ಷೆಯಾಗಿ ಕಲ್ಯಾಣವನ್ನು ಬಿಟ್ಟುಹೋಗುವಾಗ ದಾರಿಯಲ್ಲಿ ಮುರಗೋಡದ (ಬೆಳಗಾಂವಿ ಜಿಲ್ಲೆ) ಬಳಿ ಹೋರಳಿ ತನ್ನ ಹುಟ್ಟೂರಾದ ಹಿಪ್ಪರಗಿಗೆ ಹೋಗಿ ಕೆಲಕಾಲದ ಅನಂತರ ಅಲ್ಲಿಯೇ ಬಯಲಾದನೆಂದು ಐತಿಹ್ಯಗಳಿವೆ. ಅನುಭವ ಮಂಟಪದಲ್ಲಿ ಹಾಗೂ ಶಿವಶರಣರ ಆಂದೋಲನದಲ್ಲಿ ಈತ ವಹಿಸಿದ ಪಾತ್ರವನ್ನು ಶೂನ್ಯ ಸಂಪಾದನೆಯ 9ನೆಯ ಉಪದೇಶದಲ್ಲಿ ಉಜ್ಜ್ವಲವಾಗಿ ಚಿತ್ರಿಸಲಾಗಿದೆ. ಈತನ ಸಮಾಧಿ ಕಾರಿಮನೆ ಎಂಬಲ್ಲಿ ಇದ್ದಂತೆ ತಿಳಿದುಬರುತ್ತದೆ.

ಈತ ವಚನಗಳನ್ನೂ ಬರೆದಿದ್ದಾನೆ. ಇದುವರೆಗೆ ನೂರು ವಚನಗಳು ದೊರಕಿವೆ. ಕಲಿದೇವರದೇವ ಎಂಬುದು ಇವನ ವಚನಗಳ ಅಂಕಿತ. ಈತ ಒಂದು ಕಾಲಜ್ಞಾನವನ್ನೂ ಬರೆದಿದ್ದನೆಂದು ತಿಳಿದುಬರುತ್ತದೆ. ಈತನ ಜೀವನ ವಿವರಗಳನ್ನು ಕುರಿತು ಮಡಿವಾಳಯ್ಯನ ಚರಿತೆ, ಮಡಿವಾಳಯ್ಯನ ತಾರಾವಳಿ, ಮಡಿವಾಳಯ್ಯನ ಸಾಂಗತ್ಯ ಎಂಬ ಗ್ರಂಥಗಳು ರಚಿತವಾಗಿವೆ. **(ಸಿಎಚ್.ಕೆ.)**

**ಮಣಿಪಾಲ**: ಉಡುಪಿ ಜಿಲ್ಲೆಯ ಅದೇ ತಾಲ್ಲೂಕಿಗೆ ಸೇರಿದ ಒಂದು ಶೈಕ್ಷಣಿಕ ಕೇಂದ್ರ. ಹಿಂದೆ ಇದೊಂದು ಬರಡು, ಬೋಳು ಗುಡ್ಡವಾಗಿತ್ತು. 1932ರಲ್ಲಿ ಇದನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡ ತೋನ್ಸೆ ಮಾಧವ ಅನಂತ ಪೈ (ಟಿ.ಎಂ.ಎ.ಪೈ.) ಅವರಿಂದಾಗಿ ಆಧುನಿಕ ನಗರವಾಗಿ ಬೆಳೆಯಿತು. ಅವರೂ ಅವರ ಸಹೋದರರೂ ಕೂಡಿ ಬೆಳೆಸಿದ ವಿವಿಧ ಉದ್ಯಮಗಳು, ವಿದ್ಯಾಸಂಸ್ಥೆಗಳಿಂದಾಗಿ ಈಗ ಮಣಿಪಾಲ ಪ್ರಪಂಚ ಪ್ರಸಿದ್ಧ ಸ್ಥಳವಾಗಿದೆ.

ಹಿಂದೆ ಈ ಸ್ಥಳದಲ್ಲಿದ್ದ ಆವೆಮಣ್ಣಿನಿಂದ ಕೂಡಿದ ಕೆರೆಯ ಹೆಸರು ಮಣ್ಣುಪಳ್ಳ; ಇದರಿಂದ ಮಣಿಪಾಲ ಎಂಬ ಹೆಸರು ಬಂತೆಂದು ಹೇಳುವರು. ಮುನಿಗಳಿದ್ದ ಮುನಿಪಳ್ಳವೇ ಮಣಿಪಾಲವಾಯಿತೆಂದೂ ಪ್ರತೀತಿ. ಪೈಗಳು ಮೊದಲಿಗೆ ಇಲ್ಲೊಂದು ಹೆಂಚಿನ ಕಾರ್ಖಾನೆ ಪ್ರಾರಂಭಿಸಿದರು. 1942ರಲ್ಲಿ ಸ್ಥಾಪಿಸಿದ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಇಲ್ಲಿನ ಶಿಕ್ಷಣ ಸಂಸ್ಥೆಗಳ ಕೇಂದ್ರ ಸಂಸ್ಥೆ. ಈ ಸಂಸ್ಥೆಯ ಆಶ್ರಯದಲ್ಲಿ ಜಿಲ್ಲೆಯ ಒಳಗೆ ಮತ್ತು ಹೊರಗೆ ಹತ್ತಾರು ಶಿಕ್ಷಣ ಸಂಸ್ಥೆಗಳನ್ನು ತೆರೆಯಲಾಗಿದೆ. ಉಡುಪಿ-ಮಣಿಪಾಲ ನಡುವೆ ಎಂ.ಜಿ.ಎಂ. ಕಾಲೇಜಿನಿಂದ ಆರಂಭಿಸಿ ಕಸ್ತೂರ್ ಬಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ್ ಕಾಲೇಜ್ ಆಫ್ ಎಜ್ಯುಕೇಷನ್ ಮತ್ತು ಹತ್ತಿರದ ಊರುಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸಿದೆ. ಇವೆಲ್ಲ ದೇಶದಲ್ಲೇ ಅತ್ಯುನ್ನತ ವಿದ್ಯಾಸಂಸ್ಥೆಗಳೆಂದು ಹೆಸರಾಗಿದ್ದು, ವಿದೇಶಿ ವಿದ್ಯಾರ್ಥಿಗಳನ್ನೂ ಆಕರ್ಷಿಸಿವೆ. ಇವೆಲ್ಲವನ್ನು ಸೇರಿಸಿ ಮಾಹೆ (ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್; ಈಗ ಮಣಿಪಾಲ್ ವಿಶ್ವವಿದ್ಯಾಲಯ) ಎಂಬ ಪರಿಭಾವಿತ (ಡೀಮ್ಡ್) ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಟಿ.ಎಂ.ಎ.ಪೈ ಅವರೇ ಸ್ಥಾಪಿಸಿದ, ಶ್ರೀಸಾಮಾನ್ಯನ ಬ್ಯಾಂಕ್ ಎಂದು ಹೆಸರಾದ ಸಿಂಡಿಕೇಟ್ ಬ್ಯಾಂಕ್‌ನ ಕೇಂದ್ರ ಕಚೇರಿ ಇಲ್ಲಿದೆ. ಇದಲ್ಲದೆ ಕೆನರಾ ಲ್ಯಾಂಡ್ ಇನ್‌ವೆಸ್ಟ್‌ಮೆಂಟ್ಸ್, ಮಹಾರಾಷ್ಟ್ರ ಅಪೆಕ್ಸ್ ಕಾರ್ಪೋರೇಷನ್, ಜನರಲ್ ಇನ್ ವೆಸ್ಟ್‌ಮೆಂಟ್ ಅಂಡ್ ಕಮರ್ಷಿಯಲ್ ಕಾರ್ಪೋರೇಷನ್, ಇಂಡಸ್ಟ್ರಿಯಲ್ ಕ್ರೆಡಿಟ್ ಅಂಡ್ ಡೆವೆಲಪ್ ಮೆಂಟ್, ಸಿಂಡಿಕೇಟ್, ಮಣಿಪಾಲ್ ಫೈನಾನ್ಸ್ ಮೊದಲಾದ ಆರ್ಥಿಕ ಸಂಸ್ಥೆಗಳನ್ನೂ ಪೈಬಂಧುಗಳು ಸ್ಥಾಪಿಸಿ, ನಡೆಸಿಕೊಂಡು ಬರುತ್ತಿದ್ದಾರೆ. ಹೆಂಚಿನ ಕಾರ್ಖಾನೆ, ಸಹಕಾರಿ ಕೈಗಾರಿಕಾ ಎಸ್ಟೇಟ್, ಅಲಾಯ್ ಫೌಂಡ್ರಿ, ಎಲೆಕ್ಟ್ರೋ ಪ್ಲೇಟಿಂಗ್ ವರ್ಕ್ಸ್-ಇವೇ ಮೊದಲಾದ ಉದ್ಯಮಗಳು ಇಲ್ಲವೆ.

ಮಣಿಪಾಲ್ ಪ್ರೆಸ್ ಬೆಳೆದು ಉದಯವಾಣಿ, ತರಂಗ, ತುಷಾರ ದಂತಹ ಪತ್ರಿಕೆಗಳ ಹುಟ್ಟಿಗೆ ಕಾರಣವಾಯಿತು. ದೇಶದಲ್ಲಿ ಎರಡನೆಯದಾಗಿ ಹಾಗೂ ಕನ್ನಡದಲ್ಲಿ ಮೊದಲನೆಯದಾಗಿ ವೆಬ್ ಆಫ್ ಸೆಟ್‌ನಲ್ಲಿ ಮುದ್ರಣ ಗೊಳ್ಳುವ ಪತ್ರಿಕೆಯಾಗಿ ಉದಯವಾಣಿ ಅನೇಕ ಮುದ್ರಣ ಪ್ರಶಸ್ತಿಗಳನ್ನು ಗಳಿಸಿದೆ.

ವೃತ್ತಿಪರಶಿಕ್ಷಣ ಸಂಸ್ಥೆಗಳನ್ನು ಟಿ.ಎಂ.ಎ. ಪ್ರತಿಷ್ಠಾನಕ್ಕೆ ವರ್ಗಾಯಿಸಿ, ಮಣಿಪಾಲ ಭಾಷಾ ಶಿಕ್ಷಣ ಸಂಸ್ಥೆ, ಪಾಲಿ ಟೆಕ್ನಿಕ್‌ಗಳು, ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಷನ್, ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್, ಬುದ್ಧಿಮಾಂದ್ಯರ ವಿಕಸನಶಾಲೆ ಮೊದಲಾದವುಗಳನ್ನು ಅದರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಣಿಪಾಲ ಇಂದು ಪ್ರಪಂಚದ ಅತ್ಯುತ್ತಮ ಆರೋಗ್ಯ ಸೇವಾ ಸೌಲಭ್ಯಗಳುಳ್ಳ ಸಂಸ್ಥೆಗಳಲ್ಲಿ ಒಂದು. ಎಲ್ಲ ಬಗೆಯ ರೋಗಗಳಿಗೂ ಇಲ್ಲಿ ಚಿಕಿತ್ಸೆ ನಡೆಸುವ ಆಧುನಿಕ ಸೌಲಭ್ಯಗಳು ಮತ್ತು ಪರಿಣತ ವೈದ್ಯ ಸಿಬ್ಬಂದಿ ಲಭ್ಯವಿದೆ. ಇದರ ಶಾಖೆಯೊಂದು ಬೆಂಗಳೂರಿನ ಏರ್‌ಪೋರ್ಟ್ ರಸ್ತೆಯಲ್ಲಿದೆ.



ಸ್ವಾಯತ್ತ ವಿಶ್ವವಿದ್ಯಾಲಯ ಮಾನ್ಯತೆ ಪಡೆದಿರುವ ಮಣಿಪಾಲದ ಮಾಹೆ(ಕಟ್ಟಡ)

ಮಣಿಪಾಲ ಪ್ರವಾಸಿಗರ ತಾಣವೂ ಹೌದು. ವೆಲ್‌ಕಮ್ ಸಮೂಹಕ್ಕೆ ಸೇರಿದ ವ್ಯಾಲಿವ್ಯೂ ಅಂತಾರಾಷ್ಟ್ರೀಯ ಮಟ್ಟದ ಹೋಟೆಲ್. ಇಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟಿನ ಪದವಿ ಶಿಕ್ಷಣಕ್ಕೆ ಅವಕಾಶವಿದೆ. ಕಸ್ತೂರ ಬಾ ಮೆಡಿಕಲ್ ಕಾಲೇಜು, ಆಸ್ಪತ್ರೆ, ಪೆಥಾಲಜಿ ವಸ್ತು ಸಂಗ್ರಹಾಲಯಗಳು ಸಂದರ್ಶಕರನ್ನೂ ಆಕರ್ಷಿಸುತ್ತವೆ. ಕ್ರೈಸ್ಟ್ ಚರ್ಚ್, ಹೊಸ ರೀತಿಯಲ್ಲಿ ಇಗರ್ಜಿ–ಮಸೀದಿಗಳ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡ ವೇಣುಗೋಪಾಲ ಕೃಷ್ಣ ದೇವಾಲಯ ಹಾಗೂ ಉದ್ಯಾನ, ಗೀತಾಮಂದಿರ, ಇಂಡಸ್ಟ್ರಿಯಲ್ ಕಾಂಪ್ಲೆಕ್ಸಿನಲ್ಲಿರುವ ಹಲವು ಉದ್ಯಮಗಳು ಆಕರ್ಷಣೀಯ.

ದಕ್ಷಿಣ ಕನ್ನಡದಲ್ಲಿನ ವಿಶಿಷ್ಟ ಪ್ರಾಚೀನ ವಾಸ್ತು ಶೈಲಿಯನ್ನು ಉಳಿಸಿ, ಮುಂದಿನ ಪೀಳಿಗೆಗೆ ಮಾದರಿಯಾಗಿ ಉಳಿಯುವಂತೆ ನಿರ್ಮಿಸಿದ ವಿಜಯನಾಥ ಶೆಣೈಯವರ 'ಹಸ್ತಶಿಲ್ಪ' ಮಣಿಪಾಲದ ಖ್ಯಾತಿಯನ್ನು ಹೆಚ್ಚಿಸಿದೆ. ತುಳುನಾಡಿನ ಅರಸು ವಂಶಸ್ಥರುಗಳು ತಮ್ಮ ಪ್ರಾಚೀನ ಮನೆಗಳನ್ನು ಮುರಿದು ಹೊಸ ಮನೆಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಹಳೆಯ ಕಾಷ್ಠಶಿಲ್ಪಗಳು ಹಾಳಾಗುವುದನ್ನು ನೋಡಲಾಗದೆ ಅವನ್ನು ಶೆಣೈ ಸಂಗ್ರಹಿಸುತ್ತ ಬಂದರು. ಅನಂತರ ತಮ್ಮ ಕನಸಿನ ಮನೆಯನ್ನು ಹಳೆಗಾಲದ ಮನೆಯಂತೆಯೇ ನಿರ್ಮಿಸಿ ಅದರೊಳಗೆ ಸಂಗ್ರಹಿಸಿಟ್ಟ ದಕ್ಷಿಣಕನ್ನಡದ ಸಂಸ್ಕೃತಿಯ ಪುರಾತನ ವಸ್ತು ವಿಶೇಷಗಳನ್ನು ಪ್ರದರ್ಶನಕ್ಕಿಟ್ಟು ವಸ್ತುಸಂಗ್ರಹಾಲಯವನ್ನಾಗಿಸಿದ್ದಾರೆ. ಅದರ ಆಡಳಿತ ವ್ಯವಸ್ಥೆಗೆ ಒಂದು ಟ್ರಸ್ಟ್ ರಚಿಸಲಾಗಿದೆ. **(ಎಚ್.ಪಿ.ವಿ.)**

**ಮಣೇವು ಹಾಕುವುದು**: ವೈಷ್ಣವ ಹಾಗೂ ಶೈವರಲ್ಲಿ ಕಂಡುಬರುವ ಹರಕೆ ತೀರಿಸುವ ಒಂದು ವಿಶೇಷ ಸಂಪ್ರದಾಯ. ಇದು ಗ್ರಾಮದೇವತೆಯ ಹಬ್ಬದಲ್ಲಿಯೂ ವಿರಳವಾಗಿ ಕಂಡುಬರುತ್ತದೆ. ಮುಖ ನೋಡಿ ಮಣೆ ಹಾಕು ಎಂಬ ಗಾದೆ ಇಂದಿಗೂ ರೂಢಿಯಲ್ಲಿದೆ. ಈ ಮೂಲದಿಂದ ಮಣೇವು ಹಾಕುವುದು ಎಂಬ ಮಾತು ಬಂದಿರುವ ಸಾಧ್ಯತೆ ಇದೆ. ಹಿರಿಯರನ್ನು ಗೌರವಿಸು ಎಂಬ ಅರ್ಥದಲ್ಲಿ ಈ ಸಂಪ್ರದಾಯ ಉಳಿದು ಬಂದಂತೆ ತೋರುತ್ತದೆ.

ಮಣೇವು ಹಾಕುವುದಾಗಿ ಹರಕೆ ಹೊತ್ತು, ಮಣೇವು ಹಾಕಲು ಸಂಕಲ್ಪಿಸಿಕೊಂಡ ದಿವಸದಂದು ದಾಸಯ್ಯಗಳನ್ನು ತಮ್ಮ ಮನೆಗೆ ಪ್ರಸಾದಕ್ಕಾಗಿ ಆಹ್ವಾನಿಸುವರು. ಆ ದಿನ ದಾಸಯ್ಯಗಳು ಉಪವಾಸ ವ್ರತವನ್ನಾಚರಿಸಿ ಮಿಂದು ಮಡಿಯುಟ್ಟು ಆಹ್ವಾನಿತರ ಮನೆಗೆ ಬಂದು ತಿರುಪತಿ ತಿಮ್ಮಪ್ಪನ ಮುಖಸಿರಿ, ಶಂಖ, ಜಾಗಟೆ, ಬಾಂಕುಗಳನ್ನು ವಿಶೇಷ ಭಕ್ಷ್ಯ ಭೋಜ್ಯಗಳೊಂದಿಗೆ ಎಡೆಯಲ್ಲಿಟ್ಟು ಧೂಪದೀಪಾದಿ ನೈವೇದ್ಯಗಳಿಂದ ಪೂಜಿಸುವರು. ಅನಂತರ ತಿಮ್ಮಪ್ಪನ ನಾಮಸ್ಮರಣೆ ಮಾಡಿ ಬಾಂಕು ಶಂಖ ಜಾಗಟೆಗಳನ್ನು ಪೂರೈಸಿ ಎಲ್ಲ ದಾಸಯ್ಯಗಳು ಸಾಲಾಗಿ ನಿಂತು ಹೋ ಹೋ ಹೋ ಎಂದು ಕೂಗುತ್ತ ಸುತ್ತ ಮೂರು ಬಾರಿ ಪ್ರದಕ್ಷಿಣೆ ಮಾಡಿ ಎಡೆಗೆ ಎರಗಿ ತಿನ್ನುವರು. ತಿಂದು ಉಳಿದುದನ್ನು ಪ್ರಸಾದವೆಂದು ಇತರ ಭಕ್ತರಿಗೆ ಹಂಚುವರು. ಇದಾದ ಅನಂತರ ದಾಸಯ್ಯಗಳಿಗೆ ಮೀಸಲು ಊಟ ಬಡಿಸಿ ದಕ್ಷಿಣೆಯಿಂದ ಸಂತೃಪ್ತಿ ಪಡಿಸುವರು. ಕಜ್ಜಾಯ, ಹಲಸಿನಹಣ್ಣು, ಬಾಳೆಹಣ್ಣು, ಜೇನುತುಪ್ಪ ಎಡೆಯಲ್ಲಿರುವ ಪ್ರಧಾನ ಭಕ್ಷ್ಯಗಳು.

ತಿರುಪತಿಗೆ ಯಾತ್ರೆ ಹೋಗುವ ಭಕ್ತರು ಪ್ರಯಾಣ ಹೊರಡುವ ದಿನ ಅಥವಾ ಯಾತ್ರೆ ಮುಗಿಸಿ ಹಿಂದಿರುಗಿದ ದಿನ ದಾಸಯ್ಯಗಳಿಗೆ ಮಣೇವು ಹಾಕುವ ಪದ್ಧತಿ ಮಂಡ್ಯ, ತುಮಕೂರು ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಕೆಲವು ಪ್ರದೇಶಗಳಲ್ಲಿ ತಿರುಪತಿಗೆ ಹೊರಡುವ ದಿನ ಊರ ಹೊರಗಿನ ತೋಪಿನಲ್ಲಿ ದೇವರಿಗೆ ಕುರಿ ಅಥವಾ ಮೇಕೆಯನ್ನು ಬಲಿಕೊಟ್ಟು ಅಲ್ಲಿಯೇ ಅಡುಗೆ ಮಾಡಿ ದಾಸಯ್ಯಗಳಿಗೆ ಎಡೆಕೊಟ್ಟು (ಮಣೇವು ಹಾಕಿ) ಅನಂತರ ಪ್ರಯಾಣ ಮಾಡುತ್ತಾರೆ. ಇದನ್ನು ಭೂತನಸೇವೆ ಎಂದು ಕರೆಯುವರು. ಹಿಂದೆ ವಾಹನ ಸೌಕರ್ಯಗಳಿರದೆ ಕಾಲು ನಡಿಗೆಯಲ್ಲಿಯೇ ಪ್ರಯಾಣ ಮಾಡುತ್ತಿದ್ದುದರಿಂದ ದಾರಿಯಲ್ಲಿ ಭೂತಬೇತಾಳಾದಿಗಳಿಂದ ತೊಂದರೆಯಾಗದಿರಲೆಂದು ಈ ಸೇವೆ ಮಾಡುತ್ತಿದ್ದುದಾಗಿ ನಂಬಿಕೆ.

ತುರುವೇಕೆರೆ ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ಋತುಮತಿಯಾಗದ ಕನ್ಯೆಯೊಬ್ಬಳಿಗೆ ಸ್ನಾನಮಾಡಿಸಿ ಮಡಿ ಉಡಿಸಿ ಅಡಕೆ ಹೊಂಬಾಳೆಯಿಂದ ಅಲಂಕರಿಸಿದ ಕಳಸವನ್ನು ಹೊರಿಸಿಕೊಂಡು ನಡೆಮಡಿ (ದಾರಿಯುದ್ದಕ್ಕೂ ಮಡಿಯಾದ ಪಂಚೆ ಅಥವಾ ಸೀರೆಯನ್ನು ಹಾಸಿ ಕಳಸ ಹೊತ್ತವರನ್ನು ನಡೆಸಿಕೊಂಡು ಬರುವುದು) ಮೇಲೆ ಊರ ಮುಂದಿರುವ ದೇವಸ್ಥಾನಕ್ಕೆ ಕರೆದು ತರುತ್ತಾರೆ. ದೇವಸ್ಥಾನದಲ್ಲಿ ಆ ಕಳಸವನ್ನು ಪೂಜಿಸಿ ಅದರ ಮುಂದೆ ಬಾಳೆಹಣ್ಣು, ಕಡಲೆಪುರಿ, ಕಜ್ಜಾಯ ಮತ್ತಿತರ ಸಿಹಿತಿಂಡಿ ಪದಾರ್ಥಗಳನ್ನು ಎಡೆಗೆ ಇಡಲಾಗುವುದು. ಅನಂತರ ದಾಸಯ್ಯ ಎಡೆಗೆ ಮುಖಸಿರಿಯನ್ನು ತೋರಿಸಿ ತಿಮ್ಮಪ್ಪನ ನಾಮಸ್ಮರಣೆ ಮಾಡುತ್ತ ಶಂಖ ಮತ್ತು ಬಾಂಕನ್ನು ಊದಿ ಎಡೆಯ ಸುತ್ತ ಮೂರುಬಾರಿ ಪ್ರದಕ್ಷಿಣೆ ಮಾಡಿ ಎಡೆಗೆ ಎರಗಿ ತಿನ್ನುವನು. ಉಳಿದ ಎಡೆಯನ್ನು ಪ್ರಸಾದವೆಂದು ಇತರರಿಗೆ ಹಂಚಲಾಗುವುದು. ಇದೇ ತಾಲ್ಲೂಕಿನ ಮಾದಿಹಳ್ಳಿ ಎಂಬಲ್ಲಿಯೂ ಪ್ರತಿವರ್ಷ ಗ್ರಾಮದೇವತೆ ದೊಡ್ಡಮ್ಮನ ಜಾತ್ರೆಯಂದು ಸೋಮನ ಪ್ರೀತ್ಯರ್ಥವಾಗಿ ಅಲ್ಲಲ್ಲಿ ಮಣೇವು ಹಾಕುತ್ತಾರೆ.

ಮಂಡ್ಯ ಜಿಲ್ಲೆಯ ಮೇಲುಕೋಟೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ಮಣೇವು ಹಾಕುವುದರಲ್ಲೊಂದು ವಿಶೇಷತೆ ಕಂಡುಬರುತ್ತದೆ. ಇಲ್ಲಿ ತಿರುಪತಿ ತಿಮ್ಮಪನ ಮತ್ತು ಚೆಲುವ ನಾರಾಯಣನ ಭಕ್ತರು ದಾಸಯ್ಯನಿಗೆ ಮಣೇವು ಹಾಕುವ ಪದ್ಧತಿಯಿದ್ದು ಎಡೆಗೆ ಮಾಂಸಾನ್ನವನ್ನು ಬಳಸಲಾಗುತ್ತದೆ. ದಾಸಯ್ಯನು ಮುಖಸಿರಿ, ಬಾಂಕು, ಜಾಗಟೆ, ಶಂಖಗಳನ್ನು ಪೂರೈಸಿದ ಅನಂತರ ಎಡೆಗೆ ಎರಗುವನು. ಆಗ ಅವನ ಸುತ್ತ ತೆರೆ ಹಿಡಿಯಲಾಗುವುದು. ದೇವರು ಪ್ರಸಾದ ಸ್ವೀಕರಿಸುವಾಗ ಬೇರೆಯವರು ನೋಡಬಾರದೆಂಬುದು ಇದರ ಹಿಂದಿರುವ ನಂಬಿಕೆ. ಇದನ್ನು ಭೂತನ ಸೇವೆ ಅಥವಾ ದಾಸಯ್ಯನಿಗೆ ಧೂಪ ಹಾಕುವುದು ಎಂದು ಕರೆಯುತ್ತಾರೆ.

ಇದೇ ಜಿಲ್ಲೆಯ ಪಾಂಡವಪುರ ತಾಲ್ಲೂಕು ಕುರುಬರ ಬೆಟ್ಟಳ್ಳಿ ಎಂಬ ಗ್ರಾಮದಲ್ಲಿ ಪ್ರತಿವರ್ಷ ಶಿವರಾತ್ರಿ ಹಬ್ಬದ ವೇಳೆಯಲ್ಲಿ ಆಚರಿಸುವ ಮಹಾಲಕ್ಷ್ಮಿಯ ಜಾತ್ರೆಯಲ್ಲಿ ಬೀರೇದೇವರು ಮತ್ತು ಗ್ರಾಮದೇವತೆಯ ಪೂಜೆ ನಡೆಯುತ್ತದೆ. ಪೂಜೆಯ ಮುಂದೆ ಮಹಾಲಕ್ಷ್ಮಿಯ ಗುಣಗಾನ ಮಾಡುತ್ತ ಕುಣಿಯುತ್ತ ಬೀರೇಶ್ವರನನ್ನು ಮೆರಸುತ್ತ ಬರುವ ವೀರಮಕ್ಕಳಿಗೆ ಉತ್ಸವ ಬರುವ ದಾರಿಯಲ್ಲಿ ಭಕ್ತರು ಅಲ್ಲಲ್ಲಿ ಮಣೇವು ಹಾಕುತ್ತಾರೆ. ಇಲ್ಲಿ ಎಡೆಯಲ್ಲಿ ಬಾಳೆಹಣ್ಣು ಮತ್ತು ಕಜ್ಜಾಯ ಇರುತ್ತವೆ.

ಹಾಸನ ಜಿಲ್ಲೆಯಲ್ಲಿಯೂ ಮಣೇವು ಹಾಕುವ ಸಂಪ್ರದಾಯವಿದೆ. ಇದನ್ನು ಇಲ್ಲಿ ಬೆಟ್ಟೆಮಣೆ ಹಾಕುವುದು ಎಂದು ಕರೆಯುತ್ತಾರೆ. ಬಾಳೆಹಣ್ಣಿನ ಮತ್ತು ಹಲಸಿನ ತೊಳೆಯ ರಸಾಯನ ಇಲ್ಲಿನ ಎಡೆಯ ವಿಶೇಷ.

ಮಣೇವು ಹಾಕುವ ಪದ್ಧತಿ ಗೊರವರಲ್ಲಿಯೂ ಇದೆ. ಇವರು ವರ್ಷಕ್ಕೊಮ್ಮೆ ಶಿವರಾತ್ರಿಯ ಸಂದರ್ಭದಲ್ಲಿ ಮೈಲಾರಲಿಂಗನ ಹಬ್ಬವನ್ನು ಆಚರಿಸುವರು. ಹಬ್ಬದ ದಿನ ಮುಖ್ಯ ಗಾಯಕ ಕಂಬಳಿ ಗದ್ದುಗೆಯ ಮೇಲೆ ಕುಳಿತು ಮೈಲಾರಲಿಂಗನ ಮಹಿಮೆಯನ್ನು ಹಾಡುತ್ತಾನೆ. ಉಳಿದವರು ಇವನಿಗೆ ಹಿಮ್ಮೇಳ ಕೊಡುತ್ತ ಕುಣಿಯುತ್ತಾರೆ. ಕುಣಿತದ ಮಧ್ಯೆ ಹರಕೆ ಹೊತ್ತ ಮೈಲಾರಲಿಂಗನ ಭಕ್ತರು ಇವರಿಗೆ ಕರಿಕಂಬಳಿ ಹಾಸಿನ ಮೇಲೆ ಎಡೆ ಇಟ್ಟು ಮಣೇವು ಹಾಕುವರು. ಕೆಲವೊಮ್ಮೆ ಗೊರವರನ್ನು ತಮ್ಮ ಮನೆಗೆ ಆಹ್ವಾನಿಸಿ ಮಣೇವು ಹಾಕಿಸುವುದೂ ಉಂಟು. ಮಣೇವು ಹಾಕುವ ಸಂಪ್ರದಾಯ ಇತ್ತೀಚೆಗೆ ಕಡಿಮೆಯಾಗುತ್ತಿದೆ. (ಎಚ್.ಎಸ್.)

**ಮಣ್ಣೆ**: ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಒಂದು ಗ್ರಾಮ. ಜನಸಂಖ್ಯೆ 1,543. 8ನೆಯ ಶತಮಾನದಲ್ಲಿ ಶ್ರೀಪುರುಷನ ಕಾಲದಲ್ಲಿ ಗಂಗರಾಜರ ರಾಜಧಾನಿಗಳಲ್ಲೊಂದಾಗಿದ್ದು, ಇದನ್ನು ಗಂಗರ ತಾಮ್ರಶಾಸನಗಳಲ್ಲಿ ಮಾನ್ಯಪುರ ಎಂದು ಕರೆದಿದೆ. ಈ ಊರಿನಲ್ಲಿ ಗಂಗರ ಶಿಲಾಶಾಸನಗಳು ದೊರೆತಿಲ್ಲವಾದರೂ ನಾಲ್ಕು ತಾಮ್ರಶಾಸನಗಳು ದೊರೆತಿದ್ದು ಇವು ಗಂಗ ಶ್ರೀಪುರುಷ ಇಲ್ಲಿ ನೆಲಸಿ ಅನೇಕ ದಾನಗಳನ್ನು ಮಾಡಿದಂತೆ ತಿಳಿಸುತ್ತವೆ. ಗಂಗರನ್ನು ಸೋಲಿಸಿದ ರಾಷ್ಟ್ರಕೂಟ ಧ್ರುವ ತನ್ನ ಮಗ ಕಂಬಯ್ಯನನ್ನು ಗಂಗವಾಡಿ ತೊಂಬತ್ತಾರು ಸಾವಿರಕ್ಕೆ ಅಧಿಪತಿಯಾಗಿ ನೇಮಿಸಿದ್ದ. ಕಂಬಯ್ಯ ಇಲ್ಲಿಂದ ಎರಡು ದತ್ತಿ ಶಾಸನಗಳನ್ನು ಹೊರಡಿಸಿದ್ದಾನೆ. ಮುಂದೆ ಹತ್ತನೆಯ ಶತಮಾನದ ಕೊನೆಯಲ್ಲಿ ಚೋಳರು ಗಂಗರನ್ನು ಸೋಲಿಸಿದಾಗ ಈ ಊರು ಅಧೋಗತಿಗಿಳಿಯಿತು. ಚೋಳರ ಶಾಸನಗಳಲ್ಲಿ ಇದನ್ನು ಮಣ್ಣೆ ಕಟಕಂ ಎಂದು ಕರೆದಿದ್ದಾರೆ. ಹೊಯ್ಸಳ ನೃಪಕಾಮನನ್ನು ಕೊಂಗಾಳ್ವ ಮಣ್ಣೆಯಲ್ಲಿ ಸೋಲಿಸಿದಂತೆ ಒಂದು ಶಾಸನದಿಂದ ತಿಳಿದುಬರುತ್ತದೆ.

ಗಂಗರ ಕಾಲದ ಪ್ರಾಚೀನ ನಿವೇಶನದ ವಿಸ್ತಾರವಾದ ಹರವು ಅಂದಿನ ಪಟ್ಟಣದ ವೈಭವವನ್ನು ಸಾರುತ್ತದೆ. ಅನೇಕ ಇಟ್ಟಿಗೆ ಕಟ್ಟಡಗಳ ಅವಶೇಷಗಳು ಸುತ್ತಮುತ್ತ ಹೊಲಗಳಲ್ಲಿ ಚೆಲ್ಲಾಡಿವೆ. ಈಗ ಇಲ್ಲಿ ಅಳಿದುಳಿದಿರುವ ಗಂಗರ ಕಾಲದಲ್ಲಿ ನಿರ್ಮಿತವಾದ ಕಪಿಲೇಶ್ವರ ದೇವಾಲಯ, ಸೂಳೆಯರ ದೇವಸ್ಥಾನ, ಸೋಮೇಶ್ವರ ದೇವಾಲಯ ಹೆಚ್ಚಾಗಿ ಇಟ್ಟಿಗೆಯಿಂದಲೇ ಕಟ್ಟಿದ್ದು, ಅವುಗಳಲ್ಲಿ ಕಲ್ಲಿನ ಕಂಬಗಳು ಜಾಲಂಧ್ರಗಳು ನಂದಿಮಂಟಪ ಮುಂತಾದವು ಗಂಗರ ಶಿಲ್ಪದ ಮಾದರಿಗಳಾಗಿವೆ. ಚಾವಣಿಗಳಲ್ಲಿರುವ ಬಳ್ಳಿಯ ಮಾದರಿಗಳು, ನಾಗನಾಗಿಣಿಯರ ಮೂರ್ತಿಗಳೂ ಅಪರೂಪ ಕೃತಿಗಳಾಗಿವೆ. (ಎಂ.ಎಚ್.)

**ಮತ್ತಾವರ**: ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಸಬೆಯಿಂದ 6ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 1,211. ಮತ್ತಾವರದಲ್ಲಿರುವ ಪಾರ್ಶ್ವನಾಥ ಬಸದಿ ಬಹು ಪುರಾತನವಾದದ್ದು. ಹನ್ನೊಂದನೆಯ ಶತಮಾನದಲ್ಲಿ ಹೊಯ್ಸಳ ದೊರೆ ವಿನಯಾದಿತ್ಯ ಇಲ್ಲಿಗೆ ಭೇಟಿಕೊಟ್ಟಿದ್ದನೆಂದು ಈ ಬಸದಿಯಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ಬಸದಿಯ ಉತ್ತರಕ್ಕಿರುವ ಜೀರ್ಣವಾಗಿರುವ ಶಿವದೇವಾಲಯದಲ್ಲಿ ಭೈರವನ ವಿಗ್ರಹವಿದೆ. ಹೊಯ್ಸಳರ ಕಾಲದಲ್ಲಿ ಈ ಊರು ಪ್ರಸಿದ್ಧವಾಗಿದ್ದಂತೆ ಕಂಡುಬರುತ್ತದೆ. ಹೊಯ್ಸಳ ವಿನಯಾದಿತ್ಯ ಮತ್ತಾವರದ ಬಳಿ ವ್ಯವಸಾಯಕ್ಕಾಗಿ ಒಂದು ಕಾಲುವೆ ತೋಡಿಸಿದ್ದನೆಂದು ಸಹ ತಿಳಿದುಬರುತ್ತದೆ.

ಊರಿನ ನೈಋತ್ಯ ಭಾಗದಲ್ಲಿ ಅನೇಕ ಬೃಹತ್ ಶಿಲಾ ಸಮಾಧಿಗಳು ಕಂಡುಬರುತ್ತವೆ. ಅವುಗಳಲ್ಲಿ ಪ್ರತಿಯೊಂದೂ 10 ಅಡಿ ಉದ್ದ 9ಅಡಿ ಅಗಲವಿವೆ. ಈ ಸಮಾಧಿಗಳನ್ನು ನಿರ್ಮಿಸಲು ಬಳಕೆಯಾಗಿರುವ ಕಲ್ಲುಚಪ್ಪಡಿಗಳು 9ಅಡಿ ಉದ್ದ 8ಅಡಿ ಅಗಲ ಮತ್ತು 10 ಇಂಚು ದಪ್ಪವಿವೆ. ಬಹುತೇಕ ಶಿಲಾಸಮಾಧಿಗಳು ಈಗ ಹಾಳಾಗಿವೆ. ಈ ಸಮಾಧಿಗಳಲ್ಲಿ ಕಬ್ಬಿಣದ ಕಟಗಳು ಮತ್ತು ಮಣ್ಣಿನ ಮಡಕೆ ಚೂರುಗಳು ದೊರೆತಿದ್ದುವು.(ಡಿ.ಎಸ್.ಜಿ.)

**ಮತ್ತೋಡು ನಾಯಕರು**: ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಮತ್ತೋಡಿನಿಂದ ಆಳುತ್ತಿದ್ದ ಪಾಳೆಯಗಾರರು. ಮತ್ತೋಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು 1604–1779ರವರೆಗೆ ಸು. 175 ವರ್ಷಗಳ ಕಾಲ ಆಳಿದರು. ಮತ್ತೋಡನ್ನು ಹಿಂದೆ ಮತ್ತಿನಡು, ಮತ್ತಿನಾಡು, ಮತ್ತನಡು, ಮತನಡು, ಮತ್ತೇಡು ಎಂದೂ ಕರೆಯಲಾಗಿದೆ. ಈ ಮನೆತನದ ಚರಿತ್ರೆಯನ್ನು ಹೇಳುವ ಆಕರಗಳು ಅತ್ಯಲ್ಪ ಪ್ರಮಾಣದಲ್ಲಿ ದೊರೆತಿವೆ. ಅವುಗಳಿಂದ ತಿಳಿದುಬರುವ ಈ ನಾಯಕ ಮನೆತನದ ಚರಿತ್ರೆಯನ್ನು ಹೀಗೆ ಸಂಗ್ರಹಿಸಬಹುದು:

ಮತ್ತೋಡು ಪಾಳೆಯಪಟ್ಟನ್ನು ಸ್ಥಾಪಿಸಿದವನು ಬೇಡ ಜನಾಂಗದ ಗಿರಿಯಪ್ಪ ನಾಯಕ. ಇವನು ತಿಮ್ಮಣ್ಣ ನಾಯಕ ಮತ್ತು ಲಕ್ಕವ್ವ ಎಂಬ ದಂಪತಿಗಳ ಮಗ. ಈತ ಪರಾಕ್ರಮಿ ಎಂದು ಹೆಸರಾಗಿದ್ದ. ಈತನ ಬಗ್ಗೆ ಬೂದಿಹಾಳು (ಶ್ರೀರಾಂಪುರ) ನಾಯಕನಿಂದ ತಿಳಿದುಕೊಂಡ ಪೆನುಗೊಂಡೆಯ ಅರಸ ಒಂದನೆಯ ವೆಂಕಟಪತಿರಾಯ (1586–1614) ಇವನನ್ನು ತನ್ನಲ್ಲಿಗೆ ಕರೆಸಿಕೊಂಡು ಸತ್ಕರಿಸಿದ. ಮದವೇರಿದ ಆನೆಯೊಂದನ್ನು ನಿಯಂತ್ರಿಸಿದ ಇವನ ಪರಾಕ್ರಮವನ್ನು ಮೆಚ್ಚಿದ ದೊರೆ ಇವನಿಗೆ ಲಕ್ಕವ್ವನ ಹಳ್ಳಿ ಮತ್ತು ಅದರ ಸುತ್ತಲ ಪ್ರದೇಶವನ್ನು ಬಳುವಳಿಯಾಗಿ ನೀಡಿ ಕಳುಹಿಸಿಕೊಟ್ಟ. ಅಲ್ಲಿಂದ ಈ ಮನೆತನದ ಪಾಳೆಯಪಟ್ಟು ಪ್ರಾರಂಭವಾಯಿತು. ಇದು ನಡೆದದ್ದು ಸು. 1604ರಲ್ಲಿ.

ಗಿರಿಯಪ್ಪನಾಯಕನ ಅನಂತರ ಇವನ ಮಗ ಒಂದನೆಯ ದೊಡ್ಡಳ(ಣ್ಣ) ನಾಯಕ, ಆಮೇಲೆ ಇವನ ಮಗ ಒಂದನೆಯ ಹಾಲಪ್ಪನಾಯಕ, ತರುವಾಯ ಇವನ ಮಗ ಎರಡನೆಯ ದೊಡ್ಡಳ (ಣ್ಣ) ನಾಯಕ ಆಳಿದರು. ಎರಡನೆಯ ದೊಡ್ಡಳ ನಾಯಕನ ಮಕ್ಕಳು ಚಿನ್ನದ ಗಿರಿಯಪ್ಪನಾಯಕ ಮತ್ತು ಒಂದನೆಯ ಸಂಗಪ್ಪನಾಯಕ. ದೊಡ್ಡಳ ನಾಯಕನ ಅನಂತರ ಒಂದನೆಯ ಸಂಗಪ್ಪ ನಾಯಕ ದೊರೆಯಾದ. ಇವನು ಒಮ್ಮೆ ಶ್ರೀರಂಗಪಟ್ಟಣದ ಒಡೆಯರ ಆಸ್ಥಾನಕ್ಕೆ ಹೋಗಿದ್ದಾಗ, ಅಲ್ಲಿ ಹುಚ್ಚೆದ್ದ ಒಂದು ಕುದುರೆಯನ್ನು ಅಂಕೆಗೆ ತಂದು, ಅದನ್ನು ಏರಿ, ಸವಾರಿ ಮಾಡಿದನೆಂದೂ ಇವನ ಸಾಹಸಕ್ಕೆ ಅಸೂಯೆ ಪಟ್ಟ ಕೆಲವರು ಇವನತ್ತ ನಿಂಬೆಹಣ್ಣು ಮುಂತಾದುವನ್ನು ಎಸೆದರೆಂದೂ ಕುದುರೆಯ ಮೇಲೆ ಕುಳಿತುಕೊಂಡೇ, ಕತ್ತಿಯನ್ನು ಝಳಪಿಸುತ್ತಲೇ ಅವನ್ನೆಲ್ಲಾ ಚಾತುರ್ಯದಿಂದ ಈತ ತುಂಡುತುಂಡು ಮಾಡಿದನೆಂದೂ ಪ್ರತೀತಿ.

ಇವನ ಅನಂತರ ಇವನ ಮಗ ಎರಡನೆಯ ಹಾಲಪ್ಪನಾಯಕ (ದೊಡ್ಡಹಾಲಪ್ಪನಾಯಕ) ರಾಜನಾದ. ಮತ್ತೋಡಿನ ಇತಿಹಾಸದ ದೃಷ್ಟಿಯಿಂದ ಇವನ ಕಾಲ ಉನ್ನತಿಯ ಕಾಲ. ಇವನು ಒಳ್ಳೆಯ ಆಡಳಿತಗಾರ, ವಿದ್ಯಾಪ್ರೇಮಿ, ಪ್ರಜಾಹಿತ ಚಿಂತಕ, ಧರ್ಮಾಭಿಮಾನಿ ಎಂದು ಪ್ರಸಿದ್ಧನಾಗಿದ್ದ. ಬೇಡರಾಗಿದ್ದ ಈ ಮನೆತನದವರು ಲಿಂಗದೀಕ್ಷೆ ಪಡೆದು ವೀರಶೈವರಾದದ್ದು ಇವನ ಕಾಲದಲ್ಲಿಯೇ. ಇವನು ರಾಜಧಾನಿ ಮತ್ತೋಡನ್ನು ಕೋಟೆಕೊತ್ತಲಗಳಿಂದ ಬಲಿಷ್ಠಗೊಳಿಸಿದ. ಇವನಿಗೆ ಮೂರನೆಯ ದೊಡ್ಡಳ(ಣ್ಣ) ನಾಯಕ (ಮೂರನೆಯ ಹಾಲಪ್ಪನಾಯಕ), ಸಿದ್ಧಪ್ಪನಾಯಕ (ಸಿದ್ಧರಾಮಪ್ಪನಾಯಕ) ಮತ್ತು ಎರಡನೆಯ ಸಂಗಪ್ಪನಾಯಕ ಎಂಬ ಮೂವರು ಮಕ್ಕಳಿದ್ದರು. ಇವರಲ್ಲಿ ಎರಡನೆಯವನಾದ ಸಿದ್ಧಪ್ಪನಾಯಕನಿಗೆ ಪಟ್ಟಕಟ್ಟಿದಾಗ ಅಸಮಾಧಾನಗೊಂಡ ಮೂರನೆಯ ದೊಡ್ಡಳ(ಣ್ಣ) ನಾಯಕ ಚಿತ್ರದುರ್ಗದ ನಾಯಕರ ನೆರವನ್ನು ಯಾಚಿಸಿದ. ಆಗ ಅವರು ಮತ್ತೋಡಿನ ಮೇಲೆ ದಾಳಿಮಾಡಿ, ಮೂರನೆಯ ದೊಡ್ಡಳ(ಣ್ಣ) ನಾಯಕನನ್ನು ಪಟ್ಟಕ್ಕೆ ಕೂರಿಸಿದರು. ಸಿದ್ಧಪ್ಪನಾಯಕನನ್ನು ಸೆರೆಹಿಡಿದು ತಂದು ದುರ್ಗದ ಕಾರಾಗೃಹದಲ್ಲಿಟ್ಟರು.

ಸಿದ್ಧಪ್ಪನಾಯಕನ ಸೌಂದರ್ಯ ಹಾಗೂ ವ್ಯಕ್ತಿತ್ವಕ್ಕೆ ದುರ್ಗದ ದೊರೆ ಹಿರೇ ಮದಕರಿ ನಾಯಕನ (1721–48) ಮಗಳು ದೇವವ್ವ ಆಕರ್ಷಿತಳಾಗಿ ವಿವಾಹವಾಗಬಯಸಿದಾಗ ದುರ್ಗದ ದೊರೆ ಮಗಳಿಗೆ ಲಿಂಗಧಾರಣೆ ಮಾಡಿಸಿ ವಿವಾಹ ಮಾಡಿಕೊಟ್ಟ. ಅನಂತರ ಮೂರನೆಯ ದೊಡ್ಡಳ(ಣ್ಣ) ನಾಯಕನನ್ನು ಪಟ್ಟದಿಂದ ಇಳಿಸಿ, ಸಿದ್ಧಪ್ಪನಾಯಕನಿಗೆ ಪಟ್ಟ ಕಟ್ಟಲಾಯಿತು.

ಸಿದ್ಧಪ್ಪ ನಾಯಕನ ಅನಂತರ ಇವನ ಹಿರಿಯ ಮಗ ನಾಲ್ಕನೆಯ ಹಾಲಪ್ಪನಾಯಕ ಪಟ್ಟಕ್ಕೆ ಬಂದ. ಇವನೂ ದುರ್ಗದ ದೊರೆಗಳ ಮನೆತನದ ಹೆಣ್ಣನ್ನು ವಿವಾಹವಾದ. ಆದರೆ ಕ್ರಮೇಣ ಚಿತ್ರದುರ್ಗದ ದೊರೆ ಕೊನೆಯ ಮದಕರಿನಾಯಕನೊಂದಿಗೆ ಇವನ ಸಂಬಂಧ ಶಿಥಿಲಗೊಂಡಿತು. ಸೇಡಿನಿಂದ ದುರ್ಗದ ವೈರಿಯಾಗಿದ್ದ ಹೈದರ್ ಅಲಿಯ ಜೊತೆಗೆ ಸೇರಿಕೊಂಡ ಘರ್ಷಣೆಯೊಂದರ ಸಂದರ್ಭದಲ್ಲಿ ದುರ್ಗದ ಕಡೆಯವರಿಗೆ ಸೆರೆಸಿಕ್ಕ ಇವನನ್ನು ದುರ್ಗದಲ್ಲಿ ಬಂಧಿಸಿಡಲಾಯಿತು. 1779ರಲ್ಲಿ ದುರ್ಗ ಹೈದರ್ ಅಲಿಯ ವಶಕ್ಕೆ ಬಂದಾಗ ಇವನನ್ನು ಬಿಡುಗಡೆ ಮಾಡಲಾಯಿತಾದರೂ ಮತ್ತೋಡಿನ ಪಟ್ಟ ಇವನಿಗೆ ದೊರೆಯಲಿಲ್ಲ. ಅಲ್ಲಿಂದ ಇವನು ಹಾಗಲವಾಡಿಗೆ ಬಂದು, ಕೆಲವು ವರ್ಷ ಅಲ್ಲಿದ್ದು, ಆಮೇಲೆ ಮತ್ತೋಡಿಗೆ ಮರಳಿ ಊರ ಹೊರಗೆ ಒಂದು ಗುಡಿಸಲಿನಲ್ಲಿ ತನ್ನ ಹೆಂಡತಿಯೊಂದಿಗೆ ವಾಸವಾಗಿದ್ದು, ವೃದ್ಧಾಪ್ಯದ ತನ್ನ ಕೊನೆಯ ದಿನಗಳನ್ನು ಕಳೆದನೆಂದು ತಿಳಿದುಬರುತ್ತದೆ.

ಮತ್ತೋಡಿನ ನಾಯಕರು ಧಾರ್ಮಿಕವಾಗಿ ಶ್ರೀಶೈಲದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳಿಗೂ ಚಿತ್ರದುರ್ಗದ ಹೆಸರಾಂತ ಮುರಿಗೆ ಸ್ವಾಮಿಗಳಿಗೂ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಮತ್ತೋಡಲ್ಲಿ ಇವರು ಕಟ್ಟಿಸಿದ್ದ ಕೋಟೆಯ ಗೋಡೆ, ಹೆಬ್ಬಾಗಿಲು ಮುಂತಾದ ಅವಶೇಷಗಳು, ದೊಡ್ಡಕೆರೆ ಈಗಲೂ ಇವೆ. ಮುರಿಗೆ ಸ್ವಾಮಿಗಳಿಗಾಗಿ ಇವರು ಕಟ್ಟಿಸಿಕೊಟ್ಟಿದ್ದ ಮಠ ಈಗ ಪೂರ್ಣವಾಗಿ ನಶಿಸಿಹೋಗಿದೆ. ಒಂದು ಕಾಲಕ್ಕೆ ಮತ್ತೋಡು ಗಾಜಿನ ಬಳೆಗಳ ತಯಾರಿಕೆಗೆ ತುಂಬ ಹೆಸರಾಗಿತ್ತು. ಆಕರ್ಷಕ ಬಳೆಗಳ ಈ ಕೈಗಾರಿಕೆಗೆ ಸುಭದ್ರ ನೆಲೆಯನ್ನು ಮತ್ತೋಡು ನಾಯಕರು ಕಲ್ಪಿಸಿಕೊಟ್ಟಿದ್ದರು.

**ಮತ್ತೋಡು ನಾಯಕರ ವಂಶಾವಳಿ :**

ತಿಮ್ಮಳ(ಣ್ಣ)ನಾಯಕ (ಪತ್ನಿ: ಲಕ್ಕವ್ವ)
- ಗಿರಿಯಪ್ಪನಾಯಕ
  - 1ನೆಯ ದೊಡ್ಡಳ(ಣ್ಣ)ನಾಯಕ
    - 1ನೆಯ ಹಾಲಪ್ಪನಾಯಕ
      - 2ನೆಯ ದೊಡ್ಡಳ(ಣ್ಣ)ನಾಯಕ
        - ಚಿನ್ನದ ಗಿರಿಯಪ್ಪನಾಯಕ
        - 1ನೆಯ ಸಂಗಪ್ಪನಾಯಕ
          - 2ನೆಯ ಹಾಲಪ್ಪ ನಾಯಕ
            - 3ನೆಯ ದೊಡಳ(ಣ್ಣ)ನಾಯಕ (3ನೆಯ ಹಾಲಪ್ಪನಾಯಕ)
            - ಸಿದ್ಧಪ್ಪನಾಯಕ (ಸಿದ್ಧರಾಮಪ್ಪ ನಾಯಕ)
              - 4ನೆಯ ಹಾಲಪ್ಪನಾಯಕ
              - 3ನೆಯ ಸಂಗಪ್ಪನಾಯಕ
              - 4ನೆಯದೊಡ್ಡಳ(ಣ್ಣ)ನಾಯಕ
            - 2ನೆಯ ಸಂಗಪ್ಪನಾಯಕ

(ಬಿ.ಆರ್‌ಎಜಿ.)

**ಮದಗದ ಕೆರೆ:** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿರುವ ಐತಿಹಾಸಿಕ ಮಹತ್ವ ಪಡೆದ ಒಂದು ಬೃಹತ್ ಕೆರೆ. ಇದು ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳ ಸರಹದ್ದಿನಲ್ಲಿದೆ. ಇದನ್ನು ಮಾಸುರು–ಮದಗದಕೆರೆ ಎಂದು ಕರೆಯುತ್ತಾರೆ. ಮಾಸೂರು ಎಂಬ ಬೇಚಿರಾಕ್ ಗ್ರಾಮ ಶಿಕಾರಿಪುರದಿಂದ 14 ಕಿಮೀ ದೂರದಲ್ಲಿದೆ. ಈ ಕೆರೆಯ ಬಳಿ ಒಂದು ಪಾಳುಬಿದ್ದ ಕೋಟೆ ಇದೆ. ಈ ಕೆರೆಯ ಐತಿಹಾಸಿಕತೆ ಪುರಾತನವಾದುದು. ಇದರ ಬಗ್ಗೆ ಜನಪದ ಸಾಹಿತ್ಯದಲ್ಲೂ ಪ್ರಸ್ತಾಪಗಳು ಕಂಡುಬರುತ್ತವೆ. 'ಮಾಯದಂಥ ಮಳೆ ಬಂತಣ್ಣ ಮದಗದ ಕೆರೆಗೆ' ಎಂಬ ಜನಪದಗೀತೆ ಪ್ರಸಿದ್ಧವಾಗಿದೆ. ವಿಜಯನಗರ ಕಾಲದಲ್ಲಿ ಈ ಕೆರೆ ನಿರ್ಮಾಣಗೊಂಡಿತೆಂದು ಪ್ರತೀತಿ. ಇದನ್ನು ಚೊರ್ಡಿ ಅಥವಾ ಕುಮುದ್ವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಹಿಂದಿನ ಕೆರೆಗಳ ಮಾದರಿಯಲ್ಲೇ ಇದರ ಕೋಡಿಗಳನ್ನು ರಚಿಸಲಾಗಿದೆ. ಈ ವಿಸ್ತಾರವಾದ ಕೆರೆ ಗುಡ್ಡಬೆಟ್ಟಗಳ ಕಣಿವೆಯಲ್ಲಿ ಹರಡಿಕೊಂಡಿದೆ. ಈ ಕೆರೆಯ ನೀರು ಹೆಚ್ಚಾಗಿ ಹಾವೇರಿ ಜಿಲ್ಲೆಯ ಜಮೀನುಗಳಿಗೆ ಹರಿಯುತ್ತದೆ.

ಇಲ್ಲಿ ದೊರೆತಿರುವ ಪರ್ಷಿಯನ್ ಮತ್ತು ಅರಾಬಿಕ್ ಶಾಸನದಲ್ಲಿ ಈ ಕೆರೆಯನ್ನು ಫರೀದ್ ಎಂಬುವನು ಕಟ್ಟಿಸಿದನೆಂದು ತಿಳಿಸುತ್ತದೆ. ಇವನು ಬಿಜಾಪುರದ ಆದಿಲ್ ಷಾನ ಅಧಿಕಾರಿಯಾಗಿದ್ದ. ಇನ್ನೊಂದು ಅರಾಬಿಕ್ ಶಾಸನ ಈ ಕೆರೆಯನ್ನು ಸವಣೂರಿನ ನವಾಬನು ದುರಸ್ತು ಮಾಡಿದ ವಿಷಯವನ್ನು ದಾಖಲಿಸಿದೆ. 1889–90ರಲ್ಲಿ ಈ ಕೆರೆಯ ತೂಬಿನಲ್ಲಿ ಬಿರುಕು ಕಾಣಿಸಿಕೊಂಡಾಗ ಅದನ್ನು ದುರಸ್ತುಗೊಳಿಸಿದ ಸಂಗತಿ ತಿಳಿದುಬರುತ್ತದೆ. ಕರ್ನಾಟಕದ ದೊಡ್ಡ ಕೆರೆಗಳಲ್ಲೊಂದಾದ ಈ ಕೆರೆ ಪ್ರಾಚೀನರ ಎಂಜಿನಿಯರಿಂಗ್ ಕೌಶಲಕ್ಕೆ ಸಾಕ್ಷಿಯಾಗಿದೆ. *

**ಮದುವೆ ಹಾಡುಗಳು**: ಮದುವೆ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಹೇಳುವ ಹಾಡುಗಳು. ಈ ಹಾಡುಗಳನ್ನು ಸೋಬಾನೆ ಪದಗಳೆಂದೂ ಕರೆಯುತ್ತಾರೆ. ಹಾಡುವವರಿಗೆ ಸೋಬಾನದವರು ಎಂದು ಹೆಸರು. ಸೋಬಾನದ ಪದಗಳು ಹೆಚ್ಚಾಗಿ ಹೆಂಗಸರ ಪದಗಳು. ಎಲ್ಲೊ ಒಬ್ಬಿಬ್ಬರು

ಗಂಡಸರೂ ಖುಷಿಗಾಗಿ ಹಾಡು ಕಲಿತು ಹೆಂಗಸರ ಜೊತೆಯಾಗಿ ಹಾಡುವುದುಂಟು.

ಹಿಂದೆ ಮದುವೆ ಹಲವು ದಿನಗಳ ಕಾಲ ನಡೆಯುತ್ತಿತ್ತು. ಮದುವೆಯ ಎಲ್ಲ ಕಾರ್ಯಗಳಲ್ಲಿಯೂ ಊರಿಗೆ ಊರೇ ಭಾಗವಹಿಸುತ್ತಿತ್ತು. ಕೆಲಸ ಮಾಡುವಾಗ ಮೂಕರಂತೆ ಮಾಡಿದರೆ ಮನಸ್ಸಿಗೂ ದೇಹಕ್ಕೂ ಹೆಚ್ಚು ಶ್ರಮ. ಅದರ ಬದಲು ಮಾಡುವ ಕೆಲಸಗಳನ್ನು ಹಾಡಿಕೊಂಡು ಮಾಡಿದರೆ ಭಾರಿ ಕೆಲಸವಾದರೂ ಹಗುರವಾಗಿಬಿಡುತ್ತದೆ. ಅಲ್ಲದೆ, ಇದರಿಂದ ಇನ್ನೊಂದು ಉದ್ದೇಶವೂ ಸಾಧಿತವಾಗುತ್ತದೆ. ಅಪರಿಚಿತರಾದ ಗಂಡು ಹೆಣ್ಣುಗಳು ನಾಲ್ಕಾರು ದಿನಗಳ ಶಾಸ್ತ್ರದಲ್ಲಿ ಭಾಗವಹಿಸುವಾಗ ಅವರಿಗೆ ತಮ್ಮ ತಮ್ಮ ಪರಿಚಯವನ್ನು ಎಷ್ಟು ಸಾಧ್ಯವೋ ಅಷ್ಟು ಮಾಡಿಕೊಳ್ಳುವುದರ ಜೊತೆಗೆ ಹಾಡುಗಳಲ್ಲಿ ಬರುವ ಬುದ್ಧಿವಾದದ ಹಾಗೂ ತಿಳುವಳಿಕೆಯ ಮಾತುಗಳು ಸಂಸಾರ ಸುಗಮವಾಗುವುದಕ್ಕೆ ಎಡೆಮಾಡಿಕೊಡುತ್ತವೆ. ಶಾಸ್ತ್ರದ ನೀರು ತರುವಾಗ, ಶಾಸ್ತ್ರದ ಬತ್ತ ಕುಟ್ಟುವಾಗ, ವೀಳೆಯಶಾಸ್ತ್ರ ಮಾಡುವಾಗ, ಹರಿಶಿನ ಎಣ್ಣೆ ಹಚ್ಚುವಾಗ, ಗಂಡು ಹೆಣ್ಣಿನ ಮನೆಗೆ ನೆರೆ ಹೊರಡುವಾಗ, ಹೆಣ್ಣಿನೂರಿನಲ್ಲಿ ಅವರನ್ನು ಎದುರುಗೊಳ್ಳುವಾಗ, ಆರತಿ ಎತ್ತುವಾಗ. ಬೂವ ಇಕ್ಕುವಾಗ, ಗಂಧದ ಹುಡಿ ಎಸೆದಾಡುವಾಗ, ಬಾಗಿಲು ತಡೆಯುವಾಗ, ಹೆಣ್ಣೊಪ್ಪಿಸಿ ಕೊಡುವಾಗ, ಓಕಳಿ ಇಟ್ಟಾಡುವಾಗ, ಸೊಸಿಮರಕ್ಕೆ ನೀರುಹೊಯ್ಯುವಾಗ, ಹೆಣ್ಣು ಕರೆಯಲು ಬೀಗರು ಬಂದಾಗ–ಹೀಗೆ ಹತ್ತೆಂಟು ಸಂದರ್ಭಗಳಲ್ಲಿ ಶಾಸ್ತ್ರಕ್ರಿಯೆ ಇಂಥ ಹಾಡಿನ ಮೂಲಕ ಸಾಗುತ್ತದೆ.

ಸೋಬಾನೆ ಹಾಡುಗಳ ಧಾಟಿ ಒಂದೇ ರೀತಿ ಇರುವುದಿಲ್ಲ. ಶಾಸ್ತ್ರದಲ್ಲಿ ನಡೆಯುವ ಕ್ರಿಯೆಗೆ ತಕ್ಕಂತೆ ಧಾಟಿಗಳೂ ಬದಲಾವಣೆಯಾಗುತ್ತವೆ. ಇದರಲ್ಲಿ ಸುಮಾರು ಹದಿನೆಂಟು ಧಾಟಿಗಳನ್ನು ಗುರುತಿಸಬಹುದಾಗಿದೆ. ಮದುವೆ ಪದಗಳನ್ನು ಇಬ್ಬರು ಹಿಮ್ಮೇಳ ಹೇಳಿದರೆ ಮತ್ತಿಬ್ಬರು ಮುಮ್ಮೇಳ ಹಾಡುತ್ತಾರೆ.

ಎಲ್ಲ ಜನಪದ ಹಾಡುಗಳಂತೆ ಈ ಮದುವೆ ಹಾಡುಗಳನ್ನು ಮೊದಲು ಹಾಡಿದವರು ಯಾರು, ಯಾವಾಗ ಹಾಡಿದರು ಎಂಬ ಪ್ರಶ್ನೆಗಳಿಗೆ ಉತ್ತರ ದೊರೆಯುವುದಿಲ್ಲ. ಸೋಬಾನದವರನ್ನು ಕೇಳಿದರೆ ನಾರಾಯಣ ಬಲ್ಲ ಎಂದು ಹೇಳಿ, ಸ್ವಾಮಿ ಈಶ್ವರನ ಮದುವೆಯ ಸಮಯದಲ್ಲಿ ಈ ಸೋಬಾನಗಳು ಹುಟ್ಟಿ ಬೆಳೆದವು ಎಂಬುದಾಗಿ ನುಡಿದು, ದೇವರೊಡನೆ ಇವಕ್ಕೂ ಅನಾದಿಯ ಮುಸುಕು ಹೊದಿಸುತ್ತಾರೆ. ಗಿರಿಜಮ್ಮ ಇಚ್ಚಂಗಿಮಠ ಅವರ ಮದುವೆ ಹಾಡುಗಳು, ಎಂ.ವೆಂಕಟರಾವ್ ಅವರ ಶೋಭಾನೆ ಹಾಡುಗಳು, ಸ್ವಾಮಿಗೌಡ ಅವರ ಸೋಬಾನೆ ಪದಗಳು, ಎಚ್.ಎಲ್. ನಾಗೇಗೌಡರ ಸೋಬಾನೆ ಚಿಕ್ಕಮ್ಮನ ಪದಗಳು ಮೊದಲಾದ ಸಂಕಲನಗಳು ಇಂಥ ಹಾಡುಗಳನ್ನು ಕುರಿತು ಹೊರಬಂದಿವೆ. (ಎಚ್.ಎಲ್.ಎನ್.)

**ಮದ್ದೂರು**: ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕನ್ನು ಪೂರ್ವಕ್ಕೆ ಚನ್ನಪಟ್ಟಣ, ಪಶ್ಚಿಮಕ್ಕೆ ಮಂಡ್ಯ, ದಕ್ಷಿಣಕ್ಕೆ ಮಳವಳ್ಳಿ, ಉತ್ತರಕ್ಕೆ ಕುಣಿಗಲು ಹಾಗೂ ವಾಯವ್ಯಕ್ಕೆ ನಾಗಮಂಗಲ ತಾಲ್ಲೂಕುಗಳು ಸುತ್ತುವರಿದಿವೆ. ತಾಲ್ಲೂಕಿನಲ್ಲಿ 161 ಗ್ರಾಮಗಳಿವೆ. ಮದ್ದೂರು, ಕೊಪ್ಪ, ಆತಕೂರು, ಚಿಕ್ಕರಸಿನಕೆರೆ–ಇವು ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 618ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,90,783. ಇದರಲ್ಲಿ 2,64,262 ಮಂದಿ ಗ್ರಾಮಸ್ಥರು, 26,521 ಮಂದಿ ಪಟ್ಟಣಿಗರು.

ತಾಲ್ಲೂಕಿನ ಹೆಚ್ಚು ಭೂಮಿ ಕೆಂಪುಮಣ್ಣಿನಿಂದ ಕೂಡಿದ್ದು, ಮದ್ದೂರಿನ ಸಮೀಪದಿಂದ ಮಳವಳ್ಳಿ ಮತ್ತು ಹಲಗೂರಿನವರೆಗೆ ಹಬ್ಬಿರುವ ಒಂದು ಕಿರುವಿಸ್ತಾರದ ಮ್ಯಾಗ್ನಟೈಟ್ ಶಿಲಾಪಟ್ಟಿಯಲ್ಲಿ ಕಬ್ಬಿಣದ ಅಂಶ ಹೆಚ್ಚಾಗಿರುವುದು ಕಂಡುಬಂದಿದೆ. ನಾಗಮಂಗಲ ತಾಲ್ಲೂಕಿನ ಪೂರ್ವಭಾಗದಿಂದ ಹರಿದು ಬರುವ ಶಿಂಷಾನದಿ ಮದ್ದೂರು ತಾಲ್ಲೂಕಿನ ಮಧ್ಯಭಾಗದಲ್ಲಿ ಉತ್ತರ–ದಕ್ಷಿಣಕ್ಕೆ ಹರಿದು ಮಳವಳ್ಳಿ ತಾಲ್ಲೂಕನ್ನು ಪ್ರವೇಶಿಸಿ ಅನಂತರ ಕಾವೇರಿ ನದಿಯನ್ನು ಸೇರುತ್ತದೆ.

ತಾಲ್ಲೂಕಿನ ಸರಾಸರಿ ಮಳೆ 670 ಮಿಮೀ. ತಾಲ್ಲೂಕಿನ ಬಹುಭಾಗದಲ್ಲಿ ಕೆರೆ ಹಾಗೂ ನಾಲೆಯ ನೀರಾವರಿ ಸೌಕರ್ಯವಿದೆ. ಕೊಪ್ಪದ

ಸತ್ಯಾಗ್ರಹಸೌಧ, ಶಿವಪುರ

ಹತ್ತಿರ ನಿರ್ಮಿತವಾಗಿರುವ ಕೊಪ್ಪಕೆರೆಯ ದಕ್ಷಿಣ ಪಾರ್ಶ್ವದ ನಾಲೆ 8ಕಿಮೀ ಉದ್ದವಿದೆ. ಇದು ಚಿಕ್ಕನಹಳ್ಳಿ ಹತ್ತಿರದ ಸು. 400 ಎಕರೆಗೆ ನೀರುಣಿಸುತ್ತದೆ. ತಗ್ಗಳ್ಳಿಯ ಹತ್ತಿರ ಶಿಂಷಾನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟು 825 ಅಡಿ ಉದ್ದವಿದ್ದು ಇದರಿಂದ ಹೊರಡುವ ಎರಡು ನಾಲೆಗಳು–ಶಿಂಷಾನದಿ ಬಲದಂಡೆನಾಲೆ (36ಕಿಮೀ) ಮತ್ತು ಶಿಂಷಾನದಿ ಎಡದಂಡೆನಾಲೆ (19ಕಿಮೀ) ಆ ಸುತ್ತಮುತ್ತಣ ಪ್ರದೇಶಕ್ಕೆ ನೀರೊದಗಿಸುತ್ತವೆ. ಮದ್ದೂರಿಗೆ ಸಮೀಪದಲ್ಲಿ ಮದ್ದೂರು ಕೆರೆ ಎಂಬ ದೊಡ್ಡ ಕೆರೆಯಿದೆ. ಮದ್ದೂರು ಅಣೆಕಟ್ಟಿನ ಅಭಿವೃದ್ಧಿಯಿಂದ 900 ಎಕರೆ ಪ್ರದೇಶಕ್ಕೆ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಮದ್ದೂರು ವಿಭಾಗದ ವಿಶ್ವೇಶ್ವರಯ್ಯ ನಾಲೆಯಿಂದ ಸು. 23,798 ಎಕರೆ ಪ್ರದೇಶಕ್ಕೆ ನೀರು ಸರಬರಾಜಾಗುತ್ತದೆ.

ತಾಲ್ಲೂಕಿನಲ್ಲಿ ಸಾಗುವಳಿಯಾಗುತ್ತಿರುವ ಒಟ್ಟು ಭೂಮಿ 94,105 ಎಕರೆ. ನಾಲೆಗಳಿಂದ 27,838 ಎಕರೆ, ಕೆರೆಗಳಿಂದ 9,600 ಎಕರೆ, ಬಾವಿಗಳಿಂದ 200 ಎಕರೆ ಪ್ರದೇಶಕ್ಕೆ ನೀರೊದಗುತ್ತದೆ. ಬತ್ತ, ಕಬ್ಬು, ರಾಗಿ, ಜೋಳ, ಮುಖ್ಯ ಬೆಳೆಗಳು. ಸೇಂಗಾ, ಹುರುಳಿ, ತೊಗರಿ, ಕಡಲೆ, ಮೆಣಸಿನಕಾಯಿ ಇತರ ಬೆಳೆಗಳು. ರೇಷ್ಮೆ ವ್ಯವಸಾಯ ಇಲ್ಲಿನ ಜನರ ಮುಖ್ಯ ಉಪಕಸುಬು. ತಾಲ್ಲೂಕಿನಲ್ಲಿ ಒಂದು ಸರ್ಕಾರಿ ರೇಷ್ಮೆಕೋಠಿ ಹಾಗೂ ಹಿಪ್ಪುನೇರಳೆ ಸಸಿ ಪೋಷಣೆ ಮತ್ತು ತರಬೇತಿ ಕೇಂದ್ರ ಇವೆ. ಉತ್ತಮ ದರ್ಜೆಯ ರೇಷ್ಮೆ ಮೊಟ್ಟೆ ಹಾಗೂ ಹಿಪ್ಪುನೇರಳೆ ಸಸಿ ಸರಬರಾಜು ಮಾಡುವುದು ಈ ಸಂಸ್ಥೆಗಳ ಮುಖ್ಯ ಉದ್ದೇಶ. ತಾಲ್ಲೂಕಿನಲ್ಲಿ ಮೀನು ಸಾಕಣೆಯ 9 ದೊಡ್ಡ ಕೆರೆಗಳೂ 100 ಚಿಕ್ಕ ಕೆರೆಗಳೂ ಇವೆ. ಕೈಗಾರಿಕೆಗೆ ಅನುಕೂಲವಾಗುವಂತೆ 7ಸಣ್ಣ ಕೈಗಾರಿಕಾ ಸಂಸ್ಥೆಗಳಿವೆ. ಎಚ್.ಕೆ. ವೀರಣ್ಣಗೌಡ ಪ್ರಥಮದರ್ಜೆ ಕಾಲೇಜು ಸೇರಿದಂತೆ ಅನೇಕ ಶಾಲೆ ಕಾಲೇಜುಗಳಿವೆ.

ಶಿವಾರಗುಡ್ಡ, ಸೋಮನಹಳ್ಳಿ, ಶಿವಪುರ, ನಿಡಘಟ್ಟ, ಕಾಳಮುದ್ದನ ದೊಡ್ಡಿ ತಾಲ್ಲೂಕಿನ ಮುಖ್ಯ ಸ್ಥಳಗಳು.ಮದ್ದೂರಿಗೆ 12ಕಿಮೀ ದೂರದಲ್ಲಿರುವ ಶಿವಾರಗುಡ್ಡ ಒಂದು ಪ್ರೇಕ್ಷಣೀಯ ಸ್ಥಳವಾಗಿದ್ದು ಇದನ್ನು

ಶಿವಾರಗುಡ್ಡ ವಿದ್ಯಾಪೀಠ ಎಂದು ಕರೆಯುತ್ತಾರೆ. ಇಲ್ಲಿ ಒಂದು ವಯಸ್ಕರ ಶಿಕ್ಷಣ ಕೇಂದ್ರವಿದ್ದು ಅದು ಡೆನ್ಮಾರ್ಕಿನ ಯೋಜನೆಯಂತೆ ಶಿಕ್ಷಣಾರ್ಥಿಗಳಿಗೆ ತಾಂತ್ರಿಕ ಬೇಸಾಯ ಕ್ರಮ ಮತ್ತು ಸುಧಾರಿತ ಬೇಸಾಯ ಪದ್ಧತಿ ಕುರಿತಂತೆ ಶಿಕ್ಷಣ ನೀಡುವುದು. ವಿ.ಸಿ.ಫಾರಂ ಇಲ್ಲಿಯ ಮತ್ತೊಂದು ಬೇಸಾಯ ಕ್ಷೇತ್ರ. ಇಲ್ಲಿ ಜಪಾನ್ ದೇಶದ ಬೇಸಾಯ ತಜ್ಞರು ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡುವರು. ಡೆನ್ಮಾರ್ಕ್–ಮೈಸೂರು ಯೋಜನೆಯಂತೆ ಇಲ್ಲಿ ಒಂದು ಕೋಳಿಸಾಕಣೆ ಕೇಂದ್ರ ಸ್ಥಾಪಿತವಾಗಿದ್ದು ವೈಜ್ಞಾನಿಕವಾಗಿ ಪುಷ್ಟಿಕರ ಆಹಾರ ನೀಡಿ ಉತ್ತಮ ತಳಿಯ ಕೋಳಿಗಳನ್ನು ಸಾಕುವ ವಿಧಾನವನ್ನು ಹೇಳಿಕೊಡಲಾಗುತ್ತದೆ. ಇಲ್ಲಿ ಗ್ರಾಮ ಸೇವಕ ಶಿಕ್ಷಣ ತರಬೇತಿ ಕೇಂದ್ರವೂ ಇದೆ. ಪ್ರಶಾಂತವಾಗಿರುವ ಬೆಟ್ಟದ ಮೇಲೆ ಒಂದು ಆಶ್ರಮವಿದೆ. ಮದ್ದೂರಿಗೆ 3ಕಿಮೀ ದೂರದಲ್ಲಿ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಸೋಮನಹಳ್ಳಿಯಲ್ಲಿ ಭೂಸವಕಲು ರಕ್ಷಣಾ ತರಬೇತಿ ಕೇಂದ್ರವಿದೆ. ಈ ಗ್ರಾಮದ ಸಮೀಪದಲ್ಲಿ ಸ್ಕೂಟರ್ ತಯಾರಿಸುವ ಒಂದು ಕಾರ್ಖಾನೆಯಿತ್ತು. ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ನಿಡಘಟ್ಟದಲ್ಲಿ ಒಂದು ಸಹಕಾರಿ ತೆಂಗಿನನಾರು ಉದ್ಯಮವಿದೆ. ಮದ್ದೂರು–ಮಳವಳ್ಳಿ ರಸ್ತೆಯಲ್ಲಿ ಮದ್ದೂರಿಗೆ ಸು. 11ಕಿಮೀ ದೂರದಲ್ಲಿರುವ ಕಾಳಮುದ್ದನದೊಡ್ಡಿಯಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿದೆ (1974). ಈ ಕಾರ್ಖಾನೆ ಮದ್ದೂರು ಹಾಗೂ ಮಳವಳ್ಳಿ ತಾಲ್ಲೂಕುಗಳಲ್ಲಿ ಬೆಳೆಯುವ ಕಬ್ಬನ್ನು ಅರೆಯುತ್ತದೆ. ಬೆಂಗಳೂರು– ಮೈಸೂರು ರೈಲುಮಾರ್ಗ ಮದ್ದೂರಿನ ಸಮೀಪದಲ್ಲಿ ಹಾದು ಹೋಗುತ್ತದೆ. ಮದ್ದೂರಿಗೆ 2ಕಿಮೀ ದೂರದಲ್ಲಿರುವ ಶಿವಪುರದಲ್ಲಿ ರೈಲು ನಿಲ್ದಾಣವಿದೆ. ಮದ್ದೂರು ಮತ್ತು ಚಿಕ್ಕನಹಳ್ಳಿಗಳಲ್ಲಿ ವರ್ಷಕ್ಕೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ.

ಮದ್ದೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯ ಪಟ್ಟಣ. ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಮೈಸೂರಿನ ಈಶಾನ್ಯಕ್ಕೆ 57 ಕಿಮೀ ದೂರದಲ್ಲಿ ಶಿಂಷಾನದಿಯ (ಮದ್ದೂರು ಹೊಳೆ) ಬಲದಂಡೆಯ ಮೇಲಿದೆ. ಮಂಡ್ಯ ಜಿಲ್ಲೆಯ ದೊಡ್ಡ ಪಟ್ಟಣಗಳಲ್ಲಿ ಇದು ಐದನೆಯ ಸ್ಥಾನ ಪಡೆದಿದೆ. ಪಟ್ಟಣದ ಒಟ್ಟು ಜನಸಂಖ್ಯೆ 26,521.

ಇಲ್ಲಿ ತೋಟಗಾರಿಕೆ ಇಲಾಖೆ, ರೇಷ್ಮೆ ಕೋಠಿ ಹಾಗೂ ಹಿಪ್ಪುನೇರಳೆ ಸಸಿ ಪೋಷಣೆ ಮತ್ತು ತರಬೇತಿ ಕೇಂದ್ರ, ಮೀನುಸಾಕಣೆ ಕೇಂದ್ರ ಇವೆ. ಪ್ರವಾಸಿ ಮಂದಿರವಿದೆ.

ಮದ್ದೂರಿನಿಂದ ಮಳವಳ್ಳಿ, ಶಿವಸಮುದ್ರ, ಕೊಳ್ಳೇಗಾಲ, ಕುಣಿಗಲು, ಹುಲಿಯೂರುದುರ್ಗ ಮುಂತಾದ ಕಡೆಗಳಿಗೆ ಅನುಕೂಲ ರಸ್ತೆಗಳಿದ್ದು, ಉತ್ತಮ ಸಾರಿಗೆ ಸಂಪರ್ಕ ಕಲ್ಪಿಸಲಾಗಿದೆ.

ಕದಂಬ ಋಷಿ ನರಸಿಂಹದೇವರನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದುದರಿಂದ ಕದಂಬ ಕ್ಷೇತ್ರವೆಂದೂ ಶ್ರೀಕೃಷ್ಣನ ಜೊತೆ ತೀರ್ಥಯಾತ್ರೆಗಾಗಿ ಬಂದ ಪಾಂಡವರಲ್ಲಿ ಅರ್ಜುನ ನರಸಿಂಹ ದೇವರನ್ನು ಪೂಜಿಸಿದ್ದರಿಂದ ಅರ್ಜುನಪುರಿ ಎಂಬ ಹೆಸರಾಯಿತೆಂದೂ ಸ್ಥಳಪುರಾಣ. ಅನಂತರ ಇದನ್ನು ಮರದೂರು ಎಂದು ಕರೆಯಲು ಪ್ರಾರಂಭಿಸಿ ಇದೇ ಮದ್ದೂರಾಯಿತೆಂದೂ ಐತಿಹ್ಯ. ಟಿಪ್ಪು ಇಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಿಟ್ಟಿದ್ದರಿಂದ ಮದ್ದೂರಾಯಿತೆಂದೂ ಇನ್ನೊಂದು ಪ್ರತೀತಿ.

ಹೊಯ್ಸಳರ ಕಾಲದಲ್ಲಿ ಈ ಊರು ನರಸಿಂಹಚತುರ್ವೇದಿಮಂಗಲಂ ಎಂಬ ಅಗ್ರಹಾರವಾಗಿದ್ದು ಇದನ್ನು ವಿಷ್ಣುವರ್ಧನ ವೈಷ್ಣವರಿಗೆ ದಾನ ಕೊಟ್ಟಂತೆ ತಿಳಿಯುತ್ತದೆ. ಇಲ್ಲಿಗೆ ಸಮೀಪದಲ್ಲಿರುವ ಮದ್ದೂರು ಕೆರೆಯನ್ನೂ ವರದರಾಜ ದೇವಸ್ಥಾನವನ್ನೂ ಈತನೇ ಕಟ್ಟಿಸಿದನೆಂದು ಪ್ರತೀತಿ. ಇಲ್ಲಿದ್ದ ಕೋಟೆ 1617ರಲ್ಲಿ ರಾಜ ಒಡೆಯರ ವಶವಾಯಿತು. ಹೈದರ್ ಅಲಿ ಇದನ್ನು ದುರಸ್ತಿ ಮಾಡಿಸಿದ. 1791ರಲ್ಲಿ ಲಾರ್ಡ್ ಕಾರ್ನ್‌ವಾಲೀಸ್ ಈ ಕೋಟೆಯನ್ನು ನಾಶಮಾಡಿದ. ಮದ್ದೂರಿನಲ್ಲಿ ನರಸಿಂಹ, ವರದರಾಜ, ದೇಶೇಶ್ವರ ಎಂಬ ಮೂರು ಪ್ರಸಿದ್ಧ ದೇವಾಲಯಗಳಿವೆ. ನರಸಿಂಹ ದೇವಾಲಯ ಹೊಯ್ಸಳ ಶೈಲಿಯದು. ಇದಕ್ಕೆ ದ್ರಾವಿಡ ಶೈಲಿಯ ಗೋಪುರವನ್ನು ಈಚೆಗೆ ಕಟ್ಟಲಾಗಿದೆ. ಇಲ್ಲಿನ ಉಗ್ರ ನರಸಿಂಹಮೂರ್ತಿ ಕಪ್ಪುಶಿಲೆಯ ಕೆತ್ತನೆ. ಇದು 7 ಅಡಿ ಎತ್ತರವಿದ್ದು ಸುಂದರವಾಗಿದೆ. ಇದೇ ದೇವಾಲಯದಲ್ಲಿ ಒಂದು ಕಡೆ ರಾಮ, ಸೀತೆ, ಲಕ್ಷ್ಮಣ, ಆಂಜನೇಯರ ಸುಂದರ ವಿಗ್ರಹಗಳಿವೆ. ವರದರಾಜ (ಅಲ್ಲಾಳನಾಥ) ದೇವಾಲಯ ಚೋಳರ ಕಾಲಕ್ಕೂ ಹಿಂದಿನ ಅಥವಾ ಅವರ ಆಳ್ವಿಕೆಯ ಪ್ರಾರಂಭಕಾಲದ ರಚನೆ. ಇಲ್ಲಿರುವ ಅಲ್ಲಾಳನಾಥನ ವಿಗ್ರಹ 12 ಅಡಿ ಎತ್ತರವಿದ್ದು ಮುಮ್ಮುಖ ಹಾಗೂ ಹಿಮ್ಮುಖಗಳ ಕೆತ್ತನೆ ಸುಂದರವಾಗಿದೆ. ಹಿಮ್ಮುಖದ ಕೆತ್ತನೆ ಹೆಚ್ಚು ಸುಂದರವಾಗಿರುವುದರಿಂದ 'ಎಲ್ಲ ದೇವರ ಮುಂದೆ ನೋಡು ಅಲ್ಲಾಳನಾಥನ ಹಿಂದೆ ನೋಡು' ಎನ್ನುವ ಗಾದೆ ಬಳಕೆಗೆ ಬಂದಿದೆ. ವಿಷ್ಣುವರ್ಧನ ತನ್ನ ತಾಯಿಗಾಗಿ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದನೆಂದು ಪ್ರತೀತಿ.

ದೇಶೇಶ್ವರ ದೇವಾಲಯ ಗಂಗರ ಕಾಲದ ರಚನೆ. ಇದರ ಹೊರಗೋಡೆಗಳನ್ನು ಇತ್ತೀಚೆಗೆ ಬಳಪದ ಕಲ್ಲಿನಲ್ಲಿ ಕಟ್ಟಿದಂತೆ ತಿಳಿಯುತ್ತದೆ. ದೇವಾಲಯದ ನಂದಿಮಂಟಪ ಸುಂದರವಾಗಿದೆ. ಗ್ರಾಮದೇವತೆ ಮದ್ದೂರಮ್ಮನ ದೇವಾಲಯವೂ ಇಲ್ಲಿದೆ. ಪ್ರತಿ ವರ್ಷ ಏಪ್ರಿಲ್–ಮೇ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ. (ಕೆ.ಎ.ಎ.)

**ಮಧುಗಿರಿ:** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಶಿರಾ, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳನ್ನೊಳಗೊಂಡ ಜಿಲ್ಲಾ ಉಪವಿಭಾಗ ಕೇಂದ್ರ. ಈ ತಾಲ್ಲೂಕಿನ ದಕ್ಷಿಣಕ್ಕೆ ಕೊರಟಗೆರೆ, ಪಶ್ಚಿಮಕ್ಕೆ ಶಿರಾ ತಾಲ್ಲೂಕುಗಳಿದ್ದು ಪೂರ್ವ, ಉತ್ತರ ಮತ್ತು ವಾಯುವ್ಯದ ಮೂರು ಕಡೆಯೂ ಆಂಧ್ರಪ್ರದೇಶ ಸುತ್ತುವರಿದಿದೆ. ದೊಡ್ಡೇರಿ, ಮಧುಗಿರಿ, ಮಿಡಿಗೇಶಿ, ಇಟ್ಟಿಗದಿಬ್ಬನಹಳ್ಳಿ, ಕೊಡಿಗೇನಹಳ್ಳಿ ಮತ್ತು ಪುರವಾರ ಹೋಬಳಿಗಳು. 320 ಗ್ರಾಮಗಳಿವೆ. ವಿಸ್ತೀರ್ಣ 1,118,4 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,65,884.

ಜಿಲ್ಲೆಯ ಪೂರ್ವಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಕಣಶಿಲೆಯ ಬೆಟ್ಟಗಳು ಹಬ್ಬಿವೆ. ಈ ತಾಲ್ಲೂಕಿನಲ್ಲಿರುವ ಎತ್ತರದ ಬೆಟ್ಟಗಳೆಂದರೆ ಬ್ಯಾಲ್ಯ (888ಮೀ), ದೊಡ್ಡನರಮಂಗಲ (945 ಮೀ), ಮಿಡಿಗೇಶಿದುರ್ಗ (1,039 ಮೀ) ಮತ್ತು ಮಧುಗಿರಿದುರ್ಗ (1,192 ಮೀ). ತಾಲ್ಲೂಕಿನ ಪೂರ್ವಭಾಗದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಜಯಮಂಗಲಿ ನದಿ ಹರಿಯುತ್ತದೆ. ಈ ತಾಲ್ಲೂಕಿನ ಹೊಳವನಹಳ್ಳಿಯ ಹತ್ತಿರ ಪೂರ್ವದಿಂದ ಗರುಡಾಚಲ ನದಿಯೂ ರಾಮಪುರದ ಬಳಿ ಪಶ್ಚಿಮದ ಕಡೆಯಿಂದ ಸುವರ್ಣಮುಖಿ ನದಿಯೂ ಇದಕ್ಕೆ ಸೇರುತ್ತವೆ. ಮುಂದೆ ಇದು ತಾಲ್ಲೂಕಿನ ಈಶಾನ್ಯ ದಿಕ್ಕಿನಲ್ಲಿ ಹರಿದು ಆಂಧ್ರಪ್ರದೇಶದ ಅನಂತರಪುರ ಜಿಲ್ಲೆಯನ್ನು ಪ್ರವೇಶಿಸುವುದು. ಕುಮುದ್ವತಿ ನದಿ ಈ ತಾಲ್ಲೂಕಿನ ಅತ್ಯಂತ ಈಶಾನ್ಯದಲ್ಲಿ ದಕ್ಷಿಣೋತ್ತರವಾಗಿ ಹರಿಯುವುದು. ಈ ತಾಲ್ಲೂಕಿನ ತಲಪರಿಗೆಗಳು ವಿಶೇಷ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ ಸು. 635 ಮಿಮೀ.

ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕುರುಂದ ಶಿಲೆಗಳಿರುವುದು ಕಂಡುಬಂದಿದೆ. ಕೆಂಪುಮಣ್ಣಿನ ಮರಳು ಮಿಶ್ರಿತ ಜೇಡಿ ಮಣ್ಣು ಮತ್ತು ಹತ್ತಿ ಬೆಳೆಗೆ ಅತ್ಯುತ್ತಮವಾದ ಕಪ್ಪು ಜೇಡಿಮಣ್ಣಿನ ಭೂಪ್ರದೇಶಗಳು ಈ ತಾಲ್ಲೂಕಿನಲ್ಲಿವೆ. ವ್ಯವಸಾಯಕ್ಕೆ ಅನುಕೂಲವಾಗಿರುವ 123 ಕೆರೆಗಳೂ 4,100 ಬಾವಿಗಳೂ ಇವೆ. ತಾಲ್ಲೂಕಿನಲ್ಲಿ 8,106 ಎಕರೆ ಅರಣ್ಯಪ್ರದೇಶ 45,390 ಎಕರೆ ಹುಲ್ಲುಗಾವಲೂ ಇದ್ದು, 1,12,812 ಎಕರೆ ಭೂಮಿ ಬೇಸಾಯದಲ್ಲಿದೆ. ರಾಗಿ, ಬತ್ತ, ಜೋಳ, ಸೇಂಗಾ, ಹಾರಕ, ನವಣೆ, ಹುರುಳಿ, ಅವರೆ, ಕಬ್ಬು ಮುಂತಾದವು ಮುಖ್ಯ ಬೆಳೆಗಳು. ತೆಂಗಿನ ಬೆಳೆಯೂ ಸ್ವಲ್ಪ ಉಂಟು. ಈ ತಾಲ್ಲೂಕು ದಾಳಿಂಬೆ ಹಣ್ಣಿಗೆ ಪ್ರಸಿದ್ಧ.

ಈ ತಾಲ್ಲೂಕಿನಲ್ಲಿ ಬೀಡಿ ತಯಾರಿಕೆ, ಕೈಮಗ್ಗದ ಹತ್ತಿ, ಉಣ್ಣೆಬಟ್ಟೆ ತಯಾರಿಕೆ. ಖಾದಿ ಗ್ರಾಮೋದ್ಯೋಗ ಮಂಡಲಿಗೆ ಸೇರಿದಂತೆ ಕೆಲವು ಗ್ರಾಮೋದ್ಯೋಗಗಳಿವೆ. ತುಮಕೂರು–ಪಾವಗಡ ರಸ್ತೆ ಈ ತಾಲ್ಲೂಕಿನ ಮೇಲೆ ಹಾದು ಹೋಗುತ್ತದೆ. ಇದರ ಸುತ್ತಲ ಸ್ಥಳಗಳಿಗೆ ಉತ್ತಮ ಮಾರ್ಗಗಳಿವೆ.


ವೆಂಕಟರಮಣಸ್ವಾಮಿ ದೇವಸ್ಥಾನ

ಈ ತಾಲ್ಲೂಕಿನಲ್ಲಿ ಹಲವು ಸ್ಥಳಗಳು ಸುತ್ತಮುತ್ತ ಪ್ರಸಿದ್ಧವಾಗಿವೆ. ತುಮಕೂರು ನಗರದ ಉತ್ತರಕ್ಕೆ 42 ಕಿಮೀ. ದೂರದಲ್ಲಿರುವ ಭಸ್ಮಾಂಗಿ ಕೋಟೆಯುಳ್ಳ ಒಂದು ಬೆಟ್ಟ. ಹೈದರ್ ಅಲಿ ಈ ಪ್ರದೇಶವನ್ನು ವಶಪಡಿಸಿಕೊಂಡಾಗ (1768) ಬೂದಿ ಬಸವಪ್ಪನಾಯಕ ಕಟ್ಟಿಸಿದ್ದ ಮಣ್ಣಿನ ಕೋಟೆಯನ್ನು ಕೆಡವಿ ಇಟ್ಟಿಗೆ ಮತ್ತು ಕಲ್ಲಿನಿಂದ ಕೋಟೆಯನ್ನೂ ಅರಮನೆಯನ್ನೂ ಇಲ್ಲಿ ಕಟ್ಟಿಸಿದ. ಬಿಜವರ ತೋಂಟದ ಸಿದ್ಧಲಿಂಗಭೂಪಾಲ ಮತ್ತು ಮುಮ್ಮಡಿ ಚಿಕ್ಕಭೂಪಾಲ–ಈ ಪ್ರಸಿದ್ಧ ದೊರೆಗಳ ಕೇಂದ್ರವಾಗಿತ್ತು. ಮುಮ್ಮಡಿ ಚಿಕ್ಕಭೂಪಾಲ ಕನ್ನಡ ಮತ್ತು ಸಂಸ್ಕೃತಕ್ಕೆ ಪ್ರೋತ್ಸಾಹ ನೀಡಿದುದಲ್ಲದೆ ತಾನೇ 'ಅಭಿನವ ಭಾರತ ಸಾರಸಂಗ್ರಹ'ವೆಂಬ ಸಂಸ್ಕೃತ ಗ್ರಂಥ ಬರೆದ. ಚಿಕ್ಕದೇವರಾಜ 17ನೆಯ ಶತಮಾನದ ಅಂತ್ಯದಲ್ಲಿ ಇದನ್ನು ಗೆದ್ದ. ಮಧುಗಿರಿಗೆ 21 ಕಿಮೀ ದೂರದಲ್ಲಿರುವ ಏಳುಸುತ್ತಿನ ಕೋಟೆ ಎಂಬಲ್ಲಿ ಹಿಂದೆ ಪಾಂಡವರು ಇದ್ದರೆಂದು ಪ್ರತೀತಿ. ಮಿಡಿಗೇಶಿ **(ನೋಡಿ)** ಹೋಬಳಿ ಕೇಂದ್ರ. ಹಿಂದೆ ಇದು ಪಾಳೆಯಪಟ್ಟಿನ ಕೇಂದ್ರವಾಗಿತ್ತು. ಮಧುಗಿರಿಯ ವಾಯುವ್ಯದಲ್ಲಿರುವ ಸಿದ್ಧಾಪುರದಲ್ಲಿ ಒಂದು ಹಳೆಕೋಟೆ ಇದೆ. ಇಲ್ಲಿಯ ಶಾಸನದ ಪ್ರಕಾರ ಬಿಜವರದ ಮಹಾನಾಡಪ್ರಭು ಚಿಕ್ಕಪ್ಪಗೌಡ 1593ರಲ್ಲಿ ಈ ಊರನ್ನು ಕಟ್ಟಿದನೆಂದು ತಿಳಿದುಬರುತ್ತದೆ. ಅಲ್ಲದೆ ದೊಡ್ಡದಾಳಿವಟ್ಟದಲ್ಲಿರುವ ದೊಡ್ಡಲಕ್ಷ್ಮೀನರಸಿಂಹ ದೇವಾಲಯ ಪ್ರಸಿದ್ಧ. ಕೊಡಿಗೇನಹಳ್ಳಿ ಹೋಬಳಿಯ ಕೇಂದ್ರ. ಕುಡುವತ್ತಿ ಬೆಟ್ಟದ ಬುಡದಲ್ಲಿರುವ ಕುಡುವತ್ತಿ ಈಗ ಜನವಸತಿ ಇಲ್ಲದ ಗ್ರಾಮ. ಇಲ್ಲಿ ಕಂಬದರಾಯ ದೇವಾಲಯ, ಜಿರಲೆ ಮಲ್ಲಮ್ಮ ಎಂಬಾಕೆ ಕಟ್ಟಿಸಿದಳೆಂದು ಹೇಳುವ ಗೋಪಾಲಕೃಷ್ಣ ಮತ್ತು ಲಕ್ಷ್ಮೀದೇವಿ ದೇವಾಲಯಗಳು ಮತ್ತು ಮಜ್ಜನದ ಬಾವಿಯೆಂಬ ಕೊಳ ಇವೆ. ದೊಡ್ಡದಾಳಿವಟ್ಟ ಮತ್ತು ಗರಣಿಯ ಲಕ್ಷ್ಮೀನರಸಿಂಹಸ್ವಾಮಿ ಜಾತ್ರೆಗಳು, ಗೊಂಡಿಹಳ್ಳಿಯ ಆಂಜನೇಯ ಸ್ವಾಮಿ ಜಾತ್ರೆ ಈ ತಾಲ್ಲೂಕಿನಲ್ಲಿ ನಡೆಯುವ ಮುಖ್ಯ ಜಾತ್ರೆಗಳು.

ಮಧುಗಿರಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ತುಮಕೂರು–ಪಾವಗಡ ಮಾರ್ಗಮಧ್ಯದಲ್ಲಿ ಮಧುಗಿರಿ ಬೆಟ್ಟದ ಉತ್ತರ ಭಾಗದಲ್ಲಿ, ತುಮಕೂರಿಗೆ ಉತ್ತರದಲ್ಲಿ ಸು. 42ಕಿಮೀ ದೂರದಲ್ಲಿದೆ. ಊರನ್ನು ಸುತ್ತಲೂ ಬೆಟ್ಟಗಳು ಆವರಿಸಿವೆ. ಪಟ್ಟಣದ ಒಟ್ಟು ಜನಸಂಖ್ಯೆ 26,351.

ಈ ಊರು ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳು ಹಾಗೂ ಕಂಬಳಿ ತಯಾರಿಕೆ ಪ್ರಸಿದ್ಧ. ಇವನ್ನು ಸುತ್ತಲ ಊರುಗಳಿಗೂ ತುಮಕೂರು, ತಿಪಟೂರು, ಬೆಂಗಳೂರು, ಬಳ್ಳಾರಿ, ಮತ್ತು ಆಂಧ್ರಪ್ರದೇಶದ ಹಿಂದೂಪುರಗಳಿಗೂ ಕಳಿಸುವುದುಂಟು. ಚಿನ್ನದಸಲಕಿ ಎಂಬ ಅಕ್ಕಿ ಇಲ್ಲಿ ಮತ್ತು ಸುತ್ತಲ ಊರಿನಲ್ಲಿ ಪ್ರಸಿದ್ಧ.

ಮಧುಗಿರಿಯ ಮೊದಲ ಹೆಸರು ಮದ್ದಗಿರಿ. ಮಧು ಎಂಬ ಹೆಸರಿನ ಗಿರಿಯ ಉತ್ತರದ ಬುಡದಲ್ಲಿ ಈ ಊರು ಇದ್ದುದರಿಂದ ಮದ್ದಗಿರಿ ಎಂದು ಹೆಸರು ಇತ್ತಂತೆ. 1927ರಿಂದ ಮಧುಗಿರಿ ಎಂಬ ಹೆಸರು ರೂಢಿಗೆ ಬಂದಿತು. ಮಧುಗಿರಿ ಕೋಟೆ ಸುಂದರವಾದದ್ದು. ಬಹಳ ಹಿಂದೆ ಈ ಕೋಟೆಯನ್ನು ಹಿರೇಗೌಡನೆಂಬುವನು ಕಟ್ಟಿಸಿದ. ಈ ಗೌಡನ ವಂಶಜರು ಇಲ್ಲಿ ಒಂದು ಪಾಳೆಯಪಟ್ಟನ್ನು ಸ್ಥಾಪಿಸಿದ್ದರು. ಮಧುಗಿರಿ ಇವರ ಕೈಬಿಟ್ಟಿತು. ಅನಂತರ ಚಿಕ್ಕದೇವರಾಜ ಈ ಗೌಡರುಗಳನ್ನು ಬಂಧನದಿಂದ ಮುಕ್ತರನ್ನಾಗಿ ಮಾಡಿ ಅವರುಗಳ ಜೀವನೋಪಾಯಕ್ಕಾಗಿ ಮಿಡಿಗೇಶಿ ಎಂಬ ಊರನ್ನು ಸ್ಥಿರಾಸ್ತಿಯಾಗಿ ಕೊಟ್ಟ. ಮಧುಗಿರಿ ಕೋಟೆ ಕೆಲಕಾಲ ಹೈದರನ ವಶದಲ್ಲಿತ್ತು. ಅವನು ಅನೇಕ ಹೊಸ ನಿರ್ಮಾಣಗಳಿಂದ ಕೋಟೆಯನ್ನು ಭದ್ರಪಡಿಸಿದ. 1767ರಲ್ಲಿ ಮರಾಠ ಮಾಧವರಾವ್ ವಶಪಡಿಸಿಕೊಂಡ ಏಳು ವರ್ಷಗಳ ಕಾಲ ಅವನ ಆಳ್ವಿಕೆಗೆ ಮಧುಗಿರಿ ಸೇರಿತ್ತು. ಟಿಪ್ಪು 1774ರಲ್ಲಿ ಮಧುಗಿರಿಯನ್ನು ವಶಪಡಿಸಿಕೊಂಡ. ಆಗ ಮರಾಠರು ಸಿಕ್ಕಿದ್ದನ್ನು ಕೊಳ್ಳೆಹೊಡೆದು ಮಧುಗಿರಿಯನ್ನು ಹಾಳುಗೆಡವಿದರು. ಪುನಃ 1791ರಲ್ಲಿ ಮರಾಠರು ಪರಶುರಾಮ ಭಾವುವಿನ ಸೇನಾಪತಿಯಾಗಿದ್ದ ಬಲವಂತರಾವ್ ಎಂಬುವನ ನೇತೃತ್ವದಲ್ಲಿ ಮಧುಗಿರಿ ಕೋಟೆಗೆ ಐದು ತಿಂಗಳ ಕಾಲ ಮುತ್ತಿಗೆ ಹಾಕಿ ಸುತ್ತಮುತ್ತಲಿನ ಪ್ರದೇಶವನ್ನೆಲ್ಲ ಲೂಟಿ ಮಾಡಿದರು. 1792ರಲ್ಲಿ ಟಿಪ್ಪುವಿಗೂ ಇಂಗ್ಲಿಷರಿಗೂ ಸಂಧಿಯಾಗಿ ಸುಲ್ತಾನನ ಸೈನ್ಯ ಇಲ್ಲಿಗೆ ಬಂದ ಮೇಲೆ ಬಲವಂತರಾವ್ ಹಿಂದಿರುಗಿದ. ಮಧುಗಿರಿಯನ್ನು ವಶಪಡಿಸಿಕೊಂಡ ಟಿಪ್ಪು ಅದಕ್ಕೆ ಫತೇಬಾದ್ ಎಂದು ಹೆಸರಿಟ್ಟಿದ್ದ, ನಾಲ್ಕನೆಯ ಮೈಸೂರು ಯುದ್ಧವಾದ (1799) ಮೇಲೆ ಮಧುಗಿರಿ ಮೈಸೂರಿಗೆ ಸೇರಿತು.

ಪ್ರಸಿದ್ಧ ಮಧುಗಿರಿ ಕೋಟೆಯ ಅವಶೇಷವನ್ನು ಈಗಲೂ ನೋಡಬಹುದು. ಮಧುಗಿರಿ ದುರ್ಗದ ಕೋಟೆಗೆ ಅಂತರಾಳದ ಬಾಗಿಲು, ದಿಡ್ಡಿಬಾಗಿಲು, ಮೈಸೂರು ಬಾಗಿಲು ಮುಂತಾದ ಬಾಗಿಲುಗಳಿವೆ. ಕೋಟೆಯಲ್ಲಿ ಉತ್ತಮ ನೀರಿನ ಸೌಕರ್ಯವಿತ್ತು. ಈಗಲೂ ಜಾನಯ್ಯನ ಬಾವಿ, ಅರಸನ ಬಾವಿ, ಪ್ರಧಾನ ಬಾವಿ, ದೇವರಾಯಸಮುದ್ರ (ನಿರ್ಮಾಣ 1699) ಮೊದಲಾದ ಅನೇಕ ಕೊಳಗಳಿವೆ. ಈ ಬಾವಿಗಳೆಲ್ಲ ಶಿಲ್ಪಕಲಾ ಕೃತಿಯನ್ನೊಳಗೊಂಡಿವೆ. ನವಲಡಿ ಬುಗ್ಗೆ, ಭೀಮನ ಬುಗ್ಗೆ, ಚಂದ್ರ ಬುಗ್ಗೆ, ನವಿಲು ಬುಗ್ಗೆ ಇತ್ಯಾದಿ ಅನೇಕ ನೀರಿನ ತಲಪರಿಗೆಗಳಿವೆ.

ಚಂದ್ರ ಬುಗ್ಗೆಯ ಹತ್ತಿರ ರಾಮಪ್ಪಗೌಡ ಮತ್ತು ತಿಮ್ಮಪ್ಪಗೌಡರ ಅರಮನೆ ಇತ್ತಂತೆ. ಕೋಟೆಯ ಮೇಲೆ ಗೋಪಾಲಕೃಷ್ಣನ ದೇವಸ್ಥಾನವಿದೆ. ಕೋಟೆಯೊಳಗಡೆ ದವಸಧಾನ್ಯಗಳನ್ನು ತುಂಬಿಡಲು ಅನೇಕ ಕಣಜಗಳಿವೆ. ಭೀಮನ ಬುಗ್ಗೆಯ ಹತ್ತಿರ ಮಧುಗಿರಿ ನಾಯಕನಾದ ಮುಮ್ಮಡಿ ಚಿಕ್ಕಪ್ಪಗೌಡ ಕಟ್ಟಿಸಿದ ಆಂಜನೇಯನ ಗುಡಿಯಿದೆ. ಶ್ರವಣಗುಡಿಯಲ್ಲಿ ಹುತಾತ್ಮರ ಸ್ಮಾರಕಗಳಿವೆ. ಮಧುಗಿರಿ ದುರ್ಗದ ಬುಡದಲ್ಲಿರುವ ಲಿಂಗಾಯಿತ ಮಠದ ಆಗ್ನೇಯಕ್ಕೆ ಸಾಧುಗವಿ, ಮೇಕೆಗವಿ, ಪಟ್ಟದಮ್ಮನಗವಿ, ಸಿದ್ಧೇಶ್ವರ ಗವಿ ಮುಂತಾದ ಗವಿಗಳು ಇವೆ. **(ಕೆ.ವಿ.ವಿ.)**

**ಮಧುಗಿರಿ ಪಾಳೆಯಗಾರರು**: 16–18ನೆಯ ಶತಮಾನಗಳ ಅವಧಿಯಲ್ಲಿ ಮಧುಗಿರಿಯ ಸುತ್ತಮುತ್ತಲ ಪ್ರದೇಶವನ್ನು ಆಳಿದವರು. ಮಿಡಿಗೇಶಿಯ ರಾಯರೇಖಾ, ಇತರ ದಾಖಲೆಗಳು ಮತ್ತು ಕೆಲವು ಶಾಸನಗಳು ಈ ವಂಶದವರ ಬಗ್ಗೆ ಸ್ವಲ್ಪಮಟ್ಟಿನ ವಿಚಾರಗಳನ್ನು ಒದಗಿಸಿದರೂ ಈ ಪಾಳೆಯಪಟ್ಟಿನ ಚರಿತ್ರೆ ಅಸ್ಪಷ್ಟವಾಗಿದೆ. ಈ ಪಾಳೆಯಗಾರರ ಪೂರ್ವಿಕರು ಮೊದಲು ಸೊನ್ನಲಾಪುರದಲ್ಲಿ (ಈಗಿನ ಸೊಲ್ಲಾಪುರ) ಇದ್ದು ದಕ್ಷಿಣಕ್ಕೆ ಬಂದು ವಿಜಯನಗರದ ಅರಸರ ಸೇವೆಗೆ ಸೇರಿದ್ದರು. ಅನಂತರ ದೆಹಲಿಯಿಂದ ಬಂದಿದ್ದ ದಾಳಿಕಾರ ಮಲ್ಲಾಖಾನನನ್ನು ಸೋಲಿಸಿ ವಿಜಯನಗರ ಅರಸರಿಂದ ಆಸ್ಥಾನ ಗೌರವವನ್ನು ಪಡೆದು ಆಶ್ವಾಧಿಕಾರಿಗಳಾಗಿದ್ದರು. ಈ ಪಾಳೆಯಗಾರ ಕುಲದ ಆದ್ಯ ವೀರಪ್ಪಗೌಡನು ಕೋರ ಎಂಬ ಊರನ್ನು ಸ್ಥಾಪಿಸಿದ.

ವೀರಪ್ಪಗೌಡನ ಅನಂತರ ಹಿರೇಗೌಡ ಪಟ್ಟಕ್ಕೆ ಬಂದ. ಈತನೇ ಮಧುಗಿರಿ ಪಟ್ಟಣವನ್ನು ನಿರ್ಮಿಸಿದವನು. ಹಿರೇಗೌಡ ದುರ್ಗ ನಿರ್ಮಾಣ ಮಾಡಿ ಸುತ್ತಮುತ್ತಲಿನ ರಾಜ್ಯಗಳನ್ನು ಸ್ವಾಧೀನಪಡಿಸಿಕೊಂಡು ರಾಜಾ ಎಂಬ ಬಿರುದನ್ನು ಧರಿಸಿದ. ಮಿಡಿಗೇಶಿ ಕೈಫಿಯತ್ತಿನಂತೆ ಹಿರೇಗೌಡ ಎರಡನೆಯ ಪಾಳೆಯಗಾರನೆಂದು ತಿಳಿದುಬಂದರೂ ಈತನೇ ಪಾಳೆಯ ಪಟ್ಟಿನ ಸ್ಥಾಪಕನೆಂದೂ ಈತನ ಅನಂತರ ವೀರಪ್ಪಗೌಡ ಪಟ್ಟಕ್ಕೆ ಬಂದನೆಂದೂ ಕೆಲವರ ಅಭಿಪ್ರಾಯ.

ವೀರಪ್ಪಗೌಡನ ಅನಂತರ ಆತನ ಮಗ ಕಾಳಚಿಕ್ಕಪ್ಪಗೌಡ (3ನೆಯ ಚಿಕ್ಕಪ್ಪಗೌಡ) ಪಟ್ಟಕ್ಕೆ ಬಂದ. ಈತನ ಕಾಲದಲ್ಲಿ ವಿಜಯನಗರದ ಅರಸನಾಗಿದ್ದ ಶ್ರೀರಂಗರಾಯನ ಅನುಮತಿ ಪಡೆದು ಪಾಳೆಯಗಾರ ತನ್ನ ಕೋಟೆಯನ್ನು ಮತ್ತಷ್ಟು ಭದ್ರಪಡಿಸಿಕೊಂಡ. ತನ್ನ ರಾಜ್ಯದ ಪ್ರತಿಯೊಂದು ಗ್ರಾಮದ ಗಡಿ ನಿರ್ಧಾರ ಮಾಡಿಸಿದ. ಕೆರೆ ಮತ್ತು ಹಲವು ದೇವಾಲಯಗಳನ್ನು ಕಟ್ಟಿಸಿದ. ಈತನ ಕಾಲದಲ್ಲಿ ದುರ್ಗಕ್ಕೆ ಮದ್ದಗಿರಿ ಎಂಬ ಹೆಸರಿತ್ತೆಂದೂ ಅನಂತರ ಮಧುಗಿರಿ ಎಂದಾಯಿತೆಂದೂ ತಿಳಿದು ಬರುವುದು. ಈತನ ಪ್ರಾಬಲ್ಯವನ್ನು ನೆರೆಹೊರೆಯ ಪಾಳೆಯಗಾರರು ಸಹಿಸಲಿಲ್ಲ. ಅಂತ್ಯದಲ್ಲಿ ಕೊರಟಗೆರೆ ನಾಯಕ ಯುದ್ಧವನ್ನು ಆರಂಭಿಸಿದ. ಈ ಯುದ್ಧದಲ್ಲಿ ಚಿಕ್ಕಪ್ಪಗೌಡ ಮೃತನಾದ.

ಈತನ ತರುವಾಯ ಈತನ ಮಗ ಮುಮ್ಮಡಿ ಚನ್ನಪ್ಪಗೌಡ, ಅನಂತರ ರಂಗೇಗೌಡ, ರಾಮೇಗೌಡ ಮತ್ತು ತಿಮ್ಮೇಗೌಡ ಆಳಿದರು. ಮೈಸೂರಿನ ದಳವಾಯಿ ದೇವರಾಜಯ್ಯ ಮಧುಗಿರಿ ಪಾಳೆಯಗಾರನನ್ನು ಸೋಲಿಸಿ (1678) ಶ್ರೀರಂಗಪಟ್ಟಣದಲ್ಲಿ ಬಂಧಿಸಿದ. ಕೆಲಕಾಲಾನಂತರ ಮೈಸೂರು ಒಡೆಯರು ಇವನನ್ನು ಸೆರೆಮನೆಯಿಂದ ವಿಮೋಚನೆ ಮಾಡಿ ಮಿಡಿಗೇಶಿಗೆ ಕಳುಹಿಸಿ ಆ ಊರನ್ನೇ ಅವನಿಗೆ ಜಹಗಿರಿಯಾಗಿ ಕೊಟ್ಟರು; ಆದರೆ ಮುಂದೆ ಹೈದರ್ ಈ ಪಾಳೆಯಗಾರರನ್ನು ಸೋಲಿಸಿ ಇವನ ಪ್ರಾಂತ್ಯವನ್ನು ಮೈಸೂರು ರಾಜ್ಯಕ್ಕೆ ಸೇರಿಸಿದ. 1799ರಲ್ಲಿ ಬ್ರಿಟಿಷರು ಟಿಪ್ಪುವಿನ ಮೇಲೆ ದಾಳಿ ಮಾಡುವ ಸಂದರ್ಭದಲ್ಲಿ ಮಧುಗಿರಿ ಪಾಳೆಯಗಾರರ ವಂಶಸ್ಥರು ಬ್ರಿಟಿಷರಿಗೆ ಸಹಾಯ ಮಾಡಿ ತಮ್ಮ ಪಾಳೆಯಪಟ್ಟನ್ನು ಪುನಃ ಪಡೆದುಕೊಳ್ಳಲು ಪ್ರಯತ್ನಿಸಿದರು. ಆದರೆ ಅದು ಸಫಲವಾಗಲಿಲ್ಲ. **(ಎಂ.ಕೆ.ಬಿ.;ಸಿ.ವಿ.ಆರ್.)**

**ಮಧುಗಿರಿ ರಾಮು**: 1919– . ಹೆಸರಾಂತ ಭಾವಚಿತ್ರ ಸಂಯೋಜನಾ ಚಿತ್ರಕಾರರು. ಇವರು 1919 ನವೆಂಬರ್ 5ರಂದು ಮಧುಗಿರಿಯಲ್ಲಿ ಜನಿಸಿದರು. ಇವರ ತಾಯಿ ಲಕ್ಷ್ಮಿದೇವಮ್ಮ, ತಂದೆ ಹನುಮಂತಪ್ಪ. ಇವರದು ಕೃಷಿ ಹಾಗೂ ಪಶುಪಾಲನೆ ಮುಖ್ಯ ಕಸುಬಾಗುಳ್ಳ ಕುಟುಂಬ. ಚಿಕ್ಕವರಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡು ಕಡುಬಡತನದಲ್ಲಿ ಬೆಳೆದರು. ಮಧುಗಿರಿ ಕೋಟೆ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದರು. ವಿದ್ಯಾರ್ಥಿದೆಸೆಯಲ್ಲಿ ಸಹಪಾಠಿಗಳ ಜೊತೆ ಕಾಡಿನಲ್ಲಿ ವಿಹಾರ, ಈಜುವುದು, ಅಂಗಸಾಧನೆ ಮುಂತಾದ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದರು. ಸ್ಥಳೀಯ ಕಲಾರಸಿಕರು ಸೇರಿ ಆಡುತ್ತಿದ್ದ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಕ್ರಮೇಣ ಇವರು ಸ್ತ್ರೀ ಪಾತ್ರಗಳಿಗೆ ಮೀಸಲಾದರು. ಬಾಲ್ಯದಲ್ಲಿಯೇ ಸಂಗೀತ ಅಭಿನಯಗಳಲ್ಲಿ ಆಸಕ್ತಿ ಬೆಳೆಯುತ್ತಿರುವಾಗಲೇ ಚಿತ್ರಕಲಾ ಪರಿಷತ್ತಿನ ಸಂಸ್ಥಾಪಕಕ್ಕೆ ಕಾರ್ಯದರ್ಶಿ ದಾಸಪ್ಪನವರ ಮಾರ್ಗದರ್ಶನ ದೊರೆತು ಮೈಸೂರಿಗೆ ಬಂದು ಚಿತ್ರಕಲೆಯ ಅಭ್ಯಾಸ ನಡೆಸಿದರು.

ಮೈಸೂರಿಗೆ ಬಂದ ಇವರು ತಮ್ಮ ಸಂಬಂಧಿ ಸಿದ್ಧಪ್ಪನವರ ನೆರವಿನಿಂದ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಕಲಾಶಾಲೆಯಲ್ಲಿ ಪ್ರವೇಶ ಪಡೆದರು. ವಿದ್ಯಾರ್ಥಿದೆಸೆಯಲ್ಲಿ ಕಲಾಭ್ಯಾಸ ಮತ್ತು ಜೀವನ ನಿರ್ವಹಣೆಗೆ ಸೈನ್ ಬೋರ್ಡ್ ಬರೆಯುವುದು ಮತ್ತು ಇತರ ವಾಣಿಜ್ಯ ಕಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಚಾಮರಾಜೇಂದ್ರ ಕಲಾಶಾಲೆಯಲ್ಲಿ ವೈ. ಸುಬ್ರಮಣ್ಯರಾಜು, ಎನ್.ಜಿ.ಟಂಕಸಾಲೆ, ಪಾವಂಜೆ ಮೊದಲಾದವರಿಂದ ತರಬೇತಿ, ಮಾರ್ಗದರ್ಶನ ಪಡೆದ ಇವರು ಒಬ್ಬ ಉತ್ತಮ ಭಾವಚಿತ್ರ ರಚನಾಕಾರರಾಗಿ ರೂಪುಗೊಂಡರು. ಇವರು ರಂಗಗೀತೆಗಳನ್ನು ಉತ್ತರಾದಿ ನಾಟಕ ಶೈಲಿ ಮತ್ತು ಮರಾಠಿ ಬಾನಿಗಳನ್ನು ಅಭ್ಯಾಸ ಮಾಡಿದರು. ದಕ್ಷಿಣಾದಿ ಸಂಗೀತವನ್ನೂ ಕಲಿತರು. ಸರಸ್ವತಿ ಪ್ರಸಾದ ನಾಟಕ ಮಂಡಲಿಯ ಅನೇಕ ನಾಟಕಗಳಲ್ಲೂ ಪಾತ್ರವಹಿಸಿದರು. ಇವರು ಭಾಗವಹಿಸಿದ ನಾಟಕಗಳು ಮೈಸೂರು ಆಕಾಶವಾಣಿಯಲ್ಲಿ ಪ್ರಸಾರಗೊಂಡು ಹೆಚ್ಚಿನ ಮಾನ್ಯತೆ ಪಡೆದವು. ಕಲಾವಿದ್ಯಾಭ್ಯಾಸದ ಅನಂತರ ಲಲಿತ ಆರ್ಟ್ಸ್ ಎಂಬ ಸ್ಟುಡಿಯೋ ಆರಂಭಿಸಿದರು. ಕಾಲಾಂತರದಲ್ಲಿ ಅದು ಮೈಸೂರು ಆರ್ಟ್ಸ್ ಎಂದು ಪರಿವರ್ತನೆಗೊಂಡಿತು. ಇವರ ಈ ಸ್ಟುಡಿಯೋ ಚಿತ್ರಕಲೆ, ಸಂಗೀತ ಮತ್ತು ನಾಟಕ ಕಲೆಗಳನ್ನೊಳಗೊಂಡು ಮೈಸೂರು ಕಲಾ ಗಂಗೋತ್ರಿ ಎಂದು ಪ್ರಸಿದ್ಧಿ ಪಡೆಯಿತು.

ಕನ್ನಡದ ಅನೇಕ ಸಾಹಿತಿಗಳು, ಕಾದಂಬರಿಕಾರರು ಇವರ ಆಪ್ತವಲಯದಲ್ಲಿದ್ದರು. ಅವರಲ್ಲಿ ಅ.ನ.ಕೃ., ಮ.ನ. ಮೂರ್ತಿ ಹಾಗೂ ತ.ರಾ.ಸು. ಮುಖ್ಯರು. ಇವರೆಲ್ಲ ರಾಮು ಅವರಿಗೆ ಚಿತ್ರರಚನೆಯಲ್ಲಿ ಮಾರ್ಗದರ್ಶನ ಹಾಗೂ ಸಲಹೆ ನೀಡುತ್ತಿದ್ದರು. ವಾಣಿಜ್ಯಕಲೆಗಿಂತ ಕಲೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದ ಇವರು ಅನಕೃ ಅವರ ನಟಸಾರ್ವಭೌಮ, ತರಾಸು ಅವರ ಕೊನೆಯ ಕಾದಂಬರಿ ದುರ್ಗಾಸ್ತಮಾನಕ್ಕೆ ಮುಖಪುಟ ವಿನ್ಯಾಸವನ್ನು ರಚಿಸಿಕೊಟ್ಟಿದ್ದಾರೆ.

ಭಾವಚಿತ್ರ ಮತ್ತು ಸಂಯೋಜನಾ ಚಿತ್ರಗಳ ರಚನೆಯಲ್ಲಿ ಸಿದ್ಧಹಸ್ತರಾಗಿದ್ದ ಇವರು ಇತಿಹಾಸ, ಪುರಾಣ, ಕಾವ್ಯಗಳ ರಸಮಯ ಸಂದರ್ಭಗಳನ್ನೂ ಕಣ್ಣಿಗೆ ಕಟ್ಟುವಂತೆ ಕಲಾತ್ಮಕವಾಗಿ ಸಂಯೋಜಿಸಿ ಚಿತ್ರ ರಚಿಸಿದ್ದಾರೆ. ಇವರ ಕಲಾಕೃತಿಗಳು, ಭಾವಚಿತ್ರಗಳು ರಾಜ್ಯ, ರಾಷ್ಟ್ರ ಹಾಗೂ ಪ್ರಪಂಚ ಮಟ್ಟದಲ್ಲಿ ಮಾನ್ಯತೆ ಪಡೆದಿವೆ. ಇವರು ಚಿತ್ರಕಲೆಗೆ ಸಲ್ಲಿಸಿರುವ ಅಪಾರ

ಸೇವೆಗಾಗಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಇವರಿಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿಯೂ ದೊರಕಿದೆ. (ಎಸ್‌ಯು.ಎಂ.)

**ಮಧುರಕವಿ**: ಜೈನಕವಿ. ಧರ್ಮನಾಥಪುರಾಣ ಎಂಬ ಕಾವ್ಯದ ಕರ್ತೃ. ಗುಮ್ಮಟಸ್ತುತಿ ಇವನ ಇನ್ನೊಂದು ಕೃತಿ. ಈತನ ತಂದೆ ವಿಷ್ಣು, ತಾಯಿ ನಾಗಾಂಬಿಕೆ, ಹರಿಹರರಾಯನ ಪ್ರಧಾನಿ ಮುದ್ದದಂಡೇಶ ಇವನ ಪೋಷಕ. ಭೂನಾಥಾಸ್ಥಾನಚೂಡಾಮಣಿ ಎಂಬುದರಿಂದ ಈತ ಎರಡನೆಯ ಹರಹರನ (1377–1404) ಆಸ್ಥಾನಕವಿಯಾಗಿದ್ದಂತೆ ಕಂಡುಬರುತ್ತದೆ. ಕವಿಗೆ ಮಧುರಮಾಧವ, ಸರಸಕವಿರಸಾಲವಸಂತ, ಭಾರತೀಮಾನಸಕೇಳೀ ರಾಜಹಂಸ ಮೊದಲಾದ ಬಿರುದುಗಳಿದ್ದಂತೆ ತಿಳಿಯುತ್ತದೆ. ಪೂರ್ವಕವಿಗಳಲ್ಲಿ ಪಂಪ, ಪೊನ್ನ, ರನ್ನ, ನಾಗಚಂದ್ರ, ನೇಮಿಚಂದ್ರ, ಜನ್ನ– ಇವರನ್ನು ಸ್ತುತಿಸಿದ್ದಾನೆ, ಪುಷ್ಪದಂತ, ಗಜಾಂಕುಶ, ಮನಸಿಜ, ಶ್ರೀವಿಜಯ, ಸುಜನೋತ್ತಂಸ ಮೊದಲಾದವರನ್ನು ಪರೋಕ್ಷವಾಗಿ ಸ್ಮರಿಸಿದ್ದಾನೆ. ಇವನನ್ನು 3ನೆಯ ಮಂಗರಸ (ಸು.1508) ಮೊದಲಾದ ಕವಿಗಳು ಸ್ಮರಿಸಿದ್ದಾರೆ. ಕವಿ ತನ್ನನ್ನು 'ತನ್ನಾಣೆಗೋಸಣೆ ಸಲ್ಲುಂ ಸುಕವೀಂದ್ರವೃಂದ ಸಭೆಯೊಳ್ ತಾನೆಂದೊಡಮ್ಮಮ್ಮ ಧಾರಿಣಿಯೊಳ್ ಕೇಳ್ದಡೆಯಾ ಜಡಾಮಧುರನಂ ನಿರ್ಣೀತಕರ್ನಾಟ ಲಕ್ಷಣಭಾಷಾಕವಿರಾಜನಂ ಪ್ರವಿಲಸದ್ವಾಣೀಮುಖಾಂಭೋಜನಂ' ಎಂದು ಅತಿಶಯವಾಗಿ ಹೊಗಳಿಕೊಂಡಿದ್ದಾನೆ.

ಧರ್ಮನಾಥಪುರಾಣ ಹದಿನೈದನೆಯ ತೀರ್ಥಂಕರ ಧರ್ಮನಾಥನ ಚರಿತ್ರೆಯನ್ನೊಳಗೊಂಡ ಕಾವ್ಯ. ಕೃತಿ ಅಸಮಗ್ರವಾಗಿದ್ದು ಆಶ್ವಾಸಗಳು ಎಷ್ಟೆಂದು ತಿಳಿಯುವುದಿಲ್ಲ. ಕಥಾನಿರೂಪಣೆಯಲ್ಲಿ ನವೀನತೆ ಕಡಿಮೆ. ಎಷ್ಟೋ ವೇಳೆ ಕವಿ ಕಥೆಯನ್ನೇ ಕೈಬಿಟ್ಟು ವರ್ಣನೆಯಲ್ಲಿ ತೊಡಗುತ್ತಾನೆ. ಆದರೆ ಈ ವರ್ಣನೆಗಳು ಕೆಲವು ವೇಳೆ ಸಹಜವಾಗಿಯೂ ವಾಸ್ತವಿಕವಾಗಿಯೂ ಇರುವುದು ಗಮನಿಸಬೇಕಾದ ಸಂಗತಿ. ಈ ಕೃತಿಯಿಂದ ಆಯ್ದ ಕೆಲವು ಪದ್ಯಗಳನ್ನು ಅಭಿನವವಾದಿ ವಿದ್ಯಾನಂದನೂ ಭಟ್ಟಾಕಳಂಕನೂ ತಮ್ಮ ಗ್ರಂಥಗಳಲ್ಲಿ ಉದ್ಧರಿಸಿದ್ದಾರೆ.

ಗುಮ್ಮಟಸುತ್ತಿಯು ಶ್ರವಣಬೆಳಗೊಳದ ಗೊಮ್ಮಟೇಶ್ವರನ ದರ್ಶನದಿಂದ ಸ್ಫೂರ್ತಿಹೊಂದಿ ಆತನನ್ನು ಭಾವಪೂರ್ಣವಾಗಿ ಸ್ತುತಿಸಿರುವ ಅಷ್ಟಕ. ಇದರಲ್ಲಿ 9 ವೃತ್ತಗಳಿವೆ. ಪ್ರತಿ ಪದ್ಯವೂ ಗೊಮ್ಮಟೇಶಾ ಎಂದು ಅಂತ್ಯವಾಗುತ್ತದೆ. ಬೊಪ್ಪಣ ಪಂಡಿತನನ್ನು ಬಿಟ್ಟರೆ ಗೊಮ್ಮಟೇಶ್ವರನನ್ನು ಕುರಿತು ಹಾಡಿರುವ ಕವಿಗಳಲ್ಲಿ ಇವನು ಪ್ರಮುಖನಾದವ. ಈ ಪದ್ಯಗಳು ನಿಜವಾಗಿಯೂ ಹೃದಯವನ್ನು ಆರ್ದ್ರಗೊಳಿಸಿ ಮನಸ್ಸಿಗೆ ಸಂತಸವನ್ನುಂಟುಮಾಡುತ್ತವೆ.

ಹಂಪೆಯ ಕೃಷ್ಣ ದೇವಸ್ಥಾನದ ಬಳಿ ಇರುವ 1ನೆಯ ದೇವರಾಯನ ಆಳ್ವಿಕೆಯಲ್ಲಿ, 1410ರಲ್ಲಿ ಹುಟ್ಟಿದ ಒಂದು ಶಾಸನವನ್ನು ಈತನೇ ಬರೆದಂತೆ ಆ ಶಾಸನದ ಕೊನೆಯ ಪದ್ಯದಿಂದ ತಿಳಿಯುತ್ತದೆ. ಶಾಸನದಲ್ಲಿ ಮಂತ್ರಿ ಲಕ್ಷ್ಮೀಧರನು ಮಾಲ್ಯವತ್ ಪರ್ವತದ ಬಳಿ ಗಣೇಶ ಪ್ರತಿಷ್ಠೆ ಮಾಡಿದಂತೆ ಹೇಳಿದೆ. ಅಲ್ಲದೆ, ಕವಿಗೆ ಮಂತ್ರಿಯಿಂದ ಸಹಾಯ ದೊರೆತ ವಿಷಯ, ದೊರೆಗೆ ಪ್ರಾಣಾಪಾಯ ಉಂಟಾದಾಗ ತನ್ನ ಸಾಹಸದಿಂದ ಕವಿ ರಾಜನನ್ನು ಉಳಿಸಿದ ವಿಷಯ–ಇವೂ ಶಾಸನದಿಂದ ವಿದಿತವಾಗುತ್ತವೆ. (ಬಿ.ಎಸ್.ಆರ್‌ಯು.)

**ಮಧುರಚೆನ್ನ**: 1903–53. ಲೇಖಕರು ಹಾಗೂ ಚಿಂತಕರು. ಚೆನ್ನಮಲ್ಲಪ್ಪ ಗಲಗಲಿ ಎಂಬುದು ಇವರ ನಿಜವಾದ ಹೆಸರು. ಮಧುರಚೆನ್ನ ಕಾವ್ಯನಾಮ. ಹುಟ್ಟಿದ್ದು ಇಂಡಿ ತಾಲ್ಲೂಕಿನ ಹಲಸಂಗಿಯ ರೈತಮನೆತನವೊಂದರಲ್ಲಿ. ತಂದೆ ಸಿದ್ಧಲಿಂಗಪ್ಪ, ತಾಯಿ ಅಂಬವ್ವ. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ತಾಯಿಯ ಪೋಷಣೆಯಲ್ಲಿ ಬೆಳೆದರು. ಹುಟ್ಟೂರಿನ ಶಾಲೆಯಲ್ಲಿ ವ್ಯಾಸಂಗಮಾಡಿ, ಕನ್ನಡ ಮುಲ್ಕಿ ಪರೀಕ್ಷೆಯಲ್ಲಿ 1912ರಲ್ಲಿ ತೇರ್ಗಡೆಯಾದರು. ಮುಂದಿನ ವ್ಯಾಸಂಗಕ್ಕಾಗಿ ಸಿದ್ಧತೆಗಳು ನಡೆಯುತ್ತಿದ್ದಂತೆ, ಇವರ ಮನಸ್ಸು ತತ್ತ್ವಜಿಜ್ಞಾಸೆಯತ್ತ ಹರಿಯಿತು; ಸಾಹಿತ್ಯಕ್ಕೆ ಒಲಿಯಿತು. ಇದರಿಂದಾಗಿ ಕ್ರಮಬದ್ಧವಾದ ಇವರ ಶಾಲಾ ಶಿಕ್ಷಣ ನಿಂತಿತು. ಆದರೆ ಓದಿನಲ್ಲಿ ವಿಪರೀತಗೀಳು ಹುಟ್ಟಿದ್ದರಿಂದ, ಸ್ವತಂತ್ರವಾಗಿ ಇಂಗ್ಲಿಷ್ ಮತ್ತು ಬಂಗಾಲಿ ಭಾಷೆಗಳನ್ನು ಕಲಿತರು. ವಚನ ವಾಙ್ಮಯವನ್ನು ವಿಸ್ತಾರವಾಗಿ ಅಧ್ಯಯನ ಮಾಡಿದರಲ್ಲದೆ

ಜನಪದ ಸಾಹಿತ್ಯದ ತತ್ತ್ವ ಸೌಂದರ್ಯಗಳನ್ನರಿತು ಅದರಿಂದಲೂ ಪ್ರಭಾವಿತರಾದರು. ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಮತ್ತು ರವೀಂದ್ರರ ಕೃತಿಗಳನ್ನು ಅಭ್ಯಾಸ ಮಾಡಿದರು. ಮಹರ್ಷಿ ಅರವಿಂದರ ನವ ವೇದಾಂತದ ಆಕರ್ಷಣೆಗೂ ಒಳಗಾದ ಇವರು ಪಾಂಡಿಚೇರಿಯ ಅರವಿಂದಾಶ್ರಮದ ಭಕ್ತರೂ ಆದರು. ಪ್ರತಿ ವರ್ಷವೂ ಅರವಿಂದ ಆಶ್ರಮಕ್ಕೆ ಹೋಗಿಬರುತ್ತಿದ್ದ ಮಧುರಚೆನ್ನರು, ಹಲಸಂಗಿಯಲ್ಲಿ ತಮ್ಮ ಸ್ನೇಹಿತರ ನೆರವಿನಿಂದ ಅರವಿಂದ ಮಂಡಳ ಮತ್ತು ಗೆಳೆಯರ ಗುಂಪು (ಹಲಸಂಗಿ ಸಹೋದರರು) ಎಂಬ ಸಂಸ್ಥೆಗಳನ್ನು ಸ್ಥಾಪಿಸಿ ಅರವಿಂದರ ತತ್ತ್ವಗಳ ಪ್ರಚಾರ ಮತ್ತು ಸಾಹಿತ್ಯ ಚಟುವಟಿಕೆಗಳನ್ನೂ ಗ್ರಂಥಪ್ರಕಟನೆಗಳನ್ನೂ ನಿರ್ವಹಿಸಿದರು.

ಇವರು ತತ್ತ್ವಶಾಸ್ತ್ರ, ಇತಿಹಾಸ, ಸಾಹಿತ್ಯ, ಜಾನಪದ ಮುಂತಾದ ಅನೇಕ ವಿಷಯಗಳನ್ನು ಕುರಿತು ಲೇಖನಗಳನ್ನೂ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಶಬ್ದಸಾಮ್ರಾಜ್ಯದಲ್ಲಿಯ ಮಂತ್ರಶಕ್ತಿಯ ಪುನರುಜ್ಜೀವನ, ಸತ್ಯ, ಹಲಸಂಗಿಯ ಲಾವಣಿಕಾರ ಖಾಜಾಭಾಯಿ, ಇತಿಹಾಸದ ಕವಿಗಳು, ಬಸವಣ್ಣನವರ ಭೋಜನ ಶಾಲೆ, ವಿಜಯಪುರ ಶಿಲಾಶಾಸನ– ಇವು ಇವರ ಮುಖ್ಯ ಲೇಖನಗಳು. ನನ್ನ ನಲ್ಲ (1933) ಇವರ ಒಂದು ಕವನ ಸಂಗ್ರಹ. ಇದು ತುಂಬ ಜನಪ್ರಿಯವಾಗಿದೆ. ಆತ್ಮಸಂಶೋಧನೆ (1935), ಪೂರ್ಣಯೋಗದ ಪಥದಲ್ಲಿ (1960) ಇವು ಆಧ್ಯಾತ್ಮಕ್ಕೆ ಸಂಬಂಧಿಸಿದ ಇವರ ಗ್ರಂಥಗಳು. ಪೂರ್ವರಂಗ (1932), ಕಾಳರಾತ್ರಿ (1933), ಬೆಳಗು (1937) ಈ ಕೃತಿಗಳಲ್ಲಿ ಇವರ ಆತ್ಮಕಥನವಿದೆ. ಕನ್ನಡಿಗರ ಕುಲಗುರು ಶ್ರೀವಿದ್ಯಾರಣ್ಯರು (ಸಿಂಪಿ ಲಿಂಗಣ್ಣನವರೊಂದಿಗೆ) ಎಂಬುದು ಇವರು ಪ್ರಕಟಿಸಿರುವ ಒಂದು ಜೀವನಚರಿತ್ರೆ. ಮಾತೃವಾಣಿ, ಧರ್ಮಕ್ಷೇತ್ರೇ ಕುರುಕ್ಷೇತ್ರೇ, ಪೂರ್ಣಯೋಗ–ಇವು ಇವರು ಅನುವಾದಿಸಿರುವ ಗ್ರಂಥಗಳಲ್ಲಿ ಕೆಲವು.

ಮಧುರಚೆನ್ನರು ಅನೇಕ ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಇವರು ಜನಪದ ಗೀತೆಗಳನ್ನು ಹಾಡುವುದರಲ್ಲೂ ಹೆಸರುಗಳಿಸಿದ್ದರು. 1923ರಲ್ಲಿ ಬಿಜಾಪುರದಲ್ಲಿ ನಡೆದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬೀಸುವ ಕಲ್ಲಿನ ಹಾಡುಗಳು ಎಂಬ ಪ್ರಬಂಧವನ್ನು ಮಂಡಿಸಿದರು. ಸೊಲ್ಲಾಪುರದಲ್ಲಿ ನಡೆದ 33ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು (1950).

ಇವರು 1953 ಆಗಸ್ಟ್ 15ರಂದು ನಿಧನರಾದರು. ಕನ್ನಡ ಸಾಹಿತ್ಯ ಪರಿಷತ್ತು ಇವರ ಜೀವನಚರಿತ್ರೆಯನ್ನು ಪ್ರಕಟಿಸಿದೆ. (ಎಸ್.ಎಲ್.;ಬಿ.ಕೆ.)

**ಮಧುರೆ**: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಗ್ರಾಮ, ಹೋಬಳಿ ಕೇಂದ್ರ. ದೊಡ್ಡಬಳ್ಳಾಪುರದ ನೈಋತ್ಯಕ್ಕೆ 13 ಕಿಮೀ ದೂರದಲ್ಲಿದೆ. ಜನಸಂಖ್ಯೆ 798.

ಈ ಊರಿನಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಇಲ್ಲಿ ಚೈತ್ರ ಮಾಸದಲ್ಲಿ ಕರಗ ನಡೆಯುತ್ತದೆ. ಆಗ ಕೋಲಾಟ ಮುಂತಾದ ಜನಪದ ನೃತ್ಯಗಳು ನಡೆಯುತ್ತವೆ. ಊರಿನ ಸಮೀಪದಲ್ಲಿ ಒಂದು ದೊಡ್ಡ ಕೆರೆಯಿದೆ. ಈ ಕೆರೆಯ ಕೋಡಿಗೆ ಸಮೀಪವಿರುವ ಶನಿಮಹಾತ್ಮನ ದೇವಾಲಯ ಪ್ರಸಿದ್ಧ. ಪ್ರತಿ ಶನಿವಾರ ವಿಶೇಷ ಪೂಜೆಯೂ ಶ್ರಾವಣ ಶನಿವಾರಗಳಲ್ಲಿ ಹೆಚ್ಚಿನ ಪೂಜೆಯೂ ನಡೆಯುತ್ತದೆ. ಈ ಊರಿನಲ್ಲಿ ಪ್ರತಿ ಶನಿವಾರ ಸಂತೆ ಸೇರುತ್ತದೆ. (ಡಿ.ಇ.ಕೆ.ಆರ್.)

**ಮಧುವಯ್ಯ-ಹರಳಯ್ಯ**: 12ನೆಯ ಶತಮಾನದಲ್ಲಿದ್ದ ಶಿವಶರಣರು. ಬಸವಣ್ಣನವರ ಸಾಮಾಜಿಕ ಕ್ರಾಂತಿಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ ಪ್ರಮುಖರು. ಮಧುವಯ್ಯ ಅಥವಾ ಮಧುವರಸ ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಕಲ್ಯಾಣದ ಬಿಜ್ಜಳನಲ್ಲಿ ಒಬ್ಬ ಶ್ರೇಷ್ಠ ಅಧಿಕಾರಿಯಾಗಿದ್ದು ಕ್ರಮೇಣ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಶರಣನಾಗಿ ಅವರ ಸರ್ವಸಮಾನತೆಯ ತತ್ತ್ವಗಳನ್ನು ಒಪ್ಪಿಕೊಂಡಂತೆ ತೋರುತ್ತದೆ. ಹರಳಯ್ಯನು ಪಾದರಕ್ಷೆ ಹೊಲಿದು ಜೀವಿಸುವ ಕುಲದವ. ಹೆಂಡತಿ ಕಲ್ಯಾಣಿ, ಮಗ ಶೀಲವಂತಯ್ಯ. ಇವನೂ ಬಸವಣ್ಣನವರ ಪ್ರಭಾವಕ್ಕೊಳಗಾಗಿ ಶರಣನಾದ. ಅನಂತರ ಯಾವುದೋ ಒಂದು ಸಂದರ್ಭದಲ್ಲಿ ಮಧುವಯ್ಯನ ಮಗಳು ಮತ್ತು ಹರಳಯ್ಯನ ಮಗ-ಇವರಲ್ಲಿ ವಿವಾಹ ವೇರ್ಪಟ್ಟಿತು. ಸಂಪ್ರದಾಯವಾದಿಗಳು ವರ್ಣಸಂಕರವಾಯಿತೆಂದು ಬಿಜ್ಜಳನ ಬಳಿ ದೂರೊಯ್ದರು. ಹರಳಯ್ಯ ಮಧುವರಸರಿಗೆ ಬಿಜ್ಜಳ ಉಗ್ರ ಶಿಕ್ಷೆ ವಿಧಿಸಿದ. ಇದು ಕಲ್ಯಾಣದ ಕ್ರಾಂತಿಗೆ ಕಾರಣವಾಯಿತು. ರಾಜಕೀಯ ಘಟನೆಗಳೂ ಇದರ ಜೊತೆ ಸೇರಿ ಬಿಜ್ಜಳನ ಕೊಲೆಯಲ್ಲಿ ಕ್ರಾಂತಿ ಪರ್ಯವಸಾನವಾಯಿತು. ಬಸವಣ್ಣನವರ ಕಾರ್ಯಕ್ಷೇತ್ರ ಕುಸಿಯಿತು. ಶರಣರು ಕಲ್ಯಾಣವನ್ನು ಬಿಟ್ಟರು. ಪಾಲ್ಕುರಿಕೆ ಸೋಮನಾಥ ಮತ್ತು ಭೀಮಕವಿ ಬರೆದಿರುವ ಬಸವಪುರಾಣಗಳಲ್ಲಿ ಮಧುವಯ್ಯ ಮತ್ತು ಹರಳಯ್ಯ ಇಬ್ಬರೂ ಶಿಕ್ಷೆಗೆ ಒಳಗಾದುದರ ಉಲ್ಲೇಖ ಕಂಡುಬರುತ್ತದೆ. ಉತ್ತರದೇಶದ ಬಸವಲಿಂಗದೇವನ ಭೈರವೇಶ್ವರಕಾವ್ಯದ ಕಥಾಸಾಗರದಲ್ಲಿ ಮತ್ತು ಶರಣಲೀಲಾಮೃತದಲ್ಲಿ (ಚೆನ್ನಪ್ಪ ಕವಿ) ಇವರಿಬ್ಬರ ಕಥೆ ನಿರೂಪಿತವಾಗಿದೆ.

ಮಧುವಯ್ಯ ವಚನಕಾರನೂ ಆಗಿದ್ದಾನೆ. ಅರ್ಕೇಶ್ವರಲಿಂಗ ಎಂಬ ಅಂಕಿತವುಳ್ಳ ಈತನ ಅನೇಕ ವಚನಗಳು ದೊರೆತಿವೆ.

ಹರಳಯ್ಯನ ವಚನಗಳು ದೊರೆತಿಲ್ಲ. ಆದರೆ ಬಸವಣ್ಣನ ಪರುಷ ಸ್ಪರ್ಶಕ್ಕೆ ಸಿಕ್ಕು ಪರಿವರ್ತಿತರಾದ ದೀನದಲಿತ ವರ್ಗಗಳ ಉಜ್ವಲ ಪ್ರತಿನಿಧಿಯಾಗಿ ಈತ ಕಂಡುಬರುತ್ತಾನೆ. (ಎಚ್.ಟಿ.ಎಸ್.)

**ಮಧ್ವಾಚಾರ್ಯ**: 1238-1317. ದ್ವೈತ ಸಿದ್ಧಾಂತದ ಪ್ರತಿಪಾದಕರು, ಮಾಧ್ವಮತ ಪ್ರವರ್ತಕರು. ಇವರ ಪೂರ್ವಾಶ್ರಮದ ಹೆಸರು ವಾಸುದೇವ. ಉಡುಪಿಯ ಬಳಿ ಕುಂಜಾರು ಬೆಟ್ಟದ ಬಳಿಯಲ್ಲಿ ಪಾಜಕ (ಬೆಳ್ಳೆ) ಎಂಬಲ್ಲಿ ಹುಟ್ಟಿದರು.

ತುಳುನಾಡು ಆ ಕಾಲಕ್ಕೆ ಹಲವಾರು ಧಾರ್ಮಿಕ ಪರಂಪರೆಗಳ ಸಂಗಮ ಕ್ಷೇತ್ರವೆಂದು ಪ್ರಸಿದ್ಧವಾಗಿದ್ದಿತು. ಭೂತಾರಾಧನೆ, ನಾಗಪೂಜೆ, ಶೈವ, ಜೈನ, ನಾಥ, ಭಾಗವತ ಸಂಪ್ರದಾಯಗಳು ಬೇರೂರಿದ್ದ ಅಲ್ಲಿ ಆಚಾರ್ಯರು ವೈದಿಕಧರ್ಮವನ್ನು ಎತ್ತಿಹಿಡಿದು ನಿಲ್ಲಿಸಿದರು. ಉಡುಪಿಯ ಅನಂತೇಶ್ವರ ದೇವಾಲಯ ಸುತ್ತಮುತ್ತಲ ಜನರಿಗೆಲ್ಲ ಪವಿತ್ರವೆನಿಸಿದ್ದಿತು. ಅನಂತೇಶ್ವರನ ಆರಾಧಕರಲ್ಲಿ ಒಬ್ಬನಾದ ಪುರಾಣಿಕ ನಡುಮನೆಭಟ್ಟ ಇವರ ತಂದೆ. ಮೊದಲ ವಿದ್ಯಾಭ್ಯಾಸವನ್ನು ಹಳ್ಳಿಯಲ್ಲಿಯೇ ಮುಗಿಸಿದ ಆಚಾರ್ಯರು ಬ್ರಹ್ಮಜ್ಞಾನದ ಹಂಬಲ ಹೆಚ್ಚಿ ಸಂನ್ಯಾಸಿಯಾಗಿ, ಅನಂತೇಶ್ವರನ ಗುಡಿಯಲ್ಲಿ ತಂಗಿದ್ದ ಅಚ್ಯುತಪ್ರೇಕ್ಷ ಎಂಬುವರಲ್ಲಿ ವೇದಾಂತ ವಿದ್ಯಾಭ್ಯಾಸವನ್ನು ಕೈಗೊಂಡರು. ಇವರು ಸಂನ್ಯಾಸಿಗಳಾದ ಮೇಲೆ ಇವರಿಗೆ ಮಧ್ವಾಚಾರ್ಯ, ಆನಂದತೀರ್ಥ, ಪೂರ್ಣಪ್ರಜ್ಞ ಮೊದಲಾದ ಹೆಸರುಗಳು ಬಂದುವು.

ವಿದ್ಯಾಭ್ಯಾಸದ ಅವಧಿಯಲ್ಲಿಯೇ ಆಚಾರ್ಯರಿಗೆ ಆಗ ಸಿದ್ಧಾಂತವೆಂದು ಪ್ರಸಿದ್ಧವಾಗಿದ್ದ ಅದ್ವೈತ ವಿಚಾರದಲ್ಲಿ ಸಂಶಯಗಳು ತಲೆದೋರಿದುವು. ಈ ನಿಲುವು ವೇದಶಾಸ್ತ್ರ ಸಮ್ಮತವಲ್ಲವೆಂದು ಅವರಿಗೆ ತೋರಿದಾಗ ಅವರ ವಿದ್ಯಾಗುರುಗಳಿಗೂ ಅವರಿಗೂ ಭಿನ್ನಾಭಿಪ್ರಾಯ ಮೂಡಿತು. ಗುರುಗಳಿಂದಲೂ ಲಿಕುಚ (ಪೇಜತ್ತಾಯ) ವಂಶದ ಹಿರಿಯ ಯತಿಯೊಬ್ಬರಿಂದಲೂ ಪ್ರೇರಿತರಾಗಿ ಆಚಾರ್ಯರು ಭಗವದ್ಗೀತಾ ಪ್ರಸ್ಥಾನಕ್ಕೆ ತಮ್ಮ ಸಿದ್ಧಾಂತದ ಪ್ರಕಾರ ಭಾಷ್ಯವೊಂದನ್ನು ಬರೆದು ಗುರುಗಳಿಗೆ ಒಪ್ಪಿಸಿ ಉತ್ತರದೇಶದ ಯಾತ್ರೆಯನ್ನು ಕೈಗೊಂಡರು. ಹಿಮಾಲಯ ಪ್ರಾಂತ್ಯದ ಬದರಿಕಾಶ್ರಮದಲ್ಲಿ ಬ್ರಹ್ಮಸೂತ್ರಗಳಿಗೂ ದ್ವೈತಪರವಾದ ಭಾಷ್ಯವನ್ನು ಸಿದ್ಧಪಡಿಸಿ ಉಡುಪಿಗೆ ಹಿಂದಿರುಗಿದಾಗ ಅನಂತೇಶ್ವರನ ಗುಡಿಯ ಸಮೀಪದಲ್ಲಿ ಕೃಷ್ಣನ ಮಂದಿರವನ್ನು ವ್ಯವಸ್ಥೆ ಮಾಡಿದರು. ಈಗ ಪ್ರಸಿದ್ಧವಾಗಿರುವ ಉಡುಪಿ ಕೃಷ್ಣನ ಗುಡಿ ಇದೇ.

ಮತ್ತೊಮ್ಮೆ ಆಚಾರ್ಯರು ಉತ್ತರ ದೇಶದ ಯಾತ್ರೆಯನ್ನು ಕೈಗೊಂಡು ವಾದಿಗಳನ್ನು ನಿಗ್ರಹಿಸಿ, ಎಲ್ಲೆಡೆಯಲ್ಲಿಯೂ ದ್ವೈತಸಿದ್ಧಾಂತವನ್ನು ಸಮರ್ಥಿಸಿ, ಶಿಷ್ಯಸಂಗ್ರಹ ಮಾಡಿದರು. ಗೋದಾವರೀ ತೀರದಲ್ಲಿ ಶೋಭನಭಟ್ಟ (ಪದ್ಮನಾಭತೀರ್ಥ) ಮತ್ತು ಕಳಿಂಗ ಪ್ರಾಂತ್ಯದಲ್ಲಿ ಶ್ಯಾಮಶಾಸ್ತ್ರಿ (ನರಹರಿ ತೀರ್ಥ) ಇವರಿಬ್ಬರೂ ಇವರ ಶಿಷ್ಯರಾದರು. ಹೀಗೆ ದೇಶದಲ್ಲೆಲ್ಲ ಸುವಿಖ್ಯಾತರಾಗಿ, ದ್ವೈತಸಿದ್ಧಾಂತಪ್ರವರ್ತಕರಾಗಿ ನೂರಾರು ಪ್ರತಿಭಾಶಾಲಿ ಶಿಷ್ಯರ ಗುರುಗಳಾಗಿ ಹಿಂದಿರುಗಿದ ಮಧ್ವಾಚಾರ್ಯರು ಉಡುಪಿಯಲ್ಲಿ ಅನಂತೇಶ್ವರನ ಗುಡಿಯಲ್ಲಿ ಶಿಷ್ಯರಿಗೆ ಪಾಠ ಹೇಳುತ್ತಿದ್ದಾಗ ಮರೆಯಾದರು. ಆಗ ಇವರಿಗೆ ಎಂಬತ್ತು ವರ್ಷ ವಯಸ್ಸು. ತಿರೋಧಾನದ ವರ್ಷ 1317, ಮಾಘ ಶುದ್ಧ ನವಮಿ. ಇದನ್ನು ಮಧ್ವನವಮಿಯೆಂದು ಇವರ ಅನುಯಾಯಿಗಳು ವಿಶೇಷ ಸಂಭ್ರಮದಿಂದ ಆಚರಿಸುವ ಪದ್ಧತಿಯಿದೆ. ನಾರಾಯಣ ಪಂಡಿತಾಚಾರ್ಯರ 'ಮಧ್ವವಿಜಯ' ಮಧ್ವಾಚಾರ್ಯರ ಜೀವನ ಸಾಧನೆಗಳನ್ನು ವಿವರಿಸುವ ಮುಖ್ಯ ಆಧಾರಗ್ರಂಥ. ಇದು ಮಧ್ವಾಚಾರ್ಯರ ಅನಂತರ ಸ್ವಲ್ಪ ಕಾಲದಲ್ಲೇ ರಚಿತವಾಗಿದ್ದು ಇಲ್ಲಿಯ ವಿವರಗಳು ಬಹುಮಟ್ಟಿಗೆ ಸಾಧಾರಿತವಾದವು ಎಂಬ ನಂಬುಗೆಯಿದೆ.

ಆಚಾರ್ಯರು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವ ಮೂವತ್ತೇಳು ಗ್ರಂಥಗಳನ್ನು ರಚಿಸಿದರು. ಇವಕ್ಕೆ ಒಟ್ಟಾಗಿ 'ಸರ್ವಮೂಲ' ಎಂಬ ಹೆಸರಿದೆ. ಬ್ರಹ್ಮಸೂತ್ರ ಪ್ರಸ್ಥಾನದ ಮೇಲೆ ಭಾಷ್ಯ, ಅನುವ್ಯಾಖ್ಯಾನ, ಅಣುಭಾಷ್ಯ, ನ್ಯಾಯವಿವರಣ- ಈ ನಾಲ್ಕು ಗ್ರಂಥಗಳು, ಉಪನಿಷತ್ ಪ್ರಸ್ಥಾನದ ಮೇಲೆ ದಶೋಪನಿಷದ್ಭಾಷ್ಯಗಳು, ಗೀತಾಪ್ರಸ್ಥಾನದ ಮೇಲೆ ಭಗವದ್ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯನಿರ್ಣಯ-ಈ ಎರಡು ಗ್ರಂಥಗಳು, ದಶಪ್ರಕರಣಗಳು (ಅಂದರೆ ಪ್ರಮಾಣಲಕ್ಷಣ, ಕಥಾಲಕ್ಷಣ, ಉಪಾಧಿಖಂಡನ, ಮಾಯಾವಾದಖಂಡನ, ಪ್ರಪಂಚ ಮಿಥ್ಯಾತ್ವಾನುವಾದ ಖಂಡನ, ತತ್ತ್ವಸಂಖ್ಯಾನ, ತತ್ತ್ವೋದ್ಯೋತ, ಕರ್ಮನಿರ್ಣಯ, ವಿಷ್ಣುತತ್ತ್ವ

ನಿರ್ಣಯ, ತತ್ತ್ವವಿವೇಕ), ಭಾರತ ಮತ್ತು ಭಾಗವತಗಳಿಗೆ ತಾತ್ಪರ್ಯ ನಿರ್ಣಯಗಳು, ಯಮಕಭಾರತ, ಋಗ್ಭಾಷ್ಯ, ಜಯಂತೀ ನಿರ್ಣಯ, ಯತಿಪ್ರಣವಕಲ್ಪ, ಕೃಷ್ಣಾಮೃತಮಹಾರ್ಣವ, ಸದಾಚಾರಸ್ಮೃತಿ, ತಂತ್ರಸಾರ ಸಂಗ್ರಹ, ದ್ವಾದಶಸ್ತೋತ್ರ, ನಖಸ್ತುತಿ–ಇವು ಮಧ್ವಾಚಾರ್ಯರ ಕೃತಿಗಳು.

ಮಧ್ವಾಚಾರ್ಯರ ಸಿದ್ಧಾಂತ ದ್ವೈತವಾದ. ಸ್ವತಂತ್ರನಾದ ಬ್ರಹ್ಮ, ಪರತಂತ್ರಗಳಾದ ಜೀವ, ಜಡ–ಈ ಎರಡೂ ಬೇರೆ ಬೇರೆ ತತ್ತ್ವಗಳೆಂಬುದು ಸಿದ್ಧಾಂತದ ಮೂಲ ಅಂಶ. ಇವುಗಳಲ್ಲಿ ಭೇದವನ್ನು ಪ್ರತಿಪಾದಿಸುವುದ ರಿಂದ ಇವರ ಸಿದ್ಧಾಂತಕ್ಕೆ ಭೇದವಾದವೆಂಬ ಹೆಸರೂ ಇದೆ. ಜೀವ–ಈಶ್ವರ, ಜೀವ–ಜೀವ, ಜಡ–ಜೀವ, ಜಡ–ಈಶ್ವರ, ಜಡ–ಜಡ ಎಂಬ ಪಂಚಭೇದಗಳು ನಿತ್ಯಸತ್ಯಗಳೆಂಬ ಪ್ರತಿಪಾದನೆಯನ್ನು, ಅದರಲ್ಲೂ ಬಹುಮುಖ್ಯವಾದ ಜೀವ–ಈಶ್ವರ ಭೇದವನ್ನು ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಪ್ರಮಾಣಗಳಿಂದ ಪ್ರತಿಪಾದಿಸಿದ್ದಾರೆ. ಪ್ರಪಂಚ ಸತ್ಯ, ವಿಷ್ಣು ಸರ್ವೋತ್ತಮ, ದೇವ, ಜೀವ, ಜಡ ಎಲ್ಲದರಲ್ಲೂ ತರತಮತ್ವ ವಿದೆ. ಎಂಬುದು ಈ ಸಿದ್ಧಾಂತದ ಇತರ ಮುಖ್ಯಾಂಶಗಳು.

ಉಡುಪಿಯಲ್ಲಿ ಕೃಷ್ಣನನ್ನು ಪ್ರತಿಷ್ಠೆ ಮಾಡಿದ ಅನಂತರ ಆಲಯದಲ್ಲಿ ಪೂಜೆ ಅವ್ಯಾಹತವಾಗಿ ನಡೆಯಬೇಕೆಂಬ ಉದ್ದೇಶದಿಂದ ಆಚಾರ್ಯರು ಪರ್ಯಾಯ ಪದ್ಧತಿಯನ್ನು ಏರ್ಪಡಿಸಿದರು. ಇದು ಈಗಲೂ ನಡೆದು ಬರುತ್ತಿದೆ. ಗುಡಿಯಲ್ಲಿ ಪೂಜೆಯನ್ನೂ ಕೃಷ್ಣಮಠದ ನಿರ್ವಹಣೆಯನ್ನೂ ಎರಡು ವರ್ಷಗಳಿಗೊಮ್ಮೆ ಪರ್ಯಾಯ ಕ್ರಮದಲ್ಲಿ ಎಂಟು ಮಠಗಳೂ ಕೈಗೊಳ್ಳುತ್ತಿವೆ. ಆಚಾರ್ಯರು ಏರ್ಪಡಿಸಿದ ಅಷ್ಟಮಠಗಳು ಫಲಿಮಾರು, ಆದಮಾರು, ಕೃಷ್ಣಾಪುರ, ಪುತ್ತಿಗೆ, ಶೀರೂರು, ಕಾಣಿಯೂರು, ಪೇಜಾವರ, ಸೋದೆಮಠಗಳೆಂದು ಪ್ರಸಿದ್ಧವಾಗಿವೆ. ಈ ಎಂಟರಲ್ಲಿ ದ್ವಂದ್ವಮಠಗಳೆಂಬ ಕಲ್ಪನೆಯೂ ಉಂಟು. ಕೃಷ್ಣನ ಗುಡಿಯೂ ಕೃಷ್ಣಮಠವೂ ಯಾವೊಂದು ಮಠದ ಅಥವಾ ಮಠಾಧೀಶರ ಸ್ವಾಮ್ಯವೂ ಆಗಿರದೆ ಒಂದೊಂದು ಮಠವೂ ಎರಡು ವರ್ಷಗಳು ಮಾತ್ರ ಅದರ ಅಧಿಕಾರವನ್ನೂ ಹೊಣೆಗಾರಿಕೆಯನ್ನೂ ವಹಿಸಿಕೊಳ್ಳುವುದು ಸ್ವಾರಸ್ಯವಾದ ಪದ್ಧತಿ. ಮೊದಲು ಎರಡು ತಿಂಗಳ ಅವದಿ ಇದ್ದುದನ್ನು ಎರಡು ವರ್ಷಗಳಿಗೆ ಮಾರ್ಪಡಿಸಿ ಈಗಿನ ಪರ್ಯಾಯದ ವಿವರಗಳನ್ನು ನಿರ್ದೇಶಿಸಿದವರು ಸೋದೆಮಠದ ವಾದಿರಾಜರೆಂದು ಪ್ರತೀತಿ ಇದೆ.

ಉಡುಪಿಯ ಎಂಟು ಮಠಗಳಲ್ಲದೆ ಉತ್ತರಾಧಿಮಠ, ವ್ಯಾಸರಾಯಮಠ, ರಾಘವೇಂದ್ರಸ್ವಾಮಿ ಮಠ, ಮುಳಬಾಗಲು ಮಠ, ಬಾಲಗಾರತು ಮಠ, ಮಾಧವ ತೀರ್ಥಮಠ ಮೊದಲಾದ ಇತರ ಮಠಗಳೂ ಮದ್ವಾಚಾರ್ಯರ ಪರಂಪರೆಗೇ ಸೇರಿವೆ. ಕರ್ನಾಟಕವಲ್ಲದೆ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲೂ ಮಧ್ವಾಚಾರ್ಯರ ಅನುಯಾಯಿಗಳು ಇದ್ದಾರೆ. ಬಂಗಾಲದ ಕಡೆ ಗೌಡೀಯ ಪಂಥದವರಿಗೂ ಮಧ್ವಾಚಾರ್ಯರು ಗುರುಗಳು. (ಎಸ್.ಕೆ.ಆರ್.)

**ಮನಸಂದ ಮಾರಿತಂದೆ**: 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಬಸವಣ್ಣನವರ ಹಿರಿಯ ಸಮಕಾಲೀನ.

ಭಕ್ತಿವಿಶೇಷವ ಮಾಡುವರೆ ಹತ್ತು ಬೆರಳುಗಳುಂಟು, ಹಾಸಿದುಡಿದರೆ ತನಗುಂಟು, ತನ್ನ ಪ್ರಮಥರಿಗುಂಟು ಮಾರಿತಂದೆಗಳಂತೆ ಎನಗೇಕಹುದಯ್ಯ? ರತ್ನದ ಸಂಕಲೆಯನ್ನಿಕ್ಕಿ ಕಾಡಿಹೆ ಕೂಡಲ ಸಂಗಮದೇವ ಶಿವಧೋ ಶಿವಧೋ ಎಂಬ ಬಸವಣ್ಣನವರ ವಚನದಲ್ಲಿ ಮಾರಿತಂದೆ ಎಂಬ ಹೆಸರಿನ ಉಲ್ಲೇಖ ಕಂಡುಬರುತ್ತದೆ. ಇದು ವಂಶದ ಹೆಸರೋ ಅಥವಾ ಗೌರವಸೂಚಕ ಪದವೋ ಆಗಿರುವಂತೆ ತೋರುತ್ತದೆ.

ಇದುವರೆಗೆ ಇವನ 100 ವಚನಗಳು ದೊರೆತಿವೆ. ಮನಸಂದಿತ್ತು ಮಾರೇಶ್ವರ ಎಂಬುದು ಇವನ ವಚನಗಳ ಅಂಕಿತ. ಈತ ಉತ್ತಮ ಶಿವಾನುಭವಿಯಿದ್ದಂತೆ ಶ್ರೇಷ್ಠ ವಚನಕಾರನೂ ಹೌದು. ಇವನ ವಚನಗಳು ಸುಲಭವಾಗಿ ಅರ್ಥವಾಗುವಂತಿವೆ.

ಕನ್ನಡದಲ್ಲಿ ಇವನಲ್ಲದೆ ಮಾರಿತಂದೆ ಎಂಬ ಹೆಸರಿನ ಹಲವಾರು ವಚನಕಾರರು ಕಂಡುಬರುತ್ತಾರೆ. ಕೆಲವು ವಚನಗಳು ಮನಸಂದ ಮಾರೇಶ್ವರ ಎಂಬ ಅಂಕಿತದಲ್ಲಿಯೂ ರಚಿತವಾಗಿವೆ. ಈ ವಚನಗಳ ಕರ್ತೃ ಯಾರು ಎಂಬುದು ತಿಳಿದುಬರುವುದಿಲ್ಲ. (ಎಸ್.ಆರ್.ವಿ.)

**ಮನುಮುನಿ ಗುಮ್ಮಟದೇವ**: 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಈತ ಮೊದಲು ಜೈನಧರ್ಮಾವಲಂಬಿಯಾಗಿದ್ದು ಅನಂತರ ವೀರಶೈವ ಧರ್ಮವನ್ನು ಸ್ವೀಕರಿಸಿದಂತೆ ತಿಳಿದುಬರುತ್ತದೆ. ಸಕಲ ಪುರಾತನರ ವಚನಗಳಲ್ಲಿ ಇವನ ಬಗ್ಗೆ ಮಾಹಿತಿ ನೀಡುವ ಗದ್ಯವೊಂದು ಈ ರೀತಿ ಇದೆ: ಬಿಜ್ಜಳಂಗೆ ಹದಿನೆಂಟು ದೋಷಗಳಂ ತೀರ್ಚಿ, ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳ ಸರ್ವಆತ್ಮ ಭೂತಹಿತನಾಗಿ ಇರೆಂದು ಆತನಿಗೆ ಉಪದೇಶ ಗುರುವಾದ ಮಿಮಾಸಕಂಗೆ ಸಕಲ ವ್ರತನೇಮ ನಿತ್ಯವ್ರತಮಾನ ಕೃತ್ಯ ಜಿನನೇಮ ಗುಣನಾಮವಂ ಬೋಧಿಸಿದ ಬೌದ್ಧ ಅವತಾರಕ್ಕೆ ಮುಖ್ಯ ಆಚಾರ್ಯನಾದ, ತನ್ನ ಸಮಯಕ್ಕೆ ಸಿಂಧು ಚಂದ್ರನಾದ ಮನುಮುನಿ ಗುಮ್ಮಟದೇವಗಳ ವಚನ (ಪು.245). ಇದರ ಆಧಾರದಿಂದ ಗುಮ್ಮಟದೇವ ಕಳಚುರಿಯ ಬಿಜ್ಜಳನ ಸಮಕಾಲೀನನೂ ಅವನ ಗುರುವೂ ಆಗಿದ್ದನೆಂದು ತಿಳಿದುಬರುತ್ತದೆ.

ಈತನ ಗುಡಿಯ ಗುಮ್ಮಟನೊಡೆಯ ಅಗಮೇಶ್ವರಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ ಇವನ 100 ವಚನಗಳು ದೊರಕಿವೆ. ಈ ವಚನಗಳನ್ನು ಬೆಡಗಿನ ವಚನಗಳು ಮತ್ತು ಸಾಮಾನ್ಯ ವಚನಗಳೆಂದು ವಿಭಾಗಿಸಬಹುದು. ಬೆಡಗಿನ ವಚನಗಳು ಹೆಚ್ಚು ತಾತ್ತ್ವಿಕತೆಯಿಂದ ಕೂಡಿವೆ. ಕೆಲವು ವಚನಗಳಲ್ಲಿ ಸಾಹಿತ್ಯಕ ಅಂಶವೂ ಕಂಡುಬರುತ್ತದೆ. (ಎಸ್.ಆರ್.ವಿ.)

**ಮನ್ರೋ,ಥಾಮಸ್**: 1761–1827. ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿದ್ದ ಯೋಧ, ಆಡಳಿತಗಾರ.

ಸ್ಕಾಟ್ಲೆಂಡಿನ ಗ್ಲಾಸ್ಗೊನಲ್ಲಿ ಅಲೆಗ್ಸಾಂಡರ್ ಮನ್ರೋವಿನ ಪುತ್ರನಾಗಿ 1761 ಮೇ 27ರಂದು ಜನಿಸಿದ. ಅನಂತರ ಅಲ್ಲಿಯ ವಿದ್ಯಾಭ್ಯಾಸ ಮುಗಿಸಿದ ಮನ್ರೋ ಈಸ್ಟ್ ಇಂಡಿಯಾ ಕಂಪನಿಯ ಮದರಾಸು ಸೈನ್ಯವನ್ನು ಸೇರಿದ (1780). ಸರ್ ಹೆಕ್ಟರ್ ಮನ್ರೋ ಮತ್ತು ಸರ್ ಐರ್ಕೂಟ್ ಇವರ ನೇತೃತ್ವದಲ್ಲಿ 1780ರಿಂದ 1783ರ ವರೆಗೆ ನಡೆದ ಮೈಸೂರು ಯುದ್ಧದಲ್ಲಿ ಭಾಗವಹಿಸಿದ. 1781ರಲ್ಲಿ ನಡೆದ ಪೊಲಿಲೂರು ಕದನದಲ್ಲಿಯೂ ಭಾಗವಹಿಸಿದ್ದ. 1788ರಲ್ಲಿ ಗುಪ್ತಚಾರ ಇಲಾಖೆಯಲ್ಲಿ ಕಾರ್ನ್‌ವಾಲೀಸನ ಅಧೀನದಲ್ಲಿ ಇದ್ದ. ಲೆಫ್ಟಿನೆಂಟ್ ಆಗಿ ಟಿಪ್ಪುವಿನ ವಿರುದ್ಧ ದಂಡೆಯಾತ್ರೆಯಲ್ಲಿ 1790ರಲ್ಲಿ ಬಾರಾ ಮಹಲ್ ಕ್ಷೇತ್ರದಲ್ಲಿ ಭಾಗವಹಿಸಿದ್ದ. ಅನಂತರ ಅಲ್ಲಿಯೇ ಸಿವಿಲ್ ಖಾತೆಯಲ್ಲಿದ್ದ. ಪುನಃ 1799ರಲ್ಲಿ ಸೈನ್ಯವನ್ನು ಸೇರಿದ. ಟಿಪ್ಪುವಿನ ಪತನದ ಅನಂತರ ಬ್ರಿಟಿಷರು ಆಕ್ರಮಿಸಿದ್ದ ಪ್ರದೇಶಗಳ ಭಾಗವೊಂದನ್ನು ಮೈಸೂರಿನ ರಾಜಮನೆತನಕ್ಕೆ ಕೊಡಲು ತೀರ್ಮಾನಿಸಿದಾಗ, ಅವುಗಳ ವಿವರಗಳನ್ನು ವ್ಯವಸ್ಥೆಗೊಳಿಸಲು ಗವರ್ನರ್ ಜನರಲ್ ವೆಲ್ಲೆಸ್ಲಿ ನೇಮಿಸಿದ್ದ ಐವರು ಕ್ಯಾಪ್ಟನ್‌ಗಳ ಸಮಿತಿಗೆ ಮನ್ರೋ ಸಹಕಾರ್ಯದರ್ಶಿಯಾಗಿದ್ದ. 1800–1807ರ ವರೆಗೆ ತುಂಗಭದ್ರಾ ನದಿಯ ದಕ್ಷಿಣಕ್ಕಿರುವ ಪ್ರದೇಶಗಳ ಆಡಳಿತ ನಡೆಸುತ್ತ ರೈತವಾರಿ ಭೂಕಂದಾಯ ಪದ್ಧತಿಯನ್ನು ಜಾರಿಗೆ ತಂದು ಜನಪ್ರಿಯನಾದ.

1813ರಲ್ಲಿ ಕರ್ನಲ್ ಆಗಿ ನೇಮಿಸಲ್ಪಟ್ಟ ಅನಂತರ ನ್ಯಾಯಾಡಳಿತ ಮತ್ತು ಪೋಲಿಸ್ ಇಲಾಖೆಯಲ್ಲಿ ಪುನಃ ಬ್ರಿಗೇಡಿಯರ್ ಜನರಲ್ ಆಗಿ, ಪಿಂಡಾರಿಗಳು ಮತ್ತು ಮರಾಠರ ಮೇಲೆ 1817–18ರಲ್ಲಿ ಯುದ್ಧಮಾಡಿದ. ಸಂಡೂರನ್ನು ತಹಬಂದಿಗೆ ತಂದು, ಧಾರವಾಡದಲ್ಲಿ ಸೈನ್ಯ ಕಟ್ಟಿ ಡಂಬಳ, ಹುಬ್ಬಳ್ಳಿ, ಬಾದಾಮಿ ಮತ್ತು ಬೆಳಗಾಂವಿಗಳನ್ನು ಗೆದ್ದುಕೊಂಡ. 1820ರ ಜೂನ್‌ಲ್ಲಿ ಮದರಾಸಿನ ಗವರ್ನರ್ ಆಗಿದ್ದು 1824ರಿಂದ 1826ರ ವರೆಗೆ ನಡೆದ ಮೊದಲ ಬರ್ಮಾ ಯುದ್ಧದಲ್ಲಿ ಸಹಾಯ ಮಾಡಿದ.



ಮೈಸೂರಿನ ರಾಜರು ಮತ್ತು ರೆಸಿಡೆಂಟ್‌ನ ನಡುವೆ ಉಂಟಾಗಿದ್ದ ತಪ್ಪು ತಿಳಿವಳಿಕೆಯ ಪರಿಣಾಮವಾಗಿ ಹುಟ್ಟಿದ ವೈಮನಸ್ಯವನ್ನು ನಿವಾರಿಸಲು 1825ರಲ್ಲಿ ಮನ್ರೋ ಮೈಸೂರಿಗೆ ಭೇಟಿ ಇತ್ತು ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ಇಬ್ಬರ ನಡುವಣ ಸಂಬಂಧವನ್ನು ಉತ್ತಮಪಡಿಸಿದ.

ಕನ್ನಡ ಪ್ರದೇಶಗಳನ್ನೆಲ್ಲ ಒಂದೇ ಆಡಳಿತದಲ್ಲಿ ಒಟ್ಟುಗೂಡಿಸಬೇಕೆಂದು ಸೂಚಿಸಿದವರಲ್ಲಿ ಮನ್ರೋ ಮೊದಲಿಗ. ಕೃಷ್ಣಾನದಿಯ ದಕ್ಷಿಣಕ್ಕಿರುವ ಪ್ರದೇಶಗಳು, ಸೊಲ್ಲಾಪುರದ ಸಾಂಗ್ಲಿ ಮತ್ತು ಮಿರಜಗಳ ಕೆಲವು ಪ್ರದೇಶಗಳನ್ನು ಮುಂಬಯಿ ಪ್ರಾಂತ್ಯದಿಂದ ಮದರಾಸು ಪ್ರಾಂತ್ಯಕ್ಕೆ ಸೇರಿಸಿದರೆ ಆಡಳಿತ, ವಿದ್ಯಾಭ್ಯಾಸ ಮತ್ತು ಸಾಮಾಜಿಕ ದೃಷ್ಟಿಯಿಂದ ಕನ್ನಡಿಗರೆಲ್ಲರ ಸಾಮರಸ್ಯಕ್ಕೆ ಅನುಕೂಲವಾಗುವುದೆಂದು ಈತ ವಾದಿಸಿದ. ಈತ ಕಾಲರಾ ಬೇನೆಯಿಂದ 1827 ಜುಲೈ 7ರಂದು ನಿಧನನಾದ.

(ಕೆ.ವಿ.ಟಿ.)

**ಮಮದಾಪುರ**: ಬಿಜಾಪುರ ಜಿಲ್ಲೆಯ ಅದೇ ತಾಲ್ಲೂಕಿನಲ್ಲಿ ಬಿಜಾಪುರದಿಂದ 35 ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 3,818.

ಈ ಹಳ್ಳಿ ಚಿಕ್ಕದಾಗಿದ್ದರೂ ಭವ್ಯವಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಆದಿಲ್ ಶಾಹೀ ಅರಸ ಮಹಮ್ಮದನ (1627–56) ಜನಹಿತ ಪ್ರವೃತ್ತಿ ಹಾಗೂ ಸೌಂದರ್ಯಾನುಭೂತಿಗಳೇ ಈ ಊರಿನ ನಿರ್ಮಾಣಕ್ಕೆ ಕಾರಣ. ಈ ಅರಸನಿಗೆ ತನ್ನ ನಾಡಿನಲ್ಲಿ ಕೊಂಕಣದ ಸೊಗಸನ್ನು ಕಾಣಬೇಕಾಗಿತ್ತು. ಆತನು ಕೊಂಕಣ ಎಂದರೆ ಹೇಗಿರುತ್ತದೆಂದು ತನ್ನ ಪ್ರಧಾನ ಮಂತ್ರಿಯನ್ನು ಕೇಳಿದ. ಆತನ ಇಚ್ಛೆಯಂತೆ ಆತನ ಪ್ರಧಾನ ಮಂತ್ರಿ ಈ ಗ್ರಾಮದ ಕ್ಷೇತ್ರದಲ್ಲಿ ಕೊಂಕಣದ ಗಿಡಗಳನ್ನು ತಂದು ಬೆಳೆಸಿದ. ಅವುಗಳ ಬೆಳೆವಣಿಗೆಗೆ ಅನುವಾಗುವಂತೆ ಅನೇಕ ಕೆರೆ ಕುಂಟೆಗಳನ್ನು ನಿರ್ಮಾಣ ಮಾಡಿಸಿದ. ಅದರ ಪರಿಣಾಮವಾಗಿ 1633ರ ವೇಳೆಗೆ ಇಂದಿನ ಮಮದಾಪುರದ ಕ್ಷೇತ್ರದಲ್ಲಿ ಗಿಡಗಂಟಿಗಳಿಂದ ಕೂಡಿದ, ಕಣ್ಮನ ಸೆಳೆಯುವ ಮೋಹಕ ದೃಶ್ಯಗಳು ತಲೆಯೆತ್ತಿದುವು. ಅದನ್ನು ಕಂಡು ದೊರೆ ಮಹಮ್ಮದ್ ಆದಿಲ್ ಷಾ ಕ್ಷೇತ್ರದ ಸುತ್ತಲ ಹಳ್ಳಿಗಳನ್ನು ಸೇರಿಸಿ ಒಂದು ನವೀನ ಗ್ರಾಮವನ್ನು ನಿರ್ಮಾಣ ಮಾಡಿ ಅದಕ್ಕೆ ಮಹಮ್ಮದಾಪುರ (ಮಮದಾಪುರ) ಎಂದು ತನ್ನ ಹೆಸರನ್ನೇ ಕೊಟ್ಟ. ಈ ಕನಸು ನನಸಾಗುತ್ತದೆಂದು ಕಲಾಲಸಾಹೇಬನೆಂಬ ಸಂತನು ಆ ಅರಸನಿಗೆ ಹಿಂದೆಯೇ ಕಣಿ ಹೇಳಿದ್ದನಂತೆ. ಈ ಘಟನೆಯ ಸದ್ಭಾವನೆಗಳ ಪ್ರತೀಕವೋ ಎಂಬಂತೆ ಪೇಟೆಯ ಮಧ್ಯದಲ್ಲಿ ಕಮಾಲ ಸಾಹೇಬ್ ದರ್ಗಾವನ್ನು ಕಟ್ಟಿಸಿದ.

ಮಮದಾಪುರದ ಕೆರೆಗಳಲ್ಲಿ ದೊಡ್ಡಕೆರೆ ಹಾಗೂ ಸಣ್ಣಕೆರೆಗಳೆಂಬುವು ಪ್ರಮುಖವಾದುವು. ಈ ಎರಡೂ ಕೆರೆಗಳಿಗೆ ಸುಭದ್ರವಾದ ಮಣ್ಣಿನ ಅಣೆಕಟ್ಟುಗಳಿವೆ. ಈ ಕೆರೆಗಳನ್ನು 1633ರಲ್ಲಿ ಕಟ್ಟಿಸಿದ ಬಗ್ಗೆ ಇವುಗಳ ದಂಡೆಯ ಮೇಲೆ ಮಹಮ್ಮದನೇ ಹಾಕಿಸಿದ ಶಾಸನಗಳಿವೆ.

ಈ ಊರು ಇವೆಲ್ಲದರಿಂದ ರಮ್ಯವಾಗಿ ಕಾಣುವಂತೆ ಅನೇಕ ದೇವಾಲಯಗಳಿಂದಲೂ ಶೋಭಾಯಮಾನವಾಗಿದೆ. ಅವುಗಳಲ್ಲಿ ಸುಂದರವಾದ ಆಧುನಿಕ ಶಿಲ್ಪಕಲೆಗಳಿಂದ ಕೂಡಿದ ಸಿದ್ಧೇಶ್ವರ ದೇವಾಲಯ, ಊರ ಹೊರಗಡೆಯಿರುವ ಬೈಲು ಹನುಮಂತನ ಗುಡಿ, ಕೆರೆಯ ದಂಡೆಯ ಮೇಲಿರುವ ಮಹಾಲಿಂಗೇಶ್ವರ ಹಾಗೂ ಮಡಿವಾಳೇಶ್ವರ ದೇವಾಲಯಗಳು ಪ್ರಮುಖವಾದುವು. ಇವುಗಳಲ್ಲೆಲ್ಲ ಸಿದ್ಧೇಶ್ವರ ದೇವಾಲಯದಲ್ಲಿರುವ ಎತ್ತರವಾಗಿರುವ ಕಲ್ಲಿನ ಬಸವಣ್ಣನ ವಿಗ್ರಹ ಭವ್ಯವಾಗಿದ್ದು ಚಿತ್ತಾಕರ್ಷಕ ವಾಗಿದೆ. ಇಲ್ಲಿಯ ಬಹುಪಾಲು ಜನರು ಕೈಮಗ್ಗದ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ. (ಎಸ್.ಜಿ.ಎ.)

**ಮಯೂರ ಶರ್ಮ**: ಆದ್ಯ ಕದಂಬ ಮನೆತನದ ಅರಸ (ಸು.325–45). ಆ ವಂಶದ ಆಳ್ವಿಕೆಯ ಸ್ಥಾಪಕ. ಈತನ ತಂದೆ ಬಂಧುಷೇಣ, ತಾತ ವೀರಶರ್ಮ. ಇವರು ಮಾನವ್ಯಗೋತ್ರದ ವಂಶದವರಾಗಿದ್ದು ಮೂಲತಃ ತಾಳಗುಂದ ಗ್ರಾಮಕ್ಕೆ ಸೇರಿದವರೆಂದು ತೋರುತ್ತದೆ. ತಾನಿದ್ದಲ್ಲಿಯೇ ಲಭ್ಯವಿದ್ದ ಎಲ್ಲ ಶಾಸ್ತ್ರಗಳನ್ನೂ ಕಲಿತ ಮಯೂರಶರ್ಮ ಮುಂದೆ ಉನ್ನತ ವಿದ್ಯಾಭ್ಯಾಸಕ್ಕಾಗಿ ತನ್ನ ಗುರುವಾದ (ಅಂದರೆ ತಾತನಾದ) ವೀರಶರ್ಮನೊಡನೆ ಅಂದು ಪ್ರಸಿದ್ಧವಾಗಿದ್ದ ತಮಿಳುನಾಡಿನ ಕಾಂಚೀಪುರದ ಘಟಿಕಾಸ್ಥಾನಕ್ಕೆ ಹೋದ. ಆ ಸಂದರ್ಭದಲ್ಲಿ ಆತನಿಗೆ ಅಲ್ಲಿನ ಅಶ್ವಸಂಸ್ಥೆಯೊಡನೆ ಘರ್ಷಣೆಯುಂಟಾಗಿ ವಿರಸವೇರ್ಪಟ್ಟಿತು. ಕುಶ, ಸಮಿತ್ತು, ತುಪ್ಪದ ಸೌಟು ಇತ್ಯಾದಿಗಳನ್ನು ಹಿಡಿದು ಯಜ್ಞಯಾಗಾದಿಗಳನ್ನು ಮಾಡಿದ ಬ್ರಾಹ್ಮಣ ಕತ್ತಿಹಿಡಿದ ಕ್ಷತ್ರಿಯನಿಂದ ಅವಮಾನಿತನಾದ. ಇದು ಆತ ಬ್ರಾಹ್ಮವೃತ್ತಿಯನ್ನು ತ್ಯಜಿಸಿ ಕ್ಷಾತ್ರವೃತ್ತಿಯನ್ನು ಅವಲಂಬಿಸುವಂತೆ ಮಾಡಿತು. ರೋಷದಿಂದ ಕೆರಳಿದ ಮಯೂರಶರ್ಮ ಕತ್ತಿಯನ್ನು ಹಿಡಿದ. ಸೇನೆಯೊಂದನ್ನು ಕಟ್ಟಿ ಪಲ್ಲವಸೇನೆಯನ್ನು ಎದುರಿಸಿದ. ಶ್ರೀಪರ್ವತದ ವರೆಗಿನ ಪ್ರದೇಶವನ್ನು ಆಕ್ರಮಿಸಿ ಸ್ವತಂತ್ರವಾದ ರಾಜ್ಯವೊಂದಕ್ಕೆ ಅಸ್ತಿಭಾರ ಹಾಕಿದ. ಬೃಹದ್ಬಾಣರನ್ನು ಸೋಲಿಸಿ ಅವರಿಂದ ಕಪ್ಪವನ್ನು ವಸೂಲು ಮಾಡಿದ. ಇವನನ್ನು ಸೋಲಿಸಲಾಗದ ಪಲ್ಲವರು ಕೊನೆಗೆ ಪಶ್ಚಿಮ ಸಮುದ್ರದಿಂದ ಪ್ರೇಹರಾ (ಈಗಿನ ಘಟಪ್ರಭಾ ನದಿ?) ವರೆಗಿನ ಪ್ರದೇಶದ ಈತನ ಆಧಿಪತ್ಯವನ್ನು ಒಪ್ಪಿಕೊಂಡರು. ಚಂದ್ರವಳ್ಳಿಯಲ್ಲಿ ದೊರೆತ ಶಾಸನದಲ್ಲಿ ಈತ ತ್ರೈಕೂಟಕ, ಆಭೀರ, ಪಲ್ಲವ, ಪಾರಿಯಾತ್ರಕ, ಶಕಸ್ಥಾನ, ಮೊಕರಿ, ಪುನ್ನಾಟಸಯಿಂದಕ ಮುಂತಾದ ದೇಶ ಅಥವಾ ಅರಸುಮನೆತನದವರನ್ನು ಸೋಲಿಸಿ ವಶಪಡಿಸಿಕೊಂಡನೆಂದು ಹೇಳಿದೆ. ಆದರೆ ಇದರಲ್ಲಿ ಸ್ವಲ್ಪಮಟ್ಟಿಗೆ ಉತ್ಪ್ರೇಕ್ಷೆ ಇದ್ದಂತಿದೆ. ಉಜ್ಜಯಿನಿ ಹಾಗೂ ರಾಜಸ್ಥಾನದ ವರೆಗೂ ಈತ ದಂಡಯಾತ್ರೆ ಹೋಗಿದ್ದನೆಂಬುದು ಸತ್ಯದೂರವೆನಿಸುತ್ತದೆ. ಈತ ಸುಮಾರು 20 ವರ್ಷಗಳ ಕಾಲ ರಾಜ್ಯಭಾರ ಮಾಡಿದನೆಂದು ಊಹಿಸಲಾಗಿದೆ.

ಈತನನ್ನು ದ್ವಿಜೋತ್ತಮನೆಂದು ಶಾಸನಗಳು ಬಣ್ಣಿಸಿ ಶರ್ಮ ಎಂಬ ನಾಮಾಂತ್ಯವನ್ನು ನೀಡಿವೆ. ಆದರೆ ಈತನ ಅನಂತರ ಆಳಿದವರೆಲ್ಲರೂ ಕ್ಷಾತ್ರವೃತ್ತಿಯನ್ನು ಅವಲಂಬಿಸಿದ ಕಾರಣ ವರ್ಮರೆನಿಸಿಕೊಂಡರು. ಈತನನ್ನು ಅನಂತರದ ಶಾಸನಗಳು ಮಯೂರವರ್ಮನೆಂದು ಕರೆದಿವೆ.

11–12ನೆಯ ಶತಮಾನದ ಶಾಸನಗಳಲ್ಲಿ ಈ ಮಯೂರವರ್ಮನ ಕುರಿತಾದ ವಿಚಿತ್ರವಾದ ಕಥೆಗಳು ನಿರೂಪಿತವಾಗಿವೆ. ಕದಂಬವಂಶದ ಮೂಲಪುರುಷ ತ್ರಿಲೋಚನ (ಮುಕ್ಕಣ್ಣ) ಕದಂಬ. ಕದಂಬವೃಕ್ಷವೊಂದರ ಕೆಳಗೆ ಬಿದ್ದ ಶಿವನ ಬೆವರಿನಿಂದ ಹುಟ್ಟಿದ್ದ ಈತ ಕದಂಬನೆನಿಸಿಕೊಂಡ, ಈತನ ಮಗ ಮಯೂರವರ್ಮನನ್ನು ಕದಂಬವಂಶದ ಮೂಲಪುರಷ ಎಂದು ಕೆಲವು ಶಾಸನಗಳು ಹೇಳಿವೆ. ಕದಂಬ ವೃಕ್ಷದ ಕೆಳಗೆ ಜನಿಸಿದಾತನೇ ಮಯೂರವರ್ಮನೆಂದೂ ಆತನಿಗೆ ತ್ರಿನೇತ್ರಗಳಿದ್ದ ಕಾರಣ ಕಿರೀಟವನ್ನು ತಲೆಯ ಮೇಲಿಡಲಾಗದೆ ಮೊಣಕಾಲಿನ ಚಿಪ್ಪಿಗೆ ಕಟ್ಟಲಾಯಿತೆಂದೂ ಒಂದು ಸಾಂಪ್ರದಾಯಿಕ ಕಥೆ ಕೆಲವು ಶಾಸನಗಳಲ್ಲಿದೆ. ಮಯೂರವರ್ಮ ಆನಂದ ಜಿನವ್ರತೀಂದ್ರನ ಸೋದರಿಯ ಮಗನೆಂದೂ ಜೈನಸಾಂಪ್ರದಾಯಿಕ ಕಥೆಯಲ್ಲಿ ಹೇಳಲಾಗಿದೆ. ಕದಂಬ ಮನೆತನದ ಹಿರಿಮೆಯುನ್ನು ತೋರಿಸಲು ಕವಿಗಳು ಮಾಡಿದ ಕಲ್ಪನೆಗಳ ಪರಿಣಾಮಗಳಿವು.

11ನೆಯ ಶತಮಾನದಲ್ಲಿ ಧಾರವಾಡ ಜಿಲ್ಲೆಯ ಬಂಕಾಪುರ ಮತ್ತು ಹಾನಗಲ್ಲು ತಾಲ್ಲೂಕುಗಳ ಸುತ್ತಲ ಪ್ರದೇಶದಲ್ಲಿ ಕದಂಬ ಮನೆತನದವರು ಮಾಂಡಲಿಕರಾಗಿ ಆಳುತ್ತಿದ್ದರು. 1044–45ರಲ್ಲಿ ಆ ಮನೆತನದ ಮಯೂರವರ್ಮ ಪಾನುಂಗಲ್ಲನ್ನು ಆಳುತ್ತಿದ್ದ. ಪಾನುಂಗಲ್ಲು–500 ಪ್ರಾಂತದ ಮನ್ನೆಯ ಸ್ವಾಮ್ಯ ಆತನದಾಗಿತ್ತು. ಚಾಳುಕ್ಯ ಅರಸ ಒಂದನೆಯ ಸೋಮೇಶ್ವರನ ಮಾಂಡಲಿಕನಾಗಿದ್ದ ಆತ ಅರಸನ ಸೋದರತ್ತೆ, ತಂದೆಯಾದ ಜಯಸಿಂಹನ ಸೋದರಿಯಾದ ಅಕ್ಕಾದೇವಿಯನ್ನು ಮದುವೆಯಾಗಿದ್ದಂತೆ ತೋರುತ್ತದೆ. ಆತ ಹರಿಪಂತನ (ಅರಿಕೇಸರಿ) ಮಗ. ತೋಯಿಮದೇವ ಮತ್ತು ಅರಿಕೇಸರಿ ಆತನ ಇಬ್ಬರು ಮಕ್ಕಳು. ಇವರನ್ನು ಬಂಕಾಪುರದ ಕದಂಬರೆಂದು ಹೆಸರಿಸಬಹುದು.

ಹಾನಗಲ್ಲಿನ ಕದಂಬ ಶಾಖೆಗೆ ಸೇರಿದ ಇನ್ನೊಬ್ಬ ಮಯೂರವರ್ಮ ಚಾಳುಕ್ಯ ಮುಮ್ಮಡಿ ಸೋಮೇಶ್ವರನ ಮಾಂಡಲಿಕ. ಇವನು ಪಾನುಂಗಲ್ಲು ಪ್ರಾಂತವನ್ನಾಳುತ್ತಿದ್ದಾಗ ಹೊಯ್ಸಳ ವಿಷ್ಣುವರ್ಧನನು ಮೇಲಿಂದ ಮೇಲೆ ಈ ಪ್ರದೇಶದ ಮೇಲೆ ದಾಳಿ ಮಾಡಿದ. ಚಾಳುಕ್ಯರಿಗೆ ನಿಷ್ಠೆಯನ್ನು ತೋರಿದ ಈ ಮಯೂರವರ್ಮ ತಾನು ಜೀವಿಸಿರುವವರೆಗೂ ಹೊಯ್ಸಳರನ್ನು ಯಶಸ್ವಿಯಾಗಿ ವಿರೋಧಿಸಿದ. (ಬಿ.ಆರ್.ಜಿ.)

**ಮರಲೆ**: ಚಿಕ್ಕಮಗಳೂರು ತಾಲ್ಲೂಕಿನ ಒಂದು ಗ್ರಾಮ. ಕಸಬೆಯ ಆಗ್ನೇಯಕ್ಕೆ 14 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,611. ಇಲ್ಲಿ ಹೊಯ್ಸಳರ ಕಾಲದ ಚೆನ್ನಕೇಶವ ಹಾಗೂ ಸಿದ್ಧೇಶ್ವರ ದೇವಾಲಯಗಳಿವೆ. ಈ ದೇವಾಲಯಗಳನ್ನು 1130ರಲ್ಲಿ ಹೊಯ್ಸಳ ವಿಷ್ಣುವರ್ಧನನ ದಂಡನಾಯಕರಲ್ಲಿ ಒಬ್ಬನಾದ ರಾಯಣ್ಣದಂಡನಾಥ ಎಂಬುವನು ಕಟ್ಟಿಸಿದಂತೆ ತಿಳಿದುಬರುತ್ತದೆ. ದೇವಾಲಯದಲ್ಲಿರುವ ಒಂದು ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನ 1130ರಲ್ಲಿ ಈ ದೇವಾಲಯಗಳಿಗೆ ಭೇಟಿಯಿತ್ತ ವಿಷಯ ನಿರೂಪಿತವಾಗಿದೆ. ಈ ಎರಡೂ ದೇವಾಲಯಗಳ ವಿನ್ಯಾಸ ಒಂದೇ ರೀತಿ ಇದ್ದು ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪಗಳನ್ನು ಹೊಂದಿವೆ. ಈ ದೇವಾಲಯಗಳು ಆದಿ ಹೊಯ್ಸಳ ಶೈಲಿಯ ವಾಸ್ತುಶಿಲ್ಪಕ್ಕೆ ಉದಾಹರಣೆಗಳಾಗಿವೆ.

ಉತ್ತರದ ಕಡೆಗಿರುವ ಚನ್ನಕೇಶವ ದೇವಾಲಯ ಸಿದ್ಧೇಶ್ವರ ದೇವಾಲಯಕ್ಕಿಂತಲೂ ವಿಸ್ತಾರವಾಗಿಯೂ ಇದೆ. ದೇವಾಲಯದಲ್ಲಿರುವ ಮೂರ್ತಿ 5" ಎತ್ತರವಿದ್ದು ಎರಡೂ ಪಕ್ಕಗಳಲ್ಲಿ ದೇವಿಯರ ವಿಗ್ರಹಗಳನ್ನು ಹೊಂದಿದೆ. ವಿಗ್ರಹದ ಹಿಂಭಾಗದಲ್ಲಿ ವಿಷ್ಣುವಿನ ದಶಾವತಾರವನ್ನು ಚಿತ್ರಿಸಿರುವ ಪ್ರಭಾವಳಿ ಇದೆ. ದೇವಾಲಯದ ಮೇಲ್ಛಾವಣಿಯ ಒಳಭಾಗ ಸಮತಟ್ಟಾಗಿದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಒಂದು ದೊಡ್ಡ ಕಮಲದ ಹೂವನ್ನು, ಅದರ ಮೇಲ್ಭಾಗದಲ್ಲಿ ಹಿರಣ್ಯಕಶಿಪುವಿನ ಸಂಹಾರದ ಚಿತ್ರವನ್ನು ಕೆತ್ತಲಾಗಿದೆ. ಸುಕನಾಸಿಯ ಮೇಲ್ಛಾವಣಿಯಲ್ಲಿ ಲಕ್ಷ್ಮೀನಾರಾಯಣನ ವಿಗ್ರಹವನ್ನು ಕೆತ್ತಲಾಗಿದೆ. ಸುಕನಾಸಿಯ ದ್ವಾರದ ಎರಡೂ ಪಕ್ಕಗಳಲ್ಲಿ ಸುಂದರವಾದ ಎರಡು ದ್ವಾರಪಾಲಕರ ವಿಗ್ರಹಗಳಿವೆ. ದ್ವಾರದ ಮೇಲ್ಭಾಗದಲ್ಲಿ ಲಕ್ಷ್ಮೀನಾರಾಯಣ ಹಾಗೂ ಸರಸ್ವತಿಯ ವಿಗ್ರಹಗಳನ್ನು ಕೆತ್ತಲಾಗಿದೆ. ನವರಂಗದ ಮಧ್ಯದಲ್ಲಿರುವ ನಾಲ್ಕುಕಂಬಗಳ ಮೇಲ್ಭಾಗದ ನಾಲ್ಕೂ ಕಡೆಗಳಲ್ಲಿ ಮದನಿಕೆಯರ ವಿಗ್ರಹಗಳಿವೆ. ನವರಂಗದ



ಚನ್ನಕೇಶವ ದೇವಾಲಯ

ಮೇಲ್ಛಾವಣಿಯಲ್ಲಿ ಒಟ್ಟು ಒಂಬತ್ತು ಅಂಕಣಗಳಿದ್ದು ಮಧ್ಯದ ಅಂಕಣದಲ್ಲಿ ಲಕ್ಷ್ಮೀನಾರಾಯಣನನ್ನು ಮತ್ತು ಸುತ್ತಲೂ ಇರುವ ಎಂಟು ಅಂಕಣಗಳಲ್ಲಿ ದಿಕ್ಪಾಲಕರ ವಿಗ್ರಹಗಳನ್ನು ಕಾಣಬಹುದು. ಕಲಾತ್ಮಕವಾಗಿ ರೂಪಿಸಿರುವ ಎರಡು ಕಂಬಗಳ ಆಧಾರದ ಮೇಲೆ ನಿಂತಿರುವ ಮುಖಮಂಟಪದ ಮೇಲ್ಛಾವಣಿ ನವರಂಗದಂತೆಯೇ ಒಂಬತ್ತು ಅಂಕಣಗಳನ್ನು ಹೊಂದಿದೆ. ನವರಂಗದ ದ್ವಾರದ ಮೇಲ್ಭಾಗದಲ್ಲಿ ಲಕ್ಷ್ಮೀನಾರಾಯಣ ಹಾಗೂ ನಂಬಿ ನಾರಾಯಣ ಚಿತ್ರವನ್ನು ಕೆತ್ತಲಾಗಿದೆ. ದೇವಾಲಯದ ಗೋಡೆಯ ಹೊರಭಾಗ ಜಾಲಂಧ್ರಗಳಿಂದಲೂ ಅಲಂಕಾರಿಕವಾದ ಸಣ್ಣ ಸಣ್ಣ ಈ ದೇವಾಲಯಕ್ಕೆ ಕೆತ್ತನೆ ಮಾಡಿದ ಕಲ್ಲುಗಳಿಂದ ಕಟ್ಟಿರುವ ಒಂದು ಗೋಪುರವಿದೆ.

ಸಿದ್ಧೇಶ್ವರ ದೇವಾಲಯದ ಸುಕನಾಸಿಯ ಮೇಲ್ಛಾವಣಿಯ ಮಧ್ಯಭಾಗದಲ್ಲಿ ಎಂಟು ಕಮಲಗಳಿಂದಾವೃತವಾದ ತಾಂಡವೇಶ್ವರನನ್ನು ಕೆತ್ತಲಾಗಿದೆ. ಗರ್ಭಗೃಹ ದ್ವಾರದ ಮೇಲ್ಭಾಗದಲ್ಲಿ ಗಜಲಕ್ಷ್ಮಿಯ ವಿಗ್ರಹವಿದೆ. ನವರಂಗದಲ್ಲಿರುವ ನಾಲ್ಕು ಕಂಬಗಳ ಮೇಲಿರುವ ತೊಲೆಗಳ ಒಳಭಾಗದಲ್ಲಿ ಕಿರಾತಾರ್ಜುನೀಯ, ಸಮುದ್ರಮಥನ, ತಾಂಡವನೃತ್ಯ ಮತ್ತಿತರ ಪೌರಾಣಿಕ ಶಿಲ್ಪಗಳನ್ನು ಕೆತ್ತಲಾಗಿದೆ. ನವರಂಗದ ದ್ವಾರದ ಮೇಲುಗಡೆ ಗಜಲಕ್ಷ್ಮಿಯ ಚಿತ್ರವಿದ್ದು ಪಕ್ಕಗಳಲ್ಲಿ ಸರಸ್ವತಿ ಹಾಗೂ ಗಣೇಶನ ವಿಗ್ರಹಗಳನ್ನು ಕೆತ್ತಲಾಗಿದೆ. ದೇವಾಲಯದ ಗೋಡೆಯ ಹೊರಭಾಗದಲ್ಲಿ ಗಜಾಸುರ ಮರ್ಧನ, ಅಷ್ಟಭುಜನಾಟ್ಯಸರಸ್ವತಿ, ಭೈರವ, ತಾಂಡವೇಶ್ವರ, ಹಿರಣ್ಯಕಶಿಪು ಸಂಹಾರ, ವಿಷ್ಣುವಿನ ಕೆಲವು ಅವತಾರಗಳು (ವರಾಹ, ವಾಮನ, ತ್ರಿವಿಕ್ರಮ), ಬ್ರಹ್ಮ, ಉಮಾಮಹೇಶ್ವರ, ಅರ್ಧನಾರೀಶ್ವರ, ಗಣಪತಿ, ಸುಬ್ರಹ್ಮಣ್ಯ, ಭೈರವ, ಮನ್ಮಥ, ಮಹಿಷಾಸುರಮರ್ದಿನಿ ವಿಗ್ರಹಗಳಿವೆ. (ಎಂ.ಎಸ್.ಕೆ.)

**ಮರುವಂತೆ:** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಗಂಗೊಳ್ಳಿ ನದಿಯಿಂದ ಉತ್ತರಕ್ಕೆ 8ಕಿಮೀ ದೂರದಲ್ಲಿ ಸಮುದ್ರದಂಡೆಯಲ್ಲಿರುವ ಒಂದು ಗ್ರಾಮ. ಜನಸಂಖ್ಯೆ 5,059. ಈ ಗ್ರಾಮದ ಪೂರ್ವದಲ್ಲಿ

ಸೌಪರ್ಣಿಕಾ ನದಿ ದಕ್ಷಿಣಾಭಿಮುಖವಾಗಿ ಹರಿದು ಪಂಚಗಂಗಾವಳಿಯೊಂದಿಗೆ ಸಮುದ್ರವನ್ನು ಸೇರುವುದು. ಸಮುದ್ರ–ನದಿ ಎರಡರ ಮಧ್ಯದಲ್ಲಿ ಪಶ್ಚಿಮ ಕರಾವಳಿ ಮಾರ್ಗ ಹಾದುಹೋಗಿದೆ. ಎರಡು ಭಾಗಗಳೂ ಜಲಮಯವಾಗಿದ್ದು ಒಂದೆಡೆಯಿಂದ ಸಮುದ್ರದ ಅಲೆಗಳು ಬಂದು ಅಪ್ಪಳಿಸುವ ದೃಶ್ಯವಾದರೆ, ಇನ್ನೊಂದೆಡೆಯಿಂದ ಸೌಪರ್ಣಿಕಾ ನದಿ ಹರಿದು ಹೋಗುವ ದೃಶ್ಯ, ಪೂರ್ವದಲ್ಲಿರುವ ತೆಂಗಿನ ಗುಂಪುಗಳ ಮೈಲುದ್ದದ ನೋಟ ಬಲು ರಮಣೀಯ. ನದೀದಡದಲ್ಲಿ ವರಾಹಸ್ವಾಮಿ (ಮಾರಸ್ವಾಮಿ) ಪ್ರಾಚೀನ ದೇವಸ್ಥಾನವಿದ್ದು ಇಲ್ಲಿ ವರಾಹ, ನರಸಿಂಹ, ಜನಾರ್ಧನ ವಿಗ್ರಹಗಳಿವೆ. ಬ್ರಹ್ಮಲಿಂಗೇಶ್ವರ ದೇವಾಲಯವೂ ಹತ್ತಿರದಲ್ಲೇ ಇದೆ. **(ವಿ.ಬಿ.ಎಚ್.)**

**ಮರಾಠರ ಆಳ್ವಿಕೆ**: ಕರ್ನಾಟಕಕ್ಕೂ ಮರಾಠರಿಗೂ ರಾಜಕೀಯ ಬಾಂಧವ್ಯವೇರ್ಪಟ್ಟಿದ್ದು ಹದಿನೇಳನೆಯ ಶತಮಾನದಲ್ಲಿ. 1636ರಲ್ಲಿ ಮುಗಲರಿಗೂ ಆದಿಲ್‍ಶಾಹೀಗಳಿಗೂ ಶಾಂತಿ ಕರಾರು ಏರ್ಪಟ್ಟು, ಅದರ ಪ್ರಕಾರವಾಗಿ ಬಿಜಾಪುರದವರು ಉತ್ತರಕ್ಕಿದ್ದ ಮುಗಲರ ಪ್ರದೇಶದ ಮೇಲೆ ದಾಳಿ ಮಾಡುವುದನ್ನು ನಿಷೇಧಿಸಲಾಯಿತಾದ್ದರಿಂದ ಆದಿಲ್‍ಶಾಹೀ ಅರಸರು ತಮ್ಮ ಗಮನವನ್ನು ದಕ್ಷಿಣದ ಕಡೆ ಹರಿಸಿದರು. 1635ರಿಂದ ಹದಿನೇಳನೆಯ ಶತಮಾನದುದ್ದಕ್ಕೂ ಬಿಜಾಪುರದ ಸುಲ್ತಾನರು ಕರ್ನಾಟಕದ ದಕ್ಷಿಣ ಭಾಗ ಮತ್ತು ತಮಿಳುನಾಡು ಪ್ರದೇಶಗಳ ಮೇಲೆ ಅನೇಕ ದಂಡಯಾತ್ರೆಗಳನ್ನು ವ್ಯವಸ್ಥೆಗೊಳಿಸಿದರು. ಮರಾಠ ಸರದಾರರು ಈ ಎಲ್ಲ ದಂಡಯಾತ್ರೆಗಳಲ್ಲೂ ಭಾಗವಹಿಸಿದ್ದರು. ಮಾಲೋಜಿ ಭೋಂಸ್ಲೆಯ ಮಗನೂ ಪ್ರಸಿದ್ಧ ಶಿವಾಜಿಯ ತಂದೆಯೂ ಆದ ಶಹಾಜಿ (1594–1664) 1637ರ ದಂಡಯಾತ್ರೆಯಲ್ಲಿ ಪಾಲ್ಗೊಂಡ. ರಣದುಲ್ಲಾಖಾನ್ ಮತ್ತು ಶಹಾಜಿಯ ನೇತೃತ್ವದಲ್ಲಿ ಆರಂಭವಾದ ಈ ದಂಡಯಾತ್ರೆ ಇಕ್ಕೇರಿ ರಾಜ್ಯವನ್ನು ಬಲಿ ತೆಗೆದುಕೊಂಡಿತು. ಸೋತುಹೋದ ಇಕ್ಕೇರಿಯ ವೀರಭದ್ರನಾಯಕ ತನ್ನ ಅರ್ಧ ರಾಜ್ಯವನ್ನೂ 54ಲಕ್ಷ ರೂಪಾಯಿಗಳನ್ನೂ ಶತ್ರುಗಳಿಗೆ ಕೊಟ್ಟು ಅವರೊಡನೆ ಸಂಧಿ ಮಾಡಿಕೊಂಡ. ಅಪಾರ ಐಶ್ವರ್ಯವನ್ನು ಕಂಡ ಮಹಮ್ಮದ್ ಆದಿಲ್ ಷಾ 1638ರಲ್ಲಿ ಇನ್ನೊಂದು ದಂಡಯಾತ್ರೆಯನ್ನು ಅಣಿಗೊಳಿಸಿ, ರಣದುಲ್ಲಾಖಾನನನ್ನು ಸೈನ್ಯಾಧಿಪತ್ಯದ ಮೊದಲನೆಯ ಸ್ಥಾನದಲ್ಲೂ ಶಹಾಜಿಯನ್ನು ಎರಡನೆಯ ಸ್ಥಾನದಲ್ಲೂ ಇರಿಸಿ, ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡುವಂತೆ ಅವರಿಗೆ ಸೂಚನೆಯನ್ನಿತ್ತ. ಶಹಾಜಿಯ ಜೊತೆಗೆ ವೇದೋಜಿ, ರಾಘವ ಪಂಡಿತ, ಸಿದ್ಧೋಜಿ, ಕನ್ನೋಜಿ ಮೊದಲಾದ ಮರಾಠ ಸೇನಾಧಿಕಾರಿಗಳು ಆ ದಂಡಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ತುಂಗಭದ್ರೆಯನ್ನು ದಾಟಿ ಮುನ್ನುಗ್ಗಿದ ಬಿಜಾಪುರದ ಸೈನ್ಯ ಕಸ್ತೂರಿ ರಂಗಪ್ಪನಾಯಕನನ್ನು ಕೊಂದು ಶಿರಾ ದುರ್ಗವನ್ನು ವಶಪಡಿಸಿಕೊಂಡಿತು. 1638ರ ಡಿಸೆಂಬರ್ ತಿಂಗಳಿನಲ್ಲಿ ಆ ಸೈನ್ಯ ಬೆಂಗಳೂರ ಬಳಿ ಬಂದಿಳಿಯಿತು. ಬೆಂಗಳೂರಿನ ಕೆಂಪೇಗೌಡನ ಸೈನ್ಯಕ್ಕೂ ಬಿಜಾಪುರದ ಸೈನ್ಯಕ್ಕೂ ಭೀಕರ ಯುದ್ಧ ಜರುಗಿತು. ಇದರಲ್ಲಿ ಕೆಂಪೇಗೌಡ ಸೋತು ಸಂಧಿಗೊಪ್ಪಿ ಮಾಗಡಿಗೆ ತನ್ನ ರಾಜಧಾನಿಯನ್ನು ವರ್ಗಾಯಿಸಿದ. ಅದೇ ವರ್ಷ (1638) ಶಹಾಜಿ ಬೆಂಗಳೂರನ್ನು ಮಹಮ್ಮದ್ ಆದಿಲ್ ಷಾನಿಂದ ಜಹಗೀರಾಗಿ ಪಡೆದ. ಬೆಂಗಳೂರು, ಹೊಸಕೋಟೆ, ದೊಡ್ಡಬಳ್ಳಾಪುರ, ಕೋಲಾರ, ಚಿಕ್ಕಬಳ್ಳಾಪುರ, ಶಿರಾ, ಚಿಕ್ಕನಾಯಕನಹಳ್ಳಿ ಮುಂತಾದ ಪ್ರದೇಶಗಳು ಈ ಜಹಗೀರಿನಲ್ಲಿ ಇದ್ದವು. ಇದಲ್ಲದೆ ರಾಯಚೂರು ಜಿಲ್ಲೆಯಲ್ಲಿ ಕನಕಗಿರಿ ಪ್ರದೇಶ ಅವನ ಜಹಗೀರಿನ ಭಾಗವೇ ಆಗಿತ್ತು. ಮುಂದೆ ಸು. 1687ರ ವರೆಗೆ ಬೆಂಗಳೂರು ಮರಾಠರ ವಶದಲ್ಲಿತ್ತು.

ಚಾಣಾಕ್ಷನೂ ಉತ್ಕಟಾಕಾಂಕ್ಷಿಯೂ ಆದ ಶಹಾಜಿ ಬೆಂಗಳೂರನ್ನು ಮುಖ್ಯ ಸೇನಾನೆಲೆಯನ್ನಾಗಿ ಮಾಡಿಕೊಂಡು ಮುಂದೆ ಶ್ರೀರಂಗಪಟ್ಟಣದ ಒಡೆಯರ ವಿರುದ್ಧ ಅನೇಕ ಯುದ್ಧಗಳನ್ನು ಕೈಗೊಂಡ. 1639ನೆಯ ಜನವರಿ ತಿಂಗಳಿನಲ್ಲಿ ಬಿಜಾಪುರದ ಸೈನ್ಯಕ್ಕೂ ಮೈಸೂರಿನ ಕಂಠೀರವ ನರಸರಾಜ ಒಡೆಯರ ಸೈನ್ಯಕ್ಕೂ ಘೋರ ಯುದ್ಧ ನಡೆದು, ಅಂತ್ಯದಲ್ಲಿ ಸಂಧಾನವೇರ್ಪಟ್ಟಿತು. ಕಂಠೀರವ ನರಸರಾಜ ಪರಾಭವಗೊಂಡು ಬಿಜಾಪುರದವರಿಗೆ ಯುದ್ಧದ ವೆಚ್ಚವನ್ನು ಕೊಡುವುದಾಗಿ ಒಪ್ಪಿದುದಲ್ಲದೆ ವರ್ಷಂಪ್ರತಿ ಪೊಗದಿಯನ್ನು ಸಲ್ಲಿಸುವುದಾಗಿಯೂ ಸಮ್ಮತಿಸಿದ. ಈ ಸಂಧಾನದ ಮಾತುಕತೆಗಳಲ್ಲಿ ಶಹಾಜಿ ಮುಖ್ಯ ಪಾತ್ರವನ್ನು ವಹಿಸಿದ್ದ.

ಶಹಾಜಿ ಬೆಂಗಳೂರಿನಲ್ಲಿ ನೆಲೆಸಿದ ಮೇಲೆ, ಬಿಜಾಪುರದ ಸುಲ್ತಾನ ಇನ್ನೂ ಆರು ದಂಡಯಾತ್ರೆಗಳನ್ನು ವ್ಯವಸ್ಥೆಗೊಳಿಸಿ, ಅವುಗಳನ್ನು ಕರ್ನಾಟಕದ ಪ್ರಾಂತಗಳ ಮೇಲೆ ಕಳುಹಿಸಿಕೊಟ್ಟ. ಈ ಪ್ರತಿಯೊಂದು ದಂಡಯಾತ್ರೆಯಲ್ಲಿಯೂ ಶಹಾಜಿ ಭಾಗವಹಿಸಿದ. ಪ್ರತಿಯೊಂದು ದಾಳಿಯೂ ಶಹಾಜಿಯ ಅಧಿಕಾರವನ್ನು ಹೆಚ್ಚಿಸಿದುದಲ್ಲದೆ ಅವನ ರಾಜ್ಯವನ್ನು ವಿಸ್ತರಿಸಿತು.

ಶಹಾಜಿ ಬಿಜಾಪುರದ ಸುಲ್ತಾನನ ಅಧೀನನಾಗಿದ್ದರೂ ತನ್ನ ಜಹಗೀರಿನಲ್ಲಿ ಸ್ವತಂತ್ರ ರಾಜನಂತೆಯೇ ವರ್ತಿಸತೊಡಗಿದ. ಸಾರಿಗೆ ಸಂಪರ್ಕವಿಲ್ಲದ ಆ ಕಾಲದಲ್ಲಿ ಬೆಂಗಳೂರು ಬಿಜಾಪುರದಿಂದ ಬಹುದೂರವಿದ್ದುದರಿಂದ ಇವನು ಅಲ್ಲಿ ರಾಜವೈಭವದಲ್ಲಿ ಮೆರೆದನೆಂದರೆ ಅದೇನು ಆಶ್ಚರ್ಯವಲ್ಲ. ಇವನು ಕರ್ನಾಟಕದಲ್ಲಿ ಭದ್ರವಾಗಿ ತಳವೂರಿದ ಮೇಲೆ ತನ್ನ ಉಳಿದ ಕಾಲವನ್ನೆಲ್ಲ ಬೆಂಗಳೂರಿನಲ್ಲಿ ಒಂದು ಮಹೋನ್ನತ ಮರಾಠ ರಾಜಾಸ್ಥಾನವನ್ನು ನಿರ್ಮಿಸುವುದರಲ್ಲಿಯೂ ಪ್ರಜೆಗಳಿಗೆ ಸುಭದ್ರವಾದ ಆಡಳಿತವನ್ನು ನೀಡುವುದರಲ್ಲಿಯೂ ಕಳೆದ. ಬೆಂಗಳೂರು ಕೋಟೆಯನ್ನು ದುರಸ್ತಿಗೊಳಿಸಿ ಭದ್ರಪಡಿಸಿದ. ತನ್ನದೇ ನಾಣ್ಯಗಳನ್ನೂ ಹೊರಡಿಸಿದ. ಬೆಂಗಳೂರಲ್ಲಿ ಗೌರಿಮಹಲ್ ಎಂಬ ಅರಮನೆಯನ್ನು ಕಟ್ಟಿಕೊಂಡಿದ್ದ. ಬೇಸಗೆಯಲ್ಲಿ ನಂದಿಬೆಟ್ಟವನ್ನು ರಾಜಧಾನಿಯಾಗಿ ಬಳಸುತ್ತಿದ್ದ. ರಾಜ್ಯ, ಸೀಮೆ, ಹೋಬಳಿ ಮುಂತಾದ ಆಡಳಿತ ವಿಭಾಗಗಳನ್ನು ತನ್ನ ಜಹಗೀರಿನಲ್ಲಿ ಏರ್ಪಡಿಸಿದ್ದ. ಸೈನಿಕ ಮತ್ತು ಆಡಳಿತ ಸೌಕರ್ಯಕ್ಕಾಗಿ ಶಹಾಜಿ ಮಹಾರಾಷ್ಟ್ರದಿಂದ ಅನೇಕ ಕುಟುಂಬಗಳನ್ನು ಬರಮಾಡಿಕೊಂಡು ಅವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟ. ಅವರನ್ನು ಉನ್ನತ ಹುದ್ದೆಗಳಲ್ಲಿ ನಿಯೋಜಿಸಿದ. ಆಡಳಿತ ಕ್ಷೇತ್ರದಲ್ಲಿ ಮರಾಠಿ ಹೆಸರುಗಳಾದ ದೇಶಪಾಂಡೆ, ದೇಶಮುಖ್, ಕುಲಕರ್ಣಿ ಮೊದಲಾದ ಹುದ್ದೆಗಳನ್ನು ಜಾರಿಗೆ ತರುವುದಲ್ಲದೆ ಪಾರಸೀ ಹೆಸರುಗಳಾದ ಕನುಂಗೊ, ಶಿರಸ್ತೇದಾರ್ ಮತ್ತಿತರ ಹೊಸಹುದ್ದೆಗಳನ್ನು ಬಳಕೆಗೆ ತಂದ. ಕಂದಾಯ ವಸೂಲು ಮಾಡುವುದರಲ್ಲಿಯೂ ಲೆಕ್ಕಪತ್ರಗಳನ್ನಿಡುವುದರಲ್ಲಿಯೂ ಮರಾಠ ಪದ್ಧತಿಯನ್ನು ಜಾರಿಗೆ ತಂದ. ದೊಡ್ಡಬಳ್ಳಾಪುರ ಮತ್ತು ಕೋಲಾರ ಇವನ ಕಾಲದಲ್ಲಿ ಪ್ರಸಿದ್ಧಿಗೆ ಬಂದವು. ಇವನು ಕೆಲವು ಸಂದರ್ಭಗಳಲ್ಲಿ ದೊಡ್ಡಬಳ್ಳಾಪುರದಲ್ಲೋ ಅಥವಾ ಕೋಲಾರದಲ್ಲೋ ಇರುತ್ತಿದ್ದ. ಇವನ ಆಸ್ಥಾನದಲ್ಲಿ ಕಲಿಗಳು, ಸಂಗೀತಗಾರರು, ಸಾಧುಸಂತರು ಇರುತ್ತಿದ್ದರು. ಇವನು ಸಂಸ್ಕೃತ ಮತ್ತು ಮರಾಠಿ ಭಾಷೆಗಳಿಗೆ ಪ್ರೋತ್ಸಾಹ ನೀಡಿದ. ಪರ್ಣಾಳಪರ್ವತ ಗ್ರಹಣಾಖ್ಯಾನಮ್ ಮತ್ತು ರಾಧಾಮಾಧವ ವಿಲಾಸಚಂಪೂ ಎಂಬ ಗ್ರಂಥಗಳನ್ನು ರಚಿಸಿದ ಜಯರಾಮ ಎಂಬುವನು ನಾಸಿಕದಿಂದ ಬಂದು ಬೆಂಗಳೂರಿನಲ್ಲಿ ಇವನ ಆಸ್ಥಾನದಲ್ಲಿ ಸ್ವಲ್ಪಕಾಲವಿದ್ದ. ಮಹಾಕವಿಗಳಾದ ಮಲ್ಲಾರಿಭಟ್ಟ, ನಾರೋಪಂತ್, ಹನುಮಂತೆ ಮೊದಲಾದವರು ಇವನ ಆಸ್ಥಾನವನ್ನು ಅಲಂಕರಿಸಿದ್ದರು. ಪ್ರಭಾಕರಭಟ್ಟ ಇವನ ಕುಲಪುರೋಹಿತನಾಗಿದ್ದ.

ಇವನ ಮಕ್ಕಳಲ್ಲಿ ಒಬ್ಬನಾದ ಸಂಭಾಜಿ ಕೋಲಾರ, ದೊಡ್ಡಬಳ್ಳಾಪುರ ಭಾಗಗಳ ಆಡಳಿತಾಧಿಕಾರಿಯಾಗಿದ್ದ. ಸಂಭಾಜಿಯ ಅನಂತರ ಅವನ ಸತಿ ಜೈತಾಬಾಯಿ (ಶಿವನೇರಿಕೋಟೆಯ ಕಿಲ್ಲೇದಾರನ ಮಗಳು ಜಯಂತಿ ಬಾಯಿ) ಆ ಭಾಗಗಳನ್ನು ಆಳುತ್ತಿದ್ದಳು. ಇದಲ್ಲದೆ ಶಹಾಜಿಯ ಇನ್ನೊಬ್ಬ ಮಗ ಏಕೋಜಿ ಮತ್ತು ಸಂಭಾಜಿಯ ಮಕ್ಕಳಾದ ಕನ್ನರಾಯಾಜಿ, ಮಾಣಕೋಜಿ ಮೊದಲಾದವರು ಬೆಂಗಳೂರು ಜಹಗೀರಿನ ಆಡಳಿತದಲ್ಲಿ ಗಣ್ಯ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು.

1640ರಲ್ಲಿ ಶಿವಾಜಿ, ಅವನ ತಾಯಿ ಜೀಜಾಬಾಯಿ, ಗುರು ದಾದಾಜಿ ಕೊಂಡದೇವ ಇವರು ಬೆಂಗಳೂರಿಗೆ ಬಂದು ಎರಡು ವರ್ಷಗಳ ಕಾಲ ಈ ನಗರದಲ್ಲಿದ್ದರು. ಶಿವಾಜಿಯ ಮದುವೆ ಸಹ ಬೆಂಗಳೂರಿನಲ್ಲಿ ವಿಜೃಂಭಣೆಯಿಂದ ನಡೆಯಿತು. ಜೀಜಾಬಾಯಿ ಕರ್ನಾಟಕದ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಅನಂತರ ಮಗ ಸೊಸೆಯರೊಡಗೂಡಿ ಪುಣೆಗೆ ತೆರಳಿದಳು.

1664ರಲ್ಲಿ ಶಹಾಜಿ ಹೋದಿಗೆರೆಯಲ್ಲಿ ತೀರಿಕೊಳ್ಳಲು ಅವನ ಮಗ ಏಕೋಜಿ ಬೆಂಗಳೂರಿನ ಜಹಗೀರುದಾರನಾದ. ಇದಕ್ಕೂ ಮೊದಲು ಶಹಾಜಿಯ ಇನ್ನೊಬ್ಬ ಮಗ ಸಂಭಾಜಿ (ಬಹುಶಃ 1663ರಲ್ಲಿ) ತೀರಿಕೊಂಡಿರಬೇಕು. ಸಂಭಾಜಿಯ ಪತ್ನಿ ಮತ್ತು ಮಗ ಕನ್ನರಾಯಾಜಿ ಏಕೋಜಿಯ ಕೈಕೆಳಗೆ ಅಧಿಕಾರಿಗಳಾಗಿ ಮುಂದುವರಿದರು.

ಏಕೋಜಿಯ ಕಾಲದಲ್ಲಿ ಅವನ ಮತ್ತು ಮೈಸೂರು ಅರಸರ ನಡುವೆ ಹೆಚ್ಚಿನ ಘರ್ಷಣೆಗಳು ನಡೆಯತೊಡಗಿದುವು. 1675ರಲ್ಲಿ ತಂಜಾವೂರು ರಾಜ್ಯವನ್ನು ಗೆದ್ದ ಏಕೋಜಿ ತಂಜಾವೂರನ್ನೇ ತನ್ನ ನೆಲೆವೀಡಾಗಿ ಮಾಡಿಕೊಂಡ. 1673ರಲ್ಲಿ ಪಟ್ಟಕ್ಕೆ ಬಂದ ಮೈಸೂರಿನ ಚಿಕ್ಕದೇವರಾಜ ಬೆಂಗಳೂರು ಜಹಗೀರಿನ ಭಾಗಗಳ ಮೇಲೆ ಒತ್ತುವರಿ ನಡೆಸಲಾರಂಭಿಸಿದಾಗ ಅದನ್ನು ತಡೆಯುವುದು ಏಕೋಜಿಗೆ ಕಷ್ಟಕರವೇ ಆಯಿತು.

ಶಿವಾಜಿ ಬಾಲಕನಾಗಿದ್ದಾಗ ತನ್ನ ತಂದೆ ಬೆಂಗಳೂರು ಜಹಗೀರನ್ನು ಸಂದರ್ಶಿಸಿದ್ದು ಅಲ್ಲಿನ ಪರಿಸರದ ವಿಜಯನಗರ ಸಾಮ್ರಾಜ್ಯದ ಅವಶೇಷಗಳೇ ಆತನಿಗೆ ಸ್ವತಂತ್ರ ರಾಜ್ಯ ಸ್ಥಾಪಿಸಲು ಸ್ಫೂರ್ತಿ ನೀಡಿದುವೆಂದು ಪ್ರಸಿದ್ಧ ಮರಾಠರ ಇತಿಹಾಸಕಾರ ಶಿಜವಲಕರರ ಅಭಿಪ್ರಾಯ. ಮುಂದೆ ಶಿವಾಜಿ ಸ್ವತಂತ್ರ ರಾಜ್ಯ ಸ್ಥಾಪಿಸಿದಾಗ, ಅವನ ಸೇನಾನಿ ನೇತಾಜಿ ಪಾಲ್ಕರ್ ಬಿಜಾಪುರ ರಾಜ್ಯಕ್ಕೆ ಸೇರಿದ್ದ ವ್ಯಾಪಾರೀ ಕೇಂದ್ರಗಳಾದ ರಾಯಬಾಗ, ಗದಗ, ಲಕ್ಷ್ಮೇಶ್ವರಗಳನ್ನು ಸುಲಿದ (1659). ತನ್ನ ತಂದೆಯ ಪ್ರತಿಸ್ಪರ್ಧಿಯಾಗಿದ್ದ, ಮುಧೋಳದಲ್ಲಿ ಆಳುತ್ತಿದ್ದ (ಬಿಜಾಪುರದ ಮಾಂಡಳಿಕ) ಬಾಜಿ ಘೋರ್ಪಡೆಗೆ ಶಾಸ್ತಿ ಮಾಡಲು, 1664ರಲ್ಲಿ ಮುಧೋಳವನ್ನು ಲೂಟಿ ಮಾಡಿದನಲ್ಲದೆ ಅಲ್ಲಿಂದ ಮರುಳುವಾಗ ಬಿಜಾಪುರಕ್ಕೆ ಸೇರಿದ ಖಾನಾಪುರ, ಮುಗುಟಖಾನ ಹುಬ್ಬಳ್ಳಿಗಳನ್ನೂ ಸುಲಿದ. 1665ರಲ್ಲಿ ಕೆಳದಿ ರಾಜ್ಯಕ್ಕೆ ಸೇರಿದ ಸಮೃದ್ಧ ಬಂದರು ಬಸರೂರು ಶಿವಾಜಿಯ ಲೂಟಿಗೆ ಒಳಗಾಯಿತು. ಕೆಳದಿ ರಾಣಿ ಚೆನ್ನಮ್ಮಾಜಿ ಪಟ್ಟಕ್ಕೆ ಬರಲು ಶಿವಾಜಿಯ ನೆರವನ್ನು ಪಡೆದಳೆಂದು ವಿದ್ವಾಂಸರಾದ ಸರದೇಸಾಯಿ ಹೇಳಿದ್ದಾರೆ. 1673ರಲ್ಲಿ ಹುಬ್ಬಳ್ಳಿಯನ್ನು ಶಿವಾಜಿಯ ಸೇನಾನಿ ಅಣ್ಣಾಜಿ ದತ್ತೋ ಸುಲಿದಾಗ ಈ ಪ್ರಸಂಗ ಆಗಿಹೋಗಿರಬೇಕು. 1674ರಲ್ಲಿ ಕೊಪ್ಪಳಕೋಟೆ ಅವನ ವಶವಾಯಿತು. 1677ರಲ್ಲಿ ಜಿಂಜಿಗೆ ಸಾಗುವ ಮೊದಲು ದಾರಿಯಲ್ಲಿ ಯಲಬುರ್ಗದಲ್ಲಿ, ವಿಜಾಪುರದ ಸೇನಾನಿ ಹುಸೇನ್ ಖಾನ್ ಮಿಯಾನನ್ನು ಸೋಲಿಸಿ ಕೊಪ್ಪಳ ಪ್ರದೇಶವನ್ನು ಬಿಜಾಪುರದಿಂದ ವಶಪಡಿಸಿಕೊಂಡ. ಜಿಂಜಿಯಿಂದ ಮರುಳುವಾಗ, ಬೆಂಗಳೂರು ಜಹಗೀರನ್ನು ಆತ ಪೂರ್ತಿಯಾಗಿ ಗೆದ್ದುಕೊಂಡ. ಬೆಂಗಳೂರು ಜಹಗೀರನ್ನು ಪೂರ್ತಿ ವಶಪಡಿಸಿಕೊಂಡನಾದರೂ ಆ ಪೈಕಿ ಬೆಂಗಳೂರು, ಹೊಸಕೋಟೆ, ಶಿರಾಗಳನ್ನು ಏಕೋಜಿಯ ಪತ್ನಿಗೆ ಕಾಣಿಕೆಯಾಗಿ ನೀಡಿದ. ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರಗಳನ್ನು ತನ್ನ ಕೈಯಲ್ಲೇ ಉಳಿಸಿಕೊಂಡ. ಶಿವಾಜಿ ತನ್ನ ಸೋದರ ಸಂಭಾಜಿಯ ಮಗ ಮುಲುಕೋಜಿಗೆ ಕೈವಾರವನ್ನು ಮಿರಾಸಿಯಾಗಿ ನೀಡಿದ್ದ ಎಂದು ಒಂದು ಶಾಸನ ತಿಳಿಸುತ್ತದೆ. ಶಿವಾಜಿ ಇಲ್ಲಿಂದ ಹಿಂದಿರುಗುವಾಗ ಗದಗ ಪ್ರಾಂತವನ್ನು ವಶಪಡಿಸಿಕೊಂಡು, ಬೆಳವಡಿ ಮಾರ್ಗವಾಗಿ ರಾಯಗಡ ತಲಪಿದ. 1679ರಲ್ಲಿ ಮುಗಲರು ಬಿಜಾಪುರದ ಮೇಲೆ ದಂಡೆತ್ತಿ ಬಂದಾಗ ಸಿಕಂದರ್ ಆದಿಲ್ ಷಾ ಶಿವಾಜಿಯ ನೆರವು ಪಡೆದುದರಿಂದ ರಾಯಚೂರು ಜಿಲ್ಲೆಯ ಅನೇಕ ಭಾಗಗಳನ್ನು ಶಿವಾಜಿಗೆ ನೀಡಲಾಯಿತು. ಹೀಗೆ ತನ್ನ ಕೊನೆಗಾಲದ ಹೊತ್ತಿಗೆ ಶಿವಾಜಿ ಕರ್ನಾಟಕದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಮುಂತಾದ ಪ್ರದೇಶಗಳನ್ನೂ ಬೆಳಗಾಂವಿ, ಧಾರವಾಡ, ರಾಯಚೂರು ಜಿಲ್ಲೆಗಳ ಬಹು ಭಾಗವನ್ನೂ ತನ್ನ ವಶದಲ್ಲಿ ಇಟ್ಟುಕೊಂಡಿದ್ದ. ಆತನ 1679ರ ಭದ್ರಾಪುರ (ನವಲಗುಂದ ತಾಲ್ಲೂಕು) ಕನ್ನಡ ಶಾಸನದಂತೆ ಅವನು ಆ ಗ್ರಾಮದ ಗೌಡಿಕೆ, ಶಾನುಭೋವಿಕೆ ಮತ್ತು ತಳಾರಿಕೆಗಳ ವ್ಯವಸ್ಥೆ ಮಾಡಿದ್ದು ತಿಳಿಯುತ್ತದೆ. ಬಿಜಾಪುರದ ಕಾಲದಿಂದ ನಡೆದುಬಂದ ಆಡಳಿತ ವ್ಯವಸ್ಥೆಯನ್ನೇ ಶಿವಾಜಿ ಮುಂದುವರಿಸಿದ.

ಶಿವಾಜಿಯ ಮಗ ಸಂಭಾಜಿಯ ಕಾಲದಲ್ಲಿ ದಕ್ಷಿಣ ಕರ್ನಾಟಕದ ಕೋಲಾರ, ದೊಡ್ಡಬಳ್ಳಾಪುರ ಭಾಗಗಳು ಅವನ ವಶದಲ್ಲಿದ್ದುವು. 1689ರ ವರೆಗೆ ಈ ಭಾಗದಲ್ಲಿ ಸಂಭಾಜಿಯ ಆಡಳಿತವಿತ್ತೆಂದು ಸೂಚಿಸುವ ನಾಲ್ಕು ಶಾಸನಗಳೂ ಇಲ್ಲಿವೆ. ಈ ಕಾಲದಲ್ಲಿ ಸಂಭಾಜಿಗೂ ಚಿಕ್ಕದೇವರಾಜನಿಗೂ ಯುದ್ಧಗಳಾದುವು. 1682ರಲ್ಲಿ ಬಾಣಾವರದಲ್ಲಿ ಕೆಳದಿ, ಗೋಲ್ಕೊಂಡದವರ ನೆರವಿನಿಂದ ಸಂಭಾಜಿ ನಡೆಸಿದ ಯುದ್ಧ ಪ್ರಮುಖವಾಗಿದ್ದು ಅದರಲ್ಲಿ ಚಿಕ್ಕದೇವರಾಜನಿಗೇ ಜಯವಾಯಿತು. ಇದರ ಹಿಂದೆಯೇ ಜಿಂಜಿಯಲ್ಲಿ ನೆಲೆಯೂರಿದ್ದ ಸಂಭಾಜಿಯ ಭಾವ ಹರಜಿರಾಜೆ ಮಹಾಡಿಕ ಕಳುಹಿಸಿದ್ದ ಸೇನಾನಿಗಳಾದ ದಾದಾಜಿ ಕಾಕಡೆ ಮತ್ತು ಜೈತಾಜಿ ಕಾಟ್ಕರ–ಇವರುಗಳನ್ನು ಚಿಕ್ಕದೇವರಾಜ ಸೋಲಿಸಿ ಕೊಂದ. 1687ರಲ್ಲಿ ಮುಗಲರ ಮೂಲಕ ಏಕೋಜಿಗೆ ಸೇರಿದ್ದ ಬೆಂಗಳೂರನ್ನು ಪಡೆದ. ಸಂಭಾಜಿಯ ಸಾವಿಗೆ ಮೊದಲೇ ದಕ್ಷಿಣ ಕರ್ನಾಟಕದಲ್ಲಿದ್ದ ಮರಾಠರ ಪ್ರದೇಶಗಳೆಲ್ಲ ಅವರ ಕೈಬಿಟ್ಟವು. ಉತ್ತರ ಕರ್ನಾಟಕದ ಭಾಗಗಳು ಮಾತ್ರ ಅವರ ವಶದಲ್ಲಿ ಉಳಿದವು.

ರಾಜಾರಾಮನ (1659–1700) ಕಾಲದಲ್ಲಿ ಮುಗಲರ ದಂಡೆಯಾತ್ರೆಯ ಕಾರಣದಿಂದ ಮರಾಠರು ಜೀವನ್ಮರಣದ ಹೋರಾಟ ನಡೆಸಬೇಕಾಗಿ ಬಂತು. ಆಗತಾನೇ ನಾಶವಾದ (1686) ಬಿಜಾಪುರ ರಾಜ್ಯದ ಮಾಂಡಳಿಕರಾಗಿದ್ದ ಅನೇಕ ಮಾಂಡಳಿಕ ದೇಸಾಯಿಗಳೂ ದೇಶಪಾಂಡೆಗಳೂ ಒಮ್ಮೆ ಮುಗಲರ, ಒಮ್ಮೆ ಮರಾಠರ ಪಕ್ಷ ವಹಿಸುವ ಸ್ಥಿತಿ ಹಲವು ದಶಕಗಳ ಕಾಲ ಸಾಗಿತು. ಉದಾಹರಣೆಗೆ, ಜತ್‌ನ ಮಾಂಡಳಿಕನಾಗಿದ್ದ ಡಫಳೆ ಮೊದಲು ಮುಗಲರ ಸೇವೆಗೆ ಸೇರಿ, ಮುಂದೆ 1694ರಲ್ಲಿ ರಾಜಾರಾಮನ ಕಡೆಗಾದ. 1701ರಲ್ಲಿ ಮತ್ತೆ ಮುಗಲರ ಪಕ್ಷ ವಹಿಸಿದ. ಕೆಳದಿ, ಸೋದೆ, ಚಿತ್ರದುರ್ಗ ಮುಂತಾದ ಅರಸು ಮನೆತನಗಳು ಹೆಚ್ಚಾಗಿ ಮರಾಠರ ಜೊತೆ ಮೈತ್ರಿಯಿಂದ ಇದ್ದವು. ರಾಜಾರಾಮನ ಮರಣಾನಂತರ ಕರ್ನಾಟಕದ ಉತ್ತರ ಭಾಗದಲ್ಲಿ ಮುಗಲರ ಪ್ರಭಾವ ಹೆಚ್ಚಾಗಿ ಮರಾಠರ ಹಿಡಿತ ಕುಗ್ಗಿತು. 1700ರ ಸುಮಾರಿಗೆ ಕೊಲ್ಲಾಪುರದಲ್ಲಿ ಕಾಣಿಸಿದ ರಾಜಾರಾಮನ ವಂಶಜರಾದ ಕೊಲ್ಲಾಪುರದ ಛತ್ರಪತಿ ವಂಶಜರು ಸಾತಾರಾದ ಶಾಹುವಿನ ಹಾಗೂ ಅವನ ವಂಶಜರ ಜೊತೆ ನಡೆಸುತ್ತಿದ್ದ ಸ್ಪರ್ಧೆಯು ಕರ್ನಾಟಕದ

ಭಾಗಗಳಿಗೂ ವ್ಯಾಪಿಸಿತ್ತು. ಕೊಲ್ಲಾಪುರದ ಒಂದನೆಯ ಶಿವಾಜಿ (1760–1814) ನರಗುಂದ, ತೊರಗಲ್, ರಾಮದುರ್ಗ, ಕೊಪ್ಪಳ ಪ್ರದೇಶಗಳನ್ನು ಪಡೆದನಲ್ಲದೆ ಮುಗಲರಿಂದ ಮಿರಜ್, ಬಿಜಾಪುರ, ಅಥಣಿಗಳನ್ನೂ ಹೊಂದಿದ. ಸಾತಾರಾ ಮತ್ತು ಕೊಲ್ಲಾಪುರಗಳ ನಡುವೆ 1731ರಲ್ಲಿ ನಡೆದ ವಾರ್ಣಾ ಒಪ್ಪಂದದಂತೆ ವಾರ್ಣಾ ನದಿ ಮತ್ತು ತುಂಗಭದ್ರಾಗಳ ನಡುವಿನ ಪ್ರದೇಶ ಕೊಲ್ಲಾಪುರಕ್ಕೆ ಸೇರುವಂತಾಯಿತು. ಮುಂದಿನ ಅನೇಕ ದಶಕಗಳ ಕಾಲ ಉತ್ತರ ಕರ್ನಾಟಕದ ಈ ಪ್ರದೇಶಗಳು ಅನೇಕ ಬಾರಿ ಸಾತಾರಾ ಛತ್ರಪತಿಯ ಪ್ರತಿನಿಧಿ ಪೇಶವೆ ಮತ್ತು ಕೊಲ್ಲಾಪುರದ ಛತ್ರಪತಿಯ ನಡುವೆ ಕೈಬದಲಾಯಿಸುತ್ತಲಿದ್ದವು.

1714ರಲ್ಲಿ ಮುಗಲ್ ಪ್ರಾಂತಗಳನ್ನೊಳಗೊಂಡಂತೆ ಇಡೀ ದಕ್ಷಿಣ ಭಾರತದಲ್ಲೆಲ್ಲ ಚೌತಾಯಿ ಮತ್ತು ಸರದೇಶಮುಖಿ ಶುಲ್ಕವನ್ನು ಎತ್ತುವ ಅಧಿಕಾರವನ್ನು ಮರಾಠರು ಮುಗಲ್ ಚಕ್ರವರ್ತಿಯಿಂದ ಪಡೆದುಕೊಂಡರು. ಹೀಗೆ ಪಡೆದುಕೊಂಡ ಅಧಿಕಾರವನ್ನು ಚಲಾಯಿಸುವುದಕ್ಕಾಗಿ ಅವರು ಅನೇಕ ಮುಲ್ಕಗಿರಿ ದಂಡಯಾತ್ರೆಗಳನ್ನು ದಕ್ಷಿಣ ಭಾರತದ ಮೇಲೆ ಆರಂಭಿಸಿದರು. ಕರ್ನಾಟಕದ ಚರಿತ್ರೆಯಲ್ಲಿ ಹದಿನೆಂಟನೆಯ ಶತಮಾನದುದ್ದಕ್ಕೂ ಈ ರೀತಿಯ ದಂಡಯಾತ್ರೆಗಳನ್ನು ಕಾಣಬಹುದು.

ಒಂದನೆಯ ಬಾಜಿರಾಯ 1726ರ ಜನವರಿಯಲ್ಲಿ ಕರ್ನಾಟಕವನ್ನು ಪ್ರವೇಶಿಸಿ ಗಲಗಲಿ, ಕೊಲ್ಹಾರ, ಹಣಮಸಾಗರ, ಯಲಬುರ್ಗ, ಸಂಗಿನಹಾಳ, ಮುಧೋಳ, ಬೇಡರಟ್ಟಿ, ಸಿಂದಗಿ, ತಗರಿ, ಹಂಪಸಾಗರ ಮೂಲಕ ಚಿತ್ರದುರ್ಗದ ವರೆಗೆ ಬಂದು ಮರಳಿದ. ದಾರಿಯಲ್ಲಿ ಇದ್ದ ಎಲ್ಲ ದೇಸಾಯಿಗಳಿಂದಲೂ ಪಾಳೆಯಗಾರರಿಂದಲೂ ಚೌತ್ ಸಂಗ್ರಹಿಸಿದ. ಮುಂದೆ 1726ರ ಕೊನೆಗೆ ಎರಡನೆಯ ಬಾರಿ ದಂಡಯಾತ್ರೆ ಕೈಕೊಂಡು ಹುಕ್ಕೇರಿ, ನೇಸರಿ, ಬೆಳಗಾಂವಿ, ಸೋದೆ, ಬಿದನೂರು, ಅಜ್ಜಂಪುರ, ಹಾಸನ, ತಿಪಟೂರು ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಬಂದು ದಾರಿಯಲ್ಲಿ ಎಲ್ಲ ಪ್ರಮುಖ ಪಾಳೆಯಗಾರ ಹಾಗೂ ಅರಸರಿಂದ ಚೌತನ್ನು ಸಂಗ್ರಹಿಸಿದ. ಮೈಸೂರು ಅರಸರು 21 ಲಕ್ಷ ರೂಪಾಯಿ ನೀಡಿದರು. ಇದರ ಅನಂತರ 1740ರಲ್ಲಿ ರಘುಜಿ ಭೋಂಸ್ಲೆ ಮತ್ತು ಬಾಬೂಜಿ ನಾಯಕರು ಪುಣೆಯಿಂದ ಕಳುಹಿಸಲ್ಪಟ್ಟು, ಮೈಸೂರು ದೊರೆಯಿಂದಲೇ 50ಲಕ್ಷ ರೂ ಸಂಗ್ರಹಿಸಿದರು. 1744ರಲ್ಲಿ ಇನ್ನೊಮ್ಮೆ ಬಾಬೂಜಿ ನಾಯಕ ಬಿದನೂರಿಗೆ ಬಂದು ಅಲ್ಲಿಂದ ದಕ್ಷಿಣಕ್ಕೆ ಸಾಗುತ್ತಿರಲು ಬಸವಾಪಟ್ಟಣದಲ್ಲಿ ಮೈಸೂರವರು ಅವನನ್ನು ಸೋಲಿಸಿ ಹಿಂದಕ್ಕಟ್ಟಿದರು. ಪೇಶವೆ ನಾನಾಸಾಹೇಬನ (ಬಾಳಾಜಿರಾವ್) ಅನುಜ್ಞೆಯಂತೆ 1747ರಲ್ಲಿ ಸದಾಶಿವ ಭಾವು ಬಿದನೂರ ವರೆಗೆ ಬಂದು ಪೊಗದಿ ಸಂಗ್ರಹಿಸಿದ. 1753ರಲ್ಲಿ ಸ್ವತಃ ನಾನಾಸಾಹೇಬನೇ ಬಿದನೂರು, ಚಿತ್ರದುರ್ಗ, ಮೈಸೂರುಗಳಿಂದ ಪೊಗದಿ ಸಂಗ್ರಹಿಸಲು ಬಂದಿದ್ದ. ಇದೇ ರೀತಿ 1754ರಲ್ಲಿ ಬಿದನೂರು ವರೆಗೂ 1757ರಲ್ಲಿ ಶ್ರೀರಂಗಪಟ್ಟಣದ ವರೆಗೂ ಪೇಶವೆ ದಂಡಯಾತ್ರೆ ನಡೆಸಿದ್ದ.

1758ರ ಅನಂತರ ಮರಾಠರು ಕರ್ನಾಟಕದಲ್ಲಿ ಹೆಚ್ಚಿನ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಅದೇ ವರ್ಷ ಗೋಪಾಲರಾವ್ ಪಟವರ್ಧನ್ ಎಂಬುವವನು ಅಸಂಖ್ಯಾತ ಸೈನ್ಯದೊಡಗೂಡಿ ಕರ್ನಾಟಕದ ಮೇಲೆ ದಂಡಯಾತ್ರೆ ನಡೆಸಿದ. ಅವನು ಯಾವ ಆಶೆ ಆಕಾಂಕ್ಷೆಗಳನ್ನಿಟ್ಟುಕೊಂಡು ಬಂದಿದ್ದನೋ ಅವೆಲ್ಲವೂ ಮಣ್ಣುಪಾಲಾದುವು. ಮರಾಠರನ್ನು ಕರ್ನಾಟಕದಿಂದ ಓಡಿಸುವುದು ಮತ್ತು ಮರಾಠರ ನೆಲೆಗಳನ್ನು ಧ್ವಂಸ ಮಾಡುವುದು ಮೈಸೂರು ರಾಜ್ಯದ ನೀತಿಯಾಯಿತು. ಮಾರನೆಯ ವರ್ಷ ಗೋಪಾಲ ರಾವ್ ಪಟವರ್ಧನ್ ಬೆಂಗಳೂರಿಗೆ ಹಾಕಿದ ಮುತ್ತಿಗೆಯು ನಿಷ್ಫಲವಾಯಿತು. ಅಷ್ಟೇ ಅಲ್ಲದೆ ಅವನು ಅಲ್ಲಿಯತನಕ ಕರ್ನಾಟಕದ ಎಷ್ಟು ಪ್ರದೇಶಗಳನ್ನು ವಶಪಡಿಸಿಕೊಂಡಿದ್ದನೋ ಅವೆಲ್ಲವನ್ನೂ ಬಿಟ್ಟುಕೊಟ್ಟು ಗಳಿಸಿದ್ದ ಅಲ್ಪ ಸ್ವಲ್ಪ ಹಣದೊಂದಿಗೆ ಮಹಾರಾಷ್ಟ್ರಕ್ಕೆ ಮರಳಬೇಕಾಯಿತು. ಅಷ್ಟೊಂದು ಪ್ರತಿಭಟನೆಯನ್ನು ಸಜ್ಜುಗೊಳಿಸಿದವರೆಂದರೆ ದಳವಾಯಿ ನಂಜರಾಜಯ್ಯ ಮತ್ತು ಹೈದರ್ ಅಲಿ.

ಪ್ರವರ್ಧಮಾನಕ್ಕೆ ಬರುತ್ತಿದ್ದ ಹೈದರನನ್ನು ಕಂಡು ಮರಾಠರು ಮತ್ತೊಂದು ದಂಡಯಾತ್ರೆಯನ್ನು ಸಜ್ಜುಗೊಳಿಸಿದರು. ಸೈನ್ಯದ ಸರ್ವಸೇನಾಧಿಪತ್ಯವನ್ನು ಪೇಶವೆಮಾಧವರಾಯ ವಹಿಸಿದ. 1764ರಲ್ಲಿ ಮರಾಠ ಸೈನ್ಯ ಕರ್ನಾಟಕಾಭಿಮುಖವಾಗಿ ಹೊರಟಿತು. ಉತ್ತರ ಕರ್ನಾಟಕವನ್ನು ಅವರು ಕೊಳ್ಳೆಹೊಡೆದರು. ಹೈದರ್ ಮತ್ತು ಅವನ ಸೇನಾನಿ ಫಜಲುಲ್ಲ ರಟ್ಟೆಹಳ್ಳಿಯಲ್ಲಿ, ಅನಂತರ ಆನವಟ್ಟಿಯಲ್ಲಿ ಮರಾಠರನ್ನು ಸಂಧಿಸಿ, ವೀರಾವೇಶದಿಂದ ಯುದ್ಧಮಾಡಿದರು. ಮರಾಠರ ಮೇಲುಗೈಯನ್ನು ಕಂಡ ಹೈದರ್ ಆ ಸನ್ನಿವೇಶದಲ್ಲಿ ಯುದ್ಧವನ್ನು ಮುಂದುವರಿಸುವುದು ಯುಕ್ತವಲ್ಲವೆಂದು ತಿಳಿದು 1765ರ ಮಾರ್ಚ್ ತಿಂಗಳಲ್ಲಿ ಮರಾಠರೊಂದಿಗೆ ಒಪ್ಪಂದ ಮಾಡಿಕೊಂಡ. ಈ ಒಪ್ಪಂದದ ಪ್ರಕಾರ ಹೈದರ್ ಮುರಾರಿರಾಯನ ಪ್ರಾಂತಗಳನ್ನೂ ಉತ್ತರ ಕರ್ನಾಟಕದ ಬಹು ಭಾಗವನ್ನೂ ಹಿಂತಿರುಗಿಸಿದುದಲ್ಲದೆ ಯುದ್ಧಪರಿಹಾರವಾಗಿ ಮೂವತ್ತು ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿದ. ಮರಾಠರು ಈ ಸಂಧಿ ನಿಯಮಗಳಿಗೆ ಒಪ್ಪಿ, ಹೈದರನನ್ನು ಶಿರಾದ ನವಾಬನೆಂದು ಅಂಗೀಕರಿಸಿದರು. ಎರಡು ವರ್ಷಗಳ ಅನಂತರ ಪೇಶವೆ ಮತ್ತೆ ಕರ್ನಾಟಕದ ಮೇಲೆ ದಂಡಯಾತ್ರೆ ನಡೆಸಿ ಶಿರಾ, ದೊಡ್ಡಬಳ್ಳಾಪುರ, ಹೊಸಕೋಟೆ ಪ್ರದೇಶಗಳನ್ನು ವಶಪಡಿಸಿಕೊಂಡ. 1769ರಲ್ಲಿ ಅವನು ಮೂರನೆಯ ಬಾರಿ ಮೈಸೂರಿನ ಮೇಲೆ ನುಗ್ಗಿದ. ಮರು ವರ್ಷ ಅವನು ತ್ರಯಂಬಕ ಹರಿಯನ್ನು ಸೇನಾಧಿಪತಿಯನ್ನಾಗಿ ನೇಮಿಸಿ, ಕರ್ನಾಟಕದ ದಂಡಯಾತ್ರೆಯನ್ನು ಪರಿಸಮಾಪ್ತಿಗೊಳಿಸುವಂತೆ ಸೂಚಿಸಿ ತಾನು ಹಿಂದಿರುಗಿದ. ತ್ರಯಂಬಕ ಹರಿ ಹೈದರನನ್ನು ಚಿನಕುರಳಿ (ಮೋತಿ ತಲಾಬ್) ಕದನದಲ್ಲಿ ಸೋಲಿಸಿ, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ. ಆದರೆ ಅದನ್ನು ವಶಪಡಿಸಿಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ. 1771ರ ಮೇ ತಿಂಗಳಿನಲ್ಲಿ ಅವನು ಖಂಡಣಿಯನ್ನು ಪಡೆದು ಹಿಂದಿರುಗಿದ. (ಬಿ.ಎಂ.;ಎಸ್.ಕೆ.)

ಮಾಧವರಾಯನ ಮರಣಾನಂತರ ಮರಾಠರು ತುಂಗಭದ್ರೆಯ ದಕ್ಷಿಣಕ್ಕೆ ತಾವಾಗಿ ದಂಡೆತ್ತಿ ಬರದಿದ್ದರೂ ಈ ಮೈಸೂರು ಯುದ್ಧಗಳಲ್ಲಿ ಬ್ರಿಟಿಷರಿಗೆ ನೆರವಾಗಿದ್ದರು. ಟಿಪ್ಪುವಿನ ಪತನಾನಂತರ ದಕ್ಷಿಣ ಕರ್ನಾಟಕದೊಡನೆ ಮರಾಠರ ಸಂಪರ್ಕ ತಪ್ಪಿತ್ತು. ಆದರೆ ಮುಂದೆ 1818ರಲ್ಲಿ ಮರಾಠರ ಸಾಮ್ರಾಜ್ಯದ ಪತನವಾಗುವ ವರೆಗೆ ತುಂಗಭದ್ರೆಯ ಉತ್ತರದ ಪ್ರದೇಶ ಅವರ ವಶದಲ್ಲಿತ್ತು.

ತುಂಗಭದ್ರೆಯ ಉತ್ತರಕ್ಕೆ ಸೋದೆ, ಕಿತ್ತೂರು, ನರಗುಂದ, ಬಾದಾಮಿ, ಸವಣೂರು, ರಾಮದುರ್ಗ, ಜತ್, ಅಕ್ಕಲಕೋಟೆ, ಮಿರಜ್, ಸಾಂಗಲಿ, ಜಮಖಂಡಿ, ಮುಧೋಳ ಮುಂತಾದ ಅನೇಕ ಸಂಸ್ಥಾನಗಳು ಪೇಶವೆಗೆ ಅಧೀನವಾಗಿದ್ದವು. ಈ ಸಂಸ್ಥಾನಗಳ ಸ್ಥಾನಮಾನ, ಅಧಿಕಾರಗಳಲ್ಲಿ ಸಾಕಷ್ಟು ವ್ಯತ್ಯಾಸವಿತ್ತು. ಅವುಗಳ ಮತ್ತು ಕೇಂದ್ರ ಮರಾಠಾ ಸತ್ತೆಯ ನಡುವಣ ಸಂಬಂಧದ ರೀತಿಯಲ್ಲೂ ವ್ಯತ್ಯಾಸಗಳಿದ್ದುವು. ಅದನ್ನು ಹೀಗೇ ಎಂದು ಒಂದು ಸಾಮಾನ್ಯ ಸೂತ್ರದಿಂದ ನಿರೂಪಿಸುವುದು ಕಷ್ಟ. ಕೆಲವು ಗ್ರಾಮಗಳನ್ನೂ ಕೆಲವರಿಗೆ ಇನಾಂ ಆಗಿ ಕೊಡಲಾಗಿತ್ತು. ಅವುಗಳಿಗೆ ಕಂದಾಯ ಮುಂತಾದ ಕೊಡುಗೆಗಳಿಲ್ಲ. ಕೆಲವು ಸರಂಜಾಮು ಗ್ರಾಮಗಳಾಗಿದ್ದು, ಅವುಗಳ ಅಧಿಕಾರಿ ಸೈನ್ಯವನ್ನು ಒದಗಿಸಬೇಕು.

ದೇಸಾಯಿ, ದೇಶಮುಖ, ದೇಶಪಾಂಡೆ ಮುಂತಾದ ತುಂಡರಸರಂತಿರುವ ವ್ಯಕ್ತಿಗಳು ಪರಂಪರಾಗತವಾಗಿ ಕೆಲವೊಂದು ಗ್ರಾಮಗಳ ಮೇಲೆ ಅಧಿಕಾರ ಹೊಂದಿದ್ದರು. ನರಗುಂದ, ಕಿತ್ತೂರು, ಜಮಖಂಡಿ ಮುಂತಾದವು ಈ ವರ್ಗಕ್ಕೆ ಸೇರಿದ ಸಂಸ್ಥಾನಗಳು. ಆದರೆ ಇವೆಲ್ಲವೂ ಒಂದು ತಾಲ್ಲೂಕು ಎಂಬ ಆಡಳಿತ ವಿಭಾಗಕ್ಕೆ ಒಳಪಟ್ಟಿದ್ದು ಆ ತಾಲ್ಲೂಕಿನ ಮೇಲೆ ಒಬ್ಬ ಕೇಂದ್ರದ ಅಧಿಕಾರಿ ಇರುತ್ತಿದ್ದ. ಅತ್ಯಂತ ಕನಿಷ್ಠ ಕಂದಾಯ ಸಂಗ್ರಹದ ಘಟಕವೆಂದರೆ ಮಹಲ್. ಅದು ಇಂದಿನ ಒಬ್ಬ ಪಟೇಲನ ಆಡಳಿತಕ್ಕೆ ಒಳಪಟ್ಟ ಒಂದು ದೊಡ್ಡ ಗ್ರಾಮ ಅಥವಾ ಒಂದಕ್ಕಿಂತ ಹೆಚ್ಚು ಕಿರು ಗ್ರಾಮಗಳ ಸಮುದಾಯ. ಪ್ರತಿಗ್ರಾಮಕ್ಕೆ ಒಬ್ಬ ಪಾಟೀಲ, ಒಬ್ಬ ಕುಲಕರ್ಣಿ ಹಾಗೂ ಹಲವಾರು ತಳಾರರು ಇರುತ್ತಿದ್ದರು. ತಳಾರರು ಗ್ರಾಮರಕ್ಷಕರು. ಹಳಬರೆಂದೂ ಇವರನ್ನು ಕರೆದುದಿದೆ. ಕಿತ್ತೂರು ತಾಲ್ಲೂಕಿನಲ್ಲಿ 285 ಮಹಲುಗಳಿದ್ದುವು. ಈ ಪೈಕಿ 194 ಮಹಲುಗಳು ಪೇಶವೆಯ ನೇರ ಆಡಳಿತಕ್ಕೆ ಒಳಪಟ್ಟ ಅಮಲಿ ಅಥವಾ ಖಾಲ್ಸಾ ಗ್ರಾಮಗಳು. ಉಳಿದುವುಗಳಲ್ಲಿ 11 ಇನಾಂ ಗ್ರಾಮಗಳು, 22 ಸರಂಜಾಮು ಗ್ರಾಮಗಳು, 44 ಒಬ್ಬ ದೇಸಾಯಿಯ ಆಡಳಿತಕ್ಕೆ ಸೇರಿದವುಗಳು. ಮಹಲಿನ ಮೇಲೆ ಇರುವ ವಿಭಾಗಕ್ಕೆ ಕರಯತ್ ಎಂಬ ಹೆಸರಿತ್ತು. ಇದು ಹೋಬಳಿಗೆ ಸಮ. ಕಿತ್ತೂರು ತಾಲ್ಲೂಕಿನಲ್ಲಿ 15 ಕರಯತ್‍ಗಳಿದ್ದವು. ಪ್ರಾಂತ, ತರ್ಫ, ಪರಗಣಾ ಮುಂತಾದ ಇನ್ನೂ ಅನೇಕ ಆಡಳಿತ ವಿಭಾಗಗಳಿದ್ದುವು. ನರಗುಂದ ತಾಲ್ಲೂಕಿನಲ್ಲಿ ಇದ್ದ ನರಗುಂದ ಪರಗಣಾದಲ್ಲಿ 32 ಗ್ರಾಮಗಳಿದ್ದು (ಮಹಲು), ಕೊಣ್ಣೂರು ತರ್ಫದಲ್ಲಿ 29 ಗ್ರಾಮಗಳಿದ್ದವು. ಆದರೆ ಅದೇ ತಾಲ್ಲೂಕಿನ ನವಲಗುಂದ ತರ್ಫ 10 ಗ್ರಾಮಂಗಳದು, ಬಾದಾಮಿ ಪ್ರಾಂತ 7 ಗ್ರಾಮಗಳದು. ಆದರೆ ಹೆಚ್ಚಿನ ದಾಖಲೆಗಳಲ್ಲಿ ಪ್ರಾಂತ ಎಂಬ ಶಬ್ದವನ್ನು ಸವಣೂರು, ಚಿತ್ರದುರ್ಗ, ಸೋದೆಗಳಂಥ ಸಂಸ್ಥಾನಗಳನ್ನು ಉಲ್ಲೇಖಿಸಿ ಹೇಳಿದೆ.

ಶಹಾಜಿ ಮತ್ತು ಏಕೋಜಿಯರು ಬೆಂಗಳೂರು ಜಹಗೀರಿನ ಪ್ರದೇಶ ದಲ್ಲಿ ಕೃಷಿ, ನೀರಾವರಿಗಳಿಗೆ ಪ್ರೋತ್ಸಾಹ ನೀಡಿದರು. ಆಡಳಿತದಲ್ಲಿ ಕನ್ನಡವನ್ನೇ ಬಳಸಿದರು. ಈ ಭಾಗದಲ್ಲಿರುವ ಅವರ ಎಲ್ಲ ಶಾಸನಗಳು ಕನ್ನಡದಲ್ಲಿಯೇ ಇವೆ. ಶಿವಾಜಿಯ ಉತ್ತರಾಧಿಕಾರಿಗಳೂ ತಮ್ಮ ನೇರ ಆಡಳಿತಕ್ಕೆ ಒಳಪಡದ ಕರ್ನಾಟಕದ ಪ್ರದೇಶಗಳನ್ನು ಮುಗಲರಿಂದ ತಾವು ಪಡೆದ ಸುಬಾಗಳೆಂದು ಪರಿಗಣಿಸಿ, ಅವರ ಸೇನೆಗಳ ಜೊತೆ ಮೈತ್ರಿಯಿಂದ ಇದ್ದ ಕೆಳದಿ, ಸೋದೆ, ಚಿತ್ರದುರ್ಗ ಮುಂತಾದ ರಾಜ್ಯಗಳನ್ನು ಅವುಗಳ ಕಷ್ಟಕಾಲದಲ್ಲಿ ರಕ್ಷಿಸದೇ ಹೋದುದು ಮರಾಠರ ವಿಶ್ವಾಸ ಘಾತುಕ ಕೃತ್ಯವೇ ಆಗಿತ್ತು. ಕೆಳದಿ, ಸೋದೆಗಳು, ಪಾನೀಪತ್‍ನ ದುರಂತದ ಅನಂತರ ಮರಾಠರು ದುರ್ಬಲರಾಗಿದ್ದ ಕ್ಷಣದಲ್ಲಿ ಹೈದರ್ ಅಲಿಯ ದಾಳಿಗೆ ತುತ್ತಾದುವಾದರೆ, ಚಿತ್ರದುರ್ಗದ ಪತನದ ಕಾಲದಲ್ಲಿ ಅಂಥ ದುಸ್ಥಿತಿ ಯಾವುದೂ ಇರಲಿಲ್ಲ. ವಾಸ್ತವವಾಗಿ ಪೇಶವೆಯ ಕಡೆ ಯಿಂದ ಚಿತ್ರದುರ್ಗದ ನೆರವಿಗೆ ಬಂದಿದ್ದ ಹರಿಪಂತ ಫಡ್ಕೆ ಹೈದರನಿಂದ ಲಂಚ ಪಡೆದು ಹಿಂದಿರುಗಿದ. ಮೈಸೂರು ಮತ್ತು ಆಂಗ್ಲರ ನಡುವೆ ನಡೆದ ಯುದ್ಧಗಳಲ್ಲೂ ಆರಂಭದಲ್ಲಿ ಮೈಸೂರಿನ ಜೊತೆ ಒಪ್ಪಂದ ಮಾಡಿಕೊಂಡಿದ್ದ ಮರಾಠರು ಮುಂದೆ ಮೈಸೂರಿನ ಕೈಬಿಟ್ಟು ಆಂಗ್ಲರ ಜೊತೆ ಸಹಕರಿಸಿದರು.

ಮರಾಠರು ತಮ್ಮ ಆಡಳಿತಕ್ಕೆ ನೇರವಾಗಿ ಒಳಪಟ್ಟಿದ್ದ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಮರಾಠಿ ಭಾಷೆಯನ್ನು ವಿಶೇಷವಾಗಿ ಬಳಕೆಗೆ ತಂದರು. ಮರಾಠಿಗರ ಸಂಪರ್ಕದಿಂದ ವಿಠಲಭಕ್ತಿಯ ವಾರಕರಿಪಂಥ ಕರ್ನಾಟಕದಲ್ಲಿ ಹರಡಿತು. ಆಧುನಿಕ ಯುಗದಲ್ಲಿ ರಾನಡೆ, ಗೋಖಲೆ, ಟಿಳಕರ ಸಂಪರ್ಕದಿಂದ ಉತ್ತರ ಕರ್ನಾಟಕದಲ್ಲಿ ಸಾಮಾಜಿಕ ಜಾಗೃತಿ, ರಾಷ್ಟ್ರೀಯ ಜಾಗೃತಿಗಳು ಕಾಣಿಸಿಕೊಳ್ಳುವುದು ಸುಲಭವಾಯಿತು. ಉತ್ತರ ಕರ್ನಾಟಕದ ಹರಿಜನರ ಮೇಲೆ ಅಂಬೇಡ್ಕರ್ ಅವರ ಪ್ರಭಾವವೂ ಅದೇ ರೀತಿ ಕಾಣಿಸಿತು. ಮಹಾರಾಷ್ಟ್ರ ಜೊತೆಗಿನ ನಿಕಟ ಸಂಪರ್ಕ ಕನ್ನಡ ಭಾಷೆ, ಸಾಹಿತ್ಯಗಳ ಮೇಲೆ ಮರಾಠಿ ಭಾಷೆ, ಸಾಹಿತ್ಯಗಳ ಪ್ರಭಾವಕ್ಕೆ ಕಾರಣವಾಯಿತು. ಮೈಸೂರು ರಾಜವಂಶ 18ನೆಯ ಶತಮಾನದಲ್ಲಿ ಕನ್ನಡದ ಜೊತೆ ಮರಾಠಿಯನ್ನೂ ಆಡಳಿತ ಭಾಷೆಯಾಗಿ ಬಳಸುತ್ತಿತ್ತು. (ಎಸ್.ಕೆ.)

**ಮರಿಯಪ್ಪಭಟ್ಟ, ಎಂ.:** 1906-80. ಹೆಸರಾಂತ ಸಂಶೋಧಕ, ಭಾಷಾವಿಜ್ಞಾನಿ, ನಿಘಂಟುಕಾರರು. ಮುಂಗ್ಲಿಮನೆ ಮರಿಯಪ್ಪಭಟ್ಟ ಇವರ ಪೂರ್ಣಹೆಸರು. ದಕ್ಷಿಣ ಕನ್ನಡ ಜಿಲ್ಲೆಯ ಕಬಕದಲ್ಲಿ 1906 ಜುಲೈ 27ರಂದು ಜನಿಸಿದರು. ತಂದೆ ಗೋವಿಂದಭಟ್, ತಾಯಿ ಕಾವೇರಿಯಮ್ಮ. ಮೂವರು ಪುತ್ರರಲ್ಲಿ ಇವರೇ ಹಿರಿಯರು. ಪುತ್ತೂರಿನಲ್ಲಿ ಪ್ರೌಢಶಿಕ್ಷಣ ಮುಗಿಸಿ, ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಿಂದ ಆನ್ವಯಿಕ ಭೌತಶಾಸ್ತ್ರ ಮತ್ತು ಗಣಿತವನ್ನು ಮುಖ್ಯ ವಿಷಯಗಳಾಗಿ ಓದಿ ಬಿ.ಎ. ಪದವಿ ಪಡೆದರು. (1928). ಅನಂತರ ಉದ್ಯೋಗ ಅರಸಿ ಮದರಾಸಿಗೆ ತೆರಳಿದರು. ಮದರಾಸಿನ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಕೆಲಸ ಮಾಡು ತ್ತಲೇ ಮದರಾಸು ವಿಶ್ವ ವಿದ್ಯಾಲಯದಿಂದ ಕನ್ನಡ ಎಂ.ಎ. ಪಡೆದರು (1937). 1940ರಲ್ಲಿ ಕನ್ನಡ ಉಪನ್ಯಾಸ ಕರಾಗಿ ಬಡ್ತಿ ಪಡೆದರು (1955). ಲಂಡನಿನ ಓರಿಯೆಂ ಟಲ್ ಅಂಡ್ ಆಫ್ರಿಕನ್ ಸ್ಟಡೀಸ್ ವಿಭಾಗದಲ್ಲಿ ಭಾಷಾ ವಿಜ್ಞಾನದ ವಿಶೇಷ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ತೆರಳಿದರು (1955). ಅಲ್ಲಿ ಒಂದು ವರ್ಷದ ಅಧ್ಯಯನದ ಬಳಿಕ ಹಿಂದಿರುಗಿದರು. ಮದರಾಸು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡರು (1957).



ಇವರು ಸುಮಾರು ಹತ್ತು-ಹನ್ನೆರಡು ಹಳಗನ್ನಡ ಗ್ರಂಥಗಳನ್ನು ತಮ್ಮ ಸಹೋದ್ಯೋಗಿಯಾಗಿದ್ದ ಎಂ.ಗೋವಿಂದರಾಯರೊಡನೆ ಸೇರಿ, ವಿದ್ವತ್ಪೂರ್ಣವಾದ ಕಾವ್ಯವಿಮರ್ಶೆಗಳೊಡನೆ ಮದರಾಸು ವಿಶ್ವವಿದ್ಯಾಲಯ ದಿಂದ ಪ್ರಕಟಿಸಿದ್ದಾರೆ. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಂಸ್ಕೃತಿ- ಇವು ಸ್ವತಂತ್ರಕೃತಿಗಳು. ಇವರು ರಚಿಸಿದ ಹವ್ಯಕ ಪದಕೋಶ ಇವರ ನಿಧನಾನಂತರ ಪ್ರಕಟವಾಯಿತು (1980). ಮದರಾಸು ವಿಶ್ವವಿದ್ಯಾಲಯದ ಮೂಲಕ ಇವರು ಪರಿಷ್ಕರಿಸಿ ಪ್ರಕಟಿಸಿದ ಎಫ್.ಕಿಟ್ಟೆಲರ ಕನ್ನಡ-ಇಂಗ್ಲಿಷ್ ಅರ್ಥಕೋಶ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿದೆ (1968). ಇದೊಂದು ಮಹಾನ್ ವಿದ್ವತ್ತಿನ ಕೆಲಸ.

ಮಂಗರಾಜನ ಅಭಿನವಾಭಿದಾನಂ (1952), ಸೆಲೆಕ್ಟೆಡ್ ಕನ್ನಡ ಇನ್‍ಸ್ಕ್ರಿಪ್ಷನ್ಸ್ (1952), ಸಂಗೀತ ರತ್ನಾಕರ (1950), ಗುರುಬಸವನ ಸದ್ಗುರು ರಹಸ್ಯ (1951), ರಾಜಾದಿತ್ಯನ ವ್ಯವಹಾರ ಗಣಿತ (1955)- ಇವು ಭಟ್ಟರು ತಾವೇ ಸಂಪಾದಿಸಿದ ಕೃತಿಗಳು. ಆಚಣ್ಣನ ವರ್ಧಮಾನ

ಪುರಾಣ (1952), ಪಾರ್ಶ್ವಪಂಡಿತನ ಪಾರ್ಶ್ವನಾಥಪುರಾಣ (1954), ಶ್ರೀಧರಾಚಾರ್ಯನ ಜಾತಕ ತಿಲಕ (1955), ಚಿಕುಪಾಧ್ಯಾಯನ ಶ್ರೀವಿಷ್ಣು ಪುರಾಣಂ (1957)–ಇವು ತಮ್ಮ ಸಹೋದ್ಯೋಗಿಯಾಗಿದ್ದ ಎಂ. ಗೋವಿಂದ ರಾಯರೊಡನೆ ಸೇರಿ ಸಂಪಾದಿಸಿದ ಕೃತಿಗಳು. ಹಳಗನ್ನಡ ಕಾವ್ಯಸಂಗ್ರಹ (1957), ಹೊಸಗನ್ನಡ ಕಾವ್ಯಶ್ರೀ (1957), ನಲ್ನುಡಿನನ್ನುಡಿ (1962), ಸರ್ವಜ್ಞವಚನ ಸಂಗ್ರಹ (1971)–ಈ ಕೃತಿಗಳಲ್ಲಿ ಮೊದಲನೆಯ ದನ್ನು ಬಿಟ್ಟು ಉಳಿದವು ಇತರರ ಸಹಯೋಗದಲ್ಲಿ ರಚನೆಯಾದಂಥವು. ದ್ರವಿಡಿಯನ್ ಕಂಪ್ಯಾರಿಟಿವ್ ವಕ್ಯಾಬುಲರಿ (1959) ಮದರಾಸು ವಿಶ್ವವಿದ್ಯಾಲಯದ ದ್ರಾವಿಡ ಭಾಷಾ ವಿಭಾಗದ ಮುಖ್ಯಸ್ಥರ ಸಹಸಂಪಾದಕತ್ವದಲ್ಲಿ ಪ್ರಕಟಿತವಾಗಿದೆ.

ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (1960), ಸಂತರ ಚರಿತ್ರೆ (1960), ಕನ್ನಡ ಸಂಸ್ಕೃತಿ (1967) ಎಂಬ ಮೂರು ಕೃತಿಗಳು ಹಾಗೂ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸು.43 ಲೇಖನಗಳನ್ನು ವಿವಿಧ ಸಂಶೋಧನ ನಿಯತಕಾಲಿಕೆ ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಕನ್ನಡ ಸಂಸ್ಕೃತಿ ಎಂಬ ಪುಸ್ತಕದಲ್ಲಿ ಇಂಥ ಆಯ್ದ ಲೇಖನಗಳು (35) ಸಂಕಲಿತ ವಾಗಿವೆ. ಇದನ್ನು ಬೆಂಗಳೂರಿನ ಸಹಕಾರೀ ಪ್ರಕಾಶನ ಮಂದಿರದವರು ಪ್ರಕಟಿಸಿದ್ದಾರೆ (1967).

ಇವರ ಸಾಹಿತ್ಯ ಸೇವೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸರ್ಕಾರ, ದ್ರಾವಿಡ ಭಾಷಾಶಾಸ್ತ್ರ ಸಂಘ ಗೌರವಿಸಿವೆ. ಮದರಾಸು ವಿಶ್ವವಿದ್ಯಾ ಲಯದ ಜರ್ನಲ್ಸ್ ಆಫ್ ಓರಿಯೆಂಟಲ್ ರಿಸರ್ಚ್ ಪತ್ರಿಕೆಯಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅನೇಕ ಸಂಶೋಧನ ಲೇಖನಗಳನ್ನು ಇವರು ಬರೆದು ಪ್ರಕಟಿಸಿದರು. ಸುಮಾರು ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ಮದರಾಸಿ ನಲ್ಲಿ ವಾಸಮಾಡಿ ಅಲ್ಲಿ ಕನ್ನಡವನ್ನು ಕಟ್ಟಿ ಬೆಳೆಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದರು.

ಇವರು ರಚಿಸಿದ 'ಕನ್ನಡ ಸಂಸ್ಕೃತಿ' ಸಂಶೋಧನ ಕ್ಷೇತ್ರದ ಒಂದು ಮಹತ್ವದ ಕೃತಿ. ಅಗಾಧವಾದ ಭಾಷಾಪಾಂಡಿತ್ಯ, ಅಪಾರ ಸಾಹಿತ್ಯ ಪ್ರೇಮ, ಅಪೂರ್ವ ಗ್ರಂಥರಚನಾ ಹಾಗೂ ಸಂಪಾದನಾ ಕೌಶಲ, ಅನನ್ಯವಾದ ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ದೃಷ್ಟಿ ಮುಂತಾದ ಗುಣ ವಿಶೇಷಗಳು ಇವರ ವ್ಯಕ್ತಿತ್ವದ ಭಾಗವಾಗಿದ್ದವು. ಅಯನಾವರಂ ಕನ್ನಡ ಸಂಘ, ತ್ಯಾಗರಾಜನಗರ ಕನ್ನಡ ಸಂಘ, ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಸಂಘಗಳಲ್ಲಿಯೂ ಇವರು ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಭಾಷಾವಿಜ್ಞಾನ ಕ್ಷೇತ್ರದಲ್ಲಿ ಅಖಿಲ ಭಾರತ ಮಟ್ಟದ ಮಾನ್ಯತೆ ಪಡೆದಿದ್ದ ಇವರು ಕಿಟ್ಟೆಲ್ ಕೋಶವನ್ನು ಪರಿಷ್ಕರಿಸಿ ಪ್ರಕಟಿಸಿ ಅಭಿನವ ಕಿಟ್ಟೆಲ್ ಎಂಬ ಬಿರುದಿಗೂ ಪಾತ್ರರಾಗಿದ್ದರು.

ತುಳುನಾಡಿನಲ್ಲಿ ಹುಟ್ಟಿ, ತಮಿಳುನಾಡನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಕನ್ನಡಕ್ಕೆ ಅಪೂರ್ವ ಸೇವೆಸಲ್ಲಿಸಿದ ಭಟ್ಟರು 1980ರಲ್ಲಿ ನಿಧನರಾದರು. (ಪಿ.ಇ.ವಿ.)

**ಮರಿಯಪ್ಪ, ಟಿ.**: 1904–64. ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಮಾಜಸುಧಾರಕರು. ಗಾಂಧೀವಾದಿ 1904 ಜೂನ್ 4ರಂದು ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕಿನ ಕಳ್ಳನಕೆರೆಯಲ್ಲಿ (ಇಂದು ಬೀರೇಶ್ವರಪುರ ಎಂದು ಹೆಸರಾಗಿದೆ) ಸಾಮಾನ್ಯ ಮನೆತನವೊಂದರಲ್ಲಿ ಜನಿಸಿದರು. ತಂದೆ ಮರಿಯಾಮೇಸ್ತ್ರಿ, ತಾಯಿ ಹೊಂಬಾಳಮ್ಮ. ಮರಿಯಪ್ಪನವರ ಆರಂಭದ ವ್ಯಾಸಂಗ ನಾಗಮಂಗಲದಲ್ಲಿ ನಡೆಯಿತು. ಆಗಿನ ಎಲ್.ಎಸ್. ಪರೀಕ್ಷೆಯನ್ನು ಶ್ರೀರಂಗಪಟ್ಟಣದಲ್ಲಿ ತೆಗೆದುಕೊಂಡರು. ಆಗ ಇವರ ತಾಯಿಗೆ ವಿಪರೀತ ಖಾಯಿಲೆ. ಪರೀಕ್ಷೆಗೆ ಹೋಗುವುದಿಲ್ಲವೆಂದು ಬಳಿಯೇ ಕುಳಿತಿದ್ದ ಇವರನ್ನು ತಾಯಿಯೇ ಒತ್ತಾಯಮಾಡಿ ಪರೀಕ್ಷೆಗೆ ಕಳುಹಿಸಿದರು. ಆದರೆ ಮರಿಯಪ್ಪನವರು ಪರೀಕ್ಷೆ ಮುಗಿಸಿ ಹಿಂತಿರುಗಿ ಬರುವುದರಲ್ಲಿ ತಾಯಿ ತೀರಿಕೊಂಡಿದ್ದರು. ಈ ಘಟನೆ ಇವರ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತು. ಪ್ರೌಢಶಾಲೆ ಮತ್ತು ಇಂಟರ್ ಮೀಡಿಯಟ್ ವ್ಯಾಸಂಗವನ್ನು ಮೈಸೂರಿನಲ್ಲೇ ಮುಗಿಸಿದ ಇವರು ಅನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದರು. ಅಮಲ್ದಾರ್ ಕೆಲಸಕ್ಕೆ ಸೇರಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರಾದರೂ ಸ್ವತಂತ್ರವಾಗಿ ಬದುಕಬೇಕೆಂಬ ಇಚ್ಛೆಯಿಂದ ಆ ಕೆಲಸವನ್ನು ಬಿಟ್ಟು ಕಾನೂನು ಓದಲು ಪುಣೆಗೆ ಹೋದರು. ಅಲ್ಲಿ ಕಾನೂನು ಪದವಿ ಪಡೆದು ಹಿಂತಿರುಗಿ ಮೈಸೂರಿನಲ್ಲಿ ಎಚ್.ಸಿ.ದಾಸಪ್ಪನವರ ಬಳಿ ವಕೀಲವೃತ್ತಿ ಯನ್ನು ಆರಂಭಿಸಿ, ಆ ವೃತ್ತಿಯಲ್ಲಿ ಒಳ್ಳೆಯ ಪರಿಶ್ರಮವನ್ನು ಸಂಪಾದಿಸಿ ಕೊಂಡರು. ತಮ್ಮ ಬಳಿ ಬಂದ ಅನೇಕ ಕೇಸುಗಳನ್ನು ಇವರು ಮನೆಯಲ್ಲಿಯೇ ಇತ್ಯರ್ಥಮಾಡಿ ಕಳುಹಿಸುತ್ತಿದ್ದರು. ಕೈಮೀರಿದವುಗಳನ್ನು ಮಾತ್ರ ಕೋರ್ಟಿಗೆ ತೆಗೆದುಕೊಂಡು ಹೋಗುತ್ತಿದ್ದರು. ಪ್ರತಿಯೊಬ್ಬರ ಹಿತವನ್ನೂ ಕಾಪಾಡಬೇಕೆಂಬುದು ಇವರ ವಕೀಲವೃತ್ತಿಯ ಗುರಿಯಾಗಿತ್ತು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಭಾಗವಹಿಸಿದ್ದ ಮರಿಯಪ್ಪನವರು 1942 ಮತ್ತು 1947ರಲ್ಲಿ ಎರಡು ಬಾರಿ ಜೈಲುವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯಾನಂತರ ಇವರು ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಮೈಸೂರು ಪುರಸಭೆಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ರಾಜ್ಯ ವಿಧಾನಸಭೆಗೆ ಸುಮಾರು 19 ವರ್ಷಗಳ ಕಾಲ ಸದಸ್ಯರಾಗಿದ್ದರು. ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಮರಿಯಪ್ಪನವರು ಅವರ ಮಂತ್ರಿಮಂಡಲದಲ್ಲಿ ಹಣಕಾಸು ಮತ್ತು ಸಾರಿಗೆ ಸಚಿವರಾಗಿದ್ದರು. ಇವರು ಸಾರಿಗೆ ಸಚಿವರಾಗಿದ್ದಾಗಲೇ ಬಸ್‌ಮಾರ್ಗ ರಾಷ್ಟ್ರೀಕರಣಗೊಂಡು ಮೊದಲ ಸರ್ಕಾರಿ ಬಸ್ ಸಂಚರಿಸಲು ಆರಂಭಿಸಿದ್ದು. ಗ್ರಾಮಾಭಿವೃದ್ಧಿ ಯೋಜನೆಗಳಿಗೆ ಒಳ್ಳೆಯ ಬುನಾದಿ ಹಾಕಿದ ಇವರು ತಾಲ್ಲೂಕು ಮತ್ತು ಜಿಲ್ಲಾಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಿದರು.

ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಯ ಬಗ್ಗೆ ಆಸಕ್ತಿ ತಾಳಿದ್ದ ಇವರು ಅರ್ಥಸಚಿವರಾಗಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಿದ್ದ ಕನ್ನಡ–ಕನ್ನಡ ನಿಘಂಟು ಕೆಲಸಕ್ಕೆ ಆರ್ಥಿಕ ನೆರವನ್ನು ಒದಗಿಸಿ ಆ ಯೋಜನೆಯನ್ನು ಪ್ರೋತ್ಸಾಹಿಸಿದರು.

ಇವರು 1964 ಅಕ್ಟೋಬರ್ 2ರಂದು ನಿಧನರಾದರು. (ಡಿ.ಕೆ.ಆರ್.)

**ಮರೀಗೌಡ, ಎಂ.ಎಚ್.**: 1916–. ಕೃಷಿ ತಜ್ಞರು; ತೋಟಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿಯನ್ನು ತಂದ ಕರ್ನಾಟಕ ತೋಟಗಾರಿಕೆ ಇಲಾಖೆಯ ನಿವೃತ್ತ ನಿರ್ದೇಶಕರು.

ಇವರು 1916 ಆಗಸ್ಟ್ 8ರಂದು ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕಿನ ಮಾರಗೌಡನಹಳ್ಳಿಯ ಒಕ್ಕಲುತನದ ಕುಟುಂಬ ದಲ್ಲಿ ಜನಿಸಿದರು. ಗ್ರಾಮೀಣ ಪರಿಸರದ ನಡುವೆ ಬೆಳೆದು ಕೃಷಿಯ ಬಗ್ಗೆ ವಿಶೇಷ ಆಪ್ತತೆ ಬೆಳೆಸಿಕೊಂಡರು. ಶ್ರದ್ಧೆಯಿಂದ ವಿದ್ಯಾಭ್ಯಾಸ ಮುಂದುವರಿಸಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿ ಗಳಿಸಿದರು. ಮುಂದೆ ಲಖನೌ ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಪಡೆದರು. 1943ರಲ್ಲಿ ಮೈಸೂರು ಸಂಸ್ಥಾನದ ತೋಟಗಾರಿಕೆ ಇಲಾಖೆ ಯಲ್ಲಿ ತೋಟಗಾರಿಕಾ ಸಹಾಯಕರಾಗಿ ವೃತ್ತಿ ಆರಂಭಿಸಿದರು.

ಇವರು 1947ರಲ್ಲಿ ವೃತ್ತಿಯಲ್ಲಿ ವಿಶೇಷತಜ್ಞತೆ ಪಡೆಯುವ ಸಲುವಾಗಿ ಲಂಡನ್‌ಗೆ ಹೋಗಿ ಅಧ್ಯಯನ ನಡೆಸಿದರು. ಮುಂದೆ ಅಮೆರಿಕಕ್ಕೆ ಹೋದರು. ಅಲ್ಲಿನ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿ ಗಳಿಸಿದರು (1949–51). ತಾವು ಪಡೆದ

ವಿಶೇಷ ಪರಿಗಣತಿಗೆ ಮನ್ನಣೆ ಎಂಬಂತೆ ಮೈಸೂರು ರಾಜ್ಯದ ತೋಟಗಾರಿಕಾ ಇಲಾಖೆಯ ನಿರ್ದೇಶಕರಾಗಿ ನೇಮಕವಾದರು (1951) ಮುಂದೆ ವಿಸ್ತೃತ ಕರ್ನಾಟಕದ ತೋಟಗಾರಿಕಾ ಚಟುವಟಿಕೆಗಳನ್ನು ಇವರು ಬಹು ಕುಶಲತೆ ಮತ್ತು ಶ್ರದ್ಧೆಯಿಂದ ನಿರ್ವಹಿಸಿದರು.

ಬೆಂಗಳೂರಿನ ಲಾಲ್‌ಬಾಗ್ ಸಸ್ಯತೋಟ ಶತಮಾನದ ಹಿಂದಿನಿಂದಲೂ ಮುಖ್ಯ ಉದ್ಯಾನವನವಾಗಿದ್ದು ಅದು ಅಲಂಕಾರ ಸಸ್ಯಗಳ ಬೆಳೆಸುವಿಕೆಗೆ ಸೀಮಿತವಾಗಿತ್ತು. ಗೌಡರು ಈ ಪರಿಕಲ್ಪನೆಯನ್ನು ಬದಲಾಯಿಸಿ ಅಲ್ಲಿ ಬಟಾನಿಕಲ್ ಗಾರ್ಡನ್ ಮಾದರಿಯ ಉದ್ಯಾನವನ್ನು ರೂಪಿಸಿದರು. ಸತತ ಪ್ರಯೋಗ ಮತ್ತು ಸಂಶೋಧನೆ ನಡೆಸಲು ಕ್ರಮಗಳನ್ನು ಕೈಗೊಂಡರು ಇದರಿಂದಾಗಿ ಲಾಲ್‌ಬಾಗ್ ಸಸ್ಯಕಾಶಿಯಾದುದಲ್ಲದೆ, ಸಂಶೋಧನ ಕೇಂದ್ರವಾಗಿ ರೂಪುಗೊಂಡಿತು. ತೋಟಗಾರಿಕೆ ಇಲಾಖೆಯನ್ನು ರಾಜ್ಯಾದ್ಯಾಂತ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವ್ಯಾಪಕವಾಗಿ ವಿಸ್ತರಿಸಲಾಯಿತು. ಅಲ್ಲಲ್ಲಿ ತೋಟಗಾರಿಕಾ ಸಹಾಯಕರ ಸಿದ್ಧತೆಗೆ ತರಬೇತಿ ಕೇಂದ್ರಗಳು ಪ್ರಾರಂಭವಾದವು. ಇವರ ಅಧಿಕಾರವಧಿಯಲ್ಲಿ ರಾಜ್ಯಾದ್ಯಂತ 380 ಫಾರಂಗಳು, ನರ್ಸರಿಗಳು ಸ್ಥಾಪನೆಯಾದವು.

ತೋಟಗಾರಿಕೆ ಎಂದರೆ ಆಲಂಕಾರಿಕ ಸಸ್ಯಗಳನ್ನು ಬೆಳೆಯುವ ತಾಣವಲ್ಲ; ಅದೊಂದು ಆರ್ಥಿಕ ಮೌಲ್ಯವುಳ್ಳ ಉದ್ಯಮ ಎಂಬುದನ್ನು ಇವರು ತೋರಿಸಿಕೊಟ್ಟರು. ಸರ್ಕಾರಿ ತೋಟಗಳು ಅಥವಾ ಸಸ್ಯಕ್ಷೇತ್ರಗಳಲ್ಲಿ ಹಣ್ಣಿನ ಗಿಡಗಳು, ತರಕಾರಿಗಳು, ಹೂಗಳು, ಪ್ಲಾಂಟೇಷನ್ ಮತ್ತು ಸಂಬಾರ ಬೆಳೆಗಳು ಹಾಗೂ ವೈದ್ಯಕೀಯ ಮೌಲ್ಯದ ಸಸ್ಯಗಳನ್ನು ಬೆಳೆದು ಅದನ್ನು ಆದಾಯ ತರುವ ಮೂಲವಾಗಿ ಪರಿವರ್ತಿಸಿದರು. ವಿಶೇಷವಾಗಿ ತೆಂಗಿನ ಮಿಶ್ರತಳಿ ರೂಪಿಸಲು ಒಣಪ್ರದೇಶದಲ್ಲಿ ತೋಟಗಾರಿಕೆ ಮಾಡಲು ಹೊಸ ಪ್ರಯೋಗಗಳನ್ನು ನಡೆಸಿ ಸಫಲರಾದರು. ರೈತರಿಗೆ ಮತ್ತು ತೋಟಗಾರರಿಗೆ ಉಪಯುಕ್ತವಾದ ಸಸಿಗಳನ್ನು ಬೆಳೆಸಿ ನಾಮಮಾತ್ರ ಬೆಲೆಗೆ ಮಾರುವ ಏರ್ಪಾಡು ಮಾಡಿದರು. ತೋಟಗಾರಿಕೆ ಚಟುವಟಿಕೆ ಹೆಚ್ಚಿದಂತೆಲ್ಲ ಇಲಾಖೆಯಲ್ಲಿ ಸಾವಿರಾರು ಜನರಿಗೆ ಉದ್ಯೋಗ ಒದಗಿತು. ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ಖರೀದಿಸಿ ಗ್ರಾಹಕರಿಗೆ ಮಾರಲು ಸಹಕಾರ ವ್ಯವಸ್ಥೆ ಮಾಡಿದರು. ಹೀಗೆ ಇವರ ಕಾಲದಲ್ಲಿ ತೋಟಗಾರಿಕೆ ಬೃಹತ್ ಪ್ರಮಾಣದಲ್ಲಿ ವಿಸ್ತರಿಸಿತು. ಕರ್ನಾಟಕದ ಈ ಮಾದರಿ ಭಾರತ ಸರ್ಕಾರದ ಗಮನ ಸೆಳೆಯಿತು. ಅನೇಕ ರಾಜ್ಯಗಳು ಇಲ್ಲಿನ ವಿಧಾನಗಳನ್ನು ಅಳವಡಿಸಿಕೊಂಡವು.

ಸುದೀರ್ಘ ಕಾಲ (1951–74) ಇಲಾಖೆಯ ಮುಖ್ಯರಾಗಿದ್ದ ಇವರು 1974ರಲ್ಲಿ ನಿವೃತ್ತರಾದರು. ಇವರು ತೋಟಗಾರಿಕಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗಮನಿಸಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ವಿವಿಧ ಸಂಸ್ಥೆಗಳು ಇವರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಿದವು. ನಿವೃತ್ತಿಯ ಅನಂತರವೂ ಸಾಮಾಜಿಕವಾಗಿ ಸಕ್ರಿಯರಾಗಿದ್ದ ಇವರು ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ (1979–82) ಅಮೂಲ್ಯ ಸೇವೆಸಲ್ಲಿಸಿದರು. (ಡಿ.ಎಸ್.ಜೆ.)

**ಮರಿರಾವ್, ಎಂ.ಜಿ.**: ಕನ್ನಡ ರಂಗಭೂಮಿಯ ಹೆಸರಾಂತ ಹಾಸ್ಯ ನಟರು. ವರದಾಚಾರ್ಯರ ರತ್ನಾವಳಿ ನಾಟಕ ಸಭಾದಲ್ಲಿ ಹಲವು ವರ್ಷಗಳ ಕಾಲ ಬಗೆಬಗೆಯ ಹಾಸ್ಯ ಪಾತ್ರಗಳನ್ನು ನಿರ್ವಹಿಸಿ 'ಹಾಸ್ಯಕಲಾನಿಧಿ' ಎಂಬ ಬಿರುದಿಗೆ ಪಾತ್ರರಾದವರು. ಚಿಕ್ಕಂದಿನಲ್ಲಿಯೇ ಬಣ್ಣದ ಬದುಕಿಗೆ ಒಲಿದ ಇವರು, ತಮ್ಮ ಐದನೆಯ ವಯಸ್ಸಿನಲ್ಲಿ ರಂಗಭೂಮಿಯನ್ನು ಪ್ರವೇಶಿಸಿದರು (1908). ಬೆಂಗಳೂರಿನಲ್ಲಿ ವರದಾಚಾರ್ಯರು ನಾಟಕಗಳನ್ನಾಡುತ್ತಿದ್ದ ಸಮಯದಲ್ಲಿ ಅವರ ನಾಟಕ ಕಂಪನಿ ಸೇರಿ, ರಾಮಪಾಲ ಚರಿತ್ರೆ ನಾಟಕದಲ್ಲಿ ಬಾಲನಟನಾಗಿ ಅಭಿನಯಿಸಿ, ವರದಾಚಾರ್ಯರ ಮೆಚ್ಚುಗೆಯಿಂದ ಪ್ರೋತ್ಸಾಹಗೊಂಡರು. ಅನಂತರ ಇವರು ನಿರ್ವಹಿಸಿದ ಧ್ರುವಚರಿತ್ರೆ ನಾಟಕದ ಧ್ರುವನ ಪಾತ್ರ ಇವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿತು. ಆ ಪಾತ್ರವನ್ನು ಮೆಚ್ಚಿದ ಕಲಾಭಿಮಾನಿಗಳು ವಾಗ್ಗೇಯಕಾರ ಕೆ. ವಾಸುದೇವಾಚಾರ್ಯರ ಸಮ್ಮುಖದಲ್ಲಿ ಇವರನ್ನು ಅಭಿನಂದಿಸಿ ಸಭೆಯೊಂದನ್ನು ನಡೆಸಿ, ಬಂಗಾರದ ಕಾಪು ತೊಡಿಸಿ ಗೌರವಿಸಿದರು. ಜೀವನನಾಟಕ, ಸತ್ಯಹರಿಶ್ಚಂದ್ರ, ಕಬೀರದಾಸ, ಸತೀತುಳಸಿ, ಸಂಪೂರ್ಣ ರಾಮಾಯಣ ಈ ಮುಂತಾದ ಅನೇಕ ಪೌರಾಣಿಕ ನಾಟಕಗಳಲ್ಲಿ ಹಾಸ್ಯ ಪಾತ್ರಗಳನ್ನು ಮತ್ತು ಗಂಭೀರ ಪಾತ್ರಗಳನ್ನು ಇವರು ನಿರ್ವಹಿಸಿದ್ದಾರೆ. ಟಿ.ಪಿ.ಕೈಲಾಸಂ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಇವರು ಅನೇಕ ಸಾಮಾಜಿಕ ನಾಟಕಗಳಲ್ಲೂ ಪಾತ್ರವಹಿಸಿದರು. ಇವರು ಹಾಡಿರುವ 'ನಾನೊಂದು ಮದುವೆಯ ಮಾಡಿಕೊಂಬೆ' ಎಂಬ ಹಾಡು ಆಗ ಜನಪ್ರಿಯವಾಗಿದ್ದು ಕೊಲಂಬಿಯ ಕಂಪನಿಯಿಂದ ಧ್ವನಿಮುದ್ರಿತವಾಗಿದೆ.

ಇವರು ಜಿ. ನಾಗೇಶರಾಯರೊಂದಿಗೆ ಸೇರಿ ನಾಟಕ ಕಂಪನಿಯೊಂದನ್ನು ಸ್ಥಾಪಿಸಿ ಸ್ವತಂತ್ರವಾಗಿ ಸ್ವಲ್ಪಕಾಲ ನಡೆಸಿದರು. ಅನಂತರ ಬೆಂಗಳೂರು ಆಕಾಶ ವಾಣಿಯಲ್ಲಿ 'ಸ್ಟಾಫ್ ಆರ್ಟಿಸ್ಟ್' ಆಗಿ 1964ರ ವರೆಗೂ ಕೆಲಸ ಮಾಡಿದರು. (ಎಸ್.ಎಚ್.ವಿ.)

**ಮರುಳಸಿದ್ಧ**[1]: ವೀರಶೈವ ಆರ್ಚಾರ್ಯರು, ಪಂಚಕೋಕ್ತರಲ್ಲೊಬ್ಬರು. ಇವರು ಮಾಳವದೇಶದ ಆವಂತಿ ಎಂದು ಪ್ರಸಿದ್ಧವಾದ ವಟಕ್ಷೇತ್ರ ಸಿದ್ಧೇಶಲಿಂಗದಿಂದ ಅವತರಿಸಿ ಉಜ್ಜಯನಿಯಲ್ಲಿ ಧರ್ಮಪೀಠವನ್ನು ಸ್ಥಾಪಿಸಿದಂತೆ ವೀರಶೈವ ಧರ್ಮಗ್ರಂಥಗಳಲ್ಲಿ ಹೇಳಿದೆ. ಆಚಾರ್ಯ ಇವರಿಗೆ ವಾಮದೇವಮುಖ, ಯಜುರ್ವೇದಾಧ್ಯಯನ, ನಂದಿಗೋತ್ರ, ವೃಷ್ಟಿಸೂತ್ರ, ದಕ್ಷಿಣಕಲಶಾಧೀಶ್ವರತ್ವ, ಮಾಯಾಪಂಚಾಕ್ಷರೀಜಾಪಕತ್ವ, ರಕ್ತಕಂಥಾ, ಪಾಲಾಶದಂಡ ಮುಂತಾದ ಪ್ರವರಗಳಿವೆ. ಇವರು ದ್ವಾಪರಾಚಾರ್ಯದಾರುಕನ ಅವತಾರವೆಂಬ ನಂಬಿಕೆಯೂ ವೀರಶೈವರಲ್ಲಿ ಕಂಡುಬರುತ್ತದೆ. ಆಗಮಗಳಲ್ಲಿ ಹೇಳಿರುವಂತೆ ದ್ವಕ್ಷರ, ದ್ವಿವಕ್ತ್ರ, ದಾರುಕ ಮತ್ತು ಮರುಳಾರಾಧ್ಯ ಎಂದು ಕ್ರಮವಾಗಿ ನಾಲ್ಕು ಯುಗಗಳಲ್ಲಿಯೂ ಪ್ರಸಿದ್ಧರಾದವರು. 11–12ನೆಯ ಶತಮಾನಗಳಲ್ಲಿ ಮಾಳವದ ಉಜ್ಜಯನಿ ಮ್ಲೇಚ್ಛಾಕ್ರಾಂತವಾದ ಮೇಲೆ ಇವರು ಕರ್ನಾಟಕದ ಉಜ್ಜಿನಿಯಲ್ಲಿ (ಬಳ್ಳಾರಿ ಜಿಲ್ಲೆ) ಸ್ಥಿರನಿವಾಸ ಏರ್ಪಡಿಸಿದಂತೆ ತಿಳಿದುಬರುತ್ತದೆ. ಇವರ ಜೀವನದ ಇತರ ವಿವರಗಳು, ಇವರು ರಚಿಸಿದ ಗ್ರಂಥಗಳು ಉಪಲಬ್ಧವಿಲ್ಲ. (ಎಂ.ಜಿ.ಎನ್.)

**ಮರುಳಸಿದ್ಧ**[2]: ವೀರಶೈವ ಆಚಾರ್ಯರು. ಇವರು ರೇವಣಸಿದ್ಧರ ಶಿಷ್ಯ ಎಂದು ಶ್ರೀಪತಿ ಪಂಡಿತ ವಿರಚಿತ ಶ್ರೀಕರಭಾಷ್ಯ ಮತ್ತು ಮರುಳು ಸಿದ್ಧಕಾವ್ಯಗಳಲ್ಲಿ (ಸಂಧಿ5) ಹೇಳಿದೆ. ವಚನಕಾರ ಆದಯ್ಯ ತನ್ನ ವಚನಗಳಲ್ಲಿ ಉಲ್ಲೇಖಿಸಿರುವ ಮರುಳಸಿದ್ಧಯ್ಯದೇವರ ಆದೃಷ್ಟ ಪ್ರಸಾದನಿಷ್ಠೆ, ಮರುಳಸಿದ್ಧದೇವರೆನ್ನ ಶ್ರೋತ್ರ ಎಂಬಲ್ಲಿ ಸೂಚಿಸಿರುವ ಮರುಳಸಿದ್ಧ ಇವರೇ ಇರಬೇಕು. ಇವರು ಕಗ್ಗಲ್ಲ ಗೌಡನಿಗೆ ಮಗುವಾಗಿ ಸಿಕ್ಕಿ, ಜಜ್ಜ ಕಂತೆ ಧರಿಸಿ, ಕೊಲ್ಲಾಪುರದ ರಕ್ಕಸಿಯನ್ನು ಕೊಂದು, ಅವಳ ಅವಯವಗಳಿಂದ ಕಿನ್ನರ ವೀಣೆಯನ್ನು ಮಾಡಿಕೊಂಡು ಮರುಳನಂತೆ ಇದ್ದು ಉಜ್ಜಯಿನಿಯಲ್ಲಿ ಬಯಲಾದರೆಂದು ಪ್ರತೀತಿ. ಇವರ ವಿಷಯವಾಗಿ ದೇಪಕವಿಯ ಮರುಳಸಿದ್ಧ ಕಾವ್ಯ ಮುಂತಾದ ಗ್ರಂಥಗಳು ಹುಟ್ಟಿವೆ. (ಎಂ.ಜಿ.ಎನ್.)

**ಮರ್ಕುಳಿ**: ಹಾಸನ ಜಿಲ್ಲೆ ಅದೇ ತಾಲ್ಲೂಕಿನ ಒಂದು ಚಿಕ್ಕ ಹಳ್ಳಿ. ಹಾಸನದ ದಕ್ಷಿಣಕ್ಕೆ 19ಕಿಮೀ ದೂರದಲ್ಲಿದೆ. ಇಲ್ಲಿ ಹೊಯ್ಸಳರ ಕಾಲದ ಒಂದು ಜೈನ ಬಸದಿ ಇದೆ. ಇದರ ಹತ್ತಿರದಲ್ಲಿರುವ ಶಾಸನದ ಉಲ್ಲೇಖದಂತೆ ಈ ಬಸದಿ 1173ರಲ್ಲಿ ಎರಡನೆಯ ಬಲ್ಲಾಳನ ಮಂತ್ರಿ ಬೂಚಿಮಯ್ಯನಿಂದ

ಕಟ್ಟಲ್ಪಟ್ಟಿತೆಂದು ತಿಳಿದುಬರುತ್ತದೆ. ಬಸದಿಯ ವಿನ್ಯಾಸ ತ್ರಿಕೂಟಾಚಲವಾಗಿದ್ದು ಮೂರು ಗರ್ಭಗೃಹಗಳನ್ನೂ ಮೂರು ಸುಕನಾಸಿಗಳನ್ನೂ ಒಂದು ನವರಂಗವನ್ನೂ ಒಂದು ಮುಖಮಂಟಪವನ್ನೂ ಪಡೆದಿದೆ. ಬಸದಿ ಉತ್ತರಾಭಿಮುಖವಾಗಿದ್ದು ಪ್ರಾಕಾರದಿಂದ ಆವೃತವಾಗಿದೆ. ಬಸದಿಯ ಹೆಬ್ಬಾಗಿಲಿನ ಇಕ್ಕೆಲಗಳಲ್ಲೂ ಇನ್ನೆರಡು ಗುಡಿಗಳಿದ್ದು ಅವುಗಳಿಗೆ ಒಂದೊಂದು ಗರ್ಭಗೃಹವೂ ನವರಂಗವೂ ಇವೆ. ಇವು ಅನಂತರಕಾಲದ ಸೇರ್ಪಡೆಗಳು.

ಮುಖ್ಯಗುಡಿಯ ದಕ್ಷಿಣದ ಗರ್ಭಗೃಹದಲ್ಲಿ ಯೋಗಮುದ್ರೆಯಲ್ಲಿ ಆಸೀನನಾಗಿರುವ 5' ಎತ್ತರದ ಆದೀಶ್ವರನ ಪ್ರತಿಮೆಯಿದೆ. ಪೂರ್ವದ ಗುಡಿಯಲ್ಲಿ 6' ಎತ್ತರದ ಬಾಹುಬಲಿ ಎಂದು ಕರೆಯುವ ಪ್ರತಿಮೆಯೂ ಪಶ್ಚಿಮದ ಗುಡಿಯಲ್ಲಿ 5' ಎತ್ತರದಲ್ಲಿ ಐದು ಹೆಡೆ ಸರ್ಪದ ಹಿನ್ನೆಲೆಯುಳ್ಳ ಪಾರ್ಶ್ವನಾಥನ ಮೂರ್ತಿಯೂ ಇವೆ. ಮುಂಭಾಗದ ಗುಡಿಗಳಲ್ಲಿ ಪಶ್ಚಿಮಕ್ಕೆ ಪಾರ್ಶ್ವನಾಥ ಮತ್ತು ಪೂರ್ವಕ್ಕೆ ಬಾಹುಬಲಿ ಮೂರ್ತಿಗಳಿವೆ.

ಈ ಊರಿನಲ್ಲಿ ಈಚಿನ ಕಾಲದ ಒಂದು ರಂಗನಾಥ ದೇವಾಲಯ ಸಹ ಇದೆ. **(ಕೆ.ವಿ.ಟಿ.)**

**ಮಲಪ್ರಭಾ**: ಉತ್ತರ ಕರ್ನಾಟಕದ ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪೂರ್ವೇಶಾನ್ಯಾಭಿಮುಖವಾಗಿ ಹರಿಯುವ ಒಂದು ದೊಡ್ಡ ನದಿ. ಇದು ಕೃಷ್ಣಾನದಿಯ ಉಪನದಿ. ಈ ನದಿಗೆ ಮಲಾಪಹಾರಿಣಿ, ಮಲಾಪಹಾರಿ, ಮಾಲಿನಿ ಎಂಬ ಹೆಸರುಗಳೂ ಇವೆ. ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಜಂಬೋಟಿಯಿಂದ ಪಶ್ಚಿಮಕ್ಕೆ ಸು. 13ಕಿಮೀ ದೂರದ ಕಣಕುಂಬಿಯ ಬಳಿ ಸಹ್ಯಾದ್ರಿಯ ಶಿಖರಗಳಲ್ಲಿ ಇದರ ಉಗಮ. ಅಲ್ಲಿಂದ ಸು. 21ಕಿಮೀ ಪೂರ್ವಕ್ಕೆ ಹರಿದು, ಮುಂದೆ ಆಗ್ನೇಯಕ್ಕೆ ತಿರುಗಿ ಸು. 13ಕಿಮೀ ದೂರ ಪ್ರವಹಿಸಿ ಖಾನಾಪುರಕ್ಕೆ ಸ್ವಲ್ಪ ಮೊದಲು ಈಶಾನ್ಯಕ್ಕೆ ತಿರುಗಿ ಅನೇಕ ಬಳಸುಗಳೊಡನೆ ಬಹುದೂರ ಅದೇ ದಿಕ್ಕಿನಲ್ಲಿ ಮುಂದುವರಿಯುತ್ತದೆ. ಸವದತ್ತಿ ತಾಲ್ಲೂಕಿನ ಮೆಲ್ಲೂರಿನ ಬಳಿ ಪೂರ್ವಕ್ಕೆ ಗಮಿಸುವ ಈ ನದಿ ಎಕ್ಕುಂಡಿಯ ಬಳಿ ದಕ್ಷಿಣಕ್ಕೆ ತಿರುಗಿ ಮುಗಳಿಯ ಬಳಿ ಇದ್ದಕ್ಕಿದ್ದಂತೆ ಮತ್ತೆ ಉತ್ತರಕ್ಕೆ ತಿರುಗಿ ಮತ್ತೆ ಸ್ವಲ್ಪ ದೂರದಲ್ಲಿ ಪೂರ್ವಾಭಿಮುಖವಾಗಿ ಹರಿದು ಹಡಗಲಿಯಿಂದ ಸ್ವಲ್ಪ ಮುಂದೆ ಮತ್ತೆ ಉತ್ತರಕ್ಕೆ ತಿರುಗಿ ನವಿಲುತೀರ್ಥದ ಮೂಲಕ ಹರಿಯುತ್ತದೆ. ಮುಂದೆ ಮನೋಳಿಯಿಂದ ತೋರಗಲ್ಲು ದಾಭಾವರೆಗೂ ಇದರದು ಈಶಾನ್ಯ ಗಮನ. ತೋರಗಲ್ಲಿನಿಂದ ಸ್ವಲ್ಪ ಮುಂದೆ ನದಿ ಕ್ರಮೇಣ ದಿಕ್ಕು ಬದಲಿಸಿ ಆಗ್ನೇಯಕ್ಕೆ ತಿರುಗಿ ರಾಮದುರ್ಗದ ಸಮೀಪದಿಂದ ಹರಿದು ಅದೇ ತಾಲ್ಲೂಕಿನ ಆಗ್ನೇಯ ಅಂಚಿನಲ್ಲಿ ಬಾದಾಮಿ ತಾಲ್ಲೂಕಿನ ಅಂಚಿನಲ್ಲಿ ಬಿಜಾಪುರ ಜಿಲ್ಲೆಯ ಎಲ್ಲೆಯನ್ನು ಸೇರುತ್ತದೆ. ಮುಂದೆ ಸು. 32ಕಿಮೀ ದೂರ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿ ಪೂರ್ವಾಭಿಮುಖವಾಗಿ ಹರಿದು ಹೊಳೆ ಆಲೂರಿನಿಂದ ಸ್ವಲ್ಪ ಮುಂದೆ ಉತ್ತರಕ್ಕೆ ತಿರುಗಿ ಬಾದಾಮಿ ತಾಲ್ಲೂಕನ್ನು ಪ್ರವೇಶಿಸಿ ಮುಂದೆ ಕೃಷ್ಣಾನದಿಯನ್ನು ಸೇರುವ ವರೆಗೂ ಬಿಜಾಪುರ ಜಿಲ್ಲೆಯಲ್ಲಿಯೇ ಪ್ರವಹಿಸುತ್ತದೆ. ಬಿಜಾಪುರ ಜಿಲ್ಲೆಯಲ್ಲಿ ಮೊದಲು ಅನೇಕ ಬಳಸುಗಳೊಡನೆ ಉತ್ತರಾಭಿಮುಖವಾಗಿ ಹರಿದು, ಬಾದಾಮಿ ತಾಲ್ಲೂಕಿನ ನಾಗರಾಳದ ಬಳಿ ಪೂರ್ವಕ್ಕೆ ತಿರುಗಿ ಮತ್ತೆ ಉತ್ತರಾಭಿಮುಖವಾಗಿ ನೆಲವಿಗಿಯ ವರೆಗೂ ಮುಂದುವರಿಯುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಹರಿದು, ಪಟ್ಟದಕಲ್ಲಿನ ಬಳಿ ವಾಯವ್ಯಕ್ಕೆ ತಿರುಗಿ, ಜಾಲಿಹಾಳದ ಬಳಿ ಈಶಾನ್ಯ ಗಮನವನ್ನು ಪಡೆಯುತ್ತದೆ. ಮುಂದೆ ಐಹೊಳೆಯ ಬಳಿ ಮತ್ತೆ ವಾಯವ್ಯಕ್ಕೆ ತಿರುಗಿ ಕಮತಗಿಯ ವರೆಗೂ ಹೆಚ್ಚು ಕಡಿಮೆ ಉತ್ತರಾಭಿಮುಖವಾಗಿ ಹರಿದು ಅಲ್ಲಿಂದ ಮತ್ತೆ ಅನೇಕ ಬಳಸುಗಳೊಡನೆ ಈಶಾನ್ಯಾಭಿಮುಖವಾಗಿ ಸಾಗುತ್ತದೆ. ಇಲ್ಲಿಂದ ಮುಂದೆ ಕೂಡಲಸಂಗಮದ ಬಳಿ ಕೃಷ್ಣಾನದಿಯನ್ನು ಸೇರುವ ವರೆಗೂ ಇದರದು ಈಶಾನ್ಯಗಮನ. ಬೂದಿಹಾಳ, ಗಂಜಿಹಾಳ, ಕೆಂಗಲ್ಲ ಮುಂತಾದ ಕಡೆ ಆಗ್ನೇಯಕ್ಕೆ ದಿಕ್ಕು ಬದಲಿಸಿದರೂ ಮುಂದೆ ಬಹುಬೇಗ ತನ್ನ ಈಶಾನ್ಯ ಗಮನ ಪಡೆಯುತ್ತದೆ.

ಮಲಪ್ರಭಾ ನದಿಯ ಒಟ್ಟು ಉದ್ದ ಸು.330 ಕಿಮೀ. ಇದರಲ್ಲಿ ಸು. 193 ಕಿಮೀ ದೂರ ಬೆಳಗಾಂವಿ ಜಿಲ್ಲೆಯ ಖಾನಾಪುರ, ಸಂಪಗಾಂವ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳಲ್ಲೂ ಸು. 32 ಕಿಮೀ ಬಾಗಲಕೋಟೆ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿಯೂ ಅನಂತರದ ಸು. 105 ಕಿಮೀ ದೂರ ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಹುನಗುಂದ ತಾಲ್ಲೂಕುಗಳಲ್ಲೂ ಹರಿಯುತ್ತದೆ.



ಮಲಪ್ರಭಾ ಅಣೆಕಟ್ಟು

ನದಿ ಹರಿಯುವ ಪ್ರದೇಶದಲ್ಲಿ ಎರಡು ಭಿನ್ನ ರೀತಿಯ ಭೌಗೋಳಿಕ ಸನ್ನಿವೇಶಗಳನ್ನು ಕಾಣಬಹುದು. ಒಟ್ಟು ಹರಿವಿನ ಮೊದಲ ಭಾಗದಲ್ಲಿ ನದಿ ಕಪ್ಪುಮಣ್ಣಿನ ಭೂಮಿಯಲ್ಲಿ ಅಷ್ಟೇನೂ ಆಳವಿಲ್ಲದೆ ಹರಿದು ಭೂಮಿಯನ್ನು ಕ್ರಮೇಣ ಕೊರೆಯುತ್ತ ಆಳವಾದ ಕಮರಿಗಳನ್ನು ನಿರ್ಮಿಸುತ್ತ ಸಾಗುತ್ತದೆ. ಸವದತ್ತಿ ತಾಲ್ಲೂಕಿನ ನವಿಲುತೀರ್ಥ, ಮುನವಳ್ಳಿ, ರಾಮದುರ್ಗ ತಾಲ್ಲೂಕಿನ ತೋರಗಲ್ಲುಗಳಲ್ಲಿ ಇದು ವಿಶಾಲವೂ ಆಳವೂ ಆದ ಕಮರಿಗಳನ್ನು ನಿರ್ಮಿಸಿದೆ. ಮನೋಳಿಯ ಬಳಿಯ ಕಮರಿ ಸು. 300' ಆಳವಾಗಿದೆ. ಈ ಪ್ರದೇಶದಲ್ಲಿ ನದಿಯ ದಂಡೆಗಳು ತೀರ ಕಡಿದಾಗಿದ್ದು ಬೆಣಚುಕಲ್ಲಿನಿಂದ ಕೂಡಿವೆ. ನದಿಯ ಉದ್ದಕ್ಕೂ ತಿರುವುಗಳೂ ಅಲ್ಲಲ್ಲೇ ಮಧ್ಯದಲ್ಲಿ ಚಿಕ್ಕ ಚಿಕ್ಕ ದ್ವೀಪಗಳೂ ಸಾಮಾನ್ಯ. ಮಳೆಗಾಲದಲ್ಲಿ ನದಿಯಲ್ಲಿ ಭಾರಿ ಪ್ರವಾಹ ಇರುತ್ತದೆ. ಮಣ್ಣಿನಿಂದ ಕೂಡಿದ ಬಗ್ಗಡು ನೀರು ಆಗ ಸಾಮಾನ್ಯ. ಉಳಿದ ದಿನಗಳಲ್ಲೂ ನದಿ ಸಣ್ಣದಾಗಿ ಆದರೆ ನಿರಂತರವಾಗಿ ಹರಿಯುತ್ತಲೇ ಇರುತ್ತದೆ. ಭೂವೈಜ್ಞಾನಿಕವಾಗಿ ನೋಡಿದರೆ ಮಲಪ್ರಭಾ ನದಿ ಉತ್ತರದ ಕಲಾದಗಿ ಮತ್ತು ದಖನ್ ಪ್ರಸ್ಥಭೂಮಿಯ ಎಲ್ಲೆಯಾಗಿ ಹರಿಯುತ್ತದೆ. ಐಹೊಳೆಯಿಂದ ಮುಂದೆ ನದಿ ಕಲಾದಗಿ ಶ್ರೇಣಿಯ ಮೂಲಕವೇ ಹರಿಯುತ್ತದೆ.

ಮಲಪ್ರಭಾ ನದಿಗೆ ಹೇಳಿಕೊಳ್ಳುವಂತಹ ದೊಡ್ಡ ಉಪನದಿಗಳಿಲ್ಲ. ಅಲ್ಲಲ್ಲೇ ಕೆಲವು ಹಳ್ಳಗಳು ಬಂದು ಇದನ್ನು ಸೇರುತ್ತವೆ. ಮುನವಳ್ಳಿಯ ಬಳಿ ಬೆನಕಟ್ಟೆ ಹಳ್ಳ ಎಡದಂಡೆಯಿಂದಲೂ ಧಾರವಾಡ ಜಿಲ್ಲೆಯ ಹೊಳೆ ಆಲೂರಿನ ಬಳಿ ಬೆಣ್ಣೆಹಳ್ಳ ಬಲದಂಡೆಯಿಂದಲೂ ಈ ನದಿಯನ್ನು

ಕೂಡುತ್ತವೆ. ಕೃಷಿಗಾಗಿ ಈ ನದಿಯನ್ನು ಹೆಚ್ಚಾಗಿ ಬಳಸಿಕೊಂಡಿಲ್ಲ. ಇತ್ತೀಚೆಗೆ ಬೆಳಗಾಂವಿ ಜಿಲ್ಲೆಯ ನವಿಲುತೀರ್ಥದ ಬಳಿ ಇದಕ್ಕೊಂದು ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ಸು. 1,20,000 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗುವುದು.

ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಈ ನದಿಯನ್ನು ಅನೇಕ ಕಡೆ ದಾಟುತ್ತವೆ. ಖಾನಾಪುರ, ಮುಗಟಖಾನ ಹುಬ್ಬಳ್ಳಿ, ಗುರ್ಲ ಹೊಸೂರು, ರಾಮದುರ್ಗ, ಪಟ್ಟದಕಲ್ಲು ಮತ್ತು ಕಮತಗಿಯ ಸಮೀಪದಲ್ಲಿ ಸೇತುವೆಗಳನ್ನು ಕಟ್ಟಿದ್ದಾರೆ. ಖಾನಾಪುರದ ಬಳಿ ಲೋಂಡ–ಬೆಳಗಾಂವಿ ಮತ್ತು ಹೊಳೆ ಆಲೂರಿನ ಬಳಿ ಗದಗ–ಬಿಜಾಪುರ ರೈಲುಮಾರ್ಗಗಳು ಮಲಪ್ರಭಾ ನದಿಯನ್ನು ದಾಟುತ್ತವೆ.

ನದಿಯ ದಂಡೆಯಲ್ಲಿ ಮತ್ತು ಅದರ ಸಮೀಪ ಅನೇಕ ದೊಡ್ಡ ಊರುಗಳಿವೆ. ಖಾನಾಪುರ, ಮುಗಟಖಾನ ಹುಬ್ಬಳ್ಳಿ, ಎಕ್ಕುಂಡಿ, ಗುರ್ಲ ಹೊಸೂರು, ಮುನವಳ್ಳಿ, ತೋರಗಲ್ಲು, ರಾಮದುರ್ಗ, ಹೊಳೆ ಆಲೂರು, ಕಮತಗಿ, ಗಂಜಿಹಾಳ–ಇವು ನದಿಯ ದಂಡೆಗೇ ಇರುವ ಹೆಸರಿಸಬಹುದಾದ ಊರುಗಳು. ಈ ನದಿಯ ದಂಡೆಗುಂಟ ಅನೇಕ ಕಡೆ ಪ್ರಾಗೈತಿಹಾಸಿಕ ನೆಲೆಗಳೂ ದೊರಕಿವೆ. ಪ್ರಸಿದ್ಧ ಐತಿಹಾಸಿಕ ನೆಲೆಯಾದ ಬಾದಾಮಿಯು ನದಿಗೆ ಸು. 5 ಕಿಮೀ ದೂರದಲ್ಲಿದೆ. ನದಿಯ ದಂಡೆಯ ಮೇಲೆ ಇರುವ ನಂದಿಕೇಶ್ವರ, ಪಟ್ಟದಕಲ್ಲು, ಐಹೊಳೆಗಳು ಚಾಳುಕ್ಯ ವಾಸ್ತುಶಿಲ್ಪ ಕೃತಿಗಳಿಗಾಗಿ ಪ್ರಸಿದ್ಧವಾಗಿವೆ. ಈ ನದಿ ಕೃಷ್ಣಾನದಿಯನ್ನು ಸೇರುವ ಸ್ಥಳವಾದ ಕೂಡಲಸಂಗಮ ಒಂದು ಪ್ರಸಿದ್ಧ ಕ್ಷೇತ್ರ. ಹಾಗೆಯೇ ಬೆಳಗಾಂವಿ ಜಿಲ್ಲೆಯ ಮುನವಳ್ಳಿಯ ಬಳಿಯ ನವಿಲುತೀರ್ಥ ಒಂದು ಸುಂದರ ತಾಣ.

ಈ ನದಿ ಪವಿತ್ರವಾದುದೆಂದು ಬನಶಂಕರೀ ಮಹಾತ್ಮ್ಯ ವರ್ಣಿಸುತ್ತದೆ. ಮುನವಳ್ಳಿಗೆ ಸ್ವಲ್ಪ ಮೊದಲು ಮತ್ತು ಅನಂತರ ಸ್ವಲ್ಪ ದೂರ ಈ ನದಿ ಉತ್ತರಕ್ಕೆ ಹರಿಯುವುದರಿಂದ ಅಲ್ಲಿ ಇದನ್ನು ಉತ್ತರವಾಹಿನಿ ಎಂದೂ ಕರೆಯುತ್ತಾರೆ. ಹಿಂದೆ ಬ್ರಹ್ಮ ಯಜ್ಞ ಮಾಡಿದ ಮೇಲೆ ಈ ನದಿಯಲ್ಲಿ ಅವಭೃತ ಸ್ನಾನ ಮಾಡಿದನೆಂದೂ ತ್ರಿಪುರಾಸುರನನ್ನು ಕೊಂದ ಸಂದರ್ಭದಲ್ಲಿ ಶಿವನಿಗೂ ಈ ನದಿಗೂ ಸಂಬಂಧ ಕಲ್ಪಿಸಿ ಇದನ್ನು ರುದ್ರಪಾದತೀರ್ಥವೆಂದೂ ಕ್ಷತ್ರಿಯರನ್ನು ಸಂಹರಿಸಿದ ಪರಶುರಾಮ ತನ್ನ ಕೊಡಲಿಯನ್ನು ಇದೇ ನದಿಯಲ್ಲಿ ತೊಳೆದು ಐಹೊಳೆಯ ಬಳಿ ತಪಸ್ಸನ್ನಾಚರಿಸಿದನೆಂದೂ ಪೌರಾಣಿಕ ಕಥೆಗಳಿವೆ. (ಡಿ.ಕೆ.;ಎಸ್.ಜಿ.ಕೆ.)

**ಮಲ್ಪೆ**: ಉಡುಪಿ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಪಟ್ಟಣ ಮತ್ತು ಬಂದರು. ಮಂಗಳೂರಿನ ಉತ್ತರಕ್ಕೆ 65 ಕಿಮೀ ದೂರದಲ್ಲೂ ಉಡುಪಿಯ ಪಶ್ಚಿಮಕ್ಕೆ 5 ಕಿಮೀ ದೂರದಲ್ಲೂ ಇದೆ. ಮಲ್ಪೆಯ ಭೌಗೋಳಿಕ ಪರಿಸರ ರಮಣೀಯ. ಉದ್ಯಾವರ ನದಿಯು ಪಾಂಗಾಳ ಹೊಳೆಯೊಂದಿಗೆ ಜೊತೆಗೂಡಿದ ತರುವಾಯ ಕಡಲ ಸೆರಗಿನಲ್ಲೇ ಸು. 8 ಕಿಮೀ ದೂರ ಉತ್ತರಕ್ಕೆ ಹರಿದು ಕಲ್ಮಾಡಿ ಹೊಳೆಯೆಂಬ ಕಿರುತೊರೆಯನ್ನು ಕೂಡಿಕೊಂಡ ಮೇಲೆ ಸಮುದ್ರದಲ್ಲಿ ಸಂಗಮವಾಗುತ್ತದೆ. ಈ ನದಿಯ ಅಳಿವೆಗೆ ತಾಗಿದಂತೆ ಉತ್ತರಕ್ಕೆ ಮಲ್ಪೆ ಇದೆ.

ಇಲ್ಲಿಯ ಕಡಲ ಕರೆಗೆ ಸಮಾನಾಂತರವಾಗಿ ಸು.2ಕಿಮೀ ದೂರದಲ್ಲಿ ಸಮುದ್ರ ಮಧ್ಯದಲ್ಲಿರುವ ಸು. 2.5 ಕಿಮೀ ಉದ್ದದ ದರಿಯಾ ಬಹದೂರಗಡ ಶಿಲಾದ್ವೀಪಸ್ತೋಮ ಮಲ್ಪೆಗೆ ನಿಸರ್ಗನಿರ್ಮಿತ ರಕ್ಷಾಣಾಬಾಹುವಿನಂತೆ ಪಸರಿಸಿದೆ. ನಡುಗಡ್ಡೆಗಳ ಉತ್ತರಕ್ಕೆ ತೆಂಗಿನ ದ್ವೀಪ, ಅಜಕಲ್ ಬಂಡೆ, ನಡುಬಂಡೆ–ಇವುಗಳಿಂದ ಕೂಡಿದ ಸೇಂಟ್ ಮೇರಿಸ್ ದ್ವೀಪಗಳ ಗುಂಪು ಪ್ರಾಕೃತಿಕ ಲಕ್ಷಣದ ನೆಲೆ. ತೆಂಗಿನ ದ್ವೀಪದ ದಕ್ಷಿಣ ಭಾಗದಲ್ಲಿ ಕಾಣಸಿಗುವ ಬೆಸಾಲ್ಟ್ ಶಿಲಾಸ್ತಂಭ ರಚನೆಯಲ್ಲಿನ ಷಟ್ಕೋಣ ವಿನ್ಯಾಸದ ಆಕರ್ಷಕ ರಮಣೀಯತೆ ಭಾರತದ ಬೇರಾವ ಭಾಗದಲ್ಲೂ ಇಲ್ಲವೆಂದು ಹೇಳಲಾಗಿದೆ. ದರಿಯಾ ಬಹದೂರಗಡಕ್ಕೂ ಮಲ್ಪೆ ಬಂದರಿಗೂ ನಡುವಣ ಸಮುದ್ರ ಭಾಗ, ಬಿರುಗಾಳಿಯಲ್ಲಿ ಹಡಗುಗಳಿಗೂ ದೊಡ್ಡ ಮಂಜಿಗಳಿಗೂ (ಸ್ಥಳೀಯ ನೌಕೆ) ಆಶ್ರಯವನ್ನೀಯುವ ಒಳ್ಳೆಯ ರೇವು. ಆ ದ್ವೀಪಸ್ತೋಮದ ನಡುಬಂಡೆಯ ಮೇಲೆ ಒಂದು ದೀಪಸ್ತಂಭವಿದೆ. ಸೇಂಟ್ ಮೇರಿಸ್ ದ್ವೀಪಗಳ ಮಧ್ಯಕ್ಕೆ ಎದುರಾದ ಕರಾವಳಿ ತೀರದಲ್ಲಿಯ ವಡಭಾಂಡೇಶ್ವರ ಸಮುದ್ರಸ್ನಾನ ಸ್ಥಳ ಜನಪ್ರಿಯವೂ ಸುರಕ್ಷಿತವೂ ಆದದ್ದು.

ಮೀನುಗಾರಿಕೆ ಇಲ್ಲಿನ ಮುಖ್ಯ ಉದ್ಯೋಗ. ಇದಕ್ಕೆ ಸಂಬಂಧಿಸಿದಂತೆ ನಾಡ ಬಲೆಗಳ ಜೊತೆಗೆ ಯಾಂತ್ರೀಕೃತ ದೋಣಿಗಳು ಉಪಯೋಗದಲ್ಲಿವೆ. ಶೀತಲೀಕರಣ ಸ್ಥಾವರಗಳೂ ಮತ್ಸ್ಯಸಂಶೋಧನ, ಸಂಸ್ಕರಣ ಕೇಂದ್ರಗಳೂ ಸ್ಥಾಪನೆಯಾಗಿವೆ. ಸಂಸ್ಕರಿಸಿದ ಮೀನುಗಳನ್ನು ಡಬ್ಬಿಗಳಲ್ಲಿ ತುಂಬಿ ವಿದೇಶಗಳಿಗೆ ಕಳುಹಿಸಲಾಗುತ್ತದೆ. ತೆಂಗಿನ ನಾರಿನ ಕೈಗಾರಿಕೆ, ಹೆಂಚಿನ ಕಾರ್ಖಾನೆ, ಇತರ ಕೈಗಾರಿಕೆಗಳು. ನೈಸರ್ಗಿಕ ಅನುಕೂಲತೆಗಳಿರುವ ಮಲ್ಪೆ ಬಂದರನ್ನು ಆಧುನಿಕ ಮತ್ಸ್ಯೋದ್ಯಮ ಬಂದರನ್ನಾಗಿ ಮಾರ್ಪಡಿಸುವ ಯೋಜನೆಯಿಂದ ಮಲ್ಪೆ ಕರ್ನಾಟಕ ರಾಜ್ಯದ ಮತ್ಸ್ಯೋದ್ಯಮದ ಅಭಿವೃದ್ಧಿಗೆ ಕಾರಣವಾಗಿರುವುದಲ್ಲದೆ ಸಮುದ್ರಸಾರಿಗೆಸಂಚಾರಕ್ಕೆ ಅನುಕೂಲವಾಗುವುದು.

ಮಲ್ಪೆ ಬಹುತೇಕ ಪಟ್ಟಣೀಕರಣಕ್ಕೆ ಒಳಗಾಗಿದೆ. ಉಡುಪಿಯ ಜೊತೆ ಜೊತೆಯಲ್ಲೇ ವಿಸ್ತರಿಸುತ್ತಿದೆ. ಮಲ್ಪೆ ಪಟ್ಟಣ ಪಂಚಾಯಿತಿ ಆಡಳಿತಕ್ಕೆ ಸೇರಿದೆ.

ಮಲ್ಪೆಯ ಕೊಡವೂರಿನಲ್ಲಿ ಶಂಕರನಾರಾಯಣ ದೇವಾಲಯವಿದೆ. ವಡಭಾಂಡೇಶ್ವರದಲ್ಲಿ ಮಧ್ವಾಚಾರ್ಯರು ಸ್ಥಾಪಿಸಿದ್ದೆನ್ನಲಾದ ಬಲರಾಮ ದೇವಾಲಯವಿದೆ.ಮಲ್ಪೆ ಗ್ರೀಕರ ಕಾಲದಿಂದಲೂ ಅಂತಾರಾಷ್ಟ್ರೀಯ ವರ್ತಕರ ಗಮನ ಸೆಳೆದ ಒಂದು ರೇವು. (ಎಂ.ವಿ.)

**ಮಲ್ಲ**: ಸು.1057. ಒಬ್ಬ ಶಾಸನಕವಿ. ಈತ ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತೂರಿನ ಒಂದು ಶಾಸನವನ್ನು ಬರೆದಂತೆ ತಿಳಿಯುತ್ತದೆ. ಶಾಸನದಲ್ಲಿ ಈತನನ್ನು ಕವಿರಾಜ ಬಾನ್ಧವ, ಸನ್ದಟಿಕೆಯವಗಾದಮಲ್ಲಂ ಎಂದು ವರ್ಣಿಸಲಾಗಿದೆ. ಇದರಲ್ಲಿ ದೇಕಬ್ಬೆ ಎಂಬ ಸತಿ 1057ರಲ್ಲಿ ಸಹಗಮನ ಮಾಡಿ ಮಹಾಸತಿಯಾದ ವಿಷಯ ನಿರೂಪಣೆಗೊಂಡಿದೆ. ಶಾಸನದಲ್ಲಿರುವ ವೃತ್ತ, ಕಂದ, ಅಕ್ಕರಗಳ ಬಂಧವನ್ನು ನೋಡಿದರೆ ಬರೆದವನು ಪ್ರೌಢಕವಿಯೆಂದು ಊಹಿಸ ಬಹುದಾಗಿದೆ.

ರಾಜೇಂದ್ರಚೋಳನ ಮಾಂಡಲಿಕನಾಗಿದ್ದ ರವಿಗ ನುಗುನಾಡಿನ (ಈಗಿನ ಹೆಗ್ಗಡದೇವನಕೋಟೆ ತಾಲ್ಲೂಕು) ಅಧಿಪತಿ. ಅವನ ರಾಜಧಾನಿ ಬೆಳತೂರು. ಅವನು ಹುಟ್ಟಿದ ಕುಲವು ಶೌರ್ಯ, ದಾನಗಳಿಗೆ ಸುಪ್ರಸಿದ್ಧವಾದುದು. ರವಿಗ ಹುಟ್ಟಿದೊಡನೆ ಅರಿವು ಹುಟ್ಟಿತು. ಅರಿವಿನೊಡನೆ ಆಯ (ಸಾಹಸ) ಹುಟ್ಟಿತು. ಆಯದೊಡನೆ ಚಾಗ (ಔದಾರ್ಯ) ಹುಟ್ಟಿತು. ಅವನು ಎಷ್ಟು ಪ್ರಭಾವಶಾಲಿಯಾಗಿದ್ದನೆಂದರೆ ರಾಜೇಂದ್ರಚೋಳನಿಂದ ಪಲ್ಲವ, ಸತ್ತಿಗೆ, ಶಂಖ ಮುಂತಾದ ಗೌರವಗಳ ಜೊತೆಗೆ ಮಾಂಡಲಿಕ ಪದವಿಯನ್ನು ಪಡೆದಿದ್ದ. ಅವನು ಕುಡಿಯರ ವಲ್ಲಭ, ಕುಡಿಯರಾಭರಣ ಎಂದು ಹೆಸರುಗಳಿಸಿದ್ದ. ಇಂಥ ರವಿಗನಿಗೂ ವನಿತಾರನ್ನ ಎನ್ನಿಸಿಕೊಂಡ ಪೊನ್ನಕ್ಕನಿಗೂ ದೇಕಬ್ಬೆ ಮಗಳಾಗಿ ಜನಿಸಿದಳು. ಇವಳನ್ನು ನವಿಲೆನಾಡಿನ ದೊರೆ ಏಚನಿಗೆ ಕೊಟ್ಟು ಮದುವೆ ಮಾಡಿದ್ದರು. ಈ ಅನುರೂಪದಂಪತಿ

ಗಳು ಸುಖದಿಂದಿರುವಾಗ ಮಹಾಶೂರನಾದ ಏಚನಿಗೂ ಅವನ ದಾಯಾದಿಗಳಿಗೂ ಮನಸ್ತಾಪವಾಗಿ, ಆಗ ನಡೆದ ಯುದ್ಧದಲ್ಲಿ ಏಚನ ಕೈಯಲ್ಲಿ ಅನೇಕರು ಮಡಿದರು. ಆದರೆ ದುರದೃಷ್ಟವಶಾತ್ ಸೆರೆಸಿಕ್ಕಿದ ಏಚನನ್ನು ತಲಕಾಡಿಗೆ ತೆಗೆದುಕೊಂಡು ಹೋಗಿ ಶತ್ರುಗಳು ಕೊಂದರು. ರವಿಗನ ಕುಲದೀಪಕಿಯಾದ ದೇಕಬ್ಬೆ ತನ್ನ ಗಂಡನ ಸಾವಿನ ಸುದ್ದಿಯನ್ನು ಕೇಳಿದ ತಕ್ಷಣ ಕೊಂಡಕೆ ನಡೆದಳು. ಆಕೆಯ ತಂದೆ, ತಾಯಿ, ಬಂಧುವರ್ಗ ಎಲ್ಲರೂ ಸಹಗಮನ ಬೇಡವೆಂದು ಬಹುವಾಗಿ ಕೇಳಿಕೊಂಡರು; ಕಾಲುಹಿಡಿದು ಬೇಡಿಕೊಂಡರು. ಎಲ್ಲರಿಗೂ ದೇಕಬ್ಬೆಯದು ಒಂದೇ ಉತ್ತರವಾಯ್ತು. 'ನುಗುನಾಡಧಿಪತಿ ರವಿಗನ ಮಗಳಾಗಿಯುಂ ಅನ್ತೆ ನವಿಲೆನಾಡ ಅಧಿಪತಿಗಾಂ ನೆಗಳೆ ಸತಿಯಾಗಿ, ಬಾರ್ವ್ವದ ಬಗೆದಪ್ಪೆನೆ ಕೊಟ್ಟ ಕೊಂಡಮನೆ ಯಶಂ ಅೞಿಯಲ್'. ಪತಿ ಸತ್ತಮೇಲೆ ಬದುಕಿದರೆ ತಾನು ಹುಟ್ಟಿದ, ತನ್ನನ್ನು ಕೊಟ್ಟಮನೆಯ ಕೀರ್ತಿ ಅಳಿಯುತ್ತದೆಯಾದ್ದರಿಂದ ತಾನು ಅಗ್ನಿಪ್ರವೇಶ ಮಾಡುವವಳೇ ಸರಿ ಎಂದು ನಿರ್ಣಯಿಸುತ್ತಾಳೆ. ಬಳಿಕ ದೇವರಿಗೆ ನಾನಾ ದತ್ತಿಗಳನ್ನು ಬಿಟ್ಟುಕೊಟ್ಟು ನೆರೆದ ಎಲ್ಲರೂ ಬೇಡ ಬೇಡ ಎಂದು ಕೂಗುತ್ತಿದ್ದರೂ ನುಡಿಯದಿರಿಂ, ಪೋಗಿಂ, ಆಂ ಮಾಣೆನ್ ಎಂದು ಹೇಳುತ್ತ, ಭಗವಂತನಿಗೆ ಕೈಮುಗಿದು, ಹಾಗೆಯೇ ಉರಿಯುವ ಬೆಂಕಿಯನ್ನು ಪ್ರವೇಶಿಸಿ ದೇವಲೋಕಕ್ಕೆ ಹೋದಳು. ಲೋಕ ಅವಳನ್ನೂ ಅವಳ ಚಾರಿತ್ರ್ಯವನ್ನೂ ಮನಸಾರೆ ಹೊಗಳಿತು. ಮಗಳ ಸ್ಮಾರಕವಾಗಿ ರವಿಗ ಶಿಲಾಸ್ತಂಭಗಳನ್ನು ನೆಡಿಸಿದ. ತನ್ನ ಮಗಳು ಬಿಟ್ಟುಕೊಟ್ಟ ಎಲ್ಲ ದತ್ತಿಗಳನ್ನೂ ತನ್ನ ವಂಶದವರು ಪರಿಪಾಲಿಸಲೆಂದು ಶಾಸನದಲ್ಲಿ ಆಶಿಸಿದ್ದಾನೆ.

ಶಾಸನಕಾರ ದೇಕಬ್ಬೆಯನ್ನು ಹೃದಯ ತುಂಬಿ ಕೊಂಡಾಡಿದ್ದಾನೆ. ಒಂದು ಪದ್ಯ ಹೀಗಿದೆ:

ಶ್ರೀರಮಣಿ ಗೌರಿಸಚಿ ಧಾರಿಣಿಯ ಪುತ್ರಿರತಿ ಭೂರಮಣಿಯಂದದ
ಸರೂಪಱಿವೊಳ್ಪೆ
ಧಾರೆ ಜಯಧಾರೆ ಜಸಧಾರೆ ನಯಧಾರೆ ಭಯಹಾರೆ ಪತಿಭಕ್ತೆ
ಧೃತಶಕ್ತೆಯೆನೆ ಸಂದೀ
ವೀರನಿಧಿಯಂ ಚಲದ ವಾರಿನಿಧಿಯಂ ಗುಣದ ಚಾರುನಿಧಿಯಂ
ನೆಗೞ್ದದೇಕಲೆಯನಿನ್ತೀ
ನಾರಿಜನರನ್ನಮದಾರೊ ಮಱೆವರ್ ಸಕಳ ಧಾರಿಣಿಯೊಳಿನ್ತು
ವರಕಾಂತೆ ದೊರೆಯಾವಳ್.

ಮಲ್ಲ ಬರೆದಿರುವ ಈ ಶಾಸನ ಒಂದು ಉತ್ತಮ ಕಾವ್ಯಬಂಧ. ಕನ್ನಡ ಭಾಷೆಗೆ ರಾಜ ಪ್ರೋತ್ಸಾಹ ಕುಂದಿಹೋಗಿದ್ದ ಚೋಳಾಳ್ವಿಕೆಯ ಕರ್ನಾಟಕ ಭಾಗದಲ್ಲಿ ಮಲ್ಲ ಅಪರೂಪ ಕವಿಯಾಗಿ, ಬಹುಶಃ ಏಕೈಕ ಕವಿಯಾಗಿ ಕಂಡುಬರುತ್ತಾನೆ. (ಎಂ.ಸಿ.)

**ಮಲ್ಲಕಂಬ:** ಕುಸ್ತಿ ಪಟುಗಳು ತಮ್ಮ ಪಟ್ಟುಗಳಲ್ಲಿ ಪರಿಣತಿ ಗಳಿಸಲು ಇನ್ನೊಬ್ಬ ಕುಸ್ತಿ ಪಟುವಿನ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾನೆ ಪಟ್ಟುಗಳನ್ನು ಅಭ್ಯಾಸಮಾಡಿಕೊಳ್ಳಲು ಉಪಯೋಗಿಸುವ ಮರದ ಕಂಬ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಗರಡಿಮನೆ, ವ್ಯಾಯಾಮ ಶಾಲೆಗಳಲ್ಲಿ ಈ ಮಲ್ಲಕಂಬಗಳನ್ನು ಕಾಣಬಹುದು.

ಮಲ್ಲಕಂಬದ ಉದ್ದ ಸಾಮಾನ್ಯವಾಗಿ ಸು. 1.22 ಕಿಮೀ. ನೆಲದ ಒಳಗೆ ಸು.3.3 ಮೀ ಇರುವಂತೆ ನೆಡುತ್ತಾರೆ. ನೆಲದ ಮಟ್ಟದಲ್ಲಿ ಇದರ ಸುತ್ತಳತೆ ಸು. 0.68ಮೀ. ನೆಲದಿಂದ ಮೇಲಕ್ಕೆ ಬಂದಂತೆ ಸುತ್ತಳತೆಯಲ್ಲಿ ಕಿರಿದಾಗುತ್ತ ಹೋಗುತ್ತದೆ. ತುದಿಯಲ್ಲಿ ಹಿಡಿಯುವಂತೆ ಹಿಡಿ ಮಾಡಿರುತ್ತಾರೆ. ಇದರ ಮೈ ಹೊಳೆಯುತ್ತಿದ್ದು ನಯವಾಗಿರುತ್ತದೆ. ಇದರ ಮೈಗೆ ತೆಳ್ಳನೆಯ ಹರಳೆಣ್ಣೆ ಲೇಪವಿರುತ್ತದೆ. ಕುಸ್ತಿಪಟು ಮಲ್ಲಕಂಬ ಹತ್ತಿದಾಗ ಅವನ ಮೈ ಸುಲಭವಾಗಿ ಜಾರುವಂತೆ ಮಾಡಲು ಹರಳೆಣ್ಣೆ ಲೇಪ ಸಹಾಯಮಾಡುತ್ತದೆ. ಕುಸ್ತಿಯಲ್ಲಿ ಉಪಯೋಗಿಸುವ ಎಲ್ಲ ಪಟ್ಟುಗಳನ್ನು ಈ ಕಂಬದ ಮೇಲೆ ಪ್ರಯೋಗಿಸಬಹುದು. ಈ



ಅಭ್ಯಾಸದಿಂದ ಕುಸ್ತಿಗಾರನ ಸ್ನಾಯುಗಳಲ್ಲಿ ಬಲ ಹೆಚ್ಚಾಗಿ ಪಟ್ಟುಗಳನ್ನು ಹಾಕುವುದರಲ್ಲಿ ಪರಿಣತಿ ಹಾಗೂ ಚುರುಕುತನ ಗಳಿಸಲು ಸಾಧ್ಯವಾಗುತ್ತದೆ. ಮಲ್ಲಕಂಬದೊಡನೆ ಸೆಣಸುವ ಕಲೆ ಕರಗತಮಾಡಿಕೊಂಡ ಕುಸ್ತಿಪಟು ಎಂಥ ಚತುರ ಕುಸ್ತಿಗಾರನನ್ನೂ ಸೋಲಿಸಬಲ್ಲನೆಂಬ ನಂಬಿಕೆಯಿದೆ.

ಪಟ್ಟುಗಳನ್ನು ಹಾಕಲು ಅನುಕೂಲವಾಗುವಂತೆ ಮಲ್ಲಕಂಬಗಳ ಉದ್ದ ಹಾಗೂ ನೆಡುವ ಕ್ರಮದಲ್ಲಿ ಬದಲಾವಣೆಗಳಿವೆ. ಕೆಲವು ವ್ಯಾಯಾಮ ಶಾಲೆಗಳಲ್ಲಿ ಇದನ್ನು ಓರೆಯಾಗಿ ನೆಟ್ಟಿರುತ್ತಾರೆ. ಇದರಿಂದಾಗಿ ಹಲವು ವಿಶೇಷ ಪಟ್ಟುಗಳನ್ನು ಹಾಕಬಹುದು.

ಮೇಲಿನಿಂದ ನೇತುಹಾಕಿದ ಮಲ್ಲಕಂಬ ಇನ್ನೊಂದು ಬಗೆಯದು. ಇದನ್ನು ಉಪಯೋಗಿಸುವುದು ಸ್ವಲ್ಪ ಕಷ್ಟತರವಾದದ್ದು. ಈ ಕಂಬ ತೂಗಾಡುತ್ತಲೇ ಇರುತ್ತದೆ. ಇದರ ಮೇಲೆ ಕುಸ್ತಿ ಪಟು ತನ್ನ ಹಲವು ಪಟ್ಟುಗಳನ್ನು ಹಾಕುವುದರಿಂದ ಎದುರಾಳಿಯನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಶಕ್ತಿ ಹಾಗೂ ಚತುರತೆ ಗಳಿಸಬಹುದು. ಇದರಲ್ಲಿ ಪಿರಮಿಡ್ ಇತ್ಯಾದಿ ಚತುರತೆಯನ್ನೂ ತೋರಿಸಬಹುದು. ಇದಕ್ಕೆ ಉದ್ದವಾದ

ಕಂಬಗಳನ್ನು ನೆಡಬೇಕಾಗುತ್ತದೆ. ಇದರಲ್ಲಿ ಪಿರಮಿಡ್ ಮುಂತಾದ ಕಸರತ್ತುಗಳನ್ನೂ ತೋರಿಸಬಹುದು. ಇದಕ್ಕೆ ಉದ್ದವಾದ ಕಂಬಗಳನ್ನು ನೆಡಬೇಕಾಗುತ್ತದೆ. *

**ಮಲ್ಲಪ್ಪ, ಬಿ.**: 1835–1907. ಪ್ರಸಿದ್ಧ ಪಂಡಿತರು. ವ್ಯಾಕರಣ ಶಾಸ್ತ್ರದಲ್ಲಿ ಒಳ್ಳೆಯ ಪಾಂಡಿತ್ಯ ಗಳಿಸಿದ್ದ ಇವರು ವ್ಯಾಕರಣದ ಮಲ್ಲಪ್ಪ ಎಂದೇ ಹೆಸರಾಗಿದ್ದರು. ಇವರು ಈಗಿನ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಗ್ರಾಮದಲ್ಲಿ ಜನಿಸಿದರು. ಚಿಕ್ಕವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ಇವರು ಮೈಸೂರು ಅರಮನೆಯ ಭಕ್ಷಿಗಳಾಗಿದ್ದ ಸೋದರಮಾವ ಕೆಂಪಣ್ಣನವರ ಆಶ್ರಯದಲ್ಲಿ ಬೆಳೆದು ಅಭಿವೃದ್ಧಿಗೆ ಬಂದರು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿಕೊಂಡು, ಅಂದಿನ ಮೈಸೂರು ಮಹಾರಾಜರ ಕೃಪೆಗೆ ಪಾತ್ರರಾಗಿ, ಅರಮನೆಯಲ್ಲಿ ಭಾಷಾಂತರಕಾರರಾಗಿ ನೇಮಕಗೊಂಡರು. ಮೈಸೂರಿನಲ್ಲಿ ಭಾಷೋಜ್ಜೀವಿನೀ ಪಾಠಶಾಲೆ ಆರಂಭವಾದಾಗ ಮಲ್ಲಪ್ಪನವರು ಆ ಶಾಲೆಯ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡಿದರು. ಕಿಟ್ಟೆಲ್ ಮತ್ತು ಬಿ.ಎಲ್. ರೈಸ್ ಅವರಿಗೆ ಕನ್ನಡ ಭಾಷೆಗೆ ಸಂಬಂಧಿಸಿದ ಕೆಲಸಗಳಲ್ಲಿ ಇವರು ನೆರವಾಗಿದ್ದರು.

ಇವರು ಶಬ್ದಾದರ್ಶ ಎಂಬ ವ್ಯಾಕರಣ ಪುಸ್ತಕವನ್ನು ಬರೆದಿದ್ದಾರೆ. ನಾಗವರ್ಮನ ಕಾವ್ಯಾವಲೋಕನದ ಅರ್ಥಾಲಂಕಾರ ಪ್ರಕರಣವನ್ನೂ ಅವನ ಕಾದಂಬರಿಯನ್ನೂ ಷಡಕ್ಷರಿಯ ರಾಜಶೇಖರ ವಿಲಾಸವನ್ನೂ ಇವರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಮೈಸೂರಿನ ಮರಿಮಲ್ಲಪ್ಪನವರ ಪ್ರೌಢಶಾಲೆ, ವೀರಶೈವ ಸಂಸ್ಕೃತ ಪಾಠಶಾಲೆ ಮುಂತಾದ ಹಲವು ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಗಾಗಿಯೂ ಮಲ್ಲಪ್ಪನವರು ದುಡಿದಿದ್ದಾರೆ. ಇವರು 1907ರಂದು ನಿಧನರಾದರು. (ವಿ.ಎಸ್.)

**ಮಲ್ಲಪ್ಪ, ಸಿ.ಬಿ.**: 1887–1959. ಕನ್ನಡ ರಂಗಭೂಮಿಯ ಪ್ರಸಿದ್ಧ ನಟ. ಸುಮಾರು ಐದು ದಶಕಗಳಷ್ಟು ದೀರ್ಘಕಾಲ ಭಕ್ತಿರಸಪ್ರಧಾನವಾದ ಪಾತ್ರಗಳನ್ನು ಅಭಿನಯಿಸಿದ ಕೀರ್ತಿ ಇವರದು. ಇದರಿಂದಾಗಿ ಕನ್ನಡ ರಂಗ ಭೂಮಿಯ ಅಭಿಮಾನಿಗಳಿಗೆ ಇವರು ಅಭಿನವ ಭಕ್ತಶಿರೋಮಣಿ ಎಂದೇ ಚಿರಪರಿಚಿತರು. ಹುಟ್ಟಿದ್ದು ಕೋಲಾರ ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ. ತಂದೆ ಬಯಲಾಟದ ಭಾಗವತರು; ಆಗಾಗ್ಗೆ ಬಯಲಾಟಗಳಲ್ಲಿ ವೇಷ ಧರಿಸುತ್ತಿದ್ದರು. ತಂದೆಯಿಂದ ಇವರಿಗೆ ಸಂಗೀತದ ಗೀಳು ಬಳುವಳಿಯಾಗಿ ಬಂತು. ಮಾಟವಾದ ಮೂಗು ಇವರಿಗಿದ್ದುದರಿಂದ ಮುಂದೆ ಸ್ತ್ರೀಪಾತ್ರಗಳನ್ನು ವಹಿಸುವಲ್ಲಿ ಇದು ಸಹಕಾರಿಯಾಯಿತು. ಚಿಕ್ಕಂದಿನಲ್ಲಿಯೇ ಇವರಿಗೆ ಸಂಗೀತ ಮತ್ತು ಅಭಿನಯ ಕಲೆಗಳಲ್ಲಿ ಒಳ್ಳೆಯ ತರಬೇತು ದೊರೆಯಿತು. ಸು. 1897ರಲ್ಲಿ ಕನ್ನಡ ರಂಗಭೂಮಿಯನ್ನು ಪ್ರವೇಶಿಸಿದ ಇವರು ನಾಟಕ ಕಂಪನಿಯೊಂದರಲ್ಲಿ ಸುಮಾರು ಏಳು ವರ್ಷಗಳ ಕಾಲವಿದ್ದರು. ಅನಂತರ ಶ್ರೀಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘವನ್ನು ಪ್ರವೇಶಿಸಿದ ಇವರು, ಅಲ್ಲಿ ಮೊದಮೊದಲು ಸ್ತ್ರೀಪಾತ್ರಗಳನ್ನು ಅನಂತರ ಇತರ ಪಾತ್ರಗಳನ್ನು ಅಭಿನಯಿಸಿ ಹೆಸರುಗೊಂಡರು. 1921ರಲ್ಲಿ ಜಿ.ಎಚ್. ವೀರಣ್ಣ ಅವರ ಜೊತೆಯಲ್ಲಿ ಗುಬ್ಬಿ ಕಂಪನಿಯ ಒಡೆಯರೂ ಆದರು. ಈ ಕಂಪನಿ ಪ್ರದರ್ಶಿಸಿದ ಕಬೀರದಾಸ, ಸತ್ಯಹರಿಶ್ಚಂದ್ರ, ತುಕಾರಾಂ, ತುಳಸೀದಾಸ ಮೊದಲಾದ ಭಕ್ತಿರಸ ನಾಟಕಗಳಲ್ಲಿ ಪ್ರಧಾನಪಾತ್ರಗಳನ್ನು ಅಭಿನಯಿಸಿ ಆ ಪಾತ್ರಗಳಿಗೆ ಸಂಬಂಧಿಸಿದ ಗೀತೆಗಳನ್ನೂ ಹಾಡಿ ಜನಪ್ರಿಯತೆಯನ್ನು ಗಳಿಸಿಕೊಂಡರು. ಮಲ್ಲಪ್ಪನವರು ಹಾಡುತ್ತಿದ್ದ 'ಹಣವೇ ನಿನ್ನಯ ಗುಣ' ಎಂಬ ಹಾಡು ಮದರಾಸಿನ ಕೊಲಂಬಿಯ ಧ್ವನಿಮುದ್ರಿಕೆ ಸಂಸ್ಥೆಯಿಂದ ಧ್ವನಿಮುದ್ರಿತವಾಗಿ ಜನಪ್ರಿಯವಾಗಿದೆ. ಮಲ್ಲಪ್ಪನವರ ಅಭಿನಯ ಪ್ರಸಿದ್ಧಿಯನ್ನು ಕೇಳಿ 1924ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಜಗನ್ಮೋಹನ ಅರಮನೆಯಲ್ಲಿ ಇವರಿಂದ ಕಬೀರದಾಸ ನಾಟಕವನ್ನಾಡಿಸಿ ತಮ್ಮ ಮೆಚ್ಚುಗೆಯ ಕುರುಹಾಗಿ ಸುವರ್ಣ ಪದಕವನ್ನು ಬಹುಮಾನವನ್ನಾಗಿತ್ತು ಗೌರವಿಸಿದರು.

ಮಲ್ಲಪ್ಪನವರು 1927ರಲ್ಲಿ ಗುಬ್ಬಿ ಕಂಪನಿಯನ್ನು ಬಿಟ್ಟು ದೊಡ್ಡಬಳ್ಳಾಪುರದ ಅಮಾವಾಸ್ಯೆ ನಂಜುಂಡಯ್ಯನವರ ಕಂಪನಿಯ ಪಾಲುದಾರರಾದರು. ನಂಜುಂಡಯ್ಯನವರ ನಿಧನಾನಂತರ (1929) ಆ ಕಂಪೆನಿಯ ಮಾಲೀಕರಾದರು. ತಮ್ಮ ಆಡಳಿತಕ್ಕೆ ಕಂಪನಿ ಬಂದ ಅನಂತರ ನವೀನ ರೀತಿಯ ಅನೇಕ ನಾಟಕಗಳನ್ನು ಪ್ರದರ್ಶಿಸಿ ಕಂಪನಿಯ ಆದಾಯವನ್ನು ಹೆಚ್ಚಿಸಿದರು. ತಮಿಳುನಾಡಿನಲ್ಲೂ ತಮ್ಮ ನಾಟಕಗಳನ್ನು ಪ್ರದರ್ಶಿಸಿದರು. ಆ ನಾಡಿನ ಕಲಾಪ್ರೇಮಿಗಳು ಇವರ ನಾಟಕಗಳನ್ನು ಮೆಚ್ಚಿಕೊಂಡು ಒಂದು ಬೃಹತ್ ಸಮಾರಂಭದಲ್ಲಿ ಇವರಿಗೆ ಅಭಿನವ ಭಕ್ತಶಿರೋಮಣಿ ಎಂಬ ಬಿರುದನ್ನಿತ್ತು ಗೌರವಿಸಿದರು.

ಕಬೀರದಾಸ ಎಂಬ ಮೂಕ ಚಿತ್ರದಲ್ಲೂ ಮಲ್ಲಪ್ಪನವರು ಪಾತ್ರವಹಿಸಿದ್ದರು. ಗುಬ್ಬಿ ಕರ್ನಾಟಕ ಫಿಲಂಸ್ ಅವರ ಹೇಮರೆಡ್ಡಿ ಮಲ್ಲಮ್ಮ ಕನ್ನಡ ಚಿತ್ರದಲ್ಲಿ ಹೇಮರೆಡ್ಡಿಯ ಪಾತ್ರದಲ್ಲಿ ಅಭಿನಯಿಸಿದ್ದರು.

ಸ್ನೇಹಶೀಲರೂ ಉದಾರಿಗಳೂ ಆಗಿದ್ದ ಮಲ್ಲಪ್ಪನವರು ತಮ್ಮ ಸಹ ಕಲಾವಿದರನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡರಲ್ಲದೆ, ತಮ್ಮ ಆದಾಯದ ಬಹುಪಾಲನ್ನು ಬಡವಿದ್ಯಾರ್ಥಿಗಳಿಗೆ ಅನೇಕ ಸಂಘಸಂಸ್ಥೆಗಳಿಗೆ ದಾನಮಾಡಿದರು.

ಇವರು ಚಿಕ್ಕನಾಯಕನಹಳ್ಳಿಯಲ್ಲಿ 1959 ಏಪ್ರಿಲ್ 3ರಂದು ನಿಧನರಾದರು. (ಎಸ್.ಎಚ್.ವಿ.)

**ಮಲ್ಲಾಡಿಹಳ್ಳಿ**: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಗ್ರಾಮಾಂತರ ಶಿಕ್ಷಣ ಕೇಂದ್ರ. ಹೊಳಲ್ಕೆರೆಯಿಂದ 10ಕಿಮೀ ಬೆಂಗಳೂರು–ಪುಣೆ ರೈಲುಮಾರ್ಗದ ಹೊಳಲ್ಕೆರೆ ರೈಲುನಿಲ್ದಾಣದಿಂದ 3ಕಿಮೀ ದೂರದಲ್ಲಿದೆ. ಜನಸಂಖ್ಯೆ 3,450. ಕಳೆದ ಹಲವು ದಶಕಗಳಿಂದ ಇದು ಇಲ್ಲಿಯ ಅನಾಥ ಸೇವಾಶ್ರಮದ ಕಾರ್ಯಚಟುವಟಿಕೆಗಳಿಂದಾಗಿ ಖ್ಯಾತಿ ಗಳಿಸಿದೆ (–1997). ರಾಘವೇಂದ್ರ ಸ್ವಾಮೀಜಿ ಎಂಬುವರು 1943ರಲ್ಲಿ ಇದನ್ನು ಸ್ಥಾಪಿಸಿದರು. ಜನಸೇವೆಗಾಗಿಯೇ ತಮ್ಮ ಜೀವನವನ್ನು ಮುಡುಪಿಟ್ಟು ಆಜೀವ ಬ್ರಹ್ಮಚಾರಿಯಾಗಿ ಮಲ್ಲಾಡಿಹಳ್ಳಿ ಸ್ವಾಮಿ ಎಂದೇ ಪ್ರಸಿದ್ಧರಾಗಿದ್ದರು. ಅವರು ಯೋಗ ದೈಹಿಕ ಶಿಕ್ಷಣ ಮತ್ತು ವೈದ್ಯ ಇವುಗಳಲ್ಲಿ ಒಳ್ಳೆಯ ಪರಿಣತಿಯನ್ನು ಪಡೆದಿದ್ದರು; ಹಾಗೆಯೇ ಸ್ವಾತಂತ್ರ್ಯ ಹೋರಾಟದಲ್ಲಿ ಸಹ ಪಾಲ್ಗೊಂಡಿದ್ದರು; ಸಂನ್ಯಾಸಿಯಾಗಿದ್ದರೂ ಕಾವಿ ಧರಿಸದೆ ಅಚ್ಚ ಬಿಳಿಯ ಖಾದಿಯನ್ನೇ ಧರಿಸುತ್ತಿದ್ದರು. ಅವರು 'ತಿರುಕ' ಎಂಬ ಕಾವ್ಯನಾಮದಿಂದಲೂ ಪ್ರಸಿದ್ಧರು. ಗ್ರಾಮಾಂತರ ಪ್ರದೇಶದ ಜನರ ಸರ್ವತೋಮುಖ ಅಭಿವೃದ್ಧಿ ಈ ಸಂಸ್ಥೆಯ ಧ್ಯೇಯವಾಗಿತ್ತು. ಸಾರ್ವಜನಿಕರ ದೇಣಿಗೆಯೇ ಇದಕ್ಕೆ ಹಣದ ಆಶ್ರಯವನ್ನು ಕಲ್ಪಿಸಿದೆ. ಈ ಸೇವಾಶ್ರಮ ಮಲ್ಲಾಡಿಹಳ್ಳಿಯಲ್ಲಿ ವಸತಿಯುತ ಬಹೂದ್ದೇಶದ

ಪ್ರೌಢಶಾಲೆ, ಉಪಾಧ್ಯಾಯರ ತರಬೇತಿ ಸಂಸ್ಥೆ, ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಶಿಶುವಿಹಾರ, ಉಚಿತ ಆಯುರ್ವೇದ ವೈದ್ಯಕೀಯ ಕೇಂದ್ರ, ಪದವಿಪೂರ್ವ ಮಹಾವಿದ್ಯಾಲಯವನ್ನು ನಡೆಸುತ್ತಿದೆ. ಇವಲ್ಲದೆ ಒಂದು ಮುದ್ರಣಾಲಯ, ಒಂದು ವಿದ್ಯಾರ್ಥಿನಿಲಯ, ಒಂದು ವ್ಯಾಯಾಮ ಶಾಲೆ, ಒಂದು ಯೋಗ ಮಂದಿರ ಇವನ್ನು ಸಹ ನಡೆಸಿಕೊಂಡು ಬರುತ್ತಿದೆ. ಹುಡುಗರಿಗೆ ದೈಹಿಕ ಶಿಕ್ಷಣದ ತರಬೇತಿ ಶಿಬಿರಗಳು, ಜನಸಮುದಾಯದ ಪ್ರಯೋಜನಕ್ಕಾಗಿ ಯೋಗ ಶಿಕ್ಷಣ ತರಬೇತಿ ಇವನ್ನು ಏರ್ಪಡಿಸುತ್ತದೆ. ವಿದ್ಯುಚ್ಛಾಲಿತ ಉಪಕರಣಗಳು, ಹೈನುಗಾರಿಕೆ ತಂತ್ರಜ್ಞಾನ, ಆಟೋಮೊಬೈಲ್ಸ್- ಈ ವಿಷಯಗಳಲ್ಲಿ ವೃತ್ತಿ ಶಿಕ್ಷಣ ಕೋರ್ಸು (ಜೆಓಸಿ)ಗಳನ್ನೂ ದೈಹಿಕ ಶಿಕ್ಷಣ ವಿಷಯದಲ್ಲಿ ಸರ್ಟಿಫಿಕೇಟ್ ಕೋರ್ಸನ್ನೂ ತೆರೆದಿದೆ. ಇಲ್ಲಿ ಹಿಂದೆ ಮುದ್ರಣಕಲೆ, ಹೊಲಿಗೆ ಮತ್ತು ಬೇಸಾಯದ ವಿಧಾನಗಳು ಇವುಗಳನ್ನು ಕಲಿಸಲಾಗುತ್ತಿತ್ತು; ಸೇವಾಶ್ರಮದ ವತಿಯಿಂದ ಊದುಬತ್ತಿ ತಯಾರಿಕೆ ಕೂಡಾ ಹಿಂದೆ ನಡೆಯುತ್ತಿತ್ತು. ಕಾಲ ಬದಲಾದಂತೆ ಅವೆಲ್ಲ ಈಗ ಮರೆಯಾಗಿವೆ.

ಸೇವಾಶ್ರಮದಿಂದ ನಡೆಸಲಾಗುವ ಅತ್ಯಂತ ಜನಪ್ರಿಯವಾದ ಶಿಬಿರ 'ಗೃಹವೈದ್ಯ ಶಿಬಿರ'. ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಹತ್ತು ದಿನಗಳ ಕಾಲ ನಡೆಯುತ್ತದೆ. ಈ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಮನೆಯಲ್ಲೇ ಔಷಧಿ ತಯಾರಿಸಿಕೊಳ್ಳುವ ಹಾಗೂ ಚಿಕಿತ್ಸೆ ಮಾಡಿಕೊಳ್ಳುವ ವಿಧಾನಗಳನ್ನು ತಿಳಿಸಿಕೊಡುವುದಲ್ಲದೆ, ಔಷಧೀಯ ಸಸ್ಯಗಳನ್ನೂ ಪರಿಚಯಿಸಿಕೊಡಲಾಗುತ್ತದೆ. ಉಳಿದಂತೆ ವಾರಕ್ಕೆ ಒಂದು ದಿನ (ಸೋಮವಾರ) ಉಚಿತ ಆಯುರ್ವೇದೀಯ ಚಿಕಿತ್ಸೆಯನ್ನೂ ನೀಡಲಾಗುತ್ತದೆ.

ಸೇವಾಶ್ರಮದಲ್ಲಿ ಒಂದು ಔಷಧೀಯ ಸಸ್ಯವನ ಮತ್ತು ಒಂದು ತಪೋವನ ಇವೆ. ಸೇವಾಶ್ರಮಕ್ಕೆ ಸೇರಿದಂತೆ ಸ್ವಲ್ಪ ಜಮೀನು ಕೂಡಾ ಇದ್ದು, ಅದರಲ್ಲಿ ವಿದ್ಯಾರ್ಥಿನಿಲಯಕ್ಕೆ ಬೇಕಾದ ಜೋಳ, ರಾಗಿ, ಮೆಕ್ಕೆಜೋಳ, ತರಕಾರಿ ಇತ್ಯಾದಿಗಳನ್ನು ಬೆಳೆಯಲಾಗುತ್ತಿದೆ.

ಈ ಸೇವಾಶ್ರಮ ಹೊಳಲ್ಕೆರೆ ತಾಲ್ಲೂಕಿನ ದುಮ್ಮಿ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ, ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಶೆಟ್ಟಿಹಳ್ಳಿಗಳಲ್ಲಿ ಪ್ರೌಢಶಾಲೆಗಳನ್ನೂ ಮೈಸೂರಿನ ಕುವೆಂಪು ನಗರ ಬಡಾವಣೆಯಲ್ಲಿ ಬಾಲಿಕೆಯರ ಪದವಿಪೂರ್ವ ಮಹಾವಿದ್ಯಾಲಯವೊಂದನ್ನೂ ನಡೆಸುತ್ತಿದೆ.

1997ರಲ್ಲಿ ನಿಧನರಾದ ರಾಘವೇಂದ್ರ ಸ್ವಾಮೀಜಿಯವರು ಹಳ್ಳಿಗಾಡಿನ ಪರಿಸರದಲ್ಲಿ ಇಂಥ ಒಂದು ಅಪರೂಪದ ಸಮಾಜಸೇವಾ ಸಂಸ್ಥೆಯನ್ನು ಸ್ಥಾಪಿಸಿ ಶೈಕ್ಷಣಿಕ ಕ್ರಾಂತಿ ಮಾಡಿದುದು; ಕರ್ನಾಟಕ ರಾಜ್ಯದ ಗ್ರಾಮೀಣ ವಿಕಾಸದ ಇತಿಹಾಸದಲ್ಲೇ ವಿಶಿಷ್ಟವಾದದ್ದು. (ಬಿ.ಆರ್.ಎಚ್.)

**ಮಲ್ಲಿಕಾ ಕಡಿದಾಳ್ ಮಂಜಪ್ಪ:** 1920– . ಮಲ್ಲಿಕಾ ಎಂಬ ಕಾವ್ಯನಾಮದಿಂದ ಸಾಹಿತ್ಯ ರಚಿಸಿದ ಕವಯಿತ್ರಿ, ಕಥೆಗಾರ್ತಿ, ಕಾದಂಬರಿಗಾರ್ತಿ. ಕರ್ನಾಟಕದ (ಆಗಿನ ಮೈಸೂರು ರಾಜ್ಯದ) ಮುಖ್ಯಮಂತ್ರಿಗಳಾಗಿದ್ದ (1956) ಕಡಿದಾಳ್ ಮಂಜಪ್ಪನವರ ಪತ್ನಿ. ಲಕ್ಷ್ಮೀದೇವಿ ಇವರ ನಿಜನಾಮ. ಇವರು 1920 ಜೂನ್ 15ರಂದು ಚಿಕ್ಕಮಗಳೂರು ಜಿಲ್ಲೆಯ ಬಾಗೆಮನೆಯಲ್ಲಿ ಚೆನ್ನೇಗೌಡ ಹಾಗೂ ಪಾರ್ವತಮ್ಮ ದಂಪತಿಗಳ ನಾಲ್ಕನೆಯ ಸಂತಾನವಾಗಿ ಜನಿಸಿದರು. ವಕೀಲರಾಗಿದ್ದ ಕಡಿದಾಳ ಮಂಜಪ್ಪನವರೊಂದಿಗೆ ಇವರ ವಿವಾಹವಾಯಿತು (1946). ಲಕ್ಷ್ಮೀಪ್ರಕಾಶನ ಎಂಬ ಸಂಸ್ಥೆಯನ್ನು ಆರಂಭಿಸಿ ತಮ್ಮ ಐವತ್ತೈದು ಗ್ರಂಥಗಳನ್ನೂ ಅದರ ಮೂಲಕ ಪ್ರಕಟಿಸಿದರು.

ಜೀವನಗಂಗಾ ಎಂಬ ಇವರ ಮೊದಲ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿತು (1966). ಅನಂತರ ಇವರು ಡಾ. ಅಘೋರ (1967), ಡಾ. ಕಮಲೇಶ (1969), ವೈಶಾಖಪರ್ವ (1970), ವಂದೇಮಾತರಂ (1972), ಅನಂತಾನಂತದೆಡೆಗೆ, ಮನೋನ್ಮಣಿ, ಪದ್ಮಾಲಯ, ಶ್ರದ್ಧಾಲಯ ಮೊದಲಾದ ಕಾದಂಬರಿಗಳನ್ನೂ ಬಹುರತ್ನಾ ವಸುಂಧರಾ, ಸುಧಾಮಣಿ, ರಮಣಿಮಣಿ, ಲಿಯೋನಾ, ಶ್ರೀಮುಖಿ, ಮಣಿಮೇಖಲಾ, ಮಣಿಕರ್ಣಿಕಾ, ಶ್ರೀಹರ್ಷಲಾ ಮೊದಲಾದ ಹನ್ನೊಂದು ಕಥಾಸಂಗ್ರಹಗಳನ್ನೂ ಪ್ರಕಟಿಸಿದರು. ಮೊದಲಿನಿಂದಲೂ ಇವರಿಗೆ ಕಾವ್ಯದ ಸೆಳೆತವಿದ್ದು ಆ ಕ್ಷೇತ್ರದಲ್ಲಿ ನಾನಾ ಪ್ರಯೋಗಗಳನ್ನು ಮಾಡಿದರು.

ಪೂಜಾವಸಾನ ಸಮಯೇ, ಗಗನ ಕುಸುಮ, ಜೀವನಕುಸುಮ, ಚಂಪಕರಾಜಿ, ಬಕುಳರಾಜಿ, ಕಸ್ತೂರಿಮಾಲಿಕಾ, ಮಂದಾರ ಮಾಲಿಕಾ, ಗಾನತೀರ್ಥ, ನಾದಬಿಂದು, ಕಾವ್ಯಾನಂದ ನಂದಿನಿ, ಭಾವಾನಂದ ನಂದಿನಿ, ಆತ್ಮಗೀತಾಂಜಲಿ- ಹೀಗೆ ಒಟ್ಟು ಇಪ್ಪತ್ತೂರು ಕವನ ಸಂಗ್ರಹಗಳು ಪ್ರಕಟವಾಗಿವೆ. ಇವರು ಅಭಿಮನ್ಯುವಿನ ಜೀವನವನ್ನು ಕುರಿತು ಬರೆದ ಐಂದ್ರಕೀರ್ತಿ ಕೇತನಂ, ಯಾಜ್ಞವಲ್ಕ್ಯರನ್ನು ಕುರಿತ ಕೃತಂ ಸ್ಮರ ಕ್ರತುಂ ಸ್ಮರ (1977) ಕಾವ್ಯಗಳು ಇವರ ಕಾವ್ಯಪ್ರತಿಭೆಯ ಪ್ರತೀಕಗಳಾಗಿವೆ. ದೂರ ದೇಶದಲ್ಲಿ, ಬೆಳದಿಂಗಳ ರಾತ್ರಿ, ರಂಗನ ಸಾಹಸ, ಓಹಿಯೋಜ ಸರೋವರ, ಕೌಶಿಕನ ಗೊಂಬೆ, ವಿಶೇಷಸುದ್ದಿ, ಕಲ್ಯಾಣರಾಗಿಣಿ- ಇವು ಶಿಶು ಸಾಹಿತ್ಯ ಕೃತಿಗಳು. ಒಂದು ಸಾವಿರದ ಇನ್ನೂರು ಪುಟಗಳ ಶ್ರೀ ವಿವೇಕಾನಂದ ವಿಜಯಂ ಎಂಬುದು ಮಹಾಕಾವ್ಯ. ಇದರ ಭಾಷೆ ನಡುಗನ್ನಡ. ಸಾಹಿತ್ಯ, ಪ್ರಾಚೀನ ಕಾವ್ಯ, ಇತಿಹಾಸ, ಪುರಾಣ, ಉಪನಿಷತ್ತುಗಳ ಆಳವಾದ ಅಧ್ಯಯನ ಮಾಡಿರುವ ಇವರ ಕಾವ್ಯದಲ್ಲಿ ಸರಳ ಹಾಗೂ ಸಹಜತೆಯನ್ನು ಕಾಣಬಹುದು.

ಇವರ ಸಾಹಿತ್ಯ ಪ್ರತಿಭೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಇವರಿಗೆ ದೆಹಲಿ ಕನ್ನಡಿಗ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಸಂಗೀತರತ್ನ ಚಂದ್ರಕಲಾ ಪ್ರಶಸ್ತಿ, ಬಿ. ಸರೋಜಾದೇವಿ ಪ್ರಶಸ್ತಿ, ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳೂ ಚುಂಚಶ್ರೀ, ಸಮಾಜಸಂಪರ್ಕ ವೇದಿಕೆ, ಅತ್ತಿಮಬ್ಬೆ ಪ್ರತಿಷ್ಠಾನ, ಸಹ್ಯಾದ್ರಿ ಸಂಘದ ವೇದಿಕೆ- ಈ ಪ್ರಶಸ್ತಿಗಳೂ ಲಭ್ಯವಾಗಿವೆ. ಕರ್ನಾಟಕ ಸರ್ಕಾರ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ನೀಡಿ ಗೌರವಿಸಿದೆ. (ಎಸ್.ಎಮ್.ಕೆ.)

**ಮಲ್ಲಿಕಾರ್ಜುನ**: ಸು. 1240. ಸೂಕ್ತಿಸುಧಾರ್ಣವ ಎಂಬ ಸಂಕಲನ ಗ್ರಂಥದ ಸಂಯೋಜಕ. ಈತನಿಗೆ ಮಲ್ಲ, ಮಲ್ಲಪ, ಚಿದಾನಂದ, ಚಿದಾನಂದ ಮಲ್ಲಿಕಾರ್ಜುನ ಎಂಬ ಹೆಸರುಗಳೂ ಇವೆ. ಕವಿ ಗ್ರಂಥದಲ್ಲಿ ಸ್ವವಿಷಯವಾಗಿ ಏನನ್ನೂ ಖಚಿತವಾಗಿ ಹೇಳಿಕೊಂಡಿಲ್ಲ. ಯಾದವ ಕಟಕಾಚಾರ್ಯ ಸುಕವಿ ಸುಮನೋಬಾಣ ಈತನ ಮಾವ. ಕವಿಚಕ್ರವರ್ತಿ ಜನ್ನ ಭಾವ. ಶಬ್ದಮಣಿ ದರ್ಪಣದ ಕರ್ತೃ ಕೇಶಿರಾಜ ಮಗ. ಸಂಕಲನಕಾರ ತನ್ನನ್ನು ಮುನಿಗಳ ಸಭೆಯೊಳ್ ಪರಮಮುನಿ, ಸರಸಕವೀಶ್ವರ ಸಭೆಯೊಳ್ ಸರಸಕವಿ, ಬುಧರ ಸಭೆಯೊಳ್ ಪರಮಬುಧಂ ಎಂದು ವಿಶೇಷಿಸಿಕೊಂಡಿದ್ದಾನೆ. ಈತ ಸೂಕ್ತಿಸುಧಾರ್ಣವವನ್ನು ತನ್ನ ಆಶ್ರಯದಾತ ಹೊಯ್ಸಳ ವೀರಸೋಯಿದೇವನ (1235–53) ಮೆಚ್ಚಿಗೆಗಾಗಿ ರಚಿಸಿದಂತೆ ಆಶ್ವಾಸಾಂತ್ಯದಲ್ಲಿ ಬರುವ ವೀರ ಹೊಯ್ಸಳ ಸೋಯಿದೇವರಾಯ ವಿನೋದಾರ್ಕರ್ಣನಕೌತು ಕೋತ್ಪಾದಿತಮಂ ಎಂಬ ಮಾತುಗಳಿಂದ ತಿಳಿದುಬರುತ್ತದೆ. ಇವನು ಮತ್ತಾವ ಗ್ರಂಥಗಳನ್ನು ರಚಿಸಿದ್ದನೋ ತಿಳಿಯದು. ಮಂಡ್ಯ, ನಾಗಮಂಗಲ, ತರೀಕೆರೆ ಮೊದಲಾದೆಡೆಗಳಲ್ಲಿರುವ ಕೆಲವು ಶಾಸನಗಳನ್ನು ಈತ ರಚಿಸಿದ್ದಿರಬಹುದು. ಈ ಶಾಸನಗಳಲ್ಲಿರುವ ಕೆಲವು ಪದ್ಯಗಳು ಸೂಕ್ತಿಸುಧಾರ್ಣವದಲ್ಲಿಯೂ ಉದ್ಧೃತವಾಗಿವೆ.

ಸೂಕ್ತಿಸುಧಾರ್ಣವ ಕನ್ನಡದ ಮೊಟ್ಟಮೊದಲ ಸಂಕಲನಗ್ರಂಥ. ಇದಕ್ಕೆ ಕಾವ್ಯಸಾರ ಎಂಬ ಹೆಸರೂ ಇದೆ. ಇದರಲ್ಲಿ ಪೀಠಿಕಾ ಪ್ರಕರಣವೂ ಸೇರಿ 19 ಆಶ್ವಾಸಗಳಿವೆ. ಇವುಗಳಲ್ಲಿ ಉಕ್ತವಾಗಿರುವ ವಿಷಯಗಳಿವು:

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಭೋರುವೈರಿಮಿತ್ರರುದಯಂ ಋತು ನಂದನಮಂಬುಸೇಧು ಕಾಂ
ತಾರತಿ ಚಿಂತೆ ಮಂತ್ರ ಚರ ಯಾನ ವಿರೋಧಿ ಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್

– ಎಂಬ ಪದ್ಯದಲ್ಲಿ ತಿಳಿಸಿದ್ದಾನೆ. ಕೊನೆಯ (ಯುದ್ಧವರ್ಣನೆಯ) ಆಶ್ವಾಸ ಉಪಲಬ್ಧವಿಲ್ಲ. ಮಲ್ಲಿಕಾರ್ಜುನ ತನಗೆ ಹಿಂದೆ ಇದ್ದ ಎಲ್ಲ ಪ್ರಸಿದ್ಧ ಗ್ರಂಥಗಳಿಂದಲೂ ಉತ್ತಮವಾದ ಭಾಗಗಳನ್ನು ಆಯ್ದು ಗ್ರಂಥದಲ್ಲಿ ಸಂಕಲನ ಮಾಡಿದ್ದಾನೆ. ಲಬ್ಧವಾದ ಪ್ರತಿಗಳಲ್ಲಿ ಒಟ್ಟು 2,200 ಪದ್ಯಗಳಿವೆ. ಸು. 30 ಪ್ರಾಚೀನ ಕವಿಗಳಿಂದ ಪದ್ಯಗಳು ಉದ್ಧೃತವಾಗಿವೆ. ಪದ್ಯಗಳ ಆಕರ ಸೂಚಿತವಾಗಿಲ್ಲ. ಎಲ್ಲದಕ್ಕೂ ಆಕರಗಳನ್ನು ನಿಷ್ಕರ್ಷಿಸಲಾಗಿಲ್ಲ. ಸುಮಾರು ಒಂದು ಸಾವಿರ ಪದ್ಯಗಳ ಆಕರ ಅನಿರ್ದಿಷ್ಟವಾಗಿದೆ. ಮಿಕ್ಕವು ಈಗ ಉಪಲಬ್ಧವಲ್ಲದ ಕನ್ನಡ ಗ್ರಂಥಗಳಿಂದ ಆಯ್ದುಕೊಂಡುವೋ ಅಥವಾ ಸಂಕಲನಕಾರನಿಂದ ರಚಿತವಾದುವೋ ಆಗಿರಬೇಕು. ಪೀಠಿಕಾ ಪ್ರಕರಣದಲ್ಲಿ ದೇವತಾಪ್ರಾರ್ಥನೆ, ಪೂರ್ವಕವಿ ಪ್ರಶಂಸೆ, ಸುಜನ ದುರ್ಜನ ಪದ್ಧತಿಗಳ ಅನಂತರ ಹೊಯ್ಸಳವಂಶ ವರ್ಣನೆಯೂ ಉಕ್ತವಾಗಿದೆ. ಮುಂದೆ ಒಂದೊಂದು ಆಶ್ವಾಸದಲ್ಲಿಯೂ ಅಷ್ಟಾದಶ ವರ್ಣನೆಗಳಲ್ಲಿ ಒಂದೊಂದರ ವಿಷಯ ವರ್ಣಿತವಾಗಿದೆ. ಅಲ್ಲದೆ ಪ್ರತಿಯೊಂದು ಆಶ್ವಾಸದ ಪ್ರಾರಂಭದ ಒಂದೆರಡು ಪದ್ಯಗಳಲ್ಲಿ ಮುಂದೆ ವರ್ಣಿತವಾಗುವ ವಿಷಯಗಳ ವಿವರಗಳು ಸೂಚಿತವಾಗಿವೆ. ಈ ಸೂಚನೆಗನುಸಾರವಾಗಿ ಪ್ರಾಚೀನ ಗ್ರಂಥಗಳಿಂದ ಪದ್ಯಗಳು ಉದ್ಧೃತವಾಗಿವೆ. ಆಶ್ವಾಸಗಳ ಪ್ರಾರಂಭದಲ್ಲಿ ಬರುವ ಒಂದೆರಡು ಪದ್ಯಗಳೂ ಗ್ರಂಥದ ಮಧ್ಯದಲ್ಲಿ ಬರುವ ಕೆಲವು ಪದ್ಯಗಳೂ ಇವನಿಂದಲೇ ರಚಿತವಾಗಿದ್ದಿರಬಹುದೆಂದು ಊಹಿಸಬಹುದು. ಇವುಗಳ ಆಧಾರದ ಮೇಲೆ ಇವನ ಕವಿತಾ ಶಕ್ತಿಯೂ ಉಚ್ಚಮಟ್ಟದ್ದಾಗಿರ ಬಹುದೆಂದು ನಂಬಬಹುದಾಗಿದೆ. ಸಂಕಲನ ಕಾರ್ಯದಲ್ಲಿ ಈತನ ವಿವೇಕ, ವಿಚಾರಪರತೆ, ಸದಭಿರುಚಿ ಮೊದಲಾದುವು ಸ್ಪಷ್ಟವಾಗಿವೆ. ಇವನು ಆಯ್ದುಕೊಂಡಿರುವ ಒಂದೊಂದು ಪದ್ಯದಲ್ಲಿಯೂ ಶಬ್ದಾಲಂಕಾರ, ಅರ್ಥಾಲಂಕಾರ, ರಸಭಾವಗಳು, ಉಕ್ತಿವೈಚಿತ್ರ್ಯ ಮೊದಲಾದುವುಗಳಿಗೆ ಸಂಬಂಧಪಟ್ಟ ಯಾವುದಾದರೊಂದು ಬಗೆಯ ಸೊಬಗಿರುತ್ತದೆ. ಈ ಗ್ರಂಥ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕವಿಗಳ ಕಾಲನಿರ್ಣಯಕ್ಕೆ, ಕರ್ತೃತ್ವ ನಿರ್ಧಾರಕ್ಕೆ ಅಡಿಗಲ್ಲಾಗಿದೆ. ಅಲ್ಲದೆ ಈಗ ಉಪಲಬ್ಧವಿಲ್ಲದ ಕನ್ನಡ ಸಾಹಿತ್ಯಗ್ರಂಥರಾಶಿಯ ಪರಿಮಾಣವನ್ನು ಊಹಿಸಲೂ ಅನೇಕ ಗ್ರಂಥಗಳನ್ನು ಪರಿಷ್ಕರಿಸಲೂ ನೆರವಾಗಿದೆ. ಮುಂದಿನ ಇತರ ಅನೇಕ ಸಂಕಲನಗಳಿಗೆ ಪ್ರೇರಕವಾಗಿದೆ. ಈ ಕಾರಣದಿಂದಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಕೃತಿಗೆ ಒಂದು ಮಹತ್ತ್ವದ ಸ್ಥಾನವಿದೆ. (ಎನ್.ಎಆರ್.)

**ಮಲ್ಲಿಕಾರ್ಜುನ (ವಿಜಯನಗರ)**: ವಿಜಯನಗರದ ಸಂಗಮವಂಶದ ರಾಜ (1446–65). ಇಮ್ಮಡಿ ದೇವರಾಯನ ಮಗ ಮತ್ತು ಉತ್ತರಾಧಿಕಾರಿ. ತಾಯಿ ಹೊನ್ನಲಾದೇವಿ. ಇವನನ್ನು ಮುಮ್ಮಡಿ ದೇವರಾಯ ಅಥವಾ ಮುಮ್ಮಡಿ ಪ್ರೌಢದೇವರಾಯ ಎಂದೂ ಕರೆಯಲಾಗಿದೆ. ಇವನಿಗೆ ಗಜಬೇಟೆಕಾರ ಎಂಬ ಬಿರುದಿತ್ತು.

ಈತ ವಿಷಮ ಪರಿಸ್ಥಿತಿಯಲ್ಲಿ ಪಟ್ಟಕ್ಕೆ ಬಂದ. ಎರಡನೆಯ ದೇವರಾಯನ ಕಾಲದಲ್ಲಿ ವೈಭವವನ್ನು ಕಂಡ ವಿಜಯನಗರ, ಅವನ ಕೊನೆಗಾಲದಲ್ಲಿ ಆಸ್ಥಾನದ ಒಳಸಂಚಿನಿಂದ ಮತ್ತು ಹೊರಗಿನ ದಾಳಿಗಳಿಂದ ಗೊಂದಲದ ಪರಿಸ್ಥಿತಿಯಲ್ಲಿತ್ತು. 1446ರಲ್ಲಿ ಎರಡನೆಯ ದೇವರಾಯ ಮರಣ ಹೊಂದಿದಾಗ ಮಲ್ಲಿಕಾರ್ಜುನ ಇನ್ನೂ ಯುವಕ. ಪಟ್ಟವೇರಲು ಇವನ ದಾರಿ ಸುಗಮವಾಗಿರಲಿಲ್ಲ. ದೇವರಾಯನ ಕಿರಿಯ ಸಹೋದರ ಎರಡನೆಯ ವಿಜಯ ಸಿಂಹಾಸನಕ್ಕಾಗಿ ಪೈಪೋಟಿ ನಡೆಸುತ್ತಿದ್ದ. ಅವನು ಸ್ವಲ್ಪಕಾಲ ಸಿಂಹಾಸನವೇರಿ ತರುವಾಯ ಮಲ್ಲಿಕಾರ್ಜುನನಿಗೆ ಸಿಂಹಾಸನ ತೆರವು ಮಾಡಿದನೆಂದು ಹೇಳಲಾಗಿದೆ. ಇವರಿಬ್ಬರೂ ಒಟ್ಟಿಗೆ ಸ್ವಲ್ಪ ಕಾಲ ಆಳಿದರು ಎಂಬ ಅಭಿಪ್ರಾಯಕ್ಕೂ ಕೆಲವು ವಿದ್ವಾಂಸರು ಬಂದಿದ್ದಾರೆ. ಆದರೆ ವಿಜಯ ಹೇಗೆ ಪದಚ್ಯುತನಾದನೆಂಬ ಬಗ್ಗೆ ವಿವರಗಳು ಸ್ಪಷ್ಟವಾಗಿಲ್ಲ. ಅವನು ಮಲ್ಲಿಕಾರ್ಜುನನೊಂದಿಗೆ ರಾಜಿ ಮಾಡಿಕೊಂಡು ಅವನ ನ್ಯಾಯಬದ್ಧ ಹಕ್ಕನ್ನು ಮಾನ್ಯಮಾಡಿ ಅವನಿಗೆ ಸಿಂಹಾಸನವನ್ನು ಬಿಟ್ಟುಕೊಟ್ಟನೆಂದು ಮತ್ತು 1455ರ ವರೆಗೂ ತನ್ನ ಜಹಗೀರಿಯಲ್ಲಿ ಆಳುತ್ತಿದ್ದನೆಂದೂ ಅಭಿಪ್ರಾಯ ಪಡಲಾಗಿದೆ. ಕೆಲವು ತಿಂಗಳುಗಳ ಗೊಂದಲದ ಅನಂತರ ಮಲ್ಲಿಕಾರ್ಜುನ 1446ರ ಉತ್ತರಾರ್ಧ ದಲ್ಲಿ ಪಟ್ಟಾಭಿಷಿಕ್ತನಾಗಿರಬೇಕು.

ಮಲ್ಲಿಕಾರ್ಜುನ ಸಮರ್ಥ ರಾಜನಾಗಿರಲಿಲ್ಲ. ಆಸ್ಥಾನದ ಒಳಜಗಳಗಳೂ ಮತ್ತು ಸಾಮ್ರಾಜ್ಯದ ವಿಚ್ಛಿದ್ರಕಾರಕ ಶಕ್ತಿಗಳನ್ನು ಹತೋಟಿಗೆ ತರುವಲ್ಲಿ ಇವನು ಸಫಲನಾಗಲಿಲ್ಲ. ಇದರಿಂದ ಪ್ರಾಂತ್ಯಗಳಲ್ಲಿ ಸಾಮಂತರು ಸ್ವೇಚ್ಛೆಯಿಂದ ವರ್ತಿಸ ತೊಡಗಿದರು. ಇದು ಸಾಮ್ರಾಜ್ಯದ ದುರ್ಬಲತೆಗೆ ಕಾರಣವಾಯಿತು. ಎರಡನೆಯ ದೇವರಾಯನ ಕಾಲದಲ್ಲಿ ತೇಜೋಭಂಗ ಗೊಂಡಿದ್ದ ಬಹಮನೀ ಮತ್ತು ಒರಿಸ್ಸದ ರಾಜರು ವಿಜಯನಗರದ ಮೇಲೆ ಬೀಳಲು ಸಮಯ ಕಾಯುತ್ತಿದ್ದರು. ಅವರು ಮಲ್ಲಿಕಾರ್ಜುನನ ಮೇಲೆ ಯುದ್ಧ ಹೂಡಿದರು. ಬಹಮನೀ ಸುಲ್ತಾನ ಎರಡನೆಯ ಅಲಾಉದ್ದೀನ್ ಅಹ್ಮದ್ ಮತ್ತು ಒರಿಸ್ಸದ ಗಜಪತಿ ಕಪಿಲೇಶ್ವರ ವಿಜಯನಗರದ ಮೇಲೆ ದಾಳಿಯಿಟ್ಟರು. ಸು. 1450ರಲ್ಲಿ ಏಕಕಾಲದಲ್ಲಿ ಸಂಭವಿಸಿದ ಈ ಉಭಯತ್ರರ ದಾಳಿ ರಾಜಧಾನಿ ವಿಜಯನಗರವನ್ನೇ ಅಪಾಯಕ್ಕೆ ಈಡುಮಾಡಿತ್ತು. ರಾಜಧಾನಿಯ ಸಮೀಪದ ವರೆಗೂ ಬಂದಿದ್ದ ಈ ಸೈನ್ಯಗಳನ್ನು ಮಲ್ಲಿಕಾರ್ಜುನ ಕೊನೆಗೆ ಯಶಸ್ವಿಯಾಗಿ ಹಿಮ್ಮೆಟ್ಟಿಸಿದ.

ಈ ಕಾಲದಲ್ಲಿ ವಿಜಯನಗರವಾಗಲಿ, ಬಹಮನೀ ರಾಜ್ಯವಾಗಲಿ ಶಕ್ತ ರಾಜ್ಯಗಳಾಗಿರಲಿಲ್ಲ. ದಕ್ಷಿಣ ಭಾರತದಲ್ಲಿ ಉಂಟಾಗಿದ್ದ ಈ ಪರಿಸ್ಥಿತಿ ಯನ್ನು ಮನಗಂಡ ಗಜಪತಿ ಕಪಿಲೇಶ್ವರ ಈ ಸನ್ನಿವೇಶದಿಂದ ತಾನು ಲಾಭ ಪಡೆಯಲು ಸಮಗ್ರ ದಕ್ಷಿಣ ಭಾರತವನ್ನು ಕಬಳಿಸುವ ಮಹಾ ಪ್ರಯತ್ನಕ್ಕೆ ಕೈಹಚ್ಚಿದ. ಮೊದಲಿಗೆ ರೆಡ್ಡಿ ರಾಜ್ಯವಾದ ರಾಜಮಹೇಂದ್ರಿಯನ್ನು ಆಕ್ರಮಿಸಿದ. ತರುವಾಯ 1454ರ ಹೊತ್ತಿಗೆ ಕೊಂಡವೀಡು ಮತ್ತಿತರ ವಿಜಯನಗರದ ಪೂರ್ವಭಾಗಗಳನ್ನು ಹಿಡಿದ. ಕಪಿಲೇಶ್ವರನ ಮಗ ಹಮ್ಮೀರ ಬಹಮನೀ ಸೈನ್ಯವನ್ನು ಸೋಲಿಸಿ ವಾರಂಗಲ್ಲನ್ನು ಆಕ್ರಮಿಸಿ ಕೊಂಡ (1458). ಈ ಪ್ರಾರಂಭದ ಯಶಸ್ಸಿನಿಂದ ಸ್ಫೂರ್ತಿ ಪಡೆದ ಕಪಿಲೇಶ್ವರ ವಿಜಯನಗರದ ಮೇಲೆ ದಂಡಯಾತ್ರೆ ನಡೆಸಲು ತನ್ನ ಮಗ ಹಮ್ಮೀರನ ನೇತೃತ್ವದಲ್ಲಿ ಸೈನ್ಯ ಕಳುಹಿಸಿದ. ಈ ದಂಡಯಾತ್ರೆಯಿಂದ ಉದಯಗಿರಿ, ಚಂದ್ರಗಿರಿ, ಪಡೈವೀಡು, ಕಂಚಿ, ತಿರುವಾಯೂರ್, ತಿರುಚ್ಚಿರಾಪಳ್ಳಿ ಮೊದಲಾದ ವಿಜಯನಗರದ ಪಟ್ಟಣಗಳು ಗಜಪತಿಯ ಕೈವಶವಾದವು. 1463ರ ಹೊತ್ತಿಗೆ ಗಜಪತಿರಾಜ್ಯ ಗಂಗಾನದಿಯಿಂದ ಕಾವೇರಿಯವರೆಗೂ ವಿಸ್ತರಿಸಿತು. ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲೇ ಯಾವ ಶತ್ರುವೂ ಇಷ್ಟೊಂದು ದಕ್ಷಿಣದ ವರೆಗೂ ದಾಳಿ ನಡೆಸಲಿಲ್ಲ. ಮಲ್ಲಿಕಾರ್ಜುನ ಈ ದಾಳಿಯನ್ನು ತಡೆಯಲು ಸಮರ್ಥನಾಗಿರದಿದ್ದರೂ ವಿಜಯನಗರದ ಸಾಮಂತರೂ ತಂಜಾವೂರು ಮತ್ತು ಪುದುಕೋಟೆ ಪ್ರದೇಶಗಳ ಅಧಿಪತಿಯೂ ಆಗಿದ್ದ ಸಾಳುವಗೋಪ ತಿಮ್ಮ ಮತ್ತು

ಸಾಮ್ರಾಜ್ಯದ ಪೂರ್ವಭಾಗದ ಇನ್ನೊಬ್ಬ ಸಾಮಂತ ಸಾಳುವ ನರಸಿಂಹ-ಇವರು ಶತ್ರುಗಳು ಇಲ್ಲಿಂದ ಕಾಲ್ತೆಗೆಯುವಂತೆ ಮಾಡಲು ಸತತವಾಗಿ ಹೋರಾಡಿದ್ದು; ಅಲ್ಲದೆ ಮಹ್ಮೂದ್ ಗಾವಾನನ ನೇತೃತ್ವದಲ್ಲಿ ಬಹಮನೀ ರಾಜ್ಯ ಪ್ರಬಲವಾಗುತ್ತಿದುದು; 1460ರಲ್ಲಿ ಬಿದರೆ ಮೇಲೆ ದಾಳಿ ಮಾಡಿದ ಗಜಪತಿಯ ಸೈನ್ಯವನ್ನು ಮಹ್ಮೂದ್ ಗಾವಾನ್ ಹಿಮ್ಮೆಟ್ಟಿಸಿದ್ದು ಮೊದಲಾದ ಕಾರಣಗಳಿಂದ ಗಜಪತಿ ಕೇವಲ ಒಂದೆರಡು ವರ್ಷಗಳಲ್ಲೇ ಈ ಪ್ರದೇಶಗಳಿಂದ ಹಿಮ್ಮೆಟ್ಟಬೇಕಾಯಿತು. ಕೊನೆಗೆ ಉದಯಗಿರಿ ಮತ್ತು ಕೊಂಡವೀಡು ಕೋಟೆಗಳು ಮಾತ್ರ ಅವನ ಕೈಯಲ್ಲುಳಿದವು.

ಆದರೂ ಈ ದಾಳಿ ವಿಜಯನಗರದ ಮೇಲೆ ವ್ಯಾಪಕ ಪರಿಣಾಮ ಬೀರಿತು. ಪ್ರಾದೇಶಿಕವಾಗಿ ಹೆಚ್ಚು ನಷ್ಟವಾಗದಿದ್ದರೂ ಸಾಮ್ರಾಜ್ಯದಲ್ಲಿ ಅವ್ಯವಸ್ಥೆ ಹೆಚ್ಚಿತು. ಮಲ್ಲಿಕಾರ್ಜುನನ ಅಸಾಮರ್ಥ್ಯ ಜಗಜ್ಜಾಹೀರಾಯಿತು. ಇವನ ಪ್ರತಿಷ್ಠೆ ಕುಂದಿತು. ಈ ಪರಿಸ್ಥಿತಿಯಲ್ಲಿ ಪ್ರತಾಪದೇವನ ಮಗ ಮೂರನೆಯ ವಿರೂಪಾಕ್ಷ 1465ರಲ್ಲಿ ಮಲ್ಲಿಕಾರ್ಜುನನನ್ನು ಪದಚ್ಯುತಗೊಳಿಸಿದ. ಮಲ್ಲಿಕಾರ್ಜುನ ಈ ಕ್ಷಿಪ್ರಕ್ರಾಂತಿಯಲ್ಲಿ ಕೊಲೆಯಾದನೇ ಹೇಗೆ ಎಂಬವು ಬಗ್ಗೆ ಖಚಿತವಾಗಿ ತಿಳಿದುಬರುವುದಿಲ್ಲ. 1465ರಲ್ಲಿ ಮಲ್ಲಿಕಾರ್ಜುನ ಮೃತನಾದನೆಂದು ಬಹುಮಂದಿ ವಿದ್ವಾಂಸರ ಊಹೆ. ಆದರೆ ಇವನು ದಕ್ಷಿಣಕ್ಕೆ ಗಡಿಪಾರಾಗಿ ಹೋಗಿ 1487ರ ವರೆಗೂ ಬದುಕಿದ್ದನೆಂದು ಪಿ.ಬಿ. ದೇಸಾಯಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಮಲ್ಲಿಕಾರ್ಜುನ ದಕ್ಷನಲ್ಲದಿದ್ದರೂ ವಿಜಯನಗರದ ಸತ್ಸಂಪ್ರದಾಯಗಳನ್ನು ನಡೆಸಿಕೊಂಡು ಬಂದ. ಇವನು ಅನೇಕ ದಾನದತ್ತಿಗಳನ್ನು ನೀಡಿದ್ದ. ಇವನ ಕಾಲದಲ್ಲಿ ಬೊಮ್ಮರಸನ ಚತುರಾಸ್ಯನಿಘಂಟು ಮತ್ತು ಕಲ್ಲರಸನ ಜನವಶ್ಯ ಮೊದಲಾದ ಕೃತಿಗಳು ರಚಿತವಾದವು. (ಡಿ.ಎಸ್.ಜೆ.)

**ಮಲ್ಲಿಕಾರ್ಜುನ ಪಂಡಿತಾರಾಧ್ಯ**: ಸು. 1160. ವೀರಶೈವ ಪಂಡಿತ ತ್ರಯರಲ್ಲಿ ಒಬ್ಬರು. ಶ್ರೀಶೈಲ ಸಿಂಹಾಸನದ ಸ್ಥಾಪಕರು. ಗಣಸಹಸ್ರ ನಾಮಾವಳಿ ಎಂಬ ಗ್ರಂಥದ ಕರ್ತೃ. ಇವರು ಶಿವತತ್ತ್ವಸಾರಮು (ತೆಲುಗು), ಗಣಸಹಸ್ರನಾಮಾವಳಿ, ಲಿಂಗೋದ್ಭವ ಗದ್ಯ, ಅಮರೇಶ್ವರಾಷ್ಟಕ, ರುದ್ರಮಹಿಮಾ ಶತಕ, ಮಾಯಾಮೋಚನಾಸ್ತವ ನೀರಾಜನಪದ, ಆನಂದಪದ, ಇಷ್ಟಲಿಂಗಸ್ತುತಿ, ಬಸವಗೀತೆ ಮುಂತಾದ ಗ್ರಂಥಗಳನ್ನೂ ಕೆಲವು ವಚನಗಳನ್ನೂ ಬರೆದಂತೆ ತಿಳಿಯುತ್ತದೆ. ಶಿವಶರಣರಲ್ಲಿ ಒಬ್ಬನಾದ ಆದಯ್ಯನ ವಚನಗಳಲ್ಲಿ ಪಂಡಿತಾರಾಧ್ಯರ ಸ್ವಯಂಪಾಕ, ಪಂಡಿತಾರಾಧ್ಯರೆನ್ನ ಜಿಹ್ವೆ ಎಂದು ಉಲ್ಲೇಖಿತನಾಗಿರುವ ವ್ಯಕ್ತಿ ಇವರು ಎಂದು ಹೇಳಲು ಅವಕಾಶವಿದೆ. ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯ ದ್ರಾಕ್ಷಾರಾಮ ಇವರ ಜನ್ಮಸ್ಥಳ (ಇವರ ಹುಟ್ಟೂರು ಏರಳಪುರವೆಂಬ ವಾದವೂ ಇದೆ). ಇವರ ತಂದೆ ಭೀಮನ ಪಂಡಿತ, ತಾಯಿ ಗೌರಾಂಬೆ. ಗುರು ಕೋಟಿಪಲ್ಲಾರಾಧ್ಯ, ಶಿಷ್ಯ ದೋನಮಾರ್ಯ, ಹಿರಿಯ ಮಗ ಕೇದಾರಾರ್ಯ. ಶ್ರೀಶೈಲದ ಮಲ್ಲಿಕಾರ್ಜುನ ಇಷ್ಟದೈವ.

ಪಂಡಿತಾರಾಧ್ಯರು ವೆಲನಾಡು ಚೋಳನ ಆಸ್ಥಾನದಲ್ಲಿ ಪರವಾದಿಗಳನ್ನು ಜಯಿಸಿ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿದರೆಂದೂ ಚೋಳರಾಜನು ಇವರ ಕಣ್ಣು ಕೀಳಿಸಲು, ಇವರು ಅಮರಾರಾಮಕ್ಕೆ ಬಂದು ಗಣಸಹಸ್ರ ಪಠಿಸಿ, ಊರ್ಧ್ವನೇತ್ರ ಪಡೆದರೆಂದೂ ಇವರನ್ನು ಕುರಿತು ಹುಟ್ಟಿರುವ ಪಾಲ್ಕುರಿಕೆ ಸೋಮನಾಥನ (ಸು.1300) ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ (ತೆಲುಗು), ಗುರುರಾಜನ (ಸು.1430) ಪಂಡಿತ ಚಾರಿತ್ರ (ಸಂಸ್ಕೃತ), ನೀಲಕಂಠಾಚಾರ್ಯನ (ಸು.1485) ಆರಾಧ್ಯಚಾರಿತ್ರ, ಸಿದ್ಧನಂಜೇಶನ (ಸು.1650) ಗುರುರಾಜಚಾರಿತ್ರ ಮುಂತಾದ ಗ್ರಂಥಗಳಿಂದ ತಿಳಿದುಬರುತ್ತದೆ.

ಇವರು ಗೃಹಸ್ಥರಾಗಿದ್ದರು. ತಮ್ಮ ಜೀವನದ ಕಡೆಯ ದಿನಗಳಲ್ಲಿ ಶ್ರೀಶೈಲಯಾತ್ರೆ ಹೊರಟು, ಅಶಕ್ತಿಯಿಂದ ಅಲ್ಲಿಗೆ ಹೋಗಲಾರದೆ ಶಿಷ್ಯ ದೋನಮಯ್ಯನನ್ನು ಕಳುಹಿಸಿ ಆತ ಹಿಂದಿರುಗಿ ಬಂದು ಶ್ರೀಶೈಲ ವರ್ಣನೆ ಮಾಡುತ್ತಿದ್ದಾಗ ವೆಲ್ಲಟೂರು ಎಂಬಲ್ಲಿ ಸತಿಸಹಿತ ಲಿಂಗೈಕ್ಯರಾದರೆಂದು ತಿಳಿಯುತ್ತದೆ. ವೆಲ್ಲಟೂರಿನಲ್ಲಿ ಇವರ ಸಮಾಧಿಯಿದೆ. ಆಂಧ್ರದ ಪ್ರಸಿದ್ಧ ಭಾಗವತ ಕರ್ತೃ ಬೊಮ್ಮೆರ ಪೋತನನ ಗುರು ಯವ್ವಟೂರು ಗುರು ಸೋಮನಾಥನು ಮಲ್ಲಿಕಾರ್ಜುನ ಪಂಡಿತಾರಾಧ್ಯರ ವಂಶೀಯನೆಂದು ತಿಳಿದುಬಂದಿದೆ.

ಗಣಸಹಸ್ರನಾಮಾವಳಿ ಸಂಸ್ಕೃತದಲ್ಲಿ ಲಲಿತರಗಳೆಯಲ್ಲಿ ರಚಿತವಾಗಿದೆ. ಇದು ವೀರಶೈವರ ಒಂದು ಪಾರಾಯಣಗ್ರಂಥ. ಬಸವಣ್ಣನವರ ಸಮಕಾಲೀನರ ಮತ್ತು ಹಿಂದಿನ ಶಿವಶರಣರ ಹೆಸರುಗಳೆಲ್ಲವೂ ಇದರಲ್ಲಿ ಬಂದಿವೆ. ಗ್ರಂಥದಲ್ಲಿ ಒಟ್ಟು ಒಂದು ಸಾವಿರ ಶಿವಶರಣರ ಹೆಸರುಗಳಿವೆ. ಕೃತಿ ಪ್ರಮಥಗಣ, ರುದ್ರಗಣ, ಯೋಗಾಚಾರ್ಯರು, ತ್ರಿಷಷ್ಟಿಗಣರು, ಷೋಡಷ ಗಣರು, ತ್ರಯೋದಶರು, ದಶಗಣರು, ಅಮರಗಣರು ಎಂದು ವಿಭಾಗಗೊಂಡಿದೆ. ಈ ಗ್ರಂಥವನ್ನು ಆಧರಿಸಿ ಪಾಲ್ಕುರಿಕೆ ಸೋಮನಾಥ ಕನ್ನಡ ಹಾಗೂ ತೆಲುಗಿನಲ್ಲಿ ಗಣಸಹಸ್ರ ನಾಮಾವಳಿಯನ್ನು ಬರೆದಿದ್ದಾನೆ.

(ಎಂ.ಜಿ.ಎನ್.;ಬಿ.ಎಸ್.)

**ಮಲ್ಲಿಕಾರ್ಜುನ ಮನ್ಸೂರ**: 1910–. ಪ್ರಸಿದ್ಧ ಅಂತಾರಾಷ್ಟ್ರೀಯ ಹಿಂದುಸ್ಥಾನಿ ಸಂಗೀತ ಗಾಯಕರು. ಧಾರವಾಡ ಜಿಲ್ಲೆಯ ಮನ್ಸೂರ ಗ್ರಾಮದಲ್ಲಿ 1910 ಡಿಸೆಂಬರ್ 31ರಂದು ಜನಿಸಿದರು. ಇವರ ತಂದೆ ಭೀಮರಾಯಪ್ಪ, ಅಣ್ಣ ಬಸವರಾಜ್. ಭೀಮರಾಯಪ್ಪನವರು ಮನ್ಸೂರ ಗ್ರಾಮದಲ್ಲಿ ನಡೆಯುತ್ತಿದ್ದ ದೊಡ್ಡಾಟ, ಬಯಲಾಟಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಇದರಿಂದಾಗಿ ಮಕ್ಕಳಿಬ್ಬರಿಗೂ ಸಂಗೀತದ ಕಡೆಗೆ ಒಲವು ಬೆಳೆಯಿತು. ಶಾಲೆಯ ವಿದ್ಯಾಭ್ಯಾಸದ ಕಡೆಗೆ ಗಮನ ಕಡಿಮೆಯಾಯಿತು. ಅನಂತರ ಮನ್ಸೂರ್ ಅವರು ತಮ್ಮ ಅಣ್ಣನೊಂದಿಗೆ ಹುಬ್ಬಳ್ಳಿಯಲ್ಲಿ ವಾಮನರಾವ್ ಮಾಸ್ತರರ ವಿಶ್ವಗುಣಾದರ್ಶ ಸಂಗೀತ ನಾಟಕ ಕಂಪನಿಯನ್ನು ಪ್ರವೇಶಿಸಿ ಕೃಷ್ಣ, ಪ್ರಹ್ಲಾದ ಮೊದಲಾದ ಪಾತ್ರಗಳಿಂದಲೂ ಕಂಚಿನಂಥ ಕಂಠದಿಂದಲೂ ಬಹುಜನರ ಮೆಚ್ಚುಗೆಗೆ ಪಾತ್ರರಾದರು.



ಬರಬರುತ್ತ ಮನ್ಸೂರರಿಗೆ ಶಾಸ್ತ್ರೀಯ ಸಂಗೀತದತ್ತ ಹೆಚ್ಚಿನ ಒಲವು ಮೂಡಿತು. ಆ ವೇಳೆಗೆ ಸರಿಯಾಗಿ ಮಿರಜದಲ್ಲಿ ನೀಲಕಂಠ ಬುವಾ ಎಂಬ ಗ್ವಾಲಿಯರ್ ಘರಾಣೆಯ ಹಿಂದುಸ್ತಾನಿ ಗಾಯಕರ ಬಳಿ ಶಿಷ್ಯದೀಕ್ಷೆ ದೊರಕಿತು. ಇದರಿಂದಾಗಿ ಮನ್ಸೂರರ ಸಂಗೀತ ಜ್ಞಾನ ಬೆಳೆಯಿತು. ಅನಂತರ ಕೆಲಕಾಲ ಮುಂಬಯಿಯಲ್ಲಿ ಪ್ರಸಿದ್ಧ ಸಂಗೀತಗಾರ ಅಲ್ಲಾದಿಯಾಖಾನ್ ಸಾಹೇಬರ ಪುತ್ರ ಮಂಜೀಖಾನರಲ್ಲಿ ಸಂಗೀತಾಭ್ಯಾಸ ನಡೆಸಿದರು. ಅವರಲ್ಲಿರುವಾಗ ಮನ್ಸೂರರು ನಿರಂತರ ಸಂಗೀತೋಪಾಸನೆಯಲ್ಲಿ ತೊಡಗಿದರು. ಆದರೆ ದುರ್ದೈವದಿಂದ ಮಂಜೀಖಾನ್ ಸಾಹೇಬರು

ಹಠಾತ್ತನೆ ನಿಧನರಾದ್ದರಿಂದ ಮನ್ಸೂರರ ಆಕಾಂಕ್ಷೆಗೆ ದೊಡ್ಡ ಆಘಾತವುಂಟಾಯಿತು. ಮುಂದೆ ಕೊಲ್ಲಾಪುರದಲ್ಲಿ ಮಂಜೀಖಾನ್ ಅವರ ಸೋದರ ಬುರ್ಜೀಖಾನ್ ಅವರ ಬಳಿ ಸಂಗೀತ ವ್ಯಾಸಂಗ ಮುಂದುವರಿಯಿತು. ಇದರಿಂದ ಮನ್ಸೂರರ ಹಾಡುಗಾರಿಕೆಗೆ ಒಂದು ತೂಕ, ಒಂದು ನಿಲುವು, ಒಂದು ಒಪ್ಪ ಬಂತು. ಮುಂಬಯಿ, ಕಲ್ಕತ್ತ, ನಾಗಪುರ, ದೆಹಲಿ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲೆಲ್ಲ ಸಂಗೀತ ಕಚೇರಿಗಳು ಜರುಗಿ ಮನ್ಸೂರರಿಗೆ ಕೀರ್ತಿಯನ್ನು ದೊರಕಿಸಿಕೊಟ್ಟವು. ಇವರ ಅನೇಕ ಧ್ವನಿಮುದ್ರಿಕೆಗಳನ್ನು ಗ್ರಾಮಫೋನ್ ಕಂಪನಿಯವರು ಬಿಡುಗಡೆ ಮಾಡಿದ್ದಾರೆ. ರಾಗ್ ಅಡಾಣಾ, ಗೌಡ್ ಸಾರಂಗ್, ಲಲಿತಾಗೌರಿ ಮಾಲಕಂಸ್ ಮೊದಲಾದ ಶಾಸ್ತ್ರೀಯ ಧ್ವನಿಮುದ್ರಿಕೆಗಳೊಂದಿಗೆ ಠುಮುರಿ ಭಕ್ತಿಗೀತೆಗಳೂ ಬಸವೇಶ್ವರರ ವಚನಗಳು, ಶರೀಫ್ ಸಾಹೇಬರ ಪದಗಳು ಕೂಡ ಲೋಕಪ್ರಿಯವಾಗಿವೆ. ವಚನ ಸಾಹಿತ್ಯವನ್ನು ತನ್ಮಯತೆಯಿಂದ ಅದರ ಭಕ್ತಿಭಾವಗಳು ಸುವ್ಯಕ್ತವಾಗುವಂತೆ ಯೋಗ್ಯ ಧಾಟಿಯಲ್ಲಿ ತಾಳ ಲಯಗಳಲ್ಲಿ ಹಾಡುವುದರಲ್ಲಿ ಮನ್ಸೂರರು ಖ್ಯಾತಿ ಗಳಿಸಿದ್ದಾರೆ. ತುಂಬಿದ ಶ್ರುತಿ, ತಾರಕ ಮಧ್ಯಮ ಮಂದ್ರ–ಹೀಗೆ ತ್ರಿಸ್ಥಾಯಿಗಳಲ್ಲಿ ನಿರಾಯಾಸವಾಗಿ ಹರಿದಾಡುವ ಅದ್ಭುತ ಕಂಠ ಮಾಧುರ್ಯ, ಸ್ವರಕಲ್ಪನೆಯ ಮನೋಧರ್ಮ ಇಂತಹ ವಿಶಿಷ್ಟ ಅಂಶಗಳೂ ಇವರ ಖ್ಯಾತಿಗೆ ಪೂರಕವಾಗಿವೆ.

ಇವರಿಗೆ ಅನೇಕ ಪ್ರಶಸ್ತಿಗಳೂ ಸನ್ಮಾನಗಳೂ ಅಭಿಸಿವೆ. ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನಿತ್ತು ಗೌರವಿಸಿದೆ (1975). **(ಎನ್.ಕೆ.ಕೆ.)**

**ಮಲ್ಲಿಕಾರ್ಜುನಯ್ಯ, ಎಸ್.**: 1931– . ಲೋಕಸಭೆಯ ಮಾಜಿ ಉಪಾಧ್ಯಕ್ಷರು, ಹಿರಿಯ ರಾಜಕಾರಣಿ. ಇವರು ತುಮಕೂರು ಜಿಲ್ಲೆಯ ಹೊನಿಸಿಗೆರೆಯಲ್ಲಿ 1931 ಜೂನ್ 26ರಂದು ಜನಿಸಿದರು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಿದ್ಯಾರ್ಥಿಯಾಗಿದ್ದ ಇವರು ದೇಶಭಕ್ತಿ ಬೆಳೆಸಿಕೊಂಡರು. ರಾಷ್ಟ್ರೀಯ ನಾಯಕರುಗಳ ಭಾಷಣಗಳಿಂದ ಪ್ರಭಾವಿತರಾಗಿ ರಾಷ್ಟ್ರೀಯ ಸೇವಾಸಂಘದ ಬಗ್ಗೆ ಆಸಕ್ತಿ ವಹಿಸಿದರು. ಬಿ.ಕಾಂ.; ಎಂ.ಎ.; ಬಿ.ಎಲ್. ಪದವಿಗಳನ್ನು ಪಡೆದು ವೃತ್ತಿಯಲ್ಲಿ ವಕೀಲರಾದರು. ಕೃಷಿಯಲ್ಲೂ ತೊಡಗಿಕೊಂಡರು. ಸರಳ ಜೀವನ ಹಾಗೂ ಉನ್ನತ ಚಿಂತನೆಗಳಿಂದ ಇವರು ರಾಷ್ಟ್ರೀಯ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದರು. ಭಾರತೀಯ ಜನಸಂಘದ ಸಂಘಟಕರಾಗಿ ಜಿಲ್ಲೆಯಲ್ಲಿ ಅದಕ್ಕೊಂದು ಅಸ್ತಿತ್ವ ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿದರು. ಇವರ ಕರ್ತವ್ಯಶಕ್ತಿ ಹಾಗೂ ತಾಳ್ಮೆಯ ಕಾರ್ಯ ವಿಧಾನಗಳನ್ನು ಗುರುತಿಸಿದ ಪಕ್ಷ ಇವರನ್ನು ರಾಜ್ಯ ಮಟ್ಟದಲ್ಲಿ ಪಕ್ಷದ ಸೇವೆಗೆ ನೇಮಿಸಿತು.

1972ರಿಂದ 84ರವರೆಗೆ ಅವಿರತವಾಗಿ ಮೂರು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಶಿಕ್ಷಕರು ಮತ್ತು ಪದವೀಧರ ವರ್ಗದಲ್ಲಿ ಇವರು ಹೊಂದಿದ್ದ ಜನಪ್ರಿಯತೆಗೆ ಇದು ಸಾಕ್ಷಿಯಾಗಿದ್ದಿತು. 1972ರಲ್ಲಿ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದರು. ವಿಧಾನಪರಿಷತ್ ಸದಸ್ಯರಾಗಿ ಲೋಕಸಭಾ ಸಚಿವಾಲಯ ನಡೆಸಿದ ಹಣಕಾಸು ಹೊಣೆಗಾರಿಕೆ ಕುರಿತ ಸಮಾವೇಶದಲ್ಲಿ ರಾಜ್ಯ ಪ್ರತಿನಿಧಿಯಾಗಿ ಭಾಗವಹಿಸಿದರು. 1985 ಏಪ್ರಿಲ್ 10ರಂದು ವಿಧಾನಪರಿಷತ್ತಿನ ಉಪಸಭಾಪತಿಯಾಗಿ ಚುನಾಯಿತರಾದರು. ಈ ಹುದ್ದೆಯನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸಿ ಜನಪ್ರಿಯತೆ ಗಳಿಸಿದರು. ಮಧ್ಯೆ ಕೆಲವು ದಿವಸಗಳ ತೆರಪನ್ನು ಬಿಟ್ಟರೆ ಈ ಸ್ಥಾನವನ್ನು 1991 ಜುಲೈ 7ರವರೆಗೂ ಅಲಂಕರಿಸಿದ್ದರು. ಕೆಲವು ಕಾಲ ಹಂಗಾಮಿ ಸಭಾಪತಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚಿನ ಆಸಕ್ತಿವಹಿಸಿದರು.

1991ರಲ್ಲಿ ನಡೆದ ಹತ್ತನೆಯ ಲೋಕಸಭಾ ಚುನಾವಣೆಗೆ ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸಿದರು. ಆಗ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಮಿತ್ರಪಕ್ಷಗಳ ಸರ್ಕಾರ ಅಧಿಕಾರಕ್ಕೆ ಬಂದಿತ್ತು. 1991 ಆಗಸ್ಟ್ 13ರಂದು ಲೋಕಸಭೆಗೆ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾದರು. ಈ ಹುದ್ದೆಯನ್ನು 1996 ಮೇ 10 ರವರೆಗೆ ನಿರ್ವಹಿಸಿದರು. ಈ ಹುದ್ದೆಯನ್ನು ಅಲಂಕರಿಸಿದ ಕನ್ನಡಿಗರಲ್ಲಿ ಇವರು ಎರಡನೆಯವರು. ಇವರ ಪತ್ನಿ ಜಯದೇವಮ್ಮ. *

**ಮಸ್ಕಿ**: ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಒಂದು ಗ್ರಾಮ. ಜನಸಂಖ್ಯೆ 20,031. ಪ್ರಸಿದ್ಧ ಐತಿಹಾಸಿಕ ಸ್ಥಳ, ಲಿಂಗಸುಗೂರಿನಿಂದ ಆಗ್ನೇಯಕ್ಕೆ 26 ಕಿಮೀ ದೂರದಲ್ಲಿ ಮಸ್ಕಿ ನದಿಯ ಬಲದಂಡೆಯ ಮೇಲೆ ಬೆಂಗಳೂರು–ಬಿದರೆ ಹೆದ್ದಾರಿಯಲ್ಲಿ ಇದೆ. ಇದು ತಾಲ್ಲೂಕಿನ ದೊಡ್ಡ ಗ್ರಾಮಗಳಲ್ಲೊಂದಾಗಿದ್ದು ಇಲ್ಲಿ ವೈದಕೀಯ ಕೇಂದ್ರ, ಪ್ರವಾಸಿ ಮಂದಿರ, ವಿದ್ಯುತ್, ಅಂಚೆ, ತಂತಿ, ದೂರವಾಣಿ ಸೌಲಭ್ಯಗಳು ಇವೆ. ಭಾನುವಾರ ಈ ಸ್ಥಳದಲ್ಲಿ ಸಂತೆ ನಡೆಯುತ್ತದೆ.

ಮಸ್ಕಿ ಪ್ರಾಗೈತಿಹಾಸಿಕ ಕಾಲದಿಂದ ವಿಜಯನಗರ ಕಾಲದವರೆಗೂ ಒಂದು ಮುಖ್ಯ ಸ್ಥಳವಾಗಿತ್ತು. ಇಲ್ಲಿ ಪ್ರಾಗೈತಿಹಾಸಿಕ ಕಾಲದ ಒಂದು ಬೃಹತ್ ನೆಲೆಯಲ್ಲದೆ, ಚಾರಿತ್ರಿಕ ಕಾಲದ ಕೆಲವು ಕಟ್ಟಡಗಳು ಮತ್ತು ಶಾಸನಗಳು ಉಳಿದು ಬಂದಿವೆ. ವಿಜಯನಗರದ ಸದಾಶಿವರಾಯ ಹಾಗೂ ಅಚ್ಯುತರಾಯರ ಕಾಲದ ಎರಡು ಶಾಸನಗಳಿಂದ ಮಸ್ಕಿಗೆ ಆಗ ಮೊಸಗೆ ಎಂಬ ಹೆಸರಿತ್ತೆಂದೂ ಇದು ಮೊಸಗೆ ನಾಡು ಎಂಬ ಪ್ರಾಂತ್ಯ ವಿಭಾಗದ ಮುಖ್ಯ ಸ್ಥಳವಾಗಿತ್ತೆಂದೂ ತಿಳಿಯುತ್ತದೆ. ಸೇಉಣ ಸಿಂಘಣ ಮತ್ತು ಕಲ್ಯಾಣದ ಚಾಳುಕ್ಯ ವಂಶದ ಜಗದೇಕಮಲ್ಲ ಇವರ ಕಾಲದ ಶಾಸನಗಳಲ್ಲಿ ಇದನ್ನು ರಾಜಧಾನಿ ಪಿರಿಯ ಮೊಸಂಗಿ ಎಂದು ಕರೆಯಲಾಗಿದೆ. ಜಗದೇಕಮಲ್ಲನ ಇನ್ನೊಂದು ಶಾಸನದಲ್ಲಿ ಇದನ್ನು ಬ್ರಹ್ಮಪುರಿ ಮೊಸಂಗಿ ಎಂದು ಕರೆಯಲಾಗಿದೆ. ಈ ಗ್ರಾಮದ ಬಳಿಯ ಗುಡ್ಡವೊಂದರ ಮೇಲೆ ಸು. 13ನೆಯ ಶತಮಾನದ ಒಂದು ಶಿವಾಲಯವಿದೆ.

ಮಸ್ಕಿಗೆ ವಿಶೇಷ ಪ್ರಸಿದ್ಧಿ ದೊರೆತದ್ದು ಇಲ್ಲಿ ಇರುವ ಅಶೋಕನ ಶಿಲಾಶಾಸನದಿಂದ. ಈ ಶಾಸನ ದುರ್ಗದಗುಡ್ಡ ಎಂದು ಕರೆಯುವ ಒಂದು ಗುಡ್ಡದ ಪಶ್ಚಿಮ ಪಾರ್ಶ್ವದಲ್ಲಿ ದೊಡ್ಡ ಬಂಡೆಯೊಂದರ ಮೇಲಿದೆ. ಇದು 1915ರಲ್ಲಿ ಸಿ.ಬೀಡನ್ ಎಂಬ ಗಣಿಎಂಜಿನಿಯರ್ ಒಬ್ಬರಿಂದ ಬೆಳಕಿಗೆ ಬಂತು. ಈ ಶಾಸನವೂ ಅಶೋಕನ ಲಘುಪ್ರಸ್ತರ ಶಾಸನಗಳಲ್ಲೊಂದು **(ನೋಡಿ: ಅಶೋಕ)**. ಆದರೆ ಅದುವರೆಗೆ ದೊರಕಿದ್ದ ಅಶೋಕನ ಶಾಸನಗಳಲ್ಲೆಲ್ಲ ದೇವಾನಾಂಪ್ರಿಯ ಎಂಬ ಉಲ್ಲೇಖ ಮಾತ್ರ ಕಂಡುಬಂದಿದ್ದರೆ, ಈ ಶಾಸನದಲ್ಲಿ ದೇವನಾಂಪಿಯಸ ಅಸೋಕಸ ಎಂದು ಉಲ್ಲೇಖಿತವಾಗಿದ್ದು ಭಾರತದ ಅನೇಕ ಕಡೆಗಳಲ್ಲಿ ದೊರೆತ ಈ ಬಗೆಯ ಶಾಸನಗಳನ್ನು ಹಾಕಿಸಿದವನು ಮೌರ್ಯಕುಲದ ಅಶೋಕನೇ ಎಂಬ ಅಂಶವನ್ನು ಮೊಟ್ಟಮೊದಲಿಗೆ ಇದು ಸ್ಪಷ್ಟಪಡಿಸಿತು.

ಮಸ್ಕಿಯ ಪ್ರಾಗೈತಿಹಾಸಿಕ ನೆಲೆ ಸಣ್ಣಗುಡ್ಡಗಳ ವರ್ತುಲದ ಮಧ್ಯೆ ಆಯಕಟ್ಟಿನ ಸ್ಥಳದಲ್ಲಿದೆ. 1888ರ ಸುಮಾರಿನಲ್ಲಿ ರಾಬರ್ಟ್ ಬ್ರೂಸ್ ಫೂಟ್ ಈ ನೆಲೆಯನ್ನು ಸಂದರ್ಶಿಸಿ ನವಶಿಲಾಯುಗದ ಮತ್ತು ಅನಂತರ ಕಾಲದ ಅನೇಕ ವಸ್ತುಗಳನ್ನು ಸಂಗ್ರಹಿಸಿದ್ದ. 1928–29ರಲ್ಲಿ ಲಿಯೊನಾರ್ಡ್ ಮನ್ ರಾಯಚೂರು ಜಿಲ್ಲೆಯ ಪ್ರಾಚೀನ ವಸ್ತುಗಳನ್ನು ಕುರಿತು ಬರೆಯುತ್ತ ಮಸ್ಕಿಯಲ್ಲಿ ದೊರೆತ ಕುರುಹುಗಳಿಗೆ ವಿಶೇಷ ಸ್ಥಾನವನ್ನು ಕೊಟ್ಟಿದ್ದಾನೆ. 1935–37ರಲ್ಲಿ ಆಗಿನ ಹೈದರಾಬಾದ್ ಸರ್ಕಾರ ಇಲ್ಲಿ ಬೃಹತ್ ಪ್ರಮಾಣದಲ್ಲಿ ಉತ್ಖನನವನ್ನು ನಡೆಸಿತು.

1954ರಲ್ಲಿ, ಕೇಂದ್ರ ಸರ್ಕಾರದ ಪುರಾತತ್ತ್ವ ಇಲಾಖೆಯ ವತಿಯಿಂದ ಬಿ.ಕೆ. ಥಾಪರ್ ಅವರು ಇಲ್ಲಿ ಮತ್ತೆ ಉತ್ಖನನವನ್ನು ನಡೆಸಿದರು. ಈ ಉತ್ಖನನದಿಂದ ಕೆಳಕಂಡ ಸಾಂಸ್ಕೃತಿಕ ಘಟ್ಟಗಳನ್ನು ಇಲ್ಲಿ ಅನುಕ್ರಮವಾಗಿ ಗುರುತಿಸಲಾಯಿತು.

(i) ತಾಮ್ರ ಶಿಲಾಯುಗ ಸಂಸ್ಕೃತಿ (ಪ್ರ.ಶ.ಪೂ. ಸು. 1,000–400)
(ii) ಬೃಹತ್ ಶಿಲಾ ಸಂಸ್ಕೃತಿ (ಪ್ರ.ಶ.ಪೂ. ಸು. 200–ಕ್ರಿ.ಶ.50)
(iii) ಆದಿಚಾರಿತ್ರಿಕ ಸಂಸ್ಕೃತಿ (ಸು. 50–300)
(iv) ಮಧ್ಯಯುಗೀನ ಸಂಸ್ಕೃತಿ (ಸು. 1.000–1600)

(ಎಸ್.ಜಿಎ.)

ಇಲ್ಲಿನ ತಾಮ್ರಶಿಲಾಯುಗ ಸಂಸ್ಕೃತಿಯ ಘಟ್ಟದಲ್ಲಿ ತಾಮ್ರದ ಉಪಯೋಗ ಅತ್ಯಲ್ಪವಾಗಿದ್ದಂತೆ ತೋರುತ್ತದೆ. ಹೆಚ್ಚಿನ ಆಯುಧೋಪಕರಣಗಳೆಲ್ಲ ಶಿಲೆಯವು. ಅವುಗಳಲ್ಲಿ ಚರ್ಟ್ ಜಾತಿಯ ಶಿಲೆಯಿಂದ ಕೂಡಿದ ಚಿಕ್ಕ ಚಾಕು, ಅರ್ಧಚಂದ್ರ, ವರೆಗ, ಕೂರೆಗ ಮುಂತಾದ ಸೂಕ್ಷ್ಮ ಶಿಲಾಯುಧಗಳು, ಅವುಗಳನ್ನು ಮಾಡಲು ಉಪಯೋಗಿಸುತ್ತಿದ್ದ ದುಂಡುಕಲ್ಲುಗಳೂ ಇವೆ. ನಯಮಾಡಿದ ಕರಿ ಕಲ್ಲಿನ ಕೈಕೊಡಲಿಗಳೂ ಇದ್ದಂತೆ ತೋರುತ್ತವೆ. ದನ, ಕುರಿ ಮೊದಲಾದ ಸಾಕುಪ್ರಾಣಿಗಳ ಮೂಳೆಗಳೂ ಇಲ್ಲಿ ದೊರಕಿದ್ದು, ಇದು ಪಶುಪಾಲನೆ ಮತ್ತು ಸ್ವಲ್ಪಮಟ್ಟಿನ ಬೇಸಾಯ ಅಂದಿನ ಜನರ ಜೀವನಾಧಾರಗಳಾಗಿದ್ದುವೆಂಬುದನ್ನು ಸೂಚಿಸುತ್ತವೆ. ಈ ಕಾಲದ ಮನೆ ಅಥವಾ ಇನ್ನಾವ ವಾಸ್ತು ಅವಶೇಷಗಳೂ ದೊರಕಿಲ್ಲ. ಕೆಲವು ಕಂಬದ ಗುಳಿಗಳಷ್ಟೇ ಕಂಡುಬಂದಿವೆ. ಆ ಕಾಲದ ಮಡಕೆಗಳು ಕಂದು ಮತ್ತು ನಸುಗೆಂಪು ಬಣ್ಣದವಾಗಿರುತ್ತಿದ್ದುವು. ಈ ಮಡಕೆಗಳೆಲ್ಲ ಹೆಚ್ಚು ಮಟ್ಟಿಗೆ ತಿಗರಿಯಲ್ಲಿ ತಯಾರಾದವು. ಕೈನಲ್ಲಿ ಮಾಡಿದ ಮಡಕೆಗಳೂ ಅತ್ಯಲ್ಪ ಸಂಖ್ಯೆಯಲ್ಲಿ ಕಂಡುಬಂದಿವೆ. ಈ ಸಂಸ್ಕೃತಿಯ ಸ್ಥಳಗಳಲ್ಲಿ ಕಾರ್ನೀಲಿಯನ್, ಅಗೇಟ್, ಶಂಖ, ಗಾಜು ಮುಂತಾದ ಮಣ್ಣಿಂದ ಮಾಡಿದ ಮಣಿಗಳೂ ದೊರಕಿವೆ.

ಬೃಹತ್ ಶಿಲಾ ಸಂಸ್ಕೃತಿಯ ಕಾಲದ ವೈಶಿಷ್ಟ್ಯಗಳೆಂದರೆ ಬೃಹತ್ ಶಿಲಾ ಸಮಾಧಿಗಳು ಮತ್ತು ಕಬ್ಬಿಣದ ಬಳಕೆ. ಈ ಸಂಸ್ಕೃತಿಗೆ ಸಾಮಾನ್ಯವಾದ ಕಪ್ಪು ಮತ್ತು ಕೆಂಪು ಬಣ್ಣದ, ತಿಗರಿ ಮೇಲೆ ಮಾಡಿದ ಮಡಕೆಗಳು ಹೇರಳವಾಗಿ ಕಂಡುಬಂದುವು. ಗಾಜು, ಶಂಖ ಇವುಗಳಿಂದ ಮಾಡಿದ ಬಳೆ ಮತ್ತು ಮಣಿಗಳು, ಚಿಕ್ಕ ಆಟದ ಬಿಲ್ಲೆಗಳು, ಗೋಲಿಗಳು ಈ ಸಾಂಸ್ಕೃತಿಕ ಸ್ಥರಗಳಲ್ಲಿ ದೊರೆತವು. ಕೆಲವು ಕಂಬದ ಗುಳಿಗಳನ್ನು ಬಿಟ್ಟರೆ ಆ ಕಾಲದ ಮನೆಗಳ ಬಗ್ಗೆ ಯಾವ ಮಾಹಿತಿಯೂ ದೊರೆಯಲಿಲ್ಲ. ಕೆಲವು ಕಲ್ಲಿನ ಆಯುಧಗಳು ಮತ್ತು ಪ್ರಾಣಿಗಳ ಅವಶೇಷಗಳಿಂದ ಈ ಕಾಲದ ಜನ ವ್ಯವಸಾಯದಲ್ಲಿ ನಿರತರಾಗಿದ್ದರು ಹಾಗೂ ಬೇಟೆಯಾಡುವುದು ಇವರ ಆರ್ಥಿಕ ವ್ಯವಸ್ಥೆಯ ಒಂದು ಅಂಶವಾಗಿತ್ತು ಎಂಬುದು ಸೂಚಿತವಾಗುತ್ತದೆ. ಈ ಕಾಲಕ್ಕೆ ಸಂಬಂಧಿಸಿದ 8 ಸಮಾಧಿಗಳನ್ನು ಇಲ್ಲಿ ಅಗೆಯಲಾಯಿತು. ಅವುಗಳಲ್ಲಿ ಐದು ವಿಧಗಳನ್ನು ಗುರುತಿಸಬಹುದು. ಇವೆಲ್ಲಾ ಗುಳಿ ಸಮಾಧಿ ರೀತಿಯವು. ಮೊದಲನೆಯ ರೀತಿಯಲ್ಲಿ ಪೂರ್ಣ ಶವವನ್ನು ಸಮಾಧಿ ಮಾಡಲಾಗಿರುತ್ತದೆ. ಎರಡನೆಯ ರೀತಿಯಲ್ಲಿ ಮೃತನ ಕೆಲವೇ ಅಸ್ಥಿಗಳನ್ನು ಮಾತ್ರ ಇಡಲಾಗುತ್ತದೆ. ಮೂರನೆಯ ರೀತಿಯಲ್ಲಿ ಗುಳಿಯ ಒಳಗೆ ಅಸ್ಥಿ ಅವಶೇಷಗಳನ್ನು ಮಡಕೆಯ ಒಳಗೆ ಇಟ್ಟು ಸಮಾಧಿ ಮಾಡಲಾಗಿರುತ್ತದೆ. ನಾಲ್ಕು ಐದನೆಯ ರೀತಿಗಳು ಕ್ರಮವಾಗಿ ಒಂದು ಎರಡನೆಯ ರೀತಿಯವೇ; ಆದರೆ ಇವುಗಳ ಸುತ್ತ ಶಿಲಾವರ್ತುಲವಿರುತ್ತದೆ. ಎಲ್ಲ ಬೃಹತ್ ಶಿಲಾಸಮಾಧಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವಂತೆ, ಇಲ್ಲಿಯ ಸಮಾಧಿಗಳಲ್ಲಿ ಸಹ ಕಬ್ಬಿಣದ ಆಯುಧ ಮತ್ತು ಉಪಕರಣಗಳು, ಕಪ್ಪು ಮತ್ತು ಕೆಂಪು ರಂಗಿನ ಮಣ್ಣಿನ ಮಡಕೆಗಳು ಇತ್ಯಾದಿಗಳು ಇದ್ದುವು. ಗುಳಿಯ ಬುಡದಲ್ಲಿ ಬೂದಿ ಅಥವಾ ಸಣ್ಣಮಡಿಯನ್ನು ಹರಡಿರುವುದು ಹಾಗೂ ಶವಗುಳಿಗಳು ಸಾಮಾನ್ಯವಾಗಿ ಉತ್ತರ–ದಕ್ಷಿಣ ನೇರದಲ್ಲಿರುವುದು ಇಲ್ಲಿಯ ಸಮಾಧಿಗಳ ವೈಶಿಷ್ಟ್ಯಗಳು. ಅಲ್ಲದೆ ಒಂದು ಮತ್ತು ನಾಲ್ಕನೆಯ ವಿವಿಧ ಸಮಾಧಿಗಳು ಪೂರ್ಣ ಶವದ ಸಮಾಧಿಗಳಾಗಿದ್ದು, ಅವು ವಾಸದ ನೆಲೆಗಳಲ್ಲೇ ಕಂಡುಬಂದಿರುವುದು ಗಮನಾರ್ಹ ಅಂಶ. ಬೃಹತ್ ಶಿಲಾಸಮಾಧಿಗಳಿಗೆ ಸೇರಿದ ಕೆಲವು ನೆಡುಗಲ್ಲುಗಳನ್ನು ಇಲ್ಲಿಯ ಉತ್ಖನನದಲ್ಲಿ ಪರೀಕ್ಷಿಸಲಾಯಿತು. ಆದರೆ ಅವು ಶವಸಂಸ್ಕಾರ ವಿಧಿಗೆ ಸಂಬಂಧಿಸಿದ್ದೆಂಬುದಕ್ಕೆ ಯಾವ ಸೂಚನೆಯೂ ದೊರೆಯಲಿಲ್ಲ.

ಆದಿ ಚಾರಿತ್ರಿಕ ಘಟ್ಟಕ್ಕೆ ಸಂಬಂಧಿಸಿದಂತೆ ಸಾಮಾನ್ಯ ರೀತಿಯ ಕೆಂಪು ಹಾಗೂ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳ ಜೊತೆಗೆ, ಸುದ್ದೆಯ ಗೀಳುಗಳಿಂದ ಅಲಂಕೃತವಾದ ಮಡಕೆಗಳೂ ಕಂಡುಬಂದುವು. ಚರ್ಟ್ ಜಾತಿಯ ಕಲ್ಲುಗಳ ಮತ್ತು ಸುಟ್ಟಮಣ್ಣಿನ ಮಣಿಗಳು, ಗಾಜಿನ ಮಣಿಗಳು, ಗಾಜಿನ ಮತ್ತು ಶಂಖದ ಬಳೆಗಳು ಈ ಸ್ಥರಗಳಲ್ಲಿ ದೊರೆತವು. ಕಬ್ಬಿಣದ ವಸ್ತುಗಳು ಸ್ವಲ್ಪ ಸಂಖ್ಯೆಯಲ್ಲಿದ್ದುವು. ಈ ಕಾಲದ ಹೊತ್ತಿಗೆ ನಾಣ್ಯಗಳ ಬಳಕೆ ರೂಪಿತವಾಗಿದ್ದು ಇಲ್ಲಿಯ ಉತ್ಖನನದಲ್ಲಿ ಒಂದು ಸೀಸದ ನಾಣ್ಯ ದೊರೆಯಿತು.

ಮಧ್ಯಯುಗೀನ ಸ್ಥರಗಳಲ್ಲಿ ಬೂದು ಬಣ್ಣದ ನಯ ಮಾಡಿದ ಮಡಕೆಗಳು ಹೆಚ್ಚಾಗಿ ದೊರೆತುವು. ಬಹು ವರ್ಣದ ಗಾಜಿನ ಬಳೆಗಳು, ಗಾಜಿನ ಮಣಿಗಳು, ಕುತ್ಬುದ್ದೀನ್ ಮುಬಾರಕ್ ಷಾ ಖಿಲ್ಜಿಯ ಒಂದು ನಾಣ್ಯ ಇತರ ಮುಖ್ಯ ವಸ್ತುಗಳು.

ಮಸ್ಕಿಯ ನೆಲೆಯಲ್ಲಿ ದೊರಕಿರುವ ಮಣಿಗಳ ಸಂಖ್ಯೆ ವೈವಿಧ್ಯದಿಂದ ಇದು ಬಹುಶಃ ಮಣಿಗಳ ತಯಾರಿಕಾ ಕೇಂದ್ರವಾಗಿರಬೇಕೆಂಬ ಊಹೆ ಇದೆ. ಪ್ರಾಚೀನ ಕಾಲದಲ್ಲಿ ಮಸ್ಕಿ ದೂರದ ಪ್ರದೇಶಗಳೊಡನೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದಿರಬಹುದು–ಬಳೆಗಾಗಿ ಉಪಯೋಗಿಸಿರುವ ಶಂಖ ಸಮುದ್ರದಲ್ಲಿ ದೊರೆಯುವ ರೀತಿಯದು; ಇಲ್ಲಿ ದೊರೆತಿರುವ ನೀಲೋಪಲ ಶಿಲೆಯ ಮಣಿಗಳಿಗೆ ಶಿಲೆ ಪರ್ಷಿಯಾ ಪ್ರದೇಶದಿಂದ ಬಂದಿರಬೇಕೆನಿಸುತ್ತದೆ; ಹಿಂದಿನ ಉತ್ಖನನದಲ್ಲಿ ದೊರಕಿರುವ ಉರುಳೆಯಾಕಾರದ ಒಂದು ಶಿಲಾಮುದ್ರೆ ಪಶ್ಚಿಮ ಏಷ್ಯದಲ್ಲಿ ಪ್ರಚಲಿತವಾಗಿದ್ದ ರೀತಿಯದು. ಆದಿ ಚಾರಿತ್ರಿಕ ಕಾಲಕ್ಕೆ ಸಂಬಂಧಿಸಿದ ಬುದ್ಧನ ಒಂದು ಮೂರ್ತಿಯ ಒಂದು ಭಾಗ ಇಲ್ಲಿ ದೊರಕಿದ್ದು, ಒಂದು ಕಾಲದಲ್ಲಿ ಆ ಧರ್ಮ ಇಲ್ಲಿ ಪ್ರಚಲಿತವಾಗಿತ್ತೆನಿಸುತ್ತದೆ.

ಇಲ್ಲಿ ದೊರಕಿರುವ ವಿಪುಲ ಸಾಮಗ್ರಿಗಳಿಂದ ಇದು ಬಹು ಮಹತ್ವದ ಪ್ರಾಗೈತಿಹಾಸಿಕ ನಿವೇಶನ ಎಂದು ಖಚಿತವಾಗುತ್ತದೆ. ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಕಾಲದಲ್ಲಿ ಇದು ಬೃಹನ್ನಗರವಾಗಿರಬೇಕು. ಅಶೋಕನ ಶಾಸನಗಳಲ್ಲಿ ಹೆಸರಿಸಿರುವ ಸುವರ್ಣಗಿರಿ ಮಸ್ಕಿಯೇ ಇರಬಹುದೆಂಬ ಊಹೆಗೂ ಅವಕಾಶ ಕಲ್ಪಿಸಿದೆ.

*

**ಮಹದೇಶ್ವರ ಬೆಟ್ಟ**: ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಒಂದು ಬೆಟ್ಟ, ಯಾತ್ರಾಸ್ಥಳ. ಕೊಳ್ಳೇಗಾಲದ ಪೂರ್ವಕ್ಕೆ ಸು. 80 ಕಿಮೀ ದೂರದಲ್ಲಿದೆ. ಜನಸಂಖ್ಯೆ 10,676. ಈ ಬೆಟ್ಟವನ್ನು ಮಹದೇಶ್ವರ ಗಿರಿ, ಮಹದೇಶ್ವರ ಮಲೈ, ಮಾದೇಶ್ವರ ಬೆಟ್ಟ ಎಂದೂ ಕರೆಯುತ್ತಾರೆ. ಮಹದೇಶ್ವರ ಬೆಟ್ಟಕ್ಕೆ ಕೊಳ್ಳೇಗಾಲದಿಂದ ಮಧುವನಹಳ್ಳಿ, ಸಿಂಗಾನಲ್ಲೂರು, ಕಾಮಗೆರೆ, ಹನೂರು, ಅಜ್ಜೀಪುರ, ರಾಮಪುರ, ಕೌದಳ್ಳಿ–ಈ ಊರುಗಳ ಮಾರ್ಗವಾಗಿ ಹೋಗಬಹುದು. ತಮಿಳುನಾಡಿನ

ಭಕ್ತರು ಬೆಟ್ಟಕ್ಕೆ ಪಾಲಾರ್ ನದಿ ಮಾರ್ಗವಾಗಿ ಬರುತ್ತಾರೆ. ಕೌದಳ್ಳಿಯಿಂದ ಮುಂದೆ ಸು. 16 ಕಿಮೀ ಪ್ರಯಾಣ ಮಾಡಿದರೆ ಬೆಟ್ಟದ ತಪ್ಪಲು ಸಿಗುತ್ತದೆ. ಈ ತಪ್ಪಲಿಗೆ ತಾಳಬೆಟ್ಟ ಎಂದು ಕರೆಯುತ್ತಾರೆ. ಇಲ್ಲಿಂದ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಸು. 12 ಕಿಮೀ. ಬೆಟ್ಟ ಹತ್ತಲು ಎರಡು ದಾರಿಗಳಿವೆ. ಇವನ್ನು ಸರ್ಪನದಾರಿ, ಬಸವನದಾರಿ ಎಂದು ಕರೆಯುತ್ತಾರೆ. ಸರ್ಪನದಾರಿ ಸ್ವಲ್ಪ ಕಠಿಣ. ಬಸವನದಾರಿ ಸುಗಮ. ಬೆಟ್ಟದ ಮೇಲೆ ದೇವಸ್ಥಾನದ ವರೆಗೂ ಬಸ್ಸು, ಕಾರುಗಳು ಹೋಗಲು ಅವಕಾಶವಿದೆ. ಸ್ಥಳಪುರಾಣದ ಪ್ರಕಾರ ಈ ಬೆಟ್ಟಕ್ಕೆ ಸೇರಿದಂತೆ ಆನುಮಲೆ, ಜೇನುಮಲೆ, ಕಾನುಮಲೆ, ಪಚ್ಚೆಮಲೆ, ಪವಳಮಲೆ, ಪೊನ್ನಾಚಿಮಲೆ, ಕೊಂಗುಮಲೆ ಮೊದಲಾಗಿ 77 ಮಲೆಗಳಿವೆ. ಮಹದೇಶ್ವರ ಬೆಟ್ಟ, ಪೊನ್ನಾಚಿ ಬೆಟ್ಟ ಮೊದಲಾದ ಬೆಟ್ಟಗಳಲ್ಲಿ ಗಂಧದ ಮರಗಳು ಬೆಳೆದಿವೆ.

ಸು. 15 ಅಥವಾ 16 ನೆಯ ಶತಮಾನದಲ್ಲಿ ಮಾದೇಶ್ವರಸ್ವಾಮಿ **(ನೋಡಿ: ಮಾದೇಶ್ವರ)** ಕುಂತೂರು ಮಠದಿಂದ ಬಂದು ಈ ಬೆಟ್ಟದಲ್ಲಿ ನೆಲಸಿದನೆಂದು ಪ್ರತೀತಿ. ಬೆಟ್ಟದ ಮೇಲೆ ದೇವಾಲಯವಿದೆ. ಇದನ್ನು

ಮಹದೇಶ್ವರ ದೇವಾಲಯ

ಆಲಂಬಾಡಿಯ (ಈ ಗ್ರಾಮ ಬೆಟ್ಟಕ್ಕೆ 10ಕಿಮೀ ದೂರದಲ್ಲಿದೆ) ಜುಂಜೇಗೌಡ ಕಟ್ಟಿಸಿದನೆಂದು ತಿಳಿಯುತ್ತದೆ. ಗರ್ಭಗುಡಿ, ಸುಕನಾಸಿ, ಮುಖಮಂಟಪ, ನವರಂಗಗಳನ್ನೊಳಗೊಂಡಿರುವ ದೇವಾಲಯದ ಸುತ್ತಲೂ ಸುಂದರವಾದ ಪೌಳಿ, ಮಂಟಪ ಇವೆ. ಮುಖಮಂಟಪದಲ್ಲಿ ವೀರಭದ್ರನ ವಿಗ್ರಹವಿದೆ. ದೇವಾಲಯದ ಬಲದ್ವಾರದ ಪೌಳಿಯ ಮೇಲೆ ಆಲಂಬಾಡಿ ಬಸವನ ವಿಗ್ರಹವಿದೆ. ಮಾದೇಶ್ವರನ ಅರ್ಚಕರಿಗೆ ತಮ್ಮಡಿಗಳೆಂದು ಹೆಸರು. ತಮ್ಮಡಿಗಳ ಕೇರಿ ಮಾದೇಶ್ವರನ ಗುಡಿಯ ಎದುರಿಗಿದೆ. ಇದಕ್ಕೆ ಸಮೀಪದಲ್ಲಿ ಸಾಲೂರು ಮಠವಿದೆ. ವಿಶೇಷ ಪೂಜೆಗಳಲ್ಲಿ ಮಠದ ಸ್ವಾಮಿಗಳು ತಮ್ಮಡಿಗಳಿಗೆ ನೆರವಾಗುತ್ತಾರೆ. ಮಾದೇಶ್ವರ ಬೆಟ್ಟದ ಎದುರಿಗೆ ಸು. 5 ಕಿಮೀ ದೂರದಲ್ಲಿ ಬೋಳಿಬೆಟ್ಟವಿದೆ. ಇಲ್ಲಿ ಮಾದೇಶ್ವರ ದತ್ತು ಪಡೆದ ಸಂಕಮ್ಮನ ಮಕ್ಕಳಾದ ಕಾರಯ್ಯ ಮತ್ತು ಬಿಲ್ಲಯ್ಯರ ಗದ್ದಿಗೆಗಳಿವೆ. ದೇವಾಲಯದ ಪೂರ್ವಕ್ಕೆ 14 ಕಿಮೀ ದೂರದಲ್ಲಿ ಅಪೂರ್ವ ಶಿಲಾಜೋಡಣೆಯ ನಾಗಮಲೆ ಇದೆ. ಸು. 25-30 ಅಡಿ ಎತ್ತರವಿರುವ ಲಿಂಗಾಕಾರದ ಬಂಡೆಯ ಹಿಂಭಾಗದಲ್ಲಿ ನಾಗರಹೆಡೆಯಂತೆ ಮತ್ತೊಂದು ಬಂಡೆ ಚಾಚಿಕೊಂಡಂತಿದ್ದು ಇದು ನಾಗಲಿಂಗಪುಷ್ಪವನ್ನು ಹೋಲುವಂತಿದೆ. ಇಲ್ಲಿ ಮಾದೇಶ್ವರರು ತಮ್ಮ ಅಂತ್ಯಕಾಲದ ದಿನಗಳನ್ನು ಕಳೆದರೆಂದು ಪ್ರತೀತಿ.

ಬೆಟ್ಟದ ಮೇಲೆ ಯುಗಾದಿ, ದೀಪಾವಳಿ ಹಾಗೂ ಶಿವರಾತ್ರಿಗಳಲ್ಲಿ ವಿಶೇಷ ಉತ್ಸವಗಳು ನಡೆಯುತ್ತವೆ. ದಸರ ಸಮಯದಲ್ಲಿ ನಡೆಯುವ ಉಯ್ಯಾಲೋತ್ಸವ ವೈಭವಪೂರಿತವಾಗಿರುತ್ತದೆ. ಇಲ್ಲಿ ನಡೆಯುವ ಉತ್ಸವಗಳಲ್ಲೆಲ್ಲ ಮಾದೇಶ್ವರನ ಶಿಷ್ಯ ಶೇಷಣ್ಣೊಡೆಯರ ಉತ್ಸವ ತುಂಬ ವೈಶಿಷ್ಟ್ಯಪೂರ್ಣವಾದದ್ದು. ಇದು 12 ವರ್ಷಕ್ಕೊಮ್ಮೆ ನಡೆಯುತ್ತದೆ. ಅಮಾವಾಸ್ಯೆ ದಿನಗಳಲ್ಲಿ ಯಾತ್ರಿಕರು ಹೆಚ್ಚು. ಶಿವರಾತ್ರಿ ಮತ್ತು ಯುಗಾದಿ ಕಾಲದಲ್ಲಿ ದನಗಳ ಜಾತ್ರೆ ನಡೆಯುತ್ತದೆ. ಉತ್ಸವ ಹಾಗೂ ಜಾತ್ರೆಗಳಿಗೆ ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಿಂದ ಹಾಗೂ ತಮಿಳುನಾಡಿನ ಉತ್ತರದ ಸೆರಗಿನ ಕೊಯಮತ್ತೂರು, ಸೇಲಂ, ದಕ್ಷಿಣ ಆರ್ಕಾಟ್ ಮೊದಲಾದ ಪ್ರದೇಶಗಳಿಂದ ಯಾತ್ರಿಕರು ಬರುತ್ತಾರೆ. ಮಹದೇಶ್ವರ ಬೆಟ್ಟ ದೊಡ್ಡ ಪ್ರವಾಸಿ ಕೇಂದ್ರವಾಗಿಯೂ ಬೆಳೆದಿದೆ. ಇಲ್ಲಿಗೆ ಬರುವ ಭಕ್ತಾದಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ವಿವಿಧ ಸಮುದಾಯಗಳು ಮತ್ತು ಸಂಸ್ಥೆಗಳು ಹಾಗೂ ಸರ್ಕಾರ ವಸತಿ ನಿಲಯಗಳನ್ನೂ ನಿರ್ಮಿಸಿವೆ. (ವಿ.ಜಿ.ಕೆ.)

**ಮಹದೇವ, ಎಂ.:** 1953- . ಅಂತಾರಾಷ್ಟ್ರೀಯ ಪ್ರಖ್ಯಾತಿ ಪಡೆದ ಅಂಗವಿಕಲ ಕ್ರೀಡಾಪಟು. ಇವರು 1953 ಜುಲೈ 5ರಂದು ಮೈಸೂರಿನಲ್ಲಿ ಬಡ ಬುಡಕಟ್ಟು ಜನಾಂಗದಲ್ಲಿ ಜನಿಸಿದರು. ತಮ್ಮ 5ನೆಯ ವಯಸ್ಸಿನಲ್ಲಿ ಅಪಘಾತವೊಂದಕ್ಕೆ ಈಡಾಗಿ ಶಾಶ್ವತವಾಗಿ ಅಂಗವಿಕಲರಾದರು. ಇದರಿಂದ ಧೃತಿಗೆಡದೆ ಅಂಗವಿಕಲತೆಯನ್ನು ಅನುಕೂಲವನ್ನಾಗಿ ಮಾಡಿಕೊಂಡು ಅಥ್ಲೆಟಿಕ್ಸ್ ಹಾಗೂ ಕ್ರಿಕೆಟ್ ಕ್ರೀಡೆಗಳಿಗೆ ತಮ್ಮ ಬದುಕನ್ನು ಮುಡಿಪಾಗಿಟ್ಟರು. ಅನೇಕ ಜಿಲ್ಲಾ, ರಾಜ್ಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಗುಂಡು ಎಸೆತ, ಭರ್ಜಿ ಎಸೆತ, ಚಕ್ರ ಎಸೆತಗಳಲ್ಲಿ ಪದಕಗಳನ್ನು ಪಡೆದು ಅದ್ವಿತೀಯ ಸಾಧನೆ ಮಾಡಿದರು.

1991-98ರ ವರೆಗೆ ಅಂಗವಿಕಲರ ಪ್ಯಾರಾ ಒಲಂಪಿಕ್ಸ್ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸಿ ಒಟ್ಟು 12 ಪದಕಗಳನ್ನು ಗಳಿಸಿದರು. ಇದರಲ್ಲಿ 10 ಚಿನ್ನದ ಪದಕಗಳು ಸೇರಿವೆ. ಇವರು 6 ಬಾರಿ ಕರ್ನಾಟಕ ಅಂಗವಿಕಲರ ಕ್ರಿಕೆಟ್ ತಂಡದ ನಾಯಕರಾಗಿದ್ದರು. 1996ರಲ್ಲಿ ಸಾರ್ಕ್ ಪ್ಯಾರಾ ಒಲಂಪಿಕ್ ಕಮಿಟಿ ಸ್ಥಾಪನೆಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರು ಅದರ ಪ್ರಥಮ ಕಾರ್ಯದರ್ಶಿಯೂ ಆಗಿದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ವೀನ್ಸ್ ಲ್ಯಾಂಡ್‌ನಲ್ಲಿ (1991) ನಡೆದ ಭರ್ಜಿ ಎಸೆತದಲ್ಲಿ ಪಾಲ್ಗೊಂಡು ಚಿನ್ನದ ಪದಕ ಹಾಗೂ ಗುಂಡು ಎಸೆತದಲ್ಲಿ ಕಂಚಿನಪದಕ ಪಡೆದರು. ಮರುವರ್ಷ ಬಾರ್ಸಿಲೋನ ಪ್ಯಾರಾ ಒಲಂಪಿಕ್ಸ್‌ನಲ್ಲಿ ಪಾಲ್ಗೊಂಡರಾದರೂ ಭರ್ಜಿ, ಚಕ್ರ ಹಾಗೂ ಗುಂಡು ಎಸೆತಗಳಲ್ಲಿ ಯಶಸ್ಸು ಪಡೆಯಲಾಗಲಿಲ್ಲ.

ಬರ್ಲಿನ್‌ನಲ್ಲಿ ನಡೆದ ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಭರ್ಜಿ ಎಸೆತದಲ್ಲಿ ಚಿನ್ನದ ಪದಕ ಹಾಗೂ ಚಕ್ರಎಸೆತದಲ್ಲಿ ಬೆಳ್ಳಿಪದಕವನ್ನು ಗಳಿಸಿದರು (1994). ಬ್ರಿಸ್‌ಬೆನ್‌ನ ವಿಶ್ವಮಾಸ್ಟರ್ಸ್ ಸ್ಪರ್ಧೆಯಲ್ಲಿ ಭರ್ಜಿಎಸೆತ, ಚಕ್ರಎಸೆತ ಹಾಗೂ ಗುಂಡು ಎಸೆತಗಳಲ್ಲಿ ಚಿನ್ನದ ಪದಕಗಳನ್ನು ಗಳಿಸಿದರು. ಇಂಗ್ಲೆಂಡ್‌ನಲ್ಲಿ ನಡೆದ ಷೆರ್‌ವುಡ್ ಫಾರೆಸ್ಟ್ ಕ್ರೀಡೆಯಲ್ಲಿ 2 ಚಿನ್ನದ ಪದಕ ಒಂದು ಬೆಳ್ಳಿಪದಕ ಗೆದ್ದುಕೊಂಡರು (1995). ಸಿಯೋಲ್‌ನ ಪ್ಯಾರಾ ಒಲಂಪಿಕ್ಸ್ (1998) ಇವರ ಕ್ರೀಡಾ ಜೀವನದ ಕಡೆಯ ಅಂತಾರಾಷ್ಟ್ರೀಯ ಪಂದ್ಯ. ಇವರಿಗೆ ಏಕಲವ್ಯ ಪ್ರಶಸ್ತಿ (1977), ದಸರಾ ಪ್ರಶಸ್ತಿ (1990), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1991), ಅರ್ಜುನ ಪ್ರಶಸ್ತಿ (1997) ಲಭ್ಯವಾಗಿವೆ. **(ಎಸ್.ಆರ್.ಯು.)**

**ಮಹಮದ್ ಪೀರ್**: 1896-1937. ಕನ್ನಡ ವೃತ್ತಿರಂಗಭೂಮಿಯ ಸುಪ್ರಸಿದ್ಧ ನಟ. ಮೈಸೂರಿನ ಮಧ್ಯಮವರ್ಗದ ಮುಸ್ಲಿಂ ಕುಟುಂಬವೊಂದರಲ್ಲಿ ಜನಿಸಿದರು. ಇವರ ತಂದೆ ಪೈಲ್ವಾನ್ ಮೊಹಿಯುದ್ದೀನ್, ತಾಯಿ ಮುಬಾರಕ್‌ಬಿ. ತಂದೆತಾಯಿಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡ ಪೀರ್ ಅವರು ಅನಂತರ ಸೋದರಮಾವನ ಆಶ್ರಯದಲ್ಲಿ ಬೆಳೆದರು.

ಇವರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲಿಂದಲೇ ನಾಟಕದಲ್ಲಿ ಅಭಿರುಚಿ ಹತ್ತಿತು. ಅವಕಾಶ ದೊರೆತಾಗಲೆಲ್ಲ ತಪ್ಪದೆ ನಾಟಕಗಳನ್ನು ನೋಡುತ್ತಿದ್ದ ಇವರ ಮೇಲೆ ವರದಾಚಾರ್ಯ, ಕೃಷ್ಣ ಮೂರ್ತಿರಾವ್, ಬಳ್ಳಾರಿರಾಘವ ಇವರ ಪ್ರಭಾವವಾಯಿತು. ನಾಟಕದ ಗೀಳಿನಿಂದಾಗಿ ವಿದ್ಯಾಭ್ಯಾಸ ಕುಂಠಿತಗೊಂಡಿತು. 1915ರಲ್ಲಿ ಮೈಸೂರಿನಲ್ಲಿಯೇ ಇದ್ದ ಗಿರಿಧರ ಲಾಲ್ ಕಂಪನಿ ಪ್ರವೇಶಿಸುವ ಮೂಲಕ ಇವರು ರಂಗ ಭೂಮಿಗೆ ಪದಾರ್ಪಣ ಮಾಡಿದರು. ಕೃಷ್ಣಲೀಲಾ ಇವರು ಅಭಿನಯಸಿದ ಮೊದಲ ನಾಟಕ. ಈ ನಾಟಕದಲ್ಲಿ ಇವರ ವಿಜಯನ (ಮಕರಂದ) ಪಾತ್ರ ಕಲಾರಸಿಕರ ಅಪಾರ ಮೆಚ್ಚುಗೆ ಗಳಿಸಿತು. ಇದೇ ಕಂಪನಿಯ ಕೃಷ್ಣತುಲಾಭಾರ, ಕೃಷ್ಣ ಪಾರಿಜಾತ, ಶನಿಪ್ರಭಾವ ಮೊದಲಾದ ನಾಟಕಗಳಲ್ಲಿಯೂ ವಿದೂಷಕ ಅಥವಾ ಪೋಷಕಪಾತ್ರಗಳನ್ನು ನಿರ್ವಹಿಸಿ ಮೆಚ್ಚುಗೆ ಗಳಿಸಿದರು. ಹೆಚ್ಚಾಗಿ ಹಾಸ್ಯಪಾತ್ರಗಳನ್ನೇ ನಿರ್ವಹಿಸುತ್ತಿದ್ದ ಇವರ ಮೇಲೆ ಲಕ್ಷ್ಮಣರಾವ್ ಪೂರಿ ಹಾಗೂ ಕೃಷ್ಣಮೂರ್ತಿರಾವ್ ಈ ಹಾಸ್ಯನಟರ ಪ್ರಭಾವವಿತ್ತು. 1920ರಲ್ಲಿ ಪೀರ್ ಅವರು ಈ ಸಂಸ್ಥೆಯನ್ನು ಬಿಟ್ಟು ಬೆಂಗಳೂರಿಗೆ ಹೋಗಿ ಗುರುಕಾರ್ ಕಂಪೆನಿ ಎಂದು ಪ್ರಸಿದ್ಧವಾಗಿದ್ದ ನಟಭಯಂಕರ ಗಂಗಾಧರರಾಯರ ಭಾರತ ಜನ ಮನೋಲ್ಲಾಸಿನಿ ನಾಟಕ ಕಂಪೆನಿಗೆ ಸೇರಿದರು. ಇಲ್ಲಿ ಎಂಟು ವರ್ಷ ಕಾಲ ದುಡಿದರು. ಇಲ್ಲಿರುವಾಗ ಕಾಳಿದಾಸದಲ್ಲಿ ಕುರುಬ, ಸದಾರಮೆಯಲ್ಲಿ ಕಳ್ಳ, ಪ್ರಭಾಮಣಿಯಲ್ಲಿ ವಿರೋಚನ, ಸುಭದ್ರಾದಲ್ಲಿ ಬ್ರಾಹ್ಮಣ–ಇಂಥ ಹಾಸ್ಯಪಾತ್ರಗಳು ಇವರ ಪಾಲಿನದಾದವು. ಗಂಗಾಧರರಾಯರಿಗೆ ಪೀರ್ ಅವರ ನಡೆನುಡಿಗಳು ತುಂಬಾ ಹಿಡಿಸಿದವು. ಅನೇಕ ಸಂದರ್ಭಗಳಲ್ಲಿ ರಾಯರು ಇವರ ಸಲಹೆಗಳನ್ನು ಪಡೆಯುತ್ತಿದ್ದರು. ಬರುಬರುತ್ತಾ ಪೀರ್ ಅವರು ಕಂಪನಿಯ ನಟರಾಗಿಯಷ್ಟೇ ಅಲ್ಲದೆ ಆ ಕಂಪನಿಯ ಸಲಹೆಗಾರರಾಗಿ, ಕಾರ್ಯದರ್ಶಿಯಾಗಿ, ಸ್ಟೇಜ್ ಮ್ಯಾನೇಜರ್ ಆಗಿ ಕೊನೆಗೆ ಕಂಪನಿಯ ಮ್ಯಾನೇಜರ್ ಆದರು. ಅನಂತರ ವೈಯಕ್ತಿಕ ಕಾರಣಗಳಿಂದಾಗಿ ಆ ಕಂಪೆನಿ ತೊರೆದು ಸ್ವಲ್ಪಕಾಲ ಎನ್. ಸುಬ್ಬಣ್ಣನವರ ಕಂಪನಿಯಲ್ಲಿದ್ದರು. ಕೆಲವು ಸಹನಟರ ಸಹಕಾರದಿಂದ 1932ರಲ್ಲಿ ಚಂದ್ರಕಲಾ ನಾಟಕ ಮಂಡಲಿಯನ್ನು ಸ್ಥಾಪಿಸಿದರು. ಐದೂವರೆ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಈ ಸಂಸ್ಥೆ ಪೀರ್ ಅವರ ನೇತೃತ್ವದಲ್ಲಿ ಸಾಧಿಸಿದ ಕಲಾಸಿದ್ಧಿ ಅಸಾಮಾನ್ಯ. ಈ ಕಂಪೆನಿಯ ಮೊದಲ ಪ್ರಯೋಗ ದ್ವಿಜೇಂದ್ರಲಾಲ್ ರಾಯರ ಷಾಜಹಾನ ಪ್ರಚಂಡ ಜನಪ್ರಿಯತೆ ಪಡೆಯಿತು. ಒಂದೇ ನಾಟಕ ಒಂಬತ್ತು ದಿನಗಳು ಸತತ ಪ್ರದರ್ಶಿತವಾದ ಮೊದಲ ಕೀರ್ತಿ ಇದರದಾಯಿತು. ಎಚ್.ಎಲ್.ಎನ್. ಸಿಂಹ ಅವರ ಸಂಸಾರ ನೌಕ (1932), ಬಿ. ಪುಟ್ಟಸ್ವಾಮಯ್ಯನವರ ಗೌತಮ ಬುದ್ಧ (1934) ಈ ಹೊಸ ಬಗೆಯ ನಾಟಕಗಳನ್ನೂ ಈ ಮಂಡಲಿ ಆಡಿತು. ಈ ಮೂರು ವಿಶಿಷ್ಟ ನಾಟಕಗಳಲ್ಲದೆ ಪ್ರಭಾಮಣಿ ವಿಜಯ, ವೀರಸಿಂಹ ಚರಿತ್ರೆ, ಸದಾರಮೆ, ಸುಭದ್ರಾಪರಿಣಯ ಮೊದಲಾದ ನಾಟಕಗಳೂ ಈ ಮಂಡಲಿಯ ನಾಟಕಗಳಾದವು. ಸಂಸಾರ ನೌಕದಲ್ಲಿ ಸುಂದರ, ಷಾಜಹಾನ ನಾಟಕದಲ್ಲಿ ದಾರಾ, ಗೌತಮಬುದ್ಧನಲ್ಲಿ ಗೌತಮ ಈ ಪಾತ್ರಗಳ ಅಭಿನಯ ವಿಶೇಷ ಖ್ಯಾತಿಗೆ ಪಾತ್ರವಾಗಿ ಪೀರ್ ಅವರ ಹೆಸರು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಚಿರಸ್ಥಾಯಿಯಾಯಿತು. ವರದಾಚಾರ್ಯ, ರಾಘವರ ಅನಂತರ ರಂಗಾಭಿನಯ ಕಲೆ ಪ್ರಖರವಾದದ್ದು ಪೀರ್ ಅವರಿಂದಲೇ ಎಂದರೆ ಅತಿಶಯೋಕ್ತಿಯಲ್ಲ. ಕನ್ನಡ ರಾಘವ ಎಂದೇ ಪ್ರಸಿದ್ಧರಾದ ಪೀರ್ ಅವರಿಗೆ 1935ರಲ್ಲಿ ಹುಬ್ಬಳ್ಳಿಯಲ್ಲಿ ಮುದವೀಡು ಕೃಷ್ಣರಾಯರ ನೇತೃತ್ವದಲ್ಲಿ ನಾಟ್ಯ ದುರಂಧರ ಪ್ರಶಸ್ತಿ ನೀಡಲಾಯಿತು.

ಐದೂವರೆ ಅಡಿ ಎತ್ತರ, ವಿಶಾಲ ಹಣೆ, ಅಗಲ ಕಣ್ಣುಗಳು, ಕಂಚಿನ ಕಂಠ, ಆಕರ್ಷಕ ಧ್ವನಿಯ ಪೀರ್ ಅವರದು ಸರಳ ಜೀವನ, ದಕ್ಷ ಅಭಿನಯ ಹಾಗೂ ಧ್ವನಿ ಪೂರ್ಣ ಸಂಭಾಷಣಾ ವೈಖರಿ ಇವರ ನಾಟಕಗಳ ಜೀವಾಳ. ನಾಟಕಗಳಲ್ಲಿ ಉದ್ದಕ್ಕೂ ಸಂಗೀತದ ಅಬ್ಬರವಿರುವುದಕ್ಕೆ ಇವರ ಪ್ರತಿಭಟನೆ ಇತ್ತು. ಅಬ್ಬರದ ಸಂಗೀತ ಹಾಡುಗಳಿಂದ ಅನೇಕ ವೇಳೆ ನಾಟಕದ ಓಟಕ್ಕೆ ಕುಂದು ಎಂಬುದು ಇವರ ಅಭಿಪ್ರಾಯ. ಸಂಗೀತ ಪ್ರಧಾನ ನಾಟಕಗಳ ಮಹತ್ತ್ವ ಕಡಿಮೆಯಾಗಿದ್ದಾಗ, ಜನಪ್ರಿಯತೆ ಕುಂದುತ್ತಿದ್ದಾಗ, ಗದ್ಯಪ್ರಧಾನ ನಾಟಕಗಳನ್ನು ಮೊದಲು ರಂಗದ ಮೇಲೆ ಯಶಸ್ವಿಯಾಗಿ ತಂದ, ಸಾಹಿತ್ಯ ಮೌಲ್ಯವುಳ್ಳ ಕೃತಿಗಳೂ ಅಭಿನಯ ಯೋಗ್ಯ ಎಂದು ತೋರಿಸಿದ ಕೀರ್ತಿ ಪೀರ್ ಅವರಿಗೆ ಸಲ್ಲಬೇಕು.

ಬಿ.ಆರ್. ಪಂತುಲು, ಎಂ.ವಿ. ರಾಜಮ್ಮ, ಎಚ್.ಎಲ್.ಎನ್. ಸಿಂಹ, ರಾಮಚಂದ್ರಶಾಸ್ತ್ರಿ, ಎಂ.ಎಸ್. ಮಾಧವರಾವ್, ಡಿಕ್ಕಿ ಮಾಧವರಾವ್, ಜಯರಾವ್ ಮೊದಲಾದ ಖ್ಯಾತ ಕಲಾವಿದರು ಇವರ ಸಂಸ್ಥೆಯಲ್ಲಿದ್ದು ನುರಿತವರು. ಎಲಿಫೆಂಟ್ ಬಾಯ್ ಎಂದು ಹಾಲಿವುಡ್ ಚಿತ್ರರಂಗದಲ್ಲಿ ಪ್ರಸಿದ್ಧಿಯಾದ ಮೈಸೂರು ಸಾಬು ಪೀರ್ ಅವರ ವಂಶಸ್ಥ.

ಪ್ರಚಂಡ ಚಾಣಕ್ಯ ಎಂಬ ನಾಟಕವೊಂದನ್ನು ಆಡಲು ಸಿದ್ಧತೆ ನಡೆಸುತ್ತಿರುವಂತೆಯೇ ಪೀರ್ ಅವರು 1937ರಲ್ಲಿ ಹಠಾತ್ ನಿಧನಹೊಂದಿದರು.

(ಎಸ್.ಎಸ್.ಎಂಯು.)

**ಮಹಮ್ಮದ್ I**: ಬಹಮನೀ ರಾಜ್ಯದ 2ನೆಯ ಸುಲ್ತಾನ (1358–75). ಅಲಾಉದ್ದೀನ್ ಬಹಮನ್ ಷಾನ ಹಿರಿಯ ಮಗ ಮತ್ತು ಉತ್ತರಾಧಿಕಾರಿ. ಬಹಮನೀ ರಾಜ್ಯಕ್ಕೆ ಭದ್ರ ಬುನಾದಿ ಹಾಕಿದ ದಕ್ಷ ಆಡಳಿತಗಾರ. ಇವನು 1358ರ ಫೆಬ್ರವರಿ 11 ರಂದು ಪಟ್ಟಕ್ಕೆ ಬಂದ. ಪಟ್ಟಕ್ಕೆ ಬಂದ ತರುಣದಲ್ಲಿ ಓರಂಗಲ್ಲಿನ ಕಾಪಯನಾಯಕನನ್ನು ಯುದ್ಧದಲ್ಲಿ ಸೋಲಿಸಿ ಕಪ್ಪ ವಸೂಲಿ ಮಾಡಿದ. ಅವನ ಸಹಾಯಕ್ಕೆ ಬಂದಿದ್ದ ವಿಜಯನಗರದ 20,000 ಸೈನಿಕರಿಂದ ಕೂಡಿದ್ದ ಪಡೆಯನ್ನು ಹಿಮ್ಮೆಟ್ಟಿಸಿದ. ಆದರೆ ಕಾಪಯನಾಯಕನ ಮಗ ವಿನಾಯಕದೇವ ಇನ್ನೂ ವಿರುದ್ಧನಾಗಿದ್ದುದರಿಂದ ಇನ್ನೊಂದು ಘರ್ಷಣೆಯಲ್ಲಿ ಅವನನ್ನು ಸೆರೆಹಿಡಿದು ಕೊಂದ. 1362–63ರಲ್ಲಿ ದೆಹಲಿಯ ಫಿರೋಜ್‌ನನ್ನು ಬಹುಮನೀ ರಾಜ್ಯದ ಮೇಲೆ ದಂಡೆತ್ತಿ ಬರುವಂತೆ ಕಾಪಯನಾಯಕ ಸನ್ನಾಹ ನಡೆಸುತ್ತಿದ್ದುದನ್ನು ಅರಿತು, ಓರಂಗಲ್ಲಿನ ಮೇಲೆ ದಂಡೆತ್ತಿ ಹೋಗಿ ಅವನನ್ನು ಸೋಲಿಸಿ ಗೋಲ್ಕೊಂಡವನ್ನು ತನ್ನ ರಾಜ್ಯಕ್ಕೆ ವಹಿಸಿಕೊಡುವಂತೆ ಮಾಡಿದ. ಆ ಸಂದರ್ಭದಲ್ಲಿ ಕಾಪಯನಾಯಕ ನೀಡಿದ ವೈಡೂರ್ಯಭರಿತ ಸಿಂಹಾಸನ ಮುಂದೆ ಬಹಮನೀ ಸುಲ್ತಾನರ ರಾಜಸಿಂಹಾಸನವಾಯಿತು ಎಂದು ಫೆರಿಸ್ತ ತಿಳಿಸುತ್ತಾನೆ. 1366ರಲ್ಲಿ ವಿಜಯನಗರದ ಬುಕ್ಕನನ್ನು ಕೆಣಕಿದ. ದಂಡೆತ್ತಿ ಬಂದ ಬುಕ್ಕನನ್ನು ವಿಜಯನಗರದವರೆಗೂ ಹಿಮ್ಮೆಟ್ಟಿಸಿ ಸೋಲಿಸಿದ. ಈ ಯುದ್ಧದಿಂದ ಹೆಚ್ಚಿನ ಲಾಭವಾಗಲಿಲ್ಲವಾದರೂ ಸುಲ್ತಾನ ಈ ಮೂಲಕ ಶತ್ರುಗಳಿಗೆ ಬಹಮನೀ ರಾಜ್ಯದ ಪ್ರತಾಪವನ್ನು ತೋರಿಸಿಕೊಟ್ಟ. ದಖನ್ನಿನಲ್ಲಿ ಪ್ರಥಮತಃ ಮದ್ದುಗುಂಡಿನ ಉಪಯೋಗ ಬಂದಿದ್ದು ಇವನ ಕಾಲದಲ್ಲಿ. ಈ ಹೊಸ ಶಕ್ತಿ ಬಹಮನೀ ರಾಜ್ಯದ ನವಶಕ್ತಿಗೂ ಬಹುಮಟ್ಟಿಗೆ ಕಾರಣವಾಯಿತು.

ಇವನ ಮಾವ ಸೈಫುದ್ದೀನ್ ಘೋರಿಯನ್ನು ರಾಜ್ಯದ ಪ್ರಧಾನಿಯಾಗಿ (ವಕೀಲ್) ನೇಮಿಸಿದ. ಬಹು ಸಮರ್ಥನಾದ ಅವನ ಸಹಾಯದಿಂದ ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತಂದ. ರಾಜ್ಯವನ್ನು ದೌಲತಾಬಾದ್, ಬೀರಾರ್, ಬಿದರೆ, ಗುಲ್ಬರ್ಗ ಎಂಬ ನಾಲ್ಕು ಪ್ರಾಂತ್ಯಗಳಾಗಿ (ಅತ್ರಾಫ್) ವಿಂಗಡಿಸಿ ಅದಕ್ಕೆ ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಿದ. ವಿವಿಧ ಆಡಳಿತಾಂಗಗಳಿಗೆ ಸಮರ್ಥ ಅಧಿಕಾರಿಗಳನ್ನು ನೇಮಿಸಿದ. ರಾಜ್ಯದಲ್ಲಿದ್ದ ಕಳ್ಳರು, ದರೋಡೆಕಾರರ ಹಾವಳಿಯನ್ನು ಹತ್ತಿಕ್ಕಿದ. ಇವನು ಸಾಯುವ ವೇಳೆಗೆ (1375 ಏಪ್ರಿಲ್ 21) ರಾಜ್ಯದಲ್ಲಿ ಶಾಂತಿ ನೆಲೆಸಿತ್ತು.

ಇವನ ಕಾಲದಲ್ಲಿ ಗುಲ್ಬರ್ಗ ದಖನೀ ಸಂಸ್ಕೃತಿಯ ಬೀಡಾಯಿತು. ಗುಲ್ಬರ್ಗದಲ್ಲಿ ಭವ್ಯ ಸೌಧಗಳು ನಿರ್ಮಾಣವಾದವು. ಅಲ್ಲಿಯ ಪ್ರಸಿದ್ಧ ಜಾಮಿ ಮಸೀದಿ ನಿರ್ಮಾಣವಾದದ್ದು ಇವನ ಕಾಲದಲ್ಲಿ. (ಡಿ.ಎಸ್.ಜೆ.)

**ಮಹಮ್ಮದ್ II**: ಬಹಮನೀ ರಾಜ್ಯದ 5ನೆಯ ಸುಲ್ತಾನ (1378–97). ಒಂದನೆಯ ಮಹಮ್ಮದನ ತಮ್ಮ. ಮಹ್ಮೂದನ ಕಿರಿಯಮಗ. ಇವನ ಅಣ್ಣ ಒಂದನೆಯ ದಾವೂದ್ ಪಟ್ಟವೇರಿದ ಕೆಲವೇ ದಿನಗಳಲ್ಲಿ ಹಿಂದಿನ ದೊರೆ ಮುಜಾಹಿದನ ಕಡೆಯವರಿಂದ ಕೊಲೆಗೀಡಾದ ಮೇಲೆ ಅವರೇ ಇವನನ್ನು ಪಟ್ಟಕ್ಕೆ ತಂದರು (1378 ಮೇ 21). ಇವನ 19 ವರ್ಷದ ಆಳ್ವಿಕೆ ಬಹುಮಟ್ಟಿಗೆ ಶಾಂತಿಯುತವಾಗಿತ್ತು. ಪ್ರಬಲವಾಗಿದ್ದ ವಿಜಯನಗರ ಸಾಮ್ರಾಜ್ಯದವರು ಬಹಮನೀ ರಾಜ್ಯದ ವಶದಲ್ಲಿದ್ದ ಆದವಾನಿ, ಗೋವ ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡರು. ಅದಕ್ಕೆ ತೀವ್ರ ಪ್ರತಿಭಟನೆಯನ್ನು ನೀಡದಿದ್ದುದೇ ಈ ಶಾಂತಿಗೆ ಕಾರಣ. ಇವನ ಕಾಲದಲ್ಲೂ ಇರಾನೀಯರ ಪ್ರಭಾವ ಬಹಮನೀ ಆಸ್ಥಾನದಲ್ಲಿ ವಿಶೇಷವಾಗಿ ಬೆಳೆಯಿತು.

ಮಹಮ್ಮದ್ ಸ್ವತಃ ಅರಬ್ಬೀ ಮತ್ತು ಪಾರಸೀ ಭಾಷೆಗಳಲ್ಲಿ ವಿದ್ವಾಂಸನಾಗಿದ್ದ. ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದ್ದ.

ಇವನು 1397 ಏಪ್ರಿಲ್ 29ರಂದು ನಿಧನನಾದ. *

**ಮಹಮ್ಮದ್ III**: ಬಹಮನೀ ರಾಜ್ಯದ 13ನೆಯ ಸುಲ್ತಾನ (1463–82). ನಿಜಾಮುದ್ದೀನ್ ಅಹ್ಮದನ ತಮ್ಮ. ಅಣ್ಣ ಅಹ್ಮದ್ ಚಿಕ್ಕ ವಯಸ್ಸಿನಲ್ಲೇ ನಿಗೂಢ ಮರಣಕ್ಕೆ ತುತ್ತಾದಾಗ ಇವನು ಶಂಸುದ್ದೀನ್ ಮಹಮ್ಮದ್ ಎಂಬ ಹೆಸರಿನಿಂದ ಪಟ್ಟಕ್ಕೆ ಬಂದ (1463 ಜುಲೈ 30). ಆಗ ಇವನು ಇನ್ನೂ 9–10 ವರ್ಷದ ಬಾಲಕ. ರಾಜ ಪ್ರತಿನಿಧಿ ಮಂಡಳಿ ರಾಜ್ಯದ ಆಡಳಿತವನ್ನು ನಿರ್ವಹಿಸುತ್ತಿತ್ತು. 1466ರಿಂದ ಇವನು ಸ್ವತಃ ರಾಜ್ಯಸೂತ್ರವನ್ನು ನಿರ್ವಹಿಸಲು ಮುಂದಾದ. ಇವನು ಒಳ್ಳೆಯ ಯೋಧನೂ ಸಮರ್ಥ ಆಡಳಿತಗಾರನೂ ಆಗಿದ್ದ. ಆದರೆ ದುಡುಕು ಸ್ವಭಾವದವನಾಗಿದ್ದ. ಇವನ ಪ್ರಧಾನ ಮಂತ್ರಿ ಮಹ್ಮೂದ್ ಗಾವಾನ್ ಇವನಿಗೆ ಬಲಭುಜವಾಗಿ ನಿಂತು ರಾಜ್ಯ ನಿರ್ವಹಣ ಕಾರ್ಯದಲ್ಲಿ ಮಹತ್ಪಾತ್ರ ವಹಿಸಿದ.

1466ರಲ್ಲಿ ಮಾಳವದ ದೊರೆ ಮಹ್ಮೂದ್ ಬಹಮನೀ ರಾಜ್ಯದ ಭಾಗಗಳನ್ನು ಆಕ್ರಮಿಸಲು ಪ್ರಯತ್ನಿಸಿದ. ಮೊದಲು ಅವನು ಬಹಮನೀಯರನ್ನು ಸೋಲಿಸಿದರೂ ಕೊನೆಗೆ ಒಪ್ಪಂದಕ್ಕೆ ಬರಬೇಕಾಯಿತು. ಮಹ್ಮೂದ್ ಗಾವಾನನ ಚಾತುರ್ಯದಿಂದ ಖೇರ್ಲವು ಮಾಳವಕ್ಕೂ ಬೀರಾರ್ ಬಹಮನೀ ರಾಜ್ಯಕ್ಕೂ ಸೇರುವಂತಾಗಿ ಬಹಮನೀ ಮತ್ತು ಮಾಳವ ರಾಜ್ಯಗಳ ನಡುವೆ ಶಾಶ್ವತ ಶಾಂತಿ ಏರ್ಪಟ್ಟಿತು. 1470ರಲ್ಲಿ ಬಹಮನೀ ಮತ್ತು ವಿಜಯನಗರದ ಅರಸರು ಅಪರೂಪವಾಗಿ ಒಪ್ಪಂದ ಮಾಡಿಕೊಂಡು ಒರಿಸ್ಸದ ಕಪಿಲೇಶ್ವರನ ಮೇಲೆ ದಂಡನ್ನು ಕಳುಹಿಸಿದರು. ಆ ಯುದ್ಧದಲ್ಲಿ ಕಪಿಲೇಶ್ವರ ಸೋತ. ಮುಂದೆ ಅವನ ಮರಣಾನಂತರ ಅಂತರ್ಯುದ್ಧಗಳಾಗಿ ಪಟ್ಟಕ್ಕೆ ಬಂದು ಪ್ರಬಲಿಸಿದ ಪುರುಷೋತ್ತಮನನ್ನು ಎದುರಿಸಲು ಬಹಮನೀ ಸೈನ್ಯ ಮತ್ತೆ ನಡೆದರೂ ರಾಜಮಹೇಂದ್ರಿಯನ್ನು ಹಿಡಿಯುವಷ್ಟರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕಾಯಿತು. 1469–72ರಲ್ಲಿ ಮಹ್ಮೂದ್ ಗಾವಾನನ ನೇತೃತ್ವದಲ್ಲಿ ಪಶ್ಚಿಮದತ್ತ ನಡೆದ ಬಹಮನೀ ಸೇನೆ ಗೋವ ಮತ್ತು ಸುತ್ತಲ ಪ್ರದೇಶಗಳನ್ನೆಲ್ಲ ಆಕ್ರಮಿಸಿತು. 1473ರಲ್ಲಿ ಬೆಳಗಾಂವಿಯಲ್ಲಿ ದಂಗೆಯೆದ್ದಿದ್ದ ಸ್ಥಳೀಯ ರಾಜನನ್ನು ಸುಲ್ತಾನ ಮತ್ತು ಗಾವಾನ್ ಸದೆಬಡಿದರು. ರಾಜನು ಲಷ್ಕರೀ ಎಂಬ ಬಿರುದನ್ನು ಧರಿಸಿದ. 1478ರಲ್ಲಿ ಒರಿಸ್ಸದ ಮಧ್ಯಭಾಗದ ವರೆಗೂ ದಂಡೆತ್ತಿ ಹೋಗಿ ಪುರುಷೋತ್ತಮನನ್ನು ಶರಣಾಗುವಂತೆ ಮಾಡಿದ. 1481ರಲ್ಲಿ ಇವನು ದಕ್ಷಿಣದಲ್ಲಿ ಕಂಚಿಯ ವರೆಗೂ ನುಗ್ಗಿದ. ಬಹಮನೀ ಸುಲ್ತಾನರಲ್ಲೆಲ್ಲ ಇವನಷ್ಟು ದೂರ ದಕ್ಷಿಣದ ಕಡೆಗೆ ದಂಡೆತ್ತಿ ಹೋದವರಿಲ್ಲ. ಈ ಎಲ್ಲ ಸಾಧನೆಗಳಿಂದ ಮಹಮ್ಮದನ ಕಾಲದಲ್ಲಿ ಬಹಮನೀ ರಾಜ್ಯ ಗೋವದಿಂದ ಒರಿಸ್ಸದ ವರೆಗೂ ವಿಸ್ತಾರಗೊಂಡಿತು. ಪಶ್ಚಿಮ ಮತ್ತು ಪೂರ್ವ ಸಮುದ್ರದವರೆಗೆ ಹರಡಿದ್ದ ಈ ವಿಶಾಲ ರಾಜ್ಯವನ್ನು ವ್ಯವಸ್ಥಿತಗೊಳಿಸಲು ಗಾವಾನ್ ಅನೇಕ ಆಡಳಿತ ಸುಧಾರಣೆಗಳನ್ನು ಮಾಡಿದ. ಹಿಂದೆ ಇದ್ದ ರಾಜ್ಯದ 4 ಪ್ರಾಂತ್ಯಗಳಿಗೆ ಬದಲಾಗಿ 8 ಪ್ರಾಂತ್ಯಗಳನ್ನು ಮಾಡಿ ಅಧಿಕಾರಿಗಳನ್ನು ನೇಮಿಸಿದ. ಆದರೆ ಈ ಕಾಲದಲ್ಲಿ ದಖನೀ ಮತ್ತು ವಿದೇಶೀ ಅಮೀರರ ನಡುವಣ ವೈಮನಸ್ಯ ಬೆಳೆದಿದ್ದು, ಇದನ್ನು ಸರಿಪಡಿಸಲು ಗಾವಾನ್ ಪ್ರಯತ್ನಿಸಿದರೂ ಸಫಲನಾಗಲಿಲ್ಲ. ಗಾವಾನನೇ ವಿದೇಶೀ ಅಮೀರ (ಅಸಾಫೀ) ಎಂಬ ಭಾವನೆ ಬೆಳೆದಿತ್ತು. ದಖನೀ ಪಕ್ಷದವರು ಪ್ರಧಾನ ಮಂತ್ರಿ ಮಹ್ಮೂದ್ ಗಾವಾನ್ ದ್ರೋಹಿಯೆಂದು ಕುತಂತ್ರದಿಂದ ಸುಲ್ತಾನನ ಕಿವಿಯೂದಿದರು. ಇದನ್ನು ನಂಬಿದ ಸುಲ್ತಾನ ಗಾವಾನನ ತಲೆ ಹೊಡೆಸಿದ. ಈ ಘಟನೆ ನಡೆದದ್ದು 1481ರಲ್ಲಿ. ಅನಂತರ ತಾನು ನಿರಪರಾಧಿಯನ್ನು ಕೊಲ್ಲಿಸಿದೆನೆಂದು ತಿಳಿದ ಸುಲ್ತಾನ ಪಶ್ಚಾತ್ತಾಪದಿಂದ ಬೆಂದು ಆ ಕೊರಗಿನಲ್ಲೇ ಮರಣ ಹೊಂದಿದ (1482 ಮಾರ್ಚ್ 26).

ಮೂರನೆಯ ಮಹಮ್ಮದನ ಕಾಲವನ್ನು ಬಹಮನೀ ರಾಜ್ಯದ ಭವ್ಯತೆಯ ಉತ್ತುಂಗ ಕಾಲವೆನ್ನಬಹುದು. ಆಗ ಬಿದರೆ ವೈಭವದಿಂದ ರಾರಾಜಿಸುತ್ತಿತ್ತು. 1470ರಲ್ಲಿ ಬಿದರೆಯನ್ನು ಸಂದರ್ಶಿಸಿದ ರಷ್ಯದ ಪ್ರವಾಸಿ ಅಥನೇಸಿಯಸ್ ನಿಕಿಟಿನ್ ಈ ಪಟ್ಟಣ ಮಹಮ್ಮದೀಯ ಹಿಂದುಸ್ಥಾನದಲ್ಲೆಲ್ಲ ಮುಖ್ಯ ಪಟ್ಟಣವೆಂದು ವರ್ಣಿಸಿದ್ದಾನೆ. (ಡಿ.ಎಸ್.ಜೆ.)

**ಮಹಮ್ಮದ್ ಆದಿಲ್ ಷಾ**: ಬಿಜಾಪುರದ ಆದಿಲ್ ಶಾಹೀ ವಂಶದ ಸುಲ್ತಾನ (1627–56). 2ನೆಯ ಇಬ್ರಾಹೀಂ ಆದಿಲ್ ಷಾನ ಮಗ. ಇಬ್ರಾಹೀಂ ಮೃತನಾದಾಗ, ಆಸ್ಥಾನದಲ್ಲಿ ಪ್ರಭಾವಿಗಳಾಗಿದ್ದ ಮುಸ್ತಫಾಖಾನ್ ಮತ್ತು ದೌಲತ್‌ಖಾನ್ ಎಂಬ ಇಬ್ಬರು ಅಮೀರರು ಸಿಂಹಾಸನಕ್ಕೆ ಹಕ್ಕುದಾರನಾದ ಇವನ ಅಣ್ಣ ದರ್ವೇಶ್‌ನ ಕಣ್ಣು ಕೀಳಿಸಿ, 15 ವರ್ಷದ ಬಾಲಕನಾಗಿದ್ದ ಮಹಮ್ಮದ್ ಆದಿಲ್ ಷಾನನ್ನು ಗಾದಿಗೇರಿಸಿದರು.

ಈತ ಪಟ್ಟಕ್ಕೆ ಬರುತ್ತಿದ್ದಂತೆಯೇ ಅಹಮದ್‌ನಗರದ ನಿಜಾಮ ಶಾಹೀ ಸೈನ್ಯ ಹಮೀದ್ ಖಾನನ ನೇತೃತ್ವದಲ್ಲಿ ಬಿಜಾಪುರವನ್ನು ಮುತ್ತಿತ್ತು. ಆದರೆ ಮಹಮ್ಮದ್ ಅದನ್ನು ಹಿಮ್ಮೆಟ್ಟಿಸಿದ. 1628ರಲ್ಲಿ ಷಾಜಹಾನ್ ಚಕ್ರವರ್ತಿಯಾಗುತ್ತಿದ್ದಂತೆಯೇ ದಖನ್ನಿನ ಸುಲ್ತಾನರನ್ನು ಮುಗಲ್ ಸಾಮ್ರಾಜ್ಯದ ಸಾಮಂತರನ್ನಾಗಿ ಮಾಡಿಕೊಳ್ಳಬೇಕೆಂದು ಅವನು ಉಜ್ಜುಗಿಸಿದ. ಷಾಜಹಾನ್ ಸುನ್ನಿ ಪಂಥದವನಾಗಿದ್ದು, ದಖನ್ನಿನ ಸುಲ್ತಾನರು ಷಿಯಾ ಪಂಥಕ್ಕೆ ಒಲವು ತೋರಿಸುತ್ತಿದ್ದುದು ಬಹುಶಃ ಇದಕ್ಕೆ ಮುಖ್ಯ ಕಾರಣ. ತನ್ನ ಶತ್ರುಗಳಾದ ಪರ್ಷಿಯದ ಷಿಯಾ ಪಂಥೀಯ ಸುಲ್ತಾನರನ್ನು ಇವರು ಬೆಂಬಲಿಸುವರೆಂಬುದು ಅವನ ಅನಿಸಿಕೆಯಾಗಿತ್ತು. 1631ರಲ್ಲಿ ಷಾಜಹಾನನ ದಂಡನಾಯಕ ಆಸಫ್ ಬಿಜಾಪುರದ ಮೇಲೆ ಮುತ್ತಿಗೆ ಹಾಕಿದ. ಅವನು ಸಫಲನಾಗದೆ ಹಿಂದಿರುಗಿದನಾದರೂ ಬಿಜಾಪುರ ರಾಜ್ಯಕ್ಕೆ ಸಾಕಷ್ಟು ಹಾನಿಯಾಯಿತು. 1636ರಲ್ಲಿ ಷಾಜಹಾನ್ ಸ್ವತಃ ಬಿಜಾಪುರದ ಮೇಲೆ ದಂಡೆತ್ತಿ ಬಂದ. ಮೂರು ಕಡೆಯಿಂದ ಬಿಜಾಪುರವನ್ನು ಮುತ್ತಿದ ಮುಗಲ್ ಸೈನ್ಯವನ್ನು ಧೈರ್ಯದಿಂದ ಎದುರಿಸಿದರೂ ಕೊನೆಗೆ ಮಹಮ್ಮದ್ ಶರಣಾಗಿ ಮುಗಲರ ಪರಮಾಧಿಕಾರವನ್ನು ಒಪ್ಪಿಕೊಂಡು ಪೊಗದಿ ಕೊಡಲು ಒಪ್ಪಂದಮಾಡಿಕೊಳ್ಳಬೇಕಾಯಿತು. ತದನಂತರ ಮುಗಲರು ಮತ್ತು ಬಿಜಾಪುರದ ನಡುವೆ ಸೌಹಾರ್ದವೇರ್ಪಟ್ಟಿತು. ಷಾಜಹಾನ್ ತಾನು ಅಹಮದ್‌ನಗರ ರಾಜ್ಯದಿಂದ ಗಳಿಸಿದ್ದ

ಸೊಲ್ಲಾಪುರ, ಭಾಲ್ಕಿ, ಚಿಟಗುಪ್ಪ, ಉತ್ತರ ಕೊಂಕಣ ಮತ್ತು ಪುಣೆಯ ಭಾಗಗಳನ್ನು ಮಹಮ್ಮದನ ವಶಕ್ಕೆ ಉದಾರವಾಗಿ ಬಿಟ್ಟುಕೊಟ್ಟ. *

ಹೀಗೆ ರಾಜ್ಯದ ಉತ್ತರದ ಕಡೆಯಿಂದ ಯಾವ ಅಪಾಯವೂ ಒದಗದಿರುವ ಪರಿಸ್ಥಿತಿಯನ್ನು ಗಮನಿಸಿದ ಮಹಮ್ಮದ್ ಇತರ ದಿಕ್ಕುಗಳಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಲು ನಿರ್ಧರಿಸಿದ. ಇವನ ಪ್ರಸಿದ್ಧ ಸೇನಾಪತಿಗಳಾಗಿದ್ದ ರಣದುಲ್ಲಾಖಾನ್ ಮತ್ತು ಶಹಾಜೀ ಭೋಂಸ್ಲೆಯರ ನೇತೃತ್ವದಲ್ಲಿ ಬಿಜಾಪುರದ ಸೈನ್ಯ ಹಲವಾರು ದಂಡೆಯಾತ್ರೆಗಳನ್ನು ಕೈಗೊಂಡಿತು. 1635ರಲ್ಲಿ ಇಕ್ಕೇರಿಯ ವೀರಭದ್ರನಾಯಕನನ್ನು ಸೋಲಿಸಿ ಅವನಿಂದ 30 ಲಕ್ಷ ಹೊನ್ನು ಕಪ್ಪವನ್ನು ವಸೂಲು ಮಾಡಲಾಯಿತು. ಪುನಃ 1637ರಲ್ಲಿ ಬಸವಾಪಟ್ಟಣದ ಪಾಳೆಯಗಾರ ಕೆಂಗಹನುಮನ ಆಹ್ವಾನದ ಮೇರೆಗೆ ನಡೆದು ಮತ್ತೆ ಇಕ್ಕೇರಿಯನ್ನು ಆಕ್ರಮಿಸಿಕೊಳ್ಳಲಾಯಿತು. ವೀರಭದ್ರನಾಯಕ ಭುವನಗಿರಿಗೆ ಓಡಿಹೋದ. ರಣದುಲ್ಲಾಖಾನ್ ಭುವನಗಿರಿಯನ್ನು ಮುತ್ತಿದ. ಈರ್ವರಲ್ಲಿ ಒಪ್ಪಂದವಾಗಿ ಮುಂದೆ ಕೆಳದಿ ಅರಸರು ಬಿಜಾಪುರದ ಇತರ ದಾಳಿಗಳಿಗೆ ಸಹಾಯವನ್ನು ಒದಗಿಸುವಂತಾಯಿತು. ತರೀಕೆರೆ, ಬಸವಾಪಟ್ಟಣಗಳನ್ನು ಆಕ್ರಮಿಸಲಾಯಿತು. 1638ರಲ್ಲಿ ಶಿರಾ ಮತ್ತು ಬೆಂಗಳೂರು ಬಿಜಾಪುರದ ವಶವಾದವು. ಬೆಂಗಳೂರಿನಲ್ಲಿದ್ದ ಕೆಂಪೇಗೌಡನಿಗೆ ಮಾಗಡಿಯನ್ನು ಬಿಡಲಾಯಿತು. 1640ರ ದಾಳಿಯಲ್ಲಿ ದಕ್ಷಿಣ ಕರ್ನಾಟಕದ ಬಹುಭಾಗಗಳಲ್ಲಿ ಬಿಜಾಪುರದ ಸೈನ್ಯ ಜಯಗಳಿಸಿತು. ಮೈಸೂರು ಒಡೆಯರು ಬಿಜಾಪುರದ ಸೈನ್ಯವನ್ನು ಹಲವುಬಾರಿ ಸೋಲಿಸಿ ಹಿಮ್ಮೆಟ್ಟಿಸಿದರೂ 1642ರಲ್ಲಿ ಪೊಗದಿ ಕೊಡಬೇಕಾಯಿತು. ಮತ್ತೆ 1647–49ರ ಅವಧಿಯಲ್ಲಿ ಬಿಜಾಪುರದ ಸೈನ್ಯ ಮುಸ್ತಫಾಖಾನ್ ಮತ್ತು ಶಹಾಜಿ –ಇವರ ದಂಡನಾಯಕತ್ವದಲ್ಲಿ ಕಾವೇರಿ ಪಟ್ಟಣ, ಕನಕಗಿರಿ, ರತ್ನಗಿರಿ, ಅರ್ಜುನಕೋಟೆ ಮೊದಲಾದ ಅನೇಕ ಸ್ಥಳಗಳನ್ನು ಆಕ್ರಮಿಸಿ ತಮಿಳುನಾಡಿನ ಜಿಂಜಿಯ ವರೆಗೂ ನುಗ್ಗಿ ಜಯಭೇರಿ ಹೊಡೆಯಿತು. ಮಧುರೆ ಮತ್ತು ತಂಜಾವೂರಿನ ನಾಯಕರೂ ಬಿಜಾಪುರದ ಸಾರ್ವಭೌಮತ್ವವನ್ನು ಒಪ್ಪಿದರು. ಗೋವೆಯ ಮೇಲೆ ನುಗ್ಗಿದ ಮಹಮ್ಮದನ ಸೈನ್ಯ ಪೋರ್ಚುಗೀಸರ ಮೇಲೆ ಜಯಗಳಿಸಿತು. ಈ ಸಾಧನೆಗಳಿಂದ ಮಹಮ್ಮದನ ರಾಜ್ಯ ದಕ್ಷಿಣ ಭಾರತದಲ್ಲಿ ಪೂರ್ವ– ಪಶ್ಚಿಮ ಸಮುದ್ರ ಪರ್ಯಂತ ವಿಸ್ತರಿಸಿತು.

ಆದರೆ ಈ ಮಧ್ಯೆ ಆದಿಲ್ ಶಾಹೀ ರಾಜ್ಯದ ಮಹಾರಾಷ್ಟ್ರದ ಭಾಗದಲ್ಲಿ ಶಿವಾಜಿ ತನ್ನ ಚಟುವಟಿಕೆಗಳನ್ನು ಆರಂಭಿಸಿದ್ದ. 1646ರಲ್ಲಿ ಮಹಮ್ಮದ್ ಅಸ್ವಸ್ಥನಾಗಿದ್ದಾಗ ರಾಜ್ಯದ ಕೆಲವು ಕೋಟೆಗಳನ್ನು ಅವನು ವಶಪಡಿಸಿಕೊಂಡ. ಮಹಮ್ಮದ್ 1656ರಲ್ಲಿ ನಿಧನನಾದ. ಅನಂತರ ಇವನ ಮಗ 2ನೆಯ ಅಲಿ ಆದಿಲ್ ಷಾ ಅಭಿಷಿಕ್ತನಾದ.

ಮಹಮ್ಮದ್ ಆದಿಲ್ ಷಾನ ಕಾಲದಲ್ಲಿ ಆದಿಲ್ ಶಾಹೀ ರಾಜ್ಯದ ವಿಸ್ತಾರ ಅದರ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನದಾಗಿತ್ತು. ರಾಜ್ಯದ ಆದಾಯ ಹಾಗೂ ಸೈನ್ಯಬಲ ವಿಶೇಷವಾಗಿ ವರ್ಧಿಸಿತ್ತು.

ಮಹಮ್ಮದ್ ಆದಿಲ್ –ಷಾ ಕಲಾಭಿಮಾನಿ, ದಯಾಳು, ನ್ಯಾಯನಿಷ್ಠ, ಸಾಹಿತ್ಯ, ವಿಜ್ಞಾನಗಳ ಪೋಷಕ. ಇವನು ಬಿಜಾಪುರದಲ್ಲಿ ಕಟ್ಟಿಸಿದ ಗೋಳಗುಮ್ಮಟ **(ನೋಡಿ)** ಪ್ರಪಂಚಖ್ಯಾತವಾಗಿದೆ. ಬಿಜಾಪುರದ ಜುಮ್ಮಾ ಮಸೀದಿ, ಆಸಾರ್ ಮಹಲ್ ಮತ್ತು ದಾದರ್ ಮಹಲ್‌ಗಳು ಇವನ ಕಾಲದಲ್ಲಿ ನಿರ್ಮಾಣವಾದವು. **(ಡಿ.ಎಸ್.ಜೆ.)**

**ಮಹಲಿಂಗರಂಗ**: ಸು. 1675. ಅನುಭವಾಮೃತ ಎಂಬ ಗ್ರಂಥದ ಕರ್ತೃ. ಇವನ ತಂದೆ ಸಹವಾಸಿ ವಂಶದ ಮಹಲಿಂಗದೇವ, ಗುರು ಸಹಜಾನಂದ. ಕವಿಯ ನಿಜನಾಮ ರಂಗನಾಥ. ಇವನಿಗೆ ರಂಗಾವಧೂತ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಇವನ ಸ್ಥಳ ಚಿತ್ರದುರ್ಗ ಜಿಲ್ಲೆಯ ಉಚ್ಚಂಗಿದುರ್ಗದ ಸುತ್ತುಮುತ್ತಿನದಾಗಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಅನುಭವಾಮೃತ ಅದ್ವೈತ ಸಿದ್ಧಾಂತವನ್ನು ನಿರೂಪಿಸುವ ಗ್ರಂಥ; ಭಾಮಿನೀ ಷಟ್ಪದಿಯಲ್ಲಿದೆ. ಇದರಲ್ಲಿ ಅಧಿಕಾರ ಲಕ್ಷಣ, ವೈರಾಗ್ಯ ಪ್ರಕರಣ, ತ್ವಂ ಪದಾರ್ಥಶೋಧನೆ, ತತ್ಪದಾರ್ಥ ಶೋಧನೆ, ಅಸಿಪದಾರ್ಥ ನಿರ್ಣಯ, ಸಪ್ತಭೂಮಿಕೆಗಳ ಅಭ್ಯಾಸ, ಪರಮಾತ್ಮಪದ ನಿರೂಪಣ, ನಿರ್ಗುಣಾರಾಧನೆಯ ನಿರ್ಣಯ ಎಂಬ 11 ಅಧ್ಯಾಯಗಳೂ 804 ಪದ್ಯಗಳೂ ಇವೆ. ಮಹಾರಾಷ್ಟ್ರದ ಕವಿ ಮುಕುಂದರಾಜನ (13ನೆಯ ಶತಮಾನ) ವಿವೇಕಸಿಂಧು ಈ ಕೃತಿಗೆ ಆಧಾರವೆಂದು ತೋರುತ್ತದೆ. ಕವಿ ತಾನು ಅಖಿಳ ವೇದಾಂತಾರ್ಥವನು ಸಂಗ್ರಹಿಸಿ ಪೇಟುವೆ ಸಕಲರಿಗೆ ತಿಳಿವಂತೆ ಎಂದೂ ಉಪನಿಷದರ್ಥವನು ಸಂಪನ್ನಮತಿಗಳು ಪೇಳ್ದುದನೆ ನಾ ಕನ್ನಡಿಸಿದೆನೆಂದೂ ಹೇಳಿಕೊಂಡಿದ್ದಾನೆ. ಕಾವ್ಯ ಶ್ರೀಶೈಲ ಮಲ್ಲಿಕಾರ್ಜುನನ ಅಂಕಿತದಲ್ಲಿದೆ.

ಮಹಲಿಂಗರಂಗನಿಗೆ ಕನ್ನಡದ ಬಗ್ಗೆ ಅಪಾರ ಒಲವು. ಸುಲಿದ ಬಾಳೆಯಹಣ್ಣಿನಂದದಿ ಕಳೆದ ಸಿಗುರಿನ ಕಬ್ಬಿನಂದದಿ ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ದ ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡೊಡೆ ಸಾಲದೇ ಸಂಸ್ಕೃತದೊಳಿನ್ನೇನು ಎಂದು ಕನ್ನಡದ ಬಗ್ಗೆ ತನಗಿರುವ ಅಭಿಮಾನವನ್ನೂ ಕನ್ನಡ ಭಾಷೆಯ ವೈಶಿಷ್ಟ್ಯವನ್ನೂ ಪ್ರಕಟಿಸಿದ್ದಾನೆ. ಕಾವ್ಯಶೈಲಿ ಸರಳ, ಸುಲಭ ಹಾಗೂ ಲಲಿತವಾಗಿದೆ. ತತ್ತ್ವವಿಚಾರಗಳು ಸಹಜವಾಗಿ, ನೇರವಾಗಿ, ಮನಮುಟ್ಟುವಂತೆ ನಿರೂಪಿತವಾಗಿವೆ. ದೃಷ್ಟಾಂತ, ಉಪಮೆ, ರೂಪಕಾದಿ ಅಲಂಕಾರಗಳೊಡನೆ ವಿಷಯವನ್ನು ಸಹೃದಯನಿಗೆ ಸ್ಪಷ್ಟಪಡಿಸುವ ಇವನ ಕಾವ್ಯರೀತಿ ಮೆಚ್ಚತಕ್ಕದ್ದು. ಯೌವನ, ಧನಸಂಪತ್ತು ಇತ್ಯಾದಿಗಳಿದ್ದವರಿಗೆ ಅಧ್ಯಾತ್ಮ ಸಿದ್ಧಿಸದು ಎಂಬುದನ್ನು ಮೊದಲೇ ಮರ್ಕಟ ಮೇಲೆ ಮದ್ಯದ ಮದವೆದೆಯಹಿಡಿದಿರಲು ವೃಶ್ಚಿಕ ತುದಿಯ ಕಾಲನು ಕಚ್ಚಿದರೆ ಕುಣಿದಾಡುವಂದದಲಿ ಅಧಿಕಧನ ಸಂಪತ್ತು ಯೌವನವೊದಗಿರಲು ವನಿತಾದಿವಿಷಯಾಸ್ಪದನೆನಿಸಿಯೊಡಲರಿಯದವಗಧ್ಯಾತ್ಮವೇಕೆಂದ ಎಂಬ ಪದ್ಯದಲ್ಲಿ ಅನುಭವಕ್ಕೆ ತಾಕುವಂತೆ ಹೇಳಿರುವುದು ವಿಶಿಷ್ಟವಾಗಿದೆ. ಕಾವ್ಯಗುಣಗಳಿಂದಲೂ ಈ ಕೃತಿ ಮನ್ನಣೆ ಪಡೆದಿದೆ. ಭಗವದ್ಗೀತೆ, ಭಾರತ, ರಾಮಾಯಣ, ಶಾಂಕರಭಾಷ್ಯ ಮೊದಲಾದ ಗ್ರಂಥಗಳಿಂದ ಕವಿ ಸಹಾಯ ಪಡೆದಿದ್ದರೂ ಇವನಲ್ಲಿ ಸ್ವತಂತ್ರ ಲೋಕಾನುಭವ ಹಾಗೂ ಪ್ರತಿಭೆ ಕಂಡುಬರುತ್ತದೆ. ಅದ್ವೈತ ತತ್ತ್ವದ ತಿರುಳನ್ನು ಅರಿಯಲು ಕನ್ನಡಿಗರಿಗೆ ಈ ಗ್ರಂಥ ಕೈಪಿಡಿಯಾಗಿದೆ. ಈ ಕೃತಿಯನ್ನಾಧರಿಸಿ ಚಿದಾನಂದಾವಧೂತ (18ನೆಯ ಶತಮಾನ) ಜ್ಞಾನಸಿಂಧು ಎಂಬ ದೊಡ್ಡ ಗ್ರಂಥವನ್ನು ಬರೆದಿದ್ದಾನೆ. ಶ್ರೀಮತ್ಪರಮಹಂಸ ಬಾಲಕೃಷ್ಣ ಬ್ರಹ್ಮಾನಂದ ರಾಜಯೋಗಿಗಳು ಅನುಭವಾಮೃತವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾರೆ. ಇದು ಈ ಕೃತಿಯ ಹಿರಿಮೆಯನ್ನು ಎತ್ತಿ ತೋರಿಸುತ್ತದೆ. ವೇದಾಂತ ತತ್ತ್ವಗಳನ್ನು ಭೋಧಿಸುವಾಗ ಜಗನ್ನಾಥದಾಸರು ಮಹಲಿಂಗರಂಗನ ಜಾಡನ್ನೇ ಅನುಸರಿಸಿರುವುದು ಕಾಣುತ್ತದೆ. **(ಆರ್.ಕೆ.;ಟಿ.ಜಿ.ಎಸ್.)**

**ಮಹಾಕೂಟ**: ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಸು. 5ಕಿಮೀ ಪೂರ್ವಕ್ಕೆ ನಂದಿಕೇಶ್ವರ ಗ್ರಾಮದ ಬಳಿ ಇರುವ ತೀರ್ಥಕ್ಷೇತ್ರ. ಬಾದಾಮಿಯ ಚಳುಕ್ಯರ ಕಾಲದ ದೇವಾಲಯಗಳಿಂದ ಪ್ರಸಿದ್ಧವಾಗಿದೆ. ಮಹಾಕೂಟ ವಿರಳ ಗಿಡಮರಗಳ ಅರಣ್ಯದಿಂದ ಆಚ್ಛಾದಿತವಾದ ನಸುಗೆಂಪು ಮರಳುಕಲ್ಲಿನ ಎರಡು ಬೆಟ್ಟಗಳ ನಡುವಿನ ಕೊಳ್ಳದಲ್ಲಿ ಇದೆ.

ಇಲ್ಲಿ ಮಹಾಕೂಟೇಶ್ವರ ಮತ್ತು ಮಲ್ಲಿಕಾರ್ಜುನ ಎಂಬ ಎರಡು ಪ್ರಮುಖ ದೇವಾಲಯಗಳು, ಇವೆರಡರ ಮಧ್ಯೆ ಒಂದು ಪುಷ್ಕರಣಿ ಮತ್ತು ಅದರ ಸುತ್ತಲೂ ಸಣ್ಣ ಸಣ್ಣ ದೇವಾಲಯಗಳಿವೆ. ಮಲ್ಲಿಕಾರ್ಜುನ ದೇವಾಲಯದ ದಕ್ಷಿಣ ಬದಿಯ ಗೋಡೆಗೆ ಸೇರಿಸಿ ಕಟ್ಟಿದ ಪ್ರಾಕಾರದೊಳಗೆ ಇವೆಲ್ಲವೂ ಇವೆ. ಪೂರ್ವದಿಕ್ಕಿನ ಪ್ರಾಕಾರದಲ್ಲಿ ಹೆಬ್ಬಾಗಿಲು ಇದೆ. ಪ್ರಾಕಾರದ ಹೊರಗಡೆ ಆಗ್ನೇಯಕ್ಕೆ ಹೆಬ್ಬಾಗಿಲಿನ ತರಹ ಒಂದು ದೊಡ್ಡ ಕಲ್ಲುಮಂಟಪ ಇದೆ. ಇದರ ಪ್ರವೇಶದ್ವಾರದ ಎರಡು ಬದಿಗಳಲ್ಲಿ ಅಸ್ಥಿಪಂಜರದ ಹಾಗಿರುವ ಒಂದು ಗಂಡು ಮತ್ತು ಒಂದು ಹೆಣ್ಣು ಗಣಗಳ ಉಬ್ಬುಶಿಲ್ಪಗಳಿವೆ.

ಮಹಾಕೂಟೇಶ್ವರ ದೇವಾಲಯ

ಮಹಾಕೂಟೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ಒಂದೇ ಮಾದರಿಯವು. ಪ್ರದಕ್ಷಿಣಾಪಥವುಳ್ಳ ಚೌರಸ ಗರ್ಭಗೃಹ, ಇದಕ್ಕಿಂತ ಅಗಲವಾದ ಸಭಾಮಂಟಪ ಮತ್ತು ಕಿರಿದಾದ ಮುಖಮಂಟಪಗಳಿಂದ ಕೂಡಿವೆ. ಮಹಾಕೂಟೇಶ್ವರ ದೇವಾಲಯದಲ್ಲಿ ಮುಂದೆ ಪ್ರತ್ಯೇಕ ನಂದಿಮಂಟಪ ಇದೆ. ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಎತ್ತರದ ಅಧಿಷ್ಠಾನ ಅಡ್ಡಪಟ್ಟಿಕೆಯಲ್ಲಿ ಹೆಚ್ಚಾಗಿ ಶೈವಪುರಾಣಗಳಿಗೆ ಸಂಬಂಧಿಸಿದ ಮತ್ತು ಲೌಕಿಕ ವಿಷಯಕ ಶಿಲ್ಪಗಳಿವೆ. ಗೋಡೆಗಳ ಹೊರ ಮೈಯಲ್ಲಿ ದೇವಕೋಷ್ಠಗಳಲ್ಲಿ ಶೈವ ದ್ವಾರಪಾಲಕರು, ಶಿವ, ಶಿವಗಣಗಳು, ಅರ್ಧನಾರೀಶ್ವರ, ವಿಷ್ಣು ಮುಂತಾದ ಸುಂದರ ಚಿತ್ರಗಳಿವೆ. ಮಲ್ಲಿಕಾರ್ಜುನ ದೇವಾಲಯದ ಸಭಾಮಂಟಪದ ಛತ್ತಿನಲ್ಲಿ ಬ್ರಹ್ಮ ಮತ್ತು ಪಾರ್ವತಿಸಮೇತ ಶಿವನ ಶಿಲ್ಪಫಲಕಗಳಿವೆ. ಇದರ ಗರ್ಭಗುಡಿಯಲ್ಲಿ ಎತ್ತರ ಚೌಕೋನ ಪೀಠದ ಮೇಲೆ ದೊಡ್ಡ ಲಿಂಗವಿದೆ. ಮಹಾಕೂಟೇಶ್ವರ ದೇವಾಲಯದಲ್ಲಿ ಈಗಲೂ ಪೂಜೆ ನಡೆಯುತ್ತಿದ್ದು ಆಧುನಿಕ ರೀತಿಯಲ್ಲಿ ಇದರ ಮುಖಮಂಟಪವನ್ನು ವಿಸ್ತಾರ ಮಾಡಲಾಗಿದೆ.

ಕೊಳದ ಮಧ್ಯದಲ್ಲಿ ಒಂದು ಕಲ್ಲುಮಂಟಪವಿದೆ. ಇದರಲ್ಲಿ ಮುಖಲಿಂಗವಿದೆ. ಕೊಳದ ಸುತ್ತಲ್ಲೂ ಕೆಲವು ಚಿಕ್ಕ ದೇವಾಲಯಗಳಿವೆ. ಪ್ರತಿ ದೇವಾಲಯವೂ ಗರ್ಭಗೃಹ ಮತ್ತು ಮುಖಮಂಟಪಗಳಿಂದ ಮಾತ್ರ ಕೂಡಿದೆ. ಇವುಗಳಲ್ಲಿ ಮೂರಕ್ಕೆ ರೇಖಾನಾಗರ ಶೈಲಿಯ ಶಿಖರಗಳು ಮತ್ತು ಏಳಕ್ಕೆ ಪೂರ್ವಭಾವಿ ಕದಂಬ ನಾಗರ ಶೈಲಿಯ ಶಿಖರಗಳು ಇವೆ. ಸಾಮಾನ್ಯವಾಗಿ ಇವುಗಳ ಗೋಡೆಗಳ ಹೊರಮೈಯಲ್ಲಿ ದೇವಕೋಷ್ಠಗಳಿದ್ದು ಇವುಗಳಲ್ಲಿ ಕ್ರಮವಾಗಿ ಲಕುಳೀಶ, ಶಿವ, ಅರ್ಧನಾರೀಶ್ವರ ಅಥವಾ ನರಸಿಂಹ, ಭೂವರಾಹ, ಶಿವ, ಹರಿಹರ– ಈ ಶಿಲ್ಪಗಳಿವೆ. ಕೊಳದ ಸುತ್ತಲೂ ಹಲವು ಲಿಂಗಗಳು, ವಿಷ್ಣು, ನರಸಿಂಹ, ವೀರಭದ್ರ ಮುಂತಾದ ಮೂರ್ತಿಗಳೂ ಇವೆ.

ಮಹಾಕೂಟೇಶ್ವರ ದೇವಾಲಯದ ಮುಂದೆ ಚಳುಕ್ಯ ರಾಜನಾದ ಮಂಗಲೀಶನ ಶಾಸನವುಳ್ಳ ಅಷ್ಟಕೋನದ ಶಿಲಾಸ್ತಂಭವಿತ್ತು. ಇದು ಈಗ ಬಿಜಾಪುರದಲ್ಲಿರುವ ಪುರಾತತ್ತ್ವ ವಸ್ತುಸಂಗ್ರಹಾಲಯದಲ್ಲಿದೆ. ಮಂಗಲೀಶ ಕಳಚುರಿ ಮುಂತಾದವರನ್ನು ಗೆದ್ದು, ಯುದ್ಧದಲ್ಲಿ ಸಂಗ್ರಹವಾದ ಐಶ್ವರ್ಯವನ್ನು ಚಕ್ರವರ್ತಿಯಾಗಿದ್ದ ತನ್ನ ಅಣ್ಣ ಕೀರ್ತಿವರ್ಮನ ಮಹಾರಾಣಿ ದುರ್ಲಭದೇವಿಯ ಇಚ್ಛೆಯಂತೆ ಮಕುಟೇಶ್ವರನಿಗೆ ಶಕವರ್ಷ 524ರಲ್ಲಿ ಅರ್ಪಿಸಿದನೆಂದು ಶಾಸನದಲ್ಲಿ ಹೇಳಿದೆ. ಆದ್ದರಿಂದ ಈ ದೇವಾಲಯ 6ನೆಯ ಶತಮಾನದ್ದೆಂದು ತೋರುವುದು. ಈ ಶಾಸನವಲ್ಲದೆ. ಮಹಾಕೂಟೇಶ್ವರ ದೇವಾಲಯದ ಕಂಬದ ಮೆಲೆ ವಿಜಯಾದಿತ್ಯನ ಪ್ರಾಣವಲ್ಲಭೆಯಾಗಿದ್ದ ವಿನಾಪೋಟಿಯ ಶಾಸನವಿದೆ; ಇವಳು ದೇವರಿಗೆ ಚಿನ್ನದಿಂದ ಕಟ್ಟಿದ ಪೀಠವನ್ನು, ಬೆಳ್ಳಿ ಕೊಡೆಯನ್ನು ಮಾಡಿಸಿ ಹಾಗೂ ಮಂಗಳ ಎಂಬ ಊರಿನ ಎಂಟು ಕ್ಷೇತ್ರ ಭೂಮಿಯನ್ನು ದಾನ ಮಾಡಿದ ಳೆಂದು ಶಾಸನದಲ್ಲಿದೆ.

ಈ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಗುಡ್ಡದ ಇಳುಕಲಿನಲ್ಲಿ ಮತ್ತು ಕಣಿವೆಯಲ್ಲಿ ಅಲ್ಲಲ್ಲಿ ಬಿದ್ದಿರುವ ಒಂದೇ ವಿಧದ ಸುಮಾರು 20 ಶಿವಲಿಂಗಗಳಿವೆ. ಮತ್ತು ಒಂದು ಪೂರ್ವಭಾವಿ ನಾಗರ ವಿಮಾನ ಶೈಲಿಯ ಶಿಖರವುಳ್ಳ ಸಣ್ಣ ದೇವಾಲಯವಿದೆ. ಕೆಲವು ಲಿಂಗಗಳಿಗೆ ವರ್ತುಳಾಕಾರದ ಪೀಠಗಳಿಗೆ ಈ ಪ್ರದೇಶದಲ್ಲಿ ಗಡಿಗೆ ಮಡಿಕೆಗಳ, ಇಟ್ಟಿಗೆ ಗೋಡೆಗಳ ಅವಶೇಷಗಳಿವೆ. ಬಹುಶಃ ಮೊದಲು ಇಲ್ಲಿ ಈ ಲಿಂಗಗಳುಳ್ಳ ಸಣ್ಣಸಣ್ಣ ಇಟ್ಟಿಗೆ ದೇವಾಲಯಗಳಿದ್ದುವೆಂದು ತೋರುವುದು. ಕಾಲಾಂತರದಲ್ಲಿ ಇವು ಹಾಳುಬಿದ್ದು ಲಿಂಗಗಳು ಹೀಗೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆಯೆಂದು ತೋರುವುದು.

ಈ ಕ್ಷೇತ್ರವನ್ನು ಹೊಸ ಮಹಾಕೂಟ ಎಂದೂ ಕರೆಯುವುದುಂಟು. ಇಲ್ಲಿಂದ ಸುಮಾರು ಒಂದು ಕಿಮೀ ದೂರದಲ್ಲಿ ಹಳೆಯ ಮಹಾಕೂಟ ಇದೆ. ಇಲ್ಲಿ ಪೂರ್ವಾಭಿಮುಖವಾಗಿರುವ ಸರಳವಾದ ಗಜಪೃಷ್ಠಾಕೃತಿಯ ಒಂದು ಶಿವ ದೇವಾಲಯವಿದೆ. ಅಪೂರ್ವ ಮಾದರಿಯ ಈ ದೇವಾಲಯ ಸು. 5ನೆಯ ಶತಮಾನದ್ದು. ಇದರಲ್ಲಿ ಗಜಪೃಷ್ಠಾಕೃತಿಯ ಗರ್ಭಗೃಹ, ನಾಲ್ಕು ಮಧ್ಯ ಕಂಬಗಳುಳ್ಳ ಸಭಾಮಂಟಪ ಮತ್ತು ಬಿದ್ದುಹೋಗಿರುವ ಮುಖಮಂಟಪ ಇವೆ. ಸಭಾಮಂಟಪದ ಮತ್ತು ಗರ್ಭಗುಡಿಯ ಗೋಡೆಗಳ ನಡುವೆ ಪ್ರದಕ್ಷಿಣೆಗೆ ಅವಕಾಶ ಮಾಡಲಾಗಿದೆ. ಗರ್ಭಗುಡಿಯೊಳಗೆ ಜಲಧಾರಿಯುಳ್ಳ ವರ್ತುಳಾಕಾರದ ಪೀಠದಲ್ಲಿ ದೊಡ್ಡ ಪ್ರಮಾಣದ ಲಿಂಗವಿದೆ. ಗುಪ್ತರ ಕಾಲದ ದೇವಾಲಯದಲ್ಲಿರುವ ಹಾಗೆ, ಇದರ ಬಾಗಿಲು ಚೌಕಟ್ಟಿನ ಮೇಲಿನ ಅಡ್ಡ ಶಾಖೆಯು ಎರಡು ಬದಿಗಳಲ್ಲಿನ ಉದ್ದ ಶಾಖೆಗಳನ್ನು ಮೀರಿ ಚಾಚಿಕೊಂಡಿದೆ. ಇದರ ಮಧ್ಯದಲ್ಲಿ ಹಾವುಗಳ ಬಾಲಗಳನ್ನು ಹಿಡಿದ ಗರುಡನ ಉಬ್ಬು ಶಿಲ್ಪವಿದೆ. ಉದ್ದ ಶಾಖೆಗಳ ಬುಡದಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳಿಲ್ಲ. ಗರ್ಭಗುಡಿಗೆ ಮೊದಲು ಶಿಖರವಿತ್ತೋ ಇಲ್ಲವೋ ಸ್ಪಷ್ಟವಾಗಿರುವುದಿಲ್ಲ. ನವಿಲು ವಾಹನವುಳ್ಳ ನಿಂತಭಂಗಿಯಲ್ಲಿರುವ ಕಾರ್ತಿಕೇಯನ ಸುಂದರ ವಿಗ್ರಹ ಸಭಾಮಂಟಪದಲ್ಲಿದೆ.

ಇದರ ಮುಂಭಾಗದಲ್ಲಿ ಚಳುಕ್ಯರ ಕಾಲದ ಕೆತ್ತಿದ ಕಲ್ಲುಗಳಿಂದ ಕಟ್ಟಿದ ಮೆಟ್ಟಿಲುಳ್ಳ ಒಂದು ಕೊಳವಿದೆ. ಇದರ ನೈಋತ್ಯಕ್ಕೆ ಬಲಬದಿಯ ಬಯಲಿನಲ್ಲಿ ನಸುಗೆಂಪು ಕಲ್ಲಿನ ಒಂದು ಶಿವಲಿಂಗವಿದೆ. ದಕ್ಷಿಣಕ್ಕೆ ಬಾದಾಮಿಯ ಚಳುಕ್ಯರ ಕಾಲದ ಪೂರ್ವಭಾವಿ ಕದಂಬನಾಗರ ಶೈಲಿಯ ಶಿಖರವುಳ್ಳ ಗರ್ಭಗುಡಿ ಮತ್ತು ಸಣ್ಣ ಸಾಲೆಯಿಂದ ಕೂಡಿದ ಒಂದು ದೇವಾಲಯ ಮತ್ತು ಇದಕ್ಕೆ ಸೇರಿಸಿ ಹಿಂಬದಿಯಲ್ಲಿ ಕಟ್ಟಿದ ಕಲ್ಯಾಣದ ಚಾಳುಕ್ಯರ ಕಾಲದ ಒಂದು ಸರಳ ಗುಡಿ ಇವೆ. ಎರಡನೆಯ ಗುಡಿಗೆ ದಕ್ಷಿಣಾಭಿಮುಖವಾಗಿರುವ ಮುಖಮಂಟಪವಿದೆ.

ಈ ಹಳೆಯ ಹಾಗೂ ಹೊಸ ಮಹಾಕೂಟ ಕ್ಷೇತ್ರಗಳು ಕನಿಷ್ಠ 4–5ನೆಯ ಶತಮಾನದಿಂದಲೇ ಶೈವಧರ್ಮದ ಪ್ರಸಿದ್ಧ ಕೇಂದ್ರವಾಗಿದ್ದಿರಬೇಕೆಂದು ಇಲ್ಲಿರುವ ಹಲವು ಶೈವದೇವಾಲಯಗಳಿಂದ ತಿಳಿಯುತ್ತದೆ.

(ಎ.ಎಸ್.)

**ಮಹಾಕಾವ್ಯಗಳು (ಆಧುನಿಕ ಕನ್ನಡ)**: ಮಾನವ ಪ್ರತಿಭೆಯ ಮಹತ್ ಪ್ರಮಾಣದ ಆವಿಷ್ಕಾರ ಹಾಗೂ ಆಯಾ ಕಾಲಮಾನದ ಸಮಸ್ತ ಸತ್ತ್ವಗಳನ್ನು ಒಳಗೊಂಡ ಕೃತಿಯೇ ಮಹಾಕಾವ್ಯ. ಇದು ಆಧುನಿಕ ಮಹಾಕಾವ್ಯಗಳನ್ನು ಕುರಿತ ಇಂದಿನ ವ್ಯಾಖ್ಯೆ. ಮಹಾಕವಿ, ಮಹಾಕಾವ್ಯ ಎಂಬ ಪದಗಳಿಗೆ ಇದ್ದ ಹಿಂದಿನ ಅರ್ಥ ಲಕ್ಷಣಗಳು ಸಾಕಷ್ಟು ಬದಲಾವಣೆಗಳನ್ನು ಪಡೆದುಕೊಂಡಿವೆ. ಅದಕ್ಕನುಗುಣವಾಗಿ ಯುಗಧರ್ಮವನ್ನು ಮೈಗೂಡಿಸಿಕೊಂಡು ಹಳೆಯ ವಿಷಯವನ್ನು ಹೊಸದಾಗಿ ನೋಡುವ, ಹೊಸ ವಿಷಯಗಳನ್ನು ಮಹಾಕಾವ್ಯಪ್ರಕಾರಕ್ಕೆ ಅಳವಡಿಸುವ, ಹೊಸ ಹೊಸ ಆಶಯಗಳನ್ನು ಆಯಾಮಗಳನ್ನು ಅದಕ್ಕೆ ಜೋಡಿಸುವ ಕಾರ್ಯ ಈಗಿನ ಮಹಾಕಾವ್ಯಗಳಲ್ಲಿ ನಡೆದಿದೆ. ಇದಕ್ಕೆ ಬಹುಮುಖ್ಯವಾದ ಕಾರಣಗಳಲ್ಲಿ ಆಧುನಿಕ ಕವಿಗಳ ಮೇಲಾಗಿರುವ ಅನ್ಯಭಾಷಾ ಸಾಹಿತ್ಯ ಕೃತಿಗಳ ಪ್ರಭಾವವೂ ಒಂದೆನ್ನಬಹುದು.

ಕನ್ನಡದಲ್ಲಿ ಆಧುನಿಕ ಮಹಾಕಾವ್ಯಗಳ ಹುಟ್ಟಿಗೆ ಅಗ್ರಪಂಕ್ತಿ ಹಾಕಿದ ಕವಿ ಕುವೆಂಪು. ಇವರ ಶ್ರೀರಾಮಾಯಣ ದರ್ಶನಂ (1949) ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಮಹಾಕಾವ್ಯಗಳ ಸತ್ತ್ವಗಳನ್ನು ಅರಗಿಸಿಕೊಂಡು ಆಧುನಿಕ ಯುಗಕ್ಕೆ ಸಂಗತವಾಗುವಂತೆ ರಚನೆಗೊಂಡಿರುವ ಒಂದು ದರ್ಶನ ಕೃತಿ. ಆಧುನಿಕ ಯುಗದ ಮೊಟ್ಟ ಮೊದಲ ಕನ್ನಡ ರಾಮಾಯಣ ಎಂಬ ಹೆಗ್ಗಳಿಕೆ ಈ ಕೃತಿಯದು. ಕುವೆಂಪು ಅವರು ರಾಮಾಯಣ ಕಾವ್ಯ ರಚಿಸಿದ ಅನಂತರದಲ್ಲಿ ಆ ಮಟ್ಟದಲ್ಲಲ್ಲದಿದ್ದರೂ ವೈವಿಧ್ಯವಾದ ಮಹಾಕಾವ್ಯಗಳು ವಿವಿಧ ಛಂದಸ್ಸುಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂದಿವೆ. ರಾಮಾಯಣದ ಕಥೆಯನ್ನೇ ಆಧರಿಸಿ ಬಂದ ಅನಂತರದ ಕೃತಿಗಳೆಂದರೆ ಡಿ.ವಿ.ಜಿ.ಯವರ ಶ್ರೀರಾಮಪರೀಕ್ಷಣಂ (1957), ಮುಳಿಯ ತಿಮ್ಮಪ್ಪಯ್ಯ ಅವರ ನವನೀತರಾಮಾಯಣಂ, ಮಾಸ್ತಿಯವರ ಶ್ರೀರಾಮಪಟ್ಟಾಭಿಷೇಕ (1972), ಎಂ. ವೀರಪ್ಪಮೊಯಿಲಿ ಅವರ ಶ್ರೀರಾಮಾಯಣ ಮಹಾನ್ವೇಷಣಂ (2001–2005) ಮೊದಲಾದವು. ಆದರೆ ಇವುಗಳಲ್ಲಿ ಮಾಸ್ತಿ ಹಾಗೂ ವೀರಪ್ಪಮೊಯಿಲಿಯವರ ಕೃತಿಗಳು ಹೆಚ್ಚು ಗಮನಸೆಳೆದಿವೆ. ಮಾಸ್ತಿ ಮತ್ತು ಮೊಯಿಲಿ ಅವರ ಕಾವ್ಯಗಳು ಸರಳರಗಳೆಯಲ್ಲಿ ರಚನೆಗೊಂಡಿವೆ. ಕುವೆಂಪು ಅವರು ಸರಳರಗಳೆಯನ್ನೇ ವಿಸ್ತರಿಸಿ ಮಹಾಛಂದಸ್ಸು ಎಂಬ ಹೊಸ ಛಂದೋರೂಪವನ್ನು ಸೃಷ್ಟಿಸಿಕೊಂಡರು. ಶ್ರೀ ರಾಮಾಯಣದರ್ಶನಂ 22,296 ಪಂಕ್ತಿಗಳನ್ನೂ ಶ್ರೀರಾಮಪಟ್ಟಾಭಿಷೇಕ 9,053 ಪಂಕ್ತಿಗಳನ್ನೂ ಶ್ರೀ ರಾಮಾಯಣ ಮಹಾನ್ವೇಷಣಂ 43,295 ಪಂಕ್ತಿಗಳನ್ನೂ ಒಳಗೊಂಡಿವೆ. ಉದಾತ್ತ ಜೀವನ ಮೌಲ್ಯಗಳನ್ನು ಉನ್ನತಿಗೇರಿಸಿರುವ ಒಂದು ಪ್ರತಿಮಾ ಸೃಷ್ಟಿಯಾಗಿ ಶ್ರೀರಾಮಾಯಣ ದರ್ಶನಂ ಇದ್ದರೆ ವಾಸ್ತವತೆಯ ನೆಲೆಗಟ್ಟಿನ ಮೇಲೆ ಹಳೆಯ ಪಾತ್ರ ಸನ್ನಿವೇಶಗಳ ಭಾವಪ್ರಪಂಚ ಪುನಃಸೃಷ್ಟಿಗೊಂಡಿರುವ ನವ್ಯಜೀವನ ಗಾಥೆಯಾಗಿ ಶ್ರೀರಾಮಪಟ್ಟಾಭಿಷೇಕ ರಚನೆಗೊಂಡಿದೆ. ಶ್ರೀರಾಮಾಯಣ ಮಹಾನ್ವೇಷಣಂ ಕಾವ್ಯ ಭಾರತದ ಸದ್ಯದ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ನೆಲೆಗಳ ಹಲವು ವಿಕೃತಿಗಳಿಗೆ, ವಿಪ್ಲವಗಳಿಗೆ ಪರಿಹಾರವನ್ನು ಹುಡುಕುವ ಮಾರ್ಗಸೂಚಿಯಾಗಿದೆ.

ಹೊಸಗನ್ನಡದ ಹಲವಾರು ಕವಿಗಳು ವರ್ತಮಾನ ಕಾಲಘಟ್ಟದಲ್ಲಿ ಮಹಾಕಾವ್ಯರಚನೆಯ ಸಾಧ್ಯತೆಗಳನ್ನು ತೋರಿದ್ದಾರೆ. ಒಂದು ಅಂದಾಜಿನ ಮೇರೆಗೆ 20ನೆಯ ಶತಮಾನದಿಂದ ಇಲ್ಲಿಯವರೆಗೂ ಪ್ರಕಟಗೊಂಡಿರುವ ಮಹಾಕಾವ್ಯಗಳು ಸು.20–25. ಆಧುನಿಕಯುಗದ ಈ ಮಹಾಕಾವ್ಯಗಳ ರಚನೆಗಳನ್ನು ವಸ್ತುವಿನ ದೃಷ್ಟಿಯಿಂದ ಗಮನಿಸಿದಾಗ ಅವುಗಳ ಹರಹು ವೇದಕಾಲದ, ಪುರಾಣೇತಿಹಾಸಯುಗದಿಂದ ಹಿಡಿದು ಸಮಕಾಲೀನ ಐತಿಹಾಸಿಕ ವ್ಯಕ್ತಿ, ಸಂದರ್ಭಗಳ ವರೆಗೆ ಕಂಡುಬರುತ್ತದೆ. ಆಧುನಿಕ ಯುಗದ ಮಹಾಕಾವ್ಯ ರಚನೆಗಳಿವು: ಜಯದೇವಿತಾಯಿ ಲಿಗಾಡೆ ಅವರ ಸಿದ್ಧರಾಮೇಶ್ವರ ಪುರಾಣಂ (1965), ಸಮೇತನಹಳ್ಳಿ ರಾಮರಾಯರ ಶಾಕುಂತಲಾ (1971), ಗುರುದೇವಿತಾಯಿ ಹಿರೇಮಠ ಅವರ ಅಕ್ಕಮಹಾದೇವಿ ಪುರಾಣ (1974), ವಿ.ಕೃ. ಗೋಕಾಕ್ ಅವರ ಭಾರತ ಸಿಂಧುರಶ್ಮಿ (1982), ಸಂ.ಶಿ. ಭೂಸನೂರುಮಠ ಅವರ ಭವ್ಯಮಾನವ (1983), ಜ.ಚ.ನಿ. ಅವರ ಸದಾಶಿವರುದ್ರ, ಎಸ್.ಪಿ.ಪದ್ಮಣ್ಣ ಅವರ ವೀರೇಂದ್ರ ಬಾಹುಬಲಿ (1986), ಪು.ತಿ.ನ ಅವರ ಶ್ರೀ ಹರಿಚರಿತೆ (1988), ಕಾಶಿವಿಶ್ವನಾಥ ಶೆಟ್ಟಿ ಅವರ ಬುದ್ಧಚರಿತ ಮಹಾಮಧು (1989), ಬೊಮ್ಮರಸೇಗೌಡರ ಮಹಾತ್ಮಾಗಾಂಧಿ (1992), ಚಂದ್ರಶೇಖರ ಕಂಬಾರ ಅವರ ಚಕೋರಿ (1996), ಮಲ್ಲಿಕಾ ಕಡಿದಾಳ್ ಮಂಜಪ್ಪ ಅವರ ವಿವೇಕಾನಂದ ವಿಜಯ (1998), ಸುಜನಾ ಅವರ ಯುಗಸಂಧ್ಯಾ (1999), ಶಿವಲಿಂಗಮ್ಮ ಕಟ್ಟಿ ಅವರ ರುದ್ರಭದ್ರ ದರ್ಶನಂ (2000), ಹಂಪನಾ ಅವರ ಚಾರುವಸಂತ (2003), ಲತಾರಾಜಶೇಖರ ಅವರ ಬುದ್ಧಮಹಾದರ್ಶನ (2004), ಬಿ.ಎಸ್.ತಲ್ವಾಡಿ ಅವರ ಸಿರಿಭುವನಜ್ಯೋತಿ (2006).

ಇದುವರೆಗಿನ ಮಹಾಕಾವ್ಯ ರಚನೆಗಳಲ್ಲಿ ವಿಮರ್ಶಕರ ಅಭಿಪ್ರಾಯದಂತೆ ವಿ.ಕೃ.ಗೋಕಾಕ್ ಅವರ ಭಾರತಸಿಂಧುರಶ್ಮಿ, ಭೂಸನೂರು ಮಠರ ಭವ್ಯಮಾನವ, ಕುವೆಂಪು ಅವರ ಶ್ರೀರಾಮಾಯಣದರ್ಶನಂ ಈ ಮೂರು ಮಹಾಕಾವ್ಯಗಳು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಒಂದು ವೈಶಿಷ್ಟ್ಯಪೂರ್ಣ ಕಾಣಿಕೆಗಳಾಗಿವೆ. ವೈದಿಕ ಪುನರುಜ್ಜೀವನದ ಕಥೆ ಭಾರತ ಸಿಂಧುರಶ್ಮಿಯದು. ಆರ್ಯದ್ರಾವಿಡ ಕುಲಗಳ ಸಂಪರ್ಕ, ಸಂಘರ್ಷ ಸಮ್ಮಿಲನಗಳು ಹಾಗೂ ವಿಶ್ವಾಮಿತ್ರರು ವಿಶ್ವಮಾನವನಾಗಿ ಬೆಳೆಯುವ ಸಂಕೀರ್ಣ ವ್ಯಕ್ತಿತ್ವದ ಮಹಾದರ್ಶನವಾಗಿ ಈ ಮಹಾಕಾವ್ಯ ಮೂಡಿಬಂದಿದೆ. ಭವ್ಯಮಾನವ ಮಹಾಕಾವ್ಯದಲ್ಲಿ ಶಿವಶರಣೆ ಅಕ್ಕಮಹಾದೇವಿ ಶ್ರೀಶೈಲದ ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯಳಾಗದೆ ತನ್ನ ಗುರುಮಲ್ಲಯ್ಯನ ಉಪದೇಶದ ಮೇರೆಗೆ ಮರ್ತ್ಯದಲ್ಲಿಯೇ ನೆಲೆಯಾಗಿ ನಿಂತು ಮರ್ತ್ಯವನ್ನುದ್ಧರಿಸಿ ಅಮರಲೋಕವನ್ನಾಗಿಸಲು ಮಣಿಹ ತಾಳುತ್ತಾಳೆ. ಆಧುನಿಕ ಕನ್ನಡದ ಈ ಬಗೆಯ ಮಹಾಕಾವ್ಯಗಳು ಸಾಂಪ್ರದಾಯಿಕ ಪ್ರಾಚೀನ ಮಹಾಕಾವ್ಯಗಳಿಗಿಂತ ಸರ್ವವಿಧದಲ್ಲೂ ಭಿನ್ನವಾಗಿವೆ. ಆಧುನಿಕತೆ, ವೈಜ್ಞಾನಿಕತೆ, ವೈಚಾರಿಕತೆ ಹಾಗೂ ವಾಸ್ತವಿಕತೆಗಳು ಇವುಗಳ ಸ್ಪಷ್ಟ ಲಕ್ಷಣಗಳಾಗಿವೆ.

ಜಯದೇವಿತಾಯಿ ಲಿಗಾಡೆಯವರ ಶ್ರೀ ಸಿದ್ಧರಾಮೇಶ್ವರ ಪುರಾಣ ಕೂಡ ಒಬ್ಬ ಶಿವಶರಣನನ್ನು ಕುರಿತ ಮಹಾಕಾವ್ಯ. ಶಿವಶರಣ, ವಚನಕಾರ ಸಿದ್ಧರಾಮನ ಜೀವನದ ಮಹತ್ತು ಮತ್ತು ಭವ್ಯತೆಗಳನ್ನು ಕಾವ್ಯವಸ್ತು

ವನ್ನಾಗಿಸಿಕೊಂಡು ಶುದ್ಧದೇಶೀಛಂದಸ್ಸಾದ ತ್ರಿಪದಿಯಲ್ಲಿ ಮೂಡಿಬಂದಿರುವ ಈ ಕಾವ್ಯ 600 ಪುಟಗಳಲ್ಲಿ 41ಸಂಧಿಗಳನ್ನೂ 4,100 ಪದ್ಯಗಳನ್ನೂ ಹೊಂದಿದ್ದು ರಾಘವಾಂಕನ ಅನಂತರ ಸು.400 ವರ್ಷಗಳಿಂದೀಚೆಗೆ ಸಮಗ್ರವಾಗಿ, ವಿಸ್ತಾರವಾಗಿ ಸಿದ್ಧರಾಮನ ಜೀವನವನ್ನು ಪುರಾಣರೂಪದಲ್ಲಿ ಬರೆದ ಮಹಾಕಾವ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.




ಸಮೇತನಹಳ್ಳಿರಾಮರಾಯರ ಮಹಾಕಾವ್ಯ ಶಾಕುಂತಲಾ, ಮಹಾಕವಿ, ನಾಟಕಕಾರ ಕಾಳಿದಾಸನ ಅಭಿಜ್ಞಾನ ಶಾಕುಂತಲದಿಂದ ವಸ್ತುವನ್ನಾರಿಸಿಕೊಂಡು ಕಾವ್ಯವಾಗಿಸುವಲ್ಲಿ ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿದೆ. ಈ ಕಾವ್ಯದ ಕಥಾನಾಯಕಿ ಶಾಕುಂತಲಾ ಕಣ್ವರ ಶಕುಂತಲೆಯಂತೆ ಭೀರುವಲ್ಲ; ಕಷ್ಟದಲ್ಲಿ ಕಂಗೆಟ್ಟು ದೈವಕ್ಕೆ ಮಣಿದು ನಿಷ್ಕ್ರಿಯೆಗೊಂಡವಳಲ್ಲ. ವೇದವೇದಾಂಗಗಳನ್ನು ಅಭ್ಯಸಿಸಿ ಧನುರ್ವಿದ್ಯಾ ಪಾರಂಗತೆಯಾಗಿ ಕಠಿಣ ತಪಸ್ಸನ್ನಾಚರಿಸಿ ಗುಹಾಶ್ರಮದಲ್ಲಿ ಧೃತಿಗೆಡದೆ ಹಲವಾರು ವರ್ಷ ಏಕಾಂಗಿಯಾಗಿ ನೆಲೆಸಿದ್ದವಳು. ತುಂಬಿದ ರಾಜಸಭೆಯಲ್ಲಿ ವಾದಪ್ರಚಂಡರೆದುರು, ಮೇಧಾವಿಗಳೆನಿಸಿದವರ ಮುಂದೆ ಎಲ್ಲರೂ ಬೆರಗಾಗುವಂತೆ ದುಷ್ಯಂತನೊಡನೆ ವಾದಿಸುವ ಧೀರೆಯಾಗಿ ಶಕುಂತಲೆ ಚಿತ್ರಣಗೊಂಡಿದ್ದಾಳೆ. ರಾಮರಾಯರ ಈ ಕಾವ್ಯ ಅಧ್ಯಯನಾಂಗ, ವ್ಯವಹಾರಾಂಗ ಎಂಬ ಎರಡು ಭಾಗಗಳಲ್ಲಿ 47 ನಿರ್ಣಯ (ಸಂಧಿ)ಗಳನ್ನು, ಸು.16,400 ಪಾದಗಳನ್ನು ಹೊಂದಿದೆ.

ಎಸ್.ಪಿ.ಪದ್ಮಣ್ಣ ಅವರ ಮಹಾಕಾವ್ಯ ವೀರೇಂದ್ರಬಾಹುಬಲಿ. 16 ಆಶ್ವಾಸಗಳನ್ನೂ 2,392 ಸಾಂಗತ್ಯ ಪದ್ಯಗಳನ್ನೂ ಹೊಂದಿದೆ. ಇತಿಹಾಸ–ಸಾಹಿತ್ಯಗಳ ಸಮರಸ ಚಿತ್ರಣ ಈ ಕಾವ್ಯದ ವೈಶಿಷ್ಟ್ಯ. ಬಾಹುಬಲಿ ಮೂರ್ತಿಯ ಕಲ್ಪನೆಗೆ ಬೀಜಾಂಕುರವಾದ ಸಂದರ್ಭದಿಂದ ಹಿಡಿದು ಮೂರ್ತಿಯನ್ನು ಕಡೆದು ಪ್ರತಿಷ್ಠಾಪಿಸುವವರೆಗಿನ ಎಲ್ಲ ವಿಚಾರಗಳನ್ನೂ ಈ ಕಾವ್ಯ ವಿವರಿಸುತ್ತದೆ.

ಭಾಗವತದಿಂದ ವಸ್ತುವನ್ನು ಆರಿಸಿಕೊಂಡು ಶ್ರೀಕೃಷ್ಣನ ಚರಿತ್ರೆಯನ್ನು ನಿರೂಪಿಸಿರುವ ಮಹಾಕಾವ್ಯ ಪು.ತಿ.ನ. ಅವರ ಶ್ರೀಹರಿಚರಿತೆ. ವ್ಯಕ್ತಿ ಮತ್ತು ಸಮಷ್ಟಿಗಳ ಸಂಬಂಧ ಇಲ್ಲಿನ ಕೃಷ್ಣಕಥೆಯಲ್ಲಿ ಬಹಳ ಮುಖ್ಯವಾಗಿ ನಿರೂಪಣೆಗೊಳ್ಳುತ್ತದೆ. ಇದನ್ನು ಕವಿಯೇ ಕಾವ್ಯದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. 33 ಉಲ್ಲಾಸಗಳಿಂದ ಕೂಡಿರುವ ಈ ಕಾವ್ಯದ ಛಂದಸ್ಸನ್ನು ಕವಿ ಭೃಂಗಿನಡೆಯ ಭಾಮಿನೀವಾರ್ಧಕ ಎಂದು ಕರೆದುಕೊಂಡಿದ್ದಾರೆ. ಈ ಕಾವ್ಯದ ಪ್ರಣಾಮ ಎಂಬ ಮೊದಲ ಉಲ್ಲಾಸ ಹಾಗೂ ನಿವೇದನ ಎಂಬ ಕೊನೆಯ ಉಲ್ಲಾಸಗಳಲ್ಲಿ ಕವಿ ತನ್ನ ಮತ್ತು ಕಾವ್ಯ ವಿಷಯಗಳ ಬಗೆಗೆ ಸಾಕಷ್ಟು ಮಾಹಿತಿ ನೀಡಿದ್ದಾರೆ.

ಬುದ್ಧನ ಮಹಾವ್ಯಕ್ತಿತ್ವ ಹಾಗೂ ಜೀವನವನ್ನು ವಸ್ತುವಾಗಿಸಿಕೊಂಡಿರುವ ಮಹಾಕಾವ್ಯ ಕಾಶಿವಿಶ್ವನಾಥ ಶೆಟ್ಟಿ ಅವರ ಬುದ್ಧಚರಿತ ಮಹಾಮಧು. 1,000 ಪುಟಗಳಷ್ಟು ವಿಸ್ತಾರವಾಗಿರುವ ಈಕೃತಿಯಲ್ಲಿ 24,000 ಪಾದಗಳೂ 6,000 ಚುತುಷ್ಪದಿಗಳು 11 ಸಂಪುಟಗಳೂ ಇವೆ. ಇದು ಬುದ್ಧನನ್ನು ಕುರಿತ ಕನ್ನಡದ ಮೊಟ್ಟಮೊದಲ ಮಹಾಕಾವ್ಯ. ಈ ಕೃತಿಯ ಅನಂತರ ಬುದ್ಧ ವಸ್ತುವಾಗುಳ್ಳ ಇತ್ತೀಚಿನ ಮಹಾಕಾವ್ಯ ಲತಾರಾಜಶೇಖರರ 'ಬುದ್ಧಮಹಾದರ್ಶನ'. ಮಹಾವತರಣ, ಮಹಾಭಿನಿಷ್ಕ್ರಮಣ, ಮಹಾಬೋಧಿ, ವ್ಯಾಮೋಹನಿವಾರಣ, ಪರಿವರ್ತನ, ಮಹಾಪರಿನಿರ್ವಾಣ ಎಂಬ ಆರು ಸಂಪುಟ (ಅಧ್ಯಾಯ)ಗಳಲ್ಲಿ ಸರಳರಗಳೆಯಲ್ಲಿ ಎಂಬತ್ತಾರು ಸೋಪಾನ (ಸಂಧಿ)ಗಳಲ್ಲಿ ಈ ಕೃತಿ ರಚನೆಗೊಂಡಿದೆ.

ಆಧುನಿಕ ಚರಿತ್ರೆಯನ್ನೇ ಯಥಾವತ್ತಾಗಿ ಕಾವ್ಯರಚನೆಗೆ ಬಳಸಿಕೊಂಡಿರುವ ಮಹಾಕಾವ್ಯ ಬೊಮ್ಮರಸೇಗೌಡರ 'ಮಹಾತ್ಮಾಗಾಂಧಿ'. ಗಾಂಧೀಜಿಯವರ ಆತ್ಮಚರಿತ್ರೆಯ ಕಾವ್ಯರೂಪ ಇದಾಗಿದೆ. 3,500 ಭಾಮಿನೀ ಷಟ್ಪದಿಗಳಲ್ಲಿ 105 ಸಂಧಿಗಳಲ್ಲಿ ಈ ಕಾವ್ಯ ರಚನೆಗೊಂಡಿದೆ.

ಜಯದೇವಿತಾಯಿ ಲಿಗಾಡೆಯವರ ಅನಂತರ ತ್ರಿಪದಿ ಛಂದಸ್ಸಿನಲ್ಲಿ ಬರೆದ ಮತ್ತೊಂದು ಮಹಾಕಾವ್ಯ. ಚಂದ್ರಶೇಖರ ಕಂಬಾರರ 'ಚಕೋರಿ' ಜನಪದ ವಸ್ತುವಿಗೆ ಮಹಾಕಾವ್ಯ ಸ್ವರೂಪವನ್ನು ನೀಡಿದ ಕೀರ್ತಿ ಈ ಮಹಾಕಾವ್ಯದ್ದು. ವಿಮರ್ಶಕರ ಅಭಿಪ್ರಾಯದಂತೆ, ಅಖಂಡತೆಯನ್ನು ಒಡೆದರೆ ಎದುರಾಗುವ ಅನಾಹುತಗಳನ್ನು ಚಕೋರಿ ಧ್ವನಿಸುತ್ತಾ ಅಂತಹ ಅನಾಹುತಗಳನ್ನು ದಾಟಿ ಪ್ರತಿಬಿಂಬಗಳೆಲ್ಲವೂ ಬಿಂಬಗಳಲ್ಲಿ ಐಕ್ಯವಾಗುವ, ಬಯಲು ನಿರ್ವಯಲಾಗುವುದರ ಕಡೆಗೆ ಚಕೋರಿಯ ಶೋಧ ನಡೆಯುತ್ತದೆ. ಒಟ್ಟಿನಲ್ಲಿ ಜೀವವಿಕಾಸದ ವಿಭಿನ್ನ ಘಟ್ಟಗಳನ್ನು, ಜೀವ ವಿಕಾಸದ ತಲೆತಲಾಂತರದ ನಂಬಿಕೆಯ ಕಥೆಗಳನ್ನು ಹೇಳುತ್ತಾ ಸೃಷ್ಟಿ ಮತ್ತು ಅವನತಿಯ ಮೂರ್ತ–ಅಮೂರ್ತ ವಿಚಾರಗಳನ್ನು ಈ ಮಹಾಕಾವ್ಯ ವಿಶ್ಲೇಷಿಸುತ್ತದೆ.

ಮಹಾಭಾರತದಲ್ಲಿ ಪಾಂಡವರ ವಿಜಯದ ಅನಂತರ ಬರುವ ಕಥೆಯನ್ನು ಮುಖ್ಯವಸ್ತುವಾಗಿ ಹೊಂದಿ ಭಾರತೋತ್ತರ ಕಥಾ ಪ್ರಸಂಗ ಹಾಗೂ ಅದರ ದರ್ಶನ ಇತ್ಯಾದಿ ವಿಷಯಗಳನ್ನು ಎತ್ತಿಹಿಡಿಯುವ ಮಹಾಕಾವ್ಯ ಎಸ್. ನಾರಾಯಣಶೆಟ್ಟಿ (ಸುಜನಾ) ಅವರ ಯುಗಸಂಧ್ಯಾ. ಸರಳ ರಗಳೆಯ ಛಂದಸ್ಸಿನಲ್ಲಿ ಈ ಕೃತಿ ರಚನೆಗೊಂಡಿದೆ. ಮಹಾಭಾರತದ ವಿಷಾದಯೋಗದ ಚಿತ್ರಣವನ್ನು ಇಲ್ಲಿ ಕಂಡರಿಸಲಾಗಿದೆ.

ಹಂಪನಾ ಅವರ ಚಾರುವಸಂತ ದೇಸೀ ಮಹಾಕಾವ್ಯವೆಂದು ಪ್ರಸಿದ್ಧವಾಗಿದೆ. ಗುಣಾಢ್ಯನ ಪೈಶಾಚಿ ಭಾಷೆಯ ಬೃಹತ್ಕತೆಯಲ್ಲಿ ಬರುವ ಚಾರುವಸಂತದ ಕಥೆಯೇ ಈ ಕಾವ್ಯಕ್ಕೆ ಮೂಲ. ಇಪ್ಪತ್ತೊಂದನೆಯ ಶತಮಾನದಲ್ಲಿ ಈ ಕಥಾ ವಸ್ತುವನ್ನು ತನ್ನ ಕಾವ್ಯಕ್ಕೆ ಆರಿಸಿಕೊಂಡಿರುವುದಕ್ಕೆ ಕವಿ ಕೊಡುವ ಕಾರಣ ಈ ಶತಮಾನಕ್ಕೂ ಸಲ್ಲುವ, ಹೊಂದುವ ದ್ರವ್ಯ ಆ ಕಥೆಯಲ್ಲಿದೆ ಎಂಬುದು. ವಿಮರ್ಶಕರ ಅಭಿಮತದಂತೆ ವ್ಯಾಪಾರೀವರ್ಗದ ವಹಿವಾಟಿನಲ್ಲಿರಬಹುದಾದ ಆ ವರ್ಗದ ಜನರ ಜೀವನಕ್ರಮ, ಸಾಮಾಜಿಕ ರಚನೆಯಲ್ಲಿ ಅವರ ಸ್ಥಾನಮಾನ, ಜನಪದವೆನ್ನಬಹುದಾದ ನಿತ್ಯದ ನಡಾವಳಿಗಳು ಇವೇ ಮೊದಲಾದ ಹತ್ತು ಹಲವು ವಿಚಾರಗಳು ಈ ಕಥೆಯಲ್ಲಿ ಹಾಸುಹೊಕ್ಕಾಗಿವೆ. ಗತಕಾಲದ ವಿವರಗಳನ್ನು ಪ್ರಸ್ತುತ ಆಶಯ ನಡಾವಳಿಗಳೊಂದಿಗೆ ಹೊಂದಿಸುವ ಪ್ರಯತ್ನ ಈ ಕಾವ್ಯದ ವೈಶಿಷ್ಟ್ಯ.

ಇತ್ತೀಚೆಗೆ ಪ್ರಕಟಗೊಂಡಿರುವ ವೈಶಿಷ್ಟ್ಯಪೂರ್ಣ ಮಹಾಕಾವ್ಯವೆಂದರೆ ಬಿ.ಎಸ್.ತಲ್ವಾಡಿಯವರ ಸಿರಿಭುವನಜ್ಯೋತಿ. 20 ಸಾವಿರಕ್ಕೂ ಹೆಚ್ಚು ಪಂಕ್ತಿಗಳನ್ನುಳ್ಳ 800 ಪುಟಗಳ ಈ ಕಾವ್ಯ ಆದಾಮ (ಆಡಂ) ಪರ್ವ, ಕ್ರಿಸ್ತಪರ್ವಗಳೆಂಬ ಎರಡು ಪ್ರಮುಖ ವಿಭಾಗಗಳಲ್ಲಿ 43 ಕಿರಣ(ಸಂಧಿ) ಗಳನ್ನು ಒಳಗೊಂಡಿದೆ. ಇದರ ಛಂದಸ್ಸನ್ನು ಕವಿ ಸುಭಗ ರಗಳೆ ಎಂದು ಕರೆದಿದ್ದಾರೆ. ಏಸುವಿನ ಜೀವನ ಚರಿತ್ರೆಯೇ ಇದರ ವಸ್ತು. ಏಸುಕ್ರಿಸ್ತನ ಜೀವನ, ಆದೇಶ, ತತ್ತ್ವದರ್ಶನಗಳನ್ನು ಈ ಕಾವ್ಯ ಒಳಗೊಂಡಿದ್ದರೂ ಇಲ್ಲಿನ ಏಸು, ಮೇರಿ ಮೊದಲಾದ ಪ್ರಮುಖ ಪಾತ್ರಗಳ ಚಿತ್ರಣದಲ್ಲಿ ಇಡೀ ಕನ್ನಡ ಸಂಸ್ಕೃತಿ ವಿಶೇಷಗಳನ್ನು ಅಳವಡಿಸಿರುವುದು ಈ ಕಾವ್ಯದ ವೈಶಿಷ್ಟ್ಯ. ಇದನ್ನು ಕವಿ ಇನ್‌ಕಲ್ಚರೈಸೇಷನ್ ಎಂದು ಕರೆದುಕೊಂಡಿದ್ದಾರೆ. ಏಸುಕ್ರಿಸ್ತನನ್ನು ಕುರಿತಂತೆ ಇಷ್ಟು ಮಹತ್ತರವಾದ ಕೃತಿ ಕನ್ನಡದಲ್ಲಷ್ಟೇ ಅಲ್ಲ ಇಡೀ ಭಾರತೀಯ ಭಾಷೆಗಳಲ್ಲೇ ಮೊಟ್ಟಮೊದಲನೆಯದು ಎಂಬುದೇ ಈ ಮಹಾಕಾವ್ಯದ ಹೆಚ್ಚುಗಾರಿಕೆ.

ಆಧುನಿಕ ಸಾಹಿತ್ಯದಲ್ಲಿ ಹುಟ್ಟಿಬಂದ ಹಲವಾರು ಸಾಹಿತ್ಯ ಚಳವಳಿಗಳ ಪರಿಣಾಮದಿಂದ ಹಿಂದಿನ ಕವಿಗಳಂತೆ ವರ್ತಮಾನದ ಕವಿಗಳಿಗೆ ಮಹಾಕಾವ್ಯ ರಚನೆಯೊಂದೇ ಮಹಾಕವಿ ಎನಿಸಿಕೊಳ್ಳಲು ಅನಿವಾರ್ಯವೆನಿಸಿಲ್ಲ. ವಿದ್ವಾಂಸರ ಮತದಂತೆ ಇಂದು ಮಹಾಕಾವ್ಯ ನಿಜವಾದ ಅರ್ಥದಲ್ಲಿ ಒಂದು ಸಾಹಿತ್ಯ ಪ್ರಕಾರವಾಗಿದೆ. ಹಿಂದೆ ಮಹಾಕಾವ್ಯವೊಂದೇ ಬಹುಮಟ್ಟಿಗೆ ಅಂದಿನ ಯುಗಧರ್ಮವನ್ನು ಪ್ರಕಟಿಸುವ ಪ್ರಮುಖ ಮಾಧ್ಯಮವೆನಿಸಿತ್ತು. ಆದರೆ ಈ ಆಧುನಿಕ ಯುಗದಲ್ಲಿ ಒಂದು ಕಾಲದ, ಸಮಸ್ತ ಸಾಹಿತ್ಯ ಪ್ರಕಾರಗಳನ್ನು ಗಣನೆಗೆ ತೆಗೆದುಕೊಂಡು ಯುಗಧರ್ಮದ ಅಭಿವ್ಯಕ್ತಿಯನ್ನು ಗುರುತಿಸಬೇಕಿದೆ. ಆಯಾಕಾಲದ ಸಾಹಿತ್ಯಕ ಸಾಧನೆಗಳ ಮೌಲ್ಯಮಾಪನಕ್ಕೆ ಇಂದು ಮಹಾಕಾವ್ಯವೊಂದನ್ನೇ ಮಾನದಂಡವನ್ನಾಗಿ ಗಣಿಸಿದರೆ ಸಾಲದು, ಕವಿಯ ಉಳಿದ ಸಾಹಿತ್ಯಾಭಿವ್ಯಕ್ತಿಗಳ ಜೊತೆಯಲ್ಲಿ ಅದನ್ನೂ ಇರಿಸಿ ಮೌಲ್ಯಮಾಪನ ಮಾಡಬೇಕು ಎಂಬ ಅಭಿಪ್ರಾಯ ಹೆಚ್ಚು ಪ್ರಸ್ತುತವೆನಿಸಿದೆ. ಇತ್ತೀಚೆಗೆ ಪ್ರಕಟವಾಗಿರುವ ಅರವಿಂದ ಮಾಲಗತ್ತಿ ಅವರ ಚಾಂಡಾಲ ಸ್ವರ್ಗಾರೋಹಣಂ (2003), ಮುಳ್ಳೂರು ನಾಗರಾಜ್ ಅವರ ನೆಲದ ಜೋಗುಳ– ಇವು ಈ ದಿಕ್ಕಿನ ಗಮನಾರ್ಹ ಕೃತಿಗಳಾಗಿವೆ. ದಲಿತ ಸಂವೇದನೆಗಳನ್ನು ಮಹಾಕಾವ್ಯದ ತೆಕ್ಕೆಯಲ್ಲಿ ಹಿಡಿಯುವ ಪ್ರಯತ್ನ ಕನ್ನಡದಲ್ಲಿ ಇನ್ನೂ ಆಗಬೇಕಾಗಿದೆ. *

**ಮಹಾಛಂದಸ್ಸು:** ಸರಳ ರಗಳೆಯ ಪರಿಷ್ಕೃತ ರೂಪ. ಇದರ ಮೂಲ ಪ್ರಾಚೀನ ಕನ್ನಡದ ರಗಳೆಯ ಛಂದಸ್ಸಿನಲ್ಲಿ, ಅನಂತರ ಹೊಸಗನ್ನಡದಲ್ಲಿ ಬಳಕೆಗೆ ಬಂದ ಸರಳರಗಳೆಗಳಲ್ಲಿ, ಕುವೆಂಪು ಅವರ ಚಿತ್ರಾಂಗದ ಕಾವ್ಯದಲ್ಲಿ ಕಂಡುಬಂದರೂ ಅವುಗಳಿಂದ ಭಿನ್ನತೆಯನ್ನೂ ಪಡೆದುಕೊಂಡಿದೆ. ತಾಂತ್ರಿಕ ದೃಷ್ಟಿಯಿಂದ, ಇಂಗ್ಲಿಷ್ ಬ್ಲಾಂಕ್‌ವರ್ಸಿನ ಪ್ರಯೋಗಗಳಿಂದ ಪ್ರಭಾವಿತವಾದದ್ದು. ಈ ಹೆಸರನ್ನು ಕನ್ನಡದಲ್ಲಿ ಮೊದಲು ಬಳಸಿದವರು ಕುವೆಂಪು. ತಮ್ಮ ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ಮಹಾಛಂದಸ್ಸಿನ ಕಾವ್ಯ ಎಂಬ ವಿಶೇಷಣವನ್ನು ಶೀರ್ಷಿಕೆಯಲ್ಲೇ ಹಚ್ಚಿದ್ದಾರೆ. ಅವರ ಚಿತ್ರಾಂಗದಾ ಖಂಡಕಾವ್ಯದ ಛಂದಸ್ಸು ಪ್ರಥಮಾವೃತ್ತಿಯಲ್ಲಿ ಸರಳರಗಳೆಯಾಗಿದ್ದು, ಅನಂತರ ಅದನ್ನು ಪರಿಷ್ಕರಿಸಿ ಮಹಾಛಂದಸ್ಸಿಗೆ ತಿರುಗಿಸಲಾಗಿದೆ.

ಮಹಾಛಂದಸ್ಸಿನ ತಳಹದಿ ಸರಳರಗಳೆ; ಸರಳರಗಳೆಯ ಮೂಲ ಲಲಿತರಗಳೆ. ಹೊಸಗನ್ನಡ ಕವಿಗಳು ಲಲಿತ ರಗಳೆಯ ಆದ್ಯಂತ ಪ್ರಾಸಗಳನ್ನು ನಿವಾರಿಸಿ ಪಾದಾಂತ್ಯ ಯತಿನಿಯಮವನ್ನು ಉಲ್ಲಂಘಿಸಿ, ಪಾದಗಳನ್ನು ನಿಲುಗಡೆಯಿಲ್ಲದಂತೆ ಹರಿಯಬಿಟ್ಟು ಸರಳರಗಳೆಯನ್ನು ನಿರ್ಮಿಸಿಕೊಂಡರು. ಅದರ ಪರಿಣತರೂಪವೇ ಮಹಾಛಂದಸ್ಸು. ಇದನ್ನು ಸರಳರಗಳೆಯೆಂದೇ ಕರೆಯಬಾರದೇಕೆ, ಬೇರೊಂದು ಹೆಸರಿನ ಅಗತ್ಯವಿದೆಯೆ ಎಂಬ ಪ್ರಶ್ನೆ ಉದ್ಭವಿಸಿರುವುದುಂಟು. ಆದರೆ ತಮ್ಮದು ಸರಳರಗಳೆ ಅಲ್ಲವೇ ಅಲ್ಲ. ಅದು ಬಹಳ ಭಿನ್ನವಾದ ಛಂದಸ್ಸು ಎಂಬುದು ಕುವೆಂಪು ಅವರ ದೃಢನಿಲುವು. ಆದ್ದರಿಂದ ಚಿತ್ರಾಂಗದಾ, ಶ್ರೀರಾಮಾಯಣದರ್ಶನಂಗಳ ಛಂದಸ್ಸನ್ನು ಮಹಾಛಂದಸ್ಸು ಎಂದು ಕರೆಯುವುದೇ ಹೆಚ್ಚು ಯುಕ್ತವೆನಿಸುತ್ತದೆ (ಸಂಕೀರ್ಣರಗಳೆ ಎಂಬ ನಾಮಾಂತರವನ್ನೂ ಸರಳರಗಳೆಗೆ ವಿದ್ವಾಂಸರು ಸೂಚಿಸಿದ್ದಾರೆ).

ಮಹಾಛಂದಸ್ಸಿನ ಕೆಲವು ಲಕ್ಷಣಗಳು ಸರಳರಗಳೆಯಲ್ಲೇ ಇವೆ: ಗಣಪರಿವೃತ್ತಿ, ಯತಿಸ್ವಚ್ಛಂದತೆ, ಪರಿಚ್ಛೇದ ವಿಭಜನೆ ಇತ್ಯಾದಿ. ಆದರೆ ಸರಳರಗಳೆಯಲ್ಲಿ ಅಪವಾದಾತ್ಮಕವಾಗಿ ಕಂಡುಬರುವ ಈ ಲಕ್ಷಣಗಳು ಮಹಾಛಂದಸ್ಸಿನಲ್ಲಿ ಬಲುಮಟ್ಟಿಗೆ ನಿಯಮವಾಗಿ ಪರಿಣಮಿಸಿವೆ. ಎಲ್ಲಕ್ಕಿಂತ ಮುಖ್ಯವಾದುದು ಗಣಪರಿವೃತ್ತಿ. ಎಂ.ಚಿದಾನಂದ ಮೂರ್ತಿಯವರು ಹೇಳುವಂತೆ, 'ಮಹಾಛಂದಸ್ಸು' ಗಣಪರಿವೃತ್ತಿಯ ಪರಾಕಾಷ್ಠೆ. ಈ ಕಾರಣದಿಂದಲೇ ಅದು ವಿಶಿಷ್ಟವೆನಿಸುವುದು.

ಸರಳರಗಳೆಯ ಪ್ರತಿಪಾದದಲ್ಲಿ ಸಾಮಾನ್ಯವಾಗಿ ಐದು ಮಾತ್ರೆಯ ನಾಲ್ಕು ಗಣಗಳು ಬರುತ್ತವೆ; ಎಂದರೆ ಪ್ರತಿಪಾದಕ್ಕೆ ಇಪ್ಪತ್ತು ಮಾತ್ರೆಗಳು. ಆದರೆ ಮಹಾಛಂದಸ್ಸಿನ ಪಾದಗಳಲ್ಲಿ ಮಾತ್ರಾ ಸಂಖ್ಯೆ 19, 21, 22 ಹೀಗೆಲ್ಲ ವ್ಯತ್ಯಾಸವಾಗುವುದುಂಟು.

ಮಹಾಛಂದಸ್ಸು ಲೆಕ್ಕಾಚಾರದ ಪಂಚಮಾತ್ರಾ ಗಣಗಳಿಂದ ಯಾಂತ್ರಿಕವಾಗಿ ರೂಪುಗೊಂಡಿಲ್ಲ; ಇದರ ತಂತ್ರವೇ ಬೇರೆ, ಓಟವೇ ಬೇರೆ, ಜಾಯಮಾನವೇ ಬೇರೆ ಎನ್ನುತ್ತಾರೆ ಕುವೆಂಪು. ಅವರ ಪ್ರಕಾರ, ಮಹಾಛಂದಸ್ಸಿನ ಪಂಕ್ತಿಯ ಮೂಲ ಘಟಕ ಐದು ಮಾತ್ರೆಯ ಗಣವಲ್ಲ. ಎರಡು ಮತ್ತು ಮೂರು ಮಾತ್ರೆಯ (ಉಪ) ಗಣಗಳು. ಎಂತಲೇ ಬಹಳ ಕಡೆ ಪಂಚಮಾತ್ರಾಗಣ 2+3 ಅಥವಾ 3+2 ಆಗಿ ಒಡೆಯುತ್ತದೆ. ಇದಕ್ಕೆ ರಾಮಾಯಣದರ್ಶನಂ ಕೃತಿಯಲ್ಲಿ ಕೆಲವು ಉದಾಹರಣೆಗಳನ್ನು ನೋಡಬಹುದು:

2 3

ಹೇ । ಕಪಿ । ಧ್ವಜ ಗೌರವ ಪ್ರಾಣಸೂತ್ರರಿರ (ಪು:372 ಪಂಕ್ತಿ:498)

3 2

ನಮ್ಮ । ಪಡೆ । ಪಟ್ಟ ಕೋಟಲೆ ಕಿರಿದು ಮತ್ತೆಮ್ಮ

ದ್ವಿಮಾತ್ರಾಗಣಗಳು ಪ್ರತ್ಯೇಕವಾಗಿ ಪಾದದ ಆದಿ ಅಥವಾ ಮಧ್ಯ ಅಥವಾ ಅಂತ್ಯದಲ್ಲಿ ನಿಲಲ್ಲೂಬಹುದು. ಉದಾಹರಣೆಗೆ,

2 2 2

ಪುಸಿ । ಪುಸಿ । ಪುಸಿ । ಎನುತ್ತೆ ಕಿವಿಮುಚ್ಚಿದನ್ ಮಹಾ (ಪು:327 ಪಂಕ್ತಿ:339)

2

ಓಡುತಾ ಮಾಯಾವಿ । ತಾಂ । ಮೆಯ್ಗರೆದನೊಯ್ಯನೆಯೆ (ಪು:293 ಪಂಕ್ತಿ:40)

2

ತನ್ನಣ್ಣನೊಡಲೆಯೆನೆ ಚರಿಸಿದನ್ ಸುಗ್ರೀವ । ನುಂ (ಪು:293 ಪಂಕ್ತಿ:32)

5+5ರ ಸ್ಥಾನದಲ್ಲಿ 3+3+4, 3+4+3, 3+7 ಇತ್ಯಾದಿಯಾಗಿಯೂ ಗಣಪರಿವೃತ್ತಿ ಕಂಡುಬರುವುದು ಸಾಮಾನ್ಯ. ಕೆಲವು ಉದಾಹರಣೆಗಳು:

3 3 4

ಏನು । ಮೌನ । ವಿದೆನ್ನ ಕೋಮಲೆ? ಕೋಪವೆ ನಿನಗೆ (ಪು:623, ಪಂಕ್ತಿ:1)

3 4 3

ತೆರೆಯ । ತೇಜಿಯ । ಪಾಯ್ವ । ದಳದಂತೆ. ಕಣ್ ಸೆಳೆದು(ಪು:435, ಪಂಕ್ತಿ:23)

3 7

ನಮ್ಮ । ಕತೆಯುಮನಂತೆ । ವೆತೆಯನಾಕರ್ಣಿಸುತೆ (ಪುಟ: 394, ಪಂಕ್ತಿ:501)

ಪಂಚಮಾತ್ರಾಗಣದ ಏಕತಾನತೆಗೆ ಅವಕಾಶವಾಗದಂತೆ ಕವಿ ಪರಮಾವಧಿ ಸ್ವಾತಂತ್ರ್ಯವಹಿಸಿರುವುದಕ್ಕೆ ಇದೆಲ್ಲ ಸಾಕ್ಷಿ. ಆದರೆ ಮಹಾಛಂದಸ್ಸಿನಲ್ಲಿ ಐದು ಮಾತ್ರೆಯ ಗಣಗಳು ಬರುವುದೇ ಇಲ್ಲವೆಂದು ಅರ್ಥವಲ್ಲ.

ಮಹಾಛಂದಸ್ಸಿನಲ್ಲಿ ಪಂಕ್ತಿ ಮೂಲಮಾನವಲ್ಲವೆಂದೂ ವಾಕ್ಯ ಮೂಲಮಾನವೆಂದೂ ಹೇಳುತ್ತಾರೆ ಕುವೆಂಪು. ಮಹಾಛಂದಸ್ಸು ಸರ್ವಛಂದೋಸಮನ್ವಯ ಎಂದೂ ಅವರ ಅಭಿಮತ. ವೃತ್ತ, ಷಟ್ಪದಿ ಮುಂತಾದವುಗಳ ಲಯಗಳನ್ನು ಅದರಲ್ಲಿ ಭಾಗಶಃ ಗುರುತಿಸಬಹುದು. ಆದರೆ ವಿಪುಲ ಗಣಪರಿವೃತ್ತಿ ಈ ಲಯವೈವಿಧ್ಯಕ್ಕೆ ಕಾರಣ. ಶ್ರೀರಾಮಾಯಣ ದರ್ಶನದ ಮಹತ್ತಿಗೆ ತಾಂತ್ರಿಕವಾಗಿ ಅದರ ಮಹಾಶೈಲಿಯಂತೆ ಮಹಾಛಂದಸ್ಸೂ ಸಹಾಯಕವಾಗಿದೆ. *

**ಮಾಹಾತ್ಮೆಗಳು:** ಕ್ಷೇತ್ರ ಸಂದರ್ಶನ, ಪವಿತ್ರ ನದೀಸ್ನಾನ, ಪುಣ್ಯ ಶ್ಲೋಕದ ಜೀವನಾಧ್ಯಯನ ಮುಂತಾದವುಗಳ ಮೌಲ್ಯಗಳನ್ನು ಶ್ರುತಪಡಿಸುವ ಕೃತಿಗಳು. ಪಾಪಕಲುಷಿತ ಜನರು ಪಾಪ ಮುಕ್ತರಾಗಲು ವ್ರತಾಚರಣೆ, ತೀರ್ಥಸ್ನಾನ, ಕ್ಷೇತ್ರ ಸಂದರ್ಶನ ದೇವತಾ ಪೂಜೆ ಇವನ್ನು ಮಾಡಬೇಕು ಎಂಬ ಧರ್ಮಸೂಕ್ಷ್ಮವಿದೆ. ಈ ಕಾರ್ಯಗಳಲ್ಲಿ ಪ್ರವೃತ್ತಿ ಉಂಟಾಗಲು ಇವುಗಳ ಶ್ರೇಷ್ಠತೆಯನ್ನೂ ಗುಣಕೀರ್ತನವನ್ನೂ ಫಲಗಳನ್ನೂ ತಿಳಿಸುವ ಅನೇಕ ಕೃತಿಗಳಿವೆ. ಇವೇ ಮಾಹಾತ್ಮ್ಯಗಳನ್ನು ಹೇಳುವ ಕೃತಿಗಳು. ಸಾಮಾನ್ಯವಾಗಿ ಇವು ಅಧಿಕವಾಗಿ ಕಂಡುಬರುವುದು ಸಂಸ್ಕೃತ ಪುರಾಣ ಗ್ರಂಥಗಳಲ್ಲಿ. ಕ್ಷೇತ್ರತೀರ್ಥಮಾಸವ್ರತ ಇವೇ ಮೊದಲಾದವುಗಳಿಗೆ ಸಂಬಂಧಪಟ್ಟ ಮಾಹಾತ್ಮ್ಯ ಕೃತಿಗಳು ಅನೇಕವಿವೆ.

ಶಿವ-ಪಾರ್ವತಿ, ಶಂಕರ-ನಾರದ, ನಾರದ-ಭೃಗು, ಪೃಥು-ನಾರದ, ಸೂತ-ಋಷಿಗಳು ಮೊದಲಾದವರ ಸಂವಾದ ರೂಪವಾಗಿ ಈ ಮಾಹಾತ್ಮ್ಯ ಕೃತಿಗಳು ಕಂಡುಬರುತ್ತವೆ. ಇವನ್ನೇ ಆಯಾಕೃತಿಗಳಲ್ಲಿ ವಿವರಿಸಿರುವ ನಿರ್ದಿಷ್ಟ ವಿಷಯಗಳಿಗೆ ತಕ್ಕಂತೆ ಕ್ಷೇತ್ರತೀರ್ಥ ಮಾಸ ವ್ರತ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಪ್ರತಿಯೊಂದು ಮಾಹಾತ್ಮ್ಯದಲ್ಲೂ ಅದಕ್ಕೆ ಸಂಬಂಧಪಟ್ಟ ಕಥೆ ಇರುತ್ತದೆ. ಮಾಹಾತ್ಮ್ಯ ಶ್ರವಣದಿಂದ ಪಾಪನಿವಾರಣೆಯಾಗಿ ಮುಕ್ತಿ ದೊರೆಯುತ್ತದೆಂದು ಕೃತಿಯ ಕೊನೆಯಲ್ಲಿ ಫಲಶ್ರುತಿ ಇರುತ್ತದೆ.

ಕನ್ನಡ ಸಾಹಿತ್ಯದಲ್ಲೂ ಮಾಹಾತ್ಮ್ಯ ಕೃತಿಗಳು ಹಲವಾರು ಇವೆ. ಇವುಗಳಲ್ಲಿ ಕೆಲವು ಛಂದೋಬದ್ಧವಾಗಿಯೂ ಕೆಲವು ಚಂಪೂರೂಪವಾಗಿಯೂ ಮತ್ತೆ ಕೆಲವು ಗದ್ಯದಲ್ಲಿಯೂ ಇವೆ. 16ನೆಯ ಶತಮಾನದ ತನಕ ಸ್ವತಂತ್ರವಾಗಿ ಯಾವ ಮಾಹಾತ್ಮ್ಯ ಗ್ರಂಥವೂ ಇದ್ದಂತೆ ಕಾಣಬರುವುದಿಲ್ಲ. ಕೆಲವು ಕೃತಿಗಳ ಮಧ್ಯದಲ್ಲಿ ಮಂತ್ರ ಮಾಹಾತ್ಮ್ಯ, ಪ್ರಸಾದ ಮಾಹಾತ್ಮ್ಯ, ವಿಭೂತಿ ಮಾಹಾತ್ಮ್ಯ ಎಂಬ ಹೆಸರಿನಲ್ಲಿ ಅಲ್ಪ ಪ್ರಮಾಣದ ಗ್ರಂಥ ಭಾಗಗಳು ಮಾತ್ರ ಇದಕ್ಕೂ ಮೊದಲು ಇದ್ದಂತೆ ತಿಳಿದುಬರುತ್ತದೆ. ಮೈಸೂರರಸರ ಪೀಳಿಗೆಯಲ್ಲಿ ಈ ಮಾಹಾತ್ಮ್ಯ ಗ್ರಂಥಗಳು ಹೆಚ್ಚಾಗಿ ರಚಿತವಾಗಿವೆ. ಅದರಲ್ಲೂ ಚಿಕ್ಕದೇವರಾಯ ಮತ್ತು ಮುಮ್ಮಡಿಕೃಷ್ಣರಾಜ ಇವರ ಕಾಲದಲ್ಲಿ ರಚಿತವಾಗಿರುವ ಮೇಲುಕೋಟೆ, ಕಂಚಿ, ಶ್ರೀರಂಗ ಕ್ಷೇತ್ರಗಳ ಮತ್ತು ಕಾವೇರಿ ನದಿಯ ಮಾಹಾತ್ಮೆಯ ಕೃತಿಗಳೇ ಅಧಿಕ. ಕೆಲವರು ಸಂಸ್ಕೃತದಲ್ಲಿರುವ ಮಾಹಾತ್ಮ್ಯ ಗ್ರಂಥಗಳಿಗೆ ಕನ್ನಡದಲ್ಲಿ ಟೀಕನ್ನು ರಚಿಸಿರುತ್ತಾರೆ. ಮತ್ತೆ ಕೆಲವರು ಅದನ್ನೇ ಆದರಿಸಿ ಸ್ವತಂತ್ರವಾದ ಕೃತಿಗಳನ್ನೇ ರಚಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಕೆಲವು ಮುಖ್ಯ ಮಾಹಾತ್ಮ್ಯ ಗ್ರಂಥಗಳು ಕವಿ, ಕಾಲ, ವಿಷಯದ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ:

| **ಗ್ರಂಥದ ಹೆಸರು** | **ಕವಿ** | **ಕಾಲ** | **ವಿಷಯ ವಿಶೇಷತೆ** |
|---|---|---|---|
| ಬಳ್ಳಿಗಾವಿ ಮಾಹಾತ್ಮ್ಯ | ಬಸವಲಿಂಗ | ಸು.1611 | ವಾರ್ಧಕ ಷಟ್ಪದಿ, ಶಿವಾಧಿಕ್ಯ ವಿಚಾರ |
| ನಂದಿಮಾಹಾತ್ಮ್ಯ | ಗೋವಿಂದ | ಸು.1650 | (ಭಾ.ಷ.) ನಂದಿಯ ಮಹಿಮೆ |
| ತುಲಸೀ ಮಾಹಾತ್ಮ್ಯ | ಅಚ್ಯುತದಾಸ | ಸು. 1650 | (ಭಾ.ಷ.) ತುಲಸಿಯ ಮಹಿಮೆ |
| ಪಶ್ಚಿಮರಂಗ ಮಾಹಾತ್ಮ್ಯ | ಚಿಕ್ಕುಪಾಧ್ಯಾಯ | ಸು.1672 | (ಭಾ.ಷ.) ಶ್ರೀರಂಗಪಟ್ಟಣದ ಮಹಿಮೆ (ಸಾಂಗತ್ಯ) |
| ಯಾದವಗಿರಿ ಮಾಹಾತ್ಮ್ಯ | ಚಿಕ್ಕುಪಾಧ್ಯಾಯ | --,,-- | ಮೇಲುಕೋಟೆ ಮಹಿಮೆ (ಸಾಂಗತ್ಯ) |
| ಕಾವೇರಿ ಮಾಹಾತ್ಮ್ಯ | ರಂಗಯ್ಯ | ಸು.1730 | (ಭಾ.ಷ.) ಕಾವೇರಿ ನದಿ ಮಹಿಮೆ |
| ಸೇತೂ ಮಹಾತ್ಮ್ಯ | ವೈದ್ಯೇತರ ಭಕ್ತ | ಸು.1715 | (ಭಾ.ಷ.) ಸೇತೂ ಮಹಿಮೆ |
| ಬ್ರಹ್ಮೋತ್ತರ ಖಂಡ | ಮಹಾದೇವ | ಸು.1725 | (ಭಾ.ಷ.) ಷಡಕ್ಷರ, ವಿಭೂತಿ, ರುದ್ರಾಕ್ಷಿ, ಪುರಾಣ ಶ್ರವಣ ಮೊದಲಾದ ಮಹಿಮೆಗಳು |
| ದೇವೀ ಮಾಹಾತ್ಮ್ಯ | ಚಿದಾನಂದಾವಧೂತ | ಸು.1750 | (ಭಾ.ಷ.) ದೇವೀ ಮಹಿಮೆ |
| ಸಹ್ಯಾದ್ರಿ ಮಹಿಮೆ | ಬಾಲಭಾಸ್ಕರ | ? | (ಭಾ.ಷ.) ಸಹ್ಯಾದ್ರಿ ಮಹಿಮೆ |
| ಯಾದವಗಿರಿ ಮಾಹಾತ್ಮ್ಯ | ಪ್ರತಿವಾದಿ ಭಯಂಕರಂ ವೆಂಕಟಚಾರ್ಯ ಶಿಷ್ಯ | ? | (ಭಾ.ಷ.) ಮೇಲುಕೋಟೆ ಮಹಿಮೆ |

| | | | |
|---|---|---|---|
| ಕಾವೇರಿ ಮಾಹಾತ್ಮ್ಯ | ಲಿಂಗ ಕವಿ | ಸು.1850 | (ಭಾ.ಷ.) ಕಾವೇರಿ ನದಿ ಮಹಿಮೆ (ಸಾಂಗತ್ಯ) |

**ಚಂಪೂ ಗ್ರಂಥಗಳು**

| | | | |
|---|---|---|---|
| ಕಮಲಾಚಲ ಮಾಹಾತ್ಮ್ಯ | ಚಿಕ್ಕುಪಾಧ್ಯಾಯ | 1672 | ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಹಿಮೆ |
| ಹಸ್ತಿಗಿರಿ ಮಹಾತ್ಮ್ಯ | ಚಿಕ್ಕುಪಾಧ್ಯಾಯ | --,,-- | ಕಂಚಿ ಕ್ಷೇತ್ರದ ಮಹಿಮೆ |
| ಯಾದವಗಿರಿ ಮಾಹಾತ್ಮ್ಯ | ತಿಮ್ಮ | 1677 | ಮೇಲುಕೋಟೆ ಮಹಿಮೆ |
| ಪಶ್ಚಿಮರಂಗ ಮಾಹಾತ್ಮ್ಯ | ,, | --,,-- | ಶ್ರೀರಂಗಪಟ್ಟಣದ ಮಹಿಮೆ |
| ವೆಂಕಟಗಿರಿ ಮಾಹಾತ್ಮ್ಯ | ,, | --,,-- | ತಿರುಪತಿ ಕ್ಷೇತ್ರದ ಮಹಿಮೆ |
| ಶ್ರೀರಂಗ ಮಾಹಾತ್ಮ್ಯ | ಮಲ್ಲಿಕಾರ್ಜುನ | 1678 | ಶ್ರೀರಂಗ ಕ್ಷೇತ್ರದ ಮಹಿಮೆ |
| ಹಾಲಾಸ್ಯ ಮಾಹಾತ್ಮ್ಯ | ವೆಂಕಟೇಶ | 1740 | ಶಿವ ಮಹಿಮೆ |
| ಶ್ರೀರಂಗಮಾಹಾತ್ಮ್ಯ | ಸಿಂಗರಾರ್ಯ | 1740 | ಶ್ರೀರಂಗ ಕ್ಷೇತ್ರದ ಮಹಿಮೆ (ಬೆಟ್ಟದ ಚಾಮರಾಜನ ಉಪಾಧ್ಯಾಯ) |

**ಗದ್ಯ ಗ್ರಂಥಗಳು**

| | | | |
|---|---|---|---|
| ಶ್ರೀರಂಗ ಮಾಹಾತ್ಮ್ಯ | ರಂಗಾಚಾರ್ಯ | ಸು.1570 | ಶ್ರೀರಂಗ ಕ್ಷೇತ್ರದ ಮಹಿಮೆ |
| ಯದುಗಿರಿ ಮಾಹಾತ್ಮ್ಯ | ಚಿಕ್ಕುಪಾಧ್ಯಾಯ | 1672 | ಮೇಲುಕೋಟೆ ಮಹಿಮೆ |
| ವೆಂಕಟಗಿರಿ ಮಾಹಾತ್ಮ್ರ | ,, | ,, | ತಿರುಪತಿಕ್ಷೇತ್ರದ ಮಹಿಮೆ |
| ಶ್ರೀರಂಗ ಮಾಹಾತ್ಮ್ಯ | --,,-- | --,,-- | ಶ್ರೀರಂಗಕ್ಷೇತ್ರದ ಮಹಿಮೆ |
| ಹಾಲಾಸ್ಯ ಮಾಹಾತ್ಮ್ಯ | ಕಳಲೆ ನಂಜರಾಜ | 17410 | ಶಿವ ಮಹಿಮೆ |
| ಭ್ರದಗಿರಿ ಮಾಹಾತ್ಮ್ಯ | --,,-- | --,,-- | ಭದ್ರಗಿರಿಕ್ಷೇತ್ರ ಮಹಿಮೆ |
| ಹರದತ್ತಾಚಾರ್ಯ ಮಾಹಾತ್ಮ್ಯ | --,,-- | --,,-- | ಹರದತ್ತಾಚಾರ್ಯ ಮಹಿಮೆ |
| ಕಕೂದ್ಗಿರಿ ಮಾಹಾತ್ಮ್ಯ | --,,-- | --,,-- | ಶಿವಗಂಗೆ ಮಹಿಮೆ |
| ಗರಳಪುರಿ ಮಾಹಾತ್ಮ್ಯ | --,,-- | --,,-- | ನಂಜನಗೂಡು ಮಹಿಮೆ |
| ಸೇತು ಮಹಿಮಾದರ್ಶ | --,,-- | --,,-- | ಸೇತು ಮಹಿಮೆ |
| ಕಮಲಾಚಲ ಮಾಹಾತ್ಮ್ಯ | ಗೋಪಾಲರಾಜ | --,,-- | ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಹಿಮೆ |
| ಅಖಂಡಕಾವೇರಿ ಮಾಹಾತ್ಮ್ಯ | ಮುಮ್ಮಡಿ ಕೃಷ್ಣರಾಜ | 1794–1868 | ಕಾವೇರಿ ನದಿಯ ಮಹಿಮೆ |
| ಚುಂಚನಕಟ್ಟೆ ಮಾಹಾತ್ಮ್ಯ | --,,-- | --,,-- | ಚುಂಚನಕಟ್ಟೆ ಮಹಿಮೆ |
| ತಲಕಾವೇರಿ ಮಾಹಾತ್ಮ್ಯ | --,,-- | --,,-- | ತುಲಾಮಾಸದ ಕಾವೇರಿಯ ಮಹಿಮೆ |
| ದೇವೀ ಮಾಹಾತ್ಮ್ಯ | --,,-- | --,,-- | ದೇವಿಯ ಮಹಿಮೆ |
| ಹಾಲಾಸ್ಯ ಮಾಹಾತ್ಮ್ಯ | --,,-- | --,,-- | ಶಿವ ಮಹಿಮೆ |
| ತಲಕಾವೇರೀ ಮಾಹಾತ್ಮ್ಯ | ಚೆಲುವಾಂಬೆ | 1725 | ತುಲಾಮಾಸದ ಕಾವೇರಿ ನದಿಯ ಮಹಿಮೆ |
| ಧನುರ್ಮಾಸ ಮಹಿಮೆ | ವೆಂಕಟರಾಮಾಶಾಸ್ತ್ರಿ | 1823 | ಧನುರ್ಮಾಸದ ಮಹಿಮೆ |

**ಪದಗಳು**

| | | | |
|---|---|---|---|
| ವೆಂಕಟಾಚಲ ಮಾಹಾತ್ಮ್ಯ ಲಾಲಿಪದ | ಚೆಲುವಾಂಬೆ | 1725 | ತಿರುಪತಿ ಕ್ಷೇತ್ರ ಮಹಿಮೆ |

ಇವಲ್ಲದೆ ದೇವೀ ಮಾಹಾತ್ಮ್ಯ, ಕಲ್ಯಾಣ ಪಟ್ಟಣದ ಮಾಹಾತ್ಮ್ಯ, ತಾರ್ಕಿಕ ಮಾಹಾತ್ಮ್ಯ, ಗೋವರ್ಧನಗಿರಿ ಮಾಹಾತ್ಮ್ಯ, ಜಂಗಮ ಮಾಹಾತ್ಮ್ಯ, ವಿಭೂತಿ ಮಾಹಾತ್ಮ್ಯ, ವ್ಯಾಘ್ರಾಚಲ ಮಾಹಾತ್ಮ್ಯ, ಸಾಲಿಗ್ರಾಮ ಮಾಹಾತ್ಮ್ಯ, ಕೊಲ್ಲಿಪಾತ ಮಾಹಾತ್ಮ್ಯ, ಕೈಶಿಕ ದ್ವಾದಶೀ ಮಾಹಾತ್ಮ್ಯ, ಕಾಶೀಮಾಹಾತ್ಮ್ಯ ಇವೇ ಮೊದಲಾದ ಅನೇಕ ಮಾಹಾತ್ಮ್ಯಗಳನ್ನು ತಿಳಿಸುವ ಕೃತಿಗಳಿವೆ. *

**ಮಹಾದೇವ:** ಸೇವುಣ ವಂಶದ ಅರಸ (ಸು. 1261–71). ಸಿಂಘಣನ ಮೊಮ್ಮಗ, ಕೃಷ್ಣನ ಸಹೋದರ ಮತ್ತು ಉತ್ತರಾಧಿಕಾರಿ. ದೊರೆಯಾದ ಮೇಲೆ ಮಹಾದೇವ ಉತ್ತರ ಕೊಂಕಣದಲ್ಲಿ ಆಳುತ್ತಿದ್ದ ಶಿಲಾಹಾರ ಸೋಮೇಶ್ವರನ ಮೇಲೆ ನೌಕಾಯುದ್ಧವನ್ನು ಮಾಡಿ ಅವನನ್ನು ಸೋಲಿಸಿದ. ಅನಂತರ ಗುಜರಾತಿನ ರಾಜ ವೀಸಲದೇವನನ್ನೂ ಸೋಲಿಸಿದ. ಇತ್ತಕಡೆ ಆಂಧ್ರದೇಶದಲ್ಲಿ ಕಾಕತೀಯ ರುದ್ರಮದೇವಿಯ ಮೇಲೆ ಯುದ್ಧ ಮಾಡಿದ.

ಆದರೆ ಇದು ಬಹುಶಃ ನಿರ್ಣಾಯಕ ಯುದ್ಧವಾಗಲಿಲ್ಲ. ಅನಂತರ ಮಹಾದೇವ ಕದಂಬ ಕಾಮದೇವನನ್ನು ಸೋಲಿಸಿದ. ಕಾಮದೇವ ಮಹಾದೇವನ ಸಾಮಂತನಾದ. ಇನ್ನೂ ದಕ್ಷಿಣಕ್ಕೆ ಮುಂದುವರೆದು ಸಾಮಂತರ ರಾಜ ಬೊಮ್ಮರಸನ ಮೇಲೆ ಯುದ್ಧ ಮಾಡಿದರೂ ಇದರಿಂದ ವಿಶೇಷ ಪ್ರಯೋಜನ ವೇನೂ ಆಗಲಿಲ್ಲ. ಇದೇ ಸಮಯದಲ್ಲಿ ಮಹಾದೇವ ಹೊಯ್ಸಳರನ್ನೂ ಎದುರಿಸಬೇಕಾಯಿತು. ಹೊಯ್ಸಳ ಶಾಸನಗಳ ಮಾಹಿತಿಯಂತೆ ಮಹಾದೇವ ಸೋತು ಓಡಿಹೋದ. ಗುತ್ತರು, ರಟ್ಟರು ಮತ್ತು ಸಿಂದರು ಮಹಾದೇವನ ಸಾಮಂತರಾಗಿದ್ದರು. ಮಹಾದೇವನ ರಾಜ್ಯದಲ್ಲಿ ಬಿಜಾಪುರ, ಧಾರವಾಡ, ಬೆಳಗಾಂವಿ ಜಿಲ್ಲೆಗಳೂ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಕೊಲ್ಲಾಪುರದ ಅನೇಕ ಭಾಗಗಳೂ ಉತ್ತರ ಮತ್ತು ದಕ್ಷಿಣ ಕೊಂಕಣಗಳೂ ಚತ್ತೀಸ್‌ಘಡವೂ ಸೇರಿದ್ದವು. ಮಹಾದೇವ ವಿವಿಧ ಧರ್ಮಗಳ ಆಲಯಗ ಳಿಗೂ ದತ್ತಿಗಳನ್ನು ಬಿಟ್ಟುಕೊಟ್ಟಿದ್ದ. ಇವನ ಕಾಲದಲ್ಲಿ ಮಹಾನುಭಾವ ಪಂಥ ತಲೆಯೆತ್ತುತ್ತಿದ್ದಿತು. ಜಾತುರ್ವರ್ಗ ಚಿಂತಾಮಣಿಯ ಕರ್ತೃವಾದ ಹೇಮಾದ್ರಿ ಮಹಾದೇವನ ಆಸ್ಥಾನದಲ್ಲಿದ್ದ. ಮಹಾದೇವ ಸು. 1271ರಲ್ಲಿ ಮರಣಹೊಂದಲು ಅವನ ಮಗನಾದ ಆಮಣ ದೊರೆಯಾದ. (ಎ.ವಿ.ಎನ್.)

**ಮಹಾದೇವಪ್ಪ, ಮೈಲಾರ:** 1911–43. ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮನಾದ ವೀರ. ಇವರು ಬ್ಯಾಡಗಿ ತಾಲ್ಲೂಕಿನ ಮೋಟೆಬೆನ್ನೂರಿನಲ್ಲಿ 1911 ಜುಲೈ 8 ರಂದು ಜನಿಸಿದರು. ಇವರ ತಂದೆ ಮಾರ್ತಾಂಡಪ್ಪ ಮತ್ತು ತಾಯಿ ಬಸವಮ್ಮ. 1925ರಲ್ಲಿ ಇವರಿಗೆ ಸಿದ್ದಮ್ಮ ಎಂಬ ಕನ್ಯೆಯೊಡನೆ ವಿವಾಹವಾಯಿತು.

ಮಹಾದೇವಪ್ಪನವರು ಹಿರೇಕೆರೂರು ತಾಲ್ಲೂಕಿನ ಹಂಸಭಾವಿ ಹೈಸ್ಕೂಲಿ ನಲ್ಲಿ ಇಂಗ್ಲಿಷ್ ನಾಲ್ಕನೆಯ ಇಯತ್ತೆವರೆಗೆ ವ್ಯಾಸಂಗ ಮಾಡಿದರು. ಅಲ್ಲಿ ಇವರು ಅನೇಕ ದೇಶಭಕ್ತ ಅಧ್ಯಾಪಕರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ದುಮುಕಿದರು. ಭಾರತ ಸಂಚಾರಿ ಗೋಸಾವಿ ಎಂಬ ಹಿಂದಿ ಉಪಾಧ್ಯಾಯರು ಮಹಾದೇವಪ್ಪನವರು ದೇಶಭಕ್ತರಾಗಲು ಮುಖ್ಯ ಕಾರಣರು. ಎನ್.ಬಿ.ಹಿರೇಮಠರ ನೇತೃತ್ವದಲ್ಲಿ ಧಾರವಾಡದಲ್ಲಿ ಸ್ಥಾಪಿಸಿದ್ದ ಭಾರತೀಯ ತರುಣ ಸಂಘವನ್ನು ಮಹಾದೇವಪ್ಪನವರು 1929ರಲ್ಲಿ ಸೇರಿದರು.

1930ರ ಏಪ್ರಿಲ್ 13 ರಂದು ದಾಂಡಿಯಾತ್ರೆಯಲ್ಲಿ ಭಾಗವಹಿಸಿ ಉಪ್ಪಿನ ಕಾಯಿದೆಯನ್ನು ಸಾಂಕೇತಿಕವಾಗಿ ಭಂಗಗೊಳಿಸಿದರು. ಇದರಲ್ಲಿ ಕರ್ನಾಟಕ ವನ್ನು ಪ್ರತಿನಿಧಿಸುತ್ತಿದ್ದ ಮಹದೇವಪ್ಪನವರೇ ಅತ್ಯಂತ ಕಿರಿಯ ಸತ್ಯಾಗ್ರಹಿ. ನಾಲ್ಕು ತಿಂಗಳ ಕಾರಾಗೃಹ ವಾಸವನ್ನು ಮುಗಿಸಿ ಹೊರಬರುತ್ತಲೇ ಪುನಃ ಬಂಧನಕ್ಕೊಳಗಾದ ಇವರು 1931ರಲ್ಲಿ ಗಾಂಧಿ–ಇರ್ವಿನ್ ಒಪ್ಪಂದ ವಾದಾಗ ಬಿಡುಗಡೆಯಾದರು.

ಮುಂದೆ 1932ರಲ್ಲಿ ಕಾಯಿದೆಭಂಗ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದ ಮಹಾದೇವಪ್ಪನವರು 1933ರ ಕೊನೆಯಲ್ಲಿ ಬಿಡುಗಡೆ ಹೊಂದಿದರು. ಗಾಂಧೀಜಿಯವರ ಆಹ್ವಾನದ ಮೇರೆಗೆ ತಮ್ಮ ಪತ್ನಿಯೊ ಡನೆ ಸಾಬರಮತಿ ಆಶ್ರಮಕ್ಕೆ ಹೋಗಿ ದೀರ್ಘಕಾಲ ಅಲ್ಲಿದ್ದು ವಾಪಸ್ಸು ಬಂದು ಖಾದಿ ಉತ್ಪಾದನೆಯಲ್ಲಿ ಮಗ್ನರಾದರು. ಕೊರಡೂರಲ್ಲಿ ಒಂದು ಆಶ್ರಮ ನಡೆಸಿದರು. 1940–41ರಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನಾಚರಿಸಿ ಮತ್ತೊಂದು ವರ್ಷ ಕಾರಾಗೃಹದಲ್ಲಿದ್ದರು.

1942ರ ಕ್ವಿಟ್ ಇಂಡಿಯಾ ಚಳವಳಿ ಕಾಲದಲ್ಲಿ ಮುಖ್ಯ ಕಾಂಗ್ರೆಸ್ ನಾಯಕರೆಲ್ಲಾ ಬಂಧಿತರಾಗಿದ್ದಾಗ ಮಹಾದೇವಪ್ಪನವರು ಬಲವಾದ ದೇಶಭಕ್ತರ ಒಂದು ತಂಡವನ್ನು ಸಂಘಟಿಸಿ ಎಪ್ಪತ್ತೈದು ವೀರಪ್ರಕರಣಗಳನ್ನು ನಡೆಸಿ ಪ್ರಸಿದ್ಧರಾದರು. ಧಾರವಾಡ, ಬಳ್ಳಾರಿ ಜಿಲ್ಲೆಗಳು ಆಗ ಇವರ ಕಾರ್ಯಕ್ಷೇತ್ರವಾಗಿದ್ದವು. 1943ರ ಏಪ್ರಿಲ್ ಒಂದನೆಯ ತಾರೀಕು ಮಹಾದೇವಪ್ಪನವರ ಜೀವನದ ದುರ್ದಿನ. ಆ ದಿನ ಇವರು ಹೊಸರಿತ್ತಿಯ ವೀರಭದ್ರ ದೇವಾಲಯಕ್ಕೆ ಮುತ್ತಿಗೆ ಹಾಕಿ ಅಲ್ಲಿದ್ದ ಕಂದಾಯದ ಹಣವನ್ನು ದೋಚಲು ಪ್ರಯತ್ನ ಮಾಡಿದರು. ಮರೆಯಲ್ಲಿ ಅಡಗಿದ್ದ ಪೋಲೀಸನೊಬ್ಬ ಹಾರಿಸಿದ ಗುಂಡು ಇವರ ಎದೆಯನ್ನು ಸೀಳಿತು. ಇವರ ಸಂಗಡವೇ ಇದ್ದ ಈರಯ್ಯ ಮತ್ತು ತಿರಕಪ್ಪ ಎಂಬಿಬ್ಬರೂ ಪೋಲೀಸರ ಗುಂಡಿಗೆ ಬಲಿಯಾದರು. (ಎಚ್.ಪಿ.ಎಸ್.)

**ಮಹಾದೇವಿಯಮ್ಮ:** ಹನ್ನೆರಡನೆಯ ಶತಮಾನದ ಶಿವಶರಣೆ ಹಾಗೂ ವಚನಕಾರ್ತಿ. ಈಕೆ ಮೋಳಿಗೆ ಮಾರಯ್ಯನ ಪತ್ನಿ. ಮೋಳಿಗೆ ಮಾರಯ್ಯ ಕಾಶ್ಮೀರದಲ್ಲಿ ಮಹಾದೇವರಾಜನೆಂಬ ಹೆಸರಿನಿಂದ ಮಾಂಡವ್ಯಪುರವನ್ನು ಆಳುತ್ತಿದ್ದ. ಕಾಲಕ್ರಮದಲ್ಲಿ ಶಿವಾನುಭವಕ್ಕೆ ಒಲಿದು ಈಕೆ ತನ್ನ ಪತಿ ಮಾರಯ್ಯ ಹಾಗೂ ಆತನ ತಂಗಿ ಬೊಂತಾದೇವಿ ಅವರೊಡನೆ ಕಲ್ಯಾಣಕ್ಕೆ ಬಂದರು. ಕಲ್ಯಾಣದಲ್ಲಿ ಇವರು ಕಟ್ಟಿಗೆ ಒಡೆಯುವ ಕೆಲಸವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಜೀವಿಸುತ್ತಿದ್ದರು. ಈ ಶರಣ ದಂಪತಿಗಳು ವಚನಗಳನ್ನು ರಚಿಸಿದ್ದಾರೆ. ಮಲ್ಲಿಕಾರ್ಜುನ ಎಂಬುದು ಈಕೆಯ ವಚನಗಳ ಅಂಕಿತ. ಈಕೆಯ 69 ವಚನಗಳು ಸಿಕ್ಕಿವೆ. ಒಂದು ವಚನ ಹೀಗಿದೆ:

ನೀರು ನೆಲೆಯಿಲ್ಲದೆ ಇರಬಹುದೆ
ಬೀಜ ನೆಲೆಯಿಲ್ಲದೆ ಹುಟ್ಟಬಹುದೆ
ಜ್ಞಾನ ಕ್ರಿಯೆಯಿಲ್ಲದೆ ಅರಿಯಬಹುದೆ
ಚಿತ್ತಿಚಿತ್ತುವಿಲ್ಲದೆ ವಸ್ತುವ ಲಕ್ಷಿಸಿ ಗ್ರಹಿಸಬಲ್ಲುದೆ
ಇಂತೀ ಕ್ರೀ ಜ್ಞಾನ ಸಂಬಂಧಸ್ಥಲಭಾವ ಎನ್ನಯ್ಯ ಪ್ರಿಯ
ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಉಭಯಸ್ಥಲ ಭೇದ

ಈಕೆಯ ವಚನಗಳಲ್ಲಿ ಕ್ರಿಯಾಜ್ಞಾನಗಳ ಸಂಬಂಧ, ಇಷ್ಟಲಿಂಗ ಪ್ರಾಣಲಿಂಗಗಳ ಪರಸ್ಪರ ಸಂಬಂಧ, ಷಟ್‌ಸ್ಥಲಗಳ ಸ್ವರೂಪ– ಇವನ್ನು ಮಾರ್ಮಿಕವಾಗಿ ವಿವೇಚಿಸಿರುವುದನ್ನು ಕಾಣಬಹುದು. *

**ಮಹಾಬಲ ಕವಿ:** ಸು. 1254. ಜೈನಕವಿ. ನೇಮಿನಾಥಪುರಾಣ ಎಂಬ ಕಾವ್ಯದ ಕರ್ತೃ. ಈತನ ತಂದೆ ರಾಯಿದೇವ, ತಾಯಿ ರಾಜಿಯಕ್ಕ, ಗುರು ಮೇಘಚಂದ್ರ. ತನ್ನ ಗ್ರಂಥದ ಆಶ್ವಾಸಾಂತ್ಯ ಗದ್ಯದಲ್ಲಿ ಮಾಧವಚಂದ್ರತ್ರೈ ವಿದ್ಯಾಚಕ್ರವರ್ತಿ ಶ್ರೀಪಾದ ಪ್ರಸಾದಾಸಾದಿತ ಸಕಲಕಲಾಕಲಾ ಎಂದು ಹೇಳಿಕೊಂಡಿರುವುದರಿಂದ ಮಾಧವಚಂದ್ರ ಈತನ ವಿದ್ಯಾಗುರುವೆಂದು ಊಹಿಸಬಹುದಾಗಿದೆ. ವಿಶ್ವವಿದ್ಯಾವಿರಿಂಚಿ, ಸಹಜಕವಿಮನೋಗೇಹ ಮಾಣಿಕ್ಯದೀಪ ಎಂಬುವು ಇವನ ಬಿರುದುಗಳು. ನೇಮಿನಾಥಪುರಾಣವನ್ನು ವೀರನೂ ಸ್ವತಃ ಕವಿಯೂ ರಾಜನೂ ಆಗಿದ್ದ ಕೇತಯನಾಯಕ ಬರೆಸಿದಂತೆ ತಿಳಿಯುತ್ತದೆ. ಕವಿ ತನ್ನನ್ನು ಸಚಿವ ಎಂದು ವಿಶೇಷಿಸಿಕೊಂಡಿರುವುದನ್ನು ನೋಡಿದರೆ ಈತ ಕೇತಯನಾಯಕನಲ್ಲಿ ಮಂತ್ರಿಯಾಗಿದ್ದಿರಬಹುದು. ತನ್ನ ಕಾವ್ಯವನ್ನು ಶುಕ್ರಾಚಾರ್ಯರೇ ಮೊದಲಾದವರು ಸಭೆಯಲ್ಲಿದ್ದು ಕೇಳುವಂತೆ ಹೇಳಿದಂತೆಯೂ ತನ್ನ ಶಿಷ್ಯ ಲಕ್ಷ್ಮನಿಂದ ಇದನ್ನು ಬರೆಯಿಸಿ ದಂತೆಯೂ ಕವಿ ಹೇಳಿಕೊಂಡಿದ್ದಾನೆ.

ನೇಮಿನಾಥಪುರಾಣ ಹದಿನಾರು ಆಶ್ವಾಸಗಳುಳ್ಳ ಚಂಪೂ ಗ್ರಂಥ. ಇದನ್ನು 1254ರಲ್ಲಿ ರಚಿಸಿದಂತೆ ತಿಳಿಯುತ್ತದೆ. ಇದರಲ್ಲಿ 77ನೆಯ ತೀರ್ಥಂ ಕರ ನೇಮಿನಾಥನ ಚರಿತ್ರೆ ನಿರೂಪಿತವಾಗಿದೆ. ಜೊತೆಗೆ ಹರಿವಂಶ ಕುರುವಂಶ ಗಳ ಕಥೆಯೂ ಹೇಳಿದೆ. ಕಾವ್ಯಬಂಧ ಪ್ರೌಢವಾಗಿದೆ. (ಬಿ.ಎಸ್.ಸಿ.)

**ಮಹಾರಾಜನ ದುರ್ಗ:** ಹಾಸನ ಜಿಲ್ಲೆ ಆಲೂರು ತಾಲ್ಲೂಕಿನಲ್ಲಿ ಆಲೂರಿನಿಂದ ನೈಋತ್ಯಕ್ಕೆ 23ಕಿಮೀ ದೂರದಲ್ಲಿ ಮಂಗಳೂರು ಹೆದ್ದಾರಿಯ ಬಳಿ ಇರುವ ಬೆಟ್ಟ. ಸಮುದ್ರಮಟ್ಟದಿಂದ 1,006 ಮೀ

ಎತ್ತರವಿರುವ ಈ ಬೆಟ್ಟ ಕಡಿದಾದ ಭಾರಿ ಬಂಡೆಯದು. ಬೆಟ್ಟದ ತುದಿಯಿಂದ ಸುತ್ತಮುತ್ತಲಿನ ರಮ್ಯ ನೋಟವನ್ನು ಕಾಣಬಹುದು. ಬೆಟ್ಟದ ಮೇಲೆ ಪ್ರಾಚೀನ ಕೋಟೆಯ ಅವಶೇಷಗಳಿವೆ. ಕೋಟೆ ಅಷ್ಟಕೋನಾಕಾರದ ವಿನ್ಯಾಸವುಳ್ಳದ್ದು. ಈ ವಿನ್ಯಾಸವನ್ನು ಕೋಟೆಯ ಮೊದಲ ಹೆಬ್ಬಾಗಿಲ ಚಾವಣಿಯ ಮೇಲೆ ಸುಂದರವಾಗಿ ಶಿಲ್ಪಿಸಲಾಗಿದೆ. ಒಳಗೆ ಒಂದು ದೊಡ್ಡ ಕೊಳ, ಹಲವು ಮದ್ದಿನ ಮನೆಗಳು ಮತ್ತು ಇತರ ಕಟ್ಟಡಗಳ ಅವಶೇಷಗಳಿವೆ. ಕೋಟೆಯಿಂದ ಹೊರಗೆ ಹೋಗಲು ಒಂದು ಗುಪ್ತಮಾರ್ಗ ಸಹ ಇದೆ. ಹಿಂದೆ ಇಲ್ಲಿ ವೀರರಾಜ ಎಂಬ ಅರಸನಿದ್ದನೆಂದೂ ಆತ ಆಕಸ್ಮಿಕವಾಗಿ ತನ್ನ ಮಗನ ಮಾಂಸವನ್ನೇ ತಿಂದನೆಂದೂ ಅದರ ಅರಿವಾದಾಗ ಖೇದಗೊಂಡು ಕುದುರೆಯ ಮೇಲೇರಿ ಹೋಗಿ ದೊಡ್ಡ ಪ್ರಪಾತವೊಂದಕ್ಕೆ ಹಾರಿ ಪ್ರಾಣ ಕಳೆದುಕೊಂಡನೆಂದೂ ಪ್ರತೀತಿ. ಇದರಿಂದ ದುರ್ಗಕ್ಕೆ ಮಗನ ತಿಂದ ಮಹಾರಾಜನ ದುರ್ಗ ಎಂದು ಹೆಸರಾಯಿತೆನ್ನಲಾಗುತ್ತದೆ. ಕೋಟೆಯ ಕೆಳಗೆ ಮುಸಲ್ಮಾನ ಗೋರಿಯೊಂದಿದ್ದು ಅದರ ಬಳಿ ಎರಡು ಪಾರಸೀ ಶಾಸನಗಳಿವೆ. ಹಿಂದೆ ಮಹಾರಾಜನ ದುರ್ಗ ಅದೇ ಹೆಸರಿನ ತಾಲ್ಲೂಕಾಗಿತ್ತು. 1894ರಲ್ಲಿ ಈ ತಾಲ್ಲೂಕು ರದ್ದಾಗಿ ಆಲೂರು ಸಬ್ ತಾಲ್ಲೂಕು ಆಯಿತು.

(ವಿ.ಜಿ.ಕೆ.)

**ಮಹಾಲಿಂಗಪುರ:** ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಒಂದು ಪಟ್ಟಣ. ಮುಧೋಳದ ವಾಯವ್ಯಕ್ಕೆ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 407.

ಈ ಊರಿಗೆ ತಂತಿ, ದೂರವಾಣಿ, ವಿದ್ಯುತ್ ಮೊದಲಾದ ಆಧುನಿಕ ತಾಂತ್ರಿಕ ಸೌಕರ್ಯಗಳಿವೆ. ಉತ್ತಮ ಪುಸ್ತಕ ಭಂಡಾರ, ವಾಚನಾಲಯ ಹಾಗೂ ಅತಿಥಿಗೃಹಗಳಿವೆ. ಅವುಗಳ ಪಕ್ಕದಲ್ಲಿಯೇ ಸುಂದರವಾದ ಉದ್ಯಾನವನವನ್ನು ಕಾಪಾಡಿಕೊಂಡು ಬರಲಾಗಿದೆ. ಆಸ್ಪತ್ರೆ ಇದೆ. ಪ್ರೌಢ ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳಿವೆ. 1872ರಿಂದ ಈ ಊರಿನಲ್ಲಿ ಪುರಸಭಾಡಳಿತವಿದೆ. ಈ ಊರು ಕೈಮಗ್ಗದ ಕೈಗಾರಿಕಾ ಕೇಂದ್ರ. ಇಲ್ಲಿನ ಕೈಮಗ್ಗದ ಸೀರೆಗಳು ಪ್ರಸಿದ್ಧವಾಗಿವೆ.

ಈ ಊರಿನ ಚಿಕ್ಕ ಬೆಟ್ಟದ ಮೇಲೆ ಮಹಾಲಿಂಗೇಶ್ವರ ಮಂದಿರವಿದೆ. ಅಲ್ಲದೆ ಈ ಊರಿನಲ್ಲಿ ಮಹಾಲಿಂಗೇಶ್ವರನೆಂಬ ಒಬ್ಬ ಸಂತನೂ ಆಗಿಹೋಗಿದ್ದಾನೆ. ಇಲ್ಲಿ ಅದೇ ಹೆಸರಿನ ಒಂದು ವೀರಶೈವ ಮಠವೂ ಇದೆ. ಈ ಹಿನ್ನೆಲೆಯಲ್ಲಿ ಈ ಊರಿಗೆ ಮಹಾಲಿಂಗಪುರ ಎಂಬ ಹೆಸರು ಬಂದಿದೆಯೆಂದು ಪ್ರತೀತಿ. ಮಹಾಲಿಂಗೇಶ್ವರನ ಹೆಸರಿನಲ್ಲಿ ಪ್ರತಿವರ್ಷ ಸೆಪ್ಟಂಬರ್–ಅಕ್ಟೋಬರ್ ತಿಂಗಳಲ್ಲಿ ಜಾತ್ರೆ ನೆರೆಯುತ್ತದೆ. ಆಗ ಸುತ್ತಮುತ್ತಲಿನ ಸಾವಿರಾರು ಯಾತ್ರಿಕರು ಇಲ್ಲಿಗೆ ಬರುತ್ತಾರೆ. (ವಿ.ಕೆ.)

**ಮಹಿಪತಿದಾಸ:** 1611–81. ಪ್ರಸಿದ್ಧ ಹರಿದಾಸರು. ಬೆಳಗಾಂವಿ ಅಥಣಿ ತಾಲ್ಲೂಕಿನ ಐಗಳಿ ಇವರ ಜನ್ಮಸ್ಥಳ. ಕೋನೇರರಾಯ ಎಂಬುವವರು ದಾಸರ ತಂದೆ ಹಾಗೂ ವಿದ್ಯಾಗುರು. ದಾಸರು ವೇದ ಶಾಸ್ತ್ರಗಳ ಅಧ್ಯಯನದೊಂದಿಗೆ ಬೇರೆಬೇರೆ ವಿದ್ವಾಂಸರಿಂದ ಬೇರೆಬೇರೆ ಭಾಷೆಗಳನ್ನೂ ಕಲಿತರು. ಇವರಿಗೆ ಸಂಸ್ಕೃತ, ಕನ್ನಡ, ಮರಾಠಿ, ತೆಲುಗು, ಉರ್ದು, ಪಾರಸೀ ಭಾಷೆಗಳಲ್ಲಿ ಪಾಂಡಿತ್ಯವಿತ್ತು. ತೀರ ಬಡಕುಟುಂಬದಲ್ಲಿ ಹುಟ್ಟಿದ್ದರೂ ಸ್ವಸಾಮರ್ಥ್ಯ ದಿಂದ ವಿಜಯಪುರದ (ಬಿಜಾಪುರ) ಬಾದಶಹನ ದಿವಾನರಾಗಿ ರಾಜಮನ್ನಣೆಗೂ ಪಾತ್ರರಾದರು.

ಶಹನಂಗಾ ಎಂಬ ಫಕೀರರಿಂದ ಹಾಗೂ ಭಾಸ್ಕರ ಸ್ವಾಮಿಗಳ ಅನುಗ್ರಹ ದಿಂದ ದಾಸರ ಜೀವನದ ದಿಕ್ಕೇ ಬದಲಾಯಿಸಿತು. ಲೌಕಿಕ ಜೀವನದ ಮೋಹ ಕಡಿಮೆಯಾಗಿ ಸಾರವಾಡದಲ್ಲಿ ಗುರು ಭಾಸ್ಕರಸ್ವಾಮಿಗಳ ಬಳಿಯೇ ನಿಂತು, ವಿಜಯಪುರದ ತಮ್ಮ ದಿವಾನ ಹುದ್ದೆಗೆ ರಾಜೀನಾಮೆ ಯನ್ನಿತ್ತು ಸತತ ಯೋಗಾಭ್ಯಾಸದಲ್ಲಿ ತೊಡಗಿದರು. ಹನ್ನೆರಡು ವರ್ಷಗಳಲ್ಲಿ ಮುಗಿಯುವಂಥ ಯೋಗಾಭ್ಯಾಸವನ್ನು ಕೇವಲ ಹನ್ನೊಂದು ತಿಂಗಳಿನಲ್ಲಿ ಮುಗಿಸಿದರು. ಅನಂತರ ಗುರುಗಳ ಅಪ್ಪಣೆಯಂತೆ ವಿಜಯಪುರಕ್ಕೆ ಬಂದು, ತಮ್ಮ ಶಿಷ್ಯರಿಗೆ ಯೋಗಾಭ್ಯಾಸ ಮಾಡಿಸುತ್ತಿದ್ದರು. ನಾಲ್ಕಾರು ವರ್ಷಗಳ ಅನಂತರ ಸಾರವಾಡದ ಹತ್ತಿರವಿದ್ದ ಕಾಖಂಡಕಿ ಗ್ರಾಮದಲ್ಲಿ ನೆಲೆಸಿದರು. ಇಲ್ಲಿ ದಾಸರಿಗೆ ಪತ್ನೀವಿಯೋಗವಾಯಿತು. ಇವರಿಗೆ ದೇವರಾಯ ಮತ್ತು ಕೃಷ್ಣರಾಯ ಎಂಬ ಇಬ್ಬರು ಮಕ್ಕಳಿದ್ದರು.

ದಾಸರ ಯೋಗಸಿದ್ಧಿ ವಿಶಾಲ ಮನೋಭಾವದ ಬೆಳವಣಿಗೆಗೆ ಆಸ್ಪದ ನೀಡಿತು. ಎಲ್ಲ ಜಾತಿಮತಗಳವರೂ ಇವರ ಶಿಷ್ಯರಾಗಿದ್ದರು. ಮಾಧ್ವ ಮತಸ್ಥರಾದರೂ ಮಾಧ್ವ ಮತತತ್ತ್ವಗಳನ್ನು ವಿಸ್ತರಿಸಿ ಪದಗಳನ್ನು ಹಾಡಿಲ್ಲ. ಇತರ ದಾಸರುಗಳಂತೆ ಪೌರಾಣಿಕ ವರ್ಣನೆಗಳಿಗೆಂದೇ ಕೃತಿಗಳನ್ನು ಮೀಸಲಿಡಲಿಲ್ಲ. ಈ ದೃಷ್ಟಿಯಿಂದ ಇವರು ಇತರ ಹರಿದಾಸರಿಗಿಂತ ಬೇರೆಯಾಗಿ ನಿಲ್ಲುತ್ತಾರೆ.

ಪರಮತ್ಯಾಗಿಗಳೆಂದು ಪ್ರಖ್ಯಾತರಾಗಿದ್ದ ಇವರು ಸಾಮಾನ್ಯ ಜನತೆಗೆ ಪರಮಾರ್ಥವನ್ನು ಬೋಧಿಸುವುದನ್ನು ತಮ್ಮ ಜೀವನದ ಗುರಿಯಾಗಿಟ್ಟು ಕೊಂಡಿದ್ದರು. ಜನಸಾಮಾನ್ಯರಿಗಾಗಿ ಲಾವಣಿ, ಕೋಲಾಟ ಪದ, ಸುಗ್ಗಿಯ ಪದ, ಕೊರವಂಜಿ ಪದಮೊದಲಾದ ಜನಪದ ಮಟ್ಟುಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಷಟ್ಪದಿ, ಸಾಂಗತ್ಯ, ರಗಳೆಗಳನ್ನೂ ಕಾಣಬಹುದು. ಸ್ತೋತ್ರಗಳಿಂದ ಹಿಡಿದು ಕುಟ್ಟುವ ಪದಗಳು, ಜೋಗುಳದ ಪದಗಳ ವರೆಗೆ ಅವುಗಳ ವೈವಿಧ್ಯವಿದೆ. ಹಿಂದಿ, ಮರಾಠಿ ಭಾಷೆಗಳಲ್ಲೂ ದಾಸರು ಕೀರ್ತನೆಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಹೆಚ್ಚಿನವು ಇವರ ಆಧ್ಯಾತ್ಮಿಕ ಅನುಭವ ಹಾಗೂ ಯೋಗಸಿದ್ಧಿಗಳ ಪ್ರತಿಬಿಂಬದಂತಿದ್ದು ಶಿವಶರಣರ ಹಾಡುಗಳನ್ನು ನೆನಪಿಗೆ ತರುತ್ತವೆ. ಸರಳ ಶೈಲಿಯಲ್ಲಿರುವ ಇವರ ಕೀರ್ತನೆಗಳು ಪಂಡಿತ ಪಾಮರರ ಮೆಚ್ಚಿಕೆಗೆ ಪಾತ್ರವಾಗಿವೆ.

ಎಪ್ಪತ್ತು ವರ್ಷಗಳ ತುಂಬುಬಾಳನ್ನು ಬಾಳಿದ ದಾಸರು ತಮ್ಮ ಕೊನೆಗಾಲದಲ್ಲಿ ಬಿಜಾಪುರ ಜಿಲ್ಲೆಯ ಕೊಲ್ಹಾರಕ್ಕೆ ಹೋಗಿ ತಮ್ಮ ಕುಲಗುರುಗಳ ಬಳಿ ಕೆಲವು ದಿನಗಳಿದ್ದರು. ಅಲ್ಲಿಯೇ 1681ರಲ್ಲಿ ಕೊನೆಯು ಸಿರೆಳೆದರು. ಇಲ್ಲಿ ಇವರ ಹೆಸರಿನಲ್ಲಿ ವೃಂದಾವನವನ್ನು ಕಟ್ಟಲಾಗಿದೆ. ಕಾಖಂಡಕಿಯಲ್ಲಿಯೂ ದಾಸರು ಪೂಜಿಸುತ್ತಿದ್ದ ಸಾಲಿಗ್ರಾಮದ ಮೇಲೆ ವೃಂದಾವನವನ್ನು ಕಟ್ಟಿಸಿದ್ದು ವರ್ಷಕ್ಕೊಮ್ಮೆ ರಾಯರ ಪುಣ್ಯತಿಥಿಯನ್ನು ಆಚರಿಸಲಾಗುತ್ತದೆ. (ಟಿ.ಎನ್.ಎಸ್.)

**ಮಹಿಳಾ ಶಿಕ್ಷಣ:** ರಾಜ್ಯದಲ್ಲಿ 1950ರಲ್ಲಿ ಆರಂಭವಾದ ಕಡ್ಡಾಯ ಶಿಕ್ಷಣದ ಫಲವಾಗಿ ಮಹಿಳೆಯರ ಶಿಕ್ಷಣದಲ್ಲಿ ಗಣನೀಯ ಪ್ರಗತಿ ಕಂಡುಬಂದಿದೆ. 1951ರಲ್ಲಿ ರಾಜ್ಯದ ಮಹಿಳೆಯರಲ್ಲಿ ಅಕ್ಷರಸ್ಥರ ಸೇ. ಪ್ರಮಾಣ ಕೇವಲ 9.04 ಇದ್ದುದು 1961ರಲ್ಲಿ ಸೇ. 14.19ಕ್ಕೂ 1971ರಲ್ಲಿ ಸೇ. 20.6ಕ್ಕೂ ಏರಿತು. ಸದ್ಯದಲ್ಲಿ ಆ ಪ್ರಮಾಣ ಇನ್ನೂ ಗಣನೀಯವಾಗಿ ಹೆಚ್ಚಾಗಿರುವುದೆಂದು ಹೇಳಬಹುದು. ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಸೂಚಿಸಿರುವ ಈ ಪ್ರಮಾಣ ಗ್ರಾಮಾಂತರ ಪ್ರದೇಶದಲ್ಲಿ ಕಡಿಮೆಯಾಗಿಯೂ ನಗರ ಪ್ರದೇಶದಲ್ಲಿ ಹೆಚ್ಚಾಗಿಯೂ ಇರುವುದು. ಭಾರತದಲ್ಲಿ ಮಹಿಳಾ ಅಕ್ಷರಸ್ಥರ ಸರಾಸರಿ ಪ್ರಮಾಣ 18.44. ಇದರೊಡನೆ ಹೋಲಿಸಿದರೆ ಕರ್ನಾಟಕದಲ್ಲಿ ಮಹಿಳೆಯರಲ್ಲಿ ಅಕ್ಷರಪ್ರಚಾರ ಭಾರತದ ಇತರ ಕೆಲವು ಕಡೆಗಳಿಗಿಂತ ಹೆಚ್ಚಾಗಿದೆಯೆಂದು ಹೇಳಬಹುದು.

ಕಡ್ಡಾಯ ಶಿಕ್ಷಣ ಆಚರಣೆಗೆ ಬಂದ ಮೇಲೆ ಗ್ರಾಮಾಂತರ ಪ್ರದೇಶದ ಬಾಲಕಿಯರು ಶಾಲೆಗೆ ಸೇರುವುದು ಹೆಚ್ಚುತ್ತಿದೆ. ಇದರ ಫಲವಾಗಿ

ಕ್ರಮಬದ್ಧವಾಗಿ ಬೇರೆ ಬೇರೆ ಹಂತಗಳಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಶಿಕ್ಷಣಕ್ಕೆ ಬರುತ್ತಿದ್ದಾರೆ. ಆದರೂ ಹಲವಾರು ಕಾರಣಗಳಿಂದ ಅವರ ಸಂಖ್ಯಾ ಪ್ರಮಾಣ ಬಾಲಕರೊಡನೆ ಹೋಲಿಸಿದರೆ ಹಿಂದುಳಿದಿರುವುದು ಸ್ಪಷ್ಟಪಡುತ್ತದೆ.

ಸ್ವಾತಂತ್ರ್ಯಾನಂತರ ಮಹಿಳೆಯರ ಉನ್ನತ ಶಿಕ್ಷಣ ಏಕಪ್ರಕಾರವಾಗಿ ಹೆಚ್ಚುತ್ತ ಬರುತ್ತಿದೆ. 1947ರ ಸುಮಾರಿನಲ್ಲಿ ಕೇವಲ ಸೇ. 8 ಇದ್ದ ಅವರ ಸಂಖ್ಯಾ ಪ್ರಮಾಣ ಇಂದು ಒಟ್ಟು ಸಂಖ್ಯೆಯ ಮಹಿಳೆಯರಲ್ಲಿ ಸೇ. 57.45ರಷ್ಟು ಮಹಿಳೆಯರು ಅಕ್ಷರಸ್ಥರಾಗಿದ್ದಾರೆ. ನಗರ ಪ್ರದೇಶಗಳಲ್ಲಿ ಈ ಪ್ರಮಾಣ ಸೇ. 74.87ರಷ್ಟಿದೆ(2001). ಇದು ಮಹಿಳೆಯರ ಶಿಕ್ಷಣಕ್ಕೆ ಸರ್ಕಾರ ಹಾಗೂ ಪೋಷಕರು ನೀಡಿರುವ ಆದ್ಯತೆಗೆ ಸಾಕ್ಷಿಯಾಗಿದೆ. ಅವರು ಕಲಾಶಾಸ್ತ್ರಗಳಂತೆ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳಲ್ಲೂ ಶಿಕ್ಷಣ ಪಡೆಯುವುದು ಹೆಚ್ಚುತ್ತಿದೆ. ಶಿಕ್ಷಣ, ವೈದ್ಯ, ಕಾರ್ಯಾಲಯದ ವಿದ್ಯೆ, ಉಪಚಾರಿಕೆ, ಅಧ್ಯಾಪನ, ಕುಶಲಕಲೆ, ಲಲಿತ ಕಲೆ, ವಾಣಿಜ್ಯ, ಎಂಜಿನಿಯರಿಂಗ್, ಟೆಲಿಫೋನ್, ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್, ಜೀವತಂತ್ರಜ್ಞಾನ ಮುಂತಾದ ತಾಂತ್ರಿಕ ವಿಷಯಗಳಲ್ಲೂ ಅವರ ಸಂಖ್ಯೆ ಹೆಚ್ಚುತ್ತಿದೆ.

ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಬ್ಯಾಂಕುಗಳು ನಡೆಸುವ ಸ್ಪರ್ಧಾ ಪರೀಕ್ಷೆಗಳಲ್ಲೂ ಅವರು ಭಾಗವಹಿಸುವುದು ಹೆಚ್ಚುತ್ತಿದೆ. ಪೋಲಿಸ್, ರಕ್ಷಣಾ ಇಲಾಖೆ, ಸಾರಿಗೆ ವ್ಯವಸ್ಥೆಯಿಂದ ಹಿಡಿದು ವಿದ್ಯುತ್ ಪ್ರಸಾರದ ಲೈನ್ ವಿಮೆನ್ ಹುದ್ದೆಗಳವರೆಗೂ ಅವರು ವಿವಿಧ ಕೆಲಸಗಳಿಗೆ ಸೇರುತ್ತಿದ್ದಾರೆ. ಶಿಕ್ಷಕಿಯರಾಗಿ, ದಾದಿಯರಾಗಿ ಮಹಿಳೆಯರು ಹೆಚ್ಚು ಪ್ರಮಾಣದಲ್ಲಿ ವೃತ್ತಿ ಸ್ವೀಕರಿಸಿದ್ದಾರೆ. ಚುನಾಯಿತ ಪ್ರತಿನಿಧಿಗಳಾಗಿ ವಿವಿಧ ಹಂತದ ರಾಜಕೀಯ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅವರು ಗಣನೀಯ ಸಂಖ್ಯೆಯಲ್ಲಿ ತೇರ್ಗಡೆಯಾಗಿ ಸಾರ್ವಜನಿಕ ಸ್ಥಾನಗಳಿಗೆ ಹೆಚ್ಚು ಹೆಚ್ಚಾಗಿ ನೇಮಕವಾಗುತ್ತಿರುವರು.

ಶಿಕ್ಷಣದ ಎಲ್ಲ ಹಂತಗಳಲ್ಲೂ ಸಾಮಾನ್ಯವಾಗಿ ಸಹಶಿಕ್ಷಣ ಪ್ರಚಾರದಲ್ಲಿದೆ. ಹೆಂಗಸರಿಗಾಗಿಯೇ ಹಲವಾರು ಪ್ರತ್ಯೇಕ ಶಾಲೆಗಳು ಅಸ್ತಿತ್ವದಲ್ಲಿವೆ. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕೆಲವು ಮಹಿಳಾ ಕಾಲೇಜುಗಳು ಅಸ್ತಿತ್ವದಲ್ಲಿವೆ.

ಕರ್ನಾಟಕದಲ್ಲಿ ಒಂದು ಶತಮಾನಕ್ಕೆ ಹಿಂದೆ ಹೆಣ್ಣು ಮಕ್ಕಳಿಗೆ ವ್ಯವಸ್ಥಿತವಾದ ರೀತಿಯಲ್ಲಿ ಶಿಕ್ಷಣ ದೊರೆಯುತ್ತಿರಲಿಲ್ಲ. ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿ ಶಿಕ್ಷಣ ನೀಡಬೇಕೆಂಬ ಉದ್ದೇಶ ಕಾರ್ಯರೂಪಕ್ಕೆ ಬಂದುದು ಇತ್ತೀಚೆಗೆ. ಕ್ರಿಶ್ಚಿಯನ್ ಮಿಷನರಿಯವರಿಂದ ಮೈಸೂರಿನಲ್ಲಿ 1840ರಲ್ಲಿ ಹೆಣ್ಣು ಮಕ್ಕಳ ಶಾಲೆಯೊಂದೂ ಹಿಂದುಗಳಿಂದ ಬೆಂಗಳೂರಿನಲ್ಲಿ ಮತ್ತೊಂದು ಶಾಲೆಯೂ ತೆರೆಯಲ್ಪಟ್ಟವು. ಕೆಲವು ಕಾಲ ಗಂಡುಮಕ್ಕಳ ಜೊತೆಯಲ್ಲಿಯೇ ಹೆಣ್ಣು ಮಕ್ಕಳಿಗೂ ಶಿಕ್ಷಣ ದೊರೆಯುತ್ತಿತ್ತು. 1867ರಿಂದೀಚೆಗೆ ಹೆಣ್ಣುಮಕ್ಕಳಿಗಾಗಿ ಕೆಲವು ಸರ್ಕಾರಿ ಶಾಲೆಗಳೂ ಅನೇಕ ಖಾಸಗಿ ಶಾಲೆಗಳೂ ತೆರೆಯಲ್ಪಟ್ಟವು. ಆದರೂ ಸ್ತ್ರೀ ಶಿಕ್ಷಣಕ್ಕೆ ಪ್ರಾರಂಭದಿಂದಲೂ ಸಾಮಾಜಿಕ ತೊಡಕುಗಳಿದ್ದವು. ಅವುಗಳನ್ನು ತೊಡೆದು ಹೆಣ್ಣು ಮಕ್ಕಳನ್ನು ಶಾಲೆಗೆ ಆಕರ್ಷಿಸುವ ಪ್ರಯತ್ನವನ್ನು ಸರ್ಕಾರವೇ ಮಾಡಬೇಕಾಯಿತು. ಮೈಸೂರು ಅರಸರು ತಮ್ಮ ರಾಜ್ಯವನ್ನು ಮತ್ತೆ ಪಡೆದಮೇಲೆ ಮೈಸೂರಿನ ಮಹಾರಾಣಿ ಶಾಲೆಯ ಪ್ರಾರಂಭವಾಯಿತು. ಅಲ್ಲಿಂದ ಮುಂದೆ ಹೆಣ್ಣು ಮಕ್ಕಳ ಶಿಕ್ಷಣ ಪ್ರಗತಿಯ ಹಾದಿಯಲ್ಲಿ ಸಾಗುತ್ತಿತ್ತೆಂದು ಕಂಡುಬರುತ್ತದೆ. 1891ರಲ್ಲಿ ಮಹಾರಾಣಿ ಶಾಲೆಯನ್ನು ಸರ್ಕಾರವೇ ವಹಿಸಿಕೊಂಡಿತು; ಅಲ್ಲಿಯವರೆಗೂ ಅದರ ಆಡಳಿತವನ್ನು ಒಂದು ಸಮಿತಿಯು ನೋಡಿಕೊಳ್ಳುತ್ತಿತ್ತು. 1902ರಲ್ಲಿ ಮಹಾರಾಣಿ ಶಾಲೆಯು ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿತವಾಯಿತು. 1902ರಲ್ಲಿ ಸುಮಾರು 30 ವಿದ್ಯಾರ್ಥಿನಿಯವರಿಗೆ ವಿದ್ಯಾರ್ಥಿವೇತನ ದೊರೆಯಿತು. ದೇವರಾಜ ಬಹದ್ದೂರ್ ದತ್ತಿಯಿಂದ ವಿಧವೆಯರಿಗೂ ವಿದ್ಯಾರ್ಥಿವೇತನ ದೊರೆಯಿತು. ಮೈಸೂರಿನಲ್ಲಿ ವಿಧವೆಯರಿಗೆ ಸಹಾಯ ಮಾಡುವ ಉದ್ದೇಶದಿಂದ ಅಬಲಾಶ್ರಮ ಸ್ಥಾಪಿತವಾಯಿತು. ಇದರ ವೆಚ್ಚವನ್ನು ಸರ್ಕಾರದಿಂದಲೂ ಮತ್ತು ದೇವರಾಜ ಬಹದ್ದೂರ್ ದತ್ತಿಯಿಂದಲೂ ಭರಿಸಲಾಗುತ್ತಿತ್ತು.

ಹರ್ಟಾಗ್ ಸಮಿತಿಯ ಸಲಹೆಯಂತೆ ರಾಜ್ಯದಲ್ಲಿಯೂ ಸ್ತ್ರೀ ಶಿಕ್ಷಣದ ಪ್ರಗತಿಗಾಗಿ ಅನೇಕ ಯೋಜನೆಗಳನ್ನು ರೂಪಿಸಲಾಯಿತು.

ಕೇಂದ್ರದಿಂದ ರಚಿಸಲ್ಪಟ್ಟ ರಾಷ್ಟ್ರೀಯ ಸಲಹಾ ಸಮಿತಿ, ಸ್ತ್ರೀ ಶಿಕ್ಷಣ ಪಠ್ಯ ವಸ್ತು ನಿರ್ಮಾಣ ಸಮಿತಿ, ಭಕ್ತವತ್ಸಲಾ ಸಮಿತಿ, ಸ್ತ್ರೀ ನೌಕರರ ಪರಿಸ್ಥಿತಿ ಪರಿಶೀಲನಾ ಸಮಿತಿಗಳ ಸಲಹೆಯಂತೆ ರಾಜ್ಯದಲ್ಲಿಯೂ ಸಹ ರಾಜ್ಯ ಮಹಿಳಾ ಶಿಕ್ಷಣ ಮಂಡಳಿ ಸ್ಥಾಪಿಸಲ್ಪಟ್ಟಿತು. ಈ ಮಂಡಳಿಯು ಹೆಣ್ಣುಮಕ್ಕಳನ್ನು ಶಾಲೆಗೆ ಆಕರ್ಷಿಸಲು ಈ ಕೆಳಗಿನ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಸಲಹೆ ನೀಡಿತು:

1 ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು. 2 ಹಾಜರಾತಿ, ವಿದ್ಯಾರ್ಥಿ ವೇತನ ಮತ್ತು ಉಚಿತ ಪಠ್ಯ ಪುಸ್ತಕಗಳನ್ನು ಹಂಚುವುದು. 3 ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು. 4 ಗ್ರಾಮಾಂತರ ಪ್ರದೇಶದಲ್ಲಿರುವ ಶಾಲಾ ಶಿಕ್ಷಕಿಯರಿಗೆ ವಸತಿಸೌಕರ್ಯ ಕಲ್ಪಿಸುವುದು. 5 ಶಾಲೆಗಳಲ್ಲಿ ಶೌಚಗೃಹಗಳನ್ನು ನಿರ್ಮಿಸುವುದು. 6 ಹಾಜರಿಯನ್ನು ಉತ್ತಮಪಡಿಸಲು ಮಧ್ಯಾಹ್ನದ ಉಪಹಾರ ಏರ್ಪಡಿಸುವುದು. 7 ಹೆಣ್ಣುಮಕ್ಕಳಿಗೆ ತಾಂತ್ರಿಕ ಶಿಕ್ಷಣ ನೀಡುವುದು. 8 ವಿದ್ಯಾವಂತ ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸುವುದು–ಈ ಎಲ್ಲ ಸೌಲಭ್ಯಗಳಿಂದ ಹೆಣ್ಣುಮಕ್ಕಳು ಶಾಲೆಗೆ ಆಕರ್ಷಿಸಲ್ಪಡುವಂತಾಯಿತು.

ಮೂರನೆಯ ಪಂಚವಾರ್ಷಿಕ ಯೋಜನೆಯ ಹಂತದಲ್ಲಿ ಪ್ರತ್ಯೇಕ ಪ್ರಾಥಮಿಕ ಶಾಲೆಗಳೂ, ಪ್ರೌಢಶಾಲೆಗಳೂ, ಶಿಕ್ಷಕಿಯರ ತರಬೇತಿ ಕಾಲೇಜುಗಳೂ ಅನೇಕ ಉದ್ಯೋಗ ಕೇಂದ್ರಗಳೂ ಸರ್ಕಾರದಿಂದಲೂ ಖಾಸಗಿಯವರಿಂದಲೂ ಸ್ಥಾಪಿಸಲ್ಪಟ್ಟವು. ಹೆಣ್ಣು ಮಕ್ಕಳಿಗೆ ಹೊಲಿಗೆ, ಕಸೂತಿ ಮುಂತಾದ ಕಸಬು ಕಲೆಗಳಲ್ಲಿ ತರಬೇತಿ ನೀಡುವ ಅವಕಾಶವನ್ನು ಕಲ್ಪಿಸಲಾಯಿತು. ಬೆಂಗಳೂರಿನಲ್ಲಿ ಮಹಿಳೆಯರಿಗಾಗಿ ಒಂದು ವೃತ್ತಿಶಿಕ್ಷಣ ಶಾಲೆಯೂ ತೆರೆಯಲ್ಪಟ್ಟಿತು. ಇಂದು ಮಹಿಳೆಯರಿಗಾಗಿಯೇ ಕೆಲವು ಎಂಜಿನಿಯರಿಂಗ್ ಕಾಲೇಜುಗಳು ಅಸ್ತಿತ್ವಕ್ಕೆ ಬಂದಿವೆ. ರಾಜ್ಯದಲ್ಲಿ ಬಿಜಾಪುರ ಕೇಂದ್ರವಾಗುಳ್ಳ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿತವಾಗಿದೆ (2005). ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗವಿದೆ. ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ 'ಮಹಿಳಾ ಅಧ್ಯಯನ' ಎಂಬ ವಿಶೇಷ ನಿಯತಕಾಲಿಕವನ್ನು ಹೊರತರುತ್ತಿದೆ. ಪರೀಕ್ಷೆಗಳಲ್ಲಿ ಅಂಕಗಳನ್ನು ಪಡೆಯುವಲ್ಲಿ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸುತ್ತಿರುವುದು ಅವರ ಬುದ್ಧಿಶಕ್ತಿ ಹಾಗೂ ಏಕಾಗ್ರತೆಯ ಪ್ರತೀಕವಾಗಿದೆ.

ಶಾಲಾಕಾಲೇಜುಗಳ ಜೊತೆಗೆ ಕರ್ನಾಟಕ ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರಿಗೆ ಶಿಕ್ಷಣ ತರಬೇತಿ ನೀಡುವಲ್ಲಿ ಶ್ರಮಿಸಿದೆ. ಸರ್ಕಾರ ಮಹಿಳೆಯರು ಸ್ವಾವಲಂಬಿಗಳಾಗುವಂತೆ ಮಾಡಲು ವಿವಿಧ ವಿಶೇಷ ಶಿಕ್ಷಣ ಮತ್ತು ತರಬೇತಿಗಳನ್ನು ನೀಡುತ್ತಿದೆ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವ ಖಾತೆ ಹಾಗೂ ಇಲಾಖೆ ಇದೆ. **(ಎಂ.ಬಿ.ವಿ.)**

**ಮಹ್ಮೂದ್:** ಬಹಮನೀ ರಾಜ್ಯದ 14ನೆಯ ಸುಲ್ತಾನ (1482–1518). 3ನೆಯ ಮಹಮ್ಮದನ 2ನೆಯ ಮಗ ಹಾಗೂ ಅವನಿಂದ ಆಯ್ಕೆಯಾಗಿದ್ದ ಉತ್ತರಾಧಿಕಾರಿ. ತಂದೆಯ ಮರಣಾನಂತರ 1482 ಮಾರ್ಚ್

26 ರಂದು ಶಿಹಾಬುದ್ದೀನ್ ಮಹ್ಮೂದ್ ಎಂಬ ಹೆಸರಿನಲ್ಲಿ ಪಟ್ಟಕ್ಕೆ ಬಂದ. ಆಗ ಇವನು 12 ವರ್ಷದ ಬಾಲಕನಾಗಿದ್ದರಿಂದ ರಾಜ್ಯದ ಆಡಳಿತವನ್ನು ಇವನ ತಾಯಿ ಅಧ್ಯಕ್ಷಳಾಗಿದ್ದ ಮೂರು ಜನರ ಚಿಕ್ಕಕೂಟ ನಡೆಸುತ್ತಿತ್ತು. ಇವನು ವಯಸ್ಸಿಗೆ ಬಂದ ಮೇಲೂ ಸುಲ್ತಾನನಾಗಿ ಬಹು ದುರ್ಬಲನಾಗಿದ್ದ. ಮಹ್ಮೂದ್ ಗಾವಾನನ ಮರಣದಿಂದ ಪ್ರಾಂತಾಧಿಕಾರಿಗಳಲ್ಲಿ ವೈಮನಸ್ಯ ಹೆಚ್ಚಿತ್ತು. ಅಮೀರರ ನಡುವಿನ ತಿಕ್ಕಾಟ ಆಡಳಿತ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿತ್ತು. ಈ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಿಲ್ಲದ ಮಹ್ಮೂದನು ಅಮೀರರ, ಅದರಲ್ಲೂ ಆಗ ರಾಜ್ಯದ ಆಡಳಿತ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿದ್ದ ತುರ್ಕಿ ಅಮೀರ್ ಖಾಸಿಂ ಬರೀದನ ಕೈಗೊಂಬೆಯಾಗಿದ್ದ. ಆಸ್ಥಾನದ ಒಳಸಂಚುಗಳು ಹೆಚ್ಚಿ 1487ರಲ್ಲಿ ಸುಲ್ತಾನನನ್ನು ಕೊಲೆಮಾಡುವ ಪ್ರಯತ್ನವೂ ನಡೆಯಿತು.

ಪ್ರಾಂತೀಯ ಅಧಿಕಾರಿಗಳು ಬರೀದನ ಅಧಿಕಾರವನ್ನು ಮಾನ್ಯಮಾಡಲು ನಿರಾಕರಿಸತೊಡಗಿದರು. ಅವರನ್ನೂ ಹತ್ತಿಕ್ಕುವ ಪ್ರಯತ್ನಗಳು ವಿಫಲಗೊಂಡವು. 1490ರ ತರುವಾಯ ಅವರು ಸ್ವತಂತ್ರ ಪ್ರವೃತ್ತಿ ತೋರಿಸತೊಡಗಿದರು. ಅವರಲ್ಲಿ ಅಹಮದ್‍ನಗರ, ಬಿಜಾಪುರ ಮತ್ತು ಬೀರಾರಿನ ಪ್ರಾಂತಾಧಿಕಾರಿಗಳು ಬಹು ಪ್ರಬಲರಾಗಿದ್ದರು. 1510 ರವರೆಗೆ ಖಾಸಿಂ ಬರೀದನು ಸುಲ್ತಾನನ ಮೇಲೆ ಹಿಡಿತವಿಟ್ಟುಕೊಂಡಿದ್ದ. ಅನಂತರ ಅವನ ಮಗ ಅಲಿ ಬರೀದ್ ಸರ್ವಾಧಿಕಾರಿಯಾದ. ಮಹ್ಮೂದ್ ನಾಮಮಾತ್ರ ರಾಜನಾಗಿಯೇ ಉಳಿದ.

ಸುಲ್ತಾನ ತನ್ನ ಕೊನೆಯ ಅಸ್ತ್ರವೆಂಬಂತೆ ವಿಜಯನಗರದ ವಿರುದ್ಧ ಅಮೀರರನ್ನು ಎತ್ತಿಕಟ್ಟುವ ಪ್ರಯತ್ನ ಮಾಡಿದ. ಆದರೆ ಆಗ ವಿಜಯನಗರ ಸಿಂಹಾಸನದಲ್ಲಿ ಪ್ರಬಲ ರಾಜರಿದ್ದುದರಿಂದ ಇವನ ಆಟ ನಡೆಯಲಿಲ್ಲ. ಕೃಷ್ಣದೇವರಾಯನ ಕಾಲದಲ್ಲಂತೂ ಬಹಮನೀ ರಾಜ್ಯಕ್ಕೆ ಸೇರಿದ್ದ ಮುದ್ಗಲ್ಲು, ರಾಯಚೂರು ಪ್ರಾಂತ್ಯಗಳು ಅವನ ವಶವಾದುವು. ರಾಜ್ಯದ ಪೂರ್ವ ಕರಾವಳಿಯ ಭಾಗಗಳನ್ನು ಗಜಪತಿ ಪುರುಷೋತ್ತಮ ಮೊದಲೇ ಆಕ್ರಮಿಸಿದ್ದ. ಇವನ ಕೊನೆಗಾಲದಲ್ಲಿ ರಾಜ್ಯದಲ್ಲಿ ಅಸ್ಥಿರತೆ ತುಂಬಿತುಳುಕಾಡುತ್ತಿತ್ತು. ಮಹ್ಮೂದ್ 1518 ಡಿಸೆಂಬರ್ 27 ರಂದು ನಿಧನನಾದ. ಇವನ ಅನಂತರ ಬಹಮನೀ ಸಾಮ್ರಾಜ್ಯ ಪೂರ್ಣವಾಗಿ ಒಡೆದುಹೋಯಿತು.

**(ಡಿ.ಎಸ್.ಜೆ.)**

**ಮಹ್ಮೂದ್ ಗಾವಾನ್:** 1411-81. ಬಹಮನೀ ರಾಜ್ಯದ ಪ್ರಖ್ಯಾತ ಪ್ರಧಾನ ಮಂತ್ರಿ (1453-81). ಇವನು ಪರ್ಷಿಯದ ಹಾವಾನ್ (ಗೀಲಾನ್) ಎಂಬ ಊರಿನಲ್ಲಿ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದ. ಇಮಾದುದ್ದೀನ್ ಮಹ್ಮೂದ್ ಇವನ ಹುಟ್ಟು ಹೆಸರು. ಹುಟ್ಟೂರಿನ ಹೆಸರಿನ ಮೇಲೆ ಮುಂದೆ ಗಾವಾನ್ ಎಂದು ಪ್ರಸಿದ್ಧನಾದ. ಬಾಲ್ಯದಲ್ಲಿ ಒಳ್ಳೆಯ ಶಿಕ್ಷಣ ಪಡೆದು ಊರು ಬಿಟ್ಟು ಬೇರೆ ಬೇರೆ ದೇಶಗಳನ್ನು ಸಂದರ್ಶಿಸಿದ. ಕೈರೋ ನಗರದಲ್ಲಿ ಹಗಿಚ್-ಇಬ್ನ್-ಹಜ್ಮೆಲ್-ಅಸ್ಖಲಾನಿ ಎಂಬುವನ ಶಿಷ್ಯನಾಗಿದ್ದು ವಿದ್ವತ್ತನ್ನು ಸಂಪಾದಿಸಿದ.

ಆ ಕಾಲದ ದಖನ್ ಇಸ್ಲಾಮೀ ಸಂತರ ನೆಲೆವೀಡು ಎಂದು ಹೆಸರಾಗಿತ್ತು. ಇದನ್ನರಿತ ಗಾವಾನ್ ಇಲ್ಲಿಗೆ ಪ್ರಯಾಣ ಬೆಳೆಸಿದ. 1447ರಲ್ಲಿ ಬಿದರೆಗೆ ಬಂದು ತಲುಪಿದ. ಆಗಿನ ದೊರೆ 2ನೆಯ ಅಲ್ಲಾಉದ್ದೀನ್ ಅಹ್ಮದನ ಅಳಿಯ ಷಾ ಮುಹೀಬುಲ್ಲಾನ ಆಶ್ರಯ ದೊರೆತು ಕ್ರಮೇಣ ಅಲ್ಲಾವುದ್ದೀನನ ಆಸ್ಥಾನದಲ್ಲಿ ನೌಕರಿಗೆ ಸೇರಿದ. 1454-55ರಲ್ಲಿ ಸುಲ್ತಾನನ ಮೈದುನ ಜಲಾಲ್ ಖಾನ್ ತೆಲಂಗಾಣದಲ್ಲಿ ದಂಗೆಯೆದ್ದಿದ್ದಾಗ, ಗಾವಾನನ ದಕ್ಷತೆಯನ್ನು ಗಮನಿಸಿದ್ದ ಸುಲ್ತಾನ ಇವನನ್ನು ಸಾವಿರ ಸೈನಿಕರ ದಳವೊಂದಕ್ಕೆ ಮನಸಬ್ದಾರನನ್ನಾಗಿ ಮಾಡಿ ಜಲಾಲ್‍ಖಾನನ ವಿರುದ್ಧ ಕಳುಹಿಸಿದ. ಈ ಕಾರ್ಯಾಚರಣೆಯಲ್ಲಿ ಗಾವಾನ್ ಯಶಸ್ವಿಯಾದ. ಮುಂದಿನ ದೊರೆ ಹುಮಾಯೂನ್ ಪಟ್ಟಕ್ಕೆ ಬರುತ್ತಿದ್ದಂತೆಯೇ (1458) ಇವನು ಪ್ರಧಾನ ಮಂತ್ರಿಯಾಗಿ ನೇಮಿತನಾದ. ಸುಲ್ತಾನನ ದಾಯಾದಿ ಸಿಕಂದರ್ ದಂಗೆಯೆದ್ದಾಗ ಅವನ ದಂಗೆಯನ್ನು ಅಡಗಿಸುವಲ್ಲಿ ಗಾವಾನ್ ಪ್ರಮುಖ ಪಾತ್ರವಹಿಸಿದ. ಇವನ ಪ್ರತಿಷ್ಠೆ ದಿನೇ ದಿನೇ ವರ್ಧಿಸಿತು. ಹುಮಾಯೂನನ ತರುವಾಯ ಅವನ ಮಗ ಎಂಟು ವರ್ಷದ ಬಾಲಕ ನಿಜಾಮುದ್ದೀನ್ ಅಹ್ಮದ್ ಸಿಂಹಾಸನವೇರಿದಾಗ ಆಡಳಿತ ನಿರ್ವಹಿಸಲು ನರ್ಗಿಸ್ ಬೇಗಮಳ ಅಧ್ಯಕ್ಷತೆಯಲ್ಲಿ ರಚಿಸಿದ್ದ ಮೂರು ಸದಸ್ಯರ ಮಂಡಳಿಯಲ್ಲಿ ಮಹ್ಮೂದ್ ಗಾವಾನ್ ಸಹ ಇದ್ದ. 1462ರಲ್ಲಿ ಮಾಳವ ಮತ್ತು ಖಾನ್‍ದೇಶದ ಸುಲ್ತಾನರು ಹಾಗೂ ಒರಿಸ್ಸಾದ ರಾಜ ಕಪಿಲೇಶ್ವರ ಇವರು ಬಹಮನೀ ರಾಜ್ಯದ ಮೇಲೆ ಸಂಯುಕ್ತ ದಾಳಿ ನಡೆಸಿದ ಸಂದರ್ಭದಲ್ಲಿ ಮಹ್ಮೂದ್ ಗಾವಾನ್ ದಕ್ಷತೆಯಿಂದ ಕಾರ್ಯನಿರ್ವಹಿಸಿ, ಶತ್ರುಗಳನ್ನು ಹಿಮ್ಮೆಟ್ಟಿಸಿ, ಬಹಮನೀ ರಾಜ್ಯದ ಪತನವನ್ನು ನಿವಾರಿಸಿದ.

ಅಹ್ಮದ್ ಮರಣ ಹೊಂದಿ ಶಂಸುದ್ದೀನ್ ಸಿಂಹಾಸನವೇರಿದಾಗ ಆ ಮಧ್ಯೆ ಸ್ವಲ್ಪಕಾಲ ಖ್ವಾಜಾ-ಎ-ಜಹಾನ್ (ಪ್ರಧಾನಮಂತ್ರಿ) ಆಗಿ ನೇಮಿತನಾಗಿದ್ದಾತ ರಾಜಮಾತೆಯ ತಂತ್ರದಿಂದ ಅಧಿಕಾರಚ್ಯುತನಾಗಿ ಮೃತನಾದ. ಸ್ವಲ್ಪಕಾಲದಲ್ಲೇ ರಾಜಮಾತೆಯೂ ಸಕ್ರಿಯ ರಾಜಕೀಯದಿಂದ ದೂರ ಸರಿದಳು. ಆಗ ಬಹಮನೀ ರಾಜ್ಯದ ಅನೇಕ ಕಂಟಕಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಹ್ಮೂದ್ ಗಾವಾನನನ್ನು ಮತ್ತೆ ಪ್ರಧಾನಮಂತ್ರಿಯಾಗಿ ನೇಮಿಸಲಾಯಿತು (1463). ಗಾವಾನ್ ಪ್ರಧಾನಿಯಾದ ಮೇಲೆ ಆ ರಾಜ್ಯದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು. ಆಂತರಿಕ ಭದ್ರತೆಯನ್ನು ಇವನು ಯಶಸ್ವಿಯಾಗಿ ಸಾಧಿಸಿದ್ದಲ್ಲದೇ ನೆರೆಯ ರಾಜ್ಯದ ಶತ್ರುಗಳನ್ನು ಎದುರಿಸುವಲ್ಲೂ ಹೊಸ ನೀತಿಯನ್ನು ಅನುಸರಿಸಿದ. ಇದುವರೆಗೂ ತನ್ನನ್ನು ರಕ್ಷಿಸಿಕೊಳ್ಳುವುದರಲ್ಲೇ ಪ್ರಯಾಸ ಪಡುತ್ತಿದ್ದ ಬಹಮನೀ ರಾಜ್ಯ ಈಗ ಬಿರುಸಿನಿಂದ ರಾಜ್ಯ ವಿಸ್ತರಣೆಯಲ್ಲೂ ತೊಡಗಿತು.

ಬಹಮನೀ ರಾಜ್ಯದ ಪ್ರದೇಶಗಳನ್ನು ಆಕ್ರಮಿಸಲು ಹವಣಿಸುತ್ತಿದ್ದ ಮಾಳವದ ಸುಲ್ತಾನ್ ಮಹಮ್ಮದ್ ಖಿಲ್ಜಿಯ ವಿರುದ್ಧ ಗಾವಾನ್ ಸೈನಿಕ ಕಾರ್ಯಾಚರಣೆ ನಡೆಸಿದ. ಇದರ ಪರಿಣಾಮವಾಗಿ ಖಿಲ್ಜಿಯು ತನ್ನ ರಾಜ್ಯಕ್ಕೆ ಮರಳಿದ. ಅವನೊಂದಿಗೆ ಖಾಯಂ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಮಲಿಕ್ ಹಸನ್ ಬಹರಿಯ ನೇತೃತ್ವದಲ್ಲಿ ಒರಿಸ್ಸಕ್ಕೆ ಹೋದ ಬಹಮನೀ ಸೈನ್ಯ ದಂಗೆಕಾರರನ್ನು ಹೊರಹಾಕಿ ಹಮ್ಮೀರದೇವನನ್ನು ಪುರುಷೋತ್ತಮ ಎಂಬ ಹೆಸರಿನಲ್ಲಿ ಸಿಂಹಾಸನದ ಮೇಲೆ ಕೂರಿಸಿತಲ್ಲದೆ ಮುಂದೆ ರಾಜಮಹೇಂದ್ರಿ ಕೊಂಡವೀಡುಗಳನ್ನು ಜಯಿಸಿತು.

ಬಹಮನೀ ರಾಜ್ಯ ಈ ಕಾಲದಲ್ಲಿ ಪಶ್ಚಿಮದ ಕಡೆ ನಡೆಸಿದ ರಾಜ್ಯವಿಸ್ತರಣೆ ಅತ್ಯಂತ ಮಹತ್ವವಾದದ್ದು. ಸ್ವತಃ ಸುಲ್ತಾನ ಮತ್ತು ಮಹ್ಮೂದ್ ಗಾವಾನರು ನಡೆಸಿದ ದಂಡಯಾತ್ರೆಗಳಿಂದಾಗಿ ದಾಬೋಲ್, ಚಾಕಣ, ಚೌಲ್ ಮೊದಲಾದ ಸ್ಥಳಗಳು ಹಾಗೂ ಖೆಲ್ನಾ, ಸಂಗಮೇಶ್ವರದಂತಹ ದೊಡ್ಡಕೋಟೆಗಳು ಬಹಮನೀ ರಾಜ್ಯದ ವಶವಾದವು. 1469ರಿಂದ 1473ರವರೆಗಿನ ಅವಧಿಯಲ್ಲಿ ಹುಬ್ಬಳ್ಳಿ, ಬೆಳಗಾಂವಿ, ಗೋವಗಳಂತಹ ಪ್ರಮುಖ ಸ್ಥಳಗಳನ್ನು ವಿಜಯನಗರದಿಂದ ವಶ ಪಡಿಸಿಕೊಳ್ಳಲಾಯಿತು. ಇದರಿಂದ ಬಹಮನೀರಾಜ್ಯ ಅರಬ್ಬೀಸಮುದ್ರದಿಂದ ಬಂಗಾಲ ಕೊಲ್ಲಿಯವರೆಗೂ ತುಂಗಭದ್ರಾ ನದಿಯಿಂದ ಗೋದಾವರಿ ನದಿಯವರೆಗೂ ವಿಸ್ತರಿಸಿತು. 1475ರಲ್ಲಿ ಆಂಧ್ರಪ್ರದೇಶದ ಕೆಲವು ದಂಗೆಗಳನ್ನು ಅಡಗಿಸಲಾಯಿತು. 1478ರಲ್ಲಿ ಸುಲ್ತಾನ ಸ್ವತಃ ಒರಿಸ್ಸದ ಮೇಲೆ ದಂಡೆತ್ತಿಹೋಗಿ ಪುರುಷೋತ್ತಮನಿಂದ ಅಪಾರ ಕಪ್ಪ ವಸೂಲು ಮಾಡಿದ. 1481ರಲ್ಲಿ ವಿಜಯನಗರದ

ಸಾಳುವ ನರಸಿಂಹನನ್ನು ಬೆನ್ನಟ್ಟಿಹೋದ ಸುಲ್ತಾನ ಕಂಚಿಯವರೆಗೂ ಸೈನ್ಯವನ್ನು ಮುನ್ನಡೆಸಿದ. ಬಹಮನೀ ಸೈನ್ಯ ದಕ್ಷಿಣಕ್ಕೆ ಇಷ್ಟು ದೂರ ಹೋಗಿ ವಿಜಯ ಸಾಧಿಸಿದ್ದು ಇದೇ ಮೊದಲ ಬಾರಿ. ಮುಂದೆ ಎಂದೂ ಅದು ಇಷ್ಟು ದಕ್ಷಿಣದವರೆಗೂ ಹೋಗಲಿಲ್ಲ.

ಬಹಮನೀ ರಾಜ್ಯದ ಇಷ್ಟೆಲ್ಲ ಯಶಸ್ಸಿನ ಹಿಂದೆ ಮಹ್ಮೂದ್ ಗಾವಾನ್ ಪ್ರೇರಕಶಕ್ತಿಯಾಗಿದ್ದ. ಇವನ ಆಡಳಿತ ಸುಧಾರಣೆಗಳು ರಾಜ್ಯದ ದೃಢತೆಗೆ ಕಾರಣವಾಗಿದ್ದುವು. ಇವನು ಪ್ರಾಂತ್ಯಾಧಿಕಾರಿಗಳನ್ನು ಹತೋಟಿಯಲ್ಲಿಟ್ಟು ಕೊಳ್ಳಲು ರಾಜ್ಯದಲ್ಲಿದ್ದ ನಾಲ್ಕು ಪ್ರಾಂತ್ಯಗಳನ್ನು ಎಂಟು ಪ್ರಾಂತ್ಯಗಳಾಗಿ ವಿಂಗಡಿಸಿದ. ಕೆಲವು ಪ್ರದೇಶಗಳು ನೇರವಾಗಿ ಸುಲ್ತಾನನ ಅಧೀನದಲ್ಲಿರುವಂತೆ ಮಾಡಿದ್ದ. ಒಂದು ಪ್ರಾಂತ್ಯವನ್ನು ಬಿಟ್ಟು ಉಳಿದೆಲ್ಲ ಪ್ರಾಂತ್ಯಗಳ ಖಿಲ್ಲೇದಾರರು ನೇರವಾಗಿ ಸುಲ್ತಾನನಿಗೆ ಹೊಣೆಯಾಗಿರಬೇಕಾಯಿತು. ಜಹಗೀರುದಾರರು ಹಾಕುತ್ತಿದ್ದ ಸ್ಥಳೀಯ ತೆರಿಗೆಗಳ ಸಂಬಂಧದಲ್ಲಿಯೂ ಸುಲ್ತಾನನ ಹತೋಟಿ ಇರುವಂತೆ ಮಾಡಿದ. ರಾಜ್ಯದ ಇಡೀ ಜಮೀನನ್ನು ಅಳತೆ ಮಾಡಿಸಿ ಹಕ್ಕುಪತ್ರಗಳ ದಾಖಲೆಗಳನ್ನು ಸಿದ್ಧಗೊಳಿಸಲು ವ್ಯವಸ್ಥೆ ಮಾಡಿದ. ಇವನು ನ್ಯಾಯಾಂಗ, ಸೈನ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲೂ ಸುಧಾರಣೆಗಳನ್ನು ತಂದ ಈ ಗಾವಾನನ ಈ ಕ್ರಮಗಳಿಂದ ರಾಜ್ಯದ ಆಡಳಿತ ಬಿಗಿ ಹೆಚ್ಚಿತು ಮತ್ತು ಆರ್ಥಿಕ ಸ್ಥಿತಿಯೂ ಸುಧಾರಿಸಿತು. ಬಹಮನೀ ರಾಜ್ಯ ವಿಸ್ತಾರವಾಗಿ ಅದು ಹಿಂದೆಂದೂ ಕಂಡರಿಯದಷ್ಟು ವೈಭವಯುತವಾಗಿತ್ತು.

ಆದರೆ ಬಹಮನೀ ಆಸ್ಥಾನದಲ್ಲಿ ಪ್ರಾರಂಭದಿಂದಲೂ ಇದ್ದ ದಖನೀ ಮತ್ತು ಪರದೇಶಿ ಗುಂಪುಗಳಲ್ಲಿದ್ದ ದ್ವೇಷ ಹೊಗೆಯಾಡುತ್ತಲೇ ಇತ್ತು. ಮಹ್ಮೂದ್ ಗಾವಾನ್ ವಿದೇಶದಿಂದ ಬಂದವನಾದ್ದರಿಂದ ಅವನನ್ನು ದಖನಿಗಳು ಪರದೇಶಿಗಳ ಮುಖಂಡನೆಂದೇ ಬಗೆದಿದ್ದರು. ಆದರೂ ಗಾವಾನ್ ಈ ಗುಂಪುಗಳ ನಡುವೆ ಸಾಮರಸ್ಯ ತರಲು ಪ್ರಯತ್ನಿಸಿದ. ಪ್ರಾಂತೀಯ ರಾಜ್ಯಪಾಲರುಗಳನ್ನು ಈ ಎರಡು ಗುಂಪುಗಳಿಂದಲೂ ಸಮನಾಗಿ ಆರಿಸಿ ನೇಮಿಸಿದ್ದ. ಬಿಜಾಪುರದ ಉಸ್ತುವಾರಿಯನ್ನು ತಾನೇ ವಹಿಸಿಕೊಂಡಿದ್ದ. ಆದರೆ ರಾಜ್ಯಪಾಲರುಗಳ ಹುದ್ದೆಗಳನ್ನು ಒಡೆದದ್ದರಿಂದ ಅನೇಕ ಆಸ್ಥಾನಿಕರು ಅಸಂತುಷ್ಟರಾಗಿದ್ದರು. ವಿರೋಧಿ ಬಣಕ್ಕೆ ನಿಜಾಮ್–ಉಲ್–ಮುಲ್ಕ್ ಮುಖಂಡನಾಗಿದ್ದ.

ಸುಲ್ತಾನನು ದಕ್ಷಿಣದ ಕಡೆ ದಂಡೆಯಾತ್ರೆ ಕೈಗೊಂಡಿದ್ದಾಗ ಆಸ್ಥಾನದಲ್ಲಿ ಗಾವಾನನ ವಿರುದ್ಧ ಪಿತೂರಿ ನಡೆಯಿತು. ಆಗ ಗಾವಾನ್ ಕೊಂಡಪಲ್ಲಿಯಲ್ಲಿ ಠಾಣೆ ಹೂಡಿದ್ದ. ವಿರೋಧಿಗಳು ಗಾವಾನನ ಕಾರ್ಯದರ್ಶಿಯನ್ನು ಶಾಮೀಲು ಮಾಡಿಕೊಂಡು ಅವನಿಂದ ಪ್ರಧಾನಮಂತ್ರಿಯ ಮುದ್ರೆಯನ್ನು ಪಡೆದು ಖಾಲಿ ಕಾಗದದ ಮೇಲೆ ಒತ್ತಿ ಈ ಕಾಗದದಲ್ಲಿ ಗಾವಾನ್ ಒರಿಸ್ಸದ ರಾಜನಿಗೆ ಬಹಮನೀ ರಾಜ್ಯದ ಮೇಲೆ ದಂಡೆತ್ತಿ ಬರುವಂತೆ ಆಹ್ವಾನಿಸಿರುವ ಒಕ್ಕಣೆ ಇರುವಂತೆ ಬರೆದು, ಸುಲ್ತಾನ ಕೊಂಡಪಲ್ಲಿಗೆ ಬಂದಾಗ ಅವನ ಮುಂದೆ ಆ ನಕಲಿ ಪತ್ರವನ್ನು ಇಟ್ಟರು. ಆಗ ಸುಲ್ತಾನ ಗಾವಾನನನ್ನು ಕರೆಸಿ, ರಾಜ್ಯದ್ರೋಹಕ್ಕೆ ಯಾವ ಶಿಕ್ಷೆ ವಿಧಿಸಬೇಕೆಂದು ಕೇಳಿದ. ಅದಕ್ಕೆ ಹಿನ್ನೆಲೆಯನ್ನು ಅರಿಯದಿದ್ದ ಗಾವಾನ್ ತಟ್ಟನೆ ಮರಣದಂಡನೆಯೇ ಶಿಕ್ಷೆ ಎಂದು ಹೇಳಿದ. ಆಗ ಗಾವಾನನಿಗೆ ಅವನದೆಂದು ಹೇಳಲಾದ ರಾಜದ್ರೋಹದ ಪತ್ರವನ್ನು ತೋರಿಸಲಾಯಿತು. ಗಾವಾನ್ ಆ ಪತ್ರದಲ್ಲಿರುವ ಮುದ್ರೆ ತನ್ನದೆಂದು ಒಪ್ಪಿಕೊಂಡರೂ ಪತ್ರದಲ್ಲಿರುವ ಬರೆಹದ ಬಗ್ಗೆ ತನಗೇನೂ ತಿಳಿಯದೆಂದು ಹೇಳಿದ. ಆದರೆ ಸುಲ್ತಾನ ಕೋಪದಿಂದ ಪ್ರಧಾನಿಯ ತಲೆತೆಗೆಯುವಂತೆ ಆಜ್ಞೆಮಾಡಿ ನಿರ್ಗಮಿಸಿದ. 1481ರ ಏಪ್ರಿಲ್ 15ರಂದು ಮಹ್ಮೂದ್ ಗಾವಾನನನ್ನು ಮರಣದಂಡನೆಗೆ ಗುರಿಪಡಿಸಲಾಯಿತು.

ಮಹ್ಮೂದ್ ಗಾವಾನ್ ಮಧ್ಯಯುಗದ ಇತಿಹಾಸದ ಗಮನಾರ್ಹ ವ್ಯಕ್ತಿ. ಇವನು ರಾಜ್ಯದ ಉನ್ನತ ಅಧಿಕಾರ ಸ್ಥಾನದಲ್ಲಿದ್ದರೂ ಸರಳಜೀವಿಯಾಗಿದ್ದ. ತನ್ನ ಜೀವನ ನಿರ್ವಹಣೆಗೆ ವ್ಯಾಪಾರದಿಂದ ಬಂದ ಲಾಭವನ್ನು ಮಾತ್ರ ಬಳಸುತ್ತಿದ್ದ. ಜ್ಞಾನಾಕಾಂಕ್ಷಿಯೂ ವಿದ್ವತ್ ಪೋಷಕನೂ ಆಗಿದ್ದ ಗಾವಾನ್ ಬಿದರೆಯಲ್ಲಿ 1472ರಲ್ಲಿ ವಿದ್ಯಾಪೀಠವೊಂದನ್ನು (ಮದರಸಾ) ಸ್ಥಾಪಿಸಿದ್ದ. ಅಲ್ಲಿ ವಿದ್ಯಾರ್ಥಿಗಳಿಗೆ ಊಟ, ವಸತಿಗಳ ವ್ಯವಸ್ಥೆ ಮಾಡಿಸಿದ್ದ. ಇವನ ಖಾಸಗಿ ಗ್ರಂಥಾಲಯದಲ್ಲಿ 1,000 ಹಸ್ತಪ್ರತಿಗಳಿದ್ದುವು. ಇವನು ಸ್ಥಾಪಿಸಿದ ಮದರಸಾದ ಗ್ರಂಥಾಲಯದಲ್ಲಿ 3,000 ಹಸ್ತಪ್ರತಿಗಳಿದ್ದುವು. ಇವನು ತಾಜಕ್–ಉಲ್ ಇನ್ಶಾ ಮತ್ತು ದಿವಾನ್ ಇ–ಅಶ್ರ್ ಎಂಬ ಎರಡು ಗ್ರಂಥಗಳ ಕರ್ತೃ ಎಂದು ಫೆರಿಸ್ತ ತಿಳಿಸುತ್ತಾನೆ. ಇವನು ಪಾರಸೀ ಭಾಷೆಯಲ್ಲಿ ಬರೆದ ಎರಡು ದೀರ್ಘ ಪದ್ಯಗಳು ಇಂದಿಗೂ ಉಳಿದು ಬಂದಿದ್ದು ತಮ್ಮ ಸರಳ ಸೌಂದರ್ಯಕ್ಕೆ ಪ್ರಸಿದ್ಧವಾಗಿವೆ. (ಡಿ.ಎಸ್.ಜೆ.)

**ಮಹೋಪಮೆ:** ಕನ್ನಡಕ್ಕೆ ಪಶ್ಚಿಮದಿಂದ ಬಂದ ಕಾವ್ಯ ಕೊಡುಗೆಗಳಲ್ಲೊಂದು. ಹಿಂದೆ ಉಪಮೆಯಿದ್ದಿತೇ ಹೊರತು ಮಹೋಪಮೆ ಇರಲಿಲ್ಲ (ಮಹೋಪಮೆಯ ಛಾಯೆಯನ್ನು ಕೆಲವೆಡೆ ಗುರುತಿಸಬಹುದಷ್ಟೆ). ಎಪಿಕ್ ಸಿಮಿಲಿ ಅಥವಾ ಹೋಮರಿಕ್ ಸಿಮಿಲಿ ಎಂಬುದಕ್ಕೆ ಕನ್ನಡದಲ್ಲಿ ಮಹೋಪಮೆ ಎಂದು ನಾಮಕರಣಮಾಡಿ, ಮೊದಲ ಬಾರಿಗೆ ಅದನ್ನು ಬಳಸಿದವರು ಕುವೆಂಪು. ಅದರ ಗುಣಲಕ್ಷಣಗಳನ್ನು ಪ್ರಥಮತಃ ವಿವರಿಸಿದವರೂ ಅವರೆ. ಅವರ ಚಿತ್ರಾಂಗದಾ ಖಂಡಕಾವ್ಯದಲ್ಲಿ ಮತ್ತು ಶ್ರೀರಾಮಾಯಣದರ್ಶನಂ ಮಹಾಕಾವ್ಯದಲ್ಲಿ ಹಲವಾರು ಮಹೋಪಮೆಗಳನ್ನು ಕಾಣಬಹುದು.

ಪಾಶ್ಚಾತ್ಯ ಸಾಹಿತ್ಯದಲ್ಲಿ ಮಹೋಪಮೆ ಮೊದಲು ಗೋಚರಿಸುವುದು ಗ್ರೀಕ್ ಮಹಾನ್ ಕವಿ ಹೋಮರನ ಕಾವ್ಯಗಳಲ್ಲಿ. ಆದ್ದರಿಂದಲೇ ಅದನ್ನು ಹೋಮರುಪಮೆ ಎಂದೂ ಕರೆಯುತ್ತಾರೆ. ಅನಂತರ ಡಾಂಟೆ, ಮಿಲ್ಟನ್, ಮ್ಯಾಥ್ಯೂ ಆರ್ನಾಲ್ಡ್, ಟೆನಿಸನ್ ಮುಂತಾದ ಕವಿಗಳೂ ಅದನ್ನು ಬಳಸಿದ್ದಾರೆ. ಮಹೋಪಮೆ ಸಂಪೂರ್ಣವಾಗಿ ಒಪ್ಪುವುದು ಮಹಾಕಾವ್ಯಗಳಿಗೆ. ಖಂಡಕಾವ್ಯಗಳಲ್ಲಿಯೂ ಅದನ್ನು ಸಾರ್ಥಕವಾಗಿ ಬಳಸಬಹುದು. ಆದರೆ ಭಾವಗೀತೆಯಲ್ಲಿ ಮಹೋಪಮೆ ಶೋಭಿಸಲಾರದು.

ಉಪಮೆಗೂ ಮಹೋಪಮೆಗೂ ಇರುವ ವ್ಯತ್ಯಾಸವೆಂದರೆ, ಮಹೋಪಮೆಯ ದೀರ್ಘತ್ವ ಕುವೆಂಪು ಅವರು ಹೇಳುವಂತೆ, ವಿಸ್ತಾರಗೊಂಡರೆ, ವಿವರ ವರ್ಣನೆಯಿಂದ ದೀರ್ಘವಾದರೆ ಉಪಮೆ ಮಹೋಪಮೆಯಾಗುತ್ತದೆ. ಉಪಮೆ ಮಹೋಪಮೆ ಎರಡರಲ್ಲೂ ಉಪಮೇಯ ಒಂದೇ ಬಗೆಯದಾಗಿರುತ್ತದೆ. ಆದರೆ ಮಹೋಪಮಾ ಪ್ರಕ್ರಿಯೆಯಲ್ಲಿ ಉಪಮಾನ ವಿಶಿಷ್ಟವಾಗಿರುತ್ತದೆ. ಅದು ಒಂದು ಪ್ರತ್ಯೇಕ ಚಿತ್ರವಾಗಿ, ವರ್ಣನೆಯಾಗಿ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಳ್ಳಬಲ್ಲುದು. ಆದ್ದರಿಂದ ಮಹೋಪಮೆ ಉದ್ದಿಷ್ಟ ವಿಷಯದ ಸ್ಪಷ್ಟೀಕರಣ ಮತ್ತು ಪುಷ್ಟೀಕರಣಕ್ಕೆ ನೆರವಾಗುವುದು ಮಾತ್ರವಲ್ಲದೆ, ತನಗೆ ತಾನೆ ಆಸ್ವಾದ್ಯವಾಗಿಯೂ ಪರಿಣಮಿಸುತ್ತದೆ.

ದೀರ್ಘತೆ ಅಥವಾ ಬೃಹತ್ತು, ಭಾವಕೋಶ ಸಂಪತ್ತು, ರಸಪುಷ್ಟಿ, ನೂತನ ಸಂಸ್ಕಾರಸೃಷ್ಟಿ, ಮಹತ್ತು–ಇವು ಮಹೋಪಮೆಯ ಲಕ್ಷಣಗಳೆಂದು ಹೇಳಲಾಗಿದೆ. ಮಹೋಪಮೆಗೆ ಒಂದು ಸಣ್ಣ ಉದಾಹರಣೆ:

ದೀವದ ಹೋರಿಯಂ ಕಟ್ಟಿ ಬೇಂಟೆಗಂ
ಮರಸು ಕುಳಿತಿರೆ ಮರದ ತುದಿ ಮಂಚಿಗೆಯ ಮೇಲೆ,
ಸೋವತವನರಸಿ ಬರ್ಪುದು ಪಸಿದ ಪುಲಿ ಮುಂದೆ
ಕೊರ್ವಿದೆರೆಯಂ ಕಂಡದಂ ಕೊಳ್ವಲಂಪಿಂದೆ
ಹೊಂಚಿ ಮುಂಬರಿಯುತಿರಲೀಡೇಳುವುದು ಕೋವಿ.
ನೆರಕೆ ತಗುಲಿದ ಗುಂಡಿನೇರಿಂಗೊಡನೆ ಜೀವಿ

ಮೈಮರೆದುರುಳೆ, ಮರಸಿನಿಂದಿಳಿದು ಬಂದು, ಆ
ಬೇಂಟೆಗಾರಂ ತನ್ನ ಬೇಂಟೆಯನೊಸೆದು ನೋಡಿ
ಮೆಚ್ಚುವನ್, ತನ್ನ ಬೀರದ ಬೆನ್ಗೆ ತಾನೆ ಕೈ
ಚಪ್ಪರಿಸಿ! ಓಡಿದರೋ ಬಿಳ್ದಿಂದ್ರಜನ ಬಳಿಗೆ
ರಾಮಾದಿಗಳುಮಂತೆ. (ಶ್ರೀ ರಾಮಾಯಣ ದರ್ಶನಂ)

ಮಹೋಪಮೆ ಅನೇಕ ಪುಟಗಳಷ್ಟು ವ್ಯಾಪ್ತಿಯದಾಗಬಲ್ಲುದು. ಅಂಥ ಸಂದರ್ಭಗಳಲ್ಲಿ ಅದಕ್ಕೆ 'ಸ್ವಸಂಪೂರ್ಣವಾದ, ವರ್ಣನಾತ್ಮಕವಾದ ಭಾವಗೀತೆ'ಯ ಬೆಲೆ ಬರುತ್ತದೆ. *

**ಮಳಖೇಡ:** ಗುಲ್ಬರ್ಗ ಜಿಲ್ಲೆ ಸೇಡಂ ತಾಲ್ಲೂಕಿನಲ್ಲಿರುವ ಗ್ರಾಮ. ಜನಸಂಖ್ಯೆ 11,180. ಹಿಂದೆ ಇದು ಮಾನ್ಯಖೇಟ ಎಂಬ ಹೆಸರಿನಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಮಾನ್ಯಖೇಟವನ್ನು ಮುಮ್ಮಡಿ ಗೋವಿಂದನ (793–814) ಕಾಲದಲ್ಲಿ ಕಟ್ಟಲು ಆರಂಭಿಸಲಾಯಿತು. ಅವನ ಮಗ ಅಮೋಘವರ್ಷ ನೃಪತುಂಗ ಆ ಕೆಲಸವನ್ನು ಪೂರ್ಣಗೊಳಿಸಿ ಅದನ್ನು ತನ್ನ ಸ್ಥಿರ ರಾಜಧಾನಿಯನ್ನಾಗಿ ಮಾಡಿಕೊಂಡ. ಇದರ ಕೋಟೆ ಕೊತ್ತಲಗಳನ್ನು ಕಟ್ಟಲಿಕ್ಕೆ ಮೇಲ್ವಿಚಾರಣೆಗಾಗಿ ಪೂರ್ವಚಾಳುಕ್ಯ ಮನೆತನದ ವಿಷ್ಣುವರ್ಧನನನ್ನು ಮುಮ್ಮಡಿ ಗೋವಿಂದ ನೇಮಿಸಿದ್ದನೆಂದು ಕೆಲವು ಶಾಸನಗಳಿಂದ ತಿಳಿದು ಬರುತ್ತದೆ.

ಹಿಂದಿನ ಮಾನ್ಯಖೇಟ ನಾಲ್ಕಾರು ನೆರೆಯೂರುಗಳನ್ನು ಒಳಗೊಂಡು ವಿಸ್ತಾರವಾಗಿತ್ತು. ಇದರ ಪಶ್ಚಿಮಕ್ಕೆ ಸು. 6 ಕಿಮೀ ದೂರದಲ್ಲಿರುವ ಇಂದಿನ ದಂಡೋತಿ ಎಂಬ ಊರಲ್ಲಿ ದಂಡಿನ ಪಡೆ ಇದ್ದಿತು. ಪೂರ್ವಕ್ಕೆ ಸು. 14 ಕಿಮೀ ದೂರದ ಇಂದಿನ ಸೇಡಂ ಎಂಬಲ್ಲಿ ರಾಜ್ಯದ ಮುಖ್ಯ ಕಛೇರಿ ಇದ್ದಿತು. ಸೇಡಂ–ಮಳಖೇಡದ ನಡುದಾರಿಯ ಇಂದಿನ ನೀಲಹಳ್ಳಿ ಕೊಂಕನಹಳ್ಳಿ ಎಂಬ ಊರ ಎಡೆಯಲ್ಲಿ ರಾಜ್ಯದ ಬೊಕ್ಕಸವಿದ್ದಿತು ಎಂದು ಊಹೆ.

972ರಲ್ಲಿ ಮಾಳವದ ಪರಮಾರ ವಂಶದ ಇಮ್ಮಡಿ ಸೀಯಕ ಹರ್ಷ ಮಳಖೇಡದ ಮೇಲೆ ದಾಳಿ ಮಾಡಿ ಅದನ್ನು ಧ್ವಂಸ ಮಾಡಿದ. ಅನಂತರ ಆಳಿದ ಚಾಳುಕ್ಯರು ರಾಜಧಾನಿಯನ್ನು ಕಲ್ಯಾಣಕ್ಕೆ ಬದಲಾಯಿಸಿದರು.

ಕೆಲವು ಶತಮಾನಗಳು ಕಳೆದ ಮೇಲೆ ಮಳಖೇಡ ಒಬ್ಬ ಮುಸಲ್ಮಾನ ಸರದಾರನ ವಶದಲ್ಲಿತ್ತು. ಇವನು ಕಾಗಿಣಾ ಹೊಳೆ ಮತ್ತು ಒಂದು ಹಳ್ಳಕೂಡುವ ಸಂಗಮ ಸ್ಥಾನದಲ್ಲಿ ಎತ್ತರದ ದಿನ್ನೆಯ ಮೇಲೆ ವಿಸ್ತಾರವೂ ಭದ್ರವೂ ಆದ ಕೋಟೆಯನ್ನು ಕಟ್ಟಿಸಿದ. ಇದನ್ನು ಮುಜಫರ್ ಕಿಲಾ ಎಂದು ಈಗಲೂ ಕರೆಯುತ್ತಾರೆ.

ಮಳಖೇಡ ಜೈನಧರ್ಮದ ಕೇಂದ್ರವಾಗಿತ್ತು. ರಾಷ್ಟ್ರಕೂಟರ ಕಾಲದವಿರಬಹುದಾದ ಪ್ರಾಚೀನ ಬಸದಿ (ನೇಮಿನಾಥ ಜಿನಾಲಯ), ಪಾರ್ಶ್ವನಾಥ ಮೊದಲಾದ ತೀರ್ಥಂಕರರ ಮೂರ್ತಿಗಳೂ ನಂದೀಶ್ವರ, ಭೈರವ, ಸರಸ್ವತಿ, ಧರಣೇಂದ್ರ, ಪದ್ಮಾವತಿ ಮೊದಲಾದ ಯಕ್ಷಯಕ್ಷಿಯರ ವಿಗ್ರಹಗಳು ಇಲ್ಲಿ ಉಳಿದಿವೆ. ಸ್ವಲ್ಪ ಈಚೆಯ ಕಾಲದ ಚಾಳುಕ್ಯ ಪದ್ಧತಿಯ ಶಿವಾಲಯವೊಂದಿದೆ.

ವಿದ್ಯಾರಣ್ಯರ ಸಮಕಾಲೀನರೂ ಮಾಧ್ವ ಪರಂಪರೆಯ ಗ್ರಂಥಕರ್ತರೂ ಆದ ಅಕ್ಷೋಭ್ಯತೀರ್ಥ ಮತ್ತು ಅವರ ಶಿಷ್ಯ ಜಯತೀರ್ಥರು ಮಳಖೇಡವನ್ನು ತಮ್ಮ ಧಾರ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಮಳಖೇಡದಿಂದ ಅರ್ಧ ಮೈಲಿ ದೂರದಲ್ಲಿ ಅವರ ಬೃಂದಾವನಗಳಿವೆ. ಈಗಲೂ ಅವರ ಪುಣ್ಯತಿಥಿಯನ್ನು ಪ್ರತಿವರ್ಷವೂ ವಿಜೃಂಭಣೆಯಿಂದ ಆಚರಿಸುತ್ತಾರೆ.

ರಾಷ್ಟ್ರಕೂಟ ರಾಜಧಾನಿಯಾಗಿದ್ದುದಲ್ಲದೆ ಪುಷ್ಪದಂತ, ನೃಪತುಂಗ, ಪಂಪ, ಪೊನ್ನ, ರನ್ನ, ಜಯತೀರ್ಥ ಇಂಥ ಕವಿಗಳ–ಪಂಡಿತರ ಕಾರ್ಯಕ್ಷೇತ್ರವಾಗಿದ್ದ ಮಳಖೇಡ ಈಗ ಸಾಮಾನ್ಯ ಹಳ್ಳಿಯಾಗಿದೆ. (ಬಿ.ಎನ್.ಎಸ್.)

**ಮಳವಳ್ಳಿ:** ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಜಿಲ್ಲೆಯ ಆಗ್ನೇಯ ಭಾಗದಲ್ಲಿರುವ ಈ ತಾಲ್ಲೂಕನ್ನು ಪಶ್ಚಿಮ ಮತ್ತು ದಕ್ಷಿಣದಲ್ಲಿ ತಿರುಮಕೂಡಲು ನರಸೀಪುರ, ಆಗ್ನೇಯದಲ್ಲಿ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಪೂರ್ವದಲ್ಲಿ ಕನಕಪುರ, ವಾಯವ್ಯದಲ್ಲಿ ಮಂಡ್ಯ, ಉತ್ತರದಲ್ಲಿ ಮದ್ದೂರು ಮತ್ತು ಚನ್ನಪಟ್ಟಣ–ಈ ತಾಲ್ಲೂಕುಗಳು ಸುತ್ತುವರೆದಿವೆ. ಕಿರುಗಾವಲು, ಬೊಪ್ಪಗೌಡನಪುರ, ಮಳವಳ್ಳಿ ಮತ್ತು ಹಲಗೂರು ಹೋಬಳಿಗಳೂ ಒಟ್ಟು 186 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 804 ಚ.ಕಿಮೀ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 2,81,809.

ಮಳವಳ್ಳಿ ತಾಲ್ಲೂಕು ಮೊದಲು ಮೈಸೂರು ಜಿಲ್ಲೆಗೆ ಸೇರಿತ್ತು. 1939ರ ಜುಲೈ 1 ರಿಂದ ಹೊಸದಾಗಿ ರಚಿಸಲ್ಪಟ್ಟ ಮಂಡ್ಯ ಜಿಲ್ಲೆಗೆ ಸೇರಿತು. ಈ ತಾಲ್ಲೂಕು ಕಾವೇರಿ ನದಿಯ ಕಣಿವೆಯಲ್ಲಿ ಸಮುದ್ರಮಟ್ಟದಿಂದ ಸು. 762 ಮೀನಿಂದ 914 ಮೀ ಎತ್ತರದಲ್ಲಿ ಇದೆ. ಇದರ ದಕ್ಷಿಣ ಭಾಗದಲ್ಲಿ ಬಿಳಿಗಿರಿರಂಗನ ಬೆಟ್ಟದಿಂದ ಮುಂದುವರಿದ ಕಣಶಿಲೆಯ ಬೆಟ್ಟಗಳು ಕಂಡುಬರುತ್ತವೆ. ಈ ತಾಲ್ಲೂಕಿನ ಪೂರ್ವ ಭಾಗದಲ್ಲೂ ಸಣ್ಣ ಬೆಟ್ಟಗಳ ಶ್ರೇಣಿ ಹಾದು ಹೋಗಿದೆ. ಕಬ್ಬಾಳದುರ್ಗ ಈ ಭಾಗದ ಎತ್ತರವಾದ ಶಿಖರ (1,069ಮೀ). ತಾಲ್ಲೂಕಿನ ಹೆಚ್ಚುಭಾಗ ಸಾಮಾನ್ಯವಾಗಿ ಏರಿಳಿತಗಳಿಂದ ಕೂಡಿ, ಉತ್ತರದಿಂದ ದಕ್ಷಿಣದ ಕಡೆಗೆ ಇಳಿಜಾರಾಗಿದೆ. ಕಾವೇರಿ ನದಿ, ತಾಲ್ಲೂಕಿನ ದಕ್ಷಿಣ ಮೇರೆಯಾಗಿ ತಿರುಮಕೂಡಲು ನರಸೀಪುರ ಮತ್ತು ಕೊಳ್ಳೇಗಾಲ ತಾಲ್ಲೂಕನ್ನು ಬೇರ್ಪಡಿಸುತ್ತದೆ. ಇದು ತಾಲ್ಲೂಕಿನ ಆಗ್ನೇಯದ ಅಂಚಿನಲ್ಲಿ, ಬೆಳಕವಾಡಿಯ ಹತ್ತಿರ ಇಬ್ಭಾಗವಾಗಿ ಶಿವಸಮುದ್ರ ಎಂಬ ದ್ವೀಪವನ್ನುಂಟುಮಾಡಿ ಮುಂದೆ ಈ ಸೀಳುಗಳು ಕಂದರದ ಮೂಲಕ ಹರಿದು ಸು. 92 ಮೀ ಎತ್ತರದಿಂದ ಗಗನಚುಕ್ಕಿ ಮತ್ತು ಭರಚುಕ್ಕಿಗಳೆಂಬ ಜಲಪಾತಗಳಾಗಿ ಧುಮುಕುತ್ತವೆ. ಶಿಂಷಾನದಿ ತಾಲ್ಲೂಕಿನ ಪೂರ್ವಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿದು ಕಾವೇರಿಯನ್ನು ಸೇರುತ್ತದೆ. ಮಳವಳ್ಳಿ ತಾಲ್ಲೂಕಿನ ಹೆಚ್ಚು ಭಾಗ ಕಾವೇರಿ ಮತ್ತು ಶಿಂಷಾನದಿಗಳ ಬಯಲು ಪ್ರದೇಶ.

ಈ ತಾಲ್ಲೂಕಿನ ನೆಲಮಾಕನಹಳ್ಳಿ, ಗುರುದೇವರಹಳ್ಳಿ ಮತ್ತು ಅರಸಿನಕೆರೆಯ ಬಳಿ ಕೊರಂಡಂ ಸಿಗುತ್ತದೆ. ಕನ್ನಳ್ಳಿ ಹತ್ತಿರದ ಸೂಳೆಕೆರೆ ಪ್ರದೇಶದಲ್ಲಿ ಚೌಳುಪ್ಪು ದೊರೆಯುತ್ತದೆ. ಮಳವಳ್ಳಿ, ಹಲಗೂರು ಮತ್ತು ಶಿವಸಮುದ್ರಗಳ ಸುತ್ತಮುತ್ತ (ಸೇ. 60–70) ಕಬ್ಬಿಣಾಂಶ ಉಳ್ಳ ಮ್ಯಾಗ್ನಟೈಟ್ ಶಿಲೆಗಳಿವೆ.

ತಾಲ್ಲೂಕಿನಲ್ಲಿ ವರ್ಷಪೂರ್ತಿ ಹಿತವಾದ ಹವಾಮಾನ ಇರುತ್ತದೆ. ತಾಲ್ಲೂಕಿನಲ್ಲಿ ಕಾರ್ಯನಿರತ 2 ವೃಷ್ಟಿಮಾಪನ ಕೇಂದ್ರಗಳಿವೆ. ವಾಡಿಕೆಯಾಗಿ ವಾರ್ಷಿಕ ಮಳೆ 704 ಮಿಮೀ. ವಾಸ್ತವಿಕವಾಗಿ ಬಿದ್ದಮಳೆ 898 ಮಿಮೀ (2000). ಈ ತಾಲ್ಲೂಕಿನ ಒಟ್ಟು ಭೂಮಿಯಲ್ಲಿ 12,179 ಹೆಕ್ಟೇರ್ ಅರಣ್ಯ ಪ್ರದೇಶ; ಬೆಳೆ ಒಡ್ಡುವ ಪ್ರದೇಶ 49,792 ಹೆಕ್ಟೇರ್‌ಗಳು. ತಾಲ್ಲೂಕಿನ ಹೆಚ್ಚು ಭಾಗದಲ್ಲಿ ಒರಟಾದ ಮರಳು ಮಿಶ್ರಿತ ಮತ್ತು ಜೇಡಿಮಿಶ್ರಿತ ಕೆಂಪುಮಣ್ಣು ಕಂಡುಬರುವುದು. ಭೂಮಿ ಅಷ್ಟಾಗಿ ಫಲವತ್ತಾಗಿಲ್ಲ. ಆದರೆ ಹಳೆ ಕಾಲುವೆ ಪ್ರದೇಶಗಳಲ್ಲಿನ ಜೇಡಿಮಣ್ಣು ಹೆಚ್ಚು ಫಲವತ್ತಾಗಿದೆ. ಮಳವಳ್ಳಿಗೆ 19 ಕಿಮೀ ದೂರದಲ್ಲಿರುವ ಹರಡಿಹಳ್ಳದ ಕೆರೆ, ಕಾವೇರಿ ಮತ್ತು ಶಿಂಷಾ ನದಿಗಳ ಕಟ್ಟೆಗಳಿಂದ ಬರುವ ಕಾಲುವೆಯ ಶಾಖೆಗಳು ಮತ್ತು ಭೀಮಾ ತೊರೆಗೆ ದಳವಾಯಿ ಕೋಡಿಹಳ್ಳಿ ಹತ್ತಿರ

ನಿರ್ಮಿಸಿರುವ ಜಲಾಶಯ–ಇವು ಈ ತಾಲ್ಲೂಕಿನ ಮುಖ್ಯ ನೀರಾವರಿ ಸೌಲಭ್ಯಗಳು. ಒಟ್ಟು 16,686 ಹೆಕ್ಟೇರು ಪ್ರದೇಶದಲ್ಲಿ ನೀರಾವರಿ ವ್ಯವಸಾಯ ಇದೆ (2000). ಬತ್ತ, ರಾಗಿ, ಜೋಳ ಈ ತಾಲ್ಲೂಕಿನ ಮುಖ್ಯ ಬೆಳೆಗಳು. ಇದು ಮಂಡ್ಯ ಜಿಲ್ಲೆಯಲ್ಲೇ ಜೋಳ ಬೆಳೆಯುವ ಪ್ರಮುಖ ಪ್ರದೇಶ. ನೆಲಗಡಲೆ, ಕಬ್ಬು, ದ್ವಿದಳ ಧಾನ್ಯಗಳು, ಹಿಪ್ಪುನೇರಳೆ ಇತರ ಹೆಸರಿಸ ಬಹುದಾದ ಬೆಳೆಗಳು.

ಕೈಗಾರಿಕೆಯಲ್ಲಿ ಈ ತಾಲ್ಲೂಕು ಮುಂದಿಲ್ಲ. ಗೃಹಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಮಾತ್ರ ಕಂಡುಬರುತ್ತವೆ. ತಾಲ್ಲೂಕಿನಲ್ಲಿ 1 ಎಂಜಿನಿಯರಿಂಗ್, 5 ಇತರೆ ವಿವಿಧ ಕಾರ್ಖಾನೆಗಳಿವೆ (2001). ಇಲ್ಲಿ ರೇಷ್ಮೆಹುಳು ಸಾಕಾಣಿಕೆ ಮತ್ತು ಅದರ ಮೊಟ್ಟೆಗಳನ್ನು ತಯಾರು ಮಾಡುವ ಬಿತ್ತನೆ ಕೋಠಿಗಳು ವಿಶೇಷವಾಗಿ ಕಂಡುಬರುತ್ತವೆ.



ಮಾಯಮ್ಮನ ಗುಡಿ, ಬೆಳಕವಾಡಿ

ಸಾವಿರಾರು ಕುಟುಂಬಗಳಿಗೆ ಇದು ಉಪ ಕಸುಬು. ಇಲ್ಲಿಂದ ರೇಷ್ಮೆ ಮೊಟ್ಟೆಯನ್ನು ಮೈಸೂರು ಮತ್ತು ಬೆಂಗಳೂರುಗಳಿಗೆ ಕಳುಹಿಸಲಾಗುವುದು. ಮಳವಳ್ಳಿ ಮತ್ತು ಹಲಗೂರುಗಳಲ್ಲಿ ಚರ್ಮ ಹದಮಾಡುವುದು ಮತ್ತು ಪಾದರಕ್ಷೆಗಳ ತಯಾರಿಕೆಯ ಕೈಗಾರಿಕೆ ಇದೆ. ಹಲವೆಡೆ ಬತ್ತದ ಗಿರಣಿಗಳು, ಕಬ್ಬು ಅರೆಯುವ ಗಾಣಗಳು ಮತ್ತು ಕೈಮಗ್ಗದ ಬಟ್ಟೆ ತಯಾರಿಕೆ ಕಂಡುಬರುತ್ತದೆ. ಶಿವಸಮುದ್ರದಲ್ಲಿ ವಿದ್ಯುದುತ್ಪಾದನ ಕೇಂದ್ರವಿದೆ.

ತಾಲ್ಲೂಕಿನ ಆರ್ಥಿಕ ಚಟುವಟಿಕೆಗಳಿಗೆ ನೆರವಾಗಿ 11 ವಾಣಿಜ್ಯ, 3 ಗ್ರಾಮೀಣ, 5 ಸಹಕಾರಿ ಮತ್ತು 1 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿವೆ(2001). ಈ ತಾಲ್ಲೂಕಿಗೆ ರೈಲುಸಂಪರ್ಕವಿಲ್ಲ. ಮಂಡ್ಯವೇ ಸಮೀಪದ ರೈಲು ನಿಲ್ದಾಣ. ಆದರೆ ಸುಮಾರು ಎಲ್ಲ ಗ್ರಾಮಗಳಿಗೂ ರಸ್ತೆ ಸೌಲಭ್ಯ ಇದೆ. ಮೈಸೂರು–ಮಳವಳ್ಳಿ–ಕೊಳ್ಳೇಗಾಲ ರಸ್ತೆ ಸುಮಾರು ಪೂರ್ವ ಪಶ್ಚಿಮವಾಗಿಯೂ ಮದ್ದೂರು–ಮಳವಳ್ಳಿ–ಕೊಳ್ಳೇಗಾಲ ರಸ್ತೆ ಸುಮಾರು ಉತ್ತರ ದಕ್ಷಿಣವಾಗಿಯೂ ಈ ತಾಲ್ಲೂಕಿನ ಮಧ್ಯಭಾಗದಲ್ಲಿ ಹಾದುಹೋಗುತ್ತವೆ. ತಾಲ್ಲೂಕಿನ ದಕ್ಷಿಣದ ಅಂಚಿನಲ್ಲಿ ಇರುವ ತಿರುಮ ಕೂಡಲು ನರಸೀಪುರ–ಶಿವಸಮುದ್ರ ಮಾರ್ಗ ಮತ್ತು ಮಳವಳ್ಳಿ–ಬೊಪ್ಪ ಗೌಡನಪುರ ಮಾರ್ಗ ಈ ತಾಲ್ಲೂಕಿನ ಇತರ ಮುಖ್ಯ ರಸ್ತೆಗಳು. ಒಟ್ಟು 30 ಕಿಮೀ ರಾಜ್ಯ ಹೆದ್ದಾರಿ, 218 ಕಿಮೀ ಜಿಲ್ಲಾ ಮುಖ್ಯರಸ್ತೆಗಳು, 1105 ಕಿಮೀ ಗ್ರಾಮಸಂಪರ್ಕ ರಸ್ತೆಗಳು ಇವೆ (2001).

ತಾಲ್ಲೂಕಿನಲ್ಲಿ ಶಿಕ್ಷಣಕ್ಕೆ ಸೌಕರ್ಯಗಳಿದ್ದು ಒಟ್ಟು 302 ಪ್ರಾಥಮಿಕ ಶಾಲೆಗಳು, 51 ಪ್ರೌಢಶಾಲೆಗಳು, 9 ಪದವಿಪೂರ್ವ, 2 ಪದವಿ ಶಿಕ್ಷಣ ಕಾಲೇಜುಗಳು, 21 ಗ್ರಂಥಾಲಯಗಳು ಇವೆ (2001). ವಿದ್ಯುತ್, ಅಂಚೆ ತಂತಿ ಮತ್ತು ದೂರವಾಣಿ ಸೌಲಭ್ಯಗಳ ಜೊತೆಗೆ 2 ಆಸ್ಪತ್ರೆಗಳು, 2 ಔಷಧಾಲಯಗಳು, ಒಂದು ಕುಟುಂಬ ಯೋಜನಾ ಕೇಂದ್ರ ಮತ್ತು 5 ಪ್ರಾಥಮಿಕ ಆರೋಗ್ಯ ಘಟಕಗಳು ಇವೆ. ಈ ತಾಲ್ಲೂಕಿಗೆ ಸಂಬಂಧಿಸಿದ ಮುಖ್ಯ ಸ್ಥಳಗಳಲ್ಲಿ ತಾಲ್ಲೂಕಿನ ದಕ್ಷಿಣದ ಎಲ್ಲೆಯ ಬಳಿ ಇರುವ ಶಿವಸಮುದ್ರ ಗಗನಚುಕ್ಕಿ ಭರಚುಕ್ಕಿ ಜಲಪಾತಗಳಿಂದ ಮತ್ತು ವಿದ್ಯುದುತ್ಪಾದನ ಕೇಂದ್ರದಿಂದ ಬಹು ಪ್ರಸಿದ್ಧವಾಗಿದೆ. ಅಲ್ಲದೆ ಶಿಂಷಾಪುರದಲ್ಲಿ ಸಹ ಒಂದು ಚಿಕ್ಕ ವಿದ್ಯುದುತ್ಪಾದನ ಕೇಂದ್ರವಿದೆ. ಮಳವಳ್ಳಿಯ ದಕ್ಷಿಣಕ್ಕೆ ಸು. 2 ಕಿಮೀ ದೂರದಲ್ಲಿರುವ ಮಾರೇಹಳ್ಳಿಯಲ್ಲಿ ನರಸಿಂಹ ದೇವಾಲಯವಿದೆ. ಇಲ್ಲಿನ 1104ರ ಒಂದು ಕನ್ನಡ ಶಾಸನದಲ್ಲಿ ದೇವಾಲಯವನ್ನು ರಾಜಾಶ್ರಯ ವಿನ್ನಗರಮ್ ಎಂದು ಕರೆಯಲಾಗಿದೆ. ರಾಜಾಶ್ರಯ ಎಂಬುದು ಚೋಳ ದೊರೆ ಒಂದನೆಯ ರಾಜರಾಜನ ಒಂದು ಬಿರುದಾಗಿತ್ತಾದ್ದರಿಂದ ಈ ದೇವಾಲಯ ಮೂಲತಃ ಅವನ ಕಾಲದ್ದು. ಆದರೆ ಮುಂದೆ ಹೊಯ್ಸಳ ಮತ್ತು ವಿಜಯನಗರ ಆಳಿಕೆಯ ಕಾಲದಲ್ಲಿ ಅನೇಕ ಸೇರ್ಪಡೆಗಳಾಗಿವೆ. ದೇವಾಲಯದ ಮೂಲ ಲಕ್ಷ್ಮೀನರಸಿಂಹ ವಿಗ್ರಹ ಬಹು ಸುಂದರ. ಮೇ ಅಥವಾ ಜೂನ್ ತಿಂಗಳಲ್ಲಿ ನಡೆಯುವ ಈ ದೇವರ ರಥೋತ್ಸವ ಬಹುಜನರನ್ನು ಆಕರ್ಷಿಸುತ್ತದೆ.

ಮಳವಳ್ಳಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಪಟ್ಟಣ. ಮಂಡ್ಯದ ಆಗ್ನೇಯಕ್ಕೆ 29 ಕಿಮೀ ದೂರದಲ್ಲಿದೆ. ಮೈಸೂರಿನಿಂದ ಇಲ್ಲಿಗೆ 42 ಕಿಮೀ, ಬೆಂಗಳೂರಿನಿಂದ 124 ಕಿಮೀ ದೂರ. ಪಟ್ಟಣದಲ್ಲಿ 18,287 ಮಂದಿ ಪುರುಷರು, 17,513 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 35,800.

ಮಳವಳ್ಳಿಯಲ್ಲಿ ರೇಷ್ಮೆ ಸಾಕಣೆ ಮತ್ತು ಬಿತ್ತನೆ, ಚರ್ಮದ ಕೈಗಾರಿಕೆ ಮತ್ತು ಪಾದರಕ್ಷೆಗಳ ತಯಾರಿಕೆ ಮುಂತಾದ ಗೃಹ ಕೈಗಾರಿಕೆಗಳಿವೆ. ಈ ಪಟ್ಟಣ ಮುಖ್ಯ ವ್ಯಾಪಾರ ಕೇಂದ್ರ. ಕೃಷಿ ಸಹಕಾರ ಬ್ಯಾಂಕ್, ವಾಣಿಜ್ಯ ಬ್ಯಾಂಕ್‌ಗಳಿವೆ. ಒಂದು ಸರ್ಕಾರಿ ರೇಷ್ಮೆ ಕೋಠಿ ಇದೆ. ಬತ್ತ, ಬೆಲ್ಲ, ಚರ್ಮ ವಸ್ತುಗಳು ಇಲ್ಲಿಂದ ನಿರ್ಯಾತವಾಗುತ್ತವೆ. ಇಲ್ಲಿ ಹದಿನೈದು ದಿನಗಳಿಗೊಮ್ಮೆ ಸಂತೆ ನಡೆಯುತ್ತದೆ. ಪಟ್ಟಣದಲ್ಲಿ ರಕ್ಷಿತ ನೀರು ಸರಬರಾಜು, ವಿದ್ಯುತ್, ಅಂಚೆ ತಂತಿ, ದೂರವಾಣಿ, ಪ್ರಾಥಮಿಕ ಆರೋಗ್ಯ ಕೇಂದ್ರ ಮುಂತಾದ ಸೌಲಭ್ಯಗಳಿವೆ. ಶಾಲೆಗಳು ಹಾಗೂ ಒಂದು ಕಲೆ ಮತ್ತು ವಿಜ್ಞಾನ ಕಾಲೇಜು ಇವೆ. ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ.

ಚಿಕ್ಕದೇವರಾಜ ಒಡೆಯರ ಕಾಲದ 1685ರ ಒಂದು ಶಾಸನದ ಪ್ರಕಾರ ಮಳವಳ್ಳಿ ಅನೇಕ ಬಗೆಯ ಹೂ ಮತ್ತು ಹಣ್ಣುಗಳಿಗೆ ಹೆಸರುವಾಸಿಯಾಗಿತ್ತು; ಅನೇಕ ವಿದ್ವಾಂಸರುಗಳಿಂದ ಕೂಡಿತ್ತು. ಇಲ್ಲಿ ಹಿಂದೆ ಇದ್ದ ದೊಡ್ಡ ಕೋಟೆ ಈಗ ಬಹುಮಟ್ಟಿಗೆ ಹಾಳಾಗಿದೆ. ಕೋಟೆಯ ಭಾಗದ ಒಳಗೆ ಹೊಯ್ಸಳರ ಕಾಲದ ಸಾರಂಗಪಾಣಿ ದೇವಾಲಯವಿದೆ. ಮಳವಳ್ಳಿ ಪಟ್ಟಣವನ್ನು ಹೈದರ್ ತನ್ನ ಮಗ ಟಿಪ್ಪುವಿಗೆ ಜಹಗೀರಿಯಾಗಿ ಕೊಟ್ಟಿದ್ದ. ಇದರಿಂದಾಗಿ ಈ ಪಟ್ಟಣ ಒಂದು ವಾಣಿಜ್ಯ ಕೇಂದ್ರವಾಯಿತು. 1799ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದ ಸಂದರ್ಭದಲ್ಲಿ ಮಳವಳ್ಳಿಯ ಬಳಿ ಜನರಲ್ ಹ್ಯಾರೀಸ್ ಮತ್ತು ಟಿಪ್ಪುಸುಲ್ತಾನರ ನಡುವೆ ಘೋರ ಯುದ್ಧ ನಡೆಯಿತು. ಅನಂತರ ಟಿಪ್ಪುಸುಲ್ತಾನನು ಈ ಸ್ಥಳ ಬ್ರಿಟಿಷರ ಉಪಯೋಗಕ್ಕೆ ಬೀಳಬಾರದೆಂಬ ಉದ್ದೇಶದಿಂದ ಊರನ್ನು ಹಾಳುಗೆಡವಿದ. ಟಿಪ್ಪುವಿನ ಪತನಾನಂತರ ಮಳವಳ್ಳಿ ಮತ್ತೆ ಬೆಳೆದು ಈಗ ಮುಖ್ಯ ಪಟ್ಟಣವಾಗಿದೆ. **(ಕೆ.ಆರ್.ಎನ್.)**

**ಮಳವಳ್ಳಿ ಸುಂದರಮ್ಮ:** 1905– . ಪ್ರಸಿದ್ಧ ರಂಗಭೂಮಿ ಕಲಾವಿದೆ. 1905 ಸೆಪ್ಟೆಂಬರ್ 12ರಂದು ಮೈಸೂರಿನಲ್ಲಿ ಜನಿಸಿದರು. ಪ್ರಸಿದ್ಧ ಪಿಟೀಲು ವಿದ್ವಾಂಸರಾಗಿದ್ದ ಮಳವಳ್ಳಿ ಸುಬ್ಬಣ್ಣ ಇವರ ತಂದೆ. ತಾಯಿ ಲಕ್ಷ್ಮೀದೇವಮ್ಮ. ಸುಂದರಮ್ಮನವರಿಗೆ ಪ್ರಥಮವಾಗಿ ಇವರ ತಂದೆಯೇ ಎರಡು ವರ್ಷಗಳ ಕಾಲ ಕರ್ಣಾಟಕ ಸಂಗೀತದ ಪಾಠ ಹೇಳಿದರು. ಸುಬ್ಬಣ್ಣನವರು ಶ್ರೀಕೃಷ್ಣ ವಿಲಾಸ ನಾಟಕ ಸಭಾಮಂಡಳಿಯನ್ನು ವಹಿಸಿಕೊಂಡಾಗ ಸುಂದರಮ್ಮನವರ ಪ್ರಥಮ ರಂಗಪ್ರವೇಶವಾಯಿತು. ಆಗ ಏಳು ವರ್ಷದವರಾಗಿದ್ದ ಇವರು ಕಲಾವತಿಪರಿಣಯ, ಪಾಂಡು ವಿಜಯ, ಸದಾರಮೆ, ಗುಲೇ ಬಕಾವಲಿ, ಚೋರಕಥೆ, ಸಾರಂಗಧರ ಮತ್ತು ವಸಂತ ಮಿತ್ರವಿಜಯ ಮುಂತಾದ ನಾಟಕಗಳಲ್ಲಿ ಬಾಲಪಾತ್ರಗಳನ್ನು ವಹಿಸುತ್ತಿದ್ದರು. ಮುಂದೆ ಶ್ರೀಶಾರದಾ ವಿಲಾಸ ನಾಟಕಸಭಾ ಎಂಬ ನಾಟಕ ಮಂಡಳಿಯಲ್ಲಿ ಇವರು ಸುಭದ್ರೆಯ ಪಾತ್ರವಹಿಸಿ ಹೆಸರು ಗಳಿಸಲಾರಂಭಿಸಿದರು. ಸಂಗೀತದಲ್ಲಿ ಹೆಚ್ಚು ಜ್ಞಾನ ಗಳಿಸಲು ಸುಂದರಮ್ಮನವರು

ಪಿಟೀಲು ತಾಯಪ್ಪನವರಲ್ಲಿ ಒಂದೆರಡು ವರ್ಷವೂ ಬೆಂಗಳೂರಿನಲ್ಲಿ ನೆಲೆಸಿದ್ದ ವಾಸುದೇವಾಚಾರ್ಯರ ಬಳಿ ಕೆಲವು ಅಪರೂಪದ ಕೀರ್ತನೆಗಳನ್ನೂ ಹೇಳಿಸಿಕೊಂಡರಲ್ಲದೆ ಮುಂದೆ ಸೇಲಂ ದೊರೆಸ್ವಾಮಿ ಅಯ್ಯಂಗಾರ್ ಮತ್ತು ಪುಟ್ಟಸ್ವಾಮಯ್ಯ ಇವರ ಹತ್ತಿರವೂ ಸಂಗೀತಾಭ್ಯಾಸ ಮಾಡಿದರು. ಇವರ 18ನೆಯ ವರ್ಷದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಣತಿಯಂತೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಾಟಕವನ್ನಾಡಿ ಅವರನ್ನು ಮೆಚ್ಚಿಸಿದುದಲ್ಲದೆ ಮಹಾರಾಜರ ಮುಂದೆ ಅವರ ಬೇಸಗೆ ಅರಮನೆಯಲ್ಲಿ ಸಂಗೀತ ಕಚೇರಿ ನಡೆಸಿ ಅವರ ಮೆಚ್ಚುಗೆ ಮತ್ತು ಬಹುಮಾನ ಪಡೆದರು. 1924ರಲ್ಲಿ ಮದರಾಸಿನ ಓಡಿಯನ್ ಕಂಪನಿ ಸುಂದರಮ್ಮನವರ ರಂಗಗೀತೆಗಳನ್ನು ಧ್ವನಿಮುದ್ರಿಸಿಕೊಂಡಿತು. ಮುಂದೆ ಇವರು ಅನೇಕ ಕಡೆ ಸಂಗೀತ ಕಛೇರಿ ಮಾಡಿ ನಾಡಿನ ವಿದ್ವಾಂಸರ, ರಸಿಕರ ಮೆಚ್ಚುಗೆ ಗಳಿಸಿದರು. ಕೆಲವು ಹೆಸರಾಂತ ನಾಟಕ ಮಂಡಳಿಗಳಲ್ಲಿ ಪ್ರಧಾನ ನಟಿಯಾಗಿ ಅಭಿನಯಿಸಿದರು. 1927ರಲ್ಲಿ ತೆರೆಕಂಡ ಚಿರಂಜೀವಿ ಅಥವಾ ಮಾರ್ಕಂಡೇಯ ಚಲನಚಿತ್ರದಲ್ಲಿ ಮರುಧ್ವತಿಯ ಪಾತ್ರಮಾಡಿ ಬಹುಜನರ ಮೆಚ್ಚುಗೆ ಪಡೆದರು. 60 ಮಂದಿ ನಟನಟಿಯರ ಜೀವನಾಧಾರವಾಗಿದ್ದ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ ಆಡಳಿತವನ್ನು 1943ರಲ್ಲಿ ವಹಿಸಿಕೊಂಡು ಯಶಸ್ವಿಯಾಗಿ ಅನೇಕ ನಾಟಕಗಳನ್ನು ಆಡಿ ಹಣ–ಹೆಸರು ಗಳಿಸಿದರಲ್ಲದೆ ಸು. 30,000 ರೂಪಾಯಿಗಳನ್ನು ದಾನ ಮಾಡಿದರು. ಸಂಗೀತ ಮತ್ತು ನಾಟಕದಲ್ಲಿ ಇವರ ಸೇವೆಯನ್ನು ಗಮನಿಸಿ 1962ರಲ್ಲಿ ರಾಜ್ಯಸರ್ಕಾರ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಇವರನ್ನು ಕುರಿತು ಅಭಿನಯ ಶಾರದೆ ಎಂಬ ಜೀವನ ಚರಿತ್ರೆ ಪ್ರಕಟವಾಗಿದೆ. (ಕೆ.ಎಸ್.ಐ.)

**ಮಾಂಜರಾ:** ಬೀದರ್ ಜಿಲ್ಲೆಯ ಮುಖ್ಯ ನದಿ. ಗೋದಾವರಿ ವ್ಯವಸ್ಥೆಗೆ ಸೇರಿದ ಈ ನದಿ ಮಹಾರಾಷ್ಟ್ರದಲ್ಲಿ ಹುಟ್ಟಿ ಬೀದರ್ ಜಿಲ್ಲೆಯ ಪಶ್ಚಿಮದಲ್ಲಿ ಸ್ವಲ್ಪದೂರ ಗಡಿಯಾಗಿ ಹರಿದು ಭಾಲ್ಕಿ ತಾಲ್ಲೂಕಿನ ಜಮಖಂಡಿ ಗ್ರಾಮದ ಉತ್ತರದಲ್ಲಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಸ್ವಲ್ಪದೂರ ಪೂರ್ವಕ್ಕೆ ಹರಿದು ಸಂಗಮದ ಬಳಿ ಕಾರಂಜಾ ನದಿಯನ್ನು ಕೂಡಿಸಿಕೊಂಡು ಅಲ್ಲಿಂದ ಉತ್ತರಾಭಿಮುಖವಾಗಿ ಹರಿಯುತ್ತದೆ. ಅನಂತರ ಮುಂದೆ ಸ್ವಲ್ಪದೂರ ಹರಿದು ಮಹಾರಾಷ್ಟ್ರ ಮತ್ತು ಬೀದರ್ ತಾಲ್ಲೂಕುಗಳನ್ನು ಬೇರ್ಪಡಿಸುವುದು. ಬೀದರ್ ತಾಲ್ಲೂಕಿನ ನಾಮತಾಬಾದ್‌ನಿಂದ ಮುಂದೆ ಬೀದರ್ ಮತ್ತು ಆಂಧ್ರಪ್ರದೇಶದ ಗಡಿಯಾಗಿ ಸ್ವಲ್ಪದೂರ ಹರಿದು ಬೀದರ್ ತಾಲ್ಲೂಕಿನ ಕಪ್ಪಾಪುರ ಗ್ರಾಮದ ಪೂರ್ವದಲ್ಲಿ ಜಿಲ್ಲೆಯನ್ನು ಬಿಡುತ್ತದೆ. ಈ ನದಿ ಬೀದರ್ ಜಿಲ್ಲೆಯಲ್ಲಿ ಸು. 97 ಕಿಮೀ ದೂರ ಹರಿದು ಸು. 1,295 ಚ.ಕಿಮೀ ಪ್ರದೇಶಕ್ಕೆ ನೀರಿನಾಶ್ರಯ ನೀಡಿದೆ. ನದಿಯ ಎರಡೂ ದಂಡೆಯ ಬಯಲು ಫಲವತ್ತಾಗಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಈ ನದಿಯ ಒಟ್ಟು ಉದ್ದ 700 ಕಿಮೀ. ಅಲ್ಲಲ್ಲಿ ಸಣ್ಣ ಹರಿಗೋಲುಗಳ ಉಪಯೋಗವಿದ್ದು ಅಕ್ಕಪಕ್ಕದ ಗ್ರಾಮಗಳ ಸಾರಿಗೆ ಸಂಪರ್ಕಕ್ಕೆ ಅನುಕೂಲವಾಗಿದೆ.

ಈ ನದಿಯ ಉಪನದಿ ಕಾರಂಜಾ ಕಟ್ಟೆ ಯೋಜನೆಯಿಂದ 42,000 ಹೆಕ್ಟೇರ್ ಜಮೀನಿಗೆ ನೀರೊದಗಿಸುವ ಅನುಕೂಲವಿದೆ. (ಎಸ್.ಎ.ಎನ್.)

**ಮಾಕಳಿ:** ಕೋಲಾರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಹಳ್ಳಿ. ಬೆಂಗಳೂರಿನಿಂದ ಗುಂತಕಲ್ಲಿಗೆ ಹೋಗುವ ರೈಲು ಹಾದಿಯಲ್ಲಿ ದೊಡ್ಡಬಳ್ಳಾಪುರದಿಂದ ಸು. 13 ಕಿಮೀ ದೂರದಲ್ಲಿದೆ. ಮಾಕಳಿಗೆ ಸು. 4 ಕಿಮೀ ದೂರದಲ್ಲಿ ಘಾಟಿ ಸುಬ್ರಹ್ಮಣ್ಯ ದೇವಾಲಯವಿದೆ. ರೈಲಿನಲ್ಲಿ ಘಾಟಿಗೆ ಹೋಗುವವರು ಈ ಊರಿನ ಮುಖಾಂತರ ಹೋಗುವರು. ಈ ಊರಿನ ಸುತ್ತ ಇರುವ ಬೆಟ್ಟಗಳನ್ನು ಮಾಕಳಿ ಬೆಟ್ಟಗಳೆಂದು ಕರೆಯುತ್ತಾರೆ. ಘಾಟಿ ಬೆಟ್ಟಗಳ ಪ್ರಾರಂಭ ಇಲ್ಲಿಂದಲ್ಲೇ ಎನ್ನಬಹುದು. (ಡಿಇ.ಕೆ.ಆರ್.)

**ಮಾಗಡಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಪಟ್ಟಣ. ತಾಲ್ಲೂಕನ್ನು ದಕ್ಷಿಣದಲ್ಲಿ ರಾಮನಗರ ತಾಲ್ಲೂಕು, ಪೂರ್ವದಲ್ಲಿ ಬೆಂಗಳೂರು ಉತ್ತರ ಮತ್ತು ನೆಲಮಂಗಲ ತಾಲ್ಲೂಕುಗಳೂ ಉತ್ತರದಲ್ಲಿ ತುಮಕೂರು ತಾಲ್ಲೂಕು, ಪಶ್ಚಿಮದಲ್ಲಿ ಕುಣಿಗಲು ತಾಲ್ಲೂಕು ಸುತ್ತುವರೆದಿವೆ. ಹೋಬಳಿಗಳು 6, ಗ್ರಾಮಗಳು 335, ವಿಸ್ತೀರ್ಣ 913.3 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,02,417.

ನೆಲಮಂಗಲದ ಪಶ್ಚಿಮ ದಿಕ್ಕಿನಿಂದ ಬರುವ ಬೆಟ್ಟಗಳು ಈ ತಾಲ್ಲೂಕನ್ನು ಹಾಯ್ದು, ರಾಮನಗರದ ಕಡೆ ಮುಂದುವರೆದಿವೆ. ಉತ್ತರದಲ್ಲಿ ಶಿವಗಂಗೆ ಮತ್ತು ದಕ್ಷಿಣದಲ್ಲಿ ಸಾವನದುರ್ಗ ಬೆಟ್ಟಸಾಲುಗಳ ನಡುವೆ ಹರಡಿರುವ ಈ ಪ್ರದೇಶ ಹೆಚ್ಚು ಏರುತಗ್ಗುಗಳಿಂದ ಕೂಡಿದೆ. ತಾಲ್ಲೂಕಿನ ಉತ್ತರದ ಭಾಗದಲ್ಲಿ ವಿರಳ ಬೆಟ್ಟಗಳಿದ್ದರೆ, ದಕ್ಷಿಣಕ್ಕೆ ಸಾವನದುರ್ಗದತ್ತ ಬರುತ್ತಿದ್ದಂತೆ ಆ ಪ್ರದೇಶ ಕ್ರಮೇಣ ಹೆಚ್ಚು ಪರ್ವತಮಯವಾಗಿರುತ್ತದೆ. ಸಿದ್ಧೇಶ್ವರ ಬೆಟ್ಟ ಮತ್ತು ಸಾವನದುರ್ಗ ಪ್ರದೇಶಗಳಲ್ಲಿ ಬಿದಿರುಮೆಳೆಗಳಿರುವ ಅರಣ್ಯವಿದೆ. ಉಳಿದೆಡೆ ಕುರುಚಲು ಕಾಡುಗಳಷ್ಟೇ ಇವೆ. ಕಣ್ವ ಮತ್ತು ಅರ್ಕಾವತಿ ಇಲ್ಲಿನ ಹೆಸರಿಸಬಹುದಾದ ನದಿಗಳು. ಕಣ್ವ ನದಿ ತಾಲ್ಲೂಕಿನ ಪಶ್ಚಿಮದಲ್ಲಿ ಶ್ರೀಪತಿಹಳ್ಳಿಯ ಬಳಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿಯುವುದು. ತಾಲ್ಲೂಕಿನ ಪೂರ್ವಭಾಗ ಅರ್ಕಾವತಿ ನದಿಯ ಕಣಿವೆ ಪ್ರದೇಶ. ಪಶ್ಚಿಮ ಮತ್ತು ವಾಯವ್ಯ ಭಾಗದಲ್ಲಿ ಸಣ್ಣಪುಟ್ಟ ತೊರೆಗಳಿದ್ದು ಅವೆಲ್ಲ ಕುಣಿಗಲು ತಾಲ್ಲೂಕಿನೆಡೆಗೆ ಹರಿಯುತ್ತವೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 770.30 ಮಿಮೀ.

ರಾಗಿ ಈ ತಾಲ್ಲೂಕಿನ ಮುಖ್ಯ ಬೆಳೆ. ಅವರೆ, ತೊಗರಿ ಮತ್ತು ಕೆಲವು ಎಣ್ಣೆ ಬೀಜಗಳನ್ನೂ ಸ್ವಲ್ಪಮಟ್ಟಿಗೆ ಬತ್ತ ಮತ್ತು ಕಬ್ಬನ್ನೂ ಬೆಳೆಯುತ್ತಾರೆ.

ಮಾಗಡಿ ತಾಲ್ಲೂಕಿನಲ್ಲಿ ರೇಷ್ಮೆ ನೂಲಿನ ತಯಾರಿಕೆ ಇದ್ದು ಅದು ತಾಲ್ಲೂಕಿನ ಮುಖ್ಯ ರಫ್ತು ವಸ್ತುವಾಗಿದೆ. ಮಾಗಡಿಯಿಂದ ನೆಲಮಂಗಲ, ಕುಣಿಗಲು ಮತ್ತು ರಾಮನಗರಕ್ಕೆ ಹೋಗುವ ರಸ್ತೆಗಳು ತಾಲ್ಲೂಕಿನ ಮುಖ್ಯ ಹಾದಿಗಳು. ಬೆಂಗಳೂರು-ಮಂಗಳೂರು ಹೆದ್ದಾರಿ ತಾಲ್ಲೂಕಿನ ಉತ್ತರ ಭಾಗದಲ್ಲಿ ಹಾದು ಹೋಗುತ್ತದೆ. ತಾಲ್ಲೂಕಿನಲ್ಲಿ ಕೃಷಿ ಮತ್ತು ಕೃಷಿಯೇತರ ಸಹಕಾರಿ ಬ್ಯಾಂಕುಗಳು, ವಿದ್ಯುತ್, ಅಂಚೆ ತಂತಿ ಮತ್ತು ದೂರವಾಣಿ ಸೌಲಭ್ಯಗಳು, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು, ಆಸ್ಪತ್ರೆ, ಆರೋಗ್ಯ ಕೇಂದ್ರ ಮತ್ತು ಔಷಧಾಲಯಗಳು ಇವೆ. **(ಎಂ.ಎನ್.ಕೆ.)**

ಮಾಗಡಿ ತಾಲ್ಲೂಕಿನ ಮುಖ್ಯ ಗ್ರಾಮಗಳಲ್ಲಿ ಕಲ್ಯ **(ನೋಡಿ)** ಮತ್ತು ಸಾವನದುರ್ಗ **(ನೋಡಿ)** ಐತಿಹಾಸಿಕ ಪ್ರಾಮುಖ್ಯವುಳ್ಳ ಸ್ಥಳಗಳು. ಮಾಗಡಿ-ಕುಣಿಗಲು ಮಾರ್ಗದಲ್ಲಿ ಮಾಗಡಿಯ ನೈಋತ್ಯಕ್ಕೆ 5 ಕಿಮೀ ದೂರದಲ್ಲಿರುವ ಕೆಂಪಸಾಗರ ಗ್ರಾಮದಲ್ಲಿ ಒಂದು ವೀರಶೈವ ಮಠವಿದೆ. ಈ



ಸೋಮೇಶ್ವರ ದೇವಾಲಯ, ಮಾಗಡಿ

ಮಠದ ನವರಂಗದ ಒಂದು ಕಂಬದ ಮೇಲೆ ಒಂದು ಲಿಂಗ ಮಡಕೆಯಿಂದ ಹೊರಬರುತ್ತಿರುವಂತೆ ಕೆತ್ತಿದ್ದು ಅದನ್ನು ಸುರಭಾಂಡೇಶ್ವರ ಎಂದು ಕರೆಯುತ್ತಾರೆ. ಮುಂದುಗಡೆಯ ಒಂದು ಕಂಬದಲ್ಲಿ ಕೆಂಪೇಗೌಡ ವಿಗ್ರಹವನ್ನು ಕೆತ್ತಲಾಗಿದೆ. ಈ ಮಠವನ್ನು ಕೆಂಪೇಗೌಡನೇ ಕಟ್ಟಿಸಿದನೆಂದು ಪ್ರತೀತಿ. ತಾಲ್ಲೂಕಿನ ಉತ್ತರದಲ್ಲಿ ಮಾಗಡಿಗೆ ವಾಯವ್ಯದಲ್ಲಿರುವ ಹುಲಿಕಲ್ಲಿನಲ್ಲಿ ಅನೇಕ ಶಿಥಿಲ ದೇವಾಲಯಗಳೂ ಮಂಟಪಗಳೂ ಶಾಸನಗಳೂ ಕೆಲವು ವೀರಗಲ್ಲುಗಳೂ ಇವೆ. ಗ್ರಾಮದ ಹತ್ತಿರವಿರುವ ರಾಮಲಿಂಗಬೆಟ್ಟದ ಬುಡದಲ್ಲಿ ಒಬ್ಬ ಯತಿ ಇದ್ದನೆಂದೂ ಅವನ ಹಸುವನ್ನು ಹುಲಿಯೊಂದು ಕೊಂದುಹಾಕಿತೆಂದೂ ಇದನ್ನು ತಿಳಿದ ಹೊಯ್ಸಳ ದೊರೆ ಬೆಟ್ಟದಲ್ಲಿ ಕೋಟೆ ಕಟ್ಟಿಸಿ (1310) ಹುಲಿಕೊಲ್ಲು ಎಂದು ಹೆಸರಿಟ್ಟನೆಂದೂ ಕ್ರಮೇಣ ಅದು ಹುಲಿಕಲ್ಲು ಆಯಿತೆಂದೂ ಹೇಳುವರು. ಮುಂದೆ ಈ ಕೋಟೆ ಕೊರಟಗೆರೆಯ ಬೈಚೇಗೌಡನಿಗೆ ಸೇರಿತ್ತು. ತಾಲ್ಲೂಕಿನ ಉತ್ತರದ ಗಡಿಯಲ್ಲಿ ಮಾಗಡಿಯ ವಾಯವ್ಯಕ್ಕೆ ಇರುವ ಸುಗ್ಗನಹಳ್ಳಿಯಲ್ಲಿ ದ್ರಾವಿಡ ಶೈಲಿಯ ನರಸಿಂಗ ದೇವಾಲಯ ಇದೆ. ಇಲ್ಲಿರುವ ಮುಖ್ಯ ಪೂಜಾ ವಿಗ್ರಹ ಗರುಡ. ಇಲ್ಲಿ ವಾರ್ಷಿಕ ರಥೋತ್ಸವ ಮತ್ತು ದನದ ಜಾತ್ರೆ ನಡೆಯುವುದು. ಮಾಗಡಿಯ ವಾಯವ್ಯಕ್ಕಿರುವ ಸಂಕಿಘಟ್ಟ ಗ್ರಾಮದಲ್ಲಿ ಒಂದು ಜೈನ ಬಸದಿ ಇದೆ.

ಮಾಗಡಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಪಟ್ಟಣ. ಬೆಂಗಳೂರಿನ ಪಶ್ಚಿಮಕ್ಕೆ 51 ಕಿಮೀ ದೂರದಲ್ಲೂ ರಾಮನಗರದ ಉತ್ತರಕ್ಕೆ 33 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 2,02,417. ಮಾಗಡಿ ಸುತ್ತಲ ಗ್ರಾಮಗಳಿಗೆ ಮುಖ್ಯ ವ್ಯಾಪಾರ ಕೇಂದ್ರ. ಇದು ಬೆಂಗಳೂರು ನಗರಕ್ಕೆ ಸಮೀಪವಾಗಿರುವುದರಿಂದ ವೇಗವಾಗಿ ನಗರೀಕರಣದ ಪ್ರಭಾವಕ್ಕೆ ಒಳಗಾಗುತ್ತಿದೆ. ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ಬ್ಯಾಂಕುಗಳು ಇಲ್ಲಿ ನೆಲೆಗೊಂಡಿವೆ. ಮಾಗಡಿಯಿಂದ ಬೆಂಗಳೂರು, ರಾಮನಗರ, ನೆಲಮಂಗಲ ಮತ್ತು ಕುಣಿಗಲುಗಳಿಗೆ ಉತ್ತಮ ಮಾರ್ಗಗಳಿವೆ. **(ಎಂ.ಎನ್.ಕೆ.)**

ಮಾಗಡಿ 1139ರಲ್ಲಿ ಚೋಳರಾಜನೊಬ್ಬನಿಂದ ಸ್ಥಾಪಿತವಾಯಿತೆಂಬ ಐತಿಹ್ಯವಿದೆ. ಮುಂದೆ ಇದು ಹೊಯ್ಸಳರ ವಶವಾಗಿ ಮತ್ತೆ ವಿಜಯನಗರದ ಅರಸರ ಕೈಸೇರಿತು. ಅಚ್ಯುತರಾಯ ತನ್ನ ಕಾಲದಲ್ಲಿ ಈ ಪ್ರಾಂತ್ಯಕ್ಕೆ ಸಾವಂತರಾಯನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಸಾವಂತರಾಯ ನಗರವನ್ನು ವಿಸ್ತರಿಸಿ ಸಾವನದುರ್ಗ ಗೋಡೆ ಎತ್ತರಿಸಿ ಭದ್ರಪಡಿಸಿದ. ಮುಂದೆ ಸಾವಂತರಾಯನಿಗೆ ಈ ಭಾಗ ಜಹಗೀರಿಯಾಗಿ ದೊರೆತು ಆತ ಮಾಗಡಿಯನ್ನು ಆಳಿದ (1543-71). ಅವನ ಮಗ ಸಂಪಾಜರಾಜ 17 ವರ್ಷ ಆಳಿ ತಿರುಮಲೆಯ ರಂಗಸ್ವಾಮಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ. ಇವನ ಮಗ ಚಿಕ್ಕರಾಯ (ಮೂಲಕರಾಯ) 16 ವರ್ಷ ಆಳಿದ. ಇವನಿಗೆ ಮಕ್ಕಳಿರಲಿಲ್ಲವಾಗಿ ವಿಜಯನಗರದರಸ ತನ್ನ ಪ್ರತಿನಿಧಿಯೊಬ್ಬನನ್ನಿರಿಸಿದ. ಈತ ಸುತ್ತಮುತ್ತಲ ಸಾಮಂತ ಪಾಳೆಯಗಾರರಿಂದ ಕಪ್ಪ ಸಂಗ್ರಹಿಸಿ ವಿಜಯನಗರಕ್ಕೆ ಕಳುಹಿಸಿದ. 1623ರಲ್ಲಿ ಗಂಗಪ್ಪನಾಯಕನೆಂಬ ಪಾಳೆಯಗಾರ ದುರ್ಗದ ಮೇಲೇರಿಹೋಗಿ ವಿಜಯನಗರದ ರಾಯಭಾರಿಯನ್ನು ಸದೆಬಡಿದು ಮಾಗಡಿಯನ್ನೂ ವಶಪಡಿಸಿಕೊಳ್ಳಲು ಯತ್ನಿಸಿದ. ಗಂಗಪ್ಪನ ಅತಿವರ್ತನೆಯ ಸುದ್ದಿ ವಿಜಯನಗರಕ್ಕೆ ತಲುಪಿತು. ಗಂಗನನ್ನು ಬಡಿದಟ್ಟಿ ಮಾಗಡಿಯನ್ನೂ ಸಾವನದುರ್ಗವನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳುವಂತೆ ಇಮ್ಮಡಿ ಕೆಂಪೇಗೌಡನಿಗೆ ವಿಜಯನಗರದಿಂದ ನಿರೂಪ ಹೋಯಿತು. ಗಂಗನು ಕೆಂಪೇಗೌಡನನ್ನೇ ಒಲಿಸಿಕೊಂಡು ಅವನ ನೆರವಿನಿಂದ ಸಾವನದುರ್ಗ ವಶಪಡಿಸಿಕೊಂಡು, ಪ್ರತಿಯಾಗಿ ಮಾಗಡಿಯನ್ನು ಅವನಿಗೆ ಒಪ್ಪಿಸುವುದಾಗಿ ಆಸೆತೋರಿಸಿ, ಕೊನೆಗೆ ದುರ್ಗ ವಶವಾದಮೇಲೆ ಗೌಡನ ಮೇಲೆ ತಿರುಗಿಬಿದ್ದು ಅವನನ್ನು ಜಯಿಸುವ ಹಂಚಿಕೆ ಹೂಡಿದ. ಆದರೆ ಸ್ವಾಮಿನಿಷ್ಠನಾದ ಇಮ್ಮಡಿ ಕೆಂಪೇಗೌಡ ಆ ಪ್ರಲೋಭನಕ್ಕೆ ಬಲಿಯಾಗದೆ, ಗಂಗನನ್ನು ಕೊಂದು ಮಾಗಡಿಯನ್ನೂ ಸಾವನದುರ್ಗವನ್ನೂ ವಶಪಡಿಸಿಕೊಂಡು, ಅಲ್ಲಿ ತನ್ನ ಪ್ರತಿನಿಧಿಯೊಬ್ಬನನ್ನಿರಿಸಿ, ವಿಜಯ ನಗರಕ್ಕೆ ವಿಜಯ ವಾರ್ತೆ ತಿಳಿಸಿದ. ಇಮ್ಮಡಿ ಕೆಂಪೇಗೌಡ 14 ವರ್ಷಕಾಲ ಇವೆರಡೂ ಊರುಗಳನ್ನು ಬೆಂಗಳೂರಿನಿಂದಲೇ ಆಳಿದ. ಮಾಗಡಿಯಲ್ಲಿ ಬಲವಾದ ಕೋಟೆ ಕಟ್ಟಿಸಿ ಕಂದಕಗಳನ್ನು ತೋಡಿಸಿದ. ದೇಗುಲಗಳನ್ನೂ ಕೆರೆ ಕಟ್ಟೆಗಳನ್ನೂ ನಿರ್ಮಿಸಿ, ಅಲ್ಲಿಗೆ ಹೊರಗಡೆಯ ಜನ ಬಂದು ನೆಲೆಸಲು ಅನುಕೂಲ ಮಾಡಿಕೊಟ್ಟ. ಸು.1638ರಲ್ಲಿ ಬಿಜಾಪುರದ ಸೇನಾಪತಿ ರಣದುಲ್ಲಾಖಾನ್ ಬೆಂಗಳೂರನ್ನು ಆಕ್ರಮಿಸಿದ. ಅಪಾರ ಸೈನ್ಯದೊಡನೆ ಬಂದ ಖಾನನನ್ನು ಇದಿರಿಸುವುದು ದುಸ್ತರವೆಂದೂ, ಅಲ್ಲದೆ ವ್ಯರ್ಥ ಪ್ರಾಣಹಾನಿಗೆ ಕಾರಣವೆಂದೂ ಮನಗಂಡ ಇಮ್ಮಡಿ ಕೆಂಪೇಗೌಡ ವರ್ಷಂಪ್ರತಿ ಪೊಗದಿ ಕೊಡುವುದಾಗಿ ವಾಗ್ದಾನಮಾಡಿ, ಸೆರೆ ಬಿಡಿಸಿಕೊಂಡ. ತಾನು ಬೆಂಗಳೂರಿನಲ್ಲಿಯೇ ನೆಲೆಸುವ ಪಕ್ಷಕ್ಕೆ ಇಂಥ ಆಕ್ರಮಣಗಳನ್ನು ಮುಂದೆಯೂ ಎದುರಿಸಬೇಕಾಗುವುದೆಂದು ಶಂಕಿಸಿದ ಗೌಡ 1638ರಲ್ಲಿ ರಾಜಧಾನಿಯನ್ನೇ ಮಾಗಡಿಗೆ ಸ್ಥಳಾಂತರಿಸಿದ. ಮಾಗಡಿ, ಸಾವನದುರ್ಗಗಳನ್ನು ಮತ್ತಷ್ಟು ಬಲಪಡಿಸಿಕೊಂಡ. ಹದಿನೆಂಟು ವರ್ಷಕಾಲ ಮಾಗಡಿಯಿಂದ ಆಳಿದ. ಅಂದು ಮೊದಲುಗೊಂಡು ಅವನೂ ಅವನ ವಂಶಜರೂ ಮಾಗಡಿ ಕೆಂಪೇಗೌಡರೆಂಬ ಹೆಸರಿನಿಂದ ಪ್ರಸಿದ್ಧರಾದರು. ಸಾವನದುರ್ಗ

1728ರ ವರೆಗೆ ಇಮ್ಮಡಿ ಕೆಂಪೇಗೌಡನ ವಂಶಜರ ಅಧೀನವಾಗಿತ್ತು. ಅನಂತರ ಮೈಸೂರಿನ ದಳವಾಯಿ ದೇವರಾಜ ಸಾವನದುರ್ಗವನ್ನು ವಶಪಡಿಸಿಕೊಂಡು, ಆಗ ಅರಸನಾಗಿದ್ದ ಮುಮ್ಮಡಿ ಕೆಂಪೇಗೌಡನನ್ನು ಶ್ರೀರಂಗಪಟ್ಟಣಕ್ಕೆ ಬಂದಿಯಾಗಿ ಕರೆದೊಯ್ದು. ಕೆಂಪೇಗೌಡ ಅಲ್ಲೇ ಮೃತನಾದ. 1791ರಲ್ಲಿ ದುರ್ಗ ಬ್ರಿಟಿಷರ ವಶವಾಯಿತು.

ಪುರಾಣಯುಗದಲ್ಲಿ ಮಾಗಡಿ ಮಾಂಡವ್ಯಮುನಿಗಳ ಪುಣ್ಯಸ್ಥಳವಾಗಿತ್ತೆಂದು ಕೇಳಿ ಇಮ್ಮಡಿ ಕೆಂಪೇಗೌಡ ಅಲ್ಲಿಯ ರಂಗನಾಥಸ್ವಾಮಿಯ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿದ. ದೇವಾಲಯಗಳಲ್ಲಿ ನಿತ್ಯನೈಮಿತ್ತಿಕ ಪೂಜಾದಿಗಳನ್ನು ನಿರ್ವಹಿಸುವ ಬ್ರಾಹ್ಮಣರಿಗೆ ಗ್ರಾಮಗಳನ್ನು ಉಂಬಳಿ ನೀಡಿ ಗೌಡನು ಬರೆಸಿದ ಶಾಸನಗಳು ಮಾಗಡಿಯ ಸುತ್ತಮುತ್ತಣ ಊರುಗಳಲ್ಲಿ ಲಭಿಸಿವೆ. ಮಾಗಡಿಯಲ್ಲಿ ಕೆಂಪೇಗೌಡ ಕಟ್ಟಿಸಿದುದೆಂದು ಹೇಳಲಾದ ಒಂದು ಕೋಟೆ ಜೀರ್ಣಾವಸ್ಥೆಯಲ್ಲಿದೆ. ದುರ್ಗದಲ್ಲಿ ಮಾಗಡಿ ಪಾಳೆಯಗಾರರ ಕುಲದೈವವಾದ ರಾಮೇಶ್ವರ ದೇವರ ಗುಡಿಯಿದೆ. ಗೌಡನ ಅರಮನೆಯ ಅವಶೇಷ ಈ ಗುಡಿಯ ನೈಋತ್ಯಕ್ಕಿದೆ. ರಾಮೇಶ್ವರ ಗುಡಿಯಲ್ಲಿ ಗರ್ಭಗೃಹ, ಸುಕನಾಸಿ ನವರಂಗಗಳಿವೆ. ಈ ಗುಡಿಯಲ್ಲಿರುವ ಉತ್ಸವ ವಿಗ್ರಹದ ಎಡಬಲಗಳಲ್ಲಿ ಗಂಗೆ, ಪಾರ್ವತಿಯರ ವಿಗ್ರಹಗಳಿವೆ. ಮಾಗಡಿಯಿಂದ ಸುಮಾರು ಎರಡೂವರೆ ಕಿಮೀ ಪಶ್ಚಿಮಕ್ಕೆ ಮುಮ್ಮಡಿ ಕೆಂಪೇಗೌಡ ಕಟ್ಟಿಸಿದ ಸೋಮೇಶ್ವರ ದೇವಾಲಯ ಈಗ ಜೀರ್ಣಾವಸ್ಥೆಯಲ್ಲಿದೆ. ಇದು ದ್ರಾವಿಡ ಶೈಲಿಯ ದೊಡ್ಡ ಕಟ್ಟಡ. ಉತ್ತರಾಭಿಮುಖವಾಗಿ ಈ ದೇವಾಲಯಕ್ಕೆ ಪ್ರಾಕಾರವೂ ಎರಡು ಮಹಾದ್ವಾರಗಳೂ ಸುಂದರವಾದ ಅನೇಕ ಮಂಟಪಗಳೂ ಇವೆ. ಮಹಾದ್ವಾರಗಳಲ್ಲಿ ಒಂದು ಉತ್ತರ ಮುಖವಾಗಿದೆ. ಇನ್ನೊಂದು ದಕ್ಷಿಣಾಭಿಮುಖವಾಗಿದೆ. ದಕ್ಷಿಣ ದ್ವಾರವು ದೊಡ್ಡದಾಗಿದ್ದು ಇದಕ್ಕೆ ಎತ್ತರವಾದ ಗೋಪುರ ಇದೆ. ದೇವಾಲಯದ ಎಡಗಡೆಗೆ ಒಂದು ಸುಂದರ ಮಂಟಪವಿದೆ. ಇದಕ್ಕೆ ಕೆಂಪೇಗೌಡನ ಹಜಾರ ಎಂದು ಹೆಸರು. ಬಲಗಡೆ ನರ್ತಕಿಯರ ಹಜಾರ ಎಂಬ ಮಂಟಪವಿದೆ. ದೇವಾಲಯದ ಗೋಡೆಗಳಲ್ಲೂ ಚಾವಣಿಯಲ್ಲೂ ಹಿಂದಿನ ಕಾಲದಲ್ಲಿ ಪುರಾಣ ಕಥೆಗಳ ಚಿತ್ರಗಳಿದ್ದುವಂತೆ. ಹೆಚ್ಚಿನವು ಈಗ ಮಾಸಿಹೋಗಿವೆ. ಜಗಲಿಯ ದಕ್ಷಿಣಸ್ತಂಭದ ಪಶ್ಚಿಮಪಾರ್ಶ್ವದಲ್ಲಿ ಶ್ವಾನಾರೂಢವಾದ ಒಂದು ಗಂಭೀರಾಕೃತಿಯ ಪುರುಷವಿಗ್ರಹವಿದೆ. ನರ್ತಕಿಯರ ಹಜಾರದ ಎದಿರು ಜಗಲಿಯ ಸ್ತಂಭವೊಂದರಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ವೃದ್ಧನೊಬ್ಬನ ವಿಗ್ರಹವಿದೆ. ಇದು ಯಲಹಂಕ ನಾಡಪ್ರಭುಗಳ ಮೂಲ ಪುರುಷನಾದ ಕೆಂಪೇಗೌಡನ ಮೂರ್ತಿ ಎಂದು ಪ್ರತೀತಿ. ಗರ್ಭಗುಡಿಯ ಹಿಂಭಾಗದ ಒಳಗೋಡೆಯ ಮೇಲೆ ಒಂದು ಶಾಸನವಿದೆ. ಪ್ರಾಕಾರದ ನಾಲ್ಕೂ ಮೂಲೆಗಳಲ್ಲಿ ಗೋಪುರಗಳಿವೆ. ದೇವಾಲಯದಿಂದ ಕೊಂಚ ದೂರಕ್ಕೆ ಒಂದು ದೊಡ್ಡ ಕಲ್ಯಾಣಿ ಇದೆ. ದೇವಾಲಯದ ನೈಋತ್ಯಕ್ಕೆ, ಪ್ರಾಕಾರದ ಹೊರಗಡೆ ಬಸವನ ಗುಡಿಯಿದೆ. ಕೊಂಚದೂರಕ್ಕೆ ಉನ್ನತ ಬಂಡೆಯೊಂದರ ಮೇಲೆ ಶಿಖರ ಬಸವ ಎಂಬ ಗೋಪುರವಿದೆ. (ಎಂ.ಕೆ.ಬಿ.)

**ಮಾಗೋಡು ಜಲಪಾತ**: ಉತ್ತರ ಕನ್ನಡ ಜಿಲ್ಲೆಯಲ್ಲಿ ಯಲ್ಲಾಪುರಕ್ಕೆ ನೈಋತ್ಯದಲ್ಲಿ 19 ಕಿಮೀ ದೂರದಲ್ಲಿರುವ ಬೇಡ್ತಿ ನದಿಯ (ಗಂಗಾವಳಿ) ಒಂದು ಜಲಪಾತ.

ಬೇಡ್ತಿನದಿ ಕಾರವಾರ–ಹುಬ್ಬಳ್ಳಿ ಮಾರ್ಗ ಯಲ್ಲಾಪುರಕ್ಕೆ ಪಶ್ಚಿಮದಲ್ಲಿ ಸು. 3 ಕಿಮೀ ದೂರದಲ್ಲಿ ಕವಲೊಡೆಯುವುದು. ಈ ಕವಲಿನ ಎಡಮಾರ್ಗದಲ್ಲಿ ಸು. 13 ಕಿಮೀ ದೂರದಲ್ಲಿ ಮಾಗೋಡು ಗ್ರಾಮವಿದೆ. ಇದರ ಬಳಿಯೇ ಜಲಪಾತವಿದೆ. ಹಚ್ಚಹಸುರಿನ ಕಾಡಿನ ಮಧ್ಯೆ ಸುಮಾರು ಒಂದೂವರೆ ಕಿಮೀ ನಡೆದು ದಟ್ಟವಾಗಿ ಬಿದಿರು ಬೆಳೆದಿರುವ ಬೆಟ್ಟವನ್ನು ಹತ್ತಿ ಮೇಲೆ ಪೂರ್ವಾಭಿಮುಖವಾಗಿ ನಿಂತರೆ ಬೇಡ್ತಿ ನದಿಯ ಮೇಲಿನ ಕಣಿವೆಯ ದೃಶ್ಯವನ್ನು ಕಾಣಬಹುದು. ಇಲ್ಲಿಂದ ನದಿ ಬೆಟ್ಟದ ಇಳಿಜಾರಿನಲ್ಲಿ ಮುಂದುವರೆದು ಸು. 60 ಮೀ ಕೆಳಕ್ಕೆ ಹಂತ ಹಂತವಾಗಿ

ಉತ್ತರಕನ್ನಡ ಜಿಲ್ಲೆಯ ಮಾಗೋಡು ಜಲಪಾತ

ದುಮುಕಿ ಕೊಳದಂತೆ ಸೇರಿ ಮತ್ತೆ ಅಲ್ಲಿಂದ ಮುಂದೆ 184 ಮೀ ದುಮುಕುವುದು. ಇತ್ತೀಚೆಗೆ ಜಲಪಾತದ ವೀಕ್ಷಣೆಗೆ ಅನುಕೂಲಿಸಲು ದುರ್ಗಮ ದಾರಿ ಸರಿಪಡಿಸಿ, ಪ್ರವಾಸಿಮಂದಿರವನ್ನು ಕಟ್ಟಲಾಗಿದೆ. ಹಾಲಿನ ನೊರೆಯಂತೆ ನಯವಾಗಿ ಹರಿದಿಳಿವ ಈ ಜಲಪಾತದ ಸೌಂದರ್ಯ ಬೆರಗುಗೊಳಿಸುತ್ತದೆ.

ಶಿರಸಿ–ಯಲ್ಲಾಪುರ ಮಾರ್ಗದಲ್ಲಿರುವ ಮಂಚಿಕೇರಿ ಹಳ್ಳಿಯಿಂದ 8 ಕಿಮೀ ದೂರ ಕಾಲುನಡಿಗೆಯಿಂದ ಸಾಗಿ ಮಾಗೋಡು ಜಲಪಾತದ ತಳಕ್ಕೆ ಹೋಗಬಹುದು. ಈ ಜಲಪಾತದ ಸಮೀಪದಲ್ಲಿರುವ ಗುಡ್ಡದಲ್ಲಿ ಒಂದು ಪುರಾತನ ಕೋಟೆ ಇದೆ. ಈ ಕಾರಣಕ್ಕಾಗಿಯೇ ಮಾಗೋಡು ಜಲಪಾತಕ್ಕೆ ಹೊಲತಿ ಜೋಗ ಎಂದೂ ಹೆಸರಿದೆ. ಕೋಟೆಗೆ ಒಂದೇ ಪ್ರವೇಶದ್ವಾರವಿದ್ದು ಬೇಡ್ತಿ ಮತ್ತು ಶಾಲ್ಮಲಾ ಹೊಳೆಗಳು ಈ ಕೋಟೆಯನ್ನು ಮೂರು ಕಡೆಗಳಿಂದ ಸುತ್ತುವರಿದಿವೆ. (ಆರ್.ಜಿ.ಆರ್.)

**ಮಾಘನಂದಿ:** ಸು.1253. ಜೈನಕವಿ. ಮೂಲಸಂಘ ಬಲಾತ್ಕಾರ ಗಣದ ಕುಮುದಚಂದ್ರನ ಶಿಷ್ಯ. ಈತ ತನ್ನ ಗುರು ಪರಂಪರೆಯನ್ನು ವಿಸ್ತಾರವಾಗಿ ಕೊಟ್ಟಿದ್ದಾನೆ. ತನ್ನನ್ನು ಚತುರನು, ಯೋಗಕುಶಲ, ಸಿದ್ಧಾಂತಾಭಿವರ್ಧನ ಸುಧಾಕರ ಎಂದು ವಿಶೇಷಿಸಿಕೊಂಡಿದ್ದಾನೆ. ಬೆಣ್ಣೆಗುಡ್ಡದ ಶಾಸನದಲ್ಲಿ ಇವನು ಅಭಿನವಸಾರ ಚತುಷ್ಟಯದ (ಸಿದ್ಧಾಂತಸಾರ, ಶ್ರಾವಕಾಚಾರಸಾರ, ಪದಾರ್ಥಸಾರ ಮತ್ತು ಶಾಸ್ತ್ರಸಾರ ಸಮುಚ್ಚಯ) ಕರ್ತೃವೆಂದೂ ಹೊಯ್ಸಳ ದೊರೆ 3ನೆಯ ನರಸಿಂಹನಿಂದ 1265ರಲ್ಲಿ ದತ್ತಿಯನ್ನು ಪಡೆದನೆಂದೂ ಹೇಳಿದೆ. ಶಾಸ್ತ್ರಸಾರ ಸಮುಚ್ಚಯ ಸಂಸ್ಕೃತ ಗ್ರಂಥವೊಂದರ ಕನ್ನಡ ಟೀಕೆ. ಇದರಲ್ಲಿ ನಾಲ್ಕು ಅಧ್ಯಾಯಗಳಿದ್ದು ಅನುಯೋಗಗಳ ವಿಷಯ ಬಂದಿದೆ. ಪದಾರ್ಥಸಾರವೂ ಕನ್ನಡ ಟೀಕಾಗ್ರಂಥ. ಇದರಲ್ಲಿ 30 ಅಧ್ಯಾಯಗಳಿದ್ದು ಜೈನತತ್ತ್ವದ ವಿಸ್ತೃತ ವಿವರಣೆಯಿದೆ. ಉಳಿದ ಎರಡು ಗ್ರಂಥಗಳ ವಿವರ ಅಷ್ಟೊಂದು ದೊರೆಯುವುದಿಲ್ಲ. (ಎ.ಎಸ್.ಯು.)

**ಮಾಚಯ್ಯ, ಸಿ.ಸಿ.:** 1954 – . ಪ್ರಸಿದ್ಧ ಮುಷ್ಟಿಕಾಳಗಪಟು. ಚೆಯಾಂದನೆ ಚೆಟ್ಟೀಚ ಮಾಚಯ್ಯ ಇವರ ಪೂರ್ಣ ಹೆಸರು. 1954 ಮಾರ್ಚ್ 8ರಂದು ಕೊಡಗು ಜಿಲ್ಲೆಯ ಕೋಕೇರಿ ಗ್ರಾಮದಲ್ಲಿ ಜನಿಸಿದರು.

ವಿದ್ಯಾಭ್ಯಾಸ ಮುಗಿಸಿ 1972ರಲ್ಲಿ ಭಾರತ ಸೈನ್ಯದ ಮದರಾಸು ಎಂಜಿನಿಯರಿಂಗ್ ಗ್ರೂಪ್‌ನಲ್ಲಿ ಸೇರಿದರು. ಅಲ್ಲಿ ಮುಷ್ಟಿಕಾಳಗ ತಂಡದಲ್ಲಿ ಸ್ಥಾನವನ್ನು ಗಳಿಸಿಕೊಂಡರು. ಸರ್ವಿಸಸ್ ಹಾಗೂ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಅನೇಕ ವಿಜಯಗಳನ್ನು ಸಾಧಿಸಿದರು. 1976ರಲ್ಲಿ ಇವರು ಮೊಟ್ಟಮೊದಲ ಸರ್ವಿಸಸ್ ಮತ್ತು ರಾಷ್ಟ್ರೀಯ ಚಾಂಪಿಯನ್ ಷಿಪ್ ಗೆದ್ದುಕೊಂಡರು. ಅದೇ ವರ್ಷ ಸರ್ವಿಸಸ್‌ನ ಉತ್ತಮ ಮುಷ್ಟಿಕಾಳಗಪಟು ಎಂದು ಪರಿಗಣಿಸಲ್ಪಟ್ಟರು; ಮಾಂಟ್ರಿಯಲ್‌ನಲ್ಲಿ ನಡೆದ ಒಲಂಪಿಕ್ ಕ್ರೀಡೆಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ಇವರು 1977-83 ರವರೆಗೆ ಸತತವಾಗಿ ಸರ್ವಿಸಸ್ ಹಾಗೂ ರಾಷ್ಟ್ರೀಯ ಚಾಂಪಿಯನ್‌ಷಿಪ್ ಗೆದ್ದುಕೊಂಡರು. 1978-79 ಹಾಗೂ 82ರಲ್ಲಿ ಇವರನ್ನು ರಾಷ್ಟ್ರದ ಉತ್ತಮ ಮುಷ್ಟಿಕಾಳಗ ಪಟು ಎಂದು ಪರಿಗಣಿಸಲಾಯಿತು. ಜಕಾರ್ತ (1979), ಸಿಯೋಲ್ (1982) ಮತ್ತು 1983ರ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ ಎರಡು ಬಾರಿ ಬೆಳ್ಳಿಪದಕವನ್ನು ಗಳಿಸಿದರು.

ಇವರು ಎರಡು ಬಾರಿ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಭಾರತವನ್ನು ಪ್ರತಿನಿಧಿಸಿ 1982ರಲ್ಲಿ ಬ್ರಿಸ್‌ಬೇನ್‌ನಲ್ಲಿ ಕಂಚಿನ ಪದಕ ಪಡೆದರು. 1979 ರಲ್ಲಿ ಭಾರತದ ಸೇನಾದಳಕ್ಕೆ ಚಿನ್ನದ ಪದಕ ಗೆದ್ದುಕೊಟ್ಟರು. 1982ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಬಾಕ್ಸಿಂಗ್ ಟೂರ್ನಮೆಂಟ್‌ನಲ್ಲಿ ಬಾಕ್ಸಿಂಗ್ ತಂಡದ ತರಬೇತುದಾರರಾಗಿ ಕಾರ್ಯನಿರ್ವಹಿಸಿದರು. ಬಾಕ್ಸಿಂಗ್ ಕ್ರೀಡೆಗೆ ಇವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಭಾರತ ಸರ್ಕಾರ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ (1979). ಕರ್ನಾಟಕ ಸರ್ಕಾರ ಇವರಿಗೆ ಅಭಿಮನ್ಯು ಪ್ರಶಸ್ತಿ ನೀಡಿ ಪುರಸ್ಕರಿಸಿದೆ. (ಎಸ್.ಆರ್.ಯು.)

**ಮಾಚಲಘಟ್ಟ:** ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕಿನ ಒಂದು ಗ್ರಾಮ. ನಾಗಮಂಗಲದ ದಕ್ಷಿಣಕ್ಕೆ ಹೊನಕೆರೆಯಿಂದ 6 ಕಿಮೀ ದೂರದಲ್ಲಿದೆ. ಹಿಂದೆ ಇದೊಂದು ಐತಿಹಾಸಿಕ ಸ್ಥಳವಾಗಿದ್ದಿರಬಹುದೆಂದು ಇಲ್ಲಿ ದೊರಕಿರುವ ಅವಶೇಷಗಳ ಆಧಾರದಿಂದ ಹೇಳಬಹುದು. ಮಂಚನಘಟ್ಟ ಮತ್ತು ಬಿಜ್ಜಳೇಶ್ವರಪುರ ಇದರ ಪ್ರಾಚೀನ ಹೆಸರುಗಳು. ಇಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ಸುಂದರವಾದ ಮಲ್ಲೇಶ್ವರ ಗುಡಿಯಿದೆ. ಬಳಪದ ಕಲ್ಲಿನಿಂದ ಕಟ್ಟಿರುವ ಈ ಗುಡಿ ಸುಮಾರು ಹದಿಮೂರನೆಯ ಶತಮಾನದ ರಚನೆ. ದೇವಾಲಯದ ಗೋಪುರ ಒಂಬತ್ತು ಶ್ರೇಣಿಗಳಿಂದ ಕೂಡಿದ್ದು ಮೇಲಿನ ಕೆತ್ತನೆ ಆಕರ್ಷಣೀಯವಾಗಿದೆ. ನವರಂಗದ ಮಧ್ಯೆ ಮೇಲ್ಛಾವಣಿಯಲ್ಲಿ ಬಿಡಿಸಿರುವ ಕಮಲ ಚಿತ್ತಾಕರ್ಷಕವಾದದ್ದು. ಇಲ್ಲಿಯ ನಂದಿ ವಿಗ್ರಹ ಸುಂದರವಾಗಿದೆ. ಗಣೇಶ, ಸಪ್ತಮಾತೃಕೆಯರು, ಉಮಾಮಹೇಶ್ವರ ಮತ್ತು ತಾಂಡವೇಶ್ವರ ಮುಂತಾದ ಪ್ರತಿಮೆಗಳೂ ಇವೆ. ಮಲ್ಲೇಶ್ವರ ಗುಡಿಯ ಪಕ್ಕದಲ್ಲಿ ಈಗ ಶಿಥಿಲವಾಗಿರುವ ಭೈರವ ಗುಡಿ ಇದೆ. ಇದೂ ಹೊಯ್ಸಳರ ಕಾಲಕ್ಕೆ ಸೇರಿದ್ದು. (ಕೆ.ಎಸ್.ಎಸ್.)

**ಮಾಣಿಕ ನಗರ:** ಬೀದರ್ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಒಂದು ಹಳ್ಳಿ. ಜನಸಂಖ್ಯೆ 2,313. ಇಲ್ಲಿ ಮಾಧ್ಯಮಿಕ ಶಾಲೆ, ಅಂಚೆ ಕಚೇರಿ ಇವೆ. ಈ ಹಳ್ಳಿ ಪ್ರಸಿದ್ಧ ಸಂತರಾದ ಮಾಣಿಕಪ್ರಭು ಅವರ ಸ್ಮಾರಕವಾಗಿ ಇರುವ ಗುಡಿಯಿಂದ ಪ್ರಸಿದ್ಧವಾಗಿದೆ. ಇಲ್ಲಿ ಡಿಸೆಂಬರ್ ತಿಂಗಳಲ್ಲಿ ಆರು ದಿನಗಳವರೆಗೆ ನಡೆಯುವ ಜಾತ್ರೆ ಸಾವಿರಾರು ಭಕ್ತರನ್ನು ಆಕರ್ಷಿಸುತ್ತದೆ. (ಎಸ್.ಎ.ಎನ್.)

**ಮಾಣಿಕಪ್ರಭು:** 1817-65. ಸಕಲಮತ ಸಂಪ್ರದಾಯ ಎಂಬ ಮತದ ಪ್ರವರ್ತಕ. ಬೀದರ್ ಜಿಲ್ಲೆಯ ಲಾಡ(ಜ)ವಂತಿ ಗ್ರಾಮದಲ್ಲಿ ಹುಟ್ಟಿದ. ತಂದೆ ಮನೋಹರನಾಯಕ ಹರಕುಡೆ ಮತ್ತು ತಾಯಿ ಬಾಯಮ್ಮ ದೇವಿ. ಈತ ದೇಶಸ್ಥ ದತ್ತಸಂಪ್ರದಾಯದ ಬ್ರಾಹ್ಮಣರ ಮನೆತನದ ಋಗ್ವೇದದ ಆಶ್ವಲಾಯನ ಶಾಖೆಯ ಶ್ರೀವತ್ಸಗೋತ್ರದವ. ಬಾಲ್ಯದಿಂದಲೇ ಪ್ರಾಸಾದಿಕ ವ್ಯಕ್ತಿಯೆಂದು ಪ್ರಕಾಶಕ್ಕೆಬಂದ ಈತ ಅನೇಕ ಚಮತ್ಕಾರಗಳನ್ನು ಮಾಡಿ ತೋರಿಸಿದ. 1845ರಲ್ಲಿ ಹುಮನಾಬಾದದ ಬಳಿ ನಿರ್ಜನ ಸ್ಥಳವೊಂದರಲ್ಲಿ ನೆಲೆನಿಂತ. ಅದೇ ಈಗ ಮಾಣಿಕನಗರವೆಂದು ಪ್ರಸಿದ್ಧವಾಗಿರುವುದು. ಈತನಿಗೆ ಅನೇಕ ಮಂದಿ ಭಕ್ತರಾದರು. ತನ್ನ ಮತವನ್ನು ಸಕಲಮತ ಸಂಪ್ರದಾಯ ಎಂದೇ ಕರೆದ. ಈ ಪಂಥದ ಉಪಾಸ್ಯದೇವತೆ ಚೈತನ್ಯದೇವ, ಮಾನವನ ಅಂತರ್ಯಾಮಿಯಾದ ಚೈತನ್ಯ. ಮಧುಮತೀನಾಮಕ ಶಕ್ತಿದೇವತೆ ಹಾಗೂ ದತ್ತಾತ್ರೇಯ ಮೂರ್ತಿಗಳು ಇವರು ಪೂಜಿಸುವ ವಿಗ್ರಹಗಳು. ಸರ್ವಧರ್ಮ ಸಮನ್ವಯದಂತೆ ಇರುವ ಈ ಮತಕ್ಕೆ ಮುಸಲ್ಮಾನ್, ಪಾರಸೀ, ಜೈನ, ಬೌದ್ಧ, ಲಿಂಗಾಯತ ಮುಂತಾದ ಅನೇಕ ಕೋಮಿನವರು ಅನುಯಾಯಿಗಳಾಗಿದ್ದಾರೆ. ಶಿವರಾತ್ರಿ, ಮೊಹರಮ್, ದತ್ತಜಯಂತಿ ಇವು ಇಲ್ಲಿ ಆಚರಿಸಲಾಗುವ ವಿಶೇಷ ಹಬ್ಬಗಳು. ಶಾಲಿವಾಹನ ಶಕೆ 1787 ಮಾರ್ಗಶಿರ ಶುದ್ಧ 11ರಂದು ಈತ ಸಜೀವ ಸಮಾಧಿ ಹೊಂದಿದ. ಈತ ಹಿಂದಿ, ಮರಾಠಿ, ಕನ್ನಡ ಮೂರೂ ಭಾಷೆಗಳಲ್ಲಿಯೂ ಪದ್ಯರಚನೆ ಮಾಡಿದುದಾಗಿ ತಿಳಿದುಬರುತ್ತದೆ. ಆ ಪದ್ಯಗಳಲ್ಲಿ ಮೀರಾಬಾಯಿಯ ಪದ್ಯಗಳ ಮಾಧುರ್ಯವಿದೆ. ಈಗ ಈ ಮಾಣಿಕನಗರವನ್ನು ಮಾಣಿಕ ಪ್ರಭು ಸಂಸ್ಥಾನ ಎಂದೇ ಕರೆಯಲಾಗುತ್ತಿದೆ. *

**ಮಾದನ ಹಿಪ್ಪರಗಿ:** ಗುಲ್ಬರ್ಗ ಜಿಲ್ಲೆ ಅಳಂದ ತಾಲ್ಲೂಕಿನ ನೈಋತ್ಯದಲ್ಲಿ ಅಳಂದದಿಂದ ಸು. 29 ಕಿಮೀ ಅಂತರದಲ್ಲಿ ಇರುವ ಒಂದು ಗ್ರಾಮ. ಜನಸಂಖ್ಯೆ 7,665. ಹೂವು ಹಣ್ಣುಕಾಯಿಗಳ ತೋಟಗಳ ಮಧ್ಯದಲ್ಲಿ ಸುಂದರವಾಗಿ ಬೆಳೆದಿರುವ ಈ ಗ್ರಾಮವನ್ನು ಮಾಂಗನ ಹಿಪ್ಪರಗಿಯೆಂದೂ ಕರೆಯುತ್ತಾರೆ. ಇಲ್ಲಿ ಪ್ರತಿ ಮಂಗಳವಾರ ಸಂತೆ ನೆರೆಯುತ್ತದೆ. ಆಗ ಮಹಾರಾಷ್ಟ್ರದ ಅಕ್ಕಲಕೋಟೆ, ದುಧನಿ ಮೊದಲಾದ ಊರುಗಳಿಂದಲೂ ಜನ ವ್ಯಾಪಾರಕ್ಕಾಗಿ ಬರುತ್ತಾರೆ.

ಇಲ್ಲಿ ಕೈಮಗ್ಗದ ಉದ್ದಿಮೆ ವಿಶೇಷವಾಗಿ ಹಮ್ಮಿಕೊಂಡಿದೆ. ಒಂದು ನೇಕಾರರ ಸಹಕಾರೀ ಸಂಘ ಇದೆ. ಸರಕಾರಿ ಆಸ್ಪತ್ರೆ, ಮೊದಲಾದ ಜನೋಪಯೋಗಿ ಸಂಸ್ಥೆಗಳೂ ಇಲ್ಲಿವೆ. 1963ರಲ್ಲಿ ಮಾದನ ಹಿಪ್ಪರಗಿ 'ಮಾದರಿ ಗ್ರಾಮ' ಪ್ರಶಸ್ತಿಯನ್ನು ಗಳಿಸಿತು.

ಇಲ್ಲಿನ ಶಿವಲಿಂಗೇಶ್ವರ ಮಠ ಪ್ರಾಚೀನವಾದುದು. ಈ ಮಠದ ಸ್ವಾಮಿಗಳು ಹಾವೇರಿ ಹಾಗೂ ಹುಕ್ಕೇರಿ ಮಠಗಳ ಪಟ್ಟಾಧ್ಯಕ್ಷರೂ ಆಗಿದ್ದಾರೆ. ಪ್ರತಿ ವರ್ಷ ವೈಶಾಖ ಶುದ್ಧ ಪೌರ್ಣಿಮೆಯಂದು ನಡೆಯುವ ಈ ಮಠದ ಜಾತ್ರೆ ಸುಮಾರು ಐದಾರು ಸಾವಿರಕ್ಕೂ ಮಿಕ್ಕು ಭಕ್ತಾದಿಗಳನ್ನು ಆಕರ್ಷಿಸುತ್ತದೆ. ಇದಲ್ಲದೆ ಪ್ರತಿವರ್ಷ ಶ್ರಾವಣಮಾಸದ ಕಡೆಯ ಸೋಮವಾರ ವಿಶೇಷ ಪೂಜೆ ಮಾಡುತ್ತಾರೆ.

ಇಲ್ಲಿನ ಎರಡನೆಯ ಮಹತ್ತ್ವದ ಸ್ಥಾನ ಖಂಡೇರಾಯನ ಗುಡಿ. ಈ ಗುಡಿಗೆ ವಿಶೇಷವಾಗಿ ಮಾಲಗಾರರು ನಡೆದುಕೊಳ್ಳುತ್ತಾರೆ. ಪ್ರತಿವರ್ಷ ದಸರ ಹಬ್ಬಕ್ಕೆ ಇಲ್ಲಿರುವ ಕಂಬಕ್ಕೆ ಅರವಿಯನ್ನು ಕಟ್ಟಿ (ಬಟ್ಟೆ) ಅರಳು ಹುರಿಯುತ್ತಾರೆ. ಈ ಚಮತ್ಕಾರವನ್ನು ನೋಡಲು ಸುತ್ತುಮುತ್ತಲಿನ ಹಳ್ಳಿಯ ಜನರೆಲ್ಲ ಕುತೂಹಲದಿಂದ ಬಂದು ನೆರೆಯುತ್ತಾರೆ.

ಇಲ್ಲಿನ ಶರಣ ಲಿಂಗೇಶ್ವರ ಮಂದಿರವೂ ಪ್ರಸಿದ್ಧವಾದುದು. ಕಲ್ಯಾಣದ ಚಾಳುಕ್ಯರ ಕಾಲದಿಂದಲೂ ಈ ಊರು ಅಸ್ತಿತ್ವದಲ್ಲಿದ್ದಿರಬೇಕು. ಆ ಕಾಲದ ಹಲವು ಶಿಲ್ಪಗಳು ಇಲ್ಲಿ ಈಗಲೂ ಉಳಿದುಬಂದಿವೆ. (ವಿ.ಕೆ.)

**ಮಾದರ ಚೆನ್ನಯ್ಯ:** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಬಸವಣ್ಣನವರ ಹಿರಿಯ ಸಮಕಾಲೀನ. ಬಸವಣ್ಣ, ಚೆನ್ನಬಸವಣ್ಣ

ಮೊದಲಾದ ವಚನಕಾರರು ಈತನನ್ನು ಸ್ಮರಿಸಿದ್ದಾರೆ. ಬಸವಣ್ಣನವರಂತೂ ಇವನನ್ನು ಅಪ್ಪನು ನಮ್ಮ ಮಾದರ ಚೆನ್ನಯ್ಯ, ಚೆನ್ನಯ್ಯನ ಮನೆಯ ದಾಸಿಯ ಮಗ, ಕಕ್ಕಯ್ಯನ ಮನೆಯ ದಾಸಿಯ ಮಗಳಿಂದ ಹುಟ್ಟಿದ ಮಗ ತಾನು ; ಮಾದರ ಚೆನ್ನಯ್ಯ ಭಕ್ತಿಪ್ರಭಾವದಲ್ಲಿ ತಂದೆ, ಸೂತಕ ಕಳೆದ ಗುರು, ಭಕ್ತಿ ಭಿಕ್ಷೆಯನ್ನು ನೀಡಿದ ದಾನಿ ಎಂದು ಮೊದಲಾಗಿ ಸುಮಾರು ಹತ್ತುವಚನಗಳಲ್ಲಿ ಕೊಂಡಾಡಿದ್ದಾರೆ.

ಜಾತಿಯಿಂದ ಮಾದರವನಾದ ಚೆನ್ನಯ್ಯ ತಮಿಳುನಾಡಿನ ಕರಿಕಾಲ ಚೋಳರಾಜನ ಕುದುರೆ ಲಾಯದಲ್ಲಿ ಕೆಲಸಕ್ಕಿದ್ದ. ಹುಲ್ಲು ಕೊಯ್ಯುವುದು ಇವನ ಕಾಯಕ. ಅರಣ್ಯದಲ್ಲಿ ಈ ಕಾಯಕದಲ್ಲಿ ಮಗ್ನನಾದ ಏಕಾಂತ ಸ್ಥಳವೊಂದಕ್ಕೆ ಹೋಗಿ ತನ್ನ ಇಷ್ಟಲಿಂಗದಲ್ಲಿ ಧ್ಯಾನಮಗ್ನನಾಗಿದ್ದು ಶಿವನನ್ನು ಪ್ರತ್ಯಕ್ಷ ಒಲಿಸಿಕೊಂಡು ತನ್ನ ಹೆಂಡತಿ ತಯಾರಿಸಿದ ಅಂಬಲಿಯನ್ನು ಶಿವನಿಗರ್ಪಿಸಿ ಅದರ ಸವಿಯನ್ನು ಶಿವನ ಜತೆ ಕುಳಿತು ಸವಿದ. ಈ ವಿಷಯವನ್ನು ತಿಳಿದ ರಾಜ ಆನಂದಪಟ್ಟು ತಾನೂ ಮೃಷ್ಟಾನ್ನ ಮಾಡಿಸಿ ಶಿವನಿಗೆ ನೈವೇದ್ಯ ನೀಡಿದ. ಶಿವ ಊಟಮಾಡದಿರಲು ಆತ ರುಂಡವನ್ನೇ ಕತ್ತರಿಸಿಕೊಳ್ಳಲು ಅಣಿಯಾದ. ಆಗ ಚೆನ್ನಯ್ಯನ ಅಂಬಲಿಯು ನನಗೆ ಸವಿಯಾದದ್ದು, ಅದನ್ನು ನಾನು ದಿನಾಲು ಅವನೊಡನೆ ಉಣ್ಣುತ್ತೇನೆಂದು ತಿಳಿಸಲು ರಾಜ ಇಂಥ ಭಕ್ತನನ್ನು ಕಾಣಲು ಬಂದ. ಹೊಲಗೇರಿಯಿಂದ ಚೆನ್ನಯ್ಯನನ್ನು ದೊಡ್ಡ ಮೆರವಣಿಗೆಯೊಂದಿಗೆ ಶಿವಾಲಯಕ್ಕೆ ಕರೆದುಕೊಂಡು ಬಂದ. ಶಿವ ತನ್ನ ಗುಪ್ತಭಕ್ತಿಯನ್ನು ಹೀಗೆ ಪ್ರಕಟಗೊಳಿಸಿದ್ದನ್ನು ಕಂಡು ಬೇಸರಗೊಂಡ ಚೆನ್ನಯ್ಯ ತನ್ನ ಕೊರಳನ್ನು ಕತ್ತರಿಸಿಕೊಳ್ಳಲು ಅನುವಾದ. ಆಗ ಶಿವ ಪ್ರತ್ಯಕ್ಷನಾಗಿ ಆತನನ್ನು ಸಮಾಧಾನ ಪಡಿಸಿದ. ಅನಂತರ ಚೆನ್ನಯ್ಯ ಕಾಂಚೀ ಪಟ್ಟಣದಲ್ಲಿ ಸಮಾಧಿಸ್ಥನಾದ. ಈ ವಿಷಯಗಳು ಹರಿಹರನ ರಗಳೆಯಿಂದ ತಿಳಿದುಬರುತ್ತವೆ.

ಮಾದರ ಚೆನ್ನಯ್ಯ ಉತ್ತಮ ವಚನಕಾರನೂ ಆಗಿದ್ದು ಕಯ್ಯಳಿಕತ್ತಿ ಅಡಿಗೂಂಟಕ್ಕಡಿಯಾಗಬೇಡ ಅಜೆ ನಿಜಾತ್ಮರಾಮರಾಮನ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಈತನ 10 ವಚನಗಳು ದೊರಕಿವೆ. ಇವುಗಳಲ್ಲಿ ವೀರಶೈವ ತತ್ತ್ವಬೋಧನೆ ಕಂಡುಬರುತ್ತದೆ. ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮನಾಥರ ಗಣಸಹಸ್ರನಾಮದಲ್ಲಿ ಇವನ ಹೆಸರಿದೆ. ಅಬ್ಬಲೂರು, ಜಗಳೂರು ಶಿಲಾಶಾಸನಗಳಲ್ಲಿ ಇವನ ಹೆಸರಿನ ಉಲ್ಲೇಖ ಕಂಡುಬರುತ್ತದೆ. (ಎಚ್.ಎ.ಕೆ.)

**ಮಾದಾಪುರ [1]:** ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಒಂದು ಗ್ರಾಮ. ಕೊಡಗು ರಾಜರ ಸಮಾಧಿಗಳಿರುವ ಸ್ಥಳ. ಮಡಿಕೇರಿಯಿಂದ ಕೊಡ್ಲಿಪೇಟೆ ಮತ್ತು ಸಕಲೇಶಪುರಕ್ಕೆ ಹೋಗುವ ಮಾರ್ಗದಲ್ಲಿ ಮಡಿಕೇರಿಯಿಂದ ಉತ್ತರಕ್ಕೆ 21 ಕಿಮೀ ದೂರದಲ್ಲೂ ಸೋಮವಾರಪೇಟೆಯ ದಕ್ಷಿಣದಲ್ಲಿ 19 ಕಿಮೀ ದೂರದಲ್ಲೂ ಇದೆ. ಹಿಂದೆ ಈ ಊರಿಗೆ ಮಹದೇವಪುರವೆಂಬ ಹೆಸರಿತ್ತು. ಇಲ್ಲಿನ ಮಾದಾಪುರ ನದಿಯ ದಡದಲ್ಲಿ ಹಾಲೇರಿ ಮನೆತನದ ಪ್ರಖ್ಯಾತ ರಾಜ ದೊಡ್ಡ ವೀರರಾಜೇಂದ್ರ ಒಡೆಯನ ತಂದೆ ಒಂದನೆಯ ಲಿಂಗರಾಜೇಂದ್ರ ಒಡೆಯನ ಸಮಾಧಿ ಇದೆ. ದೊಡ್ಡ ವೀರರಾಜೇಂದ್ರ ಇಲ್ಲಿ ಬಸವೇಶ್ವರನನ್ನು ಪ್ರತಿಷ್ಠಾಪಿಸಿದ್ದಲ್ಲದೆ ಒಂದು ವೀರಶೈವ ಮಠವನ್ನೂ ಕಟ್ಟಿಸಿ ಅದಕ್ಕೆ ಒಂದು ಹಳ್ಳಿಯನ್ನು ಜಹಗೀರಾಗಿ ಕೊಟ್ಟಿದ್ದ. ಹಿಂದೆ ರಾಜರು ಮಠದಿಂದ ದಸರ ಶಿವರಾತ್ರಿ ಹಬ್ಬಗಳಲ್ಲಿ ಹತ್ತಿರದ ಹಳ್ಳಿಗೆ ಜಂಬೂಸವಾರಿ ಹೋಗುತ್ತಿದ್ದುದರಿಂದ ಈ ಊರಿಗೆ ಜಂಬೂರು ಎಂಬ ಹೆಸರೂ ಉಂಟು. ಮಾದಾಪುರ ಹೊಳೆಯ ಆಚೆಬದಿಯಲ್ಲಿ ಒಂದು ಸಣ್ಣ ಪೇಟೆಯಿದೆ. ಇಲ್ಲಿ ಪ್ರತಿ ಶನಿವಾರ ಸಂತೆ ಸೇರುವುದು. **(ಡಿ.ಎನ್.ಕೆ.)**

**ಮಾದಾಪುರ [2]:** ಮಂಡ್ಯಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ವಾಯವ್ಯ ಅಂಚಿನಲ್ಲಿ ಹೇಮಾವತಿ ನದಿಯ ಎಡದಂಡೆಯಲ್ಲಿರುವ ಗ್ರಾಮ. ಹೊಳೆನರಸೀಪುರದಿಂದ 11 ಕಿಮೀ ಆಗ್ನೇಯಕ್ಕಿದೆ. ಜನಸಂಖ್ಯೆ 1,641.

ಇಲ್ಲಿ ಹೊಯ್ಸಳ ಮತ್ತು ಅನಂತರಕಾಲದ ದೇವಾಲಯಗಳಿವೆ. ಗ್ರಾಮದ ಪೂರ್ವಕ್ಕಿರುವ ತ್ರಿಯಂಬಕೇಶ್ವರ ದೇವಾಲಯ ಚಿಕ್ಕದು. ಈಗ ದಿಬ್ಬವೊಂದರಲ್ಲಿ ಭಾಗಶಃ ಮುಚ್ಚಿಹೋಗಿದೆ. ಇದು ಹೊಯ್ಸಳ ಶೈಲಿಯಲ್ಲಿ ರಚಿತವಾಗಿದ್ದು, ಇದರ ಗರ್ಭಗೃಹ, ಸುಕನಾಸಿ ಮತ್ತು ನವರಂಗದ ಭುವನೇಶ್ವರಿಗಳನ್ನು ಸುಂದರವಾಗಿ ಕೆತ್ತಿದೆ. ಮಹಾಲಿಂಗೇಶ್ವರ ದೇವಾಲಯವೂ ಹೊಯ್ಸಳ ಶೈಲಿಯಲ್ಲಿ ರಚಿತವಾಗಿದ್ದು ಈಗ ಪಾಳು ಬಿದ್ದಿದೆ. ಈ ದೇವಾಲಯ ಒಳ್ಳೆಯ ಶಿಲಾಗೋಪುರದಿಂದ ಕೂಡಿತ್ತೆಂದು ತೋರುತ್ತದೆ. ದೇವಾಲಯದ ಹೊರಗೋಡೆಗಳ ಮೇಲೆ ಅರೆಗಂಬಗಳ ನಡುವೆ ಕೆಲವು ಗೂಡುಗಳನ್ನು ಬಿಡಿಸಿದೆ. ಚೆನ್ನಿಗರಾಯ ದೇವಾಲಯ ಒಕ್ಕೋಣೆಯ ಕಟ್ಟಡ. ದೇವಾಲಯದಲ್ಲಿ ಮೂರೂವರೆ ಅಡಿ ಎತ್ತರದ ಚೆನ್ನಿಗರಾಯ (ಕೇಶವ) ವಿಗ್ರಹವಿದೆ. ಹೊರಗಡೆಯಲ್ಲಿ ಭಿನ್ನವಾದ ಸೊಗಸಾದ ವಿಷ್ಣುಮೂರ್ತಿಯಿದೆ. ವೀರಭದ್ರ ದೇವಾಲಯ ಸ್ವಲ್ಪ ಈಚಿನ ಕಾಲದ್ದು. ಇದರ ನವರಂಗದಲ್ಲಿ ಒಂದೂಕಾಲು ಅಡಿ ಎತ್ತರದ ಸೂರ್ಯ, ಭೈರವ ಮತ್ತು ಭೃಂಗಿ ಮೂರ್ತಿಗಳಿವೆ. ತೊಲೆಯ ಮೇಲಿರುವ ಶಾಸನದಿಂದ ಮುಮ್ಮಡಿ ಕೃಷ್ಣರಾಜ ಒಡೆಯರ ಪತ್ನಿ ಮುದ್ದುಕೃಷ್ಣಮ್ಮ ಇಲ್ಲಿ ಬಾವಿಯೊಂದನ್ನು ತೋಡಿಸಿದ ವಿಷಯ ತಿಳಿದುಬರುತ್ತದೆ. ಬಹುಶಃ ಆಕೆ ಈ ಗ್ರಾಮದವರಾಗಿರಬೇಕು. **(ಎಚ್.ಎಂ.ಎನ್.ಆರ್.)**

**ಮಾದೇಶ್ವರ:** ಮಲೆಯ ಮಾದೇಶ್ವರ, ಏಳುಮಲೆ ಮಾದೇಶ್ವರ ಮೊದಲಾದ ಹೆಸರುಗಳಿಂದ ಪ್ರಸಿದ್ಧವಾಗಿರುವ ಜನಪದ ಆರಾಧ್ಯದೈವ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಪೂರ್ವಘಟ್ಟಗಳ ಶ್ರೇಣಿಯಲ್ಲಿ ಏಳುಮಲೆಗಳ ದಟ್ಟವಾದ ಕಣಿವೆಯಲ್ಲಿ ಗಿರಿವನಗಳ ನಡುವೆ ಮಾದೇಶ್ವರ **(ನೋಡಿ)** ಈ ಕ್ಷೇತ್ರ ಒಂದು ಪುಣ್ಯನೆಲೆಯೆನಿಸಿ ಅಪಾರ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸಿದೆ. ಬೆಂಗಳೂರು ಜಿಲ್ಲೆಯ ದಕ್ಷಿಣ ಭಾಗ, ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಬಹುಭಾಗದಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದ ಒಕ್ಕಲುಗಳು ಕಂಡುಬರುತ್ತವೆ. ಶಿವರಾತ್ರಿ, ಯುಗಾದಿ ಮತ್ತು ನವರಾತ್ರಿಗಳಲ್ಲಿ ನಡೆಯುವ ಜಾತ್ರೆ ಉತ್ಸವಗಳಿಗೆ ಭಕ್ತರು ಈ ಭಾಗಗಳಿಂದ ತಂಡತಂಡವಾಗಿ ಯಾತ್ರೆ ಹೊರಡುತ್ತಾರೆ. ತಮಿಳುನಾಡಿನ ಸೇಲಂ ಮೊದಲಾದ ಭಾಗಗಳಿಂದಲೂ ಈ ಕ್ಷೇತ್ರಕ್ಕೆ ಭಕ್ತರು ಬರುತ್ತಾರೆ.

ಮಾದೇಶ್ವರ ಬಹುಶಃ ಐತಿಹಾಸಿಕ ವ್ಯಕ್ತಿ. ಇವರನ್ನು ಕುರಿತ ಕೆಲವು ಶಾಸನಗಳೂ ಶಿಷ್ಟ ಕಾವ್ಯಗಳೂ ಪರಿಚಯ ಗ್ರಂಥಗಳೂ ಲಭ್ಯವಾಗಿವೆ. ಇವರ ಸಮಗ್ರ ಚರಿತ್ರೆಯನ್ನು ಹೇಳುವ ಜನಪದ ಕಾವ್ಯವೊಂದು ಮೌಖಿಕ ಸಂಪ್ರದಾಯದಲ್ಲಿ ಉಳಿದುಬಂದಿದೆ. ಜನಪದ ಕಾವ್ಯವೊಂದನ್ನು ಹೊರತು ಉಳಿದ ಆಧಾರಗಳೆಲ್ಲ ಇನ್ನೂರು ಮುನ್ನೂರು ವರ್ಷ ಈಚಿನವು.

ಮಾದೇಶ್ವರರನ್ನು ಕುರಿತ ವಿವರಗಳಿಗೆ ಸಂಬಂಧಿಸಿದಂತೆ ಇತರ ಆಧಾರಗಳಿಗಿಂತ ಜನಪದ ಕಾವ್ಯ ಹೆಚ್ಚು ಮಾಹಿತಿಗಳನ್ನು ಒದಗಿಸಿದೆ. ಈ ಜನಪದ ಕಾವ್ಯವನ್ನು ಪರಂಪರಾಗತವಾಗಿ ಹಾಡಿಕೊಂಡು ಬಂದವರು ಮಾದೇಶ್ವರ ಸಂಪ್ರದಾಯಕ್ಕೆ ಸೇರಿದ ದೇವರಗುಡ್ಡರು **(ನೋಡಿ)** ಎಂಬ ಒಂದು ವರ್ಗದ ಧಾರ್ಮಿಕ ವೃತ್ತಿಗಾಯಕರು. ಸದ್ಯಕ್ಕೆ ಅವರು ಹಾಡಿರುವ ಜನಪದ ಕಾವ್ಯದ ಪ್ರಕಾರ ಮಾದೇಶ್ವರರಿಗೆ ಸಂಬಂಧಿಸಿದ ಕೆಲವು ಪ್ರಮುಖ ಘಟನೆಗಳನ್ನು ಹೀಗೆ ಪಟ್ಟಿ ಮಾಡಬಹುದು:

1. ಬೇವಿನ ಕೊಲ್ಲಿಯಲ್ಲಿ ಮಾದೇಶ್ವರರು ಕಾಣಿಸಿಕೊಂಡು ಹಲಗೇಗೌಡ ಮತ್ತು ಮಹಾದೇವಮ್ಮ ದಂಪತಿಗಳನ್ನು ಹರಸಿದ್ದು, ಮಾಲಂಗಿಯ

ಬಳಿಯಲ್ಲಿ ಮಕ್ಕಳಾಟಿಕೆ ಮಾರಯ್ಯನಾದುದು, ಉತ್ತರ ದೇಶಕ್ಕೆ ಹೋಗಿ ಚಂದ್ರಶೇಖರಮೂರ್ತಿ ಮತ್ತು ಉತ್ತರಾಜಮ್ಮ ಎಂಬ ತಂದೆತಾಯಿಯರನ್ನು ಪಡೆದು ಬಂದದ್ದು, ದಕ್ಷಿಣಾಭಿಮುಖವಾಗಿ ಹೊರಟು ಸುತ್ತೂರು, ಕುಂತೂರು ಮಠಗಳಲ್ಲಿ ಪವಾಡಗಳನ್ನೆಸಗಿ ಏಳೂಮಲೆಗಳ ನಡುವೆ ನೆಲಸಿದ್ದು.

2. ದೇವತೆಗಳನ್ನೆಲ್ಲ ಸೆರೆಯಲ್ಲಿಟ್ಟು ಸೊಕ್ಕಿನಿಂದ ಮೆರೆಯುತ್ತಿದ್ದ ಶ್ರವಣನನ್ನು ನರಚಮ್ಮಾವುಗೆಯ ಪ್ರಸಂಗದಲ್ಲಿ ಕೊಂದು ದೇವತೆಗಳ ಸೆರೆ ಬಿಡಿಸಿದ್ದು.

3. ಆಲಂಬಾಡಿಯ ಸಿರಿವಂತ ಜುಂಜೇಗೌಡನನ್ನು ತನ್ನ ಪವಾಡಗಳಿಂದ ಗೆದ್ದು ಭಕ್ತನನ್ನಾಗಿ ಮಾಡಿಕೊಂಡು ಮಾದೇಶ್ವರ ಕ್ಷೇತ್ರದಲ್ಲಿ ತನಗೆ ಬೇಕಾದ ಗುಡಿ ಗೋಪುರಗಳನ್ನು ಕಟ್ಟಿಸಿದ್ದು.

4. ಪೂರ್ವಘಟ್ಟಗಳ ಶ್ರೇಣಿಯಲ್ಲಿ ವಾಸವಾಗಿರುವ ಆದಿವಾಸಿ ಜನಾಂಗ ಸೋಲಿಗರ ಶಂಕಮ್ಮನಿಗೆ ಒಲಿದು ಅವಳ ಗಂಡ ನೀಲೇಗೌಡ ಒಡ್ಡಿದ ಕಷ್ಟಗಳಿಂದ ಬಿಡುಗಡೆಯನ್ನು ದೊರಕಿಸಿದ್ದು, ಅವಳಿಗೆ ಕಾರಯ್ಯ ಮತ್ತು ಬಿಲ್ಲಯ್ಯ ಎಂಬ ಮಕ್ಕಳನ್ನು ನೀಡಿ ತನ್ನ ಶಿಷ್ಯರನ್ನಾಗಿ ಮಾಡಿಕೊಂಡದ್ದು.

5. ಎಲ್ಲರಿಗೂ ವಿಷದ ಕಜ್ಜಾಯವಿಕ್ಕಿ ಕೊಲ್ಲುತ್ತಿದ್ದ ಇಕ್ಕೇರಿ ದೇವಮ್ಮ ಎಂಬುವಳ ಮನೆಗೆ ಹೋಗಿ, ವಿಷದ ಕಜ್ಜಾಯದಿಂದ ಅವಳ ಮಗನನ್ನೇ ಕೊಂದು ಅವಳಿಗೆ ಬುದ್ಧಿ ಕಲಿಸಿದ್ದು.

6. ತನ್ನ ವರದಿಂದಲೇ ಸಿರಿಸಂಪತ್ತನ್ನು ಪಡೆದು ಕೃಪಣಳಾಗಿ, ದರ್ಪ ಅಟ್ಟಹಾಸದಿಂದ ಮೆರೆಯುತ್ತಿದ್ದ ಬೇವಿನಹಟ್ಟಿ ಕಾಳಿ ಎಂಬುವಳನ್ನು ಪರೀಕ್ಷಿಸಿ ಅವಳ ಐಶ್ವರ್ಯವನ್ನೆಲ್ಲ ಮಣ್ಣುಗೂಡಿಸಿದ್ದು.

7. ಸರಗೂರಿನ ರಾಮವ್ವೆಯ ಮಗ ಮೂಗಪ್ಪ ಎಂಬುವವನನ್ನು ತನ್ನ ಪವಾಡಗಳಿಂದ ಗೆದ್ದು ತನ್ನ ಎಣ್ಣೆಮಜ್ಜನದ ಸೇವೆಗೆ ಶಿಷ್ಯನನ್ನಾಗಿ ಮಾಡಿಕೊಂಡಿದ್ದು.

ಏಳುಮಲೆ ಮಾದೇಶ್ವರನ ಕಾರ್ಯದಲ್ಲಿ ಹೀಗೆ ಏಳುಕವಲುಗಳು ಕಂಡುಬರುತ್ತವೆ. ಬೇಡರಕಣ್ಣಪ್ಪ ಮುಂತಾದ ಸಣ್ಣಪುಟ್ಟ ಪ್ರಸಂಗಗಳೂ ಈ ಕಾವ್ಯದಲ್ಲಿ ಅಲ್ಲಲ್ಲಿ ಬಂದರೂ ಮುಖ್ಯ ಭಾಗಗಳು ಈ ಏಳು ಮಾತ್ರ. ಇಲ್ಲಿ ಬೇವಿನಕೊಲ್ಲಿ, ಸುತ್ತೂರು, ಕುಂತೂರು ಮುಂತಾದ ಕ್ಷೇತ್ರಗಳ ಪ್ರಸ್ತಾಪ ಬರುತ್ತದೆ. ಹಲಗೇಗೌಡ, ಜುಂಜೇಗೌಡ, ಶ್ರವಣದೊರೆ, ಸರಗೂರು ಮೂಗಪ್ಪ, ಬೇವಿನಹಟ್ಟಿ ಕಾಳಿ, ಶಂಕಮ್ಮ, ಕಾರಯ್ಯ, ಬಿಲ್ಲಯ್ಯ, ಬೇಡರ ಕಣ್ಣಪ್ಪ, ಇಕ್ಕೇರಿ ದೇವಮ್ಮ ಮುಂತಾದವರ ಪ್ರಸ್ತಾಪ ಬರುತ್ತದೆ. ಮಾದೇಶ್ವರರು ಏಳುಮಲೆಗಳ ದಿಕ್ಕಿನಲ್ಲಿ ಹೊರಟಾಗ, ಅನಂತರ ಏಳುಮಲೆಗಳ ಸಾಲಿನಲ್ಲಿ ತಾನು ನೆಲಸಿ, ಆ ಭಾಗದಲ್ಲೆಲ್ಲ ಸಂಚರಿಸುವಾಗ ಎಸಗಿದ ಪ್ರಮುಖ ಕಾರ್ಯಗಳ ಪ್ರಸ್ತಾಪ ಮಾತ್ರ ಈ ಕಾವ್ಯದ ಒಂದೊಂದು ಭಾಗದಲ್ಲಿ ಉಳಿದುಬಂದಂತೆ ತೋರುತ್ತದೆ.

ಮಲೆಯ ಮಾದೇಶ್ವರ ಜನಪದ ಕಾವ್ಯದಲ್ಲಿ ತಂದೆ ತಾಯಿಯರನ್ನು ಪಡೆದ ಪ್ರಸಂಗಗಳು ಕಾವ್ಯದ ಮುಖ್ಯ ಪರಿಸರದ ಹೊರಗೆ ಘಟಿಸುತ್ತವೆ. ಉತ್ತರರಾಜಮ್ಮನ ಪ್ರಸಂಗವನ್ನು ಬಿಟ್ಟರೆ, ಕಲ್ಯಾಣದಲ್ಲಿ ಬಸವೇಶ್ವರ, ನೀಲಮ್ಮ ಇವರಿಗೆ ಮಾದೇಶ್ವರ ಕಾಣಿಸಿಕೊಳ್ಳುವ ಭಾಗ ಪ್ರಕ್ಷಿಪ್ತವೆನಿಸುತ್ತದೆ. ಏಕೆಂದರೆ ಮಂಟೇಸ್ವಾಮಿ ಕಾವ್ಯದಲ್ಲಿಯೂ ಇಂಥದೇ ಘಟನೆ ಮುಖ್ಯ ಕಾವ್ಯದೊಡನೆ ಸಾವಯವ ಸಂಬಂಧವನ್ನು ಪಡೆದಿರುವುದರಿಂದ ಮಾದೇಶ್ವರರಿಗೆ ಕಲ್ಯಾಣದ ಸಂಬಂಧವನ್ನು ಕಲ್ಪಿಸಲಾಗಿಯೇ ಕಲಾವಿದರು ಸೇರಿಸಿಕೊಂಡ ಭಾಗ ಇದು ಎನ್ನಬಹುದು.

ಕಾರಯ್ಯ ಮತ್ತು ಬಿಲ್ಲಯ್ಯ ಸೋಲಿಗರ ಶಂಕಮ್ಮನ ಮಕ್ಕಳೆಂದು ಜನಪದ ಕಾವ್ಯ ಚಿತ್ರಿಸಿದರೆ, ಕೆಲವರ ಅಭಿಪ್ರಾಯದ ಪ್ರಕಾರ ಕಾರಯ್ಯನೊಬ್ಬನೇ ಸೋಲಿಗರ ಭಕ್ತ. ಬಿಲ್ಲಯ್ಯ ಕುರುಬ ಜನಾಂಗಕ್ಕೆ ಸೇರಿದವನು. ಬಿಲ್ಲಯ್ಯನಿಗೆ ಕುಂತೂರು ಮಠದಲ್ಲಿ ದೀಕ್ಷೆಯಾಗುತ್ತದೆ. ಅವನು ಮಾದೇಶ್ವರ ಕ್ಷೇತ್ರದಲ್ಲಿರುವ ತಮ್ಮಡಿಗಳ ಮೂಲ ಪುರುಷನೆಂದು ಹೇಳಲಾಗುತ್ತದೆ. ಮಾದೇಶ್ವರರ ಜೊತೆಯಲ್ಲಿ ಬಂದ ಸಂಸಾರಿ ಸಂಗಪ್ಪ ಮಾದೇಶ್ವರಗಿರಿಯ ಮೇಲೆ ಒಂದು ಮಠವನ್ನು ಸ್ಥಾಪಿಸಿದ. ಇದಕ್ಕೆ ಸಾಲೂರು ಮಠ ಎಂದು ಹೆಸರು ಬಂದಿತು. ಈ ದಾಸೋಹ ಮಠ ದೇವರಗುಡ್ಡರಿಗೆ ದೀಕ್ಷೆಯನ್ನು ಕೊಡುವ ಮೂಲಮಠ ಎನಿಸಿದೆ.

ಮಾದೇಶ್ವರ ಕಾವ್ಯದ ಶ್ರವಣನ ಪ್ರಸಂಗ ಮಾದೇಶ್ವರರ ಚರಿತ್ರೆಯ ಮೇಲೆ ಒಳ್ಳೆಯ ಬೆಳಕನ್ನು ಚೆಲ್ಲುತ್ತದೆ. ದೇವಚಂದ್ರನ ರಾಜಾವಳೀ ಕಥೆಯಲ್ಲಿ (1838) ಮಾದೇಶ್ವರರು ಭಾನುಕೀರ್ತಿ ಎಂಬ ಜಿನಮುನಿಯನ್ನು ಲಾಕ್ಷವ ಪಾದುಕಂ ಕೊಡಿಸಿ ಕಾದ ಅರೆಯ ಮೇಲೆ ಕೊಂದು ಕುಂತೂರು ಮಠದ ಜೋಳಿಗೆಯೊಡೆಯರಿಗೆ ರಾಜ್ಯವನ್ನು ಕೊಡಿಸಿದ ಪ್ರಸಂಗ ಪ್ರಸ್ತಾಪಿಸಲ್ಪಟ್ಟಿದೆ. ಮಾದೇಶ್ವರ ಕಾವ್ಯದ ಶ್ರವಣದೊರೆಯ ಸಾಲಿನೊಡನೆ ಈ ಪ್ರಸಂಗದ ಹೋಲಿಕೆ ಸ್ಪಷ್ಟವಾಗಿ ತೋರುತ್ತದೆ. ಮಾದೇಶ್ವರರು ಈ ಭಾಗಕ್ಕೆ ಆಗಮಿಸಿದ ಮೇಲೆ ಇಲ್ಲಿ ಪ್ರಾಬಲ್ಯದಲ್ಲಿದ್ದ ಜೈನಧರ್ಮ ಅವನತಿಗೊಂಡು ಶೈವಧರ್ಮದ ಪುನರುತ್ಥಾನವಾದಂತೆ ತೋರುತ್ತದೆ. ಈ ದಿಕ್ಕಿನಲ್ಲಿ ಸಂಶೋಧನೆಯನ್ನು ಕೈಗೊಳ್ಳುವುದರ ಮೂಲಕ ಮಾದೇಶ್ವರರ ಕಾಲವನ್ನು ಖಚಿತವಾಗಿ ನಿರ್ಧರಿಸುವ ಸಾಧ್ಯತೆಯಿದೆ. ಒಟ್ಟಿನಲ್ಲಿ ಖಚಿತ ಆಧಾರಗಳು ದೊರೆಯುವವರೆಗೆ ಮಾದೇಶ್ವರ ಶೈವ ಮೂಲಕ್ಕೆ ಸಂಬಂಧಪಡುವ ಒಬ್ಬ ಮಹಿಮಾಪುರುಷ ಎಂದಷ್ಟೇ ಇಟ್ಟುಕೊಳ್ಳಬಹುದು.

ಮಲೆಯ ಮಾದೇಶ್ವರ ಜನಪದ ಕಾವ್ಯ ಅನೇಕ ಪೌರಾಣಿಕ ಅಂಶಗಳನ್ನು ತನ್ನಲ್ಲಿ ಅಂತರ್ಗತಗಳಿಸಿಕೊಂಡಿದ್ದರೂ ಮಾದೇಶ್ವರರ ಜೀವನದ ಮೇಲೆ ಸ್ಪಷ್ಟವಾಗಿ ಬೆಳಕು ಚೆಲ್ಲುತ್ತದೆ. ಇದರ ಪ್ರಕಾರ ಮಾದೇಶ್ವರರು ದಕ್ಷಿಣ ಕರ್ನಾಟಕದ ಬೇವಿನಕೊಲ್ಲಿಯ ಭಾಗದಲ್ಲೆಲ್ಲೊ ಜನ್ಮವೆತ್ತಿ, ಅಸಾಮಾನ್ಯ ಅಲೌಕಿಕ ಶಕ್ತಿಯನ್ನು ಗಳಿಸಿಕೊಂಡು, ಬಾಲಜಂಗಮರಾಗಿ ಮೆರೆಯುತ್ತ, ಬೇವಿನಕೊಲ್ಲಿಯ ಭಾಗದಲ್ಲೆಲ್ಲೊ ಪವಾಡದಿಂದ ಬೆಳಕಿಗೆ ಬಂದಿರಬೇಕು. ಅಲ್ಲಿಂದ ಮುಂದೆ ಇವರು ಚರಮೂರ್ತಿಗಳಾಗಿ ಅನೇಕ ನೆಲೆಗಳಲ್ಲಿ ಸಂಚರಿಸುತ್ತ, ಅನೇಕ ವೀರಶೈವ ಮಠಗಳಿಗೂ ಸಂದರ್ಶನ ನೀಡಿ, ಎಲ್ಲಿಯೂ ನಿಲ್ಲದೆ ಏಳುಮಲೆಗಳ ನಡುವೆ ಹೋಗಿ ನೆಲೆಸಿರಬಹುದು. ತಮ್ಮ ಮಹಿಮೆಯಿಂದ, ಪವಾಡ ಶಕ್ತಿಯಿಂದ, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಸಂರಕ್ಷಿಸಿ ಜನಪ್ರಿಯತೆಯನ್ನು ಗಳಿಸಿ ಭಕ್ತರನ್ನು ಆಕರ್ಷಿಸಿರಬಹುದು.

1345ರಲ್ಲಿ ರಚಿತವಾದದ್ದೆನ್ನಲಾದ ಹರದನಹಳ್ಳಿಯ ಶಾಸನದಲ್ಲಿ ಮಾದೇಶ್ವರರ ಪ್ರಸ್ತಾಪವಿದೆಯಾದರೂ ಆ ಶಾಸನದ ಕಾಲ ಸಂದೇಹಾಸ್ಪದ. ಹೈದರ್ ಅಲಿಯ 1761ರ ಒಂದು ಶಾಸನದಲ್ಲಿ ಮಾದೇಶ್ವರರ ಬಗ್ಗೆ ಹೆಚ್ಚು ವಿವರಗಳು ಬಂದಿವೆ. ಆದರೆ ಅವರ ಮೂಲದ ಬಗ್ಗೆ ಅದರಲ್ಲಿ ಪ್ರಸ್ತಾಪವಿಲ್ಲ. ಸಂಗಪ್ಪಶಾಸ್ತ್ರಿಗಳ ಸುತ್ತೂರು ಸಿಂಹಾಸನದ ಗುರು ಪರಂಪರೆ (1933) ಎಂಬ ಗ್ರಂಥದ ಪ್ರಕಾರ ಸಿದ್ಧನಂಜದೇಶಿಕರ ಕಾಲದಲ್ಲಿ (1170–1240) ಮಾದೇಶ್ವರರು ಸುತ್ತೂರಿಗೆ ಬಂದಿದ್ದರು. ಆದರೆ ಈ ಎಲ್ಲ ಮಾಹಿತಿಗಳೂ ಸಂದಿಗ್ಧವಾಗಿವೆ. ಮಾದೇಶ್ವರರ ಮೂಲ ಅಸ್ಪಷ್ಟವಾಗಿರುವಂತೆಯೇ ಅವರ ಕಾಲವನ್ನೂ ನಿರ್ದಿಷ್ಟವಾಗಿ ಹೇಳಲು ಖಚಿತ ಆಧಾರಗಳು ಸದ್ಯದಲ್ಲಿ ಸಾಲದಾಗಿದೆ. **(ಜಿ.ಎಸ್.ಪಿ.)**

ಮಾದೇಶ್ವರರಿಗೆ ಸಂಬಂಧಿಸಿದಂತೆ ಪಿ.ಕೆ.ರಾಜಶೇಖರ ಅವರು ಮಲೆಯ ಮಾದೇಶ್ವರ ಎಂಬ ಜನಪದ ಮಹಾಕಾವ್ಯವೊಂದನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ (1973).

**ಮಾಧವ:** ಸು. 1500. ಬ್ರಾಹ್ಮಣ ಕವಿ. ಮಾಧವಾಲಂಕಾರ ಎಂಬ ಗ್ರಂಥದ ಕರ್ತೃ. ಇವನ ತಂದೆ ದೇಪರಸ. ತಾನು ಅನೇಕ ವಿದ್ಯಾಪರಿಣಿತನೆಂದೂ ಹಿರಿಯೂರ ದೊರೆಯೆಂದೂ ಕವಿ ಹೇಳಿಕೊಂಡಿದ್ದಾನೆ.

ಮಾಧವಾಲಂಕಾರ ಲಕ್ಷಣ ಗ್ರಂಥ. ಚಂಪೂಶೈಲಿಯಲ್ಲಿದೆ. ಇದು ದಂಡಿಯ ಕಾವ್ಯಾದರ್ಶದ ಅನುವಾದ. ಕಾವ್ಯಾದರ್ಶವನ್ನು ಸಮಗ್ರವಾಗಿ ಕನ್ನಡಿಸಿರುವುದು ಈ ಗ್ರಂಥದ ವೈಶಿಷ್ಟ್ಯ. ಶಬ್ದಾಲಂಕಾರಗಳು ಕಾವ್ಯದ ಗುಣದೋಷಗಳು, ದುಷ್ಕರ ಯಮಕಾದಿ ಬಂಧಗಳು–ಇವೆಲ್ಲವನ್ನು ಕಿರಿದರಲ್ಲಿಯೇ ವಿವರಿಸಲಾಗಿದೆ. ಕೃತಿ ಭಾಷಾಂತರವಾದರೂ ಸ್ವತಂತ್ರ ರಚನೆಯೆನಿಸುವಂತೆ ಹೃದಯಂಗಮವಾಗಿದೆ. **(ಕೆ.ಕೆ.)**

**ಮಾಧವ I:** ತಲಕಾಡು ಗಂಗವಂಶದ ರಾಜ (ಸು.350–75). ಮೊದಲ ಗಂಗ ಅರಸರ ವಂಶಾವಳಿಯ ಬಗ್ಗೆ ದೊರಕುವ ಮಾಹಿತಿಗಳು ಸಂದಿಗ್ಧವಾಗಿರುವುದರಿಂದ ಆ ವಂಶಾವಳಿಯಲ್ಲಿ ಮಾಧವನ ಸ್ಥಾನದ ಬಗ್ಗೆ ಹಲವು ಅಭಿಪ್ರಾಯಗಳಿವೆ. ಮಾಧವನೇ ಗಂಗವಂಶದ ಪ್ರಥಮ ರಾಜ, ಕೊಂಗುಣಿವರ್ಮ ಎಂಬುದು ಅವನ ಬಿರುದು ಮಾತ್ರ; ಕೊಂಗುಣಿವರ್ಮ ಗಂಗವಂಶದ ಸ್ಥಾಪಕ, ಮಾಧವ ಅವನ ಮಗ. ಕೊಂಗುಣಿವರ್ಮನ ಅನಂತರ ಈತ ಪಟ್ಟಕ್ಕೆ ಬಂದ– ಇವು ಪ್ರಚಲಿತವಿರುವ ಅಭಿಪ್ರಾಯಗಳು. ಮಾಧವನ ಆಳಿಕೆಯ ಕಾಲದ ಬಗ್ಗೆ ಸಹ ಅನೇಕ ಅಭಿಪ್ರಾಯಗಳಿದ್ದರೂ ಬಹುತೇಕ ಅವೆಲ್ಲ ನಾಲ್ಕನೆಯ ಶತಮಾನದಲ್ಲೇ ಇವನು ಆಳಿರಬೇಕೆಂಬುದನ್ನು ಒಪ್ಪುತ್ತವೆ.

ಗಂಗವಂಶದವರು ಮೂಲತಃ ಅಯೋಧ್ಯೆಯಲ್ಲೂ ಮತ್ತು ತರುವಾಯ ಅಹಿಚ್ಛತ್ರ ಪುರದಲ್ಲೂ ಆಳುತ್ತಿದ್ದ ಇಕ್ಷ್ವಾಕುವಂಶದ ಧನಂಜಯನ ಸಂತತಿಗೆ ಸೇರಿದವರು. ಆ ವಂಶದ ದಡಿಗ ಮತ್ತು ಮಾಧವ ಎಂಬ ಇಬ್ಬರು ರಾಜಕುಮಾರರು ಕಾರಣಾಂತರದಿಂದ ದಕ್ಷಿಣ ಭಾರತಕ್ಕೆ ಬಂದು ಸಿಂಹನಂದಾಚಾರ್ಯರೆಂಬ ಜೈನಯತಿಗಳ ಅನುಗ್ರಹದಿಂದ ಅಲ್ಲಿ ನೆಲಸಿ ಗಂಗವಾಡಿ 96000 ರಾಜ್ಯವನ್ನು ಸ್ಥಾಪಿಸಿದರು ಎಂಬ ಕಥೆ ಪ್ರಖ್ಯಾತವಾಗಿದೆ. ಆದರೆ ಈ ಕಥೆಯ ಸತ್ಯಾಸತ್ಯತೆ ಸ್ಪಷ್ಟವಿಲ್ಲ **(ನೋಡಿ:ಕೊಂಗುಣಿವರ್ಮ; ಗಂಗವಂಶ)**.

ನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಭಾರತದ ಪೂರ್ವಭಾಗದಲ್ಲಿ ಪ್ರಬಲರಾಗಿದ್ದ ಪಲ್ಲವರಿಗೂ ಕರ್ನಾಟಕದ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಹೊಸದಾಗಿ ರಾಜ್ಯಸ್ಥಾಪಿಸಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕದಂಬರಿಗೂ ವೈರತ್ವವಿದ್ದುದು ಮತ್ತು ಆಂಧ್ರಪ್ರದೇಶದ ಭಾಗಗಳನ್ನು ಆಳುತ್ತಿದ್ದ ಬಾಣರು ದುರ್ಬಲರಾಗುತ್ತಿದ್ದುದು–ಈ ಕಾರಣಗಳಿಂದ ಕರ್ನಾಟಕದ ದಕ್ಷಿಣ ಭಾಗದಲ್ಲಿ ಮತ್ತು ಈಗಿನ ಆಂಧ್ರದ ದಕ್ಷಿಣ ಭಾಗದಲ್ಲಿ ಅವ್ಯವಸ್ಥೆ ಏರ್ಪಟ್ಟಿತ್ತು. ಈ ಸಂದರ್ಭವನ್ನು ಉಪಯೋಗಿಸಿಕೊಂಡ ಮಾಧವ ಪಲ್ಲವರ ಸ್ನೇಹಗಳಿಸಿ ಬಾಣರನ್ನು ಸೋಲಿಸಿ ಕದಂಬರ ಪ್ರದೇಶಗಳನ್ನು ಆಕ್ರಮಿಸಿ ಗಂಗರಾಜ್ಯವನ್ನು ಸ್ಥಾಪಿಸಿದ ಎಂಬುದು ಇತ್ತೀಚಿನ ಅಭಿಪ್ರಾಯ.

ಒಂದನೆಯ ಮಾಧವನನ್ನು ಜಾಹ್ನವೇಯ ಕುಲ ಅಥವಾ ಗಂಗವಂಶದ ಬಾಂದಳದಲ್ಲಿ ಶೋಭಿಸುವ ಸೂರ್ಯ, ಕಾಣ್ವಾಯನ ಗೋತ್ರಕ್ಕೆ ಸೇರಿದವ, ಕ್ರೂರ ಶತ್ರುಸಮೂಹವನ್ನು ಅನೇಕ ಯುದ್ಧಗಳಲ್ಲಿ ಜಯಿಸಿದವ, ಈ ಯುದ್ಧಗಳಲ್ಲಿ ಆದ ಗಾಯದ ಕಲೆಗಳಿಂದ ಶೋಭಿತನಾದವ, ಅರ್ಹತ್ ಶಾಸನದ (ಜೈನಧರ್ಮ) ಪ್ರಸಾದದಿಂದ ರಾಜ್ಯಲಕ್ಷ್ಮಿಯನ್ನು ಪಡೆದವ ಇತ್ಯಾದಿಯಾಗಿ ಶಾಸನಗಳಲ್ಲಿ ವರ್ಣಿಸಲಾಗಿದೆ. ಇವನು ಶಿಲಾಸ್ತಂಭವನ್ನು ಒಂದೇ ಏಟಿಗೆ ತುಂಡರಿಸಿ ಬಲವನ್ನೂ ಖ್ಯಾತಿಯನ್ನೂ ಗಳಿಸಿದನೆಂದೂ ಸ್ವಬಾಹು ಬಲದಿಂದ ರಾಜ್ಯ ಸ್ಥಾಪಿಸಿದನೆಂದೂ ಮುನಿಗುರು ಮತ್ತು ದೇವತೆಗಳಿಗೆ ಪೂಜೆ ಸಲ್ಲಿಸುವಲ್ಲಿ ಶ್ರದ್ಧೆಯುಳ್ಳವನಾಗಿದ್ದನೆಂದೂ ದಾನಧರ್ಮ ಮಾಡುವಲ್ಲಿ ಉತ್ಸಾಹಿಯಾಗಿದ್ದನೆಂದೂ ತಿಳಿಸಲಾಗಿದೆ. ಇವನು ಹಣೆಯ ಮೇಲೆ ಕರ್ಣಿಕಾರ ಪುಷ್ಪವನ್ನು ಧರಿಸುತ್ತಿದ್ದನೆಂದೂ ಇಂಥ ವೀರನೂ ಬಹುಗುಣ ಸಂಪನ್ನನೂ ಆದ ಮಾಧವನು ರಾಜ್ಯ ಸ್ಥಾಪಿಸಿದ್ದು ವಿವಿಧ ದೇಶಗಳ ಮೇಲೆ ಪರಿಣಾಮ ಬೀರಿತೆಂದೂ ಸಹ ಶಾಸನಗಳಲ್ಲಿ ಉಕ್ತವಾಗಿದೆ. ಇವನ ಕಾಲದ ಶಾಸನಗಳು ದೊರೆಯದಿರುವುದರಿಂದ ಆ ಕಾಲದ ರಾಜಕೀಯ ಘಟನೆಗಳ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬರುವುದಿಲ್ಲ. ಆದರೂ ತರುವಾಯದ ಶಾಸನಗಳಲ್ಲಿ ಇವನ ಬಗ್ಗೆ ನೀಡಿರುವ ಮೇಲಿನ ವಿವರಣೆಗಳಿಂದ ಇವನು ಸ್ವಪರಾಕ್ರಮದಿಂದ ರಾಜ್ಯ ಸ್ಥಾಪಿಸಿ ಸದ್ಧರ್ಮದಿಂದ ಅದನ್ನು ನಡೆಸಿಕೊಂಡು ಬಂದನೆಂದು ಹೇಳಬಹುದು.

ಒಂದನೆಯ ಮಾಧವನಿಗೆ ಕೊಂಗುಣಿವರ್ಮ ಎಂಬ ಬಿರುದಿನ ಜತೆಗೆ ಕೊಕಣಿವರ್ಮ, ಕೊಂಗುಲಿವರ್ಮ, ಜಯಭೂಷಣ, ಬಾಣಕುಲಾಂತಕ ಮುಂತಾದ ಬಿರುದುಗಳು ಇದ್ದುದು ಕಂಡುಬರುತ್ತದೆ. ಕೊಂಗುಣಿವರ್ಮ ಎಂಬ ಬಿರುದು ಇವನಿಗೆ ಬಂದುದು ಇವನು ಕೊಂಗುದೇಶಕ್ಕೆ ಸೇರಿದವನಾದುದರಿಂದ, ಇವನು ಕೊಂಗುದೇಶವನ್ನು ಗೆದ್ದದ್ದರಿಂದ, ಇವನು ಕೊಂಕಣ ಪ್ರದೇಶವನ್ನು ಗೆದ್ದುದರಿಂದ ಮುಂತಾಗಿ ಬೇರೆ ಬೇರೆ ಅಭಿಪ್ರಾಯಗಳಿವೆ. ಆದರೆ ಕೊಂಗುಣಿವರ್ಮ ಎಂಬುದು ಗಂಗವಂಶದ ಹಲವು ಅರಸರ ಸಾಮಾನ್ಯ ಬಿರುದಾಗಿತ್ತು. ಈತ ಕೋಲಾರದಿಂದ ಕೊಂಕಣದವರೆಗೂ ಈಗಿನ ಮೈಸೂರು ಜಿಲ್ಲೆಯಿಂದ ಸೇಲಂವರೆಗೂ ರಾಜ್ಯ ವಿಸ್ತರಿಸಿದ್ದಿರಬಹುದೆಂದು ಶಾಸನಗಳ ಆಧಾರದಿಂದ ನಂಬಲಾಗಿದೆ. ಶಿವಮೊಗ್ಗ ಜಿಲ್ಲೆಯ ಮಂಡಳಿಯ ಬಳಿ ಇವನು ಒಂದು ಚೈತ್ಯಾಲಯವನ್ನು ಕಟ್ಟಿಸಿದನೆಂದು ಲೂಯಿ ರೈಸ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಒಂದನೆಯ ಮಾಧವನಿಗೆ ಹರಿವರ್ಮ ಎಂಬ ಮಗನಿದ್ದು, ಮಾಧವನ ಮರಣಾನಂತರ ಅವನು ಪಟ್ಟಕ್ಕೆ ಬಂದನೆಂಬ ಒಂದು ಅಭಿಪ್ರಾಯವೂ ಒಂದನೆಯ ಮಾಧವನಿಗೆ ಮಕ್ಕಳಿರಲಿಲ್ಲವಾದ್ದರಿಂದ ದಡಿಗನ ಮಗ ಎರಡನೆಯ ಮಾಧವ ಇವನ ಉತ್ತರಾಧಿಕಾರಿಯಾದ ಎಂಬ ಇನ್ನೊಂದು ಅಭಿಪ್ರಾಯವೂ ಇದೆ. **(ಡಿ.ಎಸ್.ಜೆ.)**

**ಮಾಧವ II:** ತಲಕಾಡು ಗಂಗವಂಶದ ರಾಜ (ಸು.400–20). ಶಾಸನಗಳಲ್ಲಿ ಇವನನ್ನು ಮಾಧವ ಮಹಾಧಿರಾಜನೆಂದು ಸಂಬೋಧಿಸಲಾಗಿದೆ. ಇವನಿಗೆ ಕಿರಿಯ ಮಾಧವನೆಂಬ ಅಭಿಧಾನವೂ ಇತ್ತು. ಇವನು ಒಂದನೆಯ ಮಾಧವನ ಮೊಮ್ಮಗ, ಆರ್ಯವರ್ಮನ ಮಗ ಮತ್ತು ಉತ್ತರಾಧಿಕಾರಿ. ಇವನಿಗೆ ಸಿಂಹವರ್ಮ ಎಂಬ ಇನ್ನೊಂದು ಹೆಸರೂ ಇತ್ತು. ಇವನು ಪಲ್ಲವ ಸ್ಕಂದವರ್ಮನಿಂದ ಅಭಿಷಿಕ್ತನಾದ ಎಂದು ತಿಳಿಯಲಾಗಿದೆ. ಆದರೆ ಲೂಯಿ ರೈಸ್ ಮತ್ತಿತರರು ಗಂಗರ ಪ್ರಥಮ ರಾಜನನ್ನು ಒಂದನೆಯ ಮಾಧವನೆಂದೂ ಈ ಮಾಧವ ಅವನ ಉತ್ತರಾಧಿಕಾರಿಯೆಂದೂ ಅಭಿಪ್ರಾಯಪಟ್ಟಿದ್ದಾರೆ. ದುಬ್ರಾಯಿರವರು ಈ ಮಾಧವ ಗಂಗವಂಶದ ಪರುವಿ ಶಾಖೆಗೆ ಸೇರಿದವನೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇನ್ನು ಕೆಲವರು ಈ ಮೇಲಿನ ವಿವರಣೆಗಳು ಮೂರನೆಯ ಮಾಧವನಿಗೆ ಅನ್ವಯಿಸುತ್ತವೆ ಎಂದು ಹೇಳಿದ್ದಾರೆ. ಎರಡನೆಯ ಮಾಧವನ ಆಳ್ವಿಕೆಯ ಕಾಲದ ಬಗ್ಗೆಯೂ ಭಿನ್ನಾಭಿಪ್ರಾಯವಿದೆ. ಆದರೆ ಎಲ್ಲ ಮುಖ್ಯ ಅಭಿಪ್ರಾಯಗಳೂ ಸಾಮಾನ್ಯವಾಗಿ ಸು. 400ರ ಆಸುಪಾಸಿನಲ್ಲಿವೆ.

ಈ ಮಾಧವನ ಕಾಲದಲ್ಲಿ ನಡೆದ ರಾಜಕೀಯ ಘಟನೆಗಳು ನಿರ್ದಿಷ್ಟವಾಗಿ ತಿಳಿದುಬರುವುದಿಲ್ಲ. ಇವನ ಸದ್ಗುಣಗಳನ್ನು ಮತ್ತು ಪಾಂಡಿತ್ಯವನ್ನು ಶಾಸನಗಳಲ್ಲಿ ಕೊಂಡಾಡಲಾಗಿದೆ. ಪ್ರಜಾಕಲ್ಯಾಣ ಸಾಧನೆಯೇ ಇವನ ರಾಜ್ಯಭಾರದ ಗುರಿಯಾಗಿದ್ದಿತು. ಇವನು ಗುರು ಬ್ರಾಹ್ಮಣ ಸೇವಾನಿರತ, ವಿದ್ಯಾವಿನಯ ಸಂಪನ್ನ, ಉಪನಿಷತ್‌ಗಳು ಮತ್ತು ನೀತಿಶಾಸ್ತ್ರಗಳಲ್ಲಿ

ಪಾರಂಗತ, ವಿವಿಧ ಶಾಸ್ತ್ರ ಜ್ಞಾನಿ, ರಾಜ್ಯನೀತಿ ನಿಪುಣ, ಕಲೆ ಸಾಹಿತ್ಯಗಳ ಪೋಷಕ ಇತ್ಯಾದಿಯಾಗಿ ಶಾಸನಗಳು ವರ್ಣಿಸಿವೆ. ಇವನು ದತ್ತಕ ಸೂತ್ರಕ್ಕೆ ವ್ಯಾಖ್ಯಾನ ಬರೆದಿದ್ದನೆಂದು ಕೆಲವು ಶಾಸನಗಳ ಉಕ್ತಿ. ಆದರೆ ಆ ಕೃತಿ ದೊರೆತಿಲ್ಲ. (ಡಿ.ಎಸ್.ಜಿ.)

**ಮಾಧವ III:** ಗಂಗವಂಶದ ರಾಜ (ಸು.440–69). ವಿಷ್ಣುಗೋಪನ ಮಗ. ಇವನಿಗೆ ತಡಂಗಾಲ ಮಾಧವನೆಂಬ ಅಡ್ಡ ಹೆಸರೂ ಉಂಟು. ಇವನ ಕಾಲು ಊನವಾಗಿದ್ದುದೇ ಇವನಿಗೆ ಹೀಗೆ ಹೆಸರು ಬರಲು ಕಾರಣವೆನ್ನಲಾಗಿದೆ.

ಮೂರನೆಯ ಮಾಧವನ ಕಾಲದಲ್ಲಿ ಪಲ್ಲವರೂ ಕದಂಬರೂ ಗಂಗರೊಡನೆ ಸ್ನೇಹ ಬೆಳೆಸಿದ್ದರು. ಕೆಲವು ಹೇಳಿಕೆಗಳ ಪ್ರಕಾರ ಪಲ್ಲವ ಸ್ಕಂದವರ್ಮ ಸ್ವಹಸ್ತದಿಂದ ಪಟ್ಟಗಟ್ಟಿದ ಗಂಗ ದೊರೆ ಮಾಧವ ಇವನೇ. ಈ ಮೂರನೆಯ ಮಾಧವನು ಒಂದನೆಯ ಕದಂಬ ಕೃಷ್ಣವರ್ಮನ ಸಹೋದರಿಯನ್ನು ವಿವಾಹವಾಗಿದ್ದ ವಿಷಯ ಅನೇಕ ಶಾಸನಗಳಿಂದ ತಿಳಿಯುತ್ತದೆ. ಈ ವಿವಾಹ ರಾಜಕೀಯ ಮಹತ್ತ್ವದಿಂದ ಕೂಡಿದ್ದಿತು. ಗಂಗರಿಗೂ ಕದಂಬರಿಗೂ ಪ್ರಾರಂಭದಿಂದಲೂ ವೈಮನಸ್ಸು ಬೆಳೆದಿತ್ತು. ಗಂಗರು ಪಲ್ಲವರ ಬೆಂಬಲದಿಂದ ಕದಂಬರ ಪ್ರದೇಶಗಳನ್ನು ಆಕ್ರಮಿಸಿದ್ದರು. ವಿಷ್ಣುಗೋಪನ ಕಾಲದಲ್ಲಿ ಗಂಗರು ಸ್ವಲ್ಪಮಟ್ಟಿಗೆ ದುರ್ಬಲರಾದಂತೆ ಕಂಡರೂ ಮಾಧವನ ಕಾಲಕ್ಕೆ ಶಕ್ತಿಸಾಮರ್ಥ್ಯಗಳನ್ನು ಗಳಿಸಿಕೊಂಡರು. ಗಂಗರಿಂದ ತಮಗೆ ಒದಗಬಹುದಾದ ಅಪಾಯವನ್ನು ಮುಂಗಂಡ ಕದಂಬರು ಈ ವಿವಾಹ ಸಂಬಂಧದಿಂದ ಮೈತ್ರಿ ಬೆಳೆಸಲು ಬಯಸಿದ್ದಿರಬಹುದು. ಒಟ್ಟಿನಲ್ಲಿ ಈ ಘಟನೆ ಗಂಗ ಮನೆತನದ ಪ್ರತಿಷ್ಠೆಯನ್ನು ಹೆಚ್ಚಿಸಿತು. ಮೂರನೆಯ ಮಾಧವ ಆಂತರಿಕವಾಗಿ ಗಂಗರಾಜ್ಯವನ್ನು ಬಲಪಡಿಸಲು ಕಾರಣನಾದ. ಎರಡನೆಯ ಮಾಧವನ ತರುವಾಯ ಪರುವಿ ಮತ್ತು ಕೈವಾರ ಶಾಖೆಗಳಲ್ಲಿ ಸೇರಿಹೋಗಿದ್ದ ರಾಜ್ಯದ ಭಾಗಗಳನ್ನು ಇವನು ಮುಖ್ಯಶಾಖೆಯಾದ ತಲಕಾಡು ವಂಶದ ಕಕ್ಷೆಗೆ ತಂದು ಗಂಗರಾಜ್ಯವನ್ನು ಪುನಃ ಒಂದುಗೂಡಿಸಿದ. ಶೃಂಗೇರಿ, ನೊಣಮಂಗಲ ಮತ್ತಿತರ ಶಾಸನಗಳಿಂದ ಮಾಧವ ತನ್ನ ರಾಜ್ಯವನ್ನು ವಿಸ್ತರಿಸಿದ್ದಾಗಿ ತಿಳಿದುಬರುತ್ತದೆ. ದೊಡ್ಡಬಳ್ಳಾಪುರ ಶಾಸನದಲ್ಲಿ ಸ್ವಬಲ ಪರಾಕ್ರಮದಿಂದ ಇವನು ತನ್ನ ರಾಜ್ಯವನ್ನು ಕೊಂಡುಕೊಂಡನೆಂದು ಹೇಳಲಾಗಿದೆ.

ಮಾಧವ ಶೈವಭಕ್ತನಾಗಿದ್ದ. ಆದರೂ ಇವನು ರಾಜಧರ್ಮಕ್ಕನುಗುಣವಾಗಿ ಇತರ ಮತಪಂಥಗಳನ್ನು ಪ್ರೋತ್ಸಾಹಿಸಿದ. ಇವನು ಬೌದ್ಧ ವಿಹಾರಕ್ಕೆ ದಾನ ಕೊಟ್ಟ ಸಂಗತಿ ಮೆಳೆಕೋಟೆ ಶಾಸನದಿಂದ ತಿಳಿದುಬರುತ್ತದೆ. ನೊಣಮಂಗಲ ತಾಮ್ರಶಾಸನದಲ್ಲಿ ಇವನು ಜಿನಯತಿ ಆಚಾರ್ಯ ವೀರದೇವನಿಗೆ ಜೈನ ದೇವಾಲಯವನ್ನು ನಿರ್ಮಿಸಲು ಭೂಮಿಯನ್ನು ದತ್ತಿ ನೀಡಿದ ವಿವರವಿದೆ. ಬ್ರಾಹ್ಮಣರಿಗೆ, ದೇವರ ಉತ್ಸವಗಳಿಗೆ ದಾನ ಕೊಟ್ಟ ಉಲ್ಲೇಖಗಳೂ ದೊರೆಯುತ್ತವೆ. ಇವನ ಕಾಲದಲ್ಲಿ ಬ್ರಾಹ್ಮಣರು ರಾಜ್ಯದ ವ್ಯವಹಾರದಲ್ಲಿ ಪ್ರಭಾವಿ ಸ್ಥಾನ ಪಡೆದಿದ್ದರೆಂದು ತಿಳಿದುಬರುತ್ತದೆ. ಅವರು ವೇದಾಧ್ಯಯನ ಧರ್ಮ ಪರಿಪಾಲನೆಯಂಥ ಕಾರ್ಯಗಳಲ್ಲದೆ, ರಾಜ್ಯನೀತಿ ನಿರೂಪಣೆಯಲ್ಲಿ, ಯುದ್ಧ ಸನ್ನಾಹಗಳಲ್ಲಿ, ಹೊರರಾಜ್ಯಗಳೊಡನೆ ಒಪ್ಪಂದ ಮಾಡಿಕೊಳ್ಳುವುದರಲ್ಲಿ, ಕೋಟೆ ಕೊತ್ತಲಗಳನ್ನು ಕಟ್ಟುವಲ್ಲಿ ರಾಜನಿಗೆ ಸಲಹೆ ನೀಡುತ್ತಿದ್ದರೆಂದು ಶಾಸನಗಳಲ್ಲಿ ಹೇಳಲಾಗಿದೆ.

ಮಾಧವ ಗಂಗವಂಶದ ತನ್ನ ಹಿರಿಯರ ಗುಣಗಳನ್ನು ಪಡೆದಿದ್ದ, ಒಳ್ಳೆಯ ದೇಹದಾರ್ಢ್ಯ ಉಳ್ಳವನಾಗಿದ್ದ, ದೇವ ಗುರು ಬ್ರಾಹ್ಮಣರ ಸೇವೆಗೈಯುತ್ತಿದ್ದ, ಧರ್ಮ ಅರ್ಥ ಕಾಮಗಳ ಔಚಿತ್ಯವರಿತು ನಡೆಯುತ್ತಿದ್ದ, ಅರಿಷಡ್ವರ್ಗಗಳನ್ನು ಗೆದ್ದವನಾಗಿದ್ದ, ಅಲ್ಲದೆ, ಇವನು ವೀರಯೋಧ, ರಾಜನೀತಿ ಪ್ರವೀಣ, ಹಲವಾರು ಕದನಗಳ ವೀರ, ಅನುಯಾಯಿಗಳಿಗೆ ಆಶ್ರಯದಾತ, ತನ್ನ ಅನುಗ್ರಹಕ್ಕೆ ಪಾತ್ರರಾದವರಿಗೆ ಅಮೃತಪ್ರಾಯ, ಕೋಪಕ್ಕೆ ತುತ್ತಾದವರಿಗೆ ವಿಷಸದೃಶ, ಕುಬೇರನಂತೆ ಸಂಪತ್ತುಳ್ಳವ, ಮೂವತ್ನಾಲ್ಕು ಬಗೆಯ ಆಯುಧಗಳನ್ನು ಬಳಸಲು ಬಲ್ಲ ಮಹಾವೀರ ಮುಂತಾಗಿ ಇವನ ವ್ಯಕ್ತಿತ್ವವನ್ನು ಶಾಸನಗಳು ವರ್ಣಿಸಿವೆ. (ಡಿ.ಎಸ್.ಜಿ.)

**ಮಾಧವ ದಂಡನಾಯಕ:** 14ನೆಯ ಶತಮಾನದಲ್ಲಿ ವಿಜಯನಗರದ ಪ್ರಾಂತ್ಯಾಧಿಕಾರಿ. ಶೈವಭಕ್ತ, ವಿದ್ವಾಂಸ, ನುರಿತ ಯೋಧ ಮತ್ತು ನಿಪುಣ ಮಂತ್ರಿ. ಚಾವುಂಡ ಮತ್ತು ಮಾಚಾಂಬಿಕಾ ಅವರ ಪುತ್ರ. ಆಂಗೀರಸ ಗೋತ್ರಕ್ಕೆ ಸೇರಿದವ. ಮಾಧವಮಂತ್ರಿ, ಮಾಧವರಸ ಮತ್ತು ಮಾದರಸ ಒಡೆಯ ಎಂದೂ ಇವನ ಹೆಸರುಗಳು. ಈ ಕಾಲದಲ್ಲಿ ಬೇರೆ ಇಬ್ಬರು ಮಾಧವರಿದ್ದುದರಿಂದ ಇವನನ್ನು ಗುರುತಿಸಲು ಚೌಡಮಾಧವ ಎಂಬ ಹೆಸರು ಚರಿತ್ರಕಾರರಲ್ಲಿ ಬಳಕೆಯಲ್ಲಿದೆ. ಈತ ಶೈವಗುರು ಕಾಶೀವಿಲಾಸ ಕ್ರಿಯಾಶಕ್ತಿಯ ಶಿಷ್ಯನಾಗಿದ್ದ.

ಒಂದನೆಯ ಹರಿಹರನ ಸಹೋದರರಲ್ಲೊಬ್ಬನಾದ ಮಾರಪ್ಪನ ಮಂತ್ರಿಯಾಗಿದ್ದ ಈತ 1366ರಲ್ಲಿ ಗೋವೆಗೆ ಮುತ್ತಿಗೆ ಹಾಕಿ ಅಲ್ಲಿ ಮಹಮ್ಮದೀಯರನ್ನು ಸೋಲಿಸಿ, ಕೊಂಕಣ ಪ್ರದೇಶವನ್ನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಸಿದ. ಶಾಸನಗಳ ಆಧಾರದ ಪ್ರಕಾರ ಈತ ಒಂದನೆಯ ಬುಕ್ಕನ ಮಂತ್ರಿಯೂ ಆಗಿದ್ದ. 1368ರಲ್ಲಿ ಬುಕ್ಕ ಈತನನ್ನು ಗೋವ ಮತ್ತು ಬನವಾಸಿಯ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಒಂದನೆಯ ಬುಕ್ಕನ ಅಪ್ಪಣೆಯನ್ನು ಪಡೆದು, ತನ್ನ ಸ್ವಂತ ಹಣದಿಂದ, ನಾಗರಖಂಡದಲ್ಲಿ ಮುಚ್ಚುಂಡಿ ಎಂಬ ಗ್ರಾಮವನ್ನು ಕೊಂಡು, ಅದಕ್ಕೆ ವೈದ್ಯೇಶ್ವರಪುರ ಎಂದು ನಾಮಕರಣ ಮಾಡಿ ಕಾಶ್ಮೀರದ 80 ಶೈವ ವಿದ್ವಾಂಸ ಬ್ರಾಹ್ಮಣರಿಗೆ ದಾನಮಾಡಿದ. ಶೈವಾಗಮ ಸಾರಸಂಗ್ರಹ ಎಂಬ ಗ್ರಂಥವನ್ನು ರಚಿಸಲು ಈತ ಮಾರಪ್ಪನಿಗೆ ನೆರವಾದ. ಉಪನಿಷತ್ತುಗಳ ಮೇಲೆ ಈತ ವ್ಯಾಖ್ಯಾನವನ್ನು ಬರೆದ. 'ಸೂತಸಂಹಿತಾ ತಾತ್ಪರ್ಯದೀಪಿಕಾ'ವನ್ನು ಬರೆದ. ಈತ ಇಮ್ಮಡಿ ಹರಿಹರನ ಆಳ್ವಿಕೆಯಲ್ಲೂ ಸ್ವಲ್ಪಕಾಲ ಜೀವಿಸಿದ್ದ. ತಲಕಾಡಿನಲ್ಲಿರುವ ವೈದ್ಯೇಶ್ವರ ದೇವಾಲಯ ಮತ್ತು ಆ ಊರಿನ ಬಳಿ ಕಾವೇರಿಗೆ ಅಡ್ಡಲಾಗಿ ಕಟ್ಟಿರುವ ಮಾಧವಮಂತ್ರಿ ಅಣೆಕಟ್ಟು ಇವನ್ನೂ ಇವನು ಕಟ್ಟಿಸಿದ ಎಂಬ ಪ್ರತೀತಿ ಇದೆ. (ಎ.ವಿ.ವಿ.)

**ಮಾಧವದೇವ:** ಸು. 1650. ಜೈನಕವಿ. ನರಪಿಂಗಲಿ ಎಂಬ ಶಾಸ್ತ್ರಗ್ರಂಥದ ಕರ್ತೃ. ಇವನಿಗೆ ಅರ್ಹದ್ದಾಸ ಎಂಬ ಹೆಸರೂ ಇದ್ದಂತೆ ತೋರುತ್ತದೆ.

ನರಪಿಂಗಲಿ ಕಂದದಲ್ಲಿ ರಚಿತವಾಗಿದ್ದು ಇದರಲ್ಲಿ ಶಕುನಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳು ನಿರೂಪಿತವಾಗಿವೆ. ಅಂದಿನ ಜನಜೀವನದಲ್ಲಿ ಇದ್ದ ರೂಢಿ, ಸಂಪ್ರದಾಯ, ಮೂಢನಂಬಿಕೆ ಮುಂತಾದವುಗಳನ್ನು ಈ ಗ್ರಂಥ ಎತ್ತಿ ತೋರುತ್ತದೆ. ಕಾವ್ಯಾಂಶಗಳು ಕ್ವಚಿತ್ತಾಗಿ ಕಂಡುಬರುತ್ತವೆ. ಪೊಚ್ಚ ಪೊಸಗನ್ನಡದಿಂದ ಯಂತ್ರ ಮಂತ್ರ ತಂತ್ರಾದಿ ವಿಚಾರಗಳನ್ನೂ ಗೇಯರಸ ಭಾವದಲ್ಲಿ ಶಕುನ ವಿಚಾರವನ್ನೂ ಹೇಳುವ ಸಾಮರ್ಥ್ಯ ಹೊಂದಿರುವೆನೆಂದು ಕವಿ ಸ್ವಪ್ರಶಂಸೆ ಮಾಡಿಕೊಂಡಿದ್ದಾನೆ. ಆದರೆ ಈ ಮಾತು ಇವನ ಗ್ರಂಥವನ್ನು ಅಭ್ಯಾಸ ಮಾಡಿದರೆ ಸತ್ಯ ಎನಿಸುವುದಿಲ್ಲ. (ಕೆ.ಎಚ್.)

**ಮಾಧವರಾವ್, ಎನ್.:** 1887–1972 . ಮೈಸೂರು ಸಂಸ್ಥಾನದ ದಿವಾನರು (1941–46). ಪೂರ್ಣ ಹೆಸರು ನ್ಯಾಪತಿ ಮಾಧವರಾವ್. 1887 ಜೂನ್ 8ರಂದು ಮಸುಲಿಪಟ್ಟಣದಲ್ಲಿ ಜನಿಸಿದರು. ತಂದೆ ಎನ್. ವೆಂಕಟಕೃಷ್ಣರಾವ್, ತಾಯಿ ವೆಂಕಟನರಸಮ್ಮ. ಮಸುಲಿ ಪಟ್ಟಣದ

ನೋಬಲ್ ಕಾಲೇಜು, ಮದರಾಸಿನ ಪಚ್ಚಯಪ್ಪ ಕಾಲೇಜು ಹಾಗೂ ಸರ್ಕಾರಿ ಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಬಿ.ಎ.; ಬಿ.ಎಲ್. ಪದವಿಗಳನ್ನು ಪಡೆದು ಮೈಸೂರು ಸರ್ಕಾರದ ಸಿವಿಲ್ ಸೇವೆಗೆ 1907ರಲ್ಲಿ ನೇಮಕಗೊಂಡರು. ಗುಬ್ಬಿ, ಮೈಸೂರು ಮತ್ತು ಸಾಗರಗಳಲ್ಲಿ ಸಬ್‌ಡಿವಿಜನ್ ಅಧಿಕಾರಿಯಾಗಿಯೂ ತರುವಾಯ ಎಫಿಷಿಯೆನ್ಸಿ ಆಡಿಟರ್, ದಿವಾನರಿಗೆ ಆಪ್ತ ಕಾರ್ಯದರ್ಶಿ, ಸ್ವಲ್ಪಕಾಲ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಡೈರೆಕ್ಟರ್ ಮತ್ತು ಆ ಸಂಸ್ಥೆಯ ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿದ್ದರು. ಆಗ ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿ ಅವರಿಂದ ಪ್ರಭಾವಿತರಾಗಿದ್ದರು. ತರುವಾಯ ಮೈಸೂರು ಮುನಿಸಿಪಾಲಿಟಿಯ ಅಧ್ಯಕ್ಷ, ಅನಂತರ ಮೈಸೂರು ಸರ್ಕಾರದ ಕಾರ್ಯದರ್ಶಿ, ಲಂಡನ್ನಿನಲ್ಲಿ ಮೈಸೂರು ಟ್ರೇಡ್ ಕಮಿಷನರ್ ಆಗಿದ್ದರು. ಲಂಡನ್ನಿನ ದುಂಡುಮೇಜಿನ ಸಮ್ಮೇಳನದಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರೊಂದಿಗೆ ಹಾಜರಿದ್ದರು. ಲಂಡನ್ನಿನಿಂದ ಹಿಂದಿರುಗಿದ ಮೇಲೆ ರೆವೆನ್ಯೂ ಕಮಿಷನರ್ ಆಗಿ, 1935ರಲ್ಲಿ ಮೈಸೂರು ಸಂಸ್ಥಾನದ ಆಡಳಿತ ಪರಿಷತ್ತಿನ ಸದಸ್ಯರಾದರು. ಜೂನ್ 1941ರಿಂದ ದಿವಾನರಾಗಿದ್ದು 1946ರಲ್ಲಿ ಆ ಹುದ್ದೆಯಿಂದ ನಿವೃತ್ತರಾದರು. ಫೆಬ್ರವರಿ 1946ರಲ್ಲಿ ವಾಷಿಂಗ್ಟನ್ ನಗರಕ್ಕೆ ಭಾರತ ಆಹಾರ ನಿಯೋಗದ ಸದಸ್ಯರಾಗಿ ಹೋಗಿದ್ದರು.

ನಿವೃತ್ತರಾದಮೇಲೆ ಪೂರ್ವ ರಾಷ್ಟ್ರಗಳ ಸಂಘಕ್ಕೆ ಸಲಹೆಗಾರರಾಗಿದ್ದರು. ರಾಜ್ಯ ವ್ಯವಸ್ಥಾಸಭೆಯ ಮತ್ತು ಅದರ ಕರಡು ರಚನಾ ಸಮಿತಿಯ ಸದಸ್ಯರಾಗಿದ್ದರು. ಹೈದರಾಬಾದಿನ ಭೂ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ರಾಜಸ್ಥಾನದ ಫಿರ್ಕ ತನಿಖಾ ಸಮಿತಿಯ ಅಧ್ಯಕ್ಷರಾಗಿದ್ದರು. ಬೆಂಗಳೂರು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದರು.

ಇವರು ಬ್ರಿಟಿಷ್ ಸರ್ಕಾರದಿಂದ ಸಿ.ಐ.ಇ. ಪದವಿಯನ್ನೂ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಪ್ರಧಾನ ಶಿರೋಮಣಿ ಎಂಬ ಬಿರುದನ್ನೂ ಗಳಿಸಿದ್ದರು.

ಬಸವನಗುಡಿ ಕೃಷ್ಣರಾವ್ ಪಾರ್ಕ್ ಎದುರಿನ 'ಹಿಮಾಲಯ' ಬಂಗಲೆಯಲ್ಲಿ ವಾಸಿಸುತ್ತಿದ್ದ ಇವರು ಬೆಂಗಳೂರಿನ ಸೆಂಚುರಿ ಕ್ಲಬ್, ಗಾಲ್ಫ್ ಕ್ಲಬ್ ಸದಸ್ಯರಾಗಿದ್ದರು. ಬೆಂಗಳೂರು ಕ್ಲಬ್, ಲಂಡನ್ನಿನ ನ್ಯಾಷನಲ್ ಲಿಬರಲ್ ಕ್ಲಬ್ ಮೊದಲಾದವುಗಳೊಡನೆಯೂ ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ ಮತ್ತು ಫೋರಂ ಆಫ್ ಇಂಟರ್‌ನ್ಯಾಷನಲ್ ಅಫೇರ್ಸ್ ಸಂಸ್ಥೆಗಳೊಡನೆಯೂ ಸಂಬಂಧವಿಟ್ಟುಕೊಂಡಿದ್ದರು. ಇವರು 1972 ಆಗಸ್ಟ್ 28 ರಂದು ಬೆಂಗಳೂರಿನಲ್ಲಿ ನಿಧನರಾದರು.

(ವಿ.ಜಿ.ಕೆ.)

**ಮಾಧವರಾವ್,ವಿ.ಪಿ.:** 1850– . ಮೈಸೂರು ಸಂಸ್ಥಾನದ ದಿವಾನರು (1906–09). ವಿಶ್ವನಾಥ ಪಾಟಣಕರ ಮಾಧವರಾವ್ ಇವರ ಪೂರ್ಣ ಹೆಸರು. 1850ರಲ್ಲಿ ಜನಿಸಿದ ಇವರು ಕುಂಭಕೋಣಂ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ 1869ರಲ್ಲಿ ಬಿ.ಎ. ಪದವಿ ಪಡೆದು ರಾಯಲ್ ಶಾಲೆಯ ಮುಖ್ಯೋಪಾಧ್ಯಾಯರಾಗಿ ಮೈಸೂರು ಸರ್ಕಾರದ ಸೇವೆಯನ್ನು ಆರಂಭಿಸಿದರು. ಅನಂತರ ಪಬ್ಲಿಕ್ ಪ್ರಾಸಿಕ್ಯೂಟರಾಗಿಯೂ ನ್ಯಾಯ ಮತ್ತು ಕಂದಾಯ ಇಲಾಖೆಗಳ ಹಲವು ಹುದ್ದೆಗಳಲ್ಲೂ ಇದ್ದು ಮುಂದೆ ಪೊಲೀಸು ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್, ಪ್ಲೇಗ್ ಕಮೀಷನರ್ ಮತ್ತು ರೆವಿನ್ಯೂ ಕಮೀಷನರ್ (1902) ಆದರು. 1904ರಲ್ಲಿ ತಿರುವಾಂಕೂರು ಸಂಸ್ಥಾನದ ದಿವಾನರಾಗಿ ಅಲ್ಲಿಯ ಆಡಳಿತದ ಹಲವಾರು ಸುಧಾರಣೆಗಳಿಗೆ ಕಾರಣರಾದರು.

ಮಾಧವರಾಯರು 1906ರಲ್ಲಿ ಮೈಸೂರಿನ ದಿವಾನರಾಗಿ ನೇಮಿಸಲ್ಪಟ್ಟು ಮೂರು ವರ್ಷಗಳ ಕಾಲ ಸರ್ಕಾರದ ಸೂತ್ರಧಾರಿಗಳಾಗಿದ್ದರು. ಈ ಅವಧಿಯಲ್ಲಿ ಆಡಳಿತಯಂತ್ರದಲ್ಲಿ ಹಲವಾರು ಸುಧಾರಣೆಗಳನ್ನು ಅಳವಡಿಸಿದರು. ಮುಖ್ಯವಾಗಿ ಸರ್ಕಾರದ ತೀರ್ಮಾನಗಳನ್ನು ಶೀಘ್ರವಾಗಿ ಮತ್ತು ಸುಲಲಿತವಾಗಿ ರೂಪುಗೊಳಿಸುವ ಉದ್ದೇಶದಿಂದ ಕೌನ್ಸಿಲರ್‌ಗಳ ಅಧಿಕಾರವನ್ನು ಹೆಚ್ಚಿಸಿ, ಅವರು ತಮ್ಮ ಅಧೀನದಲ್ಲಿದ್ದ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವಂತೆ ಮಾಡಲಾಯಿತು. ರಾಜ್ಯದ ಎಲ್ಲ ಆದಾಯಗಳ ಮತ್ತು ಖಜಾನೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಅಧಿಕಾರವನ್ನು ರೆವಿನ್ಯೂ ಕಮಿಷನರ್‌ಗೆ ನೀಡಲಾಯಿತು. ರಾಜ್ಯದ ವಿದ್ಯಾಭ್ಯಾಸ ಇಲಾಖೆಯಲ್ಲಿ ಮಹತ್ತ್ವಪೂರಿತ ಸುಧಾರಣೆಗಳು ಜಾರಿಗೆ ಬಂದವು. ಗ್ರಾಮೀಣ ಉಪಾಧ್ಯಾಯರ ಸಂಬಳಸಾರಿಗೆ ಹೆಚ್ಚಿತು. ಮಕ್ಕಳ ವಿದ್ಯಾಭ್ಯಾಸ ಮತ್ತು ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ತ್ವವನ್ನು ಕೊಡಲಾಯಿತು. ರಾಜ್ಯಾದ್ಯಂತ ಪ್ರಾಥಮಿಕ ಮತ್ತು ಎಲಿಮೆಂಟರಿ ಶಾಲೆಗಳಲ್ಲಿ ಮೈಸೂರಿನ ಮಕ್ಕಳಿಗೆ ಉಚಿತ ಶಿಕ್ಷಣ ದೊರೆಯುವಂತಾಯಿತು. ಪರಿಶಿಷ್ಟ ವರ್ಗಗಳ ಜನರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದೇಶದಿಂದ, ಮೈಸೂರು ಸರ್ಕಾರದ ವತಿಯಿಂದ ವಿದ್ಯಾರ್ಥಿ ವೇತನಗಳನ್ನು ನೀಡುವ ಏರ್ಪಾಡು ಸಹ ಆಯಿತು.

ರಾಜ್ಯದಲ್ಲಿ ಸಾರ್ವಜನಿಕ ಆರೋಗ್ಯ ಇಲಾಖೆಯ ಸ್ಥಾಪನೆ, ಅಡಕೆ ವ್ಯವಸಾಯಕ್ಕೆ ಮಾರಕವಾಗಿದ್ದ ಹಾಲತ್ ಸುಂಕದ ರದ್ದು, ಮಾರೀಕಣಿವೆ ಅಣೆಕಟ್ಟಿನ ನಿರ್ಮಾಣ (1906–07), ಮೈಸೂರು ನಗರದ ವಿದ್ಯುದೀಕರಣ (1906–07), ಕನ್ನಂಬಾಡಿ ಕಟ್ಟೆಯನ್ನು ಕಟ್ಟಲು ನಡೆಸಿದ ಪೂರ್ವಭಾವಿ ತನಿಖೆಗಳು, ಬೆಂಗಳೂರು ನಗರದ ವ್ಯವಸ್ಥಿತ ಅಭಿವೃದ್ಧಿ ಮುಂತಾದುವು ಇವರ ಕಾಲದಲ್ಲಾದ ಇತರ ಜನಹಿತ ಕಾರ್ಯಗಳು.

ಇವರ ಕಾಲದಲ್ಲಿ ಮೈಸೂರು ರಾಜ್ಯಾಂಗದ ಇತಿಹಾಸದಲ್ಲಿ ಮುಖ್ಯ ಹೆಜ್ಜೆಯನ್ನು ಇಡಲಾಯಿತು. 1907ರ ಪ್ರಥಮ ರೆಗ್ಯುಲೇಷನ್ ಪ್ರಕಾರ

ವಿಧಾನ ಪರಿಷತ್ತನ್ನು ಸ್ಥಾಪಿಸಲಾಯಿತು. ಇದರಿಂದ ಸರ್ಕಾರದ ಅಧಿಕಾರಿಗಳು ಮತ್ತು ಪ್ರಜಾಪ್ರತಿನಿಧಿಗಳು ಒಟ್ಟುಗೂಡಿ ಶಾಸನಗಳನ್ನು ರೂಪಿಸುವುದು ಸಾಧ್ಯವಾಯಿತು. ಈ ಪರಿಷತ್ತು ಅಸ್ತಿತ್ವಕ್ಕೆ ಬಂದುದು ಒಂದು ಮಹತ್ತ್ವದ ಘಟನೆಯಾದರೂ ಅದನ್ನು ರೂಪಿಸುವುದರಲ್ಲಿ ಚುನಾವಣೆ ತತ್ತ್ವವನ್ನು ಅಳವಡಿಸದೇ ಹೋದುದು ಮತ್ತು ಮೊದಲಾಗಿ ಪ್ರಜಾಸತ್ತೆಗೆ ವಿರೋಧವಾದ ಕಾರ್ಯಗಳಿಂದ ಈ ಬದಲಾವಣೆಗಳು ಹೆಚ್ಚು ಜನಪ್ರಿಯವಾಗಲಿಲ್ಲ. ಇದಲ್ಲದೆ 1908ರಲ್ಲಿ ಇವರು ಜಾರಿಗೆ ತಂದ ವೃತ್ತಪತ್ರಿಕಾ ರೆಗ್ಯುಲೇಷನ್ ರಾಜ್ಯದಲ್ಲಿದ್ದ ಪತ್ರಿಕಾಸ್ವಾತಂತ್ರ್ಯವನ್ನು ಮೊಟಕು ಮಾಡಿತು. ಈ ಕಾನೂನನ್ನು ರಾಜ್ಯದ ಜನನಾಯಕರು ಬಲವಾಗಿ ವಿರೋಧಿಸಿದರು. ಅಲ್ಲದೆ ಕೆಲವು ಪ್ರಮುಖ ಪತ್ರಿಕೆಗಳು ತಾತ್ಕಾಲಿಕವಾಗಿ ಪ್ರಕಟಣೆಯನ್ನು ನಿಲ್ಲಿಸಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದವು.

1905ರಲ್ಲಿ ಬಂಗಾಲ ವಿಭಜನೆಯ ಕಾಲದಲ್ಲಿ ಉಂಟಾದ ಆಂದೋಲನ ಮತ್ತು ಜನಜಾಗೃತಿಯ ಸಮಯದಲ್ಲಿ ಮಾಧವರಾಯರು ಕೈಗೊಂಡ ಕ್ರಮಗಳು ಪ್ರಜಾಹಿತಕ್ಕೆ ವಿರುದ್ಧವೆನ್ನಿಸಿ, ಮೈಸೂರು ಪ್ರಜಾಸಮುದಾಯದ, ರಾಜ್ಯದ ಮುಖಂಡರ ಮತ್ತು ಪತ್ರಿಕಾಸಂಪಾದಕರುಗಳ ವೈರತ್ವವನ್ನು ಕಟ್ಟಿಕೊಂಡರು. ಇದರಿಂದ ಇವರ ಕಾಲದಲ್ಲಿ ಹಲವಾರು ಆಡಳಿತ ಸುಧಾರಣೆಗಳು ಜಾರಿಗೆ ಬಂದರೂ ಒಟ್ಟನಲ್ಲಿ ಇವರ ದಿವಾನಗಿರಿ ಜನಸಮುದಾಯಕ್ಕೆ ಅಷ್ಟೊಂದು ತೃಪ್ತಿ ನೀಡಲಿಲ್ಲ.

ಮಾಧವರಾಯರು 1909ರಲ್ಲಿ ಮೈಸೂರಿನ ದಿವಾನ ಪದವಿಯಿಂದ ನಿವೃತ್ತರಾದರು. ಅನಂತರ ಬರೋಡ ಸಂಸ್ಥಾನದ ದಿವಾನರಾಗಿದ್ದರು (1910–13). ಇವರಿಗೆ ಕೈಸರ್-ಇ-ಹಿಂದ್ ಪ್ರಶಸ್ತಿ ದೊರಕಿತ್ತು.

(ಕೆ.ಟಿ.ಆರ್.)

**ಮಾನವಿಕ ಕರ್ನಾಟಕ:** ಮೈಸೂರು ವಿಶ್ವವಿದ್ಯಾನಿಲಯ 1970ರಿಂದ ಪ್ರಕಟಿಸುತ್ತಿರುವ, ಮಾನವಿಕ ವಿಷಯಗಳಗೆ ಮೀಸಲಾಗಿರುವ ಸುಸಂಸ್ಕೃತ ಅಭಿರುಚಿಯ ಓದುಗರಿಗೆ ಪ್ರಿಯವಾಗಿರುವ ಹೆಸರಾಂತ ಕನ್ನಡ ತ್ರೈಮಾಸಿಕ ಪತ್ರಿಕೆ. ಕನ್ನಡದಲ್ಲಿ ಆಲೋಚಿಸುವುದೂ ಬರೆಯುವುದೂ ಹೆಚ್ಚಾದಂತೆಲ್ಲ ಪ್ರಬುದ್ಧ ಕರ್ನಾಟಕ, ವಿಜ್ಞಾನ ಕರ್ನಾಟಕ ಪತ್ರಿಕೆಗಳು ಸಾಲದಾಗಿ ಮಾನವಿಕ ವಿಷಯಗಳಿಗೂ ಸ್ವತಂತ್ರವಾದ ಪತ್ರಿಕೆಯೊಂದನ್ನು ಹೊರತರುವ ಆವಶ್ಯಕತೆ ಉಂಟಾಯಿತು. ಅದರಂತೆ ಇದರ ಮೊದಲ ಸಂಚಿಕೆ 1970ರ ಕನ್ನಡ ರಾಜ್ಯೋತ್ಸವದಂದು ಪ್ರಕಟವಾಯಿತು. ವಿಜ್ಞಾನ ಸಾಹಿತ್ಯಗಳನ್ನುಳಿದು ಎಲ್ಲ ವಿಷಯಗಳೂ ಇದರ ಸೀಮೆಗೆ ಒಳಪಟ್ಟಿರುತ್ತವೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ತ್ವಶಾಸ್ತ್ರ, ತರ್ಕಶಾಸ್ತ್ರ, ಮನಶ್ಶಾಸ್ತ್ರ, ಸಮಾಜಶಾಸ್ತ್ರ, ಇಂಡಾಲಜಿ, ಇತಿಹಾಸ, ಪುರಾತತ್ತ್ವ, ಪತ್ರಿಕೋದ್ಯಮ, ಭೂಗೋಳಶಾಸ್ತ್ರ, ನ್ಯಾಯಶಾಸ್ತ್ರ, ಅಪರಾಧಶಾಸ್ತ್ರ, ಗ್ರಂಥಾಲಯಶಾಸ್ತ್ರ, ಶಿಕ್ಷಣಶಾಸ್ತ್ರ, ಭಾಷಾಶಾಸ್ತ್ರ, ವಾಣಿಜ್ಯ, ಸಂಗೀತ, ನೃತ್ಯ, ಚಿತ್ರಕಲೆ, ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಉಪಯುಕ್ತವೂ ವಿಚಾರಪೂರ್ಣವೂ ಸಂಶೋಧನಾತ್ಮಕವೂ ಆದ ಲೇಖನ, ವಿಮರ್ಶೆ, ಪ್ರಬಂಧಗಳನ್ನು ಕನ್ನಡದಲ್ಲಿ ಸಮರ್ಥವಾದ ರೀತಿಯಲ್ಲಿ ಬರೆಯುವ ಕಾರ್ಯದಲ್ಲಿ ಪ್ರವೃತ್ತರಾಗಿರುವ ಎಲ್ಲರಿಗೂ ಯುಕ್ತ ಮಾಧ್ಯಮವಾಗಿ ವರ್ತಿಸುವಂಥ ಪತ್ರಿಕೆಯ ಆವಶ್ಯಕತೆಯನ್ನು ಪೂರೈಸಲು ಶ್ರಮಿಸುತ್ತಿರುವ ಪತ್ರಿಕೆಯಿದು.




ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಈ ನಿಯತಕಾಲಿಕದ ಪ್ರಧಾನ ಸಂಪಾದಕರಾಗಿರುತ್ತಾರೆ. ಅದರಂತೆ ಪ್ರಥಮ ಸಂಚಿಕೆಯ ಪ್ರಧಾನ ಸಂಪಾದಕರು ಹಾ.ಮಾ. ನಾಯಕರು. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಮತ್ತು ಎ.ವಿ. ನರಸಿಂಹಮೂರ್ತಿ ಇವರು ಪ್ರಥಮ ಸಂಪಾದಕದ್ವಯರಾಗಿದ್ದರು. ಮುಂದೆ ಅನೇಕ ಪ್ರಾಧ್ಯಾಪಕರು, ವಿದ್ವಾಂಸರು ಈ ಪತ್ರಿಕೆಯ ಸಂಪಾದಕತ್ವ ವಹಿಸಿ ಮುನ್ನಡೆಸಿದ್ದಾರೆ. ವರ್ಷಕ್ಕೆ ನಾಲ್ಕು ಸಂಚಿಕೆಗಳಂತೆ ಕ್ರಮವಾಗಿ ಪ್ರಕಟವಾಗುತ್ತಿರುವ ಈ ಪತ್ರಿಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಕಟಣೆಯಾಗಿ ನಡೆಯುತ್ತಿದೆ. ಈ ಪತ್ರಿಕೆ ಕನ್ನಡದ ಮಹತ್ತ್ವದ ಮಾನವಿಕ ಪತ್ರಿಕೆಗಳ ಪೈಕಿ ಗಣ್ಯವಾದುದು. ಇದು 1/8 ಡೆಮ್ಮಿ ಆಕಾರದಲ್ಲಿ ಹೊರಬರುತ್ತಿದ್ದು ಸರಾಸರಿ 160ರಿಂದ 200 ಪುಟಗಳ ಗಾತ್ರದ್ದಾಗಿದೆ. ಇದುವರೆಗೆ ಒಟ್ಟು 35 ಸಂಪುಟಗಳು ಹೊರಬಂದಿವೆ.

*

**ಮಾನೌಮಿಯ ಚೌಪದ:** ಆಶ್ವಯುಜ ಶುದ್ಧ ನವಮಿಯ ಹಬ್ಬದಲ್ಲಿ ಹಾಡುವ ಹರಕೆಯ ಪದಗಳು. ಹಳ್ಳಿಗಳಲ್ಲಿ ಹಬ್ಬಕ್ಕೆ ಮೂರು ನಾಲ್ಕು ತಿಂಗಳು ಮೊದಲೇ ಚೌಪದಗಳನ್ನು ಹಾಡುವುದಕ್ಕೆ ಸಿದ್ಧತೆಗಳಾಗುತ್ತವೆ. ಮಠದ ಅಯ್ಯಗಳು ಅಥವಾ ಓದುವಯ್ಯನವರು ಪದಗಳನ್ನು ಹಾಡುವುದಕ್ಕೆ ಯೋಗ್ಯವಾದ ಹುಡುಗರನ್ನು ಆರಿಸಿ ತರಬೇತು ಕೊಟ್ಟು ಹಬ್ಬದ ಕಾಲದಲ್ಲಿ ಅವರಿಗೆ ನೀಟಾದ ಸಮವಸ್ತ್ರವನ್ನು ತೊಡಿಸಿ ತಾವೂ ಸೂಕ್ತವಾದ ಅಲಂಕಾರ ಮಾಡಿಕೊಂಡು ಹಳ್ಳಿಯಿಂದ ಹಳ್ಳಿಗೆ ಸಂಚಾರ ಮಾಡಿ ಮಕ್ಕಳಿಂದ ಕೋಲಾಟವಾಡಿಸಿ ಎಲ್ಲ ಜನಗಳನ್ನೂ ಕುರಿತ ಹರಕೆಗಳನ್ನು ಹಾಡಿಸುತ್ತಾರೆ. ಈ ಹರಕೆಯ ಪದಗಳು ದೇಶದ ನಾನಾ ಜನರನ್ನು ಕುರಿತವಾಗಿರುತ್ತವೆ. ರಾಜ, ಮಂತ್ರಿ, ಕರಣಿಕ, ಮಣಿಯಹಾರ, ಜನಿವಾರದವ, ಶೆಟ್ಟಿ, ಅಕ್ಕಸಾಲಿ, ಗೌಡ, ಕುರುಬ, ಹುಡುಗ, ಹುಡುಗಿ, ದೇವದಾಸಿ ಮೊದಲಾದವರ ವಿಷಯ ಕುರಿತ ಹರಕೆಗಳು ಅವರ ಸ್ವಾಭಾವಿಕ ಚಿತ್ರಗಳೊಡನೆ ಬಹು ಸೊಗಸಾಗಿರುತ್ತವೆ.

ಮಾನೌಮಿ ಚೌಪದಗಳು ಕರ್ನಾಟಕದಲ್ಲಿ ಭಿನ್ನ ಭಿನ್ನ ಪಾಠಗಳಲ್ಲಿ ದೊರೆಯುತ್ತವೆ. ಇವು ಪ್ರಾಂತೀಯವಾದ ವಿಷಯಗಳಿಂದ ಕೂಡಿ ಬಿಡಿಪದ್ಯಗಳಾಗಿದ್ದು ಸಂದರ್ಭಕ್ಕೆ ತಕ್ಕಂತೆ ಜೋಡಿಸಿಕೊಂಡಿರಬಹುದು. ಅಥವಾ ಏಕಕರ್ತೃಕವಾದ ಏಕರೂಪದ ಒಂದು ಸಂಪೂರ್ಣ ಗ್ರಂಥದ ಆಕಾರದಲ್ಲಿದ್ದ ಅದರ ಕೆಲವು ಭಾಗಗಳು ಇತರರಿಂದ ಆಯ್ದುಕೊಂಡಿದ್ದರೂ ಇರಬಹುದು. ಅನೇಕ ಚೌಪದಗಳಲ್ಲಿ ಕರ್ತೃವಿನ ಅಂಕಿತವಿರುವುದೂ ಉಂಟು. ಆಶ್ವಯುಜ ಶುದ್ಧ ಮಹನವಮಿ ಬರಲೆಂದು ಲೇಸಾಗಿ ಹರಸಿದೆವು ಬಾಲಕರು ಬಂದು ಎಂದು ಪ್ರಾರಂಭವಾಗುವ ಹರಕೆಯ ಪದಗಳು ಅಲ್ಪಸ್ವಲ್ಪ ವ್ಯತ್ಯಾಸದಿಂದ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಾರದಲ್ಲಿವೆ. ಆದಿಯ ಸ್ತೋತ್ರದ ಭಾಗಗಳು ಆಯಾ ಸ್ಥಳದ ವಿಶೇಷ ದೇವತೆಗಳನ್ನು ಕುರಿತವುಗಳಾಗಿರುತ್ತವೆ. ಗಣೇಶ, ಸರಸ್ವತಿ, ವಿಷ್ಣು, ತ್ರಿಪುರಾಂಬ, ವೀರಭದ್ರ, ಮಾಕಾಳಿ, ಹನುಮಂತ, ಬಸವೇಶ್ವರ, ಕಾವೇರಿ ಈ ದೇವತೆಗಳ ಸ್ತೋತ್ರಗಳೂ ಇರುವುದುಂಟು.

ಈ ಚೌಪದಗಳ ಮತ್ತೊಂದು ಸ್ವಾರಸ್ಯವೆಂದರೆ ಇವುಗಳಲ್ಲಿ ಬರುವ ವ್ಯಕ್ತಿಗಳ ವರ್ಣನೆ ಮತ್ತು ಹರಕೆಗಳನ್ನು ಹೆಸರಿನ ಬದಲಾವಣೆಯಿಂದ

ಯಾವ ವ್ಯಕ್ತಿಗಾದರೂ ಅನ್ವಯಿಸುವಂತೆ ಪ್ರತಿಯೊಂದು ಹರಕೆಯ ಕೊನೆಯಲ್ಲಿಯೂ ಇಂತಯ್ಯ, ಇಂತಪ್ಪ, ಅವರಯ್ಯ ಎಂಬ ಪದಗಳನ್ನು ಉಪಯೋಗಿಸಿರುವುದು. ಚೌಪದದ ಗುಂಪಿನವರು ಬೇರೆ ಬೇರೆ ವ್ಯಕ್ತಿಗಳಿಗೆ ಹರಕೆಗಳನ್ನು ಹೇಳುವಾಗ ಅಂತವರ ಹೆಸರನ್ನು ಇಲ್ಲಿ ಸೇರಿಸಿ ಹೇಳಬಹುದು.

ಚೌಪದಗಳ ಭಾಷೆ ಸರಳ ಮತ್ತು ಲಲಿತ. ಶೈಲಿ ಅಚ್ಚಗನ್ನಡ, ಛಂದಸ್ಸು ಸುಗಮ. ವರ್ಣನೆ ಕಣ್ಣಿಗೆ ಕಟ್ಟುವಂತಹುದು. ಪ್ರತಿಪಾದದಲ್ಲಿಯೂ ಐದು ಮಾತ್ರೆಯ ಮೂರು ಗಣಗಳೂ ಮೂರು ಮಾತ್ರೆಯ ಒಂದು ಗಣವೂ ಇರುತ್ತವೆ. ಅಂತ್ಯಾಕ್ಷರಪ್ರಾಸ ತಪ್ಪದೆಯೂ ದ್ವಿತೀಯಾಕ್ಷರ ಪ್ರಾಸ ಸಾಮಾನ್ಯವಾಗಿಯೂ ಬರುತ್ತದೆ. ಕೊನೆಯಲ್ಲಿ ಹಳ್ಳಿಗರ ಬುದ್ಧಿ ಪರೀಕ್ಷೆಗೆ ಸಾಕಷ್ಟು ಅವಕಾಶವನ್ನುಂಟುಮಾಡುವ ಒಗಟುಗಳೂ ಭರತವಾಕ್ಯವೂ ಇರುತ್ತವೆ. ಇಂಥ ಹಾಡುಗಳನ್ನು ಕುರಿತ ಸಂಗ್ರಹಕಾರ್ಯ ನಡೆದಿದ್ದು ಕೆ.ಆರ್.ಲಿಂಗಪ್ಪ ಅವರ ಮಾನೌಮಿ ಪದಗಳು (1955), ಎನ್.ಅನಂತರಂಗಾಚಾರ್ ಅವರ ಮಾನೌಮಿಯ ಚೌಪದ ಎಂಬ ಸಂಕಲನ ಪ್ರಕಟಗೊಂಡಿವೆ. ಭಿನ್ನಪಾಠ ಸಂಪ್ರದಾಯಗಳಿರುವಲ್ಲಿ ಈ ಹಾಡುಗಳ ಸಂಗ್ರಹಕಾರ್ಯಕ್ಕೆ ಅವಕಾಶವಿದೆ.

(ಎನ್.ಎಆರ್.)

**ಮಾನ್ವಿ:** ರಾಯಚೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಕೇಂದ್ರ. ಈ ತಾಲ್ಲೂಕನ್ನು ಪೂರ್ವ ಮತ್ತು ಈಶಾನ್ಯದಿಕ್ಕಿನಲ್ಲಿ ರಾಯಚೂರು, ಉತ್ತರದಲ್ಲಿ ದೇವದುರ್ಗ, ಪಶ್ಚಿಮ ಮತ್ತು ವಾಯವ್ಯದಲ್ಲಿ ಲಿಂಗಸುಗೂರು, ನೈಋತ್ಯದಲ್ಲಿ ಸಿಂಧನೂರು ತಾಲ್ಲೂಕುಗಳೂ ದಕ್ಷಿಣದಲ್ಲಿ ಆಂಧ್ರಪ್ರದೇಶವೂ ಸುತ್ತುವರಿದಿವೆ. ತಾಲ್ಲೂಕಿನಲ್ಲಿ 171 ಗ್ರಾಮಗಳಿವೆ. ಮಾನ್ವಿ, ಹಿರೇಕೊಟ್ನಕಲ್ಲು, ಕುರಡಿ, ಕಲ್ಲೂರು, ಸಿರಿವಾರ, ಮಲತ, ಕವಿತಾಳ, ಪಾಮನಕಲ್ಲೂರು ಮತ್ತು ಹಾಲಪುರ ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 1,792.2 ಚ.ಕಿಮೀ. ಜನಸಂಖ್ಯೆ 2,93,106.

ತುಂಗಭದ್ರಾನದಿ ತಾಲ್ಲೂಕಿನ ದಕ್ಷಿಣದಿಂದ ಪೂರ್ವ ಮತ್ತು ಈಶಾನ್ಯ ದಿಕ್ಕಿಗೆ ಹರಿದು ಆಂಧ್ರಪ್ರದೇಶದಿಂದ ಮಾನ್ವಿಯನ್ನು ಪ್ರತ್ಯೇಕಿಸಿದೆ. ಮಾನ್ವಿ ಮತ್ತು ಸಿಂಧನೂರು ತಾಲ್ಲೂಕುಗಳ ಮಧ್ಯೆ ತುಂಗಭದ್ರಾನದಿಯನ್ನು ಸೇರುವ ಹಿರೇಹಳ್ಳ ಹರಿಯುತ್ತದೆ.ಇವಲ್ಲದೆ ತಾಲ್ಲೂಕಿನಲ್ಲಿ ಇನ್ನೆರಡು ಹಳ್ಳಗಳು ಹರಿದು ತುಂಗಭದ್ರಾನದಿಯನ್ನು ಸೇರುತ್ತವೆ.

ತಾಲ್ಲೂಕಿನಲ್ಲಿ ಕಪ್ಪು ಮತ್ತು ಕೆಂಪು ಜೇಡಿಮಣ್ಣಿನ ಭೂಪ್ರದೇಶ ಹೆಚ್ಚಿದೆ. ಸರಾಸರಿ ವಾರ್ಷಿಕ ಮಳೆ 435 ಮಿಮೀ. ತಾಲ್ಲೂಕಿನಲ್ಲಿ 2353.93 ಹೆ. ಅರಣ್ಯ ಪ್ರದೇಶ, 1463.39 ಹೆ. ಬಂಜರು, 6091.54 ಹೆ, ಹುಲ್ಲುಗಾವಲೂ ಇದ್ದು, 1635.17 ಹೆ. ಭೂಮಿ ಬೇಸಾಯದಲ್ಲಿದೆ. ತಾಲ್ಲೂಕಿನಲ್ಲಿ 54 ಕೆರೆಗಳಿವೆ. ತಾಲ್ಲೂಕಿನ 128 ಗ್ರಾಮಗಳಿಗೆ ತುಂಗಭದ್ರಾ ಜಲಾಶಯದ ಎಡದಂಡೆನಾಲೆಯ ನೀರು ದೊರೆತು ವ್ಯವಸಾಯ ಅಭಿವೃದ್ಧಿಯಾಗಿದೆ. ಜೋಳ, ದ್ವಿದಳಧಾನ್ಯಗಳು, ನೆಲಗಡಲೆ, ಹತ್ತಿ, ಎಣ್ಣೆಬೀಜಗಳು, ಸಜ್ಜೆ ಮತ್ತು ಬತ್ತ ಬೆಳೆಯುತ್ತಾರೆ.

ಕೈಮಗ್ಗದ ಬಟ್ಟೆಗಳು, ಚರ್ಮ ಮತ್ತು ಮರಗೆಲಸ ಈ ತಾಲ್ಲೂಕಿನ ಕೈಗಾರಿಕೆಗಳಾಗಿವೆ. ಈ ಉದ್ಯೋಗಗಳಿಗೆ ಪ್ರೋತ್ಸಾಹ ನೀಡಲು ಸಹಕಾರ ಸಂಘಗಳಿವೆ. ಅಲ್ಲದೆ ಹತ್ತಿ ಶುದ್ಧೀಕರಣ ಕಾರ್ಖಾನೆಗಳು ಮತ್ತು ಮರಕೊಯ್ಯುವ ಕಾರ್ಖಾನೆ ಮುಂತಾದವು ಇಲ್ಲಿವೆ. ಮಾನ್ವಿ ತಾಲ್ಲೂಕಿನಿಂದ ಸುತ್ತಲ ಪಟ್ಟಣಗಳಿಗೆ ಉತ್ತಮ ಮಾರ್ಗಗಳಿವೆ. ಈ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ, ದೂರವಾಣಿ, ಅಂಚೆ ಮುಂತಾದ ಸೌಕರ್ಯಗಳಿವೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳುಂಟು. ಸರ್ಕಾರಿ, ಸಾರ್ವಜನಿಕ ಔಷಧಾಲಯಗಳಿವೆ. ಇಂದು ಮಾನ್ವಿ ತಾಲ್ಲೂಕು ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಎಲ್ಲೆಯಲ್ಲಿದ್ದು ಎರಡೂ ಕಡೆಯ ಸುತ್ತಲ ಊರುಗಳ ವ್ಯಾಪಾರ ಕೇಂದ್ರವಾಗಿದೆ.

ಈ ತಾಲ್ಲೂಕಿನಲ್ಲಿ ಕಲ್ಲೂರು **(ನೋಡಿ)** ಗ್ರಾಮದಲ್ಲಿ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಕಾಲದ ಅವಶೇಷಗಳಿವೆ. ಕವಿತಾಳ ಎಂಬ ಗ್ರಾಮದಲ್ಲಿ ಪ್ರಸಿದ್ಧ ತ್ರ್ಯಂಬಕೇಶ್ವರದ ದೇವಾಲಯವಿದ್ದು ಇದರಲ್ಲಿ ಎರಡು ಕನ್ನಡ ಶಾಸನಗಳಿವೆ. ಕೋಟೆಕಲ್ಲು ಗ್ರಾಮದ ಹತ್ತಿರವಿರುವ ಎರಡು ಬೆಟ್ಟಗಳ ಮೇಲೂ ಕೋಟೆ ಇದೆ. ಇಲ್ಲಿ ಇತಿಹಾಸಪೂರ್ವ ಕಾಲದಲ್ಲಿ ಚಿನ್ನದ ಉದ್ಯಮವಿತ್ತು.

ಮಾನ್ವಿ ಈ ಹೋಬಳಿ ಮತ್ತು ತಾಲ್ಲೂಕು ಆಡಳಿತ ಕೇಂದ್ರ. ರಾಯಚೂರಿನ ನೈಋತ್ಯದಲ್ಲಿ 44 ಕಿಮೀ ದೂರದಲ್ಲಿ, ರಾಯಚೂರು-ಸಿಂಧನೂರು ಹೆದ್ದಾರಿ ಮಧ್ಯದಲ್ಲಿದೆ. ತುಂಗಭದ್ರಾ ಯೋಜನೆಯ ಕಾರ್ಯಕೇಂದ್ರ ಮತ್ತು ವ್ಯಾಪಾರಾಭಿವೃದ್ಧಿಯೊಂದಿಗೆ ವಿಸ್ತರಿಸುತ್ತಿದೆ. ಜನಸಂಖ್ಯೆ 37,613. ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ.

ಮಾನ್ವಿಯಲ್ಲಿ ಹಳೆ ಕೋಟೆಯ ಅವಶೇಷಗಳಿವೆ. ಇಲ್ಲಿರುವ 1052ರ ಒಂದು ಶಾಸನ ಇದು ಮಹಾಮಂಡಲೇಶ್ವರ ದೇವರಸನಿಗೆ ಸೇರಿತ್ತೆಂಬುದನ್ನೂ ಚಾಳುಕ್ಯ ಒಂದನೆಯ ಸೋಮೇಶ್ವರನ ಸೇನಾಪತಿಯಾಗಿದ್ದ ಈತ ಉತ್ತರ ಕೊಂಕಣ ಮತ್ತು ಮಧ್ಯಭಾರತದ ಮೇಲೆ ದಂಡಯಾತ್ರೆ ನಡೆಸಿದ ವಿಷಯವನ್ನೂ ತಿಳಿಸುತ್ತದೆ. ಮಾನ್ವಿ ಈ ಸುತ್ತಿನ ಹಿಂದುಗಳಿಗೆ ಯಾತ್ರಾಸ್ಥಳ. ಇಲ್ಲಿ ಪ್ರಸಿದ್ಧ ಜಗನ್ನಾಥ ದೇವಾಲಯವಿದೆ. ಇಲ್ಲಿ ಜನವರಿ ತಿಂಗಳಲ್ಲಿ ನಡೆಯುವ ಕರೆಮ್ಮನ ಜಾತ್ರೆ ಬಹುಜನರನ್ನು ಆಕರ್ಷಿಸುತ್ತದೆ. ಅಲ್ಲದೆ ಸುಮಾರು ಅದೇ ತಿಂಗಳಲ್ಲಿ ಮಹಾಮಲ್ಲೇಶಪ್ಪ ಮತ್ತು ಸಂಜೀವರಾಯನ ಜಾತ್ರೆಗಳೂ ಫೆಬ್ರವರಿ ತಿಂಗಳಲ್ಲಿ ಎಲ್ಲಮ್ಮನ ಜಾತ್ರೆಯೂ ನಡೆಯುತ್ತವೆ. ಇದು ಪ್ರಸಿದ್ಧ ಹರಿದಾಸರಾದ ಜಗನ್ನಾಥದಾಸರು ಹುಟ್ಟಿದ ಊರು. ವಿದ್ವಾಂಸರಾದ ಮಾನ್ವಿ ನರಸಿಂಗರಾಯರು ಇದೇ ಪಟ್ಟಣದವರು.

(ಎಸ್.ವಿ.ಪಿ.)

**ಮಾಯಕೊಂಡ:** ದಾವಣಗೆರೆ ಜಿಲ್ಲೆ ಅದೇ ತಾಲ್ಲೂಕಿನ ಒಂದು ಊರು, ಹೋಬಳಿ ಕೇಂದ್ರ. ದಾವಣಗೆರೆಯ ಆಗ್ನೇಯದಲ್ಲಿ 28 ಕಿಮೀ ದೂರದಲ್ಲಿ ಬೆಂಗಳೂರು-ಪುಣೆ ರೈಲುಮಾರ್ಗದಲ್ಲಿದೆ. ಜನಸಂಖ್ಯೆ 5,723. ಈಗ ಈ ಊರು ವ್ಯಾಪಾರಸ್ಥಳವಾಗಿ ಅಭಿವೃದ್ಧಿಯಾಗುತ್ತಿದೆ. ಊರು ಪುರಸಭಾಡಳಿತಕ್ಕೆ ಸೇರಿದೆ. ಈ ಊರಿನಲ್ಲಿ ಕೇಶವ ಮತ್ತು ಓಬಳ ನರಸಿಂಹ ಗುಡಿಗಳಿವೆ. ಕೇಶವನ ಗುಡಿ ಗ್ರಾಮದ ಮಧ್ಯದಲ್ಲಿದೆ. ಈ ಗುಡಿ ಇತ್ತೀಚಿನ ಕಾಲದ್ದೆಂದು ಕಾಣುವುದು. ಕೇಶವ ವಿಗ್ರಹದ ಶಿಲ್ಪ ವಿಜಯನಗರದ ಕಾಲಕ್ಕೆ ಸೇರಿದ್ದು. ಓಬಳ ನರಸಿಂಹ ಗುಡಿ ಗ್ರಾಮದ ಆಗ್ನೇಯಕ್ಕಿದೆ. ಗುಡಿಯ ಉದ್ಭವ ನರಸಿಂಹಸ್ವಾಮಿ ವಿಗ್ರಹ ಗುಂಡಿನ ಆಕಾರದಲ್ಲಿದೆ. ಈ ಗುಡಿಯ ನವರಂಗಕ್ಕೆ ದ್ರಾವಿಡ ಶಿಲ್ಪಶೈಲಿಯ ನಾಲ್ಕು ಕಂಬಗಳಿವೆ. ಈ ಕಂಬಗಳ ಮೇಲೆ ಗಣೇಶ, ಹನುಮಂತ ಮೊದಲಾದ ದೇವತೆಗಳೂ ಪುರುಷಾಮೃಗ, ನೃತ್ಯಗಾತಿಯರು, ದರ್ಪಣಮೋಹಿನಿ, ಕಾಳಿಂಗ ಮೊದಲಾದ ಉಬ್ಬು ಶಿಲ್ಪದ ರಚನೆಗಳೂ ಇವೆ. (ವಿ.ಜಿ.ಕೆ.)

**ಮಾಯಸಂದ್ರ:** ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ತುರುವೇಕೆರೆಗೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,945. ಈ ಗ್ರಾಮ ಹೆಬ್ಬಾರ್ ವೈಷ್ಣವರು ನೆಲೆಸಿದ ಪಂಚಗ್ರಾಮಗಳಲ್ಲೊಂದು (ಅವರು ನೆಲೆಸಿದ ಉಳಿದ ಗ್ರಾಮಗಳು ಗುಬ್ಬಿ ತಾಲ್ಲೂಕಿನ ಕಡಬ, ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ, ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ, ತಿಪಟೂರು ತಾಲ್ಲೂಕಿನ ನೊಣವಿನಕೆರೆ). ಈ ಗ್ರಾಮದ ಬಳಿ ಕೆರೆದಂಡೆಯ ಮಧ್ಯದಲ್ಲಿ ಗಂಗೆ

ಕುಲದವರು ಪೂಜಿಸುವ ಮಾಯಮ್ಮ ದೇವತೆಯ ದೇವಾಲಯವಿದೆ. ಊರಿನಲ್ಲಿ ಕೊಲ್ಲಾಪುರದಮ್ಮ ಎಂಬ ಶಕ್ತಿದೇವತೆಯ ದೇವಾಲಯವಿದೆ. ಈ ಗ್ರಾಮಕ್ಕೆ 3 ಕಿಮೀ ದೂರದಲ್ಲಿ ನೆಲ್ಲಿಗೆರೆ ಮಾರ್ಗದಲ್ಲಿರುವ ಒಂದು ಗುಡ್ಡದ ಮೇಲೆ ಮಹದೇಶ್ವರ ದೇವಾಲಯವಿದೆ. ಪ್ರತಿವರ್ಷ ನಡೆಯುವ ಇಲ್ಲಿಯ ಜಾತ್ರೆಯಲ್ಲಿ ಜಾನುವಾರುಗಳ ಸಂತೆ ಸೇರುವುದು. ಇಲ್ಲಿಂದ ಸು. 4ಕಿಮೀ ದೂರದಲ್ಲಿರುವ ರಾಮನಗರದಲ್ಲಿ ಹೊಯ್ಸಳರ ಕಾಲದ ವರದರಾಜ ದೇವಲಯವಿದೆ. **(ವಿ.ಜಿ.ಕೆ.)**

**ಮಾಯಾಚಾರ್, ಜಿ.ಡಿ.:** ಹೆಸರಾಂತ ಮೂರ್ತಿಶಿಲ್ಪಿ. ಗುಂಡಪ್ಪ ದೇವೇಂದ್ರಪ್ಪ ಮಾಯಾಚಾರ್ ಎಂಬುದು ಇವರ ಪೂರ್ತಿ ಹೆಸರು. ಇವರಿಗೆ ಈ ಕಲೆ ಬಂದುದು ವಂಶಪಾರಂಪರ್ಯವಾಗಿ. ವಿಶ್ವಕರ್ಮ ಕುಶಲಕಲಾ ಕಲಾವಿದರಾಗಿದ್ದ ತಂದೆಯವರನ್ನು ಚಿಕ್ಕಂದಿನಲ್ಲಿಯೇ ಕಳೆದುಕೊಂಡರು. ಬಾಗಲಕೋಟೆ, ಬೆಳಗಾಂವಿಗಳಲ್ಲಿ ಬಡಗಿತನವೇ ಮೊದಲಾದ ಕಸಬುಗಳಿಂದ ಜೀವನ ನಿರ್ವಹಣೆ ಮಾಡಿದರು. ಆಕಸ್ಮಿಕವಾಗಿ ರಥ ನಿರ್ಮಾಣ ಚಾತುರ್ಯ ತೋರಿ ತಮ್ಮ ಸುಪ್ತಸತ್ವವನ್ನು ತಾವೆ ಬೆರಗಿನಿಂದ ಕಂಡುಕೊಂಡರು. ಇವರು ನಿರ್ಮಿಸಿದ ಕವತಗಿ ಹುಚೇಶ್ವರ ಮಠದ ಮುಖ್ಯದ್ವಾರದ ಸೌಂದರ್ಯ ಜನರನ್ನು ಆಕರ್ಷಿಸಿತು. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ಕೆಲಕಾಲ ಕೆಲಸ ಮಾಡಿದರು. ಬಿಜಾಪುರ, ವಾರ್ಧಾಶ್ರಮ, ಅಹಮದಾಬಾದ್, ಸಾಬರಮತಿಗಳಲ್ಲಿ ಕರಕುಶಲ ಕಾರ್ಯ ನಿರ್ವಹಿಸಿದ ಅನಂತರ ಕೆಲಸಕ್ಕೆ ರಾಜೀನಾಮೆ ನೀಡಿದರು. ಶಿಲ್ಪಗಳ ರಚನಾ ಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

ಯಾವ ಗುರುವಿನಿಂದಲೂ ಶಿಲ್ಪಕಲಾ ಶಾಸ್ತ್ರ ಕಲಿಯದಿದ್ದರೂ ಶಿಲ್ಪಕಲೆ ಇವರಿಗೆ ಕರಗತವಾಗಿತ್ತು. ಮೂರ್ತಿಶಿಲ್ಪ, ವಿಗ್ರಹಗಳ ಕೆತ್ತನೆಯ ಕಾರ್ಯ ಅವಿರತವಾಗಿ ನಡೆಸಿ 500ಕ್ಕೂ ಹೆಚ್ಚು ಸಣ್ಣದೊಡ್ಡ ಪ್ರಮಾಣದ ವಿಗ್ರಹಗಳನ್ನು ಇವರು ರಚಿಸಿದ್ದಾರೆ. ಕಾಳಿಕಾ, ಶಾರದಾ, ಮಹಾಲಕ್ಷ್ಮಿ, ಈಶ್ವರ, ಮಾರುತಿ ಮೂರ್ತಿಗಳನ್ನಲ್ಲದೆ ಶರಣರ ಹಾಗೂ ಸಂತರ ಮೂರ್ತಿಗಳನ್ನೂ ರಚಿಸಿದ್ದಾರೆ.

ಬಾಗಲಕೋಟೆಯಲ್ಲಿ ಭುವನ ಶಿಲ್ಪಕಲಾ ಶಾಲೆಯನ್ನು ಪ್ರಾರಂಭಿಸಿ (1982) ಶಿಲ್ಪಕಲಾ ಶಿಕ್ಷಣದ ಬಗೆಗೂ ಒಲವು ತೋರಿಸಿದರು. ದೈನಂದಿನ ಬದುಕಿನ ವಿಷಯಗಳನ್ನು ಕೂಡ ಆರಿಸಿಕೊಂಡು ತಾಯಿ ಮಗು, ಕೊಡ ಹೊತ್ತ ಬಾಲೆ ಇತ್ಯಾದಿ ಶಿಲ್ಪಗಳನ್ನು ರಚಿಸಿದ್ದಾರೆ.

ಇವರಿಗೆ ರಾಜ್ಯ ಕರಕುಶಲ ಮಂಡಲಿ ಪ್ರಶಸ್ತಿ, ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಲಭಿಸಿವೆ. ರಾಣಾ ಪ್ರತಾಪ ವಾಸ್ತುಶಿಲ್ಪಿ ಎಂಬ ಬಿರುದಿನ ಗೌರವ ಸಂದಿದೆ (1978). ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ (1995). ಕರ್ನಾಟಕ ಸರ್ಕಾರ ಇವರಿಗೆ ಜಕಣಾಚಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ (1997). **(ಎನ್.ಎಂ.)**

**ಮಾಯಾರಾವ್:** 1928– . ಪ್ರಸಿದ್ಧ ನೃತ್ಯ ಕಲಾವಿದೆ. 1928ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ಸಂಜೀವರಾವ್, ತಾಯಿ ಲಲಿತಾಬಾಯಿ. ತಂದೆಯವರು ಮೈಸೂರ್ ಹೋಮ್ಸ್ ಎಂಬ ಎಂಜಿನಿಯರಿಂಗ್ ಸಂಸ್ಥೆಯ ಮಾಲೀಕರಾಗಿದ್ದರು.

ಚಿಕ್ಕಂದಿನಲ್ಲಿ ಮಾಯಾ ಅವರ ಆರೋಗ್ಯ ಸಮರ್ಪಕವಾಗಿರಲಿಲ್ಲ. ಆದ್ದರಿಂದ ಎಂಟನೆಯ ವಯಸ್ಸಿನವರೆಗೆ ಮನೆಯಲ್ಲೇ ಇವರ ವಿದ್ಯಾಭ್ಯಾಸ ನಡೆಯಿತು. ಆಗ ಹಿಂದುಸ್ಥಾನಿ ಹಾಡುಗಾರಿಕೆಯ ಜೊತೆಗೆ ದಿಲ್ರುಬಾ ನುಡಿಸುವುದನ್ನೂ ಇವರು ಕಲಿಯುತ್ತಿದ್ದರು. ಇವರಿಗೆ ಹನ್ನೆರಡು ವರ್ಷವಾದಾಗ ಕಥಕ್ ನೃತ್ಯದ ಪರಿಚಯವಾಯಿತು. ಇವರ ತಂಗಿಯರಾದ ಚಿತ್ರಾ, ಉಮಾ ಸುಪ್ರಸಿದ್ಧ ಕಥಕ್ ನೃತ್ಯಕಾರರಾದ ಸೋಹನಲಾಲ್ ಅವರಿಂದ ನೃತ್ಯ ಕಲಿಯುತ್ತಿದ್ದರು. ಇವರಿಗೂ ನೃತ್ಯದಲ್ಲಿ ಒಲವು ಮೂಡಿತು. ಆದರೆ ವಯಸ್ಸಿನಲ್ಲಿ ಹಿರಿಯರಾಗಿದ್ದ ಮಾಯಾರಾವ್ ಅವರು ನೃತ್ಯ ಕಲಿಯುವುದಕ್ಕೆ ಸಂಪ್ರದಾಯ ಪ್ರಿಯರಾದ ತಂದೆ ಒಪ್ಪಲಿಲ್ಲ. ಸಂಗೀತ ಪಾಠ ಮುಂದುವರೆಯಿತು. ಆದರೆ ದಿನೇ ದಿನೇ ಇವರಿಗೆ ನೃತ್ಯದಲ್ಲಿ ಆಸಕ್ತಿ ಬೆಳೆಯಿತು. ಇವರು ನೃತ್ಯ ಕಲಿಯಲು ತಂದೆಯವರು ಕೊನೆಗೂ ಒಪ್ಪಿಗೆ ನೀಡಿದರು. 1942ರಲ್ಲಿ ಇವರು ಸೋಹನಲಾಲರ ಬಳಿ ಕಥಕ್ ಮತ್ತು ಮಣಿಪುರಿ ನೃತ್ಯ ಕಲಿಯತೊಡಗಿದರು. ಕಾಲೇಜಿನಲ್ಲಿ ಜೊತೆಯವರೊಂದಿಗೆ ಸೇರಿ ಸಂಗೀತ ರೂಪಕಗಳನ್ನು ಪ್ರದರ್ಶಿಸುತ್ತಿದ್ದರು. 1944ರಲ್ಲಿ

ಬೆಂಗಳೂರಿನ ಪುರಭವನದಲ್ಲಿ ನೀಡಿದ ಪ್ರದರ್ಶನದಲ್ಲಿ ಇವರು ವಹಿಸಿದ ಪಾತ್ರ ಎಲ್ಲರ ಮೆಚ್ಚುಗೆ ಗಳಿಸಿತು.

ಮಾಯಾ ಅವರ ನೃತ್ಯಾಸಕ್ತಿ ಬಂಧುಗಳ ವಿರೋಧ ಗಳಿಸಿತ್ತು. ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ ತರಗತಿಯಲ್ಲಿ ಓದುತ್ತಿದ್ದಾಗಲೂ ಇವರ ನೃತ್ಯ ಶಿಕ್ಷಣ ಮುಂದುವರೆಯಿತು. ಆದರೆ ಇವರ ತಂದೆ ನಿಧನರಾದಾಗ ನೃತ್ಯಾಭ್ಯಾಸಕ್ಕೆ ತಡೆಯುಂಟಾಯಿತು. ಇಂಗ್ಲಿಷ್ ಎಂ.ಎ. ಪಡೆದು ಜಯಪುರದಲ್ಲಿ ಅಧ್ಯಾಪಕಿಯ ಕೆಲಸ ದೊರಕಿಸಿಕೊಂಡಮೇಲೆ ಮತ್ತೆ ನೃತ್ಯದ ಅಭ್ಯಾಸ ಮುಂದುವರಿಸಿದರು. ಅದೇ ಕಾಲಕ್ಕೆ ಇವರು ಕಥಕ್ ನೃತ್ಯದ ಜೊತೆಗೆ ಭಾರತದ ಜನಪದ ನೃತ್ಯ ಶೈಲಿಗಳಲ್ಲೂ ಆಸಕ್ತಿ ಬೆಳೆಸಿಕೊಂಡು ಅವನ್ನೂ ಅಭ್ಯಾಸ ಮಾಡಿದರು. 1953ರಿಂದ ಎರಡು ವರ್ಷ ಇವರು ಶ್ರೀಲಂಕಾದಲ್ಲಿ ಇದ್ದು ಅಲ್ಲಿಯ ನೃತ್ಯ ಕಲಿತರು. ಕಥಕ್ ನೃತ್ಯದಲ್ಲಿ ಉಚ್ಚ ಶಿಕ್ಷಣ ಪಡೆಯಲು ಇವರಿಗೆ 1955ರಲ್ಲಿ ವಿದ್ಯಾರ್ಥಿವೇತನ ದೊರಕಿತು. ಕಥಕ್ ಸಮ್ರಾಟರೆನಿಸಿದ ಶಂಭು ಮಹಾರಾಜರಲ್ಲಿ ಕಲಿಕೆ ಮುಂದುವರಿಸಿದರು. ಬಿಡುವಿನ ವೇಳೆಯಲ್ಲಿ ಮಣಿಪುರಿಯ ಅಭ್ಯಾಸವನ್ನೂ ಮುಂದುವರಿಸಿದರು.

ರಾಸಲೀಲೆಯಲ್ಲಿ ಜನಿಸಿ, ಶೃಂಗಾರಭಕ್ತಿ ಮತ್ತು ಮಧುರಭಕ್ತಿ ಪ್ರಧಾನವಾಗಿ ಬೆಳೆದು, ಮುಗಲ್ ಆಳ್ವಿಕೆಯಲ್ಲಿ ಅಲಂಕಾರ ಪದ್ಧತಿಯಾಗಿ ರೂಪುಗೊಂಡ ಕಥಕ್ ಶೈಲಿಯ ಅಭಿಜಾತ ಲಕ್ಷಣವನ್ನು ಕಾಪಾಡುವುದು ಶಂಭು ಮಹಾರಾಜರ ಆಶಯವಾಗಿತ್ತು. ಮಹಾರಾಜರ ಶಿಷ್ಯಸಮುದಾಯದಲ್ಲಿ ಏಕೈಕ ಮಹಿಳೆಯಾಗಿದ್ದ ಇವರು ಆ ಶೈಲಿಯನ್ನು ಚೆನ್ನಾಗಿ ಕಲಿತರು. ಚಲನಚಿತ್ರಗಳಿಂದ ಪ್ರಭಾವಿತವಾಗದ ಶಾಸ್ತ್ರೀಯ ಶೈಲಿ ಮಾಯಾ ಅವರದು. ಇವರು ಪುರಂದರದಾಸರ ದೇವರನಾಮಗಳನ್ನೂ ಜಯದೇವನ ಗೀತಗೋವಿಂದವನ್ನೂ ರವೀಂದ್ರರ ಕೃತಿಗಳನ್ನೂ ಕಥಕ್‌ಗೆ ಅಳವಡಿಸಿ ಪ್ರದರ್ಶಿಸಿದರು.

ಇವರು ಶಿಷ್ಯವೇತನ ಪಡೆದು 1961ರಲ್ಲಿ ರಷ್ಯಕ್ಕೆ ಹೋಗಿ ಅಲ್ಲಿ ಎರಡೂವರೆ ವರ್ಷಗಳ ಕಾಲ ಬ್ಯಾಲೆಯ ಅಭ್ಯಾಸ ಮಾಡಿದರು. ಅಲ್ಲಿ ಇವರು ನೀಡಿದ ಶಾಕುಂತಲಾ ಹಾಗೂ ಅಮೀರ್ ಖುಸ್ರೋ ನೃತ್ಯ ಪ್ರದರ್ಶಗಳು ವಿಶೇಷ ಮೆಚ್ಚುಗೆ ಪಡೆದವು. ಇವರು ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್

ಮುಂತಾದ ದೇಶಗಳಲ್ಲೂ ಪ್ರವಾಸ ಮಾಡಿ ಪ್ರದರ್ಶನಗಳನ್ನು ನೀಡಿದರು. ಕುವೆಂಪು ಅವರ ರಾಮಾಯಣದರ್ಶನಂ ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ನೀಡಿದ ಸಂದರ್ಭದಲ್ಲಿ ದೆಹಲಿಯಲ್ಲಿ ಆ ಕಾವ್ಯದ ಆಯ್ದ ಭಾಗಗಳನ್ನು ನೃತ್ಯರೂಪದಲ್ಲಿ ಪ್ರದರ್ಶಿಸಿದ್ದರು.

ಇವರು ಅನೇಕ ಪ್ರಶಸ್ತಿಗಳನ್ನೂ ಬಹುಮಾನಗಳನ್ನೂ ಪಡೆದಿದ್ದಾರೆ. ಹೆಲ್ಸಿಂಕಿಯಲ್ಲಿ ಚಿನ್ನದ ಪದಕವೂ ಉಜ್ಜಯಿನಿಯಲ್ಲಿ ನಡೆದ ಕಾಳಿದಾಸ ಸಮಾರೋಹದಲ್ಲಿ ಸಾದರಪಡಿಸಲಾದ ಕುಮಾರ ಸಂಭವದಲ್ಲಿ ಪಾರ್ವತಿಯ ಪಾತ್ರಕ್ಕಾಗಿ ಪ್ರಶಸ್ತಿಯೂ ಕರ್ನಾಟಕ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ ಇವರಿಗೆ ದೊರಕಿವೆ. ಬೆಂಗಳೂರಿನ ನಾಟ್ಯಸಂಸ್ಕೃತಿ ಕಲಾಕೇಂದ್ರದ ಸ್ಥಾಪಕಿ ಇವರು. ಎಂ.ಎಸ್.ನಟರಾಜನ್ ಅವರ ನೇತೃತ್ವದ ನರ್ತನ ಸಂಸ್ಥೆಯಲ್ಲಿ ಜನಪದ ನೃತ್ಯ ಸಂಪಾದನೆ ನಿರ್ದೇಶನಗಳಲ್ಲಿ ಇವರು ಮಾಡಿರುವ ಕೆಲಸ ವಿಶೇಷವಾಗಿ ಉಲ್ಲೇಖಾರ್ಹವಾದುದು. (ಎಚ್.ಎಸ್.ಕೆ.)

**ಮಾರಮ್ಮ:** ಕರ್ನಾಟಕದ ಎಲ್ಲ ಗ್ರಾಮ ಹಾಗೂ ಊರುಗಳಲ್ಲಿ ಸಾಮಾನ್ಯವಾಗಿ ಕಾಣಬರುವ, ಶಕ್ತಿದೇವತೆಯ ಅವತಾರ ಎಂದು ನಂಬಲಾದ ಗ್ರಾಮದೇವತೆ. ಗ್ರಾಮದ ಹೊರಗೆ ನೆಲಸಿರುವ ಈ ದೇವತೆ ಆ ಗ್ರಾಮಕ್ಕೆ ಒದಗುವ ಕೆಡಕುಗಳು, ಈತಿಬಾಧೆಗಳು, ಸಾಂಕ್ರಾಮಿಕ ಜಾಡ್ಯಗಳು ಮುಂತಾದವನ್ನು ಪರಿಹರಿಸಿ ಗ್ರಾಮದಲ್ಲಿ ಶಾಂತಿ ನೆಮ್ಮದಿ ನೆಲಸುವಂತೆ ಮಾಡುವವಳೆಂಬ ನಂಬಿಕೆ ಜನಪದರರಲ್ಲಿದೆ. ಈಕೆ ಮುನಿದರೆ ಗ್ರಾಮಕ್ಕೆ ಕೇಡೆಂದು ತಿಳಿದ ಜನಪದರು ಈಕೆಯನ್ನು ಪ್ರಸನ್ನಳಾಗಿಸಲು ವರ್ಷಕ್ಕೊಮ್ಮೆ ಜಾತ್ರೆಮಾಡಿ ಸಂತೃಪ್ತಿಗಾಗಿ ಕುರಿಕೋಳಿ ಕೋಣಗಳ ಬಲಿ ಕೊಡುವ ಸಂಪ್ರದಾಯವಿದೆ. ಕಾನೂನಿನ ಅಡಚಣೆಯಿಂದಾಗಿ ಬಲಿಕೊಡುವುದು ಇತ್ತೀಚೆಗೆ ಕಡಿಮೆಯಾಗುತ್ತಿದೆ.

ಉರಿಮಾರಿ, ಊರುಮಾರಿ, ಮೂಗುಮಾರಿ, ದೊಡ್ಡಮಾರಿ, ಒಳ್ಳೆಮಾರಿ, ದೊಂಬರಮಾರಿ ಇತ್ಯಾದಿ ಭಿನ್ನರೂಪಗಳಲ್ಲಿಯೂ ಈ ದೇವತೆ ಪೂಜೆಗೊಳ್ಳುವುದುಂಟು. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಪ್ರಚಲಿತವಿರುವ ಹುಲಿಗ್ಯವ್ವ ಕೂಡ ಶಕ್ತಿದೇವತೆಯಾದುದರಿಂದ ಮಾರಮ್ಮನ ಬಗ್ಗೆ ಇರುವ ನಂಬಿಕೆಗಳೇ ಈ ದೇವತೆಯ ಬಗ್ಗೆಯೂ ಪ್ರಚಲಿತವಿವೆ.

ಮಾರಿ ಎಂಬ ಶಬ್ದ ನಿಷ್ಪತ್ತಿಯ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ. ಮಹೇಶ್ವರಿ ಎಂಬುದೇ ಮಾರಿ ಆಗಿದೆ ಎಂಬುದು ಒಂದು ವಾದ. ಈಕೆ ಶಕ್ತಿ ದೇವತೆಯಾದುದರಿಂದ, ದೇವಾನುದೇವತೆಗಳ ಎಲ್ಲ ರೀತಿಯ ಆಯುಧಗಳಿಂದಲೂ ಶಕ್ತಿಯಿಂದಲೂ ರೌದ್ರಾವತಾರ ಪಡೆದು ಮಹಿಷಾಸುರನನ್ನು ಕೊಂದು ಚಾಮುಂಡೇಶ್ವರಿಯಾದ ಇವಳನ್ನು ಮಹಾವೀರಿ ಎಂದು ಪರಿಗಣಿಸಿ ಅದರಿಂದಲೇ ಮಾರಿ ಶಬ್ದದ ನಿಷ್ಪತ್ತಿಯಾಗಿದೆ ಎಂಬುದು ಇನ್ನೊಂದು ವಾದ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಂಗ್ರಹವಾದ ಒಂದು ಕಥೆಯ ಪ್ರಕಾರ ಮರದೇವತೆ ಮರಮ್ಮ ಎಂಬುದರಿಂದ ಮಾರಮ್ಮ ಎಂದಾಗಿದೆ ಎಂಬ ಮಾತು ಇದೆ.

ಮಾರಮ್ಮನ ವಿಗ್ರಹದಲ್ಲಿ ರುಂಡದ ಭಾಗ ಮಾತ್ರ ಕಾಣಬರುವುದಕ್ಕೆ ಒಂದು ಕಥೆ ಹೀಗಿದೆ: ಪರಶುರಾಮ ತಂದೆಯಿಂದ ಆಜ್ಞಪ್ತನಾಗಿ ತಾಯಿಯನ್ನು ಕೊಲ್ಲಲು ಸಿದ್ಧನಾದಾಗ ಮಗನ ಪಿತೃಭಕ್ತಿಯನ್ನು ಅರಿತಿದ್ದ ರೇಣುಕಾದೇವಿ ಪರಶುರಾಮ ಇತರ ಮಕ್ಕಳಂತಲ್ಲದೆ ತನ್ನನ್ನು ಕೊಂದೇ ಬಿಡುತ್ತಾನೆಂದು ನಂಬುತ್ತಾಳೆ. ಆಗ ಆತನ ಮನಸ್ಸನ್ನು ಕರುಣರಸದ ಕಡೆಗೆ ಒಯ್ಯಲು ಯತ್ನಿಸುತ್ತಾಳೆ. ಇಲ್ಲಿ ಪರಶುರಾಮ ಬಳಸುವುದು ಗಂಡುಗೊಡಲಿಯಲ್ಲ, ಇಬ್ಬಾಯಿಕತ್ತಿ. ಎರಡು ಅಂಚಿನ ಅಲಗಿನಿಂದ ಕತ್ತರಿಸಬಹುದಾದಂಥ ಕತ್ತಿ ಹಿಡಿದು ನಿಂತ ಮಗನನ್ನು ಪರಿಪರಿಯಾಗಿ ಹಾಗೆ ಮಾಡಬೇಡವೆಂದು ಕೇಳಿಕೊಂಡರೂ ಆತ ಒಪ್ಪುವುದಿಲ್ಲ. ಕೊನೆಯ ಅಸ್ತ್ರವಾಗಿ ರೇಣುಕಾದೇವಿ, 'ಲೋ, ಮಗು, ನಾನು ನಿನ್ನನ್ನು ಹೆತ್ತವಳು ನಿನ್ನ ಅಮ್ಮ ಕಣೋ' ಎಂದು ಹೇಳಿದಾಗ ಎಲ್ಲಿ ತನ್ನನ್ನು ವಿಚಲಿತನನ್ನಾಗಿ ಮಾಡಿಬಿಡುತ್ತಾಳೋ ಎಂದು ಭಾವಿಸಿ 'ಅಮ್ಮ? ಎಲ್ಲಿ ಅಮ್ಮ?' ಎಂದು ರೇಗಿ ಕಚಕ್ಕನೆ ತಾಯಿಯ ಶಿರವನ್ನು ಕತ್ತರಿಸುತ್ತಾನೆ. ಈ ಆಘಾತದಿಂದ ಆತ ಎಚ್ಚೆತ್ತುಕೊಳ್ಳುವ ಮೊದಲೆ ಇಲ್ಲಿ ಅಮ್ಮ ಎಂಬ ಕೂಗು ಕೇಳಿಸುತ್ತದೆ. ನೋಡುತ್ತಾನೆ. ಅಮ್ಮ ನಗುತ್ತ ನಿಂತಿದ್ದಾಳೆ. ಒಂದು ತಲೆ ಕೆಳಗೆ ಬಿದ್ದಿದೆ. ಕತ್ತಿಯನ್ನು ಮತ್ತೆ ಹಿಂದಕ್ಕೆ ಮುಂದಕ್ಕೆ ಬೀಸುತ್ತಾನೆ ಎಲ್ಲಿ ಅಮ್ಮ? ಎಂದು ಅಬ್ಬರಿಸುತ್ತ. ಎರಡುಸಲಕ್ಕೆ ಎರಡು ತಲೆಗಳು ಉರುಳುತ್ತವೆ. ಮತ್ತೆ ತಿರುಗಿ ನೋಡುತ್ತಾನೆ, ಇಲ್ಲಿ ಅಮ್ಮ ಎಂದು ಹೇಳುತ್ತ

ರೇಣುಕಾದೇವಿ ನಗುತ್ತ ನಿಂತಿದ್ದಾಳೆ. ಪರಶುರಾಮನಿಗೆ ಪಿತ್ತ ನೆತ್ತಿಗೇರುತ್ತದೆ. ತಂದೆಯ ಆಜ್ಞೆಯನ್ನು ಪಾಲಿಸಲು ಆಗುತ್ತಿಲ್ಲವಲ್ಲ ಎಂಬ ಸಂಕಟಬೇರೆ. ಎಲ್ಲಿ ಅಮ್ಮ? ಅಮ್ಮ ಎಲ್ಲಿ? ಎಲ್ಲಿ ಅಮ್ಮ? ಎಂದು ಹೇಳುತ್ತ ಕತ್ತಿಯನ್ನು ಎರಡೂ ದಿಕ್ಕಿನಲ್ಲಿ ಬೀಸತೊಡಗುತ್ತಾನೆ. ಆ ಇಬ್ಬಾಯಿ ಕತ್ತಿ, ಹೋಗುತ್ತ ಒಂದು ಬರುತ್ತ ಒಂದು ಹೀಗೆ ಎರಡೂ ಅಲಗಿನಿಂದ ತಲೆಗಳು ಉರುಳುತ್ತವೆ. ಹೀಗೆ ನೂರಾರು ತಲೆಗಳು ಉರುಳಿ ರಾಶಿಯಾಗುತ್ತದೆ. ಸಾಕ್ಷಾತ್ ಆದಿಶಕ್ತಿ ಎನಿಸಿದ ರೇಣುಕಾದೇವಿಯ ತಲೆಗಳೇ ಅವೆಂದು ತಿಳಿದು ಪರಶುರಾಮ ಆ ತಲೆಗಳು ಪ್ರತಿಯೊಂದು ಹಳ್ಳಿಗೂ ಹೋಗಿ ನೆಲಸಿ ಪೂಜೆಗೊಳ್ಳುವಂತೆ ವರ ನೀಡುತ್ತಾನೆ. ಆ ತಲೆಗಳೇ ಇಂದು ಎಲ್ಲೆಲ್ಲೂ ಪೂಜೆಗೊಳ್ಳುತ್ತಿರುವ ಮಾರಮ್ಮ ಎಂಬ ಅಭಿದಾನ ಪಡೆದ ಗ್ರಾಮದೇವತೆ.

ಬ್ರಾಹ್ಮಣ ಕನ್ಯೆಯಾದ ಮಾರಮ್ಮ ಮೋಸಹೋಗಿ ಕೀಳುಜಾತಿಯವನೊಬ್ಬನನ್ನು ಮದುವೆಯಾಗಿ ನಿಜಸಂಗತಿ ತಿಳಿದಾಗ ಗಂಡನನ್ನು ಹೊರಹಾಕಿದಳೆಂದು ಹೇಳುವ ಒಂದು ಕಥೆ ಹೀಗಿದೆ:

ಕೆರೆಯ ಏರಿಯ ಮೇಲಿನ ಹೊಂಗೆಯ ಮರ ಏರಿ ಕುಳಿತಿದ್ದ ತಲಪಟ್ಟರಾಯ ಎಂಬ ಅಸ್ಪೃಶ್ಯ ಹೈದನೊಬ್ಬ ನೀರು ಮೊಗೆಯಲು ಬಂದ ಹಾರವರ ಮಗಳು ಮಾರಮ್ಮನನ್ನು ಕಂಡು ಮೋಹಿತನಾದ. ಏನಾದರೂ ಮಾಡಿ ಮಾರಮ್ಮನನ್ನು ಮದುವೆಯಾಗಬೇಕೆಂದು ಮನಸ್ಸು ಮಾಡಿದ. ಆ ಹೈದ ನಡೆನುಡಿಯಲ್ಲಿ ಬ್ರಾಹ್ಮಣಿಕೆಯನ್ನು ರೂಢಿಸಿಕೊಂಡು ಮಾರಮ್ಮನ ತಂದೆಯನ್ನು ಮರಳುಮಾಡಿ ಮದುವೆಗೆ ಒಪ್ಪಿಸಿದ. ಮಾರಮ್ಮನಿಗೂ ತಲಪಟ್ಟರಾಯನಿಗೂ ಮದುವೆ ಆಯಿತು. ಮಾರಮ್ಮ ದಿನಕ್ಕೊಂದು ಬಗೆಯ ಅಡುಗೆ ಮಾಡಿ ಇಕ್ಕುತ್ತಿದ್ದಳು. ತಲಪಟ್ಟರಾಯ ಉಂಡು ಸುಖವಾಗಿದ್ದ. ಒಂದು ದಿನ ಮಾರಮ್ಮ ನಾಮದಲಗೆ ಎಂಬ ಸಿಹಿ ತಿಂಡಿ ಮಾಡಿದಳು. ಅದನ್ನು ಕಂಡು ಇದು ಎಂಥ ತಿಂಡಿ ಎಂದು ಕೇಳಿದ. ನಾಮದಲಗೆ ಎಂದಳು. ಎಂಥಾ ಹಲಗೆ ತಿಂದರೇನು, ಕೋಣನ ನಾಲಗೆ ತಿಂದಂಗಾದಾತಾ ಎಂದ. ಆಕೆಗೆ ಸಂಶಯ ಬಂದು ಈತ ಬ್ರಾಹ್ಮಣನೋ ಅಲ್ಲವೋ ಎಂದು ತಿಳಿಯುವ ಸಲುವಾಗಿ ಒಂದು ಉಪಾಯ ಹೂಡಿದಳು. ಗಂಡನ ಕೈಗೆ ಒಂದು ಕಾಸು ಕೊಟ್ಟು ಅದರಲ್ಲಿ ಎಲೆ ಕಾಳು ಹೂವು ಎಣ್ಣೆ ಸೌದೆ ಕೊಂಡುಕೊಂಡು ಕಾಸನ್ನೂ ಹಿಂದಕ್ಕೆ ತರುವಂತೆ ಹೇಳಿದಳು. ಅದು ಅವನಿಂದ ಸಾಧ್ಯವಾಗಲಿಲ್ಲ. ಆಗ ಆಕೆ ನೀನು ಬ್ರಾಹ್ಮಣನಲ್ಲ ಎಂದಳು. ಹೇಗೆ ಎಂದ. ನೀನು ಬ್ರಾಹ್ಮಣನೇ ಆಗಿದ್ದರೆ ಆ ಎಲ್ಲಾ ವಸ್ತುಗಳಿರುವ ಒಂದು ಎಳ್ಳಿನ ಗಿಡವನ್ನು ತರುತ್ತಿದ್ದೆ. ನೀನು ಬ್ರಾಹ್ಮಣನಲ್ಲ. ಮನೆಯೊಳಗೆ ಬರಬೇಡ ಎಂದು ಹೇಳಿ ಅವನನ್ನು ಹೊರಗೆ ಅಟ್ಟಿ ಕದ ಹಾಕಿಕೊಂಡಳು.

ಮನೆಯಾಚೆ ಕುಳಿತ ತಲಪಟ್ಟರಾಯ ಮಾರಮ್ಮ ಮತ್ತೆ ಕದ ತೆರೆಯಬಹುದು ಎಂದು ಕಾದ. ಕಾಯುತ್ತ ಕುಳಿತೇಬಿಟ್ಟ. ವಿಷಯ ತಿಳಿದ ಅವನ ತಾಯಿ ಬಂದು ನೋಡಿದಳು. ಮಗನ ತಲೆ ಬಿಸಿಲಿನ ಝಳದಲ್ಲಿ ಬೇಯುತ್ತಿದ್ದುದನ್ನು ಕಂಡು ಕೈಯೆಣ್ಣೆ ತಂದು ತಲೆಗೆ ಒತ್ತಿದಳು. ಕದ ತೆರೆಯುವಳೆಂದು ಕಾದು ಕಾದು ಸಾಕಾಗಿ ಕೋಪಗೊಂಡ ತಲಪಟ್ಟರಾಯ ಎಮ್ಮೆ ಕೋಣ ಕುರಿ ಕೋಳಿ ಮುಂತಾದ ಪ್ರಾಣಿಗಳನ್ನು ಹಿಡಿದು ತಂದು ಮಾರಮ್ಮನ ಮನೆಯ ಮುಂದೆ ಕತ್ತರಿಸಿ ಎಸೆಯತೊಡಗಿದ. ಅವನು ಏನು ಮಾಡುತ್ತಿದ್ದಾನೆ ಎಂದು ನೋಡಲು ಇಣಿಕಿ ನೋಡಿದಾಗ ಮಾರಮ್ಮನ ಹಣೆಗೆ ಕೋಣನ ರಕ್ತ ಹಾರಿತು. ಆಗ ಕೋಪಗೊಂಡ ಮಾರಮ್ಮ ಕಲ್ಲಾಗಿ ಹೋಗು ಎಂದು ಶಾಪ ಕೊಟ್ಟಳು.

ಪ್ರತಿ ಮಾರಮ್ಮನ ಗುಡಿ ಮುಂದೆ ಮೋಟಾದ ಒಂದು ಕಲ್ಲುಕಂಬವನ್ನು ಕಾಣಬಹುದು (ಇದನ್ನು ಬಿಸಿಲುಮಾರಿ ಎಂದೂ ಕರೆಯುವುದುಂಟು). ಮಾರಿಗುಡಿಯ ಮುಂದೆ ಪ್ರಾಣಿಗಳನ್ನು ಬಲಿಕೊಡುವ ಜನ ಆ ಕಂಬದ ನೆತ್ತಿಗೆ ಎಣ್ಣೆ ಸುರಿಯುವುದು ರೂಢಿಯಲ್ಲಿದೆ. ಮಾರಮ್ಮನಿಗೆ ಗಂಡ ಇಲ್ಲ, ತಲಪಟ್ರಾಯ್ನಿಗೆ ಹೆಂಡ್ರಿಲ್ಲ ಎಂಬ ಮಾತು ಗಾದೆಯ ಮಾತಾಗಿದೆ. ಇದೇ ಮಾತು ಮಾರಮ್ಮನಿಗೆ ಗಂಡ ಇಲ್ಲ, ಬೋರೆದೇವರಿಗೆ ಹೆಂಡ್ರಿಲ್ಲ ಎಂದೂ ಬಳಕೆಯಲ್ಲಿದೆ (ಮಾರಮ್ಮನ ಗುಡಿ ಸಮೀಪದಲ್ಲೇ ಬೋರೆದೇವರಗುಡಿ ಇರುವುದನ್ನು ಅಲ್ಲಲ್ಲಿ ಕಾಣಬಹುದು).

ಮಾರಮ್ಮನನ್ನು ಮಕ್ಕಳ ತಾಯಿ ಮಾರಮ್ಮ ಎಂದೂ ಕರೆಯುವುದುಂಟು. ಪ್ರತಿವರ್ಷ ನಡೆಯುವ ಗ್ರಾಮದೇವತೆ ಜಾತ್ರೆಯಲ್ಲಿ ಮಾರಮ್ಮನಿಗೆ ತಂಪು ಕೊಡುವುದು ಅಲ್ಲಲ್ಲಿ ಬಳಕೆಯಲ್ಲಿದೆ. ತಂಬಿಟ್ಟು ನೆನಕ್ಕಿ ನೆನಗಡಲೆ ಎಳನೀರು ಅರಿಶಿನ ಕುಂಕುಮ ಪೂಜೆ ಸಾಮಾನು ಮತ್ತು ಕಡ್ಡಾಯವಾಗಿ ಬೇವಿನಸೊಪ್ಪು-ಇವುಗಳಿಂದ ಮಾರಮ್ಮನನ್ನು ಅರ್ಚಿಸುವುದಕ್ಕೆ ತಂಪುಕೊಡುವುದು ಎನ್ನುತ್ತಾರೆ. ಮಕ್ಕಳಿಗೆ ದಡಾರ ಸೀತಾಳ ಸಿಡುಬು ಇವು ಆಗದಿರಲಿ ಎಂಬುದು ತಂಪು ಕೊಡುವುದರ ಉದ್ದೇಶ. ಅವು ಆದಾಗಲೂ ವಾಸಿಯಾದ ಮೇಲೂ ಐದನೆಯ ಅಥವಾ ಒಂಬತ್ತನೆಯ ದಿನ ತಂಪುಕೊಡುವ ಪರಿಪಾಠವಿದೆ.

ಸಿಡುಬಾದಾಗ ಮಕ್ಕಳು ಕಣ್ಣುಬಿಡಲಾರದ ಸ್ಥಿತಿಯಲ್ಲಿದ್ದರೆ ನಿನಗೆ ಕಣ್ಣು ಕೊಡುವೆ ಎಂದು ಮಾರಮ್ಮನಿಗೆ ಹರಕೆ ಹೊರುವುದುಂಟು. ವಾಸಿಯಾದ ಮೇಲೆ ಕಣ್ಣಿನಾಕಾರದ ಬೆಳ್ಳಿಯ ತಗಡುಗಳನ್ನು ಒಯ್ದು ಮಾರಮ್ಮನ ಕಣ್ಣುಗಳ ಭಾಗದಲ್ಲಿ ಅವನ್ನು ಎಣ್ಣೆಯಿಂದ ಅಂಟಿಸಿ ಇಟ್ಟು ಪೂಜೆ ಮಾಡಿಸಿಕೊಂಡು ಬರುತ್ತಾರೆ.

ಜಾತ್ರೆ ಸಮಯದಲ್ಲಿ ಮಾರಿಗುಡಿ ಮುಂದೆ ಬೆಂಕಿಹಾಕಿ ತಮಟೆ ಬಡಿತದ ಗತ್ತಿಗೆ ವೃತ್ತಾಕಾರವಾಗಿ ಕುಣಿಯುವ ಪದ್ಧತಿ ಅಲ್ಲಲ್ಲಿ ಕಂಡುಬರುತ್ತದೆ. ಕುಣಿಯುವವರಿಗೆ ವಿಶ್ರಾಂತಿ ಕೊಡುವ ಸಲುವಾಗಿ ನಡುನಡುವೆ ವಿವಿಧ ವೇಷ ಹಾಕಿ ಜನ ಸಮೂಹವನ್ನು ರಂಜಿಸುವ ಕಾರ್ಯಕ್ರಮವೂ ಇರುತ್ತದೆ. ಹೀಗೆ ಇಡೀ ರಾತ್ರಿ ಕುಣಿಯುತ್ತಾರೆ.

ಮಕ್ಕಳ ಮಾರಮ್ಮ ಎಂದು ಕರ್ನಾಟಕದಲ್ಲಿ ಅಲ್ಲಲ್ಲಿ ಕರೆಯುವ ರೂಢಿ ಬಂದದ್ದು ಮಾರಮ್ಮನನ್ನು ಕುರಿತ ಇನ್ನೊಂದು ಬಗೆಯ ಪದ್ಧತಿಯಿಂದ. ಮಕ್ಕಳ ಮಾರಮ್ಮ ಎಂಬ ದೇವತೆಯ ಮೂಲ ಗುಡಿ ಇರುವುದು ಈಗ ತಮಿಳುನಾಡಿಗೆ ಸೇರಿಹೋಗಿರುವ ಸತ್ಯಮಂಗಲದಲ್ಲಿ. ಅಲ್ಲಿಯ ಕೆಲವು ಕುಟುಂಬಗಳವರು ಪೆಟ್ಟಿಗೆ ಆಕಾರದ ಪುಟ್ಟ 'ಗುಡಿ'ಯಲ್ಲಿ ಮಾರಮ್ಮನನ್ನು ಹೊತ್ತುಕೊಂಡು ಚಾವಟಿಯಿಂದ ಹೊಡೆದುಕೊಳ್ಳುತ್ತ ಉರಿಮೆ ಹಾಗೂ ತಮಟೆ ವಾದ್ಯಗಳನ್ನು ಬಾರಿಸುತ್ತ ಕುಟುಂಬ ಸಮೇತ ಊರೂರು ಅಲೆಯುತ್ತ ಹೊರಡುತ್ತಾರೆ. ಮಕ್ಕಳ ತಾಯಿ ಮಾರಮ್ಮ ಬಂದವಳೆ, ಮಕ್ಕಳಿರೋರೆಲ್ಲ ಕಾಣಿಕೆ ಕೊಡಿ, ಮಕ್ಕಳಿಗೆ ಸಿಡುಬು ದಡಾರ ಆಗದಂತೆ ತಾಯಿ ನೋಡಿಕೊಳ್ಳುತ್ತಾಳೆ ಎಂದು ಹೇಳುತ್ತ ಬರುತ್ತಾರೆ. ಬೀದಿ ಮಧ್ಯೆ ಪೆಟ್ಟಿಗೆ ಇಟ್ಟು ಕಾಣಿಕೆ ನಿರೀಕ್ಷಿಸುತ್ತಾರೆ. ಆಗ ಜನ ಅಕ್ಕಿ ಜೋಳ ಅಥವಾ ಅಂಥ ಯಾವುದಾದರೂ ಧಾನ್ಯ ಉಪ್ಪು ಮೆಣಸಿನಕಾಯಿ ಹುಣಿಸೆಹಣ್ಣು ಹಸಿಟ್ಟು ಇವುಗಳ ಜೊತೆಗೆ ಕಾಸು ಇಷ್ಟನ್ನು ಮೊರದಲ್ಲಿ ಇರಿಸಿಕೊಂಡು ಬಂದು ಗುಡಿಯ ಮುಂದೆ ಇಡುತ್ತಾರೆ. ಅದನ್ನೆಲ್ಲ ಅವರು ಪ್ರತ್ಯೇಕ ಚೀಲಗಳಿಗೆ ಹಾಕಿಕೊಂಡು, ದೇವರ ಭಂಡಾರ ಎಂದು ಹೇಳಿ ಬೇವಿನ ಸೊಪ್ಪನ್ನೂ ಅರಿಸಿನವನ್ನೂ ಪ್ರಸಾದವಾಗಿ ಮೊರದಲ್ಲಿ ಇಟ್ಟುಕೊಡುತ್ತಾರೆ. ಈ ಸಂದರ್ಭದಲ್ಲಿ ಅವರು ಬಟ್ಟೆಯನ್ನೂ ಕೇಳುವುದುಂಟು. ಇವು ಊರೂರು ತಿರುಗುವ ಮಾರಿಯಾದ್ದರಿಂದ ಊರುಮಾರಿ ಎಂದೇ ಕರೆಯಲ್ಪಡುತ್ತದೆ.

ನಿರ್ದಿಷ್ಟ ಕಾಲದಲ್ಲಿ ಹೀಗೆ ಊರಾಡಲು ಹೊರಡುವ ಈ ಭಕ್ತರು ತಾಯಿ ಮಾರಮ್ಮನ ಹೆಸರಿನಲ್ಲಿ ಗಳಿಸುವ ಧಾನ್ಯದಿಂದಲೇ ಜೀವಿಸುತ್ತ ಮತ್ತೆ ನಿರ್ದಿಷ್ಟ ಸಂದರ್ಭಕ್ಕೆ ಸರಿಯಾಗಿ ಮೂಲ ನಿವಾಸವಾದ ಸತ್ಯಮಂಗಲಕ್ಕೆ ಹೋಗಿ ಮೂಲ ದೇವರಿಗೆ ಉಳಿದೆಲ್ಲವನ್ನೂ ಅರ್ಪಿಸುವಲ್ಲಿಗೆ ಅವರ ಕಾರ್ಯಕ್ರಮ ಮುಗಿಯುತ್ತದೆ. ಮಾರಮ್ಮನ ಹಬ್ಬದ ಸಂದರ್ಭದಲ್ಲಿ ನಡೆಸುವ ಕುಣಿತಕ್ಕೆ ಮಾರಿಕುಣಿತವೆಂದು ಹೆಸರು. ಇದು ಹಳೆಯ ಮೈಸೂರು ಪ್ರದೇಶದಲ್ಲಿ ಹೆಚ್ಚು ಪ್ರಚಲಿತವಾಗಿದೆ. *

**ಮಾರಸಿಂಹ I:** ಸು. 796. ಗಂಗವಂಶದ ರಾಜ. ಎರಡನೆಯ ಶಿವಮಾರನ ಮಗ. ಇವನ ಕಾಲದಲ್ಲಿ, ಇವನ ತಂದೆ ಶಿವಮಾರ ರಾಷ್ಟ್ರಕೂಟರ ಒಳಜಗಳದಲ್ಲಿ ಗೋವಿಂದನ ಪಕ್ಷ ವಹಿಸಿ ಯುದ್ಧದಲ್ಲಿ ಸೋತು ಧ್ರುವನ ಬಂದಿಯಾಗಿ ರಾಜ್ಯವನ್ನು ಕಳೆದುಕೊಂಡಿದ್ದ, ಆಗ ರಾಷ್ಟ್ರಕೂಟರ ಕಂಬಯ್ಯ ಗಂಗವಾಡಿಯ ರಾಜ್ಯಪಾಲನಾಗಿದ್ದ. ಆದರೂ

ಆಲೂರಿನ ತಾಮ್ರಶಾಸನದಲ್ಲಿ (799) ಮಾರಸಿಂಹನ ಆಳ್ವಿಕೆಯ ಮೂರನೆಯ ವರ್ಷ ಉಲ್ಲೇಖವಾಗಿರುವುದರಿಂದ ಎಲ್ಲೋ ಕೆಲವು ವರ್ಷಗಳ ಕಾಲ ಇವನೂ ಆಳಿರಬಹುದೆಂದು ತೋರುತ್ತದೆ. (ಡಿ.ಎಸ್.ಜೆ.)

**ಮಾರಸಿಂಹ II:** ತಲಕಾಡು ಗಂಗವಂಶದ ಪ್ರಸಿದ್ಧ ರಾಜ (963–74). ಎರಡನೆಯ ಬೂತುಗನ ಮಗ. ಶಾಸನಗಳಲ್ಲಿ ಇವನನ್ನು ಧರ್ಮಮಹಾ ರಾಜಾಧಿರಾಜ ಸತ್ಯವಾಕ್ಯ ಕೊಂಗಣಿವರ್ಮ ಪೆರ್ಮಾಡಿ ಮಾರಸಿಂಹ ಎಂದು ಕರೆಯಲಾಗಿದೆ. ಇವನಿಗೆ ಗಂಗಕಂದರ್ಪ, ಗಂಗವಿದ್ಯಾಧರ, ಗಂಗಚೂಡಾಮಣಿ, ಗಂಗ ಮಂಡಲಿಕ, ಗಂಗವಜ್ರ, ಗಂಗರಸಿಂಹ, ಚಲದುತ್ತರಂಗ, ಧರ್ಮಾವತಾರ, ಜಗದೇಕವೀರ, ಮಂಡಲಿಕತ್ರಿಣೇತ್ರ ಮೊದಲಾದ ಬಿರುದುಗಳಿದ್ದವು.

ಕೆಲವು ಚರಿತ್ರಕಾರರು ಎರಡನೆಯ ಶಿವಮಾರನ ಮೊಮ್ಮಗನೂ ಪೃಥ್ವೀಪತಿಯ ಮಗನೂ ಆದ ಮಾರಸಿಂಹನನ್ನು ಎರಡನೆಯ ಮಾರಸಿಂಹ ಎಂದು ಪರಿಗಣಿಸುತ್ತಾರೆ. ಇವನ ಬಗ್ಗೆ ಹೆಚ್ಚಿನ ಮಾಹಿತಿ ದೊರಕುವುದಿಲ್ಲ. ಪೃಥ್ವೀಪತಿ ತನ್ನದೇ ಆದ ಒಂದು ಗಂಗಶಾಖೆಯ ಆಡಳಿತವನ್ನು ಪ್ರಾರಂಭಿಸಿದ್ದರಿಂದ ಆ ಶಾಖೆಯ ಮಾರಸಿಂಹನನ್ನು ಬಿಟ್ಟು, ತಲಕಾಡಿನ ಮೂಲ ಗಂಗಶಾಖೆಯ ಪ್ರಸಕ್ತ ಮಾರಸಿಂಹನನ್ನು ಇಲ್ಲಿ ಎರಡನೆಯ ಮಾರಸಿಂಹ ಎಂದು ಪರಿಗಣಿಸಲಾಗಿದೆ. ಪೃಥ್ವೀಪತಿಯ ಶಾಖೆಯ ಮಾರಸಿಂಹನನ್ನು ಎರಡನೆಯ ಮಾರಸಿಂಹ ಎಂದು ಗಣಿಸುವ ಚರಿತ್ರಕಾರರು ಪ್ರಸಕ್ತ ಮಾರಸಿಂಹನನ್ನು ಮೂರನೆಯ ಮಾರಸಿಂಹ ಎಂದು ಹೆಸರಿಸುತ್ತಾರೆ.

ಮಾರಸಿಂಹ ಪಟ್ಟಕ್ಕೆ ಬಂದ ಪ್ರಾರಂಭದಲ್ಲಿ ಸಾಧಿಸಿದ ಮಹತ್ಕಾರ್ಯವೆಂದರೆ ರಾಷ್ಟ್ರಕೂಟ ಮೂರನೆಯ ಕೃಷ್ಣನ ಆಹ್ವಾನದಂತೆ ಉತ್ತರದ ದಂಡಯಾತ್ರೆ ಕೈಗೊಂಡಿದ್ದು (964–65). ಈ ದಂಡಯಾತ್ರೆಯಲ್ಲಿ ಮೂರನೆಯ ಕೃಷ್ಣ ಭಾಗವಹಿಸಿದ್ದಂತೆ ತೋರುವುದಿಲ್ಲ. ಮಾರಸಿಂಹನೇ ರಾಷ್ಟ್ರಕೂಟ ಸೈನ್ಯದ ದಂಡನಾಯಕತ್ವ ವಹಿಸಿ ಉತ್ತರದಲ್ಲಿ ಕಾಲಂಜರ ಮತ್ತು ಚಿತ್ರಕೂಟ ಗಿರಿದುರ್ಗಗಳನ್ನು ಹಿಡಿದ. ಕೊನೆಗೆ ಉಜ್ಜಯಿನಿಯನ್ನು ವಶಪಡಿಸಿಕೊಂಡು ಪರಮಾರರನ್ನು ಸದೆಬಡಿದು ಅವರಿಂದ ಅಪಾರ ಐಶ್ವರ್ಯವನ್ನು ಸೂರೆಗೊಂಡು ತಂದು ರಾಷ್ಟ್ರಕೂಟ ಚಕ್ರವರ್ತಿಗೆ ಒಪ್ಪಿಸಿದ. ಈ ಕಾರ್ಯಾಚರಣೆಗಳಲ್ಲಿ ಸೇನಾನಿಗಳಾದ ಶೂದ್ರಕಯ್ಯ ಮತ್ತು ಗೊಗ್ಗಿಮಯ್ಯರು ತೋರಿಸಿದ ಪರಾಕ್ರಮಕ್ಕಾಗಿ ಉಜ್ಜಯಿನಿ ಭುಜಂಗರೆಂಬ ಬಿರುದನ್ನು ಅವರಿಗೆ ಮಾರಸಿಂಹ ನೀಡಿದ. ಮಾರಸಿಂಹ ವಿಂಧ್ಯಾಶ್ರೇಣಿಯಲ್ಲಿ ರಾಷ್ಟ್ರಕೂಟರಿಗೆ ಕಿರುಕುಳ ಕೊಡುತ್ತಿದ್ದ ಕಿರಾತರನ್ನು ಘಾತಿಸಿ ಚದುರಿಸಿದನೆಂದೂ ಅಲ್ಲ ಎಂಬ ಇನ್ನೊಬ್ಬ ಬಂಡುಕೋರ ಸಾಮಂತನನ್ನು ಅಡಗಿಸಿದನೆಂದೂ ಶ್ರವಣಬೆಳಗೊಳ ಶಾಸನದಿಂದ ತಿಳಿದುಬರುತ್ತದೆ. ಈ ಸಾಧನೆಗಳಿಂದ ಸಂತೋಷಗೊಂಡ 3ನೆಯ ಕೃಷ್ಣ ಮಾರಸಿಂಹನಿಗೆ ಗೂರ್ಜರಾಧಿರಾಜ ಎಂಬ ಬಿರುದನ್ನು ಕೊಟ್ಟು ಪುಲಿಗೆರೆ, ಬೆಳುವಲ ಮತ್ತು ಸಾಂತಳಿಗೆ ಪ್ರಾಂತ್ಯಗಳನ್ನು ನೀಡಿದ.

ಮೂರನೆಯ ಕೃಷ್ಣ 968ರಲ್ಲಿ ನಿಧನನಾದ. ಅನಂತರ ಸಿಂಹಾಸನವೇರಿದ ಖೊಟ್ಟಿಗ ಅಸಮರ್ಥನಾದುದರಿಂದ, ಅವನ ಸಾಮಂತರು ಸ್ವತಂತ್ರರಾಗಲು ಪ್ರಯತ್ನಿಸುತ್ತಿದ್ದುದಲ್ಲದೇ ರಾಷ್ಟ್ರಕೂಟರನ್ನು ನಾಶಮಾಡಲೂ ಹವಣಿಸುತ್ತಿದ್ದರು. ಇವರಲ್ಲಿ ಮುಖ್ಯವಾಗಿ ಪರಮಾರ ಸೀಯಕ ರಾಷ್ಟ್ರಕೂಟರ ಪ್ರದೇಶವನ್ನು ಆಕ್ರಮಿಸಿ ರಾಜಧಾನಿ ಮಾನ್ಯಖೇಟವನ್ನೇ ಆಕ್ರಮಿಸಿದ. ಈ ಸಂದರ್ಭದಲ್ಲಿ ಚಕ್ರವರ್ತಿ ಮೃತನಾದ. ಆಗ ರಾಷ್ಟ್ರಕೂಟ ಸಾಮ್ರಾಜ್ಯ ರಕ್ಷಣೆಗೆ ಬದ್ಧಕಂಕಣನಾಗಿದ್ದ ಮಾರಸಿಂಹ ಪರಮಾರರ ಸೈನ್ಯವನ್ನು ಸೋಲಿಸಿ ವಿಂಧ್ಯದ ಆಚೆಯವರೆಗೂ ಅಟ್ಟಿದ. 973ರಲ್ಲಿ ಚಾಳುಕ್ಯರ ಎರಡನೆಯ ತೈಲ ಸಂಯುಕ್ತ ಸೈನ್ಯವನ್ನು ರಚಿಸಿ ರಾಷ್ಟ್ರಕೂಟ ರಾಜಧಾನಿ ಮಾನ್ಯಖೇಟವನ್ನು ಮುತ್ತಿ ವಶಪಡಿಸಿಕೊಂಡ. ಇದರಿಂದ ರಾಷ್ಟ್ರಕೂಟ ಸಾಮ್ರಾಜ್ಯ ನಿರ್ನಾಮವಾಗುವ ಸ್ಥಿತಿ ಉದ್ಭವಿಸಿತು. ಆಗ ಮಾರಸಿಂಹ ಮೂರನೆಯ ಕೃಷ್ಣನ ಮೊಮ್ಮಗನಾದ ನಾಲ್ಕನೆಯ ಇಂದ್ರನನ್ನು ಚಕ್ರವರ್ತಿ ಎಂದು ಘೋಷಿಸಿ ಅವನಿಗೆ ಬಂಕಾಪುರದಲ್ಲಿ ಪಟ್ಟಕಟ್ಟಿದ. ಆದರೆ ಮಾನ್ಯಖೇಟವನ್ನು ಮಾತ್ರ ಮತ್ತೆ ಪಡೆಯಲಾಗಲಿಲ್ಲ.

ಮಾರಸಿಂಹ ರಾಷ್ಟ್ರಕೂಟರ ದಂಡಯಾತ್ರೆಗಳಲ್ಲಿ ಭಾಗವಹಿಸಿದ್ದಾಗ ನೊಳಂಬರು ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿದ್ದರು. ದೀರ್ಘಕಾಲದಿಂದಲೂ ವೈರಿಗಳಾಗಿದ್ದ ನೊಳಂಬರನ್ನು ನಿರ್ಮೂಲ ಮಾಡುವ ಉದ್ದೇಶದಿಂದ ಮಾರಸಿಂಹ ಅವರ ಮೇಲೆ ಯುದ್ಧ ಕೈಗೊಂಡು ಅವರನ್ನು ಸಂಪೂರ್ಣವಾಗಿ ಸೋಲಿಸಿ, ನೊಳಂಬಕುಲಾಂತಕ ಎಂಬ ಬಿರುದು ಧರಿಸಿದ (ಇವನ ಮಂತ್ರಿ ಚಾವುಂಡರಾಯ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ. ಇದಕ್ಕಾಗಿ ಅವನಿಗೆ ವೀರಮಾರ್ತಾಂಡ ಎಂಬ ಬಿರುದು ನೀಡಲಾಯಿತು). ಆ ನಂತರ ಮಾರಸಿಂಹ ಉಚ್ಚಂಗಿದುರ್ಗವನ್ನು ಹಿಡಿದ. ಚಾಳುಕ್ಯ ವಂಶದ ಒಬ್ಬ ರಾಜಾದಿತ್ಯನನ್ನು ಸೋಲಿಸಿದ. ಅಲ್ಲದೆ ಚೇರ, ಚೋಳ, ಪಲ್ಲವರ ಮೇಲೂ ಜಯಗಳಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ತನ್ನ ಕಾಲದಲ್ಲಿ ಅಸಂಖ್ಯಾತ ಶತ್ರುಗಳನ್ನು ಸಂಹರಿಸಿದರೂ ಸುಸಂಸ್ಕೃತನೂ ಧರ್ಮಾತ್ಮನೂ ಆಗಿದ್ದ ಮಾರಸಿಂಹನ ಮನಸ್ಸು ಕೊನೆಕೊನೆಗೆ ವೈರಾಗ್ಯದತ್ತ ಸರಿಯತೊಡಗಿತು. ಕೊನೆಗೆ 947ರಲ್ಲಿ ಬಂಕಾಪುರದಲ್ಲಿ ಗುರು ಅಜಿತಸೇನಾಚಾರ್ಯರ ಬಳಿ ಸಲ್ಲೇಖನ ವ್ರತ ಕೈಗೊಂಡು ಇಹಲೋಕವನ್ನು ತೊರೆದ.

ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದಲ್ಲಿ ಒಂದು ಸ್ತಂಭದ ಮೇಲೆ ಮಾರಸಿಂಹನ ಚರಮಶಾಸನ ಇದೆ. ನಾಗವರ್ಮ ಮತ್ತು ಕೇಶಿರಾಜ ಎಂಬ ವಿದ್ವಾಂಸರಿಂದ ರಚಿತವಾದ ಈ ಶಾಸನ ಒಂದು ಉತ್ತಮ ಕಾವ್ಯವಾಗಿದೆ. ಇದರಲ್ಲಿ ಮಾರಸಿಂಹನ ಕ್ಷಾತ್ರಸಾಧನೆಗಳನ್ನು ವರ್ಣಿಸಿರುವುದಲ್ಲದೆ, ಇವನನ್ನು ವ್ಯಾಕರಣ, ತರ್ಕ, ತತ್ತ್ವಶಾಸ್ತ್ರ ಮತ್ತು ರಾಜ್ಯನೀತಿಯಲ್ಲಿ ನಿಪುಣ ಎಂದೂ ಹೊಗಳಲಾಗಿದೆ. ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದ ಮೇಲೆ ಇರುವ ಮಾನಸ್ತಂಭವನ್ನೂ ಅನೇಕ ಬಸದಿಗಳನ್ನೂ ಇವನು ಕಟ್ಟಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಮಾರಸಿಂಹನ ಪ್ರಖ್ಯಾತ ಮಂತ್ರಿ ಚಾವುಂಡರಾಯ. ಇವನ ಕಾಲದಲ್ಲಿ ಚಾವುಂಡರಾಯ ಪುರಾಣವನ್ನು ಬರೆದ.

ಮಾರಸಿಂಹನಿಗೆ ಮೂರು ಜನ ಗಂಡುಮಕ್ಕಳಿದ್ದರು. ತಂದೆಯ ಮರಣಾನಂತರ ಹಿರಿಯ ಮಗನಾದ ನಾಲ್ಕನೆಯ ರಾಚಮಲ್ಲ ಸಿಂಹಾಸನವೇರಿದ. (ಡಿ.ಎಸ್.ಜೆ.)

**ಮಾರಿಕಣಿವೆ:** ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ಚಿತ್ರದುರ್ಗ ಬೆಟ್ಟಗಳ ಪೂರ್ವದಲ್ಲಿರುವ ಒಂದು ಕಣಿವೆ. ವೇದಾವತಿ ನದಿ ಈ ಕಣಿವೆಯ ಮೂಲಕ ಹರಿಯುತ್ತದೆ. ಇಲ್ಲಿ ವೇದಾವತಿ ನದಿಗೆ ಅಡ್ಡಗಟ್ಟೆಯನ್ನು ಕಟ್ಟಿ ವಾಣೀವಿಲಾಸ ಸಾಗರವೆಂಬ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಜಲಾಶಯದ ಉದ್ದ 405.38 ಮೀ, ಎತ್ತರ 49.37 ಮೀ. ಜಲಾನಯನ ಪ್ರದೇಶ 80.28 ಚ.ಕಿಮೀ ಜಲಾಶಯದ ನೀರು ಶೇಖರಣಾ ಸಾಧ್ಯತೆ ಸು. 30,000 ಮಿಲಿಯನ್ ಕ್ಯೂಬಿಕ್ ಅಡಿ. ಈ ಜಲಾಶಯ 10117.50 ಹೆ. ಭೂಮಿಗೆ ನೀರುಣಿಸುತ್ತದೆ. 1898ರಲ್ಲಿ ಇದರ ನಿರ್ಮಾಣ ಕಾರ್ಯ ಆರಂಭವಾಗಿ 1907ರಲ್ಲಿ ಪೂರ್ಣಗೊಂಡಿತು.

ಈ ಜಲಾಶಯಕ್ಕೆ ಸೇರಿದಂತೆಯೇ ಒಂದು ಮಾರಿದೇವತೆಯ ಗುಡಿ ಇದೆ. ಹಿಂದೆ ಈ ಸ್ಥಳದಲ್ಲಿ ಹಳ್ಳಿಯ ಜನ ಈ ಮಾರಿಯನ್ನು ಕಣಿವೆ ಮಾರಮ್ಮ ಎಂಬುದಾಗಿ ಕರೆಯುತ್ತಿದ್ದರು. ಅದೇ ಹೆಸರನ್ನು ಈ ಕಣಿವೆಗೂ

ಕೊಡಲಾಗಿದೆ. ಮಾರಿಯ ದೇವಾಲಯ ಮೊದಲು ಮರದಿಂದ ನಿರ್ಮಿತವಾಗಿದ್ದು ಅನಂತರ ಕಲ್ಲಿನಿಂದ ಕಟ್ಟಲಾಗಿದೆ. ದೇವಾಲಯದಲ್ಲಿ ಮೂರು ಶಿಲ್ಪಗಳಿವೆ. ಪಾರ್ವತಿಯ ವಿಗ್ರಹ ಮಧ್ಯದಲ್ಲಿದ್ದು ಬಲಗಡೆ ಲಕ್ಷ್ಮಿ, ಎಡಗಡೆ ಮಾರಿಯ ವಿಗ್ರಹಗಳಿವೆ. ದೇವಾಲಯದ ಮುಂಭಾಗದಲ್ಲಿ ಕಬ್ಬಿಣದಿಂದ ಮಾಡಿದ 2.43 ಮೀ. ಎತ್ತರದ ದೀಪವಿದೆ. ವರ್ಷಕ್ಕೊಮ್ಮೆ ಈ ದೀಪವನ್ನು ಹಚ್ಚಲಾಗುವುದು.

ಮಾರಿಕಣಿವೆ ಸುಂದರವಾದ ಪ್ರಕೃತಿದೃಶ್ಯಗಳಿಂದ ಕೂಡಿದ್ದು ಕರ್ನಾಟಕ ರಾಜ್ಯದ ಒಂದು ಉತ್ತಮ ಪ್ರವಾಸಿಕೇಂದ್ರವೂ ಆಗುವ ಸಾಧ್ಯತೆಯನ್ನು ಪಡೆದಿದೆ. (ಆರ್.ಸಿ.)

**ಮಾರಿಕುಣಿತ:** ಮಾರಿಹಬ್ಬದ ಸಂದರ್ಭದಲ್ಲಿ ನಡೆಯುವ ಒಂದು ಬಗೆಯ ಜನಪದ ಕುಣಿತ. ಮಾರಿ ಒಂದು ಶಕ್ತಿ ದೇವತೆ (**ನೋಡಿ: ಮಾರಮ್ಮ**). ಈಕೆ ಪಾರ್ವತಿಯ ಒಂದು ರೂಪ. ಗ್ರಾಮ ರಕ್ಷಣೆ ಇವಳ ಹೊಣೆ. ಚಾಂದ್ರಮಾನ ಫಾಲ್ಗುಣ ಮಾಸ ಎಂದರೆ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಇವಳ ಆರಾಧನೆಯನ್ನು ಹಬ್ಬ ಮತ್ತು ಜಾತ್ರೆಯ ರೂಪದಲ್ಲಿ ವಿಶೇಷವಾಗಿ ನಡೆಸುತ್ತಾರೆ. ಆ ಸಂದರ್ಭದಲ್ಲಿ ಇವಳ ಸ್ತುತಿರೂಪವಾದ, ಬಹುಪಾಲು ತ್ರಿಪದಿಗಳಲ್ಲಿರುವ ಹಾಡುಗಳನ್ನು ಹೇಳಿಕೊಂಡು ಜನರು ಸಂಭ್ರಮದಿಂದ ಕುಣಿಯುತ್ತಾರೆ. ಆದುದರಿಂದ ಇದು ಮಾರಿಕುಣಿತ ಎಂದೇ ಪ್ರಸಿದ್ಧವಾಗಿದೆ. ಮಾರಿ ದುಷ್ಟ ಶಕ್ತಿಗಳನ್ನು ದಮನ ಮಾಡಿದ ಸಂತೋಷಾರ್ಥವಾಗಿ ತನ್ನ ವೀರಮಕ್ಕಳೊಡನೆ ಕುಣಿಯುತ್ತಾ ಬಂದುದರ ಸಂಕೇತವಾಗಿ ಈ ಕುಣಿತ ರೂಪುಗೊಂಡಿದೆ. ಈ ಸಂದರ್ಭದಲ್ಲಿ ಕೆಲವು ಕಡೆ ಕೊಂಡ ಹಾಯುವ ಪದ್ಧತಿಯೂ ಇದೆ. ಈ ಕುಣಿತದ ಸಾಲಿಗೆ ವೀರ ಮಕ್ಕಳ ಕುಣಿತ, ರಂಗದ ಕುಣಿತಗಳನ್ನೂ ಸೇರಿಸಬಹುದು. ಆದರೆ ಅವು ಕಾಲ ಮತ್ತು ಪ್ರಾಂತ ಭೇದಗಳಿಗೆ ಒಳಗಾಗಿರುತ್ತವೆ. ಕೆಲವು ಕಡೆ ಯುಗಾದಿ ದಿನ ರಂಗವಲ್ಲಿ ಕರ್ಕು ಹಾಕುವ ಮೂಲಕ ಆರಂಭಮಾಡಿ ಅಲ್ಲಿಂದ ಒಂದು ತಿಂಗಳಿಗೆ ಹಬ್ಬ ಆರಂಭವಾಗುತ್ತದೆ.

ಕುಣಿತದಲ್ಲಿ ಮೂರು ಕಾಲಗಳಿವೆ. ಆರಂಭದ ಕುಣಿತವನ್ನು ಒಂದನೆಯ ಕಾಲ ಎನ್ನುವರು. ಇದರಲ್ಲಿ ಮಕ್ಕಳು ಮರಿ ಎಲ್ಲರನ್ನೂ ಕುಣಿಸುತ್ತಾರೆ. ಕುಣಿತ ತೀವ್ರವಾದಾಗ ಎರಡನೆಯ ಕಾಲ ಎನ್ನುತ್ತಾರೆ. ಮೂರನೆಯ ಹಂತ ಜಾಗರ ಎಂದರೆ ಬೆಳಗು ಪೂರ್ತಿ ಕುಣಿಯುವುದು. ಈ ಸಂದರ್ಭದಲ್ಲಿ ಕುಣಿತ ಭಕ್ತಿಯ ಪರಾಕಾಷ್ಠೆ ಮುಟ್ಟುತ್ತದೆ. ಸುತ್ತಮುತ್ತಲ ಊರುಗಳಿಂದ ಗ್ರಾಮದೇವತೆಗಳನ್ನು ತಂದು ಕುಣಿಯುತ್ತಾರೆ. ಕೆಲವು ಕಡೆ ಏಳು ಊರುಗಳ ಕುಣಿತದವರು ಕುಣಿಯಲೇಬೇಕೆನ್ನುವ ಸಂಪ್ರದಾಯವಿದೆ. ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಈ ಕುಣಿತ ಹೆಚ್ಚು ಪ್ರಚಲಿತವಾಗಿದೆ. ಇದರಲ್ಲಿ ವಯೋಭೇದವಿಲ್ಲ. ಎಷ್ಟು ಜನ ಬೇಕಾದರೂ ಕುಣಿಯಬಹುದು. ಆದರೆ ಅವರಿಗೆ ಕುಣಿತದ ಅಭ್ಯಾಸವಿರಬೇಕು. ದೈವಾರಾಧನೆ ಮತ್ತು ಆನಂದ ಈ ಕುಣಿತದ ಗುರಿ.

ಮಾರಿಹಬ್ಬ ಸಾಮಾನ್ಯವಾಗಿ ಮಂಗಳವಾರ ಆರಂಭವಾಗಿ 3 ರಿಂದ 5 ದಿನಗಳ ಕಾಲ ನಡೆಯುತ್ತದೆ. ಜನರು ಸ್ನಾನ ಮಡಿ ಮಾಡಿ ನಿಷ್ಠೆಯಿಂದ ಭಕ್ತಿ ಭಾವದಿಂದ ಹಬ್ಬವನ್ನು ಆಚರಿಸುತ್ತಾರೆ. ಊರಿನಲ್ಲಿ ಬೇರೆ ಬೇರೆ ಕೋಮಿನವರಿಗೆ ಈ ಹಬ್ಬಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಕರ್ತವ್ಯಗಳಿರುತ್ತವೆ. ಗುಡಿಗೆ ಸುಣ್ಣ ಬಣ್ಣ ಮಾಡಿ ಚಪ್ಪರ ಹಾಕುತ್ತಾರೆ. ಮಧ್ಯಾಹ್ನದ ವೇಳೆಗೆ ಎಳನೀರು, ಮೊಸರನ್ನ ಹಸಿ ಅಕ್ಕಿ ತಂಬಿಟ್ಟು ನೈವೇದ್ಯ ಮಾಡಿ ತಂಪು ಮಾಡುತ್ತಾರೆ. ಪ್ರಾಣಿ ಬಲಿಯನ್ನು ಕೊಡುವುದೂ ರೂಢಿಯಲ್ಲಿದ್ದಿತು. ಈಚೆಗೆ ಈ ಪದ್ಧತಿ ಕಡಿಮೆಯಾಗುತ್ತಿದೆ.

ತೀರ್ಥಪ್ರಸಾದ ಸೇವನೆಯ ಅನಂತರ ಸಂಜೆಯ ಸುಮಾರಿಗೆ ಮಾರಿ ಕುಣಿತ ಪ್ರಾರಂಭವಾಗುತ್ತದೆ. ಇದು ಇಡೀ ರಾತ್ರಿ ಮುಂದುವರಿಯುತ್ತದೆ. ಕೆಲವು ಕಡೆ ಮಾರನೆಯ ದಿನ ಸಂಜೆ ತಮ್ಮಡಿಗಳು ಕೊಂಡ ಹಾಯುತ್ತಾರೆ. ಅನಂತರವೂ ಮಾರಿಕುಣಿತ ನಡೆಯುತ್ತದೆ. ಕುಣಿಯುವಾಗ ತಲೆಗೆ ಎಲೆವಸ್ತ್ರ ಸುತ್ತಿರುತ್ತಾರೆ. ಒಂದೇ ಬಗೆಯ ಅಂಗಿ ಮತ್ತು ಏರುಗಚ್ಚೆ ಹಾಕಿರುತ್ತಾರೆ. ಈಚೀಚೆಗೆ ಸಮವಸ್ತ್ರ (ನಿಕ್ಕರು ಮತ್ತು ಬನೀನು) ಹಾಕಿರುತ್ತಾರೆ. ಕೈಯಲ್ಲಿ ಒಂದು ಚೌಕವಿರುತ್ತದೆ. ಕಾಲಿಗೆ ಗೆಜ್ಜೆಯನ್ನು ಕಟ್ಟಿರುತ್ತಾರೆ. ಈ ಕುಣಿತಕ್ಕೇ ವಿಶಿಷ್ಟವಾದ ಚಕ್ರಬಳೆಯ ಲಯ ಮತ್ತು ಗತ್ತಿಗೆ ಅನುಗುಣವಾಗಿ ಕುಣಿಯುತ್ತಾರೆ. ಕೆಲವು ಕಡೆಗಳಲ್ಲಿ ಡೋಲು, ಶೃತಿ, ಓಲಗ, ಕೈತಾಳ, ಗಿಡಿ ಮತ್ತು ಎರಡು ಮೂರು ತಮಟೆಗಳನ್ನು ಬಳಸುವುದುಂಟು.

ಕಲಾವಿದರು ಒಂದೇ ಸಾಲಿನಲ್ಲಿ, ಹಲವು ಸಾಲುಗಳಲ್ಲಿ ಅಥವಾ ವೃತ್ತಾಕಾರದಲ್ಲಿ ನಿಂತು ಕುಣಿಯುತ್ತಾರೆ. ಕಾಲಿನ ಚಲನೆ ನಿಧಾನವಾಗಿ ಆರಂಭವಾಗಿ ಕ್ರಮೇಣ ತೀವ್ರಗೊಳ್ಳುತ್ತ ಹೋಗುತ್ತದೆ. ಈ ಕುಣಿತದಲ್ಲಿ ಆಯಾಯ ಗತಿಗೆ ಮೀಸಲಾದ ನಿರ್ದಿಷ್ಟ ಹೆಜ್ಜೆಗಳ ಗಣನೆಯಿರುವ ನಾನಾ ಬಗೆಯ ಗತಿಗಳಿವೆ. ಇವುಗಳಲ್ಲಿ ಮಾರಮ್ಮನ ಗತಿ, ತಿರುಗಣಿಗತಿ, ನಂದಿಕಂಬದ ಗತಿ, ಕೂತಾಟದ ಗತಿ, ಬಾಬಯ್ಯನ ಗತಿ, ಸೈಕಲ್ ಗತಿ, ಒಳಗತಿ, ಕೀಳುಸೀಮೆಗತಿ, ಬೈಸಿಗೆಗತಿ, ಕತ್ತರಗಾಲಗತಿ, ತಮ್ಮಡಿ ಗತಿ, ತಟ್ಟೆಜ್ಜೆ, ದೊಡ್ಡ ಹೆಜ್ಜೆ, ಚಿಕ್ಕ ಹೆಜ್ಜೆ ಮುಂತಾದ ಪ್ರಭೇದಗಳಿವೆ.

ಪ್ರಾರ್ಥನಾ ಗತಿಯಾದ ಮಾರಮ್ಮನ ಗತಿಯಲ್ಲಿ 3 ಹೆಜ್ಜೆ ಹಾಕುತ್ತಾರೆ. ಎಡದಿಂದ ಬಲಕ್ಕೆ ಮತ್ತು ಬಲದಿಂದ ಎಡಕ್ಕೆ ಮೂರು ಮೂರು ಹೆಜ್ಜೆ ಹೀಗೆ ಒಟ್ಟು 6 ಹೆಜ್ಜೆ ಹಾಕಿ ತಿರುಗುವುದು ತಿರುಗಣಿಗತಿ. ಎಡದ ಕಾಲನ್ನು 3 ಸಾರಿ ಬಲದ ಕಾಲನ್ನು 3 ಸಾರಿ ನೆಲಕ್ಕೆ ಕುಟ್ಟುವುದು ನಂದಿಕಂಬದ ಗತಿ. ಕೂತಾಟದ ಗತಿ ಮತ್ತು ಬಾಬಯ್ಯನ ಗತಿಗಳಲ್ಲಿ ಭಿನ್ನ ವಿನ್ಯಾಸದ 5 ಹೆಜ್ಜೆ ಗತಿಗಳಿವೆ. ಕುಣಿಯುವಾಗ ಕೈಗಳನ್ನು ಸೈಕಲ್ ಪೆಡಲಿನಂತೆ ಮೇಲೆ ಕೆಳಗೆ ಆಡಿಸುವುದರಿಂದ ಸೈಕಲ್‌ಗತಿ ಎನ್ನುವ ಹೆಸರು ಬಂದಿದೆ. ಎಡಗಿರಿಕ, ಬಲಗಿರಿಕ ಎನ್ನುವ ಒಳ ಭೇದಗಳಿರುವ ಕತ್ತರಗಾಲಗತಿಯಿದೆ.

ಕುಣಿಯುವಾಗ ಬಲಗೈ ಸೊಂಟದ ಮೇಲಿದ್ದರೆ ಎಡಗೈ ಮುಂದೆ ಚಾಚಿರುತ್ತದೆ. ಎಡಗೈ ಸೊಂಟದ ಮೇಲಿದ್ದರೆ ಬಲಗೈ ಮುಂದೆ ಚಾಚಿರುತ್ತದೆ. ಕುಣಿತದ ಪ್ರಾರಂಭ ಒಂದನೆಯ ಕಾಲದಲ್ಲಿರುತ್ತದೆ. ಮಧ್ಯಭಾಗ ಸ್ವಲ್ಪ ತ್ವರಿತಗೊಂಡು ಎರಡನೆಯ ಕಾಲಕ್ಕೆ ಬರುತ್ತದೆ. ಮುಂದುವರಿದ ಕುಣಿತ ತನ್ನ ಪರಾಕಾಷ್ಠೆಗೆ ಬಂದು ಮೂರನೆಯ ಕಾಲಕ್ಕೆ ಬರುತ್ತದೆ. ಕುಣಿತ ಬದಲಾಗುವ ಮತ್ತು ಮುಗಿಯುವ ಸಂದರ್ಭವನ್ನು ಕಾಕುಹಾಕಿ–ಹೋ ಎನ್ನುವ ಉದ್ಗಾರದ ಮೂಲಕ ಸೂಚಿಸುತ್ತಾರೆ. *

**ಮಾರಿಸನ್, ವಿಲಿಯಂ:** ಮೈಸೂರು ಸಂಸ್ಥಾನದ ಬ್ರಿಟಿಷ್ ಕಮಿಷನರ್ (1833–34). ಪ್ರಾರಂಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿ ಸಾಮಾನ್ಯ ಹುದ್ದೆಯಲ್ಲಿದ್ದ. ಈತನ ಪ್ರತಿಭೆ ಮತ್ತು ದಕ್ಷತೆಯನ್ನು ಕಂಡು ಸಿಪಾಯಿದಳದಿಂದ ಫಿರಂಗಿ ದಳಕ್ಕೆ ಇವನನ್ನು ವರ್ಗಾಯಿಸಿ ಸೈನಿಕರಿಗೆ ಶಿಕ್ಷಣ ಕೊಡಲು ನೇಮಿಸಲಾಯಿತು. ಸ್ವಲ್ಪ ಕಾಲಾನಂತರ ಮೋಜಣಿ ಇಲಾಖೆಯಲ್ಲಿ ಸರ್ವೇಯರ್ ಜನರಲ್ ಆದ. ಮಿಲಿಟರಿ ಆಹಾರ ಸರಬರಾಜು ಇಲಾಖೆ ಸ್ಥಾಪಿತವಾದ ಮೇಲೆ 1810 ರಲ್ಲಿ ಆ ಇಲಾಖೆಯ ಕಮಿಸರಿ ಜನರಲ್ ಆಗಿದ್ದ. ಆಗ ಇವನ ಕಾರ್ಯಕೇಂದ್ರ ಹುಣಸೂರು. ಆಗ ಕ್ಯಾಪ್ಟನ್ ಹುದ್ದೆಯಲ್ಲಿದ್ದರೂ ಇವನ ದಕ್ಷತೆಯಿಂದ ಮೇಜರ್ ದರ್ಜೆ ದೊರಕಿ ಸೈನಿಕ ಮಂಡಲಿಯ ಸದಸ್ಯನಾದ. ಇವನ ಕೈಕೆಳಗೆ 7 ಜನ ಅಧಿಕಾರಿಗಳು ಸಹಾಯಕರಾಗಿ, 4ಜನ ಅಧಿಕಾರಿಗಳು ಉಪಸಹಾಯಕರಾಗಿ ಇದ್ದರು. ತರುವಾಯ ಲೆಫ್ಟಿನೆಂಟ್ ಕರ್ನಲ್ ಹುದ್ದೆ ಪಡೆದ. ಅನಂತರ ತಿರುವಾಂಕೂರು ಸಂಸ್ಥಾನದ ರೆಸಿಡೆಂಟ್ ಆದ.

ಈ ಮಧ್ಯೆ, 1831ರ ಹೊತ್ತಿಗೆ ಮೈಸೂರಿನ ಆಡಳಿತ ಹದಗೆಟ್ಟು, ಕಂದಾಯ ವಸೂಲಾಗದೆ, ನಗರ ಪ್ರಾಂತ್ಯದಲ್ಲಿ ದಂಗೆಗಳು ತಲೆದೋರಿದವು. ಭಾರತದ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಆ ಬಗ್ಗೆ ವಿಚಾರಣೆ ನಡೆಸಲು ಕಳುಹಿಸಿದ ಸಮಿತಿಯಲ್ಲಿ ವಿಲಿಯಂ ಮಾರಿಸನ್ ಸಹ ಇದ್ದ. ಮೈಸೂರು ಸಂಸ್ಥಾನದಲ್ಲಿ ಕಮಿಷನ್ ಆಡಳಿತ ಜಾರಿಗೆ ಬಂದಮೇಲೆ ಮೊದಲನೆಯ ಕಮಿಷನರ್ ಜಾನ್ ಬ್ರಿಗ್ಸ್‌ನ ತರುವಾಯ ಮಾರಿಸನ್ 1833 ಫೆಬ್ರವರಿ 6ರಿಂದ 1834ರ ಏಪ್ರಿಲ್ ವರೆಗೆ ಸೀನಿಯರ್ ಕಮಿಷನರ್ ಆಗಿಯೂ ಅನಂತರ ಜೂನ್ 1834ರಿಂದ ಏಕೈಕ ಕಮಿಷನರ್ ಆಗಿಯೂ ಇದ್ದ. 1834ರಲ್ಲಿ ಮಾರಿಸನ್ ಕಲ್ಕತ್ತದಲ್ಲಿ ಗವರ್ನರ್ ಜನರಲ್ ಅವರ ಪರಿಷತ್ತಿನ ಸದಸ್ಯನಾಗಿ ನೇಮಕಗೊಂಡ.

ಮಾರಿಸನ್ ಯಾವ ಕೆಸವನ್ನೇ ಆಗಲಿ ದಕ್ಷತೆಯಿಂದ ನಿರ್ವಹಿಸುತ್ತಿದ್ದ. ರಾಬರ್ಟ್ ಕ್ಲೈವನ ಕಾಲದ ತರುವಾಯ ಮದರಾಸು ಸರ್ಕಾರದಿಂದ ಗವರ್ನರ್ ಜನರಲ್ ಸಭೆಗೆ ಆಯ್ಕೆಯಾದವರಲ್ಲಿ ಇವನೇ ಮೊದಲಿಗ. ಇವನು ಬರೆದ ನೋಟ್ಸ್ ಆನ್ ಮೈಸೂರ್ ಎಂಬ ಸರ್ಕಾರಿ ಟಿಪ್ಪಣಿಗಳು ಇವನ ಕಾಲದಲ್ಲಿ ಮೈಸೂರಿನ ಆಡಳಿತ ಹೇಗಿದ್ದಿತೆಂಬುದನ್ನು ತಿಳಿಸುತ್ತವೆ.

(ವಿ.ಜಿ.ಕೆ.;*)

ಈ ಟಿಪ್ಪಣಿಗಳು ಮತ್ತು ಬೆಂಟಿಂಕನ ಸೂಚನೆಗಳ ಮೇರೆಗೆ ಸಂಸ್ಥಾನದ ಆಡಳಿತ ವ್ಯವಸ್ಥೆಯಲ್ಲಿ ಇವನ ಕಾಲದಲ್ಲಿ ಪ್ರಮುಖ ಬದಲಾವಣೆಗಳಾದುವು. ಆಗ ಇದ್ದ ನಾಲ್ಕು ಜನ ಭಾರತೀಯ ಫೌಜುದಾರರ ಸ್ಥಾನದಲ್ಲಿ ನಾಲ್ಕು ಜನ ಐರೋಪ್ಯ ಸೂಪರಿಂಟೆಂಡೆಂಟರು ನಿಯಮಿತರಾದರು. ಇವರು ಕಂದಾಯ ಮತ್ತು ನ್ಯಾಯಾಂಗಗಳ ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು. ಅಲ್ಲದೆ ಇವರು ಸಾಮಾನ್ಯ ಆಡಳಿತದ ಎಲ್ಲ ಇಲಾಖೆಗಳ ಮೇಲೂ ಸ್ವಲ್ಪಮಟ್ಟಿನ ನಿಯಂತ್ರಣವನ್ನು ಹೊಂದಿದ್ದರು. ಇವರು ಹಿಂದಿನಿಂದ ಬಂದಿದ್ದ ಸ್ಥಳೀಯ ರೀತಿನಿಯಮಗಳನ್ನು ಅದರಲ್ಲೂ ಧರ್ಮಸಂಬಂಧವಾದವುಗಳನ್ನು ಗೌರವಿಸಿ ಮುಂದುವರೆಸಿಕೊಂಡು ಹೋಗಬೇಕೆಂದು ತೀರ್ಮಾನಿಸಲಾಗಿತ್ತು. ಸ್ಥಳೀಯ ಅಮೀಲರು ಪೊಲೀಸ್ ಕಾರ್ಯಗಳನ್ನು ಮಾತ್ರ ನಿರ್ವಹಿಸುವಂತೆ ವ್ಯವಸ್ಥೆ ಮಾಡಿ, ನ್ಯಾಯ ವಿತರಣ ಕರ್ತವ್ಯಗಳನ್ನು ಅವರ ಕಕ್ಷೆಯಿಂದ ತೆಗೆಯಲಾಯಿತು. ಛಡಿ, ಅಂಗ ಛೇದನ ಮೊದಲಾದ ದೈಹಿಕ ಶಿಕ್ಷೆ ನೀಡುವುದನ್ನು ಪೂರ್ಣವಾಗಿ ನಿಲ್ಲಿಸಲಾಯಿತು. ಕೊಲೆ, ದರೋಡೆಗಳಿಗೆ ಮಾತ್ರ ಮರಣದಂಡನೆಯನ್ನು ಸೀಮಿತಗೊಳಿಸಲಾಯಿತು. ಹಿಂದೆ ಬ್ರಿಗ್ಸ್‌ನ ಕಾಲದಲ್ಲಿ ಪಟೇಲರಿಗಿದ್ದ ನ್ಯಾಯವಿತರಣಾ ಕಾರ್ಯವನ್ನು ಹಿಂತೆಗೆದು ಕೊಂಡು ಅವರ ಹಣಕಾಸಿನ ಕರ್ತವ್ಯಗಳನ್ನೂ ಮೊಟಕುಗೊಳಿಸಿ ಅದಕ್ಕಾಗಿ ವ್ಯವಸ್ಥಿತ ನಿರ್ದೇಶಕ ನಿಯಮಗಳನ್ನು ರಚಿಸಲಾಯಿತು. ಕಂದಾಯ ವಸೂಲಿ ಪದ್ಧತಿಯನ್ನು ಪುನರ್ವಿಮರ್ಶಿಸುವ ಕ್ರಮ ತೆಗೆದುಕೊಳ್ಳ ಲಾಯಿತು. ಇದರಲ್ಲಿ ರೈತರ ಹಕ್ಕುಗಳನ್ನು ಅಮೀಲರು ಬಾಧಿಸದಂತೆ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದಲ್ಲದೆ, ಧಾನ್ಯ ರೀತಿಯಲ್ಲಿ ಸಂಗ್ರಹಿಸುತ್ತಿದ್ದ ಕಂದಾಯವನ್ನು ಹಣದ ರೂಪದಲ್ಲಿಯೇ ವಸೂಲಿ ಮಾಡುವ ಕ್ರಮದ ಬಗ್ಗೆ ಆದ್ಯತೆ ನೀಡಲಾಯಿತು. ಕಮಿಷನರ್ ಈ ಎಲ್ಲ ಕಾರ್ಯಗಳನ್ನೂ ತನ್ನ ನಾಲ್ಕು ಜನ ಐರೋಪ್ಯ ಸೂಪರಿಂಟೆಂಡೆಂಟರು ಮತ್ತು ದಿವಾನ ಕಛೇರಿಯ ಸಿಬ್ಬಂದಿಯ ಸಹಾಯದೊಡನೆ ನಿರ್ವಹಿಸುವ ಏರ್ಪಾಡಾಗಿ ಕ್ರಮೇಣ ದಿವಾನ ಹುದ್ದೆಯನ್ನು ರದ್ದು ಮಾಡುವಂತಾಯಿತು. *

**ಮಾಲತಿ ಕೃಷ್ಣಮೂರ್ತಿ ಹೊಳ್ಳ**: 1958–. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಂಗವಿಕಲರ ಸ್ಪರ್ಧೆಗಳಲ್ಲಿ ಭಾಗವಹಿಸಿ ಅಪ್ರತಿಮ ಸಾಧನೆಗೈದ ಪ್ರಸಿದ್ಧ ಕ್ರೀಡಾಪಟು. ಬಾಲ್ಯದಲ್ಲಿ ಪೋಲಿಯೋಗೆ ತುತ್ತಾಗಿ ಕಾಲು ಕಳೆದುಕೊಂಡರು. ಇವರು ಜುಲೈ 1958ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಮಹಾರಾಣಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವಿ ಪಡೆದರು.

ಬೆಂಗಳೂರಿನಲ್ಲಿ ನಡೆದ ಅಂಗವಿಕಲರ ಸ್ಪರ್ಧೆಗಳಲ್ಲಿ 2 ಚಿನ್ನದ ಪದಕಗಳನ್ನು (ವ್ಹೀಲ್‌ಚೇರ್ ಮತ್ತು ಅಡೆ–ತಡೆಗಳ ಸ್ಪರ್ಧೆಗಳಲ್ಲಿ) ಮತ್ತು 2 ಬೆಳ್ಳಿ ಪದಕಗಳನ್ನು (ಗುಂಡು ಎಸೆತ ಮತ್ತು ಭರ್ಜಿ ಎಸೆತ) ಪಡೆಯುವುದರ ಮೂಲಕ ಕ್ರೀಡಾ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಇವರು ಸಿಂಗೋಲ್‌ನಲ್ಲಿ ನಡೆದ (1998) ಅಂಗವಿಕಲರ ಒಲಂಪಿಕ್ಸ್‌ನಲ್ಲಿ 100 ಮೀಟರ್ಸ್ ಸ್ಪರ್ಧೆಯಲ್ಲಿ ವಿಫಲರಾದರೂ 200 ಮೀಟರ್ಸ್ ಸ್ಪರ್ಧೆಯಲ್ಲಿ ಅಂತಿಮ ಸ್ಪರ್ಧೆಗೆ ಅರ್ಹತೆ ಪಡೆದುಕೊಂಡರು. ಡೆನ್ಮಾರ್ಕ್‌ನಲ್ಲಿ ನಡೆದ ಮಾಸ್ಟರ್ ಕ್ರೀಡಾಕೂಟದಲ್ಲಿ 4 ಚಿನ್ನದ ಪದಕಗಳನ್ನು (100ಮೀ, 200ಮೀ, ವ್ಹೀಲ್‌ಚೇರ್ ಸ್ಪರ್ಧೆ, ಗುಂಡು ಎಸೆತ, ಚಕ್ರ ಎಸೆತ) ಪಡೆಯುವಲ್ಲಿ ಯಶಸ್ವಿಯಾದರು. ಎರಡು ವರ್ಷಗಳ ಅನಂತರ ಇವರು ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡ್‌ನಲ್ಲಿ ನಡೆದ ಸ್ಪರ್ಧೆಗಳಲ್ಲಿ ದಾಖಲೆಗಳೊಂದಿಗೆ 3 ಚಿನ್ನದ ಪದಕಗಳನ್ನು [ಗುಂಡು, ಭರ್ಜಿ, ಚಕ್ರ, ಎಸೆತ] ಪಡೆಯುವಲ್ಲಿ ಯಶಸ್ವಿಯಾದರು. ಇವರು ಈಗ ವ್ಹೀಲ್‌ಚೇರ್ ಸ್ಪರ್ಧೆಗಳಿಗೆ ಹೆಚ್ಚು ಗಮನಹರಿಸದೆ ಚಕ್ರ ಎಸೆತಕ್ಕೆ ಹೆಚ್ಚು ಗಮನ ಹರಿಸುತ್ತಿದ್ದಾರೆ. 1999ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಅಂಕವಿಕಲ ಸ್ಪರ್ಧೆಯಲ್ಲಿ ಇವರು 13.80 ಮೀ ದೂರ ಎಸೆಯುವುದರೊಂದಿಗೆ ಬೆಳ್ಳಿ ಪದಕ ಪಡೆದಿದ್ದಾರೆ.

ಇವರು ತಮ್ಮ ಕ್ರೀಡಾ ಜೀವನದಲ್ಲಿ 118 ಚಿನ್ನ, 17 ಬೆಳ್ಳಿ, 8 ಕಂಚು ಪದಕಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇದರಲ್ಲಿ 7 ಚಿನ್ನದ ಪದಕಗಳು ಅಂತಾರಾಷ್ಟ್ರೀಯ ಮಟ್ಟದ್ದಾಗಿವೆ.

ಇವರಿಗೆ ಭಾರತ ಸರ್ಕಾರ 1995ರಲ್ಲಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಅಪ್ರತಿಮ ಕ್ರೀಡಾ ಸಾಧನೆಗಾಗಿ ಪದ್ಮಶ್ರೀ ಪ್ರಶಸ್ತಿಯೂ ಲಭಿಸಿದೆ (2001). ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೆ.ಕೆ.ಬಿರ್ಲಾ ಪ್ರಶಸ್ತಿ, ಪ್ರತಿಭಾಶ್ರೀ ಪ್ರಶಸ್ತಿ, ಮಾರ್ಗದರ್ಶಿ ಪ್ರಶಸ್ತಿ, ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ– ಇವು ಇವರು ಪಡೆದಿರುವ ಇತರ ಪ್ರಶಸ್ತಿಗಳು. ಈಗ ಇವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಕನ್ನಡ ಚಿತ್ರರಂಗದಲ್ಲಿಯೂ ಅಭಿನಯಿಸಿದ್ದಾರೆ. (ಎಸ್.ಆರ್.ಯು.)

**ಮಾಲೂರು:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ, ಪಟ್ಟಣ. ಕೋಲಾರ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕನ್ನು ಪೂರ್ವದಲ್ಲಿ ಬಂಗಾರಪೇಟೆ, ಉತ್ತರದಲ್ಲಿ ಕೋಲಾರ, ಪಶ್ಚಿಮದಲ್ಲಿ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕುಗಳೂ ದಕ್ಷಿಣದಲ್ಲಿ ತಮಿಳುನಾಡು ಬಳಸಿವೆ. ತಾಲ್ಲೂಕಿನಲ್ಲಿ ಒಟ್ಟು 364 ಗ್ರಾಮಗಳಿವೆ. ಲಕ್ಕೂರು, ಮಾಲೂರು, ಮಾಸ್ತಿ ಮತ್ತು ಟೇಕಲ್ ಹೋಬಳಿಗಳು. ವಿಸ್ತೀರ್ಣ 648 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,07,009.

ತಾಲ್ಲೂಕು ಪಾಲಾರ್ ಮತ್ತು ದಕ್ಷಿಣ ಪಿನಾಕಿನಿ ನದಿಗಳ ಜಲವಿಭಾಜಕ ಪ್ರದೇಶದಲ್ಲಿದೆ. ಇಲ್ಲಿಯ ಎತ್ತರ ಪ್ರದೇಶಗಳು ಶುಷ್ಕವಾಗಿಯೂ ಕುರುಚಲು ಕಾಡಿನಿಂದಲೂ ಕೂಡಿವೆ. ವಕ್ಕಲೇರಿ ಮತ್ತು ಟೇಕಲ್ ಬಳಿ ಕಣಶಿಲೆಯ ಬೆಟ್ಟಗಳಿವೆ. ತಾಲ್ಲೂಕಿನ ಬಹು ಭಾಗದಲ್ಲಿ ಅದರಲ್ಲೂ ಮಾಲೂರು ಮತ್ತು ಲಕ್ಕೂರು ಹೋಬಳಿಗಳಲ್ಲಿ ಮರಳು ಮಿಶ್ರಿತ ಕೆಂಪುಮಣ್ಣಿನ ಭೂಮಿ ಇದೆ. ಟೇಕಲ್ ಬೆಟ್ಟಗಳ ಬಳಿಗೆ ಸರಿದಂತೆ ಈ ಮಣ್ಣಿನ ಆಳ ಕಡಿಮೆಯಾಗುತ್ತದೆ. ಕರಡಿಬಂಡೆ ಮತ್ತು ದೊಡ್ಡ ಕುಂತೂರುಗಳ ಬಳಿ ಪಿಂಗಾಣಿ ಮಣ್ಣು ಇದೆ. ತಾಲ್ಲೂಕಿನ ಫಲವತ್ತಾದ ಪ್ರದೇಶ ಮಾಸ್ತಿ ಹೋಬಳಿ. ಇಲ್ಲಿ ದಕ್ಷಿಣ ಪಿನಾಕಿನಿಗೆ ಸೇರುವ ತೊರೆಗಳು ಹರಿಯುತ್ತವೆ. ಮಾರ್ಕಂಡೇಯ ನದಿಯ ಒಂದು ಕವಲು ಈ ತಾಲ್ಲೂಕಿನ ಟೇಕಲ್ ಬೆಟ್ಟಗಳ ಬಳಿ ಹುಟ್ಟಿ ಆಗ್ನೇಯ ದಿಕ್ಕಿನಲ್ಲಿ ಹರಿದು ಪಕ್ಕದ ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಬಳಿ ಮತ್ತೊಂದು ಕವಲನ್ನು ಸೇರಿಕೊಳ್ಳುವುದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 733 ಮಿಮೀ. ತಾಲ್ಲೂಕಿನ ಒಟ್ಟು 6440.71 ಹೆ 1536.24 ಹೆ ಅರಣ್ಯ ಪ್ರದೇಶವೂ 1464.98 ಹೆ ಹುಲ್ಲುಗಾವಲೂ ಇದ್ದು 2541.07 ಹೆ ವ್ಯವಸಾಯ ಮಾಡಲಾಗಿತ್ತು. ಈ ತಾಲ್ಲೂಕಿನಲ್ಲಿ ಕೆರೆಗಳು ಮತ್ತು ಬಾವಿಗಳು ಅಧಿಕ ಸಂಖ್ಯೆಯಲ್ಲಿವೆ. ಕೆರೆ ಮತ್ತು ಬಾವಿಗಳಿಂದ ಸು. 3237.60 ಹೆ ನೀರಾವರಿ ಒದಗುತ್ತಿದೆ. ರಾಗಿ, ಬತ್ತ, ಆಲೂಗೆಡ್ಡೆ, ಸೇಂಗಾ, ಹೈಬ್ರೀಡ್‍ಜೋಳ, ಮುಸುಕಿನ ಜೋಳ, ವಿವಿಧ ತರಕಾರಿಗಳು ಇಲ್ಲಿನ ಮುಖ್ಯ ಬೆಳೆಗಳು. ವ್ಯವಸಾಯದೊಂದಿಗೆ ಪಶುಪಾಲನೆ ಇದ್ದು ಅವುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ.

ಮಾಲೂರಿನ ಹತ್ತಿರದಲ್ಲಿ ದೊರೆಯುವ ಮಣ್ಣು ಹೆಂಚು ಮತ್ತು ಇಟ್ಟಿಗೆ ತಯಾರಿಕೆಗೆ ಉತ್ತಮವಾದ್ದರಿಂದ ಇಲ್ಲಿ 4 ಹೆಂಚಿನ ಕಾರ್ಖಾನೆಗಳೂ ಇವೆ. ಗೃಹಕೈಗಾರಿಕೆಗಳಾಗಿ ಬೆಂಕಿಪೊಟ್ಟಣ, ಊದುಬತ್ತಿ, ಬೀಡಿ ತಯಾರಿಕೆಗಳಿವೆ. ಕಲ್ಲಿನ ಮತ್ತು ಲೋಹದ ಸುಂದರ ವಿಗ್ರಹಗಳು, ಕಂಬಳಿ ಮತ್ತು ಕೈಮಗ್ಗದ ಬಟ್ಟೆ ತಯಾರಿಕೆ, ಜೇನು ಮತ್ತು ಕೋಳಿ ಸಾಕಣೆ, ಹಾಲಿನ ಉತ್ಪಾದನೆ ಮತ್ತು ರೇಷ್ಮೆ ವ್ಯವಸಾಯ-ಇವು ಇತರ ಪ್ರಚಲಿತವಿರುವ ಉದ್ಯಮಗಳು. ಇಲ್ಲಿ ತಯಾರಾಗುವ ಇಟ್ಟಿಗೆ, ಹೆಂಚುಗಳನ್ನು ಹೊರಜಿಲ್ಲೆಗಳಲ್ಲದೆ ಹೊರರಾಜ್ಯಗಳಿಗೂ ಕಳುಹಿಸಲಾಗುವುದು. ಶಿವಾರಪಟ್ಟಣದಲ್ಲಿ ತಯಾರಾಗುವ ಲೋಹದ ಮತ್ತು ಕಲ್ಲಿನ ವಿಗ್ರಹಗಳಿಗೆ ಹೊರದೇಶಗಳಲ್ಲೂ ಬೇಡಿಕೆ ಇದೆ. ಇಲ್ಲಿ ಬೆಳೆಯುವ ವಿವಿಧ ತರಕಾರಿಗಳನ್ನೂ ಮಲ್ಲಿಗೆ ಸೇವಂತಿಗೆ ಗುಲಾಬಿ ಹೂಗಳನ್ನೂ ಹೊರರಾಜ್ಯಗಳಿಗೂ ಕಳಿಸಿಕೊಡಲಾಗುತ್ತದೆ.

ಇಲ್ಲಿನ ವ್ಯಾಪಾರ ವಾಣಿಜ್ಯೋದ್ಯಮಗಳಿಗೆ ಸಹಕಾರಿಯಾಗಿರುವ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ.

ಮದರಾಸು-ಬೆಂಗಳೂರು ಬ್ರಾಡ್‍ಗೇಜ್ ರೈಲುಮಾರ್ಗ ಈ ತಾಲ್ಲೂಕಿನ ಮಧ್ಯದಲ್ಲಿ ಹಾದುಹೋಗಿದೆ. ಮಾಲೂರು ಮತ್ತು ಟೇಕಲ್ ರೈಲ್ವೆ ನಿಲ್ದಾಣಗಳು. ಮಾಲೂರಿನಿಂದ ಹೊಸಕೋಟೆ, ಕೋಲಾರ, ಹೊಸೂರು, ಮಾಸ್ತಿ, ಸೇಲಂ-ಈ ಸ್ಥಳಗಳಿಗೆ ಹೋಗುವ ರಸ್ತೆಗಳು ತಾಲ್ಲೂಕಿನ ಮುಖ್ಯ ಹಾದಿಗಳು. ತಾಲ್ಲೂಕಿನಲ್ಲಿ ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುಚ್ಛಕ್ತಿ ಸೌಲಭ್ಯವೂ ಆರೋಗ್ಯಕೇಂದ್ರಗಳೂ ಉಂಟು.

ತಾಲ್ಲೂಕು ಕೇಂದ್ರದಲ್ಲಿ ಒಂದು ಸರ್ಕಾರಿ ಜೂನಿಯರ್ ಕಾಲೇಜು, ಪ್ರೌಢಶಾಲೆಗಳು ಹಿರಿಯ ಪ್ರಾಥಮಿಕ ಶಾಲೆಗಳೂ ಕಿರಿಯ ಪ್ರಾಥಮಿಕ ಶಾಲೆಗಳೂ ಇವೆ.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಚಿಕ್ಕತಿರುಪತಿ **(ನೋಡಿ)** ಒಂದು ಪುಣ್ಯಕ್ಷೇತ್ರ. ಈ ತಾಲ್ಲೂಕಿನ ಮಡಿವಾಳ ಗ್ರಾಮದಲ್ಲಿ ಚೋಳರ ಕಾಲದ ಗಂಗಾಧರೇಶ್ವರ ದೇವಾಲಯವಿದೆ. ಮಾಲೂರಿನ ಉತ್ತರಕ್ಕಿರುವ ತೋರಣ ಹಳ್ಳಿಯಲ್ಲಿ ದನಗಳಿಗೆ ಬರುವ ಸಪ್ಪೆಜಾಡ್ಯವನ್ನು ವಾಸಿಮಾಡುವ ದೇವರೆಂಬ ನಂಬಿಕೆಯುಳ್ಳ ಸಪ್ಪಲಮ್ಮನ ದೇವಾಲಯವಿದೆ. ಇಲ್ಲಿ ಪ್ರತಿವರ್ಷ ಪುಷ್ಯ ಮಾಸದಲ್ಲಿ ದನಗಳ ಜಾತ್ರೆ ನಡೆಯುತ್ತದೆ. ಶಿವಾರಪಟ್ಟಣದಲ್ಲಿ ಗಂಗದೊರೆ ಶ್ರೀಪುರುಷನ ಕಾಲದ ಶಿಲಾಶಾಸನಗಳಿವೆ. ಚಿಕ್ಕಕಡತೂರಿನಲ್ಲಿ ಪ್ರಾಚೀನಕಾಲದ ವೀರರ ಗುಡಿಗಳಿವೆ. ಟೇಕಲ್ **(ನೋಡಿ)** ಪವಿತ್ರ ಸ್ಥಳ. ಮಾಸ್ತಿ **(ನೋಡಿ)** ಹೋಬಳಿ ಕೇಂದ್ರ ಮತ್ತು ದೊಡ್ಡ ಗ್ರಾಮ. ಈ ತಾಲ್ಲೂಕಿನ ವಿರೂಪಾಕ್ಷಪುರದಲ್ಲಿ ವಿಜಯನಗರದ ದೊರೆ ಎರಡನೆಯ ದೇವರಾಯನ ಕಾಲದ ವಿರೂಪಾಕ್ಷ ದೇವಾಲಯವಿದೆ.

ಮಾಲೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ಕೋಲಾರದಿಂದ ನೈಋತ್ಯಕ್ಕೆ 24 ಕಿಮೀ ದೂರದಲ್ಲಿದೆ. ಪಟ್ಟಣದ ಒಟ್ಟು ಜನಸಂಖ್ಯೆ 27,815. ಇದು ಬೆಂಗಳೂರು-ಕೋಲಾರ, ಬೆಂಗಳೂರು-ಮದರಾಸು ರೈಲ್ವೆ ಹಾದಿಯಲ್ಲಿನ ಒಂದು ನಿಲ್ದಾಣ. ಈ ಊರು ಬೆಂಗಳೂರಿನ ಪೂರ್ವಕ್ಕಿದ್ದು ಕೋಲಾರ, ಬಂಗಾರ ಪೇಟೆ, ತಮಿಳುನಾಡಿನ ಸೇಲಂ ಜಿಲ್ಲೆ-ಇವುಗಳಿಗೆ ಮಧ್ಯವರ್ತಿಯಾದ ವ್ಯಾಪಾರ ಕೇಂದ್ರವಾಗಿದೆ. ತಾಲ್ಲೂಕು ಆಡಳಿತ ಕೇಂದ್ರವಾಗಿರುವುದರಿಂದ ಸರ್ಕಾರಿ ಕಛೇರಿಗಳೂ ಬ್ಯಾಂಕುಗಳೂ ಇದ್ದು ಪ್ರೌಢಶಾಲೆ, ಆಸ್ಪತ್ರೆ, ಪಶುವೈದ್ಯಾಲಯ, ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುಚ್ಛಕ್ತಿಯ ಸೌಲಭ್ಯಗಳಿವೆ. ರಕ್ಷಿತ ಕುಡಿಯುವ ನೀರು ಸರಬರಾಜಿದ್ದು ಈ ಊರು ಪುರಸಭಾಡಳಿತಕ್ಕೆ ಸೇರಿದೆ. ಪ್ರತಿ ಗುರುವಾರ ಸೇರುವ ಈ ಊರಿನ ಸಂತೆಯಲ್ಲಿ ದನಗಳ ಮಾರಾಟ ಹೆಚ್ಚಾಗಿ ನಡೆಯುವುದು.

ವಕ್ಕಲೇರಿ ಬೆಟ್ಟದಲ್ಲಿರುವ ಮಾರ್ಕಂಡೇಶ್ವರ ದೇವಾಲಯಕ್ಕೆ ಮಲ್ಲಿಗೆ ಹೂವನ್ನು ಮಾಲೂರಿನ ತೋಟಗಳಿಂದ ಕಳುಹಿಸುತ್ತಿದ್ದುದರಿಂದ ಈ ಊರಿಗೆ ಹಿಂದೆ ಮಲ್ಲಿಕಾಪುರ ಅಥವಾ ಮಲ್ಲಿಗೆಪಟ್ಟಣವೆಂಬ ಹೆಸರಿತ್ತು ಎನ್ನಲಾಗಿದೆ. ಈ ಊರು 16ನೆಯ ಶತಮಾನದಲ್ಲಿ ಹೊಸಕೋಟೆಯ ನಾಯಕ ತಿಮ್ಮೇಗೌಡನ ಅಧೀನದಲ್ಲಿದ್ದು, ಅನಂತರ ಬಿಜಾಪುರದ ಆಡಳಿತಕ್ಕೆ ಸೇರಿದ್ದು ಹಲವು ಮನ್‍ಸುಬ್‍ದಾರರಿಗೆ ಜಹಗೀರಿಯಾಗಿ ನೀಡಲಾಗಿತ್ತು. ಮರಾಠರ ಕೈವಶವಾದ ಈ ಊರನ್ನು ರಜಪೂತ ಜಮೀನ್ದಾರ್ ಹ್ರಿದರಾಮ್ ಸಿಂಗನು ತನ್ನ ವಶಪಡಿಸಿಕೊಂಡು ವಿಸ್ತರಿಸಿ ಊರಿಗೆ ಮಾಲೂರು ಎಂದು ಹೆಸರಿಸಿದ. ಹೈದರ್ ಆಕ್ರಮಿಸಿಕೊಳ್ಳುವವರೆಗೆ ಈ ಊರನ್ನು ಹ್ರಿದರಾಮ್‍ಸಿಂಗನ ವಂಶಜರೇ ಆಳುತ್ತಿದ್ದರು.

ಶಂಕರನಾರಾಯಣಸ್ವಾಮಿ, ಧರ್ಮರಾಯಸ್ವಾಮಿ, ಬೀರೇಶ್ವರಸ್ವಾಮಿ ಮತ್ತು ಕೋದಂಡರಾಮ ಸ್ವಾಮಿ ದೇವಾಲಯಗಳು ಇಲ್ಲಿಯ ಪ್ರಮುಖ ಗುಡಿಗಳು. ಕೋದಂಡರಾಮಸ್ವಾಮಿ ದೇವಾಲಯದ ಮುಂಭಾಗದಲ್ಲಿ ಒಂದು ದೊಡ್ಡ ಪುಷ್ಕರಿಣಿ ಇದೆ. ಫಾಲ್ಗುಣ ಮಾಸದಲ್ಲಿ ಶಂಕರನಾರಾಯಣ ಸ್ವಾಮಿಗೆ 7 ದಿನಗಳು ವಿಶೇಷ ಪೂಜೆ ಮತ್ತು ರಥೋತ್ಸವ ನಡೆಯುತ್ತದೆ. ಚೈತ್ರಮಾಸದಲ್ಲಿ ಈ ಊರಿನಲ್ಲಿ ನಡೆಯುವ ಧರ್ಮರಾಯಸ್ವಾಮಿ ಕರಗ ಪ್ರಸಿದ್ಧ. **(ಎ.ಬಿ.ಬಿ.)**

**ಮಾಸೂರು:** ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಒಂದು ದೊಡ್ಡ ಗ್ರಾಮ. ಹಿರೇಕೆರೂರಿಗೆ ದಕ್ಷಿಣ ದಿಕ್ಕಿನಲ್ಲಿ 11 ಕಿಮೀ ದೂರದಲ್ಲಿ ರಾಣೆಬೆನ್ನೂರು ರೈಲು ನಿಲ್ದಾಣದಿಂದ ನೈಋತ್ಯಕ್ಕೆ 37 ಕಿಮೀ ದೂರದಲ್ಲಿದೆ. ಜನಸಂಖ್ಯೆ 9,281.

ಇಲ್ಲಿ ಹಳೆಯ ಕೋಟೆಯೊಂದಿದ್ದು ಇದು 1635ರಲ್ಲಿ ಮಹಮ್ಮದ್ ಆದಿಲ್ ಷಾನ ಕಾಲದಲ್ಲಿ ಇಲ್ಲಿನ ಅಧಿಕಾರಿಯಾಗಿದ್ದ ಮಹಮ್ಮದ್ ಖಾನ್ ಬಿನ್ ರಾಜಾ ಫರೀದ ಎಂಬುವನು ಕಟ್ಟಿಸಿದ್ದೆಂದು ಒಂದು ಶಿಲಾಶಾಸನ ತಿಳಿಸುತ್ತದೆ.

ಮಾಸೂರಿನಿಂದ ದಕ್ಷಿಣಕ್ಕೆ 3 ಕಿಮೀ ದೂರದಲ್ಲಿ ಶಿಕಾರಿಪುರ ತಾಲ್ಲೂಕಿನ ಎಲ್ಲೆಗೆ ಸೇರಿದಂತೆ ಇರುವ ಮದಗದಕೆರೆ **(ನೋಡಿ)** ಈ ಭಾಗದ ದೊಡ್ಡ ಕೆರೆ. ಬಹುಶಃ ವಿಜಯನಗರಸಾಮ್ರಾಜ್ಯದ ಕಾಲದಲ್ಲಿ ಕಟ್ಟಿದ್ದು. ತುಂಗಭದ್ರಾ ನದಿಯ ಉಪನದಿಯಾದ ಕುಮುದ್ವತಿ ನದಿಗೆ ತಳದಲ್ಲಿ 800' ದಪ್ಪವಿದ್ದು ಹಾಗೂ 100' ಎತ್ತರವಿರುವ, ಕಲ್ಲು ಬಂಡೆಗಳ ಮೇಲ್ಮೈಯುಳ್ಳ ಮಣ್ಣಿನ ಒಡ್ಡಿನಿಂದ ಕೆರೆಯನ್ನು ಕಟ್ಟಲಾಗಿದೆ. ಕೆರೆಗೆ ಎಡ ಹಾಗೂ ಬಲದಂಡೆಗಳಲ್ಲಿ ಕಾಲುವೆ ಮಾಡಿದ್ದು ಬಲಕ್ಕೆ ಸು. 8 ಕಿಮೀ ಮತ್ತು ಎಡಕ್ಕೆ ಸು. 6ಕಿಮೀ ಉದ್ದದ ಕಾಲುವೆಗಳಿವೆ.

ಮಾಸೂರಿನ ಮದಗದಕೆರೆಯ ಕೆಂಚವ್ವನ ಗುಡಿ ಇದೆ. ಇದರ ಬಗ್ಗೆ ಒಂದು ಆಕರ್ಷಕವಾದ ಕಥೆ ಇದೆ. ಮಾಸೂರಿನ ಪಟೇಲನಿಗೆ ಕೆಂಚವ್ವ ಎಂಬ ಸುಂದರ ಮಗಳಿದ್ದಳು. ಅವಳನ್ನು ಮದುವೆಯಾಗಲು ವಿಜಯ ನಗರದ ರಾಜ ಮನಸ್ಸು ಮಾಡಿದ. ಆದರೆ ರಾಜನಿಗಿಂತ ಮಾಸೂರಿನ ಪಟೇಲನ ಕುಲ ಉಚ್ಚಮಟ್ಟದ್ದಾಗಿದ್ದರಿಂದ ಕೆಂಚವ್ವ ರಾಜನನ್ನು ಮದುವೆ ಯಾಗಲು ನಿರಾಕರಿಸಿದಳು. ಮುಂದೆ ಕೆಂಚವ್ವನನ್ನು ಅವಳ ತಂದೆ ಶಿಕಾರಿಪುರ ತಾಲ್ಲೂಕಿನ ಈಸೂರಿನ ಪಟೇಲನಿಗೆ ಕೊಡಲು ನಿಶ್ಚಯಿಸಿದ. ಕೆಂಚವ್ವ ಅದಕ್ಕೂ ಒಪ್ಪದೆ ಮದಗದಕೆರೆಯಲ್ಲಿರುವ ದೇವರಗುಡಿಗೆ ಹೋಗಿ ದೇವರಿಗೆ ತನ್ನನ್ನೇ ಒಪ್ಪಿಸಿಕೊಂಡು ಕೆರೆಗೆ ಮಹಾಪೂರ ಬಂದಾಗ ಅವಳು ಗುಡಿಯಲ್ಲಿಯೇ ಲೀನವಾದಳಂತೆ. ಶಿಕಾರಿಪುರದ ಭಾಗದಲ್ಲಿ ಮಳೆ ಬಾರದಿದ್ದರೆ ಈಗಲೂ ಜನರು ಮಾಸೂರಿನ ಕೆರೆಗೆ ಬಂದು ಕೆರೆಯ ಕೆಂಚವ್ವನನ್ನು ಪೂಜಿಸಿ ಮಳೆಯನ್ನು ಕೊಡು ಎಂದು ಬೇಡಿಕೊಳ್ಳುವು ದುಂಟು.

ಇನ್ನೊಂದು ಕಥೆಯ ಪ್ರಕಾರ ಒಡ್ಡು ನಿಲ್ಲದಿದ್ದಾಗ ಕೆರೆಯನ್ನು ಕಟ್ಟುತ್ತಿದ್ದ ಒಡ್ಡರ ಪ್ರಮುಖನ ಮಗಳು ಲಕ್ಷ್ಮಿ ತನ್ನನ್ನು ಕೆರೆಗೆ ಆಹುತಿ ಯಾಗಿ ಅರ್ಪಿಸಿಕೊಂಡಳೆಂದೂ ಅವಳ ತ್ಯಾಗದಿಂದ ಕೆರೆಯ ಒಡ್ಡು ನಿಂತು ನೀರು ತುಂಬಿಬಂತೆಂದೂ ಹೇಳುವರು. ಕೆರೆಯ ತೂಬಿನ ಬಳಿ ಆಕೆಯ ಹೆಸರಿನ ಒಂದು ದೇವಾಲಯವಿದೆ.

ಮದಗದಕೆರೆ ಮತ್ತು ಅದಕ್ಕೆ ಸಂಬಂಧಿಸಿದ ಬಲಿದಾನ ಕುರಿತ ಜನಪದ ಗೀತೆಗಳು ಈ ಸುತ್ತಿನಲ್ಲಿ ಪ್ರಚಾರದಲ್ಲಿವೆ.

ಸರ್ವಜ್ಞನ ತಂದೆಯ ಊರು ಮಾಸೂರು ಎಂದು ಪ್ರತೀತಿ. ಸರ್ವಜ್ಞ ಮಾಸೂರಿನ ಸಮೀಪದಲ್ಲಿರುವ ಅಬ್ಬಲೂರಿನಲ್ಲಿ ಹುಟ್ಟಿದ್ದರೂ ಮಾಸೂರು ಮದಗದಕೆರೆಯ ಬಳಿ ಅಡ್ಡಾಡಿದ್ದನೆಂದು ಅವನ ತ್ರಿಪದಿಗಳಿಂದ ತಿಳಿದು ಬರುತ್ತದೆ.

**(ಎಸ್‌ಎ.ಎನ್.)**

**ಮಾಸ್ಟರ್ ಹಿರಣ್ಣಯ್ಯ**: 1934– . ಕನ್ನಡ ರಂಗಭೂಮಿಯ ಪ್ರಸಿದ್ಧ ನಟ. ಇವರ ಮೂಲ ಹೆಸರು ನರಸಿಂಹಮೂರ್ತಿ. 1934 ಫೆಬ್ರವರಿ 15ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ರಂಗಭೂಮಿಯ ಹಾಸ್ಯ ಚಕ್ರವರ್ತಿ ಎಂದೇ ಹೆಸರಾಗಿದ್ದ ಕೆ. ಹಿರಣ್ಣಯ್ಯ **(ನೋಡಿ)** ತಾಯಿ ಶಾರದಮ್ಮ.

ಆರಂಭದ ಶಿಕ್ಷಣ ಮದರಾಸಿನಲ್ಲಿಯೂ ಮುಂದೆ ಪ್ರಾಥಮಿಕ ಶಿಕ್ಷಣ ಮೈಸೂರಿನಲ್ಲಿ ಪೂರೈಸಿದರು. ಬನುಮಯ್ಯ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ ಶಾರದಾ ವಿಲಾಸ ಕಾಲೇಜಿನಲ್ಲಿ ಸೀನಿಯರ್ ಇಂಟರ್ ಮಿಡಿಯೇಟ್ ಮುಗಿಸಿದರು. ಕಾಲೇಜಿನಲ್ಲಿದ್ದಾಗ ನಾಟಕ ಸಂಘ ಕಟ್ಟಿ ಒಥೆಲೋ, ಉಂಡಾಡಿಗುಂಡ, ದೇವದಾಸಿ, ಬಂಡ್ವಾಳಿಲ್ಲದ ಬಡಾಯಿ, ಪೋಲಿಕಿಟ್ಟಿ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದರು. ಸೋದರ ಮಾವನ ಮನೆಯಲ್ಲಿದ್ದು ಓದುತ್ತಿದ್ದಾಗ ಸಾಧ್ವಿ, ಮೈಸೂರು ಪತ್ರಿಕೆ ಮಾರಾಟದ ಕೆಲಸ ಮಾಡಿದರು.

ತಾಯಿಯನ್ನು ಕಳೆದುಕೊಂಡ ಬಳಿಕ (1949) ತಂದೆ ಬಯಸದಿದ್ದರೂ ಅನಿವಾರ್ಯವಾಗಿ ರಂಗಭೂಮಿಗೆ ಬರಬೇಕಾಯಿತು. ಆದರೆ ಅದರಲ್ಲಿ ಯಶಸ್ವಿಯಾಗಲಿಲ್ಲ (1948–49). 1952ರಲ್ಲಿ ಕಾಲೇಜು ಶಿಕ್ಷಣ ಮುಗಿಸಿ



ಹಿರಣ್ಣಯ್ಯ ಮಿತ್ರಮಂಡಳಿಗೆ ಬಂದು ಹಿರಣ್ಣಯ್ಯನವರು ಅಭಿನಯಿಸುತ್ತಿದ್ದ ಪಾತ್ರಗಳನ್ನೇ ಮಾಡತೊಡಗಿದರು. ತಂದೆ ಕೆ.ಹಿರಣ್ಣಯ್ಯನವರು ಗತಿಸಿದ ಅನಂತರ (1953) ಕೆಲವು ತಿಂಗಳು ತುಂಬ ಕಷ್ಟ ಅನುಭವಿಸಿದರು. ಅ.ನ.ಕೃಷ್ಣ ರಾಯ ಮತ್ತು ಮಿತ್ರರ ಧನಸಹಾಯದಿಂದ ನಿಂತು ಹೋಗಿದ್ದ ಹಿರಣ್ಣಯ್ಯ ಮಿತ್ರ ಮಂಡಳಿ ಪುನರುಜ್ಜೀವನಗೊಳಿಸಿದರು. ಅನಂತರ ಮದರಾಸಿನಲ್ಲಿ ಬಿ.ಆರ್.ಪಂತುಲು ಅವರ ಗರಡಿಯಲ್ಲಿ ಚಲನಚಿತ್ರ ತರಬೇತಿ ಪಡೆದರು (1954). 1956ರಲ್ಲಿ ಪುನಃ ಕಂಪನಿ ಕಟ್ಟಿದರು. ದೇವದಾಸಿ, ಎಚ್ಚಮನಾಯಕ. ಮಕ್ಮಲ್‌ಟೋಪಿ, ಸದಾರಮೆ, ಪಂಗನಾಮ, ಬ್ಲ್ಯಾಕ್ ಮಾರ್ಕೆಟ್ ಮೊದಲಾದ ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ಹಳೆಯ ನಾಟಕಗಳನ್ನೇ ಆಡಿ ಬೇಸರ ಬಂದಾಗ ದೇಶದ ಜೀವಂತ ಸಮಸ್ಯೆ ಲಂಚವನ್ನು ಕುರಿತು ಲಂಚಾವತಾರ ಎಂಬ ನಾಟಕ ಬರೆದು ಮೊಟ್ಟ ಮೊದಲಬಾರಿಗೆ ಶಿವಮೊಗ್ಗದಲ್ಲಿ ರಂಗಕ್ಕೆ ತಂದರು (1959). ಇದು 47 ವರ್ಷಗಳಿಂದಲೂ ಪ್ರದರ್ಶನಗೊಳ್ಳುತ್ತಿದೆ. ಹತ್ತು ಸಾವಿರಕ್ಕೂ ಮಿಕ್ಕು ಪ್ರಯೋಗ ಕಂಡು ರಂಗಭೂಮಿಯಲ್ಲಿ ಹೊಸದಾಖಲೆ ಸ್ಥಾಪಿಸಿದೆ. ಅನಂತರ ಇವರು ನಡುಬೀದಿ ನಾರಾಯಣ, ಕಪಿಮುಷ್ಠಿ, ಭ್ರಷ್ಟಾಚಾರ, ಕಲ್ಯ್ಯಾವತಾರ ಮೊದಲಾದ ನಾಟಕಗಳನ್ನು ಬರೆದು ರಂಗವೇದಿಕೆಗೆ ತಂದರು. ಇವರು ಬೆಂಗಳೂರಿನಲ್ಲಿ ನಡುಬೀದಿ ನಾರಾಯಣ ನಾಟಕದಲ್ಲಿ ಅಭಿನಯಿಸಿ 488 ಪ್ರಯೋಗ ಮಾಡಿದರು (1971).

ಇವರು ಚಲನಚಿತ್ರದಲ್ಲಿ ಕೂಡ ಅಭಿನಯಿಸಿದ್ದಾರೆ. ಅವುಗಳೆಂದರೆ ದೇವದಾಸಿ, ಸಂಪ್ರದಾಯ, ಋಣಮುಕ್ತರು, ಮಧುರಮಿಲನ, ಕಲ್ಯಾಣೋತ್ಸವ, ಅಂತ (ಎರಡನೆಯ ಭಾಗ). ಸಂಪ್ರದಾಯ ಚಲನಚಿತ್ರಕ್ಕೆ ಕಥೆ, ಸಂಭಾಷಣೆ, ಚಿತ್ರಕಥೆ, ನಿರ್ದೇಶನವನ್ನೂ ಇವರೇ ಮಾಡಿದ್ದಾರೆ.

ಇದಲ್ಲದೆ ಧ್ವನಿ ಸುರುಳಿಗಾಗಿ ಪಶ್ಚಾತ್ತಾಪ, ಮಿತಸಂತಾನ, ಹರಕೆ–ತುರುಕೆ, ಚಪಲಾವತಾರ, ಲಾಟರಿಸರ್ಕಾರ, ಸಂನ್ಯಾಸಿ ಸಂಸಾರ, ಅಳಿಯಾವತಾರ, ಹುಚ್ಚಾಸ್ಪತ್ರೆ, ಗಾಂಧಿಗೇ ಟೋಪಿ, ಮೆಟ್ಟುಸ್ವಾಮಿ ಮಠಾವತಾರ, ಚಮಚಾವತಾರ, ಕುಟುಂಬಾಯಣ, ಮರ್ಡರ್ ಪಂಚಾಯ್ತಿ, ಡಬ್ಬಲ್ ತಾಳಿ, ಫೋನಾವತಾರ, ದೇವಲೋಕದಲ್ಲಿ ದತ್ತು, ಪುರಷಾಮೃಗ ಮುಂತಾದ 36 ಏಕಾಂಕ ನಾಟಕಗಳನ್ನು ಬರೆದು ನಿರ್ದೇಶಿಸಿ ತಾವೂ ಪಾತ್ರ ಮಾಡಿದ್ದಾರೆ.

ಮಾತಿನ ಮಲ್ಲರೆಂದೇ ಹೆಸರಾಗಿರುವ ಮಾಸ್ಟರ್ ಹಿರಿಯಣ್ಣಯ್ಯ ಸಾಮಾಜಿಕ ಮತ್ತು ಜೀವಂತ ಸಮಸ್ಯೆಗಳಿಗೆ ಕನ್ನಡಿ ಹಿಡಿದಿದ್ದಾರೆ. ವ್ಯಂಗ್ಯ, ವಿನೋದಭರಿತ ಶೈಲಿಯಲ್ಲಿ ರಾಜಕಾರಣಿಗಳ ಕಾವಿ, ಖಾದಿ, ಖಾಕಿ ಧರಿಸುವವರ ಹುಳುಕುಗಳಿಗೆ ಭೂತಗನ್ನಡಿಯಾಗಿದ್ದಾರೆ. ದಾರಿತಪ್ಪಿದವರಿಗೆ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಜನರಲ್ಲಿ ವೈಚಾರಿಕತೆ ತುಂಬುವ ಕಾರ್ಯದಲ್ಲಿ ಇವರದು ಎತ್ತಿದ ಕೈ. ರಾಜಕಾರಣಿಗಳ, ಅಧಿಕಾರಿಗಳ ವಿರೋಧವನ್ನು ಎದುರಿಸುತ್ತ ಜ್ವಲಂತ ಸಮಸ್ಯೆಗಳನ್ನೂ ಖಾರವಾಗಿ ವಿಶ್ಲೇಷಿಸುವ ಬಗೆಯನ್ನೂ ಜನ ಮೆಚ್ಚಿಕೊಂಡಿದ್ದಾರೆ.

ಕರ್ನಾಟಕದ ತುಂಬ ಕೆ. ಹಿರಣ್ಣಯ್ಯ ಮಿತ್ರಮಂಡಳಿಯೊಂದಿಗೆ ಓಡಾಡಿದ ಇವರು ಗೋವ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಗಳಲ್ಲಿಯೂ ಸುತ್ತಾಡಿ ತಮ್ಮ ಕಲಾಪ್ರತಿಭೆ ಮೆರೆದಿದ್ದಾರೆ. ಅಮೆರಿಕದಲ್ಲಿ ನಡೆದ ತ್ರಿವೇಣಿ ಕನ್ನಡ ಸಮ್ಮೇಳನಕ್ಕೆ ಆಹ್ವಾನಿತರಾಗಿ ಹೋಗಿ ಅಲ್ಲಿನ ವಿವಿಧ ಸ್ಥಳಗಳಲ್ಲಿ 17 ನಾಟಕಗಳನ್ನು ಪ್ರದರ್ಶಿಸಿ, ಕೆಲವು ಕಡೆ ಉಪನ್ಯಾಸ ನೀಡಿ ಬಂದರು (1983). ಆಸ್ಟ್ರೇಲಿಯ, ಸಿಂಗಪುರ, ನ್ಯೂಜಿಲೆಂಡ್, ಇಂಗ್ಲೆಂಡ್ (1996), ಬೆಹರಿನ್ ಪ್ರವಾಸ ಮಾಡಿ ಅಲ್ಲಿಯ ಪ್ರೇಕ್ಷಕರಿಗೂ ನಾಟಕದ ಮೋಡಿಮಾಡಿ ಬಂದಿದ್ದಾರೆ. ಇದುವರೆಗೆ ಇವರಿಗೆ 600ಕ್ಕೂ ಹೆಚ್ಚು ಸನ್ಮಾನಗಳಾಗಿವೆ. ಇವರಿಗೆ ಕಲಾರಾಜಸಿಂಹ, ವಾಕ್ ಚತುರ, ಅಭಿನವ ಸರ್ವಜ್ಞ, ಹಾಸ್ಯಕಲಾ ಪ್ರಪೂರ್ಣ ಮುಂತಾದ ಬಿರುದುಗಳು ಬಂದಿವೆ.

ಹಿರಣಯ್ಯನವರು ಕನ್ನಡ ರಂಗಭೂಮಿಗೆ ಸಲ್ಲಿಸಿರುವ ಅಪೂರ್ವ ಸೇವೆಗಾಗಿ ಹಲವು ಪ್ರಶಸ್ತಿ, ಗೌರವಗಳು ಸಂದಿವೆ. ಬಳ್ಳಾರಿಯಲ್ಲಿ ಪೌರಸನ್ಮಾನ ಮಾಡಿ ನಟರತ್ನಾಕರ ಎಂಬ ಬಿರುದು ನೀಡಿ ಸನ್ಮಾನಿಸಲಾಯಿತು. ಮೈಸೂರು ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ ಅವರು ಜಗನ್ಮೋಹನ ಅರಮನೆಯಲ್ಲಿ ತಮ್ಮ ಸಮ್ಮುಖದಲ್ಲಿ ಹದಿನಾಲ್ಕು ನಾಟಕಗಳ ಪ್ರದರ್ಶನ ಏರ್ಪಡಿಸಿ ಇವರಿಗೆ ನಟನ ಕಲಾಚತುರ ಎಂಬ ಬಿರುದು, ರತ್ನಖಚಿತ ಗಂಡಭೇರುಂಡ ಪದಕ ನೀಡಿ ಗೌರವಿಸಿದರು (1963–64). ಭಾರತದ ಮೇಲೆ ಚೀನ ದಾಳಿ ಮಾಡಿದಾಗ ಇವರು ತಮ್ಮ ತೂಕದ ಬೆಳ್ಳಿಯನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಅರ್ಪಿಸಿದರು (1962). ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1984), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1988), ಮಂಡ್ಯದ ಶ್ರೀ ಶಂಕರಗೌಡ ಪ್ರತಿಷ್ಠಾನ ಪ್ರಶಸ್ತಿ (1991), ನವರತ್ನಕಾರಿ ಪ್ರಶಸ್ತಿ (1998), ವಿದ್ಯಾರತ್ನ ಪ್ರಶಸ್ತಿ (2002) ಬಂದಿವೆ. ವೃತ್ತಿರಂಗಭೂಮಿಗೆ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಕರ್ನಾಟಕ ಸರ್ಕಾರ ಇವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ನೀಡಿದೆ (1997). **(ಎಸ್.ಎಂ.ಕೆ.)**

**ಮಾಸ್ತಮ್ಮ:** ಸ್ಥಳೀಯ ಜನಪದ ದೇವತೆಗಳಲ್ಲಿ ಗ್ರಾಮದೇವತೆ, ಕುಲದೇವತೆ ಮತ್ತು ಗೃಹದೇವತೆಗಳು ಅತ್ಯಂತ ಮುಖ್ಯವಾದವು. ಇವುಗಳಲ್ಲಿ ಮಾಸ್ತಮ್ಮ ಗೃಹದೇವತೆಗಳ ಗುಂಪಿಗೆ ಸೇರಿದ ಒಬ್ಬ ದೇವತೆ. ಪ್ರತಿಯೊಂದು ಊರಿನಲ್ಲಿಯೂ ಒಂದೊಂದು ಗುಂಪಿನ ಜನರಿಗೆ ಒಂದೊಂದು ಸ್ತ್ರೀ ಗೃಹದೇವತೆಯಿದ್ದು, ಆ ದೇವತೆಗೆ ಅವರು ತಪ್ಪದೆ ನಡೆದುಕೊಳ್ಳುವುದನ್ನೂ ಆ ಮೂಲಕ ಕೆಲವು ಆಚರಣೆಗಳು ರೂಢಿಗೆ ಬಂದಿರುವುದನ್ನೂ ಕಾಣಬಹುದು. ದಕ್ಷಿಣ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ತಮ್ಮ ಮನೆದೇವರಾದ ಮಾಸ್ತಮ್ಮನಿಗೆ ಶ್ರದ್ಧೆಯಿಂದ ನಡೆದುಕೊಳ್ಳುವ ಒಕ್ಕಲುಗಳಿರುವುದು ತಿಳಿದುಬರುತ್ತದೆ.

ಮಾಸ್ತಮ್ಮ ಎಂಬ ರೂಪ ಮಹಾಸತಿ+ಅಮ್ಮ ಎಂಬುದರಿಂದ ಸಿದ್ಧಿಸಿದುದಾಗಿದೆ. ಮಹಾಸತಿ ರೂಪ ಬರಬರುತ್ತ ಜನರ ಬಾಯಿಯಲ್ಲಿ ಮಾಸ್ತಿಯಾಗಿ, ಅದು ಪುರುಷಸೂಚಕವೋ ಸ್ತ್ರೀ ಸೂಚಕವೋ ತಿಳಿಯದೆ ಹೋದುದರ ಕಾರಣ ಅದಕ್ಕೆ ಸ್ತ್ರೀಸೂಚಕವಾದ ಅಮ್ಮ ಸೇರಿ ಮಾಸ್ತಮ್ಮ ಆಗಿರಬೇಕೆನಿಸುತ್ತದೆ. ಇದರ ಮೂಲದಲ್ಲಿ ಮಹಾಸತಿ ಪದ ಪ್ರಚಲಿತವಿದ್ದುದರಿಂದ, ಸಾಂಸಾರಿಕ ಅಥವಾ ಸಾಮಾಜಿಕ ಕಾರಣಕ್ಕಾಗಿ ತನ್ನ ಜೀವನವನ್ನು ತ್ಯಾಗಮಾಡಿದ ಹೆಣ್ಣೊಬ್ಬಳ ಬಲಿದಾನದ ಕಥೆ ಇದರ ಹಿಂದೆ ಸುಪ್ತವಾಗಿರಬೇಕೆಂದು ತಿಳಿಯಬಹುದಾಗಿದೆ. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಅಂಕಿತನಾಮ ಮರೆತುಹೋಗಿ, ಅನ್ವರ್ಥನಾಮವೇ ಪ್ರಸಿದ್ಧವಾಗುವುದನ್ನು ಕಾಣುತ್ತೇವೆ.

ವಾಚಿಕ ಪರಂಪರೆಯ ಕಥೆಯ ಪಾಠವೊಂದು ಹೀಗಿದೆ: ಮಾಸ್ತಮ್ಮ ಮಂಡ್ಯ ತಾಲ್ಲೂಕಿನ ಹುಲಿವಾಹನದಲ್ಲಿ ಹುಟ್ಟಿ, ಮದ್ದೂರು ತಾಲ್ಲೂಕಿನ ಈರೇಗೌಡನ ದೊಡ್ಡಿಗೆ ದತ್ತುಮಗಳಾಗಿ ಬಂದು, ಅದೇ ತಾಲ್ಲೂಕಿನ ಹೊಸಕೆರೆಗೆ ವಿವಾಹವಾಗಿದ್ದಂತೆ ತಿಳಿದುಬರುತ್ತದೆ. ಗಂಡನ ಮನೆಯಲ್ಲಿ ನಡೆದ ಒಂದು ಘಟನೆ ಇವಳು ಸತಿಹೋದುದಕ್ಕೆ ಕಾರಣವಾಗಿದೆ. ಆ ಕಥೆ ಹೀಗಿದೆ: ಮಾಸ್ತಮ್ಮನನ್ನು ಹೊಸಕೆರೆಯ ಗೌಡನ ಮನೆಗೆ ಕೊಟ್ಟು ಮದುವೆ ಮಾಡಿದರು. ಅಲ್ಲಿ ಇವಳ ಅಂದಚೆಂದ ನೋಡಿ ಹಜಾಮನೊಬ್ಬ ಕಣ್ಣಿಟ್ಟ. ಇವಳು ಸ್ನಾನ ಮಾಡುವಾಗ ಇವಳ ನಾದಿನಿಯರಿಗೆ ಹೇಳಿ ಏಳು ಹಟ್ಟಿ ಎಮ್ಮೆಕರುಗಳನ್ನು ಬಿಡಿಸಿದ. ತಲೆಗೆ ಸೀಗೇಕಾಯಿ ಹಾಕಿಕೊಂಡಿದ್ದರಿಂದ ಇವಳು ಹುಟ್ಟಿದ ನಿರ್ವಾಣದಲ್ಲಿ ಬರುತ್ತಾಳೆ ಎನ್ನುವುದು ಅವನ ಅಂದಾಜು. ಆದರೆ ಇವಳು ಒದ್ದೆಬಟ್ಟೆ ಉಟ್ಟು ಬಂದು ಏಳು ಹಟ್ಟಿ ಎಮ್ಮೆ ಕರುಗಳಿಗೆ ಏಳು ಮಂಡೆ ಕೂದಲು ಹಾಕಿ ಎಳೆತಂದು ಕಟ್ಟಿದಳು. ಗಂಡ ಮಾವ ಬರುವ ಹೊತ್ತಿಗೆ ಅಳುತ್ತ ಕುಳಿತಳು. ಕಾರಣವನ್ನು ಗಂಡನಿಗೆ ಮಾತ್ರ ಹೇಳಿದಳು, ಮಾವನಿಗೆ ಹೇಳಲಿಲ್ಲ. ಒಂದು ದಿವಸ ಹಜಾಮ ಗೌಡರನ್ನು ಕುರಿತು ನಿಮ್ಮನೆಗೆ ಊಟಕ್ಕೆ ಬರಬೇಕು ಎಂದ. ಗೌಡ ಒಪ್ಪಿಕೊಂಡ. ಆದರೆ, ಅಗ್ನಿ ಇಲ್ದೆ ಅಡುಗೆ ಮಾಡಬೇಕು, ಸಗಣಿ ಇಲ್ದೆ ನೆಲ ಸಾರಿಸಬೇಕು ಎಂಬುದು ಹಜಾಮನ ಸವಾಲು. ಮಾವ ಬಂದು ಮಂಚದ ಮೇಲೆ ಮಕಾಡೆ ಮಲಗಿಕೊಂಡ. ಆಗ ಮಾಸ್ತಮ್ಮ 'ಇಷ್ಟಕ್ಕೆ ಯಾಕೆ ಯೋಚನೆ, ಊಟ ಮಾಡೇಳಿ' ಎಂದಳು. ಮೂಗಳ ಸುಣ್ಣ ತರಿಸಿ ಅಡುಗೆ ಮಾಡಿದಳು, ಲೋಕಸರ ತರಿಸಿ ಮನೆ ಸಾರಿಸಿದಳು. ಆಮೇಲೆ ಹಜಾಮನನ್ನು ಕರೆತರುವುದಕ್ಕೆ ಮಾವನನ್ನು ಕಳಿಸಿದಳು. ಅವನು ಬಂದ. ಮಾವನಿಗೆ ಮೊದಲು ನೀರು ಕೊಟ್ಟು, ಅವನಿಗೆ ಆಮೇಲೆ ಕೊಟ್ಟಳು. ಮಾವ ಅಲ್ಲೇ ನಿಂತುಕೊಂಡ. ಹಜಾಮ ಹಜಾರಕ್ಕೆ ಕಾಲು ಹಾಕಿದ, ಮಕಾಡೆ ಬಿದ್ದ. ತಿರುಗಿ ನೋಡಲಿಲ್ಲ. ಹೊರಟು ಹೋದ. ಆಮೇಲೆ ಗಂಡನಿಗೂ ಮಾವನಿಗೂ ಊಟಕ್ಕೆ ಬಡಿಸಿ, ನಾನು ಅರಿಗಿಸ ಇರುವುದಿಲ್ಲ ಎಂದಳು. ಏಳು ಬಂಡಿ ಸಿರಿಗಂಧದ ಸೌದೆ, ಸುತ್ತ ಕಂಬಿಸ್ಯಾಲೆ, ಇಂಬಿಹಣ್ಣು, ಈರ್‌ಜಡೆ, ಅರಿಶಿನ ಕುಂಕುಮ ಕಳಸ ವಾಲಗ ಸೈವಾಗಿ ಕಡೆದ್ದು ಅಗ್ನಿಕೊಂಡಕ್ಕೆ. ಹುಣಸೆ ಹೂವಾಗಬೇಡ, ಮಾವು ಫಲವಾಗಬೇಡ, ಹೊಸಕೆರೆಗೆ ಹುಟ್ಟಿದ ಹೆಣ್ಣುಮಕ್ಕಳಿಗೆ ಗಂಡ ಇದ್ದರೆ ಮಕ್ಕಳಿಲ್ಲ, ಮಕ್ಕಳಿದ್ದರೆ ಗಂಡ ಇಲ್ಲ, ಹೊರಗೆ ಕೊಟ್ಟವು ಬದುಕುವ ಹಾಗಿಲ್ಲ ಈರೇಗೌಡನದೊಡ್ಡಿಗೂ ಹೊಸಕೆರೆಗೂ ತರೋಳಿಕೊಡೋಳಿ ಇರೋಲ್ಲ ಎಂದು ಶಾಪಕೊಟ್ಟುಕೊಂಡವಾದಳು. ಅನಂತರ ಅಲ್ಲಿಯೇ ಒಡಮೂಡಿದ್ದು. ಮಾವನೇ ಗುಡಿ ಕಟ್ಟಿದ.

ಇದಿಷ್ಟು ಮಾಸ್ತಮ್ಮನ ಬಲಿದಾನಕ್ಕೆ ಹಿನ್ನೆಲೆಯಾಗಿರುವ ಕಥೆ. ಇವೊತ್ತಿಗೂ ಹೊಸಕೆರೆಯಲ್ಲಿ ಮಾಸ್ತಮ್ಮನ ಗುಡಿ ಇದೆ. ಅದರಲ್ಲಿ ಗರ್ಭಗೃಹ ಮತ್ತು ಹಜಾರ ಎರಡೇ ಅಂಕಣಗಳು. ಗರ್ಭಗೃಹದಲ್ಲಿ ಹುತ್ತದ ರೂಪದಲ್ಲಿ ಮಾಸ್ತಮ್ಮ ಒಡಮೂಡಿದ್ದಾಳೆ ಎನ್ನುತ್ತಾರೆ. ಹೀಗೆ ಒಡಮೂಡಿದ ಮೇಲೆ ಈರೇಗೌಡನ ದೊಡ್ಡಿಯಲ್ಲಿದ್ದ ಮಾಸ್ತಮ್ಮನ

ಹಲಗೆ, ಚಿಕ್ಕಮ್ಮನ ಹಲಗೆ ಮತ್ತು ಕ್ಯಾತಮ್ಮನ ಹಲಗೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಇಟ್ಟರೆಂದು ಹೇಳಲಾಗುತ್ತಿದೆ. ಮಾಸ್ತಮ್ಮನ ಶಾಪದ ಪರಿಣಾಮವೇ ಇಂದಿಗೂ ಈರೇಗೌಡನದೊಡ್ಡಿಗೂ ಹೊಸಕೆರೆಗೂ ವಿವಾಹಸಂಬಂಧ ಇಲ್ಲದಿರುವುದಕ್ಕೆ ಕಾರಣವೆಂದು ಹಿರಿಯರು ಅಭಿಪ್ರಾಯ ಪಡುತ್ತಾರೆ.

ಇಂಥ ಕಥೆಗಳು ಇತರ ಕಡೆಯೂ ದೊರೆಯುವ ಸಾಧ್ಯತೆ ಇದೆ. ಉದಾಹರಣೆಗೆ ತುಮಕೂರಿನ ಕೆಲವು ಪ್ರದೇಶಗಳಲ್ಲಿ ಮಾಸ್ತಮ್ಮನ ದೇವಸ್ಥಾನವೂ ಇವಳಿಗೆ ಸಂಬಂಧಿಸಿದ ಕಥೆಗಳೂ ಪ್ರಚಲಿತವಿರುವುದನ್ನು ಕಾಣಬಹುದು. ಇಲ್ಲಿನ ಉದ್ದೇಶ ಒಂದೇ ಆದರೂ ಕಥನ ವಿವರಗಳಲ್ಲಿ ವ್ಯತ್ಯಾಸವಿರುವಂತೆ ತೋರುತ್ತದೆ. ಇಂಥ ಸಂದರ್ಭಗಳಲ್ಲಿ ಇದೇ ಬಗೆಯ ಹಿನ್ನಲೆಯುಳ್ಳ ಇತರ ಕಥೆಗಳ ಅಂಶಗಳು ಬಂದು ಸೇರಿಕೊಂಡಿರ ಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಆದರೆ ಇವಳ ಸೌಂದರ್ಯ ಮತ್ತು ಏಳುಮಂಡೆ ಕೂದಲಿನ ವಿವರ ಹಾಗೂ ಇವಳು ಕೊಂಡವಾದ ವಿಷಯ ಸಮಾನ ಆಶಯಗಳಾಗಿ ಪರಿಗಣಿತವಾಗುತ್ತವೆ.

ಮಾಸ್ತಮ್ಮನಿಗೆ ಸೇರಿದ ಒಕ್ಕಲುಗಳು ಇಂದಿಗೂ ಹಬ್ಬಹರಿದಿನ ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಮಾಸ್ತಮ್ಮನ ಗುಡಿಗೆ ಹೋಗಿ ಪೂಜೆ ಸಲ್ಲಿಸಿ ಬರುವುದನ್ನು ನೋಡಬಹುದು. ಇಂಥ ಸಮಯಗಳಲ್ಲಿ ವಿಶೇಷವಾಗಿ ಚಿಗಳಿ ಮತ್ತು ತಂಬಿಟ್ಟನ್ನು ಮಾಡುವುದು ರೂಢಿಯಲ್ಲಿದೆ. ಹೆಂಗಸರು ಹೋದರೆ ಗುಡಿಯ ಹಜಾರದಲ್ಲಿ ಎಡೆಮಾಡಬೇಕಾಗುತ್ತದೆ; ಆದರೆ ಗಂಡಸರು ಗರ್ಭಗೃಹದೊಳಗೆ ಎಡೆಮಾಡಬಹುದು. ಮಾಸ್ತಮ್ಮನಿಗೆ ನಡೆದುಕೊಳ್ಳುವ ಮನೆಯ ಹೆಣ್ಣುಮಗಳು ಮತ್ತು ಸೊಸೆಯರು ಹೊಸ ಬಟ್ಟೆ ತೊಡುವ ಪ್ರತಿ ಸಾರಿಯೂ ಮಾಸ್ತಮ್ಮನಿಗೆ ಇಟ್ಟು ಪೂಜೆಮಾಡಿ ತೊಟ್ಟುಕೊಳ್ಳ ಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ದೇವಸ್ಥಾನಕ್ಕೆ ಹೋಗಲು ಸಾಧ್ಯವಿಲ್ಲದಿದ್ದರೆ, ಮನೆಯಲ್ಲಿಯೋ ಅಥವಾ ಬಾವಿ, ಕಾಲುವೆಗಳ ಸಮೀಪದಲ್ಲಿಯೋ ತುಂಬಿದ ಬಿಂದಿಗೆ, ಮೂರು ಕಲ್ಲುಗಳನ್ನು ಇಟ್ಟು ಪೂಜೆ ಮಾಡಬಹುದು. ಪುರುಷರ ವಿಷಯದಲ್ಲಿ ಈ ಕಟ್ಟು ಬಹುತೇಕ ಅನ್ವಯಿಸುವುದಿಲ್ಲ. ಮದುವೆಯಾದ ತರುಣದಲ್ಲಿ ನವ ದಂಪತಿಗಳು ಮಾಸ್ತಮ್ಮನ ಗುಡಿಗೆ ಹೋಗಿ ಪೂಜೆಮಾಡಿ ಬರಬೇಕೆನ್ನುವ ಸಂಪ್ರದಾಯವಿದೆ. ಮನೆದೇವತೆ ಒಂದೇ ಆಗಿರುವ ಒಕ್ಕಲುಗಳಲ್ಲಿ ವೈವಾಹಿಕ ಸಂಬಂಧವನ್ನು ನಿಷೇಧಿಸಿದೆ.

ಪತಿ ಮಡಿದ ಮೇಲೆ ಸತಿ ಸಹಗಮನ ಮಾಡುತ್ತಿದ್ದ ಸಂಪ್ರದಾಯ ಕರ್ನಾಟಕದಲ್ಲಿ ಪ್ರಾಚೀನದಿಂದಲೂ ಕಂಡುಬಂದಿದೆ. ಅಂಥವರನ್ನು ಮಹಾಸತಿಯರೆಂದು ಸ್ತುತಿಸಿ ಅವರ ಸ್ಮಾರಕವಾಗಿ ಮಾಸ್ತಿಕಲ್ಲುಗಳನ್ನು ನೆಡುತ್ತಿದ್ದುದು ಕೂಡ ಪ್ರಾಚೀನವೇ ಆಗಿದೆ. ಹಾಗೆಯೇ ಸತಿ ಕೆಲವು ಉತ್ಕಟ ಪರಿಸ್ಥಿತಿಗಲ್ಲಿ ತನ್ನ ಚಾರಿತ್ರ್ಯಕ್ಕೆ ಕಳಂಕ ಬಂದೀತೆಂದು ತಿಳಿದು ಪತಿ ಇದ್ದರೂ ಕೊಂಡವಾಗುವುದು ರೂಢಿಯಲ್ಲಿದ್ದಿರಬೇಕೆಂದು ಕಾಣುತ್ತದೆ. ಇದಕ್ಕೆ ಮಾಸ್ತಮ್ಮನ ಕಥೆ ಒಂದು ನಿದರ್ಶನ. ಇಲ್ಲಿ ಮಾಸ್ತಮ್ಮ ಅಗ್ನಿ ಪ್ರವೇಶ ಮಾಡುವಾಗಿನ ನಿಂಬೆಹಣ್ಣಿನ ಉಲ್ಲೇಖ ಸಹಗಮನ ಪದ್ಧತಿಯಂತೆ ಸತಿಯಾದವರ ಸ್ಮರಣೆಗೆ ಮಾಸ್ತಿಕಲ್ಲುಗಳನ್ನು ನೆಟ್ಟು ಗೌರವ ತೋರಿದಂತೆ, ಇಲ್ಲಿ ಮಾಸ್ತಮ್ಮನ ಗುಡಿಯನ್ನು ಕಟ್ಟಿಸಿ ತಮ್ಮ ಗೌರವಾದರ ಭಕ್ತಿಭಾವಗಳನ್ನು ಸೂಚಿಸಲಾಗಿದೆ. ಮಾಸ್ತಮ್ಮನಿಗೆ ಸಂಬಂಧಿಸಿದ ಪ್ರತಿಯೊಂದು ಕಥೆಯ ನಡಾವಳಿಯ ಅಂತರಾಳದಲ್ಲಿಯೂ ಸಂಭವನೀಯ ಚಾರಿತ್ರಿಕ ಘಟನೆಯೊಂದಿದ್ದು, ಕ್ರಮೇಣ ಐತಿಹ್ಯದ ಅಂಶಗಳು ಅದರ ಸುತ್ತ ಬೆಳೆಯುತ್ತ ಹೋಗಿರಬೇಕೆಂದು ತೋರುತ್ತದೆ. **(ಆರ್.ಜಿ.)**

**ಮಾಸ್ತಿ:** ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಒಂದು ಗ್ರಾಮ. ಇದೇ ಹೆಸರಿನ ಹೋಬಳಿ ಕೇಂದ್ರ. ಮಾಲೂರಿನ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 6,409. ಇಲ್ಲಿ ಪ್ರತಿ ಬುಧವಾರ ಸಂತೆ ನಡೆಯುತ್ತದೆ.

16ನೆಯ ಶತಮಾನದಲ್ಲಿ ತನ್ನ ಮಗಳ ಮಾನರಕ್ಷಣೆಗಾಗಿ ಕಂಚಿಯಿಂದ ಬಂದು ಇಲ್ಲಿ ನೆಲಸಿದ ಚೊಕ್ಕಬಾಬತಿ ಎಂಬುವವನಿಂದ ಈ ಗ್ರಾಮ ಸ್ಥಾಪಿತವಾಯಿತು ಎಂದು ಹೇಳುತ್ತಾರೆ. ಮುಂದೆ ವಿಜಯನಗರದ ಅಚ್ಯುತರಾಯ ಚೊಕ್ಕ ಬಾಬತಿಯ ಸೇವೆಯನ್ನು ಪಡೆದು, ಅದಕ್ಕೆ ಪುರಸ್ಕಾರವಾಗಿ 20,000 ಪಗೋಡಗಳ ಆದಾಯ ಬರುವಂಥ ಗ್ರಾಮಗಳನ್ನು ಕೊಟ್ಟ. ಚೊಕ್ಕಬಾಬತಿ ಮಾಸ್ತಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಅವನ ಅನಂತರ ಬಂದವರು ಅಂಕುಶಗಿರಿಯಿಂದ ರಾಜ್ಯವಾಳತೊಡಗಿದರು. ಮುಂದೆ ಮರಾಠರು ಕೋಲಾರವನ್ನು ವಶಪಡಿಸಿಕೊಂಡಾಗ ಮಾಸ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡು ಹೊಸಕೋಟೆಯಲ್ಲಿ ವಿಲೀನವಾಯಿತು. ಹೈದರನ ಕಾಲದಲ್ಲಿ ಇದು ಮೈಸೂರು ರಾಜ್ಯಕ್ಕೆ ಸೇರಿತು. ಪ್ರಸಿದ್ಧ ಸಾಹಿತಿಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಈ ಊರಿನವರು. **(ಕೆ.ಟಿ.ಆರ್.)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್:** 1891–1986. ಕನ್ನಡದಲ್ಲಿ ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರಕ್ಕೆ ಭದ್ರ ಬುನಾದಿ ಹಾಕಿ ಸಣ್ಣ ಕಥೆಗಳ ಜನಕ ಎಂಬ ಹೆಸರಿಗೆ ಪಾತ್ರರಾದ ಪ್ರಸಿದ್ಧ ಸಾಹಿತಿಗಳು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು (1984). ಶ್ರೀನಿವಾಸ ಎಂಬುದು ಇವರ ಕಾವ್ಯನಾಮ. 1891 ಜೂನ್ 6 ರಂದು ಕೋಲಾರ ಜಿಲ್ಲೆಯ ಮಾಸ್ತಿ ಎಂಬಲ್ಲಿ ಜನಿಸಿದರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ಶಿವಾರಪಟ್ಟಣ, ಮಳವಳ್ಳಿ, ಕೃಷ್ಣರಾಜಪೇಟೆಗಳಲ್ಲೂ ಪ್ರೌಢಶಾಲಾ ವಿದ್ಯಾಭ್ಯಾಸ ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲಿಯೂ ನಡೆಯಿತು. ಅನಂತರ ಮಹಾರಾಜ ಕಾಲೇಜು ಸೇರಿ ಎಫ್.ಎ.ಯಲ್ಲಿ ಪ್ರಥಮದರ್ಜೆಯಲ್ಲಿ ತೇರ್ಗಡೆಯಾದರು. ಆಮೇಲೆ ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೇರಿ 1912ರಲ್ಲಿ ಬಿ.ಎ.ಪದವಿ ಗಳಿಸಿದರು. 1913ರಲ್ಲಿ ಎಂ.ಸಿ.ಎಸ್. ಪರೀಕ್ಷೆ ಕಟ್ಟಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಮುಖ್ಯ ವಿಷಯವಾಗಿ ಅಭ್ಯಾಸ ಮಾಡಿ ಎಂ.ಎ. ಪದವಿ ಪಡೆದರು. ಕೆಲಕಾಲ ಬೆಂಗಳೂರು ಮತ್ತು ಮದರಾಸುಗಳಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದರು. 1914ರಲ್ಲಿ ಮೈಸೂರು ಸರ್ಕಾರದಲ್ಲಿ ಕೆಲಸಕ್ಕೆ ಸೇರಿದರು. ಅಸಿಸ್ಟೆಂಟ್ ಕಮಿಷನರ್, ಅಸಿಸ್ಟೆಂಟ್ ಸೆಕ್ರೆಟರಿ, ಸಬ್ ಡಿವಿಜನ್ ಆಫೀಸರ್, ಮ್ಯಾಜಿಸ್ಟ್ರೇಟ್, ಸೀನಿಯರ್ ಅಸಿಸ್ಟೆಂಟ್ ಕಮಿಷನರ್, ಸೆನ್ಸಸ್ ಕಮಿಷನರ್, ಡೆಪ್ಯೂಟಿ ಕಮಿಷನರ್, ಕಂಟ್ರೋಲರ್, ಎಕ್ಸೈಸ್ ಕಮಿಷನರ್–ಇಂಥ ಅನೇಕ ಉನ್ನತ ಹುದ್ದೆಗಳಲ್ಲಿ ಪ್ರಾಮಾಣಿಕವಾಗಿ ಮತ್ತು ತೃಪ್ತಿಕರವಾಗಿ ಕಾರ್ಯನಿರ್ವಹಿಸಿ ಜನಮನ್ನಣೆ ಗಳಿಸಿದ್ದರು. 1944 ಏಪ್ರಿಲ್ 16ರಲ್ಲಿ ಸ್ವ ಇಚ್ಛೆಯಿಂದ ಎಕ್ಸೈಸ್ ಕಮಿಷನರ್ ಹುದ್ದೆಗೆ ರಾಜೀನಾಮೆ ನೀಡಿದರು.

ಮಾಸ್ತಿಯವರು ಇಂಗ್ಲಿಷ್ ಸಾಹಿತ್ಯದಲ್ಲಿ ಉನ್ನತ ವ್ಯಾಸಂಗ ಪಡೆದರೂ ಕನ್ನಡ ಭಾಷಾ ಸಾಹಿತ್ಯ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ಭಾರತೀಯ ಹಾಗೂ ಆಂಗ್ಲಸಾಹಿತ್ಯದ ಸವಿಗೆ ಸೋತ ಇವರು ಅವುಗಳ ಸಾರಸರ್ವಸ್ವವನ್ನು ತಮ್ಮ ಕಾವ್ಯರಚನಾಸೃಷ್ಟಿ ಶಕ್ತಿಗೆ ಬಳಸಿಕೊಂಡಿದ್ದಾರೆ. ಇವರ ಸಂಸ್ಕಾರದ ಮೇಲೆ ಪಾಶ್ಚಾತ್ಯ ಪ್ರಭಾವ ಬಿದ್ದಿಲ್ಲವೆಂದಲ್ಲ; ಆದರೆ ಇವರ ಸಾಹಿತ್ಯ ಕೃತಿಗಳ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ನೆರಳಾಟಕ್ಕೆ ಕೂಡಾ ಮಾಸ್ತಿಯವರು ಅವಕಾಶ ಮಾಡಿ ಕೊಟ್ಟಿಲ್ಲ. ಆ ಸಂಸ್ಕೃತಿಯಿಂದ

ಲಾಭ ಪಡೆದಿದ್ದಾರೆ. ಆದರೆ ಅದಕ್ಕೆ ಶರಣಾಗಿಲ್ಲ. ಕನ್ನಡ ಸಾಹಿತ್ಯವನ್ನು ಪಾಶ್ಚಾತ್ಯ ಸಂಸ್ಕೃತಿಯ ಛಾಯಾಜೀವಿಯನ್ನಾಗಿ ಮಾಡಿಲ್ಲ. ಅದನ್ನು ನೂರಕ್ಕೆ ನೂರರಷ್ಟು ಭಾರತೀಯ-ಕರ್ನಾಟಕ ಜಾಯಮಾನಕ್ಕೆ ಒಪ್ಪುವಂತೆ ನಿರ್ಮಿಸಿದ್ದಾರೆ. ಇದು ಇವರ ಸಾಹಿತ್ಯದ ಹಿರಿಮೆ. (ಟಿ.ಟಿ.ಎಸ್.)

1912-13ರಿಂದ ಕನ್ನಡದಲ್ಲಿ ಬರೆಯಲಾರಂಭಿಸಿದ ಮಾಸ್ತಿಯವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃಷಿ ನಡೆಸಿ 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ನವೋದಯ ಕವಿಗಳ ಸಾಲಿನಲ್ಲಿ ಮಾಸ್ತಿಯವರದೂ ಒಂದು ಬಹುಮುಖ್ಯ ಹೆಸರು. ಇವರ ಕವಿತಾಸೃಷ್ಟಿಯು ಬಿನ್ನಹ, ಅರುಣ, ತಾವರೆ, ಚೆಲುವು, ಮಲಾರ, ಮನವಿ ಎಂಬ ಆರು ಸಂಕಲನಗಳಲ್ಲಿ ಹರಡಿಕೊಂಡಿದೆ. ಸರಳತೆ, ಮಾರ್ದವತೆ ಮಾಸ್ತಿಯವರ ಭಾವಗೀತೆಗಳ ಮೂಲ ಗುಣ. ಭಾವಗೀತೆಗಳೊಡನೆ ಕಥನ ಕವನಗಳ ಸೃಷ್ಟಿಯೂ ಅಪಾರವಿದೆ. ಗೌಡರ ಮಲ್ಲಿ, ರಾಮನವಮಿ, ನವರಾತ್ರಿ ಮೊದಲಾದ ಕಥನಕವನಗಳು ಉತ್ಕೃಷ್ಟ ರಚನೆಗಳೆಂದು ಹೆಸರುಗಳಿಸಿವೆ. ಶ್ರೀರಾಮಪಟ್ಟಾಭಿಷೇಕ, ಶ್ರೀರಾಮನಪಟ್ಟಾಭಿಷೇಕವನ್ನು ಕುರಿತ ದೀರ್ಘಕಾವ್ಯ. ಇದರಲ್ಲಿ ರಾಮಾಯಣದ ಕಥೆ ಸಿಂಹಾವಲೋಕನ ಕ್ರಮದಲ್ಲಿ ನಿರೂಪಿತವಾಗಿದೆ. ಸರಳರಗಳೆಯಲ್ಲಿ ರಚಿತವಾಗಿರುವ ಈ ಕಾವ್ಯದ ನಿರೂಪಣೆಯಲ್ಲಿ ವೈವಿಧ್ಯವೂ ಹಳೆಯ ಕಥೆಗೆ ಹೊಸ ಹೊಳಪೂ ಲಭ್ಯವಾಗಿವೆ.

ಮಾಸ್ತಿಯವರ ಹೆಸರು ಇಂದು ಕನ್ನಡಿಗರಿಗೆ ಚಿರಪರಿಚಿತವಾಗಿರುವುದು ಇವರ ಸಣ್ಣಕಥೆಗಳ ಮೂಲಕ. ಇವರು 70ಕ್ಕೂ ಹೆಚ್ಚು ಸಣ್ಣ ಕಥೆಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಕಾಲ್ಪನಿಕ, ವಾಸ್ತವಿಕ ಕಥೆಗಳು ಇವೆ. ಸರಳತೆ, ನೇರನಿರೂಪಣೆ ಈ ಕಥೆಗಳ ಮೂಲ ದ್ರವ್ಯ. ನಮ್ಮ ಸಂಸ್ಕೃತಿಯ ಉತ್ತಮಾಂಶಗಳನ್ನು ಒಪ್ಪ ಓರಣವಾಗಿ ಕನ್ನಡಿಗರಿಗೆ ಪರಿಚಯಮಾಡಿಕೊಡಬೇಕೆಂಬ ಆಕಾಂಕ್ಷೆ ಈ ಎಲ್ಲ ಕಥೆಗಳ ಸೃಷ್ಟಿಗೆ ಮೂಲ ಪ್ರೇರಣೆಯಾಗಿದೆ. ರಂಗಪ್ಪನ ಮದುವೆ, ರಂಗಸ್ವಾಮಿಯ ಅವಿವೇಕ, ನಮ್ಮ ಮೇಷ್ಟರು, ಮೊಸರಿನ ಮಂಗಮ್ಮ, ಮಸುಮತ್ತಿ, ಕಾಮನಹಬ್ಬದ ಒಂದು ಕತೆ, ಡೂಬಾಯಿ ಪಾದ್ರಿಯ ಒಂದು ಪತ್ರ, ಚಂದ್ರವದನಾ, ವೆಂಕಟಿಗನ ಹೆಂಡತಿ, ನಿಜಗಲ್ಲಿನ ರಾಣಿ, ಪೆನುಗೊಂಡೆಯ ಕೃಷ್ಣಮೂರ್ತಿ, ಒಂದು ಹಳೆಯ ಕಥೆ, ವೆಂಕಟಸ್ವಾಮಿಯ ಪ್ರಣಯ- ಈ ಮೊದಲಾದ ಕಥೆಗಳು ಮಾಸ್ತಿಯವರಿಗೆ ಹೆಚ್ಚು ಪ್ರಸಿದ್ಧಿಯನ್ನು ತಂದುಕೊಟ್ಟವು. ಸಣ್ಣಕಥೆ ಹಾಗೂ ಕಾದಂಬರಿಯ ನಡುವಣ ಹರವನ್ನು ಪಡೆದುಕೊಂಡು ಮಾಸ್ತಿಯವರ ಪ್ರತಿಭಾ ಮೂಸೆಯಿಂದ ಮೂಡಿಬಂದ ಸುಬ್ಬಣ್ಣ ಕನ್ನಡದ ಮಹತ್ತ್ವದ ಕಥೆಗಳಲ್ಲೊಂದು. ಇದರಲ್ಲಿ ಸುಬ್ಬಣ್ಣ ಎಂಬ ಸಂಗೀತಗಾರನೊಬ್ಬನ ಬದುಕಿನ ಏಳು ಬೀಳುಗಳು ಅಪೂರ್ವವಾಗಿ ಚಿತ್ರಣಗೊಂಡಿದೆ.

ಚೆನ್ನಬಸವನಾಯಕ, ಚಿಕವೀರರಾಜೇಂದ್ರ ಇವು ಇವರ ಐತಿಹಾಸಿಕ ಕಾದಂಬರಿಗಳು. ಈ ಎರಡೂ ಕಾದಂಬರಿಗಳ ವಸ್ತು ಇತಿಹಾಸ. ಮೊದಲನೆಯದರಲ್ಲಿ ಬಿದನೂರು ನಾಯಕ ಮನೆತನದ ಏಳುಬೀಳಿನ ಚಿತ್ರಣವಿದ್ದರೆ ಇನ್ನೊಂದರಲ್ಲಿ ಕೊಡಗಿನ ರಾಜಕೀಯ ಇತಿಹಾಸದ ದುರವಸ್ಥೆ ಚಿತ್ರಣಗೊಂಡಿದೆ. ಒಂದರಲ್ಲಿ ಸಂಯಮವಿಲ್ಲದ ಬಾಳು ದುರಂತಕ್ಕೆ ನಾಂದಿಯಾದರೆ ಇನ್ನೊಂದರಲ್ಲಿ ಕಾಮಕ್ರೋಧಗಳಿಗೆ ತುತ್ತಾದ ಬಾಳು ದುರಂತಕ್ಕೆ ದಾರಿಮಾಡಿಕೊಡುತ್ತದೆ. ಕಾದಂಬರಿಕಾರರು ಈ ಎರಡೂ ಕೃತಿಗಳಲ್ಲಿ ಅಂದಿನ ಕಾಲದ ಜನಜೀವನವನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಶೇಷಮ್ಮ ಇವರ ಸಾಮಾಜಿಕ ಕಾದಂಬರಿ (1976).

ಕನ್ನಡದಲ್ಲಿ ಹೆಚ್ಚಾಗಿ ನಾಟಕಗಳಿಲ್ಲದ್ದನ್ನು ಮನಗಂಡಿದ್ದ ಮಾಸ್ತಿಯವರು ಶಾಂತಾ, ಸಾವಿತ್ರಿ, ಉಷಾ, ತಾಳೀಕೋಟೆ, ಮಂಜುಳಾ, ಶಿವಛತ್ರಪತಿ, ಯಶೋಧರಾ, ತಿರುಪಾಣಿ, ಕಾಕನಕೋಟೆ, ಮಾಸತಿ, ಅನಾರ್ಕಲಿ, ಪುರಂದರದಾಸ, ಕನಕಣ್ಣ ಎಂಬ ಹದಿಮೂರು ನಾಟಕಗಳನ್ನು ರಚಿಸಿದ್ದಾರೆ. ಮಂಜುಳಾ ಎಂಬ ಒಂದು ನಾಟಕವನ್ನುಳಿದು ಇತರ ನಾಟಕಗಳ ವಸ್ತು ಐತಿಹಾಸಿಕ, ಇಲ್ಲವೇ ಪೌರಾಣಿಕ. ತಾಳೀಕೋಟೆ, ಶಿವಛತ್ರಪತಿ, ಕಾಕನಕೋಟೆ, ಯಶೋಧರಾ, ಪುರಂದರದಾಸ, ಕನಕಣ್ಣ, ಮಂಜುಳಾ-ಇವು ದೊಡ್ಡ ನಾಟಕಗಳು, ಉಳಿದವು ಏಕಾಂಕಗಳು. ಇವರ ನಾಟಕಗಳಲ್ಲೆಲ್ಲಾ ಕಾಕನಕೋಟೆ ಒಂದು ವಿಶಿಷ್ಟ ಕೃತಿ. ರಣಧೀರ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ನಡೆಯಿತೆನ್ನಲಾದ ಘಟನೆಯೊಂದು ಈ ನಾಟಕದ ವಸ್ತು. ಕಾಡು ಕುರುಬರ ಜೀವನ, ಅವರಿಗೆ ಬಂದೊದಗಿದ ವಿಪತ್ತು, ಕಾಚ ಎಂಬ ವ್ಯಕ್ತಿಯ ಆಸರೆಯಿಂದ ಅವರು ಪಾರಾದ ಬಗೆ- ಈ ವಿವರಗಳಿಂದ ತುಂಬಿರುವ ಈ ಕೃತಿ ಕಾಡು ಕುರುಬರು ನಾಗರಿಕತೆಯ ಸೆಳೆತಕ್ಕೆ ತಮಗರಿವಿಲ್ಲದೆಯೇ ಒಳಗಾಗಿ ಸಂಕ್ರಮಣ ಘಟ್ಟಕ್ಕೆ ಬಂದು ನಿಲ್ಲುವುದು ಧ್ವನಿ ಪೂರ್ಣವಾಗಿ ನಾಟಕದ ಮೈಯಲ್ಲಿ ಅಂತರ್ಗತಗೊಂಡಿದೆ. ಈ ನಾಟಕ ರಂಗಭೂಮಿಯ ಮೇಲೂ ಪ್ರಚಂಡ ಯಶಸ್ಸು ಗಳಿಸಿ ನಮ್ಮ ರಂಗಭೂಮಿಯ ಪುನರುಜ್ಜೀವನದಲ್ಲಿ ಮಹತ್ತ್ವದ ಪಾತ್ರ ವಹಿಸಿತು. ಅನಂತರ ಚಲನಚಿತ್ರವಾಗಿ ತೆರೆಯ ಮೇಲೆ ಕಾಣಿಸಿಕೊಂಡು ಚಿತ್ರರಸಿಕರ ಮನಸ್ಸನ್ನೂ ಸೂರೆಗೊಂಡಿತು (1977).

ಮಾಸ್ತಿಯವರು ಕನ್ನಡದಲ್ಲಿ ಮೊದಲಿಗೆ ವಿಮರ್ಶೆಯ ವಿಚಾರವಾಗಿ ಬರೆದು ಆ ಪ್ರಕಾರದಲ್ಲಿಯೂ ಗಮನಾರ್ಹ ಕೆಲಸ ಮಾಡಿದ್ದಾರೆ. 1915ರ ಸುಮಾರಿಗೆ ಶ್ರೀ ಕೃಷ್ಣಸೂಕ್ತಿ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾದ ಸತಿಹಿತೈಷಿಣೀ ಗ್ರಂಥ ಮಾಲೆಯನ್ನು ಕುರಿತು ಎಂಬವರು (ಸತೀಹಿತೈಷಿಣೀ ಎಂಬ ಗ್ರಂಥಮಾಲೆಯಲ್ಲಿ ಪ್ರಕಟಗೊಂಡ ಏಳು ಕಾದಂಬರಿಗಳ ವಿಮರ್ಶೆ) ಮಾಸ್ತಿಯವರ ಮೊಟ್ಟಮೊದಲ ವಿಮರ್ಶಾ ಲೇಖನ. ಅನಂತರ ಮಾಸ್ತಿಯವರು ವಿಮರ್ಶೆಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನೂ ಗ್ರಂಥಗಳನ್ನೂ ರಚಿಸಿದರು. ಇವರ ವಿಮರ್ಶಾ ಲೇಖನಗಳು ವಿಮರ್ಶೆ ಎಂಬ ಹೆಸರಿನಲ್ಲಿ ಸಂಕಲನಗಳಾಗಿ ಪ್ರಕಟಗೊಂಡಿವೆ. ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ ಎಂಬ ಲೇಖನ ವಿಮರ್ಶೆಯ ತಾತ್ತ್ವಿಕ ಭಾಗಕ್ಕೆ ಸಂಬಂಧಿಸಿದ ಮೊಟ್ಟಮೊದಲ ಲೇಖನ. ಇದರಲ್ಲಿ ಸಾಹಿತ್ಯ ವಿಮರ್ಶೆಯ ಸ್ವರೂಪ ಮತ್ತು ಪ್ರಯೋಜನ, ಕವಿಗೂ ವಿಮರ್ಶಕನಿಗೂ ಇರುವ ಭೇದ, ವಿಮರ್ಶಕನ ಅರ್ಹತೆಗಳು ಮೊದಲಾದ ವಿಷಯಗಳನ್ನು ಸಮಗ್ರವಾಗಿ ಸುಂದರವಾಗಿ ವಿವೇಚಿಸಿದ್ದಾರೆ. ಮಾಸ್ತಿಯವರ ವಿಮರ್ಶಾ ವಿಧಾನ ವರ್ಣನಾತ್ಮಕ ರೀತಿಯದು. ಅಲ್ಲಿ ವಿಶ್ಲೇಷಣೆಗಿಂತ ಕೃತಿಯೊಂದನ್ನು ಸಹೃದಯತೆಯಿಂದ ಆಸ್ವಾದಿಸಿ ಆತ್ಮೀಯತೆಯಿಂದ ಪರಿಚಯ ಮಾಡಿಕೊಡುವ ಪರಿ ಹೆಚ್ಚಾಗಿ ಕಂಡುಬರುತ್ತದೆ. ವಿಮರ್ಶೆಯಲ್ಲಿ ದೋಷಗಳಿಗಿಂತ ಹೆಚ್ಚಾಗಿ ಗುಣವನ್ನು ಎತ್ತಿ ಹೇಳಬೇಕೆಂಬುದು ಮಾಸ್ತಿ ವಿಮರ್ಶೆಯ ಒಟ್ಟಾರೆ ನಿಲುವು. ಹಾಗಾಗಿ ಇವರ ವಿಮರ್ಶೆಗಳಲ್ಲಿ ಕೃತಿಯ ಆಳಕ್ಕಿಳಿದು ಅದರ ಎಲ್ಲ ಮಗ್ಗುಲುಗಳನ್ನು ಪರಿಚಯಿಸುವ ವಸ್ತುನಿಷ್ಠ ವಿಮರ್ಶೆಯ ಅಂಶ ಅಷ್ಟಾಗಿ ಕಂಡುಬರುವುದಿಲ್ಲ ಎಂಬ ವಾದವೂ ಇದೆ. ಆದಿಕವಿ ವಾಲ್ಮೀಕಿ, ಭಾರತ ತೀರ್ಥ-ಇವು ರಾಮಾಯಣ, ಮಹಾಭಾರತ ಈ ಮಹಾಕಾವ್ಯಗಳನ್ನು ಕುರಿತ ವಿಮರ್ಶಾಗ್ರಂಥಗಳು. ಆದಿಕವಿ ವಾಲ್ಮೀಕಿ ಉತ್ತಮ ವಿಮರ್ಶಾಗ್ರಂಥವೆಂಬ ಖ್ಯಾತಿಗೆ ಪಾತ್ರವಾಗಿರುವುದರ ಜೊತೆಗೆ ರಸಕೃತಿ ಎಂಬ ಹೊಗಳಿಕೆಗೂ ಪಾತ್ರವಾಗಿದೆ.

ಮಾಸ್ತಿಯವರು ಸ್ವತಂತ್ರ ಕೃತಿಗಳನ್ನು ರಚಿಸಿರುವಂತೆ ಭಾಷಾಂತರಕಾರರಾಗಿಯೂ ಅನೇಕ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಇವರು ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡ ಭಾಷೆಗೆ ತರುವಲ್ಲಿ ನಡೆಸಿದ ಪ್ರಯತ್ನ ಮೆಚ್ಚುವಂಥದ್ದು. ಕಿಂಗ್ ಲಿಯರ್ (ಲಿಯರ್ ಮಹಾರಾಜ), ದಿ ಟೆಂಪೆಸ್ಟ್ (ಚಂಡಮಾರುತ), ಟ್ವೆಲ್ಫ್‌ತ್‌ನೈಟ್ (ದ್ವಾದಶ ರಾತ್ರಿ), ಹ್ಯಾಮ್ಲೆಟ್-ಇವು ಇವರಿಂದ ಅನುವಾದಗೊಂಡಿರುವ ನಾಟಕಗಳು. ಇಷ್ಟೇ ಅಲ್ಲದೆ ಷೇಕ್ಸ್‌ಪಿಯರ್‌ನ ಅನೇಕ ನಾಟಕಗಳ ಬಿಡಿ ದೃಶ್ಯಗಳನ್ನು ಕೂಡ ಅನುವಾದಿಸಿದ್ದು ಅವು ಷೇಕ್ಸ್‌ಪಿಯರ್ ದೃಶ್ಯಗಳು- 1,2,3 ಎಂಬ ಹೆಸರಿನಲ್ಲಿ ಪ್ರಕಟಗೊಂಡಿವೆ. ಚಿತ್ರಾಂಗದಾ ಅದೇ ಹೆಸರಿನ ರವೀಂದ್ರನಾಥ ಠಾಕೂರ್ ಅವರ ಬಂಗಾಲಿ ಕೃತಿಯ ಅನುವಾದ. ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷೆಯ ವಿವೇಚನೆಯನ್ನೊಳಗೊಂಡಂತೆ ರಚಿತವಾದ ಕೃತಿ 'ನಮ್ಮನುಡಿ'. ಇದು ಕನ್ನಡ ಭಾಷಾಶಾಸ್ತ್ರವನ್ನು ಕುರಿತಂತೆ ರಚಿತವಾದ ಆರಂಭದ ಮುಖ್ಯ ಗ್ರಂಥಗಳಲ್ಲೊಂದು. ಈ ಗ್ರಂಥದಲ್ಲಿ ಮಾಸ್ತಿಯವರು ಕನ್ನಡ ಭಾಷೆಯ ಅಭಿವೃದ್ಧಿಯ ಬಗ್ಗೆ ತೋರಿರುವ ಆದರ, ಅಭಿಮಾನ ಮೆಚ್ಚುವಂಥದ್ದು. ಕನ್ನಡದಲ್ಲಿ ಮಾತ್ರವಲ್ಲದೆ ಮಾಸ್ತಿಯವರು ಇಂಗ್ಲಿಷ್‌ನಲ್ಲಿಯೂ ಗ್ರಂಥರಚನೆ ಕೈಗೊಂಡಿರುವುದುಂಟು. ಜೊತೆಗೆ ತಮ್ಮ ಅನೇಕ ಕೃತಿಗಳನ್ನು ಇವರು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಪಾಪ್ಯುಲರ್ ಕಲ್ಚರ್ ಇನ್ ಕರ್ನಾಟಕ, ದಿ ಪೊಯೆಟ್ರಿ ಆಫ್ ವಾಲ್ಮೀಕಿ, ಸುಬ್ಬಣ್ಣ, ದಿ ಮಹಾಭಾರತ-ಎ ಸ್ಟಡಿ, ಸೇಯಿಂಗ್ಸ್ ಆಫ್ ಬಸವಣ್ಣ, ರವೀಂದ್ರನಾಥ ಠಾಕೂರ್, ಷಾರ್ಟ್ ಸ್ಟೋರೀಸ್ 1, 2, 3, 4, 5 ಮೊದಲಾದವು ಇಂಗ್ಲಿಷ್ ಭಾಷೆಯಲ್ಲಿವೆ.

ಸಾಹಿತ್ಯರಂಗದ ನಾನಾಕ್ಷೇತ್ರಗಳಲ್ಲಿ ದುಡಿದು ಉತ್ತಮ ಸಾಹಿತಿ ಎಂಬ ಹೆಸರು ಗಳಿಸಿದಂತೆ ಮಾಸ್ತಿಯವರು ಪತ್ರಿಕೋದ್ಯಮದಲ್ಲಿಯೂ ಕೈಹಾಕಿ ಒಳ್ಳೆಯ ಸಂಪಾದಕರೆಂಬ ಹೆಸರು ಗಳಿಸಿದ್ದಾರೆ. ಧಾರವಾಡದಲ್ಲಿ ಆರಂಭವಾದ 'ಜೀವನ' ಪತ್ರಿಕೆ ಅನಂತರ ಬೆಂಗಳೂರಿಗೆ ಬಂದಾಗ (1944) ಮಾಸ್ತಿಯವರು ಅದರ ಸಂಪಾದಕರಾದರು. ಅನಂತರ ಎರಡು ದಶಕಗಳ ಕಾಲ ಸಂಪಾದಕರಾಗಿದ್ದುಕೊಂಡು ಈ ಪತ್ರಿಕೆಯನ್ನು ಅನೇಕ ರೀತಿಯಲ್ಲಿ ಅಭಿವೃದ್ಧಿಪಡಿಸಿದರು. ಆಗ ಇವರು ಬರೆಯುತ್ತಿದ್ದ ಸಂಪಾದಕೀಯ ಲೇಖನಗಳು ವಿಚಾರ ಪರಿಪ್ಲುತವಾಗಿದ್ದು ಅಪಾರ ಮನ್ನಣೆಗಳಿಸಿದುವು; ಈ ಲೇಖನಗಳೇ ಈಗ ಸಂಪಾದಕೀಯ ಎಂಬ ಹೆಸರಿನಲ್ಲಿ ಐದು ಭಾಗಗಳಲ್ಲಿ ಪ್ರಕಟವಾಗಿವೆ. ಗ್ರಂಥಸಂಪಾದನೆಯಲ್ಲಿಯೂ ಮಾಸ್ತಿಯವರು ಕೈಹಾಕಿರುವುದುಂಟು. ಧರಣಿಪಂಡಿತನ ಬಿಜ್ಜಳರಾಯ ಚರಿತೆ ಎಂಬ ಗ್ರಂಥವನ್ನು ಸ್ವತಂತ್ರವಾಗಿ ಸಂಪಾದಿಸಿಕೊಟ್ಟ ಇವರು ಕುವೆಂಪು ಅವರೊಡನೆ ಕುಮಾರವ್ಯಾಸನ ಕರ್ಣಾಟಭಾರತಕಥಾಮಂಜರಿ ಎಂಬ ಮಹಾಕಾವ್ಯವನ್ನು ಉತ್ತಮವಾಗಿ ಸಂಪಾದಿಸಿಕೊಟ್ಟಿದ್ದಾರೆ. ಸರ್.ಎಂ. ವಿಶ್ವೇಶ್ವರಯ್ಯ ಎಂಬ ಕೃತಿಯನ್ನು ಸಂಪಾದಿಸಿರುವುದಲ್ಲದೆ ಸರ್.ಎಂ.ವಿ. ಯವರ ಶತಮಾನೋತ್ಸವದ ಸಂಚಿಕೆ 'ಎಂ.ವಿ.' ಹೊರ ಬರುವಲ್ಲೂ ಶ್ರಮಿಸಿದ್ದಾರೆ (1960).

ನಮ್ಮಲ್ಲಿ ಕವಿಗಳು ಸ್ವವಿಚಾರವಾಗಿ ತಮ್ಮ ಬರೆವಣಿಗೆಯಲ್ಲಿಯೇ ಹೇಳಿಕೊಂಡಿರುವುದು ಬಲು ಕಡಿಮೆ. ಇಂಥ ಬರೆವಣಿಗೆ ಕನ್ನಡದಲ್ಲಿ ಬಹು ವಿರಳ. ಈ ವಿಷಯದಲ್ಲಿ ಮಾಸ್ತಿಯವರು ಒಂದು ಹೆಜ್ಜೆ ಮುಂದಿದ್ದಾರೆ. ತಮ್ಮ ಆತ್ಮಕಥೆಯನ್ನು ಭಾವ (3 ಭಾಗಗಳಲ್ಲಿ) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ (1968-69). ಈ ಗ್ರಂಥ ಮಾಸ್ತಿಯವರ ಮನೋಧರ್ಮವನ್ನು ಅರಿಯುವಲ್ಲಿ, ಅವರ ಸಾಹಿತ್ಯವನ್ನು ಕುರಿತು ಹೆಚ್ಚಿನ ಅಭ್ಯಾಸ ಮಾಡುವಲ್ಲಿ ಸಹಕಾರಿಯಾಗಿದೆ.

ಕರ್ನಾಟಕ ಏಕೀಕರಣದ ಕಾರ್ಯದಲ್ಲಿಯೂ ಮಾಸ್ತಿಯವರು ಅಪಾರವಾಗಿ ದುಡಿದಿದ್ದಾರೆ. ಇವರು ಅನೇಕ ಸಾಹಿತ್ಯಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದ (1943-48) ಇವರು ಆ ಸಂಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ಅವಿಶ್ರಾಂತವಾಗಿ ಶ್ರಮಿಸಿದರು.

ಮಾಸ್ತಿಯವರಿಗೆ ಅನೇಕ ಸನ್ಮಾನಗಳು ಲಭಿಸಿವೆ. 1929ರಲ್ಲಿ ಬೆಳಗಾಂವಿಯಲ್ಲಿ ನಡೆದ 15ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. 1942ರಲ್ಲಿ ಹೈದರಾಬಾದಿನಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ 11ನೆಯ ಅಧಿವೇಶನದ ಕನ್ನಡ ವಿಭಾಗದ ಅಧ್ಯಕ್ಷರಾಗಿದ್ದರು. 1946ರಲ್ಲಿ ಇಂಡಿಯನ್ ಪಿ.ಇ.ಎನ್. ಉಪಾಧ್ಯಕ್ಷರಾಗಿ ಆಯ್ಕೆಯಾದರು. 1976ರಲ್ಲಿ ಅದರ ಅಧ್ಯಕ್ಷ ಗೌರವಕ್ಕೆ ಭಾಜನರಾದರು. 1968ರಲ್ಲಿ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. 1974ರಲ್ಲಿ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಇವರಿಗೆ 1956ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ, 1977ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿಲಿಟ್ ಪ್ರಶಸ್ತಿ ಲಭಿಸಿತು. 1984ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದರು.

ಮಾಸ್ತಿ ಸಾಹಿತ್ಯವನ್ನು ಕುರಿತಂತೆ ಕನ್ನಡದಲ್ಲಿ ಅನೇಕ ವಿಮರ್ಶಾ ಕೃತಿಗಳು, ಲೇಖನಗಳು ಪ್ರಕಟವಾಗಿವೆ. ಅವುಗಳಲ್ಲಿ ಇವರಿಗೆ ಅರ್ಪಿಸಿದ ಶ್ರೀನಿವಾಸ (1972) ಎಂಬ ಸಂಭಾವನ ಗ್ರಂಥ ಮುಖ್ಯವಾದುದು. ಶ್ರೀನಿವಾಸ ಸಾಹಿತ್ಯ (ಮಾಸ್ತಿ ಸಾಹಿತ್ಯ ಸಮೀಕ್ಷೆ) ಎಂಬುದು ಇಂಥದೇ ಇನ್ನೊಂದು ಕೃತಿ. ಇವರನ್ನು ಕುರಿತಂತೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಇಂಗ್ಲಿಷಿನಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂಬ ಕೃತಿಯೊಂದನ್ನು ಪ್ರಕಟಿಸಿದೆ. ಇವರು ಹಾಸ್ಯ ಪ್ರವೃತ್ತಿಯವರಾಗಿದ್ದು ಸಹೃದಯಿಗಳಿಗೆ ಇವರ ಭಾಷಣಗಳು ಪ್ರಿಯವಾಗಿದ್ದವು. ಮಾಸ್ತಿಯವರು 'ಕರ್ನಾಟಕ' ವಿಷಯ ವಿಶ್ವಕೋಶದ ಪ್ರಥಮ ಆವೃತ್ತಿಯನ್ನು ಮೈಸೂರಿನಲ್ಲಿ ಬಿಡುಗಡೆ ಮಾಡಿದ್ದರು (1981). ಇವರು 1986 ಜೂನ್ 6ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರ ಸ್ಮರಣಾರ್ಥವಾಗಿ ಮಾಸ್ತಿ ಪ್ರಶಸ್ತಿ ಎಂಬ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. (*;ಟಿ.ಟಿ.ಎಸ್.)

**ಮಾಳಗಾಂವಕರ, ಮನೋಹರ:** 1913– . ಇಂಗ್ಲಿಷ್‍ನಲ್ಲಿ ಕಾದಂಬರಿ, ಕಥೆಗಳನ್ನು ರಚಿಸಿರುವ ಪ್ರಸಿದ್ಧ ಭಾರತೀಯ ಬರೆಹಗಾರರು, ಕನ್ನಡಿಗರು. 1913 ಜುಲೈ 12ರಂದು ಜನಿಸಿದರು. ತಂದೆ ದತ್ತಾತ್ರೇಯ, ತಾಯಿ ಪಾರ್ವತೀಬಾಯಿ. ವಾಸ ಬೆಳಗಾಂವಿ ಜಿಲ್ಲೆಯ ಲೋಂಡಾದ ಬಳಿ ಜಗಲಬೆಟ್ಟ ಗ್ರಾಮದಲ್ಲಿ. ಆರಂಭದ ಅಧ್ಯಯನ ಬೆಳಗಾಂವಿಯಲ್ಲಿ ನಡೆಯಿತು. ಹೆಚ್ಚಿನ ಶಿಕ್ಷಣವನ್ನು ಧಾರವಾಡದಲ್ಲಿ ಮುಗಿಸಿ ಪದವಿ ಪಡೆದು ಸೈನ್ಯ ಸೇರಿದರು. ಎರಡನೆಯ ಮಹಾಯುದ್ಧದಲ್ಲಿ ಭಾಗವಹಿಸಿದ ಇವರು ತಮ್ಮ 39ನೆಯ ವಯಸ್ಸಿನಲ್ಲಿಯೆ ನಿವೃತ್ತಿ ಹೊಂದಿ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟರು. ಶ್ರೀಮಂತಿಕೆ, ರಾಜಕೀಯ ಪರಿಸರದ ಅನುಭವ ಇವರಿಗೆ ಬಾಲ್ಯದಿಂದಲೇ ಉಂಟಾದವು. ಇವರ ತಾತ (ತಾಯಿಯ ತಂದೆ) ಗ್ವಾಲಿಯರ್ ರಾಜ್ಯದ ಮಂತ್ರಿಯಾಗಿದ್ದರು. ಹೀಗಾಗಿ ಇವರ ರಾಜಕೀಯ ಪರಿಸರದ ಅನುಭವ ಶ್ರೀಮಂತಿಕೆ ಇವೆಲ್ಲ ಇವರ ಕಾದಂಬರಿ ಕಥೆಗಳಲ್ಲಿ ಪ್ರವಹಿಸಿ ನಿಂತಿವೆ. ಸೈನ್ಯ ಸೇರಿದ ಮಾಳಗಾಂವಕರ್ ನಿವೃತ್ತಿಯ ಸಮಯದಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದರು (1952). ಆ ಕಾಲದಲ್ಲಿ ಭಾರತದ ಉದ್ದಗಲಕ್ಕೂ ಸಂಚರಿಸಿದರು. ಸ್ವಭಾವತಃ ಬೇಟೆಯಲ್ಲಿ ನಿಷ್ಣಾತರಾದ ಮಾಳಗಾಂವಕರ್ ಬರೆಯಲು ಆರಂಭಿಸಿದ್ದು ಒಂದು ಯೋಗಾಯೋಗವೇ ಸರಿ. ಇವರ ಪತ್ನಿ ಮನೋರಮಾ ಕಾಣಿಕೆಯಾಗಿ ನೀಡಿದ ಟೈಪ್‍ರೈಟರ್ ಇವರ ಬರೆವಣಿಗೆಗೆ ಕಾರಣವಾಯಿತಂತೆ.

ಮಾಳಗಾಂವಕರರ ಬರೆವಣಿಗೆ ವಿಪುಲವಾಗಿದೆ. ಕಥೆ, ಕವಿತೆ, ಕಾದಂಬರಿ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಕೃತಿ ರಚಿಸಿದ್ದಾರೆ. ಕಾನ್ಹೋಜಿ ಅಂಗ್ರೇ, ಮರಾಠ ನಾವಿಕ (1959), ಡಿಸ್ಟಂಟ್ ಡ್ರಮ್ (1960), ಕಾಂಬ್ಯಾಟ್ ಆಫ್ ಷಾಡೋಸ್ (1962), ಪ್ರಿನ್ಸೆಸ್ (1963), ಪುಅರಸ್ ಆಫ್ ದೇವಾಸ್ ಸೀನಿಯರ್ (1963), ಎ ಬೆಂಡ್ ಇನ್ ದಿ ಗ್ಯಾಂಜಸ್ (1964), ಛತ್ರಪತೀಸ್ ಆಫ್ ಕೊಲ್ಹಾಪುರ್ (1971), ಡೆವಿಲ್ಸ್ ವಿಂಡ್ (1972), ಮೆನ್ ಹೂ ಕಿಲ್ಡ್ ಗಾಂಧಿ (1978), ಓಪನ್ ಸೀಜನ್ (1978), ಷಾಲಿಮಾರ್ (ಕೃಷ್ಣ ಷಾ ಅವರ ನಾಟಕದ ಕಾದಂಬರಿ ರೂಪ, 1978), ಸೀಹಾಕ್, ಸ್ಪೈ ಇನ್ ಅಂಬರ್– ಇವು ಇವರ ಕೆಲವು ಪ್ರಮುಖ ಕೃತಿಗಳು.

ಇವಲ್ಲದೆ ಐವತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದಿದ್ದಾರೆ. ಆದರೂ ಕಾದಂಬರಿಗಳ ಮೂಲಕವೇ ಮಾಳಗಾಂವಕರ್ ಹೆಚ್ಚು ಪ್ರಸಿದ್ಧರು. ಇವರ ಕಾದಂಬರಿಗಳು ಕನ್ನಡ, ಮರಾಠಿ ಮುಂತಾಗಿ ಹಲವು ಭಾರತೀಯ ಭಾಷೆಗಳಲ್ಲಿ ಅನುವಾದಗೊಂಡಿವೆ. ಪ್ರಿನ್ಸೆಸ್ ಹಾಗೂ ಎ ಬೆಂಡ್ ಇನ್ ದಿ ಗ್ಯಾಂಜಸ್–ಈ ಎರಡು ಕಾದಂಬರಿಗಳು ಮಾಳಗಾಂವಕರರಿಗೆ ಖ್ಯಾತಿ ತಂದುಕೊಟ್ಟಿವೆ. ಪ್ರಿನ್ಸೆಸ್ ಕಾದಂಬರಿ ರಾಜ ಮಹಾರಾಜರು ಎಂಬ ಹೆಸರಿನಲ್ಲಿ ಕನ್ನಡಕ್ಕೆ ಶಂಕರಪಾಟೀಲರಿಂದ ಅನುವಾದಗೊಂಡಿದೆ. ಈ ಕಾದಂಬರಿ ಭಾರತದ ಸಂಸ್ಥಾನಿಕರ ಜೀವನವನ್ನು ಹಿನ್ನೆಲೆಯಾಗಿರಿಸಿ ಕೊಂಡು ರಚಿತವಾದ ಕೃತಿ. ಎ ಬೆಂಡ್ ಇನ್ ದಿ ಗ್ಯಾಂಜಸ್ (ಗಂಗೆಯ ಬದಲಾದ ಪಾತ್ರ) ಅಹಿಂಸೆಯ ಅಸ್ತಿಭಾರದಮೇಲೆ ನಿಂತ ಕಾದಂಬರಿ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಭಾರತದ ಚಿತ್ರ ಇದರಲ್ಲಿ ಮೂಡಿದೆ. ಷಾಲಿಮಾರ್ ಕಾದಂಬರಿ ಚಲನಚಿತ್ರವಾಗಿದೆ.

ಕಥೆ, ಕಾದಂಬರಿ ಹೀಗೆ ಯಾವುದೇ ಮಾಧ್ಯಮವಿರಲಿ ಇವರ ಬರೆವಣಿಗೆಯ ಶೈಲಿ ಸರಳ, ನೇರ, ಮಾರ್ಮಿಕ ಹಾಗೂ ವಸ್ತುನಿಷ್ಠವೆನ್ನ ಬಹುದು. *

**ಮಾಳವಾಡ, ಸ.ಸ.:** 1910–87. ಕನ್ನಡವನ್ನು ಕಟ್ಟಿದ ಮಹನೀಯರಲ್ಲಿ ಗಣ್ಯರು. ವಿಮರ್ಶಕರೂ ವಿದ್ವಾಂಸರೂ ಆಗಿ ಖ್ಯಾತನಾಮರು. ಇವರು ಮೂಲತಃ ಧಾರವಾಡ ಜಿಲ್ಲೆಯ ಮಾಳವಾಡದವರು; ಆದರೆ ಹಿರಿಯರು ನೆಲಸಿದ್ದು ಬಿಜಾಪುರ ಜಿಲ್ಲೆಯ ಗೋವನಕೊಪ್ಪ ಗ್ರಾಮದಲ್ಲಿ. ಇವರು ಧಾರವಾಡ ಜಿಲ್ಲೆಯ ಮೆಣಸಿಗಿ ಗ್ರಾಮದಲ್ಲಿ 1910 ನವೆಂಬರ್ 14ರಂದು ಜನಿಸಿದರು. ತಂದೆ ಸಂಗನಬಸಪ್ಪ, ತಾಯಿ ಕಾಳಮ್ಮ. ಮಾಳವಾಡರ ನಿಜನಾಮ ಸಂಗಪ್ಪ. ಇವರ ಬಾಲ್ಯ ಮತ್ತು ಪ್ರೌಢ ವಿದ್ಯಾಭ್ಯಾಸಗಳು ಗೋವನಕೊಪ್ಪ, ಗುಳೇದಗುಡ್ಡ, ಬಾಗಲಕೋಟೆ ಮತ್ತು ಬಿಜಾಪುರಗಳಲ್ಲಿ ನಡೆದುವು (1916–29). ಬಾಗಲಕೋಟೆಯಲ್ಲಿರುವಾಗ ಗಜೇಂದ್ರಗಡ ಶಾಮರಾಯ ಮಾಸ್ತರ ಎಂಬುವರು ಇವರಲ್ಲಿ ಸಾಹಿತ್ಯ ಪ್ರೇಮ ಮೊಳೆಯಿಸಿದರು. ಮುಂದೆ ಬಿಜಾಪುರ, ಧಾರವಾಡಗಳಲ್ಲಿ ಅದು ಬೆಳೆಯಿತು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇತಿಹಾಸ ಅರ್ಥಶಾಸ್ತ್ರಗಳ ವಿಶೇಷ ವಿಷಯಗಳ ಆಯ್ಕೆಯೊಂದಿಗೆ ವ್ಯಾಸಂಗ ಮುಂದುವರಿದು, 1933ರಲ್ಲಿ ಇವರು ಮುಂಬಯಿ ವಿಶ್ವವಿದ್ಯಾಲಯದ ಬಿ.ಎ. ಪದವಿ ಪಡೆದರು. ಅನಂತರ ಕೊಲ್ಹಾಪುರದಲ್ಲಿ ಸ್ನಾತಕೋತ್ತರ ಶಿಕ್ಷಣ ಮುಂದುವರಿಸಿ, ಕನ್ನಡ ಇಂಗ್ಲಿಷ್ ಭಾಷೆಗಳ ವಿಶೇಷ ಅಭ್ಯಾಸದೊಂದಿಗೆ ಅದೇ ವಿಶ್ವವಿದ್ಯಾಲಯದ ಎಂ.ಎ. ಪದವಿಯನ್ನು 1935ರಲ್ಲಿ ಪ್ರಥಮ ಸ್ಥಾನದೊಂದಿಗೆ ಗಳಿಸಿದರು. ಮಾಳವಾಡರ ವೃತ್ತಿಜೀವನ ಉತ್ತರ ಕರ್ನಾಟಕ ಭಾಗದ ಬೇರೆ ಬೇರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸ್ವಲ್ಪಕಾಲ ನಡೆದು, 1936ರಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕರ್ನಾಟಕ ಕಾಲೇಜಿನಲ್ಲಿ ನೇಮಕಗೊಂಡರು. ಅಲ್ಲಿಯೇ ತಮ್ಮ ಶಿಕ್ಷಕ ವೃತ್ತಿಯನ್ನು ಪೂರೈಸಿ 1966ರಲ್ಲಿ ಆ ಕಾಲೇಜಿನ ಪ್ರಾಚಾರ್ಯರಾಗಿ ನಿವೃತ್ತರಾದರು. 1970ರ ತನಕ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಂಶೋಧಕ ಪ್ರಾಧ್ಯಾಪಕರಾಗಿ ಅಲ್ಲಿಯೇ ಇದ್ದು ಕೆಲಸ ಮಾಡಿದರು.

ಮಾಳವಾಡರು ಶೈಕ್ಷಣಿಕ ರಂಗದಲ್ಲಿ ಬಹುಮುಖವಾಗಿ ಸೇವೆ ಸಲ್ಲಿಸಿ ಕರ್ನಾಟಕ ಕಾಲೇಜಿನ ಹಿರಿಮೆಯನ್ನು ಹೆಚ್ಚಿಸಿದರು. ಮೈಸೂರು, ಮುಂಬಯಿ ಸರ್ಕಾರಗಳ ಶಿಕ್ಷಣ ಇಲಾಖೆಗಳ ಅಭ್ಯಾಸ ನಿಯಾಮಕ ಮಂಡಳಿ, ಪಠ್ಯಪುಸ್ತಕ ಸಮಿತಿ, ನೇಮಕಾತಿ ಸಮಿತಿಗಳಲ್ಲಿ ತಮ್ಮ ಸಹಯೋಗ ನೀಡಿದರು. ಮುಂಬಯಿ ಸರ್ಕಾರದ ಕನ್ನಡ ಸಂಸ್ಕೃತಿ ಸಂಶೋಧನ ಸಮಿತಿಯ ಕಾರ್ಯದರ್ಶಿಯಾಗಿದ್ದರು (1938–41). ಮುಂಬಯಿ ವಿಶ್ವವಿದ್ಯಾಲಯದ ಶಿಕ್ಷಣಮಂಡಲಿ, ಸೆನೆಟ್ ಸಭೆಗಳಲ್ಲಿ ಸದಸ್ಯರಾಗಿದ್ದರು (1946–52). ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗೊಳ್ಳಲು ಹಾಗೂ ಆಕಾಶವಾಣಿ ಕೇಂದ್ರ ಆರಂಭವಾಗಲು ಇವರು ಬಹುವಾಗಿ ಶ್ರಮಿಸಿದರು. ಅಲ್ಲಿಯ ಕನ್ನಡ ಸಂಶೋಧನ ಸಂಸ್ಥೆಯ ಸ್ಥಾಪನೆಯಲ್ಲಿಯೂ ಇವರ ಪಾತ್ರವಿದ್ದಿತು; 1953–57ರ ತನಕ ಆ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಅಲ್ಲಿ ವಿದ್ವತ್ತಿನ ಚಟುವಟಿಕೆಗಳನ್ನು ಹೆಚ್ಚಿಸಿದರು. 1956ರಲ್ಲಿ ಈ ಸಂಸ್ಥೆಯನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ವಹಿಸಿಕೊಡುವಲ್ಲಿಯೂ ಇವರದು ಮಹತ್ತ್ವದ ಪಾತ್ರ. ಕರ್ನಾಟಕ ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ನಿರ್ದೇಶನಾಲಯದ ಮೊದಲ ಗೌರವ ನಿರ್ದೇಶಕರಾಗಿಯೂ (1968–70) ಇವರು ಶ್ರಮಿಸಿ, ಈ ವಿಭಾಗಕ್ಕೆ ಭದ್ರ ಬುನಾದಿಯನ್ನು ಹಾಕಿದರು.

ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಅಖಿಲ ಭಾರತ ಪಿ.ಇ.ಎನ್. ಸಂಸ್ಥೆ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ

ಅಕಾಡೆಮಿಗಳು, ಭಾರತೀಯ ಜ್ಞಾನಪೀಠ, ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕೇಂದ್ರ ಬಸವ ಸಮಿತಿ ಮುಂತಾದ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ, ಸಲಹೆಗಾರರಾಗಿ ಮಾಳವಾಡರು ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದರು. ಹಲವು ವಿದ್ವತ್ಪತ್ರಿಕೆಗಳ ಸಂಪಾದಕ ಮಂಡಲಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಮಿತಿ ಸದಸ್ಯ ಉಪಾಧ್ಯಕ್ಷರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಮಿತಿ ಸದಸ್ಯರಾಗಿ ತಮ್ಮ ವಿದ್ವತ್ತಿನ ಪ್ರಯೋಜನ ದೊರಕಿಸಿಕೊಟ್ಟರು. ಪಿ.ಇ.ಎನ್. ಸಮ್ಮೇಳನಗಳಲ್ಲಿ, ಅಖಿಲಭಾರತ ಪ್ರಾಚ್ಯ ವಿದ್ಯಾಪರಿಷತ್ತಿನ ಅಧಿವೇಶನಗಳಲ್ಲಿ, ಅರವಿಂದ ಶತಾಬ್ದಿ ಮತ್ತು ಅಂಥ ಹಲವು ವಿಚಾರಗೋಷ್ಠಿಗಳಲ್ಲಿ ಇವರು ಭಾಗವಹಿಸಿ ಪ್ರಬಂಧ ಮಂಡಿಸಿದರು. ಮದರಾಸು ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿ (1945), ಧಾರವಾಡ ಬಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರಾಗಿ ಗೌರವಿಸಲ್ಪಟ್ಟರು.

ಮಾಳವಾಡರು ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ಸ್ವಂತ ರಚನೆಗಳೂ ಸಂಪಾದಿತ ಕೃತಿಗಳೂ ಸೇರಿವೆ. ಈ ಕೃತಿಗಳ ಬೆಲೆಯುಳ್ಳ ಸಾಹಿತ್ಯಮೌಲ್ಯದ ಮೂಲಕ ಕನ್ನಡ ಭಾಷೆ ಸಾಹಿತ್ಯಗಳ ಸಂಪತ್ತನ್ನು ಹೆಚ್ಚಿಸಿದ್ದಾರೆ. ಇವು ಆತ್ಮಚರಿತ್ರೆ, ಜೀವನಚರಿತ್ರೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಅಧ್ಯಾತ್ಮ ಸಾಹಿತ್ಯ, ವಿಮರ್ಶೆ, ಸಂಪಾದನೆ ಇತ್ಯಾದಿ ಪ್ರಕಾರಗಳಲ್ಲಿ ವ್ಯಾಪಿಸಿವೆ. 'ದಾರಿ ಸಾಗಿದೆ' ಇವರ ಆತ್ಮಚರಿತ್ರೆ. ಉತ್ತಂಗಿ ಚನ್ನಪ್ಪ, ಮಧುರ ಚೆನ್ನ, ನಾಗಮಹಾಶಯ ಮೊದಲಾದವು ಜೀವನ ಚರಿತ್ರೆಗಳು; ಪಯಣದ ಕತೆ, ಸಂಚಾರ ಸಂಗಮ ಪ್ರವಾಸ ಕಥನ; ಸಂಸ್ಕೃತಿ, ಕಾಲವಾಹಿನಿ, ದೃಷ್ಟಿಕೋನ ಮೊದಲಾದವು ವೈಚಾರಿಕ ಬರೆಹಗಳು; ಶ್ರೀ ಅರವಿಂದ ಸ್ಮರಣೆ, ಅರವಿಂದ ಮಾತಾಪಥ ಮುಂತಾದವು ಅಧ್ಯಾತ್ಮ ಸಾಹಿತ್ಯದ ರಚನೆಗಳು; ಕನ್ನಡ ಸಾಹಿತ್ಯ ಸಂಸ್ಕೃತಿ ದರ್ಶನ, ಸಾಹಿತ್ಯ ಸಮಾಲೋಚನೆ, ಪುಸ್ತಕ ಪ್ರಪಂಚ, ಹರಿಹರನ ರಗಳೆಗಳಲ್ಲಿ ಜೀವನದರ್ಶನ, ಕಾವ್ಯ ಮತ್ತು ಜೀವನಚಿತ್ರಣ ಈ ಕೆಲವು ಸಾಹಿತ್ಯ ವಿಮರ್ಶೆಯ ಕೃತಿಗಳು; ರಾಘವಾಂಕ ಚರಿತೆ, ಹರಿಹರನ ಮೂರು ಗರಳೆಗಳು ಮೊದಲಾದವು ಸಂಪಾದಿತ ಗ್ರಂಥಗಳು; ಸಂಗೀತರತ್ನ, ಕರ್ನಾಟಕ ಕುಲಪುರೋಹಿತರು ಇವರ ಸಂಪಾದಕತ್ವದ ಗೌರವಗ್ರಂಥಗಳು. ಸಾಹಿತ್ಯ ಸಂಗಮ ಎಂಬ ಹೆಬ್ಬೊತ್ತಗೆಯಲ್ಲಿ ಇವರ ಸಾಹಿತ್ಯ ಕೃಷಿಯ ವೈವಿಧ್ಯವನ್ನು ನಿದರ್ಶಿಸುವ 60 ಲೇಖನಗಳು ಸಂಕಲಿತವಾಗಿದ್ದು ಅಭ್ಯಾಸಿಗಳಿಗೆ ತುಂಬ ಉಪಯುಕ್ತವಾಗಿವೆ. ಪ್ರಾಚೀನ ಮತ್ತು ಆಧುನಿಕ ಸಾಹಿತ್ಯದ ಕವಿ–ಕೃತಿಗಳ ಪರಿಚಯ ವಿಮರ್ಶೆಗಳಲ್ಲಿ, ಅರವಿಂದರ ಜೀವನ ಸಾಧನೆ ಸಂದೇಶಗಳ ಪ್ರಸಾರದಲ್ಲಿ ಇವರು ಅಪಾರವಾಗಿ ಶ್ರಮಿಸಿರುವುದನ್ನು ಗುರುತಿಸಿ, ಶಿಕ್ಷಕರಾಗಿ ಶಿಕ್ಷಣತಜ್ಞರಾಗಿ ಇವರ ಸೇವೆಯನ್ನು ಗಮನಿಸಿ ಇವರ 73ನೆಯ ಹುಟ್ಟುಹಬ್ಬದಲ್ಲಿ ವ್ಯಾಸಂಗ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು (1983). ಇವರನ್ನು ರಾಜ್ಯ ಸಾಹಿತ್ಯ ಅಕಾಡೆಮಿ ಗೌರವಿಸಿದೆ (1972). ವ್ಯಕ್ತಿಯಾಗಿ ನೇರವಾದ ನಡೆನುಡಿಗಳಿಗೆ, ವಸ್ತುನಿಷ್ಠವಿಚಾರಗಳಿಗೆ, ಆಡಳಿತ ದಕ್ಷತೆಗೆ ಇವರು ಹೆಸರಾಗಿದ್ದರು.

ಇವರು ಆಲೂರ ವೆಂಕಟರಾಯರು, ಬಿ.ಎಂ.ಶ್ರೀ, ಬಸವನಾಳ, ಬೇಂದ್ರೆ, ಕುವೆಂಪು, ಹಳಕಟ್ಟಿ, ಕುಂದಣಗಾರ್, ಕಾರಂತ, ತೀ.ನಂ.ಶ್ರೀ. ಮೊದಲಾದವರ ಸ್ನೇಹ ಸಂಪರ್ಕಗಳನ್ನು ಗಳಿಸಿದ್ದರು; ಪ್ರತಿಭಾವಂತ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಕನ್ನಡ ಸಾಹಿತ್ಯದ ಅಧ್ಯಯನ ಮಾಡಿದ್ದರು. ಇವರ ಪತ್ನಿ ಶಾಂತಾದೇವಿ ಮಾಳವಾಡ ಸಹ ಮಹಿಳಾ ಸಾಹಿತಿಗಳಲ್ಲಿ ಗಣ್ಯರೆನಿಸಿದ್ದಾರೆ. ಮಾಳವಾಡರು ಆ ಕಾಲಕ್ಕೆ ತಮ್ಮ ಗಳಿಕೆಯ 25 ಸಾವಿರ ರೂಪಾಯಿಗಳನ್ನು ಕನ್ನಡ ಸಾಹಿತ್ಯ ಪೋಷಣೆಗೆ ಬೇರೆ ಬೇರೆ ದತ್ತಿಗಳ ರೂಪದಲ್ಲಿ ವಿನಿಯೋಗಿಸಿದ್ದರು. ಇವರು 1987 ಆಗಸ್ಟ್ 30 ರಂದು ನಿಧನರಾದರು. *

**ಮಿಡಿಗೇಶಿ:** ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಕಸಬೆಯಿಂದ 19 ಕಿಮೀ ಉತ್ತರಕ್ಕೆ ಮಡಕಶಿರಾಕ್ಕೆ ಹೋಗುವ ಮಾರ್ಗದ ಸಮೀಪ ಮಿಡಿಗೇಶಿ ಬೆಟ್ಟದ ಪೂರ್ವದ ಇಳಿಜಾರಿನಲ್ಲಿರುವ ಒಂದು ಗ್ರಾಮ. ಇದೇ ಹೆಸರಿನ ಹೋಬಳಿಯ ಮುಖ್ಯಸ್ಥಳ.

ಮಿಡಿಗೇಶಿ ಹಿಂದೆ ಒಂದು ಪಾಳೆಯಪಟ್ಟಿನ ಕೇಂದ್ರವಾಗಿತ್ತು. ಇಲ್ಲಿ ಪಾಳೆಯಗಾರನಾಗಿದ್ದ ನಾಗರೆಡ್ಡಿ ಎಂಬಾತ ತನ್ನ ಸುಂದರ ಪತ್ನಿಯ ತಲೆಕೂದಲು ಮಿಡಿಯ (ಹಿಮ್ಮಡಿ) ವರೆಗೂ ಇದ್ದ ಸಂಗತಿಯ ಸ್ಮರಣಾರ್ಥವಾಗಿ ತನ್ನ ರಾಜಧಾನಿಗೆ ಮಿಡಿಗೇಶಿ ಎಂದು ನಾಮಕರಣ ಮಾಡಿದುದಾಗಿ ಐತಿಹ್ಯವಿದೆ. ಅವನೇ ಬೆಟ್ಟದ ಸುತ್ತ ಸುಭದ್ರ ಕೋಟೆಯನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಅವನ ಕಾಲ ನಿರ್ಣಯಕ್ಕೆ ಹೆಚ್ಚಿನ ಆಧಾರಗಳಿಲ್ಲ. ಬಹುಶಃ ಅವನು 14–15ನೆಯ ಶತಮಾನದಲ್ಲಿ ಆಳುತ್ತಿದ್ದಿರಬಹುದು. ದೀರ್ಘಕಾಲದವರೆಗೂ ಆ ವಂಶದ ರಾಣಿಯರು ಅಲ್ಲಿ ಆಳುತ್ತಿದ್ದರೆಂದು ತಿಳಿದುಬರುತ್ತದೆ. ಅನಂತರ ಮಧುಗಿರಿಯ ಪಾಳೆಯಗಾರ ಚಿಕ್ಕಪ್ಪಗೌಡ ಮಿಡಿಗೇಶಿಯನ್ನು ವಶಪಡಿಸಿಕೊಂಡ. 1678–79ರ ವೇಳೆಗೆ ಮೈಸೂರಿನ ಚಿಕ್ಕದೇವರಾಜ ಒಡೆಯರ ದಳವಾಯಿ ದೇವರಾಜ ಮಧುಗಿರಿಯ ನಾಯಕನಾದ ತಿಮ್ಮಪ್ಪಗೌಡ ಮತ್ತು ರಾಮಪ್ಪಗೌಡರನ್ನು ಸೋಲಿಸಿ ಜಡಕನದುರ್ಗ, ಮಧುಗಿರಿ, ಚನ್ನರಾಯನದುರ್ಗ ಮತ್ತು ಮಿಡಿಗೇಶಿಯನ್ನು ವಶಪಡಿಸಿಕೊಂಡ. ಶಹಾಜಿಯ ಹಿರಿಯ ಮಗ ತಂಜಾವೂರಿನಲ್ಲಿ ಆಳುತ್ತಿದ್ದ ವೆಂಕೋಜಿ ಅಥವಾ ಏಕೋಜಿಯ ಸೈನ್ಯ ಯಶವಂತರಾಯನ ನೇತೃತ್ವದಲ್ಲಿ ಈ ಪ್ರದೇಶವನ್ನು ಆಕ್ರಮಿಸಿಕೊಂಡರೂ ಅಲ್ಪಾವಧಿಯಲ್ಲೇ ಮತ್ತೆ ಮೈಸೂರು ಸೈನ್ಯ ಮರಾಠರನ್ನು ಹೊಡೆದೋಡಿಸಿತು. ಅದೇ ಸುಮಾರಿನಲ್ಲಿ ಬಿಜಾಪುರ ಸುಲ್ತಾನರ ಸೈನ್ಯ ಈ ಪ್ರದೇಶದ ಮೇಲೆ ದಾಳಿ ನಡೆಸಿದಾಗ ಚಿಕ್ಕದೇವರಾಜ ಅವರನ್ನು ಹೊಡೆದೋಡಿಸಿ ಈ ಪ್ರದೇಶದ ಮೇಲೆ ತನ್ನ ಅಧಿಕಾರವನ್ನು ಭದ್ರಗೊಳಿಸಿದ. ಆ ಸಮಯದಲ್ಲಿ ಮಧುಗಿರಿಯ ಪಾಳೆಯಗಾರರಿಗೆ ಮಿಡಿಗೇಶಿಯನ್ನು ಬಿಟ್ಟುಕೊಡಲಾಯಿತು. ಹೈದರ್ ಅಲಿ 1761ರಲ್ಲಿ ಮಿಡಿಗೇಶಿಯನ್ನು ಗೆದ್ದುಕೊಂಡ. 1767ರಲ್ಲಿ ಮರಾಠರ ದಳಪತಿ ಮಾಧವರಾಯ ಮಿಡಿಗೇಶಿಯನ್ನು ವಶಪಡಿಸಿಕೊಂಡರೂ 1774ರ ವೇಳೆಗೆ ಟಿಪ್ಪು ಮಧುಗಿರಿ, ಮಿಡಿಗೇಶಿಗಳನ್ನು ಪುನಃ ಆಕ್ರಮಿಸಿಕೊಂಡ. ಆದರೆ ಮರಾಠರು ಸೋತು ಓಡುವ ಮುನ್ನ ಮಿಡಿಗೇಶಿಯನ್ನು ಲೂಟಿ ಮಾಡಿ ಪಾಳುಗೆಡವಿದರು. ಅನಂತರ ಮೂರನೆಯ ಮೈಸೂರು ಯುದ್ಧದ ಸಮಯದಲ್ಲಿ ಕಾರನ್‌ವಾಲೀಸನ ಆಕ್ರಮಣದ ಅನಂತರ ಚಿಕ್ಕಪ್ಪಗೌಡನ ವಂಶಸ್ಥರು ಮಿಡಿಗೇಶಿಯಲ್ಲಿ ನೆಲೆಸಿದರು. ಮತ್ತೆ ಟಿಪ್ಪುಸುಲ್ತಾನನ ದಂಡನಾಯಕ ಕಮ್ರುದ್ದೀನನ ದಾಳಿಯಿಂದ ಅವರು ಮಿಡಿಗೇಶಿಯಿಂದ ಹೊರಬೀಳುವಂತಾಯಿತು. ಮುಸ್ಲಿಮರ ಆಳಿಕೆಯಲ್ಲಿ ಮಿಡಿಗೇಶಿಯು

ಅಸೋಫ್ ಎಂಬ ಅಧಿಕಾರಿಯ ವಾಸಸ್ಥಳವಾಗಿತ್ತು. ಅನಂತರ ಮೈಸೂರು ರಾಜ್ಯದಲ್ಲಿ ಲೀನವಾಗಿ ತಾಲ್ಲೂಕಿಗೆ ಸೇರಿದ ಹೋಬಳಿಯ ಮುಖ್ಯ ಸ್ಥಳವಾಯಿತು.

ಮಿಡಿಗೇಶಿಯ ಕೋಟೆ ಒಂದು ಕಾಲದಲ್ಲಿ ಬಹು ಭದ್ರ ಠಾಣ್ಯವಾಗಿತ್ತು. ಕಡಿದಾದ ಬೆಟ್ಟದ ಸುತ್ತಲಿರುವ ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ ದುಂಡಾದ ಬತೇರಿಗಳನ್ನೂ ಗೋಡೆಯ ಒಳಬದಿಯಲ್ಲಿ ಕಾವಲುಗಾರರು ಮತ್ತು ರಕ್ಷಣಾ ಪಡೆಯವರು ಪಹರೆ ಮಾಡಲು ಸುತ್ತಲೂ ಗೋಡೆಯ ಜಗತಿಯನ್ನೂ ಮೇಲಂಚಿನಲ್ಲಿ ಫಿರಂಗಿಗಳ ರಂಧ್ರಗಳನ್ನೂ ನಿರ್ಮಿಸಲಾಗಿದೆ. ಕೋಟೆಗೆ ಒಟ್ಟು ಐದು ಪ್ರವೇಶ ದ್ವಾರಗಳಿವೆ. ಇವುಗಳಲ್ಲಿ ಕೆಲವು ಹೈದರ್‌ಅಲಿಯ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾದವು. ಅಂಥ ಎರಡು ಪ್ರವೇಶದ್ವಾರಗಳಲ್ಲಿ ಕಮಾನು, ಗುಮ್ಮಟಾಕಾರದ ಚಾವಣಿ ಮುಂತಾದ ಮುಸ್ಲಿಮ್ ವಾಸ್ತುಲಕ್ಷಣಗಳು ಪ್ರಧಾನವಾಗಿವೆ. ಕೋಟೆಯ ಒಳಭಾಗದಲ್ಲಿ ವೆಂಕಟರಮಣಸ್ವಾಮಿ, ಮಲ್ಲೇಶ್ವರ ಮತ್ತು ಆಂಜನೇಯ ದೇವಾಲಯಗಳು, ಅರಮನೆ, ಹಾಳಾದ ಮಂಟಪ ಅಥವಾ ಕಾವಲು ಗೃಹ, ನೀರಿನ ದೋಣೆಗಳು, ಮಸೀದಿ, ಮದ್ದಿನ ಉಗ್ರಾಣ, ಧಾನ್ಯದ ಕಣಜಗಳು, ಎಣ್ಣೆ ಮತ್ತು ತುಪ್ಪದ ಸಂಗ್ರಹಕ್ಕಾಗಿ ಉಪಯೋಗಿಸುತ್ತಿದ್ದ ಗುಡಾಣಗಳು ಮುಂತಾದವುಗಳ ಅವಶೇಷಗಳಿವೆ. ಕನ್ಯಾರಮ್ಮನ ದೋಣಿ ಮತ್ತು ಮುಸರೆ ದೋಣೆಗಳು ಕೋಟೆಯ ನಿವಾಸಿಗಳಿಗೆ ನೀರನ್ನು ಒದಗಿಸುತ್ತಿದ್ದವು. ಕನ್ಯಾರಮ್ಮನ ದೋಣೆಯ ಪಕ್ಕದಲ್ಲಿರುವ ಸಣ್ಣ ಗುಡಿಯಲ್ಲಿ ಲಿಂಗಾಕಾರದ ದೇವಿಯ ಮೂರ್ತಿಯಿದೆ. ಕಾವಲುಗೃಹ ಅಥವಾ ಬುರುಜಿನ ಬಳಿಯ ಒಂದು ತಗ್ಗಿನಲ್ಲಿ ಸುಸ್ಥಿತಿಯಲ್ಲಿರುವ 20 x 15 ಅಡಿ ವಿಸ್ತೀರ್ಣದ ಎರಡು ಕೋಣೆಗಳನ್ನು ಮದ್ದಿನ ಉಗ್ರಾಣವೆಂದು ಗುರುತಿಸಲಾಗಿದೆ. ಬೆಟ್ಟದ ತುದಿಯಲ್ಲಿ ಇಟ್ಟಿಗೆ ಗಾರೆಗಳಿಂದ ನಿರ್ಮಿಸಿದ ಮಸೀದಿಯಲ್ಲಿ 35 x 20 ಅಡಿಗಳ ಹಜಾರ, ಕಟಕಟೆ ಮತ್ತು ಎರಡು ಮಿನರೆಟ್ಟುಗಳಿವೆ. ಧಾನ್ಯದ ಕಣಜಗಳಲ್ಲಿ ಇಂದಿಗೂ ರಾಗಿ ಮತ್ತು ಬತ್ತದ ಕಾಳುಗಳು ಮತ್ತು ಹೊಟ್ಟು ಉಳಿದು ಬಂದಿದೆ.

ಮಿಡಿಗೇಶಿ ಕೋಟೆಯ ಒಳಭಾಗದಲ್ಲಿ ಇರುವ ಮೂರು ಹಿಂದು ದೇವಾಲಯಗಳಲ್ಲಿ ಜಿಬಿ ಆಂಜನೇಯನ ಗುಡಿ ಪಾಳೆಯಗಾರರ ಕಾಲದಲ್ಲಿ ಕಟ್ಟಿಸಲಾಗಿದ್ದು ಅದರೊಳಗೆ ದೊಡ್ಡಕಲ್ಲಿನ ಮೇಲೆ ಕೆತ್ತಲಾದ ಆಂಜನೇಯನ ಉಬ್ಬುಶಿಲ್ಪ ಸುಂದರವಾಗಿದೆ. ಅದೇ ಕಾಲಕ್ಕೆ ಸೇರಬಹುದಾದ ಮಲ್ಲೇಶ್ವರನ ಗುಡಿಯನ್ನು ಸೆಟ್ಟಿನೋರು ಕುರುಬ ಪಂಥದವರು ತಮ್ಮ ಕುಲದೇವತೆಯಾದ ಮಲ್ಲೇಶ್ವರನಿಗೆ ಕಟ್ಟಿಸಿದನೆಂದು ಹೇಳಲಾಗಿದೆ. ಆ ಪಂಗಡಕ್ಕೆ ಸೇರಿದ ಸುಂದರ ತರುಣಿ ಚಿಕ್ಕಮಲ್ಲಮ್ಮನೆಂಬುವವಳನ್ನು ಮುಸ್ಲಿಂದಾಳಿಕಾರರು ಬಲಾತ್ಕಾರವಾಗಿ ಮಾನಭಂಗ ಮಾಡಿ ಸೆರೆಯಲ್ಲಿ ಇಟ್ಟರು. ಅವಳು ತನ್ನ ಕುಲದೇವತೆಯನ್ನು ಪ್ರಾರ್ಥಿಸಲು ದೇವತೆಯ ಅನುಗ್ರಹದಿಂದ ಬಂಡೆ ಇಬ್ಭಾಗವಾಗಿ ದಾರಿ ಮಾಡಿಕೊಟ್ಟಿತು. ಆಗ ಆಕೆ ಮಲ್ಲೇಶ್ವರನಸನ್ನಿಧಿಯಲ್ಲಿ ಅಗ್ನಿ ಪ್ರವೇಶ ಮಾಡಿದಳು ಎಂದು ಪ್ರತೀತಿ. ಬೆಟ್ಟದ ಮೆಟ್ಟಿಲುಗಳ ಸಾಲಿನ ಬಲಕ್ಕಿರುವ ಕಲ್ಲಿನ ಮೇಲೆ ಕೊರೆದ ಎಡಗೈಯಲ್ಲಿ ಈಟಿ ಮತ್ತು ಬಲಗೈಯ ಕತ್ತಿ ಹಿಡಿದ 2' ಎತ್ತರದ ಸ್ತ್ರೀಯ ಶಿಲ್ಪ ಆಕೆಯದೆಂದು ಹೇಳಲಾಗುತ್ತದೆ. ಈ ಸಂಗತಿಯನ್ನು ತಿಳಿಸುವ ತಾಮ್ರಪತ್ರವೊಂದನ್ನು ದೇವಾಲಯದಲ್ಲಿ ಡಲಾಗಿದೆ. ವೆಂಕಟರಮಣ ದೇವಾಲಯ ಕೋಟೆಯಲ್ಲಿರುವ ಮುಖ್ಯ ದೇವಾಲಯ. ಅದೇ ಹೆಸರಿನ ಮಧುಗಿರಿಯ ದೇವಾಲಯವನ್ನು ಹೋಲುವ ದ್ರಾವಿಡ ಶೈಲಿಯ ಈ ಕಟ್ಟಡವನ್ನು ನಾಗರೆಡ್ಡಿ ಕಟ್ಟಿಸಿದನೆಂದು ಹೇಳಲಾದರೂ ಅದರ ಗರ್ಭಗುಡಿ ಹೊಯ್ಸಳ ಶೈಲಿಯ ಕೊನೆಗಾಲಕ್ಕೆ ಸೇರಿದಂತೆ ಕಾಣುತ್ತದೆ. ಪೂರ್ವದ ಮಹಾದ್ವಾರದ ಮೇಲೆ ಇಟ್ಟಿಗೆ ಗಾರೆಗಳಿಂದ ಕಟ್ಟಿದ ಎತ್ತರವಾದ ಗೋಪುರವಿದೆ. ದ್ವಾರಮಂಟಪದ ಕಂಬಗಳು ಸಿಂಹಲಾಂಛನವನ್ನು ಹೊಂದಿವೆ. ದ್ವಾರಮಂಟಪದಲ್ಲಿ ಬಲದ ಸಣ್ಣ ಗುಡಿಯಲ್ಲಿ ಗಣೇಶ ಮತ್ತು ಎಡದ ಗುಡಿಯಲ್ಲಿ ಭೈರವನ ಮೂರ್ತಿಗಳಿವೆ. ನವರಂಗದ ಬಾಗಿಲಿನಲ್ಲಿರುವ ಗೂಡುಗಳಲ್ಲಿ ಗಣಪತಿ ಮತ್ತು ವೀರಭದ್ರರ ಶಿಲ್ಪಗಳಿವೆ. ದೇವಾಲಯದ ಪ್ರಾಕಾರದ ದಕ್ಷಿಣ ಗೋಡೆಯಲ್ಲಿರುವ ಬಾಗಿಲಿಗೆ ಹೊಂದಿದಂತೆ ಅರಮನೆಯ ಪಾಳುಬಿದ್ದ ಕಲ್ಲಿನ ಗೋಡೆಗಳಿವೆ. ರಾಜಮನೆತನದವರು ಈ ಬಾಗಿಲಿನಿಂದ ಗುಡಿಗೆ ಬರುತ್ತಿದ್ದರಂತೆ. ಅಲ್ಲಿನ ಗೋಡೆಯ ಮೇಲಿರುವ ಒಂದೂವರೆ ಅಡಿ ಎತ್ತರದ ಕೈಮುಗಿದು ನಿಂತ ವ್ಯಕ್ತಿಯ ಶಿಲ್ಪ ನಾಗರೆಡ್ಡಿಯದೆಂದು ಹೇಳಲಾಗುತ್ತದೆ. ಅದರ ಬಳಿ 5 ಅಡಿ ಉದ್ದದ ಕಾಳಿಂಗ ಸರ್ಪದ ಮೇಲೆ ನರ್ತಿಸುತ್ತಿರುವ ಕೃಷ್ಣನ ಶಿಲ್ಪವಿದೆ. ಮಹಾದ್ವಾರದ ಎದುರಿಗೆ ಗರುಡಮಂಟಪವಿದೆ. ಇದರ ಬಳಿಯಿರುವ 40 ಅಡಿ ಎತ್ತರದ ಹೂ ಬಳ್ಳಿಗಳಿಂದ ಆವೃತವಾದಂತೆ ಕೆತ್ತಿದ ಅಂದವಾದ ಧ್ವಜಸ್ತಂಭ ಸಿಡಿಲು ಬಡಿದು ಅರ್ಧವಾಗಿದೆ.

(ವಿ.ಜಿ.ಕೆ.;ಬಿ.ಕೆ.ಜಿ.)

**ಮಿಣಜಿಗಿ, ಮಡಿವಾಳಪ್ಪ ವೀರಪ್ಪ:** 1901–87. ಪ್ರಸಿದ್ಧ ಚಿತ್ರ ಕಲಾವಿದರು. ತೈಲ ಹಾಗೂ ಜಲವರ್ಣ ಚಿತ್ರಗಳ ರಚನೆಯಲ್ಲಿ ಸಿದ್ಧಹಸ್ತರು. ಇವರ ರಾಗಮಾಲಾ ಹಾಗೂ ನಿಸರ್ಗ ಚಿತ್ರಗಳು ವಿಶಿಷ್ಟವಾದುವು. ಬಿಜಾಪುರ ಜಿಲ್ಲೆಯ ಹಳ್ಳಿಯೊಂದರಲ್ಲಿ 1901 ಜನವರಿ 30ರಂದು ಜನಿಸಿದರು. ಶ್ರೀಮಂತ ಮನೆತನದಲ್ಲಿ ಹುಟ್ಟಿದ ಇವರು ಚಿಕ್ಕಂದಿನಲ್ಲಿಯೇ



ತಾಯಿಯನ್ನು ಕಳೆದುಕೊಂಡು ತಂದೆಯ ಆಶ್ರಯದಲ್ಲಿ ಬೆಳೆದರು. ಮೊದಲಿನಿಂದಲೂ ವೀರಪ್ಪನವರಿಗೆ ಸಂಗೀತ ಮತ್ತು ಚಿತ್ರಕಲೆಯಲ್ಲಿ ಆಸಕ್ತಿಯಿತ್ತು. ಪ್ರಾಥಮಿಕ ವಿದ್ಯಾಭ್ಯಾಸ ಬಿಜಾಪುರದಲ್ಲಿ. ಅನಂತರ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಸೇರಿ ಪ್ರಥಮ ದರ್ಜೆಯಲ್ಲಿ ಡಿಪ್ಲೊಮಾ ಪಡೆದು ಆರ್ಟ್ಸ್ ಮಾಸ್ಟರ್ ಆದರು. ಅನಂತರ ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಆರ್ಟ್ಸ್ ಸೇರಿ ಅಲ್ಲಿದ್ದ ವಿಲಿಯಮ್ ರೂಥನ್‌ಸ್ಟೈನ್ ಅವರದು ಅದ್ಭುತ ವ್ಯಕ್ತಿತ್ವ. ಅವರಿಗೆ ಭಾರತೀಯ ಸಂಸ್ಕೃತಿ ಮತ್ತು ಕಲೆಗಳ ಬಗ್ಗೆ ಅಭಿಮಾನವಿತ್ತು. ಮಿಣಜಿಗಿ ಅವರಿಗೆ ಅಂಥವರ ಜೊತೆಯಲ್ಲಿ ಕೆಲಸ ಮಾಡುವ ಸುಯೋಗ ದೊರೆಯಿತು. ಇಂಗ್ಲೆಂಡಿನ ನ್ಯಾಷನಲ್ ಗ್ಯಾಲರಿಗಳಲ್ಲಿದ್ದ ಎರಡು ಚಿತ್ರಗಳನ್ನು ಮಿಣಜಿಗಿಯವರು ಪ್ರತಿಮಾಡಿ ರೂಥನ್‌ಸ್ಟೈನ್‌ರಿಗೆ ತೋರಿಸಿದಾಗ ಅವರು ಪ್ರತಿ ತೆಗೆಯುವ ಕೆಲಸ ಮಾಡಬೇಡ, ಸ್ವತಂತ್ರವಾಗಿ ಚಿತ್ರಗಳನ್ನು ರಚಿಸು, ಉತ್ತಮ ಕಲಾಕಾರನಾಗು ಎಂದರಂತೆ. ಗುರುವಿನ ಮಾತನ್ನು ಪಾಲಿಸಲು ಮಿಣಜಿಗಿಯವರು ಸತತವಾಗಿ ದುಡಿದರು.

ಇವರು ಸುಮಾರು ಸಾವಿರ ಚಿತ್ರಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ರಾಗಮಾಲಾ ಚಿತ್ರಗಳು, ನಿಸರ್ಗ ಚಿತ್ರಗಳು, ಭಿತ್ತಿಚಿತ್ರಗಳು, ರೇಖಾಚಿತ್ರಗಳು, ಸಂಯೋಜಿತ ಚಿತ್ರಗಳು ಸೇರಿವೆ. ಇವರು ಸ್ವತಃ ಸಂಗೀತಗಾರರಾಗಿದ್ದುದರಿಂದ ಇವರ ರಾಗಮಾಲಾ ಚಿತ್ರಗಳು ಜೀವಂತಿಕೆ ಪಡೆದಿವೆ.

ಸಂಗೀತವನ್ನು ಬಣ್ಣದಲ್ಲಿ ಹಿಡಿದು ನಿಲ್ಲಿಸುವ ಕಾರ್ಯದಲ್ಲಿ ಇವರು ಯಶಸ್ವಿಯಾಗಿದ್ದಾರೆ.

ಇಂಗ್ಲೆಂಡಿನಿಂದ ಬಂದ ಇವರು ಕೆಲಕಾಲ ಮುಂಬಯಿಯಲ್ಲಿದ್ದು ಅನಂತರ ಹುಬ್ಬಳ್ಳಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಕುಂಚಬ್ರಹ್ಮ, ಕರ್ನಾಟಕ ಕಲಾಸಾರ್ವಭೌಮ ಎಂಬ ಬಿರುದುಗಳನ್ನು ಪಡೆದರು. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಸಂದಿವೆ. ಇವರು ಜಪಾನಿನಲ್ಲಿ ನಡೆದ ಅಂತಾರಾಷ್ಟ್ರೀಯ ಕಲಾಸಮ್ಮೇಳನದಲ್ಲೂ ಭಾಗವಹಿಸಿದ್ದರು. ಅಲ್ಲದೆ ಅನೇಕ ಸಂಘ ಸಂಸ್ಥೆಗಳೊಡನೆ ಸಂಬಂಧವಿರಿಸಿಕೊಂಡಿದ್ದರು. ಇವರು 1987ರಲ್ಲಿ ನಿಧನರಾದರು. *

**ಮಿಥಿಕ್ ಸೊಸೈಟಿ**: ಭಾರತದ ಇತಿಹಾಸ ಮತ್ತು ಸಂಸ್ಕೃತಿ ಶೋಧನೆಗಾಗಿ ಹುಟ್ಟಿಕೊಂಡ, ಬೆಂಗಳೂರಿನಲ್ಲಿ ಸ್ಥಾಪಿತವಾದ ಒಂದು ಸಂಸ್ಥೆ. ಆಗಿನ ಬೆಂಗಳೂರಿನ ಕಂಟೋನ್ಮೆಂಟ್ ಜಿಲ್ಲೆಯ ಜಿಲ್ಲಾಧಿಕಾರಿ ಆಗಿದ್ದ ಎಫ್.ಜೆ. ರಿಚರ್ಡ್ಸ್‌ರ ಆಸಕ್ತಿ ಮತ್ತು ಪರಿಶ್ರಮದ ಫಲವಾಗಿ ಈ ಸಂಸ್ಥೆ 1909ರಲ್ಲಿ ಸ್ಥಾಪಿತವಾಯಿತು. ಇದರ ಸ್ಥಾಪನೆಗೆ ರಾಯಲ್ ಏಷ್ಯಾಟಿಕ್ ಸೊಸೈಟಿಯೇ ಮಾದರಿ. ಮಾರಿಸ್ ಟ್ರಾವೆರ್ಸ್ ಇದರ ಪ್ರಥಮ ಅಧ್ಯಕ್ಷರು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಥಮ ಮಹಾಪೋಷಕರು. ಮೈಸೂರಿನ ರೆಸಿಡೆಂಟ್ ಸ್ಟುಯರ್ಟ್ ಫ್ರೇಸರ್ ಗೌರವಾಧ್ಯಕ್ಷರಾಗಿದ್ದರು. ಪ್ರಾಧ್ಯಾಪಕರಾಗಿದ್ದ ಎ.ಎಂ. ಟಬರ್ಡ್ ಮತ್ತು ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಆಡಳಿತ ಮಂಡಳಿಯ ಸದಸ್ಯರಾಗಿದ್ದರು.

ಈ ಸಂಸ್ಥೆಯನ್ನು 1916ರಲ್ಲಿ ಈಗಿನ ನೃಪತುಂಗ ರಸ್ತೆಯಲ್ಲಿರುವ, ಆಗ ತಾನೇ ಹೊಸದಾಗಿ ನಿರ್ಮಿತವಾದ ಡ್ಯಾಲಿ ಮೆಮೊರಿಯಲ್ ಹಾಲ್‌ಗೆ ಸ್ಥಳಾಂತರಿಸಲಾಯಿತು. ಸಂಸ್ಥೆಗೆ ಒಂದು ಸುಸಜ್ಜಿತ ಗ್ರಂಥಾಲಯವನ್ನು ರೂಪಿಸಲಾಗಿದೆ. ಈ ಗ್ರಂಥಾಲಯದಲ್ಲಿ ಇತಿಹಾಸ, ಸಾಹಿತ್ಯ, ಧರ್ಮ, ತತ್ವಶಾಸ್ತ್ರ, ಲಲಿತಕಲೆ ಮತ್ತಿತರ ವಿಷಯಗಳಿಗೆ ಸಂಬಂಧಿಸಿದ ಮೂಲ ಆಕರಗಳು ಸಂಗ್ರಹವಾಗುವಂತೆ ಆದ್ಯ ಗಮನ ನೀಡಲಾಗಿದೆ. ಇಂದು ಈ ಸಂಗ್ರಹ ಸುಮಾರು ಇಪ್ಪತ್ತೈದು ಸಾವಿರ ಶೀರ್ಷಿಕೆಗಳನ್ನೊಳಗೊಂಡಿದ್ದು ಸಂಶೋಧಕರಿಗೆ ಅಮೂಲ್ಯ ಮಾಹಿತಿಗಳ ಆಕರವಾಗಿದೆ. ಈ ಗ್ರಂಥಾಲಯಕ್ಕೆ ಹೊಂದಿಕೊಂಡಂತೆ ಒಂದು ವಾಚನಾಲಯವೂ ಇದೆ.

ಮಿಥಿಕ್ ಸೊಸೈಟಿಯ ಮುಖವಾಣಿಯಾಗಿ ಸಂಶೋಧನ ಲೇಖನಗಳನ್ನು ಪ್ರಕಟಿಸಲು ಅವಕಾಶವಾಗುವಂತೆ ದ ಕ್ವಾರ್ಟರ್ಲಿ ಜರ್ನಲ್ ಆಫ್ ದ ಮಿಥಿಕ್ ಸೊಸೈಟಿ ಎಂಬ ತ್ರೈಮಾಸಿಕವನ್ನು ಪ್ರಕಟಿಸತೊಡಗಿತು. ಇದರಿಂದ ದೇಶ ವಿದೇಶಗಳಲ್ಲಿ ಈ ಸಂಸ್ಥೆಯ ಕೀರ್ತಿ ಹಬ್ಬಿತು. 1927ರಲ್ಲಿ ಗಾಂಧೀಜಿಯವರು ಬೆಂಗಳೂರಿಗೆ ಬಂದಿದ್ದಾಗ ಮಿಥಿಕ್ ಸೊಸೈಟಿಗೆ ಭೇಟಿ ನೀಡಿ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಪ್ರಶಂಸಿಸಿದರು.

ಇಂದಿಗೂ ಈ ಸಂಸ್ಥೆ ಕ್ರಿಯಾಶೀಲವಾಗಿದ್ದು ತನ್ನ ಪರಂಪರೆಯನ್ನು ಕಾಯ್ದುಕೊಂಡು ಬಂದಿದೆ. ವಿದ್ವಾಂಸರಿಂದ ವಿವಿಧ ವಿಷಯಗಳ ಬಗ್ಗೆ ಆಗಾಗ ಉಪನ್ಯಾಸಗಳನ್ನು ಏರ್ಪಡಿಸುತ್ತದೆ; ವಿಚಾರಸಂಕಿರಣಗಳನ್ನು ನಡೆಸುತ್ತದೆ. ಈ ಸಂಸ್ಥೆ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಹಲವು ಗ್ರಂಥಗಳನ್ನು ಪ್ರಕಟಿಸಿದೆ. ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಸರ್ಟಿಫಿಕೆಟ್ ಶಿಕ್ಷಣವನ್ನೂ ನೀಡುತ್ತಿದೆ. (ಡಿ.ಎಸ್.ಜೆ.)

**ಮಿರ್ಜಿ ಅಣ್ಣಾರಾಯ:** 1918–75. ಪ್ರಸಿದ್ಧ ಸಾಹಿತಿ, ಸಮಾಜ ಸೇವಕರು. ಬೆಳಗಾಂವಿ ಜಿಲ್ಲೆಯ ಶೇಡಬಾಳದಲ್ಲಿ 1918 ಆಗಸ್ಟ್ 25ರಂದು ಜನಿಸಿದರು. ತಂದೆ ಅಣ್ಣಪ್ಪ, ತಾಯಿ ಚಂದ್ರವ್ವ. ಇವರದು ವ್ಯವಸಾಯ ಮನೆತನ. ಅಣ್ಣಾರಾಯರು ಶಾಲೆಗೆ ಹೋಗಿ ಕಲಿತಿದ್ದು ಪ್ರಾಥಮಿಕ ಶಾಲೆಯವರೆಗೆ ಮಾತ್ರ. ಅನಂತರ ಸ್ವಪ್ರಯತ್ನದಿಂದ ಖಾಸಗಿಯಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಜಾಣ ಪರೀಕ್ಷೆಯಲ್ಲಿ ಉತ್ತೀರ್ಣರಾದರು (1938). ಮರುವರ್ಷ ಪ್ರಾಥಮಿಕ ಶಾಲಾಶಿಕ್ಷಕರಾಗಿ ನೇಮಕಗೊಂಡ ಇವರು, ಸಮೀಪದ ಉಗಾರದಲ್ಲಿ ಸ್ವಲ್ಪಕಾಲ ಕೆಲಸ ಮಾಡಿದರು. ಅನಂತರ ಶೇಡಬಾಳ ಇವರ ಕಾರ್ಯಸ್ಥಾನವಾಯಿತು. ಕೆಲಸದಲ್ಲಿದ್ದುಕೊಂಡೇ ಇವರು 1953ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಧಾರವಾಡದ ಶಿಕ್ಷಕರ ಟ್ರೈನಿಂಗ್ ಕಾಲೇಜಿನಿಂದ ಶಿಕ್ಷಕ ತರಬೇತಿಯನ್ನೂ ಪಡೆದುಕೊಂಡರು (1948). ಕನ್ನಡದ ಜೊತೆಗೆ ವ್ಯವಹಾರಕ್ಕೆ ಬೇಕಾಗುವಷ್ಟು ಮರಾಠಿ, ಹಿಂದಿ, ಇಂಗ್ಲಿಷ್ ಮತ್ತು ಗುಜರಾತಿ ಭಾಷೆಗಳ ಪರಿಚಯವನ್ನೂ ಮಾಡಿಕೊಂಡರು. ಆ.ನೇ.ಉಪಾಧ್ಯೆಯವರ ಮಾರ್ಗದರ್ಶನದಿಂದ ಸಂಸ್ಕೃತ ಶಿಕ್ಷಣವನ್ನೂ ಪ್ರಾಕೃತದಲ್ಲಿ ಪರಿಶ್ರಮವನ್ನೂ ಗಳಿಸಿಕೊಂಡರು.

ಹಳ್ಳಿಯ ಸಹಜ ಬದುಕಿನಲ್ಲಿ ಬೆಳೆದ ಅಣ್ಣಾರಾಯರು ಚಿಕ್ಕಂದಿನಲ್ಲಿಯೇ ಸಾಹಿತ್ಯಕ್ಕೆ ಆಕರ್ಷಿತರಾದರು. ಹಳಗನ್ನಡ ಕೃತಿಗಳ ಜೊತೆಗೆ ಹೊಸ ಸಾಹಿತ್ಯವನ್ನೂ ಅಭ್ಯಾಸಮಾಡಿಕೊಂಡರು. ಜೊತೆಗೆ ಬರವಣಿಗೆಯ ಕಲೆಯನ್ನೂ ರೂಢಿಸಿಕೊಂಡರು. ಇವರು ಮೊದಲು ಪ್ರಕಟಿಸಿದ ಕಾದಂಬರಿ ನಿಸರ್ಗ (1945). ವಸ್ತುವಿನ ಸಹಜತೆ, ಭಾಷೆಯ ಹೊಸತನ, ಸರಳವಾದ ಕಲಾತ್ಮಕ ನಿರೂಪಣೆ, ಜೀವಂತ ಬದುಕಿನ ಚಿತ್ರಣ, ಅಂತ್ಯದಲ್ಲಿ ಬರುವ ದುರಂತ–ಇವುಗಳಿಂದ ಈ ಕಾದಂಬರಿ ಬಹುಬೇಗ ಜನಪ್ರಿಯವಾಗಿ ಕನ್ನಡದಲ್ಲಿ ಸಹಜತೆಯ ಬರವಣಿಗೆಗೆ ನಾಂದಿ ಹಾಡಿತು.

ಅಣ್ಣಾರಾಯರ ಸಾಹಿತ್ಯ ರಚನೆ ವಿಸ್ತಾರವಾದುದು. ಸನ್ಮತಿ, ವಿವೇಕಾಭ್ಯುದಯ, ಗುರುದೇವ, ಪ್ರಬುದ್ಧ ಕರ್ನಾಟಕ, ಜೀವನ ಮುಂತಾದ ಹತ್ತಾರು ನಿಯತಕಾಲಿಕಗಳಲ್ಲೂ ಸ್ಮರಣ ಸಂಪುಟ–ವಿಶೇಷಾಂಕಗಳಲ್ಲೂ ನಾನಾ ವಿಷಯಗಳ ಮೇಲೆ ನೂರಾರು ಲೇಖನಗಳನ್ನು ಬರೆದಿದ್ದಾರೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಭಾಗವಹಿಸಿ ರಾಷ್ಟ್ರಜೀವನದಲ್ಲಿ ಪರ್ವಕಾಲದಲ್ಲಿ ಸ್ಥಿತ್ಯಂತರಗಳನ್ನು ಪ್ರತ್ಯಕ್ಷ ಸಾಕ್ಷಿಗಳಾಗಿ ಕಂಡುಂಡ ಇವರು ರಾಷ್ಟ್ರಪುರುಷ, ರಾಮಣ್ಣ ಮಾಸ್ತರ ಎಂಬ ಎರಡು ಕಾದಂಬರಿಗಳನ್ನು ಬರೆದರು. ಮುಂದೆ ಶ್ರೇಯಾಂಸ, ಪ್ರತಿಸರಕಾರ, ಅಶೋಕಚಕ್ರ, ಎರಡು ಹೆಜ್ಜೆ, ಹದಗೆಟ್ಟ ಹಳ್ಳಿ ಮುಂತಾದ ಸಾಮಾಜಿಕ ಕಾದಂಬರಿಗಳನ್ನೂ ಸಮ್ರಾಟ್ ಶ್ರೇಣಿಕ, ಚಾವುಂಡರಾಯ ಎಂಬ ಚಾರಿತ್ರಿಕ ಕಾದಂಬರಿಗಳನ್ನೂ ಋಷಭದೇವ ಎಂಬ ಪೌರಾಣಿಕ ಕಾದಂಬರಿಯನ್ನೂ ಪ್ರಕಟಿಸಿದರು. ಪ್ರಣಯ ಸಮಾಧಿ, ಅಮರ ಕಥೆಗಳು, ವಿಜಯಶ್ರೀ ಇವು ಇವರ ಕಥಾಸಂಕಲನಗಳು . ಮೂಲಶಿಕ್ಷಣದ ಮೌಲ್ಯಮಾಪನ, ಭಾಷಾ ಶಿಕ್ಷಣ, ಲೇಖನಕಲೆ ಮುಂತಾದ ಶೈಕ್ಷಣಿಕ ಗ್ರಂಥಗಳನ್ನೂ ದತ್ತವಾಣಿ, ವಿಮರ್ಶೆಯ ಸ್ವರೂಪ, ಭರತೇಶನ ನಾಲ್ಕು ಚಿತ್ರಗಳು, ಕನ್ನಡ ಸಾಹಿತ್ಯದ ಒಲವುಗಳು –ಮೊದಲಾದ ವಿಮರ್ಶೆಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಕಲ್ಯಾಣ ಕೀರ್ತಿಯ ಚಿನ್ಮಯಚಿಂತಾಮಣಿ ಹಾಗೂ ಭರತೇಶವೈಭವದ ಶೋಭನ ಸಂಧಿಗಳು–ಇವು ಇವರ ಸಂಪಾದಿತ ಕೃತಿಗಳು. ಪ್ರಿಯದರ್ಶಿ, ಭಾರತದ ಬೆಳಕು, ಖಾರವೇಲ, ಭಗವಾನ್ ಮಹಾವೀರ, ಬುದ್ಧನ ಕಥೆ, ಮಹಮ್ಮದ್ ಪೈಗಂಬರ, ಶ್ರೀಶಾಂತಿಸಾಗರರು, ತೀರ್ಥಂಕರ ಮಹಾವೀರ, ಮಹಾಪುರುಷ–ಇವು ಇವರು ಬರೆದಿರುವ ಜೀವನಚರಿತ್ರೆಗಳು.

ಜೈನಧರ್ಮ ಅಣ್ಣಾರಾಯರ ಮೇರುಕೃತಿ. ಜೈನಧರ್ಮದ ದಿಗಂಬರ, ಶ್ವೇತಾಂಬರ, ಯಾಪನೀಯ, ತೇರಹಪಂಥ, ವೀಸಪಂಥ, ಸ್ಥಾನಕವಾಸಿ ಶಾಖೆಗಳು, ಭಾರತದಲ್ಲಿ ಇವುಗಳ ವ್ಯಾಪ್ತಿಯ ಇತಿಹಾಸ, ಆಗಮಗಳು, ಸ್ಯಾದ್ವಾದ, ಆತ್ಮಮೀಮಾಂಸೆ, ಕರ್ಮವಿಜ್ಞಾನ, ಸಾಧಕನ ಗುಣಸ್ಥಾನ, ಸಂಸ್ಕೃತಿ, ಸಾಹಿತ್ಯ, ಇತರ ಧರ್ಮಗಳೊಡನೆ ತುಲನಾತ್ಮಕ ಅಧ್ಯಯನ–ಇವೆಲ್ಲವನ್ನೂ ಈ ಉದ್ಗ್ರಂಥದಲ್ಲಿ ನೋಡಬಹುದು. ರವಿಷೇಣನ ರಾಮಾಯಣ ಕೃತಿಯ ಸಾರವನ್ನು ಜನತಾ ರಾಮಾಯಣವೆಂಬ ಹೆಸರಿನಲ್ಲಿ ಸುಲಭಶೈಲಿಯಲ್ಲಿ ಬರೆದು ಪ್ರಕಟಿಸಿದ್ದಾರೆ. ಇದಕ್ಕೆ ಇವರು ಬರೆದಿರುವ 150 ಪುಟಗಳ ವಿಸ್ತಾರವಾದ ವಿದ್ವತ್‌ಪೂರ್ಣವಾದ ಪ್ರಸ್ತಾವನೆ ತಲಸ್ಪರ್ಶಿಯಾದ ತೌಲನಿಕ ಸಂಶೋಧನೆಯಿಂದ ಕೂಡಿದ್ದು ಭಾರತೀಯ ಭಾಷೆಗಳಲ್ಲಿರುವ ರಾಮಾಯಣಗಳ ಪರಂಪರೆಯನ್ನು ವಿವೇಚಿಸಿದೆ. ರತ್ನಕರಂಡಕ ಶ್ರಾವಕಾಚಾರ ಎಂಬುದು ಇವರ ಇನ್ನೊಂದು ವಿದ್ವತ್ ಕೃತಿ. ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ ಎಂಬ ಕೃತಿಯನ್ನು ಹಿಂದಿಯಿಂದ ಕನ್ನಡಕ್ಕೆ ತಂದಿದ್ದಾರೆ.



ಅಣ್ಣಾರಾಯರ ಸಾರ್ವಜನಿಕ ಸೇವೆಯೂ ಗಣ್ಯವಾದುದಾಗಿದೆ. ಶೇಡಬಾಳದಲ್ಲಿ ಸ್ವಾತಂತ್ರ್ಯೋತ್ಸವದ ಸವಿನೆನಪಿಗೆ 1947 ಆಗಸ್ಟ್ 15 ರಂದು ಶಾಂತಿ ಸೇವಾಸದನವನ್ನು ತೆರೆದರು. ಅದರ ವತಿಯಿಂದ ಅನೇಕ ಹೊಸ ಬರೆಹಗಾರರಿಗೆ ತರಬೇತಿ ಕೊಟ್ಟು 45 ಪುಸ್ತಕಗಳನ್ನು ಪ್ರಕಟಿಸಿದರು. ಗ್ರಾಮಾಂತರ ಜನತೆಯಲ್ಲಿ ವಾಚನಾಭಿರುಚಿ ಹುಟ್ಟಿಸಿ ಬೆಳೆಸಬೇಕೆಂಬ ಉದ್ದೇಶದಿಂದ ಶೇಡಬಾಳದಲ್ಲಿ 1970 ಮೇ 30 ರಂದು ಜ್ಞಾನವಿಕಾಸ ಮಂದಿರವೆಂಬ ಇನ್ನೊಂದು ಸಾಂಸ್ಕೃತಿಕ ಸಂಸ್ಥೆಯನ್ನು ಆರಂಭಿಸಿದರು. ಇದರ ಹೆಸರಿಂದ ಗ್ರಂಥಭಂಡಾರವೂ ನಡೆದಿದೆ. ಸಾರ್ವಜನಿಕರ ಸೌಕರ್ಯಕ್ಕಾಗಿ ಗ್ರಂಥಾಲಯ, ವಿದ್ವಾಂಸರು ಬಂದಿಳಿದುಕೊಳ್ಳಲು ತಂಗುಮನೆ, ಸ್ಥಳದಲ್ಲಿಯೇ ವಾಸವಾಗಿದ್ದು ಬರವಣಿಗೆ ಅನ್ವೇಷಣೆ ಆಲೋಚನೆಗಳಿಗೆ ಅವಕಾಶ ಕಲ್ಪನೆ ಈ ಮುಂತಾದ ಉದ್ದೇಶಗಳಿಗಾಗಿ 1971ರಿಂದ ಚಂದ್ರಗಂಗಾ ಜ್ಞಾನಪೀಠ ಟ್ರಸ್ಟನ್ನು ಸ್ಥಾಪಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟವಾದ ಸಂಪರ್ಕಹೊಂದಿದ್ದ ಅಣ್ಣಾರಾಯರು ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರೂ (1970–74) ಕೆಲವು ವರ್ಷಗಳ ಕಾಲ ಬೆಳಗಾಂವಿ ಜಿಲ್ಲಾ ಸಾಹಿತ್ಯ ಸಮಿತಿಯ ಅಧ್ಯಕ್ಷರೂ ಆಗಿದ್ದರು. ರಾಜ್ಯಸರ್ಕಾರದ ಹಲವು ಪಠ್ಯಪುಸ್ತಕ ಸಮಿತಿಗಳ ಸದಸ್ಯರೂ ಅಧ್ಯಕ್ಷರೂ ಆಗಿದ್ದ ಇವರು ಸೊಲ್ಲಾಪುರದ ಜೀವರಾಜ ಗ್ರಂಥಮಾಲೆ, ಕೊಲ್ಲಾಪುರದ ಬಳಿಯ ಬಾಹುಬಲಿ ವಿದ್ಯಾ ಸಂಸ್ಥೆ, ಗುಡಿಬಂಡೆಯ ವಿವೇಕೋದಯ ಗ್ರಂಥಮಾಲೆ ಮುಂತಾದ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಜಿನವಿಜಯ ಮತ್ತು ಸನ್ಮತಿ ಪತ್ರಿಕೆಗಳಿಗೆ ಇವರು ಕೆಲವು ವರ್ಷಗಳ ಕಾಲ ಸಂಪಾದಕರಾಗಿದ್ದರು.

ಇವರಿಗೆ ಹಲವು ಬಗೆಯ ಗೌರವಗಳು, ಪ್ರಶಸ್ತಿಗಳು ಬಂದಿವೆ. ಇವರ ನಿಸರ್ಗ ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ದೇವರಾಜ ಬಹದ್ದೂರ್ ದತ್ತಿ ಬಹುಮಾನಗಳು ಲಭಿಸಿವೆ. ರಾಜ್ಯ ಸರ್ಕಾರದಿಂದ ಆದರ್ಶ ಶಿಕ್ಷಕ ಪ್ರಶಸ್ತಿಯನ್ನು ಪಡೆದ (1967) ಇವರನ್ನು ರಾಜ್ಯ ಸಾಹಿತ್ಯ ಅಕಾಡೆಮಿ 1970ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿತು. ಇವರಿಗೆ ಮಿರ್ಜಿ ಅಣ್ಣಾರಾಯ ಎಂಬ ಸಂಭಾವನ ಗ್ರಂಥವನ್ನು ಅರ್ಪಿಸಲಾಗಿದೆ.

**(ಕೆ.ಎಚ್.)**

**ಮೀಡ್, ರಿಚರ್ಡ್ ಜಾನ್:** 1821–94. ಮೈಸೂರು ಸಂಸ್ಥಾನದ ಚೀಫ್ ಕಮಿಷನರ್ (1870–75). ಕ್ಯಾಪ್ಟನ್ ಜಾನ್ ಮೀಡ್‌ನ ಮಗ. ರಾಯಲ್ ನೇವಿ ಶಾಲೆಯಲ್ಲಿ ಶಿಕ್ಷಣ ಪಡೆದು ಭಾರತಕ್ಕೆ ಬಂದು 1838ರಲ್ಲಿ ಬಂಗಾಲ ವಿಭಾಗದ ಸೈನ್ಯಕ್ಕೆ ಸೇರಿದ. 1857ರ ಸಿಪಾಯಿದಂಗೆಯ ಕಾಲದಲ್ಲಿ ಮೀಡ್ ಒಂದು ವಿಭಾಗದ ಸೈನ್ಯಾಧಿಕಾರಿಯಾಗಿದ್ದ. ತಾಂತ್ಯಾಟೋಪಿಯನ್ನು ಸೆರೆಹಿಡಿದವನು ಇವನೇ. ಕ್ರಮವಾಗಿ ಲೆಫ್ಟಿನೆಂಟ್ ಜನರಲ್ ಹಾಗೂ ಜನರಲ್ ಹುದ್ದೆಗೇರಿದ. ಇವನು 1860ರಲ್ಲಿ ಗ್ವಾಲಿಯರ್‌ನಲ್ಲಿ ರಾಜತಾಂತ್ರಿಕ ಪ್ರತಿನಿಧಿಯಾಗಿದ್ದ. 1861ರಲ್ಲಿ ಮಧ್ಯಪ್ರಾಂತ್ಯದ ಗವರ್ನರ್ ಜನರಲ್ ರವರ ಪ್ರತಿನಿಧಿಯಾಗಿ ನೇಮಕಗೊಂಡ. ಮೈಸೂರು ಸಂಸ್ಥಾನದ ಚೀಫ್ ಕಮೀಷನರ್ ಆಗಿದ್ದ ಬೌರಿಂಗ್ ರಾಜೀನಾಮೆ ನೀಡಿದ ಅನಂತರ 1870ರ ಫೆಬ್ರವರಿಯಲ್ಲಿ ಮೀಡ್ ಮೈಸೂರಿನ ಚೀಫ್ ಕಮಿಷನರ್ ಆಗಿ ನೇಮಕವಾಗಿ 1875ರ ಏಪ್ರಿಲ್ ವರೆಗೆ ಅದೇ ಹುದ್ದೆಯಲ್ಲಿ ಮುಂದುವರೆದ. ಈ ಮಧ್ಯದಲ್ಲಿ 1873–74ರಲ್ಲಿ ಬರೋಡ ಗಾಯಕವಾಡ ಮಲ್ಹಾರಿರಾಯನ ಮೇಲಿನ ಮೊಕದ್ದಮೆಯ ಸಂಬಂಧದಲ್ಲಿ ರಚಿತವಾದ ಉನ್ನತಮಟ್ಟದ ನ್ಯಾಯಮಂಡಳಿಯ ಸದಸ್ಯನಾಗಿದ್ದ. 1875ರಲ್ಲಿ ಬರೋಡ ಸಂಸ್ಥಾನದ ಆಡಳಿತದಲ್ಲಿ ನೇಮಕಗೊಂಡ. ಅನಂತರ ಹೈದರಾಬಾದಿನ ರೆಸಿಡೆಂಟ್ ಆಗಿದ್ದ (1876–81) ಬ್ರಿಟಿಷ್ ಸರ್ಕಾರ ಇವನಿಗೆ ಕೆ.ಸಿ.ಎಸ್.ಐ. ಪ್ರಶಸ್ತಿಯನ್ನು ನೀಡಿತ್ತು. ಈತ 1894 ಮಾರ್ಚ್ 20ರಂದು ದಕ್ಷಿಣ ಫ್ರಾನ್ಸ್‌ನಲ್ಲಿ ನಿಧನನಾದ.

ಇವನು ಮೈಸೂರು ಸಂಸ್ಥಾನದ ಕಮಿಷನರ್ ಆಗಿದ್ದ ಕಾಲದಲ್ಲಿ ದೇಶದ ಸಾರ್ವಜನಿಕ ಉಪಯೋಗಿ ಕೆಲಸಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಎಲ್ಲಕಡೆ ಕೆರೆಕಟ್ಟೆಗಳನ್ನು ದುರಸ್ತಿ ಮಾಡುವ ಮತ್ತು ದೇಶದ ಮೂಲೆಮೂಲೆಗಳಿಗೆ ರಸ್ತೆಗಳನ್ನು ರಚಿಸುವ ಕೆಲಸಗಳನ್ನು ಕೈಗೊಳ್ಳಲಾಯಿತು. ಹೊಸ ರೈಲ್ವೆಮಾರ್ಗಗಳಿಗೆ ಪೂರ್ವಭಾವಿ ಸರ್ವೇಕ್ಷಣೆ ನಡೆಯಿತು. ಅನೇಕ ಹೊಸ ಸಾರ್ವಜನಿಕ ಕಟ್ಟಡಗಳ ರಚನೆಯಾಯಿತಲ್ಲದೆ ಸಣ್ಣ ನಗರಗಳ ಅಭಿವೃದ್ಧಿ ಕಾರ್ಯವನ್ನೂ ಕೈಗೊಳ್ಳಲಾಯಿತು. ದೇಶದ ಭೂಸರ್ವೇಕ್ಷಣೆ ನಡೆದುದಲ್ಲದೆ ಹಳ್ಳಿಗಳ ಬಳಿಯಲ್ಲಿ ತೋಪುಗಳನ್ನು ನೆಡಿಸುವ ಕೆಲಸವನ್ನು ಕೈಗೊಳ್ಳಲಾಯಿತು. ವಿದ್ಯಾಭ್ಯಾಸ ಮತ್ತು ಕೃಷಿರಂಗಗಳಿಗೆ ಪ್ರೋತ್ಸಾಹ ದೊರಕಿತು. ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಲು ಕೆಲವು ತಾಲ್ಲೂಕುಗಳು ಒಟ್ಟು ಸೇರಿದ ಸಬ್ ಡಿವಿಷನ್‌ಗಳನ್ನು ರಚಿಸಿ ಅವುಗಳ ಮೇಲ್ವಿಚಾರಣೆಗೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನು ನಿಯಮಿಸಲಾಯಿತು (1871). ಲೋಕೋಪಯೋಗಿ, ಅರಣ್ಯ ಮತ್ತು ಮೋಜಣಿ ಇಲಾಖೆಗಳಲ್ಲಿ ಸ್ಥಳೀಯ ಆಡಳಿತಗಾರರನ್ನು ಉನ್ನತ ಹುದ್ದೆಗಳಿಗೆ ನಿಯಮಿಸಲು ತರಬೇತಿ ನೀಡುವುದಕ್ಕಾಗಿ ಪ್ರೊಬೇಷನರಿ ಹುದ್ದೆಗಳನ್ನು ರಚಿಸಲಾಯಿತು. ಮುನ್ಸೀಫ್ ಕೋರ್ಟುಗಳನ್ನು ಸ್ಥಾಪಿಸಿ ಅಮಲ್ದಾರರಿಂದ ನ್ಯಾಯನಿರ್ಣಯದ ಹೊರೆ ತಪ್ಪಿಸಲಾಯಿತು. ಪೊಲೀಸ್ ಇಲಾಖೆಯನ್ನು ಗ್ರಾಮದಿಂದ ಹಿಡಿದು ಮೇಲಿನ ಹಂತದವರೆಗೆ ಸುವ್ಯವಸ್ಥಿತ ಗೊಳಿಸಲಾಯಿತು.

ಬೆಂಗಳೂರಿನ ಪ್ರಸಿದ್ಧ ಕಬ್ಬನ್ ಪಾರ್ಕ್ ಸ್ಥಾಪಿತವಾದುದು ಮೀಡ್‌ನಿಂದ. ಆ ಪಾರ್ಕಿಗೆ ಮೀಡ್ ಪಾರ್ಕ್ ಎಂದೇ ಹೆಸರಿತ್ತು. ಆದರೆ ಅನಂತರ ಇವನ ಇಚ್ಛೆಯಂತೆ ಅದಕ್ಕೆ ಕಬ್ಬನ್ ಪಾರ್ಕ್ ಎಂಬ ಅಭಿದಾನ ನೀಡಲಾಯಿತು. (ಸಿ.ಕೆ.ಎನ್.)

**ಮೀನುಗಾರಿಕೆ ಉದ್ಯಮ:** ಕರ್ನಾಟಕದಲ್ಲಿ ಮೀನುಗಾರಿಕೆ ಒಂದು ಪ್ರಮುಖ ಉದ್ಯಮ. ವ್ಯವಸಾಯದಂತೆ, ಸಾಗರ ಹಾಗೂ ಒಳನಾಡುಗಳ ಮೀನುಗಾರಿಕೆ ಒಂದು ಪ್ರಮುಖ ಆಹಾರ ಉತ್ಪಾದನಾ ಉದ್ಯಮವಾಗಿಯೂ ರೂಪುಗೊಂಡಿದೆ. ಇದು ಉದ್ಯೋಗ ಮತ್ತು ವಿದೇಶ ವಿನಿಮಯವನ್ನೊದಗಿಸುವುದಲ್ಲದೆ, ಖನಿಜವಸ್ತು ಮತ್ತು ಅರಣ್ಯಸಂಪತ್ತುಗಳ ಅನಂತರದ ಸ್ಥಾನಪಡೆದಿರುವ ಈ ಉದ್ಯಮ ನೈಸರ್ಗಿಕ ಸಾಧನೋಪಾಯಗಳಲ್ಲಿ ಒಂದೆನಿಸಿದೆ.

ಸಾಗರ ಹಾಗೂ ಒಳನಾಡಿನ ಮೀನುಗಾರಿಕೆ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ರೂಢಿಯಲ್ಲಿರುವುದಾದರೂ ಅವುಗಳ ಯೋಜನಾಬದ್ಧ ಬೆಳವಣಿಗೆ ಕಂಡುಬರುವುದಿಲ್ಲ. ಇತ್ತೀಚೆಗೆ ಮಾತ್ರ ಮೀನುಗಾರಿಕೆ ಕರ್ನಾಟಕದಲ್ಲಿ ಒಂದು ವ್ಯವಸ್ಥಿತ ಕಾರ್ಯಕ್ರಮವಾಗಿದೆ. ಮೀನುಗಾರಿಕೆಯ ಅಭಿವೃದ್ಧಿಗಾಗಿಯೇ ವ್ಯವಸ್ಥಿತವಾಗಿ ಹಂತಹಂತವಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಲು 1957ರಲ್ಲಿ ಮೀನುಗಾರಿಕೆ ಇಲಾಖೆಯನ್ನು ರಚಿಸಲಾಯಿತು.

ಕರ್ನಾಟಕದ ಕರಾವಳಿ ಸು. 320 ಕಿಮೀ ಉದ್ದವಿದೆ. ಭಾರತದ ಕಡಲ ತೀರದ ಸು. 1/15 ರಷ್ಟಿರುವ ಇದು ಸಮೃದ್ಧವಾದ ಮತ್ಸ್ಯಸಂಪತ್ತಿನಿಂದ ಕೂಡಿದೆ. ಈ ತೀರವು ಕಡಲ ಮೀನುಗಾರಿಕೆಯಲ್ಲಿ ದೇಶದ ಅತ್ಯಂತ ಶ್ರೀಮಂತಭಾಗವೆನಿಸಿದ್ದು ಒಟ್ಟು ಸು.25,900 ಚ.ಕಿಮೀ. ಮೀನು ಹಿಡಿಯುವ ಪ್ರದೇಶವನ್ನು ಒಳಗೊಂಡಿದೆ. ಆದರೆ ಇದರ ಐದನೆಯ ಒಂದು ಭಾಗ ಮಾತ್ರ ಈಗ ಉಪಯೋಗಿಸಲ್ಪಡುತ್ತಿದೆ. ಕರ್ನಾಟಕ ಕರಾವಳಿ ಮೀನುಗಾರಿಕೆಯು ಬೂತಾಯಿ, ಬಂಗಡೆ ಹಾಗೂ ಇನ್ನಿತರ ಸಂಕೀರ್ಣ ತೆರನ ಸಮುದ್ರದ ಮೀನುಗಳಿಂದ ಕೂಡಿದೆ.

ಒಳನಾಡಿನ ಮೀನುಗಾರಿಕೆಗೆ ಹಲವಾರು ಸರೋವರ ಹಾಗೂ ಜಲಾಶಯಗಳು, 2,700 ದೊಡ್ಡಕೆರೆಗಳು, ಸು. 30,000 ಸಣ್ಣ ಕೆರೆಗಳು ಮತ್ತು 9,000 ಕಿಮೀ ಉದ್ದದ ನದಿ ಹಾಗೂ ಕಾಲುವೆಗಳು ಆಶ್ರಯವಾಗಿವೆ.

ಹಿಂದಿನ ಮೈಸೂರು ಸಂಸ್ಥಾನದಲ್ಲಿ ಒಳನಾಡು ಮೀನುಗಾರಿಕೆಯ ಸಂಪನ್ಮೂಲದ ಅಭಿವೃದ್ಧಿಯನ್ನಷ್ಟೇ ಕೈಗೊಳ್ಳಲಾಗಿತ್ತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ 3.03 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿತ್ತು. ಇದರ ಅನುಸಾರ ಕೃಷ್ಣರಾಜ ಸಾಗರ ಮತ್ತು ಶಾಂತಿಸಾಗರಗಳಲ್ಲಿ ಎರಡು ಮೀನು ಫಾರಂಗಳನ್ನೂ ಮುನಿರಾಬಾದ್ ಬಳಿ ತುಂಗಭದ್ರಾ ಜಲಾಶಯದಲ್ಲಿ ಒಂದು ಮೀನುಗಾರಿಕೆಯ ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಯಿತು.

ರಾಜ್ಯಕ್ಕೆ ಸಮುದ್ರತೀರ ಒದಗಿದ ಮೇಲೆಯೇ ಮೀನುಗಾರಿಕೆ ಒಂದು ಪ್ರಮುಖ ಉದ್ಯಮವಾಗಿ ಪ್ರಾರಂಭವಾಯಿತೆಂದು ಹೇಳಬಹುದು. 1957ರಲ್ಲಿ ಸ್ಥಾಪಿತವಾದ ಮೀನುಗಾರಿಕೆ ಇಲಾಖೆ ಮೀನಿನ ಅಭಿವೃದ್ಧಿಗಾಗಿ ಸುವ್ಯವಸ್ಥಿತ ಕಾರ್ಯಕ್ರಮಗಳನ್ನು ಕೈಗೊಂಡಿತು. ಈ ದಿಸೆಯಲ್ಲಿ ಎರಡನೆಯ ಯೋಜನೆಯ ಅಂಗವಾಗಿ ಸಂಶೋಧನಾ ಕೇಂದ್ರಗಳ ರಚನೆ, ಒಳನಾಡಿನ ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿ, ಸಮುದ್ರ ಮೀನುಗಾರಿಕೆಯ ವಿಸ್ತರಣೆ, ಮೀನುಗಾರರ ತರಬೇತಿ, ಮೀನುಮಾರುಕಟ್ಟೆಯ ಮತ್ತು ಮೀನಿನ ಬಳಕೆಯ ಸುಧಾರಣೆಗಳನ್ನು ಕೈಗೊಳ್ಳಲಾಯಿತು.

ಈ ಯೋಜನೆಯ ಅಭಿವೃದ್ಧಿಗಾಗಿ ಒದಗಿಸಲಾದ 42 ಲಕ್ಷ ರೂಪಾಯಿಗಳಲ್ಲಿ ಸಮುದ್ರದಿಂದ ಮೀನನ್ನು ಹೆಚ್ಚಾಗಿ ಪಡೆಯಲು ಯಾಂತ್ರೀಕೃತ ಮೀನುಗಾರಿಕೆಗೆ 7.40 ಲಕ್ಷ ರೂಪಾಯಿಗಳನ್ನು ಬಳಸಲಾಯಿತು. ಯಾಂತ್ರೀಕೃತ ಮೀನುಗಾರಿಕೆಯ ಅಂಗವಾಗಿ ಸುಧಾರಿಸಿದ ಮೀನುಹಿಡಿಯುವ ಸಲಕರಣೆಗಳ ಮತ್ತು ದೋಣಿಗಳ ಬಳಕೆ, ಜೋಪಾಸನೆ, ಸಂಸ್ಕರಣ, ಹಂಚಿಕೆ ಹಾಗೂ ವಿಕ್ರಯಗಳಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವ ಮೂಲಕ ಮೀನಿನ ಉಪಯೋಗವನ್ನು ಸುಧಾರಿಸುವುದು ಮುಂತಾದುವನ್ನು

ಮೀನು ಸಂಸ್ಕರಣೆಯಲ್ಲಿ ನಿರತ ಮಹಿಳೆಯರು

ಕೈಗೊಳ್ಳಲಾಯಿತು. 1958ರಲ್ಲಿ ಮಂಗಳೂರಿನಲ್ಲಿಯೂ 1960ರಲ್ಲಿ ಕಾರವಾರದಲ್ಲಿಯೂ ಸುಧಾರಿತ ಮಾದರಿದೋಣಿ ನಿರ್ಮಾಣ ಅಂಗಳಗಳನ್ನು ಸ್ಥಾಪಿಸಲಾಯಿತು. ಇದೇ ಕಾಲದಲ್ಲಿ ಒಂದು ಕ್ಷೇತ್ರ ಸಂಶೋಧನಾ ಪ್ರಯೋಗಾಲಯವೂ ಕೆಲವು ಶೀತಲಘಟಕಗಳೂ ಸ್ಥಾಪಿತವಾದವು. ಮೀನು ಹಿಡಿಯುವ ದೋಣಿಗಳ ಹೊಸಮಾದರಿಗಳಲ್ಲಿ ಮತ್ತು ಮೀನು ಹಿಡಿಯುವ ವಿಧಾನಗಳಲ್ಲಿ ಮೀನುಗಾರರನ್ನು ತರಬೇತಿ ಮಾಡಲು ಮಂಗಳೂರು, ಗಂಗೊಳ್ಳಿ, ಮಲ್ಪೆ, ಹೊನ್ನಾವರ ಮುಂತಾದ ಸ್ಥಳಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. ಮೀನುಗಾರರಿಗೆ ನೆರವು ನೀಡಲು ಮೀನುಗಾರಿಕೆ ಸಹಕಾರ ಸಂಘಗಳು ಹುಟ್ಟಿಕೊಂಡವು.

ಮೂರನೆಯ ವಾರ್ಷಿಕ ಯೋಜನೆಯಲ್ಲಿ ಮೀನುಗಾರಿಕೆ ಉದ್ಯಮ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಒಳಪಟ್ಟಿತು. ಇದಕ್ಕೆ ಒದಗಿಸಿದ 173.63 ಲಕ್ಷ ರೂ.ಗಳಲ್ಲಿ ಯಾಂತ್ರೀಕೃತ ಮೀನುಗಾರಿಕೆಗೆ 46.10 ಲಕ್ಷ ರೂ.ಗಳನ್ನೂ ಶೀತಲ ಸಂಗ್ರಹಣ ಘಟಕಗಳಿಗೆ 9.15 ಲಕ್ಷ ರೂ.ಗಳನ್ನೂ ಮೀನುಗಾರಿಕೆಯ ಸೌಲಭ್ಯಗಳಿಗೆ 9.8 ಲಕ್ಷ ರೂ.ಗಳನ್ನೂ ಮತ್ತು ಮೀನುಗಾರಿಕೆಯ ಶಿಕ್ಷಣ ಹಾಗೂ ತರಬೇತಿಗೆ 19.73 ಲಕ್ಷ ರೂ.ಗಳನ್ನೂ ವೆಚ್ಚಮಾಡಲಾಗಿದೆ.

ಈ ಯೋಜನೆಯ ಅವಧಿಯಲ್ಲಿ ಸಾಗರ ಮೀನುಗಾರಿಕೆಯ ಬಗ್ಗೆ ಕೈಗೊಂಡ ವಿಸ್ತಾರವಾದ ಕಾರ್ಯಕ್ರಮಗಳೆಂದರೆ 150 ಯಾಂತ್ರೀಕೃತ ದೋಣಿಗಳ ನಿರ್ಮಾಣದ ಮೂಲಕ ಮಂಗಳೂರಿನ ಹಾಗೂ ಕಾರವಾರದ ದೋಣಿ ನಿರ್ಮಾಣ ಕೇಂದ್ರಗಳ ವಿಸ್ತರಣೆ, ಮೀನುಗಾರರಿಗೆ ಅಗತ್ಯವಿರುವ ಸುಮಾರು ಮೂರುಸಾವಿರ ಸಾಧನಸಲಕರಣೆಗಳ ಪೂರೈಕೆ, 400 ಜನ ಮೀನುಗಾರರಿಗೆ ಯಾಂತ್ರೀಕೃತ ಮೀನುಗಾರಿಕೆಯಲ್ಲಿ ಹೆಚ್ಚಿನ ತರಬೇತಿ ಹಾಗೂ ಮೀನಿನ ಪರಿಣಾಮಕಾರೀ ಸಂರಕ್ಷಣೆ ಮತ್ತು ಸುಧಾರಿತ ಸಾಗಾಣಿಕೆಯ ಸೌಲಭ್ಯಗಳನ್ನು ಒದಗಿಸುವುದು, ಮೀನುಮರಿಗಳನ್ನು ಸಾಕಲು ಪೋಷಣ ಕ್ಷೇತ್ರಗಳ ನಿರ್ಮಾಣ ಹಾಗೂ ಮೀನುಗಾರರಿಗೆ

ಒಳನಾಡು ಮೀನುಗಾರಿಕೆಯನ್ನು ಕುರಿತು ಸುಧಾರಿತ ಕ್ರಮಗಳ ಬಗ್ಗೆ ತರಬೇತಿ– ಇವು ಒಳನಾಡು ಮೀನುಗಾರಿಕೆಯಲ್ಲಿ ಕೈಗೊಂಡ ಕ್ರಮಗಳು.

ಸಾಗರ ಮೀನುಗಾರಿಕೆ ಮುನ್ನಡೆದಂತೆ ಕಾರವಾರ, ಮಲ್ಪೆ, ಕುಂದಾಪುರ ಮುಂತಾದ ಸ್ಥಳಗಳಲ್ಲಿ ಮೀನುಗಾರಿಕೆ ಬಂದರುಗಳನ್ನು ನಿರ್ಮಿಸುವ ರೂಪರೇಷೆಗಳನ್ನು ಯೋಜಿಸಲಾಯಿತು. ಹಿಂದೆ ಆರಂಭಿಸಲಾಗಿದ್ದ ಎರಡು ದೋಣಿ ನಿರ್ಮಾಣ ಕೇಂದ್ರಗಳು ವಿಸ್ತೃತಗೊಂಡು ಹೆಚ್ಚಿನ ಯಾಂತ್ರೀಕೃತ ದೋಣಿಗಳ ರಚನೆಯಲ್ಲಿ ಮುನ್ನಡೆಯಿತು. ಹಾಗೆಯೇ ಸಾಧನ ಸಲಕರಣೆಗಳ ಪೂರೈಕೆಯೂ ಉತ್ತಮಗೊಂಡಿತು. ಮೀನುಗಾರಿಕೆ ತರಬೇತಿ ಕೇಂದ್ರದ ಸಾಮರ್ಥ್ಯವನ್ನು ವರ್ಧಿಸಿದ್ದಲ್ಲದೆ ಕಾರವಾರ, ಗಂಗೊಳ್ಳಿ, ಹೊನ್ನಾವರ, ಕೃಷ್ಣರಾಜಸಾಗರಗಳಲ್ಲೂ ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. ಮಂಗಳೂರು, ಮರವಂತೆ, ಭಟ್ಕಳ ಹಾಗೂ ಹಾಸನಗಳಲ್ಲಿ ಸಾಗರ ಮೀನಿನ ಬಳಕೆಯನ್ನು ಜನಪ್ರಿಯಗೊಳಿಸಲು ಹಾಗೂ ಹೆಚ್ಚಿಸಲು ಶೀತಲ ಸಂಗ್ರಹಣ ಘಟಕಗಳ ಸ್ಥಾಪನೆಯನ್ನು ಯೋಜಿಸಲಾಯಿತು. ಮೀನಿನ ಮರಿಗಳನ್ನು ಅನೇಕ ಲಕ್ಷಗಳ ಸಂಖ್ಯೆಯಲ್ಲಿ ಒಳನಾಡಿನ ವಿವಿಧ ಭಾಗಗಳಲ್ಲಿ ಬಿಡಲಾಯಿತು. ಅವುಗಳಿಗಾಗಿ ಬಹಳಷ್ಟು ಹೆಕ್ಟೇರುಗಳ ಜಲಪ್ರದೇಶಗಳಲ್ಲಿ ಹೆಚ್ಚಿನ ಮೀನು ಪೋಷಣಾಕ್ಷೇತ್ರಗಳು ನಿರ್ಮಿತವಾದವು. ಇದೇ ಕಾಲದಲ್ಲಿ ನಿರ್ಮಾಣವಾದ ತುಂಗಭದ್ರಾ ಜಲಾಶಯದಲ್ಲಿ ಒಂದು ಮೀನುಫಾರಂ ಸ್ಥಾಪಿತವಾಯಿತು.

ಮೀನುಗಾರಿಕೆಗೆ ಉಪಯುಕ್ತವಾದ ಕೆಲವು ಕೂಡುರಸ್ತೆಗಳ ನಿರ್ಮಾಣ ಹಾಗೂ ಮೀನಿನ ಸಂರಕ್ಷಿತ ಸಾಗಾಣಿಕೆಯ ಸೌಕರ್ಯಗಳ ಪೂರೈಕೆಗಳ ಒಂದು ಕಾರ್ಯಕ್ರಮವನ್ನು ಕೂಡ ಈ ಯೋಜನೆಯಲ್ಲಿ ಕೈಗೊಳ್ಳಲಾಗಿದೆ.

1966–67ರ ವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಯಾಂತ್ರೀಕೃತ ದೋಣಿಗಳಿಂದಲೂ ಶೀತಾವರಣ ಸಂರಕ್ಷಣಾ ವ್ಯವಸ್ಥೆಯ ಅಭಿವೃದ್ಧಿಯಿಂದಲೂ ಮೀನಿನ ರಫ್ತು ವರ್ಧಿಸಿ, ಹೆಚ್ಚಿನವಿದೇಶ ವಿನಿಮಯದ ಗಳಿಕೆಯಾಯಿತು. ಯೂಗೋಸ್ಲಾವಿಯದ ನೆರವು ಪಡೆದು ಮಲ್ಪೆ ಮತ್ಸ್ಯೋದ್ಯಮ ಬಂದರನ್ನು ಅಭಿವೃದ್ಧಿಗೊಳಿಸಲಾಗಿದೆ. ಒಳನಾಡು ಮೀನುಗಾರಿಕೆಯ ಕ್ರಮದ ಅನ್ವಯ, ರಾಜ್ಯದ ಒಳನಾಡಿನಲ್ಲಿ ಶೀತಾವರಣದಲ್ಲಿ ಸಂರಕ್ಷಿಸಿದ ಮೀನಿನ ಹಂಚಿಕೆ, ಎರಡು ಕೋಟಿ ಮೀನು ಮರಿಗಳ ಉತ್ಪಾದನೆ ಹಾಗೂ ಸಂಗ್ರಹಣೆ, ಐದು ಅಭಿವೃದ್ಧಿ ಕ್ಷೇತ್ರಗಳಲ್ಲಿ ಪೌಷ್ಟಿಕಾಹಾರದ ಉತ್ಪನ್ನದ ವ್ಯವಸ್ಥೆ ಹಾಗೂ ತುಂಗಭದ್ರಾ ಜಲಾಶಯದ ಸಮೀಪ ಮೀನುಬಲೆ ತಯಾರಿಕೆಯ ಒಂದು ಘಟಕದ ರಚನೆ ಮುಂತಾದವು ನಡೆದವು.

ದೋಣಿ ನಿರ್ಮಾಣ ಕೇಂದ್ರವಿಸ್ತರಣೆ, ಮೀನುಗಾರಿಕೆಯ ಸಾಧನ ಸಲಕರಣೆಗಳ ಪೂರೈಕೆ ಹಾಗೂ ಶೀತಲ ಸಂಗ್ರಹಾಲಯಗಳ ಕಾರ್ಯಾರಂಭಗಳು, ಅಲ್ಲದೆ ಎರಡು ಮೀನುಗಾರಿಕೆಯ ಶಾಲೆಗಳು ಮತ್ತು ಒಂದು ತರಬೇತಿ ಕೇಂದ್ರದ ಸ್ಥಾಪನೆ ಹಾಗೂ ಒಂದು ಮೀನು ಮಾರುಕಟ್ಟೆಯ ರಚನೆ ಮೊದಲಾದವು 1967–68ರ ವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗದ ಮುಖ್ಯ ಕಾರ್ಯಕ್ರಮಗಳು. ಮೀನುಗಾರಿಕೆಯ ಅಭಿವೃದ್ಧಿ ಕ್ಷೇತ್ರಕ್ಕೆ ನೂತನವಾಗಿ ಕೃಷಿ ಪುನರ್ಧನ ಮಂಡಳಿಯ ಪ್ರವೇಶ ಈ ವರ್ಷದ ವೈಶಿಷ್ಟ್ಯಗಳಲ್ಲೊಂದು.

ಕೇಂದ್ರ ಸರ್ಕಾರ 1968–69ರಲ್ಲಿ ರಾಜ್ಯಕ್ಕೆ 108 ಸುಧಾರಿಸಿದ ಯಾಂತ್ರೀಕೃತ ದೋಣಿಗಳನ್ನೂ ಮತ್ತು 257 ಮೀನು ಹಿಡಿಯುವ ಸಮರ್ಥಶಾಲಿ ಟ್ರಾಲರ್‌ಗಳನ್ನೂ ಮಂಜೂರು ಮಾಡಿತು. ಕುಳ್ಯಾ, ಮಣೂರು, ಕಾಪು ಹಾಗೂ ಮಡಿಕೇರಿಯಲ್ಲಿ ಸ್ಥಾಪಿಸಲಾದ ಶೀತಾಗಾರ ಸಂಗ್ರಹಣಾಲಯಗಳೂ ಕಾರವಾರದಲ್ಲಿ ಮೀನುಗಾರಿಕೆ ಬಂದರಿನ ನಿರ್ಮಾಣ ಕಾರ್ಯವೂ ಈ ವರ್ಷದಲ್ಲಿ ಆದ ಮೀನುಗಾರಿಕೆಯ ಪ್ರಗತಿ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೀನು ಸಂಸ್ಕರಣ ಕೈಗಾರಿಕೆಯೂ ವಿಸ್ತೃತಗೊಂಡು 6,000 ಕ್ಕೂ ಹೆಚ್ಚಿನ ಸಂಖ್ಯೆಯ ಮೀನುಗಾರರಿಗೆ ಉದ್ಯೋಗ ಒದಗಿದೆ. ವಾಣಿಜ್ಯ ಬ್ಯಾಂಕುಗಳು ಹಾಗೂ ಕೃಷಿ ಪುನರ್ಧನಮಂಡಳಿ ಯಾಂತ್ರೀಕೃತ ಮೀನುಗಾರಿಕೆಗೆ ಅವಶ್ಯವಾದ ಬಂಡವಾಳದ ವಿಶೇಷ ಪಾಲನ್ನು ಕೊಡಮಾಡಿದೆ.

ಬ್ಯಾಂಕುಗಳ ಸಹಾಯದ ಉತ್ತೇಜನದಿಂದ ಖಾಸಗಿ ಉದ್ಯಮಿಗಳು ಸ್ಥಾಪಿಸಿದ ಶೀತಾಗಾರದ 73 ಘಟಕಗಳಿವೆ. ಹಾಲಿ ಇರುವ 3 ಖಾಸಗಿ ಹಾಗೂ 2 ಸಹಕಾರಿ ಕ್ಷೇತ್ರದ 10 ಶೇಖರಣ ಘಟಕಗಳಲ್ಲಿ 2 ಖಾಸಗಿ ಕ್ಷೇತ್ರದ ಮೀನುಗೊಬ್ಬರ ಘಟಕಗಳಿವೆ. ಎರಡು ಜಿಲ್ಲಾ ಸಹಕಾರಿ ಮೀನು ಮಾರುಕಟ್ಟೆ ಫೆಡರೇಷನ್ನುಗಳಲ್ಲದೆ ರಾಜ್ಯ ಮೀನುಗಾರಿಕೆ ಅಭಿವೃದ್ಧಿ



ಮೀನುಹಿಡಿಯಲು ಬಳಸುವ ಯಾಂತ್ರೀಕೃತ ದೋಣಿಗಳು

ಮಂಡಳಿ ಸಹ ಮೀನಿನ ಹಾಗೂ ಮೀನಿನ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಅವುಗಳೆಲ್ಲದರ ಮಾರಾಟ ಮುಂತಾದ ಉದ್ಯಮ ಕ್ಷೇತ್ರಗಳ ವ್ಯವಹಾರಗಳನ್ನು ಕಾರ್ಯಗತಗೊಳಿಸುತ್ತವೆ. ಪ್ರತಿವರ್ಷ ಕಲ್ಕತ್ತದಿಂದ ತರಿಸಲಾಗುವ ಮೀನುಮರಿಗಳನ್ನು ವಾಣೀವಿಲಾಸ ಸಾಗರ ಹಾಗೂ ಭದ್ರಜಲಾಶಯದ ಮೀನು ಫಾರಂಗಳಲ್ಲಿ ಪೋಷಿಸಿ ಬೆಳೆಸಲಾಗುತ್ತಿದೆ. ಈಗೀಗ ಒಳನಾಡು ಮೀನುಗಾರಿಕೆಯನ್ನು ಉತ್ತಮವಾಗಿ ನಿರ್ವಹಿಸಲು ಗ್ರಾಮಪಂಚಾಯಿತಿಗಳನ್ನು ಪ್ರೋತ್ಸಾಹಿಸಲಾಗುತ್ತಿದೆಯಲ್ಲದೆ ನೂರಾರು ಅಭಿವೃದ್ಧಿ ಕ್ಷೇತ್ರಗಳಲ್ಲಿ ಅನ್ವಯ ಪೌಷ್ಟಿಕ ಆಹಾರ ಕಾರ್ಯಕ್ರಮದ ಯೋಜನೆಗಳನ್ನು ಉತ್ತೇಜಿಸಲಾಗುತ್ತಿದೆ.

ರಾಜ್ಯದಲ್ಲಿ, ಮೀನುಗಾರಿಕೆ ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸಿದುದರ ಕಾರಣ ಈ ಸಹಕಾರ ಸಂಘಗಳು ಸಾಲದ ನೆರವಿನಿಂದ ಮೀನುಗಾರಿಕೆಯ ಸಾಧನ ಸಲಕರಣೆಗಳನ್ನು ಕೊಂಡಿವೆ. ಕೃಷಿ ಪುನರ್ಧನಮಂಡಳಿಯ ಮತ್ತು ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ಮಂಗಳೂರು ಹಾಗೂ ಕಾರವಾರದ ಜಿಲ್ಲಾ ಸಹಕಾರಿ ಮೀನುಮಾರುಕಟ್ಟೆ ಸಂಘಗಳು, ಶೈತ್ಯಾಗಾರಗಳು, ಸಂರಕ್ಷಣೆ ಮತ್ತು ಶೇಖರಣಾ ಘಟಕಗಳನ್ನು ಸ್ಥಾಪಿಸಿದ್ದಲ್ಲದೆ, ಯಾಂತ್ರೀಕೃತ ದೋಣಿಗಳನ್ನು ಸಹ ನಿರ್ಮಿಸಿವೆ.

ರಾಜ್ಯ ಸರ್ಕಾರ 1971ರಲ್ಲಿ ರಾಜ್ಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿತು. ಈ ಮಂಡಳಿ ಮೀನುಗಾರಿಕೆ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದೆ.

ಮೀನುಗಳ ಕೊರತೆಯ ಕಾರಣ ಸಂಕಷ್ಟಕ್ಕೊಳಗಾದ ಮೀನುಗಾರರಿಗೆ ವ್ಯವಸ್ಥಿತ ರೀತಿಯಲ್ಲಿ ಪುನರ್ವಸತಿ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಒಳನಾಡು ಮೀನುಗಾರಿಕೆಯನ್ನು ತೀವ್ರಗೊಳಿಸುವ ಸಲುವಾಗಿ

ಪ್ರತಿಯೊಂದು ಜಿಲ್ಲೆಗೂ ಒಬ್ಬ ಮೀನುಗಾರಿಕೆ ಸಹಾಯಕ ನಿರ್ದೇಶನಾಧಿಕಾರಿಯನ್ನೂ ರಾಜ್ಯದ ಎರಡು ವಲಯಗಳಿಗೆ ಇಬ್ಬರು ಉಪನಿರ್ದೇಶನಾದಿಕಾರಿಗಳನ್ನೂ ನೇಮಿಸಲಾಗಿದೆ.

ಕರ್ನಾಟಕದಲ್ಲಿ ಈಗ ಸಾಗರ ಮೀನಿನ ಉತ್ಪಾದನೆ ಅಧಿಕಗೊಂಡಿದೆ. ರಫ್ತಿನಿಂದ ಕೋಟ್ಯಂತರ ರೂಪಾಯಿಗಳ ವಿದೇಶಿ ವಿನಿಮಯ ದೊರೆಯುತ್ತದೆ.

ಮೀನುಗಾರಿಕೆಯಲ್ಲಿ ಇತ್ತೀಚೆಗೆ ಆದ ಬೆಳವಣಿಗೆಗಳೆಂದರೆ ನಿರ್ಜಲೀಕರಣ, ಮೀನಿನ ಎಣ್ಣೆ ಮತ್ತು ಮೀನಿನ ಆಹಾರ ಹಾಗೂ ಮೀನಿನ ಸಾರಜನಕದ ಬಲವರ್ಧನೆ ಮುಂತಾದುವು. ಇವುಗಳಿಂದಾಗಿ ಮೀನುಗಾರಿಕೆ ಒಂದು ಬೃಹತ್ ಉದ್ಯಮವಾಗಿಯೇ ಪರಿಣಮಿಸಿದೆ. ಈ ಉದ್ಯಮದಲ್ಲಿ ಈಗ ಸಾಧಿಸಲಾಗಿರುವ ಅತ್ಯಂತ ತೀವ್ರ ಪ್ರಗತಿಯೆಂದರೆ ಮೀನಿನ ಕೃಷಿ. ಈ ವಿಧಾನದಿಂದ ಉಪಯುಕ್ತ ಮೀನುಗಳನ್ನು ಕೃತಕ ಇಲ್ಲವೆ ನೈಸರ್ಗಿಕ ಕೊಳಗಳಲ್ಲಿ ಕೃತಕ ಆಹಾರವನ್ನು ಕೊಟ್ಟು ಬೆಳೆಸಲಾಗುತ್ತಿದೆ. ಇದರಿಂದಾಗಿ ಮೀನಿನ ಉತ್ಪನ್ನದಲ್ಲಿ ಭಾರಿ ಪ್ರಮಾಣದ ಏರಿಕೆ ಆಗಿದೆ. 2000–01ರ ಅಂಕಿಅಂಶದಂತೆ ರಾಜ್ಯದಲ್ಲಿ 1221 ಮಂಜುಗಡ್ಡೆ ಕಾರ್ಖಾನೆಗಳು, 56 ಶೀತಲೀಕರಣ ಕೇಂದ್ರಗಳು ಇವೆ. ಇವುಗಳ ಸಾಮರ್ಥ್ಯ 3836 ಟನ್‌ಗಳು. ಈ ಸಾಲಿನಲ್ಲಿ ರಾಜ್ಯದಲ್ಲಿ ಹಿಡಿದ ಮೀನಿನ ಪ್ರಮಾಣ 3,05,375 ಮೆಟ್ರಿಕ್ ಟನ್‌ಗಳು. (ಬಿ.ಎಚ್.ಎಂ.)

**ಮೀರ್ ಸಾದಿಕ್:** ಹೈದರ್ ಅಲಿಯ ಕಾಲದ ಮೈಸೂರು ಸಂಸ್ಥಾನದ ಅಧಿಕಾರಿಗಳಲ್ಲೊಬ್ಬ. ಪ್ರೀತಿ, ವಿಶ್ವಾಸಗಳಿಗೆ ಪಾತ್ರನಾಗಿದ್ದುದರಿಂದ ಟಿಪ್ಪುಸುಲ್ತಾನ್ ಇವನನ್ನೇ ತನ್ನ ದಿವಾನನಾಗಿ ನೇಮಿಸಿದ. ಈತ ಕಂದಾಯ ಮತ್ತು ಹಣಕಾಸು ಇಲಾಖೆಯ ಮುಖ್ಯನೂ ಆಗಿದ್ದ.

ಟಿಪ್ಪುವಿಗೆ ಕಾದಿದ್ದ ಕರಾಳ ಭವಿಷ್ಯ ಮನಗಂಡ ಈತ ಬ್ರಿಟಿಷರೊಂದಿಗೆ ಸಹಕರಿಸಲು ಆರಂಭಿಸಿದ. ಬ್ರಿಟಿಷ್ ಗವರ್ನರ್ ಜನರಲ್ ಕಾರ್ನ್‌ವಾಲೀಸ್ ಮೈಸೂರಿನ ಮೇಲೆ ದಂಡೆತ್ತಿ ಬಂದ ಕಾಲದಿಂದಲೇ ಅವರೊಂದಿಗೆ ಸಂಪರ್ಕ ಬೆಳೆಸಿದ. ಶ್ರೀರಂಗಪಟ್ಟಣದ ಒಪ್ಪಂದದವರೆಗೆ ಮಾತ್ರ (1792) ಟಿಪ್ಪುವಿಗೆ ನಿಷ್ಠೆಯಿಂದಿದ್ದ. ದಿವಾನನ ಇಂಗಿತ ಅರಿತ ಟಿಪ್ಪು ಇವನನ್ನು ಬಂಧಿಸಿ ಸೆರೆಯಲ್ಲಿಟ್ಟ. ವಿಧೇಯನಾಗಿರುವ ಭರವಸೆಯ ಮೇಲೆ ಮತ್ತೆ ದಿವಾನ ಸ್ಥಾನದಲ್ಲಿ ನೇಮಿಸಿದ. ಆದರೆ ಈತ ತನ್ನ ವಿದ್ರೋಹತನವನ್ನು ಬಿಡಲಿಲ್ಲ. ಬ್ರಿಟಿಷರು ಹೂಡಿದ ಒಳಸಂಚಿನಲ್ಲಿ ಇವನೊಂದಿಗೆ ಅನೇಕ ಅಧಿಕಾರಿಗಳು ಭಾಗಿಯಾಗಿದ್ದರು. ಇದನ್ನು ಅರಿತ ಟಿಪ್ಪು ಗಲ್ಲಿಗೇರಿಸಬೇಕಾಗಿದ್ದ ದೇಶದ್ರೋಹಿಗಳ ಪಟ್ಟಿ ತಯಾರಿಸಿದ. ಆ ಪಟ್ಟಿಯಲ್ಲಿ ಮೊದಲ ಹೆಸರು ಮೀರ್ ಸಾದಿಕ್‌ನದು. ದರ್ಬಾರಿನ ಸೇವಕನೊಬ್ಬ ಇದನ್ನು ಅರಿತು ವಿಷಯವನ್ನು ಸಾದಿಕ್‌ನಿಗೆ ತಿಳಿಸಿದ. ಆಗ ಈತ ಟಿಪ್ಪುವಿನ ಆಜ್ಞೆ ಕಾರ್ಯಗತಗೊಳ್ಳುವುದಕ್ಕೆ ಮುನ್ನವೇ ಕೋಟೆಯನ್ನು ಬ್ರಿಟಿಷರಿಗೆ ಒಪ್ಪಿಸಲು ಏರ್ಪಾಡುಮಾಡಿದ. ಜೊತೆಗೆ ಟಿಪ್ಪು ತಪ್ಪಿಸಿಕೊಳ್ಳದಂತೆಯೂ ಸಂಚು ರೂಪಿಸಿದ.

ಈತ ಬ್ರಿಟಿಷರೊಂದಿಗೆ ನಡೆಸಿದ ಒಳಸಂಚಿನಂತೆ 1799 ಮೇ 2ರಂದು ಕೋಟೆಯನ್ನು ಕಾಯುತ್ತಿದ್ದ ಮೈಸೂರಿನ ಸೈನಿಕರನ್ನು ವೇತನ ಹಂಚಿಕೆ ನೆಪದಲ್ಲಿ ಹಿಂದಕ್ಕೆ ಕರೆಯಿಸಿಕೊಂಡ. ಕಾವಲು ಸೈನಿಕರ ನಿರ್ಗಮನದ ವಿರುದ್ಧ ಪ್ರತಿಭಟಿಸುವವರಾರೂ ಇರಲಿಲ್ಲ. ಸುಲ್ತಾನನ ನಿಷ್ಠಾವಂತ ಸೇನಾನಿ ಸಯಿದ್ ಗಫಾರ್ ಫಿರಂಗಿ ಗುಂಡಿಗೆ ಬಲಿಯಾಗಿದ್ದ. ಆತ ಮರಣಹೊಂದಿದ ಕೂಡಲೇ ಮೀರ್ ಸಾದಿಕ್ ಕೋಟೆಯ ಮೇಲೆ ನಿಂತು ಬಿಳಿಕರವಸ್ತ್ರ ಹಿಡಿದಾಗ ಕಂದಕಗಳಲ್ಲಿ ಅಡಗಿಕೊಂಡಿದ್ದ ಬ್ರಿಟಿಷ್ ಯೋಧರು ಮುನ್ನಡೆದು ಕೋಟೆಯ ಸಂಧಿಯೊಂದರಲ್ಲಿ ತಮ್ಮ ಧ್ವಜ ನೆಟ್ಟರು. ಮೀರ್ ಸಾದಿಕನ ಕುತಂತ್ರ ತನ್ನ ಒಡೆಯನನ್ನೇ ಬಲಿ ತೆಗೆದುಕೊಂಡಿತು. ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯ ಟಿಪ್ಪುವಿನ ಸೊಕ್ಕನ್ನಡಗಿಸುವ ಆಸೆ ಫಲಿಸಿತು. ಆದರೆ ಸಾದಿಕ್ ತನ್ನ ಕುತಂತ್ರದ ಫಲವನ್ನುಣ್ಣಲು ಬಹಳ ಕಾಲ ಬಾಳಲಿಲ್ಲ. ಬ್ರಿಟಿಷರೊಂದಿಗೆ ಸೇರಿಕೊಳ್ಳಲು ರಹಸ್ಯವಾಗಿ ಪಲಾಯನಕ್ಕೆ ಯತ್ನಿಸಿದಾಗ ಮೈಸೂರಿನ ಸೈನಿಕರೇ ಇವನನ್ನು ಕೊಲೆಗೈದರು. ಇವನ ದುಷ್ಕೃತ್ಯದ ಬಗ್ಗೆ, ವಿಶ್ವಾಸಘಾತಕತನದ ತಿಳಿದ ಅವರು ಶವವನ್ನು ಹೂತ ಮೇಲೂ ಹೊರತೆಗೆದು ಅವಮಾನಪಡಿಸಿದರು. ಗಂಡಸರು, ಹೆಂಗಸರು, ಮಕ್ಕಳಾದಿಯಾಗಿ ಶವವನ್ನು ಸುತ್ತುವರಿದು ಅದರ ಮೇಲೆ ಹೊಲಸು ಚೆಲ್ಲಿದರು. ಎರಡು ವಾರಗಳ ಅನಂತರ ಪರಿಸ್ಥಿತಿ ಸುಧಾರಿಸಲು ಬ್ರಿಟಿಷರೇ ಮಧ್ಯೆ ಪ್ರವೇಶಿಸಬೇಕಾಯಿತು. ಟಿಪ್ಪುವಿನ ಸ್ಮರಣಾರ್ಥ ಶ್ರೀರಂಗಪಟ್ಟಣ ಸಂದರ್ಶಿಸುವವರು ಇಂದಿಗೂ ಮೀರ್ ಸಾದಿಕ್ ಕೊಲೆಗೀಡಾದ ಜಾಗದಲ್ಲಿ ಕಲ್ಲೆಸೆಯುವುದುಂಟು. *

**ಮುಂಡಗೋಡ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕಿನ ಪಶ್ಚಿಮಕ್ಕೆ ಯಲ್ಲಾಪುರ, ದಕ್ಷಿಣಕ್ಕೆ ಶಿರಸಿ ತಾಲ್ಲೂಕುಗಳೂ ಉತ್ತರ ಮತ್ತು ಪೂರ್ವದಿಕ್ಕಿನಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ, ಹಾವೇರಿ ಜಿಲ್ಲೆಯ ಶಿಗ್ಗಾಂವಿ ಮತ್ತು ಹಾನಗಲ್ಲು ತಾಲ್ಲೂಕುಗಳೂ ಇವೆ. ತಾಲ್ಲೂಕನ್ನು ನಾಲ್ಕು ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. ಒಟ್ಟು 94 ಗ್ರಾಮಗಳುಂಟು. ಜನಸಂಖ್ಯೆ 90,738.

ಈ ತಾಲ್ಲೂಕು ಮಲೆನಾಡು ಪ್ರದೇಶ. ಆದರೆ ಪೂರ್ವದತ್ತ ಸರಿದಂತೆ ಬಯಲು ಹೆಚ್ಚಾಗಿ ಕಂಡುಬರುತ್ತದೆ. ಇಲ್ಲಿನ ಬೆಡಸಗಾಂವ್ ಸಮುದ್ರ ಮಟ್ಟದಿಂದ 765 ಮೀ ಎತ್ತರವಿದೆ. ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಬೇಡ್ತಿ ನದಿ ಹರಿದು ಯಲ್ಲಾಪುರ ತಾಲ್ಲೂಕನ್ನು ಬೇರ್ಪಡಿಸಿದೆ. ತಾಲ್ಲೂಕು ಸಣ್ಣಪುಟ್ಟ ಬೆಟ್ಟಗುಡ್ಡಗಳಿಂದ ಕೂಡಿದೆ. ಅರಣ್ಯಪ್ರದೇಶದಲ್ಲಿ ಸಾಗುವಾನಿ ತೋಪುಗಳಿವೆ. ಕಾಗನದಿ ತಾಲ್ಲೂಕಿನ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಬೇಡ್ತಿ ನದಿಯನ್ನು ಕೂಡಿಕೊಳ್ಳುವುದು. ಉಗ್ಗಿನಕೇರೆ, ಹುಲೆಹೊಂಡ, ನಂದಿಕಟ್ಟ, ಲಕ್ಕೊಳ್ಳಿ, ಹನುಮಾಪುರ, ಅತ್ತಂಗಿ, ಕೊಳಗಿ, ಆಲಳ್ಳಿ, ಹಿರೇಹಳ್ಳಿ, ಅಜ್ಜಿಹಳ್ಳಿ, ತಟ್ಟಿಹಳ್ಳಿ, ಇಂದೂರು, ಹುನಗುಂದ ಮೊದಲಾದ ಗ್ರಾಮಗಳೆಲ್ಲಲ್ಲ ಕೆರೆಗಳಿವೆ. ಅಲ್ಲದೆ ಸಣ್ಣಪುಟ್ಟ ತೊರೆಗಳಿಂದ ತಾಲ್ಲೂಕು ಜಲಸಮೃದ್ಧವಾಗಿದೆ. ಸರಾಸರಿ ವಾರ್ಷಿಕ ಮಳೆ 3,200 ಮಿಮೀ ಇದ್ದದ್ದು ಈಗ ಈ ಪ್ರಮಾಣ 1,155 ಮಿಮೀಗೆ ಇಳಿದಿದೆ. ತಾಲ್ಲೂಕಿನಲ್ಲಿ ಹೆಚ್ಚು ಭಾಗ ಫಲವತ್ತಾದ ಜಿಗುಟು ಕರಿಮಣ್ಣಿನಿಂದ, ಜಂಬುಮಣ್ಣಿನಿಂದ ಕೂಡಿದೆ. ಬತ್ತ ಇಲ್ಲಿಯ ಮುಖ್ಯ ಬೆಳೆ. ಜೋಳ, ತೊಗರಿ, ಅಡಕೆ ಮತ್ತು ಇತರ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಪಶುಪಾಲನೆಯುಂಟು.

ಬೇಸಾಯ ಮತ್ತು ಪಶುಪಾಲನೆ ಇಲ್ಲಿನ ಮುಖ್ಯವೃತ್ತಿ. ಉತ್ತಮ ತಳಿಯ ಜಾನುವಾರುಗಳನ್ನು ಸಾಕುವರು. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಮೀಪದ ಪಟ್ಟಣಗಳಿಗೆ ಸಾಗಿಸುವರು. ಇಲ್ಲಿನ ಜನರ ವ್ಯಾಪಾರ ಸಂಪರ್ಕ 64 ಕಿಮೀ ದೂರದ ಹುಬ್ಬಳ್ಳಿಯೊಂದಿಗೆ ಹೆಚ್ಚು. ಮುಂಡಗೋಡದಿಂದ 4 ಕಿಮೀ ಅಂತರದಲ್ಲಿರುವ ಇಂದೂರು ಮತ್ತು ಕುಸೂರು ಎಂಬಲ್ಲಿ ಎರಡೂವರೆ ಸಾವಿರ ಟಿಬೇಟಿಯನ್ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಿದೆ. ಇವರು ಹೆಚ್ಚಾಗಿ ಮುಸುಕಿನ ಜೋಳದ ಬೇಸಾಯ ಮಾಡುತ್ತಾರೆ.

ಮಂಗಳೂರು–ಮುಂಬಯಿ, ಕಾರವಾರ–ಧಾರವಾಡಗಳ ಹೆದ್ದಾರಿಗಳು ಈ ತಾಲ್ಲೂಕಿನಲ್ಲಿ ಹಾದುಹೋಗಿವೆ.

ಮುಂಡಗೋಡ ತಾಲ್ಲೂಕಿನ ಆಡಳಿತ ಕೇಂದ್ರ. ಇದು ಕಾರವಾರದಿಂದ ಈಶಾನ್ಯಕ್ಕೆ 165 ಕಿಮೀ ದೂರದಲ್ಲಿದೆ. ಹುಬ್ಬಳ್ಳಿಯಿಂದ 164 ಕಿಮೀ

ದೂರದಲ್ಲಿದೆ. 1948ರಿಂದ ಇದು ಪ್ರತ್ಯೇಕ ತಾಲ್ಲೂಕಿನ ಅಸ್ತಿತ್ವ ಪಡೆಯಿತು. ಜನಸಂಖ್ಯೆ 16,173. ಈ ಊರಿಗೆ ಪ್ರಾಚೀನ ಇತಿಹಾಸವಿರುವುದು ಇಲ್ಲಿನ ಹಳೆಯ ದೇವಾಲಯಗಳಿಂದ ತಿಳಿದುಬರುತ್ತದೆ. ಹಾನಗಲ್ಲು ಕದಂಬರ ಕಾಲದಲ್ಲಿ ಈ ಊರು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇಲ್ಲಿ ಬ್ರಹ್ಮ, ಉಮಾಮಹೇಶ್ವರ, ದುರ್ಗಾ ಮೊದಲಾದ ಪ್ರಾಚೀನ ದೇವಾಲಯಗಳಿವೆ. ಹೈದರ್ ಅಲಿ ಮತ್ತು ಟಿಪ್ಪು ಕಾಲದ ಮಸೀದಿ ಇದೆ. ಇಲ್ಲಿಗೆ 9 ಕಿಮೀ ದೂರದಲ್ಲಿ ಮುಂಡಗೋಡ–ಹುಬ್ಬಳ್ಳಿ ರಸ್ತೆಯಲ್ಲಿರುವ ಬಚಂಕಿ ಜಲಾಶಯ ಪ್ರವಾಸಿ ತಾಣವಾಗಿದೆ. ಕರಕುಶಲ ವಸ್ತುಗಳ ತಯಾರಿಕೆಗೂ ಈ ಊರು ಪ್ರಸಿದ್ಧ. ಈ ಸ್ಥಳ ಮಂಗಳೂರು–ಮುಂಬಯಿ, ಕಾರವಾರ–ಧಾರವಾಡಗಳ ಹೆದ್ದಾರಿ ಮೇಲಿರುವ ಕಾರಣ ಹೆಚ್ಚಿನ ವಾಹನ ಸಂಚಾರದಿಂದ ಕೂಡಿದೆ. ಇಲ್ಲಿಂದ 16 ಕಿಮೀ ದಕ್ಷಿಣಕ್ಕೆ ಧರ್ಮಾ ಜಲಾಶಯ ಮತ್ತು ಧರ್ಮಾ ವಸಾಹತುಗಳಿವೆ. ವಿಜಯನಗರ ಮತ್ತು ಬಹಮನೀಯರ ಆಡಳಿತದಲ್ಲಿ ಈ ಊರನ್ನು ಮಾಧವರಾವ್ ಪೇಶವೆ (1761–72) ಆಕ್ರಮಿಸಿಕೊಂಡಿದ್ದ. ಕರ್ನಲ್ ವೆಲ್ಲೆಸ್ಲಿ ಮುಂಡಗೋಡನ್ನು ಒಂದು ಮುಖ್ಯ ಸರಹದ್ದು ಪ್ರದೇಶವೆಂದೂ ಇಲ್ಲಿನ ಕೋಟೆ ರಕ್ಷಣೆಗೆ ಮುಖ್ಯವೆಂದೂ ತನ್ನ ಅನೇಕ ಪತ್ರಗಳಲ್ಲಿ ಉಲ್ಲೇಖಿಸಿದ್ದಾನೆ. ಶ್ರೀರಂಗಪಟ್ಟಣ ಪತನದ ಅನಂತರ ಈ ಊರು ಮರಾಠ ಸೇನಾಧಿಪತಿ ಗೋಖಲನ ದಾಳಿಗೆ ತುತ್ತಾಯಿತು. ಮುಂದೆ ಬ್ರಿಟಿಷರ ಆಡಳಿತಕ್ಕೆ ಸೇರಿಹೋಯಿತು. **(ಟಿ.ಪಿ.ಎಸ್.ಆರ್.)**

**ಮುಂಡರಗಿ:** ಗದಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಸ್ಥಳ. ಈ ತಾಲ್ಲೂಕನ್ನು ಪಶ್ಚಿಮ ಮತ್ತು ವಾಯವ್ಯದಲ್ಲಿ ಗದಗ ತಾಲ್ಲೂಕು, ನೈಋತ್ಯ ಮತ್ತು ಪಶ್ಚಿಮದಲ್ಲಿ ಶಿರಹಟ್ಟಿ ತಾಲ್ಲೂಕು, ಪೂರ್ವದಲ್ಲಿ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 877.4 ಚ.ಕಿಮೀ. ಗ್ರಾಮಗಳು 52. ಜನಸಂಖ್ಯೆ 1,16,309.

ಈ ತಾಲ್ಲೂಕಿನ ದಕ್ಷಿಣ ಮತ್ತು ನೈಋತ್ಯದಲ್ಲಿ ತುಂಗಭದ್ರಾ ನದಿ ಮುಂಡರಗಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಯಿಂದ ಪ್ರತ್ಯೇಕಿಸುತ್ತದೆ. ಗದಗ ತಾಲ್ಲೂಕಿನಿಂದ ಮುಂದುವರೆದು ಹರಿಯುವ ಹಿರೇಹಳ್ಳ ಈ ತಾಲ್ಲೂಕಿನ ಮಧ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿದು ತುಂಗಭದ್ರಾವನ್ನು ಕೂಡಿಕೊಳ್ಳುತ್ತದೆ. ಇದು ಮಳೆಗಾಲದಲ್ಲಿ ತುಂಬಿ ಹರಿದು ಬೇಸಗೆಯಲ್ಲಿ ಬತ್ತುವುದುಂಟು. ವಾರ್ಷಿಕ ಸರಾಸರಿ ಮಳೆ 470 ಮಿಮೀ. ತಾಲ್ಲೂಕಿನಲ್ಲಿ ಕೆಂಪುಮಿಶ್ರಿತ ಕಪ್ಪುಮಣ್ಣಿನ ಭೂಮಿ ವಿಶೇಷವಾಗಿದೆ. ಖುಷ್ಕಿ ವ್ಯವಸಾಯ ಹೆಚ್ಚು. ಬಾವಿ, ಹಳ್ಳ ತೊರೆಗಳಿಂದ ವ್ಯವಸಾಯಕ್ಕೆ ನೀರನ್ನು ಒದಗಿಸಿಕೊಳ್ಳುವುದುಂಟು. ಜೋಳ, ದ್ವಿದಳ ಧಾನ್ಯಗಳು, ಮೆಣಸಿನಕಾಯಿ, ಸೇಂಗಾ, ಹತ್ತಿ, ಗೋದಿ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ.

ಈ ತಾಲ್ಲೂಕಿನ ಕೆಲವು ಪ್ರಮುಖ ಗ್ರಾಮಗಳಲ್ಲಿ ಕೊರಲಹಳ್ಳಿ ಒಂದು. ಇದು ತುಂಗಭದ್ರಾನದಿಯ ಎಡದಂಡೆಯ ಮೇಲಿದ್ದು ಮುಂಡರಗಿಗೆ ದಕ್ಷಿಣದಲ್ಲಿ 10 ಕಿಮೀ ದೂರದಲ್ಲಿದೆ. ಇಲ್ಲಿ ಹಿಂದೆ ತುಂಗಭದ್ರಾನದಿಗೆ ಕಟ್ಟಿದ್ದ ಒಡ್ಡಿನ ಅವಶೇಷವಿದೆ. ಡಂಬಳ **(ನೋಡಿ)** ಇತಿಹಾಸ ಪ್ರಸಿದ್ಧ ಸ್ಥಳ. ಮುಂಡರಗಿಗೆ 25 ಕಿಮೀ ದೂರದಲ್ಲಿರುವ ಗುಮ್ಮಗೋಳದಲ್ಲಿ ಬಸವಣ್ಣನ ದೇವಾಲಯವಿದ್ದು ಇಲ್ಲಿ ಚೈತ್ರದಲ್ಲಿ ಜಾತ್ರೆ ನಡೆಯುತ್ತದೆ. ಹಳ್ಳಿಕೇರಿ, ಹೆಸರೂರು, ಬಾಗೇವಾಡಿ, ಬಿದರಹಳ್ಳಿ–ಇವು ತಾಲ್ಲೂಕಿನಲ್ಲಿ ಅಭಿವೃದ್ಧಿ ಹೊಂದುತ್ತಿರುವ ಇತರ ಗ್ರಾಮಗಳು.

ಮುಂಡರಗಿ ಈ ತಾಲ್ಲೂಕಿನ ಮುಖ್ಯ ಕೇಂದ್ರ. ಗದಗ ನಗರಕ್ಕೆ ಆಗ್ನೇಯದಲ್ಲಿ 38 ಕಿಮೀ ದೂರದಲ್ಲಿದೆ. ಜನಸಂಖ್ಯೆ 20,363. ಈ ಊರು ಗದಗ–ಬಳ್ಳಾರಿ ರಸ್ತೆಯಲ್ಲಿರುವುದಲ್ಲದೆ ಕೊಪ್ಪಳ, ಬೆಲತ್ತಿ ಮೊದಲಾದ ಊರುಗಳೊಡನೆ ಮಾರ್ಗ ಸಂಪರ್ಕವನ್ನು ಹೊಂದಿದೆ. ಇಲ್ಲಿ ಸೇಂಗಾ ವ್ಯಾಪಾರ ವಿಶೇಷವಾಗಿದೆ. ಇಲ್ಲಿ ಹತ್ತಿ ಮತ್ತು ಎಣ್ಣೆ ಕಾರ್ಖಾನೆಗಳಿವೆ.

ಈ ಊರಿನ ಸಮೀಪದ ಕಲ್ಲುಗುಡ್ಡದ ಮೇಲೆ ಒಂದು ಕೋಟೆ ಇದೆ. 1857ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಭೀಮರಾಯ ಇಲ್ಲಿಯವನು. ಊರಿಗೆ ಹತ್ತಿರವಿರುವ ದಿನ್ನೆಯ ಮೇಲೆ ಕನಕನರಸಿಂಹ ದೇವಾಲಯವಿದೆ. ಪ್ರತಿವರ್ಷ ಫಾಲ್ಗುಣದಲ್ಲಿ ಜಾತ್ರೆ ನಡೆಯುತ್ತದೆ. ಎರಡು ಅನ್ನದಾನೀಶ್ವರ ಮಠಗಳು ಇಲ್ಲಿವೆ. **(ಪಿ.ಆರ್.ಪಿ.)**

**ಮುಂಡರಗಿ ಭೀಮರಾಯ:** 1857ರ ಕ್ರಾಂತಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ. ಇನಾಂದಾರ ವೀರರ ಮನೆತನಕ್ಕೆ ಸೇರಿದವ. ಇವನ ತಾತ ಮೊಂಡಗ್ಯೆ ಭೀಮರಾಯ ಡಂಬಳದ ದೇಸಾಯಿಯ ಸಚಿವನಾಗಿದ್ದ. ಇವನ ತಂದೆ ಪೇಶ್ವೆಯ ಕೈಕೆಳಗೆ ಅಧಿಕಾರಿಯಾಗಿದ್ದ. ಮುಂಡರಗಿ ಭೀಮರಾಯ ಹರಪನಹಳ್ಳಿ ಮತ್ತು ಬಳ್ಳಾರಿಗಳಲ್ಲಿ ಮಾಮಲೆದಾರನಾಗಿದ್ದ. ಇಂಗ್ಲಿಷ್, ಮರಾಠಿ, ಕನ್ನಡ ಚೆನ್ನಾಗಿ ಬಲ್ಲವ. ತನ್ನ ಮೇಲಿನ ಬಿಳಿಯ ಅಧಿಕಾರಿಗಳ ನಡತೆ, ಮಾತು, ಮೇಲಾಗಿ ಅವರು ಸ್ಥಳೀಯ ಜನರನ್ನು ಕೀಳಾಗಿ ಕಾಣುತ್ತಿದ್ದ ದುರಹಂಕಾರ ಪ್ರವೃತ್ತಿ ಮೊದಲಾದುವುಗಳನ್ನು ಕಂಡರೆ ಕಿಡಿಕಿಡಿಯಾಗುತ್ತಿದ್ದ ಭೀಮರಾಯ ಸ್ವಾತಂತ್ರ್ಯ ಸಾಧನೆಗಾಗಿ ತಹತಹಪಡುತ್ತಿದ್ದ. ಆದ ಕಾರಣ ಬ್ರಿಟಿಷ್ ಅಧಿಕಾರಿಗಳಿಗೆ ಅವನ ಮೇಲೊಂದು ಕಣ್ಣಿದ್ದೇ ಇತ್ತು. ಯಾವುದೋ ಪ್ರಕರಣದಲ್ಲಿ ಭೀಮರಾಯನ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಮಾಡಿ ಅವನನ್ನು ಕೆಲಸದಿಂದ ತೆಗೆದುಹಾಕಿದರು.

ಅಂದಿನಿಂದಲೇ ಬ್ರಿಟಿಷ್ ಆಡಳಿತವನ್ನು ನಿರ್ಮೂಲ ಮಾಡಲು ಪಣತೊಟ್ಟ. 1857ರ ಮಹಾಕ್ರಾಂತಿ ಕಾಲದಲ್ಲಿ ಬ್ರಿಟಿಷರ ವಿರುದ್ಧ ಹರಡಿದ್ದ ಅಸಂತೃಪ್ತಿ, ಮುಗಲ ಬಾದಷಾ ಮತ್ತು ಮರಾಠ ಸರದಾರರ ಯೋಜನೆಗಳು ಇವನಿಗೆ ಸ್ಫೂರ್ತಿಯಾದವು. ರಹಸ್ಯಾಲೋಚನೆಗಳಿಗೆ ಮೊದಲಿಟ್ಟು ಸೊರಟೂರು ದೇಸಾಯಿ ಮೂಲಕ ನಾನಾ ನಾಯಕರ ಸ್ನೇಹ ಸಂಪರ್ಕ ಬೆಳೆಸಿದ. ಹಮ್ಮಿಗೆ ಕೆಂಚನಗೌಡ, ಡಂಬಳದ ದೇಶಮುಖ, ಗೋವಿನಕೊಪ್ಪದ ದೇಸಾಯಿ–ಇವರೆಲ್ಲ ಭೀಮರಾಯನ ಅಂತರಂಗಕ್ಕೆ ಸೇರಿದರು. ಬ್ರಿಟಿಷರನ್ನು ಓಡಿಸಲು ಕ್ರಾಂತಿಯನ್ನು ಹೇಗೆ ವ್ಯವಸ್ಥೆ ಮಾಡಬೇಕು, ಜನರನ್ನು ಇದಕ್ಕೆ ಹೇಗೆ ಸಿದ್ಧಗೊಳಿಸಬೇಕು, ಶಸ್ತ್ರಾಸ್ತ್ರಗಳನ್ನು ಹೇಗೆ ಸಂಗ್ರಹಿಸಬೇಕು–ಇವುಗಳನ್ನೆಲ್ಲ ಕುರಿತು ಆಪ್ತಸ್ನೇಹಿತರೊಂದಿಗೆ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬಂದ. ನರಗುಂದದ ಬಾಬಾ ಸಾಹೇಬನೂ ಈ ಸಂಚಿಗೆ ಸಿದ್ಧನಾದ.

ಭೀಮರಾಯ ಜನರ ವಿಶ್ವಾಸ ಗಳಿಸಿದ್ದ. ರಾಯಚೂರು ಜಿಲ್ಲೆಯ ಕೊಪ್ಪಳದಲ್ಲಂತೂ ಇವನ ಪ್ರಭಾವ ಅಪಾರವಾಗಿತ್ತು. ಬ್ರಿಟಿಷ್ ಅಧಿಕಾರಿಗಳು ಇವನ ಚಟುವಟಿಕೆಗಳನ್ನು ಎಚ್ಚರಿಕೆಯಿಂದ ನೋಡುತ್ತಿದ್ದರು. 1857 ಆಗಸ್ಟ್ 1ರಂದು ಧಾರವಾಡದ ಕಲೆಕ್ಟರನು ತನ್ನನ್ನು ಬಂದು ನೋಡು ಎಂದು ಪತ್ರ ಬರೆದ. ಭೀಮರಾಯ ಕಲೆಕ್ಟರನ್ನು ಗೌರವದಿಂದ ಕಂಡು, ಹಿಂತಿರುಗಿ ತನ್ನ ಬಂಡಾಯದ ಸಿದ್ಧತೆಯನ್ನು ಮುಂದುವರಿಸಿದ. ಶಸ್ತ್ರಾಸ್ತ್ರಗಳ ಸಂಗ್ರಹ ಮಾಡಲಾರಂಭಿಸಿದ. ಇದು ಹೇಗೋ ಬ್ರಿಟಿಷರಿಗೆ ಗೊತ್ತಾಯಿತು. ಡಂಬಳದ ಅಧಿಕಾರಿ ಹಮ್ಮಿಗೆಯ ಕೆಂಚನಗೌಡನ ಮನೆಯನ್ನು ಮುತ್ತಿ, ಮದ್ದುಗುಂಡುಗಳನ್ನು ವಶಪಡಿಸಿಕೊಂಡ. ತನ್ನ ಗುಪ್ತಕಾರ್ಯ ಬೆಳಕಿಗೆ ಬಂದುದನ್ನು ಗಮನಿಸಿದ ಭೀಮರಾಯ ನೇರ ಕಾರ್ಯಾಚರಣೆ ಆರಂಭಿಸಿದ. ರೈತಜನರಿಗೆ ಕ್ರಾಂತಿತತ್ತ್ವ ಸಾರಿದ. ಬ್ರಿಟಿಷ್

ಸರ್ಕಾರಕ್ಕೆ ಕಂದಾಯ ಕೊಡಬೇಡಿರೆಂದು ಹೇಳಿದ. ನರಗುಂದದ ದೇಸಾಯಿ, ಆನೆಗೊಂದಿಯ ಅರಸರಿಗೆ ಪತ್ರ ಬರೆದು ಹೋರಾಟಕ್ಕೆ ಅವರ ಬೆಂಬಲ ಬೇಡಿದ. ಮೊದಲು ಭೀಮರಾಯ ಮತ್ತು ಕೆಂಚನಗೌಡ ಡಂಬಳವನ್ನು ಮುತ್ತಿ ಆ ನಗರವನ್ನು ಸೂರೆಮಾಡಿದರು. ಭೀಮರಾಯ ಅಲ್ಲಿಂದ ಗದಗಕ್ಕೆ, ಗದಗದಿಂದ ಕೊಪ್ಪಳಕ್ಕೆ ನಡೆದ.

ಈ ಸುದ್ದಿ ಬ್ರಿಟಿಷರಿಗೆ ಮುಟ್ಟಿತು. ಧಾರವಾಡ, ಬಳ್ಳಾರಿ, ರಾಯಚೂರು ಕಡೆಗಳಿಂದ ಬ್ರಿಟಿಷ್ ಸೈನ್ಯಗಳು ಕೊಪ್ಪಳದ ಕಡೆ ಧಾವಿಸಿದವು. ಹೈದರಾಬಾದಿನಿಂದ ಟೇಲರ್ ಸಾಹೇಬನ ನೇತೃತ್ವದಲ್ಲಿ ಒಂದು ದಳ ಬಂತು. ಮೇಜರ್ ಹೋಗನ್ ನೇತೃತ್ವದಲ್ಲಿದ್ದ ಬ್ರಿಟಿಷ್ ಸೈನ್ಯ ಕೊಪ್ಪಳದ ಕೋಟೆಯನ್ನು ಸುತ್ತುವರಿದು ಭೀಮರಾಯನನ್ನು ಶರಣಾಗುವಂತೆ ಆಜ್ಞೆ ಮಾಡಿತು (1858 ಮೇ 31). ಆದರೆ ಭೀಮರಾಯ ವೀರಾವೇಶದಿಂದ ಹೋರಾಡಿ ರಣರಂಗದಲ್ಲಿ 1858 ಜೂನ್ 1ರಂದು ನಿಧನನಾದ. ಇದರೊಡನೆ ಕರ್ನಾಟಕದಲ್ಲಿ ಸ್ವಾತಂತ್ರ್ಯಸಮರದ ಕಿಡಿಯೂ ನಂದಿಹೋಯಿತು.

(ಟಿ.ಟಿ.ಎಸ್.)

**ಮುಂಡುಕೂರು:** ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಒಂದು ಗ್ರಾಮ. ಕಾರ್ಕಳದ ನೈಋತ್ಯಕ್ಕೆ 22 ಕಿಮೀ ದೂರದಲ್ಲಿದೆ. ಜನಸಂಖ್ಯೆ 5,822. ಗ್ರಾಮದ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಶಾಂಭವಿ (ಮುಲ್ಕಿ) ಹೊಳೆ ಹರಿಯುತ್ತದೆ. ಈ ಊರು ಪ್ರಾಚೀನ ಸ್ಥಳವೆಂದು ಇಲ್ಲಿರುವ ಮಹಿಷಮರ್ದಿನಿ ದೇವಾಲಯದಿಂದ ವಿದಿತವಾಗುತ್ತದೆ. ಮೂಡುಮೊಗ ವಾಗಿರುವ ಈ ದೇವಾಲಯ ಮಧ್ಯಮಗಾತ್ರದ ರಚನೆಯಾಗಿದ್ದು ಗರ್ಭಗೃಹ, ತೀರ್ಥಮಂಟಪ ಮತ್ತು ಸುತ್ತಲೂ ಪಾಳಿಯಿಂದ ಕೂಡಿದೆ. ಮಹಿಷಮರ್ದಿನಿಯ ಶಿಲಾಮೂರ್ತಿ 3' ಎತ್ತರವಿದೆ. ಮೂರ್ತಿಯ ಮೇಲಿನ ಕೈಗಳಲ್ಲಿ ಶಂಖ, ಚಕ್ರಗಳು, ಕೆಳಗಿನ ಬಲಗೈಯಲ್ಲಿ ತ್ರಿಶೂಲ ಇದೆ. ಕಟಿಬಂಧ ಮಾತ್ರವುಳ್ಳ, ಅಲಂಕಾರ ರಹಿತವಾದ ಈ ಮೂರ್ತಿಯನ್ನು 9–10ನೆಯ ಶತಮಾನಕ್ಕೆ ಅನ್ವಯಿಸಬಹುದು. ಮುಂದೆ ಈ ದೇವಾಲಯ ಪುತ್ತಿಗೆ ಚೌಟರಸನ ಅಧೀನದಲ್ಲಿತ್ತು. (ಪಿ.ಜಿ.ಬಿ.)

**ಮುಕ್ತಾಯಕ್ಕ:** 12ನೆಯ ಶತಮಾನದ ಶಿವಶರಣೆ ಹಾಗೂ ವಚನಕಾರ್ತಿ. ಮುಕ್ತಾಯಿ ಎಂದೂ ಹೆಸರಾಗಿದ್ದ ಈಕೆ ಆಧ್ಯಾತ್ಮಿಕ ವ್ಯಕ್ತಿಗಳಲ್ಲಿ ಮುಖ್ಯಳಾದವಳು. ಗದಗ ಜಿಲ್ಲೆಯ ಹಾಗೂ ಅದೇ ತಾಲ್ಲೂಕಿನ ಲಕ್ಕುಂಡಿ ಈಕೆಯ ಜನ್ಮಸ್ಥಳ. ಒಕ್ಕಲು ಮನೆತನದಲ್ಲಿ ಹುಟ್ಟಿದಳು. ಇವಳ ತಂದೆ ತಾಯಿಗಳ ವಿಚಾರ ತಿಳಿದಿಲ್ಲ. ಇವಳಿಗೆ ಮದುವೆಯಾಗಿ ತ್ತೆಂಬ ವಿಚಾರ ಸೂಚಿತವಾಗಿದ್ದರೂ ಗಂಡ ಯಾರೆಂಬುದು ತಿಳಿದುಬಂದಿಲ್ಲ. ಇವಳ ಅಣ್ಣ ಅಜಗಣ್ಣ. ಈತ ಇವಳ ಆಧ್ಯಾತ್ಮಿಕ ಗುರುವೂ ಆಗಿದ್ದು ಇವರ ಸಂಬಂಧ ಗುರುಶಿಷ್ಯ ಸಂಬಂಧವಾಗಿದ್ದಿತು. ಮುಕ್ತಾಯಕ್ಕ ಮದುವೆಯಾದ ಮೇಲೆ ಮಸಳಿಕಲ್ಲಿನಲ್ಲಿದ್ದ ಗಂಡನ ಮನೆಗೆ ಹೋಗ ಬೇಕಾಯಿತು. ಆಗ ತನ್ನ ಗುರುವಾದ ಅಣ್ಣನನ್ನು ಅಗಲಿರಲಾಗದ ನೋವಿನಿಂದ, ಅವನ ಯೋಗಕ್ಷೇಮದ ಬಗ್ಗೆ ಕಾತರಳಾಗಿದ್ದುದರಿಂದ, ಒಂದು ಪಕ್ಷ ಅವನಿಗೆ ಆಗಬಾರದುದೇನಾದರೂ ಆದರೆ ಅದನ್ನು ತಿಳಿದುಕೊಳ್ಳುವ ಕುರುಹನ್ನು ತಿಳಿಸಬೇಕೆಂದು ಅಣ್ಣನನ್ನು ಕೇಳಿದಳು. ಉಟ್ಟ ಸೀರೆಯ ನಿರಿಗೆ ಕಳಚಿ, ಮುಡಿಗಟ್ಟು ಬಿಚ್ಚಿ ಕೆದರಿ, ಕಡೆಯುವ ಮೊಸರು ಕಲ್ಲಾದಾಗ ನಾನು ಶಿವೈಕ್ಯನಾದೆನೆಂದು ತಿಳಿದುಕೋ ಎಂದು ಅಜಗಣ್ಣ ತನ್ನ ಸಾವನ್ನು ಸೂಚಿಸುವ ಮೂರು ಕುರುಹುಗಳನ್ನು ತಿಳಿಸಿದ. ಅಣ್ಣನನ್ನು ಅಗಲಿ ಹೋದರೂ ಅವನ ನೆನಪು ಸದಾ ಇವಳಲ್ಲಿ ಹಸುರಾಗಿತ್ತು. ಹೀಗೆ ಸ್ವಲ್ಪಕಾಲ ಕಳೆದ ಅನಂತರ ಒಂದು ದಿನ ಅಜಗಣ್ಣ ತಲೆಬಾಗಿಲಿಗೆ ಶಿರಸ್ಸು ತಾಗಿ ಲಿಂಗೈಕ್ಯನಾದ. ಇತ್ತ ಇವಳಿಗೆ ತನ್ನ ಅಣ್ಣ ಹೇಳಿದ್ದ ಮೂರು ಕುರುಹುಗಳೂ ಕಾಣಿಸಿಕೊಂಡು ಅವನು ಲಿಂಗೈಕ್ಯನಾದುದು ತಿಳಿದು ಅಪಾರ ದುಃಖಪಟ್ಟಳು. ಆಗ ಪ್ರಭುದೇವ ಬಂದು ಇವಳ ಬಗ್ಗೆ ಮರುಕಗೊಂಡು ಸಂತೈಸಿ ಶಿವಯೋಗದ ರಹಸ್ಯವನ್ನು ತಿಳಿಸಿ ಇವಳ ದುಃಖವನ್ನು ದೂರ ಮಾಡಿದ. ದೀರ್ಘಕಾಲದ ಚರ್ಚೆಯಿಂದ ಮುಕ್ತಾಯಿಯ ಭ್ರಮೆಗಳು ದೂರವಾದುವು. ಅನಂತರ ಈಕೆ ಶಬ್ದಮುಗ್ಧಳಾಗಿ ಬಯಲಾದಳು.

ಈಕೆ ಅಜಗಣ್ಣ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ರಚಿಸಿದ್ದಾಳೆ. ಇದುವರೆಗೆ ಮೂವತ್ತೇಳು ವಚನಗಳು ದೊರೆತಿವೆ. ಈಕೆಯ ವಚನಗಳಲ್ಲಿ ಒಮ್ಮೊಮ್ಮೆ ಬಸವಾದಿ ವಚನಕಾರರ ಪ್ರಭಾವ ಕಂಡುಬರುವುದು ನಿಜವಾದರೂ ಇವುಗಳ ಆಧ್ಯಾತ್ಮಿಕ ಹಾಗೂ ಸಾಹಿತ್ಯಕ ಸಿದ್ಧಿಗಳು ಗಮನಾರ್ಹವಾಗಿವೆ. ಬಸವಣ್ಣ, ಚೆನ್ನಬಸವಣ್ಣ, ಮರುಳು ಶಂಕರದೇವ, ಅಜಗಣ್ಣ ಮತ್ತು ಅಲ್ಲಮಪ್ರಭು ಮೊದಲಾದವರು ಇವಳ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ವಿಚಾರ ಇವಳ ವಚನಗಳಿಂದಲೇ ತಿಳಿದುಬರುತ್ತದೆ. ಈಕೆಯ ಹೆಸರಿನೊಂದಿಗೆ ಗೌರವಾರ್ಥದ ಅಕ್ಕ ಶಬ್ದ ಸೇರಿದ್ದು ಇವಳು ತನ್ನ ಸಮಾಜದಿಂದ ಪಡೆದಿದ್ದ ಹೃತ್ಪೂರ್ವಕ ಗೌರವಕ್ಕೆ ಸಾಕ್ಷಿಯಾಗಿದೆ. ಕಯ್ಯದು ಕುಱುಹು, ಬಾಯದು ಬೊಬ್ಬೆ ಉಲಿಯದಿರೊ ಭಾವ, ಉಲಿಯದಿರೊ ಭಾವ ವಾರಿಕಲ್ಲ ಕೊಡನಲ್ಲಿ ಮುತ್ತು ಮಾಣಿಕವ ತುಂಬಿ ಎತ್ತುವರಿಲ್ಲದೆ ಸಖಿಯನಱಸುತ್ತಿಪ್ಪೆ, ಮನದ ತನುವಿನಲ್ಲಿ ಆ ತನುವಿನ ಮನದಲ್ಲಿ ತಾನೆತ್ತಿಕೊಂಡಡೆ, ತನಗೆ ಮನ ಮೇರೆದಪ್ಪಿ ಕರಗಿ ಉಕ್ಕಿತು ನಮ್ಮ ಅಜಗಣ್ಣನ ಯೋಗ ಎಂಬ ಒಂದು ವಚನ ಇವಳ ಶೈಲಿಗೆ ನಿದರ್ಶನವಾಗಿದೆ. ಅಕ್ಕಮಹಾದೇವಿಯ ಅನಂತರ ಈಕೆ ಸಾಹಿತ್ಯಕ ಹಾಗೂ ಆಧ್ಯಾತ್ಮಿಕ ಸಿದ್ಧಿಗಳೆರಡರಿಂದಲೂ ವಿಶೇಷವಾಗಿ ಗಮನ ಸೆಳೆದ ವ್ಯಕ್ತಿಯಾಗಿದ್ದಾಳೆ. (ಜಿ.ಎಸ್.ಎಸ್.ಐ.)

**ಮುಗಲರ ಆಳ್ವಿಕೆ:** ಭಾರತದಲ್ಲಿ ಮುಗಲ್ ಸಾಮ್ರಾಜ್ಯ ಸ್ಥಾಪನೆಯಾದುದು 1526ರಲ್ಲಿ. ಆದರೆ ಅಕ್ಬರನ ಕಾಲದವರೆಗೂ (1556–1605) ಮುಗಲರು ದಕ್ಷಿಣ ಭಾರತದ ಕಡೆ ಗಮನ ಹರಿಸಲಿಲ್ಲ. 1599ರಲ್ಲಿ ಅಕ್ಬರ್ ಸ್ವತಃ ಸೈನ್ಯದ ನೇತೃತ್ವ ವಹಿಸಿ ಬಂದು ಬಹಮನೀ ಶಾಹೀ ರಾಜ್ಯಗಳಲ್ಲೊಂದಾಗಿದ್ದ ಅಹಮದ್‌ನಗರವನ್ನು ಹಿಡಿದರೂ ಕರ್ನಾಟಕದ ಶಾಹೀ ರಾಜ್ಯಗಳ ಮೇಲೆ ಹೆಚ್ಚಿನ ಪರಿಣಾಮವಾಗಲಿಲ್ಲ. 1621ರಲ್ಲಿ ಜಹಾಗೀರ್ ಕೈಗೊಂಡ ಸೈನಿಕ ಕಾರ್ಯಾಚರಣೆಗಳ ಪರಿಣಾಮವಾಗಿ ಬಿಜಾಪುರ ಮುಗಲರಿಗೆ ಕಪ್ಪಕೊಡಲು ಒಪ್ಪಿಕೊಂಡಿತು. ಆದರೆ ಕಪ್ಪವನ್ನು ನಿಯತವಾಗಿ ಸಲ್ಲಿಸುತ್ತಿರಲಿಲ್ಲ.

ಮುಗಲರ ಸಾಮ್ರಾಜ್ಯ ವಿಸ್ತರಣೆ ದಾಹ ಹೆಚ್ಚಿತು. ಸಂಪತ್ತಿನ ಕ್ರೋಢೀಕರಣದ ಆಸೆಯೂ ಮಿಗಿಲಾಗಿತ್ತು. ಇದರಿಂದ ಅವರು ದಕ್ಷಿಣದತ್ತ ಆಗಾಗ ದಂಡಯಾತ್ರೆ ಕೈಗೊಳ್ಳತೊಡಗಿದರು. 1631ರಲ್ಲಿ ಷಾಜಹಾನನ ಸೈನ್ಯ ಬಿಜಾಪುರದ ಮೇಲೆ ದಾಳಿ ಮಾಡಿದರೂ ಸಫಲವಾಗಲಿಲ್ಲ. 1636ರಲ್ಲಿ ಷಾಜಹಾನ್ ಅಹಮದ್‌ನಗರ ರಾಜ್ಯವನ್ನು ವಶಪಡಿಸಿಕೊಂಡು ಬಿಜಾಪುರದ ಮೇಲೆ ದಂಡೆತ್ತಿ ಬಂದ. ಆಗ ಆದ ಒಪ್ಪಂದದ ಪ್ರಕಾರ ಬಿಜಾಪುರದ ಸುಲ್ತಾನ ಮುಗಲರಿಗೆ 20 ಲಕ್ಷ ರೂ.ಗಳ ವಾರ್ಷಿಕ ಕಪ್ಪ ಕೊಡಲು ಮತ್ತು ಅವರ ಪರಮಾಧಿಕಾರವನ್ನು ಮಾನ್ಯಮಾಡಲು ಒಪ್ಪಿಕೊಂಡ.

ವಿಜಯನಗರದ 4ನೆಯ ಶ್ರೀರಂಗನ ಕಾಲದ ಹೊತ್ತಿಗೆ ಅವನ ಸಾಮ್ರಾಜ್ಯ ಕರಗಿಹೋಗುವ ಸ್ಥಿತಿಯಲ್ಲಿತ್ತು. ಈ ಸಂದರ್ಭದಲ್ಲಿ ಅವನು ಮುಗಲರೊಂದಿಗೆ ಸಂಪರ್ಕ ಬೆಳೆಸಿ ಶಾಹೀ ಸುಲ್ತಾನರ ದಾಳಿಗಳಿಂದ ತನ್ನನ್ನು ರಕ್ಷಿಸುವಂತೆ ಅವರನ್ನು ಕೋರಿದ್ದ. ಬಿಜಾಪುರ ಮತ್ತು

ಗೋಲ್ಕೊಂಡದ ಸುಲ್ತಾನರಿಗೆ ಮುಗಲರು ಕರ್ನಾಟಕದ ರಾಜಕೀಯದಲ್ಲಿ ಪ್ರವೇಶಿಸುವುದು ಇಷ್ಟವಿರಲಿಲ್ಲ. ಒಂದಲ್ಲ ಒಂದು ದಿನ ಮುಗಲರು ತಮ್ಮನ್ನು ನಿರ್ಮೂಲ ಮಾಡುತ್ತಾರೆಂದು ಅವರು ಚೆನ್ನಾಗಿ ತಿಳಿದಿದ್ದರು. ಆದ್ದರಿಂದ ಅವರು ಸಾಮಭೇದೋಪಾಯಗಳಿಂದ ಮುಗಲರೊಂದಿಗೆ ವ್ಯವಹರಿಸತೊಡಗಿದರು. ಆದರೆ ಈ ಮಧ್ಯೆ ಗೋಲ್ಕೊಂಡದ ಸೈನ್ಯದಲ್ಲಿ ಪ್ರಬಲನಾಗಿದ್ದ ಮೀರ್ ಜುಮ್ಲಾ ಎಂಬುವನು ಮುಗಲರ ಪಕ್ಷ ವಹಿಸಿದ. ಷಾಜಹಾನನು ಮೀರ್ ಜುಮ್ಲಾ ಗೋಲ್ಕೊಂಡಾದ ಸೈನ್ಯದಲ್ಲಿದ್ದುಕೊಂಡು ಗೆದ್ದಿದ್ದ ದಕ್ಷಿಣ ಭಾರತದ ಕೆಲವು ಪ್ರದೇಶಗಳನ್ನು ಮುಗಲ್ ಸಾಮ್ರಾಜ್ಯದ ಭಾಗವೆಂದು ಘೋಷಿಸಿ ಅದನ್ನು ಅವನಿಗೇ ಜಹಗೀರಿಯಾಗಿ ನೀಡಿದ. ಮುಗಲರ ಈ ಕ್ರಮದಿಂದಾಗಿ ದಕ್ಷಿಣ ಭಾರತದ ರಾಜಕೀಯದಲ್ಲಿ ಅವರು ನೇರವಾಗಿ ಭಾಗವಹಿಸಿದಂತಾಯಿತು. 1657ರಲ್ಲಿ ದಕ್ಷಿಣ ಭಾರತದಲ್ಲಿ ಆಗ ಮುಗಲ್ ಸಾಮ್ರಾಜ್ಯದ ಪ್ರತಿನಿಧಿಯಾಗಿದ್ದ ಔರಂಗಜೇಬ್ ಹಾಗೂ ಮೀರ್ ಜುಮ್ಲಾ ಬಿಜಾಪುರದ ಮೇಲೆ ದಾಳಿ ಮಾಡಿದರು. ಬಿಜಾಪುರದ ಸುಲ್ತಾನ ಮುಗಲರೊಂದಿಗೆ ಒಪ್ಪಂದಕ್ಕೆ ಬಂದು ಅದರ ಪ್ರಕಾರ ಬಿದರೆ, ಕಲ್ಯಾಣಿ, ಕೊಂಕಣ ಮತ್ತಿತರೆಡೆಗಳ ಕೋಟೆಗಳನ್ನು ಮುಗಲರಿಗೆ ಒಪ್ಪಿಸಬೇಕಾಯಿತು. ಆದರೆ ಈ ಒಪ್ಪಂದ ಕಾರ್ಯ ರೂಪಕ್ಕೆ ಬರುವ ಮೊದಲೇ ಔರಂಗಜೇಬ್ ದೆಹಲಿಗೆ ಧಾವಿಸಿದ.

1658ರಲ್ಲಿ ಔರಂಗಜೇಬ್ ಚಕ್ರವರ್ತಿಯೆಂದು ಘೋಷಿಸಿಕೊಂಡನಾದರೂ ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ದಕ್ಷಿಣದ ಕಡೆ ಹೆಚ್ಚು ಗಮನ ಹರಿಸಲಾಗ ಲಿಲ್ಲ. ಅವನು ಕಳುಹಿಸುತ್ತಿದ್ದ ದಂಡನಾಯಕರು ಶಾಹೀ ಸುಲ್ತಾನರನ್ನು ಸಾಕಷ್ಟು ಹಣ್ಣು ಮಾಡುತ್ತಿದ್ದರಾದರೂ ಅವರನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲು ಸಾಧ್ಯವಾಗಿರಲಿಲ್ಲ. ಮರಾಠರು ಕ್ರಮೇಣ ಪ್ರಬಲರಾಗುತ್ತಾ ಮುಗಲರಿಗೆ ಸವಾಲಾಗಿ ಪರಿಣಮಿಸಿದ್ದರು. ಈ ಎಲ್ಲ ಕಾರಣಗಳಿಂದಾಗಿ ಸಮಸ್ತ ದಖನ್ ಮತ್ತು ದಕ್ಷಿಣ ಭಾರತದಲ್ಲಿ ಮುಗಲ್ ಆಳ್ವಿಕೆಯನ್ನು ಸ್ಥಾಪಿಸುವ ಉದ್ದೇಶದಿಂದ ಔರಂಗಜೇಬ್ 1683ರಲ್ಲಿ ಸ್ವತಃ ಸೈನ್ಯಸಮೇತನಾಗಿ ದಖನ್ನಿಗೆ ಬಂದ.

1686ರಲ್ಲಿ ಬಿಜಾಪುರವೂ 1687ರಲ್ಲಿ ಗೋಲ್ಕೊಂಡವೂ ಮುಗಲರ ವಶವಾದವು. ಇದರಿಂದಾಗಿ ಮುಗಲರಿಗೆ ದಕ್ಷಿಣ ಭಾರತದ ಹೆಬ್ಬಾಗಿಲೇ ತೆರೆದುಕೊಂಡಂತಾಯಿತು. ನಿರಂತರ ಯುದ್ಧಗಳಿಂದ, ದಾಳಿಗಳಿಂದ ಬಳಲಿದ್ದ ಮೈಸೂರು ಒಡೆಯರು ಮತ್ತು ಬಿದನೂರು ನಾಯಕರು ಮುಗಲ್ ಸೈನ್ಯವನ್ನು ಎದುರಿಸುವ ಸ್ಥಿತಿಯಲ್ಲಿರಲಿಲ್ಲ. ಮುಗಲರ ಅಪಾಯವನ್ನು ಮುಂಗಡ ಮೈಸೂರಿನ ಚಿಕ್ಕದೇವರಾಯ ಬಿಜಾಪುರ ಮತ್ತು ಗೋಲ್ಕೊಂಡ ಗಳ ಆಕ್ರಮಣ ಕಾಲದಲ್ಲಿ ಮುಗಲರಿಗೆ ನೆರವಾಗಿದ್ದ. ಅವನು ಮೊದಲಿ ನಿಂದಲೂ ಮುಗಲರೊಂದಿಗೆ ಸ್ನೇಹದಿಂದಲೇ ವರ್ತಿಸುತ್ತಿದ್ದ. ಸ್ಥಳೀಯ ಪಾಳೆಯಗಾರರು ಸಮಯೋಚಿತವಾಗಿ ಪಕ್ಷಗಳನ್ನು ವಹಿಸತೊಡಗಿದರು.

ಬಿಜಾಪುರದ ಪತನದ ಅನಂತರ ಮುಗಲರು ಆ ರಾಜ್ಯಕ್ಕೆ ಸೇರಿದ್ದ ಕರ್ನಾಟಕದ ಪ್ರದೇಶಗಳನ್ನು ವಶಪಡಿಸಿಕೊಳ್ಳತೊಡಗಿದರು. ಉತ್ತರ ಕರ್ನಾಟಕದ ಬಹುತೇಕ ಭಾಗಗಳು ಮುಗಲರ ವಶವಾದವು. ದಕ್ಷಿಣ ಕರ್ನಾಟಕದ ತುಮಕೂರು, ಕೋಲಾರ ಮತ್ತು ಬೆಂಗಳೂರು ಜಿಲ್ಲೆಯ ಅನೇಕ ಭಾಗಗಳನ್ನು ಅವರು ವಶಪಡಿಸಿಕೊಂಡರು. ತುಮಕೂರು ಜಿಲ್ಲೆಯ ಶಿರಾ ಕರ್ನಾಟಕದಲ್ಲಿ ಮುಗಲರ ಆಡಳಿತ ಕೇಂದ್ರವಾಯಿತು. ಚಿಕ್ಕದೇವರಾಯ ಮುಗಲರಿಂದ ಬೆಂಗಳೂರನ್ನು ಕೊಂಡುಕೊಂಡ. ಮರಾಠರ ನಾಯಕ ರಾಜಾರಾಮ ಜಿಂಜಿಯ ಕಡೆ ಆಶ್ರಯ ಪಡೆಯಲು ಹೊರಟಿದ್ದಾ ನೆಂಬ ವಿಚಾರ ಮುಗಲರಿಗೆ ತಿಳಿದುದರಿಂದ ಅವರು ಅವನನ್ನು ಬೆನ್ನಟ್ಟಿದರು. ಈ ಸಂದರ್ಭದಲ್ಲಿ ಜುಲ್ಫಿಕರ್ ಖಾನನ ನೇತೃತ್ವದಲ್ಲಿ ಹೊರಟ ಮುಗಲ್ ಸೈನ್ಯ ರಾಯಚೂರು, ಬಿದನೂರು, ಚನ್ನಪಟ್ಟಣ ಮತ್ತು ಮೈಸೂರುಗಳ ಮೂಲಕವಾಗಿ ಮುನ್ನಡೆಯಿತು. ಬಿದನೂರಿನ ರಾಣಿ ರಾಜಾರಾಮನ ಪಲಾಯನಕ್ಕೆ ನೆರವಾದಳೆಂಬ ಕಾರಣಕ್ಕಾಗಿ ಅವಳೊಂದಿಗೆ ಮುಗಲರು ಯುದ್ಧ ನಡೆಸಿದರು. ಮರಾಠರು ರಾಣಿ ಚೆನ್ನಮ್ಮಾಜಿಯ ನೆರವಿಗೆ ನಿಂತರು. ಕೊನೆಗೆ ಅದು ಶಾಂತಿ ಒಪ್ಪಂದದಲ್ಲಿ ಪರ್ಯವಸಾನವಾಯಿತು.

1698ರ ಹೊತ್ತಿಗೆ ಮುಗಲ್ ಸೈನ್ಯ ಜಿಂಜಿಯನ್ನು ವಶಪಡಿಸಿಕೊಂಡಿತು. ಆದರೆ ರಾಜಾರಾಮ ಪುನಃ ಮಹಾರಾಷ್ಟ್ರಕ್ಕೆ ಬಂದಿದ್ದ. ಈ ಒಂದು ದಶಕದ ಕಾಲದಲ್ಲಿ ಮುಗಲರು ಕರ್ನಾಟಕದ ದೊಡ್ಡೇರಿ, ಬಸವಾಪಟ್ಟಣ, ಸಾಗರ, ಚನ್ನಪಟ್ಟಣ ಮೊದಲಾದ ಸ್ಥಳಗಳಲ್ಲಿ ಯುದ್ಧ ನಡೆಸಿದರು. ಮರಾಠ ಸೇನಾನಿ ಸಂತಾಜಿ ಬಿದನೂರು ಮತ್ತು ಚಿತ್ರದುರ್ಗದ ನಾಯಕರು ಮತ್ತಿತರ ಪಾಳೆಯಗಾರರ ಸಹಕಾರದಿಂದ ಮುಗಲ್ ಸೈನ್ಯವನ್ನು ಎದುರಿಸಿದ. ಆಗ ನಡೆದ ಯುದ್ಧಗಳಲ್ಲಿ ಅನೇಕ ಮುಗಲ್ ಸೇನಾನಿಗಳು ಮರಾಠರಿಂದ ಹತರಾದರು. ಇದರ ಪರಿಣಾಮವಾಗಿ ಕರ್ನಾಟಕದ ಬಹು ಭಾಗದಲ್ಲಿ ಮುಗಲರು ಸ್ಥಿರಪ್ರಭುತ್ವ ಸ್ಥಾಪಿಸದಂತೆ ಆಯಿತು.

ಮೈಸೂರಿನ ಚಿಕ್ಕದೇವರಾಯ ಈ ಕಾಲದಲ್ಲೂ ಮುಗಲರೊಂದಿಗೆ ಒಳ್ಳೆಯ ಸಂಬಂಧವಿಟ್ಟುಕೊಂಡಿದ್ದ. ತನ್ನ ರಾಯಭಾರಿ ಲಿಂಗಯ್ಯನನ್ನು ಔರಂಗಜೇಬನ ಬಳಿ ನಿಯೋಗ ಕಳುಹಿಸಿದ್ದ. ಚಕ್ರವರ್ತಿ ಅವನನ್ನು ಆದರದಿಂದ ಬರಮಾಡಿಕೊಂಡು ಚಿಕ್ಕದೇವರಾಯನಿಗೆ ರಾಜಾ ಜಗದೇವ್ ಎಂಬ ಬಿರುದುಕೊಟ್ಟ. 1700ರಲ್ಲಿ ಲಿಂಗಯ್ಯ ಮುಗಲ್ ಆಸ್ಥಾನದಿಂದ ಹಿಂದಿರುಗಿದ.

18ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಔರಂಗಜೇಬನು ಮರಾಠರನ್ನು ನಿರ್ಮೂಲ ಮಾಡುವ ಸಾಧ್ಯತೆಗಳು ಕಡಿಮೆಯಾದವು. ಗೆರಿಲ್ಲಾ ಯುದ್ಧದಲ್ಲಿ ಪಳಗಿದ್ದ ಮತ್ತು ಅತಿ ವೇಗದಲ್ಲಿ ಚಲಿಸಬಲ್ಲ ರಾಹುತ ಪಡೆ ಹೊಂದಿದ್ದ ಮರಾಠ ಸೈನ್ಯ ಮುಗಲ್ ಸಾಮ್ರಾಜ್ಯದ ಅದ್ದೂರಿಯ ಅಪಾರ ಸೈನ್ಯಬಲವನ್ನು ಬಳಲಿಸಿತು. ವಯೋವೃದ್ಧನೂ ಹತಾಶನೂ ಆಗಿದ್ದ ಚಕ್ರವರ್ತಿಯು ಅಹಮದ್‌ನಗರಕ್ಕೆ ಹಿಂದಿರುಗಿದ. ತರುವಾಯ ಸ್ವಲ್ಪ ಕಾಲದಲ್ಲೇ 1707ರಲ್ಲಿ ಅವನು ಮರಣ ಹೊಂದಿದ.

ಬಿಜಾಪುರ ಮತ್ತು ಗೋಲ್ಕೊಂಡಗಳು ಮುಗಲರ ವಶವಾದ ಮೇಲೆ ದಖನ್ನಿನಲ್ಲಿ ಮುಗಲರ ಆಡಳಿತ ವಿಭಾಗಗಳ ಸಂಖ್ಯೆ ನಾಲ್ಕರಿಂದ ಆರಕ್ಕೆ ಏರಿತು. ಈ ಪ್ರತಿಯೊಂದು ವಿಭಾಗಕ್ಕೂ ಫೌಜುದಾರ್ ಎಂಬ ಸೈನ್ಯಾಧಿಕಾರಿಯನ್ನು ನೇಮಿಸಲಾಗಿತ್ತು. ಬಿಜಾಪುರ, ಕರ್ನಾಟಕ ಮತ್ತು ಹೈದರಾಬಾದ್ ವಿಭಾಗಗಳೆರಡೂ ಒಬ್ಬನೇ ಅಧಿಕಾರಿಯ ಅಧೀನದಲ್ಲಿದ್ದವು. ಆಡಳಿತ ಸೌಕರ್ಯಕ್ಕೋಸ್ಕರ ಕಡಪ, ಕರ್ನೂಲು, ಸವಣೂರು ಮತ್ತು ಶಿರಾ ವಿಭಾಗಗಳನ್ನು ಮಾಡಿದರು. ಈ ವಿಭಾಗಗಳು ಆರ್ಕಾಟಿನ ನವಾಬನ ಅಧೀನದಲಿದ್ದವು. ಆರ್ಕಾಟಿನ ನವಾಬನನ್ನು ಚಕ್ರವರ್ತಿಯ ಒಪ್ಪಿಗೆಯ ಮೇಲೆ ದಖನ್ನಿನ ಗವರ್ನರು ನೇಮಿಸುತ್ತಿದ್ದ. ಇದರಿಂದ ಕರ್ನಾಟಕದಲ್ಲಿ ಬಿಜಾಪುರ, ಸವಣೂರು ಮತ್ತು ಶಿರಾಗಳು ಮುಗಲ್ ಆಡಳಿತದ ಕೇಂದ್ರಗಳಾಗಿದ್ದವು.

ಶಿರಾ ವಿಭಾಗವನ್ನು ಬಸವಾಪಟ್ಟಣ, ಬೂದಿಹಾಳು, ಶಿರಾ, ಪೆನು ಕೊಂಡ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ಕೋಲಾರಗಳೆಂಬ ಆರು ಪರಗಣಗಳಾಗಿ ವಿಂಗಡಿಸಲಾಗಿತ್ತು. ಖಾಸಿಂ ಖಾನ್ ಎಂಬುವನು ಶಿರಾ ವಿಭಾಗದ ಪ್ರಥಮ ಫೌಜುದಾರನಾದ. ಅವನು 1698ರಲ್ಲಿ ಯುದ್ಧದಲ್ಲಿ ಮಡಿದಾಗ ಜುಲ್ಫಿಕರ್ ಖಾನನನ್ನು ಅಲ್ಲಿಗೆ ನೇಮಿಸ ಲಾಯಿತು. ಒಟ್ಟು 16ಜನ ಮುಗಲ್ ಫೌಜುದಾರರು ಶಿರಾದಲ್ಲಿ ಆಳಿದಂತೆ ತಿಳಿದುಬರುತ್ತದೆ. ಇವರು ಮುಗಲ್ ಆಡಳಿತ ಪದ್ಧತಿಯನ್ನು ಆ ಭಾಗದಲ್ಲಿ

ಜಾರಿಗೆ ತಂದರು. ಮೈಸೂರಿನ ಚಿಕ್ಕದೇವರಾಜ ಸಹ ತನ್ನ ಆಡಳಿತ ವ್ಯವಸ್ಥೆಯನ್ನು ಬಹುಮಟ್ಟಿಗೆ ಮುಗಲ್ ವ್ಯವಸ್ಥೆಯ ರೀತಿಗೆ ಬದಲಾಯಿಸಿದ. ಬಿಜಾಪುರ ಪತನದ ಅನಂತರ ಅಲ್ಲಿಯ ಸುಲ್ತಾನರ ಅಧೀನದಲ್ಲಿ ಬಂಕಾಪುರದ ಗವರ್ನರ್ ಆಗಿದ್ದ ಅಬ್ದುಲ್ ರಹೂಫ್ ಮುಗಲರ ಸೇವೆಗೆ ಸೇರಿಕೊಂಡು ಅವರಿಂದ ಬಂಕಾಪುರ, ಅಜಮ್‌ನಗರ ಮತ್ತು ಬೆಳಗಾಂವಿಗಳನ್ನು ಜಹಗೀರಿ ಪಡೆದ. ಮುಂದೆ ಸವಣೂರನ್ನು ತನ್ನ ಆಡಳಿತ ಕೇಂದ್ರವಾಗಿ ಮಾಡಿಕೊಂಡ. ಅವನು ಕಂದಾಯ ವ್ಯವಸ್ಥೆಯನ್ನು ನೋಡಿಕೊಳ್ಳಲು ನವಲಗುಂದ, ಶಿರಹಟ್ಟಿ, ಹಾವನೂರು, ಡಂಬಳ ಮೊದಲಾದೆಡೆಗಳಲ್ಲಿ ಹಿಂದು ಅಧಿಕಾರಿಗಳನ್ನು (ದೇಸಾಯಿ) ನೇಮಿಸಿದ. ಇದರಿಂದ ಆ ಭಾಗದಲ್ಲಿ ಮೂಲ ಆಡಳಿತ ವ್ಯವಸ್ಥೆ ಹಿಂದು ಅಧಿಕಾರಿಗಳ ಕೈಯಲ್ಲಿ ಉಳಿದು ಪಾರಂಪರಿಕ ಪದ್ಧತಿ ಮುಂದುವರೆಯಿತು.

ಮುಗಲರ ಆಳಿಕೆ ಕರ್ನಾಟಕದಲ್ಲಿ ಬಹುಕಾಲ ಉಳಿಯಲಿಲ್ಲ. 18ನೆಯ ಶತಮಾನದಲ್ಲಿ ಮುಗಲ್ ಸಾಮ್ರಾಜ್ಯ ದಿನೇ ದಿನೇ ದುರ್ಬಲವಾಗತೊಡಗಿತು. ದಖನ್ನಿನಲ್ಲಿ ಅದಮ್ಯಶಕ್ತಿಯಾಗಿ ಬೆಳೆಯುತ್ತಿದ್ದ ಮರಾಠರು ಮುಗಲರ ಸ್ಥಾನವನ್ನು ಇನ್ನೂ ದುರ್ಬಲಗೊಳಿಸತೊಡಗಿದರು. ಮೈಸೂರು, ಬಿದನೂರು ರಾಜ್ಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸರ್ವಪ್ರಯತ್ನ ನಡೆಸುತ್ತಿದ್ದವು. 1719ರಲ್ಲಿ ಮರಾಠರ ಸಾಹು ಮುಗಲ್ ಚಕ್ರವರ್ತಿಯಿಂದ ದಖನ್ನಿನ ಆರು ಪ್ರಾಂತಗಳಲ್ಲಿ ಚೌತ್ ಮತ್ತು ಸರ್ದೇಶ್‌ಮುಖಿಗಳೆಂಬ ತೆರಿಗೆಯನ್ನು ಎತ್ತುವ ಅಧಿಕಾರ ಪಡೆದ. ಇದರಿಂದ ಉತ್ತರ ಕರ್ನಾಟಕದ ಅನೇಕ ಪ್ರದೇಶಗಳು ಮರಾಠರ ಪರಮಾಧಿಕಾರಕ್ಕೆ ಒಳಪಟ್ಟವು. ಅವನು ಚಕ್ರವರ್ತಿಯಿಂದ 16 ಜಿಲ್ಲೆಗಳ ಸ್ವರಾಜ್ಯ ಸ್ಥಾಪನೆಗೂ ಅನುಮತಿ ಪಡೆದಿದ್ದ. ಈ ಸ್ವರಾಜ್ಯದ ವ್ಯಾಪ್ತಿ ಗದುಗಿನವರೆಗೂ ವಿಸ್ತರಿಸಿತ್ತು. 1724ರಲ್ಲಿ ಹೈದರಾಬಾದಿನ ನಿಜಾಮ್ ಉಲ್ ಮುಲ್ಕನು ಚಕ್ರವರ್ತಿಯಿಂದ ಒತ್ತಾಯಪೂರ್ವಕವಾಗಿ ದಖನ್ನಿನ ಗವರ್ನರ್ ಪದವಿಯನ್ನು ಗಳಿಸಿಕೊಂಡು ಬಂದ. ಅವನು ಮುಂದೆ ಚಕ್ರವರ್ತಿಗೆ ನಾಮಮಾತ್ರ ವಿಧೇಯತೆ ತೋರಿಸುತ್ತಿದ್ದು ವಾಸ್ತವವಾಗಿ ಸ್ವತಂತ್ರ ನೀತಿ ಅನುಸರಿಸುತ್ತಿದ್ದ. ಕ್ರಮೇಣ ಫೌಜುದಾರರು ದಖನ್ನಿನ ಗವರ್ನರನಿಂದಲೂ ಸ್ವತಂತ್ರರಾಗಿ ವರ್ತಿಸತೊಡಗಿದರು (ಸು. 1748). ಈ ಎಲ್ಲ ಕಾರಣಗಳಿಂದ ಮುಗಲ್ ಆಡಳಿತ ವ್ಯವಸ್ಥೆ ಕರ್ನಾಟಕದಲ್ಲಿ ಕೆಲವೇ ದಶಕಗಳಲ್ಲಿ ಶಿಥಿಲವಾಯಿತು.

ಔರಂಗಜೇಬ್ ಬಿಜಾಪುರದಲ್ಲಿ ಕಟ್ಟಿಸಿದ ಈದ್ಗಾ, ಬಿದರೆ ಬಳಿಯ ಮಸೀದಿ, ಶಿರಾದಲ್ಲಿ ಮುಗಲ್ ಅಧಿಕಾರಿಗಳು ಕಟ್ಟಿಸಿದ ಕೋಟೆ, ಅರಮನೆ, ಉದ್ಯಾನ, ಜುಮ್ಮಾ ಮಸೀದಿ ಮೊದಲಾದವು ಇಂದಿಗೂ ಕರ್ನಾಟಕದಲ್ಲಿನ ಮುಗಲರ ಆಳ್ವಿಕೆಗೆ ಸಾಕ್ಷಿಯಾಗಿವೆ. **(ಡಿ.ಎಸ್.ಜೆ.)**

ಕರ್ನಾಟಕದಲ್ಲಿ ಮುಗಲರ ಆಳಿಕೆಯ ಕಾಲಕ್ಕೆ ಸಂಬಂಧಿಸಿದ ಅನೇಕ ನಾಣ್ಯಗಳು ದೊರಕಿವೆ. ಔರಂಗಜೇಬ್ ತನ್ನ ಸಾಮ್ರಾಜ್ಯದ ದಕ್ಷಿಣ ಪ್ರದೇಶಗಳಲ್ಲಿ ಬಳಕೆಗೋಸ್ಕರ ತನ್ನದೇ ಆದ ನಾಣ್ಯಗಳನ್ನು ಚಲಾವಣೆಗೆ ತಂದ. ಬಳ್ಳಾಪುರ, ಕೋಲಾರ, ಹೊಸಕೋಟೆ, ಗುತ್ತಿಗಳಲ್ಲಿ ಚಿನ್ನದ ನಾಣ್ಯಗಳು ಟಂಕಿಸಲ್ಪಟ್ಟವು. ಇವು ಫಣಂ ವರ್ಗಕ್ಕೆ ಸೇರಿದವು. ಮಹಮ್ಮದ್ ಷಾನ ಕಾಲದಲ್ಲೂ ಇಲ್ಲಿ ಟಂಕಿಸಲ್ಪಟ್ಟ ಚಿನ್ನದ ನಾಣ್ಯಗಳೂ ಎರಡನೆಯ ಅಲಂಗೀರನ ಹೆಸರಿನಲ್ಲಿ ಅಚ್ಚಾದ ತಾಮ್ರದ ನಾಣ್ಯಗಳೂ ಹೇರಳವಾಗಿ ದೊರಕಿವೆ. ಮಹಮ್ಮದ್ ಷಾನ ನಾಣ್ಯಗಳಲ್ಲಿ ಜರ್ಬ್ ಕೋಲಾರ್ ಎಂಬ ಪರ್ಷಿಯನ್ ಬರೆವಣಿಗೆ ಇದೆ. ಈ ರೀತಿಯ ನಾಣ್ಯಗಳು ದೇವನಹಳ್ಳಿ ಮತ್ತು ನಂದಿಯಲ್ಲೂ ಟಂಕಿಸಲ್ಪಟ್ಟವು. ಇವುಗಳಲ್ಲಿ ಟಂಕಸಾಲೆಯ ಹೆಸರು ಇದೆ. ಬಿದರೆಯಲ್ಲೂ ಮುಗಲರ ಒಂದು ಟಂಕಸಾಲೆ ಇತ್ತು. ಬಿದರೆಯಲ್ಲಿ ಮುಗಲರ ಕಾಲದ 175 ಗ್ರೇನ್ ತೂಕದ ಚಿನ್ನದ ಮೊಹರುಗಳು ಹೇರಳವಾಗಿ ದೊರಕಿವೆ. ಔರಂಗಜೇಬನ ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ವಿಶೇಷವಾಗಿ ಉತ್ತರ ಕರ್ನಾಟಕದ ವಿವಿಧ ಭಾಗಗಳಲ್ಲಿ ದೊರಕಿವೆ.

ಸ್ಥಳೀಯವಾಗಿ ಟಂಕಿಸಲಾದ ಮುಗಲ್ ನಾಣ್ಯಗಳಲ್ಲದೆ ಅಕ್ಬರ್, ಷಾಜಹಾನ್, ಔರಂಗಜೇಬ್, ಷಾ ಆಲಂ, ಮಹಮ್ಮದ್ ಷಾ, ಎರಡನೆಯ ಅಲಂಗೀರ್-ಇವರ ಸಾಮಾನ್ಯ ಮುಗಲ್ ಪರಂಪರೆಯ ನಾಣ್ಯಗಳೂ ಕರ್ನಾಟಕದಲ್ಲಿ ದೊರಕಿವೆ. ಇವುಗಳಲ್ಲಿ ಮುಂಭಾಗದಲ್ಲಿ ಕಲೀಮು, ಹಿಂಭಾಗದಲ್ಲಿ ತೇದಿ ಮತ್ತು ಟಂಕಸಾಲೆಯ ಹೆಸರುಗಳು ಕಾಣಬರುತ್ತವೆ. **(ಎ.ವಿ.ಎನ್.)**

**ಮುಗಳಿ, ರಂ.ಶ್ರೀ.:** 1906–93. ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಪ್ರಸಿದ್ಧ ವಿದ್ವಾಂಸರು. ರಂಗನಾಥ ಶ್ರೀನಿವಾಸ ಮುಗಳಿ ಇವರ ಪೂರ್ಣ ಹೆಸರು. ಧಾರವಾಡ ಜಿಲ್ಲೆಯ ಹೊಳೆ ಆಲೂರಿನಲ್ಲಿ 1906 ಜೂನ್ 15ರಂದು ಜನಿಸಿದರು. ಇವರ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಬಾಗಲಕೋಟೆ, ಬಿಜಾಪುರಗಳಲ್ಲಿ ನಡೆಯಿತು. ಗಾಂಧೀಜಿಯವರ ಅಸಹಕಾರ ಚಳವಳಿಗೆ ಮಾರುಹೋಗಿ 1920ರ ಸುಮಾರಿಗೆ ಶಾಲೆಯನ್ನು ಬಿಟ್ಟರು.



1924ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಶಿಕ್ಷಣವನ್ನು ಪುನಃ ಆರಂಭಿಸಿ 1928ರಲ್ಲಿ ಬಿ.ಎ. (ಸಂಸ್ಕೃತ ಆನರ್ಸ್) ಪದವಿಯನ್ನೂ 1930ರಲ್ಲಿ ಎಂ.ಎ. (ಕನ್ನಡ) ಪದವಿಯನ್ನೂ ಪಡೆದರು. ಅನಂತರ ಬಿ.ಟಿ. ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದರು. 1932ರಲ್ಲಿ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಹೈಸ್ಕೂಲಿನಲ್ಲಿ ಶಿಕ್ಷಕರಾದರು. ಅನಂತರ 1933ರಲ್ಲಿ ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಿನ್ಸಿಪಾಲರಾದರು. 1966ರ ವರೆಗೂ ಆ ಹುದ್ದೆಯಲ್ಲಿದ್ದು ನಿವೃತ್ತರಾದರು. ಅನಂತರ ಸುಮಾರು ಆರು ತಿಂಗಳ ಕಾಲ ಕರ್ನಾಟಕ ಸರ್ಕಾರದ ಸಾಹಿತ್ಯ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದರು. 1967ರಿಂದ70 ವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು.

ಧಾರವಾಡ ಗೆಳೆಯರ ಗುಂಪಿನಲ್ಲಿ ಬೇಂದ್ರೆ, ಗೋಕಾಕರ ಸಹಚರ್ಯೆಯಿಂದ ಕಾವ್ಯ ಸಾಧನೆಯಲ್ಲಿ ತೊಡಗಿ ತಮ್ಮ ವಿಶಿಷ್ಟ ವ್ಯಕ್ತಿತ್ವವನ್ನು ಅರಳಿಸಿಕೊಂಡ ಮುಗಳಿಯವರು ಸಾಹಿತ್ಯ ಚರಿತ್ರೆಕಾರರಾಗಿ, ವಿಮರ್ಶಕರಾಗಿ ಕನ್ನಡ ನಾಡಿನಲ್ಲಿ ಸುವಿಖ್ಯಾತರಾಗಿದ್ದು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಇವರ ಕನ್ನಡ ಸಾಹಿತ್ಯ ಚರಿತ್ರೆ (1953) ಎಂಬ ಗ್ರಂಥ ಕನ್ನಡ ಸಾಹಿತ್ಯ ಚರಿತ್ರೆಗಳ ಸಾಲಿನಲ್ಲೆ ಒಂದು ಮಹತ್ತ್ವದ ಕೃತಿಯಾಗಿದೆ. ರನ್ನನ ಕೃತಿರತ್ನ, ತವನಿಧಿ, ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ-ಈ ಗ್ರಂಥಗಳಲ್ಲದೆ, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ, ಕನ್ನಡ ಸಾಹಿತ್ಯದ ವಿವಿಧ ರೂಪಗಳು ಮತ್ತು ಪ್ರಾಚೀನ ಕವಿ-ಕಾವ್ಯಗಳನ್ನು ಕುರಿತ ಇತರ ವಿಮರ್ಶಾಕೃತಿಗಳು, ಲೇಖನಗಳು ಮುಗಳಿಯವರ ಆಳವಾದ ಪಾಂಡಿತ್ಯ ಮತ್ತು ಸಮನ್ವಯ ಮನೋಧರ್ಮಕ್ಕೆ, ಮುಕ್ತವಿಮರ್ಶೆಗೆ ನಿದರ್ಶನಗಳಾಗಿವೆ.

ಇಂಗ್ಲಿಷಿನಲ್ಲಿ ಇವರು ಬರೆದ ಹೆರಿಟೇಜ್ ಆಫ್ ಕರ್ನಾಟಕ (1946) ಎಂಬ ಗ್ರಂಥ ಕನ್ನಡಿಗರ ಸಾಂಸ್ಕೃತಿಕ ಪರಂಪರೆಯ ಸಮೀಕ್ಷೆಯಾಗಿದೆ.

ಮುಗಳಿಯವರು ಕಾವ್ಯ, ಸಣ್ಣಕಥೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿಯೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರು ಕವಿಯಾಗಿ ರಸಿಕರಂಗ ಎಂಬ ಕಾವ್ಯನಾಮದಿಂದ ಕನ್ನಡಿಗರಿಗೆ ಪರಿಚಿತರಾಗಿದ್ದಾರೆ. ಬಾಸಿಗ, ಅಪಾರ ಕರುಣೆ, ಓಂ ಅಶಾಂತಿಃ ಮುಂತಾದ ಕವನ ಸಂಗ್ರಹಗಳು ಪ್ರಕಟವಾಗಿವೆ. ಹೆಚ್ಚಿನ ಕವನಗಳ ವಸ್ತು ಭಕ್ತಿಭಾವ, ಪ್ರಕೃತಿಸೌಂದರ್ಯ, ರಾಷ್ಟ್ರೀಯತೆ, ಸಂಸಾರ ಇತ್ಯಾದಿ.

ಅನ್ನ, ಬಾಳುರಿ, ಕಾರಣಪುರುಷ–ಇವು ಇವರ ಕಾದಂಬರಿಗಳು. ಅನ್ನ ಎಂಬ ಕಾದಂಬರಿ ಬರಗಾಲದ ಭೀಕರ ಬದುಕನ್ನು ಕುರಿತದ್ದು. ಬಾಳುರಿ ನಿರುದ್ಯೋಗ ಸಮಸ್ಯೆ ಹಾಗೂ ಬದುಕಿನ ಹೋರಾಟವನ್ನು ಚಿತ್ರಿಸುತ್ತದೆ. ಕಾರಣ ಪುರುಷ ಕನ್ನಡ ಸೇವೆಗೆ ಕಂಕಣಬದ್ಧನಾದ ವ್ಯಕ್ತಿಯೊಬ್ಬನ ಜೀವನದ ವಿವರಗಳನ್ನು ನೀಡುತ್ತದೆ. ಮುಗಳಿಯವರ ನಾಟಕಗಳಲ್ಲಿ ಹೆಚ್ಚಿನವು ಸಾಮಾಜಿಕ ವಸ್ತುಗಳನ್ನೊಳಗೊಂಡಿರುವಂಥವು. 'ಎತ್ತಿದ ಕೈ' ಇವರ ಆಯ್ದ ಹತ್ತು ಏಕಾಂಕ ನಾಟಕಗಳನ್ನೊಳಗೊಂಡ ಸಂಕಲನ ಗ್ರಂಥ. ನಾಮಧಾರಿ, ಮನೋರಾಜ್ಯ, ಧನಂಜಯ–ಇವು ದೊಡ್ಡ ನಾಟಕಗಳು. ಈ ನಾಟಕಗಳು ಆ ಕಾಲಕ್ಕೆ ಕನ್ನಡ ನಾಡಿನಲ್ಲಿ ಅಪಾರ ಜನ ಮನ್ನಣೆಗಳಿಸಿದ್ದವು.

ಇವರು ಹೊರನಾಡ ಕನ್ನಡಿಗರ ಸಂಘಟನೆಗಾಗಿಯೂ ಅಪಾರವಾಗಿ ದುಡಿದಿದ್ದಾರೆ. ಕನ್ನಡ ನಾಡಿನ ಹೊರಗಿದ್ದರೂ ಕನ್ನಡನಾಡು ನುಡಿಯ ಏಳ್ಗೆಗಾಗಿ ಅವಿರತ ಶ್ರಮಿಸಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಕನ್ನಡದ ಪ್ರೌಢ ವ್ಯಾಸಂಗಕ್ಕೆ ಸಾಕಷ್ಟು ಅವಕಾಶವಿಲ್ಲದಿದ್ದಂತಹ ಕಾಲದಲ್ಲಿ ಇವರ ಪರಿಶ್ರಮದಿಂದ ಕನ್ನಡ ವಿಭಾಗ ಅಲ್ಪಾವಧಿಯಲ್ಲಿಯೇ ವಿಸ್ತಾರ ಹೊಂದಿದ್ದು ಇವರ ದಕ್ಷತೆಗೆ, ಕನ್ನಡ ನಿಷ್ಠೆಗೆ ಸಾಕ್ಷಿಯಾಗಿದೆ. ಮಹಾರಾಷ್ಟ್ರ ಹಾಗೂ ಕರ್ನಾಟಕದ ಶಿಕ್ಷಣ ರಂಗದಲ್ಲಿ ಕೆಲಸ ಮಾಡುತ್ತಿರುವ ಅನೇಕ ಕನ್ನಡ ಪದವೀಧರರು ಮುಗಳಿಯವರ ಶಿಷ್ಯವೃಂದಕ್ಕೆ ಸೇರಿದವರಾಗಿದ್ದಾರೆ.

ಮುಗಳಿಯವರ ಸಾಹಿತ್ಯಸೇವೆಗಾಗಿ ಅನೇಕ ಸನ್ಮಾನಗಳು ಲಭಿಸಿವೆ. ಜೀವನ ಪತ್ರಿಕೆಯ ಆರಂಭದಲ್ಲಿ ಕೆಲಕಾಲ ಇವರು ಅದರ ಸಂಪಾದಕರಾಗಿದ್ದರು (1940–43). 1941ರಲ್ಲಿ ಹೈದರಾಬಾದಿನಲ್ಲಿ ನಡೆದ 26ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರು ನಾಟಕ ಗೋಷ್ಠಿಯ ಅಧ್ಯಕ್ಷರಾಗಿದ್ದರು. 1955ರಲ್ಲಿ ಮೈಸೂರಿನಲ್ಲಿ ನಡೆದ 37ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಮರ್ಶಾಗೋಷ್ಠಿಯ ಅಧ್ಯಕ್ಷರಾಗಿದ್ದರು ಇವರ ಕನ್ನಡ ಸಾಹಿತ್ಯ ಚರಿತ್ರೆ ಗ್ರಂಥಕ್ಕೆ 1956ರಲ್ಲಿ ಪುಣೆ ವಿಶ್ವವಿದ್ಯಾಲಯದ ಡಿ.ಲಿಟ್.ಪದವಿಯೂ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರವೂ ಲಭಿಸಿದವು. 1963ರಲ್ಲಿ ಸಿದ್ಧಗಂಗಾದಲ್ಲಿ (ತುಮಕೂರು) ನಡೆದ 44ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡುವುದರ ಮೂಲಕ ಕನ್ನಡನಾಡು ತನ್ನ ಕೃತಜ್ಞತೆಗಳನ್ನರ್ಪಿಸಿತು. 1964ರಲ್ಲಿ ಇಂಕ್ಲಾ ಸಂಸ್ಥೆಯ ಪರವಾಗಿ ಫ್ರಿಬುವಿನಲ್ಲಿ ನೆರೆದಿದ್ದ ಜಾಗತಿಕ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಸಮಿತಿಯ ಸದಸ್ಯರೂ ಕನ್ನಡ ವಿಭಾಗದ ಸಂಚಾಲಕರೂ ಬೆಂಗಳೂರು ವಿಶ್ವವಿದ್ಯಾಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಕಾರ್ಯನಿರ್ವಾಹಕ ಸಂಪಾದಕರೂ. ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಯೋಜನೆಗಳಲ್ಲಿ ಮಾರ್ಗದರ್ಶರಾಗಿಯೂ ಕಾರ್ಯ ನಿರ್ವಹಿಸಿದರು. ಇವರು 1993ರಲ್ಲಿ ನಿಧನರಾದರು. **(ವಿ.ಎಸ್.)**

**ಮುಡುಕುತೊರೆ:** ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿರುವ ಒಂದು ಬೆಟ್ಟ, ಯಾತ್ರಾಸ್ಥಳ. ತಲಕಾಡಿಗೆ ಉತ್ತರದಲ್ಲಿ ಸು. 4 ಕಿಮೀ ದೂರದಲ್ಲಿ ಕಾವೇರಿ ನದಿಯ ಎಡದಂಡೆಯ ಮೇಲೆ, ನದಿ ಇದ್ದಕಿದ್ದಂತೆ ತಿರುವು ಪಡೆದುಕೊಳ್ಳುವ ಸ್ಥಳದ ಬಳಿ ಇದೆ. ಬೆಟ್ಟಕ್ಕೆ ಹೊಂದಿಕೊಂಡಂತೆ ಬೆಟ್ಟಹಳ್ಳಿ ಎಂಬ ಗ್ರಾಮವಿದೆ. ಈ ಬೆಟ್ಟಕ್ಕೆ ಸೋಮಗಿರಿ ಎಂಬ ಹೆಸರೂ ಇದೆ. ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯವಿದೆ. ಇಲ್ಲಿನ ಮಲ್ಲಿಕಾರ್ಜುನಲಿಂಗ ತಲಕಾಡಿನ ಪಂಚಲಿಂಗಗಳಲ್ಲೊಂದು. ಈ ದೇವಾಲಯದ ಪ್ರಾಕಾರದಲ್ಲಿ ಸು. 100 ವರ್ಷಕ್ಕೂ

ಮಲ್ಲಿಕಾರ್ಜುನ ದೇವಾಲಯ

ಹಿಂದಿನ ಒಂದು ಮಂಟಪವಿದೆ. ಇದರ ಗೋಡೆಗಳ ಮೇಲೆ ಚಿತ್ರಗಳನ್ನು ಕೆತ್ತಿರುವುದರಿಂದ ಇದನ್ನು ಚಿತ್ರಮಂಟಪ ಎಂದು ಕರೆಯುತ್ತಾರೆ. ಚಿತ್ರಗಳಲ್ಲಿ ಶಿವಪುರಾಣದ ದೃಶ್ಯಾವಳಿಗಳನ್ನು ಕೆತ್ತಲಾಗಿದೆ. ಪಟ್ಟಿಕೆಗಳ ಮೇಲೆ ಪ್ರತಿ ಚಿತ್ರದ ಹೆಸರಿನೊಂದಿಗೆ ಒಂದೊಂದು ದೃಶ್ಯವನ್ನೂ ವಿವರಿಸುವ ಕನ್ನಡ ಬರೆಹವಿದೆ. ಬೆಟ್ಟದ ಮೇಲಿನಿಂದ ನೋಡಿದಾಗ ವಿಸ್ತಾರವಾದ ಬಯಲು ಮತ್ತು ಗುಡ್ಡಗಳು ಹಾಗೂ ಕಾವೇರಿ ನದಿಯ ಅಂಕುಡೊಂಕು ದೃಶ್ಯ ಮನಸೂರೆಗೊಳ್ಳುತ್ತದೆ. ಇಲ್ಲಿನ ಕಾವೇರಿಯ ಆಚೆಯ ದಡದಲ್ಲಿ ಖಾಸಗಿ ಪ್ರವಾಸಿ ತಾಣಗಳನ್ನು ನಿರ್ಮಿಸಲಾಗಿದೆ. ಅಲ್ಲಿಗೆ ಹೋಗಲು ಸ್ಟೀಮರ್ ಸೌಲಭ್ಯವಿದೆ.

ಬೆಟ್ಟದ ಮೇಲೆ ಪ್ರತಿವರ್ಷ ಜನವರಿ–ಫೆಬ್ರವರಿ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಸು.10,000ಕ್ಕೂ ಹೆಚ್ಚು ಜನ ಪಾಲ್ಗೊಳ್ಳುವರು. ಈ ಸಂದರ್ಭದಲ್ಲಿ ತಲಕಾಡಿನ ವೈದ್ಯೇಶ್ವರ ದೇವಾಲಯದ ತಾಂಡವೇಶ್ವರ ಪ್ರತಿಮೆಯನ್ನು ಇಲ್ಲಿಗೆ ತಂದಿಡಲಾಗುತ್ತದೆ. ಜಾತ್ರೆಯ ಕೊನೆಯ ದಿನ ಮನರಂಜನೆಗಾಗಿ ಗೂಳಿಓಟ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಅಂದು ಒಳ್ಳೆಯ ತಳಿಯ ಗೂಳಿಗಳು ಎಲ್ಲ ಕಡೆಗಳಿಂದ ಬಂದು ಸ್ಪರ್ಧೆಯಲ್ಲಿ ಭಾಗವಹಿಸುತ್ತವೆ. ಗೆದ್ದ ಗೂಳಿಯ ಯಜಮಾನನು ಬಹುಮಾನವಾಗಿ ದೇವರ ಎದುರಿನಲ್ಲಿ ಅರ್ಚಕನಿಂದ ಹೂಮಾಲೆ ಪಡೆಯುತ್ತಾನೆ. ಜೊತೆಗೆ ಆತನಿಗೆ ಕರ್ನೂಲ ಜಿಲ್ಲೆಯ ಶ್ರೀ ಪರ್ವತದ ಯಾತ್ರೆ ಮಾಡುವ ಉಚಿತ ಸೌಲಭ್ಯವೂ ದೊರೆಯುತ್ತದೆ. ಜಾತ್ರೆಗೆ ಬರುವ ಯಾತ್ರಿಕರ ವಸತಿಸೌಕರ್ಯಕ್ಕಾಗಿ ಇಲ್ಲಿ ಅನೇಕ ಮಂಟಪಗಳಿವೆ.

12 ವರ್ಷಗಳಿಗೊಮ್ಮೆ ನಡೆಯುವ ತಲಕಾಡಿನ ಪಂಚಲಿಂಗದರ್ಶನ ಜಾತ್ರೆ ಹೆಚ್ಚು ಪ್ರಸಿದ್ಧವಾಗಿದ್ದು ಅಂದು ಮಲ್ಲಿಕಾರ್ಜುನಲಿಂಗದ ಪೂಜೆಯೂ ಬಹು ವೈಭವದಿಂದ ನಡೆಯುತ್ತದೆ. **(ಕೆ.)**

**ಮುತ್ತೋಡಿ**: ಚಿಕ್ಕಮಗಳೂರು ಜಿಲ್ಲೆಯ ಅದೇ ತಾಲ್ಲೂಕಿನಲ್ಲಿರುವ ಒಂದು ಅರಣ್ಯಧಾಮ. ಚಿಕ್ಕಮಗಳೂರಿನಿಂದ ನೈಋತ್ಯಕ್ಕೆ ಸು. 30ಕಿಮೀ ದೂರದಲ್ಲಿರುವ ಭದ್ರಾ ಅಭಯಾರಣ್ಯಕ್ಕೆ ಸೇರಿದೆ (1974). ಶಿವಮೊಗ್ಗ ಜಿಲ್ಲೆಯ ಲಕ್ಕವಳ್ಳಿಯಿಂದ 33ಕಿಮೀ ದೂರದಲ್ಲಿದೆ.

ಪಶ್ಚಿಮಘಟ್ಟ ಶ್ರೇಣಿಗಳ ತಪ್ಪಲಿನಲ್ಲಿ ತಟ್ಟೆಯಾಕಾರದಲ್ಲಿ ಹರಡಿಕೊಂಡಿರುವ ಈ ಅಭಯಾರಣ್ಯದ ಸುತ್ತ ಮುಳ್ಳಯ್ಯನಗಿರಿ **(ನೋಡಿ)**, ಬಾಬಾ ಬುಡನ್ ಗಿರಿ **(ನೋಡಿ)**, ಹೆಬ್ಬೆಗಿರಿ, ಗಂಗೇಗಿರಿ ಪರ್ವತ ಸಾಲುಗಳು ಇವೆ. ಭದ್ರಾನದಿಯ ಪಾತ್ರದಲ್ಲೇ ಬರುವ ಮುತ್ತೋಡಿಯಲ್ಲಿ ತಡಬೆಹಳ್ಳ, ಸೋಮವಾಹಿನಿ, ವಾಟೆಹಳ್ಳ, ಹೆಬ್ಬೆಹಳ್ಳಗಳು ಹರಿಯುತ್ತವೆ. ಈ ಅರಣ್ಯ ಭಾಗ 1998 ನವಂಬರ್ 19ರಂದು ಹುಲಿ ಸಂರಕ್ಷಣಾ ಯೋಜನೆಗೆ ಸೇರ್ಪಡೆಗೊಂಡಿತು. ಇಲ್ಲಿ ಹುಲಿ, ಚಿರತೆ, ಕಾಡುಬೆಕ್ಕು, ಕರಡಿ, ಕಾಟಿ, ಸೀಳುನಾಯಿ, ಸಿಂಗಳೀಕ, ನರಿ, ಅಪಾರ ಸಂಖ್ಯೆಯ ಜಿಂಕೆ, ಸಾಂಬಾರ್, ಕಾಡುಹಂದಿ, ಕಾಡುಕುರಿ, ಕಾಡುಪಾಪ, ಹಾರುವ ಓತಿ, ಹಾರುವ ಕೆಂಜಳಿಲು, ಚಿಪ್ಪಿನ ಆಮೆ, ಮುಳ್ಳುಹಂದಿ, ಸಾಮಾನ್ಯ ನೀರುನಾಯಿ ಮೊದಲಾದ ಪ್ರಾಣಿವರ್ಗ ಕಂಡುಬರುತ್ತದೆ. ಹೊನ್ನೆ, ಮತ್ತಿ, ನಂದಿ, ಬೀಟೆ, ತೇಗ, ತಾರೆ, ಅಳಲೆ, ನೆಲ್ಲಿ ಮೊದಲಾದ ಮರಗಳಿಂದ ಸಮೃದ್ಧವಾಗಿದೆ. ಬೃಹತ್ ಗಾತ್ರದ ಸು. 5.2 ಮೀ ಸುತ್ತಳತೆಯ ಸು. 300 ವರ್ಷಗಳಷ್ಟು ಹಳೆಯದಾದ ತೇಗದ ಮರ ಇಲ್ಲಿನ ಪ್ರಮುಖ ಆಕರ್ಷಣೆ.

ಇಲ್ಲಿನ ಕಣಿವೆಗಳಲ್ಲಿರುವ ಮರಗಳು ಎತ್ತರವಾಗಿ ಬೆಳೆದು ಸೂರ್ಯನಿಗೆ ತೆರೆದುಕೊಂಡಿರುವ ದೃಶ್ಯ ರುದ್ರರಮಣೀಯವಾಗಿ ಕಾಣುತ್ತದೆ. ಈ ಸ್ಥಳ ಅಂತಾರಾಷ್ಟ್ರೀಯ ಖ್ಯಾತಿಯ ಪಕ್ಷಿ ತಜ್ಞ ಸಲೀಂ ಅಲಿ ಅವರಿಂದ 'ಪಕ್ಷಿಗಳ ಸ್ವರ್ಗ' ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಇಲ್ಲಿ 250ಕ್ಕೂ ಹೆಚ್ಚಿನ ಪಕ್ಷಿಪ್ರಭೇದಗಳನ್ನು ವೀಕ್ಷಿಸಬಹುದಾಗಿದೆ.

ಉರಗಗಳಿಗೂ ಪ್ರಸಿದ್ಧವಾದ ಈ ಅಭಯಾರಣ್ಯದಲ್ಲಿ ನಾಗರಹಾವು, ಮಂಡಲಹಾವು, ಕಟ್ಟುಹಾವು, ಹೆಬ್ಬಾವು ಇವೆ. ಜೌಗು ಪ್ರದೇಶದಲ್ಲಿ ಮೊಸಳೆ, ಮ್ಯಾನೀಟರ್ ಓತಿ, ಹಾರುವ ಓತಿಗಳು ಕಂಡುಬರುತ್ತವೆ. ಇಲ್ಲಿರುವ ಅನೇಕ ಹಡ್ಲುಗಳು (ಬೇಸಗೆಯಲ್ಲಿ ಪ್ರಾಣಿಗಳಿಗೆ ನೀರು ಹಾಗೂ ಆಹಾರವನ್ನು ಒದಗಿಸುವ ಜೌಗುತಾಣ) ಪ್ರಾಣಿ ವೀಕ್ಷಣೆಗೆ ಅತ್ಯಂತ ಸೂಕ್ತ ತಾಣಗಳಾಗಿವೆ. ಚಂದ್ರನ ಹಡ್ಲು, ದೊಡ್ಡಬಯಲು ಹಡ್ಲು ಹೆಸರಿಸಬಹುದಾದ ಬೃಹತ್ ಹಡ್ಲುಗಳು. ಅಭಯಾರಣ್ಯ ವೀಕ್ಷಣೆಗೆ ಅಕ್ಟೋಬರ್‌ನಿಂದ ಫೆಬ್ರವರಿ ಉತ್ತಮ ಕಾಲ. ತಂಗಲು ಅನೇಕ ಪ್ರವಾಸಿ ಗೃಹಗಳಿವೆ. ಮುತ್ತೋಡಿ ಜಾಗರ ಕಣಿವೆಯಲ್ಲಿದ್ದು ಮುತ್ತಿನಪುರ ಮಠದ ಪ್ರಭಾವದಿಂದ ಮುತ್ತೋಡು ಎಂಬುದು ಜನರ ಬಾಯಲ್ಲಿ ಮುತ್ತೋಡಿಯಾಗಿ ಪ್ರಚಲಿತವಾಗಿದೆ ಎಂದು ಹೇಳಲಾಗುತ್ತದೆ.

ಪರಿಸರದ ಬದಲಾವಣೆಯಿಂದಾಗಿ, ಅಕ್ರಮ ಶಿಕಾರಿಯಿಂದಾಗಿ ಕ್ಷೀಣಿಸುತ್ತಿರುವ ಜೀವಸಂಕುಲ ಆಗಾಗ ಬೇಸಗೆಯಲ್ಲಿ ಘಟಿಸುವ ಅಗ್ನಿ ಅನಾಹುತಗಳಿಂದಲೂ ಕ್ಷೀಣಿಸುತ್ತಿದೆ. **(ಎಸ್.ಜಿ.ಎಸ್.)**

**ಮುದ್ಗಲ್ಲು:** ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿರುವ ಒಂದು ಪಟ್ಟಣ. ಇತಿಹಾಸಪ್ರಸಿದ್ಧ ಸ್ಥಳ. ಲಿಂಗಸುಗೂರಿನ ನೈಋತ್ಯಕ್ಕೆ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 19,116.

ಮುದ್ಗಲ್ಲು ಅಥವಾ ಮುದುಗಲ್ ಯಾದವರ ಕಾಲದಿಂದಲೂ ಪ್ರಸಿದ್ಧಿಯಾಗಿದ್ದು ಆ ಕಾಲದ ಅನೇಕ ಶಿಲಾಶಾಸನಗಳು ಇಲ್ಲಿ ದೊರೆತಿವೆ. 14ನೆಯ ಶತಮಾನದ ಮೊದಲ ಭಾಗದಲ್ಲಿ ಈ ಊರು ಕಾಕತೀಯ ರಾಜ್ಯದ ಗಡಿಯ ಉಕ್ಕಡವಾಗಿದ್ದಿತು. ಮಲಿಕ್ ನಾಯಿಬನು ದೇವಗಿರಿಯನ್ನು ಆಕ್ರಮಿಸಿದ ಅನಂತರ ರಾಯಚೂರಿನ ಜೊತೆಗೆ ಮುದ್ಗಲ್ಲನ್ನೂ ವಶಪಡಿಸಿಕೊಂಡ. ಬಹಮನೀ ರಾಜ್ಯ ಸ್ಥಾಪನೆಯಾದ ಅನಂತರ ಮುದ್ಗಲ್ಲು ವಿಜಯನಗರ ರಾಜ್ಯಕ್ಕೂ ಬಹಮನೀ ರಾಜ್ಯಕ್ಕೂ ನಡೆದ ಅನೇಕ ಯುದ್ಧಗಳ ನೆಲೆಯಾಗಿದ್ದಿತು. ಈ ಸ್ಥಳ ಅವರಲ್ಲಿ ಆಗಾಗ್ಗೆ ಕೈಬದಲಾಯಿಸುತ್ತಿತ್ತು. ಬಹಮನೀ ರಾಜ್ಯ ಪತನಾನಂತರ ಬಿಜಾಪುರದ ಆದಿಲ್‌ಶಾಹಿಗಳು ಈ ಊರನ್ನು ತಮ್ಮದನ್ನಾಗಿ ಮಾಡಿಕೊಂಡರು.

ಮುದ್ಗಲ್ಲಿನ ಕೋಟೆ ಆಯಕಟ್ಟಿನ ಸ್ಥಳದಲ್ಲಿ ಭದ್ರವಾಗಿ ಕಟ್ಟಿರುವ ಕೋಟೆಗಳಲ್ಲೊಂದು. ಇದೇ ಇಲ್ಲಿನ ಪ್ರಧಾನ ಆಕರ್ಷಣೆ. ಕೋಟೆಯನ್ನು ಕಟ್ಟುವುದರಲ್ಲಿ ಅಲ್ಲಿಯ ಗುಡ್ಡವನ್ನು ಅತ್ಯಂತ ಸಮರ್ಥವಾದ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ. ಗುಡ್ಡದ ಮೇಲೆ ಅರಮನೆಗಳನ್ನು ಕಟ್ಟಿದ್ದು ಅವುಗಳ ಸುತ್ತಲೂ ಬುರುಜು ಅಥವಾ ಕೊತ್ತಲಗಳೊಡನೆ ದೊಡ್ಡದಾದ ಗೋಡೆಗಳನ್ನು ನಿರ್ಮಿಸಲಾಗಿದೆ. ಮುದ್ಗಲ್ಲಿನ ಹೊರಕೋಟೆ ಸುಮಾರು ಅರ್ಧ ಚದರ ಮೈಲಿಯಷ್ಟು ಪ್ರದೇಶಗಳನ್ನು ಆಕ್ರಮಿಸಿಕೊಂಡಿದೆ. ಕೋಟೆಯ ಸುತ್ತಲೂ ಇರುವ ಕಂದಕ ಕೆಲವು ಕಡೆ 50 ಗಜಗಳಷ್ಟು ಅಗಲವಾಗಿದೆ. ಈ ಅಗಳಿನ ಹಿಂಭಾಗದಲ್ಲಿ ಸುತ್ತಲೂ ಒಂದು ಮೋಟು ಗೋಡೆ ಕೊತ್ತಲುಗಳ ಸಾಲು ಇದೆ. ಅದರಿಂದ ಮುಂದೆ ಇಕ್ಕಟ್ಟಾದ ಪ್ರದೇಶವಿದ್ದು ಅದಕ್ಕೆ ಸೇರಿದಂತೆ ಇರುವ ಮತ್ತೊಂದು ಮೋಟುಗೋಡೆಯು ದೊಡ್ಡದಾದ ಬುರುಜುಗಳಿಂದ ಆವೃತವಾಗಿದೆ. ಅನೇಕ ಕಡೆ ಕಲ್ಲುಕಟ್ಟಡದ ರಚನೆ ಹಿಂದು ಶೈಲಿಯಲ್ಲಿದ್ದು, ಕೈಪಿಡಿ ಗೋಡೆಯನ್ನು ಕಮಾನಿನಾಕಾರದಲ್ಲಿ ಮುಸ್ಲಿಂ ಸಂಪ್ರದಾಯಾನುಸಾರವಾಗಿ ಕಟ್ಟಲಾಗಿದೆ. ಅಗಳುಗಳು ಹಾಗೂ ಕೊತ್ತಲಗಳು ಸುಂದರವಾಗಿ ಕಾಣಿಸುತ್ತವೆ. ಕೋಟೆಯ ಫತೇ ದರ್ವಾಜದ (ಮಹಾದ್ವಾರ) ಮುಂಭಾಗದಲ್ಲಿ ಉತ್ತರಾಭಿಮುಖವಾಗಿ ಒಂದು ದೊಡ್ಡ ಬುರುಜು ಇದೆ. ಇದರ ಇಕ್ಕೆಲಗಳಲ್ಲಿಯೂ ರಕ್ಷಣಾ ಗೋಪುರಗಳಿವೆ. ಇವುಗಳ ಸಮೀಪದಲ್ಲೇ ರಕ್ಷಣಾದಳದ ಕೊಠಡಿಗಳಿವೆ. ಇವುಗಳ ಪ್ರವೇಶದ್ವಾರಗಳು ಕಮಾನಿನಾಕಾರದಲ್ಲಿವೆ. ರಕ್ಷಣಾಗೋಪುರಗಳು ಅಂಗಗಳನ್ನು ಹೊಂದಿದ್ದು ಪಶ್ಚಿಮ ಹಾಗೂ ವಾಯವ್ಯ ಮುಖವಾಗಿ ಪ್ರವೇಶ ದ್ವಾರಗಳನ್ನು ಹೊಂದಿವೆ. ದೊಡ್ಡ ಬುರುಜಿನ ಮೇಲೆ ಒಂದು ಫಿರಂಗಿ ಇದೆ. ಅದರ ಕೊನೆಯಲ್ಲಿ ಒಂದು ಶಾಸನವನ್ನು ಕನ್ನಡದಲ್ಲಿ ಕೆತ್ತಲಾಗಿದೆ. ಕೋಟೆಯ ಪಶ್ಚಿಮ ಭಾಗದಲ್ಲಿ ಕಿರಿದಾದ ಪ್ರದೇಶದ ಹಿಂಭಾಗದಲ್ಲಿ ಮತ್ತೊಂದು ಹೆಬ್ಬಾಗಿಲು ಇದೆ. ಈ ಪ್ರದೇಶದ ಎರಡು ಕಡೆಗಳಲ್ಲಿಯೂ ರಕ್ಷಕಭಟರ ಕೊಠಡಿಗಳಿವೆ. ಈ ಎರಡನೆಯ ಹೆಬ್ಬಾಗಿಲಿನ ಎಡಗಡೆಯಲ್ಲಿ ಇನ್ನಷ್ಟು ಮಜಬೂತಾಗಿ ಮಾಡಿರುವ ಮತ್ತೊಂದು ಹೆಬ್ಬಾಗಿಲು ಇದೆ. ಇದು ಕಮಾನಿನಾಕಾರದಲ್ಲಿದೆ. ಇದರ ನಡುವೆಗೆ ಹೊಂದಿಕೊಂಡಿರುವ ರಕ್ಷಕಭಟರ ಕೊಠಡಿಗಳು ಕೂಡ ವಿಶಾಲವಾಗಿವೆ. ಈ ಹೆಬ್ಬಾಗಿಲಿನ ಬಳಿ ಒಂದು ಮಸೀದಿ ಇದೆ. ಇದರ ಒಳಾಂಗಣ ಹಿಂದು ಶೈಲಿಯಲ್ಲಿರುವ ಕಂಬಗಳಿಂದ ನಿರ್ಮಿತವಾಗಿದೆ. ಮುಂದುಗಡೆ ಸೌಬತ್‌ಖಾನೆಯ ಅವಶೇಷಗಳಿವೆ. ಬಾಲಾಹಿಸಾರ್ (ಒಳದುರ್ಗ)ಗುಡ್ಡದ ತುದಿಯಲ್ಲಿ ಇದೆ. ಅದಕ್ಕೆ ಹೋಗುವ ದಾರಿಯಲ್ಲಿ ಫಿರಂಗಿ ಮದ್ದಿನ ಉಗ್ರಾಣವಿದೆ. ಬಾಲಾಹಿಸಾರ್‌ನಿಂದ ಕೋಟೆಯ ಒಳ ಹಾಗೂ ಹೊರಭಾಗಗಳ ಪೂರ್ಣನೋಟ ದೊರೆಯುತ್ತದೆ. ಈ ದುರ್ಗದ ಬಂಡೆಗಳಲ್ಲಿ ಸ್ವಾಭಾವಿಕ ಗುಂಡಿಗಳಿದ್ದು ಅವುಗಳಲ್ಲಿ ನೀರನ್ನು ಶೇಖರಿಸಲಾಗುತ್ತಿತ್ತು. ಬಾಲಾಹಿಸಾರ್ ರಕ್ಷಣೆಗಾಗಿ ಅನೇಕ ಕಡೆಗಳಲ್ಲಿ ಗೊತ್ತಾದ ಸ್ಥಳಗಳಲ್ಲಿ ಬುರುಜುಗಳು ಹಾಗೂ ಗೋಡೆಗಳನ್ನು ಕಟ್ಟಲಾಗಿದೆ. ಮಧ್ಯಭಾಗದಲ್ಲಿ ಗೋಳಾಕಾರದ ಒಂದು ದೊಡ್ಡ ಬುರುಜು ಇದೆ. ಇದರ ಸಮೀಪದಲ್ಲಿ ಪ್ರಕೃತಿದತ್ತವಾದ ಕೆಲವು ಗವಿಗಳಿವೆ. ಆಗ್ನೇಯದಲ್ಲಿ ಬೆಟ್ಟಗಳ ಸಾಲಿದ್ದು ಕೋಟೆ ಸುರಕ್ಷಿತವಾಗಿದೆ. ಕೋಟೆಯ ಪಶ್ಚಿಮ ಭಾಗದಲ್ಲಿ ಹಿಕ್ರಾನಿ ಬಾವಡಿ ಎಂಬ ದೊಡ್ಡ ಕೊಳ (ಸು. 140 x 50 ಗಜ) ಇದೆ. ಬಾಲಾಹಿಸಾರ್‌ನ ಮೊದಲನೆಯ ಮಹಾದ್ವಾರವನ್ನು ಕಮಾನಿನಾಕಾರದಲ್ಲಿ ಅತ್ಯಂತ ಎತ್ತರವಾಗಿ ಸ್ಥೂಲವಾಗಿ ರಚಿಸಲಾಗಿದೆ. ಎರಡನೆಯ ಹೆಬ್ಬಾಗಿಲನ್ನು ಮಿಶ್ರಶೈಲಿಯಲ್ಲಿ ಕಟ್ಟಲಾಗಿದೆ ಹಾಗೂ ರಕ್ಷಕ ಕೊಠಡಿಗಳು ಕಮಾನಿನಾಕಾರದಲ್ಲಿವೆ. ಇವುಗಳ ತಳಪಾಯ, ಕಂಬ ಹಾಗೂ ಭುವನೇಶ್ವರಿಗಳು ವಿಪುಲವಾಗಿ ಶಿಲ್ಪಗಳಿಂದ ಅಲಂಕೃತವಾಗಿವೆ. ಮೂರನೆಯ (ಹೊರಗಡೆ ಇರುವ) ಹೆಬ್ಬಾಗಿಲು ಕಂಬ ಮತ್ತು

ಹಾಸುಗಲ್ಲು ರೀತಿಯ ಶೈಲಿಯಲ್ಲಿ ಕಟ್ಟಲಾಗಿದ್ದು ಇದರ ಬಾಗಿಲುಗಳ ಮೇಲೆ ಕಬ್ಬಿಣದ ಗುಬ್ಬಿಮೊಳೆಗಳನ್ನು ಅಳವಡಿಸಲಾಗಿದೆ. ಮುಳ್ಳಿನಂತಿರುವ ಗುಬ್ಬಿಮೊಳೆಗಳಿರುವುದರಿಂದ ಈ ಬಾಗಿಲನ್ನು ಕಟಿ ದರ್ವಾಜ ಎಂದು ಕರೆಯುತ್ತಾರೆ. ಬಾಗಿಲು ಹಲಗೆಗಳ ಮೇಲೆ ಪ್ರಾಣಿ ಹಾಗೂ ದೇವತೆಗಳ ಉಬ್ಬುಶಿಲ್ಪಗಳಿವೆ. ಕೋಟೆಯ ಬಾಹ್ಯ ಭಿತ್ತಿಯ ಮೇಲೆ ಸರ್ಪವನ್ನು ಹಿಡಿದಿರುವ ದೇವತಾಮೂರ್ತಿಯೊಂದನ್ನು ಬಿಡಿಸಲಾಗಿದೆ. ಹನುಮಂತನ ಮೂರ್ತಿಯನ್ನು ಮತ್ತೊಂದೆಡೆ ಕೆತ್ತಲಾಗಿದೆ. ಕಂದಕದ ಮೇಲೆ ಇಕ್ಕಟ್ಟಾದ ಸೇತುವೆಯೊಂದನ್ನು ನಿರ್ಮಿಸಲಾಗಿದೆ.

ಬಿಜಾಪುರದ ಆದಿಲ್ ಶಾಹೀ ಮನೆತನಕ್ಕೆ ಸೇರಿದ ಏಳು ಶಾಸನಗಳು, 15 ಕನ್ನಡ ಶಾಸನಗಳು, ದೇವನಾಗರಿ ಲಿಪಿಯ ಇತ್ತೀಚಿನ ಎಂಟು ಶಾಸನಗಳು ಈ ಕೋಟೆಯಲ್ಲಿವೆ. ಇಲ್ಲಿ 1557ಕ್ಕೆ ಮುಂಚೆ ಇಬ್ರಾಹೀಂ ಆದಿಲ್ ಷಾನ ಕಾಲದಲ್ಲಿ ಜೆಸ್ವಿಟರಿಂದ ನಿರ್ಮಿತವಾದ ಒಂದು ರೋಮನ್ ಕೆಥೋಲಿಕ್ ಇಗರ್ಜಿ ಇತ್ತು. ಇದರ ನಿರ್ವಹಣೆಗಾಗಿ ಆದಿಲ್ ಷಾ ಇನಾಂ ಭೂಮಿಗಳನ್ನು ಕೊಟ್ಟಿದ್ದ. ಹಳೆಯ ಇಗರ್ಜಿಯನ್ನು ಕೆಡವಿ, ಅದೇ ಜಾಗದಲ್ಲಿ ಹೊಸ ಇಗರ್ಜಿಯನ್ನು ಕಟ್ಟಲಾಗಿದೆ.

ಮುದ್ಗಲ್ಲಿಗೆ ಸಂಬಂಧಿಸಿದಂತೆ ಒಂದು ಘಟನೆ ಜನಜನಿತವಾಗಿದೆ. ಮುದ್ಗಲ್ಲಿನಲ್ಲಿದ್ದ ಒಬ್ಬ ಅಕ್ಕಸಾಲಿಗನ ಮಗಳು ಅನುಪಮ ಸುಂದರಿಯೆಂದು ಪ್ರಸಿದ್ಧಳಾಗಿದ್ದಳು. ವಿಜಯನಗರದ ಒಂದನೆಯ ದೇವರಾಯ (1406–22) ಅವಳನ್ನು ಪಡೆಯಲು ಹವಣಿಸಿದ. ಆದರೆ ತನ್ನ ಪ್ರಯತ್ನದಲ್ಲಿ ವಿಫಲನಾಗಿದ್ದರಿಂದ ಮುದ್ಗಲ್ಲಿಗೆ ದೊಡ್ಡ ಸೈನ್ಯವನ್ನು ಕಳುಹಿಸಿದ. ಆಗ ಮುದ್ಗಲ್ಲು ಪ್ರದೇಶ ಬಹಮನೀ ಅರಸ ಫಿರೋಜ್ ಷಾಗೆ ಸೇರಿತ್ತು. ದೇವರಾಯನ ಕೃತ್ಯದಿಂದ ಕೆರಳಿದ ಫಿರೋಜ್ ವಿಜಯನಗರ ರಾಜ್ಯದ ಮೇಲೆ ದಾಳಿಯಿಟ್ಟು ವಿಜಯನಗರವನ್ನು ಮುತ್ತಿದ. ಮೊದಲು ಫಿರೋಜ್ ಈ ಪ್ರಯತ್ನದಲ್ಲಿ ವಿಫಲಗೊಂಡು ಸೋಲನ್ನು ಅನುಭವಿಸಬೇಕಾಯಿತಾದರೂ ತನ್ನ ಸೈನ್ಯಾಧಿಕಾರಿಗಳನ್ನು ವಿವಿಧ ದಿಕ್ಕುಗಳಲ್ಲಿ ಕಳುಹಿಸಿ ದೇಶವನ್ನು ಕೊಳ್ಳೆಹೊಡೆಯಲು ಆಜ್ಞಾಪಿಸಿದ. ಕೊನೆಗೆ ಫಿರೋಜ್ ಒಡ್ಡಿದ ಷರತ್ತುಗಳಿಗೆ ದೇವರಾಯ ಒಪ್ಪಿಕೊಂಡು ರಾಜಿ ಮಾಡಿಕೊಳ್ಳಬೇಕಾಯಿತು. ಇದರೊಂದಿಗೆ ಅಪಾರವಾದ ಹಣ, ಅಮೂಲ್ಯ ಮುತ್ತುಗಳನ್ನು ಹಾಗೂ ಐವತ್ತು ಆನೆಗಳನ್ನು ಫಿರೋಜ್‌ಗೆ ವರದಕ್ಷಿಣೆ ರೂಪದಲ್ಲಿ ಕೊಡಲಾಯಿತು. ಅನಂತರ ಮದುವೆಯನ್ನು ಅತ್ಯಂತ ವೈಭವದಿಂದ ನೆರವೇರಿಸಲಾಯಿತು. ಆದರೆ ಮದುವೆಯ ಅನಂತರ ಅಳಿಯ ಫೀರೋಜ್ ಊರಿಗೆ ತೆರಳುವಾಗ ದೇವರಾಯ ಸಾಕಷ್ಟು ದೂರ ಅವನೊಂದಿಗೆ ಹೋಗಿ ಬೀಳ್ಕೊಡಲಿಲ್ಲವೆಂಬ ಕಾರಣದಿಂದ ಫಿರೋಜ್ ಕೋಪಗೊಂಡ. ಇಷ್ಟೆಲ್ಲ ಘರ್ಷಣೆಗೆ ಕಾರಣಳಾದ ಮುದ್ಗಲ್ಲಿನ ಆ ಸುಂದರ ಯುವತಿಯನ್ನು ಕೊನೆಗೆ ಫಿರೋಜ್ ತನ್ನ ಮಗನಾದ ಹಸನ್‌ಖಾನ್‌ಗೆ ಮದುವೆ ಮಾಡಿಸಿದ. **(ಎಸ್.ವಿ.ಎಸ್.ಬಿ.)**

**ಮುದ್ದಣ (ನಂದಳಿಕೆ ಲಕ್ಷ್ಮೀನಾರಾಯಣಯ್ಯ):** 1870–1901. ಹೊಸಗನ್ನಡ ಕಾವ್ಯಕ್ಕೆ ನಾಂದಿ ಹಾಡಿದ ಕವಿ. ರಾಮಾಶ್ವಮೇಧಂ ಎಂಬ ಪ್ರಸಿದ್ಧ ಕಾವ್ಯದ ಕರ್ತೃ. ಕಾರ್ಕಳ ತಾಲ್ಲೂಕಿನ ನಂದಳಿಕೆ ಗ್ರಾಮದಲ್ಲಿ 1870 ಜನವರಿ 24ರಂದು ಜನಿಸಿದರು. ಇವರ ತಂದೆ ಪಾಟಾಳಿ ತಿಮ್ಮಯ್ಯ, ತಾಯಿ ಲಕ್ಷ್ಮಮ್ಮ. ರಾಮಪ್ಪ ಮತ್ತು ಲಿಂಗಣ್ಣಯ್ಯ ಚಿಕ್ಕಪ್ಪಂದಿರು. ಶಿವರಾಮಯ್ಯ ಎಂಬುವರು ಇವರ ತಮ್ಮ. ಮಳಲಿ ಸುಬ್ಬರಾಯರು ಇವರ ಗುರು. ಮುದ್ದಣನವರ ಹುಟ್ಟು ಹೆಸರು ಲಕ್ಷ್ಮೀನಾರಾಯಣಯ್ಯ. ಹೆತ್ತವರು ಮುದ್ದಿನಿಂದ ಮುದ್ದಣ್ಣ ಎಂದು ಕರೆಯುತ್ತಿದ್ದರು. ಬಾಲ್ಯದಲ್ಲಿ ಇವರು ನಂದಳಿಕೆಯಲ್ಲಿಯೇ ಶಿಕ್ಷಣ ಪಡೆದು ಅನಂತರ ಟ್ರೈನಿಂಗ್ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಬಡತನದಿಂದಾಗಿ ಆಂಗ್ಲ ವಿದ್ಯಾಭ್ಯಾಸವನ್ನು ಮುಂದುವರೆಸಲಾಗದೆ, ಮದರಾಸಿನಲ್ಲಿ ವ್ಯಾಯಾಮ ಶಿಕ್ಷಣ ಪಡೆದು ಮರಳಿದ ಅನಂತರ ಉಡುಪಿಯ ಬೋರ್ಡುಶಾಲೆಯಲ್ಲಿ ಅಂಗಸಾಧನೆಯ ಶಿಕ್ಷಕರಾಗಿ ನೇಮಕಗೊಂಡರು (1889 ಮೇ 16). ಆಗ ಇವರಿಗೆ ತಿಂಗಳಿಗೆ ಹತ್ತು ರೂಪಾಯಿ ಸಂಬಳ ಬರುತ್ತಿತ್ತು. ಮೂರು ವರ್ಷಗಳ ಅನಂತರ (1892) ಉಡುಪಿಯಿಂದ ಕುಂದಾಪುರಕ್ಕೆ ವರ್ಗವಾಯಿತು. ಆಗ ಇವರಿಗೆ 15 ರೂಪಾಯಿ ಸಂಬಳ ಬರುತ್ತಿತ್ತು. ಈ ಹೊತ್ತಿಗಾಗಲೇ ಇವರಿಗೆ ಶಿವಮೊಗ್ಗ ಜಿಲ್ಲೆಯ ಕಾಗೇಕೋಡಮಗ್ಗಿ ಗ್ರಾಮದ ನಾರಣಪ್ಪಯ್ಯ ಅವರ ಮಗಳು ಕಮಲಾಬಾಯಿ ಎಂಬುವರೊಂದಿಗೆ ಮದುವೆಯಾಗಿದ್ದು ರಾಧಾಕೃಷ್ಣ ಎಂಬ ಮಗನೂ ಇದ್ದ. ಮುಂದೆ ಮುದ್ದಣನವರಿಗೆ ಉಡುಪಿಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರ ಉದ್ಯೋಗ ದೊರೆಯಿತು. ಆಗ ಇವರಿಗೆ ದೊರೆಯುತ್ತಿದ್ದ ತಿಂಗಳ ಸಂಬಳ ಇಪ್ಪತ್ತು ರೂಪಾಯಿ. ಇಷ್ಟು ಹಣದಲ್ಲಿ ಮುದ್ದಣನವರು ತಮ್ಮ ಸಂಸಾರ ನಿಭಾಯಿಸಬೇಕಾಗಿದ್ದು ಬಡತನದಲ್ಲಿ ತುಂಬ ಬಳಲಿದರು. ಸ್ವಲ್ಪಕಾಲ ಕಳೆದ ಅನಂತರ ಕ್ಷಯ ರೋಗಕ್ಕೆ ತುತ್ತಾದರು. ಈ ವ್ಯಾಧಿ ಉಲ್ಬಣಗೊಂಡು 1901 ಫೆಬ್ರವರಿ 15ರಂದು ಕೊನೆಯುಸಿರೆಳೆದರು. ಆಗ ಇವರಿಗೆ ಕೇವಲ 31 ವರ್ಷ.

ಅತ್ಯಂತ ತೀಕ್ಷ್ಣಮತಿಯೂ ಏಕಪಾಠಿಯೂ ಎನಿಸಿದ್ದ ಮುದ್ದಣ ಬಿಡುವಿದ್ದಾಗಲೆಲ್ಲ ಸ್ವತಂತ್ರವಾಗಿಯೂ ಮಳಲಿ ಸುಬ್ಬರಾಯರಂಥ ಬಲ್ಲವರ ನೆರವಿನಿಂದಲೂ ಕಿಟ್ಟೆಲ್ ಕೋಶ, ಶಬ್ದಮಣಿದರ್ಪಣ ಮತ್ತು ಕಾವ್ಯಕಲಾನಿಧಿಯಲ್ಲಿ ಅಚ್ಚಾಗಿ ಬರುತ್ತಿದ್ದ ಕನ್ನಡ ಕಾವ್ಯಗಳು, ಬಿ.ವೆಂಕಟಾಚಾರ್ಯರ ಕಾದಂಬರಿಗಳು ಮುಂತಾದವುಗಳನ್ನು ಅಧ್ಯಯನ ಮಾಡಿ ಶಬ್ದ ಸಂಪತ್ತನ್ನೂ ವೈದುಷ್ಯವನ್ನೂ ಹೆಚ್ಚಿಸಿಕೊಳ್ಳುತ್ತಿದ್ದರು. ಜೊತೆಗೆ ಯಕ್ಷಗಾನದಲ್ಲೂ ಭಾಗವಹಿಸುತ್ತಿದ್ದರು. ಇದರಿಂದ ಇವರ ರಸಿಕತೆ, ಪಾಂಡಿತ್ಯ ಮುಂತಾದ ಗುಣಗಳಿಗೆ ಸಾಣೆ ಹಿಡಿದಂತಾಯಿತು. ಮುದ್ದಣನವರಿಗೆ ಕನ್ನಡ, ಸಂಸ್ಕೃತಗಳಲ್ಲದೆ ಮಲಯಾಳಂ, ಇಂಗ್ಲಿಷ್ ಭಾಷೆಗಳ ಪರಿಚಯವೂ ಇತ್ತು. ಇವರ ಕನ್ನಡ, ಇಂಗ್ಲಿಷ್ ಬರೆವಣಿಗೆ ಮುದ್ದಾಗಿರುತ್ತಿತ್ತು. ಸಂಗೀತದಲ್ಲಿಯೂ ಮುದ್ದಣನವರಿಗೆ ಸ್ವಲ್ಪಮಟ್ಟಿನ ಪರಿಶ್ರಮವಿತ್ತೆಂದು ತಿಳಿದುಬರುತ್ತದೆ.

ಜೋಜೋ ಎಂಬುದು ಮುದ್ದಣನವರ ಮೊದಲ ಸಂಶೋಧನಾತ್ಮಕ ಲೇಖನ. 1900ರ ಜುಲೈನಲ್ಲಿ ಪ್ರಕಟವಾಗತೊಡಗಿದ ಸುವಾಸಿನಿ ಎಂಬ ಪತ್ರಿಕೆಯ ಮೊದಲ ಸಂಚಿಕೆಯಲ್ಲೇ ಈ ಲೇಖನ ಬೆಳಕು ಕಂಡಿತು. ಚಕ್ರಧಾರಿ ಎಂಬ ಹೆಸರಿನಿಂದ ಪ್ರಕಟವಾದ ಈ ಲೇಖನದಲ್ಲಿ ತುಳುವಿನ ಜೋವು (ಸುಗಮ) ಎಂಬುದರಿಂದ ಕನ್ನಡದ ಜೋಗುಳ ಎಂಬ ಪದ ನಿಷ್ಪನ್ನವಾಗಿರಬೇಕೆಂದು ಸಾಧಿಸಲಾಗಿದೆ. ಅನಂತರ ಇವರು ಶ್ರೀ ರಾಮಾಶ್ವಮೇಧಂ, ಅದ್ಭುತ ರಾಮಾಯಣ, ಶ್ರೀರಾಮ ಪಟ್ಟಾಭಿಷೇಕ– ಈ ಹಳಗನ್ನಡ ಕಾವ್ಯಗಳನ್ನೂ ರತ್ನಾವತೀಕಲ್ಯಾಣ, ಕುಮಾರವಿಜಯ ಮೊದಲಾದ ಯಕ್ಷಗಾನ ಕೃತಿಗಳನ್ನೂ ರಚಿಸಿದರು. ಇವಲ್ಲದೆ ಗೋದಾವರಿ

ಎಂಬ ಕಾದಂಬರಿಯ ಕೆಲವು ಪರಿಚ್ಛೇದಗಳನ್ನೂ ಕನ್ನಡ ವ್ಯಾಕರಣದ ಕೆಲವು ಭಾಗಗಳನ್ನೂ ಬರೆದಿದ್ದರಂತೆ. ವಾರ್ಧಕ ಷಟ್ಪದಿಯಲ್ಲಿ ಕರ್ಣಾಟಕ ರಾಮಾಯಣವನ್ನೂ ಭಾಮಿನೀ ಷಟ್ಪದಿಯಲ್ಲಿ ಭಗವದ್ಗೀತೆಯನ್ನೂ ಕುಶವಿಜಯ ಎಂಬುದನ್ನು ನವೀನ ರೀತಿಯಲ್ಲೂ ಬರೆಯಬೇಕೆಂದು ಯೋಜಿಸಿಕೊಂಡಿದ್ದರಂತೆ. ಕಾಮಶಾಸ್ತ್ರ ಗ್ರಂಥದ ಅನುವಾದದ ಯೋಚನೆಯೂ ಇತ್ತಂತೆ. ಅಷ್ಟರಲ್ಲಿ ಬೆನ್ನುಹತ್ತಿದ ಕ್ಷಯರೋಗ ಮತ್ತು ಬಡತನ ತಾರುಣ್ಯದಲ್ಲೇ ಇವರನ್ನು ಬಲಿ ತೆಗೆದುಕೊಂಡಿತು. ಆದರೂ ಇವರ ಕೃತಿಗಳು ಮಾತ್ರ ಇವರನ್ನು ಅಮರರನ್ನಾಗಿ ಮಾಡಿದುವು.

ಶ್ರೀ ರಾಮಾಶ್ವಮೇಧ ಗದ್ಯಕಾವ್ಯ. ಪದ್ಮಪುರಾಣದಲ್ಲಿ ಬರುವ ರಾಮಾಯಣಕ್ಕೆ ಸಂಬಂಧಿಸಿದ ಕಥೆ ಈ ಕಾವ್ಯಕ್ಕೆ ಆಕರ. ಕಥೆಯ ಆರಂಭದಲ್ಲಿ ಬರುವ ಮಳೆಗಾಲದ ವರ್ಣನೆ, ಮುದ್ದಣ ಮನೋರಮೆಯರ ಸಂವಾದ ವಿನೂತನವಾಗಿದೆ. ನಿರೂಪಣೆಯಲ್ಲಿ ನವೀನತೆ ಕಂಡುಬರುತ್ತದೆ. ಓದುಗನಲ್ಲಿ ಹೊಸ ಸಂವೇದನೆಯನ್ನೂ ಕುತೂಹಲವನ್ನೂ ಕೆರಳಿಸುವಂತೆ ಇಡೀ ಕಾವ್ಯ ಮುದ್ದಣ ಮನೋರಮೆಯರ ಸಂವಾದದ ಮೇಲೆ ನಿಂತಿದೆ ಎನ್ನಬಹುದು. ರಾಮನ ಕಥೆ ಮುಖ್ಯವಾದರೂ ಶ್ರೀರಾಮಾಶ್ವಮೇಧ ಕಾವ್ಯ ಪ್ರಸಿದ್ಧವಾಗಿರುವುದು ಈ ಸಂಭಾಷಣೆಗಳಿಂದ ಮತ್ತು ಮಾತಿನ ಮೋಡಿಯಲ್ಲಿನ ಹೊಸತನದಿಂದ.

ಶ್ರೀರಾಮಪಟ್ಟಾಭಿಷೇಕ ಪದ್ಯಕಾವ್ಯ. ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ 5 ಸಂಧಿಗಳೂ 242 ಪದ್ಯಗಳೂ ಇವೆ. ರಾವಣಾದಿಗಳ ಸಂಹಾರವಾದ ಬಳಿಕ ಶ್ರೀರಾಮ ಸೀತಾಸಮೇತನಾಗಿ ಅಯೋಧ್ಯೆಗೆ ಮರಳಿ ಪಟ್ಟಾಭಿಷಿಕ್ತನಾಗುವುದು ಕಾವ್ಯವಸ್ತು. ಇದರಲ್ಲಿ ಕಾವ್ಯ ಸೌಂದರ್ಯಕ್ಕಿಂತಲೂ ವರ್ಣನೆ ಹೆಚ್ಚು. ಕೆಲವು ಸಂದರ್ಭಗಳಲ್ಲಿ ವರ್ಣನೆಗಳು ಚೆನ್ನಾಗಿವೆ. ಒಟ್ಟಿನಲ್ಲಿ ಇದನ್ನು ಕಾವ್ಯಾಂಶವನ್ನೊಳಗೊಂಡ ಒಂದು ಚಿತ್ರಕಾವ್ಯವೆಂದು ಕರೆಯಬಹುದು.

ಅದ್ಭುತ ರಾಮಾಯಣ ಶಾಕ್ತ ಸಂಪ್ರದಾಯದ ಇದೇ ಹೆಸರಿನ ಸಂಸ್ಕೃತ ಕೃತಿಯ ಆಧಾರದಿಂದ ರಚಿತವಾದ ಗದ್ಯಗ್ರಂಥ. ಇದನ್ನು ಮೂಲದ ಎಷ್ಟೋ ನೀರಸವಾದ ಅಂಶಗಳನ್ನು ಕೈಬಿಟ್ಟು, ಕಥೆಯ ಓಟಕ್ಕೆ ಭಂಗಬಾರದಂತೆ ರಚಿಸಲಾಗಿದೆ. ಪ್ರಧಾನ ಕಥೆಗಿಂತ ಉಪಕಥೆಗಳು ಹೆಚ್ಚು ರಂಜನೀಯವಾಗಿವೆ. ಹಳಗನ್ನಡ ಗದ್ಯಶೈಲಿ ಬಿಗಿಯಾಗಿದ್ದೂ ಸೊಗಸಾಗಿದೆ.

ರತ್ನಾವತಿ ಕಲ್ಯಾಣ ಅಥವಾ ದೃಢವರ್ಮ ಕಾಳಗ ಶ್ರೀಹರ್ಷನ ಪ್ರಿಯದರ್ಶಿಕಾ ಎಂಬ ನಾಟಕದ ಸ್ವಲ್ಪಭಾಗವನ್ನು ಆರಿಸಿಕೊಂಡು ಬಯಲಾಟಕ್ಕೆ ಅನುಕೂಲವಾಗುವಂತೆ, ಆದರೆ ವಸ್ತುವಿಗೆ ಭಂಗ ಬರದಂತೆ ಹೊಸ ಅಂಶವನ್ನೊಳಗೊಂಡಂತೆ ರಚಿತವಾದ ಯಕ್ಷಗಾನ ಪ್ರಬಂಧ. ಕುಮಾರ ವಿಜಯ ಅಥವಾ ಶೂರ ಪದ್ಮಾಸುರ ಕಾಳಗ ಶಂಕರ ಸಂಹಿತೆಯ ಆಧಾರದಿಂದ ರಚಿತವಾಗಿದೆ. ಈ ಎರಡರಲ್ಲೂ ಮರಾಠಿ ನಾಟಕಗಳ ಹಾಡುಗಳ ಧಾಟಿಯೂ ಶಬ್ದಾಲಂಕಾರಗಳೂ ಹೇರಳವಾಗಿದ್ದು ಕವಿಯ ಸಂಗೀತಜ್ಞಾನವನ್ನು ಸೂಚಿಸುತ್ತದೆ. ಕುಮಾರವಿಜಯದಲ್ಲಿ ಪ್ರತಿಭೆಗಿಂತ ಪಾಂಡಿತ್ಯಕ್ಕೂ ಚಿತ್ರಕವಿತೆಗೂ ಅಗ್ರಸ್ಥಾನ ದೊರೆತಿದೆ. ಮುದ್ದಣ ಈ ಎರಡೂ ಕೃತಿಗಳನ್ನು ತಮ್ಮ ಗುರು ಮಳಲಿ ಸುಬ್ಬರಾಯರಿಗೆ ಅರ್ಪಿಸಿದ್ದಾರೆ. ಮುದ್ದಣ ತಮ್ಮ ಕೃತಿಗಳ ಪ್ರಕಟಣೆಗಾಗಿ ಪಟ್ಟಪಾಡು ಶೋಚನೀಯವಾದದ್ದು. ರತ್ನಾವತೀ ಕಲ್ಯಾಣ ಇವರ ಚೊಚ್ಚಲ ಕೃತಿ. ಇವರ ಎಲ್ಲ ಕಾವ್ಯಗಳೂ ಕಾವ್ಯಮಂಜರಿಯಲ್ಲಿ ಪ್ರಕಟಗೊಂಡವು. ಅದ್ಭುತ ರಾಮಾಯಣಂ 1895ರಲ್ಲಿ, ಶ್ರೀರಾಮ ಪಟ್ಟಾಭಿಷೇಕ 1896ರಲ್ಲಿ ಪ್ರಕಟಗೊಂಡವು. ರಾಮಾಶ್ವಮೇಧವೂ ಕಾವ್ಯಮಂಜರಿಯಲ್ಲೇ ಪ್ರಕಟಗೊಂಡಿತು. ಈ ಎಲ್ಲ ಕೃತಿಗಳನ್ನು ಇವರು ಗುಪ್ತವಾದ ಹೆಸರಿನಲ್ಲಿ ಪ್ರಕಟಗೊಳಿಸಿದರು.

ಮುದ್ದಣ-ಮನೋರಮೆಯರ ಸರಸ ಸಂಭಾಷಣೆಗಳಲ್ಲಿ ಶೃಂಗಾರ, ಹಾಸ್ಯ, ಕರುಣರಸಗಳು ತುಂಬಿರುವುದಲ್ಲದೆ ಕವಿಯ ಜೀವನವೃತ್ತಾಂತದ ಕೆಲವಂಶವೂ ಸೂಚಿತವಾಗಿದೆ. ರತಿವರ್ಣನೆಯ ಸಂದರ್ಭ, ಸಪ್ತಾಕ್ಷರೀ ಮಂತ್ರಪ್ರಕರಣ ಮೊದಲಾದ ಸನ್ನಿವೇಶಗಳು ಕಾವ್ಯಕ್ಕೆ ಸತ್ತ್ವ ತುಂಬಿವೆ. ಅಲ್ಲಲ್ಲಿ ಬರುವ ವಿಶಿಷ್ಟ ವರ್ಣನೆಗಳೂ ಬಗೆಬಗೆಯ ಅಲಂಕಾರಗಳೂ ಕಾವ್ಯದ ಸೊಗಸನ್ನು ಹೆಚ್ಚಿಸುತ್ತವೆ. ಹಳಗನ್ನಡ ಗದ್ಯಶೈಲಿ ಸರಳತೆಯೊಂದಿಗೆ ಸಶಕ್ತವಾಗಿ ಮೂಡಿಬಂದಿದೆ. ಅಲ್ಲಲ್ಲಿ ಪದ್ಯಗಳು ಪದ್ಯಖಂಡಗಳೂ ಅನಾಯಾಸವಾಗಿ ಕವಿಯ ಲೇಖನಿಯಿಂದ ಹರಿದು ಇಡೀ ಕೃತಿ ಪದ್ಯಗಂಧಿಯಾಗಿದೆ. ದಕ್ಷಿಣ ಕನ್ನಡದ ತುಳುನಾಡಿನ ಎಷ್ಟೋ ನುಡಿಗಳನ್ನು ನುಡಿಗಟ್ಟುಗಳನ್ನೂ ಪ್ರಯೋಗಿಸಿ ದೇಸಿಯನ್ನು ತಂದುದು ಮಾತ್ರವಲ್ಲದೆ ಕೆಲವು ಹೊಸ ಶಬ್ದಗಳನ್ನೂ ಇವರು ಸೃಷ್ಟಿಮಾಡಿದ್ದಾರೆ. ತಮ್ಮ ಕಾವ್ಯಶೈಲಿಯನ್ನು ಪರ್ಯಾಯವಾಗಿ ಸೂಚಿಸಿರುವ ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ ರಸಮೊಸರೆ ಲಕ್ಕಣಂ ಮಿಕ್ಕಿರೆ ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ ಎಂಬ ಮಾತುಗಳು ರಾಮಾಶ್ವಮೇಧ ಕಾವ್ಯಕ್ಕೆ ಸಂಪೂರ್ಣವಾಗಿ ಒಪ್ಪತ್ತದೆ. (ಟಿ.ಜಿ.ಕೆ.ಬಿ.)

**ಮುದ್ದೇಬಿಹಾಳ:** ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಪಟ್ಟಣ. ಬಿಜಾಪುರ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಬಾಗಲಕೋಟೆ ಜಿಲ್ಲೆ, ಆಗ್ನೇಯದಲ್ಲಿ ರಾಯಚೂರು ಜಿಲ್ಲೆ, ಪೂರ್ವಕ್ಕೆ ಗುಲ್ಬರ್ಗ ಜಿಲ್ಲೆ, ಉತ್ತರಕ್ಕೆ ಸಿಂದಗಿ ತಾಲ್ಲೂಕು ಮತ್ತು ಪಶ್ಚಿಮ ಹಾಗೂ ವಾಯವ್ಯಕ್ಕೆ ಬಸವನಬಾಗೇವಾಡಿ ತಾಲ್ಲೂಕುಗಳು ಸುತ್ತುವರಿದಿವೆ. ನಾಲತವಾಡ, ಮುದ್ದೇಬಿಹಾಳ, ಢವಳಗಿ ಮತ್ತು ತಾಳಿಕೋಟೆ ಹೋಬಳಿಗಳು. ತಾಲ್ಲೂಕಿನಲ್ಲಿ 154 ಗ್ರಾಮಗಳು ಮತ್ತು 2 ಪಟ್ಟಣಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 1,507 ಚ.ಕಿಮೀ. ಜನಸಂಖ್ಯೆ 2,53,638.

ಈ ತಾಲ್ಲೂಕು ಸುಮಾರು ಮಟ್ಟಸ ಪ್ರದೇಶ. ಕೃಷ್ಣಾನದಿ ಈ ತಾಲ್ಲೂಕಿನ ದಕ್ಷಿಣದ ಗಡಿಯಾಗಿ ಬಾಗಲಕೋಟೆ ಜಿಲ್ಲೆ, ಲಿಂಗಸುಗೂರು ತಾಲ್ಲೂಕುಗಳನ್ನು ಬೇರ್ಪಡಿಸುವಂತೆ ಆಗ್ನೇಯ ಮತ್ತು ಪೂರ್ವಾಭಿಮುಖವಾಗಿ ಹರಿಯುತ್ತದೆ. ತಾಲ್ಲೂಕಿನ ಪಶ್ಚಿಮ ಗಡಿಯಾಗಿ ಹರಿಯುವ ಹಿರೇಹಳ್ಳ ನೈಋತ್ಯಾಭಿಮುಖವಾಗಿ ಸಾಗಿ ಕೃಷ್ಣಾನದಿಯನ್ನು ಸೇರುತ್ತದೆ. ತಾಲ್ಲೂಕಿನ ಈಶಾನ್ಯಭಾಗದಲ್ಲಿ ಡೋಣಿನದಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಸೋಗಲಿ ನದಿ ತಾಲ್ಲೂಕಿನ ಉತ್ತರಭಾಗದಲ್ಲಿ ಪೂರ್ವಾಭಿಮುಖವಾಗಿ ಹರಿದು ಡೋಣಿ ನದಿಯನ್ನು ಸೇರುತ್ತದೆ. ಇವಲ್ಲದೆ ಕೆಲವು ಸಣ್ಣಹಳ್ಳಗಳೂ ಈ ತಾಲ್ಲೂಕಿನಲ್ಲಿವೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 577 ಮಿಮೀ.

ಈ ತಾಲ್ಲೂಕಿನಲ್ಲಿ ಕಪ್ಪು ಮಣ್ಣಿನ ಪ್ರದೇಶವೇ ಹೆಚ್ಚು. ಡೋಣಿ ನದಿಯ ದಡಗಳಲ್ಲಿ ಕೆಲವು ಕಡೆ 30' ಆಳದವರೆಗೂ ಉಸುಕುಮಣ್ಣು ಶೇಖರವಾಗಿದೆ. ಇದು ಜನರ, ಪ್ರಾಣಿಗಳ ಪ್ರಾಣಕ್ಕೆ ಕುತ್ತಾಗಿರುವುದೂ ಉಂಟು. ಬಿಜಾಪುರ ಜಿಲ್ಲೆಯ ಇತರ ತಾಲ್ಲೂಕುಗಳಿಗಿಂತ ಈ ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಹೆಚ್ಚು ಭೂಮಿಯನ್ನು ಬಳಸಿಕೊಳ್ಳಲಾಗಿದೆ. ಡೋಣಿ ನದಿಯಿಂದಾಗಿ ತಾಳೀಕೋಟೆ ಪ್ರದೇಶ ಬಹು ಫಲವತ್ತಾಗಿದ್ದು ಸಮೃದ್ಧ ವ್ಯವಸಾಯವಿದೆ. ತಾಲ್ಲೂಕಿನಲ್ಲಿ ನೀರಾವರಿ ವ್ಯವಸಾಯ ಬಹು ಕಡಿಮೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಈ ತಾಲ್ಲೂಕಿನ ಸಿದ್ದಾಪುರದಲ್ಲಿ ಒಂದು ಕಟ್ಟೆ ಕಟ್ಟಿ ಅದರ ಎಡನಾಲೆಯಿಂದ 11.3 ಲಕ್ಷ ಹೆ. ಭೂಮಿಗೆ ನೀರೊದಗಿಸಿಕೊಳ್ಳುವ ಯೋಜನೆ ಇದೆ.

ಈ ತಾಲ್ಲೂಕಿನಲ್ಲಿ ಒಟ್ಟು ವ್ಯವಸಾಯ ಕ್ಷೇತ್ರದ ವಿಸ್ತೀರ್ಣ 1,30,907 ಹೆಕ್ಟೇರ್‌ಗಳು. ಜೋಳ, ಗೋದಿ, ನೆಲಗಡಲೆ, ಸಜ್ಜೆ ಮುಖ್ಯ ಬೆಳೆಗಳು. ಬತ್ತ, ಹೆಸರು, ತೊಗರಿ, ಅವರೆ ಮುಂತಾದವುಗಳ ಜೊತೆಗೆ ಕಬ್ಬನ್ನೂ ಬೆಳೆಯುತ್ತಾರೆ. ವ್ಯವಸಾಯದ ಜೊತೆಯಾಗಿ ರೇಷ್ಮೆ ಉದ್ಯಮವೂ ಅಲ್ಲಲ್ಲಿ ಕಂಡುಬರುತ್ತದೆ. ಪಶುಪಾಲನೆಯೂ ಇದ್ದು ಅವುಗಳ ರಕ್ಷಣೆಗೆ ಮತ್ತು ಅಭಿವೃದ್ಧಿಗೆ ಸಹಕಾರಿಯಾಗಿ ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶು ವೈದ್ಯಾಲಯಗಳಿವೆ. ಒಂದು ಆಸ್ಪತ್ರೆ, 14 ಪ್ರಾಥಮಿಕ ಪಶುವೈದ್ಯ ಕೇಂದ್ರಗಳಿವೆ (2001).

ತಾಲ್ಲೂಕಿನಲ್ಲಿ ಹತ್ತಿ ಎಕ್ಕುವ ಕಾರ್ಖಾನೆಗಳನ್ನು ಬಿಟ್ಟರೆ ಉಳಿದಂತೆ ಕೆಲವು ಗ್ರಾಮೀಣ ಕೈಗಾರಿಕೆಗಳು ಮಾತ್ರ ಇವೆ. 17 ಬಟ್ಟೆ ಉದ್ಯಮಗಳು, 40 ಎಂಜಿನಿಯರಿಂಗ್ ಉದ್ಯಮಗಳು ಇತರೆ 64 ಉದ್ಯಮಗಳಿವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕು ಮತ್ತು ನಿಯಂತ್ರಿತ ಮಾರುಕಟ್ಟೆಗಳಿವೆ. ಹೂವಿನ ಹಿಪ್ಪರಗಿ-ಮುದ್ದೇಬಿಹಾಳ-ಹುನಗುಂದ ಮಾರ್ಗ, ಮುದ್ದೇಬಿಹಾಳ-ತಾಳೀಕೋಟೆ ಮಾರ್ಗ, ಹಿಪ್ಪರಗಿ-ತಾಳೀಕೋಟೆ-ಹುಣಸಗಿ ಮಾರ್ಗ ಇವು ತಾಲ್ಲೂಕಿನ ಮುಖ್ಯ ರಸ್ತೆಗಳು.

ತಾಳೀಕೋಟೆ **(ನೋಡಿ)** ಈ ತಾಲ್ಲೂಕಿನಲ್ಲಿರುವ ಇತಿಹಾಸಪ್ರಸಿದ್ಧ ಪಟ್ಟಣ. ಮುದ್ದೇಬಿಹಾಳದ ವಾಯುವ್ಯದಲ್ಲಿ ಸು.10 ಕಿಮೀ ದೂರದಲ್ಲಿರುವ ಬಾಸರಕೋಡು ಗ್ರಾಮದಲ್ಲಿ ಜಕ್ಕಣಾಚಾರ್ಯ ನಿರ್ಮಿತವೆಂದು ಹೇಳುವ ಒಂದು ಜೈನ ದೇವಾಲಯವೂ 1750ರಲ್ಲಿ ನಿರ್ಮಿಸಿದ ಮಲ್ಲಿಕಾರ್ಜುನ ಮತ್ತು 1805ರಲ್ಲಿ ಕಟ್ಟಿರುವ ಮೂರುಲಿಂಗ ಗುಡಿಯೂ ಇವೆ. ಮುದ್ದೇಬಿಹಾಳದ ಆಗ್ನೇಯ ದಿಕ್ಕಿನಲ್ಲಿ ಸು.20 ಕಿಮೀ ದೂರದಲ್ಲಿರುವ ನಾಲತವಾಡ ದೊಡ್ಡ ಗ್ರಾಮ. ಇಲ್ಲಿ ಮೂರು ದೇವಾಲಯಗಳಿವೆ. ತಾಳೀಕೋಟೆಯಿಂದ ದಕ್ಷಿಣಕ್ಕೆ 10 ಕಿಮೀ ದೂರದಲ್ಲಿರುವ ಶಿವಪುರ ಗ್ರಾಮದ ಹತ್ತಿರ ಹಗರಟಗಿ ತೀರ್ಥವಿದೆ. ಮುದ್ದೇಬಿಹಾಳದ ಪಶ್ಚಿಮಕ್ಕೆ ಸು. 20 ಕಿಮೀ ದೂರದಲ್ಲಿ ಕೃಷ್ಣಾನದಿಯ ಎಡದಂಡೆಯ ಮೇಲಿರುವ ಯಲಗೂರು ಗ್ರಾಮ ಅಲ್ಲಿನ ಆಂಜನೇಯ ದೇವಾಲಯದಿಂದ ಪ್ರಸಿದ್ಧವಾಗಿದೆ (ಆಲಮಟ್ಟಿ ರೈಲ್ವೆ ನಿಲ್ದಾಣ ಈ ಗ್ರಾಮದಿಂದ 5 ಕಿಮೀ ದೂರದಲ್ಲಿದೆ).

ಮುದ್ದೇಬಿಹಾಳ ಈ ತಾಲ್ಲೂಕಿನ ಆಡಳಿತ ಕೇಂದ್ರ ಮತ್ತು ಮುಖ್ಯ ಪಟ್ಟಣ. ಬಿಜಾಪುರದ ಆಗ್ನೇಯಕ್ಕೆ 83 ಕಿಮೀ ದೂರದಲ್ಲಿದೆ. ಆಲಮಟ್ಟಿ ರೈಲ್ವೆ ನಿಲ್ದಾಣದಿಂದ ಇಲ್ಲಿಗೆ 27 ಕಿಮೀ ದೂರ. ಜನಸಂಖ್ಯೆ 54,424. ಪರ್ವತಗಿರಿ ಮತ್ತು ಮುದ್ದೇಬಿಹಾಳ ಎರಡೂ ಸೇರಿ ಈ ಊರು ಪುರಸಭೆಯಾಗಿದೆ. ಈ ಊರಿನಿಂದ ಹುನಗುಂದ, ಚಿಮ್ಮಲಗಿ, ನಾಲತವಾಡ, ತಾಳೀಕೋಟೆ, ಬಸವನಬಾಗೇವಾಡಿ ಮೊದಲಾದೆಡೆಗಳಿಗೆ ಉತ್ತಮ ರಸ್ತೆ ಸಂಪರ್ಕವಿದ್ದು ಮುದ್ದೇಬಿಹಾಳ ವ್ಯಾಪಾರ ಕೇಂದ್ರವಾಗಿ ಬೆಳೆಯುತ್ತಿದೆ. ಈ ಊರಿನಲ್ಲಿ ಒಂದು ಈಶ್ವರ ದೇವಾಲಯವಿದೆ.

ಬಿಜಾಪುರದ ಸುಲ್ತಾನರ ಆಡಳಿತದಲ್ಲಿದ್ದ ಈ ಪ್ರದೇಶದಲ್ಲಿ ಬಾಸರಕೋಡು ನಾಡಗೌಡರ ಪೂರ್ವಜರಾದ ಪರಮಣ್ಣನಿಂದ ಈ ಊರು 1680ರಲ್ಲಿ ಸ್ಥಾಪಿತವಾಯಿತು. ಅದೇ ಮನೆತನದ ಹುಚ್ಚಪ್ಪ 1720ರಲ್ಲಿ ಇಲ್ಲಿ ಒಂದು ಕೋಟೆಯನ್ನು ಕಟ್ಟಿಸಿದ. ಈ ಊರಿನಲ್ಲಿ ಒಂದು ಹಳೆಯ ದೇವಾಲಯವಿದೆ. ಈಗ ಆ ಕೋಟೆಯ ಭಗ್ನಾವಶೇಷಗಳನ್ನು ಕಾಣಬಹುದು.

**(ಎಸ್.ವಿ.ಪಿ.;*)**

**ಮುದ್ರಣ ಉದ್ಯಮ:** ಪಾಶ್ಚಾತ್ಯ ದೇಶಗಳಲ್ಲಿ ಸು.15-16ನೆಯ ಶತಮಾನಗಳ ಹೊತ್ತಿಗೇ ಮುದ್ರಣದ ಬಳಕೆ ಪ್ರಾರಂಭವಾದರೂ ಅದು ಭಾರತಕ್ಕೆ ಬಂದದ್ದು 19ನೆಯ ಶತಮಾನದಲ್ಲಿ. ಬ್ರಿಟಿಷ್ ಸರ್ಕಾರ ತನ್ನ ಆಡಳಿತ ನಿರ್ವಹಣೆಗಾಗಿಯೂ ಕ್ರೈಸ್ತ ಮಿಷನರಿ ಸಂಸ್ಥೆಗಳು ತಮ್ಮ ಧರ್ಮದ ಪ್ರಚಾರಕ್ಕಾಗಿ ಧರ್ಮಗ್ರಂಥಗಳನ್ನು ಅಚ್ಚಿಸುವುದಕ್ಕಾಗಿಯೂ ಮುದ್ರಣ ವಿಧಾನವನ್ನು ಇಲ್ಲಿ ಬಳಕೆಗೆ ತಂದುವು. ಕರ್ನಾಟಕದಲ್ಲಿ ಮುದ್ರಣಕಲೆಯನ್ನು ಸ್ಥಾಪಿಸಿದವರಲ್ಲಿ ಬೆಂಗಳೂರಿನ ವೆಸ್ಲಿಯನ್ ಮತ್ತು ಮಂಗಳೂರಿನ ಬಾಸೆಲ್ ಮಿಶನ್ ಸಂಸ್ಥೆಯವರು ಮೊದಲಿಗರೆನ್ನಬಹುದು. ಇವರು ಸಹ ಮೊದಲಿಗೆ ತಮ್ಮ ಮತಗ್ರಂಥಗಳನ್ನು ಮುದ್ರಿಸಿ ಕ್ರೈಸ್ತಧರ್ಮ ಪ್ರಚಾರಕ್ಕೋಸ್ಕರ ಮುದ್ರಣಾಲಯಗಳನ್ನು ಸು. 1817ರಲ್ಲಿ ಸ್ಥಾಪಿಸಿದರು. ಸೇಂಟ್ ಮಾಥ್ಯೂವಿನ ಗಾಸ್ಪೆಲ್ ಎಂಬ ಗ್ರಂಥದ ಕನ್ನಡ ಅನುವಾದ ಸು. 1820ರಲ್ಲಿ ಪ್ರಕಟವಾಯಿತು. ಅನಂತರ ರೀವ್ ಅವರ ಇಂಗ್ಲಿಷ್-ಕನ್ನಡ ಕೋಶ 1824ರಲ್ಲೂ ಕನ್ನಡ-ಇಂಗ್ಲಿಷ್ ಕೋಶ 1832ರಲ್ಲೂ ಪ್ರಕಟವಾದುವು. ಇದೇ ಮಿಷನರಿ ಸಂಸ್ಥೆಯವರು ಬಳ್ಳಾರಿ, ಮಂಗಳೂರುಗಳಿಂದ ವರ್ತಮಾನ ಪತ್ರಿಕೆಗಳ ಪ್ರಕಟಣೆಯನ್ನಾರಂಭಿಸಿ, 1843 ಜುಲೈ 1ರಂದು ಕನ್ನಡದ ಮೊದಲನೆಯ ಪತ್ರಿಕೆಯಾದ ಮಂಗಳೂರ ಸಮಾಚಾರವನ್ನು **(ನೋಡಿ:ಕಂನಡ ಸಮಾಚಾರ)** ಹೊರಡಿಸಿದರು. ಈ ಸಂಸ್ಥೆಯವರು ಪ್ರಾಚೀನ ಕನ್ನಡ ಗ್ರಂಥಗಳ ಮುದ್ರಣವನ್ನು ಸಹ ಆರಂಭಿಸಿ, ಜೈಮಿನಿ ಭಾರತ, ಬಸವಪುರಾಣ, ಮಹಾಭಾರತ ಮುಂತಾದ ಗ್ರಂಥಗಳನ್ನು ಮುದ್ರಿಸಿದರು. ಬಿ.ಎಲ್.ರೈಸ್ ಅವರು ಕನ್ನಡ ಗ್ರಂಥಮಾಲಿಕೆಯಲ್ಲಿ ಬಿಬ್ಲಿಯೋಥಿಕ ಕರ್ನಾಟಿಕ ಎಂಬ ಗ್ರಂಥವನ್ನು ಕನ್ನಡದಲ್ಲಿ ಪ್ರಕಟಿಸಿದರು. ಮುಂದೆ ಕನ್ನಡದಲ್ಲಿ ಅಮರಕೋಶವನ್ನು ಸಹ ಪ್ರಕಟಿಸಿದರು.

ಬೆಂಗಳೂರಿನ ವೆಸ್ಲಿಯನ್ ಮಿಷನ್ ಸಂಸ್ಥೆಯ ಮುದ್ರಣಾಲಯದ ಸೂಪರಿಂಟೆಂಡೆಂಟ್‌ರಾಗಿದ್ದ ಜೆ. ಗ್ಯಾರೆಟ್‌ರವರು ಆಗ ಚೀಫ್ ಕಮೀಷನರಾಗಿದ್ದ ಮಾರ್ಕ್‌ಕಬ್ಬನ್ ಅವರನ್ನು ಪ್ರೋತ್ಸಾಹಿಸಿ, ಸರ್ಕಾರದ ವತಿಯಿಂದ ಒಂದು ಮುದ್ರಣಾಲಯವನ್ನು ಸ್ಥಾಪಿಸಲು ಏರ್ಪಾಡು ಮಾಡಿ ಸು. 1842ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಮುದ್ರಣಾಲಯದ ಮೊದಲನೆಯ ಸೂಪರಿಂಟೆಂಡೆಂಟರಾದರು. ಹೀಗೆ ಆರಂಭವಾದ ಬೆಂಗಳೂರಿನ ಸರ್ಕಾರಿ ಮುದ್ರಣಾಲಯ ಇಂದು ಕರ್ನಾಟಕದ ಅತಿ ದೊಡ್ಡ ಮುದ್ರಣಾಲಯವಾಗಿದೆ. ಇವರ ಅನಂತರ ಇವರ ಮಗ ಜೆ.ಪಿ.ಗ್ಯಾರೆಟ್‌ರು ಅಧಿಕಾರಕ್ಕೆ ಬಂದರು. 1866ರಲ್ಲಿ ಮೈಸೂರು ಸರ್ಕಾರ ತನ್ನ ನಡವಳಿಕೆಗಳನ್ನೊಳಗೊಂಡಂತೆ ಮೈಸೂರು ಗೆಜೆಟ್ ಎಂಬ ಒಂದು ಪತ್ರಿಕೆಯನ್ನು ಹೊರಡಿಸಲು ಆರಂಭಿಸಿತು. ಆಗ ಇದರ ಪ್ರಕಟಣೆಯ ಜವಾಬ್ದಾರಿಯನ್ನು ಸರ್ಕಾರಿ ಮುದ್ರಣಾಲಯಕ್ಕೆ ವಹಿಸಲಾಯಿತು. ಜೆ.ಗ್ಯಾರೆಟ್ ಅನಂತರ ಅವರ ಮಗ ಜೆ.ಪಿ.ಗ್ಯಾರೆಟ್, ಅನಂತರ ಎಚ್.ಹಡ್ಸನ್, ಟಿ.ಟಿ.ಲೆಯನಾರ್ಡ್, ಎಚ್.ಎಚ್. ಸ್ಪಾರ್ಕ್ಸ್, ಜಿ.ಹ್ಯೂಮನ್ ರೈಟ್, ಸಿ.ಎಚ್.ಯೇಟ್ಸ್ (1905-17) ಇವರು ಸರ್ಕಾರಿ ಮುದ್ರಣಾಲಯದ ಸೂಪರಿಂಟೆಂಡೆಂಟರಾದರು. ಯೇಟ್ಸ್ ಅವರು ಮುದ್ರಣಾಲಯವನ್ನು ಅಭಿವೃದ್ಧಿಪಡಿಸಿ, ಮೈಸೂರಿನ ಇಬ್ಬರು ತರುಣ ಪದವೀಧರರನ್ನು ಇಂಗ್ಲೆಂಡಿಗೆ ಮುದ್ರಣ ಕಲೆಯಲ್ಲಿ ಹೆಚ್ಚಿನ ತರಬೇತಿಗಾಗಿ ಕಳುಹಿಸಿದರು. ಇವರ ಅನಂತರ ಡಿ.ಬಿ.ರಾಮಚಂದ್ರ ಮೊದಲಿಯಾರ್ (1917-23), ಬಿ.ಪುಟ್ಟಯ್ಯ (1923-34), ಬಿ.ಶ್ರೀನಿವಾಸ ಐಯ್ಯಂಗಾರ್ (1934-38), ಬಿ.ವೆಂಕಟಸುಬ್ಬರಾವ್ (1938-39) ಇವರು ಮುದ್ರಣಾಲಯದ ಸೂಪರಿಂಟೆಂಡೆಂಟರಾಗಿದ್ದರು. ಅನಂತರ ಬಿ.ಕೃಷ್ಣಸ್ವಾಮಿಶೆಟ್ಟಿ (1939-53), ಡಿ.ಎಸ್.ಗುರುಬಸವಪ್ಪ (1953-61), ಎಂ.ಎ.ಶ್ರೀರಾಮ (1961-70), ಬಿ.ಪಿ.ಮಲ್ಲರಾಜೇ ಅರಸ್ (1970-74) ಮತ್ತು ಬಿ.ಎನ್. ರಾಮಮೂರ್ತಿ (1974-80), ಡಿ.ನರಸಿಂಹಯ್ಯ, ಎಚ್.ಗಂಗಯ್ಯ ಮೊದಲಾದವರು ನಿರ್ದೇಶಕರಾಗಿ ಮುದ್ರಣಾಲಯವನ್ನು ಅಭಿವೃದ್ಧಿಗೊಳಿಸಿದ್ದಾರೆ. ಪ್ರಾರಂಭದಲ್ಲಿ ಬೆಂಗಳೂರೊಂದರಲ್ಲಿಯೇ ಇದ್ದ ಮುದ್ರಣಾಲಯ ಮೈಸೂರು, ಮಡಿಕೇರಿ, ಧಾರವಾಡ ಮತ್ತು ಗುಲ್ಬರ್ಗ ಮುಂತಾದ ಕಡೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದೆ.

ಅಲ್ಲದೆ ಬೆಂಗಳೂರಿನಲ್ಲಿಯೇ ಹೈಕೋರ್ಟಿನಲ್ಲಿ ಮತ್ತು ಸೆಂಟ್ರಲ್ ಜೈಲಿನಲ್ಲಿ ಒಂದೊಂದು ಸಣ್ಣ ಮುದ್ರಣಾಲಯಗಳು ಕೆಲಸ ಮಾಡುತ್ತಿವೆ. ಸು. 20–25 ಮಂದಿ ಕೆಲಸಗಾರರಿಂದ ಪ್ರಾರಂಭವಾದ ಬೆಂಗಳೂರಿನ ಸರ್ಕಾರಿ ಮುದ್ರಣಾಲಯದಲ್ಲಿ 2,000ಕ್ಕೂ ಮೇಲ್ಪಟ್ಟು ಕೆಲಸಗಾರರು ಕೆಲಸ ಮಾಡುತ್ತಿದ್ದರು.

ಸಂಸ್ಕೃತ ಭಾಷಾಗ್ರಂಥಗಳನ್ನು ಮುದ್ರಿಸುವುದಕ್ಕಾಗಿಯೇ ರಾಜಮನೆತನದ ಪ್ರೋತ್ಸಾಹದಿಂದ ಒಂದು ಮುದ್ರಣಾಲಯ ಮೈಸೂರಿನಲ್ಲಿ ಜಗನ್ಮೋಹನ ಅರಮನೆಯಲ್ಲಿ ಸ್ಥಾಪಿತವಾಯಿತು. ಅನಂತರ ಅದು ಸರ್ಕಾರಿ ಮುದ್ರಣಾಲಯದ ಒಂದು ಶಾಖೆಯಾಗಿ ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಪರಿಷ್ಕರಿಸಲ್ಪಟ್ಟ ಸಂಸ್ಕೃತ ಕನ್ನಡ ಗ್ರಂಥಗಳನ್ನೂ ಮೈಸೂರು ರೈಲ್ವೆ ಇಲಾಖೆಯ ಮುದ್ರಣ ಕೆಲಸಗಳನ್ನೂ ನಿರ್ವಹಿಸುತ್ತಿತ್ತು. ಈಗ ಈ ಮುದ್ರಣಾಲಯ ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯವಾಗಿ ಪರಿವರ್ತಿತವಾಗಿದೆ.

ಕರ್ನಾಟಕದ ಖಾಸಗಿ ಮುದ್ರಣ ಸಂಸ್ಥೆಗಳಲ್ಲಿ ಸು. 1862ರಲ್ಲಿ ಪ್ರಾರಂಭವಾದ ಬೆಂಗಳೂರಿನ ವಿಚಾರದರ್ಪಣ ಮುದ್ರಣಾಲಯ ಬಹಳ ಹಳೆಯದು. ಅನಂತರ ಬೆಂಗಳೂರಿನಲ್ಲಿ ಪತ್ರಿಕೆಗಳ ಪ್ರಕಟಣೆಗಾಗಿ ಯಜಮಾನ್ ಅಂಡ್ ಸನ್ಸ್ ಮುದ್ರಣಾಲಯ, ಒಕ್ಕಲಿಗರ ಮುದ್ರಣಾಲಯ, ಮೈಸೂರಿನ ಸ್ಟಾರ್ ಎಲೆಕ್ಟ್ರಿಕ್ ಮುದ್ರಣಾಲಯ, ಸಾಧ್ವಿ ಮುದ್ರಣಾಲಯ, ವೆಸ್ಲಿ ಮುದ್ರಣಾಲಯ ಮುಂತಾದವು ಸ್ಥಾಪನೆಗೊಂಡವು.

20ನೆಯ ಶತಮಾನದಲ್ಲಿ ಹೊಸ ದೈನಿಕ ಪತ್ರಿಕೆಗಳ ಮತ್ತು ಮಾಸಿಕ ಪತ್ರಿಕೆಗಳ ಪ್ರಕಟಣೆಯ ಮೂಲಕ ಮುದ್ರಣ ಉದ್ಯಮಕ್ಕೆ ಹೆಚ್ಚಿನ ಚಾಲನೆ ದೊರಕಿತು. ಈ ಪತ್ರಿಕೆಗಳ ಮುದ್ರಣಕ್ಕೆ ಅವಶ್ಯಕವಾದ ಲೈನೋಟೈಪ್, ಇಂಟರ್‌ಟೈಪ್ ಅಕ್ಷರ ಜೋಡಣೆಯ ಯಂತ್ರಗಳನ್ನು ಮತ್ತು ರೋಟರಿ ಮುದ್ರಣ ಯಂತ್ರವನ್ನು ಒಳಗೊಂಡು ಅನೇಕ ಪತ್ರಿಕಾ ಮುದ್ರಣಾಲಯಗಳು ಸ್ಥಾಪಿತವಾದವು. ಕರ್ನಾಟಕದಾದ್ಯಂತ ಇಂಥ ಹಲವಾರು ಮುದ್ರಣಾಲಯಗಳು ಕಾರ್ಯ ನಿರತವಾಗಿದ್ದವು.

ಸಾರ್ವಜನಿಕ ಮುದ್ರಣ ಸಂಸ್ಥೆಯಲ್ಲಿರುವ ಈಗಿರುವ ಬೆಂಗಳೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಕಂಪನಿ, ಮೈಸೂರು ಮುದ್ರಣಾಲಯ, ಹೊಸಾಳಿ ಮುದ್ರಣಾಲಯ, ಬೃಂದಾವನ ಮುದ್ರಣಾಲಯ, ಕರ್ನಾಟಕ ಕೋ–ಆಪರೇಟಿವ್ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಶ್ರೀ ಗೌರಿ ನಿಲಯ (ಎನ್.ಬಿ.ಎನ್.) ಮುದ್ರಣಾಲಯ (1896), ಬಿ.ಬಿ.ಸುಬ್ಬಯ್ಯ ಅಂಡ್ ಸನ್ಸ್ ಮುದ್ರಣಾಲಯ (1873), ಮೈಸೂರಿನ ವೆಸ್ಲಿ ಮುದ್ರಣಾಲಯ, ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್ (ಹಿಂದಿನ ಸ್ಟಾರ್ ಮುದ್ರಣಾಲಯ), ಸಾಧ್ವಿ ಮುದ್ರಣಾಲಯ, ಮಂಗಳೂರಿನ ಬಲ್ಮಠ ಮಾಸ್ಟರ್ ಮುದ್ರಣಾಲಯ (ಹಿಂದಿನ ಬಾಸೆಲ್ ಮಿಷನ್ ಪ್ರೆಸ್), ಶಾರದಾ ಮುದ್ರಣಾಲಯ, ಮಂಗಳೂರು ಮುದ್ರಣಾಲಯ, ಮಣಿಪಾಲದ ಮಣಿಪಾಲ್ ಪ್ರೆಸ್, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯ, ಧಾರವಾಡ ಲಿಂಗರಾಜ ಆರ್ಟ್ಸ್ ಮುದ್ರಣಾಲಯ ಮೊದಲಾದ ಅನೇಕ ಮುದ್ರಣಾಲಯಗಳನ್ನು ಹೆಸರಿಸಬಹುದು. ಕರ್ನಾಟಕದ ಎಲ್ಲ ಕಡೆಯಲ್ಲಿಯೂ ಸ್ಥಾಪಿತವಾಗಿರುವ ಸಣ್ಣದೊಡ್ಡ ಮುದ್ರಣಾಲಯಗಳು ಸುಮಾರು ಎರಡುಸಾವಿರಕ್ಕೂ ಹೆಚ್ಚಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಇವುಗಳಲ್ಲಿ ಲಕ್ಷಾಂತರ ಕುಶಲ ಕೆಲಸಗಾರರು ಹೆಚ್ಚಿನ ಗುಣಮಟ್ಟದ ಮುದ್ರಣ ಕಾರ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಮುದ್ರಣ ಕೇವಲ ಕನ್ನಡ, ಇಂಗ್ಲಿಷ್, ಸಂಸ್ಕೃತ, ಉರ್ದು ಭಾಷೆಗಳಿಗೆ ಮೀಸಲಾಗಿರದೆ ತೆಲುಗು, ತಮಿಳು, ಮರಾಠಿ, ಹಿಂದೀ ಮುಂತಾದ ಭಾಷೆಗಳಲ್ಲಿಯೂ ಮುದ್ರಿಸಲು ಬೇಕಾದ ಸಾಧನೆಗಳನ್ನು ಅನೇಕ ಮುದ್ರಣಾಲಯಗಳು ಹೊಂದಿವೆ. ಪ್ರಾರಂಭದಲ್ಲಿ ಉರ್ದು ಭಾಷೆಯ ಪುಸ್ತಕಗಳು ಲಿಥೋ ಮುದ್ರಣ ವಿಧಾನದಿಂದ ಪ್ರಕಟವಾಗುತ್ತಿದ್ದವು. ಈಗ ಅನೇಕ ಉರ್ದು ಮುದ್ರಣಾಲಯಗಳು ಸಹ ಉರ್ದು ಅಚ್ಚುಮೊಳೆ ಜೋಡಣೆ ವಿಧಾನವನ್ನು ಹೊಂದಿವೆ. ಅವುಗಳಲ್ಲಿ ಬೆಂಗಳೂರಿನ ಮೋದಿ ಪವರ್ ಪ್ರೆಸ್, ಅಲ್‌ಕಲಾಂ ಮುದ್ರಣಾಲಯ, ಪಾಸ್ಬಾನ್ ಮುದ್ರಣಾಲಯ ಮುಂತಾದುವುಗಳನ್ನು ಹೆಸರಿಸಬಹುದು.

ಮುದ್ರಣಕ್ಕೆ ಬೇಕಾದ ಕನ್ನಡ ಅಚ್ಚುಮೊಳೆಗಳನ್ನು ಪ್ರಥಮವಾಗಿ ಮಂಗಳೂರಿನ ಬಾಸೆಲ್ ಮಿಷನ್ ಮುದ್ರಣಾಲಯದವರು ಪಡಿಅಚ್ಚು ಫಾಂಟುಗಳನ್ನು ಕುಶಲ ಕೆಲಸಗಾರರಿಂದ ತಯಾರಿಸಿಕೊಂಡು ಮೊದಲು ಕೈಯಂತ್ರಗಳಿಂದಲೂ ಅನಂತರ ಅಚ್ಚುಮೊಳೆ ಎರಕ ಹೊಯ್ಯುವ ಯಂತ್ರಗಳಿಂದಲೂ ಎರಕಹೊಯ್ದು ತಮ್ಮ ಮುದ್ರಣಾಲಯಗಳು ಸ್ಥಾಪನೆಯಾದ ಕೆಲಸಗಳಿಗೆ ಉಪಯೋಗಿಸಿದರು. ಇತರ ಕಡೆ ಮುದ್ರಣಾಲಯಗಳು ಸ್ಥಾಪನೆಯಾದ ಹಾಗೆಲ್ಲಾ ಅವುಗಳಿಗೂ ತಮ್ಮಲ್ಲಿ ತಯಾರಾದ ಅಚ್ಚುಮೊಳೆಗಳನ್ನು ಸರಬರಾಜು ಮಾಡಿದರು. ಈ ಅಚ್ಚುಮೊಳೆಗಳಿಂದ ಮುದ್ರಣವಾದ ಅಕ್ಷರಗಳು ನೋಡುವುದಕ್ಕೆ ಸ್ವಲ್ಪ ವಕ್ರವಾಗಿದ್ದು, ಓದುವುದಕ್ಕೆ ಸ್ವಲ್ಪ ತೊಂದರೆಯಾಗುತ್ತಿದ್ದುದರಿಂದ ಕನ್ನಡ ಅಕ್ಷರಗಳನ್ನು ಅಂದವಾಗಿಯೂ ಓದಲು ಸುಲಭವಾಗಿರುವಂತೆಯೂ ಬರೆಯಿಸಿ, ಅವುಗಳನ್ನು ಪಡಿಅಚ್ಚು ಮಾಡುವುದಕ್ಕೆ ಉಪಯೋಗಿಸಿಕೊಂಡು ಅವುಗಳಿಂದ ಕನ್ನಡ ಅಕ್ಷರಗಳನ್ನು ಎರಕ ಹೊಯ್ದು ತಯಾರಿಸಿದರು (ಈ ನೂತನ ಅಚ್ಚುಮೊಳೆಗಳು ಸಾಧಾರಣವಾಗಿ ಎಲ್ಲ ಮುದ್ರಣಾಲಯಗಳಲ್ಲಿಯೂ ಬಳಕೆಯಲ್ಲಿದ್ದವು).

ಈ ಪರಿಸ್ಥಿತಿಯಿದ್ದಾಗ ಆಗಿನ ಮೈಸೂರು ಸರ್ಕಾರ ಸುಮಾರು ಅರ್ಧ ಶತಮಾನದ ಹಿಂದೆಯೇ ತಮ್ಮದೇ ಆದ ಕನ್ನಡ ಅಕ್ಷರಗಳನ್ನು ಅಂದವಾಗಿ ಡ್ರಾಯಿಂಗ್ ಕಾಗದದ ಮೇಲೆ ಅಚ್ಚಕಪ್ಪುಮಸಿಯಿಂದ ಬರೆಯಿಸಿ ಅವುಗಳನ್ನು ಅಮೆರಿಕ ದೇಶದಲ್ಲಿದ್ದ ಪ್ರಖ್ಯಾತ ಅಚ್ಚುಮೊಳೆ ಎರಕ ಹೊಯ್ಯುವ ಥಾಂಸನ್ ಕಂಪನಿಗೆ ಕಳುಹಿಸಿ ಪಡಿಅಚ್ಚುಗಳನ್ನು ತಯಾರಿಸಿಕೊಂಡು ಆ ಕಂಪನಿಯವರೇ ತಯಾರಿಸಿದ ಥಾಂಸನ್ ಟೈಪ್ ಕ್ಯಾಸ್ಟಿಂಗ್ ಯಂತ್ರಗಳನ್ನು ತರಿಸಿಕೊಂಡು ತಮ್ಮ ಸ್ವಂತ ಮುದ್ರಣಾಲಯದ ಉಪಯೋಗಕ್ಕಾಗಿಯೂ ಮತ್ತು ಇತರ ಮುದ್ರಣಾಲಯಗಳು ಅಪೇಕ್ಷಿಸಿದಲ್ಲಿ ಅವುಗಳಿಗೂ ಅಚ್ಚುಮೊಳೆಗಳನ್ನು ತಯಾರಿಸುತ್ತಿದ್ದರು. ಈ ಅಚ್ಚು ಮೊಳೆಗಳ ವಿಶೇಷವೇನೆಂದರೆ ಜೋಡಿಸಿದ ಅಚ್ಚುಮೊಳೆಗಳ ಸಾಲುಗಳ ಮಧ್ಯೆ ಸತುವಿನ ಪಟ್ಟಿಗಳನ್ನು (ಲೆಡ್ಸ್) ಉಪಯೋಗಿಸದೆ ಮುದ್ರಿಸುವ ಸಾಧ್ಯತೆ ಇರುವುದು. ಇದರಿಂದ ಒಂದು ಪುಟದಲ್ಲಿ ಹೆಚ್ಚು ಸಾಲುಗಳನ್ನು ಜೋಡಿಸಬಹುದು. ಬೆಂಗಳೂರಿನ ನ್ಯಾಷನಲ್ ಟೈಪ್ ಫೌಂಡರಿಯವರು, ಸಿಟಿ ಟೈಪ್ ಫೌಂಡರಿಯವರು ಮತ್ತು ಮದರಾಸಿನ ಸ್ವದೇಶಿ ಟೈಪ್ ಫೌಂಡರಿಯವರು ಸಹ ತಮ್ಮದೇ ಆದ ಕನ್ನಡ ಅಚ್ಚುಮೊಳೆಗಳನ್ನು ಎರಕ ಹೊಯ್ದು ಪ್ರಚುರಪಡಿಸುತ್ತಿದ್ದರು.

ಸುಮಾರು ಅರ್ಧಶತಮಾನದ ಹಿಂದೆಯೇ ಮಾನೊಟೈಪ್ ಯಂತ್ರವನ್ನು ಸರ್ಕಾರಿ ಮುದ್ರಣಾಲಯದಲ್ಲಿಯೂ (ಈ ಮಾನೋಟೈಪ್ ಯಂತ್ರದ ಸಹಾಯದಿಂದ 1934–35ರಲ್ಲಿ ಶ್ರೀಲಂಕಾ ದೇಶದ ಮತದಾರರ ಪಟ್ಟಿಯನ್ನು ಮುದ್ರಿಸಿ ಕೊಟ್ಟಿರುವುದು ಒಂದು ಹೆಮ್ಮೆಯ ವಿಷಯ) ಅನಂತರ ಬೆಂಗಳೂರು ಮುದ್ರಣಾಲಯ, ವೆಸ್ಲಿ ಮುದ್ರಣಾಲಯ ಮುಂತಾದವುಗಳಲ್ಲಿಯೂ ಉಪಯೋಗಿಸಲಾಗಿತ್ತು. ಮೂರು ದಶಕದ ಹಿಂದೆ

ಲೈನೋಟೈಪ್, ಇಂಟರ್ ಟೈಪ್ ಎಂಬ ಅಚ್ಚುಮೊಳೆಗಳ ಪಡಿಯಚ್ಚುಗಳನ್ನು ಜೋಡಿಸಿ ಗಟ್ಟಿಯಾದ ಸಾಲುಗಳನ್ನು ಎರಕಹೊಯ್ಯುವ ಯಂತ್ರಗಳು ಸರ್ಕಾರಿ ಮುದ್ರಣಾಲಯದಲ್ಲಿಯೂ ಅನಂತರ ಬೆಂಗಳೂರು ಮುದ್ರಣಾಲಯ, ಡೆಕ್ಕನ್ ಹೆರಾಲ್ಡ್ ಮುದ್ರಣಾಲಯ ಮುಂತಾದವುಗಳಲ್ಲಿ ಬಳಕೆಯಲ್ಲಿ ಬಂದವು. ಲೈನೋಟೈಪ್ ಮತ್ತು ಇಂಟರ್‌ಟೈಪ್ ಯಂತ್ರದ ಜೋಡಣೆಗೆ ಅನುಕೂಲವಾಗುವಂತೆ, ಕೈಜೋಡಣೆಯ ಬಳಕೆಯಲ್ಲಿರುವ 225 ಕನ್ನಡ ಅಚ್ಚುಮೊಳೆಗಳ ಬದಲಾಗಿ, ಅವನ್ನು 180ಕ್ಕೆ ಇಳಿಸಿ ಮ್ಯಾಟ್ರಿಕ್ಸ್‌ಗಳನ್ನು ತಯಾರಿಸಿಕೊಂಡು ಆಯಾಯ ಯಂತ್ರಗಳಿಗೆ ಅಳವಡಿಸಿಕೊಳ್ಳಲಾಗಿತ್ತು.

ಮುದ್ರಣಯಂತ್ರ ಸ್ಥಾಪನೆಯಲ್ಲಿ ಕರ್ನಾಟಕದಲ್ಲಿಯೂ ಇತರ ದೇಶವಿದೇಶಗಳಂತೆ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಪ್ರಾರಂಭದಲ್ಲಿ ಮುದ್ರಣ ಪ್ರತಿಗಳನ್ನು ಕೈಯಂತ್ರದಿಂದ ಗಂಟೆಗೆ 100–200 ಪ್ರತಿಗಳನ್ನು ತೆಗೆಯುತ್ತಿದ್ದರು. ಅನಂತರ ಕಾಲಿನಿಂದ ಒತ್ತಿ ನಡೆಸುವ ಟ್ರೆಡಲ್, ಕೈಗಳಿಂದ ತಿರುಗಿಸಿ ಪ್ರತಿಗಳನ್ನು ತೆಗೆಯುವ ಸ್ಟಾಪ್‌ಸಿಲಿಂಡರ್ ಪ್ರೆಸ್ ಇವುಗಳು ಬಳಕೆಯಲ್ಲಿದ್ದುವು. ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಪ್ರಾರಂಭವಾದನಂತರ ಈ ಯಂತ್ರಗಳನ್ನು ವಿದ್ಯುತ್ ಮೋಟಾರ್‌ಗಳಿಂದ ನಡೆಯಿಸಿ ಗಂಟೆಗೆ ಸಾವಿರಾರು ಪ್ರತಿಗಳನ್ನು ಮುದ್ರಿಸಲಾಗುತ್ತಿತ್ತು. ಸ್ಟಾಪ್ ಸಿಲಿಂಡರ್ ಯಂತ್ರಗಳು ವಿಶೇಷವಾಗಿ ಬಳಕೆಯಲ್ಲಿದ್ದವು. ಗಂಟೆಗೆ 50 ರಿಂದ 70 ಸಾವಿರ ಪ್ರತಿಗಳನ್ನು ಮುದ್ರಿಸಬಹುದಾದ ರೋಟರಿ ಮುದ್ರಣ ಯಂತ್ರಗಳು ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಮುದ್ರಣಾಲಯ, ಇಂಡಿಯನ್ ಎಕ್ಸ್‌ಪ್ರೆಸ್–ಕನ್ನಡ ಪ್ರಭ–ಆಂಧ್ರ ಪ್ರಭ ಮುದ್ರಣಾಲಯ, ಹಿಂದು ಮುದ್ರಣಾಲಯ, ಸಂಯುಕ್ತ ಕರ್ನಾಟಕ ಮುದ್ರಣಾಲಯ ಮುಂತಾದವುಗಳಲ್ಲಿ ಕೆಲಸ ಮಾಡುತ್ತಿವೆ. ಕರ್ನಾಟಕದಲ್ಲಿ 19ನೆಯ ಶತಮಾನದಲ್ಲಿಯೆ ಲಿಥೂ ಶಿಲೆಯ (ಲಿಥೋ ಸ್ಟೋನ್) ಮುದ್ರಣ ರೂಢಿಯಲ್ಲಿತ್ತು. ಅನಂತರ ಫ್ಲಾಟ್‌ಬೆಡ್ ರೋಟರಿ, ಡೈರೆಕ್ಟ್ ರೋಟರಿ ಯಂತ್ರಗಳು ಬಳಕೆಗೆ ಬಂದುವು. ಆಫ್‌ಸೆಟ್ ರೋಟರಿ ಮುದ್ರಣ ಯಂತ್ರಗಳು ಸಹ ಕರ್ನಾಟಕದ ಸರ್ಕಾರಿ ಮುದ್ರಣಾಲಯ, ಬೆಂಗಳೂರು ಮುದ್ರಣಾಲಯ, ಮಣಿಪಾಲ ಪ್ರೆಸ್ ಮುಂತಾದ ಮುದ್ರಣಾಲಯಗಳಲ್ಲಿ ಕೆಲಸ ಮಾಡುತ್ತಿದ್ದವು.

ಮುದ್ರಣವನ್ನು ಒಂದೇ ವರ್ಣದಲ್ಲಿಯೂ ಒಂದಕ್ಕಿಂತ ಹೆಚ್ಚಾದ ವರ್ಣಗಳಲ್ಲಿಯೂ ಮಾಡುವ ವಿಧಾನಗಳು ಸಹ ಕರ್ನಾಟಕದ ಮುದ್ರಣಾಲಯಗಳಲ್ಲಿ ಬಳಕೆಯಲ್ಲಿದ್ದವು. ತ್ರಿವರ್ಣ ಅಥವಾ ಒಂದೇ ವರ್ಣದ ಪಡಿಯಚ್ಚುಗಳನ್ನು ತಯಾರು ಮಾಡುವ ಅನೇಕ ಸಂಸ್ಥೆಗಳು ಕರ್ನಾಟಕದಲ್ಲಿವೆ. ಇವುಗಳಲ್ಲಿ ಸರ್ಕಾರಿ ಮುದ್ರಣಾಲಯ, ಯಜಮಾನ್ ಅಂಡ್ ಸನ್ಸ್, ಷಣ್ಮುಗಂ ಅಂಡ್ ಕಂಪನಿ ಇನ್ನೂ ಮುಂತಾದುವುಗಳನ್ನು ಹೆಸರಿಸಬಹುದು.

ಬೆಂಗಳೂರಿನ ನೀಲಕಂಟೇಶ್ವರ ಎಂಜಿನಿಯರಿಂಗ್ ವರ್ಕ್ಸ್, ಆರ್.ಡಿ.ಇಂಜಿನಿಯರಿಂಗ್ ವರ್ಕ್ಸ್ ಮುಂತಾದವರು, ಹುಬ್ಬಳ್ಳಿಯ ಕ್ರಾಫ್ಟ್ ಎಂಜಿನಿಯರಿಂಗ್ ಕಂಪನಿಯವರು ಪ್ಲೇಟನ್ ಮುದ್ರಣ ಯಂತ್ರಣಗಳನ್ನು ಮತ್ತು ಸ್ಟಾಪ್ ಸಿಲಿಂಡರ್ ಮುದ್ರಣ ಯಂತ್ರಗಳನ್ನೂ ಬೆಂಗಳೂರಿನ ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಸಂಸ್ಥೆಯವರು ತಮ್ಮ ಕಲಾಮೆಸರಿ (ಕೇರಳ ಪ್ರದೇಶ) ಶಾಖೆಯಲ್ಲಿ ಸ್ವಯಂಚಾಲಿತ ಲೆಟರ್‌ಪ್ರೆಸ್ ಮತ್ತು ಆಫ್‌ಸೆಟ್ ಮುದ್ರಣ ಯಂತ್ರಗಳನ್ನು ತಯಾರಿಸುತ್ತಿದ್ದರು. ಕರ್ನಾಟಕ ಸರ್ಕಾರಿ ಮುದ್ರಣಾಲಯದ ಅಧಿಕಾರಿಗಳೂ ತಮ್ಮ ವರ್ಕ್‌ಷಾಪಿನಲಿಯೇ ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಸಂಸ್ಥೆಯವರ ಸಹಕಾರದಿಂದ, ಒಂದು ಸ್ಟಾಪ್ ಸಿಲಿಂಡರ್ ಯಂತ್ರವನ್ನು ತಯಾರಿಸಿ ಕಾವೇರಿ ಎಂಬ ಹೆಸರಿನಿಂದ ಮುದ್ರಣ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಮುದ್ರಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ತಾಂತ್ರಿಕ ಬದಲಾವಣೆಗಳಾಗಿವೆ. ಡಿ.ಟಿ.ಪಿ. (ಡೆಸ್ಕ್ ಟಾಪ್ ಪಬ್ಲಿಷಿಂಗ್) ಮುದ್ರಣ ವ್ಯವಸ್ಥೆ ಕಾಲಿಟ್ಟ ಅನಂತರ ಅಚ್ಚುಮೊಳೆ ಜೋಡಿಸಿ ಮುದ್ರಿಸುವ ಪರಿಪಾಟ ಬಹುಪಾಲು ನಿಂತುಹೋಗಿದೆ. *

**ಮುಧೋಳ:** ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಬಾಗಲಕೋಟೆ ಜಿಲ್ಲೆಯ ವಾಯವ್ಯ ಭಾಗದಲ್ಲಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಜಮಖಂಡಿ, ಪೂರ್ವದಲ್ಲಿ ಬೀಳಗಿ ಮತ್ತು ಬಾಗಲಕೋಟೆ, ಆಗ್ನೇಯದಲ್ಲಿ ಬಾದಾಮಿ ತಾಲ್ಲೂಕುಗಳೂ ವಾಯವ್ಯ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಬೆಳಗಾಂವಿ ಜಿಲ್ಲೆಯೂ ಸುತ್ತುವರಿದಿದೆ. ತಾಲ್ಲೂಕು ಜಮಖಂಡಿ ಉಪವಿಭಾಗಕ್ಕೆ ಸೇರಿದೆ. ಈ ತಾಲ್ಲೂಕಿನಲ್ಲಿ ಲೋಕಾಪುರ ಮತ್ತು ಮುಧೋಳ ಹೋಬಳಿಗಳು, ಗ್ರಾಮಗಳ ಸಂಖ್ಯೆ 77, ವಿಸ್ತೀರ್ಣ 955.41 ಚ.ಕಿಮೀ. ಜನಸಂಖ್ಯೆ 2,44,316.



ಸೈಯದ್‌ಸಾಬ್‌ಮುತ್ಯಾ ದರ್ಗಾ

ಬೆಳಗಾಂವಿ ಜಿಲ್ಲೆಯಿಂದ ಹರಿದು ಬರುವ ಘಟಪ್ರಭಾ ಮುಧೋಳ ಪಟ್ಟಣಕ್ಕೆ ಪಶ್ಚಿಮದಲ್ಲಿ ಸು. 13 ಕಿಮೀ ದೂರದಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ ತಾಲ್ಲೂಕಿನ ಅಡ್ಡಕ್ಕೆ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿದು ಬಾಗಲಕೋಟೆ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ತಾಲ್ಲೂಕಿನಲ್ಲಿ ಉತ್ತಮ ಸುಣ್ಣಕಲ್ಲು ಸಿಗುವುದಲ್ಲದೆ ಲೋಕಾಪುರ ಮತ್ತು ನದಿ ದಂಡೆಗುಂಟ ಮೆಕ್ಕಲುಮಣ್ಣನ್ನೂ ಮೆದುಕಾವಿಬಣ್ಣದ ಜೇಡಿಮಣ್ಣನ್ನೂ ಕಾಣಬಹುದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 462 ಮಿಮೀ. ಇಲ್ಲಿಯ ಮುಖ್ಯ ಬೆಳೆ ಜೋಳ, ಗೋದಿ, ಸೇಂಗಾ ಮತ್ತು ದ್ವಿದಳ ಧಾನ್ಯಗಳು. ಘಟಪ್ರಭಾ ನದಿ ಎಡದಂಡೆ ಯೋಜನೆಗಳಿಂದ ಈ ತಾಲ್ಲೂಕಿನಲ್ಲಿ ಹೆಚ್ಚು ಭೂಮಿಗೆ ಜಲಸಮೃದ್ಧಿ ಒದಗಿ ಬರುತ್ತಿದೆ. ಪಶುಪಾಲನೆ ವ್ಯವಸಾಯದ ಒಂದು ಅಂಗವಾಗಿ ಬೆಳೆದು ಬಂದಿದೆ. ಅವುಗಳ ರಕ್ಷಣೆಗೆ ಪಶುವೈದ್ಯಾಲಯಗಳಿವೆ. ಸುಣ್ಣ ತಯಾರಿಕೆ, ಉಣ್ಣೆ ಉತ್ಪಾದನೆಗಳು ಇಲ್ಲಿಯ ಕೈಗಾರಿಕೆಗಳು. ವ್ಯಾಪಾರ ವಾಣಿಜ್ಯಕ್ಕೆ ಪೂರಕವಾಗಿ ಬ್ಯಾಂಕುಗಳಿವೆ.

ಮುಧೋಳ ತಾಲ್ಲೂಕಿನ ಬೆಳಗಲಿ ಗ್ರಾಮ ಮುಧೋಳದ ಪಶ್ಚಿಮದಲ್ಲಿ 11ಕಿಮೀ ದೂರದಲ್ಲಿದೆ. ಇದೇ ರನ್ನನ ಜನ್ಮಸ್ಥಳ ಎಂದು ಕೆಲವರು ಹೇಳುವರು. ಚಿತ್ರಭಾನುಕೋಟ ಘಟಪ್ರಭಾ ನದಿದಂಡೆಯಲ್ಲಿರುವ ಚಿಕ್ಕ ಗ್ರಾಮ. ಮುಧೋಳಕ್ಕೆ ಆಗ್ನೇಯದಲ್ಲಿ 22 ಕಿಮೀ ದೂರದಲ್ಲಿದೆ. ಇಲ್ಲಿ ಲೋಕಾಪುರದ ಜ್ಞಾನೇಶ್ವರಿ ಸ್ವಾಮಿಗಳು ತಪಸ್ಸು ಮಾಡಿದ ಪುರಾತನ ಗವಿ ಇದೆ. ಮುಧೋಳಕ್ಕೆ ವಾಯವ್ಯದಲ್ಲಿ 19

ಕಿಮೀ ದೂರದಲ್ಲಿರುವ ಮಹಾಲಿಂಗಪುರ **(ನೋಡಿ)** ಒಂದು ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರ. *

ಮುಧೋಳ ಈ ತಾಲ್ಲೂಕು ಮತ್ತು ಹೋಬಳಿಯ ಕೇಂದ್ರ. ಬಿಜಾಪುರಕ್ಕೆ ನೈಋತ್ಯದಲ್ಲಿ ಜಮಖಂಡಿಯ ದಕ್ಷಿಣಕ್ಕೆ 19 ಕಿಮೀ ದೂರದಲ್ಲಿ ಘಟಪ್ರಭಾ ನದಿ ಎಡದಂಡೆಯ ಮೇಲಿದೆ. ಪಟ್ಟಣ ಇಂದು ವ್ಯಾಪಾರಕೇಂದ್ರವಾಗಿ ವಿಸ್ತರಿಸುತ್ತಿದೆ. ಇದೊಂದು ಪುರಸಭೆ. ಜನಸಂಖ್ಯೆ 42,461.

ಹಿಂದಿನ ಸುಂದರ ಪಟ್ಟಣ 'ಮುದುವಳಲ್' ಇಂದಿನ ಮುಧೋಳವಾಗಿದೆ ಎಂದು ಪ್ರತೀತಿ. ರನ್ನ ಮಹಾಕವಿಯದು ಎಂದು ಹೇಳುವ ಒಂದು ಹಳೆಯ ಮನೆಯನ್ನೂ ಕವಿಯದು ಎಂದು ಒಂದು ಕಲ್ಲಿನ ಮೂರ್ತಿಯನ್ನು ಈಗಲೂ ತೋರಿಸುವುದುಂಟು.

ಮುಧೋಳ ಹಿಂದೆ ಸಂಸ್ಥಾನಿಕ ಪ್ರದೇಶವಾಗಿದ್ದು ಆ ಸಂಸ್ಥಾನಿಕರ ಹಳೆಯ ವಾಡೆ ಇದೆ. ಊರಿನ ಉತ್ತರ ಭಾಗದಲ್ಲಿ ಮುಸ್ಲಿಂ ಸಂತನೊಬ್ಬನ ದರ್ಗಾ ಇದೆ. **(ಎಸ್.ವಿ.ಪಿ.;*)**

**ಮುನಿರಾಬಾದ್:** ಕೊಪ್ಪಳ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಪಟ್ಟಣ. ಔದ್ಯೋಗಿಕ ಕೇಂದ್ರ. ಕೊಪ್ಪಳದಿಂದ 23 ಕಿಮೀ ದೂರದಲ್ಲಿ ಹುಬ್ಬಳ್ಳಿ–ಗುಂತಕಲ್ ರೈಲುಮಾರ್ಗದಲ್ಲಿದೆ. ಹೊಸಪೇಟೆಯಿಂದ ಇಲ್ಲಿಗೆ 8 ಕಿಮೀ. ಜನಸಂಖ್ಯೆ 8,115. ತುಂಗಭದ್ರಾ ಅಣೆಕಟ್ಟಿನ ನಿರ್ಮಾಣದಿಂದ ಈ ಪಟ್ಟಣಕ್ಕೆ ವಿಶೇಷ ಮಹತ್ತ್ವ ಬಂದಿದೆ. ಪಟ್ಟಣ ಇರುವುದು ಕಟ್ಟೆಯ ಎಡಪಕ್ಕದಲ್ಲಿಯೇ. ಈ ಪಟ್ಟಣಕ್ಕೆ ಹೊಂದಿಕೊಂಡಂತಿರುವ ಪಂಪಾಸಾಗರ ಜಲಾಶಯ ದಂಡೆಯ ಬೆಟ್ಟದ ಮೇಲೆ ಕೈಲಾಸವೆಂದು ಕರೆಯಲಾಗುವ ಅತ್ಯಾಧುನಿಕ ಸೌಕರ್ಯಗಳುಳ್ಳ ಬೃಹತ್ ಕಟ್ಟಡ, ಸಮೀಪದ ಹೂವಿನ ತೋಟ–ಇವು ಇಲ್ಲಿನ ಆಕರ್ಷಣೆಗಳು. ಇಲ್ಲಿನ ತೋಟ ಜಪಾನಿ ಪದ್ಧತಿಯಂತೆ ರಚಿಸಿದವುಗಳಲ್ಲಿ ರಾಜ್ಯದಲ್ಲಿಯೇ ಪ್ರಪ್ರಥಮವಾದುದು.

1944ರಲ್ಲಿ ಇಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪಿತವಾಯಿತು. ಆದರೆ ಮೊದಲಿಗೆ ರಜಕಾರರ ಹಾವಳಿಯಲ್ಲಿ ಈ ಕಾರ್ಖಾನೆ ಹಾಳಾಗಿತ್ತು. ಈಗ ಇಂಡಿಯಾ ಷುಗರ್ ರಿಫೈನರಿ ಲಿಮಿಟೆಡ್ ಎಂಬ ಹೆಸರಿನಲ್ಲಿ ಉತ್ತಮಗೊಂಡಿದೆ. ಇಲ್ಲಿರುವ ಚಾಮುಂಡಿ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಎಂಬ ಗೊಬ್ಬರ ಕಾರ್ಖಾನೆ ಸಲ್ಫ್ಯೂರಿಕ್ ಆ್ಯಸಿಡ್ ಮತ್ತು ಸೂಪರ್ ಫಾಸ್ಫೇಟ್ ತಯಾರಿಸುತ್ತದೆ. ದಿ ತುಂಗಭದ್ರಾ ಪಲ್ಪ್ ಮತ್ತು ಬೋರ್ಡ್ ಫ್ಯಾಕ್ಟರಿಯಿಂದ ಕಾಗದದ ಕಚ್ಚಾ ಸಾಮಗ್ರಿ ಉತ್ಪಾದನೆಗೊಳ್ಳುತ್ತದೆ. 1963ರಿಂದ ಹೈಡ್ರೋ ಎಲೆಕ್ಟ್ರಿಕ್ ಪವರ್ ಹೌಸ್ ಸ್ಥಾಪನೆಯಾಗಿದೆ. ಜನರೇಟಿಂಗ್ ಸ್ಟೇಷನ್, ರಾಜ್ಯ ವಿದ್ಯುತ್ ಮಂಡಲಿಯ ವೃತ್ತ ಕಛೇರಿ ಇದೆ. ಇಲ್ಲಿಂದ ಜಿಲ್ಲೆಯ ನಾನಾ ಕಡೆಗಳಿಗೆ ಉತ್ತಮ ರಸ್ತೆ ಸೌಲಭ್ಯವಿದೆ.

ಇಲ್ಲಿರುವ 1088ರ ಶಾಸನವೊಂದರ ಪ್ರಕಾರ ಚಾಳುಕ್ಯ ಆರನೆಯ ವಿಕ್ರಮಾದಿತ್ಯ ಈ ಊರನ್ನು ಚೌವೇದಿ (ಚತುರ್ವೇದಿ) ಭಟ್ಟನಿಗೆ ದಾನ ಕೊಟ್ಟನೆಂದು ತಿಳಿದುಬರುತ್ತದೆ. ಆತ ಆಗಲೇ ತುಂಗಭದ್ರಾ ನದಿಗೆ ಕಾಲುವೆ ತೆಗೆಯಿಸಿದ್ದನಂತೆ. ಹುಲುಗಿ ಎಂಬುದು (ಸಂಸ್ಕೃತದಲ್ಲಿ ವ್ಯಾಘ್ರಪುರಿ) ಈ ಊರಿನ ಪ್ರಾಚೀನ ಹೆಸರು. ಇಲ್ಲಿ 13ನೆಯ ಶತಮಾನದಲ್ಲಿ ಕಟ್ಟಿಸಿದ್ದ ಪ್ರಸಿದ್ಧ ಹುಲಿಗೆಮ್ಮನ ದೇವಾಲಯವಿದೆ. ದೇವಾಲಯದ ಎದುರಿಗೆ 25 ಅಡಿ ಎತ್ತರವಾದ ಧ್ವಜಸ್ತಂಭವಿದೆ. ದೇವಾಲಯದ ಆವರಣದಲ್ಲಿ ಪರಶುರಾಮನ ಗುಡಿಯಿದೆ. ಸಮೀಪದಲ್ಲಿಯೇ ಪಂಚಲಿಂಗೇಶ್ವರ ದೇವಾಲಯವಿದೆ. ಇಲ್ಲಿ ಒಂದು ಜೈನ ಬಸದಿಯೂ ಉಂಟು. ಪ್ರತಿವರ್ಷ ಹುಲಿಗೆಮ್ಮನ ಜಾತ್ರೆ ದೊಡ್ಡ ಪ್ರಮಾಣದಲ್ಲಿ ವೈಭವದಿಂದ ನಡೆಯುತ್ತದೆ. **(ಎಸ್.ಎಸ್.ಬಿ.)**

**ಮುಪ್ಪಿನ ಷಡಕ್ಷರಿ:** ಸು. 1500. ವೀರಶೈವ ಕವಿ. ನಿಜಗುಣ ಶಿವಯೋಗಿಯ ಸಮಕಾಲೀನನಿದ್ದಂತೆ ತೋರುತ್ತದೆ. ಈತನ ಊರು ಉಪ್ಪಿನಹಳ್ಳಿ ಇಲ್ಲವೆ ಉಕ್ಷಪುರ (ನಂದಿಪುರ)ವಾಗಿರಬಹುದು. ತೋಂಟದ ಸಿದ್ಧಲಿಂಗ ಯತಿಯ ಶಿಷ್ಯಪರಂಪರೆಗೆ ಸೇರಿದ ಎರಗಂಬಳ್ಳಿಯ ಸಿದ್ಧಲಿಂಗ ಈತನ ಗುರು ಎಂಬ ಊಹೆ ಇದೆ. ಕವಿ 74 ಕೈವಲ್ಯಪದ್ಯಗಳನ್ನೂ ಶಿವಪೂಜಾಷ್ಟಕ, ಶಿವ ಯೋಗಾಷ್ಟಕ ಎಂಬ ಕೃತಿಗಳನ್ನೂ ಬರೆದಿದ್ದಾನೆ.

ಶಿವಪೂಜಾಷ್ಟಕ ಮತ್ತು ಶಿವಯೋಗಾಷ್ಟಕಗಳಲ್ಲಿ 9 ಕಂದಗಳಿವೆ. ಕೈವಲ್ಯ ಪದಗಳು ಭಾವಪೂರ್ಣವೂ ಸರಳವೂ ಭಕ್ತಿಭರಿತವೂ ಜನಪ್ರಿಯವೂ ಆಗಿವೆ. ಇವುಗಳಲ್ಲಿ ಅಲ್ಲಲ್ಲಿ ಷಡಕ್ಷರಯ್ಯ ಎಂಬ ಅಂಕಿತ ದೊರೆಯುತ್ತದೆ. ಈ ಪದಗಳಲ್ಲಿ ಕವಿಯ ವ್ಯಕ್ತಿತ್ವ ಮೂಡಿಬಂದಿದೆ. ಮನದ ಮರ್ಕಟತನವನ್ನು ತಡೆಯುವ, ಈಶ ಕೃಪೆಯನ್ನು ಬೇಡುವ, ಸಮತಾಭಾವವನ್ನು ರೂಢಿಸುವ, ಭಕ್ತಿವಿರಕ್ತಿಗಳನ್ನು ಬೋಧಿಸುವ ನಿಸ್ಪೃಹಿಯಾಗುವ, ಹೊರಗೆ ಮೆರೆದು ತನ್ನ ತಾನು ತಿಳಿಯುವ ಉತ್ಕಟಭಾವ – ಇವು ಕೃತಿಯಲ್ಲಿ ಸುಂದರವಾಗಿ ಹೊರಹೊಮ್ಮಿವೆ. ಈಗಲೂ ಇವುಗಳನ್ನು ಭಕ್ತಿಪೂರ್ವಕವಾಗಿ ಹಾಡಲಾಗುತ್ತದೆ. ಈ ಮೂರು ಗ್ರಂಥಗಳೂ ಸುಬೋಧಸಾರ ಎಂಬ ಹೆಸರಿನಲ್ಲಿ ಪ್ರಕಟಗೊಂಡಿವೆ (1940). ಕೈವಲ್ಯಪದ್ಧತಿಯ ಹಾಡುಗಳನ್ನು ರಚಿಸಿದ ಪರಂಪರೆಯಲ್ಲಿ ನಿಜಗುಣಶಿವಯೋಗಿಯನ್ನು ಬಿಟ್ಟರೆ ಈತ ಎರಡನೆಯವನಾಗಿ ನಿಲ್ಲುತ್ತಾನೆ.

ಈತನ ಸಮಾಧಿ ಕೊಳ್ಳೇಗಾಲ ತಾಲ್ಲೂಕಿನ ಶಂಭುಲಿಂಗನ ಬೆಟ್ಟದಲ್ಲಿ ಇದೆ ಎಂದು ಪ್ರತೀತಿ. **(ಎಸ್.ಎಸ್.ಎಂಎ.)**

**ಮುರಳೀಧರರಾವ್, ಕೆ.:** 1924– . ಪ್ರಸಿದ್ಧ ನಾಟ್ಯಾಚಾರ್ಯ ಹಾಗೂ ಚಿತ್ರಕಲಾವಿದರು. 1924ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡಿನಲ್ಲಿ ಜನಿಸಿದರು. ಇವರ ತಂದೆ ವೃತ್ತಿಯಲ್ಲಿ ಅಧ್ಯಾಪಕರಾಗಿದ್ದರು. ಚಿಕ್ಕಪ್ಪ ಯಕ್ಷಗಾನ ಕಲಾವಿದರು. ಮನೆತನದಲ್ಲಿ ಕಲೆಯ ಸಂಸ್ಕಾರವಿತ್ತು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಎಸ್.ಎಸ್.ಎಲ್.ಸಿ.

ವರೆಗೆ ತಮ್ಮ ವಿದ್ಯಾಭ್ಯಾಸವನ್ನು ಮುಕ್ತಾಯ ಮಾಡಬೇಕಾಯಿತು. ಜೀವನೋಪಾಯಕ್ಕಾಗಿ ಶೀಘ್ರಲಿಪಿ, ಬೆರಳಚ್ಚು ತರಬೇತಿಗಳನ್ನೂ ಪಡೆದಿದ್ದರು.

ಮೊದಮೊದಲು ಇವರ ಆಸಕ್ತಿ ಇದ್ದದ್ದು ರೇಖಾಚಿತ್ರ, ವರ್ಣಚಿತ್ರ ಹಾಗೂ ಛಾಯಾಗ್ರಹಣಗಳಲ್ಲಿ. ನಾಟ್ಯದ ಬಗೆಗೆ ಒಲವು ಮೂಡಿದಾಗ ಇವರಿಗೆ ಸು.28 ವರ್ಷಗಳಾಗಿದ್ದವು. ಇವರು ಮುಂಬಯಿಯಲ್ಲಿ ಕೆಲಕಾಲ ನೆಲೆಸಿದ್ದಾಗ ರಾಜನ್ ಅಯ್ಯರ್ ಎಂಬ ಕಥಕ್ಕಳಿ ಶೈಲಿಯಲ್ಲಿ ಪ್ರಸಿದ್ಧರಾಗಿದ್ದ ನೃತ್ಯಗುರುಗಳ ಪರಿಚಯವಾಗಿ ಅವರೇ ಇವರ ಮೊದಲ ನಾಟ್ಯಗುರುವಾದರು. ರಾಜನ್ ಅಯ್ಯರ್ ಅವರನ್ನು ಮಂಗಳೂರಿಗೆ ಆಹ್ವಾನಿಸಿ ಲಲಿತ ಕಲಾ ಕೇಂದ್ರ ಎಂಬ ನೂತನ ಕಲಾಶಾಲೆಯನ್ನು ಆರಂಭಿಸಿದರು. ಅಷ್ಟಕ್ಕೆ ತೃಪ್ತಿಯಾಗದೆ ನೃತ್ಯಕಲೆಯ ಹೆಚ್ಚಿನ ಅಭ್ಯಾಸಕ್ಕಾಗಿ ಪಂದನಲ್ಲೂರು ಶೈಲಿಯ ನ್ಯಾಸಧಾರಿ ನಾಟ್ಯಕಲಾನಿಧಿ ಚೊಕ್ಕಲಿಂಗಂ ಪಿಳ್ಳೆಯವರಲ್ಲಿಗೆ ಹೋಗಿ ಮದರಾಸಿನಲ್ಲಿ

ಎರಡು ತಿಂಗಳ ಕಾಲ ಪ್ರಾರಂಭಿಕ ಶಿಕ್ಷಣ ಪಡೆದರು. ಅನಂತರ ಕೊಚ್ಚಿನ್‌ನಲ್ಲಿ ಚೊಕ್ಕಲಿಂಗಂ ಅವರ ಶಿಷ್ಯ ರಾಜರತ್ನಂ ಪಿಳ್ಳೆಯವರಲ್ಲಿ ಐದು ವರ್ಷಗಳ ಕಾಲ ನೃತ್ಯಾಭ್ಯಾಸ ಮಾಡಿದರು. ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲ ಪ್ರಮುಖ ಶಾಸ್ತ್ರಗ್ರಂಥಗಳನ್ನೂ ಸ್ವಂತ ಪರಿಶ್ರಮದಿಂದ ಆಳವಾಗಿ ಅಧ್ಯಯನ ಮಾಡಿ ಪರಂಪರೆಯ ಹೆಸರಿನಲ್ಲಿ ಜಡವಾಗಿದ್ದ ಭರತನಾಟ್ಯದಲ್ಲಿ ಹೊಸ ಹೊಸ ಅನ್ವೇಷಣೆ ಮಾಡಿ ಸ್ವಂತಿಕೆಯ ಛಾಪನ್ನು ಮೂಡಿಸಿದರು. ಶಾಸ್ತ್ರಾಭ್ಯಾಸದಲ್ಲಷ್ಟೇ ಅಲ್ಲದೆ ನೃತ್ಯಕಲೆಗೆ ಪೂರಕವಾದ ಎಲ್ಲ ಲಲಿತಕಲೆಗಳಲ್ಲಿಯೂ ಇವರು ಪರಿಣತಿ ಸಾಧಿಸಿದ್ದಾರೆ. ನೃತ್ಯಲೋಕ ಎಂಬುದು ಭರತನಾಟ್ಯವನ್ನು ಕುರಿತ ಇವರ ಬೃಹತ್ ಶಾಸ್ತ್ರಗ್ರಂಥ. ಈ ಗ್ರಂಥದಲ್ಲಿ ವಿಷಯ ನಿರೂಪಣೆಗೆ ಪೂರಕವಾಗಿ 345 ರೇಖಾಚಿತ್ರಗಳನ್ನು ಸ್ವತಃ ಇವರೇ ಚಿತ್ರಿಸಿದ್ದಾರೆ. ಅಲ್ಲದೆ ತಾವೇ ಸ್ವತಃ ತೆಗೆದ 63 ಛಾಯಾಚಿತ್ರಗಳನ್ನೂ ಈ ಕೃತಿಯಲ್ಲಿ ಅಳವಡಿಸಿದ್ದಾರೆ. ನೃತ್ಯಕ್ಕೆ ಸಂಬಂಧಿಸಿದ ಇವರ ಹಲವಾರು ವಿದ್ವತ್ ಲೇಖನಗಳು ಪ್ರಸಿದ್ಧ ವೃತ್ತಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ಪಠ್ಯಪುಸ್ತಕ ನಿರ್ದೇಶನಾಲಯದ ಸಮಿತಿಯಲ್ಲಿಯೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿಯೂ ಇದ್ದು ಇವರು ಸೇವೆ ಸಲ್ಲಿಸಿದ್ದಾರೆ.

ಇವರ ನಾಟ್ಯಪರಂಪರೆಯನ್ನು ಮುಂದುವರಿಸುತ್ತಿರುವ ಹಲವಾರು ಶಿಷ್ಯರು ನಾಡಿನಾದ್ಯಂತ ಇದ್ದಾರೆ. ಫ್ರೆಂಚ್ ಮೂಲದ ಇವರ ಶಿಷ್ಯೆ ಕಾಟಿಯಾ ಲೇಜೆರೆ ಭರತನಾಟ್ಯದ ಕಂಪನ್ನು ಫ್ರಾನ್ಸಿನಲ್ಲಿಯೂ ಹರಡುತ್ತಿದ್ದಾಳೆ. 1982ರಲ್ಲಿ ಫ್ರೆಂಚ್ ಸರ್ಕಾರದ ಕೋರಿಕೆಯ ಮೇರೆಗೆ ಪ್ಯಾರಿಸ್‌ನಲ್ಲಿ ನಡೆದ ಇಂಡಿಯನ್ ಯೂತ್ ಫೆಸ್ಟಿವಲ್‌ನಲ್ಲಿ ಇವರು ಭಾಗವಹಿಸಿದ್ದರು.

ಚಿತ್ರಕಲಾವಿದರಾಗಿ ಮಂಗಳೂರಿನ ಶಾರದಾ ಪ್ರೆಸ್ ಪ್ರಕಟಿಸಿದ ಕನ್ನಡ ಭೂಪಟವನ್ನು ಚಿತ್ರಿಸಿದ ಕೀರ್ತಿ ಇವರದು (1960–62). ನಿರಂಜನರ ಸಂಪಾದಕತ್ವದಲ್ಲಿ ಪ್ರಕಟವಾದ (1970–74) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ ವಿಭಾಗದಲ್ಲಿ ಚಿತ್ರ ಸಂಪಾದಕರಾಗಿ ಇವರು ಸೇವೆ ಸಲ್ಲಿಸಿದ್ದಾರೆ. ವಿಶ್ವಕೋಶದ ಲೇಖನಗಳಿಗೆ ಸೂಕ್ತ ಚಿತ್ರಗಳನ್ನು ಸಂಪಾದಿಸುವುದರ ಜೊತೆಗೆ ಹಲವಾರು ಚಿತ್ರಗಳನ್ನು ತಾವೇ ಸ್ವತಃ ಬಿಡಿಸಿದ್ದಾರೆ. ಹಲವಾರು ಸಾಹಿತಿಗಳ ಗ್ರಂಥಗಳಿಗೆ ಮುಖಪುಟ ವಿನ್ಯಾಸ ಮಾಡಿರುವ ಹಿರಿಮೆಯೂ ಇವರದು.

ಇವರ ಕಲಾಸೇವೆಗೆ ಸಂದ ಸನ್ಮಾನ, ಪ್ರಶಸ್ತಿ, ಬಿರುದುಗಳು ಅನೇಕ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾ ತಿಲಕ ಪ್ರಶಸ್ತಿ (1990), ರಾಜ್ಯ ಸರ್ಕಾರದ ಪ್ರತಿಷ್ಠಿತ ಶಾಂತಲಾ ಪ್ರಶಸ್ತಿ (2000) ಇವು ಬಹು ಮುಖ್ಯ ಪ್ರಶಸ್ತಿಗಳು. ಈಗಲೂ ವೃದ್ಧಾಪ್ಯದಲ್ಲಿಯೂ ಉತ್ಸಾಹದಿಂದ ಮೈಸೂರು, ಬೆಂಗಳೂರು, ಮಂಗಳೂರು, ಮಡಿಕೇರಿ ಮೊದಲಾದೆಡೆಗಳಲ್ಲಿ ನೃತ್ಯಪಾಠ ಮಾಡುತ್ತಿರುವ ಇವರ ಕಲಾಸೇವೆ ಅನನ್ಯವಾದದ್ದು.

(ಎಚ್.ಆರ್.ಎಲ್.)

**ಮುರಿಗೆ ದೇಶಿಕೇಂದ್ರ:** ಸು. 1540. ವೀರಶೈವಕವಿ. ರಾಜೇಂದ್ರ ವಿಜಯ ಎಂಬ ಕಾವ್ಯದ ಕರ್ತೃ. ಈತ ಬಿಜಾಪುರ ಜಿಲ್ಲೆಯ ಗುಳೇದಗುಡ್ಡದ ಮುರಿಗೆಮಠದ ಪೀಠಾಧಿಕಾರಿಯಾಗಿದ್ದಂತೆ ತೋರುತ್ತದೆ. ಮುರಿಗೆ ಶಾಂತವೀರ ಇವನ ಗುರುವಾಗಿದ್ದಿರಬಹುದೆಂಬ ಊಹೆ ಇದೆ. ಕವಿ ತನ್ನ ಹೆಸರನ್ನು ಕಾವ್ಯದಲ್ಲಿ ಎಲ್ಲೂ ಹೇಳಿಕೊಂಡಿಲ್ಲ. ಒಂದು ಹಳೆಯ ಹಸ್ತಪ್ರತಿಯ ಪ್ರತಿಕಾರನಿಂದ ರಾಜೇಂದ್ರ ವಿಜಯದ ಕರ್ತೃ ಈತನೇ ಎಂದು ತಿಳಿಯುತ್ತದೆ.

ರಾಜೇಂದ್ರ ವಿಜಯ ಚಂಪೂಗ್ರಂಥ. 9 ಪ್ರಕರಣ ಹಾಗೂ 750 ಪದ್ಯಗಳನ್ನೊಳಗೊಂಡಿದೆ. ಇದಕ್ಕೆ ಹಮ್ಮೀರ ಕಾವ್ಯ, ಮನುರಾಜನ ಕಾವ್ಯ ಎಂಬ ಹೆಸರುಗಳೂ ಇವೆ. ಇದರಲ್ಲಿ ಪ್ರಭುದೇವನ ಗುರುವಾದ ಅನಿಮೇಷದೇವನ ಜೀವನ ಚರಿತ್ರೆ ನಿರೂಪಿತವಾಗಿದೆ. ಅಲ್ಲಲ್ಲಿ ಇತರ ವ್ಯಕ್ತಿಗಳ ಕಥೆಗಳೂ ಇವೆ. ಸಿಂಗಿರಾಜನ (ಸು. 1500) ಅಮಲಬಸವಪುರಾಣದಲ್ಲಿನ ಅನಿಮಿಷಯ್ಯನ ಕಥೆ ಈ ಕೃತಿಗೆ ಆಕರ. ಜೊತೆಗೆ ಚಾಮರಸನ (ಸು. 1430) ಪ್ರಭುಲಿಂಗಲೀಲೆಯಿಂದಲೂ ಕವಿ ಪ್ರಭಾವಿತನಾಗಿದ್ದಾನೆ. ಈತನಿಗೆ ಕನ್ನಡ–ಸಂಸ್ಕೃತಗಳ ಪ್ರಯೋಗದಲ್ಲಿ ಸರಿಸಮನಾದ ಪ್ರಭುತ್ವವಿದೆ. ಅಲಂಕಾರಗಳನ್ನು ಹಿತಮಿತವಾಗಿ ಬಳಸಿದ್ದಾನೆ. *

**ಮುರಿಗೆಪ್ಪಣ್ಣ ಚೆಟ್ಟಿ:** 1907– . ನೈಜ ಚಿತ್ರಕಲೆಯ ಚಿತ್ರಕಲಾವಿದ. ಇವರದು ಶರಣಪರಂಪರೆಯ ಮನೆತನ. ಕಲಾಕಾರರಾದ ಅಡಿವೆಪ್ಪ ದಂಪತಿಗಳಿಗೆ ಮಗನಾಗಿ 1907 ಮಾರ್ಚ್ 9ರಂದು ಬೆಳಗಾಂವಿ ಜಿಲ್ಲೆ ಅಥಣಿಯಲ್ಲಿ ಜನಿಸಿದರು. ಪ್ರಾಥಮಿಕ, ಮಾಧ್ಯಮಿಕ ಶಾಲೆಯಲ್ಲಿ ಚಿತ್ರಕಲಾ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸುತ್ತಿದ್ದರು. ಕಲೆಯ ಕಾಶಿ ಎನಿಸಿದ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಸಂಸ್ಥೆಯಲ್ಲಿ ಚಿತ್ರಕಲಾ ಶಿಕ್ಷಣ ಪಡೆದ ಅನಂತರ ಕಲಾರಾಧನೆಗೆ ತೊಡಗಿದರು. ಡಿಪ್ಲೊಮಾ ಪರೀಕ್ಷೆಯಲ್ಲಿ ಇವರು ರಚಿಸಿದ ತೈಲಮಾಧ್ಯಮದ ಕೃಷ್ಣಾರ್ಜುನ ಯುದ್ಧದ ಸನ್ನಿವೇಶದ ಚಿತ್ರಕ್ಕೆ ಪ್ರಥಮ ಬಹುಮಾನ ಹಾಗೂ ಸ್ವರ್ಣ ಪದಕ ದೊರಕಿತು (1924). ಅನಂತರ ಫೆಲೋಷಿಪ್‌ಗೆ ಆಯ್ಕೆಗೊಂಡರು (1931–34).

ಸುಮಾರು ಹತ್ತುಸಾವಿರಕ್ಕೂ ಹೆಚ್ಚು ಭಾವಚಿತ್ರ, ರೇಖಾಚಿತ್ರ, ಸಂಯೋಜನ ಚಿತ್ರ ಮತ್ತು ನಿಸರ್ಗ ಚಿತ್ರಗಳನ್ನು ರಚಿಸಿರುವ ಚೆಟ್ಟಿಯವರು ಗದುಗಿನ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಸಿರಿವಂತಗೊಳಿಸಿದವರಲ್ಲಿ ಮೊದಲಿಗರು. ಅಭಿವ್ಯಕ್ತಿಗಿಂತ ಶರಣ ಪರಂಪರೆಯ ಕಥಾವಸ್ತುವಿಗೆ ಪ್ರಾಮುಖ್ಯತೆ ನೀಡಿ ಕಲ್ಪನೆಗೆ ಹೊಸ ರೂಪ ಕೊಡುವಲ್ಲಿ ಸಿದ್ಧ ಹಸ್ತರು. ನಾಡಿನ ಅನೇಕ ಶಿವಶರಣರು ಇವರ ಕುಂಚದಲ್ಲಿ ಅರಳಿದ್ದಾರೆ. ಭಾವಚಿತ್ರಗಳಲ್ಲಿ ರಾಜಮಹಾರಾಜರ ಪೇಟಗಳಲ್ಲಿ ಮತ್ತು ಆಭರಣಗಳಲ್ಲಿ ಬಂಗಾರದ ಹೊಳಪನ್ನು ನೈಜವಾಗೆ ಬಣ್ಣದ ಬಳಕೆಯಿಂದ ಚಿತ್ರಿಸುವುದು ಇವರಿಗೆ ಬಂದ ದೈವದತ್ತ ಕೊಡುಗೆ.

ಉದಯಪುರದ ಅರಮನೆಯ ಆವರಣದಲ್ಲಿದ್ದ ಜಲಮಂದಿರದ ನಿಸರ್ಗಚಿತ್ರ ಬಿಡಿಸಿದಾಗ ಅದನ್ನು ಮೆಚ್ಚಿದ ಮಹಾರಾಜರು ಚಿತ್ರವನ್ನು ಅರಮನೆಗಾಗಿ ಸಂಗ್ರಹಿಸಿ ಪುರಸ್ಕಾರ ನೀಡಿ ಗೌರವಿಸಿದರು. ಕಲಾಶಾಲೆಯ ಸುಂದರ ತೋಟದಲ್ಲಿದ್ದ ಗಿಡವೊಂದರ ಬೊಡ್ಡೆಯನ್ನು ಮೋಹಕವಾಗಿ ಚಿತ್ರಿಸಿದ್ದನ್ನು ಕಂಡು ಗುರುಗಳಾದ ಸೊಲೊಮನ್ ಅವರು ಅದನ್ನು ಶಾಲೆಯ ಗ್ಯಾಲರಿಗಾಗಿ ಸಂಗ್ರಹಿಸಿ ಅದರ ಪ್ರತಿಕೃತಿಯನ್ನು ಇಂಗ್ಲೆಂಡಿಗೆ ಕಳುಹಿಸಿದರು. ಅದು ಅಲ್ಲಿಯೂ ಮೆಚ್ಚುಗೆ ಗಳಿಸಿತು. ಮಠಮಂದಿರಗಳಲ್ಲಿ ಕಂಡುಬರುವ ಹಲವು ಕೃತಿಗಳಲ್ಲಿ ಸಿದ್ಧಲಿಂಗೇಶ್ವರಸ್ವಾಮಿಯ ಮೂಲಚಿತ್ರವನ್ನು ಪ್ರಥಮವಾಗಿ ಚಿತ್ರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಚಾಂದ ಸಂಸ್ಥಾನದ ಮಹಾರಾಜರು ಏರ್ಪಡಿಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ಇವರು ರಚಿಸಿದ ವಿಶ್ವರೂಪದರ್ಶನ ತೈಲಚಿತ್ರಕ್ಕೆ ಮಹಾರಾಜರ ಚಿನ್ನದ ಪದಕ ದೊರಕಿತು. ಹುಬ್ಬಳ್ಳಿಯ ಜಗದ್ಗುರು ಮೂರುಸಾವಿರ ಮಠದ ಗ್ರಂಥಮಾಲೆಯ ವೀರಶೈವ ಭಾರತಿ ಪುಸ್ತಕ ಸಂಪದಕ್ಕೆ ಶರಣರ ಅಸಂಖ್ಯಾತ ಚಿತ್ರಗಳನ್ನು ರಚಿಸಿರುವ ಚೆಟ್ಟಿಯವರ ಅನೇಕ ಉತ್ತಮ ಕೃತಿಗಳು ದೇಶದ ಅನೇಕ ಮಠ ಮಂದಿರಗಳಲ್ಲಿ ಅಲಂಕೃತಗೊಂಡಿವೆ.

ಇವರ ಪ್ರತಿಭೆಯನ್ನು ಗೌರವಿಸಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರಕಿವೆ. ಅವುಗಳಲ್ಲಿ ವೆಂಕಟಪ್ಪ ಪ್ರಶಸ್ತಿ (1996), ಆಚಾರ್ಯ ಪ್ರಶಸ್ತಿ (1998), ರಾಜ್ಯ ಪ್ರಶಸ್ತಿ ಹಾಗೂ ಲಲಿತಕಲಾ ಅಕಾಡಮಿಯ ಪ್ರಶಸ್ತಿಗಳು ಉಲ್ಲೇಖನೀಯ. ಕಲೆಯನ್ನು ಜೀವನದಲ್ಲಿ ಹಾಸುಹೊಕ್ಕಾಗಿಸಿಕೊಂಡ

ಚೆಟ್ಟಿಯವರು ಸರಳರು ಹಾಗೂ ಉದಾರಿಗಳು. ಗದುಗಿನಲ್ಲಿರುವ ತಮ್ಮ ಸ್ವಂತ ನಿವಾಸ ಆರ್ಟ್ ಗ್ಯಾಲರಿಯಾಗಬೇಕೆಂಬುದು ಇವರ ಆಕಾಂಕ್ಷೆ.

(ಎಸ್‌ಯು.ಎಂ.)

**ಮುರುಗೋಡು:** ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನಲ್ಲಿರುವ ಐತಿಹಾಸಿಕ ಸ್ಥಳ. ಇಲ್ಲಿ ವೀರಶೈವರ ಪ್ರಖ್ಯಾತವಾದ ದುರುದುಂಡೇಶ್ವರ ಮಠವಿದೆ. ಈ ಊರಿನ ಬೆಟ್ಟದ ಕಣಿವೆಯಲ್ಲಿ ಅನೇಕ ಗವಿಗಳಿವೆ. ಕಲ್ಯಾಣದ ಕ್ರಾಂತಿಯಾದ ಮೇಲೆ ಉಳುವಿಯ ಮಹಾಮನೆಗೆ ಹೋಗುವ ದಾರಿಯಲ್ಲಿ ಚೆನ್ನಬಸವಣ್ಣ, ಅಕ್ಕನಾಗಮ್ಮ, ರುದ್ರಮುನಿಸ್ವಾಮಿ, ಮಡಿವಾಳ ಮಾಚಯ್ಯ ಮೊದಲಾದ ಶಿವಶರಣರು ಈ ಬೆಟ್ಟದ ಗವಿಗಳಲ್ಲಿ ಆತ್ಮಸಂರಕ್ಷಣೆಗಾಗಿ ಇದ್ದರೆಂಬ ಪ್ರತೀತಿ ಇದೆ. ಬಿಜ್ಜಳನ ಸೈನ್ಯ ಇಲ್ಲಿಗೂ ಬೆನ್ನಟ್ಟಿ ಬಂದಾಗ ಶರಣರು ಶಸ್ತ್ರಸಜ್ಜಿತರಾಗಿ ಶತ್ರುಗಳನ್ನು ಸದೆಬಡಿದರು ಎಂದು ಪ್ರತೀತಿ. ಆದ್ದರಿಂದ ಈ ಊರಿಗೆ ಮುರಿದೋಡು ಅಥವಾ ಮುರುಗೋಡು ಎಂಬ ಹೆಸರು ಬಂದಿತೆಂದು ತಿಳಿದುಬರುತ್ತದೆ. *

**ಮುರ್ಡೇಶ್ವರ:** ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕಿನ ಕಡಲ ತೀರದ ಗ್ರಾಮ. ಪ್ರವಾಸಿ ಕೇಂದ್ರ. ಪ್ರಕೃತಿ ಸೌಂದರ್ಯಕ್ಕೆ ಹೆಸರಾದದ್ದು. ಭಟ್ಕಳದ ಉತ್ತರಕ್ಕೆ 15 ಕಿಮೀ ಹಾಗೂ ಹೊನ್ನಾವರಕ್ಕೆ 27 ಕಿಮೀ ದೂರದಲ್ಲಿದೆ. ಈ ಗ್ರಾಮದ ಮೂರು ಕಡೆ ಬತ್ತದ ಗದ್ದೆ, ತೆಂಗಿನಮರ ಹಾಗೂ ಬೆಟ್ಟಗಳ ಸಾಲು ಸುತ್ತುವರಿದಿದ್ದು ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ತೀರದ ಸೊಬಗು ಇದೆ. ಕೃಷಿ, ಮೀನುಗಾರಿಕೆ- ಇವು ಇಲ್ಲಿಯ ಮುಖ್ಯ ಉದ್ಯೋಗ. ಮುರ್ಡೇಶ್ವರದ ರೇವು ಅತ್ಯಂತ ಸುಂದರ. ಇಲ್ಲಿಯ ಹವೆ ಆರೋಗ್ಯಕರವಾದುದು. ಸು. 3,800 ಮಿಮೀ ಮಳೆ ಆಗುತ್ತದೆ. ಗ್ರಾಮದ ಸಮೀಪ ಒಂದು ಹೆಂಚಿನ ಕಾರ್ಖಾನೆ ಇದೆ. ಇಲ್ಲಿ ಯುದ್ಧಗಳು

ಮುರ್ಡೇಶ್ವರ ದೇವಾಲಯ

ನಡೆದ ಕುರುಹುಗಳು ಈಗಲೂ ಕಂಡುಬರುತ್ತವೆ. ಯುದ್ಧದಲ್ಲಿ ಮಡಿದ ಯೋಧರ 30 ಸಮಾಧಿಗಳು ಇಲ್ಲಿವೆ. ಈ ಗ್ರಾಮದ ಸಮುದ್ರದಂಡೆಯ ಮೇಲೆ ಸುಂದರ ಬಸದಿಯಿದೆ. ಜೈನಮೂರ್ತಿಗಳನ್ನು ಹೋಲುವ ಪಳೆಯುಳಿಕೆಗಳೂ ಇಲ್ಲಿವೆ. ವಿಜಯನಗರದ ಎರಡನೆಯ ದೇವರಾಯನ (1424-46) ಕಾಲದ ಹಾಗೂ ಇನ್ನೂ ಎರಡು ಶಿಲಾಶಾಸನಗಳು ಇಲ್ಲಿ ದೊರೆತಿವೆ.

ಇಲ್ಲಿಯ ಸಮುದ್ರದಂಡೆಯ ಕುಂದುಗಿರಿ ಎಂಬ ಗುಡ್ಡದ ಮೇಲೆ ಮುರ್ಡೇಶ್ವರನ ಚಿಕ್ಕ ಶಿಲಾ ಗುಡಿ ಇದೆ. ಈ ಲಿಂಗ ಈಶ್ವರನ ಆತ್ಮಲಿಂಗದ ಒಂದು ಭಾಗ. ಆದ್ದರಿಂದ ಈ ಸ್ಥಳ ಪೌರಾಣಿಕ ಕಾಲದಿಂದ ಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ. ಈ ಗುಡಿ ಚಾಳುಕ್ಯ ಶಿಲ್ಪ ಮಾದರಿಯಲ್ಲಿದೆ. ಇದನ್ನು ಪಾಂಡವರು ಕಟ್ಟಿಸಿದರು ಎಂಬ ದಂತಕತೆ ಇದೆ. 4-5ನೆಯ ಶತಮಾನದಲ್ಲಿ ಈ ಗುಡಿಯನ್ನು ಜೀರ್ಣೋದ್ಧಾರ ಮಾಡಲಾಗಿದೆ ಎಂಬ ಪ್ರತೀತಿ ಇದೆ.

ರಾವಣೇಶ್ವರ ತನ್ನ ತಾಯಿಗೆ ಈಶ್ವರನ ಆತ್ಮಲಿಂಗವನ್ನು ತಂದುಕೊಡುವ ಹಾದಿಯಲ್ಲಿ ವಿನಾಯಕ ಉಪಾಯದಿಂದ ಅದನ್ನು ಭೂಸ್ಪರ್ಶ ಮಾಡಿಸಿದ. ರಾವಣೇಶ್ವರ ಪಾತಾಳಕ್ಕೆ ಇಳಿಯುತ್ತಿರುವ ಲಿಂಗವನ್ನು ಬಲವಾಗಿ ಹಿಡಿದು ಎಳೆದದ್ದರಿಂದ ಲಿಂಗದ ಕೊಂಚಭಾಗ ಮುದುಡಿ ಕೈಯಲ್ಲಿ ತುಂಡಾಗಿ ಬಂತು. ಮುರುಡು ಮುರುಡು ಎಂದು ರಾವಣ ಅದನ್ನು ಬಿಸಾಡಿದನಂತೆ. ಅವನು ಉಚ್ಚರಿಸಿದ ಮುರುಡು ಶಬ್ದವೇ ಮುರ್ಡೇಶ್ವರ ಎಂದಾಯಿತಂತೆ. ಹಾಗೆ ಆತ ಎಸೆದ ತುಂಡುಗಳಲ್ಲಿ ಒಂದು ಕಾರವಾರದ ಪೂರ್ವದಿಕ್ಕಿನಲ್ಲಿ ಬಿದ್ದು ಅದಕ್ಕೆ ಸಜ್ಜೇಶ್ವರ ಎಂದೂ ಇನ್ನೊಂದು ತುಂಡು ಕುಮಟದ ದಕ್ಷಿಣ ದಿಕ್ಕಿನಲ್ಲಿ ಬಿದ್ದು ಅದು ಧಾರೇಶ್ವರ ಎಂದೂ ಮತ್ತೊಂದು ತುಣುಕು ಹೊನ್ನಾವರದ ದಕ್ಷಿಣದಿಕ್ಕಿನಲ್ಲಿ ಬಿದ್ದು ಗುಣವಂತೇಶ್ವರ ಎಂದೂ ಹೆಸರಾದುವು. ಗಣಪತಿ ಗೋಕರ್ಣದಲ್ಲಿ ಪ್ರತಿಷ್ಠಾಪಿಸಿದ ಆತ್ಮಲಿಂಗ ಮಹಾಬಲೇಶ್ವರ ಎಂಬುದಾಗಿ ಪಂಚಕ್ಷೇತ್ರಗಳಾದುವು. ಮುರ್ಡೇಶ್ವರ ದೇವಾಲಯ ನವೀಕರಣಗೊಂಡಿದೆ (1985).

ಈ ದೇವಾಲಯದ ಆವರಣದಲ್ಲಿ ಗಣಪತಿ, ಪಾರ್ವತಿ, ದತ್ತಾತ್ರೇಯ, ಹನುಮಂತ, ನವಗ್ರಹ, ಸುಬ್ರಹ್ಮಣ್ಯ ದೇವಾಲಯಗಳೂ ಇವೆ. ವಿಶಾಲವಾದ ಈ ಕ್ಷೇತ್ರದಲ್ಲಿ ಕಾಕತೀರ್ಥ, ಭೀಮತೀರ್ಥ, ಜಟಾಯು ತೀರ್ಥ, ಕುಂಭತೀರ್ಥ ಎಂಬ ತೊರೆಗಳೂ ಹರಿಯುತ್ತವೆ. ಸ್ವಲ್ಪ ದೂರದಲ್ಲಿಯೇ ವಿಶಾಲಪುಷ್ಕರಿಣಿಯಿದೆ. ಇಲ್ಲಿ ವರುಷಕ್ಕೆ ಎರಡು ಸಲ ತೆಪ್ಪೋತ್ಸವ ಜರುಗುತ್ತದೆ. ಭಾರತದ ಪ್ರಸಿದ್ಧ ವೇಣುವಾದಕ ದೇವೇಂದ್ರ ಮುರ್ಡೇಶ್ವರ ಇಲ್ಲಿಯವರು. ಗುಡಿಯ ಸಮೀಪವೇ ಒಂದು ಪ್ರವಾಸಿ ಬಂಗಲೆ ಇದೆ. ಇಲ್ಲಿನ ಪ್ರಕೃತಿ ಸನ್ನಿವೇಶ ಮತ್ತು ಕಡಲಿನ ರೋಚಕ ಅಲೆಗಳ ಸೌಂದರ್ಯ ಅಸಂಖ್ಯ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. *

**ಮುಳಗುಂದ:** ಗದಗ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಪಟ್ಟಣ. ಗದಗಿನ ನೈಋತ್ಯಕ್ಕೆ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,238.

ಈ ಊರು ಕರ್ನಾಟಕದ ಬಹು ಪುರಾತನವೂ ಇತಿಹಾಸ ಪ್ರಸಿದ್ಧವೂ ಆದ ಸ್ಥಳಗಳಲ್ಲಿ ಒಂದು. 1ನೆಯ ಶತಮಾನದ ಗ್ರೀಕ್ ಭೂಗೋಳಕಾರ ಟಾಲೆಮಿಯ ಬರೆಹದಲ್ಲಿ ಹೆಸರಿಸಿರುವ 'ಮೋರ್ಂಡ್' ಮುಳಗುಂದವೇ ಎಂದು ತಿಳಿಯಲಾಗಿದೆ. ಈ ಗ್ರಾಮದಲ್ಲಿ ರಾಷ್ಟ್ರಕೂಟ, ಗಂಗ, ಕಲ್ಯಾಣದ ಚಾಳುಕ್ಯ, ಕಳಚುರಿ, ಸಿಂದ, ಹೊಯ್ಸಳ ಮೊದಲಾದ ರಾಜವಂಶಗಳ ಕಾಲದ 20 ಶಾಸನಗಳು ದೊರೆತಿವೆ. ಪ್ರಾಚೀನ ಕಾಲದಲ್ಲಿ ಮುಳಗುಂದ-12 ಎಂಬ ಒಂದು ಚಿಕ್ಕಮಂಡಲವಾಗಿದ್ದು ವಿಶೇಷ ಪ್ರಸಿದ್ಧಿಯನ್ನು ಪಡೆದಿತ್ತು. ಚತುರ್ಯುಗಗಳಲ್ಲಿ ಪ್ರಸಿದ್ಧವಾದ ನಗರ, ಅನಾದಿ ಪಟ್ಟಣ, ಬೆಳ್ವೊಲ ವಿಷಯದ ಧರ್ಮನಿವಾಸ, ಶ್ರೀಮದ್ರಾಜಧಾನಿ ಮುಂತಾಗಿ ಶಾಸನಗಳಲ್ಲಿ ಮುಳಗುಂದವನ್ನು ವರ್ಣಿಸಲಾಗಿದೆ. ನೃಪತುಂಗನ ನೀಲಗುಂದದ ಶಾಸನದಲ್ಲಿ ಮುಳಗುಂದ-12ನ್ನು ಕುಳಪ್ಪಯ್ಯ ಎಂಬ ಅಧಿಕಾರಿ ಆಳುತ್ತಿದ್ದ ವಿಷಯವಿದೆ. ಮುಳಗುಂದದಲ್ಲಿಯೇ ರಾಷ್ಟ್ರಕೂಟ ಎರಡನೆಯ ಕೃಷ್ಣನ ಕಾಲದ ಶಾಸನವೊಂದು ದೊರೆತಿದ್ದು ಅರಸಾರ್ಯನೆಂಬುವನು ಜೈನ ಯತಿ ವೀರಸೇನನ ಶಿಷ್ಯ ಕನಕಸೇನನಿಗೆ ದತ್ತಿ ಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಗಂಗ ದೊರೆ ನೊಳಂಬ ಕುಲಾಂತಕ ಮಾರಸಿಂಹನ ಪಾದಪದ್ಮೋಪ ಜೀವಿಯಾದ ಮಾಥುರ ವಂಶದ ಪಾಂಚಾಲ ದೇಶದ ಶಾಸನ ಭಾಗವೊಂದು ಇಲ್ಲಿ ದೊರೆತಿದೆ. ಕಲ್ಯಾಣದ ಚಾಳುಕ್ಯ ಮನೆತನದ ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಆತನ ಸಾಮಂತನಾದ ಸಿಂದಕುಲದ ಬೊಪ್ಪದೇವರಸನು ಮುಳಗುಂದ-12ನ್ನು ಮನ್ನೆಯ ಸಾಮ್ಯದಿಂದ ಆಳುತ್ತಿದ್ದ. ಕಳಚುರಿ ದೊರೆ ಸಂಕಮನ ಕಾಲದ ಶಾಸನವೊಂದು (1178) ಶ್ರೀಮದನಾದಿಪಟ್ಟಣ ಮುಳಗುಂದ ಪಂಚಮಠಸ್ಥಾನ

ವಾಗಿತ್ತೆಂದು ತಿಳಿಸುತ್ತದೆ. ಯಾದವ ಸಿಂಘಣನ ಶಾಸನವೊಂದರಲ್ಲಿ (1224) ನಾಗರಸನೆಂಬ ಅಧಿಕಾರಿ ಇಲ್ಲಿನ ಸ್ವಯಂಭು ದೇವರಿಗೆ ದತ್ತಿ ಬಿಟ್ಟ ಸಂಗತಿ ಇದೆ. ಹೊಯ್ಸಳ ಎರಡನೆಯ ಬಲ್ಲಾಳನ ಶಾಸನ ವೊಂದರಲ್ಲಿ (1207) ಆತನ ಪಾದಪದ್ಮಾರಾಧಕ ಚವುಂಡಯ್ಯ ಇಲ್ಲಿನ ತೆಲ್ಲಿಗೇಶ್ವರ ದೇವರಿಗೆ ದಾನ ಕೊಟ್ಟ ಸಂಗತಿ ಇದೆ. ಈ ಶಾಸನದಲ್ಲಿ ಮುಳಗುಂದಪುರದ ಅಲ್ಲಲ್ಲಿ ದೇವಭವನದಿನಲ್ಲಲ್ಲಿಗೆ ಪುಣ್ಯ ವೀಧಿಯಿಂದುಪ್ಪರಿಗಳಿಂದ ಇಂದ್ರನಪುರದಂತಿತ್ತೆಂದು ವರ್ಣಿತವಾಗಿದೆ.



ಜೈನ ಬಸದಿ

ಜೈನಧರ್ಮೀಯರಿಗೆ ಮುಳಗುಂದ ಒಂದು ತೀರ್ಥಕ್ಷೇತ್ರವಾಗಿತ್ತು. ಇದಕ್ಕೆ ಕಾರಣ ಇಲ್ಲಿದ್ದ ಜಿನಭವನಗಳು ಮತ್ತು ಚಂದ್ರಿಕಾವಾಟದ ಯತಿಗಳ ಪರಂಪರೆ. ಈ ಯತಿಗಳ ಪರಂಪರೆಯಲ್ಲಿ ಧರ್ಮಸೇನ (ಸು. 830), ಕುಮಾರಸೇನ, ವೀರಸೇನ, ಕನಕಸೇನ, ಆರ್ಯನಂದಿ (ಸೇನ), ಅಜಿತಸೇನ (ಗಂಗದೊರೆ 2ನೆಯ ಮಾರಸಿಂಹ, ಚಾವುಂಡರಾಯ, ಮಹಾಕವಿ, ರನ್ನ ಮೊದಲಾದವರಿಗೆ ಗುರು), ಕನಕಸೇನ **II**, ಜಿನಸೇನ, ನರೇಂದ್ರಸೇನ **I**, ಮಲ್ಲಿಷೇಣ, ನಯಸೇನ **I**, ನರೇಂದ್ರಸೇನ **II** ಮತ್ತು ನಯಸೇನ **II** (ಧರ್ಮಾಮೃತದ ಕರ್ತೃ) ಮೊದಲಾದವರು ಬಹು ಪ್ರಸಿದ್ಧರು. 16–17ನೆಯ ಶತಮಾನದಲ್ಲಿ ಮುಳಗುಂದದ ಬಸದಿಗಳನ್ನು ತುರುಕರು ಕೆಡಿಸಿದ್ದು ಮತ್ತು ಬನದಾಂಬಿಕೆಯ ಶ್ರಾವಕಿಯೊಬ್ಬಳು ಸಾಗರವರ್ಣಿ ಗುರುವಿನ ಆದೇಶದ ಮೇಲೆ ಅವನ್ನು ಪುನಃ ಪ್ರತಿಷ್ಠಾಪಿಸಿದ ಸಂಗತಿ ಶಾಸನಗಳಲ್ಲಿ ಹೇಳಿದೆ. ಈಕೆ ಶ್ರವಣಬೆಳಗೊಳಕ್ಕೆ ಭೇಟಿಯಿತ್ತ ಸಂಗತಿ ಶ್ರವಣಬೆಳಗೊಳದ ಶಾಸನವೊಂದರಲ್ಲಿ ಬಂದಿದ್ದು ಆ ಶಾಸನದಲ್ಲಿ ಮುಳಗುಂದ ಸೀಮೆಯನ್ನು ಮುನಿಗುಂದದ ಸೀಮೆ ಎಂದು ಕರೆದಿದೆ.

ಮುಳಗುಂದ ಕನ್ನಡ, ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದೆ. ಇಲ್ಲಿನ 10ನೆಯ ಶತಮಾನದ ಶಾಸನವೊಂದರಲ್ಲಿ ಬರೆಪದ ಬಲ್ಮೆಗೆ ವಾದ್ಯದ ಪರಿಣತಿಗೆ ಕವಿತೆಗಿವನೊಳ್ ಯಾರು ಸಮ ಎನಿಪ ಸಾಮಿಯಣ್ಣ ಎಂಬ ಕನ್ನಡ ಕವಿಯೋರ್ವನ ಉಲ್ಲೇಖವಿದೆ. ಇದೇ ಸಾಮಿಯಣ್ಣ ಈ ಮುಳಗುಂದದ ಬಳಿಯ ನಾಗಬಾವಿಯ ಶಾಸನವನ್ನೂ (969) ಬರೆದಿರಬಹುದು. ಕರ್ನಾಟಕ ಭಾಷಾಭೂಷಣ ಗ್ರಂಥದಲ್ಲಿನ ದೀರ್ಘೋಕ್ತಿರ್ನಯಸೇನಸ್ಯ ಎಂಬ ಸೂತ್ರದಲ್ಲಿ ಉಲ್ಲೇಖಿತವಾದ ನಯಸೇನ ಈ ಮುಳಗುಂದದವ. ನಿನಗೇನೆಂಬೆನೊ ಶಾಕಟಾಯನ ಮುನೀಶನ್ತಾನೆ ಶಬ್ದಾನುಶಾಸನದೊಳ್ ಪಾಣಿನಿ ಪಾಣಿನೀಯದೊಳ್ ಚನ್ದ್ರಂ ಚಾನ್ದ್ರದೊಳ್ ತಜ್ಜೆನೇನ್ದ್ರನೆ ಜೈನೇನ್ದ್ರ ದೊಳಾ ಕುಮಾರನೆ ಗಡಂ ಕೌಮಾರದೊಳ್ಪೋಲ್ವರೆನ್ತೆನೆ ಪೋಲ್ವನ್ನಯ ಸೇನಪಣ್ಡಿತರೊಳನ್ಯರ್ವ್ವಾರ್ದ್ಧಿವೀತೋರ್ವ್ವಿಯೊಳ್ [ವ] ಇಂತು ಸಮಸ್ತ ಶಬ್ದಶಾಸ್ತ್ರ ಪಾರಾವಾರಪಾರಗರ್ನ್ನಯಸೇನ ಪಣ್ಡಿತದೇವರ್ ಎಂದು ಆತನನ್ನು ಇಲ್ಲಿನ ಶಾಸನವೊಂದು ವರ್ಣಿಸಿದೆ.

ಸಂಸ್ಕೃತದಲ್ಲಿ ಮಹಾಪುರಾಣವನ್ನು ರಚಿಸಿದ (1047) ಮಲ್ಲಿಷೇಣ ಯತಿ ಆ ಗ್ರಂಥವನ್ನು ಮುಳಗುಂದ ತೀರ್ಥದಲ್ಲಿ ಬರೆದು ಮುಗಿಸಿದುದಾಗಿ 'ತೀರ್ಥೇ ಶ್ರೀಮುಲಗುನ್ದನಾಮ್ನಿ ನಗರೇ ಶ್ರೀ ಜೈನಧರ್ಮಾಲಯೇ ಸ್ಥಿತ್ವಾಶ್ರೀ ಕವಿಚಕ್ರವರ್ತಿಯನಿಪಃ ಶ್ರೀಮಲ್ಲಿಷೇಣಾಹ್ವಯಃ ಸಂಕ್ಷೇಪಾತ್ ಪ್ರಥಮಾನುಯೋಗಕಥನ ವ್ಯಾಖ್ಯಾನ್ವಿತಂ ಶೃಣ್ವತಾಂ ಭವ್ಯಾನಾಂ ದುರಿತಾಪಹಂ ರಚಿತವಾನ್ನಿಃ ಶೇಷವಿದ್ಯಾಮ್ಬುಧಿಃ' ಎಂಬ ಆ ಗ್ರಂಥದ ಪದ್ಯವೊಂದರಿಂದ ತಿಳಿಯುತ್ತದೆ. ಈತ ನಾಗಕುಮಾರಕಾವ್ಯ, ಭೈರವ ಪದ್ಮಾವತೀಕಲ್ಪ, ಸರಸ್ವತೀಮಂತ್ರಕಲ್ಪ, ಜ್ವಾಲಿನೀ ಕಲ್ಪ ಎಂಬ ಇತರ ಗ್ರಂಥಗಳನ್ನೂ ಬರೆದುದಾಗಿ ತಿಳಿದುಬರುತ್ತದೆ. ತನ್ನನ್ನು ಉಭಯಭಾಷಾ ಕವಿಚಕ್ರವರ್ತಿ, ಗಾರುಡಮಂತ್ರವಾದವೇದಿ, ಸಕಲಾಗಮವೇದಿ ಎಂದು ಮುಂತಾಗಿ ಹೇಳಿಕೊಂಡಿದ್ದಾನೆ. ಭಾರತ ದೇಶದಲ್ಲಿ ಜೈನ ಸಮಾಜದಲ್ಲಿ ಮಲ್ಲಿಷೇಣನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಈತನ ಸಮ್ಮುಖದಲ್ಲಿ ಉಭಯ ಭಾಷೆಗಳಲ್ಲಿ ಯಾರೂ ತಮ್ಮ ಕವಿತೆಯನ್ನು ಮಂಡಿಸಲು ಹಿಂಜರಿಯುತ್ತಿದ್ದರಂತೆ.

ಕೈವಲ್ಯ ದರ್ಪಣ ಎಂಬ ಗ್ರಂಥ ಹಾಗೂ ಅನುಭಾವ ಗೀತೆಗಳನ್ನು ಬರೆದ ಬಾಲಲೀಲಾ ಮಹಾಂತ ಶಿವಯೋಗಿ **(ನೋಡಿ)** ಮುಳಗುಂದದಲ್ಲಿದ್ದರು (ಅವರ ಪ್ರಸಿದ್ಧ ಗವಿಮಠ ಇಲ್ಲಿಯೇ ಇದೆ).

ಮುಳಗುಂದದಲ್ಲಿ ಕುಂಬೇಶ್ವರ, ನಗರೇಶ್ವರ, ಪೇಟೆ ಬಸಪ್ಪ, ಸಿದ್ಧೇಶ್ವರ, ರಾಮದೇವ, ನಾರಾಯಣದೇವ ಎಂಬ ದೇವಸ್ಥಾನಗಳೂ ಚಂದ್ರನಾಥ ಬಸದಿ, ಪಾರ್ಶ್ವನಾಥ ಬಸದಿ, ಹಿರಿಬಸದಿ ಎಂಬ ಜೈನಬಸದಿಗಳೂ ಅಂದಾನೇಶ್ವರಸ್ವಾಮಿ ಮಠ ಎಂಬ ಒಂದು ವೀರಶೈವ ಮಠವೂ ಪಳೆಯುಳಿಕೆಗಳಾಗಿ ನಿಂತಿವೆ. ಪುರಾತನ ಕಟ್ಟಡಗಳಲ್ಲಿ ಕೆಲವು ಹಾಳಾಗಿವೆ. ಚಾವಣಿಯ ಬಳಿಯಲ್ಲಿ ಬಿದ್ದ ಶಾಸನಗಳು, ನಾರಾಯಣದೇವರ ಗುಡಿಯ ಮುಂದಿನ ಧ್ವಜಸ್ತಂಭ ಈ ಮಾತಿಗೆ ಸಾಕ್ಷಿಯಾಗಿದೆ. ಈ ಧ್ವಜಸ್ತಂಭ ಮೂಲದಲ್ಲಿ ಜೈನಬಸದಿಯೊಂದರ ಮುಂದೆ ನಿಲ್ಲಿಸಿದ್ದ ಮಾನಸ್ತಂಭ. ಈ ಮಾನಸ್ತಂಭವನ್ನು 977ರಲ್ಲಿ ಮಾಡಿಸಿ ಪ್ರತಿಷ್ಠೆಗೆಯ್ಸಿದ ಸಂಗತಿಯನ್ನು ಅದರ ಮೇಲಿರುವ ಶಾಸನ ಸಾರುತ್ತದೆ. ಮುಳಗುಂದ 1848ರ ವರೆಗೆ ತಾಸಗಾಂವ್ ಜಹಗೀರಿಗೆ ಸೇರಿತ್ತು. **(ಎಸ್.ಜಿಎ.)**

**ಮುಳಬಾಗಲು:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಕೇಂದ್ರ. ಈ ತಾಲ್ಲೂಕನ್ನು ವಾಯವ್ಯ, ಪಶ್ಚಿಮ, ನೈಋತ್ಯ ಮತ್ತು ದಕ್ಷಿಣದಲ್ಲಿ ಶ್ರೀನಿವಾಸಪುರ, ಕೋಲಾರ ಮತ್ತು ಬಂಗಾರಪೇಟೆ ತಾಲ್ಲೂಕುಗಳೂ ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶವೂ ಸುತ್ತುವರಿದಿವೆ. ತಾಲ್ಲೂಕಿನಲ್ಲಿ ಒಂದು ಪಟ್ಟಣವೂ 344 ಗ್ರಾಮಗಳೂ ಇವೆ. ದುಗ್ಗಸಂದ್ರ, ಮುಳಬಾಗಲು, ಬೈರಕೂರು, ತಾಯಲೂರು ಮತ್ತು ಆವನಿ ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 836.4 ಚ.ಕಿಮೀ. ಜನಸಂಖ್ಯೆ 2,31,302.

ತಾಲ್ಲೂಕು ಅನೇಕ ಬೆಟ್ಟಗುಡ್ಡಗಳಿರುವ ಪ್ರದೇಶ. ಕಣಶಿಲೆಯ ಗುಂಡುಗಳಿಂದಾದ ಬೆಟ್ಟಗಳು ಮತ್ತು ಹಲವೆಡೆ ಕಣಶಿಲೆಯ ವಿಸ್ತಾರ ಹರಹುಗಳನ್ನೂ ಅಲ್ಲಲ್ಲಿ ದೊಡ್ಡ ಒಂಟಿಬಂಡೆಗಳನ್ನೂ ಕಾಣಬಹುದು. ಮುಳಬಾಗಲು ಮತ್ತು ಆವನಿಯ ಬಳಿಯ ಬೆಟ್ಟಗಳು ದೊಡ್ಡವು. ಮುಖ್ಯ ಬೆಟ್ಟಶ್ರೇಣಿಯೊಂದು ತಾಲ್ಲೂಕಿನ ಮಧ್ಯದಲ್ಲಿ ಹಬ್ಬಿದ್ದು ಇದರ

ಪಶ್ಚಿಮದ ಪ್ರದೇಶದಲ್ಲಿ ವಿಶಾಲ ಕಣಿವೆಗಳಿದ್ದರೆ ಪೂರ್ವದಲ್ಲಿ ಕಿರುಕಣಿವೆಗಳಿವೆ. ಈ ತಾಲ್ಲೂಕಿನಲ್ಲಿ ಪಿಂಗಾಣಿ ತಯಾರಿಕೆಯಲ್ಲಿ ಉಪಯೋಗಿಸುವ ಬಿಳಿಜೇಡಿಮಣ್ಣು ಮತ್ತು ಕೆಲವು ಕಡೆ ಕೆಂಪುಜೇಡಿಮಣ್ಣು ಇದೆ. ರಾಜ್ಯದಲ್ಲಿ ಅತಿ ಕಡಿಮೆ ಮಳೆಯಾಗುವ ತಾಲ್ಲೂಕುಗಳಲ್ಲಿ ಇದೂ ಒಂದು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 755.19 ಮಿಮೀ. ಈ ತಾಲ್ಲೂಕಿನಲ್ಲಿ ಸರ್ವ ಋತುಗಳಲ್ಲಿ ಹರಿಯುವ ನದಿಗಳಿಲ್ಲ. ವ್ಯವಸಾಯಕ್ಕೆ ಪೂರಕವಾಗುವಂಥ ಹಲವಾರು ಕೆರೆಗಳೂ ಬಾವಿಗಳೂ ಇವೆ. ತಾಲ್ಲೂಕಿನಲ್ಲಿ ರಾಗಿ, ಬತ್ತ, ನೆಲಗಡಲೆ ಮುಖ್ಯ ಬೆಳೆಗಳು. ದ್ವಿದಳ ಧಾನ್ಯಗಳನ್ನೂ ಹಣ್ಣುಗಳನ್ನೂ ಬೆಳೆಯುತ್ತಾರೆ. ರೇಷ್ಮೆ ಕೃಷಿ ಇದೆ. ಪಶುಪಾಲನೆ ವ್ಯವಸಾಯದೊಂದಿಗೇ ಬೆಳೆದುಬರು ತ್ತಿದೆ. ಅವುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ತಾಲ್ಲೂಕು ಮತ್ತು ಗ್ರಾಮ ಮಟ್ಟದ ಪಶುವೈದ್ಯಾಲಯಗಳಿವೆ.



ಶ್ರೀಪಾದರಾಯರ ಬೃಂದಾವನ

ತಾಲ್ಲೂಕಿನಲ್ಲಿ ಉಕ್ಕಿನ ಪೀಠೋಪಕರಣಗಳು ಮತ್ತು ಕೈಮಗ್ಗದ ಬಟ್ಟೆ ತಯಾರಿಕೆಯುಂಟು. ಕೈಗಾರಿಕಾ ಸಹಕಾರ ಸಂಘಗಳುಂಟು. ನಿಯಂತ್ರಿತ ಮಾರುಕಟ್ಟೆ ಮತ್ತು ವಾಣಿಜ್ಯ ಬ್ಯಾಂಕುಗಳಿದ್ದು ವ್ಯಾಪಾರಾಭಿವೃದ್ಧಿಗೆ ಸಹಕಾರಿಯಾಗಿವೆ. ಮುಳಬಾಗಲು ತಾಲ್ಲೂಕಿನಿಂದ ಸುತ್ತಲ ಊರುಗಳಿಗೆ ಉತ್ತಮ ಮಾರ್ಗಗಳಿವೆ.

ಈ ತಾಲ್ಲೂಕಿನ ಆವನಿ **(ನೋಡಿ)** ಪುರಾಣ ಪ್ರಸಿದ್ಧ ಸ್ಥಳ. ಅನೇಕ ದೇವಾಲಯಗಳಿಂದ ಕೂಡಿದ ಈ ಸ್ಥಳ ದಕ್ಷಿಣ ಗಯ ಎಂದು ಪ್ರಸಿದ್ಧ. ಮುಳಬಾಗಲ ವಾಯವ್ಯದಲ್ಲಿರುವ ಕುರುಡುಮಲೆಯಲ್ಲಿ **(ನೋಡಿ)** ಪ್ರಾಚೀನ ದೇವಾಲಯಗಳ ಅವಶೇಷಗಳಿವೆ. ನಂಗಲಿ ಈ ತಾಲ್ಲೂಕಿನ ಪೂರ್ವಗಡಿಯಂಚಿನ ಗ್ರಾಮ. ವಿಷ್ಣುವರ್ಧನ ಜಯಿಸಿದವುಗಳಲ್ಲಿ ಇದೂ ಒಂದು ಎಂಬುದಾಗಿ ಶಾಸನಗಳಲ್ಲಿ ಹೇಳಿದೆ. *

ಮುಳಬಾಗಲು ಈ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಲಾರದ ಪೂರ್ವಕ್ಕೆ 30 ಕಿಮೀ ದೂರದಲ್ಲಿದೆ. ಈ ಸ್ಥಳ ತಿರುಪತಿಗೆ ಹೋಗುವ ಮಾರ್ಗದಲ್ಲಿ ಕರ್ನಾಟಕ ರಾಜ್ಯದ ಪೂರ್ವಗಡಿಯ ಮುಗ್ಗಿಲಿಬೆಟ್ಟಗಳ ಶ್ರೇಣಿಯಲ್ಲಿರುವುದರಿಂದ ಇದನ್ನು ಮೂಡ್ಲಬಾಗಿಲು ಎಂದು ಕರೆದು, ಮುಂದೆ ಅದೇ ಮುಳಬಾಗಲು ಆಗಿದೆಯೆನ್ನುವರು. ಶಾಸನಗಳಲ್ಲಿ ಇದನ್ನು ಮುಳುವಾಯಿ ಎಂದು ಕರೆಯಲಾಗಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಮುಳಬಾಗಲು ಈ ಪ್ರಾಂತ್ಯದ ಆಡಳಿತ ಕೇಂದ್ರವಾಗಿತ್ತು. ಮುಂದೆ ಇದು ಹೊಸಕೋಟೆಯ ತಿಮ್ಮೇಗೌಡನ ವಶವಾಗಿದ್ದು 1768ರಲ್ಲಿ ಇದು ಬ್ರಿಟಿಷರ ವಶವಾಯಿತು.

ಪಟ್ಟಣದ ಹತ್ತಿರ ಹಂಚುಕಲ್ಲು ಬೆಟ್ಟವೆಂಬ ಬೆಟ್ಟವಿದೆ. ಕೆಲವು ಪುರಾತನ ದೇವಾಲಯಗಳುಂಟು, ತಿರುಪತಿಗೆ ಹೋಗುವವರು ಕೆಲವೊಮ್ಮೆ ಇಲ್ಲಿನ ನರಸಿಂಹತೀರ್ಥದಲ್ಲಿ ಮಿಂದು, ಮುಡಿಕೊಟ್ಟು ಹೋಗುವ ಪದ್ಧತಿ ಇದೆ. ಈ ಬೆಟ್ಟದ ಮೇಲಿನ ಕೋಟೆಯಲ್ಲಿ ನಿಂತು ಸುತ್ತಲ ಸುಂದರ ದೃಶ್ಯಾವಳಿಯನ್ನು ಕಾಣಬಹುದು. ಬೆಟ್ಟದ ಮೇಲೆ ರಾಮತೀರ್ಥ ಮತ್ತು ಲಕ್ಷ್ಮಣತೀರ್ಥಗಳೆಂಬ ಎರಡು ಕೊಳಗಳಿವೆ. ಮುಳಬಾಗಲಿನಿಂದ ಒಂದೂವರೆ ಕಿಮೀ ದೂರದಲ್ಲಿ ಶ್ರೀಪಾದರಾಯರ ಬೃಂದಾವನವಿದೆ. ಮುಳಬಾಗಲಿನಲ್ಲಿ ಇವರ ಮಠವಿದೆ. ಬೃಂದಾವನದ ಬಲಭಾಗದಲ್ಲಿ ನರಸಿಂಹ ದೇವಾಲಯವಿದೆ. ಪ್ರತಿವರ್ಷ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಜರುಗುವ ಇಲ್ಲಿನ ಸೋಮೇಶ್ವರಸ್ವಾಮಿ ಜಾತ್ರೆ ಪ್ರಸಿದ್ಧವಾದುದು. ಮುಳಬಾಗಲ ಆಂಜನೇಯಸ್ವಾಮಿ ದೇವಾಲಯ ಬಹು ಪ್ರಸಿದ್ಧ. ಈ ದೇವಾಲಯು ವಿಶಾಲವೂ ಭವ್ಯವೂ ಆಗಿದ್ದು ಬೃಹದಾಕಾರದ ಆಂಜನೇಯಸ್ವಾಮಿಯ ಮೂರ್ತಿಯನ್ನೊಳಗೊಂಡಿದೆ. ಇಲ್ಲಿನ ಹೈದರ್ ಅಲಿ ದರ್ಗಾದ ವಾರ್ಷಿಕ ಉತ್ಸವದಲ್ಲಿ ಸಾವಿರಾರು ಅನುಯಾಯಿಗಳು ಸೇರುತ್ತಾರೆ. **(ಎಸ್.ವಿ.ಎಸ್.ಬಿ.)**

**ಮುಳಿಯ ತಿಮ್ಮಪ್ಪಯ್ಯ:** 1888–1950. ಕನ್ನಡದ ಹಿರಿಯ ವಿದ್ವಾಂಸರು, ಪ್ರಸಿದ್ಧ ಸಂಶೋಧಕರು ಹಾಗೂ ವಿಮರ್ಶಕರು. ಪಂಜೆ ಮಂಗೇಶರಾಯ, ಗೋವಿಂದ ಪೈ, ಎಂ.ಎನ್. ಕಾಮತ ಮುಂತಾದ ಪ್ರಸಿದ್ಧ ಸಾಹಿತಿಗಳ ಸಮಕಾಲೀನರು. ಇವರ ಊರು ಮುಳಿಯ ಈಗ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ವಿಟ್ಲದಿಂದ ಸು. 8 ಕಿಮೀ ದೂರದ ಆಳಿಕೆ ಗ್ರಾಮಕ್ಕೆ ಸೇರಿದೆ. ತಿಮ್ಮಪ್ಪಯ್ಯನವರು ದಕ್ಷಿಣ ಕನ್ನಡ ಜಿಲ್ಲೆಯ ಕಡೆಂಗೋಡ್ಲುವಿನಲ್ಲಿ ತಮ್ಮ ಅಜ್ಜನ ಮನೆಯಲ್ಲಿ 1888 ಮಾರ್ಚ್ 3ರಂದು ಜನಿಸಿದರು. ಇವರ ತಂದೆ ಕೇಶವಭಟ್ಟ, ತಾಯಿ ಮೂಕಾಂಬಿಕೆ. ಕಡೆಂಗೋಡ್ಲು ಶಂಕರಭಟ್ಟರು ತಿಮ್ಮಪ್ಪಯ್ಯನವರ ಸೋದರಮಾವನವರ ಮಕ್ಕಳು.

ತಿಮ್ಮಪ್ಪಯ್ಯನವರು ಬಾಲ್ಯದಲ್ಲಿಯೇ ಸ್ಥಳೀಯ ಸಂಸ್ಕೃತ ವಿದ್ವಾಂಸರಿಂದ ಸಾಕಷ್ಟು ಸಂಸ್ಕೃತಾಧ್ಯಯನ ನಡೆಸಿದರು. ನಾಲ್ಕನೆಯ ತರಗತಿಯ ವ್ಯಾಸಂಗ ಮುಗಿದ ಮೇಲೆ, ಗೃಹಸ್ಥಿತಿ ಸುಗಮವಾಗಿರಲಿಲ್ಲವಾಗಿ, ಇಂಗ್ಲಿಷ್ ಉಚ್ಚ ಶಿಕ್ಷಣದ ಆಸೆಯನ್ನು ತೊರೆದು, ಆಗ ಸಂಸ್ಕೃತ ಅಧ್ಯಯನಕ್ಕೆ ಪ್ರಸಿದ್ಧವಾಗಿದ್ದ ತಿರುವಾಂಕೂರಿಗೆ ಹೋಗಿ (1906) ಅಲ್ಲಿ ಮಹಾರಾಜ ಸಂಸ್ಕೃತ ಕಾಲೇಜು ಸೇರಿ ವ್ಯಾಸಂಗ ನಡೆಸಿದರು. ಎರಡು ಮೂರು ವರ್ಷಗಳ ಅನಂತರ ಮೈಸೂರಿಗೆ ಬಂದು ಸಂಗೀತ ಕಲಾನಿಧಿ ವಾಸುದೇವಾಚಾರ್ಯರ ಬಳಿ ಕೊಂಚ ಕಾಲ ಸಂಗೀತಾಭ್ಯಾಸ ಮಾಡಿದರು. ಸು. 1910ರಲ್ಲಿ ತಮ್ಮ ಸ್ವಂತ ಊರಿಗೆ ತೆರಳಿದರು. 1911ರಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದರು. ಇಲ್ಲಿ ಇವರ ಸಾಹಿತ್ಯ

ರಚನೆಗೆ ಹೆಚ್ಚಿನ ಅವಕಾಶ ದೊರೆಯಿತು. ರಾಮಾಶ್ವಮೇಧದ ಮುದ್ದಣ ಮನೋರಮೆಯರ ಸಂವಾದದಿಂದ ಆಕರ್ಷಿತರಾಗಿ ಚಂದ್ರಾವಳಿ ವಿಲಾಸಂ ಎಂಬ ಹಳಗನ್ನಡ ಗದ್ಯಕೃತಿ ರಚಿಸಿದರು (1913). ಶೃಂಗಾರಪ್ರಧಾನವಾಗಿ ರುವಂತೆ ಭಾಸವಾಗುವ ಈ ಕೃತಿಯ ವಸ್ತು ಅನನುರೂಪ ದಾಂಪತ್ಯದ ವಿಪರೀತ ಫಲ, ಭಗವಂತನ ಲೀಲಾವಿನೋದ, ಭಗವದ್ಭಕ್ತಿಪಾರಮ್ಯ ಗಳನ್ನೊಳಗೊಂಡಿದೆ.

ಇವರು 1914ರಲ್ಲಿ ಪೇಜಾವರ ಭೋಜರಾಯರೊಡಗೂಡಿ ಸಾಹಿತ್ಯ, ಸಾಮಾಜಿಕ ವಿಷಯಗಳಿಗೆ ಮೀಸಲಾದ ಕನ್ನಡ ಕೋಗಿಲೆ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಆರ್ಥಿಕ ಒತ್ತಡಗಳಿಂದಾಗಿ ಈ ಪತ್ರಿಕೆ ನಾಲ್ಕೈದು ವರ್ಷ ಗಳಲ್ಲಿ ನಿಂತುಹೋಯಿತು (1919). ತಿಮ್ಮಪ್ಪಯ್ಯನವರ ಪ್ರಾರಂಭದ ಕೃತಿಗಳಾದ ನಡತೆಯ ನಾಡು (1917), ಬಡಹುಡುಗಿ (1917), ಹಗ ಲಿರುಳು (1918) ಮೊದಲು ಬೆಳಕು ಕಂಡದ್ದು ಕನ್ನಡ ಕೋಗಿಲೆಯಲ್ಲಿ. ಬಡಹು ಡುಗಿ, ಕನ್ಯಾವಿಕ್ರಯ ಘಟನೆ ಯೊಂದನ್ನು ವಸ್ತುವಾಗಿಟ್ಟು ಕೊಂಡು ರಚಿಸಿದ ಕವನ. ನಡತೆಯನಾಡು ಕರ್ಣನ ವಿಷಯಕ ನಾಟಕ. ಹಗಲಿರುಳು, ಪ್ರಬೋಧ ಚಂದ್ರೋದಯದಿಂದ ಪ್ರಚೋದಿತವಾದ ತಾತ್ತ್ವಿಕ ನಾಟಕ ಕೃತಿ.

ಇವರು 1918ರಲ್ಲಿ ಮಂಗಳೂರಿನ ಸೇಂಟ್ ಅಲೋಸಿಯಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ನಿಯುಕ್ತರಾದರು. ಇಲ್ಲಿಗೆ ಇವರ ಸಾಹಿತ್ಯ ಜೀವನದ ಮೊದಲ ಘಟ್ಟ ಮುಗಿದು, ಎರಡನೆಯ ಘಟ್ಟ ಪ್ರಾರಂಭವಾಯಿತು. ಕನ್ನಡ ಕೋಗಿಲೆ ನಿಂತ ಮೇಲೆ ಇವರ ಕೃತಿಗಳು ಅನ್ಯ ಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿದವು. ಮೈಸೂರಿನ ಕಾದಂಬರೀ ಸಂಗ್ರಹ ಎಂಬ ಮಾಸಪತ್ರಿಕೆಯಲ್ಲಿ ಇವರ ಪ್ರೇಮಪಾಶ ಎಂಬ ಕಾದಂಬರಿ ಪ್ರಕಟವಾಯಿತು. ಶಂಬರಾಸುರ ವಧೆಯನ್ನು ವಸ್ತುವಾಗಿಟ್ಟುಕೊಂಡು ಆಂಡಯ್ಯನ ಕಬ್ಬಿಗರಕಾವದ ಮಾರ್ಗದಲ್ಲಿ ಇವರು ರಚಿಸಿದ ಸೊಬಗಿನ ಬಳ್ಳಿ ಎಂಬ ಅಚ್ಚಗನ್ನಡ ಕಾವ್ಯ ಮೊದಲು ಇದೇ ಮಾಸಪತ್ರಿಕೆಯಲ್ಲಿ ಪ್ರಕಟವಾಗಿ (1918) ಅನಂತರ 1930ರಲ್ಲಿ ಮಂಗಳೂರಿನ ಸೇಂಟ್ ಅಲೋಸಿಯಸ್ ಕಾಲೇಜಿನ ಕರ್ಣಾಟಕ ಸಂಘದವರಿಂದ ಪರಿಷ್ಕೃತ ರೂಪದಲ್ಲಿ ಪ್ರಕಟವಾಯಿತು. 1927ರಲ್ಲಿ ಮಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರು ಆಂಡಯ್ಯನೂ ಕನ್ನಡಮೆನಿಪ್ಪಾನಾಡೂ ಎಂಬ ಲೇಖನವನ್ನು ಸಾದರಪಡಿಸಿದರು. ಆಂಡಯ್ಯನ ಕಬ್ಬಿಗರ ಕಾವದಲ್ಲಿ ಹುದುಗಿರಬಹುದಾದ ಐತಿಹಾಸಿಕ ವಿಚಾರಗಳನ್ನು ಮೊದಲು ಕೆದಕಿದವರು ತಿಮ್ಮಪ್ಪಯ್ಯನವರು. ಈ ಲೇಖನದಿಂದ ಇವರ ವಿದ್ವತ್ತು ಮೊದಲ ಬಾರಿಗೆ ಅಖಿಲ ಕರ್ನಾಟಕದ ವಿದ್ವಾಂಸರ ಗಮನ ಸೆಳೆಯಿತು.

1931ರಲ್ಲಿ ಇವರು ಕಾರವಾರದಲ್ಲಿ ನಡೆದ 17ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ನಿಯುಕ್ತರಾದರು. ಇವರಿಗೆ ಪಂಪನ ಕಾವ್ಯಗಳಲ್ಲಿ ಹೆಚ್ಚಿನ ಆಸಕ್ತಿ ಉಂಟಾಗಿ ಪಂಪನ ಮೇಲೆ ಗ್ರಂಥರಚನೆ ಮಾಡುವ ಕೆಲಸ ಕೈಗೊಂಡರು. ಈ ನಡುವೆ ಲಲಿತ ಸಾಹಿತ್ಯ ರಚನೆಗೂ ಕೈಹಾಕಿ ಪಶ್ಚಾತಾಪ ಎಂಬ ಕಾದಂಬರಿಯನ್ನು ಬರೆದು ಪ್ರಕಟಿಸಿದರು (1934). ನಾಲ್ಕು ದಶಕಗಳ ಹಿಂದಿನ ಸಂಸ್ಕೃತಿಯನ್ನು ಈ ಕಾದಂಬರಿ ಚಿತ್ರಿಸುತ್ತದೆ.

ಬಳ್ಳಾರಿ ಸಾಹಿತ್ಯ ಸಮ್ಮೇಳನ ಕಾಲದಲ್ಲಿ ಇವರ ಮೇರು ಕೃತಿ 'ನಾಡೋಜ ಪಂಪ' ಪ್ರಕಟವಾಯಿತು (1938). ಇದರ ಜೊತೆಗೇ ಪಂಪನ ಆದಿಪುರಾಣದ ಕನ್ನಡ ಅನುವಾದ ರೂಪವಾದ ಆದಿಪುರಾಣ ಸಂಗ್ರಹವೂ ಪ್ರಕಟವಾಯಿತು. ಅನಂತರ ಪಂಪನ ವಿಕ್ರಮಾರ್ಜುನ ವಿಜಯದ ಗದ್ಯಾನುವಾದ 'ಸಮಸ್ತ ಭಾರತ ಸಾರ' 1941ರಲ್ಲಿ ಪ್ರಕಟವಾಯಿತು. ಈ ನಡುವೆ ನವನೀತ ರಾಮಾಯಣ ಎಂಬ ಲಲಿತ ರಗಳೆಯ ಕಾವ್ಯದ ಪ್ರಥಮ ಭಾಂಡ ಬೆಳಕಿಗೆ ಬಂತು (1940). ಇದರಲ್ಲಿ ಆರ್ಯ ದ್ರಾವಿಡ ಘರ್ಷಣೆ ಧ್ವನಿತವಾಗುತ್ತದೆ (ಇದರ ಇನ್ನೆರಡು ಭಾಂಡಗಳು ಪ್ರಕಟವಾಗಿಲ್ಲ). ಆದಿಪುರಾಣ ಸಂಗ್ರಹ, ಸಮಸ್ತ ಭಾರತಸಾರಗಳ ಮಾರ್ಗದಲ್ಲೇ ರಚಿತವಾದ ಇನ್ನೊಂದು ಕೃತಿ ತ್ರಿಪುರದಾಹ (1941). ಇದು ಶಿಶುಮಾಯಣನ ತ್ರಿಪುರದಹನ ಸಾಂಗತ್ಯದ ಗದ್ಯಾನುವಾದ. 1941 ಡಿಸೆಂಬರ್ ತಿಂಗಳಲ್ಲಿ ಲಕ್ಮೇಶ್ವರದಲ್ಲಿ ನಡೆದ ಪಂಪನ ಸಹಸ್ರ ಸಾಂವತ್ಸರಿಕೋತ್ಸವದ ಅಧ್ಯಕ್ಷರಾಗಿ ಇವರು ನಿಯೋಜಿತರಾದರು. ಈ ಕಾಲದಲ್ಲಿ ಕಾವ್ಯ ಸಮಯ ಎಂಬ ಕವಿ ಸಮಯ ವಿಷಯಕವಾದ ಗ್ರಂಥವನ್ನು ರಚಿಸತೊಡಗಿದ್ದರು. ಈ ಕೃತಿ ಸಂಪೂರ್ಣವಾಗಿಲ್ಲ. ಇದೇ ಕಾಲದಲ್ಲಿ ರಾವುತ ರಂಗಪ್ಪ ಎಂಬ ಗೀತನಾಟಕವೊಂದನ್ನು ಬರೆಯತೊಡಗಿದರು. ಇದು ಸಾಹಿತ್ಯದಲ್ಲಿ ಪ್ರಾಚೀನ ನವೀನ ಸಂಪ್ರದಾಯಗಳೊಳಗಿನ ಘರ್ಷಣೆಯನ್ನು ಚಿತ್ರಿಸುವ ಅಪೂರ್ವ ವಿಡಂಬನ ರೂಪಕ. ಈ ಅಪೂರ್ಣ ಕೃತಿ 'ನಡೆದು ಬಂದ ದಾರಿ'ಯ ಮೊದಲನೆಯ ಭಾಗದಲ್ಲಿ ಪ್ರಕಟವಾಗಿದೆ (ಇವರ ಅಪೂರ್ಣ ಕೃತಿಗಳಲ್ಲಿ ಸಂಸ್ಕೃತಿ ಎಂಬ ಕಿರುಹೊತ್ತಗೆಯೂ ಒಂದು). ಇವರ ಎರಡನೆಯ ವಿಮರ್ಶಾತ್ಮಕ ಕೃತಿ ಪಾರ್ತಿಸುಬ್ಬ (1945). ಈ ಗ್ರಂಥದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಯಕ್ಷಗಾನದ ಕವಿಯಾದ ಪಾರ್ತಿಸುಬ್ಬನ ಚರಿತ್ರೆ, ಅವನ ಕೃತಿಗಳ ವಿವರ, ಅವನ ಕಾವ್ಯಶಕ್ತಿ, ಯಕ್ಷಗಾನದ ಸ್ವರೂಪ ಮುಂತಾದ ವಿಷಯಗಳು ವರ್ಣಿತವಾಗಿವೆ. ಕೌಟಿಲ್ಯನ ಅರ್ಥಶಾಸ್ತ್ರ ಇವರಿಗೆ ಅತಿ ಪ್ರಿಯವಾಗಿದ್ದ ಗ್ರಂಥಗಳಲ್ಲಿ ಒಂದಾಗಿತ್ತು. ಅದನ್ನು ಕುರಿತಾದ ವಿಸ್ತೃತ ಗ್ರಂಥವೊಂದನ್ನು ಬರೆಯಬೇಕೆಂದಿದ್ದ ಇವರ ಬಯಕೆ ಪೂರ್ಣವಾಗದೆ ಹೋಯಿತು. ಆದರೆ ಅರ್ಥಶಾಸ್ತ್ರವನ್ನು ಕುರಿತು ಬರೆದ ಕೆಲವು ಲೇಖನಗಳು ಹುಬ್ಬಳ್ಳಿಯ ಕರ್ಮವೀರದಲ್ಲಿ ಪ್ರಕಟವಾದುವು (1945–49). 1948ರಲ್ಲಿ ಇವರ ಕವಿರಾಜಮಾರ್ಗ ವಿವೇಕ ಎಂಬ ವಿಮರ್ಶಾತ್ಮಕ ಗ್ರಂಥದ ಮೊದಲ ಭಾಗ ಪ್ರಕಟವಾಯಿತು (ಅನಂತರ ಸಂಪೂರ್ಣ ಗ್ರಂಥ ಪ್ರಕಟವಾಯಿತು). ಇದೇ ವರ್ಷ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿ ಪ್ರಾಚೀನ ಕನ್ನಡನಾಡಿನ ವ್ಯಾಪ್ತಿ, ಕನ್ನಡ ದೇಸಿ ಸಾಹಿತ್ಯದ ಸ್ವರೂಪ, ಬಾಜನೆಗಬ್ಬವೂ ಯಕ್ಷಗಾನವೂ ಎಂಬ ಮೂರು ಉಪನ್ಯಾಸಗಳನ್ನು ಕೊಟ್ಟರು. ಈ ಉಪನ್ಯಾಸಗಳು ಕನ್ನಡ ನಾಡೂ ದೇಸಿ ಸಾಹಿತ್ಯವೂ ಎಂಬ ಹೆಸರಿನಿಂದ ಸಂಕಲನ ರೂಪದಲ್ಲಿ ಪ್ರಕಟವಾದುವು (1954). ನೃಪತುಂಗನ ಬಲಗೈ ಬಂಟನಾದ ಬಂಕೆಯನನ್ನು ಕುರಿತ ವೀರಬಂಕೆಯ ಎಂಬ ಕಾದಂಬರಿ ಇವರ ಕೊನೆಯ ಕೃತಿ. 1950ರಲ್ಲಿ ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು ಎಂಬ ಸಂಕಲನ ಪ್ರಕಟವಾಯಿತು (1963ರಲ್ಲಿ ಇದರ ಎರಡನೆಯ ಆವೃತ್ತಿ ಪ್ರಕಟವಾಯಿತು. ಇದರ ಮೊದಲ ಆವೃತ್ತಿಯಲ್ಲಿ ರುವ ಲೇಖನಗಳ ಜೊತೆಗೆ ಬೇರೆ ಕೆಲವಾರು ಲೇಖನಗಳೂ ಇವರು ಮಾಡಿದ್ದ ಕೆಲವು ಗ್ರಂಥ ವಿಮರ್ಶೆಗಳೂ ಸೇರಿವೆ). ಹಳೆಯ ಸಾಂಪ್ರದಾಯಿಕ

ವಿದ್ವಾಂಸರಾದರೂ ಆಧುನಿಕ ಮಾರ್ಗದ ಬಗೆಗೆ ಪೂರ್ಣ ಗೌರವವಿದ್ದ ಇವರ ಚಿಕಿತ್ಸಕ ಬುದ್ಧಿಗೆ ಎಂದೂ ಅವಗುಂಠನ ಬಿದ್ದಿರಲಿಲ್ಲ.

ಇವರು 1948ರಲ್ಲಿ ನಿವೃತ್ತರಾದರು. 1950 ಜನವರಿ 16ರಂದು ನಿಧನರಾದರು. (ಎಂ.ಕೆ.ಬಿ.)

**ಮುಳ್ಳಯ್ಯನಗಿರಿ:** ಕರ್ನಾಟಕದ ಅತ್ಯಂತ ಎತ್ತರವಾದ ಗಿರಿ ಶಿಖರ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಶ್ಚಿಮಘಟ್ಟ ಶ್ರೇಣಿಯಿಂದ ಒಳಚಾಚಿರುವ ಬೆಟ್ಟಸಾಲಿನಲ್ಲಿ ಚಿಕ್ಕಮಗಳೂರು ಪಟ್ಟಣದ ಉತ್ತರಕ್ಕಿದೆ. ಎತ್ತರ ಸಮುದ್ರಮಟ್ಟದಿಂದ 1,926 ಮೀ.

ಈ ಗಿರಿ ಶ್ರೇಣಿಯು ಪಶ್ಚಿಮ–ಈಶಾನ್ಯವಾಗಿ ಹಬ್ಬಿದ್ದು ಒಂದು ತುದಿಯಲ್ಲಿ ಮುತ್ತೋಡಿ ಅಭಯಾರಣ್ಯಕ್ಕೂ ಮತ್ತೊಂದು ತುದಿಯಲ್ಲಿ ಕೆಮ್ಮಣ್ಣುಗುಂಡಿ ಗಿರಿಧಾಮಕ್ಕೂ ಸೇತುವೆಯಂತಿದೆ. ಈ ವಲಯದಲ್ಲಿ ಬಾಬಬುಡನ್‌ಗಿರಿ, ಕಲ್ಹತ್ತಗಿರಿ, ಕಾವಿಕಲ್ ಮಠ, ಅಬ್ಬೆ ಜಲಪಾತ ಮೊದಲಾದ ಪ್ರೇಕ್ಷಣೀಯ ಸ್ಥಳಗಳು ಸೇರಿವೆ. ಈ ಗಿರಿಯ ಎತ್ತರವಾದ ಪ್ರದೇಶಗಳಿಂದ ಧುಮುಕುವ ಜಲಪಾತಗಳು ಮತ್ತು ದಟ್ಟವಾಗಿ ಹಬ್ಬಿರುವ ಕಾಡು ನೋಡಲು ಅತ್ಯಂತ ರಮಣೀಯ, ಪ್ರಕೃತಿಯ ಮಡಿಲಲ್ಲಿರುವ ಈ ಗಿರಿಯ ಶಿಖರದಿಂದ ಸುದೂರ ಪ್ರದೇಶಗಳ ವಿಹಂಗಮ ನೋಟ ಕಾಣಬಹುದು. ಸೋಮವಾಹಿನಿ, ಹೊನ್ನಮ್ಮ ಹಳ್ಳ, ವೇದಾ, ಆವತಿ ಮುಂತಾದ ತೊರೆಗಳು ಈ ಬೆಟ್ಟದಲ್ಲಿ ಹುಟ್ಟುತ್ತವೆ. ಈ ಪರ್ವತಶ್ರೇಣಿಯಲ್ಲಿ ಹೇರಳವಾಗಿ ಕಬ್ಬಿಣದ ಅದಿರು ದೊರೆಯುತ್ತದೆ. ಹುಲಿ, ಕಾಡುಕೋಣ, ಚಿರತೆ, ಸಾರಂಗ, ಮುಳ್ಳುಹಂದಿ ಮುಂತಾದ ಪ್ರಾಣಿಗಳನ್ನು ಈ ಬೆಟ್ಟದ ಕಾಡುಗಳಲ್ಲಿ ಕಾಣಬಹುದು. ಇಲ್ಲಿನ ಕಾಡುಗಳಲ್ಲಿ ಉತ್ಕೃಷ್ಟವಾದ ತೇಗ, ಶ್ರೀಗಂಧ, ನಂದಿ ಮತ್ತು ಮತ್ತಿ ಮುಂತಾದ ಮರಗಳು ಹೇರಳವಾಗಿವೆ. ಔಷಧೋಪಯೋಗಿಯಾದ ಅಮೂಲ್ಯವಾದ ಅನೇಕ ಗಿಡಮೂಲಿಕೆಗಳಿಗೆ ಈ ಗಿರಿಯು ಪ್ರಸಿದ್ಧವಾಗಿದೆ. ಈ ಬೆಟ್ಟದ ಸಾಲನ್ನೇ ಪುರಾಣಗಳಲ್ಲಿ ಚಂದ್ರದ್ರೋಣ ಪರ್ವತವೆಂದು ಕರೆಯಲಾಗಿದೆ. ರಾಮ ರಾವಣರ ಯುದ್ಧದಲ್ಲಿ ಮಡಿದವರನ್ನು ಬದುಕಿಸಲು ಹನುಮಂತ ಈ ಪರ್ವತದಿಂದಲೇ ಸಂಜೀವಿನೀ ಎಂಬ ಮೂಲಿಕೆಯನ್ನು ತೆಗೆದುಕೊಂಡು ಹೋದನೆಂಬ ಐತಿಹ್ಯವಿದೆ. ಈ ಬೆಟ್ಟದ ಅನೇಕ ಭಾಗಗಳು ಅತ್ಯುತ್ತಮವಾದ ಕಾಫಿ ತೋಟಗಳಿಗೆ ಪ್ರಸಿದ್ಧವಾಗಿವೆ.

ಬೆಟ್ಟದ ಮೇಲ್ಭಾಗದಲ್ಲಿ ಮುಳ್ಳಯ್ಯನ ಗದ್ದುಗೆ, ಮಧ್ಯ ಭಾಗದಲ್ಲಿ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನ ಹಾಗೂ ಪಾದದಲ್ಲಿ ನಿರ್ವಾಣಸ್ವಾಮಿ ಗದ್ದುಗೆ ಮತ್ತು ನಿರ್ವಾಣಸ್ವಾಮಿಮಠ ಇವೆ. ಈ ದೇವಾಲಯಗಳ ಹಾಗೂ ಗದ್ದುಗೆಗಳ ನಿರ್ವಹಣೆಯು ಈ ಪ್ರದೇಶದ ಮೂರು ನಾಡಿನವರಿಗೆ ಸೇರಿದೆ. ಈ ಪ್ರದೇಶದ ಸುತ್ತಮುತ್ತಲಿನ ಜನರು ತಮ್ಮ ಗ್ರಾಮದೇವತೆಗಳ ಉತ್ಸವಮೂರ್ತಿಗಳೊಡನೆ ಕಾಲ್ನಡಿಗೆಯಲ್ಲಿ ಯಾತ್ರಾರ್ಥಿಗಳಾಗಿ ಬಂದು ಈ ಪ್ರದೇಶದಲ್ಲಿ ನಡೆಯುವ ಜಾತ್ರೆಗಳಲ್ಲಿ ಭಾಗವಹಿಸಿ ವಿಶೇಷ ಸೇವೆಗಳನ್ನು ಸಲ್ಲಿಸುತ್ತಾರೆ. ವರ್ಷಕ್ಕೊಮ್ಮೆ ಯುಗಾದಿ ವೇಳೆಯಲ್ಲಿ ನಡೆಯುವ ಇಲ್ಲಿನ ಜಾತ್ರೆ ದೊಡ್ಡದಾಗಿದ್ದು ಅನೇಕರನ್ನು ಆಕರ್ಷಿಸುತ್ತದೆ. ಈ ಬೆಟ್ಟದ ದೇವಾಲಯಗಳಿಗೆ ಹಾಗೂ ಗದ್ದುಗೆಗಳಿಗೆ ಹೋಗಿಬರಲು ರಸ್ತೆಯ ಅನುಕೂಲವಿದೆ. ಮುಳ್ಳಯ್ಯನಗಿರಿ ಒಂದು ಪ್ರೇಕ್ಷಣೀಯ ಸ್ಥಳ. (ಎಸ್.ವಿ.ಎಸ್.ಬಿ.)

**ಮುಳ್ಳೂರು:** ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಒಂದು ಗ್ರಾಮ. ಶನಿವಾರಸಂತೆಯಿಂದ ದಕ್ಷಿಣಕ್ಕೆ ಸು 6 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,026. ಗಂಗರ ಮತ್ತು ಚಂಗಾಳ್ವರ ಕಾಲದಲ್ಲಿ ಪ್ರಾಮುಖ್ಯತೆ ಪಡೆದಿದ್ದ ಈ ಊರಿನಲ್ಲಿ ಆ ಕಾಲದ ಜೈನಬಸದಿಗಳಿವೆ. ಈ ಬಸದಿಗಳು ಈಗ ಜೀರ್ಣಾವಸ್ಥೆಯಲ್ಲಿವೆ. 1058ರ ಒಂದು ಶಾಸನದಲ್ಲಿ ರಾಜೇಂದ್ರ ಚೋಳ ಪೃಥ್ವೀಕೊಂಗುಣಿII ಎಂಬುವವನು ತನ್ನ ತಾಯಿ ಪೊಂಬಚ್ಚರಸಿಯ ಸ್ಮಾರಕವಾಗಿ ತನ್ನ ತಂದೆ 1050ರಲ್ಲಿ ನಿರ್ಮಿಸಿದ್ದ ಬಸದಿಯೊಂದಕ್ಕೆ ಕೆಲವು ಗ್ರಾಮಗಳನ್ನೂ ಎಣ್ಣೆಯನ್ನೂ ದಾನವಿತ್ತ ಉಲ್ಲೇಖವಿದೆ. ಇದು ಮುಳ್ಳೂರಿಗೆ ಸಂಬಂಧಿಸಿದ್ದಿರಬೇಕು. ಚಂಗಾಳ್ವರ ಕೊನೆಯ ಸಂತತಿಯ ಶಾಸನವೊಂದರಲ್ಲಿ (ಸು. 1280, 1296, 1300ರ ಸಮಯ) ಮಲ್ಲಿದೇವನೆಂಬ ಚಂಗಾಳ್ವ ರಾಜ ಮತ್ತು ಅವನ ಮಗ ಹರಿಹರದೇವರಸು ತಮ್ಮ ಪ್ರಜೆಗಳಿಗೆ ಭೂಮಿ, ಧನ ಇತ್ಯಾದಿಗಳನ್ನು ದಾನ ಕೊಟ್ಟ ಸ್ಥಳ ಮುಳ್ಳೂರೆಂದು ಉಲ್ಲೇಖಿತವಾಗಿದೆ. ಮುಳ್ಳೂರು ಗಣವೆಂದು ಪ್ರಸಿದ್ಧವಾದ ಜೈನ ಶಿಷ್ಯ ಪರಂಪರೆಗೆ ಈ ಊರು ಕೇಂದ್ರವಾಗಿತ್ತು. (ಎಂ.ವಿ.)

**ಮೂಗೂರು:** ಮೈಸೂರು ಜಿಲ್ಲೆ ತಿರುಮಕೂಡಲುನರಸೀಪುರ ತಾಲ್ಲೂಕಿನ ಒಂದು ಗ್ರಾಮ, ಹೋಬಳಿ ಕೇಂದ್ರ. ತಿರುಮಕೂಡಲು ನರಸೀಪುರದ ಆಗ್ನೇಯಕ್ಕೆ 10 ಕಿಮೀ ದೂರದಲ್ಲಿದೆ. ಜನಸಂಖ್ಯೆ 7,727. ಬಹು ಪ್ರಾಚೀನವಾದ ಈ ಗ್ರಾಮದಲ್ಲಿ ಆರು ದೇವಾಲಯಗಳಿವೆ. ದೇಶೇಶ್ವರ, ನಾರಾಯಣ ಮತ್ತು ತಿಬ್ಬಾದೇವಿ ದೇವಾಲಯಗಳು ಅವುಗಳಲ್ಲಿ ಮುಖ್ಯವಾದುವು. ಊರಿಗೆ ಈಶಾನ್ಯ ದಿಕ್ಕಿನಲ್ಲಿರುವ ದೇಶೇಶ್ವರ ದೇವಾಲಯವನ್ನು ದೊಡ್ಡ ಆವರಣದೊಳಗೆ ಕಟ್ಟಿದೆ. ಮುಂದೆ ಸುಂದರವಾದ ಗೋಪುರ ಹಾಗೂ ದೊಡ್ಡದಾದ ಒಂದು ದೀಪದ ಕಂಬ ಇವೆ. ಈ ದೇವಾಲಯವನ್ನು ವಿವಿಧ ಹಂತಗಳಲ್ಲಿ ಕಟ್ಟಿದಂತೆ ತೋರುತ್ತದೆ. ದೇಶೇಶ್ವರ ದೇವಾಲಯ ಮೂಲತಃ ಕುಳ್ಳು ಗರ್ಭಗುಡಿ ಮಾತ್ರ ಇದ್ದ ಒಂದು ಅಂಕಣದ ಕಟ್ಟಡ. ಇದು ಬಹುಶಃ ಚೋಳರ ಕಾಲಕ್ಕೆ ಸೇರಿದ್ದು. ಪ್ರಾಯಶಃ ಹೊಯ್ಸಳ ಮೂರನೆಯ ನರಸಿಂಹನ ಕಾಲದಲ್ಲಿ ಈ ದೇವಾಲಯಕ್ಕೆ ಕೂಡಿದ ಹಾಗೆ ಶಂಕರೇಶ್ವರನ ದೊಡ್ಡ ದೇವಾಲಯವೊಂದನ್ನು ಮತ್ತು ಒಂದು ದೊಡ್ಡ ಅಗ್ರಹಾರವನ್ನು ಕಟ್ಟಲಾಯಿತು. ಅನಂತರ ದೇಶೇಶ್ವರ ದೇವಾಲಯ ಮತ್ತು ಶಂಕರೇಶ್ವರ ದೇವಾಲಯದ ನವರಂಗಕ್ಕೆ ಸೇರಿದ ಹಾಗೆ ಒಂದು ದ್ವಾರವನ್ನು ನಿರ್ಮಿಸಲಾಯಿತು. ಈ ದೇವಾಲಯದಲ್ಲಿರುವ ಶಂಕರೇಶ್ವರ ಲಿಂಗ ಒಂದು ಅಡಿ ವ್ಯಾಸವುಳ್ಳದ್ದಾಗಿದೆ. ದೇವಾಲಯದ ನವರಂಗದಲ್ಲಿರುವ ಸೂರ್ಯ, ವಿಷ್ಣು, ಸಪ್ತಮಾತೃಕಾ ಮುಂತಾದ ವಿಗ್ರಹಗಳಿವೆ. ನವರಂಗದ ದಕ್ಷಿಣ ದ್ವಾರದ ಎದುರಿಗಿರುವ ಗೂಡಿನೊಳಗೆ ಕೈಜೋಡಿಸಿ ನಿಂತಿರುವ ವಿಗ್ರಹವೊಂದಿದೆ. ಈ ವಿಗ್ರಹವು ದೇವಾಲಯವನ್ನು ಕಟ್ಟಿಸಿದ ದಾನಿಯದೆಂದು ಪ್ರತೀತಿ. ವಿಜಯನಗರ ಕಾಲದಲ್ಲಿ ಈ ದೇವಾಲಯದ ಆವರಣ, ಮಹಾದ್ವಾರ, ಗೋಪುರ, ಗರುಡಗಂಬ ಸುಂದರವಾದ ಕೆತ್ತನೆಗಳುಳ್ಳ ಪಂಚಲಿಂಗಗುಡಿ ಮತ್ತು ಪಾರ್ವತಿ ಗುಡಿ–ಮುಂತಾದವನ್ನು ಕಟ್ಟಿಸಲಾಯಿತು. ಈ ದೇವಾಲಯದಲ್ಲಿ ಚೋಳರ ಕಾಲದ ಆರು ಕಂಬಗಳಿವೆ. ಈ ಕಂಬಗಳು ಮೊದಲಿನ ದೇಶೇಶ್ವರ ದೇವಾಲಯ ಹಾಗೂ ಅದರ ಮುಖ ಮಂಟಪಕ್ಕೆ ಸೇರಿದ್ದೆಂದು ತೋರುತ್ತದೆ. ಎರಡು ಅಂಕಣವಿರುವ ಶಂಕರೇಶ್ವರ ದೇವಾಲಯದ ಮುಖಮಂಟಪ ಅನಂತರದ ಸೇರ್ಪಡೆ. ದೇವಾಲಯದ ಯಾಗಶಾಲೆಯ ಹಾಗೂ ಪಂಚಲಿಂಗ ಗುಡಿಗಳ ಮರದ ಬಾಗಿಲುಗಳ ಶಿವಲೀಲೆ, ಮತ್ತಿತರ ಸುಂದರವಾದ ಕೆತ್ತನೆಗಳಿಂದ ಕೂಡಿದ್ದು ವಿಜಯನಗರದ ಕಾಲಕ್ಕೆ ಸೇರಿದ್ದಾಗಿವೆ. ದೇವಾಲಯದ ಆವರಣದ ಹಿಂಭಾಗದಲ್ಲಿರುವ ಸಣ್ಣ ಗುಡಿಯೊಂದರಲ್ಲಿ ಕಾಲಬೈರವನ ಸುಂದರವಾದ ಮೂರ್ತಿಯೊಂದಿದೆ. ಸುಮಾರು ಮೂರು ಅಡಿ ಎತ್ತರವಿರುವ ಈ ವಿಗ್ರಹ ಸೂಕ್ಷ್ಮವಾದ ಕೆತ್ತನೆಗಳನ್ನೊಳಗೊಂಡಿದೆ. ತ್ರಿಭಂಗಿಯಲ್ಲಿ ನಿಂತಿರುವ ಈ ನಗ್ನ ವಿಗ್ರಹದ ಕೈಗಳಲ್ಲಿ ಹಾವು, ಮುರಿದ ಕತ್ತಿ, ತ್ರಿಶೂಲ ಮತ್ತು

ಕಪಾಲಗಳಿವೆ. ಎರಡೂ ಪಕ್ಕಗಳಲ್ಲಿ ನಾಲ್ಕು ನಾಲ್ಕು ಗಣಗಳಿದ್ದು ಒಂದು ಬೇಟೆನಾಯಿಯನ್ನು ಕೂಡ ಸುಂದರವಾಗಿ ಕೆತ್ತಲಾಗಿದೆ. ವಿಗ್ರಹದ ಹಿಂಭಾಗದಲ್ಲಿ ಸಸ್ಯಾಲಂಕರಣದ ತೋರಣವನ್ನು ಕಾಣಬಹುದು.

ದೇಶೇಶ್ವರ ದೇವಾಲಯಕ್ಕೆ ಸುಮಾರು ನೂರು ಗಜ ಉತ್ತರಕ್ಕೆ ತಿಬ್ಬಾದೇವಿ (ತ್ರಿಪುರಾಂಬ, ತ್ರಿಪುರಸುಂದರಿ) ದೇವಾಲಯವಿದೆ. ಈ ದೇವಾಲಯ ಮೊದಲು ಬರೀ ಗರ್ಭಗೃಹವನ್ನು ಮಾತ್ರ ಒಳಗೊಂಡಿದ್ದು ಮಿಕ್ಕ ಭಾಗಗಳನ್ನು ಹೊಯ್ಸಳರ ಕಾಲದಲ್ಲಿ ಕಟ್ಟಿದಂತೆ ತೋರುತ್ತದೆ. ನವರಂಗ, ಮುಖಮಂಟಪ, ಮುಖದ್ವಾರ, ಇಲ್ಲಿರುವ ಪಾಳೆಯಗಾರರ ವಿಗ್ರಹಗಳು ಮತ್ತು ಪ್ರಾಕಾರ-ಇವೆಲ್ಲವೂ ಹೆಚ್ಚು ಕಡಿಮೆ ವಿಜಯನಗರದ ಕಾಲದವು. ಮತ್ತೆ ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಲ್ಲಿ ದೇವಾಲಯದ ಜೀರ್ಣೋದ್ಧಾರವಾದಂತೆ ತೋರುತ್ತದೆ. ಈ ದೇವಾಲಯದ ಮುಖ್ಯ ದೇವತೆ ವೈಷ್ಣವಿ. ಈ ದೇವಾಲಯದ ತಗಡು ಮುಚ್ಚಿದ ಬಾಗಿಲುಗಳ ಮೇಲೆ, ವಾಹನಗಳ ಮೇಲೆ ಮತ್ತು ಇತರ ಪಾತ್ರೆಗಳ ಮೇಲೆ ಅನೇಕ ಶಾಸನಗಳನ್ನು ಕಾಣಬಹುದು. ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ ದೇವಾಲಯದ ಕೈಪಿಡಿಗೋಡೆಯನ್ನು ಗಾರೆಗಚ್ಚಿನಿಂದ ಮಾಡಿದ ಪಾರ್ವತಿ, ಲಕ್ಷ್ಮೀ, ಸರಸ್ವತಿ, ಅಷ್ಟದಿಕ್ಪಾಲಕರು, ದಶಾವತಾರ ಮತ್ತು ಸಪ್ತಮಾತೃಕಾ ಮುಂತಾದ ನೂರಕ್ಕೂ ಹೆಚ್ಚು ವಿಗ್ರಹಗಳಿಂದ ಅಲಂಕರಿಸಲಾಯಿತು. ಈ ದೇವಾಲಯದ ಮಹಾದ್ವಾರದ ಮುಂಭಾಗದಲ್ಲಿ ಹತ್ತೊಂಬತ್ತನೆಯ ಶತಮಾನಕ್ಕೆ ಸೇರಿದ ಒಂದು ಮಂಟಪವಿದೆ. ಈ ಮಂಟಪ ಇಟ್ಟಿಗೆ ಗಾರೆಗಳಿಂದ ಕಟ್ಟಿದ್ದು ಸುಂದರವಾದ ಕಂಬಗಳು, ಕಮಾನುಗಳು ಹಾಗೂ ಕೈಪಿಡಿಗೋಡೆಗಳನ್ನು ಹೊಂದಿದೆ.

ಇಲ್ಲಿರುವ ನಾರಾಯಣಸ್ವಾಮಿ ದೇವಾಲಯ ಹೊಯ್ಸಳರ ಕಾಲದ್ದು. ಆವರಣದೊಳಗಡೆ ಇರುವ ಈ ದೇವಾಲಯ ಗರ್ಭಗೃಹ, ಸುಕನಾಸಿ, ನಾಲ್ಕು ಕಂಬಗಳಿರುವ ಒಂದು ನವರಂಗ ಮತ್ತು ಒಂದು ಮುಖಮಂಟಪವನ್ನೊಳಗೊಂಡಿದೆ. ನವರಂಗದ ಕಂಬಗಳು ಉರುಳೆಯಾಕಾರವಾಗಿದ್ದು ಬೆಣಚುಕಲ್ಲಿನಿಂದ ಮಾಡಲ್ಪಟ್ಟಿದೆ. ತಿಬ್ಬಾದೇವಿ ದೇವಾಲಯದ ದಕ್ಷಿಣಕ್ಕೆ ಸುಮಾರು ಮೂರು ಗಜ ದೂರದಲ್ಲಿ ಆದಿನಾಥ ಮತ್ತು ಪಾರ್ಶ್ವನಾಥರ ಬಸ್ತಿಗಳಿವೆ. ನಿಂತಿರುವ ಪಾರ್ಶ್ವನಾಥನ ವಿಗ್ರಹ ಸುಮಾರು ನಾಲ್ಕು ಅಡಿ ಎತ್ತರವಿದ್ದು ತಲೆಯ ಮೇಲೆ ಏಳು ಹೆಡೆಗಳ ಸರ್ಪವೊಂದಿದೆ. ವಿಗ್ರಹದ ಪೀಠದ ಮೇಲಿರುವ ಕನ್ನಡದ ಶಾಸನದಿಂದ ಈ ವಿಗ್ರಹ ಹೊಯ್ಸಳರ ಕಾಲದ್ದೆಂದು ತಿಳಿಯುತ್ತದೆ. ಪದ್ಮಾಸನರೂಢನಾದ ಆದಿನಾಥನ ವಿಗ್ರಹವೂ ನಾಲ್ಕು ಅಡಿ ಎತ್ತರವಿದೆ. ಇಲ್ಲಿರುವ ಕಂಬಗಳು ಹೊಯ್ಸಳರ ಕಾಲದ್ದೆಂದು ಹೇಳಬಹುದು.

ಮೂಗೂರಿನಲ್ಲಿ ಪ್ರತಿವರ್ಷ ಡಿಸೆಂಬರ್ ಅಥವಾ ಜನವರಿಯಲ್ಲಿ ನಡೆಯುವ ತಿಬ್ಬಾದೇವಿ ದೇವಾಲಯದ ಉತ್ಸವ ಸಾವಿರಾರು ಜನರನ್ನು ಆಕರ್ಷಿಸುತ್ತದೆ.

**(ಎಂ.ಎಸ್.ಕೆ.)**

**ಮೂಡಬಿದರೆ:** ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಒಂದು ಪಟ್ಟಣ. ದಕ್ಷಿಣ ಭಾರತದ ಜೈನಕಾಶಿಯೆಂದು ಖ್ಯಾತಿವೆತ್ತ ತೀರ್ಥಕ್ಷೇತ್ರ. ಮಂಗಳೂರು-ಕಾರ್ಕಳ ರಸ್ತೆಯಲ್ಲಿ ಮಂಗಳೂರಿನ ಈಶಾನ್ಯಕ್ಕೆ 35 ಕಿಮೀ ದೂರದಲ್ಲಿದೆ. ಶಾಸನಗಳಲ್ಲಿ ಬಿದರೆಯೆಂದೂ ಸಾಹಿತ್ಯ ಗ್ರಂಥಗಳಲ್ಲಿ ವಂಶಪುರ, ವೇಣುಪುರವೆಂದೂ ಕರೆಯಲಾಗಿರುವ ಈ ಗ್ರಾಮ 17ನೆಯ ಶತಮಾನದಲ್ಲಿ ಪುತ್ತಿಗೆಯ ಚೌಟರಸರ ರಾಜಧಾನಿಯಾಗಿತ್ತು.

ಶಾಸನಗಳಲ್ಲಿ ಬಿದಿರೆ ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಮೂಡಬಿದಿರೆ ಪ್ರಾಚೀನ ಕಾಲದಿಂದಲೂ ಜೈನಧರ್ಮಕ್ಕೆ ಹೆಸರಾದ ಊರು. ಒಂದು ಕಾಲದಲ್ಲಿ ಅಧಿಕ ಜನಸಂಖ್ಯೆಯ ಊರಾಗಿದ್ದರೂ ಕಾಲಾಂತರದಲ್ಲಿ ಜನವಾಸ ಕಡಿಮೆಯಾಗಿ ನೆಲ ಹಾಳುಬಿದ್ದು ಎಲ್ಲೆಲ್ಲೂ ಬಿದಿರಿನ ಮೆಳೆಗಳು ಬೆಳೆದುಕೊಂಡವು. ಒಮ್ಮೆ ಶ್ರವಣಬೆಳಗೊಳದಿಂದ ಇಲ್ಲಿಗೆ ಬಂದ ಓರ್ವ ಜೈನ ಗುರುವಿನ ಆದೇಶದಂತೆ ಬಿದಿರ ಹಿಂಡಲುಗಳನ್ನು ಕಡಿದು ನೆಲವನ್ನು ಅಗೆದಾಗ ಅಲ್ಲೊಂದು ಪಾರ್ಶ್ವನಾಥ ಸ್ವಾಮಿಯ ವಿಗ್ರಹ ದೊರಕಿತು. ಸಮೀಪದಲ್ಲಿ ನೆಲಸಿದ್ದ ಜೈನರು ಅಲ್ಲೇ ಒಂದು ಬಸದಿಯನ್ನು ಕಟ್ಟಿಸಿ ಆ ಪ್ರತಿಮೆಯನ್ನು ಅದರಲ್ಲಿ ಪ್ರತಿಷ್ಠಾಪಿಸಿದರು. ಈ ಬಸದಿಗೆ ಹಳೇ ಬಸದಿ ಅಥವಾ ಗುರುಬಸದಿ ಎಂದು ಹೆಸರು ಬಂತು. ಈಗಲೂ ಈ ಊರ ಜೈನ ಪೀಠಾಧಿಪತಿಗಳಿಗೆ ಪಟ್ಟವಾಗುವುದು ಈ ಗುರುಬಸದಿಯಲ್ಲಿಯೇ. ಹೀಗೆ ಬಿದಿರಿನಿಂದ ಆವೃತವಾಗಿದ್ದ ಊರೇ ಬಿದಿರೆ. ಈ ಅಚ್ಚಗನ್ನಡದ ಸಂಸ್ಕೃತ ರೂಪಾಂತರಗಳೇ ವಂಶಪುರ, ವೇಣುಪುರ. ಮುಂದೆ ಈ ಊರು ಬೆಳೆದು 18 ಬಸದಿಗಳು, 18 ದೇವಾಲಯಗಳು, 18 ಕೆರೆಗಳು ಮತ್ತು 18 ಕೇರಿಗಳಿರುವ ಊರೆಂಬ ಪ್ರತೀತಿಯುಂಟಾಯಿತು. ಚರಿತ್ರೆಯು ವಿವರಣೆಗಳಲ್ಲೂ ಶಾಸನಗಳಲ್ಲೂ ಇದು (ಮೂಡಬಿದಿರೆ) ಒಂದು ನಗರವೆಂದು ಪ್ರಸಿದ್ಧವಿದ್ದು, ಎಂಟು ಮಂದಿ ಸೆಟ್ಟಿಕಾರರು (ವ್ಯಾಪಾರಸ್ಥರು) ಮತ್ತು ನಾಲ್ವರು ಏಳಮೆಗಳು (ವ್ಯವಸಾಯಗಾರರು) ಇವರಿಂದ ಆಳಲ್ಪಡುತ್ತಿತ್ತೆಂದು ತಿಳಿದುಬರುತ್ತದೆ.

ಮೂಡಬಿದಿರೆಯಲ್ಲಿ 18 ಜೈನ ಬಸದಿಗಳಿವೆ. ಇವುಗಳಲ್ಲಿ ಸಾವಿರಕಂಬಗಳ ಬಸದಿ ಎಂದು ಲೋಕವಿಶ್ರುತವಾದ ತ್ರಿಭುವನತಿಲಕ ಚೂಡಾಮಣಿ ಚೈತ್ಯಾಲಯ ದಕ್ಷಿಣ ಭಾರತದ ಉತ್ತಮ ವಾಸ್ತು ನಿರ್ಮಾಣಗಳಲ್ಲೊಂದು.



ಚಂದ್ರನಾಥ ಬಸದಿ

ಇದರ ರಚನೆ 1431ರಲ್ಲಾಯಿತೆಂದು ಇಲ್ಲಿನ ಗದ್ದಿಗೆ ಮಂಟಪದಲ್ಲಿರುವ ಶಿಲಾಲೇಖದಲ್ಲಿದೆ. ಕಗ್ಗಲ್ಲಿನಿಂದ ನಿರ್ಮಿತವಾದ ಈ ಕಟ್ಟಡದ ಲಾವಣ್ಯ ಅನುಪಮವಾದುದು. ಗರ್ಭಗುಡಿಯ ಮುಂದೆ ಮೂರು ಮಂಟಪಗಳು ಸಾಲಾಗಿದ್ದು ಪ್ರಾಕಾರದಿಂದ ಸುತ್ತುವರಿದಿದೆ. ಏರುವಿನ್ಯಾಸದಲ್ಲಿ ಒಂದರ ಮೇಲೆ ಒಂದಾಗಿ ಮೂರು ಅಂತಸ್ತುಗಳಿದ್ದು ಇಳಿಜಾರು ಚಾವಣಿಗಳನ್ನು ಹೊಂದಿದೆ. ಮೇಲಿನ ಅಂತಸ್ತಿಗೆ ತಾಮ್ರದ ತಗಡುಗಳನ್ನು ಹೊದಿಸಿದ್ದು ಅಲ್ಲಿ ನಿಂತು ನೋಡಿದರೆ ಅರಬ್ಬೀಸಮುದ್ರ ಕಾಣುತ್ತದೆ ಎಂದು ಹೇಳುತ್ತಾರೆ. ಈ ಬಸದಿಯ ಬಹುಸಂಖ್ಯಾತ ಕಂಬಗಳಲ್ಲಿ ಯಾವುದೇ ಒಂದು ಕಂಬದ ಕೆತ್ತನೆ ಇನ್ನೊಂದರಂತಿಲ್ಲವೆಂಬ ವೈಶಿಷ್ಟ್ಯ ಪಡೆದಿದೆ. ಇಲ್ಲಿ ಗೋಡೆಗಳಲ್ಲಿ, ಕಂಬಕಂಬಗಳಲ್ಲಿ ಕೆತ್ತಲ್ಪಟ್ಟ ಹೂ-ಹಣ್ಣುಗಳ, ಬಳ್ಳಿಗಳ, ಮೃಗಪಕ್ಷಿಗಳ, ದೇವಾಸುರರ ಗೊಂಬೆಗಳ ಆಲಂಕಾರಿಕ ನೈಪುಣ್ಯವಂತೂ ಅತ್ಯಂತ ಶ್ಲಾಘನೀಯ. ಮುಂದಿರುವ ಭೈರಾದೇವಿ ಮಂಟಪದ ಕೆಳಗಲ್ಲುಗಳಲ್ಲಿ ಕೆತ್ತಲಾದ ಜಿರಾಫೆ ಮತ್ತು ಚೀನ ದೇಶದ ಪುರಾಣಪ್ರಾಣಿಯಾದ ಡ್ರೇಗನ್ ಅತಿ ವಿಸ್ಮಯಕರ. ಇವು ಅಷ್ಟೇ ಅಪೂರ್ವ ಶಿಲ್ಪರಚನೆಗಳು. ಈ ಬಸದಿಯ ಮುಂಭಾಗದಲ್ಲಿ 16 ಮೀ ಎತ್ತರದಲ್ಲಿರುವ ಮಾನಸ್ತಂಭವೂ ನಕ್ಷತ್ರಾಕಾರದ ಮಂಟಪವೂ ಭವ್ಯವೂ ಆಕರ್ಷಣೀಯವೂ ಆಗಿದೆ. ಪಂಚಲೋಹದ ಏಳಡಿ ಎತ್ತರದ

ಪ್ರಾಯಶಃ ದಕ್ಷಿಣ ಭಾರತದಲ್ಲೇ ಅತಿ ದೊಡ್ಡದಾದ ಚಂದ್ರನಾಥಸ್ವಾಮಿ ತೀರ್ಥಂಕರನ ಮೂರ್ತಿ ಈ ಬಸದಿಯಲಿದೆ. ಪ್ರತಿವರ್ಷ ಚೈತ್ರಮಾಸದ ಪೂರ್ಣಿಮಾ ದಿನ ಇಲ್ಲಿ ರಥೋತ್ಸವ ನಡೆಯುತ್ತದೆ.

ಗುರುಬಸದಿಗೆ ಸಿದ್ಧಾಂತ ಬಸದಿ ಎಂಬ ಹೆಸರೂ ಇದೆ. ಇಲ್ಲಿ ಜೈನರ ಪವಿತ್ರ ಧಾರ್ಮಿಕ ಗ್ರಂಥಗಳಾದ ಧವಲ, ಜಯಧವಲ, ಮತ್ತು ಮಹಾಧವಲ-ಎಂಬವುಗಳು ಶ್ರೀತಾಳೆಯ ಓಲೆಯ ಪ್ರತಿಗಳು ಇವೆ. ಪ್ರಾಕೃತ ಭಾಷೆಯಲ್ಲಿ ಹಳಗನ್ನಡ ಅಕ್ಷರಗಳಿಂದ ಬರೆಯಲ್ಪಟ್ಟ ಈ ಸಿದ್ಧಾಂತ ಗ್ರಂಥಗಳಲ್ಲದೆ, ಆ ಬಸದಿಯಲ್ಲಿ ತಿರ್ಥಂಕರರ 33 ನವರತ್ನ ರಚಿತ ಪ್ರತಿಮೆಗಳಿವೆ. ಸಿದ್ಧಾಂತ ಗ್ರಂಥಗಳನ್ನೂ ಈ ಅಮೂಲ್ಯ ವಿಗ್ರಹಗಳನ್ನೂ ದರ್ಶನ ಮಾಡಲು ಪ್ರತಿವರ್ಷವೂ ದೂರದ ಸ್ಥಳಗಳಿಂದ ಸಾವಿರಾರು ಜೈನ ಯಾತ್ರಿಕರು ಇಲ್ಲಿಗೆ ಬರುತ್ತಾರೆ. ಅಮ್ಮನವರ ಬಸದಿ ಮತ್ತು ತಿಪ್ಪಬಸದಿಗಳು ವಿಗ್ರಹಶಿಲ್ಪದ ದೃಷ್ಟಿಯಿಂದ ವೈಶಿಷ್ಟ್ಯವುಳ್ಳವುಗಳಾಗಿವೆ.

ಚೌಟರ ಅರಮನೆಯ ಕಂಬದ ಮೇಲಿರುವ ನವನಾರಿ ಕುಂಜರ

ಮೂಡಬಿದಿರೆಯ ಬೆಟ್ಟಕೇರಿಯಲ್ಲಿ ಮುಡಿಂಜಿ (ಮುಡಿಜ) ಎಂಬ ಜೈನ ಸ್ಮಾರಕಗಳು ಇವೆ. ಎತ್ತರಕ್ಕೆ ಹೋದಂತೆ ಸಪೂರವಾಗುವ ಟಿಬೆಟ್ಟಿನ ಸ್ತೂಪಗಳ ರೀತಿಯಲ್ಲಿರುವ ಈ ರಚನೆಗಳು ವಿಚಿತ್ರ ತರದವಾಗಿವೆ. ಇಲ್ಲಿಯ ಬಸ್ ನಿಲ್ದಾಣದ ಸಮೀಪವಿರುವ ಚೌಟರಸರ ಅರಮನೆ ಈಗ ಹಾಳಾಗಿದ್ದರೂ ಅದರ ಬಲು ಸೊಗಸಾದ ಮರದ ಕೆತ್ತನೆಯ ಜಾಲಾಕ್ಷ ಕಿಟಿಕಿಗಳೂ ಕಂಬಗಳೂ ನೇತ್ರಾನಂದಕರವಾಗಿವೆ. ಪಟ್ಟದ ಚಾವಡಿಯ ಕಂಬಗಳಲ್ಲಿ ಕೆತ್ತಿರುವ ಪಂಚನಾರೀತುರಂಗ (ಐವರು ಹೆಂಗಸರು ಹೆಣೆದುಕೊಂಡು ರಚಿಸಲಾದ ಕುದುರೆ) ಮತ್ತು ನವನಾರೀಕುಂಜರ (ಒಂಬತ್ತು ಜನ ಹೆಂಗಸರು ಹೆಣೆದುಕೊಂಡು ರಚಿಸಲಾದ ಆನೆ) ಇವೆರಡು ಅತ್ಯಂತ ರಮಣೀಯವಾಗಿವೆ. ಪೂರ್ವಕಾಲದ ವೈಭವವನ್ನು ಸೂಚಿಸತಕ್ಕ ಕೋಟೆ ಮೂಡಬಿದಿರೆಯ ಈಶಾನ್ಯದಲ್ಲಿದ್ದು ಹನ್ನೊಂದು ಬತೇರಿಗಳನ್ನು ಹೊಂದಿದೆ. ಅಲ್ಲೊಂದು ಹನುಮಂತನಗುಡಿ ಇದೆ. **(ಎಂ.ವಿ.)**

ಮೂಡಬಿದಿರೆಯಲ್ಲಿ ಗಜಪೃಷ್ಠಾಕಾರದ ಮಹಿಷಮರ್ದಿನಿಯ ಗೌರೀದೇಗುಲ, ಗೋಪಾಲಕೃಷ್ಣ ಮಂದಿರ, ವೆಂಕಟರಮಣ ದೇವಾಲಯ ಮತ್ತು ಮಹಾಲಸ ದೇವಾಲಯ ಸಹ ಇವೆ. ಈ ಊರಿನ ಜೈನಮಠ ಪ್ರಖ್ಯಾತವಾಗಿದೆ. ಅಭಿನವ ಚಾರುಕೀರ್ತಿ ಪಂಡಿತಾಚಾರ್ಯ ಎಂಬುದು ಇಲ್ಲಿನ ಆಚಾರ್ಯರ ಬಿರುದು. ಇಲ್ಲಿ ಎರಡು ಇಗರ್ಜಿಗಳೂ ಮೂರು ಮಸೀದಿಗಳೂ ಇವೆ. ಪಟ್ಟಣದ ಸಮೀಪದಲ್ಲಿ ಪೂರ್ವಕ್ಕೆ ಸು. 2 ಕಿಮೀ ದೂರದಲ್ಲಿ ಕೋಡಂಕಲ್ಲು (ಕೊಡಂಜೆ ಕಲ್ಲು) ಎಂಬ ಎರಡು ಕೋಡುಗಳುಳ್ಳ 277 ಮೀ ಎತ್ತರದ ಬೆಟ್ಟವಿದೆ. ಈ ಬೆಟ್ಟದ ಮೇಲೆ ಒಂದು ನ್ಯಾಯಬಸದಿ ಇದೆ. ಇಲ್ಲಿ ಹಿಂದೆ ಅಪರಾಧಿಗಳ ವಿಚಾರಣೆ ನಡೆಯುತ್ತಿತ್ತಂತೆ. ಈಗಲೂ ಇಲ್ಲಿ ಒಂದು ಕಲ್ಲುಮಂಟಪವಿದೆ. ಈ ಬೆಟ್ಟದಲ್ಲಿ ಕಗ್ಗಲ್ಲೊಂದು ಚಾಚಿ ನಿಂತಿರುವ ರೀತಿ, ನೋಟಕರನ್ನು ಬೆರಗುಗೊಳಿಸುತ್ತದೆ.

ಕಾರ್ಕಳ, ಮುಲ್ಕಿ, ಮಂಗಳೂರು, ಬಂಟ್ವಾಳ, ಬೆಳ್ತಂಗಡಿ ಮತ್ತು ನಾರಾವಿಗಳಿಗೆ ಯೋಗ್ಯ ಮಾರ್ಗ ಸೌಕರ್ಯಗಳನ್ನು ಹೊಂದಿರುವ ಮೂಡಬಿದಿರೆ ವ್ಯಾಪಾರ ಕೇಂದ್ರವಾಗಿ ಬೆಳೆಯಲು ಅನುಕೂಲ ಸ್ಥಾನದಲ್ಲಿದೆ. ಪ್ರತಿ ಶುಕ್ರವಾರ ಇಲ್ಲಿ ಸಂತೆ ನಡೆಯುತ್ತದೆ. ಇಂದಿನ ಮೂಡಬಿದರೆ ಬೆಳೆದು ಮುಂದುವರಿಯುತ್ತಿರುವ ನಗರ. ಇಲ್ಲಿ ಪುರಸಭೆ ಇದೆ. ಒಂದು ಕಾಲೇಜು ಮತ್ತು ಇತರ ಶಾಲೆಗಳು ಇದೆ. ಇಲ್ಲಿಯ ವಿಖ್ಯಾತ ಸಮಾಜ ಮಂದಿರ (ಅದರೊಂದಿಗೆ ಲೀನವಾದ ಸರಸ್ವತೀ ಸೇವಾಸಂಘ). ಟೌನ್ ಸಹಕಾರಿ ಬ್ಯಾಂಕ್ ಇತರ ಬ್ಯಾಂಕ್‌ಗಳ ಶಾಖೆಗಳು ಸಾಮಾಜಿಕ ಮತ್ತು ಆರ್ಥಿಕ ರಂಗದ ಸಂಸ್ಥೆಗಳಾಗಿ ಹೆಸರು ಪಡೆದಿವೆ. ಇಲ್ಲಿ ಒಂದು ಅನಾನಸು (ನೆಲಹಲಸು) ನಾರು ಸಂಶೋಧನ ಕೇಂದ್ರವಿದೆ. **(ಬಿ.ಎಂ.ಇ.;ಎಂ.ವಿ.)**

**ಮೂಡಿಗೆರೆ:** ಚಿಕ್ಕಮಗಳೂರು ಜಿಲ್ಲೆಯ ನೈಋತ್ಯ ಭಾಗದಲ್ಲಿರುವ ಒಂದು ತಾಲ್ಲೂಕು ಮತ್ತು ಅದರ ಮುಖ್ಯಪಟ್ಟಣ. ಈ ತಾಲ್ಲೂಕನ್ನು ಪೂರ್ವದಲ್ಲಿ ಬೇಲೂರು ತಾಲ್ಲೂಕು, ಆಗ್ನೇಯದಲ್ಲಿ ಸಕಲೇಶಪುರ ತಾಲ್ಲೂಕು, ದಕ್ಷಿಣ ಮತ್ತು ನೈಋತ್ಯದಲ್ಲಿ ಬೆಳ್ತಂಗಡಿ ತಾಲ್ಲೂಕು, ಪಶ್ಚಿಮದಲ್ಲಿ ಕಾರ್ಕಳ ತಾಲ್ಲೂಕು, ಉತ್ತರದಲ್ಲಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳು ಸುತ್ತುವರಿದಿವೆ. ಗೋಣಿಬೀಡು, ಬಣಕಲ್, ಬಾಳೂರು, ಮೂಡಿಗೆರೆ ಮತ್ತು ಕಳಸ ಈ ತಾಲ್ಲೂಕಿನ ಹೋಬಳಿಗಳು. ಗ್ರಾಮಗಳು 140. ವಿಸ್ತೀರ್ಣ 1,163.6 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 1,41,415.

ಈ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿದ್ದು ಪರ್ವತಮಯವಾಗಿದೆ. ತಾಲ್ಲೂಕಿನ ಪಶ್ಚಿಮದ ಅಂಚಿನುದ್ದಕ್ಕೂ ಪಶ್ಚಿಮಘಟ್ಟಗಳ ಬೆಟ್ಟಶ್ರೇಣಿ ಇದೆ. ಇದರಲ್ಲಿ ಕುದುರೆ ಮುಖ (1,894 ಮೀ), ಬಲ್ಲಾಳರಾಯನ ದುರ್ಗ (1,505 ಮೀ), ಎಪ್ಪತ್ತುಮಂದಿಗುಡ್ಡ, ಶಿಸಲುಕುಡಿ, ಜೇನುಕಲ್ಲುಗುಡ್ಡ ಬಹು ಎತ್ತರದ ಶಿಖರಗಳು. ತಾಲ್ಲೂಕಿನ ಇತರ ಭಾಗಗಳೂ ಬಹುಮಟ್ಟಿಗೆ ಏರುತಗ್ಗಾಗಿದ್ದು ಕಣಿವೆ, ಕಮರಿಗಳು, ದಿಣ್ಣೆ, ಬೆಟ್ಟಗಳಿಂದ ಕೂಡಿವೆ.

ಈ ತಾಲ್ಲೂಕು ಬಹುಮಟ್ಟಿಗೆ ಧಾರವಾಡ ಶಿಲಾಶ್ರೇಣಿಯ ಪ್ರದೇಶ. ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬಿಣದ ಅದಿರು ಮತ್ತು ಗ್ರಾನೈಟುಗಳು ಹೇರಳವಾಗಿವೆ. ಕುದುರೆಮುಖ ಕಬ್ಬಿಣದ ಅದಿರಿನ ಹರವು ಪ್ರಸಿದ್ಧವಾದುದು. ಕುದುರೆಗುಂಡಿ ಮತ್ತು ಬಾಳೆಗದ್ದೆ ಮೊದಲಾದ ಸ್ಥಳಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಬಳಸುವ ಕಲ್ಲುಗಳನ್ನು ಹೇರಳವಾಗಿ ತೆಗೆಯಲಾಗುತ್ತದೆ. ಕೆಲವೆಡೆ ಮರಳು ಮತ್ತು ಜೇಡಿಮಣ್ಣು ಯಥೇಚ್ಛವಾಗಿ ದೊರೆಯುತ್ತವೆ.

ಜಲಸಂಪತ್ತು ಇಲ್ಲಿನ ಪ್ರಮುಖ ಪ್ರಾಕೃತಿಕ ಸಂಪನ್ಮೂಲಗಳಲ್ಲೊಂದು. ಭದ್ರಾ ಮತ್ತು ಹೇಮಾವತಿ ಹುಟ್ಟುವುದು ಈ ತಾಲ್ಲೂಕಿನಲ್ಲಿ. ಹೇಮಾವತಿ ನದಿಗೆ ಕೊಟ್ಟಿಗೆಹಾರದ ಬಳಿ ಸೋಮಾವತಿ, ಕಿತ್ತಲೆಗಂಡಿ ಬಳಿ ಬಕ್ಕಿಹಳ್ಳ,

ಕೆಸವಳಲು ಕೂಡಿಗೆಯಲ್ಲಿ ಕಪಿಲ ಅಥವಾ ಕಡದಾಳು ಹಳ್ಳ ಹಾಗೂ ಉದುಸೆ ಬಳಿ ಬೆರಣೆ ಹಳ್ಳ ಮುಂದೆ ಯಗಚಿ ಹಾಗೂ ವಾಟೆಹೊಳೆ ಮೊದಲಾದ ದೊಡ್ಡ ತೊರೆಗಳು ಕೂಡಿಕೊಳ್ಳುತ್ತವೆ. ಈ ತಾಲ್ಲೂಕಿನ ಉತ್ತರ ಮತ್ತು ಪೂರ್ವಭಾಗದ ಕಾಡುಗಳಲ್ಲಿ ಹರಿಯುವ ಅನೇಕ ತೊರೆಗಳು ಭದ್ರಾನದಿಯನ್ನು ಸೇರುತ್ತವೆ. ಇದಲ್ಲದೆ ಈ ತಾಲ್ಲೂಕಿನ ಬೆಟ್ಟಗುಡ್ಡಗಳಲ್ಲಿ ಅಸಂಖ್ಯಾತ ಚಿಕ್ಕ ಹಳ್ಳಗಳು ಹರಿಯುವುವು. ಈ ತಾಲ್ಲೂಕಿನಲ್ಲಿ ಜೂನ್‌ನಿಂದ ಸೆಪ್ಟೆಂಬರ್ ತಿಂಗಳ ವರೆಗೆ ಅಧಿಕ ಮಳೆ ಬೀಳುವುದು. ಬೈರಾಪುರ ಎಸ್ಟೇಟ್ ಮತ್ತು ಕೊಟ್ಟಿಗೆಹಾರ ಈ ತಾಲ್ಲೂಕಿನ ಹೆಚ್ಚು ಮಳೆ ಬೀಳುವ ಪ್ರದೇಶಗಳು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 2,509 ಮಿಮೀ.

ಶ್ರೀವಸಂತಪರಮೇಶ್ವರಿ ದೇವಸ್ಥಾನ, ಅಂಗಡಿ

ಬೆಟ್ಟಗುಡ್ಡಗಳ ಮೇಲೆ ಸದಾ ಹಸುರುಭರಿತ ಕಾಡುಗಳು ಕಂಡುಬರುತ್ತವೆ. ಈ ಕಾಡುಗಳಲ್ಲಿ ಕರ್ನಾಟಕದ ಕಾಡುಗಳಲ್ಲಿ ದೊರೆಯುವ ಎಲ್ಲ ಮರಗಳೂ ಬೆಳೆಯುತ್ತವೆ. ಅವುಗಳಲ್ಲಿ ಶ್ರೀಗಂಧ, ಹಲಸು, ತೇಗ, ಮತ್ತಿ, ದಬ್ಬೆ, ನಂದಿ, ಸಂಪಿಗೆ ಮೊದಲಾದವು ಮುಖ್ಯವಾದವು. ಇಲ್ಲಿಯ ಮೀಸಲು ಕಾಡುಗಳಲ್ಲಿ ಬಾಳೂರು, ಸಾರಗೂಡು, ಕುಂದೂರು, ಮುದ್ರೆಮನೆ ಮೊದಲಾದ ಮೀಸಲು ಅರಣ್ಯಗಳಿವೆ. ಇವಲ್ಲದೆ ಪಶ್ಚಿಮ ಘಟ್ಟದ ಉದ್ದಕ್ಕೂ ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನಲ್ಲಿ ಅರಣ್ಯ ಪ್ರದೇಶವಿದೆ. ಅಲ್ಲಲ್ಲೆ ನೂರಾರು ಎಕರೆಗಳಷ್ಟು ಈಚಲು ಗಿಡಗಳ ಹರವುಗಳನ್ನು ಕಾಣಬಹುದು.

ಮಲೆನಾಡಿನ ಕೆಲವೆಡೆಗಳಲ್ಲಿರುವಂತೆ ಇಲ್ಲಿ ಪ್ರಾಣಿ ಸಂಪತ್ತೂ ಹೇರಳ. ಇಲ್ಲಿನ ಕಾಡುಗಳಲ್ಲಿ ಆನೆ, ಹುಲಿ, ಹಂದಿ, ಕಾಡೆಮ್ಮೆ, ಕಡವೆ ಮೊದಲಾದ ಪ್ರಾಣಿಗಳಿವೆ. ಆದರೆ ಕಾಫಿ ಮತ್ತು ಏಲಕ್ಕಿ ತೋಟಗಳ ಸಾಗುವಳಿಯಿಂದ, ಬೇಟೆ ಮತ್ತು ಕಾಡು ಕಡಿಯುವುದರಿಂದ ಪ್ರಾಣಿಗಳ ಸಂಖ್ಯೆ ಕ್ಷೀಣಿಸಿದೆ.

ಬತ್ತ ಇಲ್ಲಿಯ ಮುಖ್ಯ ಆಹಾರ ಬೆಳೆ. ಗುಡ್ಡಗಳ ನಡುವೆ ಇಳಿಜಾರಿನಿಂದ ಕೂಡಿದ ಕಿರುಬಯಲುಗಳು ಬತ್ತ ಬೆಳೆಯುವ ಪ್ರದೇಶಗಳು. ಮಳೆಯ ನೀರೇ ಮುಖ್ಯ ಆಧಾರ. ಕೆಲವೆಡೆ ರಾಗಿಯನ್ನೂ ಸ್ವಲ್ಪಮಟ್ಟಿಗೆ ಬೆಳೆಯುವರು. ಈ ತಾಲ್ಲೂಕಿನಲ್ಲಿ ಕಾಫಿ ಪ್ಲಾಂಟೇಷನ್ನುಗಳು ವ್ಯಾಪಕವಾಗಿವೆ. ಇಲ್ಲಿ ಅರ‍್ಯಾಬಿಕ ಮತ್ತು ಆಧುನಿಕ ಆಯ್ಕೆ ತಳಿಗಳ ಜತೆಗೆ ರೋಬಸ್ಟ ಕಾಫಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಈ ತಾಲ್ಲೂಕಿನಲ್ಲಿ ಅದರಲ್ಲೂ ವಿಶೇಷವಾಗಿ ಕಳಸದ ಸುತ್ತಮುತ್ತ ಅಡಕೆ ಬೆಳೆಯುತ್ತಾರೆ. ಅಲ್ಲಿಯೇ ಕೆಲವು ಟೀ ತೋಟಗಳೂ ಇವೆ. ಮೆಣಸನ್ನು ಎಲ್ಲೆಡೆ ಬೆಳೆಯಲಾಗುತ್ತಿದೆ. ಏಲಕ್ಕಿ ಈ ತಾಲ್ಲೂಕಿನ ಮುಖ್ಯ ವಾಣಿಜ್ಯ ಬೆಳೆಯಾಗಿತ್ತು. ಆದರೆ ಕೆಲವು ದಶಕಗಳಿಂದ ಮಳೆ ಕಡಿಮೆಯಾದುದರಿಂದ ಮತ್ತು ಆಧುನಿಕ ಕಾಫಿ ಸಾಗುವಳಿ ಜನಪ್ರಿಯವಾದುದರಿಂದ ಈ ಬೆಳೆ ಕ್ಷೀಣಿಸುತ್ತಿದೆ. ಏಲಕ್ಕಿಗೆ ಇರುವ ಅನಿಶ್ಚಿತ ಬೆಲೆಯೂ ಇದಕ್ಕೆ ಕಾರಣ. ಆದರೂ ಇಂದು ಏಲಕ್ಕಿ ಸಾಗುವಳಿಯನ್ನು ಆಧುನಿಕ ರೀತಿಯಲ್ಲಿ ನಡೆಸುವ ಹೊಸ ಪ್ರಯತ್ನಗಳು ಕಂಡುಬರುತ್ತಿವೆ. ಮೂಡಿಗೆರೆ ಕೈಮರದ ಬಳಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಿರುವ ಪ್ರಾದೇಶಿಕ ಏಲಕ್ಕಿ ಸಂಶೋಧನ ಕೇಂದ್ರವಿದ್ದು ಅದು ಬಹುತೇಕ ತೋಟದ ಬೆಳೆಗಳ ಸಾಗುವಳಿಗೆ ಸಹಕಾರಿಯಾಗಿದೆ. ಇತ್ತೀಚೆಗೆ ಇಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪಿತವಾಗಿದೆ.

ಈ ತಾಲ್ಲೂಕಿನಲ್ಲಿ ದೊಡ್ಡ ಕೈಗಾರಿಕೆಗಳಿಲ್ಲ. ಕೆಲವೆಡೆ ಅಕ್ಕಿ ಗಿರಣಿಗಳಿವೆ. ಮೂಡಿಗೆರೆಯ ಬಳಿ ಮರ ಕೊಯ್ಯುವ, ಕೆಳಗೂರಿನಲ್ಲಿ ಟೀ ಹದ ಮಾಡುವ ಕಾರ್ಖಾನೆಗಳು ಇವೆ. ಬಿದಿರಿನ ವಸ್ತುಗಳನ್ನು ತಯಾರಿಸುವುದು, ಗಾಡಿ ಕೂಡಿಸುವುದು, ಕಬ್ಬಿಣದ ಕೆಲಸ, ಮಡಕೆ ಮಾಡುವುದು, ವಾಹನಗಳ ದುರಸ್ತು ಮಾಡುವುದು ಮೊದಲಾದ ಗೃಹಕೈಗಾರಿಕೆಗಳಿವೆ. ಕುದುರೆಗುಂಡಿ ಮತ್ತು ಬಾಳೆಗದ್ದೆ ಸ್ಥಳಗಳಲ್ಲಿ ಕಟ್ಟಡಕ್ಕೆ ಬಳಸುವ ಕಲ್ಲುಗಳನ್ನು ತೆಗೆಯುವರು.

1976ರಿಂದ ಕಾರ್ಯಾಚರಣೆಯಲ್ಲಿರುವ ಕುದುರೆಮುಖ ಕಬ್ಬಿಣ ಅದಿರು ಯೋಜನೆ ಈ ತಾಲ್ಲೂಕಿಗೇ ಮಹತ್ತ್ವದ್ದು. ತಾಲ್ಲೂಕಿನಲ್ಲಿ ಸಹಕಾರ ಸಂಘಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಇದ್ದು ಆರ್ಥಿಕ ಚಟುವಟಿಕೆಗೆ ಅನುಕೂಲವಾಗಿದೆ. ಪ್ಲಾಂಟೇಷನ್‌ಗಳಿಗೆ ಸಂಬಂಧಿಸಿದಂತೆ ಕಾರ್ಮಿಕರ ಸಂಘಟನೆಯೂ ಹಲವೆಡೆ ಇದೆ.

ಈ ತಾಲ್ಲೂಕಿನ ಸರಹದ್ದಿನಲ್ಲಿ ಮೂಡಿಗೆರೆಯಿಂದ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಸಂಪರ್ಕಿಸುವ ಚಾರ್ಮಾಡಿ ಘಾಟ್ ಮಾರ್ಗ ಇದೆ. ಮೂಡಿಗೆರೆ-ಚಿಕ್ಕಮಗಳೂರು ರಸ್ತೆ, ಮೂಡಿಗೆರೆ-ಸಕಲೇಶಪುರ ರಸ್ತೆ, ಮೂಡಿಗೆರೆ ಮಾಕೋನಹಳ್ಳಿ-ಬೇಲೂರು ರಸ್ತೆ, ಮೂಡಿಗೆರೆ-ಕೊಟ್ಟಿಗೆಹಾರ-ಉರುವಿನ ಖಾನ್-ಬಾಳೆ ಹೊನ್ನೂರು ರಸ್ತೆ, ಮೂಡಿಗೆರೆ-ಕಳಸ-ಕುದುರೆಮುಖ ರಸ್ತೆ, ಮೂಡಿಗೆರೆ-ದಾರದಹಳ್ಳಿ-ದೇವವೃಂದ ರಸ್ತೆ-ಇವು ತಾಲ್ಲೂಕಿನ ಮುಖ್ಯ ಮಾರ್ಗಗಳು.

ಮಲೆನಾಡಿನಲ್ಲಿ ವಿಶೇಷವಾಗಿರುವ ಸುಗ್ಗಿಹಬ್ಬದ ಆಚರಣೆ ಈ ತಾಲ್ಲೂಕಿನಲ್ಲೆಲ್ಲ ಕಂಡುಬರುತ್ತದೆ. ಹಲವು ಗ್ರಾಮಗಳ ಗುಂಪುಗಳು ಸೇರಿ ಒಂದು 'ಸಾವಿರ'ವೆಂದು ಒಟ್ಟಾಗಿ ಈ ಹಬ್ಬ ಆಚರಿಸುತ್ತಾರೆ. ಸುಗ್ಗಿದೇವತೆಗಳು ಪಾರ್ವತಿಯ ಅವತಾರವೆಂದು ಹಬ್ಬದಲ್ಲಿ ಹೆಣ್ಣು ದೇವತೆಗಳನ್ನು ಪೂಜಿಸುತ್ತಾರೆ. ಉಗಾದಿಯ ತರುವಾಯ ದೇವವೃಂದದಲ್ಲಿ ನಡೆಯುವ ರಾಮೇಶ್ವರ ರಥೋತ್ಸವ ಈ 'ನಾಡಿನ ಹಬ್ಬ'. ಹಾಗೆಯೆ ಪಲ್ಗುಣಿಯಲ್ಲಿ ಮೂರುಸಾವಿರದ ನಾಡ ಜಾತ್ರೆ ನಡೆಯುತ್ತದೆ. ಕಳಸದಲ್ಲಿ ನಡೆಯುವ ಕಳಸೇಶ್ವರಸ್ವಾಮಿ ಜಾತ್ರೆ, ಹೊರನಾಡು ಅನ್ನಪೂರ್ಣೇಶ್ವರಿ ಜಾತ್ರೆ-ಇವು ತಾಲ್ಲೂಕಿನ ಮುಖ್ಯವಾದ ಉತ್ಸವಗಳು. ಈ ತಾಲ್ಲೂಕಿನ ಸುಗ್ಗಿ ಕುಣಿತ, ಕೋಲಾಟ ಪ್ರಸಿದ್ಧ.

ತಾಲ್ಲೂಕಿನ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ ಅನೇಕ ಪೌರಾಣಿಕ ಐತಿಹ್ಯಗಳಿವೆ. ಇಲ್ಲಿನ ಹೇರಿಕೆ ಗ್ರಾಮದ ಸಮೀಪದಲ್ಲಿರುವ ಪಾಂಡವರ ಗುಡ್ಡದಲ್ಲಿ ಹಿಂದೆ ಪಾಂಡವರು ವಾಸಿಸುತ್ತಿದ್ದರೆಂದು ಹೇಳುವುದುಂಟು. ಈ ತಾಲ್ಲೂಕಿನಲ್ಲಿ ಕಳಸ, ಹೊರನಾಡು, ದೇವವೃಂದ **(ನೋಡಿ)** ಮೊದಲಾದ ಧಾರ್ಮಿಕ ಕೇಂದ್ರಗಳೂ ಅಂಗಡಿ **(ನೋಡಿ)**. ಬಲ್ಲಾಳರಾಯನದುರ್ಗ ಮೊದಲಾದ ಐತಿಹಾಸಿಕ ಸ್ಥಳಗಳೂ ಇವೆ. ಬಲ್ಲಾಳರಾಯನ ದುರ್ಗದಲ್ಲಿ ಹೊಯ್ಸಳರ ಕಾಲದ ಕೋಟೆ ಇದೆ.

ಇಲ್ಲಿನ ಪಶ್ಚಿಮ ಘಟ್ಟದಲ್ಲಿ ಸುಮಾರು ಐದುಸಾವಿರ ಅಡಿಗಳ ಎತ್ತರದಲ್ಲಿ ಗುತ್ತಿಹಳ್ಳಿಯ ಬಳಿ ಇರುವ ದೇವರಮನೆ ಭೈರವೇಶ್ವರ ಮತ್ತು ಭೈರಾಪುರದ ಬಳಿಯ ನಾಣ್ಯದ ಭೈರವೇಶ್ವರ ದೇವಾಲಯಗಳು ಹೊಯ್ಸಳ ಕಾಲದ ನಿರ್ಮಾಣಗಳಿವೆ.

ಮೂಡಿಗೆರೆ ಈ ತಾಲ್ಲೂಕಿನ ಆಡಳಿತ ಕೇಂದ್ರ. ಕಡೂರು ಮಂಗಳೂರು ಹೆದ್ದಾರಿಯಲ್ಲಿ ಕಡೂರಿನ ನೈಋತ್ಯಕ್ಕೆ 73 ಕಿಮೀ ದೂರದಲ್ಲೂ ಚಿಕ್ಕಮಗಳೂರಿಗೆ 33 ಕಿಮೀ ದೂರದಲ್ಲೂ ಇದೆ. ಮೂಡಿಗೆರೆ ಪಟ್ಟಣದ ಒಟ್ಟು ಜನಸಂಖ್ಯೆ 17,065. ಇದು ಪುರಸಭಾಡಳಿತವಿರುವ ಪಟ್ಟಣ. ಧರ್ಮಸ್ಥಳ ಮತ್ತು ಮಂಗಳೂರುಗಳಿಗೆ ಈ ಊರಿನ ಮೂಲಕ ವಾಹನ ಸಂಪರ್ಕ ವಿರುವುದರಿಂದ ಇಲ್ಲಿಂದ ರಾಜ್ಯದ ಬಹುತೇಕ ಕಡೆಗಳಿಗೆ ಬಸ್ ಸೌಕರ್ಯವಿದೆ. ಇಲ್ಲಿ ಪ್ರಥಮ ದರ್ಜೆ ಕಾಲೇಜಿದೆ.

ಇಲ್ಲಿ ಹಲವು ಪ್ರಾಚೀನ ಶಾಸನಗಳಿವೆ. ಹಿಂದಿನಿಂದಲೂ ಈ ಊರು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗುವ ಮುಖ್ಯ ಸಂಚಾರಮಾರ್ಗದಲಿದ್ದು ಪ್ರಾಮುಖ್ಯತೆ ಪಡೆದಿತ್ತು. **(ಬಿ.ಎಸ್‌ಯು.ಆರ್.)**

**ಮೂರೂರು ದೇವರು ಹೆಗಡೆ**: 1920–91. ಯಕ್ಷಗಾನದ ಅಭಿಜಾತ ಕಲಾವಿದ. ಹೆಣ್ಣುಮಕ್ಕಳನ್ನು ಮೊಟ್ಟ ಮೊದಲಬಾರಿಗೆ ರಂಗಭೂಮಿಗೆ ತಂದ ಪ್ರಯೋಗಶೀಲರು. ಉತ್ತರಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನ ಮೂರೂರು ಗ್ರಾಮದಲ್ಲಿ ಜನಿಸಿದರು (1920). ಇವರ ಮೂಲ ಹೆಸರು ವೆಂಕಟರಮಣ, ಆದರೆ ಯಕ್ಷಗಾನ ಲೋಕದಲ್ಲಿ ದೇವರು ಹೆಗಡೆ ಎಂದೇ ಪ್ರಸಿದ್ಧರಾಗಿದ್ದರು. ತಂದೆ ಶಿವವಿಷ್ಣು ಹೆಗಡೆ, ತಾಯಿ ಭಾಗೀರಥಿ. ಕಿರ್ನೀರು ಸುಬ್ರಾಯ ಹೆಗಡೆ ಇವರ ಗುರುಗಳು. ಇವರ ಅಜ್ಜ ಊರಕೇರಿ ಗಣಪತಿ ಹೆಗಡೆ ಪ್ರಸಿದ್ಧ ಭಾಗವತ, ಮದ್ದಲೆಗಾರ ಹಾಗೂ ಅರ್ಥಧಾರಿಗಳಾಗಿದ್ದರು. ಅಜ್ಜನ ಪ್ರೇರಣೆಯಿಂದ ಶಂಭರಾಸುರ ಕಾಳಗದಲ್ಲಿ ಇವರು ರುಕ್ಮಿಣಿಯಾಗಿ ಮೊದಲು ರಂಗ ಪ್ರವೇಶಿಸಿದರು (1935). 1940ರ ವರೆಗೆ ಹವ್ಯಾಸಿ ಕಲಾವಿದರಾಗಿದ್ದ ಇವರು ಅನಂತರ ಕರ್ಕಿ, ಇಡಗುಂಜಿ, ಧರ್ಮಸ್ಥಳ, ಕೂಡ್ಲೆ, ಸುರತ್ಕಲ್, ಮುಲ್ಕಿ, ಕೊಲ್ಲೂರು ಮೊದಲಾದ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ವೃತ್ತಿಮೇಳಗಳಲ್ಲಿ ಸೇವೆಸಲ್ಲಿಸಿ ನಿವೃತ್ತರಾದರು (1967). ನಿವೃತ್ತರಾದ ಅನಂತರವೂ ಅತಿಥಿ ಕಲಾವಿದರಾಗಿ ಅನೇಕ ಮೇಳಗಳಲ್ಲಿ ತಾಳಮದ್ದಳೆಗಳಲ್ಲಿ ಯಕ್ಷಗಾನದ ಸೇವೆ ಮಾಡಿದರು.



ಭೂಕೈಲಾಸದ ರಾವಣ, ಹರಿಶ್ಚಂದ್ರ ಪ್ರಸಂಗದ ವಿಶ್ವಾಮಿತ್ರ, ಕಂಸ, ಘಟೋತ್ಕಚ, ಭೀಮ, ದುಷ್ಟಬುದ್ಧಿ, ಹಿರಣ್ಯಕಶಿಪು ಇಂಥ ಪಾತ್ರಗಳಿಗೆ ಹೇಳಿ ಮಾಡಿಸಿದಂತಹ ಕಲಾವಿದರಾಗಿದ್ದರು. ರಂಗಪ್ರವೇಶ ಮಾಡುವಾಗಲೆ ಪಾತ್ರದ ಸ್ವಭಾವ, ಮನೋಭಾವ ಅಭಿವ್ಯಕ್ತಗೊಳಿಸುತ್ತಿದ್ದರು. ಇವರ ಎತ್ತರದ ನಿಲುವು, ಗಡಸುದನಿ, ಮುಖವರ್ಣಿಕೆ, ನಾಟಕೀಯ ವೇಷ ಕ್ಷಣ ಕ್ಷಣಕ್ಕೂ ಬದಲಾಗುವ ಮುಖಭಾವ, ಹಿತಮಿತವಾದ ಕುಣಿತ, ಅರ್ಥವತ್ತಾದ ಮಾತು ಪಾತ್ರಗಳ ವೈಶಿಷ್ಟ್ಯವನ್ನು ಸಾರುತ್ತಿದ್ದುವು. ಖಳನಾಯಕ ಹಾಗೂ ದುಷ್ಟ ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ವಲು, ನಳ, ಬಾಹುಕ, ಹರಿಶ್ಚಂದ್ರ, ವಾಲಿ, ಸುಗ್ರೀವ, ಮುಂಜರಾಜನಂತಹ ಸೌಮ್ಯಮಿಶ್ರ ಸ್ವಭಾವದ ಪಾತ್ರಗಳನ್ನೂ ಇವರು ಅಷ್ಟೇ ಚೆನ್ನಾಗಿ ನಿರ್ವಹಿಸುತ್ತಿದ್ದರು. ಇವೆಲ್ಲ ಜನಮೆಚ್ಚಿಗೆಗೆ ಪಾತ್ರವಾದರೂ ಜನಮಾನಸದಲ್ಲಿ ಇವರ ದುಷ್ಟಪಾತ್ರಗಳೇ ಬೇರೂರಿವೆ.

ಇವರೊಬ್ಬ ಪ್ರಯೋಗಶೀಲ ಕಲಾವಿದರು. ಯಕ್ಷಗಾನ ವೇಷಭೂಷಣಗಳಲ್ಲಿ ನಾವೀನ್ಯವನ್ನು ಸಹಕಲಾವಿದರೊಂದಿಗೆ ಚರ್ಚಿಸಿ ಪಾತ್ರರೂಪಿಸುವ ಪರಂಪರೆಯನ್ನು ತಂದರು. ಹಿನ್ನೆಲೆಯಲ್ಲಿ ಕೂರುತ್ತಿದ್ದ ಭಾಗವತ, ಮದ್ದಲೆ, ಚಂಡೆ, ಸ್ವರಹಿಡಿಯುವವರನ್ನು ಮುನ್ನೆಲೆಗೆ ತಂದು ಬಲಗಡೆಗೆ ಸರಿಸಿದರು. ಹಿಮ್ಮೇಳದಲ್ಲಿ ಪಿಟೀಲು ಉಪಯೋಗಿಸಿದವರಲ್ಲಿ ಇವರೇ ಮೊದಲಿಗರು. ತಮ್ಮ ಪೌರಾಣಿಕ ಪಾತ್ರಗಳಿಗೆ ಆಧುನಿಕ ದೃಷ್ಟಿಯ ಸ್ಪರ್ಶಕೊಟ್ಟರು; ಹೊಸ ಹೊಸ ಆವಿಷ್ಕಾರಗಳನ್ನು ವೇಷ, ಭಾವ, ನಡೆ, ಗತ್ತು, ಗಾಂಭೀರ್ಯ, ಅಭಿವ್ಯಕ್ತಿಯಲ್ಲಿ ತಂದರು. ತಮ್ಮ ಹೆಣ್ಣು ಮಕ್ಕಳಿಗೆ ಯಕ್ಷಗಾನ ಪಾತ್ರಗಳಲ್ಲಿ ಅವಕಾಶಕೊಟ್ಟು ಪ್ರೋತ್ಸಾಹಿಸಿದರು.

ಇವರು ಶ್ರೀಮಹಾವಿಷ್ಣು ಪ್ರಾಸಾಧಿಕ ಯಕ್ಷಗಾನ ಕಲಾಸಂಘ ಎಂಬ ಸಂಸ್ಥೆ ಸ್ಥಾಪಿಸಿ ಕೆಲಕಾಲ ನಡೆಸಿದರು. ಎರಡು ವರ್ಷಗಳ ಕಾಲ (1981–82) ಮೂರೂರಿನಲ್ಲಿ ತರಬೇತಿ ಕೇಂದ್ರ ನಡೆಸಿದರು. ಸಾಹಿತ್ಯಾಸಕ್ತಿಯನ್ನು ಹೊಂದಿದ್ದ ಇವರು ಕವನಗಳನ್ನೂ ರಚಿಸಿದ್ದಾರೆ. ನಾದಾನ್ವೇಷಣೆ ಎಂಬ ಕವನಸಂಕಲನ ಇವರ ಕಾವ್ಯ ಪ್ರತಿಭೆಗೆ ಸಾಕ್ಷಿಯಾಗಿದೆ. ಅಶ್ವತ್ಥಾಮ ಗರ್ವಭಂಗ, ಕಂಸವಧೆ, ಪ್ರಚಂಡಲಂಕೇಶ್ವರ ಎಂಬ ಯಕ್ಷಗಾನ ಪ್ರಸಂಗಗಳನ್ನು ಇವರು ರಚಿಸಿದ್ದಾರೆ. ಯಕ್ಷಗಾನ ಕ್ಷೇತ್ರಕ್ಕೆ ಇವರು ಸಲ್ಲಿಸಿದ ಸೇವೆಗಾಗಿ ಕರ್ನಾಟಕ ಜಾನಪದ ಮತ್ತುಯಕ್ಷಗಾನ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ (1988). ತಮ್ಮ ಇಳಿವಯಸ್ಸಿನಲ್ಲಿ ಕೊಳಗಿ ಬೀಸದ ಅವಧೂತರ ಶಿಷ್ಯರಾಗಿದ್ದ ಇವರು 29 ಆಗಸ್ಟ್ 1991ರಂದು ನಿಧನರಾದರು. **(ಎಸ್.ಎಂ.ಕೆ)**

**ಮೂರ್ತಿರಾವ್, ಎ.ಎನ್.**: 1900–2001. ಕನ್ನಡದ ಹೆಸರಾಂತ ಹಿರಿಯ ವಿದ್ವಾಂಸರು, ವಿಮರ್ಶಕರು, ಪ್ರಬಂಧಕಾರರು. ಅಕ್ಕಿಹೆಬ್ಬಾಳು ನರಸಿಂಹಮೂರ್ತಿರಾವ್ ಇವರ ಪೂರ್ಣ ಹೆಸರು. ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಅಕ್ಕಿಹೆಬ್ಬಾಳಿನಲ್ಲಿ 1900 ಜೂನ್ 16ರಂದು ಜನಿಸಿದರು. ತಂದೆ ಸುಬ್ಬರಾಯ, ತಾಯಿ ಪುಟ್ಟಮ್ಮ. ಬಾಲ್ಯದ ದಿನಗಳನ್ನು ಮೇಲುಕೋಟೆ, ನಾಗಮಂಗಲಗಳಲ್ಲಿ ಕಳೆದರು. ಬಾಲ್ಯದಲ್ಲೇ ಹಳ್ಳಿಯ ವಾತಾವರಣದಲ್ಲೂ ಸಂಗೀತ, ಸಾಹಿತ್ಯ ಎರಡಲ್ಲೂ ಇವರಿಗೆ ತೀವ್ರವಾದ ಆಸಕ್ತಿ ಮೂಡಿತು. ಮೈಸೂರಿನಲ್ಲಿದ್ದ ಬಂಧುಗಳೊಬ್ಬರು ಇವರನ್ನು ಒತ್ತಾಯಮಾಡಿ 1913ರಲ್ಲಿ ಹಳ್ಳಿಯಿಂದ ತಮ್ಮ ಮನೆಗೆ ಕರೆದು ತಂದು ಶಾಲೆಗೆ ಸೇರಿಸಿದರು. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೆ ಇವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಅಭಿರುಚಿ ಹುಟ್ಟಿತು. ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಗ್ರಂಥಗಳ ಓದಿನ ಜೊತೆಗೆ ಸೊಗಸಾದ ಇಂಗ್ಲಿಷ್ ಬರೆವಣಿಗೆಯನ್ನೂ ರೂಢಿಸಿಕೊಂಡರು. ವೆಸ್ಲಿಯನ್ ಮಿಷನ್ ಸ್ಕೂಲಿನ ಪ್ರಿನ್ಸಿಪಾಲರಾಗಿದ್ದ ರೆವರೆಂಡ್ ಆರ್. ಡಬ್ಲ್ಯು. ಬೂಟ್ ಮತ್ತು ಅಧ್ಯಾಪಕ ಡಿ. ಎನ್. ಮೂರ್ತಿ ಅವರು ಇವರಲ್ಲಿ ಮೂಡಿದ್ದ ಇಂಗ್ಲಿಷ್ ಭಾಷೆ ಸಾಹಿತ್ಯಗಳ ಬೆಳೆವಣಿಗೆಗೆ ನೀರೆರೆದರು.

ರಾಯರು ವೆಸ್ಲಿಯನ್ ಹೈಸ್ಕೂಲಿನಲ್ಲಿ ಎಂಟ್ರೆನ್ಸ್ (ಪ್ರಿ–ಯೂನಿವರ್ಸಿಟಿ) ಮುಗಿಸಿ ಮಹಾರಾಜ ಕಾಲೇಜು ಸೇರಿದರು. ಜ್ಞಾನ ಪ್ರಪಂಚದ ಅನೇಕ ದಿಗ್ಗಜಗಳು ಅಂದಿಗೆ ಆ ಕಾಲೇಜಿನಲ್ಲಿ ಪ್ರಾಧ್ಯಾಪಕ ವರ್ಗದಲ್ಲಿದ್ದರು.

ಕಾಲೇಜಿನ ಪ್ರೊಫೆಸರ್ ಜೆ.ಸಿ. ರಾಲೋ ಅವರು ಈ ತರುಣನ ಇಂಗ್ಲಿಷ್ ಭಾಷಾ ಪ್ರೇಮವನ್ನು ಉಜ್ಜ್ವಲಗೊಳಿಸಿದರು. ಎಸ್. ರಾಧಾಕೃಷ್ಣನ್‌ರವರು ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರ ಆಕರ್ಷಣೆಯಿಂದಾಗಿ ಮೂರ್ತಿರಾಯರು ಇಂಗ್ಲಿಷ್ ಸಾಹಿತ್ಯದ ಜೊತೆಗೆ ತತ್ವಶಾಸ್ತ್ರವನ್ನೂ ಅಧ್ಯಯನ ವಿಷಯವಾಗಿ ಆಯ್ದುಕೊಂಡರು. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು ಹೊಸಗನ್ನಡ ನವೋದಯ ಸಾಹಿತ್ಯದ ಆಚಾರ್ಯ ಪುರುಷರೆಂದು ಪ್ರಸಿದ್ಧಿ ಪಡೆದ ಬಿ.ಎಂ. ಶ್ರೀಕಂಠಯ್ಯನವರು ಮೂರ್ತಿರಾಯರ ಇನ್ನೊಬ್ಬ ಗುರುಗಳು. ಆ ಪರಿಸರದಲ್ಲಿ ಅಧ್ಯಯನ ಮಾಡಿ ಇವರು 1922ರಲ್ಲಿ ಬಿ.ಎ. ಪದವಿ ಪಡೆದರು. ಇಂಗ್ಲಿಷ್ ಭಾಷೆ, ಸಾಹಿತ್ಯಗಳನ್ನು ಪ್ರಧಾನ ವಿಷಯಗಳನ್ನಾಗಿ ಅಧ್ಯಯನ ಮಾಡಿ 1924ರಲ್ಲಿ ಎಂ.ಎ. ಪದವಿ ಪಡೆದರು.



ಇವರು ಚಿಕ್ಕವಯಸ್ಸಿನಿಂದಲೂ ಪ್ರತಿಯೊಂದು ಘಟನೆಯನ್ನು ವಸ್ತುನಿಷ್ಠವಾಗಿ, ಭಾವೋದ್ವೇಗಕ್ಕೆ ಒಳಗಾಗದೆ, ಚಿಕಿತ್ಸಕ ದೃಷ್ಟಿಯಿಂದ ನೋಡುವುದನ್ನು ಬೆಳೆಸಿಕೊಂಡಿದ್ದರು. ವಿದ್ವಾಂಸರು ಮಹಾರಾಜ ಕಾಲೇಜಿನ ವಿದ್ವತ್ತು, ವ್ಯಕ್ತಿತ್ವಗಳಲ್ಲಿ ಇತರರು ತಮ್ಮ ಎತ್ತರಕ್ಕೆ ಏರುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು. ಕೈನೀಡಿ ಇವರನ್ನು ತಮ್ಮ ಹತ್ತಿರಕ್ಕೆ ಎಳೆದುಕೊಂಡರು. ಭುಜಕೊಟ್ಟು ಇನ್ನೂ ಮೇಲಕ್ಕೆ ಏರಲು ನೆರವಾದರು. ಉತ್ತಮ ಮಿತ್ರ ಮಂಡಲಿಯೂ ಇವರಿಗೆ ದೊರೆತಿತ್ತು. ತೀ.ನಂ. ಶ್ರೀಕಂಠಯ್ಯ. ಡಿ.ಎಲ್. ನರಸಿಂಹಾಚಾರ್, ಕುವೆಂಪು, ಜಿ. ಹನುಮಂತರಾವ್ ಮೊದಲಾದವರು ಆ ಮಿತ್ರ ಮಂಡಳಿಯ ಸದಸ್ಯರು. ಮುಂದೆ ಪು.ತಿ.ನರಸಿಂಹಾಚಾರ್ಯರೂ ಆ ಗುಂಪಿಗೆ ಸೇರಿದರು. ಹೀಗೆ ಇವರು ಅನಾಯಾಸವಾಗಿ ವಿದ್ವತ್ತಿನ ದಿಗ್ಗಜಗಳನ್ನೂ ಸಾಹಿತ್ಯ ಲೋಕದ ಹಿಮಾಲಯದ ಶಿಖರಗಳನ್ನೂ ಬಾಳ ಕಡಲಿನ ಬೆಳಕಿನ ಕಂಬಗಳನ್ನೂ ಕಂಡು, ಒಡನಾಡಿ ಹರ್ಷಿಸಿದರು.

1924ರಲ್ಲಿ ಮೂರ್ತಿರಾಯರು ಮಹಾರಾಜ ಕಾಲೇಜಿನ ಇಂಗ್ಲಿಷ್ ವಿಭಾಗದಲ್ಲಿ ಟ್ಯೂಟರ್ ಆಗಿ ಕೆಲಸಕ್ಕೆ ಸೇರಿ ಸ್ವಲ್ಪಕಾಲ ಆ ಹುದ್ದೆಯಲ್ಲಿದ್ದರು. 1925–27ರ ತನಕ ಮೈಸೂರು ಮಹಾರಾಜ ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. 1927ರಲ್ಲಿ ಮತ್ತೆ ಕಾಲೇಜು ಅಧ್ಯಾಪಕರಾಗಿದ್ದರು. 1940ರಲ್ಲಿ ಉಪಪ್ರಾಧ್ಯಾಪಕರಾದರು. 1940–43ರ ತನಕ ಶಿವಮೊಗ್ಗೆಯ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿದ್ದರು. 1943ರಲ್ಲಿ ಮೈಸೂರು ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡರು. ಸುಮಾರು ನಾಲ್ಕು ವರ್ಷಗಳ ಕಾಲ ಅಲ್ಲಿ ಇವರು ಸಲ್ಲಿಸಿದರು. ಅನೇಕ ಹೊಸ ಕಲಾವಿದರನ್ನು ಬೆಳಕಿಗೆ ತಂದದ್ದು, ಈಗಾಗಲೇ ಕಲಾ ಪ್ರಪಂಚದಲ್ಲಿ ಹೆಸರು ಪಡೆದಿದ್ದವರಿಗೆ ಹೆಚ್ಚಿನ ಗೌರವ ದೊರಕುವಂತೆ ಮಾಡಿದ್ದು, ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು–ಇವು ಮೂರ್ತಿರಾಯರ ಸಾಧನೆಗಳಲ್ಲಿ ಕೆಲವು.

1948ರಲ್ಲಿ ಇವರು ಆಗತಾನೆ ಸ್ಥಾಪಿತವಾಗಿದ್ದ ಚಿತ್ರದುರ್ಗದ ಇಂಟರ್ ಮೀಡಿಯೆಟ್ ಕಾಲೇಜಿನ ಮುಖ್ಯಸ್ಥರಾಗಿ ನೇಮಕಗೊಂಡರು. ಒಂದು ವರ್ಷ ಕಾಲ ಅಲ್ಲಿದ್ದರು. 1949ರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಆರು ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ 1955ರಲ್ಲಿ ನಿವೃತ್ತಿಗೊಂಡರು. ಇವರ ವಿದ್ವತ್ತು ಮತ್ತು ಆಡಳಿತ ದಕ್ಷತೆಯನ್ನು ಗಮನಿಸಿದ ಅಂದಿನ ಮೈಸೂರು ಸರ್ಕಾರ ಇವರನ್ನು ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನಾಗಿ ನೇಮಿಸಿತು (1956). ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿಯ ಸುಲಭ ಆವೃತ್ತಿ ಬಿಡುಗಡೆಗೊಂಡದ್ದೂ ಸರ್ಕಾರ ಯೋಜಿಸಿದ್ದ ಕನ್ನಡ ವಿಶ್ವಕೋಶದ ಸಾಮಗ್ರಿ ಸಂಗ್ರಹಣಾ ಕಾರ್ಯ ತಕ್ಕಮಟ್ಟಿಗೆ ಪ್ರಗತಿ ಹೊಂದಿದ್ದೂ ಇವರು ನಿರ್ದೇಶಕರಾಗಿದ್ದ ಅವಧಿಯಲ್ಲೇ. ಸುಮಾರು ಮೂರು ವರ್ಷಗಳ ಕಾಲ ಆ ಇಲಾಖೆಯಲ್ಲಿ ಸೇವೆ ಸಲ್ಲಿಸಿ 1959ರಲ್ಲಿ ಬಿಡುಗಡೆ ಹೊಂದಿದರು.

ಇವಲ್ಲದೆ ಇವರು ಹಲವು ಗೌರವ ಹುದ್ದೆಗಳನ್ನೂ ಅಲಂಕರಿಸಿದ್ದರು. 1959ರಲ್ಲಿ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, 1954–56ರಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಚಾಲಕ ಅಧ್ಯಕ್ಷರಾಗಿಯೂ ಸದರ್ನ್ ಲ್ಯಾಂಗ್ವೇಜಸ್ ಬುಕ್ ಟ್ರಸ್ಟ್‌ನ ಕನ್ನಡ ಶಾಖೆಯ ಸಂಚಾಲಕ ಅಧ್ಯಕ್ಷರಾಗಿಯೂ ನಾಲ್ಕು ವರ್ಷಗಳ ಕಾಲ ಆಲ್ ಇಂಡಿಯಾ ರೇಡಿಯೋದ ಸೆಂಟ್ರಲ್ ಪ್ರೋಗ್ರಾಮ್ ಅಡ್ವೈಸರಿ ಕಮಿಟಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು.

ಇವರ ಮೊದಲ ಕೃತಿ 'ಆಷಾಡಭೂತಿ' (1931). ಫ್ರೆಂಚ್ ನಾಟಕಕಾರ ಮೋಲಿಯೇರ್‌ನ (1622–73) ತಾರ್ತುಫ್ ನಾಟಕದ ಆಧಾರದ ಮೇಲೆ ಬರೆದದ್ದು. ಪ್ರಕಟವಾದ ಕೂಡಲೆ ಅನೇಕ ಕಡೆಗಳಲ್ಲಿ ಪ್ರಯೋಗಗೊಂಡು ಇವರಿಗೆ ಕೀರ್ತಿಯನ್ನು ತಂದುಕೊಟ್ಟಿತು. ಆಷಾಡಭೂತಿ ನಾಟಕ ಓದಿದ ಯಾರೂ ಅದನ್ನು ಅನುವಾದವೆಂದೂ ಅಳವಡಿಕೆಯೆಂದೂ ಭಾವಿಸುವುದಿಲ್ಲ. ತಿಳಿಗನ್ನಡದಲ್ಲಿ ರಚಿತವಾಗಿರುವ ಒಂದು ಸ್ವತಂತ್ರ ಕೃತಿಯಂತೆ ಇದು ಓದಿಸಿಕೊಳ್ಳುತ್ತದೆ. ಮೂಲದ ಸನ್ನಿವೇಶಗಳನ್ನೂ ಹೆಸರುಗಳನ್ನೂ ದೇಶದ ಪರಿಸರಕ್ಕೆ ಮೂರ್ತಿರಾಯರು ಅಳವಡಿಸಿಕೊಂಡಿದ್ದಾರೆ.

ಇವರ ಇನ್ನೊಂದು ಕೃತಿ ಸಾಕ್ರಟೀಸಿನ ಕೊನೆಯ ದಿನಗಳು (1934). ಪ್ಲೇಟೋನ ಎನ್ಥ್‌ಫ್ರೊ, ಕ್ರಿಟೊ, ಅಪಾಲಜಿ ಮತ್ತು ಫೀಡೋ ಎಂಬ ಸಂವಾದಗಳನ್ನು ಅನುವಾದಿಸಿ ಸಾಕ್ರಟೀಸಿನ ಕೊನೆಯ ದಿನಗಳು ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ವಿಸ್ತಾರವಾದ ಅವತರಣಿಕೆಯಲ್ಲಿ ಅನುವಾದಕರು ಸಾಕ್ರಟೀಸಿನ ವ್ಯಕ್ತಿಚಿತ್ರವನ್ನು, ಅವನ ಮಾತುಕತೆಗಳ ಮೂಲಕ ಅವನ ತತ್ತ್ವ, ಸಿದ್ಧಾಂತಗಳು ರೂಪುಗೊಂಡ ಆವರಣದ ವಿವರಗಳನ್ನು ನೀಡಿದ್ದಾರೆ. ಇವರಿಗೆ ಮೂಲ ಗ್ರೀಕ್ ಭಾಷೆಯ ಇಂಗ್ಲಿಷ್ ಅನುವಾದ. ಅನುವಾದ ಕ್ರಿಯೆಯಲ್ಲಿ ಸ್ಪಷ್ಟತೆಯ ಜೊತೆಗೆ ಸರಳತೆಯೂ ಬೆರೆತಿರಬೇಕೆಂಬ ತತ್ತ್ವವನ್ನು ಇವರು ಎಚ್ಚರಿಕೆಯಿಂದ ಪಾಲಿಸಿದ್ದಾರೆ.

ಆರ್. ಎಂ. ವ್ಯಾಲಂಟೈನನ ದಿ ಕೋರಲ್ ಐಲೆಂಡ್ ಕೃತಿಯ ಸಂಗ್ರಹಾನುವಾದ 'ಹವಳದ ದ್ವೀಪ'. ಇವರ ಇತರ ಅನುವಾದ ಕೃತಿಗಳು: ಮೋಲಿಯೇರ್‌ನ ಎರಡು ನಾಟಕಗಳು, ಯೋಧನ ಪುನರಾಗಮನ (1947), ಪಾಶ್ಚಾತ್ಯ ಸಣ್ಣಕಥೆಗಳು, ಅಮೆರಿಕನ್ ಸಾಹಿತ್ಯ, ಇಂಡಿಯ ಇಂದು ಮತ್ತು ನಾಳೆ (ಜವಹರಲಾಲ್ ನೆಹರು ಅವರ ಇಂಡಿಯಾ ಟುಡೆ ಅಂಡ್ ಟುಮಾರೊ ಪುಸ್ತಕದ ಅನುವಾದ). ಈ ಎಲ್ಲದರಲ್ಲಿಯೂ ಮೂಲಕ್ಕೆ ನಿಷ್ಠೆ ತೋರಿಸಿಯೂ ಭಾಷೆಯ ಸರಳತೆಯನ್ನು ಉಳಿಸಿಕೊಳ್ಳುವ ಇವರ ವಿಶಿಷ್ಟ ಶೈಲಿಯನ್ನು ಕಾಣಬಹುದು.

ಇವರ ಅನುವಾದ ಕೃತಿಗಳಲ್ಲಿ ವಿಶೇಷವಾದ ಉಲ್ಲೇಖಕ್ಕೆ ಅರ್ಹವಾದದ್ದು 'ಚಂಡಮಾರುತ' (1981). ವಿಲಿಯಂ ಷೇಕ್ಸ್‌ಪಿಯರ್‌ನ ಪ್ರಖ್ಯಾತ

ನಾಟಕ ದಿ ಟೆಂಪೆಸ್ಟ್ ಎಂಬುದರ ಅನುವಾದ ಇದು. ಸು.66 ಪುಟಗಳಷ್ಟು ದೀರ್ಘವಾದ ಅವತರಣಿಕೆಯಲ್ಲಿ ಇವರು ಷೇಕ್ಸ್‌ಪಿಯರನ ಮೂಲ ನಾಟಕದ ಎಲ್ಲ ಮುಖಗಳನ್ನೂ ವಿದ್ವತ್ಪೂರ್ಣವಾಗಿ ಸಮಗ್ರವಾಗಿ ವಿಶ್ಲೇಷಿಸಿದ್ದಾರೆ. ಮಾನವ ಸ್ವಭಾವಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ಷೇಕ್ಸ್‌ಪಿಯರನ ನಾಟಕವೊಂದರ ಅನುವಾದಕ್ಕೆ ತೊಡಗುವವರು ಸಂಪಾದಿಸಿರಬೇಕಾದ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಪ್ರಭುತ್ವ ಯಾವ ಸ್ವರೂಪದ್ದಾಗಿರಬೇಕು, ಅನುವಾದ ಎಷ್ಟು ನಿಖರವಾಗಿ ಮೂಲದ ಪ್ರತಿಬಿಂಬವಾಗಬಲ್ಲುದು ಎಂಬುದನ್ನು ತೋರಿಸುವ ಕೃತಿ ಇದು.

ಇಂಗ್ಲಿಷಿನಿಂದ ಕನ್ನಡಕ್ಕೆ ಮಾತ್ರವಲ್ಲದೆ ಕನ್ನಡದಿಂದ ಇಂಗ್ಲಿಷಿಗೂ ಇವರಿಂದ ಅನುವಾದಗಳು ನಡೆದಿವೆ. ಶಿವರಾಮ ಕಾರಂತನ ಮರಳಿ ಮಣ್ಣಿಗೆ ಕಾದಂಬರಿಯ ಅನುವಾದ 'ದಿ ರಿಟರ್ನ್ ಟು ದಿ ಸಾಯಿಲ್'. ಅಲ್ಲದೆ ತಮ್ಮದೇ ಕೆಲವು ಪ್ರಬಂಧಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಎಸ್. ರಾಧಾಕೃಷ್ಣನ್, ಎಂ. ವಿಶ್ವೇಶ್ವರಯ್ಯ ಮೊದಲಾದ ವ್ಯಕ್ತಿಗಳನ್ನು ಕುರಿತು ಪ್ರಬಂಧಗಳನ್ನೂ ಬಿ. ಎಂ. ಶ್ರೀಕಂಠಯ್ಯನವರನ್ನು ಕುರಿತು ಇಂಗ್ಲಿಷಿನಲ್ಲಿ ಪುಸ್ತಕವನ್ನೂ ಬರೆದಿದ್ದಾರೆ.

ಇವರು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಪ್ರಬಂಧಕಾರರಲ್ಲೊಬ್ಬರು. ಹಗಲುಗನಸುಗಳು (1937), ಅಲೆಯುವ ಮನ (1959), ಮಿನುಗು ಮಿಂಚು (1962) –ಇವು ಇವರ ಲಲಿತ ಪ್ರಬಂಧಗಳ ಸಂಕಲನಗಳು (ಈಗ ಇವು ಮೂರೂ ಒಂದು ಸಂಕಲನದಲ್ಲಿ ಸಮಗ್ರ ಲಲಿತ ಪ್ರಬಂಧಗಳು ಎಂಬ ಹೆಸರಿನಿಂದ ಅಚ್ಚಾಗಿವೆ, 1988). ಲಲಿತ ಪ್ರಬಂಧ ಎಂಬ ಸಾಹಿತ್ಯ ಪ್ರಕಾರವನ್ನು ಜನಪ್ರಿಯಗೊಳಿಸಿದವರೇ ಇವರು. ಅದರ ರಚನೆಯಲ್ಲಿ ಇಂದಿಗೂ ಇವರು ಅಚಾರ್ಯ ಸ್ಥಾನದಲ್ಲಿದ್ದಾರೆ. ಮೃದುವಾದ ಹಾಸ್ಯ,ಲಘುವಾದ ಚಿಂತನೆ, ಮನವನ್ನು ಉಲ್ಲಾಸಗೊಳಿಸುವಂಥ ವಿಚಾರ–ಇವು ಇವರ ಲಲಿತ ಪ್ರಬಂಧಗಳ ಪ್ರಧಾನ ಲಕ್ಷಣಗಳು. ಗೌರಜ್ಜಿ, ಹಗಲುಗನಸುಗಳು, ಹೂವುಗಳು, ಗಾಡಿಯ ಪ್ರಯಾಣ–ಇವು ಇವರ ಉತ್ತಮ ಪ್ರಬಂಧಗಳ ಪೈಕಿ ಕೆಲವು.

ಪ್ರವಾಸ ಸಾಹಿತ್ಯ ಕ್ಷೇತ್ರಕ್ಕೆ ಇವರು ನೀಡಿರುವ ಅಮೂಲ್ಯವಾದ ಕೊಡುಗೆ 'ಅಪರ ವಯಸ್ಕನ ಅಮೆರಿಕಾ ಯಾತ್ರೆ'. ಅಮೆರಿಕ ಎಲ್ಲ ದೇಶಗಳ, ಎಲ್ಲ ಕಾಲಗಳ ತರುಣ ತರುಣಿಯರನ್ನೂ ಕೈಬೀಸಿ ಕರೆಯುತ್ತಿರುವ ಯಕ್ಷಲೋಕ. ಅಂಥ ದೇಶಕ್ಕೆ ಮೂರ್ತಿರಾಯರು ಮೊದಲ ಸಲ ಹೋದದ್ದು ತಮ್ಮ 73ನೆಯ ವಯಸ್ಸಿನಲ್ಲಿ; ಎರಡನೆಯ ಸಲ ಅಲ್ಲಿ ಸುತ್ತಾಡಿದ್ದು ತಮ್ಮ 76ನೆಯ ವಯಸ್ಸಿನಲ್ಲಿ. ಪಕ್ವ ವಯಸ್ಸಿನ, ಸುಲಭವಾಗಿ ಭಾವಾತಿರೇಕಕ್ಕೆ ಒಳಗಾಗದ ವ್ಯಕ್ತಿಯೊಬ್ಬರು ಅಮೆರಿಕದೇಶದ ಎಲ್ಲ ಮುಖಗಳನ್ನು ವ್ಯಕ್ತಿನಿಷ್ಠನಾಗಿ ನೋಡಿ ತಮ್ಮ ಪ್ರತಿಕ್ರಿಯೆಗಳನ್ನು, ವರ್ಣನೆಗಳನ್ನು ಸಹಜ ಸರಳ, ಸುಂದರ ಶೈಲಿಯಲ್ಲಿ ನೀಡಿದ್ದಾರೆ. ಕನ್ನಡದ ಅತ್ಯುತ್ತಮ ಪ್ರವಾಸ ಕಥನಗಳಲ್ಲಿ ಒಂದೆಂದು ಇದು ಪರಿಗಣಿತವಾಗಿದೆ.

ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು (1997) ದೊರಕಿಸಿ ಕೊಟ್ಟ ಕೃತಿ ಚಿತ್ರಗಳು–ಪತ್ರಗಳು (1978). ಪ್ರೌಢಶಾಲೆ, ಕಾಲೇಜುಗಳಲ್ಲಿ, ಅನಂತರದ ಬದುಕಿನಲ್ಲಿ ರಾಯರು ಕಂಡ ಅನೇಕ ವ್ಯಕ್ತಿಗಳ ಜೀವನದ ನೆಳಲು–ಬೆಳಕುಗಳನ್ನು ಸೊಗಸಾಗಿ ಚಿತ್ರಿಸಿರುವ ಕೃತಿ ಇದು. ಎಸ್. ರಾಧಾಕೃಷ್ಣನ್‌ರವರಂಥ ಅಂತಾರಾಷ್ಟ್ರೀಯ ಖ್ಯಾತಿಯ ವ್ಯಕ್ತಿಗಳು, ಜೆ.ಸಿ. ರಾಲೋ, ಟಿ.ಎಸ್. ವೆಂಕಣ್ಣಯ್ಯ, ಬಿ.ಎಂ. ಶ್ರೀಕಂಠಯ್ಯ ಮೊದಲಾದ ಪ್ರಸಿದ್ಧ ಪ್ರಾಧ್ಯಾಪಕರು, ತಮ್ಮ ಪಾಂಡಿತ್ಯ, ಓದು, ಶಿಷ್ಯವಾತ್ಸಲ್ಯಗಳಿಂದ ಮೂರ್ತಿರಾಯರ ಮನಸ್ಸನ್ನು ಸೂರೆಗೊಂಡ ಡಿ.ಎಲ್. ಮೂರ್ತಿಯವರು, ಎನ್. ದೇಶಿಕಾಚಾರ್ಯರು ಮುಂತಾದ ಉದಾತ್ತ ವ್ಯಕ್ತಿ ಚಿತ್ರಗಳೂ ಅತ್ಯಂತ ಸ್ವಾರಸ್ಯಕರ ರೀತಿಯಲ್ಲಿ ಇಲ್ಲಿ ವರ್ಣಿತವಾಗಿವೆ. ಮೈಸೂರು ವಿಶ್ವವಿದ್ಯಾನಿಲಯ, ಅನೇಕ ಸರ್ಕಾರಿ ಕಾಲೇಜುಗಳು, ಆಕಾಶವಾಣಿ, ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ–ಮುಂತಾದ ಕೆಲವು ವಿಶಿಷ್ಟ ಸಂಸ್ಥೆಗಳನ್ನು ಕುರಿತ ಮಿಂಚುನೋಟಗಳು ಇಲ್ಲವೆ. ಉತ್ತರಾರ್ಧದಲ್ಲಿರುವ 75 ಪತ್ರಗಳಲ್ಲಿ ಹೆಚ್ಚಿನವು ಇವರ ಮಿತ್ರರಾದ ತೀ.ನಂ. ಶ್ರೀಕಂಠಯ್ಯನವರಿಗೆ ಬರೆದವು. ಕಳೆದುಹೋದ ಕೆಲವು ದಶಕಗಳ ಸಾಹಿತ್ಯಕ ಚಟುವಟಿಕೆಗಳು, ವಿದ್ವತ್ಪ್ರಪಂಚದ ಆಗುಹೋಗುಗಳು, ಸಾಮಾಜಿಕ ಘಟನೆಗಳನ್ನು ತೀರ ಕಡಿಮೆ ಎನ್ನಬಹುದಾದಷ್ಟು ವೈಯಕ್ತಿಕ ವಿವರಗಳನ್ನು ಈ ಪತ್ರಗಳು ಪುನಾರಚಿಸಿ ನೀಡುತ್ತವೆ. ಕೆಲವು ಪತ್ರಗಳು ರಾಯರು ತಮ್ಮ ಮಗನಿಗೆ, ಸೊಸೆಗೆ ಬರೆದವು. ಸಾಕಾರ–ನಿರಾಕಾರ ದೈವದ ಕಲ್ಪನೆ, ಬದುಕಿನ ಸ್ವರೂಪ ಮುಂತಾದವುಗಳನ್ನು ತಮಗೆ ಸಿದ್ಧಿಸಿರುವ ಶೈಲಿಯಲ್ಲಿ ಸರಳವೂ ಅತ್ಯಂತ ನಿಕೃಷ್ಟವೂ ಆದ ರೀತಿಯಲ್ಲಿ ಈ ಪತ್ರಗಳಲ್ಲಿ ವಿವರಿಸಿದ್ದಾರೆ.

ಷೇಕ್ಸ್‌ಪಿಯರ್ (ಭಾಗ1, 1962); ಮಾಸ್ತಿಯವರ ಕಥೆಗಳು (1971); ಪೂರ್ವಸೂರಿಗಳೊಡನೆ (1981); ಸಾಹಿತ್ಯ ಮತ್ತು ಸತ್ಯ (1982); ಮತ್ತುವಿಮರ್ಶಾತ್ಮಕ ಪ್ರಬಂಧಗಳು (1982)– ಇವು ಇವರ ವಿಮರ್ಶಾಕೃತಿಗಳು. ಷೇಕ್ಸ್‌ಪಿಯರ್ ಬಗ್ಗೆ ಇವರಿಗಿರುವ ಪ್ರೀತಿ ಗೌರವಗಳನ್ನು ಮಾತ್ರವಲ್ಲದೆ ಅವನ ನಾಟಕಗಳ ವಿಷಯದಲ್ಲಿ ಇವರು ಪಡೆದಿರುವ ತಲಸ್ಪರ್ಶಿಯಾದ ಪಾಂಡಿತ್ಯವನ್ನು, ಇಷ್ಟೆಲ್ಲದರ ಹಿನ್ನೆಲೆಯಲ್ಲಿ ಷೇಕ್ಸ್‌ಪಿಯರನ ನಾಟಕಗಳನ್ನು ವಿಚಿಕಿತ್ಸಕ ದೃಷ್ಟಿಯಿಂದ ನೋಡಿರುವ ಇವರ ನಿಶಿತವಾದ ವಿಮರ್ಶಾಮತಿಯನ್ನು ಇವರ ಷೇಕ್ಸ್‌ಪಿಯರ್ ಕೃತಿ ಎತ್ತಿ ತೋರಿಸುತ್ತದೆ.

ರಾಯರ ವ್ಯಕ್ತಿತ್ವ ಅತ್ಯಂತ ವಿಶಿಷ್ಟವಾದದ್ದು. ಶತಾಯುಷಿಯಾಗಿ ಬದುಕಿದ, ಅತ್ಯಂತ ಆರೋಗ್ಯಕರವಾದ ದೃಷ್ಟಿಯನ್ನು ಹೊಂದಿದ್ದ ಇವರ ಮನಸ್ಸು ಸದಾ ಅನ್ವೇಷಕವಾಗಿದ್ದು ಹೊಸ ಹೊಸ ವಿಷಯಗಳನ್ನು ತಿಳಿಯುವ, ವಿಶ್ಲೇಷಿಸುವ ಕುತೂಹಲವನ್ನು ತೋರಿಸುತ್ತಲೇ ಇದ್ದಿತು. ದೈವದ ವಿಷಯದಲ್ಲಾಗಲಿ, ಸಂಪ್ರದಾಯ, ಆಚರಣೆಗಳ ವಿಷಯದಲ್ಲಾಗಲಿ ಲವಲೇಶವಾದರೂ ಮೂಢನಂಬಿಕೆಗಳಿಲ್ಲದ, ತೆರೆದ ಮನಸ್ಸಿನ ಅಪರೂಪದ ವ್ಯಕ್ತಿ. ದೇವರು (1991) ಎಂಬ ಕೃತಿಯಲ್ಲಿ ಜಗತ್ತಿನಲ್ಲಿ ದೇವರಿಲ್ಲ ಎಂಬುದನ್ನು ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. ಇದು ಇವರ ಅತ್ಯಂತ ಜನಪ್ರಿಯ ಕೃತಿಗಳಲ್ಲೊಂದು. ಆದರೆ ತಮ್ಮ ಜೀವನದ ಸಂಧ್ಯಾ ಕಾಲದಲ್ಲಿ ಇವರು ತಮ್ಮೂರಿನ ನರಸಿಂಹ ದೇವಾಲಯಕ್ಕೆ ಭೇಟಿ ನೀಡಿದ್ದು ಹಾಗೂ ಒಳ್ಳೆಯತನವೇ ದೇವರೆಂದು ಹೇಳಿದ್ದು ಸುದ್ದಿಯಾಗಿತ್ತು. ಇಂಡಿಯಾ: ಇಂದು ಮತ್ತು ನಾಳೆ, ಜನತಾ ಜನಾರ್ಧನ (1995), ಮಹಾಭಾರತದಲ್ಲಿ ಕೇಡು ಎಂಬುವು ಇವರು ಕೊನೆಗಾಲದಲ್ಲಿ ರಚಿಸಿದ ಕೃತಿಗಳು.

ಇವರಿಗೆ ಶಾಸ್ತ್ರೀಯ ಸಂಗೀತದಲ್ಲಿ ತೀವ್ರವಾದ ಆಸಕ್ತಿಯಷ್ಟೇ ಅಲ್ಲ ಆಳವಾದ ಪಾಂಡಿತ್ಯವೂ ಇತ್ತು. ಸಾಹಿತ್ಯ, ಕಲೆ, ಸಂಗೀತ, ಇವೆಲ್ಲಕ್ಕಿಂತ ಬದುಕು ತುಂಬ ದೊಡ್ಡದು ಎಂಬ ಜೀವನ ಶ್ರದ್ಧೆ ಇವರದು.

ಇವರಿಗೆ ಕನ್ನಡದ ಜನತೆ ಆತ್ಮೀಯವಾದ ರೀತಿಯಲ್ಲಿ ಅನೇಕ ಕಡೆಗಳಲ್ಲಿ ಸನ್ಮಾನ ನೀಡಿದೆ. ವಿಶ್ವವಿದ್ಯಾನಿಲಯ, ಸರ್ಕಾರಗಳು ಇವರನ್ನು ಗೌರವಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳು ಇವರ ಕೃತಿಗಳಿಗೆ ಬಹುಮಾನ ನೀಡಿವೆ. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್. (1977) ಪದವಿ ನೀಡಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ (1974), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1984), ಪಂಪ ಪ್ರಶಸ್ತಿ (1992), ಹಂಪಿ ಕನ್ನಡ

ವಿಶ್ವವಿದ್ಯಾನಿಲಯದ ನಾಡೋಜ ಗೌರವ, ಡಿ.ಲಿಟ್ ಪ್ರಶಸ್ತಿ ಲಭ್ಯವಾಗಿವೆ. ಇವರು 1984ರಲ್ಲಿ ಕೈವಾರದಲ್ಲಿ ನಡೆದ 56ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು 101ನೆಯ ವಯಸ್ಸಿನಲ್ಲಿ 2001ರಲ್ಲಿ ನಿಧನರಾದರು. *

**ಮೃಗೇಶವರ್ಮ:** ಆದ್ಯ ಕದಂಬವಂಶದ ರಾಜ (ಸು. 455–80). ಶಾಂತಿವರ್ಮನ ಮಗ ಮತ್ತು ಉತ್ತರಾಧಿಕಾರಿ. ವೈಜಯಂತಿ (ಇಂದಿನ ಬನವಾಸಿ, ಉತ್ತರ ಕನ್ನಡ ಜಿಲ್ಲೆ) ಮತ್ತು ಪಲಾಶಿಕಾ (ಇಂದಿನ ಹಲಶಿ, ಬೆಳಗಾಂವಿ ಜಿಲ್ಲೆ) ಇವನ ರಾಜಧಾನಿಗಳಾಗಿದ್ದುವು. ಇವನು ಗಂಗ ಮತ್ತು ಪಲ್ಲವರನ್ನು ಯುದ್ಧದಲ್ಲಿ ಸೋಲಿಸಿದ. ಬಹುಶಃ ಚಂಡದಂಡ, 2ನೆಯ ಸಿಂಹವರ್ಮ ಅಥವಾ 4ನೆಯ ಸ್ಕಂದವರ್ಮ ಇವರಲ್ಲಿ ಒಬ್ಬನನ್ನು ಇವನು ಸೋಲಿಸಿರಬೇಕು. ಮೃಗೇಶ ಸ್ವತಃ ಹಿಂದುಧರ್ಮದವನಾಗಿದ್ದರೂ ಪರಧರ್ಮ ಸಹಿಷ್ಣುವಾಗಿದ್ದು ಅನೇಕ ಹಿಂದು ಮತ್ತು ಜೈನಧರ್ಮದ ಕಾರ್ಯಗಳ ಸಲುವಾಗಿ ದತ್ತಿಗಳನ್ನಿತ್ತಿದ್ದ. ಹಲಶಿಯಲ್ಲಿ ಜೈನಬಸದಿಯೊಂದನ್ನು ಇವನು ಕಟ್ಟಿಸಿದನೆಂದು ಶಾಸನವೊಂದರಿಂದ ತಿಳಿಯುತ್ತದೆ.

ಕೈಕೇಯ ವಂಶದ ಪ್ರಭಾವತಿ ಇವನ ರಾಣಿ. ರವಿವರ್ಮ, ಭಾನುವರ್ಮ, ಶಿವರಥ ಇವನ ಮಕ್ಕಳು. ಮೃಗೇಶವರ್ಮನ ಮರಣಾನಂತರ ಇವನ ತಮ್ಮನಾದ ಶಿವಮಾಂಧಾತೃವರ್ಮ ಕದಂಬ ಸಿಂಹಾಸನವನ್ನೇರಿದ. ಉತ್ತರ ಕನ್ನಡ ಜಿಲ್ಲೆಯ ಗುಡ್ನಾಪುರ ಮತ್ತು ಬನವಾಸಿಯಲ್ಲಿ ಇತ್ತೀಚೆಗೆ ದೊರೆತ ಎರಡು ಶಾಸಗಳು ಇವನ ಜೀವನದ ಕೆಲ ಮುಖ್ಯ ಅಂಶಗಳನ್ನು ವಿಶಿಷ್ಟ ರೀತಿಯಲ್ಲಿ ನಮೂದಿಸುತ್ತವೆ. (ಎಂ.ಎನ್.ಕೆಎ.)

**ಮೃತ್ಯುಂಜಯಾಚಾರ್ಯ, ಎನ್.ಕೆ.:** 1919– . ಖ್ಯಾತ ಶಿಲ್ಪಿ, ಸಂಸ್ಕೃತ, ವೇದ, ಆಗಮಶಾಸ್ತ್ರಗಳನ್ನು ಆಳವಾಗಿ ಅಭ್ಯಾಸ ಮಾಡಿದ ಆಚಾರ್ಯ. ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಜನಿಸಿದರು (1919). ತಂದೆ ಎನ್. ಕಸ್ತೂರಾಚಾರ್ಯ. ಇವರದು ವೈದಿಕ ಪುರೋಹಿತರ ಮನೆತನ. ಏಳನೆಯ ತರಗತಿಯವರೆಗೆ ಶಿಕ್ಷಣ ಪಡೆದರು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದೆ ಇವರು ಸೋದರಮಾವನ ಬಳಿ ಸಂಸ್ಕೃತ ಮತ್ತು ವೇದಗಳ ಅಧ್ಯಯನ ಹಾಗೂ ವಂಶಪಾರಂಪರ್ಯವಾಗಿ ಬಂದ ಶಿಲ್ಪಕಲೆಯನ್ನು ಅಭ್ಯಾಸ ಮಾಡಿದರು. ಮೈಸೂರು ಅರಮನೆಯ ಕಲಾವಿದ ಲಕ್ಷ್ಮಣ ಕೃಷ್ಣರಾಯರಲ್ಲಿ ಚಿತ್ರಕಲೆಯಲ್ಲಿ ಶಿಷ್ಯವೃತ್ತಿ ಪಡೆದರು.

ಚಿತ್ರಕಲಾ ಪರಿಣತಿಯ ಬಳಿಕ ಜಯಚಾಮರಾಜೇಂದ್ರ ತಾಂತ್ರಿಕ ವೃತ್ತಿಶಿಕ್ಷಣ ಶಾಲೆಯಲ್ಲಿ ಒಂದು ವರ್ಷ ಲೋಹ, ಶಿಲ್ಪಕಲೆಗಳಲ್ಲಿ ಶಿಕ್ಷಣ ಪಡೆದರು. ಸ್ವರ್ಣ ಕಲಾನಿಪುಣ ಶಿಲ್ಪಕಲಾ ಪಿತಾಮಹಾರೆನಿಸಿಕೊಂಡಿದ್ದ ಸಿಂಗಣ್ಣಾಚಾರ್ಯರಲ್ಲಿ ಶಿಲ್ಪಕಲೆಯ ಪ್ರೌಢಿಮೆ ಪಡೆದರು. ಇವರ ಲೋಹದ ಅನೇಕ ಕೆತ್ತನೆಗಳು ನಾಡಿನ ಹಲವಾರು ದೇವಾಲಯಗಳಲ್ಲಿವೆ. ವಳ್ಳಿಸುಬ್ರಹ್ಮಣ್ಯ, ಕೊಳಲು ಕೃಷ್ಣ, ಗೋವರ್ಧನ ಗಿರಿಧಾರಿ ಕೃಷ್ಣ, ನಾಗಕನ್ನಿಕಾ, ಕಾಳಿಕಾ ಪರಮೇಶ್ವರಿ ಮೊದಲಾದವು ಇವರ ಮಹತ್ ಕೃತಿಗಳು. ಅನೇಕ ಸಂಸ್ಥೆಗಳಲ್ಲೂ ಇವರ ಶಿಲೆ ಮತ್ತು ಲೋಹದ ಅಲಂಕರಣೀಯ ವಿಗ್ರಹಗಳು ಮೆರಗು ಸೂಸುತ್ತಿವೆ. ಇವರು ಮೇಣದಲ್ಲೂ ಅನೇಕ ಸುಂದರ ಮೂರ್ತಿಗಳನ್ನು ರಚಿಸಿರುವುದು ಉಲ್ಲೇಖನೀಯ.

ಇವರು ನಿಷ್ಠೆ ಮತ್ತು ನಿರಾಡಂಬರದ ಕಲಾ ಸೇವಕರು. ಶಿಲ್ಪರತ್ನಂ, ಶಿಲ್ಪಕಲಾ ಪ್ರವೀಣ, ಮಹಾಶಿಲ್ಪಜ್ಞಾನಿ ಮೊದಲಾದ ಬಿರುದು, ಗೌರವಗಳಿಗೆ ಇವರು ಪಾತ್ರರಾಗಿದ್ದಾರೆ. ಶಿಲ್ಪಕಲಾ ಕ್ಷೇತ್ರದಲ್ಲಿ ಇವರು ಸಲ್ಲಿಸಿರುವ ಸೇವೆಗಾಗಿ ಕರ್ನಾಟಕ ಸರ್ಕಾರ ಜಕಣಾಚಾರಿ ಪ್ರಶಸ್ತಿ ನೀಡಿ ಗೌರವಿಸಿದೆ (2002). (ಎನ್.ಎಂ.)

**ಮೆಕೆಂಜಿ, ಕಾಲಿನ್:** 1754–1821. ಭಾರತದ ಹಾಗೂ ಕರ್ನಾಟಕದ ಐತಿಹಾಸಿಕ ಮತ್ತು ಸಾಂಸ್ಕೃತಿಕ ದಾಖಲೆಗಳ ಸಂಗ್ರಹಕಾರ; ಭಾರತದ ಮಾಜಿ ಪ್ರಧಾನ ಸರ್ವೇಕ್ಷಣಾಧಿಕಾರಿ; ಮೈಸೂರು ರಾಜ್ಯದ ಮಾಜಿ ಸರ್ವೇಕ್ಷಣಾ ಇಲಾಖೆಯ ಮುಖ್ಯಸ್ಥ.

ಈತ ಸ್ಕಾಟ್‌ಲೆಂಡಿನ ಪಶ್ಚಿಮದ್ವೀಪಗಳ ಸ್ಟೊರ್ನೋವೇನಲ್ಲಿ 1754ರಲ್ಲಿ ಜನಿಸಿದ. ಭಾರತಕ್ಕೆ ಹಿಂದು ಗಣಿತಶಾಸ್ತ್ರ ಕುರಿತು ಮಾಹಿತಿ ಸಂಗ್ರಹಿಸಲು ಬಂದ. ತಮಿಳುನಾಡಿನ ಮದುರೆಗೆ ಭೇಟಿ ನೀಡಿದಾಗ ಇವನಿಗೆ ಭಾರತದ ಸಮೃದ್ಧವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ದಾಖಲೆಗಳ ಸಂಗ್ರಹ ಮಾಡಬೇಕೆಂಬ ಪ್ರೇರಣೆಯಾಯಿತು. ಭಾರತದಲ್ಲೇ ನೆಲೆ ನಿಲ್ಲಲು ತೀರ್ಮಾನಿಸಿ ಆಗಿನ ಮದರಾಸು ಪ್ರಾಂತದ ಸೇನಾ ವಿಭಾಗದಲ್ಲಿ ಎಂಜಿನಿಯರ್ ಆಗಿ ಸೇವೆಗೆ ಸೇರಿದ. ಆ ಕಾಲದ ಸೇನೆಯ ಎಂಜಿನಿಯರ್‌ಗಳು ಸೈನ್ಯದ ಮುಂಚೂಣಿಯಲ್ಲಿದ್ದು ಅದರ ಚಲವಲನಕ್ಕೆ ಮತ್ತು ಫಿರಂಗಿ ಸ್ಥಾಪನೆಗೆ ಮಾರ್ಗದರ್ಶನ ಮಾಡಬೇಕಿತ್ತು. ಬ್ರಿಟಿಷರು 1799ರಲ್ಲಿ ಟಿಪ್ಪುವಿನ ಮೈಸೂರು ರಾಜ್ಯದ ಮೇಲೆ ಅಂತಿಮ ಪ್ರಹಾರ ನಡೆಸಿದಾಗ ಮೆಕೆಂಜಿ ಹೈದರಾಬಾದ್ ನಿಜಾಮನ ಸೈನ್ಯದ ಮುಖ್ಯ ಎಂಜನಿಯರ್ ಆಗಿ ದಂಡಯಾತ್ರೆಯಲ್ಲಿ ಭಾಗವಹಿಸಿದ್ದ.

ಇವನನ್ನು ಮೈಸೂರು ದೇಶದ ಸರ್ವೇಕ್ಷಣಾ ಇಲಾಖೆಯ ಮುಖ್ಯಸ್ಥನನ್ನಾಗಿ ನೇಮಿಸಲಾಯಿತು (1800–07). ಆಗ ಇವನಿಗೆ ಹಳೆಯ ಮೈಸೂರು ರಾಜ್ಯದ ಸಮಗ್ರ ಭೂ ಸರ್ವೇಕ್ಷಣೆ ನಡೆಸುವ ಹೊಣೆ ಹೊರಿಸಲಾಗಿತ್ತು. ಈತ ಈ ಕೆಲಸವನ್ನು ನಿರ್ವಹಿಸುತ್ತಲೇ ಇಲ್ಲಿನ ಇತಿಹಾಸ, ಆಚರಣೆಗಳು, ಪರಂಪರೆ, ಸಾಹಿತ್ಯ, ಐತಿಹ್ಯ, ಶಾಸನಗಳ ನಕಲುಗಳು, ನಾಣ್ಯಗಳು, ಹಸ್ತಪ್ರತಿಗಳು ಮತ್ತು ಪ್ರಾಚೀನ ವಸ್ತುಗಳನ್ನು ಸಂಗ್ರಹಿಸಿದ. ಈ ಕೆಲಸಕ್ಕಾಗಿ ತಾವೇ ಸಂಬಳ ಕೊಟ್ಟು ಕೆಲವು ಸಹಾಯಕ ಪಂಡಿತರನ್ನು ನೇಮಿಸಿಕೊಂಡಿದ್ದ. ಲಕ್ಷ್ಮಯ್ಯ, ತೆಲುಗು ಕವಿ ಬೋರಯ್ಯ, ಅಬ್ದುಲ್ ಅಜೀಜ್, ಬಸವಯ್ಯ, ಮಹಾಬಲರಾವ್, ಶಿವರಾವ್, ರಾಮಸ್ವಾಮಿ ಮೊದಲಾದವರು ಸಹಾಯಕರಾಗಿದ್ದರೆಂದು ಆ ಕಾಲದ ಉಲ್ಲೇಖಗಳಿಂದ ಊಹಿಸಲಾಗಿದೆ. ಪರ್ಷಿಯನ್, ಅರಾಬಿಕ್, ಪ್ರಾಕೃತ ಗ್ರಂಥಗಳನ್ನು ಸಂಗ್ರಹಿಸಲೂ ಈತ ಆಸಕ್ತಿ ತೋರಿದ. ಈತನಿಗೆ ಜೈನಧರ್ಮದ ಬಗ್ಗೆ ವಿಶೇಷ ಆಸಕ್ತಿಯಿದ್ದುದರಿಂದ ಆ ಧರ್ಮಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿದ. ಈತನಿಗೆ ಶ್ರೀಲಂಕಾದಲ್ಲಿನ ಕೋಟೆಗಳ ದುರಸ್ತಿ ಕಾರ್ಯವನ್ನೂ ವಹಿಸಲಾಯಿತು. ಈತನನ್ನು ಕರ್ನಲ್ ಹುದ್ದೆಗೆ ನೇಮಿಸಿದಾಗ ಕರ್ನಲ್ ಮೆಕೆಂಜಿ ಎಂದು ಜನಪ್ರಿಯನಾದ.

1810ರಲ್ಲಿ ಸರ್ಕಾರದ ಪ್ರಧಾನ ಸರ್ವೇಕ್ಷಣ ಅಧಿಕಾರಿಯಾಗಿ ನೇಮಿತವಾದ ಮದರಾಸು 1812ರಲ್ಲಿ ಜಾವದ ಬೊರೊಬೊದೂರ್‌ತ್ರ ಅವಶೇಷಗಳ ಸಮೀಕ್ಷೆಗೆ ನಿಯೋಜಿತನಾದ. ಜಾವದ ವಿವಿಧ ಆಡುಭಾಷೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ. ಈತ ತನ್ನ 58ನೆಯ ವಯಸ್ಸಿನಲ್ಲಿ ಬರ್ಟಲೊ ಎಂಬ ಡಚ್ ಮಹಿಳೆಯನ್ನು ಜಾವದಲ್ಲಿ ವಿವಾಹವಾದ. ಆಕೆ ಈತನಿಗೆ ಅಲ್ಲಿ ಡಚ್ ದಾಖಲೆಗಳನ್ನು ಪರಿಶೀಲಿಸಲು ನೆರವಾದ ಸಂಶೋಧಕಿ ಇರಬೇಕೆಂದು ಊಹಿಸಲಾಗಿದೆ. ಅಲ್ಲಿಂದ ಹಿಂದಿರುಗಿದ ಮೇಲೆ ಕೇರಳ, ಆಂಧ್ರ ಮತ್ತಿತರ ಕಡೆಗಳಲ್ಲಿ ಸೇವೆ ಸಲ್ಲಿಸಿದ. ಇವನ ಕರ್ತವ್ಯ ನಿಷ್ಠೆ ಮತ್ತು ಮೇಧಾವಿತನಕ್ಕೆ ದೊರೆತ ಮಾನ್ಯತೆಯಾಗಿ 1815ರಲ್ಲಿ ಇವನನ್ನು ಭಾರತದ ಪ್ರಧಾನ ಸರ್ವೇಕ್ಷಣ ಜನರಲ್ ಆಗಿ ನೇಮಿಸಲಾಯಿತು. ಆದರೆ ಈತ ಮದರಾಸಿನಲ್ಲಿ ದಾಖಲೆಗಳ ಸಂಗ್ರಹದಲ್ಲಿ ಮುಳುಗಿದ್ದು ಎರಡು ವರ್ಷಗಳ ಕಾಲ ಹೊಸ ಹುದ್ದೆಯನ್ನು ವಹಿಸಿಕೊಳ್ಳಲಾಗಲಿಲ್ಲ. 1817ರಲ್ಲಿ ಈ ಹೊಸ ಹುದ್ದೆಯನ್ನು ವಹಿಸಿಕೊಂಡ. ಆಂಧ್ರದಲ್ಲಿ

ಕೃಷ್ಣಾನದಿಯಿಂದ ಪೆನ್ನಾರ್ ನದಿಯವರೆಗೂ ಸರ್ವೇಕ್ಷಣ ಕಾರ್ಯ ನಡೆಸಿದ. 1819ರಲ್ಲಿ ಇವನ ವಿದ್ವತ್ತನ್ನು ಪರಿಗಣಿಸಿ ಲಂಡನ್‌ನ ರಾಯಲ್ ಸೊಸೈಟಿಯ ಫೆಲೊ ಆಗಿ ನೇಮಕ ಮಾಡಲಾಯಿತು. ಅದೇ ವರ್ಷ ಪ್ರಧಾನ ಕರ್ನಲ್ ಆಗಿ ಬಡ್ತಿ ಹೊಂದಿದ.

ನಿರಂತರ ಕಾರ್ಯಬಾಹುಳ್ಯದ ನಡುವೆಯೂ ಈತ ಅನೇಕ ವಿದ್ವತ್ಪೂರ್ಣ ಲೇಖನಗಳನ್ನೂ ಬರೆದು ವಿವಿಧ ಜರ್ನಲ್‌ಗಳು ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ. ಈ ಲೇಖನಗಳು ಏಷ್ಯಾಟಿಕ್ ಆನ್ಯುಯಲ್ ರಿಜಿಸ್ಟರ್, ಓರಿಯೆಂಟಲ್ ರಿಪೆರ್ಟರಿ, ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲ್ ಮೊದಲಾದಕಡೆ ಪ್ರಕಟವಾಗಿವೆ. ಈತ ಸ್ಕೆಚಸ್ ಆಫ್ ದ ವಾರ್ ವಿಥ್ ಟೀಪೂ ಸುಲ್ತಾನ್ ಎಂಬ ಕೃತಿಯನ್ನು ಎರಡು ಸಂಪುಟಗಳಲ್ಲಿ ರಚಿಸಿದ. ಇದನ್ನು ವಿಲ್ಕ್ಸ್ ಪರಿಶೀಲಿಸಿದ್ದ (ಈ ಸಂಪುಟಗಳು ಈಗ ಲಭ್ಯವಿಲ್ಲ). ಈತ ರಚಿಸಿದ ಲೈಫ್ ಆಫ್ ಹೈದರ್ ಅಲಿ ಎಂಬ ಕೃತಿಯ ಒಂದು ಭಾಗ ಏಷ್ಯಾಟಿಕ್ ಆನ್ಯುಯಲ್ ರಿಜಿಸ್ಟರ್‌ನಲ್ಲಿ ಪ್ರಕಟವಾಗಿತ್ತು. ಉಳಿದ ಭಾಗ ಸಿಕ್ಕಿಲ್ಲ. ಈತ ಆನೆಗೊಂದಿ, ಕೊಯಮತ್ತೂರು ಮತ್ತು ವಿಜಯನಗರದ ತರುವಾಯದ ಅರಸರ ಬಗ್ಗೆಯೂ ದಾಖಲೆಗಳನ್ನು ಸಂಗ್ರಹಿಸಿದ್ದ.

ಮೆಕೆಂಜಿ ತನ್ನ ಜೀವಿತ ಕಾಲದಲ್ಲೇ ತನ್ನ ಸಂಗ್ರಹವನ್ನು ಸಂರಕ್ಷಿಸಿ, ಅದಕ್ಕೊಂದು ವಿವರಣಾತ್ಮಕ ಸೂಚಿ ರಚಿಸಿ, ಅಗತ್ಯವಿದ್ದಲ್ಲಿ ಅನುವಾದಿಸಿ ಪ್ರಕಟಿಸಬೇಕೆಂಬ ಉದ್ದೇಶ ಹೊಂದಿದ್ದ. ಆದರೆ ಬಿಡುವಿರದ ಸತತ ದುಡಿಮೆಯಿಂದಾಗಿ ಇವನ ಆರೋಗ್ಯ ಬೇಗ ಕ್ಷೀಣಿಸಿತು. ನಿವೃತ್ತನಾಗಿ ವಿಶ್ರಾಂತಿ ಪಡೆಯಬೇಕೆಂಬ ಯೋಜನೆಯಲ್ಲಿದ್ದಾಗಲೇ 1821ರಲ್ಲಿ ನಿಧನನಾದ. ಇವನ ನಿಧನದ ತರುವಾಯ ಈತ ಸಂಗ್ರಹಿಸಿದ ದಾಖಲೆಗಳು ಶಿಥಿಲವಾಗುವ ಚಿಂತೆಯಿಂದ ಇವನ ಪತ್ನಿ ಇವುಗಳ ಮುಖ್ಯ ಸಂಗ್ರಹಗಳನ್ನು ಈಸ್ಟ್ ಇಂಡಿಯಾ ಕಂಪನಿಗೆ ಸಂರಕ್ಷಣೆಗಾಗಿ ಒಂದು ಲಕ್ಷ ರೂಪಾಯಿಗೆ ಮಾರಿದಳು. ಇವುಗಳಲ್ಲಿ ಕೆಲವು ಲಂಡನ್ ಗ್ರಂಥಾಲಯ ಮತ್ತು ವಸ್ತುಸಂಗ್ರಹಾಲಯ ಸೇರಿದರೆ ಇನ್ನು ಕೆಲವು ಮದರಾಸ್ ಕಾಲೇಜಿನ ಗ್ರಂಥಾಲಯ ಮತ್ತು ಮದರಾಸಿನ ಓರಿಯೆಂಟಲ್ ಮಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಸೇರಿದವು. ತರುವಾಯದ ಕಾಲದಲ್ಲಿ ಸರ್ಕಾರ ವಿಲ್‌ಸನ್ ಮತ್ತು ರೆವರೆಂಡ್ ಟೇಲರ್‌ರಿಂದ ಈ ಸಂಗ್ರಹಗಳ ಸೂಚಿ ಸಿದ್ಧಪಡಿಸಿತು. 570 ಪುಟಗಳ ಈ ಸೂಚಿಯ ಪ್ರಕಾರ 1568 ಹಸ್ತಪ್ರತಿಗಳು, 2070 ಸ್ಥಳೀಯ ಕಥನಗಳು, 8076 ಶಾಸನ ಪ್ರತಿಗಳು, 2150 ಭಾಷಾಂತರಗಳು, 6218 ನಾಣ್ಯಗಳು ಮತ್ತು 146 ವಿಗ್ರಹಗಳು ಹಾಗೂ ಇತರ ಪ್ರಾಕ್ತನ ವಸ್ತುಗಳು ದಾಖಲಾಗಿವೆ. ಬಿ.ಎಲ್. ರೈಸ್ ಮೊದಲಾದ ಮತ್ತಿತರ ವಿದ್ವಾಂಸರು ಮೆಕೆಂಜಿಯ ಸಂಶೋಧನ ಕಾರ್ಯವನ್ನು ಮುಕ್ತವಾಗಿ ಪ್ರಶಂಸಿಸಿದ್ದಾರೆ ದಕ್ಷಿಣ ಭಾರತದ ಸಾಹಿತ್ಯ ಮತ್ತು ಪೂರ್ವಚರಿತ್ರೆಯ ಬಗ್ಗೆ ನಮ್ಮ ಜ್ಞಾನ ಸಮಗ್ರವಾಗಿ ಮೆಕೆಂಜಿ ಹಸ್ತಪ್ರತಿಗಳನ್ನೇ ಅವಲಂಬಿಸಿದೆ ಎಂಬ ಮಾರ್ಖಮ್ ಅವರ ಹೇಳಿಕೆ ಅಕ್ಷರಶಃ ನಿಜ. ವಿರಳ ಐರೋಪ್ಯ ಸಂಶೋಧಕರ ಸಾಲಿಗೆ ಸೇರಿದ ಈತ ಕನ್ನಡಿಗರಿಗೆ ಚಿರಸ್ಮರಣೀಯನಾಗಿದ್ದಾನೆ. *

**ಮೆಕ್ಕೆಕಟ್ಟೆ:** ಉಡುಪಿ ಜಿಲ್ಲೆ ಅದೇ ತಾಲ್ಲೂಕಿನ ಶಿರಿಯಾರ ಗ್ರಾಮದಲ್ಲಿರುವ ಒಂದು ಸ್ಥಳ. ಉಡುಪಿಯಿಂದ 28 ಕಿಮೀ ದೂರದಲ್ಲಿ ಐತಿಹಾಸಿಕ ಸ್ಥಳವಾದ ಬಾರಕೂರಿನಿಂದ 8 ಕಿಮೀ ಉತ್ತರಕ್ಕಿದೆ.

ಪ್ರಾಚೀನ ಕಾಷ್ಠಶಿಲ್ಪಗಳ ಅಪೂರ್ವ ಸಂಗ್ರಹದಿಂದ ಈ ಸ್ಥಳ ಪ್ರಸಿದ್ಧವಾಗಿದೆ. ಎರಡು ಅಡಿಯಿಂದ ಇಪ್ಪತ್ತು ಅಡಿಗಳಷ್ಟು ಎತ್ತರದ ಬಣ್ಣ ಬಣ್ಣದ ವಿಲಕ್ಷಣ ರೂಪಗಳ ತುಳುನಾಡಿನ ದೈವಗಳ 170 ಮರದ ಮೂರ್ತಿಗಳನ್ನು ಇಲ್ಲಿರುವ ಬ್ರಹ್ಮಸ್ಥಾನದಲ್ಲಿ ಕಾಣಬಹುದು. ಊರುಗಳು ಎಂದು ಕರೆಯುವ ಈ ಕಾಷ್ಠ ಶಿಲ್ಪಗಳು ನೋಡುವವರ ಮನಸ್ಸಿನಲ್ಲಿ ಭಯ ಭಕ್ತಿಗಳನ್ನು ಮೂಡಿಸುತ್ತವೆ. ಈ ಶಿಲ್ಪಗಳು ಬಿಗುನಿಲುವಿನಲ್ಲಿ ನೆಟ್ಟಗೆ ನಿಂತಂತಿದ್ದು, 'ಮೆಕ್ಕೆಕಟ್ಟೆ ಉರು ನಿಂತ ಹಾಗೆ' ಎಂಬ ರೂಢಿಮಾತಿಗೆ ಕಾರಣವಾಗಿವೆ; ಇಲ್ಲಿನ ಪ್ರಧಾನ ದೇವತೆ ನಂದಿಕೇಶ್ವರ. ಮಿಕ್ಕವೆಲ್ಲ ಶಿವಗಣಗಳು.

ಸ್ಥಳಪುರಾಣದಿಂದ ತಿಳಿದುಬರುವಂತೆ ಇದು ಹಿಂದೆ ಜಂಬುಕೇಶ್ವರ ಋಷಿಗಳು ಯಜ್ಞಕ್ಕಾಗಿ ಮೇಕೆ ಕಟ್ಟಿದ ಸ್ಥಳವೇ ಮುಂದೆ ಮೆಕ್ಕೆಕಟ್ಟೆ ಅಥವಾ ಕೆಲವರು ಹೇಳುವಂತೆ ಮಕ್ಕಿಕಟ್ಟೆ (ಕುಂದಾಪುರ ಕನ್ನಡದ ವೈಶಿಷ್ಟ್ಯ) ಎಂದು ಕರೆಸಿಕೊಂಡಿರಬೇಕೆಂದು ಐತಿಹ್ಯವಿದೆ. ಇಲ್ಲಿಂದ ಒಂದು ಕಿಮೀ ದೂರದಲ್ಲಿ ಜಂಬೂರಿ ಎಂಬಲ್ಲಿ ಒಂದು ಶಿವದೇವಸ್ಥಾನ ಪಾಳು ಬಿದ್ದಿದೆ. ಎಷ್ಟೋ ಶತಮಾನಗಳ ಹಿಂದೆ ಶತ್ರುರಾಜನ ಸೇನೆ ನಡೆದು ಬರುತ್ತಿದ್ದಾಗ ಇದ್ದಕಿದ್ದಂತೆ ಸೈನ್ಯ ಇಲ್ಲಿನ ನಂದಿಕೇಶ್ವರನ ಪ್ರಭಾವದಿಂದ ನಿಂತುಬಿಟ್ಟಿತೆಂದೂ ಮುಂದೆ ಹೋಗಬೇಕಾದರೆ ಮರದ ಸೈನ್ಯಾಕೃತಿಗಳನ್ನು ಕೆತ್ತಿಸಿ ನಿಲ್ಲಿಸಬೇಕಾಯಿತೆಂದೂ ಒಂದು ದಂತಕಥೆ ಇದೆ. ಇದಕ್ಕೆ ತಕ್ಕಂತೆ ಇಲ್ಲಿರುವ ಊರುಗಳಲ್ಲಿ ಹಲವು ಮಾನವಾಕೃತಿಯ ಸೈನಿಕರಂತಿವೆ. ಕೆಲವು ಬೂತಗಣಗಳಂತೆಯೂ ಇವೆ. (ವಿ.ಬಿ.ಎಚ್.)

**ಮೆಣಸು:** ಕರ್ನಾಟಕದ ಸಂಬಾರ ಬೆಳೆಗಳಲ್ಲಿ ಒಂದು. ಪಶ್ಚಿಮ ಘಟ್ಟಗಳ ತಪ್ಪಲಿನಲ್ಲೇ ಇದರ ಸಾಗುವಳಿ ಹೆಚ್ಚು. ಮೆಣಸನ್ನು ತೋಟದ ಬೆಳೆಯಾಗಿಯೂ ಮನೆಗಳ ಹಿತ್ತಲ ಬೆಳೆಯಾಗಿಯೂ ಬೆಳೆಸಲಾಗುತ್ತಿದೆ. ಮೆಣಸಿಗಾಗಿಯೇ ತೋಟಗಳು ಇದ್ದರೂ ಕಾಫಿ, ಏಲಕ್ಕಿ ತೋಟಗಳ ಮಧ್ಯೆ ಮಿಶ್ರಬೆಳೆಯಾಗಿ ಬೆಳೆಸುವುದೇ ಹೆಚ್ಚು. ಮೆಣಸಿನ ಬಳ್ಳಿಯನ್ನು ಮರಗಳಿಗೆ ಹಬ್ಬಿಸುವುದುಂಟು. ತೋಟಗಳಲ್ಲಿ ಬಿದಿರು, ಸಿಮೆಂಟ್ ಕಂಬಗಳನ್ನು ನೆಟ್ಟು ಅಥವಾ ಹಾಲಿವಾಣ ಎಂಬ ಕುಬ್ಜ ಮರವನ್ನು ಬೆಳೆಸಿ ಮೆಣಸಿನ ಬಳ್ಳಿಯನ್ನು ಹಬ್ಬಿಸಲಾಗುತ್ತದೆ. ದೊಡ್ಡ ಮರಗಳಿಗೂ ಇದನ್ನು ಹಬ್ಬಿಸಬಹುದು. ಬೀಜದಿಂದ ಸಸಿಮಾಡಿ ಸಸ್ಯಾಭಿವೃದ್ಧಿ ಮಾಡಬಹುದು. ಆದರೆ ಈ ಕ್ರಮದಿಂದ ಬಳ್ಳಿಯ ಗುಣಗಳು ವ್ಯತ್ಯಾಸವಾಗುತ್ತದಲ್ಲದೆ ಫಲ ಬರುವುದು ನಿಧಾನ. ಆದ್ದರಿಂದ ಬಲಿತ ಉತ್ತಮ ಗಿಡದ ಬುಡದ ಬಳಿಯ ರೆಂಬೆಗಳನ್ನು ಕತ್ತರಿಸಿ ಮಣ್ಣು ತುಂಬಿದ ಬುಟ್ಟಿಗಳಲ್ಲಿ ನೆಟ್ಟು, ನೀರೆರೆದು ತಳಿಯೆಬ್ಬಿಸಲಾಗು ತ್ತಿದೆ. ಇದಕ್ಕೆ ಫೆಬ್ರವರಿ–ಮಾರ್ಚ್ ಉತ್ತಮ ಕಾಲ. ಕೆಲವು ತಿಂಗಳುಗಳಲ್ಲೇ ಕಡ್ಡಿಗಳು ಚೆನ್ನಾಗಿ ಬೇರು ಬಿಟ್ಟು ಸಸಿಗಳು ಸಿದ್ಧವಾಗುತ್ತವೆ. ಜೂನ್ ಹೊತ್ತಿಗೆ ಅವನ್ನು ಆಯ್ದ ಭೂಮಿಯಲ್ಲಿ ನಾಟಿ ಮಾಡಬಹುದು.

ಕರ್ನಾಟಕದಲ್ಲಿ (ಹಾಗೂ ಕೇರಳ) ಬಹು ಕಾಲದಿಂದ ಮೆಣಸನ್ನು ಬೆಳೆಸಲಾಗುತ್ತಿದೆ. ರೋಮನ್ನರು ಈ ಸಂಬಾರ ವಸ್ತುಗಳಿಗಾಗಿ ಕ್ರಿ.ಪೂ.ದ ಆರಂಭದಲ್ಲಿ ಇಲ್ಲಿಗೆ ಬಂದು ವ್ಯಾಪಾರ ನಡೆಸುತ್ತಿದ್ದುದಕ್ಕೆ ದಾಖಲೆಗಳಿವೆ. ಮೆಣಸಿನಲ್ಲಿ ಕೆಲವು ವಿಶಿಷ್ಟ ಬಗೆಗಳುಂಟು. ಬಾಲಂಕೊಟ್ಟ, ಕುದುರೆವಾಲಿ, ಕರಿಯುಂಡ, ಮಲ್ಲಿಗೆ ಸರ, ಕರಿವಳ್ಳಿ ಮುಂತಾದವು ಮುಖ್ಯ ಬಗೆಗಳೆನಿಸಿವೆ. ಈಚೆಗೆ ಉತ್ತಮ ಇಳುವರಿ ಕೊಡುವ ಮತ್ತು ರೋಗಗಳನ್ನು ನಿಗ್ರಹಿಸುವ ಸಾಮರ್ಥ್ಯವುಳ್ಳ ಪಣ್ಣಿಯೂರು–1 ಎಂಬ ಒಂದು ಮಿಶ್ರತಳಿಯನ್ನು ಕೇರಳದಲ್ಲಿ ಮೆಣಸು ಸಂಶೋಧನ ಕೇಂದ್ರ ಅಭಿವೃದ್ಧಿಪಡಿಸಿದೆ. ಈ ವಿವಿಧ ಬಗೆಗಳಲ್ಲಿ ಮೆಣಸಿನ ಕಾಳಿನ ಗೊಂಚಲುಗಳ ಉದ್ದ, ಕಾಳಿನ ಗಾತ್ರ, ಬಣ್ಣ, ಇಳುವರಿ ಮುಂತಾದುವುಗಳಲ್ಲಿ ವ್ಯತ್ಯಾಸವುಂಟು.

ಮೆಣಸಿನ ಬಳ್ಳಿ ಸಮುದ್ರಮಟ್ಟದಿಂದ ಹಿಡಿದು 1,000 ಮೀಟರ್ ಎತ್ತರದವರೆಗಿನ ಪ್ರದೇಶಗಳಲ್ಲಿ ಬೆಳೆಯಬಲ್ಲುದು. ವರ್ಷಕ್ಕೆ ಸು. 250

ಸೆಮೀ ಮಳೆ ಅವಶ್ಯಕ. ಫಲವತ್ತಾದ ಮಣ್ಣು, ಇಳಿಜಾರು ಪ್ರದೇಶ ಮತ್ತು ಉಷ್ಣತೆ, ಆರ್ದ್ರತೆ ಇರುವ ಹವಾಗುಣ ಬೇಕು. ಬಲಿತ ಗಿಡಗಳಿಗೆ ವರ್ಷಕ್ಕೆ 100 ಗ್ರಾಂ ಮ್ಯೂರಿಯೇಟ್ ಆಫ್ ಪೊಟ್ಯಾಷ್, 1 ಕೆಜಿ ಸೂಪರ್ ಫಾಸ್ಫೇಟ್, 9 ಕೆಜಿ ಕಾಂಪೋಸ್ಟ್ ಗೊಬ್ಬರ ಹಾಕಲಾಗುತ್ತದೆ. ಎಳೆಯ ಗಿಡಗಳಿಗೆ ನೆರಳು ಆವಶ್ಯಕ. ಬೆಳೆದ ಮೇಲೆ ಆಗಾಗ ಸವರಿ ತೀರ ಎತ್ತರಕ್ಕೆ ಬೆಳೆಯದಂತೆಯೂ ಚೆನ್ನಾಗಿ ಕವಲೊಡೆದು ಹರಡಿಕೊಳ್ಳುವಂತೆಯೂ ಮಾಡಲಾಗುತ್ತದೆ. ಕೀಟಗಳಿಂದಲೂ ರೋಗಾಣುಗಳಿಂದಲೂ ಗಿಡವನ್ನು ರಕ್ಷಿಸಲು ಆಗಾಗ ಡಿ.ಡಿ.ಟಿ., ಸೆರಸಾನ್, ಬೋರ್ಡೊ ಮಿಶ್ರಣ ಮುಂತಾದವನ್ನು ಸಿಂಪಡಿಸಬೇಕು.

ಮೆಣಸಿನ ಬಳ್ಳಿಗಳು ಹೂ ಬಿಡತೊಡಗಿದಾಗ ತುಂತುರು ಮಳೆ ಆವಶ್ಯಕ. ಇಲ್ಲದಿದ್ದರೆ ಬೆಳೆ ಹಾಳಾಗುತ್ತದೆ. ಹೂ ಬಿಟ್ಟು, ಹೀಚು ಬಂದು ಕಾಯಿ ಬಲಿಯಲು 6–8 ತಿಂಗಳಾಗುತ್ತವೆ. ಮೆಣಸಿನ ಕಾಳುಗಳು ದ್ರಾಕ್ಷಿಯ ಗೊಂಚಲುಗಳಂತೆ ರೆಂಬೆಗಳಲ್ಲಿ ತೂಗಾಡುತ್ತವೆ. ಒಂದೊಂದು ಗೊಂಚಲಿನಲ್ಲಿ 2–3 ಕಾಳುಗಳು ಕೆಂಪುಬಣ್ಣಕ್ಕೆ ತಿರುಗುತ್ತಲೇ ಕೊಯ್ಲು ನವೆಂಬರ್‌ನಿಂದ ಮಾರ್ಚ್ ವರೆಗೂ ಸಾಗುತ್ತದೆ. ಕಿತ್ತು ತಂದ ಗೊಂಚಲುಗಳನ್ನು ಒಂದುದಿನ ರಾಶಿಮಾಡಿ ಹಾಗೆಯೇ ಬಿಟ್ಟು ಕಾಯಿಗಳು ತೊಟ್ಟಿನಿಂದ ಸುಲಭವಾಗಿ ಬಿಟ್ಟುಕೊಳ್ಳುವಂತೆ ಮಾಡಲಾಗುತ್ತದೆ. ಅನಂತರ ಕೈಯಿಂದ ಅಥವಾ ಕಾಲಿನಿಂದ ಉಜ್ಜಿ ಕಾಳುಗಳನ್ನು ತೊಟ್ಟಿನಿಂದ ಬೇರ್ಪಡಿಸಲಾಗುತ್ತದೆ. ತರುವಾಯ ಕಾಳುಗಳನ್ನು ಗೋಣಿಚೀಲದ ಮೇಲೆ ಅಥವಾ ಸಿಮೆಂಟ್ ನೆಲದ ಮೇಲೆ ಹರಡಿ ಬಿಸಿಲಿನಲ್ಲಿ 7–8 ದಿನ ಒಣಗಿಸಲಾಗುತ್ತದೆ. ಹಸುರುಬಣ್ಣದ ಕಾಯಿ ಒಣಗಿದಂತೆ ಕಪ್ಪುಬಣ್ಣಕ್ಕೆ ತಿರುಗುತ್ತದೆ. ಇದಕ್ಕೆ ಕಾಳಿನ ಸಿಪ್ಪೆಯಲ್ಲಿರುವ ಕೆಲವು ಕಿಣ್ವಗಳಿಂದ ಉಂಟಾಗುವ ರಾಸಾಯನಿಕ ಪರಿವರ್ತನೆಗಳೇ ಕಾರಣ.

ಮೆಣಸು ಒಣಗಿದ ಅನಂತರ ಅದರಲ್ಲಿರುವ ಸಿಪ್ಪೆ, ತೊಟ್ಟು, ಕಸ ಮುಂತಾದವನ್ನು ತೆಗೆದು ಶುದ್ಧಿ ಮಾಡಲಾಗುತ್ತದೆ. 100 ಕೆಜಿ ಹಸಿಮೆಣಸಿನಿಂದ 33 ಕೆಜಿ ಒಣಮೆಣಸು ಸಿಗುತ್ತದೆ. ರಫ್ತು ಮಾಡುವಾಗ ಅದನ್ನು ಮತ್ತೆ ಒಣಗಿಸಿ, ಶುದ್ಧಿಮಾಡಿ, ಗಾತ್ರಾನುಸಾರ ವಿಂಗಡಿಸಿ ಚೀಲಗಳಿಗೆ ತುಂಬಿ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ. ಮೆಣಸು ಕಾರವಾಗಿರುವುದಲ್ಲದೆ ಔಷಧೀಯ ಗುಣಗಳನ್ನು ಹೊಂದಿದೆ. ಕೆಲವು ತಿನಿಸುಗಳಿಗೆ ಮೇಲು ರುಚಿಗಾಗಿಯೂ ಇದರ ಪುಡಿಯನ್ನು ಬಳಸುತ್ತಾರೆ.

(ವೈ.ಎಸ್.ಎಲ್.)

**ಮೆರೆಮಿಂಡಯ್ಯ:** 12ನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ವಚನಕಾರ. ಈತ ಬಸವಣ್ಣನವರಿಗಿಂತ ಹಿಂದಿನವನಿರಬೇಕೆಂಬ ಅಭಿಪ್ರಾಯವೂ ಇದೆ. ಇವನ ಹೆಸರಿನಲ್ಲಿ ಇದುವರೆಗೆ 101 ವಚನಗಳು ದೊರೆತಿವೆ. ಐಘಟದೂರ ರಾಮೇಶ್ವರಲಿಂಗ ಎಂಬುದು ಇವನ ವಚನಗಳ ಅಂಕಿತ. ಅಸಿಯಾಗಲಿ, ಕೃಷಿಯಾಗಲಿ, ಮಸಿಯಾಗಲಿ ಮಾಡುವಲ್ಲಿ ಹುಸಿಯಿಲ್ಲದಿರಬೇಕು, ಅದು ಅಸಮಾಕ್ಷನ ಬರವು. ಪಶುಪತಿಯ ಇರವು ಐಘಟದೂರ ರಾಮೇಶ್ವರ ಲಿಂಗವು ತಾನೇ–ಎಂಬ ವಚನದಲ್ಲಿ ಅಸಿಯಿಂದ ಯೋಧರನ್ನೂ ಕೃಷಿಯಿಂದ ಶ್ರಮಜೀವಿಗಳನ್ನೂ ಮಸಿಯಿಂದ ಬುದ್ಧಿಜೀವಿಗಳನ್ನೂ ಸಂಬೋಧಿಸಿ–ಈ ಮೂರು ಕಾಯಕದಲ್ಲಿ ಯಾವುದನ್ನೇ ಅವಲಂಬಿಸಿ, ಆದರೆ ಅಲ್ಲಿ ಎಲ್ಲಿಯೂ ಹುಸಿಯಿರದಿರಲಿ ಎಂದು ತಿಳಿಸಿದ್ದಾನೆ. ಇಂಥ ಹಲವು ಸ್ಫಟಿಕ ಶುದ್ಧ ಮಾತುಗಳು ಇವನ ವಚನಗಳಲ್ಲಿ ಹೊರಹೊಮ್ಮಿವೆ.

ಮೆರೆಮಿಂಡಯ್ಯ ಎಂಬ ಹೆಸರಿನ ಇನ್ನೊಬ್ಬ ವ್ಯಕ್ತಿಯಿದ್ದು ಈತ ಅರುವತ್ತು ಮೂವರು ಪುರಾತನರಲ್ಲಿ ಒಬ್ಬನಾಗಿದ್ದು 8ನೆಯ ಶತಮಾನದಲ್ಲಿ ಜೀವಿಸುತ್ತಿದ್ದಂತೆ ತಿಳಿಯುತ್ತದೆ. ಇವನನ್ನು ಕುರಿತು ಹರಿಹರ ಒಂದು ರಗಳೆಯನ್ನೂ ಬರೆದಿದ್ದಾನೆ. ಇವನೂ ವಚನಕಾರ ಮೆರೆಮಿಂಡ ಯ್ಯನೂ ಒಬ್ಬನೇ ಎಂದೂ ಇಬ್ಬರೂ ಭಿನ್ನವ್ಯಕ್ತಿಗಳೆಂದೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ.

(ಜಿ.ಎಸ್.ಪಿ.ಎಂ.)

**ಮೇಕೆದಾಟು:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ದಟ್ಟವಾದ ಅರಣ್ಯದ ನಡುವೆ ಕಾವೇರಿ ನದೀಪಾತ್ರದಲ್ಲಿ ಇರುವ ಒಂದು ಪ್ರೇಕ್ಷಣೀಯ ಸ್ಥಳ. ಬೆಂಗಳೂರಿನ ದಕ್ಷಿಣಕ್ಕೆ ಸಾತನೂರು ಮಾರ್ಗವಾಗಿ 113 ಕಿಮೀ ದೂರದಲ್ಲೂ ಕನಕಪುರದಿಂದ ಸಾತನೂರು, ಆಲಹಳ್ಳಿ, ಉಯ್ಯಂಬಳ್ಳಿಗಳ ಮಾರ್ಗವಾಗಿ ದಕ್ಷಿಣದಲ್ಲಿ ಸು. 40 ಕಿಮೀ ದೂರದಲ್ಲೂ ಇರುವ ಈ ಸ್ಥಳ ಹಿಂದಿನಿಂದಲೂ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಕನಕಪುರ ಮಾರ್ಗವಾಗಿ ಅರ್ಕಾವತಿ ನದಿ ಸು. 32 ಕಿಮೀ ಮೈದಾನ ಪ್ರದೇಶದಲ್ಲಿ ಹರಿದು ಕಡೆಗೆ ತಾಲ್ಲೂಕಿನ ದಕ್ಷಿಣದ ಅರಣ್ಯ ಪ್ರದೇಶವನ್ನು ಹೊಕ್ಕು ಕಾವೇರಿಯನ್ನು ಸಂಗಮ ಎನ್ನುವೆಡೆಯಲ್ಲಿ ಸೇರುತ್ತದೆ. ಅಲ್ಲಿ ಸಂಗಮೇಶ್ವರನ ದೇವಾಲಯ ಮತ್ತು ಒಂದು ಪ್ರವಾಸಿ ಮಂದಿರವಿದೆ. ಇಲ್ಲಿಂದ ಅರ್ಕಾವತಿಯನ್ನು ದಾಟಿ ಕಾವೇರಿಯ ಎಡದಂಡೆಯ ಮೇಲೆ ಸು. 5 ಕಿಮೀ ದೂರದಲ್ಲಿರುವ ಮೇಕೆದಾಟು ಸಿಕ್ಕುತ್ತದೆ. ಪ್ರವಾಸಿಗರಿಗೆ



ಮೇಕೆದಾಟಿನ ಬಳಿ ಕಾವೇರಿಯ ಹರಿವು

ಮುಖ್ಯ ಆಕರ್ಷಣೀಯ ಕೇಂದ್ರ ಮೇಕೆದಾಟು ಎಂದು ಪ್ರಸಿದ್ಧವಾಗಿದ್ದರೂ ಆ ಆಕರ್ಷಣೀಯ ಪೂರ್ವಸಿದ್ಧತೆ ಸಂಗಮದಿಂದಲೇ ಆರಂಭವಾಗುತ್ತದೆ. ಅರ್ಕಾವತಿಯೊಡಗೂಡಿದ ಕಾವೇರಿ ದಟ್ಟವಾದ ಅರಣ್ಯದ ನಡುವೆ ಮುಂದೆ ಪ್ರವಹಿಸಿದಂತೆ ಅದರ ಪಾತ್ರ ಕ್ರಮಕ್ರಮವಾಗಿ ಕಿರಿದಾಗುತ್ತ ಬರುತ್ತದೆ. ಅಲ್ಲಿಂದ ಇಳಿಜಾರು ಹೆಚ್ಚುತ್ತ ಹೋಗುವುದರಿಂದ ನೀರಿನ ಪ್ರವಾಹ ಭೋರ್ಗರೆಯುತ್ತ ವನಾಂತರ ಪ್ರದೇಶವನ್ನೆಲ್ಲ ಗಂಭೀರ ಸ್ವರದಿಂದ ತುಂಬಿರುತ್ತದೆ. ಶತಶತಮಾನಗಳ ಪ್ರವಾಹದ ಹೊಡೆತಕ್ಕೆ ಸಿಕ್ಕಿದ ಇಕ್ಕೆಲಗಳ ಬೆಟ್ಟಗಳ ಬಂಡೆಗಳು ಚಿತ್ರವಿಚಿತ್ರವಾಗಿ ಕೊರೆದು ಹೋಗಿ ನಿಸರ್ಗ ನಿರ್ಮಿಸಿರುವ ಮಹೋನ್ನತ ಶಿಲ್ಪಕಲಾಕೃತಿಗಳಂತೆ ಕಂಗೊಳಿಸುತ್ತಿರುತ್ತವೆ. ಪಾತಾಳದಲ್ಲಿ ಭೋರ್ಗರೆಯುತ್ತ ಇಳಿದೋಡುತ್ತಿರುವ ನದಿಯ ಎತ್ತರವಾದ ಎರಡು ಪಾರ್ಶ್ವಗಳಲ್ಲೂ ಮರಗಳ ಸಾಲಿನ ಹಸುರಿನ ಸಾಂದ್ರತೆ ಪ್ರಪಾತದ ಪ್ರವಾಹದ ಮೇಲೆ ಕತ್ತಲುಗರೆಯುತ್ತ ಅದರ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಇಂಥ ಗಂಭೀರತೆಯ ನಡುವೆ ಮುಂದೆ ಪ್ರವಹಿಸಿದಂತೆ ನದಿಯ ಪಾತ್ರ ತೀರ ಇಕ್ಕಟ್ಟಾಗುತ್ತ ಬಂದು ಕೊನೆಗೆ ಮೇಕೆದಾಟನ್ನು ಸೇರುತ್ತದೆ. ಇಲ್ಲಿ ನದಿಯ ಪಾತ್ರ

ಕೆಲವೇ ಅಡಿಗಳಷ್ಟು ಅಗಲವಾಗಿದ್ದು ಇಡೀ ಜಲರಾಶಿಯೆಲ್ಲ ಆ ಅಂತರದೊಳಗೆ ಪ್ರವಹಿಸಿ ನದಿಯ ಹಿಂದಿನ ದೃಶ್ಯದ ಗಂಭೀರತೆ, ಪರಾಕಾಷ್ಠತೆಯನ್ನು ಮುಟ್ಟಿದಂತೆ ತೋರುತ್ತದೆ. ಇಲ್ಲಿ ನದಿಯ ಪಾತ್ರ ಮೇಕೆ ಸಹ ದಾಟುವಷ್ಟು ಇದೆ ಎಂದು ಉತ್ಪ್ರೇಕ್ಷೆಯಿಂದ ಹೇಳುವಷ್ಟು ಕಿರಿದಾಗಿದೆ. ಹಿಂದೆ ಇಲ್ಲಿ ಒಂದು ಮೇಕೆ ಹಾಗೆ ದಾಟಿದ್ದರಿಂದ ಮೇಕೆದಾಟು ಎಂಬ ಹೆಸರು ಬಂದಿತೆಂದು ಹೇಳುವುದೂ ಉಂಟು. ನದಿಯ ಎಡದಡದಲ್ಲಿ ದುಮ್ಮಿಕ್ಕುವ ನೀರಿಗೆ ಸೋಕುವಂತೆ ಪಕ್ಕದಲ್ಲಿ ಅಗಲವಾದ ಚಪ್ಪಟೆ ಬಂಡೆಕಲ್ಲೊಂದಿದೆ. ಅದನ್ನು ಟೇಬಲ್‌ರಾಕ್ ಎನ್ನುವರು. ಪ್ರವಾಸಿಗರು ಅದರ ಮೇಲೆ ನಿಂತು ದೃಶ್ಯದ ಸೊಬಗನ್ನು ವೀಕ್ಷಿಸುವುದು ವಾಡಿಕೆ. ಎಚ್ಚರ ತಪ್ಪಿ ಇಲ್ಲಿ ಈಜಲು ಹೋಗುವವರು ದುರಂತ ಮರಣ ಅಪ್ಪುವ ಪ್ರಸಂಗಗಳು ನಡೆಯುತ್ತಿರುತ್ತವೆ. ನದಿ ಮುಂದಕ್ಕೆ ಪ್ರವಹಿಸಿದಂತೆ ಅದರ ಪಾತ್ರ ಮತ್ತೆ ವಿಸ್ತರಿಸುತ್ತ ಹೋಗುತ್ತದೆ. ಜಲರಾಶಿ ಹರಡಿಕೊಂಡು ಹೆಚ್ಚು ಇಳಿಜಾರಿಲ್ಲದ ಬಯಲಿನಲ್ಲಿ ನಿಧಾನವಾಗಿ ಮುಂದೆ ಸಾಗುತ್ತದೆ. ಟೇಬಲ್‌ರಾಕಿನ ಮೇಲೆ ನಿಂತು ನೋಡುವಾಗ ನದಿಯ ಹಿಂದಿನ ಗಭೀರತೆಯ ರುದ್ರರಮಣೀಯತೆಯನ್ನೂ ಅದರ ಮುಂದಿನ ಮಧುರ ಮಂಜುಳ ಮನೋಹರತೆಯನ್ನೂ ಏಕಕಾಲದಲ್ಲಿ ನೋಡಿ ಆನಂದಿಸಬಹುದು. ಮುಂದೆ ನದಿ ಕೊಳ್ಳೇಗಾಲ ತಾಲ್ಲೂಕಿನ ಪೂರ್ವ ಮತ್ತು ದಕ್ಷಿಣದ ಗಡಿಗಳನ್ನೂ ಆವರಿಸಿದಂತೆ ಹರಿದು ತಮಿಳುನಾಡನ್ನು ಸೇರುತ್ತದೆ. (ಎಸ್.ವಿ.ಎಸ್.)

**ಮೇಲುಕೋಟೆ:** ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನಲ್ಲಿ ಕಸಬೆಯಿಂದ ಉತ್ತರಕ್ಕೆ 29 ಕಿಮೀ ದೂರದಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ, ಸಮುದ್ರಮಟ್ಟದಿಂದ 1,013 ಮೀ ಎತ್ತರದಲ್ಲಿ ಗಿರಿಪಂಕ್ತಿಯೊಂದರ ಮೇಲೆ ಮಟ್ಟಸ ಪ್ರದೇಶದಲ್ಲಿ ಸುಂದರ ಪರಿವೇಶದಲ್ಲಿದೆ. ಇಲ್ಲಿಗೆ ಮಂಡ್ಯ (36 ಕಿಮೀ), ಮೈಸೂರು (50 ಕಿಮೀ), ಬೆಂಗಳೂರು (130 ಕಿಮೀ) ಮೊದಲಾದ ಸ್ಥಳಗಳಿಂದ ಉತ್ತಮ ರಸ್ತೆ ಸಂಪರ್ಕವಿದೆ. ಪುರಸಭಾಡಳಿತಕ್ಕೆ ಒಳಪಟ್ಟಿದೆ.

ದಕ್ಷಿಣ ಭಾರತದಲ್ಲಿ ಶ್ರೀ ವೈಷ್ಣವ ಕ್ಷೇತ್ರಗಳೆಂದು ಖ್ಯಾತವಾಗಿರುವ ನಾಲ್ಕು ಕ್ಷೇತ್ರಗಳಲ್ಲಿ ಇದೂ ಒಂದು (ಇತರ ಮೂರು–ಕಂಚಿ, ತಿರುಪತಿ ಮತ್ತು ಶ್ರೀರಂಗಂ). ಮೇಲುಕೋಟೆಗೆ ನಾರಾಯಣಾದ್ರಿ, ವೇದಾದ್ರಿ, ಯಾದವಾದ್ರಿ, ಯತಿಶೈಲ ಮುಂತಾದ ಹೆಸರುಗಳುಂಟು. ಕೃತಯುಗದಲ್ಲಿ ಸನತ್ಕುಮಾರ ಇಲ್ಲಿಗೆ ಬಂದು ತಿರುನಾರಾಯಣ ದೇವರನ್ನು ಪ್ರತಿಷ್ಠಾಪಿಸಿದುದರಿಂದ ನಾರಾಯಣಾದ್ರಿಯೆಂದೂ ತ್ರೇತಾಯುಗದಲ್ಲಿ ದತ್ತಾತ್ರೇಯ ಈ ಪರ್ವತದಲ್ಲಿ ವೇದಗಳನ್ನು ಪ್ರವಚನ ಮಾಡಿದುದರಿಂದ ವೇದಾದ್ರಿಯೆಂದೂ ದ್ವಾಪರದಲ್ಲಿ ಕೃಷ್ಣಾದಿಗಳಿಂದ ಪೂಜಿಸಲ್ಪಟ್ಟಿದ್ದರಿಂದ ಯಾದವಾದ್ರಿಯೆಂದೂ ಕಲಿಯುಗದಲ್ಲಿ ರಾಮಾನುಜರು ಬಂದು ಈ ಸ್ಥಳವನ್ನು ಜೀರ್ಣೋದ್ಧಾರ ಮಾಡಿದುದರಿಂದ ಯತಿಶೈಲವೆಂದೂ ಹೆಸರಿರುವುದಾಗಿ ತಿಳಿದು ಬರುತ್ತದೆ. ಶಾಸನಗಳಲ್ಲಿ ವೈಕುಂಠವರ್ಧನಕ್ಷೇತ್ರ, ದಕ್ಷಿಣ ಬದರಿಕಾಶ್ರಮ, ಯಾದವಗಿರಿ, ತಿರುನಾರಾಯಣಪುರ, ಮೇಲುಕೋಟೆ ಎಂಬ ಹೆಸರುಗಳ ಉಲ್ಲೇಖವಿದೆ. 1189ರ ಬಲ್ಲಾಳನ ಕಾಲದ ಒಂದು ಶಾಸನ ಮೇಲುಕೋಟೆಯ ವಿಷಯವಾಗಿ ಪ್ರಸ್ತಾಪಿಸುತ್ತದೆ. ಈ ಆಧಾರದಿಂದ ಹೊಯ್ಸಳರ ಕಾಲದಲ್ಲೇ ಕೋಟೆಯು ಇದ್ದಿತೆಂದು ಹೇಳಬಹುದು.

ಕರ್ನಾಟಕ ದೇಶದ ಮತ ಚರಿತ್ರೆಯಲ್ಲಿ ಮೇಲುಕೋಟೆಯ ಪಾತ್ರ ಮಹತ್ತರವಾದುದು. ತಮಿಳುನಾಡಿನಲ್ಲಿ ಶ್ರೀವೈಷ್ಣವ ಸಮುದಾಯಕ್ಕೆ ಚೋಳರ ಕಾಲದಲ್ಲಿ ಒದಗಿದ ಸಂದಿಗ್ಧ ಪರಿಸ್ಥಿತಿಯಲ್ಲಿ ಕರ್ನಾಟಕ ಅದಕ್ಕೆ ನೆಲೆಯಾಗಿ, ಮೇಲುಕೋಟೆ ಶ್ರೀವೈಷ್ಣವ ಪಂಥದ ಮುಖ್ಯ ಕೇಂದ್ರವಾಯಿತು. 12 ವರ್ಷಗಳ ಕಾಲ ರಾಮಾನುಜರು ಮೇಲುಕೋಟೆಯಲ್ಲಿ ಇದ್ದರೆಂದು ಗುರುಪರಂಪರಾಪ್ರಭಾವ ಎಂಬ ಗ್ರಂಥ ತಿಳಿಸುತ್ತದೆ. ಹೊಯ್ಸಳರ ಕಾಲದಿಂದ ಪ್ರಸಿದ್ಧಿಗೆ ಬಂದ ಮೇಲುಕೋಟೆ ಇದುವರೆಗೂ ಅದರ ಕೀರ್ತಿಯನ್ನೂ ಪಾವಿತ್ರ್ಯವನ್ನೂ ಕಾಪಾಡಿಕೊಂಡು ಬಂದಿದೆ.

ಚೆಲುವನಾರಾಯಣನ ದೇವಸ್ಥಾನ ಮೇಲುಕೋಟೆಯ ಮುಖ್ಯ ದೇವಾಲಯ. ಈ ದೇವಸ್ಥಾನ ಸು. 280 ಅಡಿ ಚಚ್ಚೌಕಾಕಾರದ ವಿಸ್ತಾರವಾದ ಕಟ್ಟಡ. ಸುತ್ತಲೂ ಕೈಸಾಲೆ, ಮುಂದೆ ಮಹಾದ್ವಾರ ಮತ್ತು ಗೋಪುರ–ಇವುಗಳನ್ನೊಳಗೊಂಡ ಕಲ್ಲಿನ ಪ್ರಾಕಾರ, ಅದಕ್ಕೆ ಸೇರಿದಂತೆ ಒಳಗೂ ಕೈಸಾಲೆ, ಚಿಕ್ಕ ಗುಡಿಗಳು, ಯಜ್ಞಶಾಲೆ, ಪಾಕಶಾಲೆ, ಮಂಟಪಗಳು



ಚೆಲುವನಾರಾಯಣಸ್ವಾಮಿ ದೇವಾಲಯ

ಮತ್ತು ಪಾತಾಳಾಂಕಣ ಇವೆ. ಮೂಲ ಗುಡಿಯಲ್ಲಿ ಗರ್ಭಗುಡಿ ಮತ್ತು ಅದರ ಸುತ್ತಲೂ ಸುರಂಗದ ಕತ್ತಲೆ ಪ್ರದಕ್ಷಿಣೆ ಇದೆ (ಇದು ವರ್ಷಕ್ಕೊಂದು ದಿನ ವೈರಮುಡಿ ಉತ್ಸವದ ರಾತ್ರಿ ತೆರೆಯಲ್ಪಡುವುದು). ಗರ್ಭಗುಡಿಯ ಮುಂದಣ ನವರಂಗಕ್ಕೆ ಮೂರು ಕಡೆಯಿಂದ ಪ್ರವೇಶವುಂಟು. ಈ ದೇವಸ್ಥಾನದ ವೈಶಿಷ್ಟ್ಯವೆಂದರೆ ಉತ್ಸವವಿಗ್ರಹವಾದ ಶೆಲ್ವಪಿಳ್ಳೆಯನ್ನು ಮೂಲ ವಿಗ್ರಹದಿಂದ ಬೇರ್ಪಡಿಸಿ ನವರಂಗದಲ್ಲಿ ಒಂದು ಮಂಟಪದಲ್ಲಿ ಇಟ್ಟಿರುವುದು. ಪಾತಾಳಾಂಕಣದಲ್ಲಿರುವ ಅನೇಕ ಸನ್ನಿಧಿಗಳಲ್ಲಿ ರಾಮಾನುಜಾಚಾರ್ಯರ ಸನ್ನಿಧಿ, ಯದುಗಿರಿ ಅಮ್ಮನವರ ಸನ್ನಿಧಿ ಮುಖ್ಯವಾದುದು. ಈ ರಾಮಾನುಜರ ವಿಗ್ರಹವು ರಾಮಾನುಜರು ಮೇಲುಕೋಟೆಯನ್ನು ಬಿಟ್ಟು ಶ್ರೀರಂಗಕ್ಕೆ ಹೊರಟಾಗ ಅವರ ಜ್ಞಾಪಕಾರ್ಥವಾಗಿ ಶಿಷ್ಯರುಗಳಿಂದ ಪ್ರತಿಷ್ಠಾಪಿಸಲ್ಪಟ್ಟಿತೆಂದು ಪ್ರತೀತಿಯಿದೆ. ಈ ದೇವಾಲಯದಲ್ಲಿ ಪಾಂಚರಾತ್ರಾಗಮ ರೀತ್ಯಾ ಪೂಜೆ ನಡೆಯುವುದು. ದೇವರ ಕೈಂಕರ್ಯ ಮತ್ತು ದೇವಸ್ಥಾನದ ಮೇಲ್ವಿಚಾರಣೆ ನಡೆಸುವುದಕ್ಕಾಗಿ ರಾಮಾನುಜರು ಹಾಕಿಕೊಟ್ಟು ಹೋದ ನಿಯಮಗಳು ಇಂದಿಗೂ ಇಲ್ಲಿ ಜಾರಿಯಲ್ಲಿವೆ. ಇವುಗಳನ್ನು ಪರಿಪಾಲಿಸುವುದಕ್ಕಾಗಿ ರಾಮಾನುಜರು ಮಾಡಿದ ಐಂಬತ್ತಿರುವಲ್ (ಅಧಿಕಾರಿಗಳು) ಅವರ ಪರಂಪರೆಯವರು ಇಂದಿಗೂ ಅವುಗಳನ್ನು ನಡೆಸುತ್ತಿದ್ದಾರೆ. ಹುತ್ತದಲ್ಲಿ ಹುದುಗಿದ್ದ ನಾರಾಯಣದೇವರನ್ನು ತೆಗೆಯಲು ಮತ್ತು ದೇವಸ್ಥಾನವನ್ನು ಪುನರ್ನಿರ್ಮಿಸಲು ರಾಮಾನುಜರಿಗೆ ಹೊಯ್ಸಳ ವಿಷ್ಣುವರ್ಧನ ಸಹಾಯ ಮಾಡಿದನೆಂದು ಹೇಳಲಾಗುತ್ತದೆ. 1110ರಲ್ಲಿ ಈ ನಾರಾಯಣನ ಪ್ರತಿಷ್ಠಾಪನೆ ಆಯಿತೆಂದು ಹೇಳಿಕೆ. ಒಂದನೆಯ ನರಸಿಂಹನ ಕಾಲದಲ್ಲಿ (1155) ತೊಣ್ಣೂರಿನ ಮಹಾಜನಗಳು ತಿರುನಾರಾಯಣ ದೇವರಿಗೆ ಮಾನ್ಯ ನೀಡಿರುವುದಾಗಿ ಒಂದು ಶಾಸನ ತಿಳಿಸುತ್ತದೆ. ಮೂರನೆಯ ಬಲ್ಲಾಳನ ಸಾಮಂತರಾಜ ಪರಮವೈಷ್ಣವನಾದ ಮಾಧವ ದಣ್ಣಾಯಕ

ಅನೇಕ ರೀತಿಯಲ್ಲಿ ದೇವಸ್ಥಾನದ ಏಳಿಗೆಗೆ ಕಾರಣನಾಗಿದ್ದನೆಂದು ಶಾಸನಗಳಿಂದ ತಿಳಿಯುತ್ತದೆ.

14ನೆಯ ಶತಮಾನದಲ್ಲಿ ಮೇಲುಕೋಟೆ ಮಹಮ್ಮದೀಯರ ದಾಳಿಗೆ ಈಡಾಗಿತ್ತು. 1460ರಲ್ಲಿ ವಿಜಯನಗರದ ಅರಸು ಮಲ್ಲಿಕಾರ್ಜುನನ ಮಂತ್ರಿಯಾದ ತಿಮ್ಮಣ್ಣ ದಂಡನಾಯಕ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ. ಚಕ್ರತ್ತಾಳ್ವಾರ್ ಸನ್ನಿಧಿ ಮತ್ತು ಶ್ರೀ ಯದುಗಿರಿ ಅಮ್ಮನವರ ಸನ್ನಿದಿಗಳ ಮುಂಭಾಗದಲ್ಲಿ ಇರುವ ಮಂಟಪಗಳು ತಿಮ್ಮಣ್ಣ ದಂಡನಾಯಕ ನಿಂದ ಕಟ್ಟಲ್ಪಟ್ಟವೆಂದು ಅಲ್ಲಿಯೇ ಕಂಬದ ಮೇಲಿರುವ ಒಂದು ಶಾಸನ ಹೇಳುತ್ತದೆ. ಇಲ್ಲಿರುವ ಒಂದೊಂದು ಕಂಬವೂ ಒಂದೊಂದು ಕಥೆಯನ್ನು ಹೇಳುತ್ತಿವೆಯೋ ಎಂಬಂತೆ ರಾಮಾಯಣ, ಭಾಗವತ ಮತ್ತು ಭಾರತ ಕಥೆಗಳು, ಕೃಷ್ಣ ಕಂಸನನ್ನು ಕೊಂದದ್ದು, ವಿಭೀಷಣ ರಾಮನಿಗೆ ನಮಸ್ಕರಿಸುತ್ತಿರುವುದು, ಅರ್ಜುನ ಇಂದ್ರಕೀಲ ಪರ್ವತದಲ್ಲಿ ತಪಸ್ಸನ್ನಾ ಚರಿಸುತ್ತಿರುವುದು ಮುಂತಾದವು ಕಣ್ಣಿಗೆ ಕಟ್ಟುವಂತೆ ಕೆತ್ತಲ್ಪಟ್ಟಿವೆ.



ಬೆಟ್ಟ, ಪುಷ್ಕರಣಿ ಮತ್ತು ಯೋಗಾನರಸಿಂಹ ದೇವಾಲಯ

1771ರಲ್ಲಿ ಮರಾಠರು ಮೇಲುಕೋಟೆಯನ್ನು ಲೂಟಿ ಮಾಡಿದರು. ಅವರು ಗುರುತು ಕೂಡ ಸಿಕ್ಕದ ಹಾಗೆ ಇಲ್ಲಿನ ಅನೇಕ ಧರ್ಮಕೇಂದ್ರ ಗಳನ್ನು ಸುಟ್ಟುಹಾಕಿದ್ದಲ್ಲದೆ, ಸಿಕ್ಕಿದ್ದನ್ನೆಲ್ಲಾ ಕೊಳ್ಳೆಹೊಡೆದು ಇಲ್ಲಿನ ತೇರುಗಳಿಗೂ ಬೆಂಕಿಯಿಟ್ಟು ಅವುಗಳಲ್ಲಿದ್ದ ಕಬ್ಬಿಣದ ಭಾಗವನ್ನು ಸಾಗಿಸಿದರಂತೆ.

ಇಲ್ಲಿನ ಉತ್ಸವ ಮೂರ್ತಿ ಶೆಲ್ವಪಿಳ್ಳೆ (ಸಂಪತ್ಕುಮಾರ) ಬಗ್ಗೆ ಒಂದು ಕಥೆ ಉಂಟು. ಇದು ದೆಹಲಿಯ ಸುಲ್ತಾನನ ಅರಮನೆಯಲ್ಲಿದ್ದು, ಅವನ ಮಗಳಾದ ವರನಂದಿಯು ಅನುಭೋಗಿಸುತ್ತಿದ್ದಳೆಂದೂ ಅದನ್ನು ತಿಳಿದ ರಾಮಾನುಜರು ದೆಹಲಿಗೆ ಹೋಗಿ ವರನಂದಿಯಿಂದ ವಿಗ್ರಹವನ್ನು ತಂದರೆಂದೂ ಈ ಅಗಲಿಕೆಯನ್ನು ತಾಳಲಾರದೆ ವರನಂದಿ ಶೆಲ್ವಪಿಳ್ಳೆ ಯನ್ನು ಹಿಂಬಾಲಿಸಿ ಬಂದು ದೇವರಲ್ಲಿ ಐಕ್ಯಳಾದಳೆಂದು ಹೇಳಲಾಗಿದೆ. ಇದರ ಕುರುಹಾಗಿ ನಾರಾಯಣನ ಪಾದದಡಿಯಲ್ಲಿ ವರನಂದಿಯ ವಿಗ್ರಹ ಇದೆ. ಅಲ್ಲದೆ ಊರ ಹೊರಗೆ ಒಂದು ವರನಂದಿಯ ಗುಡಿಯನ್ನು ನಿರ್ಮಿಸಲಾಗಿದೆ. ಇವಳನ್ನು ಬೀಬಿ ನಾಚ್ಚಿಯಾರ್ ಎಂದೂ ಕರೆಯುತ್ತಾರೆ. ಶ್ರೀರಾಮನು ಬಹಳ ಪ್ರೀತಿಯಿಂದ ಪೂಜಿಸುತ್ತಿದ್ದುದರಿಂದ ಈ ಮೂರ್ತಿಗೆ ರಾಮಪ್ರಿಯ ಎಂಬ ಹೆಸರೂ ಉಂಟು. ಕಾಲಕ್ರಮದಲ್ಲಿ ಈ ಘಟನೆ ವರನಂದಿ ಕಲ್ಯಾಣ ಎಂಬ ಕನ್ನಡ ಕಾವ್ಯವೊಂದರಲ್ಲಿ ಪ್ರಖ್ಯಾತವಾಗಿದೆ. ರಾಮಾನುಜರು ದೆಹಲಿಯಿಂದ ಉತ್ಸವ ವಿಗ್ರಹವನ್ನು ತಂದ ದಿನ ವಿಕೃತಿ ಸಂವತ್ಸರ ಆಶ್ವಯುಜ ಶುದ್ಧ ಸಪ್ತಮಿ ಎಂದೂ ಹೇಳಲಾಗಿದೆ. ವರ್ಷಂಪ್ರತಿ ಆ ದಿನದ ಜ್ಞಾಪಕಾರ್ಥವಾಗಿ ದೇವಸ್ಥಾನದಲ್ಲಿ ಈಗಲೂ ಡೆಲ್ಲಿ ಉತ್ಸವ ಎಂಬುದು ನಡೆಯುತ್ತದೆ.

ಚೆಲುವನಾರಾಯಣಸ್ವಾಮಿ ಮೈಸೂರು ಅರಸರ ಆರಾಧ್ಯ ದೇವರು. ಆ ಅರಸರು ದೇವಾಲಯಕ್ಕೆ ಹೇರಳವಾದ ದಾನಧರ್ಮಗಳನ್ನು ಮಾಡಿದ್ದಾರೆ. ರಾಜ ಒಡೆಯರು ತಮಗೆ ವಿಜಯನಗರದ ಅರಸರಿಂದ ಉಂಬಳಿಯಾಗಿ ಬಂದ ಮುತ್ತಿಗೆರೆ ಗ್ರಾಮ ಮತ್ತು ಅದರ 50 ಉಪಗ್ರಾಮಗಳನ್ನು ಇಲ್ಲಿನ ದೇವಸ್ಥಾನಕ್ಕೂ ಬ್ರಾಹ್ಮಣರಿಗೂ ಕೊಟ್ಟರು. ಗುಡಿ ಎದುರು ದೊಡ್ಡ ಮಂಟಪವನ್ನು ಕಟ್ಟಿಸಿ ದೇವತಾ ಉತ್ಸವಗಳಿಗೆ ಬಹಳ ಉತ್ತೇಜನ ಕೊಟ್ಟರು. ರಾಜ ಒಡೆಯರವರ ಭಕ್ತವಿಗ್ರಹ ದೇವಸ್ಥಾನದ ಚಿನ್ನದ ಬಾಗಿಲಿನೊಳಗಿನ ನವರಂಗದ ಒಂದು ಕಂಬದಲ್ಲಿ ಕೆತ್ತಿದ್ದು, ಈಗಲೂ ಅದಕ್ಕೆ ಮರ್ಯಾದೆ ನಡೆಯುತ್ತದೆ. ಮೈಸೂರು ಅರಸರು ದೇವಾಲಯಕ್ಕೆ ಕೊಟ್ಟ ರತ್ನಾಭರಣಗಳ ವಸ್ತುಗಳು ಈಗಲೂ ಇವೆ. ರಾಜ ಒಡೆಯರ ರಾಜಮುಡಿ ಮತ್ತು ಕೃಷ್ಣರಾಜ ಒಡೆಯರ ಕೃಷ್ಣರಾಜ ಮುಡಿ ಬಹಳ ಪ್ರಸಿದ್ಧವಾದವು. ಟಿಪ್ಪು ಈ ದೇವಸ್ಥಾನಕ್ಕೆ ಕೆಲವು ಆನೆಗಳನ್ನು ಮತ್ತು ಆಭರಣಗಳನ್ನು ನೀಡಿರುವುದಾಗಿ ಶಾಸನಗಳಿಂದ ತಿಳಿಯುತ್ತದೆ. ರತ್ನಖಚಿತವಾದ ವೈರಮುಡಿ ಎಂಬ ಕಿರೀಟ ಚೆಲುವನಾರಾಯಣ ಗುಡಿಯ ಅಮೂಲ್ಯ ವಸ್ತುಗಳಲ್ಲಿ ಒಂದು. ಈ ವೈರಮುಡಿಯ ಕಾಲ, ದೇಶ, ವರ್ತಮಾನಗಳು ಬಗೆಹರಿಸಲಾಗದ ಐತಿಹ್ಯವಾಗೇ ಉಳಿದಿದೆ. ವರ್ಷಂಪ್ರತಿ ಈ ಕಿರೀಟವನ್ನು ಉತ್ಸಮೂರ್ತಿಗೆ ಧರಿಸಿ ವೈಭಯುತವಾಗಿ ವೈರಮುಡಿ ಉತ್ಸವವನ್ನು (ಏಪ್ರಿಲ್‌ನಲ್ಲಿ) ನಡೆಸಲಾಗುತ್ತದೆ. ಈ ಉತ್ಸವ ಸಾವಿರಾರು ಜನರನ್ನು ಆಕರ್ಷಿಸುತ್ತದೆ.

ಚೆಲುವನಾರಾಯಣ ಸ್ವಾಮಿ ದೇವಸ್ಥಾನದ ನಾಲ್ಕು ಬೀದಿಗಳಲ್ಲಿಯೂ ಇನ್ನೂ ಬೇರೆ ಬೇರೆ ದೇವಾಲಯಗಳನ್ನೂ ಕೊಳಗಳನ್ನೂ ಮತ್ತು ಮಂಟಪಗಳನ್ನೂ ಕಾಣಬಹುದು. 29 ಕೊಳಗಳು, 73 ಮಂಟಪಗಳು, 19 ತೋಟಗಳು ಈ ಊರಿನಲ್ಲಿದ್ದಂತೆ ದೇವಸ್ಥಾನದ ಕೈಪಿಡಿ ಪಟ್ಟಿಮಾಡಿದೆ. ಈ ಊರಿನಲ್ಲಿ ತೋಪುಗಳು ಒಂದು ಕಾಲದಲ್ಲಿ ಸಮೃದ್ಧವಾಗಿದ್ದುವು. ಈಗ ಅವು ಬಹಳ ವಿರಳ.

ದೇವಾಲಯದಿಂದ ಅನತಿದೂರದಲ್ಲಿರುವ ಕಲ್ಯಾಣಿ ತೀರ್ಥ ರಾಮಾನುಜರ ಕಾಲಕ್ಕೂ ಮುಂಚೆಯೇ ಇದ್ದಿತೆಂದು ಹೇಳಲಾಗುತ್ತದೆ. ಇದರ ಸುತ್ತ ಅನೇಕ ಮಂಟಪಗಳಿವೆ. ಇಲ್ಲಿ ಕಾಣಿಸುವ 6' ಎತ್ತರದ ಕಂಬಗಳು ಬಹಳ ಸಾಧಾರಣವಾಗಿವೆ. ಅಲ್ಲಲ್ಲಿಯೇ ಕಾಣಲಾಗುವ ಗೂಡುಗಳಲ್ಲಿ ಬೇರೆ ಬೇರೆ ವಿಷ್ಣುವಿನ ಮೂರ್ತಿಗಳನ್ನು ಇಡಲಾಗಿದೆ. ಇಲ್ಲಿಯ ಅಷ್ಟತೀರ್ಥಗಳಲ್ಲಿ ಕಲ್ಯಾಣಿ ಅಗ್ರಗಣ್ಯವಾದುದು.

ಚೆಲುವನಾರಾಯಣಸ್ವಾಮಿ ದೇವಸ್ಥಾನದಿಂದ ಬಲಕ್ಕೆ ಸ್ವಲ್ಪ ಮೆಟ್ಟಲೇರಿ ಹೋದರೆ ಗೋಪಾಲರಾಯನ ಬಾಗಿಲು ಎಂಬ ಕೋಟೆ ಬಾಗಿಲು ಸಿಕ್ಕುತ್ತದೆ. ನಾಲ್ಕು ದೊಡ್ಡ ದೊಡ್ಡ ಕಲ್ಲುಕಂಬಗಳನ್ನು ಇಲ್ಲಿ ನಿಲ್ಲಿಸಲಾಗಿದೆ. ಕಟ್ಟಡ ಮುಗಿಯದೆ ಅರ್ಧಕ್ಕೇ ನಿಂತಿದೆ. ಇಲ್ಲಿನ ಶಿಲ್ಪಗಳು ಬಹಳ ಸುಂದರವಾಗಿವೆ. ಬಹುಶಃ 16ನೆಯ ಶತಮಾನದಲ್ಲಿ ವಿಜಯನಗರದ ಶ್ರೀರಂಗರಾಯನ ಎರಡನೆಯ ಮಗ ರಾಮದೇವರಾಯನ ದಳಪತಿ ಗೋಪಾಲರಾಯ ಈ ಕೋಟೆಯ ಬಾಗಿಲನ್ನು ಕಟ್ಟಲು ಪ್ರಾರಂಭಿಸಿದ ನೆಂದು ಕಾಣುತ್ತದೆ.

ಕಲ್ಯಾಣಿಯ ತೀರದಲ್ಲಿರುವ ಬೆಟ್ಟದ ಮೇಲಿನ ಯೋಗಾನರಸಿಂಹ ದೇವಾಲಯ ಮೇಲುಕೋಟೆಯ ಇನ್ನೊಂದು ಮುಖ್ಯಸ್ಥಾನ. ಇದು ಮೇಲುಕೋಟೆಯ ಅತ್ಯಂತ ಎತ್ತರದ ಶೃಂಗದ ಮೇಲೆ (ಸಮುದ್ರಮಟ್ಟ ದಿಂದ 1,177 ಮೀ) ಇದ್ದು ಇಲ್ಲಿಂದ ಸುತ್ತಲ ವಿಶಾಲ ಪ್ರದೇಶದ

ಸುಂದರ ಪಕ್ಷಿನೋಟವನ್ನು ಸವಿಯಬಹುದು. ಈ ನಾರಸಿಂಹ ಕ್ಷೇತ್ರ ಇಲ್ಲಿನ ಸಪ್ತಕ್ಷೇತ್ರಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಗರ್ಭಗುಡಿ, ಸುತ್ತ ಮಂಟಪ ಮತ್ತು ಮಹಾದ್ವಾರವುಳ್ಳ ಈ ದೇವಾಲಯ ಚಿಕ್ಕದು. ಮೈಸೂರು ಅರಸರು, ಟಿಪ್ಪು ಮುಂತಾದ ಅನೇಕರು ಈ ದೇವಾಲಯಕ್ಕೆ ದತ್ತಿಗಳನ್ನು ನೀಡಿದ್ದಾರೆ. ದೇವಸ್ಥಾನದಲ್ಲಿ ಟಿಪ್ಪುಸುಲ್ತಾನ್ ಕೊಟ್ಟ ನಗಾರಿಯನ್ನೂ ಪರಕಾಲಮಠದವರು ಸಮರ್ಪಿಸಿದ್ದ ದೊಡ್ಡ ಗಂಟೆಯನ್ನೂ ಕಾಣಬಹುದು.

ರಾಮಾನುಜ ಸಿದ್ಧಾಂತದ ಅನುಯಾಯಿಗಳ ಯತಿರಾಜಮಠ, ಅಹೋಬಿಲಮಠ, ಪರಕಾಲಮಠ, ವಾನಮಾಮಲೈಮಠ ಮುಂತಾದುವೂ ಮೇಲುಕೋಟೆಯಲ್ಲಿವೆ. ಯತಿರಾಜಮಠವನ್ನು ರಾಮಾನುಜರೇ ಸ್ಥಾಪಿಸಿದರೆಂದು ಹೇಳಲಾಗುತ್ತದೆ. 1398ರಲ್ಲಿ ಪ್ರಾರಂಭವಾದ ಅಹೋಬಿಲಮಠವನ್ನು ಮೇಲುಕೋಟೆಯಲ್ಲಿ ಹುಟ್ಟಿದ 'ಆದಿವಣ್' ಶಠಗೋಪ ಮಹಾದೇಶಿಕರ್ ಅವರು ಸ್ಥಾಪಿಸಿದರು. ಇಂದಿಗೂ ಈ ಶ್ರೀವೈಷ್ಣವಮಠಗಳು ಧರ್ಮಜಾಗೃತಿಯ ಕೇಂದ್ರಗಳಾಗಿ ನಡೆದುಬರುತ್ತಿವೆ. ಮೇಲುಕೋಟೆಯಲ್ಲಿ ಸಂಸ್ಕೃತ ಸಂಶೋಧನ ಕೇಂದ್ರವಿದೆ. ಮೇಲುಕೋಟೆಯಲ್ಲಿ ನೆಲಸಿದ್ದ ಶ್ರೀ ವೈಷ್ಣವ ಸಮುದಾಯದವರು ಇಂದು ಉದ್ಯೋಗಾರ್ಥ ವಿವಿಧ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಆದರೆ ಬೆಟ್ಟದ ಮೇಲಿನ ಊರು ಕರಕುಶಲಿಗಳು ಮತ್ತು ರೈತರೂ ಸೇರಿದಂತೆ ಇಂದಿಗೂ ಸು. 4 ಸಾವಿರ ಜನವಸತಿಗೆ ಆಶ್ರಯ ಕಲ್ಪಿಸಿದೆ. (ಆರ್.ವಿ.)

**ಮೈದುನ ರಾಮಯ್ಯ:** 12ನೆಯ ಶತಮಾನ ಶಿವಶರಣ ಹಾಗೂ ವಚನಕಾರ. ಆಂಧ್ರಪ್ರದೇಶದ ಭೀಮಾವತೀಪುರ ಇವನ ಜನ್ಮಸ್ಥಳ. ಇವನ ತಂದೆ ಸೋಮನಾಥ, ತಾಯಿ ಮಹಾದೇವಿ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ಶಿವಭಕ್ತನಿಷ್ಠಳಾದ ತಾಯಿಯ ಇಚ್ಛೆಯಂತೆ ವಿದ್ಯೆ ಕಲಿತ. ದೀಪಾವಳಿಯ ಹಬ್ಬಕ್ಕೆ ಓರಗೆಯವರು ತಮ್ಮ ಮನೆಗೆ ತಂತಮ್ಮ ಅಕ್ಕಭಾವಂದಿರನ್ನು ಕರೆಸುತ್ತಾರೆಂಬುದನ್ನು ಕೇಳಿ ತಾವೂ ಹಾಗೆ ಮಾಡಬೇಕೆಂದು ತಾಯಿಗೆ ಹೇಳಿದಾಗ, ಕುಮಾರನ ಭಾವವನ್ನರಿತ ಆಕೆ ನಿನ್ನ ಅಕ್ಕ ಗೌರಿಯೆಂದೂ ಭಾವ ಮಲ್ಲಿಕಾರ್ಜುನನೆಂದೂ ಅವರಿರುವುದು ಶ್ರೀಶೈಲವೆಂದೂ ತಿಳಿಸಿದಳು. ಮುಗ್ಧ ಬಾಲಕ ಅಕ್ಕಭಾವಂದಿರನ್ನು ಶ್ರೀಶೈಲದಲ್ಲಿ ಹುಡುಕಿ, ಕಾಣದೆ ತೊಳಲಿ ಬಳಲಿ, ಪ್ರಾಣ ಕಳೆದುಕೊಳ್ಳಲು ಸಿದ್ಧನಾದಾಗ, ಶಿವಪಾರ್ವತಿಯರು ಅವನಿಗೆ ಕಾಣಿಸಿಕೊಂಡರು. ಅನಂತರ ಅವರನ್ನು ಅಕ್ಕಭಾವದಿರೆಂದೇ ಮನೆಗೆ ಕರೆತಂದು ಸತ್ಕರಿಸಿ ಶಿವನಿಂದ ಇಷ್ಟಲಿಂಗೋಪದೇಶ ಪಡೆದು ಮೈದುನ ರಾಮಯ್ಯನಾದ ಎಂಬ ಕಥೆಯಿದೆ.

ಈತ ಮಹಾಲಿಂಗ ಚನ್ನರಾಮಾ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾನೆ. ಇದುವರೆಗೆ ಎರಡು ಮಾತ್ರ ದೊರಕಿವೆ. ಇವನನ್ನು ಕುರಿತು ಶಂಕರದೇವ (ಸು.1620) ಎಂಬುವನು ಮೈದುನ ರಾಮಯ್ಯನ ರಗಳೆ ಎಂಬ ಒಂದು ಕಾವ್ಯವನ್ನು ಬರೆದಿದ್ದಾನೆ. (ಬಿ.ಸಿ.ಜೆ.)

**ಮೈಲಾರ:** ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕಿನಲ್ಲಿ ತುಂಗಭದ್ರಾನದಿಯ ದಂಡೆಯ ಮೇಲಿರುವ ಗ್ರಾಮ, ಪ್ರಸಿದ್ಧ ಯಾತ್ರಾಸ್ಥಳ. ಹಡಗಲಿಯಿಂದ ನೈಋತ್ಯಕ್ಕೆ 33 ಕಿಮೀ ದೂರದಲ್ಲಿದೆ. ಇಲ್ಲಿ ಶಿವಮಲ್ಲಾರಿಯ ದೇವಾಲಯವಿದೆ. ದೇವಾಲಯದಲ್ಲಿರುವ ಶಿವಲಿಂಗ ಉದ್ಭವಲಿಂಗವೆಂದೂ ಮೈಲಾರ ಅಥವಾ ಮಲ್ಲಾರಿಯ ಮೂರ್ತಿ ಮಣ್ಣಿನದೆಂದೂ ಹೇಳಲಾಗುತ್ತದೆ. ಈ ಮಣ್ಣಿನ ಮೂರ್ತಿಯ ಉಲ್ಲೇಖ ಸು. 15–16 ನೆಯ ಶತಕದ ಮಲ್ಲಾರಿ ಮಹಾತ್ಮೆಯಲ್ಲೂ ಬಂದಿದೆ. 12ನೆಯ ಶತಮಾನದ ಕನ್ನಡ ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಮೈಲಾರನ ಭಕ್ತರಾದ ಗೊರವರ ಉಲ್ಲೇಖಗಳಿವೆ.

13ನೆಯ ಶತಮಾನದ ಅನಂತರ ಮತ್ತು 16ನೆಯ ಶತಮಾನದೊಳಗೆ ಉತ್ತರ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರ, ಮಾಳವ ಮತ್ತು ಆಂಧ್ರಪ್ರದೇಶಗಳಲ್ಲಿ ಮೈಲಾರಲಿಂಗ, ಮಲ್ಲಾರಿ, ಮಾರ್ತಾಂಡ ಭೈರವ, ಖಂಡೋಬಾ ಮುಂತಾದ ಹೆಸರುಗಳನ್ನು ಪಡೆದು ತನ್ನ ಪತ್ನಿ ಮಾಳಚಿ–ಮ್ಹಾಳಸಾದೇವಿಯೊಂದಿಗೆ ಜನಪ್ರಿಯಗೊಂಡ ಗ್ರಾಮದೇವತೆ ಕಾಲಾಂತರದಲ್ಲಿ ವಿವಿಧ ಮತ–ಪಂಥಗಳ ಆರಾಧ್ಯದೇವತೆಯಾಗಿರಬೇಕು. ಶಿವನ ಅವತಾರವೆಂದು ಹೇಳುತ್ತ ಮೈಲಾರನ ಮಹಿಮೆಯನ್ನು ಬಣ್ಣಿಸುವ ಪುರಾಣರೂಪದ ಗ್ರಂಥಗಳೂ ರಚನೆಯಾದವು. ಇವುಗಳಲ್ಲಿ ಮುಖ್ಯವಾದುದು ಮಲ್ಲಾರಿ ಮಹಾತ್ಮೆ.

ಈಗ ಮೈಲಾರ ಬಹು ಪ್ರಸಿದ್ಧವಾದ ಶಿವಕ್ಷೇತ್ರ. ಇಲ್ಲಿ ಗೊರವರು ಅಪಾರ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಪ್ರತಿವರ್ಷ ಫೆಬ್ರವರಿ ತಿಂಗಳಿನಲ್ಲಿ ಇಲ್ಲಿ ನಡೆಯುವ ಜಾತ್ರೆ ಸುತ್ತಮುತ್ತಲ ಪ್ರದೇಶದಿಂದ ಬಹುಜನರನ್ನು ಆಕರ್ಷಿಸುತ್ತದೆ.

ಮೈಲಾರದ ಸ್ಥಳಪುರಾಣದಲ್ಲಿ ಬ್ರಹ್ಮನ ವರಬಲದಿಂದ ಮದಿಸಿದ ಮಲ್ಲ ಮತ್ತು ಮಣಿ ಎಂಬ ದೈತ್ಯರ ಹಾವಳಿಯಿಂದ ದಿಕ್ಕೆಟ್ಟ ಋಷಿಗಳೂ ದೇವತೆಗಳೂ ಶಿವನ ಮೊರೆಹೊಕ್ಕಾಗ ಶಿವ ಆ ರಕ್ಕಸರನ್ನು ಹತ್ತು ದಿನಗಳ ಕದನದ ಅನಂತರ ಕೊಂದುದರಿಂದ ಇವನಿಗೆ ಮಲ್ಲಾರಿಯೆಂಬ ಹೆಸರಾಯಿತೆಂದು ಹೇಳಿದೆ. ಈ ಹೋರಾಟದ ಸ್ಮಾರಕವಾಗಿ ವಾರ್ಷಿಕ ಜಾತ್ರೆಯಲ್ಲಿ ಮೈಲಾರನ ಭಕ್ತರು ಶಿವನ ಸೈನ್ಯವಾದ ನಾಯಿಗಳಂತೆ ನಟಿಸುತ್ತಾರೆ. ಹೋರಾಟದ ಹತ್ತು ದಿನಗಳನ್ನು ಬೆಟ್ಟಗಳಲ್ಲಿ ಕಳೆದ ಮೈಲಾರನನ್ನು ಭಕ್ತರು ಹಿಂದಕ್ಕೆ ಕರೆತರುವಾಗ ಮಾರ್ಗ ಮಧ್ಯದಲ್ಲಿ ದೇವಿ ಮಾಳಚಿ ಎದುರುಗೊಳ್ಳುತ್ತಾಳೆ. ಆ ಸಂತೋಷ ಸಂದರ್ಭದಲ್ಲಿ ಒಬ್ಬ ಭಕ್ತನ ದೇಹದಲ್ಲಿ ದೇವತೆ ಪ್ರವೇಶಿಸಿ ಆ ವರ್ಷದ ಭವಿಷ್ಯವನ್ನು ನುಡಿಯುವುದು, ಜಾತ್ರೆಯ ಸಮಯದಲ್ಲಿ ಮೈಲಾರನ ಭಕ್ತರು ಕಲ್ಲಿನ ಕಂಬಕ್ಕೆ ಬಿಗಿಸಲಾದ ಕಬ್ಬಿಣದ ಸರಪಳಿಯನ್ನು ಜಗ್ಗಿ ಎಳೆದು ತುಂಡರಿಸುವುದು ಮಲ್ಲಾರಿಯ ಶಕ್ತಿಯ ಸಂಕೇತವಾಗಿದೆ. ಇದೇ ಸಮಯದಲ್ಲಿ ದನಗಳ ದೊಡ್ಡ ಜಾತ್ರೆಯೂ ಸೇರುತ್ತದೆ. (ಬಿ.ಕೆ.ಜಿ.)

**ಮೈಲಾರದ ಬಸವಲಿಂಗ:** 19ನೆಯ ಶತಮಾನದಲ್ಲಿದ್ದ ಶಿವಶರಣ ಹಾಗೂ ಕವಿ. ಷಟ್‌ಸ್ಥಲ ನಿರಾಭಾರ ವೀರಶೈವ ಸಿದ್ಧಾಂತ, ಶಿವಾನುಭವ ದರ್ಪಣ, ಲಿಂಗಪೂಜಾ ವಿಧಾನ, ಪಂಚಾಚಾರ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಮೈಲಾರ ಇವರ ಜನ್ಮಸ್ಥಳ. ಇವರು ಇಲ್ಲಿ ಚಿಕ್ಕ ಅಂಗಡಿಯ ಮಾಲೀಕರಾಗಿದ್ದರು. ಲಿಂಗನಾಯಕನಹಳ್ಳಿಯ ಚೆನ್ನವೀರಸ್ವಾಮಿ ಇವರ ಗುರು. ವೀರಶೈವ ಸಿದ್ಧಾಂತ ಮತ್ತು ಆಚರಣೆಗಳಿಗೆ ಸಂಬಂಧಪಟ್ಟ ವಿಷಯಗಳು ಇವುಗಳಲ್ಲಿ ಪ್ರತಿಪಾದಿತವಾಗಿವೆ. ಆದರೂ ಇವುಗಳಲ್ಲಿ ಸರ್ವಧರ್ಮ ಸಮನ್ವಯ ದೃಷ್ಟಿ ಸಹ ಕಂಡುಬರುತ್ತದೆ. ಇವರ ಇನ್ನೊಂದು ಕೃತಿ ಗುರುಕರುಣತ್ರಿವಿಧಿ. ಇದು ತಮ್ಮ ಗುರು ಚೆನ್ನವೀರರನ್ನು ಕುರಿತು ರಚಿಸಿರುವ 333 ತ್ರಿಪದಿಗಳನ್ನುಳ್ಳ ಗ್ರಂಥ. (ಜೆ.ಎಸ್.ಪಿ.ಎಂ.)

**ಮೈಲಾರಲಿಂಗ:** ಹಾವೇರಿ ಜಿಲ್ಲೆ ರಾಣೆಬೆನ್ನೂರು ಬಳಿಯಿರುವ ಪುಣ್ಯಕ್ಷೇತ್ರ. ದೇವರಗುಡ್ಡದ ಮೇಲೆ ಮೈಲಾರಲಿಂಗ ದೇವಸ್ಥಾನವಿದೆ. ಪ್ರತಿವರ್ಷವೂ ಇಲ್ಲಿ ನಡೆಯುವ ಜಾತ್ರೆಗೆ ಪ್ರಾಮುಖ್ಯ ಇದೆ. ಸಾವಿರಾರು ಭಕ್ತರು ಇಲ್ಲಿ ಕಲೆಯುತ್ತಾರೆ. ಕರ್ನಾಟಕದ ಉಳಿದ ಕಡೆಗಳಲ್ಲಿಯೂ ಮೈಲಾರ ಲಿಂಗ ಕ್ಷೇತ್ರಗಳಿವೆ. ಹಿರೇ ಮೈಲಾರ, ಗುಟ್ಟೂರು ಮೈಲಾರ,

ರೆಕ್ಕಾಲ್‌ಗೊಂಡಾ ಮೈಲಾರ, ಲಸ್ನಾಗರದ ಮೈಲಾರ, ಕೊಂಗಳ್ಳಿ ಮೈಲಾರ, ಸೂಜಿಕಲ್ಲು ಮೈಲಾರ, ಯಾದಗಿರಿ ಮೈಲಾರ, ಮುಡುಕುತೊರೆ ಮೈಲಾರ, ನಾಗಮಂಗಲ ತಾಲ್ಲೂಕಿನ ಮೈಲಾರ, ಶ್ರೀಶೈಲಕ್ಷೇತ್ರ ಮೈಲಾರ–ಇವುಗಳಿಗೆ ಸಂಬಂಧಿಸಿದ ಸ್ಥಳ ಕಥೆಗಳೂ ಇವೆ.

ಜನಸಾಮಾನ್ಯರಿಗೆ ತೊಂದರೆ ಕೊಡುತ್ತಿದ್ದ ಮಣಿಮಲ್ಲಾಪುರ ಎಂಬ ರಾಕ್ಷಸನನ್ನು ಈಶ್ವರ ಗೊರವನ ವೇಷದಲ್ಲಿ ಬಂದು ಸಂಹರಿಸಿದನೆಂಬುದು ಈ ಕ್ಷೇತ್ರದ ಸ್ಥಳಪುರಾಣ. ಈ ರಾಕ್ಷಸ ಬ್ರಹ್ಮನನ್ನು ಪ್ರಾರ್ಥಿಸಿ ಯಾರಿಂದಲೂ ಸಾವು ಬಾರದೆ ಇರುವಂತೆ ವರ ಬೇಡುತ್ತಾನೆ. ಆದರೆ ಬ್ರಹ್ಮ ಇದಕ್ಕೆ ಕಿವಿಗೊಡದಿರಲು, ಆತ ಪರಮೇಶ್ವರನನ್ನೇ ಕುರಿತು ಬೇಡುತ್ತಾನೆ. ಪರಮೇಶ್ವರ ಇದರಿಂದ ಕುಪಿತನಾಗಿ ತಲೆ ಕೊಡವುತ್ತಾನೆ. ಈಶ್ವರನ ತಲೆಯಿಂದ ತುಪ್ಪದ ಮಾಳಮ್ಮ ಎಂಬ ಹೆಣ್ಣು ಜನಿಸಿ ರಾಕ್ಷಸನನ್ನು ಕೊಲ್ಲಲು ಉದ್ಯುಕ್ತಳಾಗುತ್ತಾಳೆ. ಆಕೆಯಿಂದಲೂ ರಾಕ್ಷಸನನ್ನು ಕೊಲ್ಲಲು ಸಾಧ್ಯವಾಗದೆ ಹೋದಾಗ, ಪರಮೇಶ್ವರನೇ ಗೊರವನ ವೇಷದಲ್ಲಿ ಬಂದು ರಾಕ್ಷಸನನ್ನು ಕೊಂದು ತುಪ್ಪದ ಮಾಳಮ್ಮನನ್ನು ಮದುವೆಯಾಗುತ್ತಾನೆ.

ಈ ಕ್ಷೇತ್ರದ ಪವಾಡಗಳಿಗೆ ಸಂಬಂಧಿಸಿದಂತೆಯೂ ಒಂದು ಕಥೆ ಇದೆ. ಗಂಗೆ ಮಾಳಮ್ಮ ಎಂಬಾಕೆ ತನ್ನ ಏಳು ಮಂದಿ ಅಣ್ಣ ತಮ್ಮಂದಿರಿಗೂ ಊಟ ಹೊತ್ತು ಹೋಗುತ್ತಿರುವಾಗ, ಈಶ್ವರ ಗೊರವನ ವೇಷದಲ್ಲಿ ಬಂದು ಅವಳ ಬಳಿ ನಿಲ್ಲುತ್ತಾನೆ. ಇದನ್ನು ನೋಡಿದ ಅವಳ ಏಳು ಮಂದಿ ಅಣ್ಣತಮ್ಮಂದಿರೂ ತಮ್ಮ ಎರಡು ನಾಯಿಗಳನ್ನೂ ಅವನ ಕಡೆಗೆ ಅಟ್ಟುತ್ತಾರೆ. ಆದರೆ ಆ ನಾಯಿಗಳು ಅವನಿಗೆ ಏನೂಮಾಡದೆ ಸುಮ್ಮನೆ ನಿಲ್ಲುತ್ತವೆ. ಆಗ ಆ ಏಳು ಮಂದಿ ಅಣ್ಣತಮ್ಮಂದಿರೇ ಅವನ ಬಳಿಗೆ ಹೋಗುತ್ತಾರೆ. ಆಗ ಗೊರವನ ರೂಪದಲ್ಲಿದ್ದ ಪರಮೇಶ್ವರ ಗಂಗೆ ಮಾಳಮ್ಮನನ್ನು ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಐದು ಪವಾಡಗಳನ್ನು ಮಾಡಿತೋರಿಸಿದರೆ ಮದುವೆ ಮಾಡಿಕೊಡುವುದಾಗಿ ಅವರು ಹೇಳುತ್ತಾರೆ. ಆಗ ಪರಮೇಶ್ವರ ಸರಪಳಿ ಪವಾಡ, ಶೂಲದ ಪವಾಡ, ಗೋವದ ಪವಾಡ, ಅಲಗು ಪವಾಡ, ಶಿರಸಿ ಪವಾಡ ಎಂಬ ಐದು ಪವಾಡಗಳನ್ನು ಮಾಡಿ ತೋರಿಸುತ್ತಾನೆ. ಈಗಲೂ ಮೈಲಾರಲಿಂಗನ ಭಕ್ತರು ಅನೇಕ ಬಗೆಯ ಪವಾಡಗಳನ್ನು ಮಾಡುತ್ತಾರೆ. ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿಯ ಪ್ರಮುಖ ಆಕರ್ಷಣೆಯೂ ಇವೇ ಆಗಿವೆ. ಇವು ಅತ್ಯಂತ ರೋಮಾಂಚಕಾರಿಯಾಗಿರುತ್ತವೆ. ಮೈಲಾರಲಿಂಗನ ಭಕ್ತರು ಪವಾಡಗಳನ್ನು ಮಾಡುವುದಾಗಿ ಹರಸಿಕೊಂಡಿರುತ್ತಾರೆ.

ಗೊರವರು **(ನೋಡಿ)** ಎಂಬ ವೃತ್ತಿಗಾಯಕರು ಈ ಮೈಲಾರಲಿಂಗ ಕ್ಷೇತ್ರಕ್ಕೆ ಸಂಬಂಧಪಟ್ಟವರು. ಇವರು ಮೈಲಾರಲಿಂಗನ ಕಥಾಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಕಥಾಪರಂಪರೆಗಿಂತ ರೋಮಾಂಚಕಾರಿ ಪವಾಡಗಳನ್ನು ಮಾಡುವಲ್ಲಿ ಇವರು ಹೆಸರಾದವರು. ಇವರ ನೃತ್ಯವೂ (ಗೊರವರ ಕುಣಿತ) ಬಹಳ ವೈವಿಧ್ಯಪೂರ್ಣವಾದುದೆನಿಸಿದೆ. ವರ್ಷದಲ್ಲಿ ಎರಡು ದಿವಸ ಜಾತ್ರೆ ವಿಶೇಷ ರೀತಿಯಿಂದ ನಡೆಯುತ್ತದೆ. *

**ಮೈಸೂರು:** ಕರ್ನಾಟಕ ರಾಜ್ಯದ ಒಂದು ವಿಭಾಗ, ಜಿಲ್ಲೆ, ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ, ನಗರ. ಮೈಸೂರು ವಿಭಾಗಕ್ಕೆ ಮಂಡ್ಯ, ಕೊಡಗು, ಹಾಸನ, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಸೇರಿವೆ.

**ಜಿಲ್ಲೆ :** ಕರ್ನಾಟಕ ರಾಜ್ಯದ ದಕ್ಷಿಣಾಂತ್ಯದಲ್ಲಿರುವ ಈ ಜಿಲ್ಲೆಯನ್ನು ಉತ್ತರದಲ್ಲಿ ಹಾಸನ, ಮಂಡ್ಯ ಜಿಲ್ಲೆಗಳು, ಪಶ್ಚಿಮದಲ್ಲಿ ಕೊಡಗು, ಪೂರ್ವದಲ್ಲಿ ಮಂಡ್ಯ, ಚಾಮರಾಜನಗರ ಜಿಲ್ಲೆಗಳು, ದಕ್ಷಿಣದಲ್ಲಿ ಕೇರಳ ರಾಜ್ಯ ಸುತ್ತುವರೆದಿವೆ. ಜಿಲ್ಲೆ ಉ.ಅ. $11^0$ 60" ನಿಂದ $20^0$ 17" ವರೆಗೂ ಪೂ.ರೇ. $75^0$ 19" ನಿಂದ $77^0$ 77" ವರೆಗೂ ವಿಸ್ತರಿಸಿದೆ. ಪಿರಿಯಾಪಟ್ಟಣ, ನಂಜನಗೂಡು, ತಿರುಮಕೂಡಲು ನರಸೀಪುರ, ಮೈಸೂರು, ಕೆ.ಆರ್. ನಗರ, ಹುಣಸೂರು ಮತ್ತು ಹೆಗ್ಗಡದೇವನಕೋಟೆ ಇವು ಜಿಲ್ಲೆಯ 7 ತಾಲ್ಲೂಕುಗಳು. 33 ಹೋಬಳಿಗಳು, 1203 ಜನವಸತಿಯುಳ್ಳ ಗ್ರಾಮಗಳಿದ್ದು ಜಿಲ್ಲಾ ವಿಸ್ತೀರ್ಣ 6269 ಚ.ಕಿಮೀ. ಜಿಲ್ಲೆಯ ಒಟ್ಟು ಜನಸಂಖ್ಯೆ 26,41,027. ಇದರಲ್ಲಿ 16,56,310 ಮಂದಿ ಗ್ರಾಮವಾಸಿಗಳು, 9,68,601 ಮಂದಿ ಪಟ್ಟಣವಾಸಿಗಳು.

**ಮೇಲ್ಮೈ ಲಕ್ಷಣ :** ಮೈಸೂರು ಜಿಲ್ಲೆ ಸಮುದ್ರಮಟ್ಟದಿಂದ ಸು. 610 ಮೀ ಎತ್ತರದಲ್ಲಿದೆ. ಪಿರಿಯಾಪಟ್ಟಣ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ಪಶ್ಚಿಮ ಘಟ್ಟಗಳು ಮತ್ತು ಪೂರ್ವ ಘಟ್ಟಗಳ ನಡುವೆ ಜಿಲ್ಲೆ ಹಬ್ಬಿದೆ. ಈ ಜಿಲ್ಲೆಯ ಮುಖ್ಯ ಬೆಟ್ಟಗಳು: ಮೈಸೂರಿನ ಚಾಮುಂಡಿಬೆಟ್ಟ (1,063 ಮೀ), ತಿರುಮಕೂಡಲು ನರಸೀಪುರದ ಶಂಭುಲಿಂಗೇಶ್ವರ ಬೆಟ್ಟ ಮತ್ತು ವಾಯವ್ಯದ ಕಡೆ ಇರುವ ಬೆಟ್ಟದಪುರದ ಬೆಟ್ಟ (ಸು. 1337 ಮೀ). ಇವಲ್ಲದೇ ಅನೇಕ ಸಣ್ಣಪುಟ್ಟ ಬೆಟ್ಟಗಳೂ ಇವೆ.

ಈ ಜಿಲ್ಲೆಯನ್ನು ಪಶ್ಚಿಮದ ಉಪಮಲೆನಾಡು ಪ್ರದೇಶ, ಮಧ್ಯದ ಕಾಲುವೆ ನೀರಾವರಿ ಪ್ರದೇಶ, ಪೂರ್ವದ ಕೆರೆ ನೀರಾವರಿಯ ಶುಷ್ಕಪ್ರದೇಶವೆಂದು ವಿಂಗಡಿಸಬಹುದು. ಪಶ್ಚಿಮದ ಉಪಮಲೆನಾಡನ್ನು ಬಿಟ್ಟು ಜಿಲ್ಲೆಯ ಉಳಿದ ಭಾಗ ಅಸಮ ಇಳಿಜಾರಿನ ಏರಿಳಿತಗಳಿಂದ ಕೂಡಿದ ಮೈದಾನ ಪ್ರದೇಶ. ಮಧ್ಯಭಾಗ ಕಾಲುವೆ ಮತ್ತು ನದಿಗಳ ನೀರಾವರಿಯಿಂದ ಕೂಡಿದ ತರಿಬೆಳೆಗಳ ಸಮೃದ್ಧ ವ್ಯವಸಾಯ ಪ್ರದೇಶವಾದರೆ, ಪೂರ್ವದ ಮೈದಾನ ಕೆರೆ ನೀರಾವರಿಯ ಶುಷ್ಕ ಆಹಾರಬೆಳೆ ಮತ್ತು ವಾಣಿಜ್ಯ ಬೆಳೆಗಳ ನಾಡು. ಒಟ್ಟಿನಲ್ಲಿ ಈ ಜಿಲ್ಲಾ ಭೂಮಟ್ಟ ಪಶ್ಚಿಮದಿಂದ ಪೂರ್ವದ ಕಡೆಗೆ ಕ್ರಮೇಣ ಇಳಿಜಾರಾಗಿದೆ.

**ವಾಯುಗುಣ:** ಇಲ್ಲಿ ಉಷ್ಣವಲಯದ ಮಾನ್‌ಸೂನ್ ಮಾರುತಗಳ ವಾಯುಗುಣವಿದೆ. ಸರಾಸರಿ ಉಷ್ಣತೆ $12.9^0$ ಸೆ. ನಿಂದ $36.5^0$ ಸೆ. ಇರುತ್ತದೆ. ಪಶ್ಚಿಮದ ಉಪಮಲೆನಾಡು ಪ್ರದೇಶಕ್ಕೆ ಸೇರಿದ ಹೆಗ್ಗಡದೇವನ ಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಚಳಿಗಾಲ ಮತ್ತು ಮಳೆಗಾಲದಲ್ಲಿ ತೇವದಿಂದ ಕೂಡಿದ ತಂಪಾದ ಹವೆ ಇರುತ್ತದೆ. ಉಳಿದ ತಾಲ್ಲೂಕುಗಳಲ್ಲಿ ನದಿ ಹರಿಯುವ ಪ್ರದೇಶಗಳನ್ನು ಉಳಿದು ಇತರ ಎಲ್ಲಾ ಭಾಗಗಳಲ್ಲೂ ಶುಷ್ಕ ಹವೆ ಇರುತ್ತದೆ. ಇಲ್ಲಿ ಹಗಲು ಮತ್ತು ರಾತ್ರಿ ಹಾಗೂ ಚಳಿಗಾಲ ಮತ್ತು ಬೇಸಗೆ ಕಾಲದ ಉಷ್ಣತೆಯಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುತ್ತದೆ. ಸಾಮಾನ್ಯವಾಗಿ ಜೂನ್‌ನಿಂದ ಸೆಪ್ಟೆಂಬರ್ ತನಕ ಬೀಸುವ ನೈಋತ್ಯ ಮಾನ್‌ಸೂನ್ ಮಾರುತಗಳಿಂದ ಅಧಿಕ ಮಳೆಯಾಗುತ್ತದೆ. ಪಶ್ಚಿಮದ ಉಪಮಲೆನಾಡು ಪ್ರದೇಶಗಳಲ್ಲಿ ಜಿಲ್ಲೆಯ ಇತರ ಭಾಗಕ್ಕಿಂತ ಹೆಚ್ಚು ಮಳೆಬೀಳುತ್ತದೆ. ಪಶ್ಚಿಮದಿಂದ ಪೂರ್ವಕ್ಕೆ ಮಳೆ ಪ್ರಮಾಣ ಕಡಿಮೆಯಾಗುತ್ತ ಹೋಗುತ್ತದೆ. ಜಿಲ್ಲೆಯಲ್ಲಿ 41 ಕಾರ್ಯನಿರತ ವೃಷ್ಟಿಮಾಪನ ಕೇಂದ್ರಗಳಿವೆ. ಜಿಲ್ಲಾ ವಾರ್ಷಿಕ ವಾಡಿಕೆ ಮಳೆ 782 ಮಿಮೀ. ವಾಸ್ತವಿಕವಾಗಿ ಬಿದ್ದಮಳೆ 962.1 ಮಿಮೀ (2000).

**ನದಿಗಳು:** ಕಾವೇರಿ, ಲಕ್ಷ್ಮಣತೀರ್ಥ ಮತ್ತು ಕಪಿಲಾ ಮುಖ್ಯ ನದಿಗಳು. ಕಾವೇರಿ ನದಿ ನೆರೆಯ ಕೊಡಗು ಜಿಲ್ಲೆಯ ತಲಕಾವೇರಿ ಎಂಬಲ್ಲಿ ಹುಟ್ಟಿ ವಾಯವ್ಯ ಕಡೆಯಿಂದ ಜಿಲ್ಲೆಯನ್ನು ಪ್ರವೇಶಿಸಿ, ಪೂರ್ವಾಭಿಮುಖವಾಗಿ ಹರಿದು ಮಂಡ್ಯ ಜಿಲ್ಲೆಯ ಮೂಲಕ ಪುನಃ ಮೈಸೂರು ಜಿಲ್ಲೆಯನ್ನು ಈಶಾನ್ಯ ದಿಕ್ಕಿನಿಂದ ಸೇರಿ ಪೂರ್ವ ದಿಕ್ಕಿಗೆ ಹರಿಯುತ್ತದೆ. ಜಿಲ್ಲೆಯಲ್ಲಿ



ಇದು ಸು. 242 ಕಿಮೀ ದೂರ ಪ್ರವಹಿಸುತ್ತದೆ. ಕಪಿಲಾ (ಸು. 147 ಕಿಮೀ), ಲಕ್ಷ್ಮಣತೀರ್ಥ (65 ಕಿಮೀ), ಹೊನ್ನುಹೊಳೆ ಮುಂತಾದ ಉಪನದಿಗಳು ಕಾವೇರಿಯನ್ನು ಈ ಜಿಲ್ಲೆಯಲ್ಲಿ ಸೇರುತ್ತವೆ. ಕಪಿಲಾ ಕೇರಳದ ವೈನಾಡಿನಲ್ಲಿ ಹುಟ್ಟಿ ಕೊಡಗಿನ ಮೂಲಕ ಹರಿದು ಮೈಸೂರು ಜಿಲ್ಲೆಯನ್ನು ತಲುಪಿ, ತಿರುಮಕೂಡಲು ನರಸೀಪುರದ ಹತ್ತಿರ ಕಾವೇರಿಯನ್ನು ಸೇರುತ್ತದೆ. ಕಪಿಲಾ ನದಿಗೆ ಗುಂಡ್ಲುಹೊಳೆ, ನುಗುಹೊಳೆ ಎಂಬ ಉಪನದಿಗಳಿವೆ. ಉಡುತೊರೆಹಳ್ಳ, ಮಾವಿನಹಳ್ಳ, ಸುವರ್ಣಾವತಿ ಮುಂತಾದ ನದಿಗಳೂ ಇವೆ.

**ಮಣ್ಣು :** ಈ ಜಿಲ್ಲೆಯಲ್ಲಿ ಕೆಂಪುಮಣ್ಣು, ಮರಳುಮಣ್ಣು ಲ್ಯಾಟರೈಟ್ ಮಣ್ಣು, ಕೆಂಪು ಜೇಡಿಮಣ್ಣು ಮತ್ತು ಕಪ್ಪುಮಣ್ಣು ಕಂಡುಬರುತ್ತದೆ. ಲ್ಯಾಟರೈಟ್ ಮಣ್ಣು ಜಿಲ್ಲೆಯ ಪಶ್ಚಿಮ ಭಾಗದಲ್ಲೂ ಕೆಂಪುಮಣ್ಣು ವಾಯುವ್ಯ ಭಾಗದಲ್ಲೂ ಕಂಡುಬರುತ್ತದೆ. ಈ ಎರಡು ವಿವಿಧ ಮಣ್ಣು ಜಿಲ್ಲೆಯ ಸುಮಾರು ಅರ್ಧ ಭಾಗದಷ್ಟು ಪ್ರದೇಶದಲ್ಲಿ ಹರಡಿದೆ. ಕಪ್ಪುಮಣ್ಣು ಜಿಲ್ಲೆಯ ಈಶಾನ್ಯ ಭಾಗದಲ್ಲಿ, ಕೆಂಪುಮಿಶ್ರಿತ ಮರಳು ಮಣ್ಣು ಪಿರಿಯಾಪಟ್ಟಣ, ಹೆಗ್ಗಡದೇವನ ಕೋಟೆ ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ಕಂಡುಬರುತ್ತದೆ. ಸಾರಜನಕ ಪೋಷಕಾಂಶ ಮಣ್ಣು ಅನೇಕ ತಾಲ್ಲೂಕುಗಳಲ್ಲಿ ಕಂಡುಬರುತ್ತದೆ.

**ಸಸ್ಯವರ್ಗ:** ಹೆಚ್ಚಿನ ಸಸ್ಯ ಸಂಪತ್ತು ಹೆಗ್ಗಡದೇವನಕೋಟೆ, ಹುಣಸೂರು ತಾಲ್ಲೂಕುಗಳಲ್ಲಿ ಕೇಂದ್ರೀಕೃತವಾಗಿದೆ. ಈ ಭಾಗದಲ್ಲಿ ಹೆಚ್ಚು ಕಾಡುಗಳು ಮತ್ತು ಹುಲ್ಲುಗಾವಲು ಪ್ರದೇಶಗಳು ಕಂಡುಬರುತ್ತವೆ. ಇಲ್ಲಿಯ ಕಾಡುಗಳಲ್ಲಿ ತೇಗ, ಗಂಧ, ಬೀಟೆ, ನಂದಿ, ಹೊನ್ನೆ, ಮತ್ತಿ, ಎತ್ತಿಗ, ಹಡಗ ಮುಂತಾದ ಮರಗಳಲ್ಲದೆ ಬೆಂಕಿಪೊಟ್ಟಣ ಕೈಗಾರಿಕೆಗೆ ಬೇಕಾದ ಮೃದುಮರ, ಬಿದಿರು, ಅರಗು, ಗೋಂದು ಮುಂತಾದವು ದೊರಕುವುವು. ಅಲ್ಲದೇ ಜಿಲ್ಲೆಯ ಕೆಲವು ಭಾಗಗಳಲ್ಲಿ ನೀಲಗಿರಿ, ತೇಗ, ಗೋಡಂಬಿ ಮುಂತಾದ ಸಸಿಗಳನ್ನು ನೆಟ್ಟು ಪ್ಲಾಂಟೇಷನ್‍ಗಳನ್ನು ಬೆಳೆಸಲಾಗಿದೆ. ಹುಣಸೆ, ಹೊಂಗೆ ಮತ್ತು ಬಾಬುಲ್ ಮರದ ತೋಪುಗಳನ್ನೂ ಕಾಣಬಹುದು.

ಜಿಲ್ಲೆಯಲ್ಲಿ 1999–2000 ಅಂಕಿಅಂಶದ ಪ್ರಕಾರ 62,851ಹೆ. ಅರಣ್ಯ ಪ್ರದೇಶವಿದೆ. ಮೈಸೂರು ಮತ್ತು ಹುಣಸೂರು ಎರಡು ಮುಖ್ಯ ಅರಣ್ಯ ಭಾಗಗಳು. ಅರಣ್ಯ ಸಂಪತ್ತಿನಲ್ಲಿ ಮೈಸೂರು ಜಿಲ್ಲೆ ರಾಜ್ಯದಲ್ಲಿ 3ನೆಯ ಸ್ಥಾನ ಪಡೆದಿದೆ. ಜಿಲ್ಲೆಯ ಅನೇಕ ಕೈಗಾರಿಕೆಗಳಿಗೆ ಇಲ್ಲಿಯ ಅರಣ್ಯಗಳು ಕಚ್ಚಾ ಸಾಮಗ್ರಿಗಳನ್ನು ಒದಗಿಸುತ್ತವೆ.

**ಪ್ರಾಣಿಸಂಪತ್ತು:** ಜಾನುವಾರು ಸಂಪತ್ತಿನಲ್ಲಿ ಈ ಜಿಲ್ಲೆ ಉತ್ತಮ ಮಟ್ಟದಲ್ಲಿದೆ. ಕುರಿ ಸಾಕಾಣಿಕೆ ಜಿಲ್ಲೆಯ ಆರ್ಥಿಕಾಭಿವೃದ್ಧಿಯಲ್ಲಿ ಗಣನೀಯ ಪಾತ್ರ ವಹಿಸುತ್ತದೆ. ಬನ್ನೂರು ತಳಿ ಕುರಿಗಳು ಪ್ರಸಿದ್ಧವಾದವು. ದನಸಾಕಣೆ ಮೊದಲನೆಯ ಸ್ಥಾನವನ್ನೂ ಮೇಕೆ–ಕುರಿ ಸಾಕಣೆ ಎರಡನೆಯ ಸ್ಥಾನದಲ್ಲೂ ಇವೆ. ಹಂದಿ, ಕೋಳಿ ಮುಂತಾದವುಗಳ ಸಾಕಾಣೆಯೂ ಮತ್ಸ್ಯೋದ್ಯಮವೂ ಇದೆ. ಅರಣ್ಯಗಳಲ್ಲಿ ಹುಲಿ, ಚಿರತೆ, ಜಿಂಕೆ, ಕಾಡುಕೋಣ, ಆನೆ, ಕರಡಿ, ಮುಂತಾದ ಪ್ರಾಣಿಗಳೂ ನಾನಾ ಬಗೆಯ ಪಕ್ಷಿಗಳೂ ಉರಗಗಳೂ ಇವೆ. ವನ್ಯಮೃಗ ಸಂರಕ್ಷಣಾ ಕೇಂದ್ರಗಳಿವೆ. 1997ರ ಗಣತಿಯಂತೆ ಜಿಲ್ಲೆಯಲ್ಲಿ ಪ್ರಾಣಿಸಂಪತ್ತಿನ ರಕ್ಷಣೆಗಾಗಿ 16 ಪಶುವೈದ್ಯ ಶಾಲೆಗಳು, 37 ಚಿಕಿತ್ಸಾಲಯ ಗಳು, 104 ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, 7 ಸಂಚಾರಿ ಪಶುವೈದ್ಯ ಚಿಕಿತ್ಸಾಲಯಗಳು, 9 ಕೃತಕ ಗರ್ಭಧಾರಣಾ ಕೇಂದ್ರಗಳಿದ್ದವು. ಇವುಗಳ ಜೊತೆಗೆ ಮತ್ಸ್ಯೋದ್ಯಮವೂ ಇದ್ದು 16,188 ಟನ್ನು ಮೀನನ್ನು ಹಿಡಿಯಲಾಗಿತ್ತು (2001).

**ಖನಿಜ ಸಂಪತ್ತು:** ಈ ಜಿಲ್ಲೆಯ ಪಶ್ಚಿಮ, ದಕ್ಷಿಣ ಮತ್ತು ಆಗ್ನೇಯ ಭಾಗಗಳಲ್ಲಿ ಚಾರ್ನೊಕೈಟ್ ಶಿಲೆಗಳಿವೆ. ಉಳಿದಭಾಗ ಕಣಶಿಲೆಗಳ ಪ್ರದೇಶ. ಅಲ್ಲಲ್ಲಿ ಹಾರ್ನ್‍ಬ್ಲೆಂಡ್ ಪೈರಾಕ್ಸೆನೈಟ್ ಮಾನೈಟ್ ಈ ಶಿಲಾರಚನೆಗಳಿಂದ ಕೂಡಿದ್ದು ಅನೇಕಬಗೆಯ ಖನಿಜಗಳು ದೊರಕುತ್ತವೆ. ಕ್ರೋಮೈಟ್, ತಾಮ್ರ, ಕೊರಂಡಮ್, ಗಾರ್ನೈಟ್, ಚಿನ್ನ, ಗ್ರಾಫೈಟ್, ಕಬ್ಬಿಣದ ಅದಿರು, ಕಯನೈಟ್, ಸಿಲಿಮನೈಟ್, ಸುಣ್ಣಕಲ್ಲು, ಡಾಲೋಮೈಟ್, ಬಳಪದಕಲ್ಲು, ವರ್ಮಿಕುಲೈಟ್, ಅಲಂಕರಣ ಹಾಗೂ ಕಟ್ಟಡದ ಶಿಲೆಗಳು ಕಲ್ನಾರು ಮುಂತಾದ ಖನಿಜಗಳನ್ನು ಒಳಗೊಂಡಿದೆ.

**ನೀರಾವರಿ:** ಜಿಲ್ಲೆಯಲ್ಲಿ ಕಾಲುವೆ, ಕೆರೆ, ಬಾವಿಗಳಿದ್ದು ಹೆಚ್ಚುಭಾಗ ದಲ್ಲಿ ನೀರಾವರಿ ಸೌಲಭ್ಯವಿದೆ. ನಂಜನಗೂಡು, ತಿರುಮಕೂಡಲು ನರಸೀಪುರ, ಕೆ. ಆರ್. ನಗರ ತಾಲ್ಲೂಕುಗಳ ಶೇಕಡ 82.8 ಭೂಮಿ ನೀರಾವರಿಗೆ ಒಳಪಟ್ಟಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲೂ ಕಾಲುವೆ ನೀರಾವರಿ ಅಭಿವೃದ್ಧಿಗೊಳ್ಳುತ್ತಿದೆ. ಉಳಿದ ತಾಲ್ಲೂಕುಗಳಲ್ಲಿ ಬಾವಿ ಮತ್ತು ಕೆರೆ ನೀರಾವರಿಯಿದೆ. ಜಿಲ್ಲೆಯಲ್ಲಿ ಸಾಗುವಳಿಯಾಗುವ ಒಟ್ಟು ಭೂಮಿಯ ಸೇಕಡ 18 ರಷ್ಟು ಭೂಮಿ ನೀರಾವರಿಗೆ ಸೇರಿದೆ. ಕಪಿಲಾ, ಹಾರಂಗಿ, ನುಗು ಮತ್ತು ತಾರಕಾ ಯೋಜನೆಗಳಿಂದ ಈ ಜಿಲ್ಲೆಯ ನೀರಾವರಿಗೆ ಹೆಚ್ಚು ಭೂಮಿ ಸೇರಿದೆ. ಇವಲ್ಲದೇ ಗುಂಡಾಲ ಯೋಜನೆ, ಸುವರ್ಣಾವತಿ ಯೋಜನೆ ಮುಂತಾದವುಗಳ ಜೊತೆಗೆ ಅನೇಕ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಂಡಿದೆ. ಕೊಡಗು ಜಿಲ್ಲೆಯ ಹಾರಂಗಿ ಮತ್ತು ಹೇಮಾವತಿ ಯೋಜನೆಗಳಿಂದಲೂ ಈ ಜಿಲ್ಲೆಗೆ ನೀರಾವರಿ ಸೌಲಭ್ಯ ಸಿಗುತ್ತದೆ. ಜಿಲ್ಲೆಯಲ್ಲಿ 98,576 ಹೆ. ಕಾಲುವೆಗಳಿಂದ, 9,314 ಹೆ. ಕೆರೆಗಳಿಂದ, 11,653 ಹೆ. ಬಾವಿಗಳಿಂದ 359 ಹೆ. ಏತನೀರಾವರಿ ಯಿಂದ 718 ಹೆ. ಕೊಳವೆ ಬಾವಿಗಳಿಂದ, ಒಟ್ಟು 1,20,620 ಹೆ. ಭೂಮಿ ನೀರಾವರಿಯಾಗುತ್ತಿತ್ತು (1998–99).

**ಕೃಷಿ:** ಮೈಸೂರು ವ್ಯವಸಾಯ ಪ್ರಧಾನ ಜಿಲ್ಲೆ. ಜಿಲ್ಲೆಯ ಹೆಚ್ಚು ಭಾಗದ ಬೇಸಾಯ ಮಳೆಯನ್ನು ಅವಲಂಬಿಸಿದೆ. ಜಿಲ್ಲೆಯಲ್ಲಿ ಬೆಳೆಯುವ ಮುಖ್ಯ ಆಹಾರ ಬೆಳೆಗಳೆಂದರೆ ಬತ್ತ, ರಾಗಿ, ಜೋಳ ಮತ್ತು ಕಡಲೆ, ಹುರುಳಿ, ಅಲಸಂದೆ, ತೊಗರಿ ಮುಂತಾದವು. ವಾಣಿಜ್ಯ ಬೆಳೆಗಳಲ್ಲಿ ಹತ್ತಿ, ಹೊಗೆಸೊಪ್ಪು, ಕಬ್ಬು ಮತ್ತು ನೆಲಗಡಲೆ, ಹರಳು ಮುಂತಾದ ಎಣ್ಣೆಬೀಜಗಳು ಮುಖ್ಯವಾದವು;ಜಿಲ್ಲೆಯ ಹೆಚ್ಚು ಪ್ರದೇಶದಲ್ಲಿ ಅಧಿಕ ಇಳುವರಿಯ ಹೈಬ್ರಿಡ್ ಬಿತ್ತನೆಗಳನ್ನು ಬಳಕೆಗೆ ತರಲಾಗಿದೆ. ನೀರಾವರಿ ಪ್ರದೇಶಗಳಲ್ಲಿ ಸುಧಾರಿತ ಬಿತ್ತನೆ ಬೀಜಗಳಿಂದ ಸಾಂದ್ರಬೇಸಾಯ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಅಲ್ಲದೆ ಸಸ್ಯಸಂರಕ್ಷಣಾ ಕಾರ್ಯಗ ಳನ್ನು ಕೈಗೊಳ್ಳಲಾಗಿದೆ. ನುಗು ಪ್ರದೇಶದಲ್ಲಿ ಕೃಷಿ ತರಬೇತಿ ಕೇಂದ್ರ ತೆರೆಯಲಾಗಿದೆ.

1998–99ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ 1,09,666 ಹೆ.ಗಳಲ್ಲಿ ಬತ್ತ, 83,670 ಹೆ.ಗಳಲ್ಲಿ ರಾಗಿ, 17,492 ಹೆ.ಗಳಲ್ಲಿ ಜೋಳ, 2,28,439 ಹೆ.ಗಳಲ್ಲಿ ವಿವಿಧ ಏಕದಳ ಬೆಳೆಗಳನ್ನು, 17,602 ಹೆ.ಗಳಲ್ಲಿ ಮುಸುಕಿನ ಜೋಳ, 923 ಹೆ.ಗಳಲ್ಲಿ ಕಡಲೆ, 6,687 ಹೆ.ಗಳಲ್ಲಿ ತೊಗರಿ, 17,920 ಹೆ.ಗಳಲ್ಲಿ ವಿವಿಧ ದ್ವಿದಳ ಧಾನ್ಯಗಳನ್ನು, 11,790 ಹೆ.ಗಳಲ್ಲಿ ನೆಲಗಡಲೆ, 9,441 ಹೆ.ಗಳಲ್ಲಿ ಕಬ್ಬು, 59,668 ಹೆ.ಗಳಲ್ಲಿ ಹತ್ತಿಯನ್ನು ಬೆಳೆಯಲಾಗಿತ್ತು.

ಗೃಹ ಕೈಗಾರಿಕೆಗಳಲ್ಲಿ ರೇಷ್ಮೆ ಮುಖ್ಯವಾದುದು. ರಾಜ್ಯದ ಒಟ್ಟು ಹಿಪ್ಪುನೇರಳೆ ಬೆಳೆಯುವ ಪ್ರದೇಶದ ಸೇಕಡ 60 ರಷ್ಟು ಪ್ರದೇಶ ಈ ಜಿಲ್ಲೆಯೊಂದರಲ್ಲೇ ಇದ್ದು ನಂಜನಗೂಡು ಉಪವಿಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಮೈಸೂರಿನಲ್ಲಿ ಕೇಂದ್ರೀಯ ರೇಷ್ಮೆ ಸಂಶೋಧನಾಲಯ ವಿದೆ. ಈ ಜಿಲ್ಲೆಯಲ್ಲಿ ಪಪ್ಪಾಯಿ, ನಿಂಬೆ, ಸಪೋಟ, ಸೀಬೆ, ಹಲಸು, ಬಾಳೆ, ಮಾವು ಮುಂತಾದ ಹಣ್ಣುಗಳನ್ನೂ ಮಲ್ಲಿಗೆ, ಗುಲಾಬಿ, ಸಂಪಿಗೆ, ಜಾಜಿ ಮುಂತಾದ ಹೂವುಗಳನ್ನೂ ನಂಜನಗೂಡಿನ ರಸಬಾಳೆ, ಮೈಸೂರು ಮಲ್ಲಿಗೆ, ಮೈಸೂರು ವಿಳ್ಯೇದೆಲೆ ಮತ್ತು ಮೊಗರು ಬದನೆಕಾಯಿಯನ್ನೂ ಬೆಳೆಯಲಾಗುತ್ತದೆ.

**ಕೈಗಾರಿಕೆ:** ಜಿಲ್ಲೆಯಲ್ಲಿ ವಿವಿಧ ಕೈಗಾರಿಕೆಗಳು ಇದ್ದು ಗಣನೀಯ ಪ್ರಗತಿಯನ್ನು ಸಾಧಿಸಿವೆ. ಇಲ್ಲಿಯ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳೆರಡರಲ್ಲೂ ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳಿವೆ.

ಸರ್ಕಾರಿ ಕ್ಷೇತ್ರದಲ್ಲಿ ಮೈಸೂರು, ತಿರುಮಕೂಡಲು ನರಸೀಪುರಗಳಲ್ಲಿ ಗಂಧದ ಎಣ್ಣೆ, ರೇಷ್ಮೆ ಬಟ್ಟೆ, ರೇಷ್ಮೆನೂಲು, ಅರಗು ಮತ್ತು ಬಣ್ಣದ ಕಾರ್ಖಾನೆಗಳು ಮತ್ತು ಭಾರತ್ ಅರ್ತ್ ಮೂವರ್ಸ್ ನಿಯಮಿತ (ಬಿ.ಇ.ಎಂ.ಎಲ್.) ರೈಲ್ವೆ ಕಾರ್ಯಗಾರ, ಸಿ.ಎಫ್.ಟಿ.ಆರ್.ಐ. ಮತ್ತು ಆರ್.ಎಂ.ಪಿ, ಕಿರ್ಲೋಸ್ಕರ್, ವಿಪ್ರೊ, ಲಾರ್ಸನ್ ಮತ್ತು ಟ್ಯೂಬ್ರೊ ಕಾರ್ಖಾನೆಗಳಿವೆ.

ಮೈಸೂರು, ನಂಜನಗೂಡು, ಹುಣಸೂರು ಇಲ್ಲಿ ಖಾಸಗೀ ಕೈಗಾರಿಕೆಗಳಿವೆ. ಅವುಗಳಲ್ಲಿ ಸೌತ್ ಇಂಡಿಯ ಪೇಪರ್ ಮಿಲ್ಸ್, ಗಜಾನನ ರೈಸ್ ಅಂಡ್ ಆಯಿಲ್ ಮಿಲ್, ಮೈಸೂರು ಚಿಪ್‌ಬೋರ್ಡ್ಸ್ ಲಿಮಿಟೆಡ್, ಸುನಂದ ಅಗರಬತ್ತಿ, ಸುಜಾತ ಬಟ್ಟೆ ಗಿರಣಿ, ಹುಣಸೂರು ಪ್ಲೈವುಡ್ (ನಿಯಮಿತ), ಜೆ.ಕೆ. ಟೈರ್ಸ್ (ವಿಕ್ರಾಂತ್ ಟೈರ್ ಕಾರ್ಖಾನೆ) ಹಳೆಯ ಮತ್ತು ಅನೇಕ ಹೊಸ ಉದ್ಯಮಗಳಿವೆ. ಇದಲ್ಲದೆ ಜಿಲ್ಲೆಯಲ್ಲಿ ಬತ್ತದ ಮಿಲ್ಲುಗಳಿವೆ. ಹಾಗೂ ನೂಲು ತೆಗೆಯುವ, ಸುಗಂಧ ಎಣ್ಣೆಗಳ ತಯಾರಿಕೆಯ ಮತ್ತು ದನಗಳ ಮೇವಿನ ಕೈಗಾರಿಕೆಗಳಿವೆ.

ಜಿಲ್ಲೆಯಲ್ಲಿ 55 ಬಟ್ಟೆ ಕಾರ್ಖಾನೆಗಳು, 58 ರಸಾಯನಿಕ, 88 ಎಂಜನಿಯರಿಂಗ್, 202 ಇತರೇ ವಿವಿಧ ಕಾರ್ಖಾನೆಗಳು ಸೇರಿ ಒಟ್ಟು 403 ಕಾರ್ಖಾನೆಗಳಿದ್ದು 54,238 ಮಂದಿಗೆ ಉದ್ಯೋಗ ದೊರೆತಿದೆ. 6 ಕೈಗಾರಿಕಾ ಪ್ರದೇಶಗಳು, 526 ಕೈಗಾರಿಕಾ ಶೆಡ್ಡುಗಳು ಇವೆ (2001). ನಗರದ ಸುತ್ತ ಅನೇಕ ಹೊಸ ಕೈಗಾರಿಕೆಗಳು ಸ್ಥಾಪನೆಗೊಂಡಿದ್ದು ನಗರ ವಿಸ್ತೀರ್ಣವೂ ಬೆಳೆಯುತ್ತಿದೆ.

ಮೈಸೂರಿನಲ್ಲಿರುವ ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ಚಲುವಾಂಬ ಆಸ್ಪತ್ರೆ ಹೆಸರಾದವು. ಜಿಲ್ಲೆಯಲ್ಲಿ 14 ಅಲೋಪತಿ ಆಸ್ಪತ್ರೆಗಳು, ಭಾರತೀಯ ವೈದ್ಯ ಪದ್ಧತಿಯ 8 ಆಸ್ಪತ್ರೆಗಳು, ಯುನಾನಿ ಪದ್ಧತಿಯ ಆಸ್ಪತ್ರೆಗಳೂ ಇವೆ. ವಿವಿಧ ಸಂಸ್ಥೆಗಳ 57 ಸುಸಜ್ಜಿತ ಆಸ್ಪತ್ರೆಗಳು,

ಮಹಾರಾಜ ಕಾಲೇಜು

96 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉಪಕೇಂದ್ರಗಳೂ ಸೇರಿ ಒಟ್ಟು 510. ಕುಟುಂಬ ಕಲ್ಯಾಣ ಕೇಂದ್ರಗಳು, 41 ಪ್ರಾಥಮಿಕ ಆರೋಗ್ಯ ಘಟಕಗಳೂ ಇವೆ (2001). ಹೃದಯ ರೋಗಕ್ಕೆ ಸಂಬಂಧಿಸಿದ ಅತ್ಯಾಧುನಿಕ ತಾಂತ್ರಿಕ ಸೌಲಭ್ಯ ಹೊಂದಿದ ವಿಕ್ರಮ್ ಆಸ್ಪತ್ರೆಯೂ ಇಲ್ಲಿದೆ. ಬಸಪ್ಪ ಮೆಮೋರಿಯಲ್ ಆಸ್ಪತ್ರೆ, ಬಿ.ಜಿ.ಎಸ್. ಅಪೊಲೊ ಆಸ್ಪತ್ರೆ, ಭಾರತ್ ಆಸ್ಪತ್ರೆ ಮೊದಲಾದವು ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡ ವಿಶಿಷ್ಟ ಆಸ್ಪತ್ರೆಗಳು.

**ಶಿಕ್ಷಣ:** ಈ ಜಿಲ್ಲೆಯಲ್ಲಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳೂ ಮತ್ತು ಪ್ರೌಢಶಾಲೆಗಳೂ ಪ್ರಥಮ ದರ್ಜೆ ಕಾಲೇಜುಗಳೂ ತಾಂತ್ರಿಕ ಕಾಲೇಜುಗಳೂ 2 ವೈದ್ಯಕೀಯ ಕಾಲೇಜುಗಳೂ 2 ಆಯುರ್ವೇದ ಕಾಲೇಜುಗಳೂ 2 ಸಂಸ್ಕೃತ ಪಾಠಶಾಲೆಗಳೂ ಜೊತೆಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರ ತರಬೇತಿ ಕೇಂದ್ರಗಳೂ ವೃತ್ತಿ ಶಿಕ್ಷಣ

ಪ್ರಾರ್ಥನಾಮಂದಿರ, ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ

ಶಾಲೆಗಳೂ ಇವೆ. ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಅದಕ್ಕೆ ಸೇರಿದ ಮಾನಸ ಗಂಗೋತ್ರಿ ಸ್ನಾತಕೋತ್ತರ ಶಿಕ್ಷಣ ಕೇಂದ್ರವಿದೆ. ಜಿಲ್ಲೆಯ ವಿದ್ಯಾಭ್ಯಾಸ ಅಭಿವೃದ್ಧಿಯಲ್ಲಿ ಇಲ್ಲಿಯ ಖಾಸಗೀ ಸಂಘಸಂಸ್ಥೆಗಳ ಸೇವೆಯೂ ಗಣನೀಯವಾದದ್ದು. ಜಿಲ್ಲೆಯ ಸಾಕ್ಷರತಾ ಪ್ರಮಾಣ 63.69 ಇದೆ (2001). ಜಿಲ್ಲೆಯಲ್ಲಿ 2286 ಪ್ರಾಥಮಿಕ ಶಾಲೆ, 391 ಪ್ರೌಢಶಾಲೆ, 89 ಪದವಿಪೂರ್ವ ಕಾಲೇಜು, 42 ಸಾಮಾನ್ಯ ಶಿಕ್ಷಣ ಕಾಲೇಜು, 10 ಪಾಲಿಟೆಕ್ನಿಕ್, 6 ಎಂಜನಿಯರಿಂಗ್, 2 ಅಲೋಪತಿ ಮತ್ತು 2 ಭಾರತೀಯ ವೈದ್ಯಪದ್ಧತಿ, 2 ದಂತ ಶಿಕ್ಷಣ ಕಾಲೇಜು ಇವೆ. 114 ಗ್ರಂಥಾಲಯಗಳಿವೆ. ಮೈಸೂರು ಜಿಲ್ಲೆ ಮೊದಲಿನಿಂದಲೂ ಶಿಕ್ಷಣಕ್ಕೆ, ಸಂಗೀತ, ನೃತ್ಯ, ಲಲಿತಕಲೆಗಳಿಗೆ, ಶಿಕ್ಷಣ ತಜ್ಞರಿಗೆ, ಸಾಹಿತಿಗಳಿಗೆ ನೆಲೆಯಾದದ್ದೆಂದು ಪ್ರಸಿದ್ಧಿ ಪಡೆದಿದೆ.

**ಸಾರಿಗೆ ಸಂಪರ್ಕ:** ಈ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಪರ್ಕದೊಂದಿಗೆ ರಾಜ್ಯದ ಹೆದ್ದಾರಿಗಳ ಸಂಪರ್ಕವಿದೆ. ಇವುಗಳಲ್ಲದೆ ಜಿಲ್ಲಾ ರಸ್ತೆಗಳು, ತಾಲ್ಲೂಕು ಮಂಡಲಿ ರಸ್ತೆಗಳು, ಗ್ರಾಮೀಣ ಸಂಪರ್ಕ ರಸ್ತೆಗಳು ಇವೆ. ಇಲ್ಲಿಂದ ಮೈಸೂರು–ಬೆಂಗಳೂರು, ಮೈಸೂರು–ಅರಸೀಕೆರೆ, ಮೈಸೂರು–ಚಾಮರಾಜನಗರ ರೈಲು ಸಂಪರ್ಕವಿದೆ. ಮೈಸೂರು ಜಿಲ್ಲೆಯಲ್ಲಿ 20 ರೈಲು ನಿಲ್ದಾಣಗಳಿವೆ. 59 ಕಿಮೀ ಬ್ರಾಡ್‌ಗೇಜ್, 43 ಕಿಮೀ ಮೀಟರ್ ಗೇಜ್ ರೈಲು ಮಾರ್ಗವಿದೆ (2001). 79 ಕಿಮೀ ರಾಷ್ಟ್ರೀಯ ಹೆದ್ದಾರಿ, 338 ಕಿಮೀ ರಾಜ್ಯ ಹೆದ್ದಾರಿ, 1038 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳು, 209 ಕಿಮೀ ಇತರ ಜಿಲ್ಲಾ ರಸ್ತೆಗಳು ಇದ್ದು ಒಟ್ಟು 4,471 ಕಿಮೀ ಪಕ್ಕಾರಸ್ತೆಗಳಿವೆ (1999).

ಈ ಜಿಲ್ಲೆಯಲ್ಲಿ ವಿದ್ಯುತ್ತನ್ನು ಕೈಗಾರಿಕೆ, ಬೇಸಾಯ ಮತ್ತು ಗೃಹಬಳಕೆಗಳಿಗೆ ಬಳಸಲಾಗುತ್ತಿದೆ. ಇತ್ತೀಚೆಗೆ ನೀರಾವರಿ ಪಂಪು ಸೆಟ್ಟುಗಳಿಗಾಗಿ ವಿದ್ಯುತ್ತಿನ ಬೇಡಿಕೆ ಅಧಿಕಗೊಂಡಿದೆ. ಈ ಜಿಲ್ಲೆಯ ಪಟ್ಟಣಗಳು ಮತ್ತು ಅನೇಕ ಗ್ರಾಮಗಳು ವಿದ್ಯುತ್ತಿನ ಸೌಲಭ್ಯ ಪಡೆದಿವೆ.

**ಮಾರುಕಟ್ಟೆ ವ್ಯವಸ್ಥೆ:** ಈ ಜಿಲ್ಲೆಯ ಮೈಸೂರು, ಕೆ. ಆರ್. ನಗರ ಮತ್ತು ನಂಜನಗೂಡುಗಳಲ್ಲಿ ಕೃಷಿಮಾರುಕಟ್ಟೆಗಳಿವೆ. ಜೊತೆಗೆ ಅಧಿಕ ಸಂಖ್ಯೆಯ ಸಣ್ಣ ಮಾರುಕಟ್ಟೆಗಳೂ ಇದ್ದು ಸಂತೆಗಳೂ ನಡೆಯುತ್ತವೆ. ಮೈಸೂರಿನಲ್ಲಿರುವ ಒಟ್ಟು 13 ನಿಯಂತ್ರಿತ ಮಾರುಕಟ್ಟೆಗಳು ಜಿಲ್ಲೆಯ

ಅಧಿಕ ಉತ್ಪಾದನಾ ಸಾಮಗ್ರಿಗಳು ವಾರಕ್ಕೊಮ್ಮೆ ನಡೆಯುವ ಸಂತೆಗಳಲ್ಲಿ ವಿಲೇವಾರಿಯಾಗುತ್ತವೆ. ಹೆಚ್ಚುವರಿ ಸಾಮಗ್ರಿಗಳನ್ನು ಸುತ್ತಮುತ್ತಲಿನ ಜಿಲ್ಲೆಗಳಿಗೆ ಬೇಡಿಕೆಯ ಮೇಲೆ ಕಳಿಸುವುದುಂಟು. ಬತ್ತ, ರಾಗಿ, ಜೋಳ, ತೆಂಗು, ಬೆಲ್ಲ, ಹೊಂಗೆ ಮತ್ತು ಬೇವಿನಎಣ್ಣೆ ಮುಂತಾದವು ರಫ್ತಾಗುತ್ತವೆ. ಬತ್ತ ಮತ್ತು ಎಣ್ಣೆ ಸಂಸ್ಕರಣ ಘಟಕಗಳಿವೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹೆಚ್ಚು ತಂಬಾಕು ಬೆಳೆಯುವುದರಿಂದ ಅಲ್ಲಿ ಅದರ ಸಂಸ್ಕರಣ ಮತ್ತು ಮಾರುಕಟ್ಟೆ ಸಹಕಾರಿ ಸಂಘಗಳಿಂದ ನಡೆಯುತ್ತಿದೆ.



ಮೈಸೂರು ಅರಮನೆ

**ಆರ್ಥಿಕ ವ್ಯವಸ್ಥೆ:** ಮೈಸೂರು ಜಿಲ್ಲೆಯಲ್ಲಿ ಅನೇಕ ವಾಣಿಜ್ಯ, ಜಿಲ್ಲಾ ಸಹಕಾರ, ಭೂ ಅಭಿವೃದ್ಧಿ ಮುಂತಾದ ಬ್ಯಾಂಕುಗಳಿವೆ. ಇವು ಜಿಲ್ಲೆಯ ಕೈಗಾರಿಕೆಗಳಿಗೆ ಮತ್ತು ವಿವಿಧ ಕಸಬುದಾರರಿಗೆ ಆರ್ಥಿಕ ಸಹಕಾರ ನೀಡುವುವು. 2000–2001ರ ಸಾಲಿನಲ್ಲಿ 184 ವಾಣಿಜ್ಯ ಬ್ಯಾಂಕುಗಳು, 56 ಗ್ರಾಮೀಣ ಬ್ಯಾಂಕುಗಳು, 11 ನಗರ ಪ್ರದೇಶ ಸಹಕಾರ ಬ್ಯಾಂಕುಗಳು, 7 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಹಾಗೂ 1420 ಸಹಕಾರ ಮತ್ತು ಕೃಷಿ ಮಾರಾಟ ಸಂಘಗಳು ಇದ್ದವು.

**ಪ್ರವಾಸೋದ್ಯಮ:** ಮೈಸೂರು ಜಿಲ್ಲೆಯ ಸುತ್ತಲೂ ಕೆಲವು ಪ್ರವಾಸಿ ಕೇಂದ್ರಗಳಿದ್ದು, ಅವುಗಳಲ್ಲಿ ಈಗ ಕೆಲವು ಕೇಂದ್ರಗಳು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಿಗೆ ಸೇರಿಹೋಗಿವೆ. ಉದಾಹರಣೆಗೆ ಕಾವೇರಿ ಯಿಂದ ಸುತ್ತುವರಿಯಲ್ಪಟ್ಟ ಐತಿಹಾಸಿಕ ದ್ವೀಪ ಶ್ರೀರಂಗಪಟ್ಟಣ, ಇಲ್ಲಿಯ ರಂಗನಾಥಸ್ವಾಮಿ ದೇವಸ್ಥಾನ, ಮಸೀದಿ, ದರಿಯಾ ದೌಲತ್, ಟಿಪ್ಪುವಿನ ಅರಮನೆ ಮತ್ತು ಆತನ ಗೋರಿಯನ್ನು ಒಳಗೊಂಡ ಗುಂಬಜ್ ಮುಂತಾದವು. ಕಾವೇರಿಯಿಂದ ಸುತ್ತುವರಿದ ರಂಗನತಿಟ್ಟು ಒಂದು ದ್ವೀಪ. ಇಲ್ಲಿ ಖಂಡಾಂತರಗಳಿಂದ ಬರುವ ವೈವಿಧ್ಯಮಯ ಪಕ್ಷಿ ಸಂಕುಲ ಕಾಣಬಹುದು. ಈ ಪಕ್ಷಿಧಾಮದಲ್ಲಿ ದೋಣಿ ವಿಹಾರದ ಸೌಲಭ್ಯವೂ ಉಂಟು. ಹೊಯ್ಸಳ ಶಿಲ್ಪಕಲೆ ಕ್ಷೇತ್ರವಾದ ಸೋಮನಾಥಪುರದಲ್ಲಿ ಪ್ರಸಿದ್ಧ ಸೋಮನಾಥ ದೇವಾಲಯವಿದೆ. ಗೊಮ್ಮಟಗಿರಿ ಇನ್ನೊಂದು ಪ್ರವಾಸಿ ಕೇಂದ್ರ.

ತಲಕಾಡಿನ ಪಂಚಲಿಂಗೇಶ್ವರ ದೇವಾಲಯಗಳು, ನುಗು ಮತ್ತು ಕಬಿನಿ ಜಲಾಶಯಗಳು, ನಾಗರಹೊಳೆ ಅರಣ್ಯ ಮತ್ತು ಕಬಿನಿ ನದಿಯ ದಡದ ಮೇಲಿರುವ ನಂಜನಗೂಡಿನಲ್ಲಿ ನಂಜುಂಡೇಶ್ವರನ ದೇವಸ್ಥಾನ ಮುಂತಾದವು. ಮೈಸೂರು ನಗರವೇ ಒಂದು ಪ್ರವಾಸಿ ಆಕರ್ಷಣ ತಾಣವಾಗಿದೆ.

**ತಾಲ್ಲೂಕು:** ಜಿಲ್ಲೆಯ ಉತ್ತರಭಾಗದಲ್ಲಿರುವ ಈ ತಾಲ್ಲೂಕನ್ನು ವಾಯವ್ಯದಲ್ಲಿ ಕೃಷ್ಣರಾಜನಗರ, ಉತ್ತರದಲ್ಲಿ ಪಾಂಡವಪುರ ಮತ್ತು ಶ್ರೀರಂಗಪಟ್ಟಣ, ಪೂರ್ವದಲ್ಲಿ ತಿರುಮಕೂಡಲು ನರಸೀಪುರ, ದಕ್ಷಿಣದಲ್ಲಿ ನಂಜನಗೂಡು, ಪಶ್ಚಿಮದಲ್ಲಿ ಹುಣಸೂರು ಮತ್ತು ಹೆಗ್ಗಡೆದೇವನಕೋಟೆ ತಾಲ್ಲೂಕುಗಳು ಸುತ್ತುವರಿದಿವೆ. ಜಯಪುರ, ವರುಣ, ಇಲವಾಲ ಮತ್ತು ಮೈಸೂರು ಹೋಬಳಿಗಳು. 128 ಜನವಸತಿಯುಳ್ಳ ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 815.6 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 10,38,490. ಆಡಳಿತ ಕೇಂದ್ರ ಮೈಸೂರು ನಗರ.

ಈ ತಾಲ್ಲೂಕು ಅಸಮ ಇಳಿಜಾರಿನ ಬಯಲುಪ್ರದೇಶವಾಗಿದೆ. ಬೆಟ್ಟದಹಳ್ಳಿ ಭಾಗದಲ್ಲಿ ಗುಡ್ಡಗಳು ಹೆಚ್ಚಾಗಿವೆ. ತಾಲ್ಲೂಕಿನಲ್ಲಿರುವ ಬೆಟ್ಟಗಳಲ್ಲಿ ಚಾಮುಂಡಿಬೆಟ್ಟ (1063 ಮೀ) ಮುಖ್ಯವಾದದ್ದು. ಈ ತಾಲ್ಲೂಕಿನ ಪೂರ್ವ ಮತ್ತು ಉತ್ತರದಲ್ಲಿ ಕಾವೇರಿ ನದಿ, ದಕ್ಷಿಣದಲ್ಲಿ ಕಬಿನಿ ನದಿ ಇವೆಯಾದರೂ ತಾಲ್ಲೂಕಿನ ಸರಹದ್ದಿಗೆ ಇವು ಒಳಪಟ್ಟಿಲ್ಲ. ತಾಲ್ಲೂಕಿನ ವಾಯುಗುಣ ಹಿತಕರ. ವಾರ್ಷಿಕ ಸರಾಸರಿ ಮಳೆ ಸು. 834.80ಮಿಮೀ. ವಾಸ್ತವಿಕವಾಗಿ ಬಿದ್ದ ಮಳೆ 979.8 ಮಿಮೀ (2001). ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವಿಲ್ಲ. ಸೌದೆಗಾಗಿ ಉಪಯೋಗಿಸುವ ಸಣ್ಣ ಗಿಡಮರಗಳು ಮತ್ತು ಪೊದೆಗಳು ಕಂಡುಬರುತ್ತವೆ. ನೀಲಗಿರಿ ಮರಗಳ ಪ್ಲಾಂಟೇಷನ್‌ಗಳು ಮತ್ತು ಇತರ ಮಿಶ್ರ ಜಾತಿಯ ಹೊಂಗೆ, ಹುಣಿಸೆ, ಬನ್ನಿ ಮತ್ತು ಬಾಬುಲ್ ಮುಂತಾದ ಮರಗಳು ಕಂಡುಬರುತ್ತವೆ.

ಬತ್ತ, ರಾಗಿ, ಜೋಳ, ಹೊಗೆಸೊಪ್ಪು, ಕಡಲೆಕಾಯಿ, ಹತ್ತಿ, ಎಣ್ಣೆಬೀಜ ತಾಲ್ಲೂಕಿನ ಮುಖ್ಯ ಬೆಳೆಗಳು, ಕಬ್ಬು, ಹಿಪ್ಪುನೇರಳೆ ವಾಣಿಜ್ಯ ಬೆಳೆಗಳು. ಇಲ್ಲಿ ದನ, ಕುರಿ, ಎಮ್ಮೆ, ಮೇಕೆ ಮುಂತಾದ ಜಾನುವಾರು ಸಂಪತ್ತು ಇದೆ. 29 ಪಶುವೈದ್ಯಶಾಲೆಗಳಿವೆ. ಕೋಳಿ ಸಾಕಾಣಿಕೆಯಲ್ಲಿ ಪ್ರಥಮ ಸ್ಥಾನಪಡೆದಿದೆ. ಮತ್ಸ್ಯೋದ್ಯಮವಿದ್ದು 4753 ಟನ್ ಮೀನನ್ನು ಹಿಡಿಯಲಾಗಿದೆ (2001).

ಮೈಸೂರು ತಾಲ್ಲೂಕಿನಲ್ಲಿ 3 ಬಟ್ಟೆ, 32 ರಸಾಯನಿಕ, 41 ಎಂಜನಿಯರಿಂಗ್, 308 ಇತರೆ ಕಾರ್ಖಾನೆಗಳಿವೆ. ಒಟ್ಟು 384 ಕಾರ್ಖಾನೆಗಳಿದ್ದು 29,753 ಮಂದಿ ಉದ್ಯೋಗಿಗಳಿದ್ದಾರೆ (2001). ಮೈಸೂರು ತಾಲ್ಲೂಕಿನೊಳಗೆ ಮತ್ತು ಅದರ ಸುತ್ತಮುತ್ತ ಹೊಸಹೊಸ ಉದ್ದಿಮೆಗಳು ಸ್ಥಾಪನೆಯಾಗಿ ಕೈಗಾರಿಕೀಕರಣ ತ್ವರಿತಗತಿಯಲ್ಲಿ ಮುಂದು ವರೆಯುತ್ತಿದೆ.

ರಂಗಚಾರ್ಲು ಪುರಭವನ

ಈ ತಾಲ್ಲೂಕಿಗೆ ರಸ್ತೆ ಮತ್ತು ರೈಲುಮಾರ್ಗಗಳ ಸಂಪರ್ಕವಿದೆ. ಇಲ್ಲಿಂದ ನಂಜನಗೂಡು, ಚಾಮರಾಜನಗರ, ಅರಸೀಕೆರೆ ಮತ್ತು ಬೆಂಗಳೂರುಗಳೊಡನೆ ರೈಲು ಸಂಪರ್ಕ ಇದೆ. ತಾಲ್ಲೂಕಿನಲ್ಲಿ 18 ಕಿಮೀ ಬ್ರಾಡ್‌ಗೇಜ್, 18 ಕಿಮೀ ಮೀಟರ್‌ಗೇಜ್ ಒಟ್ಟು 36 ಕಿಮೀ ರೈಲುಮಾರ್ಗವಿದೆ. 31 ಕಿಮೀ ರಾಷ್ಟ್ರೀಯ ಹೆದ್ದಾರಿ, 68 ಕಿಮೀ ರಾಜ್ಯ

ಹೆದ್ದಾರಿ, 172 ಕಿಮೀ ಮುಖ್ಯ ಜಿಲ್ಲಾ ರಸ್ತೆ ಒಳಗೊಂಡಂತೆ ಒಟ್ಟು 557 ಪಕ್ಕಾರಸ್ತೆ ಸೇರಿಸಿ ಒಟ್ಟು 1374 ಕಿಮೀ ರಸ್ತೆಗಳಿದ್ದವು (2001).

ಮೈಸೂರು ಜಿಲ್ಲಾಧಿಕಾರಿ ಕಛೇರಿ

ತಾಲ್ಲೂಕಿನ ವ್ಯಾಪಾರ ವಾಣಿಜ್ಯಕ್ಕೆ ಆರ್ಥಿಕ ಅನುಕೂಲತೆ ಮತ್ತು ಸಹಕಾರ ನೀಡಲು ಅನೇಕ ವಾಣಿಜ್ಯ, ಸಹಕಾರ ಬ್ಯಾಂಕುಗಳಿವೆ. 2001ರ ಗಣತಿಯಂತೆ ತಾಲ್ಲೂಕಿನಲ್ಲಿ 130 ವಾಣಿಜ್ಯ, 10 ಗ್ರಾಮೀಣ, 10 ನಗರ ಪ್ರದೇಶದ ಸಹಕಾರಿ ಮತ್ತು 1 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿವೆ. ಇವುಗಳಲ್ಲಿ ಹೆಚ್ಚಿನವು ನಗರ ಪ್ರದೇಶದಲ್ಲೆ ಇವೆ (2001). ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳೂ ಸ್ನಾತಕೋತ್ತರ ಶಿಕ್ಷಣಕೇಂದ್ರ ಮಾನಸಗಂಗೋತ್ರಿ, ಇವುಗಳ ಜೊತೆಗೆ ವಿವಿಧ ಶಾಲಾ ಕಾಲೇಜುಗಳೂ ವೃತ್ತಿಶಿಕ್ಷಣ ಶಾಲೆಗಳೂ ವೈದ್ಯಕೀಯ, ಎಂಜಿನಿಯರಿಂಗ್, ವಾಣಿಜ್ಯ, ಕಾನೂನು ಕಾಲೇಜುಗಳೂ ಇದ್ದು ತಾಲ್ಲೂಕುಗಳಲ್ಲಿ ಸಾಕ್ಷರತಾ ಪ್ರಮಾಣ 66.98 ಇದ್ದಿತು (1991). 630 ಪ್ರಾಥಮಿಕ ಶಾಲೆಗಳು, 182 ಪ್ರೌಢಶಾಲೆಗಳು, 45 ಪದವಿಪೂರ್ವ, 31 ಸಾಮಾನ್ಯ ಶಿಕ್ಷಣ, 9 ಪಾಲಿಟೆಕ್ನಿಕ್, 5 ಎಂಜನಿಯರಿಂಗ್, ವೈದ್ಯಕೀಯ, ದಂತವೈದ್ಯ, ಆಯುರ್ವೇದ ಮುಂತಾದ ವೃತ್ತಿಶಿಕ್ಷಣ ಕಾಲೇಜುಗಳಿವೆ (2001). ಈ ತಾಲ್ಲೂಕಿನಲ್ಲಿ ಜಿಲ್ಲಾ ಹಾಗು ತಾಲ್ಲೂಕು ಸರ್ಕಾರಿ ಆಡಳಿತ ಕಚೇರಿಗಳಿವೆ. ಜಿಲ್ಲಾ ನ್ಯಾಯಾಲಯಗಳೂ ಕೇಂದ್ರ ಸರ್ಕಾರದ ಕೆಲವು ಆಡಳಿತ ಕಚೇರಿಗಳೂ ಇಲ್ಲಿವೆ.

**ನಗರ:** ಮೈಸೂರು ವಿಭಾಗ, ಜಿಲ್ಲೆ ಮತ್ತು ತಾಲ್ಲೂಕಿನ ಹಾಗೂ ಹೋಬಳಿಯ ಆಡಳಿತ ಕೇಂದ್ರ. ಕರ್ನಾಟಕದ ರಾಜಧಾನಿ ಬೆಂಗಳೂರಿಗೆ 138 ಕಿಮೀ ದೂರದಲ್ಲಿದೆ. ನಗರ ವಿಸ್ತೀರ್ಣ 37.30 ಚ.ಕಿಮೀ ಇದ್ದದ್ದು ಹೊಸ ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಅನೇಕ ಹೊಸ ಬಡಾವಣೆಗಳು ನಿರ್ಮಾಣಗೊಂಡು ವಿಸ್ತೀರ್ಣ ಮತ್ತು ಜನಸಂಖ್ಯೆ ಹೆಚ್ಚಿದೆ. ನಗರ ಪಾಲಿಕೆ ವ್ಯಾಪ್ತಿಯ ಜನಸಂಖ್ಯೆ 7,73,889. ಕರ್ನಾಟಕದ ಮುಖ್ಯ ನಗರಪಾಲಿಕೆಗಳಲ್ಲಿ ಇದೂ ಒಂದು. ಅನೇಕ ಬಡಾವಣೆಗಳನ್ನೊಳಗೊಂಡ ವಿಶಾಲ ಮೈಸೂರು ನಗರದಲ್ಲಿ 3,99,904 ಮಂದಿ ಗಂಡಸರು, 3,85,896 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 7,85,800 (2001). ನಗರ ಸಮುದ್ರಮಟ್ಟದಿಂದ 763 ಮೀ ಎತ್ತರದಲ್ಲಿದೆ. ಉತ್ತರಕ್ಕೆ ಅಕ್ಷಾಂಶ $12^0$ 18" ನಿಂದ ಪೂರ್ವರೇಖಾಂಶ $76^0$ 12" ರಲ್ಲಿದೆ. ಸುತ್ತಲೂ ದಿಣ್ಣೆಯಂತಹ ಪ್ರದೇಶದಿಂದ ಮತ್ತು ಆಗ್ನೇಯದಲ್ಲಿ ಚಾಮುಂಡಿಬೆಟ್ಟದಿಂದ ಆವೃತವಾಗಿರುವ ನಗರದ ಹವೆ ಮಾರ್ಚಿ, ಏಪ್ರಿಲ್ ಮತ್ತು ಮೇ ತಿಂಗಳು ಬಿಟ್ಟು ಮಿಕ್ಕ ಕಾಲದಲ್ಲಿ ತಂಪಾಗಿರುತ್ತದೆ.

**ಶಿಕ್ಷಣ:** ನಾಡಿನ ಸಾಂಸ್ಕೃತಿಕ ರಾಜಧಾನಿ ಎನಿಸಿದ ಮೈಸೂರು ನಗರ ಕರ್ನಾಟಕ ರಾಜ್ಯದ ಮುಖ್ಯ ಶಿಕ್ಷಣ ಕೇಂದ್ರಗಳಲ್ಲಿ ಒಂದಾಗಿದೆ. ಮೈಸೂರು ಅರಸರ ಕಾಲದಿಂದಲೂ ಇಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವಿದೆ. ಅನೇಕ ಪ್ರಾಥಮಿಕ, ಮಾಧ್ಯಮಿಕ ಪ್ರೌಢಶಾಲೆಗಳೂ ತಾಂತ್ರಿಕ ಹಾಗೂ ವೃತ್ತಿಶಿಕ್ಷಣ ಶಾಲೆಗಳೂ ಕಿವುಡಮೂಗರ ಪಾಠಶಾಲೆಯೂ ಇವೆ. ಮಾನವಿಕ ಮತ್ತು ವಿಜ್ಞಾನ, ವಾಣಿಜ್ಯ, ನ್ಯಾಯಶಾಸ್ತ್ರ, ಲಲಿತಕಲೆ, ವ್ಯಾಯಾಮ, ಶಿಕ್ಷಣ, ತಾಂತ್ರಿಕ ಹಾಗೂ ವೈದ್ಯಕೀಯ ಮುಂತಾದ ಕಾಲೇಜುಗಳಿವೆ. 1916 ರಲ್ಲಿ ಸ್ಥಾಪನೆಯಾದ ಪ್ರಸಿದ್ಧ ಮೈಸೂರು ವಿಶ್ವವಿದ್ಯಾನಿಲಯವಿದೆ. ಮಾನಸಗಂಗೋತ್ರಿ ಸ್ನಾತಕೋತ್ತರ ಶಿಕ್ಷಣ ಕೇಂದ್ರ ಇದಕ್ಕೆ ಸೇರಿದ್ದು ಉನ್ನತ ಮಟ್ಟದ ಶಿಕ್ಷಣ ಮತ್ತು ಸಂಶೋಧನೆಗೆ ಅವಕಾಶವಿದೆ. 1887 ರಲ್ಲಿ ಸ್ಥಾಪನೆಯಾದ ಪ್ರಾಚ್ಯವಿದ್ಯಾ ಸಂಶೋಧನಾಲಯವಿದೆ **(ನೋಡಿ)**. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಭಾರತೀಯ ಭಾಷಾ ಸಂಸ್ಥಾನ, ಅಖಿಲ ಭಾರತ ವಾಕ್ ಶ್ರವಣಸಂಸ್ಥೆ ಮತ್ತು ಆಡಳಿತಾಧಿಕಾರಿಗಳ ತರಬೇತಿ ಕೇಂದ್ರ ಮುಂತಾದುವು ಇವೆ. ಕೇಂದ್ರ ಆಹಾರ ಸಂಶೋಧನಾಲಯ ಮತ್ತು ರಕ್ಷಣಾ ಖಾತೆಗೆ ಸೇರಿದೆ ಆಹಾರ ಸಂಶೊಧನಾಲಯ, (ಡಿ.ಎಫ್.ಆರ್.ಎಲ್.) ರೇಷ್ಮೆ ಸಂಶೋಧನಾಲಯ, ಸರ್ಕಾರಿ ಸಾರ್ವಜನಿಕ

ಸೇಂಟ್ ಫಿಲೋಮಿನ ಚರ್ಚ್

ಗ್ರಂಥಾಲಯ, ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮುಂತಾದವುಗಳಿವೆ. ಆಕಾಶವಾಣಿ ಕೇಂದ್ರವಿದೆ.

ಮೈಸೂರು ಅರಮನೆ ಪ್ರಾಚೀನ ಕಲಾಕೃತಿಗಳ ಒಂದು ಅದ್ಭುತ ಕಟ್ಟಡ. ಇದನ್ನು 1911–12 ರಲ್ಲಿ ಸುಮಾರು 42 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ನಿರ್ಮಿಸಲಾಗಿದೆ. ಜಗನ್ಮೋಹನ ಅರಮನೆಯಲ್ಲಿ ಚಾಮರಾಜೇಂದ್ರ ಚಿತ್ರ ಶಾಲೆಯಿದೆ. ಮೈಸೂರಿನ ಚಾಮರಾಜೇಂದ್ರ

ಮೃಗಾಲಯ ಬಲು ಪ್ರಸಿದ್ಧವಾದದ್ದು. ಮೈಸೂರು ನಗರಕ್ಕೆ ಹತ್ತಿರವಾದ ಕೃಷ್ಣರಾಜಸಾಗರ ಮತ್ತು ಬೃಂದಾವನ ಪ್ರವಾಸಿ ಆಕರ್ಷಣೆಗಳಲ್ಲಿ ಒಂದು.

**ಕೈಗಾರಿಕೆ:** ಮೈಸೂರು ನಗರದ ತೀವ್ರ ಬೆಳೆವಣಿಗೆಗೆ ಇತ್ತೀಚಿನ ಕೈಗಾರಿಕೀಕರಣ ಮುಖ್ಯವಾಗಿದೆ. ಅವುಗಳಲ್ಲಿ ರಫ್ತು ಸಾಮಗ್ರಿಗಳ ಉತ್ಪಾದನೆ ಮಾಡುವ ಕೈಗಾರಿಕೆಗಳು ಮತ್ತು ಸ್ಥಳೀಯ ನಿತ್ಯಬಳಕೆಯ ಅವಶ್ಯಕತೆ ಪೂರೈಸುವ ಕೈಗಾರಿಕೆಗಳಿವೆ. ನಗರ ಮತ್ತು ಅದರ ಸುತ್ತ ಇರುವ ಕೈಗಾರಿಕೆಗಳಲ್ಲಿ ಸರ್ಕಾರಿ ರೇಷ್ಮೆ ಬಟ್ಟೆ ತಯಾರಿಕಾ ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆ, ಅಗರಬತ್ತಿ ತಯಾರಿಕಾ ಕಾರ್ಖಾನೆಗಳು, ಬೀಡಿ ತಯಾರಿಕೆ ಮುಂತಾದ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿವೆ.

ಜರ್ಮನ್ ಸರ್ಕಾರದ ನೆರವಿನಿಂದ ಪ್ರಾರಂಭಿಸಿದ್ದ ದೊಡ್ಡ ಮುದ್ರಣಾಲಯ, ಫಾಲ್ಕನ್ ಮತ್ತು ವಿಕ್ರಾಂತ್ ಟೈರ್ಸ್ ಕಾರ್ಖಾನೆಗಳು, ಇವಲ್ಲದೆ ಅನೇಕ ಮರ ಕೊಯ್ಯುವ ಕಾರ್ಖಾನೆಗಳೂ ಅಕ್ಕಿ ಗಿರಣಿಗಳೂ ಮುದ್ರಣಾಲಯ ಗಳೂ ವಿದ್ಯುತ್ ಮಗ್ಗಗಳೂ ಮತ್ತು ಕೈಮಗ್ಗಗಳೂ ಹೆಂಚು ಮತ್ತು ಇಟ್ಟಿಗೆ ಕಾರ್ಖಾನೆಗಳೂ ಸೇರಿದಂತೆ. ಮೈಸೂರು ಇಂದು ಬೆಂಗಳೂರಿಗೆ ಪರ್ಯಾಯವಾಗಿ ಕೈಗಾರಿಕೆಗಳನ್ನು ಮತ್ತು ಮಾಹಿತಿ ತಂತ್ರಜ್ಞಾನ ಉದ್ಯಮ ಗಳನ್ನು ಆಕರ್ಷಿಸುತ್ತಿದೆ. ಇನ್‌ಫೋಸಿಸ್ ಸಂಸ್ಥೆ ಇಲ್ಲಿ ದೊಡ್ಡ ಪ್ರಮಾಣ ದಲ್ಲಿ ಬಂಡವಾಳ ಹೂಡಿದೆ.

ಭಾರತದ ಪ್ರಾಚೀನ ನಗರಗಳಲ್ಲಿ ಕರ್ನಾಟಕದ ಮೈಸೂರು ನಗರವೂ ಒಂದು ಹಿಂದಿನಿಂದಲೂ ಸುಂದರವಾದ ಹಾಗೂ ಚೊಕ್ಕವಾದ ನಗರವೆಂದು ಹೆಸರು ಪಡೆದಿದೆ. ಮಹಾಭಾರತದ ಕಾಲದಲ್ಲಿ ಮಹಿಷನಾಡು ಎಂಬ ಉಲ್ಲೇಖ ಕಂಡುಬರುತ್ತದೆಂದೂ ಹೇಳುವರು. ಸ್ಥಳ ಪುರಾಣದ ಪ್ರಕಾರ ಹಿಂದೆ ಮಹಿಷನೆಂಬ ರಾಕ್ಷಸರಾಜನಿದ್ದನೆಂದೂ ಪಾರ್ವತಿದೇವಿ ಚಾಮುಂಡೇಶ್ವರಿಯಾಗಿ ಬಂದು ಅವನನ್ನು ಸಂಹರಿಸಿದ್ದರಿಂದ ಆಕೆಗೆ ಮಹಿಷಾಸುರಮರ್ದಿನಿ ಎಂಬ ಹೆಸರು ಬಂತೆಂದೂ ಹೇಳುವರು. ಆ ಮಹಿಷನ ಊರೇ ಮುಂದೆ ಮೈಸೂರು ಆಯಿತೆಂದೂ ಪ್ರತೀತಿ. ಈ ಮಹಿಷಮಂಡಲದ ಉಲ್ಲೇಖ ಅಶೋಕನ ಕಾಲದಲ್ಲೂ ಕಂಡುಬರುತ್ತದೆ. ಆತ ಬೌದ್ಧಧರ್ಮ ಪ್ರಚಾರಕರನ್ನು ಮಹಿಷಮಂಡಲಕ್ಕೆ ಕಳುಹಿಸಿದ್ದನಂತೆ.

ಅರಮನೆ ವೃತ್ತ

ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಎರುಮೈ ನಾಡು ಎಂದು ಮೈಸೂರಿನ ಬಗ್ಗೆ ಉಲ್ಲೇಖವಿದೆ. ಅನೇಕ ಶಾಸನಗಳಲ್ಲಿ ಮೈಸೂರನ್ನು ಮಹಿಷೂರು, ಮಹಿಷಪುರ, ಮಹಿಷೂರಪುರ, ಮಹಿಷಾಸುರಪುರ ಎಂದು ಉಲ್ಲೇಖಿ ಸಿರುವುದು ಕಂಡುಬಂದಿದೆ. ಮೈಸುನಾಡು 70 ಅಸ್ತಿತ್ವದಲ್ಲಿತ್ತೆಂದೂ ನಂದಿಗುಂದ ಗ್ರಾಮ ಮೈಸುನಾಡು 70 ಕ್ಕೆ ಸೇರಿತು. (ನಂಜನಗೂಡು ಶಾಸನ, 1021) ಎಂದೂ ತಿಳಿದುಬರುತ್ತದೆ. 1499 ಮತ್ತು ಅನಂತರದ ಶಾಸನಗಳಲ್ಲಿ ಮೈಸೂರು ಎಂಬ ಹೆಸರಿನ ಸ್ಪಷ್ಟ ಉಲ್ಲೇಖ ಕಂಡುಬರು ತ್ತದೆ. ಮುಂದೆ ಸು. 1524 ರಲ್ಲಿ ಬೆಟ್ಟದ ಚಾಮರಾಜನೆಂಬ ಅರಸು ಮೈಸೂರನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ರಾಜ್ಯಭಾರ ನಡೆಸ ತೊಡಗಿದನೆಂದೂ 1610 ರಲ್ಲಿ ರಾಜ ಒಡೆಯರು ವಿಜಯನಗರದ ಪ್ರತಿನಿಧಿ ಶ್ರೀರಂಗರಾಯನಿಂದ ಶ್ರೀರಂಗಪಟ್ಟಣವನ್ನು ಪಡೆದುಕೊಂಡರೆಂದೂ ತಿಳಿದುಬರುತ್ತದೆ. ಟಿಪ್ಪುವಿನ ಮರಣದ ತನಕ (1799) ಶ್ರೀರಂಗಪಟ್ಟಣ ಮೈಸೂರು ರಾಜ್ಯದ ರಾಜಧಾನಿಯಾಗಿತ್ತು. ಭಾರತಕ್ಕೆ ಸ್ವಾತಂತ್ರ್ಯ ಲಭಿಸು ವತನಕ ಮೈಸೂರು ನಗರ ಮೈಸೂರು ರಾಜ್ಯದ ರಾಜಧಾನಿಯಾಗಿತ್ತು.

*

**ಮೈಸೂರು ಅನಂತಸ್ವಾಮಿ:** 1936–95. ಸುಗಮ ಸಂಗೀತಕ್ಕೆ ಹೊಸ ಆಯಾಮ ನೀಡಿದ ಪ್ರಸಿದ್ಧ ಗಾಯಕರು. ಕನ್ನಡ ಭಾವಗೀತೆಗಳನ್ನು ಕ್ಯಾಸೆಟ್ ಮೂಲಕ ಮಾರುಕಟ್ಟೆಗೆ ತಂದ ಮೊದಲಿಗರು. ವಿದೇಶಗಳಲ್ಲಿ ಮೊದಲಬಾರಿಗೆ ಕನ್ನಡ ಭಾವಗೀತೆಗಳ ವಾದ್ಯವೃಂದ ನಡೆಸಿದವರು. ಇವರಿಂದ ಕನ್ನಡ ಸುಗಮ ಸಂಗೀತ ಗಾಯಕರ ಒಂದು ಪರಂಪರೆಯೇ ಕರ್ನಾಟಕದಲ್ಲಿಸೃಷ್ಟಿಯಾಯಿತು.



ಇವರು 1936 ಅಕ್ಟೋಬರ್ 25 ರಂದು ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಜೆ.ಪಿ. ಸುಬ್ಬರಾವ್, ತಾಯಿ ಕಮಲಮ್ಮ. ಇವರ ತಾತ ಚಿಕ್ಕರಾಮರಾಯರು ಅರಮ ನೆಯ ಸಂಗೀತಗಾರರಾಗಿ 'ಸಂಗೀತ ರತ್ನ' ಎನಿಸಿಕೊಂಡ ವರು. ಅವರಿಗೆ ತಾಳಬ್ರಹ್ಮ ಎಂಬ ಬಿರುದೂ ಇತ್ತು. ಇಂಥ ಕೌಟುಂಬಿಕ ಪರಿಸರದಿಂದ ಅನಂತಸ್ವಾಮಿಯವರಿಗೆ ಬಾಲ್ಯದಲ್ಲೇ ಸಂಗೀತದ ಒಡನಾಟ ಲಭಿಸಿತು. ಕೃಷ್ಣಮೂರ್ತಿ, ಪಲ್ಲಡಂ ನಾಗರಾಜರಾಯರ ಬಳಿ ಸಂಗೀತಾಭ್ಯಾಸ ಮಾಡಿದರು. ಮೈಸೂರಿನ ಯುವರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಓದಿದರು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ದೇಶಭಕ್ತಿಗೀತೆಗಳ ಗಾಯನ ಇವರ ಮೇಲೆ ಪ್ರಭಾವವನ್ನುಂಟುಮಾಡಿತು. ಆ ಕಾಲದ ಪ್ರಸಿದ್ಧ ಗಾಯಕ ರಾದ ಎಚ್.ಎಸ್.ರಾಮಚಂದ್ರರ ಪ್ರಭಾವವೂ ಇವರ ಮೇಲಾಯಿತು. ಪ್ರಸಿದ್ಧ ಗಾಯಕರಾದ ಕಾಳಿಂಗರಾಯರ ಗಾಯನದ ಮೋಡಿಗೆ ಮರುಳಾದ ಇವರು ಕಾಳಿಂಗ ರಾಯರನ್ನು ತಮ್ಮ ಗುರುಗಳಾಗಿ ಸ್ವೀಕರಿಸಿದರು.

ಮಹಾರಾಜ ಕಾಲೇಜಿನ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪು ರಚನೆಗಳನ್ನೇ ಹಾಡಿ ತಮ್ಮ ಗಾಯನ ಜೀವನದ ಮೊದಲ ಯತ್ನ ಮಾಡಿದರು. ಕುವೆಂಪು ಅವರು ಇವರ ಗಾಯನವನ್ನು ಮೆಚ್ಚಿದ್ದರು. ಇವರ ರಾಗ ಸಂಯೋಜನೆಗಳನ್ನು ಅಪಾರವಾಗಿ ಮೆಚ್ಚಿದ ಕಾಳಿಂಗರಾಯರು ಇವರಿಗೆ ಪ್ರೋತ್ಸಾಹ ನೀಡಿದರು. ಸಿನಿಮಾ ಗೀತೆ ಹಾಡುವ ಹುಚ್ಚಿನಿಂದ ಮದರಾಸು ಸೇರಿದ್ದ ಇವರನ್ನು ಸುಗಮ ಸಂಗೀತಕ್ಕೆ ಮರಳುವಂತೆ ಮಾಡಿದವರೇ ಕಾಳಿಂಗರಾಯರು.

ಎಲ್.ಆರ್.ಡಿ.ಇ. ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದ ಅನಂತಸ್ವಾಮಿ ಯವರು ತಮ್ಮ ಪ್ರೀತಿಯ ಹಾಡುಗಾರಿಕೆಯನ್ನು ತಪಸ್ಸಾಗಿ ಕೈಗೊಂಡರು. ಉದ್ಯೋಗನಿಮಿತ್ತ ಬೆಂಗಳೂರಲ್ಲಿ ನೆಲೆಸಿದ ಇವರು ಪ್ರಭಾತ್ ಕಲಾವಿ ದರು ಹಾಗೂ ಎಂ. ಎಸ್. ಐ.ಎಲ್. ಸಂಗೀತ ಕಾರ್ಯಕ್ರಮಗಳಿಂದ

ಜನಪ್ರಿಯರಾದರು. ಪ್ರಭಾತ್ ಕಲಾವಿದರು ತಂಡದ ಕಿಂದರಿ ಜೋಗಿ, ಪುಣ್ಯಕೋಟಿ, ಸಿಂಡ್ರೆಲಾ, ಲವಕುಶ, ಧರ್ಮಭೂಮಿ, ಕರ್ನಾಟಕ ವೈಭವ ಮೊದಲಾದ ನೃತ್ಯ ರೂಪಕಗಳಿಗೆ ಇವರು ಮಾಡಿದ ಸಂಗೀತ ಸಂಯೋಜನೆ ಇಂದಿಗೂ ಜನಪ್ರಿಯವಾಗಿವೆ.

ಚಿತ್ರಗೀತೆಗಳ ಪ್ರಾಬಲ್ಯವನ್ನೂ ಮೀರಿನಿಂತು ಕನ್ನಡ ಭಾವಗೀತೆಗಳ ಕ್ಯಾಸೆಟ್ ಯುಗಕ್ಕೆ ಕಾರಣವಾದ ಇವರ ಮೊದಲ ಕ್ಯಾಸೆಟ್ 'ನಿತ್ಯೋತ್ಸವ'. ಕನ್ನಡದ ಬಹುಪಾಲು ಕವಿಗಳು ಇವರ ಗಾಯನದಿಂದ ಜನಮನದಲ್ಲಿ ನೆಲೆ ನಿಂತರೆಂದರೆ ಅದು ಅತಿಶಯೋಕ್ತಿಯಲ್ಲ. ಭಾವಸಂಗಮ, ಕೆಂದಾವರೆ, ನಾಕುತಂತಿ, ದುಂದುಭಿ, ತಾರಕ್ಕ ಬಿಂದಿಗೆ, ದೀಪೋತ್ಸವ, ಹೇಳ್ತೀನಿ ಕೇಳಾ ಸುಮಧುರ ಮೊದಲಾದವು ಇವರ ಜನಪ್ರಿಯ ಧ್ವನಿಸುರುಳಿಗಳು.

ಓನನ್ನ ಚೇತನಾ, ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ, ಎದೆತುಂಬಿ ಹಾಡಿದೆನು, ಜೋಗದ ಸಿರಿ ಬೆಳಕಿನಲ್ಲಿ, ಬೆಣ್ಣೆ ಕದ್ದ ನಮ್ಮ ಕೃಷ್ಣ ಮೊದಲಾದ ಹಾಡುಗಳು ಇವರ ಗಾಯನದಿಂದ ಚಿರಸ್ಥಾಯಿಯಾಗಿವೆ, ಸುಗಮ ಸಂಗೀತದ ಸುಮಧುರ ಫಲಗಳಾಗಿವೆ, ಶ್ರೋತೃಗಳನ್ನು ಮೋಡಿ ಮಾಡಿವೆ. ಹೊಸ ಗಾಯಕರನ್ನು ರೂಪಿಸಿ ಅವರಿಗೆ ವೇದಿಕೆ ನೀಡಿದ್ದು ಅನಂತಸ್ವಾಮಿಯವರ ಇನ್ನೊಂದು ಹೆಗ್ಗಳಿಕೆ.

ಇವರ ಪ್ರತಿಭೆಗೆ ಅಸಂಖ್ಯ ಪ್ರಶಸ್ತಿಗಳು ಸಂದಿವೆ. ಇವುಗಳಲ್ಲಿ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ, ರಾಜ್ಯೋತ್ಸವ ಪ್ರಶಸ್ತಿ, ಸುಗಮ ಸಂಗೀತ ಸಿರಿ ಮೊದಲಾದವು ಪ್ರಮುಖವಾದವು.

ಇವರು 1995 ಜನವರಿ 9ರಂದು ನಿಧನರಾದರು. ಈಗ ಇವರ ಮಕ್ಕಳು (ರಾಜು ಅನಂತಸ್ವಾಮಿ) ಇವರ ಗಾಯನ ಪರಂಪರೆಯನ್ನು ಮುಂದುವರಿಸಿದ್ದಾರೆ. ಇವರ ಪತ್ನಿ ಶಾಂತಾ ಕೂಡ ಸಂಗೀತ ಪ್ರೇಮಿ. **(ಎಸ್.ಬಿ.ಎಚ್.ಎ.)**

**ಮೈಸೂರು ಒಡೆಯರು:** 15ನೆಯ ಶತಮಾನದ ಆದಿಭಾಗದಿಂದ 1948ರವರೆಗೂ ಉಳಿದುಬಂದ ರಾಜಮನೆತನ. ಮೈಸೂರು ಜಿಲ್ಲೆಯ ಕೆಲವು ಭಾಗಗಳನ್ನು ಒಳಗೊಂಡಿದ್ದ ಚಿಕ್ಕ ಪಾಳೆಯಪಟ್ಟಿನಲ್ಲಿ ಅಧಿಕಾರ ಸ್ಥಾಪಿಸಿ, ವಿಜಯನಗರದ ಸಾಮಂತರಾಗಿ ಆಳುತ್ತಿದ್ದರು. ರಕ್ಕಸತಂಗಡಿ ಯುದ್ಧದ ತರುವಾಯ ವಿಜಯನಗರ ಸಾಮ್ರಾಜ್ಯ ಶಿಥಿಲವಾಗುತ್ತಿದ್ದ ಕಾಲದಲ್ಲಿ ಕೆಲಕಾಲ ಸಾಮಂತರಾಗಿ, ಅನಂತರ ಸ್ವತಂತ್ರರಾಗಿ ದಕ್ಷಿಣ ಕರ್ನಾಟಕದ ಹಲವು ಭಾಗಗಳನ್ನು ಆಕ್ರಮಿಸಿಕೊಂಡು ಮುಂದೆ ತಮ್ಮ ಪ್ರಭಾವವನ್ನು ಸುತ್ತಣ ಪ್ರದೇಶಗಳಿಗೂ ವಿಸ್ತರಿಸಿ, 18ನೆಯ ಶತಮಾನದ ಉತ್ತರಾರ್ಧದಲ್ಲಿ ಕೆಲಕಾಲ ಲುಪ್ತವಾಗಿದ್ದ ಅಧಿಕಾರವನ್ನು ಮತ್ತೆ ಬ್ರಿಟಿಷರ ಸಹಾಯದಿಂದ ಪಡೆದು, ಅವರ ಅಧೀನತ್ವದಲ್ಲಿ ಇತ್ತೀಚೆಗೆ ಈ ರಾಜ್ಯ ಭಾರತ ಒಕ್ಕೂಟದಲ್ಲಿ ಸೇರಿಹೋಗುವವರೆಗೂ (1948) ಆಳಿದ ರಾಜಮನೆತನ. ವಿಜಯನಗರ ಸಾಮ್ರಾಜ್ಯ ನಶಿಸಿದಮೇಲೆ ಆ ರಾಜ್ಯ ಬಿತ್ತಿ ಬೆಳೆಸಿದ ಹಲವು ಧ್ಯೇಯ ಮತ್ತು ಸಂಪ್ರದಾಯಗಳನ್ನು ಮುಂದುವರೆಸಿದ ಕೀರ್ತಿ ಮೈಸೂರಿನ ಈ ಒಡೆಯರ ವಂಶದ್ದು. ಈ ದೃಷ್ಟಿಯಲ್ಲಿ ಮೈಸೂರು ಒಡೆಯರ ರಾಜ್ಯ ದಕ್ಷಿಣ ಭಾರತದಲ್ಲಿ ಆಳಿದ ಇತರ ಎಲ್ಲ ವಿಜಯನಗರೋತ್ತರ ರಾಜ್ಯಗಳಿಗೂ ಶಿಖರಪ್ರಾಯವಾಗಿತ್ತು.

**ರಾಜಕೀಯ ಇತಿಹಾಸ:** ಶ್ರೀರಂಗಪಟ್ಟಣ ಮತ್ತು ಮೈಸೂರು ಈ ವಂಶದ ಅರಸರ ರಾಜಧಾನಿಗಳಾಗಿದ್ದುವು. ರಾಜಾಧಿರಾಜ, ರಾಜಪರಮೇಶ್ವರ, ಅಪ್ರತಿಮವೀರ, ಬಿರುದೆಂತೆಂಬರಗಂಡ, ಕರ್ನಾಟಕಸಿಂಹಾಸನಾಧೀಶ್ವರ ಇತ್ಯಾದಿ ಹಲವು ಬಿರುದುಗಳನ್ನು ಈ ವಂಶದ ಅರಸರು ಬಳಸುತ್ತಿದ್ದರು. ದಕ್ಷಿಣ ಕರ್ನಾಟಕದಲ್ಲಿ ದೊರಕುವ ಇವರ ಹಲವಾರು ಶಿಲಾ ಹಾಗೂ ತಾಮ್ರಶಾಸನಗಳು, ಮೈಸೂರು ಅರಮನೆ, ಮೈಸೂರು ಸರ್ಕಾರ, ದೆಹಲಿಯ ರಾಷ್ಟ್ರೀಯ ಪತ್ರಾಗಾರ, ಲಂಡನ್ನಿನ ಇಂಡಿಯಾ ಹೌಸ್ ಮುಂತಾದೆಡೆಗಳಲ್ಲಿ ರುವ ರಾಜಕೀಯ ದಾಖಲೆ ಪತ್ರಗಳು ಈ ರಾಜವಂಶದ ಇತಿಹಾಸವನ್ನು ರಚಿಸಲು ಮೂಲಾಧಾರಗಳು. ಅಲ್ಲದೆ, ಮೈಸೂರು ದೊರೆಗಳ ವಂಶಾವಳಿ, ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ, ಮೈಸೂರು ನಗರದ ಪೂರ್ವೋತ್ತರ, ಮೈಸೂರು ರಾಜರ ಚರಿತ್ರೆ, ಕಳಲೆ ಅರಸುಗಳ ವಂಶಾವಳಿ, ಕಂಠೀರವನರಸರಾಜವಿಜಯ, ಚಿಕ್ಕದೇವರಾಯ ವಂಶಾವಳಿ, ಚಿಕ್ಕದೇವರಾಜ ವಿಜಯಂ, ಅಪ್ರತಿಮವೀರಚರಿತ್ರೆ ಮುಂತಾದ ಐತಿಹಾಸಿಕ ಗ್ರಂಥಗಳು, ದಾಖಲೆಗಳು ಸಹಾಯಕವಾಗಿವೆ.

ಈ ವಂಶದ ಮೊದಲ ಇತಿಹಾಸ ಅಸ್ಪಷ್ಟ. ಇದರ ಸ್ಥಾಪಕನಾದ ಯದುರಾಯನು ಸೋದರ ಕೃಷ್ಣರಾಯನೊಡನೆ ದ್ವಾರಕೆಯಿಂದ ಇಲ್ಲಿಗೆ ಬಂದು ನೆಲಸಿದನೆಂಬ ಐತಿಹ್ಯವಿದೆಯಾದರೂ ಶಾಸನಗಳಲ್ಲಿ ಇದರ ಪ್ರಸ್ತಾಪ ಬರುವುದಿಲ್ಲ. ಆದ್ಯನಾದ ಯದುರಾಯ (ಸು.1399–1423) ಸುಸಂದರ್ಭವೊದಗಿದಾಗ, ಮೈಸೂರಿನ ಆಗ್ನೇಯದಲ್ಲಿರುವ ಹದಿನಾಡು (ನಂಜನಗೂಡು ತಾಲ್ಲೂಕು ಹದಿನಾರು) ಮತ್ತು ಕಾರುಗಹಳ್ಳಿಗಳ ಪಾಳೆಯ ಪಟ್ಟಿನ ಆಧಿಪತ್ಯವನ್ನು ಸಾಧಿಸಿಕೊಂಡಿರಬೇಕು. ಈ ಸಂದರ್ಭದಲ್ಲಿ ಜಂಗಮನೊಬ್ಬನು ಸಹಕರಿಸಿದನೆಂದೂ ಅವನ ಮೇಲಿನ ಗೌರವದಿಂದ ತಮ್ಮ ಹೆಸರಿನೊಡನೆ ಮೈಸೂರು ಅರಸರು 'ಒಡೆಯರು' ಎಂಬ ಹೆಸರನ್ನೂ ಸೇರಿಸಿಕೊಳ್ಳುವ ಪರಿಪಾಠ ಬೆಳೆಯಿತೆಂದೂ ಪ್ರತೀತಿ. ಮುಂದಿನ ಅರಸರೆಲ್ಲ ಈ ಒಡೆಯರ್ ಎಂಬ ಕುಲನಾಮವನ್ನು ಬಳಸಿದರು. ಒಡೆಯರ್ ಅಂದರೆ ಒಡೆಯ ಅಥವಾ ಯಜಮಾನ ಎಂಬ ಅರ್ಥ ಇರುವುದನ್ನೂ ಗಮನಿಸಬಹುದು.

ಯದುರಾಯನ ಅನಂತರ ಬೆಟ್ಟದ ಚಾಮರಾಜ (1423–59), ತಿಮ್ಮರಾಜ I (1459–78), ಹಿರಿಯ ಚಾಮರಾಜ II (1478–1513), ಹಿರಿಯ ಬೆಟ್ಟದ ಚಾಮರಾಜ III (1513–53) ಈ ಪುತ್ರ ಪರಂಪರೆಯಲ್ಲಿ ಕ್ರಮವಾಗಿ ಆಳಿದರು. 3ನೆಯ ಚಾಮರಾಜನ ಮಗ 2ನೆಯ ತಿಮ್ಮರಾಜ (1553–72) ಪಾಳೆಯಗಾರರನ್ನು ಗೆದ್ದು ಬಿರುದೆಂತೆಂಬರಗಂಡ ಎಂಬ ಬಿರುದನ್ನು ಪಡೆದುಕೊಂಡ. ಅನಂತರ ಆತನ ಕಿರಿಯ ತಮ್ಮ ಬೋಳ ಚಾಮರಾಜ (1572–76) ಪಟ್ಟಕ್ಕೆ ಬಂದು ವೆಂಕಟಾದ್ರಿನಾಯಕನನ್ನು ಜಯಿಸಿ ಅವನು ಬಳಸುತ್ತಿದ್ದ ಸುಗುಣ ಗಂಭೀರ ಎಂಬ ಬಿರುದನ್ನು ತಾನೇ ಧರಿಸಿದ. ಆತನ ಅಣ್ಣ ಕೃಷ್ಣರಾಜನ ಮಗ ಬೆಟ್ಟದ ದೇವರಾಜ (1576–78) ಕೆಲಕಾಲ ಆಳಿ ವಿರಕ್ತನಾಗಿ ತಮ್ಮನಾದ ರಾಜೊಡೆಯನಿಗೆ ಮೈಸೂರಿನಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿದ. ಒಡೆಯರ ವಂಶದ ಚರಿತ್ರೆ ಸ್ಪಷ್ಟವಾಗಿ ಪ್ರಾರಂಭವಾಗುವುದು ಈ ಕಾಲದಲ್ಲಿ. ಕೇವಲ 33 ಹಳ್ಳಿಗಳನ್ನು ಹೊಂದಿದ್ದ ಮೈಸೂರು ಪಾಳೆಯಪಟ್ಟನ್ನು ದೊಡ್ಡ ರಾಜ್ಯವಾಗಿ ವಿಸ್ತರಿಸಿದವನು ರಾಜ ಒಡೆಯ (1578–1617). ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ವಿಜಯನಗರದ ಪ್ರತಿನಿಧಿ ತಿರುಮಲಾರ್ಯನಿಗೂ ವಿಜಯನಗರದ ಅರಸು ವೆಂಕಟನಿಗೂ ವೈಮನಸ್ಯವಿದ್ದ ಸಂದರ್ಭದಲ್ಲಿ ರಾಜಒಡೆಯ ತಿರುಮಲನನ್ನು ಅಲಕ್ಷಿಸಿ ಮೈಸೂರಿನಲ್ಲಿ ಕೋಟೆಯನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಪ್ರದೇಶಗಳನ್ನು ಗೆದ್ದುಕೊಂಡ. ಕೊನೆಗೆ ತಿರುಮಲನನ್ನೂ ಎದುರಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಅರಸನಾದ. ವೆಂಕಟ ಒಪ್ಪಿಗೆ ಪಡೆದು ಸ್ವತಃ ಈ ಭಾಗದಲ್ಲಿ ವಿಜಯನಗರದ ಪ್ರತಿನಿಧಿಯಾದ. ವೆಂಕಟನು ಮೈಸೂರಿನ ಸಮೀಪದ ಕೆಲವು ಭಾಗಗಳನ್ನೂ ರಾಜಒಡೆಯನಿಗೇ ಕೊಟ್ಟ. ರಾಜಒಡೆಯ ತನ್ನ ವಿಕ್ರಮಗಳನ್ನು ಮುಂದುವರೆಸಿ ಅನೇಕ ಚಿಕ್ಕಪಟ್ಟ ಪಾಳೆಯಪಟ್ಟುಗಳನ್ನೆಲ್ಲ ಸದೆಬಡಿದ. ಶ್ರೀರಂಗಪಟ್ಟಣ ಮತ್ತು ಸುಮಾರು ಇಂದಿನ ಇಡೀ ಮೈಸೂರು ಜಿಲ್ಲೆ ಇವನ ವಶಕ್ಕೆ ಬಂದಿತು.

ಅನಂತರ ಪಟ್ಟಕ್ಕೆ ಬಂದ ರಾಜ ಒಡೆಯನ ಮೊಮ್ಮಗ ಚಾಮರಾಜ ಒಡೆಯನ ಕಾಲದಲ್ಲಿ (1617–37) ರಾಜ್ಯ ವಿಸ್ತರಣೆ ಮುಂದುವರಿದು

# ಮೈಸೂರು ಒಡೆಯರು

**ವಂಶಾವಳಿ:**

ಯದುರಾಯ (ವಿಜಯ) – (1399–23)

ಹಿರಿಯ ಬೆಟ್ಟದ ಚಾಮರಾಜ ಒಡೆಯರ್ I – (1423–59)

ತಿಮ್ಮರಾಜ ಒಡೆಯರ್ I – (1459–78)

ಹಿರಿಯ ಚಾಮರಾಜ ಒಡೆಯರ್ II – (1478–1513)

ಹಿರಿಯ ಬೆಟ್ಟದ ಚಾಮರಾಜ ಒಡೆಯರ್ III – (1513–53)

ತಿಮ್ಮರಾಜ ಒಡೆಯರ್ II (1553–72) | ಕೃಷ್ಣರಾಜ ಒಡೆಯರ್ | ಬೋಳ ಚಾಮರಾಜ ಒಡೆಯರ್ IV (1572–76)

ಬೆಟ್ಟದ (ದೇವರಾಜ) ಒಡೆಯರ್ (1576–78)

ರಾಜ ಒಡೆಯರ್ I (1578–1617) | ಬೆಟ್ಟದ ಚಾಮರಾಜ ಒಡೆಯರ್ | ಮುಪ್ಪಿನ ದೇವರಾಜ ಒಡೆಯರ್ | ಚಾಮರಾಜ ಒಡೆಯರ್

ನರಸರಾಜ ಒಡೆಯರ್ | ನಂಜರಾಜ ಒಡೆಯರ್ | ಬೆಟ್ಟದ ಒಡೆಯರ್ | ರಾಜ ಒಡೆಯರ್ II (1637–38) | ಕಂಠೀರವ ನರಸರಾಜ ಒಡೆಯರ್ I (1638–59)

ಚಾಮರಾಜ ಒಡೆಯರ್ V (1617–37)

ದೊಡ್ಡ ದೇವರಾಜ ಒಡೆಯರ್ | ಚಿಕ್ಕದೇವರಾಜ ಒಡೆಯರ್ | ದೇವರಾಜ ಒಡೆಯರ್ (ಕೆಂಪದೇವರಾಜ ಒಡೆಯರ್) (1659–73) | ಮರಿ ದೇವರಾಜ ಒಡೆಯರ್

ಚಿಕ್ಕದೇವರಾಜ ಒಡೆಯರ್ (1673–1704) | ಕಂಠೀರವ ಒಡೆಯರ್

ಕಂಠೀರವ ನರಸರಾಜ ಒಡೆಯರ್ II (1704–14)

ಕೃಷ್ಣರಾಜ ಒಡೆಯರ್ I (1714–32)

(ದತ್ತು) ಚಾಮರಾಜ ಒಡೆಯರ್ (1732–34) | (ದತ್ತು) ಕೃಷ್ಣರಾಜ ಒಡೆಯರ್ II (1734–66)

ನಂಜರಾಜ ಒಡೆಯರ್ (1766–70) | ಬೆಟ್ಟದ ಚಾಮರಾಜ ಒಡೆಯರ್ VII (1770–76) | (ದತ್ತು) ಖಾಸಾ ಚಾಮರಾಜ ಒಡೆಯರ್ VIII (1776–96)

ಕೃಷ್ಣರಾಜ ಒಡೆಯರ್ III (1799–1831)

(ದತ್ತು) ಚಾಮರಾಜ ಒಡೆಯರ್ IX (1881–94)

ಕೃಷ್ಣರಾಜ ಒಡೆಯರ್ IV (1895–1940) | ಕಂಠೀರವ ನರಸಿಂಹರಾಜ ಒಡೆಯರ್

(ದತ್ತು) ಜಯಚಾಮರಾಜ ಒಡೆಯರ್ (1940–50)

ಆತನು ತಲಕಾಡು, ಹೊಳೆನರಸೀಪುರ ಮುಂತಾದ ಪಾಳೆಪಟ್ಟುಗಳನ್ನು ಮುರಿದುದಲ್ಲದೆ ಬಲಶಾಲಿಯಾಗಿದ್ದ ಚನ್ನಪಟ್ಟಣದ ಜಗದೇವರಾಯನನ್ನೂ ಸೋಲಿಸಿ ಮೈಸೂರು ರಾಜ್ಯ ಹಾಸನ, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳನ್ನೂ ಒಳಗೊಳ್ಳುವಂತೆ ಮಾಡಿದ. ಆ ಸಮಯದಲ್ಲಿ ಬಹು ಬಲಿಷ್ಠವಾದ ಕೆಳದಿಯ ಅರಸರ ಮೇಲೂ ದಂಡೆತ್ತಿಹೋಗುವ ಮಟ್ಟಿಗೆ ಮೈಸೂರಿನ ಶಕ್ತಿ ಬೆಳೆದಿತ್ತು.



ಮೈಸೂರು ಒಡೆಯರ ರತ್ನಸಿಂಹಾಸನ

ಅನಂತರದ ದೊರೆ ಇಮ್ಮಡಿ ರಾಜಒಡೆಯ (1637–38) ದಳವಾಯಿ ವಿಕ್ರಮರಾಯನ ಕುತಂತ್ರದಿಂದ ಕೊಲೆಯಾದಮೇಲೆ ಪಟ್ಟಕ್ಕೆ ಬಂದ ರಣಧೀರ ಕಂಠೀರವ ನರಸರಾಜ ಒಡೆಯ I (1638–59) ಬಹು ಬಲಿಷ್ಠನಾದ. ಈತ ಸಾಂಬಳ್ಳಿ, ಕಾವೇರಿಪುರ, ದಂಟಳ್ಳಿ, ಸಿಂಗಾನಲ್ಲೂರು, ತುರುವೇಕೆರೆ, ಆನೆಬಾಗೂರು, ತೋಳ್ಯ, ಚಂಗಪ್ಪಾಡಿ, ಮಾರಟಹಳ್ಳಿ, ಹಂಪಾಪುರ, ಪಿರಿಯಾಟ್ಟಣ, ಬೆಟ್ಟದಪುರ, ರುದ್ರಪಟ್ಟಣ, ಕಣ್ಣಾಗಾಲ (ಪಿರಿಯಾಪಟ್ಟಣದ ಬಳಿಯ), ಕಿತ್ತೂರು, ನಂಜರಾಜಪಟ್ಟಣ, ಹೆಬ್ಬೂರು, ಸೂಳೆಕೆರೆದುರ್ಗ, ಯಲಹಳಕನಾಡು, ಚೆನ್ನಗಿರಿ, ಗನ್ನಿಗ್ರಾಮ, ಮಾದಾಪುರ, ಕತ್ತರಿಘಟ್ಟ, ರತ್ನಗಿರಿ, ವೀರಭದ್ರನದುರ್ಗ, ಡಂಕಣಕೋಟೆ, ಸತ್ಯಮಂಗಲ, ಹೊಸೂರು–ಇವುಗಳನ್ನು ಗೆದ್ದುಕೊಂಡ ಬಿಜಾಪುರ ರಣದುಲ್ಲಾಖಾನ ನೊಡನೆ ಹೋರಾಡಿ ಗೆದ್ದ. ಶ್ರೀರಂಗಪಟ್ಟಣ ಮತ್ತು ಮೈಸೂರು ಕೋಟೆಗಳನ್ನು ಭದ್ರಮಾಡಿದ. ಮೈಸೂರಲ್ಲಿ ಫಿರಂಗಿಗಳನ್ನಿಡಿಸಿದ ಮೈಸೂರು ರಾಜ್ಯದ ಸಂಪತ್ತನ್ನೂ ಶಕ್ತಿಯನ್ನು ವರ್ಧಿಸಿದ. ಪಶ್ಚಿಮದಲ್ಲಿ ಕೊಡಗಿನವರೆಗೂ ದಕ್ಷಿಣದಲ್ಲಿ ಸತ್ಯಮಂಗಲ ಮತ್ತು ಡಣಾಯಕನ ಕೋಟೆ, ಆಗ್ನೇಯದಲ್ಲಿ ಕಾವೇರಿಪಟ್ಟಣದವರೆಗೂ ಈತನ ರಾಜ್ಯ ವಿಸ್ತರಿಸಿತು. ನರಸರಾಜನ ಉತ್ತರಾಧಿಕಾರಿಯಾದ ದೇವರಾಜಒಡೆಯ (1659–73) ಬಿಜಾಪುರ ಮತ್ತು ಗೋಲ್ಕಂಡದ ಸುಲ್ತಾನರು, ಕೆಳದಿಯ ನಾಯಕರು ಹಾಗೂ ಮಧುರೆಯ ನಾಯಕನ ಮೇಲೆ ಯುದ್ಧಗಳನ್ನು ನಡೆಸಿ ರಾಜ್ಯವನ್ನು ಪೂರ್ವದಲ್ಲಿ ಸೇಲಂ, ದಕ್ಷಿಣದಲ್ಲಿ ಕೊಯಮತ್ತೂರು ಜಿಲ್ಲೆಯ ಧಾರಾಪುರ, ಉತ್ತರದಲ್ಲಿ ಚಿಕ್ಕನಾಯಕನಹಳ್ಳಿ ವರೆಗೆ ವಿಸ್ತರಿಸಿದ.

ಶೂರನೂ ದಕ್ಷನೂ ಆದ ಚಿಕ್ಕದೇವರಾಜ ಒಡೆಯ (1673–1704) ದೇವರಾಜ ಒಡೆಯನ ಹಿರಿಯ ಸೋದರನಾದ ದೊಡ್ಡದೇವರಾಜ ಒಡೆಯನ ಮಗ. ಈತ ಪಟ್ಟಕ್ಕೆ ಬಂದ ತರುವಾಯ ದೇವನಗಿರಿ, ಹೊನ್ನವಳ್ಳಿ, ಬೊಮ್ಮಸಮುದ್ರ, ತೊಡನಾಡು, ಅಂದೂರು, ಮಧುಗಿರಿ ಕುಂಬಿ, ಹೊಸೂರು, ತುಮಕೂರು, ಕಂದಿಗೆರೆ, ತ್ಯಾಮಗೊಂಡ್ಲು, ಬೆಂಗಳೂರು, ಆವನಿ, ಪೆರೂರು, ಹೊಸಕೋಟೆ, ಮನುಗೊಂಡೆ ದುರ್ಗ, ಮನ್ನಾರಗುಡಿ, ವಾಮಲೂರು, ಧರ್ಮಪುರಿ, ಕಾವೇರಿಪಟ್ಟಣ, ಅನಂತಗಿರಿ, ಬಾಗಡಿ, ಹಾರನಹಳ್ಳಿ, ಬಾಣಾವರ, ಕಡೂರು, ಸಕ್ಕರೆಪಟ್ಟಣ, ಬೇಲೂರು, ವಸ್ತಾರೆ, ಚಿಕ್ಕಮಗಳೂರು, ಮಹಾರಾಜನದುರ್ಗ, ಹಾಸನ, ಅರಕಲಗೂಡು, ಐಗೂರು, ಸಕಲೇಶಪುರ, ಕೊಡ್ಲಿಪೇಟೆ, ಶಾದಮಂಗಲ, ನಾಮಕಲ್ಲು, ತಮ್ಮಂಬಟ್ಟಿ–ಇವುಗಳನ್ನು ಸಾಧಿಸಿಕೊಂಡು ದಕ್ಷಿಣ ಭಾರತದ ಅಪ್ರತಿಮ ವೀರನಾಗಿ, ಉತ್ತರದಲ್ಲಿ ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಿಂದ ಹಿಡಿದು ದಕ್ಷಿಣದಲ್ಲಿ ಪಳನಿ, ಆನೆಮಲೈವರೆಗೂ ಪಶ್ಚಿಮದಲ್ಲಿ ಕೊಡಗು, ಬೇಲೂರಿನಿಂದ ಹಿಡಿದು ಪೂರ್ವದಲ್ಲಿ ಸೇಲಂ ವರೆಗೂ ಹಬ್ಬಿದ ವಿಶಾಲರಾಜ್ಯಕ್ಕೆ ಅಧಿಪತಿಯಾದ. ಆಡಳಿತವನ್ನು ವ್ಯವಸ್ಥೆಗೊಳಿಸಿದ. ಹೊಸ ಪ್ರದೇಶಗಳನ್ನು ಸಾಗುವಳಿಗೆ ಒಳಪಡಿಸಿದ. ದೇಶದ ಹಾಗೂ ಕೋಶದ ಸಂಪತ್ತನ್ನು ಹೆಚ್ಚಿಸಿದ. ಶ್ರೀಮಂತನಾಗಿ ನವಕೋಟಿ ನಾರಾಯಣನೆಂಬ ಹೆಸರು ಗಳಿಸಿದ. ದೆಹಲಿಯ ಬಾದಷಹನಿಂದ ಅನೇಕ ಸನ್ಮಾನಗಳನ್ನು ಪಡೆದ. ಇದು ಮೈಸೂರು ಇತಿಹಾಸದ ಉಚ್ಛ್ರಾಯ ಕಾಲ.

ಚಿಕ್ಕದೇವರಾಜನ ಮಗ ಇಮ್ಮಡಿ ಕಂಠೀರವ ನರಸರಾಜ (1704–14) ಮೂಕನೂ ದುರ್ಬಲನೂ ಆಗಿದ್ದುದರಿಂದ ರಾಜ್ಯದ ಆಡಳಿತದಲ್ಲಿ ದಳವಾಯಿಗಳ ಕೈವಾಡ ಹೆಚ್ಚಾಯಿತು. ಅವರಲ್ಲಿ ಮುಖ್ಯರಾದವರು ಕಳಲೆಯ ದಳವಾಯಿಗಳು. ಮೈಸೂರಿನ ಇತಿಹಾಸದಲ್ಲಿ ಚಿಕ್ಕದೇವರಾಜನ ಅನಂತರದ ಕಾಲವನ್ನು ದಳವಾಯಿಗಳ ಕಾಲ ಎಂದೇ ಕರೆಯಬಹುದು. ದೊಡ್ಡಕೃಷ್ಣರಾಜನ (ಕೃಷ್ಣರಾಜಒಡೆಯರ್) ಕಾಲದಲ್ಲಿ (1714–32) ಮುಗಲ್ ಮತ್ತು ಮರಾಠರ ದಾಳಿಗಳಿಂದ ಮೈಸೂರು ಬೊಕ್ಕಸ ಬರಿದಾಯಿತು. ರಾಜ್ಯದ ಸ್ಥಿತಿ ಹದಗೆಟ್ಟಿತು. ಅನಂತರ ಸಿಂಹಾಸನವನ್ನು ಹತ್ತಿದ ಆತನ ದತ್ತುಪುತ್ರ ಚಾಮರಾಜ VI (1732–1734) ದಳವಾಯಿ ದೇವರಾಜಯ್ಯನ ದ್ರೋಹದಿಂದ ಕಬ್ಬಾಳುದುರ್ಗದ ಸೆರೆಯಲ್ಲೇ ತನ್ನ ಜೀವಿತವನ್ನು ಕಳೆದ. ಅನಂತರ ಪಟ್ಟಕ್ಕೆ ಬಂದ ಇಮ್ಮಡಿ ಕೃಷ್ಣರಾಜನ (1734–66) ಕಾಲದಲ್ಲಿ ಹೈದರನ ಅಧಿಕಾರ ಬೆಳೆಯತೊಡಗಿ ಕೊನೆಗೆ ಹೈದರನು ಸರ್ವಾಧಿಕಾರಿಯಾದ. ಆತನೂ ಮತ್ತು ಅವನ ಮಗ ಟಿಪ್ಪುಸುಲ್ತಾನನೂ ವಸ್ತುತಃ ಸಾರ್ವಭೌಮರಾದರು. ಇವರಿಬ್ಬರ ಆಳಿಕೆಯಲ್ಲಿ ಮೈಸೂರು ರಾಜವಂಶದವರ ಪಾತ್ರವೇನೂ ಇದರಲ್ಲಿರಲಿಲ್ಲ.

ಈ ಸಂದರ್ಭದಲ್ಲಿ ಬಹು ಚಿಕ್ಕಯಸ್ಸಿನಲ್ಲೇ ವಿಧವೆಯಾದ ಇಮ್ಮಡಿ ಕೃಷ್ಣರಾಜನ ಪತ್ನಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಮೈಸೂರು ರಾಜವಂಶದ ಆಳ್ವಿಕೆ ಅಳಿಯದಂತೆ ನೋಡಿಕೊಳ್ಳುವ ಪ್ರಯತ್ನ ನಡೆಸಿದಳು. ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ರಾಜಮನೆತನ ಹಲವು ಕಷ್ಟಗಳನ್ನು ಅನುಭವಿಸಬೇಕಾಗಿ ಬಂದರೂ ಧೃತಿಗೆಡದೆ, ಆಗಾಗ್ಗೆ ಮರಾಠರು ಮತ್ತು ಬ್ರಿಟಿಷರೊಡನೆ ಗುಪ್ತಸಂಧಾನ ನಡೆಸುತ್ತಿದ್ದಳು. ವಂಶದ ಕುಡಿಗಳೂ ದುರದೃಷ್ಟವಶಾತ್ ಅಥವಾ ಕುತಂತ್ರದಿಂದ ಕಮರಿದಾಗ ಮಕ್ಕಳನ್ನು ದತ್ತು ತೆಗೆದುಕೊಂಡು ತನ್ನ ಪ್ರಯತ್ನ ಮುಂದುವರೆಸಿದಳು.

1799ರಲ್ಲಿ ಶ್ರೀರಂಗಪಟ್ಟಣ ಪತನವಾಗಿ ಟಿಪ್ಪು ಸುಲ್ತಾನನು ಮರಣವನ್ನಪ್ಪಿದ ಮೇಲೆ ಮೈಸೂರು ರಾಜ್ಯದ ಇತಿಹಾಸ ಹೊಸ ತಿರುವನ್ನು ಪಡೆಯಿತು. ಹೈದರ್, ಟಿಪ್ಪುಸುಲ್ತಾನರ ಕಾಲದಲ್ಲಿ ದಕ್ಷಿಣ ಭಾರತದಲ್ಲೇ ಅತ್ಯಂತ ಪ್ರಬಲವಾಗಿದ್ದ ಮೈಸೂರು ರಾಜ್ಯ ಒಡೆದು ಹರಿದುಹಂಚಿಹೋಯಿತು. ಕರ್ನಾಟಕದ ಉತ್ತರದ ಭಾಗಗಳು ಬ್ರಿಟಿಷರ ಆಡಳಿತದಲ್ಲಿದ್ದ ಮುಂಬಯಿ ಪ್ರಾಂತ ಮತ್ತು ಹೈದರಾಬಾದು ನಿಜಾಮನ ಸಂಸ್ಥಾನಗಳ ನಡುವೆ ಸೇರಿಹೋದವು. ಧಾರವಾಡ, ಉತ್ತರಕನ್ನಡ, ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳು ಮುಂಬಯಿ ಪ್ರಾಂತಾಡಳಿತಕ್ಕೆ ಸೇರಿದರೆ ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳು ನಿಜಾಮನ ಸಂಸ್ಥಾನದ ಭಾಗವಾದವು. ಬಳ್ಳಾರಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳು

ಹಾಗೂ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಮದರಾಸು ಪ್ರಾಂತದ ಅಧೀನಕ್ಕೆ ಒಳಪಟ್ಟವು. ಕೊಡಗು, ಜಮಖಂಡಿ ಮತ್ತು ಸೊಂಡೂರುಗಳಂತಹ ಚಿಕ್ಕ ರಾಜಾಡಳಿತ ಸಂಸ್ಥಾನಗಳಿಗೆ ಮಾನ್ಯತೆ ನೀಡಲಾಯಿತು. ತುಂಗಭದ್ರಾ ನದಿಯಿಂದ ಕಾವೇರಿಯವರೆಗೂ ಹರಡಿದ್ದ ಮೈಸೂರು ರಾಜ್ಯದ ಉಳಿದ ಭಾಗವನ್ನು ಹಿಂದಿನ ಮೈಸೂರು ಒಡೆಯರ ಮನೆತನಕ್ಕೆ ವಹಿಸಲಾಯಿತು. ಈ ಪ್ರದೇಶ ಮುಂದೆ ಬೆಂಗಳೂರು, ಕೋಲಾರ, ಮೈಸೂರು, ಹಾಸನ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು (ಕಡೂರು) ಮತ್ತು ಶಿವಮೊಗ್ಗ ಜಿಲ್ಲೆಗಳಾಗಿ ವಿಂಗಡಿಸಲಾವಾಯಿತು. ಮೈಸೂರು ಸಂಸ್ಥಾನವು ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗಳಿಗೆ ಪ್ರೋತ್ಸಾಹ ನೀಡುವ ಪರಂಪರೆಯನ್ನು ಮುಂದುವರಿಸಿದ್ದರಿಂದಲೂ ಮತ್ತು ಕನ್ನಡ ಪ್ರದೇಶದ ಹೆಚ್ಚು ವಿಸ್ತಾರವಾದ ರಾಜ್ಯವಾಗಿ ಆಡಳಿತ ನಡೆಸಿದುದ್ದರಿಂದಲೂ ಇದರ ಇತಿಹಾಸ ಮುಖ್ಯವೆನಿಸಿದೆ.



ಚಿತ್ರಕಲೆ: ಇಂಗ್ಲಿಷ್ ಸ್ಕೂಲ್ ಉದ್ಘಾಟನೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್

ಈ ಸಂಸ್ಥಾನವನ್ನು 1800–31ರವರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಆಳಿದರು. ಹದಿನೆಂಟನೆಯ ಶತಮಾನದುದ್ದಕ್ಕೂ ಅವಿರತವಾಗಿ ಮೈಸೂರು ರಾಜ್ಯ ನಡೆಸಿದ ಯುದ್ಧಗಳಿಂದಾಗಿ ಮತ್ತು ಬ್ರಿಟಿಷ್ ಪ್ರಭುತ್ವಕ್ಕೆ ಪ್ರತಿವರ್ಷ ಕೊಡಬೇಕಾಗಿದ್ದ ಪೊಗದಿಯಿಂದಾಗಿ, ಹಿಂದಿನ ಪಾಳೆಯಗಾರರ ಮನೆತನಗಳ ಹಕ್ಕುದಾರರ ಅಸಹಕಾರ ಹಾಗೂ ಪ್ರತಿಭಟನೆಯಿಂದಾಗಿ ಸಂಸ್ಥಾನವನ್ನು ಅಭಿವೃದ್ಧಿಯ ಸರಿದಾರಿಯಲ್ಲಿ ಮುನ್ನಡೆಸುವುದು ಕಷ್ಟಕರವಾಗಿದ್ದಿತು. ಆದರೂ ದಿವಾನ್ ಪೂರ್ಣಯ್ಯನ (1800–11) ನೇತೃತ್ವದಲ್ಲಿ ದೇಶದಲ್ಲಿ ಕಾನೂನು ವ್ಯವಸ್ಥೆಯನ್ನು ಜಾರಿಗೆ ತರುವುದರಲ್ಲಿ, ನೀರಾವರಿ ಕೆಲಸಗಳನ್ನು ಕೈಗೊಳ್ಳುವಲ್ಲಿ, ಕಂದಾಯ ವಸೂಲಿಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಯಿತು.

ಪೂರ್ಣಯ್ಯನ ಅನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಮೇಣ ಆಡಳಿತದಲ್ಲಿ ದಕ್ಷತೆಯನ್ನು ತರುವಲ್ಲಿ ಹಿನ್ನಡೆ ಅನುಭವಿಸಿದರು. ಪದೇ ಪದೇ ಆಗುತ್ತಿದ್ದ ದಿವಾನರುಗಳ ಬದಲಾವಣೆ; ಆಗಾಗ ತಲೆದೋರಿದ ಕ್ಷಾಮಗಳಿಂದ ಆದ ಆರ್ಥಿಕ ಹಿಂಜರಿತ; ನಗರದಲ್ಲಿ ನಡೆದ ರೈತರ ದಂಗೆ– ಇವು ಮೈಸೂರು ಸಂಸ್ಥಾನವನ್ನು ಸರಿಯಾಗಿ ಮುನ್ನಡೆಸುವಲ್ಲಿ ಮುಮ್ಮಡಿಯವರು ವಿಫಲರಾಗಿದ್ದಾರೆಂಬ ಅಭಿಪ್ರಾಯ ಬ್ರಿಟಿಷ್ ಪ್ರಭುತ್ವದಲ್ಲಿ ಮೂಡಿತು. ಸಮಿತಿಯೊಂದನ್ನು ನೇಮಿಸಿ ಆ ಸಮಿತಿಯ ವರದಿಯ ಆಧಾರದ ಮೇಲೆ ಕೃಷ್ಣರಾಜ ಒಡೆಯರ ಆಳ್ವಿಕೆಯನ್ನು ರದ್ದುಪಡಿಸಿ 1831ರಲ್ಲಿ ನೇರವಾಗಿ ಕಮಿಷನರುಗಳ ಒಂದು ಮಂಡಲಿಗೆ ಅಧಿಕಾರ ವಹಿಸಿಕೊಟ್ಟಿತು. ಮುಂದೆ 1881ರ ವರೆಗೂ ಕಮಿಷನರ ಆಳ್ವಿಕೆ ನಡೆಯಿತು (ನೋಡಿ: ಬ್ರಿಟಿಷರ ಆಳ್ವಿಕೆ). ಮುಮ್ಮಡಿ ಕೃಷ್ಣರಾಜ ಒಡೆಯರು (ನೋಡಿ) ಸುಸಂಸ್ಕೃತರೂ ಉದಾರಿಗಳೂ ಆಗಿದ್ದು ಅವರ ಕಾಲದಲ್ಲಿ ಕನ್ನಡ ಸಾಹಿತ್ಯ, ಸಂಗೀತ, ಕಲೆಗಳು ಮತ್ತು ಧಾರ್ಮಿಕ ಆಚರಣೆಗಳು ಪ್ರೋತ್ಸಾಹ ಪಡೆದವು.

ಮುಮ್ಮಡಿ ಕೃಷ್ಣರಾಜ ಒಡೆಯರು ರಾಜ್ಯಾಧಿಕಾರವನ್ನು ಕಳೆದುಕೊಂಡರೂ ತಮಗಾಗಿದ್ದ ಅನ್ಯಾಯದ ಬಗ್ಗೆ ಬ್ರಿಟಿಷ್ ಪ್ರಭುತ್ವಕ್ಕೆ ಮನವಿ ಮಾಡುವ ಪ್ರಯತ್ನವನ್ನು ಮುಂದುವರಿಸಿದರು. ಅಂತಿಮವಾಗಿ ಬೌರಿಂಗ್ ಕಮಿಷನರಾಗಿದ್ದಾಗ ಮುಮ್ಮಡಿಯವರ ಉತ್ತರಾಧಿಕಾರಿಗಳಿಗೆ ರಾಜ್ಯಾಧಿಕಾರ ವಹಿಸಿಕೊಡಲು ಬ್ರಿಟಿಷ್ ಪ್ರಭುತ್ವ ಒಪ್ಪಿಗೆ ನೀಡಿತು. ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಉತ್ತರಾಧಿಕಾರಿಯಾಗಿ ಅಪ್ರಾಪ್ತ ವಯಸ್ಕರಾಗಿದ್ದ ಚಾಮರಾಜ ಒಡೆಯರನ್ನು ದತ್ತು ಸ್ವೀಕಾರ ಮಾಡಿದರು. ಈ ಒಂಬತ್ತನೆಯ ಚಾಮರಾಜ ಒಡೆಯರು ಪಟ್ಟಾಭಿಷೇಕ ಸಮಾರಂಭ 1868 ಸೆಪ್ಟೆಂಬರ್ 23ರಂದು ನಡೆಯಿತು.

ಮುಮ್ಮಡಿಯವರು ಚಾಮರಾಜ ಒಡೆಯರನ್ನು ದತ್ತು ತೆಗೆದುಕೊಂಡ ವಿಶಿಷ್ಟ ಸಂದರ್ಭವನ್ನು ಎ.ಎನ್. ನಿರಂಜನರಾಜ ಅರಸು ಅವರು ತಮ್ಮ ಮುಮ್ಮಡಿ ಶ್ರೀಕೃಷ್ಣರಾಜ ಮಹೀಪಾಲ ವಂಶರತ್ನಾಕರ ಎಂಬ ಕೃತಿಯಲ್ಲಿ ವಿಶದವಾಗಿ ಚರ್ಚಿಸಿದ್ದಾರೆ. ಈ ಲೇಖಕರು ಮುಮ್ಮಡಿಯವರ ಅಳಿಯಂದಿರಾದ ಅಳಿಯ ಲಿಂಗರಾಜ ಅರಸರ ವಂಶಸ್ಥರಾಗಿದ್ದು ಕೆಲವು ವಿಶಿಷ್ಟ ಮಾಹಿತಿಗಳಿಂದ ಈ ಮುಂದಿನ ವಿಚಾರಗಳನ್ನು ನಿರೂಪಿಸಿದ್ದಾರೆ: ಮುಮ್ಮಡಿಯವರಿಗೆ ಐವರು ಧರ್ಮಪತ್ನಿಯರೂ ಹದಿನೈದು ಮಂದಿ ಗಾಂಧರ್ವ ಪತ್ನಿಯರೂ ಇದ್ದರು. ಶಾಸನಗಳಲ್ಲಿ ಇವರೆಲ್ಲರನ್ನೂ ಧರ್ಮಪತ್ನಿಯರೆಂದೇ ಪ್ರಸ್ತಾಪಿಸಲಾಗಿದೆ. ಗಾಂಧರ್ವ ಪತ್ನಿಯರೆಂದರೆ ದುಷ್ಯಂತ ಶಕುಂತಲೆಯರಂತೆ ಮೆಚ್ಚಿ ಮದುವೆಯಾದವರು. ಇದು ಕೂಡ ಧರ್ಮಸಿಂಧುವಾದ ವಿವಾಹವಾಗಿದೆ. ಮುಮ್ಮಡಿಯವರಿಗೆ ಗಂಡು ಮತ್ತು ಹೆಣ್ಣು ಮಕ್ಕಳಿದ್ದರು. ಅವರಲ್ಲಿ ಗಾಂಧರ್ವ ಪತ್ನಿಯರಿಗೆ ಸೇನಾಪತಿ ಚಾಮರಾಜ ಒಡೆಯರು ಮತ್ತು ಯುವರಾಜ ನಂಜರಾಜ ಒಡೆಯರೆಂಬ ಪುತ್ರರಿದ್ದು ಅವರಿಬ್ಬರು ಬೇಗ ನಿಧನರಾದರು. ಮುಮ್ಮಡಿಯವರ ಉತ್ತರಾಧಿಕಾರಿಯನ್ನು ನೇಮಿಸುವ ಪ್ರಶ್ನೆ ಬಂದಾಗ ಈ ಪುತ್ರರ ಮಕ್ಕಳನ್ನಾಗಲಿ ಪುತ್ರಿಯರ ಮಕ್ಕಳನ್ನಾಗಲಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಶಾಸ್ತ್ರಬದ್ಧವಾಗಿ ದುಷ್ಯಂತನು ಭರತನಿಗೆ ಪಟ್ಟಕಟ್ಟಿದಂತೆ ಈ ಸಂತತಿಗೂ ಸಿಂಹಾಸನದ ಮೇಲೆ ಹಕ್ಕಿದ್ದಿತು. ಹೀಗಾಗಲು ಮುಮ್ಮಡಿಯವರ ನೇರ ವಂಶದವರ ಹಕ್ಕಿನ ಬಗ್ಗೆ ಬ್ರಿಟಿಷ್ ಪ್ರಭುತ್ವದ ಸ್ಥಳೀಯ ಸಲಹೆಗಾರರು, ಬ್ರಿಟಿಷ್ ಕಮಿಷನರು ಹಾಗೂ ತದನಂತರ ದಿವಾನರಾಗಿದ್ದ ಸಿ.ರಂಗಾಚಾರ್ಲು ರವರು ಸೂಕ್ತ ಗಮನ ಕೊಡದೆ ಅವರ ಮೇಲೆ ಒತ್ತಡ ತಂದರು. ಇದರ ಫಲವಾಗಿ ಹಿಂದಿನ ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಸಂತತಿಯ ಕೃಷ್ಣೇ ಅರಸರಿಗೆ ಚಾಮರಾಜರ ತಂದೆ ಕೃಷ್ಣೇ ಅರಸು ದತ್ತುವಾಗಿದ್ದರು. ಅವರ ಸಂತತಿಯನ್ನು ಅಧಿಕಾರಕ್ಕೆ ತರಲು ಚಾಮರಾಜ ಒಡೆಯರನ್ನು ದತ್ತು ತೆಗೆದುಕೊಳ್ಳುವಂತೆ ಮಾಡಲಾಯಿತು. ಮುಮ್ಮಡಿಯವರ ದೌಹಿತ್ರ ಸಂತಾನಕ್ಕೆ ಅಧಿಕಾರ ಕೊಡಲು ಆ ಕಾಲದ ಧರ್ಮಾಧಿಕಾರಿಗಳಲ್ಲಿ ದತ್ತು ಸ್ವೀಕಾರದ ಬಗ್ಗೆ ಅಧಿಕಾರ ವರ್ಗದವರು ಪ್ರಸ್ತಾಪ ಮಾಡಲಿಲ್ಲ. ರಾಜಕೀಯ ಸನ್ನಾಹದಿಂದ ಮನುಧರ್ಮದಲ್ಲಿ ಅಂಗೀಕೃತವಾದ ದೌಹಿತ್ರ (ಮಗಳ ಮಕ್ಕಳು) ಉತ್ತರಾಧಿಕಾರತ್ವದ ಹಕ್ಕನ್ನು ನಿರಾಕರಿಸಲಾಯಿತು. ಮುಂದೆ ಈ ಚಾಮರಾಜೇಂದ್ರ ಒಡೆಯರ ಮನೆತನ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಸೂಕ್ತವಾಗಿ ಸ್ಮರಿಸಿಕೊಳ್ಳಲಿಲ್ಲ (ಅವರ ಒಂದು ಪ್ರತಿಮೆಯನ್ನು ಮೈಸೂರು ನಗರದಲ್ಲಿ ಸ್ಥಾಪಿಸಲು ಆಸಕ್ತಿ ತೋರಿಸಿಲ್ಲ), ಅವರ ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ ಸಂತಾನಕ್ಕೆ ತರುವಾಯದ ಮೈಸೂರು ಒಡೆಯರು ಸರಿಯಾದ ಮನ್ನಣೆ ನೀಡಲಿಲ್ಲ ಎಂಬ ಈ ಅಂಶಗಳು

ಅರಸು ಅವರ ಅಭಿಪ್ರಾಯಗಳಾಗಿವೆ. ಮುಮ್ಮಡಿಯವರು 1868 ಮಾರ್ಚ್ 27ರಂದು ನಿಧನರಾದರು. ಬ್ರಿಟಿಷ್ ಪ್ರಭುತ್ವದೊಂದಿಗಿನ ಒಪ್ಪಂದದಂತೆ ಪ್ರಾಪ್ತವಯಸ್ಸಿಗೆ ಬಂದ ಚಾಮರಾಜ ಒಡೆಯರು ಒಂಬತ್ತನೆಯ ಚಾಮರಾಜೇಂದ್ರ ಒಡೆಯರೆಂಬ ಅಭಿದಾನದೊಂದಿಗೆ 1881 ಮಾರ್ಚ್ 25ರಂದು ಮೈಸೂರು ಸಂಸ್ಥಾನದ ರಾಜ್ಯಾಧಿಕಾರವನ್ನು ವಹಿಸಿಕೊಂಡರು.

ಅನೇಕ ನಿರ್ಬಂಧಗಳ ಷರತ್ತಿನ ಮೇರೆಗೆ ಅಧಿಕಾರಕ್ಕೆ ಬಂದ ಒಡೆಯರು ಆಡಳಿತದ ಸಾಫಲ್ಯಕ್ಕೆ ಹೆಚ್ಚಾಗಿ ದಿವಾನರನ್ನೇ ಅವಲಂಬಿಸಬೇಕಾಯಿತು. ಸಿ.ರಂಗಾಚಾರ್ಲು ಅವರನ್ನು ದಿವಾನರನ್ನಾಗಿ ನೇಮಿಸಿಕೊಂಡ ಚಾಮರಾಜ ಒಡೆಯರು ಅವರ ಸಲಹೆಯ ಮೇರೆಗೆ ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸಿದರು (1881). ಇದು ಮುಖ್ಯವಾಗಿ ರೈತರು ಮತ್ತು ವರ್ತಕ ಪ್ರತಿನಿಧಿಗಳು, ಆಂಗ್ಲೋ ಇಂಡಿಯನ್ನರು ಮತ್ತು ಪ್ಲಾಂಟೇಷನ್ ಬೆಳೆಗಾರರ ಪ್ರತಿನಿಧಿಗಳಿಂದ ಕೂಡಿದ್ದಿತು. ಈ ಪ್ರಜಾಪ್ರತಿನಿಧಿ ಸಭೆ ದಸರ ಸಂದರ್ಭದಲ್ಲಿ ಮೈಸೂರಿನಲ್ಲಿ ಸೇರುತ್ತಿದ್ದಿತು. ದಿವಾನರು ರಾಜ್ಯದ ಅಭಿವೃದ್ಧಿ ಚಟುವಟಿಕೆಗಳು ಮತ್ತಿತರ ಸಂಗತಿಗಳನ್ನು ಸಭೆಯ ಗಮನಕ್ಕೆ ತರುತ್ತಿದ್ದರು. ಪ್ರಾರಂಭದಲ್ಲಿ ಕೇವಲ ಮನವಿ ಸಲ್ಲಿಕೆ ಸ್ವರೂಪದಲ್ಲಿದ್ದ ಈ ಸಭೆಗೆ ಕ್ರಮೇಣ ಕೆಲವು ಅಧಿಕಾರಗಳನ್ನು ನೀಡಲಾಯಿತು. ಇದು ಭಾರತದಲ್ಲಿಯೇ ಪ್ರಥಮ ಪ್ರಜಾಸತ್ತಾತ್ಮಕ ಮಾದರಿ ಸಂಸ್ಥೆ ಎಂಬ ಹೆಗ್ಗಳಿಕೆ ಪಡೆದಿತ್ತು.

ದಿವಾನ್ ರಂಗಾಚಾರ್ಲು 1883ರಲ್ಲಿ ನಿಧನರಾದಾಗ ಅವರ ಸ್ಥಾನಕ್ಕೆ ಕೆ. ಶೇಷಾದ್ರಿ ಅಯ್ಯರ್ **(ನೋಡಿ)** ನೇಮಕವಾದರು. ಅವರು 1900ರ ವರೆಗೂ ದಿವಾನರಾಗಿದ್ದರು. ಈ ಅವಧಿಯಲ್ಲಿ 1894ರ ಕೊನೆಯಲ್ಲಿ ಚಾಮರಾಜ ಒಡೆಯರು ನಿಧನರಾದುದರಿಂದ ಅವರ ಪುತ್ರ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರಿಗೆ 1895ರಲ್ಲಿ ಪಟ್ಟಕಟ್ಟಲಾಯಿತು. ರೈಲುಮಾರ್ಗಗಳ ನಿರ್ಮಾಣ, ಸ್ಥಳೀಯ ಸಂಸ್ಥೆಗಳ ಸ್ಥಾಪನೆ, ಮಾರಿಕಣಿವೆ ಜಲಾಶಯ ನಿರ್ಮಾಣದ ಆರಂಭ, ಪ್ರಾಚ್ಯ ವಿದ್ಯಾಸಂಸ್ಥೆ, ಪ್ರಾಚೀನ ಶಾಸನಗಳ ಸಂಗ್ರಹ ಮತ್ತು ಪ್ರಕಟಣೆ, ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲಾ ಕಾಲೇಜುಗಳ ಪ್ರಾರಂಭ ಮೊದಲಾದ ಅಭಿವೃದ್ಧಿ ಕಾರ್ಯಗಳು ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ ನಡೆದಿದ್ದವು.

ನಾಲ್ವಡಿ ಕೃಷ್ಣರಾಜ ಒಡೆಯರು 1902ರಿಂದ ಸ್ವತಂತ್ರವಾಗಿ ಆಳತೊಡಗಿದರು. ಇವರ ಕಾಲದಲ್ಲಿ ವಿ.ಎನ್.ಕೃಷ್ಣಮೂರ್ತಿ, ವಿ.ಪಿ.ಮಾಧವ ರಾವ್, ಟಿ.ಆನಂದರಾವ್, ಎಂ.ವಿಶ್ವೇಶ್ವರಯ್ಯ, ಎಂ.ಕಾಂತರಾಜ ಅರಸ್, ಆಲ್ಬಿಯನ್ ಬ್ಯಾನರ್ಜಿ, ಮಿರ್ಜಾ ಇಸ್ಮಾಯಿಲ್ ದಿವಾನರಾಗಿ ಕೆಲಸ ಮಾಡಿದರು. ಸುಮಾರು ನಾಲ್ಕು ದಶಕಗಳ ಪ್ರಬುದ್ಧ ಆಳ್ವಿಕೆಯಲ್ಲಿ ಉತ್ತಮ ದಿವಾನರುಗಳನ್ನು ಆರಿಸಿಕೊಂಡು, ಅವರಿಗೆ ಸೂಕ್ತ ಸ್ವಾತಂತ್ರ್ಯ ನೀಡಿ, ರಾಜ್ಯದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗಲು ಕಾರಣರಾದುದು ನಾಲ್ವಡಿಯವರ ಉದಾತ್ತ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ ಮೂಲಕ ಸದಸ್ಯರನ್ನು ಆರಿಸಲು ಹೆಚ್ಚಿನ ಕ್ರಮಗಳನ್ನು ಕೈಗೊಂಡಿದ್ದಲ್ಲದೆ 1907ರಲ್ಲಿ ಶಾಸನಗಳನ್ನು ಚರ್ಚಿಸಿ, ಪರಾಮರ್ಶಿಸಿ ಅನುಮೋದಿಸಲು ನ್ಯಾಯವಿಧಾಯಕ ಸಭೆಯನ್ನು ರಚಿಸಿದ್ದು ಪ್ರಜಾಪ್ರಭುತ್ವದೆಡೆಗೆ ಇಟ್ಟ ದೊಡ್ಡ ಹೆಜ್ಜೆಯಾಯಿತು.

ಆದರೆ ನಾಲ್ವಡಿಯವರಿಗೆ ರಾಜ್ಯ ಎದುರಿಸುತ್ತಿದ್ದ ಬಡತನ, ಬರಗಾಲ ಮತ್ತು ಯೋಜನಾರಾಹಿತ್ಯದ ಸ್ಥಿತಿಗಳು ಆತಂಕ ತಂದಿದ್ದವು. ಇಂತಹ ಸ್ಥಿತಿಯಲ್ಲಿ ಜನರ ಆಶೋತ್ತರಗಳನ್ನು ಈಡೇರಿಸುವುದಿರಲಿ ಬ್ರಿಟಿಷ್ ಪ್ರಾಂತಗಳ ಮಟ್ಟಕ್ಕೂ ಮೈಸೂರು ಸಂಸ್ಥಾನ ಬೆಳೆಯುವುದು ಸಾಧ್ಯವಿರಲಿಲ್ಲ. ಕಾವೇರಿ ನದಿಗೆ ಒಂದು ಆಧುನಿಕ ಜಲಾಶಯ ನಿರ್ಮಿಸುವುದು, ವೃತ್ತಿಪರ ಶಿಕ್ಷಣ ನೀಡುವುದು– ಈ ಬಗ್ಗೆ ಪ್ರಯತ್ನಗಳು ಸ್ವಲ್ಪಮಟ್ಟಿಗೆ ನಡೆದಿದ್ದವು. ಆದರೆ ರಾಜ್ಯ ಮಿತವಾದ ಅಧಿಕಾರ ಪಡೆದಿದ್ದು ಹೊಸದಾಗಿ ಸಾಲ ಮಾಡಿ ವಿವಿಧ ಯೋಜನೆಗಳಲ್ಲಿ ತೊಡಗಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಆಗ ಒಬ್ಬ ವರ್ಚಸ್ವಿ ನಾಯಕನ ಮತ್ತು ಯೋಜಕನ ಅಗತ್ಯವಿದ್ದಿತು. ಆ ಕಾಲದಲ್ಲಿ ಮುಂಬಯಿ ಸರ್ಕಾರದಲ್ಲಿ ಎಂಜಿನಿಯರಾಗಿ ಸೇವೆಸಲ್ಲಿಸುತ್ತಿದ್ದ ಮೈಸೂರು ರಾಜ್ಯದ ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ ಜನಿಸಿದ ಎಂ. ವಿಶ್ವೇಶ್ವರಯ್ಯನವರು ಭಾರತದ ಮಟ್ಟದಲ್ಲಿ ಪ್ರತಿಭಾವಂತರೆಂದು ಹೆಸರು ಗಳಿಸಿದ್ದವರಾಗಿದ್ದರು. ಅವರ ಸೇವೆಯನ್ನು ರಾಜ್ಯಕ್ಕೆ ಒದಗಿಸಿ ಕೊಳ್ಳಲು ಆಸಕ್ತಿ ತೋರಿದ ಕೃಷ್ಣರಾಜ ಒಡೆಯರು ಅದರಲ್ಲಿ ಸಫಲರೂ ಆದರು. 1909ರಲ್ಲಿ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಆಗಿ ನೇಮಕವಾದರು.



ಜಗನ್ಮೋಹನ ಅರಮನೆ

ಅತೀವ ದೇಶಪ್ರೇಮಿಯಾಗಿದ್ದ ಮತ್ತು ತಾವು ಹುಟ್ಟಿದ ಸಂಸ್ಥಾನದ ಬಗ್ಗೆ ಪ್ರೀತಿ ಹೊಂದಿದ್ದ ವಿಶ್ವೇಶ್ವರಯ್ಯನವರು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ವಿದ್ಯುತ್ ಸಂಚಾರವಾದಂತೆ ಚುರುಕುಗೊಳಿಸಿದರು. ಮಹಾರಾಜರ ವಿಶ್ವಾಸ ಪಡೆದು ಶಿಕ್ಷಣ, ಕೈಗಾರಿಕೆ, ಆರ್ಥಿಕ ಮುನ್ನಡೆಯ ಬಗ್ಗೆ ವಿವಿಧ ಯೋಜನೆಗಳನ್ನು ಸಿದ್ಧಪಡಿಸಿ ಮಹಾರಾಜರ ಮುಂದಿಟ್ಟರು. ಇದರಿಂದ ಸುಪ್ರೀತರಾದ ಮಹಾರಾಜರು ಎಂ. ವಿಶ್ವೇಶ್ವರಯ್ಯನವರನ್ನು **(ನೋಡಿ)** 1912ರಲ್ಲಿ ಸಂಸ್ಥಾನದ ದಿವಾನರನ್ನಾಗಿ ನೇಮಿಸಿದರು. ಸ್ವತಃ ಎಂಜಿನಿಯರೂ ದಕ್ಷ ಆಡಳಿತಗಾರರೂ ಆಗಿದ್ದ ಅವರು ಸಂಸ್ಥಾನದ ಇತಿಹಾಸದಲ್ಲಿ ಅಭಿವೃದ್ಧಿಯ ಶಕೆಯನ್ನೇ ಪ್ರಾರಂಭಿಸಿದರು. ಆರ್ಥಿಕ ಪರಿಷತ್ತಿನ ಸ್ಥಾಪನೆ, ರೈಲುಮಾರ್ಗಗಳ ನಿರ್ಮಾಣದ ಬೃಹತ್ ಯೋಜನೆ, ವಿದ್ಯುತ್ ಉತ್ಪಾದನೆ, ಕೆರೆಗಳ ಸಂರಕ್ಷಣೆ, ಪ್ರಾಥಮಿಕ ಶಿಕ್ಷಣದ ವಿಸ್ತರಣೆ, ವಿಶ್ವವಿದ್ಯಾನಿಲಯ ಸ್ಥಾಪನೆ, ಭದ್ರಾವತಿ ಉಕ್ಕು ಕಾರ್ಖಾನೆ ಸೇರಿದಂತೆ ಕೈಗಾರಿಕೆಗಳ ಪ್ರಾರಂಭ, ಸ್ಥಳೀಯ ಸಂಸ್ಥೆಗಳ ಕಾಯಿದೆ ಜಾರಿ, ಮೈಸೂರು ಬ್ಯಾಂಕ್ ಸ್ಥಾಪನೆ ಮುಂತಾದ ಹಲವು ಹತ್ತು ಕಾರ್ಯಗಳನ್ನು ಒಟ್ಟಿಗೆ ಕೈಗೊಂಡು ಇಡೀ ಭರತಖಂಡವೇ ಮೈಸೂರಿನತ್ತ ನೋಡುವಂತೆ ಮಾಡಿದರು. ಹಣಕಾಸು ನಿರ್ವಹಣೆಗೆ ಹೊಸ ವ್ಯಾಖ್ಯಾನ ನೀಡಿದರು. ಮೈಸೂರು ಸಂಸ್ಥಾನ ಖಾಯಂ ಅಸ್ತಿತ್ವವಿಲ್ಲದೆ ಬ್ರಿಟಿಷ್ ಪ್ರಭುತ್ವದಡಿ ಸರ್ಪದ ನೆರಳಲ್ಲಿರುವ ಕಪ್ಪೆಯಂತೆ ಇದ್ದಿತು. ಅದನ್ನು ನಿವಾರಿಸಿ 1913ರಲ್ಲಿ ವೈಸ್‌ರಾಯ್‌ರೊಂದಿಗೆ ಹೊಸ ಒಪ್ಪಂದ ಮಾಡಿಕೊಂಡು ಇತರ ಸಂಸ್ಥಾನಗಳಂತೆ ಮೈಸೂರು ಸಂಸ್ಥಾನವು ಸಮಾನವಾದ ಮತ್ತು ಶಾಶ್ವತ ಸ್ಥಾನಮಾನ ಹೊಂದುವಂತೆ ಮಾಡಿದರು.

ಮೈಸೂರು ಸಂಸ್ಥಾನ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವಾಗಲೇ ಒಂದನೆಯ ಮಹಾಯುದ್ಧ ತಂದ ಸಂಕಷ್ಟ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಬಗ್ಗೆ ಎದ್ದ ವಿವಾದ ಸಮಸ್ಯೆಗಳನ್ನು ಒಡ್ಡಿದವು. ಅಂತಿಮವಾಗಿ

ಆ ಕಾಲದ ರಾಜಕೀಯ ಮತ್ತು ರಾಜಮನೆತನದ ಪರಿಸ್ಥಿತಿಗಳು ನಾಲ್ವಡಿಯವರು ವಿಶ್ವೇಶ್ವರಯ್ಯನವರ ಸೇವೆಯನ್ನು ಮುಂದುವರಿಸಲಾಗದಂತೆ ಮಾಡಿದವು. 1918ರಲ್ಲಿ ವಿಶ್ವೇಶ್ವರಯ್ಯನವರು ಪದವಿ ತ್ಯಾಗ ಮಾಡಿದರು. ಮುಂದೆ 1926ರಲ್ಲಿ ಮಿರ್ಜಾ ಇಸ್ಮಾಯಿಲರು ದಿವಾನರಾಗುವವರೆಗೂ ಸಂಸ್ಥಾನದ ಆರ್ಥಿಕ ಗೊಂದಲದ ಸ್ಥಿತಿಯನ್ನು ಅನುಭವಿಸಿತು. ಮಿರ್ಜಾ ಅವರು ದಿವಾನರಾದರೂ ವಿಶ್ವೇಶ್ವರಯ್ಯನವರು ಮಹಾರಾಜರ ಅಪೇಕ್ಷೆಯಂತೆ ರಾಜ್ಯದ ವಿವಿಧ ಯೋಜನೆಗಳಿಗೆ ಸಲಹೆ ಸಹಕಾರ ನೀಡುತ್ತ ಬಂದರು. 1920–21ರಲ್ಲಿ ಜಾರಿಗೆ ಬಂದ ಮಿಲ್ಲರ್ ಸಮಿತಿಯ ವರದಿಯು ಹಿಂದುಳಿದ ವರ್ಗದವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಕಲ್ಪಿಸಿತು.

ಗನ್ ಹೌಸ್

ಮಿರ್ಜಾ ಇಸ್ಮಾಯಿಲರ (ನೋಡಿ) ದಿವಾನಗಿರಿ ಚಟುವಟಿಕೆಭರಿತವಾಗಿದ್ದಿತು. ಅವರು ವಿಶ್ವೇಶ್ವರಯ್ಯನವರ ಅಭಿವೃದ್ಧಿ ಯೋಜನೆಗಳನ್ನೆಲ್ಲ ಮುಂದುವರಿಸಿದ್ದಲ್ಲದೆ ಹೊಸ ಕೈಗಾರಿಕೆಗಳ ಸ್ಥಾಪನೆಗೂ ಆಸಕ್ತಿ ತೋರಿದರು. ಅಂದಿನ ಒತ್ತಡವನ್ನರಿತು ಸಂವಿಧಾನಾತ್ಮಕ ಸುಧಾರಣೆ ತಂದರು. ಸ್ವಾತಂತ್ರ್ಯ ಚಳವಳಿ ತೀವ್ರಗೊಂಡಂತೆಲ್ಲ ಅವುಗಳನ್ನು ನಿಯಂತ್ರಿಸಿ ಮಹಾರಾಜರನ್ನು ಬೆಂಬಲಿಸಲು ಕ್ರಮ ಕೈಗೊಂಡರು. 1940ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ನಿಧನರಾದರು. ಮಹಾರಾಜರ ಜನಪ್ರಿಯತೆ ಕುಗ್ಗದಂತೆ ಆಡಳಿತ ನಡೆಸಿದ ಕೀರ್ತಿ ಮಿರ್ಜಾ ಇಸ್ಮಾಯಿಲರಿಗೂ ಸಲ್ಲುತ್ತದೆ. ಮುಂದೆ ಅಧಿಕಾರಕ್ಕೆ ಬಂದ ನಾಲ್ವಡಿಯವರ ದತ್ತುಪುತ್ರ ಜಯಚಾಮರಾಜೇಂದ್ರ ಒಡೆಯರ್ ಅವರ ಅಧಿಕಾರಾವಧಿಯ ಪ್ರಾರಂಭದಲ್ಲೇ (1941) ಮಿರ್ಜಾರವರು ದಿವಾನ ಪದವಿಗೆ ರಾಜೀನಾಮೆ ನೀಡಿದರು.

1940ರ ದಶಕ ಸ್ವಾತಂತ್ರ್ಯ ಹೋರಾಟ ತಾರಕಕ್ಕೇರಿದ ಕಾಲ. ಆಗ ಎನ್.ಮಾಧವರಾವ್ ಮತ್ತು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ದಿವಾನರಾಗಿದ್ದರು. ಈ ಅವಧಿಯಲ್ಲಿ ಸ್ವಾತಂತ್ರ್ಯ ಹೋರಾಟ ತುತ್ತತುದಿ ಮುಟ್ಟಿದ ಕಾಲ. ಮೈಸೂರು ಸಂಸ್ಥಾನದಲ್ಲಿ 1938ರಲ್ಲಿ ವಿದುರಾಶ್ವತ್ಥ (ಕೋಲಾರ ಜಿಲ್ಲೆಯ ಗೌರಿ ಬಿದನೂರು ತಾಲ್ಲೂಕು) ಮತ್ತು 1942ರಲ್ಲಿ ಈಸೂರಿನಲ್ಲಿ (ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು) ಹಿಂಸೆ ಭುಗಿಲೆದ್ದು ರಾಜಕೀಯ ವಾತಾವರಣವನ್ನು ಕದಡಿದ್ದವು. ಸ್ವಾತಂತ್ರ್ಯ ಹೋರಾಟಗಾರರು ಅತ್ಯುತ್ಸಾಹದಿಂದ ಪಾಲ್ಗೊಂಡು ಜೈಲುಗಳನ್ನು ಸೇರಿದರು. 1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಪಡೆದಾಗ ಮೈಸೂರು ಅರಮನೆಯ ಡೋಲಾಯಮಾನ ಸ್ಥಿತಿಯನ್ನು ನಿವಾರಿಸಲು ಸತ್ಯಾಗ್ರಹಿಗಳು ಮೈಸೂರು ಚಲೋ ಚಳವಳಿಗೆ ಕರೆಕೊಟ್ಟರು. ಇದು ಅರಮನೆ ಸತ್ಯಾಗ್ರಹವೆಂದೂ ಪರಿಚಿತವಾಗಿದೆ. ಸ್ವತಃ ರಾಷ್ಟ್ರಪ್ರೇಮಿಯಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಪ್ರಜಾಡಳಿತಕ್ಕೆ ಅವಕಾಶ ಕಲ್ಪಿಸುವುದಾಗಿ ಘೋಷಿಸಿದರು. ಅದರಂತೆ ಕೆ.ಸಿ.ರೆಡ್ಡಿಯವರು 1947 ಅಕ್ಟೋಬರ್ 24ರಂದು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಚುನಾಯಿತರಾಗಿ ಅಧಿಕಾರ ವಹಿಸಿಕೊಂಡರು. ಸ್ವಲ್ಪಕಾಲದ ಮೇಲೆ (1949) ದಿವಾನ್ ಹುದ್ದೆಯನ್ನು ರದ್ದುಗೊಳಿಸಲಾಯಿತು.

ಮೈಸೂರು ರಾಜಮನೆತನದ ಬಗ್ಗೆ ಸಾರ್ವಜನಿಕರಲ್ಲಿ ಇದ್ದ ಗೌರವ ನಿಷ್ಠೆಗಳಿಗೆ ಬೆಲೆಕೊಟ್ಟು ಭಾರತ ಸರ್ಕಾರ 1950 ಜನವರಿ 26ರಂದು ಭಾರತ ಗಣರಾಜ್ಯ ರಚಿತವಾಗುವವರೆಗೂ ಜಯಚಾಮರಾಜೇಂದ್ರ ಒಡೆಯರಿಗೆ 'ಮಹಾರಾಜ' ಪದವಿಯನ್ನು ಧರಿಸಲು ಅಧಿಕಾರ ನೀಡಿತ್ತು. ಮಹಾರಾಜರು ಜನಾನುರಾಗಿಗಳಾಗಿದ್ದು 1950–56ರವರೆಗೂ ಮೈಸೂರು ರಾಜ್ಯದ ರಾಜಪ್ರಮುಖರಾಗಿದ್ದರು. 1956ರಲ್ಲಿ ವಿಶಾಲ ಮೈಸೂರು ರಾಜ್ಯದ ಪ್ರಥಮ ರಾಜ್ಯಪಾಲರನ್ನಾಗಿ ಜಯಚಾಮರಾಜೇಂದ್ರ ಒಡೆಯರನ್ನೇ ನೇಮಿಸಿದ್ದು ಜನತೆ ಅವರ ಬಗ್ಗೆ ಹೊಂದಿದ್ದ ಕೃತಜ್ಞತಾ ಭಾವನೆಗೆ ಸಾಕ್ಷಿ. 1964ರವರೆಗೂ ಅವರು ಆ ಹುದ್ದೆಯಲ್ಲಿದ್ದರು. ಇಂದಿರಾಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದ ಅವಧಿಯಲ್ಲಿ (1960ರ ದಶಕದ ಕೊನೆಯ ಭಾಗದಲ್ಲಿ) ಮಹಾರಾಜರಿಗಿದ್ದ ರಾಜಧನವೂ ಸೇರಿದಂತೆ ಕೆಲವು ವಿಶೇಷ ಸವಲತ್ತುಗಳನ್ನು ರದ್ದುಪಡಿಸಿದಾಗ ಮೈಸೂರು ಒಡೆಯರ ವಂಶದ ಕಾನೂನುಬದ್ಧ ಅಸ್ತಿತ್ವ ಅಂತ್ಯಗೊಂಡಿತು. ಅವರ ಪುತ್ರ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಮೈಸೂರು ಅರಮನೆಯಲ್ಲಿ ಈಗಲೂ ವಾಸಿಸುತ್ತಿದ್ದಾರೆ. ಅವರು ಎರಡನೆಯ ಬಾರಿಗೆ ಲೋಕಸಭಾ ಸದಸ್ಯರಾಗಿ ಚುನಾಯಿತರಾಗಿದ್ದು ಜನತಂತ್ರದೊಂದಿಗೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡಿದ್ದಾರೆ. **(ಡಿ.ಎಸ್.ಜೆ.)**

ಮಧುವನ

**ಆಡಳಿತ ವ್ಯವಸ್ಥೆ :** ಮೈಸೂರು ಒಡೆಯರು ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಿದ್ದುದರಿಂದ ಆಡಳಿತ ಪದ್ಧತಿಯಲ್ಲಿ ಮೊದಲು ಇವರು ವಿಜಯನಗರದ ಪದ್ಧತಿಯನ್ನು ಅನುಸರಿಸಿದರು. ಕಾಲಕ್ರಮದಲ್ಲಿ ಇವರು ಪ್ರಬಲರಾದಂತೆ ಆಡಳಿತ ಪದ್ಧತಿಯಲ್ಲಿ ಹಲವು ಮಾರ್ಪಾಟುಗಳನ್ನು ಮಾಡಿಕೊಂಡಿದ್ದರು.

ರಾಜ ಒಡೆಯನು ಶ್ರೀರಂಗಪಟ್ಟಣವನ್ನಾಕ್ರಮಿಸಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದ ಮೇಲೆ ದಳವಾಯಿ, ಸರ್ವಾಧಿಕಾರಿಗಳನ್ನು ಆಡಳಿತನಿರ್ವಹಣೆಗಾಗಿ ನೇಮಿಸಿದ. ಪ್ರತಿಗ್ರಾಮದಲ್ಲಿಯೂ ಮೇಲ್ವಿಚಾರಣೆ, ರಕ್ಷಣೆ ಮತ್ತು ಕಂದಾಯ ವಸೂಲಿಗಳಿಗಾಗಿ ಅಧಿಕಾರಿಗಳನ್ನು ನೇಮಿಸಲಾಯಿತು. ರಾಜ್ಯ ವಿಸ್ತಾರವಾದಂತೆ ಒಳಾಡಳಿತವನ್ನು ನೋಡಿಕೊಳ್ಳಲು ಕಾರ್ಯಕರ್ತರನ್ನು

ನೇಮಿಸಲಾಯಿತು. ಕಂಠೀರವ ನರಸರಾಜ ದೂರದೃಷ್ಟಿಯುಳ್ಳ ಆಡಳಿತಗಾರನಾಗಿದ್ದ. ದಳವಾಯಿಗಳು ಸೈನ್ಯವನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡು ಪ್ರಜಾಡಳಿತದಲ್ಲಿಯೂ ಕೈವಾಡ ನಡೆಸುತ್ತಿದ್ದುದನ್ನು ತಪ್ಪಿಸಿ ತಾನೇ ಅಧಿಕಾರವನ್ನು ಕೈಯಲ್ಲಿರಿಸಿಕೊಂಡಿದ್ದ. ಟಂಕಸಾಲೆಯನ್ನು ಸ್ಥಾಪಿಸಿ ಕಂಠೀರಾಯ ಹಣವನ್ನು ಚಲಾವಣೆಗೆ ತಂದ. ಚಿಕ್ಕ ದೇವರಾಜ ಪಂಚಪ್ರಧಾನರಾಗಿದ್ದರು. ರಾಜ್ಯಕ್ಕೆಲ್ಲ ಅನ್ವಯಿಸುವಂತೆ ಅಂಚೆವ್ಯವಸ್ಥೆ ಸ್ಥಾಪಿತವಾಯಿತು. ಭೂ ಮತ್ತು ಇತರ ಕಂದಾಯ ಕಾನೂನುಗಳನ್ನು ಕ್ರೋಢೀಕರಿಸಲಾಯಿತು. ಕೇಂದ್ರಾಡಳಿತವನ್ನು ಹದಿನೆಂಟು ಇಲಾಖೆಗಳಾಗಿ ವಿಭಾಗಿಸಲಾಯಿತು. ಅಧಿಕಾರಿಗಳಿಗೆ ಕೊಡಬೇಕಾದ ಸಂಬಳವನ್ನು ಅರ್ಧದಷ್ಟು ನಗದು ಹಾಗೂ ಅರ್ಧದಷ್ಟು ಧಾನ್ಯರೂಪದಲ್ಲಿಯೂ ಪಾವತಿಮಾಡಲಾಗುತ್ತಿತ್ತು, ಪ್ರತಿ ನಿತ್ಯವೂ ಬೊಕ್ಕಸಕ್ಕೆ ಗೊತ್ತಾದ ಪ್ರಮಾಣದ ಹಣ ಸಲ್ಲಲೇಬೇಕೆಂಬ ನಿಯಮ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದ್ದು, ಇದರಿಂದ ಭಂಡಾರದಲ್ಲಿ ಅಪಾರ ಹಣ ಶೇಖರವಾಗಿದ್ದು ರಾಜನನ್ನು ನವಕೋಟಿನಾರಾಯಣನೆನ್ನುತ್ತಿದ್ದರು. ಆಡಳಿತ ಸುವ್ಯವಸ್ಥೆಯ ಜೊತೆಗೆ ತೂಕ ಅಳತೆಗಳನ್ನು ನಿರ್ದಿಷ್ಟಗೊಳಿಸಲಾಗಿತ್ತು, ಮಾರುಕಟ್ಟೆಗಳನ್ನು ನಿಯಂತ್ರಿಸಲಾಗಿತ್ತು. ಬೆಂಗಳೂರಿನಲ್ಲಿ ಸಾವಿರಾರು ನೇಯ್ಗೆಯವರನ್ನು ತಂದು ಸ್ಥಾಪಿಸಿ ಅವರು ತಯಾರಿಸಿದ ವಸ್ತುಗಳನ್ನು ನಿರ್ಯಾತ ಮಾಡುವುದಕ್ಕೂ ಏರ್ಪಾಟುಮಾಡಲಾಗಿತ್ತು. ಸೈನ್ಯಕ್ಕೆ ಬೇಕಾದ ಫಿರಂಗಿ, ಮದ್ದು, ಗುಂಡು ಇತ್ಯಾದಿ ಸೈನ್ಯೋಪಕರಣಗಳನ್ನು ತಯಾರಿಸುವ ಒಂದು ಕೇಂದ್ರವನ್ನು ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲಾಗಿತ್ತು. ಕಾವೇರಿ ನದಿಗೆ ಅಣೆಕಟ್ಟೆಯನ್ನು ಕಟ್ಟಿ ಚಿಕ್ಕದೇವರಾಜ ನಾಲೆ, ದೇವರಾಜ ನಾಲೆಗಳೆಂಬ ಎರಡು ಕಾಲುವೆಗಳನ್ನೂ ನಿರ್ಮಿಸಿದ್ದುದಲ್ಲದೆ ಹಲವಾರು ಕೆರೆಕಟ್ಟೆಗಳನ್ನು ಕಟ್ಟಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟಿದ್ದರು.

ಗಂಡಭೇರುಂಡ ರಾಜಲಾಂಛನ

ಚಿಕ್ಕದೇವರಾಜ ಒಡೆಯರ ಅನಂತರ ದಳವಾಯಿಗಳ ಪ್ರಾಬಲ್ಯ ಹೆಚ್ಚಾಗಿ ಕೊನೆಗೆ ಹೈದರ್ ಮತ್ತು ಟಿಪ್ಪು ಇವರಿಗೆ ಆಡಳಿತ ಸೇರಿದಾಗ ಆಡಳಿತದ ಬಿಗಿ ಹೆಚ್ಚಾಗಿ ಸೈನ್ಯಕ್ಕೆ ಆಧುನಿಕ ತರಬೇತಿ ದೊರಕಿತು; ಅನಂತರ ಒಡೆಯರಿಗೆ ರಾಜ್ಯ ಹಿಂತಿರುಗಿದರೂ ಆಡಳಿತ ಪದ್ಧತಿ ಬ್ರಿಟಿಷರ ಆಳ್ವಿಕೆಯ ಪದ್ಧತಿಯಲ್ಲಿಯೇ ನಡೆಯಿತು.

**ಚಿತ್ರಕಲೆ:** ಒಡೆಯರ ಕಾಲದಲ್ಲಿ ಇತರ ಲಲಿತಕಲೆಗಳಿಗೆ ದೊರೆತ ಪ್ರೋತ್ಸಾಹ ಚಿತ್ರಕಲೆಗೂ ದೊರೆಯಿತು. ವಿಜಯನಗರದ ಅನಂತರ ಆ ಕಾಲದ ಚಿತ್ರಕಲೆಯನ್ನು ಅನುಸರಿಸಿ ಬೆಳೆಸಿದವರು ಮೈಸೂರು ಒಡೆಯರು. ಇವರ ಕಾಲದಲ್ಲಿ ಹೇರಳವಾಗಿ ವರ್ಣಚಿತ್ರಗಳ ರಚನೆ ಆಗಿದ್ದಿರಬೇಕು. ಆದರೆ ವಾಸ್ತು ಶಿಲ್ಪಗಳಂತೆ ಹೆಚ್ಚು ದೃಢವಾದ ವಸ್ತುಗಳನ್ನು ಈ ಕಲೆಗೆ ಬಳಸಿಲ್ಲವಾದ್ದರಿಂದ ಅರಮನೆ, ಅಧಿಕಾರಿಗಳ ಮನೆ, ಪ್ರತಿಷ್ಠಿತರ ಮನೆಗಳಲ್ಲಿ ಅವರ ವಿಲಾಸಕ್ಕಾಗಿ ರಟ್ಟು, ಹಲಗೆ, ತಾಟುಗಳ ಮೇಲೆ ಬರೆಸಿದ ಚಿತ್ರಗಳ ಬಹುಪಾಲು ಕಾಲಕ್ರಮದಲ್ಲಿ ನಷ್ಟವಾಗಿದ್ದಿರಬೇಕು. ಹಾಗಲ್ಲದೆ ಇವರ ಕಾಲದಲ್ಲಿ ರಚನೆಗೊಂಡ ಭಿತ್ತಿಚಿತ್ರಗಳು ದೇವಾಲಯಗಳ, ಮಠಗಳ, ಮಹಲುಗಳ ಗೋಡೆ, ಚಾವಣಿಗಳ ಮೇಲೆ ಉಳಿದು ಬಂದಿವೆ. ಜಲ ಅಥವಾ ತೈಲವರ್ಣದಿಂದ ಗೋಡೆಗಳನ್ನೋ ಚಾವಣಿಗಳನ್ನೋ ತೊಲೆಗಳನ್ನೋ ಆಧಾರವಾಗಿ ಮಾಡಿಕೊಂಡು ವಿಸ್ತಾರವಾದ ಚಿತ್ರರಚನೆ ಮಾಡಿರುವುದು ಅಲ್ಲಲ್ಲಿ ಕಂಡುಬಂದಿದೆ. ಈ ಕಾಲದ ಮೊದಲಿನ ಭಿತ್ತಿಚಿತ್ರಗಳು ವಿಜಯನಗರದ ಚಿತ್ರಕಲೆಯನ್ನೇ ಹೋಲುತ್ತವೆ. ಈಗ ತಿಳಿದಿರುವ ಮಟ್ಟಿಗೆ ಬಹುಶಃ ಈ ಒಡೆಯರ ಕಾಲದ ಮೊದಲ ಚಿತ್ರಗಳೆಂದರೆ ಹರದನಹಳ್ಳಿಯಲ್ಲಿ ದಿವ್ಯಲಿಂಗೇಶ್ವರ ದೇವಾಲಯದ ಹಿಂದಿರುವ ಕೈಸಾಲೆಯ ಚಾವಣಿ, ತೊಲೆಗಳ ಮೇಲೆ ರಚಿತವಾದವು. 17ನೆಯ ಶತಮಾನದ ಪ್ರಥಮಾರ್ಧಕ್ಕೆ ಸೇರಿಸಬಹುದಾದ ಈ ಚಿತ್ರಗಳಲ್ಲಿ ಲೇಪಾಕ್ಷಿಯಲ್ಲಿನ ವಿಜಯನಗರ ಶೈಲಿಯ ವರ್ಣಚಿತ್ರಗಳ ಮಾದರಿಯನ್ನು ಕಾಣಬಹುದು. ಚಾವಣಿಯಿಂದ ನೀರು ಸೋರಿ ಈಗ ಈ ಚಿತ್ರಗಳು ಹೆಚ್ಚುಪಾಲು ಮಾಸಲಾಗಿ ಮಸುಕಾಗಿರುವುದಾದರೂ ಉಳಿದಿರುವಷ್ಟೇ ಚಿತ್ರಗಳು ಮೇಲ್ಮಟ್ಟವನ್ನು ಸೂಚಿಸುತ್ತವೆ. ಅಂಕಣಗಳ ನಡುವೆ ದೊಡ್ಡದಾಗಿ ದಶಭುಜಶಿವ, ಉಮಾಮಹೇಶ್ವರ, ಅಂಧಕಾಸುರ ಸಂಹಾರ, ಗಜಾಸುರಮರ್ದನ, ಲಕ್ಷ್ಮೀನಾರಾಯಣ ಮುಂತಾದ ಮೂರ್ತಿಗಳನ್ನು ಚಿತ್ರಿಸಿದ್ದು, ಸುತ್ತಲೂ ಹಲವು ಬಗೆಯ ಅಲಂಕರಣಗಳಿವೆ. ಈ ಮೂರ್ತಿಗಳಲ್ಲಿ ಕೆಲವಂತೂ ತುಂಬ ಆಕರ್ಷಕವಾಗಿದೆ. ಅದರಲ್ಲಿಯೂ ಗಜಾಸುರಮರ್ದನ, ಮೂರ್ತಿಯ ಚಿತ್ರದಲ್ಲಿ ಗಜಾಸುರನನ್ನು ಸೀಳಿ, ಆ ರಕ್ಕಸನ ಕುಂಭಸ್ಥಳದ ಮೇಲೆ ತಾಂಡವನೃತ್ಯದಲ್ಲಿ ಮಗ್ನವಾಗಿರುವ ಭಂಗಿಯಲ್ಲಿ ತೀವ್ರ ಚಲನೆಯಿದೆ. ಮುಖಚರ್ಯೆಯಲ್ಲಿ ಓಜಸ್ಸಿದೆ, ಮೂರ್ತಿ ಸತ್ವಪೂರ್ಣವಾಗಿದೆ. ತೊಲೆಗಳ ಮೇಲೆ ಕೃಷ್ಣಲೀಲೆ, ಸಮುದ್ರ ಮಥನ, ಶಿವಲೀಲೆಗಳು, ಅಷ್ಟದಿಕ್ಪಾಲಕರು ಮುಂತಾದ ಹಲವು ಬಗೆಯ ಚಿತ್ರಣಗಳನ್ನು ಅಲ್ಲಲ್ಲಿ ಬಿಡಿಸಿರುವುದು ಕುತೂಹಲಕರವಾಗಿದೆ. ಒಂದೆಡೆ ಮುಸ್ಲಿಂ ಸರದಾರನೊಬ್ಬನು ಹುಕ್ಕ ಸೇದುತ್ತಿರುವ ಅಪರೂಪದ ಚಿತ್ರವೊಂದಿದ್ದರೆ ಮತ್ತೊಂದೆಡೆ ಹಾವಾಡಿಗನೊಬ್ಬ ಪುಂಗಿಯೂದುತ್ತಿದ್ದಾನೆ; ಸರ್ಪವೊಂದು ಬುಟ್ಟಿಯಿಂದ ಮೇಲಕ್ಕೆ ಹೆಡೆಯೆತ್ತಿದೆ; ದೂರದಲ್ಲಿ ಕೋತಿಯೊಂದು ತನ್ನ ಹಿಂಗಾಲುಗಳ ಮೇಲೆ ನಿಂತು ಭಯಮಿಶ್ರಿತ ಆಶ್ಚರ್ಯದಿಂದ ನೋಡುತ್ತಿದೆ. ಇಂಥ ಕಡೆಗಳಲ್ಲೆಲ್ಲ ಚಿತ್ರಕಾರನ ಕಲಾಕೌಶಲ್ಯ ಎದ್ದು ಕಾಣುತ್ತದೆ.

ಹಿರಿಯ ಬೆಟ್ಟದ ಚಾಮರಾಜ ಒಡೆಯರು

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ನಿರ್ಮಿತವಾದ ಶ್ರವಣಬೆಳಗೊಳದ ಕಲ್ಯಾಣಿಯ ಒಂದು ಎತ್ತರವಾದ ಮಂಟಪದ ಚಾವಣಿ, ತೊಲೆ ಗಂಬಗಳ ಮೇಲೆ ಚಿತ್ರಗಳು ತುಂಬಿದ್ದಂತೆ ತೋರುತ್ತದೆ. ಆದರೆ ಈಗ ಈ ಚಿತ್ರಗಳ ಕುರುಹು ಮಾತ್ರ ಅಲ್ಲಲ್ಲಿ ಕಂಡುಬರುತ್ತದೆ. ಹಿರಿಯೂರಿನ ತೇರು ಮಲ್ಲೇಶ್ವರ ದೇವಾಲಯದ ಮುಂದಿನ ಮಂಟಪ ಮತ್ತು ಎಡೆಯೂರು ಸಿದ್ಧಲಿಂಗೇಶ್ವರ ಮಠದ ಗೋಡೆಗಳ ಮೇಲೆ ಸುಮಾರು ಇದೇ ಕಾಲದ ಚಿತ್ರಗಳನ್ನು ನೋಡಬಹುದು. ಇವು ಬಹುಮಟ್ಟಿಗೆ ಗಿರಿಜಾಕಲ್ಯಾಣ ಮತ್ತು ಇತರ ಶಿವಲೀಲೆಗಳನ್ನು ಕುರಿತದ್ದಾಗಿದೆ.

ಮುಂದಿನ ಘಟ್ಟಕ್ಕೆ ಸೇರಿದುದು ಸೀಬಿಯ ನರಸಿಂಹ ದೇವಾಲಯದಲ್ಲಿ ಮುಖಮಂಟಪ ಮತ್ತು ಮಹಾದ್ವಾರಗಳ ಒಳಚಾವಣಿಗಳು, ತೊಲೆಗಳ

ಮೇಲೆಲ್ಲ ತುಂಬಿಹೋಗಿರುವ ವರ್ಣಚಿತ್ರಗಳು. 18ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿರುವ ಈ ಚಿತ್ರಗಳು ವಿಷಯವೈವಿಧ್ಯಕ್ಕೆ ಹಲವು ಕಥೆಗಳ ವಿವರವಾದ ದೃಶ್ಯಾವಳಿಗಳಿಗೆ ಹೆಸರಾಗಿವೆ. ಇಲ್ಲಿ ವಿಷ್ಣುವಿನ ದಶಾವತಾರಗಳುಂಟು; ಶಿವಲೀಲೆಗಳುಂಟು; ರಾಮಾಯಣ, ಭಾರತ, ಭಾಗವತ, ಅಪರೂಪವಾದ ನರಸಿಂಹ-ಚಂಚುಲಕ್ಷ್ಮಿಯರ ಕಥೆಗಳುಂಟು. ಶಿವಲೀಲೆಗಳಲ್ಲಿ ಶರಭಾವತಾರ, ಸುಂದರ ಕಲ್ಯಾಣಮೂರ್ತಿ, ಉಮಾಮಹೇಶ್ವರಮೂರ್ತಿ, ಅಂಧಕಾಸುರಸಂಹಾರಮೂರ್ತಿ, ಯೋಗಾಸನ ಮೂರ್ತಿ, ಗಜಾಸುರಮರ್ದನ ಮೊದಲಾದುವೂ ಮಹಾಭಾರತ ಯುದ್ಧದ ವಿವರಣೆಗಳಲ್ಲಿ ಯುದ್ಧಸನ್ನದ್ಧವಾಗಿರುವ ಎರಡು ಸೈನ್ಯಗಳೂ ಚತುರಂಗ ಬಲಸಮೇತವಾಗಿದ್ದು ಗೀತೋಪದೇಶ ಮುಂತಾದುವೂ ಕೃಷ್ಣಲೀಲೆಗಳಲ್ಲಿ ಶಂಬರಾಸುರ, ಭಸ್ಮಾಸುರ, ಕಿಮ್ಮೀರ, ನರಕಾಸುರ, ಧೇನುಕ, ಹಯ, ಶಕಟ ಮೊದಲಾದ ರಾಕ್ಷಸರ ವಧೆಗಳೂ ಕಾಳಿಂಗ ಮರ್ದನ, ರುಕ್ಮಿಣೀ ಕಲ್ಯಾಣ, ಗೋಪೀ ವಸ್ತ್ರಾಪಹರಣ, ರಾಸಕ್ರೀಡೆ ಮೊದಲಾದವೂ, ರಾಮಾಯಣದಲ್ಲಿ ಸೀತಾಕಲ್ಯಾಣ, ವಾಲಿವಧೆ ಮತ್ತು ತಾರೆಯ ಶೋಕ, ಸುಗ್ರೀವಸಖ್ಯ, ಸೀತಾನ್ವೇಷಣೆ, ಸಮುದ್ರ ಲಂಘನ, ಅಶೋಕವನದಲ್ಲಿ ಸೀತೆ, ಹಾಗೆಯೇ ವಿಶ್ವರೂಪದರ್ಶನ ಮೊದಲಾದ ದೃಶ್ಯಗಳು ಅತಿನಾಜೂಕಾಗಿ ಬಿಡಿಸಲ್ಪಟ್ಟಿದೆ. ಇವುಗಳಲ್ಲಿ ಕೆಲವು ಚಿತ್ರಗಳ ವಿವರಣೆಯನ್ನೂ ಕೆಳಗೆ ಕೊಟ್ಟಿದೆ. ಮಹಾದ್ವಾರದ ಚಿತ್ರಗಳಲ್ಲಿ ಹೈದರ್, ಟಿಪ್ಪು, ಆ ದೇವಾಲಯವನ್ನು ಕಟ್ಟಿಸಿದ ನಲ್ಲಪ್ಪ ಮತ್ತು ಇತರ ಅಧಿಕಾರಿಗಳು, ಸೈನ್ಯ ಮೊದಲಾದುವಿವೆ. ಇಲ್ಲಿ ದರಿಯಾ ದೌಲತ್‌ನಲ್ಲಿ ಕಾಣುವಂತೆ ವ್ಯಕ್ತಿಚಿತ್ರಣಗಳನ್ನು ಬಿಡಿಸಿರುವುದನ್ನು ಗಮನಿಸಬಹುದು.

ಚಾಮರಾಜ ಒಡೆಯರು

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಚಿತ್ರಕಲೆಗೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಟಿಪ್ಪು ದರಿಯಾದೌಲತ್ ಅರಮನೆಯ ಗೋಡೆಗಳ ಮೇಲೆ ವ್ಯಕ್ತಿಚಿತ್ರಣಗಳನ್ನು ಬರೆಸಿದುದನ್ನು ಮಾದರಿಯಾಗಿಟ್ಟುಕೊಂಡು ಮುಮ್ಮಡಿ ಕೃಷ್ಣರಾಜ ಒಡೆಯರು 1861ರಲ್ಲಿ ಕಟ್ಟಿಸಿದ ಜಗನ್ಮೋಹನ ಅರಮನೆಯ ಮೇಲಂತಸ್ತಿನ ದೊಡ್ಡದಾದ ಹಜಾರ ಮತ್ತು ಇಕ್ಕೆಲಗಳಲ್ಲಿ ಸಂತಾನಾಂಬುಜ, ಅದರ ಎರಡು ಕಡೆಗಳಲ್ಲಿಯೂ ಭಾರತದ ಮತ್ತು ಹೊರಗಿನ ಹಲವಾರು ರಾಜರುಗಳ ಭಾವಚಿತ್ರಗಳು, ರಾಜನ ಅನೇಕ ಬಂಧಿಗಳು ಮತ್ತು ಅಧಿಕಾರಗಳು, ವಿಜಯದಶಮಿ ಜಂಬೂಸವಾರಿಯ ವೈಭವದ ಮೆರವಣಿಗೆ, ಬೇಟೆಯ ಚಿತ್ರಗಳು, ಕಲ್ಪದ್ರುಮ, ವಸಂತೋತ್ಸವದ ದೃಶ್ಯಗಳು ಕುತೂಹಲಕರವಾಗಿ ಚಿತ್ರಿತವಾಗಿವೆ. ತಮ್ಮ ತಂದೆ ಚಾಮರಾಜ ಒಡೆಯರ ಜನನದ ನೆನಪಿಗಾಗಿ ಚಾಮರಾಜನಗರದಲ್ಲಿ ಕಟ್ಟಿಸಿದ ಜನನಮಂಟಪದಲ್ಲಿಯೂ ಗೋಡೆಗಳು ಇದೇ ರೀತಿ ವರ್ಣಚಿತ್ರಗಳಿಂದ ತುಂಬಿರುವುದನ್ನು ನೋಡಬಹುದು. ಇದೇ ರೀತಿ ಸುಬ್ಬರಾಯದಾಸರು ಮೈಸೂರಿನಲ್ಲಿ ಕಟ್ಟಿಸಿರುವ ವೆಂಕಟರಮಣ ಸ್ವಾಮಿ ದೇವಾಲಯದ ಮೇಲ್ಭಾಗದಲ್ಲಿಯೂ ಒಂದು ಚಿತ್ರಮಂಟಪವಿದೆ. ಅಲ್ಲಿಯೂ ಮೈಸೂರರಸರ ಭಾವಚಿತ್ರಗಳು ಮೊದಲಾದುವು ಇವೆ. ಶ್ರವಣಬೆಳಗೊಳದ ಜೈನಮಠದ ಗೋಡೆಗಳ ಮೇಲೆ ಜನರ ಮತ್ತು ಜೈನಚಕ್ರವರ್ತಿಗಳ ಜೀವನವನ್ನು ಚಿತ್ರಿಸುವ, ಪಾರ್ಶ್ವನಾಥನ ಸಮವಸರಣ, ಭರತನಾಗಕುಮಾರರ ಕಥೆ ಮೊದಲಾದ ಇದೇ ಕಾಲದ ಚಿತ್ರಗಳಿದ್ದು ಇವುಗಳಲ್ಲೊಂದರಲ್ಲಿ ಮುಮ್ಮಡಿ ಕರಷ್ಣರಾಜ ಒಡೆಯರ ದರ್ಬಾರಿನ ಚಿತ್ರವೂ ಉಂಟು. ಈ ಕಾಲದ ಚಿತ್ರಮಂಟಪಗಳ ಗುಂಪಿಗೆ ಮುಡುಕುತೊರೆ ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಚಿತ್ರ ಮಂಟಪವನ್ನೂ ಸೇರಿಸಬಹುದು. ಇಲ್ಲಿ ಭಿಕ್ಷಾಟನ ಮೂರ್ತಿ, ದೇವೀಮಹಾತ್ಮೆ, ಗಿರಿಜಾಕಲ್ಯಾಣ, ನಟರಾಜ ಮುಂತಾದ ಚಿತ್ರಗಳಿದ್ದು ಒಂದೊಂದಕ್ಕೂ ವಿವರಣಾತ್ಮಕ ಅಂಕಿತವಿದೆ. ಈ ಮೇಲಿನ ಎಲ್ಲ ಚಿತ್ರಗಳೂ ದೇಶೀಶೈಲಿಯಲ್ಲಿಯೇ ರಚಿತವಾದುವು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅನೇಕ ಚಿತ್ರಕಾರರು ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಇವರು ಕರ್ನಾಟಕದ ಚಿತ್ರಶೈಲಿಯೊಂದಿಗೆ ಬಂಗಾಲಿ ಚಿತ್ರ ಕಲೆಯನ್ನೂ ಐರೋಪ್ಯ ಶೈಲಿಯನ್ನೂ ಮೈಗೂಡಿಸಿಕೊಂಡು ಚಿತ್ರರಚನೆ ಮಾಡಿರುವುದನ್ನು ನೋಡಬಹುದಾಗಿದೆ. ಇವುಗಳಲ್ಲಿ ವೆಂಕಟಪ್ಪನವರು ಅರಮನೆಯ ಗೋಡೆಗಳ ಮೇಲೆ ಚಿತ್ರಿಸಿರುವ ದೃಶ್ಯಗಳು ಮನೋಜ್ಞವಾಗಿವೆ.

**ಲಲಿತಕಲೆಗಳು :** ಒಡೆಯರ ಆಳ್ವಿಕೆಯಲ್ಲಿ ಸಂಗೀತ, ನೃತ್ಯ ಮೊದಲಾದ ಇತರ ಲಲಿತಕಲೆಗಳಿಗೆ ಕೊಟ್ಟ ಪ್ರೋತ್ಸಾಹವೂ ಗಣನೀಯವಾದುದು. ಆದರೆ ಇವು ಕೇವಲ ಶ್ರವ್ಯ ಮತ್ತು ದೃಶ್ಯಗಳಾದುದರಿಂದ ಬೇರೆ ಬೇರೆ ಅರಸರ ಕಾಲಗಳಲ್ಲಿದ್ದ ರೀತಿ ಮತ್ತು ಬೆಳವಣಿಗೆಯನ್ನು ಗುರುತಿಸುವುದು ಅಸಾಧ್ಯ. ಆಗ ರಚಿತವಾದ ಗ್ರಂಥಗಳಲ್ಲಿ ಕಂಡುಬರುವ ವಿಷಯಗಳಿಂದ ಮಾತ್ರ ಕೆಲಮಟ್ಟಿಗೆ ಒಡೆಯರು ಲಲಿತಕಲೆಗಳಿಗೆ ಕೊಟ್ಟ ಪ್ರೋತ್ಸಾಹವನ್ನು ಗುರುತಿಸಬಹುದು.

**ಸಂಗೀತ :** ರಾಜಒಡೆಯನ ಅನಂತರ ಬಂದ ಚಾಮರಾಜ ಒಡೆಯ ಸ್ವತಃ ಸಂಗೀತಪಟುವಾಗಿದ್ದನೆಂದು ತಿಳಿದುಬರುತ್ತದೆ. ಚಿಕ್ಕದೇವರಾಯ ಕವಿಯಾಗಿದ್ದಂತೆ ಸಂಗೀತಜ್ಞನೂ ಆಗಿದ್ದ. ಈತನಿಗೆ ರಸಿಕಜನಕರ್ಣರಸಾಯನೀಕೃತಸಂಗೀತವಿಸ್ತರಂ ಎಂಬ ಬಿರುದಿತ್ತು. ಈತ ಗೀತಗೋಪಾಲ ಎಂಬ ಸಂಗೀತಕೃತಿಯನ್ನು ರಚಿಸಿದ್ದಾನೆ. ಇದರಲ್ಲಿ ಇವನ ಆಸ್ಥಾನ ಕವಿಯಾಗಿದ್ದ ತಿರುಮಲಾರ್ಯ ರಚಿಸಿದ ಕೆಲವು ಕೀರ್ತನೆಗಳೂ ಸೇರಿರುವಂತೆ ತೋರುತ್ತದೆ. ಜಯದೇವ ಸಂಸ್ಕೃತದಲ್ಲಿ ರಚಿಸಿದ್ದ ಗೀತಗೋವಿಂದ ಇದಕ್ಕೆ ಮಾದರಿ. ಇದರಲ್ಲಿನ ಹಾಡುಗಳು ಸುಂದರವಾಗಿದ್ದು ಭಗವಂತನ ಗುಣಾತಿಶಯಗಳನ್ನು ಕೊಂಡಾಡುವ ಈ ಕೀರ್ತನೆಗಳು ಸಂಗೀತಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಭಾಗವತ ಮೊದಲಾದ ಪುರಾಣಗಳಲ್ಲಿ ಬರುವ ಅನೇಕ ಭಕ್ತರ ತತ್ತ್ವೋಪದೇಶಗಳನ್ನೂ ಆಳ್ವಾರುಗಳ

ಕೃಷ್ಣರಾಜ ಒಡೆಯರು

ಉಪದೇಶಿಸಿದ ತತ್ತ್ವಗಳನ್ನೂ ಸುಂದರವಾಗಿ ಈ ಕೀರ್ತನೆಗಳಲ್ಲಿ ಅಳವಡಿಸಲಾಗಿದೆ. ಗದ್ಯದಲ್ಲಿ ಮೊದಲು ತತ್ತ್ವವನ್ನು ತಿಳಿಸಿ, ಅದಕ್ಕೆ ಹೊಂದುವಂತೆ ಸರಳವಾದ ರೀತಿಯಲ್ಲಿ ಸುಲಭವಾದ ಭಾಷೆಯಲ್ಲಿ ಕೀರ್ತನೆಗಳನ್ನು ಈತ ರಚಿಸಿದ್ದಾನೆ.

ಸಂಗೀತದ ಬೆಳವಣಿಗೆಯಲ್ಲಿ ಮುಮ್ಮಡಿ ಕೃಷ್ಣರಾಜನ ಪಾತ್ರ ಹಿರಿಯದಾದುದು. ಈತ ತನ್ನ ಆಸ್ಥಾನದಲ್ಲಿ ಘನತೆಗೆ ತಕ್ಕಂತೆ ಅನೇಕ ಸಂಗೀತ ವಿದ್ವಾಂಸರನ್ನು ಆದರಿಸಿ ಪೋಷಿಸಿದ. ತಂಜಾವೂರಿನ ಪ್ರಸಿದ್ಧ ವಾಗ್ಗೇಯಕಾರರಾದ ವೀಣೆ ವೆಂಕಟಸುಬ್ಬಯ್ಯನವರನ್ನು ಮೈಸೂರಿಗೆ ಕರೆಸಿ, ಅವರ ಸಂಗೀತ ಸಾಮರ್ಥ್ಯಕ್ಕೆ ಮೆಚ್ಚಿ, ಅವರಿಗೆ ಒಂದು ಬಂಗಾರದ ವೀಣೆಯನ್ನಿತ್ತು ಗೌರವಿಸಿದನೆಂದು ಪ್ರತೀತಿ ಇದೆ. ಚಾಮರಾಜ ಒಡೆಯರ ಆಸ್ಥಾನದಲ್ಲಿ ಪ್ರಖ್ಯಾತರಾದ ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣ, ಮೈಸೂರು ಸದಾಶಿವರಾಯರೇ ಮೊದಲಾದ ಘನ ವಿದ್ವಾಂಸರಿದ್ದರು. ಸದಾಶಿವರಾಯರು ಶೇಷಣ್ಣ, ಸುಬ್ಬಣ್ಣ ಮೊದಲಾದವರಿಗೆ ಗುರುಗಳೂ ಆಗಿದ್ದರು. ಇವರ ಅಲಂಕಾರಪೂರ್ಣ ಕೃತಿಗಳು ವಿಶಿಷ್ಟವಾದುವು. ಚಾಮರಾಜ ಒಡೆಯರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಸ್ಥಾನಗಳಲ್ಲಿ ಹಲವು ಸಂಗೀತ ವಿದ್ವಾಂಸರಿಗೆ ಆಶ್ರಯ ಕೊಟ್ಟಿದ್ದುದಲ್ಲದೇ ಕರ್ನಾಟಕದ ಹೊರಗಿನ ಅನೇಕ ಪ್ರಸಿದ್ಧ ವಿದ್ವಾಂಸರನ್ನು ಅರಮನೆಗೆ ಕರೆಸಿ ಗೌರವಿಸುತ್ತಿದ್ದರು. ಪಟ್ಣಂ ಸುಬ್ರಹ್ಮಣ್ಯ ಅಯ್ಯರ್, ತಿರುಕ್ಕೋವಿದ ಕ್ಯಾವಲ್ ಕೃಷ್ಣ ಅಯ್ಯರ್, ಮಹಾವೈದ್ಯನಾಥ ಅಯ್ಯರ್ ಮೊದಲಾದ ಪ್ರೌಢ ಸಂಗೀತವಿದ್ವಾಂಸರು ಹೀಗೆ ಅರಮನೆಯಿಂದ ಗೌರವ ಪಡೆದವರಲ್ಲಿ ಕೆಲವರು. ನಾಲ್ವಡಿ ಕೃಷ್ಣರಾಜ ಒಡೆಯರು ಸಂಗೀತಗಾರರಿಗೆ ಕೊಟ್ಟ ಉದಾರ ಆಶ್ರಯದಿಂದ ಹೊಸ ಹೊಸ ರಚನೆಗಳಿಗೂ ಕಲಾಪ್ರಾವೀಣ್ಯಕ್ಕೂ ಎಡೆಯಾಯಿತು. ಶೇಷಣ್ಣ, ಬಿಡಾರಂ ಕೃಷ್ಣಪ್ಪ, ಸಾಂಬಯ್ಯ, ಮುತ್ತಯ್ಯ ಭಾಗವತರ್, ವಾಸುದೇವಾಚಾರ್ಯ–ಇವರು ರಚಿಸಿದ ಅನೇಕ ಕೃತಿಗಳಲ್ಲಿ ಸಂಗೀತ ಪ್ರಪಂಚದಲ್ಲಿ ಹೊಸ ಹೊಸ ಪ್ರಯೋಗಗಳು ನಡೆದಿರುವುದನ್ನು ಕಾಣಬಹುದು. ಈ ಕಾಲದಲ್ಲಿ ತೆಲುಗು, ಸಂಸ್ಕೃತ ಸಂಗೀತ ಕೃತಿಗಳ ಜೊತೆಗೆ ಹಲವು ಕನ್ನಡ ಕೃತಿಗಳು ರಚಿತವಾದವು. ಮುತ್ತಯ್ಯ ಭಾಗವತರು ನೂರೆಂಟು ರಾಗಗಳಲ್ಲಿ ಚಾಮುಂಡೇಶ್ವರಿಯ ಮೇಲೆ ನೂರೆಂಟು ಕೀರ್ತನೆಗಳನ್ನು ರಚಿಸಿದರು. ದೇವೋತ್ತಮದಾಸರು ಕನ್ನಡ ಹಾಡುಗಳನ್ನು ರಚಿಸಿದ ಮುಖ್ಯರಲ್ಲಿ ಒಬ್ಬರು. ಕರಿಗಿರಿರಾಯರು ಕೃಷ್ಣರಾಜ ಒಡೆಯರ ಆಶ್ರಯದಲ್ಲಿದ್ದ ಸುಪ್ರಸಿದ್ಧ ವಿದ್ವಾಂಸರು. ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಸ್ಥಾನಕ್ಕೆ ಆಹ್ವಾನಿಸಿ ಸನ್ಮಾನ ಮಾಡಿದ ವಿದ್ವಾಂಸರುಗಳಲ್ಲಿ ವೀಣಾ ಧನಮ್ಮಾಳ್, ಅರಿಯಾಕುಡಿ ರಾಮಾನುಜಯ್ಯಂಗಾರ್, ಟೈಗರ್ ವರದಾಚಾರ್ಯ ಮುಂತಾದ ಕರ್ನಾಟಕ ಸಂಗೀತ ವಿದ್ವಾಂಸರುಗಳಲ್ಲದೆ ಫಿತಯಾಜ್‌ಖಾನ್, ಅಬ್ದುಲ್ ಕರೀಂಖಾನ್ ಮೊದಲಾದ ಹಿಂದೂಸ್ತಾನೀ ಸಂಗೀತಗಾರರೂ ಸೇರಿದ್ದಾರೆ. ಸಂಗೀತಕ್ಕೆ ಕೃಷ್ಣರಾಜ ಒಡೆಯರು ಕೊಟ್ಟ ಪ್ರೋತ್ಸಾಹದಿಂದ ಮೈಸೂರು ಸಂಗೀತಕ್ಕೆ ಪ್ರಸಿದ್ಧವಾಗಿ, ಸಂಗೀತಗಾರರನ್ನು ಮಾತ್ರವಲ್ಲದೆ ಸಂಗೀತಪ್ರಿಯರನ್ನೂ ಬಹುವಾಗಿ ಆಕರ್ಷಿಸುತ್ತಿದ್ದಿತು. ಇವರ ಅನಂತರ ಬಂದ ಜಯಚಾಮರಾಜ ಒಡೆಯರು ಪಾಶ್ಚಾತ್ಯ ಪೌರ್ವಾತ್ಯ ಸಂಗೀತಗಳೆರಡರಲ್ಲಿಯೂ ನಿಷ್ಣಾತರಾಗಿದ್ದುದಲ್ಲದೆ ಸ್ವತಃ ವಾಗ್ಗೇಯಕಾರರೂ ಆಗಿದ್ದರು. ಇವರ ಹಲವು ಕೃತಿಗಳು ಪ್ರಸಿದ್ಧವಾಗಿವೆ.

**ನೃತ್ಯ:** ವಿಜಯನಗರದ ಅರಸರ ಕಾಲದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಗೇರಿದ್ದ ನೃತ್ಯಕಲೆ, ಅವರ ಆಡಳಿತದ ಕಡೆಗಾಲದ ಹೊತ್ತಿಗಾಗಲೇ ತನ್ನ ಗೌರವವನ್ನು ಕಳೆದುಕೊಳ್ಳಲಾರಂಭಿಸಿತ್ತು. ಉನ್ನತವಾದ ವೃತ್ತಿ ಸಂಪ್ರದಾಯವನ್ನು ಕೀಳರಿಮೆಯ ಕಾಯಕವಾಗಿ ಜನರನ್ನಾಕರ್ಷಿಸುವ ಸಾಧನವನ್ನಾಗಿ ವೇಶ್ಯೆಯರು ಬಳಸಲಾರಂಭಿಸಿದರು. ಇದರ ಫಲವಾಗಿ ರಾಣಿಯರು, ರಾಜಕುಮಾರಿಯರು ಕಲಿತು ಪ್ರದರ್ಶಿಸುತ್ತಿದ್ದ ಈ ಕಲೆಯನ್ನು ಕುಲೀನ ಮನೆತನದವರು ಅಭ್ಯಾಸ ಮಾಡುವುದು ಮರ್ಯಾದೆಯಲ್ಲ ಎಂಬ ಭಾವನೆ ಬೆಳೆಯಲು ಅವಕಾಶವಾಯಿತು. ಒಡೆಯರ ಆಸ್ಥಾನಗಳಲ್ಲಿ ನೃತ್ಯಗಾತಿಯರನ್ನು ನೇಮಿಸಿದ್ದರೂ ಅದು ಕೇವಲ ಸಾಂಪ್ರದಾಯಿಕ. ಆದರೂ, ನೃತ್ಯದಲ್ಲಿ ಹಿಂದಿನಿಂದ ಬೆಳೆದುಬಂದಿದ್ದ ಸಂಪ್ರದಾಯವನ್ನು ಉಳಿಸಿಕೊಂಡು ಆಸ್ಥಾನಗಳಲ್ಲಿಯೂ ದೇವದಾಸಿಯರಾಗಿ ದೇವಾಲಯಗಳಲ್ಲೂ ಪೋಷಣೆ ಪಡೆದು ಆ ಸಂಪ್ರದಾಯ ಪೂರ್ಣವಾಗಿ ನಶಿಸದಂತೆ ಉಳಿಸಿಕೊಂಡು ಬಂದರು. ರಾಜರ ಆಸ್ಥಾನದಲ್ಲಿ ಮಾತ್ರವಲ್ಲದೆ, ಪ್ರತಿಷ್ಠಿತರ ಮನೆಗಳಲ್ಲಿಯೂ ಕೆಲವು ಸಮಾರಂಭಗಳಲ್ಲಿ ನೃತ್ಯವನ್ನೇರ್ಪಡಿಸುವುದು ಸಾಮಾನ್ಯವಾಗಿತ್ತು. ಮುಮ್ಮಡಿ ಕರಷ್ಣರಾಜ ಒಡೆಯರ ಕಾಲದಲ್ಲಿ ಅವರ ಆಸ್ಥಾನದಲ್ಲಿದ್ದ ಜೆಟ್ಟಿತಾಯಮ್ಮ ಇಂಥ ಪ್ರಬುದ್ಧ ನೃತ್ಯಗಾರ್ತಿ. ಗಿರಿಯಪ್ಪ, ಕಾಶಿಗುರು, ಅಮೃತಪ್ಪ, ದಾಸಪ್ಪ, ಕಿಟ್ಟಪ್ಪ ಮೊದಲಾದವರು ಇವರ ಕಾಲದಲ್ಲಿ ನೃತ್ಯಕಲೆ ಪುನರುಜ್ಜೀವನಗೊಂಡಿತೆಂದು ಹೇಳಬಹುದು. ಈ ಕಾಲದಲ್ಲಿ ಕಲೆಗಾಗಿ ಕಲೆಯನ್ನು ಅಭ್ಯಾಸ ಮಾಡುವ ಶ್ರದ್ಧೆ ಮೂಡಿ ಹಲವರು ನೃತ್ಯಾಭ್ಯಾಸ ಮಾಡಿ ಅದನ್ನು ಪ್ರಸಾರ ಮಾಡಿದರು. ಇದರೊಂದಿಗೆ ವೇಶ್ಯೆಯರ ಸೊತ್ತಾಗಿದ್ದ ನೃತ್ಯ ಬಹುಮಟ್ಟಿಗೆ ಅವರ ಕೈ ಬಿಟ್ಟಿತು.

**ಸಾಹಿತ್ಯ:** ಮೈಸೂರು ಒಡೆಯರು ಸಾಹಿತ್ಯಕ್ಕೆ ಅಪರಿಮಿತವಾದ ಪ್ರೋತ್ಸಾಹವನ್ನು ಕೊಟ್ಟರು. ಕನ್ನಡ, ಸಂಸ್ಕೃತವಲ್ಲದೆ ತೆಲುಗು ಸಾಹಿತ್ಯಕ್ಕೂ ಇವರಿಂದ ಪ್ರೋತ್ಸಾಹ ದೊರೆತಿರುವುದು ಕಂಡುಬರುತ್ತದೆ. ಚಿಕ್ಕದೇವರಾಜ ಒಡೆಯನ ಕಾಲದಲ್ಲಿದ್ದ ಅವನ ಸೇನಾಪತಿಯಾಗಿದ್ದ ಕಳಲೆ ವೀರರಾಜ ವಚನಭಾರತಮು ಎಂಬ ಗದ್ಯಗ್ರಂಥವನ್ನು ಬರೆದ. ಇವನ ಮಗ ನಂಜರಾಜ ಹಾಲಾಸ್ಯಮಹಾತ್ಯ್ಮಮು ಎಂಬ ಕಾವ್ಯವನ್ನು ಬರೆದಿದ್ದಾನೆ. ಕಂಠೀರವ ನರಸರಾಜ ಒಡೆಯನ ಕಾಲದಲ್ಲಿ ಕೆಲವು ತೆಲುಗು ಯಕ್ಷಗಾನಗಳೂ ರಚಿತವಾದಂತೆ ತಿಳಿದುಬರುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ಕುಂಡಲಕೀರ್ತಿ ಚಂದ್ರಕವಿಯು ಕೃಷ್ಣ ಭೂಪಾಲೀಯಮು ಎಂಬ ಕಾವ್ಯವನ್ನು ರಚಿಸಿದ್ದಾನೆ.

ಈ ಕಾಲದ ಸಂಸ್ಕೃತ ಕಾವ್ಯಗಳಲ್ಲಿ ಮುಖ್ಯವಾದುದೆಂದರೆ ಕವಿಗಳಿಗೆ ಆಶ್ರಯದಾತನಾಗಿ ಆಧುನಿಕ ಭೋಜನೆನಿಸಿಕೊಂಡಿದ್ದ ದಳವಾಯಿ ನಂಜರಾಜ ರಚಿಸಿದ ಸಂಗೀತಗಂಗಾಧರ, ಆತನ ಆಶ್ರಯದಲ್ಲಿದ್ದ ನರಸಿಂಹ ಕವಿಯ ನಂಜರಾಜಯಶೋಭೂಷಣವೆಂಬ ಅಲಂಕಾರಗ್ರಂಥ, ಮುಮ್ಮಡಿ ಕೃಷ್ಣರಾಜ ಬರೆದ ಸೂರ್ಯ ಚಂದ್ರಾದಿವಂಶಾವತರಣ, ಶ್ರೀತತ್ವ ನಿಧಿ ಎಂಬ ಸಂಕಲನ ಗ್ರಂಥ, ದಶರಥನಂದನ ಚರಿತ ಎಂಬ ಆರ್ಯಾವೃತ್ತದಲ್ಲಿ ರಚಿಸಿದ ರಾಮಾಯಣ, ಗ್ರಹಣದರ್ಪಣ, ಸಂಖ್ಯಾರತ್ನಕೋಶ, ಚದುರಂಗ ಸಾರಸರ್ವಸ್ವ ಮೊದಲಾದ ಗ್ರಂಥಗಳು. ಈ ರಾಜನ ಆಶ್ರಯದಲ್ಲಿದ್ದ ರಾಮಕೃಷ್ಣಶಾಸ್ತ್ರಿ ಎಂಬ ಸಂಸ್ಕೃತ ಕವಿಯ ಭುವನಪ್ರದೀಪಿಕಾ ಎಂಬ ವಿಶ್ವಕೋಶ, ಹಾಗೆಯೇ ಶ್ರೀನಿವಾಸಕವಿ ಸಾರ್ವಭೌಮಕೃತವಾದ ಮುಮ್ಮಡಿ ಕೃಷ್ಣರಾಜನನ್ನು ಕುರಿತ ಕೃಷ್ಣರಾಜಪ್ರಭಾವೋದಯ ಮತ್ತು ಕೃಷ್ಣನೃಪಯೋತ್ಕರ್ಷಚಂಪೂ ಇವೇ ಮೊದಲಾದುವು.

ಈ ಕಾಲದಲ್ಲಿ ಕನ್ನಡ ಸಾಹಿತ್ಯವಂತೂ ಬಹುಮುಖವಾಗಿ ಅಭಿವೃದ್ಧಿ ಹೊಂದಿತು. ಹಲವಾರು ಚರಿತ್ರ ಗ್ರಂಥಗಳು, ಮುಖ್ಯವಾಗಿ ಒಡೆಯರ ಬಗೆಗೆ, ಈ ಕಾಲದಲ್ಲಿ ಹುಟ್ಟಿಕೊಂಡುದೊಂದು ವಿಶೇಷ. ಇವುಗಳೊಂದಿಗೆ ಅಲಂಕಾರ ಗ್ರಂಥಗಳು, ರಾಮಾಯಣ, ಭಾರತ ಮುಂತಾದ ಕಾವ್ಯಗಳ ಗದ್ಯಾವತರಣಗಳೂ ಈ ಕಾಲದಲ್ಲಿ ಕಂಡುಬಂದವು. ಸತ್ವದ ದೃಷ್ಟಿಯಿಂದ ಅಲ್ಲದಿದ್ದರೂ, ಅವುಗಳ ಸಂಖ್ಯೆಯ ದೃಷ್ಟಿಯಿಂದ ಈ ಕಾಲದ ಕನ್ನಡ ಗ್ರಂಥಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

ರಾಜಒಡೆಯನ ಅನಂತರ ಆಳಿದ ಚಾಮರಾಜ ಒಡೆಯನ ಹೆಸರಿನಲ್ಲಿ ಚಾಮರಾಜೋಕ್ತಿ ವಿಲಾಸ ಮತ್ತು ಮಣಿಪ್ರಕಾಶನ ಎಂಬ ಗ್ರಂಥಗಳಿವೆ. ಮೊದಲನೆಯದು ರಾಮಾಯಣದ ಕಥೆಯ ಗದ್ಯನಿರೂಪಣೆಯಾದರೆ ಎರಡನೆಯದು ಬ್ರಹ್ಮೋತ್ತರಖಂಡದ ಟೀಕೆ. ಇದೇ ಕಾಲದಲ್ಲಿ ಶಾಲಿಹೋತ್ರನ ಅಶ್ವಶಾಸ್ತ್ರವನ್ನು ರಾಮಚಂದ್ರನೆಂಬುವನು ಸರಳವಾದ ಪದ್ಯ ಕಾವ್ಯವಾಗಿ ನಿರೂಪಿಸಿದ್ದಾನೆ. ಕಂಠೀರವ ನರಸರಾಜನ ಆಸ್ಥಾನಕವಿ ಗೋವಿಂದ ವೈದ್ಯನು ಕಂಠೀರವ ನರಸರಾಜವಿಜಯ ಎಂಬ ಸಾಂಗತ್ಯಕಾವ್ಯ ವನ್ನು ರಚಿಸಿದ್ದಾನೆ.

ಚಿಕ್ಕದೇವರಾಜ ಒಡೆಯನ ಆಳ್ವಿಕೆ ಒಡೆಯರ ಕಾಲದ ಕನ್ನಡ ಸಾಹಿತ್ಯದ ಉತ್ಕರ್ಷದ ಕಾಲ. ಈತ ಸ್ವತಃ ಕವಿಯಾಗಿದ್ದು ಹಲವು ಗ್ರಂಥಗಳನ್ನು ರಚಿಸಿದ್ದುದಲ್ಲದೆ ತಿರುಮಲಾರ್ಯ, ಚಿಕುಪಾಧ್ಯಾಯ, ಸಿಂಗರಾರ್ಯ, ತಿಮ್ಮಕವಿ, ಮಲ್ಲಿಕಾರ್ಜುನ, ವೇಣುಗೋಪಾಲ ವರಪ್ರಸಾದ, ಚಿದಾನಂದ ಮೊದಲಾದ ಕವಿಗಳಿಗೆ ಇವನ ಕಾಲದಲ್ಲಿ ದೊರೆತ ಆಶ್ರಯ ಅನೇಕ ಕಾವ್ಯಗಳ, ಶಾಸ್ತ್ರಗ್ರಂಥಗಳ ರಚನೆಗೆ ಕಾರಣವಾಯಿತು. ಚಿಕ್ಕದೇವರಾಯನ ಮಂತ್ರಿಯಾಗಿದ್ದ ತಿರುಮಲಾರ್ಯ ಅಪ್ರತಿಮವೀರಚರಿತ್ರೆ, ಚಿಕದೇವರಾಜ ವಂಶಾವಳಿ, ಚಿಕದೇವರಾಜವಿಜಯ ಮತ್ತು ಚಿಕದೇವರಾಜಶತಕಗಳನ್ನು ಬರೆದಿದ್ದಾನೆ. ಚಿಕುಪಾಧ್ಯಾಯನೆಂಬ ಕವಿ ಇಪ್ಪತ್ತೆಂಟಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾನೆ. ದಿವ್ಯಸೂರಿಚರಿತೆ ತಮಿಳುನಾಡಿನ ಆಳ್ವಾರುಗಳ ಕಥೆಗಳನ್ನು ನಿರೂಪಿಸುತ್ತದೆ. ವಿಷ್ಣುಪುರಾಣವನ್ನು ಚಂಪೂ ಮತ್ತು ಗದ್ಯರೂಪಗಳೆರಡರಲ್ಲಿಯೂ ರಚಿಸಿದ್ದಾನೆ. ಇವಲ್ಲದೆ ರಂಗಧಾಮ ಸ್ತುತಿ, ಶೃಂಗಾರಶತಕ ಮೊದಲಾದ ಸಾಂಗತ್ಯಗಳು ವರ್ಣನಾಪ್ರಧಾನವಾದ ಕೃತಿಗಳು. ಚಮತ್ಕಾರದಿಂದ ಕೂಡಿದ ಚಿತ್ರಶತಕವೆಂಬ ಸಾಂಗತ್ಯವೊಂದನ್ನೂ ಈತ ರಚಿಸಿದ್ದಾನೆ; ಕಾಮಂದಕನೀತಿ ಎಂಬ ಸಂಸ್ಕೃತದ ಕೃತಿಗೆ ಕನ್ನಡ ಟೀಕೆಯನ್ನೂ ರಚಿಸಿದ್ದಾನೆ. ಕನ್ನಡದಲ್ಲಿ ನಾಟಕವನ್ನು ಮೊದಲು ರಚಿಸಿದ ಕೀರ್ತಿ ಈ ಕಾಲದ ಇನ್ನೊಬ್ಬ ಕವಿ ಸಿಂಗಾರಾರ್ಯನದು. ಈತ ಮಿತ್ರವಿಂದಾ ಗೋವಿಂದ ಎಂಬ ನಾಟಕವನ್ನು ರಚಿಸಿದ. ಹರ್ಷನ ರತ್ನಾವಳಿ ನಾಟಕ ಈ ಕೃತಿಗೆ ಮೂಲ. ಚಿಕ್ಕದೇವರಾಯನ ಕಾಲದಲ್ಲಿ ಸ್ತ್ರೀಯರೂ ಕೃತಿರಚನೆ ಕೈಗೊಂಡರು. ಸಂಚಿಯ ಹೊನ್ನಮ್ಮ, ಹದಿಬದೆಯ ಧರ್ಮ ಎಂಬ ಸಾಂಗತ್ಯ ಕಾವ್ಯವನ್ನು ರಚಿಸಿದ್ದಾಳೆ. ಶೃಂಗಾರಮ್ಮ ಎಂಬ ಇನ್ನೊಬ್ಬ ಕವಯಿತ್ರಿ ಪದ್ಮಿನೀ ಕಲ್ಯಾಣವೆಂಬ ಕಾವ್ಯವನ್ನು ಸಾಂಗತ್ಯದಲ್ಲಿ ಬರೆದಿದ್ದಾಳೆ.

ದೊಡ್ಡದೇವರಾಜನ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ಮುಂದುವರಿಯಿತು. ಆತನ ರಾಣಿ ಚೆಲುವಾಂಬೆ ಸ್ವತಃ ಕವಯಿತ್ರಿ ಯಾಗಿದ್ದಳು. ವರನಂದೀ ಕಲ್ಯಾಣ, ವೆಂಕಟಾಚಲಮಹಾತ್ಮೆ, ಲಾಲಿಪದ ಆಕೆಯ ಕೃತಿಗಳು. ದಳವಾಯಿ ನಂಜರಾಜ ಹಲವಾರು ಮಹಾತ್ಮ್ಯಗಳನ್ನು, ಕಾವ್ಯಗಳನ್ನು ರಚಿಸಿರುವುದಲ್ಲದೆ ಅನೇಕ ಕವಿಗಳಿಗೆ ಆಶ್ರಯದಾತನೂ ಆಗಿದ್ದ. ಇವನ ನಂಜರಾಜ ವಾಣೀವಿಲಾಸ ಮಧುರೆಯ ಸುಂದರೇಶ್ವರನ ಲೀಲೆಗಳನ್ನೊಳಗೊಂಡಿರುವ ವಿಸ್ತಾರವಾದ ಗ್ರಂಥ. ಶಾಲ್ಯದ ಕೃಷ್ಣರಾಜನೆಂಬ ಕವಿ ವಿವೇಕಾಭರಣ, ಯಯಾತಿಕಾವ್ಯ, ಸದಾಶಿವ ಶತಕ, ಅಪ್ರಸ್ತುತ ಪ್ರಶಂಸಾ ಶತಕ ಮೊದಲಾದ ಕಾವ್ಯಗಳನ್ನು ರಚಿಸಿದ್ದಾನೆ. ಹಾಡು, ವಚನ, ಸಾಂಗತ್ಯ, ಷಟ್ಪದಿ ವೃತ್ತಗಳನ್ನು ಈತ ಬಳಸಿದ್ದಾನೆ. ವೆಂಕಮಾತ್ಯ ವಾರ್ಧಕ ಷಟ್ಪದಿಯಲ್ಲಿ ರಾಮಾಯಣವನ್ನೂ ಚಂಪೂ ಶೈಲಿಯಲ್ಲಿ ಇಂದಿರಾಭ್ಯುದಯವನ್ನೂ ಬರೆದಿದ್ದಾನೆ.

ಮುಮ್ಮಡಿ ಕೃಷ್ಣರಾಜರು ಚಿಕ್ಕದೇವರಾಜನಂತೆ ಸ್ವತಃ ಕವಿಯಾಗಿದ್ದರು. ಇವರ ಆಸ್ಥಾನದಲ್ಲಿಯೂ ಹಲವಾರು ಕವಿಗಳು ಆಶ್ರಯ ಪಡೆದಿದ್ದರು. ಸಾಂಗತ್ಯ ಪ್ರಕಾರಗಳಿಗೆ ಸೇರಿದ ಕೃತಿಗಳು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರಗೊಂಡವು. ಮುಮ್ಮಡಿ ಕೃಷ್ಣರಾಜರ ಕೃಷ್ಣರಾಜವಾಣಿ ವಿಲಾಸ ಎಂಬ ಭಾರತದ ಟೀಕೆ, ಸೌಗಂಧಿಕಾಪರಿಣಯವೆಂಬ ಗದ್ಯಪದ್ಯಾತ್ಮಕವಾದ ಕಾವ್ಯಗಳು ಪ್ರಸಿದ್ಧವಾಗಿವೆ. ಇವರ ಕಾಲದ ಗ್ರಂಥಕಾರರಲ್ಲಿ ದೇವಚಂದ್ರ ಪ್ರಸಿದ್ಧನಾದವನು. ಈತ ತನ್ನ ರಾಜಾವಳೀ ಕಥೆಯಲ್ಲಿ ಅನೇಕ ರಾಜರ ಚರಿತ್ರೆಯನ್ನು ತಿಳಿಸಿದ್ದಾನೆ. ಕೆಂಪುನಾರಾಯಣ ಈ ಕಾಲದ ಇನ್ನೊಬ್ಬ ಪ್ರಮುಖ ಕವಿ. ಇವನು ಮುದ್ರಾಮಂಜೂಷ ಎಂಬ ಕಾವ್ಯವನ್ನು ಸರಳವಾದ ಸುಲಲಿತವಾದ ಗದ್ಯದಲ್ಲಿ ಬರೆದಿದ್ದಾನೆ. ಅಳಿಯ ಲಿಂಗರಾಜನೂ ಹಲವು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ನರಪತಿಚರಿತ್ರವು ಚಂಪೂಶೈಲಿಯ ಅಲಂಕಾರಗ್ರಂಥ. ಮುಮ್ಮಡಿ ಕೃಷ್ಣರಾಜರ ಸ್ತುತಿರೂಪವಾದ ಪದ್ಯಗಳನ್ನು ಇಲ್ಲಿ ಉದಾಹರಣೆಯಾಗಿ ರಚಿಸಿದ್ದು ಈ ಗ್ರಂಥ ತಿರುಮಲಾರ್ಯನ ಅಪ್ರತಿಮವೀರಚರಿತೆಯನ್ನು ಅನುಸರಿಸಿದೆ.

ಚಾಮರಾಜ ಒಡೆಯರ ಕಾಲದಲ್ಲಿದ್ದ ಬಸವಪ್ಪಶಾಸ್ತ್ರಿಯವರು ಕಾಳಿದಾಸನ ಅಭಿಜ್ಞಾನ ಶಾಕುಂತಲವನ್ನು ಕನ್ನಡಿಸಿ ಅಭಿನವಕಾಳಿದಾಸರೆಂದು ಪ್ರಸಿದ್ಧ ರಾಗಿದ್ದಾರೆ. ಈ ವಂಶದ ಕೊನೆಯ ಅರಸರಾದ ಜಯಚಾಮರಾಜ ಒಡೆಯರು ಆರಂಭಿಸಿದ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆ ವೈಶಿಷ್ಟ್ಯಪೂರ್ಣ ವಾದುದು. ಅನೇಕ ಪಂಡಿತರಿಂದ ಋಗ್ವೇದ, ಪುರಾಣಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಮೂಲಪಾಠವನ್ನೂ ಅದರ ಅನುವಾದವನ್ನೂ ಹಲವು ಸಂಪುಟಗಳಲ್ಲಿ ಪ್ರಕಟಿಸಿ ಕನ್ನಡದ ಜ್ಞಾನಭಂಡಾರವನ್ನು ಬೆಳೆಸಿದ್ದಾರೆ.

**ವಾಸ್ತು-ಶಿಲ್ಪ:** ವಿಜಯನಗರದ ಪತನಾನಂತರ ಅವರ ವಾಸ್ತು ಮತ್ತು ಶಿಲ್ಪ ಶೈಲಿಯನ್ನನುಸರಿಸಿ ಮುಂದುವರೆದವರಲ್ಲಿ ಮೈಸೂರಿನ ಒಡೆಯರು ಪ್ರಮುಖರು. ಆದರೆ ವಿಜಯನಗರದ ಶೈಲಿಯಲ್ಲಿ ಕಂಡುಬರುವ ಶ್ರೀಮಂತ ಸೌಂದರ್ಯವಾಗಲಿ, ಭಾವದ ಅಭಿವ್ಯಕ್ತಿಯಾಗಲಿ ಇಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ.

ರಾಜ ಒಡೆಯರ ಕಾಲದಿಂದ ಆರಂಭಿಸಿ ಮೈಸೂರರಸರು ಹಲವಾರು ಗುಡಿ ಗೋಪುರಗಳನ್ನು ಕಟ್ಟಿಸಿದ್ದಾರೆ. ಮೇಲುಕೋಟೆಯ ಚೆಲುವರಾಯಸ್ವಾಮಿ ದೇವಾಲಯದಲ್ಲಿ ಮುಂದಿನ ಮುಖಮಂಟಪ ಕಂಬವೊಂದರ ಮೇಲಿನ ಮೂರ್ತಿಯನ್ನು ರಾಜ ಒಡೆಯರೆಂದು ಗುರುತಿಸ ಲಾಗಿದ್ದು ಆ ಮಂಟಪವನ್ನು ಅವರು ಕಟ್ಟಿಸಿರುವ ಸಾಧ್ಯತೆ ಇದೆ. ಅಲ್ಲಿಯ ಕಲ್ಯಾಣಿಯ ನಿರ್ಮಾಪಕ 5ನೆಯ ಚಾಮರಾಜ ಒಡೆಯರ್. ಅದರ ಒಂದು ಮೂಲೆಯಲ್ಲಿರುವ ಅಷ್ಟಮುಖದ ಮಂಟಪ ಸುಂದರವಾದ ಹಾಗೂ ವಿಶಿಷ್ಟವಾದ ಕೃತಿ. ಒಂದನೆಯ ಕಂಠೀರವ ನರಸರಾಜ ಒಡೆಯರ್ ಕಟ್ಟಿಸಿರುವ ಶ್ರೀರಂಗಪಟ್ಟಣದ ನರಸಿಂಹಸ್ವಾಮಿ ದೇವಾಲಯ ದೊಡ್ಡದಾದ ಗರ್ಭಗೃಹ, ಅಡ್ಡಲಾಗಿರುವ ಸುಕನಾಸಿ, ಅನೇಕ ಕಂಬಗಳಿರುವ ನವರಂಗ, ಪ್ರದಕ್ಷಿಣಾಪಥ, ಪಾತಾಳಾಂಕಣ, ಪ್ರಾಕಾರಗಳು, ನಾಲ್ಕು ಮೂಲೆಗಳಲ್ಲಿಯೂ ಬೇರೆ ಬೇರೆ ಗುಡಿಗಳು, ಮಹಾದ್ವಾರ ಮತ್ತು ಹೊರಗಿನ ಮುಖಮಂಟಪ ಗಳಿಂದ ಕೂಡಿದೆ. ಆದರೆ ವಾಸ್ತು ಸೌಂದರ್ಯ ದೃಷ್ಟಿಯಿಂದ ಸಾಮಾನ್ಯ ವಾದ ಕಟ್ಟಡ. ಮೈಸೂರಿನಲ್ಲಿ ತ್ರಿನೇಶ್ವರನ ಗುಡಿಯ ಮಹಾದ್ವಾರ ಗೋಪುರ ಮತ್ತು ಚಾಮುಂಡಿ ಬೆಟ್ಟದ ಮೆಟ್ಟಿಲುಗಳ ಕರ್ತೃ ದೊಡ್ಡ ದೇವರಾಜ ಒಡೆಯರ್. ಚಿಕ್ಕದೇವರಾಜ ಒಡೆಯರು ಬೆಂಗಳೂರಿನಲ್ಲಿರುವ ಕೋಟೆ ವೆಂಕಟರಮಣಸ್ವಾಮಿ ದೇವಾಲಯ ಕಟ್ಟಿಸಿದರು. ಇಲ್ಲಿನ ದ್ರಾವಿಡ ರೀತಿಯ ಸಂಕೀರ್ಣ ಸ್ತಂಭಗಳು, ಗೋಡೆಯ ಮೇಲಿನ ಉಬ್ಬು ಶಿಲ್ಪ ಗಮನಿಸಬೇಕಾದಂಥವು. ಇಲ್ಲಿನ ದ್ರಾವಿಡ ರೀತಿಯ ಸಂಕೀರ್ಣ ಸ್ತಂಭಗಳು, ಗೋಡೆಯ ಮೇಲಿನ ಉಬ್ಬುಶಿಲ್ಪ ಗಮನಿಸಬೇಕಾದಂಥವು. ಶ್ರೀರಂಗಪಟ್ಟಣದಲ್ಲಿ ಶ್ವೇತವರಾಹಸ್ವಾಮಿ ದೇವಾಲಯವನ್ನು ಇವರು

ನಿರ್ಮಿಸಿದಂತೆ ತಿಳಿದುಬರುತ್ತದೆ. ಗುಂಡ್ಲುಪೇಟೆಯಲ್ಲಿ ದೊಡ್ಡದೇವ ರಾಜರ ನೆನಪಿಗಾಗಿ ಇವರು ಕಟ್ಟಿಸಿದ ಪರವಾಸುದೇವರ ದೇವಾಲಯ ಕಗ್ಗಲ್ಲಿನಲ್ಲಿ ದ್ರಾವಿಡ ರೀತಿಯಲ್ಲಿ ಕಟ್ಟಿರುವ ಮೈಸೂರರಸರ ಕಾಲದ ಉತ್ತಮವಾದ ಕಟ್ಟಡ. ಕಿರು ಜಗಲಿಯ ಮೇಲಿರುವ ಈ ದೇವಾಲಯದ ಹೊರಗೋಡೆಗಳ ಮೇಲೆ ಅಲ್ಲಲ್ಲಿ ಒರಟಾದ ಅರೆಗಂಬಗಳೂ ಅರೆಗೋ ಪುರಗಳೂ ಇದ್ದು ವಿಶಾಲವಾದ ನವರಂಗದಲ್ಲಿ ಕಂಬಗಳ ವಾಸ್ತು ಸಂಪ್ರದಾಯ ಪುನರುಜ್ಜೀವನಗೊಂಡಿತು. ಚಾಮರಾಜನಗರದ ಚಾಮರಾಜೇಶ್ವರ, ಮೈಸೂರು ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಮುಂದಿನ ಉನ್ನತವಾದ ಗೋಪುರ, ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಹೊರಪ್ರಾಕಾರ, ಮಹಾದ್ವಾರದ ಗೋಪುರ, ಪ್ರಾಕಾರದ ಸುತ್ತಲೂ ಇರುವ ಗುಡಿಗಳು, ವರುಣದಲ್ಲಿ ದೇವಾಜಮ್ಮಣ್ಣಿಯ ಹೆಸರಿನಲ್ಲಿ ಕಟ್ಟಿಸಿರುವ ಮಹದೇಶ್ವರ ದೇವಾಲಯ ಮೊದಲಾದುವು ಇವರ ಕಾಲದ ರಚನೆಗಳು. ಈ ಹಲವು ದೇವಾಲಯಗಳಲ್ಲಿ ಭಾರತೀಯ ಮುಸ್ಲಿಮ್ ಸಂಪ್ರದಾಯದಿಂದ ಉದ್ಭವವಾದ ಹಲವು ಚಿತ್ತಾರಗಳು ಮತ್ತು ವಿನ್ಯಾಸಗ ಳನ್ನು ಗಚ್ಚಿನಲ್ಲಿ, ಪೌಳಿ ಮತ್ತು ಗೋಪುರಗಳಲ್ಲಿ ಮೂಡಿಸಿರುವುದನ್ನು ಕಾಣಬಹುದು.

ಇಲ್ಲಿಯವರೆಗಿನ ಒಡೆಯರ ಕಾಲದ ವಾಸ್ತುಕಲೆಯಲ್ಲಿ ದೇಶೀ ಸಂಪ್ರದಾಯದ ಮುಂದುವರಿಕೆಯಷ್ಟೇ ಕಂಡುಬರುತ್ತದೆ. ಅದರಲ್ಲೂ ಈ ಹೆಚ್ಚಿನ ಕೃತಿಗಳೆ ವಿಜಯನಗರ ಶೈಲಿಯ ಅನುಕರಣೆಗಳೆಂದೇ ಹೇಳಬಹುದು. ಆದರೆ ವಿಜಯನಗರ ಕಾಲದ ಬೃಹತ್ ಗಾತ್ರವಾಗಲೀ ದೃಢಗಂಭೀರ ಪ್ರಮಾಣಗಳಾಗಲೀ ಈ ವಾಸ್ತುಕೃತಿಗಳಲ್ಲಿ ಕಾಣಲಾಗುವುದಿಲ್ಲ.

ಮೈಸೂರು ದೇಶದಲ್ಲಿ ರೆಸಿಡೆಂಟರ ಆಳಿಕೆ ಆರಂಭವಾದ ಕಾಲದಿಂದ ಮುಂದೆ ಇಲ್ಲಿ ಪಾಶ್ಚಾತ್ಯ ವಾಸ್ತು ಸಂಪ್ರದಾಯ ಬೇರೂರಲಾರಂಭಿಸಿತು. ಮೈಸೂರು ಅರಸರುಗಳ ಕಾಲದಲ್ಲಿ ಹಳೆಯ ದೇಶೀ ಸಂಪ್ರದಾಯಗಳು ಎಲ್ಲೋ ಕೆಲವೆಡೆ (ಉದಾ: ಶೃಂಗೇರಿಯ ಶಾರದಾ ದೇವಾಲಯ, ಮೈಸೂರು ಭುವನೇಶ್ವರಿ, ಕಾಮಕಾಮೇಶ್ವರಿ ದೇವಾಲಯಗಳು ಇತ್ಯಾದಿ) ಕಂಡು ಬರುತ್ತವೆ. ಹೆಚ್ಚಿನ ಕೃತಿಗಳು ಲೌಕಿಕ ವಾಸ್ತುವರ್ಗಕ್ಕೆ ಸೇರಿದವು. ಪಾಶ್ಚಾತ್ಯ ಶೈಲಿ ಮತ್ತು ರಚನಾತಂತ್ರಗಳಿಂದ ರಚಿತವಾದ ಮೈಸೂರಿನ ಲಲಿತ ಮಹಲ್, ಮಹಾರಾಜ ಕಾಲೇಜು, ಓರಿಯಂಟಲ್ ಲೈಬ್ರರಿ, ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆ, ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರಿನ ಹೈಕೋರ್ಟ್ ಕಟ್ಟಡ, ಸೆಂಟ್ರಲ್ ಕಾಲೇಜು, ಅರಮನೆ ಮುಂತಾದುವು ಈ ಹೊಸ ರಚನಾ ರೀತಿಯ ಉತ್ತಮ ಉದಾಹರಣೆಗಳು. ಮೈಸೂರಿನ ಅರಮನೆಯಲ್ಲಿ ಹಲವು ಪಾಶ್ಚಾತ್ಯ ಹಾಗೂ ದೇಶೀಯ ವಾಸ್ತು ಸಂಪ್ರದಾಯಗಳ ಮಿಶ್ರಣ ಇದೆ. ಮೈಸೂರಿನ ಕೃಷ್ಣರಾಜೇಂದ್ರ ಮತ್ತು ಚಾಮರಾಜೇಂದ್ರ ವೃತ್ತಗಳಲ್ಲಿ ಇರುವ ರಾಜರ ಪ್ರತಿಕೃತಿಯನ್ನು ಸ್ಥಾಪಿಸಿರುವ ಮಂಟಪಗಳು, ಅಲಂಕರಣ ವಾಸ್ತುವಿನ ಉತ್ತಮ ರಚನೆಗಳು.

ಶಿಲ್ಪದಲ್ಲಿ ವಿಜಯನಗರ ಸಂಪ್ರದಾಯದ ಅನುಕರಣೆ ಕಂಡುಬರುತ್ತದೆ. ಚಾಮುಂಡಿಬೆಟ್ಟದ ಮೇಲಿನ ದೊಡ್ಡ ದೇವರಾಜ ಒಡೆಯರ ಕಾಲದ ಪ್ರಸಿದ್ಧವಾದ ಬೃಹದಾಕಾರದ ಬಸವ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿದೆ. ಇದು ದಳವಾಯಿ ವಿಕ್ರಮರಾಯ ಮಾಡಿಸಿದ್ದು. ಗುಂಡ್ಲುಪೇಟೆಯ ಪರವಾಸುದೇವ ದೇವಾಲಯದ ಮೂಲ ವಿಗ್ರಹ ಒಡೆಯರ ಕಾಲದ ಮೂರ್ತಿಶಿಲ್ಪಕ್ಕೆ ಒಂದು ಉತ್ತಮ ಉದಾಹರಣೆ. ಮುಖದಲ್ಲಿರುವ ವಿಶಾಲನೇತ್ರಗಳು. ತುಟಿಗಳನ್ನು ಕೊಂಕಿಸಿ ಮೂಡಿಸಿರುವ ಕೃತಕ ನಗೆ, ಗುಂಡುಮುಖ, ಕುಳ್ಳಾಗಿ ಕಾಣುವ ಸುಪುಷ್ಟದೇಹ, ಉದ್ದವಾಗಿ ಕಂಡರೂ ಚಪ್ಪಟೆಯಾದ ಮೂಗು, ಹೆಚ್ಚು ಗುಂಭವಾಗಿ ಬಿಡಿಸಿದ ಅಂಗಾಂಗಗಳು, ಮೂರ್ತಿಯ ಗಾತ್ರಕ್ಕೆ ದೊಡ್ಡದಾದ ಕಿರೀಟ, ಸೆಟೆದು ಕುಳಿತಿರುವ ಭಂಗಿ ಮುಂತಾದುವನ್ನು ಗಮನಿಸಿದಾಗ ಸ್ವಾಭಾವಿಕತೆಗಿಂ ತಲೂ ಸಾಂಪ್ರದಾಯಿಕತೆಗಿಂತಲೂ ಹೆಚ್ಚು ಸ್ಪಷ್ಟವಾಗಿರುವುದು ಕಂಡುಬರು ತ್ತದೆ. ಚಾಮರಾಜನಗರ, ನಂಜನಗೂಡು, ಮೈಸೂರು (ಪ್ರಸನ್ನಕೃಷ್ಣ ಸ್ವಾಮಿ) ಮುಂತಾದಲ್ಲಿನ ಮುಮ್ಮಡಿ ಕೃಷ್ಣರಾಜರ ದೇವಾಲಯಗಳಲ್ಲಿ ಅರವತ್ತಮೂರು ಪುರಾತನರು, ಆಳ್ವಾರರು, ಶಿವಲೀಲಾಮೂರ್ತಿಗಳು, ಬೇರೆ ಬೇರೆ ಹೆಸರಿನ ಹಲವು ಲಿಂಗಗಳು ಅಥವಾ ವಿಷ್ಣುವಿನ ಅವತಾರ ಗಳು ಇದ್ದು ಪ್ರಾಕಾರದ ಪೌಳಿಯಲ್ಲಿ ಗಣೇಶ, ಶೈವ ಅಥವಾ ವೈಷ್ಣವ ವಿಗ್ರಹಗಳು ಇತ್ಯಾದಿ ಗಚ್ಚಿನ ಮೂರ್ತಿಗಳನ್ನು ಕಾಣಬಹುದು. ಇವು ವಾಸ್ತುಶಿಲ್ಪವನ್ನು ಅಭ್ಯಾಸ ಮಾಡುವವರಿಗೆ ತುಂಬಾ ಉಪಯುಕ್ತವಾಗಿವೆ.

ಈ ಕಾಲದಲ್ಲಿ ರಾಜರ ಪ್ರಕೃತಿ ವಿಗ್ರಹಗಳು ವಿಶೇಷವಾಗಿ ಕಂಡುಬರು ತ್ತವೆ. ಕಂಠೀರವ ನರಸರಾಜ ಒಡೆಯರ ಭಕ್ತಿವಿಗ್ರಹ ಉದ್ದವಾದ ನಿಲುವಂಗಿ, ಸೊಂಟಕ್ಕೆ ಸುತ್ತಿರುವ ವಸ್ತ್ರ, ಕೈಕೆಳಗೆ ಕವಚಗಳು, ಪಕ್ಕದಲ್ಲಿ ನೇತಾಡುತ್ತಿರುವ ಕತ್ತಿ ಗುರಾಣಿಗಳು, ಕಲ್ಲಿಮೀಸೆ, ಚೂಪಾದ ಆದರೆ ಚಪ್ಪಟೆಯಾಗಿ ಹರಡಿರುವ ಮೂಗು, ದೊಡ್ಡದಾದ ಕಣ್ಣುಗಳು, ತಲೆಕೂದಲನ್ನು ಎತ್ತಿ ಓರೆಯಾಗಿ ಕಟ್ಟಿರುವ ಮುಡಿ, ಕೈಮುಗಿದು ನೇರವಾಗಿ ನಿಂತಿರುವ ನಿಲವು ಇವುಗಳ ಅಳವಡಿಕೆಯಿಂದ ಆ ಕಾಲದ ಪ್ರತಿಕೃತಿ ಶಿಲ್ಪಗಳ ಉತ್ತಮ ಉದಾಹರಣೆಯಾಗಿದೆ. ಗುಂಡ್ಲುಪೇಟೆಯ ಪರವಾಸುದೇವರ ದೇವಾಲಯದ ಕಂಬವೊಂದರ ಮೇಲೆ ತನ್ನ ಪರಿವಾರದೊಂದಿಗೆ ಕುಳಿತಿರುವ ರಾಜನ ಮೂರ್ತಿ ಚಿಕ್ಕದೇವರಾಜ ಒಡೆಯರದಿರಬೇಕು. ನಂಜನಗೂಡು ಮೊದಲಾದೆಡೆಗಳಲ್ಲಿರುವ ಕೃಷ್ಣರಾಜ ಒಡೆಯರ ಮತ್ತು ಅವರ ರಾಣಿಯರ ಭಕ್ತವಿಗ್ರಹಗಳು ಬಹು ನಾಜೂಕಾಗಿ ಕೆತ್ತಿದ ಉತ್ತಮ ಪ್ರತಿಮೆಗಳಾಗಿವೆ.

ಈ ಕಾಲದ ಕಂಚಿನ ವಿಗ್ರಹಗಳು ಸಾಕಷ್ಟು ಸಂಖ್ಯೆಯಲ್ಲಿ ದೊರಕಿವೆ. 18ನೆಯ ಶತಮಾನದಲ್ಲಿ ದಳವಾಯಿ ಕಳಲೆ ನಂಜರಾಜಯ್ಯ ಮಾಡಿಸಿದ ನಟರಾಜ ಮೂರ್ತಿಗಳು ಹರದನಹಳ್ಳಿ, ತೆರಕಣಾಂಬಿ, ತಲಕಾಡು ಮೊದಲಾದೆಡೆಗಳ ದೇವಾಲಯಗಳಲ್ಲಿವೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಈತ ಅರ್ಪಿಸಿದ 63 ಪುರಾತನ ಬಿಡಿ ಭಕ್ತವಿಗ್ರಹಗಳು ಇವೆ. ಈ ವಿಗ್ರಹಗಳು ವಿಜಯನಗರ ಸಂಪ್ರದಾಯದವು. ಅಲ್ಲದೆ ಬೆಳ್ಳಿ, ತಾಮ್ರ, ಹಿತ್ತಾಳೆ ಹಾಗೂ ಕಂಚಿನಲ್ಲಿ ಮಾಡಿದ ಗರುಡ, ಬಸವ, ಆನೆ ಮುಂತಾದ ಅನೇಕ ವಾಹನಗಳು ನಂಜನಗೂಡು, ಚಾಮುಂಡಿ ಬೆಟ್ಟ, ಶ್ರೀರಂಗಪಟ್ಟಣ ಮತ್ತು ಮೇಲುಕೋಟೆಯ ದೇವಾಲಯಗಳಲ್ಲಿ ಇವೆ. ಹೆಚ್ಚಿನವು ಮೈಸೂರು ಅರಸರ, ಅದರಲ್ಲೂ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಣಿಕೆಗಳು.

ಒಡೆಯರ ಕಾಲದ ಮೂರ್ತಿಗಳ ಪ್ರಮಾಣ ಕಿರಿದು. ಇವುಗಳಲ್ಲಿ ಭಾವಪೂರ್ಣತೆಯಾಗಲಿ, ನಿಲುವಿನಲ್ಲಿ ವಾಸ್ತವತೆಯಾಗಲಿ, ಅಂಗಾಂಗಗ ಳಲ್ಲಿ ನಯಗಾರಿಕೆಯಾಗಲಿ, ಚಲನೆಯಾಗಲಿ, ಹೆಚ್ಚು ಕಾಣಿಸದು. ಸಾಂಪ್ರದಾಯಿಕವಾದ ಕಟ್ಟುಪಾಡುಗಳಿಗೊಳಗಾಗಿ ಆಗ ಬಳಕೆಯಲ್ಲಿದ್ದ ಶಿಲ್ಪಶಾಸ್ತ್ರಕ್ಕನುಗುಣವಾಗಿ ಕಂಡರಿಸಿರುವ ಇವರ ಮೂರ್ತಿಶಿಲ್ಪಗಳಲ್ಲಿ ವಿಜಯನಗರದ ಜೀವಂತಕಲೆ ಕೃತಕತೆಯ ಹಾದಿಯನ್ನು ತುಳಿದಿರುವುದನ್ನು ಸ್ಪಷ್ಟವಾಗಿ ಕಾಣಬಹುದು.

**ಶಾಸನಗಳು, ದಾಖಲೆಗಳು:** ಮೈಸೂರು ಒಡೆಯರ ಕಾಲ ಶಾಸನಗಳನ್ನು ಹಾಕಿಸುತ್ತಿದ್ದ ಪರಂಪರೆಯ ಕೊನೆಯ ಘಟ್ಟ. ಈಗ ದೊರೆತಿರುವ

ಈ ಕಾಲದ ಐನೂರಕ್ಕೂ ಹೆಚ್ಚು ಶಾಸನ–ದಾಖಲೆಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು : ತಾಮ್ರಶಾಸನಗಳು, ಶಿಲಾ ಮತ್ತು ಲೋಹ ಶಾಸನಗಳು ಮತ್ತು ಸನ್ನದು, ನಿರೂಪಗಳು. ಈ ಮೂರೂ ಪ್ರಕಾರದ ಶಾಸನಗಳೂ ಒಂದರಿಂದ ಒಂದು ಭಿನ್ನರೀತಿಯಲ್ಲಿವೆ. ಸಂಖ್ಯಾಬಲದಲ್ಲಿ ಉಳಿದ ಎರಡಕ್ಕಿಂತ ತೀರ ಕಡಿಮೆಯಾಗಿರುವ ತಾಮ್ರಶಾಸನಗಳು ಎಲ್ಲ ದೃಷ್ಟಿಯಿಂದಲೂ ಹೆಚ್ಚು ಅಮೂಲ್ಯವಾದುವು.

ತಾಮ್ರಶಾಸನಗಳು ವಿಜಯನಗರದ ಅರಸರ ತಾಮ್ರಶಾಸನಗಳ ರಚನೆಯನ್ನನುಸರಿಸಿದ್ದರೂ ಅವುಗಳ ಹಲಗೆಯ ಗಾತ್ರದಲ್ಲಿ ದೊಡ್ಡವು ; ಆಕಾರದಲ್ಲಿ ಹೆಚ್ಚು ಸುಧಾರಿಸಿವೆ. ವಿಜಯನಗರದ ಹಲಗೆಗಳ ಮೇಲ್ಭಾಗ ವಷ್ಟೂ ಕಮಾನಿನಾಕಾರದಲ್ಲಿ ಮುಂಚಾಚಿಕೊಂಡಿದ್ದರೆ ಒಡೆಯರ ತಾಮ್ರಶಾಸನಗಳ ಮೇಲ್ಭಾಗದಲ್ಲಿ ಬಳೆಯನ್ನು ತೂರಿಸಲು ಒಂದು ಗುಂಡು ತೂತು ಮಾಡುವಷ್ಟು ಸ್ಥಳ ಮಾತ್ರ ಮುಂಚಾಚಿರುತ್ತದೆ. ಹಲಗೆಗಳವರೆಗೂ ಇವರ ತಾಮ್ರಶಾಸನಗಳುಂಟು. ಇವರ ಕೆಲವು ತಾಮ್ರಶಾಸನಗಳು ಬಹುಶಃ ಕರ್ನಾಟಕದ ಅರಸುಮನೆತನಗಳ ಶಾಸನಗಳಲ್ಲಿಯೇ ಅತ್ಯಂತ ದೊಡ್ಡವೆಂದು ಹೇಳಬಹುದು. 15 ಹಲಗೆಗಳಿರುವ ಒಂದು ಶಾಸನದಲ್ಲಿ 733 ಪಂಕ್ತಿಗಳಿದ್ದರೆ ಮತ್ತೊಂದಕ್ಕೆ 16 ಹಲಗೆಗಳಿದ್ದು ಅದು 1,390 ಪಂಕ್ತಿಗಳಿಂದ ಕೂಡಿದೆ. ಶಾಸನದ ಹಲಗೆಗಳನ್ನು ಬಳೆಯೊಂದಕ್ಕೆ ಪೋಣಿಸಿದ್ದು ಅವುಗಳ ಜೊತೆಗೆ ವರಾಹ ಮುದ್ರೆಯನ್ನುಳ್ಳ ಗಂಟೆಯಾಕಾರದ ದಪ್ಪ ಗುಂಡೊಂದನ್ನು ಸೇರಿಸಿರುತ್ತದೆ. ತಾಮ್ರಶಾಸನಗಳಲ್ಲಿನ ಲಿಪಿ ಆರಂಭದಲ್ಲಿ ನಂದಿನಾಗರಿ; ಅನಂತರದ ಶಾಸನಗಳಲ್ಲಿ ಗುಂಡಾದ ಕನ್ನಡ. ಭಾಷೆ ಸಾಮಾನ್ಯವಾಗಿ ಸಂಸ್ಕೃತ;ಒಮ್ಮೊಮ್ಮೆ ಕನ್ನಡದಲ್ಲಿರುವುದೂ ಉಂಟು. ಕೆಲವು ಶಾಸನಗಳಲ್ಲಿ ಮೊದಲು ಪ್ರೌಢವಾದ ಕಾವ್ಯಶೈಲಿ ಸಂಸ್ಕೃತದಲ್ಲಿದ್ದು ಅದೇ ವಿಷಯವನ್ನೇ ಕನ್ನಡ ಗದ್ಯದಲ್ಲಿ ಅನಂತರ ವಿವರಿಸಿರುತ್ತದೆ. ಈ ತಾಮ್ರಶಾಸನಗಳು ಬಹುತೇಕ ದತ್ತಿ ಶಾಸನಗಳಾಗಿದ್ದು ದತ್ತಿಬಿಟ್ಟ ಗ್ರಾಮಗಳ ಚತುಸ್ಸೀಮೆಗಳನ್ನು ಮಾತ್ರ ಕನ್ನಡದಲ್ಲಿಯೇ ವಿವರಿಸಲಾಗಿದೆ. ಈ ಚತುಸ್ಸೀಮೆಗಳ ವಿವರಗಳು ಬೇರೆ ರಾಜಮನೆತನಗಳ ಶಾಸನಗಳಲ್ಲಿ ಎಲ್ಲಿಯೂ ಕಂಡುಬರದಷ್ಟು ವಿವರಪೂರ್ಣವಾಗಿ, ಕೆಲವು ವೇಳೆ ಹಲವು ಹಲಗೆಗಳನ್ನಾವರಿಸುವಷ್ಟು ವಿಸ್ತಾರವಾಗಿರುತ್ತವೆ.

ದೊಡ್ಡದೇವರಾಜ, ಚಿಕ್ಕದೇವರಾಜ, ಕಂಠೀರವ ನರಸರಾಜ, ಒಂದನೆಯ ಕೃಷ್ಣರಾಜ, ಎರಡನೆಯ ಕೃಷ್ಣರಾಜ ಇವರ ಹಲವಾರು ತಾಮ್ರ ಶಾಸನಗಳು ಮೊದಲು ವಿಷ್ಣುಬ್ರಹ್ಮರಿಂದಾರಂಭಿಸಿ ಚಂದ್ರನ ಮೂಲಕ ಯದುರಾಯನೂ ಅವನ ದ್ವಾರಕೆಯಲ್ಲಿ ಆಳುತ್ತಿದ್ದು ಆ ವಂಶದಲ್ಲಿ ಕೆಲವರು ಕರ್ನಾಟ ದೇಶಕ್ಕೆ ಬಂದು ಇಲ್ಲಿನ ಸೌಂದರ್ಯಕ್ಕೆ ಮನಸೋತು ಇಲ್ಲಿಯೇ ನೆಲಸಿದರೆಂದೂ ಮಹಿಷಾಪುರವು ಇವರ ರಾಜಧಾನಿಯಾಯಿತೆಂದೂ ತಿಳಿಸುವುದಲ್ಲದೆ ಮುಂದೆ ಬೆಟ್ಟದ ಚಾಮರಾಜನಿಂದಾರಂಭಿಸಿ ವಂಶಾವಳಿಯನ್ನು ವಿವರಿಸುತ್ತವೆ. ಮೊದಲಿನ ಕೆಲವು ಶಾಸನಗಳು ವಿಜಯನಗರದ ಸಾರ್ವಭೌಮತ್ವವನೊಪ್ಪಿಕೊಳ್ಳುತ್ತವೆ. ಮುಂದಿನವು ಒಡೆಯರು ಸ್ವತಂತ್ರವಾಗಿ ಆಳುತ್ತಿದ್ದುದನ್ನು ಸೂಚಿಸುತ್ತವೆ. ಚಿಕ್ಕದೇವರಾಜ, ಕೃಷ್ಣ ರಾಜರ ಆಸ್ಥಾನಗಳಲ್ಲಿದ್ದ ತಿರುಮಲಾರ್ಯನು ಅನೇಕ ತಾಮ್ರಶಾಸನಗಳ ಕರ್ತೃ. ಈತ ರಾಮಾಯಣ, ಭಾರತ ಪಾರಾಯಣ ಮಾಡುವುದರಲ್ಲಿ ನಿಷ್ಣಾತ; ಕರ್ನಾಟಕ, ಆಂಧ್ರ, ಸಂಸ್ಕೃತ ಕವಿತ್ವದಲ್ಲಿ ನಿಪುಣ; ಗಾಂಧರ್ವ ವಿದ್ಯೆಯಲ್ಲಿ ಕುಶಲ ಎಂದು ಹೇಳಿಕೊಂಡಿದ್ದಾನೆ. ದೇವನಗರ, ತೊಂಡನೂರು, ಕಳಲೆ, ಕಂಚಿ ಮುಂತಾದ ಸ್ಥಳಗಳ ತಾಮ್ರಶಾಸನಗಳೆಲ್ಲ ಕಾವ್ಯಮಯವಾಗಿ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ರಚಿಸಿರುವ ಈತನ ಶಾಸನ ಪದ್ಯಗಳು ಎಷ್ಟು ಸೊಗಸಾಗಿವೆಯೆಂದರೆ ಇವುಗಳಿಂದ ಮಿತ್ರವಿಂದಾ ಗೋವಿಂದ ನಾಟಕಕ್ಕೆ ಸಿಂಗರಾರ್ಯ ಪದ್ಯಗಳನ್ನಾರಿಸಿಕೊಂಡಿದ್ದಾನೆ. ಅಪ್ರತಿಮ ವೀರಚರಿತ್ರೆಯಲ್ಲಿಯೂ ಈ ಶಾಸನಗಳಲ್ಲಿನ ಕೆಲವು ಪದ್ಯಗಳಿವೆ.

ಈ ತಾಮ್ರಶಾಸನಗಳಲ್ಲಿ ಚಾರಿತ್ರಿಕ ವಿಷಯಗಳು ತುಂಬಿವೆ. ಚಿಕ್ಕದೇವರಾಜ ನಡೆಸಿದ ಯುದ್ಧಗಳು, ಕೃಷ್ಣರಾಜ ಮಾಡಿದ ದಾನ ಧರ್ಮಗಳು ಮುಂತಾದ ಹಲವು ವಿವರಗಳು ಇವುಗಳಿಂದ ತಿಳಿದುಬರುತ್ತದೆ. ಈ ತಾಮ್ರಶಾಸನಗಳನ್ನು ಹಾಕಿಸಿರುವ ಮುಖ್ಯ ಉದ್ದೇಶ ಅಗ್ರಹಾರಗಳನ್ನು ರಚಿಸಿ ಹಲವು ವೃತ್ತಿಗಳಾಗಿ ವಿಂಗಡಿಸಿ ದತ್ತಿ ಬಿಡುವುದು. ಅನೇಕ ಕಾರಣಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಹೀಗೆ ಗ್ರಾಮಗಳನ್ನು ದತ್ತಿ ಬಿಟ್ಟುದುಂಟು. ದಳವಾಯಿ ಕಳಲೆ ದೇವರಾಜಯ್ಯ ಹದಿನಾಲ್ಕು ಗ್ರಾಮಗಳಿಂದ ಕೂಡಿದ ರಾಮಚಂದ್ರಪುರ ಅಗ್ರಹಾರವನ್ನು ನಿರ್ಮಿಸಿದ ವಿಷಯವನ್ನು ತಿಳಿಸುವ ತಿರುಮಕೂಡಲು ನರಸೀಪುರ ತಾಲ್ಲೂಕಿನ ಶಾಸನವೇ ಅತ್ಯಂತ ದೊಡ್ಡದು.

ಶಿಲಾಶಾಸನಗಳು ಸಾಮಾನ್ಯವಾಗಿ ಗದ್ಯರೂಪದಲ್ಲಿ ಕನ್ನಡದಲ್ಲಿದ್ದು ಶಾಸನ ಹಾಕಿಸಿರುವ ಉದ್ದೇಶವನ್ನು ಮಾತ್ರ ತಿಳಿಸುವ ವಸ್ತುನಿಷ್ಠ ಶಾಸನಗಳೇ ಹೆಚ್ಚು. ಒಡೆಯರು ಹಾಕಿಸಿರುವ ಈ ಶಾಸನಗಳಲ್ಲಿ ಶಾಸನ ಹಾಕಿಸಿದ ರಾಜನ ಮೂರು ಅಥವಾ ನಾಲ್ಕು ತಲೆಮಾರುಗಳ ವಂಶಾವಳಿಯನ್ನು ಕೊಡುವುದು ರೂಢಿ. ಚಿಕ್ಕದೇವರಾಜರ ಕಾಲದ ಮತ್ತು ಅನಂತರದ ಕೆಲವು ಶಾಸನಗಳಲ್ಲಿ ಬಿರುದೆಂತೆಂಬರ ಗಂಡ, ಲೋಕೈಕವೀರ, ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಪ್ರೌಢಪ್ರತಾಪನ ಪ್ರತಿಮವೀರನರಪತಿ ಮುಂತಾದ ಬಿರುದಾವಳಿಗಳನ್ನು ನೋಡಬಹುದು. ದೊಡ್ಡಶಾಸನಗಳಲ್ಲಿಯೂ ಕೂಡ ಸಾಹಿತ್ಯಾಂಶ ಇಲ್ಲವೇ ಇಲ್ಲವೆನ್ನಬಹುದು. ಚಿಕ್ಕದೇವರಾಜ ಮಳವಳ್ಳಿಯಲ್ಲಿ ಶೃಂಗಾರಕೊಳವೆಂಬ ಕೊಳವನ್ನು ಕಟ್ಟಿಸಿದ ವಿಷಯವನ್ನು ತಿಳಿಸುವ ಅಲ್ಲಿನ ಶಾಸನ ಸಂಸ್ಕೃತದಲ್ಲಿ ಸುಂದರವಾದ ವೃತ್ತಗಳಿಂದ ರಚಿತವಾಗಿದ್ದು ಕೊನೆಯಲ್ಲಿ ಕನ್ನಡದಲ್ಲಿಯೂ ಆ ವಿಷಯವನ್ನು ತಿಳಿಸುತ್ತದೆ. ಕಲ್ಲಂಬಾಳಿನ ಹೊಯ್ಸಳರ ಕಾಲದ ದೇವಾಲಯವನ್ನು ಒಡೆಯರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿದ ವಿಷಯುವನ್ನು ತಿಳಿಸುವ ಶಾಸನದ ಆರಂಭದಲ್ಲಿ ರಘುವಂಶದ ವಾಗರ್ಥಾವಿವ ಎಂದು ಮೊದಲಾಗುವ ಪ್ರಸಿದ್ಧವಾದ ಶ್ಲೋಕವನ್ನು ಕೊಟ್ಟಿರುವುದೊಂದು ವಿಶೇಷ. ಕಂಠೀರವ ನರಸರಾಜನು ಕಂಠೀರಾಯ ಹಣವನ್ನು ಟಂಕಿಸಿದುದನ್ನು ಒಂದು ಶಾಸನ ತಿಳಿಸಿದರೆ ಮತ್ತೆರಡು ಶಾಸನಗಳು ಕಾಶಿ ಪ್ರಯಾಗಗಳಲ್ಲಿ ದಾನಧರ್ಮಗಳಿಗಾಗಿ ಈ ರಾಜ ದತ್ತಿ ಬಿಟ್ಟುದುದನ್ನು ತಿಳಿಸುತ್ತವೆ. ಪವಾಡಗಳನ್ನು ತಿಳಿಸುವ ಕೆಲವು ಶಾಸನಗಳೂ ಉಂಟು. 1818ರಲ್ಲಿ ಮೈಲಿಬೇನೆ ಮತ್ತು ಕಾಲರ ಹರಡಿದಾಗ ನಂಜಮ್ಮ ಎಂಬ ಕನ್ಯೆಯ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮಿ ಮತ್ತು ಉಜ್ಜಯಿನಿಯ ಮಹಾಕಾಳಿಯರು ಆವಿರ್ಭವಿಸಿ ಎಲ್ಲ ವರ್ಣದವರಿಗೂ ರೋಗಾದ್ಯುಪದ್ರವಗಳನ್ನು ಪರಿಹರಿಸಿದುದಾಗಿ ಕನ್ನಂಬಾಡಿಯ ಶಾಸನವೊಂದು ತಿಳಿಸುತ್ತದೆ. ಹಾಗೆಯೇ ಮೈಸೂರಿನಲ್ಲಿ ಪ್ಲೇಗಿನ ಉಪದ್ರವ ಹರಡಿದ್ದಾಗ ಸುಬ್ಬರಾಯದಾಸರಿಗೆ ದೇವರು ಶ್ರೀ ವೈಷ್ಣವ ಬಾಲಕನಂತೆ ಕಾಣಿಸಿಕೊಂಡು ಅಂಗಾರಾಕ್ಷತೆ ಪ್ರಸಾದವನ್ನು ದಯಪಾಲಿಸಿದಾಗ ಎಂಟು ದಿನ ಮೈಮೇಲೆ ಎಚ್ಚರವಿಲ್ಲದೆ, ಬಂದ ರೋಗಿಗಳನ್ನೆಲ್ಲ ಅಂಗಾರಾಕ್ಷತೆಗಳನ್ನು ಕೊಟ್ಟು ರೋಗ ವಾಸಿಮಾಡಿದ ಪವಾಡಗಳನ್ನು ಮೈಸೂರಿನ ಶಾಸನವೊಂದು ತಿಳಿಸುತ್ತದೆ. ಶಿಲಾಶಾಸನಗಳಲ್ಲಿಯೇ ದೊಡ್ಡದಾದ ಈ ಶಾಸನ 2 ಕಲ್ಲುಗಳ ಮೇಲಿದ್ದು ಸುಬ್ಬರಾಯದಾಸರು ನಡೆಸಿದ ತೀರ್ಥಯಾತ್ರೆಗಳು, ಮಾಡಿದ ಧರ್ಮಕಾರ್ಯಗಳನ್ನೆಲ್ಲ ವಿವರವಾಗಿ ತಿಳಿಸಿ ಅವರು ಕಟ್ಟಿಸಿದ ದೇವಾಲಯಗಳ, ಅಗ್ರಹಾರಗಳ ವಿವರಗಳನ್ನು

ತಿಳಿಸುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ನೂರಾರು ಶಾಸನಗಳಿದ್ದರೂ ಅವು ಹೆಚ್ಚಾಗಿ ಮೂರ್ತಿಗಳ ಪೀಠದ ಮೇಲೆ, ಒಡವೆಗಳ ಮೇಲೆ, ದೇವಾಲಯಗಳ ಪಾತ್ರೆಗಳ ಮೇಲೆ, ಉತ್ಸವ ವಿಗ್ರಹಗಳ ಮೇಲೆ ಇರುವ ಕಿರುಶಾಸನಗಳು. ನಂಜನಗೂಡು, ಚಾಮರಾಜನಗರ, ಮೈಸೂರು, ಮೇಲುಕೋಟೆ, ಶ್ರೀರಂಗಪಟ್ಟಣ ಮುಂತಾದ ಅನೇಕ ಕಡೆ ದೇವಾಲಯಗಳಿಗೆ ನೂರಾರು ಲೋಹ ಮತ್ತು ಶಿಲಾಮೂರ್ತಿಗಳನ್ನು ಮಾಡಿಸಿದವರ ಹೆಸರಿರುತ್ತವೆ; ಈ ಶಾಸನಗಳಲ್ಲಿ ವಿಷಯ ವೈವಿಧ್ಯತೆ ಕಡಿಮೆ.

ಸನ್ನದುಗಳು, ನಿರೂಪಗಳು, ರಹದಾರಿ ಪತ್ರಗಳು ಮುಂತಾದ ಕೈಯಲ್ಲಿ ತಯಾರುಮಾಡಿದ ಹಾಳೆಗಳ ಮೇಲಿರುವ ಐತಿಹಾಸಿಕ ದಾಖಲೆಗಳೇ ಹೆಚ್ಚು ಉಳಿದು ಬಂದಿರುವುದು. ಶೃಂಗೇರಿ, ಕೂಡಲಿ, ಪರಕಾಲ ಮಠಗಳೇ ಆದಿಯಾಗಿ ಅನೇಕ ಮಠಗಳಿಗೂ ವಿದ್ವಾಂಸರಿಗೂ ಅಧಿಕಾರಿಗಳಿಗೂ ಕೊಟ್ಟ ದಾನಪತ್ರಗಳು ಅಥವಾ ಸನ್ನದುಗಳು ಉದ್ದವಾದ ಕಾಗದದ ಸುರುಳಿಯಲ್ಲಿದ್ದು ಮೇಲೆ ರಾಜನ ಮುದ್ರೆಯೂ ಕೆಳಗೆ ಸ್ವಹಸ್ತಾಕ್ಷರದಲ್ಲಿ ಕೊಟ್ಟ ದಾನದ ವಿಷಯವೂ ರುಜುವೂ ಇರುತ್ತವೆ. ಕೆಲವು ವೇಳೆ ಕನ್ನಡ, ಮರಾಠಿ ಮತ್ತು ಪಾರಸೀ ಭಾಷೆ ಮತ್ತು ಲಿಪಿಗಳಲ್ಲಿ ಈ ಸನ್ನದುಗಳಿರುವುದುಂಟು. ಪತ್ರಗಳನ್ನು ಅಮೀಲರಿಗೆ ಉದ್ದೇಶಿಸಿದ್ದು ಅವುಗಳ ನಕಲನ್ನು ಕಡತಕ್ಕೆ ಸೇರಿಸುವ ನಿರೂಪವಿರುತ್ತದೆ. ಮಠದ ಸ್ವಾಮಿಗಳೋ ಪಂಡಿತರೋ ಸಂಚಾರ ಹೊರಟಾಗ ಅವರಿಗೆ ಅಲ್ಲಲ್ಲಿ ಅನುಕೂಲ ಮಾಡಿಕೊಡುವಂತೆ ಆಯಾ ತಾಲ್ಲೂಕಿನ ಅಮೀಲರಿಗೆ ಬರೆದು ಕಳುಹಿಸಿದ ನಿರೂಪಗಳು, ಅವರು ಊರಿಂದ ಸಂಚರಿಸಲು ರಹದಾರಿಗಳು ಅನೇಕವಿವೆ. ತಿರುಮಕೂಡಲು ನರಸೀಪುರ ಅಮೀಲರಿಗೆ ಪೂರ್ಣಯ್ಯ ಬರೆದ ಒಂದು ಓಲೆ ಸ್ವಾರಸ್ಯವಾದುದು. ನರಸೀಪುರದಲ್ಲಿದ್ದ ವೆಂಕಟರಾಮಾಶಾಸ್ತ್ರಿಗಳೆಂಬ ಶ್ರೋತ್ರಿಯರು ತೀರಿಕೊಂಡಾಗ, ಅವರ ಹೆಂಡತಿ ಯಾರು ಎಷ್ಟೇ ಸಮಾಧಾನ ಮಾಡಿದರೂ ಕೇಳದೆ ಸಹಗಮನ ಮಾಡುವುದಾಗಿ ಹಟ ಹಿಡಿದಾಗ ಅಮೀಲರು ವಿಷಯವನ್ನು ಪೂರ್ಣಯ್ಯ ನಿಗೆ ಬರೆದು ತಿಳಿಸಿದಾಗ ಶಾಸ್ತ್ರಿಗಳು ಶ್ರೋತ್ರಿಯರಾಗಿ ಬಾಳಿದ ಹಿರಿಯರು ಅವರ ಹೆಂಡತಿ ಹಾಗೆ ಹಟ ಹಿಡಿಯುವುದು ಸರಿಯಲ್ಲ ಎಂದು ಎಲ್ಲ ಬಗೆಯಲ್ಲೂ ತಿಳಿಹೇಳುವುದು; ಎಷ್ಟು ಮಾತ್ರಕ್ಕೂ ಒಪ್ಪದಿದ್ದಲ್ಲಿ ಸಹಗಮನಕ್ಕೆ ಒಪ್ಪಿಗೆ ಕೊಡುವುದು' ಎಂದು ಉತ್ತರ ಬರೆದಿದ್ದಾನೆ.

(ಎಂ.ಎಚ್.)

**ನಾಣ್ಯಗಳು:** ಮೈಸೂರು ಒಡೆಯರ ನಾಣ್ಯಗಳು ಇಕ್ಕೇರಿಯ ನಾಣ್ಯಗಳನ್ನೇ ವಿಶೇಷವಾಗಿ ಹೋಲುತ್ತವೆ. ಇವರು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಅಚ್ಚುಹಾಕಿಸಿದರೂ ಚಿನ್ನ ಮತ್ತು ತಾಮ್ರದ ನಾಣ್ಯಗಳೇ ವಿಶೇಷವಾಗಿ ದೊರೆತಿವೆ. ಈ ಮನೆತನದ ರಾಜರಲ್ಲಿ ಮೊಟ್ಟಮೊದಲನೆಯದಾಗಿ ನಾಣ್ಯಗಳನ್ನು ಅಚ್ಚುಹಾಕಿಸಿದವನು ಕಂಠೀರವ ನರಸರಾಜ ಒಡೆಯರ್. ಇವನು ಹಣಗಳನ್ನು ಮಾತ್ರ ಟಂಕಿಸಿದ. ಇವುಗಳಿಗೆ ಕಂಠೀರಾಯ ಹಣವೆಂದು ಹೆಸರಾಯಿತು. ಕಾಲಕ್ರಮದಲ್ಲಿ ದಿವಾನ್ ಪೂರ್ಣಯ್ಯ ಇದೇ ರೀತಿಯ ಹಣವನ್ನು ಅಚ್ಚು ಹಾಕಿಸಿದ. ಈ ಎರಡು ನಾಣ್ಯಗಳ ಭಿನ್ನತೆಯನ್ನು ತೋರಿಸಲು, ಕಂಠೀರವ ನರಸರಾಜ ಒಡೆಯರ್ ಮುದ್ರಿಸಿದ ನಾಣ್ಯವನ್ನು ಅಗಲ ಕಂಠೀರಾಯ ಹಣವೆಂದು ಕರೆಯಲಾಯಿತು. ಈ ರೀತಿಯ ಹತ್ತು ಹಣಗಳಿಗೆ ಸಮವಾದ ಕಂಠೀರಾಯ ವರಹವೆಂಬುದು ಲೆಕ್ಕಾಚಾರದಲ್ಲಿದ್ದರೂ ಆ ರೀತಿಯ ನಾಣ್ಯಗಳು ಮಾತ್ರ ಮುದ್ರಿತವಾಗಲಿಲ್ಲ. ಕಂಠೀರಾಯ ಹಣದ ಮುಮ್ಮುಖದಲ್ಲಿ ನರಸಿಂಹನ ಚಿತ್ರವೂ ಹಿಮ್ಮುಖದಲ್ಲಿ ಶ್ರೀ ಚಿಕ್ಕದೇವರಾಯ ಎಂಬ ನಾಗರೀ ಲಿಪಿಯ ಬರೆಹವೂ ಇರುತ್ತದೆ. ಹಣದ ಮುಮ್ಮುಖದಲ್ಲಿ ಚಾಮುಂಡಿಯ ಚಿತ್ರ, ಹಿಮ್ಮುಖದಲ್ಲಿ ಚಿಕ್ಕದೇವರಾಜ ಎಂಬ ಕನ್ನಡ ಲಿಪಿಯ ಬರೆವಣಿಗೆ ಇರುತ್ತದೆ. ಇವುಗಳನ್ನು ಚಿಕ್ಕದೇವರಾಯ ಹಣವೆಂದೂ ಕರೆಯುತ್ತಾರೆ. ಇದೇ ಕಾಲದಲ್ಲಿ 46 ಮತ್ತು 23 ಗ್ರೇನ್ ತೂಕದ ತಾಮ್ರದ ನಾಣ್ಯಗಳು ಬಳಕೆಯಲ್ಲಿದ್ದವು. ಅವುಗಳ ಮುಮ್ಮುಖದಲ್ಲಿ ಸಿಂಹ, ಹುಲಿ ಮುಂತಾದ ಪ್ರಾಣಿಗಳ ಚಿತ್ರಗಳೂ ಹಿಮ್ಮುಖದಲ್ಲಿ 1 ರಿಂದ 33ರ ವರೆಗಿನ ಕನ್ನಡದ

ಮೈಸೂರು ಒಡೆಯರ ನಾಣ್ಯಗಳು

ಸಂಖ್ಯೆಗಳೂ ಇವೆ. ಇವುಗಳು ಯಾರ ನಾಣ್ಯಗಳೆಂದು ಖಚಿತವಾಗಿ ತಿಳಿದಿಲ್ಲವಾದರೂ ಕೆಲವು ವಿದ್ವಾಂಸರು ಇವುಗಳನ್ನು ಚಿಕ್ಕದೇವರಾಜರದ್ದೆಂದೂ ಸಂಖ್ಯೆಗಳು ಅವರ ಆಳ್ವಿಕೆಯ ವರ್ಷಗಳೆಂದೂ ಭಾವಿಸುತ್ತಾರೆ.

ತಾತ್ಕಾಲಿಕವಾಗಿ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿದ್ದ ಮೈಸೂರು ರಾಜ್ಯ ಸ್ವತಂತ್ರವಾದ ಅನಂತರ ಮೈಸೂರು ಅರಸರು ತಮ್ಮ ನಾಣ್ಯಗಳನ್ನು ಮತ್ತೆ ಅಚ್ಚುಮಾಡಲು ಪ್ರಾರಂಭಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಬಾಲಕನಾಗಿದ್ದಾಗ ರೀಜೆಂಟನಾಗಿದ್ದ ದಿವಾನ್ ಪೂರ್ಣಯ್ಯ ಇಕ್ಕೇರಿಯ ವರಹಗಳ ಮಾದರಿಯಲ್ಲಿ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದ; ಇವು ಹೊಸ ಇಕ್ಕೇರಿ ವರಹ ಎಂದು ಪ್ರಸಿದ್ಧವಾದುವು. ಇವುಗಳ ಮುಮ್ಮುಖದಲ್ಲಿ ಶಿವಪಾರ್ವತಿ ಮತ್ತು ಹಿಮ್ಮುಖದಲ್ಲಿ ಶ್ರೀ ಎಂಬ ಅಕ್ಷರ ಇರುತ್ತದೆ. ಇವನು ಅಚ್ಚುಹಾಕಿಸಿದ ಹಣಗಳಿಗೆ ಗಿಡ್ಡು ಕಂಠೀರಾಯ ಹಣವೆಂದು ಹೆಸರು. ಮುಮ್ಮಡಿ ಕೃಷ್ಣರಾಜ ಒಡೆಯರು ಆಡಳಿತವನ್ನು ವಹಿಸಿಕೊಂಡ ಮೇಲೆ ಪೂರ್ಣಯ್ಯ ಅಚ್ಚು ಹಾಕಿಸಿದ್ದ ನಾಣ್ಯಗಳನ್ನೇ ಸ್ವಲ್ಪ ಬದಲಾವಣೆಯೊಂದಿಗೆ ಮುಂದುವರೆಸಿದರು. ಹಿಮ್ಮುಖದಲ್ಲಿ ಶ್ರೀಕೃಷ್ಣರಾಜ ಎಂಬ ನಾಗರೀ ಬರೆಹವನ್ನು ಅಚ್ಚುಹಾಕಿಸಿದರು. ಇವುಗಳಿಗೆ ಕರ್ತರ್ (ರಾಜ) ಇಕೇರಿ ವರಹವೆಂದೂ ಹೆಸರಿದ್ದಿತು. ಇವರು ಹೊಸ ನಮೂನೆಯ ತಾಮ್ರದ ನಾಣ್ಯಗಳನ್ನೂ ಮುದ್ರಿಸಲು ಆರಂಭಿಸಿದರು. ಇವುಗಳಲ್ಲಿ ಅನೇಕ ನಮೂನೆಗಳನ್ನು ಕಾಣಬಹುದು. ಮೊದಲು ಅಚ್ಚಾದದ್ದು ಆನೆ ಕಾಸು ಎಂದು ಕರೆಯಲಾದ ನಾಣ್ಯ. ಇದರ ಮುಮ್ಮುಖದಲ್ಲಿ ಆನೆಯ ಚಿತ್ರ ಮತ್ತು ಹಿಮ್ಮುಖದಲ್ಲಿ ಶ್ರೀಕೃಷ್ಣರಾಜ ಎಂಬ ನಾಗರೀ ಬರೆಹವಿದೆ. ಅನಂತರ ಮೈಲಿಕಾಸು ಬಳಕೆಗೆ ಬಂದಿತು. ಇದರಲ್ಲಿ ಆನೆಯ ಮೇಲೆ ಶ್ರೀ ಎಂಬ ಕನ್ನಡ ಅಕ್ಷರ ಮತ್ತು ಹಿಮ್ಮುಖದಲ್ಲಿ ಇಂಗ್ಲಿಷಿನಲ್ಲಿ ಕ್ಯಾಷ್ ಎಂಬ ಬರೆಹ ಮತ್ತು ರೋಮನ್ ಸಂಖ್ಯೆಯಲ್ಲಿ (V, X, XX) ಅದರ ಮೌಲ್ಯ ಮತ್ತು ಕನ್ನಡದಲ್ಲಿ ಮಯಿಲಿಕಾಸು ಎಂಬ ಬರೆಹ ಕಾಣಬರುತ್ತದೆ. ಅನಂತರ ಮುಮ್ಮುಖದಲ್ಲಿ ಆನೆಯ ಮೇಲೆ ಕನ್ನಡದಲ್ಲಿ 'ಚಾ' ಅಥವಾ 'ಚಾಮುಂಡಿ', ಹಿಮ್ಮುಖದಲ್ಲಿ ನಾಣ್ಯದ ಮೇಲ್ಭಾಗದಲ್ಲಿ ಕೃಷ್ಣ ಎಂಬ ಕನ್ನಡ ಬರೆಹ, ಅದರ ಕೆಳಗೆ ಮಯಿಲಿ ಕಾಸು (ಕನ್ನಡದಲ್ಲಿ) ಮತ್ತು ಇಂಗ್ಲಿಷಿನ 'ಕ್ಯಾಷ್' ಇರುವ ನಾಣ್ಯಗಳು ಅಚ್ಚಾದುವು. ಕೊನೆಗೆ ಆನೆಗೆ ಬದಲಾಗಿ ಸಿಂಹದ ಚಿತ್ರವೂ ಅದರ ಮೇಲೆ ಶ್ರೀಚಾಮುಂಡಿ ಎಂಬ

ಕನ್ನಡ ಬರೆಹ, ಸೂರ್ಯಚಂದ್ರರಿರುವ ಮುಮ್ಮುಖವೂ ಹಿಮ್ಮುಖದಲ್ಲಿ ನಾಣ್ಯದ ಮಧ್ಯದಲ್ಲಿ ಕೃಷ್ಣ ಎಂಬ ಬರೆಹ ಅದರ ಸುತ್ತಲೂ ವೃತ್ತಾಕಾರದಲ್ಲಿ **XXV** ಕ್ಯಾಷ್ ಎಂಬ ಇಂಗ್ಲಿಷ್ ಬರೆಹ, ಜರ್ಬಿ ಮಹಿಸೂರ್ ಎಂಬ ಪಾರಸೀ ಬರೆಹ ಮತ್ತು ಮಯಿಲಿ ಕಾಸು 25 ಎಂಬ ಕನ್ನಡ ಬರೆಹದ ನಾಣ್ಯಗಳು ಬಳಕೆಗೆ ಬದವು. 1833ರಲ್ಲಿ ಟಂಕಸಾಲೆ ಮೈಸೂರಿನಿಂದ ಬೆಂಗಳೂರಿಗೆ ಬದಲಾಯಿಸಲ್ಪಟ್ಟರೂ ಇದೇ ರೀತಿಯ ನಾಣ್ಯಗಳು ಅಚ್ಚಾಗುತ್ತಿದ್ದವು. $6^1/_4$ಕಾಸಿನ ನಾಣ್ಯದಲ್ಲಿ ಸಿಂಹದ ಮೇಲೆ ಶ್ರೀ ಎಂಬ ಅಕ್ಷರ, ಹಿಮ್ಮುಖದಲ್ಲಿ ಕೃಷ್ಣ ಎಂಬ ಕನ್ನಡ ಬರೆಹ, ಜರ್ಬಿ ಮಹಿಸೂರ್ ಎಂಬ ಪಾರಸೀ ಬರೆಹ ಇವೆ. 1843ರಲ್ಲಿ ಟಂಕಸಾಲೆ ಅಂತಿಮವಾಗಿ ಮುಚ್ಚಲ್ಪಟ್ಟಿತು. ಆ ವರ್ಷ ಅಚ್ಚಾದ ತಾಮ್ರದ ನಾಣ್ಯದಲ್ಲಿ ಮುಮ್ಮುಖದಲ್ಲಿ ಸಿಂಹದ ಚಿತ್ರ, ಅದರ ಮೇಲೆ ಶ್ರೀ ಎಂಬ ಅಕ್ಷರ, ಕೆಳಭಾಗದಲ್ಲಿ 1843, ಹಿಮ್ಮುಖದಲ್ಲಿ ಕೃಷ್ಣ ಎಂಬ ಕನ್ನಡ ಬರೆಹ, ಅದರ ಕೆಳಗೆ ಮಹಿಸೂರ್ ಜರ್ಬಿ ಎಂಬ ಪಾರಸೀ ಬರೆವಣಿಗೆಯನ್ನು ಕಾಣಬಹುದು. ಇದು ಮೈಸೂರು ಅರಸರು ಅಚ್ಚುಮಾಡಿಸಿದ ಕೊನೆಯ ನಾಣ್ಯ. **(ಎ.ವಿ.ಎನ್.)**

**ಮೈಸೂರು ವಾಸುದೇವಾಚಾರ್ಯ:** 1865–1961. ಸಂಗೀತ ಮತ್ತು ಸಾಹಿತ್ಯ ಎರಡರಲ್ಲೂ ಸವ್ಯಸಾಚಿಯೆನಿಸಿಕೊಂಡಿದ್ದ, ಇಪ್ಪತ್ತನೆಯ ಶತಮಾನದ ಪ್ರಮುಖ ವಾಗ್ಗೇಯಕಾರರಲ್ಲಿ ಒಬ್ಬರು. ಕಾಕನಹಳ್ಳಿ ವಾಸುದೇವಾಚಾರ್ಯರೆಂದೂ ಪ್ರಸಿದ್ಧರು. ಇವರು 1865 ಮೇ 28 ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಸುಬ್ರಹ್ಮಣ್ಯಾಚಾರ್ಯರು, ತಾಯಿ ಕೃಷ್ಣಾಬಾಯಿ.

ಮೈಸೂರು ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ಇವರ ಸಾಹಿತ್ಯದ ಕೃಷಿ ಆರಂಭವಾಯಿತು. ಅರಮನೆಯ ವಿದ್ವಾಂಸರಾಗಿದ್ದ ಸುಬ್ಬರಾಯರು ಹಾಗೂ ವೀಣೆ ಪದ್ಮನಾಭಯ್ಯನವರ ಬಳಿ ಇವರ ಬಾಲ್ಯಸಂಗೀತ ಪಾಠ ನಡೆಯಿತು. ಸಂಗೀತ ಕ್ಷೇತ್ರದ ಇವರ ಉನ್ನತವ್ಯಾಸಂಗ ತಿರುವಯ್ಯಾರಿನಲ್ಲಿ ಪಟ್ಣಂ ಸುಬ್ರಹ್ಮಣ್ಯಅಯ್ಯರ್ ಅವರ ಬಳಿ ನಡೆಯಿತು (1884–90). ತ್ಯಾಗರಾಜರ ನೇರ ಶಿಷ್ಯ ಪರಂಪರೆಯಲ್ಲಿ ಬಂದವರು ವಾಸುದೇವಾಚಾರ್ಯರು.

ಆಚಾರ್ಯರು ರಚಿಸಿರುವ ಕೃತಿಗಳಲ್ಲಿ 50 ಕೀರ್ತನೆಗಳು ವಾಸುದೇವ ಕೀರ್ತನ ಮಂಜರಿ ಎಂಬ ಅಂಕಿತದಲ್ಲಿ ಎರಡು ಸಂಪುಟಗಳಲ್ಲಿ ಪ್ರಕಟವಾಗಿವೆ. ನವ ರತ್ನರಾಗಮಾಲಿಕಾ ಎಂಬುದರಲ್ಲಿ ಆಚಾರ್ಯರ 9 ರಾಗಮಾಲಿಕಾ ರಚನೆಗಳಿವೆ. ಇವರ ಸಂಪಾದಕತ್ವದಲ್ಲಿ ಸಿದ್ಧವಾದ ಮೈಸೂರು ಸದಾಶಿವ ರಾಯರ ಕೆಲವು ಕೀರ್ತನೆಗಳನ್ನು ಮದರಾಸು ಮ್ಯೂಸಿಕ್ ಅಕಾಡೆಮಿಯವರು ಹೊರತಂದಿದ್ದಾರೆ. ಜಯಚಾಮರಾಜ ಒಡೆಯರು ರಚಿಸಿರುವ ಸುಮಾರು ನೂರು ಕೀರ್ತನೆಗಳನ್ನು ಆಚಾರ್ಯರು ಪರಿಷ್ಕರಿಸಿದ್ದಾರೆ. ತಮ್ಮ ಜೀವಿತದ ಕೊನೆಯ ಭಾಗವನ್ನು ಆಚಾರ್ಯರು ಮದರಾಸಿನ ಕಲಾಕ್ಷೇತ್ರ ಸಂಸ್ಥೆಯ ಸೇವೆಗೆಂದು ಮುಡುಪಿಟ್ಟರು. ಆ ಮಹಾಸಂಸ್ಥೆಯ ಉಪಾಧ್ಯಕ್ಷರಾಗಿ, ಮುಂದೆ ಆ ಸಂಸ್ಥೆಯ ಶಿರೋಮಣಿ ಸಂಗೀತ ಕಾಲೇಜಿನ ಪ್ರಿನ್ಸಿಪಾಲರಾದರು. ಆ ಸಂದರ್ಭದಲ್ಲಿ ಆಚಾರ್ಯರು ಸಾಧಿಸಿದ ಮಹತ್ಕಾರ್ಯವೆಂದರೆ ರಾಮಾಯಣ ಮಹಾಕಾವ್ಯವನ್ನು ನೃತ್ಯ ನಾಟಕಕ್ಕೆಅಳವಡಿಸಿ ಅದಕ್ಕೆ ಮನೋಹರವಾದ ಸಂಗೀತವನ್ನು ರಚಿಸಿದ್ದು. ಆರು ಭಾಗಗಳಲ್ಲಿರುವ ಈ ನೃತ್ಯ ನಾಟಕಗಳು ದೇಶವಿದೇಶಗಳಲ್ಲಿನ ರಸಿಕರಿಗೆ ಪ್ರಿಯವಾಗಿವೆ.

ವಾಸುದೇವಾಚಾರ್ಯರು ಭಾರತದಾದ್ಯಂತ ಸಂಚರಿಸಿ, ಅನೇಕ ಸಂಗೀತ ಕಛೇರಿಗಳನ್ನು ಮಾಡಿ ಗುರುಮನೆಗಳಿಂದ ಬಿರುದು ಬಹುಮಾನಗಳನ್ನು ಪಡೆದರು. ಸಂಗೀತ ಶಾಸ್ತ್ರರತ್ನ, ಸಂಗೀತಶಾಸ್ತ್ರವಿಶಾರದ ಎಂಬ ಬಿರುದುಗಳನ್ನಿತ್ತವರು ಮೈಸೂರರಸರು. ಮದರಾಸು ಮ್ಯೂಸಿಕ್ ಅಕಾಡೆಮಿ ಇವರಿಗೆ ಸಂಗೀತ ಕಳಾನಿಧಿ ಎಂಬ ಪ್ರಶಸ್ತಿ ನೀಡಿದೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿನೀಡಿ ಗೌರವಿಸಿದೆ. ಭಾರತ ಸರ್ಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಇವರು ಸಂಗೀತಲೋಕದ ತಮ್ಮ ಬಗೆಬಗೆಯ ಅನುಭವಗಳನ್ನು ನಾ ಕಂಡ ಕಲಾವಿದರು ಮತ್ತು ನೆನಪುಗಳು ಎಂಬ ಎರಡು ಪುಸ್ತಕಗಳಲ್ಲಿ ಹೇಳಿದ್ದಾರೆ. **(ಎಸ್.ಕೆ.ಎಂ.)**

**ಮೈಸೂರು ವಿಶ್ವವಿದ್ಯಾನಿಲಯ:** ಕರ್ನಾಟಕ ರಾಜ್ಯದ ಹಿರಿಯ ವಿಶ್ವವಿದ್ಯಾನಿಲಯಗಳಲ್ಲೊಂದು. 1916ರಲ್ಲಿ ಸ್ಥಾಪಿತವಾಯಿತು. ಇದರ ಆಡಳಿತ ಕೇಂದ್ರ ಮತ್ತು ಮುಖ್ಯ ಕಾಲೇಜುಗಳು ಹಾಗೂ ಮಾನಸಗಂಗೋತ್ರಿ ಎಂಬ ಸ್ನಾತಕೋತ್ತರ ಕೇಂದ್ರ ಮೈಸೂರಿನಲ್ಲಿವೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಈ ಜಿಲ್ಲೆಗಳು ಇದರ ಪ್ರಾದೇಶಿಕ ವ್ಯಾಪ್ತಿಯಲ್ಲಿವೆ.

ಭಾರತದಲ್ಲಿ ಉನ್ನತ ಶಿಕ್ಷಣದ ಪ್ರಾಮುಖ್ಯವನ್ನು ಅರಿತು ಅಗತ್ಯ ಸೌಲಭ್ಯವನ್ನು ಒದಗಿಸಿಕೊಟ್ಟ ಆಶ್ರಿತ ಸಂಸ್ಥಾನಗಳಲ್ಲಿ ಮೈಸೂರು ಮೊದಲನೆಯದು. 1853ರಲ್ಲಿ ಆರಂಭವಾದ ಮೈಸೂರಿನ ಮಹಾರಾಜ ಕಾಲೇಜೂ 1858ರಲ್ಲಿ ಆರಂಭವಾದ ಬೆಂಗಳೂರಿನ ಸೆಂಟ್ರಲ್ ಕಾಲೇಜೂ ಇಪ್ಪತ್ತನೆಯ ಶತಮಾನದ ಎರಡನೆಯ ದಶಕದವರೆಗೂ ಮದರಾಸು ವಿಶ್ವವಿದ್ಯಾಲಯದ ಅಂಗೀಕೃತ ಕಾಲೇಜುಗಳಾಗಿದ್ದವು. 1916ರಲ್ಲಿ ಮೈಸೂರು ಸಂಸ್ಥಾನದಲ್ಲೇ ಮೊತ್ತಮೊದಲನೆಯದಾಗಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೇಲಿನ ಎರಡು ಕಾಲೇಜುಗಳೂ ಕೇಂದ್ರ ಸಂಸ್ಥೆಗಳಾದುವು. 1917ರಲ್ಲಿ ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕಾಲೇಜೂ 1924ರಲ್ಲಿ ಮೆಡಿಕಲ್ ಕಾಲೇಜೂ (ಅನಂತರ ಇದು ಮೈಸೂರಿಗೆ ವರ್ಗವಾಯಿತು) ಆರಂಭವಾದುವು. 1959ರ ವೇಳೆಗೆ ಇನ್ನೂ ವಿಶ್ವವಿದ್ಯಾನಿಲಯದ 13 ನೂತನ ಕಾಲೇಜುಗಳು ಆರಂಭವಾದುವು. ಜೊತೆಗೆ ಅದು 37 ಖಾಸಗಿ ಕಾಲೇಜುಗಳಿಗೂ ಅಂಗೀಕಾರ ನೀಡಿತು. 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬರುವ ಮೊದಲು ಈ ವಿಶ್ವವಿದ್ಯಾನಿಲಯ ಇಡೀ ಹಳೆ ಮೈಸೂರು ಭಾಗ ಮತ್ತು ಹಿಂದಿನ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳ ವ್ಯಾಪ್ತಿ ಹೊಂದಿತ್ತು. 1964ರಲ್ಲಿ ಬೆಂಗಳೂರು ನಗರದ 32 ಕಾಲೇಜುಗಳೂ ನೂತನ ವಿಶ್ವವಿದ್ಯಾಲಯದ ವ್ಯಾಪ್ತಿಗೆ ವರ್ಗವಾದುವು. ಕೇವಲ ಎರಡು ಕಾಲೇಜುಗ ಳಿಂದ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯ 1976ರ ಹೊತ್ತಿಗೆ 127 ಕಾಲೇಜುಗಳನ್ನು ಹೊಂದಿತ್ತು. ಈಗ 147 ಕಾಲೇಜುಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿವೆ. ಕೇವಲ 598 ವಿದ್ಯಾರ್ಥಿಗಳಿಂದ ಆರಂಭವಾದ ವಿಶ್ವವಿದ್ಯಾನಿಲಯ 90 ವರ್ಷಗಳ ಈ ಕಾಲಾವಧಿಯಲ್ಲಿ ಅಗಾಧವಾಗಿ ಅಭಿವೃದ್ಧಿ ಹೊಂದಿ ಲಕ್ಷಾಂತರ ಮಂದಿ ವಿದ್ಯಾರ್ಥಿಗಳಿಗೆ ಶಿಕ್ಷಣವೀಯುತ್ತಿದೆ. ಬೋಧನೆ, ಸಂಶೋಧನೆ, ವಿಸ್ತರಣೆ–ಈ ಮೂರು ಕರ್ತವ್ಯಗಳನ್ನೂ ಪರಿಣಾಮಕಾರಿಯಾಗಿ ವ್ಯವಸ್ಥೆಗೊಳಿಸಿಕೊಂಡು ನಿರ್ವಹಿಸುತ್ತ ಭಾರತದ ಖ್ಯಾತಿವೆತ್ತ ವಿಶ್ವವಿದ್ಯಾಲಯಗಳಲ್ಲೊಂದೆಂದು ಹೆಸರು ಪಡೆದಿದೆ. ಈಚಿನ ವರ್ಷಗಳಲ್ಲಿ ನ್ಯಾಕ್ ಸಮಿತಿಯಿಂದ A+ ಮಾನ್ಯತೆಯನ್ನು ಪಡೆದಿದೆ.

ಈ ವಿಶ್ವವಿದ್ಯಾನಿಲಯದ ಮೂಲಶಾಸನ 1933ರಲ್ಲೂ ಅನಂತರ 1939ರಲ್ಲೂ ತಿದ್ದುಪಡಿಯಾಗಿ ಸೆನೆಟ್ಟಿನ ಸದಸ್ಯತ್ವ ಹೆಚ್ಚು ವ್ಯಾಪ್ತಿಯುತವಾದುದರ ಜೊತೆಗೆ ಅಕಾಡಮಿಕ್ ಕೌನ್ಸಿಲ್ಲನ್ನು ಆರಂಭಿಸಿ ತನ್ನ ಶೈಕ್ಷಣಿಕ ಕಾರ್ಯಕ್ರಮಗಳನ್ನು ತಾನೇ ರೂಪಿಸಿ ನಡೆಸಿಕೊಂಡು ಬರುವ ಹಕ್ಕು ಪಡೆದುಕೊಂಡಿತು. ಅನಂತರ 1956ರ ಕಾಯಿದೆಯ ಪ್ರಕಾರ ವಿಶ್ವವಿದ್ಯಾನಿಲಯ ಸ್ವತಂತ್ರ ಸಂಸ್ಥೆಯಾಯಿತು. 1960ರಲ್ಲಿ ಆಗತಾನೆ ಕೊಂಡುಕೊಂಡ ಜಯಲಕ್ಷ್ಮೀ ವಿಲಾಸಕ್ಕೆ ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದ ಸ್ನಾತಕೋತ್ತರ ತರಗತಿಗಳು ವರ್ಗವಾದುವು. ವಿಶ್ವವಿದ್ಯಾನಿಲಯದ ಈ ನೂತನ ಬಡಾವಣೆಗೆ ಅಂದಿನ ಉಪಕುಲಪತಿಗಳಾಗಿದ್ದ ರಾಷ್ಟ್ರಕವಿ ಕೆ.ವಿ.ಪುಟ್ಟಪ್ಪನವರು ಮಾನಸಗಂಗೋತ್ರಿ ಎಂದು ನಾಮಕರಣ ಮಾಡಿದರು.

ವಿಶ್ವವಿದ್ಯಾನಿಲಯ ನಡೆಸುತ್ತಿದ್ದ 17 ಕಾಲೇಜುಗಳಲ್ಲಿ 14ನ್ನು 1960ರಲ್ಲಿ ಸರ್ಕಾರಕ್ಕೆ ವರ್ಗಾಯಿಸಲಾಯಿತು. 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಆರಂಭವಾದ್ದರಿಂದ ಸೆಂಟ್ರಲ್ ಕಾಲೇಜು ಅದಕ್ಕೆ ಸೇರಿಹೋಯಿತು. ಆದ್ದರಿಂದ ವಿವಿಧ ವಿಜ್ಞಾನ ಮತ್ತು ಗಣಿತ ಶಾಸ್ತ್ರಗಳ ಸ್ನಾತಕೋತ್ತರ ತರಗತಿಗಳನ್ನು ಮಾನಸಗಂಗೋತ್ರಿಯಲ್ಲಿ ಹೊಸದಾಗಿ ಆರಂಭಿಸಬೇಕಾಯಿತು. ಸ್ನಾತಕೋತ್ತರ ವಿಭಾಗಗಳ ವ್ಯವಸ್ಥೆ 1960ರಲ್ಲಿ ಆರಂಭವಾಗಿ ಮುಂದುವರಿಯಿತು.

ನೂತನವಾಗಿ ಆಡಳಿತ ವಿಭಾಗ, ಕಟ್ಟಡಗಳ ನಿರ್ಮಾಣ, ಪ್ರಯೋಗಾಲಯಗಳ ಸ್ಥಾಪನೆ, ಉಪಕರಣಾದಿಗಳ ಸರಬರಾಜು, ಅಧ್ಯಾಪಕರ ನೇಮಕ, ವಿದ್ಯಾರ್ಥಿನಿಲಯಗಳ ಆರಂಭ, ಗ್ರಂಥಾಲಯದ ಏರ್ಪಾಟು–ಇವೆಲ್ಲ ಕಾರ್ಯಗಳೂ ಯೋಜನೆಯಿಂದ ಯೋಜನೆಗೆ ಮುಂದುವರಿದುವು. 9ನೆಯ ಯೋಜನೆಯ ವೇಳೆಗೆ ಸಾಕಷ್ಟು ಪ್ರಗತಿ ಸಾಧಿಸಲಾಯಿತು. ಈಗ (2007) ಸುಮಾರು 59ಕ್ಕೂ ಹೆಚ್ಚಿನ ವಿಷಯ ವಿಭಾಗಗಳಲ್ಲಿ ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಗೊಂಡಿದೆ. ಇತ್ತೀಚೆಗೆ ರಸಾಯನ ವಿಜ್ಞಾನ, ಭೌತವಿಜ್ಞಾನ ಮತ್ತು ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಷಯಗಳಲ್ಲಿ 5 ವರ್ಷಗಳ ಇಂಟೆಗ್ರೇಟೆಡ್ ಎಂಎಸ್‌ಸಿ ಕೋರ್ಸ್ ಆರಂಭಿಸಲಾಗಿದೆ. ಪ್ರಾಣಿವಿಜ್ಞಾನ ವಿಭಾಗದಲ್ಲಿ ಜೆನಿಟಿಕ್ಸ್ ಕೋರ್ಸ್ ಆರಂಭಿಸಲಾಗಿದೆ. ಯುವರಾಜ ಕಾಲೇಜಿಗೆ ಸ್ವಾಯತ್ತತೆ ನೀಡಲಾಗಿದೆ.

1962ರಲ್ಲಿ ಮಂಗಳೂರಿಗೆ 20 ಕಿಮೀ ದೂರದಲ್ಲಿರುವ ಕೊಣಾಜೆಯಲ್ಲಿ ಮಂಗಳಗಂಗೋತ್ರಿಯೆಂಬ ಸ್ನಾತ್ತಕೋತ್ತರ ಕೇಂದ್ರವನ್ನು ವಿಶ್ವವಿದ್ಯಾನಿಲಯ ಆರಂಭಿಸಿತು. ಕನ್ನಡ ಮತ್ತು ಭೌತವಿಜ್ಞಾನ ವಿಭಾಗಗಳು ಆ ವರ್ಷ ಆರಂಭವಾದುವು. ಅನಂತರ 1970ರಲ್ಲಿ ಜೀವವಿಜ್ಞಾನ ವಿಭಾಗವೂ 1971ರಲ್ಲಿ ವಾಣಿಜ್ಯಶಾಸ್ತ್ರ ವಿಭಾಗವೂ ಆರಂಭವಾದುವು. ಅದೇ ರೀತಿ 1973–74ರಲ್ಲಿ ಶಿವಮೊಗ್ಗದ ಬಳಿ ಮತ್ತೊಂದು ಸ್ನಾತ್ತಕೋತ್ತರ ಕೇಂದ್ರವನ್ನು (ಭದ್ರಾ ಪ್ರಾಜೆಕ್ಟ್) ಆರಂಭಿಸಿತು. ಮೊದಲ ವರ್ಷ ಕನ್ನಡ ಮತ್ತು ಔದ್ಯೋಗಿಕ ರಸಾಯನಶಾಸ್ತ್ರಗಳ ಶಿಕ್ಷಣ ಏರ್ಪಟ್ಟಿತು. ಇವೆರಡು ಕೇಂದ್ರಗಳೂ ಮುಂದೆ ಎರಡು ಪ್ರತ್ಯೇಕ ವಿಶ್ವವಿದ್ಯಾಲಯಗಳಾದವು.

ಪ್ರತಿಯೊಂದು ಸ್ನಾತ್ತಕೋತ್ತರ ವಿಷಯ ವಿಭಾಗವೂ ತನ್ನ ಕಾರ್ಯಕೇತ್ರವನ್ನು ವಿಸ್ತರಿಸಿಕೊಳ್ಳುತ್ತಿದೆ. ಕನ್ನಡ ವಿಭಾಗ ಕನ್ನಡ ಅಧ್ಯಯನ ಸಂಸ್ಥೆಯಾಗಿ (1966) **(ನೋಡಿ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)** ವ್ಯವಸ್ಥೆಗೊಂಡು ವಿವಿಧ ಎಂ.ಎ. ತರಗತಿಗಳ ಜೊತೆಗೆ ಇತರ ತರಗತಿಗಳನ್ನೂ ಕಾರ್ಯಕ್ರಮಗಳನ್ನೂ ವ್ಯವಸ್ಥೆಗೊಳಿಸಿಕೊಂಡಿದೆ. ಇಂಗ್ಲಿಷ್ ವಿಷಯ ವಿಭಾಗ ಒಂದು ವರ್ಷದ ಇಂಗ್ಲಿಷ್ ಡಿಪ್ಲೊಮ ತರಗತಿಗಳನ್ನೂ ಇತಿಹಾಸ ವಿಭಾಗದಲ್ಲಿ ಮಧ್ಯ ಏಷ್ಯ ಅಧ್ಯಯನದಲ್ಲಿ ಡಿಪ್ಲೊಮ ಮತ್ತು ಎಂ.ಎ. ತರಗತಿಗಳನ್ನೂ ಭೂಗೋಳಶಾಸ್ತ್ರದ ವಿಭಾಗದಲ್ಲಿ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಪ್ರಾದೇಶಿಕ ಯೋಜನೆಯ ಎರಡು ವರ್ಷಗಳ ಎಂ.ಎ. ಮತ್ತು ಪಿಎಚ್.ಡಿ. ತರಗತಿಗಳನ್ನೂ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಅಲ್ಪಾವಧಿ ತರಗತಿಗಳನ್ನೂ ಏರ್ಪಡಿಸಲಾಗಿದೆ. ಈಗ ಈ ವಿಭಾಗ ಅಭಿವೃದ್ಧಿ ಅಧ್ಯಯನ ಸಂಸ್ಥೆ ಎಂಬ ಹೆಸರಿನಲ್ಲಿ ಪ್ರತ್ಯೇಕವಾಗಿ ರೂಪುಗೊಂಡಿದ್ದು ಹಲವು ಹೊಸ ಕಾರ್ಯಕ್ರಮಗಳನ್ನೂ ಕೈಗೊಂಡಿದೆ. ಭೂವಿಜ್ಞಾನ ವಿಭಾಗ ಖನಿಜ ವಿಜ್ಞಾನ ಸಂಸ್ಥೆಯನ್ನು ಆರಂಭಿಸಿದೆ. ಶಿಕ್ಷಣಶಾಸ್ತ್ರ ವಿಭಾಗ ಹಿಂದಿನಿಂದ ನಡೆಯುತ್ತಿದ್ದ ಎಂ.ಇಡಿ. ತರಗತಿಯ ಜೊತೆಗೆ ಎರಡು ವರ್ಷದ ಎಂ.ಎ. ತರಗತಿಯನ್ನು ನಡೆಸುತ್ತಿದೆ. ವಾಣಿಜ್ಯ ಶಾಸ್ತ್ರದ ವಿಭಾಗ ಎರಡು ವರ್ಷದ ಎಂ.ಕಾಂ. ಜೊತೆಗೆ ಸಾಮಾನ್ಯ ಪ್ರಥಮ ಪದವಿ ಪಡೆದವರಿಗೂ ಅವಕಾಶವುಳ್ಳ ವ್ಯವಹಾರೋದ್ಯಮಗಳ ಆಡಳಿತದಲ್ಲಿ ಎಂ.ಎ. ತರಗತಿಯನ್ನೂ ನಡೆಸುತ್ತಿದೆ. ಸಂಗೀತ, ನ್ಯಾಯಶಾಸ್ತ್ರ, ವಿಷಯಗಳಲ್ಲೂ ಸ್ನಾತಕೋತ್ತರ ತರಗತಿಗಳ ವ್ಯವಸ್ಥೆಯಾಗಿದೆ. ಗ್ರಂಥಾಲಯ ವಿಜ್ಞಾನದಲೂ ದೈಹಿಕ ಶಿಕ್ಷಣದಲ್ಲೂ ಸ್ನಾತಕೋತ್ತರ ಶಿಕ್ಷಣ ಏರ್ಪಟ್ಟಿದೆ. ಆಧುನಿಕ ಶಿಕ್ಷಣ ಪದ್ಧತಿಗನುಗುಣವಾಗಿ ಕಂಪ್ಯೂಟರ್ ವಿಜ್ಞಾನದಲ್ಲಿ ಮಾಸ್ಟರ್ಸ್ ಪದವಿಗಳು, ಬಯೋಟೆಕ್ನಾಲಜಿ ಮತ್ತು ಬಯೋಕೆಮಿಸ್ಟ್ರಿ, ರೇಷ್ಮೆ ಕೃಷಿ ಮೊದಲಾದ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ನೀಡಲಾಗುತ್ತಿದೆ. ಕಂಪ್ಯೂಟರ್ ಮತ್ತು ಮಾಹಿತಿ ವಿಜ್ಞಾನಕ್ಕೆ ಸಂಬಂಧಿಸಿದ ನಾನಾ ಡಿಪ್ಲೊಮ ಮತ್ತು ಸರ್ಟಿಫಿಕೇಟ್ ಶಿಕ್ಷಣಗಳನ್ನು ಪ್ರಾರಂಭಿಸಿ ಅದನ್ನು ಮಾನಸಗಂಗೋತ್ರಿ ಆವರಣದಲ್ಲಿ ಹೊಸದಾಗಿ ನಿರ್ಮಿಸಲಾದ ಸೆನೆಟ್ ಭವನದಲ್ಲಿ ನೆಲೆಗೊಳಿಸಲಾಗಿದೆ (ಸಿಸ್ಟ್). ಶ್ರವಣ ದೃಶ್ಯ ಸಂಶೋಧನ ಸಂಸ್ಥೆ (ಎವಿಆರ್‌ಸಿ) ಸ್ಥಾಪಿಸಲಾಗಿದೆ. ಈಗ ಅದು ಇ.ಎಂ.ಎಂ.ಆರ್.ಸಿ ಎಂಬ ಹೆಸರಿನಲ್ಲಿ ಗುರುತಿಸಲ್ಪಡುತ್ತಿದೆ. ಡಾ. ಅಂಬೇಡ್ಕರ್ ಅಧ್ಯಯನ ಭವನ ನಿರ್ಮಿತವಾಗಿದೆ. ವಿವಿಧ ಮಹನೀಯರ ಹೆಸರುಗಳಲ್ಲಿ, (ಉದಾಗೆ ಕುವೆಂಪು, ವಿವೇಕಾನಂದ) ಧರ್ಮಗಳ ಹೆಸರಿನಲ್ಲಿ ಅಧ್ಯಯನ ಪೀಠಗಳು ಪ್ರಾರಂಭವಾಗಿವೆ.

ಬೋಧನೆ, ಸಂಶೋಧನೆ, ವಿಸ್ತರಣೆ–ಈ ಮೂರು ಕರ್ತವ್ಯಗಳೂ ಸಮಾನ ಪ್ರಾಮುಖ್ಯದವೆಂದು ದೃಢವಾಗಿ ನಂಬಿರುವ ವಿಶ್ವವಿದ್ಯಾನಿಲಯ ಎಲ್ಲ ವಿಷಯ ವಿಭಾಗಗಳಲ್ಲೂ ಸಂಶೋಧನೆಗೆ ಅವಕಾಶ ಕಲ್ಪಿಸಿದೆ.

**ವಿಸ್ತರಣ ಸೇವೆ :** ವಿಶ್ವವಿದ್ಯಾಲಯಗಳಲ್ಲಿ ಕ್ರಮವಾದ ವಿದ್ಯಾರ್ಥಿಗಳಾಗಿ ಸೇರಿ ಶಿಕ್ಷಣಪಡೆಯಲಾಗದಿದ್ದವರ ಉಪಯೋಗಕ್ಕಾಗಿ ವ್ಯಾಪಕವಾದ ವಿಸ್ತರಣ ಸೇವಾ ವ್ಯವಸ್ಥೆ ಏರ್ಪಟ್ಟಿದೆ. ಪ್ರಸಾರಾಂಗ ಈ ಕಾರ್ಯದ ಹೊಣೆ ಹೊತ್ತಿದೆ. ಸುಮಾರು 70 ವರ್ಷಗಳ ಹಿಂದಿನಿಂದಲೂ ತನ್ನ ಪ್ರಾದೇಶಿಕ ವ್ಯಾಪ್ತಿಯ ಬೇರೆ ಬೇರೆ ಊರುಗಳಲ್ಲಿ ವಿವಿಧ ವಿಷಯಗಳನ್ನು ಕುರಿತು ವಿದ್ವಾಂಸರಿಂದ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುವ ಕಾರ್ಯವೂ ಆ ಉಪನ್ಯಾಸಗಳ ವಿಷಯವನ್ನು ಕಿರುಹೊತ್ತಗೆಗಳಾಗಿ ಪ್ರಕಟಿಸುವ ಕಾರ್ಯವೂ ನಡೆಯುತ್ತಿದ್ದು ಅವೆರಡು ಕಾರ್ಯಗಳೂ ತುಂಬ ಜನಪ್ರಿಯವೆನಿಸಿವೆ. ಇವುಗಳ ಜೊತೆಗೆ ವಿಶೇಷ ಉಪನ್ಯಾಸಗಳೂ ಉಪನ್ಯಾಸ ಮಾಲೆಗಳೂ ಏರ್ಪಡುತ್ತಿವೆ. ಪುಟ್ಟಣ್ಣ ಚೆಟ್ಟಿ ಪುದುವಟ್ಟಿನ ಮಾಲೆ, ಗೃಹಸರಸ್ವತಿ ಗ್ರಂಥಮಾಲೆ, ವಿಶೇಷೋಪನ್ಯಾಸ ಮಾಲೆ ಮುಂತಾದ ಶೀರ್ಷಿಕೆಯಲ್ಲೂ ಅನೇಕ ಉಪಯುಕ್ತಗ್ರಂಥಗಳು ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಪ್ರಕಟವಾಗಿವೆ. ಇವುಗಳ ಜೊತೆಗೆ ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕಗಳೆಂಬ ಮೂರು ತ್ರೈಮಾಸಿಕ ಕನ್ನಡ ಪತ್ರಿಕೆಗಳೂ ಪ್ರಕಟವಾಗುತ್ತಿವೆ. ಜೊತೆಗೆ ಇಲ್ಲಿಯವರೆಗೆ ಪ್ರಕಟವಾದ ಮತ್ತು ಪ್ರಕಟವಾಗುತ್ತಿರುವ ವಿವರಣಾತ್ಮಕ ಗ್ರಂಥಸೂಚಿಯನ್ನು ಹಲವಾರು ಸಂಪುಟಗಳಲ್ಲಿ ಪ್ರಕಟಿಸುತ್ತಿದೆ. 1968ರಿಂದ ಈಚೆಗೆ ಅಂಚೆ ಮತ್ತು ತೆರಪಿನ ಶಿಕ್ಷಣ ಏರ್ಪಟ್ಟು ಅದು ಈಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವೆಂಬ **(ನೋಡಿ)** ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಅಸ್ತಿತ್ವಕ್ಕೆ ಬಂದಿದೆ. ಅದು ಮೂಲತಃ ಕಲಾಶಾಸ್ತ್ರದ ವಿವಿಧ ವಿಷಯ ವಿಭಾಗಗಳಲ್ಲಿ ಪಿಯುಸಿ ಮತ್ತು ಪದವಿ ಮಟ್ಟದಲ್ಲೂ ಕನ್ನಡ, ಇಂಗ್ಲಿಷ್, ಇತಿಹಾಸ,

ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಹಿಂದೀ ಈ ವಿಷಯಗಳಲ್ಲಿ ಸ್ನಾತ್ತಕೋತ್ತರ ಮಟ್ಟದಲ್ಲೂ ಈ ಶಿಕ್ಷಣಸೌಲಭ್ಯ ಏರ್ಪಟ್ಟು ಇತರ ವಿಷಯಗಳಿಗೂ ಕ್ರಮಕ್ರಮವಾಗಿ ವಿಸ್ತರಿಸುವ ಕಾರ್ಯಕ್ರಮ ಹೊಂದಿತ್ತು. ಈಗ ಅದರ ವ್ಯಾಪ್ತಿ ವಿಸ್ತರಿಸಿದೆ. ಸಂಜೆಯ ವೇಳೆ ಬಂದು ಶಿಕ್ಷಣ ಪಡೆಯಲು ಆಶಿಸತಕ್ಕವರಿಗಾಗಿ ಸಂಜೆಯ ಕಾಲೇಜನ್ನು ಆರಂಭಿಸಿದೆ. ಮಂಡ್ಯ ಮತ್ತು ಹಾಸನದಲ್ಲಿ ಸ್ನಾತಕೋತ್ತರಕೇಂದ್ರಗಳನ್ನು ತೆರೆದಿದೆ.

ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳಿಗೂ ಗ್ರಂಥ ಪ್ರಕಟಣೆಗೂ ಸಹಾಯ ವಾಗುವಂತೆ ವಿಶ್ವವಿದ್ಯಾನಿಲಯ ತನ್ನದೇ ಆದ ಮುದ್ರಣಾಲಯವನ್ನು ಹೊಂದಿದ್ದು ಅತ್ಯಾಧುನಿಕ ಯಂತ್ರೋಪಕರಣಗಳಿಂದ ಸಜ್ಜುಗೊಂಡಿದೆ. ಈ ಮುದ್ರಣಾಲಯ ಮುದ್ರಣಕಲೆಯಲ್ಲಿ ಡಿಪ್ಲೊಮ ತರಗತಿಗಳನ್ನೂ ನಡೆಸುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯ ಕಾರ್ಯಸೌಧ

ಹಿಂದೆ ಮಹಾರಾಜ ಕಾಲೇಜಿನ ಆವರಣದಲ್ಲಿದ್ದ ವಿಶ್ವವಿದ್ಯಾನಿಲಯದ ಗ್ರಂಥಾಲಯವನ್ನು ಮಾನಸಗಂಗೋತ್ರಿಯಲ್ಲಿ ನಿರ್ಮಾಣವಾಗಿ ನೂತನವೂ ವಿಶಾಲವೂ ಆದ ಭವ್ಯಮಂದಿರಕ್ಕೆ ವರ್ಗಾಯಿಸಲಾಗಿದೆ. ವಿವಿಧ ಜ್ಞಾನಕ್ಷೇತ್ರ ಗಳ ಸಂಶೋಧಕರಿಗೆ ಅನೂಕೂಲ ಏರ್ಪಟ್ಟಿದೆ. ಅಮೂಲ್ಯ ಗ್ರಂಥಗಳೂ ಪರಾಮರ್ಶನ ಕೃತಿಗಳೂ ಸಂಶೋಧನ ಪತ್ರಿಕೆಗಳೂ ಇಲ್ಲಿ ದೊರಕುವುದ ಲ್ಲದೆ ಸೂಕ್ಷ್ಮ ಛಾಯಾಗ್ರಹಣ ಸೇವೆಯ ಸೌಲಭ್ಯವನ್ನೂ ವ್ಯವಸ್ಥೆಗೊಳಿಸಿದೆ. ಮಹಾರಾಜ ಕಾಲೇಜಿನ ವಿದ್ಯಾರ್ಥಿನಿಲಯದ ಜೊತೆಗೆ ಮಾನಸಗಂಗೋತ್ರಿ ಯಲ್ಲಿ ಮಹಿಳೆಯರಿಗೂ ಪುರುಷರಿಗೂ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಜೊತೆಗೆ ಡಾರ್ಮಿಟರಿ ವ್ಯವಸ್ಥೆಯೂ ಉಂಟು.

ಹಿಂದಿನಿಂದ ಅನೇಕ ಉಪಯುಕ್ತ ಪ್ರಕಟಣೆಗಳನ್ನು ಹೊರಡಿಸಿರುವ ಹಾಗೂ ಸಂಶೋಧನೆ ಮತ್ತು ಗ್ರಂಥಸಂಪಾದನೆಗೆ ಮೀಸಲಾಗಿದ್ದ ಪ್ರಾಚ್ಯವಿದ್ಯಾಸಂಶೋಧನಾಲಯ ಸಂಸ್ಕೃತ ಮತ್ತು ಅರ್ಯಾಬಿಕ್ ಕೃತಿಗಳ ಪ್ರಕಟಣೆಗಳನ್ನು ಕೈಗೊಂಡಿದೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡದ ಅನೇಕ ಮಹತ್ತ್ವಪೂರ್ಣ ಪ್ರಕಟಣೆಗಳನ್ನು ಮಾಡಿಕೊಂಡು ಬಂದಿದೆ. ಈ ಎರಡು ಸಂಸ್ಥೆಗಳ ಭಂಡಾರಗಳಲ್ಲೂ ಸಹಸ್ರಾರು ಅಮೂಲ್ಯ ತಾಳೆಗರಿ ಗ್ರಂಥಗಳು ಸಂಗ್ರಹವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯ ಡಿ.ಲಿಟ್., ಡಿ.ಎಸ್‌ಸಿ., ಡಿ.ಇಡಿ., ಡಿ.ಇ., ಪಿಎಚ್.ಡಿ.ಎಂ.ಫಿಲ್–ಈ ಡಾಕ್ಟರೇಟ್ ಪದವಿಗಳನ್ನೂ ಎಂ.ಎ., ಎಂ.ಎಸ್‌ಸಿ., ಎಂ.ಇಡಿ., ಎಂ.ಪಿ.ಇಡಿ., ಎಂ.ಎಸ್.ಡಬ್ಲ್ಯು., ಎಂ.ಎಫ್. ಎ.ಬಿ.ಎಂ., ಎಂ.ಕಾಂ., ಎಂ.ಮ್ಯೂಸಿಕ್., ಎಂ.ಎಲ್., ಎಂ.ಬಿ.ಎ., ಎಂ.ಸಿ.ಎ., ಎಂ.ಟೆಕ್, ಎಲ್‌ಎಲ್.ಎಂ.–ಈ ಮಾಸ್ಟರ್ ಪದವಿಗಳನ್ನೂ ಬಿ.ಎ., ಬಿ.ಎಸ್‌ಸಿ., ಬಿ.ಐ.ಎಸ್. (ಲಿಬ್.,) ಬಿ.ಮ್ಯೂಸಿಕ್., ಬಿ.ಕಾಂ., ಬಿ.ಬಿ.ಎಂ. ಮುಂತಾದ ಬ್ಯಾಚಲರ್ ಪದವಿಗಳನ್ನೂ, ವಿದೇಶಿಭಾಷೆ, ಮುದ್ರಣ, ಭಾಷಾಂತರ, ವಿಜ್ಞಾನ ಮುಂತಾದ ವಿಷಯಗಳಲ್ಲಿ ಡಿಪ್ಲೊಮಗಳನ್ನೂ ನೀಡುತ್ತಿದೆ. ಇತ್ತೀಚೆಗೆ ಪಿಯುಸಿ ಅನಂತರದ ಐದುವರ್ಷಗಳ ಎಂ.ಎಸ್‌ಸಿ. ಇಂಜೆಸ್ಟೇಟೆಡ್ ಪದವಿಯನ್ನು ವಿಜ್ಞಾನ ವಿಷಯಗಳಲ್ಲಿ (ಭೌತವಿಜ್ಞಾನ, ರಸಾಯನ ವಿಜ್ಞಾನ, ಸಸ್ಯಜೀವವಿಜ್ಞಾನ) ನೀಡುತ್ತಿದೆ.

ಬೇರೆ ಬೇರೆ ಅಂಗರಚನೆ, ಆಡಳಿತ ವ್ಯವಸ್ಥೆ, ಕಾನೂನು ಪದ್ಧತಿ ಮುಂತಾದವುಗಳನ್ನು ಹೊಂದಿದ್ದ ಕರ್ನಾಟಕದ ಮೂರು ಸಾಮಾನ್ಯ ವಿಶ್ವವಿದ್ಯಾನಿಲಯಗಳಿಗೂ ಅನ್ವಯಿಸುವಂತೆ ಕರ್ನಾಟಕದ ವಿಶ್ವವಿದ್ಯಾ ನಿಲಯಗಳ ವ್ಯಾಪಕ ರೀತಿಯ ಅಧಿನಿಯಮವು ರಚನೆಯಾಯಿತು. ಇದರ ಪ್ರಕಾರ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿದ್ದ ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು–ಈ ಜಿಲ್ಲೆಗಳ ಕಾಲೇಜುಗಳು ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿಹೋದವು.

**ವಜ್ರಮಹೋತ್ಸವ:** ತೊಂಬತ್ತು ವರ್ಷಗಳ ಫಲಪ್ರದ ಸೇವೆಯನ್ನು ಸಲ್ಲಿಸಿ ಭಾರತದ ಖ್ಯಾತ ವಿದ್ಯಾಸಂಸ್ಥೆಯೆಂದು ಹೆಸರುಗೊಂಡಿರುವ ಮೈಸೂರು ವಿಶ್ವವಿದ್ಯಾನಿಲಯ 1976ರಲ್ಲಿ ತನ್ನ ವಜ್ರಮಹೋತ್ಸವವನ್ನು ಆಚರಿಸಿಕೊಂಡಿತು. ಅನಂತರ ಸುವರ್ಣಮಹೋತ್ಸವನ್ನೂ ಅಮೃತ ಮಹೋತ್ಸವನ್ನೂ ಆಚರಿಸಿತು. ಕೇವಲ ಎರಡು ಕಾಲೇಜುಗಳಿಂದ ಆರಂಭವಾದ ವಿಶ್ವವಿದ್ಯಾನಿಲಯ ಈಗ 147 ಕಾಲೇಜುಗಳನ್ನು ಹೊಂದಿದೆ. ಇದು ತನಕ ಈ ವಿಶ್ವವಿದ್ಯಾನಿಲಯದಿಂದ ಲಕ್ಷಾಂತರಮಂದಿ ಸ್ನಾತಕಪೂರ್ವ ಪದವೀಧರರು, ಸ್ನಾತಕೋತ್ತರ ಪದವೀಧರರು ರಾಷ್ಟ್ರದ ಹಾಗೂ ಪ್ರಪಂಚದ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸಿ ತಮ್ಮ ವಿದ್ಯಾಪೀಠದ ಕೀರ್ತಿಪ್ರತಿಷ್ಠೆಗಳನ್ನು ಎತ್ತಿ ಹಿಡಿದಿದ್ದಾರೆ.

ವಜ್ರಮಹೋತ್ಸವದ ಸವಿ ನೆನಪಿಗಾಗಿ ವಿಶ್ವವಿದ್ಯಾನಿಲಯ ನಾಲ್ಕು ನೂತನ ಯೋಜನೆಗಳನ್ನು ರೂಪಿಸಿಕೊಂಡಿತ್ತು. ಮೊದಲನೆಯದಾಗಿ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ 100 ಗ್ರಾಮಗಳನ್ನು ದತ್ತು ತೆಗೆದುಕೊಂಡು ಅಲ್ಲಿನ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ಭರಣಿ ಯೋಜನೆಯನ್ನು ಕೈಗೊಂಡಿತು. ಎರಡನೆಯದಾಗಿ ಈ ವಿದ್ಯಾ

ಗಾಂಧಿ ಭವನ, ಮಾನಸಗಂಗೋತ್ರಿ

ಸಂಸ್ಥೆಯ ಉಗಮಕ್ಕೆ ಕಾರಣರಾದ ನಾಲ್ವಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿ ಕಲಾ ಮತ್ತು ಮಾನವಿಕ ಶಾಸ್ತ್ರಗಳ ವಿಶಿಷ್ಟ ಅಧ್ಯಯನ ಪೀಠ ಮತ್ತು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ತಾಂತ್ರಿಕ ವಿಜ್ಞಾನದ ವಿಶಿಷ್ಟ ಅಧ್ಯಯನ ಪೀಠವನ್ನು ಆರಂಭಿಸಿದೆ. ಮೂರನೆಯದಾಗಿ ವಜ್ರಮಹೋತ್ಸವದ ನೆನಪಿಗಾಗಿ ಖ್ಯಾತ ವಿದ್ವಾಂಸರಿಂದ ಉಪನ್ಯಾಸಮಾಲೆ ಯನ್ನು ಆರಂಭಿಸಲಾಗಿದೆ. ನಾಲ್ಕನೆಯದಾಗಿ ಆರ್ಥಿಕ ಅಡಚಣೆಯಿಂದಾಗಿ ವಿದೇಶಗಳಿಗೆ ಉನ್ನತ ಶಿಕ್ಷಣಕ್ಕಾಗಿ ಹೋಗಲಾರದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೆರವು ನೀಡಲು ವಜ್ರಮಹೋತ್ಸವ ನಿಧಿಯಿಂದ ಸಹಾಯ ದೊರಕಿಸುವ ಕಾರ್ಯವನ್ನು ಕೈಗೊಂಡಿದೆ.

ಮೇಲಿನ ಯೋಜನೆಗಳ ಜೊತೆಗೆ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪುರಸಭೆಯ ಈಜು ಕೊಳವನ್ನು ವಹಿಸಿಕೊಂಡು ನಿರ್ವಹಿಸುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯದ ಆರಂಭದಿಂದಲೂ ಖ್ಯಾತ ವಿದ್ವನ್ಮಣಿಗಳು ಇದರ ಕುಲಪತಿಯ ಪೀಠವನ್ನು ಅಲಂಕರಿಸಿ ವಿಶ್ವವಿದ್ಯಾನಿಲಯದ ಕೀರ್ತಿಪ್ರತಿಷ್ಠೆಗೆ ಕಾರಣರಾಗಿದ್ದಾರೆ. ಅವರುಗಳೆಂದರೆ: ಎಚ್.ವಿ.ನಂಜುಂಡಯ್ಯ (1916–20), ಬ್ರಜೇಂದ್ರನಾಥ್ ಸೀಲ್ (1921–29), ಇ.ಸಿ.ಮೆಟ್‌ಕಾಫ್ (1930–37); ಎನ್.ಎಸ್.ಸುಬ್ಬರಾವ್ (1937–42); ಇ.ಜಿ.ಮೆಕಲ್ ಪೈನ್ (1942–44); ಟಿ.ಸಿಂಗಾರವೇಲು ಮೊದಲಿಯಾರ್ (1944–46); ಎಂ.ಸುಲ್ತಾನ ಮೊಹಿಯುದ್ದೀನ್ (1946–48); ಬಿ.ಎಲ್. ಮಂಜುನಾಥ್ (1950–55); ವಿ.ಎಲ್.ಡಿಸೌಜಾ (1954–56); ಕೆ.ವಿ.ಪುಟ್ಟಪ್ಪ (1956–60); ಎನ್.ಎ.ನಿಕ್ಕಮ್ (1960–62); ಕೆ.ಎಂ.ಫಣಿಕ್ಕರ್ (1963–64); ಕೆ.ಎಲ್.ಶ್ರೀಮಾಲಿ (1964–69); ದೇ.ಜವರೇಗೌಡ (1969–75); ಡಿ.ವಿ. ಅರಸ್ (1975–79); ಕೆ.ಎಸ್.ಹೆಗಡೆ (1979–85), ವೈ.ಪಿ.ರುದ್ರಪ್ಪ (1985–88), ಸೆಲ್ವಿದಾಸ್(1988–91), ಎಂ. ಮಾದಯ್ಯ (1991–97), ಎಸ್.ಎನ್.ಹೆಗಡೆ (1997–2003). ಈಗಿನ ಕುಲಪತಿ ಜೆ. ಶಶಿಧರಪ್ರಸಾದ್ (2003ರ ಸೆಪ್ಟೆಂಬರ್‌ನಿಂದ). **(ಎನ್.ಎಸ್.ವಿ.)**

**ಮೈಸೂರು ಸದಾಶಿವರಾಯ:** ಕರ್ನಾಟಕ ಸಂಗೀತ ಪ್ರಪಂಚದಲ್ಲಿ ಮೈಸೂರು ಒಂದು ವಿಶಿಷ್ಟವಾದ ಸ್ಥಾನವನ್ನು ಗಳಿಸಿಕೊಟ್ಟ 19ನೆಯ ಶತಮಾನದ ಪ್ರಮುಖ ವಾಗ್ಗೇಯಕಾರರು. ಆಂಧ್ರಪ್ರದೇಶದ ಆರ್ಕಾಟ್ ಜಿಲ್ಲೆಯವರಾದ ಇವರು ತಮ್ಮ 80ನೆಯ ವಯಸ್ಸಿನಲ್ಲಿ ಮೈಸೂರಿಗೆ ಬಂದು ನೆಲಸಿ, ತಮ್ಮ ವಿದ್ಯಾಪ್ರತಿಭೆ ಪಾಂಡಿತ್ಯಗಳಿಂದ ಆಗಿನ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಗೌರವಕ್ಕೆ ಪಾತ್ರರಾದರು. ತ್ಯಾಗರಾಜರ ಶಿಷ್ಯರಾದ ವಾಲಾಜಪೇಟೆ ವೆಂಕಟರಮಣ ಭಾಗವತರು ಇವರ ಸಂಗೀತ ಗುರುಗಳು. ಒಮ್ಮೆ ತಮ್ಮ ಗುರುಗಳ ಮನೆಗೆ ತ್ಯಾಗರಾಜರು ಬಂದಿದ್ದಾಗ ಸದಾಶಿವರಾಯರು ತ್ಯಾಗರಾಜಸ್ವಾಮಿ ವೆಡಲಿನ ಎಂಬ ಕೃತಿಯನ್ನು ತೋಡಿ ರಾಗದಲ್ಲಿ ರಚಿಸಿ, ಅವರ ಸಮ್ಮುಖದಲ್ಲಿ ಹಾಡಿ ಅವರ ಆಶೀರ್ವಾದವನ್ನು ಪಡೆದರು. ಆಕರ್ಷಕವಾದ ವ್ಯಕ್ತಿತ್ವವುಳ್ಳವರೂ ತೇಜಸ್ವಿಗಳೂ ಆಗಿದ್ದ ರಾಯರು ತಮ್ಮ ಪಾಂಡಿತ್ಯಕ್ಕೆ ತಕ್ಕ ಠೀವಿಯನ್ನೂ ಹೊಂದಿದ್ದರು. ನರಸಿಂಹದೇವರ ಉಪಾಸಕರಾಗಿದ್ದ ಇವರು ಕಮಲಾ ಮನೋಹರಿ ರಾಗದಲ್ಲಿ ನರಸಿಂಹುಡು ದಯಿಂಚೆನು ಎಂಬ ಕೃತಿಯನ್ನು ರಚಿಸಿ ಭಕ್ತಿಪೂರ್ವಕವಾಗಿ ಹಾಡುತ್ತಿದ್ದರು.

ಸದಾಶಿವರಾಯರ ರಚನಾಶೈಲಿ ಪಾಂಡಿತ್ಯಪೂರ್ಣವಾದುದು. ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿತವಾಗಿರುವ ಇವರ ಕೃತಿಗಳು ಸಂಗೀತ, ಸಾಹಿತ್ಯ ಹಾಗೂ ರಸಭಾವಗಳ ದೃಷ್ಟಿಯಿಂದ ಶ್ರೇಷ್ಠವಾದುವೆಂದು ಪರಿಗಣಿಸಲ್ಪಟ್ಟಿವೆ. ಸದಾಶಿವ ಎಂಬ ಅಂಕಿತದಲ್ಲಿ ಇವರು ಪದವರ್ಣಗಳು, ಕೃತಿಗಳು ಮತ್ತು ತಿಲ್ಲಾನಗಳನ್ನು ರಚಿಸಿದ್ದಾರೆ. ಇವರದು ಗಂಡುಶೈಲಿಯ ಗಾಯನ. ಇವರ ಕೃತಿಗಳನ್ನು ಹಾಡಲು ಪ್ರೌಢವಾದ ಜ್ಞಾನ ಮತ್ತು ಕಠಿಣ ಅಭ್ಯಾಸ ಆವಶ್ಯಕ.

ಮೈಸೂರಿನಲ್ಲಿ ರಾಮನವಮಿ ಉತ್ಸವವನ್ನು ಪ್ರಾರಂಭಿಸಿ ಬಹಳ ವಿಜೃಂಭಣೆಯಿಂದ ನಡೆಸುತ್ತದ್ದ ಸದಾಶಿವರಾಯರು ದೈವಭಕ್ತರೂ ಉದಾರಿಗಳೂ ಆಗಿದ್ದರು. ಇವರ ಶಿಷ್ಯರಾದ ವೀಣೆ ಸುಬ್ಬಣ್ಣನವರು ಆಗಿನ ಕಾಲಕ್ಕೆ ತಮ್ಮ ಗುರುಗಳಿಗೆ 5 ಸಹಸ್ರ ರೂಪಾಯಿಗಳನ್ನೂ ಮತ್ತು ಶಾಲು ಜೋಡಿಯನ್ನೂ ಗುರುದಕ್ಷಿಣೆಯಾಗಿ ಅರ್ಪಿಸಿ ಗೌರವಿಸಿದ್ದರು. **(ಆರ್.ಎನ್.ಡಿ)**

**ಮೈಸೂರು ಸೀತಾರಾಮಶಾಸ್ತ್ರೀ:** 1868–1933. ಸಂಸ್ಕೃತ ಮತ್ತು ಕನ್ನಡದಲ್ಲಿ ಪಂಡಿತರಾಗಿದ್ದ ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರು. ಹಳ್ಳದಕೇರಿ ಸೀತಾರಾಮಶಾಸ್ತ್ರೀಗಳೆಂದೂ ಪ್ರಸಿದ್ಧರಾಗಿದ್ದ ಇವರು ಮೈಸೂರು ಹಳ್ಳದಕೇರಿಯಲ್ಲಿ 1868 ಅಕ್ಟೋಬರ್ 26ರಂದು ಜನಿಸಿದರು. ಕತ್ತವಾಡಿಪುರ ಅಗ್ರಹಾರದ ಪಂಡಿತ ಚಂದ್ರಶೇಖರಶಾಸ್ತ್ರಿಗಳಲ್ಲಿ ಸಂಸ್ಕೃತ ಮತ್ತು ಕನ್ನಡ ವ್ಯಾಸಂಗವನ್ನು ಮಾಡಿದರು. ಮೈಸೂರು ಸದ್ವಿದ್ಯಾಪಾಠಶಾಲೆಯಲ್ಲಿ ಉಪಾಧ್ಯಾಯರಾಗಿ ವೃತ್ತಿಜೀವನವನ್ನು ಆರಂಭಿಸಿದ ಇವರು ಅನಂತರ ಮೈಸೂರು ಟ್ರೈನಿಂಗ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ಕೆಲಸ ಮಾಡಿ 1929ರಲ್ಲಿ ನಿವೃತ್ತರಾದರು.

ಇವರು ಸಂಸ್ಕೃತದಿಂದ ಅನೇಕ ಗ್ರಂಥಗಳನ್ನು ಕನ್ನಡಕ್ಕೆ ತಂದಿದ್ದಾರೆ. ಭಾಸನ ಪ್ರತಿಮಾ ನಾಟಕ ಇವರ ಮೊದಲ ಅನುವಾದ ಕೃತಿ. ಹೃದ್ಯವಾದ ಕಂದವೃತ್ತಗಳಿಂದ ಕೂಡಿರುವ ಈ ಕೃತಿ ಈಗಲೂ ಅಧ್ಯಯನ ಯೋಗ್ಯವಾಗಿದೆ. ವೇಣೀಸಂಹಾರ ನಾಟಕವನ್ನು ಪೂರ್ಣವಾಗಿ ಹಳಗನ್ನಡ ಗದ್ಯ ಪದ್ಯಗಳಲ್ಲಿ ಕನ್ನಡಿಸಿದ್ದಾರೆ. ಈ ಕೃತಿ ಹಳಗನ್ನಡ ಛಂದೋಬಂಧಗಳ ಹಾಗೂ ಭಾಷಾ ಪ್ರಯೋಗಗಳ ಮೇಲೆ ಇವರಿಗಿದ್ದ ಪ್ರಭುತ್ವಕ್ಕೆ ಸಾಕ್ಷಿಯಾಗಿದೆ. ಇಂದ್ರಕೀಲವಿಜಯ, ಕರ್ಣಾಟಕ ಮಹೀಶೂರ ದೇಶಾಭ್ಯುದಯ, ಕರ್ಣಾಟ ಸ್ನುಷಾವಿಜಯ, ಕರ್ಣಾಟ ವಿಕ್ರಮಾರ್ಕಚರಿತಂ, ಕುಚೇಲೋಪಾಖ್ಯಾನ, ಕೃಷ್ಣಸಂಧಾನ, ಕೃಷ್ಣರಾಜ ವಂಶಾವಳಿ ವಿಜಯ, ಗೋಪಿಕಾಗೀತೆ, ಗಂಗಾ ಶಂತನು ವಿಲಾಸ, ಚತುರ್ದಶ ಮಂಜರಿ, ತರಂಗಿಣಿ, ನವರತ್ನದರ್ಪಣ, ಪದ್ಯಕದಂಬ, ಪ್ರಶ್ನೋತ್ತರ ಭಗವದ್ಗೀತ, ಪಾರ್ವತೀ ಪರಿಣಯ ನಾಟಕ, ಪಂಚತಂತ್ರ, ಭಕ್ತಿವಿಜಯ, ಬಾಲ ರಾಮಾಯಣ, ಭಜಗೋವಿಂದ, ಲಲಿತಾಸಹಸ್ರನಾಮ ಚಂದ್ರಿಕೆ, ಸುಧಾಮ ಚರಿತ್ರೆ, ಹಾಲಾಸ್ಯ ಮಹಾತ್ಮೆ–ಇವು ಇವರ ಇತರ ಕೃತಿಗಳು. ಸಂಸ್ಕೃತದಲ್ಲಿ ಹತ್ತಾರು ಕಾವ್ಯ ಸ್ತೋತ್ರಾದಿಗಳನ್ನೂ ಇವರು ರಚಿಸಿದ್ದಾರೆ. ಇವರು 1933 ಡಿಸೆಂಬರ್ 20ರಂದು ನಿಧನರಾದರು.

**(ಕೆ.ಕೆ.)**

**ಮೊದಲಕಲ್ಲು ಶೇಷದಾಸ:** ಸು. 1800–85. ಹೆಸರಾಂತ ಹರಿದಾಸರು. ಗದ್ವಾಲಿಗೆ ಸು. 8 ಕಿಮೀ ದೂರದಲ್ಲಿರುವ ದರೂರು ಇವರ ಜನ್ಮ ಸ್ಥಳ. ಗ್ರಾಮದ ಕುಲಕರಣಿಯ ವೃತ್ತಿಯಲ್ಲಿ ನಿರತರಾಗಿದ್ದ ಇವರನ್ನು ಶೇಷಪ್ಪ ಎಂದು ಕರೆಯುತ್ತಿದ್ದರು. ತುಂಗಭದ್ರಾ–ಕೃಷ್ಣಾ ನದಿಗಳ ಮಧ್ಯದಲ್ಲಿರುವ ಮೊದಲಕಲ್ಲಿಗೆ ಹೋಗಿ ತಪಶ್ಚರ್ಯೆ ಮಾಡಿ ಕೀರ್ತನೆ ಗಳನ್ನು ರಚಿಸಿ ಹಾಡಿದ್ದರಿಂದ ಮೊದಲಕಲ್ಲು ಶೇಷದಾಸರೆಂದು ಪ್ರಸಿದ್ಧರಾ ದರು. ಗದ್ವಾಲ ಸಂಸ್ಥಾನವನ್ನು ಅಂದು ಆಳುತ್ತಿದ್ದ ಸೋಮಭೂಪಾಲ ಇವರ ಪ್ರಸಿದ್ಧಿಯನ್ನು ಕೇಳಿ ಸಹಿಸಲಾರದೆ ಸಕಾಲದಲ್ಲಿ ಸರ್ಕಾರಕ್ಕೆ ಹಣ ಕಟ್ಟಲಿಲ್ಲವೆಂದು ಇವರ ಮೇಲೆ ದೂರು ಹೊರಿಸಿ ರಾಜಸಭೆಯಲ್ಲಿ ಅವಮಾನಗೊಳಿಸಿದ. ಶೇಷಪ್ಪನವರು ದರೂರನ್ನು ಬಿಟ್ಟು ಚಿಂತಲರೇವು ಎಂಬಲ್ಲಿ ವ್ಯಾಸರಾಯರಿಂದ ಪ್ರತಿಷ್ಠಿತವಾದ ಮಾರುತಿರಾಯನ ಸೇವೆಯಲ್ಲಿ ತೊಡಗಿ, ಅಂದಿನಿಂದ ಹರಿದಾಸರಾಗಿ ಕಾಲಕಳೆದರು. ಗದ್ವಾಲಿನಲ್ಲಿ ಪಾರ್ಥಸಾರಥಿಯ ದೇವಾಲಯ ಕಟ್ಟಿದರು. ವಿದ್ವಜ್ಜನರಿಗೆ ಆತಿಥ್ಯ ನೀಡುತ್ತಿದ್ದರು. ಇವರ ಆತಿಥ್ಯವನ್ನು ಸುರಪುರದ ಆನಂದದಾಸರೂ ಯಳಮೇಲೀ ಹಯಗ್ರೀವಾಚಾರ್ಯರೂ ಸ್ವೀಕರಿಸಿದ್ದರು. ಚೀಕಲಪರವಿಯಲ್ಲಿ

ಇವರು ಕೆಲವು ದಿನಗಳನ್ನು ಅಶ್ವತ್ಥನರಸಿಂಹದೇವರ ಸೇವೆಯಲ್ಲಿ ಕಳೆದರು. ಅನಂತರ ಚಿಪ್ಪಗಿಯಲ್ಲಿ ಕೆಲದಿನವಿದ್ದು ಮತ್ತೆ ಚಿಂತಲರೇವಿಗೆ ಬಂದರು. ಅಷ್ಟರಲ್ಲಾಗಲೇ ಇವರ ಖ್ಯಾತಿ ಎಲ್ಲೆಡೆಯೂ ಹರಡಿತ್ತು. ಕೆಲದಿನ ಕಳೆದ ಅನಂತರ ಮೊದಲಕಲ್ಲಿಗೆ ವಾಪಸಾದರು. ನಿರಂತರವಾಗಿ ಸುಮಾರು ಇಪ್ಪತ್ತು ವರ್ಷಗಳನ್ನು ಭಗವತ್ ಸ್ಮರಣೆಯಲ್ಲಿ ಕಳೆದು ಗದ್ವಾಲಿನಲ್ಲಿ ನಿಧನರಾದರು. ಇವರ ದೇಹಸಂಸ್ಕಾರ ಮಾಡಿದ ಸ್ಥಳದಲ್ಲಿ ಒಂದು ಬೃಂದಾವನವಿದೆ. ವೈಶಾಖ ಶುದ್ಧ ಅಷ್ಟಮಿಯಂದು ಪ್ರತಿವರ್ಷ ದಾಸರ ಪುಣ್ಯತಿಥಿ ನಡೆಯುತ್ತದೆ.

ಇವರು ಗುರುವಿಜಯವಿಠಲ ಎಂಬ ಅಂಕಿತದಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ. 43 ಸುಳಾದಿಗಳು, ಅನೇಕ ದೇವರನಾಮಗಳು, ಉಗಾಭೋಗಗಳು ದೊರೆತಿವೆ. 18 ತಾಳಗಳಿರುವ ಒಂದು ದೊಡ್ಡ ಸುಳಾದಿಯೂ ಇದೆ. ಭಕ್ತಿಯ ಬಗ್ಗೆ ಇವರಿಗೆ ವಿಶೇಷ ಆದರಣೆಯಿರುವುದು ಇವರ ಕೀರ್ತನೆಗಳಲ್ಲಿ ಕಂಡುಬರುತ್ತದೆ. ಕೆಲವಾರು ಸುಳಾದಿಗಳಲ್ಲಿ ಭಕ್ತರ ವಿಷಯವಾಗಿ ಹೇಳಿದ್ದಾರೆ. ಸಮಾಜದ ನಡತೆಯನ್ನು ಕುರಿತು ಹೇಳುವಾಗ ಒಳಗೊಂದು ಹೊರಗೊಂದು ನುಡಿವ ಜನರನ್ನು ಕುರಿತು ವಿಡಂಬಿಸಿದ್ದಾರೆ. ಆಧ್ಯಾತ್ಮಿಕ ವಿವರಣೆಯನ್ನೊಳಗೊಂಡ ಸುಳಾದಿ ದೊಡ್ಡದು. (ಎಚ್.ಆರ್.ಡಿ.)

**ಮೊಸಳೆ:** ಹಾಸನ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ಹಾಸನ–ಹೊಳೆನರಸೀಪುರ ಮಾರ್ಗದಲ್ಲಿ ಹಾಸನಕ್ಕೆ ದಕ್ಷಿಣದಲ್ಲಿ 13 ಕಿಮೀ ದೂರದಲ್ಲಿದೆ. ಜನಸಂಖ್ಯೆ 717. ಇಲ್ಲಿ ನಾಗೇಶ್ವರ, ಚನ್ನಕೇಶವ ಎಂಬ ಎರಡು ಪ್ರಸಿದ್ಧ ಹೊಯ್ಸಳ ದೇವಾಲಯಗಳಿವೆ. ಇವು ಒಂದೇ ರೀತಿಯ ತಳವಿನ್ಯಾಸ, ಗರ್ಭಗುಡಿ, ಸುಕನಾಸಿ, ಮಂಟಪ ಮತ್ತು ಶಿಖರಗಳನ್ನು ಹೊಂದಿರುವ ಅವಳಿದೇವಾಲಯಗಳು. ಬಳಪದಕಲ್ಲಿನಿಂದ ರಚಿತವಾಗಿರುವ ಈ ದೇವಾಲಯಗಳನ್ನು ಶೈಲಿಯ ದೃಷ್ಟಿಯಿಂದ ನೋಡಿದರೆ



ಚನ್ನಕೇಶವ ದೇವಾಲಯ

ಇವೆರಡೂ ನುಗ್ಗೇಹಳ್ಳಿ ಮತ್ತು ಸೋಮನಾಥಪುರ ದೇವಾಲಯಗಳ ಸಮಕಾಲೀನವೆಂದೂ ಬಹುಶಃ 1250ರಲ್ಲಿ ನಿರ್ಮಾಣವಾಗಿರಬೇಕೆಂದೂ ಊಹಿಸಬಹುದು.

ನಾಗೇಶ್ವರ ದೇವಾಲಯ ಜಗತಿಯ ಮೇಲೆ ನಿರ್ಮಿತವಾಗಿದೆ. ಕೆಳಗಿನಿಂದ ನಾಲ್ಕೂವರೆ ಅಡಿ ಎತ್ತರದವರೆಗೆ ಐದು ಪಟ್ಟಿಕೆಗಳಿವೆ. ಮೇಲಿನ ಎರಡು ಪಟ್ಟಿಕೆಗಳಲ್ಲಿನ ಕೀರ್ತಿಮುಖ, ಮಕರ ಮತ್ತು ಕಲಶಗಳನ್ನು ಪೂರ್ಣ ಮಾಡಿಲ್ಲ. ಈ ಪಟ್ಟಿಕೆಗಳ ಮೇಲೆ ವಿವಿಧ ಸುಂದರ ಶಿಲ್ಪಗಳಿವೆ. ದುರ್ಗಾ, ಶಕ್ತಿ, ಮಹಾಕಂಠ, ಸದಾಶಿವ, ಮಾಹೇಶ್ವರಿ ಮುಂತಾದ ಶಿಲ್ಪಗಳು ಇಲ್ಲಿ ವಿಶೇಷವಾಗಿವೆ. ನಾಲ್ಕು ಹಂತದಲ್ಲಿರುವ ಶಿಖರ ಚೌಕಾಕೃತಿಯಲ್ಲಿದ್ದು ತುದಿಯಲ್ಲಿರುವ ಕಲಶ ಸುಂದರವಾಗಿದೆ. ಶಿಖರದಲ್ಲಿಯೂ ಶಿವನ ವಿವಿಧ ರೂಪದ ಶಿಲ್ಪಗಳಿವೆ. ಒಟ್ಟು ಈ ದೇವಾಲಯದಲ್ಲಿ ಒಂಬತ್ತು ಭುವನೇಶ್ವರಿಗಳಿವೆ. ಸುಕನಾಸಿಯಲ್ಲಿ ಜಾಲಂಧ್ರಗಳಿವೆ. ಇಲ್ಲಿರುವ ಮನ್ಮಥ–ರತಿಯರ ಶಿಲ್ಪ ಗಮನಾರ್ಹವಾದುದು. ಗರ್ಭಗೃಹದಲ್ಲಿ ಸುಂದರ ಲಿಂಗವಿದೆ.

ಚನ್ನಕೇಶವ ದೇವಾಲಯದಲ್ಲಿ ವೈಷ್ಣವ ಶಿಲ್ಪಗಳೇ ವಿಶೇಷ. ಪಟ್ಟಿಕೆಗಳ ಮೇಲಿನ ವಿಗ್ರಹಗಳಲ್ಲಿ ಗರುಡ, ಕೇಶವ, ವೇಣುಗೋಪಾಲ, ಗೋವರ್ಧನಧಾರಿ, ಅನಿರುದ್ಧ, ಶ್ರೀಧರ–ಬಲಿ–ವಾಮನ, ಅಚ್ಯುತ, ಲಕ್ಷ್ಮೀನಾರಾಯಣ, ಲಕ್ಷ್ಮೀ, ಸರಸ್ವತಿ ಮುಂತಾದ ಶಿಲ್ಪಗಳಿವೆ. ಇಲ್ಲಿ ಈ ಸುಂದರವಾದ ಒಂಬತ್ತು ಭುವನೇಶ್ವರಿಗಳಿವೆ. ಸುಕನಾಸಿಯ ಭುವನೇಶ್ವರಿಯಲ್ಲಿ ಉಗ್ರನರಸಿಂಹ, ಗರ್ಭಗುಡಿಯಲ್ಲಿ ಆರು ಅಡಿ ಎತ್ತರದ ಕೇಶವ ವಿಗ್ರಹವಿದೆ. ಹಿಂಭಾಗದ ತೋರಣದಲ್ಲಿ ದಶಾವತಾರ ಶಿಲ್ಪಗಳಿವೆ.

ಎರಡು ದೇವಾಲಯಗಳ ಗೋಪುರದ ಮುಂಭಾಗದಲ್ಲಿಯೂ ಹುಲಿಯೊಡನೆ ಹೋರಾಡುತ್ತಿರುವ ಸಳನ ಸುಂದರ ಕೆತ್ತನೆ ಇದೆ. (ಎ.ವಿ.ಎನ್.)

**ಮೊಹರಂ ಹಾಡುಗಳು:** ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಮೊಹರಂ ಹಬ್ಬದಲ್ಲಿ ಶಾಂತಿ ಹಾಗೂ ಧರ್ಮಕ್ಕಾಗಿ ತಮ್ಮನ್ನೇ ತಾವು ಬಲಿ ಕೊಟ್ಟುಕೊಂಡ ಹಜರತ್ ಹಸನ್–ಹುಸೇನರ ವೀರಚರಿತ್ರೆಯನ್ನೊಳಗೊಂಡ ಹಾಡುಗಳನ್ನು. ಹಾಡುವುದರಿಂದ ಈ ಹೆಸರು ಬಂದಿದೆ. ಇವುಗಳನ್ನು ಅಲಾವಿ ಪದಗಳೆಂದೂ ಕರ್ಬಲ ಪದಗಳೆಂದೂ ಕರೆಯುತ್ತಾರೆ.

ಮೊಹರಂ ಹಬ್ಬದಲ್ಲಿಯೇ ಹಾಡಲಾಗುವ ಈ ಪದಗಳಿಗೆ ಈ ಹಬ್ಬದ ಆಚರಣೆಯ ಕಥೆಯೇ ಹಿನ್ನೆಲೆ. ಇಸ್ಲಾಂ ಧರ್ಮಸ್ಥಾಪಕರಾದ ಮಹಮ್ಮದ್ ಪೈಗಂಬರರ ತರುವಾಯ ನಾಲ್ಕು ಜನ ಕಲೀಫರು ಪೀಠವನ್ನೇರಿದರು. ಅವರಲ್ಲಿ ಹಜರತ್ ಅಲಿ ಅವರು ನಾಲ್ಕನೆಯವರು. ಹಜರತ್ ಅಲಿಯವರ ಜ್ಯೇಷ್ಠಪುತ್ರರಾದ ಹಜರತ್ ಹಸನ್ ಅವರ ಕಾಲದಲ್ಲಿ ಸಿರಿಯದ ಪ್ರಾಂತ್ಯಾಧಿಕಾರಿಯಾಗಿದ್ದ ಹಜರತ್ ಮುಆವಿಯಾ ಅವರ ಮಗ ಯಜೀದನೇ ಕಲೀಫ ಪದಕ್ಕೆ ಹಕ್ಕುದಾರನೆಂದು ಸಾರಿದಾಗ ಇವನ ಪ್ರಭುತ್ವವನ್ನು ಮನ್ನಿಸಲು ಜನ ನಿರಾಕರಿಸಿದರು. ಇದೇ ಮುಂದೆ ನಡೆದ ಕರ್ಬಲ ಕಾಳಗಕ್ಕೆ ನಾಂದಿಯಾಯಿತು. ಧರ್ಮರಕ್ಷಣೆಗಾಗಿ ಯಜೀದನ ಉದ್ಧಟತನವನ್ನು ವಿರೋಧಿಸಿ ಹುಸೇನರು ಜೀವನದ ಹಂಗುತೊರೆದು ಹೋರಾಡಿದರು. ಆದರೆ ಇವರದು ಸಾತ್ವಿಕ ಹೋರಾಟ. ಕಪಟವರಿಯದ ಹುಸೇನರನ್ನು ಯಜೀದನ ಕಡೆಯವರು ಮೋಸದಿಂದ ಕೊಂದರು. ಮೊಹರಂ ಇಂಥ ಒಂದು ದುರಂತ ಚರಿತ್ರೆಯ ಧಾರ್ಮಿಕ ಹಿನ್ನೆಲೆಯ ಸಂಕೇತವಾಗಿದೆ. ಇದು ಪರಂಪರೆಯಿಂದ ಮುಸ್ಲಿಮರದಾದರೂ ಆಚರಣೆಯಿಂದ ಸಾರ್ವಜನಿಕ ಹಬ್ಬವಾಗಿ ಬೆಳೆದಿದೆ. ಹಬ್ಬದ ದಿನ ಹಿಂದುಗಳೂ ಮುಸ್ಲಿಮರೂ ಕೂಡಿ ಯಾವ ಭೇದಭಾವವಿಲ್ಲದೆ ಮೇಳಗಳನ್ನು ರಚಿಸಿಕೊಂಡು ಕನ್ನಡದ ಹಾಡುಗಳನ್ನು ಹಾಡುತ್ತಾ ಕುಣಿಯುತ್ತ ಮನೆಯಿಂದ ಮನೆಗೆ, ಊರಿಂದೂರಿಗೆ ಸಂದೇಶಗಳನ್ನು ಸಾರುತ್ತ ಸಂಚರಿಸುವರು. ಒಂದು ಹಾಡು ಮುಗಿಯುತ್ತಲೇ ಮತ್ತೊಂದನ್ನು ಅಲ್ಲೇ ಸೃಷ್ಟಿಸಿ ಹಾಡಿ ತೋರಿಸುವ ಚತುರ ಹಾಡುಗಾರರೂ ಈ ಮೇಳಗಳಲ್ಲಿರುತ್ತಾರೆ. ಒಂದಕ್ಕಿಂತ ಹೆಚ್ಚು ಮೇಳಗಳು ಒಂದೆಡೆ ಸೇರಿದಾಗ ಹಾಡುಗಳ ಮೂಲಕವೇ ಅನೇಕ ವಿಷಯಗಳ ಮೇಲೆ ನಡೆಯುವ ವಾದವಿವಾದ ಕೇಳುವುದಕ್ಕೆ ಸೊಗಸಾಗಿರುತ್ತದೆ. ಆಡುಮಾತನ್ನೇ ಮೂಲ ಬಂಡವಾಳವಾಗಿಟ್ಟುಕೊಂಡು ರಚಿತವಾದ ಈ ಹಾಡುಗಳು ಸರಳವಾಗಿವೆ, ಸುಂದರವಾಗಿವೆ. ಇವುಗಳಲ್ಲಿ ಬೆಡಗಿನ ಮಾತನ್ನೂ ಪ್ರಾಸವಿನ್ಯಾಸಗಳನ್ನೂ ಪಾತ್ರಚಿತ್ರಣಗಳ ಸೊಗಸನ್ನೂ ಕಾಣಬಹುದು.

ಕರ್ಬಲ ಕಾಳಗದ ಅನೇಕ ಘಟನೆಗಳು ಇಲ್ಲಿ ಮನಮುಟ್ಟುವಂತೆ ವರ್ಣಿತವಾಗಿರುವುದುಂಟು. ಉದಾಹರಣೆಗೆ ಒಂದು ಪದ :

ಧರಮಕ ಸತ್ತವರಾ ಸಿಗತಾರ ಕೋಟಿಗೊಬ್ಬ ಜನರಾ

ಮುಸಲಮಾನ ಮಂದ್ಯಾಗ ದೊರೀತಾರ ಹುಸೀನ ಸಾಹೇಬರಾ –

ಎಂದು ಪ್ರಾರಂಭವಾಗಿ

ಯಜೀದನವತಾರಾ ನಡೆಸಿತೊ ಅಧಿಕಾರ ಭರಪೂರಾ

ನೋಡಲಾಗದ ಎದುರಾಗಿ ನಿಂತಾರೊ ಹಜರತ ಹುಸೇನರಾ

ಲಡಾಯಿ ತಯ್ಯಾರಾ ಆದಾರ ಒಂಟಿಮ್ಯಾಲೆ ಸ್ವಾರಾ

ಹೊಂಟ ನಿಂತಾರೊ ಕರ್ಬಲಾ ಭೂಮಿಗೆ ಬಂಧುಬಳಗ ಪೂರಾ

ಅರಣ್ಯದಾಗವರಾ ಕಾಣದ ಮೂರ ದಿವಸ ನೀರಾ

ಕುಡದಾರೊ ತಣ್ಣೀರಾ ಮಕ್ಕಳು ಹುಡುಗರು ಹೆಂಗಸರಾ

ಜಂಗ ಎದರ–ಬದರಾ ವೈರಿಯ ಮೋಸಕ ಜಯಕಾರಾ

ಶರಣು ಹೋಗದವರಾ ಸ್ವರ್ಗಕ್ಕೆ ಹೋದಾರೊ ಹಜರತರಾ

–ಹೀಗೆ ಮುಂದುವರಿಯುತ್ತದೆ. ಹಜರತ್ ಹುಸೇನರ ಪಕ್ಷದಲ್ಲಿದ್ದ ವೀರರೆಲ್ಲಾ ಯಜೀದನ ಕ್ರೂರ ಪಕ್ಷದವರಿಂದ ಹೋರಾಡಿ ಗತಪ್ರಾಣವಾಗಿದ್ದ ಸಮಯದಲ್ಲಿ ವೈರಿಗಳೊಡನೆ ಹೋರಾಡಲು ತಾನು ಹೋಗುವುದಾಗಿ ವೀರ ಕಾಶಿಮ ಹಟಮಾಡುತ್ತಾನೆ. ಆಗ ಅವನ ಕಕ್ಕ ಹಜರತ್ ಹುಸೇನರು ಮತ್ತು ಹಸೀನಾ ಬಾನೂ ಈ ಮೊದಲೇ ತೀರಿಹೋಗಿದ್ದ ಹಜರತ್ ಹಸನ್ ಅವರ ಬಯಕೆಯಂತೆ ತಮ್ಮ ಮಗಳಾದ ಸಕೀನಾ ಬಾನೂವನ್ನು ಕಾಶೀಮನಿಗಿತ್ತು ಕೂಡಲೇ ಲಗ್ನ ಮಾಡಿದರು. ಈ ಸಂದರ್ಭವನ್ನು ಕುರಿತ ಒಂದು ಮೊಹರಂ ಹಾಡು:

ರಣವೆ ಹಂದರ ಭಲ್ಲೆಯೇ ಕಠಾರಿ,

ರಣಗರ್ಜನೆಯೇ ವಾದ್ಯಘೋಷ ಭೇರಿ.

ಇನ್ನೂ ಹರಿಶಿನದ ಮೈ ಆರದಿರುವ ತನ್ನ ಪ್ರಿಯ ಮಡದಿಯ ಅನುಮತಿ ಕೇಳಿದಾಗ ಅವಳು

ನಮ್ಮನ ಬಿಟ್ಟ ಹೋಗತೀರಿ ಲಡಾಯಿಕ

ನೀವು ಬರುವುದು ಎಷ್ಟು ದಿನಕ

ಹೇಳಿರಿ ಈ ಕ್ಷಣಕ–ಎನ್ನುತ್ತಾಳೆ.

ಕಾಮಿನಿ ಯಾಕ ನೀ ಚಿಂತಿ ಮಾಡತೀ ಸುಮಕ

ಸಂತೋಷದಿಂದ ಇರಬೇಕ

ಅಲ್ಲಿ ನಮ್ಮ ಪಂಥ ಇರುವ ನಿರಕ

ಹೋಗಿ ಬರ್ತೀನಿ ಲಡಾಯಿಕ–ಎಂದು ಅವಳನ್ನು ಸಂತೈಸಿ ತಿರುಗಿ ಬರುವೆನೆಂದು ಆಶ್ವಾಸನೆ ಕೊಟ್ಟು ಹೋದ ವೀರಕಾಶಿಮ ಮರಳಿ ಬರಲೇ ಇಲ್ಲ. ವಿಷಯ ತಿಳಿದ ಸಕೀನಾ ಬಾನೂ

ಕಟ್ಟಿದ ಕರಿಮಣಿ ಚಟ್ಟನೆ ಹರದಾಳ

ಇಟ್ಟುಕೊಳ್ಳದೆದಕ–ಎಂದು ಹರಿದು ಹಾಕುತ್ತಾಳೆ ಈ ದುರಂತ ಸನ್ನಿವೇಶ ಕರುಳಿರಿಯುವಂತೆ ಚಿತ್ರಿತವಾಗಿದೆ.

ಹಜರತ್ ಹಸನ್ ಮತ್ತು ಹುಸೇನರ ಪವಿತ್ರ ಜೀವನದ ಅಮರ ಸಂದೇಶವನ್ನು ಸಾರುವುದು ಮೊಹರಂ ಹಾಡುಗಳ ಪ್ರಧಾನ ಉದ್ದೇಶ. ಹಾಡುಗಾರರ ಮೇಳಗಳು ಸಮವಸ್ತ್ರ ಧರಿಸಿ, ರಣಹಲಗೆ ಬಡಿಯುತ್ತ, ಹಾಡುತ್ತ ಬಂದರೂ ಅದರ ಹಿಂದೆ ದುರಂತದ ಛಾಯೆ ಅಡಗಿದ್ದು ತಮ್ಮ ಹಾಡುಗಳಿಗೆ ಬಣ್ಣ ಬರಲೆಂಬ ಉದ್ದೇಶದಿಂದ ನೃತ್ಯದ ಗತಿಯನ್ನು ಅಳವಡಿಸಿಕೊಂಡಿರಬೇಕೆಂದು ತೋರುತ್ತದೆ. ಬಹುಶಃ ಇದು ಕಾಲಕ್ರಮೇಣ ಬೆಳೆಯುತ್ತ ಬಂದಿರಬೇಕು. **(ಟಿ.ಎಸ್.ಆರ್.)**

**ಮೊಹರೆ ಹಣಮಂತರಾವ್:** 1892–1960. ಪ್ರಸಿದ್ಧ ಪತ್ರಿಕೋದ್ಯಮಿ, ಸ್ವಾತಂತ್ರ್ಯ ಹೋರಾಟಗಾರ, ಲೇಖಕರು. ಇವರು 1892 ನವೆಂಬರ್ 12ರಂದು ಬಿಜಾಪುರ ಜಿಲ್ಲೆಯ ದೇವರಹಿಪ್ಪರಗಿ ಗ್ರಾಮದಲ್ಲಿ ಜನಿಸಿದರು. ಮೊಹರೆ ರಾಘಣ್ಣನಾಯಕ ಮತ್ತು ಲಕ್ಷ್ಮೀಬಾಯಿ ಇವರ ತಂದೆ ತಾಯಂದಿರು. ಪೇಶ್ವೆಗಳ ಕಾಲದಲ್ಲಿ ಇವರ ಪೂರ್ವಜರು ಮೊಹರು ಹಾಕಿಕೊಡುವ ಕೆಲಸ ಮಾಡುತ್ತಿದ್ದುದರಿಂದ ಇವರ ಮನೆತನಕ್ಕೆ ಮೊಹರೆ ಎಂಬ ಹೆಸರು ಬಂತಂತೆ. ಇವರು ತಮ್ಮ ನಾಲ್ಕನೆಯ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡರು. ತಂದೆ ಸಾರ್ವಜನಿಕ ಸಂಘಸಂಸ್ಥೆಗಳಲ್ಲಿ ದುಡಿಯುತ್ತಿದ್ದುದರಿಂದ ಇವರಿಗೂ ಬಾಲ್ಯದಲ್ಲಿಯೇ ಸಾರ್ವಜನಿಕ ಕಾರ್ಯದಲ್ಲಿ ಒಲವು ಬೆಳೆಯಿತು.

ದೇವರಹಿಪ್ಪರಗಿ, ಬಾಗಲಕೋಟೆ, ವಿಜಾಪುರಗಳಲ್ಲಿ ಓದಿ, ಬೆಳಗಾಂವಿ ಕೇಂದ್ರದಿಂದ ಶಾಲಾ ಅಂತಿಮ ಪರೀಕ್ಷೆಯಲ್ಲಿ ಜಯಗಳಿಸಿದರು. ಇವರ ಪ್ರೀತಿಯ ಗುರುಗಳಾಗಿದ್ದ ಜಿ.ಕೆ. ಪುರಾಣಿಕರು ಕಾರವಾರಕ್ಕೆ ವರ್ಗವಾಗಿ

ಹೋದುದರಿಂದ ಇವರೂ ಅಲ್ಲಿಗೆ ಹೋಗಿ ಓದಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದರು (1913). ಅನಂತರ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ (1914–18) ವ್ಯಾಸಂಗ ಮಾಡಿ, ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯೆ ಮುಂದುವರಿಸುತ್ತಿದ್ದಾಗ (1921) ಮಹಾತ್ಮಾ ಗಾಂಧೀಜಿಯವರ ಅಸಹಕಾರ ಆಂದೋಲನದ ಕರೆಯ ಮೇರೆಗೆ ಕಾಲೇಜಿಗೆ ಶರಣು ಹೊಡೆದರು. ವಿಜಾಪುರಕ್ಕೆ ಹಿಂದಿರುಗಿ ದೇಶಪಾಂಡೆ ಜಯರಾಯರು ಸಂಪಾದಕರಾಗಿದ್ದ ಕರ್ನಾಟಕ ವೈಭವ ವಾರಪತ್ರಿಕೆಯಲ್ಲಿ ಉಪಸಂಪಾದಕರಾದರು. ಆ ಪತ್ರಿಕೆಯ ಸಂಪಾದಕರನ್ನು ಬ್ರಿಟಿಷರು ಬಂಧಿಸಿದ್ದರಿಂದ ಇವರೇ ಸಂಪಾದಕರಾದರು. ಇವರು ಬರೆದ ಕರ್ನಾಟಕದ ವೀರರೇ ಎಂಬ ಸಂಪಾದಕೀಯ ಲೇಖನ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗುವಂತೆ ಮಾಡಿತು. ಇವರಿಗೆ ಎರಡು ವರ್ಷ ಸಶ್ರಮ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ದಂಡ ವಿಧಿಸಿತು. ಇವರು ಕಾಲೇಜಿನಲ್ಲಿ ಓದುತ್ತಿದ್ದಾಗಲೇ (1920) ಕಲಬುರ್ಗಿ ಜಿಲ್ಲೆಯ ಸುರಪುರ ತಾಲ್ಲೂಕಿನ ಹನುಮಂತರಾವ್ ದೇಶಪಾಂಡೆಯವರ ಮಗಳು ರಂಗೂಬಾಯಿಯವರೊಡನೆ ವಿವಾಹವಾಯಿತು. 1925ರಲ್ಲಿ ಬಿಡುಗಡೆಯಾಗಿ ಬಂದ ಇವರು 'ಕರ್ನಾಟಕ ವೈಭವ'ದ ಸಂಪಾದಕರಾಗಿ ಮುಂದುವರಿದರು. ಲೋಕಲ್ ಬೋರ್ಡ್ ಮುನ್ಸಿಪಾಲಿಟಿಗಳ ಲಂಚಗುಳಿತನ ಮತ್ತು ಜಾತಿ ಪಕ್ಷಪಾತದ ವಿರುದ್ಧ ದನಿಯೆತ್ತಿದರು. ಸಾರ್ವಜನಿಕ ಜೀವನದಲ್ಲಿ ಪ್ರಮುಖ ವ್ಯಕ್ತಿಯೆನಿಸಿಕೊಂಡ ಇವರು 1928ರಲ್ಲಿ ಬಾಗಲಕೋಟೆಯಲ್ಲಿ ಕರ್ನಾಟಕ ಪತ್ರಿಕೋದ್ಯಮ ಸಂಘ ಸ್ಥಾಪಿಸಿ ಪ್ರಥಮ ಪರಿಷತ್ತು ನಡೆಸಿದರು.

1930ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕಾಗಿ ಇವರಿಗೆ ಒಂದು ವರ್ಷ ಶಿಕ್ಷೆ ಹಾಗೂ ಇನ್ನೂರೈವತ್ತು ರೂಪಾಯಿ. ದಂಡ ವಿಧಿಸಲಾಯಿತು. 1932ರಲ್ಲಿ ಕಾಂಗ್ರೆಸ್ ಅಕ್ರಮ ಸಂಸ್ಥೆ ಎಂದು ಬ್ರಿಟಿಷರು ಸಾರಿದಾಗ ಅದನ್ನು ಪ್ರತಿಭಟಿಸಿ ಬಾಗಲಕೋಟೆಯಲ್ಲಿ ಅಧಿವೇಶನ ನಡೆಸುವ ತಯಾರಿಯಲ್ಲಿದ್ದಾಗ ಬ್ರಿಟಿಷರಿಗೆ ಅದರ ಸುಳಿವು ಸಿಕ್ಕು, ಇವರ ಮನೆಯನ್ನು ಶೋಧಿಸಿ ಆಕ್ಷೇಪಾರ್ಹ ಸಾಹಿತ್ಯ ಸಿಕ್ಕಿತೆಂಬ ಸುಳ್ಳು ಆರೋಪ ಹೊರೆಸಿ ಇವರನ್ನು ಬಂಧಿಸಿತು. ಕಾರಾಗೃಹದಲ್ಲೇ ಇವರು ಕಾರ್ಯಕರ್ತರನ್ನು ಹುರಿದುಂಬಿಸಿ ಕಾಂಗ್ರೆಸ್ ಅಧಿವೇಶನ ನಡೆಯುವಂತೆ ಮಾಡಿದರು.

ಇವರು ಬಳವಂತರಾವ್ ದಾತಾರರ ಕರೆಯ ಮೇರೆಗೆ ಬೆಳಗಾಂವಿಗೆ ಬಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆ ಸೇರಿದರು. ಕಟ್ಟಿ ಶೇಷಾಚಾರ್ಯ, ಎಚ್.ಆರ್. ತೆರಗುಂಡಿಯವರ ಅನಂತರ ಅದರ ಸಂಪಾದಕರಾದರು (1934). ಆಗ ಪತ್ರಿಕೆ ಬೆಳಗಾಂವಿಯಿಂದ ಹೊರಡುತ್ತಿತ್ತು. ಇದರ ಪ್ರಸಾರ ಸಂಖ್ಯೆ ಆಗ 700. ಪತ್ರಿಕೆ ಆರ್ಥಿಕ ಮುಗ್ಗಟ್ಟಿಗೆ ಈಡಾದಾಗ ಇವರು ಅದರ ಸೂತ್ರಧಾರರಾಗಿ ಆರ್ಥಿಕ ಸ್ಥಿತಿ ಸುಧಾರಿಸಲು ಮುಂದಾದರು. ಕರ್ನಾಟಕ ಪ್ರಕಾಶನ ಮಂಡಳವು ಸಂಯುಕ್ತ ಕರ್ನಾಟಕವನ್ನು ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿಗೆ ವಹಿಸಿಕೊಟ್ಟ (1935) ಬಳಿಕ ಇವರು ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದರು (1935). ದಿವಾಕರರ ಜೊತೆ ಸೇರಿ ಚರ್ಚಿಸಿ ಪತ್ರಿಕೆಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಿದರು (1937). ಮುದ್ರಣ ವಿನ್ಯಾಸವನ್ನು ಅಂದಗೊಳಿಸಲು ಆಧುನಿಕ ಮುದ್ರಣ ವ್ಯವಸ್ಥೆಯನ್ನು ಮಾಡಿದರು; ವೈವಿಧ್ಯಮಯ ಲೇಖನಗಳಿಂದ ಪತ್ರಿಕೆಯ ರೂಪ ಬದಲಿಸಿದರು. ಕರ್ಮವೀರ ಎಂಬ ವಾರಪತ್ರಿಕೆಯೂ ಕಸ್ತೂರಿ ಎಂಬ ಮಾಸಪತ್ರಿಕೆಯೂ ಆರಂಭವಾದುವು.

ಸಂಯುಕ್ತ ಕರ್ನಾಟಕ 1943ರಲ್ಲಿ ಭಾರತೀಯ ಮತ್ತು ಪೌರಸ್ತ್ಯ ವೃತ್ತಪತ್ರ ಸಂಸ್ಥೆಯ ಸದಸ್ಯತ್ವ ಪಡೆಯಿತು (1956). ಇವರು ಅಂದಿನಿಂದ ಈ ಸಂಸ್ಥೆಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ (1957) ಕಾರ್ಯನಿರ್ವಹಿಸಿದರು. ಅಖಿಲ ಭಾರತ ಸಂಪಾದಕ ಪರಿಷತ್ತಿನ ಸ್ಥಾಪನೆಯಾದಾಗ (1940) ಇವರು ಅದರ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿದ್ದರು.

ಯುದ್ಧಕಾಲದ ವಾರ್ತೆಗಳು ಜನರ ಮನಸ್ಸನ್ನು ಕೆರಳಿಸುವಂತಿರಬಾರದು ಎಂದು ಬ್ರಿಟಿಷ್ ಸರ್ಕಾರ ಸ್ಥಾಯಿ ಸಮಿತಿ ರಚಿಸಿದಾಗ ಹನುಮಂತರಾಯರು ಅದರ ಸದಸ್ಯರಾದರು. ಸರ್ಕಾರ ಸುದ್ದಿಗಳನ್ನು ಸೆನ್ಸಾರ್ ಮಾಡಿಸಿ ಪ್ರಕಟಿಸಬೇಕೆಂದು ಸುಗ್ರೀವಾಜ್ಞೆ ಹೊರಡಿಸಿದಾಗ ನಿಯೋಗದೊಡನೆ ಅಂದಿನ ಗೃಹಮಂತ್ರಿಗಳನ್ನು ಕಂಡು ಚರ್ಚಿಸಿ ಸುಗ್ರೀವಾಜ್ಞೆ ಹಿಂತೆಗೆದುಕೊಳ್ಳುವಂತೆ ಮಾಡಿದರು. ಪಿ.ಟಿ.ಐ. ಸಂಸ್ಥೆಯ ಒಡೆತನವನ್ನು ಭಾರತೀಯರು ವಹಿಸಿಕೊಂಡಾಗ ಸಂಯುಕ್ತ ಕರ್ನಾಟಕದ ಪರವಾಗಿ ಇವರು ನಿರ್ದೇಶಕರ ಮಂಡಳಿಯ ಸದಸ್ಯರಾದರು. ಪಿ.ಟಿ.ಐ. ಸಂಸ್ಥೆಯ ಹಣಕಾಸು ಉಪಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದರು (1949–55).

ಹುಬ್ಬಳ್ಳಿಯಲ್ಲಿ ಬ್ಯಾಂಕ್ ಆಫ್ ಕರ್ನಾಟಕ ಸ್ಥಾಪಿಸಲು ದುಡಿದದ್ದು ಇವರ ಇನ್ನೊಂದು ಸಾಧನೆ. 1946ರಲ್ಲಿ ಸ್ಥಾಪಿತವಾದ ಈ ಬ್ಯಾಂಕಿನ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು (1954). ಇವರ ಕಾಲದಲ್ಲಿ ಗದಗ, ಧಾರವಾಡ, ವಿಜಾಪುರ, ಕುಂದಗೋಳ, ಜಮಖಂಡಿ, ಸವಣೂರು, ದಾಂಡೇಲಿಗಳಲ್ಲಿ ಇದರ ಶಾಖೆಗಳು ಆರಂಭವಾದುವು. ಹುಬ್ಬಳ್ಳಿಯಲ್ಲಿ ಬ್ಯಾಂಕಿನ ದೊಡ್ಡ ಕಟ್ಟಡದ ನಿರ್ಮಾಣವಾಯಿತು. ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ನ್ಯಾಯಮೂರ್ತಿ ಎಸ್.ಎಸ್. ಲೋಕೂರರ ಅಧ್ಯಕ್ಷತೆಯಲ್ಲಿ ಅಧ್ಯಯನ ಸಮಿತಿಯ ರಚನೆಯಾದಾಗ ಇವರು ಆ ಸಮಿತಿಯ ಸದಸ್ಯರಾಗಿ ಅಮೂಲ್ಯ ಸಲಹೆ ನೀಡಿದರು (1947–48). ವಿಶ್ವವಿದ್ಯಾಲಯ ಸ್ಥಾಪನೆಯಾದಾಗ (1949) ಕರ್ನಾಟಕ ಪತ್ರಿಕೆಗಳ ಪ್ರತಿನಿಧಿಯಾಗಿ ಸೆನೆಟ್‌ಗೆ ಆಯ್ಕೆಗೊಂಡು ಅನೇಕ ವರ್ಷಗಳ ಕಾಲ ಸದಸ್ಯರಾಗಿದ್ದರು. ಇವರು 1958ರ ನವೆಂಬರ್‌ನಲ್ಲಿ ಸಂಯುಕ್ತ ಕರ್ನಾಟಕದಿಂದ ನಿವೃತ್ತರಾದರು. 1960 ಆಗಸ್ಟ್ 15ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು.

(ಎಸ್.ಎಮ್.ಕೆ.)

**ಮೊಳಕಾಲ್ಮೂರು:** ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯಪಟ್ಟಣ. ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದ್ದು ಜಿಲ್ಲೆಯ ಈಶಾನ್ಯ ದಿಕ್ಕಿನಲ್ಲಿರುವ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಚಳ್ಳಕೆರೆ ತಾಲ್ಲೂಕು, ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶ, ವಾಯವ್ಯ ಮತ್ತು ಪಶ್ಚಿಮದಲ್ಲಿ ಬಳ್ಳಾರಿ ಜಿಲ್ಲೆ ಸುತ್ತುವರಿದಿವೆ. ಈ ತಾಲ್ಲೂಕಿನಲ್ಲಿ ದೇವಸಮುದ್ರ ಮತ್ತು ಮೊಳಕಾಲ್ಮೂರು ಹೋಬಳಿಗಳಿವೆ. ಒಂದು ಪಟ್ಟಣ ಮತ್ತು 91 ಗ್ರಾಮಗಳಿವೆ, ವಿಸ್ತೀರ್ಣ 736.2 ಚ.ಕಿಮೀ. ಜನಸಂಖ್ಯೆ 1,26,742.

ತಾಲ್ಲೂಕು ಹೆಚ್ಚಿನ ಮಟ್ಟಿಗೆ ಕಣಶಿಲೆಯ ಬೆಟ್ಟಗುಡ್ಡಗಳ ಪ್ರದೇಶ. ಮಧ್ಯೆ ಮಧ್ಯೆ ಇರುವ ಅನೇಕ ಕಣಿವೆ ಪ್ರದೇಶಗಳು ಸುಮಾರು ಮಟ್ಟಸವಾಗಿದ್ದು ಜನವಸತಿಗೆ ಯೋಗ್ಯವಾಗಿದೆ. ಪೂರ್ವಘಟ್ಟಶ್ರೇಣಿಗೆ ಸೇರಿದ ಒಂದು ಚಾಚು ಇಲ್ಲಿ ಹಬ್ಬಿದೆ. ತಾಲ್ಲೂಕಿನ ಸುತ್ತಮುತ್ತ ಹರಡಿರುವ ಬೆಟ್ಟಗುಡ್ಡಗಳಲ್ಲಿ ಬ್ರಹ್ಮಗಿರಿ (706 ಮೀ), ನುಂಕಪ್ಪನ ಗುಡ್ಡ (ನುಂಕೆ ಭೈರವ, 921 ಮೀ), ಜಟಂಗ ರಾಮೇಶ್ವರ ಬೆಟ್ಟ (1,057 ಮೀ) ಮತ್ತು ಶಾಂತಿಗುಡ್ಡ (790 ಮೀ) ಮುಖ್ಯವಾದುವು.

ಈ ತಾಲ್ಲೂಕಿನ ಮುಖ್ಯನದಿ ಜನಗಹಳ್ಳ. ಇದನ್ನು ಚಿನ್ನಹಗರಿ ಎಂದೂ ಕರೆಯುತ್ತಾರೆ. ಚಿತ್ರದುರ್ಗ ಮತ್ತು ಜಗಳೂರು ತಾಲ್ಲೂಕುಗಳ ಮುಖಾಂತರ ಹರಿದು ಬರುವ ಈ ನದಿ ಮೊಳಕಾಲ್ಮೂರು ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆಯ ಎಲ್ಲೆಯಾಗಿ ಸ್ವಲ್ಪದೂರ ಹರಿದು ತಾಲ್ಲೂಕಿನ ಮಧ್ಯಭಾಗದಲ್ಲಿ ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಹರಿದು ಮುಂದೆ ವೇದಾವತಿಯನ್ನು ಕೂಡಿಕೊಳ್ಳುವುದು. ಈ ನದಿಗೆ ಕೆಲವು ಹಳ್ಳಗಳು ಬಂದು ಸೇರುವುದುಂಟು.

ತಾಲ್ಲೂಕಿನಲ್ಲಿ ಒಟ್ಟು 73,000 ಹೆಕ್ಟೇರ್ ಭೂಮಿಯಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 526,39 ಮಿಮೀ. ವ್ಯವಸಾಯಕ್ಕೆ ಅನುಕೂಲವಾಗಿ ಅನೇಕ ಕೆರೆ ಬಾವಿಗಳೂ ಇವೆ. ತಲಪರಿಗೆಗಳೂ ಬಹುಸಂಖ್ಯೆಯಲ್ಲಿದ್ದು ಉಪಯುಕ್ತವಾಗಿವೆ. ಈ ತಾಲ್ಲೂಕಿನಲ್ಲಿ ಜೋಳ, ರಾಗಿ, ಬತ್ತ, ತೊಗರಿ, ಗೋದಿ, ಎಣ್ಣೆಬೀಜಗಳು, ಕಬ್ಬು, ಸೇಂಗಾ, ಹೊಗೆಸೊಪ್ಪು ಮತ್ತು ಹತ್ತಿ ಬೆಳೆಯುತ್ತಾರೆ.

ತಾಲ್ಲೂಕಿನಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಚಿತ್ರದುರ್ಗ–ಬಳ್ಳಾರಿ ರಸ್ತೆ, ಮೊಳಕಾಲ್ಮೂರು–ಕೂಡ್ಲಿಗಿ, ಕೂಡ್ಲಿಗಿ–ದೇವಸಮುದ್ರ, ಮೊಳಕಾಲ್ಮೂರು–ರಾಯದುರ್ಗ–ರಸ್ತೆಗಳು ತಾಲ್ಲೂಕಿನ ಮುಖ್ಯ ಸಂಪರ್ಕ ಮಾರ್ಗಗಳು. ಈ ತಾಲ್ಲೂಕಿನಲ್ಲಿ ತಯಾರಾಗುವ ಕೈಮಗ್ಗದ ರೇಷ್ಮೆ ಬಟ್ಟೆಗಳು ಪ್ರಸಿದ್ಧವಾಗಿವೆ.

ಕೊಂಡಲಹಳ್ಳಿ, ಕೋನಸಾಗರ, ನಾಗಸಮುದ್ರ, ಬೊಮ್ಮಗೊಂಡನಕೆರೆ, ಹಿರೇಕೆರೆಹಳ್ಳಿ, ದೇವಸಮುದ್ರ ಮತ್ತು ರಾಮಪುರ ಈ ತಾಲ್ಲೂಕಿನ ಕೆಲವು ಮುಖ್ಯ ಗ್ರಾಮಗಳು. ಈ ತಾಲ್ಲೂಕಿನ ಬ್ರಹ್ಮಗಿರಿ **(ನೋಡಿ)**, ಜಟಂಗ ರಾಮೇಶ್ವರ **(ನೋಡಿ)** ಮತ್ತು ಸಿದ್ದಾಪುರಗಳಲ್ಲಿ ಅಶೋಕನ ಶಾಸನಗಳು ದೊರಕಿವೆ. ಅಲ್ಲದೆ ಇವುಗಳ ಬಳಿಯಲ್ಲಿ ಇಸಿಲ ಎಂಬ ಬಹು ಪ್ರಾಚೀನ ಪಟ್ಟಣವೂ ಇತ್ತೆನ್ನಲಾಗಿದೆ. ನುಂಕೆಭೈರವ ಬೆಟ್ಟದಲ್ಲಿ ಪ್ರತಿ ವೈಶಾಖದಲ್ಲಿ ಜಾತ್ರೆ ನಡೆಯುತ್ತದೆ. ಬೊಮ್ಮಘಟ್ಟದ ರಾಮದೇವರ ಜಾತ್ರೆಯೂ ಈ ಸುತ್ತಿನಲ್ಲಿ ಪ್ರಸಿದ್ಧವಾದುದು.

ಮೊಳಕಾಲ್ಮೂರು ಈ ತಾಲ್ಲೂಕಿನ ಮುಖ್ಯಪಟ್ಟಣ. ಬೆಂಗಳೂರು–ರಾಯದುರ್ಗ ಮಾರ್ಗದಲ್ಲಿ ಬಳ್ಳಾರಿಗೆ ದಕ್ಷಿಣಕ್ಕೆ 62 ಕಿಮೀ ದೂರದಲ್ಲೂ ಚಿತ್ರದುರ್ಗದ ಈಶಾನ್ಯಕ್ಕೆ 84 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 14,133. ಊರಿನ ಸುತ್ತಮುತ್ತಲೂ ಬೆಟ್ಟಗುಡ್ಡಗಳಿದ್ದು, ಉತ್ತರಕ್ಕೆ ವಿಶಾಲವಾದ ಒಂದು ಕೆರೆ ಇದೆ. ಇದನ್ನು ನಾಯಕನಹಟ್ಟಿಯ ನಾಯಕನೊಬ್ಬ ತನ್ನ ತಾಯಿಯ ಹೆಸರಿನಲ್ಲಿ ಕಟ್ಟಿಸಿದನೆಂದು ತಿಳಿದು ಬರುತ್ತದೆ. ಮೊಳಕಾಲ್ಮೂರು ಸುತ್ತಲ ನಗರಗಳಿಗೆ ಉತ್ತಮ ರಸ್ತೆಗಳಿಂದ ಸಂಪರ್ಕ ಹೊಂದಿದ್ದು ವ್ಯಾಪಾರ ಕೇಂದ್ರವಾಗಿ ಬೆಳೆಯುತ್ತಿದೆ. ಪಟ್ಟಣ ಪೌರಸಭೆಯ

ಅಳಿತಕ್ಕೆ ಒಳಪಟ್ಟಿದೆ. ಈ ಊರು ರೇಷ್ಮೆ ಬಟ್ಟೆಗೆ ಪ್ರಸಿದ್ಧ. ನೇಯ್ಗೆ ಇಲ್ಲಿನ ಮುಖ್ಯ ಉದ್ಯಮಗಳಲ್ಲೊಂದು. ಇದೊಂದು ಪ್ರವಾಸಿ ಕೇಂದ್ರವೂ ಹೌದು.

ಹತ್ತನೆಯ ಶತಮಾನದಲ್ಲಿ ಈ ಪ್ರದೇಶ ನೊಳಂಬವಾಡಿ 32000 ಸೀಮೆಯಲ್ಲಿ ಸಮಾವೇಶಗೊಂಡಿತ್ತು. ಜಟಂಗ ರಾಮೇಶ್ವರದಲ್ಲಿ 962ರಲ್ಲಿ ಕಟ್ಟಿದ ರಾಮೇಶ್ವರ ದೇವಾಲಯವಿದೆ. ಕಲ್ಯಾಣದ ಚಾಳುಕ್ಯರ ಆರನೆಯ ವಿಕ್ರಮಾದಿತ್ಯನ ಸಹೋದರ ಜಯಸಿಂಹನ ಅನಂತರ ಹೊಯ್ಸಳ ಮತ್ತು ವಿಜಯನಗರ ದೊರೆಗಳ ಅಧಿಕಾರಕ್ಕೆ ಒಳಪಟ್ಟಿದ್ದ ಈ ಊರು ಹದಿನೈದ ನೆಯ ಶತಮಾನದಲ್ಲಿ ರಾಯದುರ್ಗದ ನಾಯಕರ ವಶದಲ್ಲಿತ್ತು. ಬೆಪ್ಪಮೊಮ್ಮ ನಾಯಕನೆಂಬುವನು ನಾಯಕನಹಟ್ಟಿಯ ಮಲ್ಲಪ್ಪನಾಯಕನೆಂಬುವನಿಗೆ ಅವನ ಬಳಿ ಇದ್ದ ಶ್ರೇಷ್ಠವಾದ ಬಿಳಿ ಹಸುಗಳ ಬದಲು ಇದನ್ನು ಕೊಟ್ಟ ನೆಂದು ಒಂದು ಕಥೆ ಇದೆ. ಮುಂದೆ ಇದನ್ನು ಹೈದರ್ ಗೆದ್ದು ಮೈಸೂರಿಗೆ ಸೇರಿಸುವವರೆಗೆ ಈ ಊರು ಚಿತ್ರದುರ್ಗದ ಪಾಳೆಯಗಾರರ ಅಧೀನದ ಲ್ಲಿತ್ತು. ಇಲ್ಲಿನ ಪ್ರಾಚೀನ ಕೆರೆಯ ಬಳಿ ಒಂದು ಪ್ರತಿಧ್ವನಿ ಕೊಡುವ 'ಕೂಗು ಬಂಡೆ' ಇದೆ. ಇದರ ಸಮೀಪದ ಕಲ್ಲಮೇಲೆ ಮಹಾಕವಿ ಕಾಳಿದಾಸನನ್ನು ಹೊಗಳುವ ಒಂದು ಯಮಕ ಶ್ಲೋಕವನ್ನು ಕೆತ್ತಲಾಗಿದೆ. ಈ ಸಂಸ್ಕೃತ ಶ್ಲೋಕದಲ್ಲಿ ಕಾಳಿದಾಸನನ್ನು ಕವಿಶ್ರೇಷ್ಠನೆಂದು ಕರೆದು ಶತ್ರುಗಳಿಗೂ ನೀನು ಹೃದಯಸ್ಪರ್ಶಿ ಕಾವ್ಯದಿಂದ ಸುಖ, ಸಂಪತ್ತುಗಳನ್ನು ಕೊಡುತ್ತಿರುವೆ ಎಂದು ಅಜ್ಞಾತ ಕವಿ ಇಲ್ಲಿ ಉದ್ಗಾರ ತೆಗೆದಿದ್ದಾನೆ. ಯಮಕ ಬಂಡೆಯ ವಾಯವ್ಯಕ್ಕೆ ನುಂಕೆಭೈರವನ ಬೆಟ್ಟವಿದೆ. ಇದು ಕಡಿದಾಗಿದ್ದು ಉತ್ತರದ ಗೋಸಾಯಿಗಳ ಪವಿತ್ರ ಯಾತ್ರಾಸ್ಥಳವಾಗಿದೆ. ಹತ್ತನೆಯ ಶತಮಾನದಲ್ಲಿ ಒಬ್ಬ ಕದಂಬ ದೊರೆ ಲಂಕೇಶ್ವರನ ಹೆಸರಿನಲ್ಲಿ ಕಟ್ಟಿಸಿದ ದೇವಾಲಯ ಇದೆಂದು ಹೇಳಲಾಗಿದೆ. ಈ ಕಾಲದಲ್ಲೇ ಲುಂಕೆಯ ಹೆಸರಿನ ಕೋಟೆಯನ್ನು ನಿರ್ಮಿಸಿದರು. ಅದೇ ಕಾಲಾನಂತರ ನುಂಕೆಕೋಟೆಯಾಯಿತು.

(ಎಸ್.ಕೆ.ಒ.)

**ಮೋಟಗಾನಹಳ್ಳಿ ರಾಮಶೇಷಶಾಸ್ತ್ರೀ:** 1867–1934. ಸುಪ್ರಸಿದ್ಧ ಸಂಸ್ಕೃತ–ಕನ್ನಡ ಪಂಡಿತರು. ಮೋಟಗಾನಹಳ್ಳಿ ಶಂಕರಶಾಸ್ತ್ರಿ ಇವರ ಅಣ್ಣ. ರಾಮಶೇಷಶಾಸ್ತ್ರಿಯವರು ಮಾಗಡಿ ತಾಲ್ಲೂಕು ಮೋಟಗಾನ ಹಳ್ಳಿಯಲ್ಲಿ ಮುಲಕನಾಡು ಬ್ರಾಹ್ಮಣ ಕುಟುಂಬವೊಂದ ರಲ್ಲಿ ಜನಿಸಿದರು. ಇವರ ಹೆಚ್ಚಿನ ವಿದ್ಯಾಭ್ಯಾಸವೆಲ್ಲ ಮಾಗಡಿಯಲ್ಲಿ ಕರಣಿಕರು ನಡೆಸುತ್ತಿದ್ದ ಗುರುಕುಲ ಪದ್ಧತಿಯ ಪಾಠಶಾಲೆಯಲ್ಲಿ ನಡೆಯಿತು (ಮಾಗಡಿ ಕರಣಿ ಕರ ವೇದ ಪಾಠಶಾಲೆಯೊಂದು ಬೆಂಗಳೂರಿನಲ್ಲಿದೆ). ಮಾಗಡಿ ಯಿಂದ ಬೆಂಗಳೂರಿಗೆ ಬಂದು ನೆಲಸಿದ ಶಾಸ್ತ್ರೀಗಳು ಅಲ್ಲಿನ ಆರ್ಯಬಾಲಿಕಾ ಪಾಠಶಾಲೆ, ನಾರ್ಮಲ್‌ಸ್ಕೂಲ್, ಮಹಾ ರಾಣಿ ಕಾಲೇಜು–ಈ ಸಂಸ್ಥೆಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಬೋಧಕರಾಗಿದ್ದರು. ಬೆಂಗಳೂರಿನ ಕೆಲವು ಪ್ರಮುಖ ವರ್ತಕರ ಕೋರಿಕೆ ಯಂತೆ, ಅಣ್ಣ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳ ವ್ಯಾಖ್ಯಾನದೊಂದಿಗೆ ಅನೇಕ ವರ್ಷಕಾಲ ಇವರು ಮಹಾಭಾರತವನ್ನು ವಾಚನಮಾಡಿದರು.

ಮೈಸೂರು ಅರಮನೆಯಲ್ಲಿ ಇವರು ಜಯಚಾಮರಾಜ ಒಡೆಯರಿಗೆ ಅಕ್ಷರಾಭ್ಯಾಸ ಮೊದಲಗೊಂಡು ಎಸ್.ಎಸ್.ಎಲ್.ಸಿ. ವರೆಗೆ ಸಂಸ್ಕೃತ ಭಾಷಾ ಶಿಕ್ಷರಾಗಿದ್ದರು.

ಇವರ ಹೆಸರು ಚಿರಸ್ಥಾಯಿಯಾಗಿರುವುದು ಪ್ರತಿಪದಾರ್ಥ, ತಾತ್ಪರ್ಯ ಮತ್ತು ಟಿಪ್ಪಣಿ ಸಮೇತ ಅನುವಾದ ಮಾಡಿರುವ ಶ್ರೀಮದ್ ಭಾಗವತ ಮಹಾಪುರಾಣದಿಂದ. ಈ ಮಹತ್ಕಾರ್ಯವನ್ನು ಇವರು 1909ರಲ್ಲಿ ಪ್ರಾರಂಭ ಮಾಡಿ 1924ರಲ್ಲಿ ಮುಗಿಸಿದರು. ಗ್ರಂಥದ ಪ್ರಕಟನೆ 1911ರಲ್ಲಿ ಆರಂಭವಾಗಿ 1932ರಲ್ಲಿ ಮುಗಿಯಿತು. ಭಾಗವತದ ಶೈಲಿ ರಾಮಾಯಣ ಭಾರತಗಳ ಶೈಲಿಗಿಂತ ಕ್ಲಿಷ್ಟ ಮತ್ತು ಪ್ರೌಢ ; ಶಾಸ್ತ್ರೀಗಳ ಸರ್ವಸಮರ್ಪಕ ವಾದ ಅನುವಾದ ಇವರ ಉಭಯಭಾಷಾಪಾಂಡಿತ್ಯಕ್ಕೂ ವೇದಾಗಮಾದಿ ಶಾಸ್ತ್ರ ಸಂಪನ್ನತೆಗೂ ನಿದರ್ಶನವಾಗಿದೆ. ಇವರು ಸಂಸ್ಕೃತದಿಂದ ಅನುವಾದ ಮಾಡಿದ ಇತರ ಕೃತಿಗಳಿವು : ವಿಶಾಖದತ್ತನ ಮುದ್ರಾರಾಕ್ಷಸ ನಾಟಕ (ದ್ವಿತೀಯ ಮುದ್ರಣ, 1931), ಮುಕುಂದಾನಂದ ಭಾಣ (1935) ಮತ್ತು ಹಿತೋಪದೇಶ. ಅಮರಕೋಶವನ್ನು ಟೀಕೆಟಿಪ್ಪಣಿಗಳೊಂದಿಗೆ ಪರಿಷ್ಕರಿಸಿ ಮುದ್ರಣಕ್ಕೆ ಸಿದ್ಧಪಡಿಸಿದ್ದರೆಂದು ಹೇಳಲಾಗಿದೆ.

ಇವರ ಭಾಷಾಪಾಂಡಿತ್ಯ ಮತ್ತು ಅರಮನೆಯ ಸೇವೆಯನ್ನು ಗಮನಿಸಿ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ ಆಸ್ಥಾನ ಮಹಾವಿದ್ವಾನ್ ಪದವಿ ಯನ್ನಿತ್ತು ಗೌರವಿಸಿದ್ದರು. ಶೃಂಗೇರಿ, ಶಿವಗಂಗೆ, ಕೂಡಲಿ, ಶ್ರೀಮಠಗಳಿಂ ದಲೂ ಇವರು ಸನ್ಮಾನಿತರಾಗಿದ್ದರು.

(ಎಂ.ವಿ.ಎಸ್.)

**ಮೋಟಗಾನಹಳ್ಳಿ ಶಂಕರಶಾಸ್ತ್ರೀ:** 1862–1913. ಸುಪ್ರಸಿದ್ಧ ವಿದ್ವಾಂಸರು. ಪ್ರಸಿದ್ಧ ವಿದ್ವಾಂಸರಾದ ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರೀ ಇವರ ತಮ್ಮ. ತಂದೆ ಸಾಂಬಶಾಸ್ತ್ರೀ. ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ ಇವರ ಮಗ. ಶಾಸ್ತ್ರೀಗಳು ಜನಿಸಿದ್ದು ಬೆಂಗಳೂರು ಜಿಲ್ಲೆ ಮಾಗಡಿ ತಾಲ್ಲೂಕು ಮೋಟಗಾನ ಹಳ್ಳಿಯಲ್ಲಿ. ಬಾಲ್ಯವೆಲ್ಲ ಮೋಟಗಾನಹಳ್ಳಿಯಲ್ಲೇ ಕಳೆಯಿತು. ಮಗನಿಗೆ ಎಂಟೊಂಬತ್ತು ವರ್ಷವಾಗಿದ್ದಾಗ ಸಾಂಬಶಾಸ್ತ್ರೀಗಳು ಬೆಂಗಳೂರಿಗೆ ಬಂದು ನೆಲೆಸಿದರು. ಶಂಕರಶಾಸ್ತ್ರೀಗಳ ವಿದ್ಯಾಭ್ಯಾಸವೆಲ್ಲ ಸೋದರಮಾವ ಗಂಗಾಧರಶಾಸ್ತ್ರೀಗಳ ಬಳಿ ಸಾಗಿತು. ತಾಯ್ನುಡಿ ತೆಲುಗಿನಲ್ಲೂ ಕನ್ನಡ ಸಂಸ್ಕೃತಗಳಲ್ಲೂ ಪಾಂಡಿತ್ಯವನ್ನು ಗಳಿಸಿದರು. ಸಂಸ್ಕೃತ ಮತ್ತು ಕನ್ನಡ ಕಾವ್ಯಗಳ ಅಧ್ಯಯನ ದೊಂದಿಗೆ, ಅಲಂಕಾರ, ಛಂದಸ್ಸು ಮತ್ತು ವ್ಯಾಕರಣ ಶಾಸ್ತ್ರಗಳಲ್ಲಿ ಪಾರಂಗತರೆನಿಸಿದ್ದರು.

ಇವರು ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆ ಯಲ್ಲಿ ಸಂಸ್ಕೃತದ ಅಧ್ಯಾಪಕರಾಗಿಯೂ ದಂಡುಪ್ರದೇಶದ (ಕಂಟೋ ನ್ಮೆಂಟ್) ಆರ್ಕಾಟು ನಾರಾಯಣಸ್ವಾಮಿ ಮೊದಲಿಯಾರ್ ಪ್ರೌಢಶಾಲೆಯಲ್ಲಿ ತೆಲುಗು ಉಪಾಧ್ಯಾಯರಾಗಿಯೂ ಕೆಲಸ ಮಾಡಿದರು. ಬೆಂಗಳೂರಿನ ಮಹಾಜನರಲ್ಲಿ ಪುರಾಣ ಪ್ರವಚನಕಾರರೆಂದು ಬಹು ಪ್ರಸಿದ್ಧರಾಗಿದ್ದರು. ಬೆಂಗಳೂರಿನ ಚಾಮರಾಜಪೇಟೆ, ನಗರ್ತಪೇಟೆ ಮುಂತಾದ ಕಡೆಗಳಲ್ಲಿ ಏರ್ಪಾಡಾಗುತ್ತಿದ್ದ ಪುರಾಣಪ್ರವಚನಗಳಲ್ಲಿ ಇವರ ಸಹೋದರರಾದ ರಾಮಶೇಷಶಾಸ್ತ್ರೀಗಳು ಶ್ಲೋಕಗಳನ್ನು ವಾಚನ ಮಾಡುತ್ತಿದ್ದರು, ಇವರು ಪಂಡಿತಪಾಮರ ರಂಜಕವಾಗುವಂತೆ ವ್ಯಾಖ್ಯಾನ ಮಾಡುತ್ತಿದ್ದರು.

ಇವರಿಗೆ ಸಂಸ್ಕೃತ, ಕನ್ನಡ ಭಾಷಾಪಾಂಡಿತ್ಯದೊಂದಿಗೆ ಗ್ರಂಥರಚನಾ ಸಾಮರ್ಥ್ಯವಿದ್ದರೂ ಗ್ರಂಥರಚನೆಯ ಹವ್ಯಾಸಕ್ಕೆ ಹೋಗಲಿಲ್ಲ. ಕೆಲವು ನಾಟಕ ಕಂಪನಿಗಳ ಮತ್ತು ಪೇಟೆಯ ಪುಸ್ತಕದ ಅಂಗಡಿಗಳ ಒತ್ತಾಯ ದಿಂದ ಕೆಲವು ನಾಟಕಗಳನ್ನು ಬರೆದುಕೊಟ್ಟಿದ್ದುಂಟು ; ಬಯಸಿದವರಿಗೆ ಸಂದರ್ಭಕ್ಕೆ ತಕ್ಕ ಪದ್ಯಗಳನ್ನೂ ರಚಿಸಿಕೊಡುತ್ತಿದ್ದರು. ಶಬ್ದಾಲಂಕಾರ,

ಅರ್ಥಾಲಂಕಾರ, ಪದಲಾಲಿತ್ಯ ಮುಂತಾದ ಸಾಹಿತ್ಯಗುಣಗಳಿಂದ ಕೂಡಿದ್ದ ಇವರ ಆಶುಕವಿತಾರಚನೆಗಳೂ ಸಂಸ್ಕೃತ ಕನ್ನಡ ಪದ್ಯಗಳೂ ಸಂಪ್ರದಾಯದ ಹಾಡುಗಳೂ ಬಹುಮಟ್ಟಿಗೆ ಈಗ ನಷ್ಟವಾಗಿವೆ. ಇವರು ರಚಿಸಿದ ಕನ್ನಡ ನಾಟಕಗಳಲ್ಲಿ ಮುಖ್ಯವಾದುವು : ಇಂದ್ರಸಭಾ, ಪಾಂಡವವಿಜಯ, ಶ್ರೀಯಾಳಚರಿತ್ರೆ ಅಥವಾ ಧರ್ಮಪಾಲ ನಾಟಕ, ಮಂದಾರೋಜ್ವಲಪರಿಣಯ ಅಥವಾ ಗುಲೇಬಕಾವಲಿ. ಗುಲೇಬಕಾವಲಿ ಮುಂತಾದ ನಾಟಕಗಳನ್ನು ಗುಬ್ಬಿ ನಾಟಕ ಕಂಪನಿಯವರು ಆಡುತ್ತಿದ್ದರು. ಜನರಂಜನೆಗಾಗಿ ಬರೆದ ಇಂಥ ನಾಟಕಗಳು ಕನ್ನಡ ರಂಗಭೂಮಿಯ ಬೆಳೆವಣಿಗೆಯಲ್ಲಿ ಮುಖ್ಯಪಾತ್ರವಹಿಸಿವೆ. ಇವರು 1913ರ ಮಾರ್ಚ್ ತಿಂಗಳಲ್ಲಿ ನಿಧನರಾದರು.

**(ಎಂ.ವಿ.ಎಸ್.)**

**ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ:** 1905–61. ಪ್ರಸಿದ್ಧ ಪಂಡಿತರು, ನಾಟಕಕಾರರು. ಇವರದು ವಿದ್ವಾಂಸರ ಮನೆತನ. ಮೋಟಗಾನಹಳ್ಳಿ ಶಂಕರಶಾಸ್ತ್ರೀ ಇವರ ತಂದೆ. ಇವರು ಬೆಂಗಳೂರಿನಲ್ಲಿ ಮಾಧ್ಯಮಿಕ ಶಾಲೆ, ಪ್ರೌಢ ಶಾಲೆಗಳ ವ್ಯಾಸಂಗ ಮುಗಿಸಿ, ಸಂಸ್ಕೃತ ಕಾಲೇಜಿಗೆ ಸೇರಿ 1913–20ರ ವರೆಗೆ ವ್ಯಾಸಂಗ ಮಾಡಿ ಪಾಂಡಿತ್ಯವನ್ನು ಗಳಿಸಿಕೊಂಡರು. ಸಾಹಿತ್ಯದ ಜೊತೆಗೆ ಸಂಗೀತದಲ್ಲೂ ಸಾಕಷ್ಟು ಪ್ರವೇಶವನ್ನು ಪಡೆದರು. ವಾಲ್ಮೀಕಿ ರಾಮಾಯಣವನ್ನು ಚೆನ್ನಾಗಿ ವಾಚನ ಮಾಡುತ್ತಿದ್ದ ಇವರು ಉತ್ತಮ ಗಮಕಿಗಳೂ ಆಗಿದ್ದರು. ಬೆಂಗಳೂರಿನ ಸೇಂಟ್ ಥೆರೆಸಾ ಕಾನ್ವೆಂಟಿನಲ್ಲಿ ಕನ್ನಡ ಪಂಡಿತರಾಗಿ (1943–61) ಕೆಲಸ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಇವರ ನುಡಿ ಪತ್ರಿಕೆಗೆ ಇವರು ಕೆಲಕಾಲ ಸಂಪಾದಕರಾಗಿದ್ದರು. ಮಹತ್ತರ ಕೊಡುಗೆ ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದು (1930–38). ಮೈಸೂರು ಅರಮನೆಯ ಶ್ರೀಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಸ್ಕಂದಪುರಾಣವನ್ನು ಕನ್ನಡಕ್ಕೆ ತಂದಿದ್ದಾರೆ. ಇವರ ಇತರ ಕೃತಿಗಳಿವು: ಸ್ಕಂದಪುರಾಣ ಖಂಡಿಕೆಗಳು, ಲಲಿತೋಪಾಖ್ಯಾನ, ಸಂಸ್ಕೃತ ನಾಟಕ ಕಥೆಗಳು (ಎರಡು ಭಾಗಗಳಲ್ಲಿ), ಕರ್ನಾಟಕ ಮಾಳವಿಕಾಗ್ನಿಮಿತ್ರ.

ಮೈಸೂರು ಮಹಾರಾಜರು 1936ರಲ್ಲಿ ಇವರನ್ನು ಆಸ್ಥಾನ ವಿದ್ವಾಂಸರನ್ನಾಗಿ ಮಾಡಿ ಗೌರವಿಸಿದರು. ಇವರು 1961 ಜುಲೈ 30ರಂದು ನಿಧನರಾದರು.

**(ಟಿ.ಟಿ.ಎಸ್.)**

**ಮೋದಿ, ಎಂ.ಸಿ.:** 1916–2005. ಪ್ರಸಿದ್ಧ ನೇತ್ರವೈದ್ಯರು. ಮುರಿಗೆಪ್ಪ ಚನ್ನವೀರಪ್ಪ ಮೋದಿ ಇವರ ಪೂರ್ಣ ಹೆಸರು. ತಂದೆ ಚನ್ನವೀರಪ್ಪ, ತಾಯಿ ದುಂಡಮ್ಮ. ಬಿಜಾಪುರ ಜಿಲ್ಲೆಯ ಬೀಳಗಿರಿಯಲ್ಲಿ 1916 ಅಕ್ಟೋಬರ್ 4 ರಂದು ಜನಿಸಿದರು. ಪಿ. ಬಿ. ಪ್ರೌಢಶಾಲೆ, ಬೆಳಗಾಂವಿಯ ಕರ್ನಾಟಕ ಆಯುರ್ವೇದ ಕಾಲೇಜು, ಕೆ.ಬಿ.ಎಚ್.ಬಿ. ಕಣ್ಣಿನ ಆಸ್ಪತ್ರೆಯಲ್ಲಿ ತಮ್ಮ ಪ್ರಥಮ ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿದರು. ಮುಂದೆ ಅಮೆರಿಕದ ಕೊಲಂಬಿಯ ಮತ್ತು ನ್ಯೂಯಾರ್ಕ್ ವಿಶ್ವವಿದ್ಯಾಲಯಗಳಲ್ಲಿ ನೇತ್ರಶಾಸ್ತ್ರದ ಸ್ನಾತಕೋತ್ತರ ಅಧ್ಯಯನ ಮಾಡಿ ಮುಂಬಯಿಯಲ್ಲಿ ತಮ್ಮ ಖಾಸಗೀ ವೈದ್ಯವೃತ್ತಿಯನ್ನು ಆರಂಭಿಸಿದರು (1942). ಇವರು ಮಹಾತ್ಮ ಗಾಂಧಿಯವರ ಅರ್ಪಿತ ಭಾವನೆಯ, ನಿಸ್ವಾರ್ಥ ಜನಸೇವೆಯ ಆದರ್ಶಕ್ಕೆ ಮಾರುಹೋಗಿ ಅವರ ಆಶೀರ್ವಾದವನ್ನು ಪಡೆದು, ದೇಶದಲ್ಲಿ ವಿಸ್ತೃತವಾಗಿರುವ ಅಂಧತ್ವದ ನಿವಾರಣೆಗೆ ತಮ್ಮನ್ನು ಅರ್ಪಿಸಿಕೊಂಡರು (1943). ವೈಯಕ್ತಿಕ ಸುಖ–ಸಂತೋಷವನ್ನು ತ್ಯಜಿಸಿ, ತಮ್ಮ ಪ್ರತಿಭೆ–ಪರಿಣತಿಯನ್ನು ಜನಸಾಮಾನ್ಯರ ಬಳಿ ಕೊಂಡೊಯ್ದು ಕಣ್ಣಿಲ್ಲದವರಿಗೆ ಬೆಳಕಾದರು.

ವೈದ್ಯಕೀಯ ವೃತ್ತಿಯಲ್ಲಿ ಮೋದಿಯವರ ಸಾಧನೆ ಅದ್ವಿತೀಯವಾದುದು. ವೈದ್ಯನಿದ್ದಲ್ಲಿ ರೋಗಿ ಹೋಗಬೇಕೆಂಬ ವಿಚಾರವನ್ನು ಅಲ್ಲಗಳೆದು, ರೋಗಿ ಇದ್ದಲ್ಲಿಗೇ ವೈದ್ಯರು ಹೋಗಬೇಕೆಂಬ ಪರಿಪಾಠವನ್ನು ರೂಢಿಯಲ್ಲಿ ತಂದರು. ಸಂಚಾರಿ ನೇತ್ರಚಿಕಿತ್ಸಾಲಯವನ್ನು ಪ್ರಪಂಚದಲ್ಲಿ ಸ್ಥಾಪಿಸಿದ ಪ್ರಥಮ ವ್ಯಕ್ತಿ ಇವರು. ಇವರ ಸಂಚಾರಿ ನೇತ್ರಚಿಕಿತ್ಸಾಲಯ ಬೃಹದಾಕಾರವಾಗಿ ಬೆಳೆದಿದೆ. ದಕ್ಷಿಣ ಮತ್ತು ಪಶ್ಚಿಮ ಭಾರತದ ಪ್ರದೇಶಗಳಲ್ಲಿ ಸಂಚರಿಸಿ ಲಕ್ಷಾಂತರ ಜನರಿಗೆ ದೃಷ್ಟಿಯನ್ನು ನೀಡಿದ್ದಾರೆ.



ಮೋದಿಯವರು ಸಾಮೂಹಿಕ ಉಚಿತ ನೇತ್ರ ಚಿಕಿತ್ಸೆಯನ್ನು ಪ್ರಾರಂಭಿಸಿದವರಲ್ಲಿ ಪ್ರಥಮರು. ಅಂಧತ್ವ ನಿವಾರಣೆಗೆ ಇವರು ಹಮ್ಮಿದ ಈ ಆಂದೋಲನದಲ್ಲಿ 1974ರ ಹೊತ್ತಿಗೇ 4 ಲಕ್ಷ ಜನರ ಕಣ್ಣುಗಳ ಶಸ್ತ್ರಚಿಕಿತ್ಸೆಯನ್ನೂ 40 ಲಕ್ಷ ಜನರ ಕಣ್ಣು ಪರೀಕ್ಷೆಯನ್ನೂ ಮಾಡಿ ದೃಷ್ಟಿ ಸಮಸ್ಯೆಗಳಿಗೆ ಪರಿಹಾರ ನೀಡಿದ್ದರು. ಅಗತ್ಯಬಿದ್ದ ಸಹಸ್ರಾರು ಮಂದಿಗೆ ಕನ್ನಡಕಗಳನ್ನು ಉಚಿತವಾಗಿ ನೀಡಿದರು.

ಮೋದಿಯವರ ಸಂಚಾರಿ ಆಸ್ಪತ್ರೆ ಎರಡು ವಾರಗಳ ಪರ್ಯಂತ ಒಂದೊಂದು ಸ್ಥಳದಲ್ಲಿ ನಡೆಯುತ್ತದೆ. ಆ ಶಿಬಿರಕ್ಕೆ ಶಾಲೆ ಕಾಲೇಜು ಮತ್ತಿತರ ಕಟ್ಟಡಗಳನ್ನು ಬಳಸಿಕೊಳ್ಳಲಾಗುವುದು. ಅನೇಕ ಸಂಘಸಂಸ್ಥೆಗಳು, ಸ್ವಯಂಸೇವಕರು ಆ ಶಿಬಿರದ ಯಶಸ್ಸಿಗೆ ಶ್ರಮಿಸುತ್ತಾರೆ. ಅಲ್ಲಿ ನೆರೆದ ರೋಗಿಗಳಿಗೆ, ಅವರ ಸಹಾಯಕರಿಗೆ ಊಟ–ವಸತಿಗಳ ವ್ಯವಸ್ಥೆ ಇರುತ್ತದೆ. ಮೊದಲು ರೋಗಿಗಳನ್ನು ಪರೀಕ್ಷಿಸಿ ಎರಡು ದಿನಗಳಲ್ಲಿ ಶಸ್ತ್ರಚಿಕಿತ್ಸೆಯನ್ನು ಮುಗಿಸಿ ಅನಂತರದ 10 ದಿನಗಳು ಶಸ್ತ್ರಚಿಕಿತ್ಸೆಯೋತ್ತರ ನಿರೀಕ್ಷಣೆಗೆ ರೋಗಿಗಳು ಒಳಪಡುತ್ತಾರೆ. ಗಂಟೆಗೆ ನಲವತ್ತು ಶಸ್ತ್ರಚಿಕಿತ್ಸೆ ಮಾಡುತ್ತಿದ್ದ ಮೋದಿಯವರು ತಿರುಪತಿಯ ಶಿಬಿರದಲ್ಲಿ ಒಂದೇ ದಿನ 833 ಮೋತಿಬಿಂದು ತೆಗೆದ ದಾಖಲೆ ಇದೆ.

ಸಂಚಾರಿನೇತ್ರ ಚಿಕಿತ್ಸಾ ಘಟಕವಲ್ಲದೆ ದಾವಣಗೆರೆಯಲ್ಲಿ ನೇತ್ರಚಿಕಿತ್ಸಾ ಕೇಂದ್ರವೊಂದನ್ನು ಸ್ಥಾಪಿಸಿದ್ದು–ಇವುಗಳೆಲ್ಲ ಸಾರ್ವಜನಿಕ ಟ್ರಸ್ಟ್‌ಗಳಾಗಿವೆ. ಈ ಟ್ರಸ್ಟ್ ಬೆಂಗಳೂರು, ಬೆಳಗಾಂವಿ ಮತ್ತು ದಾವಣಗೆರೆಯಲ್ಲಿ ಉಚಿತ ಕಣ್ಣಾಸ್ಪತ್ರೆಗಳನ್ನು ಹೊಂದಿದೆ.

ಮೋದಿಯವರು ಅನೇಕ ಬಾರಿ ಅಮೆರಿಕ, ರಷ್ಯ ಸಂದರ್ಶಿಸಿ ಅಲ್ಲಿ ತಮ್ಮ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಪ್ರದರ್ಶಿಸಿದ್ದಾರೆ. ನೇತ್ರಚಿಕಿತ್ಸೆಯ ದೊರೆ, ಸಾಮೂಹಿಕ ನೇತ್ರಚಿಕಿತ್ಸಾ ವಿಧಾನದ ಆದ್ಯಪ್ರವರ್ತಕ, ನೇತ್ರದಾನಿ, ಕಣ್ಣು ಕೊಡುವ ಅಣ್ಣ ಎಂದು ಇವರನ್ನು ವರ್ಣಿಸುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಮೋದಿಯವರು ತಮ್ಮ ಸುತ್ತ ತ್ಯಾಗಜೀವಿಗಳ ದೊಡ್ಡಗುಂಪನ್ನೇ ಕಟ್ಟಿ ಮಾನವೀಯ ಸೇವೆಗೆ ನಿಂತ ಮಹಾವ್ಯಕ್ತಿಯಾಗಿದ್ದರು. ಜೀವಿತಾವಧಿಯಲ್ಲೇ ಇವರೊಂದು ದಂತಕತೆಯಾದರು.

ಭಾರತ ಸರ್ಕಾರ ಇವರ ಕಾರ್ಯವನ್ನು ಗುರುತಿಸಿ 1956ರಲ್ಲಿ ಪದ್ಮಶ್ರೀ, 1968ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಗೌರವಿಸಿತು. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟೊರೇಟ್ ಪ್ರಶಸ್ತಿಯನ್ನು ನೀಡಿವೆ. ಮೋದಿಯವರ ಮಾನವೀಯ ಕಾರ್ಯಕ್ಕೆ ದೇಶ–ವಿದೇಶಗಳಲ್ಲಿ ಖ್ಯಾತಿ ಮನ್ನಣೆ ಮತ್ತು ಗೌರವ ಲಭಿಸಿವೆ. ಕರ್ನಾಟಕ ಸರ್ಕಾರ ಮೋದಿಯವರನ್ನು ಕುರಿತಂತೆ ಒಂದು ಸಾಕ್ಷ್ಯಚಿತ್ರವನ್ನು ತಯಾರಿಸಿದೆ.

**(ಪಿ.ಎಸ್.ಎಸ್‌ಪಿ.)**

**ಮೋಹನದಾಸ:** ಸು. 1750. ಹೆಸರಾಂತ ಹರಿದಾಸರು. ಬಡತನದ ಬೇಗೆಯಿಂದ ಇವರ ತಾಯಿ ರೋಗದ ಕೂಸನ್ನು ತುಂಗಭದ್ರೆಗೆ ಎಸೆಯ ಬೇಕೆಂದಿದ್ದಾಗ ವಿಜಯದಾಸರ ಅನುಗ್ರಹದಿಂದ ಬದುಕಿದರು. ಅವರಿಂದ ಮೋಹನ ಎಂದು ಹೆಸರು ಹೊಂದಿ ಮೋಹನದಾಸರಾಗಿ ಮೋಹನವಿಠಲ ಎಂಬ ಅಂಕಿತದಿಂದ ಸುಳಾದಿ, ಕೀರ್ತನೆ ಮತ್ತು ಉಗಾಭೋಗಗಳನ್ನು ರಚಿಸಿದ್ದಾರೆ. ಇವರಿಗೆ ವಿಜಯದಾಸರಲ್ಲಿ ಹೆಚ್ಚು ಗೌರವವಿದ್ದು ಅವರನ್ನು ಕುರಿತಂತೆಯೂ ಕೀರ್ತನೆಗಳನ್ನು ಬರೆದಿದ್ದಾರೆ. ಇವರ ಅನೇಕ ರಚನೆಗಳಲ್ಲಿ ಹರಿಭಕ್ತಿಯನ್ನು ಪ್ರಧಾನವಾಗಿ ಬೋಧಿಸಿರುವುದು ಕಂಡುಬರುತ್ತದೆ.

ಕೋಲುಹಾಡು ಇವರ ಒಂದು ಪ್ರಮುಖವಾದ ರಚನೆ. ಇದರಲ್ಲಿ 217ನುಡಿಗಳಿವೆ. ಇದು ಜನಪದ ಸಾಹಿತ್ಯದ ಕೋಲು ಪದಗಳ ಮಟ್ಟಿನಲ್ಲಿದೆ. ನಾಲ್ಕು ಪಾದಗಳಿಗೆ ಒಂದು ನುಡಿ. ಈ ರಚನೆಯಲ್ಲಿ ಸುಮಾರು ಅರ್ಧಭಾಗ ವಿಷ್ಣುವಿನ ಸ್ತುತಿಗೆ ಮೀಸಲಾಗಿದೆ. ಇದರಲ್ಲಿ ಸುಭದ್ರೆ–ರುಕ್ಮಿಣಿ, ಕೃಷ್ಣಾರ್ಜುನ ಸಂಭಾಷಣೆ ಇದೆ. ನೀತಿನುಡಿಗಳಂತಿರುವ ಇವುಗಳ ತತ್ತ್ವ ಸಾಹಿತ್ಯದೃಷ್ಟಿ ಯಿಂದ ನೋಡಿದಾಗ ಕಡಿಮೆಯೇ. ಒಂದು ನುಡಿ:

ಭಾವಜ್ವರ ಸಂಗ ಶ್ಯಾವಿಗೆ ಉಂಡಂತೆ
ಭಾವವನರಿಯದ ಬಲುಹೀನ–ಕೋಲೆ
ಭಾವವನರಿಯದ ಬಲುಹೀನರ ಸಂಗ
ಬೇವಿನ ಹಾಲ ಕುಡಿದಂತೆ–ಕೋಲೆ

ಏನೆಲೊ, ಮೂರ್ ದುಡ್ಡು, ಭಾವಯ್ಯ, ತಲೆಹೊಡಕ, ತಿರುಗಲ ತಿಪ್ಪಿ, ಮನೆಮಾರಿ, ಪುಂಡುಗಾರ, ಲಂಡರ್ ಗೊಡವೆ ಮುಂತಾದ ಆಡು ಮಾತುಗಳನ್ನು ಇವರು ಸಮರ್ಥವಾಗಿ ಕೀರ್ತನೆಗಳಲ್ಲಿ ಬಳಸಿಕೊಂಡಿದ್ದಾರೆ. (ಎಚ್.ಆರ್.ಡಿ.)

**ಮೋಳಿಗೆ ಮಾರಯ್ಯ:** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಅರಸೊತ್ತಿಗೆ ಬಿಟ್ಟು ಕಾಯಕವೇ ಕೈಲಾಸ ಎಂಬ ನುಡಿಯನ್ನು ಸ್ವೀಕರಿಸಿ ಸೌದೆ ಒಡೆಯುವ ಕಾಯಕವನ್ನು ಕೈಗೊಂಡು ನಡೆನುಡಿಗಳಲ್ಲಿ ಆದರ್ಶವಾಗಿ ಬಾಳಿದವ. ಇವನಿಗೆ ಮೋಳಿಗಯ್ಯ ಎಂಬ ಹೆಸರೂ ಇದೆ. ಮೊದಲಿಗೆ ಈತ ಕಾಶ್ಮೀರ ದೇಶದ ಮಾಂಡವ್ಯಪುರದ ರಾಜನಾಗಿದ್ದ ನೆಂದೂ ಅನಂತರ ಬಸವಣ್ಣನವರ ವಿಚಾರಗಳ ಆಕರ್ಷಣೆಗೊಳಗಾಗಿ ರಾಜ್ಯವನ್ನು ತ್ಯಜಿಸಿ ತನ್ನ ಹೆಂಡತಿ ಗಂಗಾದೇವಿಯೊಂದಿಗೆ ಕಲ್ಯಾಣಕ್ಕೆ ಬಂದು ಅಲ್ಲಿ ಮೋಳಿಗೆ ಮಾರಯ್ಯನಾದನೆಂದೂ ಹೆಂಡತಿ ಮಹಾದೇವಿಯಾ ದಳೆಂದೂ ವೀರಶೈವ ಗ್ರಂಥಗಳು ಹೇಳುತ್ತವೆ. ತೆಲುಗು ಬಸವಪುರಾಣಮು, ಕನ್ನಡ ಬಸವಪುರಾಣ, ಶಿವತತ್ತ್ವಚಿಂತಾಮಣಿ, ವೀರಶೈವಾಮೃತ ಮಹಾಪು ರಾಣ, ಪ್ರಭುದೇವರಪುರಾಣ, ರಾಘವಾಂಕಚಾರಿತ್ರ, ಗುರುರಾಜಚಾರಿತ್ರ, ವೃಷಭೇಂದ್ರವಿಜಯ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ, ಶರಣಲೀಲಾಮೃತ, ಬೋರಬಸವಪುರಾಣ ಮೊದಲಾದ ಗ್ರಂಥಗಳಲ್ಲಿ ಇವನ ಚರಿತ್ರೆ ನಿರೂಪಿತವಾಗಿದೆ. ಹೊನ್ನವಳ್ಳಿಯ ಗೌರಾಂಕ (ಸು. 1525) ಈತನನ್ನು ಕುರಿತು ಮೋಳಿಗಯ್ಯನ ಪುರಾಣ ಎಂಬ ಕಾವ್ಯವನ್ನು ಬರೆದಿದ್ದಾನೆ. ಪ್ರಭುದೇವರ ಶೂನ್ಯಸಂಪಾದನೆಯಲ್ಲಿ ಮೋಳಿಗಯ್ಯಗಳ ಸಂಪಾದನೆ ಎಂಬ ಭಾಗವಿದೆ. ಕೀರ್ತನೆಕಾರರು ತಮ್ಮ ಕೀರ್ತನೆಗಳಲ್ಲಿ ಈತನನ್ನು ಕೊಂಡಾಡಿದ್ದಾರೆ. ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ ಮೊದಲಾದವರು ಈತನನ್ನು ತಮ್ಮ ಆದರ್ಶವ್ಯಕ್ತಿಯನ್ನಾಗಿ ಮಾಡಿಕೊಂಡಿದ್ದಾರೆ.

ಮಾರಯ್ಯ ಶ್ರೇಷ್ಠ ಶಿವಭಕ್ತನೂ ಆದರ್ಶ ಶರಣನೂ ಆಗಿದ್ದಂತೆ ಪ್ರಸಿದ್ಧ ವಚನಕಾರನೂ ಆಗಿದ್ದಾನೆ. ಈತನ 819 ವಚನಗಳು ದೊರಕಿವೆ. ನಿಃಕಳಂಕಮಲ್ಲಿಕಾರ್ಜುನ ಎಂಬುದು ಇವನ ವಚನಗಳ ಅಂಕಿತ. ಈ ವಚನಗಳಲ್ಲಿ ಷಟ್ಸ್ಥಲಸಿದ್ಧಾಂತದ ನಿರೂಪಣೆಯನ್ನು ಕಾಣಬಹುದಾಗಿದೆ.

ಈತನ ಸತಿ ಮಹಾದೇವಿಯೂ ವಚನಗಳನ್ನು ರಚಿಸಿದ್ದಾಳೆ. ಇದುವರೆಗೆ ಇವಳ 69 ವಚನಗಳು ದೊರಕಿವೆ. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಎಂಬುದು ಇವಳ ವಚನಗಳ ಅಂಕಿತ. (ಬಿ.ಎಸ್.ಎಸ್.)

**ಮೌಕ್ತಿಕ ಕವಿ:** ಸು. 1120. ಚಂದ್ರನಾಥಾಷ್ಟಕ ಎಂಬ ಗ್ರಂಥದ ಕರ್ತೃ. ಈ ಗ್ರಂಥವನ್ನು ಈತನೇ ಬರೆದನೆಂಬುದಕ್ಕೆ ಗ್ರಂಥಾಂತ್ಯದಲ್ಲಿರುವ ಕೃತಕೃತ್ಯಂ ಮೌಕ್ತಿಕ ಸತ್ಕವಿ ವಿರಚಿಸಿದೀಸಾರಮಪ್ಪಷ್ಟಕ ಶ್ರೀ ಸ್ತುತಿಯಂ ಎಂಬ ಮಾತುಗಳು ಆಧಾರವಾಗಿವೆ. ಇದೇ ಪದ್ಯದಲ್ಲಿ ಪೆಣ್ಣೆಂಗಡಲ ಪುರವರಾಧೀಶ್ವರಂ ಚಂದ್ರನಾಥಾ ಎಂದು ಊಹಿಸಬಹುದಾಗಿದೆ. ಈ ಪೆಣ್ಣೆಂಗಡಲು ಅಥವಾ ಹೆಣ್ಣೆಂಗಡಲು (ಕೊಡಗು ಜಿಲ್ಲೆ) ಜೈನ ಕೊಂಗಾಳ್ವರ ರಾಜ್ಯಕ್ಕೆ ಸೇರಿದ್ದು, ಇದನ್ನು ವೀರಕೊಂಗಾಳ್ವದೇವ ಸು. 1120ರಲ್ಲಿ ಮೇಘಚಂದ್ರನ ಶಿಷ್ಯ ಪ್ರಭಾಚಂದ್ರ ಸಿದ್ಧಾಂತದೇವನಿಗೆ ದಾನವಾಗಿ ಕೊಟ್ಟಂತೆ ಶಾಸನವೊಂದರಿಂದ ತಿಳಿದುಬರುತ್ತದೆ.

ಚಂದ್ರನಾಥಾಷ್ಟಕ ಚಂದ್ರನಾಥ ಸ್ತುತಿಪರವಾದ ಗ್ರಂಥ. ಕನ್ನಡದಲ್ಲಿ ಸ್ವತಂತ್ರವಾಗಿ ದೊರೆತಿರುವ ಅಷ್ಟಕಗಳಲ್ಲಿ ಮೊದಲನೆಯದು. ಒಂಬತ್ತು ವೃತ್ತಗಳಿವೆ. ಪ್ರತಿವೃತ್ತವೂ ಚಂದ್ರನಾಥ ಎಂದು ಮುಗಿಯುತ್ತದೆ. (ಕೆ.ಬಿ.)

**ಮೌರ್ಯರ ಆಳ್ವಿಕೆ:** ಪ್ರ.ಶ.ಪೂ. 4–3ನೆಯ ಶತಮಾನಗಳಲ್ಲಿ ಮಗಧದ ಪಾಟಲೀಪುತ್ರದಿಂದ ಆಳುತ್ತಿದ್ದ ರಾಜಮನೆತನ. ಈ ವಂಶದ ಮೂರನೆಯ ದೊರೆ ಅಶೋಕನ ಶಾಸನಗಳು ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಕೊಪ್ಪಳ (ಗವಿಮಠ ಮತ್ತು ಪಾಲ್ಕಿಗುಂಡು) ಹಾಗೂ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ದೊರೆತಿರುವುದರಿಂದ ಆ ಕಾಲದಲ್ಲಿ ಕರ್ನಾಟಕದ ಉತ್ತರ ಭಾಗದ ಪ್ರದೇಶಗಳು ಮೌರ್ಯ ಸಾಮ್ರಾಜ್ಯದಲ್ಲಿ ಸೇರ್ಪಡೆಯಾಗಿದ್ದುವೆಂಬುದು ಸ್ಪಷ್ಟ. ಉತ್ತರ ಭಾರತದಲ್ಲಿ ಭೀಕರ ಕ್ಷಾಮ ತಲೆದೋರುವುದೆಂದು ಅರಿತ ಚಂದ್ರಗುಪ್ತ ರಾಜ್ಯವನ್ನು ತ್ಯಜಿಸಿ, ತನ್ನ ಗುರು ಭದ್ರಬಾಹುವಿನೊಂ ದಿಗೆ ದಕ್ಷಿಣ ಭಾರತದ ಕಡೆಗೆ ಬಂದು ಶ್ರವಣಬೆಳಗೊಳದಲ್ಲಿ ನೆಲೆಸಿ, ಕೊನೆಯಲ್ಲಿ ಸಲ್ಲೇಖನ ವ್ರತವನ್ನು ಕೈಗೊಂಡು ಮರಣವನ್ನಪ್ಪಿದನೆಂದು ಜೈನ ಸಂಪ್ರದಾಯ ತಿಳಿಸುತ್ತದೆ. ಶ್ರವಣಬೆಳಗೊಳದಲ್ಲಿನ ಮಧ್ಯಕಾಲೀನ ಶಾಸನಗಳು ಈ ವಿಚಾರವನ್ನು ಸಮರ್ಥಿಸುತ್ತವೆ. ಈ ಚಂದ್ರಗುಪ್ತ ಯಾರೆಂಬ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯವಿದ್ದರೂ ಹೆಚ್ಚಿನವರಲ್ಲಿ ಈತ ಮೌರ್ಯ ಚಂದ್ರಗುಪ್ತ ಎಂಬ ಅಭಿಪ್ರಾಯ ಇರುವುದರಿಂದ, ಆ ಕಾಲದಲ್ಲಿ ಶ್ರವಣಬೆಳಗೊಳವನ್ನೂ ಒಳಗೊಂಡಿದ್ದ ಕರ್ನಾಟಕದ ದಕ್ಷಿಣದ ಭಾಗಗಳೂ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತೆಂದು ಊಹಿಸಬಹುದು. ಆದರೆ ಅಶೋಕನಾಗಲೀ ಅವನ ಹಿಂದಿನ ಮೌರ್ಯ ರಾಜರುಗಳಾಗಲೀ ದಕ್ಷಿಣ ಭಾರತದ ಮೇಲೆ ದಂಡೆತ್ತಿಬಂದು ರಾಜ್ಯ ವಿಸ್ತರಿಸಿದ ಬಗ್ಗೆ ಯಾವ ಆಧಾರಗಳೂ ಇಲ್ಲ. ಆದರೆ ಕ್ರಿಸ್ತಶಕಾರಂಭ ಕಾಲದ ಸಂಘಂ ತಮಿಳು ಸಾಹಿತ್ಯ ಮತ್ತು ಕರ್ನಾಟಕದ 11–12ನೆಯ ಶತಮಾನದ ಕೆಲವು ಶಾಸನಗಳಲ್ಲಿ ದಕ್ಷಿಣ ಭಾರತದಲ್ಲಿ ನಂದರ ಆಳ್ವಿಕೆಯಿದ್ದ ಪ್ರಸ್ತಾಪಗಳು ದೊರಕುವುದರಿಂದ ಕರ್ನಾಟಕ ಮೊದಲು ನಂದರ ಅಧೀನದಲ್ಲಿದ್ದು ಅನಂತರ ಅವರ ಉತ್ತರಾಧಿಕಾರಿಗಳಾದ ಮೌರ್ಯರು ತಮ್ಮ ಆಧಿಪತ್ಯ ವನ್ನು ಮುಂದುವರೆಸಿರಬೇಕೆಂದು ತರ್ಕಿಸಬಹುದು.

ಮೌರ್ಯರ ಕಾಲದ ಕರ್ನಾಟಕದ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಯ ವಿಷಯ ಹೆಚ್ಚು ತಿಳಿದಿಲ್ಲ. ರಾಜಾಜ್ಞೆಗಳು ಸುವರ್ಣಗಿರಿಯಲ್ಲಿನ ಪ್ರಾಂತ್ಯಾಧಿಕಾರಿಗಳ ಮುಖೇನ ಇಸಿಲದಲ್ಲಿನ ಮಹಾಮಾತ್ರರಿಗೆ ತಿಳಿಸಲಾಗುತ್ತಿದ್ದಿತೆಂದು ಬ್ರಹ್ಮಗಿರಿ ಗುಂಪಿನ ಶಾಸನಗಳಲ್ಲಿ ಉಕ್ತವಾಗಿರು ವುದರಿಂದ, ಸುವರ್ಣಗಿರಿ(ರಾಯಚೂರು ಜಿಲ್ಲೆಯ ಮಸ್ಕಿ, ಕನಕಗಿರಿ ಅಥವಾ

ಕರ್ನೂಲು ಜಿಲ್ಲೆಯ ಚೊನ್ನಗಿರಿ) ದಕ್ಷಿಣ ಭಾರತದಲ್ಲಿ ಮೌರ್ಯರ ಉಪರಾಜಧಾನಿಯಾಗಿದ್ದು, ಇಸಿಲ (ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ) ಈ ಪ್ರದೇಶದ ಆಡಳಿತ ಕೇಂದ್ರವಾಗಿದ್ದು, ಈ ಎರಡು ಸ್ಥಳಗಳಲ್ಲೂ ಬೇರೆ ಬೇರೆ ದರ್ಜೆಯ ರಾಜ್ಯಾಧಿಕಾರಿಗಳಿದ್ದರೆಂದು ತಿಳಿಯಬಹುದು. ಸಂಘಂ ಸಾಹಿತ್ಯದಲ್ಲಿ ದೊರಕುವ ಕೆಲವು ಆಧಾರಗಳಿಂದ ಈ ಪ್ರದೇಶದ ಲ್ಲಿದ್ದ ಮೌರ್ಯ ಸೈನ್ಯ, ಸ್ಥಳೀಯ ಕೋಶರ್ ಎಂಬ ಜನರೊಡನೆ ಕೂಡಿದ ದಕ್ಷಿಣ ಭಾರತದ ರಾಜಕೀಯದಲ್ಲಿ ಪ್ರಭಾವೀ ಪಾತ್ರವಹಿಸಿದ್ದಿತೆಂದು ಊಹಿಸಬಹುದು. ಮಹಾವಂಸ, ದೀಪವಂಸ ಮುಂತಾದ ಸಿಂಹಳದ ಬೌದ್ಧಗ್ರಂಥಗಳಲ್ಲಿ ಅಶೋಕನು ಕಳುಹಿಸಿದ ಭಿಕ್ಷುಗಳು ಕರ್ನಾಟಕದಲ್ಲಿ ಬೌದ್ಧ ಧರ್ಮವನ್ನು ಹರಡಿದರೆಂದು ತಿಳಿಸಿದೆ. ಬ್ರಹ್ಮಗಿರಿ, ಮಸ್ಕಿ ಮುಂತಾದೆಡೆಗಳಲ್ಲಿ ನಡೆದಿರುವ ಉತ್ಖನನಗಳಿಂದ ಸಾತವಾಹನಪೂರ್ವ ಕಾಲದ ಸಾಂಸ್ಕೃತಿಕ ಸ್ಥಳಗಳು ಬೃಹತ್ ಶಿಲಾಸಮಾಧಿ (ಮೆಗಾಲಿಥಿಕ್) ಸಂಸ್ಕೃತಿಯವಾಗಿರುವುದರಿಂದ ಮೌರ್ಯರ ಕಾಲದಲ್ಲಿ ಈ ಸಂಸ್ಕೃತಿಯೇ ಕರ್ನಾಟಕದಲ್ಲಿದ್ದಿರಬಹುದು. ಆದರೆ ಇದು ಬಹು ವಿವಾದಾಸ್ಪದ ವಿಷಯ. ಉತ್ತರ ಭಾರತದಲ್ಲಿ ದೊರೆತಿರುವ ಒತ್ತುಮುದ್ರೆಯ ನಾಣ್ಯಗಳು ಕರ್ನಾಟಕದ ಗುಲ್ಬರ್ಗ ಮತ್ತು ಬೆಳಗಾಂವಿ ಜಿಲ್ಲೆಯಲ್ಲಿ ದೊರಕಿರುವುದ ರಿಂದ, ಆ ಕಾಲದಲ್ಲಿ ಕರ್ನಾಟಕ ಉತ್ತರ ಭಾರತದೊಡನೆ ವ್ಯಾಪಾರಾದಿ ಸಂಪರ್ಕಗಳನ್ನೂ ಹೊಂದಿದ್ದು, ಪ್ರಾಯಶಃ ಈ ನೂತನ ರಾಜಕೀಯ ಆರ್ಥಿಕ ಸ್ಥಿತಿಯಿಂದಾಗಿ, ಸಾಂಸ್ಕೃತಿಕವಾಗಿ ಗ್ರಾಮೀಣ ಘಟ್ಟದಿಂದ ನಾಗರೀ ಕತೆಯ ಘಟ್ಟಕ್ಕೆ ಪರಿವರ್ತನೆ ಹೊಂದಲಾರಂಭಿಸಿರಬೇಕೆಂದು ಹೇಳಬಹುದು. ಅಶೋಕನ ಅನಂತರ ಕರ್ನಾಟಕ ಮೌರ್ಯರ ಕೈಬಿಟ್ಟಿರಬೇಕು.

(6–7ನೆಯ ಶತಮಾನಗಳಲ್ಲಿ ಕೊಂಕಣ–ಗೋವ ಪ್ರದೇಶದಲ್ಲಿ ಆಳುತ್ತಿದ್ದ ಮೌರ್ಯವಂಶದ ಚಂದ್ರವರ್ಮ ಮತ್ತು ಅನಿರ್ಜಿತವರ್ಮ ಎಂಬುವರ ಶಾಸನಗಳು ದೊರಕಿವೆ. ಆದರೆ ಈಗಿನ ಕರ್ನಾಟಕದ ಯಾವುದೇ ಭಾಗ ಇವರ ಆಳ್ವಿಕೆಗೆ ಒಳಪಟ್ಟಿದ್ದಂತೆ ತೋರುವುದಿಲ್ಲ.) *

# ಯ

**ಯಂತ್ರ ಉದ್ಯಮ:** ವೈಜ್ಞಾನಿಕ ಮತ್ತು ತಾಂತ್ರಿಕ ರಂಗಗಳಲ್ಲಿ ಅಗಾಧ ಮುನ್ನಡೆಯನ್ನು ಸಾಧಿಸಿರುವ ಆಧುನಿಕ ಯುಗದ ಆರ್ಥಿಕತೆಯಲ್ಲಿ ಯಂತ್ರಗಳ ಪಾತ್ರ ಮಹತ್ತ್ವದ್ದಾಗಿದ್ದು, ವಿವಿಧ ವಸ್ತುಗಳ ಉತ್ಪಾದನೆ ಮತ್ತು ವಿತರಣರಂಗಕ್ಕೆ ಮೂಲಾವಶ್ಯಕಗಳಾದ ಯಂತ್ರಗಳು ಮತ್ತು ಯಂತ್ರೋಪಕರಣಗಳನ್ನು ತಯಾರುಮಾಡುವುದು ಬಹುಮುಖ್ಯವಾದ ಉದ್ಯಮವಾಗಿ ರೂಪುಗೊಂಡಿದೆ. ವಿಶ್ವದ ಎಲ್ಲೆಡೆಯಲ್ಲೂ ಕಂಡುಬಂದಿರುವ ಕೈಗಾರಿಕಾ ಕ್ರಾಂತಿಯ ಪರಿಣಾಮ ಭಾರತವನ್ನು ತಲುಪುವ ಮೊದಲು ಈ ನಾಡಿನಲ್ಲಿ ಸಹ ಬಹು ಹಿಂದಿನ ಕಾಲದಿಂದಲೂ ತಿಗರಿ, ಮಗ್ಗ, ಕುಲುಮೆಗಳಂಥ ಬಹು ಸರಳವಾದ ಯಂತ್ರಗಳು ಬಳಕೆಯಲ್ಲಿದ್ದು ಅವುಗಳ ಉಪಯೋಗ ಸಣ್ಣ ಗೃಹ ಉದ್ಯಮಗಳಿಗೆ ಸೀಮಿತವಾಗಿತ್ತು. ಆದರೆ ಇಂದಿನ ಯಂತ್ರ ಉದ್ಯಮ ಪಾಶ್ಚಾತ್ಯ ದೇಶಗಳಲ್ಲಿ ನಡೆದ ವೈಜ್ಞಾನಿಕ ಮತ್ತು ಕೈಗಾರಿಕಾ ಕ್ರಾಂತಿಯ ಫಲ. ಸಹಜವಾಗಿ, 19ನೆಯ ಶತಮಾನ ಮತ್ತು 20ನೆಯ ಶತಮಾನದ ಮೊದಲ ದಶಕಗಳಲ್ಲಿ ಬೇರೆ ದೇಶಗಳಲ್ಲಿ, ಅದರಲ್ಲೂ ಬ್ರಿಟನ್‌ನಲ್ಲಿ ತಯಾರಾದ ಯಂತ್ರಗಳನ್ನು ಇಲ್ಲಿನ ಬಳಕೆಗೆ ಆಮದು ಮಾಡಿಕೊಳ್ಳುವುದು ಸಾಮಾನ್ಯವಾಗಿತ್ತು. ದೇಶದ ಆರ್ಥಿಕ ದೃಷ್ಟಿಯಿಂದ ಈ ಪರಾವಲಂಬನವನ್ನು ನಿಲ್ಲಿಸಿ ಅಥವಾ ಕಡಿಮೆ ಮಾಡಿ, ಇಲ್ಲಿಯೇ ಸ್ಥಳೀಯ ಆವಶ್ಯಕತೆಗಳಿಗೆ ಉಪಯುಕ್ತವಾದ ಯಂತ್ರಗಳು ಮತ್ತು ಉಪಕರಣಗಳನ್ನು ತಯಾರಿಸುವ ಪ್ರಯತ್ನಗಳು ನಡೆದು ಇಂದು ಕರ್ನಾಟಕದಲ್ಲಿಯೂ ಯಂತ್ರ ಉದ್ಯಮ ಬೃಹತ್ ಪ್ರಮಾಣದಲ್ಲಿ ಬೆಳೆದಿದೆ.

ಈ ರಂಗದ ಹೆಚ್ಚಿನ ಸಾಧನೆಗಳೆಲ್ಲ ಸ್ವಾತಂತ್ರ್ಯೋತ್ತರ ಕಾಲದ್ದೆಂದು ಹೇಳಬಹುದಾದರೂ ತತ್ಪೂರ್ವ ಈ ನಾಡಿನಲ್ಲಿ, ಅದರಲ್ಲೂ ಹಳೆಯ ಮೈಸೂರು ಸಂಸ್ಥಾನದ ಭಾಗದಲ್ಲಿ ಈ ದಿಶೆಯಲ್ಲಿ ಸ್ವಲ್ಪಮಟ್ಟಿನ ಚಟುವಟಿಕೆ ಆರಂಭವಾಗಿತ್ತು. ಈ ಶತಮಾನದ ಮೊದಲ ದಶಕಗಳಲ್ಲಿಯೇ ಕಾರ್ಯ ನಿರತವಾದ ಶಿವಸಮುದ್ರ ವಿದ್ಯುದಾಗಾರ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಯಂತ್ರೋದ್ಯಮದ ಬೆಳವಣಿಗೆಯ ಆವಶ್ಯಕತೆಗಳನ್ನು ಒದಗಿಸಿದ್ದುವು **(ನೋಡಿ : ಕೈಗಾರಿಕೆಗಳು)**.

2ನೆಯ ಮಹಾಯುದ್ಧದ ಕಾಲದಲ್ಲಿ ಈ ಉದ್ಯಮ ಇನ್ನೂ ಬೆಳೆಯಿತು. ಯಂತ್ರೋದ್ಯಮಕ್ಕೆ ಕುಶಲಿಗಳಾದ ಜನರ ಸಿದ್ಧತೆ ಮುಖ್ಯವೆಂದು ವಿಶ್ವೇಶ್ವರಯ್ಯನವರು ದಾನ ನೀಡಿ, 1942ರಲ್ಲಿ ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಸ್ವಲ್ಪ ಹಿಂದೆ, ಅಂದರೆ 1940ರಲ್ಲಿ, ಬೆಂಗಳೂರಿನ ಹಿಂದುಸ್ಥಾನ್ ವಿಮಾನ ಕಾರ್ಖಾನೆ ಪ್ರಾರಂಭವಾಗಿತ್ತು. ಮೈಸೂರು ಸರ್ಕಾರದ ಪಿಂಗಾಣಿ ಕಾರ್ಖಾನೆ, ವಿದ್ಯುತ್ ಕಾರ್ಖಾನೆ, ಕೇಂದ್ರೀಯ ಕೈಗಾರಿಕಾ ಕಾರ್ಯಾಗಾರ ಬೆಂಗಳೂರಿ ನಲ್ಲೂ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆ ಹರಿಹರದಲ್ಲೂ ಸ್ಥಾಪನೆ ಗೊಂಡವು. ಇವುಗಳ ಜೊತೆಗೆ ಖಾಸಗಿಯಾಗಿ ಸಣ್ಣಪುಟ್ಟ ಉದ್ಯಮಗಳೂ ಬೆಳೆದುವು.

ಕರ್ನಾಟಕದಲ್ಲಿ, ಅದರಲ್ಲೂ ಬೆಂಗಳೂರಿನಲ್ಲಿ ನೆಲೆಗೊಂಡಿದ್ದ ತಾಂತ್ರಿಕ ಪರಿಸರವನ್ನು ಗಮನಿಸಿದ ಭಾರತ ಸರ್ಕಾರ ಸ್ವಾತಂತ್ರ್ಯಾನಂತರದಲ್ಲಿ ಇಲ್ಲಿನ ಹಿಂದುಸ್ಥಾನ್ ವಿಮಾನ ಕಾರ್ಖಾನೆಯನ್ನು ಅಗಾಧವಾಗಿ ವಿಸ್ತರಿಸಿರುವು ದಲ್ಲದೆ ಹಿಂದುಸ್ಥಾನ್ ಮೆಷಿನ್ ಟೂಲ್ಸ್, ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್– ಈ ಬೃಹತ್ ಉದ್ಯಮಗಳನ್ನು ಇಲ್ಲಿಯೇ ಪ್ರಾರಂಭಿಸಿತು. ರಾಜ್ಯಸರ್ಕಾರವೂ ತನ್ನ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೈಗಾರಿಕೆಗಳಲ್ಲಿ ಬಂಡವಾಳ ಹೂಡುವುದು, ಅವಶ್ಯಕವಾದ ಉದ್ಯಮಗಳಿಗೆ ನೆರವು ನೀಡುವುದು, ಧನ ವಿನಿಯೋಗ ಮಾಡಲು ಇಚ್ಛಿಸುವವರಿಗೆ ಪ್ರೋತ್ಸಾಹ ನೀಡುವುದು, ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಿಸುವುದು ಹಾಗೂ ಅವುಗಳಿಗೆ ಅವಶ್ಯವಿರುವ ಹಣಕಾಸು ಮತ್ತು ಇತರ ತಾಂತ್ರಿಕ ಸೌಕರ್ಯಗಳನ್ನು ಒದಗಿಸುವುದು ಮುಂತಾದ ಕಾರ್ಯಕ್ರಮ ಗಳಿಂದ ಯಂತ್ರ ಮತ್ತು ಯಂತ್ರೋಪಕರಣಗಳ ಉತ್ಪಾದನಾರಂಗದಲ್ಲಿ ಖಾಸಗಿ ಉದ್ಯಮಿಗಳೂ ಭಾಗವಹಿಸಲು ಪ್ರೋತ್ಸಾಹ ನೀಡುತ್ತಿದೆ. ಕರ್ನಾಟಕ ರಾಜ್ಯ ಹಣಕಾಸು ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕಾ ಮಂಡಲಿ, ಸಣ್ಣ ಕೈಗಾರಿಕಾ ಸೇವಾಸಂಸ್ಥೆಗಳಂಥ ಅನೇಕ ಸರ್ಕಾರಿ ಕಾರ್ಯಶಾಖೆಗ ಳಿಂದ ಸಣ್ಣ ಉದ್ದಿಮೆಗಳಿಗೆ ನಾನಾ ರೀತಿಯ ಸಹಾಯ ಉತ್ತೇಜನ ದೊರೆಯುತ್ತಿದೆ. ಯಂತ್ರೋದ್ಯಮಕ್ಕೆ ಒಳ್ಳೆಯ ವಾತಾವರಣ, ಯೋಗ್ಯರಾದ ಕಾರ್ಮಿಕರು, ಸರ್ಕಾರದ ಸೌಕರ್ಯ ಕರ್ನಾಟಕದಲ್ಲಿ ವಿಶೇಷವಾಗಿ ಇರುವುದ ರಿಂದ ಇಲ್ಲಿ ಯಂತ್ರೋದ್ಯಮ ಬೆಳೆಯಲು ಅವಕಾಶವಾಗುತ್ತಿದೆ.

ಕರ್ನಾಟಕ ಯಂತ್ರೋದ್ಯಮದ ಬೀಡು ಎಂದು ಹೇಳಿದರೆ ತಪ್ಪಾಗಲಾರದು. ಹಾಸನದಲ್ಲಿ ಉಪಕರಣಗಳ ಕಾರ್ಖಾನೆ, ಧಾರವಾಡದಲ್ಲಿ ಗಡಿಯಾರದ ಕಾರ್ಖಾನೆ, ಬೆಂಗಳೂರಿನಲ್ಲಿ ಕಿರ್ಲೋಸ್ಕರ್ ವಿದ್ಯುತ್ ಕಾರ್ಖಾನೆ, ವಿದ್ಯುತ್ ಕಾರ್ಖಾನೆ – ಹೀಗೆ ಕರ್ನಾಟಕ ರಾಜ್ಯದ ಕೈಗಾರಿಕೆ ಬೆಳೆಯುತ್ತಿದೆ. ಅನೇಕ ಉಕ್ಕು ಪುನರ್ ಉರುಳು ಯಂತ್ರಾಗಾರ ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಹರಡಿವೆ. ಭಾರತ ಸರ್ಕಾರದ ರೈಲ್ವೆ ಇಲಾಖೆಯವರು ಬೆಂಗಳೂರಿನ ಯಲಹಂಕದ ಬಳಿ ರೈಲುಗಾಡಿಗಳಿಗೆ ಬೇಕಾದ ಗಾಲಿ ಮತ್ತು ಇರುಚು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಲು ಯೋಜಿಸಿದ್ದಾರೆ. ಕರ್ನಾಟಕ ಸರ್ಕಾರದ ಕೇಂದ್ರೀಯ ಕೈಗಾರಿಕಾ ಕಾರ್ಯಾಗಾರದವರ ವಿದ್ಯುತ್ ಚಾಲಕ ಎರಡು ಮತ್ತು ಮೂರು ಗಾಲಿಗಳ ವಾಹನಗಳ ತಯಾರಿಕೆಯ ಉದ್ಯಮ, ಮದ್ದೂರಿನ ಬಳಿ ಸ್ಥಾಪಿತವಾಗಿರುವ ಸ್ಕೂಟರ್ ಕಾರ್ಖಾನೆ, ಭದ್ರಾವತಿಯಲ್ಲಿ ಫೌಂಡ್ರಿ ಮತ್ತು ಪೋರ್ಜ್ ವಿಭಾಗ, ಧಾರವಾಡದ ಹತ್ತಿರ ಇರುವ ಕನ್ನಡ ಬೆರಳಚ್ಚಿನ ಯಂತ್ರಗಳ ಕಾರ್ಖಾನೆ ಮತ್ತು ಸ್ಕೂಟರ್ ಕಾರ್ಖಾನೆ ಇವೂ ಹೊಸದಾಗಿ ಬೆಳೆಯುತ್ತಿವೆ. ದೊಡ್ಡ ಉದ್ಯಮಗಳಿಗೆ ಪೂರಕವಾಗಿಯೋ ಅಥವಾ ಸ್ವತಂತ್ರವಾಗಿಯೋ ಯಂತ್ರ ಮತ್ತು ಯಂತ್ರೋಪಕರಣಗಳನ್ನು ತಯಾರಿಸುವ ನಾಲ್ಕಾರು ಖಾಸಗಿ ಘಟಕಗಳೂ ಕರ್ನಾಟಕದಲ್ಲಿವೆ.

ಕೆಲವು ಬೃಹತ್ ಉದ್ಯಮಗಳ ಪರಿಚಯದಿಂದ ಕರ್ನಾಟಕದ ಯಂತ್ರೋದ್ಯಮದ ವಿಸ್ತಾರವನ್ನು ತಿಳಿಯಬಹುದು.

1) ನ್ಯೂ ಗೌರ್ನಮೆಂಟ್ ಎಲೆಕ್ಟ್ರಿಕಲ್ ಫ್ಯಾಕ್ಟರಿ : ರಾಜ್ಯ ಸರ್ಕಾರ ಜರ್ಮನಿಯ ಎ.ಇ.ಜಿ. ಕಂಪನಿಯ ಸಹಯೋಗದೊಡನೆ ಈ ಕಾರ್ಖಾನೆಯನ್ನು 1965ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭಿಸಿತು. ವಿದ್ಯುತ್ ಯಂತ್ರಗಳ ತಯಾರಿಕೆ ಮುಖ್ಯ ಉದ್ದೇಶ. ನೂರಾರು ಕೋಟಿ ರೂಪಾಯಿಗಳನ್ನು ಬಂಡವಾಳ ಹೂಡಲಾಗಿದೆ. ಇಲ್ಲಿ ತಯಾರಾದ ಯಂತ್ರಗಳನ್ನು ಅನೇಕ ಕಡೆಗಳಿಗೆ ರಫ್ತು ಮಾಡಲಾಗುತ್ತಿದೆ.

2) ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ : 1954 ರಲ್ಲಿ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ತಯಾರಿಸಲು ಭಾರತ ಸರ್ಕಾರ ಬೆಂಗಳೂರಿನಲ್ಲಿ ಪ್ರಾರಂಭಿಸಿದ ಕಾರ್ಖಾನೆ. 1956ರಲ್ಲಿ ಮಧ್ಯಮ ಶಕ್ತಿ ಎಚ್.ಪಿ. ಟ್ರಾನ್ಸ್‌ಮೀಟರ್ಸ್ ಮತ್ತು ರಿಸೀವರ್ಸ್ ತಯಾರಿಕೆ ಪ್ರಾರಂಭವಾಯಿತು. 1,000 ಜನ ಕೆಲಸಗಾರರಿಂದ 60 ಲಕ್ಷ ರೂ. ಬೆಲೆಬಾಳುವ ವಸ್ತುಗಳು ತಯಾರು ಮಾಡಲ್ಪಟ್ಟವು. ಈಗ ಆರು ತಯಾರಿಕಾ ವಿಭಾಗಗಳಿವೆ. ಸು. 350 ಬಗೆಯ ಎಲೆಕ್ಟ್ರಾನಿಕ್ ಉಪಕರಣಗಳನ್ನು ಒಂದೇ ಕಾರ್ಖಾನೆಯಲ್ಲಿಯೇ ತಯಾರು ಮಾಡುತ್ತಿರುವುದು ಭಾರತದಲ್ಲಿಯೇ ಏಕೆ ವಿದೇಶಗಳ ಕಾರ್ಖಾನೆಗಳಿಗೆ ಹೋಲಿಸಿದರೂ ಒಂದು ವಿಶೇಷವೇ. ರಕ್ಷಣಾ ಇಲಾಖೆ, ರೈಲ್ವೆ, ಅಂಚೆ ಮತ್ತು ತಂತಿ ಇಲಾಖೆ, ಪ್ರಸಾರ ಮತ್ತು ವಿದ್ಯಾ ಇಲಾಖೆ, ವೈದ್ಯ ಇಲಾಖೆಗಳೂ ಇದರಲ್ಲಿ ತಯಾರಾದ ಉಪಕರಣಗಳನ್ನು ಉಪಯೋಗಿಸುತ್ತಿವೆ. ಇಲ್ಲಿರುವ 14 ಸಾವಿರ ಜನ ಕೆಲಸಗಾರರಲ್ಲಿ 3 ಸಾವಿರ ಜನ ಮಹಿಳೆಯರು.

ಎಚ್.ಎಫ್. ಮತ್ತು ವಿ.ಎಚ್.ಎಸ್. ಎಂಬ ಅನೇಕ ವಿಧವಾದ ಟ್ರಾನ್ಸ್‌ರಸೀವರ್ಸ್‌ಗಳನ್ನು, ವಾಲ್ವ್ ಟ್ರಾನ್ಸ್‌ಮೀಟರ್ಸ್, ಟ್ಯೂಬ್ಸ್, ರಾಡಾರ್ ಮತ್ತು ವೈದ್ಯಕೀಯ ರಂಗಕ್ಕೆ ಬೇಕಾದ ಅನೇಕ ಎಲೆಕ್ಟ್ರಾನಿಕ್ ಉಪಕರಣಗಳನ್ನು, ಗಣಕ ಯಂತ್ರಗಳಿಗೆ ಬೇಕಾದ ಡಿಜಿಟಲ್ ಸಿಂಫನಿಸಸ್ ಮುಂತಾದ ಉಪಕರಣಗಳನ್ನು ತಯಾರು ಮಾಡುತ್ತಿದೆ. ಸಂಶೋಧನೆ ಮತ್ತು ವಿಕಸನ ವಿಭಾಗಕ್ಕಾಗಿ ಒಟ್ಟು ಉತ್ಪಾದನೆಯಲ್ಲಿ ಸೇಕಡ 5ರಷ್ಟು ಖರ್ಚು ಮಾಡಿ ಹೊಸ ಉಪಕರಣಗಳನ್ನು ಕಂಡುಹಿಡಿಯಲು ಉತ್ತೇಜನ ಕೊಡಲಾಗುತ್ತಿದೆ. ಉತ್ಪಾದನೆಯಲ್ಲಿ ಸೇಕಡ 60ರಷ್ಟು ಸ್ವಾವಲಂಬಿಯಾಗಿದೆ.

ಇಲ್ಲಿ ತಯಾರಾದ ಕೋಟ್ಯಂತರ ರೂಪಾಯಿಗಳ ಬೆಲೆಬಾಳುವ ಉತ್ಪನ್ನಗಳನ್ನು ರಫ್ತು ಮಾಡಿದೆ. ಅಮೆರಿಕ, ಪಶ್ಚಿಮಜರ್ಮನಿ, ಇಟಲಿ, ಗ್ರೀಸ್, ತುರ್ಕಿ, ಸಿಂಗಪುರ್, ಹಾಂಗ್‌ಕಾಂಗ್, ಜಪಾನ್, ನ್ಯೂಜಿಲೆಂಡ್, ಆಸ್ಟ್ರೇಲಿಯ, ಕೀನ್ಯ, ಬ್ರೆಜಿಲ್, ಆರ್ಜೆಂಟಿನ, ಬಲ್ಗೇರಿಯ, ಯೂಗೋಸ್ಲಾವಿಯ, ಘಾನ, ಮಲೇಷ್ಯ, ಈಜಿಪ್ಟ್, ಇರಾನ್ ಮುಂತಾದ ದೇಶಗಳಿಗೆ ರಫ್ತು ಮಾಡಿ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಬಿ.ಇ.ಎಲ್. ಗುರುತನ್ನು ಹರಡಿದೆ. ಬಂಡವಾಳ ಹೂಡಿಕೆ ನೂರಾರು ಕೋಟಿಗಳನ್ನು ಮೀರಿದೆ. ಈ ಕಾರ್ಖಾನೆಯ ಒಂದು ವಿಭಾಗವನ್ನು ಉತ್ತರ ಪ್ರದೇಶದ ಘಾಜಿಯಾಬಾದಿನಲ್ಲಿ ಪ್ರಾರಂಭಿಸಲಾಗಿದೆ.

3) ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್: 1948ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಗಿ ಟೆಲಿಫೋನ್‌ಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಉಪಕರಣಗಳನ್ನು ತಯಾರು ಮಾಡುತ್ತಿದೆ. ಇದರಿಂದ ಟೆಲಿಫೋನುಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿ ಕೋಟ್ಯಂತರ ರೂಪಾಯಿಗಳ ವಿದೇಶೀ ವಿನಿಮಯದ ಉಳಿತಾಯವಾಗುತ್ತಿದೆ. ಏಷ್ಯ ಮತ್ತು ಆಫ್ರಿಕ ದೇಶಗಳು ಹಾಗೂ ಇಂಗ್ಲೆಂಡ್, ನ್ಯೂಜಿಲೆಂಡ್, ಬೆಲ್ಜಿಯಂ, ಗ್ರೀಸ್, ಐರ್ಲೆಂಡ್‌ಗಳಿಗೆ 1972ರವರೆಗೆ 4 ಕೋಟಿ ರೂಪಾಯಿಗಳ ಬೆಲೆಬಾಳುವ ಉಪಕರಣಗಳನ್ನು ರಫ್ತು ಮಾಡಿದೆ. 1972ರಲ್ಲಿ ಕಾರ್ಖಾನೆಯ ಆಸ್ತಿ 40.5ಕೋಟಿ ರೂಪಾಯಿಗಳು, 32.78 ಕೋಟಿ ಮಾರಾಟ.

4) ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್: ಸಾವಿರಾರು ಜನ ವರ್ಷಗಟ್ಟಲೆ ಮಾಡುವ ಮಣ್ಣಿನ ಕೆಲಸವನ್ನು ಕೆಲವೇ ಯಂತ್ರಗಳು ಕೆಲವೇ ದಿನಗಳಲ್ಲಿ ಮಾಡುವಂತಹ ಯಂತ್ರಗಳನ್ನು ಮಾಡುವ ಕಾರ್ಖಾನೆ ಇದು. ಭಾರತದಲ್ಲೇ ಮೊದಲನೆಯದು. ಅಮೆರಿಕದ ಲೆಟರ್ನೊ ವೆಸ್ಟಿಂಗ್ ಹೌಸ್ ಇವರ ಸಹಯೋಗದೊಡನೆ 1964ರಲ್ಲಿ ಈ ಕಾರ್ಖಾನೆ ಬೆಂಗಳೂರಿನ ಹಿಂದುಸ್ಥಾನ್ ವಿಮಾನ ಕಾರ್ಖಾನೆಯ ರೈಲ್ವೆಕೋಚ್ ವಿಭಾಗದಲ್ಲಿ ಪ್ರಾರಂಭವಾಯಿತು. 1965ರಲ್ಲಿ ರೈಲ್‌ಕೋಚ್ ಕಾರ್ಖಾನೆ ಎಚ್.ಎ.ಎಲ್. ನಿಂದ ಬೇರೆಯಾಗಿ ಬಿ.ಇ.ಎಂ.ಎಲ್. ಅನ್ನು ಸೇರಿತು. ಕರ್ನಾಟಕ ಸರ್ಕಾರ ಕೋಲಾರ ಚಿನ್ನದ ಗಣಿ ಪ್ರದೇಶದ ಹತ್ತಿರ ಕೊಟ್ಟ 1,800 ಎಕರೆ ಪ್ರದೇಶದಲ್ಲಿ ಸ್ಥಾಪಿತವಾಯಿತು. ಎರಡನೆಯ ಮಹಾಯುದ್ಧವಾದ ಮೇಲೆ ಹಿಂದುಸ್ಥಾನ್ ವಿಮಾನ ಕಾರ್ಖಾನೆಯ ಒಂದು ಭಾಗವಾಗಿ ರೈಲ್‌ಕೋಚ್ ವಿಭಾಗ 1947 ರಿಂದ ರೈಲುಗಾಡಿಯನ್ನು ತಯಾರಿಸಲು ಪ್ರಾರಂಭಿಸಿತು. ಸಮಗ್ರ ರೈಲುಗಾಡಿಗಳನ್ನು ಇಲ್ಲಿ ತಯಾರು ಮಾಡಲಾಗುತ್ತಿದೆ. ಎರಡನೆಯ ತರಗತಿ (ಹಿಂದಿನ ಮೂರನೆಯ ತರಗತಿ) ಗಾಡಿ, ಎಸ್.ಎಲ್.ಆರ್. ಪೋಸ್ಟಲ್ ಗಾಡಿಗಳು, ಸ್ಲೀಪರ್ ಗಾಡಿಗಳು – ಹೀಗೆ ವಿವಿಧ ಗಾಡಿಗಳನ್ನು ಸಹಸ್ರಾರು ಸಂಖ್ಯೆಯಲ್ಲಿ ತಯಾರಿಸಿದೆ. ಇವುಗಳನ್ನು ವಿವಿಧ ಕಡೆಗಳಿಗೆ ರಫ್ತು ಮಾಡಲಾಗಿದೆ. 20 ಮತ್ತು 50 ಟನ್ ಭಾರವನ್ನು ಸಾಗಿಸುವಂಥ ಟ್ರೈಲರ್‌ಗಳನ್ನು ತಯಾರಿಸಲಾಗುತ್ತಿದೆ. ಜಪಾನಿನ ಕೊಮಾಟ್ಸು ಕಂಪನಿಯವರ ಸಹಕಾರದೊಡನೆ ಕ್ರಾಲರ್ ಟ್ರ್ಯಾಕ್ಟರ್ಸ್ ಮಾಡಲಾಗುತ್ತಿದೆ. ವೆಸ್ಟಿಂಗ್ ಹೌಸ್ ಕಂಪನಿಯ ಸಹಕಾರದೊಡನೆ ವರ್ಷಕ್ಕೆ 850 ಯಂತ್ರಗಳನ್ನು ತಯಾರಿಸುವ ಯೋಜನೆಯೊಡನೆ ಮೋಟರೈಸ್ಡ್ ಸ್ಕ್ರೇಪರ್ಸ್, ಹಾಲ್‌ಪಾರ್, ಟಿಗಾರ್ಸ್, ಕ್ರಾಲರ್ ಮೋಟಾರ್ ಗ್ರೇಡರ್, ಟ್ರಾಕ್ಟರ್ ಶೊವೆಲ್ಸ್, ಮೋಟರೈಸ್ಡ್ ಕ್ರೇನ್ಸ್, ಫ್ರಂಟ್ ಎಂಡ್ ಲೋಡರ್ ಮುಂತಾದ ಉಪಕರಣಗಳನ್ನು ಕೆ.ಜಿ.ಎಫ್.ನ ಮೃಚ್ಚಾಲಕ ವಿಭಾಗದಲ್ಲಿ ತಯಾರಿಸಲಾಗುತ್ತಿದೆ. ಮಾರಾಟ, ದುರಸ್ತಿ ಮತ್ತು ಮಾರಾಟದ

ಅನಂತರದ ಸೇವೆಯ ಅನುಕೂಲಕ್ಕಾಗಿ ಒಂದು ವಿಭಾಗವೂ ಇದೆ. 1974–75 ರಲ್ಲಿ ಒಟ್ಟು ಉತ್ಪಾದನೆ 67.14 ಕೋಟಿ, ರಫ್ತು ವ್ಯಾಪಾರ 4.88 ಕೋಟಿ. 303 ರೈಲುಗಾಡಿಗಳು, 529 ಮಣ್ಣು ಎತ್ತುವ ಯಂತ್ರಗಳನ್ನು ಉತ್ಪಾದಿಸಲಾಗಿದೆ. 10,981 ಜನ ಒಟ್ಟು ಕೆಲಸಗಾರರು. ಆಸ್ತಿ 89.70 ಕೋಟಿ ರೂಪಾಯಿಗಳು.

ಈ ಕಾರ್ಖಾನೆ ಹೊರದೇಶಗಳಲ್ಲಿ ರಫ್ತು ವ್ಯಾಪಾರಕ್ಕೆ ಪ್ರಯತ್ನ ನಡೆಸುತ್ತಿದೆ. ಅಂತಾರಾಷ್ಟ್ರೀಯ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದೆ. ಮೃಚ್ಚಾಲಕ ಯಂತ್ರಗಳ ವಿಭಾಗದ ಸಂಶೋಧನೆ ಮತ್ತು ವಿಕಾಸದ ವಿಭಾಗ ಹೊಸ ಮಾದರಿಯ 1.3 ಘನ ಮೀಟರ್ ಮತ್ತು 2.3 ಘನ ಮೀಟರ್ ಡೋಜರ್ ಶೊವೆಲ್ಸ್ ಹಾಗೂ 4.5 ಘನ ಮೀಟರ್ ಫ್ರೆಂಟ್ ಎಂಡ್ ಲೋಡರನ್ನು ಅಭಿವೃದ್ಧಿಗೊಳಿಸುತ್ತಿದೆ.

5) ಹಿಂದುಸ್ಥಾನ್ ಮೆಷೀನ್ ಟೂಲ್ಸ್: 1953ರಲ್ಲಿ ಭಾರತ ಸರ್ಕಾರ ಸ್ವಿಟ್ಸರ್ಲೆಂಡಿನ ಆರಿಕ್ಲಾನ್ ಮೆಷೀನ್ ಟೂಲ್ಸ್ ಸಹಕಾರದೊಡನೆ ಈ ಕಾರ್ಖಾನೆಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿತು. ಎಚ್ 22 ಎಂಬ ಲೇತ್ ತಯಾರಿಸಲು ಪ್ರಾರಂಭಿಸಿ, ಬೇರೆ ಬೇರೆ ವಿಧವಾದ ಯಂತ್ರಗಳನ್ನು ಅಂದರೆ ಮಿಲ್ಲಿಂಗ್, ರೇಡಿಯಲ್ ಡ್ರಿಲ್ಲಿಂಗ್, ಎಚ್.ಬಿ. ಲೇತ್ ಮತ್ತು ಗ್ರೈಂಡಿಂಗ್ ಯಂತ್ರಗಳ ತಯಾರಿಕೆ ಪ್ರಾರಂಭವಾಯಿತು. 1961 ರಲ್ಲಿ 400 ಯಂತ್ರಗಳ ತಯಾರಿಕೆಯಾಯಿತು. 1961ರಲ್ಲಿ ತನ್ನದೇ ಆದ ಮತ್ತೊಂದು ಕಾರ್ಖಾನೆಯನ್ನು ಪ್ರಾರಂಭಿಸಿತು. 1965ರಲ್ಲಿ 2,000 ಯಂತ್ರಗಳನ್ನು ತಯಾರಿಸಲಾರಂಭಿಸಿ ಹರಿಯಾಣದ ಪಿಂಜೋರ್ ಮತ್ತು ಕೇರಳದ ಕಲಾಮಸರಿ ಮತ್ತು ಆಂಧ್ರಪ್ರದೇಶದ ಹೈದರಾಬಾದಿನಲ್ಲಿ ಮೂರು ಕಾರ್ಖಾನೆಗಳನ್ನು ಪ್ರಾರಂಭಿಸಿತು. ವಿಶೇಷ ಉದ್ದಿಶ್ಯವುಳ್ಳ ಯಂತ್ರಗಳ ತಯಾರಿಕೆಯ ಕಾರ್ಯದಲ್ಲಿ ತೊಡಗಿತು. ಭಾರೀ ಉತ್ಪಾದನೆ, ಸಾಮಾನ್ಯ ತಯಾರಿಕೆಯಿಂದ ಕಾರು ಮತ್ತು ಸೈಕಲ್ಲುಗಳ ಉತ್ಪಾದನೆಗೆ ಸಹಾಯಕವಾಯಿತು. ಗ್ರಾಹಕನಿಗೆ ಬೇಕಾಗುವಂಥ ಯಂತ್ರಗಳ ತಯಾರಿಕೆಯಿಂದ ಸ್ವಯಂಚಾಲನೆಗೆ ಅನುಕೂಲವಾಗುವಂಥ ಯಂತ್ರಗಳ ತಯಾರಿಕೆ ಕೈಗೊಳ್ಳಲಾಗಿದೆ.

ರಫ್ತು ವ್ಯಾಪಾರವನ್ನು ಹೆಚ್ಚಾಗಿ ನಡೆಸಿ ಅಮೆರಿಕ, ಪಶ್ಚಿಮಜರ್ಮನಿ, ಇಂಗ್ಲೆಂಡ್, ಆಸ್ಟ್ರೇಲಿಯ, ನ್ಯೂಜಿಲೆಂಡ್, ಪೋಲೆಂಡ್, ಹಂಗೇರಿ, ಚೆಕೊಸ್ಲೊವಾಕಿಯಾ, ಪೂರ್ವ ಜರ್ಮನಿ ಮತ್ತು ಬಲ್ಗೇರಿಯ ಮುಂತಾದ ದೇಶಗಳಿಗೆ ರಫ್ತು ಮಾಡಿದೆ. ಈ ಕಾರ್ಖಾನೆ ಸ್ವಯಂಚಾಲನೆಗೆ ಬಹಳ ಸಹಾಯ ಮಾಡಿದೆ.

6) ಎಚ್.ಎಮ್.ಟಿ. ಕೈಗಡಿಯಾರ ಕಾರ್ಖಾನೆ: ಇಡೀ ಭಾರತದಲ್ಲೇ ಮೊದಲನೆಯ ಕೈಗಡಿಯಾರದ ಕಾರ್ಖಾನೆ ಬೆಂಗಳೂರಿನಲ್ಲಿ 1960ರಲ್ಲಿ ಜಪಾನಿನ ಸಿಟಿಜನ್ ವಾಚ್ ಕಂಪನಿಯ ಸಹಕಾರದೊಡನೆ ಹಿಂದುಸ್ಥಾನ್ ಮೆಷೀನ್ ಟೂಲ್ಸ್ ಕಾರ್ಖಾನೆಯ ವಿಭಾಗವಾಗಿ ಸ್ಥಾಪಿತವಾಯಿತು. 1961ರಲ್ಲಿ ತಯಾರಿಕೆ ಆರಂಭವಾಗಿ ಜಪಾನಿನಿಂದ ಬಿಡಿ ಭಾಗಗಳನ್ನು ತರಿಸಿ ಜೋಡಿಸಿ 800 ಗಡಿಯಾರಗಳನ್ನು ತಯಾರು ಮಾಡಿತು. 1961–62ರಲ್ಲಿ 14,439, 1966–67ರಲ್ಲಿ 2.4 ಲಕ್ಷ ಗಡಿಯಾರಗಳು ತಯಾರಾದುವು. ಸಿಟಿಜನ್, ಜನತಾ, ನ್ಯೂಮನ್, ಜವಹರ್, ಸೋನಾ, ಸುಜಾತಾ, ಪೈಲಟ್ ಮುಂತಾದ ಗಡಿಯಾರಗಳು ತಯಾರಾಗಿ ವರ್ಷಕ್ಕೆ 2.5 ಲಕ್ಷ ಗಡಿಯಾರಗಳು ತಯಾರಾಗುತ್ತಿದ್ದವು. 10 ಲಕ್ಷ ಎಲೆಕ್ಟ್ರಾನಿಕ್ ಹಾಗೂ 40 ಲಕ್ಷ ಸಾಮಾನ್ಯ ಗಡಿಯಾರಗಳನ್ನು ತಯಾರಿಸುವ ಯೋಜನೆಯೂ ರೂಪಿತವಾಗಿತ್ತು. 6.7 ಲಕ್ಷ ಗಡಿಯಾರಗಳನ್ನು 18 ಮಾದರಿಗಳಲ್ಲಿ ತಯಾರಿಸಲಾಗುತ್ತಿದೆ. ಕೈಗಡಿಯಾರಗಳನ್ನು ತಯಾರಿಸಲು ಬೇಕಾಗುವ ವಸ್ತುಗಳಲ್ಲಿ ಸೇಕಡಾ 86ರಷ್ಟು ದೇಶೀಯವಾಗಿ ತಯಾರಿಸಲಾಗುತ್ತಿದೆ. ಉಳಿದ ಭಾಗವನ್ನು ಕೆಲವೇ ವರ್ಷಗಳಲ್ಲಿ ಇಲ್ಲೇ ತಯಾರು ಮಾಡುವ ಯೋಜನೆಯಿದೆ.

7) ಹಿಂದುಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್: 1940ರಲ್ಲಿ ಸುಪ್ರಸಿದ್ಧ ಕೈಗಾರಿಕೋದ್ಯಮಿ ವಾಲ್‌ಚಂದ್ ಹೀರಾಚಂದ್ ಅವರು ಬೆಂಗಳೂರಿನಲ್ಲಿ ಈ ಕಾರ್ಖಾನೆಯ ಶಂಕುಸ್ಥಾಪನೆ ಮಾಡಿದರು. ಇದಕ್ಕೆ ಮುಂಚೆ ವಿಮಾನದ ದುರಸ್ತಿಯನ್ನು ಭಾರತದಲ್ಲೇ ಮಾಡಿದರೂ ಬಿಡಿಭಾಗಗಳನ್ನು ಹೊರ ದೇಶಗಳಿಂದ ತರಿಸಬೇಕಾಗಿತ್ತು. 1940 ಡಿಸೆಂಬರ್ 25ರಂದು ಭಾರತ ಸರ್ಕಾರ, ಮೈಸೂರು ಸರ್ಕಾರ ಮತ್ತು ವಾಲ್‌ಚಂದ್ ಹೀರಾಚಂದ್ ಅವರು ಪಾಲುದಾರರಾಗಿ ಈ ಉದ್ಯಮ ಪ್ರಾರಂಭವಾಯಿತು. ಆಗಿನ ಮೈಸೂರು ಸರ್ಕಾರ ಕಾರ್ಖಾನೆಯ ನಿರ್ಮಾಣಕ್ಕೆ ನಿವೇಶನ ನೀಡಿತು. ಕಾರ್ಖಾನೆಯ ಅಸ್ತಿಭಾರ ಹಾಕಿದ 6 ತಿಂಗಳಲ್ಲೇ ಮೊದಲನೆಯ ಫೈಟರ್ ವಿಮಾನ ಹಾರಿತು. ಎರಡು ವರ್ಷಗಳ ಅನಂತರ ಈ ಕಾರ್ಖಾನೆಯನ್ನು ಭಾರತ ಸರ್ಕಾರ ವಹಿಸಿಕೊಂಡಿತು. 2ನೆಯ ಮಹಾಯುದ್ಧದ ಸಮಯದಲ್ಲಿ ಅಮೆರಿಕದ ಸೈನ್ಯಕ್ಕೆ ವಿಮಾನ ರಿಪೇರಿ, ಶುದ್ಧೀಕರಣ, ಬಿಡಿಭಾಗಗಳನ್ನು ಕಳಚಿ ಚೊಕ್ಕಟ ಮಾಡುವುದು–ಈ ಮೊದಲಾದ ಕೆಲಸ ಪ್ರಾರಂಭವಾಯಿತು. ಯುದ್ಧವಾದ ಅನಂತರ 16 ಸಾವಿರ ಜನ ಕೆಲಸಗಾರರನ್ನು 3 ಸಾವಿರಕ್ಕೆ ಇಳಿಸಿ ಡಕೋಟ ವಿಮಾನಗಳನ್ನು ಸರಿಪಡಿಸಿ ಜನಗಳ ಬಳಕೆಗೆ ಉಪಯೋಗವಾಗುವಂತೆ ಮಾಡಲಾಯಿತು.

1947ರಲ್ಲಿ ರೈಲುಗಾಡಿಗಳ ತಯಾರಿಕೆ ಪ್ರಾರಂಭವಾಯಿತು. 1946ರಲ್ಲಿಯೇ ವಿಮಾನ ತಯಾರಿಕೆಯ ಯೋಜನೆ ಪ್ರಾರಂಭವಾಗಿ ಸ್ವಾತಂತ್ರ್ಯ ಬಂದಮೇಲೆ ತರಬೇತಿ ವಿಮಾನ ತಯಾರಿಕೆ ಪ್ರಾರಂಭವಾಯಿತು. 1951ರಲ್ಲಿ ಈ ಕಾರ್ಖಾನೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಮಂತ್ರಾಲಯ ವಹಿಸಿಕೊಂಡಿತು.

1964ರಲ್ಲಿ ದೇಶಾದ್ಯಂತ ಇರುವ ವಿಮಾನ ಕಾರ್ಖಾನೆಗಳನ್ನು ಒಂದುಗೂಡಿಸಿ ಹಿಂದುಸ್ಥಾನ್ ಏರೋನಾಟಿಕ್ಸ್ ಸಂಸ್ಥೆಯಾಗಿ ರೂಪುಗೊಳಿಸಲಾಯಿತು. 1965ರಲ್ಲಿ ಇದರೊಂದಿಗೆ ಇದ್ದ ರೈಲ್‌ಕೋಚ್ ವಿಭಾಗ ಭಾರತ್ ಅರ್ಥ್ ಮೂವರ್ಸ್ ಜೊತೆ ಸೇರಿಕೊಂಡಿತು. ಬೆಂಗಳೂರಿನಲ್ಲಿ ಕೇಂದ್ರ ಕಛೇರಿ ಹೊಂದಿರುವ ಈ ಕಂಪೆನಿ ಬೆಂಗಳೂರು, ನಾಸಿಕ್, ಲಕ್ನೊ, ಕಾನ್ಪುರ, ಕೋರಾಪಟ್, ಹೈದರಾಬಾದುಗಳಲ್ಲಿ ತನ್ನ ವಿಭಾಗಗಳನ್ನು ಹೊಂದಿದೆ.

ಆರಂಭಕಾಲದಲ್ಲಿ ಹಾರ್ಲೋ ಪಿ.ಸಿ–5, ಟ್ರೈನರ್, ಹಾಕ್ ಟ್ರೈನರ್ ಬಾಂಬರ್ ವಿಮಾನಗಳನ್ನು ತಯಾರಿಸಲು ಪ್ರಾರಂಭಿಸಲಾಯಿತು. ಅದೇ ಕಾಲದಲ್ಲಿ 10 ಜನರ ಗ್ಲೈಡರ್ ಹಾರಿಸಲಾಯಿತು. 1943ರಲ್ಲಿ ಯುದ್ಧ ವಿಮಾನ ದುರಸ್ತಿ ಆರಂಭವಾಗಿ 1947–48ರಲ್ಲಿ ಎಚ್.ಟಿ.–2 ಟ್ರೈನರ್ ವಿಮಾನಗಳ ರಚನೆ ಪ್ರಾರಂಭವಾಯಿತು. 1950ರಲ್ಲಿ ವ್ಯಾಂಪೈರ್ ನ್ಯಾಟ್ ಜೆಟ್ ವಿಮಾನಗಳ ತಯಾರಿಕೆ ಪ್ರಾರಂಭಿಸಲಾಯಿತು. 1956ರಲ್ಲಿ ಜರ್ಮನಿಯ ಎಂಜಿನಿಯರುಗಳ ಸಹಾಯದಿಂದ ಎಚ್.ಎಫ್.–24 ಮಾರುತ್ ವಿಮಾನ ತಯಾರಿಸಲು ಪ್ರಾರಂಭವಾಗಿ 1961ರಲ್ಲಿ ಮೊದಲನೆಯ ವಿಮಾನ ಹಾರಿತು. ಹಾರಾಟಗಾರರ ಕ್ಲಬ್ಬಿಗೆ ಬೇಕಾದ ಪುಷ್ಪಕ್, ವ್ಯವಸಾಯಗಾರರಿಗೆ ಬೇಕಾಗುವ ವಸಂತ್ ಮತ್ತು ಕೃಷಿಕ್ ವಿಮಾನಗಳನ್ನು ತಯಾರಿಸಲಾಯಿತು. 1964ರಲ್ಲಿ ಬೇಸಿಕ್ ಜೆಟ್ ಟ್ರೈನರ್ ಕಿರಣ್ (ಎಚ್.ಜೆ.ಟಿ. 16) ರಚಿಸಿ ಹಾರಿಸಲಾಯಿತು. ಈಗ ಹೆಲಿಕಾಪ್ಟರ್ ವಿಭಾಗದಲ್ಲಿ ಅಲಾಟಿ ಮತ್ತು ಚೀತಾ ಇವುಗಳ ತಯಾರಿಕೆ ನಡೆಯುತ್ತಿದೆ.

1956ರಲ್ಲಿ ಪ್ರಾರಂಭವಾದ ಎಂಜಿನ್ ಕಾರ್ಖಾನೆಯಲ್ಲಿ ಆರ್.ಎಫ್.9–702(ಆರ್.ಫಿನ್) ಎಂಜಿನ್, ಡಾರ್ಟ್ ಎಂಜಿನ್ ತಯಾರಿಕೆ ನಡೆಯುತ್ತಿದೆ.

ಅರ್ಬನ್ ಟರ್ಬೋ ಜೆಟ್ ಎಂಜಿನ್ ಅನ್ನು ಹೆಲಿಕಾಪ್ಟರಿಗೆ ತಯಾರಿಸಲಾಗುತ್ತಿದೆ. ಉತ್ತಮವಾದ ಫೌಂಡ್ರಿ ಮತ್ತು ಫೋರ್ಜ್ ವಿಭಾಗಗಳೂ ಇವೆ. 1974–75ರಲ್ಲಿ ಇದರ ಆಸ್ತಿ 375 ಕೋಟಿ ರೂ. ಮಾರಾಟ 105 ಕೋಟಿ ರೂ.

8) ಮೋಟಾರ್ ಇಂಡಸ್ಟ್ರೀಸ್ ಕಂಪನಿ (ಮೈಕೊ): 1951ರಲ್ಲಿ ಜರ್ಮನಿಯ ರಾಬರ್ಟ್ ಬಾಷ್ ಕಂಪನಿಯ ಸಹಯೋಗದೊಡನೆ ಈ ಕಾರ್ಖಾನೆ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಡೀಸೆಲ್ ಫ್ಯೂಯೆಲ್ ಇಂಜೆಕ್ಷನ್ ಉಪಕರಣ ಮತ್ತು ಸ್ಪಾರ್ಕಿಂಗ್ ಪ್ಲಗ್‌ಗಳನ್ನು ತಯಾರಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ. ಭಾರತದಲ್ಲಿ ತಯಾರಾಗುತ್ತಿರುವ ಡೀಸೆಲ್ ಇಂಜಿನ್‌ಗಳುಳ್ಳ ಲೋಕೋಮೋಟಿವ್ ಟ್ರ್ಯಾಕ್ಟರ್ ಮತ್ತು ಇತರ ಯಂತ್ರಗಳಲ್ಲಿ ಈ ಕಾರ್ಖಾನೆಯಲ್ಲಿ ತಯಾರಾದ ಉಪಕರಣಗಳನ್ನು ಉಪಯೋಗಿಸಲಾಗುತ್ತಿದೆ. ನಾಸಿಕದಲ್ಲಿಯೂ ಒಂದು ಕಾರ್ಖಾನೆಯನ್ನು ಪ್ರಾರಂಭಿಸಲಾಗಿದೆ. ಆಮದು ನಿಲ್ಲಿಸಿ ವಿದೇಶೀ ವಿನಿಮಯದ ಉಳಿತಾಯವಾಗಿರುವುದಲ್ಲದೆ, ಪಶ್ಚಿಮ ಜರ್ಮನಿಯೊಂದಿಗೆ ರಫ್ತು ವ್ಯಾಪಾರದಿಂದ ಅಪಾರ ಹಣ ಗಳಿಸಿದೆ. ದೇಶದ ಪ್ರಮುಖ ಭಾಗಗಳಲ್ಲಿ ಸುಮಾರು ನೂರಾರು ಮಾರಾಟ ಹಾಗೂ ಸೇವಾ ಕೇಂದ್ರಗಳಿವೆ. ತೀವ್ರಗತಿಯಲ್ಲಿ ಅಭಿವೃದ್ಧಿಗೊಂಡ ಈ ಉದ್ಯಮ ಈಗ ಅತ್ಯಾಧುನಿಕ ವಾಹನಗಳ ಬಿಡಿ ಭಾಗಗಳನ್ನು ತಯಾರಿಸುತ್ತಿದೆ.

ಯಂತ್ರಗಳ ಸ್ವರೂಪ ಮತ್ತು ವಿನ್ಯಾಸ ಅವುಗಳ ಉಪಯೋಗಕ್ಕನುಗುಣವಾಗಿ ದಿನೇ ದಿನೇ ಬದಲಾಗುತ್ತಿವೆ. ಭಾರತ್ ಅರ್ಥ್ ಮೂವರ್ಸ್‌ನಂತಹ ಉದ್ಯಮ ಭಾರಿ ಗಾತ್ರದ, ನೆಲಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುವ ಯಂತ್ರಗಳನ್ನು ತಯಾರಿಸಿದರೆ ರೇಡಿಯೋಗಳು ಗಡಿಯಾರಗಳು, ಕಂಪ್ಯೂಟರ್‌ಗಳು, ಸ್ಕ್ಯಾನಿಂಗ್ ಯಂತ್ರಗಳು, ಕ್ಯಾಮರಾಗಳ ತಯಾರಿಕಾಕ್ಷೇತ್ರದಲ್ಲಿ ಸೂಕ್ಷ್ಮಾತಿ ಸೂಕ್ಷ್ಮ ಉಪಕರಣಗಳನ್ನು ತಯಾರಿಸುವ ಉದ್ಯಮಗಳು ಬೆಳೆದುಬಂದಿವೆ. ಯಂತ್ರಗಳು ನಾಗರಿಕತೆಯ ಪ್ರಮುಖ ಸಲಕರಣೆಗಳಾಗಿರುವುದರಿಂದ ಈ ಕ್ಷೇತ್ರ ಕ್ರಾಂತಿಕಾರಕ ಬದಲಾವಣೆ ಕಂಡಿದೆ. (ಎಚ್.ಎಸ್.)

**ಯಕ್ಷಗಾನ:** ಕರ್ನಾಟಕ ಸಂಸ್ಕೃತಿಯ ಒಂದು ಪ್ರಮುಖ ಅಂಗವಾಗಿ ಬೆಳೆದು ಬಂದಿರುವ ಜನಪದ ರಂಗಸಂಪ್ರದಾಯ ವಿವಿಧ ಪ್ರಭೇದಗಳೊಡನೆ ಕರ್ನಾಟಕದ ಅನೇಕ ಭಾಗಗಳಲ್ಲಿ ಇದು ಪ್ರಚಲಿತವಾಗಿದೆ. ಪ್ರಮುಖ ಪ್ರಭೇದಗಳನ್ನು ಹೀಗೆ ಗುರುತಿಸಬಹುದು.

1. ಯಕ್ಷಗಾನ ಬಯಲಾಟ

1) ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಪ್ರದೇಶ

ಅ) ಮೂಡಲಪಾಯ (ದೊಡ್ಡಾಟ, ಅಟ್ಟದಾಟ, ಯಕ್ಷಗಾನ ಬಯಲ್ಗತೆ)

ಆ) ಘಟ್ಟದ ಕೋರೆ

2. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು, ಶಿವಮೊಗ್ಗ ಜಿಲ್ಲೆಯ ಮಲೆನಾಡಿನ

ಗರ್ಭ ಪ್ರದೇಶ.

ಅ) ಪಡುವಲಪಾಯ (ಬಡಗತಿಟ್ಟು, ತೆಂಕ ತಿಟ್ಟು)

2) ತಾಳಮದ್ದಲೆ **(ನೋಡಿ)**

3) ಬೊಂಬೆಯಾಟಗಳು

ಅ) ಸೂತ್ರದ ಬೊಂಬೆಯಾಟ **(ನೋಡಿ)**

ಆ) ತೊಗಲು ಬೊಂಬೆಯಾಟ **(ನೋಡಿ)**

**ಪ್ರಾಚೀನತೆ:** ಯಕ್ಷಗಾನದ ಪ್ರಾಚೀನತೆಯ ಬಗ್ಗೆ ಹೆಚ್ಚಿನ ಮಾಹಿತಿ ದೊರಕುವುದಿಲ್ಲವಾದರೂ ಭರತಮುನಿಯ ನಾಟ್ಯಶಾಸ್ತ್ರದಲ್ಲಿ ಅಲ್ಲಲ್ಲಿ ತೋರಿಬರುವ ಕೆಲವು ಆಧಾರಗಳಿಂದ ಈ ಕಲೆ ಬಹಳ ಹಿಂದಿನಿಂದಲೂ ಇತ್ತೆಂಬುದು ಸ್ಪಷ್ಟವಾಗುತ್ತದೆ. ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ಯಕ್ಷಗಾನ ಎಂಬ ಹೆಸರಿನ ಉಲ್ಲೇಖ ಕಂಡುಬರುತ್ತದೆ. ಕರ್ನಾಟಕದಲ್ಲಿ ಸು. 12ನೆಯ ಶತಮಾನದಲ್ಲಿ ಒಂದು ಗಾನ ಸಂಪ್ರದಾಯ ಯಕ್ಷಗಾನ ಎಂಬ ಹೆಸರಿನಿಂದ ಬಳಕೆಯಲ್ಲಿತ್ತು. ಮುಂದೆ ಅದು ನಾಟಕರೂಪದಲ್ಲಿ ಪರಿವರ್ತನೆಗೊಂಡಾಗ ಬಯಲಾಟ, ದಶಾವತಾರ ಆಟ, ದೊಡ್ಡಾಟ, ಪಾರಿಜಾತ ಎಂಬ ಹೆಸರುಗಳಿಂದ 15ನೆಯ ಶತಮಾನದ ಹೊತ್ತಿಗೆ ರೂಢಿಗೆ ಬಂದಂತೆ ಕಾಣುತ್ತದೆ. ಈ ಬಯಲಾಟದ ಇನ್ನೊಂದು ರೂಪ ತಾಳಮದ್ದಲೆ ಅಥವಾ ಯಕ್ಷಗಾನ ಕೂಟ. ಇದು 16ನೆಯ ಶತಮಾನದಲ್ಲಿ ರೂಢಿಯಾಗಿದ್ದಂತೆ ತಿಳಿದುಬರುತ್ತದೆ.

ತೆಂಕತಿಟ್ಟು ವೇಷಧಾರಿ

**ಪಡುವಲಪಾಯ:** ಈ ಪ್ರಭೇದದಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಆವಶ್ಯಕವಾದ ರಂಗಸ್ಥಳವನ್ನು ಹದಿನೈದು ಅಡಿ ಚಚ್ಚೌಕಾಕಾರದಲ್ಲಿ ನಾಲ್ಕು ಮೂಲೆಗಳಲ್ಲಿ ನಾಲ್ಕಾರು ಬಿದಿರು ಕಂಬಗಳನ್ನು ನೆಟ್ಟು ಸಿದ್ಧಪಡಿಸುವರು. ರಂಗಸ್ಥಳಕ್ಕಿಂತ ಸ್ವಲ್ಪ ದೂರದಲ್ಲಿ ಚೌಕಿಯನ್ನು (ನಟರು ವೇಷಹಾಕಿಕೊ

ಳ್ಳುವ ಸ್ಥಳ) ಕಟ್ಟುವರು. ಆಟದ ಪ್ರಾರಂಭ ನೇಪಥ್ಯ ಗೃಹವಾದ ಈ ಚೌಕಿಯಿಂದಲೇ. ಅಲ್ಲಿ ಮೊದಲಿಗೆ ವಿನಾಯಕನನ್ನು ಸ್ತುತಿಸಿ, ದೇವರ ಮುಂದೆ ಕಿರೀಟ, ಗೆಜ್ಜೆ, ಹಣ್ಣುಕಾಯಿ ಇಟ್ಟು ಹನುಮನಾಯಕ (ಹಾಸ್ಯಗಾರ) ಆರತಿ ಎತ್ತುತ್ತಾನೆ. ದೇವರಿಗೆ ಎತ್ತಿದ ಆರತಿಯನ್ನೇ ವಾದ್ಯಗಳಿಗೂ ಎತ್ತುತ್ತಾನೆ. ಅನಂತರ ಹನುಮನಾಯಕನಿಂದ ವೀಳೆಯ ಪಡೆದ ಭಾಗವತರು ದೇವರಿಗೆ ಎತ್ತಿದ ಆರತಿಯೊಂದಿಗೆ ಮದ್ದಲೆಗಾರರು ಕೋಡಂಗಿಗಳೊಂದಿಗೆ ದೇವತಾಸ್ತುತಿ ಮಾಡುತ್ತಾ ರಂಗಸ್ಥಳ ಪ್ರವೇಶಿಸುತ್ತಾರೆ.

ಯಕ್ಷಗಾನ ಆಟದಲ್ಲಿ ಭಾಗವತನೇ ಪ್ರಥಮ ಪಾತ್ರದಾರಿ. ಎರಡನೆಯ ವೇಷಧಾರಿಯೇ ಕಥಾನಾಯಕ. ಭಾಗವತನು ಸೂತ್ರಧಾರಿಯಾಗಿ ಕಾರ್ಯ ನಿರ್ವಹಿಸುತ್ತಾನೆ. ರಾಕ್ಷಸ ಪಾತ್ರ ನಿರ್ವಹಿಸುವವರು ಬಣ್ಣದ ವೇಷದವರು. ಆಟದ ಆರಂಭದಿಂದ ಕೊನೆಯ ಮಂಗಳದ ತನಕ ದೇವರನ್ನು ಚೌಕಿಗೆ ಮುಟ್ಟಿಸುವ ತನಕವೂ ಭಾಗವತನಿರಬೇಕು.

ಭಾಗವತರ ಪರಿವಾರ ರಂಗಸ್ಥಳಕ್ಕೆ ಬಂದೊಡನೆ ಚಂಡೆ, ಮದ್ದಲೆ (ಮೃದಂಗ), ಜಾಗಟೆ ಮತ್ತು ಚಕ್ರತಾಳಗಳನ್ನು ಬಾರಿಸುವ ಪದ್ಧತಿಯಿದ್ದು, 'ಕೇಳಿ ಕೇಳಿ ಹೊಡೆಯುವುದು' ಎನ್ನುತ್ತಾರೆ. ಹೀಗೆ ಬಡಿಯುವುದರ ಉದ್ದೇಶ ಊರಿನ ಜನಕ್ಕೆ ಆಟದ ಆರಂಭದ ಅರಿವಾಗಲಿ ಎಂಬುದೊಂದಾದರೆ, ಇನ್ನೊಂದು ದೇವರ ಲೀಲೆಯನ್ನು ಆಡುವ ರಂಗಸ್ಥಳದಲ್ಲಿನ ಭೂತಾಸುರರ ಉಚ್ಚಾಟನೆ ಮತ್ತು ವಿಘ್ನಶಾಂತಿ ಆಗಲಿ ಎಂಬುದು.

ರಂಗಸ್ಥಳದಲ್ಲಿ ಮೊದಲು ಗಣಪತಿ ಪೂಜೆ, ಅನಂತರ ಇತರ ದೇವರುಗಳ ಸ್ತುತಿ ನಡೆಯುತ್ತದೆ. ಇವಕ್ಕೆಲ್ಲ ತಕ್ಕ ಪದಗಳು ರಾಗತಾಳಸಹಿತ ಇವೆ. ಈ ಹಾಡುಗಳ ಜೊತೆಗೆ ಮದ್ದಲೆಯ ಗತ್ತುಗಳನ್ನು ಹೇಳುತ್ತಾರೆ. ಜೊತೆಯಲ್ಲಿ ಸ್ವಲ್ಪ ಕುಣಿತವೂ ನಡೆಯುತ್ತದೆ. ರಂಗಸ್ಥಳಕ್ಕೆ ಬರುವ ವೇಷಧಾರಿಗಳೆಲ್ಲರೂ ಭಾಗವತರಿಗೂ ರಂಗಸ್ಥಳಕ್ಕೂ ವಂದಿಸುತ್ತಾರೆ.

ಇಷ್ಟೆಲ್ಲ ಮುಗಿದ ಮೇಲೆ ರಂಗಸ್ಥಳಕ್ಕೆ ಮೊದಲನೆಯ ಪ್ರವೇಶವೇ ಹನುಮನಾಯಕ ಮತ್ತು ಅವನ ಪರಿವಾರದ ಕೋಡಂಗಿಗಳದ್ದು, ಇವರ ವೇಷಭೂಷಣ ವಿಚಿತ್ರ ತರದ್ದಾಗಿದ್ದು ತಲೆಯ ಮುಂಡಾಸಿಗೆ ಮಾವಿನ ಸೊಪ್ಪು ಮತ್ತು ನೆಕ್ಕಿ ಸೊಪ್ಪುಗಳನ್ನು ಸಿಕ್ಕಿಸಿಕೊಂಡಿರುತ್ತಾರೆ. ಹಿಮ್ಮೇಳದಲ್ಲಿ ಜಾಗಟೆ, ಮದ್ದಲೆ, ಚಂಡೆ, ಚಕ್ರತಾಳಗಳ ಗತ್ತಿಗೆ ಅನುಗುಣವಾಗಿ ಕುಣಿಯುತ್ತಾರೆ. ಯಕ್ಷಗಾನದಲ್ಲಿ ನೃತ್ಯ ಪ್ರಾರಂಭವಾಗುವುದು ಇಲ್ಲಿಂದಲೇ. ಕೋಡಂಗಿ ಮತ್ತು ಹನುಮನಾಯಕರಿಗೆ ಸಭಾಲಕ್ಷಣದಲ್ಲಿ ಅಧಿಕವಾದ ಸ್ವಾತಂತ್ರ್ಯವಿದೆ. ಸಭಾಲಕ್ಷಣ ಕಾಲಕ್ಷೇಪ ಇದರಿಂದಾಗಿ ವಿಸ್ತರಿಸುತ್ತದೆ. ಅನಂತರ ಭಾಗವತರು ಸಭಾಪತಿಯ ಲಕ್ಷಣ, ಸಭಿಕರ ಲಕ್ಷಣ, ರಂಗಸ್ಥಳದ ವಿವರ, ಆಟ ಆಡಿಸುವವರು ಹೇಗಿರಬೇಕು, ನೋಡುವ ಭಕ್ತರು ಎಂತಿರಬೇಕು, ಭಾಗವತ ಎಂದರೆ ಯಾರು, ಸಂಗೀತಗಾರ ಎಂದರೆ ಯಾರು ಮೊದಲಾದುವನ್ನು ವಿವರಿಸುವರು. ಭಾಗವತರು ಮತ್ತು ಕೋಡಂಗಿಗಳ ನಡುವೆ ಸ್ವಲ್ಪ ಮಟ್ಟಿನ ಸರಸಸಂವಾದ ನಡೆದ ಅನಂತರ ಬಾಲಗೋಪಾಲಕರ ನೃತ್ಯ ಆರಂಭವಾಗುತ್ತದೆ. ಸುಂದರವಾದ ಕೇದಗೆ ಮುಂತಲೆ ಧರಿಸಿ, ಭುಜಕೀರ್ತಿ, ಎದೆಕಟ್ಟು, ಒಡ್ಯಾಣ, ವೀರಕಸೆ ಮುಂತಾದವುಗಳನ್ನು ಧರಿಸಿದ ಸುಂದರ ವೇಷದ ಇಬ್ಬರು ಬಾಲಕರು ನರ್ತಿಸಿ ನಿರ್ಗಮಿಸುವರು. ಅನಂತರ ಭಾಗವತರು ಮುಂದಿನಿಂದ ತೆರೆವಲ್ಲಿ ಎಂಬ ಹೆಸರಿನ ಪರದೆಯನ್ನು ಹಿಡಿದಿದ್ದಾಗ ಒಬ್ಬ ಸ್ತ್ರೀವೇಷಧಾರಿ ಅದರೊಳಗೆ ಬಂದು ನಿಲ್ಲುವನು. ಆಗ ಭಾಗವತರ ಹಾಡಿನ ಚರಣವೊಂದನ್ನು ಹಾಡಿ ಜಾಗಟೆಯನ್ನು ಎತ್ತಿ ಹಿಡಿದು ಬಾರಿಸಿದೊಡನೆಯೇ ಮದ್ದಲೆಯವನು ಊವಿಯಿಂದ ಅನೇಕ ತರದ ನಡೆಗಳನ್ನು (ಪೆಟ್ಟು) ಬಾರಿಸುವನು. ಇದನ್ನು ಬಿಡಿತ ಅಥವಾ ಬಿಡಿತಿಗೆ ಎನ್ನುತ್ತಾರೆ. ಈ ಬಿಡಿತಿಗೆಯ ಗತ್ತಿಗೆ ಸ್ತ್ರೀವೇಷದಾರಿ ತನ್ನ ಹೆಜ್ಜೆಗಾರಿಕೆಯನ್ನು ತೋರಿಸುತ್ತ ರಂಗದ ಮುಂಭಾಗಕ್ಕೆ ಬರುವನು. ಅನಂತರ ಭಾಗವತ ಬರೇ ಮೂರು ಪೆಟ್ಟುಗಳಿಂದ ಕೂಡಿದ ಏಕತಾಳವನ್ನು ಜಾಗಟೆಯಲ್ಲಿ ಬಾರಿಸುವನು. ಆಗ ಆ ತಾಳಕ್ಕೆ ಹೊಂದಿಕೊಂಡಂತೆ ಮದ್ದಲೆಗಾರ ಮದ್ದಲೆಯನ್ನು ನುಡಿಸುವನು. ಭಾಗವತನು ಜಾಗಟೆ ಬಾರಿಸುತ್ತಲೇ ತಾದಿಮಿತ ದಿಮಿತೈ । ದಿಕಿಟ ದಿಂದತೈ । ತತ್ತೊಂದಿಕು ತಕುತೈ । ಕಿಟಕತ । ತರಕಿಟ ಕಿಟತಕತೈ ಎಂಬಿತ್ಯಾದಿ ತಾಳಗತಿಯನ್ನು ನುಡಿಸುವನು. ಇದನ್ನು ಬಾಯಿತಾಳ ಎನ್ನುತ್ತಾರೆ. ಈ ಬಾಯಿ ತಾಳದ ನುಡಿಗಳಿಗೆ ತಕ್ಕಂತೆ ಸ್ತ್ರೀವೇಷಧಾರಿ ನರ್ತಿಸುತ್ತಾನೆ.

ಅನಂತರ ಸುಬ್ರಮಣ್ಯ, ಅರ್ಧನಾರೀಶ್ವರ ಎಂಬ ವೇಷಗಳು ಪ್ರವೇಶಿಸಿದಾಗ ಸಂಗೀತಗಾರನು ಆಯಾ ದೈವಗಳಿಗೆ ಸಂಬಂಧಿಸಿದ ಸ್ತುತಿಗಳನ್ನು ಹಾಡುವನು. ವೇಷಧಾರಿಗಳು ಸ್ವಲ್ಪ ಹೊತ್ತು ಕುಣಿದು ನಿಷ್ಕ್ರಮಿಸುವರು. ಇದಾದ ಅನಂತರ ಸ್ತ್ರೀವೇಷದ ನರ್ತನ. ಇಲ್ಲಿ ಒಂದೇ ತಾಳಕ್ಕೆ ಬೇರೆ ಬೇರೆ ಹೆಜ್ಜೆಗಳನ್ನಿಟ್ಟುಕೊಂಡು ಕುಣಿಯುವ ವೈವಿಧ್ಯವನ್ನು ಕಾಣಬಹುದು. ಈ ಸಮಯದಲ್ಲಿ ಇಲ್ಲಿಗೆ ಮುಖ್ಯ ಹಾಸ್ಯಗಾರ ಪ್ರವೇಶಿಸಿ ದೈವ ದೇವರುಗಳ ಹೊಗಳಿಕೆ ನಡೆಸುವನು. ಸ್ವಲ್ಪ ಹೊತ್ತು ಕುಣಿದ ಸ್ತ್ರೀವೇಷ ಮತ್ತು ಹಾಸ್ಯ ವೇಷದ ನಿರ್ಗಮನದೊಂದಿಗೆ ಯಕ್ಷಗಾನ ಬಯಲಾಟದ ಪೂರ್ವಭಾಗ ಕೊನೆಗೊಳ್ಳುವುದು. ಸಭಾಲಕ್ಷಣದ

ಯಕ್ಷಗಾನ ಪ್ರಸಂಗ

ಸಂಪ್ರದಾಯ, ಅಲ್ಲಿನ ನೃತ್ಯ, ಹಾಡುಗಾರಿಕೆ, ಹಾಸ್ಯ ಎಲ್ಲ ರಂಗಸ್ಥಳಕ್ಕಾಗಿಯೇ ರೂಪಗೊಂಡದ್ದು. ಇದು ಒಂದು ರೀತಿಯಲ್ಲಿ ಕಿರಿಯ ಕಲಾವಿದರ ತರಬೇತಿ ಕೇಂದ್ರವೆನ್ನಬಹುದು.

ಸಭಾಲಕ್ಷಣ ಮುಗಿದ ಅನಂತರ ಆಡಲು ನಿರ್ಧರಿಸಿದ ಪ್ರಸಂಗ ಆರಂಭವಾಗುತ್ತದೆ. ಇದನ್ನು ಉತ್ತರರಂಗ ಎನ್ನುತ್ತಾರೆ. ಪ್ರಾರಂಭದಲ್ಲಿ ಭಾಗವತ ಸೂಕ್ಷ್ಮವಾಗಿ ಅಂದಿನ ಕಥಾ ಪರಿಚಯ ಮಾಡುವನು. ಇದಕ್ಕೆ ಕಥಾನುಸಾರವೆಂದು ಹೆಸರು. ಅನಂತರ ಯಾವುದೇ ಪ್ರಸಂಗವನ್ನು ಆಡುವ ಮುನ್ನ ಒಡ್ಡೋಲಗ ಎಂಬ ಒಂದು ಸಂಪ್ರದಾಯವಿದ್ದು ಇದರ ಮುಖ್ಯ ಉದ್ದೇಶವೆಂದರೆ ಪಾತ್ರಗಳನ್ನು ಸಭೆಗೆ ಪರಿಚಯಿಸುವುದು. ಭಾಗವತರ ಎಡ ಭಾಗದಲ್ಲಿ ಹಿಡಿದ ತೆರೆಯ ಹಿಂದೆ ಅಂದಿನ ಕಥೆಯ ಪೀಠಿಕಾ ವೇಷದವರು ಒಬ್ಬೊಬ್ಬರಾಗಿ ಕುಣಿಯುವುದನ್ನು ತೆರೆಕಲಾಗು ಎನ್ನುವರು. ಬಳಿಕ ರಂಗದಲ್ಲಿ ತೆರೆ ಹಿಡಿದು ವೇಷದವರು ಒಂದೇ ತಾಳಕ್ಕೆ ಬೇರೆ ಬೇರೆ ಕ್ರಮದ ತೆರೆಕುಣಿತವನ್ನು ತೋರಿಸುವರು. ಭಾಗವತನು ಆ

ವೇಷದೊಡನೆ ಸಂಭಾಷಿಸಿ, ಸೂಕ್ಷ್ಮವಾಗಿ ವೇಷದ ಪರಿಚಯ ಮಾಡಿಸುವನು. ಅನಂತರ ಪ್ರಸಂಗದ ಹಾಡುಗಳನ್ನು ಹಾಡುವನು. ವೇಷಧಾರಿಗಳು ತಾಳಕ್ಕೆ ತಕ್ಕಂತೆ ಕುಣಿಯುತ್ತ ಭಾವಕ್ಕೆ ತಕ್ಕಂತೆ ಅಭಿನಯಿಸುವರು. ಹಾಡು, ಕುಣಿತ ನಿಲ್ಲಿಸಿದ ಮೇಲೆ ಪಾತ್ರಧಾರಿಯು ಪದಕ್ಕೆ ಸರಿಯಾಗಿ ಅರ್ಥ ವಿವರಿಸುವನು. ಇಲ್ಲಿ ಅವನು ತನ್ನ ಪ್ರತಿಭಾಶಕ್ತಿ ಸಾಹಿತ್ಯಾನುಭವಗಳಿಂದ ಔಚಿತ್ಯವರಿತು ರಸವತ್ತಾಗಿ ಅರ್ಥವಿಸ್ತಾರಗೈಯಲು ಸ್ವತಂತ್ರನಾಗುವನು. ಬೇರೆ ಬೇರೆ ವೇಷಗಳ ರಂಗಪ್ರವೇಶ ವಿಧಾನದಲ್ಲಿಯೂ ವೈವಿಧ್ಯವಿದೆ. ಪೀಠಿಕಾ ವೇಷದ ಅನಂತರ ಬರುವ ಅಭಿಮನ್ಯು, ಕರ್ಣ, ಅರ್ಜುನ ಇತ್ಯಾದಿ ವೇಷಗಳು ಚಂಡೆಯ ಪೆಟ್ಟಿಗೆ ತಕ್ಕಂತೆ ವೀರಗತಿಯಲ್ಲಿ ರಂಗವನ್ನು ಪ್ರವೇಶಿಸಿ ಕುಣಿಯುತ್ತವೆ. ರಾವಣ ಇತ್ಯಾದಿ ಬಣ್ಣದ ವೇಷಗಳು ಚೌಕಿಯಿಂದಲೇ ಅಟ್ಟಹಾಸಗೈಯುತ್ತ ರಂಗಪ್ರವೇಶಿಸಿ ತೆರೆಯಲ್ಲಿ ಕುಣಿಯುತ್ತವೆ.

ಯಕ್ಷಗಾನ ಹೆಚ್ಚಾಗಿ ಪುರಾಣ ಕಥೆಗಳ ದೃಶ್ಯರೂಪ. ಇದರಲ್ಲಿ ಬರುವ ದೇವದಾನವ, ಮಾನವ, ಗಂಧರ್ವರೆಲ್ಲರೂ ಅತಿಮಾನವರೇ. ಈ ಅತಿಮಾನವತೆಯನ್ನು ತೋರುವುದಕ್ಕೆ ಅನುಗುಣವಾಗಿ ಯಕ್ಷಗಾನದ ವೇಷಭೂಷಣ, ಮುಖವರ್ಣಿಕೆ, ಹಿನ್ನೆಲೆ, ಹಿಮ್ಮೇಳ, ಬೆಳಕು ಎಲ್ಲವೂ ಯೋಜಿಸಲ್ಪಟ್ಟಿವೆ. ಯಕ್ಷಗಾನದ ಕಲ್ಪಕತೆಯನ್ನು ಪೋಷಿಸಿ, ಅತೀವ ಶೋಭೆಯನ್ನೀವ ಅಂಗವೆಂದರೆ ಅವರ ವೇಷಭೂಷಣಗಳು ಹಾಗೂ ಮುಖವರ್ಣಿಕೆಗಳು. ಇಲ್ಲಿನ ವೇಷಭೂಷಣ ವೈವಿಧ್ಯಮಯವಾದುದು. ಅವುಗಳಲ್ಲಿ ಪಟ್ಟೀಸ್, ಗೆಜ್ಜೆ, ಕಾಲ್ಕಡಗ, ಕಾಲುಮುಳ್ಳುಗಳು, ಗೆಜ್ಜಡ್ಡಿಗೆ, ಗುಂಡಡ್ಡಿಗೆ, ಭುಜಕೀರ್ತಿ, ತೋಳ್ಕಟ್ಟು, ಕೈಕಟ್ಟು, ಕೈಸರ, ಕರ್ಣಪಾತ್ರ, ಸೋಗೊಲ್ಲಿ, ಕೆನ್ನೆಪ್ಪು, ಚೆನ್ನೆಪ್ಪು, ಕಿರೀಟ, ಕೇಶವೇರಿತಟ್ಟೆ, ದಗಲೆ, ಬಾಲ್ಮುಂಡು, ತ್ರಿಶೂಲ, ವಜ್ರಾಯುಧ, ಯಮದಂಡ, ಗದೆ, ಕತ್ತಿ, ಸಬಳ ಧನಸ್ಸು, ಮೀಸೆ, ಸೊಂಟದ ಡಾಬುಗಳು, ಮಾರ್ ಮಾಲೆಗಳು, ಕೊರಳಾರ, ಗೆಜ್ಜೆಟಿಕ್ಕಿ, ಕಾಲ್ಜಂಗು, ದಂಚಿ, ಕಸೆ, ಕೇಸರಿ ಮೊದಲಾದುವು ಮುಖ್ಯವಾದುವು. ಈ ಅನೇಕ ವಸ್ತ್ರಾಭರಣ ವಿಶೇಷಗಳನ್ನು ತಯಾರಿಸಲು ಹೆಚ್ಚಾಗಿ ಬಣ್ಣಬಣ್ಣದ ಬಟ್ಟೆ, ಕಾಗದ, ಬೇಗಡೆಗಳನ್ನೂ ಮೆದುಮರ, ಬಿದುರು ಮೊದಲಾದವುಗಳನ್ನೂ ಬಳಸುತ್ತಾರೆ.

ಯಾವ ವೇಷಕ್ಕೂ ಮುಖವಾಡವಿಲ್ಲದಿರುವುದು ಯಕ್ಷಗಾನದ ವೈಶಿಷ್ಟ್ಯ. ಅಶ್ವಮೇಧದ ಕುದುರೆ ಮೊದಲಾದ ಪ್ರಾಣಿಗಳನ್ನು ಸಾಂಕೇತಿಕವಾಗಿ ತೋರಿಸಬೇಕಾಗಿ ಬಂದಾಗ ಮಾತ್ರ ಒಮ್ಮೊಮ್ಮೆ ಮುಖವಾಡವನ್ನು ಬಳಸುವುದುಂಟು. ಆಟದ ಪಾತ್ರವೇ ಆಗಿರುವ ಸಿಂಹದಂಥ ಪಾತ್ರಗಳನ್ನು ಮುಖವರ್ಣಿಕೆಯಿಂದಲೇ ಮಾಡುತ್ತಾರೆ. ವೇಷದ ಸ್ವಭಾವಕ್ಕನುಸರಿಸಿ ಬಣ್ಣಗಾರಿಕೆಯಲ್ಲಿಯೂ ವೈವಿಧ್ಯವಿದೆ. ಶೃಂಗಾರ ಲಲಿತ ಪಾತ್ರಗಳ ಬಣ್ಣ ಶ್ಯಾಮಲ. ರೌದ್ರ ಪಾತ್ರಗಳ ಮುಖವರ್ಣ ಕೆಂಪು. ಗೌರವರ್ಣ ವೀರರಸವನ್ನು ಅಭಿವ್ಯಂಜಿಸುತ್ತದೆ. ಭಯಾನಕ ರಸವನ್ನು ಸೂಚಿಸಲು ಮುಖವನ್ನು ಕಪ್ಪು-ಕೆಂಪು ರೇಖೆಗಳಿಂದಲೂ ಬಿಳಿ ಚಿಟ್ಟೆ (ಚುಟ್ಟಿ) ಗಳಿಂದಲೂ ಚಿತ್ರಿಸುವರು. ಹೆಣ್ಣು ಬಣ್ಣದವರು ಬೀಭತ್ಸ ರಸಾಭಿವ್ಯಕ್ತಿಗೆ ಕಡುನೀಲ ವರ್ಣವನ್ನು ಪ್ರಧಾನವಾಗಿ ಬಳಸಿದರೂ ಸೂಕ್ಷ್ಮಭಾವಗಳ ಅಭಿವ್ಯಕ್ತಿಗಾಗಿ ವಿವಿಧ ವರ್ಣವಿನ್ಯಾಸಗಳಿಂದಲೂ ಮುಖರಂಜನೆ ಮಾಡುವರು. ಪಾತ್ರಗಳು ಧರಿಸುವ ಶಿರೋಭೂಷಣದಿಂದ ಒಡವೆ ವಸ್ತ್ರಗಳಿಂದ ಪ್ರೇಕ್ಷಕ ಸಮೂಹಕ್ಕೆ ಪಾತ್ರಗಳನ್ನು ಪರಿಚಯ ಮಾಡಿಸುವ ವ್ಯವಸ್ಥೆ ಇರುವುದು ಯಕ್ಷಗಾನದ ಇನ್ನೊಂದು ವೈಶಿಷ್ಟ್ಯವೆನ್ನಬಹುದು.

ಯಕ್ಷಗಾನದ ನೃತ್ಯ (ಕುಣಿತ) ತರಂಗಿತತೆಯನ್ನು ತನ್ನ ಮುಖ್ಯ ಗುಣವಾಗಿ ಬಳಸಿಕೊಂಡಿದೆ. ಇಲ್ಲಿ ಸಂಜ್ಞೆ, ಸಂಕೇತಗಳು ಗೌಣ. ಈ ನೃತ್ಯಕ್ಕೆ ಹಿಮ್ಮೇಳದ ತಾಳ, ಮದ್ದಲೆ, ಚಂಡೆಗಳು ವಿಶೇಷ ಸಹಕಾರಿಯಾಗಿ ಬರುತ್ತವೆ. ಸ್ತ್ರೀ ಪಾತ್ರಗಳಲ್ಲಿ ಲಾಸ್ಯ, ಲಘುಪಾತ್ರಗಳಲ್ಲಿ ಹಾಸ್ಯ ಹಾಗೂ ಬೇರೆಲ್ಲೂ ಕಾಣಸಿಗದ, ಈ ಕಲೆಗೆ ವಿಶಿಷ್ಟವಾಗಿರುವ ವೀರ, ರೌದ್ರರಸ ಸಮನ್ವಿತವಾದ ನೃತ್ಯಗಳನ್ನು ಪ್ರಧಾನಪುರುಷ ಪಾತ್ರಗಳಲ್ಲಿ ಕಾಣಬಹುದು. ವಿಶೇಷ ಉತ್ಸಾಹವನ್ನು ತೋರಿಸುವ ಸಂಗೀತಗಳು (ದಿಗಿಣ), ಮಂಡಿಯೂರಿ ನೆಲದ ಮೇಲೆ ಬುಗುರಿಯಂತೆ ವೃತ್ತಾಕಾರದಲ್ಲಿ ತಿರುಗುವ ಮಂಡಿಗಳೂ ಈ ನೃತ್ಯದ ಅಂಗವಾಗಿ ಬಂದಿವೆ. ಕುಣಿತದ ಕೂಡೆನಿಲವುಗಳು (ಗತ್ತು) ಕೂಡ ಯಕ್ಷಗಾನದ ಪ್ರಮುಖ ವೈಶಿಷ್ಟ್ಯ. ಇದೇ 'ಭಂಗಿ' : ಇದರಲ್ಲಿ ಸಮಭಂಗ, ಅಭಂಗ, ದ್ವಿಭಂಗ, ಅತಿಭಂಗ, ತ್ರಿಭಂಗ ಮೊದಲಾದ ನಿಲವುಗಳಿವೆ. ವೇಷಗಳು ಧರಿಸುವ ಆಯುಧ ಸಂಕೇತರೂಪದ ಸಾಧನಗಳು ಸಹ ಈ ಅಂಗಭಂಗಿ ಹಾಗೂ ನಿಲವುಗಳಿಗೆ ಮೋಹಕತೆಯನ್ನು ನೀಡಿ ಪೋಷಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಹಾರಾಡಿ ರಾಮ, ಅಳಿಕೆ ರಾಮಣ್ಣ ರೈ, ವೀರಭದ್ರನಾಯಕ ಮೊದಲಾದ ಕಲಾವಿದರು ತಮ್ಮ ಅಮೋಘ ಯಕ್ಷಗಾನ ನೃತ್ಯದಿಂದ ಜನಮನವನ್ನು ಸೂರೆಗೊಂಡಿದ್ದಾರೆ.

ಯಕ್ಷಗಾನದ ಗಾನ ಅಥವಾ ಹಾಡುಗಾರಿಕೆಯು (ಭಾಗವತಿಕೆ) ಶ್ರುತಿ, ರಾಗ, ತಾಳ, ಲಯಗಳಿಂದ ರೂಪುಗೊಂಡಿರುವ ಕರ್ನಾಟಕ ಹಾಗೂ ಹಿಂದುಸ್ಥಾನೀ ಮಾರ್ಗ ಸಂಪ್ರದಾಯಗಳಿಗಿಂತ ಭಿನ್ನವಾಗಿರುವ ಒಂದು

ತೆಂಕತಿಟ್ಟಿನ ವೇಷಗಾರಿಕೆ

ದೇಸೀ ಗೀತ ಸಂಪ್ರದಾಯವಾಗಿದೆ. ಗೀತಕ್ಕೆ ಹಿಮ್ಮೇಳವಾಗಿ ಶ್ರುತಿವಾದ್ಯ, ತಾಳ, ಮದ್ದಲೆ ಮತ್ತು ಚಂಡೆಗಳನ್ನು ಬಳಸಲಾಗುತ್ತದೆ. ಸೋರೆ ಬುರುಡೆಯಿಂದ ಮಾಡಿದ ಪುಂಗಿಯನ್ನು ಹಿಂದೆ ಶ್ರುತಿವಾದ್ಯವಾಗಿ ಬಳಸುತ್ತಿದ್ದರೆ, ಇತ್ತೀಚೆಗೆ ಹಾರ್ಮೋನಿಯಮ್ ಪುಂಗಿಯ ಸ್ಥಾನವನ್ನು ಆಕ್ರಮಿಸಿದೆ. ಇಲ್ಲಿ ರಾಗಗಳಿಗಿಂತ ಧಾಟಿಗಳಿಗೆ (ಮಟ್ಟು) ಪ್ರಾಶಸ್ತ್ಯ ಹೆಚ್ಚು. ಸು. 80ರಷ್ಟು ಯಕ್ಷಗಾನ ರಾಗಗಳು ಉಪಲಬ್ಧವಿದ್ದು, ಇವುಗಳ ಧಾಟಿಗಳು ನೃತ್ಯಗೀತಗಳೆರಡರ ತರಂಗಿತತೆಗೆ ಆಧಾರಭೂತವಾ ಗಿವೆ. ಇಲ್ಲಿ ಮುಖ್ಯ ಹಾಡುಗಾರಿಕೆ ಭಾಗವತನದಾದರೂ ಸಂಭಾಷಣೆಗೆ ಸಂದರ್ಭ ಒದಗಿದಾಗ, ಅವನಿಗಿಂತ ಮುಂಚೆ ಅಥವಾ ಜೊತೆಯಾಗಿ ಪಾತ್ರಧಾರಿಗಳೂ ಧ್ವನಿಗೂಡಿಸಿ ಹಾಡುವ ಕ್ರಮವಿದೆ. ಯಕ್ಷಗಾನ ಪ್ರಸಂಗದಲ್ಲಿನ ಪದ್ಯಮಾತ್ರ ಕವಿರಚಿತವಾದದ್ದು; ಆದರೆ ನಡುವೆ ಬರುವ ಮಾತು ಅಥವಾ ಸಂಭಾಷಣೆಯು ಪಾತ್ರಧಾರಿಗಳ (ಅರ್ಥಧಾರಿಗಳ) ಆಶುಗದ್ಯ ಸಾಹಿತ್ಯವೆಂದೇ ಹೇಳಬೇಕು. ವೇಷಧಾರಿಗಳ ಬಾಯಲ್ಲಿ ಸಮಯಸ್ಫೂರ್ತಿಯಿಂದ ಪಾತ್ರ, ಸಂದರ್ಭ, ಸನ್ನಿವೇಶಗಳಿಗೆ ಅನುಸಾರ ವಾಗಿ ಬರುವ ಈ ಮಾತುಗಳಲ್ಲಿ ಭಾವತಲ್ಲೀನತೆಯೇ ಮುಖ್ಯ ಗುಣವಾಗಿರುತ್ತದೆ. ಹೀಗೆ ಯಕ್ಷಗಾನದಲ್ಲಿ ಪ್ರಸಂಗ ಸಾಹಿತ್ಯದ ಪದ್ಯವೂ ಮಾತು

ಗಾರಿಕೆಯ ಗದ್ಯವೂ ಏಕಶರೀರವಾಗಿ ಹೊಂದಾಣಿಕೆಯಾಗಿದ್ದುಕೊಂಡು ರಸಪ್ರತಿಪಾದನೆಗೆ ಕುಮ್ಮಕ್ಕು ನೀಡುತ್ತವೆ.

ರಾಮಾಯಣ, ಭಾರತ, ಭಾಗವತಾದಿಗಳಿಂದ ಆರಿಸಿಕೊಂಡ ಕಥಾನಕಗಳ ಆಧಾರದ ಮೇಲೆ, ಯಕ್ಷಗಾನಕ್ಕಾಗಿಯೇ ಪದ್ಯದಲ್ಲಿ ರಚಿತವಾದ ಕಥಾನಕಕ್ಕೆ ಪ್ರಸಂಗ ಎಂದು ಹೆಸರು. ಕನ್ನಡದಲ್ಲಿ ಮುನ್ನೂರಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳು ದೊರೆತಿವೆ. ಐರಾವತ, ಭೀಷ್ಮವಿಜಯ, ಕನಕಾಂಗಿ, ನಳದಮಯಂತಿ, ಉತ್ತರ ಗೋಗ್ರಹಣ, ಅಭಿಮನ್ಯುವಧೆ, ಪಂಚವಟಿ, ಅಂಗದಸಂಧಾನ, ಮೈರಾವಣಕಾಳಗ, ಲವಕುಶ, ಪ್ರಹ್ಲಾದಚರಿತ್ರೆ, ರತಿಕಲ್ಯಾಣ, ಬಾಣಾಸುರಕಾಳಗ, ಕುಮಾರವಿಜಯ ಮೊದಲಾದವು ಪ್ರಸಿದ್ಧ ಯಕ್ಷಗಾನ ಪ್ರಸಂಗಗಳಲ್ಲಿ ಕೆಲವು. ಇಂಥ ಪ್ರಸಂಗ ಕರ್ತೃಗಳಲ್ಲಿ ವಿಷ್ಣು, ನಗಿರೆಯ ಸುಬ್ರಹ್ಮಣ್ಯ, ದೇವದಾಸ, ಪಾಂಡೇಶ್ವರ ವೆಂಕಟ, ಧ್ವಜಪುರದ ನಾಗಪ್ಪಯ್ಯ, ಹಳೆಮಕ್ಕಿ ರಾಮ, ನಿತ್ಯಾನಂದ ಅವಧೂತ, ಹಟ್ಟಿಯಂಗಡಿ ರಾಮಭಟ್ಟ, ಪಾರ್ತಿಸುಬ್ಬ, ಮುದ್ದಣ, ಗೇರಸೊಪ್ಪೆ ಶಾಂತಪ್ಪಯ್ಯ, ಬೋರಾಡಿ ವೆಂಕಟರಮಣಯ್ಯ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ ಮೊದಲಾದ ಕೆಲವು ಪ್ರಮುಖರನ್ನು ಹೆಸರಿಸಬಹುದು. ಭಾಗವತಿಕೆಯಲ್ಲಿ ಇತ್ತೀಚೆಗೆ ಕುಂಜಾರು ಶೇಷಗಿರಿ ಭಾಗವತ, ಬಲಿಪ ನಾರಾಯಣ ಭಾಗವತ ಮುಂತಾದವರು ಪ್ರಸಿದ್ಧರಾದವರು.

**(ವಿ.ಎಸ್.ಬಿ.,ಬಿ.ವಿ.ಕೆ.,ಎಂ.ಆರ್.ಎಸ್.;ಕೆ.ವಿ.ಎಸ್ಎ.;ಎ.ಜಿ.ಬಿ. ಟಿ.ಜಿ.ಕೆ.ಬಿ.)**

**ಮೂಡಲಪಾಯ:** ಈ ಪ್ರಭೇದದ ರಂಗ ಸ್ಥಳ ಕೆಲವು ಅಂಶಗಳಲ್ಲಿ ಕರ್ನಾಟಕದ ಇನ್ನಿತರ ಭಾಗಗಳ ರಂಗಸ್ಥಳದಂತೆಯೇ ರೂಪುಗೊಂಡರೂ ಒಂದಂಶದಲ್ಲಿ ಮಾತ್ರ ಪಡುವಲಪಾಯದಿಂದ ಭಿನ್ನವಾಗಿದೆ. ನಾಲ್ಕು ಕಂಬಗಳ ಮಧ್ಯೆ ಕಾದಿರಿಸಿದ ಜಾಗವೇ ರಂಗಸ್ಥಳವೆನಿಸಿದರೂ ಇಲ್ಲಿ ಭೂಮಿಯಿಂದ ಒಂದು ಅಥವಾ ಒಂದೂವರೆ ಅಡಿ ಎತ್ತರಕ್ಕಾದಂತೆ ಮರದ ಹಲಗೆಗಳನ್ನು ಹಾಸಿ ವಿಶೇಷವಾಗಿ ನಿರ್ಮಿಸಿದ ಅಟ್ಟದ ಮೇಲೆ ಆಟ ನಡೆಯುತ್ತದೆ. ಈ ಕಾರಣಕ್ಕಾಗಿಯೇ ಮೂಡಲಪಾಯಕ್ಕೆ ಅಟ್ಟದಾಟ ಎಂಬ ಹೆಸರೂ ರೂಢಿಯಲ್ಲಿದೆ.

ರಂಗಸಜ್ಜಿಕೆಯಲ್ಲಿ ಪಾತ್ರಗಳ ಪ್ರವೇಶಕ್ಕನುಗುಣವಾಗಿ ವ್ಯವಸ್ಥೆ ಇರುತ್ತದೆ. ರಾಮಾಯಣದಂಥ ಆಂಜನೇಯನ ಪಾತ್ರ ಬರುವ ಆಟವನ್ನು ಆಡುವಾಗ ರಂಗಸಜ್ಜಿಕೆ ವಿಶೇಷ ರೀತಿಯಿಂದ ಕೂಡಿರುತ್ತದೆ. ಸಾಮಾನ್ಯವಾಗಿ ಆಂಜನೇಯನಂಥ ಪಾತ್ರಗಳು ಮೊದಲ ಬಾರಿಗೆ ರಂಗದ ಮೇಲೆ ಕಾಣಿಸಿಕೊಳ್ಳುವಾಗ ಗಂಭೀರ ಪಾತ್ರಗಳಂತೆ ರಂಗದ ಒಳಭಾಗದಿಂದಲಾಗಲಿ ಅಥವಾ ರಾಕ್ಷಸ ಪಾತ್ರಗಳಂತೆ ರಂಗದ ಮುಂಭಾಗದಿಂದಲಾಗಲಿ ಕಾಣಿಸಿಕೊಳ್ಳದೆ ಆಕಾಶದಿಂದ ಅಥವಾ ಮರದ ಮೇಲಿಂದ ಧರೆಗೆ ಇಳಿದು ಬಂದಂತೆ ವ್ಯವಸ್ಥೆಗೊಳಿಸುವುದು ಇಲ್ಲಿನ ವಿಶೇಷ. ಇಲ್ಲಿ ಪಾತ್ರಗಳಿಗೆ ಬಣ್ಣಹಾಕುವವನೇ ಬೇರೆ ಇರುತ್ತಾನೆ. ಅವನನ್ನು ಬಣ್ಣದವನು ಎಂದೇ ಕರೆಯುತ್ತಾರೆ.

ಮೂಡಲಪಾಯದ ರಂಗಸಂಪ್ರದಾಯ ಹಲವು ದೃಷ್ಟಿಯಿಂದ ಕುತೂಹಲಕಾರಿಯಾದುದು. ಪ್ರಸಂಗದ ಆರಂಭ ರಂಗದ ಮೇಲೆಯೇ ಆಗುತ್ತದೆಯಾದರೂ ನಾಂದೀ ಭಾಗಕ್ಕೆ ಸಂಬಂಧಿಸಿದ ಕೆಲವು ಸಂಪ್ರದಾಯಗಳು ಆಚರಣೆ ನೇಪಥ್ಯ ಗೃಹದಿಂದಲೇ ಆರಂಭವಾಗಿರುತ್ತದೆ. ಪಾತ್ರಧಾರಿಗಳು ವೇಷ ಧರಿಸುವುದಕ್ಕೆ ಮುನ್ನವೇ ಆಭರಣವಿಶೇಷ ಹಾಗೂ ವಾದ್ಯವಿಶೇಷಗಳನ್ನೆಲ್ಲ ಒಂದೆಡೆ ಇಟ್ಟು ಪೂಜಿಸುತ್ತಾರೆ. ಅನಂತರ ಪಾತ್ರಧಾರಿಗಳು ಭಾಗವತರಿಗೆ ವಂದಿಸಿ ಅವರಿಂದ ಆಶೀರ್ವಾದ ಪಡೆದು, ವೇಷ ಧರಿಸಲು ತೊಡಗುತ್ತಾರೆ. ಅನಂತರ ಭಾಗವತರು ಮತ್ತು ಹಿಮ್ಮೇಳದವರು ರಂಗದ ಬಲಭಾಗದಲ್ಲಿ ನಿಲ್ಲುತ್ತಾರೆ. ಆಟ ಮುಗಿಯುವವರೆಗೆ ಇವರು ಇಲ್ಲೇ ನಿಂತಿರುತ್ತಾರೆ. ರಂಗದ ಮೇಲೆ ಮೊದಲು ಗಣಪತಿಯ ಪೂಜೆ ಆಗುತ್ತದೆ. ಇಲ್ಲಿ ಭಾಗವತ ಪೂಜಾರಿಯನ್ನು ಬರಮಾಡಿಕೊಳ್ಳುವ ರೀತಿ ಹಾಗೂ ಅವರಿಬ್ಬರಿಗೂ ನಡೆಯುವ ಸಂಭಾಷಣೆ ಸ್ವಾರಸ್ಯವಾಗಿರುತ್ತದೆ.

ವಿನಾಯಕನ ಪೂಜೆಯ ಅನಂತರ ಭಾಗವತರು ವಿನಾಯಕ, ಪಾರ್ವತಿ ಪರಮೇಶ್ವರ, ನಂದೀಶ, ಭೃಂಗಿ, ವೀರಭದ್ರ ಮೊದಲಾದ ಶಿವಗಣಗಳನ್ನು ಸ್ಮರಿಸಿ ಶಾರದಾಸ್ತುತಿಯನ್ನು ಮಾಡುತ್ತಿರುವಂತೆಯೇ ರಂಗದ ಮೇಲೆ ಹನುಮನಾಯಕನ ಪ್ರವೇಶವಾಗುತ್ತದೆ. ಇಲ್ಲಿಂದ ಸಂಪೂರ್ಣವಾಗಿ ಆಟ ಮುಗಿಯುವವರೆಗೂ ಹನುಮನಾಯಕ ರಂಗದ ಮೇಲೆ ಇರುತ್ತಾನೆ. ಎಲ್ಲ ರಾಜರುಗಳ ಸಾರಥಿಯೂ ಅವನೇ. ರಂಗದ ಮೇಲೆ ಬರುವ ಎಲ್ಲ ಪಾತ್ರಗಳನ್ನು ವಿಚಾರಿಸುವ ಜವಾಬ್ದಾರಿಯೂ ಆತನದೇ. ಅನಂತರ ಬಾಲಗೋಪಾಲರು ಪ್ರವೇಶಿಸುತ್ತಾರೆ. ಹೀಗೆ ಇವರೆಲ್ಲರೂ ಬಂದು ಮುಂದೆ ನಡೆಯಲಿರುವ ಆಟಕ್ಕೆ ಶುಭವನ್ನು ಹಾರೈಸಿಹೋದಮೇಲೆ ಭಾಗವತರು ಸಭಿಕರನ್ನುದ್ದೇಶಿಸಿ 'ನಾನು ಕಥೆಯನ್ನು ಯಕ್ಷಗಾನದಲ್ಲಿ ಹಾಡುವೆನು. ಅದರಲ್ಲಿ ಏನಾದರೂ ತಪ್ಪುಗಳು ಕಂಡು ಬಂದರೆ ಕುಚ್ಚಿತೋಕ್ತಿಗಳಿಂದ ಕುಹಕವಂಗ್ಯೆಯದೆ ನೀರುಕ್ಷೀರವಂ ವಿಂಗಡಿಸುವ ಹಂಸದೋಪಾದಿಯಲ್ಲಿ ಏನು ಅಬದ್ಧವಿದ್ದರೂ ಬಾಲಾಭಾಷಾ ವಿಶೇಷೋಜ್ಜ್ವಲವೆಂದೆಣಿಸಿ ಬುದ್ಧಿವಂತರು ಸದ್ದುಮಾಡದೆ ಸಾವಧಾನದಿಂ ದಾಲಿಸಿ ಕೇಳಿ ಸಂತೋಷ ಯುಕ್ತರಾಗಬೇಕು' ಎಂದು ವಿಜ್ಞಾಪಿಸಿಕೊಂಡು ಆಟವನ್ನು ಆರಂಭಿಸುತ್ತಾನೆ.

ಮೋಹಿನಿ–ಭಸ್ಮಾಸುರ ಪ್ರಸಂಗ

ಪ್ರಾತಗಳು ರಂಗಪ್ರವೇಶಿಸುವ ಕ್ರಮದಲ್ಲಿ ಒಂದೊಂದು ವರ್ಗದ ಪಾತ್ರಗಳಿಗೂ ವ್ಯತ್ಯಾಸವಿರುತ್ತದೆ. ಈ ದೃಷ್ಟಿಯಿಂದ ಘೋರ ಪಾತ್ರಗಳ ಪ್ರವೇಶ ಕ್ರಮ ಅದ್ಭುತವಾಗಿರುತ್ತದೆ. ಅಂಥ ಪಾತ್ರಗಳ ಸ್ವರೂಪವನ್ನು ಮತ್ತಷ್ಟು ಎತ್ತಿತೋರಿಸುವುದಕ್ಕಾಗಿ, ಸಹಜ ವಾತಾವರಣವನ್ನು ನಿರ್ಮಿಸಿ ಪ್ರೇಕ್ಷಕರ ಮಧ್ಯಭಾಗದಿಂದ ಕೇಕೆಹಾಕುತ್ತ ಆರ್ಭಟಿಸಿಕೊಂಡು ಬರುವ ವ್ಯವಸ್ಥೆ ಇರುತ್ತದೆ. ಜೊತೆಯಲ್ಲಿ ಪಂಜನ್ನು ಹಿಡಿದ ಇಬ್ಬರು ವ್ಯಕ್ತಿಗಳು ಹಾಗೂ ಅದಕ್ಕೆ ಗುಗ್ಗುಳದ ಪುಡಿಯನ್ನು ಎರಚುವ ಒಬ್ಬ ವ್ಯಕ್ತಿ, ಜೊತೆಗೆ ತಮಟೆಯವರು ಇರುತ್ತಾರೆ: ಉಳಿದ ಪಾತ್ರಗಳೆಲ್ಲ ರಂಗದ ಹಿಂಭಾಗದಿಂದಲೇ ರಂಗಪ್ರವೇಶ ಮಾಡುತ್ತವೆ. ಆಟದ ಮುಕ್ತಾಯ ಧ್ವನಿಪೂರ್ಣವಾಗಿರುತ್ತದೆ. ಕೊನೆಯ ದೃಶ್ಯ ಮುಗಿದ ಮೇಲೆ ಮಂಗಳಾರತಿಯಾಗುತ್ತದೆ. ಉಳಿದ ಪಾತ್ರಧಾರಿಗಳೂ ಆಗ ರಂಗದ ಮೇಲೆ ಬಂದು ಭಜನೆಯಲ್ಲಿ ಭಾಗವಹಿಸುತ್ತಾರೆ. ಅನಂತರ ಹತ್ತಿರದ ದೇವಸ್ಥಾನಕ್ಕೆ ಹಾಗೆಯೇ ತೆರಳಿ ಮತ್ತೆ ಭಜನೆಯೊಂದಿಗೇ ಬಣ್ಣದ ಮನೆಯನ್ನು ಸೇರಿಕೊಳ್ಳುತ್ತಾರೆ.

ಮೂಡಲಪಾಯದಲ್ಲಿ ಪ್ರಧಾನವಾಗಿ ಆಯ್ದುಕೊಳ್ಳುವ ಕಥಾಭಾಗವೆಲ್ಲ ವೀರರಸಪ್ರಧಾನವಾದುದು. ಉಳಿದ ರಸಗಳ ಪ್ರತಿಪಾದನೆಗೆ ಅವಕಾಶ ವಿದ್ದರೂ ವೀರರಸಕ್ಕೆ ಅಗ್ರಸ್ಥಾನ. ಇಲ್ಲಿ ಪ್ರಸಂಗ ಸಾಹಿತ್ಯ ರಚನೆ ಗದ್ಯ-ಪದ್ಯಗಳೆರಡರಿಂದಲೂ ಕೂಡಿರುತ್ತದೆ; ಎರಡೂ ಕವಿನಿರ್ಮಿತವೇ. ಪಾತ್ರಧಾರಿ ಪದ್ಯವನ್ನೆಂತು ಕಂಠಪಾಠ ಮಾಡಿ ಹಾಡಬೇಕೋ ಗದ್ಯವನ್ನೂ ಅಂತೆಯೇ ಕಂಠಪಾಠ ಮಾಡಿ ಮಾತನಾಡಬೇಕು. ಇಲ್ಲಿ ಪಾತ್ರಧಾರಿಗಳಿಗೆ ಅಭಿನಯದ ಹೊರತು ಇನ್ನಾವುದೇ ಬಗೆಯ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲ. ಪಡುವಲಪಾಯ ಈ ದೃಷ್ಟಿಯಿಂದ ಸಂಪೂರ್ಣ ಭಿನ್ನವಾಗಿದೆ. ಮೂಡಲ ಪಾಯದಲ್ಲಿ ಬಳಸುವ ವಾದ್ಯವಿಶೇಷಗಳೆಂದರೆ ತಾಳ, ಮೃದಂಗ (ಮದ್ದಲೆ), ಮುಖವೀಣೆ ಹಾಗೂ ಶ್ರುತಿಗಾಗಿ ಮೊದಲು ಬಳಸಲಾಗುತ್ತಿದ್ದ ಪುಂಗಿಗೆ ಬದಲಾಗಿ ಈಗ ಬಳಸುತ್ತಿರುವ ಹಾರ್ಮೋನಿಯಂ. ಇಲ್ಲಿ ಇಷ್ಟೇ ವಾದ್ಯಗಳಲ್ಲಿ ತೋರುವ ವೈವಿಧ್ಯ, ಮಾಡುವ ಚಮತ್ಕಾರ ಅದ್ಭುತ ವಾದುದು. ಕುಣಿತ ಹಾಗೂ ಹಾಡಿಗೆ ಹೊಂದಿಕೊಂಡಂತೆ ತಾಳ ಹಾಗೂ ಮೃದಂಗ ಅಪೂರ್ವ ಮೆರಗನ್ನು ಕೊಟ್ಟರೆ, ಹಿಮ್ಮೇಳದೊಂದಿಗೆ ಮುಖವೀಣೆ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ.

ಸಾಮೂಹಿಕ ಹಿಮ್ಮೇಳ ಮೂಡಲಪಾಯದ ಒಂದು ಆಕರ್ಷಕ ಅಂಗ. ಭಾಗವತರು ಆಡಿದುದನ್ನು ಮುಖವೀಣೆಯೊಡನೆ ಆಲಾಪನೆ ಮಾಡುವ ರೀತಿ ಇಲ್ಲಿ ಅಪೂರ್ವವಾಗಿರುತ್ತದೆ.

ಇಲ್ಲಿನ ಮತ್ತೊಂದು ಆಕರ್ಷಕ ಅಂಗ ವೇಷಭೂಷಣ. ಈ ವೇಷ ಭೂಷಣಗಳನ್ನು, ಆಭರಣವಿಶೇಷಣಗಳನ್ನು ಸಿದ್ಧಗೊಳಿಸಲು ಬಳಸುವ ಸಾಮಾನ್ಯ ವಸ್ತುಗಳೆಂದರೆ ಬೆಂಡುಮರ, ಜೀರುಂಬೆ ರೆಕ್ಕೆ, ಗಾಜಿನ ಚೂರು, ಬಣ್ಣದಬಟ್ಟೆ ಮುಂತಾದುವುಗಳು. ಜನಪದರ ಅಪ್ರತಿಮ ಕಲ್ಪನಾಶಕ್ತಿ, ಪ್ರತಿಭಾಶಕ್ತಿ ಹಾಗೂ ಕಲಾಶಕ್ತಿಯನ್ನು ಇಲ್ಲಿ ದಟ್ಟವಾಗಿ ಕಾಣಬಹುದಾಗಿದೆ. ಮೂಡಲಪಾಯ ಇಂದಿಗೂ ಹಳ್ಳಿಗಾಡಿನಲ್ಲಿ ತನ್ನ ಮೂಲಸ್ವರೂಪವನ್ನು ಉಳಿಸಿಕೊಂಡಿದೆ. **(ಡಿ.ಕೆ.ಆರ್.)**

**ಉಪಸಂಹಾರ:** ಕರ್ನಾಟಕದ ಯಕ್ಷಗಾನವನ್ನು ಹೋಲುವ ನೃತ್ಯನಾಟಕ ಗಳ ಪರಂಪರೆ ನೆರೆಯ ಆಂಧ್ರ ಮತ್ತು ತಮಿಳು ನಾಡುಗಳಲ್ಲಿವೆ. ಆಂಧ್ರ ಪ್ರದೇಶದ ಕೂಚುಪುಡಿ ಎಂಬಲ್ಲಿ ಉಳಿದುಕೊಂಡಿರುವ ಭಾಮಾಕಲಾಪಂ ವೀದಿನಾಟಕವೆನ್ನುವ ನೃತ್ಯನಾಟಕ ಯಕ್ಷಗಾನದಿಂದ ಪ್ರೇರಿತವಾಗಿ ಸೃಷ್ಟಿಯಾಗಿದೆ ಎಂಬುದು ವಿದ್ವಾಂಸರ ಅಭಿಮತ. ಈ ನಾಟಕದಲ್ಲಿ ವೈಷ್ಣವಭಕ್ತಿಪ್ರಧಾನವಾದ ಕಥಾವಸ್ತುವಿರುವುದು ಮಾತ್ರ ವಲ್ಲದೆ ಯಕ್ಷಗಾನದಲ್ಲಿರುವ ಇತರ ಅಂಶಗಳೂ ಕಂಡುಬರುವುದರಿಂದ ಈ ಹೇಳಿಕೆ ಸಾಧುವಾಗಿರಲು ಸಾಧ್ಯವಿದೆ.

ತಮಿಳುನಾಡಿನ ಭಾಗವತ ಮೇಳಗಳು ಯಕ್ಷಗಾನದಂತಿವೆ. ಹಲವು ಹಳ್ಳಿಗಳಲ್ಲಿ ಪ್ರಚಲಿತವಿದ್ದರೂ ಮೇಲತ್ತೂರಿನ ಸಂಪ್ರದಾಯವೇ ಪ್ರಸಿದ್ಧವಾದುದು. ಈ ಕಲೆಯೂ ಪರೋಕ್ಷವಾಗಿ ಯಕ್ಷಗಾನ ಕಲೆಗೆ ಋಣಿಯಾಗಿದೆ. ಭಾಮಾಕಲಾಪಂ ವೀದಿನಾಟಕದಲ್ಲಿ ಪ್ರಾವೀಣ್ಯವನ್ನು ಪಡೆದ ಮಹನೀಯರೇ ತಮಿಳು ನಾಡಿನಲ್ಲಿ ಈ ಕಲೆಯನ್ನು ಬಳಕೆಯಲ್ಲಿ ತಂದರೆಂದು ತಿಳಿದುಬರುತ್ತದೆ. ತಂಜಾವೂರಿನ ನಾಯಕರ ಪ್ರೋತ್ಸಾಹ ದಿಂದ ಬೆಳಗಿದ ಭಾಗವತ ಮೇಳಗಳಿಗೆ ತೀರ್ಥ ನಾರಾಯಣ ಯತಿಯೆಂಬು ವರು ತೆಲುಗಿನಲ್ಲಿ ಪ್ರಸಂಗಗಳನ್ನು ರಚಿಸಿಕೊಟ್ಟಿದ್ದಾರೆ. ಇಲ್ಲಿ ಪ್ರಹ್ಲಾದಚರಿತ್ರೆ ಯನ್ನೇ ಮುಖ್ಯವಾಗಿ ಪ್ರದರ್ಶಿಸುತ್ತಾರೆ; ಇದೇ ಮಾದರಿಯ ಇನ್ನೊಂದು ಗ್ರಾಮೀಣ ನೃತ್ಯನಾಟಕವೆಂದರೆ ತೆರುಕ್ಕೂತ್ತು; ಇದನ್ನು ನಮ್ಮ ನಾಡಿನ ದೊಡ್ಡಾಟಕ್ಕೆ ಹೋಲಿಸಬಹುದೇ ಹೊರತು ಯಕ್ಷಗಾನಕ್ಕಲ್ಲ. ಯಕ್ಷಗಾನದ ಮುಖವರ್ಣಿಕೆ, ವೇಷಭೂಷಣ, ನೃತ್ಯಾಭಿನಯಗಳ ವೈಭವ ಕಲಾವಿಲಾಸ ಗಳನ್ನು ತಮಿಳುನಾಡಿನ ಸಾಮಾನ್ಯ ಮಟ್ಟದ ನೃತ್ಯನಾಟಕಗಳು ಪಡೆದಿಲ್ಲ. ಯಕ್ಷಗಾನ ಕಲಾವಿದರು ಕಲಾ ವ್ಯವಸಾಯವನ್ನು ಒಂದು ಉದ್ಯೋಗವ ನ್ನಾಗಿ ಮಾಡಿಕೊಂಡು ಬಾಳಿನುದ್ದಕ್ಕೂ ಆ ಕ್ಷೇತ್ರದಲ್ಲಿ ದುಡಿಯುತ್ತಾರೆ. ಆಂಧ್ರದಲ್ಲಿ ಅದು ಬಹುಮಟ್ಟಿಗೆ ಹವ್ಯಾಸವಾಗಿದ್ದರೆ, ತಮಿಳುನಾಡಿನಲ್ಲಿ ವರ್ಷಲ್ಲೊಮ್ಮೆ ಮಾತ್ರ ಪ್ರದರ್ಶಿಸುವ ಕಲೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ಯಕ್ಷಗಾನ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿಕೊಂಡಿದೆ. ಈ ಕಲೆಯನ್ನು ಶಿವರಾಮಕಾರಂತರಂಥ ಉದ್ದಾಮ ವಿದ್ವಾಂಸರು ಅನೇಕ ರೀತಿಯಲ್ಲಿ ಪರಿಷ್ಕರಿಸಿ ಪ್ರಚುರಪಡಿಸಿರುವು ದುಂಟು. ಈ ಅಮೂಲ್ಯ ಕಲೆಯನ್ನು ಉಳಿಸಿ, ಬೆಳೆಸುವ ಸಲುವಾಗಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಆಶ್ರಯದಲ್ಲಿ ಶಿವರಾಮ ಕಾರಂತರ ನೇತೃತ್ವದಲ್ಲಿ, ಗುರು ವೀರಭದ್ರ ನಾಯಕನ ಹಿರಿತನದಲ್ಲಿ, ಉಡುಪಿಯ ಲ್ಲೊಂದು ಯಕ್ಷಗಾನ ಕೇಂದ್ರ ಸ್ಥಾಪನೆಗೊಂಡು (1971) ಯಕ್ಷಗಾನದ ಶಾಸ್ತ್ರೀಯ ಹಾಗೂ ಕ್ರಮಬದ್ಧ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿದೆ. ಯಕ್ಷಗಾನ ಕಲೆಯನ್ನು ಕುರಿತಂತೆ ಅನೇಕ ಗ್ರಂಥಗಳು ರಚಿತವಾಗಿದ್ದು ಅವುಗಳಲ್ಲಿ ಶಿವರಾಮ ಕಾರಂತರ ಯಕ್ಷಗಾನ ಬಯಲಾಟ ಎಂಬ ಮಹಾಪ್ರಬಂಧ ಒಂದು ಮಹತ್ತ್ವದ ಕೃತಿಯಾಗಿದೆ. **(ಎಸ್‌ಇ.ಐ.)**

**ಯಕ್ಷಯಕ್ಷಿಯರು:** ಹಿಂದು ಧಾರ್ಮಿಕ ಪುರಾಣ ಕಲ್ಪನೆಯ ಪ್ರಕಾರ ಯಕ್ಷಯಕ್ಷಿಯರು ದೇವತೆಗಳಲ್ಲಿಯೇ ಒಂದು ಪಂಗಡ. ಆದರೆ ಇವರಿಗೆ ಯಾವುದೇ ಪೂಜೆ ಪುರಸ್ಕಾರವಿಲ್ಲ. ಯಕ್ಷಲೋಕ, ಯಕ್ಷಪ್ರಶ್ನೆ ಎಂಬ ನುಡಿಗಳು ಕನ್ನಡದಲ್ಲಿ ಬಳಕೆಯಲ್ಲಿವೆ. ಯಕ್ಷಲೋಕವೆಂದರೆ ಅದೊಂದು ಅವಾಸ್ತವ ಕಲ್ಪನಾಲೋಕ. ಬಿಡಿಸಲಾಗದ, ಸಂದಿಗ್ಧರೂಪದ ಪ್ರಶ್ನೆಗಳನ್ನು ಯಕ್ಷಪ್ರಶ್ನೆ ಎಂಬ ಮಾತಿನಿಂದ ಕರೆಯಲಾಗುತ್ತದೆ. ಪಾಂಡವರು ಅಜ್ಞಾನವಾಸದಲ್ಲಿದ್ದಾಗ ಅವರನ್ನು ಪರೀಕ್ಷಿಸುವ ನೆಪದಿಂದ ಯಮ ಯಕ್ಷ ರೂಪತಾಳಿ ಕೆಲವು ಪ್ರಶ್ನೆಗಳನ್ನು ಕೇಳಿದ ಆಖ್ಯಾನ ಮಹಾಭಾರತ ದಲ್ಲಿ ಪ್ರಸಿದ್ಧವಾಗಿದೆ.

ಜೈನರಲ್ಲಿ ಯಕ್ಷಯಕ್ಷಿಯರಿಗೆ ವಿಶೇಷವಾದ ಸ್ಥಾನವಿದೆ. ಹೊರನೋಟಕ್ಕೆ ತೀರ್ಥಂಕರ ವಿಗ್ರಹಗಳು ವ್ಯತ್ಯಾಸಗಳಿಲ್ಲದೆ ಒಂದೇ ಏರಕದ ಮೂರ್ತಿಗಳಂತೆ ಕಾಣುತ್ತವೆ. ಆದರೆ ತೀರ್ಥಂಕರರನ್ನು ಗುರುತಿಸುವ ಅನೇಕ ಕ್ರಮಗಳಿವೆ. ಒಬ್ಬ ತೀರ್ಥಂಕರನಿಗೂ ಇನ್ನೊಬ್ಬ ತೀರ್ಥಂಕರನಿಗೂ ಕೆಲವು ಅಂಶಗಳಲ್ಲಿ ವ್ಯಾತ್ಯಾಸಗಳಿರುತ್ತವೆ. ಅವುಗಳಲ್ಲಿ ಪ್ರಮುಖವಾದವು-ಲಾಂಛನ, ಎತ್ತರ, ಬಣ್ಣ ಮತ್ತು ಯಕ್ಷಯಕ್ಷಿಯರು. ಒಬ್ಬೊಬ್ಬ ತೀರ್ಥಂಕರನಿಗೂ ಮೂರ್ತಿಯ ಬಲಭಾಗದಲ್ಲಿ ಯಕ್ಷನೂ ಎಡಭಾಗದಲ್ಲಿ ಯಕ್ಷಿಯೂ ಇರುತ್ತಾರೆ. ಯಕ್ಷ ಯಕ್ಷಿಯರನ್ನು ಶಾಸನ ದೇವತೆಗಳೆಂದೂ ಕರೆಯಲಾಗುತ್ತದೆ.

ಕನ್ನಡ ಜೈನಪುರಾಣಗಳಲ್ಲಿ ಯಕ್ಷಯಕ್ಷಿಯರ ಸ್ತೋತ್ರಪದ್ಯಗಳಿವೆ. ಜೈನ ಪುರಾಣಗಳಲ್ಲೂ ಇವರ ಸಂಬಂಧವಾದ ಕಥೆಗಳು ಬರುತ್ತವೆ. ಮಹಾಪುರಾಣ, ಪ್ರತಿಷ್ಠಾತಿಲಕಗಳಲ್ಲಿ ಇವರ ಪ್ರಸ್ತಾಪವಿದೆ. ಇವರು ಪುರಾಣಾದಿಗಳಲ್ಲಿ ಸ್ಥಾನ ಪಡೆದದ್ದು, ಜೈನಧರ್ಮವನ್ನು ಪ್ರವೇಶಿಸಿದ್ದು ಜೈನಧರ್ಮದ ಇತಿಹಾಸಾರಂಭ ಕಾಲದಲ್ಲಿ ಅಲ್ಲವೆಂದೂ ಪೂಜಾದಿ ಬಾಹ್ಯ ಆಚಾರಗಳು ಆರಂಭವಾದ ಘಟ್ಟದಲ್ಲಿರಬೇಕೆಂದೂ ತಿಳಿಯಲು ಅವಕಾಶವಿದೆ. ಇಂದಿಗೂ ಇವರಿಗೆ ಪ್ರತ್ಯೇಕವಾದ ಪೂಜಾಮಂದಿರಗಳೂ ಪೂಜಾವ್ಯವಸ್ಥೆಯೂ ದಕ್ಷಿಣದಲ್ಲಿರುವಷ್ಟು ಉತ್ತರದಲ್ಲಿಲ್ಲ. ಮೂರ್ತಿ ನಿರ್ಮಾಣದ ದೃಷ್ಟಿಯಿಂದಲೂ ಯಕ್ಷಯಕ್ಷಿಯರ ವಿಗ್ರಹಗಳು ದಕ್ಷಿಣದಲ್ಲೇ ಅಧಿಕ, ಉತ್ತರದಲ್ಲಿ ಇವರ ಮೂರ್ತಿಗಳನ್ನು ಕೆತ್ತಿಸುವ ವಿಧಾನ ವಿರಳ.

ಒಟ್ಟು 24 ಜನ ಯಕ್ಷರು 24 ಜನ ಯಕ್ಷಿಯರೂ ಇದ್ದಾರೆ. 24 ಜನ ಯಕ್ಷರು: ಗೋಮುಖ, ಮಹಾಯಕ್ಷ, ತ್ರಿಮುಖ, ಯಕ್ಷೇಶ್ವರ, ತುಂಬುರು,

ಕುಸುಮ, ವರನಂದಿ, ವಿಜಯ, ಅಜಿತ, ಬ್ರಹ್ಮ, ಈಶ್ವರ, ಕುಮಾರ, ಷಣ್ಮುಖ, ಪಾತಾಳ, ಕಿನ್ನರ, ಗರುಡ, ಗಂಧರ್ವ, ಮಹೇಂದ್ರ, ಕುಬೇರ, ಪುರುಷವರ, ವಿದ್ಯುತ್ಪ್ರಭ, ಸರ್ವಾಹ್ಣ, ಧರಣೇಂದ್ರ, ಮತ್ತು ಮಾತಂಗ.

ಯಕ್ಷಯಕ್ಷಿಯರು

24 ಜನ ಯಕ್ಷಿಯರು: ಚಕ್ರೇಶ್ವರಿ, ರೋಹಿಣಿ, ಪ್ರಜ್ಞಪ್ತಿ, ವಜ್ರಶೃಂಖಲಾ, ಪುರುಷದತ್ತಾ, ಮಾನೋವೇಗೆ, ಕಾಳಿ, ಜ್ವಾಲಾಮಾಲಿನಿ, ಮಹಾಕಾಳಿ, ಮಾನವಿ, ಗೌರಿ, ಗಾಂಧಾರಿ, ವೈರೋಚಿ, ಅನಂತಮತಿ, ಮಾನಸಿ, ಮಹಾಮಾನಸಿ, ಜಯಾವಿಜಯಾ, ಅಪರಾಜಿತಾ, ಬಹುರೂಪಿಣಿ, ಚಾಮುಂಡಿ, ಕೂಷ್ಮಾಂಡಿ, ಪದ್ಮಾವತಿ ಮತ್ತು ಸಿದ್ಧಾಯಿನಿ.

ದಿಂಗಬರ ಮತ್ತು ಶ್ವೇತಾಂಬರ ಜೈನಧರ್ಮದ ಎರಡು ಮುಖ್ಯ ಸಂಪ್ರದಾಯಗಳು. ದಿಗಂಬರ ಅಮ್ನಾಯದಂತೆ ಮೋಕ್ಷ ಪ್ರಾಪ್ತಿ ಪುರುಷ ದೇಹಧಾರಿ ಜೀವಕ್ಕೆ ಮಾತ್ರ. ಅದರಿಂದಾಗಿ ಪೂಜೆ, ಪುರಸ್ಕಾರಗಳು ಕೂಡ ಪುರುಷದೈವಗಳಿಗೇ ಹೆಚ್ಚು. ಚೈತ್ಯಾಲಯಗಳಲ್ಲಿ ತೀರ್ಥಂಕರರಿಗೇ ಮೊದಲ ಪೂಜೆ. ಆದರೆ ಕಾಲಾಂತರದಲ್ಲಿ ಅವರ ಜೊತೆಗೆ ಉಳಿದ ಶಕ್ತಿಗಳಿಗೂ ಪೂಜೆ ಸಲ್ಲತೊಡಗಿತು. ಗೌಣದೇವತೆಗಳೆಂದು ಪರಿಗಣಿತ ವಾಗಿದ್ದ ಯಕ್ಷಯಕ್ಷಿಯರೂ ಪ್ರತ್ಯೇಕ ಪೂಜೆ ಪಡೆಯುವಂತಾದರು. ಈ ಕ್ರಮ ವ್ಯಾಪಕವಾಗಿ ಮುಂದುವರಿಯಿತು. ಮೂಲದಲ್ಲಿ ಯಕ್ಷಿ ಆರಾಧನೆಯ ರೂಪದಲ್ಲಿ ಪ್ರಾರಂಭವಾದ ಈ ಪೂಜಾ ಸಂಪ್ರದಾಯ ತಾಂತ್ರಿಕ ಆರಾಧನೆಯಾಗಿ ಪರಿಣಮಿಸಿತು. ತತ್ಫಲವಾಗಿ ಕೆಲವು ಜೈನ ಗುರುಗಳು ಈ ಪೂಜಾಪದ್ಧತಿಯನ್ನು ಪುರಸ್ಕರಿಸಿದರು. ಅವರಲ್ಲಿ ಹಲವರು ಮಂತ್ರ, ತಂತ್ರ, ನೈಪುಣ್ಯ ಸಂಪಾದಿಸಿದರು. 11ನೆಯ ಶತಮಾನದಲ್ಲಿದ್ದ ಮಲ್ಲಿಷೇಣಸೂರಿ ಎಂಬ ಜೈನಮುನಿ ಹೆಸರಾಂತ ತಾಂತ್ರಿಕಾರಾಧಕನಾಗಿದ್ದ. ಈತ ಜ್ವಾಲಿನೀ ಕಲ್ಪ, ಭೈರವ ಪದ್ಮಾವತೀ ಕಲ್ಪ ಎಂಬ ಕೃತಿಗಳನ್ನು ಬರೆದಿದ್ದಾನೆ.

ಕನ್ನಡನಾಡಿನಲ್ಲಿ ಯಕ್ಷಿ ಆರಾಧನೆ ವಿಶೇಷವಾಗಿ ಕಂಡುಬಂದರೂ ಎಲ್ಲ ಯಕ್ಷಯಕ್ಷಿಯರಿಗೂ ಸಮಾನಪೂಜೆ, ಪ್ರಸಿದ್ಧಿ ದೊರೆಯಲಿಲ್ಲ. ಪದ್ಮಾವತಿ, ಜ್ವಾಲಾಮಾಲಿನಿ–ಈ ಇಬ್ಬರು ಯಕ್ಷಿಯರಿಗೆ ಮಾತ್ರ ವಿಶೇಷ ಮಾನ್ಯತೆ ದೊರೆತಿದೆ. ಇವರನ್ನು ಗೌರವ ಪೂರ್ವಕವಾಗಿ ಅಮ್ಮನವರು ಎಂದೂ ಸಂಬೋಧಿಸಲಾಗು ತ್ತದೆ. ಪದ್ಮಾವತಿ 23ನೆಯ ತೀರ್ಥಂಕರನಾದ ಪಾರ್ಶ್ವನಾಥ ತೀರ್ಥಂಕರನ ಯಕ್ಷಿ; ಜ್ವಾಲಾ ಮಾಲಿನಿ 8ನೆಯ ತೀರ್ಥಂಕರನಾದ ಚಂದ್ರಪ್ರಭ ತೀರ್ಥಂಕರನ ಯಕ್ಷಿ. ಜ್ವಾಲಾಮಾಲಿನಿ ಯಕ್ಷಿಯ ದೇವಸ್ಥಾನಗಳು ಉತ್ತರ ಕನ್ನಡಜಿಲ್ಲೆಯ ಗೇರುಸೊಪ್ಪೆ, ಚಿಕ್ಕಮಗಳೂರು ಜಿಲ್ಲೆಯ ಎಡೆಹಳ್ಳಿ ಮತ್ತು ನರಸಿಂಹರಾಜಪುರ (ಸಿಂಹನಗದ್ದೆ) ಮೊದಲಾದ ಕಡೆಗಳಲ್ಲಿವೆ. ಪದ್ಮಾವತಿ ಯಕ್ಷಿಯ ದೇವಸ್ಥಾನಗಳಲ್ಲಿ ಶಿವಮೊಗ್ಗದಲ್ಲಿಯ ಹೊಂಬುಜ (ಹುಮಚ) ಕ್ಷೇತ್ರದಲ್ಲಿರುವುದು ವಿಖ್ಯಾತ ವಾಗಿದೆ. ಈಕೆ ಏಳು ನೂರು ವರ್ಷಗಳ ಹಿಂದೆ ಹೊಂಬುಜ ಕ್ಷೇತ್ರದ ಅಧಿದೇವತೆಯೂ ಅಲ್ಲಿ ಹಿಂದೆ ಆಳಿದ ಸಾಮಂತ ವಂಶದವರ

ಯಕ್ಷ, ಪಟಣ

ಕುಲದೇವತೆಯೂ ಆಗಿದ್ದಳು. ಈಕೆಗೆ ಹರಕೆ ಹೊತ್ತು ನನ್ನಿಗಂಗನೆಂಬ ಅರಸ ಹಾಗೂ ಅವನ ಅರಸಿ ಕಂಚಲ ಮಹಾದೇವಿಯು ಹೆಮ್ಮಾಡಿದೇವ ಎಂಬ ಮಗನನ್ನು ಪಡೆದರೆಂದು ಶಾಸನ ದಾಖಲೆಯಿದೆ. ಕೆಲವು ಕನ್ನಡ ಓಲೆಗರಿ ಗ್ರಂಥಗಳ ಪ್ರಾರಂಭದಲ್ಲಿ ಪದ್ಮಾವತಿದೇವಿಯ ಸ್ತುತಿಯಿದೆ. ಶ್ರವಣಬೆಳಗೊಳದಲ್ಲಿ ಅಧಿದೇವತೆಯಾಗಿ ಕೂಷ್ಮಾಂಡಿನಿದೇವಿ ಎಂಬ ಯಕ್ಷಿ ಸಿದ್ಧಸಿಂಹಾಸನಾಧೀಶ್ವರಿ ಎಂದು ಪ್ರಖ್ಯಾತಳಾಗಿದ್ದಾಳೆ. ಶ್ರವಣಬೆಳಗೊಳ ಮತ್ತು ಸಮೀಪದ ಸ್ಥಳಗಳಲ್ಲಿ ಕೂಷ್ಮಾಂಡಿನಿಯ ಸುಂದರವಾದ ಹತ್ತಾರು ವಿಗ್ರಹಗಳಿವೆ. ಹಾಸನ ಜಿಲ್ಲೆಯ ಮರ್ಕೂಲಿ ಎಂಬ ಹಳ್ಳಿಯಲ್ಲಿ ಅಪೂರ್ವ ಕಲಾಸಂಪತ್ತಿನಿಂದ ಕಂಗೊಳಿಸುವ ಗೋಮುಖ ಯಕ್ಷ ಹಾಗೂ ಚಕ್ರೇಶ್ವರಿ ಯಕ್ಷಿಯ ವಿಗ್ರಹಗಳಿರುವ ಪಂಚಬಸದಿಯಿದೆ. ಹದಿನಾರು ಹಸ್ತಗಳ ನ್ನೊಳಗೊಂಡ, ಶಿಲ್ಪಕಲಾ ಪರಿಪೂರ್ಣತೆಯಿಂದ ಶೋಭಿಸುವ ಯಕ್ಷರಿರುವ ಈ ಬಸದಿಯನ್ನು ಹೊಯ್ಸಳ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲಾದೇವಿ ನಿರ್ಮಿಸಿದಳೆಂದು ಅಲ್ಲಿಯ ಶಾಸನಗಳಿಂದ ತಿಳಿದು ಬರುತ್ತದೆ. ಜೈನಧರ್ಮದಲ್ಲಿ ಕುಲದೇವತೆ ಇಲ್ಲವೇ ಮಂತ್ರ ತಂತ್ರ ಸಿದ್ಧಿ ಉಪಾಸನೆಗಳಿಗೆ ಪುರಸ್ಕಾರವಿಲ್ಲ. ಆದರೂ ಯಕ್ಷಯಕ್ಷಿಯರ ಪೂಜೆ ಒಂದು ರೀತಿಯಲ್ಲಿ ಮಾತೃಪೂಜೆಯೂ ಆಗಿದ್ದುದರಿಂದ ಸಹಜ ವಾಗಿಯೇ ಮಂತ್ರವಿದ್ಯೆಗೆ ಎಡೆಗೊಟ್ಟಿತು. ಅರ್ಕಕೀರ್ತಿ ಎಂಬ ಜೈನ ಯತಿವಿಮಲಾದಿತ್ಯನೆಂಬ ದೊರೆಗೆ ಒದಗಿದ್ದ ಶನಿಸಂಕಟವನ್ನು ಈ ಮೂಲಕ ನಿವಾರಿಸಿದನೆಂದು ಒಂದು ಆಧಾರ ತಿಳಿಸುತ್ತದೆ. ಇದೇ ರೀತಿ ಇನ್ನೂ ಕೆಲವು ಜೈನ ಯತಿಗಳು ಮಂತ್ರಸಿದ್ಧಿ ಪಡೆದು ಪ್ರಸಿದ್ಧರಾದ ವಿಚಾರ ಶಾಸನನಾದಿಗಳಿಂದ ತಿಳಿದುಬರುತ್ತದೆ. ಜಿನಚಂದ್ರದೇವನೆಂಬ ಗುರು

ಮಹಾಮಂತ್ರವಾದಿಯಾಗಿದ್ದನಂತೆ. ಆತನ ಮುಂದೆ ಭೂತ ಪ್ರೇತಪಿಶಾಚಾದಿಗಳ ಆಟ ಏನೂ ನಡೆಯುತ್ತಿರಲಿಲ್ಲವೆಂದೂ ಉಲ್ಲೇಖವಿದೆ. ಕೆಲವು ರಾಜಮನೆತನಗಳಿಗೆ ಭೈರವ, ಕಾಳಿಕಾದೇವಿ ಕುಲದೇವತೆಗಳಾಗಿದ್ದರು.

ಯಕ್ಷಯಕ್ಷಿಯರಿಗೆ ಭಕ್ತರು ಸಲ್ಲಿಸಿದ ಪೂಜೆಗೆ ತಕ್ಕ ಪ್ರತಿಫಲ ದೊರೆಯುತ್ತದೆಂಬ ನಂಬಿಕೆ ಜೈನಧರ್ಮೀಯರಲ್ಲಿದೆ. ಜೈನೇತರರಲ್ಲೂ ಈ ಬಗೆಯ ಪೂಜೆಗಳುಂಟು. ಶಕ್ತಿ ದೇವತೆಗಳ ಪೂಜಾವಿಧಾನಕ್ಕೆ ಯಕ್ಷಿಯರ ಪೂಜೆಯೂ ಸೇರುತ್ತದೆ. ಬೌದ್ಧರಲ್ಲಿ ತಾರಾದೇವಿ (ತಾರಾಭಗವತಿ), ಹಿಂದೂಗಳಲ್ಲಿ ಗೌರಿ ಜನಪ್ರಿಯವಾಗಿರುವಂತೆ ಜೈನರಲ್ಲಿ ಪದ್ಮಾವತಿ ಯಕ್ಷಿ ಬಹುಮನ್ನಣೆಗೆ ಪಾತ್ರಳಾದ ದೇವತೆ. ಕೆಲವು ಸಂಶೋಧಕರು ತಾರಾ, ಪದ್ಮಾವತಿ ಮತ್ತು ಗೌರಿ ಈ ಮೂವರ ಸ್ವರೂಪವೂ ಒಂದೇ ಎಂದು ಅಭಿಪ್ರಾಯಪಡುತ್ತಾರೆ. *

**ಯಗಚಿ:** ಹೇಮಾವತಿ ನದಿಯ ಪ್ರಮುಖ ಉಪನದಿ. ಇದಕ್ಕೆ ಬದರಿ ಎಂಬ ಹೆಸರೂ ಇದೆ. ಈ ನದಿ ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿಯಲ್ಲಿ ಹುಟ್ಟಿ, ದಕ್ಷಿಣಾಭಿಮುಖವಾಗಿ ಹರಿದು, ಬೇಲೂರು ಪಟ್ಟಣವನ್ನು ತಾಗಿ ಅದೇ ತಾಲ್ಲೂಕಿನ ಸಿರಿಘಟ್ಟ ಎಂಬ ಗ್ರಾಮದ ಬಳಿ ಹಾಸನ ಜಿಲ್ಲೆಯನ್ನು ಪ್ರವೇಶಿಸಿ ಗೊರೂರು ಗ್ರಾಮದ ಹತ್ತಿರ ಹೇಮಾವತಿ ನದಿಯನ್ನು ಕೂಡಿಕೊಳ್ಳುತ್ತದೆ. ಬೇಲೂರು ಸಮೀಪ ಇದಕ್ಕೆ ಅಡ್ಡಲಾಗಿ ಜಲಾಶಯ ನಿರ್ಮಿಸಿ ಸಾವಿರಾರು ಎಕರೆ ಜಮೀನಿನ ನೀರಾವರಿಗೆ ಅನುಕೂಲ ಕಲ್ಪಿಸಲಾಗಿದೆ. ನದಿಯ ಉದ್ದ ಸುಮಾರು 65 ಕಿಮೀ. ಈ ನದಿಗೆ ಅಡ್ಡಲಾಗಿ ಬೇಲೂರು ತಾಲ್ಲೂಕಿನ ಬೊಮ್ಮಡಿಹಳ್ಳಿ, ಹಾಸನ ತಾಲ್ಲೂಕಿನ ಹಾಲವಾಗಲು (ಹಾಲಬಾಗಿಲು) ಮತ್ತು ಚಂದ್ರವಳ್ಳಿಗಳಲ್ಲಿ ನೀರಾವರಿಗಾಗಿ ಚಿಕ್ಕ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ವಾಟೆಹೊಳೆ (ಉದ್ದ ಸು. 30 ಕಿಮೀ) ಮತ್ತು ಬಿರಂಜಿಹಳ್ಳ ಯಗಚಿಯ ಉಪನದಿಗಳು. ಈ ನದಿಯಿಂದ ಬೇಲೂರು ಮತ್ತು ಹಾಸನಗಳ ಪಟ್ಟಣಗಳಿಗೆ ಕುಡಿಯುವ ನೀರಿನ ಸರಬರಾಜು ಆಗುತ್ತದೆ. (ಎ.ಕೆ.)

**ಯಡ್ರಾಮನಹಳ್ಳಿ ದೊಡ್ಡಭರಮಪ್ಪ:** ತೊಗಲುಗೊಂಬೆಯಾಟದ ಹೆಸರಾಂತ ಕಲಾವಿದ. ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕು ಯಡ್ರಾಮನಹಳ್ಳಿ ಸ್ವಂತ ಸ್ಥಳ. ತಂದೆ ದೇವೇಂದ್ರಪ್ಪ, ತಾಯಿ ಕೆಂಚಮ್ಮ.

ವಂಶಪಾರಂಪರ್ಯವಾಗಿ ಬಂದ ತೊಗಲುಗೊಂಬೆಯಾಟ ಕಲೆಯನ್ನು ತಮ್ಮ ತಾತನವರಿಂದ ಕಲಿತರು. ನಾಲ್ಕು ದಶಕಗಳಿಗಿಂತ ಹೆಚ್ಚು ಕಾಲದಿಂದ ಈ ಕಲೆಯಲ್ಲಿ ಇವರು ಮಾಡಿರುವ ಸಾಧನೆ ಅಪರೂಪದ್ದು. ಈ ಕಲೆಯನ್ನು ಆಸಕ್ತರಿಗೆ ಕಲಿಸುತ್ತ ಇವರು ಆದರ್ಶಗುರು ಎನಿಸಿದ್ದಾರೆ. ತಮ್ಮ ಕಲಾತಂಡದೊಡನೆ ಜರ್ಮನಿ ಮುಂತಾದ ದೇಶಗಳಿಗೆ ಭೇಟಿನೀಡಿ ವಿದೇಶೀಯರಿಗೆ ಈ ಕಲೆ ಪ್ರದರ್ಶಿಸಿ ಅವರ ಮೆಚ್ಚುಗೆಗಳಿಸಿದ್ದಾರೆ. ಕರ್ನಾಟಕದ ಹಲವಾರು ಜನಪದ ಕಲಾಮೇಳಗಳಲ್ಲಿ ಇವರು ಪಾಲ್ಗೊಂಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಸಂಘಟಿಸಿದ್ದ ಜಾನಪದ ಸಮ್ಮೇಳನದಲ್ಲಿ ಇವರು ಭಾಗವಹಿಸಿದ್ದರು (1975). ಬೆಂಗಳೂರಿನಲ್ಲಿ ಜರುಗಿದ ರಾಜ್ಯಮಟ್ಟದ ಕಲಾಮೇಳದಲ್ಲಿಯೂ ಭಾಗವಹಿಸಿದ್ದರು (1982). ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ಕರಕುಶಲ ಪರಿಷತ್ತು, ಉಡುಪಿಯ ಪ್ರಾದೇಶಿಕ ಜಾನಪದ ಕಲೆಗಳ ಅಧ್ಯಯನ ಕೇಂದ್ರ ಮೊದಲಾದ ಪ್ರತಿಷ್ಠಿತ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಇವರನ್ನು ಗೌರವಿಸಿವೆ. ಜರ್ಮನಿಯ ವಿದ್ವಾಂಸ ಷೆಲ್ವಮನ್ ಅವರು ದೊಡ್ಡಭರಮಪ್ಪನವರ ಕಲೆಯನ್ನು ಮೆಚ್ಚಿ ಅಪೂರ್ವ ಕಲಾವಿದ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಾಲೆಂಡ್ ದೇಶದ ವಿದ್ವಾಂಸರೂ ಇವರ ಕಲೆಯನ್ನು ಪ್ರಶಂಸಿಸಿದ್ದಾರೆ. ಇವರ ಕಲಾಸಾಧನೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1982), ಕರ್ನಾಟಕ ಸರ್ಕಾರ ಜಾನಪದ ಶ್ರೀ ಪ್ರಶಸ್ತಿ (1996) ನೀಡಿ ಗೌರವಿಸಿದೆ. (ಜಿ.ಆರ್.ಟಿ.)

**ಯದುರಾಯ:** ಮೈಸೂರು ರಾಜಮನೆತನದ ಮೂಲ ಪುರುಷ (ಸು. 1399–1423). ವಿಜಯ ಎಂಬುದು ಈತನ ಇನ್ನೊಂದು ಹೆಸರಿದ್ದಂತೆ ತೋರುತ್ತದೆ.

ಶ್ರೀ ಕೃಷ್ಣನ ವಂಶಕ್ಕೆ ಸೇರಿದ ಕೆಲವು ರಾಜಕುಮಾರರರು ಕಾಥೆಯವಾಡದ ದ್ವಾರಕೆಯಿಂದ ವಿಹಾರಾರ್ಥವಾಗಿಯೋ ಅಥವಾ ಅವರ ಕುಲದೇವತೆಯಾದ ಯದುಗಿರಿಯಲ್ಲಿರುವ ನಾರಾಯಣನ ದರ್ಶನಕ್ಕಾಗಿಯೋ ಕರ್ನಾಟಕಕ್ಕೆ ಬಂದು, ಇಲ್ಲಿಯ ನಿಸರ್ಗಸೌಂದರ್ಯಕ್ಕೆ ಮನಸೋತು ಮಹಿಷಪುರದಲ್ಲಿ (ಮೈಸೂರಿನಲ್ಲಿ) ನೆಲಸಿ, ಮೈಸೂರು ರಾಜವಂಶದ ಮೂಲ ಪುರುಷರಾದರೆಂದು ಶಾಸನಗಳು ತಿಳಿಸುತ್ತವೆ.

ಐತಿಹ್ಯಗಳ ಪ್ರಕಾರ 1399ರಲ್ಲಿ ಯದುವಂಶೋದ್ಭೂತರಾದ ಯದುರಾಯ (ವಿಜಯ) ಮತ್ತು ಕೃಷ್ಣ ಎಂಬ ಇಬ್ಬರು ಸೋದರರು ಗುಜರಾತಿನ ದ್ವಾರಕಾಪುರದಿಂದ ಕನ್ನಡ ದೇಶಕ್ಕೆ ಬಂದರು. ಆಗ ಹದಿನಾಡಿನ ಪಾಳೆಯಗಾರನಾಗಿದ್ದ ಚಾಮರಾಜ ಗತಿಸಿಹೋಗಿ, ಅವನ ಕುಟುಂಬದವರು ಕಷ್ಟಸ್ಥಿತಿಯಲ್ಲಿದ್ದರು. ಸಮೀಪದ ಕಾರುಗಹಳ್ಳಿಯ ಮಾರನಾಯಕ ಈ ಸಮಯವನ್ನು ಉಪಯೋಗಿಸಿಕೊಂಡು ಅವನ ಮಗಳನ್ನು ತನಗೆ ಧಾರೆಯೆರೆದುಕೊಡುವಂತೆ ಅವಳ ತಾಯಿಯನ್ನು ಒತ್ತಾಯಪಡಿಸುತ್ತಿರುವುದಾಗಿಯೂ ಅವಳು ಬೇರೆ ಮಾರ್ಗವಿಲ್ಲದೆ ಆ ಮದುವೆಗೆ ಸಮ್ಮತಿಸಿರುವುದಾಗಿಯೂ ಈ ತರುಣರಿಗೆ ತಿಳಿದುಬಂತು. ಇದೇ ಸುಸಮಯವೆಂದು ಅರಿತ ಈ ತರುಣರು ರಾಜಕುಟುಂಬದವರೊಡಗೂಡಿ, ಮಾರನಾಯಕ ಮತ್ತು ಅವನ ಅನುಚರರು ಭೋಜನಕ್ಕೆ ಕುಳಿತಿದ್ದಾಗ, ಅವರ ಮೇಲೆ ಬಿದ್ದು ಮಾರನಾಯಕನನ್ನು ಕೊಂದರು. ಕಾರುಗಹಳ್ಳಿ ಇವರ ವಶವಾಯಿತು. ಈ ತರುಣರಲ್ಲಿ ಒಬ್ಬನಾದ ವಿಜಯ ಅಥವಾ ಯದುರಾಯನನ್ನು ರಾಜಕುಮಾರಿ ಸ್ವಇಚ್ಛೆಯಿಂದ ವರಿಸಿದಳು. ಈ ಸಮಯದಲ್ಲಿ ಯದುರಾಯನಿಗೆ ಒಬ್ಬ ಜಂಗಮ ಸ್ವಾಮಿಯ ಭೇಟಿಯಾಗಿ ಅವನ ಶಿಷ್ಯನಾದನೆಂದೂ ಇದರಿಂದಾಗಿ ಈತ 'ಒಡೆಯರು' ಎಂಬ ಬಿರುದಿನಿಂದ ಹದಿನಾಡು ಪ್ರಾಂತವನ್ನೂ ಕಾರುಗಹಳ್ಳಿಯನ್ನೂ ಆಳಿದ ಮತ್ತು ಈ ಬಿರುದು ಅನಂತರದ ಈತನ ಮನೆತನದ ಅರಸರಲ್ಲಿ ಮುಂದುವರಿಯಿತು ಎಂಬ ಹೇಳಿಕೆ ಇದೆ. ಯದುರಾಯ ಜನಿಸಿದ್ದು 1371ರಲ್ಲಿ, ಪಟ್ಟಾಭಿಷಿಕ್ತನಾದುದು 1399ರಲ್ಲಿ ಎಂದು ಮೈಸೂರು ಅರಮನೆಯಲ್ಲಿರುವ ದಾಖಲೆಗಳಿಂದ ತಿಳಿದುಬರುತ್ತದೆ. ಈತನ ಮರಣಾನಂತರ ಇವನ ಪುತ್ರನಾದ ಹಿರಿಯ ಬೆಟ್ಟದ ಚಾಮರಾಜ ಪಟ್ಟಕ್ಕೆ ಬಂದ (1423). (ಆರ್.ವಿ.)

**ಯಮನೂರು:** ನವಲಗುಂದ ತಾಲ್ಲೂಕಿನ ಒಂದು ಗ್ರಾಮ; ಯಾತ್ರಾಸ್ಥಳ. ಹುಬ್ಬಳ್ಳಿ–ಬಿಜಾಪುರ ಹೆದ್ದಾರಿಯಲ್ಲಿ ನವಲಗುಂದದ ನೈಋತ್ಯಕ್ಕೆ 5 ಕಿಮೀ ದೂರದಲ್ಲಿ ಬೆಣ್ಣೆಹಳ್ಳದ ಎಡದಂಡೆಯ ಮೇಲಿದೆ. ಜನಸಂಖ್ಯೆ 2,168.

17ನೆಯ ಶತಮಾನದ ಉತ್ತರಾರ್ಧದಲ್ಲಿ ಆಗಿಹೋದರೆನ್ನಲಾದ ರಾಜಾಬಾಗ ಸವಾರ ಎಂಬುವರ ಹೆಸರಿನಲ್ಲಿ ಈ ಊರಿನಲ್ಲಿ ವರ್ಷಕ್ಕೊಮ್ಮೆ

ಚಾಂಗೇದವರ ಉರುಸ್ ನಡೆಯುತ್ತದೆ. ದೇಶದ ನಾನಾ ಮೂಲೆಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಜನ ಇಲ್ಲಿಗೆ ಬಂದು ಹರಕೆ ಸಲ್ಲಿಸುತ್ತಾರೆ. ಈ ದೇವರ ಮಹಿಮೆಯಿಂದ ಭಕ್ತಜನರ ಸಂಕಷ್ಟಗಳು ದೂರವಾಗಿ, ಅವರ ರೋಗರುಜಿನಗಳು, ಅದರಲ್ಲೂ ಗುಹ್ಯರೋಗಗಳು ನಿವಾರಣೆಯಾಗುತ್ತವೆಂಬ ನಂಬಿಕೆ ಸ್ಥಳೀಕರಲ್ಲಿದೆ. (ವಿ.ಎಸ್.ಬಿ.)

**ಯರ್ಮುಂಜ ರಾಮಚಂದ್ರ:** 1933–55. ನವ್ಯ ಸಾಹಿತ್ಯಪಂಥದ ಆರಂಭದ ದಿನಗಳಲ್ಲಿ ಗಂಭೀರ ಸಾಹಿತ್ಯರಚನೆಯಲ್ಲಿ ತೊಡಗಿಕೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಯುವ ಸಾಹಿತಿ, ಪತ್ರಿಕೋದ್ಯಮಿ.ಇವರು 1933 ಫೆಬ್ರವರಿ 9ರಂದು ಜನಿಸಿದರು. ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಓದಿ ಎಸ್.ಎಸ್.ಎಲ್.ಸಿ. ಮುಗಿಸಿದರು. ಕೆಲವು ಕಾಲ ತಮ್ಮ ಊರಾದ ಕಬುಕ ಎಂಬಲ್ಲಿ ಪೋಸ್ಟ್ ಮಾಸ್ತರಾಗಿ, ಅಧ್ಯಾಪಕರಾಗಿ, ಬೆರಳಚ್ಚುಗಾರ ರಾಗಿ ಕೂಡ ಕೆಲಸ ಮಾಡಿದರು. ಅನಂತರ ಮಂಗಳೂರಿನ ನವಭಾರತ ದೈನಿಕದ ಹಾಗೂ ಕಡೆಂಗೋಡ್ಲು ಶಂಕರಭಟ್ಟರ ರಾಷ್ಟ್ರಮತ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಕೆಲಸ ಮಾಡಿದರು. ಇವರು ಪಾಂಚಜನ್ಯ ಎಂಬ ಹೆಸರಿನ ಕೈಬರೆಹದ ಮಾಸಪತ್ರಿಕೆಯನ್ನು ಪಿ.ಎಸ್. ರಾಮ ಎಂಬವರ ಜೊತೆಗೂಡಿ ಸಂಪಾದಿಸುತ್ತಿದ್ದರು (1949–54). ಕಬುಕದಿಂದ ಪ್ರಕಟವಾಗುತ್ತಿದ್ದ ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲಿ ನೂರುಪುಟ, ವಾರ್ಷಿಕ ವಿಶೇಷ ಸಂಚಿಕೆಯಲ್ಲಿ ಇನ್ನೂರು ಪುಟ ಇರುತ್ತಿದ್ದವು. ಶಿವರಾಮ ಕಾರಂತ, ಗೋವಿಂದ ಪೈ, ಸೇಡಿಯಾಪು ಕೃಷ್ಣಭಟ್ಟ, ವಿ.ಜಿ. ಭಟ್ಟ, ಗೋಪಾಲಕೃಷ್ಣ ಅರ್ತಿ, ಮ. ಗೋಪಾಲಕೃಷ್ಣರಾಯ ಮೊದಲಾದ ಗಣ್ಯ ಲೇಖಕರು ಈ ಪತ್ರಿಕೆಗೆ ಬರೆಯುತ್ತಿದ್ದರು. ಕಬುಕದಂಥ ಸಣ್ಣ ಊರಿನ ಜನರಿಗೆ ದೇಶ–ವಿದೇಶಗಳ ಸಾಹಿತ್ಯ–ರಾಜಕೀಯ–ಸಾಮಾಜಿಕ ವಿಚಾರಗಳ ಪರಿಚಯ ಮಾಡುವುದೇ ಈ ಪತ್ರಿಕೆಯ ಉದ್ದೇಶವಾಗಿದ್ದಿರಬೇಕು. ಇದು ಸಾಂಸ್ಕೃತಿಕ ವಿಕೇಂದ್ರೀಕರಣಕ್ಕಾಗಿ ನಡೆಸಿದ ಒಂದು ಮುಖ್ಯ ಪ್ರಯತ್ನವೂ ಹೌದು.

ವಿದಾಯ ಎಂಬ ಇವರ ಕವನಸಂಕಲನ ಇವರ ಮರಣಾನಂತರ ಪ್ರಕಟವಾಯಿತು (1956). ಇದರಲ್ಲಿ ನವೋದಯ, ಪ್ರಗತಿಶೀಲ, ನವ್ಯ ಶೈಲಿಗಳಲ್ಲಿ ಬರೆದ ನಲವತ್ತು ಕವನಗಳಿವೆ. ಪ್ರಕೃತಿ, ಗಂಡು ಹೆಣ್ಣಿನ ಸಂಬಂಧ, ಅಸಮಾನತೆ, ಸಾವು, ಬದುಕುವ ಛಲ ಮೊದಲಾದ ವಿಷಯಗಳ ಬಗ್ಗೆ ಈ ಕವನಗಳಲ್ಲಿ ವ್ಯಕ್ತವಾಗಿರುವ ದೃಷ್ಟಿಕೋಣ ಅತ್ಯಂತ ಸಂಕೀರ್ಣವಾದದ್ದು. 'ಚಿಕಿತ್ಸೆಯ ಹುಚ್ಚು' ಇವರ ಕಥಾಸಂಕಲನ (1954). ಸಾಮಾಜಿಕ ಸ್ಥಿತಿಯನ್ನೂ ವ್ಯಕ್ತಿಯ ಮಾನಸಿಕ ಸ್ಥಿತಿಯನ್ನೂ ಒಟ್ಟಿಗೇ ಚಿತ್ರಿಸುವ ಕಥೆಗಳೆಂದು ಇವುಗಳನ್ನು ಗುರುತಿಸಲಾಗಿದೆ. ಚೆನ್ನಪ್ಪ ಒಡೆದ ಮೂರ್ತಿ ಮೂರ್ತಿಭಂಜಕತೆಯ ವಸ್ತುವನ್ನು ಉದ್ಘಾಟಿಸಿದ ಕಥೆ; 'ಪ್ರೇತಾತ್ಮಗಳು' ಎಳೆ ಹುಡುಗನ ಮೂಲಕ ಕಥೆ ಹೇಳುವ ಕನ್ನಡದ ಮೊದಲ ಪ್ರಯತ್ನಗಳಲ್ಲೊಂದು ಎಂದು ವಿಮರ್ಶಕರು ಗುರುತಿಸಿದ್ದಾರೆ. ಸಮಕಾಲೀನ ಲೇಖಕರಾದ ಯು.ಆರ್. ಅನಂತಮೂರ್ತಿ, ಕೆ.ಸದಾಶಿವ, ರಾಜಲಕ್ಷ್ಮಿ ಎನ್. ರಾವ್ ಮೊದಲಾದವರ ಕಥೆಗಳಿಗೆ ಹೋಲಿಸಿದರೆ ಆ ಕಾಲಕ್ಕೆ ಇವರ ಕಥೆಗಳು ಮೇಲುಮಟ್ಟದಲ್ಲಿವೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ನವ್ಯ ಸಣ್ಣಕಥೆಗಳಲ್ಲಿ ಸಾಂಕೇತಿಕತೆಯನ್ನು ಅರ್ಥಪೂರ್ಣವಾಗಿ ತರಲು ಪ್ರಯತ್ನಿಸಿದ ಮೊದಲ ಲೇಖಕರಲ್ಲಿ ಇವರೂ ಒಬ್ಬರು. ಇವರ ಸಮಗ್ರಕಾವ್ಯ, ಕಥೆಗಳನ್ನು ಬೆಂಗಳೂರಿನ ಪ್ರಿಸಮ್‌ಯಿಕ್ ಬುಕ್ಸ್ ಎಂಬ ಸಂಸ್ಥೆ ಪ್ರಕಟಿಸಿದೆ (2002). (ಆರ್.ಡಿ.)

**ಯಲಗುಪ್ಪ:** ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಒಂದು ಗ್ರಾಮ. ಗೇರು ಸೊಪ್ಪೆ ಮಾರ್ಗದಲ್ಲಿ ಹೊನ್ನಾವರದಿಂದ 15 ಕಿಮೀ ದೂರದಲ್ಲಿದೆ. ಈ ಗ್ರಾಮದಲ್ಲಿರುವ ದೇವ ವೈದ್ಯ ಧನ್ವಂತರಿ ದೇವಸ್ಥಾನ ಪ್ರಸಿದ್ಧ. ಹಿಂದೆ ಮೈಸೂರಿನ ಕೆಲವು ಆಯುರ್ವೇದ ವೈದ್ಯರು ತಮ್ಮ ವೃತ್ತಿಯ ಆರಾಧ್ಯದೇವರನ್ನು ಕುರಿತು ಕುತೂಹಲ ತಾಳಿ ನಡೆಸಿದ ಶೋಧನೆಯಲ್ಲಿ ಈ ಗ್ರಾಮದಲ್ಲಿರುವ ದೇವಮೂರ್ತಿ ಕೈಯಲ್ಲಿ ಅಮೃತ ಕಲಶ ಹಿಡಿದಿರುವುದರಿಂದ ಇದು ಧನ್ವಂತರಿ ವಿಗ್ರಹವೆಂದು ತೀರ್ಮಾನಿಸಿದರು. ಸ್ಥಳೀಯ ವಿದ್ವಾಂಸರೂ ಇದನ್ನು ಪುಷ್ಟೀಕರಿಸಿದರು. ಈ ದೇವಾಲಯದ ಬಳಿ ಒಂದು ಸಣ್ಣ ಕೆರೆಯಿದೆ. ಧನ್ವಂತರಿ ಮೂರ್ತಿ ಇರುವ ಜಾಗದಿಂದ ಚಿಕ್ಕ ಜಲಧಾರೆ ಹರಿದು ಬಂದು ಈ ಕೆರೆಗೆ ಸೇರುತ್ತದೆ. ಇದಕ್ಕಾಗಿ ಧನ್ವಂತರಿತೀರ್ಥವೆಂದು ಈ ಕೆರೆಯನ್ನು ಕರೆಯಲಾಗುತ್ತದೆ. ಇದರಲ್ಲಿ ಸ್ನಾನ ಮಾಡುವುದರಿಂದ ಚರ್ಮರೋಗಗಳು ಗುಣವಾಗುತ್ತವೆ ಎಂಬ ನಂಬಿಕೆಯಿದೆ. ದೇವಾಲಯದ ಸಮೀಪ ಆಯುರ್ವೇದ ಗಿಡಮೂಲಿಕೆಗಳ ಔಷಧೀಯ ಸಸ್ಯಗಳ 'ಧನ್ವಂತರಿ ವನ' ಇದೆ. ಪ್ರತಿವರ್ಷ ಧನ್ವಂತರಿ ಪುನಶ್ಚರಣ ಯಾಗ ಹಾಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತವೆ. (ಎಸ್.ಎಚ್‌ಇ.)

**ಯಲಬುರ್ಗ:** ಕೊಪ್ಪಳ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಮುಖ್ಯ ಪಟ್ಟಣ. ಕೊಪ್ಪಳಕ್ಕೆ ಉತ್ತರಕ್ಕಿರುವ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಕೊಪ್ಪಳ, ಉತ್ತರಕ್ಕೆ ಕುಷ್ಟಗಿ ಮತ್ತು ಪೂರ್ವಕ್ಕೆ ಗಂಗಾವತಿ ತಾಲ್ಲೂಕುಗಳು, ಪಶ್ಚಿಮ, ನೈಋತ್ಯ ಮತ್ತು ವಾಯವ್ಯದಲ್ಲಿ ಗದಗ ಜಿಲ್ಲೆಯ ರೋಣ ಹಾಗೂ ಗದಗ ತಾಲ್ಲೂಕುಗಳು ಸುತ್ತುವರೆದಿವೆ. ಬಾಂಡಿ, ಯಲಬುರ್ಗ ಮತ್ತು ಕುಕ್ಕನೂರು ಹೋಬಳಿಗಳು. ಈ ತಾಲ್ಲೂಕಿನ ಒಟ್ಟು ಗ್ರಾಮಗಳು 144. ವಿಸ್ತೀರ್ಣ 1,498 ಚ.ಕಿಮೀ. ಜನಸಂಖ್ಯೆ 2,35,263.

ಜಿಲ್ಲೆಯ ಪಶ್ಚಿಮ ಭಾಗದ ಮೈದಾನ ಪ್ರದೇಶದಲ್ಲಿರುವ ಈ ತಾಲ್ಲೂಕಿನ ಹೆಚ್ಚು ಪ್ರದೇಶ ಕಪ್ಪುಮಣ್ಣಿನ ಎರೆಭೂಮಿಯಿಂದ ಕೂಡಿದೆ. ಈ ತಾಲ್ಲೂಕಿನ ವಾಯವ್ಯದಿಂದ ಆಗ್ನೇಯಕ್ಕೆ ಹರಿಯುವ ಒಂದು ದೊಡ್ಡ ತೊರೆ, ಪಶ್ಚಿಮದಿಂದ ಹರಿವ ಮತ್ತೆರಡು ಪುಟ್ಟ ತೊರೆಗಳನ್ನು ಕೂಡಿಕೊಂಡು ತುಂಗಭದ್ರಾ ನದಿಯನ್ನು ಸೇರುತ್ತದೆ. ತಾಲ್ಲೂಕಿನ ಸರಾಸರಿ ಮಳೆ 620 ಮಿಮೀ. ಜಿಲ್ಲೆಯ ಇತರ ತಾಲ್ಲೂಕುಗಳಿಗಿಂತ ಈ ತಾಲ್ಲೂಕಿನಲ್ಲಿ ಹೆಚ್ಚುಮಳೆ ಬೀಳುತ್ತದೆ. ಇಲ್ಲಿನ ವ್ಯವಸಾಯ ಕೆರೆ, ಬಾವಿ ಮತ್ತು ಮಳೆಯನ್ನವಲಂಬಿಸಿದೆ. ಈ ತಾಲ್ಲೂಕಿನ ಮುಖ್ಯ ಬೆಳೆಗಳೆಂದರೆ ಜೋಳ, ಗೋದಿ, ಸೇಂಗಾ, ಸಜ್ಜೆ, ಬತ್ತ, ತೊಗರಿ. ಇವುಗಳ ಜೊತೆಯಲ್ಲಿ ಹತ್ತಿ, ಹರಳುಬೀಜ, ಸ್ವಲ್ಪ ಕಬ್ಬು ಬೆಳೆಯುತ್ತಾರೆ.

ವ್ಯವಸಾಯಪ್ರಧಾನವಾದ ಈ ತಾಲ್ಲೂಕಿನಲ್ಲಿ ಕೈಗಾರಿಕೆಗಳು ಕಡಿಮೆ. ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಸಹಾಯ ಪಡೆದ ಗ್ರಾಮಗಳಲ್ಲಿ ಎಣ್ಣೆ, ಚರ್ಮ, ಹಗ್ಗ ಮತ್ತು ಮರಗೆಲಸದ ಕೆಲವು ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಹತ್ತಿ ಸಂಸ್ಕರಣದ 16 ಕಾರ್ಖಾನೆಗಳೂ 2 ಎಣ್ಣೆ ಮಿಲ್ಲುಗಳೂ ಒಂದು ಮರ ಕೊಯ್ಯುವ ಕಾರ್ಖಾನೆ ಮತ್ತು ಒಂದು ಚರ್ಮ ವಸ್ತುಗಳ ಉತ್ಪಾದನಾ ಕೇಂದ್ರ ಈ ತಾಲ್ಲೂಕಿನಲ್ಲಿವೆ. ರಾಷ್ಟ್ರೀಯ ಹೆದ್ದಾರಿ ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಕೊಪ್ಪಳ ಮತ್ತು ಕುಷ್ಟಗಿ ತಾಲ್ಲೂಕುಗಳನ್ನು ಸೇರಿಸಿದಂತೆ ಹಾದು ಹೋಗಿದೆ. ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳೂ ಈ ತಾಲ್ಲೂಕಿನಲ್ಲಿ ಹಾದು ಹೋಗಿರುವುದಲ್ಲದೆ ಹುಬ್ಬಳ್ಳಿ–ಬಳ್ಳಾರಿ ರೈಲ್ವೆ ಮಾರ್ಗ ಈ ತಾಲ್ಲೂಕಿನ ದಕ್ಷಿಣದಲ್ಲಿ ಹಾದುಹೋಗಿದ್ದು ವ್ಯಾಪಾರ ವಾಣಿಜ್ಯ ಪ್ರಗತಿಗೆ ಸಹಾಯಕವಾಗಿದೆ.

ತಾಲ್ಲೂಕು ಮಟ್ಟದ ಸರ್ಕಾರಿ ಸಾರ್ವಜನಿಕ ಔಷಧಾಲಯ, ಮಾಸ್ತಿ ಮತ್ತು ಮೆಡಿಕಿನಾಳದಲ್ಲಿ ಆಯುರ್ವೇದದ ಔಷಧಾಲಯಗಳೂ ಮಂಗಳೂರು ಮತ್ತು ಕುಕ್ಕನೂರುಗಳಲ್ಲಿ ಆರೋಗ್ಯ ಕೇಂದ್ರಗಳೂ ಇವೆ.

ಈ ತಾಲ್ಲೂಕಿನ ಮಂಗಳೂರಿನ ಮಂಗಳೇಶ್ವರ ಜಾತ್ರೆ ಪ್ರಸಿದ್ಧವಾದದ್ದು. ಇಟಗಿ (ನೋಡಿ) ಗ್ರಾಮದಲ್ಲಿರುವ ಮಹದೇವ ದೇವಾಲಯ ಸುಂದರ ವಾಸ್ತು ಕೃತಿ. ಯಲಬುರ್ಗದ ದಕ್ಷಿಣಕ್ಕಿರುವ ಕುಕ್ಕನೂರು **(ನೋಡಿ)** ಹಿಂದೆ ಕುಂತಲ ಪುರವಾಗಿತ್ತೆಂದು ಹೇಳುವರು. ಇಲ್ಲಿ ಚಾಳುಕ್ಯ ಶೈಲಿಯ ಅನೇಕ ದೇವಾಲಯ ಮತ್ತು ಕಟ್ಟಡಗಳ ಅವಶೇಷಗಳಿವೆ. *

ಯಲಬುರ್ಗ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ರಾಯಚೂರಿನ ನೈಋತ್ಯಕ್ಕೆ ಈ ಊರಿದೆ. ಜನಸಂಖ್ಯೆ 11,437.

ಐತಿಹಾಸಿಕವಾಗಿ ಇದರ ಹಳೆಯ ಹೆಸರು ಎರಂಬರ್ಗ. 11-12ನೆಯ ಶತಮಾನಗಳಲ್ಲಿ ಸಿಂದ ಮನೆತನದವರು ಇದರ ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದರು. ಆ ವಂಶದ ಆಚರಸನ ವಿಷಯವನ್ನು ಉಲ್ಲೇಖಿಸಿರುವ ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನವೊಂದು ಇಲ್ಲಿದೆ. ಊರ ಹೊರಗಿರುವ ಪಾಳು ಬಿದ್ದಿರುವ ಒಂದು ಕಲ್ಲಿನ ಮಂಟಪ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈಶ್ವರ ದೇವಾಲಯವಾಗಿತ್ತೆಂದು ಪ್ರತೀತಿ.

ಇಲ್ಲಿ ಶಾಲಾ ಕಾಲೇಜುಗಳಿವೆ. ವಿದ್ಯುಚ್ಛಕ್ತಿ, ಅಂಚೆ, ತಂತಿ, ದೂರವಾಣಿ ಸೌಕರ್ಯಗಳಿವೆ. ಸಾರ್ವಜನಿಕ ಆಸ್ಪತ್ರೆ, ಪಶುವೈದ್ಯಾಲಯಗಳುಂಟು. ಇಲ್ಲಿ ಪ್ರತಿವರ್ಷ ಬಸವಜಯಂತಿ ಸಂದರ್ಭದಲ್ಲಿ ಐದು ದಿನಗಳ ಜಾತ್ರೆ ನಡೆಯುತ್ತದೆ. ಈ ಊರು ಕಂಬಳಿ ನೇಯ್ಗೆಗೆ ಪ್ರಸಿದ್ಧ. (ಎಸ್.ವಿ.ಪಿ.)

**ಯಲಹಂಕ:** ಬೆಂಗಳೂರು ನಗರ ಜಿಲ್ಲೆ ಉತ್ತರ ಬೆಂಗಳೂರು ತಾಲ್ಲೂಕಿನಲ್ಲಿ, ಬೆಂಗಳೂರಿ ನಿಂದ ಉತ್ತರಕ್ಕೆ 16 ಕಿಮೀ ದೂರದಲ್ಲಿ ಗುಂತಕಲ್ಲು ಮತ್ತು ಚಿಕ್ಕಬಳ್ಳಾಪುರಕ್ಕೆ ಹೋಗುವ ರೈಲುಮಾರ್ಗದಲ್ಲಿ ಇರುವ ಐತಿಹಾಸಿಕ ಸ್ಥಳ. ಜನಸಂಖ್ಯೆ 90,827. ಚೋಳರ ಕಾಲದಲ್ಲಿ ಇಳೈಪಾಕ್ಕ, ಹೊಯ್ಸಳರ ಕಾಲದಲ್ಲಿ ಎಲಹಕ್ಕ ಎಂದಿದ್ದ ಇದರ ಹೆಸರು ಇದರ ಸುತ್ತಮುತ್ತಲಿನ ಪ್ರದೇಶಕ್ಕೂ ಅನ್ವಯಿಸುತ್ತಿತ್ತು. 15ನೆಯ ಶತಮಾನದಲ್ಲಿ ಯಲಹಂಕದ ಪಾಳೆಯಗಾರರಿಗೆ ಸೇರಿದ್ದ ಈ ಊರು ಅನಂತರ ಮೈಸೂರು ಒಡೆಯರ ವಶವಾಯಿತು.

1871ರ ವರೆಗೆ ಇದೇ ಹೆಸರಿನ ತಾಲ್ಲೂಕು ಕೇಂದ್ರವಾಗಿದ್ದ ಇಲ್ಲಿ ಒಂದು ಪುರಸಭೆ ಇದೆ. ಯಲಹಂಕದ ವೇಣುಗೋಪಾಲ ದೇವಾಲಯದಲ್ಲಿ ಪ್ರತಿವರ್ಷ ಚೈತ್ರಶುದ್ಧ ಅಷ್ಟಮಿಯಂದು ರಥೋತ್ಸವ ನಡೆಯುತ್ತದೆ.

(ಎಚ್.ವಿ.ಎಸ್.)

**ಯಲಹಂಕದ ಪಾಳೆಯಗಾರರು:** 15ನೆಯ ಶತಮಾನದಲ್ಲಿ ಯಲಹಂಕದಲ್ಲಿ ಪಾಳೆಯಪಟ್ಟನ್ನು ಸ್ಥಾಪಿಸಿ, ಮುಂದೆ 16-18ನೆಯ ಶತಮಾನಗಳಲ್ಲಿ ಬೆಂಗಳೂರು ಮತ್ತು ಮಾಗಡಿಗಳಿಂದ ಬೆಂಗಳೂರು ಜಿಲ್ಲೆಯ ಬಹುಭಾಗದ ಮೇಲೆ ಆಳಿಕೆ ನಡೆಸಿದ ಪಾಳೆಯಗಾರರು. ಮೊದಲು ವಿಜಯನಗರದವರಿಗೆ ಅಧೀನರಾಗಿದ್ದ ಇವರು ಕ್ರಮೇಣ ಸ್ವತಂತ್ರರಾದರು.

ಆವತಿಯ ರಣಭೈರೇಗೌಡನ ಕಿರಿಯ ಮಗ ಜಯಗೌಡ ಯಲಹಂಕ ಪಾಳೆಯಪಟ್ಟನ್ನು ಸ್ಥಾಪಿಸಿ (ನೋಡಿ: ಆವತಿ ಪಾಳೆಯಗಾರರು) ಯಲಹಂಕನಾಡ ಪ್ರಭು ಎಂದು ಬಿರುದಾಂಕಿತನಾಗಿ, ವಿಜಯನಗರ ಸಾಮಂತನಾಗಿ ಆಳಿದ (ಸು.1418-33). ಇವನ ಮಗ ಗಿಡ್ಡೇಗೌಡ (ಸು.1433-1443). ಬಹುಕಾಲ ಮಕ್ಕಳಿಲ್ಲದ ಈತನಿಗೆ ಕುಲದೇವತೆ ಕೆಂಪಮ್ಮನ ವರಪ್ರಸಾದದಿಂದ ಮಗುವೊಂದು ಜನಿಸಿತಂತೆ. ಆ ಮಗುವಿಗೆ ಕೆಂಪನಂಜೇಗೌಡ ಎಂದು ಹೆಸರಿಟ್ಟನಲ್ಲದೆ, ಈ ವಂಶದ ಮುಂದಿನ ಪಾಳೆಯಗಾರರು ಕೆಂಪಮ್ಮನ ಹೆಸರು ಧರಿಸುವುದು ವಾಡಿಕೆಯಾಯಿತು. ಇವನು 70 ವರ್ಷ (ಸು.1443-1513) ರಾಜ್ಯಭಾರ ಮಾಡಿದ. ಇವನ ಮಗನೇ ಬೆಂಗಳೂರು ನಿರ್ಮಾಪಕ ಕೆಂಪೇಗೌಡ.

1ನೆಯ ಕೆಂಪೇಗೌಡ (ಸು.1513-69) ವಿಜಯನಗರದ ಸಾಮ್ರಾಟರಾದ ಕೃಷ್ಣದೇವರಾಯ ಮತ್ತು ಅಚ್ಯುತರಾಯ ಇವರ ಅನುಗ್ರಹಕ್ಕೆ ಪಾತ್ರನಾಗಿದ್ದ. ತನ್ನ ಪ್ರವಾಸ ಕಾಲದಲ್ಲಿ ಶಿವನಸಮುದ್ರಂ (ಈಗಿನ ಬೆಂಗಳೂರು ಪ್ರದೇಶ ಕ್ಕಿದ್ದ ಹೆಸರು) ಪ್ರದೇಶವು ಕೋಟೆಯನ್ನು ಕಟ್ಟಲು ಅನುಕೂಲವಾಗಿರುವು ದನ್ನು ಅರಿತು, ಅಚ್ಯುತರಾಯನ ಅನುಜ್ಞೆಯ ಮೇರೆಗೆ ಮಣ್ಣಿನ ಕೋಟೆಯನ್ನು ಕಟ್ಟಿ, ಬೆಂಗಳೂರು ಎಂದು ಹೆಸರಿಟ್ಟು, ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಅಂದಿನಿಂದ ಬೆಂಗಳೂರು ಕೆಂಪೇಗೌಡನೆಂದು ಪ್ರಸಿದ್ಧನಾದ.

ಬೆಂಗಳೂರಿನ ದುರ್ಗದ ನಿರ್ಮಾಣದಿಂದ ವಿಜಯನಗರದ ದೊರೆ ಅಚ್ಯುತರಾಯನಿಗೆ ಸಂತೋಷವಾಯಿತು. 30,000 ವರಹ ಆದಾಯ ತರುವ ಬೆಂಗಳೂರಿನ ಸುತ್ತಲ ಪ್ರದೇಶಗಳನ್ನು ಕೆಂಪೇಗೌಡನಿಗೆ ಕೊಟ್ಟ. ಅವುಗಳಿಂದ ಬರುವ ಆದಾಯವನ್ನು ಕೆಂಪೇಗೌಡ ಸದ್ವಿನಿಯೋಗ ಮಾಡಿದ; ಬೆಂಗಳೂರನ್ನು ವಿಸ್ತರಿಸಿದ; ಪೇಟೆಗಳನ್ನು ಸ್ಥಾಪಿಸಿ ವ್ಯಾಪಾರಿಗಳನ್ನೂ ಕುಶಲಕರ್ಮಿಗಳನ್ನೂ ನೆಲೆಗೊಳಿಸಿದ. ಕೆಂಪೇಗೌಡ ದೈವಭಕ್ತನೂ ಧರ್ಮಿಷ್ಠನೂ ಆಗಿದ್ದ. ಬೆಂಗಳೂರಿನಲ್ಲಿ ಗವಿಗಂಗಾಧರೇಶ್ವರ ದೇವಾಲಯ ಮತ್ತು ಬಸವನಗುಡಿಯನ್ನು ನಿರ್ಮಿಸಿ ಅಲ್ಲಿಯ ಅರ್ಚಕರಿಗಾಗಿ 3 ಅಗ್ರಹಾರಗಳನ್ನು ಕಟ್ಟಿಸಿಕೊಟ್ಟ. ಒಂದು ಟಂಕಸಾಲೆಯನ್ನು ಸ್ಥಾಪಿಸಿ ಭೈರವನಾಣ್ಯಗಳನ್ನು ಮುದ್ರಿಸಿದ. ಇವನ ಅನಂತರ ಇವನ ಮಗ ಗಿಡ್ಡೇಗೌಡ (ಸು.1569-78), ಅನಂತರ ಇಮ್ಮಡಿ ಕೆಂಪೇಗೌಡ (ಸು.1578-1658) ಆಳಿದರು.

ಇಮ್ಮಡಿ ಕೆಂಪೇಗೌಡ ಹೊಸ ಗ್ರಾಮಗಳನ್ನು ಕಟ್ಟಿ, ತನ್ನ ನಾಡನ್ನು ವಿಸ್ತರಿದ. ತಳಾರಿ ಗಂಗಪ್ಪನಾಯಕ ಎಂಬುವನು ಆಕ್ರಮಿಸಿಕೊಂಡಿದ್ದ ಸಾವನದುರ್ಗವನ್ನೂ ಮಾಗಡಿಯನ್ನೂ ಮತ್ತೆ ಗಳಿಸಿ 14 ವರ್ಷಗಳ ಕಾಲ ಇವೆರಡೂ ಊರುಗಳನ್ನು ಬೆಂಗಳೂರಿನಿಂದಲೇ ಆಳಿದ. 1638ರಲ್ಲಿ ಬಿಜಾಪುರದ ಸುಲ್ತಾನನ ಸೇನಾನಿ ರಣದುಲ್ಲಾಖಾನ್ ಬೆಂಗಳೂರನ್ನು ಆಕ್ರಮಿಸಿ ಕೆಂಪೇಗೌಡನನ್ನು ಸೆರೆಹಿಡಿದ. ಕೆಂಪೇಗೌಡ ಬೆಂಗಳೂರನ್ನು ಅವನಿಗೆ ಬಿಟ್ಟು, ಬಿಜಾಪುರಕ್ಕೆ ಕಪ್ಪ ಕೊಡುವ ಒಪ್ಪಂದಕ್ಕೆ ಬಂದು, ಮಾಗಡಿಗೆ ಹೋಗಿ ಅಲ್ಲಿ ರಾಜ್ಯವಾಳಲಾರಂಭಿಸಿದ. ಅಂದಿನಿಂದ ಮಾಗಡಿ ಅವನ ರಾಜಧಾನಿಯಾಯಿತು ಮತ್ತು ಅವನ ವಂಶಜರಿಗೆ ಮಾಗಡಿ ಕೆಂಪೇಗೌಡ ಅರಸರೆಂಬ ಹೆಸರು ಬಂತು. ಈ ಕಾಲದಲ್ಲಿ ವಿಜಯನಗರದ ರಾಜರ ಅಂಕೆಯಿಂದ ತಪ್ಪಿಸಿಕೊಂಡು ಸ್ವೇಚ್ಛೆಯಾಗಿ ಆಳುತ್ತಿದ್ದ ಹುಲಿಕಲ್ಲು, ಹುಲಿಯೂರುದುರ್ಗ, ಹುತ್ರಿದುರ್ಗ, ಭೈರವನದುರ್ಗ, ಕುಣಿಗಲು ಪ್ರಾಂತ್ಯಗಳ ಪಾಳೆಯಗಾರರನ್ನು ಜಯಿಸಿ ಅವರ ಪ್ರಾಂತ್ಯಗಳನ್ನು ವಶಪಡಿಸಿಕೊಂಡು, ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಶ್ರೀರಂಗರಾಯನನ್ನು ಜಯಿಸಿದ. ದೀರ್ಘಕಾಲ ಪ್ರಜಾಪ್ರಿಯನಾಗಿ ರಾಜ್ಯವಾಳಿ ಧರ್ಮಪ್ರಭುವೆನಿಸಿಕೊಂಡು 1658ರಲ್ಲಿ ಕಾಲವಾದ.

ಇಮ್ಮಡಿ ಕೆಂಪೇಗೌಡನ ತರುವಾಯ ಅವನ ಮಗ ಮುಮ್ಮಡಿ ಕೆಂಪೇಗೌಡ(ಸು.1658-78), ಅವನ ಮಗ ದೊಡ್ಡವೀರಪ್ಪಗೌಡ (ಸು.1678-1705), ಅವನ ಮಗ ಮುಮ್ಮಡಿ ಕೆಂಪ ವೀರಪ್ಪಗೌಡ (ಮುಮ್ಮಡಿ ಕೆಂಪೇಗೌಡ ಸು. 1705-28) ಆಳಿದರು. ಈ ಕೆಂಪೇಗೌಡ ಶತ್ರುಗಳಿಂದ ರಕ್ಷಿಸಿಕೊಳ್ಳಲು ಮಾಗಡಿಯಲ್ಲದೆ ನೆಲಪಟ್ಟಣವೆಂಬ ದುರ್ಗವನ್ನೂ ಕಟ್ಟಿಕೊಂಡಿದ್ದ. ಒಂದು ಸಣ್ಣ ಕಾರಣವನ್ನು ನೆಪಮಾಡಿಕೊಂಡು ಮೈಸೂರಿನ ದಳವಾಯಿ ದೇವರಾಜಯ್ಯ ಸಾವನದುರ್ಗಕ್ಕೆ ಮುತ್ತಿಗೆ ಹಾಕಿ, ಗೌಡನ ಸೈನ್ಯವನ್ನು ಸೋಲಿಸಿ, ನೆಲಪಟ್ಟಣವನ್ನು ಪಾಳುಮಾಡಿ, ಕೆಂಪೇಗೌಡನನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿದ. ಮಾಗಡಿ ಪ್ರಾಂತ್ಯ ಮೈಸೂರಿಗೆ ಸೇರಿ (1728) ಕೆಂಪೇಗೌಡ ಅರಸುಗಳ ಆಳಿಕೆ ಕೊನೆಗೊಂಡಿತು.

ಯಲಹಂಕ ಪ್ರಭುಗಳ ವಂಶಾವಳಿಯಲ್ಲಿ ಕೆಂಪೇಗೌಡ ಎಂಬ ಹೆಸರಿನ ಹಲವರು ಇರುವುದರಿಂದ ಇವರ ಇತಿಹಾಸ ರಚನೆ ಸ್ವಲ್ಪ ಕ್ಲಿಷ್ಟವಾಗಿದೆ.

**ಶಾಸನಗಳ ಪ್ರಕಾರ ಈ ಮನೆತನದ ವಂಶಾವಳಿ :**

ಕೆಂಪನಂಜೇಗೌಡ
|
ಹಿರಿಯ ಕೆಂಪೇಗೌಡ
(1588–1608)
|
ಇಮ್ಮಡಿ ಕೆಂಪೇಗೌಡ
(1628–31)
|
ಮುಮ್ಮಡಿ ಕೆಂಪೇಗೌಡ
(1667–74)
|
ಮುಮ್ಮಡಿ ದೊಡ್ಡ ವೀರಪ್ಪಗೌಡ
(1681–88)
|
ಮುಮ್ಮಡಿ ಕೆಂಪವೀರಪ್ಪಗೌಡ
(1697–1715)

ಈ ವಂಶದವರ ಆಳಿಕೆಯ ಕಾಲದಲ್ಲಿರುವ ಕೆಲವು ವ್ಯತ್ಯಾಸಗಳು ಇನ್ನೂ ಸ್ಪಷ್ಟ ಆಧಾರಗಳು ದೊರೆಯದೆ ಅಸ್ಪಷ್ಟವಾಗಿವೆ. ಯಲಹಂಕ ನಾಡು ಪ್ರಭು ದುತ್ತನ ಹಳ್ಳಿಯ ಚಿಕ್ಕಗಿರಿಯಪ್ಪಗೌಡ (1567) ಮತ್ತು ಹಿರಿಯ ಅಣ್ಣನ ಮಗ ಚಿಕ್ಕಹೊನ್ನಗೌಡನ (1597) ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿವೆ. 17ನೆಯ ಶತಮಾನದಲ್ಲಿ ಯಲಹಂಕದ ಪ್ರಭು ಮುಮ್ಮಡಿ ಕೆಂಪಭೂಪಾಲನ ಆಸ್ಥಾನದಲ್ಲಿ ಕವಿಯಾಗಿದ್ದ ಮುಕ್ತೀಶ್ವರ ದೀಕ್ಷಿತನ ಮಗ ಏಕಾಮ್ರ ದೀಕ್ಷಿತ ರಚಿಸಿದ ಸಾವನದುರ್ಗದ ವೀರಭದ್ರೇಶ್ವರನ ರಥೋತ್ಸವವನ್ನು ವರ್ಣಿಸುವ ವೀರಭದ್ರವಿಜಯವೆಂಬ ಚಂಪೂ ಗ್ರಂಥದಿಂದ ತಿಳಿದುಬರುವ ವಂಶಾವಳಿಯು ಶಾಸನೋಕ್ತ ವಂಶಾವಳಿಯೊಂದಿಗೆ ಬಹುಮಟ್ಟಿಗೆ ಸರಿಹೊಂದುತ್ತದೆ.

ಈ ಯಲಹಂಕದ ಪ್ರಭುಗಳು ಧರ್ಮನಿಷ್ಠರಾಗಿದ್ದು ಹಲವು ಗ್ರಾಮಗಳು, ಕೆರೆ, ದೇವಾಲಯ, ಅಗ್ರಹಾರಗಳನ್ನು ನಿರ್ಮಿಸಿರುವರಲ್ಲದೆ, ಅನೇಕ ಮಠ, ದೇವಾಲಯಗಳಿಗೆ ದತ್ತಿಗಳನ್ನು ನೀಡಿದ್ದಾರೆ. ಒಂದನೆಯ ಕೆಂಪೇಗೌಡನ ಕಾಲದಲ್ಲಿ ಬೆಂಗಳೂರಿನ ಗವಿ ಗಂಗಾಧರೇಶ್ವರ, ದೊಡ್ಡಬಸವನಗುಡಿ ಮತ್ತು ಅದರ ಸಮೀಪದಲ್ಲಿರುವ ಇತರ ದೇವಾಲಯಗಳು ರಚಿತವಾದುವು. ಇಮ್ಮಡಿ ಕೆಂಪೇಗೌಡ ಮಾಗಡಿಯ ರಂಗನಾಥ ದೇವಾಲಯ, ಸಾವನದುರ್ಗದ ವೀರಭದ್ರ ದೇವಾಲಯಗಳನ್ನು ವಿಸ್ತರಿಸಿದ. ಮುಮ್ಮಡಿ ಕೆಂಪವೀರಪ್ಪಗೌಡ ಮಾಗಡಿ ಬಳಿ ಇರುವ ರಾಯಪೇಟೆಯಲ್ಲಿ ಚೆಲುವರಾಯ ಸ್ವಾಮಿಯನ್ನೂ (1711) ಬೈಚಾಪುರದಲ್ಲಿ ವರದ ಚೆಲುವರಾಜಸ್ವಾಮಿಯನ್ನೂ (1712) ಪ್ರತಿಷ್ಠಾಪಿಸಿದ. ಮಾಗಡಿಯ ಪಶ್ಚಿಮಕ್ಕೆ ಒಂದು ದೊಡ್ಡ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿದ. ಶಿವಗಂಗೆಯ ಗಂಗಾಧರೇಶ್ವರ ದೇವಾಲಯವನ್ನು ವಿಸ್ತರಿಸಿ, ಸುಂದರಗೊಳಿಸಿ ಒಂದು ಕೊಳವನ್ನೂ ಅನೇಕ ಮಂಟಪಗಳನ್ನೂ ವೀರಶೈವ ಮಠಗಳನ್ನೂ ಕಟ್ಟಿಸಿದ.

ಎರಡನೆಯ ಕೆಂಪೇಗೌಡನ ಕಾಲದಲ್ಲಿ ಪೆನುಗೊಂಡೆ, ಬೆಂಗಳೂರು, ಗೂಳೂರು, ಚಿಕ್ಕನಾಯಕಹಳ್ಳಿ, ಬಳ್ಳಾಪುರಂ. ಚಂದ್ರಗಿರಿ, ಕೋಲಾಲ, ಕೊಟ್ಟಕೋಟ, ಕಾವೇರಿಪಟ್ಟಣ, ರಾಯಕೋಟ, ನರಸೀಪುರ, ಬೇಲೂರು, ಹೆಬ್ಬೂರು, ನಾಗಮಂಗಲ, ಇಕ್ಕೇರಿ. ಬಸ್ತಿಹಳ್ಳಿಯ ನಾನಾ ದೇಶಿಗಳು ಬೆಂಗಳೂರಿನ ಮುತ್ತ್ಯಾಲ ಪೇಟೆಯ ರಂಗನಾಥಸ್ವಾಮಿಯ ಪೂಜೆಗಾಗಿ ದಾನಗಳನ್ನು ಕೊಟ್ಟರು. 1667ರಲ್ಲಿ 3ನೆಯ ಕೆಂಪೇಗೌಡನು ಕಾಶಿಯಲ್ಲಿ ಒಂದು ಮಠವನ್ನು ಕಟ್ಟಿಸಿ, ಲಿಂಗವನ್ನು ಪ್ರತಿಷ್ಠೆ ಮಾಡಿ ಅಳಲುಕುಪ್ಪೆ ಗ್ರಾಮವನ್ನು ದಾನಮಾಡಿದ. ದಾಸೇ ಬೋಯಿ ಎಂಬವನಿಗೆ ಕೆರೆಯ ಕೆಲಸಕ್ಕಾಗಿ ಹರಂಗಹಳ್ಳಿಯ ಭಟ್ಟ ಕೊಡುಗೆಯನ್ನು ಕೊಟ್ಟ. ಇದೇ ರೀತಿ ಮಾಗಡಿ ಸೀಮೆಯಲ್ಲಿ ಸೋಮೇಶ್ವರ ದೇವರಿಗಾಗಿ ಅಗ್ರಹಾರದ ವೃತ್ತಿಗಳನ್ನೂ ಗೋಪಾಲದೇವರಿಗೆ ಊಳಿಗಮಾನ್ಯವನ್ನೂ ಕೊಟ್ಟ. ಯಲಹಂಕದ ಪ್ರಭುಗಳು ಇಂಥ 300 ಮಠಗಳನ್ನು ಮಾಗಡಿಯ ಸುತ್ತಮುತ್ತಲ ಪ್ರದೇಶದಲ್ಲಿ ಕಟ್ಟಿಸಿ ದತ್ತಿಕೊಟ್ಟರೆಂಬ ಹೇಳಿಕೆ ಇದೆ.

ಈ ವಂಶದ ಅರಸರ ಕೆಲವು ಶಿಲಾಪ್ರತಿಮೆಗಳು ಬೆಂಗಳೂರು (ಅಲಸೂರಿನ) ಸೋಮೇಶ್ವರ ಮತ್ತು ಮಾಗಡಿಯ ಸೋಮೇಶ್ವರ ದೇವಾಲಯಗಳಲ್ಲೂ ಕೆಂಪೇಗೌಡನ ಒಂದು ಕಂಚಿನ ಪ್ರತಿಮೆ ಶಿವಗಂಗೆಯಲ್ಲೂ ಇವೆ. ಇವರು ರಾಜ್ಯಕ್ಕೆ ನೀಡಿದ ಹಲವು ಕೊಡುಗೆಗಳಲ್ಲಿ ಬೆಂಗಳೂರು ನಗರದ ಸ್ಥಾಪನೆ ಅತ್ಯಮೂಲ್ಯವಾದುದು. **(ವಿ.ಎಸ್.ಎಸ್.;ಎಚ್.ವಿ.ಎಸ್.)**

**ಯಲ್ಲಾಪುರ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವಕ್ಕೆ ಮುಂಡಗೋಡ, ದಕ್ಷಿಣಕ್ಕೆ ಶಿರಸಿ, ನೈಋತ್ಯಕ್ಕೆ ಅಂಕೋಲ, ಪಶ್ಚಿಮ ಮತ್ತು ವಾಯವ್ಯಕ್ಕೆ ಕಾರವಾರ ಮತ್ತು ಸುಪ, ಉತ್ತರಕ್ಕೆ ಹಳಿಯಾಳ ಈ ತಾಲ್ಲೂಕುಗಳೂ ಈಶಾನ್ಯದಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕೂ ಸುತ್ತುವರಿದಿವೆ. ಮಂಚಿಕೇರಿ, ಯಲ್ಲಾಪುರ ಈ ತಾಲ್ಲೂಕಿನಲ್ಲಿರುವ ಹೋಬಳಿಗಳು. ಒಟ್ಟು 133 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,525 ಚ.ಕಿಮೀ. ಜನಸಂಖ್ಯೆ 73,497.

ಕವಡಿಕೆರೆಯ ಕವಡಮ್ಮ ದೇವಸ್ಥಾನ

ಈ ತಾಲ್ಲೂಕಿನಲ್ಲಿ ಬೇಡ್ತಿನದಿ (ಗಂಗಾವಳಿ) ಈಶಾನ್ಯ ದಿಕ್ಕಿನಿಂದ ನೈಋತ್ಯಕ್ಕೆ ಹರಿದು ಅಂಕೋಲದ ದಕ್ಷಿಣದಲ್ಲಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಕಾಳೀನದಿ ತಾಲ್ಲೂಕಿನ ಉತ್ತರ ಮತ್ತು ವಾಯವ್ಯದ ಗಡಿಯಾಗಿ ಹರಿದು ಸುಪ ಮತ್ತು ಹಳಿಯಾಳ ತಾಲ್ಲೂಕುಗಳನ್ನು ಯಲ್ಲಾಪುರ ತಾಲ್ಲೂಕಿನಿಂದ ಬೇರ್ಪಡಿಸುತ್ತದೆ. ತಾಲ್ಲೂಕಿನ ಆಗ್ನೇಯದಲ್ಲಿ ಸೋಂದ ನದಿ ಸ್ವಲ್ಪದೂರ ಶಿರಸಿ ಮತ್ತು ಯಲ್ಲಾಪುರ ತಾಲ್ಲೂಕುಗಳ ಮಧ್ಯೆ ಗಡಿಯಾಗಿ ಹರಿದು ಬೇಡ್ತಿನದಿಯನ್ನು ಅರಬೈಲಿನ ದಕ್ಷಿಣದಲ್ಲಿ ಸೇರುವುದು. ತಾಲ್ಲೂಕಿನ ಹೆಚ್ಚು ಭಾಗ ಅರಣ್ಯ ಪ್ರದೇಶದಿಂದ ಕೂಡಿದೆ. ಉಳಿದ ಭಾಗ ಬೆಟ್ಟಗುಡ್ಡ ಪ್ರದೇಶ. ತಾಲ್ಲೂಕಿನಲ್ಲಿ ಕೆಂಪುಮಣ್ಣಿನ ಭೂಪ್ರದೇಶವು ಇದೆ. ಸರಾಸರಿ ವಾರ್ಷಿಕ ಮಳೆ 2,286 ಮಿಮೀ. ಬತ್ತ ಮತ್ತು ಕಬ್ಬು ತಾಲ್ಲೂಕಿನ ಮುಖ್ಯ ಬೆಳೆಗಳು. ಅಲ್ಪಪ್ರಮಾಣದಲ್ಲಿ ದ್ವಿದಳ ಧಾನ್ಯಗಳನ್ನೂ

ಬೆಳೆಯುತ್ತಾರೆ. ಬೆಟ್ಟಗುಡ್ಡಗಳ ಕಣಿವೆ ತೋಟಗಳಲ್ಲಿ ಅಡಕೆ ಏಲಕ್ಕಿ, ಮೆಣಸು ಮತ್ತು ತೆಂಗನ್ನು ಕಾಣಬಹುದು.

ತಾಲ್ಲೂಕಿನಲ್ಲಿ ಅರಣ್ಯೋತ್ಪನ್ನ ಉದ್ದಿಮೆಗಳೂ ಮರಕೊಯ್ಯುವ ಕಾರ್ಖಾನೆಗಳೂ ಇವೆ. ಸಹಕಾರಿ ಸಂಸ್ಥೆಗಳೂ ವಾಣಿಜ್ಯ ಬ್ಯಾಂಕುಗಳೂ ವಿದ್ಯುಚ್ಛಕ್ತಿ, ಅಂಚೆ, ತಂತಿ, ದೂರವಾಣಿ ಸೌಲಭ್ಯಗಳೂ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂಥ ಶಿಕ್ಷಣ ಸಂಸ್ಥೆಗಳು ಇವೆ. ಆರೋಗ್ಯ ಕೇಂದ್ರಗಳಿವೆ. ತಾಲ್ಲೂಕಿನಿಂದ ಸುತ್ತಲ ಪಟ್ಟಣಗಳಿಗೆ ಮತ್ತು ಕರಾವಳಿ ಬಂದರುಗಳಿಗೆ ಉತ್ತಮ ಮಾರ್ಗಗಳಿದ್ದು ವ್ಯಾಪಾರ ವಾಣಿಜ್ಯಕ್ಕೆ ಅನುಕೂಲಕರವಾಗಿವೆ.

ಮಾಗೋಡು ಮತ್ತು ಲಾಲಗುಳಿ ಜಲಪಾತಗಳು ಈ ತಾಲ್ಲೂಕಿನ ಎರಡು ಸುಂದರ ತಾಣಗಳಾಗಿವೆ. ಯಲ್ಲಾಪುರದ ಪಶ್ಚಿಮದಲ್ಲಿ ಸು. 14 ಕಿಮೀ ದೂರದಲ್ಲಿ ಗಣೇಶಗುಡ್ಡೆ ಘಾಟ್ ಮಾರ್ಗವಿದೆ. ಅಣಶಿ ಮತ್ತು ಅರಬೈಲ ಕಣಿವೆ ಮಾರ್ಗಗಳು ಕಾರವಾರ, ಅಂಕೋಲ, ಕುಮಟ, ಹೊನ್ನಾವರಗಳೊಡನೆ ಸಂಪರ್ಕ ಕಲ್ಪಿಸುತ್ತವೆ.

ಯಲ್ಲಾಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ. ಊರು ಕಾರವಾರಕ್ಕೆ ಈಶಾನ್ಯದಲ್ಲಿದೆ. ಜನಸಂಖ್ಯೆ 17,923. ಇಲ್ಲಿ ಅನೇಕ ಸರ್ಕಾರಿ ಆಡಳಿತ ಕಚೇರಿಗಳೂ ಬ್ಯಾಂಕುಗಳೂ ಇವೆ. ಊರಿನಲ್ಲಿ ವಿದ್ಯುಚ್ಛಕ್ತಿ, ಅಂಚೆ-ತಂತಿ, ದೂರವಾಣಿ ಮತ್ತು ಶಾಲೆಗಳು, ಆರೋಗ್ಯ ಕೇಂದ್ರ, ಪ್ರವಾಸಿ ಮಂದಿರ ಮುಂತಾದವು ಇವೆ. ಇಲ್ಲಿಯ ದುರ್ಗಾ ದೇವಾಲಯ ನೋಡತಕ್ಕದ್ದಾಗಿದೆ. ಈ ಊರು ಪುರಸಭಾಡಳಿತಕ್ಕೆ ಸೇರಿದೆ. **(ಜಿ.ಬಿ.ಎಸ್.)**

**ಯಶವಂತ ಚಿತ್ತಾಲ:** 1928-. ಕನ್ನಡದ ಪ್ರಸಿದ್ಧ ಸೃಜನಶೀಲ ಕಥೆಗಾರರು, ಕಾದಂಬರಿಕಾರರು. ಇವರು ಉತ್ತರಕನ್ನಡ ಜಿಲ್ಲೆ ಗೋಕರ್ಣ ತಾಲ್ಲೂಕಿನ ಹನೇಹಳ್ಳಿಯಲ್ಲಿ 1928 ಆಗಸ್ಟ್ 3ರಂದು ಜನಿಸಿದರು. ತಂದೆ ವಿಠೋಬಾ, ತಾಯಿ ರುಕ್ಮಿಣಿ, ಕನ್ನಡದ ಪ್ರಸಿದ್ಧ ಕವಿ ಗಂಗಾಧರ ಚಿತ್ತಾಲರು ಇವರ ಅಣ್ಣ. ಇವರ ಮಾತೃಭಾಷೆ ಕೊಂಕಣಿ. ಹನೇಹಳ್ಳಿ ಮತ್ತು ಕುಮಟಗಳಲ್ಲಿ ಆರಂಭಿಕ ವಿದ್ಯಾಭ್ಯಾಸ ಮಾಡಿದ ಇವರು ಉನ್ನತ ವಿದ್ಯಾಭ್ಯಾಸವನ್ನು ಧಾರವಾಡ, ಮುಂಬಯಿ ಮತ್ತು ಅಮೆರಿಕದ ನ್ಯೂಜರ್ಸಿಗಳಲ್ಲಿ ಮಾಡಿದರು. ಇವರ ಮೇಲೆ ಅತ್ಯಂತ ಗಾಢ ಪ್ರಭಾವ ಬೀರಿದ ಸಾಹಿತಿಗಳೆಂದರೆ ಗೌರೀಶ ಕಾಯ್ಕಿಣಿ ಹಾಗೂ ಶಾಂತಿನಾಥ ದೇಸಾಯಿಯವರು.

ಇವರ ಆರಂಭದ ಆಸಕ್ತಿಯ ಕ್ಷೇತ್ರ ಚಿತ್ರಕಲೆಯಾಗಿತ್ತು. ಇದರಲ್ಲಿ ವಿಶೇಷ ಪರಿಣತಿ ಪಡೆಯಲು ಮುಂಬಯಿಯ ಕಲಾನಿಕೇತನದ ಸಂಜೆತರಗತಿಗಳಿಗೂ ಹೋಗುತ್ತಿದ್ದರು. ಕ್ರಮೇಣ ಎಂ.ಎನ್.ರಾಯ್ ಅವರ ವಿಚಾರಧಾರೆಗಳಿಂದ ಆಕರ್ಷಿತರಾಗಿ ರ್‍ಯಾಡಿಕಲ್ ಡೆಮೊಕ್ರಟಿಕ್ ಪಾರ್ಟಿಯ ಸದಸ್ಯತ್ವ ಪಡೆದರು. ನವ ಮಾನವತಾವಾದದ ಮಾರ್ಗವಾಗಿ ಮಾರ್ಕ್ಸ್, ಎರಿಕ್ ಫ್ರಾಂ, ಹಕ್ಸ್‌ಲಿ, ಎಡಿಂಗ್‌ಟನ್, ಫ್ರಾಯ್ಡ್ ಮೊದಲಾದ ಹಲವು ಧೀಮಂತರ ವಿಚಾರಗಳಿಗೆ ತಮ್ಮ ಮನಸ್ಸನ್ನು ಅನಾವರಣ ಮಾಡಿಕೊಂಡರು. ಇವುಗಳೊಂದಿಗೆ ತಮ್ಮ ಆಯ್ಕೆಯ ವಿಷಯವಾದ ಪ್ಲಾಸ್ಟಿಕ್ ತಂತ್ರವಿಜ್ಞಾನದಲ್ಲಿ ಪದವಿ ಪಡೆದು ಮುಂಬಯಿಯ ಬೇಕ್‌ಲೈಟ್ ಹೈಲಮ್ ಲಿಮಿಟೆಡ್ ಸಂಸ್ಥೆಯಲ್ಲಿ ಉನ್ನತ ಹುದ್ದೆಗೆ ಸೇರಿದರು (1953). ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ಪ್ಲಾಸ್ಟಿಕ್ ಅಂಡ್ ರಬ್ಬರ್ ಸಂಸ್ಥೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಇವರು ಮುಂಬಯಿಯ ಇಂಡಿಯನ್ ಪ್ಲಾಸ್ಟಿಕ್ ಮತ್ತು ಅಮೆರಿಕದ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಹಲವಾರು ಸಂಶೋಧನೆಗಳನ್ನು ನಡೆಸಿದರು. 1972ರಲ್ಲಿ ಅಮೆರಿಕದ ಸ್ಟೀವನ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅಧ್ಯಯನ ನಡೆಸಿ ರಾಸಾಯನಿಕ ತಂತ್ರವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ತಂತ್ರಜ್ಞಾನ ಕ್ಷೇತ್ರದಲ್ಲಿ ಸು. 30ವರ್ಷಗಳಿಗೂ ಹೆಚ್ಚಿನ ಇವರ ದುಡಿಮೆ ಆಧುನಿಕ ಜಗತ್ತಿನ ಸ್ವರೂಪವನ್ನೇ ನಿಯಂತ್ರಿಸುತ್ತಿರುವ ಬಂಡವಾಳಶಾಹಿ, ಕೈಗಾರಿಕಾ ಜಗತ್ತಿನ ನಿಕಟ ಪರಿಚಯವನ್ನು ತಂದುಕೊಟ್ಟಿತು. ವೈಯಕ್ತಿಕ ಜೀವನದಲ್ಲಿ ಹಾಗೂ ಉದ್ಯೋಗದಲ್ಲಿ ಅನುಭವಿಸಿದ ಹಲವು ದುರಂತಗಳು ಹಾಗೂ ಬಿಕ್ಕಟ್ಟುಗಳು ಇವರ ಬರೆವಣಿಗೆಯ ಹಲವು ಕಾಳಜಿಗಳಿಗೆ ಕಾರಣವಾದವು. ವೃತ್ತಿಯಿಂದ ರಸಾಯನ ವಿಜ್ಞಾನದ ತಂತ್ರಜ್ಞರಾದರೂ ಇವರ ಆಸಕ್ತಿ ಕನ್ನಡಸಾಹಿತ್ಯ ಸೃಷ್ಟಿ. ಇವರ ಬದುಕಿನ ಎಲ್ಲ ಹಿನ್ನೆಲೆಗಳೂ ಇವರ ಸೃಜನಶೀಲತೆಯ ಪಕ್ವತೆಗೆ ಸಹಕಾರಿಯಾಗಿವೆ.



ತಮ್ಮ ತೆಕ್ಕೆಗೆ ಬಂದ ಅನುಭವಗಳನ್ನು ಪ್ರತಿಮಾ ನಿರ್ಮಿತಿ, ಸಾಮಾನ್ಯೀ ಕರಣ, ಅಂತರಂಗ ಪರಿವೀಕ್ಷಣೆ ಮುಂತಾದ ಹತ್ತು ಹಲವು ಸಾಹಿತ್ಯಕ ಸಾಧನಗಳ ಮೂಲಕ ಅನನ್ಯವಾಗಿಸುವ ಕಲೆಯಲ್ಲಿ ಚಿತ್ತಾಲರು ನಿಷ್ಣಾತರು. ಬೊಮ್ಮಿಯ ಹುಲ್ಲುಹೊರೆ (1949) ಇವರ ಮೊದಲ ಕತೆ. ಅಲ್ಲಿಂದೀಚೆಗೆ ಹಲವಾರು ಕಥಾಸಂಕಲನಗಳು, ಕಾದಂಬರಿಗಳು, ಪ್ರಬಂಧಗಳು, ಪ್ಲಾಸ್ಟಿಕ್ ತಂತ್ರವಿಜ್ಞಾನಕ್ಕೆ ಸಂಬಂಧಿಸಿದಂತೆ ಅನೇಕ ಇಂಗ್ಲಿಷ್ ಲೇಖನಗಳು ಪ್ರಕಟವಾಗಿವೆ. ಸಂದರ್ಶನ (1957) ಸಂಕಲನದ ಬಹುಪಾಲು ಕತೆಗಳು ದಿನಕರ ದೇಸಾಯಿ ಅವರು ಪ್ರಕಟಿಸುತ್ತಿದ್ದ ಜನಸೇವಕ ಎಂಬ ವಾರಪತ್ರಿಕೆ ಯಲ್ಲಿ 'ನನ್ನ ಜಿಲ್ಲೆಯ ಜೀವನ ಚಿತ್ರಗಳು' ಮಾಲಿಕೆಯಡಿಯಲ್ಲಿ ಪ್ರಕಟಗೊಂಡಿವೆ. ಆಬೋಲೀನ (1960), ಆಟ(1969), ಕತೆಯಾದಳು ಹುಡುಗಿ (1980), ಬೇನ್ಯಾ (1983), ಸಿದ್ಧಾರ್ಥ (1988), ಕುಮಟೆಗೆ ಬಂದಾ ಕಿಂದರಿಜೋಗಿ (1977), ಐವತ್ತೊಂದು ಕತೆಗಳು (2000), ಓಡಿ ಹೋದಾ ಮುಟ್ಟಿ ಬಂದಾ (2001)-ಇವು ಇವರ ಪ್ರಮುಖ ಕಥಾಸಂಕಲನಗಳು. ಕನ್ನಡ ಕಥಾಪ್ರಪಂಚದಲ್ಲಿ ಇವರನ್ನು ಮುಖ್ಯರಾಗಿಸಿದ ಕಥಾಸಂಕಲನ 'ಆಟ'.

ಇವರ ಮೊದಲ ಕಥಾಸಂಕಲನದಿಂದ ಹಿಡಿದು ಇತ್ತೀಚಿನ ಓಡಿಹೋದಾ ಮುಟ್ಟಿ ಬಂದಾ ಕಥಾಸಂಕಲನದ ವರೆಗೆ ಇವರ ಕಥಾಸೃಷ್ಟಿಯ ಹಂತಹಂತದ ಬೆಳವಣಿಗೆ ಗೋಚರವಾಗುತ್ತದೆ. ಇವರ ಸಮಗ್ರಕಥಾ ಸಾಹಿತ್ಯವನ್ನು ಹನೇಹಳ್ಳಿಯ ಪ್ರಾದೇಶಿಕ ಹಿನ್ನೆಲೆಯುಳ್ಳ ಸಾಂಪ್ರದಾಯಿಕ ಪ್ರಜ್ಞೆಯ ಆವಿಷ್ಕಾರವುಳ್ಳ ಕತೆಗಳು, ನಗರ ಜೀವನದ ಹಿನ್ನೆಲೆಯಲ್ಲಿ ಬರೆದ ನವ್ಯ ಪ್ರಜ್ಞೆಯ ಅಭಿವ್ಯಕ್ತಿಯನ್ನು ಸಾಧಿಸಲೆತ್ನಿಸುವ ಕತೆಗಳು ಮತ್ತು ವಿಶಿಷ್ಟ ಸಾಕಾರ ಅನುಭವದ ಮೇಲೆ ನಿಂತಿದ್ದು ಸಾರ್ವತ್ರಿಕತೆಯತ್ತ ಮುಖ ಮಾಡಿರುವ ಕತೆಗಳು ಎಂದು ಮೂರು ತೆರನಾಗಿ ವಿಂಗಡಿಸಬಹುದು.

ಇವರ ಕಾದಂಬರಿಗಳು ಕೂಡ ಕತೆಗಳಷ್ಟೇ ಪ್ರಾಮುಖ್ಯ ಪಡೆದಿವೆ. ಮೂರುದಾರಿಗಳು (1964), ಶಿಕಾರಿ (1979), ಛೇದ (1985), ಪುರುಷೋತ್ತಮ (1990), ಕೇಂದ್ರ ವೃತ್ತಾಂತ (1995)-ಇವು ಇವರ ಕಾದಂಬರಿಗಳು. ದಿಗಂಬರ ಎಂಬುದು ಇವರ ಅಪ್ರಕಟಿತ ಕಾದಂಬರಿ. ಮೂರುದಾರಿಗಳು ಚಲನಚಿತ್ರವಾಗಿ ಪ್ರಶಸ್ತಿಗಳಿಸಿದೆ. ಶಿಕಾರಿ ಕನ್ನಡದ ಅತ್ಯುತ್ಕೃಷ್ಟ ಕಾದಂಬರಿಗಳಲ್ಲೊಂದು. ಜನಪ್ರಿಯತೆ ಮತ್ತು ವಿಮರ್ಶಕರ ಮನ್ನಣೆಗಳನ್ನು

ಸಮಪ್ರಮಾಣದಲ್ಲಿ ಗಳಿಸಿದ ಕಾದಂಬರಿಯಿದು. ಇಬ್ಬರು ಮೇಲಧಿಕಾರಿಗಳ ಪರಸ್ಪರ ಪ್ರತಿಷ್ಠೆಯ ಕಾದಾಟದಲ್ಲಿ ತಾನು ನೇರವಾಗಿ ಪಾಲ್ಗೊಂಡಿರದ ವಿದ್ಯಮಾನಗಳಿಗೆ ಬಲಿಪಶುವಾದ ನಾಗಪ್ಪನ ಮಾನಸಿಕ ತುಮುಲವನ್ನು ಈ ಕಾದಂಬರಿ ಚಿತ್ರಿಸುತ್ತದೆ. ಇವರ ಬಹುತೇಕ ಕಾದಂಬರಿಗಳು ಹನೇಹಳ್ಳಿಯ ಒಡಲಿನಿಂದ ಮೂಡಿಬಂದ ಪಾತ್ರಗಳನ್ನು ತಮ್ಮ ಕೇಂದ್ರವಾಗಿಸಿಕೊಂಡಿವೆ. ಇವರ ಕಥನ ಪ್ರತಿಭೆಯೇ ಇವರ ಕಾದಂಬರಿಗಳ ಯಶಸ್ಸಿಗೆ ಕಾರಣವಾಗಿದೆ. ಭೇದ ಕಾದಂಬರಿ ಇವರ ಸೃಜನಶೀಲ ಬದುಕಿನ ಸಂದರ್ಭದಲ್ಲಿ ಒಂದು ಅರ್ಥಪೂರ್ಣ ಮುಂದುವರಿಕೆಯ ಘಟ್ಟವನ್ನು ಸಂಕೇತಿಸುತ್ತದೆ.

'ಪುರುಷೋತ್ತಮ' ಚಿತ್ತಾಲರ ಬೃಹತ್ ಕಾದಂಬರಿ. ಇವರ ಪ್ರಮುಖ ಕಾಳಜಿಗಳೆಲ್ಲ ಏಕತ್ರ ಸಂಘಟಿಸಿರುವ, ಇವರ ಸೃಜನಶೀಲ ಚೈತನ್ಯ ಮಡುಗಟ್ಟಿರುವ ಮಹಾತ್ವಾಕಾಂಕ್ಷೆಯ ಕೃತಿಯಿದು. ಈ ಕಾದಂಬರಿಯ ಶಿಲ್ಪ ಮಹಾಕಾವ್ಯದ ಶಿಲ್ಪದ ಹಾಗೆ ಮುಖ್ಯ ಕಥೆಗೆ ಅಂಟಿಯೂ ಅಂಟ ದಂಥ ಹಲವಾರು ಉಪಾಖ್ಯಾನಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಮೇಲುನೋಟಕ್ಕೆ ಅನಿವಾರ್ಯವೆನ್ನಿಸದ ಈ ಹಲವು ಕಥೆಗಳು ಒಂದನ್ನು ಇನ್ನೊಂದು ಬೆಳಗಿಸುತ್ತಾ ಎಲ್ಲದರ ಅರ್ಥಪೂರ್ಣತೆಯನ್ನು ಹೆಚ್ಚಿಸುತ್ತವೆ.

ಸಾಹಿತ್ಯ, ಸೃಜನಶೀಲತೆ ಮತ್ತು ನಾನು (1980) ಎಂಬುದು ಇವರ ಕತೆಯೋಪಾದಿಯ ಪ್ರಬಂಧಗಳ ಸಂಕಲನ. ಸೃಜನಶೀಲ ಲೇಖಕನೊಬ್ಬ ಒಂದುಕಡೆ ತನ್ನ ಅಂತರಂಗದಲ್ಲಿನ ನಿಗೂಢ ಸೃಷ್ಟಿಪ್ರಕ್ರಿಯೆಯ ನಾಡಿಬಡಿತ ಗಳನ್ನು ನಿರ್ಮಮವಾಗಿ ಪರಿಶೀಲಿಸುತ್ತಾ ಪಡೆದಿರುವ ಹಲವು ಒಳನೋಟ ಗಳನ್ನು ಒಳಗೊಂಡಿದೆ. 'ಸಾಹಿತ್ಯದ ಸಪ್ತಧಾತುಗಳು' (2001)-ಇದು ಇವರು ಇಪ್ಪತ್ತುವರ್ಷಗಳ ಅವಧಿಯಲ್ಲಿ ಬರೆದ ವಿಮರ್ಶಾ ಪ್ರಬಂಧಗಳ ಮತ್ತೊಂದು ಸಂಕಲನ.

ಇವರ 'ಕತೆಯಾದಳು ಹುಡುಗಿ' ಸಂಕಲನ ಕೊಂಕಣಿ ಭಾಷೆಗೆ ಮೆಲ್ವಿನ್ ಡಿ ಸಿಲ್ವ ಅವರಿಂದ 'ಕಾಣಿ ಜಾಲೀ ಚಲೀ' ಎಂಬುದಾಗಿ ಅನುವಾದ ಗೊಂಡಿದೆ. 'ಕಥಗಾ ಮಾರಿನ ಅಮ್ಮಾಯಿ' ಎಂದು ಭಾರ್ಗವಿರಾವ್ ಅವರಿಂದ ತೆಲುಗಿಗೂ 'ಒರು ಪೆಣ್ ಕದ್ಯೆಯಾಗರಲ್' ಎಂದು ಟಿ.ಬಿ.ಸಿದ್ಧ ಲಿಂಗಯ್ಯ ಅವರಿಂದ ತಮಿಳಿಗೂ ಭಾಷಾಂತರಗೊಂಡಿದೆ. ವಿಲ್ಯಮ್ ಡಿ ಸಿಲ್ವ ಎಂಬುವವರು ಇವರ ಒಂಬತ್ತು ಕತೆಗಳನ್ನು ಖೇಳ್ ಆನಿಹೆರ್ ಕಥಾ ಎಂದು ಕೊಂಕಣಿಗೆ ಭಾಷಾಂತರಿಸಿದ್ದಾರೆ. ಇವರ ಹದಿಮೂರು ಕತೆಗಳನ್ನು 'ದಿ ಬಾಯ್ ಹೂ ಟಾಕ್ಡ್ ಟು ಟ್ರೀಸ್' ಎಂದು ಪದ್ಮಶರ್ಮ ಹಾಗೂ ಬಿ.ಸಿ.ರಾಮಚಂದ್ರಶರ್ಮ ಅವರು ಆಂಗ್ಲಭಾಷೆಯಲ್ಲಿ ಅನುವಾದಿಸಿದ್ದಾರೆ. ಇವರ 'ಶಿಕಾರಿ' ಕಾದಂಬರಿ ಕೇಶವ ಮಹಾಗಾವ್ಕರ ಅವರಿಂದ ಮರಾಠಿಗೆ ಅನುವಾದವಾಗಿದೆ.

ಆಧುನಿಕ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿ ಅಗ್ರಮಾನ್ಯ ಕತೆ, ಕಾದಂಬರಿಕಾರರೆಂದು ಖ್ಯಾತರಾಗಿರುವ ಇವರಿಗೆ ಸಂದಿರುವ ಪ್ರಶಸ್ತಿ, ಪುರಸ್ಕಾರಗಳು ಅಪಾರ. ಅವುಗಳಲ್ಲಿ ಮುಖ್ಯವಾದವು: ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ (1983), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಭಾರತೀಯ ಭಾಷಾ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶಿವರಾಮಕಾರಂತ ಪ್ರಶಸ್ತಿ, ಶ್ರೀಗುರುನಾರಾ ಯಣ ಸಾಹಿತ್ಯ ಪ್ರಶಸ್ತಿ, ಗೊರೂರು ಪ್ರಶಸ್ತಿ, ನಿರಂಜನ ಪ್ರಶಸ್ತಿ, ಟಿ.ಎಂ.ಎ. ಪೈ ಪ್ರತಿಷ್ಠಾನಪುರಸ್ಕಾರ, ಔಟ್‌ಸ್ಟ್ಯಾಂಡಿಂಗ್ ಕೊಂಕನೀಸ್ ಅವಾರ್ಡ್, ಮಹಾರಾಷ್ಟ್ರಸರ್ಕಾರದ ಗೌರವ ಪುರಸ್ಕಾರ ಮೊದಲಾದವು. *

**ಯಶೋಧರಾ ದಾಸಪ್ಪ:** 1905-80. ಹೆಸರಾಂತ ಸಾಮಾಜಿಕ ಕಾರ್ಯಕರ್ತರು, ಮಾಜಿಸಚಿವೆ. ಮಹಾತ್ಮ ಗಾಂಧಿಯವರ ನಿಷ್ಠ ಅನುಯಾಯಿ ಗಳಲ್ಲೊಬ್ಬರು. 1905 ಮೇ 5ರಂದು ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಕೆ. ಎಚ್. ರಾಮಯ್ಯನವರು **(ನೋಡಿ)** ಪ್ರಸಿದ್ಧ ಸಮಾಜ ಸೇವಕರಾಗಿದ್ದರು. ತಾಯಿ ರೇವಮ್ಮ, ಸಂಪ್ರದಾಯಸ್ಥ ಮಹಿಳೆಯಾದರೂ ಸುಧಾರಣೆಯ ವಾತಾವರಣಕ್ಕೆ ಹೊಂದಿಕೊಂಡಿದ್ದರು. ಯಶೋಧರಮ್ಮ ನವರ ಪ್ರಾಥಮಿಕ ಹಾಗೂ ಪ್ರೌಢ ವಿದ್ಯಾಭ್ಯಾಸ ಬೆಂಗಳೂರಿನಲ್ಲಿ ನಡೆಯಿತು. ಬೆಂಗಳೂರಿನ ಲಾರ್ಡ್ ಮಿಷನ್ ಹೈಸ್ಕೂಲಿನಲ್ಲಿ ಇವರು ವಿದ್ಯಾಭ್ಯಾಸ ಮಾಡುತ್ತಿದ್ದಾಗ, ಆ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎಂ.ಎಸ್. ಬಟ್ಲರ್ ಇವರ ಮೇಲೆ ಬಹಳ ಪ್ರಭಾವ ಬೀರಿದರು. ಸಮಾಜಸೇವಾ ಕಾರ್ಯಕ್ಕೆ ಸ್ಫೂರ್ತಿ ಕೊಟ್ಟರು. ಅನಂತರ ಇವರು ಮದರಾಸಿನಲ್ಲಿ ಸ್ವಲ್ಪಕಾಲ ಕಾಲೇಜು ಶಿಕ್ಷಣ ಪಡೆದರು. 1926ರಲ್ಲಿ ಎಚ್. ಸಿ. ದಾಸಪ್ಪನವ

ರೊಂದಿಗೆ **(ನೋಡಿ)** ಇವರ ವಿವಾಹವಾಯಿತು. ಎಚ್. ಸಿ. ದಾಸಪ್ಪನವರು ವಕೀಲರೂ ಮೈಸೂರು ಪೌರಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿ ಕೆಲಸ ಮಾಡುತ್ತಿದ್ದಾಗ ಯಶೋಧರಾ ದಾಸಪ್ಪನವರು ಸಮಾಜ ಸೇವಾ ಕಾರ್ಯದಲ್ಲಿ ಅತೀವ ಆಸಕ್ತಿ ವಹಿಸಿದರು. 1937 ರಲ್ಲಿ ಸ್ವಾತಂತ್ರ್ಯ ಹೋರಾಟದ ಕಾವು ಮೈಸೂರು ಸಂಸ್ಥಾನಕ್ಕೆ ತಟ್ಟಿದಾಗ ಇವರು ಪತಿಗಿಂತ ಒಂದು ವರ್ಷ ಮುಂಚೆ ಕಾಂಗ್ರೆಸ್ಸಿಗೆ ಸೇರಿದರು; ಅನಂತರ ದಾಸಪ್ಪನವರನ್ನೂ ಕಾಂಗ್ರೆಸ್ಸಿಗೆ ಎಳೆದರು.

1938ರ ಏಪ್ರಿಲ್‌ನಲ್ಲಿ ಅಂದಿನ ಮೈಸೂರು ಕಾಂಗ್ರೆಸ್‌ನ ಆಶ್ರಯದಲ್ಲಿ ಮದ್ದೂರಿನ ಬಳಿ ಶಿವಪುರದಲ್ಲಿ ನಡೆದ ಧ್ವಜಸತ್ಯಾಗ್ರಹದಲ್ಲಿ ಇವರು ಪತಿಯೊಂದಿಗೆ ಭಾಗವಹಿಸಿದ್ದರು. 1942ರ ಚಲೇಜಾವ್ ಚಳವಳಿಯಲ್ಲಿ ಯಶೋಧರಾ ದಾಸಪ್ಪನವರು ಭೂಗತ ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯವಿತ್ತು ಮಾರ್ಗದರ್ಶನ ನೀಡಿದರು.

ಯಶೋಧರಾ ದಾಸಪ್ಪನವರು ಕೆಲವು ವರ್ಷಗಳ ಕಾಲ ಹಿಂದಿನ ಮೈಸೂರು ಸಂಸ್ಥಾನದ ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿದ್ದರು. ಅನಂತರ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಕ್ಕೆ ತಮ್ಮ ಪೂರ್ಣಕಾಲವನ್ನು ವಿನಿಯೋಗಿಸುವುದಕ್ಕಾಗಿ ನ್ಯಾಯವಿಧಾಯಕ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಕಸ್ತೂರ ಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ರೂಪುಗೊಂಡ ಮೇಲೆ ಗಾಂಧೀಜಿಯವರು ಇವರನ್ನು ಮೈಸೂರು ಸಂಸ್ಥಾನದಲ್ಲಿ ಕಸ್ತೂರ ಬಾ ಟ್ರಸ್ಟಿನ ಪ್ರತಿನಿಧಿಯನ್ನಾಗಿ ನೇಮಿಸಿದರು. ಆ ಟ್ರಸ್ಟಿನ ಪ್ರತಿನಿಧಿಯಾಗಿ ಇವರು ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಬಹಳ ಶ್ರಮಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಬಾಲವಾಡಿ, ಮಹಿಳೆಯರ ಶಿಕ್ಷಣ ಮತ್ತು ಕೈಗಾರಿಕಾ ಕೇಂದ್ರಗಳು ಹಾಗೂ ಪ್ರಸೂತಿಕಾ ನಿಲಯಗಳನ್ನು ಸ್ಥಾಪಿಸಿದರು. ಈ ಸೇವಾ ಕೇಂದ್ರಗಳು ಸ್ವಾವಲಂಬಿಗಳಾಗಿ ಸಾರೋದ್ಧಾರವಾಗಿ ಸೇವಕಾರ್ಯಗ ಳನ್ನು ನಡೆಸಿಕೊಂಡು ಹೋಗಬೇಕೆಂಬ ಉದ್ದೇಶದಿಂದ ಅವುಗಳಿಗೆ ಭೂ ಆಸ್ತಿಯನ್ನೂ ಸಂಗ್ರಹಿಸಿದರು. ಕರ್ನಾಟಕದ ಮಹಿಳಾ ಸೇವಾ ಕಾರ್ಯಕರ್ತರ ತರಪೇತಿಗಾಗಿ ಅರಸೀಕೆರೆ ಬಳಿ ಕಸ್ತೂರ ಬಾ ಗ್ರಾಮವನ್ನು ನಿರ್ಮಿಸಿದರು. ಮೂಡಿಗೆರೆ ತಾಲ್ಲೂಕು ಭಾರತಿ ಬೈಲ್‌ನಲ್ಲಿ ಒಂದು ಕೇಂದ್ರ ಸ್ಥಾಪಿಸಿದ್ದರು.

ಯಶೋಧರಾ ದಾಸಪ್ಪನವರು 1948ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಅದೇ ವರ್ಷ ರಚಿತವಾದ ಅಖಿಲ ಭಾರತ ಗಾಂಧೀ ಸ್ಮಾರಕ ನಿಧಿಯ ಖಾಯಂ ಧರ್ಮದರ್ಶಿಯಾಗಿಯೂ ನೇಮಕಗೊಂಡರು. 1962ರ ಮಹಾಚುನಾವಣೆಯಲ್ಲಿ ಮೈಸೂರು ರಾಜ್ಯ ವಿಧಾನ ಸಭೆಗೆ ಚುನಾಯಿತರಾದರು. ಆಗ ಎಸ್. ನಿಜಲಿಂಗಪ್ಪನವರು ರಚಿಸಿದ ಮಂತ್ರಿ ಮಂಡಲದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ ನೇಮಕಗೊಂಡರು. 1966ರಲ್ಲಿ ನಿಜಲಿಂಗಪ್ಪನವರ ಮಂತ್ರಿಮಂಡಲ ಪಾನನಿರೋಧ ನೀತಿಯನ್ನು ರದ್ದುಮಾಡಲು ತೀರ್ಮಾನಿಸಿದಾಗ ಅದನ್ನು ಪ್ರತಿಭಟಿಸಿ ಇವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು.

ಯಶೋಧರಾ ದಾಸಪ್ಪನವರು ಬಡ ಹೆಣ್ಣುಮಕ್ಕಳಿಗೆ ಉದ್ಯೋಗಗಳನ್ನು ಒದಗಿಸುವ ಉದ್ದೇಶದಿಂದ ಗೀತಾ ಕೈಗಾರಿಕಾ ಸಹಕಾರ ಸಂಘವನ್ನು ಸ್ಥಾಪಿಸಿ, ಬೆಂಗಳೂರು ಐ.ಟಿ.ಐ. ಸಂಸ್ಥೆಯ ಸಹಯೋಗದಿಂದ ಟೆಲಿಫೋನ್ ಜೋಡಣೆಯ ಉಪಕೇಂದ್ರವನ್ನು ಆರಂಭಿಸಿದ್ದರು. ಬೆಂಗಳೂರಿನ ಇವರ ಮನೆಯಲ್ಲಿ ವಿದ್ಯಾವಂತ ಹರಿಜನ ಬಡ ಹೆಣ್ಣುಮಕ್ಕಳ ಸಲುವಾಗಿ ಎಚ್.ಎಂ.ಟಿ. ಗಡಿಯಾರದ ಜೋಡಣಾ ಉಪಕೇಂದ್ರವೊಂದನ್ನು ಸ್ಥಾಪಿಸಿದ್ದರು. ಗಾಂಧೀ ಸ್ಮಾರಕ ನಿಧಿ, ಹರಿಜನ ಸೇವಾ ಸಂಘ, ಗ್ರಾಮೀಣ ಮಹಿಳಾ ಸಂಘ, ಸಮಾಜ ಕಲ್ಯಾಣ ಮಂಡಲಿ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಈ ಮುಂತಾದ ಸಂಸ್ಥೆಗಳಲ್ಲೂ ಇವರು ಸೇವೆ ಸಲ್ಲಿಸಿದ್ದಾರೆ.

ಇವರಿಗೆ ಭಾರತ ಸರ್ಕಾರ 1973ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಮಾಜಿ ಲೋಕಸಭಾ ಸದಸ್ಯರಾದ ತುಲಸೀದಾಸ್ ದಾಸಪ್ಪನವರೂ ಸೇರಿದಂತೆ ಇವರಿಗೆ ಇಬ್ಬರು ಗಂಡುಮಕ್ಕಳು, ಒಬ್ಬ ಸಾಕುಮಗಳು. ತಮ್ಮ ಜೀವಿತಾವಧಿಯ ಉದ್ದಕ್ಕೂ ಒಂದಲ್ಲ ಒಂದು ಸಾಮಾಜಿಕ ಸೇವೆಯಲ್ಲಿ ತೊಡಗಿರುತ್ತಿದ್ದ ಇವರು 1980 ಜೂನ್ 20ರಂದು ನಿಧನರಾದರು. ಮೈಸೂರು ನಗರದ ವಿ.ವಿ.ಮೊಹಲ್ಲಾದಲ್ಲಿರುವ ಇವರ ಹಿರಿಯರ ಮನೆಯನ್ನೇ ಒಂದು ಟ್ರಸ್ಟ್ ಆಗಿ ರಚಿಸಿ ಸಾರ್ವಜನಿಕ ಸಂಸ್ಥೆಯಾಗಿ ಪರಿವರ್ತಿಸಲಾಗಿದೆ. ಅದು ಈಗ ಹತ್ತಾರು ವಿದ್ಯಾರ್ಥಿನಿಯರಿಗೆ ಆಶ್ರಯ ನೀಡಿದೆ. (ಬಿ.ಆರ್.ಪಿ.)

**ಯಳಂದೂರು:** ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ತಾಲ್ಲೂಕಿನ ಆಡಳಿತ ಕೇಂದ್ರ. ಜಿಲ್ಲೆಯ ಅತ್ಯಂತ ಚಿಕ್ಕ ತಾಲ್ಲೂಕಾಗಿರುವ ಇದನ್ನು ವಾಯವ್ಯ, ಉತ್ತರ ಮತ್ತು ಪೂರ್ವದಲ್ಲಿ ಕೊಳ್ಳೇಗಾಲ ತಾಲ್ಲೂಕೂ ಪಶ್ಚಿಮ ಮತ್ತು ದಕ್ಷಿಣದಲ್ಲಿ ಚಾಮರಾಜನಗರ ತಾಲ್ಲೂಕೂ ಸುತ್ತುವರಿದಿವೆ. ಯಳಂದೂರು ಮತ್ತು ಅಗರ ಈ ತಾಲ್ಲೂಕಿನ ಹೋಬಳಿಗಳು. ಒಟ್ಟು 28 ಗ್ರಾಮಗಳಿದ್ದು ತಾಲ್ಲೂಕಿನ ವಿಸ್ತೀರ್ಣ 264.7 ಚ.ಕಿಮೀ. ಈ ತಾಲ್ಲೂಕಿನ ಜನಸಂಖ್ಯೆ 69,386. ಇದರಲ್ಲಿ 60,801 ಮಂದಿ ಗ್ರಾಮೀಣರು, 8,585 ಮಂದಿ ಪಟ್ಟಣಿಗರು.

ತಾಲ್ಲೂಕಿನ ಹೆಚ್ಚಿನ ಪ್ರದೇಶ ಸಮತಟ್ಟಾಗಿದ್ದು, ವ್ಯವಸಾಯಯೋಗ್ಯ ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಕಪ್ಪುಮಣ್ಣಿನ ಭೂಪ್ರದೇಶವನ್ನೊಳಗೊಂಡಿದೆ. ಈ ತಾಲ್ಲೂಕಿನಲ್ಲಿ 2,700 ಹೆಕ್ಟೇರ್ ವ್ಯವಸಾಯಕ್ಕೆ ಉಪಯೋಗವಾಗುತ್ತಿದ್ದು 7,751 ಹೆಕ್ಟೇರ್ ವ್ಯವಸಾಯವಾಗದ ಭೂಮಿ ಇದೆ. ಈ ತಾಲ್ಲೂಕಿನ ದಕ್ಷಿಣ ಭಾಗ ಬಿಳಿಗಿರಿರಂಗನ ಬೆಟ್ಟದ ಸಾಲಿನ ದಟ್ಟ ಕಾಡುಗಳಿಂದ ಕೂಡಿದ್ದರೆ, ಉತ್ತರ ಭಾಗ ಸುವರ್ಣಾವತಿ ನದಿ ಮತ್ತು ಕೆರೆಗಳ ಪ್ರದೇಶವಾಗಿದೆ. ಒಟ್ಟಿನಲ್ಲಿ ತಾಲ್ಲೂಕು ತಂಪಾದ ಹವಾಗುಣ ಪಡೆದಿದೆ. ವಾರ್ಷಿಕ ಮಳೆ 779 ಮಿಮೀ. ಈ ತಾಲ್ಲೂಕಿನಲ್ಲಿ 10,722 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಈ ತಾಲ್ಲೂಕಿಗೆ ಸೇರಿರುವ ಬಿಳಿಗಿರಿರಂಗನಬೆಟ್ಟದ ಸಾಲು ಉತ್ತರ-ದಕ್ಷಿಣವಾಗಿ ಹಬ್ಬಿದೆ. ಈ ಬೆಟ್ಟ ದಟ್ಟವಾದ ಕಾಡಿನಿಂದ ಆವೃತವಾಗಿದ್ದು ಕಾಡಿನಲ್ಲಿ ತೇಗ, ಹೊನ್ನೆ, ಮತ್ತಿ, ಬೀಟೆ, ಕಲ್ಲುಬಾಗಿ ಇತ್ಯಾದಿ ಮರಗಳಿವೆ. ಆನೆ, ಕಾಡುಕೋಣ, ಜಿಂಕೆ, ಚಿರತೆ, ಕರಡಿ-ಮೊದಲಾದ ವನ್ಯಮೃಗಗಳಿವೆ. ಸುವರ್ಣಾವತಿ ಈ ತಾಲ್ಲೂಕಿನ ಮುಖ್ಯ ನದಿ. ಈ ನದಿ ತಾಲ್ಲೂಕನ್ನು ಅಂಬಳೆ ಗ್ರಾಮದ ಪಶ್ಚಿಮದಲ್ಲಿ ಪ್ರವೇಶಿಸಿ ನೈಋತ್ಯದಿಂದ ಯಳಂದೂರು ಮೂಲಕ ಈಶಾನ್ಯಾಭಿಮುಖವಾಗಿ ತಾಲ್ಲೂಕಿನಲ್ಲಿ ಹರಿದು ಅಗರ ಗ್ರಾಮದ ಈಶಾನ್ಯದಲ್ಲಿ ಕೊಳ್ಳೇಗಾಲ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ನದಿ ಮತ್ತು ಕೆಲವು ಕೆರೆಗಳು ತಾಲ್ಲೂಕಿನ ವ್ಯವಸಾಯಕ್ಕೆ ಅನುಕೂಲವಾಗಿವೆ. ಕೆರೆಗಳ ಆಶ್ರಯದಲ್ಲಿ ಬತ್ತ, ಕಬ್ಬು ಬೆಳೆಯುತ್ತಾರೆ. ತೆಂಗು, ಅಡಕೆ, ಹಿಪ್ಪುನೇರಳೆ, ವೀಳೆಯದೆಲೆ ಈ ತಾಲ್ಲೂಕಿನ ಮುಖ್ಯ ವಾಣಿಜ್ಯ ಬೆಳೆಗಳು. ಕುದೇರು, ಮಾಂಬಳ್ಳಿ ಪ್ರದೇಶಗಳಲ್ಲಿ ಹೆಚ್ಚಾಗಿ ಹಿಪ್ಪುನೇರಳೆ ಬೆಳೆಯುತ್ತಾರೆ. ಮಳೆಯನ್ನೇ ಆಶ್ರಯಿಸಿ ರಾಗಿ, ಜೋಳ ಬೆಳೆಯುತ್ತಾರೆ.

ಗೌರೀಶ್ವರ ದೇವಾಲಯದ ಮಹಾದ್ವಾರ

ರೇಷ್ಮೆ ನೂಲು ತೆಗೆಯುವುದು ಈ ತಾಲ್ಲೂಕಿನ ಪ್ರಮುಖ ಗೃಹಕೈಗಾರಿಕೆ. ತಾಲ್ಲೂಕಿನಲ್ಲಿ ಬ್ಯಾಂಕ್ ಮತ್ತು ಕೃಷಿ ಮತ್ತು ಕೃಷಿಯೇತರ ಸಾಲ ನೀಡುವ ಸಹಕಾರ ಸಂಘಗಳಿವೆ. ಯಳಂದೂರು ಮಾರ್ಗದಿಂದ ಹೋಗುವ ನಂಜನಗೂಡು-ಕೊಳ್ಳೇಗಾಲ ರಸ್ತೆ, ಚಾಮರಾಜನಗರ-ಯಳಂದೂರು ರಸ್ತೆ ತಾಲ್ಲೂಕಿನ ಪ್ರಮುಖ ರಸ್ತೆಗಳು. ಯಳಂದೂರಿಗೆ 19 ಕಿಮೀ ದೂರದಲ್ಲಿರುವ ಚಾಮರಾಜನಗರ ರೈಲು ನಿಲ್ದಾಣವೇ ಇದಕ್ಕೆ ಸಮೀಪವಾದದ್ದು.

ತಾಲ್ಲೂಕಿನಲ್ಲಿ ಶಾಲಾ ಕಾಲೇಜುಗಳು ಸ್ಥಾಪನೆಯಾಗಿವೆ. ಯಳಂದೂರು, ಅಗರ ಹಾಗೂ ಮಾಂಬಳ್ಳಿ ಊರುಗಳಲ್ಲಿ ಆರೋಗ್ಯ ಕೇಂದ್ರಗಳಿವೆ. ಅಂಚೆ-ತಂತಿ ಮತ್ತು ವಿದ್ಯುತ್ ಸೌಲಭ್ಯಗಳಿವೆ.

ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳೆಂದರೆ ಅಗರ **(ನೋಡಿ)** ಮತ್ತು ಬಿಳಿಗಿರಿರಂಗನ ಬೆಟ್ಟ **(ನೋಡಿ)**. ಅಗರದಲ್ಲಿ ರಾಮೇಶ್ವರ, ನರಸಿಂಹ, ವರದರಾಜ ಮತ್ತು ದುರ್ಗಾದೇವಿ ಎಂಬ ನಾಲ್ಕು ಪ್ರಾಚೀನ ದೇವಾಲಯಗಳಿವೆ.

ಯಳಂದೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯ ಪಟ್ಟಣ. ಮೈಸೂರಿನ ಆಗ್ನೇಯಕ್ಕೆ 61 ಕಿಮೀ ದೂರದಲ್ಲೂ ನಂಜನಗೂಡಿನ ಪೂರ್ವಕ್ಕೆ 45 ಕಿಮೀ ದೂರದಲ್ಲೂ ಚಾಮರಾಜನಗರ ರೈಲ್ವೆ ನಿಲ್ದಾಣಕ್ಕೆ ಉತ್ತರದಲ್ಲಿ 19 ಕಿಮೀ ದೂರದಲ್ಲೂ ಇರುವ ಈ ಪಟ್ಟಣ ಸುವರ್ಣಾವತಿ (ಹೊನ್ನೊಳೆ) ನದಿಯ ದಡದಲ್ಲಿದೆ. ಜನಸಂಖ್ಯೆ 8,585.

ಯಳಂದೂರು ಸುತ್ತಲ ಊರುಗಳಿಗೆ ಮತ್ತು ತಾಲ್ಲೂಕಿಗೆ ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿದೆ. ಊರಲ್ಲಿ ಅಂಚೆ, ದೂರವಾಣಿ, ವಿದ್ಯುತ್, ಆರೋಗ್ಯ ಕೇಂದ್ರ, ವಾಚನಾಲಯ ಮುಂತಾದವುಗಳ ಸೌಲಭ್ಯಗಳಿವೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಿವೆ. ಬ್ಯಾಂಕ್ ಮತ್ತು ಸಹಕಾರ ಸಂಘಗಳಿವೆ. ಊರು ಪುರಸಭಾಡಳಿತಕ್ಕೆ ಸೇರಿದೆ.

ಹಿಂದೆ ಈ ಊರು ಹದಿನಾಡು ಪ್ರಾಂತ್ಯದ ರಾಜಧಾನಿಯಾಗಿತ್ತೆಂದೂ ವಿಜಯನಗರದ ಅರಸರ ಕಾಲದಲ್ಲಿ ಸಂಪದ್ಭರಿತ ಪಟ್ಟಣವಾಗಿತ್ತೆಂದೂ ತಿಳಿದುಬರುತ್ತದೆ. 1807ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಯಳಂದೂರು ತಾಲ್ಲೂಕನ್ನು ದಿವಾನ್ ಪೂರ್ಣಯ್ಯನಿಗೆ ಜಹಗೀರಾಗಿ ಕೊಟ್ಟಿದ್ದು ಇನಾಂ ರದ್ಧತಿ ಶಾಸನಕ್ಕೆ ಅನುಗುಣವಾಗಿ ಈ ತಾಲ್ಲೂಕು ಸರ್ಕಾರದ ವಶಕ್ಕೆ ಸೇರಿತು. ಇಲ್ಲಿನ ಗೌರೀಶ್ವರ ದೇವಾಲಯವನ್ನು ಹದಿನಾಡ ದೊರೆ ಸಿಂಗಿದೇವ 1450ರಲ್ಲಿ ಕಟ್ಟಿಸಿದನೆಂದು ತಿಳಿಯುತ್ತದೆ. ಗೌರೀಶ್ವರ ದೇವಾಲಯದ ಶಾಸನವೊಂದರಲ್ಲಿ ಈ ಊರನ್ನು ಎಳೆಯಿಂದೂರು (ಎಳೆಯ ಚಂದ್ರನ, ಬಾಲಚಂದ್ರನ ಊರು) ಎಂದು ಕರೆಯಲಾಗಿದೆ. ಈ ಊರು ಪೂರ್ವ ದಿಕ್ಕಿನ ಶ್ವೇತಗಿರಿ (ಬಿಳಿಗಿರಿ), ಆಗ್ನೇಯ ದಿಕ್ಕಿನ ಮಲ್ಲಿನಾಥ ಗಿರಿ, ದಕ್ಷಿಣ ದಿಕ್ಕಿನ ಸುರಗಿಗಿರಿ, ನೈಋತ್ಯದಿಕ್ಕಿನ ಶಂಕರೇಶ್ವರಗಿರಿ, ಪಶ್ಚಿಮ ದಿಕ್ಕಿನ ಮಲ್ಲಿಕಾರ್ಜುನಗಿರಿ, ವಾಯವ್ಯ ದಿಕ್ಕಿನ ಶಂಭುಲಿಂಗನಗಿರಿ, ಉತ್ತರ ದಿಕ್ಕಿನ ಶ್ರೀ ಶೈಲಗಿರಿ, ಈಶಾನ್ಯ ದಿಕ್ಕಿನ ನಿರ್ಮಲಗಿರಿ– ಈ ಎಂಟು ಗಿರಿಗಳ ನಡುವೆ ಕಂಗೊಳಿಸುತ್ತಿತ್ತೆಂದೂ ಶಾಸನದಲ್ಲಿ ವರ್ಣಿಸಿದೆ. ಒಂದು ತಮಿಳು ಶಾಸನ ಈ ಊರನ್ನು ಇಳಮರದೂರು ಎಂದು ಹೆಸರಿಸಿದೆ. ಇಲ್ಲಿನ ಗೌರೀಶ್ವರ ದೇವಾಲಯ ದ್ರಾವಿಡ ಶೈಲಿಯಲ್ಲಿದ್ದು ಅದರ ಮಹಾದ್ವಾರ ಹನ್ನೆರಡು ಅಡಿಗಳಷ್ಟು ಎತ್ತರವಾಗಿದೆ. ಸುಂದರವಾದ ಕಲ್ಲಿನ ಬಳೆಗಳು, ದ್ವಾರಬಂಧದ ಮೇಲಿನ ಭಾಗದಲ್ಲಿ ಕೆತ್ತಿರುವ ಬ್ರಹ್ಮ ಹಾಗೂ ಸರಸ್ವತಿ ವಿಗ್ರಹಗಳು ಮನೋಹರವಾಗಿವೆ. ಈ ದೇವಾಲಯದಲ್ಲಿ ಶಿವ, ದಕ್ಷಿಣಾಮೂರ್ತಿ, ಭೈರವ, ವೀರಭದ್ರ, ಗಣಪತಿ, ದುರ್ಗ, ವಿಷ್ಣು, ವೇಣುಗೋಪಾಲ, ಕೃಷ್ಣ ಹಾಗೂ ರಾಮ–ಈ ವಿಗ್ರಹಗಳಿವೆ. ಮಹಾದ್ವಾರ ಸುಂದರವಾದ ನಾಲ್ಕು ಕಂಬಗಳಿಂದ ಕೂಡಿದ್ದು ಅದರ ಒಳಚಾವಣಿಯಲ್ಲಿ ಕಮಲದ ಮೊಗ್ಗನ್ನು ಅಂದವಾಗಿ ಬಿಡಿಸಲಾಗಿದೆ. ಒಂದು ಕಡೆ ಸುಗ್ರೀವರ ಕದನದ ಚಿತ್ರವಿದೆ. ಈಗಿನ ವರಾಹಸ್ವಾಮಿ ದೇವಾಲಯವಿರುವ ಸ್ಥಳದಲ್ಲಿ ಮೊದಲಿಗೆ ಒಂದು ಜೈನಬಸದಿ ಇತ್ತೆಂದೂ ಹತ್ತಿರದ ಯರಿಯೂರಿನಿಂದ ಅಲ್ಲಿನ ಶಿಥಿಲವಾದ ದೇವಾಲಯದ ಕೆಲವು ಭಾಗಗಳನ್ನು ತಂದು ಈ ದೇವಾಲಯವನ್ನು ನಿರ್ಮಿಸಿ ವರಾಹಸ್ವಾಮಿಯನ್ನು ಸ್ಥಾಪಿಸಲಾಯಿತೆಂದೂ ತಿಳಿದುಬರುತ್ತದೆ. ಕಪಿಲೇಶ್ವರ ದೇಸಸ್ಥಾನದಲ್ಲಿನ ತಮಿಳು ಶಾಸನವೊಂದ ರಿಂದ ಯಳಂದೂರು ಪ್ರದೇಶ ಚೋಳರ ಆಳಿಕೆಯಲ್ಲಿತ್ತೆಂದೂ ದೇವಸ್ಥಾನವನ್ನು ಚೋಳರು ನಿರ್ಮಿಸಿದರೆಂದೂ ತಿಳಿಯುತ್ತದೆ. ಚೋಳ ಮತ್ತು ಹೊಯ್ಸಳರ ಕಾಲದಲ್ಲಿ ಈ ದೇವಾಲಯಕ್ಕೆ ಅನೇಕ ದತ್ತಿಗಳನ್ನು ಬಿಡಲಾಗಿತ್ತು. ಈ ಊರನ್ನು ಚೋಳರ ಶಾಸನಗಳಲ್ಲಿ ಚೋಳೇಂದ್ರ ಸಿಂಹಚತುರ್ವೇದಿಮಂಗಲಂ ಎಂದು ಕರೆಯಲಾಗಿದೆ. ರಾಜಶೇಖರವಿಲಾಸದ ಕರ್ತೃ ಪ್ರಸಿದ್ಧ ವೀರಶೈವ ಕವಿ ಷಡಕ್ಷರದೇವ ಇಲ್ಲಿನ ದನಗೂರು ಮಠದಲ್ಲಿ ಕೆಲವು ಕಾಲ ಇದ್ದನೆಂದೂ ಯಳಂದೂರಿಗೆ ಸು. 5ಕಿಮೀ ದೂರದಲ್ಲಿರುವ ಶಂಭುಲಿಂಗನಬೆಟ್ಟದಲ್ಲಿನ ಗುಹೆಯಲ್ಲಿ ಧ್ಯಾನಸ್ಥನಾಗುತ್ತಿದ್ದ ನೆಂದೂ ತಿಳಿದುಬರುತ್ತದೆ. ಸ್ಥಳೀಯರು ಈ ಗುಹೆಯನ್ನು ಈಗಲೂ ಷಡಕ್ಷರಯ್ಯನ ಗುಹೆ ಎಂದು ಕರೆಯುತ್ತಾರೆ. ಊರಿನಲ್ಲಿ ಈತನ ಗದ್ದುಗೆ ಇದೆ. ವೈದ್ಯಗ್ರಂಥ ಒಂದನ್ನು ರಚಿಸಿದ ನರಸಿಂಹಭಟ್ಟ ಮತ್ತು ಹದಿಬದೆಯ ಧರ್ಮವನ್ನು ರಚಿಸಿದ ಸಂಚಿಯ ಹೊನ್ನಮ್ಮ, ಜೈನವಿದ್ವಾಂಸ ನಾದ ವಿಶಾಲಾಕ್ಷ ಪಂಡಿತ ಈ ಊರಿನವರೆಂದು ಗುರುತಿಸಲಾಗುತ್ತದೆ.

**(ಕೆ.ಆರ್.ಆರ್.;ಎಸ್.ಎನ್.ಜಿ.;ಎಸ್.ವಿ.ಎಸ್,ಬಿ.)**

**ಯಾಣ:** ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ ಒಂದು ಯಾತ್ರಾಸ್ಥಳ. ಕುಮಟಕ್ಕೆ ಈಶಾನ್ಯದಲ್ಲಿ ಸು. 24 ಕಿಮೀ ದೂರದಲ್ಲಿ ದೇವಿಮನೆ ಮತ್ತು ವಡ್ಡಿಘಾಟ್ ಮಾರ್ಗಮಧ್ಯದಲ್ಲಿ ಸಹ್ಯಾದ್ರಿ ಬೆಟ್ಟಗಳ ಕಣಿವೆಗಳಿಂದ ಸುತ್ತುವರಿದಿರುವ ಸುಂದರ ತಾಣ. ಇದನ್ನು ಭೈರವಕ್ಷೇತ್ರ ವೆಂದೂ ಕರೆಯುತ್ತಾರೆ. ಪಶ್ಚಿಮಕ್ಕೆ ಮೋತಿಗುಡ್ಡ ಬೆಟ್ಟವಿರುವ ಈ ಕಣಿವೆಯಲ್ಲಿ ಶಿವಪಾರ್ವತಿಯರ ಮಂದಿರವಿದೆ. ಈ ಮಂದಿರಕ್ಕೆ ಹೋಗಲು ದಕ್ಷಿಣದಲ್ಲಿರುವ ಹರಿತದಿಂದ ಸು. 13 ಕಿಮೀ ದೂರದ ಮತ್ತೊಂದು

ಭೈರವೇಶ್ವರ ಬಂಡೆ

ಉತ್ತರದ ವಡ್ಡಿಕಣಿವೆಯ ಸು. 5ಕಿಮೀ ದೂರದ ಎರಡು ಶ್ರಮದಾಯಕ ಮಾರ್ಗಗಳಿವೆ. ಜಿಂಕೆ ಮತ್ತು ಕಾಡುಕೋಣಗಳು ಹೆಚ್ಚು ಇರುವ ವಡ್ಡಿ ಕಣಿವೆಮಾರ್ಗ ಸದಾಕಾಲದ ಹರಿದ್ವರ್ಣ ಅರಣ್ಯ ಮಧ್ಯದಲ್ಲಿ ಹಾದುಹೋ ಗಿದೆ. ದಟ್ಟ ಅರಣ್ಯದ ಮಧ್ಯೆ ಕೋಟೆಗೋಡೆಯಂತೆ ಸು. 46 ಮೀ ಎತ್ತರವಿರುವ ಕೋಡಗಲ್ಲು ಬಂಡೆಯ ಬೆಟ್ಟವಿದೆ. ಇಲ್ಲಿ ಸು. 37 ಮೀ ಉದ್ದ, 3ಮೀ ಅಗಲ, 3ಮೀ ಎತ್ತರವಿರುವ ಭೈರವೇಶ್ವರ ಗುಹೆಯಿದೆ. ಇಲ್ಲಿರುವ ಭೈರವೇಶ್ವರ ಲಿಂಗದ ಮೇಲೆ ಸಣ್ಣ ಝರಿಯೊಂದು ಸದಾ ಜಿನುಗುತ್ತಿರುತ್ತದೆ. ಈ ಗುಹೆಯ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿರುವ ಚಿಕ್ಕ ಗುಹೆಯೊಂದರಲ್ಲಿ ಸು. 3ಮೀ ಎತ್ತರವಿರುವ ಪಾರ್ವತಿದೇವಿಯ ವಿಗ್ರಹವಿದೆ. ಇದನ್ನು ಚಂಡಿಯಮ್ಮ ಎಂದೂ ಕರೆಯುವುದುಂಟು. ಕಲ್ಲುಬಂಡೆಗಳ ಮಧ್ಯೆ ಹರಿಯುವ ನೀರು ಶುಭ್ರವಾಗಿದ್ದು ಇದನ್ನು 'ಬೆಳ್ಳಿ ಝರಿ' ಎನ್ನುವರು. ಈ ಝರಿ ಮುಂದೆ ಹರಿದು ಆನೆಗೊಂಡಿ ಎಂಬ ಹೆಸರಿನಿಂದ ಕುಮಟಕ್ಕೆ ಈಶಾನ್ಯದಲ್ಲಿ ಸು. 13 ಕಿಮೀ ದೂರದಲ್ಲಿ ಉಪ್ಪಿನಪಟ್ಟಣವೆಂಬಲ್ಲಿ ತದಡಿ (ಅಘನಾಶಿನಿ) ನದಿಯನ್ನು ಸೇರಿಕೊಳ್ಳುವುದು.

ಈ ಕ್ಷೇತ್ರದಲ್ಲಿ ಜೇನುಹುಟ್ಟುಗಳು ಹೆಚ್ಚು. ಶಿವರಾತ್ರಿಯಂದು ಇಲ್ಲಿ ಭೈರವೇಶ್ವರನ ಜಾತ್ರೆ ನಡೆಯುತ್ತದೆ.

ಪೌರಾಣಿಕ ಕಥೆಯಂತೆ ಮಹಾವಿಷ್ಣು ಮೋಹಿನಿಯಾಗಿ ಭಸ್ಮಾಸುರನನ್ನು ಭಸ್ಮಮಾಡಿದ ಈ ಸ್ಥಳದಲ್ಲಿ ಭಸ್ಮಾಸುರನ ಭಸ್ಮವೂ ಕೂಡಿದೆ ಎಂಬುದು ಸ್ಥಳೀಯ ನಂಬಿಕೆ. ಇಲ್ಲಿನ ಭೈರವೇಶ್ವರ ಶಿಖರ, ಮೋಹಿನಿ ಶಿಖರ, ಪಾರ್ವತಿ ದೇವಾಲಯ, ನಾರಾಯಣ ದೇವಾಲಯ–ಇವು ಭಸ್ಮಾಸುರ ಮೋಹಿನಿ ಪ್ರಕರಣದ ಕ್ಷೇತ್ರ ಎಂಬುದರ ಸಂಕೇತವಾಗಿದೆ.

ಈ ಕ್ಷೇತ್ರ ಪ್ರವೇಶವಾಗುತ್ತಲೆ ಮೊದಲು ಸಿಗುವುದು ಗಣಪತಿಯ ಗುಡಿ, ಮುಂದೊಂದು ಕೆರೆ, ಶಿಲೆಯೊಳಗಿಂದ ಸದಾಕಾಲ ಹರಿದು ಬರುವ ತೀರ್ಥಸ್ನಾನಕ್ಕೆ ಯೋಗ್ಯವಾದ ಝರಿ ಇದೆ. ಇದನ್ನು ಚಂಡಿಕಾ ದೇವಾಲಯವೆನ್ನುತ್ತಾರೆ. ಈ ಕ್ಷೇತ್ರಕ್ಕೆ ಹೋಗುವುದು ಬಲು ಪ್ರಯಾಸಕರ ಎಂಬುದರಿಂದಲೋ ಏನೋ 'ಮೈ ಸೊಕ್ಕಿದ್ದರೆ ಯಾಣ ನೋಡು' ಎಂಬ ಒಂದು ನಾಣ್ಣುಡಿ ಈ ಭಾಗದಲ್ಲಿ ಪ್ರಚಲಿತವಿದೆ. ಕೌಶಿಕ ರಾಮಾಯಣ ವನ್ನು ಬರೆದ ಬತ್ತಲೇಶ್ವರ ಕವಿ ಇಲ್ಲಿಯವನು. (ವಿ.ಬಿ.ಎಚ್.)

**ಯಾದಗಿರಿ:** ಗುಲ್ಬರ್ಗ ಜಿಲ್ಲೆಯ ಯಾದಗಿರಿ ಉಪವಿಭಾಗದ ಒಂದು ತಾಲ್ಲೂಕು ಮತ್ತು ಪಟ್ಟಣ ಹಾಗೂ ಅವುಗಳ ಆಡಳಿತ ಕೇಂದ್ರ. ಈ ತಾಲ್ಲೂಕಿನ ವಾಯವ್ಯ ಮತ್ತು ಉತ್ತರದಲ್ಲಿ ಚಿತ್ತಾಪುರ ಮತ್ತು ಸೇಡಂ ತಾಲ್ಲೂಕುಗಳೂ ಪಶ್ಚಿಮದಲ್ಲಿ ಶಹಾಪುರ ತಾಲ್ಲೂಕು ದಕ್ಷಿಣ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶವೂ ಸುತ್ತುವರಿದಿದೆ. ಬಳಚಕ್ಕರ್, ಹತ್ತಿಕುಣಿ, ಸಯ್ದಾಪುರ, ಯಾದಗಿರಿ ಕೊಂಕಲ್ ಮತ್ತು ಗುರುಮಠಕಲ್ ಹೋಬಳಿಗಳಿದ್ದು ಒಟ್ಟು 142 ಗ್ರಾಮಗಳಿವೆ. ವಿಸ್ತೀರ್ಣ 1710.8 ಚ.ಕಿಮೀ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 3,25,907.

ಈ ತಾಲ್ಲೂಕು ಗುಡ್ಡಗಾಡು ಪ್ರದೇಶ. ತಾಲ್ಲೂಕಿನ ಉತ್ತರ ಭಾಗದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಸುಮಾರು 32 ಕಿಮೀ ಉದ್ದದ ಬೆಟ್ಟಸಾಲಿದ್ದು ಅದು ಮುಂದೆ ಸೇಡಂ ತಾಲ್ಲೂಕನ್ನು ಪ್ರವೇಶಿಸುವುದು. ಉಳಿದ ದಕ್ಷಿಣ ಭಾಗ ಸಣ್ಣಪುಟ್ಟ ಗುಡ್ಡಗಳಿರುವ ಪ್ರದೇಶ. ಇಲ್ಲಿನ ಶಿಲಾರಚನೆ ಧಾರವಾಡ ಶಿಲಾರಚನೆಯೊಂದಿಗೆ ಹೋಲುವುದು. ಶುದ್ಧ ಬೆಣಚುಕಲ್ಲು, ಮರಳು, ಪ್ರಶಸ್ತ ಶಿಲೆ ಮತ್ತು ಬಳಪದಕಲ್ಲು ಈ ತಾಲ್ಲೂಕಿನಲ್ಲಿ ಸಿಗುವುದು. ತಾಲ್ಲೂಕಿನ ಮುಖ್ಯ ನದಿ ಭೀಮಾ. ಇದು ತಾಲ್ಲೂಕಿನ ಪಶ್ಚಿಮದಲ್ಲಿ ದಕ್ಷಿಣಾಭಿಮುಖವಾಗಿ ತಾಲ್ಲೂಕಿನ ಗಡಿಯಾಗಿ ಹರಿದು ಶಹಾಪುರ ತಾಲ್ಲೂಕನ್ನು ಬೇರ್ಪಡಿಸಿದೆ. ನದಿಯ ಉದ್ದಕ್ಕೂ ಅದರ ಇಕ್ಕೆಲಗಳಲ್ಲಿ ಹತ್ತಿ ಬೆಳೆಗೆ ಉತ್ತಮವಾದ ಕಪ್ಪುಮಣ್ಣಿನ ಭೂಮಿ ಇದ್ದು ಮಧ್ಯೆ ಮಧ್ಯೆ ಮರಳು ಮಿಶ್ರಿತ ಕಪ್ಪುಮಣ್ಣಿನ ಭೂಮಿ ಕಾಣಬರುವುದು.

ಹೆಚ್ಚು ತಾಪಮಾನದಿಂದ ಕೂಡಿರುವ ಏಪ್ರಿಲ್, ಮೇ, ಜೂನ್ ತಿಂಗಳು ಗಳನ್ನು ಬಿಟ್ಟರೆ ಉಳಿದ ಕಾಲಗಳಲ್ಲಿ ವಾಯುಗುಣ ಹಿತಕರವೆನ್ನಬಹುದು. ವಾರ್ಷಿಕ ಮಳೆ 828.93 ಮಿಮೀ.

ಈ ತಾಲ್ಲೂಕಿನಲ್ಲಿ 2,572 ಹೆಕ್ಟೇರು ಅರಣ್ಯ ಪ್ರದೇಶವಿದ್ದು ಜಿಲ್ಲೆಯಲ್ಲಿ ಈ ತಾಲ್ಲೂಕು ಎರಡನೆಯದಾಗಿತ್ತು. ಈ ಅರಣ್ಯ ಶುಷ್ಕ ಉಷ್ಣವಲಯ ಪ್ರದೇಶದ್ದಾಗಿದ್ದು ಮುಳ್ಳುಕಂಟಿಗಳಿಂದ ಕೂಡಿದೆ. ಇಲ್ಲಿನ ಅರಣ್ಯದಲ್ಲಿ ಹುರಗಲುಮರ, ಕೆಂಪುಜಾಲಿ, ಶ್ರೀಗಂಧ, ಹೊನ್ನೆ, ಕರೀಜಾಲಿ ಮುಂತಾದ ಮರಗಳು ಬೆಳೆಯುತ್ತವೆ.

ತಾಲ್ಲೂಕಿನಲ್ಲಿ ಭೀಮಾನದಿಯ ಎಡದಂಡೆಯುದ್ದಕ್ಕೂ ವ್ಯವಸಾಯಕ್ಕೆ ನೀರಿನಾಶ್ರಯವಿದೆ. ಹತ್ತಿಕುಣಿ ತೊರೆ ಜಲಸಂಗ್ರಹದಿಂದ ಈ ತಾಲ್ಲೂಕಿನ ಬೇಸಾಯಕ್ಕೆ ನೀರೊದಗುತ್ತಿದೆ. ತಾಲ್ಲೂಕಿನಲ್ಲಿ ಜೋಳ, ಸಜ್ಜೆ, ರಾಗಿ, ಗೋದಿ, ತೈಲಬೀಜಗಳು, ದ್ವಿದಳಧಾನ್ಯಗಳು, ಬತ್ತ, ಮೆಣಸಿನಕಾಯಿ, ಹತ್ತಿ ಮತ್ತು ಹೊಗೆಸೊಪ್ಪನ್ನು ಬೆಳೆಯುವರು. ತಾಲ್ಲೂಕಿನಲ್ಲಿ ಮಾವು, ಬಾಳೆ, ದ್ರಾಕ್ಷಿ ಮುಂತಾದ ಫಲಗಳನ್ನೂ ಆಲೂಗೆಡ್ಡೆ, ಈರುಳ್ಳಿ ಮತ್ತು ವಿವಿಧ ತರಕಾರಿಗಳನ್ನೂ ಬೆಳೆಯುವರು. ಪಶುಸಂಗೋಪನೆಯುಂಟು. ಭೀಮಾನದಿಯ ದಂಡೆಗುಂಟ ಸ್ವಲ್ಪಮಟ್ಟಿನ ಮತ್ಸ್ಯೋದ್ಯಮವೂ ಉಂಟು.

ತಾಲ್ಲೂಕು ಕೈಗಾರಿಕೆಯಲ್ಲಿ ಹೆಚ್ಚು ಪ್ರಗತಿ ತೋರಿಲ್ಲ. ಬೀಡಿ ತಯಾರಿಕೆ ಮತ್ತು ಇತರ ಗ್ರಾಮಾಂತರ ಕೈಗಾರಿಕೆಗಳಿದ್ದು ಇಲ್ಲಿರುವ ಗ್ರಾಮಾಂತರ ಕುಶಲ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಕಬ್ಬಿಣ ಮತ್ತು ಮರಗೆಲಸ, ಬಟ್ಟೆ ಹೊಲಿಯುವುದು, ಉಣ್ಣೆಬಟ್ಟೆ ಮತ್ತು ಚರ್ಮವಸ್ತು ತಯಾರಿಕೆ ಮತ್ತು ನೇಯುವುದರಲ್ಲಿ ತರಬೇತಿ ಕೊಡಲಾಗುತ್ತದೆ. ಸೇಂಗಾ, ಬೀಡಿ, ಬೇವಿನ ಎಣ್ಣೆ ಇವು ತಾಲ್ಲೂಕಿನ ಮುಖ್ಯ ಆರ್ಥಿಕ ಉತ್ಪಾದನೆ ಮತ್ತು ತಯಾರಿಕೆ. ತಾಲ್ಲೂಕಿನಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿದ್ದು ಆರ್ಥಿಕ ನೆರವು ನೀಡುತ್ತಿವೆ. ಸಿಮೆಂಟ್ ತಯಾರಿಕೆ ಉದ್ಯಮಗಳಿವೆ.

ಈ ತಾಲ್ಲೂಕಿನ ಪಶ್ಚಿಮದ ಅಂಚಿನಲ್ಲಿ ರಾಯಚೂರು–ಗುಲ್ಬರ್ಗ ರೈಲುಮಾರ್ಗ ಹಾದುಹೋಗಿದೆ. ತಾಲ್ಲೂಕಿನಲ್ಲಿ ಮುಖ್ಯ ಜಿಲ್ಲಾ ರಸ್ತೆಗಳೂ ಹಾದು ಹೋಗಿದ್ದು ಇಲ್ಲಿಂದ ಸುತ್ತಲ ಊರು ಮತ್ತು ಪಟ್ಟಣಗಳಿಗೆ ಉತ್ತಮ ಮಾರ್ಗಗಳುಂಟು.

ಈ ತಾಲ್ಲೂಕಿನ ಮುಖ್ಯ ಗ್ರಾಮಗಳಲ್ಲಿ ಹತ್ತಿಕುಣಿ ಒಂದು. ಯಾದಗಿರಿಯ ಉತ್ತರಕ್ಕೆ 11 ಕಿಮೀ ದೂರದಲ್ಲಿರುವ ಈ ಗ್ರಾಮದ ಬಳಿ ಹತ್ತಿಕುಣಿ ತೊರೆಗೆ ಕಟ್ಟಿರುವ ಕಟ್ಟೆಯಿಂದ ಇದು ಹೆಚ್ಚು ಪ್ರಸಿದ್ಧವಾಗಿದೆ. ಈ ತಾಲ್ಲೂಕಿಗೆ ಸೇರಿರುವ ಸಂಗಮ ಒಂದು ಪವಿತ್ರ ಕ್ಷೇತ್ರ. ಇಲ್ಲಿ ಭೀಮಾನದಿ ಕೃಷ್ಣಾನದಿಯನ್ನು ಕೂಡುತ್ತದೆ. ಇಲ್ಲಿಯ ಚೆನ್ನವೀರ ಬಸವೇಶ್ವರ ಜಾತ್ರೆ ಪ್ರಸಿದ್ಧವಾದುದು.

ಯಾದಗಿರಿ ಈ ತಾಲ್ಲೂಕಿನ ಆಡಳಿತ ಕೇಂದ್ರ. ಭೀಮಾನದಿಯ ಎಡದಂಡೆಗೆ ಸನಿಹದಲ್ಲೂ, ಗುಲ್ಬರ್ಗದ ಆಗ್ನೇಯಕ್ಕೆ 124 ಕಿಮೀ ದೂರದಲ್ಲೂ ಬೆಂಗಳೂರಿನ ಉತ್ತರಕ್ಕೆ 570 ಕಿಮೀ ದೂರದಲ್ಲೂ ಇದೆ. ಪಟ್ಟಣದಲ್ಲಿ 29,962 ಮಂದಿ ಪುರುಷರು, 28,840 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 75,734

ಪಟ್ಟಣ ಸಮುದ್ರಮಟ್ಟಕ್ಕೆ 360 ಮೀಟರ್ ಎತ್ತರದಲ್ಲಿದ್ದು ಬೇಸಗೆ ಕಾಲ ಬಿಟ್ಟು ಉಳಿದ ಕಾಲಗಳಲ್ಲಿ ಹಿತಕರ ವಾಯುಗುಣ ಹೊಂದಿದೆ. ರಾಯಚೂರು–ಗುಲ್ಬರ್ಗ ರೈಲುಮಾರ್ಗದ ಒಂದು ಮುಖ್ಯ ರೈಲುನಿಲ್ದಾಣವಾಗಿದ್ದು ಜೊತೆಗೆ ಜಿಲ್ಲಾ ಹೆದ್ದಾರಿಗಳ ಕೂಡುಸ್ಥಳದಲ್ಲಿರುವ ಈ ಪಟ್ಟಣ ಒಂದು ಮುಖ್ಯ ವ್ಯಾಪಾರಕೇಂದ್ರ. ಈ ಪಟ್ಟಣದಲ್ಲಿ ಪ್ರೌಢ, ಮಾಧ್ಯಮ ಮತ್ತು ಪ್ರಾಥಮಿಕ ಶಾಲೆಗಳೂ ಆಸ್ಪತ್ರೆಗಳೂ ಕಾಲೇಜೂ ಇದ್ದು ಅಂಚೆ, ವಿದ್ಯುತ್ ಮುಂತಾದ ಸೌಲಭ್ಯಗಳಿವೆ. ಪಟ್ಟಣದ ಹತ್ತಿರವಿರುವ ಬೆಟ್ಟದ ಮೇಲೆ ಯಾದವ ದೊರೆಗಳ ಕಾಲದ ಒಂದು ಕೋಟೆಯಿದೆ. ಜುಮ್ಮಾ ಮಸೀದಿ ಇದೆ. ಇಲ್ಲಿ ಪ್ರಸಿದ್ಧ ಮೈಲಾರಲಿಂಗ ದೇವಾಲಯವಿದ್ದು ಇದು ಒಂದು ಪವಿತ್ರಕ್ಷೇತ್ರವೆನಿಸಿದೆ. (*;ಡಿ.ಎಸ್.ಜಿ.)

**ಯಾದವ ಕವಿ:** ಸು. 1800. ಕಲಾವತೀ ಪರಿಣಯ ಎಂಬ ಗ್ರಂಥದ ಕರ್ತೃ. ಚಿಕ್ಕಬಳ್ಳಾಪುರ ಇವನ ಜನ್ಮಸ್ಥಳ. ಈತ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪಂಡಿತನಾಗಿದ್ದನೆಂದು ತಿಳಿದುಬರುತ್ತದೆ. ಉಭಯ ಕವಿತಾವಿಚಕ್ಷಣ, ಉಭಯಕವಿತಾವಿಶಾರದ– ಇವು ಇವನ ಬಿರುದುಗಳು.

ಕಲಾವತೀಪರಿಣಯ ಗದ್ಯರೂಪದಲ್ಲಿದೆ. ಇದರಲ್ಲಿ 12 ಆಶ್ವಾಸಗಳಿವೆ. ಗದ್ಯದಲ್ಲಿದ್ದರೂ ಕಾವ್ಯದ ಬಹುಭಾಗವನ್ನು ಐದು ಐದು ಮಾತ್ರೆಯ ಗಣಗಳಾಗಿ ವಿಭಾಗಿಸಬಹುದು. 11ನೆಯ ಆಶ್ವಾಸದಲ್ಲಿ ವಿಜಯವರ್ಮನ ಪುತ್ರಿಯ ಸೌಂದರ್ಯವನ್ನು ವರ್ಣಿಸಲು ಒಂದು ವೃತ್ತ ಹಾಗೂ 5 ಕಂದಪದ್ಯಗಳನ್ನು ರಚಿಸಿರುವುದನ್ನು ಗಮನಿಸಿದರೆ ಕವಿಗೆ ಪದ್ಯದಲ್ಲಿಯೂ ಬರೆಯುವ ಸಾಮರ್ಥ್ಯವಿದ್ದಿತೆಂದು ಊಹಿಸಬಹುದು. ದ್ವಾದಶಾಶ್ವಾಸಗಳಲ್ಲಿ ಹೇಳಿರುವ ಕಥೆಯನ್ನು ಹೀಗೆ ಸಂಗ್ರಹಿಸಬಹುದು: ಸೌರಾಷ್ಟ್ರ ದೇಶಾಧಿಪತಿ ಕುವಲಯಾಪೀಡನೆಂಬುವನು ಸರ್ವಮಂಗಳೆಯ ಕರುಣದಿಂದ ಕಲಾವತಿ ಯೆಂಬ ಕನ್ಯಾರತ್ನವನ್ನು ಪಡೆದ. ಪುತ್ರಿ ಪ್ರಾಪ್ತವಯಸ್ಕಳಾಗಲು, ಅವಳನ್ನು ವರಿಸಲು ಬಂದವರು ಆ ಪುರದ ರಕ್ಕಸಿಯನ್ನು ಸಂಹರಿಸಬೇಕೆಂಬ ನಿಬಂಧನೆ ಇದ್ದಿತು. ಇದನ್ನು ಸಾಧಿಸಲಾಗದೆ ಪರಾಜಿತರಾದವರಲ್ಲಿ ಕಾಶ್ಮೀರದ ಅಧಿಪತಿ ವಿಜಯವರ್ಮನೂ ಒಬ್ಬ. ಆದರೆ ಸೌವೀರ ದೇಶದ ಲೀಲಾವತಿಯೆಂಬ ರಾಜಧಾನಿಯ ಅಧಿಪತಿ ಬೃಹದ್ರಥ ಆ ಪುರದ ಉದ್ಯಾನವನದಲ್ಲಿದ್ದ ಕಲಾವತಿಯನ್ನು ಕಂಡು ಕಾಮವಿಕಾರಕ್ಕೊಳಗಾಗಿ ಅವಳ ಸಂಪರ್ಕವನ್ನು ಬಯಸಿದ. ಅವನ ಬಯಕೆಯನ್ನು ತಿರಸ್ಕರಿಸಿದ ಕಲಾವತಿಯನ್ನು ಕುರಿತು ನಿನ್ನನ್ನು ಪಾಣಿಗ್ರಹಣವನ್ನು ಮಾಡಿಕೊಂಡು ನಿನ್ನನ್ನು ತೊರೆಯುವೆ ಎಂದು ಪ್ರತಿಜ್ಞೆ ಮಾಡಿದ. ಅವಳು ಸಹ 'ನಿನ್ನಂಗಸಂಗದಿಂದರಸ ತನ್ನುದರದೊಳ್ ಜನಿಸಿದ ಕುಮಾರನಿಂ ನಿಮ್ಮ ನಿಗ್ರಹವನು ಮಾಡಿಸುವೆ' ಎಂದು ಪ್ರತಿ ನುಡಿದಳು. ಬೃಹದ್ರಥ ಆ ಪುರದ ರಕ್ಕಸಿಯನ್ನು ಸಂಹರಿಸಿ ಕಲಾವತಿಯನ್ನು ವಿವಾಹವಾಗಿ ತನ್ನ ಪ್ರತಿಜ್ಞೆಯಂತೆ ಅವಳನ್ನು ತ್ಯಜಿಸಿ ತನ್ನ ಪಟ್ಟಣವನ್ನು ಸೇರಿದ. ಕೆಲವು ತಿಂಗಳ ಅನಂತರ ಮಂತ್ರಿಕುಮಾರ ಕಲಾಧರನಾಗಿಯೂ ಕಲಾವತಿ ಅವನ ಸಹೋದರಿ ಮದನಮಂಜರಿಯಾಗಿಯೂ ಮಾರುವೇಷಗಳಿಂದ ಬಂದು ಬೃಹದ್ರಥನನ್ನು ಕಂಡು ವಿಶ್ವಾಸ ಗಳಿಸಿದರು. ಕಾಲಕ್ರಮದಲ್ಲಿ ಕಲಾವತಿ ಅರಸನೊಡನೆ ಸಂಪರ್ಕವನ್ನು ಹೊಂದಿ, ಗರ್ಭವತಿಯಾಗಿ, ತನ್ನ ತವರಿಗೆ ಹಿಂದಿರುಗಿ, ಕುಂಡಲಶ್ರವನೆಂಬ ಪುತ್ರರತ್ನವನ್ನು ಪಡೆದಳು. ನಿಜಾಂಶವನ್ನು ತಿಳಿದ ಬೃಹದ್ರಥನಿಗೆ ಸ್ತ್ರೀಬಲ್ಮೆಯನ್ನು ಕಂಡು ಆಶ್ಚರ್ಯವಾಯಿತು.

ಕುಂಡಲಶ್ರವ ಬೆಳೆದು ಸದೃಢಶಾಲಿಯಾಗಿ, ಒಮ್ಮೆ ಅರಣ್ಯಮಧ್ಯದಲ್ಲಿ ಸಂಚರಿಸುತ್ತಿರಲು ಶಾಪಮುಕ್ತನಾದ ವಿದ್ಯಾಧರನೊಬ್ಬ ಇವನು ಮಹಾಪುರುಷನೆಂದು ತಿಳಿದು, ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳನ್ನು ಕಲಿಸಿ ಬೀಳ್ಕೊಟ್ಟ. ಅನಂತರ ಕುಂಡಲಶ್ರವ ಭೂದಿಗ್ವಿಜಯದಲ್ಲಿ ತೊಡಗಿ ಸಮಸ್ತ ರಾಜರನ್ನು ಜಯಿಸಿದ. ಕೊನೆಗೆ ತಂದೆ ಬೃಹದ್ರಥನನ್ನು ಎದುರಿಸುವ ಪರಿಸ್ಥಿತಿಯೊದಗಿ, ಅಸ್ತ್ರಪ್ರತ್ಯಸ್ತ್ರಗಳಿಂದ ಯುದ್ಧಮಾಡಿ ಗೆದ್ದ. ಕಲಾವತಿಯ ಪ್ರತಿಜ್ಞೆ ನೆರವೇರಿದೊಡನೆಯೇ ಪತಿಪತ್ನಿಯರ ಸಮಾಗಮವಾಯಿತು. ಬೃಹದ್ರಥ ತನ್ನ ಮಗನಿಗೆ ವಿಜಯವರ್ಮನ ಪುತ್ರಿಯನ್ನು ತಂದುಕೊಂಡು ವಿವಾಹವನ್ನು ಜರುಗಿಸಿ ಯೌವರಾಜ್ಯಾಭಿಷೇಕ ವನ್ನು ನೆರವೇರಿಸಿದ. ಈ ಕಥೆ ಮಹಾಭಾರತದ ಚಿತ್ರಾಂಗದೆಯ ವೃತ್ತಾಂತ ವನ್ನು ಹೋಲುವಂತಿದೆ. (ಕೆ.ಆರ್.ಎಸ್.)

**ಯಾಮಿನಿ ಕೃಷ್ಣಮೂರ್ತಿ:** ಭರತನಾಟ್ಯ ಕೂಚುಪುಡಿ ಮತ್ತು ಒಡಿಸ್ಸಿ ನೃತ್ಯಶೈಲಿಗಳಲ್ಲಿ ಪರಿಣಿತರಾದ ಹೆಸರಾಂತ ಕಲಾವಿದರು. ಇವರು ಹುಟ್ಟಿದ್ದು ಬೆಂಗಳೂರಿನಲ್ಲಿ. ಇವರ ತಂದೆ ಕೃಷ್ಣಮೂರ್ತಿ ಆಂಧ್ರಪ್ರದೇಶದ ವರು. ಎಳೆಯ ವಯಸ್ಸಿನಲ್ಲಿಯೆ ಮಗಳ ಕಲಾಭಿರುಚಿಯನ್ನು ಗಮನಿಸಿ ಅದರ ಸರ್ವತೋಮುಖ ಬೆಳೆವಣಿಗೆಗೆ ನೆರವಾದರು. ಮಗಳಿಗೆ ನೃತ್ಯ ಶಿಕ್ಷಣವನ್ನು ಕೊಡಿಸುವ ಸಲುವಾಗಿ ಕೃಷ್ಣಮೂರ್ತಿಯವರು 1954ರಲ್ಲಿ ಮದರಾಸಿಗೆ ಹೋಗಿ ನೆಲೆಸಿದರು. ಅಲ್ಲಿ ಮೊದಲು ಗೌರಿ ಅಮ್ಮನವರಲ್ಲಿ ಇವರ ನೃತ್ಯಾಭ್ಯಾಸ ಪ್ರಾರಂಭವಾಯಿತು. ಅನಂತರ ಪ್ರಸಿದ್ಧ ಕಲಾಕ್ಷೇತ್ರದ ರುಕ್ಮಿಣಿ ಅರುಂಡೇಲ್ ಅವರಲ್ಲಿ ಹಲವು ವರ್ಷ ಉನ್ನತ ಶಿಕ್ಷಣವನ್ನು ಪಡೆದರು. ಕೂಚುಪುಡಿ ನೃತ್ಯವನ್ನು ವೇದಾಂತಂ ಲಕ್ಷ್ಮೀನಾರಾಯಣ ಶಾಸ್ತ್ರಿ, ವೇಣುಗೋಪಾಲಶರ್ಮ ಮತ್ತು ಚಿನ್ನಕೃಷ್ಣಮೂರ್ತಿಯವರಲ್ಲಿ ಕಲಿತರು. ಒಡಿಸ್ಸಿ ನೃತ್ಯವನ್ನು ಕೇಳುಚರಣ್ ಮಹಾಪಾತ್ರ, ಪಂಕಜ

ಚರಣ್‌ದಾಸ್ ಅವರಲ್ಲಿ ಅಭ್ಯಾಸ ಮಾಡಿದರು. ಭಾರತ ಸರ್ಕಾರದ ಶಿಷ್ಯವೇತನವನ್ನು ಪಡೆದು ನೃತ್ಯಕ್ಷೇತ್ರದಲ್ಲಿ ಪ್ರತಿಭಾನ್ವಿತ ನಾಟ್ಯಾಚಾರ್ಯ ರಾದ ವಳವೂರ್ ರಾಮಯ್ಯ ಪಿಳ್ಳೆ, ಎಲ್ಲಪ್ಪ ಪಿಳ್ಳೆ, ಚೊಕ್ಕ ಲಿಂಗಂ ಪಿಳ್ಳೆ, ಕಿಟ್ಟಪ್ಪಪಿಳ್ಳೆ ಮೊದಲಾದವರಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದರು.

ಯಾಮಿನಿಯವರು 1956 ರಲ್ಲಿ ರುಕ್ಮಿಣಿ ಅರುಂಡೇಲ್ ಅವರೊಡನೆ ನೃತ್ಯ ನಾಟಕ ಗಳಲ್ಲಿ ಪಾಲ್ಗೊಂಡು ವಿದೇಶಗಳಲ್ಲೂ ಕಾರ್ಯಕ್ರಮವನ್ನು ನಡೆಸಿದರು. ದೆಹಲಿಯ ಸಂಗೀತ ಭಾರತೀ ಇನ್‌ಸ್ಟಿಟ್ಯೂಟ್ ಸಂಸ್ಥೆಯಲ್ಲಿ ಹಲವು ವರ್ಷಗಳ ಕಾಲ ಇವರು ಅಧ್ಯಾಪಕಿಯಾಗಿಯೂ ಸೇವೆ ಸಲ್ಲಿಸಿದರು.

ಇವರ ಕಲಾಸೇವೆಗೆ ಹಲವು ಬಗೆಯ ಪ್ರಶಸ್ತಿಗಳು ಲಭಿಸಿವೆ. ಭಾರತ ಸರ್ಕಾರ 1968ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. 1974ರಲ್ಲಿ ತಿರುಪತಿ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪದವಿ ನೀಡಿತು. ತಿರುಪತಿ ದೇವಸ್ಥಾನದ ಆಸ್ಥಾನ ನರ್ತಕಿಯಾಗಿಯೂ ಇವರು ನೇಮಕ ಗೊಂಡಿದ್ದರು. ಕೇಂದ್ರ ಸಂಗೀತ ನಾಟಕ ಅಕಾಡೆಮಿ 1978ರಲ್ಲಿ ಪ್ರಶಸ್ತಿ ನೀಡಿತು. ಶ್ರೀಕೃಷ್ಣಗಾನಸಭೆ ಇವರಿಗೆ ನೃತ್ಯ ಚೂಡಾಮಣಿ ಎಂಬ ಬಿರುದನ್ನಿತ್ತು ಸನ್ಮಾನಿಸಿದೆ. *

**ಯಾಮುನಾಚಾರ್ಯ, ಎಂ.:** 1899–1970. ಪ್ರಸಿದ್ಧ ತತ್ತ್ವಶಾಸ್ತ್ರಜ್ಞರು, ಲೇಖಕರು. 1899 ಸೆಪ್ಟೆಂಬರ್ 3ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ನಾರಣ್ಯೆಯ್ಯಂಗಾರ್, ತಾಯಿ ಮಾಣಿಕ್ಯಮ್ಮ. ಇವರ ತಾತಂದಿರಾದ

ಗೋವಿಂದಾಚಾರ್ಯಸ್ವಾಮಿಗಳು ಪೂರ್ವಾಶ್ರಮದಲ್ಲಿ ಮೈಸೂರು ಸರ್ಕಾರದ ಎಂಜಿನಿಯರಾಗಿದ್ದವರು. ಅವರು ಅನುಭಾವಿಗಳು ಮತ್ತು ನಿಮ್ನವರ್ಗದವರ ಏಳಿಗೆಗಾಗಿ ತುಂಬ ಶ್ರಮಿಸಿ ನೂರಾರು ಆದಿದ್ರಾವಿಡ ಶಿಷ್ಯವರ್ಗವನ್ನು ಬೆಳೆಸಿದ್ದರು. ವೈಷ್ಣವ ಅನುಭಾವವನ್ನು ಕುರಿತು ಇಂಗ್ಲಿಷ್‌ನಲ್ಲಿ ಅವರು ಒಂದು ಪ್ರಮಾಣಗ್ರಂಥವನ್ನೂ ಬರೆದಿದ್ದಾರೆ. ತಮ್ಮ ತಾತಂದಿರ ಪ್ರಭಾವದಿಂದ ಯಾಮುನಾಚಾರ್ಯರಿಗೆ ಚಿಕ್ಕಂದಿನಲ್ಲಿಯೇ ತತ್ತ್ವಶಾಸ್ತ್ರದಲ್ಲಿ ವಿಶೇಷ ಆಸಕ್ತಿ ಬೆಳೆಯಿತು. ಮೈಸೂರು ಮಹಾರಾಜ ಕಾಲೇಜಿನಲ್ಲಿ ತತ್ತ್ವಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದ ಇವರು, ಆ ಕಾಲೇಜಿನಲ್ಲಿ

ಅನೇಕ ವರ್ಷಗಳ ಕಾಲ ತತ್ತ್ವಶಾಸ್ತ್ರದ ಅಧ್ಯಾಪಕರಾಗಿದ್ದರು. ಅನಂತರ ಹಾಸನದ ಇಂಟರ್‌ಮೀಡಿಯೇಟ್ ಕಾಲೇಜಿನ ಸೂಪರಿಂಟೆಂಡೆಂಟರಾಗಿ ಕೆಲಸಮಾಡಿ ನಿವೃತ್ತರಾದರು (1956). ಅನಂತರ ಮೈಸೂರಿನಲ್ಲಿ ಸ್ಥಾಪಿತವಾದ ಗಾಂಧೀ ವಿಚಾರ ಸಂಸ್ಥೆಯ ಅಧ್ಯಕ್ಷರಾಗಿ ಗಾಂಧಿ ಸಾಹಿತ್ಯವನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸುವ ಕೆಲಸದಲ್ಲಿ ನಿರತರಾಗಿದ್ದ ಇವರು ಅಮೆರಿಕದ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಿಂದ ಆಹ್ವಾನಿತರಾಗಿ ಆ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಾಲ್ಕು ತಿಂಗಳ ಕಾಲ ಗಾಂಧೀತತ್ತ್ವ ಮತ್ತು ಭಾರತೀಯ ತತ್ತ್ವವನ್ನು ಕುರಿತು ಅನೇಕ ಉಪನ್ಯಾಸಗಳನ್ನು ಮಾಡಿದರು. 1967-68ರಲ್ಲಿ ದೆಹಲಿಯ ಗಾಂಧೀ ಪೀಸ್ ಫೌಂಡೇಷನ್ ಸಂಸ್ಥೆಯ ಅಧ್ಯಕ್ಷರಾಗಿಯೂ ಇವರು ಕಾರ್ಯ ನಿರ್ವಹಿಸಿದರು.

ಇಂಗ್ಲಿಷ್, ಕನ್ನಡ, ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಒಳ್ಳೆಯ ಪಾಂಡಿತ್ಯ ಗಳಿಸಿಕೊಂಡಿದ್ದ ಇವರು ಜನಪ್ರಿಯ ಭಾಷಣಕಾರರೂ ಆಗಿದ್ದರು. ತತ್ತ್ವಶಾಸ್ತ್ರ, ಗಾಂಧೀಸಾಹಿತ್ಯ ಮುಂತಾದ ಅನೇಕ ವಿಷಯಗಳನ್ನು ಕುರಿತು ಇವರು ಲೇಖನಗಳನ್ನೂ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಇವರ ಕೆಲವು ಮುಖ್ಯ ಪುಸ್ತಕಗಳಿವು: ಪಾಶ್ಚಾತ್ಯ ರಾಜಕೀಯ ತತ್ತ್ವಗಳು, ನಮ್ಮ ಆಳ್ವಾರರುಗಳು, ಆಧುನಿಕ ತರ್ಕಶಾಸ್ತ್ರಸಂಗ್ರಹ, ಮತಧರ್ಮತತ್ತ್ವಶಾಸ್ತ್ರ, ಆಚಾರ್ಯ ರಾಮಾನುಜರು. ಮತಧರ್ಮದ ಪುನರುಜ್ಜೀವನ ಮತ್ತು ಮನುಷ್ಯನ ಮನಸ್ಸು ಎಂಬ ಎರಡು ಪುಸ್ತಕಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ತಂದಿದ್ದಾರೆ. ಇವರು 1970 ಜನವರಿ 4ರಂದು ಮೈಸೂರಿನಲ್ಲಿ ನಿಧನಹೊಂದಿದರು. **(ಜಿ.ಎಚ್.)**

**ಯೂಸುಫ್ ಆದಿಲ್ ಖಾನ್:** ಆದಿಲ್ ಶಾಹೀ ರಾಜವಂಶದ ಸ್ಥಾಪಕ. ಬಹಮನೀ ರಾಜ್ಯದ ಪ್ರತಿನಿಧಿಯಾಗಿ ಇದ್ದರೂ ವಸ್ತುತಃ ಸ್ವತಂತ್ರವಾಗಿ ಬಿಜಾಪುರ ಪ್ರಾಂತ್ಯವನ್ನು ಆಳಿದ (1490-1510). ಮೂಲತಃ ಈತ ಜಾರ್ಜಿಯ ದೇಶದವ. ಫೆರಿಸ್ತನ ಪ್ರಕಾರ ಇವನು ತುರ್ಕಿಯ ಸುಲ್ತಾನ ಎರಡನೆಯ ಮುರಾದನ ಮಗ. ಮುರಾದನು 1451ರಲ್ಲಿ ಮಡಿದು ಅವನ ಮಗ ಮಹಮ್ಮದ್ ಸುಲ್ತಾನನಾದಾಗ, ಅವನು ಹಿಂದಿನ ಸುಲ್ತಾನನ ಇತರ ಎಲ್ಲ ಗಂಡು ಮಕ್ಕಳನ್ನೂ ಕೊಲ್ಲುವಂತೆ ಆಜ್ಞಾಪಿಸಿದ. ಯೂಸುಫನ ತಾಯಿ ಚಾತುರ್ಯದಿಂದ ರಕ್ಷಿಸಿ ಪರ್ಷಿಯದ ಒಬ್ಬ ವರ್ತಕನ ರಕ್ಷಣೆಗೆ ಒಪ್ಪಿಸಿದಳು. ಪರ್ಷಿಯದಲ್ಲಿ ಸ್ವಲ್ಪಕಾಲವಿದ್ದು ಅಲ್ಲಿಂದ ತನ್ನ ಹದಿನಾರನೆಯ ವಯಸ್ಸಿನಲ್ಲಿ ಗುಲಾಮನಾಗಿ ಭಾರತಕ್ಕೆ ಬಂದ. ಇವನನ್ನು ಮಹ್ಮೂದ್ ಗಾವಾನ್ ಕೊಂಡುಕೊಂಡ. ತನ್ನ ಸ್ವಸಾಧನೆಗಳಿಂದ ಹಾಗೂ ಗಾವಾನನ ಕರುಣೆಯಿಂದ ದಿನೇ ದಿನೇ ಉನ್ನತ ಪದವಿಗೇರಿದ. ಆರಂಭದಲ್ಲಿ ಒಂದು ಅಶ್ವದಳದ ನಾಯಕನಾಗಿದ್ದು, ಕ್ರಮೇಣ ಯುದ್ಧಕಾರ್ಯದಲ್ಲಿ ಪ್ರಧಾನಿಯ ಬಲಗೈಯಂತಿದ್ದು ಬಹಮನೀ ರಾಜ್ಯದಲ್ಲಿ ಹೆಸರುಗಳಿಸಿ, ಕೊನೆಗೆ ಬಿಜಾಪುರದ ಪ್ರಾಂತಪಾಲ ಹುದ್ದೆಗೆ ಏರಿದ.

ರಾಜಧಾನಿ ಬಿದರೆಯಲ್ಲಿ ಪ್ರಧಾನಿಯಾಗಿ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ ಖಾಸಿಂ ಬರೀದ್ ಎಂಬುವನು ಯೂಸುಫನ ಪರಮ ವೈರಿಯಾಗಿದ್ದ. ಯೂಸುಫನ ಪ್ರಾಬಲ್ಯವನ್ನು ಮುರಿಯಲು ಆತ ಸದಾ ಹೊಂಚುಹಾಕುತ್ತಿದ್ದ. ಸುಲ್ತಾನನೇ ಅವನ ಕೈಗೊಂಬೆಯಾಗಿದ್ದನಾಗಿ, ಕುಟಿಲ ಖಾಸಿಂ ಬರೀದನ ಅಧೀನಕ್ಕೊಳಪಟ್ಟಿರಲು ಇಚ್ಛಿಸದ ಪ್ರಾಂತಪಾಲರು ಸ್ವತಂತ್ರವಾಗಿರಲು ಹವಣಿಸುತ್ತಿದ್ದರು. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡ ಯೂಸುಫನು 1490ರ ಹೊತ್ತಿಗೆ ವಸ್ತುತಃ ಸ್ವತಂತ್ರನಾದ.

ಇದನ್ನು ಸಹಿಸಲಾರದ ಖಾಸಿಂ ಬರೀದ್ ಯೂಸುಫ್‌ಖಾನನನ್ನು ಸೋಲಿಸಲು ಕೊಂಕಣದ ಬಹಾದುರ್ ಗಿಲಾನಿ ಹಾಗೂ ವಿಜಯನಗರದ ರಾಜಪ್ರತಿನಿಧಿ ನರಸನಾಯಕರೊಡನೆ ಒಡಂಬಡಿಕೆಯೊಂದನ್ನು ಮಾಡಿಕೊಂಡು, ಅವರನ್ನು ಬಿಜಾಪುರದ ವಿರುದ್ಧ ಎತ್ತಿಕಟ್ಟಿದ. ನರಸನಾಯಕ ಕೃಷ್ಣಾ-ತುಂಗಭದ್ರಾ ಪ್ರದೇಶಗಳನ್ನು ಪ್ರವೇಶಿಸಿ ರಾಯಚೂರು ಮತ್ತು ಮುದ್ಗಲ್ಲುಗಳನ್ನು ಸ್ವಾಧೀನಪಡಿಸಿಕೊಂಡ. ಯೂಸುಫ್‌ಖಾನನು ರಾಯಚೂರು ಮತ್ತು ಮುದ್ಗಲ್‌ಗಳನ್ನು ವಿಜಯನಗರಕ್ಕೆ ಬಿಟ್ಟುಕೊಟ್ಟು ನರಸನಾಯಕನೊಡನೆ ಸಂಧಿ ಮಾಡಿಕೊಂಡ. ಗಿಲಾನಿಯನ್ನು ಸೋಲಿಸಿ ಓಡಿಸಿದ. ಅನಂತರ ಖಾಸಿಂ ಬರೀದನ ವಿರುದ್ಧ ದಂಡೆತ್ತಿಹೋಗಿ ಅವನನ್ನೂ ಅವನ ಜೊತೆಗೂಡಿದ್ದ ಪರೆಂದದ ಮಲಿಕ್ ಅಹ್ಮದನನ್ನೂ ನೆಲದುರ್ಗದ ಬಳಿ ನಡೆದ ಯುದ್ಧದಲ್ಲಿ ಸೋಲಿಸಿದ. ಅನಂತರ ಮಲಿಕ್ ಅಹ್ಮದನೊಡನೆ ಶಾಂತಿ ಒಪ್ಪಂದ ಮಾಡಿಕೊಂಡ. ಶತ್ರುಬಾಧೆ ನಿವಾರಣೆಯಾಗುತ್ತಿದ್ದಂತೆ ರಾಯಚೂರು ಮತ್ತು ಮುದ್ಗಲ್‌ಗಳನ್ನು ಪುನಃ ಗಳಿಸಲು ಉದ್ಯುಕ್ತನಾದ. ಆಗ ವಿಜಯನಗರದವರೊಡನೆ ನಡೆದ ಯುದ್ಧದಲ್ಲಿ ಸಫಲನಾದರೂ ಶಾಂತಿ ಒಪ್ಪಂದದ ಸೋಗು ಹಾಕಿ ನರಸನಾಯಕ, ಅವನ ಮಗ ತಿಮ್ಮ ಮತ್ತು ಅವರ ಪ್ರಧಾನ ಅಧಿಕಾರಿಗಳನ್ನು ಆಹ್ವಾನಿಸಿ ಕುತಂತ್ರದಿಂದ ಹಲವರನ್ನು ಕೊಲೆಮಾಡಿಸಿದ. ನರಸನಾಯಕ ಮತ್ತು ಅವನ ಮಗ ಹೇಗೋ ತಪ್ಪಿಸಿಕೊಂಡರು. ರಾಯಚೂರು ಮತ್ತು ಮುದ್ಗಲ್ಲು ಕೋಟೆಗಳು ಯೂಸುಫನ ವಶವಾದವು.

ಸಮಕಾಲೀನ ಕಲಾಕೃತಿ

1495ರಲ್ಲಿ ಖಾಸಿಂ ಬರೀದನ ದುರಾಡಳಿತದ ವಿರುದ್ಧ ಗುಲ್ಬರ್ಗದ ರಾಜ್ಯಪಾಲನಾಗಿದ್ದ ದಸ್ತೂರ್ ದಿನಾರ್ ದಂಗೆಯೆದ್ದ. ಇವನ ಉಪಟಳವನ್ನು ಅಡಗಿಸಲು ಬರೀದನು ಯೂಸುಫನ ಸಹಾಯವನ್ನು ಕೋರಿದ. ಈ ದಂಗೆಯನ್ನು ಅಡಗಿಸಲು ಬರೀದನಿಗೆ ಸಹಾಯ ಮಾಡಿದನಾದರೂ ದಿನಾರನನ್ನು ಕೊಲ್ಲಲು ಯತ್ನಿಸಿದ ಬರೀದನನ್ನು ತಡೆದು, ಗುಲ್ಬರ್ಗವನ್ನು ದಿನಾರನಿಗೇ ಹಿಂದಿರುಗಿಸಿದ. ಆದರೆ ಮುಂದೆ 1504ರಲ್ಲಿ ಗುಲ್ಬರ್ಗದ ಮೇಲೆ ದಂಡೆತ್ತಿ ಹೋಗಿ ದಸ್ತೂರ್ ದಿನಾರನನ್ನು ಸೋಲಿಸಿ ಕೊಂದು ಗುಲ್ಬರ್ಗವನ್ನು ತನ್ನ ಆಧಿಪತ್ಯಕ್ಕೆ ಸೇರಿಸಿಕೊಂಡ.

ಪರ್ಷಿಯ ದೇಶದಲ್ಲಿ ತನ್ನ ಬಾಲ್ಯದ ಬಹುದಿನಗಳನ್ನು ಕಳೆದಿದ್ದ ಯೂಸುಫನಿಗೆ ಷಿಯಾ ಧರ್ಮದ ಬಗ್ಗೆ ನಿಷ್ಠೆಯಿತ್ತು. 1502ರಲ್ಲಿ ತನ್ನ ರಾಜ್ಯದ ಷಿಯಾ ಧರ್ಮವನ್ನು ಅಧಿಕೃತ ಧರ್ಮವೆಂದು ಘೋಷಿಸಿದ. ಸುನ್ನಿ ಧರ್ಮಾನುಯಾಯಿಗಳಿಗೂ ಸಹಿಷ್ಣುತೆಯನ್ನು ಪ್ರಕಟಿಸಿದ. ಯಾರನ್ನೂ ಬಲಾತ್ಕರಿಸಿ ಷಿಯಾ ಧರ್ಮಾನುಯಾಯಿಗಳಾಗಲು ಒತ್ತಾಯಿಸಬಾರದೆಂದು ರಾಜಶಾಸನವೊಂದನ್ನು ಹೊರಡಿಸಿದರೂ ಈ ಬದಲಾವಣೆಯಿಂದ ಗೋಲ್ಕೊಂಡ ಹಾಗೂ ಅಹಮದ್‌ನಗರಗಳ ಸುಲ್ತಾನರು ಕೋಪಗೊಂಡರು. ಇಂಥ ಸಮಯಕ್ಕಾಗಿಯೇ ಕಾಯುತ್ತಿದ್ದ ಖಾಸಿಂ ಬರೀದ್ ಅವರನ್ನು ಮತ್ತೂ ಪ್ರಚೋದಿಸಿ ಬಿಜಾಪುರದ ಮೇಲೆ ಅವರೆಲ್ಲರೂ ಯುದ್ಧ ಹೂಡುವಂತೆ ಮಾಡಿದ. ಈ ಪರಿಸ್ಥಿತಿಯಿಂದ ಪಾರಾಗಲು ಯೂಸುಫ್ ಬೀರಾರಿಗೆ ಪಲಾಯನ ಮಾಡಿದ. ಅಲ್ಲಿನ ಸುಲ್ತಾನ

ಇಮಾದ್‌ಷಾನ ಬುದ್ಧಿವಾದದಂತೆ ಷಿಯಾ ಧರ್ಮವನ್ನು ಕುರಿತು ಘೋಷಣೆಯನ್ನು ಹಿಂತೆಗೆದುಕೊಂಡು ಸುನ್ನಿ ಧರ್ಮಕ್ಕೆ ಪುನಃ ಮನ್ನಣೆ ಕೊಟ್ಟ. ಬಿಜಾಪುರದ ವಿರುದ್ಧ ರಚಿತವಾಗಿದ್ದ ಸ್ನೇಹ ಕೂಟದವರು ಇನ್ನೂ ಯುದ್ಧಕ್ಕೆ ಸಿದ್ಧರಾಗಿದ್ದರು. ಆದರೆ ಈ ಸ್ನೇಹಕೂಟವನ್ನು ಒಡೆಯಲು ಇಮಾದ್ ಷಾ ಗೋಲ್ಕೊಂಡ ಹಾಗೂ ಅಹಮದ್‌ನಗರಗಳ ಸುಲ್ತಾನರಿಗೆ ಪತ್ರವೊಂದನ್ನು ಬರೆದು ಈ ಸ್ನೇಹಕೂಟವನ್ನು ರಚಿಸುವುದರಲ್ಲಿ ಖಾಸಿಂ ಬರೀದನ ದುರುದ್ದೇಶ ಅಡಗಿದೆಯೆಂದು ತಿಳಿಯಪಡಿಸಿದ. ಇದರ ಪರಿಣಾಮವಾಗಿ ಸ್ನೇಹಕೂಟ ಒಡೆಯಿತು. ಗೋಲ್ಕೊಂಡ ಹಾಗೂ ಅಹಮದ್‌ನಗರಗಳ ಸೇನೆಗಳು ಹಿಂದೆ ಸರಿಯಲು ಖಾಸಿಂ ಬರೀದ್ ಒಬ್ಬೊಂಟಿಗನಾದ. ಅವನನ್ನು ಯೂಸುಫ್ ಎದುರಿಸಿ ಸೋಲಿಸಿ, ಜಯಶಾಲಿಯಾಗಿ ಬಿಜಾಪುರಕ್ಕೆ ಹಿಂದಿರುಗಿದ. ಶತ್ರುಗಳಿಂದ ತೊಂದರೆ ನಿವಾರಣೆಯಾದ ಮೇಲೆ ಷಿಯಾ ಧರ್ಮವನ್ನು ರಾಜ್ಯದಲ್ಲಿ ಪುನಃ ಘೋಷಿಸಿದ. 1510ರಲ್ಲಿ ಅದುವರೆಗೆ ಬಿಜಾಪುರದ ವಶದಲ್ಲಿದ್ದ ಗೋವೆಯನ್ನು ಪೋರ್ಚುಗೀಸರು ಆಕ್ರಮಿಸಿಕೊಂಡರು. ಆದರೆ ಶೀಘ್ರದಲ್ಲಿ ಯೂಸುಫ್ ದಾಳಿಮಾಡಿ ಅವರನ್ನು ಸೋಲಿಸಿ ಗೋವೆಯನ್ನು ಉಳಿಸಿಕೊಂಡ. ಆದರೆ ಅದೇ ವರ್ಷ ಯೂಸುಫ್ 1510ರ ನವೆಂಬರ್‌ನಲ್ಲಿ ನಿಧನನಾದ. ಬಿಜಾಪುರದ ಬಳಿಯ ಗೋರಿಯಲ್ಲಿ ಇವನ ಅಂತ್ಯಸಂಸ್ಕಾರ ನಡೆಯಿತು. ಇವನ ನಿಧನಾನಂತರ ಪೋರ್ಚುಗೀಸರು ಗೋವೆಯನ್ನು ಪುನಃ ಸ್ವಾಧೀನಪಡಿಸಿಕೊಂಡರು.

ಯೂಸುಫ್‌ಖಾನನು ಮುಕುಂದರಾವ್ ಎಂಬ ಮರಾಠ ನಾಯಕನೊಬ್ಬನ ಮಗಳನ್ನು ವಿವಾಹವಾಗಿದ್ದ. ಈಕೆಯ ಪ್ರಭಾವದಿಂದ ಹಿಂದುಗಳ ಬಗ್ಗೆ ಸಹನೆಯಿಂದ ನಡೆದುಕೊಂಡ. ಸರ್ಕಾರದ ಯಾವ ಹುದ್ದೆಗೇ ಆಗಲಿ, ಹಿರಿಯ ಸ್ಥಾನಗಳಿಗೇ ಆಗಲಿ ಹಿಂದುಗಳನ್ನು ನೇಮಿಸಲು ಹಿಂತೆಗೆಯುತ್ತಿರಲಿಲ್ಲ. ಯೂಸುಫ್ ಉತ್ತಮ ನಡತೆಯುಳ್ಳವನೂ ಧರ್ಮಶೀಲನೂ ಆಗಿದ್ದು, ಸಾಹಿತಿಗಳನ್ನೂ ಪಂಡಿತರನ್ನೂ ಗೌರವಿಸಿ ಪೋಷಿಸುತ್ತಿದ್ದ ಎಂದು ಫೆರಿಸ್ತ ಹೊಗಳಿದ್ದಾನೆ. ಇವನ ಕಾಲದಲ್ಲಿ ಪರ್ಷಿಯ, ತುರ್ಕಿಗಳಿಂದ ಆಗಮಿಸಿದ್ದ ಪಂಡಿತರು ಬಿಜಾಪುರದಲ್ಲಿ ಆಸ್ಥಾನವನ್ನು ಅಲಂಕರಿಸಿದ್ದರು. ಸ್ವತಃ ಸುಲ್ತಾನನೇ ಪಂಡಿತನಾಗಿದ್ದು ಉತ್ತಮ ವಾಗ್ಮಿಯೂ ಆಗಿದ್ದ. (ಎಂ.ಎನ್.ವಿ.)

**ಯೋಗಾನರಸಿಂಹಮೂರ್ತಿ, ಎಚ್.ಕೆ.:** 1927-2002. ಯೋಗಣ್ಣ ಎಂಬ ಹೆಸರಿನಿಂದ ಚಿರಪರಿಚಿತರಾದ ರಂಗಭೂಮಿ ಹಾಗೂ ಚಲನ ಚಿತ್ರರಂಗದ ಬಹುಮುಖ ಪ್ರತಿಭಾವಂತ ನಟ, ಗಾಯಕ, ಹಾರ್ಮೋನಿಯಂ ಮಾಸ್ಟರ್, ಸಂಗೀತ ನಿರ್ದೇಶಕ, ಕವಿ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಹಳೇಬೀಡು ಗ್ರಾಮದಲ್ಲಿ 1927 ಜುಲೈ 5ರಂದು ಜನಿಸಿದರು. ಇವರ ತಂದೆ ಕೃಷ್ಣಶಾಸ್ತ್ರಿಗಳು ಪುರಾಣಗಳ ವ್ಯಾಖ್ಯಾನಕಾರರು ಹಾಗೂ ಪೌರೋಹಿತ್ಯದ ವೃತ್ತಿನಡೆಸುತ್ತಿದ್ದರು. ಬಡತನದ ಬವಣೆಯಲ್ಲೇ ಬೆಳೆದ ಯೋಗಣ್ಣನವರು ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ ಶ್ರೀರಂಗಪಟ್ಟಣಕ್ಕೆ ಬಂದು ವಾರಾನ್ನ ಮಾಡಿ ಎಲ್.ಎಸ್. ಪರೀಕ್ಷೆಯನ್ನು ಮುಗಿಸಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದರು. ಮೈಸೂರಿನಲ್ಲಿಯೂ ವಾರಾನ್ನವೇ ಗತಿಯಾದಾಗ ಪರಾವಲಂಬನೆಯ ಬದುಕಿನ ಬಗ್ಗೆ ಬೇಸರಗೊಂಡು ವಿದ್ಯಾಭ್ಯಾಸವನ್ನು ತೊರೆದು ಬಾಲ್ಯದಿಂದಲೇ ಆಕರ್ಷಿತ ವಾಗಿದ್ದ ರಂಗಭೂಮಿಯನ್ನು ಪ್ರವೇಶಿಸಿದರು. ಆಗ ಚಾಮರಾಜನಗರದಲ್ಲಿ ಹೆಸರಾಂತ ಚಲನಚಿತ್ರ ಹಾಗೂ ರಂಗನಟರೂ ಆಗಿದ್ದ ತಮ್ಮ ಚಿಕ್ಕಪ್ಪ ಎಚ್.ರಾಮಚಂದ್ರಶಾಸ್ತ್ರಿಗಳ 'ಶ್ರೀ ಮಂಜುನಾಥೇಶ್ವರ ಕಲಾಮಂಡಳಿ'ಯನ್ನು ಸೇರಿದರು. ಅಲ್ಲಿ ಹೆಸರಾಂತ ಗಾಯಕರಾದ ಪಿ. ಕಾಳಿಂಗರಾಯರು ಇವರು ಸಹ ಕಲಾವಿದರಾಗಿದ್ದರು.

ರಾಮಾಂಜನೇಯ ಯುದ್ಧ ಎಂಬ ನಾಟಕದಲ್ಲಿ ಇವರು ಆಂಜನೇಯನ ಪಾತ್ರ ವಹಿಸಿದರು. ವಿಜಯ ನಾರಸಿಂಹ ಅವರು ಬರೆದ ಸ್ವಾರ್ಥಿ ಸಾಮಾಜಿಕ ನಾಟಕಕ್ಕೆ ಇವರು ಹಾಡುಗಳನ್ನು ಬರೆದು ಸಂಗೀತ ನಿರ್ದೇಶಿಸಿದರು. ಮಹದೇವಸ್ವಾಮಿಯವರ ಕನ್ನಡ ಥಿಯೇಟರ್ಸ್ ಕಂಪನಿಗಾಗಿ ರಾಜಾ ವಿಕ್ರಮ, ಚಂದ್ರಹಾಸ ಎಂಬ ನಾಟಕಗಳನ್ನು ಬರೆದರು. ಬೆಂಗಳೂರಿನಲ್ಲಿ ರಾಜಾವಿಕ್ರಮ ನಾಟಕದ ಸತತ 250 ಪ್ರಯೋಗಗಳಾದುವು. ಆಗಿನ ಪ್ರಧಾನಮಂತ್ರಿ ಜವಹರಲಾಲ್‌ನೆಹರು ಈ ನಾಟಕವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅನಂತರ ಕೆ. ಹಿರಣ್ಣಯ್ಯನವರ ಮಿತ್ರಮಂಡಳಿ ಪ್ರವೇಶಿಸಿದ ಯೋಗಣ್ಣನವರು ಪಣಿವರಾಜ್ (ಅಡಿಗೆ ಭಟ್ಟ), ನಡುಬೀದಿ ನಾರಾಯಣ (ಬಿಕನಾಸಿ), ಶ್ರೀಮನ್‌ರಮಾರಮಣಗೋವಿಂದ ನಾಟಕಗಳನ್ನು ಬರೆದರು.

1963ರಲ್ಲಿ ಸರ್ವೋದಯ ನಾಟಕ ಮಂಡಳಿ ಎಂಬ ತಮ್ಮ ಸ್ವಂತ ಕಂಪನಿ ಸ್ಥಾಪಿಸಿದರು. ಇವರೇ ಬರೆದು ನಟಿಸಿದ ಚಿರಂಚಿಕಳ್ಳ ಭಟ್ಟ, ಶ್ರೀಮಾನ್ ಬೇವಾರ್ಸಿ ನಾಟಕಗಳು ಬಹಳ ಜನಪ್ರಿಯವಾದುವು. ಬೀದಿಕಾಮಣ್ಣ, ಅಪವಾದ, ಇಂದ್ರಾಣಿ-ಸುಂದ್ರಾಣಿ, ಜನಆರ್ಧನ, ನಾಡಮನೆ, ಭೂಕೈಲಾಸ ಮುಂತಾದ ನಾಟಕಗಳನ್ನು ಬರೆದರು. ಗುಲ್ಬರ್ಗ ದಲ್ಲಿ ಕಂಪನಿ ಮೊಕ್ಕಾಂ ಮಾಡಿದ್ದಾಗ ಬಿರುಗಾಳಿಯ ಆಘಾತಕ್ಕೆ ಸಿಕ್ಕಿ ಈ ಕಂಪನಿ ನಾಶವಾಯಿತು.

ಅನಂತರ ಮೈಸೂರಿಗೆ ಬಂದು ನೆಲಸಿದರು. ಆಗಿನ ಪ್ರಸಿದ್ಧ ಹವ್ಯಾಸಿರಂಗ ತಂಡ ಅಮರಕಲಾ ಸಂಘಕ್ಕಾಗಿ ಕೈಕಾರಾಣಿ ನಾಟಕ ಬರೆದು ನಿರ್ದೇಶಿಸಿ ಸಂಗೀತವನ್ನು ಸಂಯೋಜಿಸಿದರು. ರಣಧೀರ ಕಂಠೀರವ ಇವರು ಸಿದ್ಧಪಡಿಸಿದ ಮತ್ತೊಂದು ನಾಟಕ. ಮೈಸೂರಿನ ಕರ್ನಾಟಕ ನಾಟಕ ರಂಗಾಯಣದಲ್ಲಿ ಆಹ್ವಾನಿತ ಸಂಗೀತ ನಿರ್ದೇಶಕರಾಗಿ ಕೆಲಕಾಲ ಸೇವೆ ಸಲ್ಲಿಸಿದರು. ಅನೇಕ ಪ್ರಸಿದ್ಧ ಸಾಹಿತಿಗಳ ನಾಟಕಗಳಿಗೆ ರಂಗಸಂಗೀತ ಸಂಯೋಜಿಸಿದ್ದರು.

ಕಣಗಾಲ್ ಪ್ರಭಾಕರ ಶಾಸ್ತ್ರೀಯವರು ನಿರ್ದೇಶಿಸಿದ ಕೂಲಿಕಾರಿ ಎಂಬ ಕನ್ನಡ ಹಾಗೂ ತಮಿಳು ಅವತರಣಿಕೆಗಳ ಚಲನಚಿತ್ರಕ್ಕೆ ಇವರು ಸಂಗೀತ ನಿರ್ದೇಶನ ನೀಡುವ ಮೂಲಕ ಚಲನಚಿತ್ರ ಸಂಗೀತ ನಿರ್ದೇಶಕ ರಾದರು. ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ ಶುಭಮಂಗಳ, ಕಥಾಸಂಗಮ, ರಂಗನಾಯಕಿ ಮುಂತಾದ ಚಿತ್ರಗಳಿಗೆ ಸಂಭಾಷಣೆ ಒದಗಿಸಿದರು. ಸಿದ್ದಲಿಂಗಯ್ಯ, ರಾಜೇಂದ್ರಸಿಂಗ್ ಬಾಬು ನಿರ್ದೇಶಿಸಿದ ಅನೇಕ ಚಿತ್ರಗಳಿಗೆ ಇವರು ಸಂಭಾಷಣೆ ಒದಗಿಸಿದ್ದಾರೆ.

ಇವರಿಗೆ ಅನೇಕ ಪ್ರಶಸ್ತಿ, ಗೌರವಗಳು ಲಭ್ಯವಾಗಿವೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1983), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1996), ಗಾನಕಲಾ ಭೂಷಣ ಸಿ. ಹೊನ್ನಪ್ಪ ಭಾಗವತರ್ ಪ್ರಶಸ್ತಿ (1998), ಡಾ.ಗುಬ್ಬಿವೀರಣ್ಣ ಪ್ರಶಸ್ತಿ (1999) ಇವು ಇವರಿಗೆ ಸಂದ ಕೆಲವು ಮುಖ್ಯ ಪ್ರಶಸ್ತಿಗಳು. ಇವರು 2002 ಜೂನ್ 22ರಂದು ನಿಧನ ಹೊಂದಿದರು. (ಎನ್‌ಪಿ.ಸಿ.)

# ರ

**ರಂಗಣ್ಣ,ಎಸ್.ವಿ.:** 1898–1987. ಹೆಸರಾಂತ ವಿಮರ್ಶಕ, ಸಾಹಿತಿ, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು. ಹಾಸನ ಜಿಲ್ಲೆಯ ಸಾಲಗಾಮೆಯಲ್ಲಿ 1898 ಡಿಸೆಂಬರ್ 24 ರಂದು ಜನಿಸಿದರು. ತಂದೆ ವೆಂಕಟಸುಬ್ಬಯ್ಯ, ತಾಯಿ ವೆಂಕಟಲಕ್ಷ್ಮಮ್ಮ. ಇವರ ಪ್ರೌಢಶಾಲಾ ವ್ಯಾಸಂಗ ಚಿಕ್ಕಮಗಳೂರಿನಲ್ಲಿಯೂ ಇಂಟರ್ ಮೀಡಿಯೆಟ್ ಮತ್ತು ಬಿ.ಎ. ಪದವಿಯ ವಿದ್ಯಾಭ್ಯಾಸ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಆಯಿತು. ಆಗ್ಗೆ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಜೆ.ಜೆ. ಟೇಟರು ಇವರ ಮೇಲೆ ಅತಿಶಯವಾದ ಪ್ರಭಾವವನ್ನು ಬೀರಿದುದಲ್ಲದೆ ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷವಾದ ಅಕ್ಕರೆಯನ್ನುಂಟು ಮಾಡಿದರು. ಇದೇ ಕಾಲದಲ್ಲಿ ಆ ಕಾಲೇಜಿನಲ್ಲಿ ಕನ್ನಡ ಬೋಧಕರಾಗಿದ್ದ

ಎ.ಆರ್.ಕೃಷ್ಣಶಾಸ್ತ್ರಿಗಳು ರಂಗಣ್ಣನವರಲ್ಲಿ ಕನ್ನಡದ ಅಭಿಮಾನ ಮೂಡುವುದಕ್ಕೆ ಭದ್ರವಾದ ತಳಹದಿ ಹಾಕಿದರು. ವ್ಯಾಸಂಗದ ಉದ್ದಕ್ಕೂ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ರಂಗಣ್ಣನವರು 1919ರಲ್ಲಿ ಪ್ರಥಮ ದರ್ಜೆಯಲ್ಲಿ ಬಿ.ಎ. ಪದವಿ ಪಡೆದರು. ಅದೇ ವರ್ಷ ಮೈಸೂರಿಗೆ ಬಂದ ಇವರು ಮಹಾರಾಜ ಕಾಲೇಜನ್ನು ಸೇರಿ, ಅಧ್ಯಾಪಕತ್ವದ (ಟ್ಯೂಟರ್) ಜೊತೆಗೆ ಪ್ರಥಮ ಶ್ರೇಣಿಯಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು ಗಳಿಸಿಕೊಂಡರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ 1921ರಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಇವರು 1928–33ರವರೆಗೆ ತುಮಕೂರಿನ ಇಂಟರ್ ಮೀಡಿಯೆಟ್ ಕಾಲೇಜಿನ ಸೂಪರಿಂಟೆಂಡೆಂಟರಾಗಿದ್ದರು. ಅನಂತರ ಸೆಂಟ್ರಲ್ ಕಾಲೇಜಿಗೆ ಹಿಂದಿರುಗಿ ಅಲ್ಲಿ ಇಂಗ್ಲಿಷ್ ಭಾಷಾಸಾಹಿತ್ಯಗಳ ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಕೆಲಸಮಾಡಿ 1945ರಲ್ಲಿ ಮಹಾರಾಜ ಕಾಲೇಜಿಗೆ ಪ್ರಾಧ್ಯಾಪಕರಾಗಿ ಬಂದರು. ಅನಂತರ ಇಂಗ್ಲಿಷ್ ಇಲಾಖೆಯ ಮುಖ್ಯಸ್ಥರಾಗಿ, ಪ್ರಿನ್ಸಿಪಾಲರಾಗಿ, ಕಾರ್ಯನಿರ್ವಹಿಸಿ 1954ರಲ್ಲಿ ನಿವೃತ್ತರಾದರು.

ರಂಗಣ್ಣನವರ ಕಾರ್ಯರಂಗ ಬೋಧನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಇವರು ಭಾಗವಹಿಸುತ್ತಿದ್ದ ಇತರ ಚಟುವಟಿಕೆಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು. ಮೊದಲನೆಯದಾಗಿ ಇವರು ತಾವು ಇತರ ಭಾಷೆಗಳ – ಮುಖ್ಯವಾಗಿ ಇಂಗ್ಲಿಷ್–ಮೂಲಕ ಸಂಪಾದಿಸಿದ ಜ್ಞಾನವನ್ನು ತಮ್ಮ ಗುರುಗಳಾದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ ಪ್ರೇರಣೆಯಂತೆ ಕನ್ನಡದ ಮೂಲಕ ಹರಿಸಲು ಸಂಕಲ್ಪಿಸಿ ನಾಡಿನ ಉದ್ದಗಲ ಸಂಚರಿಸಿ ಉಪನ್ಯಾಸಗಳ ಮೂಲಕ, ಬರೆಹಗಳ ಮೂಲಕ ಜನತೆಯಲ್ಲಿ ಭಾಷಾಭಿಮಾನವನ್ನು ಬೆಳೆಸಲು ಪ್ರಯತ್ನಿಸಿದರು. ಎರಡನೆಯದಾಗಿ 1923ರಲ್ಲಿ ರೋವರ್ ಸ್ಕೌಟ್ ಚಳವಳಿಗೆ ದುಮುಕಿದ ಇವರು ಅದರಲ್ಲಿ ಕುಂದದ ಆಸಕ್ತಿಯನ್ನಿಟ್ಟುಕೊಂಡಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಯೂನಿಯನ್ ಶಾಖೆಗೆ ಇವರು ಕಾರ್ಯದರ್ಶಿಗಳಾಗಿದ್ದಾಗ ನಾಡಿನ ವಿವಿಧ ವಿದ್ವಾಂಸರ ಸಹಕಾರದಿಂದ 1928ರಲ್ಲಿ ರನ್ನಕವಿ ಪ್ರಶಸ್ತಿ ಎಂಬ ವಿಮರ್ಶಾಗ್ರಂಥವನ್ನು ಹೊರತಂದರು. 1933ರಲ್ಲಿ ತುಮಕೂರಿನಿಂದ ಬೆಂಗಳೂರಿಗೆ ಬಂದ ಮೇಲೆ ಬೆಂಗಳೂರು ಶಾಖೆಯ ವಿಶ್ವವಿದ್ಯಾನಿಲಯದ ಉಪಾಧ್ಯಾಯ ಸಂಘದ ಕಾರ್ಯದರ್ಶಿಯಾಗಿದ್ದು ನಾಡಿನ ಬೇರೆ ಬೇರೆ ಭಾಗಗಳಲ್ಲಿ ಕನ್ನಡದಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿದುದಲ್ಲದೆ ಅಂಥ ಕೆಲವು ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲೂ ಪ್ರಕಟಿಸಿದರು. ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಇವರು ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಸೇವೆಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಪರಿಷ್ಕರಣ ಯೋಜನೆಯ ಪ್ರಧಾನ ಸಂಪಾದಕರಾಗಿ ಇವರು ಸ್ವಲ್ಪ ಕಾಲ ಕಾರ್ಯನಿರ್ವಹಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸಹಕಾರ ಸಂಘ, ಮೈಸೂರು ನಗರದ ಪದವೀಧರರ ಸಹಕಾರ ಸಂಘ, ಮೈಸೂರಿನ ಅನಾಥಾಲಯ– ಇವುಗಳ ಅಧ್ಯಕ್ಷರಾಗಿ, ಮೈಸೂರಿನ ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಗೌರವ ಸದಸ್ಯರಾಗಿ ಇವರು ಸೇವೆಸಲ್ಲಿಸಿದ್ದಾರೆ. ಇವರು ತಮ್ಮ ನವಿರಾದ ಹಾಸ್ಯಮಿಶ್ರಿತ ಭಾಷಣಕ್ಕೆ ಹೆಸರಾಗಿದ್ದರು.

ಈ ಎಲ್ಲ ಚಟುವಟಿಕೆಗಳನ್ನು ಮೀರಿಸಿ ಇವರಿಗೆ ಕನ್ನಡ ಸಾಹಿತ್ಯದಲ್ಲಿ ಶಾಶ್ವತ ಕೀರ್ತಿಯನ್ನು ತಂದುಕೊಟ್ಟಿರುವುದು ಇವರ ಸಾಹಿತ್ಯನಿರ್ಮಾಣ ಕಾರ್ಯ. ಪ್ರಬುದ್ಧ ಕರ್ಣಾಟಕದ ಮೊಟ್ಟಮೊದಲ ಸಂಚಿಕೆಯಲ್ಲಿ ಕನ್ನಡ ಸಾಹಿತ್ಯದ ಗುಣ ದೋಷಗಳು ಎಂಬ ಇವರ ಮೊದಲ ಲೇಖನ ಪ್ರಕಟವಾಯಿತು. ಪ್ರಕಟವಾದ ಇವರ ಮೊದಲ ಪುಸ್ತಕ ಕುಮಾರವ್ಯಾಸ. ಇವರ ಅನೇಕ ಲೇಖನಗಳು ಕನ್ನಡದ ವಿದ್ವತ್ಪತ್ರಿಕೆಗಳಲ್ಲಿ ಚದುರಿಹೋಗಿವೆ. ಹೊಸಗನ್ನಡದಲ್ಲಿ ನೂತನ ವಿಮರ್ಶೆಯ ಮಾರ್ಗವನ್ನು ಸ್ಥಾಪಿಸಿದ ಕೀರ್ತಿ ರಂಗಣ್ಣನವರಿಗೆ ಸಲ್ಲುತ್ತದೆ. ರನ್ನಕವಿ ಪ್ರಶಸ್ತಿಯಲ್ಲಿರುವ ಇವರ ರನ್ನನ ಶೈಲಿ ಎಂಬ ಲೇಖನ ಕನ್ನಡದ ಬೇರೆ ಬೇರೆ ಕವಿಗಳ ಶೈಲಿಯನ್ನು ವಿಮರ್ಶಿಸುವುದಕ್ಕೆ ನಾಂದಿಯಾಯಿತು. ಪಂಪ, ರನ್ನ, ಜನ್ನ, ನಾಗಚಂದ್ರ, ಹರಿಹರ, ರಾಘವಾಂಕ, ಲಕ್ಷ್ಮೀಶ, ಕನಕದಾಸ ಮೊದಲಾದ ಕನ್ನಡದ ಹಿರಿಯ ಕವಿಗಳ ಶೈಲಿಯನ್ನು ಕುರಿತು ವಿಮರ್ಶಿಸಿದ್ದಾರೆ. ಇವೆಲ್ಲ ಶೈಲಿ ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು, ಗದಾಯುದ್ಧ ನಾಟಕವನ್ನು ಕುರಿತ ವಿಮರ್ಶೆ ಈ ಮುಂತಾದ ಬಿಡಿಲೇಖನಗಳ ಸಂಗ್ರಹ ಹೊನ್ನಶೂಲ 1959ರಲ್ಲಿ ಪ್ರಕಟವಾಯಿತು. ಕಾಳಿದಾಸನ ನಾಟಕಗಳ ವಿಮರ್ಶೆ, ಪಾಶ್ಚಾತ್ಯ ಗಂಭೀರ ನಾಟಕಗಳು–ಈ ಗ್ರಂಥಗಳು ಕನ್ನಡದಲ್ಲಿ ವಿಮರ್ಶೆಯ ಹೊಸ ಕಾಣ್ಕೆಗಳನ್ನು ಮೂಡಿಸಿವೆ. ಈ ಗ್ರಂಥಗಳೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆಯಲ್ಲಿ ಪ್ರಕಟವಾಗಿರುವ ಕುಮಾರವ್ಯಾಸ, ಕುಮಾರವ್ಯಾಸವಾಣಿ, ವಿಡಂಬನೆ, ಹಾಸ್ಯ – ಈ ಕಿರುಹೊತ್ತಗೆಗಳನ್ನು ಸೇರಿಸಿಕೊಳ್ಳಬೇಕು. 1970ರಲ್ಲಿ ಪ್ರಕಟವಾದ ಇವರ ಪಾಶ್ಚಾತ್ಯ ಗಂಭೀರ ನಾಟಕಗಳು ಒಂದು ಬೃಹತ್ ಗ್ರಂಥ. ಗ್ರೀಸ್. ಇಟಲಿ, ಸ್ಪೇನ್, ಇಂಗ್ಲೆಂಡ್, ಫ್ರಾನ್ಸ್, ರಷ್ಯ, ನಾರ್ವೆ ಮುಂತಾದ ಯುರೋಪಿನ ದೇಶಗಳಲ್ಲಿ ಗಂಭೀರ ನಾಟಕಗಳು ಬೆಳೆದು ಬಂದ ಬಗೆ, ಅಲ್ಲಿನ ಮುಖ್ಯ ಗಂಭೀರನಾಟಕಕಾರರು ಮತ್ತು ಅವರ ಕೃತಿಗಳ ವಿಮರ್ಶೆಯನ್ನು ಮಾಡಿಕೊಡುವ ಈ ಗ್ರಂಥ ಪಾಶ್ಚಾತ್ಯ ಗಂಭೀರ ನಾಟಕಗಳ ವಿಶ್ವಕೋಶದಂತಿದೆ.

ರಂಗಣ್ಣನವರ ಸಾಹಿತ್ಯಕ ಚಟುವಟಿಕೆ ವಿಮರ್ಶೆಯ ಕ್ಷೇತ್ರಕ್ಕೆ ಮಾತ್ರ ಪರಿಮಿತವಾಗದೆ ಸೃಜನಾತ್ಮಕ ಸಾಹಿತ್ಯಕ್ಕೂ ಕೈಚಾಚಿದೆ. ಇವರು ಬರೆದಿರುವ ಹಲವು ನಾಟಕಗಳಲ್ಲಿ ಹರಿಶ್ಚಂದ್ರ ನಾಟಕ ಪ್ರಖ್ಯಾತವಾಗಿದೆ. ಗದಾಯುದ್ಧದಿಂದ ಶ್ರೀಯವರು ಗದಾಯುದ್ಧ ನಾಟಕವನ್ನು ಕಂಡರಿಸಿದಂತೆ, ರಂಗಣ್ಣನವರು ರಾಘವಾಂಕನ ಹರಿಶ್ಚಂದ್ರಕಾವ್ಯದಿಂದ ಹರಿಶ್ಚಂದ್ರ ನಾಟಕವನ್ನು ಸಿದ್ಧಪಡಿಸಿದ್ದಾರೆ. ಪಾಶ್ಚಾತ್ಯ ಕವಿಗಳ ಜೀವನ, ಸ್ವಭಾವ, ಚರ್ಯೆ ಮೊದಲಾದ ನಾನಾಭಾವಗಳನ್ನು ಕವಿಕಥಾಮೃತದಲ್ಲಿ (1972) ಚಿತ್ರಿಸಿದ್ದಾರೆ. ರಂಗಬಿನ್ನಪ (1963) ಇವರ ಇನ್ನೊಂದು ಗಣ್ಯಕೃತಿ. ಇಲ್ಲಿನ ವಚನಗಳು ಒಂದು ಸಾಲಿನಿಂದ ಹಿಡಿದು ಒಂದು ಪುಟಕ್ಕೂ ಮೀರಿ ಬೆಳೆಯುತ್ತ ಮಾನವಸ್ವಭಾವಗಳಾದ ಸುಖ, ದುಃಖ, ಆಶೆ, ನಿರಾಶೆ, ಮಾನ, ಅಪಮಾನ, ಕಷ್ಟಕಾರ್ಪಣ್ಯ, ಬದುಕನ್ನು ಎದುರಿಸಬೇಕೆಂಬ ಶ್ರದ್ಧೆ, ಧೈರ್ಯ, ಛಲ ಮೊದಲಾದ ನಾನಾ ಭಾವಗಳನ್ನು ಚಿತ್ರಿಸುತ್ತವೆ. ಕೋಲ್ ಕೋಲ್ ಕೂಡಿ ಬರಲಿ (1976) ಎಂಬ ಇವರ ಇನ್ನೊಂದು ಗ್ರಂಥ ಜನಪದ ಸಾಹಿತ್ಯವನ್ನು ಕುರಿತ ವಿಮರ್ಶೆಯನ್ನೂ ಇವರೇ ಸಂಗ್ರಹಿಸಿದ ಜನಪದಗೀತೆಗಳನ್ನೂ ಒಳಗೊಂಡಿದೆ.

ರಂಗಣ್ಣನವರು ಇಂಗ್ಲಿಷ್‌ನಲ್ಲೂ ಕೆಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಬಿ.ಎಂ. ಶ್ರೀಕಂಠಯ್ಯ, ದಿ ಲೇಡಿ ಅಂಡ್ ರಿಂಗ್, ಓಲ್ಡ್ ಟೇಲ್ಸ್ ರೀಟೋಲ್ಡ್, ಆನ್ ದಿ ಸೆಲ್ಫ್ ಇವು ಮುಖ್ಯವಾದವು.

ಇವರಿಗೆ ಅನೇಕ ಗೌರವ, ಪ್ರಶಸ್ತಿಗಳು ದೊರೆತಿವೆ. ಇವರು ಪ್ರಾಧ್ಯಾಪಕ ಹುದ್ದೆಯಿಂದ ನಿವೃತ್ತರಾದಾಗ ಶಿಷ್ಯರು, ಮಿತ್ರರು ಇವರಿಗೆ ಬಾಗಿನ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದರು. ಸ್ಕೌಟ್ ಸೇವೆಗಾಗಿ ಇವರಿಗೆ ರಜತ ಗಜ ಎಂಬ ಪ್ರಶಸ್ತಿ ಬಂದಿದೆ. ಇವರ ರಂಗಬಿನ್ನಪ ಎಂಬ ಕೃತಿಗೆ 1965ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಮೈಸೂರು ವಿಶ್ವವಿದ್ಯಾನಿಲಯ 1970ರಲ್ಲಿ ಇವರಿಗೆ ಗೌರವ ಡಿ.ಲಿಟ್ ಪದವಿಯನ್ನು ಕೊಟ್ಟು ಗೌರವಿಸಿದೆ. 1976ರಲ್ಲಿ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ 49ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಇವರು 1987 ಫೆಬ್ರವರಿ 17ರಂದು ಮೈಸೂರಿನಲ್ಲಿ ನಿಧನರಾದರು. (ಎಚ್.ಎಂ.ಎಸ್.)

**ರಂಗದ ಕುಣಿತ:** ಒಂದು ಪ್ರಮುಖ ಜನಪದ ನೃತ್ಯ. ಇದು ಮಂಡ್ಯ ಜಿಲ್ಲೆಯಲ್ಲಿ ವ್ಯಾಪಕವಾಗಿಯೂ ಬೆಂಗಳೂರು, ಮೈಸೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿರಳವಾಗಿಯೂ ಕಂಡುಬರುತ್ತದೆ. ಗ್ರಾಮದೇವತೆಯ ಗುಡಿಯ ಮುಂಭಾಗದ ಬಯಲೇ ಈ ಕುಣಿತದ ರಂಗಶಾಲೆ. ಈ ಕುಣಿತ ಸುಗ್ಗಿಯ ಕಾಲದಲ್ಲಿ ನಡೆಯುವುದರಿಂದ ಸುಗ್ಗಿಯಕುಣಿತವೆಂದೂ ಕರೆಯುವರು. ಒಕ್ಕಲುತನದವರಿಗೆ ಇದು ಹಿಗ್ಗಿನ ಕುಣಿತವೂ ಹೌದು. ಗ್ರಾಮದೇವತೆಯ ಹಬ್ಬ ಹದಿನೈದು ದಿನಗಳಿರುವಂತೆಯೇ ಊರಿನ ಪ್ರಮುಖರೆಲ್ಲ ಸೇರಿ ನಿಗದಿತ ದಿನವನ್ನು ನಿರ್ಧರಿಸಿ ಕುಣಿತದ ಕಾರ್ಯಕ್ರಮವನ್ನು ಯೋಜಿಸುತ್ತಾರೆ. ಹೊಳೆಯ ಬಳಿಯಿಂದ ಕಳಸ ಸಮೇತ ಅತ್ತಿಮರದ ಮೂರು ಕವಲುಗಳುಳ್ಳ ಎರಡು ಅಡಿ ಉದ್ದದ ಕೊಂಬೆಯೊಂದರ ತುಂಡನ್ನು ಪೂಜಿಸಿ ತರುವ ಕಂಬಿಕ್ಕುವ ಶಾಸ್ತ್ರಮಾಡಿ ಪೂಜೆ ಸಲ್ಲಿಸುತ್ತಾರೆ. ಈ ಶಾಸ್ತ್ರ ನಡೆಯುವುದು ಮಂಗಳವಾರ ಅಥವಾ ಶುಕ್ರವಾರ. ಕೊಂಬೆಯನ್ನು (ಕಂಬ) ಗ್ರಾಮದೇವತೆಯ ಗುಡಿಯ ಮುಂದಿರುವ ಬಲಿಗಂಬಕ್ಕೆ ಕಟ್ಟುತ್ತಾರೆ. ಕಂಬಿಕ್ಕಿದ ತರುವಾಯ ಊರಿನಲ್ಲಿ ಯಾವ ಮನೆಯಲ್ಲೂ ಯಾವುದೇ ರೀತಿಯ ಮೈಲಿಗೆ ಆಗಬಾರದು. ಒಂದು ವೇಳೆ ಆದರೆ ಅಂಥವರು ಗ್ರಾಮದ ಪ್ರಮುಖರಿಗೆ ತಿಳಿಸುವುದಲ್ಲದೆ ಬಲಿಕಂಬಕ್ಕೆ ಕಟ್ಟಿದ ಕಂಬವನ್ನು ಅಂದು ರಾತ್ರಿಯೇ ವಾದ್ಯ ಸಮೇತ ತೆಗೆದುಕೊಂಡು ಹೋಗಿ ಹೊಳೆಗೆ ಬಿಟ್ಟು ಹೊಸ ಕಂಬವನ್ನು ತಂದು ಬಲಿಗಂಬಕ್ಕೆ ಕಟ್ಟುತ್ತಾರೆ.

ರಂಗದ ಕುಣಿತದ ಹುರಿಯಾಳುಗಳು ಕಾಲಿಗೆ ಗೆಜ್ಜೆ ಕಟ್ಟಿ, ತಲೆ ಹಾಗೂ ನಡುವಿಗೆ ಚೌಕವನ್ನು ಸುತ್ತಿರುತ್ತಾರೆ. ಈ ಕುಣಿತಕ್ಕೆ ಮೇಳಗೂಡಿಸಲು ತಮಟೆ, ನಗಾರಿ, ಪಾರಚೀ (ತಾರಸಿ) ವಾದ್ಯಗಳು ಬೇಕೇಬೇಕು. ಕುಣಿಯಲು ಇಷ್ಟೇ ಜನರಿರಬೇಕೆಂಬ ನಿಯಮವೇನು ಇಲ್ಲ. ಸಾಮಾನ್ಯವಾಗಿ ಸಮಸಂಖ್ಯೆಯಲ್ಲಿ ಇರುತ್ತಾರೆ. ಕುಣಿಯುತ್ತ ಭೂ ಬಾಲರೇ, ಆಹಾ ಇತ್ಯಾದಿ ಉದ್ಗಾರ ಮಾಡುತ್ತಾರೆ. ಮೂರು, ಐದು ಅಥವಾ ಏಳು ಹೆಜ್ಜೆಗಳು ಈ ಕುಣಿತದ ವಿಶೇಷ. ಐದು ಹೆಜ್ಜೆಯ ಕುಣಿತಕ್ಕೆ ತಿರುಣಿ ಕುಣಿತ ಎನ್ನುತ್ತಾರೆ. ವೈವಿಧ್ಯಮಯ ಕುಣಿತದ ನಡುವೆ ವಿಶ್ರಾಂತಿ ತೆಗೆದುಕೊಳ್ಳುವಾಗ ಊರದೇವತೆಯನ್ನು ಕುರಿತು ಹಾಡುಗಳನ್ನು ಹೇಳುತ್ತಾರೆ. ಈ ಹಾಡುಗಳಿಗೆ ರಂಗಪದ ಎಂಬುದಾಗಿ ಕರೆಯುವರು. ಕೆಲವು ಹಾಸ್ಯ ಚಟಾಕಿಯನ್ನೂ ಹಾರಿಸುವುದುಂಟು. ರಂಗದ ಕುಣಿತ ಮಧ್ಯರಾತ್ರಿಯ ತನಕ ನಡೆಯುತ್ತದೆ. ಹಬ್ಬ ಮುಗಿದ ಬಳಿಕ ಕೊಂಡದ ಶಾಸ್ತ್ರದ ಮಾರನೆಯ ದಿನ ಕಂಬವನ್ನು ಕಳಸ, ವಾದ್ಯ ಸಮೇತ ತೆಗೆದುಕೊಂಡು ಹೋಗಿ ಹೊಳೆಗೆ ಬಿಡುವುದರೊಂದಿಗೆ ಕುಣಿತದ ಪ್ರಕ್ರಿಯೆ ಮುಕ್ತಾಯವಾಗುತ್ತದೆ. (ಎಂ.ಆರ್.ಇ.)

ನೃತ್ಯದ ಒಂದು ಮಜಲು

**ರಂಗನತಿಟ್ಟು:** ಮಂಡ್ಯಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ಕಾವೇರಿನದಿಯ ಒಂದು ಚಿಕ್ಕ ದ್ವೀಪಸಮೂಹ. ಕರ್ನಾಟಕದ ಪ್ರಸಿದ್ಧ ಪಕ್ಷಿಧಾಮ. ಮೈಸೂರು ನಗರಕ್ಕೆ ಉತ್ತರದಲ್ಲಿ ಸು.20 ಕಿಮೀ ದೂರದಲ್ಲೂ ಶ್ರೀರಂಗಪಟ್ಟಣದ ಪಶ್ಚಿಮಕ್ಕೆ ಸು. 3 ಕಿಮೀ ದೂರದಲ್ಲೂ ಮತ್ತು ಬೆಂಗಳೂರು ನಗರಕ್ಕೆ ನೈಋತ್ಯದಲ್ಲಿ ಸು. 130 ಕಿಮೀ ದೂರದಲ್ಲೂ ಇದೆ. ದ್ವೀಪ ಸಮೂಹ ಸುಮಾರು 40 ಹೆಕ್ಟೇರು ಪ್ರದೇಶವನ್ನು ಆವರಿಸಿದೆ. ಕಾವೇರಿ ನದಿ ಇಲ್ಲಿ ಇಬ್ಭಾಗವಾಗಿ ಸುಮಾರು ನಾಲ್ಕು ಫರ್ಲಾಂಗ್ ದೂರಹರಿದು ಮತ್ತೆ ಕೂಡಿಕೊಳ್ಳುತ್ತದೆ. ಈ ನದಿ ಸುತ್ತಿನ ಮಧ್ಯದಲ್ಲಿರುವ ಸುಮಾರು ಒಂದೂವರೆ ಫರ್ಲಾಂಗ್ ಅಗಲವಿರುವ ಸುಣ್ಣಕಲ್ಲಿನ ಭೂಮಿಯೇ ಇಲ್ಲಿನ ಮುಖ್ಯದ್ವೀಪ. ಈ ದ್ವೀಪದೊಳಗೆ ವಿರಳವಾಗಿ ಮರಗಿಡಗಳು ಬೆಳೆದಿವೆ. ಜನವಸತಿ ಇಲ್ಲದ ಈ ಪ್ರದೇಶ ಸುತ್ತಲೂ ಗದ್ದೆ ಬಯಲಿನಿಂದಲೂ ನದಿಯ ಎರಡು ದಂಡೆಗಳಲ್ಲೂ ಬೆಳೆದಿರುವ ಸದಾ ಹಸುರಾಗಿರುವ ವಿವಿಧ ಮರಗಿಡಗಳಿಂದಲೂ ಆವೃತವಾಗಿದೆ.

ಭಾರತದ ಪ್ರಸಿದ್ಧ ಪಕ್ಷಿವಿಜ್ಞಾನಿ ಸಲೀಂ ಅಲಿ (1896–1987) ಅವರ ಶಿಫಾರಸ್ಸಿನ ಮೇಲೆ ಈ ತಾಣ ಪಕ್ಷಿಧಾಮದ ಪಟ್ಟ ಪಡೆಯಿತು (1940). ಇಲ್ಲಿ ಪಕ್ಷಿಗಳಿಗೆ ಪ್ರಕೃತಿದತ್ತ ರಕ್ಷಣೆ ಮತ್ತು ಆಹಾರ ಎರಡೂ ಇರುವುದರಿಂದ ಪ್ರಪಂಚದ ನಾನಾ ಕಡೆಗಳಿಂದ ಇಲ್ಲಿಗೆ ಪಕ್ಷಿಗಳು ವಲಸೆ

ಬರುತ್ತವೆ. ಜುಲೈ–ಅಕ್ಟೋಬರ್ ಅವಧಿಯಲ್ಲಿ ಪಕ್ಷಿಸಂಕುಲ ಹೆಚ್ಚಾಗಿರುತ್ತದೆ. ಇದು ಪಕ್ಷಿಗಳು ಮರಿ ಮಾಡುವ ಕಾಲ. ಈ ಪಕ್ಷಿಧಾಮದಲ್ಲಿ ಗೊರವಂಕ, ಗಿಳಿ, ಚಮಚಮುಖಿ, ಬುಲ್‌ಬುಲ್, ಕಾಜಾಣ, ಗೀಜಗ, ಸೂರಕ್ಕಿ, ಚಂಬುಕುಟಿಗ, ಮೀಂಚುಳ್ಳಿ, ಗರುಡ, ನೀರುಕಾಗೆ, ಕಳ್ಳಿಪೀರ, ನವಿಲು, ಬೆಳವ, ದೇವನಹಕ್ಕಿ, ಕೌಜುಗ, ಜಂಗಲ್ ಬಾಬ್ಲರ್, ರಾಬಿನ್, ಫ್ಲೈಕ್ಯಾಚರ್, ಫ್ಲವರ್‌ಪೆಕೆರ್, ಕಪ್ಪು ಮತ್ತು ಬಿಳಿ ಐಬಿಸ್, ಕ್ರಾಸ್‌ಬಿಲ್

ಪಕ್ಷಿಧಾಮ, ಶ್ರೀರಂಗಪಟ್ಟಣ

ಮುಂತಾದ ವಿವಿಧ ಜಾತಿಯ, ಗಾತ್ರದ ಮತ್ತು ಬಣ್ಣಗಳ ಪಕ್ಷಿಗಳನ್ನು ಕಾಣಬಹುದು. ನದಿಯಲ್ಲಿ ದೊಡ್ಡ ಪ್ರವಾಹ ಬಂದಾಗ ಈ ಪಕ್ಷಿ ಸಂಕುಲ ಹಾನಿಗೊಳಗಾಗಿರುವುದುಂಟು.

ಇಲ್ಲಿಗೆ ವಲಸೆ ಬರುವ ಪಕ್ಷಿಗಳೆಂದರೆ ಕೆಲವು ಜಾತಿಯ ವರಟೆಗಳು, ಸಿಹಿ ನೀರಿನಲ್ಲಿ ಇರುವ ಟೇಲ್ಸ್ ಎಂಬ ಜಾತಿಯ ಬಾತು ಮುಂತಾದುವು. ಇವು ಮೊಟ್ಟೆ ಇಟ್ಟು ಮರಿ ಮಾಡುವ ಸ್ಥಳಗಳಾದ ಯುರೋಪ್, ಸೈಬೀರಿಯಗಳಲ್ಲಿ ಶೀತ ಕಾಲದಲ್ಲಿ ನದಿ, ಸರೋವರಗಳ ನೀರು ಹೆಪ್ಪುಗಟ್ಟುವುದರಿಂದ ಆಹಾರಾಭಾವವುಂಟಾಗುವುದರಿಂದ ಹೇರಳ ಪ್ರಮಾಣದಲ್ಲಿ ಆಹಾರ ದೊರೆಯುವ ರಂಗನತಿಟ್ಟಿಗೆ ವಲಸೆ ಬರುವುವು. ಉತ್ತರದಿಂದ ವಲಸೆ ಬರುವ ಹಕ್ಕಿಗಳಲ್ಲಿ ಪ್ರಮುಖವಾದುದು ಫ್ಲೆಮಿಂಗೊ. ಈ ಹಕ್ಕಿಗಳ ತೌರು ಕಚ್‌ನ ರಣ್ ಪ್ರದೇಶ. ಆಫ್ಘಾನಿಸ್ಥಾನದ ಉದ್ದನೆ ಬಾಲದ ಹಕ್ಕಿಯೂ ಇಲ್ಲಿಗೆ ವಲಸೆ ಬರುವುದು. ಪರ್ವತಗಳಲ್ಲಿ ವಾಸಿಸುವ ನೀಲಗೃಧ್ರಗಳೂ ಹಿಮಾಲಯದಿಂದ ರಂಗನತಿಟ್ಟಿಗೆ ವಲಸೆ ಬರುವುವು.

ರಂಗನತಿಟ್ಟು ಇಂದು ಒಂದು ಪಕ್ಷಿಸಂರಕ್ಷಣಾ ಕ್ಷೇತ್ರವಾಗಿದ್ದು ಅರಣ್ಯ ಇಲಾಖೆಯ ಮೇಲ್ವಿಚಾರಣೆಗೆ ಸೇರಿದೆ. ಇಲ್ಲಿ ಪಕ್ಷಿಬೇಟೆಯನ್ನು ನಿಷೇಧಿಸಿದೆ. ಈ ಸ್ಥಳದಲ್ಲಿ ಪಕ್ಷಿವೀಕ್ಷಣೆಗೆ ಒಂದು ಗೋಪುರ ಕಟ್ಟಲಾಗಿದೆ. ಪಕ್ಷಿವೀಕ್ಷಣೆಗೆ ನದಿಯನ್ನು ದಾಟಿ ದ್ವೀಪಗಳ ಹತ್ತಿರ ಹೋಗಲು ದೋಣಿಗಳ ಅನುಕೂಲವಿದೆ. ಉತ್ತಮ ಮಾರ್ಗ ಸಂಪರ್ಕವಿದ್ದು ಇದು ಪ್ರವಾಸಿಗರ ಆಕರ್ಷಣೆಯ ಸ್ಥಳಗಳಲ್ಲೊಂದಾಗಿದೆ. (ಜಿ.ಒ.)

**ರಂಗನಾಥ್, ಕೆ.ಎಚ್.:** 1926– . ಕರ್ನಾಟಕ ವಿಧಾನ ಸಭೆಯ ಮಾಜಿ ಅಧ್ಯಕ್ಷರು ಹಾಗೂ ಸಚಿವರು; ರಾಜಕಾರಣಿ.

ಇವರು 1926 ಅಕ್ಟೋಬರ್ 20 ರಂದು ಚಿತ್ರದುರ್ಗ ಜಿಲ್ಲೆ ಹಿರಿಯೂರಿನಲ್ಲಿ ಜನಿಸಿದರು. ತಂದೆ ಹರಿಹರಪ್ಪ, ತಾಯಿ ಸಿದ್ದಮ್ಮ. ಬಡತನದ ಬವಣೆಯಲ್ಲಿ ವಿದ್ಯಾಭ್ಯಾಸ ಮಾಡಿದ ರಂಗನಾಥ್ ಅವರು ಜಾತ್ಯಾತೀತ ಪರಿಸರದಲ್ಲಿ ಬೆಳೆಯುವ ಅವಕಾಶ ಪಡೆದರು. ವಿದ್ಯಾರ್ಥಿಯಾಗಿದ್ದಾಗ ಕ್ವಿಟ್ ಇಂಡಿಯ ಚಳವಳಿಯಲ್ಲಿ(1942) ಭಾಗವಹಿಸಿ ಸೆರೆವಾಸ ಅನುಭವಿಸಿದರು. ಆಗ ಇವರಿಗೆ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರ ನಾಯಕರ ಸಹವಾಸ ದೊರೆಯಿತು. ಮುಂದೆ ವ್ಯಾಸಂಗದ ಕಡೆ ಗಮನಹರಿಸಿ ಬಿ.ಎಸ್ಸಿ. ಮತ್ತು ಬಿ. ಎಲ್. ಪದವಿಗಳನ್ನು ಪಡೆದು ಬೆಂಗಳೂರಿನಲ್ಲಿ ವಕೀಲ ವೃತ್ತಿಯಲ್ಲಿ ತೊಡಗಿದರು. ಅಂದು ಹಿರಿಯ ವಕೀಲರಾಗಿದ್ದ ಕೆಂಚಪ್ಪನವರು ಇವರಿಗೆ ಮಾರ್ಗದರ್ಶನ ಮಾಡಿ ವೃತ್ತಿಯಲ್ಲಿ ಒಳ್ಳೆಯ ಹೆಸರು ಗಳಿಸಲು ನೆರವಾದರು.

ಸ್ವಭಾವತಃ ಸಮಾಜವಾದಿ ದೃಷ್ಟಿಕೋನ ಹೊಂದಿದ್ದ ಇವರು 1948ರ ವೇಳೆಗೆ ಸಮಾಜವಾದಿ ಪಕ್ಷದ ಸದಸ್ಯರಾಗಿದ್ದರು. ಆಗ ನಡೆದ ಕಾಗೋಡು ಸತ್ಯಾಗ್ರಹದಲ್ಲಿ (ಗೇಣಿದಾರರ ಚಳವಳಿ) ಇವರೂ ಸಕ್ರಿಯವಾಗಿ ಪಾಲ್ಗೊಂಡರು. ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ, ಅಶೋಕ ಮೆಹ್ತಾ, ನರೇಂದ್ರದೇವ ಮೊದಲಾದವರ ಸಂಪರ್ಕ ಮತ್ತು ಪ್ರಭಾವ ಇವರು ಅಪ್ಪಟ ಸಮಾಜವಾದಿಯಾಗಿ ರೂಪುಗೊಳ್ಳಲು ನೆರವಾಯಿತು. 1962ರ ವರೆಗೂ ಚುನಾವಣೆಯಿಂದ ದೂರ ಉಳಿದ ಇವರು ತಮ್ಮ ವಕೀಲ ವೃತ್ತಿಯಲ್ಲಿ ಹೆಚ್ಚಿನ ಯಶಸ್ಸು ಸಾಧಿಸಿದರು. ಬೆಂಗಳೂರಿನ ಗಾಂಧಿನಗರದಲ್ಲಿ ಸರಳವಾಗಿ ಜೀವಿಸುತ್ತಿದ್ದ ಇವರು ಸಮಾಜವಾದಿ ಪಕ್ಷದಲ್ಲಿ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದರು. 1962ರ ಸಾರ್ವತ್ರಿಕ ಚುನಾವಣೆಯಲ್ಲಿ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಕ್ಷೇತ್ರ ಪ್ರಥಮಬಾರಿಗೆ ಏಕಸದಸ ಮೀಸಲು ಕ್ಷೇತ್ರವಾಗಿ ಮಾರ್ಪಟ್ಟಿತ್ತು. ಆಗ ಜಿಲ್ಲೆಯ ಸಮಾಜವಾದಿ ಗೆಳೆಯರ ಒತ್ತಾಸೆಯ ಮೇರೆಗೆ ಮೂಡಿಗೆರೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಜಯಶೀಲರಾದರು. ವಿದಾನಸಭಾ ಸದಸ್ಯರಾಗಿ ಒಳ್ಳೆಯ ಹೆಸರು ಮಾಡಿದ ಇವರು ತಮ್ಮ ಸಜ್ಜನಿಕೆ, ಸಂಭಾವಿತತನ ಹಾಗೂ ತಾಳ್ಮೆಯ ಗುಣಗಳಿಂದ ಜನಪ್ರಿಯರಾದರು 1967ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಅದೇ ಕ್ಷೇತ್ರದಿಂದ ಪುನರಾಯ್ಕೆಯಾದರು. ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ

ರಾಜ್ಯಮಟ್ಟದಲ್ಲಿ ಸೇವೆಸಲ್ಲಿಸಿ ಅನುಭವ ಪಡೆದರು.

1969ರ ರಾಜಕೀಯ ಸ್ಥಿತ್ಯಂತರದಲ್ಲಿ ಇಂದಿರಾ ಗಾಂಧಿ ನೇತೃತ್ವದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. 1972ರ ಚುನಾವಣೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದರು (1972–74). 1973ರಲ್ಲಿ ರಾಜ್ಯ ಸರ್ಕಾರದ ಸಂಪುಟ ಸಚಿವರಾದರು. ಮುಂದೆ ಸಾರಿಗೆ, ಸಹಕಾರ, ಗೃಹ, ಸಂಸದೀಯ ವ್ಯವಹಾರಗಳು ಮೊದಲಾದ ವಿವಿಧ ಖಾತೆಗಳನ್ನು ನಿರ್ವಹಿಸಿದರು. ಎಲ್ಲರೊಂದಿಗೂ ಹೊಂದಿಕೊಂಡು ಹೋಗುವ ಗುಣದಿಂದಾಗಿ ಇವರು ತಮ್ಮ ಜವಾಬ್ದಾರಿಯನ್ನು ಸಾರ್ಥಕವಾಗಿ ನಿರ್ವಹಿಸಲು ಸಾಧ್ಯವಾಯಿತು. ಹಿರಿಯೂರು ಕ್ಷೇತ್ರದಿಂದ ಪುನರಾಯ್ಕೆಯಾದ ಇವರು 1981–83ರ ತನಕ ವಿಧಾನಸಭೆಯ ಸಭಾಧ್ಯಕ್ಷರಾಗಿದ್ದರು. 1984ರಲ್ಲಿ ಸಾಮಾನ್ಯ ಕ್ಷೇತ್ರದಿಂದ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು ಬಂದರು. 1989ರಲ್ಲಿ ಮತ್ತೆ ಹಿರಿಯೂರು ವಿಧಾನಸಭಾ ಕ್ಷೇತ್ರದಿಂದ

ಚುನಾಯಿತರಾಗಿ ಕೃಷಿ, ತೋಟಗಾರಿಕೆ ಸೇರಿದಂತೆ ವಿವಿಧ ಖಾತೆಗಳನ್ನು ನಿರ್ವಹಿಸಿದರು. 1999ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಇವರು ತಮ್ಮ ಸಹಪಾಠಿ ಎಸ್.ಎಂ. ಕೃಷ್ಣ ಅವರ ಸಂಪುಟದಲ್ಲಿ ಅರಣ್ಯ ಸಚಿವರಾಗಿ ಸೇವೆ ಸಲ್ಲಿಸಿದರು. ಯಾವುದೇ ಕಾರ್ಯದಲ್ಲಿ ಇವರು ಕಾನೂನು ಕಟ್ಟಳೆಗಳಿಗೆ ಮೊದಲ ಮನ್ನಣೆ ನೀಡುತ್ತಿದ್ದರು. ದೇಶವಿದೇಶಗಳಲ್ಲಿ (ಅಮೆರಿಕ, ಜಪಾನ್ ಮೊದಲಾದವು) ಪ್ರವಾಸ ಮಾಡಿದ್ದಾರೆ. ಇವರ ಪತ್ನಿ ಲಲಿತಮ್ಮ. **(ಎಸ್.ಎನ್.ಜಿ.)**

**ರಂಗಭೂಮಿ:** ಕನ್ನಡ ರಂಗಭೂಮಿಯ ಇತಿಹಾಸವನ್ನು ಗಮನಿಸಿದರೆ ಅದು ಜನಪದ ರಂಗಭೂಮಿ **(ನೋಡಿ)**, ಆಸ್ಥಾನ ರಂಗಭೂಮಿ ಎಂಬ ಎರಡು ನೆಲೆಗಟ್ಟಿನಲ್ಲಿ ಬೆಳೆದು ಬಂದಿರುವುದು ಸ್ಪಷ್ಟಪಡುತ್ತದೆ.

**ಆಸ್ಥಾನ ರಂಗಭೂಮಿ:** ಇದು ರಾಜಾಶ್ರಯದಲ್ಲಿ ಬೆಳೆದು ಬಂತು. ಇಲ್ಲಿ ಸಂಗೀತ, ನೃತ್ಯ, ನೃತ್ಯರೂಪಕಗಳಿಗೆ ಪ್ರಾಶಸ್ತ್ಯ. ಪ್ರಾಚೀನಕಾಲದಿಂದಲೂ ಕನ್ನಡ ದೊರೆಗಳು ರಂಗಭೂಮಿಗೆ ಆಶ್ರಯದಾತರಾಗಿದ್ದರು. ಧಾರವಾಡ ಬಳಿಯ ಮಗುಂದ ಶಾಸನದಲ್ಲಿ (1045) ನಾಟಕಶಾಲೆಯನ್ನು ಕಟ್ಟಿಸಿದ ಪ್ರಸ್ತಾಪ, ಭರತೇಶವೈಭವದಲ್ಲಿನ (ಸು. 1577) ಶೃಂಗಾರಮಯ ನಾಟಕ ಶಾಲೆಗಳ ವರ್ಣನೆ, ಕೆಳದಿಯ ವೆಂಕಟಪ್ಪನಾಯಕ (ಸು. 1600) ಇಕ್ಕೇರಿ ಅರಮನೆಯಲ್ಲಿ ನಾಟಕಶಾಲೆ ಕಟ್ಟಿಸಿದನೆಂಬ ಲಿಂಗಣ್ಣಕವಿಯ ಕೆಳದಿ ನೃಪವಿಜಯದ ಹೇಳಿಕೆ, ಕೃಷ್ಣದೇವರಾಯನ ರಾಜಧಾನಿಯಲ್ಲಿ ಪಟ್ಟದ ನಾಟಕಶಾಲೆಗಳಿದ್ದುವೆಂಬ ಇತಿಹಾಸಕಾರರ ಅಭಿಪ್ರಾಯ, ಮೈಸೂರಿನ ಒಂದನೆಯ ಕಂಠೀರವ ನರಸರಾಜ ಒಡೆಯರ್ ಅವರ (1638–59) ಅರಮನೆಯಲ್ಲಿದ್ದ ನಾಟಕಶಾಲೆಯ ಬಗ್ಗೆ ಗೋವಿಂದವೈದ್ಯನ ಕಾವ್ಯಸಾಕ್ಷ್ಯ–ಇವು ಆಸ್ಥಾನ ರಂಗಭೂಮಿಯ ಅಸ್ತಿತ್ವದ ಸಾತತ್ಯವನ್ನು ಸಾರುತ್ತವೆ. ಪಂಪನ ಆದಿಪುರಾಣದಲ್ಲಿನ ಐಂದ್ರನಾಟಕ ವಿಧಿಯ ಪ್ರಸ್ತಾಪ, ಪೊನ್ನನ ಶಾಂತಿ ಪುರಾಣದಲ್ಲಿ ಬಳಸಿರುವ ನಾಟಕ ಲಕ್ಷಣಗಳ ರೂಪಕ, ಕವಿರಾಜಮಾರ್ಗದಲ್ಲಿ ನಾಟಕದ ಬಗ್ಗೆ ಉಲ್ಲೇಖ, ಕಾಮದೇವ, ದುರ್ಗಸಿಂಹ, ಭೀಮಕವಿ, ಕುಮಾರವ್ಯಾಸ ಮೊದಲಾದವರ ಸಾಹಿತ್ಯ ಕೃತಿಗಳಲ್ಲಿ ಅಲ್ಲಲ್ಲಿ ಬರುವ ಉಲ್ಲೇಖಗಳು– ಇವುಗಳಿಂದ ಕನ್ನಡದಲ್ಲಿ ನಾಟಕದ ಅಸ್ತಿತ್ವ ಇದ್ದದ್ದು ವಿದಿತವಾಗುತ್ತದೆ. ನಾಟಕ ಎನ್ನುವ ಪದ ನೃತ್ಯ ಎನ್ನುವುದಕ್ಕೆ ಸಂವಾದಿಯಾಗಿಯೂ ಬಳಕೆಯಾಗುತ್ತಿತ್ತು. ಬಹುಪಾಲು ಕಥಾನೃತ್ಯಗಳನ್ನೇ ನಾಟಕಗಳೆಂದು ಕರೆಯುತ್ತಿದ್ದರು. ರಾಜಾಸ್ಥಾನ ನಾಟಕಶಾಲೆಗಳಲ್ಲಿ ಇಂಥ ನೃತ್ಯ ಪ್ರದರ್ಶನಗಳೇ ಅಧಿಕವಾಗಿರುತ್ತಿದ್ದುವು. ಗದ್ಯದಲ್ಲಿ ಸಂಭಾಷಣೆಯನ್ನು ಒಳಗೊಂಡ ನಾಟಕಗಳೇ ಅಂದು ಪ್ರದರ್ಶನವಾಗುತ್ತಿರಲಿಲ್ಲವೇ ಎನ್ನುವುದಕ್ಕೆ ಖಚಿತ ಉತ್ತರವಿಲ್ಲ. ಸಂಸ್ಕೃತದಲ್ಲಿ ಹೇರಳವಾಗಿ ಇಂಥ ನಾಟಕಗಳಿದ್ದುದರಿಂದ ಇವು ರಂಗಪ್ರಯೋಗಗಳನ್ನು ಕಂಡಿದ್ದವಾದುದರಿಂದ, ಕನ್ನಡ ರಾಜರ ರಸಿಕತೆಗೆ ಸಾಕ್ಷಿಯಾಗಿ, ಇವುಗಳನ್ನು ಆಡುವುದು, ಆಡಿಸುವುದು ಪ್ರತಿಷ್ಠೆಯ ಮಾತಾಗಿದ್ದುದರಿಂದ ಅವರ ಅರಮನೆಯ ನಾಟಕಶಾಲೆಗಳಲ್ಲಿ ಸಂಸ್ಕೃತ ನಾಟಕಗಳ ಪ್ರದರ್ಶನಗಳನ್ನು ಕಂಡಿದ್ದರೆ ಆಶ್ಚರ್ಯವಿಲ್ಲ. ವಿಜಯನಗರದ ಕೃಷ್ಣದೇವರಾಯನ ಹೆಸರಿನಲ್ಲಿ ಸಂಸ್ಕೃತದಲ್ಲಿ ರಚಿತವಾದ ಜಾಂಬವತೀ ಕಲ್ಯಾಣನಾಟಕ ವಿರೂಪಾಕ್ಷದೇವರ ಚೈತ್ರೋತ್ಸವ ಸಂದರ್ಭದಲ್ಲಿ ಪ್ರದರ್ಶನ ಕಂಡ ಉಲ್ಲೇಖವಿದೆ. ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ ಕನ್ನಡ ಆಸ್ಥಾನ ಕವಿಗಳು ಹೇರಳವಾಗಿದ್ದಿರಬೇಕು. ನಾಗವರ್ಮನ ಕಾವ್ಯಾವಲೋಕನದಲ್ಲಿ, ಜಯಕೀರ್ತಿಯ ಛಂದೋನುಶಾಸನದಲ್ಲಿ, ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿ ಇದಕ್ಕೆ ಆಧಾರಗಳಿವೆ. ಈ ಅನುವಾದಗಳ ಉದ್ದೇಶ ಸೀಮಿತವಾಗಿದ್ದು, ಜನಸಾಮಾನ್ಯರನ್ನು ಮುಟ್ಟಿ ಪ್ರಚುರವಾಗುತ್ತಿರಲಿಲ್ಲ. ಸು. 1680ರಲ್ಲಿ ರಚಿತವಾದ ಮಿತ್ರವಿಂದಾ ಗೋವಿಂದ ಉಪಲಬ್ಧ ಪ್ರಾಚೀನ ನಾಟಕ. ಶ್ರೀಹರ್ಷನ ರತ್ನಾವಳೀ ಸಂಸ್ಕೃತ ನಾಟಕವನ್ನು ಕನ್ನಡಕ್ಕೆ ತಂದವನು ಸಿಂಗರಾರ್ಯ. ಈ ನಾಟಕ ರಂಗಪ್ರಯೋಗವಾಗಿತ್ತೆ ಇಲ್ಲವೇ ಎನ್ನುವುದು ಖಚಿತವಿಲ್ಲ. ದೊರೆತ ಮೊದಲ ನಾಟಕ ಇದೆಂದು ರಂಗಭೂಮಿಯ ಇತಿಹಾಸವನ್ನು ಇಲ್ಲಿಂದಲೇ ಆರಂಭಿಸಲಾಗುತ್ತದೆ. ಆದರೆ ನಾಟಕ ಸಾಹಿತ್ಯದ ಇತಿಹಾಸವೇ ಬೇರೆ, ರಂಗಭೂಮಿಯ ಇತಿಹಾಸವೇ ಬೇರೆ. ನಾಟಕ ಸಾಹಿತ್ಯ ಸಮೃದ್ಧವಾಗಿದೆ ಎಂದರೆ ರಂಗಭೂಮಿ ಉಚ್ಛ್ರಾಯಾವಸ್ಥೆಯಲ್ಲಿದೆ ಎಂದೂ ನಾಟಕಗಳೇ ದೊರೆಯಲಿಲ್ಲ ಎಂದರೆ ರಂಗಭೂಮಿಯ ಕಥೆ ಶೂನ್ಯವೆಂದೂ ಅಲ್ಲ. ಕನ್ನಡ ರಂಗಭೂಮಿಯ ಇತಿಹಾಸವನ್ನು ಗಮನಿಸುವಾಗ ಸಂಸ್ಕೃತನಾಟಕದ ಸಿರಿಯನ್ನು ಹಿನ್ನೆಲೆಯಲ್ಲಿಟ್ಟುಕೊಂಡರೆ ಕೆಲವು ತಪ್ಪು ತೀರ್ಮಾನಗಳಿಗೆ ಎಡೆ ನೀಡುತ್ತದೆ. ಆಸ್ಥಾನ ರಂಗಭೂಮಿಗೆ ಮಾತ್ರ ಶಿಷ್ಟ ನಾಟಕಗಳು ಮೀಸಲಾಗಿದ್ದುವು. ಆಸ್ಥಾನ ರಂಗಸ್ಥಳದಲ್ಲಿ ವಿರಳವಾಗಿ ಜನಪದ ಮೇಳಗಳಿಗೂ ಅವಕಾಶ ವೀಯುತ್ತಿದ್ದರು. 1812ರಲ್ಲಿ ಧರ್ಮಸ್ಥಳದ ಯಕ್ಷಗಾನ ಮೇಳವೊಂದು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಮೇಳ ಕಟ್ಟಿತ್ತು. ಕರ್ನಾಟಕದ ಕೊನೆಯ ರಾಜ ಪರಂಪರೆಯವರಾದ ಮೈಸೂರರಸರ ಆಸ್ಥಾನ ರಂಗಭೂಮಿಯೇ ಹಳೆಯ ಮೈಸೂರು ಸಂಸ್ಥಾನದಲ್ಲಿ ವೃತ್ತಿರಂಗ ಭೂಮಿಯ ಉಗಮಕ್ಕೆ ಮೂಲಕಾರಣವಾಯಿತು ಎನ್ನುವುದು ಗಮನಾರ್ಹ ಅಂಶ.

ಗುಣಮುಖ ನಾಟಕದ ಒಂದು ದೃಶ್ಯ

**ವೃತ್ತಿರಂಗಭೂಮಿ:** ಹತ್ತೊಂಬತ್ತನೆಯ ಶತಮಾನದ ಕೊನೆಯ ಹಂತದಲ್ಲಿ ಚರ್ವಿತ ಚರ್ವಣವಾಗಿದ್ದ ಕನ್ನಡ ರಂಗಭೂಮಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನುಂಟು ಮಾಡಿದ ಹೊಸಗಾಳಿ ಬೀಸತೊಡಗಿತು. ಅದರ ಫಲವಾಗಿ ವೃತ್ತಿ ರಂಗಭೂಮಿ ಕಾಣಿಸಿಕೊಂಡಿತು. ಪ್ರಧಾನವಾಗಿ ಮಧ್ಯಮವರ್ಗದ ಜನತೆಗೆ ಮನರಂಜನೆ ನೀಡುವ ಮೂಲಕ, ಆರ್ಥಿಕ ಲಾಭ ಸಂಪಾದನೆಗೆ ಈ ರಂಗಭೂಮಿ ಮಾಧ್ಯಮವಾಯಿತು. ಜನಪದ ರಂಗದ ಧ್ಯೇಯಗಳಾದ ದೈವಾರಾಧನೆ, ನೀತಿಬೋಧೆ ಮತ್ತು ಆಸ್ಥಾನ ರಂಗದ ಉದ್ದೇಶಗಳಾದ ಕಲಾಪ್ರೌಢಿಮೆ, ಕಲಾರಸಿಕತೆ, ಕಲಾಪ್ರತಿಷ್ಠೆಗಳಿಂದ ಭಿನ್ನವಾಗಿ ಮನರಂಜನೆ, ಹಣಸಂಪಾದನೆಯೇ ಗುರಿಯಾದ ವೃತ್ತಿರಂಗ ಭೂಮಿ ಅದಕ್ಕೆ ಅನುಗುಣವಾಗಿ ನಾಟಕ ವಿಧಾನವನ್ನು ರೂಪಿಸಿಕೊಳ್ಳ ಬೇಕಾಯಿತು. ಕಥಾವಸ್ತು, ಪ್ರಯೋಗತಂತ್ರ, ನಿರೂಪಣಾಶೈಲಿ, ವೇಷ ಭೂಷಣ, ರಂಗಾಲಂಕಾರ, ರಂಗಸಂಗೀತ, ಅಭಿನಯಗಳಲ್ಲಿ ಹೊಸಹೊಸ ಸಂಪ್ರದಾಯಗಳು ರೂಪುಗೊಂಡವು. ನಟನೆಯೇ ವೃತ್ತಿಯಾದ ನಟನಟಿ ಯರುಳ್ಳ ಮಂಡಳಿಗಳು ಹುಟ್ಟಿಕೊಂಡು ಊರೂರು ಪ್ರವಾಸ ಮಾಡುತ್ತ, ಅಲ್ಲಲ್ಲಿ ತಾತ್ಕಾಲಿಕ ರಂಗಮಂದಿರಗಳನ್ನು ನಿರ್ಮಿಸಿಕೊಂಡು, ಹೊಸ ನಾಟಕಗಳನ್ನು ಬರೆಸಿಕೊಂಡು, ರಂಗಸಜ್ಜಿಕೆಯಲ್ಲಿ ನಾವೀನ್ಯವನ್ನು ತಂದು ಕೊಂಡ ಜನರನ್ನು ರಂಜಿಸತೊಡಗಿದವು. ಮುಂದೆ ಕಂಪನಿ ನಾಟಕಗಳ ಯುಗ ಆರಂಭವಾಯಿತು.

ವಿದೇಶಿ ಪ್ರಭಾವದಿಂದ ಸು. 1775ರಷ್ಟು ಹಿಂದೆಯೇ ಭಾರತದಲ್ಲಿ ವೃತ್ತಿರಂಗ ಭೂಮಿಯ ಆಗಮನವಾಗಿತ್ತು. ಆದರೆ ಅವುಗಳ ವ್ಯಾಪ್ತಿ ಕಲ್ಕತ್ತ ಹಾಗೂ ಮುಂಬಯಿ ಪ್ರಾಂತ್ಯಗಳಿಗೆ ಮಾತ್ರ ಸೀಮಿತವಾಗಿತ್ತು. ಕಾಲಕ್ರಮೇಣ ಮಹಾರಾಷ್ಟ್ರದಲ್ಲಿ ಅನೇಕ ಪಾರಸೀ ಕಂಪನಿಗಳು, ಮರಾಠಿ ಕಂಪನಿಗಳು ಹುಟ್ಟಿಕೊಂಡು ಜನಪ್ರಿಯವಾದುವು. ಈ ವೃತ್ತಿಸಂಸ್ಥೆಗಳು ನೆರೆಯ ಕರ್ನಾಟಕಕ್ಕೂ ಪದೇ ಪದೇ ಭೇಟಿ ನೀಡಿ ಪ್ರದರ್ಶನಗಳನ್ನು ನೀಡುತ್ತಿದ್ದವು. ಅದ್ದೂರಿಯ ರಂಗಸಜ್ಜಿಕೆ, ಕಣ್ಣುಕುಕ್ಕುವ ಬೆಳಕಿನ ವ್ಯವಸ್ಥೆ, ಅಪ್ಯಾಯಮಾನ ವೇಷಭೂಷಣಗಳನ್ನೊಳಗೊಂಡ ಈ ವೃತ್ತಿನಾಟಕಗಳನ್ನು ಕಂಡ ಕನ್ನಡ ಜನ ಅವಕ್ಕೆ ಮಾರುಹೋದರು; ಅಲ್ಲದೆ ಅವುಗಳನ್ನು ಅನುಕರಿಸಲಾರಂಭಿಸಿದರು. ಈ ಮರಾಠಿ ವೃತ್ತಿರಂಗ ಭೂಮಿಯ ಪ್ರಭಾವ ಕನ್ನಡ ವೃತ್ತಿರಂಗದ ಉಗಮಕ್ಕೆ ನಾಂದಿಯಾಯಿತು.



ಹಿಪ್ಪೋಲಿಟಸ್ ನಾಟಕದ ಒಂದು ದೃಶ್ಯ

ಕರ್ನಾಟಕದ ಎರಡು ಭಾಗಗಳಲ್ಲಿ ವೃತ್ತಿರಂಗಭೂಮಿ ಸ್ವತಂತ್ರವಾಗಿ ವಿಕಸಿಸಿತು. ಉತ್ತರ ಕರ್ನಾಟಕದಲ್ಲಿ ಹಾಗೂ ಮೈಸೂರು ಸಂಸ್ಥಾನದಲ್ಲಿ ಪ್ರಮುಖವಾಗಿ ವೃತ್ತಿರಂಗದ ಬೆಳವಣಿಗೆಗಳನ್ನು ಕಾಣಬಹುದು.

**ಉತ್ತರ ಕರ್ನಾಟಕದಲ್ಲಿ:** ಶಾಂತಕವಿಗಳೆಂದು ಖ್ಯಾತರಾದ ಬಾಳಾಚಾರ್ಯ ಗೋಪಾಳಾಚಾರ್ಯ ಸಕ್ಕರಿಯವರ ನೇತೃತ್ವದಲ್ಲಿ ಗದುಗಿನಲ್ಲಿ 1874ರಲ್ಲಿ ಸ್ಥಾಪಿತವಾದ ಶ್ರೀ ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿಯೇ ಕನ್ನಡದ ಪ್ರಪ್ರಥಮ ವೃತ್ತಿ ನಾಟಕ ಕಂಪನಿ. ಮರಾಠಿ ಕಂಪನಿಗಳ ಪ್ರಭಾವವನ್ನು ಕುಗ್ಗಿಸುವ, ಮರಾಠಿ ನಾಟಕ ಪ್ರಭಾವವನ್ನು ಅಡಗಿಸುವ, ಕನ್ನಡತನವನ್ನು ಎತ್ತಿಹಿಡಿಯುವ ಉದ್ದೇಶದಿಂದ ಈ ಕಂಪನಿ ತಲೆ ಎತ್ತಿತ್ತು. ಮರಾಠಿ ರಂಗದ ಎಲ್ಲ ಹೊಸ ತಂತ್ರಗಳನ್ನು ಅಳವಡಿಸಿಕೊಂಡು ಯಕ್ಷಗಾನ ಜನಪದ ಕಥಾವಸ್ತುವನ್ನು ರಂಗಕ್ಕೆ ತರುವ ಯತ್ನ ಮಾಡಲಾಯಿತು. ಶಾಂತಕವಿಯವರೇ ರಚಿಸಿದ ಉಷಾಹರಣ ಇವರ ಮೊದಲ ನಾಟಕ. ಶ್ರೀಯಾಳ ಸತ್ತ್ವಪರೀಕ್ಷೆ, ಸುಂದೋಪಸುಂದರ ವಧೆ, ಕೀಚಕವಧೆ, ಸುಧನ್ವವಧಾ, ಸೀತಾರಣ್ಯಪ್ರವೇಶ ಮೊದಲಾದ ಕನ್ನಡ ನಾಟಕಗಳು ರಂಗವೇರಿದವು. ಈ ಮಂಡಳಿಯಲ್ಲಿ ಹೆಸರು ಮಾಡಿದ ನಟರೆಂದರೆ ಗುಡಿ ರಾಘವೇಂದ್ರಚಾರ್ಯ, ನಾಯಕಿ ಪಾತ್ರದ ಡಂಬಳ ಹುಚ್ಚಾಚಾರ್ಯ, ವಿದೂಷಕ ಪಾತ್ರದ ಬಾದಾಮಿ ಪುಟ್ಟಾಚಾರ್ಯ, ಪ್ರಯೋಗತಂತ್ರ ಯಕ್ಷಗಾನ ರೀತಿಯದಾದರೂ ರಂಗಸಜ್ಜಿಕೆ, ವೇಷಭೂಷಣ, ದೀಪವ್ಯವಸ್ಥೆಗಳು ಹೊಸ ಬಗೆಯವಾಗಿ, ಜನಪದ ಹಾಗೂ ಶಿಷ್ಟ ರಂಗಭೂಮಿಯ ಸಮನ್ವಯತೆಯನ್ನು ಇಲ್ಲಿ ಕಾಣಬಹುದು. ಹದಿನಾರು ವರ್ಷಗಳ ಕಾಲ ಮೆರೆದ ಈ ಕಂಪನಿಯ ಸ್ಥಾಪಕರಾದ ಶಾಂತಕವಿಗಳು ಕರ್ನಾಟಕ ನಾಟಕ ಪಿತಾಮಹ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಕೃತಪುರ ನಾಟಕ ಮಂಡಳಿಯಿಂದ ಪ್ರಚೋದಿತರಾಗಿ ಉತ್ತರ ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿ ನಾಟಕ ಕಂಪನಿಗಳು ಹುಟ್ಟಿಕೊಂಡವು. ಧಾರವಾಡ, ರಾಣೆಬೆನ್ನೂರು, ಹಿರೇಕೆರೂರು, ಹುಬ್ಬಳ್ಳಿ, ಲಕ್ಷ್ಮೇಶ್ವರ, ನವಲಗುಂದ, ಬಾದಾಮಿ, ರಬಕವಿ ಮೊದಲಾದ ಕೇಂದ್ರಗಳಲ್ಲಿ ಉಗಮಗೊಂಡ ಕಂಪನಿಗಳು ಜನಪ್ರಿಯವಾಗಿ ಮಹಾರಾಷ್ಟ್ರ, ಆಂಧ್ರಗಳಿಗೂ ಪ್ರವಾಸ ಹೋಗತೊಡಗಿದವು.

ಅವಲಗಟ್ಟಿ ವೆಂಕಣ್ಣಾಚಾರ್ ನೇತೃತ್ವದ ಹಲಸಿಗಿ ನಾಟಕ ಸಂಘವೇ ಮೊದಲ ಕನ್ನಡ ನಾಟಕ ಕಂಪನಿ ಎನ್ನುವವರೂ ಇದ್ದಾರೆ. 1878ರಲ್ಲಿ ಹುಟ್ಟಿಕೊಂಡ ಈ ಕಂಪನಿಯ ಜನಪ್ರಿಯ ನಾಟಕ ವಿರಾಟಪರ್ವ ಶ್ರೀನಿವಾಸ ಕವಿಗಳೆಂಬ ಅಭಿದಾನದಿಂದ ವೆಂಕಣ್ಣಾಚಾರ್ ರಚಿಸಿದ ಶ್ರೀಮತಿ ಪರಿಣಯ, ಮದಾಲಸ ಪರಿಣಯ, ದ್ರೌಪದಿವಸ್ತ್ರಾಪಹರಣ, ಬಾಣಾಸುರವಧೆ ಮೊದಲಾದ ನಾಟಕಗಳನ್ನು ಈ ಕಂಪನಿ ಅಭಿನಯಿಸುತ್ತಿತ್ತು. ಸಂಸ್ಕೃತ–ಕನ್ನಡ ಸಾಹಿತ್ಯಗಳಲ್ಲಿ ಪರಿಣತರಾಗಿದ್ದ, ಕಾವ್ಯವಾಚನ ಕಲೆಯಲ್ಲಿ ನಿಷ್ಣಾತರಾಗಿದ್ದ ಕಲಾವಿದರ ತಂಡವಿದ್ದ ಕಂಪನಿ ಇದು. ತನ್ನ ಪ್ರವಚನಗಳಿಗೇ ಪ್ರಸಿದ್ಧವಾಗಿದ್ದ ಈ ಕಂಪನಿ 1886ರವರೆಗೆ ಜೀವಂತವಾಗಿತ್ತು.

ನೆರೆಯ ರಾಜ್ಯಗಳಲ್ಲಿ ಪ್ರವಾಸಮಾಡಿದ ಮೊದಲ ಮಂಡಳಿಯೆಂದರೆ 1886ರಲ್ಲಿ ಹುಟ್ಟಿದ ಧಾರವಾಡದ ತಂತುಪುರಸ್ಥ ನಾಟಕಮಂಡಳಿ. ಈ ಕಂಪನಿಯಲ್ಲಿ ಭೀಮಾಚಾರ್ಯವರಿ, ಗೋಪಿನಾಥರಾವ್ ಜೋಶಿ, ರಾಮಚಂದ್ರಭಾವು, ದತ್ತಾತ್ರೇಯರಾವ್ ಮೊದಲಾದ ಹೆಸರಾಂತ ನಟರಿದ್ದರು. ಮಹಾರಾಷ್ಟ್ರದಲ್ಲಿ ಮರಾಠಿ ನಾಟಕಗಳನ್ನು, ಆಂಧ್ರದಲ್ಲಿ ತೆಲುಗು ನಾಟಕಗಳನ್ನು ಆಡಬಲ್ಲವರಾಗಿದ್ದುದು ಇವರ ವೈಶಿಷ್ಟ್ಯ.

1885ರಲ್ಲಿ ಉತ್ತರ ಕರ್ನಾಟಕದಲ್ಲಿ ರೈಲುಮಾರ್ಗಗಳ ಪ್ರವೇಶವಾಗತೊಡಗಿ ಆಕರ್ಷಕ ಉದ್ಯೋಗಾವಕಾಶಗಳ ದಾರಿ ತೆರೆದಿದ್ದುದರಿಂದ ನಾಟಕ ಮಂಡಳಿಗಳು ಕುಸಿಯತೊಡಗಿದವು. ಮಂಡಳಿಗಳೊಳಗಿನ ವೈಮನಸ್ಯಗಳೂ ಈ ಕುಸಿಯುವಿಕೆಗೆ ಚಾಲನೆ ನೀಡಿದವು. 1893ರಲ್ಲಿ ಉತ್ತರ ಕರ್ನಾಟಕಕ್ಕೆ ಪ್ರವಾಸ ಬಂದ ಮರಾಠರ ಅದ್ದೂರಿಯ ಕಿರ್ಲೋಸ್ಕರ ನಾಟಕ ಮಂಡಳಿ ತನ್ನ ಉತ್ಕೃಷ್ಟ ಗಾಯನ, ಅಭಿನಯ, ರಂಗಸಜ್ಜಿಕೆಗಳಿಂದ ಮತ್ತೆ ಕನ್ನಡ ರಂಗಭೂಮಿಗೆ ಚೇತನ ತುಂಬುವ ಕೆಲಸಮಾಡಿತು. ಧಾರವಾಡದ ಯುವಕ ಕಲಾವಿದರು ಸೇರಿ ಹಿಂದೂ ಯೂನಿಯನ್ ಕ್ಲಬ್ಬಿನ ಉಗಮವಾಯಿತು. ಷೇಕ್ಸ್‌ಪಿಯರನ ಟೇಮಿಂಗ್ ಆಫ್ ದಿ ಶ್ರ್ಯೂ ನಾಟಕದ ಮರಾಠಿ ಅವತರಣಿಕೆ 'ತ್ರಾಟಿಕಾ' ಇವರ ಮೊದಲ ಪ್ರಯೋಗ. ಗಣಪತರಾವ್ ಜೋಷಿ, ಬಳವಂತರಾವ್ ಜೋಗ್ ಮೊದಲಾದ ಪ್ರತಿಭಾವಂತ ಕಲಾವಿದರು ಈ ಮಂಡಳಿಯ ವರ್ಚಸ್ಸನ್ನು ಹೆಚ್ಚಿಸಿದರು. ರಾಣಾ ಭೀಮದೇವ್, ನರವೀರ ಮಾಲುಸರೆ ಎಂಬ ಇನ್ನೆರಡು ಮರಾಠಿ ನಾಟಕ

ಗಳು ಇವರವು. ಬಿಜಾಪುರದಲ್ಲಿ ಕೌಜಲಗಿ ಶ್ರೀನಿವಾಸರಾವ್, ಮುಗಳಿ ಶ್ರೀನಿವಾಸರಾವ್ ಮತ್ತಿತರರು ಮಂಡಳಿಯೊಂದನ್ನು ಕಟ್ಟಿ ಮರಾಠಿ ನಾಟಕಗಳನ್ನು ಆಡತೊಡಗಿದರು. ಹಾಗಾಗಿ ಕನ್ನಡ ರಂಗಭೂಮಿಯಲ್ಲಿ ಮರಾಠಿ ನಾಟಕಗಳೇ ಜನಪ್ರಿಯವಾಗತೊಡಗಿದವು. ಇದನ್ನು ತಡೆಗಟ್ಟಲು ಧಾರವಾಡ ತಾಲ್ಲೂಕಿನ ಮದಿಹಾಳ ಗ್ರಾಮದಲ್ಲಿ 1896ರಿಂದಲೂ ಅಸ್ತಿತ್ವದಲ್ಲಿದ್ದ ಪ್ರಾಚ್ಯ ಕ್ರೀಡಾ ಸಂವರ್ಧಕ ಮಂಡಳಿ ಪುನರ್ ವ್ಯವಸ್ಥೆಗೊಂಡು 1904ರಲ್ಲಿ ಭರತ ಕಲೋತ್ತೇಜಕ ಸಂಗೀತ ಸಮಾಜ ಎಂದಾಗಿ ಕನ್ನಡ ನಾಟಕಗಳ ಪರಿಷ್ಕೃತ ಪ್ರದರ್ಶನಗಳನ್ನು ನೀಡತೊಡಗಿತು. ಹವ್ಯಾಸೀ ಸಂಸ್ಥೆಯ ಧೋರಣೆಯಿಟ್ಟುಕೊಂಡಿದ್ದ ಈ ಮಂಡಳಿ ಚುರುಮುರಿ ಶೇಷಗಿರಿರಾಯರ ಕನ್ನಡ ಶಾಕುಂತಲ, ಉಳವೇಶ ಕವಿಯ ಕನ್ನಡ ಮೃಚ್ಛಕಟಿಕ, ಮುದವೀಡು ಕೃಷ್ಣರಾಯರು ಮರಾಠಿಯಿಂದ ಅನುವಾದಿಸಿದ ರಾಮರಾಜ್ಯವಿಯೋಗ, ಸೌಭದ್ರ ನಾಟಕಗಳನ್ನು ರಂಗದ ಮೇಲೆ ತಂದಿತು. ಸಂಗೀತವಿದ್ವಾಂಸ ದೇಶಪಾಂಡೆ ತಿರುಮಲರಾಯ ಈ ಕಂಪನಿಯ ಪ್ರಮುಖ ಕಲಾವಿದರು. ಇಲ್ಲಿಯ ಬಹುತೇಕ ಕಲಾವಿದರೆಲ್ಲ ರೈಲ್ವೇ ನೌಕರರಾಗಿದ್ದವರೇ. ರೈಲ್ವೇ ಕಚೇರಿ ಧಾರವಾಡದಿಂದ ಮದರಾಸಿಗೆ ವರ್ಗವಾದಾಗ ಮಂಡಳಿಯ ನಟಸಂಖ್ಯಾಬಲ ಉಡುಗಿಹೋಯಿತು. 1916ರಲ್ಲಿ ಈ ಮಂಡಳಿ ನಿಷ್ಕ್ರಿಯಗೊಂಡಿತು. ಕನ್ನಡ ನಾಟಕಗಳಿಗೆ ಮತ್ತೆ ರಂಗಪಟ್ಟ ನೀಡಿದ, ಅನುವಾದಿತ ನಾಟಕಗಳಿಗೆ ಪ್ರಾಶಸ್ತ್ಯ ಕೊಟ್ಟ, ಹಣ ಸಂಪಾದನೆಗಿಂತ ಪ್ರದರ್ಶನ ಸಾಮೀಪ್ಯಕ್ಕೆ ಮೊದಲ ಗಮನವಿತ್ತ ಖ್ಯಾತಿ ಈ ಕಂಪನಿಗೆ ಸಲ್ಲಬೇಕು.

20ನೆಯ ಶತಮಾನದ ಆರಂಭದೊಡನೆ ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಹಲವು ಮಹತ್ತರ ಬದಲಾವಣೆಗಳಾದವು. ಮರಾಠಿ ಮಂಡಳಿಗಳೊಡನೆ ಸೆಣಸುವ ಹುರುಡು ಕನ್ನಡದ ಬಗ್ಗೆ ಭಾವನಾತ್ಮಕ ಧ್ಯೇಯ, ವೈಯಕ್ತಿಕ ಚಪಲಾಸಕ್ತಿಗಳು ಮುಖ್ಯವಾಗದೆ ಮಧ್ಯಮವರ್ಗದ ಮನರಂಜನೆಯ ಪೂರೈಕೆ, ವ್ಯಾವಹಾರಿಕ ಮಟ್ಟದಲ್ಲಿ ಮಂಡಳಿಯ ನಿರ್ವಹಣೆ, ಪರಿಷ್ಕೃತ ನಾಟಕ ಪ್ರದರ್ಶನ, ಆಕರ್ಷಕ ರಂಗಸಂಗೀತ ಅಳವಡಿಕೆಗಳ ನಿಟ್ಟಿನಲ್ಲಿ ಅನೇಕ ಸಫಲ ಸಂಸ್ಥೆಗಳು ಹುಟ್ಟಿಕೊಂಡವು. ಹೀಗೆ ಪ್ರಸಿದ್ಧವಾದ ಮೊದಲ ವೃತ್ತಿ ನಾಟಕ ಮಂಡಳಿ ಎಂದರೆ ಶಿರಹಟ್ಟಿ ನಾಟಕಮಂಡಲಿ (1903–36). ಶಿರಹಟ್ಟಿ ವೆಂಕೋಬರಾಯರ ನೇತೃತ್ವದ ಶ್ರೀಮಹಾಲಕ್ಷ್ಮೀ ಪ್ರಾಸಾದಿತ ನಾಟಕಮಂಡಳಿ ಎಂದರೆ ಇದೇ. ಪದ್ಮಾವತೀಪರಿಣಯ, ಯವನೀವಿಜಯ, ಭೋಜಪ್ರಬಂಧ, ಕಾಳಿದಾಸ ಚರಿತ್ರೆ, ಪ್ರಹ್ಲಾದಚರಿತ್ರೆ, ರಾಮಾಂಜನೇಯ ಯುದ್ಧ – ಈ ಕಂಪನಿಯ ಯಶಸ್ವೀ ನಾಟಕಗಳು. ಸ್ವತಃ ವೆಂಕೋಬರಾಯರೇ ಅಲ್ಲದೆ, ಕೊಲ್ಲೂರಯ್ಯಸ್ವಾಮಿ, ಗೋವಿಂದಾಚಾರ್ಯ, ವಾಮನರಾವ್ ಮಾಸ್ತರ ಈ ಕಂಪನಿಯ ನಟರು. ಈ ಮಂಡಳಿಯ ರಂಗಸಂಗೀತ ಪ್ರಸಿದ್ಧವಾಗಿತ್ತು.

ಕನ್ನಡ ರಂಗಭೂಮಿಯಲ್ಲಿ, ಇತರೆಡೆಗಳಂತೆ ಸ್ತ್ರೀಪಾತ್ರಗಳನ್ನು ಪುರುಷ ನಟರೇ ನಿರ್ವಹಿಸುವುದು ಸಂಪ್ರದಾಯವಾಗಿತ್ತು. ಈ ಶಿಸ್ತನ್ನು ಮುರಿದು ಸ್ತ್ರೀಪಾತ್ರಗಳಿಗೆ ಸ್ತ್ರೀಯರನ್ನೇ ರಂಗದ ಮೇಲೆ ತಂದ ಕೀರ್ತಿ ಶಿವಮೂರ್ತಿ ಸ್ವಾಮಿ ಕಣಬರ್ಗಿಮಠ ಅವರು ಸ್ಥಾಪಿಸಿದ ತೊಣ್ಣೂರುಕರ್ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿಯದು (1901–21). ಗಂಗೂಬಾಯಿ ಗುಳೇದಗುಡ್ಡ ಕನ್ನಡ ರಂಗಭೂಮಿಯ ಮೊದಲ ನಟಿ. ಆ ಕಾಲದ ಕರ್ನಾಟಕ ಗಂಧರ್ವ ಮುರಗೋಡು ಗಂಗಾಧರ ಈ ಮಂಡಳಿಯ ನಟರು. ಅದ್ದೂರಿಯ ಮರಾಠಿ ಕಂಪನಿಗಳಿಗೆ ಸರಿಸಾಟಿಯಾಗುವಂತೆ ಈ ಕಂಪನಿಗೆ ಅತ್ಯಾಧುನಿಕ ರಂಗಸಜ್ಜಿಕೆಯನ್ನು ಅಳವಡಿಸಿಕೊಳ್ಳಲಾಯಿತು. ತಿರುಗುಮಂಚವನ್ನು ಪ್ರಥಮ ಬಾರಿಗೆ ಪ್ರವೇಶಗೊಳಿಸಲಾಯಿತು. ಡೈನಮೊ ಉಪಯೋಗಿಸಿ ಉರಿಸಿದ ವಿದ್ಯುದ್ದೀಪಗಳು ಪ್ರಥಮ ಬಾರಿಗೆ ಕನ್ನಡ ರಂಗಸ್ಥಳವನ್ನು ಝಗಝಗಿಸಿದವು. ದೃಶ್ಯಗಳ ಮಾರ್ಪಾಡುಗಳನ್ನು ಕ್ಷಣಾರ್ಧದಲ್ಲಿ ಮಾಡುವ ಸಾಹಸಗಳು ಕಾಣಿಸಿಕೊಂಡವು. ಶನಿಪ್ರಭಾವ, ಮನೋವಿಜಯ, ತುಕಾರಾಂ ಮೊದಲಾದವು ಈ ಕಂಪನಿಯ ಪ್ರಖ್ಯಾತ ನಾಟಕಗಳು.

ಕಂಪನಿಯ ನಾಟಕಗಳು ಜನಪ್ರಿಯವಾಗತೊಡಗಿ ಆರ್ಥಿಕವಾಗಿ ಲಾಭದಾಯಕವಾಗ ತೊಡಗಿದುದರಿಂದ ಅನೇಕ ವೃತ್ತಿಮಂಡಳಿಗಳು ಹುಟ್ಟಿಕೊಂಡವು. 1905ರಲ್ಲಿ ಬಂಗಾಳ ವಿಭಜನೆಯಾದ ಮೇಲೆ ರಾಷ್ಟ್ರಾದ್ಯಂತ ರಾಷ್ಟ್ರೀಯತೆಯ ಗಾಳಿ ಬೀಸತೊಡಗಿ ಈ ನವಚೇತನಕ್ಕೆ ಕನ್ನಡ ರಂಗಭೂಮಿಯೂ ಮಾರ್ದನಿಗೊಡತೊಡಗಿತು. ಪೌರಾಣಿಕ ನಾಟಕಗಳೇ ಆಗಲಿ ಸಾಮಾಜಿಕ ನಾಟಕಗಳೇ ಆಗಲಿ ಅವುಗಳಲ್ಲಿ ಹೊಸ ಸಂದೇಶವನ್ನು ಬಿತ್ತುವ ಕಾರ್ಯ ನಡೆಯತೊಡಗಿತು. ಈ ಕಾಲದಲ್ಲಿ ಮೂಡಿದ ಸಂಸ್ಥೆ ವಾಮನರಾವ್ ಮಾಸ್ತರರ ವಿಶ್ವಗುಣಾದರ್ಶ ಮಂಡಳಿ (1931–34) ಪ್ರಮುಖವಾದದ್ದು. ಶಿರಹಟ್ಟಿ ಕಂಪನಿಯಲ್ಲಿದ್ದ ಇವರು ಮೊದಮೊದಲು ಆ ಕಂಪನಿ ನಾಟಕಗಳನ್ನೇ ಆಡುತ್ತಿದ್ದು, ಅನಂತರ ಜನಪ್ರಿಯ ಮರಾಠಿ ನಾಟಕಗಳನ್ನು ಅನುವಾದ ಮಾಡಿಸಿ ಆಡತೊಡಗಿದರು. ಇಂಥ ಪ್ರಮುಖ ನಾಟಕಗಳೆಂದರೆ ವಿದ್ಯಾಸಾಧನ, ಸಂದೇಹಸಾಮ್ರಾಜ್ಯ, ಮಹಾನಂದ, ಸಂತ ಸಕ್ಕೂಬಾಯಿ, ಪುಂಡಲೀಕ, ಬಾಜಿರಾವ್ ಪೇಶ್ವೆ, ವೀರ ಅಭಿಮನ್ಯು ಇತ್ಯಾದಿ. ಮನಸ್ಸಿಗೆ ಹಿತವಾಗುವ ಆಡುಭಾಷೆ, ಮೋಹಕ ಮರಾಠಿ ರಂಗಗೀತೆಗಳ ಧಾಟಿ ಜನಪ್ರಿಯವಾದವು. ಗಂಗೂಬಾಯಿ ಗುಳೇದಗುಡ್ಡ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ಮನ್ಸೂರ್, ರಾಣೆಬೆನ್ನೂರು ಮಲ್ಲಪ್ಪ ಮೊದಲಾದ ಪ್ರಸಿದ್ಧರು ಈ ಕಂಪನಿಯವರು.

ಇದೇ ಸಂದರ್ಭದಲ್ಲಿ ರಾಣೆಬೆನ್ನೂರಿನ ಹತ್ತಿರದ ಹಲಗೇರಿ ಗ್ರಾಮದಲ್ಲಿನ ಉತ್ಸಾಹಿ ಕಲಾವಿದರು ಸಹಕಾರಿ ತತ್ತ್ವದ ಆಧಾರದ ಮೇಲೆ ನಾಟಕಮಂಡಳಿಯನ್ನು ಕಟ್ಟುವ ಯತ್ನ ನಡೆಸಿದರು. ಹಲಗೇರಿ ಕಂಪನಿ ಎಂದು ಹೆಸರುವಾಸಿಯಾದ ಶ್ರೀ ಹಾಲಸಿದ್ದೇಶ್ವರ ಪ್ರಾಸಾದಿತ ಸಂಗೀತನಾಟಕ ಮಂಡಳಿ ಲಿಂಗನಗೌಡ ಪಾಟೀಲರ ನೇತೃತ್ವದಲ್ಲಿ ಸ್ಥಾಪಿತವಾಯಿತು. ಪಾದುಕಾ ವಿಷಮವಿವಾಹ, ರಾಕ್ಷಸೀ ಮಹತ್ವಾಕಾಂಕ್ಷೆ, ಹೇಮರೆಡ್ಡಿ ಮಲ್ಲಮ್ಮ, ಟಿಪ್ಪುಸುಲ್ತಾನ್ ಮೊದಲಾದ ಗಂಭೀರನಾಟಕಗಳೂ ಸ್ತ್ರೀ, ಬಿ.ಎ. ಎಂಬ ಹಾಸ್ಯನಾಟಕಗಳೂ ಇವರವು. ದೊಡ್ಡಜೆಟ್ಟಪ್ಪ ಸೋದರರು ಈ ಕಂಪನಿಯ ಹೆಸರಾಂತ ನಟರು. ಹಾಸ್ಯಪ್ರಧಾನ ನಾಟಕಗಳ ಪ್ರಯೋಗಗಳನ್ನು ಯಶಸ್ವಿಗೊಳಿಸಿದವರೂ ಇವರೇ.

ಕನ್ನಡ ರಂಗಭೂಮಿಯಲ್ಲಿ ಅಭಿನಯಕಲೆಗೆ ಸ್ಥಾನ ದೊರಕಿಸಿಕೊಟ್ಟವರಲ್ಲಿ ಒಬ್ಬರಾದ ಗರೂಡ ಸದಾಶಿವರಾಯರ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯ (1916–44) ನಾಟಕಗಳು ಸಾಹಿತ್ಯ ಪ್ರೌಢಿಮೆಗೆ ದಕ್ಷ ಅಭಿನಯಕ್ಕೆ ಪ್ರಸಿದ್ಧವಾಗಿದ್ದವು. ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಕಥಾವಸ್ತುಗಳನ್ನಿಟ್ಟುಕೊಂಡು ಗರೂಡರೇ ರಚಿಸಿದ ಐವತ್ತುನಾಲ್ಕು ನಾಟಕಗಳಲ್ಲಿ ಈ ಮಂಡಳಿಯಲ್ಲಿ ಜನಪ್ರಿಯವಾದವೆಂದರೆ ಎಚ್ಚಮನಾಯಕ, ಪಾದುಕಾಪಟ್ಟಾಭಿಷೇಕ, ಕೃಷ್ಣಲೀಲೆ, ಕಂಸವಧೆ, ಶಕ್ತಿವಿಲಾಸ, ಕಬೀರ್‌ದಾಸ್, ಶರಣಬಸವ ಮೊದಲಾದುವು. ರಂಗ ಭೂಮಿಯನ್ನು ಪವಿತ್ರಕ್ಷೇತ್ರವೆಂದು ಭಾವಿಸಿದ್ದು, ದೇಶಪ್ರೇಮ ಹಾಗೂ ಸ್ವಾತಂತ್ರ್ಯಾಕಾಂಕ್ಷೆಗಳಿಗೆ ಪುಟಕೊಟ್ಟ ಕಂಪನಿಗಳಲ್ಲಿ ಇದು ಅತಿ ಪ್ರಮುಖವಾದದ್ದು.

ಹುಲಿಮನೆ ಸೀತಾರಾಮಶಾಸ್ತ್ರಿಯವರ ಜಯಕರ್ನಾಟಕ ನಾಟಕ ಮಂಡಳಿ, ಹಂದಿಗನೂರು ಸಿದ್ಧರಾಮಪ್ಪನವರ ವಿಶ್ವರಂಜನ ನಾಟಕ ಮಂಡಳಿ, ಗಂಗೂಬಾಯಿ ಗುಳೇದಗುಡ್ಡ ಅವರ ಶ್ರೀಕೃಷ್ಣ ನಾಟಕಕಂಪನಿ ಮತ್ತು ವೀರಾಚಾರ್ಯರ ಶ್ರೀರಾಮಸೇವಾ ನಾಟ್ಯ ಸಂಸ್ಥೆ, ಬಸವರಾಜ ಮನ್ಸೂರ್ ಮತ್ತು ಗೋಹರ್ ಕರ್ನಾಟಕಿಯವರ ವಾಣಿ ವಿಲಾಸ ನಾಟಕ ಮಂಡಳಿ ಹೆಸರಿಸಬಹುದಾದಂಥವು. ಕೊಪ್ಪಳ ಸಂಗೀತ ನಾಟಕ ಮಂಡಳಿ ಅದ್ದೂರಿ

ಯಿಂದ ವಿಜಯಲಕ್ಷ್ಮೀ ನಾಟಕ ಸಭೆ ರಂಗತಂತ್ರಗಳಿಂದ, ಕೆಬಿಆರ್ ನಾಟಕ ಮಂಡಳಿ ಪ್ರದರ್ಶನ ಸಹಜತೆ ಹಾಗೂ ಹಾಸ್ಯಮಯತೆಯಿಂದ ಹೆಸರುಮಾಡಿದವು. ಪ್ರಸಿದ್ಧ ಗಾಯಕಿ ಬಚ್ಚಾಸಾನಿಯ ಸ್ತ್ರೀನಾಟಕ ಮಂಡಳಿಯಲ್ಲಿ ಸಂಪೂರ್ಣವಾಗಿ ಸ್ತ್ರೀ ಕಲಾವಿದೆಯರೇ ಇದ್ದದ್ದು ಒಂದು ವೈಶಿಷ್ಟ್ಯ.

**ಮೈಸೂರು ಸಂಸ್ಥಾನದಲ್ಲಿ :** ದಕ್ಷಿಣ ಕರ್ನಾಟಕದಲ್ಲಿ ವೃತ್ತಿರಂಗಭೂಮಿ ಹುಟ್ಟಿಕೊಂಡ ಪರಿಸ್ಥಿತಿ ಉತ್ತರ ಕರ್ನಾಟಕದ ಪರಿಸ್ಥಿತಿಗಿಂತ ಭಿನ್ನವಾದದ್ದು. ಮೈಸೂರು ಸಂಸ್ಥಾನ ಮೈಸೂರು ದೊರೆಗಳ ಆಳ್ವಿಕೆಯಲ್ಲಿತ್ತು. ಪರಂಪರಾಗತ ಆಸ್ಥಾನ ಧರ್ಮಕ್ಕೆ ಅನುಗುಣವಾಗಿ ಇಲ್ಲಿಯ ದೊರೆಗಳೂ ಶೃಂಗಾರಕ್ಕೆ ಸಲ್ಲಬೇಕಾದ ಮಾನ್ಯತೆ ನೀಡುತ್ತಿದ್ದುದು ಸಹಜವಾಗಿತ್ತು. ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿಯೇ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಧರ್ಮಸ್ಥಳದ ಯಕ್ಷಗಾನ ಮೇಳವನ್ನು ಕರೆಸಿದ್ದಕ್ಕೆ ದಾಖಲೆಗಳಿವೆ. ರಾಜಾಶ್ರಯದ ಬಿಡಾರ ದಶಾವತಾರ ಮೇಳದವರು ಯಕ್ಷಗಾನಗಳನ್ನು ಆಡುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಮೈಸೂರಿಗೆ ಬಂದ ಮರಾಠಿ ಹಾಗೂ ಪಾರಸೀ ನಾಟಕ ಮಂಡಳಿಗಳು ಈ ಭಾಗದಲ್ಲಿಯೂ ರಂಗಭೂಮಿಯ ಹೆಸರಿಗೆ ಬೀಜಕಾರಕವಾದವು. 1876ರಲ್ಲಿ ಮರಾಠರ ಮಹದೇವಭಟ್ಟನ ನೇತೃತ್ವದಲ್ಲಿ ಸಾಂಗ್ಲೀಕರ್ ನಾಟಕಮಂಡಳಿ ಮೈಸೂರಿಗೆ ಬಂದು ಸಂಸ್ಕೃತ ಪಾಠಶಾಲೆಯ ಒಳಾಂಗಣದಲ್ಲಿಯೂ ಚಾಮರಾಜ ಒಡೆಯರ್ ಅವರ ಸಮ್ಮುಖದಲ್ಲಿಯೂ ಸೌಭದ್ರ, ಶಾಕುಂತಲ ನಾಟಕಗಳನ್ನು ಆಡಿತು. ಈ ಮರಾಠಿ ಕಂಪನಿ ಗಳಿಸಿದ ಯಶಸ್ಸಿನಿಂದ ಪ್ರೇರಿತರಾಗಿ ಬಾಲೀವಾಲಾ ಅವರ ವಿಕ್ಟೋರಿಯಾ ಪಾರಸೀ ಕಂಪನಿಯೂ ಮೈಸೂರಿಗೆ ಧಾವಿಸಿ ಇಂದ್ರಸಭಾ, ಗುಲೇಬಕಾವಲಿ ಎಂಬ ಅದ್ದೂರಿಯ ಉರ್ದು ನಾಟಕಗಳನ್ನಾಡಿತು. ಮೇಲಕ್ಕೆ ಸುರುಳಿ ಸುತ್ತಿಕೊಳ್ಳುವ ಪರದೆಯ ವಿಸ್ಮಯ ಕನ್ನಡ ರಂಗಭೂಮಿಯ ಪ್ರೇಕ್ಷಕರಲ್ಲಿ ಬೆರಗನ್ನು ಮೂಡಿಸಿತು. ವೈಭವೋಪೇತ ದರಬಾರು ದೃಶ್ಯ, ಕಣ್ಣುಕುಕ್ಕುವ ದೀಪಾಲಂಕಾರ, ಸ್ತ್ರೀಪಾತ್ರಧಾರಿಗಳು ಈ ಎಲ್ಲ ಹೊಸ ಸಂಗತಿಗಳಿಂದ ದಶಾವತಾರ ಆಟವನ್ನು ಕಂಡಿದ್ದ ಕನ್ನಡ ರಂಗಮಂಟಪಕ್ಕೆ ಹೊಸ ಹುರುಪು ಮೂಡಿದಂತಾಯಿತು. ಮೈಸೂರು ಅರಸರಿಗೆ ಆಸ್ಥಾನ ರಂಗಭೂಮಿಯೊಂದನ್ನು ನವೀಕರಿಸುವ ಅಭಿಲಾಷೆಯಾಯಿತು. ಅರಮನೆಗೆ ಸೇರಿದ ರಾಯಲ್ ಪಾಠಶಾಲೆಯ ವಿದ್ಯಾರ್ಥಿಗಳು ಹೊಸ ನಿಟ್ಟಿನಲ್ಲಿ ಪ್ರಹ್ಲಾದ ನಾಟಕವನ್ನಾಡಿದರು. ಈ ನಾಟಕದ ಭಾಷೆ ಮರಾಠಿ ಎನ್ನುವುದು ಕುತೂಹಲಕಾರ ಅಂಶ. ಅನಂತರ ಈ ಮೈಸೂರು ರಾಯಲ್ ಡ್ರಮ್ಯಾಟಿಕ್ ಕಂಪನಿಯವರು ಫೆನಿಷ್ಡ್ ಅಪಾರ್ಟ್‌ಮೆಂಟ್ಸ್ ಎಂಬ ಇಂಗ್ಲಿಷ್ ನಾಟಕವನ್ನು ಆಡಿದರು. ದಿವಾನ್ ರಂಗಾಚಾರ್ಲು ಅವರು ಹೊಸ ಕನ್ನಡ ನಾಟಕಗಳ ರಚನೆಗೆ, ಪ್ರಸಿದ್ಧ ಸಂಸ್ಕೃತ ಇಂಗ್ಲಿಷ್ ನಾಟಕಗಳ ಅನುವಾದಕ್ಕೆ ಪ್ರಚೋದನೆ ನೀಡಿದರು. ಇದರ ಫಲವಾಗಿಯೇ ಬಸವಪ್ಪಶಾಸ್ತ್ರಿಗಳು ಸುಪ್ರಸಿದ್ಧ ಶಾಕುಂತಲವನ್ನು ಕನ್ನಡಕ್ಕೆ ಯಶಸ್ವಿಯಾಗಿ ಅನುವಾದಿಸಿದರು. ರಾಯಲ್ ಸ್ಕೂಲಿನ ವಿದ್ಯಾರ್ಥಿ ನಟರು, ಆಸ್ಥಾನಪಂಡಿತರು ಇತ್ಯಾದಿ ಅರಮನೆ ಕಲಾವಿದರು ಸೇರಿದ ಮಂಡಳಿ ಶಾಕುಂತಲ ಕರ್ನಾಟಕ ನಾಟಕ ಸಭಾ ಎಂಬ ಹೆಸರಿನಿಂದ 1881ರಲ್ಲಿ ಆರಂಭವಾಗಿ ಮೊದಲನಾಟಕ ಶಾಕುಂತಲವನ್ನು ಆಡಿತು. ಲಕ್ಷ್ಮೀಪತಿಶಾಸ್ತ್ರಿ, ಎಂ.ಡಿ.ಸುಬ್ಬಣ್ಣ, ಗಿರಿಭಟ್ಟರ ತಮ್ಮಯ್ಯ, ದೇವರಾಜ ಅರಸು ಪ್ರಮುಖ ಪಾತ್ರಧಾರಿಗಳು. ಕಲ್ಯಾಣಿ ಮೈದಾನದಲ್ಲಿ (ಈಗಿನ ಪುರಭವನ) ಚಪ್ಪರ ಹಾಕಿ ಸಾರ್ವಜನಿಕ ವೇದಿಕೆಯಲ್ಲಿಯೂ ನಾಟಕವನ್ನಾಡಿದರು. ಬೆಂಗಳೂರಿನಲ್ಲಿಯೂ ಪ್ರದರ್ಶನಗಳನ್ನಿತ್ತರು. ಆಸ್ಥಾನ ರಂಗಭೂಮಿ ಜನತೆಯ ನಡುವೆ ಚಲಿಸಿತು. ಪೋಷಕರ ಗೌರವಾರ್ಥ 1882ರಲ್ಲಿ ಈ ಮಂಡಳಿಯ ಹೆಸರನ್ನು ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂದು ಬದಲಿಸಲಾಯಿತು. ಸಿ. ಸುಬ್ಬರಾವ್ ಹಾಗೂ ಎ. ಆನಂದರಾಯರು ಅನುವಾದಿಸಿದ ಒಥೆಲ್ಲೊ (ಶೂರಸೇನ ಚರಿತೆ), ಎ. ಆನಂದರಾಯರ ಹಾಗೂ ಜಯರಾಯಾಚಾರ್ಯರು ಅನುವಾದ ಮಾಡಿದ ರೋಮಿಯೊ ಅಂಡ್ ಜೂಲಿಯಟ್ (ರಾಮವರ್ಮ–ಲೀಲಾವತಿ) ಹಾಗೂ ಮರ್ಚೆಂಟ್ ಆಫ್ ವೆನಿಸ್ (ಪಾಂಚಾಲೀಪರಿಣಯ) ನಾಟಕಗಳನ್ನು ಅರಮನೆ ಕಂಪನಿ ಆಸ್ಥಾನರಂಗದಲ್ಲಿ ಅಭಿನಯಿಸಿತು. ಇತರ ನಾಟಕಗಳೆಂದರೆ ಸೋಸಲೆ ಅಯ್ಯಶಾಸ್ತ್ರಿಗಳ ವಿಕ್ರಮೋರ್ವಶೀಯ, ಚಂಡಕೌಶಿಕ, ಪ್ರತಾಪಸಿಂಹಚರಿತೆ, ಬಸವಪ್ಪಶಾಸ್ತ್ರಿಗಳ ರತ್ನಾವಳಿ, ಉತ್ತರರಾಮಚರಿತೆ, ಮಾಲತೀಮಾಧವ, ಸುಬ್ಬಾಶಾಸ್ತ್ರಿಗಳ ಮೃಚ್ಛಕಟಿಕ ಇತ್ಯಾದಿ. ಮುಂದಿನ ಹತ್ತು ವರ್ಷಗಳಲ್ಲಿ ಹುಟ್ಟಿದ ಅನೇಕ ವೃತ್ತಿಸಂಸ್ಥೆಗಳಿಗೆ ಈ ಅರಮನೆ ಅನುವಾದ ನಾಟಕಗಳೇ ಮೂಲಗ್ರಾಸವಾಗಿ ಉಳಿದವು.

ಅರಮನೆ ಕಂಪನಿಯ ಆಡಳಿತ ನಿರ್ವಹಣೆ ಅರಮನೆಯದೇ ಆಗಿತ್ತು. ದರ್ಬಾರ್ ಭಕ್ಷಿ ಲಿಂಗರಾಜ ಅರಸ್ ಅವರ ಅನಂತರ ಎಂ. ಗೋಪಾಲರಾಜ ಅರಸ್ ಇದರ ನಿರ್ವಾಹಕರಾಗಿದ್ದರು. ಬಿಡಾರಂ ಕೃಷ್ಣಪ್ಪನವರು ನಾಟಕಾಭ್ಯಾಸದ ಮೇಲ್ವಿಚಾರಕರಾಗಿದ್ದರು. ಸರ್ಟನ್ ರಾಮರಾಯ, ಎಂ.ಡಿ.ಸುಬ್ಬಣ್ಣ, ವೀರರಾಘವ, ಮಂಡ್ಯದ ರಂಗಾಚಾರ್ಯ, ಪುಟ್ಟಾರಿಶಾಸ್ತ್ರಿ, ಜಂಜೂಟಿ ಶೇಷಗಿರಿರಾಯ ಈ ಕಂಪನಿಯ ಪ್ರಮುಖ ನಟರು. ರುದ್ರನಾಟಕಗಳಲ್ಲಿ ಜನರ ಅಭಿರುಚಿ ಮೂಡಿಸಿದ ಕೀರ್ತಿ ಈ ಕಂಪನಿಗೆ ಸಲ್ಲಬೇಕು. ಆದರೆ ಕಾಲಕ್ರಮೇಣ ಅರಮನೆ ಮಂಡಳಿಯಲ್ಲಿ ಒಡಕುಂಟಾಗಿ 1917ರಲ್ಲಿ ಕಂಪನಿಯನ್ನು ಮುಚ್ಚಲಾಯಿತು. ಮೂವತ್ತೈದು ವರ್ಷಗಳ ಕಾಲ ಒಂದು ನಾಟಕ ಕಂಪನಿಯನ್ನು ಯಶಸ್ವಿಯಾಗಿ ನಡೆಸಿ ಆಸ್ಥಾನ ರಂಗಭೂಮಿಯನ್ನು ಜನತೆಯೊಡನೆಯೂ ಹಂಚಿಕೊಂಡು, ಅನೇಕ ವೃತ್ತಿರಂಗಸಂಸ್ಥೆಗಳ ಉದಯಕ್ಕೆ ಕಾರಣರಾದ ಕೀರ್ತಿ ಮೈಸೂರು ಅರಸರದು. ಶುದ್ಧಸಾಹಿತ್ಯ, ಶಾಸ್ತ್ರೀಯ ಹಾಡುಗಾರಿಕೆ, ಸಹಜಾಭಿನಯದಂಥ ಉತ್ತಮ ಅಭಿರುಚಿಗಳಿಗೆ ಆದ್ಯಸ್ಥಾನ ನೀಡುವ ಪರಂಪರೆಯನ್ನು ಆರಂಭಿಸಿದವರೂ ಇವರೇ.

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಮಗ ಮದನವಿಲಾಸ ತೊಟ್ಟಿ ನಂಜರಾಜ ಬಹದ್ದೂರರೂ ಆ ಕಾಲದಲ್ಲಿಯೇ (1844–85) ಒಂದು ನಾಟಕ ಸಂಘವನ್ನು ಸ್ಥಾಪಿಸಿ ಗುರಿಕಾರ್ ಮಾದಪ್ಪನವರ ನೇತೃತ್ವದಲ್ಲಿ ತುಲಾಭಾರ, ರಾಮಾಯಣ, ನಳಚರಿತ್ರೆ ಮೊದಲಾದ ನಾಟಕಗಳನ್ನು ಮೈಸೂರು, ಬೆಂಗಳೂರುಗಳಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದರು.

ಮರಾಠಿ ಹಾಗೂ ಪಾರಸೀ ನಾಟಕ ಕಂಪನಿಗಳ ಪ್ರಭಾವ ಅರಮನೆಯ ಮೇಲಾದಂತೆ ಪುರಜನರ ಮೇಲೆಯೂ ಆಯಿತು. ಅರಮನೆ ಕಂಪನಿ ಸಾರ್ವಜನಿಕ ಪ್ರದರ್ಶನಗಳನ್ನು ನೀಡುತ್ತಿದ್ದರೂ ಅದು ಆಸ್ಥಾನರಂಗಭೂಮಿ ಎಂಬ ಭಾವನೆ ಮರೆಯಾಗಿರಲಿಲ್ಲ. ಹಾಗಾಗಿ ಕೆಲವು ವೃತ್ತಿಮಂಡಳಿಗಳು ಜನರಂಜನೆಗಾಗಿ ಹುಟ್ಟಿಕೊಂಡವು. ಪ್ರಮುಖವಾದದ್ದೆಂದರೆ ಖ್ಯಾತನಟ ಮಂಡ್ಯದ ರಂಗಾಚಾರ್ಯರು 1881ರಲ್ಲಿ ಕಟ್ಟಿದ ರಾಜಧಾನೀ ನಾಟಕ ಮಂಡಳಿ. ಅರಮನೆ ಕಂಪನಿಗೆ ಸವಾಲಾದ ಈ ಮಂಡಳಿ ಕನ್ನಡವಲ್ಲದೆ ಸಂಸ್ಕೃತ, ಮರಾಠಿ, ಹಿಂದುಸ್ಥಾನೀ ಭಾಷೆಗಳ ನಾಟಕಗಳನ್ನು ಅಭಿನಯಿಸುತ್ತಿತ್ತು. ಪ್ರಸಿದ್ಧ ನಾಟಕಗಳೆಂದರೆ ಬಾಣಾಸುರೋಪಾಖ್ಯಾನ, ಇಂದ್ರಸಭಾ, ಸತ್ಯವರ್ಮಚರಿತೆ, ರತ್ನಾವಳಿ. ರಂಗಾಚಾರ್ಯರಲ್ಲದೆ ತಿರುನಾರಾಯಣ ಅಯ್ಯಂಗಾರ್, ನಾರಸಿಂಹಂ ವೆಂಕಟಾಚಾರ್ಯ, ಗೌರೀ ನರಸಿಂಹಯ್ಯ, ನರಸಿಂಹಾಚಾರ್, ಸುಬ್ಬರಾವ್, ಡಿ. ನರಸಿಂಹಯ್ಯ ಮೊದಲಾದ ನಟರು ಈ ಮಂಡಳಿಯಲ್ಲಿದ್ದರು. ರಂಗಾಚಾರ್ಯರು ಅರಮನೆ ಕಂಪೆನಿಯನ್ನು ಸೇರಿದ ಮೇಲೆ ಇದು ನಿಷ್ಕ್ರಿಯವಾಯಿತು. ಶ್ರೀಯಾಳ ಚರಿತ್ರೆ ಎಂಬ ಜನಪ್ರಿಯ ನಾಟಕವನ್ನು ಆಡುತ್ತಿದ್ದ ರಸಿಕ ಮನೋಲ್ಲಾಸಿನಿ ನಾಟಕ ಮಂಡಳಿಯೂ (1883–86) ಇಲ್ಲಿ ಉಲ್ಲೇಖಾರ್ಹ. ರಾಣಿ ಪಾರ್ಟಿನ ಗೌರೀ ನರಸಿಂಹಯ್ಯನವರು 1886ರಲ್ಲಿ ಕಟ್ಟಿದ ಶ್ರೀ ಸರಸ್ವತೀ ವಿಲಾಸ

ಕರ್ನಾಟಕ ಸಭೆ ಇನ್ನೊಂದು ಸಮಕಾಲೀನ ಸಂಸ್ಥೆ. ದೇವುಡು ಶಾಸ್ತ್ರಿ, ರಾಮಚಂದ್ರಪಂಡಿತ, ಪಟ್ಟಾಭಿರಾಮ ಶಾಸ್ತ್ರಿ, ಬಿ.ಕೆ. ಸುಬ್ಬರಾಯ, ಎಂ.ಕೆ. ನಂಜುಂಡಪ್ಪ, ಬೋಧರಾವ್, ಕೃಷ್ಣಮೂರ್ತಿರಾವ್ ಈ ಮಂಡಳಿಯ ಪ್ರಮುಖ ನಟರು. ಎ.ವಿ. ವರದಾಚಾರ್ಯರು ಮೊದಲು ರಂಗಪ್ರವೇಶಿಸಿದ್ದು ಈ ಕಂಪನಿಯ ಮೂಲಕವೇ.

ವೃತ್ತಿರಂಗ ಚಟುವಟಿಕೆಗಳು ಮೈಸೂರಿಗೆ ಸೀಮಿತವಾಗಿದ್ದ ಕಾಲದಲ್ಲಿ ಬೆಂಗಳೂರಿನಲ್ಲಿ ನಾಟಕಸಂಘವನ್ನು ಸ್ಥಾಪಿಸಿದವರೆಂದರೆ ಎಸ್.ಎಸ್. ಸೆಟ್ಲೂರ್, ಎಸ್.ಟಿ. ಗೋಪಾಲಯ್ಯಂಗಾರ್. ಬೆಂಗಳೂರು ಜನತೆಯಲ್ಲಿಯೂ ರಂಗಾಸಕ್ತಿ ಮೂಡಿದ ಅನಂತರ ಎಂ.ಎಲ್.ಶ್ರೀಕಂಠೇಶಗೌಡ, ಪೂರ್ಣ ರಾಘವೇಂದ್ರರಾಯ, ಎಲ್.ಜಯರಾಯ ಇವರುಗಳು ಸೇರಿಕೊಂಡು ಶ್ರೀಕಂಠೇಶ್ವರ ಕರ್ನಾಟಕ ನಾಟಕಸಭೆಯನ್ನು ಸ್ಥಾಪಿಸಿದರು. 1907ರವರೆಗೆ ಯಶಸ್ವಿಯಾಗಿದ್ದ ಈ ಮಂಡಳಿ ಸೀತಾಸ್ವಯಂವರ, ಘೋಷಯಾತ್ರೆ, ಪ್ರಮೀಳಾರ್ಜುನೀಯ ಮೊದಲಾದ ನಾಟಕಗಳನ್ನಾಡಿತು. ಸುಲ್ತಾನಪೇಟೆಯ ಮುಸ್ಲಿಂಹಾಲಿನ ಪಕ್ಕದಲ್ಲಿ ರಂಗಮಂಟಪವೊಂದನ್ನು ನಿರ್ಮಿಸಲಾಗಿತ್ತು. ಇಲ್ಲಿನ ಮತ್ತೊಂದು ಸಮಕಾಲೀನ ಮಂಡಳಿ ಎಂದರೆ ಪೆರಿಶಾಮಯ್ಯಂಗಾರ್ ಅವರ ಕಂಪನಿ. ವೀಣೆವಿದ್ವಾನ್ ಗೋಪಾಲರಾಯ ಮತ್ತು ತಿಮ್ಮಪ್ಪ ಇಲ್ಲಿಯ ಹೆಸರಾಂತ ನಟರು.

ಕೈವಾರ ಕೃಷ್ಣರಾವ್ ಹಾಗೂ ಕೈವಾರ ರಾಮರಾಯರ ಗೊಲ್ಲರಪೇಟೆ ನಾಟಕಸಭೆ ಈ ಕಾಲದ್ದೆ. ನಾಲ್ಕುವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಈ ಕಂಪನಿ ಅನಂತರ ಇಬ್ಭಾಗವಾಗಿ ಸಂಗೀತ ಸಾಗರ ಚಂದ್ರೋದಯ ಸಭೆ ಹಾಗೂ ಸಿಟಿ ಅಪೆರಾ ಟ್ರೂಪ್ ಎಂಬ ಎರಡು ಮಂಡಳಿಗಳು ಹುಟ್ಟಿಕೊಂಡವು.

ಬೆಂಗಳೂರಿನಲ್ಲಿ ಪ್ರವರ್ಧಿಸಿ ವೃತ್ತಿರಂಗಕ್ಕೆ ಭದ್ರಬುನಾದಿ ಹಾಕಿಕೊಟ್ಟ ಕಂಪನಿ ಎಂದರೆ ಬುಳ್ಳಪ್ಪನವರ ಕಂಪನಿ. ಟ್ರೂತ್ ಪತ್ರಿಕೆಯ ಮಾಲೀಕರಾಗಿದ್ದ ಬುಳ್ಳಪ್ಪನವರು 1895ರಲ್ಲಿ ಈ ಸಂಸ್ಥೆಯನ್ನು ಕಟ್ಟಿದರು. ಎಂಟುವರ್ಷಗಳ ಕಾಲ ಪ್ರಸಿದ್ಧವಾಗಿದ್ದ ಈ ಸಂಸ್ಥೆಯಲ್ಲಿ ರಾಜಪಾರ್ಟು ಸೂರಪ್ಪ, ನಕಲಿ ಕೃಷ್ಣಮೂರ್ತಿರಾಯ, ವಿದ್ವಾನ್ ವೆಂಕಟಪ್ಪ ಮೊದಲಾದ ಸಂಗೀತಾಭಿನಯ ನಿಷ್ಣಾತರಿದ್ದರು. ಅದ್ದೂರಿಯ ಸೆಟ್, ಚಮಕುಗಳಿಗೆ ಪ್ರಸಿದ್ಧವಾದ ಈ ಕಂಪನಿ ಅನೇಕ ವೃತ್ತಿಸಂಸ್ಥೆಗಳಿಗೆ ಆದರ್ಶವಾಗಿತ್ತು.

ಆರಂಭಕಾಲದಲ್ಲಿ ಮೈಸೂರು, ಬೆಂಗಳೂರು ಸುತ್ತಮುತ್ತ ಅನೇಕ ಮಂಡಳಿಗಳು ಹುಟ್ಟಿಕೊಂಡು ಅವುಗಳಲ್ಲಿದ್ದ ನಟರು ಹೊರಹೋಗಿ ಮತ್ತಷ್ಟು ಮಂಡಳಿಗಳು ಹುಟ್ಟಿಕೊಂಡು ವೃತ್ತಿರಂಗದಲ್ಲಿ ಅನೇಕ ಸಂಸ್ಥೆಗಳು ಕಾಣಿಸಿಕೊಂಡವು. ಒಂದು ಕಂಪನಿಯ ನಟರು ಇನ್ನೊಂದಕ್ಕೆ ಹಾರುವುದು ಸಾರ್ವತ್ರಿಕ ಸುಲಭ ಪ್ರಕ್ರಿಯೆಯಾಗಿತ್ತು. ಸ್ಪರ್ಧೆ ಈರ್ಷ್ಯೆಗಳು ಸರ್ವಸಾಮಾನ್ಯವಾಗಿದ್ದವು. ಆದರೂ ಕನ್ನಡ ವೃತ್ತಿರಂಗಭೂಮಿ ಸರ್ವಸಾಮಾನ್ಯವಾಗಿತ್ತು. ಕನ್ನಡ ವೃತ್ತಿರಂಗಭೂಮಿ ಸಾರ್ವಜನಿಕರಲ್ಲಿ ಕೆರಳಿಸಿದ ನಾಟಕ ಅಭಿರುಚಿ, ನಾಡಿನಾದ್ಯಂತ ರಂಗವೀಕ್ಷಕರ ಸಂಖ್ಯೆಯ ಹೆಚ್ಚಳ, ಕೆಲವು ರಂಗವ್ಯಕ್ತಿಗಳ ಸಂಘಟನಾಚಾತುರ್ಯಗಳು ಮಹಾಸಂಸ್ಥೆಗಳು ಮೂಡಿ ನಿಲ್ಲಲು ಕಾರಣವಾಯಿತು.

ಮೊದಲಿಗೆ ಹೇಳಬೇಕಾದ ಮಹಾಸಂಸ್ಥೆಯೆಂದರೆ ಗುಬ್ಬಿಕಂಪನಿಯೆಂದು ಖ್ಯಾತವಾದ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘ. ಕನ್ನಡ ವೃತ್ತಿರಂಗಭೂಮಿಯ ಇತಿಹಾಸವೆಂದರೆ ಗುಬ್ಬಿಕಂಪನಿಯ ಇತಿಹಾಸ ಎಂದರೆ ಉತ್ಪ್ರೇಕ್ಷೆಯಲ್ಲ. ವೃತ್ತಿರಂಗಭೂಮಿಯ ಹುಟ್ಟಿನೊಂದಿಗೆ ಹುಟ್ಟಿಕೊಂಡು ಅದರ ಏಳುಬೀಳುಗಳಲ್ಲಿ ಸಹಭಾಗಿಯಾಗಿ ಕೀರ್ತಿಶಿಖರವೇರಿ ಇನ್ನೂ ಉಳಿದಿರುವ ಏಕೈಕ ಸಂಸ್ಥೆ ಎಂದರೆ ಇದೇ. ಗುಬ್ಬಿ ಚಂದಣ್ಣ, ಅಬ್ದುಲ್ ಅಜೀಜ್, ಸಾಹುಕಾರ್ ನೀಲಕಂಠಪ್ಪನವರು ಸೇರಿ 1884ರಲ್ಲಿ ಈ ಮಂಡಳಿಯನ್ನು ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಹುಟ್ಟುಹಾಕಿದರು. ದೊಡ್ಡಾಟ ಪ್ರಸಂಗವನ್ನು ನಾಟಕವಾಗಿ ಪರಿವರ್ತಿಸಿ ಆಡಿದ ಕುಮಾರರಾಮನ ಕಥೆ ಇವರ ಮೊದಲ ಆಟ. ಚೋರಕಥೆ, ಜಗನ್ಮೋಹನ ಚರಿತೆ ಇತ್ಯಾದಿ ನಾಟಕಗಳನ್ನು ಇವರು ಆಡುತ್ತಿದ್ದರು. 1917ರಲ್ಲಿ ಜಿ.ಎಚ್. ವೀರಣ್ಣನವರು ಕಂಪನಿಯ ನೇತೃತ್ವವನ್ನು ವಹಿಸಿಕೊಂಡು ಮುಂದಿನ ನಲವತ್ತು ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿ ಕಂಪನಿಯನ್ನು ಚಿರಸ್ಥಾಯಿಯಾಗಿಸಿದರು. ಬೆಳ್ಳಾವೆ ನರಹರಿಶಾಸ್ತ್ರೀ, ಭೀಮರಾಯ, ಬಿ. ಪುಟ್ಟಸ್ವಾಮಯ್ಯ ಮೊದಲಾದ ನಾಟಕಕಾರರನ್ನೂ ಜಿ.ನಾಗೇಶರಾಯ, ನಟಭಯಂಕರ ಗಂಗಾಧರಾಯ, ಎಂ.ವಿ. ಸುಬ್ಬಯ್ಯ ನಾಯ್ಡು, ಗುರುಮೂರ್ತಪ್ಪ, ರಾಘವೇಂದ್ರರಾವ್, ಶ್ರೀಕಂಠಮೂರ್ತಿ, ಹೊನ್ನಪ್ಪ ಭಾಗವತ್, ಜಿ. ಸುಂದರಮ್ಮ, ವಾಸುದೇವರಾವ್ ಗಿರಿಮಾಜಿ, ಬಿ.ಆರ್. ಪಂತಲು, ಮಾಧವರಾವ್, ರಾಜಕುಮಾರ್, ಬಾಲಕೃಷ್ಣ,

ಒಡಕಲು ಬಿಂಬ ನಾಟಕದಲ್ಲಿ ಅರುಂಧತಿ ನಾಗ್

ನರಸಿಂಹರಾಜು, ಜಿ.ವಿ. ಅಯ್ಯರ್, ಬಿ.ವಿ.ಕಾರಂತ್ ಮೊದಲಾದ ವ್ಯಕ್ತಿಗಳನ್ನೂ ತರಬೇತಿಗೊಳಿಸಿದ ಕೇಂದ್ರವಿದು. ವಿವಿಧ ಮುಖಗಳಲ್ಲಿ ರಂಗಭೂಮಿಯ ಪುರೋಭಿವೃದ್ಧಿಗೆ ಶ್ರಮಿಸಿದ ಸಂಸ್ಥೆ ಇದು. 1924ರಲ್ಲಿ ಬೆಂಗಳೂರಿನಲ್ಲಿ ತಮ್ಮದೇ ಆದ ನಾಟಕ ಮಂದಿರವನ್ನು ನಿರ್ಮಿಸಿಕೊಂಡಿತು. 1925ರಲ್ಲಿ ಬಾಲಕಲಾವರ್ಧಿನಿ ನಾಟಕ ಸಂಘ ಎಂಬ ಬಾಲಕಲಾವಿದರ ವೃತ್ತಿ ಸಂಸ್ಥೆಯನ್ನು ಉಪಸಂಸ್ಥೆಯಾಗಿ ಕಟ್ಟಿತು. 1926ರಲ್ಲಿ ಗದುಗಿನ ವೃತ್ತಿಮಂಡಳಿಯನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಉಷಾಸ್ವಯಂವರ, ಕೃಷ್ಣಲೀಲೆ, ಕುರುಕ್ಷೇತ್ರ, ದಶಾವತಾರ–ಈ ಪೌರಾಣಿಕಗಳಲ್ಲದೆ, ಸಾಹುಕಾರ, ಅಡ್ಡದಾರಿ, ಕಾಲಚಕ್ರ, ಸದಾರಮೆ ಇತ್ಯಾದಿ ಹಾಸ್ಯಪ್ರಧಾನ ಸಾಮಾಜಿಕ ನಾಟಕಗಳನ್ನೂ ಆಡುತ್ತಿತ್ತು. ಮೊದಲಿಗೆ ಅತ್ಯಂತ ಜನಪ್ರಿಯವಾದದ್ದೆಂದರೆ ಕುರುಕ್ಷೇತ್ರ ನಾಟಕ. ಅನಂತರ ವೈಭವೋಪೇತ ರಂಗಸಜ್ಜಿಕೆ. ಅದ್ಭುತ ಬೆಳಕಿನ ವ್ಯವಸ್ಥೆ. ಟ್ರಿಕ್ ದೃಶ್ಯಗಳ ಸೊಗಸು ಮೊದಲಾದ ನವೀನ ರಂಗತಂತ್ರಗಳಿಂದ ರಂಗಕ್ಕೇರಿದ ದಶಾವತಾರ ಕನ್ನಡ ರಂಗನಾಟಕ ಪ್ರಯೋಗಗಳಲ್ಲಿ ಒಂದು ಮೈಲಿಗಲ್ಲು. ಕರ್ನಾಟಕಾಂಧ್ರ ನಾಟಕ ಸಾರ್ವಭೌಮರೆಂದು ಬಿರುದಾಂಕಿತ ವೀರಣ್ಣನವರು 1938ರಲ್ಲಿ ಹಿಂದೆಯೇ ಸಮರ ದೃಶ್ಯಗಳಿಗೆ ರಂಗದ ಮೇಲೆ ಆನೆ ಕುದುರೆಗಳನ್ನು ಪ್ರವೇಶಗೊಳಿಸಿ

ದ್ದರು. ಬೆಳಕಿನ ಸಲಕರಣೆಗಳನ್ನು ಬಳಸಿ ಚಲಚ್ಚಿತ್ರ ತಂತ್ರಗಳನ್ನು ಅಳವಡಿಸಿಕೊಂಡು ರಂಗಸಜ್ಜಿಕೆಯಲ್ಲಿ ನಾವೀನ್ಯತೆಯನ್ನು ಉಂಟುಮಾಡಿದ್ದರು.

1944ರಲ್ಲಿ ಈ ಕಂಪನಿಯ ಕೃಷ್ಣಲೀಲಾ ನಾಟಕ ಮೈಸೂರಿನಲ್ಲಿ ಸತತವಾಗಿ 125 ಪ್ರದರ್ಶನಗಳನ್ನು ಕಂಡಿತು. 1945ರಲ್ಲಿ ಅರಮನೆಯಲ್ಲಿ ಸತತವಾಗಿ ಹದಿನೇಳು ಭಿನ್ನ ನಾಟಕಗಳನ್ನು ಆಡಿದ ಕೀರ್ತಿಯೂ ಇವರದು. 1946ರಲ್ಲಿ ಕರ್ನಾಟಕದ ಪ್ರಥಮ ಸುಸಜ್ಜಿತ ರಂಗಮಂದಿರವಾದ ಗುಬ್ಬಿಶ್ರೀ ಚನ್ನಬಸವೇಶ್ವರ ನಾಟಕಶಾಲೆಯನ್ನು ತೆರೆಯಲಾಯಿತು. ಈ ಕಂಪನಿಯ ವತಿಯಿಂದ 1948ರಲ್ಲಿ ಕನ್ನಡ ನಾಟಕರಂಗದ ಶತಮಾನೋತ್ಸವವನ್ನು ವೈಭವದಿಂದ ಆಚರಿಸಲಾಯಿತು. ಇದರೊಂದಿಗೆ ಗುಬ್ಬಿ ಕಂಪನಿಯ ವಜ್ರಮಹೋತ್ಸವವೂ ನಡೆಯಿತು. ಈ ಶತಮಾನೋತ್ಸವದ ವೈಶಿಷ್ಟ್ಯವೆಂದರೆ ಕನ್ನಡ ನಾಡಿನ ಎಲ್ಲ ಭಾಗಗಳ ನಟರು, ನಾಟಕಕಾರರು, ಕಂಪನಿ ಮಾಲೀಕರು, ರಂಗವಿಮರ್ಶಕರು ಬಂದು ಕನ್ನಡ ರಂಗಭೂಮಿಯ ಆಗುಹೋಗುಗಳ ಬಗ್ಗೆ ಚರ್ಚಿಸಿದ್ದು, ಈ ಸಂದರ್ಭದಲ್ಲಿ ರಂಗಭೂಮಿಯ ಶತಮಾನೋತ್ಸವ ಸಂಚಿಕೆ ಎಂಬ ಕನ್ನಡ ರಂಗಪರಿಚಯ ಗ್ರಂಥವನ್ನು ಹೊರತರಲಾಯಿತು. ವೃತ್ತಿರಂಗ ಹೀನದೆಸೆಗೆ ಇಳಿದ ಅನಂತರ ಇಂದಿಗೂ ಜೀವಂತವಾಗಿ ಉಳಿದಿರುವ ಸಂಸ್ಥೆ ಇದು.

ಸಮಕಾಲೀನ ಸಂಸ್ಥೆಗಳಲ್ಲಿ ಇಷ್ಟೇ ಉಜ್ವಲ ಹೆಸರು ಗಳಿಸಿದ ಸಂಸ್ಥೆ ಎಂದರೆ ಮೈಸೂರು ನಾಟಕರಂಗದ ಅನಭಿಷಿಕ್ತ ಸಮ್ರಾಟರೆನಿಸಿಕೊಂಡಿದ್ದ ಎ.ವಿ. ವರದಾಚಾರ್ಯರ ರತ್ನಾವಳಿ ಥಿಯೇಟ್ರಿಕಲ್ ಕಂಪನಿ. ಇದನ್ನು ಮೈಸೂರು ವೃತ್ತಿರಂಗ ಪರಂಪರೆಯ ಅವಿಭಾಜ್ಯ ಅಂಗವೆನ್ನಬಹುದು. ಮಂಡ್ಯದ ರಂಗಾಚಾರ್ಯರ ರಾಜಧಾನಿ ನಾಟಕಮಂಡಲಿಯೇ ಅನಂತರ ಗೌರಿ ನರಸಿಂಹಯ್ಯನವರ ಕೈಯಲ್ಲಿ ಶ್ರೀ ಸರಸ್ವತಿ ವಿಲಾಸ ನಾಟಕ ಸಭೆಯಾಗಿ, ಅನಂತರ ವರದಾಚಾರ್ಯರು ಈ ಸಂಸ್ಥೆಯನ್ನು 1904ರಲ್ಲಿ ಪುನರುಜ್ಜೀವನಗೊಳಿಸಿದರು. ಇಪ್ಪತ್ತು ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿದರು. ಇಪ್ಪತ್ತು ನಾಟಕಗಳ ನೂರಾರು ಪ್ರದರ್ಶನಗಳನ್ನು ಕೊಟ್ಟರು. ರತ್ನಾವಳಿ, ಶಾಕುಂತಲ, ನಿರುಪಮ, ಮನ್ಮಥವಿಜಯ, ವಿಷ್ಣುಲೀಲೆ, ಭಕ್ತಪ್ರಹ್ಲಾದ–ಈ ಜನಪ್ರಿಯ ನಾಟಕಗಳನ್ನು ಆಡಿ ದಕ್ಷಿಣ ಭಾರತದಾದ್ಯಂತ ಪ್ರವಾಸ ಮಾಡಿ ಕನ್ನಡ ನಾಡಿನ ರಂಗಸಂಸ್ಕೃತಿಯ ರಾಯಭಾರಿ, ನಾಟಕಶಿರೋಮಣಿ ಎನಿಸಿಕೊಂಡರು. ಹಾಸ್ಯನಟ ಕೃಷ್ಣಮೂರ್ತಿರಾವ್, ರಾಣಿಪಾತ್ರದ ಬೋಧರಾವ್, ಆರ್. ನಾಗೇಂದ್ರರಾವ್, ಎಂ.ಜಿ. ಮರಿರಾವ್, ರಾಜಯ್ಯಂಗಾರ್, ಕೆ.ಸೀತಾರಾಮರಾವ್ ಮೊದಲಾದವರು ಈ ಸಂಸ್ಥೆಯ ಪ್ರಸಿದ್ಧ ನಟರು. ಕನ್ನಡ ರಂಗಭೂಮಿಗೆ ವರದಾಚಾರ್ಯರ ಕೊಡುಗೆ ವಿಶಿಷ್ಟವಾದದ್ದು. ಮುಖ್ಯವಾದದ್ದೆಂದರೆ ರಂಗಸಂಗೀತದ ಸುಧಾರಣೆ. ಕಂದ, ವೃತ್ತ, ಗೀತೆಗಳನ್ನು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಅಳವಡಿಸಿ, ಶುದ್ಧಶಾರೀರದಿಂದ ರಾಗಪರಿಜ್ಞಾನದಿಂದ, ಭಾವಪ್ರತಿಪಾದನೆಗೆ ಹಾಡುವ ವಿಶಿಷ್ಟ ರಂಗಸಂಗೀತ ಇಲ್ಲಿ ಕಾಣಿಸಿಕೊಂಡು ಪ್ರಚುರವಾಯಿತು. ಅನಾವಶ್ಯಕ ಸಂಗೀತಾಲಾಪಗಳನ್ನು ಮಿತಗೊಳಿಸಿ ರಸಪೋಷಣೆಗೆ ತಕ್ಕ ರಾಗ, ಹಾಡಿನ ಅವಧಿಗಳಲ್ಲಿ ಮಾರ್ಪಾಡಾಯಿತು. ಪಾತ್ರಗಳ ಪ್ರವೇಶ ನಿಷ್ಕ್ರಮಣಗಳು ರಸಾವೇಶಕ್ಕೆ ಪೂರಕವಾಗಿ ವಿಜೃಂಭಿಸಿದವು. ರಂಗಸಜ್ಜಿಕೆಯಲ್ಲಿಯೂ ಬದಲಾವಣೆಗಳಾದವು. ರಂಗದ ಪಾರ್ಶ್ವಗಳಲ್ಲಿರುತ್ತಿದ್ದ ಪಕ್ಕವಾದ್ಯದವರನ್ನು ರಂಗದೆದುರು ತಂದು ವಾದ್ಯಹಳ್ಳವನ್ನು ನಿರ್ಮಿಸಿ, ಪಾತ್ರಧಾರಗಳಿಗೂ ಪಕ್ಕವಾದ್ಯದವರಿಗೂ ಸಾಂಗತ್ಯ ತರುವ ಮಾರ್ಗವನ್ನು ರೂಪಿಸಲಾಯಿತು. ಲೆಗ್ ಹಾರ್ಮೋನಿಯಮ್ ವಾದ್ಯವನ್ನು ಹೆಚ್ಚು ಬಳಕೆಗೆ ತರಲಾಯಿತು. ಉಡುಗೆ–ತೊಡುಗೆಗಳಲ್ಲಿಯೂ ನಾವೀನ್ಯವನ್ನು ತಂದು ಅವು ಪಾತ್ರಸಹಜವಾಗಿರುವಂತೆ ಮಾಡಲಾಯಿತು. ಈ ಸುಧಾರಣೆಗಳು ಸರ್ವಜನಮಾನ್ಯವಾಗಿ ಇತರ ವೃತ್ತಿಸಂಸ್ಥೆಗಳೂ ಆಚರಣೆಗೆ ತರತೊಡಗಿದುವು.

ಮೈಸೂರಿನ ಇನ್ನೊಂದು ರಂಗಪರಂಪರೆಯಾಗಿ, ಅರಮನೆ ಕಂಪನಿಯ ಕಲಾವಿದರ ತಂಡ ಮತ್ತೆ ಶಾಕುಂತಲ ಕರ್ನಾಟಕ ಸಭೆಯನ್ನು ಕಟ್ಟಿಕೊಂಡು, ಸ್ವಲ್ಪ ಕಾಲಾನಂತರ ಎನ್. ಸುಬ್ಬಣ್ಣನವರ ನೇತೃತ್ವದಲ್ಲಿ ಶ್ರೀ ಚಾಮುಂಡೇಶ್ವರಿ ನಾಟಕ ಸಭಾ ಎಂಬ ವೃತ್ತಿ ಸಂಸ್ಥೆಯಾಯಿತು. ಕ್ರಮವಾಗಿ ಸುಬ್ಬಣ್ಣ ಆರ್. ನಾಗೇಂದ್ರರಾವ್, ಮರಿರಾವ್ ಹಾಗೂ ಕೊಟ್ಟೂರಪ್ಪನವರ ನೇತೃತ್ವದಲ್ಲಿ ಈ ಕಂಪನಿ ನಡೆದುಕೊಂಡು ಬಂತು. ಈ ಕಂಪನಿಯ ಸುಪ್ರಸಿದ್ಧ ನಾಟಕ ದಾನಶೂರಕರ್ಣ, ವರದಾಚಾರ್ಯರು ರೂಢಿಗೆ ತಂದ ಸುಧಾರಣೆಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಯಿತು. ವಿದ್ಯುಚ್ಛಕ್ತಿಯನ್ನು ಅನುಕೂಲಕ್ಕೆ ತಕ್ಕಂತೆ ಅಳವಡಿಸಿಕೊಂಡು ಅನೇಕ ಮಾಯಾತಂತ್ರ ದೃಶ್ಯಗಳನ್ನು ರಂಗದ ಮೇಲೆ ತರಲಾಯಿತು.

ವರದಾಚಾರ್ಯರ ಅನಂತರ ಕನ್ನಡ ರಂಗಭೂಮಿಯಲ್ಲಿ ಸುಧಾರಣೆಗಳನ್ನು ತಂದು ಸಫಲರಾದವರಲ್ಲಿ ನಾಟ್ಯಕಲಾಪ್ರಪೂರ್ಣ ಬಳ್ಳಾರಿ ಟಿ. ರಾಘವ ಪ್ರಮುಖರು. ಇವರ ನಾಯಕತ್ವದಲ್ಲಿ ಬೆಂಗಳೂರು ಅಮೆಚೂರ್ ಸಂಸ್ಥೆ ರಾಮರಾಜು, ಒಥೆಲೊ, ಮರ್ಚೆಂಟ್ ಆಫ್ ವೆನಿಸ್, ಮಂಡೋದರಿ, ಸಂಯುಕ್ತ ಇತ್ಯಾದಿ ನಾಟಕಗಳನ್ನಾಡಿತು. ರಾಜಾಸ್ತಾನದ ರಂಗಮಂಚಕ್ಕೆ ಸಾಟಿಯಾಗಿ ಸ್ತ್ರೀಯ ಪ್ರವೇಶ ನಿಷಿದ್ಧವಾಗಿದ್ದ ಸಂಪ್ರದಾಯಕ್ಕೆ ವರದಾಚಾರ್ಯರೂ ಕಟ್ಟುಬಿದ್ದಿದ್ದರು. ಇವರ ಅನೌಚಿತ್ಯವನ್ನು ಗಮನಿಸಿದ ರಾಘವರು ವಿದ್ಯಾವಂತ ಪ್ರತಿಷ್ಠಿತ ಮಹಿಳೆಯರನ್ನು ರಂಗಕ್ಕೆ ಏರಿಸಿ ಯಶಸ್ವಿಯಾದರು. ನಾಟಕದಲ್ಲಿ ಸಂಗೀತಕ್ಕಿದ್ದ ಪ್ರಾಧಾನ್ಯವನ್ನು ಮೊಟಕುಗೊಳಿಸಿ ಭಾವಪೂರ್ಣ ಅಭಿನಯಕ್ಕೆ ಗದ್ಯವೇ ಸ್ಪಷ್ಟ ಮಾಧ್ಯಮ ಎನ್ನುವುದನ್ನು ಇವರ ನಾಟಕಗಳು ಸಾಧಿಸಿ ತೋರಿಸಿದವು. ರಾಘವರ ನಾಟಕಗಳಲ್ಲಿ ಹಾಡುಗಳಿರದೆ ಅಲ್ಲಲ್ಲಿ ಉದ್ದೇಶಪೂರ್ವಕ ಸೀಸ ಪದ್ಯಗಳಿರುತ್ತಿದ್ದವು. ರಂಗರಚನೆ, ಉಡುಗೆ ತೊಡುಗೆಗಳ ಸುಧಾರಣೆಗೂ ಗಮನವಿತ್ತರು. ಸನ್ನಿವೇಶಕ್ಕೆ ಹೊಂದಿಕೊಳ್ಳದ ಪರದೆ ಸೀನರಿಗಳ ಬದಲು ಬೂದು ಅಥವಾ ನೀಲಿ ರಂಗಿನ ಹಿಂತೆರೆಯ ಖಾಲಿರಂಗ ಸನ್ನಿವೇಶ ಉದ್ದೇಶವನ್ನು ಈಡೇರಿಸುತ್ತದೆ ಎನ್ನುವುದು ಇವರ ನಿಲವಾಗಿತ್ತು.

ನಟನೊಬ್ಬನ ಅಭಿನಯ ಪ್ರತಿಭೆಯಿಂದ ಉಳಿದುಕೊಂಡು ಬಂದ ಕಂಪನಿಗಳಲ್ಲಿ ಪ್ರಮುಖವಾದದ್ದು ಮಹಮದ್ ಪೀರ್ ಅವರ ಚಂದ್ರಕಲಾ ನಾಟಕ ಮಂಡಳಿ (1930–37). ಅಭ್ಯಾಸ ಪರಿಪೂರ್ಣತೆ, ಮೇಕಪ್ ಪಕ್ವತೆ, ಅಭಿನಯ ಮಹತಿ, ಮಾತುಗಳ ಸ್ಪಷ್ಟ ಉಚ್ಚಾರಣೆ, ಅಗತ್ಯವಿದಷ್ಟೇ ಚಲನವಲನಗಳು, ಭಾವದಲ್ಲಿ ತಲ್ಲೀನತೆ ಇವರ ಯಶಸ್ಸಿನ ಕಾರಣಗಳಾಗಿದ್ದುವು. ಎಚ್.ಎಲ್.ಎನ್.ಸಿಂಹ, ಎಂ.ವಿ.ರಾಜಮ್ಮ ಮೊದಲಾದ ಸಹನಟನಟಿಯರಿದ್ದ ಈ ಕಂಪನಿ ಗೌತಮಬುದ್ಧ, ಷಾಜಹಾನ್, ಸಂಸಾರನೌಕ ನಾಟಕಗಳನ್ನಾಡುತ್ತಿತ್ತು.

ಸಮಕಾಲೀನ ಸಂಸ್ಥೆಗಳಲ್ಲಿ ಪ್ರಮುಖವಾದವೆಂದರೆ ಎಂ.ವಿ. ಸುಬ್ಬಯ್ಯನಾಯ್ಡು ಅವರ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ (1932). ಟಿ. ಸೀತಾರಾಮಯ್ಯನವರ ಸೀತಾವನೋಹರ ಕಂಪನಿ (1934), ಎಂ.ಸಿ. ಮಹದೇವ ಸ್ವಾಮಿಯವರ ಕನ್ನಡ ಥಿಯೇಟರ್ಸ್ ನಾಟಕ ಸಂಘ ಮೊದಲಾದವು.

ಸಾಂಪ್ರದಾಯಿಕ ಕಥಾಚೌಕಟ್ಟನ್ನು ಸಡಲಿಸಿ, ಪರಂಪರಾಗತ ರಂಗಪ್ರಯೋಗ ರೀತಿಯನ್ನು ಧಿಕ್ಕರಿಸಿ, ಹೊಸ ಮಾರ್ಗವನ್ನು ಆವಿಷ್ಕರಿಸಿದವರಲ್ಲಿ ಹಿರಣ್ಣಯ್ಯ ಮಿತ್ರಮಂಡಳಿಯ ಕೆ. ಹಿರಣ್ಣಯ್ಯನವರು ಪ್ರಮುಖರು. ರಂಗದ ಮೇಲೆ ದೀರ್ಘಾವಧಿಯ ಪ್ರಥಮ ಏಕಾಂಕವನ್ನು ತಂದು ಗೆದ್ದವರು ಇವರು. ಈ ಮಂಡಳಿಯ ದೇವದಾಸಿ ನಾಟಕ ಬೆಂಗಳೂರಿನಲ್ಲಿ 387 ಸತತ ಪ್ರದರ್ಶನಗಳಿಂದ ದಾಖಲೆ ಸ್ಥಾಪಿಸಿತು. ಹಿರಣ್ಣಯ್ಯನವರು ಮಕಮಲ್ ಟೋಪಿ, ಪಂಗನಾಮ ಮೊದಲಾದ ನಾಟಕಗಳ ಮೂಲಕ ಕುಡಿತ,

ಸಾಮಾಜಿಕ ತಾರತಮ್ಯ, ವಿಷಮ ವಿವಾಹ ಇತ್ಯಾದಿ ಸಾಮಾಜಿಕ ಸಮಸ್ಯೆಗಳನ್ನು ರಂಗದ ಮೇಲೆ ತಂದು ಹಿಂಜಿ ಬದಲಾಗುತ್ತಿರುವ ಅಭಿರುಚಿಗೆ ಪುಟಗೊಟ್ಟರು. ಇವರ ಮಗ ನರಸಿಂಹಮೂರ್ತಿ (ಮಾಸ್ಟರ್ ಹಿರಣ್ಣಯ್ಯ) ಮತ್ತೆ 1959ರಲ್ಲಿ ಮಿತ್ರಮಂಡಳಿಯನ್ನು ಪುನರುಜ್ಜೀವನಗೊಳಿಸಿದರು. ಸಾಮಾಜಿಕ ಸಮಸ್ಯೆಗಳನ್ನು ಎತ್ತಿ ಹಿಂಜುವುದೇ ಇವರ ಧ್ಯೇಯವಾಯಿತು. ಲಂಚಾವತಾರ, ಭ್ರಷ್ಟಾಚಾರ, ನಡುಬೀದಿ ನಾರಾಯಣ ಮೊದಲಾದ ಇವರ ನಾಟಕಗಳು ಇಂದಿಗೂ ಜನಪ್ರಿಯವಾಗಿವೆ. ಅಭಿನಯಕ್ಕಿಂತ ವ್ಯಂಗ್ಯೋಕ್ತಿಗಳು, ಕಟು ಹಾಸ್ಯದ ಮೊನಚು, ಮಾತಿನಮೋಡಿ, ಸಂಭಾಷಣೆಯ ಮೋಜು ಈ ನಾಟಕಗಳಲ್ಲಿನ ಅಂತಃಸತ್ವ.

ವೃತ್ತಿರಂಗ ಸಂಸ್ಥೆಗಳು ಪ್ರಮುಖವಾಗಿ ಉತ್ತರ ಕರ್ನಾಟಕ ಹಾಗೂ ಮೈಸೂರು ಸಂಸ್ಥಾನಗಳಲ್ಲಿ ಬೇರು ಬಿಟ್ಟು ಅರಳಿದ್ದರೂ ಕನ್ನಡ ನಾಡಿನ ಇತರೆಡೆಗಳಲ್ಲಿಯೂ ಇಂಥ ಚಟುವಟಿಕೆಗಳು ನಡೆದಿವೆ. ಕರಾವಳಿ ತೀರದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ 1912ರ ವೇಳೆಗೆ ಒಂದೆರಡು ಸಂಸ್ಥೆಗಳು ಆಗಿಹೋಗಿದ್ದವು. ರಾಮಯ್ಯ ಅಡಪದರ ಶ್ರೀ ರಾಜರಾಜೇಶ್ವರಿ ನಾಟಕ ಮಂಡಳಿ ಮೈಸೂರು ಕಂಪನಿಗಳ ಸ್ಫೂರ್ತಿಯಿಂದ ಮೂಡಿದ್ದು, 1914ರ ಹೊತ್ತಿಗೆ ಶಾಬು ಸಾಹೇಬ ಕಂಪನಿ ಹಾಗೂ ಮನಮೋಹನ ಕಂಪನಿ ಎಂಬ ಎರಡು ವೃತ್ತಿ ಸಂಸ್ಥೆಗಳು ಕಾರ್ಯನಿರತವಾಗಿದ್ದುವು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಕಂಪನಿಯೆಂದರೆ ಮುಂಡಾಜಿ ರಂಗನಾಥ ಭಟ್ಟರ ಶ್ರೀ ಅಂಬಾಪ್ರಸಾದಿತ ನಾಟಕ ಮಂಡಳಿ, ಕನ್ನಡ ನಾಡಿನಾದ್ಯಂತ ಪ್ರವಾಸ ಮಾಡಿ ಹಗಲು ಪ್ರದರ್ಶನಗಳನ್ನು ಕೊಟ್ಟ ದಕ್ಷಿಣ ಕನ್ನಡದ ಏಕೈಕ ಕಂಪನಿ ಇದು.

ಹೈದರಾಬಾದು ರಾಜ್ಯದಂಚಿನ ಬಳ್ಳಾರಿ ಜಿಲ್ಲೆಯಲ್ಲಿ ಮೊದಮೊದಲು ವೃತ್ತಿರಂಗಭೂಮಿ ತೆಲುಗು ನಾಟಕಗಳನ್ನೇ ಅಳವಡಿಸಿಕೊಂಡಿತ್ತು. ಅನಂತರ ಕನ್ನಡ ನಾಟಕ ರಚನೆಯಿಂದ ಹಿಡಿದು ಕಂಪನಿಯ ಆಗುಹೋಗುಗಳಿಗೆ ಬಾಧ್ಯರಾಗಿ ದುಡಿದ ಕೆ. ಶ್ರೀನಿವಾಸರಾವ್, ಸಿ. ಗೋಪಾಲಚಾರ್ಯ, ಎಚ್. ಹನುಮಂತಗೌಡ, ತೋರಣಗಲ್ಲು ರಾಜಾರಾವ್, ಬಲಗಂದಿ ಓಬಲಶಾಸ್ತ್ರಿ, ಸುಬ್ಬಾಶಾಸ್ತ್ರಿ, ಜೋಳದರಾಶಿ ದೊಡ್ಡನಗೌಡ ಮೊದಲಾದವರು ವೃತ್ತಿರಂಗ ಬೆಳವಣಿಗೆಗೆ ಸಿಂಚನವೆರೆದರು. ಹರಪನಹಳ್ಳಿ, ಹಿರೇಕಲ್ಲು, ಹಂಪಸಾಗರ, ಕೊಟ್ಟೂರು, ಮೊರಬ, ಕಡ್ಲಿಬೈಲು, ಆಲೂರು, ರಾಯದುರ್ಗ ಮೊದಲಾದೆಡೆ ಮಂಡಳಿಗಳು ಹುಟ್ಟಿಕೊಂಡವು. ಬಳ್ಳಾರಿ ಟಿ. ರಾಘವರು ರಂಗಭೂಮಿ ಚಳವಳಿಯಲ್ಲಿ ಕ್ರಾಂತಿಯುಂಟು ಮಾಡಿದರು. ಜೋಳದರಾಶಿ ದೊಡ್ಡನಗೌಡರ ನೇತೃತ್ವದಲ್ಲಿ ಮೂರು ನಾಟಕ ಕಲಾ ಪರಿಷತ್ತುಗಳು ನಡೆದದ್ದು ಈ ಪ್ರಾಂತ್ಯದಲ್ಲಿಯೇ. 1948ರಲ್ಲಿ ನಡೆದ ಮೊದಲ ನಾಟಕ ಪರಷತ್ತಿನ ಅಧ್ಯಕ್ಷತೆ ಗರೂಡ ಸದಾಶಿವರಾಯರದು. 1950ರಲ್ಲಿ ಆರ್. ನಾಗೇಂದ್ರರಾಯರ ಅಧ್ಯಕ್ಷತೆಯಲ್ಲಿ ಎರಡನೆಯ ಪರಿಷತ್ತು ನಡೆಯಿತು. ಮೂರನೆಯ ಪರಿಷತ್ತು ಅ.ನ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ 1952ರಲ್ಲಿ ನಡೆಯಿತು. ಈ ಪರಿಷತ್ತಿನಿಂದ ಕನ್ನಡ ನಾಡಿನ ರಂಗಭೂಮಿ ಬಾಂಧವರು ಒಂದೆಡೆ ಸೇರಿ ರಂಗಹಿತದ ಬಗ್ಗೆ ಚರ್ಚಿಸಲು ವೇದಿಕೆಯೊಂದು ದೊರೆತಂತಾಯಿತು.

ಸು. 1880ರ ವೇಳೆಗೆ ಬೇರುಬಿಟ್ಟು ಸು. 1900ರಿಂದ ಹತ್ತಿರ ಹತ್ತಿರ ಅರ್ಧ ಶತಮಾನ ಕಾಲ ಪ್ರವರ್ಧಮಾನವಾಗಿ ರಂಗಭೂಮಿಯ ಸುವರ್ಣ ಯುಗವನ್ನು ಕಂಡ ಅನಂತರ ಅನಿವಾರ್ಯ ಕಾರಣಗಳಿಂದ ಅವನತಿ ಪಡೆದ ವೃತ್ತಿರಂಗಭೂಮಿ ಕರ್ನಾಟಕದಾದ್ಯಂತ ನಡೆಸಿದ ವ್ಯಾಪಕ ಚಟುವಟಿಕೆಗಳಿಗೆ ಸಾಕ್ಷಿಯಾಗಿ ವಿಪುಲ ನಾಟಕಮಂಡಳಿಗಳಿದ್ದವು.

ಸೀಡೆಡ್ ಡಿಸ್ಟ್ರಿಕ್ಟ್ಸ್ ಅಸೋಸಿಯೇಷನ್, ಬೆಂಗಳೂರು (1900), ಮಳವಳ್ಳಿ ಸುಬ್ಬಣ್ಣನವರ ನಾಟಕ ಮಂಡಳಿ (1900), ಅಮೆಚೂರ್ ನಾಟಕ ಮಂಡಳಿ, ಬೆಂಗಳೂರು (1909), ಶ್ರೀಕೃಷ್ಣ ಪಾರಿಜಾತ ನಾಟಕ ಮಂಡಳಿ (1916), ಅಬ್ಬಿಗೇರಿ ನಾಟಕ ಮಂಡಳಿ, ಜಿ. ನಾಗೇಶರಾಯರ ಜೀವಾನಂದ ರತ್ನಾವಳೀ ನಾಟಕ ಮಂಡಳಿ, ಆರ್ಯರತ್ನಾವಳಿ ನಾಟಕಸಭಾ, ತುಮಕೂರಿನ ಬಿ. ರಂಗನಾಥ ಮೊದಲಿಯಾರ್ ಅವರ ಶಾರದಾ ವಿಲಾಸ ನಾಟಕ ಸಭಾ ಬೆಂಗಳೂರಿನ ಸಾಮ್ರಾಜ್ಯ ಲಕ್ಷ್ಮಿ ನಾಟಕ ಸಭಾ, ಡಿ. ಲಕ್ಕಣಯ್ಯ ಅವರ ಸಾಹಿತ್ಯ ನಾಟಕ ಸಂಘ (1919), ಶ್ರೀ ಸೋಮೇಶ್ವರ ಕೃಪಾಪೋಷಿತ ಕರ್ನಾಟಕ ಸಭಾ, ಗುಬ್ಬಿ ಶಾಂತರಾಜಪ್ಪನವರ ಕಂಪನಿ, ಅಗಳಿ ಕಂಪನಿ, ಗೋಪಾಲರಾಜ ಆರ್ಟ್ ಕಂಪನಿ, ಆರವಳ್ಳಿ, ತಿಮ್ಮೋಟಪ್ಪನ ಕಂಪನಿ, ಸ್ತ್ರೀನಾಟಕ ಕಂಪನಿ, ಬೆಳ್ಳಾವೆ ಸೋಮೇಶ್ವರ ವಿಲಾಸ ನಾಟಕ ಮಂಡಳಿ, ಶ್ರೀಕೃಷ್ಣವಿಲಾಸ ಕರ್ನಾಟಕ ನಾಟಕ ಸಭಾ (1910), ರಸಿಕ ಜನಾನಂದಿನಿ ನಾಟಕಸಭಾ, ಬಾಲ ಸರಸ್ವತಿ ನಾಟಕ ಸಂಘ (1907), ಸರಸ್ವತಿ ನಾಟಕ ಸಭೆ (1907), ಸಿ.ಬಿ. ಮಲ್ಲಪ್ಪನವರ ಶ್ರೀಚಂದ್ರಮೌಳೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಭೆ (1927), ಶ್ರೀ ವಿಜಯಲಕ್ಷ್ಮಿ ನಾಟಕ ಸಭಾ, ಟಿ.ಎಸ್.ಗುರಿಕಾರರ ಭಾರತ ಜನಮನೋಲ್ಲಾಸಿನಿ ನಾಟಕ ಸಭಾ (1924), ಬಾಲರತ್ನಾಕರ ನಾಟಕ ಕಂಪನಿ (1925), ಶ್ರೀ ದುರ್ಗಾಂಬ ಕೃಪಾಪೋಷಿತ ನಾಟಕ ಸಭಾ (1927), ಶ್ರೀ ಶಾರದಾ ವಿಲಾಸ, ಒಥೆಲೊ ಥಿಯೇಟ್ರಿಕಲ್ ಯೂನಿಯನ್ (1914), ಶ್ರೀಪಂಚರತ್ನಾಕರ ನಾಟಕ ಸಭಾ, ಶ್ರೀಶಾರದಾವಿಲಾಸ ನಾಟಕ ಸಭಾ, ಶಾರದಾ ಸಂಗೀತ ನಾಟಕ ಮಂಡಳಿ (1937), ವರದಾಚಾರ್ಯ ಸ್ಮಾರಕ ಕಲಾಸಂಘ, ಸತ್ಯನಾರಾಯಣ ನಾಟಕ ಮಂಡಳಿ (1942), ಇಂದಿರಾ ಲಲಿತ ಕಲಾಸೇವಾ ಮಂಡಳಿ (1946), ಶ್ರೀಮತಿ ಲಕ್ಷ್ಮಾಸಾನಿ ಮಂಡಳಿ, ಶ್ರೀಚಂದ್ರ ಮೌಳೇಶ್ವರಸ್ವಾಮಿ ನಾಟಕ ಮಂಡಳಿ, ಶ್ರೀಸೋಮೇಶ್ವರ ನಾಟಕ ಸಭಾ (1943), ದಾವಣಗೆರೆ ಶಿವಯೋಗಿ ಬಕ್ಕೇಶ್ವರ ಸಂಗೀತ ನಾಟಕ ಮಂಡಳಿ, ಶ್ರೀಸೋಮೇಶ್ವರ ವಿಲಾಸ ನಾಟಕ ಮಂಡಳಿ, ಕೊಳ್ಳೇಗಾಲದ ಅಕ್ಕಮಹಾದೇವಿ ಕೃಪಾಪೋಷಿತ ನಾಟಕ ಸಭಾ (1943), ಕಲಾಸೇವಾ ಮಂಡಳಿ, ಸುಮಂಗಲಿ ನಾಟಕ ಸಂಘ, ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ, ದಿ ಪಾಪ್ಯುಲರ್ ಥಿಯೇಟ್ರಿಕಲ್ ಕಂಪನಿ ಆಫ್ ಮೈಸೂರು, ಮನೋಹರ ಗಾಯನ ಸಮಾಜ, ಶ್ರೀಕಮಲಾಕರ ನಾಟಕ ಸಭೆ, ಸ್ಟಾರ್ ಅಪೇರಾ ಟ್ರೂಪ್, ವಿದ್ವಜ್ಜನ ಮನೋಲ್ಲಾಸಿನಿ ನಾಟಕ ಮಂಡಳಿ, ರಮಾ ಮನೋಹರ ನಾಟಕ ಸಭಾ, ಶ್ರೀ ಚನ್ನಬಸವೇಶ್ವರ ಪ್ರಸನ್ನ ನಾಟಕ ಮಂಡಳಿ, ಕರ್ನಾಟಕ ನಾಟಕ ಸಭಾ, ಶೇಷಕಮಲ ನಾಟಕ ಮಂಡಳಿ, ಸಿಂಹಾಸ್ ಸೆಲೆಕ್ಟ್ ಎವರ್‌ಗ್ರೀನ್ ಆರ್ಟಿಸ್ಟ್, ಶ್ರೀ ತುಪ್ಪದ ಆಂಜನೇಯ ಸ್ವಾಮಿ ಸಂಘ, ಈಸ್ಟರ್ನ್ ಥಿಯೇಟ್ರಿಕಲ್ ಕಂಪನಿ, ಬಾಲಗಂಧರ್ವ ಕಂಪನಿ, ಶ್ರೀ ಶಾಂಭವಿ ಪ್ರಸಾದಿತ ನಾಟಕ ಸಂಘ, ಆರ್ಯ ಕರ್ನಾಟಕ ನಾಟಕ ಸಭಾ, ಸರಸ್ವತಿ ಮನೋಹರ ಗಾಯನ ಸಮಾಜ, ಹೊನ್ನಪ್ಪ ಭಾಗವತರ ಶ್ರೀ ಉಮಾಮಹೇಶ್ವರ ನಾಟಕ ಮಂಡಳಿ, ಎಂ.ಸಿ. ಮಹದೇವಸ್ವಾಮಿಗಳ ಕನ್ನಡ ಥಿಯೇಟರ್ಸ್, ಆರ್. ನಾಗರತ್ನಮ್ಮನವರ ಸ್ತ್ರೀನಾಟಕ ಮಂಡಳಿ, ಯೋಗಾನರಸಿಂಹರ ಆದರ್ಶ ಕಲಾಮಂಡಳಿ, ಬಿತ್ತರಗಿ ಗಂಗಾಧರ ಶಾಸ್ತ್ರಿಗಳ ಶ್ರೀಕುಮಾರ ವಿಜಯ ನಾಟಕ ಸಂಸ್ಥೆ, ಜಮಖಂಡಿಯ ಶ್ರೀಗಜಾನನ ನಾಟ್ಯ ಸಂಘ, ಚಿಂದೋಡಿ ವೀರಪ್ಪನವರ ಕೆ.ಬಿ.ಆರ್. ಡ್ರಾಮಾ ಕಂಪನಿ, ಬಸವರಾಜ ಮನ್ಸೂರರ ವಾಣಿವಿಲಾಸ ನಾಟಕ ಮಂಡಳಿ ಇತ್ಯಾದಿ.

ವೃತ್ತಿರಂಗಭೂಮಿ ಆಳವಾಗಿ ಬೇರುಬಿಟ್ಟು ಉತ್ತರ ಕರ್ನಾಟಕದಲ್ಲಿ ಇನ್ನೂ ಹಲವಾರು ಕಂಪನಿಗಳು ಹಿಂದಿನಷ್ಟೆ ಜೀವಂತವಾಗಿದ್ದು ಜನರನ್ನು ರಂಗಭೂಮಿಯಲ್ಲಿ ಇಂದಿಗೂ ಆಸಕ್ತಿ ಇಡುವಂತೆ ಮಾಡಿದೆ. ಶ್ರೀ ಹುಚ್ಚೇಶ್ವರ ನಾಟಕ ಮಂಡಳಿ, ಹೊಳೆಹುಚ್ಚೇಶ್ವರ ನಾಟಕ ಮಂಡಳಿ, ಕಲಾಪ್ರಕಾಶ ನಾಟಕ ಮಂಡಳಿ, ಕರ್ನಾಟಕ ಕಲಾಸಂಘ, ಮಹಾಕೋಟೇಶ್ವರ

ಕೃಪಾಪೋಷಿತ ನಾಟಕ ಸಂಘ, ಕರ್ನಾಟಕ ನಾಟ್ಯಸಂಘ, ಸಂಗಮೇಶ್ವರ ನಾಟಕ ಮಂಡಳಿ, ಓಂಕಾರೇಶ್ವರ ನಾಟಕ ಸಂಘ, ಮಲ್ಲಿಕಾರ್ಜುನ ನಾಟಕ ಮಂಡಳಿ, ಭಾರತೀ ನಾಟ್ಯಸಂಘ, ಶಿವಯೋಗೀಶ್ವರ ನಾಟಕ ಸಂಘ, ಶ್ರೀವೀರೇಶ್ವರ ನಾಟ್ಯ ಸಂಘ, ಕೊಟ್ಟೂರೇಶ್ವರ ನಾಟ್ಯ ಸಂಘ, ಭುವನೇಶ್ವರಿ ಕೃಪಾನಿಧಿ ಸಂಘ, ಶ್ರೀ ಅಮರೇಶ್ವರ ನಾಟ್ಯ ಸಂಘ ಇತ್ಯಾದಿ ಸಂಸ್ಥೆಗಳು ಇನ್ನೂ ಸಕ್ರಿಯವಾಗಿದ್ದು ಸಾಮಾಜಿಕ ಪೌರಾಣಿಕ ಐತಿಹಾಸಿಕ ನಾಟಕಗಳನ್ನು ನೀಡುತ್ತಿವೆ.

20ನೆಯ ಶತಮಾನದ 5ನೆಯ ದಶಕದಿಂದ ವೃತ್ತಿರಂಗಭೂಮಿ ಕುಸಿಯ ತೊಡಗಿತು. ಇದರ ಅವನತಿಗೆ ಪ್ರಧಾನ ಕಾರಣವೆಂದರೆ ಚಲನಚಿತ್ರಗಳ ಯುಗ ಆರಂಭವಾದದ್ದು. ಮೂಕಚಿತ್ರಗಳು ಹಿಂದೆಯೇ ಬರಲಾರಂಭಿಸಿದ್ದರೂ ಸಂಭಾಷಣಾ ಸಂಗೀತ ಪ್ರಧಾನ ನಾಟಕಗಳಿಗೆ ಪೆಟ್ಟು ಬಿದ್ದಿರಲಿಲ್ಲ. ವಾಕ್ಚಿತ್ರಗಳ ಹೊಳೆ ಹರಿಯತೊಡಗಿದ ಮೇಲೆ ನಾಟಕಗಳಿಗಿಂತ ಅಧಿಕಪಟ್ಟು ಮನರಂಜನೆ ನೀಡಬಲ್ಲ ಚಿತ್ರಗಳತ್ತ ಪ್ರೇಕ್ಷಕರ ಅಭಿರುಚಿ ಒಲಿಯಿತು. ಅಲ್ಲಲ್ಲಿ ಅಲ್ಪಸ್ವಲ್ಪವಿದ್ದ ರಂಗಮಂದಿರಗಳು ಚಿತ್ರಮಂದಿರಗಳಾದುವು. ಟೂರಿಂಗ್ ಸಿನಿಮಾ ಮಂಡಳಿಗಳು ಅಧಿಕವಾಗಿ ವೃತ್ತಿರಂಗಮಂಡಳಿಗಳು ಅವುಗಳೊಂದಿಗೆ ಸ್ಪರ್ಧಿಸಲಾರದಾದವು. ರಂಗಭೂಮಿಯ ಹೆಸರಾಂತ ನಟವೃಂದ ಆಕರ್ಷಕ ಚಿತ್ರರಂಗವನ್ನು ಪ್ರವೇಶಿಸಿದುದರಿಂದ ರಂಗ ಪ್ರತಿಪಲಾಯನವಾಗಿ ಆ ದಿಕ್ಕಿನಲ್ಲಿಯೂ ವೃತ್ತಿರಂಗ ಸೋಲತೊಡಗಿತು. ಇದರ ಜೊತೆಗೆ ನಗರಗಳಲ್ಲಿ ಹವ್ಯಾಸಿ ರಂಗಭೂಮಿ ಕಾಣಿಸಿಕೊಂಡು ವೃತ್ತಿರಂಗ ನಗರ ಪ್ರೇಕ್ಷಕರನ್ನು ಸಂಪೂರ್ಣವಾಗಿ ಕಳೆದುಕೊಂಡಿತು. ನಾಡಿನಾದ್ಯಂತ ಜನರಲ್ಲಿ ಮೊಳೆತ ಹೊಸ ಅಭಿರುಚಿಗೆ, ಹೊಸ ಜೀವನ ವಿಧಾನಕ್ಕೆ ಹೊಸ ನಾಗರಿಕತೆಗೆ ಹೊಂದಿಕೊಳ್ಳಲಾಗದೆ, ತನ್ನ ಅಂತಸ್ಸತ್ವ ವನ್ನುಳಿಸಿಕೊಂಡು, ಹೊಸ ಸವಾಲಿಗನುಗುಣವಾಗಿ ತನ್ನ ಅಂತರಂಗವನ್ನು ಬದಲಿಸಿಕೊಳ್ಳಲಾಗದೆ ವೃತ್ತಿರಂಗಭೂಮಿ ಅವನತಿಯ ದಾರಿ ಹಿಡಿಯಿತು. ಅನಂತರದಲ್ಲಿ ಪರ್ಯಾಯ ವ್ಯವಸ್ಥೆ ಎಂಬಂತೆ ಹವ್ಯಾಸಿ ರಂಗಭೂಮಿ ಚಾಲ್ತಿಗೆ ಬಂತು. **(ಎಸ್.ಎಸ್.ಎಂ.ಯು)**

**ರಂಗಸ್ಥಳ:** ಕೋಲಾರಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಶ್ರೀರಂಗ ನಾಥಸ್ವಾಮಿಯ ಬೃಹತ್ ದೇಗುಲವಿರುವ ಸ್ಥಳ. ಚಿಕ್ಕಬಳ್ಳಾಪುರದಿಂದ ಗೌರಿಬಿದನೂರಿಗೆ ಹೋಗುವ ಮಾರ್ಗದಲ್ಲಿ, ಚಿಕ್ಕಬಳ್ಳಾಪುರಕ್ಕೆ ಸು.5 ಕಿಮೀ ದೂರದಲ್ಲಿರುವ ತಿಪ್ಪೇನಹಳ್ಳಿಯಿಂದ ಬೋದಗನಹಳ್ಳಿಗೆ ಹೋಗುವ ಮಾರ್ಗದಲ್ಲಿ ತಿಪ್ಪೇನಹಳ್ಳಿಗೆ ಸು. 2 ಕಿಮೀ ದೂರದಲ್ಲಿದೆ.

ಇಲ್ಲಿರುವ ಶ್ರೀರಂಗನಾಥಸ್ವಾಮಿ ದೇವಾಲಯ ವಾಸ್ತುಶಿಲ್ಪದ ದೃಷ್ಟಿ ಯಿಂದ ವಿಜಯನಗರದ ಕಾಲಕ್ಕೆ ಸೇರುವಂಥದ್ದು. ದೇವಾಲಯದ ಮಹಾದ್ವಾರ ದಕ್ಷಿಣಾಭಿಮುಖವಾಗಿದ್ದು ಸುಕನಾಸಿ, ನವರಂಗ, ಸುಂದರವಾದ ಮುಖಮಂಟ ಪಗಳನ್ನು ಹೊಂದಿದೆ. ಮುಖಮಂಟಪದ ಸುತ್ತಲೂ ಸುಂದರ ಕೆತ್ತನೆಯಿಂದ ಕೂಡಿದ ಶಿಲಾಸ್ತಂಭಗಳನ್ನೊಳಗೊಂಡ ಹಜಾರವಿದೆ. ಮುಖಮಂಟಪ ಏರಿಸಿದ ಜಗತಿಯ ಮೇಲೆ ನಿರ್ಮಾಣಗೊಂಡಿದೆ. ಇದರಲ್ಲಿ 24 ಶಿಲಾಸ್ತಂಭಗ ಳಿವೆ. ಇದಕ್ಕೆ ಹೊಂದಿಕೊಂಡಂತಿರುವ ಹಜಾರದ 14 ಶಿಲಾಸ್ತಂಭಗಳೂ ಉತ್ತಮ ಕೆತ್ತನೆಯಿಂದ ಕೂಡಿವೆ. ಮುಂಭಾಗದ ಹಜಾರದಲ್ಲಿ 8 ಶಿಲಾಸ್ತಂಭಗಳಿವೆ. ಮುಖಮಂಟಪ ಹಾಗೂ ಹಜಾರದಲ್ಲಿ ಸಾಲುಸಾಲಾಗಿ ಎಲ್ಲ ಶಿಲಾಸ್ತಂಭಗಳಲ್ಲಿಯೂ ಮೂರು ಸಾಲುಗಳ ಕೆತ್ತನೆಗಳಿವೆ. ಮಂಟಪದ ಸೂರು ಕೂಡ ಕಲ್ಲಿನಲ್ಲಿಯೇ ಕೊರೆಯಲ್ಪಟ್ಟಿದ್ದು ಸಾರಸೆನಿಕ ಶಿಲ್ಪ ಶೈಲಿಯನ್ನು ನೆನಪಿಗೆ ತರುವಂತಿದೆ. ನವರಂಗದಲ್ಲಿ ಶ್ರೀವೈಷ್ಣವ ಆಚಾರ್ಯರುಗಳಾದ ವಿಶ್ವಕಸೇನ, ರಾಮಾನುಜ, ನಮ್ಮಾಳ್ವಾರ್ ಮತ್ತು ಚಕ್ರತ್ತಾಳ್ವಾರ್‌ಗಳ ಲೋಹದ ಪ್ರತಿಮೆಗಳಿವೆ. ದೇವಾಲಯದಲ್ಲಿ ಶಯನ ಮುದ್ರೆಯಲ್ಲಿರುವ ಶ್ರೀರಂಗನಾಥ ಸ್ವಾಮಿಯ ಮೂರ್ತಿ ಸುಮಾರು ನಾಲ್ಕು ಅಡಿ ಎತ್ತರವಿದ್ದು ಸುಂದರವಾಗಿದೆ.

ಮುಖಮಂಟಪದ ಮುಂಭಾಗದ ಹಜಾರಕ್ಕೆ ಹೊಂದಿಕೊಂಡಂತಿರುವ ಶಿಲಾಸ್ತಂಭಗಳ ಮೊದಲ ಸಾಲಿನ ಮಧ್ಯದ ಎರಡು ಸ್ತಂಭಗಳ ಮೇಲೆ



ಶ್ರೀರಂಗನಾಥಸ್ವಾಮಿ ದೇವಾಲಯದ ಮಹಾದ್ವಾರ

ಅಶ್ವಾರೋಹಿಗಳನ್ನು ಸುಂದರವಾಗಿ ಕಡೆಯಲಾಗಿದೆ. ಪ್ರಾಕಾರದೊಳಗೆ ಧ್ವಜಸ್ತಂಭದ ಪೂರ್ವಕ್ಕೆ ಶ್ರೀಲಕ್ಷ್ಮೀದೇವಿ ಹಾಗೂ ಅಂಡಾಳದೇವಿಯರ ಆಲಯಗಳಿವೆ. ದೇವಾಲಯದ ಪ್ರಾಕಾರದ ಹೊರಗೆ ಪೂರ್ವದಿಕ್ಕಿನಲ್ಲಿ ಶಂಖ ಮತ್ತು ಚಕ್ರತೀರ್ಥಗಳಿವೆ. ದೇವಾಲಯದ ಪಶ್ಚಿಮಕ್ಕಿರುವ ಬೆಟ್ಟಗಳ ಸಾಲನ್ನು ಜ್ವಾಲಾ ನರಸಿಂಹಸ್ವಾಮಿ ಬೆಟ್ಟವೆಂದು ಕರೆಯುತ್ತಾರೆ.

ಶ್ರೀರಂಗನಾಥಸ್ವಾಮಿ ದೇವಾಲಯವನ್ನು ಚಾಮರಾಜ ಒಡೆಯರು ಪರಕಾಲ ಮಠಾಧೀಶರ ಅಭೀಷ್ಟದಂತೆ ಜೀರ್ಣೋದ್ಧಾರಗೊಳಿಸಿದಂತೆ ತಿಳಿದು ಬರುತ್ತದೆ. ಇಲ್ಲಿ ನಡೆಯುವ ಉತ್ಸವಗಳಲ್ಲಿ ಮಾರ್ಗಶಿರ ಶುದ್ಧ ಪೂರ್ಣಿಮೆ ಯಂದು ನಡೆಯುವ ಬ್ರಹ್ಮೋತ್ಸವ, ಮುಕ್ಕೋಟಿ ಏಕಾದಶಿ, ದಸರ ವಿಶೇಷ ಸೇವೆ ಮತ್ತು ಶ್ರೀರಾಮನವಮಿ ಉತ್ಸವಗಳು ಮುಖ್ಯವಾದವುಗಳು. ಬ್ರಹ್ಮೋತ್ಸವದ ಕಾಲದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

ಇಲ್ಲಿ ಅನೇಕ ಶಾಸನಗಳು ದೊರೆತಿವೆ. ಸು. 12ನೆಯ ಶತಮಾನದಲ್ಲಿ ಪ್ರಸಿದ್ಧ ವೈಷ್ಣವ ಗುರುಗಳಾದ ಪರಾಶರ ಭಟ್ಟರು ಶ್ರೀರಂಗನಾಥನನ್ನು ಕೊಂಡಾಡಿ ಸಂಸ್ಕೃತ ಭಾಷೆಯಲ್ಲಿ ಶ್ರೀರಂಗರಾಜಸ್ತವ ಎಂಬ ಕಾವ್ಯವನ್ನು ರಚಿಸಿದಂತೆ ತಿಳಿದುಬರುತ್ತದೆ. **(ಎಂ.ಎನ್.ವಿ.)**

**ರಂಗಾ,ಬಿ.ಎಸ್.:** 1918– . ಕನ್ನಡ ಚಲನಚಿತ್ರ ನಿರ್ಮಾಪಕ, ನಿರ್ದೇಶಕ, ಛಾಯಾಗ್ರಾಹಕ. ಬೆಂಗಳೂರಿನವರಾದ ಇವರು ಮೊದಲಿಗೆ ರಂಗಭೂಮಿಯ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡದ್ದು ತಮ್ಮ ತಂದೆಯವರ ಮೂಲಕ. ಛಾಯಾಗ್ರಹಣದಲ್ಲಿಯೂ ಆಸಕ್ತಿ ಹೊಂದಿದ್ದ ಇವರು 1940ರ ಸುಮಾರಿಗೆ ಹೆಚ್ಚಿನ ಕಲಿಕೆಗಾಗಿ ಮುಂಬಯಿಗೆ ಹೋಗಿ ಅಲ್ಲಿ ರಣಜಿತ್ ಸ್ಟುಡಿಯೋ ಸೇರಿ ಆ ಸಂಸ್ಥೆಯಲ್ಲಿ ತಯಾರಾದ ಅಛೂತ್, ತುಲಸೀದಾಸ್, ಹೋಲಿ, ಪಾಗಲ್, ಪರದೇಶಿ ಮೊದಲಾದ ಚಿತ್ರಗಳಲ್ಲಿ ಸಹಾಯಕರಾಗಿ ದುಡಿದರು. ಅನಂತರ ಮದರಾಸಿನ ಜೆಮಿನಿ ಸ್ಟುಡಿಯೋದಲ್ಲಿ ಛಾಯಾಗ್ರಹಣ ನಿರ್ದೇಶಕರಾದರು(1941). ಆ ಸಂಸ್ಥೆಯಿಂದ ತಯಾರಾದ ನಾರದರ್, ನಂದನಾರ್, ಬಾಲನಾಗಮ್ಮ, ದಾಸಿ, ಅಪರಂಜಿ ಚಿತ್ರಗಳಿಗೆ ಛಾಯಾಗ್ರಹಣ ಒದಗಿಸಿದರು. ಅನಂತರ ತಮಿಳರೊಬ್ಬರ ಜೊತೆಗೂಡಿ ಭಕ್ತ ತುಲಸೀದಾಸ್ ಎಂಬ ಸ್ವಂತ ಚಿತ್ರವನ್ನು ಮುಂಬಯಿಯಲ್ಲಿ ತಯಾರಿಸಿದರು. ಆದರೆ ಆ ಚಿತ್ರ ಯಶಸ್ವಿಯಾಗಲಿಲ್ಲ. ಅನಂತರ ಭರಣಿ ಸಂಸ್ಥೆಯ ಲೈಲಾಮಜ್ನು

ಚಿತ್ರಕ್ಕೆ ನೀಡಿದ ಛಾಯಾಗ್ರಹಣದಿಂದ ಇವರಿಗೆ ಖ್ಯಾತಿ ಲಭಿಸಿತು. ಸ್ತ್ರೀಸಾಹಸಂ, ಶಾಂತಿ, ದೇವದಾಸು, ಮನಂಪೋಲ್ ಮಾಂಗಲ್ಯಂ, ಕಣವನ್ ಕಣ್ ಕಂಡ ದೈವಂ, ಮೊದಟಿ ರಾತ್ರಿ, ದೀಕ್ಷ ಇತ್ಯಾದಿ ಹಲವಾರು ತಮಿಳು-ತೆಲುಗು ಚಿತ್ರಗಳ ಛಾಯಾಗ್ರಾಹಕರೂ ಇವರೇ. ಅತ್ಯಂತ ಜನಪ್ರಿಯ ಚಿತ್ರವಾದ ದೇವದಾಸು ಇವರ ಹೆಮ್ಮೆಯ ಚಿತ್ರ.

ರಂಗಾ ಅವರು ದಕ್ಷಿಣ ಭಾರತದಲ್ಲಿಯೇ ಪ್ರಥಮವಾದ ಆಟೋಮ್ಯಾಟಿಕ್ ಲ್ಯಾಬೊರೇಟರಿಯಾದ ವಿಕ್ರಂ ಲ್ಯಾಬೊರೇಟರಿ ಸಂಸ್ಥೆಯನ್ನು 1950ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದರು. ಕರ್ನಾಟಕದಲ್ಲಿ ಸಾಕಷ್ಟು ಪ್ರೋತ್ಸಾಹ ದೊರೆಯದೆ ಹೋದುದರಿಂದ ಇದು ಮದರಾಸಿಗೆ ವರ್ಗಾವಣೆಯಾಯಿತು. ಈ ಲ್ಯಾಬೊರೇಟರಿಗೆ ಪೂರಕವಾಗಿ ವಿಕ್ರಂ ಪ್ರೊಡಕ್ಷನ್ಸ್ ಸಂಸ್ಥೆ 1952ರಲ್ಲಿ ಸ್ಥಾಪಿತವಾಯಿತು. ಮಾಗೋಪಿ ಎಂಬ ತೆಲುಗು ಚಿತ್ರ ಈ ಸಂಸ್ಥೆಯ ಪ್ರಥಮ ಚಿತ್ರ. 1955ರಲ್ಲಿ ಇವರದೇ ಆದ ವಿಕ್ರಂ ಸ್ಟುಡಿಯೋ ಸ್ಥಾಪನೆಯಾಯಿತು. ಸ್ಟುಡಿಯೋ, ಲ್ಯಾಬೊರೇಟರಿ, ನಿರ್ಮಾಣ, ನಿರ್ದೇಶನ, ಛಾಯಾಗ್ರಹಣ ಎಲ್ಲವೂ ಸ್ವಂತವಾಗಿದ್ದ ಆ ದಿನಗಳು ಇವರ ಜೀವನದ ಸುವರ್ಣಕಾಲ. ಕನ್ನಡ, ತಮಿಳು, ತೆಲುಗು ಮತ್ತು ಹಿಂದೀ ಈ ನಾಲ್ಕು ಭಾಷೆಗಳಲ್ಲಿಯೂ ಇವರು ಚಿತ್ರಗಳನ್ನು ತಯಾರಿಸಿದ್ದಾರೆ. 1956ರಲ್ಲಿ ಭಕ್ತಮಾರ್ಕಂಡೇಯ ಎಂಬ ಚಿತ್ರವನ್ನು ಮೂರು ಭಾಷೆಗಳಲ್ಲಿ ನಿರ್ಮಿಸಿದರು. ತೆನಾಲಿ ರಾಮಕೃಷ್ಣ, ಕುಟುಂಬಗೌರವಂ ಚಿತ್ರಗಳನ್ನು ಎರಡು ಭಾಷೆಗಳಲ್ಲಿ ನಿರ್ಮಿಸಿದರು. ನಿಶ್ಚಯ ತಾಂಬೂಲಂ, ಪಟ್ಟಿಕಾಟ್ಟು ಪೊನ್ನಯ್ಯ, ತೆನ್ರಲ್ ವೀಸುಂ- ಇವು ತಮಿಳು ಚಿತ್ರಗಳು. ವಸಂತಸೇನ ತೆಲುಗು ಚಿತ್ರ. ಭಾಯಿ ಬೆಹನ್ ಹಿಂದೀ ಚಿತ್ರ. ಮಹಿಷಾಸುರಮರ್ದಿನಿ (1959), ಪ್ರತಿಜ್ಞೆ (1964), ಮಹಾಸತಿ ಅನಸೂಯ (1965), ಚಂದ್ರಹಾಸ (1965), ಪಾರ್ವತಿ ಕಲ್ಯಾಣ (1967)- ಇವು ಕನ್ನಡ ಚಿತ್ರಗಳು. ಕನ್ನಡದ ಪ್ರಪ್ರಥಮ ವರ್ಣಚಿತ್ರವಾದ ಅಮರಶಿಲ್ಪಿ ಜಕಣಾಚಾರಿಯನ್ನು (1964) ನಿರ್ಮಿಸಿದ ಕೀರ್ತಿ ಇವರದು. ಇದಾದ ಅನಂತರ ಭಲೇ ಬಸವ (1969) ಹಾಗೂ ಮಿಸ್ಟರ್ ರಾಜಕುಮಾರ್ (1970) ಎಂಬ ಇನ್ನೆರಡು ವರ್ಣಚಿತ್ರಗಳೂ ಇವರ ತಯಾರಿಕೆಯೇ. ಇವರ ಸಿಡಿಲುಮರಿ (1971) ಹಾಗೂ ಮಣ್ಣಿನ ಮಗಳು (1974) ಅಷ್ಟಾಗಿ ಯಶಸ್ಸು ಕಾಣಲಿಲ್ಲ. ಚಿತ್ರಜೀವನದ ಕೊನೆಯ ಘಟ್ಟಗಳಲ್ಲಿ ಆರ್ಥಿಕ ನಷ್ಟ ಅನುಭವಿಸಿದ ಇವರ ಚಿತ್ರರಂಗ ಚಟುವಟಿಕೆ ಸ್ವಲ್ಪಕಾಲ ಸ್ಥಗಿತಗೊಂಡಿತ್ತು. ಅನಂತರ ಕರ್ನಾಟಕ ಫಿಲಂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನ ಸಹಾಯದಿಂದ ಸುಳಿ(1978) ಎಂಬ ಕನ್ನಡ ಚಿತ್ರವನ್ನು ನಿರ್ಮಿಸಿದರು. ಭಾಗ್ಯವಂತ (1981), ಹಾಸ್ಯರತ್ನ ರಾಮಕೃಷ್ಣ (1982), ಹುಲಿಯಾದ ಕಾಳ (1984) ಇವರ ಇತರ ಚಿತ್ರಗಳು. **(ಎಸ್.ಎಸ್.ಎಂಯು.)**

**ರಂಗಾಚಾರ್ಲು:** 1831-83. ಮೈಸೂರು ಸಂಸ್ಥಾನದ ದಿವಾನರು. ಪೂರ್ಣ ಹೆಸರು ಶಿಟ್ಟಿಪುಣ್ಯಂ ವೀರವಳ್ಳಿ ರಂಗಾಚಾರ್ಲು. 1831ರಲ್ಲಿ ಚೆಂಗಲ್‌ಪಟ್ಟು ಜಿಲ್ಲೆಯ ಶಿಟ್ಟಿಪುಣ್ಯಂನಲ್ಲಿ ಜನಿಸಿದರು. ತಂದೆ ರಾಘವಾಚಾರ್ಯ, ತಾಯಿ ಕನಕಮ್ಮ. ರಂಗಾಚಾರ್ಲು ಅವರು ಮದರಾಸಿನ ಪಚ್ಚೆಯಪ್ಪ ಪಾಠಶಾಲೆ ಮತ್ತು ಮದರಾಸು ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡಿ 1849ರಲ್ಲಿ ವಿಶ್ವವಿದ್ಯಾನಿಲಯದ ಪ್ರೊಫಿಷಿಯೆನ್ಸಿ (ಪ್ರವೀಣ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ 1850ರಲ್ಲಿ ಮದರಾಸು ಕಲೆಕ್ಟರರ ಕಛೇರಿಯಲ್ಲಿ 14 ರೂಪಾಯಿ ವೇತನದ ಮೇಲೆ ಅಸಿಸ್ಟೆಂಟ್ ಮುನ್ಷಿಯಾಗಿ ಸೇರಿದರು. ಆ ತರುವಾಯ ರಿಕಾರ್ಡು ಕೀಪರ್ (ದಫ್ತರ್ ರಕ್ಷಕ), ಡೆಪ್ಯುಟಿ ಅಕೌಂಟೆಂಟ್ (1851), ಹೆಡ್ ರೈಟರ್ ಮತ್ತು ಭಾಷಾಂತರಕಾರರಾಗಿ (1852) ಕೆಲಸ ನಿರ್ವಹಿಸಿದರು. 1855 ರಲ್ಲಿ ಹೆಚ್ಚಿನ ವ್ಯಾಸಂಗಕ್ಕೆಂದು ಮದರಾಸಿಗೆ ಹೋಗಿ ಲಾ ಕಾಲೇಜಿನಲ್ಲಿ ಓದಿದರು. 1856ರಲ್ಲಿ ಸಿವಿಲ್ ಕೋರ್ಟ್ ಪ್ಲೀಡರ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಅದೇ ವರ್ಷ ಸೈದಾಪೇಟೆಯ ತಹಶೀಲ್ದಾರರಾಗಿ ನೇಮಕಗೊಂಡರು. 1857ರಲ್ಲಿ ನೆಲ್ಲೂರು ನಾಯಬ್ ಶಿರಸ್ತೆದಾರ್ ಕೆಲಸ ನಿರ್ವಹಿಸಿ, 1859ರಲ್ಲಿ ರಾಜಮಹೇಂದ್ರಿಯ ಡೆಪ್ಯುಟಿ ಕಲೆಕ್ಟರ್ ಆದರು. ಆಮೇಲೆ ಇನಾಂ ಕಮಿಷನ್ನಿನ ಅಧ್ಯಕ್ಷ ಟೇಲರ್ ಅವರ ಸಹಾಯಕರಾಗಿ ಕೆಲಸ ಮಾಡಿದರು. ಟೇಲರ್ ಅವರು 1864ರಲ್ಲಿ ಭಾರತೀಯ ರೈಲುಗಳ ಸ್ಥಿತಿಯನ್ನು ಪರಿಶೀಲಿಸಲು ನೇಮಕವಾದಾಗ ಅವರು ರಂಗಾಚಾರ್ಲು ಅವರನ್ನು ತಮ್ಮ ಸಹೋದ್ಯೋಗಿಯನ್ನಾಗಿ ನೇಮಿಸಿಕೊಂಡರು. ಅನಂತರ ರಂಗಾಚಾರ್ಲು ಅವರು 1864ರಲ್ಲಿ ಕಲ್ಲಿಕೋಟೆಯ ಟ್ರೆಜರಿ ಡೆಪ್ಯುಟಿ ಕಲೆಕ್ಟರ್ ಆದರು. 1868ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಕಾಲವಾದಾಗ, ಅವರ ಚರ-ಸ್ಥಿರ ಸ್ವತ್ತುಗಳನ್ನು ಜೋಪಾನಮಾಡಿ ಅವರ ಸಾಲಗಳನ್ನು ತೀರಿಸುವ ಏರ್ಪಾಡಿಗಾಗಿ ಮೇಜರ್ ಎಲಿಯಟ್ ನೇಮಕವಾದರು. ಆಗ ಬೌರಿಂಗ್ ಸಾಹೇಬರ ಶಿಫಾರಸಿನಂತೆ ಎಲಿಯಟ್ ಅವರ ಸಹಾಯಕ ಅಧಿಕಾರಿಯಾಗಿ ರಂಗಾಚಾರ್ಲು ಮೈಸೂರಿಗೆ ಬಂದರು. ಇವರು ಅಧಿಕಾರ ವಹಿಸಿಕೊಂಡಾಗ ಅರಮನೆಯ ಆಡಳಿತದಲ್ಲಿ ನ್ಯೂನತೆಗಳಿದ್ದುವು. ಬೊಕ್ಕಸ ಬರಿದಾಗಿತ್ತು. ಅರಮನೆಯ ವಸ್ತುಗಳು ದೋಚಿ ಹೋಗಿದ್ದುವು. ರಂಗಾಚಾರ್ಲು ಕಟ್ಟುನಿಟ್ಟಾದ ನಿಯಮಗಳನ್ನು ತಂದು ಅರಮನೆಯ ದುಂದುವೆಚ್ಚಗಳನ್ನು ಕಡಿತಗೊಳಿಸಿದರು. ಬಾಲಕರಾಗಿದ್ದ ಚಾಮರಾಜ ಒಡೆಯರ ಪಟ್ಟಾಭಿಷೇಕ ಕೂಡಲೆ ಅಗತ್ಯವೆಂದು ಬ್ರಿಟಿಷ್ ಸರ್ಕಾರಕ್ಕೆ ಶಿಫಾರಸು ಮಾಡಿದರು. ಅರಮನೆಯ ಕಾರ್ಯದರ್ಶಿಯಾಗಿದ್ದ ರಂಗಾಚಾರ್ಲು ಅವರಿಗೆ ಚಾಮರಾಜ ಒಡೆಯರ ಪೋಷಕರಿಗೆ ಸಹಾಯ ಮಾಡುವ ಜವಾಬ್ದಾರಿ ಬಿದ್ದಿತು, ಜೊತೆಗೆ ಚಾಮರಾಜ ಒಡೆಯರ ಶಿಕ್ಷಣದ ಉಸ್ತುವಾರಿಯನ್ನು ವಹಿಸಿಕೊಂಡರು.

ಇದೇ ಕಾಲದಲ್ಲಿ ರಂಗಾಚಾರ್ಲು ಮೈಸೂರು ಸಂಸ್ಥಾನದಲ್ಲಿ 50 ವರ್ಷಗಳ ಬ್ರಿಟಿಷ್ ಆಡಳಿತ ಎಂಬ ವಿದ್ವತ್‌ಪೂರ್ಣವಾದ ತಮ್ಮ ಲೇಖನದಲ್ಲಿ ಸಂಸ್ಥಾನದ ಪ್ರಗತಿಯಾಗಿಲ್ಲ, ನಾನಾ ಇಲಾಖೆಗಳು ಅಭಿವೃದ್ಧಿಗೊಳ್ಳ ಬೇಕಾಗಿದೆ ಎಂದು ಹೇಳಿಕೆಯನ್ನಿತ್ತರು. ಲಂಚರುಷುವತ್ತುಗಳನ್ನು ಖಂಡಿಸುತ್ತಿದ್ದ ಇವರು ಅರಮನೆಯ ವೆಚ್ಚವನ್ನು ತಗ್ಗಿಸಿ ಎರಡೂವರೆ ಲಕ್ಷ ರೂಪಾಯಿಗಳನ್ನು ಉಳಿಸಿದರು. ಇಂಡಿಯಾ ಸರ್ಕಾರ ಇವರ ದಕ್ಷತೆಯನ್ನು ಮೆಚ್ಚಿ ಇವರಿಗೆ ಸಿ.ಐ.ಇ. ಬಿರುದು ನೀಡಿತು (1878).

ಚಾಮರಾಜ ಒಡೆಯರು ರಾಜ್ಯಭಾರವನ್ನು ತಾವೇ ವಹಿಸಿಕೊಂಡಾಗ (1881) ರಂಗಾಚಾರ್ಲು ದಿವಾನರಾಗಿ ನೇಮಕಗೊಂಡರು. ದಿವಾನರಾಗಿದ್ದಾಗ

ಇವರು ಬೆಂಗಳೂರು–ತಿಪಟೂರು ರೈಲುಮಾರ್ಗದ ಕೆಲಸವನ್ನು ಪ್ರಾರಂಭಿಸಿದರು. ಮೈಸೂರಿನಲ್ಲಿ 1881 ಆಗಸ್ಟ್ 25ರಂದು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಆ ಸಭೆಯ ಪಿತಾಮಹ ಎಂಬ ಕೀರ್ತಿಯನ್ನು ಗಳಿಸಿದರು. ರಾಜ್ಯದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಟ್ಟರು. ಇವರು 1882ರಲ್ಲಿ ದೇಹಾಲಸ್ಯದಿಂದ ವಿಶ್ರಾಂತಿಗಾಗಿ ಮದರಾಸಿಗೆ ತೆರಳಿ ಅಲ್ಲಿ 1883 ಜನವರಿ 20ರಂದು ನಿಧನರಾದರು. ಇವರು ತೋರಿಕೆಗೆ ಕಠಿಣವಾಗಿ ಕಂಡರೂ ಮೃದುಸ್ವಭಾವದವರಾಗಿದ್ದರು. ನ್ಯಾಯತತ್ಪರರೂ ಪರಮದೇಶಾಭಿಮಾನಿಯೂ ಆಗಿದ್ದ ಇವರು ಚತುರ ಆಡಳಿತಗಾರರು ಸಹ. ದೇಶದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಉನ್ನತಿಗೆ ಶ್ರಮಿಸಿದ ಮುಂದಿನ ಮೈಸೂರು ದಿವಾನರುಗಳಲ್ಲಿ ಎಂ.ವಿಶ್ವೇಶ್ವರಯ್ಯನವರೂ ಸೇರಿದಂತೆ ಎಲ್ಲರಿಗೂ ಇವರು ಮಾದರಿಯಾದದ್ದು ಇವರ ವ್ಯಕ್ತಿತ್ವದ ಹಿರಿಮೆಗೆ ಸಾಕ್ಷಿ.

ಮೈಸೂರು ಸಂಸ್ಥಾನಕ್ಕೆ ಅಪಾರ ಸೇವೆ ಸಲ್ಲಿಸಿದ ಇವರ ಸ್ಮರಣೆಗಾಗಿ ಮೈಸೂರಿನಲ್ಲಿ ರಂಗಾಚಾರ್ಲು ಮೆಮೋರಿಯಲ್ ಹಾಲ್ (ಈಗಿನ ಪುರಭವನ) ಸ್ಥಾಪಿಸಲಾಗಿದೆ. **(ವಿ.ಜಿ.ಕೆ)**

**ರಂಗಾಯಣ:** ಕನ್ನಡದ ವೃತ್ತಿ ರಂಗಭೂಮಿ ಪುನಶ್ಚೇತನ ನೀಡುವ ಸಲುವಾಗಿ ಕರ್ನಾಟಕ ಸರ್ಕಾರ ಮೈಸೂರಿನಲ್ಲಿ ಸ್ಥಾಪಿಸಿದ ಒಂದು ಸಂಸ್ಥೆ (1989). ಮೈಸೂರು–ಹುಣಸೂರು ರಸ್ತೆಯಲ್ಲಿರುವ ಕಲಾಮಂದಿರದ ಆವರಣದಲ್ಲಿ ಇದು ನೆಲೆಗೊಂಡಿದೆ. ಆಧುನಿಕ ಪರಿಕಲ್ಪನೆಯ ರೆಪರ್ಟರಿ ಕಂಪೆನಿಯಾದ ರಂಗಾಯಣ ತನ್ನ ವಿಶಿಷ್ಟವಾದ ರಂಗಪ್ರಯೋಗಗಳಿಂದಾಗಿ ದೇಶಾದ್ಯಂತ ಹೆಸರು ಮಾಡಿದೆ. ವಿದೇಶಗಳಲ್ಲಿಯೂ ರಂಗಪ್ರದರ್ಶನಗಳನ್ನು ನೀಡಿ ಮೆಚ್ಚುಗೆ ಪಡೆದಿದೆ. ನಲವತ್ತು ಜನರ ಸಮಗ್ರ ತಂಡವಾದ ರಂಗಾಯಣ ತನ್ನದೇ ಆದ ಕಲಾವಿದರು, ಪ್ರಶಿಕ್ಷಕರು, ತಂತ್ರಜ್ಞರು



ನಾಟಕ: ಗಾಂಧಿ ವರ್ಸಸ್ ಗಾಂಧಿ

ಹಾಗೂ ಆಡಳಿತ ಸಿಬ್ಬಂದಿಯನ್ನು ಹೊಂದಿದೆ. ಇದು ಭೂಮಿಗೀತ ಎಂಬ ಸುಸಜ್ಜಿತ ರಂಗಮಂದಿರ, ವನರಂಗ ಎಂಬ ಬಯಲುರಂಗ ಮಂದಿರ, ಶ್ರೀರಂಗ ಎಂಬ ಕಿರುರಂಗಮಂದಿರ, ರಂಗಮಾಹಿತಿ ಕೇದ್ರ, ರಂಗ ತರಬೇತಿ ಶಾಲೆ, ಕರಕುಶಲ ಮಾರಾಟಮಳಿಗೆ–ಕುಟೀರ, ರಂಗ ಪುಸ್ತಕಮಳಿಗೆ, ಕ್ಯಾಂಟೀನ್ ಇತ್ಯಾದಿ ಖಾಯಂ ವ್ಯವಸ್ಥೆಗಳನ್ನು ಹೊಂದಿದೆ. ವರ್ಷವಿಡೀ ವಾರಾಂತ್ಯ ರಂಗಪ್ರದರ್ಶನಗಳನ್ನು ನೀಡುತ್ತದೆ. ಪ್ರತಿ ವರ್ಷ ಒಂದು ರಾಷ್ಟ್ರೀಯ ನಾಟಕೋತ್ಸವ, ಒಂದು ಹವ್ಯಾಸಿ ನಾಟಕೋತ್ಸವ, ಚಿಣ್ಣರಮೇಳ ಎಂಬ ಮಕ್ಕಳ ಬೇಸಗೆ ಶಿಬಿರ ಹಾಗೂ ರಾಜ್ಯಾದ್ಯಂತ ಹಲವು ರಂಗತರಬೇತಿ ಕಾರ್ಯಾಗಾರಗಳನ್ನು ನಡೆಸುತ್ತದೆ. ಪ್ರಪಂಚ ಖ್ಯಾತ ರಂಗನಿರ್ದೇಶಕರಾದ ಬಿ.ವಿ.ಕಾರಂತರು ಈ ಸಂಸ್ಥೆಯ ಮೊದಲ ಮುಖ್ಯಸ್ಥರು ಹಾಗೂ ನಿರ್ದೇಶಕರು. ಅನಂತರ ಸಿ.ಬಸವಲಿಂಗಯ್ಯ, ಪ್ರಸನ್ನ ನಿರ್ದೇಶಕರಾಗಿದ್ದರು. ಈಗ ಚಿದಂಬರರಾವ್‌ಜಂಬೆ ನಿರ್ದೇಶಕರಾಗಿದ್ದಾರೆ. ದೇಶವಿದೇಶಗಳ ಹೆಸರಾಂತ ನಿರ್ದೇಶಕರು, ರಂಗ ವಿನ್ಯಾಸಕರು ರಂಗಾಯಣ ಸಂಸ್ಥೆಗೆ ನಾಟಕ ತಯಾರಿಸಿಕೊಟ್ಟಿದ್ದಾರೆ. ಕನ್ನಡದ ಎಲ್ಲ ಪ್ರಮುಖ ನಾಟಕಕಾರರ ನಾಟಕಗಳು, ವಿದೇಶಿ ನಾಟಕಕಾರರ ಪ್ರಮುಖ ಕೃತಿಗಳು ಈ ಆಧುನಿಕ ರೆಪರ್ಟರಿ ತಂಡದ ಪ್ರದರ್ಶನಮಾಲೆಯಲ್ಲಿ ಸೇರಿವೆ. ಕರ್ನಾಟಕದ ಮೂಲೆ ಮೂಲೆಗಳಿಂದ ಆಯ್ಕೆ ಮಾಡಲಾದ ತರಬೇತಾದ ಪ್ರಸಿದ್ಧ ಕಲಾವಿದರು ಹಾಗೂ ತಂತ್ರಜ್ಞರು ರಂಗಾಯಣದ ಬೆನ್ನೆಲುಬಾಗಿ ದುಡಿಯುತ್ತಿದ್ದಾರೆ.

ರಂಗಾಯಣ ಒಂದು ಸ್ವಾಯತ್ತ ಸಾಂಸ್ಕೃತಿಕ ಸಂಸ್ಥೆ. ಸಂಸ್ಥೆಯ ನಿರ್ವಹಣೆಗೆಂದು ಕರ್ನಾಟಕ ಸರ್ಕಾರ ರಂಗ ಸಮಾಜ ಎಂಬ ಸಂಘವೊಂದನ್ನು ನೊಂದಾಯಿಸಿ ನಡೆಸಿಕೊಂಡು ಬರುತ್ತಿದೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಸಚಿವರು ರಂಗಸಮಾಜದ ಅಧ್ಯಕ್ಷರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯವರು ಇದರ ಕಾರ್ಯಾಧ್ಯಕ್ಷರು. ರಂಗಾಯಣದ ನಿರ್ದೇಶಕರು ರಂಗಸಮಾಜದ ಪದನಿಮಿತ್ತ ಕಾರ್ಯದರ್ಶಿಗಳು. ರಂಗ ಸಮಾಜವು ರಂಗಭೂಮಿಯ ಪ್ರತಿಷ್ಠಿತ ಹಿರಿಯರನ್ನು ಸದಸ್ಯರನ್ನಾಗಿ ಹೊಂದಿದ್ದು ಇವರೆಲ್ಲರ ಮಾರ್ಗದರ್ಶನದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರಲಾಗುತ್ತಿದೆ.

ರಂಗಾಯಣ ತನ್ನ ಆವರಣದಲ್ಲಿ ಕರಕುಶಲ ಮಾರಾಟ ಮಳಿಗೆಯೊಂದನ್ನು ಸ್ಥಾಪಿಸಿದೆ. ಗ್ರಾಮೀಣ ಭಾಗದ ಹಾಗೂ ಮಹಿಳಾ ಕರಕುಶಲಕರ್ಮಿಗಳ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ವರ್ಷವಿಡೀ ಪ್ರತಿ ಶನಿವಾರ ಮತ್ತು ಭಾನುವಾರದಂದು ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟವಿರುತ್ತದೆ. ಈ ಮೂಲಕ ನಿರ್ಲಕ್ಷಿತ ಜನಪದ ಕುಶಲ ಕರ್ಮಿಗಳಿಗೆ ಉತ್ತೇಜನ ನೀಡುವುದು ರಂಗಾಯಣದ ಆಶಯ.

ಭಾರತದಲ್ಲಿ ಕೆಲಸ ಮಾಡುತ್ತಿರುವ ಎರಡು ಪ್ರಮುಖ ರೆಪರ್ಟರಿ ತಂಡಗಳಲ್ಲಿ ರಂಗಾಯಣ ಒಂದು. ರಂಗಾಯಣದ ವಾರಾಂತ್ಯ ಪ್ರದರ್ಶನಗಳು ಭೂಮಿಗೀತ ರಂಗಮಂದಿರದಲ್ಲಿ ನಡೆಯುತ್ತವೆ. ಇದು ಇನ್ನೂರು ಮಂದಿ ಪ್ರೇಕ್ಷಕರು ಕೂರಬಲ್ಲಂತಹ ಸುಸಜ್ಜಿತ ರಂಗಮಂದಿರ. ರಂಗಮಂದಿರಕ್ಕೆ ಹೊಂದಿಕೊಂಡಿರುವ ಉಪಾಹಾರ ಗೃಹ, ರಂಗ ಮಾಹಿತಿ ಕೇಂದ್ರದ ಗ್ರಂಥ ಭಂಡಾರ, ಸುಂದರವಾದ ಉದ್ಯಾನವನ ಇತ್ಯಾದಿ ವ್ಯವಸ್ಥೆಗಳು ಪ್ರೇಕ್ಷಕರಿಗೆ ಸುಸಂಸ್ಕೃತ ವಾತಾವರಣ ನಿರ್ಮಿಸುವಲ್ಲಿ ಸಹಕಾರಿಯಾಗಿವೆ.

ರಂಗಾಯಣ ತನ್ನ ನಾಟಕಗಳನ್ನು ನಿಯತವಾಗಿ ಕರ್ನಾಟಕದ ವಿವಿಧ ಪಟ್ಟಣಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಪ್ರದರ್ಶಿಸುತ್ತಾ ಬಂದಿದೆ. ದೆಹಲಿ, ಮುಂಬೈ, ಕೋಲ್ಕತಗಳಲ್ಲಿ ನಡೆಯುವ ರಾಷ್ಟ್ರೀಯ ನಾಟಕೋತ್ಸವಗಳಲ್ಲಿ ರಂಗಾಯಣ ಭಾಗವಹಿಸುತ್ತದೆ. ಹದಿನೈದು ವರ್ಷಗಳ ಅಪಾರ ಅನುಭವ ಹೊಂದಿರುವ ಕಲಾವಿದರು, ಸಂಗೀತಗಾರರು, ವಿನ್ಯಾಸಕರು ಹಾಗೂ ತಂತ್ರಜ್ಞರು ಇಲ್ಲಿ ಖಾಯಂ ಆಗಿ ಲಭ್ಯವಿದ್ದಾರೆ. ದೇಶವಿದೇಶಗಳ ಪ್ರಖ್ಯಾತ ರಂಗ ನಿರ್ದೇಶಕರುಗಳಾದ ಫ್ರಿಟ್ಸ್ ಬೆನವಿಟ್ಸ್, ಕನ್ಹಯ್ಯಲಾಲ್ ಸಿಂಗ್, ವಾಸಲೈ, ಶ್ರೀಮತಿ ಇರಿಯಾನ, ಬಿ. ವಿ. ಕಾರಂತರು, ಪ್ರಸನ್ನ, ಬಸವಲಿಂಗಯ್ಯ, ರುಸ್ತುಂ ಬರೂಚ, ಎಂ.ಎಸ್. ಸತ್ಯು, ಭಾಗೀರಥಿಬಾಯಿ ಮೊದಲಾದವರು ರಂಗಾಯಣಕ್ಕೆ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಶೇಕ್ಸ್‌ಪಿಯರ್, ಬರ್ಟೋಲ್ಟ್ ಬ್ರೆಕ್ಟ್, ಶ್ರೀರಂಗ, ಕುವೆಂಪು, ಶಿವರಾಮಕಾರಂತ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಮಾಸ್ತಿ ಮೊದಲಾದ ಅನೇಕ ಹೆಸರಾಂತ ನಾಟಕಕಾರರ ನಾಟಕಗಳನ್ನು ರಂಗಾಯಣ

ಪ್ರದರ್ಶಿಸಿದೆ. ಸಾಕ್ಷರತಾ ಆಂದೋಲನದಲ್ಲಿ ಭಾಗಿಯಾಗಿ ನೂರಾರು ಬೀದಿ ನಾಟಕಗಳನ್ನು ಅಭಿನಯಿಸಿದೆ. ಡಿಡಿಪಿಐ ಹಾಗೂ ಡಿಸಿಆರ್‌ಟಿ ಸಂಸ್ಥೆಗಳೊಂದಿಗೆ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸಿದೆ. ರಂಗಾಯಣ ಈಗ ಭಾರತೀಯ ರಂಗಶಿಕ್ಷಣ ಕೇಂದ್ರವೆಂಬ ತರಬೇತಿ ಸಂಸ್ಥೆಯನ್ನು ಮೈಸೂರಿನಲ್ಲಿ ಆರಂಭಿಸಿದೆ. ಇದು ಇಡೀ ದೇಶದಲ್ಲೇ ಮೊದಲನೆಯದು. ಇಲ್ಲಿ ಸಂವಹನ ತರಬೇತಿ, ವ್ಯಕ್ತಿತ್ವ ವಿಕಾಸ ತರಬೇತಿ, ನಾಯಕತ್ವ ತರಬೇತಿ, ಶಿಕ್ಷಣದಲ್ಲಿ ರಂಗಭೂಮಿ ಕಾರ್ಯಕ್ರಮ, ಕಲಾ

ತಲೆದಂಡ ನಾಟಕದ ಒಂದು ದೃಶ್ಯ

ಜಾಥಾಗಳು ಮೊದಲಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದೆ. ಕರ್ನಾಟಕದ ಪಂಚಾಯತಿ ಸದಸ್ಯರುಗಳಿಗೆ ತರಬೇತಿ ನೀಡುವ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಹತ್ತ್ವಾಕಾಂಕ್ಷಿ ಯೋಜನೆಯಲ್ಲಿ ರಂಗಾಯಣ ಕೈಜೋಡಿಸಿದೆ. ಶ್ರೀರಂಗ ಕೇಂದ್ರ ದಕ್ಷಿಣ ಭಾರತದಲ್ಲಿಯೇ ಮೊದಲನೆಯ ರಂಗಮಾಹಿತಿ ಹಾಗೂ ಸಂಶೋಧನ ಕೇಂದ್ರವಾಗಿ ಅಭಿವೃದ್ಧಿಗೊಳ್ಳಲಿದೆ. ಆಧುನಿಕ ಮಾಹಿತಿ ತಂತ್ರಜ್ಞಾನ ಜಾಲವನ್ನು ಅದು ಬಳಸಿಕೊಳ್ಳುತ್ತಿದೆ. ಜೊತೆಗೆ ವರ್ಷವಿಡೀ ಮುಖಾಮುಖಿ, ಚರ್ಚಾಗೋಷ್ಠಿ, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮೊದಲಾದ ಕಾರ್ಯಕ್ರಮಗಳನ್ನು ಈ ಕೇಂದ್ರದಿಂದ ನಡೆಸಲಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ರಂಗ ಸಂಶೋಧನೆಯ ಪಿಎಚ್.ಡಿ ಕಾರ್ಯಕ್ರಮ ಸದ್ಯದಲ್ಲಿಯೇ ಆರಂಭವಾಗಲಿದೆ. ರಂಗಾಯಣದ ಚಿಣ್ಣರ ಮೇಳ ಅಪಾರ ಜನಪ್ರಿಯತೆ ಗಳಿಸಿಕೊಂಡಿರುವ ಮಕ್ಕಳ ಬೇಸಗೆ ರಂಗ ಶಿಬಿರ. ಪ್ರತಿ ವರ್ಷದ ಏಪ್ರಿಲ್–ಮೇ ತಿಂಗಳಲ್ಲಿ ಒಂದು ತಿಂಗಳ ಕಾಲ ನಡೆಯುವ ಈ ಬೇಸಗೆ ಶಿಬಿರವು ರಂಗ ತರಬೇತಿ, ಚಿತ್ರಕಲೆ, ಸಂಗೀತ, ಕರಕುಶಲ ಕಲೆಗಳು, ವಿಜ್ಞಾನ, ಪರಿಸರ ಪ್ರಜ್ಞೆ ಮೊದಲಾದ ಹಲವು ಕ್ಷೇತ್ರಗಳನ್ನು ಮಕ್ಕಳಿಗೆ ಪರಿಚಯಿಸುತ್ತದೆ. ಚಿಣ್ಣರ ಮೇಳದ ಕೊನೆಯಲ್ಲಿ ಐದು ದಿನಗಳ ಮಕ್ಕಳ ನಾಟಕೋತ್ಸವ ನಡೆಯುತ್ತದೆ. ಶಿಬಿರದಲ್ಲಿ ತಯಾರಾಗುವ ಹತ್ತಾರು ನಾಟಕಗಳು ಇಲ್ಲಿ ಪ್ರದರ್ಶಿತವಾಗುತ್ತವೆ.

ರಂಗಾಯಣ ಪ್ರತಿ ವರ್ಷವೂ ರಾಷ್ಟ್ರೀಯ ನಾಟಕೋತ್ಸವವನ್ನು ನಡೆಸಿಕೊಂಡು ಬರುತ್ತಿದೆ. 2001ರಲ್ಲಿ ಮಹಿಳಾ ಸಶಕ್ತ ವರ್ಷದ ಅಂಗವಾಗಿ ದೇಶದಲ್ಲಿ ಪ್ರಥಮ 'ಅಕ್ಕ' ಮಹಿಳಾ ನಾಟಕೋತ್ಸವವನ್ನು ರಾಷ್ಟ್ರಮಟ್ಟದಲ್ಲಿ ಸಂಘಟಿಸಲಾಯಿತು. ಈ ನಾಟಕೋತ್ಸವದಲ್ಲಿ ರಾಷ್ಟ್ರದ ಪ್ರಮುಖ ಭಾಷೆಗಳ, ಶ್ರೇಷ್ಠ ನಿರ್ದೇಶಕರ ಉತ್ತಮ ನಾಟಕಗಳು ಪ್ರದರ್ಶನಗೊಂಡವು. ಭಕ್ತಿಕವಿ ಹಾಗೂ ಪಾರಂಪರಿಕ ನಟ ಬಹುರೂಪಿ ಚೌಡಯ್ಯನವರ ನೆನಪಿನ 'ಬಹುರೂಪಿ' ನಾಟಕೋತ್ಸವ ಭಾರತೀಯ ಜನಪದ ಹಾಗೂ ಕಥನ ಶೈಲಿಗೆ ಒತ್ತು ನೀಡಿತು. ದೇಶಾದ್ಯಂತ ಹಲವಾರು ರಂಗತಂಡಗಳು, ಜನಪದ ಕಲಾವಿದರು, ವಿದ್ವಾಂಸರು ಇದರಲ್ಲಿ ಭಾಗವಹಿಸುವರು. ಉತ್ಸವದ ಅಂಗವಾಗಿ ಭಾರತೀಯ ಕಥನ ರಂಗಭೂಮಿಯ ಬಗ್ಗೆ ಮೂರು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವೂ ಯೋಜಿತವಾಗಿತ್ತು. ನಾಟಕೋತ್ಸವದ ಸಂದರ್ಭದಲ್ಲಿ ಚಿತ್ರ ಪ್ರದರ್ಶನ, ವಸ್ತು ಪ್ರದರ್ಶನ, ಪುಸ್ತಕ ಪ್ರದರ್ಶನ–ಮಾರಾಟ, ಕರಕುಶಲ ವಸ್ತುಗಳ ಮಾರಾಟ, ಭಾರತೀಯ ಶೈಲಿಯ ಊಟೋಪಚಾರಗಳ ಉತ್ಸವ ಮೊದಲಾದವುಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಅಸಂಘಟಿತವಾಗಿದ್ದ ಮತ್ತು ಕ್ಷೀಣಿಸುತ್ತಿದ್ದ ರಂಗಕಲೆಗಳಿಗೆ ತರಬೇತಿ, ಶಿಕ್ಷಣ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ರಂಗಾಯಣ ಸಮಾಜ ಮುಖಿಯಾಗಿದೆ. *

**ರಂಜಾಳ ಗೋಪಾಲ ಶೆಣೈ:** 1897– . ಕರ್ನಾಟಕದ ಪ್ರಸಿದ್ಧ ಶಿಲ್ಪಿಗಳು. ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ 1897 ಜನವರಿ 6 ರಂದು ಜನಿಸಿದರು. ಕಾರ್ಕಳಕ್ಕೆ ಹತ್ತಿರದಲ್ಲಿರುವ ರಂಜಾಳ ಇವರ ಹಿರಿಯರ ಮೂಲಸ್ಥಳ. ಇವರ ತಂದೆ ಜನಾರ್ದನ ಶೆಣೈಯವರೂ ಶಿಲ್ಪಿಗಳು. ಅವರು ಗೌಡಸಾರಸ್ವತ ಸಮಾಜದಲ್ಲಿ ಪೂಜನೀಯರಾಗಿದ್ದ ಶ್ರೀ ಭುವನೇಂದ್ರಸ್ವಾಮಿಯವರ ಅಂತರಂಗ ಶಿಷ್ಯರಂತಿದ್ದವರು. ಗೋಪಾಲ ಶೆಣೈಯವರಿಗೂ ತಂದೆಯಿಂದ ಶಿಲ್ಪಕಲೆ ಇಳಿದು ಬಂತು. ಶೆಣೈ ಅವರು ಶಾಸ್ತ್ರೀಯವಾಗಿ ಎಲ್ಲೂ ಕಲಾಭ್ಯಾಸ ಮಾಡದಿದ್ದರೂ ಗುರುಕರುಣೆ, ತಂದೆಯ ಮಾರ್ಗದರ್ಶನ, ಅಚಲ ಶ್ರದ್ಧೆ ಹಾಗೂ ನಿರಂತರ ಪ್ರಯತ್ನಗಳಿಂದ ಪರಿಣತ ಶಿಲ್ಪಿಯೆನಿಸಿದರು. ಶಿಲ್ಪಕ್ಕೆ ತಮ್ಮ ಬದುಕನ್ನು ಮೀಸಲಿಡುವ ಮೊದಲು, ಸುಮಾರು ಹದಿನೈದು ವರ್ಷಗಳ ಕಾಲ ಇವರು ಕಾರ್ಕಳದ ವಿ.ಡಿ.ಎ. ಸಂಸ್ಕೃತ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದರು. ಇವರಿಗೆ ಸಂಸ್ಕೃತ ಭಾಷೆಯಲ್ಲಿ ಗಾಢವಾದ ಅರಿವಿತ್ತು. ಜೈನಶಾಸ್ತ್ರ–ಧರ್ಮ ಗ್ರಂಥಗಳನ್ನೂ ಕಾವ್ಯಗಳನ್ನೂ ಸಾಕಷ್ಟು ಅಧ್ಯಯನ ಮಾಡಿದ್ದರು. 1920ರ ಸುಮಾರಿಗೆ ಇವರು ತಮ್ಮ ಶ್ರೀಮದ್ಭುವನೇಂದ್ರ ಶಿಲ್ಪಶಾಲೆಯನ್ನು ಸ್ಥಾಪಿಸಿದರು. ಅಂದಿನಿಂದ ಇಂದಿನವರೆಗೆ ಅದೇ ಇವರ ಕಾರ್ಯಕ್ಷೇತ್ರವಾಗಿತ್ತು.

ಕಾರ್ಕಳ ವೆಂಕಟರಮಣ ದೇವಾಲಯದ ಗರುಡ ಮಂಟಪದ ನಾಲ್ಕು ಕಂಬಗಳನ್ನು ಕಡೆದ ಮೇಲೆಯೇ ಇವರ ಕಲಾ ವಿದಗ್ಧತೆ ಜನರ ಕಣ್ಮನಗಳನ್ನು ಸೆಳೆದದ್ದು. ಆ ಕಂಬಗಳ ಕಂಡರಣೆಗೆ ಇವರಿಗೆ ಎಂಟು ವರ್ಷಗಳು



ಹಿಡಿದುವು (1934–42). ನೆಲ್ಲಿಕಾಯಿ ಶಿಲೆಯಲ್ಲಿ ನಿರ್ಮಿತವಾದ ಆ ಕಂಬಗಳ ಕುಸುರಿಗೆಲಸ ತುಂಬು ಸೊಗಸಿನದು ಮತ್ತು ನಯಗಾರಿಕೆಯದು.

ಇವರಿಗೆ ವಿಗ್ರಹ ಶಿಲ್ಪದಲ್ಲಿ ಹೆಚ್ಚಿನ ಆಸಕ್ತಿಯಿತ್ತು. ಈವರೆಗೆ ಇವರು ನಿರ್ಮಿಸಿರುವ ವಿಗ್ರಹಗಳು ಅನೇಕ. ಹೃಷಿಕೇಶದ ಶಿವಾನಂದ ಆಶ್ರಮದಲ್ಲಿರುವ ಮುರಳೀಧರ, ಅಲಹಾಬಾದಿಗೆ ಕಳುಹಿಸಿದ ಕಡೆಗೋಲು ಕೃಷ್ಣ, ಪರ್ತಗಾಳಿಮಠಕ್ಕೆ ನೀಡಿದ ವೃಂದಾವನ, ವಡಾಲಮಠಕ್ಕೆ ಒಪ್ಪಿಸಿದ ರಾಮಲಕ್ಷ್ಮಣಸೀತೆ–ಇವು ಕೆಲವು ಉತ್ಕೃಷ್ಟ ರಚನೆಗಳು. ಕಂಚು ಬೆಳ್ಳಿ ಬಂಗಾರ ಮುಂತಾದ ಲೋಹಗಳಿಂದ ಮಣ್ಣು ಮತ್ತು ದಂತದಿಂದಲೂ ಸೂಕ್ಷ್ಮ ಸುಂದರ ಪ್ರತಿಮೆಗಳನ್ನು ಶೆಣೈಯವರು ನಿರ್ಮಿಸಿದ್ದಾರೆ. ಅಮೃತ

ಶಿಲೆ, ಸಾಲಿಗ್ರಾಮಗಳಲ್ಲೂ ಮೋಹಕ ಮೂರ್ತಿಗಳನ್ನು ಕಡೆದಿದ್ದಾರೆ. ಶೆಣೈ ಅವರು ಕೆಲಕಾಲ ಚಿತ್ರಕಲೆಯಲ್ಲೂ ನಿರತರಾಗಿದ್ದರು. ಇವರ ಮನೆಯಲ್ಲಿ ಇನ್ನೂ ಮಾಸದೆ ಉಳಿದಿರುವ ಹಿರಿಯಂಗಡಿ ಮಾನಸ್ತಂಭ, ಸಿದ್ಧಾರ್ಥನ ರಾಜ್ಯತ್ಯಾಗ, ಹೊಲೆಯರ ಮದುವೆ–ಈ ಕೆಲವು ಚಿತ್ತಾಕರ್ಷಕ ವರ್ಣ ಚಿತ್ರಗಳು ಇವರ ಚಿತ್ರಕಲೆಯ ನೆನಪಿನ ಹೆಗ್ಗುರುತಾಗಿವೆ.

ಗೋಪಾಲ ಶೆಣೈಯವರ ಹೆಸರು ಕರ್ನಾಟಕದಲ್ಲೇ ಅಲ್ಲದೆ ಹೊರನಾಡುಗಳಿಗೂ ಹಬ್ಬುವಂತಾದುದು ಇವರು ಧರ್ಮಸ್ಥಳಕ್ಕಾಗಿ ನಿರ್ಮಿಸಿದ ಗೊಮ್ಮಟೇಶ್ವರನ ಬೃಹನ್ಮೂರ್ತಿಯಿಂದ. ಈ ಬೃಹನ್ಮೂರ್ತಿಯ ಕೆತ್ತನೆ 1967 ಅಕ್ಟೋಬರ್ 12ರಂದು ಕಾರ್ಕಳದ ಮಂಗಲಪಾದೆ ಎಂಬಲ್ಲಿ ವಿಧ್ಯುಕ್ತವಾಗಿ ಆರಂಭವಾಗಿ ಸುಮಾರು ಐದು ವರ್ಷಗಳಲ್ಲಿ, ಐವತ್ತಕ್ಕೂ ಹೆಚ್ಚು ಜನ ಕುಶಲಕರ್ಮಿಗಳ ನೆರವಿನಿಂದ ಪೂರ್ಣ ಗೊಂಡಿತು. 1973ರ ಮಾರ್ಚ್ ತಿಂಗಳಲ್ಲಿ ಈ ಮೂರ್ತಿಯನ್ನು ಕಾರ್ಕಳದಿಂದ ತಂದು ಧರ್ಮ ಸ್ಥಳದಲ್ಲಿ ಪ್ರತಿಷ್ಠಾಪಿಸಲಾ ಯಿತು. 13 ಅಡಿಗಳ ಪೀಠ ಭಾಗವನ್ನು ಬಿಟ್ಟು ಪಾದ ದಿಂದ ಶಿರಸ್ಸಿ ನವರೆಗೆ 39 ಅಡಿ ಉದ್ದ, 14 ಅಡಿ ಅಗಲ, 170 ಟನ್ ಭಾರವಿರುವ ಈ ಮೂರ್ತಿ ಆಧುನಿಕ ಶಿಲ್ಪ ಚರಿತ್ರೆಗೆ ಅಚ್ಚ ರಿಯ ಒಂದು ಅಧ್ಯಾಯವನ್ನೇ ಸೇರಿಸಿದೆ.

1969ರಲ್ಲಿ ಗೋಪಾಲ ಶೆಣೈಯವರಿಗೆ ಭಾರತ ಸರ್ಕಾರ ಮಾಸ್ಟರ್ ಕ್ರ್ಯಾಫ್ಟ್ಸ್‌ಮನ್ ಪ್ರಶಸ್ತಿಯನ್ನು ನೀಡಿತು. ಅದೇ ವರ್ಷ ಕರ್ನಾಟಕ ರಾಜ್ಯ ಸರ್ಕಾರ ಲಲಿತ ಕಲಾ ಅಕಾಡೆಮಿ ಪ್ರಶಸ್ತಿಯನ್ನಿತ್ತು ಗೌರವಿಸಿತು. (ಎಂ.ಆರ್.ಎ.)

**ರಕ್ಕಸತಂಗಡಿ:** ವಿಜಯನಗರ ಸಾಮ್ರಾಜ್ಯದ ಮೇಲೆ 1565ರಲ್ಲಿ ಬಹಮನೀ ಸುಲ್ತಾನರು ಒಟ್ಟುಗೂಡಿ ಯದ್ಧಮಾಡಿದ ಒಂದು ರಣಬಯಲು. ತಾಳೀಕೋಟೆ ಯದ್ಧವೆಂದೂ ಪ್ರಸಿದ್ಧ. ಈ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಸೋತು ಕೊನೆಗೊಂಡಿತು. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕಸಬೆಯಿಂದ ಈಶಾನ್ಯಕ್ಕೆ 35 ಕಿಮೀ ದೂರದಲ್ಲಿರುವ ತಾಳೀಕೋಟೆಯಲ್ಲಿದ್ದ ಕೋಟೆಯಲ್ಲಿ ಮುಸಲ್ಮಾನ ಸುಲ್ತಾನರು ತಮ್ಮ ಸೇನೆಯನ್ನು ಸಂಗ್ರಹಿಸಿ ಅನಂತರ ಇದರ ಹತ್ತಿರವಿರುವ ಪ್ರದೇಶದಲ್ಲಿ ಯುದ್ಧಮಾಡಿದ್ದರಿಂದ ತಾಳೀಕೋಟೆ ಯುದ್ಧವೆಂದು ಕರೆಯುವುದು ವಾಡಿಕೆಯಾಯಿತು. ಆದರೆ ವಾಸ್ತವವಾಗಿ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಕೃಷ್ಣಾನದಿಯ ಉತ್ತರಕ್ಕೆ ಇರುವ ಇಂದಿನ ರಕ್ಕಸಗಿ– ತಂಗಡಗಿ– ತಂಗಡಬೈಲು ಅಮ್ಮಾಪುರ – ಹೀಗೆ ಮೂರು ಚಿಕ್ಕ ಚಿಕ್ಕ ಹಳ್ಳಿಗಳನ್ನು ಆವರಿಸಿಕೊಂಡಿರುವ ದೊಡ್ಡ ಬಯಲಿನಲ್ಲಿ ಯುದ್ಧ ನಡೆದಿದೆ. ಇದರ ಬಗ್ಗೆ ಕೆಳದಿ ನೃಪವಿಜಯ ಗ್ರಂಥದಲ್ಲಿ ಶಾಲಿವಾಹನ ಶಕವರ್ಷ 1487ನೆಯ ರಕ್ತಾಕ್ಷಿ ಸಂವತ್ಸರದ ಮಾಘಬಹುಳದಲ್ಲಿ ರಕ್ಕಸತಂಗಡಿಯೆಂಬ ಸ್ಥಳದಲ್ಲಿ ರಾಮರಾಯರಂ ಪಿಡಿದು ಶಿರಶ್ಛೇದನಂಗೈದು ಎಂಬ ಉಲ್ಲೇಖವಿದೆ. ಇದರಂತೆ ದಾಖಲೆಗಳು ದೊರೆತ ಮೇಲೆ ತಾಳೀಕೋಟೆ ಯುದ್ಧವನ್ನು ರಕ್ಕಸತಂಗಡಿ ಯುದ್ಧ ಎಂದು ಇತಿಹಾಸ ತಜ್ಞರು ಪರಿಷ್ಕರಿಸಿದರು. ಇಂದಿನ ರಕ್ಕಸಗಿಯೆ ಅಂದಿನ ರಕ್ಕಸತಂಗಡಿ. ಕೃಷ್ಣಾ ನದಿಯ ಎಡಬಲದ ಹಲವಾರು ಸ್ಥಳಗಳಲ್ಲಿ ಯುದ್ಧ ನಡೆದಿದ್ದು ಅಂಥ ಸ್ಥಳಗಳಲ್ಲಿ ರಕ್ಕಸತಂಗಡಿಯೂ ಒಂದು. *

**ರಗಳೆ:** ಸಂಸ್ಕೃತ–ಪ್ರಾಕೃತ ಪ್ರಭಾವದಿಂದ ಹುಟ್ಟಿ ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಬಳಕೆಗೊಂಡಿರುವ ಮಾತ್ರಾಗಣಬದ್ಧವಾದ ವಿಶಿಷ್ಟ ಛಂದೋ ರೂಪ. ಇದರಲ್ಲಿ ಉತ್ಸಾಹ, ಮಂದಾನಿಲ, ಲತವೆಂಬ ಮೂರು ಪ್ರಭೇದಗಳಿವೆ. ರಗಳೆ, ರಘಟಾ ಎಂಬ ಶಬ್ದಗಳನ್ನು ಮೊದಲಬಾರಿಗೆ ಬಳಸಿದವನು ಛಂದೋಂಬುಧಿಯ ಕರ್ತೃ ನಾಗವರ್ಮ. ಇದರ ಲಕ್ಷಣ ಗಳನ್ನು ಹೇಳಿರುವವರಲ್ಲಿ ನಾಗವರ್ಮ ಮತ್ತು ಜಯಕೀರ್ತಿ ಮುಖ್ಯರು. ರಗಳೆ ಛಂದಸ್ಸು ಮಾರ್ಗಕಾವ್ಯಗಳಲ್ಲಿ ವರ್ಣಕ ಭಾಗವಾಗಿ ಸೇರಿ ಹರಿಹರನ ಕಾವ್ಯಗಳಲ್ಲಿ ಒಂದು ಸ್ವತಂತ್ರ ದೇಸೀಕಾವ್ಯ ಮಾಧ್ಯಮವಾಗಿ ಬೆಳೆದದ್ದನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾಣುತ್ತೇವೆ. ಸಂಸ್ಕೃತ, ಪ್ರಾಕೃತ ಛಂದೋಗ್ರಂಥಗಳಲ್ಲಿ ರಘಟಾ ಶಬ್ದದ ಉಲ್ಲೇಖ ಕಾಣುವುದಿಲ್ಲ. ಇದರಿಂದಾಗಿ ಉಳಿದ ಛಂದೋವ್ಯಾಕರಣ ಗ್ರಂಥಗಳಲ್ಲಿ ಕಾಣುವ ಉಲ್ಲೇಖ ಗಳಿಗೆಲ್ಲ ಛಂದೋಂಬುಧಿಯ ಉಲ್ಲೇಖವೇ ಮೂಲವಾಗಿರಿಬೇಕೆಂಬುದು ವಿದ್ವಾಂಸರ ಅಭಿಪ್ರಾಯ.

ತೆಲುಗು ಭಾಷೆಯಲ್ಲಿ ರಗಳೆ ಎಂಬುದಕ್ಕೆ ರಗಡ ಎಂಬ ಪದದ ಬಳಕೆಯಿದೆ. ಆದರೆ ಈ ಭಾಷೆಯ ಪ್ರಾಚೀನ ಲಕ್ಷಣ ಗ್ರಂಥಗಳಲ್ಲಾಗಲಿ, ಆಧುನಿಕ ವಿದ್ವಾಂಸರಲ್ಲಾಗಲಿ ಈ ಶಬ್ದದ ಬಗೆಗೆ ವಿಶೇಷ ಚರ್ಚೆ ನಡೆದಂತಿಲ್ಲ. ಸಂಸ್ಕೃತದಲ್ಲಿ ಅಲಂಕಾರ ಸಂಗ್ರಹ, ಛಂದಶೇಖರ ಇತ್ಯಾದಿ ಕೃತಿಗಳಲ್ಲಿ ರಗಲಾ, ರಗಡಾ ಎಂಬ ಪ್ರಯೋಗಗಳು ಕಾಣಿಸಿಕೊಂಡಿದ್ದರೂ ಶಬ್ದಶಃ ಯಾವ ಅರ್ಥದಲ್ಲಿ ಅವು ಬಳಕೆಗೊಂಡಿರಬಹುದು ಎಂಬುದರ ವಿವರಣೆ ದೊರೆಯುವುದಿಲ್ಲ.

ರಗಳೆ ಹೆಸರಿನ ಬಗೆಗೆ ಕನ್ನಡ ವಿದ್ವಾಂಸರಲ್ಲಿ ವಿಪುಲ ಚರ್ಚೆಯಿದೆ. ವಿದ್ವಾಂಸರ ಪ್ರಕಾರ ಈ ಪದ್ಯಜಾತಿ ಕನ್ನಡಕ್ಕೆ ಪ್ರಾಕೃತ ಸಾಹಿತ್ಯದ ವಿಶೇಷ ಸಂಪರ್ಕವುಂಟಾದ ಕಾಲದಲ್ಲಿ ಕಾಣಿಸಿಕೊಂಡಿತು. ಆದ್ದರಿಂದ ಇದರ ಮೂಲವೂ ಪ್ರಾಕೃತ ಅಥವಾ ಅಪಭ್ರಂಶ ಸಾಹಿತ್ಯಕ್ಕೆ ಸಂಬಂಧಿಸಿರ ಬಹುದೆಂಬ ಅಭಿಪ್ರಾಯವಿದೆ. ರಾಜಶೇಖರನ ಛಂದಶೇಖರದಲ್ಲಿ ರಗಡಾಧ್ರುವಕ ಎಂಬ ಪದಪ್ರಯೋಗವಿದೆ. ಇಲ್ಲಿ ರಗಡಾ ಎಂಬುದು ಒಂದು ಪದ್ಯಜಾತಿಯನ್ನು ಹೇಳುವ ಶಬ್ದವಾಗಿರುವುದು ಸ್ಪಷ್ಟ. ಈ ಪದ್ಯಜಾತಿಯ ಲಕ್ಷಣಗಳೇ ಕನ್ನಡ ರಗಳೆಯ ಮೂಲ ಎಂಬುದು ರಾಜಶೇಖರ ಹಾಗೂ ಹೇಮಚಂದ್ರ ಈ ಇಬ್ಬರ ಅಭಿಮತವೂ ಆಗಿದೆ. ಈ ರಗಡಾಧ್ರುವಕವೇ ಕನ್ನಡದ ರಗಳೆ ಮತ್ತು ಸಂಸ್ಕೃತದ ರಘಟಾ ಶಬ್ದಗಳ ಹುಟ್ಟಿಗೆ ಪ್ರೇರಕ ವಾಗಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯ (ರಗಡಾ(ಪ್ರಾ) > ರಗಳೆ (ಕ) < ರಘಟಾ (ಸಂ).

ಬೇರೆಬೇರೆ ಪಾದಗಳ ಒಂದು ಘಟಕವನ್ನು ಹೇಳುವ ಶಬ್ದ ರಗಳೆ. ಬೇರೆ ಬೇರೆ ಗಣನಿಯಮಗಳಿಗನುಸಾರವಾಗಿ ಇದರ ಪಾದರಚನೆಯೂ ಬೇರೆ ಬೇರೆಯಾಗುತ್ತದೆ. ಇವು ಪಂಪಾದ್ಯರ ಕಾಲದಲ್ಲಿ ಪದ್ದಳಿ ಇತ್ಯಾದಿ ಹೆಸರುಗಳಿಂದ ಸೂಚಿತವಾಗಿವೆ. ಕನ್ನಡದ ಪದ್ದಳಿಯ ರಗಳೆ ಅಪಭ್ರಂಶದಲ್ಲಿ ಕಾಣುವ ಪಜ್ಜಟಿಕೆಯ ಕಡವಕಗಳಂತೆ. ಹೀಗೆ ಪ್ರಾಕೃತ ಮೂಲವನ್ನು ಅನುಸರಿಸುವಾಗ ಕನ್ನಡದಲ್ಲಿ ಕೆಲವು ಸ್ವತಂತ್ರ ವ್ಯತ್ಯಾಸ ಗಳನ್ನು ಮಾಡಿಕೊಳ್ಳಲಾಗಿದೆ. ಚಂಪೂಕಾವ್ಯಗಳಲ್ಲಿ ವಿಪುಲವಾಗಿ, ಶಾಸನಗಳಲ್ಲಿ ಕ್ವಚಿತ್ತಾಗಿ ಕಾಣಿಸಿಕೊಳ್ಳುವ ರಗಳೆಗಳಿಗೆ ಅಪಭ್ರಂಶ ಛಂದಸ್ಸಿನಲ್ಲಿ ಕಾಣುವ ತ್ರಿಕಲ, ಚತಷ್ಕಲ ಮತ್ತು ಪಂಚಕಲ ಎಂಬ ಹೆಸರುಗಳಿಂದ ಕಟ್ಟಿರುವ ಕಡವಕಗಳೇ ಮೂಲ ಮತ್ತು ಪ್ರೇರಕ ಎಂಬ ಅಭಿಪ್ರಾಯವಿದೆ. 3, 4 ಮತ್ತು 5 ಮಾತ್ರೆಗಳ ಈ ರಗಳೆಗಳಲ್ಲಿ ಪ್ರಾಚೀನ ಕನ್ನಡ ಕವಿಗಳು ಅಪಭ್ರಂಶ ಕವಿಗಳಂತೆಯೇ ವೈವಿಧ್ಯತೆ ವ್ಯತ್ಯಾಸಗಳನ್ನೂ ಮಾಡಿಕೊಂಡಿದ್ದಾರೆ. ಈ ರಗಳೆಗಳು 12ನೆಯ ಶತಮಾನ ದಲ್ಲಿ ಹರಿಹರನ ಕೈಯಲ್ಲಿ ಸ್ಥಾಯೀ ರೂಪವನ್ನು ಪಡೆದು ಉತ್ಸಾಹ, ಮಂದಾನಿಲ ಮತ್ತು ಲಲಿತವೆಂಬ ಹೆಸರುಗಳಿಂದ ಪ್ರಸಿದ್ಧಿಗೊಂಡವು. ಪ್ರಾಚೀನ ಕಾವ್ಯಶಾಸ್ತ್ರಾದಿ ಗ್ರಂಥಗಳಲ್ಲಿ ರಗಳೆ ಪ್ರಯೋಗಗೊಂಡಿದ್ದರೂ ಅದರ ಸಂಪೂರ್ಣ ಸತ್ತ್ವ ವ್ಯಾಪ್ತಿಗಳನ್ನು ಮನಗಂಡು ಇದನ್ನೇ ತನ್ನ ಕಾವ್ಯಗಳ ಪ್ರಧಾನ ಛಂದಸ್ಸನ್ನಾಗಿ ಗಣಿಸಿ ಅತ್ಯಂತ ಯಶಸ್ವಿಯಾಗಿ ಪ್ರಯೋಗಿಸಿದವನು ಹರಿಹರ. ಈತ ರಗಳೆಯ ಕವಿಯೆಂದೇ ಪ್ರಸಿದ್ಧನಾದ. ಕೆರೆಯ ಪದ್ಮರಸ, ತ್ರಿಭುವನ ತಾತ, ರಾಘವಾಂಕ, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಸ್ವತಂತ್ರ ಸಿದ್ಧಲಿಂಗೇಶ್ವರ, ಆಂಡಯ್ಯ ಮೊದಲಾದವರು ಹರಿಹರನ ಅನಂತರ ರಗಳೆ ಪ್ರಕಾರವನ್ನು ತಮ್ಮ ಕಾವ್ಯಗಳಲ್ಲಿ ಮುಂದುವರಿಸಿ ಕೊಂಡು ಹೋದರು.

ರಗಳೆ ಯಾವ ಛಂದಸ್ಸಂಪ್ರದಾಯದ್ದು ಎಂಬ ಸೂಚನೆ ನಮಗೆ ನಾಗವರ್ಮನಲ್ಲಿ ಸಿಗಬಹುದಾದರೂ ಅದರ ಮೂಲಕ ನೇರ ನಿರ್ದೇಶನ ನಮಗೆ ದೊರೆಯುವುದು ಜಯಕೀರ್ತಿಯ ಛಂದೋನುಶಾಸನದಲ್ಲಿ. ಇದರಲ್ಲಿ

ರಘಟಾದ ಲಕ್ಷಣವನ್ನು ಹೇಳುತ್ತಾ ಪದ್ಧತಿ ಎಂಬ ಛಂದಸ್ಸಿನೊಂದಿಗೆ ರಗಳೆಯನ್ನು ಸಮೀಕರಿಸಿದ್ದಾನೆ. ಇವನು ಬಳಸುವ ಸೈವ ಪದ್ಧತಿ ಎಂಬ ಮೂಲದ ಮಾತು ರಗಳೆ ಛಂದಸ್ಸಿನ ಮೂಲದ ಮೇಲೆ ಬೆಳಕುಚೆಲ್ಲಿದೆ.

ಕನ್ನಡ ಕಾವ್ಯಗಳ ಮಾತೃಕೆಗಳಲ್ಲಿ ರಗಳೆಯ ಪದ್ಯಗಳಿಗೆ ಅಲ್ಲಲ್ಲಿ ಪದ್ಧತಿ ಎಂಬ ಸಂಸ್ಕೃತ ಪದದ ಪ್ರಾಕೃತ ರೂಪವಾದ ಪದ್ದಡಿ, ಪದ್ಧಳಿ ಎಂಬ ಹೆಸರುಗಳ ಬಳಕೆಯನ್ನು ಕಾಣಬಹುದು. ಇದು ಆ ಪದ್ಯಜಾತಿ ಪದ್ಧತಿ ಛಂದಸ್ಸಿನ ರಗಳೆಯಾಗಿದೆ ಎನ್ನುವುದನ್ನು ಸೂಚಿಸುತ್ತದೆ.

ಉತ್ಸಾಹ, ಮಂದಾನಿಲ, ಲಲಿತ– ಈ ಮೂರು ಪ್ರಭೇದಗಳ ಹೆಸರು ಮತ್ತು ಲಕ್ಷಣ ನಿರೂಪಣೆ ಮೊದಲ ಬಾರಿಗೆ ಕಂಡುಬರುವುದು ಗುಣಚಂದ್ರನ ಛಂದಸ್ಸಾರದಲ್ಲಿ. ಈ ಬಗೆಗೂ ವಿದ್ವಾಂಸರಲ್ಲಿ ವಿಪುಲ ಚರ್ಚೆಯಾಗಿದೆ. ಈ ಮೂರು ಹೆಸರುಗಳೂ ಕನ್ನಡ ಛಂದಶ್ಶಾಸ್ತ್ರ ಸಂಪ್ರದಾಯಮೂಲವಾಗಿ ಬಂದಿರಬಹುದು. ಇವಕ್ಕೆ ಈ ಮೂರು ರಗಳೆಗಳ ಸಾಮಾನ್ಯ ಮುಖ್ಯ ಪ್ರೇರಣೆ ಛಂದೋಂಬುಧಿಯೇ ಆಗಿರಬೇಕು.

ಉತ್ಸಾಹ ರಗಳೆಯ ಸಾಮಾನ್ಯ ಲಕ್ಷಣ: ಒಂದು ರೀತಿ – 4 ತ್ರಿಮಾತ್ರಾಗಣಗಳಂತೆ ಪಾದಕ್ಕೆ 12 ಮಾತ್ರೆಗಳು:

ಕುಳಿರ್ವ । ಪೂಗೊ । ಳಂಗ । ಳಲ್ಲಿ

ತಳಿರ । ಕಾವ । ಣಂಗ । ಳಲ್ಲಿ (ಕಬ್ಬಿಗರಕಾವ)

ಇನ್ನೊಂದು ರೀತಿ– 8 ತ್ರಿಮಾತ್ರಾಗಣಗಳಂತೆ ಪಾದಕ್ಕೆ 16 ಮಾತ್ರೆಗಳು:

ಮಗನ । ಕರೆಯ । ಲಂದು । ಶಂಕೆ । ಯಿಲ್ಲ । ದಿರ್ದ । ರೆಳ್ದು । ಪೋಗಿ

ಮಗನೆ । ಮಗನೆ । ಬಾರೆ । ನುತ್ತೆ । ತಂದೆ । ಕರೆದು । ನೋಡಿ । ಬೀಗಿ॥

(ಸಿರಿಯಾಳನ ರಗಳೆ)

ಮಂದಾನಿಲ ರಗಳೆಯ ಸಾಮಾನ್ಯ ಲಕ್ಷಣ 4 ಚತುರ್ಮಾತ್ರಾಗಣಗಳಂತೆ ಪಾದಕ್ಕೆ 16 ಮಾತ್ರೆಗಳು:

ಪಂಕಜ । ದಂತಿರೆ । ಪುಟ್ಟಿದ । ಳೊಲವಿಂ

ಪಂಕವ । ನೆಂದುಂ । ಪೊರ್ದದೆ । ನಲವಿಂ

(ಆದಯ್ಯನ ರಗಳೆ)

ಲಲಿತ ರಗಳೆಯ ಸಾಮಾನ್ಯ ಲಕ್ಷಣ 4 ಪಂಚಮಾತ್ರಾಗಣಗಳಂತೆ ಪಾದಕ್ಕೆ 20 ಮಾತ್ರೆಗಳು:

ಸೊಂಪಿನಿಂ । ಕಂಪಿಡುವ । ಸಂಪಗೆಗ । ಳಂ ಕೊಂಡು

ಪೊಂಪೆಸೆವ । ಹೊಂಗೇದ । ಗೆಯ ಹೂಗ । ಳಂ ಕೊಂಡು

(ಬಸವರಾಜದೇವರ ರಗಳೆ)

ಕನ್ನಡದ ಲಲಿತ ರಗಳೆ ಇಂಗ್ಲಿಷ್‌ನ ಬ್ಲಾಂಕ್ ವರ್ಸ್ ಎಂಬ ಛಂದಃ ಪ್ರಕಾರದ ಕೆಲವು ಸೌಲಭ್ಯಗಳನ್ನು ಅಳವಡಿಸಿಕೊಂಡು ಸರಳ ರಗಳೆ, ಮಹಾಛಂದಸ್ಸುಗಳೆಂಬ ಹೆಸರುಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಕಾಸಗೊಂಡದ್ದನ್ನೂ ನಾವು ಗಮನಿಸಬಹುದು. *

**ರಘುನಾಥರಾವ್,ಆರ್.:** ಸು. 1860–1918. ಹೊಸಗನ್ನಡ ಅರುಣೋದಯ ಕಾಲದ ಭಾಷಾಸೇವಕರು. ಮೈಸೂರಿನವರು. ಮದರಾಸು ವಿಶ್ವವಿದ್ಯಾನಿಲಯದ ಬಿ.ಎ. ಪದವೀಧರರಾಗಿ ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ಅಧ್ಯಾಪಕರಾಗಿ ಕೆಲಸಮಾಡಿದರು. ಇವರು ಭೂಗೋಳ, ಇತಿಹಾಸ, ಇಂಗ್ಲಿಷ್ ವಿಷಯಗಳ ಬೋಧಕರಾಗಿದ್ದರೂ ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಹಲವು ಬಗೆಯಲ್ಲಿ ಶ್ರಮಿಸಿದರು. ಚಾರಿತ್ರಿಕ ಮತ್ತು ಶಾಸ್ತ್ರೀಯ ದೃಷ್ಟಿಯಿಂದ ಕನ್ನಡ ಭಾಷೆಯ ಅಧ್ಯಯನ ಕೈಕೊಂಡ ಇವರು ಭಾಷೆಯ ಸ್ವರೂಪ, ಬೆಳವಣಿಗೆ, ವರ್ಣಮಾಲೆ, ವ್ಯಾಕರಣ ಮೊದಲಾದ ವಿಷಯಗಳನ್ನು ಕುರಿತು ಅಭ್ಯಾಸಪೂರ್ಣ ಬರೆಹಗಳನ್ನು ಪ್ರಕಟಿಸಿದರು. ಈಸೋಪನ ನೀತಿ ಕಥೆಗಳು, ಕರ್ನಾಟಕ ವ್ಯಾಕರಣೋಪನ್ಯಾಸ ಮಂಜರಿ, ನೀತಿರತ್ನಾಕರ, ಸನಾತನ ಧರ್ಮ ದೀಪಿಕೆ, ದಿ ಆರ್ಟ್ ಆಫ್ ಟ್ರಾನ್ಸ್‌ಲೇಶನ್–ಇವು ಇವರ ಕೆಲವು ಕೃತಿಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗಾಗಿಯೂ ಶ್ರಮಿಸಿದ ರಘುನಾಥರಾಯರು ಪರಿಷತ್ತಿನ ಕಾರ್ಯದರ್ಶಿಗಳಾಗಿಯೂ (1916–18) ಸೇವೆ ಸಲ್ಲಿಸಿದರು. (ವಿ.ಎಸ್.)

**ರಟ್ಟಕವಿ:** ಸು. 1300. ರಟ್ಟಮತ ಎಂಬ ಗ್ರಂಥದ ಕರ್ತೃ. ಮಾರಸಿಂಹ ಚಮೂಪತಿಯಾಗಿ ಕಾಡಮರಸನ ವಂಶದ 16ನೆಯ ತಲೆಯಾಗಿ ಹುಟ್ಟಿದ ನಾಗಕುಮಾರ ಇವನ ತಂದೆ. ಬೂತನಣುಗಂ ಎಂದು ಕವಿ ಹೇಳಿಕೊಂಡಿರುವುದರಿಂದ ಇವನ ತಂದೆ ನಾಗಕುಮಾರನಿಗೆ ಬೂತುಗ ಎಂಬ ಹೆಸರೂ ಇದ್ದಿರಬಹುದೆಂದು ತೋರುತ್ತದೆ. ನೆಗೞ್ದಭಯಾಂಬುಧಿ ನಿಜಸುತೆಗೆ ಚಂದ್ರ ಲೇಖೆಗೆ ಪೇೞ್ದಪಂ ಕನ್ನಡದಿಂ ಎಂದು ಗ್ರಂಥದಲ್ಲಿ ತಿಳಿಸುವುದರಿಂದ ಕವಿಯ ಹೆಸರು ಅಭಯಾಂಬುಧಿ ಎಂದೂ ಮಗಳ ಹೆಸರು ಚಂದ್ರಲೇಖೆಯೆಂದೂ ತಿಳಿದುಬರುತ್ತದೆ. ಜಿನನಗರಪತಿ, ಗಿರಿನಗರಾಧೀಶ್ವರ ಎಂದು ತನ್ನನ್ನು ವಿಶೇಷಿಸಿಕೊಂಡಿರುವುದರಿಂದ ಈತ ಯಾವುದಾದರೂ ಒಂದು ನಗರಕ್ಕೆ ಅಧಿಪತಿಯಾಗಿದ್ದಿರಬಹುದು. ರಟ್ಟವೆಡಂಗ, ಸುಕವಿನಿಧಾನ ಎಂಬವು ಬಿರುದುಗಳಿದ್ದಿರಬಹುದು. ನಯಬಂಧು, ಜಿನದಾಸ, ಅರ್ಹದ್ದಾಸ, ಸಮ್ಯಕ್ತ್ವರತ್ನಾಕರ, ರಟ್ಟಕಂದರ್ಪ, ಕವಿಗಳಾಭರಣ, ರಟ್ಟಕವೀಂದ್ರ, ಕವಿಕಂಜಸಂಭವ, ಸಹಜಕವೀಶ್ವರ, ಜಿನಧರ್ಮ ವತ್ಸಲ ಎಂದೂ ಈತ ತನ್ನನ್ನು ವಿಶೇಷಿಸಿಕೊಂಡಿದ್ದಾನೆ.

ರಟ್ಟಮತ ವೃತ್ತ, ಕಂದ, ರಗಳೆ, ತ್ರಿಪದಿ ಈ ವೃತ್ತಭೇದಗಳಿಂದ ಕೂಡಿ ರಚಿತವಾಗಿದೆ. ಇದರಲ್ಲಿರುವ ಸು. 900 ಪದ್ಯಗಳಲ್ಲಿ ಮಳೆಯ ಕುರುಹು, ಆಕಸ್ಮಿಕ ಲಕ್ಷಣ, ಶಕುನ, ವಾಯುಚಕ್ರ, ಗೋಪ್ರವೇಶ, ಭೂಕಂಪ, ಭೂಜಾತ ಫಲ, ಮಳೆಯ ನಯ, ಉತ್ಪಾತಲಕ್ಷಣ, ಪರಿವೇಶಲಕ್ಷಣ, ಇಂದ್ರಧನುರ್ಲಕ್ಷಣ, ಪ್ರಥಮಗರ್ಭಲಕ್ಷಣ, ದ್ರೋಣಸಂಖ್ಯೆ, ಮಿಂಚಿನ ಲಕ್ಷಣ, ಪ್ರತಿಸೂರ್ಯಲಕ್ಷಣ, ಸಂವತ್ಸರಫಲ, ಗ್ರಹಗಳ ಪಗೆ ಕಳೆ, ಮೇಘಗಳ ನಾಮಕುಲ ವರ್ಣಧ್ವಾನ ವಿಚಾರ, ದೇಶವೃಷ್ಟಿ, ಮಾಸಫಲ, ರಾಹುಚಕ್ರ, ನಕ್ಷತ್ರಫಲ, ಬಿತ್ತುವ ಶಕುನ, ಉದಕಾರ್ಗಳ, ಸಂಕ್ರಾಂತಿ ಫಲ ಈ ವಿಷಯಗಳು ಉಕ್ತವಾಗಿವೆ. ಗ್ರಂಥ ಅಸಮಗ್ರವಾಗಿದೆ. 14ನೆಯ ಶತಮಾನದಲ್ಲಿದ್ದ ಭಾಸ್ಕರನೆಂಬ ಆಂಧ್ರಕವಿ ರಟ್ಟಮತವನ್ನು ತೆಲುಗಿಗೆ ಭಾಷಾಂತರ ಮಾಡಿದ್ದಾನೆ. (ಎಸ್.ಎನ್.ಕೆ.)

**ರಟ್ಟರು, ಸವದತ್ತಿಯ:** 10–13ನೆಯ ಶತಮಾನಗಳಲ್ಲಿ, ಇಂದಿನ ಬೆಳಗಾಂವಿ ಜಿಲ್ಲೆಯ ಮತ್ತು ಸುತ್ತಲಿನ ಕೆಲವು ಪ್ರದೇಶಗಳನ್ನು ಒಳಗೊಂಡಿದ್ದ ಕುಹುಂಡಿ ಮಂಡಲವನ್ನು ಆಳುತ್ತಿದ್ದ ಸಾಮಂತ ರಾಜಮನೆತನ. ಈ ವಂಶದವರ ರಾಜಧಾನಿ ಮೊದಲು ಬೆಳಗಾಂವಿ ಜಿಲ್ಲೆಯ ಸವದತ್ತಿ. ಅನಂತರ ವೇಣುಗ್ರಾಮ (ಬೆಳಗಾಂವಿ). ಇವರು ತಮ್ಮ ಕೆಲವು ಶಾಸನಗಳಲ್ಲಿ, ಪ್ರಾಯಶಃ ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳಲು, ತಾವು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಸಂತತಿಯವರೆಂದು ಹೇಳಿಕೊಂಡಿದ್ದಾರೆ. ಆದರೆ ಶಾಸನಗಳಲ್ಲಿ ಈ ವಂಶದ ಹೆಸರು ರಾಷ್ಟ್ರಕೂಟ ಎಂದು ಎಲ್ಲೂ ಇಲ್ಲದೆ ರಟ್ಟ ಎಂದೇ ಸಂಬೋಧಿತವಾಗಿದೆ. ಲಟ್ಟಲೂರ ಪುರವರಾಧೀಶ್ವರ ಎಂಬ ಈ ವಂಶೀಯರ ಬಿರುದಿನಿಂದ ಇವರು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯ ಲಾಟೂರು ಎಂಬ ನಗರಕ್ಕೆ ಸೇರಿದವರೆಂದು ತಿಳಿಯಬಹುದು.

ರಟ್ಟರಾಜ್ಯಸ್ಥಾಪನೆ ಮತ್ತು ಮೂಲ ಪುರುಷರ ವಿಷಯವಾಗಿ ಏನೂ ತಿಳಿದಿಲ್ಲ. ಇದರ ಒಂದು ಶಾಖೆಯ ಆಳ್ವಿಕೆ ಮೈಳಾಪತೀರ್ಥನೆಂಬ ಜೈನ ಗುರುವಿನಿಂದ ಸ್ಥಾಪಿತವಾದ ಕಾರೇಯ ಪಂಥದ ಅನುಯಾಯಿಯೂ ಮೇಱಡನ ಮಗನೂ ಆದ ಪೃಥ್ವೀರಾಮನಿಂದ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ಇವನು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಸಾಮಂತ. ಪಿಟ್ಟುಗ ಮತ್ತು ಶಾಂತಿವರ್ಮ ಈ ವಂಶದ ಇತರ ಅರಸರು. ಶಾಂತಿವರ್ಮ ಕಲ್ಯಾಣ ಚಾಳುಕ್ಯರ ವಂಶದ ಮೊದಲನೆಯ ತೈಲನ ಸಾಮಂತನಾಗಿದ್ದ.

ಹೆಚ್ಚು ಪ್ರಸಿದ್ಧವಾದ ಇನ್ನೊಂದು ಶಾಖೆಯ ಆದ್ಯ ನನ್ನ (ಸು. 960–75). ಇವನ ಮಗ ಕತ್ತ ಅಥವಾ ಒಂದನೆಯ ಕಾರ್ತವೀರ್ಯ (ಸು. 975–1000). 980ರ ಇವನ ಮೊಟ್ಟಮೊದಲನೆಯ ಶಾಸನದಲ್ಲಿ

ಇವನು ಚಾಳುಕ್ಯ ಇಮ್ಮಡಿ ತೈಲನ ಸಾಮಂತನಾಗಿ ಕುಹುಂಡಿ 3000 ಪ್ರಾಂತ್ಯವನ್ನು ಪಾಲಿಸುತ್ತಿದ್ದನೆಂದು ಹೇಳಿದೆ. ಇವನೇ ಈ ವಂಶದ ನಿಜವಾದ ಸ್ಥಾಪಕ. ಕಾರ್ತವೀರ್ಯನ ಅನಂತರ ಇವನ ಮೊದಲನೆಯ ಮಗ ದಾಯಿಮ ಮತ್ತು ಇನ್ನೊಬ್ಬ ಮಗ ಕಣ್ಣ ಕ್ರಮವಾಗಿ ಆಳಿದರು. ಅನಂತರ ಶಾಸನಗಳಲ್ಲಿ ದಾಯಿಮನನ್ನು ರಟ್ಟರ ಮೇರು ಎಂದು ವರ್ಣಿಸಿರುವುದು ಗಮನಾರ್ಹ. ಕಣ್ಣನ ಮಗ ಎರಗ ಅಥವಾ ಎರೆಯಮ (ಸು. 1030–47) ಚಾಳುಕ್ಯ 2ನೆಯ ಜಯಸಿಂಹನ ಮಹಾಸಾಮಂತ. ರಟ್ಟಮಾರ್ತಾಂಡ, ರಟ್ಟನಾರಾಯಣ, ಸಿಂಗನಗರುಡ ಮುಂತಾದ ಇವನ ಬಿರುದುಗಳಿಂದ, ಇವನು 2ನೆಯ ಜಯಸಿಂಹನ ಯುದ್ಧಗಳಲ್ಲಿ ಸಹಾಯಕನಾಗಿ ತನ್ನ ಪ್ರಭಾವವನ್ನು ಬೆಳೆಯಿಸಿಕೊಳ್ಳುತ್ತಿದ್ದನೆಂದು ಹೇಳಬಹುದು. ಎರಗನ ಮರಣಾನಂತರ ಇವನ ಸಹೋದರನಾದ ಅಂಕ (ಸು. 1047–64) ರಾಜನಾದ. ಇವನು ಚಾಳುಕ್ಯ ಒಂದನೆಯ ಸೋಮೇಶ್ವರನ ಸಾಮಂತ. ಇವನ ಕಾಲದಲ್ಲಿ ಚೋಳರು ಕೊಲ್ಲಾಪುರದವರೆಗೂ ನುಗ್ಗಿದರು. ಅಂಕನ ಅನಂತರ, ಇವನ ಅಣ್ಣನ ಮಗನಾದ ಸೇನ (ಸು. 1064–66), ಅನಂತರ ಅವನ ಮಗ ಇಮ್ಮಡಿ ಕಣ್ಣ (ಕಣ್ಣಕೈರ) ಆಳಿದರು. ಇಮ್ಮಡಿ ಕಣ್ಣನೂ ಅವನ ಸಹೋದರ ಇಮ್ಮಡಿ ಕಾರ್ತವೀರ್ಯನೂ ಒಟ್ಟಿಗೆ ರಾಜ್ಯಭಾರ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಇಮ್ಮಡಿ ಕಣ್ಣನು ಕದಂಬರ ದೊರೆ ಜಯಕೇಶಿಯೊಡನೆ ಸೇರಿ ಲಾಟ ರಾಜ್ಯದ ಮೇಲೆ ದಂಡೆತ್ತಿಹೋಗಿ ವಿಜಯಿಯಾದನೆಂದು ಊಹಿಸಲು ಅವಕಾಶವಿದೆ. ಇಮ್ಮಡಿ ಕಣ್ಣನ ಹಿಂದಿನವರೆಲ್ಲ ಸಾಮಂತರೆಂಬ ಬಿರುದನ್ನು ಹೊಂದಿದ್ದರೆ, ಇವನು ಮಹಾಮಂಡಲೇಶ್ವರ ಪದವಿಯನ್ನು ಸಂಪಾದಿಸಿದ ಮೊಟ್ಟಮೊದಲನೆಯ ರಟ್ಟರಾಜ. ಸು. 1068ರಲ್ಲಿ ಕಣ್ಣ ಮರಣ ಹೊಂದಿದ. ಅನಂತರ ಸಹರಾಜನಾಗಿದ್ದ ಇವನ ತಮ್ಮ ಇಮ್ಮಡಿ ಕಾರ್ತವೀರ್ಯ ಮೊದಲ ಇಮ್ಮಡಿ ಸೋಮೇಶ್ವರ. ಅನಂತರ ಆರನೆಯ ವಿಕ್ರಮಾದಿತ್ಯ ಇವರ ಆಶ್ರಯದಲ್ಲಿ ಆಳಿದ. ಕಾರ್ತವೀರ್ಯನ ಮಗ ಇಮ್ಮಡಿ ಸೇನ (ಸು. 1094–1129). ಇವನು ಆರನೆಯ ವಿಕ್ರಮಾದಿತ್ಯನ ಮಗ ಯುವರಾಜ ಜಯಕರ್ಣನ ಆಶ್ರಯದಲ್ಲಿ ಆಳುತ್ತಿದ್ದ. ಹೊಯ್ಸಳರು, ಗೋವೆಯ ಕದಂಬರು, ಪಾಂಡ್ಯರು, ಶಿಲಾಹಾರರು ಮುಂತಾದವರು ಆರನೆಯ ವಿಕ್ರಮಾದಿತ್ಯನನ್ನು ಸೋಲಿಸಲು ಪ್ರಯತ್ನಗಳನ್ನು ಮಾಡುತ್ತಿದ್ದ ಸಮಯದಲ್ಲಿ ಇಮ್ಮಡಿ ಸೇನನು ದಂಡನಾಯಕ ಚಾಮುಂಡ ಮತ್ತು ಸಿಂದದೊರೆ ಆಚುಗಿ ಇವರೊಡನೆ ಸೇರಿ ಚಾಳುಕ್ಯರಿಗೆ ಸಹಾಯಮಾಡಿದ. ಇವನು ಕೆಲಕಾಲ ಮುಮ್ಮಡಿ ಸೋಮೇಶ್ವರನ ಅಧೀನನೂ ಆಗಿದ್ದಂತೆ ತೋರುತ್ತದೆ. ಇಮ್ಮಡಿ ಸೇನನ ಅನಂತರ ಮುಮ್ಮಡಿ ಕಾರ್ತವೀರ್ಯ (1129–88) ರಾಜನಾದ. ಕಳಚುರಿಗಳು ಚಾಳುಕ್ಯರನ್ನು ಮೂಲೆಗೊತ್ತಿದ ಸಂದರ್ಭದಲ್ಲಿ ಮುಮ್ಮಡಿ ಕಾರ್ತವೀರ್ಯ ಸ್ವತಂತ್ರನಾಗಲು ಹವಣಿಸಿದರೂ ಫಲಿಸದೆ ಕೊನೆಗೆ ಅವರ ಸಾಮಂತನಾದ. ಕಳಚುರಿಗಳ ಅವನತಿ ಪ್ರಾರಂಭವಾದಾಗ ಸ್ವಲ್ಪಕಾಲ ಮಹಾಮಂಡಳೇಶ್ವರ ಎಂದಷ್ಟೇ ಅಲ್ಲದೆ ಚಕ್ರವರ್ತಿ ಎಂಬ ಬಿರುದನ್ನೂ ಹೊತ್ತು ಸ್ವತಂತ್ರವಾಗಿ ಆಳಿದ. ಆದರೆ ಮುಂದೆ ಚಾಳುಕ್ಯ ನಾಲ್ವಡಿ ಸೋಮೇಶ್ವರನ ಕಾಲದಲ್ಲಿ ತನ್ನ ರಾಜ್ಯವನ್ನು ಕಳೆದುಕೊಂಡಂತೆ ತೋರುತ್ತದೆ. ಇವನ ರಾಣಿ ಪದ್ಮಲದೇವಿ ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟಳು.

ಮುಮ್ಮಡಿ ಕಾರ್ತವೀರ್ಯನ ಅನಂತರ ಅವನ ಮಗನಾದ ಒಂದನೆಯ ಲಕ್ಷ್ಮೀದೇವ (1188–99) ಮೊದಲು ಸಾಮಂತ ಪದವಿಯನ್ನು ಸಾಧಿಸಿಕೊಂಡು ಹೊಯ್ಸಳರಿಗೂ ಸೇವುಣರಿಗೂ ಕಾದಾಟಗಳು ನಡೆಯುತ್ತಿದ್ದ ಕಾಲದಲ್ಲಿ ಪುನಃ ಸ್ವತಂತ್ರನಾದ. ಅಷ್ಟೇ ಅಲ್ಲದೆ ಗೋವೆಯ ಕದಂಬರ ವಶದಲ್ಲಿದ್ದ ವೇಣುಗ್ರಾಮವನ್ನು ಅವರಿಂದ ಕಿತ್ತುಕೊಂಡು ತನ್ನ ರಾಜಧಾನಿಯನ್ನು ಸವದತ್ತಿಯಿಂದ ವೇಣುಗ್ರಾಮಕ್ಕೆ ಬದಲಾಯಿಸಿದ. ಲಕ್ಷ್ಮೀದೇವನಿಗೆ ಚಂದಲದೇವಿ ಎಂಬ ರಾಣಿಯಿಂದ ಕಾರ್ತವೀರ್ಯ (ನಾಲ್ವಡಿ) ಮತ್ತು ಮಲ್ಲಿಕಾರ್ಜುನ ಎಂಬ ಮಕ್ಕಳಿದ್ದರು. ತಮ್ಮ ತಂದೆಯ ಮರಣಾನಂತರ ಇವರಿಬ್ಬರೂ ರಾಜ, ಯುವರಾಜರಾಗಿ ಆಳಿದರು. ನಾಲ್ವಡಿ ಕಾರ್ತವೀರ್ಯನೂ ಸ್ವತಂತ್ರನಾಗಿಯೇ ರಾಜ್ಯವಾಳಿದ (1199–1221). ಸು.1210ರಲ್ಲಿ ಇವನ ಸಹೋದರನೂ ಯುವರಾಜನೂ ಆಗಿದ್ದ ಮಲ್ಲಿಕಾರ್ಜುನ ಅಕಾಲಮೃತ್ಯುವನ್ನು ಹೊಂದಿದ. ನಾಲ್ವಡಿ ಕಾರ್ತವೀರ್ಯನ ಮಗನಾದ ಇಮ್ಮಡಿ ಲಕ್ಷ್ಮೀದೇವ (1221–33) ಮುನಿಚಂದ್ರನೆಂಬ ಗುರುವಿನ ಸಹಾಯದಿಂದ ಸೇವುಣ ಸಿಂಘನೊಡನೆ ಯುದ್ಧ ಮಾಡಿದ. ಆದರೆ ಆ ಯುದ್ಧದಲ್ಲಿ ಪರಾಜಿತನಾದ. ಇದರಿಂದ ರಟ್ಟರ ಆಳ್ವಿಕೆಯೂ ಕೊನೆಗೊಂಡಿತು.

## ರಟ್ಟರ ವಂಶಾವಳಿ

**ಮೊದಲನೆಯ ಶಾಖೆ :**

ಮೇಱಡ
|
ಪೃಥ್ವೀರಾಮ
|
ಶಾಂತಿವರ್ಮ

**ಎರಡನೆಯ ಶಾಖೆ :**

ನನ್ನ
(ಸು. 960–75)
|
(ಕತ್ತ) ಕಾರ್ತವೀರ್ಯ I
(ಸು. 975–1000)

- ದಾಯಿಮ
- ಕಣ್ಣ I
  - ಎರಗ (ಸು.1030–47)
    - ಸೇನ I (ಸು. 1064–66)
      - ಕಣ್ಣ (ಕಣ್ಣಕೈರ)
      - ಕಾರ್ತವೀರ್ಯ II (ಸು. 1068–94, ಪತ್ನಿ, ಭಾಗಲದೇವಿ)
        - ಸೇನ II (ಸು.1094–1129)
          - ಕಾರ್ತವೀರ್ಯ III (ಸು. 1129–88, ಪತ್ನಿ, ಪದ್ಮಲದೇವಿ)
            - ಲಕ್ಷ್ಮೀದೇವ I (ಸು. 1188–99, ಪತ್ನಿ, ಚಂದಲದೇವಿ)
              - ಕಾರ್ತವೀರ್ಯ IV (ಸು. 1199–1221)
                - ಲಕ್ಷ್ಮೀದೇವ II (1221–33)
              - ಮಲ್ಲಿಕಾರ್ಜುನ
  - ಅಂಕ (ಸು.1047–64)

ರಟ್ಟರು ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಮಾತ್ರವಲ್ಲದೆ ಸಾಂಸ್ಕೃತಿಕ ಚರಿತ್ರೆಯಲ್ಲೂ ಖ್ಯಾತರಾಗಿದ್ದಾರೆ. ರಟ್ಟ ರಾಣಿಯರಲ್ಲಿ ಅನೇಕರು ಜೈನ ದೇವಾಲಯಗಳನ್ನು ಕಟ್ಟಿಸಿದರೆ ಮತ್ತೆ ಕೆಲವರು ಈಶ್ವರ ದೇವಸ್ಥಾನಗಳನ್ನು ಕಟ್ಟಿಸಿದರು. ನಾಲ್ವಡಿ ಕಾರ್ತವೀರ್ಯನು (1201) ರಾಯಭಾಗದ ಆದಿನಾಥ ಬಸದಿಗೆ ದಾನ ನೀಡಿದ್ದಾನೆ. ಆತನ ಸಚಿವ ಬೆಳಗಾವಿಯಲ್ಲಿ ರಟ್ಟ ಜಿನಾಲಯ ಕಟ್ಟಿಸಿ ಕೃತಾರ್ಥನಾದ. ಇದೇ ಕಾರ್ತವೀರ್ಯನು 1219ರಲ್ಲಿ ನೇಸರ್ಗಿಯ ಶಿವಾಲಯವೊಂದಕ್ಕೆ ದಾನ ನೀಡಿದ್ದಾನೆ. ಇವರು ಕನ್ನಡ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟರು. ಒಂದನೆಯ ಲಕ್ಷ್ಮೀದೇವ ಕರ್ಣಪಾರ್ಯ ಮತ್ತು ನೇಮಿಚಂದ್ರ ಎಂಬ ಪ್ರಸಿದ್ಧ ಕನ್ನಡ ಲೇಖಕರ ಪೋಷಕನಾಗಿದ್ದರೆ, ಪಾರ್ಶ್ವನಾಥ ಪುರಾಣದ ಕರ್ತೃ ಪಾರ್ಶ್ವನಾಥ ಪಂಡಿತನು ನಾಲ್ವಡಿ ಕಾರ್ತವೀರ್ಯನ ಆಶ್ರಯದಲ್ಲಿದ್ದ. ನಾಲ್ವಡಿ ಕಾರ್ತವೀರ್ಯನ ಕಾಲದಲ್ಲಿ ಬೆಳಗಾಂವಿ ಸಂಪದ್ಭರಿತ ನಗರವಾಗಿದ್ದು ದೂರದೇಶದ ವ್ಯಾಪಾರಿಗಳೂ ಇಲ್ಲಿಗೆ ಬರುತ್ತಿದ್ದರೆಂಬುದಕ್ಕೆ ಉಲ್ಲೇಖಗಳಿವೆ.

(ಎ.ವಿ.ಎನ್.)

**ರಟ್ಟೀಹಳ್ಳಿ:** ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಒಂದು ಗ್ರಾಮ. ರಾಣೆಬೆನ್ನೂರು ರೈಲ್ವೆ ನಿಲ್ದಾಣದಿಂದ 27 ಕಿಮೀ ದೂರದಲ್ಲಿದೆ. ಜನಸಂಖ್ಯೆ 11,702. ಪ್ರಾಚೀನ ಕಾಲದಲ್ಲಿ ಈ ಊರು ರಟ್ಟೀಹಳ್ಳಿ 100 ಎಂಬ ಆಡಳಿತ ವಿಭಾಗದಲ್ಲಿ ಒಂದು ದೊಡ್ಡ ಅಗ್ರಹಾರವಾಗಿತ್ತು. ಇಲ್ಲಿ ಇಂದಿಗೂ ಆ ಪ್ರಾಚೀನತೆಯ ಕುರುಹುಗಳಾಗಿ ಕದಂಬೇಶ್ವರ, ಕೇಶವ ದೇವಾಲಯ ಮುಂತಾದವುಗಳಿವೆ.

ರಟ್ಟೀಹಳ್ಳಿಯ ಮೊದಲ ಉಲ್ಲೇಖ ಕಾವ್ಯಾವಲೋಕನಂ ಗ್ರಂಥದಲ್ಲಿ (ಪದ್ಯ 212) ಬಂದುದಾಗಿ ಕಂಡುಬರುತ್ತದೆ. ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಎರಡನೆಯ ತೈಲಪ ರಟ್ಟೀಹಳ್ಳಿ ಮೊದಲಾದ ಹಲವು ಸ್ಥಳಗಳನ್ನು ಗೆದ್ದುದಾಗಿ ಆ ಪದ್ಯದಲ್ಲಿ ವರ್ಣಿಸಿದೆ. ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಬೊಮ್ಮದೇವ ದಂಡಾಧೀಶನಿಗೆ ಬನವಾಸಿ ನಾಡಿನ ಆಡಳಿತವನ್ನು ವಹಿಸಿಕೊಟ್ಟ ಉಲ್ಲೇಖ ಒಂದು ಶಾಸನದಲ್ಲಿ ಬಂದಿದೆ. ಮಹಾಮಂಡಳೇಶ್ವರ ಪಾಂಡ್ಯದೇವನಿಂದ (1174) ಕದಂಬೇಶ್ವರ ದೇವರಿಗೆ ದಾನ ಬಿಟ್ಟ ಸಂಗತಿ ಒಂದು ಶಾಸನದಲ್ಲಿದೆ. ರಟ್ಟೀಹಳ್ಳಿಯಲ್ಲಿದ್ದ ಅಗ್ನಿಮಠದ ಮಲ್ಲಿನಾಥ ದೇವರಿಗೆ ದಾನ ಕೊಟ್ಟ ಸಂಗತಿ ಸೇವುಣ ಚಕ್ರವರ್ತಿ ಎರಡನೆಯ ಸಿಂಘಣನ ಕಾಲದ (1238) ಶಾಸನವೊಂದರಲ್ಲಿ ಬಂದಿದೆ. ಈ ದತ್ತಿಯನ್ನು ಸ್ವೀಕರಿಸಿದ ವ್ಯಕ್ತಿ ಸ್ಥಾನಾಚಾರ್ಯ ರಾಜಗುರು ಮೂರುಜಾವಿದೇವ. ಕದಂಬೇಶ್ವರ ದೇವಸ್ಥಾನದ ಹಾಗೆ ಆ ಕಾಲದಲ್ಲಿ ಇಲ್ಲಿ ಸಿದ್ಧಗಿರಿ, ಜೈನಬಸದಿ ಇವೂ ಪ್ರಸಿದ್ಧವಾಗಿದ್ದುವು. ಇಲ್ಲಿ ಹರಿಯುವ ಕುಮುದ್ವತಿ ನದಿದಂಡೆಯ ಮೇಲೆ, ಮಂಟಪದಲ್ಲಿ ದೊರೆತ ಶಾಸನ ಸೇವುಣ ದೊರೆ ರಾಮಚಂದ್ರನ ಕಾಲದ್ದು. ಇದರಲ್ಲಿ ಹೊಯ್ಸಳ ರಾಯವಿಭಾಡ ಬಿರುದಿನ ಮಹಾಮಂಡಳೇಶ್ವರನಾದ ಸಳುವೆಯ ಆಚರಸ ಪಂಡಿತನು ಮಾಡಿದ ದಾಳಿಯ ಉಲ್ಲೇಖವಿದೆ. ವಿಜಯನಗರದ ಸದಾಶಿವರಾಯನ ಕಾಲದ ಒಂದು ಶಾಸನ ಇಲ್ಲಿನ ಬ್ರಾಹ್ಮಣನೊಬ್ಬನಿಗೆ ದಾನ ನೀಡಿದುದನ್ನು ತಿಳಿಸುತ್ತದೆ. ಹೈದರ್ ಅಲಿ ಮತ್ತು ಮರಾಠರ ನಡುವೆ ನಡೆದ ಯುದ್ಧಗಳಲ್ಲಿ ರಟ್ಟೀಹಳ್ಳಿಯು ಹೈದರನ ಒಂದು ಅತ್ಯಂತ ಭದ್ರವಾದ ಕೇಂದ್ರವಾಗಿದ್ದಿತು. ಆಗ ಇಲ್ಲಿ ಆತ ತನ್ನ ದಂಡನಾಯಕ ಫಜಲ್ ಉಲ್ಲಾನ ನೇತೃತ್ವದಲ್ಲಿ 20,000 ಕುದುರೆ ಹಾಗೂ 40,000 ಪದಾತಿಸೈನ್ಯವನ್ನು ಹೊಂದಿದ್ದ. ಆತ ಮರಾಠರ ವಿರುದ್ಧ ಯುದ್ಧಮಾಡಿ ಸೋತಾಗ ರಟ್ಟೀಹಳ್ಳಿಯಿಂದ ಕಾಲ್ತೆಗೆದ. ಅನಂತರದ ಕಾಲದಲ್ಲಿ ಈ ಊರಿನ ಪ್ರಾಮುಖ್ಯತೆ ಕಡಿಮೆಯಾಗುತ್ತ ಬಂತು.

(ಎಸ್.ಜಿ.ಎ.)

**ರತ್ನಾಕರವರ್ಣಿ:** 16ನೆಯ ಶತಮಾನದ ಜೈನಕವಿ. ಕನ್ನಡದ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯನಾದವ. ಭರತೇಶವೈಭವ, ತ್ರಿಲೋಕಶತಕ, ರತ್ನಾಕರಾಧೀಶ್ವರ ಶತಕ, ಅಪರಾಜಿತೇಶ್ವರ ಶತಕ ಎಂಬ ಗ್ರಂಥಗಳ ಕರ್ತೃ. ಇವನಿಗೆ ರತ್ನಾಕರ, ರತ್ನಾಕರ ಅಣ್ಣ, ರತ್ನಾಕರಸಿದ್ಧ ಎಂಬ ಹೆಸರುಗಳೂ ಇದ್ದು ತನಗೆ ರತ್ನಾಕರಸಿದ್ಧ ಎಂಬ ಹೆಸರು ಅತ್ಯಂತ ಮೆಚ್ಚಿಗೆಯಾದುದೆಂದು ಹೇಳಿಕೊಂಡಿದ್ದಾನೆ. ಚಾರುಕೀರ್ತಿ ಆಚಾರ್ಯ ಇವನ ದೀಕ್ಷಾಗುರು. ಹಂಸನಾಥ ಮೋಕ್ಷಗುರು.

ರತ್ನಾಕರವರ್ಣಿ ತನ್ನ ಕಾವ್ಯಗಳಲ್ಲಿ ಸ್ವಂತ ಜೀವಿತಕ್ಕೆ ಸಂಬಂಧಿಸಿದ ಯಾವ ದಾಖಲೆಗಳನ್ನೂ ಬಿಟ್ಟಿಲ್ಲ. ಇವನನ್ನು ಕುರಿತು ಕೆಲವು ಬಾಹ್ಯ ವಿವರಗಳು ದೊರೆತಿವೆ. ಆದರೆ ಅವು ಎಷ್ಟು ವಿಶ್ವಸನೀಯವೆಂಬುದು ಸರಿಯಾಗಿ ಹೇಳಬರುವಂತಿಲ್ಲ. ದೇವಚಂದ್ರ (1770–1841) ತನ್ನ ರಾಜಾವಳೀ ಕಥೆಯಲ್ಲಿ ರತ್ನಾಕರವರ್ಣಿಯ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದ್ದಾನೆ. ಆತನ ಹೇಳಿಕೆಯ ಪ್ರಕಾರ ರತ್ನಾಕರವರ್ಣಿ ಸೂರ್ಯವಂಶಕ್ಕೆ ಸೇರಿದವನು. ಕ್ಷತ್ರಿಯ ಕುಲದವನು, ತುಳು ದೇಶದವನು, ಮೂಡುಬಿದರೆಯವನು, ದೇವರಾಜನ ಮಗ, ರತ್ನಾಕರಾಧೀಶನೆಂದು ಹೆಸರು. ಬಾಲ್ಯದಲ್ಲಿ ಜೈನಾಗಮಗಳ ಶಿಕ್ಷಣವನ್ನು ಪಡೆದಿದ್ದ. ಕವಿಯಾದ ಮೇಲೆ ತೌಳವದೇಶದ ಭೈರರಸ ಒಡೆಯರ ಆಸ್ಥಾನಕವಿಯಾಗಿ ಶೃಂಗಾರಕವಿಯೆಂಬ ಪ್ರಶಸ್ತಿ ಪಡೆದ. ಇವನು ಯೋಗಶಾಸ್ತ್ರದಲ್ಲೂ ಕಾವ್ಯಶಾಸ್ತ್ರದಷ್ಟೇ ಪ್ರವೇಶ ಪಡೆದಿದ್ದ. ಈತನೂ ವಿಜಯಣ್ಣನೂ ಸಮಕಾಲೀನರು. ವಿಜಯಣ್ಣನ ಕಾವ್ಯವಾದ ದ್ವಾದಶಾನುಪ್ರೇಕ್ಷೆಗೆ ದೊರೆತ ಮರ್ಯಾದೆ–ಪ್ರಭಾವನೆ ಕಂಡು ತಾನೂ ಭರತೇಶ್ವರಚರಿತೆಯೆಂಬ ಕಾವ್ಯ ಬರೆದು ಭಿನ್ನಾಭಿಪ್ರಾಯ ಬಂದ ಕಾರಣದಿಂದ ಬೇಸರಿಸಿ ವೀರಶೈವಧರ್ಮ ಸ್ವೀಕರಿಸಿ ಬಸವಪುರಾಣ ಮೊದಲಾದ ಕೃತಿಗಳನ್ನು ರಚಿಸಿದ. ಕಡೆಗೆ ಕೋಪ ಉಪಶಮನವಾದ ಮೇಲೆ ಮತ್ತೆ ಜೈನಧರ್ಮಕ್ಕೆ ಹಿಂತಿರುಗಿ ಶತಕವನ್ನೂ ಅಧ್ಯಾತ್ಮಗೀತೆಗಳನ್ನೂ ಬರೆದ.

ದೇವಚಂದ್ರನ ಈ ನಿರೂಪಣೆಯಲ್ಲಿ ವಸ್ತುಸ್ಥಿತಿಯ ಜೊತೆಗೆ ಉತ್ಪ್ರೇಕ್ಷೆಗಳೂ ವಿಸಂಗತಿಗಳೂ ಸೇರಿವೆ. ರತ್ನಾಕರ ತುಳು ದೇಶದ ಕವಿಯೆಂಬುದು ಸ್ಥಾಪಿತ ಸತ್ಯ. ಆತ ತುಳು ಭಾಷೆಯ ಪರಿಣತನೂ ಆಗಿದ್ದ. ಅಲ್ಲದೆ ಜೈನಮತದಿಂದ ಮತಾಂತರಮಾಡಿದ ಕಾಲದಲ್ಲಿ ತೆಲುಗುಭಾಷಾಪ್ರದೇಶಗಳನ್ನೂ ಸುತ್ತಿರಬೇಕು. ಅದರಿಂದಲೇ ಆತನಿಗೆ ‘ಅಯ್ಯಯ್ಯಾ ಚೆನ್ನಾದುದೆನೆ ಕನ್ನಡಿಗರು ರಯ್ಯ ಮಂಚಿದಿಯೆನೆ ತೆಲುಗಾ ಅಯ್ಯಯ್ಯ ಎಂಚಪೊರ್ಲಾಡೆಂದು ತುಳುವರು ಮೆಯ್ಯುಬ್ಬಿ ಕೇಳಬೇಕಣ್ಣಾ’ ಎಂದು ಮೂರು ಭಾಷೆಗಳನ್ನು ಪ್ರಸ್ತಾಪಿಸುವುದು ಸಾಧ್ಯವಾಯಿತೆಂದು ತೋರುತ್ತದೆ. ರತ್ನಾಕರ ಜೈನಧರ್ಮದಿಂದ ವೀರಶೈವ ಧರ್ಮಕ್ಕೆ ‘ತಜ್ಜಾತಿಯನುತ್ತರೋತ್ತರಗೊಳಿಸಿ ನೆಗಳ್ಚಿದ್ದೂ’ ನಡೆದ ನನ್ನಿಯೆಂಬುದಕ್ಕೆ ಬೇರೆ ಆಧಾರಗಳೂ ಇವೆ; ರತ್ನಾಕರನ ಕೀರ್ತನೆಯೊಂದರಲ್ಲಿ ‘ಕರ್ಮವೇ ಬಲ್ಲಿತಲ್ಲ ಜಿನಧರ್ಮವನುಳಿದೆನ್ನನೀಪರಿ ಹುಚ್ಚುಮಾಡಿತಲ್ಲ; ಕರ್ಮವಶದಿ ಕಾರ್ಗತ್ತಲೆ ಕವಿದೆನ್ನ ಚರ್ಮಕ್ಕೆ ಲಿಂಗವು ಬಿತ್ತಲ್ಲ; ನಿರ್ಮಲ ಶ್ರೀಜಿನಧರ್ಮದೊಳಿದ್ದೆನ್ನ ಈ ಮೈ ಹುಚ್ಚು ಮಾಡಿತಲ್ಲ ಎಂಬ ಹೇಳಿಕೆ ಬರುತ್ತದೆ. ಇದೇ ಅಭಿಪ್ರಾಯವನ್ನು ಅನುರಣಿಸುವ ಸಾಲುಗಳು ರತ್ನಾಕರನ ಶತಕಗಳಲಿಯೂ ಬರುತ್ತವೆ. ದೇವಚಂದ್ರನ ವಿವರಣೆಯಲ್ಲಿ ಸಂದೇಹದ ಭಾಗವೂ ಇದೆ; ರತ್ನಾಕರ ವಿಜಯಣ್ಣನ (ಸು. 1448) ಸಮಕಾಲೀನನೆಂಬುದು, ಬಸವಪುರಾಣವನ್ನು ಬರೆದನೆಂಬುದು ಈ ಸಂದೇಹ ಭಾಗ. ರತ್ನಾಕರನಿಗೆ ದೇವಚಂದ್ರ ಶಕ 1479 (ಸು. 1557) ಎಂದು ಕಾಲವನ್ನು ಹೇಳಿದ್ದಾನೆ. ವಿಜಯಣ್ಣ ಕಾವ್ಯವನ್ನು ಪೂರೈಸಿದ್ದೇ 1448ರಲ್ಲಿ. ಆದ್ದರಿಂದ ಇವರಿಬ್ಬರೂ ಸಮಕಾಲೀನರಲ್ಲ. ಬಸವಪುರಾಣವನ್ನು ರತ್ನಾಕರ ಬರೆದುದಲ್ಲವೆಂಬುದಕ್ಕೆ

ಆಧಾರಗಳಿರುವಂತೆ ಬರೆದನೆಂಬುದಕ್ಕೆ ಇಲ್ಲ. ರತ್ನಾಕರನೇ ಈ ಮತಾಂತರ ಕಾಲದಲ್ಲಿ ಸೋಮೇಶ್ವರ ಶತಕವನ್ನು ಬರೆದನೆಂಬ ಹೇಳಿಕೆಯಿರುವ ಪದ್ಯವೊಂದು ಪ್ರಾಚೀನ ಹಸ್ತಪ್ರತಿಯೊಂದರಲ್ಲಿದೆ. ಇದನ್ನು ಪ್ರಮಾಣವೆಂದು ಸ್ವೀಕರಿಸಲು ಬಾಧಕಗಳಿವೆ. ರತ್ನಾಕರನ ಸುತ್ತ ಇಂಥ ಕಾಲ್ಪನಿಕ ಸಂಗತಿ ಗಳು ಇನ್ನೂ ಕೆಲವು ಹಬ್ಬಿವೆ. ಯೋಗದ ಮೂಲಕ ಈತ ಭೈರರಸನ ಮಗಳ ಕನ್ನೆಮಾಡಕ್ಕೆ ಹೋಗಿಬರುತ್ತಿದ್ದು ಇವರಿಬ್ಬರಿಗೂ ಸ್ನೇಹವೇರ್ಪಟ್ಟು ದೊರೆಯ ಆಗ್ರಹಕ್ಕೆ ಪಾತ್ರನಾಗಿ ಸಂನ್ಯಾಸ ಸ್ವೀಕರಿಸಿದನೆಂದೂ ಒಂದು ಹೇಳಿಕೆಯಿದೆ. ಗಟ್ಟಿಪಾತಳಿಯ ಮೇಲೆ ನಿಲ್ಲದ ಇಂಥ ಹೇಳಿಕೆಗಳನ್ನು ನಂಬುವಂತಿಲ್ಲ.

ರತ್ನಾಕರ ಸಂಪ್ರದಾಯಗಳಿಗೆ ಶರಣಾದವನಲ್ಲ; ಸಂಸಾರಸುಖವನ್ನು ನಿರಾಕರಿಸಬೇಕೆಂದವನಲ್ಲ; ಉಂಡರೇನು ಉಟ್ಟರೇನು ಅಬಲೆಯರೊಡನೆ ಕೂಡಿದರೇನು ಎಂದು ನೇರವಾಗಿ ಕೇಳಿದವನು; ಯಾವುದರಲ್ಲೂ ಒಂದು ಇತಿಮಿತಿ ಇರಬೇಕೆಂದವನು. ವಸ್ತುವಿನ ಆಯ್ಕೆಯಲ್ಲಿ ನಿರ್ವಹಣೆಯಲ್ಲಿ ಛಂದಸ್ಸಿನಲ್ಲಿ ನಿರೂಪಣೆಯಲ್ಲಿ ಯಾದೃಚ್ಛಿಕವಾಗಿ ನಡೆದವನು. ರೂಢಿ ರೀತಿ ರಿವಾಜುಗಳಲ್ಲಿ ಅರ್ಥಹೀನತೆಯಿದ್ದಾಗ ಮುಲಾಜಿಲ್ಲದೆ ಕಿತ್ತೆಸೆದು ಸರಿಕಂಡ ದಾರಿಯಲ್ಲಿ ಧೀಮಂತನಂತೆ ಹೆಜ್ಜೆ ಹಾಕಿದವನು. ಜೈನ ಸಾಂಪ್ರದಾಯಿಕ ಕಾವ್ಯಪದ್ಧತಿಗೆ ಪೂರ್ಣ ತಿಲಾಂಜಲಿಯಿತ್ತು ಬಿನ್ನಹ ಗುರುವೆ ಧ್ಯಾನಕ್ಕೆ ಬೇಸರಾದಾಗ ನಿನ್ನನಾದಿಯ ಮಾಡಿಕೊಂಡು ಕನ್ನಡ ದೊಳಗೊಂದು ಸುಕಥೆಯ ಪೇಳುವೆ ಎಂದು ಹೇಳಲು ತೊಡಗಿದ್ದಾನೆ. ಅಷ್ಟಾದಶ ವರ್ಣನೆಗಳಲ್ಲೂ ಎಷ್ಟು ಬೇಕೊ ಅಷ್ಟಕ್ಕೆ ಮಾತ್ರ, ಉಚಿತತೆ ತಕ್ಕಷ್ಟು ಪ್ರವೇಶ ಪಡೆದಿದೆ. ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು ವಿಕಳವಾದರು ದೋಷವಿಲ್ಲ ಸಕಲಲಕ್ಷಣಕಾಗಿ ಬಿರಸು ಮಾಡಿದರೆ ಪುಸ್ತಕದ ಬದನೆಕಾಯಹುದು ಎಂಬುದು ಕವಿಯ ಧೋರಣೆ. ಆದ್ದರಿಂದ ರಳಕುಳಶಿಥಿಲಸಮಾಸಗಳ ಕೋಟಲೆ ಹಾಡುವ ಕಾವ್ಯದಲ್ಲಿ ಬೇಡವೆಂಬುದು ಕವಿಯ ಆಶಯ. **(ಎಚ್.ಪಿ.ಎಸ್.)**

ಭರತೇಶವೈಭವ 80 ಸಂಧಿಗಳು ಹಾಗೂ 10,000 ಪದ್ಯರಾಶಿಯನ್ನುಳ್ಳ ಸಾಂಗತ್ಯ ಕಾವ್ಯ. ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿ ವಿಜಯ, ಮೋಕ್ಷವಿಜಯ ಎಂಬ ಪಂಚವಿಜಯಗಳಾಗಿ ಕಾವ್ಯ ವಿಭಾಗ ಗೊಂಡಿದೆ.

ಭರತೇಶ ಪ್ರಥಮ ತೀರ್ಥೇಶನ ಹಿರಿಯ ಮಗ, ಮೊದಲ ಚಕ್ರಿ. ಇಡೀ ಕಾವ್ಯ ಆತನ ನಿತ್ಯಜೀವನದ ದಿನಚರಿಯಂತಿದ್ದು, ಅವನ ಒಟ್ಟು ಬದುಕಿನ ವಿಸ್ತಾರ ವೈವಿಧ್ಯ ವಿಲಾಸ ವೈಭವಗಳ ಮಹೋನ್ನತಿಯನ್ನು ತುಂಬ ಕಲಾತ್ಮಕವಾಗಿ ಕನ್ನಡಿಸಿದೆ. ಆತನ ಬಹಿರಂಗದ ಭೋಗದ ಬದುಕಿನಂತೆ ಯೋಗದ ಅಂತರಂಗದ ಜೀವನವನ್ನೂ ಕವಿ ಬಣ್ಣಕಟ್ಟಿ ಕುಸುರಿಕೆಲಸದಂತೆ ನಯವಾಗಿ ಬಿಡಿಸಿದ್ದಾನೆ. ಈ ವಿಚಾರದಲ್ಲಿ ರತ್ನಾಕರವರ್ಣಿ ಜಿನಸೇನರ ಪೂರ್ವಪುರಾಣ ಹಾಗೂ ಪಂಪನ ಆದಿಪುರಾಣಕ್ಕೆ ಋಣಿಯಾಗಿದ್ದರೂ ಮುಂದಿನ ಕವಿಗಳಿಗೆ ತಾನೇ ಆದರ್ಶದ ಗಣಿಯಾಗಿದ್ದಾನೆ; ಮಹಾಕವಿಯೆಂಬ ಹೆಸರಿಗೆ ಪೂರ್ಣವಾಗಿ ಪಾತ್ರನಾಗಿದ್ದಾನೆ. ಭರತೇಶವೈಭವವು ಭರತೇಶನ ಚರಿತೆ. ಇದರ ಗತಿ ಮತಿ ಆಯು ಉಸಿರು ಹೆಸರು ಎಲ್ಲ ಅವನೆ. ಭರತನ ಸಾರ್ಥಕ ಜೀವನದ ಹಲವು ಪ್ರಮುಖ ಮಜಲುಗಳನ್ನು ಕುರಿತು ಮಾಡಿದ ಕಲಾತ್ಮಕವಾದ ಪಕ್ವವಿಮರ್ಶೆಯಂತೆ ಈ ಕೃತಿ ಮೈ ಪಡೆದಿದೆ. ಇದರಲ್ಲಿ ಕವಿಯ ಸಮೃದ್ಧವಾದ ಅನುಭವ ಹಾಗೂ ವಿಕಸನಶೀಲವಾದ ವೈಚಾರಿಕತೆ ಒಂದೇ ಲೋಹವಾಗಿ ಕರಗಿ ಬಂದಿವೆ. ಪುರಾಣವಾದುದನ್ನು ಕಾವ್ಯವನ್ನಾಗಿಸುವಲ್ಲಿ ಕವಿ ಅಪರೂಪ ಸಿದ್ಧಿ ಪಡೆದಿದ್ದಾನೆ. ಹಳೆಯ ವಸ್ತುವಿಗೆ ಹೊಸ ಕಸಿ ಎಸಗಿದ್ದಾನೆ. ಜೈನವಸ್ತುವನ್ನೂ ವೈದಿಕ ಕಾವ್ಯ ವಿನ್ಯಾಸದ ಜತೆಗೆ ಜಾನಪದ ಸತ್ತ್ವದ ಉತ್ತಮ ಅಂಶಗಳನ್ನೂ ತೆಕ್ಕೆಹಾಕಿದ್ದಾನೆ. ಜನಪದ ಪ್ರತಿಭೆಯ ಸಾಮುದಾಯಿಕ ಮನಸ್ಸಿನ ಪ್ರತ್ಯಕ್ಷ ಫಲಗಳಾದ ಕಥೆಗಳು, ಕ್ರಿಯೆಗಳು, ಆಶಯಗಳು, ಕ್ರಿಯಾತ್ಮಕವಾದ ಮಾನವ ಜನ್ಮದಲ್ಲಿ ಏನೇನು ರೂಪಾಂತರ ಪಡೆಯಬಹುದೆಂಬುದಕ್ಕೆ ಭರತೇಶ ವೈಭವ ಲಕ್ಷ್ಯದಂತಿದೆ.

ರತ್ನಾಕರನಿಗೆ ಶಬ್ದದಾರಿದ್ರ್ಯವಿಲ್ಲ. ಕನ್ನಡ ಶಬ್ದಭಂಡಾರ ಕವಿಗೆ ಅಂಗೈ ಮೇಲಣ ನೆಲ್ಲಿಯಕಾಯಿ, ಶಬ್ದಗಳು, ಅವುಗಳಿಗಿರುವ ಅರ್ಥ-ಭಾವ-ನಾದ-ಧ್ವನಿಕೋಶಗಳ ಬೆಡಗಿನಿಂದ ಅಡೆತಡೆಯಿಲ್ಲದೆ ನಿರರ್ಗಳವಾಗಿ ಪುಟಿಯುತ್ತಿದೆ. ಹಾಗೆಯೇ ಸಾಂಗತ್ಯದ ಸೀಮಾಪುರುಷನೂ ಆಗಿದ್ದಾನೆ. ಸಾಂಗತ್ಯದ ವಿಲಾಸಮಯ ಸರಳ ಸುಂದರ ಲವಲವಿಕೆಯ ಶೈಲಿ, ದೃಶ್ಯಚಿತ್ರಗಳಿಂದ ಹೃದ್ಯವಾಗಿದೆ. ಒಮ್ಮೊಮ್ಮೆ ಒಂದೊಂದು ಪದ್ಯದಲ್ಲಿ ಒಂದೊಂದು ಉಜ್ವಲಚಿತ್ರ ಮೂಡುತ್ತಾ ಅವೆಲ್ಲ ಒಟ್ಟಾಗಿ ಕೂಡುತ್ತ, ಒಂದು ಅನುಭವ ಕೇಂದ್ರವನ್ನು ಕಟ್ಟಿಕೊಡುತ್ತವೆ. ಈ ಚಿತ್ರಗಳಿಗೆ ಕವಿ ಕೊಡುವ ಮಾನವೀಯ ಸ್ಪರ್ಶದಿಂದಾಗಿ ಭರತೇಶವೈಭವದ ಚಿತ್ರಗಳು ಚಿರಂತನವಾಗಿವೆ.

ಕವಿ ಎಂಥ ಗಹನವಾದ ವಿಚಾರವನ್ನೂ ನಿರಾಯಾಸವಾಗಿ ಸಂವಹನಿಸುತ್ತಾನೆ. ಆವರಣದ ಸೃಷ್ಟಿಯಲ್ಲಿ ಆತ ಸಾಧಿಸಿರುವ ಯಶಸ್ಸು ಅದ್ಭುತ. ನಾಟಕೀಯ ಸನ್ನಿವೇಶಗಳ ಅನುಭವಗಳನ್ನು ಇಂದ್ರಿಯಗಮ್ಯವನ್ನಾಗಿಸುತ್ತವೆ. ಈ ಗುಣಗಳಿಂದ ಕಾವ್ಯಕ್ಕೆ ಹೆಚ್ಚಿನ ಎತ್ತರ ನಿಲುಕುವಂತೆ ಕವಿ ಸಾಧಿಸಿ ತೋರಿಸಿದ್ದಾನೆ. ಕಾವ್ಯದಲ್ಲಿ ನೆನಪಿನ ನಾಲಿಗೆಯ ಮೇಲೆ ಬಹುಕಾಲ ರಸ ಒಸರಿಸುವ ಪರಿಭಾವ್ಯ ಪದ್ಯಗಳು ಪ್ರಸಂಗಗಳು ಸೂರೆಹೋಗಿವೆ. ಭೋಗವಿಜಯದ ಸಂಧಿಗಳು ಭಾವಗೀತೆಗಳಾಗಿ ಮೆಚ್ಚುಗೆಗೆ ಪಾತ್ರವಾಗುತ್ತವೆ. ಜೇನ ಸೋನೆಯನ್ನು ಸುರಿದಂತೆ ಹಾಡಿದ ಗಾಯಕಿಯರ ಗಾನಕಲೆ ಇಲ್ಲಿ ಕಾವ್ಯಕಲೆಯಾಗಿ ಅವತರಿಸಿದೆ. ಇಂಥ ರೂಪಕ ಸಿಂಚಿತ ಭಾಷಾ ವಿಲಾಸ, ಚಿತ್ರಶಕ್ತಿ ಈ ಕಾವ್ಯದಲ್ಲಿ ಹೆಕ್ಕಿದಲ್ಲಿ ಸಿಕ್ಕುತ್ತದೆ. ನಾಟ್ಯರಂಗದ ತೆರೆ ಸರಿಯುತ್ತಿದ್ದಂತೆ ಸುಂದರಿಯರು ಸಮ್ಮೋಹನಸಾಗರದ ಸುಳಿಗಳಾಗಿ 'ಬಲಕೆಡಕೊಲೆದು ಹರಿವೆಳವಿಸಿಲಲ್ಲಿ ಯೆಳನಾಗ ಹರಿವಂತೆ' ಮೈಮುರಿದು ಸುಳಿಯುತ್ತಾರೆ. ಲಲಿತ ಶೃಂಗಾರಾದಿ ಕೋಮಲ ಭಾವಗಳು ತಮ್ಮ ಸೂಕ್ಷ್ಮ ಪದರಗಳನ್ನು ಕವಿಯ ಪಾರದರ್ಶಕ ಶೈಲಿಯಲ್ಲಿ ಸ್ಫುಟವಾಗಿ ತೋರಿಸುತ್ತವೆ. ಅಟ್ಟುವ ತೆರೆ ಓಡುವ ತೆರೆಗಳನ್ನು ಸೆರೆಹಿಡಿದ ಕಡಲ ಬಣ್ಣನೆ, ಸೂರ್ಯೋದಯ, ಮಕ್ಕಳಾಟದ ವರ್ಣನೆ ಮೊದಲಾದುವು ವಾಸ್ತವತೆಯಲ್ಲಿ ಅದ್ದಿ ತೆಗೆದಂತಿವೆ.

ಕಲಾಪೂರ್ಣವಾದ ಭೋಗವಿಜಯದಲ್ಲಿ ಭರತನ ಮೂರು ದಿನಗಳ ರಾಗ ರಸಿಕತೆ ಸಂಜೆಗತ್ತಲಿನಲ್ಲಿ ಚಂದ್ರನ ಕಾಂತಿಯಲ್ಲಿ ರಂಜಿಸುವ ನಕ್ಷತ್ರ ಮಂಡಲದಂತಿದೆ. ಕವಿ ಗಮಕಿ ಗಾಯಕ ನರ್ತಕ ಸಮುದಾಯ ಭರತನ ಕಾಮನಬಿಲ್ಲಾಗಿ ನಿಲ್ಲುತ್ತಾರೆ. ಆತನದು ಅಪಾರ ಸಂಸಾರ, ಸಾವಿರಾರು ಮಡದಿಯರ ಶೃಂಗಾರ ಸಾಗರ. ಆತ ತನ್ನ ಹೆಂಡತಿಯರು, ಅವರ ತವರೂರನ್ನು ಮರೆಯುವಂತೆ ನೋಡಿಕೋಂಡ ಪ್ರಿಯಕರ, ಯಾವುದೇ ಸಾಹಿತ್ಯದಲ್ಲಿ ಇಂಥ ದಾಂಪತ್ಯಚಿತ್ರಣ ಅಪರೂಪ. ಇದು ಪ್ರಪಂಚಸಾಹಿತ್ಯಕ್ಕೆ ಕನ್ನಡದ ಕೊಡುಗೆ. ರತ್ನಾಕರನ ಯಶಸ್ಸು ಸಂಸಾರಚಿತ್ರಗಳಲ್ಲಿದೆ. ಇಷ್ಟಿದ್ದೂ ಇಲ್ಲಿನ ಶೃಂಗಾರ ಉನ್ನತವಾದುದು. ಇದು ಒಲಿದವರ ಕೂಟವನ್ನು ಅಕುಟಿಲವಾಗಿ ಬಿಡಿಸಿದೆ. ಕುಸುಮಾಜಿಯೊಡನೆ ಭರತ ಪ್ರೇಮದಿಂದ ಪುಳಕಿತವಾಗಿ ಕಳೆಯುವ ಇರುಳಿನ ಅನುಭವ ಶುದ್ಧಕಾವ್ಯವಾಗಿ ಹರಳುಗೊಂಡಿದೆ. ಲೈಂಗಿಕಾನುಭವ ಹೇಯವೆಂದು ಮರೆಮಾಡುವ ಮರ್ಯಾದೆಗಳಿಂದ ಪಾರಾದ ಇಲ್ಲಿನ ಮುಕ್ತವಾತಾವರಣ ಸ್ವಚ್ಛವಾಗಿ

ಅನಶ್ಲೀಲವಾಗಿ ಅಪೂರ್ವ ಶುಚಿತ್ವ ಪಡೆದಿದೆ. ಅಲ್ಲದೆ ಅಂತಃಪುರದ ಚಿತ್ರಕ್ಕೆ ತಿಳಿಹಾಸ್ಯದ ಗೆರೆಯೊಂದು ಅಂಚು ಹೆಣೆದು ಮಿಂಚುತ್ತದೆ.

ಭರತೇಶವೈಭವ ಇಂಗ್ಲಿಷ್, ಹಿಂದಿ, ಗುಜರಾತಿ ಮತ್ತು ಮರಾಠಿ ಭಾಷೆಗಳಿಗೆ ಅನುವಾದಗೊಂಡಿರುವುದು ಆ ಕಾವ್ಯದ ಜನಪ್ರಿಯತೆಯನ್ನು ಎತ್ತಿ ತೋರಿಸುತ್ತದೆ. **(ಎಚ್.ಪಿ.ಎನ್.;ಜಿ.ಬಿ.)**

ರತ್ನಾಕರನ ಹಾಡುಗಳಲ್ಲಿ ಕಾವ್ಯಕ್ಕಿಂತ ಜಿನಭಕ್ತಿಯದೇ ಮೇಲುಗೈ. ತ್ರಿಲೋಕ ಶತಕ ಜೈನಧರ್ಮಾನುಸಾರವಾಗಿ ಲೋಕಾಕೃತಿಯನ್ನು ತಿಳಿಸುವ ತೀರ ಸಪ್ಪೆಯಾದ ಕೃತಿ. ಅಪರಾಜಿತ ಶತಕ ಮತ್ತು ರತ್ನಾಕರ ಶತಕಗಳು ಭಾವಗೀತಾತ್ಮಕವಾದ ಖಂಡಕಾವ್ಯಗಳು. ಅಚ್ಚಗನ್ನಡ ಸೊಬಗು ಲಾಲಿತ್ಯಗಳಿಂದ ಭಾವಗೀತೆಯಾಗಿ ಹರಿದ ಇವನ ವೃತ್ತಗಳು ಹೃದಯಸ್ಪರ್ಶಿಯಾಗಿವೆ. ಆರಂಭದಲ್ಲಿ ಸಾಧಕನ ಆರ್ತಧ್ವನಿಯೂ ಕಡೆಗೆ ಸಿದ್ಧನ ಸಂತೃಪ್ತಿಯ ಸೊಲ್ಲೂ ಕೇಳುತ್ತದೆ. ಸಂಶಯಶ್ರದ್ಧೆ ಕಳಚಿ ಅಖಂಡಿತಶ್ರದ್ಧೆ ಮೂಡುತ್ತದೆ. ಅಳಲ ಕೊಳಲನ್ನೂದಿದ ಕವಿಯೇ ಆನಂದದ ಉದ್ಗಾರಗಳನ್ನು ಚಿಮ್ಮಿಸುತ್ತಾನೆ.

ರತ್ನಾಕರ ಶತಕದಲ್ಲಿ 228 ಪದ್ಯಗಳಿದ್ದು ವೈರಾಗ್ಯ, ನೀತಿ, ಆಧ್ಯಾತ್ಮ ವಿಚಾರಗಳು ಬೋಧಪ್ರದವಾಗಿ ಪ್ರತಿಪಾದಿತವಾಗಿವೆ. ಧರ್ಮಪಥಭ್ರಷ್ಟ ನಾದೆನಲ್ಲ ಎಂದು ಕೊರಗಿ ಕರಗಿ ಹರಿದ ಕವಿಯ ಮನಸ್ಸನ್ನು ಕನ್ನಡಿಸುವ ಪದ್ಯಗಳು ಪ್ರಿಯವಾಗುತ್ತವೆ. ಯಾವ ಮುಚ್ಚುಮರೆಯೂ ಇಲ್ಲದೆ ಬಿಚ್ಚುಮನಸ್ಸಿನಿಂದ ತನ್ನ ನಡೆನುಡಿಗಳ ನಡಾವಳಿಯನ್ನು ನಿರ್ದಾಕ್ಷಿಣ್ಯವಾಗಿ ತಾನೇ ಪರಾಂಬರಿಸಿ ಹುಳುಕುಗಳನ್ನು ಹೊರಗೆಳೆಯುತ್ತಾನೆ. ನಾನಾಗರ್ಭದಿ ಪುಟ್ಟಿ, ಸ್ತ್ರೀಯಂ ಮಕ್ಕಳನೆಂತಗಲ್ವೆ, ಎತ್ತೆತ್ತ ಲತಾಂಗಿಯರ್ಸುಳಿದರತ್ತ ತ್ತಾಡುಗುಂ ಎಂಬಂಥ ಪದ್ಯಗಳು ಇದಕ್ಕೆ ಉದಾಹರಣೆಗಳು. ಮತ್ತೆ ಕೆಲವು ಪದ್ಯಗಳಲ್ಲಿ ಅಟ್ಟಹಾಸ ಅಹಂಕಾರ ಭೋಗಗಳಿಂದ ಬೀಗುವ ಮನುಷ್ಯ ಮದ ಕರಗುತ್ತ ಸಾಗಿ ಸ್ವಂತ ವ್ಯಥೆಯ ಒಳದನಿಯೊಂದು ಕೇಳಿಸುತ್ತದೆ. ಕವಿ ಅಂತರ್ಮುಖಿಯಾಗುತ್ತಿರುವ ಬೆಳೆವಣಿಗೆಯನ್ನು ಕಾಣಿಸುತ್ತದೆ. ಇಲ್ಲೆಲ್ಲ ಕವಿಜೀವನದ ಉದ್ಗಾರಗಳು, ಉಸಿರಾಟ ಕೂಡ ಕೇಳುವಷ್ಟು ಭಾವಸ್ಪರ್ಶಿಯಾಗಿವೆ. ಇಲ್ಲಿಯೂ ಸ್ಪಷ್ಟ ನಿಲುವಿನ ಎಳೆಗಳನ್ನು ನೇಯುತ್ತಿರುವ, ಒಂದು ಆರೋಗ್ಯಕರ ಜೀವನದೃಷ್ಟಿಯನ್ನು ಮೂಡಿಸಲು ಸಮರ್ಥವಾಗುವ ವ್ಯವಸ್ಥೆ ಕಂಡುಬರುತ್ತದೆ. ಮಲಗಿದ ಅನುಭವಗಳ ಅಸ್ಫುಟ ಆಕೃತಿಗಳನ್ನು ಮಾತಿನ ಬೆಳಕಿನಿಂದ ಎಚ್ಚರಕ್ಕೆ ತೆರೆಯುತ್ತ ಹೋಗುವ ಕಾಂತಿಮಯ ಭಾಗಗಳೂ ಇಲ್ಲಿವೆ.

ಅಪರಾಜಿತಶತಕದಲ್ಲಿ 128 ಪದ್ಯಗಳಿವೆ. ಇದರಲ್ಲಿ ಕವಿಯ ಅಂತರಂಗ ದಲ್ಲಿ ಸ್ಫುರಿಸಿದ ಭಾವತರಂಗಗಳು ಒಂದರ ಹಿಂದೆ ಒಂದರಂತೆ ವೀಚೀಗತಿಯಲ್ಲಿ ತೇಲಿಬರುತ್ತವೆ. ಇಲ್ಲಿನ ಲಲಿತವಾದ ಪದಗುಂಫನ ಶ್ರುತಿಮಧುರವಾಗಿದೆ. ವಿಷಯನಿರೂಪಣೆ ಸ್ಫುಟವಾಗಿದ್ದು ಅರ್ಥಪೂರ್ಣ ವಾಗಿದೆ. ರತ್ನಾಕರಶತಕದ ಹಳವಂಡ, ಭಾವಪೂರದ ಅಬ್ಬರಗಳು ಇಲ್ಲಿಲ್ಲ. ಇಲ್ಲಿ ಪ್ರವಾಹ ತಗ್ಗಿದ ಮೇಲಿನ ಪ್ರಶಾಂತತೆಯಿದೆ. 'ಅರಸುವೆನೆನ್ನ ದೇಹದೊಳಗೆನ್ನನೆ ಕಾಣ್ಬೆನಮೂರ್ತ ಸಿದ್ಧನಂ ಪೊರಗೊಳಗೆಲ್ಲಮಂ ತೊಳೆದು ತಿಂಗಳ ಪುತ್ಥಳಿ ಮಾಡಿ ನೋಡುವೆ' ಎಂಬಲ್ಲಿ ಹೊಸ ಅರಿವಿನ ಹೊಂಬೆಳಗಿನಲ್ಲಿ ಹೊಸ ಹಾದಿ ಹಿಡಿದು ಹೊರಟ ಧೃತಗತಿಯಲಯವಿದೆ. ಇಲ್ಲಿನ ಬಹುಪಾಲು ಜೀವನವಿವೇಕದ ಮಾತುಗಳು ತನಗೆ ತಾನೆ ಹೇಳಿಕೊಂಡ ಸ್ವಗತ ಮಾದರಿಯಲ್ಲಿವೆ. ಆವನುಮಕ್ಕೆ ನಿನ್ನಡಿಗಳಂ ನೆನೆವಾತನೆ ನನ್ನ ಬಂಧು, ರಂಭೆಯೆ ಬಂದು ತಾಂ ಕೊರಲನಪ್ಪಿದೊಡಂ ಪುಳಕಂಗಳಾಗದೇ.... ಬುದ್ಧಿ ಕಲಂಕದೇ ಶಿಲಾಸ್ತಂಭವೆನಲ್ಕೆಯೆನ್ನೊಳಗೆ ನಿಲ್ವೆನಪರಾಜಿತೇಶ್ವರಾ ಎಂಬಲ್ಲಿ ಚಿತ್ತಚಾಂಚಲ್ಯಗಳು ಬತ್ತಿ ಆತ್ಮವಿಶ್ವಾಸ ಪ್ರಾಪ್ತವಾಗಿರುವುದು ನಿಚ್ಚಳವಾಗಿ ವ್ಯಕ್ತವಾಗಿದೆ. ಈ ಎರಡು ಶತಕಗಳು ಜೀವಂತವಾದ ಒಂದು ವ್ಯಕ್ತಿತ್ವ ಹಂತಹಂತವಾಗಿ ಬೆಳೆದ ಕ್ರಮವನ್ನು ಪರಿಚಯಿಸುವ ಹೆಜ್ಜೆಗುರುತುಗಳಾಗಿ ನಿಲ್ಲುತ್ತವೆ. ಆತ್ಮಕಥನದ ವೈಹಾಳಿಗತಿಯಲ್ಲಿ ಬಿಚ್ಚಿಕೊಳ್ಳುವ ಈ ಬರೆವಣಿಗೆ ಅತ್ಯಂತ ಆತ್ಮೀಯ ರೀತಿಯಲ್ಲಿ ಜೀವನದ ಸಮೀಕ್ಷೆಯನ್ನು ನಡೆಸಿದಂತಿದ್ದು ಕವಿಸ್ವಭಾವದ ಸಂಕೀರ್ಣ ಪದರಗಳನ್ನು ತೆರೆದಿರಿಸಿದಂತಿದೆ. ಮತೀಯ ಮಿತಿಗಳನ್ನು ಕತ್ತರಿಸಿ ಸರ್ವಜನ ಗ್ರಾಹ್ಯ ವಾಗುವ ಈ ಪ್ರಾಂಜಲ ನಿರೂಪಣೆ ಪರಿಭಾವನಾರ್ಹವಾಗಿದೆ. **(ಎಚ್.ಪಿ.ಎನ್.)**

**ರನ್ನ:** ಸು. 949. ಕನ್ನಡದ ಮಹಾಕವಿಗಳಲ್ಲೊಬ್ಬ. ಸಾಹಸಭೀಮ ವಿಜಯ, ಅಜಿತನಾಥಪುರಾಣ ಎಂಬ ಕಾವ್ಯಗಳ ಕರ್ತೃ. ಪರಶುರಾಮಚರಿತೆ, ಚಕ್ರೇಶ್ವರಚರಿತೆ ಎಂಬ ಕಾವ್ಯಗಳನ್ನು ತಾನು ರಚಿಸಿರುವುದಾಗಿ ಅಜಿತಪುರಾಣ ದಲ್ಲಿ ಹೇಳಿಕೊಂಡಿದ್ದಾನೆ. ಆದರೆ ಆ ಕಾವ್ಯಗಳು ನಮಗೆ ದೊರೆತಿಲ್ಲ. ಈತ ರನ್ನಕಂದ ಎಂಬ ನಿಘಂಟೊಂದನ್ನು ರಚಿಸಿದಂತೆ ತಿಳಿಯುತ್ತದೆ. ಇದೂ ಉಪಲಬ್ಧವಿಲ್ಲ.

ಬಾಗಲಕೋಟೆ ಜಿಲ್ಲೆಯ ಮುಧೋಳ ಇವನ ಜನ್ಮಸ್ಥಳ. ಈತ ಸು. 949ರಲ್ಲಿ ಜನಿಸಿದ. ಬಳೆಗಾರ ವೃತ್ತಿಯ ಜೈನಧರ್ಮೀಯ ಜಿನವಲ್ಲಭ ಈತನ ತಂದೆ; ತಾಯಿ ಅಬ್ಬಲಬ್ಬೆ. ದೃಢಬಾಹು, ರೇಚಣ, ಮಾರಮಯ್ಯ ಅಣ್ಣಂದಿರು. ಕವಿಗೆ ತನ್ನ ಹುಟ್ಟೂರಿನಲ್ಲಿ ವಿದ್ಯಾಪೋಷಣೆಗೆ ಅನುಕೂಲವಾದ ವಾತಾವರಣ ಇರಲಿಲ್ಲ. ಆದ್ದರಿಂದ ಈತ ವಿದ್ಯೆ ಪಡೆಯಲೆಂದು ಗಂಗಮಂಡಲಕ್ಕೆ ಬಂದಂತೆ ತಿಳಿಯುತ್ತದೆ. ಅಲ್ಲಿ ಈತನಿಗೆ ಗಂಗರಾಜ್ಯದ ಮಂತ್ರಿಯೂ ವಿದ್ಯಾಪೋಷಕನೂ ಧರ್ಮಪೋಷಕನೂ ಆಗಿದ್ದ ಚಾವುಂಡ ರಾಯನ ಆಶ್ರಯ ದೊರಕಿತು. ಜೊತೆಗೆ ಅಜಿತಸೇನಾಚಾರ್ಯರಂಥ ಗುರುಗಳಲ್ಲಿ ಶಿಷ್ಯತ್ವ ದೊರೆಕಿತು ಲೌಕಿಕ ಮತ್ತು ಧಾರ್ಮಿಕ ವಿದ್ಯಾಭ್ಯಾಸ ಪೂರೈಸಿದ. ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಕಾವ್ಯ ರಚಿಸುವ ಸಾಮರ್ಥ್ಯ ಪಡೆದ. ಅನಂತರ ಈತ ರಾಜಾಸ್ಥಾನಗಳಲ್ಲಿ ಕೀರ್ತಿಗಳಿಸಿ ಹುಟ್ಟೂರಿಗೆ ಮರಳಿ ಬಂದಂತೆ ತಿಳಿಯುತ್ತದೆ.

ರನ್ನ ವಿಶೇಷ ಆತ್ಮಾಭಿಮಾನವುಳ್ಳ ಕವಿ. ತನ್ನ ವ್ಯಕ್ತಿತ್ವದ ಬಗ್ಗೆ, ಕಾವ್ಯ ಶಕ್ತಿಯ ಬಗ್ಗೆ, ಕಾವ್ಯದ ಹಿರಿಮೆಯ ಬಗ್ಗೆ ನಿಸ್ಸಂಕೋಚವಾಗಿ ಹೊಗಳಿಕೊಂಡಿದ್ದಾನೆ. ಚಾಳುಕ್ಯ ಚಕ್ರವರ್ತಿಯಿಂದ ಕವಿಚಕ್ರವರ್ತಿ ಎಂಬ ಬಿರುದು ಪಡೆದುದನ್ನೂ ತಾನು ಜಿನಸಮಯದೀಪಕನೆಂಬುದನ್ನೂ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಆರಾತೀಯ ಕವೀಶ್ವರರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯೊಳ್ ಕವಿರನ್ನಂ ಎಂಬ ಮಾತು ರನ್ನ ತನ್ನ ಕಾವ್ಯಸೃಷ್ಟಿಯನ್ನು ಕುರಿತು ಹೇಳಿಕೊಂಡದ್ದಾದರೆ ರತ್ನಪರೀಕ್ಷಾನಾಂ ಕೃತಿರತ್ನಪರೀಕ್ಷಕನೆಂದು ಫಣಿಪತಿಯ ಫಣಾರತ್ನಮುಮಂ ರನ್ನನ ಕೃತಿರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೆ ಎಂಬ ನುಡಿ ಸಹೃದಯ ವಿಮರ್ಶಕರನ್ನು ಕುರಿತದ್ದು. ಈ ಎರಡೂ ಒಣಪ್ರತಿಷ್ಠೆಯ ಮಾತುಗಳಲ್ಲ ಎಂಬ ಸಂಗತಿ ಇವನ ಕಾವ್ಯಗಳ ಅಭ್ಯಾಸದಿಂದ ಸುವ್ಯಕ್ತವಾಗುತ್ತದೆ.

ಸಾಹಸಭೀಮವಿಜಯು 10 ಆಶ್ವಾಸಗಳುಳ್ಳ ಚಂಪೂಕಾವ್ಯ. ಗದಾಯುದ್ಧ ಎಂಬ ಹೆಸರಿನಿಂದಲೂ ಪ್ರಸಿದ್ಧವಾಗಿರುವ ಈ ಕಾವ್ಯದ ರಚನೆಯ ಕಾಲ ಸು. 982 (1008ರಲ್ಲಿ ಬರೆದಿರಬೇಕೆಂಬ ಅಭಿಪ್ರಾಯವೂ ಇದೆ). ಮಹಾಭಾರತದ ಗದಾಸೌಪ್ತಿಕ ಪರ್ವಗಳ ಕಥಾಭಾಗವೇ ಈ ಕಾವ್ಯವಸ್ತುವಿಗೆ ಆಧಾರ. ಪಂಪನ ವಿಕ್ರಮಾರ್ಜುನವಿಜಯ (13ನೆಯ ಆಶ್ವಾಸ), ಭಾಸನ ಊರುಭಂಗ, ಭಟ್ಟನಾರಾಯಣನ ವೇಣೀಸಂಹಾರ ನಾಟಕ-ಇವುಗಳ ಪ್ರಯೋಜವನ್ನೂ ಕವಿ ಪಡೆದುಕೊಂಡಿದ್ದಾನೆ. ಹೀಗಿದ್ದೂ ರನ್ನ ಈ ಕಾವ್ಯರಚನೆಯಲ್ಲಿ ಸ್ವತಂತ್ರವೆನಿಸುವ ಪ್ರತಿಭೆಯನ್ನು ತೋರಿದ್ದಾನೆ.

ಚಾಳುಕ್ಯ ಚಕ್ರವರ್ತಿ ತೈಲಪನ ಆಜ್ಞೆಯಂತೆ ಆತನ ಮಗ ಯುವರಾಜ ಇಿವಬೆಡಂಗ ಸತ್ಯಾಶ್ರಯ (997–1008) ದಂಡಯಾತ್ರೆ ಕೈಕೊಂಡು ಚೋಳ ಅರಸ ಅಪರಾದಿತ್ಯನನ್ನು ಸೋಲಿಸಿ ಕಾಂಚೀನಗರ, ಗೂರ್ಜರಗಳನ್ನು ಗೆದ್ದು ಸಾಹಸವನ್ನು ಮೆರೆದ. ಈ ಸಂಗತಿ ರನ್ನನ ಕಾವ್ಯರಚನೆಗೆ ಪ್ರಚೋದನೆಯನ್ನು ಒದಗಿಸಿತು. ಯುವರಾಜನ ಸಾಹಸಗಳನ್ನು ವರ್ಣಿಸುವ ದೃಷ್ಟಿಯಿಂದ ಕವಿ ಸಾಹಸಭೀಮವಿಜಯ ಕಾವ್ಯವನ್ನು ರಚಿಸಿದ. ಇದರಲ್ಲಿ ಇತಿಹಾಸ ಪುರಾಣಗಳನ್ನು ಒಂದಕ್ಕೊಂದು ಹೊಂದಿಸಿ ಹೇಳಲಾಗಿದ್ದು ಮಹಾಭಾರತದ ಭೀಮಸೇನನೊಂದಿಗೆ ಸತ್ಯಾಶ್ರಯನನ್ನು ಹೋಲಿಸಲಾಗಿದೆ.

ದುರ್ಯೋಧನ–ಭೀಮರ ನಡುವೆ ನಡೆದ ಗದಾಯುದ್ಧದ ಕಥಾನಿರೂಪಣೆಯಲ್ಲಿ ರನ್ನ ಮಹಾಭಾರತದ ಮುಖ್ಯ ಕಥೆಯನ್ನು ಸಿಂಹಾವಲೋಕನ ಕ್ರಮದಿಂದ ಸೂಚಿಸಿದ್ದಾನೆ. ಒಳಪೊಕ್ಕು ನೋಡೆ ಭಾರತದೊಳಗಣ ಕಥೆಯೆಲ್ಲಮೀ ಗದಾಯುದ್ಧದೊಳಂತೊಳಕೊಂಡತ್ತೆನೆ ಸಿಂಹಾವಳೋಕ ನಕ್ರಮದಿನಱಿಪಿದಂ ಕವಿರತ್ನಂ ಎಂದು ಒಂದು ಕಡೆ ಕವಿಯೇ ಹೇಳಿಕೊಂಡಿದ್ದಾನೆ. ಈ ಕಾವ್ಯಕ್ಕೆ ಭೀಮಸೇನನೇ ನಾಯಕ. ಕೊನೆಯಲ್ಲಿ ಆತನಿಗೇ ಪಟ್ಟಾಭಿಷೇಕ. ದ್ರೌಪದಿಗೆ ಪಂಚಪತಿಗಳೆಂಬ ಕಲ್ಪನೆ ಇಲ್ಲಿಲ್ಲ. ಭೀಮ ನೊಬ್ಬನೇ ಆಕೆಯ ಪತಿ. ದ್ರೌಪದಿ ಈ ಕಾವ್ಯದ ನಾಯಕಿ. ಕುರುಕ್ಷೇತ್ರದ ಯುದ್ಧದಲ್ಲಿ ಕೌರವಪಕ್ಷದ ವೀರರೆಲ್ಲ ಅಳಿದು ದುರ್ಯೋಧನನೊಬ್ಬನೇ ಉಳಿದಿದ್ದಾನೆ. ಆ ಸಂದರ್ಭದಲ್ಲಿ ಪಾಂಡವ ಕೌರವರಲ್ಲಿ ಸಂಧಿಯ ಪ್ರಸ್ತಾಪ ಬರುತ್ತದೆ. ಪಾಂಡವರು ಸಂಧಿಗೆ ಒಪ್ಪಿದರೆ ತನ್ನ ಪ್ರತಿಜ್ಞೆಗೆ ಭಂಗವಾಗುವುದೆಂದು ದ್ರೌಪದಿ ಭಾವಿಸುತ್ತಾಳೆ. ಆಗ ಆಕೆ ಭೀಮಸೇನನನ್ನು ಪ್ರಚೋದಿಸಿ ತನ್ನ ಮತ್ತು ಆತನ ಪ್ರತಿಜ್ಞೆಗಳು ನೆರವೇರುವಂತೆ ಮಾಡುವ ಉದ್ದೇಶದಿಂದ ಆತನ ಬಳಿ ಬರುತ್ತಾಳೆ. ಹೀಗೆ ಆರಂಭವಾಗುವ ಈ ಕಾವ್ಯದ ಕಥೆ ದುರ್ಯೋಧನನ ಸೋಲು, ಭೀಮಸೇನನ ಪಟ್ಟಾಭಿಷೇಕ ದೊಂದಿಗೆ ಕೊನೆಗೊಳ್ಳುತ್ತದೆ.

ಹತ್ತು ಆಶ್ವಾಸಗಳಲ್ಲಿಯ ಇದರ ಕಥಾಭಾಗವನ್ನು ಐದು ಅಂಕಗಳ ನಾಟಕವನ್ನಾಗಿ ಸಹಜವಾಗಿ ಅಳವಡಿಸುವ ಬಗೆಯಲ್ಲಿ ರನ್ನ ಕಾವ್ಯವಸ್ತುವನ್ನು ವಿನ್ಯಾಸಗೊಳಿಸಿದ್ದಾನೆ. ಸ್ಫುಟವಾದ ಪಾತ್ರದರ್ಶನ, ಪರಿಣಾಮಕಾರಿ ಸನ್ನಿವೇಶ ನಿರ್ಮಾಣ, ಚತುರ ಸಂಭಾಷಣೆ, ಉತ್ಕಟ ರಸಾವಿಷ್ಕಾರ–ಈ ನಾಟಕೀಯ ಗುಣಗಳು ಈ ಕಾವ್ಯದಲ್ಲಿವೆ. ಪಾತ್ರಚಿತ್ರಣದಲ್ಲಿಯೂ ಕವಿ ಸಿದ್ಧಹಸ್ತನೆನಿಸಿದ್ದಾನೆ. ಭೀಮನ ಸಾಹಸಗಳ ವರ್ಣನೆಯಲ್ಲಿ ಕವಿ ಜಾಣ್ಮೆ ತೋರಿದ್ದಾನೆ. ದುರ್ಯೋಧನನ ಪಾತ್ರಚಿತ್ರಣ ಇಡೀ ಕಾವ್ಯದಲ್ಲಿ ಮಹೋನ್ನತವಾಗಿದ್ದು ಸಹೃದಯರಿಗೆ ಆತ ಒಬ್ಬ ಮಹಾನುಭಾವನಾಗಿ ಕಂಡುಬರುತ್ತಾನೆ. ಆತನ ಅಂತ್ಯಕಾಲದ ನಡೆವಳಿಕೆಯಂತೂ ಹೃದಯಸ್ಪರ್ಶಿಯಾಗಿದೆ. ಅವನ ಒಂದೊಂದು ಮಾತಿನಲ್ಲಿ ಧೀಮಂತ ನಾಯಕನೊಬ್ಬನ ಬದುಕಿನ ಪರಿಪಕ್ವತೆ ಕಂಡುಬರುತ್ತದೆ. ದ್ರೌಪದಿಯ ಪಾತ್ರವೂ ಪರಿಣಾಮಕಾರಿಯಾಗಿದೆ. ಇನ್ನುಳಿದ ಪಾತ್ರಗಳ ಚಿತ್ರಣವೂ ಸುಂದರವಾಗಿದೆ. ಕಾವ್ಯಶೈಲಿ ಸುಸ್ಪಷ್ಟವೂ ಪರಿಣಾಮಕಾರಿಯೂ ಆಗಿದೆ. ವೀರ, ಕರುಣ, ಹಾಸ್ಯ, ಬೀಭತ್ಸ, ಶೃಂಗಾರ ಇತ್ಯಾದಿಗಳ ರಸಾನುಭವ ಈ ಕಾವ್ಯದ ಓದುಗರಿಗೆ ಸುಲಭವಾಗಿ ದೊರೆಯುತ್ತದೆ. ಮಾನವೀಯ ಸ್ವಭಾವಚಿತ್ರಣ, ಸಂಘರ್ಷಣೆಗಳ ಚಿತ್ರಣ ಮನಮುಟ್ಟುವ ಬಗೆಯಲ್ಲಿ ಬಂದಿದೆ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದಲ್ಲಿ ಸಾಹಸಭೀಮವಿಜಯ ಒಂದು ಮಹತ್ತ್ವದ ಕೃತಿಯಾಗಿದೆ. (ಎಸ್.ಎಸ್.ಎಂ.ಎ.)

ಅಜಿತಪುರಾಣ ಪ್ರೌಢ ಚಂಪೂಕಾವ್ಯ. ಇದರ ರಚನೆಯ ಕಾಲ 993. ಅಜಿತತೀರ್ಥಂಕರ ಪುರಾಣತಿಲಕಂ ಎಂದು ಕವಿ ಈ ಕಾವ್ಯಕ್ಕೆ ಇಟ್ಟಿರುವ ಹೆಸರು. ಇದನ್ನು ಕವಿ ಪುರಾಣತಿಲಕ, ಪುರಾಣಚೂಡಾಮಣಿ ಎಂದೂ ಕರೆದಿದ್ದಾನೆ. ಚಾಳುಕ್ಯ ಚಕ್ರವರ್ತಿ ಆಹವಮಲ್ಲ ತೈಲಪನ ಪಡೆವಳನಾಗಿದ್ದ ನಾಗಿದೇವನೆಂಬುವನು ಅಕಾಲಮೃತ್ಯುವಿಗೆ ತುತ್ತಾಗಲು, ಆತನ ಹಿರಿಯ ಹೆಂಡತಿ ಅತ್ತಿಮಬ್ಬೆ ತನ್ನಿಂದ ಇದನ್ನು ಬರೆಸಿದಳೆಂದು ಕವಿ ಹೇಳಿಕೊಂಡಿದ್ದಾನೆ. ಅವಳ ಆದರ್ಶ ಚಾರಿತ್ರವನ್ನು ಪೀಠಿಕಾ ಭಾಗದಲ್ಲಿ ಮನಸಾರೆ ಹೊಗಳಿದ್ದಾನೆ. ಸುಮಾರು ಎಂಟುನೂರು ಪದ್ಯಗಳನ್ನು ಒಳಗೊಂಡು ಹನ್ನೆರಡು ಆಶ್ವಾಸಗಳಲ್ಲಿ ಹರಡಿರುವ ಈ ಪುಟ್ಟ ಜೈನಪುರಾಣ ಎರಡನೆಯ ತೀರ್ಥಂಕರ ಅಜಿತನಾಥನ ಜೀವಿತ ವೃತ್ತಾಂತವನ್ನು ಒಳಗೊಂಡಿದೆ. ಮೊದಲ ಮತ್ತು ಕಡೆಯ ಆಶ್ವಾಸಗಳು ಪ್ರಾರ್ಥನೆ, ಕವಿಕಾವ್ಯಪ್ರಶಸ್ತಿಗೆ ಮೀಸಲಾಗಿವೆ. ಎರಡರಿಂದ ಎಂಟನೆಯ ಆಶ್ವಾಸದವರೆಗೆ ಕಥಾನಾಯಕನ ಸುರಲೋಕಾವತಾರೋತ್ಸವ, ಜನ್ಮಾಭಿಷೇಕೋತ್ಸವ, ಪರಿನಿಷ್ಕ್ರಾಂತಿ ಮಹೋತ್ಸವ, ಕೈವಲ್ಯ ಬೋಧೋತ್ಸವ, ಪರಿನಿರ್ವಾಣಮಹೋತ್ಸವ ಎಂಬ ಪಂಚಕಲ್ಯಾಣಗಳ ಹಂದರದ ಮೇಲೆ ಕಥೆ ಹಬ್ಬಿದೆ. ಒಂಬತ್ತರಿಂದ ಹನ್ನೊಂದರವರೆಗೆ ಇರುವ ಮೂರು ಆಶ್ವಾಸಗಳಲ್ಲಿ ಚಕ್ರವರ್ತಿ ಸಗರನ ಕಥೆ ನಿರೂಪಿತವಾಗಿದೆ. ಈ ಕಥೆ ಕಾವ್ಯದಲ್ಲಿ ಒಂದು ರಸಘಟ್ಟ. ಸಗರನ ಪಾತ್ರಚಿತ್ರಣ ಭವ್ಯತೆಯನ್ನು ಮುಟ್ಟಿದೆ. ಕಥೆ ಉಪಕಥೆಗಳೆರಡರಲ್ಲೂ ಮತತತ್ತ್ವನಿರೂಪಣೆ ಪ್ರಮುಖಪಾತ್ರವನ್ನು ವಹಿಸಿದೆ. ಅಜಿತಸ್ವಾಮಿ ಸಂಸಾರತ್ಯಾಗಿಯಾಗುವ ಸನ್ನಿವೇಶ ಕರುಣರಸದಿಂದ ತುಂಬಿದೆ. ಋತು ವರ್ಣನೆ ಸುಂದರವಾಗಿದೆ. ಇಲ್ಲಿನ ವೈರಾಗ್ಯ ನಿರೂಪಣೆ ಕವಿಚೇತನದ ಆತ್ಮರೋದನವಾಗಿ ಮತಧರ್ಮದ ಸಂಕೋಚದಿಂದ ಮೇಲಕ್ಕೇರಿ ವಿಶ್ವಧರ್ಮದ ಮಹೋನ್ನತಿಯನ್ನು ಮುಟ್ಟಿದೆ. ಈತನ ಶೈಲಿಯಲ್ಲಿ ಭಾವ–ಭಾಷೆಗಳು ಸಮರಸವಾಗಿ ಬೆರೆತು ಕಿವಿಗೆ ಇಂಪನ್ನೂ ಹೃದಯಕ್ಕೆ ತಂಪನ್ನೂ ನೀಡುತ್ತವೆ. (ಟಿ.ಎಸ್.ಎಸ್.)

**ರಬಕವಿ–ಬನಹಟ್ಟಿ:** ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಒಂದು ಪಟ್ಟಣ. ಕಸಬೆಯಿಂದ ಪಶ್ಚಿಮಕ್ಕೆ 19 ಕಿಮೀ ದೂರದಲ್ಲಿ, ಕುಡಚಿ ರೈಲ್ವೆ ನಿಲ್ದಾಣದಿಂದ 34 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 70,248. ರಬಕವಿ ಮತ್ತು ಬನಹಟ್ಟಿಗಳಿಗೆ 1952ರಲ್ಲಿ ಒಂದು ಜಂಟಿ ಪುರಸಭೆ ಸ್ಥಾಪಿತವಾಯಿತು. ಈ ಊರಲ್ಲಿ ರಬಕವಿ, ಬನಹಟ್ಟಿ, ಹೊಸೂರು ಮತ್ತು ರಾಂಪುರಗಳೆಂಬ ನಾಲ್ಕು ಊರುಗಳು ಸಮಾವೇಶಗೊಂಡಿವೆ. ಪುರಸಭೆಯ ಕಾರ್ಯಾಲಯ ಬನಹಟ್ಟಿಯಲ್ಲಿದೆ. ನೇಯ್ಗೆ ಇಲ್ಲಿನ ಜನರ ಮುಖ್ಯ ಉದ್ಯೋಗ. ಇಲ್ಲಿ ನೇಯುವ ಮಧ್ಯಮ ದರ್ಜೆಯ ಸೀರೆಗಳನ್ನು ವಿಶೇಷವಾಗಿ ಹುಬ್ಬಳ್ಳಿಗೆ ಕಳಿಸಲಾಗುತ್ತದೆ. ರಬಕವಿಯಲ್ಲಿರುವ ಶಂಕರಲಿಂಗ ದೇವಾಲಯ ಹಾಗೂ ಬನಹಟ್ಟಿಯ ಪಶ್ಚಿಮಕ್ಕೆ ಒಂದು ಗುಡ್ಡದ ಮೇಲಿರುವ ಕಾಡುಸಿದ್ಧೇಶ್ವರ ದೇವಾಲಯ ಪ್ರೇಕ್ಷಣೀಯವಾಗಿವೆ. (ಜಿ.ಎನ್.ಕೆ.)

**ರಮಾದೇವಿ, ವಿ.ಎಸ್.:** 1934–. ಕರ್ನಾಟಕದ ಮಾಜಿ ರಾಜ್ಯಪಾಲರು (1999–2004). ಆಂಧ್ರಪ್ರದೇಶದ ಚೆಟ್ರೊಲು ಎಂಬಲ್ಲಿ 1934 ಜನವರಿ 15ರಂದು ಜನಿಸಿದರು. ತಂದೆ ವಿ.ವಿ. ಸುಬ್ಬಯ್ಯ, ತಾಯಿ ವಿ. ವೆಂಕಟರತ್ನಮ್ಮ.

ರಮಾದೇವಿಯವರು ಎಂ.ಎ., ಎಲ್.ಎಲ್.ಎಮ್. ಪದವೀಧರರು. ಆಂಧ್ರಪ್ರದೇಶದ ಉನ್ನತ ನ್ಯಾಯಾಲಯದಲ್ಲಿ ವಕೀಲರಾಗಿದ್ದ ಇವರು ಕೇಂದ್ರಸರ್ಕಾರದಲ್ಲಿ ಗ್ರೂಪ್–ಎ ವೃಂದದ ಅಧಿಕಾರಿಯಾಗಿ ತಮ್ಮ ಸೇವೆ ಪ್ರಾರಂಭಿಸಿದರು.

ಶಾಸಕಾಂಗ ವಿಭಾಗದಲ್ಲಿ ವಿಶೇಷ ಕಾರ್ಯದರ್ಶಿ, ಕಾನೂನು ಆಯೋಗದ ಸದಸ್ಯ ಕಾರ್ಯದರ್ಶಿ ಮತ್ತು ಭಾರತ ಸರ್ಕಾರದ ಕಾರ್ಯದರ್ಶಿಯಂತಹ ಉನ್ನತ ಹುದ್ದೆಗಳಲ್ಲಿ ಇವರು ಸೇವೆಸಲ್ಲಿಸಿದರು. ಸೀಮಿತ ಅವಧಿಗೆ ಮುಖ್ಯ ಚುನಾವಣಾ ಆಯುಕ್ತರಾಗಿಯೂ ಕಾರ್ಯನಿರ್ವಹಿಸಿದರು. ರಾಷ್ಟ್ರೀಯ ಮಹಿಳಾ ಆಯೋಗದ ಗೌರವ ಸಲಹೆಗಾರರೂ ಆಗಿದ್ದ ಇವರು ರಾಜ್ಯಸಭೆಯ ಮಹಾಕಾರ್ಯದರ್ಶಿಯಾಗಿಯೂ ನೇಮಕಗೊಂಡಿದ್ದರು (1993–97).

ಮಹಿಳೆಯರು ಹಾಗೂ ದುರ್ಬಲ ವರ್ಗದವರಲ್ಲಿ ಚುನಾವಣಾ ವಿಷಯವು ಸೇರಿದಂತೆ ಕಾನೂನು ಜಾಗೃತಿ ಉಂಟುಮಾಡುವುದು, ವಿಚಾರ ಸಂಕಿರಣ, ಕಮ್ಮಟ ಮತ್ತು ತರಬೇತಿಗಳಲ್ಲಿ ನ್ಯಾಯಾಧೀಶರು ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಅಪರಾಧ ನ್ಯಾಯ ಪದ್ಧತಿ ಬಗೆಗೆ ಸಂವಾದಿಸುವುದು, ಅಂಗವಿಕಲರಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ರಾಷ್ಟ್ರೀಯ ಅಂತಾರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳ ಬಗೆಗೆ ಅಧ್ಯಯನ ನಡೆಸುವುದು, ಸಾಹಿತ್ಯರಚನೆ ಮೊದಲಾದುವು ಇವರ ಕೆಲವು ವಿಶೇಷ ಆಸಕ್ತಿಯ ವಿಷಯಗಳು.

ಮಹಿಳೆ ಮತ್ತು ಕಾನೂನು, ಮಕ್ಕಳು ಮತ್ತು ಕಾನೂನು, ಅಂಗವಿಕಲರು ಮತ್ತು ಕಾನೂನು–ಹೀಗೆ ಕಾನೂನಿಗೆ ಸಂಬಂಧಿಸಿದ ಕೆಲವು ಕೃತಿಗಳನ್ನು ರಚಿಸಿದ್ದಾರೆ. ತೆಲುಗಿನಲ್ಲಿ ಕೆಲವು ಕತೆ, ಕಾದಂಬರಿ ಹಾಗೂ ಪ್ರಬಂಧಗಳನ್ನು ಬರೆದಿರುವರು. ಇವರ ಒಂದೆರಡು ಕೃತಿಗಳು ಕನ್ನಡಕ್ಕೂ ಅನುವಾದವಾಗಿವೆ. ಇವರು ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದರು. (26-07-1997 ರಿಂದ 03-12-1999) 1999 ಡಿಸೆಂಬರ್ 2 ರಿಂದ 2004ರ ವರೆಗೆ ಕರ್ನಾಟಕದ ರಾಜ್ಯಪಾಲರಾಗಿ ಸೇವೆಸಲ್ಲಿಸಿದರು. ಯಾವುದೇ ವಿವಾದಗಳಿಗೆ ಎಡೆಬರದಂತೆ ದಕ್ಷತೆಯಿಂದ ಕಾರ್ಯ ನಿರ್ವಹಿಸುವುದು ಇವರ ಕಾರ್ಯವೈಖರಿಯ ವಿಶೇಷತೆಯಾಗಿತ್ತು. (ಟಿ.ಜಿ.)

**ರಮಾಬಾಯಿ:** 1858-1922. ಪ್ರಸಿದ್ಧ ಸಮಾಜ ಸುಧಾರಕಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿದ ಇವರು ಅನಂತ ಪದ್ಮನಾಭ ಡೋಂಗ್ರೆ ಮತ್ತು ಲಕ್ಷ್ಮೀಬಾಯಿ ದಂಪತಿಗಳ ಮೂವರು ಮಕ್ಕಳಲ್ಲಿ ಕಿರಿಯರು. ಪ್ರಚಂಡ ಬುದ್ಧಿ, ಅಪಾರ ಪಾಂಡಿತ್ಯ ಪಡೆದಿದ್ದ ಇವರು ಬಂಗಾಲಿ ವ್ಯಕ್ತಿಯೊಬ್ಬರನ್ನು ಮದುವೆಯಾಗಿ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾದರು. ಸಂಪ್ರದಾಯಶರಣರು ಈಕೆಯ ಪಾಂಡಿತ್ಯ ಮತ್ತು ವಾಗ್ವೈಖರಿಯನ್ನು ಮೆಚ್ಚಿ ಪ್ರಶಂಸಿಸಿದರೂ ಈಕೆಯ ಅಂತರ್ಜಾತೀಯ ವಿವಾಹವನ್ನೂ ಹಿಂದುಧರ್ಮವನ್ನು ಟೀಕಿಸುತ್ತಿದ್ದ ರೀತಿಯನ್ನೂ ಕಂಡು ಕೆರಳಿದರು. ಪುರುಷ ವರ್ಗವು ಮಹಿಳೆಯರನ್ನು ಶೋಷಿಸುತ್ತಿದ್ದ ರೀತಿ ಮತ್ತು ಅನಾದರದ ಮನೋಭಾವಗಳಿಂದ ನೊಂದ ರಮಾಬಾಯಿ ಕ್ರೈಸ್ತಧರ್ಮ ಸ್ವೀಕರಿಸಿದರು. ಮೂರು ವರ್ಷಗಳ ಕಾಲ (1884-86) ಚೆಲ್ಟನ್‌ಹ್ಯಾಮ್ (ಇಂಗ್ಲೆಂಡ್) ಕ್ರಿಶ್ಚಿಯನ್ ಮಹಿಳಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಅಮೆರಿಕದಲ್ಲಿ ಕಿಂಡರ್‌ಗಾರ್ಟನ್‌ನ ಫ್ರಾಯಬೆಲ್ಸ್ ಸಿಸ್ಟಮ್‌ನ್ನು ಕಲಿತರು. ಅನಂತರ ಶಿಕ್ಷಣಕಾರ್ಯಕ್ಕೆ ಅಪಾರವಾದ ಆರ್ಥಿಕ ನೆರವಿನ ಭರವಸೆ ಪಡೆದು ಇವರು ಭಾರತಕ್ಕೆ ಮರಳಿದರು.

ಮಹಿಳೆಯರ ಕಲ್ಯಾಣಕ್ಕಾಗಿ ಇವರು ವಿಧವೆಯರು, ಪತಿತೆಯರು ಹಾಗೂ ರೋಗಿಷ್ಠ ಸ್ತ್ರೀಯರ ನೆರವಿಗಾಗಿ ಅಸಂಖ್ಯಾತ ಸಂಘ-ಸಂಸ್ಥೆಗಳನ್ನು ತೆರೆದರು. ಪುಣೆಯಲ್ಲಿ ವಿಧವೆಯರ ಉದ್ಧಾರಕ್ಕಾಗಿ ಆರ್ಯ ಮಹಿಳಾ ಸಮಾಜವನ್ನು ಆರಂಭಿಸಿ ಸಂಸ್ಕೃತವನ್ನು ಕಲಿಸಿದರು. ಸು. 2000 ವಿದ್ಯಾರ್ಥಿಗಳು ಅಲ್ಲಿ ಕಲಿಯುತ್ತಿದ್ದರು. ವಿದ್ವಾಂಸರಾದ ಡಿ.ಡಿ. ಕರ್ವೆ ಅವರು ಪುಣೆಯಲ್ಲಿ ಹಿಂದು ವಿಧವೆಯರಿಗಾಗಿ 1889ರಲ್ಲಿ ಸ್ಥಾಪಿಸಿದ್ದ ಶಾರದಾ ಸದನದಲ್ಲಿ ಅವರ ಶಿಷ್ಯೆಯಾಗಿ ರಮಾಬಾಯಿ ನಿಸ್ಪೃಹ ಸೇವೆ ಸಲ್ಲಿಸಿದರು. ಇದರ ಪರಿಣಾಮವಾಗಿ ಈ ಶಾರದಾ ಸದನ 1910ರಲ್ಲಿ 'ಇಂಡಿಯಾ ವಿಮೆನ್ಸ್ ಯೂನಿವರ್ಸಿಟಿ'ಯಾಗಿ (ಭಾರತದ ಮಹಿಳಾ ವಿಶ್ವವಿದ್ಯಾನಿಲಯ) ಪರಿವರ್ತಿತವಾಯಿತು. ಈ ಸಂಸ್ಥೆಯಲ್ಲಿ ಸ್ತ್ರೀಯರಿಗೆ ಉಪಯುಕ್ತವಾದ ಗೃಹವಿಜ್ಞಾನ ಮತ್ತು ಭಾರತೀಯ ಸಂಪ್ರದಾಯಗಳ ಬಗ್ಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಇದರಿಂದಾಗಿ ಬ್ರಾಹ್ಮಣ ಸಮಾಜದ ಎಷ್ಟೋ ವಿಧವೆಯರು ಮತ್ತು ಸಾಮಾನ್ಯವಾಗಿ ಸ್ತ್ರೀ ಸಮೂಹ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಯಿತು.

ಪುಣೆಯಲ್ಲಿ ಇವರು ಸ್ಥಾಪಿಸಿದ್ದ ಆರ್ಯ ಮಹಿಳಾ ಸಮಾಜದಿಂದ ಹೆಚ್ಚಿನ ಯಶಸ್ಸು ದೊರೆಯಲಿಲ್ಲ. ರಾನಡೆ ಮತ್ತು ಆರ್.ಜಿ. ಭಂಡಾರಕರ್ ಅವರು ರಮಾಬಾಯಿಯವರಿಗೆ ಮೊದಮೊದಲು ಸಹಾನುಭೂತಿ ತೋರಿಸಿದರು. ಮಹಿಳೆಯರಿಗೆ ಶಿಕ್ಷಣ ನೀಡುವ ನೆಪದಲ್ಲಿ ಮತಾಂತರಕಾರ್ಯದಲ್ಲಿ ರಮಾಬಾಯಿ ತೊಡಗಿದ್ದಾರೆ ಎಂದು ಟಿಳಕ್ ಆಪಾದಿಸಿದರು. ಶಾರದಾ ಸದನವು ನಡೆಸುತ್ತಿದ್ದ ಮತಾಂತರ ಕಾರ್ಯವನ್ನು ಇವರು ಬಹಿರಂಗವಾಗಿ ಒಪ್ಪಿಕೊಂಡರು. ಆಗ ಭಂಡಾರಕರ್ ಮತ್ತು ರಾನಡೆ ಅವರು ರಮಾಬಾಯಿಯವರ ಕಾರ್ಯಚಟುವಟಿಕೆಗಳೊಂದಿಗೆ ಇದ್ದ ಸಂಪರ್ಕವನ್ನು ಕಡಿದುಕೊಂಡರು. ರಮಾಬಾಯಿಯವರ ಪಾಂಡಿತ್ಯಪೂರ್ಣ ಸಾಧನೆಗಾಗಿ ಇವರಿಗೆ ಕಲ್ಕತ್ತೆಯಲ್ಲಿ ಸಾರ್ವಜನಿಕ ಮನ್ನಣೆಯಾಗಿ ಪಂಡಿತ ಮತ್ತು ಸರಸ್ವತಿ ಎಂಬ ಪ್ರಶಸ್ತಿಗಳನ್ನು ನೀಡಲಾಯಿತು. ಇವರು ಅನೇಕ ಮರಾಠಿ ಗ್ರಂಥಗಳನ್ನು ರಚಿಸಿದ್ದಾರೆ. ದಿ ಹೈಕ್ಯಾಸ್ಟ್ ಹಿಂದು ವಿಮೆನ್, ರಮಾಬಾಯಿ ಬೈಬಲ್ (ಮೂಲ ಹೀಬ್ರೂ ಭಾಷೆಯಿಂದ ಅನುವಾದ), ಎ ಟೆಸ್ಟಿಮೊನಿ (ಕ್ರೈಸ್ತ ಧರ್ಮಕ್ಕೆ ಮತಾಂತರವಾದ ಕಥೆ) ಇವರ ಮುಖ್ಯ ಕೃತಿಗಳು. *

**ರಮೇಶ್ ಟಿಕಾರಾಂ:** ಅರ್ಜುನ ಪ್ರಶಸ್ತಿ ಪಡೆದ ಪ್ರಸಿದ್ಧ ಅಂಗವಿಕಲ ಕ್ರೀಡಾಪಟು. ಬಾಲ್ಯದಲ್ಲಿಯೇ ಪೋಲಿಯೋ ರೋಗಕ್ಕೆ ತುತ್ತಾದರೂ ಮಾನಸಿಕ ದೃಢತೆಯಿಂದ ಅಂಗವೈಕಲ್ಯವನ್ನು ಮೀರಿ ಯಶಸ್ಸು ಪಡೆದವರು. ಬೆಂಗಳೂರಿನ ದಂಡು ಪ್ರದೇಶದಲ್ಲಿನ ಬಾಪೂಜಿ ಸ್ಮಾರಕ ವಿದ್ಯಾಲಯದಲ್ಲಿ ಓದುತ್ತಿದ್ದ ಸಂದರ್ಭದಲ್ಲಿ (1982) ಇತರ ಮಕ್ಕಳು ಆಡುತ್ತಿದ್ದದ್ದನ್ನು ಕಂಡು ತಾನೂ ಆಡಬೇಕೆಂಬ ಹಂಬಲ ಇವರಲ್ಲಿ ಮೂಡಿತು. ಕಠಿಣ ಪರಿಶ್ರಮದ ದೈಹಿಕ ಅಭ್ಯಾಸದಲ್ಲಿ ನಿರತರಾದರು. ಇವರು ಶಾಲೆಯಲ್ಲಿ ಓದುತ್ತಿದ್ದಾಗ ಉತ್ತಮ ಕುಸ್ತಿ ಪಟುವಾಗಿದ್ದರು. ಅಲ್ಲಿ ಇವರಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿತು. ಇವರು 1988ರಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಂಗವಿಕಲರ ಕ್ರೀಡಾಕೂಟದಲ್ಲಿ ಷಾಟ್‌ಪುಟ್ ವಿಭಾಗದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದರು; ಕೇರಲಂನಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಇಂಗ್ಲೆಂಡಿನ ನಾಟಿಂಗ್‌ಹ್ಯಾಂನಲ್ಲಿ ನಡೆದ ಷೇರ್‌ವುಡ್ ಫಾರೆಸ್ಟ್ ಗೇಮ್ಸ್ ಇವರು ಪಾಲ್ಗೊಂಡ ಮೊದಲ ಅಂತಾರಾಷ್ಟ್ರೀಯ ಸ್ಪರ್ಧೆ (1995). ಇದರಲ್ಲಿ ಷಾಟ್‌ಪುಟ್ ಮತ್ತು ಜಾವಲಿನ್ ಥ್ರೋಗಳಲ್ಲಿ ಇವರು ಬೆಳ್ಳಿಪದಕ ಗೆದ್ದುಕೊಂಡರು. ಅನಂತರ ಆಸ್ಟ್ರೇಲಿಯ ದಲ್ಲಿ ನಡೆದ ಸದರ್ನ್ ಮಲ್ಟಿ ಡಿಸೆಬಿಲಿಟಿ ಚಾಂಪಿಯನ್‌ಷಿಪ್‌ನಲ್ಲಿ ಭಾಗ ವಹಿಸಿ ಷಾಟ್‌ಪುಟ್‌ನಲ್ಲಿ ಸ್ವರ್ಣಪದಕವನ್ನು ಪಡೆದರು (1999). 2002ರಲ್ಲಿ

ಬೆಂಗಳೂರಿನಲ್ಲಿ ಅಂಗವಿಕಲರ ವಿಶ್ವಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪಂದ್ಯ ನಡೆಯಲು ಇವರೂ ಕಾರಣರು. ಭಾರತ ಸರ್ಕಾರ ಇವರ ಕ್ರೀಡಾ ಸಾಧನೆಗಾಗಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ (2003). (ಎಸ್.ಆರ್.ಯು.)

**ರಮೇಶ್, ಬಿ.ಸಿ.:** 1971– . ಉತ್ತಮ ಕಬಡ್ಡಿ ಆಟಗಾರರು. 1971 ಜುಲೈ 4ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಪೊಲೀಸ್ ಆರಕ್ಷಕ ನಿರೀಕ್ಷಕರಾಗಿದ್ದರು. ಅವರು ಉತ್ತಮ ಫುಟ್‌ಬಾಲ್ ಆಟಗಾರರೂ ಹೌದು. ರಮೇಶ್ ಅವರ ತಮ್ಮ ಬಿ.ಸಿ.ಸುರೇಶ್ ಕೂಡ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕಬಡ್ಡಿ ಆಟಗಾರರು.

ಪ್ರಾರಂಭದ ಪ್ರಾಥಮಿಕ ಶಿಕ್ಷಣವನ್ನು ಬೆಂಗಳೂರಿನಲ್ಲಿ ಪಡೆದ ರಮೇಶ್ ಪ್ರೌಢಶಾಲೆಯ ಹಂತದಲ್ಲೇ ಕಬಡ್ಡಿ ಆಟಗಾರರಾಗಿ ರೂಪುಗೊಂಡರು. ಪ್ರಾರಂಭದ ದಿನಗಳಲ್ಲಿ ಹಿಂದೂಸ್ತಾನ್ ಮಷಿನ್ ಟೂಲ್ಸ್ ತಂಡದ ಆಟಗಾರರಾಗಿ, ಅನಂತರ ಭಾರತೀಯ ಸ್ಟೇಟ್ ಬ್ಯಾಂಕ್ ತಂಡದ ಆಟಗಾರರಾಗಿ ರಾಷ್ಟ್ರೀಯ ಮಟ್ಟದಲ್ಲಿ 8 ಬಾರಿ ಪ್ರತಿನಿಧಿಸಿದ್ದಲ್ಲದೆ ತಂಡದ ನಾಯಕರಾಗಿ ಉತ್ತಮ ಕಾರ್ಯ ನಿರ್ವಹಿಸಿರುವರು. ಹಿರಿಯರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 11 ಬಾರಿ ಭಾಗವಹಿಸಿದ ಇವರು ಹಲವಾರು ಬಾರಿ ಶ್ರೇಷ್ಠ ಆಲ್‌ರೌಂಡರ್ ಆಗಿ ಆಯ್ಕೆಗೊಂಡಿದ್ದಾರೆ.



1995ರ 7ನೆಯ ಎಸ್.ಎ.ಎಫ್. ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ ಅಂತಾರಾಷ್ಟ್ರೀಯ ಪಂದ್ಯಾಟಗಳಲ್ಲಿ ಸೇರ್ಪಡೆಗೊಂಡ ಇವರು ಪ್ರತಿಯೊಂದು ಏಷ್ಯನ್ ಕ್ರೀಡಾಕೂಟದಲ್ಲೂ ಎಸ್.ಎ.ಎಫ್. ಕ್ರೀಡೆಗಳಲ್ಲಿ ಚಿನ್ನವನ್ನು ದೊರಕಿಸಿಕೊಡುವುದರ ಮೂಲಕ ಭಾರತ ತಂಡದ ನಾಯಕರಾಗಿಯೂ ಕಾರ್ಯ ನಿರ್ವಹಿಸಿದರು.

ಇವರಿಗೆ ಬಂದ ಪ್ರಶಸ್ತಿಗಳು ಹಲವಾರು. ಕರ್ನಾಟಕ ಸರ್ಕಾರದಿಂದ 1999ರಲ್ಲಿ ಏಕಲವ್ಯ ಪ್ರಶಸ್ತಿಯನ್ನೂ 2000ರಲ್ಲಿ ಕೆಂಪೇಗೌಡ ಪ್ರಶಸ್ತಿಯನ್ನೂ ಪಡೆದು 2002ರಲ್ಲಿ ಕರ್ನಾಟಕದ ಒಲಂಪಿಕ್ಸ್ ಸಂಸ್ಥೆಯಿಂದಲೂ ಸನ್ಮಾನಿತರಾದ ಇವರು ಹೀರೋ ಇಂಡಿಯಾ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ಕ್ರೀಡಾಪಟು. ಇವರ ಸಾಧನೆಯನ್ನು ಪರಿಗಣಿಸಿ ಭಾರತ ಸರ್ಕಾರ ಇವರಿಗೆ 2001ರಲ್ಲಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶಾಖೆಯೊಂದರಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವ ಇವರು ಕಬಡ್ಡಿ ಆಟವನ್ನು ರಾಜ್ಯಾದ್ಯಂತ ಬೆಳೆಸುವ ಉದ್ದೇಶದಿಂದ ಗ್ರಾಮೀಣ ಪ್ರತಿಭೆಗಳನ್ನು ಹೊರತರುತ್ತಿದ್ದಾರೆ; ಎಳೆಯರಿಗೆ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡುತ್ತಿದ್ದಾರೆ. (ಎಸ್.ಆರ್.ಯು.)

**ರಮೇಶ್‌ಕುಮಾರ್:** 1949– . ಹೆಸರಾಂತ ರಾಜಕಾರಣಿ, ಕರ್ನಾಟಕ ವಿಧಾನಸಭೆಯ ಮಾಜಿ ಅಧ್ಯಕ್ಷರು, ಉತ್ತಮ ವಾಗ್ಮಿ. ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಅಡ್ಡಗಲ್ಲು ಎಂಬ ಊರಿನಲ್ಲಿ 1949 ನವೆಂಬರ್ 23ರಂದು ಜನಿಸಿದರು. ವಿದ್ಯಾರ್ಥಿ ದೆಸೆಯಲ್ಲಿ ವಿದ್ಯಾರ್ಥಿ ಸಂಘಗಳ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಬಿ.ಎಸ್ಸಿ. ಪದವಿ ಪಡೆದ ಅನಂತರ ಕೃಷಿಕ ವೃತ್ತಿಯಲ್ಲಿದ್ದರು. ಇಂದಿರಾ ಗಾಂಧಿಯವರ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಏರುಮುಖದಲ್ಲಿದ್ದಾಗ ಇವರು ಯುವ ಕಾಂಗ್ರೆಸ್ಸಿನ ಮುಂದಾಳುಗಳ ಲ್ಲೊಬ್ಬರಾಗಿ ಹೆಸರು ಗಳಿಸಿದರು. ಮೊದಲ ಬಾರಿಗೆ 1977ರಲ್ಲಿ ಶಾಸಕರಾಗಿ ಚುನಾಯಿತರಾದರು. ಅನಂತರದಲ್ಲಿ ಜನತಾ ಪಕ್ಷದ ವತಿಯಿಂದ ಶ್ರೀನಿವಾಸಪುರ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದರು. ಜನತಾ ಪಕ್ಷದ ಸರ್ಕಾರ 1994ರಲ್ಲಿ ಮತ್ತೆ ಅಧಿಕಾರಕ್ಕೆ ಬಂದಾಗ ವಿಧಾನಸಭೆಗೆ ಆಯ್ಕೆಯಾಗಿ ಅದರ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಒಂದು ಅವಧಿಗೆ ಸಭಾಧ್ಯಕ್ಷರಾಗಿದ್ದ ಇವರು ತಮ್ಮ ನೇರ ಮಾತು ಹಾಗೂ ನಡವಳಿಕೆಗಳಿಂದ ಸರ್ಕಾರದ ಅಂಕುಡೊಂಕುಗಳನ್ನು ತಿದ್ದುವ ಮೂಲಕ ಪ್ರಸಿದ್ಧರಾದರು. ಇವರ ಭಾಷಣಗಳನ್ನು ಜನ ಕುತೂಹಲದಿಂದ ಕೇಳುವಷ್ಟು ಪರಿಣಾಮಕಾರಿ ಭಾಷಣಕಾರಾಗಿ ಹೊರಹೊಮ್ಮಿದರು. ಇವರು ವಿಧಾನಸಭಾಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿಭಾವಂತ ಸಂಸದೀಯ ಪಟುಗಳು ಮಾಲಿಕೆಯಲ್ಲಿ ರಾಜ್ಯದ ಪ್ರಸಿದ್ಧ ಶಾಸಕರು ಮತ್ತು ಸಂಸತ್ ಸದಸ್ಯರನ್ನು ಕುರಿತು ಕಿರುಹೊತ್ತಿಗೆಗಳ ರೂಪದಲ್ಲಿ ಗ್ರಂಥಗಳ ಪ್ರಕಟಣೆ ಯೋಜನೆ ಚುರುಕುಗೊಂಡಿತು. ಈ ಗ್ರಂಥಗಳು ಹಿರಿಯ ಸಂಸದೀಯರ ಸಂಕ್ಷಿಪ್ತ ಪರಿಚಯದೊಂದಿಗೆ ಶಾಸಕಾಂಗಗಳಲ್ಲಿ ಅವರು ಮಾಡಿದ ಭಾಷಣಗಳು ಮತ್ತು ಕಲಾಪಗಳ ವಿವರಗಳನ್ನು ಹೊಂದಿದ್ದು ಯುವ ಶಾಸಕರಿಗೂ ಇತಿಹಾಸಕಾರರಿಗೂ ಉಪಯುಕ್ತವಾಗಿವೆ.



ಇವರು ಸಂಗೀತ, ಕಲೆ ಮತ್ತು ಅಭಿನಯಗಳಲ್ಲಿ ಆಸಕ್ತಿ ಉಳ್ಳವರು. ಇತ್ತೀಚೆಗೆ ಕಿರುತೆರೆಯ ಧಾರಾವಾಹಿಯೊಂದರಲ್ಲಿ ಅಭಿನಯಿಸಿ ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಉತ್ತಮ ಗ್ರಂಥಗಳನ್ನು ಓದುವ ಪ್ರವೃತ್ತಿ ಇವರ ನೆಚ್ಚಿನ ಹವ್ಯಾಸಗಳಲ್ಲೊಂದು. ಈಗ ಇವರು ಕಾಂಗ್ರೆಸ್ ಪಕ್ಷದಲ್ಲಿದ್ದು ಶಾಸಕರಾಗಿದ್ದಾರೆ. (ಎಸ್.ಎನ್.ಜಿ.)

**ರಮ್ಯಕಾವ್ಯ:** ಸು. 1920–50ರವರೆಗಿನ ಕನ್ನಡ ಕಾವ್ಯವನ್ನು ರಮ್ಯಕಾವ್ಯ ಎಂದು (ರೊಮ್ಯಾಂಟಿಕ್) ನವ್ಯಪಂಥೀಯರು ಕರೆದರು. ಈ ಕಾವ್ಯಕ್ಕೆ ಆಂಗ್ಲ ರೊಮ್ಯಾಂಟಿಕ್ ಕಾವ್ಯದ ಪ್ರೇರಣೆಯಿದ್ದರೂ ಇದು ಅದರ ಅನುಕರಣವಲ್ಲ. ಆಂಗ್ಲಕಾವ್ಯದ ಪ್ರಭಾವವಿರುವುದು ಮುಖ್ಯವಾಗಿ ಅಭಿವ್ಯಕ್ತಿ ತಂತ್ರದಲ್ಲಿ ರೂಪಾಂಶದಲ್ಲಿ. ಆದ್ದರಿಂದಲೇ ಈ ಅವಧಿಯ ಕನ್ನಡ ಕಾವ್ಯವನ್ನು ಕುವೆಂಪು ನವೋದಯ ಕಾವ್ಯವೆಂದು ಸಮುಚಿತವಾಗಿ ಹೆಸರಿಸಿದರು. ಈಗ ಆ ಹೆಸರೇ ರೂಢಿಗೆ ಬಂದಿದೆ.

ಆಂಗ್ಲ ರೊಮ್ಯಾಂಟಿಕ್ ಕಾವ್ಯ ತನಗಿಂತ ಹಿಂದಿನ ಕಾವ್ಯಕ್ಕೆ ಪ್ರತಿಭಟನೆಯಾಗಿ ಕಾಣಿಸಿಕೊಂಡದ್ದು. ಆದರೆ ಅದಕ್ಕಿದ್ದ ವಿಶಿಷ್ಟ ಹಿನ್ನೆಲೆ ಕನ್ನಡ ನವೋದಯ ಕಾವ್ಯಕ್ಕೆ ಇರಲಿಲ್ಲವಾದ್ದರಿಂದ, ಇದು ಪರಂಪರೆಗೆ ಬೆನ್ನು ತಿರುಗಿಸದೇ ಬೆಳೆದುಬಂತು. ಆಂಗ್ಲ ರೊಮ್ಯಾಂಟಿಕ್ ಕಾವ್ಯದೊಡನೆ ಕೆಲವು ಸಾಮ್ಯಗಳನ್ನುಳ್ಳದ್ದಾಗಿಯೂ ಅಧಿಕ ಆಯಾಮಗಳನ್ನು ಅರ್ಜಿಸಿತು. ರೊಮ್ಯಾಂಟಿಸಿಸಂ, ಕ್ಲಾಸಿಸಿಂ ಇವೆರಡೂ ಭಿನ್ನವಾದ ಪ್ರವೃತ್ತಿಗಳು (ನಿಜವಾದ ವಿರೋಧವಿರುವುದು ರೊಮ್ಯಾಂಟಿಕ್‌ವಾದ, ವಾಸ್ತವವಾದಗಳ ನಡುವೆ). ರೊಮ್ಯಾಂಟಿಕ್ ಶಬ್ದ ರೊಮಾನಿಕಾ ಭಾಷೆಯಿಂದ ನಿಷ್ಪನ್ನವಾದುದು. ರೊಮಾನಿಕಾ ಎಂಬುದು ರೋಮನ್ ಸಾಮ್ರಾಜ್ಯದಲ್ಲಿ ಅಧಿಕೃತ ಲ್ಯಾಟಿನ್

ಭಾಷೆಯೊಡನೆ ಬೆಳೆದುಬಂದ 8ನೆಯ ಶತಮಾನದ ಭಾಷೆಯೊಂದರ ಹೆಸರು. ಅದರಿಂದ ರೊಮಾನ್ಸ್ ಎಂಬ ಹೆಸರು ಬಂತು. ರೊಮಾನ್ಸ್ ಎಂಬುದು ಮೊದಲು ಹಳೆಯ ಫ್ರೆಂಚ್ ಭಾಷೆಗೆ ಅನಂತರ ಇನ್ನಿತರ ಲ್ಯಾಟಿನ್ ಭಾಷೆಗಳಿಗೆ ಅನ್ವಯವಾಯಿತು. ಆಮೇಲೆ ಈ ಶಬ್ದ ಫ್ರೆಂಚ್ ಭಾಷೆಯೊಂದರ ಹೆಸರಾಗಿರುವುದರ ಬದಲು ಒಂದು ಬಗೆಯ ಸಾಹಿತ್ಯವನ್ನು, ಕಾಲ್ಪನಿಕ ಕಥೆಗಳನ್ನು ಸೂಚಿಸುವಂತಾಯಿತು. ಇನ್ನೂ ಈಚೆಗೆ 17ನೆಯ ಶತಮಾನದಲ್ಲಿ ತನ್ನ ಕಾಲ್ಪನಿಕ ಸ್ವರೂಪದಿಂದಾಗಿ ಈ ಶಬ್ದಕ್ಕೆ ಭ್ರಾಮಕ ಮತ್ತು ಹುಸಿ ಎಂಬ ಅರ್ಥವುಂಟಾಯಿತು. ಈ ಹೀನಾರ್ಥ ಸಾಕಷ್ಟು ದೀರ್ಘಕಾಲ ಮುಂದುವರಿಯಿತು. 18ನೆಯ ಶತಮಾನ ದಲ್ಲಿ ಈ ಶಬ್ದದ ಉತ್ತಮವಾದ ಅರ್ಥ ಬಳಕೆಗೆ ಬಂತು. ಅದು ಗಾಥಿಕ್ ಅವಶೇಷಗಳಿಗೂ ಅರಣ್ಯದೃಶ್ಯಗಳಿಗೂ ಭಯ–ಭವ್ಯತೆ, ವಿಷಾದ–ಸಾಹಸಗಳ ಇತರ ಆಹ್ಲಾದಕರ ಮಿಶ್ರಣಗಳಿಗೂ ಅನ್ವಯಿಸುವಂತಾಯಿತು. ಆಧುನಿಕಾರ್ಥದಲ್ಲಿ ರೊಮ್ಯಾಂಟಿಕ್ ಎಂಬ ಶಬ್ದ ಮೊಟ್ಟಮೊದಲು ಅನ್ವಯವಾದುದು ಜರ್ಮನಿಯಲ್ಲಿ.

ರೊಮ್ಯಾಂಟಿಕ್ ಪ್ರವೃತ್ತಿ ಒಂದು ವಿಶೇಷ ಚಿತ್ತವೃತ್ತಿ, ಜೀವನ ದೃಷ್ಟಿ ಮತ್ತು ಅನುಭವ ಪದ್ಧತಿ: ಅದರಲ್ಲಿ ಅಂತರ್ಮುಖತೆ, ಅನುಭಾವಗಳಿಗೆ ಪ್ರಾಮುಖ್ಯ. ಸ್ವಾತಂತ್ರ್ಯದ ಮನೋಧರ್ಮ ಮತ್ತು ನಿಸರ್ಗಕ್ಕೆ ಮರಳುವಿಕೆ, ಆಂತರಿಕಾನುಭವವನ್ನು ಅವಲಂಬಿಸುವ ಪ್ರವೃತ್ತಿ, ಅದ್ಭುತದ ಪುನರುಜ್ಜೀವನ, ಕಿನ್ನರ ರೀತಿಯ ಬರೆವಣಿಗೆ, ಭಾವಜೀವನದ ತೀವ್ರ ಪ್ರಾಧಾನ್ಯ, ಚಿಂತನೆಗೆ ವಿಭಿನ್ನವಾದ, ಭಾವನೆ ತುಂಬಿದ ಹೃದಯ–ಹೀಗೆ ಬಗೆಬಗೆಯಾಗಿ ರೊಮ್ಯಾಂಟಿಕ್ ಪ್ರವೃತ್ತಿಯನ್ನು ವರ್ಣಿಸಲಾಗಿದೆ. ಕಲ್ಪನೆ, ಧ್ವನಿಶಕ್ತಿ, ಅಸ್ಪಷ್ಟತೆ, ಇಂದ್ರಿಯಗಮ್ಯತೆ, ವಿಷಾದ, ಶಬ್ದಗಳ ಮಾಂತ್ರಿಕ ಬಳಕೆ, ಗೇಯತೆ, ಶ್ರೀಮಂತ ಪ್ರತಿಮಾವಳಿ, ಉದ್ಬೋಧನ ಶಕ್ತಿ, ಪರಿಪೂರ್ಣತೆ–ಇವುಗಳನ್ನು ರೊಮ್ಯಾಂಟಿಕ್ ಗುಣಗಳೆನ್ನಲಾಗಿದೆ.

ರೊಮ್ಯಾಂಟಿಸಿಸಂ ಎಂಬುದು ಎರಡು ಅರ್ಥಗಳಲ್ಲಿ ಬಳಕೆಗೊಳ್ಳುತ್ತ ಬಂದಿದೆ: (1)ಒಂದು ನಿರ್ದಿಷ್ಟ ಕಾವ್ಯ ಚಳವಳಿ (2)ಸಾಹಿತ್ಯ ಚರಿತ್ರೆಯ ಬೆಳೆವಣಿಗೆಯ ಒಂದು ಘಟ್ಟ. ಎರಡನೆಯ ಅರ್ಥದಲ್ಲಿ ಅದು ಒಂದು ಮನೋಧರ್ಮವನ್ನು ಸೂಚಿಸುತ್ತದೆ. ಪ್ರಾಯಶಃ ಎಲ್ಲ ಸಾಹಿತ್ಯ ಕಲೆಗಳಲ್ಲೂ ಕಂಡುಬರುತ್ತದೆ.

ಇಂಗ್ಲೆಂಡಿನಲ್ಲಿ ರೊಮ್ಯಾಂಟಿಕ್ ಯುಗಕ್ಕೆ ಹಿಂದಿದ್ದ ನಿಯೋಕ್ಲಾಸಿಕ್ ಯುಗ ಬುದ್ಧಿಶಕ್ತಿಗೆ ಪಟ್ಟಕಟ್ಟಿತ್ತು. ವೈಜ್ಞಾನಿಕ ಮನೋಭಾವದ ಬೆಳೆವಣಿಗೆ ಇದಕ್ಕೆ ಕಾರಣ. ಮನುಷ್ಯ ಎಲ್ಲ ಜ್ಞಾನವನ್ನೂ ಬೌದ್ಧಿಕವಾಗಿಯೆ ಪಡೆಯುತ್ತಾನೆ ಎಂಬುದು ನಿಯೋಕ್ಲಾಸಿಕ್ ಯುಗದ ನಂಬಿಕೆಯಾಗಿತ್ತು. ಅದನ್ನು ರೊಮ್ಯಾಂಟಿಕ್ ಸಾಹಿತ್ಯ ಒಪ್ಪದೆ, ಇಂದ್ರಿಯಾನುಭವ ಮತ್ತು ಕಲ್ಪನೆಯ ಮೇಲೆ ಒತ್ತುಹಾಕಿತು; ಅನುಭಾವ, ದರ್ಶನಗಳಿಗೆ ಪ್ರಾಶಸ್ತ್ಯ ನೀಡಿತು.

ರೊಮ್ಯಾಂಟಿಕ್ ಯುಗಕ್ಕೆ ಹಿಂದಿನ ಸಾಹಿತ್ಯ ಇಂಗ್ಲೆಂಡಿನಲ್ಲಿ ತನ್ನ ಲಕ್ಷ್ಯವನ್ನು ನಗರವಾಸಿಗಳಿಗೆ, ಶ್ರೀಮಂತರಿಗೆ ಸೀಮಿತಗೊಳಿಸಿತ್ತು. ಆದರೆ ರೊಮ್ಯಾಂಟಿಕ್ ಸಾಹಿತ್ಯ ಮನುಷ್ಯನ ವ್ಯಕ್ತಿತ್ವದ ಘನತೆಯನ್ನು ಗುರುತಿಸಿತು. 1799ರಲ್ಲಿ ಘಟಿಸಿದ ಫ್ರಾನ್ಸಿನ ಮಹಾಕ್ರಾಂತಿ ಈ ದಿಶೆಯಲ್ಲಿ ಬೀರಿದ ಪ್ರಭಾವ ಗಣನೀಯವಾದುದು.

ಸಾಮಾನ್ಯ ಜನಜೀವನದಿಂದ ವಸ್ತುವನ್ನೆತ್ತಿಕೊಳ್ಳುವುದು, ಮಾನವನನ್ನು ಆಸಕ್ತಿಯ ಕೇಂದ್ರವಾಗಿ ಮಾಡಿಕೊಳ್ಳುವುದು, ನಿಸರ್ಗೋಪಾಸನೆ ಮುಂತಾದವು ಆಂಗ್ಲ ರೊಮ್ಯಾಂಟಿಕ್ ಕಾವ್ಯ, ಕನ್ನಡ ನವೋದಯ ಕಾವ್ಯ ಎರಡರಲ್ಲೂ ಗೋಚರಿಸುವ ಸಂಗತಿಗಳು. ಆದರೆ ಭಾರತೀಯ ಹಿನ್ನೆಲೆ ಯಲ್ಲಿ ಅಧ್ಯಾತ್ಮ, ಅನುಭಾವಗಳನ್ನು ಸಹಜವಾಗಿಯೆ ಉಸಿರಾಡುವ ಕನ್ನಡ ನವೋದಯಕಾವ್ಯ 'ರಮ್ಯ'ದಾಚೆಗೂ ತನ್ನ ಪರಿಧಿಯನ್ನು ವಿಸ್ತರಿಸಿ ಕೊಂಡಿದೆ. ಅದರ ಹಿಂದೆ ಪಶ್ಚಿಮದ ಪ್ರೇರಣೆಗಳೆಂತೊ ಅಂತೇ ಸ್ವದೇಶಿ ಪ್ರೇರಣೆಗಳೂ ಇವೆ. *

**ರವಿವರ್ಮ:** ಆದ್ಯ ಕದಂಬ ವಂಶದ ರಾಜ (ಸು. 485–519). ಮೃಗೇಶವರ್ಮನ ಮಗ. ತಂದೆ ಮರಣಹೊಂದಿದ ಸಮಯದಲ್ಲಿ ಪ್ರಾಯಶಃ ಇವನು ಇನ್ನೂ ಪ್ರಾಪ್ತ ವಯಸ್ಕನಾಗಿರದಿದ್ದುದರಿಂದ, ಇವನ ಚಿಕ್ಕಪ್ಪ ಮಾಂಧಾತೃವರ್ಮ ಬನವಾಸಿಯಲ್ಲಿ ರಾಜ್ಯವಾಳಲಾರಂಭಿಸಿದ. ಆತನ ಮರಣಾನಂತರ ರವಿವರ್ಮ ಸಿಂಹಾಸನವನ್ನು ಪಡೆದ. ಇವನು ವಿಷ್ಣುವರ್ಮನನ್ನು ಸೋಲಿಸಿದನೆಂದೂ ಕಾಂಚೀಪತಿ ಚಂಡದಂಡನನ್ನು ಕೊಂದನೆಂದೂ ಶಾಸನಗಳು ತಿಳಿಸುತ್ತವೆ. ವಿಷ್ಣುವರ್ಮನು ರವಿವರ್ಮನ ಜ್ಞಾತಿ, ತ್ರಿಪರ್ವತ ಕದಂಬ ಶಾಖೆಯ ಅರಸ. ಚಂಡದಂಡ ಪ್ರಾಯಶಃ ಪಲ್ಲವ ವಂಶದ ಒಂದು ಶಾಖೆಗೆ ಸೇರಿದವನಿರಬಹುದು. ರವಿವರ್ಮನ ಕಾಲದಲ್ಲಿ ಕದಂಬ ರಾಜ್ಯ ನರ್ಮದಾ ನದಿಯವರೆಗೂ ಹಬ್ಬಿದ್ದಿತೆಂಬ ಹೇಳಿಕೆ ಇದ್ದರೂ ಇದು ಉತ್ಪ್ರೇಕ್ಷೆಯೆಂದು ತೋರುತ್ತದೆ. ಈತನ ಕಾಲದಲ್ಲಿ ಪಲಾಶಿಕಾ (ಬೆಳಗಾಂವಿ ಜಿಲ್ಲೆಯ ಹಲಶಿ), ಉಚ್ಚಶೃಂಗಿ (ಬಳ್ಳಾರಿ ಜಿಲ್ಲೆಯ ಉಚ್ಚಂಗಿ) ಸಹ ಉಪರಾಜಧಾನಿಗಳಾಗಿದ್ದುವು. ಈತನ ಸಹೋದರರಾಗಿದ್ದ ಭಾನುವರ್ಮ ಮತ್ತು ಶಿವರಥ ಕ್ರಮವಾಗಿ ಹಲಶಿಯಲ್ಲಿ ಹಾಗೂ ಉಚ್ಚಂಗಿಯಲ್ಲಿ ಪ್ರಾಂತ್ಯಾಧಿಕಾರಿಗಳಾಗಿದ್ದರು. ರವಿವರ್ಮನ ಸು. 35 ವರ್ಷಗಳ ದೀರ್ಘ ಆಳ್ವಿಕೆಯ ಅನಂತರ ಇವನ ಮಗ ಹರಿವರ್ಮ ಪಟ್ಟವೇರಿದ.

(ಎ.ವಿ.ವಿ.)

**ರಸೆಲ್,ಡಬ್ಲ್ಯು.ಎ.:** 1830–92 ಉತ್ತರ ಕರ್ನಾಟಕದಲ್ಲಿ ನವೋದಯ ಕಾಲದಲ್ಲಿ ಶಿಕ್ಷಣಕ್ಷೇತ್ರದಲ್ಲಿ ಮಹತ್ತ್ವಪೂರ್ಣವಾದ ಸೇವೆಯನ್ನು ಸಲ್ಲಿಸಿದ ಮತ್ತು ಕನ್ನಡ ಭಾಷೆಯ ಏಳ್ಗೆಗಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸರು. ವಿಲಿಯಂ ಅಲೆನ್ ರಸೆಲ್ ಇವರ ಪೂರ್ಣ ಹೆಸರು.

ಇವರು ಹುಟ್ಟಿದ್ದು 1830ರಲ್ಲಿ. ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ದಲ್ಲಿ ಎಂ.ಎ. ಪದವಿ ಪಡೆದ ಅನಂತರ 1860ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕಹೊಂದಿದರು. 1862ರಲ್ಲಿ ಮುಂಬಯಿ ಪ್ರಾಂತ್ಯದ ಮಧ್ಯ ವಿಭಾಗದಲ್ಲಿ ಶಿಕ್ಷಣಾಧಿಕಾರಿಗಳಾದರು. ಅನಂತರ ಉತ್ತರ ವಿಭಾಗದಲ್ಲಿ ಒಂದು ವರ್ಷ ಕೆಲಸ ಮಾಡಿ, 1865ರ ಮೇ ತಿಂಗಳಲ್ಲಿ ದಕ್ಷಿಣ ವಿಭಾಗದ ಅಂದರೆ ಉತ್ತರ ಕರ್ನಾಟಕ ಭಾಗದ ಶಿಕ್ಷಣಾಧಿಕಾರಿಗಳಾಗಿ ನೇಮಕವಾದರು. ಈ ಭಾಗದಲ್ಲಿ ಇವರು ಅಖಂಡವಾಗಿ 20 ವರ್ಷ ಸೇವೆ ಸಲ್ಲಿಸಿ, 1885ರ ಮಾರ್ಚ್‌ನಲ್ಲಿ ನಿವೃತ್ತರಾಗಿ ಇಂಗ್ಲೆಂಡಿಗೆ ಮರಳಿದರು. ತಮ್ಮ 62ನೆಯ ವಯಸ್ಸಿನಲ್ಲಿ 1892ರ ಡಿಸೆಂಬರ್ ನಲ್ಲಿ ಜರ್ಮನಿಯಲ್ಲಿ ನಿಧನರಾದರು.

19ನೆಯ ಶತಮಾನದ ಪ್ರಾರಂಭಕಾಲದಲ್ಲಿ ಉತ್ತರ ಕರ್ನಾಟಕವನ್ನು ದಕ್ಷಿಣ ಮಹಾರಾಷ್ಟ್ರವೆಂದು ಕರೆಯಲಾಗುತ್ತಿತ್ತು. ಇಲ್ಲಿಯ ಸುಸಂಸ್ಕೃತರ ಭಾಷೆ ಮರಾಠಿಯಾಗಿತ್ತು; ಲೆಕ್ಕಪತ್ರಗಳನ್ನೆಲ್ಲ ಸಂಪೂರ್ಣವಾಗಿ ಮರಾಠಿಯಲ್ಲಿಯೇ ಬರೆಯುವ ಪರಿಪಾಠವಿತ್ತು. ಇಂಥ ಸಮಯದಲ್ಲಿ ಕರ್ನಾಟಕದಲ್ಲಿ ಕನ್ನಡಕ್ಕೆ ಉನ್ನತ ಸ್ಥಾನಮಾನಗಳನ್ನು ತಂದುಕೊಟ್ಟ ಶ್ರೇಯಸ್ಸು ರಸೆಲ್ ಅವರದು. ರಸೆಲರು ಕನ್ನಡದ ಕೆಲಸವನ್ನು ಹತ್ತಾರು ರೀತಿಯಲ್ಲಿ ಮಾಡಿದರು. ಉತ್ತರ ಕರ್ನಾಟಕ ಭಾಗದ ಭಾಷೆ ಕನ್ನಡವೆಂದು ಅರಿತ ಇವರು ಅಲ್ಲಿಯ ಮಕ್ಕಳಿಗೆಲ್ಲ ಕನ್ನಡದಲ್ಲಿಯೇ ಶಿಕ್ಷಣ ದೊರಕುವಂತೆ ಕನ್ನಡ ಶಾಲೆಗಳನ್ನು ಪ್ರಾರಂಭಿಸಿದರು. ಉನ್ನತ ಹುದ್ದೆಗಳು ಕನ್ನಡಿಗರಿಗೂ ದೊರಕುವಂತೆ ಮಾಡಿದರು. ಕನ್ನಡ ಬಾರದ ಮರಾಠಿ

ಶಿಕ್ಷಣಾಧಿಕಾರಿಗಳು ಕನ್ನಡ ಕಲಿಯುವಂತೆ ನಿಗದಿಸಿದರು. ಕನ್ನಡದಲ್ಲಿ ಕ್ರಮಿತ ಪುಸ್ತಕಗಳನ್ನು ಬರೆಯುವುದಕ್ಕಾಗಿ ಒಬ್ಬ ಭಾಷಾಂತರಕಾರರನ್ನು ನಿಯಮಿಸಿದರು. ತಿಂಗಳಿಗೆ 25–30 ರೂಪಾಯಿ ಸಂಬಳ ಕೊಟ್ಟು ಒಬ್ಬ ಕನ್ನಡ ಪಂಡಿತರನ್ನು ನಿಯಮಿಸಿಕೊಂಡು ರಸೆಲರೇ ಸ್ವತಃ ಕನ್ನಡವನ್ನು ಕಲಿತರು. ಕನ್ನಡ ಪಾಂಡಿತ್ಯದ ಪ್ರೋತ್ಸಾಹಕ್ಕಾಗಿ ಒಂದು ಸಾವಿರ ರೂಪಾಯಿಯಷ್ಟು ಸ್ವಂತ ಹಣವನ್ನು ಸರ್ಕಾರದಲ್ಲಿ ಠೇವಣಿ ಇರಿಸಿ, ಅದರ ಬಡ್ಡಿಯಿಂದ ವರ್ಥ್ ಬಹುಮಾನ ಎಂಬ ಬಹುಮಾನ ಪದ್ಧತಿಯನ್ನು ಪ್ರಾರಂಭಿಸಿದರು. ಸ್ವತಃ ಲೇಖಕರಾಗಿದ್ದ ಇವರು ಬರೆಹಗಾರರಿಗೆ ಪ್ರೋತ್ಸಾಹವಿತ್ತರು. ಫೈರ್ ಫ್ಲೈಸ್ ಇನ್ ಇಂಡಿಯಾ ಎಂಬ ಇವರ ಸರಸಕವಿತೆ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಜಿ.ನೆಲ್ಸನ್ ಫ್ರೇಜರ್ ಎಂಬುವರು ರಸೆಲ್‌ರಂಥ ಅಧಿಕಾರಿಗಳೇ ಮುಂದುವರಿದಿದ್ದರೆ, ಉತ್ತರ ಕರ್ನಾಟಕದಲ್ಲಿ ಕನ್ನಡದ ಕೆಲಸ ಬಹಳ ಪ್ರಗತಿ ಹೊಂದುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. (ಆರ್.ವೈ.ಡಿ.)

**ರಹಮಾನ್ ಘರ್:** ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನಲ್ಲಿರುವ ಒಂದು ಗಿರಿದುರ್ಗ. ಚಿಂತಾಮಣಿಯ ನೈಋತ್ಯಕ್ಕೆ ಸು. 11 ಕಿಮೀ ದೂರದಲ್ಲಿದೆ. ಈ ಗಿರಿದುರ್ಗವನ್ನು ಸಮುದ್ರಮಟ್ಟಕ್ಕೆ 1,304 ಮೀ ಎತ್ತರವಿರುವ ಬೆಟ್ಟದ ಮೇಲೆ ಕಟ್ಟಲಾಗಿದೆ. ದುರ್ಗವನ್ನು ಕೈವಾರದ ಈಶಾನ್ಯಭಾಗದಲ್ಲಿರುವ ಶಾಮರಾವ್ ಹೊಸಪೇಟೆಯ ಕಡೆಯಿಂದ ಹತ್ತಬಹುದು. ಈ ದುರ್ಗ ಸ್ವಲ್ಪಕಾಲ ಮರಾಠರ ಆಡಳಿತಕ್ಕೆ ಸೇರಿತ್ತೆಂದು ತಿಳಿದುಬರುತ್ತದೆ. ಮುಂದೆ ಟಿಪ್ಪುಸುಲ್ತಾನನ ಕೈಸೇರಿದ ಈ ದುರ್ಗ ಐತಿಹಾಸಿಕ ಪ್ರಾಮುಖ್ಯ ಪಡೆಯಿತು. 1791ರಲ್ಲಿ ಇದು ಬ್ರಿಟಿಷರ ಆಡಳಿತಕ್ಕೆ ಸೇರಿತು.

ಈ ಗಿರಿದುರ್ಗ ಈಗಲೂ ಬಹು ಬಲವಾಗಿದ್ದು ಇಲ್ಲಿ ಅನೇಕ ಕಟ್ಟಡಗಳೂ ಭಗ್ನಮಂದಿರಗಳೂ ಇವೆ. ಅವುಗಳಲ್ಲಿ ಕೆಲವು ಮದ್ದುಗುಂಡುಗಳ ದಾಸ್ತಾನಿಗಾಗಿ ಉಪಯೋಗಿಸುತ್ತಿದ್ದ ಮಳಿಗೆಗಳೆಂದು ತೋರುತ್ತದೆ. ಆನೆ ಮತ್ತು ಕುದುರೆ ಲಾಯಗಳೂ ಇಲ್ಲಿದ್ದಂತೆ ತೋರುತ್ತದೆ. ದುರ್ಗದ ಕೆಲವು ಪಾರ್ಶ್ವಗಳಲ್ಲಿ ಆಪತ್ಕಾಲದಲ್ಲಿ ಪಾರಾಗಲು ನಿರ್ಮಿಸಿದ ಸುರಂಗ ಮಾರ್ಗಗಳಿದ್ದಂತೆ ಕಾಣುತ್ತದೆ. ದುರ್ಗದ ಕೋಟೆ ರಕ್ಷಣೆಗೆ ಎರಡು ಬುರುಜುಗಳನ್ನು ನಿರ್ಮಿಸಿದ್ದು–ಭಗ್ನವಾದ ದ್ವಾರವಿರುವುದು ಕಂಡುಬರುತ್ತದೆ. ಕೋಟೆಗೋಡೆಯನ್ನು ಗಾರೆಯ ಬಳಕೆಯಿಲ್ಲದೆ ಕಟ್ಟಲಾಗಿದೆ. ಮೇಲುಗಡೆ ಹಾಳಾದ ರಕ್ಷಣಾ ತಡೆಗೋಡೆಗಳೂ ಕಾವಲುಗಾರನ ಮನೆಯೂ ಇವೆ. ಬಾಗಿಲ ಬಳಿಯೆ ಇರುವ ಸಹಜ ನೀರಿನ ತಾಣವನ್ನು ಬಾವಿಯನ್ನಾಗಿ ಪರಿವರ್ತಿಸಿರುವುದು ಕಂಡುಬರುತ್ತದೆ. ಅರಮನೆ ಅಥವಾ ಮುಖ್ಯಸ್ಥಾನ ದೊಡ್ಡಮನೆಯ ಅವಶೇಷವಿದೆ. ಬೆಟ್ಟದ ಪೂರ್ವ ಮತ್ತು ದಕ್ಷಿಣದಲ್ಲಿ ಬುರುಜುಗಳಂತೆ ಕಾಣುವ ಎರಡು ದೊಡ್ಡ ಕಡಿದಾದ ಬಂಡೆಗಳಿವೆ. ಈ ದುರ್ಗದ ಮೇಲೇರಿದರೆ ಸುತ್ತಲೂ ಸುಂದರವಾದ ಪ್ರಕೃತಿ ದೃಶ್ಯಗಳನ್ನು ಕಾಣಬಹುದು.

ಇಂದಿನ ಕೈವಾರವೇ ಏಕಚಕ್ರಪುರವಾಗಿದ್ದು, ಈ ಪುರದಲ್ಲಿ ಕೆಲವು ಕಾಲ ಪಾಂಡವರು ವಾಸವಾಗಿದ್ದರೆಂದೂ ಆಗ ಭೀಮ ಈ ಬೆಟ್ಟದಲ್ಲಿ ವಾಸವಾಗಿದ್ದ ಬಕಾಸುರನನ್ನು ಕೊಂದು ಅಲ್ಲಿಯ ಗುಹೆಯೊಂದರಲ್ಲಿ ಮುಚ್ಚಿದನೆಂದೂ ಅದಕ್ಕಾಗಿಯೇ ಈ ಬೆಟ್ಟದ ಪಶ್ಚಿಮದಲ್ಲಿ ಕೈವಾರದ ಕಡೆಗೆ ಇರುವ ದೊಡ್ಡ ಬಂಡೆಯ ಸಂದಿನಿಂದ ಕೆಂಪು ನೀರು ಶಿವರಾತ್ರಿಯ ಕಾಲದಲ್ಲಿ ಜಿನುಗುವುದೆಂದೂ ಅದು ರಾಕ್ಷಸನ ರಕ್ತವೆಂದೂ ಸ್ಥಳೀಯ ನಂಬಿಕೆ. **(ಎಂ.ಎಸ್.ವಿ.)**

**ರಾಗಿ:** ದಕ್ಷಿಣ ಕರ್ನಾಟಕದ ಒಂದು ಮುಖ್ಯಬೆಳೆ. ಹವಾಮಾನದ ಏರುಪೇರುಗಳಿಗೆ ಹೊಂದಿಕೊಂಡು ಒಣ ಬೇಸಾಯ ಕ್ರಮದಲ್ಲೂ ಉತ್ತಮ ಫಲ ನೀಡಬಲ್ಲ ಬೆಳೆ ಇದು. ಇದರಲ್ಲಿ ಎಲ್ಲ ಋತುಗಳಿಗೂ ಹೊಂದಿಕೊಂಡು ಉತ್ತಮವಾಗಿ ಬೆಳೆಯಬಲ್ಲ ತಳಿಗಳಿದ್ದು, ಅವನ್ನು ವರ್ಷವಿಡೀ ಬೆಳೆಸಬಹುದು. ಮಳೆ ಅಭಾವದಿಂದಾಗಿ ಒಣಗಿದಂತಿದ್ದರೂ ಸ್ವಲ್ಪ ಮಳೆ ಬಿದ್ದೊಡನೆ ಪೂರ್ಣವಾಗಿ ಚೇತರಿಸಿಕೊಂಡು ಉತ್ತಮ ಫಲ ಕೊಡಬಲ್ಲುದು. ಅಧಿಕ ಪೌಷ್ಟಿಕಾಂಶಗಳನ್ನೊಳಗೊಂಡಿರುವುದರಿಂದ ಕಷ್ಟಜೀವಿಗಳಿಗೆ ಚೈತನ್ಯದಾಯಕ. ಅಲ್ಲದೆ ಇದಕ್ಕೆ ರೋಗ ರುಜಿನಾದಿಗಳು ಬರುವುದು ಕಡಿಮೆ. ಎಚ್ಚರ ವಹಿಸಿದಲ್ಲಿ ಕೀಟಬಾಧೆಗಳಿಲ್ಲದೆ 50 ವರ್ಷಗಳಿಗೂ ಮೇಲ್ಪಟ್ಟು ದಾಸ್ತಾನು ಮಾಡಬಹುದು. ಇದರ ಹುಲ್ಲು ಉತ್ತಮ ಮೇವು ಕೂಡ.

ರಾಗಿ ಪ್ರಭೇದ ಬಹುಶಃ ಭಾರತದ್ದು. ಇದರ ತವರು ಭಾರತ ಅಥವಾ ಆಫ್ರಿಕ ಎಂಬ ಎರಡು ವಾದಗಳಿವೆ. ಆದರೆ ಭಾರತದಲ್ಲಿ 5 ಪ್ರಭೇದಗಳಿವೆಯಲ್ಲದೆ ಇದು ಅನೇಕ ರಾಜ್ಯಗಳಲ್ಲಿ ಮುಖ್ಯ ಆಹಾರ ಹಾಗೂ ಮುಖ್ಯ ಮೇವು ಆಗಿರುವುದರಿಂದ ಬಹುಶಃ ಭಾರತದ್ದೇ ಇರಬೇಕು. ರಾಗಿ ಉಷ್ಣವಲಯದ ಬೆಳೆ. ಪೂರ್ವಆಫ್ರಿಕ, ಇತಿಯೋಪಿಯ ಮತ್ತು ಸೋಮಾಲಿ ಪ್ರದೇಶಗಳಲ್ಲಿನ ವಿವಿಧ ಮೂಲ ನಿವಾಸಿಗಳಿಗೂ ಇದು ಮುಖ್ಯ ಆಹಾರ.

ರಾಗಿಯನ್ನು ಭಾರತದ ಅನೇಕ ರಾಜ್ಯಗಳಲ್ಲಿ ಬೆಳೆಸಲಾಗುತ್ತಿದೆ. ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಬಿಹಾರ, ಉತ್ತರ ಪ್ರದೇಶ ಮತ್ತು ಗುಜರಾತ್ ಇದರ ಬೇಸಾಯಕ್ಕೆ ಹೆಸರಾಗಿವೆ. ಆದರೆ ಒಟ್ಟು ವಿಸ್ತೀರ್ಣದ 1/3 ಭಾಗದಷ್ಟು ಕರ್ನಾಟಕದಲ್ಲಿ–ಅದರಲ್ಲೂ ದಕ್ಷಿಣ ಕರ್ನಾಟಕದಲ್ಲಿ ಬೆಳೆಯಲಾಗುತ್ತಿದೆ. ಕರ್ನಾಟಕದ ಮುಖ್ಯ ಆಹಾರ ಬೆಳೆಗಳಲ್ಲಿ ರಾಗಿಗೆ ಮೂರನೆಯ ಸ್ಥಾನ.

ಕರ್ನಾಟಕದಲ್ಲಿ ರಾಗಿ ಬೆಳೆಯ ವಿಸ್ತೀರ್ಣ ಮತ್ತು ಉತ್ಪಾದನೆ (1998–99)

| ಕ್ರ.ಸಂ. | ಜಿಲ್ಲೆ | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪಾದನೆ (ಮೆಟ್ರಿಕ್ ಟನ್‌ಗಳಲ್ಲಿ) |
|---|---|---|---|
| 01. | ಬೆಂಗಳೂರು | 48,459 | 1,03,596 |
| 02. | ಬೆಂಗಳೂರು(ಗ್ರಾ) | 1,47,008 | 2,47,161 |
| 03. | ಚಿತ್ರದುರ್ಗ | 62,409 | 98,169 |
| 04. | ದಾವಣಗೆರೆ | 35,741 | 61,248 |
| 05. | ಕೋಲಾರ | 1,18,444 | 2,23,034 |
| 06. | ಶಿವಮೊಗ್ಗ | 8,702 | 12,549 |
| 07. | ತುಮಕೂರು | 2,06,568 | 2,96,350 |
| 08. | ಬೆಳಗಾವಿ | 2,625 | 2,325 |
| 09. | ಬಿಜಾಪುರ | -- | -- |
| 10. | ಬಾಗಲಕೋಟೆ | -- | -- |
| 11. | ಧಾರವಾಡ | 165 | 148 |
| 12. | ಗದಗ | 18 | 26 |
| 13. | ಹಾವೇರಿ | 4,756 | 4,079 |
| 14. | ಉತ್ತರಕನ್ನಡ | 109 | 116 |
| 15. | ಬಳ್ಳಾರಿ | 6,547 | 5,840 |

| | | | |
|---|---|---|---|
| 16. | ಬೀದರ್ | -- | -- |
| 17. | ಗುಲ್ಬರ್ಗ | 5 | 4 |
| 18. | ರಾಯಚೂರು | -- | -- |
| 19. | ಕೊಪ್ಪಳ | -- | -- |
| 20. | ಚಿಕ್ಕಮಗಳೂರು | 61,059 | 1,04,235 |
| 21. | ದಕ್ಷಿಣಕನ್ನಡ | -- | -- |
| 22. | ಉಡುಪಿ | -- | -- |
| 23. | ಹಾಸನ | 1,35,019 | 2,41,479 |
| 24. | ಕೊಡಗು | 425 | 460 |
| 25. | ಮಂಡ್ಯ | 85,467 | 1,64,759 |
| 26. | ಮೈಸೂರು | 83,670 | 1,33,160 |
| 27. | ಚಾಮರಾಜನಗರ | 23,484 | 35,338 |
| | **ಒಟ್ಟು** | **10,30,679** | **17,34,076** |

500-630 ಮಿಮೀ ಮಳೆಯಾಗುವ ಪ್ರದೇಶ ಇದಕ್ಕೆ ಸೂಕ್ತವಾದದ್ದು. ಮಲೆನಾಡಿನ ಹಾಗೂ ತೀರ ಪ್ರದೇಶಗಳಲ್ಲಿನ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲೂ ಬೆಳೆಯುತ್ತಾರೆ. ನೀರು ಹೆಚ್ಚಾದಲ್ಲಿ ಬೆಳೆ ಕೆಡುತ್ತದಾದ್ದರಿಂದ ನೀರು ಸುಲಭವಾಗಿ ಬಸಿಯುವಂತಿರಬೇಕು.

ಕೆಂಪುಭೂಮಿ ರಾಗಿ ಬೆಳೆಗೆ ಉತ್ತಮ. ಕೆಂಪುಜೇಡಿ ಮತ್ತು ಮರಳು ಮಿಶ್ರಿತ ಕೆಂಪುಮಣ್ಣು ಇದಕ್ಕೆ ತುಂಬ ಸೂಕ್ತ. ದಟ್ಟ ಎರೆಭೂಮಿ ಈ ಬೆಳೆಗೆ ಸೂಕ್ತವಲ್ಲ. ಹಗುರ ಎರೆಮಣ್ಣಿನಲ್ಲಿ ಬೆಳೆಸಬಹುದಾದರೂ ಮಳೆಗಾಲದಲ್ಲಿ ಹಾಗೂ ನೀರು ಅಧಿಕವಾಗುವಲ್ಲಿ ಬೆಳೆ ಸಮರ್ಪಕವಾಗಿ ಬರುವುದಿಲ್ಲ. ಬೇಸಗೆಯಲ್ಲಿ ಸಾಕಷ್ಟು ನೀರನ್ನು ಪೂರೈಸಬಹುದಾದಾಗ ಬೆಳೆ ಉತ್ತಮವಾಗಬಹುದು. ಆದ್ದರಿಂದ ಇದನ್ನು ಬತ್ತದೊಡನೆ ಪರ್ಯಾಯವಾಗಿ ಮಳೆಗಾಲ, ಚಳಿಗಾಲ ಅಥವಾ ಬೇಸಗೆಯಲ್ಲಿ ಬೆಳೆಸಬಹುದು. ಕಲ್ಲು, ಜವುಗು ಭೂಮಿಗಳು ಇದಕ್ಕೆ ಸಮರ್ಪಕವಲ್ಲ.

ರಾಗಿಯನ್ನು ಹಿಂಗಾರು ಮಳೆ ಆಶ್ರಯದಲ್ಲಿ ಬೆಳೆಸುವುದೇ ಹೆಚ್ಚು. ಇದು ಸ್ವಲ್ಪ ಧೀರ್ಘಾವಧಿಯ ಹೈನು ಬೆಳೆ. ಸಾಮಾನ್ಯವಾಗಿ ದೀರ್ಘಾವಧಿ ತಳಿಗಳನ್ನೇ ಬಳಸಲಾಗುತ್ತದೆ. ಮೈಸೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಏಪ್ರಿಲ್-ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಇಲ್ಲಿ ಬೆಳೆಸುವ ರಾಗಿಗೆ ಕಾರು ರಾಗಿ ಎಂದು ಹೆಸರು. ಇದರ ಕಾಲಾವಧಿ ಹೈನು ಬೆಳೆಗಿಂತ ಸ್ವಲ್ಪ ಕಡಿಮೆ. ಹೈನು ಬೆಳೆಗಿಂತ ಒಂದು ಒಂದೂವರೆ ತಿಂಗಳ ಮೊದಲೇ ಕಟಾವಾಗುತ್ತದೆ. ಕಾರುರಾಗಿ ಬೆಳೆಯಲು ಸಕಾಲದಲ್ಲಿ ಮಳೆ ಬಾರದೆ ನಾಟಿ ತಡವಾದಲ್ಲಿ ಅದನ್ನು ಎಡೆಕಾರು ಎಂದು ಕರೆಯಲಾಗುತ್ತದೆ. ನೀರಾವರಿಯ ಅನುಕೂಲವಿರುವೆಡೆ ಮಾತ್ರ ಬೇಸಗೆ ಬೆಳೆ ಬೆಳೆಯಲಾಗುತ್ತದೆ. ಈ ಮೂರು ಮುಖ್ಯ ಬೆಳೆಗಳಲ್ಲದೆ, ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕೆರೆಗಳಿಗೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ನೀರು ತುಂಬುವುದರಿಂದ ಜೂನ್ ಸೆಪ್ಟೆಂಬರ್ ಅವಧಿಯಲ್ಲಿ ರಾಗಿ ಬೆಳೆಸಿ, ಆನಂತರ ಬೇಸಗೆಯಲ್ಲಿ ಬತ್ತ ಬೆಳೆಸುವುದು ರೂಢಿಯಲ್ಲಿದೆ. ಮಂಡ್ಯ ಜಿಲ್ಲೆಯ ಹಲವು ಭಾಗಗಳಲ್ಲಿ ಅಲ್ಪಕಾಲಾವಧಿಯ ಬತ್ತ ಅಥವಾ ಕಬ್ಬು ಕಟಾವಾದೊಡನೆ ನವೆಂಬರ್-ಡಿಸೆಂಬರ್ ತಿಂಗಳಲ್ಲಿ ಇಬ್ಬನಿ ರಾಗಿಯನ್ನು ಗದ್ದೆಗಳಲ್ಲಿ ಬೆಳೆಸುವುದಿದೆ. ಈ ತಳಿ ಸಾಮಾನ್ಯ ಚಳಿಯನ್ನು ತಡೆದುಕೊಳ್ಳಬಹುದು.

ರಾಗಿ ವ್ಯವಸಾಯದ ಭೂಮಿಯನ್ನು ಮಾಗಿ ಉಳುಮೆ ಮಾಡಿಡುವುದು ಸಾಮಾನ್ಯ ವಾಡಿಕೆ. ಫಸಲು ಕಟಾವಿನ ಅನಂತರ ಮಳೆಯಾದಲ್ಲಿ, ಆ ತೇವಾಂಶವನ್ನು ಬಳಸಿ ಒಂದೆರಡು ಸಲ ಹಸನಾಗಿ ಉಳುಮೆ ಮಾಡಿ ಹಾಗೆಯೇ ಬಿಡಲಾಗುತ್ತದೆ. ಇದರಿಂದ ಮುಂಗಾರಿನಲ್ಲಿ ಬೀಳುವ ಮಳೆ ನೀರನ್ನು ಮಣ್ಣು ಹೀರಿ ಹಿಡಿದು, ಬೆಳೆಗೆ ಸಹಾಯಕವಾಗುತ್ತದೆ. ಪೂರ್ಣ ಉಳುಮೆ ಮಾಡಲು ಸಾಧ್ಯವಾಗದಿದ್ದರೆ ಹೆಗ್ಗುಂಟೆಯಿಂದಾದರೂ ಹೆರಗಿ ಮಣ್ಣಿನ ಮೇಲ್ಪದರವನ್ನು ಸಡಲಿಸಿ ಬಿಡುವುದು ಉಂಟು. ಇದರಿಂದ ಬೇಸಗೆಯಲ್ಲಿ ಮಣ್ಣು ಒಣಗಿ, ಸಕಾಲದಲ್ಲಿ ನಾಟಿ ಅಥವಾ ಬಿತ್ತನೆ ಮಾಡಲು ಅನುಕೂಲವಾಗುತ್ತದೆ. ಇಲ್ಲದಿದ್ದಲ್ಲಿ ಮೊದಲ ಮಳೆಯನ್ನು ಬಳಸಿ ಉಳುಮೆ ಮಾಡಬೇಕಾಗುತ್ತದೆ. ಆಗ ಬೆಳೆಸು ಹಿಂಬದಿಯಾಗಿ ತೊಂದರೆಯಾಗಬಹುದು. ಮಳೆ ಬಿದ್ದ ತಕ್ಷಣ ಪುನಃ ಒಂದೆರಡು ಸಲ ಭೂಮಿಯನ್ನು ಚೆನ್ನಾಗಿ ಉತ್ತು ಮೇಲ್ಪದರ ಪುಡಿಯಾಗಿರುವಂತೆ ಸಿದ್ಧಪಡಿಸಲಾಗುತ್ತದೆ.

ಸಾಮಾನ್ಯವಾಗಿ ರಾಗಿ ಫಸಲಿಗೆ ಸಾಕಷ್ಟು ಸಾವಯವ ಗೊಬ್ಬರ ಪೂರೈಕೆ ಏರ್ಪಡಿಸಲಾಗುತ್ತದೆ. ಕೆರೆಯ ಗೋಡು, ಹುತ್ತದ ಕೆಂಪು ಮಣ್ಣು, ತೋಪು ದಿಬ್ಬ ಮುಂತಾದವುಗಳ ಫಲವತ್ತಾದ ಮಣ್ಣು ಎಕರೆಗೆ 5-10 ಗಾಡಿ ಹಟ್ಟಿ ಅಥವಾ ಕಾಂಪೋಸ್ಟ್ ಗೊಬ್ಬರಗಳನ್ನು ಮಣ್ಣಿನ ಮೇಲೆ ಹರಡಿ ಉತ್ತು ಒಳಗೆ ಸೇರಿಸಲಾಗುತ್ತದೆ. ಬೆಂಗಳೂರು, ಮೈಸೂರು, ಹಾಸನ, ತುಮಕೂರು ಜಿಲ್ಲೆಗಳಲ್ಲಿ ಕುರಿ ಆಡುಗಳ ಮಂದೆಯನ್ನು ಹೊಲಗಳಲ್ಲಿ ರಾತ್ರಿ ಕಾಲ ತಂಗಲು ಏರ್ಪಡಿಸಿ ಅವುಗಳ ಹಿಕ್ಕೆ ಮತ್ತು ಮೂತ್ರಗಳ ವಿಸರ್ಜನೆಯಿಂದ ಭೂಮಿಯ ಫಲವತ್ತತೆಯನ್ನು ಅಧಿಕಗೊಳಿಸಲಾಗುತ್ತದೆ. ಗದ್ದೆಗಳಲ್ಲಿ ಜುಲೈ ಅನಂತರ ಬೆಳೆಸುವಲ್ಲಿ ಮುಂಗಾರು ಮಳೆಯನ್ನನುಸರಿಸಿ ಹಸುರೆಲೆ ಗೊಬ್ಬರ ಬೀಜಗಳನ್ನು ಬಿತ್ತಿ ಹೂವಾಗುವ ಮೊದಲು ಅವನ್ನು ಉತ್ತು ಮಣ್ಣಿನೊಳಗೆ ಸೇರಿಸುವುದೂ ಉಂಟು. ರಾಗಿಗೆ ಗೊಬ್ಬರಗಳ ಆವಶ್ಯಕತೆಯಿದೆ. ಅಧಿಕ ಇಳುವರಿ ಕೊಡಬಲ್ಲ ಶಕ್ತಿಪೂರ್ಣ ಇಂಡಾಫ್ ತಳಿಗಳಿಗೆ ಹೆಚ್ಚು ಗೊಬ್ಬರ ಬಳಸಬೇಕಾಗುತ್ತದೆ. ಅನೇಕ ಪ್ರಯೋಗಗಳಿಂದ ಖುಷ್ಕಿ ಮತ್ತು ತರಿ ಬೆಳೆಗಳಿಗೆ ಆವಶ್ಯಕವಾಗಿ ಒದಗಿಸಬೇಕಾದ ಪೋಷಕಾಂಶಗಳನ್ನು ನಿಗದಿ ಮಾಡಲಾಗಿದೆ.

ಖುಷ್ಕಿ ರಾಗಿ : 1. ಹಟ್ಟಿ ಅಥವಾ ಕಾಂಪೋಸ್ಟ್ ಗೊಬ್ಬರ ಎಕರೆಗೆ 3,000ಕೆ.ಜಿ. ಬಿತ್ತನೆಗೆ ಅಥವಾ ನಾಟಿಗೆ 2-3 ವಾರಗಳ ಮುಂಚೆಯೇ ಎರಚಿ ಉತ್ತುಬಿಡುವುದುಂಟು.

2. ರಾಸಾಯನಿಕ ಗೊಬ್ಬರಗಳು : ಸಾರಜನಕ - 20ಕೆ.ಜಿ. ಮತ್ತು ರಂಜಕ - 15ಕೆ.ಜಿ.

ಇದರಲ್ಲಿ ಪೂರ್ಣ ರಂಜಕ ಮತ್ತು ಅರ್ಧಭಾಗ ಸಾರಜನಕವನ್ನು ಬಿತ್ತನೆ ಅಥವಾ ನಾಟಿ ಮಾಡುವಾಗಲೂ ಮತ್ತು ಉಳಿದ ಅರ್ಧಭಾಗ ಸಾರಜನಕವನ್ನು 6-7 ವಾರಗಳ ಅನಂತರವೂ ಒದಗಿಸುವುದಿದೆ.

ತರಿ ರಾಗಿ : 1. ಹಟ್ಟಿ ಅಥವಾ ಕಾಂಪೋಸ್ಟ್ ಗೊಬ್ಬರ ಎಕರೆಗೆ 3,000 ಕೆ.ಜಿ ನಾಟಿಗೆ 2-3 ವಾರಗಳ ಮೊದಲೇ ಭೂಮಿಗೆ ಹರಡಿ ಉತ್ತುಬಿಡಲಾಗುತ್ತದೆ.

2. ರಾಸಾಯನಿಕ ಗೊಬ್ಬರ : ಸಾರಜನಕ - 30ಕೆ.ಜಿ. ಮತ್ತು ರಂಜಕ- 15ಕೆ.ಜಿ. ಪೊಟ್ಯಾಷ್ - 15ಕೆ.ಜಿ.

ಇದರ ಅರ್ಧ ಭಾಗ ಸಾರಜನಕ ಮತ್ತು ಪೂರ್ಣ ಭಾಗ ರಂಜಕ ಹಾಗೂ ಪೊಟ್ಯಾಷ್‌ಗಳನ್ನು ನಾಟಿ ಸಮಯದಲ್ಲೂ ಉಳಿದರ್ಧ ಸಾರಜನಕವನ್ನು ನಾಟಿ ಮಾಡಿದ 30 ದಿನಗಳ ಅನಂತರವೂ ಕೊಟ್ಟು ಮಣ್ಣು ಏರಿ ಹಾಕಲಾಗುತ್ತದೆ.

ರಾಗಿಯನ್ನು ಎರಚಿ ಸಾಲಿನಲ್ಲಿ ಬಿತ್ತುವುದು ಅಥವಾ ಅಗೆಪಾತಿಯಲ್ಲಿ ಬೆಳೆಸಿ ಹದವಿದ್ದಾಗ ಕಿತ್ತು ನಾಟಿ ಮಾಡುವುದು ರಾಗಿ ಬಿತ್ತನೆಯ ಮುಖ್ಯ ವಿಧಾನಗಳು. ಸಾಲು ಬಿತ್ತನೆಯನ್ನು ಸಡ್ಡೆ ಅಥವಾ ಕೂರಿಗೆಗಳಿಂದ ನಿರ್ವಹಿಸಲಾಗುತ್ತದೆ. ಸಾಲಿನಲ್ಲಿ ಗೊಬ್ಬರ ಮಿಶ್ರಿತ ಬೀಜವನ್ನು ತೆಳುವಾಗಿ ಚೆಲ್ಲಿ ಮುಚ್ಚುವುದು ಕೆಲವೆಡೆ ಬಳಕೆಯಲ್ಲಿದೆ. ತಳಿ ಮತ್ತು ಕಾಲಕ್ಕನುಗುಣವಾಗಿ ಸಾಲಿನಿಂದ ಸಾಲಿಗೆ 6"–10" ಅಂತರ ಕೊಡಲಾಗುತ್ತದೆ. ಬೀಜ ಬಿತ್ತನೆಮಾಡುವಲ್ಲಿ ಎಕರೆಗೆ 4 ರಿಂದ 6 ಕೆ.ಜಿ ಬಳಸಲಾಗುತ್ತದೆ. ನಾಟಿಮಾಡುವಲ್ಲಿ 2–3 ಕೆ.ಜಿ ಸಾಕು. ರಾಗಿಯನ್ನು ಬಿತ್ತುವಾಗ ಬಹಳ ಆಳಕ್ಕೆ ಬಿತ್ತದಂತೆ ಎಚ್ಚರವಹಿಸಲಾಗುತ್ತದೆ.

ರಾಗಿ ಬಿತ್ತನೆಗೆ ಹೆಚ್ಚಿನ ವಿಶ್ರಾಂತಿ ಕಾಲಾವಧಿ ಅಗತ್ಯವಿಲ್ಲ. ಮಳೆ ಅಧಿಕವಾದಾಗ ಒಣಗಿರುವ ತೆನೆಯಲ್ಲಿನ ಬೀಜ ಅಲ್ಲಿಯೇ ಮೊಳೆಯಲು ಉಪಕ್ರಮಿಸುತ್ತದೆ.

ನಾಟಿ ಮಾಡುವಲ್ಲಿ ಮಳೆಯನ್ನು ಅನುಸರಿಸಿ ಸಕಾಲಕ್ಕೆ 25–30 ದಿನಗಳ ವಯಸ್ಸಿನ ಸಸಿ ಸಿಗುವಂತೆ ಹೊಲದ ತಗ್ಗು ಮೂಲೆಯೊಂದರಲ್ಲಿ ಹೆಚ್ಚಿನ ಗೊಬ್ಬರ ಹರಡಿ ಬೀಜ ಬಿತ್ತಲಾಗುತ್ತದೆ. ಅಗೆಪಾತಿಯನ್ನು ಕಳೆ ತೆಗೆದು ಸಲಹಿ, ಮಳೆ ಬಂದಾಗ ಸಸಿಗಳನ್ನು ಕಿತ್ತು ನಾಟಿಮಾಡಲಾಗುತ್ತದೆ. ನೀರಾವರಿಯಲ್ಲಿ ಬೆಳೆಸುವುದಾದಲ್ಲಿ 25" ಉದ್ದ ಮತ್ತು 4" ಅಗಲ ಮತ್ತು 4" ಎತ್ತರದ 15 ಸಸಿ ಮಡಿಗಳನ್ನು ಸಿದ್ಧಪಡಿಸಿ ಪ್ರತಿ ಮಡಿಗೂ 3 ರಿಂದ 4 ಕುಕ್ಕೆ ಕೊಟ್ಟಿಗೆ ಗೊಬ್ಬರ ಅರ್ಧ ಕೆ.ಜಿ. ಅಮೋನಿಯಮ್ ಸಲ್ಫೇಟ್, 1 ಕೆ.ಜಿ. ಸೂಪರ್ ಫಾಸ್ಫೇಟ್ ಮತ್ತು ಅರ್ಧ ಕೆ.ಜಿ. ಮ್ಯೂರಿಯೇಟ್ ಆಫ್ ಪೊಟ್ಯಾಷ್ ಹಾಕಲಾಗುತ್ತದೆ. ಅನಂತರ ಎರಡು ಕೆ.ಜಿ. ಬಿತ್ತನೆಯನ್ನು 4 ಗ್ರಾಮ್ ಅಗ್ರೋಸಾನ್ ಅಥವಾ ಸೆರೋಸಾನ್‌ನಿಂದ ಪರಿಷ್ಕರಿಸಿ 2" ಅಂತರ ಸಾಲಿನಲ್ಲಿ ಬಿತ್ತಲಾಗುತ್ತದೆ. ಸಾಲುಗಳು ಮುಚ್ಚುವಂತೆ ಕೊಟ್ಟಿಗೆ ಗೊಬ್ಬರ ಅಥವಾ ಹುಡಿಮಣ್ಣು ಹರಡಿ ದಿನವೂ ನೀರು ಹಾಕುವುದಿದೆ. ಬಿತ್ತನೆಯಾದ 12–14 ದಿನಗಳ ತರುವಾಯ ಪ್ರತಿಮಡಿಗೂ ಅರ್ಧ ಕೆ.ಜಿ. ಅಮೋನಿಯಮ್ ಸಲ್ಫೇಟ್ ಮೇಲುಗೊಬ್ಬರವಾಗಿ ಕೊಡುವುದಿದೆ. ಪೈರು 20–25 ದಿನಗಳಲ್ಲಿ ನಾಟಿಗೆ ಸಿದ್ಧವಾಗುತ್ತದೆ.

ಮಳೆ ಆಶ್ರಯದಲ್ಲಿ ಬಿತ್ತುವಲ್ಲಿ ಬೀಜವನ್ನು ನೀರಿನಲ್ಲಿ ಸುಮಾರು 18 ಗಂಟೆ ಕಾಲ ನೆನೆಹಾಕಿ ತೆಗೆದು ನೆರಳಿನಲ್ಲಿ ಹರಡಿ 24 ಗಂಟೆಗಳ ಕಾಲ ಒಣಗಿಸಿ ಅನಂತರ ಬಿತ್ತಲಾಗುತ್ತದೆ. ಸಂಜೆ ನೀರಿನಲ್ಲಿ ನೆನೆಸಿ ಬೆಳಗ್ಗೆ ನೆರಳಿನಲ್ಲಿ ಒಣಗಿಸುವುದು ವಾಡಿಕೆ. ಇದು ಬೀಜವನ್ನು ದೃಢಪಡಿಸಿ ಹವಾಮಾನದ ಏರುಪೇರುಗಳನ್ನು ಬಹುಮಟ್ಟಿಗೆ ತಡೆಯುಂತೆ ಮಾಡುತ್ತದೆ. ಬಿತ್ತನೆಗೆ ಮುಂಚೆ ಪ್ರತಿ ಕೆ.ಜಿ. ಬೀಜಕ್ಕೂ 2 ಗ್ರಾಮ್ ಅಗ್ರೋಸಾನ್ ಜಿ.ಎನ್. ಅಥವಾ ಸೆರೋಸಾನ್ ಬೆರಸಿ ಬೀಜೋಪಚಾರ ಮಾಡಲಾಗುತ್ತದೆ. ಅನಂತರ ಜಿಂಕ್ ಸಲ್ಫೇಟಿನಿಂದ ಪರಿಷ್ಕರಿಸುವುದು ಫಲದಾಯಕವೆಂದು ಕಂಡುಬಂದಿದೆ. ಮಣ್ಣಿನಲ್ಲಿ ಇದರ ಕೊರತೆ ಕೆಲವು ವೇಳೆ ಕಡಿಮೆ ಇಳುವರಿಗೆ ಕಾರಣವಾಗಬಹುದು. ಇದರಿಂದ 12.5 ಗ್ರಾಮ್ ಜಿಂಕ್ ಸಲ್ಫೇಟನ್ನು 5–6 ಚಮಚ ನೀರಿನಲ್ಲಿ ಬೆರಸಿ ಅದನ್ನು $2\text{–}2^1/_2$ಕೆ.ಜಿ. ಬೀಜದೊಡನೆ ಚೆನ್ನಾಗಿ ಸಂಜೆ ಕಲೆಸಿಟ್ಟು ಮಾರನೆಯ ಬೆಳಗ್ಗೆ ಬಿತ್ತುವುದುಂಟು. ಇದನ್ನು ನೀರಾವರಿ ಅಥವಾ ಮಳೆಯಾಶ್ರಯದಲ್ಲೂ ಅನುಸರಿಸುವುದು ಉತ್ತಮ.

ನಾಟಿ ಮಾಡತಕ್ಕ ಅಥವಾ ಬಿತ್ತನೆ ಮಾಡುವ ಭೂಮಿಯನ್ನು ಹಲವು ಸಲ ಉತ್ತು ಹೆಂಟೆಯೆಲ್ಲ ಪುಡಿಯಾಗಿ ಹಸನಾಗುವಂತೆ ಮಾಡಿ ಕಳೆಯನ್ನೆಲ್ಲಾ ತೆಗೆದು ಹಾಕಿ, ಎಕರೆಗೆ 8–10 ಗಾಡಿ ಕೊಟ್ಟಿಗೆ ಗೊಬ್ಬರ ಹರಡಿ ಮಣ್ಣಿನಲ್ಲಿ ಸೇರಿಸಲಾಗುತ್ತದೆ. ನಾಟಿ ಮಾಡುವಲ್ಲಿ ಸಸಿಗಳು 20–22 ದಿನಗಳು ಮೀರದಂತೆ ನೋಡಿಕೊಳ್ಳಲಾಗುತ್ತದೆ. ಅವು ತಡವಾದಷ್ಟೂ ಇಳುವರಿ ಕಡಿಮೆಯಾಗುತ್ತದೆ. ಫಲವತ್ತಲ್ಲದ ಭೂಮಿಗಳಲ್ಲಿ 9" ಸಾಲುಗಳಲ್ಲಿ ಸಸಿಗಳ ನಡುವೆ 4" ಅಂತರ ಇರುವಂತೆ ನೆಡಲಾಗುತ್ತದೆ. ಪ್ರತಿ ಗುಳಿಗೂ 2–3 ಸಸಿಗಳನ್ನು ನೆಡುವುದಿದೆ. ಫಲವತ್ತಾದ ಭೂಮಿಗಳಲ್ಲಿ ಗುಳಿಯಿಂದ ಗುಳಿಗೆ 6" ಅಂತರ ಕೊಡುವುದು ರೂಢಿ. ಕೆಲವೆಡೆಗಳಲ್ಲಿ ಸಿದ್ಧಪಡಿಸಿದ ಭೂಮಿಯಲ್ಲಿ 9" ಅಂತರದಲ್ಲಿ ಮುಳ್ಳುಗಳಿರುವ ಸಾಲು ಕುಂಟೆಯನ್ನು ಎರಡು ಕಡೆಯೂ ಹೊಡೆದು ಪಗಡೆದಾಯ ಗುರುತು ಮಾಡಿ, ಅವು ಸೇರುವೆಡೆ 2–3 ಸಸಿಗಳನ್ನು ನಾಟಿ ಮಾಡಲಾಗುತ್ತದೆ. ಇದರಿಂದ ಸಾಲುಗಳ ನಡುವೆ ಎರಡು ಕಡೆಗಳಲ್ಲೂ ಕುಂಟೆ ಹರಗಿ ಕಳೆ ತೆಗೆಯಲೂ ಮಣ್ಣು ಏರಿ ಹಾಕಲೂ ಅನುಕೂಲವಾಗುತ್ತದೆ.

ರಾಗಿಯನ್ನು ಶುದ್ಧ ಬೆಳೆಯಾಗಿ ಅಥವಾ ಅಕ್ಕಡಿ ಬೆಳೆಯಾಗಿ ಬೆಳೆಸಲಾಗುತ್ತದೆ. ಅವರೆ, ತೊಗರಿ, ಜೋಳ, ಅಪಸೆಣಬು, ಸೂರ್ಯಕಾಂತಿ ಮುಂತಾದವು ಇದರ ಉಪಬೆಳೆಗಳು.

ರಾಗಿ ಬೆಳೆಗೆ ಹಲವಾರು ಕೀಟ ಮತ್ತು ರೋಗಗಳಿಂದ ತೊಂದರೆಯಾಗಬಹುದು. ಹೇನು, ಬೇರು ತಿನ್ನುವ ಗೊಣ್ಣೆಹುಳು, ಕಾಂಡ ಕೊರೆಯುವ ಹುಳು, ಎಲೆ ಕತ್ತರಿಸುವ ಹುಳು, ತೆನೆಯ ಗೋಡುಮಾರು ಹುಳು ಮತ್ತು ಬಿಳಿಮೂತಿಯ ಹುಳು ಇದಕ್ಕೆ ತೊಂದರೆ ಕೊಡುವ ಮುಖ್ಯ ಕೀಟಗಳು. ರೋಗಗಳಲ್ಲಿ ಬುಡ ಕೊರೆಯುವ ರೋಗ, ಸಸಿಗಳ ಬ್ಲೈಟ್ (ಕೊಳೆರೋಗ), ಬೆಂಕಿ ರೋಗ, ನಂಜು ರೋಗ ಮತ್ತು ಕಂದುಬಣ್ಣದ ಚುಕ್ಕೆ ರೋಗ ಮುಖ್ಯವಾದುವು. ರಾಗಿ ದಾಸ್ತಾನಿನಲ್ಲಿ ಕೀಟಬಾಧೆ ಅಪರೂಪ.

**ಅಗ್ರೋಸಾನ್ ಅಥವಾ ಸಿರೋಸಾನ್‌ನಿಂದ (ಕೆಜಿಗೆ 2 ಗ್ರಾಮ್) ಬೀಜ ಪರಿಷ್ಕರಣೆ:** ಮಡಿಯಲ್ಲಿನ ಸಸಿಗಳು 15 ದಿನಗಳಾಗಿದ್ದಾಗ ಕೀಟಗಳೇನಾದರೂ ಕಂಡುಬಂದಲ್ಲಿ 18 ಮಿಲೀ ಡೈಮಿತೋಯೇಟನ್ನು 18 ಲೀ ನೀರಿನಲ್ಲಿ ಬೆರಸಿ ಸಿಂಪಡಿಸುವುದು, ರೋಗ ಚಿಹ್ನೆಗಳಿದ್ದಲ್ಲಿ ಅದರಲ್ಲಿ 18ಮಿಲೀ ಹಿನೋಸಾನ್ ಅಥವಾ 40 ಗ್ರಾಮ್ ಜೈನ್‌ಟನ್ನೂ ಬೆರಸಿ ಉಪಯೋಗಿಸುವುದು. ನಾಟಿಯ ಅನಂತರ ಪ್ರತಿ ಎಕರೆಗೂ ಮೇಲಿನ ಮಿಶ್ರಣದ 200 ಲೀಟರನ್ನು 20 ಮತ್ತು 40 ದಿನಗಳಿಗೊಮ್ಮೆಯಂತೆ ಬಳಸುವುದು. ಬೇರು ಕತ್ತರಿಸುವ ಹುಳವಿದ್ದಲ್ಲಿ 8 ಕೆ.ಜಿ ಜಿಫೋರೇಟ್ ಅಥವಾ 10 ಕೆಜಿ ಕಾರ್ಬೋಫ್ಯೂರಾನ್ ಅಥವಾ 12 ಕೆಜಿ ಡೈಸಲ್ಫೋಟಾನ್ ನನ್ನು ಮಣ್ಣಿನಲ್ಲಿ ಬೆರೆಸುವುದು. ಕುತ್ತಿಗೆ ಬೆಂಕಿರೋಗವಿದ್ದಲ್ಲಿ 50 ರಷ್ಟು ತೆನೆಗಳು ಹೊರಬಂದಾಗ 18 ಲೀಟರ್‌ನಲ್ಲಿ 18ಮಿಲೀ ಹಿನೋಸಾನ್ ಅಥವಾ 18ಗ್ರಾಮ್ ಕಾಸುವಿನ್ ಅಥವಾ 40ಗ್ರಾಂ ಡೈಥೇನ್ ಜಡ್ ಬೆರಸಿ 15 ದಿನಗಳ ಅಂತರದಲ್ಲಿ ಎಕರೆಗೆ ಮಿಶ್ರಣದ 200 ಲೀಟರ್‌ನಂತೆ ಸಿಂಪಡಿಸುವುದು.

ಕಾಳು ಬಲಿಯುತ್ತಿರುವ ತೆನೆಗಳ ಮೇಲೆ ಗೂಡುಮಾರು ಹುಳುಗಳು ಕಂಡುಬಂದಲ್ಲಿ 36 ಮಿಲೀ ಮ್ಯಾಲಥಿಯಾನ್ ಅಥವಾ 72 ಗ್ರಾಮ್ ಕಾರ್ಬಾರಿಲ್ಲನ್ನು 18 ಲೀ ನೀರಿನಲ್ಲಿ ಬೆರಸಿ ಎಕರೆಗೆ 200 ಲೀಟರಿನಂತೆ ಸಿಂಪಡಿಸುವುದು–ಇವು ರೋಗ ಹಾಗೂ ಕೀಟನಿರೋಧಕ ಮಾರ್ಗಗಳು.

ಕಾರುರಾಗಿ ಸುಮಾರು 4 ತಿಂಗಳಲ್ಲಿ (ಆಗಸ್ಟ್ ಕೊನೆಗೆ) ಕೊಯ್ಲಿಗೆ ಸಿದ್ಧವಾಗುತ್ತದೆ. ಆಗ ಇನ್ನೂ ಮಳೆಗಾಲ ಇರುವುದರಿಂದ ಕೂಡಲೇ ಮೆದೆ ಹಾಕದೆ ಕೊಯ್ದು ಅರಿಗಳನ್ನು 7–8 ದಿನ ಹಾಗೆಯೇ ಹೊಲದಲ್ಲಿ ಒಣಗಲು ಬಿಟ್ಟದ್ದು ಅನಂತರ ಶೇಖರಿಸಿ ತೆನೆ ಮೇಲಿರುವಂತೆ ಸಣ್ಣ

ಗುಡ್ಡೆಗಳಾಗಿ ಜೋಡಿಸಿಡಲಾಗುತ್ತದೆ. ಮುಂದೆ ನವೆಂಬರ್ ವೇಳೆಗೆ ಮಳೆ ನಿಂತ ಮೇಲೆ ಕಣಕ್ಕೆ ಸಾಗಿಸಿ ಪಕ್ಕದಲ್ಲೇ ಮೆದೆ ಹಾಕಿಡಲಾಗುತ್ತದೆ. ಹಿಂಗಾರು ರಾಗಿ ನವೆಂಬರ್–ಡಿಸೆಂಬರ್ ವೇಳೆಗೆ ಕಟಾವಿಗೆ ಸಿದ್ಧವಾಗುತ್ತದೆ. ಇದರ ಕಾಲಾವಧಿ ಸುಮಾರು 4 $^1/_2$ ತಿಂಗಳು. ಇದನ್ನು ಸಣ್ಣಗುಡ್ಡೆಗಳಾಗಿ ಶೇಖರಿಸಿಡುವುದಿಲ್ಲ. ಒಣಗಿದ ಅರಿಗಳನ್ನು ಮೆದೆ ಹಾಕಿಡಲಾಗುತ್ತದೆ.

ರಾಗಿಯ ಒಕ್ಕಣೆ ಸಾಮಾನ್ಯವಾಗಿ ಮಂಜು ಮುಗಿದು ಬೇಸಗೆ ಪ್ರಾರಂಭವಾದಾಗಲೇ, ಅಂದರೆ ಫೆಬ್ರವರಿ ತಿಂಗಳ ಅನಂತರ; ಉಳಿದ ಎಲ್ಲ ಬೆಳೆಗಳ ಒಕ್ಕಣೆ ಮುಗಿದಮೇಲೆ. ಕಣದಲ್ಲಿ ರಾಗಿ ಅರಿಗಳನ್ನು ಹರಡಿ ಕೋಲಿನಿಂದ ಬಡಿದು ಅಥವಾ ಎತ್ತುಗಳಿಂದ ಸತತವಾಗಿ ತುಳಸಿ ಅಥವಾ ರೋಣುಕಲ್ಲು ಹೊಡೆದು ಒಕ್ಕಣೆ ಮಾಡಲಾಗುತ್ತದೆ. ಕೋಲಿನಿಂದ ಬಡಿಯುವಲ್ಲಿ ಅತಿ ತೆಳುವಾಗಿ ಹರಡಿ, ನೀಳ ಕೋಲುಗಳಿಂದ ಅರಿಯನ್ನು ಬಡಿದು ಕಾಳು ಬಿಡಿಸಲಾಗುತ್ತದೆ.

ತುಳಿಸುವಲ್ಲಿ 6–8 ಎತ್ತುಗಳನ್ನು ಕಟ್ಟಿ ಅರಿಗಳ ಮೇಲೆ ಸುತ್ತಲೂ ತಿರುಗಿಸಿ ಅರಿಯನ್ನು ಆಗಿಂದಾಗ್ಗೆ ತಿರುವಿಹಾಕಿ, ಕಡ್ಡಿಗಳಿಂದ ಬಡಿದು ಬಿಡಿಸಲಾಗುತ್ತದೆ. ಕಲ್ಲುಹೊಡೆಯುವುದು ಸುಲಭ, ಅದಕ್ಕೆ ಒಂದೇ ಜೊತೆ ಎತ್ತು ಸಾಕು. ಅಲ್ಲದೆ ಹುಲ್ಲು ಜಜ್ಜಿದಂತಾಗಿ ಮೇವಿಗೆ ಸುಲಭವಾಗುತ್ತದೆ.

ಖುಷ್ಕಿ ರಾಗಿಯಿಂದ ಎಕರೆಗೆ 6–8 ಕ್ವಿಂಟಾಲ್, ನೀರಾವರಿಯಲ್ಲಿ ಜಾತಿಗನುಗುಣವಾಗಿ ಪೂರ್ಣ ರಾಗಿಯಿಂದ 15–20 ಕ್ವಿಂಟಾಲ್, ಶಕ್ತಿರಾಗಿ ಯಿಂದ 20–25 ಕ್ವಿಂಟಾಲ್ ಇಳುವರಿ ಪಡೆಯಲಾಗುತ್ತದೆ.

ರಾಗಿಯಲ್ಲಿ ಅನೇಕ ತಳಿಗಳಿವೆ. ಇವುಗಳಲ್ಲಿ ಮುಖ್ಯವಾದವು ಕೆಲವು ಮಾತ್ರ.

1.ಪೂರ್ಣರಾಗಿಯನ್ನು ಚಳಿಗಾಲ ಬಿಟ್ಟು ಉಳಿದ ಎಲ್ಲ ಕಾಲದಲ್ಲೂ ಬೆಳೆಸಬಹುದು. ಇದು ಸಾಮಾನ್ಯ ಗಿಡ್ಡತಳಿ. 100 ರಿಂದ 110 ದಿನ ಕಾಲಾವಧಿ. ತೆನೆಯಿಂದ ಕಾಳು ಸುಲಭವಾಗಿ ಉದುರುವುದಿಲ್ಲ. ತೆನೆಗಳೆಲ್ಲ ಒಂದೇ ಕಾಲಕ್ಕೆ ಬಲಿತು ಕಟಾವಿಗೆ ಬರುತ್ತವೆ. ಈ ತಳಿ ಹೆಚ್ಚಿನ ಗೊಬ್ಬರವನ್ನು ಬಳಸಿದರೆ ಅಧಿಕ ಇಳುವರಿ ಕೊಡಬಲ್ಲದು. 2. ಶಕ್ತಿ (ಆರ್ ಓ ಹೆಚ್ 2) 3–3 $^1/_2$ ಅಡಿ ಎತ್ತರ ಬೆಳೆಯಬಲ್ಲ 120–125 ದಿನ ಕಾಲಾವಧಿಯ ತಳಿ. ಮೇ ತಿಂಗಳಿಂದ ಆಗಸ್ಟ್‌ವರೆಗೂ ನೀರಾವರಿ ಹಾಗೂ ಖುಷ್ಕಿ ಬೆಳೆಯಾಗಿ ಬಿತ್ತಬಹುದು. 3. ಇಂಡಾಫ್ (–1 ರಿಂದ 5) ಭಾರತ ಮತ್ತು ಆಫ್ರಿಕ ತಳಿಗಳ ಸಂಕರದಿಂದ ಉತ್ಪನ್ನವಾದುದು. ಇಂಡಾಫ್–1 ಮತ್ತು ಇಂಡಾಫ್ –3, 3 $^1/_2$–4 ಅಡಿ ಎತ್ತರ ಬೆಳೆಯುವ ನೀಳ ತೆನೆ ಹಿಲಕು ಹೊಂದಿದ ತಳಿ. 120–125 ದಿನ ಕಾಲಾವಧಿ. ಜೂನ್ ತಿಂಗಳಿಂದ ಸೆಪ್ಟೆಂಬರ್ ಕೊನೆಯವರೆಗೂ ಬಿತ್ತಲು ಸಮಂಜಸವಾದದ್ದು. ಹುಲ್ಲೂ ಸಾಕಷ್ಟು ಒದಗುತ್ತದೆ. ಇಂಡಾಫ್ –4 ಮತ್ತು ಇಂಡಾಫ್ –5 ಬೇಸಗೆ ಬೇಸಾಯಕ್ಕೆ ಅನುಕೂಲವಾದ ತಳಿಗಳು. ಮಳೆ ಆಶ್ರಯದಲ್ಲಿ 13–15 ಕ್ವಿಂಟಾಲ್, ನೀರಾವರಿಯಲ್ಲಿ 20–24 ಕ್ವಿಂಟಾಲ್ ಇಳುವರಿ ಕೊಡಬಲ್ಲವು.

**(ಜಿ.ವಿ.ಬಿ.ಎಸ್.)**

**ರಾಗಿ ಲಕ್ಷ್ಮಣಯ್ಯ:** 1921–93. ರಾಗಿ ಬೆಳೆ ತಜ್ಞರು. ನಿವೃತ್ತ ಕೃಷಿ ಅಧಿಕಾರಿ. ಮೈಸೂರು ತಾಲ್ಲೂಕು ಹಾರೋಹಳ್ಳಿಯಲ್ಲಿ 1921 ಮೇ 15ರಂದು ಬಡ ದಲಿತ ಕೃಷಿ ಕುಟುಂಬದಲ್ಲಿ ಜನಿಸಿದರು. ಬಾಲ್ಯದ ದಿನಗಳಿಂದಲೇ ಕೃಷಿ ವಿಧಾನಗಳಿಗೆ ತಮ್ಮ ಒಳಗಣ್ಣು ತೆರೆದುಕೊಂಡಿದ್ದರು. ಪದವೀಧರರಾದ ಮೇಲೆ ಇವರು ತಮಗೆ ದೊರೆತ ರೈಲ್ವೆ ಇಲಾಖೆಯ ಉದ್ಯೋಗವನ್ನು ತೊರೆದು ತಮಗೆ ಪ್ರಿಯವಾಗಿದ್ದ ರಾಜ್ಯದ ಕೃಷಿ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಕೃಷಿ ಇಲಾಖೆ ಸೇರಿದ ಅನಂತರ ಕೃಷಿಯಲ್ಲಿ ಸಂಶೋಧನೆ, ಪ್ರಯೋಗಗಳನ್ನು ನಿರಂತರವಾಗಿ ಮುಂದುವರಿಸಿಕೊಂಡೇ ಬಂದರು. ರಾಗಿ ತಳಿಗಳ ಮೇಲೆ ಇವರಿಗೆ ವಿಶೇಷವಾದ ಆಸಕ್ತಿ. ಒಣಹವೆಯಲ್ಲೂ ಸುಮಾರಾಗಿ ಬೆಳೆದುಕೊಂಡಿದ್ದು ತೇವ ದೊರೆತ ಒಡನೆಯೇ ಹುಲುಸಾಗಿ ಬೆಳೆಯುವ ರಾಗಿಯ ಗುಣ, ಅದರ ರೋಗ ನಿರೋಧಕ ಶಕ್ತಿ ಇವರನ್ನು ಸೆಳೆದಿತ್ತು. ಬಡವರ ಹೊಟ್ಟೆಗೆ ಹಿಟ್ಟು, ಅವರ ಬಡಕಲು ದನಗಳಿಗೆ ಮೇವು ಒದಗಿಸುವ ಈ ಕಷ್ಟಸಹಿಷ್ಣು ಬೆಳೆ ಇವರಿಗೆ ಮೋಡಿಮಾಡಿತ್ತು. ಆದರೆ ರಾಗಿತಳಿ ಅಭಿವೃದ್ಧಿಪಡಿಸುವಲ್ಲಿ ಒಂದು ತೊಡಕಿತ್ತು. ರಾಗಿ ಸ್ವಭಾವತಃ ಸ್ವಕೀಯ ಪರಾಗಸ್ಪರ್ಶದ ಬೆಳೆ. ಈ ನೈಸರ್ಗಿಕ ಏರ್ಪಾಡನ್ನು ತಡೆದು ಮತ್ತೊಂದು ತಳಿಯ ಪುಷ್ಪ ಪರಾಗದಿಂದ ಅದು ಫಲಿಸುವಂತೆ ಮಾಡಲು ಈ ಹಿಂದೆ ಹಲವರು ಪ್ರಯತ್ನಿಸಿ ವಿಫಲರಾಗಿದ್ದರು. ಇದರಿಂದ ಧೃತಿಗೆಡದ ಲಕ್ಷ್ಮಣಯ್ಯ ಈ ಸಾಹಸಕ್ಕೆ ಕೈಹಾಕಿದರು. ಸಂಪರ್ಕ ಸಂಕರಣ ವಿಧಾನದಿಂದ ಸಂಕರ ಬೀಜ ಪಡೆಯುವಲ್ಲಿ ಯಶಸ್ಸು ಗಳಿಸಿದರು. ಈ ವಿಧಾನದಿಂದ ಅರುಣಾ, ಅನ್ನಪೂರ್ಣ, ಉದಯ, ಪೂರ್ಣ, ಕಾವೇರಿ, ಶಕ್ತಿ ತಳಿಗಳನ್ನು ಅಭಿವೃದ್ಧಿಪಡಿಸಿದರು (1951–64). ಆ



ದಿನಗಳಲ್ಲಿ ಇವರ ಬದುಕನ್ನು ರಾಗಿ ಸಂಪೂರ್ಣವಾಗಿ ಆವರಿಸಿತ್ತು. ತಮ್ಮ ವಾಸದ ಮನೆಯ ಸುತ್ತಲಿನ ಜಾಗ ದಲ್ಲೆಲ್ಲ ಹಲವಾರು ರಾಗಿತಳಿ ಮತ್ತು ಅವುಗಳ ಸಂಕರ ತಳಿಗಳನ್ನು ಬೆಳೆದು ಪ್ರತಿ ಸಸ್ಯವನ್ನೂ ಕೂಲಂಕಷವಾಗಿ ಅಭ್ಯಸಿಸುವುದು ಇವರ ಮೆಚ್ಚಿನ ಹವ್ಯಾಸವಾಯಿತು.

ಇವರು ಅಭಿವೃದ್ಧಿಪಡಿಸಿದ ಎಲ್ಲ ತಳಿಗಳೂ ಏಷ್ಯದ ತಳಿಗಳಿಂದಲೇ ಆದಂತಹವು. ಹೆಚ್ಚಿನ ಸಾಧನೆಗಾಗಿ ಲಕ್ಷ್ಮಣಯ್ಯನವರ ಮನಸ್ಸು ತುಡಿಯಿತು. ಆಗ ಇವರ ಗಮನಕ್ಕೆ ಬಂದದ್ದು ಉತ್ಕೃಷ್ಟವಾದ ಆಫ್ರಿಕದ ರಾಗಿ ತಳಿಗಳು. ಆಫ್ರಿಕ ರಾಗಿಯ ತೌರು. ಈ ಎರಡೂ ಉಪಖಂಡಗಳ ತಳಿಗಳ ಮಧ್ಯೆ ಆನುವಂಶಿಕ ಅಂತರವಿತ್ತು; ಇಚ್ಛಿತ ವ್ಯತ್ಯಾಸಗಳಿದ್ದವು. ಇದನ್ನು ಇವರು ಬಳಸಿಕೊಂಡರು. ಇದರ ಫಲವಾಗಿ ಇಂಡಿಯಾ – ಆಫ್ರಿಕ ತಳಿಗಳ ಸಮ್ಮಿಲನದಿಂದ ಉದಿಸಿದ್ದೇ 'ಇಂಡಾಫ್' ತಳಿ. ವಿವಿಧ ಹವಾಗುಣಗಳಿಗೆ ಹೊಂದುವಂತೆ ಇರುವ ಇಂಡಾಫ್ 1 ರಿಂದ 15 ನೆಯ ತಳಿಗಳವರೆಗೆ ಬಿಡುಗಡೆಮಾಡಿ ರಾಗಿಬೆಳೆ ಯಲ್ಲಿ ಕ್ರಾಂತಿ ಮಾಡಿದರು. 1964ರಲ್ಲಿ ಪ್ರಾರಂಭ ಆದ ಈ ಒಡನಾಟ ಇವರು ನಿವೃತ್ತಿ ಆದ (1984) ಅನಂತರವೂ ಮುಂದುವರೆಯಿತು.

ನಿವೃತ್ತಿಯ ಅನಂತರ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಇವರನ್ನು ರಾಗಿಯ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿತು. ತಮ್ಮ ಹೊಸ ಹುದ್ದೆಯಲ್ಲಿ ರಾಗಿಯ ಏಳ್ಗೆಗೆ ಪುನಃ ತಮ್ಮನ್ನು ಸಮರ್ಪಿಸಿಕೊಂಡರು. ಜಿಂಬಾಬ್ವೆ ದೇಶದ ರಾಗಿ ತಳಿಗಳ ವೈವಿಧ್ಯತೆಯನ್ನು ಬಳಸಿಕೊಂಡು ಇನ್ನಷ್ಟು ಉತ್ತಮ ತಳಿಗಳನ್ನು ರೂಪಿಸತೊಡಗಿದರು. ಇವರ ಸತತ ಶ್ರಮದ ಫಲವಾಗಿ ಕರ್ನಾಟಕದಲ್ಲಿ ರಾಗಿ ಬೆಳೆಯ ವಿಸ್ತೀರ್ಣ ಹೆಚ್ಚಿತು. ಉತ್ಪಾದನೆಯೂ ಹಲವು ಪಟ್ಟು ವೃದ್ಧಿಸಿತು. ಕರ್ನಾಟಕದಲ್ಲಿ ಲಕ್ಷ್ಮಣಯ್ಯ ನವರ ಹೆಸರನ್ನು ಕೇಳದೇ ಇರುವ ರೈತರು ಇರಬಹುದು; ಆದರೆ

ಇಂಡಾಫ್ ಎಂಬ ರಾಗಿ ತಳಿಯ ಹೆಸರನ್ನು ಕೇಳದ ಯಾವ ರೈತರೂ ಇಲ್ಲ. ಇವರು ಸರಳ ಜೀವಿಯಾಗಿದ್ದರು. ತಮಗೂ ತಮ್ಮ ಮಕ್ಕಳಿಗೂ ದೊರೆಯಬಹುದಾಗಿದ್ದ ಸರ್ಕಾರಿ ಮೀಸಲು ಸೌಲಭ್ಯಗಳನ್ನು ನಿರಾಕರಿಸಿದ ಉದಾತ್ತ ಜೀವಿ.

ಅಪ್ಪಟ ಗಾಂಧಿವಾದಿಯಾದ ಇವರು ತಾವೇ ಚರಕದಿಂದ ನೂಲನ್ನು ತೆಗೆದು ಸಬರಮತಿ ಆಶ್ರಮಕ್ಕೆ ಕಳುಹಿಸಿ ಅಲ್ಲಿಂದ ಖಾದಿ ಬಟ್ಟೆ ತರಿಸಿ ಕೊಳ್ಳುತ್ತಿದ್ದರು. ಇವರಿಗೆ ಹಲವಾರು ಗೌರವ ಪ್ರಶಸ್ತಿಗಳು ದೊರಕಿದ್ದವು. ಇವರು 1993 ಮೇ 14ರಂದು ನಿಧನ ಹೊಂದಿದರು. (ಎಚ್.ಎಲ್.ಕೆ.)

**ರಾಘವ, ಬಳ್ಳಾರಿ:** 1880–1946. ಹೆಸರಾಂತ ನಟ, ನಾಟಕಕಾರ ಹಾಗೂ ವಕೀಲರು. ಇವರ ಪೂರ್ಣ ಹೆಸರು ತಾಡಪತ್ರಿ ರಾಘವಾಚಾರ್ಯ. ಹುಟ್ಟಿದ್ದು ಬಳ್ಳಾರಿಯ ಶ್ರೀವೈಷ್ಣವ ಕುಟುಂಬವೊಂದರಲ್ಲಿ. ತಂದೆ ನರಸಿಂಹಾಚಾರ್ಯರು ತೆಲುಗು ಪಂಡಿತರಾಗಿದ್ದರು, ತಾಯಿ ಶೇಷಮ್ಮ. ಆರಂಭದ ವ್ಯಾಸಂಗವನ್ನು ಬಳ್ಳಾರಿಯಲ್ಲಿ ಮುಗಿಸಿದ ಇವರು ಎಫ್.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅನಂತರ ಮದರಾಸಿನಲ್ಲಿ ಓದಿ ಬಿ.ಎ. ಹಾಗೂ ಬಿ.ಎಲ್. ಪದವಿಗಳನ್ನು (1905) ಗಳಿಸಿ ಬಳ್ಳಾರಿಯಲ್ಲಿ ತಮ್ಮ ಸೋದರಮಾವ ಧರ್ಮಾವರಂ ರಾಮಕೃಷ್ಣಮಾಚಾರ್ಯರ ಬಳಿ ವಕೀಲ ವೃತ್ತಿಯಲ್ಲಿ ತರಬೇತಿ ಪಡೆದರು (1906–12). ಅನಂತರ ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಆರಂಭಿಸಿ, ತಮ್ಮ ದಕ್ಷತೆ ಹಾಗೂ ಪರಿಶ್ರಮಗಳಿಂದ ಒಳ್ಳೆಯ ವಕೀಲರೆಂದೂ ಹೆಸರು ಮಾಡಿದರು.

ರಾಘವರು ಮದರಾಸಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಬಾಂಬೆ ಪಾರಸೀ ಥಿಯೆಟ್ರಿಕಲ್ ಕಂಪನಿ ನಾಟಕಗಳನ್ನು ನೋಡುತ್ತಿದ್ದರು. ಆ ಕಂಪನಿಯ ಸುಪ್ರಸಿದ್ಧ ನಟ ದಾದಾಭಾಯಿ ಏಸ್ತ್ರಿಯವರ ಅಭಿನಯ ಇವರ ಮೇಲೆ ಒಳ್ಳೆಯ ಪ್ರಭಾವವನ್ನು ಬೀರಿತಲ್ಲದೆ ಮುಂದೆ ಇವರು ರಂಗಭೂಮಿಯನ್ನು ಪ್ರವೇಶಿಸಲೂ ಕಾರಣವಾಯಿತು. ಕನ್ನಡದ ಜೊತೆಗೆ ತೆಲುಗು, ತಮಿಳು, ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಪರಿಶ್ರಮವನ್ನು ಸಂಪಾದಿಸಿಕೊಂಡಿದ್ದ ಇವರು ಮೊದಲು ಅಭಿನಯಿಸಿದ್ದು ಡಾಕ್ಟರ್ ಅಂಡ್ ಅಪಾತಕಿರಿ ಎಂಬ ಇಂಗ್ಲಿಷ್ ನಾಟಕದಲ್ಲಿ. ಅನಂತರ ಬಳ್ಳಾರಿಯಲ್ಲಿ ವಟ್ಟಂ ಶಾಮರಾವ್ ಸೋದರರ ನೆರವಿನೊಂದಿಗೆ ಷೇಕ್ಸ್‌ಪಿಯರ್ ಕ್ಲಬ್ಬನ್ನು ಸ್ಥಾಪಿಸಿ ಕೆಲವು ಇಂಗ್ಲಿಷ್ ನಾಟಕಗಳನ್ನು ಅಭಿನಯಿಸಿದರು.

ಅಂದಿನ ದಿನಗಳಲ್ಲಿ ಬಳ್ಳಾರಿಯಲ್ಲಿ ಧರ್ಮಾವರಂ ರಾಮಕೃಷ್ಣಾಚಾರ್ಯ, ಕೋಲಾಚಲಂ ಶ್ರೀನಿವಾಸರಾಯ ಎಂಬ ಪ್ರತಿಭಾವಂತ ನಾಟಕಕಾರರು ಅನೇಕ ಸ್ವತಂತ್ರ ನಾಟಕಗಳನ್ನು ಬರೆದು ಸರಸವಿನೋದಿನಿ ಸಭೆ, ಸಮನೋರಮ ಸಭೆಗಳಿಂದ ನಾಟಕ ಪ್ರದರ್ಶನಗಳನ್ನು ನಡೆಸುತ್ತಿದ್ದರು. ಈ ಕಂಪನಿಗಳಲ್ಲಿ ಹಲವಾರು ನಾಟಕಗಳಲ್ಲಿ ರಾಘವರು ಅಭಿನಯಿಸಿದರು. ವಿಜಯನಗರ ಪತನ ಎಂಬ ನಾಟಕದಲ್ಲಿ ಇವರು ವಹಿಸಿದ ಪಠಾನ್ ರುಸ್ತುಮ್ ಪಾತ್ರ ಇವರಿಗೆ ಒಳ್ಳೆಯ ಜನಪ್ರಿಯತೆಯನ್ನು ದೊರಕಿಸಿಕೊಟ್ಟಿತು. ಮುಂದೆ ಬೆಂಗಳೂರಿನ ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್ (ಅಡ)ಸಂಸ್ಥೆಯ ನೇತಾರರಾಗಿ ಕರ್ನಾಟಕದಲ್ಲಿ ಮಾತ್ರವಲ್ಲದೆ ಮುಂಬಯಿ, ಕಲ್ಕತ್ತ ಮತ್ತು ಸಿಮ್ಲಾಗಳಲ್ಲೂ ನಾಟಕ ಪ್ರದರ್ಶನಗಳನ್ನು ನಡೆಸಿದರು. ರಾಘವರು ಅಭಿನಯಿಸುತ್ತಿದ್ದ ಹರಿಶ್ಚಂದ್ರ, ದಶರಥ, ರಾವಣ ಈ ಮುಂತಾದ ಪೌರಾಣಿಕ ಪಾತ್ರಗಳು ತುಂಬ ಜನಪ್ರಿಯವಾದವು. ಇವರು 1928ರಲ್ಲಿ ಇಂಗ್ಲೆಂಡಿಗೆ ಹೋಗಿ ಆ ದೇಶದ ರಂಗಭೂಮಿಯ ಚಟುವಟಿಕೆಗಳನ್ನು ಅಭ್ಯಸಿಸಿದರು; ಅಲ್ಲಿಯ ನಾಟಕಗಳಿಗೂ ನಮ್ಮ ನಾಟಕಗಳಿಗೂ ಇರುವ ಮುಖ್ಯ ವ್ಯತ್ಯಾಸಗಳನ್ನು ಅಧ್ಯಯನ ಮಾಡಿದರು. ಪ್ರಸಿದ್ಧ ನಾಟಕಕಾರ ಬರ್ನಾರ್ಡ್ ಷಾ ಅವರನ್ನು ಭೇಟಿಯಾದ ರಾಘವರು ಸ್ವದೇಶಕ್ಕೆ ಹಿಂದಿರುಗಿ, ತಮ್ಮ ನಾಟಕಗಳಲ್ಲಿ ಹಲವಾರು ಬದಲಾವಣೆಗಳನ್ನು ತಂದು, ರಂಗಭೂಮಿಗೆ ಒಂದು ಹೊಸ ಆಯಾಮವನ್ನು ನೀಡಿದರು. ಆ ದಿನಗಳಲ್ಲಿ ಸ್ತ್ರೀ ಪಾತ್ರಗಳನ್ನು ಸಾಮಾನ್ಯವಾಗಿ ಪುರುಷರೇ ವಹಿಸುತ್ತಿದ್ದರು. ರಾಘವರು ಇದನ್ನು ತಪ್ಪಿಸಿ ಸ್ತ್ರೀ ಪಾತ್ರಗಳನ್ನು ಸ್ತ್ರೀಯರಿಂದಲೇ ಮಾಡಿಸಿದರು. ರಾಘವರ ನಟನಾಸಾಮರ್ಥ್ಯ ಅನೇಕ ರಾಷ್ಟ್ರೀಯ ನಾಯಕರ ಮೆಚ್ಚುಗೆಗೆ ಪಾತ್ರವಾಯಿತು. ಲೋಕಮಾನ್ಯ ಟಿಳಕ ಅವರು ಬಳ್ಳಾರಿಯಲ್ಲಿ ವಾಣಿವಿಲಾಸ ನಾಟಕ ಭವನವನ್ನು ಉದ್ಘಾಟಿಸಿದ ಸಮಯದಲ್ಲಿ ರಾಘವರ ಕಲಾನೈಪುಣ್ಯವನ್ನು ಮೆಚ್ಚಿಕೊಂಡರು. ಬೆಂಗಳೂರಲ್ಲಿ ಹರಿಜನ ನಿಧಿಗಾಗಿ ದೀನಬಂಧು ಕಬೀರ್ ನಾಟಕವನ್ನು ಅಮೆಚೂರ್ ನಾಟಕ ಸಂಘದವರು ಗಾಂಧೀಜಿಯ ನೇತೃತ್ವದಲ್ಲಿ ಅಭಿನಯಿಸಿದಾಗ ರಾಘವರ ಕಬೀರ್ ಪಾತ್ರವನ್ನು ನೋಡಿ ಗಾಂಧೀಜಿಯವರು ಜಯಕಾರದಿಂದ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ರವೀಂದ್ರನಾಥ್ ಠಾಕೂರರು ಬೆಂಗಳೂರಿಗೆ ಬಂದಾಗ ಅಮೆಚೂರ್ ಸಂಘದವರು ಅಭಿನಯಿಸಿದ ಪ್ರಹ್ಲಾದ ನಾಟಕದಲ್ಲಿ ರಾಘವರ ಹಿರಣ್ಯಕಶಿಪು ಪಾತ್ರಾಭಿನಯವನ್ನು ಮೆಚ್ಚಿ ಕೊಂಡಾಡಿದರು.

ರಾಘವರು ತಮ್ಮ ಮಿತ್ರರ ಒತ್ತಾಯದಿಂದ ಚಲನಚಿತ್ರರಂಗವನ್ನು ಪ್ರವೇಶಿಸಿ (1935–40) ದ್ರೌಪದೀಮಾನಸಂರಕ್ಷಣ, ರೈತುಬಿಡ್ಡ, ಚಂಡಿಕಾ ಎಂಬ ತೆಲುಗು ಚಿತ್ರಗಳಲ್ಲಿ ಅಭಿನಯಿಸಿದರು.

ಭಾರತೀಯ ರಂಗಭೂಮಿಯನ್ನು ಸುವ್ಯವಸ್ಥಿತ ರೀತಿಯಲ್ಲಿ ಸಂಘಟಿಸಲು ಪ್ರಯತ್ನಿಸಿದ ಇವರು ಆಂಧ್ರನಾಟಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಆಗಿನ ಭಾರತ ಸರ್ಕಾರ ಇವರಿಗೆ ರಾವ್ ಬಹದ್ದೂರ್ ಪ್ರಶಸ್ತಿ ನೀಡಿ ಗೌರವಿಸಿತು. ಇವರು 1946 ಏಪ್ರಿಲ್ 16ರಂದು ನಿಧನರಾದರು.

(ಕೆ.ಡಿ.ಜಿ.)

**ರಾಘವಾಂಕ:** ಸು. 1225. ಹರಿಶ್ಚಂದ್ರಕಾವ್ಯ, ಸೋಮನಾಥಚಾರಿತ್ರ, ವೀರೇಶಚರಿತೆ, ಶರಭಚಾರಿತ್ರ, ಹರಿಹರಮಹತ್ತ್ವ ಎಂಬ ಗ್ರಂಥಗಳ ಕರ್ತೃ. ಇವುಗಳಲ್ಲಿ ಮೊದಲ ನಾಲ್ಕು ಉಪಲಬ್ಧವಿದ್ದು, ಕಡೆಯ ಎರಡು ಉಪಲಬ್ಧವಿಲ್ಲ. ಈ ಆರು ಕೃತಿಗಳನ್ನಲ್ಲದೆ ಈತ ಇನ್ನೂ ಕೆಲವು ಕೃತಿಗಳನ್ನು ಬರೆದಿರುವನೆಂದು ಹೇಳಲಾಗಿದೆ. ಅಂಥವುಗಳಲ್ಲಿ ದೇವಾಂಗ ದಾಸಿಮಯ್ಯನ ಪುರಾಣವೂ ಒಂದು. ಆದರೆ ಇದನ್ನು ಬೇರಾವನೊ ಕವಿ ಬರೆದಿದ್ದು ರಾಘವಾಂಕನ ತಲೆಗೆ ಕಟ್ಟಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ನಾರಸಿಂಹನು (ಸು. 1768) ತನ್ನ ಅನುಭವ ಶಿಖಾಮಣಿಯನ್ನು ರಾಘವಾಂಕನ ಶರಷಟ್ಪದಿ ಗ್ರಂಥವೊಂದನ್ನು ನೋಡಿ ಬರೆದಿರುವೆನೆಂದು ಹೇಳಿಕೊಂಡಿದ್ದಾನೆ. ಹರಿಹರಮಹತ್ತ್ವ ಮತ್ತು ಶರಭಚಾರಿತ್ರಗಳಲ್ಲಿ ಯಾವುದಾದರೊಂದು ಈ ಶರಷಟ್ಪದಿ ಗ್ರಂಥವಾಗಿರಬಹುದು.

ರಾಘವಾಂಕನ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಅವನ ಕೃತಿಗಳಿಂದಲೂ ಬಸವಪುರಾಣ, ಚೆನ್ನಬಸವಪುರಾಣ, ಪದ್ಮರಾಜಪುರಾಣ, ರಾಘವಾಂಕ ಚಾರಿತ್ರ ಮುಂತಾದ ವೀರಶೈವ ಪುರಾಣಗಳಿಂದಲೂ ಕೆಲವು ವಿಷಯಗಳು ದೊರೆಯುತ್ತವೆ. ಈತ ಮಹಾದೇವಭಟ್ಟ ಮತ್ತು ರುದ್ರಾಣಿಯರ ಮಗನೆಂಬುದು ಒಂದು ನಿಶ್ಚಿತ ಸಂಗತಿ. ಕವಿಯೇ ತನ್ನ ಹರಿಶ್ಚಂದ್ರ

ಕಾವ್ಯದಲ್ಲಿ ಹಂಪೆಯ ಮಹಾದೇವನಾತ್ಮಜ ಎಂದು ಹೇಳಿಕೊಂಡಿದ್ದಾನೆ. ಪ್ರತಿಯೊಂದು ಕಾವ್ಯದ ಆದಿಯಲ್ಲಿಯೂ ಪಂಪಾವಿರೂಪಾಕ್ಷನ ಪ್ರಸ್ತಾಪವಿದ್ದು, ಅದನ್ನೇ ಆ ಮೇಲಿನ ವೀರಶೈವ ಪುರಾಣಗಳು ಅನುಸರಿಸುವುದರಿಂದ ಇವನು ಪಂಪಾಕ್ಷೇತ್ರದ ನಿವಾಸಿ ಎಂಬುದು ಸ್ಪಷ್ಟವಾಗುತ್ತದೆ. ಈತ ಹರಿಹರನ ಸೋದರಳಿಯನೂ ಶಿಷ್ಯನೂ ಆಗಿದ್ದನೆಂಬುದು ಮತ್ತೊಂದು ಮುಖ್ಯ ಸಂಗತಿ. ಹಂಪೆಯ ಶಂಕರಪ್ರಭು, ಹಂಪೆಯ ಮಾದಿರಾಜ, ಹಂಪೆಯ ಮಹಾದೇವ-ಇವರು ಇವನ ಇತರ ಗುರುಗಳು. ಹರಿಶ್ಚಂದ್ರಕಾವ್ಯ ಮತ್ತು ಸೋಮನಾಥಚಾರಿತ್ರಗಳ ಪೀಠಿಕೆಗಳಲ್ಲಿ ಕವಿ ಇವರನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಪೂರ್ವಕವಿಗಳಲ್ಲಿ ಕೇಶಿರಾಜನನ್ನು ಮಾತ್ರ ಸ್ಮರಿಸಿದ್ದಾನೆ. ಇವನು ಕೊಂಡಗುಳಿ ಕೇಶಿರಾಜನೆಂದೇ ತಿಳಿಯಲಾಗಿದೆ. ರಾಘವಾಂಕನಿಗೆ ಉಭಯಕವಿ ಶರಭಭೇರುಂಡ, ಉಭಯಕವಿ ಕಮಲರವಿ ಮತ್ತು ಅದಟಕವಿ ನಿಕರಚೌದಂತ ಎಂಬ ಬಿರುದುಗಳಿದ್ದಂತೆ ತಿಳಿದುಬರುವುದು. ಪಂಪಾಕ್ಷೇತ್ರದ ರಾಜನಾದ ದೇವರಾಜನು ಈತನ ಪಾಂಡಿತ್ಯವನ್ನು ಮೆಚ್ಚಿ ಕವಿಶರಭಭೇರುಂಡ ಎಂಬ ಪಾದದ ಪೆಂಡೆಯವನಿತ್ತು ಗೌರವಿಸಿದನಂತೆ. ಈ ದೇವರಾಜನೇ ಹರಿಶ್ಚಂದ್ರ ಕಾವ್ಯವನ್ನು ಬಂಗಾರದ ಹರಿವಾಣದಲ್ಲಿಟ್ಟು ಅಂಬಾರಿಯಲ್ಲಿ ಮೆರವಣಿಗೆ ಮಾಡಿಸಿದ ವಿಚಾರ ರಾಘವಾಂಕಚಾರಿತ್ರ ಮತ್ತು ಗುರುರಾಜಚಾರಿತ್ರಗಳಲ್ಲಿ ಉಲ್ಲೇಖಿತವಾಗಿದೆ. ರಾಘವಾಂಕನು ಸಿದ್ಧರಾಮಚಾರಿತ್ರವನ್ನು ಬರೆದ ಮೇಲೆ ಹೆಚ್ಚು ಪ್ರಸಿದ್ಧನಾದಂತೆಯೂ ಇದನ್ನು ಕೇಳಿದ ಹೊಯ್ಸಳ ನರಸಿಂಹ ಬಲ್ಲಾಳನ ಮಂತ್ರಿ ಕೆರೆಯ ಪದ್ಮರಸ ರಾಘವಾಂಕನ ಭೇಟಿಗೆ ಕಾತರಿಸಿದನೆಂದೂ ತಿಳಿದುಬರುತ್ತದೆ. ರಾಘವಾಂಕ ಓರಂಗಲ್ಲಿಗೆ ಹೋಗಿ ಪ್ರತಾಪರುದ್ರನ ಸಭೆಯಲ್ಲಿ ತನ್ನ ಮೀಸಲುಗವಿತೆಯಾದ ವೀರೇಶಚರಿತೆಯನ್ನು ವಾಚಿಸಿ ಪರವಾದಿಗಳಾದ ಏಕ, ದ್ವಿ, ತ್ರಿ ಸಂಧಿವಿಗ್ರಹಿಗಳನ್ನು ಸೋಲಿಸಿ ಮನ್ನಣೆ ಪಡೆದನೆಂಬ ವಿಚಾರ ವೀರಶೈವ ಪುರಾಣಗಳಲ್ಲಿ ಉಕ್ತವಾಗಿದೆ. ಕಡೆಗೆ ಕೆರೆಯ ಪದ್ಮರಸನ ಮಾರ್ಗದರ್ಶನದಲ್ಲಿ ಈತ ಬೇಲೂರಿನಲ್ಲಿ ಬಯಲಾದ ವಿಷಯ ಪೂರ್ವೋಕ್ತ ಪುರಾಣಗಳಲ್ಲಿದೆ.

ರಾಘವಾಂಕನ ಕಾವ್ಯಗಳೆಲ್ಲ ಷಟ್ಪದಿ ಕಾವ್ಯಗಳು. ಇವನನ್ನು ಷಟ್ಪದಿ ಕಾವ್ಯದ ನಿರ್ಮಾಪಕನೆನ್ನುವುದು ವಾಡಿಕೆ. ಆದರೆ ಇವನಿಗಿಂತ ಮುಂಚಿನ ಚಂದ್ರರಾಜನ ಮದನತಿಲಕದಲ್ಲಿಯೇ ಷಟ್ಪದಿಗಳು ಸಿಕ್ಕುತ್ತವೆ. ಪೋಲಾಳ್ವ ದಂಡನಾಥನು ಹರಿಚಾರಿತ್ರ ಎಂಬ ಷಟ್ಪದಿ ಕಾವ್ಯವನ್ನು ರಚಿಸಿದ್ದನೆಂದು ಹರಿಹರದ ಶಾಸನದಲ್ಲಿ ಹೇಳಿದೆ. ಈ ಕಾವ್ಯ ದೊರೆತಿಲ್ಲವಾದ್ದರಿಂದ, ಉಪಲಬ್ಧವಿರುವ ಕೃತಿಗಳಲ್ಲಿ ಇಡೀ ಕಾವ್ಯಕ್ಕೆ ಷಟ್ಪದಿಯನ್ನು ಮೊದಲಿಗೆ ಬಳಸಿದವನು ರಾಘವಾಂಕನೇ. ಆದ್ದರಿಂದ ರಾಘವಾಂಕನನ್ನು ಷಟ್ಪದಿ ಕಾವ್ಯಗಳ ನಿರ್ಮಾಪಕನೆನ್ನುವುದಕ್ಕಿಂತ ಪ್ರವರ್ತಕನೆನ್ನಬಹುದು.

ರಾಘವಾಂಕ ತನ್ನ ಕೃತಿಗಳನ್ನು ರಚಿಸಿದ ಅನುಕ್ರಮವೂ ಒಂದು ಸಮಸ್ಯೆಯಾಗಿದೆ. ಹರಿಶ್ಚಂದ್ರಕಾವ್ಯವೇ ಒಂದು ತೆರನಾಗಿದ್ದು, ಉಳಿದ ಕೃತಿಗಳು ಇನ್ನೊಂದು ತೆರನಾಗುವುದು ಇದಕ್ಕೆ ಕಾರಣ. ಇದರಿಂದ ಹರಿಶ್ಚಂದ್ರಕಾವ್ಯ ಮೊದಲು ರಚಿತವಾದದ್ದೆಂದು ಕೆಲವರು, ಕಡೆಯಲ್ಲಿ ರಚಿತವಾದದ್ದೆಂದು ಮತ್ತೆ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಉಳಿದ ಕೃತಿಗಳ ಅನುಕ್ರಮದ ಪ್ರಶ್ನೆ ಅಷ್ಟಾಗಿ ಕಾಡುವುದಿಲ್ಲ. ಏಕೆಂದರೆ ಅವೆಲ್ಲ ಒಂದೇ ಮನೋಧರ್ಮದವು. ರಾಘವಾಂಕಚರಿತ್ರದಲ್ಲಿ ಬರುವ ಹಲ್ಲು ಮುರಿದ ಕಥೆ, ಇದಕ್ಕೆ ಸಾಂಕೇತಿಕ ಉತ್ತರ ನೀಡುತ್ತದೆ. ಕಾಲಧರ್ಮ ಮತ್ತು ಪರಿಸರಗಳೊಡನೆ ಹೋರಾಡಿಯೂ ಅದಕ್ಕೆ ಬದ್ಧನಾಗಿ ಹೋದ ಕವಿಯೊಬ್ಬನ ಚಿತ್ರ ಇಲ್ಲಿದೆ. ಹರಿಶ್ಚಂದ್ರಕಾವ್ಯವನ್ನು ಬರೆಯುವಾಗ ಮತಧರ್ಮವನ್ನು ಪ್ರಸಾರ ಮಾಡುವುದು ಕವಿಯ ಉದ್ದೇಶವಾಗಿರಲಿಲ್ಲ. ವಚನಕಾರರ ಸಾಮಾಜಿಕ ಕ್ರಾಂತಿಯನ್ನು ಅಭಿವ್ಯಕ್ತಿಸುವುದಷ್ಟೇ ಗುರಿಯಾಗಿತ್ತು. ಆದರೆ ಉಳಿದ ಕೃತಿಗಳಲ್ಲಿ ಧಾರ್ಮಿಕ ಶ್ರದ್ಧೆಯೇ ಕಾವ್ಯಶ್ರದ್ಧೆಯಾಗಿ ಮಾರ್ಪಾಡುಗೊಂಡಿತು. ರಾಘವಾಂಕ ತನ್ನ ಮನೋಧರ್ಮದಲ್ಲಿ ಹೀಗೆ ಸ್ಥಿತ್ಯಂತರ ಹೊಂದಿದ ಮೇಲೆ ಶೈವಕೃತಿಪಂಚಕಗಳನ್ನು ಬರೆದಿರಬೇಕೆಂಬುದು ಸ್ಪಷ್ಟ. ಧಾರ್ಮಿಕ ಪ್ರವೃತ್ತಿಯ ಇಂಥ ಧೋರಣೆಯುಳ್ಳ ಕವಿ ಅದಕ್ಕೆ ತದ್ವಿರುದ್ಧವಾದ ಹರಿಶ್ಚಂದ್ರಕಾವ್ಯವನ್ನು ಆಮೇಲೆ ಬರೆದಿರುವುದು ಅಸಾಧ್ಯವೆನಿಸುತ್ತದೆ.

ಹರಿಶ್ಚಂದ್ರಕಾವ್ಯ ರಾಘವಾಂಕನ ಮೊದಲ ಕೃತಿ, ಮಾತ್ರವಲ್ಲದೆ ಮಹತ್ ಕೃತಿಯೂ ಆಗಿದೆ. 14 ಸ್ಥಲಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ಈ ಕಾವ್ಯ ವಾರ್ಧಕ ಷಟ್ಪದಿಯಲ್ಲಿದೆ. ಇದನ್ನು ಪಂಪಾಕ್ಷೇತ್ರದ ದೇವರಾಜನ ಆಸ್ಥಾನದಲ್ಲಿ ಬರೆದು ಓದಿದನೆಂದು ತಿಳಿದುಬರುತ್ತದೆ. ಆದರೆ ಈ ದೇವರಾಯ ಯಾರು ಎಂಬ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಸತ್ಯವನ್ನು ಸಾಧಿಸಿ ತೋರಿಸುವುದಕ್ಕಾಗಿ ಹರಿಶ್ಚಂದ್ರ ಪಟ್ಟ ಪಾಡಿನ ಕಥೆಯೇ ಹರಿಶ್ಚಂದ್ರಕಾವ್ಯದ ವಸ್ತು. ಈ ಕಾವ್ಯವನ್ನು ರಚಿಸಲು ಐತರೇಯ ಬ್ರಾಹ್ಮಣ, ಹರಿವಂಶ, ಲಿಂಗಪುರಾಣ, ಮಾರ್ಕಂಡೇಯ ಪುರಾಣ, ದೇವೀಭಾಗವತ, ಚಂಡಕೌಶಿಕ ನಾಟಕ ಮುಂತಾದ ಕೃತಿಗಳಿಂದ ವಸ್ತುವನ್ನು ಸ್ವೀಕರಿಸಿದ್ದಾನೆ. ಹೀಗೆ ಸ್ವೀಕರಿಸಿದ್ದರೂ ಹಲವಾರು ವ್ಯತ್ಯಾಸಗಳನ್ನು ಮಾಡಿಕೊಂಡಿದ್ದಾನೆ. ಇದರ ಜೊತೆಗೆ ಸ್ವತಂತ್ರ ರಚನೆಗಳೂ ಸೇರಿಕೊಂಡಿವೆ. ಇಂದ್ರನ ಒಡ್ಡೋಲಗ, ವಸಿಷ್ಠ-ವಿಶ್ವಾಮಿತ್ರರ ಸಂವಾದ,ವಿಶ್ವಾಮಿತ್ರನ ಕಾಟ-ಇಂಥ ಕೆಲವು ಪ್ರಸಂಗಗಳು ಸ್ವಲ್ಪಮಟ್ಟಿಗೆ ಮೂಲ ಆಕರಗಳಿಗೆ ಋಣಿಯಾಗಿದ್ದರೂ ಅವುಗಳ ಯಶಸ್ಸಿಗೆ ರಾಘವಾಂಕನೇ ಕಾರಣನಾಗಿದ್ದಾನೆ. ನಕ್ಷತ್ರಕನ ಪಾತ್ರ, ಹೊಲತಿಯರ ಪ್ರಸಂಗ ಮತ್ತು ಕಾಶೀರಾಜಪುತ್ರನ ಪ್ರಕರಣಗಳು ಸಂಪೂರ್ಣವಾಗಿ ರಾಘವಾಂಕನ ಸ್ವೋಪಜ್ಞ ಸೃಷ್ಟಿಗಳಾಗಿವೆ. ಹರಿಶ್ಚಂದ್ರಕಾವ್ಯದ ಮೊದಲ ಆರು ಸ್ಥಲಗಳು ವರ್ಣನಾಪ್ರಧಾನವಾಗಿದ್ದು ನಿಷ್ಕ್ರಿಯವಾಗಿರುತ್ತವೆ. ವಸಿಷ್ಠ-ವಿಶ್ವಾಮಿತ್ರರ ಸಂವಾದವೊಂದನ್ನು ಬಿಟ್ಟರೆ ಅವುಗಳನ್ನು ಕ್ರಮಿಸುವುದೇ ಕಷ್ಟವಾಗುತ್ತದೆ. ವಾಸ್ತವವಾಗಿ ಕಥೆ ಕ್ರಿಯಾಶೀಲವಾಗುವುದು ಸಪ್ತಮಸ್ಥಲದಿಂದ. ರಾಘವಾಂಕನ ಪ್ರತಿಭೆಯ ನಿಜವಾದ ಅಭಿವ್ಯಕ್ತಿ ಇಲ್ಲಿಂದ ಆರಂಭವಾಗುತ್ತದೆ.

ಹರಿಶ್ಚಂದ್ರಕಾವ್ಯ ರಾಘವಾಂಕನ ನಾಟಕೀಯ ಶಕ್ತಿಯೆಲ್ಲವನ್ನೂ ಸೂರೆಗೊಂಡಿರುವ ಒಂದು ನಾಟಕ ಕಾವ್ಯ. ಇಲ್ಲಿಯ ಸಂವಿಧಾನವಾಗಲಿ, ಸಂವಾದವಾಗಲಿ, ದೃಶ್ಯಸಂಯೋಜನಾಕೌಶಲವಾಗಲಿ, ಅಭಿನಯ ಕಲೆಯಾಗಲಿ ಅವನ ನಾಟ್ಯ ಪ್ರತಿಭೆಯ ಅಪೂರ್ವ ರೀತಿ ವಿನ್ಯಾಸಗಳನ್ನು ಎತ್ತಿತೋರಿಸುತ್ತದೆ. ಆದ್ದರಿಂದ ಹರಿಶ್ಚಂದ್ರಕಾವ್ಯ ಮೂಲತತ್ತ್ವದಲ್ಲಿ ಒಂದು ಅತ್ಯಂತ ಪ್ರಭಾವಶಾಲಿ ನಾಟಕವಾಗಿದೆ ಎಂಬುದು ತೀರ ದಿಟ ಎಂಬ ವಿಮರ್ಶಕರ ಮಾತು ಸತ್ಯ. ಸಂಭಾಷಣೆಗಳ ಮೂಲಕ ಪಾತ್ರಗಳ ಮನೋರಂಗದ ಭಾವನಾ ಸುರಳಿಯನ್ನು ಬಿಚ್ಚಿಡುತ್ತಾಹೋಗುವುದು ಇಲ್ಲಿಯ ವಿಶೇಷ. ಘರ್ಷಣೆಗಳನ್ನು ತಂದಿಟ್ಟು, ಅದರ ಮೂಲಕ ಪಾತ್ರಗಳ ಗುಣಲಕ್ಷಣಗಳನ್ನು ರೂಪಿಸುವುದು ಕವಿಯ ಉದ್ದೇಶ. ಇಲ್ಲೆಲ್ಲ ಕಾಣುವುದು ದುಂದು ಮಾತುಗಾರಿಕೆಯಲ್ಲ, ದೃಶ್ಯಮಯ ಜಗತ್ತು. ವಸಿಷ್ಠ-ವಿಶ್ವಾಮಿತ್ರರ ವಾಗ್ವಾದ ಮತ್ತು ಅನಾಮಿಕ ಸತಿಯರು-ಹರಿಶ್ಚಂದ್ರರಾಯನ ಸಂವಾದಗಳು ಇದಕ್ಕೆ ಉತ್ತಮ ನಿದರ್ಶನಗಳಾಗಿವೆ. ಹರಿಶ್ಚಂದ್ರಕಾವ್ಯದಲ್ಲಿ ವ್ಯಕ್ತಗೊಂಡಿರುವ ಅಪೂರ್ವ ನಾಟಕೀಯತೆ ಅವನ ಉಳಿದ ಯಾವ ಕಾವ್ಯದಲ್ಲೂ ಇಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ. ಇದಕ್ಕೆ ಬೇರೆ ಏನೇ ಕಾರಣವಿರಲಿ, ಹರಿಶ್ಚಂದ್ರಕಾವ್ಯದಲ್ಲಿ ಬರುವಂತೆ ಘಟನೆ, ಸಂಘರ್ಷಣೆ, ಸನ್ನಿವೇಶ, ದೃಶ್ಯಪರಂಪರೆಗಳನ್ನು ಉಳಿದ ಕಾವ್ಯಗಳಲ್ಲಿ ತರಲು ಆಸ್ಪದವಿಲ್ಲದಿರುವುದು ಮುಖ್ಯವಾಗಿದೆ.

ಸಾಮಾಜಿಕ ಮೌಲ್ಯಗಳ ಅಭಿವ್ಯಕ್ತಿಯ ದೃಷ್ಟಿಯಿಂದಲೂ ಹರಿಶ್ಚಂದ್ರಕಾವ್ಯ ಮಹತ್ತ್ವದ್ದಾಗಿದೆ. ಅತಿಹುಸಿವ ಯತಿ ಹೊಲೆಯ ಹುಸಿಯದಿಹ ಹೊಲೆಯನುನ್ನತಯತಿವರನು ಎಂಬ ಮಾತು ಸಾಮಾಜಿಕವಾಗಿ ಮುಖ್ಯವಾಗಿದ್ದು, ಹರಿಶ್ಚಂದ್ರಕಾವ್ಯದ ಕಾವ್ಯಪಲ್ಲವಿಯಾಗಿರುವಂತೆ ಕಾಣುತ್ತದೆ. ಹೊಲೆತನದ ಪ್ರಶ್ನೆಯನ್ನು ಕವಿಯೊಬ್ಬ ಈ ರೀತಿ ಎತ್ತಿಕೊಂಡು ನಡೆಸಿಕೊಂಡದ್ದು ಅಪೂರ್ವವಾದದ್ದು. ವಿಶ್ವಾಮಿತ್ರ ಋಷಿಯಾಗಿದ್ದರೂ ಹೊಲೆತನವನ್ನು ಹೊರಬೇಕಾಯಿತು. ಮುನಿಗೆ ಹೊಲೆಯಾವುದತಿ ಕೋಪಬದ್ಧ ದ್ವೇಷನಿಮಿತ್ತವೈರ ಎಂದು ಕವಿ ಹೇಳುತ್ತಾನೆ. ಇದರಿಂದ ಗಾಣಿಗಿತ್ತಿಯರು ಹೊಲತಿಯರಾದರು. ಅಹಂಕಾರ ಕುಲಮದಗಳನ್ನು ಕಳೆಯಲು ಹರಿಶ್ಚಂದ್ರನೂ ಹೊಲೆಯನಾಗಬೇಕಾಯಿತು. ಆದರೆ ಇಲ್ಲೆಲ್ಲ ಸಮಸ್ಯೆ ತಾತ್ತ್ವಿಕವಾಗಿ ಬಿಡುತ್ತದೆಯೇ ಹೊರತು ಸಾಮಾಜಿಕ ಅಂತರಂಗಗಳನ್ನು ಗುರುತಿಸುವುದಾಗುವುದಿಲ್ಲ. ಹರನೆಂಬುದೇ ಸತ್ಯ ಸತ್ಯವೆಂಬುದು ಹರನು ಇದು ಹರಿಶ್ಚಂದ್ರಕಾವ್ಯದ ದರ್ಶನ. ಮೊದಮೊದಲು ಕಾಣುವ ಹರಿಶ್ಚಂದ್ರ ಸತ್ಯಸಾಧಕನೇ ಹೊರತು ಸಿದ್ಧಪುರುಷನಲ್ಲ. ಕವಿ ಹರಿಶ್ಚಂದ್ರನ ಜನನದ ಹಿನ್ನಲೆಯಲ್ಲಿ ಆತ ಕಾರಣಕರ್ತನೆಂದು ಚಿತ್ರಿಸಿಲ್ಲ. ಅವನೂ ಇತರರಂತೆ ದೋಷ ದೌರ್ಬಲ್ಯಗಳಿಗೆ ಒಳಗಾಗಬಲ್ಲ. ಚಮ್ಮಟಿಗೆ ಹಿಡಿದು ಸತಿಯರನ್ನು ಹೊಡೆದದ್ದಾಗಲಿ, ಅವರನ್ನು ಹೊಲತಿಯರೆಂದು ಕರೆದದ್ದಾಗಲಿ ಇದಕ್ಕೆ ನಿದರ್ಶನ. ಅವನಲ್ಲಿದ್ದ ಕುಲಮದ, ಅಹಂಕಾರಮದಗಳು ಪೂರ್ಣ ನಿರಸನವಾದ ಅನಂತರವೇ ಸತ್ಯದ ಪೂರ್ಣ ಸಾಕ್ಷಾತ್ಕಾರವಾಗುವುದು. ಹೀಗೆ ಕಾವ್ಯ ಹಲವಾರು ಜೀವನ ಮೌಲ್ಯಗಳಿಗೆ ತೆರೆದುಕೊಂಡಿದೆ; ಕನ್ನಡದ ಮಹತ್ತ್ವದ ಕೃತಿಗಳಲ್ಲೊಂದಾಗಿದೆ.

ಸಿದ್ಧರಾಮಚಾರಿತ್ರ ರಾಘವಾಂಕನ ಎರಡನೆಯ ದೊಡ್ಡ ಕೃತಿ. ವಚನಕಾರನೂ ಕರ್ಮಯೋಗಿಯೂ ಆದ ಸಿದ್ಧರಾಮನ ಜೀವನ ಕಥೆಯೇ ಇಲ್ಲಿಯ ವಸ್ತು. ಸಿದ್ಧರಾಮನ ಇತಿಹಾಸ ವೃತ್ತಾಂತದ ಜೊತೆಗೆ ಪವಾಡಪ್ರಸಂಗಗಳೂ ಅತಿಮಾನುಷ ವಿಷಯಗಳೂ ಸೇರಿ ಕಾವ್ಯಕಲೆಯನ್ನು ಬೆಳೆಸಿರುವುದರಿಂದ ಇದು ಪುರಾಣವೆಂದು ಹೆಸರಾಗಿದೆ. ರಾಘವಾಂಕನ ಉಳಿದ ಕಾವ್ಯಗಳಲ್ಲಿಲ್ಲದ ಒಂದು ಗಾಂಭೀರ್ಯ ಮತ್ತು ತಾದಾತ್ಮ್ಯಗಳು ಇದರಲ್ಲಿವೆ. ಹರಿಹರನ ಉಲ್ಲೇಖಗಳು, ಜನಪದದಲ್ಲಿ ಹರಡಿದ್ದಿರಬಹುದಾದ ಕಥೆಗಳು, ಸಿದ್ಧರಾಮನ ವಚನಗಳು– ಇವುಗಳನ್ನು ಆಧರಿಸಿ ಸಿದ್ಧರಾಮನ ಕಥೆಯನ್ನು ರಚಿಸಿದಂತಿದೆ. ಕೆಲವನ್ನು ಕವಿಯೇ ಸೃಷ್ಟಿಸಿಕೊಂಡಿರಬಹುದಾದ ಸಾಧ್ಯತೆಯೂ ಇದೆ. ರಾಘವಾಂಕನಿಗೆ ಸಿದ್ಧರಾಮನ ವಚನಗಳ ಪರಿಚಯವಿದ್ದಿರಬೇಕೆಂಬುದಕ್ಕೆ ಕೃತಿಯಲ್ಲಿಯೇ ಆಧಾರಗಳು ಸಿಕ್ಕುತ್ತವೆ. ರಾಘವಾಂಕನು ಸೋಮನಾಥಚಾರಿತ್ರ ಬರೆಯುವಾಗ ಹರಿಹರನ ಆದಯ್ಯನ ರಗಳೆಯನ್ನು ಆಧಾರಮಾಡಿಕೊಂಡಂತೆ, ಸಿದ್ಧರಾಮಚಾರಿತ್ರಕ್ಕೂ ಅಂಥದೇ ಮೂಲವಿರಬಹುದೆಂದು ಒಂದು ಅಭಿಪ್ರಾಯವಿದೆ. ಆದರೆ ಸಿದ್ಧರಾಮನನ್ನು ಕುರಿತ ಹರಿಹರನ ರಗಳೆ ಈವರೆಗೆ ದೊರೆತಿಲ್ಲ. ಹರಿಹರನ ಕೆಲವು ರಗಳೆಗಳಲ್ಲಿ ಸಿದ್ಧರಾಮನನ್ನು ಕುರಿತ ಕೆಲವು ಉಲ್ಲೇಖಗಳು ಮಾತ್ರ ದೊರೆಯುತ್ತವೆ. ಇದಲ್ಲದೆ ಸಿದ್ಧರಾಮನ ವಿಷಯವಾಗಿ ಶಾಸನಗಳೂ ಸಿಗುತ್ತಿದ್ದು, ರಾಘವಾಂಕ ತನ್ನ ಕಾವ್ಯಕ್ಕೆ ಇಲ್ಲಿಂದಲೂ ವಿಷಯಗಳನ್ನು ತೆಗೆದುಕೊಂಡಿರಬಹುದು.

ಕಾವ್ಯದ ಆರಂಭದಲ್ಲಿಯೇ ಕವಿ ತನ್ನ ಕೃತಿಯನ್ನು ಕುರಿತು ನಟ್ಟಕಲ್ಲೆ ನಿಸದಿಳೆಯೊಳಗೆ ಸುಳಿವ ಶಾಸನವೆನಿಸಿ ಪೇಳ್ವೆನೀ ಸತ್ಕೃತಿಯನು ಎಂದು ಉಲ್ಲೇಖಿಸಿ, ಕಥಾನಾಯಕ ಮನುಜನಲ್ಲ, ಕಾರಣರುದ್ರ ಎಂದು ಹೇಳಿದ್ದಾನೆ. ಸಿದ್ಧರಾಮನ ಪಾತ್ರಕ್ಕೆ ಇದು ಮುನ್ನುಡಿಯೂ ಕನ್ನಡಿಯೂ ಆಗಿದೆ. ಸಿದ್ಧರಾಮಚಾರಿತ್ರ ಧರ್ಮವನ್ನು ಕಾವ್ಯಧರ್ಮವನ್ನೂ ಸೇರಿಸಿ ಹೇಳಹೊರಟ ಒಂದು ಪುರಾಣಕಾವ್ಯ. ಈ ದೃಷ್ಟಿಯಲ್ಲಿ ರಾಘವಾಂಕ ಪುರಾಣಕಾರರ ದಾರಿಯಲ್ಲಿಯೇ ನಡೆದಿದ್ದಾನೆ. ಪ್ರಸ್ತುತ ಕಾವ್ಯದಲ್ಲಿ ಸಿದ್ಧರಾಮನು ಶಿವಸಾಕ್ಷಾತ್ಕಾರ ಪಡೆದು ಸೊನ್ನಲಿಗೆಗೆ ಬರುವವರೆಗೆ ಒಂದು ಘಟ್ಟವಾದರೆ, ಅಲ್ಲಿಂದ ಅಲ್ಲಮನ ಸಂದರ್ಶನದವರೆಗೆ ಮತ್ತೊಂದು ಘಟ್ಟವಾಗುತ್ತದೆ. ಮತ್ತೆ ಅಲ್ಲಿಂದ ಮಹಾಸಮಾಧಿಯವರೆಗೆ ಮಗುದೊಂದು ಘಟ್ಟವಾಗುತ್ತದೆ. ಸಿದ್ಧರಾಮನ ವ್ಯಕ್ತಿತ್ವ ಈ ಮೂರು ಹಂತಗಳಲ್ಲಿ ಸ್ಫುಟವಾಗುತ್ತಾ ಹೋಗುತ್ತದೆ. ಇಡೀ ಕಾವ್ಯದಲ್ಲಿಯೇ ಹೆಚ್ಚು ಕಲಾತ್ಮಕ ಭಾಗಗಳೆಂದರೆ ಸಿದ್ಧರಾಮನ ಜನನ ಮತ್ತು ಬಾಲ್ಯ ಪ್ರಸಂಗಗಳು. ಇವನ್ನು ಬಿಟ್ಟರೆ ಬಿಲ್ಲೇಶಬೊಮ್ಮಯ್ಯನ ಮತ್ತು ಅಲ್ಲಮನ ಸಂದರ್ಶನದ ಪ್ರಸಂಗಗಳು ಹೆಸರಿಸಬಹುದಾದವು. ಉಳಿದವೆಲ್ಲ ಘಟನೆಗಳ ಚಿತ್ರಗಳೂ ಅಥವಾ ಆಚರಣೆಗಳ ನಿರೂಪಣೆಯೊ ಇಲ್ಲವೆ ಪವಾಡಗಳ ಪ್ರದರ್ಶನವೂ ಆಗಿಬಿಡುತ್ತವೆ. ಸಮಸ್ತ ಜೀವಾಳಗಳಿಗೂ ಸೂತ್ರವನ್ನು ಕಲ್ಪಿಸುವಲ್ಲಿ ಸಿದ್ಧರಾಮನ ಲೋಕಮುಖವಾದ ಜೀವವನ್ನು ಕಾಣುತ್ತೇವೆ. ಅವನ ಸಾಮಾಜಿಕ ಪ್ರಜ್ಞೆ ಕ್ರಿಯಾಶೀಲವಾಗುವುದು ಇಂಥ ಕಥೆಗಳಲ್ಲಿಯೇ. ಸಿದ್ಧರಾಮನು ಕರ್ಮಯೋಗಿ ಎನ್ನುವುದನ್ನು ಕವಿ ಚೆನ್ನಾಗಿ ನಿರೂಪಿಸಿದ್ದಾನೆ. ಶಿವಯೋಗಿಯ ಶರೀರಂ ವೃಥಾ ಸವೆಯಲಾಗದನುಗೊಂಬನಿತು ಕಾಯಕಂ ನಡೆಯುತಿರಬೇಕು ಎನ್ನುವಲ್ಲಿ ಇದು ವ್ಯಕ್ತವಾಗಿದೆ.

ಪ್ರಸ್ತುತ ಕಾವ್ಯದಲ್ಲಿ ಮೂಲಕಥೆಯ ಜೊತೆಗೆ ಹಲಕೆಲವು ಉಪಕಥೆಗಳು ಬರುತ್ತವೆ. ಸಿದ್ಧರಾಮನ ಮಹಿಮೆಯನ್ನು ಸಾರುವುದಕ್ಕೆ ಇವು ಉದ್ದಿಷ್ಟವಾಗಿದ್ದರೂ ಕಾವ್ಯದ ಬಹುಭಾಗವನ್ನು ಇವೇ ಆಕ್ರಮಿಸಿ ಬಿಡುವುದರಿಂದ ಏಕತಾನತೆ ಸೃಷ್ಟಿಗೊಳ್ಳುತ್ತದೆ. ಇವುಗಳನ್ನು ಆಯಾ ಪಾತ್ರಗಳ ಮೂಲಕವೇ ಹೇಳಿಸಿರುವುದು ಒಂದು ವೈವಿಧ್ಯ. ಈ ಕಥೆಗಳು ನಾಲ್ಕಾರು ಪದ್ಯಗಳಲ್ಲಿ ಬಂದು ಹೋಗಿರುವುದರಿಂದ ಕಥೆಯ ದೃಷ್ಟಿಯಿಂದಲೂ ಸತ್ತ್ವಪೂರ್ಣವೆನಿಸುವುದಿಲ್ಲ. ಇನ್ನು ಸಿದ್ಧರಾಮನ ಮಹಿಮೆಯನ್ನು ಹೇಳುವುದಕ್ಕಾಗಿ ಇವಿದ್ದರೂ ಪವಾಡಗಳಷ್ಟೇ ಆಗಿ ಉಳಿಯುತ್ತವೆಯೇ ಹೊರತು ಸನ್ನಿವೇಶದ ಮೂಲಕ ಪರಿಣಾಮಗೊಳ್ಳುವುದಿಲ್ಲ. ವ್ಯಕ್ತಿತ್ವಪ್ರಧಾನವಾದ ಈ ಕಾವ್ಯವನ್ನು ಅದರ ನಾಯಕನ ಚಾರಿತ್ರಿಕ ಸಂದರ್ಭದಲ್ಲಿ ಇಟ್ಟು ನೋಡಿದಾಗ ಕವಿ ಕಟ್ಟಿಕೊಳ್ಳುವ ಬಹಳಷ್ಟು ಉಪಕಥೆಗಳು ಅವನ ಜೀವನ ಚರಿತ್ರೆಯ ನಿಜವಾದ ಚಿತ್ರದ ಕಡೆಗೆ ಬೆಳಕು ಚೆಲ್ಲಲಾರವು ಎನಿಸುತ್ತದೆ.

ರಾಘವಾಂಕನ ಕಾವ್ಯಗಳಲ್ಲೆಲ್ಲ ವೀರೇಶಚರಿತೆಯನ್ನು ಬಿಟ್ಟರೆ ಸೋಮನಾಥಚಾರಿತ್ರವೇ ಅತ್ಯಂತ ಚಿಕ್ಕದು. ಪುಲಿಗೆರೆಯ ಜೈನಬಸದಿಯಲ್ಲಿ ಸೌರಾಷ್ಟ್ರದ ಸೋಮನಾಥನನ್ನು ತಂದು ನಿಲ್ಲಿಸಿದ ವಚನಕಾರ ಆದಯ್ಯನ ಚರಿತ್ರೆಯೇ ಇದರ ವಸ್ತು. ಇದಕ್ಕೆ ಆದಯ್ಯನ ಕಾವ್ಯ ಅಥವಾ ಆದಿಸೆಟ್ಟಿ ಪುರಾಣ ಎಂಬ ಹೆಸರೂ ಇದೆ. ಕಥೆ ದೊಡ್ಡದಲ್ಲದಿದ್ದರೂ ವಿಸ್ತಾರ ವರ್ಣನೆಗಳೆಂಬ ಐದು ಸ್ಥಲಗಳಲ್ಲಿ ಹರಡಿಕೊಂಡಿದೆ. ಹರಿಹರನ ಅದಯ್ಯನ ರಗಳೆಯಿಂದ ಇದಕ್ಕೆ ವಸ್ತುವನ್ನು ತೆಗೆದುಕೊಂಡಿರಬಹುದೆಂದು ತೋರುತ್ತದೆ.

ಕಾವ್ಯವನ್ನು ಆರಂಭಿಸುವ ಮುನ್ನ ಕಥೆಯ ಸಾರಾಂಶ ರೂಪದ ಕಥಾಗರ್ಭವನ್ನು ಕೊಟ್ಟಿದ್ದಾನೆ. ಈ ಕಥಾಸೂಚನೆಯೊಡನೆ ವಿವರವಾದ ವರ್ಣನೆಯೊಡನೆ ವಿಸ್ತಾರವಾದ ಕಾವ್ಯವನ್ನಾಗಿಸಿದ್ದಾನೆಂಬುದು ಪದ್ಯದ ಕಡೆಯ ವಾಕ್ಯದಿಂದ ಅರ್ಥವಾಗುತ್ತದೆ. ಈ ಕಥೆಯ ಪೂರ್ವಪ್ರಸಂಗವಾಗಿ ನಾರದನ ಪ್ರವೇಶವಾಗುತ್ತದೆ. ನಾರದ ಪುಲಿಗೆರೆಯನ್ನು ವರ್ಣಿಸಿ ಆ ಮೂಲಕ ಆದಯ್ಯನ ಅವತಾರಕ್ಕೆ ಸಿದ್ಧತೆ ನಡೆಸುವನು. ಆದಯ್ಯನ ಜನನಕ್ಕಿರುವ ಕೈಲಾಸದ ಹಿನ್ನೆಲೆ ಕಥಾವಸ್ತುವಿಗೆ ಪೌರಾಣಿಕ ಚೌಕಟ್ಟನ್ನು ಕಲ್ಪಿಸುತ್ತದೆ. ಜನನಬಾಲ್ಯಾದಿ ವಿಷಯಗಳೆಲ್ಲ ವೀರಶೈವ ಪುರಾಣಕಾರರು ಅನುಸರಿಸಿರುವ ರೀತಿಯಲ್ಲಿಯೇ ಇವೆ. ಈ ವಿಷಯಗಳನ್ನು ವಿವರವಾಗಿ

ಮಂದಗತಿಯಲ್ಲಿ ಚಿತ್ರಿಸಿದ ಕವಿ, ಮುಂದಿನ ವಿವಾಹ ಮತ್ತು ವ್ಯಾಪಾರಕ್ಕೆ ಹೋಗುವ ಪ್ರಸಂಗಗಳನ್ನು ತ್ವರಿತವಾಗಿ ಚಿತ್ರಿಸಿದ್ದಾನೆ. ಸೋಮನಾಥಚಾರಿತ್ರದಲ್ಲಿ ಕಥೆಯ ಏಕಸೂತ್ರತೆಗೆ ಭಂಗಬಂದಿರುವುದಲ್ಲದೆ ರಸೈಕ್ಯವೂ ಇಲ್ಲವಾಗಿದೆ. ಪಾತ್ರಚಿತ್ರಣವೂ ಸರಿಯಾಗಿ ನಡೆದಿಲ್ಲ. ಆದಯ್ಯ ತಂದೆತಾಯಿಗಳನ್ನು ಅಗಲಿ ಹೋಗುವಾಗ ಹೆಂಡತಿಯ ವಿಷಯವನ್ನೆ ಎತ್ತದಿರುವುದು ಇದಕ್ಕೊಂದು ನಿದರ್ಶನ. ಸಂಸಾರಿಯಾಗಿದ್ದೂ ಪದ್ಮಾವತಿಯನ್ನು ನೋಡಿದ ಮಾತ್ರದಲ್ಲಿ ಜಾರುವುದು ಅವನ ಉದಾತ್ತತೆಯನ್ನು ತೋರಿಸುವುದಿಲ್ಲ. ಆದಯ್ಯ ಕಾರಣಿಕ ಪುರುಷನೆಂದು ಮೊದಮೊದಲು ಚಿತ್ರಿಸಿದ ಕವಿ, ಅನಂತರ ಅವನಲ್ಲಿ ಅಕಾರಣಿಕತನದ ಎಚ್ಚರವನ್ನೇ ಕಾಣಿಸಿಲ್ಲ. ಪದ್ಮಾವತಿಯನ್ನು ಪ್ರೀತಿಸುವಾಗ ಅವನ ಸಾಮಾನ್ಯ ಪ್ರಣಯ ಪ್ರವೃತ್ತಿ ಉತ್ಕರ್ಷಗಳೇ ಕಾರಣವಾಗುತ್ತವೆ. ವಾಸ್ತವವೆಂದರೆ, ಸೋಮನಾಥನ ಪ್ರತಿಷ್ಠಾಪನೆಗೆ ಪದ್ಮಾವತಿ ಆದಯ್ಯರ ಪ್ರಣಯ ಪ್ರಸಂಗವೇ ಕಾರಣವಾಗುತ್ತದೆ.

ಸೋಮನಾಥಚಾರಿತ್ರ ಒಂದು ರೀತಿಯಲ್ಲಿ ಪಾತ್ರಪ್ರಧಾನವಾದ ಕೃತಿ. ಆದಯ್ಯನ ವ್ಯಕ್ತಿತ್ವ ಮತ್ತು ವೀರಶೈವ ಧರ್ಮಪರವಾಗಿರುವ ಅವನ ವೀರನಿಷ್ಠೆಯನ್ನು ಕುರಿತು ಹೇಳುವುದು ಕವಿಯ ಉದ್ದೇಶ. ಬಸದಿಯಲ್ಲಿ ಸೋಮನಾಥನನ್ನು ಸ್ಥಾಪಿಸುವ ಮುಖ್ಯಘಟನೆಯನ್ನು ಬಿಟ್ಟರೆ ಈ ಕಾವ್ಯ ಘಟನಾ ಪ್ರಧಾನವೂ ಆಗುವುದಿಲ್ಲ. ಪಾತ್ರವಾಗಲಿ, ಪ್ರಸಂಗವಾಗಲಿ ಸನ್ನಿವೇಶಗಳಿಂದ ನಿರ್ಮಾಣಗೊಳ್ಳದೆ ತಾತ್ತ್ವಿಕವಾಗುವುದೇ ಹೆಚ್ಚು. ಆದಯ್ಯನ ಐತಿಹಾಸಿಕತೆಯನ್ನು ಮತಸಂಬಂಧವಾದ ಘರ್ಷಣೆಯಲ್ಲಿ ಮಾತ್ರ ಕಾಣಬಹುದಾಗಿದೆ. ಉತ್ಕೃಷ್ಟ ಸ್ಥಿತಿಯಲ್ಲಿದ್ದ ಜೈನಧರ್ಮ, ಅದನ್ನು ಪ್ರತಿಭಟಿಸಿ ಅಸ್ತಿತ್ವವನ್ನು ಪಡೆದುಕೊಳ್ಳಲು ಹವಣಿಸುತ್ತಿದ್ದ ವೀರಶೈವ ಧರ್ಮ ಇವುಗಳಿಗೆ ಪ್ರಸ್ತುತ ಕಾವ್ಯ ಪುರಾಣರೂಪವಂತೆ ಕಾಣುತ್ತದೆ. ಬ್ರಹ್ಮಶಿವ, ವೃತ್ತವಿಲಾಸ ಮುಂತಾದ ಕವಿಗಳೂ ತಮ್ಮ ಕಾವ್ಯಗಳಲ್ಲಿ ಸ್ವಮತಶ್ಲಾಘನೆ ಅನ್ಯಮತದೂಷಣೆಯನ್ನು ತಂದಿದ್ದಾರೆ. ಸೋಮನಾಥ ಚರಿತ್ರವೂ ಇದೇ ಸಾಲಿಗೆ ಸೇರುತ್ತದೆ. ಇದರಿಂದಾಗಿ ಕೃತಿಯಲ್ಲಿ ಕಾವ್ಯಾಂಶಗಳಿಗಿಂತ ಮತೀಯಾಂಶಗಳೇ ಅಧಿಕವೆನಿಸುತ್ತದೆ.

ರಾಘವಾಂಕನ ಕಾವ್ಯಗಳಲೆಲ್ಲ ವೀರೇಶಚರಿತೆ ಅತ್ಯಂತ ಚಿಕ್ಕದು. ಇದು ಉದ್ದಂಡ ಷಟ್ಪದಿಯಲ್ಲಿ ರಚಿತವಾಗಿದೆ. ಕವಿ ಇದನ್ನು ಮೀಸಲುಗವಿತೆ ಎಂದು ಕರೆದುಕೊಂಡಿದ್ದಾನೆ. ಇದಕ್ಕೆ ಕಾರಣವೇನೊ ತಿಳಿಯದು. ಆದರೆ ಪ್ರಯೋಗಶೀಲತೆಯನ್ನು ಮಾತ್ರ ಇದು ಧ್ವನಿಸುವಂತಿದೆ ವೀರಭದ್ರನಿಂದ ದಕ್ಷಾಧ್ವರ ಧ್ವಂಸವಾದದ್ದೆ ಇಲ್ಲಿಯ ಕಥಾವಸ್ತು. ಈ ಕಥೆ ಸ್ಕಾಂದಪುರಾಣ, ಶಿವಪುರಾಣ, ಲಿಂಗಪುರಾಣ, ವಾಯವೀಯಸಂಹಿತೆ, ಭಾರ ಭಾಗವತಾದಿ ಗ್ರಂಥಗಳಲ್ಲಿ ಬರುತ್ತದೆ. ಈ ಎಲ್ಲ ವಸ್ತುವನ್ನು ಆಧರಿಸಿ ಹರಿಹರನು ವೀರಭದ್ರ ದೇವರ ರಗಳೆಯನ್ನು ರಚಿಸಿದ್ದಾನೆ. ರಾಘವಾಂಕ ಇಲ್ಲಿ ಹರಿಹರನನ್ನೇ ಅನುಸರಿಸಿದ್ದರೂ ಅವನಿಗೆ ಪ್ರತಿಕ್ರಿಯೆಯೊ ಎನ್ನುವಂತೆ ಹಲಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿರುವಂತಿದೆ. ಶಿವನ ಪಾರಮ್ಯವನ್ನು ಸಾರುವುದೇ ಕವಿಯ ಏಕೈಕ ಉದ್ದೇಶ. ಈ ಕಾವ್ಯದಲ್ಲಿ ರೌದ್ರವೇ ಸ್ಥಾಯಿ.ಅದರ ರುದ್ರಭಯಂಕರತೆಯನ್ನು ಭವ್ಯತೆಗೇರಿಸಲು ಯತ್ನಿಸಿದ್ದಾನೆ. ವಸ್ತುವಿನಲ್ಲೇ ಸಹಜವಾಗಿ ಭವ್ಯತೆ ಇರುವಂತೆ ತೋರುತ್ತದೆ. ಪ್ರತಿಮಾರೂಪದಲ್ಲಿ ನಿರೂಪಿಸಿದ್ದರೆ ಶಿವ-ದಕ್ಷರ ನಡುವಣದ ಕಥೆ ಇನ್ನೂ ರಮ್ಯವಾಗಬಹುದಿತ್ತು. ಆದರೆ ಈಗ ಅದು ಸಂಪೂರ್ಣವಾಗಿ ಭಾವದ ಹುಚ್ಚು ಹೊಳೆಯಾಗಿದೆ, ಆಲೋಚನೆ ಯಾವ ಪಾತ್ರಕ್ಕೂ ಅಂಟಿ ಬಂದಂತೆ ಕಾಣುವುದಿಲ್ಲ. ಇಲ್ಲಿಯ ಭವ್ಯತೆಗೆ ಉದಾತ್ತತೆಯ ಜೋಡಿಲ್ಲ, ಆವೇಶಕ್ಕೆ ವಿವೇಚನೆಯ ಬೆಂಬಲ ಸಾಲದು ಎಂಬ ವಿಮರ್ಶಕರ ಮಾತು ಅಕ್ಷರಶಃ ನಿಜ.

ರಾಘವಾಂಕನಿಗೆ ಕಾವ್ಯರಚನೆಯ ಉದ್ದೇಶ ಗುರಿಗಳಲ್ಲಿ ಉನ್ನತ ಗೌರವವಿತ್ತು. ಜನ ಬದುಕಬೇಕೆಂದು ಕಾವ್ಯಮುಖದಿಂ ಪೇಳ್ದನನಪೇಕ್ಷೆಯಿಂದ ಎಂಬುದು ಅವನ ಕಾವ್ಯೋದ್ದೇಶ. ನಿರಪೇಕ್ಷೆಯನ್ನೇ ಕಾವ್ಯದ ಉದ್ದೇಶವನ್ನಾಗಿಟ್ಟುಕೊಂಡ ರಾಘವಾಂಕನ ಈ ದೃಷ್ಟಿ ಅತ್ಯಂತ ನೂತನವಾದದ್ದಾಗಿದೆ. ಜನತಾಂತದೃಷ್ಟಿಯ ಈ ಮಾತಿನಲ್ಲಿ ಕವಿಯ ಸಾಮಾಜಿಕ ಕಾಳಜಿಯನ್ನು ಸಾಹಿತ್ಯಕ ನಿಯೋಗದ ಒಂದು ಸ್ಪಷ್ಟನೆಯನ್ನೂ ಕಾಣಬಹುದಾಗಿದೆ. ಪಂಡಿತರಿಗಾಗಿ ಕಾವ್ಯರಚನೆಯಾಗುತ್ತಿದ್ದ ಕಾಲದಲ್ಲಿ ರಾಘವಾಂಕನು ಪಾಮರರಿಗೂ ಪ್ರಿಯವಾಗುವ ಸಾಹಿತ್ಯ ಸೃಷ್ಟಿಸುತ್ತೇನೆ, ಜನ ಬದುಕಬೇಕೆಂದು ಕಾವ್ಯ ಬರೆಯುತ್ತೇನೆ ಎಂದು ಹೊರಟಿದ್ದು ಮೆಚ್ಚಬೇಕಾದ ಸಂಗತಿ. (ಆರ್.ಜಿ.)

**ರಾಘವಾಚಾರ್, ಕ. ವೆಂ.:** 1904-77. ಗ್ರೀಕ್ ಭಾಷೆಯಲ್ಲಿ ಪರಿಣತರಾಗಿದ್ದ ಪ್ರಸಿದ್ಧ ಕನ್ನಡ ವಿದ್ವಾಂಸರು. ಆ ಭಾಷೆಯ ಅನೇಕ ನಾಟಕಗಳನ್ನು ಕನ್ನಡಿಸಿದ್ದಾರೆ. ಇವರು ತುಮಕೂರು ಜಿಲ್ಲೆ ಕಡಬದವರು. ಹುಟ್ಟಿದ್ದು ತಾಯಿಯ ತವರಾದ ಬೇಲೂರಿನಲ್ಲಿ. ಇವರದು ಶ್ರೀ ವೈಷ್ಣವ ಮನೆತನ. ಇವರ ತಾತ ಶ್ರೀನಿವಾಸಭಟ್ಟರು ಆಚಾರನಿಷ್ಠರೂ ಶಾಸ್ತ್ರವೇತ್ತರೂ ಘನಪಂಡಿತರೂ ಆಗಿದ್ದರು. ತಂದೆ ವೆಂಕಟಾಚಾರ್ಯ, ತಾಯಿ ತಿರುಮಲಮ್ಮ, ಅಣ್ಣ ರಾಮಸ್ವಾಮಿ, ಜೊತೆಗೆ ಒಬ್ಬ ತಂಗಿ. ತಂದೆ ವೆಂಕಟಾಚಾರ್ಯರು ತುಮಕೂರಿನಲ್ಲಿ ವಕೀಲರಾಗಿದ್ದರು. ಚಿಕ್ಕಂದಿನಲ್ಲಿಯೇ ತಾಯಿಯನ್ನೂ ಅಣ್ಣನನ್ನೂ ಕಳೆದುಕೊಂಡ ಇವರು ಚಿಕ್ಕಪ್ಪ ಶ್ರೀನಿವಾಸಯ್ಯಂಗಾರರ ಪೋಷಣೆಯಲ್ಲಿ ಬೆಳೆದು ಅಭಿವೃದ್ಧಿಗೆ ಬಂದರು.

ಇವರ ಪ್ರಾಥಮಿಕ ವ್ಯಾಸಂಗ ತುಮಕೂರಿನಲ್ಲಿ ಎ.ವಿ.ಸ್ಕೂಲಿನಲ್ಲಿಯೂ ಹೈಸ್ಕೂಲಿನ ವ್ಯಾಸಂಗ ಕೊಲಿಜಿಯೇಟ್ ಹೈಸ್ಕೂಲಿನಲ್ಲಿಯೂ ನಡೆಯಿತು.

ಅಲ್ಲಿಯ ಅಧ್ಯಾಪಕರಾದ ಕೃಷ್ಣಸ್ವಾಮಿ ಅಯ್ಯರ್ ಮೊದಲಾದವರ ಮಾರ್ಗದರ್ಶನ ಇವರ ಮೇಲೆ ತುಂಬ ಪ್ರಭಾವ ಬೀರಿತು. ಆ ಕಾಲಕ್ಕೆ ಅಲ್ಲಿ ಹಬ್ಬಿದ ಪ್ಲೇಗಿನಿಂದಾಗಿ ಬೆಂಗಳೂರಿನ ಕೋಟೆ ಎ.ವಿ.ಸ್ಕೂಲ್‍ನಲ್ಲಿ ವ್ಯಾಸಂಗವನ್ನು ಮುಂದುವರಿಸಿದರು. ಅಲ್ಲಿ ಪತ್ತೇದಾರಿ ಕಾದಂಬರಿಕಾರರಾದ ವಿದ್ವಾನ್ ಬಾಲಸರಸ್ವತಿಗಳ ಶಿಷ್ಯರಾಗುವ ಯೋಗ ಒದಗಿತು ; ಅವರ ಪ್ರಭಾವಕ್ಕೂ ಒಳಗಾದರು. ಈ ಮಧ್ಯೆ ತಮ್ಮ 16ನೆಯ ವಯಸ್ಸಿನಲ್ಲಿ ತಂದೆಯನ್ನೂ ಕಳದುಕೊಂಡ ಇವರು ಬೆಂಗಳೂರಿನ ಚಿಕ್ಕಪ್ಪನ ಆಶ್ರಯದಲ್ಲಿದ್ದುಕೊಂಡು ವೆಸ್ಲಿಯನ್ ಹೈಸ್ಕೂಲಿಗೆ ಸೇರಿದರು. ಅಲ್ಲಿ ಉಪಾಧ್ಯಾಯರಾಗಿದ್ದ ಎಸ್.ವೆಂಕಟರಾಮನ್ ಅವರ ವ್ಯಕ್ತಿತ್ವದಿಂದ ಪ್ರಭಾವಿತರಾದರು. ಮುಂದೆ ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಸೇರಿ (1925-28) ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರಗಳನ್ನು ವ್ಯಾಸಂಗ ಮಾಡಿ ಬಿ.ಎ. ಪದವಿ ಗಳಿಸಿದರು. ಆ ಕಾಲೇಜಿನ ಅಧ್ಯಾಪಕ ವರ್ಗದಲ್ಲಿದ್ದ ಮೆಟ್ಕಾಫ್, ವೆಂಕಟರಾವ್ ತೆಲಂಗ್, ಬಿ.ಎಸ್.ಮಾಧವರಾವ್, ಸಿ.ಎನ್. ಶ್ರೀನಿವಾಸಯ್ಯಂಗಾರ್, ಬಿ.ವೆಂಕಟೇಶಾಚಾರ್ಯ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರೀ ಮೊದಲಾದವರ ಮಾರ್ಗದರ್ಶನದಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡರು. ಅನಂತರ ಮೈಸೂರಿನ ಮಹಾರಾಜ ಕಾಲೇಜಿಗೆ ಬಂದು 1928ರಲ್ಲಿ

ಕನ್ನಡ ಎಂ.ಎ. ತರಗತಿಗೆ ಸೇರಿದರು. ಅಲ್ಲಿ ಇಂಗ್ಲಿಷಿನ ಪ್ರಾಧ್ಯಾಪಕರೂ ಕನ್ನಡದ ಗೌರವ ಪ್ರಾಧ್ಯಾಪಕರೂ ಆಗಿದ್ದ ಬಿ.ಎಂ. ಶ್ರೀಕಂಠಯ್ಯನವರ ಪ್ರಭಾವಕ್ಕೆ ಒಳಗಾದರು.ಜೊತೆಗೆ ಟಿ.ಎಸ್. ಸುಬ್ಬರಾಯಶಾಸ್ತ್ರಿ, ಡಿ. ಶ್ರೀನಿವಾಸಾಚಾರ್ಯ, ಸಿ.ಆರ್. ನರಸಿಂಹಶಾಸ್ತ್ರಿ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ ಮೊದಲಾದ ಗುರುವರ್ಯರ ಮಾರ್ಗದರ್ಶನವೂ ಇವರಿಗೆ ಲಭಿಸಿತು. 1931ರಲ್ಲಿ ಎಂ.ಎ. ಪದವಿಯನ್ನು ಪಡೆದರು. ತೀ.ನಂ. ಶ್ರೀಕಂಠಯ್ಯ ಮತ್ತು ಜಿ.ಪಿ. ರಾಜರತ್ನಂ ಅವರು ಇವರ ಸಹಪಾಠಿಗಳಾಗಿದ್ದರು. ಎಂ.ಎ. ಪದವಿ ಪಡೆದ ಕೂಡಲೆ ಕೆಲಸ ಸಿಕ್ಕದಿದ್ದುದರಿಂದ ರಾಘವಾಚಾರ್ಯರು ಶಿಕ್ಷಣ ಕಾಲೇಜಿಗೆ ಸೇರಿ 1932ರಲ್ಲಿ ಬಿ.ಟಿ. ಪದವಿಯನ್ನು ಪಡೆದರು. ಆಗಲೂ ಕೆಲಸ ಸಿಕ್ಕದೆ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳಲು ಬೆಂಗಳೂರಿಗೆ ಹೋಗಿ ಪಂಡಿತ ಪಿ.ಎಂ. ಸೋಮಸುಂದರಂ ಅವರಿಂದ ತಮಿಳನ್ನೂ ದಂಡುಪ್ರದೇಶದಲ್ಲಿದ್ದ ಯುನೈಟೆಡ್ ಥಿಯಾಲಾಜಿಕಲ್ ಕಾಲೇಜಿನಲ್ಲಿ ಗ್ರೀಕ್ ಪಂಡಿತರಾಗಿದ್ದ ಎಚ್.ಕೆ. ಮೌಲ್ಟನ್ ಅವರಿಂದ ಗ್ರೀಕನ್ನೂ ಅಭ್ಯಾಸ ಮಾಡಿದ ಇವರು ಅನಂತರ ಆ ಭಾಷೆ ಮತ್ತು ಸಾಹಿತ್ಯಗಳಲ್ಲಿ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿಕೊಂಡರು.

ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜು ಮತ್ತು ಜಿಲ್ಲಾ ನಾರ್ಮಲ್ ಸ್ಕೂಲಿನಲ್ಲಿ ಸ್ವಲ್ಪಕಾಲ ಅಧ್ಯಾಪಕರಾಗಿ ಕೆಲಸಮಾಡಿದ ಇವರು ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಸಾಹಿತ್ಯ ಸಹಾಯಕರಾಗಿ ನೇಮಕಗೊಂಡರು. ನಿಘಂಟಿನ ಪ್ರಧಾನ ಸಂಪಾದಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರು ಆಚಾರ್ಯರ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದರು. ರಾಘವಾಚಾರ್ಯರು ವೆಂಕಟನಾರಣಪ್ಪನವರಿಗೆ ಬಲಗೈಯಂತಿದ್ದು ನಿಘಂಟಿನ ಕಾರ್ಯಭಾರವನ್ನು ಅತ್ಯಂತ ಆಸ್ಥೆಯಿಂದ ನಿರ್ವಹಿಸುತ್ತಿದ್ದರು. ಸುಮಾರು 9 ವರ್ಷಗಳ ಕಾಲ ನಿಘಂಟಿನ ಕೆಲಸ ಮಾಡಿದ ಅನಂತರ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡರು. ಈ ಮಧ್ಯೆ 1943ರಲ್ಲಿ ವೆಂಕಟನಾರಣಪ್ಪನವರು ತೀರಿಕೊಂಡಮೇಲೆ ಎಂ.ಆರ್. ಶ್ರೀನಿವಾಸಮೂರ್ತಿ ಅವರು ನಿಘಂಟಿನ ಪ್ರಧಾನ ಸಂಪಾದಕರಾದರು. ಆಗ ಮತ್ತೆ ನಿಘಂಟಿನ ಕಚೇರಿಗೆ ಹೋದ ರಾಘವಾಚಾರ್ಯರು ಆ ಕಾರ್ಯವನ್ನು ಮುಗಿಸಿ 1946ರಲ್ಲಿ ತಮ್ಮ ಅಧ್ಯಾಪಕ ಹುದ್ದೆಗೆ ಮರಳಿದರು. ಇವರು ಯುವರಾಜ, ಮಹಾರಾಜ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸಹಸ್ರಾರು ವಿಧ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಮಹಾರಾಜ ಕಾಲೇಜಿನಲ್ಲಿ ಭಾಷಾಶಾಸ್ತ್ರವನ್ನು ಬೋಧಿಸುತ್ತಿದ್ದ ಇವರು ಆ ವಿಭಾಗದ ಉಪಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿ 1959ರಲ್ಲಿ ನಿವೃತ್ತರಾದರು. ಅನಂತರ ದೆಹಲಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮೊಟ್ಟಮೊದಲ ಅಧ್ಯಾಪಕರಾಗಿ ನೇಮಕಗೊಂಡು ಸುಮಾರು ಹತ್ತು ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದರು (1969).

ಕನ್ನಡ ಹಾಗೂ ಇಂಗ್ಲಿಷ್ ನಿಘಂಟುಗಳಿಗೆ ಇವರು ಸಲ್ಲಿಸಿರುವ ಸೇವೆ ಸ್ಮರಣೀಯವಾದುದು. ಹಲವಾರು ಭಾಷೆಗಳಲ್ಲಿ ಪ್ರಭುತ್ವವನ್ನು ಪಡೆದಿದ್ದ ಆಚಾರ್ಯರಿಂದ ನಿಘಂಟಿನ ಕಾರ್ಯಕ್ಕೆ ಬಹಳಷ್ಟು ಪ್ರಯೋಜನವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿಗೆ ಮೊದಲಿನಿಂದ ಕಡೆಯತನಕ ನಿರಂತರವಾಗಿ ದುಡಿದು, ಅಸಂಖ್ಯಾತ ಸಾರವತ್ತಾದ ಶಬ್ದಗಳನ್ನು ಸೃಷ್ಟಿಸಿ ಶಬ್ದಬ್ರಹ್ಮರೆನಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿಗೆ ಅದರ ಪ್ರಾರಂಭಾವಸ್ಥೆಯಿಂದ ದುಡಿದವರಲ್ಲಿ ಇವರೂ ಒಬ್ಬರು. ಇವರು ಸಂಪಾದಕ ಸಮಿತಿಯ ಸದಸ್ಯರಾಗಿದ್ದರು (1943–69). ಆಮೇಲೆ ಸಂಪಾದಕ ಸಮಿತಿಯ ಉಪಾಧ್ಯಕ್ಷರಾಗಿ (1969–71), ತರುವಾಯ ಆ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಇಂಗ್ಲಿಷ್, ಸಂಸ್ಕೃತ, ತಮಿಳು ಭಾಷೆಗಳಲ್ಲಿ ಇವರಿಗಿದ್ದ ಆಳವಾದ ಪಾಂಡಿತ್ಯ ಕನ್ನಡ ನಿಘಂಟಿನ ಕಾರ್ಯಕ್ಕೆ ವಿಶೇಷವಾದ ಪ್ರಯೋಜನವಾಯಿತು.

ಆಚಾರ್ಯರಿಗೆ ಬಾಲ್ಯದಿಂದಲೂ ಸೇವಾಕಾರ್ಯದಲ್ಲಿ ಅಮಿತವಾದ ಉತ್ಸಾಹ ಮತ್ತು ಶ್ರದ್ಧೆ. 1920ರಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಖಾದಿ ಧಾರಣೆ ಮಾಡಿದರು. ಅಂದಿನಿಂದ  ಬಾಳಿನುದ್ದಕ್ಕೂ ಖಾದಿಯೇ ಇವರ ಖಾಸಗಿ ಮತ್ತು ಕಚೇರಿ ಉಡುಪಾಯಿತು. ಆ ಕಾಲಕ್ಕೇ ಇವರು ಕೋಹಿನೂರು ಸಂಘ ಎಂಬ ವಿದ್ಯಾರ್ಥಿ ಸಂಸ್ಥೆಯನ್ನು ಕಟ್ಟಿ ಎಂಟು ವರ್ಷಗಳು ಅದರ ಕಾರ್ಯಕಲಾಪಗಳನ್ನು ನಿರ್ವಹಿಸಿದರು. ಹಿಂದುಸ್ತಾನಿ ಸೇವಾದಳದ ಬೆಂಗಳೂರು ಶಾಖೆಯ ಸ್ವಯಂಸೇವಕ ತಂಡದ ಸದಸ್ಯರಾಗಿ 1924ರ ಡಿಸೆಂಬರ್ ತಿಂಗಳಲ್ಲಿ ಬೆಳಗಾಂವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸೇವೆ ಸಲ್ಲಿಸಿದರು. ಹಾಗೆಯೇ 1927ರ ಡಿಸಂಬರ್ ತಿಂಗಳಲ್ಲಿ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲೂ ಸ್ವಯಂಸೇವಕರಾಗಿ ಭಾಗವಹಿಸಿದರು. ಇದೇ ವರ್ಷದಲ್ಲಿ ಗಾಂಧೀಜಿ ಅವರು ನಂದಿಬೆಟ್ಟಕ್ಕೆ ಬಂದಿದ್ದಾಗ ಅವರ ಸಾನ್ನಿಧ್ಯ ಸೇವೆಯನ್ನೂ ಮಾಡಿದ್ದರು. ಅಲ್ಲದೆ ರಾಜಾಜಿ, ಮಹದೇವದೇಸಾಯಿ, ಮದನಮೋಹನ ಮಾಲವೀಯ, ಮೋತಿಲಾಲ್ ನೆಹರು, ಕಸ್ತೂರಬಾ ಇವರೇ ಮೊದಲಾದ ರಾಷ್ಟ್ರನಾಯಕರ ಪರಿಚಯ ಸಾಹಚರ್ಯಗಳನ್ನೂ ಪಡೆದರು. ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸ ಕಾರ್ಯಗಳಲ್ಲೂ ಆಚಾರ್ಯರು ಸಹಕರಿಸಿದ್ದಾರೆ. ಪರಿಷತ್ತಿನ ಕಾರ್ಯದರ್ಶಿಗಳಾಗಿ (1942–43 ; 1944–45;1946–47), ಕನ್ನಡ ನುಡಿಯ ಸಂಪಾದಕರಾಗಿ ಇವರು ಸೇವೆಸಲ್ಲಿಸಿದ್ದರಲ್ಲದೆ 'ಕನ್ನಡ ಬಾವುಟ', ಬಿ.ಎಂ. ಶ್ರೀ ಅವರಿಗೆ ಅರ್ಪಿಸಿದ ಅಭಿನಂದನ ಗ್ರಂಥ 'ಸಂಭಾವನೆ' ಈ ಕೃತಿಗಳ ಪ್ರಕಟನೆಯಲ್ಲೂ ನೆರವಾಗಿದ್ದರು.

ಇವರ ಸಾಹಿತ್ಯಸೇವೆ ಬಹುಮುಖವಾದುದು. ಗ್ರೀಕ್ ಮೂಲದಿಂದಲೇ ಕನ್ನಡಕ್ಕೆ ಹಲವಾರು ನಾಟಕಗಳನ್ನು ತಂದುಕೊಟ್ಟದ್ದು ಇವರ ವಿಶಿಷ್ಟವಾದ ಕೊಡುಗೆ. ಇವರು ಭಾಷಾಂತರಿಸಿದ ಸಾಫೋಕ್ಲೀಸ್‌ನ ಅಂತಿಗೊನೆ 1956ರಲ್ಲಿ ಪ್ರಕಟವಾಯಿತು. ಅನಂತರ ಇವರು ಭಾಷಾಂತರಿಸಿದ ಅಗಮೆಮ್ನನ್, ಒಯ್ದಿ ಪೌಸ್ ದೊರೆ, ಕಪ್ಪೆಗಳು ಎಂಬ ನಾಟಕಗಳು ಮೂರು ಗ್ರೀಕ್ ನಾಟಕಗಳು ಎಂಬ ಹೆಸರಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗಿವೆ. ಜನ್ನನ ಯಶೋಧರ ಚರಿತೆಯ ಒಂದು ಹೊಸ ಪರಿಷ್ಕರಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಹೊರತಂದರು (1941). ಇವರು ಅರಿಸ್ಟಾಟಲ್‌ನ ಕಾವ್ಯಮೀಮಾಂಸೆಯನ್ನೂ ಅನುವಾದಿಸಿದ್ದಾರೆ. ಸಾಹಿತ್ಯ, ಸಂಸ್ಕೃತಿ, ಭಾಷಾಶಾಸ್ತ್ರ ಇವೇ ಮೊದಲಾದ ವಿಷಯಗಳನ್ನು ಕುರಿತು ಹಲವಾರು ಸಂಶೋಧನಾತ್ಮಕ ಲೇಖನಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆದಿದ್ದಾರೆ. ಈ ಲೇಖನಗಳೆಲ್ಲ ನಂದಾ ನೆನಪು (1973) ಎಂಬ ಸಂಪುಟದಲ್ಲಿ ಸಮಾವೇಶಗೊಂಡಿವೆ.

(ಎನ್.ಬಿ.)

**ರಾಘವಾಪುರ:** ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಒಂದು ಗ್ರಾಮ. ಕಸಬೆಯ ಉತ್ತರಕ್ಕೆ 8 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,517. ಈ ಗ್ರಾಮದ ಪ್ರಾಚೀನ ಹೆಸರು ಗೊಮ್ಮಟಹಳ್ಳಿ. 1321ರಲ್ಲಿ ನಾರಾಯಣ ಡಣಾಯಕ ಇದನ್ನು ಅಗ್ರಹಾರವನ್ನಾಗಿ ಮಾಡಿ ತನ್ನ ತಂದೆ ರಾಘವ ಡಣಾಯಕನ ಹೆಸರನ್ನಿಟ್ಟ ಎಂಬ ವಿಷಯ ಶಾಸನವೊಂದರಿಂದ  ತಿಳಿದುಬರುತ್ತದೆ.

ಇಲ್ಲಿ ಲಕ್ಷ್ಮೀನಾರಾಯಣ, ಶಿವ ಮೊದಲಾದ ದೇವಾಲಯಗಳಿವೆ. ಗ್ರಾಮದ ಮಧ್ಯದಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯ ದೊಡ್ಡದು.

ದೇವಾಲಯದಲ್ಲಿರುವ ನಾರಾಯಣ ವಿಗ್ರಹವನ್ನು ನಾರಾಯಣ ಡಣಾಯಕ ಸ್ಥಾಪಿಸಿದನೆಂದು ಪ್ರತೀತಿ. ಇವನೇ ಕಟ್ಟಿಸಿದ ಇನ್ನೊಂದು ದೇವಾಲಯ ಶಿವದೇವಾಲಯ. ಇದರಲ್ಲಿರುವ ರಾಮೇಶ್ವರಲಿಂಗ ಸುಂದರವಾಗಿದೆ. ದೇವಾಲಯದೊಳಗಿರುವ ಕೆಲವು ಸಣ್ಣ ಶಿಲ್ಪಗಳಲ್ಲಿ ಸಮಭಂಗದಲ್ಲಿ ನಿಂತಿರುವ ಮಹಿಷಾಸುರಮರ್ದಿನಿಯ ಶಿಲ್ಪ ಚಿತ್ತಾಕರ್ಷಕವಾಗಿದೆ.

ಗ್ರಾಮದ ಉತ್ತರಕ್ಕೆ ಲಕ್ಷ್ಮಣಸಮುದ್ರವೆಂಬ ಕೆರೆಯಿದೆ. ಇದನ್ನೂ ನಾರಾಯಣ ಡಣಾಯಕ ನಿರ್ಮಿಸಿದನೆಂದು ತಿಳಿಯುತ್ತದೆ. ಕೆರೆಯ ಸಮೀಪದಲ್ಲಿಯೇ ಮೂರು ಚಿಕ್ಕಗುಡಿಗಳಿವೆ. (ಸಿ.ಕೆ.ವೈ.ಡಿ.)

**ರಾಘವೇಂದ್ರ, ಹೊ.ನ.:** 1935– . ಸುಗಮ ಸಂಗೀತ ಕ್ಷೇತ್ರದ ಹಿರಿಯ ಗಾಯಕರು. ಗರ್ತಿಕೆರೆ ರಾಘಣ್ಣ ಎಂದೇ ಪರಿಚಿತರಾದ ಇವರು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಗರ್ತಿಕೆರೆ ಗ್ರಾಮದಲ್ಲಿ 1935ರಲ್ಲಿ ಜನಿಸಿದರು. ಹೊಸನಗರದ ನಾಗಪ್ಪಯ್ಯ, ಮೂಕಾಂಬಿಕಾ ಇವರ ತಂದೆ ತಾಯಿಗಳು. ಅತ್ಯಂತ ಬಡತನದಲ್ಲಿ ಬೆಳೆದ ಇವರಿಗೆ ಚಿಕ್ಕಂದಿನಲ್ಲಿಯೇ ಸಂಗೀತದ ಪರಿಸರ ದೊರೆಯಿತು. ಮನೆಯಲ್ಲಿ ನಡೆಯುತ್ತಿದ್ದ ಭಜನೆ, ಹರಿಕಥೆ, ಗಾಯನ ಕಾರ್ಯಕ್ರಮಗಳು ಇವರಲ್ಲಿ ಹಾಡುವ ಆಸಕ್ತಿಯನ್ನು ಹುಟ್ಟುಹಾಕಿದವು. ಇವರು ಓದಿದ್ದು ನಾಲ್ಕನೆಯ ತರಗತಿಯವರೆಗೆ ಮಾತ್ರವಾದರೂ ಇವರಿಗೆ ವಚನ, ಹರಿದಾಸ ಸಾಹಿತ್ಯ, ಆಧುನಿಕ ಸಾಹಿತ್ಯದ ಬಗೆಗೆ ಗಂಭೀರ ಅರಿವು ಇತ್ತು. ಇವರು ಹಿರಿಯ ಸಮಾಜವಾದಿ ಶಾಂತವೇರಿ ಗೋಪಾಲಗೌಡರ ಆತ್ಮೀಯರಾಗಿದ್ದರು. ಅವರ ಪರವಾಗಿ ಚುನಾವಣಾ ಪ್ರಚಾರಕ್ಕೆ ಇಳಿದು, ವೇದಿಕೆಗಳಲ್ಲಿ ಲಾವಣಿ ಹಾಗೂ ಅನೇಕ ಜನಪದ ಗೀತೆಗಳನ್ನು ಕಟ್ಟಿ ಹಾಡಿ ಜನಮನವನ್ನು ಸೂರೆಗೊಂಡರು.



ಮಲೆನಾಡ ಕೋಗಿಲೆ ಎಂದು ಪ್ರಸಿದ್ಧರಾಗಿದ್ದ ಇವರು ಹಾರ್ಮೋನಿಯಂ, ತಬಲ, ಕೊಳಲು ವಾದನಗಳಲ್ಲಿ ಸಾಕಷ್ಟು ಪರಿಶ್ರಮವನ್ನು ಹೊಂದಿದ್ದರು. ಗಾಯಕರೂ ಸಂಗೀತ ಸಂಯೋಜಕರೂ ಗೀತರಚನಕಾರರೂ ಆಗಿದ್ದರು. ಕನ್ನಡ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದ ಇವರು ಮಧುರಕಂಠದಿಂದ ಹಾಡಬಲ್ಲವರಾಗಿದ್ದರು. ಇವರ ಸಂಗೀತ ನಿರ್ದೇಶನದಲ್ಲಿ ಸಿ. ಅಶ್ವತ್ಥ್, ಮೈಸೂರು ಅನಂತಸ್ವಾಮಿ, ಶಿವಮೊಗ್ಗ ಸುಬ್ಬಣ್ಣ, ಪುತ್ತೂರು ನರಸಿಂಹನಾಯಕ, ರತ್ನಮಾಲಾ ಪ್ರಕಾಶ ಮೊದಲಾದ ಹೆಸರಾಂತ ಕಲಾವಿದರು ಹಾಡಿರುವುದೊಂದು ಹೆಗ್ಗಳಿಕೆ. ಇವರ ಸಂಗೀತ ನಿರ್ದೇಶನದಲ್ಲಿ ಅಭಿನಂದನೆ, ದಾಸರಪದ, ಆಟಪಾತ, ಹಯಗ್ರೀವನಮನ, ವಂದನ, ಕೃಷ್ಣ ಬರುವನಂತೆ ಮೊದಲಾದ ಹಲವಾರು ಧ್ವನಿಸುರುಳಿಗಳು ಹೊರಬಂದಿವೆ. ಇವರಿಗೆ ಅನೇಕ ಪ್ರಶಸ್ತಿ–ಗೌರವಗಳು ಲಭಿಸಿವೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ(1972), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ(1991), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ(1993), ಸಂತ ಶಿಶುನಾಳ ಷರೀಫ್ ಪ್ರಶಸ್ತಿ(2002)– ಇವು ಇವರ ಪ್ರತಿಭೆಗೆ ದೊರೆತ ಮುಖ್ಯ ಪ್ರಶಸ್ತಿಗಳು. ಕರ್ನಾಟಕ ಕಲಾತಿಲಕ ಎಂಬ ಗೌರವಕ್ಕೂ ಇವರು ಪಾತ್ರರಾಗಿದ್ದಾರೆ. (ಎಚ್.ಆರ್.ಎಲ್.)

**ರಾಘವೇಂದ್ರತೀರ್ಥ:** 1595–1671. ಮಾಧ್ವ ಪರಂಪರೆಯ ಪ್ರಸಿದ್ಧ ಆಚಾರ್ಯರು. ಇವರು ಮೂಲತಃ ಕುಂಭಕೋಣದವರು. ಗೌತಮ ಗೋತ್ರಜರು. ವೇದ ವಿದ್ಯಾವಿಶಾರದರೂ ವೀಣಾವಾದನ ನಿಪುಣರೂ ಆಗಿದ್ದು ಕೃಷ್ಣದೇವರಾಯನ (1509–29) ಆಸ್ಥಾನ ವಿದ್ವಾಂಸರಾಗಿದ್ದ ಕುಂಭಕೋಣದ ವೀಣಾ ಕೃಷ್ಣಭಟ್ಟ ಇವರ ಪ್ರಪಿತಾಮಹ. ತಾತ ಕನಕಾಚಲ ಭಟ್ಟ. ತಂದೆ ವೀಣಾ ತಿಮ್ಮಣ್ಣ ಭಟ್ಟ, ತಾಯಿ ಗೋಪಮ್ಮ. ಆ ದಂಪತಿಗಳ ಮಕ್ಕಳು ವೆಂಕಮ್ಮ, ಗುರುರಾಜ ಮತ್ತು ವೆಂಕಟಭಟ್ಟ ಎಂಬ ಮೂವರಲ್ಲಿ ಇವರು ಕೊನೆಯವರು. ತಿರುಪತಿಯ ವೆಂಕಟೇಶನ ವರಬಲದಿಂದ ಹುಟ್ಟಿದವರೆಂದು ಪ್ರತೀತಿ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ಮಧುರೆಯಲ್ಲಿದ್ದ ಭಾವನ ಮನೆಯಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸ ಮಾಡಿ, ಪುನಃ ಕುಂಭಕೋಣಕ್ಕೆ ಬಂದು ಅಲ್ಲಿದ್ದ ಸುಧೀಂದ್ರತೀರ್ಥರ ಆಶ್ರಯದಲ್ಲಿ ಶಾಸ್ತ್ರಾಧ್ಯಯನ ಮಾಡಿ ಪಾಂಡಿತ್ಯ ಗಳಿಸಿಕೊಂಡರು. ಇವರ ಪತ್ನಿ ಸರಸ್ವತೀದೇವಿ, ಪುತ್ರ ಲಕ್ಷ್ಮೀನಾರಾಯಣ.

ವೆಂಕಟಭಟ್ಟ ಎಂಬುದು ಇವರ ಪೂರ್ವಾಶ್ರಮದ ಹೆಸರು. ಇವರ ವಿದ್ಯಾಸಂಪನ್ನತೆ, ಆಕರ್ಷಕ ನಡೆನುಡಿ, ಆಚಾರನಿಷ್ಠೆ, ಸಿದ್ಧಾಂತದೀಕ್ಷೆ, ಅಪೂರ್ವ ತೇಜಸ್ಸುಗಳನ್ನು ಕಂಡು ಗುರು ಸುಧೀಂದ್ರರು ಇವರಿಗೆ ಸನ್ಯಾಸದೀಕ್ಷೆಯಿತ್ತು ರಾಘವೇಂದ್ರತೀರ್ಥ ಎಂದು ನಾಮಕರಣಮಾಡಿ ತಮ್ಮ ಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು (1623).

ಇವರು ಪೀಠಾಧಿಪತಿಯಾಗಿದ್ದ ಕಾಲ(1623–71) ಮಾಧವ ಪರಂಪರೆಯ ಆ ಮಠದ ಸುವರ್ಣಯುಗ. ಇವರ ತರುವಾಯ ಆ ಮಠಕ್ಕೆ ರಾಘವೇಂದ್ರಸ್ವಾಮಿಗಳ ಮಠ (ರಾಯರ ಮಠ) ಎಂದೇ ಹೆಸರಾಗಿ ಇಂದಿಗೂ ಆ ಹೆಸರೇ ಪ್ರಸಿದ್ಧವಾಗಿದೆ. ಇವರು 1671ರ ಶ್ರಾವಣ ಬಹುಳ ಬಿದಿಗೆ ಗುರುವಾರ ಸಶರೀರರಾಗಿ ತುಂಗಭದ್ರಾ ತೀರದ ಮಂತ್ರಾಲಯದಲ್ಲಿ ಬೃಂದಾವನ ಪ್ರವೇಶ ಮಾಡಿದರು.

ರಾಘವೇಂದ್ರತೀರ್ಥರು ಪ್ರಕಾಂಡ ಪಂಡಿತರು. ದ್ವೈತ ಸಿದ್ಧಾಂತದ ಬೆಳೆವಣಿಗೆಯ ಇತಿಹಾಸದಲ್ಲಿ ಇವರ ಹೆಸರು ಚಿರಸ್ಥಾಯಿಯಾದುದು. ಆ ಸಿದ್ಧಾಂತವನ್ನು ಖಚಿತವಾಗಿ ನಿರೂಪಿಸುವವೆಂದೂ ಸಾರವನ್ನು ಎತ್ತಿ ಹಿಡಿಯುವವೆಂದೂ ಪ್ರಸಿದ್ಧವಾಗಿರುವ ಪರಿಮಳ, ಭಗವದ್ಗೀತಾವಿವೃತಿ, ಪ್ರಾತಃಸಂಕಲ್ಪಗದ್ಯ, ಉಪನಿಷತ್‌ಖಂಡಾರ್ಥ, ರಾಮಚರಿತ್ರಮಂಜರಿ, ಕೃಷ್ಣಚಾರಿತ್ರಮಂಜರಿ ಮುಂತಾದ 48 ಉದ್ಗ್ರಂಥಗಳನ್ನು ಇವರು ಸಂಸ್ಕೃತದಲ್ಲಿ ರಚಿಸಿದ್ದಾರೆ.

ಇವರು ಸಂಗೀತತಜ್ಞರೂ ಆಗಿದ್ದು ಅನೇಕ ಕೀರ್ತನೆಗಳನ್ನು ರಚಿಸಿ ದೇವಾರ್ಪಣೆ ಮಾಡುತ್ತಿದ್ದರಂತೆ. ಕನ್ನಡದಲ್ಲಿ ಇವರದು ಎಂದು ಹೇಳಲಾಗಿರುವ ಒಂದೇ ಒಂದು ದೇವರನಾಮ 'ಇಂದು ಎನಗೆ ಗೋವಿಂದಾ' ಎಂಬುದು ಮಾತ್ರ ಪ್ರಸಿದ್ಧವಾಗಿ ಉಳಿದಿದೆ. ಆದರೆ ಇವರ ದಿವ್ಯ ಪ್ರೋತ್ಸಾಹದಿಂದ ಕನ್ನಡದಲ್ಲಿ ಹರಿದಾಸಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಬಹುಮಂದಿ ಸುಪ್ರಸಿದ್ಧ ಹರಿದಾಸರು ಇವರ ವ್ಯಕ್ತಿತ್ವಮಹಿಮೆಗಳನ್ನು ಕುರಿತು ಅನೇಕ ಕೃತಿಗಳನ್ನು ರಚಿಸಿ ಕೊಂಡಾಡಿದ್ದಾರೆ.

ಭರತಖಂಡದ ಬಹುಜನರ ಆಧ್ಯಾತ್ಮಿಕ ಜೀವನಸಾಧನೆಯಲ್ಲಿ ರಾಘವೇಂದ್ರರ ಪಾತ್ರ ಹಿರಿದಾಗಿದೆ. ರಾಘವೇಂದ್ರರು ಭಕ್ತರ ಸಕಲಾಭೀಷ್ಟ ಪ್ರದಾಯಕರು, ಪವಾಡಪುರುಷರು ಎಂದು ಪ್ರಸಿದ್ಧರಾಗಿದ್ದಾರೆ. ಇವರ ಮೂಲಬೃಂದಾವನವಿರುವ ಮಂತ್ರಾಲಯ ಮಹಿಮಾಕ್ಷೇತ್ರವೆಂದು ಹೆಸರಾಗಿದ್ದು ಸಹಸ್ರಾರು ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಇವರ ಹೆಸರಿನ ಮೃತ್ತಿಕಾ ಬೃಂದಾವನಗಳನ್ನು ಮುಂಬಯಿ, ಮದರಾಸು, ದೆಹಲಿ,

ಹೈದರಾಬಾದು, ಬೆಂಗಳೂರು, ಮೈಸೂರು ಮುಂತಾದೆಡೆಗಳಲ್ಲಿ ಸ್ಥಾಪಿಸಿದ್ದಾರೆ. ಇಂಥ ಸುಮಾರು 152 ಬೃಂದಾವನಗಳು ಭಾರತದಾದ್ಯಂತ ಇವೆ. (ಕೆ.ಎಂ.ಕೆ.)

**ರಾಘವೇಂದ್ರರಾವ್, ಎಂ.:** 1914–99. ಪ್ರಸಿದ್ಧ ಗಮಕಿ, ಗಮಕ ಕಲೆಯ ಪ್ರಚಾರಕರು. 1914 ಆಗಸ್ಟ್ 7ರಂದು ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಜನಿಸಿದರು. ತಂದೆ ಮೈಸೂರು ನೀಲಕಂಠಕೇಶವರಾಯ, ತಾಯಿ ವೆಂಕಟಲಕ್ಷ್ಮಮ್ಮ. ರಾಘವೇಂದ್ರರಾಯರಿಗೆ ಸಾಹಿತ್ಯಪಾಠ ಆರಂಭವಾದದ್ದೇ ಇವರ ತಂದೆಯವರಿಂದ. ತಮ್ಮ ಹತ್ತನೆಯ ವಯಸ್ಸಿಗೆ ಗಮಕವಾಚನ ಕಲಿಯಲು ಪ್ರಾರಂಭಿಸಿದರು. ಜವಳಿ ಅಂಗಡಿಯ ತಮ್ಮಯ್ಯ ಎಂಬುವರ ಬಳಿ ಗುರುಕುಲ ಪದ್ಧತಿಯಲ್ಲಿ ಗಮಕ ಶಿಕ್ಷಣ ಪಡೆದರು.

ಇವರು ಗಮಕಕಲೆಯನ್ನು ಸ್ವತಃ ಕಲಿಯುವುದರೊಂದಿಗೆ ಅದರ ಪ್ರಚಾರದ ವಿಷಯದಲ್ಲೂ ಮಹತ್ತರ ಕಾಳಜಿ ಹೊಂದಿದ್ದರು. ಇದಕ್ಕಾಗಿ ಬೇಕಾದ ಎಲ್ಲ ವಿಧಿವಿಧಾನಗಳನ್ನೂ ಅಳವಡಿಸಿ ಗಮಕ ಕಾರ್ಯಕ್ರಮಗಳನ್ನು ಹಲವಾರು ಸಭೆಸಮಾರಂಭಗಳಲ್ಲಿ ನೀಡಿದರು. ಈ ಕಲೆಯತ್ತ ಜನರನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸಲು ಸುಶ್ರಾವ್ಯವಾಗಿ ಗಮಕ ವಾಚನ ಮಾಡುವುದರೊಂದಿಗೆ ಆಕರ್ಷಕವಾಗಿ ವ್ಯಾಖ್ಯಾನವನ್ನೂ ಮಾಡುತ್ತಿದ್ದರು. ಹಗಲಿರುಳು ಲಕ್ಷಿಸದೆ ಊರೂರುಗಳನ್ನು ತಿರುಗಿ ಸಂಗೀತ, ಸಾಹಿತ್ಯಗಳಲ್ಲಿ ಆಸಕ್ತರಾಗಿದ್ದವರನ್ನು ಒಂದು ಕಡೆ ಸೇರಿಸಿ ಅವರಿಗೆ ಈ ಕಲೆಯ ಪರಿಚಯ ಮಾಡಿಸಿದರು. ಶ್ರದ್ಧೆ ತೋರಿದವರಿಗೆ ಪಾಠ ಹೇಳಿಕೊಡುವ ಮೂಲಕ ಈ ಕಲೆಯ ಬೆಳೆವಣಿಗೆಗೆ ಗಟ್ಟಿ ತಳಪಾಯ ಹಾಕಿದರು. ಜೊತೆಗೆ ಅನೇಕ ಸಂಘಸಂಸ್ಥೆಗಳನ್ನು ಸ್ಥಾಪಿಸಿ ಆ ಮೂಲಕವೂ ಗಮಕ ಕಲೆಯ ಪ್ರಚಾರಕ್ಕಾಗಿ ಶ್ರಮಿಸಿದರು. ಇವರ ಇಂಥ ಪ್ರಯತ್ನಗಳಿಂದ ಗಮಕಕಲೆ ಕರ್ನಾಟಕದ ಮೂಲೆಮೂಲೆಗಳಲ್ಲೂ ವ್ಯಾಪಿಸುವಂತಾಯಿತು.



ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಇವರೇ ಬೋಧಕರಾಗಿದ್ದು ಒಂದು ಶಿಷ್ಟ ಪರಂಪರೆಯ ಬೆಳೆವಣಿಗೆಗೆ ಕಾರಣರಾದರು. ಪರಿಷತ್ತು ನಡೆಸುತ್ತಿದ್ದ ಗಮಕ ಪರೀಕ್ಷೆಗಳಿಗೆ ಪಠ್ಯಕ್ರಮ ಸಿದ್ಧಗೊಳಿಸುವುದು, ಪಠ್ಯಪುಸ್ತಕಗಳನ್ನು ತಯಾರಿಸುವುದು ಹಾಗೂ ಪರೀಕ್ಷಕರನ್ನು ನೇಮಿಸುವುದು–ಹೀಗೆ ಎಲ್ಲ ಜವಾಬ್ದಾರಿಯುತ ಕಾರ್ಯಗಳನ್ನು ಹೊತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ವಿಭಾಗದ ಸಂಚಾಲಕರಾಗಿ ಗಣನೀಯ ಸೇವೆ ಸಲ್ಲಿಸಿದರು. ಶಿಕ್ಷಣ ಇಲಾಖೆಯಲ್ಲಿಯೂ ಸೇವೆಸಲ್ಲಿಸುತ್ತಿದ್ದ ಇವರು ತಮ್ಮ ನಿವೃತ್ತಿಯ ಅನಂತರ ಮೈಸೂರಿನಲ್ಲಿ ಕಾವ್ಯರಂಜನಿಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಸೇರಿದ್ದ ಗಮಕ ವಿಭಾಗವನ್ನು ಪರಿಷತ್ತಿನಿಂದ ಬೇರ್ಪಡಿಸಿ ಕರ್ನಾಟಕ ಗಮಕ ಕಲಾ ಪರಿಷತ್ತು ಎಂಬ ಪ್ರತ್ಯೇಕ ಸಂಸ್ಥೆಯ ಸ್ಥಾಪನೆಗೆ (1982) ಕಾರಣರಾದರು. ಅಷ್ಟೇ ಅಲ್ಲದೆ ಗಮಕ ಪ್ರಚಾರಗೋಷ್ಠಿ, ಕಾವ್ಯ ಗಾಯನ ಕಲಾಮಂದಿರ ಈ ಸಂಸ್ಥೆಗಳಿಗೂ ಇವರೇ ರೂವಾರಿಯಾಗಿದ್ದರು.

ಸ್ವತಃ ಕವಿಗಳೂ ಆಗಿದ್ದ ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಗಮಕಿ, ಕಾವ್ಯಗಾಯನ ಕಲಾ ಸಂಗ್ರಹ, ಗಮಕ ಪ್ರಚಾರ ಬೋಧಿನಿ, ಗಮಕ ಪ್ರವೇಶದಾಯಿನಿ ಮೊದಲಾದವು ಗಮಕ ಕಲೆಗೆ ಸಂಬಂಧಿಸಿದ ಇವರ ಗಣನೀಯ ಕೃತಿಗಳು. ಸತ್ಯದೇವಚರಿತೆ, ವಾಸುದೇವ ವಿಜಯ, ವೆಂಕಟೇಶ ವಿಜಯ, ಶ್ರೀ ರಾಘವೇಂದ್ರ ಗುರುಕೀರ್ತನಮಾಲಿಕಾ, ವ್ಯಾಸರಾಯ ಮಹಾತ್ಮೆ, ಆನಂದಗೀತೆ ಮೊದಲಾದವು ಇವರ ಗೇಯಕೃತಿಗಳು. ರಾಘಣ್ಣನ ಕಲಿಪದಗಳು ಎಂಬ ಹೆಸರಿನಿಂದ ಇವರು ಪದಗಳನ್ನೂ ರಚಿಸಿದ್ದಾರೆ.

ಗಮಕ ಕ್ಷೇತ್ರದಲ್ಲಿ ಇವರು ಸಲ್ಲಿಸಿರುವ ಅಪಾರ ಸೇವೆಗಾಗಿ ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ರಾಜ್ಯಸರ್ಕಾರದ ಪ್ರತಿಷ್ಠಿತ ಕನಕ–ಪುರಂದರ ಪ್ರಶಸ್ತಿ– ಇವು ಮುಖ್ಯವಾದವು. ಇವರು ಗಮಕ ಕಲಾ ಪರಿಷತ್ತಿನ ಮೂರನೆಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿ ಗಮಕ ರತ್ನಾಕರ ಎಂಬ ಬಿರುದನ್ನೂ ಗಳಿಸಿದ್ದರು. ಇವರು 1999 ನವೆಂಬರ್ 3ರಂದು ನಿಧನರಾದರು. (ಎಚ್.ಆರ್.ಎಲ್.)

**ರಾಘವೇಂದ್ರ ಪಾಟೀಲ**: 1951– . ಆಧುನಿಕ ಕನ್ನಡದ ಹೊಸತಲೆಮಾರಿನ ಮಹತ್ವದ ಸೃಜನಶೀಲ ಲೇಖಕರು ಹಾಗೂ ವಿಮರ್ಶಕರು. ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯಲ್ಲಿ 1951 ಏಪ್ರಿಲ್ 16 ರಂದು ಜನಿಸಿದರು. ತಂದೆ ಬಲವಂತರಾವ್ ಪಾಟೀಲ, ತಾಯಿ ಇಂದಿರಾಬಾಯಿ. ಪ್ರಾಣಿವಿಜ್ಞಾನದಲ್ಲಿ ಎಂ.ಎಸ್ಸಿ. ಪದವಿ ಪಡೆದ ರಾಘವೇಂದ್ರರು ವೃತ್ತಿಯನ್ನಾರಂಭಿಸಿದ್ದು ಪದವಿಪೂರ್ವ ಕಾಲೇಜಿನ ಅಧ್ಯಾಪಕರಾಗಿ. ಅನಂತರ ಮಲ್ಲಾಡಿಹಳ್ಳಿಯಲ್ಲಿ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನೇಮಕಗೊಂಡು ತಮ್ಮ ಆದರ್ಶ ಸೇವೆಗಳಿಂದ ಅತ್ಯುತ್ತಮ ಸಂಸ್ಥೆ ಎಂಬ ಮನ್ನಣೆ ಕಾಲೇಜಿಗೆ ದೊರಕುವಂತೆ ಮಾಡಿದ ಕೀರ್ತಿ ಇವರದು. ವಿಜ್ಞಾನ ವಿಷಯಗಳಲ್ಲಿ ಅಧ್ಯಯನ ನಡೆಸಿದ್ದರೂ ಇವರ ಆಪ್ತ ಕಾರ್ಯಕ್ಷೇತ್ರ ಸಾಹಿತ್ಯವಾಗಿದೆ. ಸಣ್ಣಕಥೆ, ಕಾದಂಬರಿ, ವಿಚಾರ–ವಿಮರ್ಶೆಗಳಲ್ಲಿ ಸೃಜನಶೀಲರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಒಡಪುಗಳು, ಪ್ರತಿಮೆಗಳು, ದೇಸಗತಿ, ಮಾಯಿಯ ಮುಖಗಳು– ಇವು ಇವರ ಕಥಾಸಂಕಲನಗಳು. ಬಾಳವ್ವನ ಕನಸುಗಳು, ತೇರು– ಇವು ಇವರ ಮುಖ್ಯ ಕಾದಂಬರಿಗಳು. ವಾಗ್ವಾದ ಎಂಬುದು ವಿಮರ್ಶನ ಕೃತಿ. ಅಜ್ಞಾತ ಮುಂಬೈ ಎಂಬುದು ಇವರ ಪ್ರವಾಸ ಕಥನ. ಬೆಟಗೇರಿ ಕೃಷ್ಣಶರ್ಮರ ಜೀವನ, ಸಾಹಿತ್ಯಕ ಸಾಧನೆಗಳನ್ನು ಕುರಿತು ಬರೆದ ಕೃತಿ ಆನಂದಕಂದ. ಇವುಗಳಲ್ಲದೆ ಸಂಕಿರಣ, ಹೊಸಕಾವ್ಯದ ಮುನ್ನೆಲೆ (ಭಾಗ 1 ಮತ್ತು 2), ಕಾಡಿನ ಹುಡುಗ ಕೃಷ್ಣ, ಮಾಸ್ತಿಸಾಹಿತ್ಯ ಸಮಗ್ರ ದರ್ಶನ ಮೊದಲಾದ ಹಲವು ಉತ್ತಮ ಕೃತಿಗಳನ್ನು ಇತರ ವಿದ್ವಾಂಸರೊಡ ಗೂಡಿ ಸಂಪಾದಿಸಿದ್ದಾರೆ. ಆನಂದಕಂದ ಎಂಬ ಮಾಲಿಕೆಯಲ್ಲಿ ನಾಡಿನ ಹಲವಾರು ಶ್ರೇಷ್ಠ ಲೇಖಕರ ಕೃತಿಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯ ಚಿಂತನೆಗೆ ಅಗತ್ಯ ವಾತಾವರಣ ನಿರ್ಮಿಸುವ ಪ್ರಯತ್ನದ ಹಿನ್ನೆಲೆಯಲ್ಲಿ ಸಾಹಿತ್ಯ ಸಂವಾದ ಎಂಬ ಗಮನಾರ್ಹ ಸಾಹಿತ್ಯ ಪತ್ರಿಕೆಯನ್ನು ತಮ್ಮ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿದ್ದಾರೆ. ಸಾಹಿತ್ಯ, ಸಂಸ್ಕೃತಿ ವಿಚಾರಗಳೇ ಇದರ ಕೇಂದ್ರವಸ್ತು. ತಿರುಕರಂಗ ಎಂಬ ಹೆಸರಿನಲ್ಲಿ ನಾಟಕೋತ್ಸವವನ್ನು ಯಶಸ್ವಿಯಾಗಿ ಸಂಘಟಿಸಿ ಸಾಂಸ್ಕೃತಿಕ ಕ್ಷೇತ್ರದಲ್ಲೂ ಕೀರ್ತಿಭಾಜನರಾಗಿದ್ದಾರೆ.

ನವ್ಯಮಾದರಿಯಲ್ಲಿಯೇ ಕಥೆಗಳನ್ನು ಬರೆಯಲಾರಂಭಿಸಿದರೂ ಅದನ್ನು ಮೀರುವ ಪ್ರಯತ್ನ ಮಾಡಿದ ಇವರು ತೇರು ಕಾದಂಬರಿಯಲ್ಲಿ ಆಧುನಿಕಪುರಾಣವನ್ನು ಸೃಷ್ಟಿಸುವ ಮೂಲಕ ನವ್ಯೋತ್ತರ ಕಥಾಸಾಹಿತ್ಯಕ್ಕೆ ಹೊಸ ಸಾಧ್ಯತೆಯೊಂದನ್ನು ತೋರಿಸಿಕೊಟ್ಟಿದ್ದಾರೆ ಎಂಬ ವಿಮರ್ಶಕರ ಅಭಿಪ್ರಾಯ ಗಮನಾರ್ಹವಾಗಿದೆ. ತಮ್ಮ ವಿಶಿಷ್ಟ ಪ್ರತಿಭೆಯಿಂದ ಪರಂಪರೆಯ ಒಳಹೊಕ್ಕು ಅಲ್ಲೇ ಸ್ಥಗಿತಗೊಳ್ಳದೆ ಹೊರಬಂದು

ಪರಂಪರೆಯ ನೆಪದಲ್ಲಿ ಹೊಸದನ್ನು ರೂಪಿಸುವ ವೈಶಿಷ್ಟ್ಯ ಇವರದು. ಇದನ್ನು ತೇರು ಕಾದಂಬರಿಯಲ್ಲಿ ಗುರುತಿಸಬಹುದು. ಅಲ್ಲದೆ ಸಾಮಾಜಿಕ ಬದುಕಿನ ಹತ್ತು ಹಲವು ಮುಖಗಳು ಇವರ ಕಥೆ ಕಾದಂಬರಿಗಳಲ್ಲಿ ಅನಾವರಣಗೊಳ್ಳುತ್ತವೆ. ಇದೂ ಇವರ ಕೃತಿಗಳ ಯಶಸ್ಸಿಗೆ ಒಂದು ಪ್ರಮುಖ ಕಾರಣವಾಗಿದೆ.



ಸಮಾಜದ ಚಲನೆಗೆ ಮನುಷ್ಯನ ಸೃಜನಶೀಲತೆಯೇ ಕಾರಣ ಎಂದು ನಂಬುವ ಪಾಟೀಲರು ತಮ್ಮ ಪರಿಸರವನ್ನು ಸದಾ ಸೃಜನಶೀಲವಾಗಿಡಲು ನಿರಂತರ ಶ್ರಮಿಸುತ್ತಿರುವ ಕ್ರಿಯಾಶೀಲ ವ್ಯಕ್ತಿ. ನಾಡಿನುದ್ದಗಲಕ್ಕೂ ಪರಸ್ಪರ ಸೌಹಾರ್ದತೆಯನ್ನು ಮೂಡಿಸುವ ದಿಶೆಯಲ್ಲಿ ಗೆಳೆಯರ ಬಳಗವನ್ನು ಕಟ್ಟಿಕೊಂಡು ಇತ್ಯಾತ್ಮಕ ಪ್ರತಿಭೆಯ ಮಹತ್ವದ ಲೇಖಕರೆನಿಸಿಕೊಂಡ ಇವರಿಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಅವುಗಳಲ್ಲಿ ಮುಖ್ಯವಾದವು: ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಎರಡುಬಾರಿ), ಕಾರಂತಪ್ರಶಸ್ತಿ, ಚದುರಂಗ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಗೊರೂರು ಪ್ರಶಸ್ತಿ ಮತ್ತು ಬೆಳಗಾಂವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನದ ಸಿರಿಗನ್ನಡ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(2005). (ಎ.ಆರ್.ಎಂ.ಕೆ.)

**ರಾಚಪ್ಪ:** ರಾಣಿಪಾತ್ರದ ರಾಚಪ್ಪ ಎಂದೇ ಪ್ರಸಿದ್ಧರಾಗಿದ್ದ ರಂಗಭೂಮಿಯ ನಟ. ಬೆಂಗಳೂರಿನ ಸಿಟಿ ಅಪೆರಾ ಟ್ರೂಪ್ ಎಂಬ ನಾಟಕ ಸಂಸ್ಥೆಯ ನಟರಾಗಿದ್ದರು. ಈ ಕಂಪನಿ ಮೈಸೂರಿನಲ್ಲಿ ಪ್ರದರ್ಶಿಸಿದ ನಾಟಕಗಳು ಜನಪ್ರಿಯವಾದುವು; ಆಗಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಅಪೇಕ್ಷೆಯಂತೆ ಅರಮನೆಯ ನಾಟಕ ಕಂಪನಿಯಲ್ಲಿಯೂ ಹಲವು ನಾಟಕಗಳನ್ನಾಡಿದರು. ಈ ನಾಟಕಗಳಲ್ಲಿ ಪಾತ್ರವಹಿಸಿದ್ದ ರಾಚಪ್ಪನವರ ಅಭಿನಯವನ್ನು ಮೆಚ್ಚಿಕೊಂಡ ಕೃಷ್ಣರಾಜ ಒಡೆಯರು, ಇವರನ್ನು ತಮ್ಮ ಅರಮನೆ ನಾಟಕ ಕಂಪನಿಗೆ ಸೇರಿಸಿಕೊಂಡು, ಬಿಡಾರಂ ಕೃಷ್ಣಪ್ಪನವರಿಂದ ಸಂಗೀತ ಪಾಠವನ್ನು ಮಾಡಿಸಿದರು. ಇದರಿಂದ ಉತ್ತೇಜನಗೊಂಡ ರಾಚಪ್ಪನವರು, ಹಲವು ಬಗೆಯ ರಾಣಿಪಾತ್ರಗಳನ್ನು ಅಭಿನಯಿಸಿ ಜನಪ್ರಿಯರಾದರಲ್ಲದೇ ತಮ್ಮ ಪಾತ್ರಗಳಿಗೆ ಸಂಬಂಧಿಸಿದ ಅನೇಕ ಹಾಡುಗಳನ್ನು ತಾವೇ ಹಾಡಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಅರಮನೆ ನಾಟಕ ಕಂಪನಿಯಲ್ಲಿದ್ದ ಸರ್ಟನ್ ರಾಮರಾವ್, ದೊಡ್ಡಮಹಾಲಿಂಗಪ್ಪ, ಲಕ್ಷ್ಮೀಪತಿಶಾಸ್ತ್ರಿ ಮೊದಲಾದ ಹೆಸರಾಂತ ಕಲಾವಿದರಿಂದ ಪ್ರಭಾವಗೊಂಡ ರಾಚಪ್ಪನವರು ಶಾಕುಂತಲ, ವಿರಾಟಪರ್ವ, ರಾಜಸೂಯಯಾಗ– ಮುಂತಾದ ಪೌರಾಣಿಕ ನಾಟಕಗಳಲ್ಲಿ ರಾಜನ ಪಾತ್ರವಹಿಸಿ, ತಮ್ಮ ಕಲಾ ನೈಪುಣ್ಯವನ್ನು ಪ್ರದರ್ಶಿಸಿದರು. ಇವರ ಅಭಿನಯಕಲೆಗೆ ಮಾರುಹೋಗಿದ್ದ ಕೃಷ್ಣರಾಜ ಒಡೆಯರು ಇವರಿಗೆ ಖಿಲ್ಲತ್ತುಗಳನ್ನೂ ಸುವರ್ಣಪದಕಗಳನ್ನೂ ನೀಡಿ ಗೌರವಿಸಿದರು. ಅರಮನೆ ಕಂಪನಿಯಲ್ಲದೆ, ಶಾಕುಂತಲ ನಾಟಕ ಮಂಡಲಿ, ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ ಈ ಮುಂತಾದ ನಾಟಕ ಕಂಪನಿಗಳಲ್ಲೂ ಇವರು ನಟರಾಗಿದ್ದರು. ಈ ಕಂಪನಿಗಳು ಮದರಾಸು ಮತ್ತು ಆಂಧ್ರಪ್ರದೇಶಗಳಲ್ಲಿ ಪ್ರದರ್ಶಿಸಿದ ನಾಟಕಗಳಲ್ಲೂ ಅಭಿನಯಿಸಿ ಹೊರ ನಾಡಿನಲ್ಲೂ ಹೆಸರುಗೊಂಡರು. ಒಳ್ಳೆಯ ಕಂಠಶ್ರೀಯನ್ನು ಹೊಂದಿದ್ದ ರಾಚಪ್ಪನವರು ಹಾಡಿರುವ ಎಲ್ಲಿರುವೆ ತಂದೆ ಬಾರೋ, ಜಯ ಜಯ ಗೋಕುಲ ಬಾಲ, ನಾಗವೇಣಿ ನಗರಿಗೆ ನಾಂ ಪೋಗಿ ಬರುವೆನೆ ಈ ಮುಂತಾದ ಹಾಡುಗಳು ರಿಕಾರ್ಡುಗಳಾಗಿಯೂ ಜನಪ್ರಿಯವಾಗಿವೆ. (ಎಂ.ಎಚ್.ಆರ್.)

**ರಾಚಮಲ್ಲ I:** ತಲಕಾಡು ಗಂಗ ವಂಶದ ದೊರೆ (ಸು. 816–43). ವಿಜಯಾದಿತ್ಯನ ಮಗ. ಇವನು ರಾಜನಾದ ತರುಣದಲ್ಲಿಯೇ ಬಾಣರಾಜ ವಿದ್ಯಾಧರನು ಗಂಗವಾಡಿ 36000 ಪ್ರಾಂತ್ಯದ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದ. ರಾಷ್ಟ್ರಕೂಟ ಅಮೋಘವರ್ಷನೂ ರಾಚಮಲ್ಲನನ್ನು ಸೋಲಿಸಲು ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದ. ಇವೆಲ್ಲವನ್ನೂ ಗಮನಿಸುತ್ತಿದ್ದ ರಾಚಮಲ್ಲ ತನ್ನ ಸಾಮಂತರೊಡನೆ ಸಖ್ಯವನ್ನು ಬೆಳೆಸಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡ. ನೊಳಂಬ ಸಿಂಹಪೋತನ ಸಖ್ಯವನ್ನು ಸಂಪಾದಿಸುವ ದೃಷ್ಟಿಯಿಂದ ತನ್ನ ಮಗಳಾದ ಜಾಯಬ್ಬೆಯನ್ನು ನೊಳಂಬಾಧಿರಾಜ ಪೊಳಲ್ಚೋರನಿಗೆ ಲಗ್ನ ಮಾಡಿಕೊಟ್ಟುದು ಮಾತ್ರವಲ್ಲದೆ, ತಾನೇ ಸಿಂಹಪೋತನ ಮೊಮ್ಮಗಳನ್ನು ಮದುವೆಯಾದ. ರಾಚಮಲ್ಲ ಸ್ವತಂತ್ರನಾಗಲು ಹವಣಿಸುತ್ತಿರುವುದನ್ನು ನೋಡಿದ ರಾಷ್ಟ್ರಕೂಟ ಅಮೋಘವರ್ಷ ತನ್ನ ಪ್ರಸಿದ್ಧ ಸೇನಾನಿ ಬಂಕೆಯನ ನೇತೃತ್ವದಲ್ಲಿ ಒಂದು ಸೈನ್ಯವನ್ನು ಗಂಗರಾಜನ ಮೇಲೆ ಕಳುಹಿಸಿದ. ಬಂಕೆಯ ಕೈದಾಳದುರ್ಗವನ್ನು ವಶಪಡಿಸಿಕೊಂಡು ಗಂಗಸೈನ್ಯವನ್ನು ಕಾವೇರಿಯವರೆಗೂ ಅಟ್ಟಿಸಿಕೊಂಡು ಹೋದ. ಅಷ್ಟರಲ್ಲಿಯೇ ರಾಷ್ಟ್ರಕೂಟ ರಾಜ್ಯದಲ್ಲಿ ಪರಿಸ್ಥಿತಿ ಹದಗೆಟ್ಟದ್ದರಿಂದ ಅವನು ಹಿಂದಿರುಗಬೇಕಾಯಿತು. ಇದರಿಂದ ಉತ್ತೇಜಿತನಾದ ರಾಚಮಲ್ಲ ಗಂಗವಾಡಿಯ ಬಹುಭಾಗವನ್ನು ಆಕ್ರಮಿಸಿಕೊಂಡ. ಆದರೂ ಗಂಗವಾಡಿ ಪೂರ್ಣವಾಗಿ ಇವನ ಕೈಸೇರಲಿಲ್ಲ. ತಾತ್ಕಾಲಿಕವಾಗಿಯಾದರೂ ರಾಷ್ಟ್ರಕೂಟರಿಂದ ಗಂಗರಾಜ್ಯವನ್ನು ಬಿಡಿಸಿಕೊಂಡ ಕೀರ್ತಿ ರಾಚಮಲ್ಲನಿಗೆ ಸಲ್ಲುತ್ತದೆ. (ಎ.ವಿ.ಎನ್.)

**ರಾಚಮಲ್ಲ II:** ತಲಕಾಡು ಗಂಗವಂಶದ ದೊರೆ (ಸು. 870–919). ನೀತಿಮಾರ್ಗ ಎಱೆಗಂಗನ ಜ್ಯೇಷ್ಠಪುತ್ರ. ತಂದೆಯ ಮರಣಾನಂತರ ಪಟ್ಟಕ್ಕೆ ಬಂದ. ಸತ್ಯವಾಕ್ಯ ಎಂಬುದು ಇವನ ಬಿರುದು. ರಾಚಮಲ್ಲನಿಗೆ ಇವನ ತಮ್ಮ ಬೂತುಗ ಸಹಾಯಕನಾಗಿ ಯುವರಾಜನಾಗಿದ್ದು ಇವನ ಯುದ್ಧಗಳಲ್ಲಿ ಪಾಲ್ಗೊಂಡ. ಇವನ ಕಾಲದಲ್ಲಿ ಗಂಗರಾಜಕುಮಾರನೇ ಆದ ಮೊದಲನೆಯ ಪೃಥ್ವೀಪತಿಯ ಮಗನಾದ ನನ್ನಿಯಗಂಗನು ಬಾಣ ಮತ್ತು ವೈಡುಂಬರ ಸಹಾಯವನ್ನು ಪಡೆದ ರಾಜಮಲ್ಲನನ್ನು ಎದುರಿಸಿದರು. ತಾತ್ಕಾಲಿಕವಾಗಿ ಬಾಣರು ಗಂಗ ರಾಜ್ಯದ ಕೆಲವು ಭಾಗಗಳನ್ನು ಗೆದ್ದುಕೊಂಡು ತಲಕಾಡನ್ನು ಆಕ್ರಮಿಸಿಕೊಂಡರು. ಆದರೆ ರಾಜಮಲ್ಲನ ಸ್ನೇಹಿತನೇ ಆಗಿದ್ದ ನೊಳಂಬ ಮಹೇಂದ್ರ ಸೋರೆಮಡ್ಡಿಯಲ್ಲಿ ಜರುಗಿದ ಘೋರ ಕದನದಲ್ಲಿ (892) ನನ್ನಿಯ ಗಂಗನನ್ನು ಸೋಲಿಸಿ ಅವನ ಹೆಸರಿಲ್ಲದಂತೆ ಮಾಡಿದ. ಈ ವಿಜಯದಿಂದ ನೊಳಂಬ ಮಹೇಂದ್ರ ಉತ್ತೇಜಿತನಾಗಿ ರಾಚಮಲ್ಲನನ್ನೇ ಕಡೆಗಣಿಸಲು ಪ್ರಾರಂಭಿಸಿದ. ಯುವರಾಜ ಬೂತುಗ ಮಹೇಂದ್ರನ ಮೇಲೆ ಯುದ್ಧಮಾಡಿ, ಅವನನ್ನು ಪೂರ್ಣ ಸೋಲಿಸಲಾಗದಿದ್ದರೂ ತಡೆಹಿಡಿದ. ಬೂತುಗ ಮರಣ ಹೊಂದಲು ಅವನ ಮಗನಾದ ಎರಡನೆಯ ಎಱೆಗಂಗ ಯುದ್ಧವನ್ನು ಮುಂದುವರಿಸಿ 895ರಲ್ಲಿ ನೊಳಂಬ ಮಹೇಂದ್ರನನ್ನು ಕೊಂದು ಮಹೇಂದ್ರಾಂತಕ ಎಂಬ ಬಿರುದನ್ನು ಧರಿಸಿದ. ಎಱೆಗಂಗನ ಪರಾಕ್ರಮವನ್ನು ಮೆಚ್ಚಿದ ಮಕ್ಕಳಿಲ್ಲದ ರಾಚಮಲ್ಲ ಅವನನ್ನು ರಾಜ್ಯಭಾರದಲ್ಲಿ ಸೇರಿಸಿಕೊಂಡ. ಇಮ್ಮಡಿ ರಾಚಮಲ್ಲ ಪ್ರಜೆಗಳ ಯೋಗಕ್ಷೇಮವನ್ನೇ ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯಭಾರ ಮಾಡುತ್ತಿದ್ದನೆಂದು ಅನೇಕ ಶಾಸನಗಳು ಹೊಗಳಿವೆ. ಇವನು ಬ್ರಾಹ್ಮಣ ಮತ್ತು ಜೈನ ಸಂಸ್ಥೆಗಳಿಗೆ ವಿಶೇಷವಾಗಿ ದತ್ತಿಗಳನ್ನು ಬಿಟ್ಟುಕೊಟ್ಟ. ಜನರು ಪುಣ್ಯ ಕಾರ್ಯನಿರತರಾಗುವಂತೆ ಪ್ರೋತ್ಸಾಹಿಸಿ, ಹಾಗೆ ಪ್ರಸಿದ್ಧರಾದವರಿಗೆ

ಪೆರ್ಮಾನಡಿಪಟ್ಟ ಎಂಬ ಗೌರವವನ್ನು ಕೊಡುತ್ತಿದ್ದ. ಇವನು ಕೊಂಬಾಳೆ ಎಂಬಲ್ಲಿ ರೋಗಪೀಡಿತನಾಗಿ ಮೃತನಾದ. (ಎ.ವಿ.ಎನ್.)

**ರಾಚಮಲ್ಲ III:** ತಲಕಾಡು ಗಂಗವಂಶದ ದೊರೆ (933–36). ಎರಡನೆಯ ಎಱೆಗಂಗನ ಮಗ, ಇಮ್ಮಡಿ ಬೂತುಗನ ಅಣ್ಣ ಮತ್ತು ನರಸಿಂಹನ ತಮ್ಮ. ಅಣ್ಣ ನರಸಿಂಹನ ಮರಣಾನಂತರ ಪಟ್ಟಕ್ಕೆ ಬಂದ. ಈತ ತನ್ನ ಅಲ್ಪಾವಧಿಯ ಅಧಿಕಾರ ಕಾಲದಲ್ಲೂ ಅನೇಕ ಯುದ್ಧಗಳನ್ನು ಮಾಡಬೇಕಾಗಿ ಬಂತು. ಇವನ ತಮ್ಮನಾದ ಬೂತುಗನಿಗೆ ರಾಷ್ಟ್ರಕೂಟ ಕನ್ಯೆ ರೇವಕನಿಮ್ಮಡಿಯನ್ನು ಕೊಟ್ಟು ಲಗ್ನವಾಗಿದ್ದಿತು. ಈ ಬೂತುಗ ಅಮೋಘವರ್ಷನ ತಮ್ಮ ಮುಮ್ಮಡಿ ಕೃಷ್ಣನಿಗೆ ರಾಜ್ಯ ಸಿಕ್ಕುವ ಹಾಗೆ ಸಹಾಯ ಮಾಡಿದ್ದ. ಇದಕ್ಕೆ ಪ್ರತಿಫಲವೆಂಬಂತೆ ಈಗ ಗಂಗರಾಜ್ಯ ತನಗೆ ಸಿಗಲು ಸಹಾಯ ಮಾಡಬೇಕೆಂದು ಕೃಷ್ಣನನ್ನು ಬೂತುಗ ಕೇಳಿದ. ಅಣ್ಣತಮ್ಮಂದಿರ ಜಗಳದಲ್ಲಿ ರಾಷ್ಟ್ರಕೂಟ ಕೃಷ್ಣ ಬೂತುಗನ ಪರವಾಗಿದ್ದ. ಇಂಥ ಒಳಜಗಳ ನಡೆಯುತ್ತಿರುವುದನ್ನು ಗಮನಿಸಿದ ನೊಳಂಬ ಅಣ್ಣಿಗ ಇದೇ ತಕ್ಕ ಸಮಯವೆಂದು ರಾಚಮಲ್ಲನ ಮೇಲೆ ಯುದ್ಧಮಾಡಿದ. ಕೊತ್ತಮಂಗಲದಲ್ಲಿ ನಡೆದ ಯುದ್ಧದಲ್ಲಿ ಅಣ್ಣಿಗ ಸೋತ. ಆದರೆ ರಾಚಮಲ್ಲ ಅವನನ್ನು ಕೊಲ್ಲದೆ, ಮುಂದೆ ಬೂತುಗನನ್ನು ಸೋಲಿಸಲು ಅವನ ನೆರವು ಆವಶ್ಯಕವೆಂದು ತಿಳಿದು ಅವನನ್ನು ಸ್ನೇಹಿತನನ್ನಾಗಿ ಮಾಡಿಕೊಂಡ. ಆದರೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನಿಂದ ಸಹಾಯ ಪಡೆದ ಇಮ್ಮಡಿ ಬೂತುಗ ತನ್ನ ಅಣ್ಣ ರಾಚಮಲ್ಲನನ್ನು ಯುದ್ದದಲ್ಲಿ ಸೋಲಿಸಿದ್ದು ಮಾತ್ರವಲ್ಲದೆ, ಅವನನ್ನು ಕೊಂದು ಗಂಗರಾಜ್ಯವನ್ನು ತನ್ನದನ್ನಾಗಿ ಮಾಡಿಕೊಂಡ. ಕೆಲವು ಶಾಸನಗಳು ಇವನನ್ನು ದುಷ್ಟನೆಂದೂ ಪ್ರಜಾಹಿಂಸಕನೆಂದೂ ವರ್ಣಿಸಿವೆ. ಆದರೆ ಅವುಗಳ ವಿವರ ತಿಳಿಯದು.

(ಎ.ವಿ.ಎನ್.)

**ರಾಚಮಲ್ಲ IV:** ತಲಕಾಡು ಗಂಗವಂಶದ ದೊರೆ (ಸು. 974–99). ಇಮ್ಮಡಿ ಮಾರಸಿಂಹನ ಮಗ. ತಂದೆಯ ಮರಣಾನಂತರ ಗಂಗ ಸಿಂಹಾಸನಕ್ಕಾಗಿ ತನ್ನ ತಮ್ಮನಾದ ನೀತಿಮಾರ್ಗ ಗೋವಿಂದರಸನೊಡನೆ ಕಲಹಗಳು ಪ್ರಾರಂಭವಾದವು. ಆಗ ಮಾರಸಿಂಹನ ಮಂತ್ರಿಯಾಗಿದ್ದ ಚಾವುಂಡರಾಯ ರಾಚಮಲ್ಲನಿಗೆ ಸಹಾಯಕನಾಗಿ ನಿಂತ. ಈ ಕಲಹದಲ್ಲಿ ರಾಚಮಲ್ಲ ಜಯಶಾಲಿಯಾದ. ಆದರೆ ಇದೇ ಸಮಯದಲ್ಲಿ ಪ್ರಬಲನಾಗುತ್ತಿದ್ದ ಚಾಳುಕ್ಯ ಇಮ್ಮಡಿ ತೈಲನು ಇಬ್ಬರನ್ನೂ ಸೋಲಿಸಿ, ಗಂಗರಾಜ್ಯದ ಉತ್ತರ ಭಾಗಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡ. ಆದರೆ ರಾಚಮಲ್ಲ ಗಂಗರಾಜ್ಯದ ದಕ್ಷಿಣ ಭಾಗದಲ್ಲಿ ಆಳಿಕೊಂಡಿದ್ದ. ಕೊನೆಗೆ ಚೋಳರು ಇವನನ್ನು ಸೋಲಿಸಿ, ಇವನ ರಾಜ್ಯವನ್ನು ತಮ್ಮದನ್ನಾಗಿ ಮಾಡಿಕೊಂಡರು.

(ಎ.ವಿ.ಎನ್.)

**ರಾಚಯ್ಯ, ಬಿ.:** 1922–2000. ಪ್ರಮುಖ ದಲಿತ ರಾಜಕಾರಣಿ; ಮಾಜಿ ರಾಜ್ಯಪಾಲರು. ಇವರು ಹಿಂದಿನ ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ (ಈಗ ಚಾಮರಾಜನಗರ ಜಿಲ್ಲೆ) ಆಲೂರು ಗ್ರಾಮದಲ್ಲಿ 1922 ಆಗಸ್ಟ್ 10 ರಂದು ಜನಿಸಿದರು. ತಂದೆ ಪೊಳ್ಳಂಡೆ ಬಸವಯ್ಯ, ತಾಯಿ ಸಿದ್ದಮ್ಮ. ರಾಚಯ್ಯನವರು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ಕ್ರಮವಾಗಿ ಆಲೂರು, ಕುದೇರು ಮತ್ತು ಹಾಸನದಲ್ಲಿ ಮಾಡಿ ಅನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎಸ್ಸಿ. ಪದವಿ ಪಡೆದರು (1948). ಬೆಂಗಳೂರಿನ ಕಾನೂನು ವಿದ್ಯಾಲಯದಿಂದ ಬಿ.ಎಲ್.ಪದವಿ ಪಡೆದುಕೊಂಡರು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು.

1952ರಲ್ಲಿ ಪ್ರಥಮ ಸಾರ್ವತ್ರಿಕ ವಿಧಾನಸಭಾ ಚುನಾವಣೆ ನಡೆದಾಗ ಯಳಂದೂರು ಮೀಸಲು ಕ್ಷೇತ್ರದಿಂದ ಪ್ರಜಾ ಸೋಷಿಯಲಿಸ್ಟ್ ಪಕ್ಷದಿಂದ ಆಯ್ಕೆಯಾದರು. ಕೆಂಗಲ್ ಹನುಮಂತಯ್ಯನವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು (1954). 1957ರಲ್ಲಿ ನಡೆದ ಚಾಮರಾಜನಗರ ವಿಧಾನಸಭಾ ಮೀಸಲು ಕ್ಷೇತ್ರದಿಂದ ಮತ್ತೆ ಆಯ್ಕೆಯಾದರು. ಮತ್ತೆ 1962ರಲ್ಲಿ ಮೂರನೆಯ ಬಾರಿಗೆ ಸಂತೇಮರಳ್ಳಿ ಶಾಸನಸಭೆಗೆ ಆಯ್ಕೆಯಾದರು. ಎಸ್.ಆರ್. ಕಂಠಿ ಅವರ ಸಂಪುಟದಲ್ಲಿ ಪ್ರಥಮಬಾರಿಗೆ ಮಂತ್ರಿಯಾದರು. ಅನೇಕ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿದರು. 1977ರಲ್ಲಿ ನಡೆದ ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದ ಚುನಾವಣೆಯಲ್ಲಿ ಆಯ್ಕೆಯಾಗಿ ಚರಣ್ ಸಿಂಗ್ ನೇತೃತ್ವದ ಸರ್ಕಾರದಲ್ಲಿ (1979) ಕೈಗಾರಿಕಾಭಿವೃದ್ಧಿ ಮಂತ್ರಿಯಾಗುವುದರ ಮೂಲಕ ರಾಷ್ಟ್ರಮಟ್ಟದಲ್ಲೂ ತಮ್ಮನ್ನು ಗುರುತಿಸಿಕೊಂಡರು.

1983ರಲ್ಲಿ ಜನತಾರಂಗದಿಂದ ಸ್ಪರ್ಧಿಸಿ ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದಿಂದ ಗೆದ್ದು ಬಂದರು. ಮತ್ತೆ 1985ರಲ್ಲಿ ಅದೇ ಕ್ಷೇತ್ರದಿಂದ ಜಯ ಪಡೆದರು. ಸುಮಾರು ಎರಡೂವರೆ ದಶಕಗಳ ರಾಜಕೀಯ ಜೀವನದಲ್ಲಿ ಇವರು ಮಂತ್ರಿಯಾಗಿ ಕೃಷಿ, ಸಹಕಾರ ಮತ್ತು ಅರಣ್ಯ, ಮೀನುಗಾರಿಕೆ, ರೇಷ್ಮೆ, ಕಂದಾಯ, ತೋಟಗಾರಿಕೆ, ಶಿಕ್ಷಣ ಖಾತೆಗಳನ್ನು ನಿರ್ವಹಿಸಿದರು. ಇದರ ಜೊತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗೃಹ, ಆರೋಗ್ಯ ಯೋಜನೆಯ ಮಂತ್ರಿಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸರ್ಕಾರದ ಪ್ರತಿನಿಧಿಯಾಗಿ ದಕ್ಷಿಣ ಕೊರಿಯ, ಇಂಡೊನೇಷ್ಯ ಮುಂತಾದ ವಿದೇಶಗಳಿಗೆ ಭೇಟಿ ನೀಡಿದರು. 1989ರಲ್ಲಿ ರಾಜ್ಯ ಜನತಾದಳದ ಅಧ್ಯಕ್ಷರಾದರು. ಇವರಿಗೆ ರಾಜ್ಯದ ಮುಖ್ಯಮಂತ್ರಿಯಾಗುವ ಅವಕಾಶಗಳಿದ್ದವು. ರಾಜ್ಯಪಾಲರಾಗಿ ನೇಮಕಗೊಂಡರು. ಹಿಮಾಚಲ ಪ್ರದೇಶ (1990), ಕೇರಳ (1990–95), ಗೋವ (ಹಂಗಾಮಿ) ರಾಜ್ಯಗಳಲ್ಲಿ ಸೇವೆಸಲ್ಲಿಸಿದರು. 1995 ಆಗಸ್ಟ್ 11ರಂದು ರಾಜ್ಯಪಾಲ ಹುದ್ದೆಯಿಂದ ನಿವೃತ್ತರಾದರು. ಸಾತ್ವಿಕ ವ್ಯಕ್ತಿತ್ವದ ರಾಚಯ್ಯನವರು ಅಜಾತಶತ್ರು ಎನಿಸಿದ್ದರು. ಮಿತವಾದ ಮಾತು ಮತ್ತು ಸದಾ ಶಾಂತಚಿತ್ತತೆಯಿಂದ ಜನಪ್ರಿಯರಾಗಿದ್ದರು. ಇವರು 2000 ಫೆಬ್ರವರಿ 14ರಂದು ನಿಧನರಾದರು. ಇವರ ಪುತ್ರ ಆರ್. ಕೃಷ್ಣಮೂರ್ತಿ ಶಾಸಕರಾಗಿದ್ದರು. (ಎಂ.ಆರ್.ಇ.)

**ರಾಜ ಅಯ್ಯಂಗಾರ್, ಬಿ.ಎಸ್.:** –1978. ಕರ್ಣಾಟಕ ಸಂಗೀತ ವಿದ್ವಾಂಸರು, ರಂಗಭೂಮಿ ಹಾಗೂ ಚಲನಚಿತ್ರ ನಟರು. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಬಾಣಾವರದಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸರಂಗಾಚಾರ್. ರಾಜಅಯ್ಯಂಗಾರ್ ಅವರು ಚಿಕ್ಕವರಾಗಿದ್ದಾಗಲೇ ತಂದೆ ತೀರಿಕೊಂಡರು. ಆಗ ತಾಯಿಯೊಡನೆ ತಾಯಿಯ ತವರೂರಾದ ಹೊಳಲ್ಕೆರೆ ಸೇರಿದರು. ಅಲ್ಲೇ ಪ್ರಾಥಮಿಕ ಶಿಕ್ಷಣ ಪಡೆದರು. ಚಿತ್ರದುರ್ಗದಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಚಿಕ್ಕಂದಿನಲ್ಲೇ ಸಂಗೀತದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಇವರು ದಸರ ನೋಡಲು ತಮ್ಮ ಸೋದರಮಾವನೊಂದಿಗೆ ಮೈಸೂರಿಗೆ ಹೋಗಿದ್ದಾಗ ಅಲ್ಲಿ ಇವರಿಗೆ ಸುಪ್ರಸಿದ್ದ ನಟರಾದ ವರದಾಚಾರ್ಯರ ಸಾನ್ನಿಧ್ಯ ಲಭಿಸಿತು. ವರದಾಚಾರ್ಯರ ಕಂಪನಿಯಲ್ಲೇ ಇವರು ಉಳಿದುಕೊಂಡು, ಅವರ ಪ್ರೋತ್ಸಾಹದಿಂದ ಮೆಟ್ರಿಕ್ಯುಲೇಷನ್ ವರೆಗೆ ಶಿಕ್ಷಣ ಮುಂದುವರೆಸಿದರು.

ಆ ವೇಳೆಗೆ ಇವರಿಗೆ ಸಂಗೀತದ ಆಸಕ್ತಿ ವಿಶೇಷವಾಗಿ ಬೆಳೆಯಿತು. ಶಾಮರಾವ್ ಎಂಬುವರಲ್ಲಿ ಹಲವು ವರ್ಷಗಳ ಕಾಲ ಇವರು ಕರ್ಣಾಟಕ ಸಂಗೀತವನ್ನು ಶಾಸ್ತ್ರೋಕ್ತವಾಗಿ ಅಭ್ಯಾಸ ಮಾಡಿದರು. ಅನಂತರ ಕಂಪನಿಯನ್ನು ಬಿಟ್ಟು ಬೆಂಗಳೂರಿನಲ್ಲಿ ಸಂಗೀತ ಶಾಲೆಯೊಂದನ್ನು ಆರಂಭಿಸಿದರು. ಆದರೆ ಈ ಶಾಲೆ ಬಹಳ ಕಾಲ ನಡೆಯಲಿಲ್ಲ. ಸಂಗೀತದ ಅಭ್ಯಾಸವನ್ನು ಮುಂದುವರಿಸಬೇಕೆಂಬ ಉದ್ದೇಶದಿಂದ ಇವರು ಮದರಾಸಿನಲ್ಲಿ ಸುಪ್ರಸಿದ್ಧ ಸಂಗೀತ ವಿದ್ವಾಂಸ ಟೈಗರ್ ವರದಾಚಾರ್ಯರ ಸಹೋದರ ಕೆ.ವಿ. ಶ್ರೀನಿವಾಸಯ್ಯಂಗಾರ್ ಅವರ ಶಿಷ್ಯರಾದರು. ಅನೇಕ ವರ್ಷಗಳ ಸಾಧನೆಯಿಂದ ಇವರು ಟೈಗರ್ ಸಂಪ್ರದಾಯದ ಘನವಿದ್ವಾಂಸರಾದರು. ಮದರಾಸಿನ ಪ್ರಸಿದ್ಧ ಸಭೆಯೊಂದರ ಆಶ್ರಯದಲ್ಲಿ ಇವರು ನಡೆಸಿದ ಪ್ರಥಮ ಸಂಗೀತ ಕಛೇರಿ (1926) ತುಂಬ ಯಶಸ್ವಿಯಾಯಿತು. ಆ ಸಭೆಯಲ್ಲಿದ್ದ ಟೈಗರ್ ವರದಾಚಾರ್ಯರು ಇವರ ಪ್ರತಿಭೆಯನ್ನು ಬಹಳ ಮೆಚ್ಚಿಕೊಂಡರು. ಅಲ್ಲಿಂದ ಮುಂದೆ ಅನೇಕ ಕಡೆಗಳಲ್ಲಿ ಇವರ ಕಛೇರಿಗಳು ನಡೆದುವು. 1927ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಆಶ್ರಯದಲ್ಲಿ ಏರ್ಪಾಟಾಗಿದ್ದ ಸಂಗೀತ ಸಭೆಯೊಂದರಲ್ಲಿ ಇವರಿಗೆ ಚಿನ್ನದ ಪದಕ ದೊರಕಿತು. ಕುಂಭಕೋಣದ ಮಹಾ ಮಾಘ ಉತ್ಸವದಲ್ಲಿ ನಡೆದ ಕಚೇರಿಯೂ ಇವರ ಸಂಗೀತ ಜೀವನದ ಒಂದು ಮೈಲಿಗಲ್ಲು. 1929ರಲ್ಲಿ ಆಗಿನ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ಇವರು ಹಾಡಿದಾಗ ರಾಜರು ಮೆಚ್ಚಿಕೊಂಡರು. ಇವರನ್ನು ಇನ್ನೊಮ್ಮೆ ಕರೆಸಿಕೊಂಡು ಖಾಸಗಿಯಾಗಿ ಹಾಡಿಸಿ ಕೇಳಿ ಸಂತೋಷಪಟ್ಟು ಇವರಿಗೆ ವಿಶೇಷ ಸನ್ಮಾನ ಮಾಡಿದರು. ತಿರುವಾಂಕೂರು ಮಹಾರಾಜರು ಮೆಚ್ಚುಗೆಯ ಕುರುಹಾಗಿ ಸುವರ್ಣಪದಕ ನೀಡಿದರು.



ರಾಜ ಅಯ್ಯಂಗಾರ್ ಅವರು ಭಾರತದಲ್ಲೆಲ್ಲ ಸಂಚರಿಸಿ ಕಚೇರಿಗಳಲ್ಲಿ ಹಾಡಿದರು. ಬರ್ಮದಲ್ಲೂ ಪ್ರವಾಸ ಕೈಗೊಂಡರು. ರಂಗೂನಿನ ಸಂಗೀತ ಪ್ರಿಯರಿಂದ ಇವರಿಗೆ ಬಂಗಾರದ ಪದಕ ಲಭಿಸಿತು. 1945ರಲ್ಲಿ ಮದರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರಿಗೆ ಗಾನಕಲಾನಿಧಿ ಎಂಬ ಬಿರುದನ್ನೂ ಚಿನ್ನದ ಪದಕವನ್ನೂ ನೀಡಲಾಯಿತು. ಮದರಾಸಿನ ಮ್ಯೂಸಿಕ್ ಅಕಾಡೆಮಿ ಇವರಿಗೆ ವಿದ್ವತ್ ಪದಕ ನೀಡಿತು. ಬೆಂಗಳೂರಿನ ಕರ್ನಾಟಕ ಗಾನಕಲಾ ಪರಿಷತ್ತು ಇವರನ್ನು 1970ರಲ್ಲಿ ಸನ್ಮಾನಿಸಿತು. ಕರ್ನಾಟಕ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ ಇವರಿಗೆ ಪ್ರಾಪ್ತವಾಗಿದೆ.

ಇವರ ಹಾಡುಗಾರಿಕೆಯ ಆಡಿಸಿದಳು ಯಶೋದಾ ಎಂಬ ದೇವರನಾಮದ ಧ್ವನಿಮುದ್ರಿಕೆ ಬಹಳ ಜನಪ್ರಿಯವಾಗಿದೆ. ಇದು ಇವರ ಕಂಚಿನ ಕಂಠ, ಶಾಸ್ತ್ರಶುದ್ಧಲಯಜ್ಞಾನ, ಭಾವಪೂರ್ಣತೆಗೆ ನಿದರ್ಶನವಾಗಿದೆ. ಅಷ್ಟೇ ಅಚ್ಚುಕಟ್ಟಾಗಿ ಇವರು ಹಾಡಿರುವ ಕ್ಷೀರಸಾಗರಶಯನ ಎಂಬ ಇನ್ನೊಂದು ಕೃತಿ ಧ್ವನಿಮುದ್ರಣವಾಗಿದೆ.

ಅತ್ಯಂತ ಶಿಸ್ತಿನ ಜೀವನ ನಡೆಸುತ್ತ, ಶ್ರದ್ಧೆಯಿಂದ ತಮ್ಮ ಶಾರೀರವನ್ನು ಪೋಷಿಸಿಕೊಂಡು ಬಂದ ರಾಜ ಅಯ್ಯಂಗಾರ್ ಅವರು ಸಂಗೀತದಲ್ಲಿ ಹಳೆಯ ಕಾಲದ ಗುರುಕುಲ ಪದ್ಧತಿಯಲ್ಲಿ ನಂಬಿಕೆ ಇಟ್ಟವರಾಗಿದ್ದರು. ಸಂಗೀತಗಾರರಾಗಬಯಸುವವರು ಚಿಕ್ಕಂದಿನಿಂದಲೇ ಸಾಧನೆ ಮಾಡಬೇಕು ಎಂಬುದು ಇವರ ಅಭಿಪ್ರಾಯ. ಸಂಗೀತ ಕಚೇರಿಗಳು ಸಂಪ್ರದಾಯವನ್ನು ಬಿಟ್ಟು ನಡೆಯಬಾರದು ಎಂಬುದು ಇವರ ವಾದ. ಕ್ರಮಬದ್ಧವಾಗಿ ನಡೆಯುವ ಕಚೇರಿಗಳು ರಸಪೋಷಣೆಗೆ ಸಹಾಯಕವಾಗುತ್ತದೆ ಎಂದು ಭಾವಿಸಿದ್ದ ಇವರು ಯಾವುದೇ ಕಚೇರಿಗಾದರೂ ಪೂರ್ವಸಿದ್ಧತೆ ಮಾಡಿಕೊಂಡೇ ಹೋಗುವ ಪದ್ಧತಿ ಅನುಸರಿಸಿದವರು. ಕಚೇರಿಗಳು ಅಗ್ಗದ ಕಸರತ್ತುಗಳಿಗೆ ಬಲಿಯಾಗಬಾರದೆಂದು ಧೃಡವಾಗಿ ನಂಬಿದ್ದರು. ವಾಗ್ಗೇಯಕಾರರು ನಿರ್ದೇಶಿಸಿರುವ ರಾಗಗಳಲ್ಲೇ ಕೃತಿಗಳನ್ನು ಹಾಡಬೇಕೆಂಬುದು ಇವರ ಮತ. ಕಚೇರಿಗಳಲ್ಲಿ ಹಾಡುವವರು ಪಕ್ಕವಾದ್ಯಗಾರರ ಮನೋಧರ್ಮವನ್ನೂ ಸಾಮರ್ಥ್ಯವನ್ನೂ ಅರಿತುಕೊಂಡು ಅವು ಪೂರ್ಣವಾಗಿ ಪ್ರಕಟವಾಗುವಂತೆ ನೆರವಾಗಬೇಕು ಎಂದು ಇವರು ಹೇಳುತ್ತಿದ್ದರು. ಪುರಂದರದಾಸರ ಕೃತಿಗಳನ್ನು ಜನಪ್ರಿಯಗೊಳಿಸಲು ಇವರು ವಿಶೇಷವಾದ ಶ್ರಮವಹಿಸಿದರು. ಕನ್ನಡ ಕೃತಿಗಳ ಹಾಡುಗಾರಿಕೆಯೆಂದರೆ ಇವರಿಗೆ ತುಂಬ ಅಚ್ಚುಮೆಚ್ಚು.

ಇವರು ಚಲನಚಿತ್ರಕ್ಷೇತ್ರದಲ್ಲಿ ಕೂಡ ಕೆಲಸಮಾಡಿದ್ದರು. ಕನ್ನಡದ ಪ್ರಸಿದ್ಧ ಚಿತ್ರಗಳಲ್ಲೊಂದಾದ 'ಹರಿಶ್ಚಂದ್ರ'ದಲ್ಲಿ ಇವರು ನಾರದನ ಪಾತ್ರವನ್ನೂ ತಮಿಳಿನ 'ತುಳಸೀದಾಸ'ದಲ್ಲಿ ತುಳಸೀದಾಸನ ಪಾತ್ರವನ್ನೂ ತೆಲುಗಿನ 'ತುಲಸಿ ಜಲಂಧರ'ದಲ್ಲಿ ಸಾಧುವಿನ ಪಾತ್ರವನ್ನೂ ವಹಿಸಿ ಉತ್ತಮ ಅಭಿನಯ ನೀಡಿದ್ದರು. ಇವರು 1978 ಜುಲೈ 4ರಂದು ನಿಧನರಾದರು.

(ಎಚ್.ಎಸ್.ಕೆ.)

**ರಾಜ ಒಡೆಯರ್ I:** 1552–1617. ಮೈಸೂರು ರಾಜವಂಶದ ಅರಸು (1578–1617). 3ನೆಯ ಹಿರಿಯ ಬೆಟ್ಟದ ಚಾಮರಾಜನ ಮಗ. 2ನೆಯ ತಿಮ್ಮರಾಜನ ತಮ್ಮ ಹಾಗೂ ಉತ್ತರಾಧಿಕಾರಿ. 1552ರಲ್ಲಿ ಜನಿಸಿದ. ಈತನಿಗೆ ತಿಮ್ಮರಾಜ ಎಂಬ ಹೆಸರೂ ಇದ್ದಂತೆ ತೋರುತ್ತದೆ.

ರಾಜ ಒಡೆಯರ್ ಪಟ್ಟಕ್ಕೆ ಬಂದ ಕಾಲದಲ್ಲಿ ಮೈಸೂರು ರಾಜ್ಯ 33 ಹಳ್ಳಿಗಳನ್ನೊಳಗೊಂಡು, ಕೇವಲ 3,000 ವರಹಗಳ ಆದಾಯ ಹೊಂದಿತ್ತು. ಮೈಸೂರಿನ ರಾಜರು ಸಾಮಂತರಾಗಿ, ವಿಜಯನಗರ ಸಾಮ್ರಾಟರ ಪ್ರಭುತ್ವಕ್ಕೆ ಒಳಪಟ್ಟಿದರು. ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಆಡಳಿತಾಧಿಕಾರಿಗೆ ಪೊಗದಿ ಪಾವತಿಯಾಗಬೇಕಾಗಿತ್ತು. 1565ರ ತಾಳೀಕೋಟೆ ಯುದ್ಧಾನಂತರ ವಿಜಯನಗರ ಸಾಮ್ರಾಜ್ಯ ಒಡೆದು ಹೋದರೂ ಪೂರ್ಣವಾಗಿ ಹಾಳಾಗಿರಲಿಲ್ಲ. ವೆಂಕಟಪತಿರಾಯ ಪೆನುಗೊಂಡೆಯಿಂದ ಆಡಳಿತ ನಡೆಸುತ್ತಿದ್ದ. ತಿರುಮಲರಾಯ ಶ್ರೀರಂಗಪಟ್ಟಣದಲ್ಲಿ ಅವನ ಪ್ರತಿನಿಧಿಯಾಗಿದ್ದ. ರಾಜ ಒಡೆಯರ್ ಇವನ ಹತೋಟಿಗೆ ಒಳಪಟ್ಟಿದ್ದ. ಆದರೆ ಶೂರನೂ ಸಾಮರ್ಥ್ಯಶಾಲಿಯೂ ಆದ ಈತ ತಿರುಮಲರಾಯನ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ರಾಜ್ಯದ ಆರ್ಥಿಕ ಮುಗ್ಗಟ್ಟಿನಿಂದ ಪೊಗದಿಯನ್ನು ಸಲ್ಲಿಸಲು ಸಾಧ್ಯವಿಲ್ಲವೆಂದು ತಿರುಮಲರಾಯನಿಗೆ ತಿಳಿಸಿದ್ದಲ್ಲದೆ ಅವನ ಅನುಮತಿ ಪಡೆದು, ತನ್ನ ಅನುಕೂಲಕ್ಕೋಸ್ಕರ ಮೈಸೂರಿನ ಸುತ್ತ ಬಲವಾದ ಕೋಟೆಯೊಂದನ್ನು ಕಟ್ಟಿದ. 1584ರಲ್ಲಿ ಹೊಳೆನರಸೀಪುರದ ನರಸಿಂಹ ನಾಯಕನಿಂದ ಅಕ್ಕಿಹೆಬ್ಬಾಳನ್ನು ಅದರ ಸುತ್ತಲ 12 ಹಳ್ಳಿಗಳನ್ನೂ ತಿರುಮಲನಿಂದ ವಶಪಡಿಸಿಕೊಂಡು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ.

ಇವನು ನಡೆಸಿದ ದಾಳಿಗಳು ಮತ್ತು ಸಾಧಿಸಿದ ಕಾರ್ಯಗಳನ್ನು ಗಮನಿಸಿದ ತಿರುಮಲರಾಯ ರಾಜ ಒಡೆಯನನ್ನು ಆಸ್ಥಾನಕ್ಕೆ ಕರೆಸಿ, ಅವನನ್ನು ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡಿದ. ಆದರೆ ರಾಜ ಒಡೆಯ ರಾಜ್ಯ ವಿಸ್ತರಣೆಯ ಕಾರ್ಯವನ್ನು ಮುಂದುವರಿಸಿ 1590ರಲ್ಲಿ ಕೆಂಬಾಳಿನ ದೇಪರಾಜನನ್ನು ಸೋಲಿಸಿದ. 1591ರಲ್ಲಿ ಮುಳ್ಳೂರನ್ನೂ

1593ರಲ್ಲಿ ಹಾರೋಹಳ್ಳಿಯನ್ನೂ ವಶಪಡಿಸಿಕೊಂಡ. 1595ರಲ್ಲಿ ಕಾರುಗಹಳ್ಳಿ ವೀರರಾಜಯ್ಯನ ಸೇನೆಯನ್ನು ಸೋಲಿಸಿ, ಅವನನ್ನು ಪದಚ್ಯುತಿಗೊಳಿಸಿದ. ಈತನನ್ನು ನಿಗ್ರಹಿಸಲು ಶ್ರೀರಂಗಪಟ್ಟಣದ ಪ್ರತಿನಿಧಿಯಿಂದ ಆಜ್ಞಾಪಿತನಾಗಿ ಬಂದ ಉಮ್ಮತ್ತೂರಿನ ಪಾಳೆಯಗಾರನನ್ನು ವಧಿಸಿದ. ಮುಂದೆ ಅನೇಕ ಪಾಳೆಯಗಾರರು ಸೇರಿ ವಿಜಯನಗರದ ಪ್ರತಿನಿಧಿಯನ್ನು ಸೆರೆಹಿಡಿದಾಗ, ರಾಜ ಒಡೆಯ ಅವನನ್ನು ಸೆರೆಯಿಂದ ಬಿಡಿಸಿದ. ಈ ಸ್ತುತ್ಯಸೇವೆಗಾಗಿ ವಿಜಯನಗರದ ಅರಸು ರಾಜ ಒಡೆಯನಿಗೆ ಮೈಸೂರು ಜಿಲ್ಲೆಯ ಬನ್ನೂರು ಮತ್ತು ಸೋಸಲೆ ಪ್ರಾಂತ್ಯಗಳನ್ನು ನೀಡಿದ.

ಈ ಸಾಧನೆಗಳು ರಾಜ ಒಡೆಯನ ಶೌರ್ಯ ಸಾಮರ್ಥ್ಯಗಳಿಗೆ ನಿದರ್ಶನಗ ಳಾದರೂ ವಿಜಯನಗರದ ಪ್ರತಿನಿಧಿಯಾದ ತಿರುಮಲರಾಯನನ್ನು ಶ್ರೀರಂಗಪಟ್ಟಣದಿಂದ ಓಡಿಸಿ, ಅದನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡಿದ್ದು ಈತನ ಮಹತ್ತ್ವದ ಸಾಧನೆ. ಅನೇಕ ಪಾಳೆಯಗಾರರು ಪಿತೂರಿ ನಡೆಸಿ ಈತನನ್ನು ನಿಗ್ರಹಿಸುವಂತೆ ತಿರುಮಲರಾಯನನ್ನು ಪ್ರೇರೇಪಿಸಿದರು. ಅವನು ಇವನ ಶೌರ್ಯ, ಇವನ ಸೇನೆಯ ಶಿಸ್ತು, ಪ್ರಜೆಗಳ ರಾಜನಿಷ್ಠೆ, ಸಮರ್ಪಕ ಆಡಳಿತ– ಇವುಗಳನ್ನು ನೋಡಿ ಮೆಚ್ಚಿದ್ದರೂ ಪಾಳೆಯಗಾರರ ಒತ್ತಾಸೆಯಿಂದ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಯುದ್ಧ ಮಾಡಲೇಬೇಕಾಯಿತು. 1596ರಲ್ಲಿ ಕೆಸರೆಯಲ್ಲಿ ನಡೆದ ಭೀಕರ ಯುದ್ಧದಲ್ಲಿ ತಿರುಮಲನ ಸೈನ್ಯ ಸೋತಿತು. ಅವಮಾನಿತನಾದ ತಿರುಮಲರಾಯ ಶ್ರೀರಂಗಪಟ್ಟಣಕ್ಕೆ ಹಿಂತಿರುಗಬೇಕಾಯಿತು.

ರಾಜ ಒಡೆಯ ಮತ್ತೆ ತಿರುಮಲರಾಯನ ರಾಜ್ಯದ ಮೇಲೆ ಆಕ್ರಮಣ ನಡೆಸಿ, ಅನೇಕ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡ. 1600ರಲ್ಲಿ ಅರಕೆರೆ, 1606ರಲ್ಲಿ ಸೋಸಲೆ, 1607ರಲ್ಲಿ ತಲಕಾಡನ್ನು ಸೇರಿಸಿಕೊಂಡ. 1608ರಲ್ಲಿ ಪಾಳೆಯಗಾರರ ಪ್ರಬಲವಾದ ಒಕ್ಕೂಟವನ್ನು ಎದುರಿಸಿ ಕುಣಿಗಲು ಯುದ್ಧದಲ್ಲಿ ಅವರನ್ನು ಸೋಲಿಸಿದ. 1610ರಲ್ಲಿ ತಿರುಮಲರಾಯ ಮತ್ತೆ ರಾಜ ಒಡೆಯನ ಮೇಲೆ ಯುದ್ಧ ಮಾಡಿದಾಗ, ಒಡೆಯನ ಮಗ ನರಸರಾಜ ತಿರುಮಲರಾಯನನ್ನು ಓಡಿಸಿ, ಶ್ರೀರಂಗಪಟ್ಟಣವನ್ನು ತನ್ನ ವಶಕ್ಕೆ ತೆಗೆದುಕೊಂಡ. ಈ ಕ್ರಮಕ್ಕೆ ವಿಜಯನಗರದ ಅರಸ ವೆಂಕಟನ ಅನುಮೋದನೆಯೂ ದೊರಕಿ, ರಾಜ ಒಡೆಯ ಶ್ರೀರಂಗಪಟ್ಟಣದಲ್ಲಿ ಆತನ ಪ್ರತಿನಿಧಿಯಾದ. ಆದರೆ ವಸ್ತುತಃ ಈತ ಸ್ವತಂತ್ರನಾಗಿದ್ದು ಮೈಸೂರು ರಾಜ್ಯದ ನಿಜವಾದ ಸ್ಥಾಪಕನಾದ. **(ಕೆ.ಟಿ.ಆರ್.)**

ತನ್ನ ಸಾಧನೆಗಳನ್ನು ಮುಂದುವರೆಸಿ ಪಿರಿಯಾಪಟ್ಟಣದ ನಂಜುಂಡ ಅರಸನಿಂದ ಸಿರಿಯೂರನ್ನೂ (1610), ಶ್ರೀಕಂಠ ಒಡೆಯನಿಂದ ಸರಗೂರನ್ನೂ (1612) ಗೆದ್ದುಕೊಂಡ. 1614ರಲ್ಲಿ ಹದಿನಾಡಿನ ನಂಜರಾಜನನ್ನು ಸೋಲಿಸಿ, ತೆರಕಣಾಂಬಿ, ಉಮ್ಮತ್ತೂರು ಮೊದಲಾದ ಪ್ರಾಂತ್ಯಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಅದೇ ವರ್ಷ ಹುರವನ್ನೂ 1615ರಲ್ಲಿ ಹರದನಹಳ್ಳಿಯನ್ನೂ ಗೆದ್ದ. 1615ರಲ್ಲಿ ಕಳಲೆ, ಹೆಗ್ಗಡದೇವನಕೋಟೆ, ತಲಕಾಡು, ಹುಲ್ಲಹಳ್ಳಿ, ಮಳಲವಾಡಿ ಇತ್ಯಾದಿಗಳನ್ನೂ ಗೆದ್ದು ಕಪ್ಪ ವಸೂಲಿ ಮಾಡಿದ. 1617ರಲ್ಲಿ ಪಿರಿಯಾಪಟ್ಟಣದ ನಂಜುಂಡ ಅರಸನಿಂದ ಮಾವತ್ತೂರನ್ನು ಗೆದ್ದ.

1617ರ ಹೊತ್ತಿಗೆ ಮೈಸೂರು ಅರಸರ ರಾಜ್ಯ ಉತ್ತರದಲ್ಲಿ ಶ್ರೀರಂಗಪಟ್ಟಣದಿಂದ ದಕ್ಷಿಣದಲ್ಲಿ ಉಮ್ಮತ್ತೂರು, ತೆರಕಣಾಂಬಿಯವರೆಗೂ ಪೂರ್ವದಲ್ಲಿ ಬನ್ನೂರಿನಿಂದ ಪಶ್ಚಿಮದಲ್ಲಿ ಮಾವತ್ತೂರು, ಅಕ್ಕಿ ಹೆಬ್ಬಾಳು ಮತ್ತು ಹೊಳೆನರಸಿಪುರದವರೆಗೂ ಹಬ್ಬಿತ್ತು. ಉತ್ತರದಲ್ಲಿ ಚನ್ನಪಟ್ಟಣದ ಜಗದೇವರಾಯನ ರಾಜ್ಯದಂಚಿನಿಂದ, ದಕ್ಷಿಣದಲ್ಲಿ ಮಧುರೆಯ ನಾಯಕನ ರಾಜ್ಯದ ಅಂಚಿನ ವರೆಗೂ ಇರುವ ಪ್ರದೇಶಗಳು ರಾಜ ಒಡೆಯನ ರಾಜಕೀಯ ಪ್ರಭಾವದ ವಲಯದೊಳಗಿದ್ದುವು. ಸೈನ್ಯದ ಕಾರ್ಯಾಚರಣೆಗಾಗಿ ದಳವಾಯಿ ಪದ್ಧತಿಯನ್ನು ಜಾರಿಗೆ ತಂದ (1614). ರಾಜ ಒಡೆಯನ ರಾಜ್ಯಭಾರ ಕ್ರಮ ಕಟ್ಟುನಿಟ್ಟಾಗಿತ್ತು.

ಇವನು ರೈತರ ಬಗ್ಗೆ ದಯಾಶೀಲನಾಗಿದ್ದ. ವ್ಯವಸಾಯಗಾರರು ಹಿಂದೆ ಕೊಡುತ್ತಿದ್ದ ಕಂದಾಯಕ್ಕಿಂತ ಹೆಚ್ಚು ಕೊಡಬೇಕಾಗಿಲ್ಲವೆಂದು ನಿರೂಪ ಹೊರಡಿಸಿ, ಅವರ ಪ್ರೀತಿ ಬೆಂಬಲಗಳನ್ನು ಗಳಿಸಿಕೊಂಡ. ವಿಜಯನಗರದಲ್ಲಿ ಪ್ರಚಲಿತವಾಗಿದ್ದ ನವರಾತ್ರಿ ಉತ್ಸವವನ್ನು ಮೈಸೂರಿನಲ್ಲಿಯೂ ನಡೆಸಲು ಆರಂಭಿಸಿದ. ಈತ ವಿಷ್ಣುಭಕ್ತ. ಆದರೆ ವೈಷ್ಣವ ದೇವಾಲಯಗಳಲ್ಲದೆ ಶೈವ ದೇವಾಲಯಗಳಿಗೂ ಉಂಬಳಿಗಳನ್ನು ಬಿಟ್ಟ. ಮೈಸೂರಿನ ಲಕ್ಷ್ಮೀಕಾಂತ, ಶ್ರೀರಂಗಪಟ್ಟಣದ ರಂಗನಾಥ ಮತ್ತು ಮೇಲುಕೋಟೆಯ ಚಲುವರಾಯ ಈತನ ಆರಾಧ್ಯದೈವಗಳು. ಈ ಎಲ್ಲ ದೇವಾಲಯಗಳ ದುರಸ್ತಿಗೂ ಪೂಜಾದಿಗಳಿಗೂ ವ್ಯವಸ್ಥೆ ಮಾಡಿದ. ಮೇಲುಕೋಟೆಯ ದೇವರಿಗೆ ರಾಜಮುಡಿ ಎಂಬ ಕಿರೀಟವನ್ನು ಒಪ್ಪಿಸಿದ. ಮೈಸೂರಿನ ಲಕ್ಷ್ಮೀಕಾಂತ ದೇವಾಲಯದ ಹೆಗ್ಗೋಪುರವನ್ನು ಕಟ್ಟಿಸಿದ. ಈತನ ಕಾಲದಲ್ಲಿ ಶ್ರೀವೈಷ್ಣವಮತಕ್ಕೆ ಬಹಳ ಪ್ರೋತ್ಸಾಹ ದೊರಕಿತು. ಶ್ರೀ ವೈಷ್ಣವಕವಿಗಳಾದ ಶ್ರೀರಂಗಮಾಹಾತ್ಮ್ಯದ ಕರ್ತೃ ಸಿಂಗರಾರ್ಯ, ಕರ್ಣವೃತ್ತಾಂತವನ್ನು ಬರೆದ ತಿರುಮಲಾರ್ಯ ಇವನ ಆಸ್ಥಾನದಲ್ಲಿದ್ದರು. ತಿರುಮಲಾರ್ಯ ಕೆಲಕಾಲ ರಾಜ ಒಡೆಯನ ಪ್ರಧಾನಿಯೂ ಆಗಿದ್ದ.

ಈತನ ಪಟ್ಟದ ರಾಣಿ ಬೊಮ್ಮನಹಳ್ಳಿಯ ವೀರಾಂಬ ಅಲ್ಲದೆ ಈತನಿಗೆ ಅನೇಕ ಪತ್ನಿಯರಿದ್ದರು. ನಂಜರಾಜ, ನರಸರಾಜ, ಬೆಟ್ಟ ಒಡೆಯ ಮತ್ತು ಇಮ್ಮಡಿ ರಾಜ ಒಡೆಯ ಈತನ ಮಕ್ಕಳು.

ಕಿರಿಯ ಪಾಳೆಯಪಟ್ಟಾಗಿದ್ದ ಮೈಸೂರನ್ನು ದೊಡ್ಡ ರಾಜ್ಯವಾಗಿ ವಿಸ್ತರಿಸಿದ ಕೀರ್ತಿಯನ್ನು ಗಳಿಸಿದ ರಾಜ ಒಡೆಯ 1617ರಲ್ಲಿ ಮೃತನಾದ.*

**ರಾಜಒಡೆಯರ್ II:** ಮೈಸೂರು ರಾಜವಂಶದ ದೊರೆ (1637–38). ಒಂದನೆಯ ರಾಜ ಒಡೆಯನ ಮಗ. ಜನನ, ತಂದೆ ಕಾಲವಾದ ಅನಂತರ ಮೇ 20, 1612ರಲ್ಲಿ. ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ 6ನೆಯ ಚಾಮರಾಜನ ಮರಣಾನಂತರ ಈತ ಪಟ್ಟಕ್ಕೆ ಬಂದ. ಶಾಸನಗಳಲ್ಲಿ ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಈತನನ್ನು ಇಮ್ಮಡಿ ರಾಜರಸ, ಇಮ್ಮಡಿ ರಾಜೊಡೆಯರ್, ಇಮ್ಮಡಿ ರಾಜ ಎಂದು ಕರೆಯಲಾಗಿದೆ.

ಈತ ಪಟ್ಟಕ್ಕೆ ಬರುವ ವೇಳೆಗಾಗಲೇ ಅರಸೊತ್ತಿಗೆಯ ಮೇಲೆ ದಳವಾಯಿಗಳ ಪ್ರಾಬಲ್ಯ ಅಧಿಕಗೊಳ್ಳುತ್ತ ಬಂದಿತ್ತು. ಇವನ ಕಾಲದಲ್ಲಿ ವಿಕ್ರಮರಾಯ ದಳವಾಯಿಯಾಗಿ ಮುಂದುವರಿದ. 1638ರಲ್ಲಿ ನಡೆದ ಅರಕಲಗೂಡಿನ ಮುತ್ತಿಗೆ ಇವನ ಆಳ್ವಿಕೆಯ ಕಾಲದ ಒಂದು ಮುಖ್ಯ ಘಟನೆ. ದಳವಾಯಿ ವಿಕ್ರಮರಾಯ ಸೇನೆಯೊಂದಿಗೆ ಅರಕಲಗೂಡಿಗೆ ಮುತ್ತಿಗೆ ಹಾಕಿ, ಅಲ್ಲಿನ ಒಡೆಯ ಕೃಷ್ಣಪ್ಪನಾಯಕನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡಿಕೊಂಡು ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದ.

ರಾಜ ಒಡೆಯ ಪ್ರತಿಭಾನ್ವಿತನಾದ ಅರಸ. ಇವನ ಧೈರ್ಯ ಮತ್ತು ಪರಾಕ್ರಮಗಳು ಸಾಹಿತ್ಯ ಗ್ರಂಥಗಳಲ್ಲಿ ಹಾಗೂ ಶಾಸನಗಳಲ್ಲಿ ಪ್ರತಿಧ್ವನಿತವಾಗಿವೆ. ಈತ ಕೇವಲ ಒಂದೂವರೆ ವರ್ಷಗಳ ಕಾಲ ಆಳಿದನಾದರೂ ಇವನ ಆಳ್ವಿಕೆ ಜನಪ್ರಿಯವಾಗಿತ್ತು, ದಕ್ಷತೆಗೆ ಹೆಸರಾಗಿತ್ತು. ತನ್ನ ಪೂರ್ವಿಕರ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಬಂದನಲ್ಲದೆ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ಪೋಷಕನೂ ಆಗಿದ್ದ. ವಿಷ್ಣುವಿನ ಪರಮಭಕ್ತನಾದ ಈತ ವೈಷ್ಣವಧರ್ಮಕ್ಕೆ ಸಂಬಂಧಿಸಿದ ಭಕ್ತಿ ಪ್ರಧಾನವಾದ ಸಾಹಿತ್ಯದ ಪಠನವನ್ನು ಕೇಳುವುದರಲ್ಲಿ ಉತ್ಸುಕನಾಗಿದ್ದ. ಒಮ್ಮೆ ಇವನ

ದೇಹಸ್ಥಿತಿ ಸರಿಯಿಲ್ಲದಿದ್ದಾಗ ದಳವಾಯಿ ವಿಕ್ರಮರಾಯ ಆಸ್ಥಾನದ ವೈದ್ಯನ ಮೂಲಕ ವಿಷವಿತ್ತು ಇವನನ್ನು ಕೊಲೆಮಾಡಿಸಿದ. **(ಎಚ್.ವಿ.ಎಸ್.)**

**ರಾಜಕುಮಾರ್:** 1929–2006. ಕನ್ನಡ ಚಿತ್ರರಂಗದ ಮೇರು ನಾಯಕ ನಟ. ಕರ್ನಾಟಕ ರತ್ನ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರು. ಮೈಸೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದ ಚಾಮರಾಜನಗರದಿಂದ (ಈಗ ಜಿಲ್ಲೆ) ಸು.20 ಕಿಮೀ ದೂರದ ಗಾಜನೂರಿನಲ್ಲಿ 1929 ಏಪ್ರಿಲ್ 24ರಂದು ಜನಿಸಿದರು. ಕನಕಪುರದ ಸಮೀಪದ ಮುತ್ತತ್ತಿ ಕ್ಷೇತ್ರದ ಮುತ್ತತ್ತಿರಾಯನ ವರಪ್ರಸಾದದಿಂದ ಹುಟ್ಟಿದ ಮಗು ಎಂಬ ನಂಬಿಕೆಯಿಂದ ಇವರಿಗೆ ಮುತ್ತುರಾಜ ಎಂದು ಹೆಸರಿಟ್ಟರು. ಇವರ ತಂದೆ ಪ್ರಸಿದ್ಧ ರಂಗಭೂಮಿ ನಟ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ **(ನೋಡಿ)**, ತಾಯಿ ಲಕ್ಷ್ಮಮ್ಮ. ಬಾಲ್ಯ ಜೀವನವನ್ನು ಬಡತನದಲ್ಲಿ ಕಳೆದರು. ಇವರ ಆರಂಭದ ವಿದ್ಯಾಭ್ಯಾಸ ಮೂರನೆಯ ತರಗತಿಗೇ ಕುಂಠಿತವಾಯಿತು. ಆ ಕಾಲದಲ್ಲಿ ಇವರ ತಂದೆ ನಾಟಕ ಕಲಿಸುವ ಮಾಸ್ತರು; ಅವರ ಜೊತೆ ಊರೂರು ಪ್ರವಾಸ ಮಾಡಿದರು. ತಂದೆಯವರಿಂದಲೇ ಹಾಡುಗಾರಿಕೆ, ಅಭಿನಯಗಳಲ್ಲಿ ತರಪೇತು ಪಡೆದರು. ಅನಂತರ ಗುಬ್ಬಿ ವೀರಣ್ಣನವರ ನಾಟಕ ಕಂಪನಿ ಪ್ರವೇಶಿಸುವುದರ ಮೂಲಕ ವೃತ್ತಿ ರಂಗ ಜೀವನವನ್ನು ಪ್ರಾರಂಭಿಸಿದರು.

ಮೊದಮೊದಲಿಗೆ ಬಾಲಪಾತ್ರಗಳು, ಸಖಿ, ಸೇವಕಿ ಮೊದಲಾದ ಹೆಣ್ಣು ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಕುರುಕ್ಷೇತ್ರ ನಾಟಕದಲ್ಲಿ ಇವರು ಅಭಿಮನ್ಯು, ಕುಂತಿ ಮೊದಲಾದ ಪಾತ್ರಗಳಲ್ಲಿ ಅಭಿನಯಿಸಿ ಹೆಸರು ಪಡೆದರು. ಆಗ ಗುಬ್ಬಿ ಕಂಪನಿಯಲ್ಲಿ ಬಿ.ವಿ. ಕಾರಂತ್, ಎಂ.ವಿ.ವಾಸುದೇವರಾವ್ ಮೊದಲಾದವರು ಇವರ ಸಹೋದ್ಯೋಗಿಗಳಾಗಿದ್ದರು.

ಇವರು 1942ರ ವೇಳೆಗೆ ಕಲ್ಯೆವಾಣಿ ಫಿಲಮ್ಸ್‌ನವರ ಭಕ್ತಪ್ರಹ್ಲಾದ ಚಿತ್ರದಲ್ಲಿ ಬಾಲಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದರಾದರೂ ಚಿತ್ರರಂಗಕ್ಕೆ ಅಧಿಕೃತ ಪ್ರವೇಶವಾದದ್ದು ಗುಬ್ಬಿ ವೀರಣ್ಣನವರು ನಿರ್ಮಿಸಿದ ಬೇಡರಕಣ್ಣಪ್ಪ (1954) ಚಿತ್ರದ ಮೂಲಕ ಈ ಚಿತ್ರದ ನಿರ್ದೇಶಕರಾದ ಎಚ್.ಎಲ್.ಎನ್. ಸಿಂಹ ಅವರು ಇವರಿಗೆ ರಾಜಕುಮಾರ್ ಎಂದು ಚಿತ್ರ ನಾಮಕರಣ ಮಾಡಿದರು. ಅಲ್ಲಿಂದ ಮುಂದೆ ಚಿತ್ರರಂಗದಲ್ಲಿ ರಾಜಕುಮಾರ್ ಎಂದೇ ಪ್ರಸಿದ್ಧರಾದರು.

ಮೊದಮೊದಲು ಭಕ್ತಿ ಪಾತ್ರಗಳಿಗೆ ಮಾತ್ರ ಮೀಸಲಾದವರು ಎನ್ನುವಷ್ಟು ಸೊಗಸಾಗಿ ಭಕ್ತಿ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಭಕ್ತವಿಜಯ, ಹರಿಭಕ್ತ, ಓಹಿಲೇಶ್ವರ(1956), ಸತೀ ನಳಾಯಿನಿ(1957), ಕೃಷ್ಣಗಾರುಡಿ (1958), ಧರ್ಮವಿಜಯ(1959), ದಶಾವತಾರ, ಭಕ್ತ ಕನಕದಾಸ(1960), ಶ್ರೀಶೈಲ ಮಹಾತ್ಮೆ, ಕೈವಾರ ಮಹಾತ್ಮೆ, ಭಕ್ತ ಚೇತ(1961), ಮಹಾತ್ಮ ಕಬೀರ್(1962), ಸಂತ ತುಕಾರಾಂ(1963), ಸರ್ವಜ್ಞಮೂರ್ತಿ(1965), ಮಂತ್ರಾಲಯ ಮಹಾತ್ಮ(1966), ಭಕ್ತಕುಂಬಾರ(1974)–ಈ ಚಿತ್ರಗಳಲ್ಲಿನ ಇವರ ಭಕ್ತಿಪಾತ್ರಗಳ ಅಭಿನಯ ಅಮೋಘವಾದುದು. ಭೂಕೈಲಾಸದ (1958) ರಾವಣ, ಮಹಿಷಾಸುರಮರ್ದಿನಿಯ(1959) ಮಹಿಷ, ಶ್ರೀರಾಮಾಂಜನೇಯ ಯುದ್ಧದ(1963) ರಾಮ, ಮೋಹಿನಿ ಭಸ್ಮಾಸುರದ(1966) ಭಸ್ಮಾಸುರ, ಮಹಾಸತಿ ಅನಸೂಯದ(1965) ನಾರದ, ಬಬ್ರುವಾಹನದ (1977) ಬಬ್ರುವಾಹನ ಇವರ ಜನಪ್ರಿಯ ಪೌರಾಣಿಕ ಪಾತ್ರಗಳು. ಸಾಮಾಜಿಕ, ಜನಪದ, ಐತಿಹಾಸಿಕ ಪಾತ್ರಗಳಲ್ಲಿಯೂ ಅಷ್ಟೇ ಮಟ್ಟಿನ ಕೌಶಲದಿಂದ ಅಭಿನಯ ಪ್ರತಿಭೆ ತಮ್ಮಲ್ಲಿದೆ ಎನ್ನುವುದನ್ನು ಬಹುಬೇಗ ಸ್ಪಷ್ಟಪಡಿಸಿದರು. ಇವರ ಮೊದಲ ಸಾಮಾಜಿಕ ಚಿತ್ರ ಪಂಢರಿಬಾಯಿ ನಿರ್ಮಿಸಿದ ರಾಯರ ಸೊಸೆ(1957). ಇತರ ಪ್ರಮುಖ ಸಾಮಾಜಿಕ ಚಿತ್ರಗಳಿವು: ಕರುಣೆಯೇ ಕುಟುಂಬದ ಕಣ್ಣು(1962), ನಂದಾದೀಪ, ಸಾಕುಮಗಳು, ಗೌರಿ, ಕುಲವಧು (1963), ಚಂದವಳ್ಳಿಯ ತೋಟ, ನಾಂದಿ (1964), ತೂಗುದೀಪ, ಸಂಧ್ಯಾರಾಗ(1966), ಚಕ್ರತೀರ್ಥ(1967), ಗಾಂಧಿನಗರ, ಸರ್ವಮಂಗಳಾ(1968), ಮಾರ್ಗದರ್ಶಿ, ಉಯ್ಯಾಲೆ, ಕರುಳಿನ ಕರೆ(1969), ಕಸ್ತೂರಿ ನಿವಾಸ, ಕುಲಗೌರವ(1971), ಸಿಪಾಯಿರಾಮು, ಬಂಗಾರದ ಮನುಷ್ಯ(1972), ಬಿಡುಗಡೆ, ಸ್ವಯಂವರ, ದೂರದ ಬೆಟ್ಟ, ಗಂಧದಗುಡಿ(1975) ಭಾಗ್ಯವಂತರು(1977). ಜನಪ್ರಿಯ ಜನಪದ ಚಿತ್ರಗಳಿವು : ರಾಣಿಹೊನ್ನಮ್ಮ(1960), ಆಶಾಸುಂದರಿ(1960), ಸ್ವರ್ಣಗೌರಿ, ದೇವಸುಂದರಿ, ವಿಧಿವಿಲಾಸ(1962), ವೀರಕೇಸರಿ, ಚಂದ್ರಕುಮಾರ, ಬೆಟ್ಟದ ಹುಲಿ(1965), ಕಠಾರಿವೀರ, ಮಧುಮಾಲತಿ(1966), ಗಂಗೆಗೌರಿ, ರಾಜದುರ್ಗದ ರಹಸ್ಯ, ದೇವರ ಗೆದ್ದ ಮಾನವ(1967), ಭಾಗ್ಯದೇವತೆ (1968), ಜಗಮೆಚ್ಚಿದಮಗ(1972), ಬಹದ್ದೂರ್‌ಗಂಡು(1976). ಐತಿಹಾಸಿಕ ಚಿತ್ರಗಳಲ್ಲಿಯೂ ಇವರ ನಾಯಕ ಪಾತ್ರದ ಅಭಿನಯ ಸ್ಮರಣೀಯವಾದುದು. ರಣಧೀರ ಕಂಠೀರವ (1960), ಕಿತ್ತೂರು ಚೆನ್ನಮ್ಮ(1961), ಇಮ್ಮಡಿ ಪುಲಿಕೇಶಿ(1967), ಶ್ರೀಕೃಷ್ಣದೇವರಾಯ (1970), ಮಯೂರ(1975), ಹುಲಿಯ ಹಾಲಿನ ಮೇವು(1979). ಮೊದಲಾದ ಚಿತ್ರಗಳು ಚಿತ್ರರಂಗದಲ್ಲಿ ದಾಖಲೆ ಸ್ಥಾಪಿಸಿವೆ. 1968ರಲ್ಲಿ ಬಿಡುಗಡೆಯಾದ ಜೇಡರಬಲೆ ಚಿತ್ರದ ಮೂಲಕ ಆಧುನಿಕ ಬಾಂಡ್ ಶೈಲಿಯ ಪಾತ್ರಗಳಿಗೆ ಪ್ರವೇಶಿಸಿ ಅಪಾರ ಜನಪ್ರಿಯತೆ ಗಳಿಸಿದರು. ಗೋವಾದಲ್ಲಿ ಸಿಐಡಿ 999(1968), ಆಪರೇಷನ್ ಜಾಕ್‌ಪಾಟ್ (1969), ಆಪರೇಷನ್ ಡೈಮಂಡ್ ರಾಕೆಟ್(1978)–ಈ ಚಿತ್ರಗಳು ಉಲ್ಲೇಖನೀಯ. ಅನಂತರದಲ್ಲಿ ಕನ್ನಡದಲ್ಲಿ ಈ ಸ್ವರೂಪದ ಅನೇಕ ಚಿತ್ರಗಳು ತೆರೆಕಂಡವು. 205ಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿರುವ ಇವರು ಕನ್ನಡೇತರ ಚಿತ್ರಗಳಲ್ಲಿ

ಕಾಣಿಸಿಕೊಂಡಿಲ್ಲ. ಇವರ ಚಿತ್ರಗಳು ತೆಲುಗು ಮತ್ತು ತಮಿಳಿಗೆ ಡಬ್ ಆಗಿವೆ. ಸತಿಶಕ್ತಿ(1963), ದಾರಿತಪ್ಪಿದ ಮಗ(1975), ಬಭ್ರುವಾಹನ(1976), ಮೊದಲಾದ ಚಿತ್ರಗಳಲ್ಲಿ ದ್ವಿಪಾತ್ರದಲ್ಲಿಯೂ ಕುಲಗೌರವ (1972), ಶಂಕರ್‌ಗುರು(1977) ಚಿತ್ರಗಳಲ್ಲಿ ತಂದೆ, ಮಗ, ಮೊಮ್ಮಗ–ಹೀಗೆ ತ್ರಿಪಾತ್ರಗಳಲ್ಲಿಯೂ ಕಾಣಿಸಿಕೊಂಡಿದ್ದರು.

ಇವರು ನಾಯಕನಾಗಿ ಅಭಿನಯಿಸಿದ ಚಿತ್ರ ಬಂಗಾರದ ಮನುಷ್ಯ (1972) 104 ವಾರಗಳ ಕಾಲ ಸತತವಾಗಿ ನಡೆದು ದಕ್ಷಿಣ ಭಾರತದಲ್ಲಿಯೇ, ಪ್ರಥಮ ಬಾರಿಗೆ ದಾಖಲೆ ಸ್ಥಾಪಿಸಿತು. ಅನಂತರ ಪ್ರೇಮದ ಕಾಣಿಕೆ, ಹಾಲುಜೇನು, ಕವಿರತ್ನ ಕಾಳಿದಾಸ, ಚಲಿಸುವ ಮೋಡಗಳು, ಸನಾದಿ ಅಪ್ಪಣ್ಣ, ಭಕ್ತಕುಂಬಾರ, ಶೃತಿಸೇರಿದಾಗ, ಆಕಸ್ಮಿಕ ಮೊದಲಾದ ಚಿತ್ರಗಳು ಇವರಿಗೆ ಅಪಾರ ಯಶಸ್ಸು ತಂದವು. ಇವರು ನಟಿಸಿದ ಕಡೆಯಚಿತ್ರ 'ಶಬ್ದವೇಧಿ'(2005). ಇವರ ಅನೇಕ ಚಿತ್ರಗಳು ಶತದಿನೋತ್ಸವ ಮತ್ತು ರಜತೋತ್ಸವ ಆಚರಿಸಿದೆ. ಇವರ ಅಭಿನಯದ ಭಕ್ತ ಕನಕದಾಸ, ಸತ್ಯ ಹರಿಶ್ಚಂದ್ರ, ಕುಲಗೌರವ, ಭಕ್ತಕುಂಬಾರ, ಬಂಗಾರದ ಹೂ, ಮದುವೆ ಮಾಡಿನೋಡು ಮೊದಲಾದ ಚಿತ್ರಗಳು ರಾಜ್ಯಪ್ರಶಸ್ತಿ ಗಳಿಸಿವೆ. ಇವರ ಶ್ರೇಷ್ಠ ಅಭಿನಯಕ್ಕಾಗಿ ಐದು ಬಾರಿ ರಾಜ್ಯ ಪ್ರಶಸ್ತಿ ಲಭಿಸಿದೆ. ಎರಡು ಬಾರಿ ಪ್ರತಿಷ್ಠಿತ ಫಿಲಂಫೇರ್ ಪ್ರಶಸ್ತಿ ದೊರಕಿದೆ. ಭಾರತೀಯ ಚಲನಚಿತ್ರ ರಂಗದ ಅತ್ಯುನ್ನತ ಪ್ರಶಸ್ತಿಯಾದ ದಾದಾಸಾಹೇಬ್ ಪಾಲ್ಕೆ ಪ್ರಶಸ್ತಿಯೂ (1995) ಪದ್ಮಭೂಷಣ ಪ್ರಶಸ್ತಿಯೂ ಇವರಿಗೆ ಲಭಿಸಿವೆ. ಕರ್ನಾಟಕ ರಾಜ್ಯ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಕರ್ನಾಟಕ ರತ್ನ' ಇವರಿಗೆ ಸಂದಿದೆ. ನಾಡಿನಾದ್ಯಂತ ಚಲನಚಿತ್ರ ಪ್ರೇಮಿಗಳಿಂದ, ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ. ವರನಟ, ನಟಸಾರ್ವಭೌಮ, ಕನ್ನಡ ಕಂಠೀರವ, ರಸಿಕರ ರಾಜ ಇವು ಇವರಿಗೆ ಚಲನಚಿತ್ರ ಪ್ರೇಮಿಗಳು ಕೊಟ್ಟ ಬಿರುದುಗಳು. ಮೈಸೂರು ವಿಶ್ವವಿದ್ಯಾನಿಲಯ ಇವರ ಕಲಾ ಸೇವೆಯನ್ನು ಪುರಸ್ಕರಿಸಿ 1976ರ ಫೆಬ್ರವರಿಯಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಇವರು ಕನ್ನಡ ಚಿತ್ರರಂಗದ ಬಹುತೇಕ ಎಲ್ಲ ನಾಯಕ ನಟಿಯರೊಂದಿಗೆ ಅಭಿನಯಿಸಿದ್ದರು. ಪಂಢರೀಬಾಯಿ, ಎಂ.ವಿ.ರಾಜಮ್ಮ, ಆದವಾನಿ ಲಕ್ಷ್ಮೀದೇವಿ, ಬಿ. ಸರೋಜಾದೇವಿ, ಜಮುನ, ಸಾಹುಕಾರ್ ಜಾನಕಿ, ಹರಿಣಿ, ಕೃಷ್ಣಕುಮಾರಿ, ವಂದನ, ಜಿ. ವರಲಕ್ಷ್ಮೀ, ರಾಜಶ್ರೀ, ಕಲ್ಪನಾ, ಚಂದ್ರಕಲಾ, ಪದ್ಮಪ್ರಿಯಾ ಮೊದಲಾದವರೊಡನೆ ನಟಿಸಿದ್ದರೂ ಲೀಲಾವತಿ, ಜಯಂತಿ, ಭಾರತಿ, ಆರತಿ, ಮಂಜುಳ, ಜಯಮಾಲ, ಲಕ್ಷ್ಮಿ, ಜಯಪ್ರದ, ಮಾಧವಿ, ಸರಿತಾ ಇವರೊಂದಿಗಿನ ಇವರ ತಾರಾಜೋಡಿ ಆಯಾ ಕಾಲದಲ್ಲಿ ಅಪಾರ ಜನಪ್ರಿಯತೆ ಗಳಿಸಿತ್ತು.

ಆಕರ್ಷಕ ಶಾರೀರವನ್ನು ಪಡೆದಿದ್ದ ಇವರು ಹಿನ್ನೆಲೆ ಗಾಯಕರಾಗಿಯೂ ಪ್ರಸಿದ್ಧರಾಗಿದ್ದರು. ಮಹಿಷಾಸುರಮರ್ದಿನಿ ಚಿತ್ರದಲ್ಲಿಯೇ ಹಾಡಿದ್ದರೂ ಗಾಯಕರಾಗಿ ಪ್ರಸಿದ್ಧರಾದದ್ದು ಸಂಪತ್ತಿಗೆ ಸವಾಲ್(1974) ಚಿತ್ರದಲ್ಲಿ ಹಾಡಿದ 'ಯಾರೇ ಕೂಗಾಡಲಿ ಊರೇ ಹೋರಾಡಲಿ' ಎಂದು ಆರಂಭವಾಗುವ ಎಮ್ಮೆ ಹಾಡಿನ ಮೂಲಕವೇ. ಇವರ ಹಾಡುಗಳ ಧ್ವನಿ ಮುದ್ರಿಕೆಗಳು ವಿಪುಲವಾಗಿ ಮಾರಾಟವಾಗಿವೆ. ಇವರು ಆರಂಭದಲ್ಲಿ ತಮ್ಮ ಪಾತ್ರದ ಹಾಡುಗಳಿಗೆ ಮಾತ್ರ ಕಂಠ ನೀಡುತ್ತಿದ್ದರು. ಮುಂದೆ ಅನ್ಯರ ಕೆಲವು ಚಿತ್ರಗಳಿಗೆ ಹಿನ್ನೆಲೆ ಗಾಯಕರಾಗಿ ಹಾಡಿದರು. ಅಲ್ಲದೆ ಚಿತ್ರೇತರ ಭಕ್ತಿಗೀತೆಗಳ ಮತ್ತು ಭಾವಗೀತೆಗಳ ಧ್ವನಿಮುದ್ರಿಕೆಗಳಿಗೂ ಇವರು ಹಾಡಿದ್ದುಂಟು. ಕುವೆಂಪು ಅವರ ಭಾವಗೀತೆಗಳನ್ನು ಇವರು ಸೊಗಸಾಗಿ ಹಾಡಿದ್ದಾರೆ; ಅನೇಕ ಧ್ವನಿ ಸುರಳಿಗಳನ್ನು ತಂದಿದ್ದಾರೆ. ತಾವೇ ಹಾಡಿ ನೂರಾರು ರಸಮಂಜರಿ ಕಾರ್ಯಕ್ರಮಗಳನ್ನೂ ನಡೆಸಿಕೊಟ್ಟಿದ್ದಾರೆ. ಇವರು ಹಾಡಿದ 'ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು' ಎಂಬ ಹಾಡು ಕನ್ನಡಿಗರಲ್ಲಿ ಕನ್ನಡಾಭಿಮಾನವನ್ನು ಬಡಿದೆಬ್ಬಿಸಿತ್ತು. ಇವರನ್ನು ರಾಜಕೀಯ ರಂಗಕ್ಕೆ ಸೆಳೆದುಕೊಳ್ಳಬೇಕೆಂಬ ಅನೇಕ ಪ್ರಯತ್ನಗಳು ಸಫಲವಾಗಲಿಲ್ಲ. ಚಿತ್ರರಂಗದ ಸಮಸ್ಯೆಗಳಿಗೆ, ಕನ್ನಡನಾಡು, ನುಡಿಯ ಸಮಸ್ಯೆಗಳಿಗೆ ಅತೀವವಾಗಿ ಸ್ಪಂದಿಸಿದ ಇವರು ಬರ, ಪ್ರವಾಹ ಪರಿಸ್ಥಿತಿಯಲ್ಲಿ ಪಾದಯಾತ್ರೆ ಮಾಡಿ ಹಣ ಸಂಗ್ರಹಿಸಿ ಸಹಕರಿಸಿದರಲ್ಲದೆ ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಕನ್ನಡದ ಪ್ರಮುಖ ಶಕ್ತಿಯಾಗಿ ಕಾಣಿಸಿಕೊಂಡಿದ್ದರು. ಇವರು ಯೋಗಾಭ್ಯಾಸ ಮತ್ತು ನಿತ್ಯ ವ್ಯಾಯಾಮದಿಂದ ದೇಹಾರೋಗ್ಯವನ್ನು ಬಹುಕಾಲ ಕಾಪಾಡಿಕೊಂಡಿದ್ದರು. ಜೀವನದಲ್ಲಿ ಸರಳತೆಯನ್ನು ಗೌರವಿಸುವ ಸುಸಂಸ್ಕೃತ ವ್ಯಕ್ತಿಯಾಗಿದ್ದ ಇವರು ತಮ್ಮ ವಿನಯ ಸೌಜನ್ಯಗಳಿಗೆ ಪ್ರಸಿದ್ಧರಾಗಿದ್ದರು. ತಂದೆಯವರ ಬಗ್ಗೆ ಅಮಿತ ಗೌರವ, ಅಪಾರ ಅಭಿಮಾನವಿತ್ತು. ಇವರು ತಮ್ಮ ಚಿತ್ರಗಳನ್ನು ನೋಡುತ್ತಿದ್ದ ಶ್ರೀಸಾಮಾನ್ಯರನ್ನು ಅಪಾರವಾಗಿ ಗೌರವಿಸುತ್ತಿದ್ದರು. ಅವರನ್ನು 'ಅಭಿಮಾನಿ ದೇವರುಗಳು' ಎಂದು ಎದೆಯಾಳದಿಂದ ಸ್ಮರಿಸುತ್ತಿದ್ದರು. ಇವರ ಪತ್ನಿ ಪಾರ್ವತಮ್ಮ. ಇವರ ಮೂವರು ಪುತ್ರರಾದ ಶಿವರಾಜಕುಮಾರ್ (ಶಿವಣ್ಣ), ರಾಘವೇಂದ್ರ ರಾಜಕುಮಾರ್, ಪುನೀತ್ ರಾಜಕುಮಾರ್**(ನೋಡಿ)** ಇಂದು ಕನ್ನಡ ಚಿತ್ರರಂಗದಲ್ಲಿ ನಾಯಕ ನಟರಾಗಿ ಹೆಸರು ಮಾಡಿದ್ದಾರೆ. ಕುಖ್ಯಾತ ಕಾಡುಗಳ್ಳ, ದಂತಚೋರ ವೀರಪ್ಪನ್ 2000ದ ಜುಲೈ 30ರಂದು ಇವರನ್ನು ಸೆರೆ ಹಿಡಿದಿದ್ದ. ನೂರ ಎಂಟು ದಿನಗಳ ಕಾಲ ಕಾಡಿನಲ್ಲಿ ಬಂಧನದಲ್ಲಿರಿಸಿ ಕೊಂಡಿದ್ದು ಅನಂತರ ಬಿಡುಗಡೆಗೊಳಿಸಿದ್ದ. ರಾಜಕುಮಾರ್ ಅವರ ಬದುಕಿನಲ್ಲಿ ಇದೊಂದು ಅವಿಸ್ಮರಣೀಯ ಘಟನೆ.

ರಾಜಕುಮಾರ್ ಅವರ ವ್ಯಕ್ತಿತ್ವ ಸಾಧನೆಗಳನ್ನು ಕುರಿತಂತೆ ಕನ್ನಡದಲ್ಲಿ ಹಲವು ಕೃತಿಗಳು ಪ್ರಕಟಗೊಂಡಿವೆ. ಸದಾಶಿವಯ್ಯ ಅವರು ಬರೆದಿರುವ ಒಂದು ಕಥಾನಾಯಕನ ಕಥೆ 'ವಿಜಯಚಿತ್ರ' ಚಲನಚಿತ್ರ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತ್ತು. ವಿ. ನಾಗರಾಜ್ ಅವರ 'ರಾಜಕುಮಾರ್', ಕರ್ನಾಟಕ ಚಲನಚಿತ್ರ ಪತ್ರಕರ್ತರ ಪರಿಷತ್ ಪ್ರಕಟಿಸಿದ ಶ್ಯಾಮಸುಂದರ ಕುಲಕರ್ಣಿಯವರ 'ರಾಜಕುಮಾರ್' ಮೊದಲಾದ ಕೃತಿಗಳನ್ನೂ ಇಲ್ಲಿ ಹೆಸರಿಸಬಹುದು. ರಾಜಕುಮಾರ್ ಅವರು ಪದ್ಮಭೂಷಣ ಪ್ರಶಸ್ತಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಸಾರ್ಥಕ ಸುವರ್ಣ ಎಂಬ ಶೀರ್ಷಿಕೆಯಡಿಯಲ್ಲಿ ಇವರನ್ನು ಕುರಿತಂತೆ ಹಲವು ಸಂಪುಟಗಳನ್ನು ಹೊರತಂದಿದೆ. ಇವುಗಳಲ್ಲಿ ಎ.ಎನ್. ಪ್ರಹ್ಲಾದರಾವ್ ಬರೆದಿರುವ ಪದ್ಮಭೂಷಣ ರಾಜಕುಮಾರ್ ಅಭಿವಂದನೆ ಎಂಬ ಬರೆಹ ಚಿತ್ರಜಗತ್ತಿ ನಲ್ಲಿ ರಾಜಕುಮಾರ್ ಅವರ 50 ವರ್ಷಗಳ ಸಾಧನೆಗಳನ್ನು ದಾಖಲಿಸಿದೆ. ಇದೇ ಸರಣಿಯಲ್ಲಿ 2005 ರಲ್ಲಿ ಬಂಗಾರದ ಮನುಷ್ಯ ಎಂಬ ಸಂಪುಟ ಪ್ರಕಟಗೊಂಡಿದೆ.

ಕನ್ನಡ ನಾಡಿನ ಮೇಲೆ, ಕನ್ನಡಿಗರ ಮೇಲೆ ರಾಜಕುಮಾರ್ ಅವರ ವ್ಯಕ್ತಿತ್ವದ ಪ್ರಭಾವ ಅಪಾರವಾದುದು. ಇವರು 2006ರ ಏಪ್ರಿಲ್ 12 ರಂದು ಬೆಂಗಳೂರಿನಲ್ಲಿ ನಿಧನರಾದರು. **(ಎ.ಎಸ್.ಎಂ.ಯು.)**

**ರಾಜಗೋಪಾಲಕೃಷ್ಣರಾಯ, ಕಡೇಕಾರು:** 1885–1953. ಹೊಸಗನ್ನಡ ಅರುಣೋದಯ ಕಾಲದ ವಿದ್ವಾಂಸರು; ಪತ್ರಿಕೋದ್ಯಮಿಗಳು. ಈ ಶತಮಾನದ ಆರಂಭದ ದಶಕಗಳಲ್ಲಿ ಪ್ರಸಿದ್ಧವಾಗಿದ್ದ ಶ್ರೀಕೃಷ್ಣಸೂಕ್ತಿ ಎಂಬ ಮಾಸ ಪತ್ರಿಕೆಯ ಸಂಪಾದಕರಲ್ಲೊಬ್ಬರು (ಇನ್ನೊಬ್ಬರು ಕೆರೋಡಿ ಸುಬ್ಬರಾಯರು). ಇವರು ಉಡುಪಿ ತಾಲ್ಲೂಕಿನಲ್ಲಿ ನಿಡಂಬೂರು ಮಾಗಣೆಗೆ ಸೇರಿದ ಕಡೇಕಾರು ಗ್ರಾಮದಲ್ಲಿ 1884ರಲ್ಲಿ ಜನಿಸಿದರು. ಇವರ ಬಾಲ್ಯದ

ವಿಚಾರ ಹೆಚ್ಚಾಗಿ ತಿಳಿಯದು. ಉಡುಪಿ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್‌ವರೆಗೆ ವಿದ್ಯಾಭ್ಯಾಸ ನಡೆಸಿದರಂತೆ. ಆಗ ಇವರು ಪ್ರಸಿದ್ಧ ಕವಿ ಮುದ್ದಣನ ಅಚ್ಚುಮೆಚ್ಚಿನ ಶಿಷ್ಯರಾಗಿದ್ದಂತೆ ತಿಳಿದುಬರುತ್ತದೆ.

ರಾಜಗೋಪಾಲಕೃಷ್ಣರಾಯರ ಹೆಸರು ಕನ್ನಡ ನಾಡಿಗೆ ಪರಿಚಿತವಾದದ್ದು. ಇವರು ಶ್ರೀಕೃಷ್ಣಸೂಕ್ತಿ ಮಾಸಪತ್ರಿಕೆಯ ಸಂಪಾದಕರಾದ ಅನಂತರ. ಇವರ ಬಂಧುಗಳಾದ ಕೆರೋಡಿ ಸುಬ್ಬರಾಯರು 1906ರಲ್ಲಿ ಶ್ರೀಕೃಷ್ಣಸೂಕ್ತಿ ಮಾಸಪತ್ರಿಕೆಯನ್ನು ಆರಂಭಿಸಿ ಒಂದು ವರ್ಷ ಕಾಲ ನಡೆಸಿದರು. ಸು. 1907ರಲ್ಲಿ ಈ ಮಾಸಪತ್ರಿಕೆಯ ಸಂಪಾದಕರಲ್ಲೊಬ್ಬರಾಗಿ ಪತ್ರಿಕೋದ್ಯಮ ರಂಗವನ್ನು ಪ್ರವೇಶಿಸಿದ ರಾಜಗೋಪಾಲಕೃಷ್ಣರಾಯರು ಪತ್ರಿಕೆಯನ್ನು ಬೆಳೆಸುವಲ್ಲಿ ಬಹುವಾಗಿ ಶ್ರಮಿಸಿದರು. ಕೆರೋಡಿ ಸುಬ್ಬರಾಯರು ಸಂಪಾದಕರಲ್ಲೊಬ್ಬರಾಗಿದ್ದರೂ ಪತ್ರಿಕೆಯ ಪೂರ್ಣ ಜವಾಬ್ದಾರಿ ಕೃಷ್ಣರಾಯರದಾಗಿತ್ತು. ಈ ಪತ್ರಿಕೆಯನ್ನು ಇವರು ಒಟ್ಟು ಒಂಬತ್ತು ವರ್ಷಗಳ ಕಾಲ ನಡೆಸಿದರು. ಶ್ರೀಕೃಷ್ಣಸೂಕ್ತಿ ಕನ್ನಡನಾಡಿನಲ್ಲಷ್ಟೇ ಅಲ್ಲದೆ ಕನ್ನಡನಾಡಿನ ಹೊರಗೂ (ಮದರಾಸು ಮತ್ತು ಮುಂಬಯಿ ಪ್ರಾಂತ್ಯಗಳಲ್ಲಿ) ಒಳ್ಳೆಯ ಪತ್ರಿಕೆಯೆಂಬ ಹೊಗಳಿಕೆಗೆ ಪಾತ್ರವಾಗಿತ್ತು. ಈ ಪತ್ರಿಕೆಯಲ್ಲಿ ಇವರು ಬರೆದ ಸಂಪಾದಕೀಯ ಲೇಖನಗಳು ಗಮನಾರ್ಹವಾದುವುಗಳಾಗಿವೆ. ಇವರು ಕಂಠೀರವ ಎಂಬ ವಾರಪತ್ರಿಕೆಯ ಸ್ಥಾಪನೆಗೂ ಕಾರಣರಾಗಿದ್ದರು. ಕೆಲಕಾಲ ಆ ಪತ್ರಿಕೆಯ ಸಂಪಾದಕರಾಗಿಯೂ ಇವರು ಕೆಲಸ ನಿರ್ವಹಿಸಿದಂತೆ ತಿಳಿದುಬರುತ್ತದೆ.

ರಾಜಗೋಪಾಲ ಕೃಷ್ಣರಾಯರು ಉತ್ತಮ ಸಾಹಿತಿಯೂ ಹೌದು. ಅನೇಕ ಕಥೆ, ಕವನ, ನಾಟಕಗಳನ್ನು ಬರೆದಿದ್ದಾರೆ. ಇವರು ಉತ್ತಮ ಅನುವಾದಕರೂ ಆಗಿದ್ದರು. ಕನ್ನಡವಲ್ಲದೆ ಇಂಗ್ಲಿಷ್, ಬಂಗಾಲಿ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಇವರು ಇಂಗ್ಲಿಷ್ ಹಾಗೂ ಬಂಗಾಲಿಯಿಂದ ಅನೇಕ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರ ಹೆಚ್ಚಿನ ಅನುವಾದ ಹಾಗೂ ಸ್ವತಂತ್ರ ಬರೆಹಗಳು ಸುವಾಸಿನಿ, ಶ್ರೀಕೃಷ್ಣಸೂಕ್ತಿ, ಕಂಠೀರವ, ಸ್ವದೇಶಾಭಿಮಾನಿ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳ ಅಭಿವೃದ್ಧಿಯಲ್ಲಿ ಆಸಕ್ತರಾಗಿದ್ದ ಕೃಷ್ಣರಾಯರು ಸಾರ್ವಜನಿಕ ರಂಗದಲ್ಲಿಯೂ ಹೆಸರು ಪಡೆದಿದ್ದರು. ಅನೇಕ ಸಂಘಸಂಸ್ಥೆಗಳ ಜೊತೆ, ಉನ್ನತ ವ್ಯಕ್ತಿಗಳ ಜೊತೆ ನಿಕಟಸಂಪರ್ಕವನ್ನು ಇಟ್ಟುಕೊಂಡಿದ್ದರು. ದ್ರಾವಿಡ ಬ್ರಾಹ್ಮಣರ ಪರಿಷತ್ತಿಗೆ ಅಧ್ಯಕ್ಷರಾಗಿದ್ದರು. 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಯಾಗಿ ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿದ್ದರು. ಬಂಗಾಲಿ ಭಾಷೆ ಸಾಹಿತ್ಯಗಳ ಬಗ್ಗೆ ಅಪಾರ ಒಲವನ್ನು ಹೊಂದಿದ್ದ ಇವರು ವಂಗಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿದ್ದರು. ಇಂದು ಕನ್ನಡನಾಡಿನಲ್ಲಿ ಹೆಸರಾದ ಉಡುಪಿ ಕರ್ಣಾಟಕ ಸಂಘವನ್ನು ಸ್ಥಾಪಿಸಿದವರು ಇವರೇ. ಈ ಸಂಘ ರಾಯರ ಮುಂದಾಳತ್ವದಲ್ಲಿ 1944ರಲ್ಲಿ ಸ್ಥಾಪನೆಗೊಂಡಿತು. ಇವರು ಈ ಸಂಘದ ಅಧ್ಯಕ್ಷರಾಗಿ 6 ವರ್ಷಗಳ ಕಾಲ ಅವಿಶ್ರಾಂತವಾಗಿ ದುಡಿದರು. ಎಲ್ಲಕ್ಕಿಂತ ಹೆಚ್ಚಾಗಿ ಇವರು ತಮ್ಮ ಪತ್ರಿಕೆಯ ಮೂಲಕ ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಶ್ರೀಮಂತಗೊಳಿಸಲು ನೆರವಾದದ್ದಲ್ಲದೆ, ನೂರಾರು ಜನ ಲೇಖಕರನ್ನು ಕನ್ನಡ ಸಾರಸ್ವತ ಲೋಕಕ್ಕೆ ಶ್ರೀಕೃಷ್ಣಸೂಕ್ತಿಯ ಮೂಲಕ ಪರಿಚಯ ಮಾಡಿಕೊಟ್ಟದ್ದು ವಿಶೇಷ ಉಲ್ಲೇಖಕ್ಕೆ ಪಾತ್ರವಾದ ಸಂಗತಿ.

ತಮ್ಮ ಕಡೆಗಾಲದವರೆಗೂ ಕನ್ನಡದ ಏಳ್ಗೆಗಾಗಿ ದುಡಿದ ಕೃಷ್ಣರಾಯರು 1953 ಅಕ್ಟೋಬರ್ 17ರಂದು ನಿಧನ ಹೊಂದಿದರು. ಇವರನ್ನು ಕುರಿತಂತೆ ಹಾ.ತಿ. ಕೃಷ್ಣೇಗೌಡ ಅವರು ಕಡೇಕಾರು ರಾಜಗೋಪಾಲಕೃಷ್ಣರಾಯರು ಬದುಕು–ಬರಹ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ (1978). **(ಎನ್.ಆರ್.ಆರ್.)**

**ರಾಜಪುರೋಹಿತ, ನಾರಾಯಣ ಶ್ರೀನಿವಾಸ:** 1877–1953. ಪ್ರಸಿದ್ಧ ಸಂಶೋಧಕರು. ಕನ್ನಡ ನಾಡಿನ ಪ್ರಾಚೀನ ಇತಿಹಾಸ, ಸಂಸ್ಕೃತಿ ಮತ್ತು ಸಾಹಿತ್ಯಕ್ಷೇತ್ರಗಳಲ್ಲಿ ಸಂಶೋಧನೆಯನ್ನು ನಡೆಸಿ, ಕರ್ನಾಟಕದ ಪ್ರಾಚೀನ ಪರಂಪರೆಯ ವಿಷಯದಲ್ಲಿ ಕನ್ನಡಿಗರಲ್ಲಿ ತಿಳಿವನ್ನು ಬೆಳೆಸಿ, ಅವರಲ್ಲಿ ಕರ್ನಾಟಕತ್ವದ ಕಲ್ಪನೆಯನ್ನು ಮೂಡಿಸಿ, ಆ ಮೂಲಕ ಕರ್ನಾಟಕ ಸಾಂಸ್ಕೃತಿಕ ಏಕೀಕರಣವನ್ನು ಸಾಧಿಸಬೇಕೆಂದು ದುಡಿದ ಮಹನೀಯರು. ಹಾವೇರಿ ತಾಲ್ಲೂಕಿನ ಅಗಡಿ ಇವರ ಜನ್ಮಸ್ಥಳ. ಧಾರವಾಡದಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು. ಕೆಲಕಾಲ ಸರ್ಕಾರಿ ಶಾಲಾ ಉಪಾಧ್ಯಾಯರಾಗಿ ಕೆಲಸ ಮಾಡಿದ ಅನಂತರ ಧಾರವಾಡದಲ್ಲಿ ಆಲೂರು ವೆಂಕಟರಾಯರು ಸ್ಥಾಪಿಸಿದ್ದ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಶಿಕ್ಷಕರಾದರು. ಆ ಶಾಲೆ ನಿಂತುಹೋದಮೇಲೆ ಕರ್ನಾಟಕ ಇತಿಹಾಸ ಸಂಶೋಧನೆಯಲ್ಲಿ ತೊಡಗಿದರು. 1914ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಸಂಸ್ಥಾಪಕರಲ್ಲಿ ಇವರು ಪ್ರಮುಖರು. ತಾಡವೋಲೆ ಗ್ರಂಥಗಳು, ತಾಮ್ರಶಾಸನಗಳು, ಪುರಾತನ ನಾಣ್ಯಗಳು ಮುಂತಾದ ಆಧಾರ ಸಾಮಾಗ್ರಿಗಳನ್ನು ಸಂಗ್ರಹಿಸುವ ಸಲುವಾಗಿ ಕನ್ನಡನಾಡಿನ ಆದ್ಯಂತ ಸಂಚರಿಸಿದರು.

ಇವರ ಸಂಶೋಧನೆಯ ವ್ಯಾಪ್ತಿ ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಗಳನ್ನೂ ಒಳಗೊಂಡಿತ್ತು. ಈ ಸಂಬಂಧವಾಗಿ ಇವರು ಬರೆದ ಅನೇಕ ವಿದ್ವತ್ಪೂರ್ಣ ಲೇಖನಗಳು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಮತ್ತು ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಪ್ರಾಚೀನ ಕರ್ನಾಟಕ ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಈ ಲೇಖನಗಳಲ್ಲಿ ಇವರು ನೃಪತುಂಗ, ರನ್ನ, ದುರ್ಗಸಿಂಹ, ಬಸವಣ್ಣ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದ ಪ್ರಮುಖ ಕನ್ನಡ ಕವಿಗಳ ಕಾಲ, ದೇಶ, ಮತಗಳನ್ನು ಕುರಿತು ಚರ್ಚಿಸಿದ್ದಾರೆ.

ಕಾಶಿಯ ಭಾರತಧರ್ಮ ಮಹಾಮಂಡಲದಲ್ಲಿ ಧರ್ಮಶಾಸ್ತ್ರವನ್ನೂ ತತ್ತ್ವಶಾಸ್ತ್ರವನ್ನೂ ಅಧ್ಯಯನ ಮಾಡಿದ್ದ ರಾಜಪುರೋಹಿತರು ಸಹವಾಸಿ, ಕಾಣ್ವ ಮುಂತಾದ ಕೆಲವು ಬ್ರಾಹ್ಮಣ ಪಂಗಡಗಳ ಬಗೆಗೆ ಸಂಶೋಧನಾತ್ಮಕ ಲೇಖನಗಳನ್ನು ಬರೆದುದಲ್ಲದೆ, ದಾನಧರ್ಮ ಪದ್ಧತಿ (1910), ಸುರೇಶ್ವರಾಚಾರ್ಯರ ಚರಿತ್ರೆ (1922), ಮಧ್ವಾಚಾರ್ಯರ ಚರಿತ್ರೆ (1936), ಯಾಜ್ಞವಲ್ಕ್ಯರ ಚರಿತ್ರೆ (1936) ಎಂಬ ವಿದ್ವತ್ಪೂರ್ಣ ಗ್ರಂಥಗಳನ್ನು ರಚಿಸಿದ್ದಾರೆ.

ರಾಜಪುರೋಹಿತರು ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ– ಈ ಸಂಸ್ಥೆಗಳ ಅಜೀವ ಸದಸ್ಯರಾಗಿದ್ದು ಅವುಗಳ ಅಭಿವೃದ್ಧಿ ಕಾರ್ಯಕಲಾಪಗಳಲ್ಲಿ ಸಹಕರಿಸಿದ್ದಾರೆ. ಮುಂಬಯಿಯಲ್ಲಿ 1935ರಲ್ಲಿ ನಡೆದ 21ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮೊತ್ತಮೊದಲಿಗೆ ಏರ್ಪಾಟಾದ ಸಂಶೋಧಕ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು.

ಇರಿಗೆ ಧಾರವಾಡದಲ್ಲಿ 1947ರಲ್ಲಿ ಇವರ ಅರವತ್ತನೆಯ ಹುಟ್ಟುಹಬ್ಬವನ್ನು ಆಚರಿಸಿ, ನಿಧಿಯನ್ನು ಅರ್ಪಿಸಿ ಗೌರವಿಸಲಾಯಿತು. ಇವರು 1953 ಆಗಸ್ಟ್ 23ರಂದು ನಿಧನರಾದರು. (ಎಂ.ವಿ.ಎಸ್.)

**ರಾಜಮ್ಮ, ಎಂ.ವಿ.:** 1921– . ಕನ್ನಡ ಚಲನಚಿತ್ರ ಕಲಾವಿದೆ, ನಿರ್ಮಾಪಕಿ. ಇವರು ಬೆಂಗಳೂರು ಜಿಲ್ಲೆಯ ಅಗ್ಗೊಂಡಹಳ್ಳಿಯಲ್ಲಿ 1921ರ ಮಾರ್ಚಿಯಲ್ಲಿ ಜನಿಸಿದರು. ಪ್ರಸಿದ್ಧ ಜಮೀನುದಾರರೂ ವ್ಯಾಪಾರಿಯೂ ಆಗಿದ್ದ ನಂಜಪ್ಪ ಇವರ ತಂದೆ, ತಾಯಿ ಸುಬ್ಬಮ್ಮ.

ರಾಜಮ್ಮನವರು ರಂಗಭೂಮಿ ಪ್ರವೇಶಿಸಿದ್ದು (ಪೀರ್ ಕಂಪನಿ) ಎಚ್.ಎಲ್.ಎನ್.ಸಿಂಹ ಅವರ ಮೂಲಕ. ಅಭಿನಯಿಸಿದ ಮೊದಲ ನಾಟಕ ಸಂಸಾರನೌಕ. ಈ ನಾಟಕದಲ್ಲಿ ಇವರು ಅಭಿನಯಿಸಿದ ನಾಯಕಿ ಸರಳೆಯ ಪಾತ್ರ ಇವರಿಗೆ ಅಪಾರ ಯಶಸ್ಸನ್ನು ತಂದುಕೊಟ್ಟಿತು. ಗೌತಮ ಬುದ್ಧ, ಸುಭದ್ರಾ ಪರಿಣಯ ಈ ನಾಟಕಗಳೂ ರಾಜಮ್ಮನವರಿಗೆ ಕೀರ್ತಿ ತಂದುಕೊಟ್ಟವು. ಅನಂತರ ಸಂಸಾರ ನೌಕ ನಾಟಕ ಚಲನಚಿತ್ರವಾದಾಗ ಇವರು ಆ ಚಿತ್ರದಲ್ಲಿಯೂ ಸರಳೆಯ ಪಾತ್ರವಹಿಸುವುದರ ಮುಲಕ ಚಿತ್ರರಂಗ ಪ್ರವೇಶಿಸಿದರು. ಇಲ್ಲಿ ಇವರಿಗೆ ಪಂತುಲು ಅವರ ಪರಿಚಯವಾಯಿತು. ಸಂಸಾರ ನೌಕ (1936)ಚಿತ್ರದಲ್ಲಿ ಇವರಿಬ್ಬರೂ ನಾಯಕ–ನಾಯಕಿ ಪಾತ್ರವಹಿಸಿದ್ದರಾಗಿ ಈ ಪರಿಚಯ ಗಾಢವಾಯಿತು.

ಕೆಲಕಾಲಾನಂತರ ರಾಜಮ್ಮನವರು ಸ್ವಂತ ಚಿತ್ರ ನಿರ್ಮಾಣದಲ್ಲಿ ತೊಡಗಿ ರಾಧಾರಮಣ ಎಂಬ ಚಿತ್ರವನ್ನು ನಿರ್ಮಿಸಿದರು (1943). ಇದು ಉತ್ತಮ ಚಿತ್ರವೆಂಬ ಹೆಸರು ಗಳಿಸಿತಾದರೂ ಹಣ ಗಳಿಸಲಿಲ್ಲ. ಅನಂತರ ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯ ಸಹಯೋಗದೊಡನೆ ಮಕ್ಕಳ ರಾಜ್ಯ ಎಂಬ ಚಿತ್ರವನ್ನು ತಯಾರಿಸಿದರು. ಈ ಚಿತ್ರವೂ ಜನಪ್ರಿಯವಾಯಿತು. ಆದರೆ ಗಲ್ಲಾಪೆಟ್ಟಿಗೆಯ ದೃಷ್ಟಿಯಿಂದ ಅಷ್ಟಾಗಿ ಯಶಸ್ಸು ಕಾಣಲಿಲ್ಲ. ಅನಂತರ ರಾಜಮ್ಮನವರು ಚಿತ್ರ ನಿರ್ಮಾಣವನ್ನು ನಿಲ್ಲಿಸಿದರು. ಈ ವೇಳೆಗಾಗಲೇ ಇವರು ಪದ್ಮಿನಿ ಚಿತ್ರ ಸಂಸ್ಥೆಯ ಖಾಯಂ ಕಲಾವಿದೆಯಾಗಿದ್ದರು. ಈ ಸಂಸ್ಥೆಯ ಪ್ರಥಮ ಚಿತ್ರ 'ಮೊದಲ ತೇದಿ' ಯಿಂದ ದಕ್ಷಿಣ ಭಾರತೀಯ ಚಿತ್ರರಂಗದಲ್ಲಿ ರಾಜಮ್ಮನವರು ತಮ್ಮದೇ ಆದ ಸ್ಥಾನಗಳಿಸಿಕೊಂಡರು. ಮುಂದೆ ಸಂಪೂರ್ಣವಾಗಿ ನಟಿಯಾದರು. ನಾಯಕಿ ನಟಿಯಾಗಿ ಅಪಾರ ಯಶಸ್ಸು ಗಳಿಸಿದರು. ಸುಮಾರು ಎರಡು ದಶಕಗಳ ಕಾಲ ಬಿ.ಆರ್.ಪಂತುಲು ಮತ್ತು ಎಂ.ವಿ.ರಾಜಮ್ಮ ಈ ತಾರಾಜೋಡಿ ಅಂದಿನ ಚಿತ್ರರಸಿಕರ ಮನಸ್ಸನ್ನು ಸೂರೆಗೊಂಡಿತ್ತು.

ರಾಜಮ್ಮನವರು 50ಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ, 80ಕ್ಕೂ ಹೆಚ್ಚು ತಮಿಳು ಚಿತ್ರಗಳಲ್ಲಿ, 20ಕ್ಕೂ ಹೆಚ್ಚು ತೆಲುಗು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಒಂದು ಹಿಂದಿ ಚಿತ್ರದಲ್ಲಿಯೂ ಅಭಿನಯಿಸಿರುವುದುಂಟು. ಸ್ಕೂಲ್ ಮಾಸ್ಟರ್ (1958), ಕಿತ್ತೂರು ಚೆನ್ನಮ್ಮ (1961) ಈ ಚಿತ್ರಗಳಲ್ಲಿನ ಅತ್ಯುತ್ತಮ ಅಭಿನಯಕ್ಕಾಗಿ ಅವರಿಗೆ ಪ್ರಶಸ್ತಿಗಳು ದೊರಕಿವೆ. (ಬಿ.ಎಸ್.ಎಸ್.ಆರ್)

**ರಾಜರತ್ನಂ, ಜಿ.ಪಿ.:** 1908–79. ಕನ್ನಡದ ಆಚಾರ್ಯರಲ್ಲೊಬ್ಬರು. ಸುಮಾರು ನಾಲ್ಕು ದಶಕಗಳ ಕಾಲ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಗಾಗಿ ಶ್ರಮಿಸಿದವರು. ಇವರದು ಪ್ರಸಿದ್ಧ ಪಂಡಿತ ಮನೆತನ. ಮೈಸೂರು ಕಡೆಯಲ್ಲಿ ಗುಂಡ್ಲುಪಂಡಿತರೆಂದು ಹೆಸರಾಗಿದ್ದ ವೈದ್ಯರತ್ನಂ ಲಕ್ಷ್ಮಣಾಚಾರ್ಯರು ಇವರ ಚಿಕ್ಕತಾತ. ಸಂಸ್ಕೃತ –ಹಳಗನ್ನಡಗಳಲ್ಲಿ ಪಾಂಡಿತ್ಯಗಳಿಸಿ, ಒಳ್ಳೆಯ ಉಪಾಧ್ಯಾಯರೆಂದು ಹೆಸರುಗೊಂಡಿದ್ದ ಜಿ.ಕೆ.ಗೋಪಾಲಕೃಷ್ಣ ಅಯ್ಯಂಗಾರರು ಇವರ ತಂದೆ. ರಾಜರತ್ನಂ ಹುಟ್ಟಿದ್ದು ಕ್ಲೋಸ್‌ಪೇಟೆಯಲ್ಲಿ (ಈಗಿನ ರಾಮನಗರ). ಇವರಿಗೆ ಎಳವೆಯಲ್ಲಿಯೇ ಸಾಹಿತ್ಯ ಸಂಗೀತಗಳ ಸವಿ; ಮನೆಯಲ್ಲಿ ಅಂಥ ಸುಸಂಸ್ಕೃತ ವಾತಾವರಣ ದೊರಕಿತು. ತಂದೆಯವರು ಮನೆಯಲ್ಲಿ ಹೇಳಿಕೊಡುತ್ತಿದ್ದ ಸಂಸ್ಕೃತ ಶ್ಲೋಕಗಳು, ಹಳೆಗನ್ನಡದ ನೀತಿಪದ್ಯಗಳು ಹಾಗೂ ತಾಯಿ ಹೇಳಿಕೊಡುತ್ತಿದ್ದ ದೇವರನಾಮಗಳು – ಇವುಗಳಿಂದ ತುಂಬ ಪ್ರಭಾವಿತರಾದರು. ಮೈಸೂರಿನಲ್ಲಿ ಉಪಾಧ್ಯಾಯರಾಗಿದ್ದ ಇವರ ತಂದೆ, ತಾವು ಪಾಠ ಮಾಡಲು ಹೋಗುತ್ತಿದ್ದ ತರಗತಿಗಳಿಗೆ ಮಗನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ನೇರವಾಗಿ ಲೋಯರ್ ಸೆಕೆಂಡರಿ ತರಗತಿಗಳಿಂದ ತಮ್ಮ ಶಾಲಾಶಿಕ್ಷಣವನ್ನು ಆರಂಭಿಸಿದ ರಾಜರತ್ನಂ ಅವರಿಗೆ ಪುಸ್ತಕ ಓದುವ ಗೀಳು ಬಹಳವಾಗಿತ್ತು. ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಮಟ್ಟಗಳಲ್ಲಿ ಪದ್ಯಸಾರ, ಪಂಚತಂತ್ರ, ಈಸೋಪನ ನೀತಿಕಥೆಗಳು, ಎಂ.ಎಸ್.ಪುಟ್ಟಣ್ಣ, ಬಿ. ವೆಂಕಟಾಚಾರ್‌ರ ಕನ್ನಡ ಪುಸ್ತಕಗಳ ಜೊತೆಗೆ ಸ್ಕಾಟ್, ಡಿಕನ್ಸ್, ಕಾನನ್ ಡಾಯಲ್ ಮುಂತಾದ ಇಂಗ್ಲಿಷ್ ಲೇಖಕರ ಪುಸ್ತಕಗಳನ್ನೂ ಬಹುವಾಗಿ ಓದಿದರು. ಇವರ ಈ ಪುಸ್ತಕದ ಪ್ರೀತಿ ಕಾಲೇಜನ್ನು ಸೇರಿದಾಗ ಮತ್ತಷ್ಟು ಬೆಳೆಯಿತು; ವಿಸ್ತಾರವಾಯಿತು. ಅದಕ್ಕೆ ತಕ್ಕ ವಾತಾವರಣವೂ ಬಿ.ಎಂ. ಶ್ರೀಕಂಠಯ್ಯ, ಎ.ಆರ್. ಕೃಷ್ಣಶಾಸ್ತ್ರೀ, ವೆಂಕಣ್ಣಯ್ಯ, ವಿ. ಸೀತಾರಾಮಯ್ಯ ಮುಂತಾದ ಗುರುಹಿರಿಯರ ನಿಕಟ ಸಂಪರ್ಕಗಳೂ ಒದಗಿದವು. ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಕನ್ನಡ ವಿಷಯಗಳ ಜೊತೆಗೆ ವಿಜ್ಞಾನ ವಿಷಯಗಳನ್ನು ಓದಿ ಬಿ.ಎ. (1928) ಪದವಿ ಪಡೆದ ಇವರು ಮುಂದೆ ಮೈಸೂರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಕನ್ನಡದಲ್ಲಿ ಎಂ.ಎ. ಪದವಿ ಪಡೆದರು (1931). ಆರಂಭದಲ್ಲಿ ಇವರು ಕೆಲಸ ಮಾಡಿದ್ದು ಶಿಶುವಿಹಾರ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ. ಪದವಿ ಪಡೆದ ಏಳು ವರ್ಷಗಳ ತರುವಾಯ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಇಲಾಖೆಯಲ್ಲಿ ಇವರಿಗೊಂದು ಪಂಡಿತ ಹುದ್ದೆ ದೊರೆಯಿತು. ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಇವರು ಮುಂದೆ ಕನ್ನಡ ಉಪಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿ ನಿವೃತ್ತರಾದರು (1964). ಅನಂತರ ಯು.ಜಿ.ಸಿ. ಉಪಾಧ್ಯಾಯರೆಂದು ಮೂರು ವರ್ಷಗಳ ಕಾಲ ಕೆಲಸಮಾಡಿ ಆ ಕೆಲಸದಿಂದಲೂ ಬಿಡುವುಗೊಂಡ ಇವರು ತಮ್ಮ ಜೀವನದ ಕೊನೆಯವರೆಗೂ ಕನ್ನಡದ ಕೆಲಸದಲ್ಲಿ ನಿರತರಾಗಿದ್ದರು.

ರಾಜರತ್ನಂರವರ ಪ್ರತಿಭೆ–ಪಾಂಡಿತ್ಯಗಳು ಬಹುಮುಖವಾದುವು. ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲದೆ ಪಾಳಿ, ಪ್ರಾಕೃತ ಹಿಂದಿ ಮತ್ತು ತೆಲುಗು ಭಾಷೆಗಳಲ್ಲೂ ಇವರಿಗೆ ಒಳ್ಳೆಯ ಪರಿಶ್ರಮವಿತ್ತು. ಇವರು ಮಾಡಿರುವ ಸಾಹಿತ್ಯ ಸೇವೆ, ಗುಣ ಮತ್ತು ಗಾತ್ರಗಳೆರಡರಲ್ಲೂ ದೊಡ್ಡಮಟ್ಟದ್ದು; ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಇನ್ನೂರಕ್ಕೂ ಮಿಕ್ಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಹೀಗಾಯಿತು' ಎಂಬುದು ಇವರು ಬರೆದ ಮೊದಲ ಪದ್ಯ; ಇಪ್ಪತ್ತೆರಡು ಪಂಕ್ತಿಗಳ ಒಂದು ಕವನ. ಇವರು ಈ ಕವನ ಬರೆದದ್ದು ಮಹಾರಾಜ ಕಾಲೇಜಿನಲ್ಲಿ ಜೂನಿಯರ್ ಎಂ.ಎ. ವಿದ್ಯಾರ್ಥಿಯಾಗಿದ್ದಾಗ. ಪದ್ಯ ಕಾಲೇಜಿನ ಯೂನಿಯನ್ ಪತ್ರಿಕೆಯಲ್ಲಿ ಮೊದಲು ಪ್ರಕಟವಾಯಿತಲ್ಲದೆ ಅದಕ್ಕೆ ಐದು ರೂಪಾಯಿ ಬಹುಮಾನವೂ ಬಂತು. ಆ ಪ್ರೋತ್ಸಾಹದಿಂದ ಉತ್ತೇಜನಗೊಂಡ

ಇವರು ಸೋಲಿಗರ ಸಿದ್ಧ ಮತ್ತು ನೆನಪು ಎಂಬ ಎರಡು ಏಕಾಂಕ ದೃಶ್ಯಗಳನ್ನು ರಚಿಸಿದರು. ಅವೂ ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದುವು. ಆ ಪತ್ರಿಕೆಯ ಸಂಪಾದಕರ ಸಲಹೆಯಂತೆ, ಹತ್ತು ರೂಪಾಯಿ ಕೊಟ್ಟು ಆ ಲೇಖನದ ಒಂದು ನೂರು ಮೇಲಚ್ಚಿನ ಪ್ರತಿಗಳನ್ನು ಕೊಂಡು, ಮಿತ್ರರು ಕೂಡಿ ಕಟ್ಟಿಕೊಂಡಿದ್ದ ತರುಣರ ದಂಡು ಸಂಘದ ಹೆಸರಿನಲ್ಲಿ ಅದನ್ನು ಪ್ರಕಟಿಸಿ, ನಾಲ್ಕಾಣೆಗೊಂದಂತೆ ಮಾರಿದರು. ಆ ಮಾರಾಟದಿಂದ ಅವರ ಖರ್ಚು ಕಳೆದು, ಹತ್ತು ರೂಪಾಯಿ ಲಾಭ ಬಂತು. ಅದೇ ರಾಜರತ್ನಂರವರ ಪುಸ್ತಕ ಪ್ರಕಟಣೆಯ ಮೊದಲ 'ಬೋಣಿ'. ಮುಂದೆ ಪುಸ್ತಕ ಬರೆಯುವ, ಬರೆದದ್ದನ್ನು ಪ್ರಕಟಿಸುವ, ಪ್ರಕಟಿಸಿದ್ದನ್ನು ಮಾರುವ ಕೆಲಸವನ್ನು ಆಸರಬೇಸರವಿಲ್ಲದೆ ಮಾಡಿದ ರಾಜರತ್ನಂ ತಮ್ಮನ್ನು 'ಸಾಹಿತ್ಯ ಪರಿಚಾರಕ' ಎಂದು ಕರೆದುಕೊಂಡರು.



ರಾಜರತ್ನಂ ಅವರು ಬೌದ್ಧ ಮತ್ತು ಜೈನಧರ್ಮದ ಪ್ರಚಾರಕ್ಕೆ ಹಲವು ಬಗೆಯಲ್ಲಿ ಶ್ರಮಿಸಿದರು. ಕನ್ನಡ ಎಂ.ಎ. ಪದವಿ ಪಡೆದ ತರುಣರಲ್ಲಿ ಮಾಸ್ತಿಯವರ ನೆರವಿನಿಂದ ವಾಲ್ಟೇರಿನ ಕ್ಯಾಂಡಿಡ್ ಎಂಬ ಕೃತಿಯನ್ನು ಕನ್ನಡಕ್ಕೆ ತರುವುದರಲ್ಲಿ ನಿರತರಾದರು. ಮಾಸ್ತಿಯವರ ಸಲಹೆಯಂತೆ ಫಾಹಿಯಾನನ ಕ್ಷೇತ್ರಯಾತ್ರೆಗಳನ್ನು ಭಾಷಾಂತರಿಸಿದರು. ಎ.ಆರ್. ಕೃಷ್ಣಶಾಸ್ತ್ರಿಗಳ ಸೂಚನೆಯಂತೆ ಅದರ ಜೊತೆಗೆ ಯುವಾನ್ ಚಾಂಗ್ ಇತ್ಸಿಂಗ್ ಮುಂತಾದ ಇನ್ನಿತರ ಬೌದ್ಧ ಯಾತ್ರಿಕರನ್ನು, ಬೌದ್ಧಧರ್ಮವನ್ನು ಕುರಿತ ಒಂದು ಅನುಬಂಧವನ್ನು ಬರೆದರು. ಅದನ್ನು ಎ.ಆರ್ ಕೃಷ್ಣಶಾಸ್ತ್ರಿಗಳು ಚೀನಾ ದೇಶದ ಬೌದ್ಧಯಾತ್ರಿಕರು (1932) ಎಂಬ ಹೆಸರಿನಿಂದ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಿದರು. ಇದೇ ಇವರ ಪ್ರಕಟವಾದ ಮೊದಲ ಪುಸ್ತಕ. ಬೌದ್ಧಧರ್ಮದ ಜತೆಗೆ ಜೈನಧರ್ಮವನ್ನು ವಿಸ್ತಾರವಾಗಿ ಪರಿಚಯ ಮಾಡಿಕೊಂಡರು ಶಾಕ್ಯಸಾಹಿತ್ಯಮಂಟಪ ಎಂಬ ಹೆಸರಿನ ಪುಸ್ತಕ ಮಾಲೆಯನ್ನು ಆರಂಭಿಸಿ, ಆ ಮಾಲೆಯಲ್ಲಿ ಧರ್ಮದಾನಿ ಬುದ್ಧ (1933), ಬುದ್ಧ ವಚನ ಪರಿಚಯ (1937), ಪಾಲಿಪಜ್ಜ ಪುಷ್ಪಾಂಜಲಿ (1937), ಬುದ್ಧನ ಕತೆಗಳು (1940), ಜಾತಕ ಕತೆಗಳು (1941), ಧಮ್ಮಪದ (1945), ಭಗವಾನ್ ಬುದ್ಧ (1956) ಮುಂತಾದ ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳನ್ನು ಬರೆದು ಪ್ರಕಟಿಸಿದರು. ಹಾಗೆಯೇ ಜೈನಧರ್ಮಕ್ಕೆ ಸಂಬಂಧಿಸಿದಂತೆ ಮಹಾವೀರನ ಮಾತುಕತೆ (1937), ಶ್ರೀ ಗೊಮ್ಮಟೇಶ್ವರ (1938), ಭಗವಾನ್ ಮಹಾವೀರ (1938), ಶ್ರೀಪಾರ್ಶ್ವನಾಥ ಚಂಪೂ (1940) ಎಂಬ ಪುಸ್ತಕಗಳನ್ನು ರಚಿಸಿ ಪ್ರಕಟಿಸಿದರು.

ಇವರ ರತ್ನನ ಪದಗಳು (1932) ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಿದ ಕೃತಿ. ಕನ್ನಡ ನವೋದಯದ ಸಂಧಿಕಾಲದಲ್ಲಿ ಪ್ರಕಟವಾದ ಕೆಲವು ಅಮರ ಕಾವ್ಯಗಳಲ್ಲಿ ರತ್ನನ ಪದಗಳು ಕೃತಿಗೆ ಹಿರಿಯ ಸ್ಥಾನವಿದೆ ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ರತ್ನನ ಪದಗಳು ವೈಶಿಷ್ಟ್ಯವೆಂದರೆ, ಅಲ್ಲಿ ಬಳಕೆಯಾಗಿರುವ ಆಡುಭಾಷೆ ಮತ್ತು ಸೃಷ್ಟಿಯಾಗಿರುವ ನೂತನ ಜಗತ್ತು; ಆ ಜಗತ್ತಿನ ನಿವಾಸಿಗಳಾದ ರತ್ನ, ನಂಜಿ, ಮುನಿಯರಂಥ ವ್ಯಕ್ತಿಗಳು; ಕಾಸು ಇಸ್ಕೊಂಡಿ ಕಸ ಕೊಡುವ ಜಿಪುಣ ಮುನಿಯನಂಥ ಪಾತ್ರಸೃಷ್ಟಿ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾದುದು; ಇಂಗ್ಲಿಷ್‌ನಲ್ಲಿ ಡ್ರೈಡನ್ ಕವಿ ಸೃಷ್ಟಿಸಿರುವ ಜಮ್‌ರಿ ಎಂಬ ವಿಡಂಬನ ಪಾತ್ರವನ್ನು ಹೋಲುವಂಥದು ಎಂಬುದಾಗಿ ವಿಮರ್ಶಕರೊಬ್ಬರು ಹೇಳಿದ್ದಾರೆ. ರತ್ನನ ಪದಗಳು ಸಾಲಿನಲ್ಲಿ ನಿಲ್ಲುವಂಥ ಇವರ ಇನ್ನೊಂದು ಕೃತಿ ನಾಗನ ಪದಗಳು (1952). ಶಾಂತಿ (1934) ನೂರು ಪುಟಾಣಿ (1940), ಮಹಾಕವಿ ಪುರುಷ ಸರಸ್ವತಿ (1940)– ಇವು ಇವರ ಇತರ ಪದ್ಯ ಸಂಕಲನಗಳು. ಮೊದಲನೆಯದು ಮುಕ್ತಕಗಳ ರೀತಿಯ ರಚನೆಗಳ ಸಂಕಲನ. ಎರಡನೆಯದು ಸಾಹಿತ್ಯ ವಿಡಂಬನೆ.

ಕೈಲಾಸಂ ಗರಡಿಯಲ್ಲಿ ಪಳಗಿದ ರಾಜರತ್ನಂ ಅವರು ಬರೆದಿರುವ ನಾಟಕಗಳು ವೈಚಾರಿಕತೆಗೆ ಹೆಸರಾಗಿವೆ. ಗಂಡುಗೊಡಲಿ (1932), ನರಕದ ನ್ಯಾಯ ಮತ್ತು ಕಂಬ್ಳಿಸೇವೆ (1934), ಸಂಭವಾಮಿ ಯುಗೇ ಯುಗೇ (1942), ಶಕಾರನ ಸಾರೋಟು (1934), ಬಾಹುಬಲಿಯ ವಿಜಯಂ ಮತ್ತು ಗೊಮ್ಮಟಶಿಲ್ಪ (1953)– ಇವು ಇವರ ಕೆಲವು ನಾಟಕಗಳು.

ರಾಜರತ್ನಂ ಅವರ ವಿದ್ವತ್ ಪ್ರತಿಭೆಯನ್ನು ಆಕರ್ಷಿಸಿದ ಇನ್ನೊಂದು ಕ್ಷೇತ್ರ ಹಳಗನ್ನಡ ಕವಿ ಕೃತಿಗಳ ಪರಿಚಯ ವಿಭಾಗ. ತಮಗೆ ಮೆಚ್ಚುಗೆಯಾದ ಹಲವು ಹಳಗನ್ನಡ ಕೃತಿಗಳಿಗೆ ಹೊಸಗನ್ನಡದಲ್ಲಿ ಅರ್ಥ, ಟೀಕು, ವ್ಯಾಖ್ಯಾನಗಳನ್ನು ಮಾಡಿ ಪ್ರಕಟಿಸಿದ್ದಾರೆ. ಈ ದಾರಿಯಲ್ಲಿನ ಕೆಲವು ಗ್ರಂಥಗಳಿವು: ರನ್ನನ ರಸಘಟ್ಟ (1948), ಹೊಸಗನ್ನಡ ಯಶೋಧರ ಚರಿತ್ರೆ (1944), ಶ್ರೀಕವಿರತ್ನ (1948), ಚಿಕದೇವರಾಜ ಬಿನ್ನಪ (1950), ಶ್ರೀ ಕವಿ ಪಂಪ (1951) ಹೀಗೆಯೇ ತಮಗೆ ಇಷ್ಟವಾದ ಹಲವು ಕನ್ನಡ ಲೇಖಕರನ್ನೂ ಅವರ ಕೃತಿಗಳನ್ನೂ ಕುರಿತ ಅವಲೋಕನಗಳನ್ನು ಪ್ರಕಟಿಸಿದ್ದಾರೆ. ಇಂಥವುಗಳಲ್ಲಿ ಕೆಲವು: ಕೈಲಾಸಂ ಅವರ ಏಕಲವ್ಯ (1944), ಸಂಸ ಕವಿಯ ವಿಗಡ ವಿಕ್ರಮಚರಿತ (1947), ಚಿತ್ರಾಂಗದ ಚಿತ್ರಕೂಟ (1949).

ಎಳಮೆಯಲ್ಲಿಯೇ ಗಾಂಧೀ ತತ್ವಗಳಿಂದ ಪ್ರಭಾವಿತರಾದ ರಾಜರತ್ನಂ ಅವರು ಕನ್ನಡದಲ್ಲಿ ಗಾಂಧೀ ಸಾಹಿತ್ಯದ ಬೆಳವಣಿಗೆಗೂ ಶ್ರಮಿಸಿದ್ದಾರೆ. ಗಾಂಧೀಜಿಯವರ ಅನುಪಮ ವ್ಯಕ್ತಿತ್ವದ ಹಲವು ಮುಖಗಳನ್ನು ಮಕ್ಕಳಿಗೂ ದೊಡ್ಡವರಿಗೂ ಈ ಪುಸ್ತಕಗಳ ಮೂಲಕ ಪರಿಚಯಿಸಿದ್ದಾರೆ: ಗಾಂಧೀ ಜಯಂತಿಯ ಕಾಣಿಕೆ (1942), ದೇವರ ಸಾಕ್ಷಿ (1943), ಗಾಂಧೀ ಜ್ಞಾಪಕ ದೀಪ (1948), ಗಾಂಧೀಜಿ ಅವರ ಕತೆ (1949), ಗಿಳಿಮರಿಗಳ ಗಾಂಧೀ (1942), ಮಕ್ಕಳ ಗಾಂಧೀ (1942), ವಂದೇ ಗಾಂಧೀಜಿ (1949).

ರಾಜರತ್ನಂರವರು ಸೃಷ್ಟಿಸಿರುವ ಮಕ್ಕಳ ಸಾಹಿತ್ಯ ಮೇಲುಮಟ್ಟದ್ದು, ಮಕ್ಕಳ ಸಾಹಿತ್ಯ ರಚನೆಗೆ ಮಾದರಿಯಾಗಿರುವಂಥದು. ಶಿಶುವಿಹಾರಗಳಲ್ಲಿ ಸ್ವಲ್ಪಕಾಲ ಮಕ್ಕಳೊಂದಿಗೆ ಕಳೆದಿದ್ದ ರಾಜರತ್ನಂ, ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತಿದ್ದರು. ಅವರಿಗೆ ಎಂಥ ಸಾಹಿತ್ಯ ಅಗತ್ಯವೆಂಬುದನ್ನು ತಮ್ಮ ಕೃತಿಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಇವರ ಪುಸ್ತಕಗಳೆಂದರೆ ಮಕ್ಕಳಿಗೆ ರಸಕವಳ. ಇವರ ತುತ್ತೂರಿ ಮತ್ತು ಕಡಲೆಪುರಿಗಳಂತೂ ಮಕ್ಕಳ ಲೋಕದಲ್ಲಿ ತುಂಬ ಜನಪ್ರಿಯವಾಗಿರುವ ಪುಸ್ತಕಗಳು. ಚುಟುಕ (1933), ಕೆನೆಹಾಲು (1935), ಕಲ್ಲುಸಕ್ಕರೆ (1935), ತಾರೆ (1947), ರಸಕವಳ (1954)– ಇವು ಮಕ್ಕಳಿಗಾಗಿ ಇವರು ರಚಿಸಿರುವ ಪದ್ಯ ಪುಸ್ತಕಗಳು. ಗುಲಗಂಜಿ (1934), ಕೋಳಿಕಳ್ಳ (1941), ಗೂಳೂರು ಗಾಯಕರು (1946), ಬಾ ಕರು ಬಾ (1946)–ಇವು ಗದ್ಯ ಕೃತಿಗಳು. ಬೆಳೆಯುವ ಪಯಿರು (1949) ಮತ್ತು ಧ್ವಜವಂದನೆ (1949) ಎಂಬ ಎರಡು ನಾಟಕಗಳನ್ನೂ ಬರೆದಿದ್ದಾರೆ. ಇದಲ್ಲದೆ ಕನ್ನಡದ ಬೇರೆ ಬೇರೆ ಕವಿಗಳು ಬರೆದಿದ್ದ ಹಲವು ಕವನಗಳನ್ನು ಕೂಡಿಸಿ ಕಂದನ ಕಾವ್ಯಮಾಲೆ ಎಂಬ ಒಂದು ಸಂಕಲನವನ್ನು ಪ್ರಕಟಿಸಿದ್ದಾರೆ.

ರಾಜರತ್ನಂ ಅವರ ವಿಚಾರ ವೈಭವ ದಟ್ಟವಾದುದು, ಬಹುಮುಖವಾದುದು. ಇವರ ಹಲವು ವಿಚಾರಸರಣಿಗಳು ಪುಸ್ತಕರೂಪದಲ್ಲೂ ಪ್ರಕಟವಾಗಿವೆ: ವಿಚಾರ ತರಂಗ (1967), ಕಿರಣಾನುಭವ (1968), ಸಭಾವಿನಯ (1969), ಸಾರಸ್ಯ ಮತ್ತು ವಿಚಾರರಶ್ಮಿ.

ರಾಜರತ್ನಂ ಅವರ ಸ್ನೇಹ ವಿಶ್ವಾಸಗಳು ಆದರ್ಶಪ್ರಾಯವಾದುವು. ತಮಗೆ ಹಿರಿಯರೂ ಪ್ರಿಯರೂ ಆಗಿದ್ದ ಸಂಸ, ಗೋವಿಂದ ಪೈ, ಕೈಲಾಸಂ, ವೆಂಕಣ್ಣಯ್ಯ, ಡಿ.ವಿ.ಜಿ. ಮುಂತಾದವರನ್ನು ಕುರಿತು ಹಲವು ಲೇಖನಗಳನ್ನು , ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಗೋವಿಂದ ಪೈಗಳಿಂದ ತಮಗೆ ಬಂದಿದ್ದ 47 ಪತ್ರಗಳನ್ನು ಮಂಜೇಶ್ವರದ ಶ್ರೀ.ಎಂ. ಗೋವಿಂದ ಪೈ ಅವರ ಕೆಲವು ಪತ್ರಗಳು ಎಂಬ ಪುಸ್ತಕವಾಗಿ ಪ್ರಕಟಿಸಿದ್ದಾರೆ (1971). ಅನಕೃ ತೀರಿಕೊಂಡಾಗ ಅವರ ನೆನಪಿಗಾಗಿ ಬೆಂಗಳೂರು ಮಲ್ಲೇಶ್ವರಂನಲ್ಲಿರುವ ಗಾಂಧೀ ಸಾಹಿತ್ಯ ಸಂಘದಲ್ಲಿ ಹನ್ನೆರಡು ಸ್ಮಾರಕ ಉಪನ್ಯಾಸಗಳನ್ನು ಮಾಡಿ, ಅವುಗಳನ್ನು ಸ್ನೇಹದೀಪ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ (1972). ತಮ್ಮ ಆರಂಭದ ಸಾಹಿತ್ಯದ ಬದುಕನ್ನು ಕುರಿತ ಹತ್ತು ವರ್ಷ ಎಂಬ ಕೃತಿಯನ್ನು ಪ್ರಕಟಿಸಿದ (1939) ರಾಜರತ್ನಂ ಅವರು ಅನಂತರ ನಿರ್ಭಯಾಗ್ರಫಿಯನ್ನು (ಎಂಟು ಕಂತುಗಳಲ್ಲಿ) ಪ್ರಕಟಿಸಿ ತಮ್ಮ ಮನದ ಅಂತರ್ದರ್ಶನವನ್ನು ಕಾಣಿಸಿದ್ದರು.

ಸಾಹಿತ್ಯ ಚಟುವಟಿಕೆಯ ಜತೆಗೆ ರಾಜರತ್ನಂ ಅವರು ಮಾಡಿರುವ ಸಂಘಸಂಸ್ಥೆಗಳ ಸೇವೆಯೂ ಗಣ್ಯವಾದುದು. ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ 1930ರಿಂದಲೂ ಸಂಪರ್ಕವನ್ನಿಟ್ಟುಕೊಂಡಿದ್ದ ಇವರು, ಪರಿಷತ್ತಿನ ಸಾಮಾನ್ಯ ಸದಸ್ಯರಾಗಿ, ಪರಿಚಾರಕರಾಗಿ, ಗೌರವ ಕೋಶಾಧಿಕಾರಿಗಳಾಗಿ ಪರಿಷತ್ತಿನ ಮುನ್ನಡೆಗೆ ದುಡಿದಿದ್ದಾರೆ. ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಉಪಾಧ್ಯಕ್ಷರಾಗಿ, ವಿದ್ಯಾರ್ಥಿಗಳ ಬರೆವಣಿಗೆಗೆ ಮಾರ್ಗದರ್ಶನ ಮಾಡಿದರಲ್ಲದೆ ಅವರ ಅನೇಕ ಬರೆಹಗಳನ್ನು ನಮ್ಮನಮ್ಮವರು, ನಮ್ಮ ಬೇಂದ್ರೆಯವರು ಮುಂತಾದ ಪುಸ್ತಕ ರೂಪದಲ್ಲೂ ಪ್ರಕಟಿಸಿದ್ದರು.

ರಾಜರತ್ನಂ ಅವರು ಮಾಡಿದ ನಾಡುನುಡಿಗಳ ಸೇವೆಗೆ ಮನ್ನಣೆ ಎಂಬಂತೆ ಇವರಿಗೆ ಹಲವು ಬಗೆಯ ಬಹುಮಾನಗಳು, ಗೌರವಗಳು ಲಭಿಸಿವೆ. ವಿದ್ಯಾರ್ಥಿದೆಶೆಯಲ್ಲಿ ಬರೆದ ತಾರೆ ಎಂಬ ಇವರ ಪದ್ಯಕ್ಕೆ ಶ್ರೀ ಅವರ ರಜತೋತ್ಸವ ಸ್ವರ್ಣಪದಕ ದೊರಕಿತು. 1938ರಲ್ಲಿ ಬಳ್ಳಾರಿಯಲ್ಲಿ ನಡೆದ 23ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ 1944ರಲ್ಲಿ ರಬಕವಿಯಲ್ಲಿ ನಡೆದ 28ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು. ಇವರ ಚೀನಾ ದೇಶದ ಬೌದ್ಧ ಯಾತ್ರಿಕರು, ರತ್ನನ ಪದಗಳು, ಬುದ್ಧವಚನ ಪರಿಚಯ, ಬುದ್ಧನ ಕತೆಗಳು ಈ ಪುಸ್ತಕಗಳಿಗೆ ದೇವರಾಜ ಬಹದ್ದೂರ್ ದತ್ತಿ ಬಹುಮಾನ ಬಂದಿದೆ. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ಇವರಿಗೆ ರಾಜರತ್ನಂ ಎಂಬ ಗೌರವ ಗ್ರಂಥವನ್ನು ಒಪ್ಪಿಸಿದ್ದರು. ರಾಜ್ಯ ಸಾಹಿತ್ಯ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ (1969). ಇವರ ಅರವತ್ತನೆಯ ಹುಟ್ಟು ಹಬ್ಬವನ್ನು (1969) ಬೆಂಗಳೂರಿನ ಬಿ.ಬಿ.ಡಿ. ಪ್ರೆಸ್‌ನವರು ಸಾರ್ವಜನಿಕವಾಗಿ ಆಚರಿಸಿದರು. ಅದೇ ಸಂದರ್ಭದಲ್ಲಿ ಬೆಂಗಳೂರು ಗಾಂಧೀ ಸಾಹಿತ್ಯ ಸಂಘದವರು ನಮ್ಮ ರಾಜರತ್ನಂ ಎಂಬ ಪುಸ್ತಕವನ್ನು ಪ್ರಕಟಿಸಿದರು. ಕಾರ್ಕಳದಲ್ಲಿ ಸೇರಿದ್ದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯ 1972ರಲ್ಲಿ ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿತು. 1978ರಲ್ಲಿ ದೆಹಲಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಲಾಯಿತು. 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಮಕ್ಕಳ ಸಾಹಿತ್ಯ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು.

ಇವರು 1979 ಮಾರ್ಚ್ 13ರಂದು ನಿಧನರಾದರು. ಇವರ ನೆನಪಿಗಾಗಿ ಜೀವರತ್ನ (1979) ಮತ್ತು ಸಾಹಿತ್ಯ ಪರಿಚಾರಕ (1979) ಎಂಬ ಎರಡು ಸಂಸ್ಮರಣ ಸಂಪುಟಗಳು ಪ್ರಕಟವಾಗಿವೆ. *

**ರಾಜಾದಿತ್ಯ:** ಸು.1190. ಕನ್ನಡದ ಮೊದಲ ಗಣಿತಶಾಸ್ತ್ರಕಾರ. ಕೊಂಡಿಮಂಡಲಕ್ಕನುಪಮರತ್ನಮಂಡನಮೆನಿಪ್ಪ ಪೂವಿನಬಾಗೆ ಇವನ ಜನ್ಮಸ್ಥಳ. ಇವನಿಗೆ ರಾಜವರ್ಮ, ಬಾಚಯ, ಬಾಚಿರಾಜ ಎಂಬ ಹೆಸರುಗಳೂ ಗಣಿತವಿಳಾಸ ಓಜೆವೆಡಂಗ, ಪದ್ಯವಿದ್ಯಾಧರ, ಗಣಿತವಿರಿಂಚಿ ಎಂಬ ಬಿರುದುಗಳೂ ಇದ್ದಂತೆ ತಿಳಿದುಬರುತ್ತದೆ. ಉರ್ವೀಶ್ವರನಿಕರಸಭಾಯೋಗ್ಯಂ ಎಂದು ಹೇಳಿಕೊಂಡಿರುವುದರಿಂದ ಈತ ಎರಡನೆಯ ಬಲ್ಲಾಳನ (1173–1220) ಆಸ್ಥಾನದಲ್ಲಿ ಇದ್ದಿರಬೇಕು. ಇವನ ಗುರು ಶುಭಚಂದ್ರದೇವ, ತಂದೆ ಶ್ರೀಪತಿ, ತಾಯಿ ವಸಂತಾಖ್ಯೆ, ಅಣ್ಣ ಶಾಂತ, ಹೆಂಡತಿ ಕನಕಮಾಲೆ, ಮಕ್ಕಳು ಭರತ ಮತ್ತು ಬಾಹುಬಲಿ (ಈ ಇಬ್ಬರೂ 2ನೆಯ ಬಲ್ಲಾಳನ ದಂಡನಾಯಕರಾಗಿದ್ದಂತೆ ನಾಗಮಂಗಲ ತಾಲ್ಲೂಕಿನ ಒಂದು ಶಾಸನದಿಂದ ತಿಳಿಯುತ್ತದೆ).

ವ್ಯವಹಾರ ಗಣಿತ, ಕ್ಷೇತ್ರಗಣಿತ, ಲೀಲಾವತಿ, ವ್ಯವಹಾರರತ್ನ, ಚಿತ್ರಹಸುಗೆ, ಜೈನಗಣಿತಸೂತ್ರಟೀಕೋದಾಹರಣ–ಇವು ಈತನ ಕೃತಿಗಳು. ವ್ಯವಹಾರ ಗಣಿತವೊಂದನ್ನು ಬಿಟ್ಟು ಉಳಿದವಾವೂ ಅಚ್ಚಾಗಿಲ್ಲ. ಅಲ್ಲದೆ ಸಿಕ್ಕುವ ಯಾವ ಓಲೆಪ್ರತಿಯೂ ಶುದ್ಧವಾಗಿಯೂ ಸಂಪೂರ್ಣವಾಗಿಯೂ ಇಲ್ಲ. ಈ ಎಲ್ಲ ಕೃತಿಗಳೂ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟಂತಿರುವುದು ಬಹುಮುಖ್ಯ ಸಂಗತಿಯಾಗಿದೆ.

ವ್ಯವಹಾರಗಣಿತ ಗದ್ಯಪದ್ಯಾತ್ಮಕವಾಗಿದೆ. ಸೂತ್ರಗಳನ್ನು ಪದ್ಯರೂಪದಲ್ಲಿ ರಚಿಸಿ ಟೀಕೆಯನ್ನೂ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ಇದರಲ್ಲಿ 8 ಅಧಿಕಾರಗಳಿವೆ. ಒಂದೊಂದು ಅಧಿಕಾರಕ್ಕೂ ಹಾರ ಎಂಬ ಸಂಜ್ಞೆ ಇದೆ. ಈ ಗ್ರಂಥವನ್ನು ಕವಿ 5 ದಿನಗಳಲ್ಲಿ ಬರೆದಂತೆ ಹೇಳಿಕೊಂಡಿದ್ದಾನೆ. ಇದು ಸಹಜ ತ್ರಯರಾಶಿ, ವ್ಯಸ್ತತ್ರಯರಾಶಿ, ಸಹಜ ಪಂಚರಾಶಿ, ವ್ಯಸ್ತಪಂಚರಾಶಿ, ಸಹಜಸಪ್ತರಾಶಿ, ವ್ಯಸ್ತಸಪ್ತರಾಶಿ, ಸಹಜನವರಾಶಿ, ವ್ಯಸ್ತನವರಾಶಿ, ಪದಪಿನಸೂತ್ರ, ಬಣ್ಣಾಂತರದ ಸೂತ್ರ, ಹೊದೆಯಂಬಿನ ಸೂತ್ರ, ವಿಧುರೆ, ತೂಬಿನ ಸೂತ್ರ, ಹರಿವರಿಯ ಸೂತ್ರ, ಚಕ್ರಬಡ್ಡಿ ಮೊದಲಾದ ವಿಷಯಗಳನ್ನು ಒಳಗೊಂಡಿದೆ.

ಲೀಲಾವತಿ ಪದ್ಯರೂಪವಾಗಿದ್ದು ಇದರಲ್ಲಿ ಲೆಕ್ಕಗಳನ್ನು ಮಾಡಿ ತೋರಿಸಿದೆ. ವ್ಯವಹಾರ ರತ್ನದಲ್ಲಿ 5 ಅಧಿಕಾರಗಳಿವೆ. ಚಿತ್ರಹಸುಗೆ ಸೂತ್ರ ಟೀಕಾರೂಪವಾಗಿದೆ. ಜೈನಗಣಿತಸೂತ್ರಟೀಕೋದಾಹರಣದಲ್ಲಿ ಪ್ರಶ್ನೆಗಳನ್ನು ಕೊಟ್ಟು ಉತ್ತರ ಪಡೆದ ವಿಧಾನ ನಿರೂಪಿತವಾಗಿದೆ. ಈತ ತನ್ನ ಎಲ್ಲ ಕೃತಿಗಳಲ್ಲಿ ಬಳಸಿಕೊಂಡಿರುವ ಭಾಷೆ ಲಲಿತವೂ ಶುದ್ಧವೂ ಆಗಿದ್ದು ಹೇಳುತ್ತಿರುವ ವಿಷಯವನ್ನು ಮನಮುಟ್ಟುವಂತೆ ರೂಪಿಸುವಲ್ಲಿ ಯಶಸ್ವಿಯಾಗಿದೆ. ಈ ಗ್ರಂಥಗಳನ್ನು ಬರೆಯುವಲ್ಲಿ ಕವಿ ಸಂಸ್ಕೃತದ ಭಾಸ್ಕರಾಚಾರ್ಯನಿಗೆ ಎಷ್ಟರಮಟ್ಟಿಗೆ ಋಣಿಯಾಗಿದ್ದಾನೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಅಂದಿನ ಕಾಲಕ್ಕೆ ವ್ಯವಹಾರ ಗಣಿತ ತುಂಬ ಜನಪ್ರಿಯ ಕೃತಿಯಾಗಿದ್ದು ಇವನ ಗಣಿತಸೂತ್ರಗಳನ್ನು ಎಲ್ಲ ಕಡೆಯೂ ಅಭ್ಯಾಸ ಮಾಡುತ್ತಿದ್ದರೆಂದು ತಿಳಿದುಬರುತ್ತದೆ.

(ಎನ್.ಬಿ.ಎಲ್.)

**ರಾಜಾರಾಮಣ್ಣ:** 1925–2004. ಭಾರತದ ಪ್ರಸಿದ್ಧ ನ್ಯೂಕ್ಲಿಯರ್ ವಿಜ್ಞಾನಿ. 1974ರ ಮೇ 18ರಂದು ರಾಜಾಸ್ಥಾನದ ಮರುಭೂಮಿಯಲ್ಲಿ ಭಾರತ ನಡೆಸಿದ ನ್ಯೂಕ್ಲಿಯರ್ ಸಾಧನದ ಪರೀಕ್ಷಾರ್ಥ ಪ್ರಯೋಗದ ಸ್ಫೋಟನೆಯ ನೇತಾರರಲ್ಲಿ ಒಬ್ಬರು.

ಇವರು 1925ರ ಜನವರಿ 28ರಂದು ತುಮಕೂರಿನಲ್ಲಿ ಹುಟ್ಟಿದರು. ಮೈಸೂರಿನ ಗುಡ್ ಶೆಫರ್ಡ್ ಕಾನ್ವೆಂಟ್, ಬೆಂಗಳೂರಿನ ಬಿಷಪ್ ಕಾಟನ್ ಸ್ಕೂಲ್ ಮತ್ತು ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಇವರ ಮೊದಲ ವ್ಯಾಸಂಗ ನಡೆಯಿತು. ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ 1945ರಲ್ಲಿ ಬಿ.ಎಸ್‌ಸಿ. (ಆನರ್ಸ್) ಪದವಿಯನ್ನೂ 1948ರಲ್ಲಿ ಲಂಡನ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪದವಿಯನ್ನೂ ಪಡೆದರು.

1949ರಲ್ಲಿ ಇವರು ಮುಂಬಯಿಯ ತಾತಾ ವಿಜ್ಞಾನ ಕೇಂದ್ರವನ್ನು ಸೇರಿದರು. ಅಲ್ಲಿಯ ಪ್ರಾಧ್ಯಾಪಕ ಪದವಿಯನ್ನು ಇವರಿನ್ನೂ ಹೊಂದಿದ್ದಾರೆ). 1953ರಲ್ಲಿ ಇವರು ಟ್ರಾಂಬೆಯ ಪರಮಾಣುಶಕ್ತಿ ಕೇಂದ್ರದ ನ್ಯೂಕ್ಲಿಯರ್ ಭೌತವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ನಿಯೋಜಿತರಾದರು. 1962ರಲ್ಲಿ ಭೌತವಿಜ್ಞಾನ ಗುಂಪಿನ ನಿರ್ದೇಶಕರಾದರು. ಅನಂತರ 1972ರಲ್ಲಿ ಭಾಭಾ ಪರಮಾಣು ಸಂಶೋಧನಾ ಕೇಂದ್ರದ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು. ಇದರ ಜೊತೆಗೆ ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆ ಮತ್ತು ಹೈದರಾಬಾದಿನ ಎಲೆಕ್ಟ್ರಾನಿಕ್ ಕಾರ್ಪೊರೇಷನ್ನಿನ ಅಧ್ಯಕ್ಷರೂ ಆಗಿದ್ದರು.



ಟ್ರಾಂಬೆಯಲ್ಲಿ ಪರಮಾಣುಶಕ್ತಿ ಕೇಂದ್ರ ಪ್ರಾರಂಭವಾದಾಗಿನಿಂದ ಅದರ ಎಲ್ಲ ಚಟುವಟಿಕೆಗಳಲ್ಲೂ ರಾಜಾರಾಮಣ್ಣನವರು ಪಾಲುಗೊಂಡಿದ್ದರು. ಅಪ್ಸರ, ಸೈರಸ್ ಮತ್ತು ಪೂರ್ಣಿಮ–ಈ ರಿಯಾಕ್ಟರುಗಳ ವಿನ್ಯಾಸ ಮತ್ತು ರಚನೆಯಲ್ಲಿ ಇವರು ವಹಿಸಿದ ಪಾತ್ರ ನಿರ್ಣಾಯಕವಾದುದು. ವಾನ್ ಡಿ ಗ್ರಾಫ್ ವೇಗೋತ್ಕರ್ಷಕ, ಕಲ್ಕತ್ತದಲ್ಲಿ ರೂಪುಗೊಳ್ಳುತ್ತಿರುವ ವ್ಯತ್ಯಸ್ಥ ಶಕ್ತಿ ಸೈಕ್ಲೋಟ್ರಾನ್ ಮತ್ತು ಕಲ್ಪಾಕಮ್‌ನಲ್ಲಿ ನಿರ್ಮಾಣವಾಗುತ್ತಿರುವ ಸಂಶೋಧನ ರಿಯಾಕ್ಟರುಗಳು ಇವರ ಅದಮ್ಯ ನಾಯಕತ್ವಕ್ಕೆ ಸಾಕ್ಷಿಗಳಾಗಿವೆ.

ನ್ಯೂಟ್ರಾನ್ ಉಷ್ಣೀಕರಣ, ಮಂದಶಕ್ತಿ ನ್ಯೂಕ್ಲಿಯ ಕ್ರಿಯೆಗಳು, ವಿದಳನ–ಹೀಗೆ ಹಲವು ಪ್ರಕಾರಗಳಲ್ಲಿ ರಾಮಣ್ಣ ಉನ್ನತ ಸಂಶೋಧನೆಗಳನ್ನು ನಡೆಸಿದರು. ಇವರು ಪ್ರಕಟಿಸಿದ ಪ್ರೌಢ ಲೇಖನಗಳ ಸಂಖ್ಯೆ ಎಂಬತ್ತನ್ನೂ ಮೀರಿದೆ. ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಜ್ಞಾನ ಸಮ್ಮೇಳನಗಳಲ್ಲಿ ಇವರು ಪಾಲುಗೊಂಡಿದ್ದರು. 1963ರಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ಸುವರ್ಣ ಅಧಿವೇಶನದಲ್ಲಿ ಭೌತವಿಜ್ಞಾನ ವಿಭಾಗದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು. ಅದೇ ವರ್ಷ ಇವರಿಗೆ ಪ್ರತಿಷ್ಠಿತ ಶಾಂತಿಸ್ವರೂಪ್ ಭಟ್ನಾಗರ್ ಪಾರಿತೋಷಕವೂ ಲಭಿಸಿತು. ವಿಜ್ಞಾನರಂಗದಲ್ಲಿ ಇವರು ಸಾಧಿಸಿರುವ ಹಿರಿಮೆಯನ್ನು ಗುರುತಿಸಿ ಭಾರತ ಸರ್ಕಾರ ಇವರಿಗೆ 1968ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ 1973ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ. 1975ರಲ್ಲಿ ಇವರಿಗೆ ಭಾರತ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತು.

ಇವರು ಭಾರತದ ಡಿಫೆನ್ಸ್ ರಿಸರ್ಚ್ ಅಂಡ್ ಡೆವಲೆಪ್‌ಮೆಂಟ್ ಆರ್ಗನೈಸೇಷನ್ನಿನ ಡೈರೆಕ್ಟರ್–ಜನರಲ್ ಆಗಿಯೂ ಅಂದಿನ ರಕ್ಷಣಾ ಸಚಿವರಿಗೆ ವೈಜ್ಞಾನಿಕ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದರು. ಮೂವತ್ತನೆಯ ಅಂತಾರಾಷ್ಟ್ರೀಯ ಪರಮಾಣು ಶಕ್ತಿ ನಿಯೋಗದ ಸರ್ವಸದಸ್ಯರ ಸಮಾವೇಶದ ಅಧ್ಯಕ್ಷರೂ ಆಗಿದ್ದರು. 1990ರಲ್ಲಿ ಇವರು ಕೇಂದ್ರ ಸರ್ಕಾರದಲ್ಲಿ ರಕ್ಷಣಾ ಸಚಿವಾಲಯದಲ್ಲಿ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದರು. 1993ರಲ್ಲಿ ಇವರಿಗೆ ವಿಶ್ವಭಾರತೀ ವಿಶ್ವವಿದ್ಯಾಲಯ ದೇಶಿಕೋತ್ತಮ ಗೌರವ ಪದವಿಯನ್ನು ನೀಡಿ ಗೌರವಿಸಿತು. 1997ರಲ್ಲಿ ಇವರು ರಾಜ್ಯಸಭೆಯ ಸದಸ್ಯರಾಗಿ ಸೇವೆಗೈದಿದ್ದರು. 1998ರಲ್ಲಿ ರಾಮಣ್ಣ ಅವರು ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್ ಸಂಸ್ಥೆಯ ನಿರ್ದೇಶಕರಾಗಿದ್ದರು.

ಇವರು ಭೌತವಿಜ್ಞಾನ ಕ್ಷೇತ್ರದಲ್ಲಿ ಅಪಾರ ಸಿದ್ಧಿಸಾಧನೆಗಳನ್ನು ಮಾಡಿದ್ದರೂ ಪ್ರವೃತ್ತಿಯಲ್ಲಿ ಪಾಶ್ಚಾತ್ಯ ಸಂಗೀತದಲ್ಲಿ ವಿಶೇಷ ಪರಿಶ್ರಮ ಪಡೆದಿದ್ದರು; ಅತ್ಯುತ್ಕೃಷ್ಟ ಪಿಯಾನೋ ವಾದಕರೂ ಆಗಿದ್ದರು. ದಿ ಸ್ಟ್ರಕ್ಚರ್ ಆಫ್ ಮ್ಯೂಸಿಕ್ ಅಂಡ್ ವೆಸ್ಟರ್ನ್ ಸಿಸ್ಟಮ್ಸ್ ಎಂಬುದು ಇವರ ಸಂಗೀತ ಕೃತಿ. ಇಯರ್ಸ್ ಆಫ್ ಪಿಲ್ಗ್ರಿಮೇಜ್ ಎಂಬುದು ಇವರ ಆತ್ಮಕಥೆ. ನೃತ್ಯ, ನಾಟಕ, ತತ್ತ್ವಜ್ಞಾನ, ಸಾಹಿತ್ಯಗಳಲ್ಲಿ ಹೆಚ್ಚಿನ ಆಸಕ್ತಿ ತಳೆದಿದ್ದರು.

ಇವರು 2004 ಸೆಪ್ಟೆಂಬರ್ 23ರಂದು ಮುಂಬಯಿಯಲ್ಲಿ ನಿಧನರಾದರು. *

**ರಾಜಾರಾವ್, ಹಾಸನ:** 1909–2006. ಇಂಗ್ಲಿಷ್ ಭಾಷೆಯಲ್ಲಿ ಸೃಜನಶೀಲ ಬರೆವಣಿಗೆ ಮಾಡಿದವರಲ್ಲಿ ಅಗ್ರಗಣ್ಯರು. ಪ್ರಸಿದ್ಧ ಕಾದಂಬರಿಕಾರರು; ಕರ್ನಾಟಕದವರು.

ರಾಜಾರಾಯರು 1909 ನವೆಂಬರ್ 21ರಂದು ಹಾಸನದಲ್ಲಿ ಜನಿಸಿದರು. ಮೈಸೂರಿನ ಮಹಾರಾಜರು 1909ರಲ್ಲಿ ಹಾಸನಕ್ಕೆ ಭೇಟಿಯಿತ್ತಾಗ ಇವರು ಹುಟ್ಟಿದ್ದರಿಂದ ಇವರಿಗೆ ರಾಜಾ ಎಂದು ಹೆಸರಿಟ್ಟರಂತೆ. ಇವರ ತಂದೆತಾಯಿಗಳು ಚಿಕ್ಕ ವಯಸ್ಸಿನಲ್ಲೇ ಇವರಿಗೆ ರಾಮಾಯಣ, ಮಹಾಭಾರತ, ಪುರಾಣಗಳ ಕಥೆಗಳನ್ನು ಹೇಳಿ ಇವರಲ್ಲಿ ಭಾರತೀಯ ಸಂಸ್ಕೃತಿಯ ಒಲವನ್ನೂ ಶ್ರದ್ಧೆಯನ್ನೂ ಬೆಳೆಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಹಾಸನದಲ್ಲಿ ಮುಗಿಸಿದ ಇವರು ಪ್ರೌಢವಿದ್ಯಾಭ್ಯಾಸಕ್ಕೆಂದು ಹೈದರಾಬಾದಿಗೆ ತೆರಳಿ ಅಲ್ಲಿಯ ನಿಜಾಂ ಕಾಲೇಜಿನಲ್ಲಿ ಇಂಗ್ಲಿಷ್ ಮತ್ತು ಇತಿಹಾಸಗಳನ್ನು ಐಚ್ಛಿಕ ವಿಷಯಗಳನ್ನಾಗಿ ಓದಿ ತಮ್ಮ 19ನೆಯ ವಯಸ್ಸಿನಲ್ಲಿ ಪದವೀಧರರಾದರು (1929). ಇತಿಹಾಸದಲ್ಲಿ ಹೆಚ್ಚಿನ ಸಂಶೋಧನೆಗೆಂದು ಫ್ರಾನ್ಸ್‌ಗೆ ತೆರಳಿದ ಇವರು ಅಲ್ಲಿಯ ಸಾರ್‌ಬೋನ ವಿಶ್ವವಿದ್ಯಾಲಯವನ್ನು ಸೇರಿದರು. ಅಲ್ಲಿ ಪ್ರಾಧ್ಯಾಪಕರಾಗಿದ್ದ ಕೆಚಾಮಿಯ ಅವರ ನಿರ್ದೇಶನದಲ್ಲಿ ಸಂಶೋಧನೆಯನ್ನು ನಡೆಸಲು ಯತ್ನಿಸಿದರು. ಆದರೆ ಇವರ ಮನಸ್ಸು ಬರೆವಣಿಗೆಯತ್ತ ಹೊರಳಿ, ಅದರ ಆಕರ್ಷಣೆಯೇ ಪ್ರಬಲವಾಗಿ ಪರಿಣಮಿಸಿದ್ದರಿಂದ ಸಂಶೋಧನೆಯನ್ನು ಬಿಟ್ಟು ಬರೆವಣಿಗೆಯನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಳ್ಳುವ ನಿರ್ಧಾರ ಕೈಗೊಂಡರು. ಇದೇ ಸಂದರ್ಭದಲ್ಲಿ ಇವರು ಕೆಮಿಲ್ಲೆ ಮೌಲಿ ಎಂಬ ಫ್ರೆಂಚ್ ಮಹಿಳೆಯನ್ನು ಮದುವೆಯಾದರು (1931). ಅನಂತರ 1965ರಲ್ಲಿ ಜೋನ್ಸ್ ಎಂಬುವರನ್ನು ವಿವಾಹವಾದರು. ತಮ್ಮ ಜೀವನದ ಅರ್ಧಕ್ಕೂ ಹೆಚ್ಚಿನ ಭಾಗವನ್ನು ಇವರು ಫ್ರಾನ್ಸ್‌ನಲ್ಲಿ ಕಳೆಯುತ್ತಿದ್ದರು. ವರ್ಷದಲ್ಲಿ ಆರು ತಿಂಗಳು ಭಾರತದಲ್ಲೂ ಇನ್ನಾರು ತಿಂಗಳು ಯುರೋಪ್ ಮತ್ತು ಅಮೆರಿಕದಲ್ಲಿ ಕಳೆಯುತ್ತಿದ್ದರು. 1965ರಿಂದ ಆಸ್ಟನ್‌ನ ಟೆಕ್ಸಾಸ್ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿ ವರ್ಷದಲ್ಲಿ ಒಂದು ಸೆಮಿಸ್ಟರಿಗೆ ಬೋಧಿಸುತ್ತಿದ್ದರು.

ರಾಜಾರಾಯರ ಬದುಕಿನ ಬಹುಭಾಗ ಪಾಶ್ಚಾತ್ಯ ದೇಶಗಳಲ್ಲಿ ಕಳೆದಿದ್ದರೂ ಇವರ ಚೇತನ ನಿರಂತರವಾಗಿ ಸ್ಫೂರ್ತಿ ಪಡೆದಿರುವುದು

ಭಾರತೀಯ ಪರಂಪರೆಯಿಂದ. ಭಾರತೀಯ ಪರಂಪರೆಯ ಸಂಪ್ರದಾಯದ ಗರ್ಭದಲ್ಲಿ ಶಾಶ್ವತ ಮಾನವೀಯ ಮೌಲ್ಯಗಳು ಅಡಗಿವೆಯೆಂಬುದು ರಾಜಾರಾಯರ ನಿಲುವು. ಈ ನಿಲುವಿನ ಮುಂಬೆಳಕಿನಲ್ಲಿ ಇವರು ತಮ್ಮ ಜೀವನವನ್ನೂ ನಡೆಸಿಕೊಂಡು ಬಂದರು. ಲೇಖನವೃತ್ತಿಯನ್ನು ದಿವ್ಯಸಾಹಿತ್ಯೋಪಾಸನೆಯೆಂದು ಭಾವಿಸಿದ್ದ ಇವರಿಗೆ ಸಾಹಿತ್ಯೇತಿ ಹಾಸಗಳಲ್ಲಿ ವಿಶೇಷ ಆಸಕ್ತಿ ಇದ್ದರೂ ವೇದಾಂತ ತತ್ತ್ವಶಾಸ್ತ್ರಗಳೇ ಇವರ ಜೀವನದ ಉಸಿರು. ಇವರಿಗೆ ಕನ್ನಡ, ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಆಳವಾದ ಪರಿಶ್ರಮವಿತ್ತು. ಭಾರತದ ಆರ್ಷೇಯ ಸಂಸ್ಕೃತಿ ಪರಂಪರೆಗಳಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟುಕೊಂಡಿದ್ದ ಇವರು ತಮ್ಮ ಬರೆವಣಿಗೆಯಲ್ಲಿ ಜೀವನವನ್ನು ಒಳಹೊಕ್ಕು ನೋಡುವುದು, ಭಾರತೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದು, ಅತ್ಯಂತ ದೀನದಲಿತರಲ್ಲಿಯೂ ತಾವು ಕಂಡ ಉತ್ಕೃಷ್ಟ ಮಾನವೀಯತೆ, ಜೀವನಶ್ರದ್ಧೆ ಮೊದಲಾದವುಗಳನ್ನು ಬಣ್ಣಿಸುವುದು ಇವರ ಸಾಹಿತ್ಯದ ಪರಮಧ್ಯೇಯ.



20ನೆಯ ಶತಮಾನದ ನಾಲ್ಕನೆಯ ದಶಕದಲ್ಲಿ ಸಾಹಿತ್ಯಸೃಷ್ಟಿಗೆ ತೊಡಗಿದ ಇವರು ಕಾಂತಾಪುರ (1938), ದಿ ಸರ್ಪೆಂಟ್ ಅಂಡ್ ದಿ ರೋಪ್ (1960), ದಿ ಕ್ಯಾಟ್ ಅಂಡ್ ಷೇಕ್ಸ್‌ಪಿಯರ್:ಎ ಟೇಲ್ ಆಫ್ ಇಂಡಿಯಾ (1965), ಕಾಮ್‌ರೇಡ್ ಕಿರಿಲೋವ್ (1976), ಚೆಸ್‌ಮಾಸ್ಟರ್ ಅಂಡ್ ಹಿಸ್ ಮೂವ್ಸ್ (1988) ಎಂಬ ಕಾದಂಬರಿಗಳನ್ನೂ ದಿ ಕೌ ಆಫ್ ದಿ ಬ್ಯಾರಿಕೇಡ್ ಅಂಡ್ ಅದರ್ ಸ್ಟೋರೀಸ್ (1947) ಎಂಬ ಒಂದು ಸಣ್ಣಕಥಾಸಂಕಲನವನ್ನೂ ಪ್ರಕಟಿಸಿದ್ದಾರೆ. ಪ್ರತಿಷ್ಠಿತ ಇಂಗ್ಲಿಷ್ ಪತ್ರಿಕೆಗಳಲ್ಲಿ ಇವರ ಅನೇಕ ಲೇಖನಗಳೂ ಕಥೆಗಳೂ ಪ್ರಕಟವಾಗಿವೆ. ಇಕ್ಬಾಲ್ ಸಿಂಗ್‌ರೊಡನೆ ವಿದರ್ ಇಂಡಿಯಾ (1948) ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಇವರ ದಿ ಗ್ರೇಟ್ ಇಂಡಿಯನ್ ವೇ (1998) ಎಂಬುದು ಮಹಾತ್ಮ ಗಾಂಧೀಜಿಯವರ ಜೀವನವನ್ನು ಕುರಿತದ್ದು. ಡಾಟರ್ ಆಫ್ ದ ಮೌಂಟನ್ (2006) ಇವರು ಬರೆದ ಕೊನೆಯ ಕಾದಂಬರಿ.

ರಾಜಾರಾಯರ ಸಣ್ಣಕಥೆಗಳನ್ನು ಎರಡು ಬಗೆಗಳಾಗಿ ವಿಂಗಡಿಸಬಹುದು. ಮೊದಲನೆಯದು, 1930ರ ದಶಕದಲ್ಲಿ – ಅಂದರೆ ಇವರ ತಾರುಣ್ಯದಲ್ಲಿ ಬರೆದವು. ಎರಡನೆಯದು, ಇವರ ಹದಿವಯಸ್ಸಿನ ಬಳಿಕ ಬರೆದಂಥವು. ಮೊದಲನೆಯ ವರ್ಗದ ಕಥೆಗಳಲ್ಲಿ ದೀನದಲಿತ ವರ್ಗಗಳ ಉದ್ಧಾರಕ್ಕಾಗಿ ಗಾಂಧೀಜಿ ನಡೆಸುತ್ತಿದ್ದ ಹೋರಾಟದ ಪ್ರಭಾವದಿಂದಾಗಿ ಸಾಮಾಜಿಕ ಕಾಳಜಿ ಸ್ಪಷ್ಟವಾಗಿ ಕಾಣುತ್ತದೆ. ಎರಡನೆಯ ಬಗೆಯ ಕಥೆಗಳಲ್ಲಿ ಇವರು ಉತ್ತಮ ಕಾದಂಬರಿಕಾರರಾಗುವ ಪೂರ್ವ ಸಿದ್ಧತೆಯೂ ಕಲಾತ್ಮಕತೆಯೂ ಎದ್ದು ಕಾಣುತ್ತದೆ. ಇವುಗಳ ಕಥಾವಸ್ತು, ಪಾತ್ರಕಲ್ಪನೆ, ಚಿಂತನವಿಧಾನ, ಇಂಗ್ಲಿಷ್ ಭಾಷೆಯನ್ನು ಭಾರತೀಯ ಸಂವೇದನಾಶೀಲತೆಗೆ ಒಗ್ಗಿಸುವ ರೀತಿ ಮತ್ತು ಶೈಲಿಗಳಲ್ಲಿ ಮುಂದಿನ ಕಾದಂಬರಿಗಳಲ್ಲಿ ಕಾಣಬರುವ ಹದ, ಪರಿಪಾಕಗಳ ಸೂಚನೆಗಳಿವೆ.

ದಿ ಕೌ ಆಫ್ ದಿ ಬ್ಯಾರಿಕೇಡ್ಸ್ ಅಂಡ್ ಅದರ್ ಸ್ಟೋರೀಸ್ ಎಂಬ ಸಂಕಲನದಲ್ಲಿ ಜವನಿ, ದಿ ಲಿಟಲ್ ಗ್ರ್ಯಾಂ ಶಾಪ್, ಅಕ್ಕಯ್ಯ, ನಿಮ್ಕು, ದಿ ಕೌ ಆಫ್ ದಿ ಬ್ಯಾರಿಕೇಡ್ಸ್ ಎಂಬ ಸಣ್ಣ ಕಥೆಗಳಿವೆ. ರಷ್ಯದ ಸುಂದರ ತರುಣಿಯೊಬ್ಬಳ ಕರುಣಾಜನಕ ಬದುಕನ್ನು ಸೂಕ್ಷ್ಮವಾಗಿ, ಕಾವ್ಯಾತ್ಮಕವಾಗಿ ಚಿತ್ರಿಸಿರುವ ನಿಮ್ಕು ಎಂಬ ಸಣ್ಣಕಥೆ ಪ್ರಪಂಚದ ಅತ್ಯುತ್ತಮ ಸಣ್ಣ ಕಥೆಗಳಲ್ಲೊಂದೆಂದು ಖ್ಯಾತಿ ಪಡೆದಿದೆ. ಈ ಕಥೆಯಲ್ಲಿ ರಾಜಾರಾಯರು ಐರೋಪ್ಯ ಆವರಣಕ್ಕೆ ಭಾರತೀಯ ಸಂಸ್ಕೃತಿಯನ್ನು ಬೆಸೆದಿದ್ದಾರೆ. ಜವನಿ, ಇದೇ ಹೆಸರಿನ ಶೂದ್ರ ವಿಧವೆಯೊಬ್ಬಳ ಯಾತನಾಮಯ ಬದುಕನ್ನು ನಿರೂಪಿಸುವ ಉತ್ತಮ ಕಥೆ. ಅಕ್ಕಯ್ಯ ಎಂಬ ಕಥೆಯಲ್ಲಿ ಯಾರಿಗೂ ಬೇಡದ, ಮನೆಯಿಂದ ಹೊರಗಾಗಿ ಅನಾಥಳಾದ ನತದೃಷ್ಟ ವಿಧವೆಯ ಜೀವನಚಿತ್ರಣವಿದೆ. ದಿ ಕೌ ಆಫ್ ದಿ ಬ್ಯಾರಿಕೇಡ್ಸ್ ಅಹಿಂಸಾ ತತ್ತ್ವವನ್ನು ಸಾರುವ ಭಾರತೀಯ ಸಂಸ್ಕೃತಿಯ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುವ ಕಥೆ.

ರಾಜಾರಾಯರ ಮಹತ್ವದ ಸಾಹಿತ್ಯ ಸೃಷ್ಟಿಯೆಂದರೆ ಇವರ ಕಾದಂಬರಿಗಳು. ಕಾಂತಾಪುರ ಕಾದಂಬರಿ ಗಾಂಧೀತತ್ತ್ವದಿಂದ ಗಾಢವಾಗಿ ಪ್ರಭಾವಿತವಾದ ಬರೆವಣಿಗೆ ಕಾಂತಾಪುರ ಎಂಬ ಒಂದು ಚಿಕ್ಕಹಳ್ಳಿ ತನ್ನ ಶತಶತಮಾನದ ದೀರ್ಘನಿದ್ರೆಯಿಂದ ಮೈಕೊಡವಿಕೊಂಡು ಮೇಲೆದ್ದು ಗಾಂಧೀಜಿಯವರ ಅಹಿಂಸಾತ್ಮಕ ಚಳವಳಿಯ ಹಿನ್ನಲೆಯಲ್ಲಿ ನಾಯಕನೊಬ್ಬನ ಮುಂದಾಳತ್ವದಲ್ಲಿ ಇಡೀ ಹಳ್ಳಿಯೇ ಒಂದಾಗಿ ಶೋಷಣೆಯನ್ನು ಪ್ರತಿಭಟಿಸಿ ಹೋರಾಟ ನಡೆಸುವುದು ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವ ವಸ್ತು. ಕಾದಂಬರಿಯಲ್ಲಿ ಬರುವ ಮೂರ್ತಿ, ಪಟೇಲ ರಂಗೇಗೌಡ, ಭಟ್ಟ ಮೊದಲಾದ ಪಾತ್ರಗಳು ಜೀವಂತವಾಗಿ ಕಂಡರಣೆಗೊಂಡಿವೆ. ಮೂರ್ತಿಯ ಪಾತ್ರದಲ್ಲಿ ಆದರ್ಶದ ಅಂಶ ತುಂಬಿಕೊಂಡಿದ್ದು, ಅದರಲ್ಲಿ ಲೇಖಕರನ್ನು ಒಂದಾಗಿ ಕಾಣಬಹುದು. ಹಾಗಿದ್ದೂ ಕೂಡ ಪಾತ್ರಕ್ಕೂ ಪರಿಸರಕ್ಕೂ ನಡುವೆ ಇರುವ ಕಂದರವನ್ನು ಗುರುತಿಸಿಕೊಂಡಿರುವ ಲೇಖಕರ ಪ್ರಾಮಾಣಿಕತೆ ಮೆಚ್ಚಬೇಕಾದ್ದು. ಈ ಪಾತ್ರದ ಆಂತರಂಗಿಕ ತುಮುಲಗಳನ್ನು ಲೇಖಕರು ಚಿತ್ರಿಸುವಾಗ ತಮ್ಮ ಭಾವನೆಗಳು ಸಂಯಮವನ್ನು ನುಂಗದ ಹಾಗೆ ನೋಡಿಕೊಂಡಿದ್ದಾರೆ;ತುಂಬ ನಿರ್ವಿಕಾರವಾಗಿ, ಪ್ರಾಂಜಲವಾಗಿ ಪಾತ್ರನಿರ್ಮಿತಿ ಮಾಡಿದ್ದಾರೆ. ಈ ಅನನ್ಯತೆಯಿಂದಲೇ ಈ ಪಾತ್ರ ನಮಗೆ ಪ್ರಿಯವಾಗುವುದು.

ಈ ಕಾದಂಬರಿಯಲ್ಲಿ ಕಥೆಯ ಮೈಗೆ ಒಗ್ಗುವಂಥ ಶೈಲಿಯನ್ನು ಆವಿಷ್ಕರಿಸಿ ಅಳವಡಿಸಿಕೊಳ್ಳುವುದು ಹೊಸದೊಂದು ಅನುಭವವಾಗಿದೆ. ಲೇಖಕರೇ ಹೇಳುವಂತೆ, ಅದು ಅವರಿಗೇನೂ ಸುಲಭವಾಗಿ ದಕ್ಕಲಿಲ್ಲ. ತುಂಬ ರಂಜಕವಾಗಿ ಮೊದಲಿನಿಂದ ಕಡೆಯವರೆಗೂ ಒಂದೇ ಉಸಿರಿನಲ್ಲಿ ಕಥೆಯ ಓಟವನ್ನು ಕಾಯ್ದುಕೊಂಡಿದ್ದಾರೆ. ಇಲ್ಲಿ ಕಥೆಗಿಂತಲೂ ಅದರ ಬೌದ್ಧಿಕತೆಯ ಅಂಶ ಪ್ರಾಮುಖ್ಯ ಪಡೆದುಕೊಂಡಿದೆಯಾದರೂ ಜಟಿಲತಮವಾದ ಸಂಕೀರ್ಣ ಅಂಶಗಳನ್ನು ತೀರ ಸರಳವಾಗಿ ಸಹಜವಾಗಿ ಚಿತ್ರಿಸಿರುವ ಜಾಣ್ಮೆಯನ್ನು ನೋಡಬಹುದು. ಭಾರತೀಯ ಪರಂಪರೆಯ ಮಹಾನ್ ಹಿನ್ನಲೆಯಲ್ಲಿ ಒಂದು ಸಂವೇದನಶೀಲ ಚೇತನ ಇಂದು ಪಡೆಯುವ ಅನುಭವಗಳನ್ನೂ ತೀರ ಭಿನ್ನವಾದ ಸಾಂಸ್ಕೃತಿಕ ಜಗತ್ತಿಗೆ ಪರಿಚಯಿಸಿಕೊಡುವುದರಲ್ಲಿ ರಾಜಾರಾಯರು ಮೊದಲನೆಯವರಷ್ಟೇ ಅಲ್ಲ, ಮೊದಲಿಗರೂ ಹೌದು. ಕನ್ನಡ ಭಾಷೆಯ ಜಾಯಮಾನ, ಗತ್ತು, ಎರಿಳಿತಗಳು ಇವೆಲ್ಲವನ್ನೂ ಆಶ್ಚರ್ಯವೆನಿಸುವಷ್ಟು ಸಹಜವಾಗಿ ತಮ್ಮ ಈ ಹೊಸ ಇಂಗ್ಲಿಷ್ ಭಾಷೆಯಲ್ಲಿ ಅಳವಡಿಸಿದ್ದಾರೆ. ಕೆಲವೆಡೆ ಅಂಥ ಅನುವಾದಗಳು ಕಾವ್ಯದ ಉತ್ಕಟತೆಯನ್ನೂ ಪಡೆದುಕೊಳ್ಳುತ್ತವೆ. ತನ್ನ ಇತಿಮಿತಿಗಳೇನೇ ಇದ್ದರೂ ಕಾಂತಾಪುರ ಭಾರತೀಯ ಇಂಗ್ಲಿಷ್ ಲೇಖಕರು ನಡೆಯಬೇಕಾದ ದಾರಿ ಯಾವುದೆಂಬುದನ್ನು ಸೂಚಿಸುವ ಕೈಮರವಾಯಿತು; ಹೊಸ ಪರಂಪರೆಯೊಂದರ ಉದಯವಾಣಿಯಾಯಿತು.

ಐತಿಹಾಸಿಕ ದಾಖಲೆಯೆಂದೇ ಅಲ್ಲ, ತನ್ನ ಅಂತಸ್ಸತ್ತ್ವದಿಂದ ಕೂಡ ಈ ಕಾದಂಬರಿ ನಿರ್ವಿವಾದವಾಗಿ ಒಂದು ಉತ್ಕೃಷ್ಟ ಕಲಾಕೃತಿಯ ಸ್ಥಾನವನ್ನು ಪಡೆದುಕೊಂಡಿದೆ. ಪ್ರಸಿದ್ಧ ಆಂಗ್ಲ ಲೇಖಕರಾದ ಇ.ಎಂ. ಫಾರ್‌ಸ್ಟರ್ ಅವರು ಈ ಕಾದಂಬರಿಯನ್ನು ಕುರಿತು 'ಕಾಂತಾಪುರ ಒಂದು ಉತ್ತಮ ಕಾದಂಬರಿ. ಭಾರತೀಯ ಲೇಖಕನೊಬ್ಬನಿಂದ ಇಂಗ್ಲಿಷ್ ಭಾಷೆಯಲ್ಲಿ ಇದುವರೆವಿಗೂ ಇಂಥ ಕೃತಿ ಬಂದೇ ಇಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಾಂತಾಪುರದ ಅನಂತರ ಪ್ರಕಟವಾದ ದಿ ಸರ್ಪೆಂಟ್ ಅಂಡ್ ದಿ ರೋಪ್ ಒಂದು ಮಹತ್ತ್ವಪೂರ್ಣ ಕೃತಿ. ಕಾಂತಾಪುರದಲ್ಲಿನ ಪ್ರಯೋಗ ಶೀಲತೆ ಈ ಕಾದಂಬರಿಯಲ್ಲಿ ಹೆಚ್ಚಿನ ವ್ಯಾಪ್ತಿ ಹಾಗೂ ಯಶಸ್ಸುಗಳಿಂದ ಮುಂದುವರಿದಿದೆ. ಭಾರತೀಯನಾದ ರಾಮಸ್ವಾಮಿ ಹಾಗೂ ಫ್ರೆಂಚ್ ಮಹಿಳೆ ಮ್ಯಾಡಲೀನರ ಕಥೆಯ ಮೂಲಕ ಪೂರ್ವಪಶ್ಚಿಮಗಳ ತಾತ್ತ್ವಿಕ ಮಿಲನವನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಮಾನವನು ಯಾವುದು ನಿರುಪಾಧಿಕ, ಯಾವುದು ನಿತ್ಯ, ಯಾವುದು ಅನಿತ್ಯ, ಯಾವುದು ಹಾವು, ಯಾವುದು ಹಗ್ಗ, ಯಾವುದು ನಿಜವಸ್ತು, ಯಾವುದು ನೆರಳು ಎನ್ನುವುದನ್ನು ಅರಿಯಲು ಕಲಿಯಬೇಕು; ಇಂಥ ಯುಕ್ತಾಯುಕ್ತ ವಿವೇಚನೆಯನ್ನು ತಿಳಿಸುವ ಜ್ಞಾನವೇ ನಿಜವಾದ ಜ್ಞಾನ ಎನ್ನುವುದು ಈ ಕಾದಂಬರಿಯ ತಿರುಳು.

ರಾಜಾರಾಯರನ್ನೂ ಇವರ ಸಾಹಿತ್ಯಕೃಷಿಯನ್ನೂ ಕುರಿತಂತೆ ರಾಜಾರಾವ್: ಎ ಕ್ರಿಟಿಕಲ್ ಸ್ಟಡಿ ಆಫ್ ಹಿಸ್ ವರ್ಕ್ಸ್ (ಸಿ.ಡಿ.ನರಸಿಂಹಯ್ಯ, 1972), ರಾಜಾರಾವ್ (ಎಂ.ಎಸ್.ನಾಯಕ್, 1972) ಎಂಬ ಎರಡು ಅಧ್ಯಯನಗಳು ಪ್ರಕಟವಾಗಿವೆ. ಇವರಿಗೆ 1964ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಭಾರತ ಸರ್ಕಾರ ಇವರ ಸಾಹಿತ್ಯ ಸೇವೆಗಾಗಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ (1969). ಇವರು 2006 ಜುಲೈ 8ರಂದು ಅಮೆರಿಕದಲ್ಲಿ ನಿಧನಹೊಂದಿದರು. (ಎಚ್.ಜಿ.ಎಸ್.)

**ರಾಜೀವ ತಾರಾನಾಥ:** 1932– . ಸರೋದ್ ವಾದನದ ಮೂಲಕ ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರರಾಗಿರುವ ಕರ್ನಾಟಕದ ಸಂಗೀತ ಕಲಾವಿದ ಹಾಗೂ ಸಾಹಿತಿ. 1932 ಅಕ್ಟೋಬರ್ 17ರಂದು ಜನಿಸಿದರು. ಪ್ರಸಿದ್ಧ ವೈದ್ಯರೂ ಸಾಹಿತಿಯೂ ವಾಗ್ಮಿಯೂ ಸಂಗೀತಗಾರರೂ ಯೋಗಾಭ್ಯಾಸಿಯೂ ಕ್ರಾಂತಿಕಾರಿಯೂ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಪಂಡಿತ ತಾರಾನಾಥರು (1891–1942) ಇವರ ತಂದೆ; ತಾಯಿ ಸುಮತಿ. ತುಂಗಭದ್ರಾ ನದಿಯ ದಂಡೆಯ ಮೇಲಿದ್ದ ಪ್ರೇಮಾಯತನ ಎಂಬ ಆಶ್ರಮದಲ್ಲಿ ರಾಜೀವರು ತಮ್ಮ ಬಾಲ್ಯದ ದಿನಗಳನ್ನು ಕಳೆದರು.

ರಾಜೀವರಿಗೆ ಚಿಕ್ಕಂದಿನಿಂದಲೂ ಗೆಳೆಯ, ಗುರು, ಆಪ್ತರೆಂದರೆ ಇವರ ತಂದೆಯೇ. ಎರಡನೆಯ ಒಡನಾಡಿ ಮನೆಯಲ್ಲಿದ್ದ ಗ್ರಾಮಫೋನು. ಆಗಿನ ಕಾಲದ ಖ್ಯಾತ ಹಿಂದುಸ್ಥಾನಿ ಗಾಯಕರ ಧ್ವನಿಮುದ್ರಿಕೆಗಳು ಮನೆಯಲ್ಲಿದ್ದುದಲ್ಲದೆ ಮನೆಯೇ ಸಂಗೀತ ಶಾಲೆಯಂತಿತ್ತು. ಇವರು ಮೊದಲು ತಬಲಾ, ಅನಂತರ ಗಾಯನ ಹಾಗೂ ಸರೋದ್ ವಾದನವನ್ನು ಕಲಿತರು. ತಮ್ಮ ಬಿಡುವಿನ ಅವಧಿಯಲ್ಲಿ ಅಬ್ದುಲ್ ಕರೀಂಖಾನರಿಂದ ಆರಂಭಿಸಿ ಅನೇಕ ಹಿಂದುಸ್ತಾನಿ ಗಾಯಕರ ಧ್ವನಿಮುದ್ರಿಕೆಗಳನ್ನು ರಾಜೀವರು ಆಲಿಸುತ್ತಿದ್ದರು. ಮನೆಯಲ್ಲಿ ಕನ್ನಡ, ಸಂಸ್ಕೃತ, ಇಂಗ್ಲಿಷ್, ಉರ್ದು, ಕೊಂಕಣಿ, ಹಿಂದಿ, ಬಂಗಾಲಿ, ತಮಿಳು, ತೆಲುಗು– ಹೀಗೆ ಹಲವು ಭಾಷೆಗಳನ್ನು ಮಾತನಾಡುತ್ತಿದ್ದ ಪರಿಸರವಿತ್ತು. ಇಂಥ ವೈವಿಧ್ಯಮಯವಾದ ಶ್ರೀಮಂತ ಸಾಂಸ್ಕೃತಿಕ ಪರಿಸರದಲ್ಲಿ ರಾಜೀವರು ತಮ್ಮ ಬಾಲ್ಯವನ್ನು ಕಳೆದರು. ರಾಜೀವರಿನ್ನೂ ಚಿಕ್ಕವರಿರುವಾಗಲೇ ಪಂಡಿತ ತಾರಾನಾಥರು ಇವರಿಗೆ ಸಂಗೀತ ಪಾಠ ಕಲಿಸುವ ವ್ಯವಸ್ಥೆ ಮಾಡಿದ್ದರು. ಮೊದಲಿಗೆ ಸವಣೂರ ಕೃಷ್ಣಾಚಾರ್ಯರಿಂದ ಶಾಸ್ತ್ರೋಕ್ತ ಸಂಗೀತ ಕಲಿಕೆ ಪ್ರಾರಂಭವಾಯಿತು. ಅನಂತರದಲ್ಲಿ ಸವಾಯಿ ಗಂಧರ್ವರ ಶಿಷ್ಯರಾದ ವೆಂಕಟರಾವ್ ರಾಮದುರ್ಗರ ಮೂಲಕ ಭೈರವಿ ರಾಗವನ್ನು ಕಲಿತಿದ್ದಲ್ಲದೆ ಆ ಮೂಲಕ ರಾಗಗಳ ಸಂಕೀರ್ಣತೆಯ ಅರಿವುಂಟಾಯಿತು. 1940ರಲ್ಲಿ ಪಂಚಾಕ್ಷರಿ ಗವಾಯಿಗಳಿಂದ ಮುಲ್ತಾನಿ, ಬೋಗಿಯಾ ರಾಗಗಳನ್ನು ಕಲಿತರು. ಒಂಬತ್ತು ವರ್ಷದ ಬಾಲಕ ರಾಜೀವ ಬೆಂಗಳೂರಿನಲ್ಲಿ ಕಟ್ಟಡವೊಂದರ ಉದ್ಘಾಟನೆಗೆ ಸಂಗೀತ ಕಛೇರಿ ನಡೆಸಿಕೊಟ್ಟು ಜನಪ್ರೀತಿಗೆ ಪಾತ್ರರಾದರು. ಇದು ಇವರ ಮೊಟ್ಟಮೊದಲ ಸಂಗೀತ ಕಛೇರಿ. ಅಂದು ಇವರು ಹಾಡಿದ ರಾಗ ಬಾಗೇಶ್ರೀ.

ಪಂಡಿತ ತಾರಾನಾಥರು 1942ರಲ್ಲಿ ಶಂಕರಜೋಶಿ ದೇವಗಿರಿ ಅವರಿಂದ ರಾಜೀವರಿಗೆ ಸಂಗೀತಪಾಠ ಹೇಳಿಸುವ ವ್ಯವಸ್ಥೆಯನ್ನು ಮಾಡಿದ್ದರು. ದೇವಗಿರಿಯವರು ಪಾಠ ಹೇಳಲು ಬಂದ ದಿನದಂದು ಪಂಡಿತ ತಾರಾನಾಥರು ತೀರಿಕೊಂಡಿದ್ದರು (1942 ಅಕ್ಟೋಬರ್ 31). ಧೃತಿಗೆಡದ ರಾಜೀವರ ತಾಯಿ ಮಗನಿಗೆ ಸಂಗೀತ ಪಾಠ ಹೇಳಿಸುವ ವ್ಯವಸ್ಥೆ ಮಾಡಿದರು.

ಸುಮಾರು ಒಂಬತ್ತು ವರ್ಷಗಳ ಕಾಲ ರಾಜೀವರು ಶಂಕರ ಜೋಶಿಯವರಲ್ಲಿ ಸಂಗೀತ ವ್ಯಾಸಂಗ ಮಾಡಿದರು.

ರಾಜೀವರು 1949ರಲ್ಲಿ ನೇರವಾಗಿ ಸೀನಿಯರ್ ಕೇಂಬ್ರಿಜ್ ಪರೀಕ್ಷೆಗೆ ಕುಳಿತು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಯಾದರು. 1955ರ ವೇಳೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಆನರ್ಸ್ ಪದವಿ ಪಡೆದು ಅದೇ ಕಾಲೇಜಿನಲ್ಲಿ ಅಧ್ಯಾಪಕರಾದರು. 1961ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಿ ಇಂಗ್ಲಿಷ್ ಎಂ.ಎ. ಪದವಿಯನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ಪಡೆದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೇ ಇಂಗ್ಲಿಷ್ ಅಧ್ಯಾಪಕರಾಗಿ ನೇಮಕವಾದರು. ಯು.ಜಿ.ಸಿ. ಶಿಷ್ಯವೇತನ ಪಡೆದು 1969ರಲ್ಲಿ ಸಿ.ಡಿ. ನರಸಿಂಹಯ್ಯನವರ ಮಾರ್ಗದರ್ಶನದಲ್ಲಿ ದಿ ಇಮೇಜ್ ಇನ್ ದಿ ಪೊಯಿಟ್ರಿ ಆಫ್ ಟಿ.ಎಸ್. ಎಲಿಯಟ್ ಎಂಬ ವಿಷಯ ಕುರಿತು ಅಧ್ಯಯನ ಮಾಡಿ ಪಿಎಚ್.ಡಿ. ಪದವಿ ಪಡೆದರು (1968).

ರಾಜೀವರ ಬದುಕಿನಲ್ಲಿ ಮಹತ್ತ್ವದ ತಿರುವು ಮೂಡಿಸಿದ ಘಟನೆಯೆಂದರೆ 1952ರಲ್ಲಿ ಬೆಂಗಳೂರಿನಲ್ಲಿ ನಡೆದ ಪಂಡಿತ ರವಿಶಂಕರ್ ಮತ್ತು ಉಸ್ತಾದ್ ಅಲಿ ಅಕ್ಬರ್‌ಖಾನರ ಸಿತಾರ್–ಸರೋದ್ ಜುಗಲ್‌ಬಂದಿ ಕಾರ್ಯಕ್ರಮ. ಈ ಕಾರ್ಯಕ್ರಮ ಇವರಿಗೆ ಸರೋದ್ ವಾದ್ಯದ ಪೂರ್ಣ ಮಹತ್ವವನ್ನು ಅರಿವಿಗೆ ತಂದುಕೊಟ್ಟಿತು. ವಾದ್ಯಗಳ ರಾಜನೆಂದರೆ ಸಿತಾರ್ ಎಂದುಕೊಂಡಿದ್ದ ರಾಜೀವರು ಪಂಡಿತ ರವಿಶಂಕರ್ ಅವರ ಸಿತಾರ್ ಕೇಳಲು ಅಂದಿನ ಸಂಗೀತ ಕಛೇರಿಗೆ ಬಂದು ಅಲಿ ಅಕ್ಬರ್ ಖಾನರು ನುಡಿಸಿದ 'ಪೂರ್ವಕಲ್ಯಾಣಿ' ರಾಗವನ್ನು ಕೇಳಿದರು. ರಾಜೀವರ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಆ ರಾಗ ಮುಗಿಯುವ ವೇಳೆಗೆ ರಾಜೀವರು ಸರೋದ್ ವಾದನದ ವಶವಾಗಿಹೋಗಿದ್ದರು. ಸರೋದ್‌ವಾದನ ರಾಜೀವರ ಭಾವಕೋಶದಲ್ಲಿ ಹೆಪ್ಪುಗಟ್ಟತೊಡಗಿತು. ಈ ವಾದ್ಯವನ್ನು ಕಲಿಯಲೇಬೇಕು, ಕಲಿತರೆ ಅಲಿ ಅಕ್ಬರ್‌ಖಾನರ ಹತ್ತಿರವೇ ಕಲಿಯಬೇಕೆಂದುಕೊಂಡರು. ಹೀಗೆ ಖಾನ್ ಸಾಹೇಬರ

ಅಂದಿನ ಸಂಗೀತ ಕಛೇರಿ ರಾಜೀವರ ಸಂಗೀತ ಜೀವನಕ್ಕೆ ಒಂದು ಗೊತ್ತುಗುರಿಯನ್ನು ಕಲ್ಪಸಿಕೊಟ್ಟಿತು.

ಸರೋದ್ ಕಲಿಯಲು ಅಲಿ ಅಕ್ಬರ್‌ಖಾನ್ ಅವರಲ್ಲಿ ಶಿಷ್ಯವೃತ್ತಿ ಕೈಗೊಂಡರು. 1952–55 ರವರೆಗೆ ಮುಂಬಯಿ ಬೆಂಗಳೂರುಗಳಿಗೆ ಓಡಾಟವಿಟ್ಟುಕೊಂಡೆ ಸರೋದ್ ಅಭ್ಯಾಸ ಹಾಗೂ ಅಧ್ಯಾಪನ ಎರಡನ್ನೂ ನಡೆಸಿಕೊಂಡು ಬಂದರು. ಇವರ ತಾಯಿ ತೀರಿಕೊಂಡಮೇಲೆ 1955ರಲ್ಲಿ ಅಧ್ಯಾಪಕ ವೃತ್ತಿಗೆ ರಾಜೀನಾಮೆ ಸಲ್ಲಿಸಿ ಮುಂಬಯಿಗೆ ಹೋಗಿ ನೆಲಸಿ ಜೀವನ ನಿರ್ವಹಣೆಗಾಗಿ 'ಆರ್ಯನ್ ಪಾತ್' ಪತ್ರಿಕಾಲಯ ಮತ್ತು ಭಾರತೀಯ ವಿದ್ಯಾಭವನ ಶಾಲೆಯಲ್ಲಿ ಕೆಲಸ ಮಾಡುತ್ತಾ ತಮ್ಮ ಸರೋದ್ ಅಭ್ಯಾಸವನ್ನು ಮುಂದುವರಿಸಿದರು.

ಕಲ್ಕತ್ತಕ್ಕೆ ಹೋಗಿ ನೆಲಸಿದ್ದ ಅಲಿ ಅಕ್ಬರ್‌ಖಾನರು ತಮ್ಮ ಶಿಷ್ಯನನ್ನು ಕಲ್ಕತ್ತಕ್ಕೆ ಬರುವಂತೆ ಕರೆದರು. ರಾಜೀವರು ಕಲ್ಕತ್ತಕ್ಕೆ ಹೋದರು. ಕಡುಕಷ್ಟದ ದಿನಗಳವು. ರಾಜೀವರು ತಾಳ್ಮೆ–ಸಂಯಮಗಳಿಂದ ಕಷ್ಟನಿಷ್ಠುರಗಳನ್ನು ಧೈರ್ಯದಿಂದ ಎದುರಿಸಿದರು. ಇವರ ಧ್ಯಾನಶೀಲ ಮನಸ್ಸು ಇವರನ್ನು ಮಹಾನ್‌ಸಾಧಕರನ್ನಾಗಿ ಮಾಡಿತು. 1955ರಿಂದ 1960ರವರೆಗೆ ಖಾನ್ ಸಾಹೇಬರು ಸರೋದ್ ನುಡಿಸುವಿಕೆಯನ್ನು ರಾಜೀವರಿಗೆ ಧಾರೆ ಎರೆದರು. ಇವರ ಸರೋದ್ ವಾದನಾಭ್ಯಾಸ ಒಂದು ಪರಿಪಕ್ವತೆಯ ಘಟ್ಟ ತಲುಪಿತು. ಅನಂತರ ರಾಜೀವರು ಕಲ್ಕತ್ತದಿಂದ ಹಿಂದಿರುಗಿ ಬಂದು ಪುನಃ ಅಧ್ಯಾಪನವೃತ್ತಿಯನ್ನು ಕೈಗೊಂಡರು. 1960ರಲ್ಲಿ ಮೈಸೂರಿನ ಬನುಮಯ್ಯ ಕಾಲೇಜು, 1961ರಲ್ಲಿ ರಾಯಚೂರಿನ ಎಲ್.ವಿ.ಡಿ. ಕಾಲೇಜು, 1964ರಲ್ಲಿ ಧಾರವಾಡದ ಕರ್ನಾಟಕ ಕಾಲೇಜು, 1965ರಲ್ಲಿ ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಷನ್ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ದುಡಿದರು. 1968ರಲ್ಲಿ ತಿರುಚಿಯ ರೀಜನಲ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಇಂಗ್ಲಿಷ್ ಬೋಧಕರಾಗಿದ್ದ ಇವರು ಪದವಿ ಪಡೆದ ಮೇಲೆ ಹೈದರಾಬಾದಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಅಂಡ್ ಫಾರಿನ್ ಲಾಂಗ್ವೇಜ್ (ಐ.ಇ.ಎಫ್.ಎಲ್.) ಸಂಸ್ಥೆಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನೇಮಕವಾದರು. 1986ರ ಅನಂತರ ಪ್ರಾಧ್ಯಾಪಕ ಹುದ್ದೆಗೆ ರಾಜೀನಾಮೆ ಸಲ್ಲಿಸಿ, ಬೆಂಗಳೂರಿಗೆ ಬಂದು ನೆಲೆಸಿದರು. ಈಗ ತಮ್ಮ ಬದುಕಿನ ಸಂಪೂರ್ಣ ಸಮಯವನ್ನು ಸರೋದ್‌ಗಾಗಿ ಮೀಸಲಾಗಿಟ್ಟಿರುವ ರಾಜೀವರು ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಂಗೀತ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿ ಸಂದರ್ಶನ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು.

ರಾಜೀವರ ಪತ್ನಿ ಮಾಧವಿ. ಇವರ ಏಕೈಕ ಪುತ್ರ ಚೇತನ್ ತಾರಾನಾಥ್ ಈಗ ಅಮೆರಿಕದಲ್ಲಿದ್ದಾರೆ, ಬದುಕಿನಲ್ಲಿ ಹಲವಾರು ಏರಿಳಿತಗಳನ್ನು ಕಂಡಿರುವ ರಾಜೀವರು ಸಂಚಾರಿ ಸ್ವಭಾವದ ವ್ಯಕ್ತಿ. ಹೊಸದರ ಅನ್ವೇಷಕರು. ಸ್ವತಂತ್ರ ಮನೋಧರ್ಮ ಇವರದು. ನಿರಂತರ ಶೋಧ ಇವರ ಗುಣ. ಏಕಾಗ್ರತೆ ಇವರ ಬದುಕಿನ ಮೂಲಭಿತ್ತಿ. ಹಿಂದುಸ್ತಾನಿ ಸಂಗೀತದಲ್ಲಿ ಸರೋದ್ ವಾದಕರೇ ಇಲ್ಲ ಎನ್ನುವಷ್ಟರಮಟ್ಟಿಗೆ ಅವರ ಸಂಖ್ಯೆ ಇಳಿದಿರುವಾಗ ಇವರು ದೊಡ್ಡ ಸರೋದ್ ಕಲಾವಿದರಾಗಿ ಸನಾಯಿ ಘರಾನಾ ಸಂಗೀತ ಪರಂಪರೆಗೆ ಸೇರಿದ್ದಾರೆ. ಇವರು ದೇಶದಾದ್ಯಂತ ಕಛೇರಿಗಳನ್ನು ನಡೆಸಿರುವುದಲ್ಲದೆ ಪ್ರಪಂಚದ ಅನೇಕ ದೇಶಗಳಲ್ಲಿ ತಮ್ಮ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕಲ್ಕತ್ತದ ಅಖಿಲಭಾರತ ಸಂಗೀತೋತ್ಸವ, ಮುಂಬಯಿಯ ಭಾತಖಂಡೆ ಸಮ್ಮೇಳನ, ಗ್ವಾಲಿಯರಿನ ತಾನಸೇನ ಸಮಾವೇಶ, ಬೆಂಗಳೂರಿನಲ್ಲಿ ಜರುಗಿದ (1986) ಅಖಿಲಭಾರತ ಸಾಂಸ್ಕೃತಿಕ ಸಮ್ಮೇಳನ, ದೆಹಲಿಯಲ್ಲಿ ಜರುಗಿದ (1978) ರಾಷ್ಟ್ರೀಯ ಕಲಾ ಉತ್ಸವ ಮುಂತಾದವು. 1974ರಲ್ಲಿ ಇವರು ಆಸ್ಟ್ರೇಲಿಯ ದೇಶದಲ್ಲಿ ಪ್ರವಾಸಮಾಡಿ ಸಿಡ್ನಿ, ಮೆಲ್ಬೋರ್ನ್, ಅಡಿಲೆಡ್, ಕ್ಯಾನ್‌ಬೆರಾಗಳಲ್ಲಿ ಕಛೇರಿ ನಡೆಸಿದ್ದಾರೆ. ಸಿಡ್ನಿಯ "ಅಪೇರಾ ಹೌಸ್"ನಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿದ (1974) ಪ್ರಪ್ರಥಮ ಭಾರತೀಯನೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ಇರುವ ಅಲಿ ಅಕ್ಬರ್‌ಖಾನ್ ಸಂಗೀತ ಶಾಲೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ದುಡಿದಿದ್ದಾರೆ. ವಾಲ್ಟ್‌ಡಿಸ್ನಿ ಯೂನಿವರ್ಸಿಟಿ ಆಫ್ ಪರ್‌ಫಾರಿಂಗ್ ಆರ್ಟ್ಸ್ ಎಂಬಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ಇಲ್ಲಿ ಪ್ರಾಧ್ಯಾಪಕರಾಗಿರುವ ಭಾರತೀಯರಲ್ಲಿ ಪಂಡಿತ ರವಿಶಂಕರ್ ಮೊದಲಿಗರಾದರೆ ರಾಜೀವ ತಾರಾನಾಥರು ಎರಡನೆಯವರು.

ರಾಜೀವರದು ವೈವಿಧ್ಯಮಯವಾದ ಆಸಕ್ತಿ, ಬಹುಮುಖ ಪ್ರತಿಭೆ. ಇವರು ವಿಚಾರವಾದಿಗಳೂ ವಿಮರ್ಶಕರೂ ಹಿನ್ನೆಲೆ ಗಾಯಕರೂ ಸಂಗೀತ ನಿರ್ದೇಶಕರೂ ಆಗಿದ್ದಾರೆ. ಇವರು ಸಿನಿಮಾ ಜಗತ್ತಿಗೆ ನೀಡಿರುವ ಕೊಡುಗೆ ಕೂಡ ಗಮನಾರ್ಹವಾದುದು. ಇಪ್ಪತ್ತನೆಯ ಶತಮಾನದ ಎಂಬತ್ತರ ದಶಕದಲ್ಲಿ ಆರಂಭವಾದ ಹೊಸ ಅಲೆಯ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ. ಮೊದಮೊದಲಿಗೆ ತಮ್ಮ ಗುರುಗಳ ಜೊತೆಗೂಡಿ ಬಂಗಾಲಿ ಚಲನಚಿತ್ರಗಳಿಗೆ ಸಂಗೀತ ನಿರ್ದೇಶನ ನೀಡುತ್ತಿದ್ದ ರಾಜೀವರು 1970ರಲ್ಲಿ ಯು.ಆರ್. ಅನಂತಮೂರ್ತಿಯವರ ಕಾದಂಬರಿಯಾಧಾರಿತ 'ಸಂಸ್ಕಾರ' ಕನ್ನಡ ಚಲನಚಿತ್ರಕ್ಕೆ ಸಂಗೀತ ನಿರ್ದೇಶನ ನೀಡಿದರು. 1975ರಲ್ಲಿ ಪಿ. ಲಂಕೇಶ್‌ರ ಪಲ್ಲವಿ ಚಿತ್ರಕ್ಕೆ ಸಂಗೀತ ನಿರ್ದೇಶನ ನೀಡಿದರು. ಈ ಚಿತ್ರ ವರ್ಷದ ಅತ್ಯುತ್ತಮ ಹಿನ್ನೆಲೆ ಸಂಗೀತವುಳ್ಳ ಚಿತ್ರ ಎಂದು ರಾಷ್ಟ್ರಪ್ರಶಸ್ತಿ ಪಡೆಯಿತು. ಇವರ ಸಂಗೀತ ನಿರ್ದೇಶನದ ಕಾಂಚನ ಸೀತ (1978), ಪೂಕುವಯಲ್ (1981) ಎಂಬ ಮಲಯಾಳಂ ಚಿತ್ರಗಳು ರಾಷ್ಟ್ರಪ್ರಶಸ್ತಿ ಗಳಿಸಿವೆ. 1982ರಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಬಿಡುಗಡೆಯಾದ ಪೇಪರ್ ಬೋಟ್ ಎಂಬ ಚಲನಚಿತ್ರ ರಾಜ್ಯ ಪ್ರಶಸ್ತಿಗೆ ಪಾತ್ರವಾಗಿದೆ. 1991ರಲ್ಲಿ ಬಿಡುಗಡೆಯಾದ ಕದವು ಎಂಬ ಮಲಯಾಳಂ ಚಲನಚಿತ್ರ ಸಿಂಗಪುರ್‌ನಲ್ಲಿ ನಡೆದ ಏಷ್ಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರವೆಂದು ಮನ್ನಣೆ ಗಳಿಸಿದೆ. ಇದಲ್ಲದೆ 1970ರಲ್ಲಿ ಚದುರಂಗರು ನಿರ್ದೇಶಿಸಿದ ಕುವೆಂಪು ಸಾಕ್ಷ್ಯಚಿತ್ರಕ್ಕೂ ರಾಜೀವರು ಸಂಗೀತ ನಿರ್ದೇಶನ ನೀಡಿದರು.

ರಾಜೀವರಿಗೆ ಸಂಗೀತದ ತರುವಾಯದ ಆಸಕ್ತಿಯ ಕ್ಷೇತ್ರವೆಂದರೆ ಸಾಹಿತ್ಯ. ಸಾಹಿತ್ಯವನ್ನು ಸಂಗೀತದ ಸಂವೇದನೆಯಿಂದಲೇ ಗ್ರಹಿಸುವ ಮನಸ್ಸು ಇವರದು. ಕನ್ನಡ ನವ್ಯ ವಿಮರ್ಶಕರಲ್ಲಿಯೂ ಇವರ ಹೆಸರು ಮುಖ್ಯವಾದದ್ದು. ಟಿ.ಎಸ್. ಎಲಿಯಟ್‌ನ ಕಾವ್ಯದ ಮೇಲೆ ಸಂಶೋಧನೆ ನಡೆಸಿ ಆ ಕಾವ್ಯದ ಸೂಕ್ಷ್ಮಗಳನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ಷೇಕ್‌ಸ್ಪಿಯರನ ಕಾರಿಯೊಲನಸ್ ನಾಟಕವನ್ನೂ ಎಲಿಯಟ್‌ನ ದಿ ವೇಸ್ಟ್ ಲ್ಯಾಂಡ್ ಕಾವ್ಯವನ್ನೂ ತೌಲನಿಕವಾಗಿ ಅಧ್ಯಯನ ನಡೆಸಿ ಮಂಡಿಸಿರುವ ಪ್ರಬಂಧ ಪ್ರಪಂಚದ ವಿಮರ್ಶಕರ ಗಮನ ಸೆಳೆದಿದೆ.

ಕನ್ನಡದಲ್ಲಿ ರಾಜೀವರು ಬರೆದಿರುವ ಲೇಖನಗಳು ಕಡಿಮೆ. ಎಚ್.ಎಂ. ಚನ್ನಯ್ಯನವರ ಕಾಮಿ, ಆಮೆ ಕವನ ಸಂಕಲನಗಳಿಗೆ, ನ. ರತ್ನ ಅವರ ಎಲ್ಲಿಗೆ ಎಂಬ ನಾಟಕಕ್ಕೆ, ಯು. ಆರ್. ಅನಂತಮೂರ್ತಿಯವರ ಪ್ರಶ್ನೆ ಕಥಾಸಂಕಲನಕ್ಕೆ ಇವರು ಅರ್ಥಪೂರ್ಣವಾದ ಮುನ್ನುಡಿಗಳನ್ನು ಬರೆದಿದ್ದಾರೆ. ಗಿರೀಶ್ ಕಾರ್ನಾಡರ ತುಘಲಕ್ ನಾಟಕದ ಬಗ್ಗೆ, ಚಂದ್ರಶೇಖರ ಕಂಬಾರರ ನಾಟಕಗಳ ಬಗ್ಗೆ ಇವರು ವಿಮರ್ಶೆ ಬರೆದಿದ್ದಾರೆ.

ಮನ್ವಂತರದಲ್ಲಿ ಬರೆದ ನಾಟಕ ಪ್ರಜ್ಞೆ, ನಾಟಕ ಮತ್ತು ಕ್ರಿಯಾವಿಧಿ, ಸಾಹಿತ್ಯ ಮತ್ತು ವೈಚಾರಿಕತೆ, "ಕದಡಿದ ನೀರು" ಕೃತಿ ವಿಮರ್ಶೆ– ಈ ಲೇಖನಗಳು ಇವರನ್ನು ಕನ್ನಡ ನವ್ಯ ವಿಮರ್ಶಕರ ಸಾಲಿನಲ್ಲಿ ಮುಖ್ಯರನ್ನಾಗಿಸಿವೆ. ರಾಜೀವರು ಸಾಹಿತ್ಯ ಮತ್ತು ಸಂಗೀತ ಕುರಿತಂತೆ ಪ್ರಕಟಿಸಿರುವ ಕೆಲವು ಲೇಖನಗಳು ಹೀಗಿವೆ:

ದಿ ಪೊಯಟ್ರಿ ಆಫ್ ನಿಜಮ್ ಎಜಿಕಿಲ್ (1966), ಆ್ಯವರೇಜ್ ಹ್ಯಾಸ್ ದಿ ಪಾಸಿಟಿವ್: ಎ ನೋಟ್ ಆನ್ ಆರ್.ಕೆ. ನಾರಾಯಣ್ (1967), ಕಾರಿಯೊಲನಸ್, ದಿ ವೇಸ್ಟ್ ಲ್ಯಾಂಡ್ ಅಂಡ್ ದಿ ಕ್ಯಾರಿಯೊಲ್ ಪೊಯಮ್ಸ್ (1963), ಎಕ್ಸ್‌ಪೀರಿಯನ್ಸ್ ಅಂಡ್ ಕಾನ್ಸೆಪ್ಚುಯಲೈಸೇಶನ್: ಎ ಪ್ರಾಬ್ಲಮ್ ಫಾರ್ ದಿ ಕನ್ನಡ ಕ್ರಿಟಿಕ್ (1968), ನಳಿನಿ: ಎ ಸ್ಟಡಿ ಇನ್ ಏಲಿಯನೇಶನ್(1971), ಎ ಸಾವಂತ್ ಇನ್ ಸರೋದ್ (1983), ಸಾಂಗ್ ಇನ್ ದಿ ಇಂಡಿಯನ್ ಫಿಲ್ಮ್ (1983), ಸಮ್ ಲೌಡ್ ಥಿಂಕಿಂಗ್ ಆನ್ ದಿ ಟೀಚಿಂಗ್ ಆಫ್ ಮ್ಯೂಸಿಕ್ ಇನ್ ಇಂಡಿಯ (1985).

ರಾಜೀವರ ಸಾಧನೆಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಏಡನ್ ಟೆಲಿವಿಷನ್ ಸಂಸ್ಥೆ ಇವರನ್ನು ಕುರಿತು 'ಫಿನಾನ್‌ಮಿನ್ ಆಲ್ ಹಿಂದ್' (ಭಾರತದ ಕಲಾವಿದ) ಎಂಬ ಸಾಕ್ಷ್ಯಚಿತ್ರವನ್ನು ನಿರ್ಮಿಸಿದೆ (1980). ಕರ್ನಾಟಕ ಸರ್ಕಾರ ಕರ್ನಾಟಕದ ಸಂಗೀತಗಾರ ಎಂಬ ಹೆಸರಿನಲ್ಲಿ ಇವರ ಸಾಕ್ಷ್ಯಚಿತ್ರವನ್ನು ನಿರ್ಮಿಸಿದೆ (1983). ಇವರಿಗೆ 1988ರಲ್ಲಿ ಹಿಂದುಸ್ತಾನಿ ಸಂಗೀತ ಕಲಾಕಾರ ಮಂಡಳಿಯಿಂದ ಅಭಿನಂದನೆಯ ಮನ್ನಣೆ ದೊರೆತಿದೆ. 1989–92ರ ಅವಧಿಗೆ ಇವರಿಗೆ ಅಮೆರಿಕದ ಫೋರ್ಡ್ ಫೌಂಡೇಶನ್ ಫೆಲೋಶಿಪ್ ದೊರೆತಿತ್ತು. ಕರ್ನಾಟಕ ನೃತ್ಯ ಸಂಗೀತ ಅಕಾಡೆಮಿ ಪ್ರಶಸ್ತಿ (1992), ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1996) ಇವರಿಗೆ ಲಭ್ಯವಾಗಿವೆ. *

**ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ:** ಬೆಂಗಳೂರಿನಲ್ಲಿರುವ ವೈದ್ಯವಿಜ್ಞಾನ ವಿಶ್ವವಿದ್ಯಾಲಯ. ಕರ್ನಾಟಕದಲ್ಲಿದ್ದ ವೈದ್ಯ ವಿಜ್ಞಾನ ಕಾಲೇಜುಗಳು ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಹಂಚಿಹೋಗಿದ್ದುವು. 1994ರ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ ಅನ್ವಯ ಈ ಎಲ್ಲ ಕಾಲೇಜುಗಳನ್ನು ಒಂದು ತೆಕ್ಕೆಗೆ ತಂದು ಈ ವಿಶ್ವವಿದ್ಯಾಲಯವನ್ನು 1996ರಲ್ಲಿ ಸ್ಥಾಪಿಸಲಾಯಿತು. ಇದರ ಮೂಲ ಉದ್ದೇಶಗಳೆಂದರೆ ಆರೋಗ್ಯ ವಿಜ್ಞಾನಗಳ ಕಲಿಕೆ ಮತ್ತು ಸಂಶೋಧನೆಗಳನ್ನು ಉನ್ನತೀಕರಣಗೊಳಿಸುವುದು ಮತ್ತು ಎಲ್ಲ ಆರೋಗ್ಯ ವಿಜ್ಞಾನ ಶಾಖೆಗಳ ಜ್ಞಾನವನ್ನು ಪ್ರಸಾರ ಮಾಡುವುದು. ಕರ್ನಾಟಕದಲ್ಲಿರುವ ವೈದ್ಯಕೀಯ, ದಂತವಿಜ್ಞಾನ, ಆಯುರ್ವೇದ, ಹೋಮಿಯೋಪತಿ, ಯುನಾನಿ, ಶುಶ್ರೂಷೆ, ಔಷಧೀಯ ವಿಜ್ಞಾನ, ಆಸ್ಪತ್ರೆ ಆಡಳಿತ, ಪ್ರಕೃತಿ ಚಿಕಿತ್ಸೆ, ಯೋಗ ಮತ್ತು ಅಂಗಸಾಧನ ಚಿಕಿತ್ಸೆ ಹಾಗೂ ಆರೋಗ್ಯ ವಿಜ್ಞಾನಗಳ ನಾನಾ ವಿಭಾಗಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಸೇರಿದಂತೆ ಎಲ್ಲ ನಿಕಾಯ, ಅಧ್ಯಯನ ವಿಭಾಗಗಳನ್ನು ಒಂದು ಸಂಸ್ಥೆಯ ಆಡಳಿತಕ್ಕೆ ಒಳಪಡಿಸಿರುವುದು ಈ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯಾಗಿದೆ. ಈ ಮೊದಲು ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದಂತಿದ್ದ 261 ಸಂಸ್ಥೆಗಳು ಈಗ ಈ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡಿವೆ. ಎಸ್. ಕಾಂತಾ ಈ ವಿಶ್ವವಿದ್ಯಾಲಯದ ಪ್ರಥಮ ಕುಲಪತಿ (1996–99). ಇವರು ಈ ಬೃಹತ್ ಸಂಸ್ಥೆಯನ್ನು ಮುನ್ನಡೆಸಿದರು. ಅನಂತರ ಎಸ್. ಚಂದ್ರಶೇಖರಶೆಟ್ಟಿಯವರು ಕುಲಪತಿಗಳಾಗಿ ಸೇವೆಸಲ್ಲಿಸಿದರು (1999). ಬಲವೀರ ರೆಡ್ಡಿಯವರು ಈಗಿನ ಕುಲಪತಿ.

ಪ್ರತಿವರ್ಷ 12,000 ವಿದ್ಯಾರ್ಥಿಗಳು ಪದವಿ ತರಗತಿಗಳಿಗೂ 2000 ವಿದ್ಯಾರ್ಥಿಗಳು ಸ್ನಾತಕೋತ್ತರ ತರಗತಿಗಳಿಗೂ ಸೇರುತ್ತಿರುವ ಈ ವಿಶ್ವವಿದ್ಯಾಲಯದಲ್ಲಿ ಆಡಳಿತ ವಿಭಾಗ, ಮೌಲ್ಯಮಾಪನ ವಿಭಾಗ, ಹಣಕಾಸು ವಿಭಾಗ, ಅಧ್ಯಯನಾಭಿವೃದ್ಧಿ ವಿಭಾಗ, ವಿದ್ಯಾರ್ಥಿ ಯೋಗಕ್ಷೇಮ ಮತ್ತು ಸಾರ್ವಜನಿಕ ಸಂಪರ್ಕ ವಿಭಾಗ, ಸಂಶೋಧನೆ ಮತ್ತು ಅಧ್ಯಯನ ವಿಭಾಗ, ಎನ್.ಎಸ್.ಎಸ್., ಕ್ರೀಡಾ ಮತ್ತು ಸಾಂಸ್ಕೃತಿಕ

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

ವಿಭಾಗ, ಗಣಕ ಕೇಂದ್ರ, ಪ್ರಸಾರಾಂಗ ಮತ್ತು ಉತ್ತಮ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವನ್ನೊಳಗೊಂಡಿದೆ. ಆರೋಗ್ಯ ವಿಜ್ಞಾನಗಳ ಬೋಧನೆಯಲ್ಲಿ ಉನ್ನತಿ ಸಾಧಿಸುವುದೇ ಪರಮಗುರಿಯಾಗುಳ್ಳ ಈ ವಿಶ್ವವಿದ್ಯಾಲಯದ ಲಾಂಛನ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಆರೋಗ್ಯ ವಿಜ್ಞಾನಗಳ ಸಂಗಮದ ಪ್ರತೀಕವಾಗಿದೆ. ನಮಗೆ ದೇವರು ಕೊಟ್ಟಿರುವ ಪೂರ್ಣಾಯುಷ್ಯವನ್ನು ಪರಿಪೂರ್ಣ ಆರೋಗ್ಯದೊಂದಿಗೆ ಅನುಭವಿಸೋಣ ಎಂಬ ಉಪನಿಷತ್ತಿನ ಶಾಂತಿಮಂತ್ರವೇ ವಿಶ್ವವಿದ್ಯಾಲಯದ ಧ್ಯೇಯವಾಗಿದೆ.

ರಾಜ್ಯದಲ್ಲಿ 75 ಆಯುರ್ವೇದ, 324 ನರ್ಸಿಂಗ್, 45 ದಂತವೈದ್ಯ, 78 ಫಾರ್ಮಸಿ, 5 ಯುನಾನಿ, 13 ಹೋಮಿಯೋಪತಿ, 36 ವೈದ್ಯ (ಎಂಬಿಬಿಎಸ್) ಕಾಲೇಜುಗಳೂ 65 ಪ್ಯಾರಾಮೆಡಿಕಲ್ ಹಾಗೂ ಫಿಸಿಯೋಥೆರಪಿ, 3 ಯೋಗ ಹಾಗೂ ಪ್ರಕೃತಿ ಚಿಕಿತ್ಸಾ ಕಾಲೇಜುಗಳೂ ಇದ್ದು ಒಟ್ಟು 644 ವೈದ್ಯಕೀಯ ಕಾಲೇಜುಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿವೆ. *

**ರಾಣೆಬೆನ್ನೂರು:** ಹಾವೇರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಧಾರವಾಡ ಜಿಲ್ಲೆಗೆ ಸೇರಿದ್ದ ಈ ತಾಲ್ಲೂಕು 1997ರ ಆಗಸ್ಟ್ 24ರಂದು ಅಸ್ತಿತ್ವಕ್ಕೆ ಬಂದ ಹಾವೇರಿ ಜಿಲ್ಲೆಗೆ ಸೇರಿತು. ಈ ತಾಲ್ಲೂಕನ್ನು ದಕ್ಷಿಣ ಮತ್ತು ಪೂರ್ವದಲ್ಲಿ ದಾವಣಗೆರೆ ಜಿಲ್ಲೆಯೂ ಉತ್ತರದಲ್ಲಿ ಹಾವೇರಿ ತಾಲ್ಲೂಕೂ ಪಶ್ಚಿಮದಲ್ಲಿ ಹಿರೇಕೆರೂರು ಮತ್ತು ಬ್ಯಾಡಗಿ ತಾಲ್ಲೂಕುಗಳೂ ಸುತ್ತುವರೆದಿವೆ. ಈ ತಾಲ್ಲೂಕಿನಲ್ಲಿ ಕುಪ್ಪೇಲೂರು, ರಾಣೆಬೆನ್ನೂರು ಮತ್ತು ಮೆಡ್ಲೇರಿ– ಈ ಹೋಬಳಿಗಳೂ 103 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 904 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 3,04,990. ಇದರಲ್ಲಿ 2,08,641 ಗ್ರಾಮಸ್ಥರು, 96,349 ಪಟ್ಟಣವಾಸಿಗಳು.

ಈ ತಾಲ್ಲೂಕಿನ ಹೆಚ್ಚು ಭಾಗ ಮಲೆನಾಡ ಸೆರಗಿನ ಪ್ರದೇಶ. ತುಂಗಭದ್ರಾ ನದಿ ಈ ತಾಲ್ಲೂಕಿನ ಬಲಪಾರ್ಶ್ವದ ಗಡಿಯಾಗಿ ಹರಿಯುತ್ತದೆ. ಅದು ಮೊದಲು ದಕ್ಷಿಣದ ಅಂಚಿನಲ್ಲಿ ತುಮ್ಮಿನಕಟ್ಟಿ ಗ್ರಾಮದ ಬಳಿ ತಾಲ್ಲೂಕಿನ ಸಂಪರ್ಕಹೊಂದಿ ಹರಿಹರ, ಹರಪನಹಳ್ಳಿ, ಹಡಗಲಿ ತಾಲ್ಲೂಕುಗಳನ್ನು ರಾಣೆಬೆನ್ನೂರು ತಾಲ್ಲೂಕಿನಿಂದ ಬೇರ್ಪಡಿಸುವ ರೇಖೆಯಾಗಿ ಹರಿದು ಉತ್ತರದಲ್ಲಿ ಚೌಡದಾನಪುರದ ಬಳಿ ಹಾವೇರಿ ತಾಲ್ಲೂಕಿನ ಗಡಿ ಮುಟ್ಟುತ್ತದೆ. ಕುಮುದ್ವತಿ ನದಿ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಸ್ವಲ್ಪದೂರ ಪೂರ್ವಾಭಿಮುಖವಾಗಿ ಹರಿದು ತುಂಗಭದ್ರಾ ನದಿಯನ್ನು ಮುದೇನೂರಿನ ಬಳಿ ಸೇರಿಕೊಳ್ಳುತ್ತದೆ. ರಾಣೆಬೆನ್ನೂರಿನ ಪಶ್ಚಿಮಕ್ಕಿರುವ ಅಸುಂಡಿ ಕೆರೆ ಮತ್ತು ಪೂರ್ವಕ್ಕಿರುವ ಮೆಡ್ಲೇರಿ ಕೆರೆಗಳು ಈ ತಾಲ್ಲೂಕಿನ ವ್ಯವಸಾಯಕ್ಕೆ ಬಹಳಷ್ಟು ಸಹಾಯಕವಾಗಿವೆ. ವಾರ್ಷಿಕ ಸರಾಸರಿ ಮಳೆ 632 ಮಿಮೀ. ತಾಲ್ಲೂಕಿನಲ್ಲಿ ಸು. 125 ಚ.ಕಿಮೀ ಮೀಸಲು ಅರಣ್ಯ ಪ್ರದೇಶ ಮತ್ತು ಸು. 55 ಚ.ಕಿಮೀ ಹುಲ್ಲುಗಾವಲಿನ ಅರಣ್ಯಪ್ರದೇಶ ಇವೆ. ಈ ತಾಲ್ಲೂಕಿನ ಅರಣ್ಯಗಳ ಬೆಲೆಬಾಳುವ ಇತರ ಉಪಯುಕ್ತ ಮರಗಳೊಡನೆ ಗಂಧದ ಮರವೂ ಹೆಚ್ಚು ಬೆಳೆಯುತ್ತವೆ. ಕಪ್ಪು ಮತ್ತು ಕೆಂಪು ಮಸಾರಿ ಮಣ್ಣಿನ ಫಲವತ್ತಾದ ಭೂಮಿಯಿದ್ದು ತಾಲ್ಲೂಕಿನಲ್ಲಿ ಜೋಳ, ಗೋದಿ, ಬತ್ತ, ಸೇಂಗಾ, ಹತ್ತಿ, ದ್ವಿದಳ ಧಾನ್ಯಗಳು ಬೆಳೆಯುತ್ತವೆ. ರಾಗಿ, ವಿವಿಧ ತರಕಾರಿಗಳು ಮತ್ತು ಫಲಗಳು ಇತರ ಬೆಳೆಗಳು.

ತುಂಗಭದ್ರಾ ಮತ್ತು ಕುಮುದ್ವತಿ ನದಿಗಳು ತಾಲ್ಲೂಕಿನ ವ್ಯವಸಾಯಕ್ಕೆ ನೀರನ್ನೊದಗಿಸುತ್ತವೆ. ಈ ನದಿಗಳಿಂದ ಮತ್ಸ್ಯೋದ್ಯಮವೂ ತಕ್ಕಮಟ್ಟಿಗೆ ನಡೆಯುತ್ತದೆ. ಪಶುಪಾಲನೆ ವ್ಯವಸಾಯದಂತೆ ಒಂದು ಉಪಪ್ರಧಾನ ಕಸಬಾಗಿದೆ.

ಬೆಂಗಳೂರು-ಬೆಳಗಾಂವಿ ಹೆದ್ದಾರಿ ಹಾಗೂ ರೈಲುಹಾದಿ ಈ ತಾಲ್ಲೂಕಿನ ಮೂಲಕ ಆಗ್ನೇಯ-ವಾಯುವ್ಯಾಭಿಮುಖವಾಗಿ ಹಾದುಹೋಗುತ್ತದೆ. ರಾಣೆಬೆನ್ನೂರಿನಿಂದ ಗುತ್ತಲ, ಬ್ಯಾಡಗಿ, ಕೋಡ, ಮಾಸೂರು, ಹೊನ್ನಾಳಿಗಳಿಗೆ ಹೋಗುವ ಮಾರ್ಗಗಳು ತಾಲ್ಲೂಕಿನ ಇತರ ಮುಖ್ಯ ರಸ್ತೆಗಳು.

ಈ ತಾಲ್ಲೂಕಿನ ಕೆಲವು ಮುಖ್ಯಸ್ಥಳಗಳಲ್ಲಿ ಐರಣಿ **(ನೋಡಿ)** ರಾಣೆಬೆನ್ನೂರಿನ ಪೂರ್ವಕ್ಕೆ ಸು. 22ಕಿಮೀ ದೂರದಲ್ಲಿ ತುಂಗಭದ್ರಾನದಿಯ ಎಡದಂಡೆಯ ಮೇಲಿದೆ. ಇಲ್ಲೊಂದು ಹಳೆಯ ಕೋಟೆ ಇದೆ. ರಾಣೆಬೆನ್ನೂರಿನ ಉತ್ತರಕ್ಕೆ ಸು. 22ಕಿಮೀ ದೂರದಲ್ಲಿ ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಚೌಡದಾನಪುರ **(ನೋಡಿ)** ಇದೆ. ಇಲ್ಲಿ ಮುಕ್ತೇಶ್ವರ ದೇವಾಲಯವಿದೆ. ರಾಣೆಬೆನ್ನೂರಿಗೆ ಉತ್ತರದಲ್ಲಿ ಸು. 13ಕಿಮೀ ದೂರದಲ್ಲಿರುವ ಗುಡ್ಡ ಗುಡ್ಡಾಪುರದಲ್ಲಿ (ದೇವರಗುಡ್ಡ) ಮಲ್ಲಾರಿ ದೇವಾಲಯವಿದೆ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ಸೇರುವುದು. ರಾಣೆಬೆನ್ನೂರಿನ ವಾಯವ್ಯದಲ್ಲಿ ಸು. 5ಕಿಮೀ ದೂರದಲ್ಲಿರುವ ಹುಲಿಹಳ್ಳಿಯ ಹಳೆಯ ಕೋಟೆ, ರಾಮೇಶ್ವರ ದೇವಾಲಯ ಇವೆ. ರಾಣೆಬೆನ್ನೂರಿನ ಈಶಾನ್ಯಕ್ಕೆ ಸು. 15ಕಿಮೀ ದೂರದಲ್ಲಿ ತುಂಗಭದ್ರಾ ಎಡದಂಡೆಯ ಮೇಲೆ ಇರುವ ಮೆಡ್ಲೇರಿ ಹೋಬಳಿ ಕೇಂದ್ರ. ಇಲ್ಲಿ ತಯಾರಾಗುವ ಕಂಬಳಿಗಳು ಪ್ರಸಿದ್ಧ. ಮೆಡ್ಲೇರಿಯಲ್ಲಿರುವ ಕೆರೆಗೆ 2,250' ಉದ್ದ 41' ಎತ್ತರವಿರುವ ಅಣೆಕಟ್ಟಿದೆ.

ರಾಣೆಬೆನ್ನೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯಪಟ್ಟಣ. ಧಾರವಾಡದಿಂದ ಆಗ್ನೇಯಕ್ಕೆ 125 ಕಿಮೀ ದೂರದಲ್ಲಿದೆ. ಪುಣೆ-ಬೆಂಗಳೂರು ರೈಲ್ವೆ ಮಾರ್ಗ ಹಾಗೂ ರಾಷ್ಟ್ರೀಯ ಹೆದ್ದಾರಿ ಈ ಪಟ್ಟಣದ ಮೂಲಕ ಹಾದುಹೋಗಿವೆ. ಪಟ್ಟಣದಲ್ಲಿ 46,001 ಗಂಡಸರು, 43,593 ಹೆಂಗಸರಿದ್ದು ಒಟ್ಟು ಜನಸಂಖ್ಯೆ 89,594.

ಈ ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ. ಇದರ ಸುತ್ತಮುತ್ತ ಹತ್ತಿ ಹಾಗೂ ಸೇಂಗಾ ಹೇರಳವಾಗಿ ಬೆಳೆಯುವುದರಿಂದ ಇಲ್ಲಿ ಹತ್ತಿ ಅರೆಯುವ ಜಿನ್ನುಗಳು ಮತ್ತು ಸೇಂಗಾ ಎಣ್ಣೆಯ ಮಿಲ್ಲುಗಳು ಇವೆ. ಈ ಪಟ್ಟಣ ಹತ್ತಿ, ಸೇಂಗಾ, ಗೋದಿ, ಮೆಣಸಿನಕಾಯಿ ಹಾಗೂ ಬಟ್ಟೆ ವ್ಯಾಪಾರಕ್ಕೆ ಪ್ರಸಿದ್ಧ. ರಾಣೆಬೆನ್ನೂರಿನ ದಕ್ಷಿಣಕ್ಕೆ ಇರುವ ದಾವಣಗೆರೆ ಅತ್ಯಂತ ಸಮೀಪವಾಗಿದ್ದು ಆ ನಗರದೊಂದಿಗೆ ವ್ಯಾಪಾರದ ಸಂಪರ್ಕ ಹೆಚ್ಚು.

ಸಿದ್ದೇಶ್ವರ ದೇವಾಲಯ ಈ ಊರಿನ ಪ್ರಾಚೀನ ಹಾಗೂ ಮುಖ್ಯ ದೇವಾಲಯ. ಈ ಊರಿನಲ್ಲಿರುವ ಹಜರತ್ ಜಮಾಲ್ ಷಾ ವಲೋ ಎಂಬ ಸಂತರ ಸಮಾಧಿ ಪವಿತ್ರಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಮೊಹರಂ ಹಬ್ಬದ ಕಾಲದಲ್ಲಿ ಇಲ್ಲಿ ಜಾತ್ರೆ ಸೇರುತ್ತದೆ. **(ಎಂ.ಎಸ್‌ಎಚ್.;ಎಸ್.ಎ.ಎಸ್.)**

**ರಾಧಾಕೃಷ್ಣ, ಬಿ.ಪಿ.:** 1918– . ಭಾರತದ ಪ್ರಸಿದ್ಧ ಭೂವಿಜ್ಞಾನಿ. ಇವರ ಪೂರ್ಣ ಹೆಸರು ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ. ಇವರು 1918 ಏಪ್ರಿಲ್ 30ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಪುಟ್ಟಯ್ಯ, ಬೆಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಾಗಿದ್ದವರು.

ರಾಧಾಕೃಷ್ಣ ಅವರ ಆರಂಭಿಕ ವಿದ್ಯಾಭ್ಯಾಸ ಬೆಂಗಳೂರಿನಲ್ಲಿ ನಡೆಯಿತು. ಅನಂತರ ಸೆಂಟ್ರಲ್ ಕಾಲೇಜಿನಲ್ಲಿ ಭೂವಿಜ್ಞಾನವನ್ನು

ಐಚ್ಛಿಕ ವಿಜ್ಞಾನವನ್ನಾಗಿ ಆಯ್ದುಕೊಂಡು ಬಿ.ಎಸ್‌ಸಿ. (ಆನರ್ಸ್) ಪದವಿಯನ್ನು ಮೊದಲ ದರ್ಜೆಯಲ್ಲಿ ಗಳಿಸಿಕೊಂಡರು (1937). ಜೊತೆಗೆ ಚಿನ್ನದ ಪದಕವನ್ನೂ ಪಡೆದರು. ಅನಂತರ ತಮ್ಮ 19ನೆಯ ವಯಸ್ಸಿನಲ್ಲಿ ಆಗಿನ ಮೈಸೂರು ಭೂವಿಜ್ಞಾನ ಇಲಾಖೆಯಲ್ಲಿ (ಈಗಿನ ಗಣಿ ಮತ್ತು ಭೂವಿಜ್ಞಾನ ಇಲಾಖೆ) ಭೂ ಸರ್ವೇಕ್ಷಣ ಸಹಾಯಕರಾಗಿ ಕೆಲಸಕ್ಕೆ ಸೇರಿದರು. ಇದೇ ಇಲಾಖೆಯಲ್ಲಿ ಸತತವಾಗಿ 37 ವರ್ಷಗಳ ದೀರ್ಘಾವಧಿ ಸೇವೆಸಲ್ಲಿಸಿದರಲ್ಲದೆ ಕೊನೆಯ ಹತ್ತುವರ್ಷಗಳು ಆ ಇಲಾಖೆಯ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿ 1974ರಲ್ಲಿ ನಿವೃತ್ತರಾದರು.

ಇವರು ನಿರ್ದೇಶಕರಾಗಿದ್ದ ಹತ್ತುವರ್ಷಗಳ ಅವಧಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸರ್ವತೋಮುಖ ಬೆಳವಣಿಗೆಯನ್ನು ಕಂಡಿತು. ರಾಜ್ಯದಲ್ಲಿ ಅಂತರ್ಜಲ ಸರ್ವೇಕ್ಷಣಾ ಘಟಕ ಮತ್ತು ಲಘು ಖನಿಜಾಭಿವೃದ್ಧಿ ಯೋಜನೆಗಳು ಸ್ಥಾಪನೆಗೊಂಡವು (1966). ಇವರ ಸೇವಾವಧಿಯಲ್ಲಿ ಇಂಗಳಧಾಳ, ಕಲ್ಯಾಡಿ ಮತ್ತು ತಿಂಥಿಣಿಗಳಲ್ಲಿ ತಾಮ್ರದ ಗಣಿಗಳು ಪ್ರಾರಂಭವಾದುವು. ಇವರು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪಕಛೇರಿಗಳನ್ನು ಸ್ಥಾಪಿಸಿ ಅಂತರ್ಜಲ ಭೂವೈಜ್ಞಾನಿಕ ಭೂಪಟವನ್ನು ತಯಾರಿಸಿ ಪ್ರಕಟಿಸಿದರು. ಇಲಾಖೆಯ ವಿವಿಧ ಯೋಜನೆಗಳಿಂದ ರಾಜ್ಯದ ಬೊಕ್ಕಸಕ್ಕೆ ಆದಾಯ ಗಳಿಸುವಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಎರಡನೆಯ

ಸ್ಥಾನವನ್ನು ಪಡೆಯುವಂತೆ ಆ ಇಲಾಖೆಯನ್ನು ಅಭಿವೃದ್ಧಿಪಡಿಸಿದರು. ಭಾರತದ ವಿವಿಧ ರಾಜ್ಯ ಭೂವಿಜ್ಞಾನ ಇಲಾಖೆಗಳಲ್ಲೆಲ್ಲ ಮೈಸೂರು ಭೂವಿಜ್ಞಾನ ಇಲಾಖೆ ಶ್ರೇಷ್ಠ ಇಲಾಖೆಯೆಂದು ಹೆಸರು ಪಡೆಯಲು ಇವರು ಕಾರಣರಾದರು.

ರಾಜ್ಯದ ಉದ್ದಗಲಕ್ಕೂ ಪ್ರಸರಿಸಿರುವ ವಿವಿಧ ಶಿಲಾಸಮುದಾಯಗಳನ್ನು ಮತ್ತು ಅವುಗಳಲ್ಲಿ ಹುದುಗಿರುವ ನಾನಾ ಬಗೆಯ ಖನಿಜಸಂಪತ್ತು ಮತ್ತು ರತ್ನಗಳನ್ನು ವ್ಯವಸ್ಥಿತ ರೀತಿಯಲ್ಲಿ ಅಧ್ಯಯನ ಮಾಡಿದ ಇವರು ಕ್ರಮಬದ್ಧ ಗಣಿಕಾರ್ಯಗಳನ್ನು ರೂಪಿಸಿದರು. ಇದರ ಸಲುವಾಗಿ ಖನಿಜಾಭಿವೃದ್ಧಿ ಮಂಡಳಿ ಸಂಸ್ಥೆಯನ್ನು 1953ರಲ್ಲಿ ಪ್ರಾರಂಭಿಸಿದರು. ಅದು ಈಗ ಮೈಸೂರು ಮಿನರಲ್ಸ್ ಲಿಮಿಟೆಡ್ ಎಂಬ ಹೆಸರಿನಿಂದ ಕಾರ್ಯಪ್ರವೃತ್ತವಾಗಿದೆ. ಕಾಳೀ, ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣಾನದಿಗಳ ಅಣೆಕಟ್ಟುಗಳಿಗೆ ಸಂಬಂಧಿಸಿದಂತೆ ಇವರು ಸಲ್ಲಿಸಿದ ಭೂಸರ್ವೇಕ್ಷಣಾ ವರದಿಗಳೂ ಇಂದಿಗೂ ಅತ್ಯುತ್ತಮವೆನಿಸಿವೆ.

ಇವರು ಸರ್ಕಾರಿ ಸೇವೆಯಿಂದ ನಿವೃತ್ತರಾದ ಬಳಿಕ, ಕರ್ನಾಟಕ ಸರ್ಕಾರ ಇವರನ್ನು ಕರ್ನಾಟಕ ತಾಮ್ರನಿಕ್ಷೇಪ ಒಕ್ಕೂಟ ಮತ್ತು ಭಾರತ ಚಿನ್ನದ ಗಣಿ ನಿಯಮಿತ ಸಂಸ್ಥೆಗಳಿಗೆ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ನೇಮಕಮಾಡಿತು (1976–79). ಇವರ ನಿರ್ದೇಶನದಲ್ಲಿ ಚಿತ್ರದುರ್ಗ ಜಿಲ್ಲೆಯ ಇಂಗಳಧಾಳ ಮತ್ತು ಹಾಸನ ಜಿಲ್ಲೆಯ ಕಲ್ಯಾಡಿ ತಾಮ್ರದ ಗಣಿಗಳ ಕಾರ್ಯಚಟುವಟಿಕೆಗಳು ಸಮಗ್ರ ಹಾಗೂ ವ್ಯವಸ್ಥಿತ ರೀತಿಯಲ್ಲಿ ನಡೆದು ಉತ್ಪಾದನಾಸಾಮರ್ಥ್ಯ ಅಧಿಕಗೊಂಡಿತು. ಇಂಗಳಧಾಳದಲ್ಲಿ ಲೋಹಸಂಸ್ಕರಣ ಘಟಕವೂ ಸ್ಥಾಪನೆಯಾಯಿತು.

ಇವರು ಭಾರತ ವ್ಯವಸಾಯೋತ್ಪನ್ನ ಹಣಕಾಸು ಅಭಿವೃದ್ಧಿ ಸಂಸ್ಥೆಯ ಕೋರಿಕೆ ಮೇರೆಗೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು. ಮಹಾರಾಷ್ಟ್ರ ಮತ್ತು ಉತ್ತರಪ್ರದೇಶಗಳಲ್ಲಿ ಅಂತರ್ಜಲ ಲಭಿಸುವ ತಾಣ, ಜಲೋದ್ಧಾರಣಾ ವಿಧಾನ, ಬಳಸುವ ರೀತಿ ಮುಂತಾದವುಗಳ ಮೇಲೆ ಸಮೀಕ್ಷಾ ಕಾರ್ಯಗಳನ್ನು ನಡೆಸಿ, ವ್ಯವಸಾಯಕ್ಕೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಶೋಧನಾಕಾರ್ಯವನ್ನು ನಡೆಸಿ ಕೊಟ್ಟರು. ಹೀಗಾಗಿ ಇವರಿಗೆ ಅಂತರ್ಜಲ ಭಗೀರಥ ಎಂಬ ಬಿರುದೂ ಬಂತು.

ಇವರು ಇಲಾಖೆಯ ಕಾರ್ಯಕಲಾಪಗಳ ಜೊತೆಯಲ್ಲೇ ಭೂವಿಜ್ಞಾನ ಅಧ್ಯಯನ ಮತ್ತು ಸಂಶೋಧನೆಗಳನ್ನು ನಡೆಸಿ ತಮ್ಮ ಸಂಶೋಧನ ಲೇಖನಗಳಿಂದ ಪ್ರಸಿದ್ಧಿ, ಪದವಿ ಮತ್ತು ಪ್ರಶಸ್ತಿಗಳನ್ನು ಪಡೆದರು. ಈಗಿನ ರಾಮನಗರದಿಂದ (ಹಿಂದಿನ ಕ್ಲೋಸ್‌ಪೇಟೆ) ಮೊಳಕಾಲ್ಮೂರುವರೆಗೆ ಅನೂಚಾನವಾಗಿ ಹಬ್ಬಿರುವ ಕಣಶಿಲೆಗಳನ್ನು ಕುರಿತು ಸಿ.ಎಸ್. ಪಿಚ್ಚುಮುತ್ತುರವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ನಡೆಸಿದರು. ಇದಕ್ಕೆ ಸಂಬಂಧಿಸಿದಂತೆ ಇವರು ಮಂಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯ 1954ರಲ್ಲಿ ಪಿಎಚ್.ಡಿ. ಪದವಿ ನೀಡಿತು. ಇವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವ ಸಂಶೋಧನ ಲೇಖನಗಳ ಸಂಖ್ಯೆ ಮುನ್ನೂರಕ್ಕೂ ಹೆಚ್ಚಿವೆ. ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಹಬ್ಬಿರುವ ಆರ್ಷೇಯಕಲ್ಪದ ಶಿಲೆಗಳ ಜಟಿಲಸಮಸ್ಯೆಗಳನ್ನು ಸಮಂಜಸವಾಗಿ, ವೈಜ್ಞಾನಿಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಸಂಶೋಧನೆ ಮಾಡಿರುವ ಇವರ ಪ್ರತಿಭೆಯನ್ನು ಗೌರವಿಸಿ ಧನಬಾದ್‌ನ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್ ಸಂಸ್ಥೆ 1992ರಲ್ಲಿ ಇವರಿಗೆ ಗೌರವ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು ನೀಡಿತು. ಇಂಡಿಯನ್ ಸೈನ್ಸ್ ಅಕಾಡಮಿ 1956ರಲ್ಲಿ ಇವರನ್ನು ತನ್ನ ಗೌರವ ಸದಸ್ಯರನ್ನಾಗಿ ಆರಿಸಿತು. ಭಾರತ ಸರ್ಕಾರ ಇವರಿಗೆ 1971ರಲ್ಲಿ ರಾಷ್ಟ್ರೀಯ ಖನಿಜಪ್ರಶಸ್ತಿಯನ್ನೂ (ನ್ಯಾಷನಲ್ ಮಿನರಲ್ ಅವಾರ್ಡ್) ಮತ್ತು 1991ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ನೀಡಿ ಗೌರವಿಸಿತು. ಇಂಡಿಯನ್ ನ್ಯಾಷನಲ್ ಅಕಾಡಮಿ ಆಫ್ ಸೈನ್ಸ್ ಸಂಸ್ಥೆ 1972ರಲ್ಲಿ ಇವರನ್ನು ತನ್ನ ಗೌರವ ಸದಸ್ಯರನ್ನಾಗಿ ಆರಿಸಿ ಗೌರವಿಸಿತು. ಲಂಡನ್ನಿನ ಭೂವೈಜ್ಞಾನಿಕ ಸಂಘ 1986ರಲ್ಲೂ ಅಮೆರಿಕ ಸಂಯುಕ್ತ ಸಂಸ್ಥಾನಗಳ ಭೂವೈಜ್ಞಾನಿಕ ಸಂಘ 1988ರಲ್ಲೂ ಇವರನ್ನು ತಮ್ಮ ತಮ್ಮ ಗೌರವ ಸದಸ್ಯರನ್ನಾಗಿ ಅಂಗೀಕರಿಸಿದವು. ಕರ್ನಾಟಕ ಸರ್ಕಾರ 1974ರಲ್ಲಿ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. 1990ರಲ್ಲಿ ಕಲ್ಕತ್ತದ ಏಷ್ಯಾಟಿಕ್ ಸೊಸೈಟಿ ಇವರಿಗೆ ಪ್ರಮಥನಾಥ್ ಬೋಸ್ ಚಿನ್ನದಪದಕವನ್ನು ಕೊಟ್ಟು ಗೌರವಿಸಿತು. ನವದೆಹಲಿಯ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡಮಿ, 1993ರಲ್ಲಿ ಭೂವಿಜ್ಞಾನದಲ್ಲೇ ಅತಿಪ್ರತಿಷ್ಠಿತವಾದ ಡಿ.ಎನ್. ವಾಡಿಯ ಚಿನ್ನದ ಪದಕವನ್ನು ಇವರಿಗೆ ನೀಡಿ ಗೌರವಿಸಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರತಿಷ್ಠಿತ ಪ್ರಶಸ್ತಿಯೆನಿಸಿರುವ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿಯೂ ಇವರಿಗೆ ಸಂದಿದೆ. ಕೆನಡದ ಖ್ಯಾತ ಭೂವಿಜ್ಞಾನಿ ಎ.ಡಿ. ಗೆನ್ನಿನ್ ಮತ್ತು ಸಹೋದ್ಯೋಗಿಗಳು 1985ರಲ್ಲಿ ಕರ್ನಾಟಕ ರಾಜ್ಯದ ಕೋಲಾರದ ಚಿನ್ನದಗಣಿ ಪ್ರದೇಶದಲ್ಲಿ ಸರ್ವೇಕ್ಷಣೆ ನಡೆಸಿ ಪತ್ತೆ ಮಾಡಿದ ಒಂದು ಹೊಸವರ್ಗದ ಖನಿಜಕ್ಕೆ ರಾಧಾಕೃಷ್ಣೈಟ್ ಎಂಬ ಹೆಸರಿಟ್ಟರು.

ಭಾರತ ಉಪಖಂಡದ ಭೂಇತಿಹಾಸದಲ್ಲಿ ಖನಿಜಸಂಪತ್ತಿನ ತವರುಮನೆ ಎನಿಸಿದ ಆರ್ಷೇಯಕಲ್ಪದ ಶಿಲಾಸಮೂಹಗಳ ಮೇಲೆ ರಾಧಾಕೃಷ್ಣ ಅವರು ಬರೆದ ಲೇಖನಗಳು ಪಾಶ್ಚಾತ್ಯ ಮತ್ತು ಪೌರಾತ್ಯ ಭೂವಿಜ್ಞಾನಿಗಳ ಪ್ರಶಂಸೆಗೆ ಪಾತ್ರವಾಗಿವೆ. ಇವರು ಯುನೈಟೆಡ್ ಕಿಂಗ್‌ಡಮ್‌ನ ಲ್ಯಾಕ್ಯಾನ್‌ಸ್ಟರ್ ಎಂಬಲ್ಲಿ ನ್ಯಾಟೋ ಸಂಸ್ಥೆಯ ಆಶ್ರಯದಲ್ಲಿ ನಡೆದ, ಭೂಮಿಯ ಪೂರ್ವೇತಿಹಾಸವನ್ನು ಕುರಿತ ಸಮ್ಮೇಳನದಲ್ಲಿ ಭಾಗವಹಿಸಿದ್ದರು (1975). ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ತರ ಕ್ಯಾರೊಲೀನ ವಿಶ್ವವಿದ್ಯಾಲಯದ ಆಹ್ವಾನದ ಮೇರೆ ಅಲ್ಲಿಗೆ ಆಗ್ನೇಯ ಏಷ್ಯದ ಭೂವಿಜ್ಞಾನ ಕುರಿತ ಸಮ್ಮೇಳನದಲ್ಲಿ ಭಾಗವಹಿಸಿ ಅನೇಕ ವಿದ್ವತ್ಪೂರ್ಣ ಭಾಷಣಗಳನ್ನು ನೀಡಿದರು. ಭಾರತ ಮತ್ತು ರಷ್ಯದೇಶಗಳ ಸಂಯುಕ್ತ ಆಶ್ರಯದಲ್ಲಿ ಹೈದರಾಬಾದಿನಲ್ಲಿರುವ ನ್ಯಾಷನಲ್ ಜಿಯೋಫಿಸಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಂಸ್ಥೆಯಲ್ಲಿ ನಡೆದ ಆರ್ಷೇಯ ಶಿಲಾವರ್ಗದ ಭೂರಸಾಯನ ಸಂಶೋಧನೆಗೆ ಸಂಬಂಧಿಸಿದ ಯೋಜನೆಯ ರೂವಾರಿಯಾಗಿ ಸೇವೆಸಲ್ಲಿಸಿದರು (1976–81). 1982ರಲ್ಲಿ ಭಾರತ–ಕೆನಡಗಳ ಸಂಯುಕ್ತ ಆಶ್ರಯದಲ್ಲಿ ನಡೆದ, ದಕ್ಷಿಣ ಭಾರತದ ಪ್ರಾಗ್ಜೀವಿ ಶಿಲೆಗಳನ್ನು ಕುರಿತ ಕಾರ್ಯಾಗಾರದ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಅನೇಕ ವಿದ್ವದ್ಗೋಷ್ಠಿಗಳನ್ನು ನಡೆಸಿದರು. 1984ರಲ್ಲಿ ಕರ್ನಾಟಕದ ಚಿತ್ರದುರ್ಗದಲ್ಲಿ ಭಾರತ ಭೂವೈಜ್ಞಾನಿಕ ಸಂಘದ ವತಿಯಿಂದ ನಡೆದ ಸಭೆಯಲ್ಲಿ ಕ್ರಿಸ್ಟಲ್ ಎವಲ್ಯೂಷನ್ ಅಂಡ್ ಮೆಟಲರ್ಜಿ ಎಂಬ ವಿಚಾರದ ಬಗ್ಗೆ ವಿಚಾರಪೂರಿತವಾದ ಭಾಷಣ ಮಾಡಿ ತಮ್ಮ ಸಂಶೋಧನಾನುಭವದ ಹರಹನ್ನು ಪ್ರದರ್ಶಿಸಿದ್ದರು.

ಭೂವಿಜ್ಞಾನಿಗಳನ್ನು ಸಂಘಟಿಸಿ ಭೂವಿಜ್ಞಾನವನ್ನು ಪ್ರಚುರಪಡಿಸುವಲ್ಲಿ ಇವರು ಮಾಡಿದ ಕೆಲಸ ಸ್ಮರಣೀಯವಾದುದು. 1950ಕ್ಕೂ ಮೊದಲೇ ಮೈಸೂರು ಭೂವಿಜ್ಞಾನಿಗಳ ಸಂಘವನ್ನು ಸ್ಥಾಪಿಸಿ, ಅದರ ಕಾರ್ಯದರ್ಶಿಯಾಗಿ ಭೂವೈಜ್ಞಾನಿಕ ವಿಷಯಗಳ ಪ್ರಕಟಣೆಗಾಗಿ ಮಾಸಪತ್ರಿಕೆಯೊಂದನ್ನು ಆರಂಭಿಸಿದರು. ಜಿಯಲಾಜಿಕಲ್ ಸೊಸೈಟಿ ಆಫ್ ಇಂಡಿಯ ಸಂಸ್ಥೆಯನ್ನು 1958ರಲ್ಲಿ ಪ್ರಾರಂಭಿಸಿ ಅದರ ಮೊದಲ ಕಾರ್ಯದರ್ಶಿಯಾಗಿ, ಭಾರತದಲ್ಲಿ ನಡೆಯುವ ಭೂವೈಜ್ಞಾನಿಕ ಸಂಶೋಧನೆಗಳನ್ನು ಪ್ರಪಂಚಾ

ದ್ಯಂತ ಪ್ರಚುರಪಡಿಸಲು ಮತ್ತು ಇತರ ದೇಶಗಳಲ್ಲಿ ನಡೆವ ಸಂಶೋಧನೆಗಳನ್ನು ತಿಳಿಯಲು ನೆರವಾಗುವಂತೆ ಜರ್ನಲ್ ಆಫ್ ಜಿಯಲಾಜಿಕಲ್ ಸೊಸೈಟಿ ಆಫ್ ಇಂಡಿಯ ಎಂಬ ತ್ರೈಮಾಸಿಕವನ್ನು ಆರಂಭಿಸಿದರು. ಅನಂತರ ಅದು ಮಾಸಪತ್ರಿಕೆಯಾಗಿ ಅಭಿವೃದ್ಧಿ ಹೊಂದಿತು. ಭೂವಿಜ್ಞಾನ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿವಿಧ ರಾಜ್ಯಗಳ ಭೂವಿಜ್ಞಾನ ಖನಿಜಸಂಪತ್ತು, ಭೂವಿನ್ಯಾಸ, ಭೂವೈಜ್ಞಾನಿಕ ಸರ್ವೇಕ್ಷಣ ಕೈಪಿಡಿ, ಅಂತರ್ಜಲ, ಆರ್ಥಿಕ ಭೂವಿಜ್ಞಾನ, ಭೂಕಂಪನ ಮುಂತಾದ ಅಮೂಲ್ಯ ವಿಷಯಗಳನ್ನು ಕುರಿತು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ರಾಧಾಕೃಷ್ಣ ಅವರು ಕನ್ನಡದಲ್ಲೂ ಉತ್ತಮ ಬರೆಹಗಾರರು ಹಾಗೂ ವಾಗ್ಮಿಗಳಾಗಿದ್ದಾರೆ. ಇವರ ಮೊದಲ ಕನ್ನಡ ಕೃತಿ ನನ್ನ ತಂದೆ ಎಂಬುದು ತಮ್ಮ ತಂದೆಯನ್ನು ಕುರಿತು ಬರೆದದ್ದು. ಪ್ರಸಿದ್ಧ ವಿಜ್ಞಾನಿಗಳಾದ ಡಾರ್ವಿನ್, ಸಿ.ವಿ. ರಾಮನ್, ಶ್ರೀನಿವಾಸ ರಾಮಾನುಜನ್, ಬಿ.ಜಿ.ಎಲ್.ಸ್ವಾಮಿ ಇವರನ್ನು ಕುರಿತ ಜೀವನ ಚರಿತ್ರೆಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡಮಿ 1989ರಲ್ಲಿ ಇವರ ರಾಮನ್ ಪುಸ್ತಕಕ್ಕೆ ಬಹುಮಾನ ನೀಡಿದೆ. ಅಂತರ್ಜಲ ಎಂಬುದು ಭೂಜಲವಿಜ್ಞಾನದ ಮೇಲೆ ಬರೆದ ಒಂದು ಪುಸ್ತಕ. ಭೂವಿಜ್ಞಾನಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ಇವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಇವರಿಗೆ ಮೈಸೂರು ನಗರದ ದೇಜಗೌ ಟ್ರಸ್ಟ್ ವಿಶ್ವಮಾನವ ಪ್ರಶಸ್ತಿ ನೀಡಿ ಗೌರವಿಸಿದೆ (1997). ಕರ್ನಾಟಕದ ವಿಜ್ಞಾನ ಪರಿಷತ್ತಿನ ಅಧ್ಯಕ್ಷರಾಗಿಯೂ ಇವರು ಸೇವೆಸಲ್ಲಿಸಿದ್ದಾರೆ. ಇವರು ಸಂಪಾದಕರಾಗಿ ನಡೆಸುತ್ತಿದ್ದ ಕಾಮಕೋಟಿ ಪ್ರಭ ಎಂಬ ಮಾಸಪತ್ರಿಕೆ ತತ್ತ್ವಜ್ಞಾನದಲ್ಲಿ ಇವರಿಗಿರುವ ಪಾಂಡಿತ್ಯಕ್ಕೆ ಸಾಕ್ಷಿ. *

**ರಾಧಾಕೃಷ್ಣ, ಸಿ.:** 1928– . ಪ್ರಸಿದ್ಧ ಸಂಗೀತ, ನೃತ್ಯ, ನಾಟಕ ಕಲಾವಿದರು. 1928 ಜನವರಿ 23ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಬಿ.ಆರ್. ಚೆನ್ನಯ್ಯ, ತಾಯಿ ಚೆಲ್ಲಮ್ಮ. ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಇವರು ತಮ್ಮ ಎರಡನೆಯ ತಾಯಿಯ ಬಳಿ ಬೆಳೆದರು. ತಾಯಿಗಿದ್ದ ಅಪಾರ ಸಂಗೀತ ಆಸಕ್ತಿ ಇವರು ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ಶಿಕ್ಷಣ ಪಡೆಯಲು ಸಹಾಯವಾಯಿತು. ತಾವರೆಕೆರೆ ರಾಮರಾಯರು ಇವರ ಮೊದಲ ಗುರು. ಇವರ ಕಂಠ ಮಾಧುರ್ಯವನ್ನು ಮೆಚ್ಚಿದ ಸೋದರಮಾವ ಗುಂಡಪ್ಪ ಇವರಿಗೆ ಉನ್ನತ ಮಟ್ಟದಲ್ಲಿ ಸಂಗೀತ ಹಾಗೂ ನೃತ್ಯ ಶಿಕ್ಷಣಗಳು ಮನೆಯಲ್ಲಿಯೇ ಲಭಿಸುವಂತೆ ವ್ಯವಸ್ಥೆ ಮಾಡಿದರು. ಮುಂದೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉದ್ಯೋಗಕ್ಕೆ ಸೇರುವಂತಾದರೂ ಇವರು ಸಂಗೀತ, ನೃತ್ಯ ಕಲಿಕೆಗಳನ್ನು ಮಾತ್ರ ಬಿಡಲಿಲ್ಲ. ಇವರ ಸಂಗೀತಾಭ್ಯಾಸಕ್ಕೆ ಚಿಂತನಪಲ್ಲಿ ರಾಮಚಂದ್ರರಾಯರ ಸಹಾಯ, ಸಹಕಾರ, ಪ್ರೋತ್ಸಾಹಗಳೆಲ್ಲ ಲಭಿಸಿದವು. ಇವರ ಅಭಿನಯ ಹಾಗೂ ಜಾವಳಿ ಪದಗಳ ಕಲಿಕೆಯಲ್ಲಿ ಇವರ ಬಂಧುಗಳೆನಿಸಿದ್ದ ಪದ್ಮಮ್ಮ, ನಾಗಮ್ಮ ಇವರುಗಳ ಬೋಧನೆ, ಸಹಕಾರಗಳು ಯಥೇಚ್ಛವಾಗಿ ಲಭಿಸಿದವು.

ರಾಧಾಕೃಷ್ಣ ಅವರು ತಮ್ಮ 17ನೆಯ ವಯಸ್ಸಿನಲ್ಲಿ ಸಂಗೀತ ಕಛೇರಿಗಳನ್ನೂ 18ನೆಯ ವಯಸ್ಸಿನಲ್ಲಿ ನೃತ್ಯ ಕಾರ್ಯಕ್ರಮಗಳನ್ನೂ ನೀಡಲು ಆರಂಭಿಸಿದರು. ಗುಬ್ಬಿವೀರಣ್ಣ ಅವರ ಕಂಪನಿನಾಟಕಗಳಲ್ಲೂ ಪಾತ್ರಗಳನ್ನು ಮಾಡಿದರು. ನಾಟಕಗಳಲ್ಲಿ ಇವರ ಅತೀವ ಆಸಕ್ತಿಯನ್ನು ಗುರುತಿಸಿದ ಇವರ ತಂದೆ ಸಿ.ಆರ್.ಕೆ. ಕಲಾಸಂಘ ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಆದರೆ ಈ ಸಂಸ್ಥೆ ಹೆಚ್ಚುಕಾಲ ಉಳಿಯಲಿಲ್ಲ. ಹಾಗಾಗಿ ಇವರ ಒಲವೆಲ್ಲ ನೃತ್ಯ, ಸಂಗೀತಗಳ ಮೇಲೆ ಹೆಚ್ಚು ಕೇಂದ್ರೀಕೃತವಾಯಿತು. ಮುಂದೆ ಚಿತ್ತರಂಜನಿ ಕಲಾಕ್ಷೇತ್ರವೆಂಬ ನಾಟ್ಯಶಾಲೆಯನ್ನು ಸ್ವತಂತ್ರವಾಗಿ ಸ್ಥಾಪಿಸಿದರು (1956). ಜನರನ್ನು ಮಂತ್ರಮುಗ್ಧರನ್ನಾಗಿಸುವ ನೃತ್ಯವೈಖರಿ ಇವರದ್ದು.

ಶಿವಲಿಂಗಸಾಕ್ಷಿ, ಹಂಸಗೀತೆ, ಸಂಘರ್ಷ, ಕಾವೇರಿ ಮೊದಲಾದ ಹಲವು ಚಲನಚಿತ್ರಗಳಿಗೆ ನೃತ್ಯನಿರ್ದೇಶಕರಾಗಿ ಸೇವೆಸಲ್ಲಿಸಿದ ಗರಿಮೆ



ಇವರದು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ದೇಶ ಸಂಚಾರ ಮಾಡಿ ನೃತ್ಯ ಪ್ರದರ್ಶನಗಳನ್ನು ನೀಡಿದ್ದಾರೆ. ಜೊತೆಗೆ ಮದುರೆ, ಮದರಾಸು, ಬೆಂಗಳೂರುಗಳಲ್ಲಿ ಆರು ವರ್ಷಗಳ ಕಾಲ ನೃತ್ಯ ಪಾಠಮಾಡುವ ಮೂಲಕ ಬೆಂಗಳೂರುಡ್ಯಾನ್ಸ್‌ಮಾಸ್ಟರ್ ಎಂಬ ಪ್ರಸಿದ್ಧಿಪಡೆದಿದ್ದರು. ಇವರು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕ ಸರ್ಕಾರದ ಪ್ರೌಢ ಶಿಕ್ಷಣಮಂಡಲಿಯಿಂದ ನೃತ್ಯ ಪರೀಕ್ಷಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಕಲಾಸೇವೆಗಾಗಿ ಹಲವಾರು ಪ್ರಶಸ್ತಿ, ಗೌರವಗಳು ಲಭಿಸಿವೆ. ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ (1983), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1989), ಮದರಾಸಿನ ಕಪಾಲಿ ಫೈನಾರ್ಟ್ಸ್ ನೀಡಿದ ನೃತ್ಯೋತ್ಸವ ಪ್ರಶಸ್ತಿ, ಪಟ್ಟದಕಲ್ಲಿನಲ್ಲಿ ದೊರೆತ ಅಚಲಪ್ರಶಸ್ತಿ, ಶಾಂತಲಾ ಆರ್ಟ್ಸ್ ಅಕಾಡೆಮಿಯ ಶಾಂತಲಾ ಪ್ರಶಸ್ತಿ, ಬೆಂಗಳೂರಿನ ತಮಿಳು ಸಂಘದ ನಾಟ್ಯಕಲೈಮಾಮಣಿ ಪ್ರಶಸ್ತಿ, ಕರ್ನಾಟಕ ನೃತ್ಯಕಲಾ ಪರಿಷತ್ತಿನ ನಾಟ್ಯ ಶಿರೋಮಣಿ ಪ್ರಶಸ್ತಿ, ಕರ್ನಾಟಕ ಸರ್ಕಾರದ ಶಾಂತಲಾ ಪ್ರಶಸ್ತಿ (2003) ಮೊದಲಾದವು ಇವರಿಗೆ ದೊರೆತ ಪ್ರಮುಖ ಪ್ರಶಸ್ತಿಗಳು. ಇವರ ನೃತ್ಯನಿರ್ದೇಶನದಲ್ಲಿ ಮೂಡಿಬಂದ ಕಾಳಿದಾಸನ ಕೃತಿದರ್ಶನ, ವಿಷಕನ್ಯೆ, ಶಾಂತಲಾ, ಪದ್ಮಾವತೀಪರಿಣಯ ಮೊದಲಾದ ನೃತ್ಯ ನಾಟಕಗಳು ಇಂದಿಗೂ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

(ಎಚ್.ಆರ್.ಎಲ್.)

**ರಾನಡೆ, ಆರ್.ಡಿ.:** 1886–1957. ಪ್ರಸಿದ್ಧ ತತ್ತ್ವಜ್ಞಾನಿ. ಇವರ ಪೂರ್ಣ ಹೆಸರು ರಾಮಚಂದ್ರ ದತ್ತಾತ್ರೇಯ ರಾನಡೆ. ನಿಕಟವರ್ತಿಗಳಲ್ಲಿ ಮತ್ತು ಶಿಷ್ಯವೃಂದದಲ್ಲಿ ಗುರುದೇವ ಎಂದು ಖ್ಯಾತರಾಗಿದ್ದರು. ಇವರು 1886 ಜುಲೈ 3 ರಂದು ಜಮಖಂಡಿಯಲ್ಲಿ ಹುಟ್ಟಿದರು. ಕುಶಾಗ್ರಮತಿಗಳಾಗಿದ್ದ ಇವರು ಗಣಿತಶಾಸ್ತ್ರದಲ್ಲಿ ಬಿ.ಎ. (1907) ಮತ್ತು ತತ್ತ್ವಶಾಸ್ತ್ರದಲ್ಲಿ ಎಂ.ಎ. (1914) ಪದವಿ ಪಡೆದರು. ಇವರಿಗೆ ಗ್ರೀಕ್ ಹಾಗೂ ಸಂಸ್ಕೃತ ಭಾಷೆಗಳ ಮೇಲೆ ಅಸಾಧಾರಣ ಪ್ರಭುತ್ವವಿತ್ತು.

1914–24ರ ಅವಧಿಯಲ್ಲಿ ಇವರು ಡೆಕ್ಕನ್ ಎಜುಕೇಶನ್ ಸಂಸ್ಥೆಯ ಫರ್ಗ್ಯುಸನ್ ಹಾಗೂ ವಿಲಿಂಗ್ಡನ್ ಮಹಾವಿದ್ಯಾಲಯಗಳಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅನಂತರ ತೀವ್ರ ಅನಾರೋಗ್ಯದ ಕಾರಣದಿಂದ ನೌಕರಿಯನ್ನು ಬಿಟ್ಟು ಬಿಜಾಪುರ ಜಿಲ್ಲೆಯ ನಿಂಬಾಳ ಎಂಬ ಹಳ್ಳಿಯಲ್ಲಿ ನೆಲೆಸಿದರು. ಮತ್ತೆ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿ (1927–45) ಅದೇ

ವಿಶ್ವವಿದ್ಯಾಲಯದ ಉಪಕುಲಪತಿಗಳಾದರು (1945–46). ಅಲಹಾಬಾದ್ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್.ಪದವಿಯನ್ನು ನೀಡಿ ಗೌರವಿಸಿದೆ.

ಇವರಿಗೆ ಆಧ್ಯಾತ್ಮದತ್ತ ಹೆಚ್ಚಿನ ಒಲವಿತ್ತು. ಇದು ಇವರ ತಾಯಿ ಪಾರ್ವತೀದೇವಿ ಅವರಿಂದ ಬಳುವಳಿಯಾಗಿ ಬಂದಿತ್ತು. ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಇಂಚಗೇರಿಯ ಸಂಪ್ರದಾಯದ ಉಮದಿ ಭಾವುಸಾಹೇಬ ಎಂಬ ಗುರುಗಳಿಂದ ನಾಮದೀಕ್ಷೆಯನ್ನು ಪಡೆದು ನಿಷ್ಠೆಯಿಂದ ಸಾಧನೆಯಲ್ಲಿ ತೊಡಗಿದರು.

ರಾನಡೆ ಅವರ ತತ್ತ್ವ ದರ್ಶನ ಅದ್ವೈತ ಪರಂಪರೆಯದು. ಇವರ ದರ್ಶನವನ್ನು ಅನುಭಾವಮಾರ್ಗದ ಅದ್ವೈತ ಎಂದೂ ಆನಂದವಾದ ಎಂದೂ ಸಾಕ್ಷಾತ್ಕಾರವಾದ ಎಂದೂ ವಿಶ್ಲೇಷಿಸಲಾಗುತ್ತದೆ. ನೈತಿಕತೆ ಹಾಗೂ ನಾಮಸ್ಮರಣೆ– ಇವು ಇವರ ಪ್ರಕಾರ ಸಾಕ್ಷಾತ್ಕಾರ ಮಾರ್ಗದಲ್ಲಿ ಮಹತ್ತ್ವದ ಅಂಗಗಳು. ರಾನಡೆಯವರ ಶಿಷ್ಯವೃಂದ ಅಪಾರ. ಜಾತಿಮತಗಳನ್ನು ಗಣಿಸದೆ ಎಲ್ಲರನ್ನೂ ಸಮಾನಭಾವದಿಂದ ಕಾಣುತ್ತಿದ್ದ ಇವರು ಸಹಸ್ರಾರು ಜನರಿಗೆ ನಾಮದೀಕ್ಷೆಯನ್ನು ಕೊಟ್ಟಿದ್ದಾರೆ.

ಎ ಕನ್‌ಸ್ಟ್ರಕ್ಟಿವ್ ಸರ್ವೆ ಆಫ್ ಉಪನಿಷದಿಕ್ ಫಿಲಾಸಫಿ (1926), ಮಿಸ್ಟಿಸಿಸಂ ಇನ್ ಮಹಾರಾಷ್ಟ್ರ (1933), ಪಾಥ್‌ವೇ ಟು ಗಾಡ್ ಇನ್ ಹಿಂದಿ ಲಿಟರೇಚರ್ (1954), ದಿ ಭಗವದ್ಗೀತಾ ಆ್ಯಸ್ ಎ ಫಿಲಾಸಫಿ ಆಫ್ ಗಾಡ್ ರಿಯಲೈಸೇಷನ್ (1959), ಪಾಥ್ ವೇ ಟು ಗಾಡ್ ಇನ್ ಕನ್ನಡ ಲಿಟರೇಚರ್ (1960), ವೇದಾಂತ ಆ್ಯಸ್ ಎ ಕಲ್ಮಿನೇಷನ್ ಆಫ್ ಇಂಡಿಯನ್ ಫಿಲಾಸಫಿಕಲ್ ಥಾಟ್ (1970)– ಇವು ಇವರ ಗ್ರಂಥಗಳು.

ರಾನಡೆ ಅವರು 1957ರ ಜೂನ್ 6ರಂದು ನಿಂಬಾಳದಲ್ಲಿ ನಿಧನರಾದರು. ಇವರ ಸಹಯೋಗದಿಂದ ನಿಂಬಾಳ ಒಂದು ಪವಿತ್ರ ಕ್ಷೇತ್ರವಾಗಿದ್ದು ಅನೇಕ ಆಧ್ಯಾತ್ಮಿಕ ಸಾಧಕರನ್ನು ಆಕರ್ಷಿಸುತ್ತಿದೆ. **(ಪಿ.ವಿ.ಕೆ.)**

**ರಾಬರ್ಟ್‌ಸನ್‌ಪೇಟೆ:** ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಕಸಬೆಯ ಆಗ್ನೇಯಕ್ಕೆ 15 ಕಿಮೀ ದೂರದಲ್ಲಿರುವ ಪಟ್ಟಣ. ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಸಮೀಪದಲ್ಲಿ ಅದರ ಈಶಾನ್ಯ ಭಾಗದಲ್ಲಿದೆ. ಇದು ಸುಮಾರು ಎಪ್ಪತ್ತು ವರ್ಷಗಳ ಕಾಲ ಕೆ.ಜಿ.ಎಫ್. ನೈರ್ಮಲ್ಯ ಮಂಡಳಿಯ ಪುರಸಭಾ ಆಡಳಿತಕ್ಕೆ ಸೇರಿತ್ತು. ಇತ್ತೀಚೆಗೆ ಪಟ್ಟಣ ಬೆಳೆದು ವಿಸ್ತರಿಸಿದ ಪ್ರಯುಕ್ತ 1964ರ ನವೆಂಬರ್ 1ರಂದು ನೈರ್ಮಲ್ಯ ಮಂಡಳಿಯಿಂದ ಪ್ರತ್ಯೇಕಿಸಿ ಪ್ರತ್ಯೇಕ ಪೌರಸಭಾ ಆಡಳಿತಕ್ಕೆ ಒಳಪಡಿಸಲಾಗಿದೆ. ಜನಸಂಖ್ಯೆ 1,41,424.

ಜಾನ್ ಟೇಲರ್ ಅಂಡ್ ಕಂಪನಿ 1885ರಲ್ಲಿ ಚಿನ್ನಕ್ಕಾಗಿ ಗಣಿಗಳನ್ನು ಅಗೆದಾಗ ಮೊದಲ ಸುರಂಗವನ್ನು ಉರಿಗಾಂ ಗ್ರಾಮದಲ್ಲಿ ತೋಡಿದರು. ಆ ಗ್ರಾಮದ ಸಮೀಪದಲ್ಲಿ ಈ ಊರು ಬೆಳೆಯಿತು. ಹಿಂದೆ ಇಲ್ಲಿಯ ಚಿನ್ನದ ಗಣಿಗಳ ಆಡಳಿತವನ್ನು ನಡೆಸುತ್ತಿದ್ದ ಜಾನ್ ಟೇಲರ್ ಅಂಡ್ ಕಂಪೆನಿಯ ತಾಂತ್ರಿಕ ಅಧಿಕಾರಿಗಳಾಗಿದ್ದ ರಾಬರ್ಟ್‌ಸನ್ ಮತ್ತು ಅಂಡರ್‌ಸನ್ ಇಬ್ಬರೂ ಗಣಿ ಕಾರ್ಮಿಕರ ಯೋಗಕ್ಷೇಮದ ಬಗ್ಗೆ ಹೆಚ್ಚು ಸೇವೆ ಸಲ್ಲಿಸಿದ್ದರಿಂದ ಅವರಿಬ್ಬರ ಸ್ಮರಣಾರ್ಥ ಗಣಿ ಪ್ರದೇಶದ ಎರಡು ಬಡಾವಣೆಗಳಿಗೆ ಅವರ ಹೆಸರನ್ನು ಇಡಲಾಯಿತು. ಒಂದು ಭಾಗ ರಾಬರ್ಟ್‌ಸನ್ ಪೇಟೆ ಆಯಿತು.

ರಾಬರ್ಟ್‌ಸನ್‌ಪೇಟೆ ಮತ್ತು ಉರಿಗಾಂ ಈ ಎರಡಕ್ಕೂ ರೈಲ್ವೆ ನಿಲ್ದಾಣವಿದೆ. ರಾಬರ್ಟ್‌ಸನ್‌ಪೇಟೆಯಲ್ಲಿ ದೊಡ್ಡ ಪುರಸಭೆ ಮಾರುಕಟ್ಟೆ ಇದೆ; ಬಾಲಕ ಹಾಗೂ ಬಾಲಕಿಯರಿಗೆ ಪ್ರತ್ಯೇಕವಾಗಿ 2 ಪ್ರೌಢಶಾಲೆಗಳೂ ಒಂದು ಪ್ರಥಮ ದರ್ಜೆ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು ಇವೆ. ಈ ಪಟ್ಟಣದ ಈಶಾನ್ಯಕ್ಕೆ 11 ಕಿಮೀ ದೂರದಲ್ಲಿರುವ ಬೇತಮಂಗಲ ಕೆರೆಯಿಂದ ಇಲ್ಲಿಗೆ ಸುರಕ್ಷಿತ ಕುಡಿಯುವ ನೀರಿನ ಸರಬರಾಜಿದೆ. ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುತ್ ಸೌಲಭ್ಯವಿದೆ.

ರಾಬರ್ಟ್‌ಸನ್‌ಪೇಟೆಯ ಪುರಸಭೆಗೆ ಸೇರಿರುವ ಉರಿಗಾಂ 1880ರಲ್ಲಿ ಒಂದು ಸಣ್ಣ ಗ್ರಾಮವಾಗಿತ್ತು. ಈ ಗ್ರಾಮದಲ್ಲಿರುವ ಹೊಯ್ಸಳ ರಾಮನಾಥನ ಕಾಲದ (13ನೆಯ ಶತಮಾನದ) ಶಾಸನಗಳಿಂದ ಈ ಸ್ಥಳಕ್ಕೆ ಉರಿಗ್ಯೆಯಂ ಎಂಬ ಹೆಸರಿದ್ದುದಾಗಿ ತಿಳಿದುಬರುತ್ತದೆ. **(ವಿ.ಜಿ.ಕೆ)**

**ರಾಮಕೃಷ್ಣ ಹೆಗಡೆ:** 1927–2004. ಕರ್ನಾಟಕದ ಹಿರಿಯ ರಾಜಕಾರಣಿ, ರಾಜಕೀಯ ಮುತ್ಸದ್ದಿ, ಕರ್ನಾಟಕದ ಮಾಜಿ ಮುಖ್ಯಮಂತ್ರಿ (1983–84). ಕೇಂದ್ರ ಸರ್ಕಾರದಲ್ಲಿ ವಾಣಿಜ್ಯ ಸಚಿವರಾಗಿದ್ದವರು (1998).

ಇವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ದೊಡ್ಮನೆಯ ರೈತ ಕುಟುಂಬದಲ್ಲಿ 1927 ಆಗಸ್ಟ್ 29ರಂದು ಜನಿಸಿದರು. ತಂದೆ ಮಹಾಬಲೇಶ್ವರ, ತಾಯಿ ಸರಸ್ವತಿ. ಇವರು ಉನ್ನತ ಶಿಕ್ಷಣ ಪಡೆದುದು ಉತ್ತರ ಪ್ರದೇಶದ ಕಾಶಿವಿದ್ಯಾಪೀಠದಲ್ಲಿ. ಇವರು ಎಂ.ಎ., ಎಲ್‌ಎಲ್.ಬಿ. ಪದವೀಧರರು.

ವಿಶಿಷ್ಟಶೈಲಿಯ, ನವುರಾದ ವರ್ತನೆಯಲ್ಲಿ ಪರಿಣತರಾದ ಇವರು ಚಾಣಾಕ್ಷ ರಾಜಕಾರಣಿಯೆಂದೇ ಹೆಸರಾಗಿದ್ದರು. ತಮ್ಮ ರೀತಿನೀತಿಗಳಿಂದಾಗಿ ಬಲು ತೀವ್ರವಾದ ಪ್ರತಿಕ್ರಿಯೆಗಳಿಗೆ ಇವರು ಅವಕಾಶ ಮಾಡಿಕೊಡುತ್ತಾರೆಂಬುದು ಹಲವರ ಅಭಿಪ್ರಾಯ. ತಮ್ಮ ದೀರ್ಘ ರಾಜಕೀಯ ಯಾತ್ರೆಯಲ್ಲಿ ತೀವ್ರವಾಗಿ ಪ್ರೀತಿಸುವ ಉತ್ಕಟ ಅಭಿಮಾನಿಗಳನ್ನೂ ಪ್ರತಿರೋಧ ವ್ಯಕ್ತಪಡಿಸುವ ಉಗ್ರ ವಿರೋಧಿಗಳನ್ನೂ ಸಂಪಾದಿಸಿಕೊಂಡಿದ್ದರೆಂದು ಅನೇಕರು ಹೇಳುವುದುಂಟು.

ರಾಮಕೃಷ್ಣ ಹೆಗಡೆಯವರು ಜನಜಂಗುಳಿಯ ಮಟ್ಟದಿಂದ ಮೇಲೇರಿ ಬಂದ ಉತ್ತಮ ಸಂಘಟಕರೆಂದು ಹೆಸರುಗಳಿಸಿದವರು. ಕಾಂಗ್ರೆಸ್ಸಿನಲ್ಲಿ ಇವರ ರಾಜಕೀಯ ಜೀವನ ಆರಂಭವಾದದ್ದು ಸಾಮಾನ್ಯ ಕಾರ್ಯಕರ್ತನಾಗಿ. ಕ್ರಮ ಕ್ರಮವಾಗಿ ವಿವಿಧ ಹಂತಗಳಲ್ಲಿ ಇವರು ಅನುಭವ ಸಂಪಾದಿಸಿಕೊಂಡರು. ಇವರು ಅಖಿಲ ಕರ್ನಾಟಕ ವ್ಯಾಪ್ತಿಯ ಕೀರ್ತಿಗಳಿಸಿದ್ದು 1957ರಲ್ಲಿ ನೂತನವಾಗಿ ಸ್ಥಾಪಿತವಾದ ಕರ್ನಾಟಕ ರಾಜ್ಯದ ವಿಧಾನಸಭೆಗೆ ಆಯ್ಕೆಯಾದಾಗ. ಆಗ ಇವರಿಗೆ ಕೇವಲ ಮೂವತ್ತು ವರ್ಷ. ಈ ಉತ್ಸಾಹಿ ಯುವಕ ಆಗ ಕರ್ನಾಟಕದ ಹಿರಿಯ ಮುತ್ಸದ್ದಿ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಗಮನ ಸೆಳೆದರು. ನಿಜಲಿಂಗಪ್ಪನವರ ಸರ್ಕಾರದಲ್ಲಿ ಯೋಜನೆ ಮತ್ತು ಅಭಿವೃದ್ಧಿಯ ಉಪಮಂತ್ರಿಯಾಗಿ ನೇಮಕಗೊಂಡರು. ನಿಜಲಿಂಗಪ್ಪನವರ ಸರ್ಕಾರದಲ್ಲಿ ಮಂತ್ರಿಯಾದ ಇನ್ನೊಬ್ಬರು ವೀರೇಂದ್ರ ಪಾಟೀಲರು **(ನೋಡಿ)** ಹೆಗಡೆಯವರಿಗಿಂತ ಹಿರಿಯರು. ಇವರಿಬ್ಬರೂ ನಿಜಲಿಂಗಪ್ಪನವರ ವಿಶೇಷವಾದ ನಂಬಿಕೆಗೆ ಪಾತ್ರರಾಗಿ ಅವರ ಎಡಗೈ ಬಲಗೈಗಳಂತೆ ಕೆಲಸಮಾಡುತ್ತಿದ್ದರು. ಕರ್ನಾಟಕದ ರಾಜಕೀಯದಲ್ಲಿ ಲವಕುಶರೆಂದೇ ಹಲವರು ಇವರನ್ನು ಕರೆಯುತ್ತಿದ್ದುದುಂಟು.

ಹೆಗಡೆಯವರ ಶ್ರದ್ಧೆ, ದಕ್ಷತೆ, ಚಾಣಾಕ್ಷತೆಗಳಿಗೆ ಬಲು ಬೇಗ ಯಶಸ್ಸು ದೊರಕಿತು. ಇವರು ಸಂಪುಟದರ್ಜೆಯ ಮಂತ್ರಿಯಾಗಿ (1962–65) ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಸಹಕಾರ ಖಾತೆಗಳನ್ನು ನಿರ್ವಹಿಸಿದರು. ಮುಂದೆ ಹಣಕಾಸು, ಅಬಕಾರಿ, ವಾರ್ತಾ ಮತ್ತು ಪ್ರಚಾರ, ಯೋಜನೆ, ಯುವಜನ ಕಲ್ಯಾಣ ಮಂತ್ರಿಯಾಗಿ (ಬೇರೆ ಬೇರೆ ಅವಧಿಗಳಲ್ಲಿ) ಸೇವೆ ಸಲ್ಲಿಸಿದರು (1965–71).

ಈ ನಡುವೆ ಕಾಂಗ್ರೆಸ್ ಒಡೆದು ಎರಡು ಹೋಳಾಗಿತ್ತು. ಇಂದಿರಾ ಗಾಂಧಿಯವರ ಆಳುವ ಕಾಂಗ್ರೆಸ್ ಒಂದು ಹೋಳಾದರೆ, ನಿಜಲಿಂಗಪ್ಪನವರ ಅಧ್ಯಕ್ಷತೆಯ ಸಂಸ್ಥಾ ಕಾಂಗ್ರೆಸ್ ಇನ್ನೊಂದು ಹೋಳು. ನಿಜಲಿಂಗಪ್ಪನವರಲ್ಲಿ ನಿಷ್ಠೆ ಹೊಂದಿದ್ದ ಹೆಗಡೆಯವರು ಸಂಸ್ಥಾ ಕಾಂಗ್ರೆಸ್ಸಿನಲ್ಲಿ ಮುಂದುವರಿದರು. ಪಕ್ಷದ ಮಹಾಕಾರ್ಯದರ್ಶಿಯಾಗಿಯೂ ಕೆಲಸ ನಿರ್ವಹಿಸಿದರು. ಸಂಸ್ಥಾ ಕಾಂಗ್ರೆಸ್ ಚುನಾವಣೆಗಳಲ್ಲಿ ಸೋಲನ್ನು ಅನುಭವಿಸಿದಾಗ ಇವರು ರಾಜ್ಯದ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾದರು.

ಇಂದಿರಾಗಾಂಧಿಯವರ ಸರ್ಕಾರ ತುರ್ತುಪರಿಸ್ಥಿತಿಯನ್ನು ಘೋಷಿಸಿದಾಗ (1975) ವಿರೋಧಪಕ್ಷಗಳ ಇತರ ಹಲವರಂತೆ ಹೆಗಡೆಯವರೂ ಸ್ಥಾನಬದ್ಧತೆಯನ್ನು ಅನುಭವಿಸಬೇಕಾಯಿತು. ಬಂಧನದಿಂದ ಹೊರಬಂದ ಮೇಲೆ ಇವರು ಬದಲಾದ ವ್ಯಕ್ತಿಯಾದರೆಂದು ಹಲವರು ಭಾವಿಸುತ್ತಾರೆ. ಇವರ ವಿನೋದ ಪ್ರವೃತ್ತಿ ಕಡಿಮೆಯಾಗಿ, ಗಾಂಭೀರ್ಯ ಹೆಚ್ಚಿತೆಂದೂ ಇವರ ಶೈಲಿ ಹೆಚ್ಚು ದೃಢವೂ ಗಟ್ಟಿಯೂ ಆಯಿತೆಂದೂ ಹಲವರ ಅನಿಸಿಕೆ.



ತುರ್ತುಪರಿಸ್ಥಿತಿ ಕೊನೆಗೊಂಡು ಚುನಾವಣೆ ನಡೆದಾಗ (1977) ಕೇಂದ್ರದಲ್ಲಿ ಜನತಾಪಕ್ಷದ ಸರ್ಕಾರ ಸ್ಥಾಪಿತವಾಯಿತು. ಪಕ್ಷದ ವಿವೇಕಯುತ ನಾಯಕರಲ್ಲೊಬ್ಬರೆಂದು ಇವರು ಪರಿಗಣಿತರಾದರು. ಜನತಾ ಪಕ್ಷದ ಅಖಿಲ ಭಾರತ ಮಟ್ಟದ ಮಹಾಕಾರ್ಯದರ್ಶಿಯಾಗಿ ನೇಮಕಗೊಂಡರು. ಪಕ್ಷದ ಅಧಿಕೃತ ವಕ್ತಾರರಾಗಿ ತಮ್ಮ ಚುರುಕಾದ ಮಾತಿನಿಂದ, ವ್ಯಂಗ್ಯ ವಿಡಂಬನೆ, ನಗೆಚಟಾಕಿಗಳಿಂದ ಹೆಚ್ಚಿನ ಜನಪ್ರಿಯತೆಗಳಿಸಿದರು. ಉತ್ತರ ಕನ್ನಡ ಜಿಲ್ಲೆಯ ಈ ವ್ಯಕ್ತಿ ಅಖಿಲ ಭಾರತದಲ್ಲಿ ಹಲವು ಮಿತ್ರರನ್ನೂ ಅಭಿಮಾನಿಗಳನ್ನು ಸಂಪಾದಿಸಿಕೊಂಡರು. ರಾಜಕಾರಣವೇ ಅಲ್ಲದೆ ಜೀವನದ ಇತರ ಕ್ಷೇತ್ರಗಳಿಗೂ ಇವರ ಸ್ನೇಹವಲಯ ವಿಸ್ತರಿಸಿತು.

ಬಹುಕಾಲ ಕರ್ನಾಟಕ ರಾಜ್ಯದಿಂದ ಹೊರಗಡೆಯೇ ಅಖಿಲ ಭಾರತ ರಾಜಕೀಯದಲ್ಲಿ ಮುಳುಗೇಳುತ್ತಿದ್ದ ರಾಮಕೃಷ್ಣ ಹೆಗಡೆ 1983ರಲ್ಲಿ ಹಠಾತ್ತನೆ ಕರ್ನಾಟಕ ರಾಜ್ಯದ ರಾಜಕಾರಣಕ್ಕೆ ಮರಳಿದರು. ಆ ವರ್ಷ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿತು. ಕೇಂದ್ರದಲ್ಲಿ ರಾಜ್ಯಸಭೆಯ ಸದಸ್ಯರಾಗಿದ್ದ ಹೆಗಡೆಯವರು ಕನಕಪುರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರು. 1983 ಜನವರಿ 10ರಂದು ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಈ ಮೂಲಕ ಇವರು ಕರ್ನಾಟಕದ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಮುಖ್ಯಮಂತ್ರಿಯಾದಂದಿನಿಂದಲೂ ಅಧಿಕಾರದಲ್ಲಿ ಉಳಿಯಲು ಇವರು ನಿರಂತರವಾಗಿ ಸೆಣಸಾಟ ನಡೆಸಬೇಕಾಗಿಬಂತು. ಇವರ ಅಲ್ಪಸಂಖ್ಯಾತ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ ಎಡಬಿಡದೆ ಶ್ರಮಿಸುತ್ತಿತ್ತು. ಬಿಜೆಪಿ, ಕಮ್ಯೂನಿಸ್ಟರು ಮತ್ತು ಪಕ್ಷೇತರ ಸದಸ್ಯರ ನೆರವಿನಿಂದ ಇವರು ಆಡಳಿತ ನಡೆಸಿದರು.

1984ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಇವರ ಪಕ್ಷ ರಾಜ್ಯದಿಂದ ಕೇವಲ ನಾಲ್ಕು ಸ್ಥಾನಗಳನ್ನು ಗಳಿಸಿತು. ಹೆಗಡೆಯವರ ಸರ್ಕಾರ ಜನಪ್ರಿಯತೆಯನ್ನು ಕಳೆದುಕೊಂಡಿರುವುದರಿಂದ ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ್ ಪ್ರಚಾರ ನಡೆಸಿತು. ಹೆಗ್ಗಡೆಯವರು ಈ ವಾದವನ್ನು ಒಪ್ಪಲಿಲ್ಲ. ಆದರೂ ಕೊನೆಗೆ 1984 ಡಿಸೆಂಬರ್ 29ರಂದು ರಾಜೀನಾಮೆ ನೀಡಿ, ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆ ನಡೆಸಬೇಕೆಂದು ರಾಜ್ಯಪಾಲರಿಗೆ ಕೋರಿಕೆ ಸಲ್ಲಿಸಿದರು. ತಮ್ಮ ಪಕ್ಷದ ಜನಪ್ರಿಯತೆಯನ್ನು ಸಾಬೀತುಗೊಳಿಸುವುದಾಗಿ ಹೇಳಿದರು. 1985 ಮಾರ್ಚ್ 5ರಂದು ನಡೆದ ಚುನಾವಣೆಯಲ್ಲಿ ಇವರ ಪಕ್ಷಕ್ಕೆ ಪ್ರಚಂಡ ಜಯ ಲಭಿಸಿತು. ಅದು ಮೂರನೆಯ ಎರಡರಷ್ಟು ಬಹುಮತಗಳಿಸಿತು.

ಆದರೆ ಬಹುಕಾಲ ಇವರ ಅಧಿಕಾರ ಮುಂದುವರಿಯಲಿಲ್ಲ. ಸಾರಾಯಿಯನ್ನು ಸೀಸೆಗೆ ತುಂಬಿ ಮಾರಾಟ ಮಾಡಲು ಇವರು ಅನುಮತಿ ನೀಡಿ ಮಾಡಿಕೊಂಡಿದ್ದ ಕರಾರು ಅನೂರ್ಜಿತವೆಂದು ಉಚ್ಚನ್ಯಾಯಾಲಯ ಅದನ್ನು ತಳ್ಳಿಹಾಕಿತು. ನೈತಿಕ ಹೊಣೆ ಹೊತ್ತು ಹೆಗಡೆಯವರು ಹಠಾತ್ತನೆ ರಾಜೀನಾಮೆ ನೀಡಿದರು. ಆದರೆ ಇವರ ಪಕ್ಷದ ಸದಸ್ಯರು ಇವರನ್ನು ಬಿಟ್ಟುಕೊಡಲೊಪ್ಪಲಿಲ್ಲ. ಅವರ ಇಚ್ಛೆಗೆ ತಲೆಬಾಗಿ ಇವರು ಮತ್ತೆ ವಿಧಾನಸೌಧಕ್ಕೆ ಹಿಂದಿರುಗಿದರು. 1986 ಫೆಬ್ರವರಿ 16ರಂದು ಪುನಃ ಮುಖ್ಯಮಂತ್ರಿಯಾಗಿ ಪ್ರತಿಜ್ಞಾವಚನ ಸ್ವೀಕರಿಸಿದರು.

ಅಲ್ಪಮತ ಸರ್ಕಾರದ ಅಧಿಪತಿಯಾಗಿದ್ದೂ ತಮ್ಮ ಚತುರೋಪಾಯಗಳಿಂದ ಸರ್ಕಾರವನ್ನು ಉಳಿಸಿಕೊಂಡು, ಚುನಾವಣೆ ನಡೆಸಿ ಬಹುಮತಗಳಿಸಿ ಗೆದ್ದು ಬಂದ ಹೆಗಡೆ ಚಾಣಾಕ್ಷ ರಾಜಕಾರಣಿ ಎಂಬ ಹೆಸರು ಗಳಿಸಿಕೊಂಡರು. ತಮ್ಮದು ಮೌಲ್ಯಾಧಾರಿತ ರಾಜಕಾರಣವೆಂದೂ ಇವರು ಹೇಳಿಕೊಳ್ಳುತ್ತಿದ್ದರು. ಸಾರಾಯಿ ಸೀಸೆ ಹಗರಣದಲ್ಲಿ ನ್ಯಾಯಾಲಯದ ತೀರ್ಪಿನಿಂದಾಗಿ ಇವರ ಮೌಲ್ಯ ಪ್ರತಿಪಾದನೆಗೆ ಕಳಂಕ ಹತ್ತಿದೆಯೆಂದು ವಿರೋಧಿಗಳು ವಾದಿಸಿದರು. ಆದರೂ ಹೆಗಡೆಯವರು ಏಕಾಂಗ ವೀರನಂತೆ ಹೋರಾಡಿದರು. ರಾಜ್ಯದಲ್ಲಿ ವಿರೋಧಿಗಳ ಟೀಕೆಗಳಿಗೆ ಉತ್ತರಿಸುತ್ತ, ಕೇಂದ್ರ ಸರ್ಕಾರಕ್ಕೆ ವಿರುದ್ಧವಾಗಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ದೊರಕಬೇಕೆಂದು ವಾದಿಸುತ್ತ ಮುಂದುವರಿದ ಹೆಗಡೆ ಹಣಕಾಸಿನ ಸಮಸ್ಯೆಯನ್ನು ಎದುರಿಸಬೇಕಾಗಿತ್ತು. ರಾಜ್ಯದ ಹಣಕಾಸು ಮಂತ್ರಿಯೂ ಆಗಿದ್ದ ಇವರು ಕಟುಟೀಕೆಗೆ ಗುರಿಯಾದರು. ರಾಜ್ಯದಲ್ಲಿ ನಾಲ್ಕು ವರ್ಷ ಸತತವಾಗಿ ಅನಾವೃಷ್ಟಿಯಾದ್ದರಿಂದ ಪರಿಸ್ಥಿತಿ ತುಂಬ ಹದಗೆಟ್ಟಿತ್ತು. ವಿರೋಧಿಗಳು ಪ್ರಬಲರಾದರು. ಪರಸ್ಪರ ದೋಷಾರೋಪಣೆಗಳು ಬೆಳೆದವು. ದೂರವಾಣಿ ಕದ್ದಾಲಿಕೆಯ ಆರೋಪ ತೀವ್ರವಾಗಿ, ಕೊನೆಗೆ ಹೆಗಡೆ ಅವರು ರಾಜೀನಾಮೆ ನೀಡಿ ಹೊರಬಂದರು (1989). ಎಸ್.ಆರ್. ಬೊಮ್ಮಾಯಿ ಮುಖ್ಯಮಂತ್ರಿಯಾದರು. ಹೆಗಡೆಯವರ ತೀವ್ರ ಪ್ರತಿಸ್ಪರ್ಧಿಯಾದ ಎಚ್.ಡಿ. ದೇವೇಗೌಡರು ವಿರೋಧಿ ಪಾಳಯಕ್ಕೆ ಸೇರಿಕೊಂಡಿದ್ದರು.

ಈ ಒಳಜಗಳದ ಫಲವಾಗಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ರಾಮಕೃಷ್ಣ ಹೆಗಡೆಯವರು ಅಖಿಲ ಭಾರತ ಪ್ರವಾಸ ಕೈಗೊಂಡು ಭಾಷಣಗಳನ್ನು ನೀಡುತ್ತ ಜನಮನದಲ್ಲಿ ಉಳಿದುಕೊಳ್ಳಲು ಯತ್ನನಡೆಸಿದರು. ಇವರು ಕೆಲಕಾಲ ಯೋಜನಾ ಆಯೋಗದ ಉಪಾಧ್ಯಕ್ಷರಾಗಿಯೂ ಸೇವೆಸಲ್ಲಿಸಿದರು.

ಕಾಂಗ್ರೆಸ್ ಮತ್ತೆ ಜನಪ್ರಿಯತೆ ಕಳೆದುಕೊಳ್ಳುವ ಸೂಚನೆಗಳು ಕಂಡುಬಂದಾಗ ಜನತಾದಳಕ್ಕೆ ಮತ್ತೆ ಅಧಿಕಾರ ದೊರಕಿಸಿಕೊಡುವ ಅವಕಾಶ ಪ್ರಾಪ್ತವಾಯಿತು. ಎಚ್.ಡಿ. ದೇವೇಗೌಡರೂ, ರಾಮಕೃಷ್ಣ ಹೆಗಡೆಯವರೂ ಮತ್ತೆ ಒಂದಾಗಿ ಸೇರಿದರು. ರಾಜ್ಯದಲ್ಲಿ ವ್ಯಾಪಕ ಪ್ರವಾಸ ಕೈಗೊಂಡು ಪ್ರಚಾರ ನಡೆಸಿದರು. 1994ರ ಚುನಾವಣೆಯಲ್ಲಿ ಮತ್ತೆ ಜನತಾದಳಕ್ಕೆ ಜಯ ದೊರಕಿತು. ತಾವೂ ಒಬ್ಬ ಅಭ್ಯರ್ಥಿಯಾಗುವ ಯೋಚನೆಯನ್ನು ಹೆಗಡೆಯವರು ಕೊನೆ ಗಳಿಗೆಯಲ್ಲಿ ಬಿಟ್ಟುಕೊಟ್ಟಿದ್ದರು. ಸರ್ಕಾರವನ್ನು ಯಾರು ರಚಿಸುವರೆಂಬ ಬಗ್ಗೆ ಸ್ವಲ್ಪಕಾಲ ಅನಿಶ್ಚಿತತೆ ಉಂಟಾಯಿತು. ವಿರಸ ಪ್ರಸಂಗ ಮುಂದುವರಿಯಿತು. ಕೊನೆಗೆ ಎಚ್.ಡಿ. ದೇವೇಗೌಡರೇ ಮುಖ್ಯಮಂತ್ರಿಯಾದರು. ರಾಮಕೃಷ್ಣ ಹೆಗಡೆ ದೂರಸರಿಯ ಬೇಕಾಯಿತು. ಹೆಗಡೆಯವರು ಅನಂತರ ರಾಜ್ಯಸಭೆಗೆ ಪುನರಾಯ್ಕೆಯಾದರು.

ಎಚ್.ಡಿ. ದೇವೇಗೌಡರು ಅನಿರೀಕ್ಷಿತವಾಗಿ ಕೇಂದ್ರದಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಳ್ಳಬೇಕಾಗಿ ಬಂದಾಗ ರಾಜ್ಯದಲ್ಲಿ ತೆರವಾದ ಸ್ಥಾನದಲ್ಲಿ ಯಾರು ಮುಖ್ಯಮಂತ್ರಿಯಾಗಬೇಕೆಂಬ ಪ್ರಶ್ನೆ ಮತ್ತೆ ಪ್ರಧಾನವಾಯಿತು. ಹೆಗಡೆಯವರು ಜೆ.ಎಚ್. ಪಟೇಲರನ್ನು ಬೆಂಬಲಿಸಿದರು. ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು.

ಆದರೆ ವಿರಸ ವಾತಾವರಣ ಮುಂದುವರಿಯಿತು. ರಾಮಕೃಷ್ಣ ಹೆಗಡೆಯವರು ಪಕ್ಷವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾರೆಂಬ ಆರೋಪದ ಮೇಲೆ ಆಗಿನ ಅಖಿಲ ಭಾರತ ಜನತಾದಳದ ಅಧ್ಯಕ್ಷರು ಇವರನ್ನು ಪಕ್ಷದಿಂದ ಹೊರಹಾಕಿದರು. ರಾಷ್ಟ್ರೀಯ ನವನಿರ್ಮಾಣ ವೇದಿಕೆ ಎಂಬ ರಾಜಕೀಯೇತರ ಸಂಘಟನೆಯನ್ನು ಹೆಗಡೆ ಸ್ಥಾಪಿಸಿದರು. ರಾಜ್ಯದಾದ್ಯಂತ ವ್ಯಾಪಕ ಪ್ರವಾಸ ಕೈಗೊಂಡರು. ಅನಂತರ ರಾಮಕೃಷ್ಣ ಹೆಗಡೆ ತಮ್ಮದೇ ಆದ ಲೋಕಶಕ್ತಿಯನ್ನು ಸ್ಥಾಪಿಸಿದರು. 1998ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಸಾಧಿಸಿ ಕೆಲವು ಸ್ಥಾನಗಳನ್ನು ಗೆದ್ದರು. ಅನಂತರ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡಾಗ ಅದರಲ್ಲಿ ವಾಣಿಜ್ಯ ಸಚಿವರಾದರು. ಆದರೆ ಬಿ.ಜೆ.ಪಿ. ಇತರ ಎನ್.ಡಿ.ಎ. ಅಂಗಪಕ್ಷಗಳೊಂದಿಗೆ ಮಧ್ಯಂತರ ಚುನಾವಣೆಯ ಅನಂತರ ಅಧಿಕಾರಕ್ಕೆ ಬಂದಾಗ ಹೆಗ್ಗಡೆಯವರಿಗೆ ಕೇಂದ್ರ ಸಂಪುಟದಲ್ಲಿ ಸ್ಥಾನ ಸಿಗಲಿಲ್ಲ. ಹೆಗಡೆ ರಾಜ್ಯ ರಾಜಕೀಯದಲ್ಲಿ ಜನತಾದಳದ (ಸಂಯುಕ್ತ) ನಾಯಕರಾಗಿ ಮುಂದುವರಿದರು. ತೀವ್ರ ಅನಾರೋಗ್ಯಕ್ಕೊಳ ಗಾಗಿ 2004ರ ಜನವರಿ 12ರಂದು ನಿಧನರಾದರು. *

**ರಾಮಚಂದ್ರ:** ಸೇವುಣವಂಶದ ಕೊನೆಯ ದೊರೆ (1271–1312). ಕನ್ನರನ ಮಗ. ತನ್ನ ಚಿಕ್ಕಪ್ಪನ ಮಗನಾದ ಆಮಣ ಪಟ್ಟಕ್ಕೆ ಬಂದ ಕೂಡಲೆ ಅವನನ್ನು ಸೋಲಿಸಿ ತಾನೇ ರಾಜನಾದ. ಪಟ್ಟಕ್ಕೆ ಬರುತ್ತಿದ್ದಂತೆಯೇ ಮಾಳವ ಮತ್ತು ಗುಜರಾತುಗಳ ಕಡೆಗೆ ದಂಡೆತ್ತಿ ಹೋಗಿ ಮಾಳವರಾಜ ಅರ್ಜುನವರ್ಮನನ್ನು ಸೋಲಿಸಿ ಅಲ್ಲಿಂದ ಮುಂದೆ ನುಗ್ಗಿ ವಾಘೇಲ ರಾಜ ಅರ್ಜುನನನ್ನೂ ಪರಾಜಯಗೊಳಿಸಿದ. ಈ ಎರಡು ವಿಜಯಗಳೂ 1272ಕ್ಕಿಂತ ಮುಂಚೆ ಸಾಧಿತವಾದುವು. ಅನಂತರ ಈತ ಹೊಯ್ಸಳರತ್ತ ತಿರುಗಿದ. ಅವನು 1276ರಲ್ಲಿ ಸಾಂತರ ಬೊಮ್ಮರಸನ ಮೇಲೆ ಯುದ್ಧ ಮಾಡಿ ಸೋಲಿಸಿದ. ಅನಂತರ ತಿಕ್ಕಮ ಗುತ್ತವೊಳಲಿನ ಮೂರನೆಯ ಗುತ್ತನನ್ನು ಸ್ನೇಹಿತನನ್ನಾಗಿ ಮಾಡಿಕೊಂಡು, ಇರುಂಗೊಳ, ಹರಿಪಾಲ, ಜೋಯಿದೇವ, ಇಮ್ಮಡಿ ಬಲ್ಲಹದೇವ ಮುಂತಾದ ಮಾಂಡಲಿಕರ ಸೈನ್ಯಸಹಾಯದೊಡನೆ ಬೆಳವಾಡಿಗೆ ಮುತ್ತಿಗೆಹಾಕಿದ. ಆಗ ಹೊಯ್ಸಳ ಸೈನ್ಯ ಚಿಕ್ಕಕೇತಯ್ಯ ನಾಯಕನ ಮುಂದಾಳುತ್ವದಲ್ಲಿ ಧೈರ್ಯದಿಂದ ಕಾದಾಡಿ ಸೇವುಣ ಸೈನ್ಯವನ್ನು ದುಮ್ಮೆಯವರೆಗೆ ಓಡಿಸಿತು. ರಾಮಚಂದ್ರ ಕಾಕತೀಯ ರಾಣಿ ರುದ್ರಮದೇವಿಯೊಡನೆಯೂ ಯುದ್ಧಮಾಡಿದ. ಇದರಲ್ಲಿಯೂ ಇವನು ಜಯಶಾಲಿಯಾಗಲಿಲ್ಲ. ಕಾಕತೀಯರು ರಾಯಚೂರಿನ ಹಾಲುವೆ ಮತ್ತು ಮಾನುವೆ ಕೋಟೆಗಳನ್ನು ಆಕ್ರಮಿಸಿದರು.

ಈ ರೀತಿ ರಾಮಚಂದ್ರ ಒಂದೇ ಸಮನೆ ಯುದ್ಧನಿರತನಾಗಿದ್ದಾಗ ಸೇವುಣರಿಗೆ ದೊಡ್ಡ ವಿಪತ್ತು ಬಂದೊದಗಿತು. ದೆಹಲಿಯ ಸುಲ್ತಾನ ಅಲಾ ಉದ್ದೀನನ ಸೈನ್ಯ 1296ರಲ್ಲಿ ದೇವಗಿರಿಯನ್ನು ಮುತ್ತಿತು. ರಾಮಚಂದ್ರ ಅಸಹಾಯಕತೆಯಿಂದ ಕೋಟೆಯೊಳಗೆ ಸೇರಿಕೊಂಡ. ಆದರೆ ಆಹಾರಪದಾರ್ಥಗಳು ಮುಗಿದುಹೋದುದರಿಂದ ಮತ್ತು ಅಲಾ ಉದ್ದೀನ್ ತನ್ನ ಭಾರಿ ಸೈನ್ಯ ಹಿಂದೆ ಬರುತ್ತಿದೆ ಎನ್ನುವ ಸುಳ್ಳು ಸುದ್ದಿಯನ್ನು ಹಬ್ಬಿಸಿದ್ದರಿಂದ ರಾಮಚಂದ್ರ ಸಂಧಿಯನ್ನು ಮಾಡಿಕೊಂಡ. ಅನಂತರ ಏನಾಯಿತು ಎಂದು ತಿಳಿಯದು. ಏಕೆಂದರೆ ಮಹಮ್ಮದೀಯ ಇತಿಹಾಸಕಾರರ ಬರೆವಣಿಗೆಯಲ್ಲಿ ಒಮ್ಮತವಿಲ್ಲ. ಫೆರಿಸ್ತನ ಪ್ರಕಾರ ರಾಮಚಂದ್ರನ ಮಗನಾದ ಸಿಂಘಣ ರಾಜಧಾನಿಗೆ ಹಿಂದಿರುಗಿ, ತನ್ನ ತಂದೆಯ ಇಚ್ಛೆಗೆ ವಿರುದ್ಧವಾಗಿ ಅಲಾ ಉದ್ದೀನ್‌ನನಿಗೆ "ನಿನಗೆ ನಿನ್ನ ಪ್ರಾಣದ ಮೇಲೆ ಆಸೆ ಇದ್ದರೆ ನೀನು ಲೂಟಿ ಮಾಡಿರುವುದನ್ನೆಲ್ಲ ಹಿಂದಿರುಗಿಸಿ, ತಪ್ಪಿಸಿಕೊಂಡು ಓಡಿಹೋಗುವುದು ನಿನ್ನ ಅದೃಷ್ಟವೆಂದು ಭಾವಿಸು" ಎಂದು ಪತ್ರ ಬರೆದ. ಇದರಿಂದ ಕೋಪಗೊಂಡ ಅಲಾ ಉದ್ದೀನ್ ಮತ್ತೊಮ್ಮೆ ಯುದ್ಧಮಾಡಿ ಸಿಂಘಣನನ್ನು ಸೋಲಿಸಿದ. ಅಲ್ಲದೆ ಕಪ್ಪಕಾಣಿಕೆಗಳ ಮೊತ್ತವನ್ನು ಹೆಚ್ಚಿಸಿದ. ಸಿಂಘಣ ಓಡಿಹೋದ.

ರಾಮಚಂದ್ರ 1303ರಲ್ಲಿ ಮತ್ತೊಮ್ಮೆ ಹೊಯ್ಸಳರ ಮೇಲೆ ಹೊಳಲ್ಕೆರೆ ಯಲ್ಲಿ ಯುದ್ಧ ಮಾಡಿದ. ಇದರಲ್ಲಿಯೂ ಈತ ಪರಾಜಿತನಾದ. ಅಲ್ಲದೆ, ಈತ ಅಲಾ ಉದ್ದೀನನಿಗೆ ಕೊಡಬೇಕಾಗಿದ್ದ ಕಪ್ಪವನ್ನು ನಿಲ್ಲಿಸಿದ್ದರಿಂದ, ಕೋಪಗೊಂಡ ಸುಲ್ತಾನ ಮಲ್ಲಿಕ್ ಕಾಫರ್‌ನನ್ನು ದೇವಗಿರಿಗೆ ಕಳುಹಿಸಿದ. ರಾಮಚಂದ್ರ ಮತ್ತೊಮ್ಮೆ ಸೋತ. ಮಲ್ಲಿಕ್ ಕಾಫರ್ ಇವನನ್ನು ದೆಹಲಿಗೆ ಒಯ್ದ. ಆರು ತಿಂಗಳ ಕಾಲ ಅಲಾ ಉದ್ದೀನನ ಅತಿಥಿಯಾಗಿದ್ದ ರಾಮಚಂದ್ರ ಹಲವು ಮರ್ಯಾದೆಗಳೊಡನೆ ದೇವಗಿರಿಗೆ ಹಿಂದಿರುಗಿ ತನ್ನ ಮರಣಪರ್ಯಂತ ಸುಲ್ತಾನನಿಗೆ ವಿಧೇಯನಾಗಿ ನಡೆದುಕೊಂಡ. 1309ರಲ್ಲಿ ಅಲಾ ಉದ್ದೀನನ ಸೈನ್ಯ ಓರಂಗಲ್ಲಿಗೆ ಹೋಗುವ ಮಾರ್ಗದಲ್ಲಿ ದೇವಗಿರಿಯಲ್ಲಿ ತಂಗಿದ್ದಾಗ ರಾಮಚಂದ್ರ ಅದಕ್ಕೆ ಸಹಾಯ ಮಾಡಿದ. ಅನಂತರ 1312ರಲ್ಲಿ ಮೃತನಾದ.

ಸೇವುಣ ವಂಶದ ಕೊನೆಯ ಸಮರ್ಥ ದೊರೆಯಾಗಿದ್ದ ಈತ ವಿಶಾಲವಾದ ರಾಜ್ಯಕ್ಕೆ ಒಡೆಯನಾಗಿದ್ದ. ಆದರೆ ಈತ ಉತ್ತರದಿಂದ ಒತ್ತಿಬರುತ್ತಿದ್ದ ಇಸ್ಲಾಮೀ ಬಲವನ್ನು ತಡೆಯುವ ಪ್ರಯತ್ನಗಳನ್ನು ಮಾಡದೆ, ತನ್ನ ಸುತ್ತಮುತ್ತಿನವರೊಡನೆ ಯುದ್ಧಗಳಲ್ಲಿ ನಿರತನಾಗಿ ಕೊನೆಗೆ ತಾನೇ ಇಸ್ಲಾಮೀಯ ಶಕ್ತಿಗೆ ಬಲಿಯಾದ. ಇವನ ಅನಂತರ ಇವನ ಮಕ್ಕಳಲ್ಲಿ ಒಬ್ಬನಾದ ಸಿಂಘಣ ದೇವಗಿರಿಯ ರಾಜನಾದ.

ರಾಮಚಂದ್ರ ಮರಾಠಿ ಸಾಹಿತ್ಯದ ಬೆಳೆವಣಿಗೆಗೆ ವಿಶೇಷ ಪ್ರೋತ್ಸಾಹ ಕೊಟ್ಟ. ಮಹಾನುಭಾವ ಪಂಥದ ಅನೇಕ ಗ್ರಂಥಗಳು ಇವನ ಆಸ್ಥಾನದಲ್ಲಿ ರಚಿತವಾದುವು.

(ಎ.ವಿ.ಎನ್.)

**ರಾಮಚಂದ್ರರಾವ್, ಎಂ.ಬಿ.:** 1906– . ಕರ್ನಾಟಕದ ಪ್ರಸಿದ್ಧ ಭೂವಿಜ್ಞಾನಿ. ಪೂರ್ಣ ಹೆಸರು ಮಂದಗೆರೆ ಭಾರದ್ವಾಜ್ ರಾಮಚಂದ್ರ ರಾವ್. 1906 ಆಗಸ್ಟ್ 5ರಂದು ಮಂಡ್ಯ ಜಿಲ್ಲೆಯ ಮಂದಗೆರೆಯಲ್ಲಿ ಜನ್ಮತಳೆದರು. ಇವರ ತಂದೆ ಭೈರಪ್ಪ ಭಾರದ್ವಾಜ್, ತಾಯಿ ವೆಂಕಮ್ಮ. ರಾಯರು ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ನಡೆಸಿ ಸೆಂಟ್ರಲ್ ಕಾಲೇಜಿನ

ಭೂವಿಜ್ಞಾನ ಶಾಖೆಯ ಪ್ರತಿಭಾವಂತ ವಿದ್ಯಾರ್ಥಿ ಎನಿಸಿ 1928ರಲ್ಲಿ ಬಿ.ಎಸ್‌ಸಿ ಪದವೀಧರರಾದರು. ಆ ವರ್ಷವೇ ಇವರನ್ನು ಅಂದಿನ ಮೈಸೂರು ಸರ್ಕಾರ ಭೂಸರ್ವೇಕ್ಷಣಾ ಇಲಾಖೆಯಲ್ಲಿ ಸಹಾಯಕ ಭೂವಿಜ್ಞಾನಿಯಾಗಿ ನೇಮಕಮಾಡಿತು. ಕರ್ನಾಟಕದ ಹಲವಾರು ಕಡೆ ಸರ್ವೇಕ್ಷಣೆಯನ್ನು ನಡೆಸಿ ಹಿರಿಯ ಅಧಿಕಾರಿಗಳ ಮೆಚ್ಚುಗೆಯನ್ನು ಗಳಿಸಿದರು. ಇಲ್ಲಿನ ಶಿಲಾ ಸಮುದಾಯದಲ್ಲಿ ಹುದುಗಿದ್ದ ಖನಿಜಗಳ ಅನ್ವೇಷಣೆ, ಗಣಿ ಕೆಲಸ ಹಾಗೂ ಕೆಲವು ಎಂಜಿನಿಯರಿಂಗ್ ಯೋಜನೆಗಳಲ್ಲಿ ಶ್ರಮಿಸಿದರು. ಇದರ ಜೊತೆಗೆ 1933ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎಂ.ಎಸ್‌ಸಿ ಪದವಿಯನ್ನೂ ಗಳಿಸಿದರು.



ಆ ವೇಳೆಗೆ ಖನಿಜಾನ್ವೇಷಣೆಯಲ್ಲಿ ಭೂಭೌತ ಸರ್ವೇಕ್ಷಣೆ ಹೆಚ್ಚು ಬಳಕೆಗೆ ಬಂದಿತ್ತು. 1937–38ರಲ್ಲಿ ರಾಮಚಂದ್ರರಾಯರು ಈ ಹೊಸ ವಿಧಾನದಲ್ಲಿ ಹೆಚ್ಚಿನ ಪರಿಶ್ರಮ ಪಡೆದು ಮೈಸೂರಿನ ಭೂ ಸರ್ವೇಕ್ಷಣ ಇಲಾಖೆಯಲ್ಲೂ ಈ ವಿಧಾನವನ್ನು ಬಳಕೆಗೆ ತಂದರು. ಚಿತ್ರದುರ್ಗ ಬಳಿ ಇರುವ ಇಂಗಳದಹಾಳಿನ ತಾಮ್ರ ಅದಿರಿನ ನಿಕ್ಷೇಪಗಳ ಮತ್ತು ಕೋಲಾರ ಜಿಲ್ಲೆಯ ಗಣಾಚಾರಪುರದ ಗ್ರ್ಯಾಫೈಟ್ ಅದಿರಿನ ನಿಕ್ಷೇಪಗಳ ವ್ಯಾಪ್ತಿಯನ್ನು ಅರಿತುಕೊಳ್ಳಲು ಇವರು ಕೈಗೊಂಡ ಭೂಭೌತ ಸರ್ವೇಕ್ಷಣೆ ಬಹು ಸಹಾಯಕವೆನಿಸಿತಲ್ಲದೆ ಆ ಪ್ರದೇಶಗಳಲ್ಲಿನ ಗಣಿ ಕೆಲಸಕ್ಕೆ ಸಾಕಷ್ಟು ಅನುಕೂಲವೆನಿಸಿತು. ಅಲ್ಲದೆ ನಾಡಿನ ಹಲವಾರು ಕಡೆ ಈ ವಿಧಾನಗಳ ನೆರವಿನಿಂದ ಭೂಜಲವನ್ನು ಪತ್ತೆಹಚ್ಚಿ ನೀರಿಗಿದ್ದ ಬವಣೆಯನ್ನು ನಿವಾರಿಸಲು ಸಹಾಯಕರಾದರು. ಇವರ ಸಾಧನೆಯ ಕೀರ್ತಿ ನೆರೆನಾಡಿಗೂ ಹಬ್ಬಿ 1944ರಲ್ಲಿ ಸ್ವಲ್ಪಕಾಲ ಇವರ ಸೇವೆಯನ್ನು ಅಂದಿನ ಮದರಾಸು ಸರ್ಕಾರಕ್ಕೆ ಎರವಲು ನೀಡಲಾಯಿತು. ಅಲ್ಲಿನ ಜನೋಪಯೋಗಿ ಇಲಾಖೆಯವರು ಕೈಗೊಂಡಿದ್ದ ಹಲವಾರು ಯೋಜನೆಗಳಲ್ಲಿ ಇವರ ಉತ್ತಮ ಸಲಹೆ ಲಭ್ಯವಾಗಿ ಕೆಲವು ನದೀ ಪಾತ್ರಗಳ ತಳದಲ್ಲಿ, 30–60 ಮೀಟರ್ ಆಳದಲ್ಲಿ ಹುದುಗಿದ್ದ ಶಿಲಾವಿನ್ಯಾಸವನ್ನು ಅರಿಯಲು ಸಾಧ್ಯವಾಯಿತು.

ಇವರ ಪ್ರತಿಭೆಯನ್ನು ಗುರುತಿಸಿದ ಮೈಸೂರು ಸರ್ಕಾರ ಭೂಭೌತ ಸರ್ವೇಕ್ಷಣಾ ವಿಧಾನಗಳಲ್ಲಿ ಹೆಚ್ಚಿನ ಪರಿಶ್ರಮ ಪಡೆಯಲೆಂದು ಉನ್ನತ ತರಬೇತಿಗಾಗಿ ಇವರನ್ನು ಒಂದು ವರ್ಷ ಕಾಲ ಇಂಗ್ಲೆಂಡ್, ಅಮೆರಿಕ ಮತ್ತು ಕೆನಡ ದೇಶಗಳಿಗೆ ಕಳುಹಿಸಿತು. ಅಲ್ಲಿಂದ ಮರಳಿದ ಮೇಲೆ 1949ರಲ್ಲಿ ಭಾರತ ಸರ್ಕಾರದ ಅಪೇಕ್ಷೆಯಂತೆ ಇವರ ಸೇವೆಯನ್ನು ಭಾರತ ಭೂ ಸರ್ವೇಕ್ಷಣಾ ಇಲಾಖೆಗೆ ವಹಿಸಲಾಯಿತು. ಭೂಭೌತ ಸರ್ವೇಕ್ಷಣಾ ಶಾಖೆಯನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳಿಸಿ ಅದರ ಕಾರ್ಯಚಟುವಟಿಕೆಯನ್ನು ಬಹುವಾಗಿ ವಿಸ್ತರಿಸಿದರು. ರಾಜಸ್ತಾನದ ಖೇತ್ರಿ, ಬಿಹಾರಿನ ಸಿಂಘಭೂಂ, ಕರ್ನಾಟಕದ ಚಿತ್ರದುರ್ಗ ಹೀಗೆ ಹಲವಾರು ಪ್ರದೇಶಗಳ ತಾಮ್ರ, ಸೀಸ, ಮ್ಯಾಂಗನೀಸ್ ಮುಂತಾದ ಅದಿರು ನಿಕ್ಷೇಪಗಳ ವ್ಯವಸ್ಥಿತ ಅನ್ವೇಷಣೆಯಾಯಿತು. ಇದೇ ವೇಳೆಯಲ್ಲಿ ಗುಜರಾತಿನ ಕ್ಯಾಂಬೆ ಮತ್ತು ತಮಿಳುನಾಡಿನ ಕಾವೇರಿ ನದೀಮುಖಜ ಭೂಪ್ರದೇಶಗಳಲ್ಲಿ ನಡೆದ ತೈಲಾನ್ವೇಷಣೆಯ ಕಾರ್ಯದಲ್ಲೂ ರಾಯರದೇ ನಿರ್ದೇಶನ.

ಈ ವೇಳೆಗೆ ಭಾರತ ಸರ್ಕಾರದವರು ತೈಲ ಮತ್ತು ನೈಸರ್ಗಿಕ ಅನಿಲ ನಿಕ್ಷೇಪಗಳನ್ನು ಪತ್ತೆಹಚ್ಚುವ ಕಾರ್ಯವನ್ನು ಚುರುಕುಗೊಳಿಸಿ ಅದಕ್ಕಾಗಿಯೇ ಪ್ರತ್ಯೇಕ ಆಯೋಗವೊಂದನ್ನು 1957ರಲ್ಲಿ ಡೆಹ್ರಾಡೂನಿನಲ್ಲಿ ಆರಂಭಿಸಿದರು. ಆಯೋಗದ ಭೂಭೌತ ಶಾಖೆಯ ನಿರ್ದೇಶಕರಾಗಿ ನೇಮಕಗೊಂಡ ರಾಮಚಂದ್ರರಾಯರು ದೇಶದ ಹಲವಾರು ಪ್ರದೇಶಗಳಲ್ಲಿ ತೈಲನಿಕ್ಷೇಪಗಳಿಗಾಗಿ ಸರ್ವೇಕ್ಷಣಾ ಕಾರ್ಯಕ್ರಮಗಳನ್ನು ನಿಯೋಜಿಸಿದರು. ಹೀಗೆ ನಡೆಸಿದ ಸರ್ವೇಕ್ಷಣೆ ಇವರ ನೇತೃತ್ವದಲ್ಲಿ ಉತ್ತಮ ಕೆಲಸ ಮಾಡಿ ಪ್ರಸಿದ್ಧವಾದ ಕ್ಯಾಂಬೆ–ಅಂಕಲೇಶ್ವರ ನೈಸರ್ಗಿಕ ಅನಿಲ ಮತ್ತು ತೈಲಕ್ಷೇತ್ರಗಳ ವ್ಯಾಪ್ತಿಯನ್ನು ಪತ್ತೆಹಚ್ಚಿತು. 1959ರಲ್ಲಿ ಆಯೋಗದ ಸದಸ್ಯರಾದ ಇವರು ಅದರ ತಾಂತ್ರಿಕ ಹಾಗೂ ಆಡಳಿತ ವಿಭಾಗಗಳ ಹೊಣೆಗಾರಿಕೆಯನ್ನೂ ವಹಿಸಿಕೊಂಡರು. 1961ರಲ್ಲಿ ಇವರು ವಿಶ್ರಾಂತರಾದರು. ಆದರೂ ಇವರ ಅಪಾರ ಪರಿಶ್ರಮ ಹಾಗೂ ಅನುಭವಗಳು ಆಯೋಗಕ್ಕೆ ಆವಶ್ಯಕವೆನಿಸಿ ಸಲಹೆಗಾರರನ್ನಾಗಿ ನೇಮಿಸಲಾಯಿತು.

ಅನಂತರ 1971–72ರಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಆಯೋಗದ ರಚನೆ, ಆಡಳಿತ, ಕಾರ್ಯವಿಧಾನ–ಈ ಎಲ್ಲ ಅಂಶಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ನೇಮಿಸಿದ ಸಮಿತಿಯಲ್ಲೂ ರಾಯರು ಸದಸ್ಯರಾಗಿ ಸೇವೆ ಸಲ್ಲಿಸಿದರು. ಹೀಗೆ 35 ವರ್ಷಗಳಿಗೂ ಹೆಚ್ಚು ಕಾಲದ ಇವರ ಉತ್ತಮ ಸೇವೆಯನ್ನು ಮೆಚ್ಚಿ 1972ರಲ್ಲಿ ಕೇಂದ್ರ ಸರ್ಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಗೌರವಿಸಿತು.

ತಮ್ಮ ಅಧಿಕಾರದ ಅವಧಿಯಲ್ಲಿ ಹಲವಾರು ಅಂತಾರಾಷ್ಟ್ರೀಯ ಸಭೆ–ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ಇವರು ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ರಷ್ಯ, ಇಂಗ್ಲೆಂಡ್, ಜರ್ಮನಿ, ಇಟಲಿ, ರೊಮೇನಿಯ, ಇರಾನ್ ಮೊದಲಾದ ದೇಶಗಳಲ್ಲಿ ಪ್ರವಾಸಮಾಡಿ ಅಪಾರ ಅನುಭವ ಗಳಿಸಿದರು.

ಭೂ ಹಾಗೂ ಭೂಭೌತ ವಿಜ್ಞಾನಕ್ಕೆ ಸಂಬಂಧಿಸಿದಂತೆ 70ಕ್ಕೂ ಹೆಚ್ಚು ಪ್ರಬಂಧಗಳನ್ನು ಬರೆದಿದ್ದಾರೆ. ಹಲವಾರು ವೈಜ್ಞಾನಿಕ ಸಂಘಗಳ ಸದಸ್ಯರು ಹಾಗೂ ಭಾರತ ಭೂವಿಜ್ಞಾನ ಸಂಘದ ಉಪಾಧ್ಯಕ್ಷರು ಆಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿರುವ ಇವರ ಪುಸ್ತಕ 'ಔಟ್‌ಲೈನ್ಸ್ ಆಫ್ ಜಿಯೊಫಿಸಿಕಲ್ ಪ್ರಾಸ್ಪೆಕ್ಟಿಂಗ್' ಭೂಭೌತ ವಿಜ್ಞಾನಿಗಳ ಮೆಚ್ಚುಗೆಯನ್ನು ಗಳಿಸಿದೆ. **(ಬಿ.ವಿ.ಜಿ.)**

**ರಾಮಚಂದ್ರರಾವ್, ಎಸ್.ಕೆ.:** 1927–2006. ಬಹುಭಾಷಾ ವಿದ್ವಾಂಸರು, ಸಂಗೀತಶಾಸ್ತ್ರಜ್ಞರು, ಅತ್ಯುತ್ತಮ ಶಿಲ್ಪಿ, ಅನುಭಾವಿ ದಾರ್ಶನಿಕರು. ಇವರು 1927 ಫೆಬ್ರವರಿ 9ರಂದು ಹಾಸನದಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಸಾಲಿಗ್ರಾಮ ಕೃಷ್ಣರಾಮಚಂದ್ರರಾವ್. ಇವರ ತಂದೆ ಸಾಲಿಗ್ರಾಮ ಕೃಷ್ಣನಾರಾಯಣರಾವ್, ತಾಯಿ ಕಮಲಾಂಬಾ. ಸಾ.ಕೃ. ಎಂದೇ ಪ್ರಸಿದ್ಧರಾಗಿದ್ದ ರಾಮಚಂದ್ರರಾವ್ ಅವರು ಬಾಲ್ಯದಲ್ಲಿಯೇ ತಮ್ಮ ತಂದೆಯವರಿಂದ ಮನಃಶಾಸ್ತ್ರ ಹಾಗೂ ಭಾರತೀಯ ತತ್ತ್ವಶಾಸ್ತ್ರಗಳ ಬಗೆಗೆ ಬೋಧನೆ ಪಡೆದಿದ್ದರು. ಮನಃಶಾಸ್ತ್ರ ಕ್ಷೇತ್ರದಲ್ಲಿ ಪದವಿಗಳಿಸಿದರು. ಇವರ ಆಸಕ್ತಿಯ ಕ್ಷೇತ್ರ ಬಹಳ ವ್ಯಾಪಕವಾದದ್ದು. ಹೀಗಾಗಿ ಇವರಿಗೆ ಗುರುಗಳಾಗಿ ಅನೇಕರು ಒದಗಿ ಬಂದರು. ರಾಳ್ಳಪಲ್ಲಿ ಅನಂತಕೃಷ್ಣಶರ್ಮರಿಂದ ಸಂಗೀತಶಾಸ್ತ್ರ, ಪ್ರಾಕೃತ, ತೆಲುಗು ಭಾಷೆಗಳನ್ನು ಕಲಿತರು. ವಿ. ವೆಂಕಟರಾಮಯ್ಯರ್ ಅವರಿಂದ ವೈಣಿಕ ವಿದ್ಯೆ ಪಡೆದರು. ಚಿತ್ರಕಲೆಯ ಭೀಷ್ಮರೆನಿಸಿದ್ದ ಕೆ. ವೆಂಕಟಪ್ಪನವರ ಬಳಿ ಚಿತ್ರಕಲೆಯ ಅಭ್ಯಾಸ ಮಾಡಿದರು. ಬೌದ್ಧಧರ್ಮದ ವಿಚಾರಗಳು ಇವರಿಗೆ ಅತ್ಯಂತ ಪ್ರಿಯವಾಗಿದ್ದವು.

ಗೋವಿಂದ ಪೈ, ಕಿಟ್ಟೆಲ್ ಇವರ ಪರಂಪರೆಯಲ್ಲಿಯೇ ನಡೆದ ಇವರು ಕಲಿತ ಭಾಷೆಗಳು, ಕೈಗೊಂಡ ಅಧ್ಯಯನ-ಸಂಶೋಧನೆಗಳು ಅಪಾರ. ಪಾಲಿ, ಅರ್ಧಮಾಗಧಿ, ಅಪಭ್ರಂಶ, ಸಂಸ್ಕೃತ, ಪ್ರಾಕೃತ, ಗ್ರೀಕ್, ಲ್ಯಾಟಿನ್, ಜರ್ಮನ್, ಫ್ರೆಂಚ್, ತಮಿಳು, ಕನ್ನಡ, ತೆಲುಗು, ಬಂಗಾಲಿ, ಮರಾಠಿ, ಇಂಗ್ಲಿಷ್ ಮೊದಲಾದ ಭಾಷೆಗಳನ್ನು ಕಲಿತಿದ್ದಷ್ಟೇ ಅಲ್ಲದೆ ಅವುಗಳಲ್ಲಿ ಪ್ರಾತಿನಿಧಿಕ ಕೆಲಸಗಳನ್ನು ಮಾಡಿರುವುದು ಇವರ ಹಿರಿಮೆ.

ಬೆಂಗಳೂರಿನ ನಿಮ್ಹಾನ್ಸ್‌ನ ಕ್ಲಿನಿಕಲ್ ಸೈಕಾಲಜಿ ವಿಭಾಗದ ಮುಖ್ಯಸ್ಥರಾಗಿ ವೃತ್ತಿಯನ್ನು ಆರಂಭಿಸಿದ ಇವರು ಬಹಳ ಬೇಗ ಆ ವೃತ್ತಿಗೆ ವಿದಾಯ ಹೇಳಿ ತಮ್ಮ ಕೊನೆಗಾಲದವರೆಗೂ ಕ್ಯಾಲಿಸನ್ ಕಾಲೇಜ್ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹಾಗೂ ಹಲವಾರು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಮನಃಶಾಸ್ತ್ರ ಮತ್ತು ಭಾರತೀಯ ತತ್ತ್ವ ಶಾಸ್ತ್ರಗಳ ಬೋಧಕರಾಗಿ, ಸಂಶೋಧಕರಾಗಿ ದುಡಿದರು.



ಸಣ್ಣಕಥೆ, ಕಾದಂಬರಿ, ಮಹಾತ್ಮರ ಜೀವನ ಚಿತ್ರಣ, ದೇವಾಲಯಗಳ ಇತಿಹಾಸ, ಶಿಲ್ಪಶಾಸ್ತ್ರ, ಆಯುರ್ವೇದ, ಲಲಿತಕಲೆಗಳು, ವೇದಾಂತ ಆಗಮ ಕೋಶಗಳು, ತತ್ತ್ವಮೀಮಾಂಸೆಯ ಸಿದ್ಧಾಂತಗಳು, ವೈಚಾರಿಕ ಲೇಖನಗಳು, ವೇದ-ವೇದಾಂಗದರ್ಶನಗಳು- ಹೀಗೆ ಇವರ ಲೇಖನಿ ಹತ್ತು ದಿಕ್ಕುಗಳಲ್ಲಿ ಹರಡಿದೆ. ವಿವಿಧ ಭಾಷೆಗಳಲ್ಲಿ ಇವರು ರಚಿಸಿರುವ ಗ್ರಂಥಗಳ ಸಂಖ್ಯೆ ಇನ್ನೂರಕ್ಕೂ ಹೆಚ್ಚು. ಟಿಬೆಟ್ಟಿನ ಬೌದ್ಧಸಂತ ಮಿಲರೇಪನ ಬಗೆಗೆ ಬರೆದ ಕೃತಿ ಇವರ ಮೊಟ್ಟ ಮೊದಲ ಪ್ರಕಟಿತ ಕೃತಿ. ಸಾಯಣಾ ಚಾರ್ಯರು, ಆನಂದತೀರ್ಥರು, ಅರವಿಂದರು ಹಾಗೂ ಕಪಾಲಿಶಾಸ್ತ್ರಿಗಳು ವೇದಗಳಿಗೆ ಮಾಡಿರುವ ಭಾಷ್ಯಗಳನ್ನು ಆಳವಾಗಿ ಅಭ್ಯಸಿಸಿ ಋಗ್ವೇದಕ್ಕೆ ಮೂರುಸ್ತರದ ವಿಶಿಷ್ಟ ವ್ಯಾಖ್ಯಾನವನ್ನು ಸು. 30 ಸಂಪುಟಗಳಲ್ಲಿ ಸಿದ್ಧಮಾಡಿರುವುದು ಇವರ ಅಪ್ರತಿಮ ವಿದ್ವತ್ತಿಗೆ ಸಾಕ್ಷಿಯಾಗಿದೆ. ಈ ಸಂಪುಟಗಳಲ್ಲಿ 18 ಸಂಪುಟಗಳು ಈಗಾಗಲೇ ಪ್ರಕಟಗೊಂಡಿವೆ. ಚಿತ್ರಕಲೆ, ಶಿಲ್ಪ, ವಾಸ್ತು, ಸಂಗೀತ, ನೃತ್ಯ, ನಾಟಕ, ಸಿನಿಮಾ, ಕರಕುಶಲ ಕಲೆಗಳು, ಕಲಾವಿದರು ಈ ಬಗೆಯ ವಿಚಾರಗಳನ್ನು ಒಳಗೊಂಡಂತೆ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಸಿರುವ 10 ಸಂಪುಟಗಳು, ಪ್ರಾಕೃತ ಪದಕೋಶ (ಜೈನಯುಗ, 1985) ಮೊದಲಾದವು ಇವರ ಕೆಲವು ಮುಖ್ಯ ಸಂಪಾದಿತ ಕೃತಿಗಳು. ತಿರುಪತಿ ತಿರುಮಲೆ ದೇವರು (1964), ಭಾರತೀಯ ದೇವಾಲಯ ಗಳ ಜಾನಪದ ಮೂಲ(1981) ಮೊದಲಾದವು ಇವರ ಸ್ವತಂತ್ರ ಕೃತಿಗಳು. ಗುರುಗಳಾದ ಕೆ.ವೆಂಕಟಪ್ಪ, ಹಾಗೂ ರಾಳ್ಲಪಳ್ಳಿಯವರ ಜೀವನ ಸಾಧನೆಗಳನ್ನು ಕುರಿತು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಇವರು ಬರೆದಿರುವ ಕೃತಿಗಳು ಕಲಾಭ್ಯಾಸಿಗಳಿಗೆ ಕೈಪಿಡಿಗಳಂತಿವೆ. ದೇವೇಂದ್ರನಾಥ ಠಾಕೂರರ ಬ್ರಹ್ಮೋಪಾಸನೆ ಎಂಬುದು ಬಂಗಾಲಿ ಕೃತಿಯ ಕನ್ನಡ ಅನುವಾದ. ಆಳ್ವಾರರ ನುಡಿಮುತ್ತುಗಳು (1985), ಧರ್ಮದಲ್ಲಿ ಪೂರ್ವ ಮತ್ತು ಪಶ್ಚಿಮ ಮೊದಲಾದವು ಇವರ ಮುಖ್ಯ ಅನುವಾದ ಕೃತಿಗಳು.

ಇವರು ವಿದ್ವತ್ ಪ್ರಪಂಚದಲ್ಲಿ ಏಕಾಂಗಿಯಾಗಿ ಮಾಡಿರುವ ಸಾಧನೆ ಮೇರು ಸದೃಶವಾದದ್ದು. ಈ ಬಗೆಯ ಸಾಧನೆಗೆ ಸಂದಿರುವ ಪ್ರಶಸ್ತಿ ಗೌರವಗಳೂ ಅಪಾರ. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ನೀಡುವ ವೇದವಿದ್ವತ್ಸಮ್ಮಾನ್ ಪ್ರಶಸ್ತಿ, ತಿರುಪತಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ವಾಚಸ್ಪತಿ ಪುರಸ್ಕಾರ, ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳು ನೀಡಿದ ಗೌರವ ಡಾಕ್ಟರೇಟ್‌ಗಳು ಮೊದಲಾದವುಗಳನ್ನು ಉಲ್ಲೇಖಿಸಬಹುದು. ಇವರು 2006 ಫೆಬ್ರವರಿ 2 ರಂದು ನಿಧನರಾದರು. *

**ರಾಮಚಂದ್ರರಾವ್, ಟಿ.ಎಸ್.:** 1922-1977. ಪ್ರಸಿದ್ಧ ಪತ್ರಿಕೋದ್ಯಮಿ. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದಲ್ಲಿ 1922ರಲ್ಲಿ ಜನಿಸಿದರು. ತಂದೆ ಸೂರ್ಯ ನಾರಾಯಣರಾಯ, ತಾಯಿ ಬನಶಂಕರಮ್ಮ. ಬಾಲ್ಯದಲ್ಲೇ ಪಿತೃ ವಿಯೋಗವಾಗಿ ಅಕ್ಕನ ಆಶ್ರಯದಲ್ಲಿ ಬೆಳೆದರು. ಪರಶುರಾಮಪುರದಲ್ಲಿ ಶಿವಮೊಗ್ಗದಲ್ಲಿ ಪ್ರೌಢಶಾಲೆಗೆ ಸೇರಿದರು. ಅನಂತರ ಆಗ ಮೈಸೂರಿನಲ್ಲಿದ್ದ (ಈಗಿನ ಯುವರಾಜ ಕಾಲೇಜು) ಪ್ರಥಮ ದರ್ಜೆ ಕಾಲೇಜಿನಲ್ಲಿ ಓದು ಮುಂದುವರಿಸಿದರು. ಸೀನಿಯರ್ ಇಂಟರ್ ಮೀಡಿಯೆಟ್ ತರಗತಿಯಲ್ಲಿದ್ದಾಗ ಕಾಯಿಲೆ ಬಿದ್ದು ಚೇತರಿಸಿಕೊಳ್ಳುತ್ತಿದ್ದಂತೆ, ಬೆಂಗಳೂರಿನಲ್ಲಿದ್ದ ತಾಯಿಯ ಅನಾರೋಗ್ಯ ನಿಮಿತ್ತ ಓದು ನಿಲ್ಲಿಸಿ ತಾಯಿಯ ಸೇವೆಗೆ ನಿಂತರು.

ಪ್ರಥಮವಾಗಿ ತಿಂಗಳಿಗೆ 15 ರೂಪಾಯಿ ಸಂಬಳದ ಮೇಲೆ ಟೀ ಪ್ರಚಾರಕರಾಗಿ ಕೆಲಸಕ್ಕೆ ಸೇರಿದರು. 1943ರ ಸುಮಾರಿನಲ್ಲಿ ಈ ಕೆಲಸ ಬಿಟ್ಟು ಬೆಂಗಳೂರಿನ ಕಬ್ಬನ್‌ಪೇಟೆಯಲ್ಲಿ ದಿನಸಿ ಅಂಗಡಿ ಇಟ್ಟರು. ಇವೆಲ್ಲ ಚಟುವಟಿಕೆಗಳ ಮಧ್ಯೆ ಪುಸ್ತಕಗಳನ್ನು ಓದುವ ಅಭ್ಯಾಸ ಬಿಟ್ಟಿರಲಿಲ್ಲ. ಎಂ. ಶಿವರಾಂ (ರಾಶಿ) ಅವರ ಪ್ರೋತ್ಸಾಹದ ಮೇಲೆ ಕೊರವಂಜಿ ಪತ್ರಿಕೆಗೆ ಲೇಖನಗಳನ್ನು ಬರೆಯಲಾರಂಭಿಸಿದರು. ಕೊರವಂಜಿಯ ಮತ್ತೊಬ್ಬ ಬರೆಹಗಾರರಾಗಿದ್ದ ರಾಮಸ್ವಾಮಿಯವರೊಡನೆ ಸೇರಿ ಮೂನ್‌ಲೈಟ್ ಎಂಬ ಇಂಗ್ಲಿಷ್ ಚಲನಚಿತ್ರ ಪತ್ರಿಕೆಯನ್ನು ಪ್ರಾರಂಭಿಸಿದರು. ಪತ್ರಿಕೆ ಹೆಚ್ಚು ಕಾಲ ಮುಂದುವರಿಯಲಿಲ್ಲ. ಈ ವೇಳೆಗೆ (1948) ಪ್ರಜಾವಾಣಿ ಪ್ರಾರಂಭವಾದದ್ದರಿಂದ ಅದರ ಉಪಸಂಪಾದಕರಾಗಿ ಸೇರಿದರು.



ಪ್ರಜಾವಾಣಿಯ ಪ್ರಥಮ ಸಂಪಾದಕರಾಗಿದ್ದ ಬಿ. ಪುಟ್ಟಸ್ವಾಮಯ್ಯನವರು ನಿವೃತ್ತರಾದ ಮೇಲೆ ಸಿ.ಜಿ.ಕೆ. ರೆಡ್ಡಿಯವರು ಸಂಪಾದಕರಾಗಿಯೂ ಖಾದ್ರಿ ಶಾಮಣ್ಣನವರು ಸಹಸಂಪಾದಕರಾಗಿಯೂ ಕೆಲಸ ಮಾಡಲಾರಂಭಿಸಿದರು. ಇವರಿಬ್ಬರೂ ಕೆಲಸ ಬಿಟ್ಟಮೇಲೆ ಟಿ.ಎಸ್. ರಾಮಚಂದ್ರರಾವ್ ಅವರನ್ನು ಸಂಪಾದಕರನ್ನಾಗಿ ನೇಮಿಸಲಾಯಿತು. ಆಗ ಇವರಿಗೆ ಕೇವಲ ಇಪ್ಪತ್ತೇಳು ವರ್ಷ.

ಇವರು ಸಂಪಾದಕರಾದ ಮೇಲೆ ಪ್ರಜಾವಾಣಿ ಬಹಳಷ್ಟು ಹೊಸ ರೂಪ ತಾಳಿ ಜನಪ್ರಿಯವಾಯಿತು. ಇವರು ಪ್ರಾರಂಭಿಸಿದ ಛೂಬಾಣ- ವಿಶಿಷ್ಟವಾದ ವ್ಯಂಗ್ಯ, ವಿಡಂಬನೆಯ ಹಾಸ್ಯದ ಹೊದಿಕೆ ಹೊತ್ತ ಮೊನಚು

ಬಾಣವಾಗಿಯೇ ಇತ್ತು. ಅದು ಯಾರ ದಾಕ್ಷಿಣ್ಯಕ್ಕೂ ಕಟ್ಟುಬೀಳದೆ ಗುರಿ ಇಟ್ಟ ಕಡೆ ಚುಚ್ಚದೆ ಬಿಡುತ್ತಿರಲಿಲ್ಲ. ಪತ್ರಿಕೋದ್ಯಮದಲ್ಲಿ ಆ ಒಂದು ಬಗೆಯ ಬರೆಹವನ್ನು ಜಾರಿಗೆ ತಂದು ಜನಪ್ರಿಯತೆ ಗಳಿಸಿದರು. 27 ವರ್ಷಗಳಷ್ಟು ದೀರ್ಘಕಾಲ ಪ್ರಜಾವಾಣಿಯ ಸಂಪಾದಕರಾಗಿದ್ದರು. ಟಿಯೆಸ್ಸಾರ್ ಎಂದು ಜನಪ್ರಿಯರಾಗಿದ್ದ ಇವರು ಅನೇಕ ಬಾರಿ ವಿದೇಶ ಪ್ರಯಾಣ ಮಾಡಿ ಅಪಾರ ಅನುಭವ ಗಳಿಸಿ ಅದರ ಫಲವನ್ನು ಪ್ರಜಾವಾಣಿಯ ಮೂಲಕ ಕನ್ನಡ ಜನತೆಗೆ ನೀಡಿದರು. ಇವರ ಛೂಬಾಣದ ಬರೆಹಗಳನ್ನು ಸಂಗ್ರಹಿಸಿ ಇತ್ತೀಚೆಗೆ ಪುಸ್ತಕರೂಪದಲ್ಲಿ ಪ್ರಕಟಿಸಲಾಗಿದೆ. ಇವರು 1977 ಏಪ್ರಿಲ್ 11ರಂದು ನಿಧನರಾದರು. ಕರ್ನಾಟಕ ಸರ್ಕಾರ ಇವರ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು ಸ್ಥಾಪಿಸಿದ್ದು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರಿಗೆ ಇದನ್ನು ವರ್ಷಂಪ್ರತಿ ನೀಡಲಾಗುವುದು. (ಬಿ.ವಿ.ವಿ.ಎ.)

**ರಾಮಚಂದ್ರಶರ್ಮ, ಬಿ.ಸಿ.:** 1925–2005. ಆಧುನಿಕ ಕನ್ನಡ ಸಾಹಿತ್ಯದ ಸುಪ್ರಸಿದ್ಧ ನವ್ಯಕವಿ, ಕಥೆಗಾರ ಹಾಗೂ ನಾಟಕಕಾರರು. ಇವರ ಪೂರ್ಣ ಹೆಸರು ಬೋಗಾದಿ ಚಂದ್ರಶೇಖರ ಶರ್ಮ ರಾಮಚಂದ್ರ ಶರ್ಮ. 1925 ನವೆಂಬರ್ 28ರಂದು ಮಂಡ್ಯಜಿಲ್ಲೆಯ ನಾಗಮಂಗಲದ ಬೋಗಾದಿ ಎಂಬಲ್ಲಿ ಜನಿಸಿದರು. ಇವರ ತಂದೆ ಚಂದ್ರಶೇಖರಶರ್ಮ. ರಾಮಚಂದ್ರಶರ್ಮರು ಚಿಕ್ಕ ವಯಸ್ಸಿಗೇ ತಂದೆಯನ್ನು ಕಳೆದುಕೊಂಡು ಬಡತನದಲ್ಲಿ ಬೆಳೆಯಬೇಕಾಯಿತು. ಬೆಂಗಳೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್ಸಿ., ಬಿ.ಎಡ್ ಪದವಿಗಳನ್ನು ಗಳಿಸಿದರು. ಚಿಕ್ಕಂದಿನಲ್ಲಿ ಎಂ.ವಿ. ಸೀತಾರಾಮಯ್ಯ ಅವರ ಆಸರೆ, ಒಡನಾಟಗಳಲ್ಲಿ ಬೆಳೆದ ಇವರಿಗೆ ಅವರ ಮೂಲಕ ವಿ.ಸೀ, ಬಿ.ಎಂ.ಶ್ರೀ, ಎಂ.ಆರ್.ಶ್ರೀ, ಕ.ವೆಂ. ರಾಘವಾಚಾರ್, ಎಲ್. ಗುಂಡಪ್ಪ, ಬೇಂದ್ರೆ ಮೊದಲಾದ ಹಲವು ಕನ್ನಡದ ಪ್ರತಿಭಾವಂತ ಚೇತನಗಳ ಸಹವಾಸ ದೊರೆತು ಉತ್ತಮ ಸಾಹಿತ್ಯ ಪ್ರೇರಣೆ ಒದಗಿತು. ಹೋರಾಟದ ಮನಸ್ಸು ಹಾಗೂ ನಂಬಿದ್ದನ್ನು ಸಾಧಿಸುವ ಛಲ ಬೇರೂರಿತು.

ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ ಇವರು ಇಥಿಯೋಪಿಯಕ್ಕೆ ತೆರಳಿ ಅಲ್ಲಿ ಕೆಲಕಾಲ ಅಧ್ಯಾಪಕರಾಗಿ ಸೇವೆಸಲ್ಲಿಸಿ ಇಂಗ್ಲೆಂಡ್‌ಗೆ ಬಂದರು. ವೃತ್ತಿಯಲ್ಲಿದ್ದುಕೊಂಡೇ ಮನಃಶಾಸ್ತ್ರದಲ್ಲಿ ಅಧ್ಯಯನ ನಡೆಸಿ ವಲಸೆಹೋದ ಭಾರತದ ಮಕ್ಕಳ ಬುದ್ಧಿಶಕ್ತಿಯನ್ನು ಕುರಿತು ಮಹಾಪ್ರಬಂಧವನ್ನು ರಚಿಸಿ ಪಿಎಚ್.ಡಿ. ಪದವಿ ಗಳಿಸಿದರು. ವಿಶ್ವಸಂಸ್ಥೆಯ ಪರವಾಗಿ ಮನಶಾಶಸ್ತ್ರದ ಸಲಹೆಗಾರರಾಗಿ ಇಂಗ್ಲೆಂಡ್, ಜಾಂಬಿಯ ಮತ್ತು ಯುನೆಸ್ಕೋಗಳಲ್ಲಿ ಸೇವೆ ಸಲ್ಲಿಸಿದರು.

ಕಾವ್ಯ ಬರೆವಣಿಗೆಯ ಆರಂಭದ ದಿನಗಳಲ್ಲಿ ಪ್ರಗತಿಶೀಲ ಆಶಯಗಳನ್ನು ದಟ್ಟವಾಗಿ ಹೊಂದಿದ್ದ ಇವರ ಕಾವ್ಯ ಮುಖ್ಯವಾಗಿ ಪ್ರಸ್ತಾಪಿಸಿದ್ದು ಆರ್ಥಿಕ ಅಸಮಾನತೆ ಹಾಗೂ ಅದಕ್ಕೆ ಕಾರಣವಾದ ಸಂಗತಿಗಳನ್ನು. ಶ್ರೇಷ್ಠಕಾವ್ಯದ ಬಗೆಗೆ, ಜಗತ್ತಿನ ಭಿನ್ನ ಕಾವ್ಯ ಮಾದರಿಗಳ ಬಗೆಗೆ ಇವರು ಅಧ್ಯಯನ ನಡೆಸುವಲ್ಲಿ ಸ್ಫೂರ್ತಿ ಪಡೆದದ್ದು ವೈ.ಎನ್.ಕೆ. ಅವರಿಂದ. ತಮ್ಮ 27ನೆಯ ವಯಸ್ಸಿನಲ್ಲಿ ಕಾವ್ಯರಚನೆ ಆರಂಭಿಸಿದ ಇವರ ಮೊಟ್ಟಮೊದಲ ಕವನ ಸಂಕಲನ 'ಹೃದಯಗೀತ' (1952). ಅನಂತರ ಏಳುಸುತ್ತಿನ ಕೋಟೆ (1953), ಬುವಿ ನೀಡಿದ ಸ್ಫೂರ್ತಿ (1956), ಹೇಸರಗತ್ತೆ (1969), ಬ್ರಾಹ್ಮಣ ಹುಡುಗ (1978), ಮಾತು–ಮಾಟ (1984), ದೆಹಲಿಗೆ ಬಂದ ಹೊಸವರ್ಷ (1988), ಸಪ್ತಪದಿ (1996) ಮೊದಲಾದವು ಇವರ ಪ್ರಸಿದ್ಧ ಕವನ ಸಂಕಲನಗಳು. ಗೆಶ್ಚರ್ಸ್ (1978) ಎಂಬುದು ಇವರ ಇಂಗ್ಲಿಷ್ ಕಾವ್ಯಸಂಕಲನ. ಯೇಟ್ಸ್, ಎಲಿಯಟ್, ಎಜ್ರಾಪೌಂಡ್, ಆಡನ್ ಮೊದಲಾದ ಮೂವತ್ತೊಂಬತ್ತು ಪಾಶ್ಚಾತ್ಯ ಕವಿಗಳ ನೂರು ಭಿನ್ನ ಮಾದರಿಯ ಕವಿತೆಗಳನ್ನು ಈ ಶತಮಾನದ ನೂರು ಇಂಗ್ಲಿಷ್ ಕವನಗಳು (1982) ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಿ ಅನುವಾದ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆ.

ಮಂದಾರಕುಸುಮ (1953), ಏಳನೆಯ ಜೀವ (1956), ಬೆಳಗಾಯಿತು (1969), ಕತೆಗಾರನಕತೆ (1985)– ಇವು ಇವರ ಕಥಾ ಸಂಕಲನಗಳು. ಪ್ರಗತಿಶೀಲ ಸಂವೇದನೆ ಪ್ರಬಲವಾಗಿದ್ದು ನವ್ಯ ಸಂವೇದನೆ ಕನ್ನಡ ಸಾಹಿತ್ಯವನ್ನು ಪ್ರವೇಶಿಸುತ್ತಿದ್ದ ಸಂದರ್ಭದಲ್ಲಿ ಬರೆದ ಇವರ ಕತೆಗಳು ಹೆಚ್ಚು ಪ್ರಯೋಗಶೀಲ ಮನೋಧರ್ಮದವಾಗಿವೆ. ಕನ್ನಡ ಕಥಾ ಸಾಹಿತ್ಯದಲ್ಲಿ ನವ್ಯಸಂವೇದನೆಯನ್ನು ಮೊಟ್ಟಮೊದಲಿಗೆ ತಂದ ಹಿರಿಮೆ ಇವರದು.



ಬಾಳಸಂಜೆ (1952), ನೀಲಿಕಾಗದ (1953), ಸೆರಗಿನ ಕೆಂಡ (1954), ನೆರಳು (1957), ಕಾರಂಜಿ (1985) ಇವರ ಮುಖ್ಯ ನಾಟಕಗಳು. 'ಸೆರಗಿನ ಕೆಂಡ' ರೇಡಿಯೋ ನಾಟಕ. ಸಿಪಾಯಿದಂಗೆಯ ಕೇಂದ್ರವ್ಯಕ್ತಿ ಪೇಶ್ವೆ ನಾನಾಸಾಹೇಬನ ಅಂತ್ಯವನ್ನು ಚಿತ್ರಿಸುವ ಕಿರುನಾಟಕ. ಬಾಳಸಂಜೆ, ವೈತರಣಿ ಎಂಬ ಗೀತನಾಟಕವನ್ನೂ ಇವರು ರಚಿಸಿದ್ದಾರೆ. ಕನ್ನಡ ನಾಟಕ ಚರಿತ್ರೆಯ ಒಂದು ಸಂಕ್ರಮಣ ಕಾಲದ ಪ್ರಯೋಗಗಳನ್ನಾಗಿ ಇವರ ನಾಟಕಗಳನ್ನು ವಿಮರ್ಶಕರು ವಿಶ್ಲೇಷಿಸಿದ್ದಾರೆ.

ಇವರು ತಮ್ಮ ಪತ್ನಿ ಹಾಗೂ ಲೇಖಕಿ ಪದ್ಮ ಅವರೊಂದಿಗೆ ಸೇರಿ ಮಾಡಿರುವ ಅನುವಾದ ಕೃತಿಗಳೂ ಗಮನಾರ್ಹವಾದವು. ಯಶವಂತ ಚಿತ್ತಾಲರ ಕತೆಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ. ಬಿ.ಎಂ.ಎಸ್: ದಿ ಮ್ಯಾನ್ ಆಂಡ್ ಹಿಸ್ ವರ್ಕ್ಸ್ (1974), ಫ್ರಂ ಕಾವೇರಿ ಟು ಗೋದಾವರಿ, ಮಾಸ್ತಿ, ದಿ ಹೌಸ್ ಆಫ್ ಕಾನೂರು (ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯ ಅನುವಾದ) ಮೊದಲಾದವು ಇವರ ಪ್ರಮುಖ ಅನುವಾದಿತ ಕೃತಿಗಳು. ಹೀಗೆ ಮಾಸ್ತಿ, ಕುವೆಂಪು, ಚಿತ್ತಾಲ ಮೊದಲಾದ ಕನ್ನಡದ ಮಹತ್ವದ ಸಾಹಿತಿಗಳನ್ನು ಭಾಷಾಂತರದ ಮೂಲಕ ಪ್ರಪಂಚದ ಸಾಹಿತ್ಯಕ್ಕೆ ಪರಿಚಯಿಸಿರುವ ಇವರ ಕಾರ್ಯ ಅನನ್ಯವಾದದ್ದು.

ಇವರ ಸಾಹಿತ್ಯ ಸೇವೆಗೆ ಅನೇಕ ಪ್ರಶಸ್ತಿಗಳು ದೊರಕಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (1985), ಕತೆಗಳ ಅನುವಾದಕ್ಕಾಗಿ ಕಥಾ ಪ್ರಶಸ್ತಿ (1992), ರಾಜ್ಯೋತ್ಸವ ಪ್ರಶಸ್ತಿ (1997), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1998)– ಇವು ಮುಖ್ಯವಾದುವು.

ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಾದ ಕಾವ್ಯ, ಕತೆ, ನಾಟಕ, ವಿಮರ್ಶೆ ಮೊದಲಾದ ಕ್ಷೇತ್ರಗಳಲ್ಲಿ ಇವರು ಕೆಲಸ ಮಾಡಿದ್ದರೂ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡದ್ದು ಕಾವ್ಯ ಕ್ಷೇತ್ರದಲ್ಲಿ. ಕಾವ್ಯದ ಅಸಲು ಕಸುಬಿನ ಬಗ್ಗೆ ಸದಾ ಚಿಂತಿಸುವ ಶರ್ಮರು ಕನ್ನಡ ಕಾವ್ಯ ಚರಿತ್ರೆಗೆ ಭಿನ್ನ ಮಾದರಿಯನ್ನು, ಕನ್ನಡ ಭಾಷೆಗೆ ಜೀರ್ಣಾಗ್ನಿ ಶಕ್ತಿಯನ್ನು ತಂದುಕೊಟ್ಟ ವಿಶಿಷ್ಟ ಪ್ರತಿಭೆಗಳಲ್ಲಿ ಒಬ್ಬರು ಎಂಬುದು ವಿಮರ್ಶಕರ ಅಭಿಪ್ರಾಯ. ಇವರು 2005 ಏಪ್ರಿಲ್ 18ರಂದು ನಿಧನರಾದರು. *

**ರಾಮತೀರ್ಥ:** ಬೆಳಗಾಂವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಒಂದು ಗ್ರಾಮ ಹಾಗೂ ಪ್ರಸಿದ್ಧ ತೀರ್ಥಕ್ಷೇತ್ರ. ಅಥಣಿಯಿಂದ ಈಶಾನ್ಯಕ್ಕೆ 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,325. ಈ ಊರಿಗೆ ಸಮೀಪದಲ್ಲಿ ಆನಂದ ಪರ್ವತ ಎಂಬ ಬೆಟ್ಟವಿದ್ದು, ಬೆಟ್ಟದಲ್ಲಿರುವ ಗುಹೆಯಲ್ಲಿ ಆನಂದನಾಯಕಿ ಎಂಬ ದೇವತೆಯ ವಿಗ್ರಹವಿದೆ. ಗುಹೆಗೆ ಪೂರ್ವದಲ್ಲಿ

ರಾಮೇಶ್ವರ ಎಂಬ ಪ್ರಾಚೀನ ದೇವಾಲಯವಿದೆ. ಈ ದೇವಾಲಯದ ಕಂಬಗಳನ್ನು ಸುಂದರವಾಗಿ ಕೆತ್ತಲಾಗಿದೆ. ದೇವಾಲಯದ ಮಹಾದ್ವಾರದ ಮೇಲ್ಗಡೆ ನಟರಾಜನ ವಿಗ್ರಹವಿದೆ. ಪ್ರಾಕಾರದಲ್ಲಿ ನೃಸಿಂಹ, ಅಮೃತೇಶ್ವರ, ಮಾರುತಿ, ಕಾಳಭೈರವ, ಹಾಗೂ ಬ್ರಹ್ಮದೇವರ ಗುಡಿಗಳಿವೆ.

ಮೊದಲಿಗೆ ಈ ದೇವಾಲಯವನ್ನು ವೆಂಕಟೇಶ್ವರನ ಹೆಸರಿನಲ್ಲಿ ಕಟ್ಟಲಾಗಿತ್ತೆಂದು ಪ್ರತೀತಿ. ಶ್ರೀರಾಮನು ಸೀತೆಯ ಶೋಧಾರ್ಥವಾಗಿ ಸಂಚರಿಸುತ್ತ ಕಹೋಳ ಎಂಬ ಗ್ರಾಮಕ್ಕೆ ಬಂದನೆಂದೂ ಅಲ್ಲಿ ಕಹೋಳ ಋಷಿಗಳ ದರ್ಶನ ಪಡೆದು ಸ್ವಯಂಭೂ ಎನಿಸಿದ ಓಂಕಾರೇಶ್ವರನನ್ನು ಪೂಜಿಸಿ ಪಾಶುಪತಾಸ್ತ್ರವನ್ನು ಪಡೆದು ಹರಿಹರರಲ್ಲಿ ಭೇದವಿಲ್ಲವೆಂಬ ಸಂಕೇತಕ್ಕಾಗಿ ಈ ಸ್ಥಾನಕ್ಕೆ ರಾಮೇಶ್ವರ ಎಂಬ ಹೆಸರಿಟ್ಟನೆಂದೂ ಶೈವಪುರಾಣದ ರಾಮೇಶ್ವರ ಮಹಾತ್ಮ್ಯೆಯಲ್ಲಿ ಹೇಳಿದೆ. ಆ ಕಹೋಳ ಆಶ್ರಮವೇ ಈಗ ಕೋಹಳ್ಳಿ ಗ್ರಾಮವೆಂದು ಹೆಸರಾಗಿದೆ. ಇದು ಅಥಣಿಯಿಂದ ಸು. 30 ಕಿಮೀ ದೂರದಲ್ಲಿದೆ. ಕಾಶೀ ವಿಶ್ವೇಶ್ವರ ತನ್ನ ಪರಿವಾರಸಹಿತ ಇಲ್ಲಿ ಬಂದು ನೆಲಸಿದನೆಂದು ತ್ರಿಕೋಟಕ ರುದ್ರಸಂಹಿತೆಯ ಶೈವಪುರಾಣ ಭಾಗದಲ್ಲಿ ಹೇಳಿದೆ. ಈ ಕ್ಷೇತ್ರದ ಸಮೀಪದಲ್ಲಿ ಹರಿಯುವ ಹಳ್ಳ ಉತ್ತರದ ಗಂಗಾನದಿ ಎಂದು ಪ್ರಸಿದ್ಧವಿದೆ. ಹಳ್ಳದಲ್ಲಿ ಪಾಪನಾಶಿನಿ ಎಂಬ ಮಡು ಇದೆ.

ಈ ಊರಿನಲ್ಲಿ ಪ್ರತಿವರ್ಷ ಮಹಾಶಿವರಾತ್ರಿಯಂದು ರಾಮದೇವರ ಹೆಸರಿನಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. (ಎಂ.ಎ.)

**ರಾಮದಾಸ ಅಡ್ಯಂತಾಯ:** 1947– . ಕರ್ನಾಟಕದ ಸಮಕಾಲೀನ ಚಿತ್ರಕಲಾವಿದರಲ್ಲಿ ಪ್ರಮುಖರು. ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು (2001). ಇವರು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿ ಅಬ್ಲಮೊಗರುವಿನಲ್ಲಿ 1947 ಜೂನ್ 27ರಂದು ಜನಿಸಿದರು. ತಂದೆ ಕೆ. ನಾರಾಯಣ ಅಡ್ಯಂತಾಯ, ತಾಯಿ ಮೀನಾಕ್ಷಿ. ರಾಮದಾಸರು ಕುಟುಂಬದ ಆರ್ಥಿಕ ಸಂಕಷ್ಟಗಳಿಂದಾಗಿ ಪುಸ್ತಕಗಳಿಗೆ ರಟ್ಟುಕಟ್ಟುವ ಕೆಲಸವನ್ನು ಹಗಲುಹೊತ್ತು ಕೈಗೊಂಡು ರಾತ್ರಿ ಶಾಲೆಗೆ ಹೋಗಿ ಕಲಿತವರು. ಮಂಗಳೂರಿನ ಗಣಪತಿ ಶಾಲೆ, ಕಾಶಿ ಹೈಸ್ಕೂಲುಗಳಲ್ಲಿ ಅಭ್ಯಾಸ ಮಾಡಿದರು. ಅನಂತರ ಬೆಂಗಳೂರಿಗೆ ಬಂದು ಪೀಠೋಪಕರಣ ಮಾರುವ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿ ರಾತ್ರಿಯ ಕಾಲೇಜಿನಲ್ಲಿ ಓದು ಮುಂದುವರಿಸಿದರು. ಈ ನಡುವೆ ಕೆನ್ ಕಲಾ ಶಾಲೆಯ ವಿದ್ಯಾರ್ಥಿಯಾಗಿ ಸೇರಿದರು. ಚಿತ್ರಕಲಾ ಡಿಪ್ಲೊಮಾ ಪಡೆದು ಶಿಕ್ಷಕರಾದರು (1978). ರಾಜ್ಯ ಲಲಿತಕಲಾ ಅಕಾಡೆಮಿಯ ಶಿಷ್ಯವೇತನ ಪಡೆದು ಶಾಂತಿನಿಕೇತನಕ್ಕೆ ತೆರಳಿ ಚಿತ್ರಕಲಾ ಪದವಿ ಪಡೆದರು. 1983ರಿಂದ ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯಲ್ಲಿ (ಕಾವಾ) ಚಿತ್ರಕಲಾ ಅಧ್ಯಾಪಕರಾಗಿದ್ದರು. ಸಬಿತಾ ಇವರ ಪತ್ನಿ. ಇವರಿಗೆ ಒಬ್ಬ ಪುತ್ರ (ಮಾನುಷ್) ಹಾಗೂ ಒಬ್ಬ ಪುತ್ರಿ (ಲಿಪಿ) ಇದ್ದಾರೆ.



ರಾಮದಾಸರದು ಅಸಾಂಪ್ರದಾಯಿಕ ಚಿತ್ರಕಲೆ. ಅಮೂರ್ತದತ್ತ ಒಲವು. ದಿನನಿತ್ಯ ಹೊಸತನ್ನು ಹೇಳುವುದೇ ಕಲೆ ಎಂಬುದು ಇವರ ನಂಬಿಕೆ. ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಇವರ ಕೃತಿ ಫೇರಿ ಟೇಲ್ ವಿತೌಟ್ ಎ ಸ್ಟೋರಿ ಎಂಬುದು. ಇದು 1.1 ಮೀಟರ್ ಚಚ್ಚೌಕ ಆಕೃತಿಯ ಮಿಶ್ರ ಮಾಧ್ಯಮದ ಕೃತಿ. (ಎನ್.ಪಿ.ವಿ.)

**ರಾಮದುರ್ಗ:** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕನ್ನು ಪೂರ್ವದಲ್ಲಿ ಬಾಗಲಕೋಟೆ ಜಿಲ್ಲೆ, ದಕ್ಷಿಣದಲ್ಲಿ ಗದಗ ಜಿಲ್ಲೆಯ ನರಗುಂದ ತಾಲ್ಲೂಕು, ನೈಋತ್ಯ ಮತ್ತು ಪಶ್ಚಿಮದಲ್ಲಿ ಸವದತ್ತಿ, ಉತ್ತರದಲ್ಲಿ ಗೋಕಾಕ ತಾಲ್ಲೂಕುಗಳು ಸುತ್ತುವರೆದಿವೆ. 103 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,215 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,27,265. ಇದರಲ್ಲಿ 1,90,616 ಮಂದಿ ಗ್ರಾಮವಾಸಿಗಳೂ 36,649 ಮಂದಿ ಪಟ್ಟಣಿಗರೂ ಇದ್ದಾರೆ.

ಈ ತಾಲ್ಲೂಕು ಎರೆಮಣ್ಣಿನ ಭೂಮಿಯಿಂದ ಕೂಡಿದೆ. ಈ ತಾಲ್ಲೂಕಿನಲ್ಲಿ ದೊಡ್ಡ ಬೆಟ್ಟಗಳಿಲ್ಲ. ಅಲ್ಲಲ್ಲಿ ಸಣ್ಣಪುಟ್ಟ ಗುಡ್ಡಗಳನ್ನು ಕಾಣಬಹುದು. ಕುರುಚಲು ಕಾಡುಗಳು ಕಾಣಬರುತ್ತವೆ. ತಾಲ್ಲೂಕಿನ ವಾಯುಗುಣ ಹಿತವಾಗಿದೆ. ಮಲೆನಾಡ ನೆರೆನಾಡಿನಂತಿರುವ ಈ ತಾಲ್ಲೂಕಿನಲ್ಲಿ ಸಾಕಷ್ಟು ಮಳೆ ಆಗುವುದು. ವಾರ್ಷಿಕ ಸರಾಸರಿ ಮಳೆ 538.83 ಮಿಮೀ.

ಈ ತಾಲ್ಲೂಕಿನ ದಕ್ಷಿಣದಲ್ಲಿ ಮಲಪ್ರಭಾ ನದಿ ಹರಿಯುತ್ತದೆ. ಈ ನದಿ ನೈಋತ್ಯದಲ್ಲಿ ಬೊಚಬಾಳ ಗ್ರಾಮದ ಉತ್ತರದಲ್ಲಿ ತಾಲ್ಲೂಕನ್ನು ಪ್ರವೇಶಿಸಿ ಹಳೆತೊರಗಲ್ಲು ಗ್ರಾಮದ ಉತ್ತರದವರೆಗೂ ಈಶಾನ್ಯಾಭಿಮುಖವಾಗಿ ಹರಿದು, ಅನಂತರ ಗ್ರಾಮವನ್ನು ಬಳಸಿಕೊಂಡು ರಾಮದುರ್ಗದ ಮುಖಾಂತರ ಕಿಳಬನೂರು ಗ್ರಾಮದವರೆಗೆ ದಕ್ಷಿಣಾಭಿಮುಖವಾಗಿ ಮುಂದುವರಿದು, ಅನಂತರ ಸ್ವಲ್ಪದೂರ ಹಲಗಟ್ಟಿ ಗ್ರಾಮದವರೆಗೆ ಮೇಲೇರಿ ಮುಂದೆ ಆಗ್ನೇಯಾಭಿಮುಖವಾಗಿ ಹರಿದು, ಸಂಗಾಳ ಗ್ರಾಮದ ಪೂರ್ವದಲ್ಲಿ ಈ ತಾಲ್ಲೂಕನ್ನು ಬಿಟ್ಟು ಬಾದಾಮಿ ತಾಲ್ಲೂಕನ್ನು ಪ್ರವೇಶಿಸುವುದು. ಮಲಪ್ರಭಾ ನದಿಗೆ ಕೊಳಚಿ ಎಂಬಲ್ಲಿ ಒಂದು ಸಣ್ಣ ಅಣೆಕಟ್ಟನ್ನು ನಿರ್ಮಿಸಿ ನೀರಾವರಿಗೆ ಅನುಕೂಲ ಕಲ್ಪಿಸಲಾಗಿದೆ. ಈ ನದಿಯ ದಂಡೆ ವ್ಯವಸಾಯ ಯೋಗ್ಯವಾಗಿದ್ದು ನೀರಾವರಿ ಅನುಕೂಲ ದೊರೆಯುತ್ತಿದೆ. ಈ ತಾಲ್ಲೂಕಿನ ಉತ್ತರದಲ್ಲಿ ಕೆಲವು ಚಿಕ್ಕ ಹಳ್ಳಗಳು ಹರಿಯುವುದುಂಟು. ಅವು ಬೇಸಗೆಯಲ್ಲಿ ಬತ್ತಿಹೋಗುವುವು. ತಾಲ್ಲೂಕಿನ ಅತ್ಯಂತ ದಕ್ಷಿಣದಲ್ಲಿ ಜಾಟಹಳ್ಳ ಹರಿಯುವುದು. ಇದು ತಾಲ್ಲೂಕಿನ ಕಡ್ಲಿಕೊಪ್ಪ ಗ್ರಾಮದ ದಕ್ಷಿಣದಲ್ಲಿ ತಾಲ್ಲೂಕನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಹರಿದು ಕಲ್ಹಾಳ ಗ್ರಾಮದ ಉತ್ತರದಲ್ಲಿ ತಾಲ್ಲೂಕನ್ನು ಬಿಡುವುದು. ಇದೂ ಕೂಡ ತಾಲ್ಲೂಕಿನಲ್ಲಿ ತಕ್ಕ ಮಟ್ಟಿಗೆ ನೀರಾವರಿ ಉಪಯುಕ್ತವಾಗಿದೆ.

ಈ ತಾಲ್ಲೂಕಿನ ಹೆಚ್ಚು ಭಾಗ ಎರೆಮಣ್ಣಿನ ಭೂಮಿಯಾಗಿದ್ದು ಶೇಂಗಾ, ಜೋಳ ಮತ್ತು ಹತ್ತಿ ಇಲ್ಲಿನ ಪ್ರಮುಖ ಬೆಳೆಗಳು. ಜೊತೆಗೆ ಕೆಲವು ದ್ವಿದಳ ಧಾನ್ಯಗಳನ್ನು ಬೆಳೆಯುವುದುಂಟು.

ಈ ತಾಲ್ಲೂಕಿನಲ್ಲಿ ವ್ಯವಸಾಯವೇ ಪ್ರಧಾನವಾದರೂ ಖಾದ್ಯತೈಲ, ಕೈ ಮಗ್ಗದ ಬಟ್ಟೆ ಮತ್ತು ಬೆಲ್ಲ ತಯಾರಿಸಿ ಹೊರಗೆ ಕಳಿಸುವರು. ಚರ್ಮ ವಸ್ತುಗಳ ತಯಾರಿಕೆಯೂ ಉಂಟು. ಮರದ ವಸ್ತುಗಳ ತಯಾರಿಕೆಯೂ ಸ್ವಲ್ಪಮಟ್ಟಿಗೆ ಇದೆ.

ತಾಲ್ಲೂಕಿನಲ್ಲಿ ರಸ್ತೆಮಾರ್ಗ ಸಂಪರ್ಕ ಉತ್ತಮವಾಗಿದೆ. ವಿದ್ಯುತ್, ಅಂಚೆ, ದೂರವಾಣಿ ಸೌಕರ್ಯಗಳಿವೆ. ತಾಲ್ಲೂಕಿನಲ್ಲಿ ಒಟ್ಟು 91 ಪ್ರಾಥಮಿಕ ಶಾಲೆಗಳೂ 45 ಮಾಧ್ಯಮಿಕ ಶಾಲೆಗಳೂ 5 ಪ್ರೌಢಶಾಲೆಗಳೂ ಒಂದು ಕಾಲೇಜೂ ಇದ್ದು ವಿದ್ಯಾಭ್ಯಾಸಕ್ಕೆ ಸಾಕಷ್ಟು ಅನುಕೂಲಗಳಿವೆ.

ಆಸ್ಪತ್ರೆ ಮತ್ತು ಔಷಧಾಲಯಗಳಿವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿದ್ದು ತಾಲ್ಲೂಕಿನ ಕೈಗಾರಿಕೆ ಮತ್ತು ವ್ಯವಸಾಯಕ್ಕೆ ಆರ್ಥಿಕ ಸಹಾಯ ನೀಡುತ್ತಿವೆ.

ರಾಮದುರ್ಗ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯಪಟ್ಟಣ. ಮಲಪ್ರಭಾ ನದಿಯ ಎಡದಂಡೆಯ ಮೇಲೆ, ಬೆಳಗಾಂವಿ ನಗರದ ಪೂರ್ವಕ್ಕೆ 104 ಕಿಮೀ ದೂರದಲ್ಲೂ ಬೈಲಹೊಂಗಲದ ಈಶಾನ್ಯಕ್ಕೆ 72 ಕಿಮೀ ದೂರದಲ್ಲೂ ಇದೆ. ಪಟ್ಟಣದಲ್ಲಿ 18,515 ಗಂಡಸರು, 18,124 ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 36,639.

ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಶೇಂಗಾ, ಹತ್ತಿ ಮತ್ತು ದ್ವಿದಳ ಧಾನ್ಯಗಳ ವ್ಯಾಪಾರ ನಡೆಯುತ್ತದೆ. ಈ ಪಟ್ಟಣದ ಪೂರ್ವಕ್ಕೆ 48 ಕಿಮೀ ದೂರದಲ್ಲಿ ಬಾದಾಮಿಯ ರೈಲ್ವೆ ನಿಲ್ದಾಣವಿದೆ. ಈ ಪಟ್ಟಣಕ್ಕೆ ವಿದ್ಯುತ್, ಅಂಚೆ, ದೂರವಾಣಿ ಸಂಪರ್ಕ ಸೌಲಭ್ಯಗಳಿವೆ. ವಿಜ್ಞಾನ ಮತ್ತು ಕಲಾ ಕಾಲೇಜು, ಪ್ರೌಢ, ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳು ಇವೆ. ಆಸ್ಪತ್ರೆಗಳೂ ಇದ್ದು ವೈದ್ಯಕೀಯ ಸೌಲಭ್ಯವಿದೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಶಿವಾಜಿ ಕಾಲದ್ದೆಂದು ಹೇಳುವ ಒಂದು ಹಳೆಯ ಕೋಟೆ ಈ ಪಟ್ಟಣದಲ್ಲಿದೆ. (ಎಸ್.ಎ.ಎಸ್.)

1671ರಲ್ಲಿ ರಾಮದುರ್ಗವನ್ನು ಶಿವಾಜಿಯು ಭಾವೆ ಮನೆತನದವರಿಗೆ ನೀಡಿದ. ಇದು ನರಗುಂದ ಸಂಸ್ಥಾನದ ಒಂದು ಭಾಗವಾಗಿದ್ದು ಮುಂದೆ ಈ ಮನೆತನದ ಇಬ್ಬರು ಸೋದರರಲ್ಲಿ ಆಸ್ತಿ ಹಂಚಿಕೆಯಾಗಿ ಪ್ರತ್ಯೇಕ ಸಂಸ್ಥಾನವಾಗಿ ರೂಪುಗೊಂಡಿತು. ಬಹುಶಃ ಇದರ ಸ್ವತಂತ್ರ ಅಸ್ತಿತ್ವ 19ನೆಯ ಶತಮಾನದ ಆದಿಭಾಗದಲ್ಲಿ ಆಗಿರಬೇಕು. ಈ ಕಾಲದಲ್ಲಿ ಮುರಾರಿರಾವ್ ಭಾವೆ ಎಂಬ ರಾಮದುರ್ಗದ ಒಬ್ಬ ಸಂಸ್ಥಾನಿಕನ ಹೆಸರು ಕಂಡುಬರುತ್ತದೆ. ಈತನಿಗೆ ಮಕ್ಕಳಿರಲಿಲ್ಲವಾಗಿ ಇವನ ವಿಧವೆ ಪತ್ನಿಯು ಒಬ್ಬ ದತ್ತುಪುತ್ರನನ್ನು ಪಡೆದುದನ್ನು ಕಂಪನಿ ಸರಕಾರ ಮಾನ್ಯಮಾಡಿತ್ತು (1828). 169 ಚದರ ಮೈಲು ವಿಸ್ತೀರ್ಣವಿದ್ದ ಈ ಸಂಸ್ಥಾನ ಸ್ವಾತಂತ್ರ್ಯಾನಂತರ ಬೆಳಗಾಂವಿ ಜಿಲ್ಲೆಯಲ್ಲಿ ಲೀನವಾಯಿತು.

ಸ್ವಾತಂತ್ರ್ಯಸಂಗ್ರಾಮದ ಕಾಲದಲ್ಲಿ ಇಲ್ಲಿ ನಡೆದ ಒಂದು ತೀವ್ರ ಚಳವಳಿಯಿಂದಾಗಿ ಈ ಪಟ್ಟಣ ಖ್ಯಾತಿಗೆ ಬಂತು. ಸಂಸ್ಥಾನದಲ್ಲಿ ಅನೇಕ ವರ್ಷ ಬರಗಾಲ ಇದ್ದುದರಿಂದ ಕಂದಾಯ ಮಾಫಿ ಮಾಡಲು ಜನ ಚಳವಳಿ ನಡೆಸಿದ್ದರು. ಕಾಂಗ್ರೆಸ್ಸಿನ ಮಧ್ಯಸ್ಥಿಕೆಯಿಂದ ಅರಸರಿಗೂ ಜನರಿಗೂ ಒಂದು ಒಪ್ಪಂದವಾಗುವ ಪರಿಸ್ಥಿತಿ ಉಂಟಾದರೂ ಕೆಲವು ನಾಯಕರು ಪ್ರಕ್ಷುಬ್ಧ ಭಾಷಣ ಮಾಡಿ ಜನರನ್ನು ರೊಚ್ಚಿಗೆಬ್ಬಿಸಿದರು. ಪ್ರಕ್ಷೋಭಕರ ಭಾಷಣ ಮಾಡಿದ ನಾಯಕರಿಬ್ಬರ ಬಂಧನವಾಗಲು ಅವರ ಬಿಡುಗಡೆಗಾಗಿ 1939 ಏಪ್ರಿಲ್ 7ರಂದು ಜನರು ರಾಮದುರ್ಗ ಜೈಲಿನ ಮೇಲೆ ದಾಳಿ ಮಾಡಿ ಎಂಟು ಮಂದಿ ಪೋಲಿಸರನ್ನು ಕೊಂದರು. ಈ ದುರಂತದ ಪರಿಣಾಮವಾಗಿ ನಡೆದ ಖಟ್ಲೆಯಲ್ಲಿ ಆರು ಜನರಿಗೆ ಫಾಸಿ ಶಿಕ್ಷೆಯಾಗಿ ಅನೇಕರಿಗೆ ಜೈಲು ಶಿಕ್ಷೆ ಆಯಿತು. (ಎಸ್.ಕೆ.)

**ರಾಮನ್, ಸಿ.ವಿ.:** 1888–1970. ದ್ಯುತಿ ಭೌತಜ್ಞಾನದಲ್ಲಿನ ವಿದ್ಯಮಾನವೊಂದನ್ನು ಮೊತ್ತಮೊದಲಿಗೆ ವೈಜ್ಞಾನಿಕವಾಗಿ ಅರ್ಥವಿಸಿ ರಾಮನ್ ಪರಿಣಾಮ ಎಂಬ ಹೆಸರಿನಿಂದ ಪ್ರಪಂಚಕ್ಕೆ ಪ್ರಕಟಿಸಿದ ನೊಬೆಲ್ ಪ್ರಶಸ್ತಿ ಪುರಸ್ಕೃತ ಭೌತವಿಜ್ಞಾನಿ. ಯಾವುದೇ ಒಂದು ಬಣ್ಣದ–ಉದಾಹರಣೆಗೆ ಕೆಂಪು, ನೀಲಿ, ಹಳದಿ ಇತ್ಯಾದಿ–ಬೆಳಕಿನ ಕಿರಣ ದಂಡವನ್ನು ಅಶ್ರಗದ ಮೂಲಕ ಹಾಯಿಸಿ ಬಿಳಿತೆರೆಯ ಮೇಲೆ ಬೀಳಿಸಿದರೆ ಅದರ ರೋಹಿತ ದೊರೆಯುವುದು. ಇದರಲ್ಲಿ ಕೆಲವು ಉಜ್ಜ್ವಲ ರೇಖೆಗಳು ಎದ್ದುಕಾಣುವುವು. ಇವೆಲ್ಲವೂ ಮೂಲ ಬೆಳಕಿನ ಬಣ್ಣದವೇ ಆಗಿ ತೋರಿದರೂ ಛಾಯೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿರುತ್ತವೆ. ಅಂದರೆ, ಮೂಲ ಬೆಳಕು ಈ ವಿವಿಧ ಛಾಯೆಗಳ ಸಂಯುಕ್ತ ಮತ್ತು ಅಶ್ರಗ ಅದನ್ನು ವಿಭಜಿಸಿದೆ ಎಂದು ತಿಳಿಯುವುದು. ಆ ಒಂದೊಂದು ಘಟಕದ (ಅಂದರೆ ಛಾಯೆಯ) ಅಲೆಯುದ್ದ ಬೇರೆ ಬೇರೆ ಇರುವುದರಿಂದ ಅದು ರೋಹಿತದಲ್ಲಿ ತನಗೇ ವಿಶಿಷ್ಟವಾದ ಸ್ಥಾನವನ್ನು ಪಡೆಯುತ್ತದೆ. ಈಗ ಅದೇ ಬೆಳಕನ್ನು ಮೊದಲು ಪಾರದರ್ಶಕ ಪದಾರ್ಥದ ಮೂಲಕವೂ ಮತ್ತೆ ಅಶ್ರಗದ ಮೂಲಕವೂ ಹರಿಸಿ ಅದರ ರೋಹಿತವನ್ನು ಪಡೆದರೆ ಇದರಲ್ಲಿ

ಮೊದಲಿದ್ದ ಗೆರೆಗಳ ಜೊತೆಗೆ ಕೆಲವು ಹೊಸ ಗೆರೆಗಳು ಕಂಡುಬರುವುವು. ಆದ್ದರಿಂದ ಮೂಲ ಬೆಳಕಿನಲ್ಲಿ ಇದ್ದ ವಿವಿಧ ಅಲೆಯುದ್ದ ರಶ್ಮಿಗಳ ಜೊತೆಗೆ ಹೊಸ ಅಲೆಯುದ್ದದವೂ ಸೇರಿಕೊಂಡಿವೆ ಎಂದು ತೀರ್ಮಾನಿಸ ಬೇಕಾಗುವುದು. ಬೆಳಕಿನ ಹಾದಿಯಲ್ಲಿ ಪಾರದರ್ಶಕ ಪದಾರ್ಥ ಅಡ್ಡಬರುವುದರಿಂದ ಈ ಪರಿಣಾಮ ಕಂಡುಬರುತ್ತದೆ. ಇದೇ ರಾಮನ್ ಪರಿಣಾಮ. ಇದರ ಅಧ್ಯಯನದಿಂದ ಪಾರದರ್ಶಕ ಪದಾರ್ಥದ ಅಣು ರಚನೆಯ ಬಗ್ಗೆ ಮಾಹಿತಿ ಪಡೆಯಬಹುದು. ಭೌತವಿಜ್ಞಾನದ ಸಂಶೋಧನೆಗಳಲ್ಲಿ ರಾಮನ್ ಪರಿಣಾಮಕ್ಕೆ ಮಹತ್ತ್ವದ ಸ್ಥಾನವಿದೆ. ಇದರ ಆವಿಷ್ಕಾರ ಕಲ್ಕತ್ತದಲ್ಲಾದರೂ ರಾಮನ್ ಇದನ್ನು ಪ್ರಕಟಿಸಿದ್ದು ಬೆಂಗಳೂರಿನಲ್ಲಿ (1928 ಫೆಬ್ರವರಿ 28). ಈ ಆವಿಷ್ಕಾರದ ಹಿರಿಮೆಯನ್ನು ಗುರುತಿಸಿ ಸ್ವೀಡನ್ನಿನ ನೊಬೆಲ್ ಪ್ರತಿಷ್ಠಾನ ಇವರಿಗೆ 1930ರ ಭೌತವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಿಕವನ್ನು ನೀಡಿ ಗೌರವಿಸಿತು. ಭಾರತದ ಪ್ರಥಮ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಇವರು. ಆ ಮೊದಲೇ 1924ರಲ್ಲಿ ಇವರಿಗೆ ಎಫ್.ಆರ್.ಎಸ್. ಪ್ರಶಸ್ತಿ ಬಂದಿತ್ತು.

ಇವರು ತಮಿಳುನಾಡಿನ ತಿರುಚ್ಚಿರಾಪಳ್ಳಿಯಲ್ಲಿ 1888 ನವೆಂಬರ್ 7ರಂದು ಜನಿಸಿದರು. 1907ರಲ್ಲಿ ಭೌತವಿಜ್ಞಾನದ ಎಂ.ಎ. ಡಿಗ್ರಿಯನ್ನು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಪಡೆದು, ಅದೇ ವರ್ಷ ಅಖಿಲ ಭಾರತ ಸ್ಪರ್ಧಾಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿ ಭಾರತ ಸರ್ಕಾರದ ವಿತ್ತ ವಿಭಾಗದಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್ ಆಗಿ ನೇಮಕಗೊಂಡರು. ಆದರೆ ಇವರ ಒಲವೆಲ್ಲ ವಿಜ್ಞಾನದ ಕಡೆಗೇ ಇದ್ದುದರಿಂದ ಕಲ್ಕತ್ತದಲ್ಲಿನ ದಿ ಇಂಡಿಯನ್ ಅಸೋಸಿಯೇಶನ್ ಫಾರ್ ದಿ ಕಲ್ಟಿವೇಶನ್ ಆಫ್ ಸೈನ್ಸ್ ಎಂಬ ಖಾಸಗಿ ವಿಜ್ಞಾನ ಸಂಶೋಧನ ಮಂದಿರದಲ್ಲಿ ಸಂಶೋಧನೆಯಲ್ಲಿ ತೊಡಗಿದರು. ಉದ್ಯೋಗನಿಮಿತ್ತ ಕಲ್ಕತ್ತದಿಂದ ಹೊರಗಿನ ಊರುಗಳಿಗೆ ಹೋಗಬೇಕಾಗಿದ್ದ ರಾಮನ್ ಅವರು 1911ರಲ್ಲಿ ಪುನಃ ಕಲ್ಕತ್ತಕ್ಕೆ ಮರಳಿದರು. ಕಲ್ಕತ್ತ ವಿಶ್ವವಿದ್ಯಾನಿಲಯದ ಕುಲಪತಿ ಆಶುತೋಷ ಮುಖರ್ಜಿಯವರ ಆಮಂತ್ರಣದ ಮೇರೆಗೆ 1917ರಲ್ಲಿ ಇವರು ತಮ್ಮ ಸರ್ಕಾರಿ ಕೆಲಸಕ್ಕೆ ರಾಜಿನಾಮೆ ನೀಡಿ, ಆ ವಿಶ್ವವಿದ್ಯಾಲಯದ ಪಲಿತ್ ಭೌತವಿಜ್ಞಾನ ಪ್ರಾಧ್ಯಾಪಕರಾಗಿ ಸೇರಿದರು.

ಸದಾ ಕುತೂಹಲಿ, ಪ್ರಯೋಗಪಟು ಮತ್ತು ಚಿಂತನಶೀಲರಾಗಿದ್ದ ರಾಮನ್ 1917ರಿಂದ ಮುಂದೆ ಮೂಲಭೂತ ಸಂಶೋಧನೆಗಳನ್ನು ಮಾಡಲು ಉದ್ಯುಕ್ತರಾದರು. ಬೆಳಕಿನ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವುದು ಇವರ

ಆಗಿನ ಆಸಕ್ತ ಕ್ಷೇತ್ರ. ಇಲ್ಲಿ ದುಡಿದುದರ ಪರಮಸಿದ್ಧಿಯೇ ಈ ಹಿಂದೆ ವಿವರಿಸಿರುವ ರಾಮನ್ ಪರಿಣಾಮದ ಆವಿಷ್ಕಾರ. ಇದರಿಂದ ಇವರ ಖ್ಯಾತಿ ಪ್ರಪಂಚದಾದ್ಯಂತ ಹಬ್ಬಿತು. ಯುರೋಪ್, ರಷ್ಯ, ಅಮೆರಿಕ ಮೊದಲಾದ ರಾಷ್ಟ್ರಗಳಲ್ಲಿನ ವಿಜ್ಞಾನ ಸಂಸ್ಥೆಗಳ ಆಹ್ವಾನದ ಮೇರೆಗೆ ಸಂದರ್ಶಿಸಿ ಹಲವಾರು ಗೌರವ ಪ್ರಶಸ್ತಿಗಳನ್ನು ಗಳಿಸಿ ಮರಳಿದರು.

ಇವರು 1933ರಲ್ಲಿ ಬೆಂಗಳೂರಿನ ಇಂಡಿಯನ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಿನ ನಿರ್ದೇಶಕತ್ವವನ್ನು ವಹಿಸಿಕೊಂಡರು. ಮರುವರ್ಷ ಇಂಡಿಯನ್ ಅಕಾಡೆಮಿ ಆಫ್ ಸೈನ್ಸನ್ನು ಖಾಸಗಿಯಾಗಿ ತಮ್ಮ ಸಂಚಾಲಕತ್ವದಲ್ಲಿ ಸ್ಥಾಪಿಸಿದರು. ಇದರ ಉದ್ದೇಶಗಳಿಷ್ಟು: ಪ್ರಥಮ ದರ್ಜೆಯ ಸಂಶೋಧಕರ ಪ್ರಬಂಧಗಳನ್ನು ಪ್ರಕಟಿಸುವುದು, ವಿಜ್ಞಾನ ಸಂಬಂಧ ಸಮಸ್ಯೆಗಳ ಚರ್ಚೆಗೆ ಹೊಸ ವೇದಿಕೆ ಒದಗಿಸುವುದು, ಭಾರತದ ವೈಜ್ಞಾನಿಕ ಹಾಗೂ ಔದ್ಯಮಿಕ ಸಂಶೋಧನೆಗಳನ್ನು ಸಂಘಟಿಸುವುದು. ಈ ಉದ್ದೇಶ ಸಿದ್ಧಿಗಾಗಿ ಸಂಶೋಧನ ಮಾಸಿಕವೊಂದನ್ನು ಸಹ ರಾಮನ್ ಪ್ರಾರಂಭಿಸಿದರು (ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ಅಕಾಡೆಮಿ). ತಮ್ಮ ನೆಚ್ಚಿನ ವಿಜ್ಞಾನಮಂದಿರವನ್ನು ಇವರು ಬೆಂಗಳೂರಿನ ಹೆಬ್ಬಾಳ ಎಂಬಲ್ಲಿ ಕಟ್ಟಿಸಿದರು (1947). 1939ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಿನ ನಿರ್ದೇಶಕತ್ವವನ್ನು ಬಿಟ್ಟುಕೊಟ್ಟು ಕೇವಲ ಭೌತವಿಜ್ಞಾನಮುಖ್ಯರಾಗಿ ಉಳಿದರು. 1918ರಲ್ಲಿ ಈ ಹೊಣೆಗಾರಿಕೆಯನ್ನೂ ಕಳಚಿಕೊಂಡು ಸ್ವಂತ ಮಂದಿರದ ಪೂರ್ಣ ಕಾಲದ ಸಂಶೋಧಕ ಮತ್ತು ನೇತಾರರಾದರು. ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂದೇ ಪ್ರಸಿದ್ಧವಾಗಿರುವ ಈ ಮಂದಿರದ ಜೀವನಾಡಿ ಏನಿರಬೇಕು ಎಂಬುದನ್ನು ಸ್ವತಃ ಅವರೇ ಹೀಗೆಂದು ಬರೆದಿದ್ದಾರೆ: "ನಮ್ಮ ಪ್ರಾಚೀನ ರಾಷ್ಟ್ರಕ್ಕೆ ತಕ್ಕುದಾದಂಥ ವಿಜ್ಞಾನ ಸಂಶೋಧನ ಕೇಂದ್ರವನ್ನು ಅಸ್ತಿತ್ವಕ್ಕೆ ತರಬೇಕೆಂಬುದು ನನ್ನ ತೀವ್ರ ಅಭಿಲಾಷೆ. ಈ ಕೇಂದ್ರದಲ್ಲಿ ನಮ್ಮ ದೇಶದ ತೀಕ್ಷ್ಣಮತಿಗಳು ವಿಶ್ವರಹಸ್ಯವನ್ನು ಶೋಧಿಸಬೇಕು; ಮತ್ತು ಹಾಗೆ ಮಾಡುವುದರ ಮೂಲಕ ವಿಶ್ವಚಟುವಟಿಕೆಗಳನ್ನು ನಿಯಂತ್ರಿಸುತ್ತಿರುವ ಅತೀತ ಶಕ್ತಿಯನ್ನು ಗ್ರಹಿಸಲು ನಮಗೆ ನೆರವಾಗಬೇಕು. ಆತನ ದಿವ್ಯಕೃಪೆಯಿಂದ ನಮ್ಮ ದೇಶಪ್ರೇಮಿಗಳೆಲ್ಲರೂ ಈ ಕಾರಣವನ್ನು ಪೋಷಿಸುವ ವಿಧಾನವನ್ನು ಕಂಡಾಗ ಮಾತ್ರ ಈ ಗುರಿ ಸಿದ್ಧಿಸೀತು".

ಸೃಷ್ಟಿಯ ಸಕಲ ವಿದ್ಯಮಾನಗಳೂ ರಾಮನ್ ಅವರ ಆಸಕ್ತಿಯನ್ನು ಕೆರಳಿಸಿದ್ದುವು. ಎಂದೇ ಇವರ ಮಂದಿರದ ವಸ್ತುಸಂಗ್ರಹಾಲಯ ಮತ್ತು ಪುಸ್ತಕ ಭಂಡಾರಗಳು ವಿಶಾಲ ವ್ಯಾಪ್ತಿಯುಳ್ಳವಾಗಿವೆ. ಮೂಲತಃ ಇವರು ಭೌತವಿಜ್ಞಾನಿ ಆಗಿದ್ದರೂ ಇವರ ಕುತೂಹಲ ಸಕಲ ಶಾಸ್ತ್ರಗಳನ್ನೂ ಒಳಗೊಂಡಿತ್ತು ಭಾರತದ ಸುಪ್ತವಿಜ್ಞಾನಪ್ರಜ್ಞೆಯನ್ನು ಇವರಿಗಿಂತ ಚೆನ್ನಾಗಿ ಪ್ರಕಟಿಸಿದ ವಿಜ್ಞಾನಿ ಇನ್ನೊಬ್ಬನಿಲ್ಲ. ಭಾರತವನ್ನೂ ಭಾರತದ ಪ್ರಾಚೀನ ಪರಂಪರೆ ಹಾಗೂ ಸತ್ತ್ವಸಾಮರ್ಥ್ಯಗಳನ್ನೂ ಇವರಿಗಿಂತ ಗಾಢವಾಗಿ ನಂಬಿ ಪ್ರೀತಿಸಿದ ವಿಜ್ಞಾನಿ ಇನ್ನೊಬ್ಬನಿಲ್ಲ. ನೇಟಿವ್ ವಿಜ್ಞಾನ ಎಂಬುದೇ ಇಲ್ಲ ಎಂದು ದೇಶೀಯರೆಲ್ಲರೂ ತಿರಸ್ಕಾರದಿಂದ ಉದ್ಗರಿಸುತ್ತಿದ್ದಾಗ, ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿ ವಿಜ್ಞಾನವನ್ನು ಕಲಿತ ವಿನಾ ಏನೂ ಪ್ರಯೋಜನವಿಲ್ಲ ಎಂದು ಅವರೆಲ್ಲರೂ ಪ್ರಾಮಾಣಿಕವಾಗಿ ನಂಬಿದ್ದಾಗ ಈ ಸೇಕಡ ನೂರು ದೇಸಿ ವಿಜ್ಞಾನಿ ರಾಮನ್, ಸ್ವಂತ ಸಾಹಸಪರಿಶ್ರಮಗಳಿಂದ ಭಾರತದ ವಿಜ್ಞಾನಸಾಮರ್ಥ್ಯವನ್ನು ಎತ್ತಿಹಿಡಿದರು. ಇವರ ವಿದ್ಯಾಭ್ಯಾಸ, ಸಂಶೋಧನೆ, ಸಿದ್ಧಿ ಎಲ್ಲವೂ ನಡೆದದ್ದು ಭಾರತದ ಒಳಗೇ. ಅಂತಾರಾಷ್ಟ್ರೀಯ ಖ್ಯಾತಿ ಬಂದ ಬಳಿಕ ಮಾತ್ರವೇ ಇವರು ವಿದೇಶೀ ಪ್ರವಾಸ ಕೈಗೊಂಡರು.

ಇವರು 1970 ನವೆಂಬರ್ 21ರಂದು ಬೆಂಗಳೂರಿನಲ್ಲಿ ನಿಧನರಾದರು.

(ಜಿ.ಟಿ.ಎನ್.)

**ರಾಮನಗರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಉತ್ತರದಲ್ಲಿ ಮಾಗಡಿ, ಪೂರ್ವದಲ್ಲಿ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ಮತ್ತು ಕನಕಪುರ ತಾಲ್ಲೂಕುಗಳೂ ವಾಯುವ್ಯದಲ್ಲಿ ತುಮಕೂರು ಜಿಲ್ಲೆ ಪಶ್ಚಿಮದಲ್ಲಿ ಚನ್ನಪಟ್ಟಣ ತಾಲ್ಲೂಕು, ದಕ್ಷಿಣದಲ್ಲಿ ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕುಗಳ ಚಾಚಿದ ಪ್ರದೇಶಗಳು ಸುತ್ತುವರೆದಿವೆ. ಕೂಟಗಲ್ಲು, ಕೈಲಂಚ, ರಾಮನಗರ ಮತ್ತು ಬಿಡದಿ-ಇವು ತಾಲ್ಲೂಕಿನ ನಾಲ್ಕು ಹೋಬಳಿಗಳು. ಗ್ರಾಮಗಳ ಸಂಖ್ಯೆ 134. ವಿಸ್ತೀರ್ಣ 631.7 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ 2,38,347. ಇದರಲ್ಲಿ 1,58,953 ಗ್ರಾಮವಾಸಿಗಳು 79,394 ಪಟ್ಟಣಿಗರೂ ಇದ್ದಾರೆ.

ಈ ತಾಲ್ಲೂಕು ಬಹುತೇಕ ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಮೈದಾನ ಪ್ರದೇಶ ಕಡಿಮೆ. ಒರಟಾದ ಕಂದುಬಣ್ಣದ ಬೆಣಚುಕಲ್ಲಿನಿಂದ ಕೂಡಿದ ಬೆಟ್ಟಗಳ ಸಾಲು ರಾಮನಗರದ ಮೂಲಕ ಹಾದುಹೋಗಿದೆ. ಕೆಲವು ಕಡೆ ಬೆಟ್ಟದ ತಪ್ಪಲುಗಳಲ್ಲಿ ಕುರುಚಲು ಗಿಡದ ಕಾಡು ವಿಶೇಷವಾಗಿ ಕಂಡುಬರುತ್ತದೆ. ಅರ್ಕಾವತಿ ಈ ತಾಲ್ಲೂಕಿನ ಮುಖ್ಯನದಿ. ಇದು ತಾಲ್ಲೂಕನ್ನು ಉತ್ತರದಲ್ಲಿ ಪ್ರವೇಶಿಸಿ ರಾಮನಗರದವರೆಗೆ ದಕ್ಷಿಣಾಭಿಮುಖವಾಗಿ ಹರಿದು ಅಲ್ಲಿಂದ ಆಗ್ನೇಯಾಭಿಮುಖವಾಗಿ ಕನಕಪುರ ತಾಲ್ಲೂಕನ್ನು ಪ್ರವೇಶಿಸುವುದು. ತಾಲ್ಲೂಕಿನ ಮಧ್ಯದಲ್ಲಿ ಹರಿಯುವ ಈ ನದಿಯ ಎಡ ಮತ್ತು ಬಲದಂಡೆಗಳ ಭೂಪ್ರದೇಶ ವ್ಯವಸಾಯ ಯೋಗ್ಯವಾಗಿದೆ. ಮಂಚನಬೆಲೆ ಯೋಜನೆಯಿಂದ ಈ ನದಿಯ ನೀರನ್ನು ಹೆಚ್ಚು ಉಪಯುಕ್ತವಾಗಿ ಬಳಸಿಕೊಳ್ಳಲಾಗಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಸ್ವಲ್ಪ ದೂರ ಉತ್ತರದಿಂದ ದಕ್ಷಿಣಕ್ಕೆ ಕಣ್ವನದಿ ಹರಿದು ಚನ್ನಪಟ್ಟಣ ತಾಲ್ಲೂಕನ್ನು ಪ್ರವೇಶಿಸುವುದು.

ಈ ತಾಲ್ಲೂಕಿನ ಮುಖ್ಯ ಕಸಬು ವ್ಯವಸಾಯ. ಹೆಚ್ಚಿನ ವ್ಯವಸಾಯಕ್ಕೆ ಮಳೆ ನೀರು ಆಧಾರ. ಸರಾಸರಿ ಮಳೆ 800 ಮಿಮೀ. ರಾಗಿ, ಬತ್ತ, ಕಬ್ಬು ಮುಖ್ಯ ಬೆಳೆಗಳು. ಸ್ವಲ್ಪ ಗೋದಿಯನ್ನೂ ಬೆಳೆಯುತ್ತಾರೆ. ನದಿ ದಂಡೆ ಹಾಗೂ ಮೆಕ್ಕಲು ಮಣ್ಣಿನ ಭೂಪ್ರದೇಶದಲ್ಲಿ ತೆಂಗನ್ನು ಬೆಳೆಯುತ್ತಾರೆ. ಹಿಪ್ಪುನೇರಳೆ ಈ ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆ.

ಬೀಡಿ ಕಟ್ಟುವುದು, ರೇಷ್ಮೆ ಸಾಕಣೆ, ರೇಷ್ಮೆ ನೂಲು ತೆಗೆಯುವುದು, ಹೆಂಚು ಮತ್ತು ವ್ಯವಸಾಯ ಉಪಕರಣಗಳ ತಯಾರಿಕೆ, ರೇಷ್ಮೆ ಸೀರೆ ನೇಯುವುದು ತಾಲ್ಲೂಕಿನ ಗೃಹಕೈಗಾರಿಕೆಗಳು.

ತಾಲ್ಲೂಕಿನಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಮತ್ತು ಪದವಿಪೂರ್ವ ಶಾಲಾಕಾಲೇಜುಗಳಿವೆ. ಪ್ರಸೂತಿಗೃಹ, ಶಿಶುಕಲ್ಯಾಣ ಮತ್ತು ಆರೋಗ್ಯ ಕೇಂದ್ರಗಳಿವೆ.

ಮಾಗಡಿ-ರಾಮನಗರ, ರಾಮನಗರ-ಕನಕಪುರ ಮತ್ತು ಮೈಸೂರು-ಬೆಂಗಳೂರು ಪ್ರಾಂತೀಯ ಹೆದ್ದಾರಿ-ಇವು ತಾಲ್ಲೂಕಿನ ಪ್ರಮುಖ ರಸ್ತೆ ಮಾರ್ಗಗಳು. ಮೈಸೂರು-ಬೆಂಗಳೂರು ರೈಲುಮಾರ್ಗ ರಾಮನಗರದ ಮೂಲಕ ಹಾದು ಹೋಗುತ್ತದೆ.

ರಾಮನಗರ ಈ ತಾಲ್ಲೂಕಿನ ಆಡಳಿತ ಕೇಂದ್ರ. ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಬೆಂಗಳೂರಿಗೆ ನೈಋತ್ಯದಲ್ಲಿ 48 ಕಿಮೀ ದೂರದಲ್ಲಿ ಅರ್ಕಾವತಿ ನದಿಯ ಎಡದಂಡೆಯ ಮೇಲಿದೆ. ಪಟ್ಟಣದಲ್ಲಿ 41,084 ಮಂದಿ ಗಂಡಸರು, 38,281 ಮಂದಿ ಹೆಂಗಸರು ಇದ್ದು ಒಟ್ಟು ಜನಸಂಖ್ಯೆ 79,365.

1800ರಲ್ಲಿ ದಿವಾನ್ ಪೂರ್ಣಯ್ಯನಿಂದ ಸ್ಥಾಪನೆಯಾದ ಈ ಊರಿಗೆ ಹಿಂದೆ ಕ್ಲೋಸ್‌ಪೇಟೆ ಎಂಬ ಹೆಸರಿದ್ದು ಚನ್ನಪಟ್ಟಣ, ಮಾಗಡಿ ಮತ್ತು ಕಾನಕಾನಹಳ್ಳಿ ತಾಲ್ಲೂಕುಗಳನ್ನೊಳಗೊಂಡ ಬೆಂಗಳೂರು ಜಿಲ್ಲೆಯ ಉಪವಿಭಾಗವಾಗಿತ್ತು. ಹಳೆ ಮೈಸೂರಿನ ರೆಸಿಡೆಂಟ್ ಆಗಿದ್ದ ಸರ್ ಬ್ಯಾರಿಕ್ಲೋಸ್ ಎಂಬುವನ ಗೌರವಾರ್ಥ ಕ್ಲೋಸ್‌ಪೇಟೆ ಎಂಬ ಹೆಸರನ್ನು ಇಡಲಾಗಿತ್ತೆಂದು ಕನ್ನಡ–ಪರ್ಷಿಯನ್ ಎರಡೂ ಭಾಷೆಗಳಲ್ಲಿರುವ ಇಲ್ಲಿನ ಶಾಸನವೊಂದರಿಂದ ತಿಳಿಯುತ್ತದೆ. ಹೊಸಪೇಟೆ, ನವಿಪೇಟೆ ಮತ್ತು ರಾಮಗಿರಿ–ಇವು ಈ ಊರಿಗಿದ್ದ ಇತರ ಹೆಸರುಗಳು. ಅರ್ಕಾವತಿ ನದಿಯ ದಡದಲ್ಲಿ ಅಗ್ರಹಾರವೂ ಅರ್ಕೇಶ್ವರ ಹಾಗೂ ರಾಮದೇವರ ದೇವಾಲಯಗಳೂ ಮತ್ತು ಪೂರ್ಣಯ್ಯನವರು ಕಟ್ಟಿಸಿದ ಒಂದು ಛತ್ರವೂ ಇವೆ. **(ಜಿಟಿ.)**

ಈ ಪಟ್ಟಣದಲ್ಲಿ ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು. ಒಂದು ಸರ್ಕಾರಿ ಜೂನಿಯರ್ ಕಾಲೇಜು ಮತ್ತು ಒಂದು ಕಲಾ ತರಬೇತಿ ಕೇಂದ್ರ ಇದ್ದು ಗ್ರಂಥಾಲಯ ಮತ್ತು ವಾಚನಾಲಯಗಳಿವೆ. ಸಹಕಾರಿ ಸಂಘಗಳು, ವಾಣಿಜ್ಯ ಬ್ಯಾಂಕುಗಳೂ ಇವೆ. ಈ ಪಟ್ಟಣ ಮೈಸೂರು–ಬೆಂಗಳೂರು ಮಾರ್ಗದ ಒಂದು ಮುಖ್ಯ ರೈಲುನಿಲ್ದಾಣ. ಅಂಚೆ, ದೂರವಾಣಿ, ವಿದ್ಯುತ್ ಮುಂತಾದ ಸೌಲಭ್ಯಗಳಿವೆ. ವ್ಯಾಪಾರ ಕೇಂದ್ರವಾದ ಈ ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ.

ರಾಮನಗರದ ಉತ್ತರಕ್ಕೆ ಸು. 5 ಕಿಮೀ ದೂರದಲ್ಲಿ ರಾಮಗಿರಿ ಬೆಟ್ಟ ಇದೆ. ಇದನ್ನು ರೇವಣಸಿದ್ಧೇಶ್ವರಬೆಟ್ಟ ಎಂತಲೂ ಕರೆಯುತ್ತಾರೆ. ಈ ಬೆಟ್ಟದ ಮೇಲೆ ಹಿಂದೆ ಇದ್ದ ಕೋಟೆಯ ಅವಶೇಷಗಳಿವೆ. ರಾಮ ಮತ್ತು ರಾಮೇಶ್ವರ ದೇವಸ್ಥಾನಗಳು ಈ ಬೆಟ್ಟದ ಮೇಲಿದ್ದು ಮೊದಲಿನ ದೇವಸ್ಥಾನದ ರಂಗಮಂಟಪ ಪಾಳೆಯಗಾರ ಕೆಂಪೇಗೌಡ ನಿರ್ಮಿತವೆಂದು ತಿಳಿಯುತ್ತದೆ. ಸ್ಥಳಪುರಾಣದ ಪ್ರಕಾರ ಕಾಕಾಸುರನೆಂಬ ರಾಕ್ಷಸನನ್ನು ಶ್ರೀರಾಮ ಸಂಹರಿಸಿದ್ದರಿಂದ ಈಗಲೂ ಬೆಟ್ಟದ ಮೇಲೆ ಕಾಗೆಗಳು ಹಾರುವುದಿಲ್ಲವೆಂದು ಪ್ರತೀತಿ. ರಾಮೇಶ್ವರ ದೇವಸ್ಥಾನದ ಮುಂದೆ ಇರುವ ಬಂಡೆಯನ್ನು ಮಾರ್ಕಂಡೇಯನೆಂದೂ ದೇವಸ್ಥಾನದ ಎಡಕ್ಕೆ ಇರುವ ಬಂಡೆಗಳನ್ನು ಸಪ್ತಋಷಿಗಳೆಂದೂ ಹೇಳುತ್ತಾರೆ. ಬೆಟ್ಟದ ಮೇಲೊಂದು ದೋಣೆಯಿದೆ. ವರ್ಷಕ್ಕೊಮ್ಮೆ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ರಾಮನಗರಕ್ಕೆ ಸು. 5 ಕಿಮೀ ದೂರದಲ್ಲಿ ಜಲಸಿದ್ಧೇಶ್ವರ ಎಂಬ ಮತ್ತೊಂದು ಬೆಟ್ಟವಿದೆ. **(ಎಸ್.ಎನ್.ಜಿ)**

**ರಾಮನಾಥ:** ಹೊಯ್ಸಳ ಅರಸು (1253–95). ವೀರ ಸೋಮೇಶ್ವರ ಮತ್ತು ಅವನ ರಾಣಿಯಾದ ಸೋವಲದೇವಿಯರ ಮಗ. ರಾಮನಾಥನಿಗೂ ಇವನ ಮಲಸಹೋದರನಾದ ಮೂರನೆಯ ನರಸಿಂಹನಿಗೂ ಹೊಂದಾಣಿಕೆ ಇರಲಿಲ್ಲವಾಗಿ ವೀರಸೋಮೇಶ್ವರ ಸಾಮ್ರಾಜ್ಯವನ್ನು ಇಬ್ಭಾಗ ಮಾಡಿ ತಮಿಳುನಾಡಿನ ಪ್ರದೇಶಗಳನ್ನು ರಾಮನಾಥನಿಗೆ ಕೊಟ್ಟ. ಆದರೆ ಸ್ವಲ್ಪಕಾಲದಲ್ಲೇ ರಾಮನಾಥ ಮಧುರೆಯ ಜಟಾವರ್ಮನ್ ಸುಂದರ ಪಾಂಡ್ಯನಿಂದ ಪರಾಜಿತವಾಗಿ ತನ್ನ ರಾಜ್ಯದ ಹೆಚ್ಚು ಭಾಗಗಳನ್ನೂ ರಾಜಧಾನಿಯಾದ ವಿಕ್ರಮಪುರವನ್ನೂ ಕಳೆದುಕೊಂಡ. ಧರ್ಮಪುರಿ ಜಿಲ್ಲೆಯ ಹೊಸೂರು ಬಳಿಯ ಕುಂದಾಣಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ನರಸಿಂಹನ ರಾಜ್ಯದ ಮೇಲೆ ನಿರಂತರವಾದ ಆಕ್ರಮಣದಲ್ಲಿ ತೊಡಗಿದ. ಸೇಲಂ, ಧರ್ಮಪುರಿ, ಬೆಂಗಳೂರು ಮತ್ತು ಕೋಲಾರ (ಮತ್ತು ಪ್ರಾಯಶಃ ಕೊಯಮತ್ತೂರು) ಜಿಲ್ಲೆಗಳ ಪ್ರದೇಶಗಳಷ್ಟೇ ಇವನ ಆಳ್ವಿಕೆಗೆ ಒಳಪಟ್ಟಿದ್ದವು. ಇವನು ಒಮ್ಮೆ ಕುಣಿಗಲಿನವರೆಗೂ ದಂಡೆತ್ತಿ ಹೋಗಿ ನರಸಿಂಹನಿಂದ ಪರಾಜಿತನಾಗಿ ಹಿಂದಿರುಗಿದ. ಕಮಲಾದೇವಿ ಇವನ ರಾಣಿ. ಇವರಿಗೆ ವಿಶ್ವನಾಥ ಎಂಬ ಕುಮಾರನಿದ್ದ. ವಿಶ್ವನಾಥ ತನ್ನ ತಂದೆಯ ಆಳ್ವಿಕೆಯ ಕೊನೆಗಾಲದಲ್ಲಿ ಆಡಳಿತದಲ್ಲಿ ಭಾಗವಹಿಸುತ್ತಿದ್ದ. ರಾಮನಾಥ 1295ರಲ್ಲಿ ಮೃತನಾದ. ಅನಂತರ 3ನೆಯ ಬಲ್ಲಾಳ ಇವನ ರಾಜ್ಯವನ್ನು ಮೂಲ ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡ. **(ಜಿ.ಆರ್.ಆರ್.)**

**ರಾಮನಾಥಪುರ:** ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಒಂದು ಗ್ರಾಮ ಹಾಗೂ ಹೋಬಳಿ ಕೇಂದ್ರ. ಅರಕಲಗೂಡಿಗೆ ದಕ್ಷಿಣದಲ್ಲಿ 19 ಕಿಮೀ ದೂರದಲ್ಲಿ ಕಾವೇರಿನದಿಯ ಎಡದಂಡೆಯ ಮೇಲಿದೆ.



ಪ್ರಸನ್ನ ರಾಮೇಶ್ವರ ದೇವಾಲಯ

ಇಲ್ಲಿ ಸುಬ್ರಹ್ಮಣ್ಯೇಶ್ವರ, ಪಟ್ಟಾಭಿರಾಮ, ಅಗಸ್ತ್ಯೇಶ್ವರ, ಪ್ರಸನ್ನ ರಾಮೇಶ್ವರ, ಆಂಜನೇಯ, ಲಕ್ಷ್ಮೀನರಸಿಂಹ ಮತ್ತು ದುರ್ಗಾರಾಮೇಶ್ವರಿ ದೇವಾಲಯಗಳಿವೆ. ವಹ್ನಿಪುಷ್ಕರಿಣಿ ಎಂಬ ತೀರ್ಥವೂ ಇದೆ. ಇದೊಂದು ಪವಿತ್ರ ಸ್ಥಳವಾಗಿ ದಕ್ಷಿಣ ಕಾಶಿ ಎಂದು ಹೆಸರು ಗಳಿಸಿದೆ.

ಸುಬ್ರಹ್ಮಣ್ಯೇಶ್ವರ ದೇವಾಲಯ ದ್ರಾವಿಡ ಶೈಲಿಯಲ್ಲಿದೆ. ಇಲ್ಲಿನ ಏಳು ಹೆಡೆಗಳುಳ್ಳ ನಾಗವಿಗ್ರಹ ಸುಂದರವಾಗಿದೆ. ಪ್ರತಿವರ್ಷ ಮಾರ್ಗಶಿರ ಶುದ್ಧ ಷಷ್ಠಿಯಂದು ರಥೋತ್ಸವ, ಜಾತ್ರೆ ಜರುಗುತ್ತವೆ. ಇದೇ ಕಾಲದಲ್ಲಿ ವಸ್ತು ಪ್ರದರ್ಶನ ಮತ್ತು ದನಗಳ ಜಾತ್ರೆ ನಡೆಯುತ್ತದೆ. ಪಟ್ಟಾಭಿರಾಮ ದೇವಾಲಯವೂ ದ್ರಾವಿಡ ಶೈಲಿಯಲ್ಲಿದೆ. ಇದರ ಎದುರಿನಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯದ ವಿಗ್ರಹ ಚಿಕ್ಕದೇವರಾಜ ಒಡೆಯರ ಕಾಲದ್ದಾಗಿದ್ದು ಸುಂದರವಾಗಿದೆ. ಪ್ರಸನ್ನರಾಮೇಶ್ವರ ದೇವಾಲಯ ಹೊಯ್ಸಳರ ಕಾಲದ್ದು. ಆದರೆ ವಿಜಯನಗರದ ಅರಸುಗಳ ಮತ್ತು ಪಾಳೆಯಗಾರರ ಕಾಲದಲ್ಲಿ ವಿಸ್ತರಿಸಲ್ಪಟ್ಟಿದೆ. ದುರ್ಗಾಪರಮೇಶ್ವರಿ ದೇವಾಲಯದ ದೇವವಿಗ್ರಹವನ್ನು ಶಂಕರಾಚಾರ್ಯರು ಸ್ಥಾಪಿಸಿದರೆಂದು ಪ್ರತೀತಿ.

ಈ ಊರಿನಲ್ಲಿ ಒಂದು ಸಂಸ್ಕೃತ ಪಾಠಶಾಲೆ, ಪ್ರೌಢಶಾಲೆ ಇವೆ. ಈ ಊರಿನ ಬಳಿ ಕಾವೇರಿ ನದಿಗೆ ಒಂದು ಸೇತುವೆಯನ್ನೂ ಕೃಷ್ಣರಾಜಕಟ್ಟೆ ಎಂಬ ಅಣೆಕಟ್ಟೆಯನ್ನೂ ಕಟ್ಟಲಾಗಿದೆ. ರಾಮನಾಥಪುರಕ್ಕೆ ಅರಕಲಗೂಡು, ಹೊಳೆನರಸೀಪುರ, ಕೊಣನೂರು ಮೊದಲಾದೆಡೆಗಳಿಂದ ಉತ್ತಮ ರಸ್ತೆ ಸಂಪರ್ಕವಿದೆ.

ಅಸುರರ ಗುರು ಶುಕ್ರಾಚಾರ್ಯರು ಮೃತಸಂಜೀವಿನಿ ಮಂತ್ರದ ಸಿದ್ಧಿಗಾಗಿ ಇಲ್ಲಿ ತಪಸ್ಸನ್ನು ಮಾಡಿದ್ದರೆಂದೂ ಭೃಗು ಮುನಿಗಳಿಂದ ಶಾಪಗ್ರಸ್ತನಾದ ಅಗ್ನಿಗೆ ಇಲ್ಲಿ ಶಾಪವಿಮೋಚನೆ ಆಯಿತೆಂದೂ ಅದರ ನೆನಪಾಗಿ ವಹ್ನಿಪುಷ್ಕರಿಣಿ ಇದೆ ಎಂದೂ ತ್ರೇತಾಯುಗದಲ್ಲಿ ರಾಮಚಂದ್ರ ಬ್ರಹ್ಮಹತ್ಯಾ ದೋಷಪರಿಹಾರಕ್ಕಾಗಿ ಇಲ್ಲಿ ಶಿವನನ್ನು ಪೂಜಿಸಿದನೆಂದೂ ಇಲ್ಲಿಯ ಸ್ಥಳಪುರಾಣ ತಿಳಿಸುತ್ತದೆ. **(ಕೆ.ಆರ್.ಆರ್.;ವಿ.ಎಸ್.ಎಸ್.)**

**ರಾಮಮೂರ್ತಿ, ಎಂ.:** 1918–67. ಕನ್ನಡದ ಜನಪ್ರಿಯ ಲೇಖಕರು ಮತ್ತು ಕನ್ನಡದ ಹಿತರಕ್ಷಣೆಗಾಗಿ ಹೋರಾಟ ನಡೆಸಿದವರು. ಮ.ರಾಮಮೂರ್ತಿ ಎಂದೇ ಪ್ರಸಿದ್ಧರಾಗಿದ್ದ ಇವರು 1918 ಮಾರ್ಚ್ 11ರಂದು ಜನಿಸಿದರು. ಪತ್ತೆದಾರಿ ಕಾದಂಬರಿ ಪ್ರಕಾರದಲ್ಲಿ ಇವರದು ವಿಶೇಷ ಯಶಸ್ಸು. ತಂದೆ ಮದ್ದೂರು ಸೀತಾರಾಮಶಾಸ್ತ್ರಿ; ವೀರಕೇಸರಿ ಸೀತಾರಾಮಶಾಸ್ತ್ರಿ ಎಂದೇ ಅವರು ಪ್ರಸಿದ್ಧಿ. ಗಾಂಧೀಜಿಯವರೊಂದಿಗೆ ಆಪ್ತ ಸಂಬಂಧ ಇಟ್ಟುಕೊಂಡವರು. ಸ್ವಾತಂತ್ರ್ಯ ಹೋರಾಟಗಾರರು. 'ವೀರಕೇಸರಿ' ಎಂಬ ಪತ್ರಿಕೆ ನಡೆಸುತ್ತಿದ್ದರು.

ರಾಮಮೂರ್ತಿಯವರ ಪ್ರಾಥಮಿಕ ಶಿಕ್ಷಣ ನಂಜನಗೂಡಿನಲ್ಲಿ ನಡೆಯಿತು. ಇವರು ತಂದೆಯಿಂದ ಸಂಸ್ಕೃತ ಕಲಿತರು. ಇವರ ಮೇಲೆ ಪ್ರಭಾವಬೀರಿದ ಗುರುಗಳು ಸುಬ್ರಹ್ಮಣ್ಯ ಅಯ್ಯರ್. ಮುಂದೆ ಇವರ ಶಿಕ್ಷಣ ನಡೆದದ್ದು ಬೆಂಗಳೂರಿನ ಗಾಂಧಿನಗರದಲ್ಲಿದ್ದ ಆರ್ಯ ವಿದ್ಯಾಶಾಲೆಯಲ್ಲಿ. ಇವರ ತಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಜೈಲು ಸೇರಿದಾಗ ರಾಮಮೂರ್ತಿಯವರ ಶಾಲೆಯ ಮುಖ್ಯ ಅಧ್ಯಾಪಕರಾದ ದೇವುಡು ನರಸಿಂಹಶಾಸ್ತ್ರಿಗಳು ಇವರಿಗೆ ಅಶ್ವತ್ಥನಾರಾಯಣ ಅವರಲ್ಲಿ ಆಶ್ರಯ ದೊರಕಿಸಿಕೊಟ್ಟರು. ಅವರಲ್ಲಿದ್ದ ಗ್ರಂಥರಾಶಿ ರಾಮಮೂರ್ತಿಯವರಿಗೆ ಓದುವ ಗೀಳನ್ನು ಹಚ್ಚಿಸಿತು. ಶಾಲೆಯ ಓದಿನ ಬಗ್ಗೆ ಆಸಕ್ತಿ ಕಳೆದು ಹೋಯಿತು.



ದೇವುಡು ನರಸಿಂಹಶಾಸ್ತ್ರಿಯವರನ್ನೆ ಕೇಂದ್ರವಾಗಿರಿಸಿಕೊಂಡು ರಾಮಮೂರ್ತಿ ಮೊತ್ತಮೊದಲು ಬರೆದ ಕಥೆ 'ಗುರುದಕ್ಷಿಣೆ'. ಅದು 'ಮಕ್ಕಳ ಪುಸ್ತಕ'ದಲ್ಲಿ ಪ್ರಕಟವಾಯಿತು. ಇವರ ತಂದೆಯವರ ಸಹಚರರಾದ ಅನೇಕ ಸ್ವಾತಂತ್ರ್ಯ ಯೋಧರ ಪರಿಚಯವಾಯಿತು. ಬಾಲಗಂಗಾಧರ ಟಿಳಕರ ಪ್ರಥಮ ಪುಣ್ಯತಿಥಿಯ ದಿನ, ಈಗ ಕನ್ನಡ ಸಾಹಿತ್ಯ ಪರಿಷತ್ತು ಇರುವ ಸ್ಥಳದ ಗಾಂಧಿಮೈದಾನದಲ್ಲಿ ಸೇರಿದ ಬೃಹತ್ ಸಭೆಯಲ್ಲಿ ರಾಮಮೂರ್ತಿ ಮೊದಲ ಭಾಷಣ ಮಾಡಿದರು. ಇವರ ವಾಗ್ವೈಖರಿಯನ್ನು ಕೊಂಡಾಡಿದ ಕರ್ಲಮಂಗಲಂ ಶ್ರೀಕಂಠಯ್ಯನವರು ಲಕ್ಷ್ಮೀಶ, ಕುಮಾರವ್ಯಾಸ, ಬಸವಣ್ಣ, ಅಕ್ಕಮಹಾದೇವಿ, ಪುರಂದರದಾಸ ಮುಂತಾದವರ ಸಾಹಿತ್ಯವನ್ನು ಓದಲು ಪ್ರೋತ್ಸಾಹಿಸಿದರು. ತಂದೆಯವರು ನಡೆಸುತ್ತಿದ್ದ 'ವೀರಕೇಸರಿ' ಪತ್ರಿಕೆಗಾಗಿ ಇಂಗ್ಲಿಷ್ ಸುದ್ದಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಕೊಡಲು ನಾರಾಯಣಸ್ವಾಮಿ ಅಯ್ಯರ್‌ರಲ್ಲಿ ಇವರು ಇಂಗ್ಲಿಷ್ ಅಧ್ಯಯನ ಮಾಡಿದರು. ಕೆಲವು ದಿನ ಇವರು ಬಾಂಬೆ ಶೋ ಎಂಬ ಮನರಂಜನ ಕಾರ್ಯಕ್ರಮ ನಡೆಸಿ ತಂದೆಯವರ ವಿರೋಧಕ್ಕೆ ಒಳಗಾದರು. 1942 ರಲ್ಲಿ ನಂಜನಗೂಡಿನ ಕಮಲಮ್ಮ ಅವರೊಂದಿಗೆ ಇವರ ವಿವಾಹವಾಯಿತು. ಆ ವೇಳೆಗೆ 'ವೀರಕೇಸರಿ' ಪತ್ರಿಕೆ ನಿಂತುಹೋಯಿತು. ಇವರು ವಿನೋದವಾಣಿ, ಕಥಾವಾಣಿ, ವಿನೋದಿನಿ ಮುಂತಾದ ಪತ್ರಿಕೆಗಳನ್ನು ನಡೆಸಿದರು. ಆದರೆ ಯಾವುದೂ ಸಫಲವಾಗಲಿಲ್ಲ. ಲೈಂಗಿಕ ವಿಜ್ಞಾನದ ಪತ್ರಿಕೆಯ ಅಗತ್ಯವನ್ನರಿತು ಕಾಮಕಲಾ ಎಂಬ ಪತ್ರಿಕೆ ಆರಂಭಿಸಿದರು. ಸಂಪ್ರದಾಯವಾದಿಗಳು ಅಶ್ಲೀಲ ಪತ್ರಿಕೆ ಎಂದು ಇವರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದರು. ಇದು ಅಶ್ಲೀಲ ಪತ್ರಿಕೆಯಲ್ಲ ಲೈಂಗಿಕ ವಿಜ್ಞಾನ ಎಂದು ಇವರು ವಾದಿಸಿ ಗೆದ್ದರು. ಮುಂದೆ ಅಶ್ಲೀಲ ಪತ್ರಿಕೆಗಳ ಹಾವಳಿ ಹೆಚ್ಚಾದುದರಿಂದ ತತ್ತ್ವನಿಷ್ಠರಾದ ರಾಮಮೂರ್ತಿ ತಮ್ಮ ಪತ್ರಿಕೆಯನ್ನು ನಿಲ್ಲಿಸಿದರು.

ಶೆರ್ಲಾಕ್ ಹೋಮ್ಸ್, ಅಗಾಥಾ ಕ್ರಿಸ್ಟಿ, ಎಡ್ಗರ್ ಅಲೆನ್ ಪೊ, ಗಾರ್ಡನರ್ ಮೊದಲಾದ ಲೇಖಕರ ಕೃತಿಗಳಿಂದ ಪ್ರಭಾವಿತರಾಗಿ ಇವರು ಕನ್ನಡಿಗರಲ್ಲಿ ವಾಚನಾಭಿರುಚಿ ಬೆಳೆಸಲು 1950 ರಿಂದ 1960ರವರೆಗೆ ಅನೇಕ ಪತ್ತೆದಾರಿ ಕಾದಂಬರಿಗಳನ್ನು ಬರೆದರು. ಕಾಲುವೆ ಮನೆ, ಯಾರವನು, ವಿಷಕನ್ಯೆ, ಅಮೃತಮಯಿ, ರಾಜರಹಸ್ಯ, ಮರೆಯಾಗಿದ್ದ ವಜ್ರಗಳು, ಏಕಾಕಿನಿ, ಎರಡು ಚೂರಿಗಳು, ಸಾಗರಿ, ಕಡೆಯಮಾತು, ಬೆರಳಿಲ್ಲದ ಕೈ, ವೈಯಾಳಿಕಾವಲ್, ಒಡೆದ ಬಳೆ, ಆ ಸುಂದರಿಯರು, ವಿಚಿತ್ರವಾದ ಭಾವಚಿತ್ರ, ಕೈಕೊಟ್ಟ ಪ್ರೇಮಪತ್ರ, ಅಪರಾಧಿಯ ಆತ್ಮಕಥೆ, ಅವನ ಪ್ರೇಯಸಿ, ಅದೃಷ್ಟದ ಮಚ್ಚೆ, ಜಾರುವ ಸೆರಗು, ಜುಲೇಖಾ, ಮತ್ತೆ ಜುಲೇಖಾ, ರಜಾಕಾರ ಗುಪ್ತಚಾರ, ಇಬ್ಬರು ರಾಣಿಯರು, ರಾಜದಂಡ ಮೊದಲಾದ 150ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಪತ್ತೆದಾರಿ ರಾಮಮೂರ್ತಿ ಎಂದೇ ಹೆಸರಾದರು. ಮೊದಮೊದಲು ಇವರು ಇಂಗ್ಲಿಷ್ ಕಾದಂಬರಿಗಳನ್ನು ರೂಪಾಂತರಿಸಿದರೂ ಮುಂದೆ ಸ್ವತಂತ್ರ ಐತಿಹಾಸಿಕ, ಸಾಮಾಜಿಕ ಪತ್ತೆದಾರಿ ಕಾದಂಬರಿಗಳನ್ನು ಬರೆದರು. ಇವರು 9 ಆಣೆಗೆ 125 ಪುಟದ ಒಂದು ಪುಸ್ತಕ ಕೊಟ್ಟು ಕನ್ನಡಿಗರಲ್ಲಿ ಓದುವ ಅಭಿರುಚಿ ಬೆಳೆಸಿದರು. ಇವರು ಮೊದಲು ಬರೆದ ಪತ್ತೆದಾರಿ ಕಥೆ 'ನಾರಾಯಣರಾಯನ ಭೂತ'. ರಜಾಕಾರರ ನಾಯಕ ಕಾಸೀಂ ರಜ್ವಿಯ ಸುತ್ತ ಹೆಣೆದ ಕಾದಂಬರಿ. 'ರಜಾಕಾರ ಗುಪ್ತಚಾರ'. ಇದು ಕನ್ನಡದ ಪ್ರಥಮ ಗೂಢಚರ್ಯೆಯ ಕಾದಂಬರಿ. ರಾಜದಂಡ, ವಿಪ್ಲವ, ಇಬ್ಬರು ರಾಣಿಯರು, ಇತರರಿಗೆ ಸೀಮೆ ಮೊದಲಾದವು ಇವರ ಐತಿಹಾಸಿಕ ಕಾದಂಬರಿಗಳು. ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೇರಿದ್ದು ವಿಪ್ಲವ. ಚಿತ್ರಶಾಕುಂತಲಾ ಎಂಬುದು ಇವರು ಭಾಮಿನಿ ಷಟ್ಪದಿಯಲ್ಲಿ ಬರೆದ ಕಾವ್ಯ.

ಬೆಂಗಳೂರಿನಲ್ಲಿ ತಮಿಳು, ಮಲೆಯಾಳಂ, ತೆಲುಗು ಭಾಷೆಯ ಜನ ಹೆಚ್ಚಾಗಿದ್ದು, ಕನ್ನಡಿಗರನ್ನು ಕೇಳುವವರೇ ಇಲ್ಲವಾಗುತ್ತಿರುವುದನ್ನು ಗಮನಿಸಿದ ರಾಮಮೂರ್ತಿ ಕನ್ನಡ ಯುವಜನ ಸಭಾ ಎಂಬ ಸಂಘ ಆರಂಭಿಸಿ, 1962ರಲ್ಲಿ ಬೆಂಗಳೂರಿನಲ್ಲಿ ಅದರ ಅಧಿವೇಶನ ನಡೆಸಿ, ಕನ್ನಡಕ್ಕೆ ಪ್ರಾಶಸ್ತ್ಯ ನೀಡಬೇಕೆಂದು ನಿರ್ಣಯ ಮಾಡಿಸಿದರು. ಇದರಲ್ಲಿ ರಾಮಮೂರ್ತಿಯವರದೇ ಮುಖ್ಯಪಾತ್ರ. ಆ ಸಂಸ್ಥೆಯ ಆಶ್ರಯದಲ್ಲಿ 'ಕನ್ನಡ ಯುವಜನ' ಪತ್ರಿಕೆಯನ್ನು ಆರಂಭಿಸಿ ಸಂಪಾದಕರಾಗಿ ದುಡಿದರು.

ಕನ್ನಡ ಉಳಿಸಿ ಬೆಳೆಯಿಸುವ ಕಾರ್ಯದಲ್ಲಿ ಇವರು ಅನಕೃ ಅವರೊಂದಿಗೆ ಸೇರಿ ಹಲವಾರು ಸಂಘಸಂಸ್ಥೆಗಳನ್ನು ಸ್ಥಾಪಿಸಿದರು. ಇವೆಲ್ಲ ಶಿಖರಪ್ರಾಯ ಸಂಸ್ಥೆಯಾಗಿ ಕರ್ನಾಟಕ ಸಂಯುಕ್ತ ರಂಗ ಆರಂಭವಾಯಿತು. ಅ.ನ. ಕೃಷ್ಣರಾಯರು ಅದರ ಅಧ್ಯಕ್ಷರು, ರಾಮಮೂರ್ತಿ ಪ್ರಧಾನ ಕಾರ್ಯದರ್ಶಿ. ಬೆಂಗಳೂರು ಬಡಾವಣೆಗಳಲ್ಲಿ ಭಾಷಣ, ಪ್ರತಿಭಟನೆ, ಸಭೆ ಸಮಾರಂಭಗಳಲ್ಲಿ ಇವರಿಬ್ಬರೂ ತೊಡಗಿದರು. 1963ರಲ್ಲಿ ರಾಮಮೂರ್ತಿ ಮೊತ್ತಮೊದಲ ಕನ್ನಡ ರಾಜ್ಯೋತ್ಸವವನ್ನು ಸಂಘಟಿಸಿ ಯಶಸ್ವಿಯಾದರು. ಇದರಿಂದ ಕರ್ನಾಟಕದಲ್ಲಿ ಕನ್ನಡಿಗರ ಸ್ವಾಭಿಮಾನ ಜಾಗೃತವಾಯಿತು. ಈ ಬಗೆಯ ಅನೇಕ ಸಂಘಸಂಸ್ಥೆಗಳು ಹುಟ್ಟಿಕೊಂಡವು. ಕನ್ನಡಿಗರಿಗೆ ಸಮುಚ್ಚಯಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಸಿಗುವಂತಾಯಿತು. ಕನ್ನಡ ಕಲೆ, ಚಲನಚಿತ್ರಗಳಿಗೆ ಪ್ರೋತ್ಸಾಹ ದೊರೆಯಿತು. ಇಂದು ಕನ್ನಡಿಗರ, ಕನ್ನಡತನದ ಕುರುಹಾಗಿ

ಉಪಯೋಗಿಸುವ ಹಳದಿ ಕೆಂಪು ಬಣ್ಣದ ಬಾವುಟವನ್ನು ಪರಿಚಯಿಸಿದವರು ರಾಮಮೂರ್ತಿ ಮತ್ತು ಅನಕೃ.

1956ರಲ್ಲಿ ಕರ್ನಾಟಕ ಏಕೀಕರಣವಾದರೂ ಕನ್ನಡ ಪ್ರದೇಶಗಳಾದ ಕಾಸರಗೋಡು, ಹೊಸೂರು, ತಾಳವಾಡಿ, ಆಲೂರು, ಆದವಾನಿ, ರಾಯದುರ್ಗ, ಸೊಲ್ಲಾಪುರ, ಅಕ್ಕಲಕೋಟೆ, ಜತ್ತ ಇವು ಕರ್ನಾಟಕವನ್ನು ಬಿಟ್ಟುಹೋದವು ಎಂದು ಇವರಿಗೆ ಖೇದವಾಗಿತ್ತು. ಗೋವ ಮಹಾರಾಷ್ಟ್ರಕ್ಕೆ ಹೋಗಬಾರದು ಕರ್ನಾಟಕಕ್ಕೆ ಬರಬೇಕು ಎಂಬ ಆಶೆಯೂ ಇವರದಾಗಿತ್ತು.

ಕನ್ನಡ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ನಮ್ಮ ಪ್ರತಿನಿಧಿಗಳು ಪಂಚಾಯತಿಯಿಂದ ಹಿಡಿದು ಶಾಸನಸಭೆಯವರೆಗೂ ಇರಬೇಕು, ಅದಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಒಂದು ಪಕ್ಷವನ್ನು ಕಟ್ಟಬೇಕು ಎಂದು 1966ರಲ್ಲಿ 'ಕನ್ನಡ ಪಕ್ಷ' ಕಟ್ಟಿದರು. 1966–67ರ ಚುನಾವಣೆಯಲ್ಲಿ ಕನ್ನಡ ಪಕ್ಷದ ಪ್ರತಿನಿಧಿಗಳು ಸ್ಪರ್ಧಿಸಿದರು. ಆದರೆ ಜಯ ಗಳಿಸಲಿಲ್ಲ. ಕನ್ನಡದ ಹೋರಾಟದಲ್ಲಿ ಜೈಲಿಗೆ ಹೋದ ಕಾರ್ಯಕರ್ತರಿಗೆ ಜಾಮೀನು ನೀಡುವುದರಿಂದ ಹಿಡಿದು ಕನ್ನಡಿಗರ ಸಮಸ್ಯೆಗಳನ್ನು ಬಗೆಹರಿಸುವವರೆಗೂ ಹಲವಾರು ಕಲಾಪಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ರಾಮಮೂರ್ತಿಯವರು ದಿನದಿನವೂ ನ್ಯಾಯಾಲಯಗಳಿಗೆ ಅಲೆಯಬೇಕಾಯಿತು. ಇವರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು. 1967ರಲ್ಲಿ ಇವರು ಕನ್ನಡ ಚಳವಳಿಯಿಂದ ದೂರ ಸರಿದರು.

ಮುಂದೆ ಇವರು ಮನೆಯ ಜವಾಬ್ದಾರಿ ಹೊತ್ತು, ಕುಟುಂಬದ ಜಮೀನಿನಲ್ಲಿ (ಕಗ್ಗಲಿಪುರದ ಬಳಿ ತಲಘಟ್ಟಪುರ) ವ್ಯವಸಾಯ ಆರಂಭಿಸಿದರು. ಅಲ್ಲಿ ನೀರಿನ ಸೌಕರ್ಯವಿರಲಿಲ್ಲವಾದ್ದರಿಂದ ಬಾವಿ ತೊಡಿಸತೊಡಗಿದರು. 1967 ಡಿಸೆಂಬರ್ 25ರಂದು ತಮ್ಮ ಮಕ್ಕಳಾದ ದಿನಕರ ಮತ್ತು ಮಂಜು–ಇವರನ್ನು ಕರೆದುಕೊಂಡು ಬಾವಿಯಲ್ಲಿ ನೀರು ಬಂದುದನ್ನು ನೋಡಲು ಇಳಿದರು. ಕೂಲಿಯಾಳುಗಳು ಮಣ್ಣನ್ನು ಮೇಲೆತ್ತಿ ಹಾಕುತ್ತಿದ್ದಾಗ ಆಕಸ್ಮಿಕವಾಗಿ ದಡ ಕುಸಿದು ಮಣ್ಣಿನ ರಾಶಿಯ ಅಡಿಯಲ್ಲಿ ರಾಮಮೂರ್ತಿ ತಮ್ಮ ಇಬ್ಬರು ಮಕ್ಕಳೊಂದಿಗೆ ಸಿಲುಕಿ ಅಸುನೀಗಿದರು. **(ಎಸ್.ಎಂ.ಕೆ.)**

**ರಾಮಯ್ಯ, ಎಂ.ಎಸ್.:** 1922– . ಪ್ರಸಿದ್ಧ ಮೃದಂಗ ವಿದ್ವಾಂಸರು. 1922 ಮೇ 7ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಸುಬ್ಬಣ್ಣ, ತಾಯಿ ಮದ್ದೂರಮ್ಮ. ರಾಮಯ್ಯನವರಿಗೆ ಚಿಕ್ಕಂದಿನಿಂದಲೂ ಉತ್ತಮ ಸಂಗೀತ ಪರಿಸರ ಒದಗಿತ್ತು. ಇವರ ತಾತ ಅನಂತಪ್ಪ ಹಾಗೂ ತಂದೆ ಸುಬ್ಬಣ್ಣ ಇಬ್ಬರೂ ಪ್ರಸಿದ್ಧ ತಬಲಾ ವಾದಕರಾಗಿದ್ದರು. ಇವರು ತಮ್ಮ ಸಂಗೀತ ವಿದ್ಯಾಭ್ಯಾಸವನ್ನು ತಬಲಾ ಕಲಿಕೆಯಿಂದ ಆರಂಭಿಸಿದರು. ಇವರಿಗೆ ತಂದೆಯೇ ಮೊದಲ ಗುರು. ಇವರ ಸಹೋದರರಾದ ಎಂ.ಎಂ. ಸುಬ್ರಹ್ಮಣ್ಯ ಹಾಗೂ ಎಂ.ಎಸ್. ಶೇಷಪ್ಪ ಇವರುಗಳು ಪಿಟೀಲುವಾದನದಲ್ಲಿ ಹಾಗೂ ಮೃದಂಗ ವಾದನದಲ್ಲಿ ಪರಿಣತರಾಗಿದ್ದು ಪ್ರಸಿದ್ಧರಾಗಿದ್ದರು.

ರಾಮಯ್ಯನವರು ಮೃದಂಗಾಭ್ಯಾಸವನ್ನು ಮೈಸೂರು ಅರಮನೆಯ ವಿದ್ವಾಂಸರಾಗಿದ್ದ ಮುತ್ತುಸ್ವಾಮಿದೇವರು ಮತ್ತು ಅವರ ಮಗ ವೆಂಕಟೇಶದೇವರ ಬಳಿ ಮಾಡಿದರು. ಹೆಚ್ಚಿನ ಶಿಕ್ಷಣವನ್ನು ಎ.ಟಿ. ಪುಟ್ಟಾಚಾರ್ ಹಾಗೂ ಶ್ರೀನಿವಾಸುಲು ನಾಯ್ಡು ಎಂಬುವರ ಬಳಿ ಪಡೆದರು. ಇವರಿಗೆ ಕರ್ನಾಟಕ ಸಂಗೀತ ಹಾಗೂ ಹಿಂದುಸ್ತಾನಿ–ಈ ಎರಡು ಸಂಗೀತ ಪದ್ಧತಿಗಳಲ್ಲಿಯೂ ಅತೀವ ಆಸಕ್ತಿಯಿತ್ತು. ಈ ಕಾರಣದಿಂದ ಇವರು ಅಲಿಜಾನ್ ಸಾಹೇಬರಿಂದ ತಬಲಾ ವಾದನದ ಶಿಕ್ಷಣವನ್ನೂ ಪಡೆದು ಎರಡು ಸಂಗೀತ ಕ್ಷೇತ್ರಗಳಲ್ಲಿಯೂ ಹಿರಿಯ ಸಾಧಕರಾದರು.

ಹಿಂದುಸ್ತಾನಿ ಸಂಗೀತದಲ್ಲಿ ಹೆಸರಾಂತ ಗಾಯಕರಾದ ಭೀಮಸೇನ ಜೋಶಿ ಹಾಗೂ ಮಲ್ಲಿಕಾರ್ಜುನ ಮನ್ಸೂರರಂತಹ ಅನೇಕ ಘನ ವಿದ್ವಾಂಸರುಗಳಿಗೆ ಹಾಗೂ ಕರ್ನಾಟಕ ಸಂಗೀತದಲ್ಲಿ ಮೈಸೂರು ವಾಸುದೇವಾಚಾರ್ಯರು, ಅರಿಯಾಕುಡಿ ರಾಮಾನುಜೈಯ್ಯಂಗಾರ್, ಮುತ್ತಯ್ಯ ಭಾಗವತರು, ಮಹಾರಾಜಪುರಂ ವಿಶ್ವನಾಥ ಅಯ್ಯರ್, ಜಿ.ಎನ್. ಬಾಲಸುಬ್ರಹ್ಮಣ್ಯ, ಚಿತ್ತೂರು ಸುಬ್ರಹ್ಮಣ್ಯಪಿಳ್ಳೆ, ದ್ವಾರಂ ವೆಂಕಟಸ್ವಾಮಿನಾಯ್ಡು, ಪಿಟೀಲು



ಚೌಡಯ್ಯ, ಮಹಾಲಿಂಗಂ, ಎಂ.ಎಲ್. ವಸಂತಕುಮಾರಿ, ಡಿ.ಕೆ. ಪಟ್ಟಮ್ಮಾಳ್, ಬಾಲಮುರಳೀಕೃಷ್ಣ–ಹೀಗೆ ಹಲವಾರು ಪ್ರಸಿದ್ಧ ಗಾಯಕರು, ಪಿಟೀಲು ಹಾಗೂ ಕೊಳಲು ವಿದ್ವಾಂಸರುಗಳಿಗೆ ಪಕ್ಕವಾದ್ಯ ಸಹಕಾರ ನೀಡಿರುವ ಹೆಮ್ಮೆ ಇವರದು. ಇವರು ಆಕಾಶವಾಣಿಯ ನಿಲಯ ಕಲಾವಿದರಾಗಿಯೂ ಸು.45 ವರ್ಷ ಸೇವೆ ಸಲ್ಲಿಸಿದ್ದರು.

ಇವರ ಸಂಗೀತ ಕಲಾಸೇವೆಗಾಗಿ ಹಲವಾರು ಬಿರುದು, ಸನ್ಮಾನ, ಪ್ರಶಸ್ತಿಗಳು ಇವರಿಗೆ ಲಭಿಸಿವೆ. ನಾದಚಿಂತಾಮಣಿ, ತಾಳವಾದ್ಯಪ್ರವೀಣ, ಲಯವಾದ್ಯಶಿರೋಮಣಿ, ಲಯಭೂಷಣ, ಗಾನಕಲಾ ಭೂಷಣ, ಮೃದಂಗ ಕಲಾ ಶಿರೋಮಣಿ, ಮೃದಂಗವಾದನ ಕೇಸರಿ ಮೊದಲಾದವು ಇವರಿಗೆ ಸಂದ ಬಿರುದುಗಳು. ಇವರು 1991ರಲ್ಲಿ ಬೆಂಗಳೂರು ಗಾಯನ ಸಮಾಜ ನಡೆಸಿದ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕನಕ–ಪುರಂದರ ಪ್ರಶಸ್ತಿ (1998) ಮೊದಲಾದವು ಇವರಿಗೆ ಸಂದ ಮುಖ್ಯ ಪ್ರಶಸ್ತಿಗಳು. ನಾಡಿನಾದ್ಯಂತ ಹಲವಾರು ವಿದ್ಯಾರ್ಥಿಗಳು ಇವರಿಂದ ಮೃದಂಗ ಶಿಕ್ಷಣ ಪಡೆದಿದ್ದಾರೆ. **(ಎಚ್.ಆರ್.ಎಲ್.)**

**ರಾಮಯ್ಯ,ಕೆ.ಎಚ್.:** 1870–1933. ಹೆಸರಾಂತ ಸಮಾಜ ಸುಧಾರಕರು. ಆಗಿನ ಮೈಸೂರು ಸಂಸ್ಥಾನದ ಸಹಕಾರ ಇಲಾಖೆಯಲ್ಲಿ ರಿಜಿಸ್ಟ್ರಾರ್ ಆಗಿದ್ದರು. ಇವರ ಹಿರಿಯರು ದೊಡ್ಡಬಳ್ಳಾಪುರ ತಾಲ್ಲೂಕಿನ ಕಲ್ಲುದೇವರಹಳ್ಳಿಯವರು. ಇವರ ಅಜ್ಜ ಚಿಕ್ಕಣ್ಣಗೌಡರು ಒಕ್ಕಲು ಕಸಬನ್ನು ತೊರೆದು ಬೆಂಗಳೂರಿಗೆ ಬಂದು ನೆಲಸಿದರು. ಅವರು ಕಂಟ್ರಾಕ್ಟ್ ಕೆಲಸವನ್ನು ಮಾಡಿಸುತ್ತ ಚಿಕ್ಕಣ್ಣ ಮೇಸ್ತ್ರಿ ಎಂದೇ ಹೆಸರಾಗಿದ್ದರು. ಚಿಕ್ಕಣ್ಣ ಮೇಸ್ತ್ರಿಯವರ ಮಗ ಹನುಮಾ ಮೇಸ್ತ್ರಿ. ಇವರೇ ರಾಮಯ್ಯನವರ ತಂದೆ, ತಾಯಿ ನಂಜಮ್ಮನವರು. ರಾಮಯ್ಯನವರು 1879 ಜುಲೈ 12ರಂದು ಜನಿಸಿದರು. ಬಾಲ್ಯದಲ್ಲಿ ಇವರ ಮೇಲೆ ಇವರ ತಾಯಿಯ ವಿಶೇಷ ಪ್ರಭಾವ ಗಾಢವಾಗಿತ್ತು. ಇವರ ತಾಯಿ ಆಗ ಅಸ್ಪೃಶ್ಯರೆಂದು ಕರೆಯುತ್ತಿದ್ದವರನ್ನು ಮನೆ ಒಳಗೆ ಕರೆದುಕೊಳ್ಳುವಷ್ಟು ವಿಶಾಲ ಹೃದಯದವರಾಗಿದ್ದರು. ರಾಮಯ್ಯನವರ ಬಾಲ್ಯದ ವಿದ್ಯಾಭ್ಯಾಸ ಬೆಂಗಳೂರಿನಲ್ಲಿ ನಡೆಯಿತು. ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡಿ ಮದರಾಸಿನಲ್ಲಿ ಪದವಿಶಿಕ್ಷಣ ಮುಂದುವರಿಸಿದರು. ಈ ಮಧ್ಯೆ ತಂದೆ ತೀರಿಹೋದರೂ ಬಡತನದಲ್ಲಿಯೇ ಓದಿ 1903ರಲ್ಲಿ ಬಿ.ಎ. ಪದವಿ ಗಳಿಸಿದರು. ಮಾರನೆಯ ವರ್ಷ ನ್ಯಾಯಶಾಸ್ತ್ರದಲ್ಲಿ ಬಿ.ಎಲ್. ಪದವಿ ಗಳಿಸಿಕೊಂಡರು.

ಇವರು ವಿದ್ಯಾರ್ಥಿದೆಸೆಯಲ್ಲಿದ್ದಾಗಲೆ ಪ್ರತಿಭಾವಂತರೆಂದೂ ಒಳ್ಳೆಯ ವಾಗ್ಮಿ ಎಂದೂ ಹೆಸರಾಗಿದ್ದರು. ಮದರಾಸಿನಲ್ಲಿ ವಿವೇಕಾನಂದರನ್ನು

ಸಂದರ್ಶಿಸುವ ಮತ್ತು ಅವರೊಂದಿಗೆ ಸಂಭಾಷಿಸುವ ಸುಯೋಗ ಇವರಿಗೆ ಲಭಿಸಿತ್ತು. ಉನ್ನತ ಶಿಕ್ಷಣ, ಲೋಕಜ್ಞಾನ ಮತ್ತು ಮಹಾಪುರುಷರ ಸಂಸರ್ಗದಿಂದ ಇವರ ವ್ಯಕ್ತಿತ್ವ ಪುಷ್ಟಿಗೊಂಡಿತ್ತು. ಇವರು ವ್ಯಾಸಂಗ ಮುಗಿಸಿ ಮೈಸೂರು ಸಂಸ್ಥಾನದ ಸೇವೆಗೆ ಸೇರಿ ಸಹಕಾರ ಇಲಾಖೆಯ ರಿಜಿಸ್ಟ್ರಾರ್, ರೈತರ ಸಂಯೋಜನಾಧಿಕಾರಿ, ಹಿಂದುಳಿದ ವರ್ಗಗಳ ಮೇಲ್ವಿಚಾರಕ ಈ ಮುಂತಾದ ಉನ್ನತ ಅಧಿಕಾರಗಳನ್ನು ನಿರ್ವಹಿಸಿದರು. ಇವರು ಕೆಲವು ವರ್ಷಗಳ ಕಾಲ ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದರು.

ಇವರು 1913ರಲ್ಲಿ ಇಂಗ್ಲೆಂಡಿಗೆ ಹೋಗಿ ಬಾರ್-ಅಟ್-ಲಾ ಪದವಿ ಪಡೆದು 1917ರಲ್ಲಿ ಭಾರತಕ್ಕೆ ಹಿಂದಿರುಗಿದರು. ಪುನಃ 1933ರಲ್ಲಿ ಇವರು ಆಗಿನ ಮೈಸೂರು ಯುವರಾಜರೊಂದಿಗೆ ಇಂಗ್ಲೆಂಡ್ ಪ್ರವಾಸ ಮಾಡಿಬಂದರು.

ಇವರು ಆಡಳಿತದಲ್ಲಿ ದಕ್ಷತೆಗೆ ಹೆಸರಾಗಿದ್ದಂತೆ ಸಮಾಜ ಸೇವೆಯಲ್ಲಿ ಹಿಂದುಳಿದ ವರ್ಗಗಳ ನೇತಾರರೂ ಆಗಿದ್ದರು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘವನ್ನು ಸ್ಥಾಪಿಸಿದರು. ಚನ್ನಪಟ್ಟಣ, ಚುಂಚನಕಟ್ಟೆ ಮತ್ತು ಮೇಲುಕೋಟೆಯಲ್ಲಿ ಬಡವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳು, ಶಾಲೆಗಳು ಸ್ಥಾಪಿತವಾಗಲು ಅಪಾರವಾಗಿ ಶ್ರಮಿಸಿದರು. ಆದಿಚುಂಚನಗಿರಿ ಮಠದ ಅಭಿವೃದ್ಧಿ ಕಾರ್ಯದಲ್ಲೂ ಇವರು ನೆರವಾಗಿದ್ದರು. 1928ರ ಫೆಬ್ರವರಿ ತಿಂಗಳಿನಲ್ಲಿ ಇವರ ಅಧ್ಯಕ್ಷತೆ ಯಲ್ಲಿ ಶ್ರೀಮಠದ ಶಿಷ್ಯರ ಮಹಾಸಭೆ ಮೊದಲಬಾರಿಗೆ ಜರುಗಿತು. ಇವರು ಒಕ್ಕಲಿಗರ ಸಮಾಜದ ಏಳಿಗೆಗೆ ಮಾತ್ರವಲ್ಲದೆ ಪರಿಶಿಷ್ಟವರ್ಗದ ಕಲ್ಯಾಣಕ್ಕಾಗಿಯೂ ಬಹುವಾಗಿ ಶ್ರಮಿಸಿದರು.

ಇವರ ನೆನಪಿಗಾಗಿ ಮೈಸೂರಿನ ಒಂಟಿಕೊಪ್ಪಲಿನಲ್ಲಿ ಕೆ.ಎಚ್. ರಾಮಯ್ಯ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಾಗಿದೆ (1937). ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರಾಗಿದ್ದ ಯಶೋಧರಾ ದಾಸಪ್ಪ **(ನೋಡಿ)** ಮತ್ತು ಮೈಸೂರು ಅರಮನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಕ್ಯಾಪ್ಟನ್ ಕೃಷ್ಣ ಇವರ ಮಕ್ಕಳು. **(ಡಿ.ಎಸ್.ಜೆ.)**

**ರಾಮಯ್ಯ, ಪಿ.ಆರ್.:** 1894–1970. ಪ್ರಸಿದ್ಧ ಪತ್ರಿಕೋದ್ಯಮಿ. ತಾಯಿನಾಡು ಪತ್ರಿಕೆಯ ಸ್ಥಾಪಕ ಸಂಪಾದಕ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ 1894 ಸೆಪ್ಟೆಂಬರ್ 10ರಂದು ಜನಿಸಿದರು. ಮೈಸೂರು ಮರಿಮಲ್ಲಪ್ಪನವರ ಶಾಲೆಯಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದ ಇವರು ಕಾಶಿವಿಶ್ವವಿದ್ಯಾಲಯದಲ್ಲಿ ವ್ಯಾಸಂಗಮಾಡಿ ಪ್ರಥಮ ದರ್ಜೆಯಲ್ಲಿ ಬಿ.ಎಸ್‌ಸಿ ಪದವಿ ಪಡೆದರು. ಮುಂದೆ ಎಂ.ಎಸ್‌ಸಿ ತರಗತಿಗೆ ಸೇರಿದರಾದರೂ ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ವ್ಯಾಸಂಗ ಮುಂದುವರಿಸದೆ ಪತ್ರಿಕೋದ್ಯಮದಲ್ಲಿ ಆಸಕ್ತಿ ವಹಿಸಿ, ಮದರಾಸಿನಿಂದ ಪ್ರಕಟವಾಗುತ್ತಿದ್ದ ಸ್ವರಾಜ್ಯ ಪತ್ರಿಕೆಗೆ ಉಪಸಂಪಾದಕರಾಗಿ ಸ್ವಲ್ಪಕಾಲ ದುಡಿದರು. ಅನಂತರ ಬೆಂಗಳೂರಿಗೆ ಹಿಂತಿರುಗಿ ಸ್ವರಾಜ್ಯ ಪತ್ರಿಕೆಯ ವರದಿಗಾರ ಹಾಗೂ ಪ್ರತಿನಿಧಿ ಆಗಿ ಸ್ವಲ್ಪ ಕಾಲ ಕೆಲಸಮಾಡಿ ಮೈಸೂರಿಗೆ ಹೋದರು (1925). ಅಲ್ಲಿ ಎಂ. ವೆಂಕಟಕೃಷ್ಣಯ್ಯನವರ ಶಿಷ್ಯರಾಗಿ ಸಾಧ್ವಿ ಸಂಪದಭ್ಯುದಯ, ವೆಲ್ತ್ ಆಫ್ ಮೈಸೂರ್ ಮುಂತಾದ ಪತ್ರಿಕೆಗಳ ಉಪಸಂಪಾದಕರಾಗಿ ಕೆಲಸ ಮಾಡಿದರು. 1927ರಲ್ಲಿ ಸ್ವತಂತ್ರವಾಗಿ ತಾಯಿನಾಡು ಪತ್ರಿಕೆಯನ್ನು ಬೆಳೆಸಿ ಮೈಸೂರಿನಿಂದ ಸ್ವಲ್ಪಕಾಲ ಪ್ರಕಟಿಸಿ, ಅನಂತರ ಪತ್ರಿಕೆಯನ್ನು ಬೆಂಗಳೂರಿಗೆ ವರ್ಗಾಯಿಸಿದರು (1929). 1932ರಲ್ಲಿ ತಾಯಿನಾಡು ಮುದ್ರಣಾಲಯವನ್ನು ಆರಂಭಿಸಿ, ಪತ್ರಿಕೆಯ ದರ್ಜೆಯನ್ನು ಉತ್ತಮಪಡಿಸಿ, ಅದನ್ನು ಒಂದು ಆದರ್ಶ ದಿನಪತ್ರಿಕೆಯನ್ನಾಗಿ ಮಾಡಿದರು. ತಾಯಿನಾಡು ಪತ್ರಿಕೆಯ ಜತೆಗೆ ಡೈಲಿ ನ್ಯೂಸ್ ಎಂಬ ಇಂಗ್ಲಿಷ್ ದಿನಪತ್ರಿಕೆಯನ್ನೂ ಸ್ವಲ್ಪಕಾಲ ನಡೆಸಿದರು.

ರಾಮಯ್ಯನವರು ಸಲ್ಲಿಸಿದ ಸಮಾಜಸೇವೆ ಗಣ್ಯವಾದುದು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಇವರು 1942ರ ಕ್ವಿಟ್ ಇಂಡಿಯ ಚಳವಳಿಯ ಸಂದರ್ಭದಲ್ಲಿ ದಸ್ತಗಿರಿಯಾಗಿ ತುರಂಗವಾಸ ಅನುಭವಿಸಿದರು. ಬೆಂಗಳೂರು ಪುರಸಭೆಯ ಸದಸ್ಯರಾಗಿಯೂ (1947) ಮೈಸೂರು ವಿಧಾನಸಭಾ ಸದಸ್ಯರಾಗಿಯೂ (1952) ಇವರು ಸೇವೆ ಸಲ್ಲಿಸಿದ್ದರು. ಮೈಸೂರು ಸಂಸ್ಥಾನದ ಪತ್ರಿಕೋದ್ಯಮಿಗಳ ಸಂಘ, ಹಿಂದೀ ಪ್ರಚಾರ ಪರಿಷತ್ತು, ಮೈಸೂರು ಸ್ವಾತಂತ್ರ್ಯ ಹೋರಾಟ ಸಮಿತಿ ಮುಂತಾದ ಹಲವು ಸಂಘಸಂಸ್ಥೆಗಳಿಗೂ ಇವರ ಸೇವೆ ಸಂದಿದೆ.

ಇವರು ಅನೇಕ ಲೇಖನಗಳನ್ನೂ ಫ್ರಾನ್ಸಿನ ಮಹಾಕ್ರಾಂತಿ (1933), ಆಧುನಿಕ ರಷ್ಯಾ (1943), ಪೊಲಿಟಿಕಲ್ ಎವಲ್ಯೂಷನ್ ಆಫ್ ಮೈಸೂರ್ (1962), ದಯಾಸಾಗರ ಎಂ. ವೆಂಕಟಕೃಷ್ಣಯ್ಯನವರ ಜೀವನ ಚರಿತ್ರೆ (1969) ಎಂಬ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಇವರು ಬರೆದ ಗಾಂಧೀಜಿ ಎಂಬ ಪುಸ್ತಕ ಇವರ ನಿಧನಾನಂತರ ಪ್ರಕಟವಾಯಿತು. ಆಗಿನ ಮೈಸೂರು ರಾಜ್ಯ ಸರ್ಕಾರ 1969ರಲ್ಲಿ ಇವರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು. **(ಎನ್.ಎಸ್.ಎಂ.)**

**ರಾಮರಸ ವಿರೂಪಾಕ್ಷ:** ಸು. 1538. ಹರಿಶ್ಚಂದ್ರ ಸಾಂಗತ್ಯ ಎಂಬ ಕೃತಿಯ ಕರ್ತೃ. ಇವನ ತಂದೆ ರಾಮರಸ.

ಹರಿಶ್ಚಂದ್ರ ಸಾಂಗತ್ಯದಲ್ಲಿ 13 ಸಂಧಿಗಳೂ 619 ಪದ್ಯಗಳೂ ಇವೆ. ರಾಘವಾಂಕನ ಹರಿಶ್ಚಂದ್ರಕಾವ್ಯ ಈ ಕೃತಿಗೆ ಆಕರ. ಕಥೆ, ಸಂವಿಧಾನ, ಪಾತ್ರಸೃಷ್ಟಿ, ಸನ್ನಿವೇಶಕಲ್ಪನೆ, ದರ್ಶನ ಎಲ್ಲವೂ ರಾಘವಾಂಕನಿಂದ ಬಂದವು. ವಿರೂಪಾಕ್ಷನ ಕೆಲಸವೇನಿದ್ದರೂ ರಾಘವಾಂಕ ಹಾಕಿಕೊಟ್ಟ ಚೌಕಟ್ಟಿನಲ್ಲೇ. ಆದರೂ ಇವನ ಕೃತಿ ಹರಿಶ್ಚಂದ್ರಕಾವ್ಯದ ನೆರಳಲ್ಲ. ವರ್ಣನೆಗಳಲ್ಲಿ ಇವನು ಎಷ್ಟೋ ಕಡೆ ರಾಘವಾಂಕನಿಂದ ಬೇರೆಯಾಗಿದ್ದಾನೆ; ಮೂಲಕಥೆಯನ್ನು ಸ್ವಲ್ಪಮಟ್ಟಿಗೆ ಪುಷ್ಟಿಗೊಳಿಸುವುದೂ ಉಂಟು. ಇವನ ಸ್ವತಂತ್ರ ಪ್ರತಿಭೆಯ ಕಿಡಿಗಳು ಕಾವ್ಯದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಇವನ ಸಾಂಗತ್ಯದಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರತಿಯೊಂದು ಪದ್ಯದ ಒಂದು ಮತ್ತು ಮೂರನೆಯ ಪಾದಗಳಲ್ಲಿ ಒಳಪ್ರಾಸ ನಿಯತವಾಗಿದೆ. ರಾಘವಾಂಕನ ಷಟ್ಪದಿ

ಕಾವ್ಯವನ್ನು ಸರಳವಾಗಿ ಸಾಂಗತ್ಯದಲ್ಲಿ ನಿರೂಪಿಸಿದ ನಾಲ್ವರು ಕವಿಗಳಲ್ಲಿ ವಿರೂಪಾಕ್ಷನಿಗೆ ಗಮನಾರ್ಹವಾದ ಸ್ಥಾನವಿದೆ. (ಸಿ.ಪಿ.ಕೆ.)

**ರಾಮರಾಯ:** ವಿಜಯನಗರ ಸಾಮ್ರಾಜ್ಯದ ಆಡಳಿತ ಸೂತ್ರಗಳನ್ನು ಪೂರ್ಣವಹಿಸಿಕೊಂಡಿದ್ದ ಮಹಾಮಂಡಲೇಶ್ವರ (ರಾಜ್ಯಾಧಿಕಾರತ್ವ 1543–65). ಸಾಮ್ರಾಟ ಕೃಷ್ಣದೇವರಾಯನ ಅಳಿಯ. ಇವನಿಗೆ ಕೋದಂಡರಾಮ ಎಂಬ ಹೆಸರೂ ಇದ್ದಿತೆಂದು ತಿಳಿದುಬರುತ್ತದೆ.

ಇವನು ಪ್ರಾರಂಭದಲ್ಲಿ ಗೋಲ್ಕೊಂಡದ ಸೈನ್ಯದಲ್ಲಿದ್ದನೆಂದು ಕೆಲವೊಂದು ಮೂಲಗಳಿಂದ ತಿಳಿದುಬರುತ್ತದೆ. ಅಲ್ಲಿಂದ ಬಂದು ಕೃಷ್ಣದೇವರಾಯನ ಬಳಿ ಸೇವೆಗೆ ಸೇರಿಕೊಂಡು ದಕ್ಷ ದಂಡನಾಯಕನೆನಿಸಿದ. ಕೆಲಕಾಲ ತೆಲುಗು ಪ್ರದೇಶಗಳಲ್ಲಿ ರಾಜಪ್ರತಿನಿಧಿಯಾಗಿಯೂ ಇದ್ದ. ಇವನ ಶಕ್ತಿಸಾಹಸಗಳಿಗೆ ಮೆಚ್ಚಿದ ಕೃಷ್ಣದೇವರಾಯ ತನ್ನ ಮಗಳು ತಿರುಮಲಾಂಬೆಯನ್ನು ಇವನಿಗೆ ಕೊಟ್ಟು ವಿವಾಹ ಮಾಡಿದ. ಇದರಿಂದ ಇವನು ಮುಂದೆ ಅಳಿಯರಾಮರಾಯನೆಂದು ಪ್ರಸಿದ್ಧನಾದ. ಕೃಷ್ಣದೇವರಾಯನ ಕಾಲದಲ್ಲಿ (1509–29) ರಾಮರಾಯ ಆಡಳಿತದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲೊಬ್ಬನಾಗಿದ್ದ. ಕೃಷ್ಣದೇವರಾಯನ ಮಗ ತಿರುಮಲರಾಯ ವಿಷಪ್ರಾಶನದಿಂದ ಮರಣಹೊಂದಲಾಗಿ ಕೃಷ್ಣದೇವರಾಯನ ಮಲತಮ್ಮ ಅಚ್ಯುತರಾಯನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ. ಆದರೆ ಮುಂದೆ ಇವರಿಬ್ಬರ ನಡುವೆ ವಿರಸ ಬಂತು. ಅಚ್ಯುತರಾಯ ರಾಜನಾಗಿರುವುದನ್ನು ಸಹಿಸದೆ ಕೃಷ್ಣದೇವರಾಯನ ಚಿಕ್ಕಮಗುವನ್ನು ಉತ್ತರಾಧಿಕಾರಿಯೆಂದು ಘೋಷಿಸಬೇಕೆಂದು ಹವಣಿಸುತ್ತಿದ್ದ. ಆದರೆ ಅಷ್ಟರಲ್ಲೇ ಆ ಮಗುವೂ ತೀರಿಕೊಂಡಿದ್ದರಿಂದ ನಿರಾಶನಾದರೂ ರಾಮರಾಯ ತನ್ನ ರಾಜಕೀಯ ಶಕ್ತಿಸಂವರ್ಧನೆಯಲ್ಲಿ ತೊಡಗಿದ.

1542ರಲ್ಲಿ ಅಚ್ಯುತರಾಯ ನಿಧನನಾದಾಗ ಅವನ ಮಗ ವೆಂಕಟ ಉತ್ತರಾಧಿಕಾರಿಯಾಗಿ ಬಂದ. ಇನ್ನೂ ಬಾಲಕನಾಗಿದ್ದ ಅವನ ಪರವಾಗಿ ಅವನ ಸೋದರ ಮಾವನಾದ ಸಲಕ ತಿರುಮಲ ರಾಜಪ್ರತಿನಿಧಿಯಾಗಿ ಆಡಳಿತಸೂತ್ರವನ್ನು ಹಿಡಿಯಲು ಪ್ರಯತ್ನಿಸುತ್ತಿದ್ದ. ಆದರೆ ರಾಮರಾಯ ಸೆರೆಯಲ್ಲಿದ್ದ ಸದಾಶಿವನನ್ನು ಬಿಡುಗಡೆ ಮಾಡಿ ಅವನೇ ರಾಜನೆಂದು ಸಾರಿದ. ಈ ಸ್ಪರ್ಧೆಯಲ್ಲಿ ತಿರುಮಲ ಮತ್ತು ರಾಮರಾಯರ ನಡುವೆ ಅನೇಕ ಯುದ್ಧಗಳು ನಡೆದವು. ಕೊನೆಗೆ ತಿರುಮಲನು ರಾಮರಾಯನಿಂದ ಸಂಪೂರ್ಣವಾಗಿ ಸೋತು ಕೊಲೆಗೀಡಾದ.

1543ರಲ್ಲಿ ರಾಮರಾಯ ಸದಾಶಿವನ ಪಟ್ಟಾಭಿಷೇಕ ಮಾಡಿಸಿದ. ಆದರೆ ಅಧಿಕಾರವೆಲ್ಲ ರಾಮರಾಯನ ಕೈಸೇರಿತು. ರಾಜಬಿರುದುಗಳನ್ನು ತನ್ನ ಹೆಸರಿನೊಂದಿಗೆ ಸೇರಿಸಿಕೊಂಡ. 1550ರವರೆಗೂ ರಾಮರಾಯ ರಾಜಪ್ರತಿನಿಧಿಯೆಂದು ಆಳ್ವಿಕೆ ನಡೆಸಿದ. ಆಗ ಪ್ರಬುದ್ಧ ವಯಸ್ಸಿಗೆ ಬಂದ ಸದಾಶಿವ ಸ್ವತಂತ್ರ ಪ್ರವೃತ್ತಿಯನ್ನು ತೋರಿಸತೊಡಗಿದಾಗ ರಾಮರಾಯ ಅವನನ್ನು ಸುರಕ್ಷಿತವಾಗಿ ಬಂಧನದಲ್ಲಿಟ್ಟು 1551ರಿಂದ ತಾನೇ ಅಧಿಕಾರ ಚಲಾಯಿಸತೊಡಗಿದ. ವರ್ಷಕ್ಕೊಮ್ಮೆ ರಾಮರಾಯನ ಸಹೋದರರು ರಾಜನ ಬಳಿ ಹೋಗಿ ಗೌರವ ಸೂಚಿಸುತ್ತಿದ್ದರು.

ರಾಮರಾಯ ರಾಜ್ಯಸೂತ್ರಗಳನ್ನು ವಹಿಸಿಕೊಂಡ ಕೂಡಲೇ ತನ್ನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿಯನ್ನು ಕ್ರಮವಾಗಿ ಮಂತ್ರಿ ಮತ್ತು ಸೇನಾಧಿಪತಿಯಾಗಿ ನೇಮಿಸಿದ. ಅನೇಕ ಹಳೆಯ ಆಸ್ಥಾನಿಕರನ್ನು ತೆಗೆದು ಅವರ ಸ್ಥಾನದಲ್ಲಿ ತನ್ನ ರಕ್ತಸಂಬಂಧಿಗಳನ್ನು ತಂದ. ವಿವಿಧ ಪ್ರಾಂತ್ಯಗಳಲ್ಲೂ ತನ್ನವರನ್ನು ಪ್ರತಿನಿಧಿಗಳನ್ನಾಗಿ ನೇಮಿಸಿದ. ಮುಸ್ಲಿಮರಿಗೆ ಉನ್ನತ ಸ್ಥಾನಗಳನ್ನು ಕೊಟ್ಟು ಸೈನ್ಯದಲ್ಲಿ ಹೆಚ್ಚು ಹೆಚ್ಚಾಗಿ ಸೇರಿಸಿಕೊಂಡ. ಈ ಮೇಲಿನ ಎರಡೂ ಕಾರ್ಯಗಳು ಆಂತರಿಕ ಅಸಮಾಧಾನ ಮತ್ತು ಪ್ರತಿಭಟನಾ ಪ್ರವೃತ್ತಿಗೆ ಇಂಬುಗೊಟ್ಟವು. ಸಾಮ್ರಾಜ್ಯದ ಆಡಳಿತದ ನೈತಿಕ ಬಲ ಕುಸಿಯಿತು. ದೇಶಾದ್ಯಂತ ಅಶಾಂತಿ ಮತ್ತು ದಂಗೆಗಳು ಪ್ರಾರಂಭವಾದವು. ದಕ್ಷಿಣದ ಸಾಮಂತರನ್ನು ಅಡಗಿಸಬೇಕಾಯಿತು. ಆ ದಂಡಯಾತ್ರೆಯ ನೇತೃತ್ವ ವಹಿಸಿದ್ದ ವಿಟ್ಠಲ ಮತ್ತು ಚಿನ್ನತಿಮ್ಮ ಇವರು ಚಂದ್ರಗಿರಿ, ಭುವನಗಿರಿಗಳನ್ನು ವಶಪಡಿಸಿಕೊಂಡರು. ತಂಜಾವೂರು ಮತ್ತು ಪುದುಕೋಟೆಯ ನಾಯಕರು ಶರಣಾದರು. ಪದಚ್ಯುತನಾಗಿದ್ದ ಪಾಂಡ್ಯನನ್ನು ಪ್ರತಿಷ್ಠಾಪಿಸಿದರು. ತಿರುವಾಂಕೂರಿನ ಪಂಚ ತಿರುವಡಿಗಳ ಸೈನ್ಯವನ್ನು ಎದುರಿಸಿ ಸೋಲಿಸಿದರು. ಚಿನ್ನತಿಮ್ಮ ಕನ್ಯಾಕುಮಾರಿಯಲ್ಲಿ ವಿಜಯಸ್ತಂಭವನ್ನು ನೆಟ್ಟ. ವಿಟ್ಠಲ ದಕ್ಷಿಣದ ಮಹಾಮಂಡಲೇಶ್ವರನಾಗಿ ನಿಯೋಜಿತನಾದ. ಈ ನಿಗ್ರಹಕಾರ್ಯವನ್ನು ಉತ್ತರದ ಮುದ್ಗಲ್‌ವರೆಗೂ ನಡೆಸಿದ. ಕರಾವಳಿಯಲ್ಲಿ ಕೀಟಲೆ ಕೊಡುತ್ತಿದ್ದ ಪೋರ್ಚುಗೀಸರನ್ನು ರಾಮರಾಯ ಅಡಗಿಸಿದ (1557–58). ಇದಲ್ಲದೆ ಸಿಲೋನಿನಲ್ಲಿ ಕ್ಯಾಡಿಯ ರಾಜನನ್ನು ಶರಣಾಗುವಂತೆ ಮಾಡಿದ.

ಹಿಂದೆ ಕೃಷ್ಣದೇವರಾಯನ ಪ್ರತಾಪದಿಂದ ನೊಂದಿದ್ದ ದಖನ್ನಿನ ಶಾಹೀರಾಜ್ಯಗಳು ಒಳಗೊಳಗೇ ವಿಜಯನಗರದ ಮೇಲೆ ಹಗೆ ಸಾಧಿಸುತ್ತಿದ್ದವು. ಆದರೆ ವಿಜಯನಗರದ ಮುಂದೆ ಅವು ದುರ್ಬಲವಾಗಿದ್ದವು. ಅವುಗಳ ಪರಸ್ಪರ ದ್ವೇಷ, ಸಂಶಯಗಳಿಗೊಳಗಾಗಿ ಆಗಾಗ ಒಂದಿಲ್ಲೊಂದು ರಾಜ್ಯ ವಿಜಯನಗರದೊಂದಿಗೆ ಮೈತ್ರಿ ಬೆಳೆಸುತ್ತಿತ್ತು. ರಾಮರಾಯ ಹಿಂದೆ ಗೋಲ್ಕೊಂಡದ ಸೇವೆಯಲ್ಲಿದ್ದುದರಿಂದ ಅವನಿಗೆ ಈ ಮುಸ್ಲಿಂ ರಾಜ್ಯಗಳ ಆಂತರಿಕ ಸಂಬಂಧಗಳ ಸ್ವರೂಪವೂ ಚೆನ್ನಾಗಿ ತಿಳಿದಿದ್ದಿರಬೇಕು. ಸಂದರ್ಭಕ್ಕನುಗುಣವಾಗಿ ಇವನು ಅವರಲ್ಲಿ ಕೆಲವರಿಗೆ ಸಹಾಯಹಸ್ತ ಚಾಚುತ್ತ ಭೇದನೀತಿಯನ್ನು ಅನುಸರಿಸಿದ್ದ. ಶಾಹೀ ರಾಜ್ಯಗಳ ಪ್ರದೇಶದಲ್ಲಿ 1542ರಿಂದ 1564ರವರೆಗೂ ನಿರಂತರವಾಗಿ ಯುದ್ಧಗಳ ಸರಣಿ ಮುಂದುವರಿಯಿತು. 1542ರಲ್ಲಿ ಬಿಜಾಪುರದ ಇಬ್ರಾಹಿಂ ಆದಿಲ್‌ಷಾ ವಿಜಯನಗರದ ಮೇಲೆ ಬಿದ್ದರೂ ಹೆಚ್ಚಿನ ಪರಿಣಾಮವಾಗಲಿಲ್ಲ. ಮುಂದೆ ವಿಜಯನಗರ 1557ರವರೆಗೂ ಅಹಮದ್‌ನಗರದ ಪರ ವಹಿಸಿತು. 1543ರಲ್ಲಿ ರಾಮರಾಯ ಬಿಜಾಪುರದಿಂದ ರಾಯಚೂರು ಮತ್ತು ಕೃಷ್ಣಾ–ತುಂಗಭದ್ರಾ ಮಧ್ಯವರ್ತಿ ಪ್ರದೇಶಗಳನ್ನು ವಶಪಡಿಸಿಕೊಂಡ. ಸೊಲ್ಲಾಪುರ ಅಹಮದ್‌ನಗರಕ್ಕೆ ದಕ್ಕಿತು. ಅಹಮದ್‌ನಗರದವರು ಕಲ್ಯಾಣವನ್ನು ಬಿದರೆಯವರಿಂದ ಕಿತ್ತುಕೊಂಡರು (1551). ಹೀಗೆ ರಾಯಚೂರು, ಮುದ್ಗಲ್, ಕಲ್ಯಾಣ ಮತ್ತು ಸೊಲ್ಲಾಪುರಗಳಿಗಾಗಿ ಆಗಾಗ ಪೈಪೋಟಿ ನಡೆಯುತ್ತಿದ್ದ ಸಂದರ್ಭದಲ್ಲಿ ರಾಮರಾಯ ತನ್ನ ನೀತಿಯನ್ನು ಬದಲಿಸಿದ (1557). ಬಿಜಾಪುರದೊಂದಿಗೆ ಸ್ನೇಹ ಬೆಳೆಸಿದ. ರಾಮರಾಯನ ನೆರವಿನಿಂದ ಆಲಿ ಆದಿಲ್ ಷಾ ಅಹಮದ್‌ನಗರಕ್ಕೆ ಅಪಾರ ನಷ್ಟ ಉಂಟುಮಾಡಿದ (1558–59). 1563ರ ಯುದ್ಧದಲ್ಲೂ ಅಹಮದ್‌ನಗರ ಅಪಮಾನಕರ ಸೋಲನ್ನು ಅನುಭವಿಸಬೇಕಾಯಿತು.

1564ರ ಹೊತ್ತಿಗೆ ದಖನ್ನಿನ ರಾಜಕೀಯ ಸ್ಥಿತಿ ಅತಿಗೊಂದಲಮಯವಾಗಿದ್ದಿತು. ವಿಜಯನಗರ ದಕ್ಷಿಣದಲ್ಲಿ ಅತಿಪ್ರಬಲವಾಗಿ ಕಾಣಿಸಿಕೊಂಡರೆ, ಉತ್ತರದಲ್ಲಿ ಶಾಹೀ ಸುಲ್ತಾನರು ಪರಸ್ಪರ ಹೋರಾಡಿ ಹಣ್ಣಾಗಿದ್ದರು. ವಿಜಯನಗರವನ್ನು ಒಂದಲ್ಲ ಒಂದು ರಾಜ್ಯ ಅವಲಂಬಿಸುವುದು ಅನಿವಾರ್ಯವಾಗಿತ್ತು. ಮುಸ್ಲಿಂ ರಾಜ್ಯಗಳು ಈ ಪರಿಸ್ಥಿತಿಯನ್ನು ಅರಿತುಕೊಳ್ಳುವಲ್ಲಿ ವಿಫಲವಾಗಲಿಲ್ಲ. ಅವು ಪರಸ್ಪರ ಮಾತುಕತೆ ನಡೆಸಿ ತಮ್ಮ ಐಕಮತ್ಯದ ಅಗತ್ಯವನ್ನು ಮನಗಂಡವು. ಇದರ ಪರಿಣಾಮವಾಗಿ ಅವರೊಳಗೆ ವಿವಾಹಸಂಬಂಧಗಳು ಜರುಗಿದವು. ವಿಜಯನಗರವನ್ನು ನಾಶಮಾಡುವ ಏಕೈಕ ಗುರಿಯಿಂದ ಭಾವೈಕ್ಯವನ್ನು

ಸಾಧಿಸಲಾಯಿತು. ಈ ಸುಲ್ತಾನರ ನಾಲ್ಕು ರಾಜ್ಯಗಳು ಒಂದಾಗಿ ಬಿಜಾಪುರದ ಬಳಿ ತಮ್ಮ ಸೈನ್ಯವನ್ನು ಜಮಾಯಿಸಿದವು. 1564 ಡಿಸೆಂಬರ್ 25ರಂದು ಈ ಸಂಯುಕ್ತ ಸೈನ್ಯದ ದಂಡಯಾತ್ರೆ ದಕ್ಷಿಣದತ್ತ ಹೊರಟಿತು. ಇತ್ತ ರಾಮರಾಯ ಮುಂದಾಗಿ ಈ ಅಪಾಯವನ್ನರಿತ್ತಿದ್ದ. ಆಗ ಎಂಬತ್ತು ವರ್ಷದವನಾಗಿದ್ದ ಇವನು ಬೃಹತ್ ಸೈನ್ಯದೊಂದಿಗೆ ಸ್ವತಃ ರಣರಂಗಕ್ಕೆ ಹೊರಟ. ಇವನ ಸೋದರರಾದ ವೆಂಕಟಾದ್ರಿ ಮತ್ತು ತಿರುಮಲರೂ ಮುಂದಾಗಿಯೇ ಹೋಗಿದ್ದರು. ಒಂದು ತಿಂಗಳಕಾಲ ಉಭಯ ಸೈನ್ಯಗಳೂ ಪರಸ್ಪರ ಶಕ್ತಿಮೀರಿ ಮತ್ತು ವ್ಯೂಹ ರಚನೆಯಲ್ಲಿ ತೊಡಗಿದವು. ಯುದ್ಧದ ಪ್ರಮುಖ ಘಟನೆ ಕೃಷ್ಣಾನದಿಯ ಬಳಿಯ ರಕ್ಕಸತಂಗಡಿಯಲ್ಲಿ ನಡೆಯಿತೆಂದು ಗುರುತಿಸಲಾಗಿದೆ. 1565 ಜನವರಿ 23ರಂದು ನಡೆದ ಭೀಕರ ಕದನದಲ್ಲಿ ರಾಮರಾಯ ಮೃತನಾದ. ವಿಜಯನಗರ ಸೈನ್ಯ ಕಂಗಾಲಾಗಿ ಸೋತು ಓಡಿತು.

ರಾಮರಾಯನ ಸೋಲು ಮತ್ತು ಸಾವಿನಿಂದಾಗಿ ವಿಜಯನಗರ ಸಾಮ್ರಾಜ್ಯ ಮಸುಕಾಯಿತು. ಅಲ್ಲಿಂದ ಮುಂದೆ ಹಲವು ದಶಕಗಳ ಕಾಲ ವಿಜಯನಗರ ರಾಜವಂಶ ಮುಂದುವರಿದರೂ ಹಿಂದಿನ ವೈಭವ ಕೂಡಿಬರಲಿಲ್ಲ. ಈ ಐತಿಹಾಸಿಕ ದುರಂತಕ್ಕೆ ರಾಮರಾಯ ಸ್ವಲ್ಪಮಟ್ಟಿಗೆ ಕಾರಣನೆಂಬುದು ಹಲವು ಇತಿಹಾಸಕಾರರ ಅಭಿಪ್ರಾಯ. ರಾಮರಾಯ ಅಪ್ರತಿಮವೀರ, ರಣಭಯಂಕರ, ನೂರು ಸಮರಗಳ ವೀರ. ಆದರೆ ಇವನು ದಖನ್ನಿನ ರಾಜಕೀಯದಲ್ಲಿ ದೊಡ್ಡಣ್ಣನ ಪಾತ್ರವಹಿಸಿದುದು ಉಳಿದವರಿಗೆ ಅಸಹನೀಯ ವಾಯಿತು. ಸುಲ್ತಾನರ ಒಳಜಗಳದಲ್ಲಿ ಇವನ ಮಧ್ಯಪ್ರವೇಶ ಅತಿಯಾದದ್ದೂ ಒಂದು ರೀತಿಯಲ್ಲಿ ತಪ್ಪು ಲೆಕ್ಕಾಚಾರವಾಯಿತು. ರಾಮರಾಯನ ಸಮಯ ಸಾಧಕ ನೀತಿ ಮತ್ತು ಪರಿಸ್ಥಿತಿಗಳು ಅವನಿಗೇ ಎರವಾದವು.

ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿಪ್ರೋತ್ಸಾಹ ನೀತಿಯನ್ನು ರಾಮರಾಯನೂ ಮುಂದುವರಿಸಿದ. ಇವನ ಆಸ್ಥಾನದಲ್ಲಿ ತೆಲುಗು ಕವಿ ಭಟ್ಟುಮೂರ್ತಿ ಇದ್ದ. ವ್ಯಾಸರಾಯರು, ಪುರಂದರದಾಸರು, ಕನಕದಾಸರು ಇವನ ಸಮಕಾಲೀನರು. ಮಹಾದೇವಿಯಕ್ಕನ ಪುರಾಣದ ಕರ್ತೃ ಬಸವೇಂದ್ರ, ಚೋಳರಾಜ ಸಾಂಗತ್ಯದ ಕರ್ತೃ ಲಿಂಗ ಮುಂತಾದ ವೀರಶೈವ ಕವಿಗಳು ಪ್ರಸಿದ್ಧರಾಗಿದ್ದರು. ಭಾರತ, ರಸರತ್ನಾಕರ, ವೈದ್ಯಸಾಂಗತ್ಯ ಮೊದಲಾದುವನ್ನು ರಚಿಸಿದ ಸಾಳ್ವ ಮತ್ತು ಚಂದ್ರಪ್ರಭ ಚರಿತೆಯನ್ನು ರಚಿಸಿದ ದೊಡ್ಡಯ್ಯ ಈ ಕಾಲದ ಜೈನಕವಿಗಳಲ್ಲಿ ಮುಖ್ಯರು. ರಾಮರಾಯ ಧಾರ್ಮಿಕ ಕಾರ್ಯಗಳಿಗೆ ದಾನ, ದತ್ತಿಗಳನ್ನು ಕೊಟ್ಟಿದ್ದಾನೆ. ಇವನು ಶ್ರೀವೈಷ್ಣವ ಪಂಥದ ಪರಮಪೋಷಕನಾಗಿದ್ದ. ಮಾಧ್ವ ವಿಜಯೇಂದ್ರ ತೀರ್ಥರ ವಿದ್ವತ್ತು, ತತ್ತ್ವಜ್ಞಾನಗಳನ್ನು ಗೌರವಿಸಿ ಹಲವಾರು ಹಳ್ಳಿಗಳನ್ನು ಅವರಿಗೂ ಉಂಬಳಿ ನೀಡಿದ್ದ. (ಡಿ.ಎಸ್.ಜೆ.)

**ರಾಮರಾವ್, ಟಿ.ಕೆ.:** 1929–86. ಕನ್ನಡದ ಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರು. ತುಮಕೂರು ಕೃಷ್ಣಮೂರ್ತಿ ರಾಮರಾವ್ ಇವರ ಪೂರ್ಣ ಹೆಸರು. ಚಿತ್ರದುರ್ಗ ಜಿಲ್ಲೆ ಹೊಸದುರ್ಗದಲ್ಲಿ 1929 ಅಕ್ಟೋಬರ್ 7ರಂದು ಜನಿಸಿದರು. ತಂದೆ ಟಿ. ಕೃಷ್ಣಮೂರ್ತಿ; ತಾಯಿ ನಾಗಮ್ಮ. ತಂದೆ ವೃತ್ತಿಯಲ್ಲಿ ರೈಲ್ವೇ ಸ್ಟೇಶನ್ ಮಾಸ್ತರರಾಗಿದ್ದರು. ಓದಿನಲ್ಲಿ ವಿಶೇಷ ಆಸಕ್ತಿಯಿದ್ದ ಇವರು ವಿದ್ಯಾರ್ಥಿಯಾಗಿದ್ದಾಗಲೇ ಆಂಗ್ಲ ಮತ್ತು ಬಂಗಾಳಿ ಸಾಹಿತ್ಯವನ್ನು ಅಭ್ಯಸಿಸಿದರು. ಕ್ರಿಕೆಟ್ ಹಾಗೂ ಬ್ಯಾಡ್‌ಮಿಂಟನ್‌ಗಳಲ್ಲಿ ಆಸಕ್ತಿ ಕುದುರಿಸಿಕೊಂಡರು. ಬೆಂಗಳೂರಿನ ರೇಣುಕಾಚಾರ್ಯ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಓದಿದರು. ವೃತ್ತಿಯಲ್ಲಿದ್ದ ತಂದೆ ನಿಧನರಾದ ಮೇಲೆ ಅದೇ ಇಲಾಖೆ ಸೇರಿದ ರಾಮರಾವ್ ಕೆಲಕಾಲ ಮದರಾಸಿನಲ್ಲಿ ರೈಲ್ವೆಗಾರ್ಡ್ ಆಗಿ ಕೆಲಸಮಾಡಿದರು. ಈ ಮೂಲದಿಂದ ಬರುವ ಆದಾಯ ಜೀವನ ನಿರ್ವಹಣೆಗೆ ಸಾಲದೆ ವೃತ್ತಿಗೆ ರಾಜೀನಾಮೆ ನೀಡಿ ಚನ್ನಪಟ್ಟಣದ ಸ್ವಂತ ಮನೆಗೆ ಹಿಂದಿರುಗಿದರು. ಖಾಸಗಿ ಪಾಠಶಾಲೆ ತೆರೆದು, ಔಷಧ ಹಾಗೂ ಫಾರ್ಮಸಿ ವ್ಯಾಸಂಗ ಮುಂದುವರೆಸಿ (1956) ಚನ್ನಪಟ್ಟಣದ ಪೊಲೀಸ್ ಸ್ಟೇಶನ್ ಎದುರು ಔಷಧ ಅಂಗಡಿ ತೆರೆದರು. ನ್ಯೂಸ್‌ಪೇಪರ್ ಏಜನ್ಸಿಯನ್ನು ಪಡೆದರು. 1969ರಲ್ಲಿ ಗ್ರೀಸ್, ಇಟಲಿ, ಸ್ವಿಟ್ಜರ್‌ಲೆಂಡ್, ಫ್ರಾನ್ಸ್, ಇಂಗ್ಲೆಂಡ್, ಅಮೆರಿಕ, ಕೆನಡ, ಜಪಾನ್, ಹಾಂಕಾಂಗ್, ಥೈಲೆಂಡ್, ಸಿಂಗಪುರ್, ಶ್ರೀಲಂಕಾ ಮುಂತಾದ ರಾಷ್ಟ್ರಗಳಿಗೆ ಭೇಟಿನೀಡಿದರು.

ಸೃಜನಶೀಲ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡ ಇವರು ಒಟ್ಟು ಐವತ್ನಾಲ್ಕು ಕಾದಂಬರಿ, ಹದಿನಾಲ್ಕು ಕಥಾ ಸಂಕಲನ ಹಾಗೂ ಒಂದು ಪ್ರವಾಸಕಥನವನ್ನು ಬರೆದಿದ್ದಾರೆ. ಇವೆಲ್ಲವೂ ಕನ್ನಡದ ಪ್ರಸಿದ್ಧ ದಿನಪತ್ರಿಕೆ, ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡು ಗ್ರಂಥರೂಪ ಪಡೆದಿವೆ. ಮಕ್ಕಳ ಸಾಹಿತ್ಯದಲ್ಲೂ ಕೃಷಿ ಮಾಡಿರುವ ರಾಮರಾಯರ ಸಾಹಿತ್ಯ ಸೃಷ್ಟಿ ವೈವಿಧ್ಯಮಯವಾದುದು. ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದ ಇವರು ಧಾರವಾಡದಲ್ಲಿ ನಡೆದ ಕರ್ನಾಟಕದ ರಾಜ್ಯದ ಪ್ರಥಮ ಪತ್ತೇದಾರಿ ಕಾದಂಬರಿ ಲೇಖಕರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು (1985). ಇವರ ಕಾದಂಬರಿಗಳು ಸಾಮಾಜಿಕ ಹಾಗೂ ಚಾರಿತ್ರಿಕ ವಸ್ತುಗಳನ್ನು ಪ್ರಧಾನವಾಗಿಟ್ಟು ಕೊಂಡಿವೆ. ಇವರ ಅನೇಕ ಕಾದಂಬರಿಗಳು ಚಲನಚಿತ್ರಗಳಾಗಿ ಖ್ಯಾತವಾಗಿವೆ. ಬಂಗಾರದ ಮನುಷ್ಯ (1971) ಕನ್ನಡ ಚಲನಚಿತ್ರ ರಂಗಕ್ಕೆ ಹೊಸ ಜೀವಕಳೆಯನ್ನು ನೀಡಿ ಅಪಾರಸಂಖ್ಯೆಯ ಚಿತ್ರರಸಿಕರನ್ನು ಸೆಳೆದ ದಾಖಲೆಯನ್ನು ಹೊಂದಿದೆ. ಮರಳು ಸರಪಣಿ (1977), ಮೂರುಜನ್ಮ (1984), ಸೇಡಿನ ಹಕ್ಕಿ (1985), ಸೀಳು ನಕ್ಷತ್ರ (1986), ವರ್ಣಚಕ್ರ (1987), ಮಣ್ಣಿನದೋಣಿ (1992) ಮುಂತಾದವು ಇವರ ಕಾದಂಬರಿಯನ್ನು ಆಧರಿಸಿದ ಹೆಸರಿಸ ಬಹುದಾದ ಚಲನಚಿತ್ರಗಳಾಗಿವೆ. 'ದಿಬ್ಬದ ಬಂಗಲೆ' ಸುಧಾ ವಾರ ಪತ್ರಿಕೆಯ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಪುರಸ್ಕಾರ ಪಡೆದಿದೆ. ಪಯಣದ ಕೊನೆ (1986) ಇವರ ಕೊನೆಯ ಕಾದಂಬರಿ.

ದೂರಗಗನ, ಮೂರನೆಯ ಕೀಲಿಕೈ, ತ್ರಿಕೋನದ ಮನೆ, ಪಶ್ಚಿಮದ ಬೆಟ್ಟ, ಪಚ್ಚೆತೋರಣ, ಮಧುರ ಮಿಲನ, ಆಸರೆಯ ಬೊಂಬೆ, ಜಗದೇವರಾಯ, ಕೋವಿಕುಂಚ, ಸೀಮಾರೇಖೆ, ಹಿಮಪಾತ, ಲಂಗರು, ಸರ್ಪದಂಡೆ, ಕಹಳೆಬಂಡೆ, ಕೆಂಪುಮಣ್ಣು, ಪದ್ಮರಾಗ, ಆಷಾಢರಾತ್ರಿಗಳು, ನಿಗೂಢರು, ತಾಳೆಹೂ, ತೋರುಬೆರಳು, ಕಪ್ಪುನಾಯಿ, ಶಕುನಪಕ್ಷಿ, ಗುಲಾಮಹೆಣ್ಣು, ರಾಣಿಜೇನು, ಬೆದರುಬೊಂಬೆ, ಡೊಂಕುಮರ, ನೆರಳು, ಆರಿದಲಾಂಧ್ರ, ವಜ್ರದಕೊಂಬು, ದೂರದ ಕರೆ, ಚಿತ್ರಾವತಿ, ಚುಕ್ಕೆಯ ಪಾರಿವಾಳ, ರಹಸ್ಯಪತ್ರ, ಜೋಡಿಛಾಯೆ, ಕನಸುಗಾರ, ಕಣಿವೆಸೇರಿದವಳು ಮುಂತಾದವು ಇವರ ಕಾದಂಬರಿಗಳಾಗಿವೆ.

ಉಬ್ಬರವಿಳಿತ, ಹೇಡಿ, ನಾಲ್ಕುರೇಖೆಗಳು, ಎತ್ತರದ ಮನೆಯವನು, ಮಧುಚಂದ್ರ, ಬೆಂಕಿಗೂಡು, ಕಲ್ಲುಹಾಸಿಗೆ, ಕೊನೆಯ ಸಾಕ್ಷಿ, ಕೊಲ್ಲಿಯ ಹಣ, ಅಪರಾತ್ರಿಯ ಆತ್ಮೀಯ ಮುಂತಾದುವು ಇವರ ಕಥಾಸಂಕಲನಗಳು. ಪತ್ತೇದಾರಿ ಅಂಶ ಇವರ ಕಥೆ ಅಥವಾ ಕಾದಂಬರಿಗಳ ಮುಖ್ಯ ಕೇಂದ್ರವಾದರೂ ಭಾರತೀಯತೆ, ದೇಶ, ಭಾಷೆ, ಬಡತನ, ಸಾಂಸ್ಕೃತಿಕ ಅಂಶಗಳನ್ನು ಅಲ್ಲಿ ವಿಶೇಷವಾಗಿ ಶೋಧಿಸಿದ್ದಾರೆ. ಅಸ್ಪೃಶ್ಯತೆ, ಜಾತೀಯತೆ, ಮೇಲುಕೀಳೆಂಬ ಭಾವನೆಗಳ ಜಿಜ್ಞಾಸೆಯನ್ನು ನಡೆಸಿದರು. ಸಾಮಾಜಿಕ ಬದಲಾವಣೆ, ವೈಜ್ಞಾನಿಕ ಜೀವನ ದೃಷ್ಟಿ ಇವು ಇವರ ಕಾದಂಬರಿ, ಕಥೆಗಳಲ್ಲಿ ಎದ್ದುಕಾಣುವ ಅಂಶಗಳು. ಸ್ವಾತಂತ್ರ್ಯ ಬಂದ ಹೊಸ್ತಿಲಲ್ಲಿ ಕನ್ನಡದಲ್ಲಿ

ಜನಪ್ರಿಯ ಕೃತಿಗಳನ್ನು ರಚಿಸಿದ ಇವರು ಕನ್ನಡ ಸಾಹಿತ್ಯ ಜನಸಾಮಾನ್ಯರ ಮನ, ಮನೆಗಳಲ್ಲಿ ಸ್ಥಾನ ಪಡೆಯಲು ದೊಡ್ಡ ಕೊಡುಗೆ ನೀಡಿದ್ದಾರೆ.

ಮಕ್ಕಳ ಸಾಹಿತ್ಯದಲ್ಲೂ ಕೃಷಿ ಮಾಡಿರುವ ರಾಮರಾವ್ ಜೆ.ಎನ್.ತಾತಾ, ಲಾಲಾ ಲಜಪತರಾಯ್, ಟಿ.ವಿ. ಸುಂದರಂಅಯ್ಯಂಗಾರ್, ಶ್ಯಾಮಾಪ್ರಸಾದ್ ಮುಖರ್ಜಿ ಹಾಗೂ ಸ್ವಾಮಿ ಶಿವಾನಂದರ ಬಗ್ಗೆ ವ್ಯಕ್ತಿಚಿತ್ರಗಳನ್ನು ರಚಿಸಿದರು. ಜಗ್ಗು ಸಾಹಸಗಳು ಎಂಬ ಮಕ್ಕಳ ಸಾಹಸ ಕೃತಿಗಳನ್ನೂ ಇವರು ರಚಿಸಿದ್ದಾರೆ.

'ಗೋಳದ ಮೇಲೊಂದು ಸುತ್ತು' ವಿಶ್ವದ ಹದಿನಾಲ್ಕು ರಾಷ್ಟ್ರಗಳ ಇವರ ವಿಶಿಷ್ಟ ಪ್ರವಾಸಕಥನ. ಇದು ಅನೇಕ ಮುದ್ರಣ ಕಂಡ ಜನಪ್ರಿಯ ಪ್ರವಾಸ ಸಾಹಿತ್ಯ. ಆಯಾ ದೇಶಗಳ ಜನಜೀವನ, ಸಂಸ್ಕೃತಿ, ವಿದ್ಯಾಭ್ಯಾಸ, ಪರಿಸರ ಪ್ರಜ್ಞೆಗಳನ್ನು ಮನಮುಟ್ಟುವಂತೆ ಈ ಕೃತಿ ಪರಿಚಯಿಸುತ್ತದೆ. ಶಕುಂತಲಾ ಇವರ ಪತ್ನಿ. ಇವರು 1986 ನವೆಂಬರ್ 11 ರಂದು ನಿಧನರಾದರು.

(ಎಸ್.ಟಿಎಚ್ಎ.)

**ರಾಮರಾವ್, ಬಿ.:** 1890-1970. ಭಾರತದ ಪ್ರಸಿದ್ಧ ಭೂವಿಜ್ಞಾನಿ. ಹಿಂದಿನ ಮೈಸೂರು ರಾಜ್ಯದ ಭೂವಿಜ್ಞಾನ ಇಲಾಖೆಯ ನಿರ್ದೇಶಕರಾಗಿದ್ದವರು. ಇವರ ಪೂರ್ಣ ಹೆಸರು ಬೆಳ್ಳೂರು ರಾಮರಾವ್. 1890 ನವೆಂಬರ್ 20ರಂದು ಚಿತ್ರದುರ್ಗದಲ್ಲಿ ಜನಿಸಿದರು. ತಂದೆ ವೆಂಕಟೇಶಯ್ಯ. ರಾಮರಾಯರು ತಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು. ಸರ್ಕಾರಿ ನೌಕರರಾಗಿದ್ದ ಇವರ ತಂದೆಯವರ ವರ್ಗಾವಣೆಗಳಿಂದಾಗಿ ವಿವಿಧ ಪ್ರದೇಶಗಳ ಪ್ರಕೃತಿದತ್ತ ರಮಣೀಯ ಸ್ಥಳಗಳು ಬಾಲಕ ರಾಮರಾವ್ ಮುಂದಿನ ಜೀವನವಿಡೀ ನಿಸರ್ಗಪ್ರೇಮಿಯಾಗಿರಲು ಅನುವು ಮಾಡಿಕೊಟ್ಟವು. ಎಲ್ಲ ಪರೀಕ್ಷೆಗಳಲ್ಲೂ ಪ್ರಥಮಸ್ಥಾನಗಳಿಸಿದ್ದರಿಂದ ಸರ್ಕಾರದಿಂದ ವಿದ್ಯಾರ್ಥಿ ವೇತನವೂ ದೊರೆಯಿತು. ಮುಂದೆ ತಮಗೆ ಪ್ರಿಯವೆನಿಸಿದ ಭೂವಿಜ್ಞಾನ ವಿಷಯವನ್ನೇ ಆರಿಸಿಕೊಂಡು ಮದರಾಸು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು. ಅನಂತರ ಇವರು ಸಿವಿಲ್ ಪರೀಕ್ಷೆಗೆ ಕುಳಿತರಾದರೂ ರ‍್ಯಾಂಕ್ ಗಳಿಸಲು ವಿಫಲರಾದರು. ಈ ವೇಳೆಗಾಗಲೇ ರಾಬರ್ಟ್ ಬ್ರೂಸ್ ಫೂಟ್ ಎಂಬ ಭೂವಿಜ್ಞಾನಿಯ ಮಾರ್ಗದರ್ಶನದಲ್ಲಿ ಮೈಸೂರು ರಾಜ್ಯದಲ್ಲಿ ಭೂವಿಜ್ಞಾನ ಇಲಾಖೆ ಸ್ಥಾಪನೆಗೊಂಡಿತ್ತು (1894). ನೂತನವಾಗಿ ಆರಂಭವಾದ ಆ ಇಲಾಖೆಗೆ ಮೈಸೂರು ಸರ್ಕಾರ ಭೂವಿಜ್ಞಾನ ವಿಷಯದಲ್ಲಿ ಅಭ್ಯರ್ಥಿಗಳಿಗಾಗಿ ಒಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು 1914ರಲ್ಲಿ ಏರ್ಪಡಿಸಿತ್ತು. ಆ ಪರೀಕ್ಷೆಗೆ ಕುಳಿತಿದ್ದ ಮೂವತ್ತು ಅಭ್ಯರ್ಥಿಗಳ ಪೈಕಿ ರಾಮರಾವ್ ಪ್ರಪ್ರಥಮ ಸ್ಥಾನಗಳಿಸಿದರು. ತೇರ್ಗಡೆಯಾದ ಇತರರೆಂದರೆ ಟಿ.ಪಿ. ಕೈಲಾಸಂ ಹಾಗೂ ವೇಣುಗೋಪಾಲ್. ಕೈಲಾಸಂ ಅವರು ನಾಟಕ ಮತ್ತು ಹಾಸ್ಯಕಲೆಗಳಲ್ಲಿ ಆಸಕ್ತಿ ವಹಿಸಿದ್ದರಿಂದ ಭೂವಿಜ್ಞಾನ ಇಲಾಖೆಯನ್ನು ಸೇರಿದ ನಾಲ್ಕುವರೆ ವರ್ಷಗಳಲ್ಲಿ ಸೇವೆಗೆ ರಾಜೀನಾಮೆ ಇತ್ತರು. ಹೀಗಾಗಿ ರಾಮರಾವ್ ಮೈಸೂರು ಭೂವಿಜ್ಞಾನ ಇಲಾಖೆಯಲ್ಲಿ 14 ವರ್ಷಗಳ ಕಾಲ ನಿರ್ದೇಶಕರಾಗಿ, ಒಟ್ಟು 33 ವರ್ಷಗಳ ಸುದೀರ್ಘ ಸೇವೆಸಲ್ಲಿಸಿ 1948ರಲ್ಲಿ ನಿವೃತ್ತಿ ಹೊಂದಿದರು. ಅದೇ ವರ್ಷ ಕೇಂದ್ರ ಸರ್ಕಾರ ಸ್ಥಾಪಿಸಿದ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಸಂಸ್ಥೆಯ ಪ್ರಪ್ರಥಮ ನಿರ್ದೇಶಕರಾಗಿಯೂ ಸೇವೆಸಲ್ಲಿಸಿ ಆ ಹುದ್ದೆಯಿಂದ 1951ರಲ್ಲಿ ನಿವೃತ್ತಿಹೊಂದಿದರು.

ಇವರ ಸೇವಾವಧಿಯಲ್ಲಿ ರಾಜ್ಯದ ಭೂವಿಜ್ಞಾನ ಇಲಾಖೆ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಿತು. ಇವರು ತಮ್ಮ ಅಧ್ಯಯನ ಕ್ಷೇತ್ರದಲ್ಲಿನ ಉಚ್ಚಶಿಕ್ಷಣಕ್ಕಾಗಿ ಲಂಡನ್ನಿಗೆ ಪ್ರಯಾಣ ಮಾಡಿದರು (1932). ವಾಷಿಂಗ್‌ಟನ್ನಿನಲ್ಲಿ ನಡೆದ ಅಂತಾರಾಷ್ಟ್ರೀಯ ಭೂವಿಜ್ಞಾನ ಸಂಕಿರಣದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದರು (1933). ಸ್ವದೇಶಕ್ಕೆ ಮರಳಿದ ಬಳಿಕ, ಆಗಲೇ ನಡೆಸಿದ್ದ ರಾಜ್ಯದ ಪ್ರಾಥಮಿಕ ಸರ್ವೇಕ್ಷಣೆ ಮುಗಿದಿತ್ತಾದರೂ ಕೆಲವು ಅತಿ ಮುಖ್ಯವಾದ ಪ್ರದೇಶಗಳ ಪುನರ್ ಸರ್ವೇಕ್ಷಣಾಕಾರ್ಯ ಇವರ ಪಾಲಿಗೆ ಬಂತು. ಮೊದಲ ಸಮೀಕ್ಷೆಗಳನ್ನು ಪೂರೈಸಿದ್ದ ಸ್ಮಿತ್, ಸಂಪತ್ ಐಯಂಗಾರ್ ಮತ್ತು ಜಯರಾಮ್ ಎಂಬವರು ಆ ಪ್ರದೇಶದ ಶಿಲೆಗಳೆಲ್ಲ ಅಗ್ನಿಶಿಲಾ ಮೂಲದವೆಂದು ಅಭಿಪ್ರಾಯಪಟ್ಟಿದ್ದರು. ಆದರೆ ರಾಮರಾಯರ ಹೊಳೆನರಸೀಪುರ ಮತ್ತು ಚಿತ್ರದುರ್ಗ ಪ್ರದೇಶಗಳ

ಮರುಸಮೀಕ್ಷೆಗಳಿಂದಾಗಿ ಅವು ಜಲಜಶಿಲಾ ಸಂಚಯನಗಳಿಂದ ಆದುವೆಂಬುದು ಸ್ಪಷ್ಟಪಟ್ಟಿತು. ಅಲ್ಲದೆ, ಕರ್ನಾಟಕದ ಶಿಲಾಸ್ತೋಮಗಳು ಪ್ರಪಂಚದಲ್ಲೇ ವಿಶಿಷ್ಟ ಮಾದರಿಯವೆಂಬುದನ್ನು ರಾಮರಾಯರು ಪ್ರಪ್ರಥಮವಾಗಿ ಶ್ರುತಪಡಿಸಿದರು. ಪೈರಾಕ್ಸೀನ್ ಗ್ರಾನುಲೈಟುಗಳು ಅಗ್ನಿಶಿಲಾ ಅಂತಸ್ಸರಣದಿಂದ ಆದುವಲ್ಲವೆಂದೂ ಅವು ನಿಜಕ್ಕೂ ಪೆನಿನ್ಸುಲಾರ್ ನೈಸ್‌ಪಟ್ಟಿಶಿಲೆಗಳಲ್ಲಿ ಅಂತರ್ಗತವಾದವು ಎಂಬುದನ್ನು ನಿಖರವಾಗಿ ನಿರೂಪಿಸಿದರು. ಮೈಸೂರು ಸರ್ಕಾರದ ವತಿಯಿಂದ ಗುಜರಾತ್ ರಾಜ್ಯದ ಬೇರಿಯ ಪ್ರದೇಶದ ಭೂವೈಜ್ಞಾನಿಕ ಸರ್ವೇಕ್ಷಣೆಗಾಗಿ ರಾಮರಾವ್ ಅವರ ಸೇವೆಯನ್ನು ಎರವಲು ನೀಡಿದ್ದರ ಸಲುವಾಗಿ ಆ ರಾಜ್ಯದ ಖನಿಜ ಮತ್ತು ಶಿಲೆಗಳ ನಿಖರ ಸಮೀಕ್ಷೆ ಸಾಧ್ಯವಾಯಿತು.

ಇವರು ಅಮೆರಿಕ ಸಂಯುಕ್ತಸಂಸ್ಥಾನಗಳು ಮತ್ತು ಯುರೋಪ್‌ಗಳ ಪ್ರವಾಸವನ್ನು ಮುಗಿಸಿ ಸ್ವದೇಶಕ್ಕೆ ಬರುವ ವೇಳೆಗೆ ಹಲವಾರು ಶುಭಸಮಾಚಾರಗಳು ಇವರಿಗಾಗಿ ಕಾದಿದ್ದವು. ಭಾರತೀಯ ವಿಜ್ಞಾನ ಕಾಂಗ್ರೆಸ್‌ನ (1935) ಭೂವಿಜ್ಞಾನ ವಿಭಾಗೀಯ ಅಧ್ಯಕ್ಷರಾಗಿ ಆಯ್ಕೆಯಾದದ್ದು ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್ ಸಂಸ್ಥೆಗಳು ತಮ್ಮ ಸದಸ್ಯತ್ವ ನೀಡಿ ಗೌರವಿಸಿದ್ದು – ಇವು ಇವರಿಗೆ ಸಂದ ಗೌರವ. ನಿರ್ದೇಶಕರಾಗಿ ಬಡ್ತಿಯೂ ಲಭಿಸಿತು (1935). ಅದೇ ವರ್ಷ ಇವರು ಧಾರವಾಡ ಶಿಲಾಸ್ತೋಮದ ವರ್ಗೀಕರಣವನ್ನು ಪ್ರಕಟಿಸಿದರು. ಇದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಭೂವಿಜ್ಞಾನ ಮಂಡಳಿಗಳು ಇಂದಿಗೂ ಅನುಸರಿಸುತ್ತಿರುವ ವರ್ಗೀಕರಣ ಹಾಗೂ ಸಮದೂಗುವಿಕೆಯ ಸೂತ್ರವಾಗಿ ಉಳಿದುಬಂದಿದೆ.

ರಾಮರಾವ್ ಅವರದು ಸುಲಲಿತ ಬರೆವಣಿಗೆ. 1953ರಲ್ಲಿ ತಮ್ಮ ಆತ್ಮಚರಿತ್ರೆಯನ್ನು 'ರಿಕಲೆಕ್ಷನ್ಸ್ ಆಫ್ ಎನ್ ಇಂಡಿಯನ್ ಜಿಯಾಲಜಿಸ್ಟ್' (ಭಾರತೀಯ ಭೂವಿಜ್ಞಾನಿಯೋರ್ವನ ಸವಿನೆನಪುಗಳು) ಬರೆದರು. ಆ ಗ್ರಂಥದಲ್ಲಿ ಭೂವಿಜ್ಞಾನಿಗೆ ಎದುರಾಗುವ ಸಮಸ್ಯೆಗಳು, ಹಾಸ್ಯಪ್ರಸಂಗಗಳು, ದಿನಚರಿಗಳಲ್ಲದೆ ನದಿ, ಪರ್ವತ, ಜಲಪಾತಗಳ ಹಾಗೂ ನಿಸರ್ಗವರ್ಣನೆಯನ್ನೂ ಸುಂದರವಾಗಿ ಚಿತ್ರಿಸಿದ್ದಾರೆ. ತಮ್ಮ ವಿಶ್ರಾಂತಜೀವನದ ಸಮಯದಲ್ಲಿ ಇವರು ಭಾರತೀಯ ಭೂವಿಜ್ಞಾನ ಸಂಘದ (ಜಿಯಲಾಜಿಕಲ್ ಸೊಸೈಟಿ ಆಫ್ ಇಂಡಿಯ) ಆಜೀವ ಸದಸ್ಯರಾಗಿ,

ಆ ಸಂಘಕ್ಕೆ ಎರಡು ಬಾರಿ ಅಧ್ಯಕ್ಷರಾಗಿ (1964, 1967) ಆಯ್ಕೆಯಾಗಿದ್ದರು. ಆ ಸಂಘದ ಏಳಿಗೆಗಾಗಿ ಕೊನೆಯ ತನಕ ಶ್ರಮಿಸಿದರು.

ಇವರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ 90ಕ್ಕೂ ಮೀರಿ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಇವರ ಇಂಗ್ಲಿಷ್ ಬರವಣಿಗೆಗಳು ಪ್ರಬುದ್ಧವೂ ಕಾವ್ಯಮಯವೂ ಆಗಿವೆ. ಇವರು ಬರೆದ ಕರ್ನಾಟಕದ ಖನಿಜ ನಿಕ್ಷೇಪಗಳು ಎಂಬ ಪುಸ್ತಕ 1959ರಲ್ಲಿ ಪ್ರಕಟವಾಯಿತು. ಇವರಿಗೆ ಛಾಯಾಚಿತ್ರಕಲೆಯಲ್ಲೂ ಆಸಕ್ತಿ ಇತ್ತು. ಇಂಗ್ಲಿಷ್ ಭಾಷೆಯಲ್ಲಿ ಇವರು ಆರಂಭದ ವರ್ಷಗಳಲ್ಲಿ ನಡೆಸಿದ ಸಮೀಕ್ಷಾ ವಿವರಣೆ, ಶಿಲೆ, ಖನಿಜ ಮತ್ತು ಅವುಗಳ ರಚನಾವಿನ್ಯಾಸಗಳ ನಕ್ಷೆ ಹಾಗೂ ಭೂಇತಿಹಾಸ ಸಂಘಟನಾ ನಿರೂಪಣೆಗಳು ಇಂದಿಗೂ ಪ್ರಸ್ತುತವೆನಿಸಿವೆ. ಇವರು 1970 ಫೆಬ್ರವರಿ 15ರಂದು ನಿಧನರಾದರು. *

**ರಾಮರಾವ್, ಲಕ್ಷ್ಮೀಶ್ವರ್:** 1896–1974. ಭಾರತದ ಪ್ರಸಿದ್ಧ ಭೂವಿಜ್ಞಾನಿ. ಇವರು ಬೆಂಗಳೂರಿನಲ್ಲಿ 1896 ಜನವರಿ 23ರಂದು ಜನಿಸಿದರು. ಇವರ ತಂದೆ ರಾಘವೇಂದ್ರರಾವ್ ದೇಶಪಾಂಡೆ, ತಾಯಿ ನಾಗೂಬಾಯಿ. ಇವರ ಪೂರ್ವಜರು ಮೂಲತಃ ಲಕ್ಷ್ಮೀಶ್ವರದವರು. ಚಿಕ್ಕಂದಿನಲ್ಲಿ ರಾಮರಾವ್ ಅವರಿಗೆ ಮಾತೃ ವಿಯೋಗವಾಯಿತು. ಇವರ ಆರಂಭಿಕ ವಿದ್ಯಾಭ್ಯಾಸ ನಡೆದದ್ದು ಬೆಂಗಳೂರಿನಲ್ಲಿ. 1918ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎಸ್ಸಿ. ಪದವಿ ಪಡೆದರು. ಅನಂತರ ಅದೇ ಕಾಲೇಜಿನಲ್ಲಿ ಭೂವಿಜ್ಞಾನದ ಅಧ್ಯಾಪನವೃತ್ತಿ ಪ್ರಾರಂಭಿಸಿ, ಮುಂದೆ ಪ್ರಾಧ್ಯಾಪಕರೂ ಆಗಿ ಆ ವಿಭಾಗದ ಮುಖ್ಯಸ್ಥರಾಗಿ ಮೂರು ದಶಕಗಳಿಗೂ ಹೆಚ್ಚುಕಾಲ ಸೇವೆ ಸಲ್ಲಿಸಿ 1951ರಲ್ಲಿ ನಿವೃತ್ತರಾದರು. ಭೂವಿಜ್ಞಾನದ ಸೇವೆಗಾಗಿ ನೂರಾರು ನಿಷ್ಣಾತ ವಿದ್ಯಾರ್ಥಿಗಳು ಇವರ ಸೇವಾವಧಿಯಲ್ಲಿ ತರಬೇತು ಪಡೆದರು. ಭೂವಿಜ್ಞಾನದ ಹಲವು ಶಾಖೆಗಳಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ ಇತ್ತು. ಭೂಇತಿಹಾಸ ಮತ್ತು ಪ್ರಾಗ್ಜೀವಿ ವಿಜ್ಞಾನಗಳ ಬಗ್ಗೆ ಅದರಲ್ಲೂ ಭಾರತದ ಭೂಇತಿಹಾಸದ ಬಗ್ಗೆ ಇವರು ಅಧಿಕಾಸಕ್ತಿ ಬೆಳೆಸಿಕೊಂಡಿದ್ದರು. ಇವರ ಬೋಧನಾಕ್ರಮ ಹೆಚ್ಚು ಆಕರ್ಷಣೀಯವೂ ಸ್ಫೂರ್ತಿದಾಯಕವೂ ಅಲ್ಲದೆ ಸ್ಪಷ್ಟ ಅಭಿಪ್ರಾಯಗಳಿಂದ ಕೂಡಿತ್ತು. ಇವರ ಸಂಶೋಧನ ಪ್ರಕಟಣೆಗಳು ನೂರಕ್ಕೂ ಹೆಚ್ಚಾಗಿದ್ದು, ಅವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಪ್ರಪಂಚಾದ್ಯಂತ ಅತ್ಯಂತ ಕುತೂಹಲಕಾರಿ ವಿಷಯ ಎಂದೆನಿಸಿರುವ ಕ್ರಿಟೇಷಸ್ ಯುಗ ಮತ್ತು ತೃತೀಯ ಜೀವಿಕಲ್ಪಗಳ ನಡುವಿನ ಸೀಮಾ ರೇಖೆಯನ್ನು ಕುರಿತಂತೆ ಇವರು ಪರಿಷ್ಕರಿಸಿ ಹಲವಾರು ಪ್ರಬಂಧಗಳನ್ನು ಒಳಗೊಂಡ ಆಧಾರ ಗ್ರಂಥವೊಂದನ್ನು ಹೊರತಂದು (1966) ಈ ಸಂಬಂಧದಲ್ಲಿ ಇದ್ದ ಕ್ಲಿಷ್ಟಸಮಸ್ಯೆಯನ್ನು ಕುರಿತಾದ ಸಂದಿಗ್ಧತೆಯನ್ನು ಹೋಗಲಾಡಿಸಿದರು.



ಇವರು ಜಿಯಲಾಜಿಕಲ್ ಸೊಸೈಟಿ ಆಫ್ ಇಂಡಿಯ ಸಂಸ್ಥೆಯ ಸಂಸ್ಥಾಪಕರು. ಆ ಸಂಸ್ಥೆಯ ಅಧ್ಯಕ್ಷರಾಗಿ ಆ ಸಂಸ್ಥೆ ಹೊರತರುತ್ತಿದ್ದ ನಿಯತಕಾಲಿಕದ ಸಂಪಾದಕರಾಗಿ 13 ವರ್ಷಗಳ ದೀರ್ಘಸೇವೆ ಸಲ್ಲಿಸಿದರು. ಇವರ ಸಂಶೋಧನ ಪ್ರಕಟಣೆಗಳನ್ನು ಗಮನಿಸಿದ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ 1940ರ ಭೂವಿಜ್ಞಾನದ ವಿಭಾಗದ ವಿದ್ವತ್ ಸಭೆಗೆ ಇವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿತು. ಏಷ್ಯದ ಭೂಇತಿಹಾಸ ಮತ್ತು ಪ್ರಾಗ್ಜೀವಿ ವಿಜ್ಞಾನಗಳಿಗೆ ಅಪಾರ ಕೊಡುಗೆಗಳನ್ನಿತ್ತ ಇವರಿಗೆ, ಬಂಗಾಲದ ಏಷ್ಯಾಟಿಕ್ ಸೊಸೈಟಿ ಪ್ರಮಥನಾಥ್ ಬೋಸ್ ಪ್ರಶಸ್ತಿ ಪದಕವನ್ನು ನೀಡಿ ಗೌರವಿಸಿತು. ಯು.ಎಸ್.ಎಸ್.ಆರ್. ವಿಜ್ಞಾನ ಅಕಾಡೆಮಿ ಇವರನ್ನು ಅಂತಾರಾಷ್ಟ್ರೀಯ ಕ್ರಿಟೇಷನ್ ಮತ್ತು ತೃತೀಯ ಜೀವಿಕಲ್ಪದ ನಡುವಣ ಸೀಮಾರೇಖೆಯನ್ನು ನಿರ್ಧರಿಸುವ ತಂಡದ ಮುಖಂಡರನ್ನಾಗಿ ನೇಮಕಮಾಡಿತ್ತು. ಭಾರತದ ಎಣ್ಣೆ ಮತ್ತು ಪ್ರಾಕೃತಿಕ ಅನಿಲ ಸಂಸ್ಥೆಯಿಂದ (ಓ.ಎನ್.ಜಿ.ಸಿ.) ಶಿಕ್ಷಣಾರ್ಥಿಗಳ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಇವರಿಗೆ ಕೋರಿಕೆ ಬಂದಿತ್ತಾದರೂ ಅದನ್ನು ಒಪ್ಪಿಕೊಳ್ಳದೆ ಭಾರತದ ಭೂವೈಜ್ಞಾನಿಕ ಸಂಘದ ಅಧ್ಯಕ್ಷರಾಗಿಯೇ ಮುಂದುವರೆದರು.

ಇವರು ಸರಳ ಹಾಗೂ ಉದಾತ್ತ ನೀತಿ ನಿಷ್ಠೆಯ ವ್ಯಕ್ತಿಯಾಗಿದ್ದರು. ಕೆಲಕಾಲ ಪಾರ್ಶ್ವವಾಯು ಪೀಡಿತರಾಗಿದ್ದ ಇವರು 1974 ನವೆಂಬರ್ 11ರಂದು ನಿಧನಹೊಂದಿದರು. *

**ರಾಮರಾವ್ ವಿ. ನಾಯಕ:** 1909–98. ಪ್ರಸಿದ್ಧ ಸಂಗೀತಗಾರರು. ರಾಮರಾವ್ ವೆಂಕಾಜಿ ನಾಯಕ ಇವರ ಪೂರ್ಣ ಹೆಸರು. ಇವರು 1909 ಸೆಪ್ಟೆಂಬರ್ 28ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ವೆಂಕಾಜಿನಾಯಕ. ತಾಯಿ ಲಕ್ಷ್ಮೀಬಾಯಿ. ಮೂಲತಃ ಇವರು ಹಾವೇರಿ ಜಿಲ್ಲೆಯಲ್ಲಿದ್ದವರು. ಸವಣೂರು ತಾಲ್ಲೂಕಿನ ನೀಲಗಿರಿಗ್ರಾಮದವರು. ಇವರಿಗೆ ಚಿಕ್ಕಂದಿನಿಂದಲೇ ಸಂಗೀತದ ಬಗ್ಗೆ ಒಲವು ಮೂಡಿತು. ಕರ್ನಾಟಕ ಸಂಗೀತವನ್ನು ಹಾರ್ಮೋನಿಯಂ ವಾದಕರಾದ ಶ್ರೀನಿವಾಸರಾವ್ ಅವರ ಬಳಿ ಅಭ್ಯಾಸ ಮಾಡಿದರು.

ತಮ್ಮ ಕುಟುಂಬದಲ್ಲಿ ಹಣದ ಅಡಚಣೆ ಉಂಟಾದಾಗ ತಮ್ಮ ಹತ್ತನೆಯ ವಯಸ್ಸಿನಲ್ಲೇ ಸಂಗೀತ ಪಾಠ ಹೇಳಿ ದಿನಕ್ಕೆ ಐದು ರೂಪಾಯಿ ಗಳಿಸಿ ಸಂಸಾರ ತೂಗಿಸುತ್ತಿದ್ದರು (1920). ಬಾಲಕಲಾವಿದರಾಗಿ ಧ್ರುವ ಹಾಗೂ ಪ್ರಹ್ಲಾದನ ಪಾತ್ರಗಳಲ್ಲಿ ಸುಪ್ರಸಿದ್ಧ ನಾಟಕ ಕಂಪನಿಗಳಲ್ಲಿ ಭಾಗವಹಿಸಿದರು. ಸಣ್ಣ ವಯಸ್ಸಿನಲ್ಲಿ ಇವರು ಹೆಚ್ಚಾಗಿ ಸ್ತ್ರೀ ಪಾತ್ರಗಳನ್ನು ಮನೋಜ್ಞವಾಗಿ ಅಭಿನಯಿಸುತ್ತಿದ್ದರು. ಗುಬ್ಬಿವೀರಣ್ಣ, ಹಿರಣ್ಣಯ್ಯ, ವರದಾಚಾರ್ ಇವರು ಅಭಿನಯಿಸುತ್ತಿದ್ದ ಕೆಲವು ಸುಪ್ರಸಿದ್ಧ ನಾಟಕ ಕಂಪನಿಗಳು. ಆ ಕಾಲದಲ್ಲಿ ಕಲಾವಿದರಿಗೆ ಕಲಾಸೇವೆಗೆ ಪ್ರತಿಫಲವಾಗಿ ಒಂದು ಸೇರು ರಾಗಿ ಅಥವಾ ಬತ್ತವನ್ನು ದಿನಗೂಲಿಯಾಗಿ ನೀಡುವ ಪರಿಪಾಠವಿತ್ತು. ಸಂಗೀತದ ಬಗ್ಗೆ ಅಪಾರ ಒಲವಿದ್ದ ಇವರು ಪಂಡಿತ ಗೋವಿಂದ ವಿಠಲ ಭಾವೆ ಅವರಲ್ಲಿ, ಅನಂತರ ಆಗ್ರ ಘರಾನದ ಶ್ರೇಷ್ಠ ವಿದ್ವಾಂಸರಾಗಿದ್ದ ಸ್ವಾಮಿ ವಲ್ಲಭದಾಸರಲ್ಲಿ ಉಸ್ತಾದ್ ಅತ್ತಾ ಹುಸೇನ ಖಾನ ಅವರಲ್ಲಿ ಅಭ್ಯಾಸ ನಡೆಸಿದರು. ಇಲ್ಲಿ ಇವರಿಗೆ ಭಾರತೀಯ ಸಂಗೀತದ ಶ್ರೀಮಂತಿಕೆಯ ಅರಿವೂ ಗುರುಶಿಷ್ಯ ಪರಂಪರೆಯ ಪರಿಚಯವೂ ಆಯಿತು. ಮುಂದೆ ಇವರು ಆಗ್ರ ಘರಾನದ ಅನನ್ಯ ಸಾಧಕರಾದ ಉಸ್ತಾದ್ ಫಯಾಜ್ ಖಾನ್ ಅವರಲ್ಲಿ ಪಳಗಿ ನುರಿತ ಗಾಯಕರಾಗಿ ರೂಪುಗೊಂಡರು. ಇವರು ಗಾಯನದ ಜೊತೆಗೆ ಹಾರ್ಮೋನಿಯಂ ವಾದನದಲ್ಲೂ ನೈಪುಣ್ಯ ಗಳಿಸಿದ್ದರು. ತನಿ ಹಾಡುಗಾರಿಕೆ ಹಾಗೂ ಸಮರ್ಥವಾಗಿ ಸಾಥ್ ನೀಡುವುದರಲ್ಲಿ ಪರಿಣತಿ ಹೊಂದಿದ್ದರು. ಬೆಂಗಳೂರಿಗೆ ಬಂದಾಗಲೆಲ್ಲ ಸಾಥ್ ನೀಡುತ್ತಿದ್ದ ಇವರನ್ನು ವಲ್ಲಭದಾಸರು ಬರೋಡಕ್ಕೆ ಆಹ್ವಾನಿಸಿದರು. ಇವರು ಆಗ್ರ ಘರಾನದಲ್ಲಿ ಹೆಚ್ಚಿನ ಪರಿಶ್ರಮ ಹೊಂದಿ ಕಛೇರಿಗಳಿಗೆ ಸಾಥ್ ಕೂಡ ನೀಡಿ ಪ್ರಖ್ಯಾತರಾದರು. ಅತ್ಯಂತ ಪ್ರತಿಭಾವಂತರಾದ ಇವರು ತಮ್ಮ ಸೃಜನಶೀಲತೆಯಿಂದ ಅನೇಕ ರಾಗಗಳಲ್ಲಿ ಖಯಾಲ್‌ಗಳನ್ನು ರಚಿಸಿ

ದ್ದಾರೆ. ಕರ್ನಾಟಕ ಸಂಗೀತದ ಕಲ್ಯಾಣ ವಸಂತರಾಗದಿಂದ ಪ್ರಭಾವಿತರಾಗಿ ಅಪರೂಪದ ನಾಗರಂಜನಿ ಎಂಬ ಹೊಸ ರಾಗವನ್ನು ಸಂಯೋಜಿಸಿದ್ದಾರೆ.

ಇವರು ಅನೇಕ ಸಂಗೀತ ಕಾರ್ಯಕ್ರಮಗಳನ್ನು ದೇಶಾದ್ಯಂತ ನೀಡಿದ್ದಾರೆ. ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ, ಮೈಸೂರು ದಸರ ಕಾರ್ಯಕ್ರಮಗಳಲ್ಲಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ತಮ್ಮ ಸತತ ಸಾಧನೆಯಿಂದ ಒಲಿಸಿಕೊಂಡ ಸಂಗೀತ ಜ್ಞಾನವನ್ನು ಅನೇಕ ಶಿಷ್ಯರಿಗೆ ಧಾರೆಯೆರೆದಿದ್ದಾರೆ. ಕಲಾಸೇವೆಗಾಗಿ ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ಸಂದಿವೆ. ಗಂಧರ್ವ ಮಹಾವಿದ್ಯಾಲಯದ ಸಂಗೀತ ಕಲಾ ಭೂಷಣ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಧ್ಯಪ್ರದೇಶದ ಪ್ರತಿಷ್ಠಿತ ತಾನಸೇನ್ ಪ್ರಶಸ್ತಿ, ಕಾಳಿದಾಸ ಸಮ್ಮಾನ್, ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಇವು ಮುಖ್ಯವಾದುವು. ಮೈಸೂರಿನ ಅರಮನೆಯ ಆವರಣದಲ್ಲಿ ಸಮರ್ಪಿಸಲಾದ (1995) ರಾಜ್ಯದ ಸಂಗೀತ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಇಲ್ಲಿ ಸ್ಮರಣೀಯ. ಇವರು ತಮ್ಮ 89ನೆಯ ವಯಸ್ಸಿನಲ್ಲಿ 1998 ಅಕ್ಟೋಬರ್ 21ರಂದು ನಿಧನರಾದರು. **(ಎಸ್‌ಯು.ಎಂ.)**

**ರಾಮಸಾಗರ:** ಬಂಗಾರಪೇಟೆ ತಾಲ್ಲೂಕಿನ ರಾಮಸಾಗರ ಗ್ರಾಮಕ್ಕೆ ಕೆಲವೇ ಫರ್ಲಾಂಗಗಳ ದೂರದಲ್ಲಿ ಪಾಲಾರ್ ನದಿಗೆ ಅಡ್ಡಲಾಗಿರುವ ಜಲಾಶಯಗಳಲ್ಲಿ ಇದೇ ಕೊನೆಯದು. ಈ ಕೆರೆ ಚೋಳರ ಕಾಲದಿಂದಲೂ ಇದೆಯೆಂದೂ ಹಿಂದೆ ಇದನ್ನು ಬಕ್ಕಸಾರವೆಂದು ಕರೆಯುತ್ತಿದ್ದರೆಂದೂ ಹೇಳುವರು. 1903ರಲ್ಲಿ ಮಿತಿಮೀರಿದ ಪ್ರವಾಹದಿಂದಾಗಿ ನೀರು ಕೆರೆಯ ಏರಿಯ ಮೇಲೆ ಹರಿದು ಏರಿ ಮೂರು ಕಡೆ ಕೊಚ್ಚಿಹೋದ ಕಾರಣ 1904ರಲ್ಲಿ ಇದನ್ನು ದುರಸ್ತು ಮಾಡಲಾಯಿತು. ಈ ಕೆರೆಯಿಂದ ಸು. 1,261 ಎಕರೆ ಪ್ರದೇಶಕ್ಕೆ ನೀರಾವರಿ ಒದಗುತ್ತದೆ. **(ಎಚ್.ಆರ್.ಆರ್.)**

**ರಾಮಸ್ವಾಮಿ ಮೊದಲಿಯಾರ್, ಆರ್ಕಾಟ್:** 1887-1976. ಮೈಸೂರು ಸಂಸ್ಥಾನದ ದಿವಾನರು (1946-49). 1887ರಲ್ಲಿ ಜನಿಸಿದರು. ಇವರ ತಂದೆ ಕುಪ್ಪುಸ್ವಾಮಿ ಮೊದಲಿಯಾರ್. ಮದರಾಸು ವಿಶ್ವವಿದ್ಯಾಲಯದ ಪದವೀಧರರಾಗಿ ಬಿ.ಎಲ್. ಪರೀಕ್ಷೆಮಾಡಿ ವಕಾಲತ್ತು ವೃತ್ತಿಯನ್ನು ಆಶ್ರಯಿಸಿದರು. ಮದರಾಸು ಪ್ರಜಾಪ್ರತಿನಿಧಿಯ ಸದಸ್ಯ (1920-26), ಮದರಾಸು ನಗರ ಸಭೆಯ ಸದಸ್ಯ, ಅನಂತರ ಅದರ ಮೇಯರ್ (1928-30) ಆದರು. ಅನೇಕ ಸಮಿತಿಗಳ ಸದಸ್ಯ ಹಾಗೂ ಕೆಲವು ಕಾಲ ಜಸ್ಟಿಸ್ ಪತ್ರಿಕೆಯ ಸಂಪಾದಕ (1927-35) ಸಹ ಆಗಿದ್ದರು. ಅನಂತರ ಇವರು ವೈಸ್‌ರಾಯ್ ಅವರ ಮಂತ್ರಿಮಂಡಲದ ಸದಸ್ಯರೂ (1939-46) ಲಂಡನ್ನಿನಲ್ಲಿರುವ ಇಂಡಿಯ ಕಾರ್ಯದರ್ಶಿಗಳ ಮಂತ್ರಾಲೋಚನ ಸಭೆಯ ಸದಸ್ಯರೂ ಆಗಿದ್ದರು.

ರಾಮಸ್ವಾಮಿ ಮೊದಲಿಯಾರರು ಒಳ್ಳೆ ವಾಗ್ಮಿ. ಉತ್ತಮ ಶ್ರೇಣಿಯ ವ್ಯವಹಾರ ಕುಶಲಿ. ವಿವಿಧ ರಂಗಗಳಲ್ಲಿನ ಇವರ ಸೇವೆಗಾಗಿ ಅನೇಕ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಬ್ರಿಟಿಷ್ ಸರ್ಕಾರದಿಂದ ದಿವಾನ್ ಬಹದ್ದೂರ್ ನೈಟ್ ಪ್ರಶಸ್ತಿ (1937), ಕೆ.ಸಿ.ಎಸ್.ಐ. (1942) ಮತ್ತು ಭಾರತ ಸರ್ಕಾರದಿಂದ ಪದ್ಮವಿಭೂಷಣ (1976) ಪ್ರಶಸ್ತಿ ಸಂದಿವೆ. ಇವರು 1976ರಲ್ಲಿ ಮದರಾಸಿನಲ್ಲಿ ನಿಧನರಾದರು. **(ಟಿ.ಟಿ.ಎಸ್.)**

**ರಾಮಾಜೋಯಿಸ್, ಎಂ.:** 1931- . ಹೆಸರಾಂತ ನ್ಯಾಯವಾದಿ, ಕಾನೂನು ತಜ್ಞ, ಲೇಖಕರು. ಮಂಡಗದ್ದೆ ರಾಮಾಜೋಯಿಸ ಇವರ ಪೂರ್ತಿ ಹೆಸರು. ಜಾರ್ಖಂಡ್ ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದರು. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಆರಗ ಗ್ರಾಮದಲ್ಲಿ 1931 ಜುಲೈ 27ರಂದು ಜನಿಸಿದರು. ತಂದೆ ನರಸಿಂಹಜೋಯಿಸ್, ತಾಯಿ ಲಕ್ಷ್ಮೀದೇವಮ್ಮ. ಮಂಡಗದ್ದೆ ಮತ್ತು ತಂದೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಶಿವಮೊಗ್ಗದಲ್ಲಿ ಪ್ರೌಢಶಿಕ್ಷಣ ಮುಗಿಸಿದರು. ಅನಂತರ ಶಿವಮೊಗ್ಗದ ಸರ್ಕಾರಿ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಓದಿದರು. ಬಿ.ಎಸ್‌ಸಿ. ಪದವಿ ಪಡೆದ (1954) ಇವರು 1958ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿ ಪಡೆದರು. ಅದೇ ವರ್ಷ ಆಗಿನ ಹಿರಿಯ ವಕೀಲರಾದ ವೆಂಕಟರಂಗ ಅಯ್ಯಂಗಾರರ ಮಾರ್ಗದರ್ಶನದಲ್ಲಿ ವೃತ್ತಿಜೀವನ ಆರಂಭಿಸಿದರು. 1963ರಿಂದ ಸ್ವತಂತ್ರವಾಗಿ ನ್ಯಾಯವಾದಿಗಳಾಗಿ ದುಡಿದು ಹೆಸರು ಮಾಡಿದರು. ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡ ಇವರು (1977), ಹಂಗಾಮಿ ಮುಖ್ಯನ್ಯಾಯಾಧೀಶ ರಾಗಿಯೂ ಕೆಲಸ ನಿರ್ವಹಿಸಿದ್ದಾರೆ(1989-91). 1992ರ ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಪಂಜಾಬ್ ಮತ್ತು ಹರಿಯಾಣದಲ್ಲಿ ಉಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು.



ಇವರು ತಮ್ಮ ವೃತ್ತಿಜೀವನದುದ್ದಕ್ಕೂ ನಿರ್ಭೀತ, ನಿಷ್ಪಕ್ಷಪಾತ, ಪ್ರಾಮಾಣಿಕ ನ್ಯಾಯಾಧೀಶರೆಂದು ಛಾಪು ಒತ್ತಿದರು. ಸರ್ವೋಚ್ಚನ್ಯಾಯಾಲಯದ ಹಿರಿಯ ನ್ಯಾಯವಾದಿಗಳಾಗಿ 1993ರಿಂದ ಸುಮಾರು ಒಂಬತ್ತು ವರ್ಷ ಸಾರ್ವಜನಿಕ ಹಿತಾಸಕ್ತಿಗಳತ್ತ ಗಮನ ಹರಿಸಿದರು. ಮೊದಲಿನಿಂದಲೂ ದೇಶಪ್ರೇಮವನ್ನು ಬೆಳೆಸಿಕೊಂಡಿದ್ದ ಜೋಯಿಸರು ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಯಲ್ಲಿ ಶಿಸ್ತು, ಸಂಯಮ, ಮನೋಸ್ಥೈರ್ಯ ಬೆಳೆಸಿಕೊಂಡವರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ರಾಷ್ಟ್ರೀಯ ನಾಯಕರಾದ ಅಟಲ್ ಬಿಹಾರಿ ವಾಜಪೇಯಿ, ಮಧು ಲಿಮಯೆ, ಮಧು ದಂಡವತೆ, ಎಲ್.ಎನ್. ಮಿಶ್ರ, ಎಲ್.ಕೆ. ಅಡ್ವಾಣಿ ಪರವಾಗಿ ಹೇಬಿಯಸ್ ಕಾರ್ಪಸ್ ಅರ್ಜಿಗಳನ್ನು ಹಾಕಿ ಹೋರಾಟ ನಡೆಸಿದರು. ಇದರ ಪರಿಣಾಮವಾಗಿ ಇವರು ಬಂಧನಕ್ಕೊಳಗಾಗಿ ಸುಮಾರು ಹದಿಮೂರು ತಿಂಗಳ ಕಾಲ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಕಳೆಯಬೇಕಾಯಿತು. 1992ರಲ್ಲಿ ಇವರು ಪಂಜಾಬ್, ಹರಿಯಾಣ ನ್ಯಾಯಾಧೀಶ ಸ್ಥಾನಕ್ಕೆ ಪ್ರತಿಭಟನಾತ್ಮಕ ರಾಜಿನಾಮೆ ನೀಡಿದರು.

ಇವರು ನ್ಯಾಯಾಧೀಶರಾಗಿ ನೀಡಿದ ಬಹುತೇಕ ತೀರ್ಪುಗಳಿಗೆ ಸುಪ್ರೀಂಕೋರ್ಟಿನ ಮನ್ನಣೆ ದೊರಕಿದೆ. ಬೆಂಗಳೂರಿನ ತಿಪ್ಪಗೊಂಡನಹಳ್ಳಿ ಬಳಿ ಬಡಾವಣೆ ತಲೆಯೆತ್ತುವುದನ್ನು ತಪ್ಪಿಸಿ ಬೆಂಗಳೂರಿಗೆ ಶುದ್ಧ ನೀರು ದೊರೆಯುವಂತೆ ಮಾಡಿದರು. ಭಾಷಾ ಅಲ್ಪಸಂಖ್ಯಾತರ ಪರ ಮಾತೃಭಾಷಾ ಶಿಕ್ಷಣ ಕುರಿತಂತೆ ಇವರು ನೀಡಿದ ತೀರ್ಪು ಭಾರತದ ಎಲ್ಲ ರಾಜ್ಯಗಳಿಗೂ ಅನ್ವಯವಾಗುವಂತಹುದು. ಕ್ಯಾಪಿಟೇಶನ್ ಹಣ ನೀಡಿದರೂ ಅಲ್ಲಿಯೂ ಅರ್ಹತೆಯೆ ಮಾನದಂಡವಾಗಬೇಕು ಎಂದು ಇವರು ನೀಡಿದ ತೀರ್ಪು ಸಾರ್ವಕಾಲಿಕ ಮೌಲ್ಯ ಹೊಂದಿದೆ.

ರಾಷ್ಟ್ರೀಯವಾದಿಯಾದ ಇವರು ಸಾರ್ವಜನಿಕ ಹಿತಾಸಕ್ತಿಗಳಿಗೆ ಧಕ್ಕೆ ಬಂದಾಗಲೆಲ್ಲ ದನಿ ಎತ್ತರಿಸಿದ್ದಾರೆ. ಕೈಗಾ ಅಣುಸ್ಥಾವರದ ಕುರಿತು ಶಿವರಾಮ ಕಾರಂತರು ಪರಿಸರ ರಕ್ಷಣೆ ಕಾಳಜಿ ವಹಿಸಿದಾಗ ಕಾರಂತರ

ಪರ ವಕಾಲತ್ತು ವಹಿಸಿ ಪರಿಸರ ಪ್ರಭಾವ ವರದಿಯ ಬಗ್ಗೆ ಸರ್ಕಾರ ಜಾಗೃತವಾಗುವಂತೆ ಮಾಡಿದರು. ಇವರು ಕಾನೂನಿಗೆ ಸಂಬಂಧಿಸಿದಂತೆ ಅನೇಕ ಮೌಲಿಕ ಗ್ರಂಥಗಳನ್ನು ರಚಿಸಿದ್ದಾರೆ. ಸರ್ವಿಸಸ್ ಅಂಡರ್ ದಿ ಸ್ಟೇಟ್ ಎಂಬುದು ಇವರ ಪ್ರಥಮ ಕೃತಿ (1987). ತುರ್ತುಪರಿಸ್ಥಿತಿಯ ಅವಧಿಯಲ್ಲಿ (1975–77) ಇವರು ಸರ್ಕಾರಿ ಕ್ರಮಗಳ ವಿರುದ್ಧ ಕೋರ್ಟಿನಲ್ಲಿ ನಡೆದ ನ್ಯಾಯಾಂಗೀಯ ಹೋರಾಟದ ಕಥಾನಕವುಳ್ಳ ಇನ್ನೊಂದು ಪುಸ್ತಕವೂ ಓದುಗರನ್ನು ಆಕರ್ಷಿಸಿದೆ. ಲೀಗಲ್ ಅಂಡ್ ಕಾನ್‌ಸ್ಟಿಟ್ಯೂಷನಲ್ ಹಿಸ್ಟರಿ ಆಫ್ ಇಂಡಿಯಾ ಎಂಬ ಇವರ ಗ್ರಂಥ (1984) ಮೂರು ಮುದ್ರಣಗಳನ್ನು ಕಂಡಿದ್ದು ಕಾನೂನು ಪದವಿ ಶಿಕ್ಷಣದ ಪಠ್ಯಪುಸ್ತಕವಾಗಿದೆ.

ಧರ್ಮದ ಅರ್ಥವನ್ನು ಎಳೆಎಳೆಯಾಗಿ ಬಿಡಿಸಿಟ್ಟು ಆ ಕಾಲದಲ್ಲಿ ವ್ಯವಹಾರ ಧರ್ಮದಲ್ಲಿದ್ದ ಸಿವಿಲ್ ಮತ್ತು ಕ್ರಿಮಿನಲ್ ಕಾನೂನು ವ್ಯಾಖ್ಯಾನಿಸಿದ್ದಾರೆ. ಪ್ರಾಚೀನ ಅರ್ವಾಚೀನ ಕಾಲಗಳ ಸೇತುವೆ ಕಟ್ಟಿ ಇಂದಿನ ನ್ಯಾಯಶಾಸ್ತ್ರದ ನ್ಯಗ್ರೋಧದ ಬೀಜಗಳು ಪ್ರಾಚೀನ ನ್ಯಾಯ ಶಾಸ್ತ್ರದ ಗ್ರಂಥಗಳಲ್ಲಿ ಅಡಗಿದೆಯೆಂಬುದನ್ನು ಪರಿಣಾಮಕಾರಿಯಾಗಿ ಸರಳವಾಗಿ ವಿಶ್ಲೇಷಿಸಿದ ಕೃತಿ ‘ಧರ್ಮ ದಿ ಗ್ಲೋಬಲ್ ಎಥಿಕ್’. ಪ್ರಾಚೀನ ಪರಂಪರೆಯ ಅಧ್ಯಯನಕ್ಕೆ ಇದು ಆಕರವೆನಿಸಿದೆ.

ಇವರು ಬೆಂಗಳೂರು ನಗರದಲ್ಲಿರುವ ರಾಷ್ಟ್ರೀಯ ಕಾನೂನು ಶಾಲೆಯ ಗೌರವ ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲಿನ ಸದಸ್ಯ, ಕೊಟ್ಟಾಯಮ್ ಮಹಾತ್ಮಾಗಾಂಧಿ ವಿಶ್ವವಿದ್ಯಾಲಯದ ಕಾನೂನು ಅಧ್ಯಯನ ಮಂಡಳಿಯ ಸದಸ್ಯ, ಭಾರತೀಯ ವಿದ್ಯಾಭವನದ ಉಪಾಧ್ಯಕ್ಷ, ಭಾರತ ವಿಕಾಸ ಪರಿಷತ್ತಿನ ಅಖಿಲ ಭಾರತ ಮಟ್ಟದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಉತ್ತಮ ವಾಗ್ಮಿ ಎಂದು ಹೆಸರಾದ ಇವರು ಅನೇಕ ವೇದಿಕೆಗಳಿಂದ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದ್ದಾರೆ.

(ಎಸ್.ಎಂ.ಕೆ.)

**ರಾಮಾನುಜನ್, ಎ.ಕೆ.:** 1929–93. ಕನ್ನಡದ ಪ್ರಸಿದ್ಧ ನವ್ಯಕವಿ. ಕತೆಗಾರ, ಜಾನಪದತಜ್ಞ, ಭಾಷಾವಿಜ್ಞಾನಿ; ದ್ರಾವಿಡ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿ, ದ್ರಾವಿಡ ಸಂಸ್ಕೃತಿಯನ್ನು ಪಾಶ್ಚಾತ್ಯ ಪ್ರಪಂಚಕ್ಕೆ ಮೊತ್ತಮೊದಲ ಬಾರಿಗೆ ಪರಿಚಯಿಸಿದ ಶ್ರೇಷ್ಠ ಭಾಷಾಂತರಕಾರ. ಇವರ ಪೂರ್ಣ ಹೆಸರು ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್. ಇವರು 1929 ಮಾರ್ಚ್ 16ರಂದು ಮೈಸೂರಿನಲ್ಲಿ ಜನಿಸಿದರು. ಪ್ರಾಥಮಿಕದಿಂದ ಸ್ನಾತಕೋತ್ತರ ತರಗತಿವರೆಗೆ ಇವರು ಶಿಕ್ಷಣ ಪಡೆದದ್ದು ಮೈಸೂರಿನಲ್ಲಿ. 1950ರಲ್ಲಿ ಇಂಗ್ಲಿಷ್ ಎಂ.ಎ. ಪದವಿ ಗಳಿಸಿ ಬರೋಡ, ಬೆಳಗಾಂವಿ, ಮದುರೈ, ಕೊಯಿಲಾನ್ ಮೊದಲಾದೆಡೆಗಳಲ್ಲಿ ಸುಮಾರು ಒಂಬತ್ತು ವರ್ಷಗಳ ಕಾಲ ಉಪನ್ಯಾಸಕರಾಗಿ ಕೆಲಸ ಮಾಡಿದರು. 1959ರಲ್ಲಿ ಸ್ಮಿತ್‌ಮಂಟ್ ವ್ಯಾಸಂಗ ವೇತನ ಹಾಗೂ ಫುಲ್‌ಬ್ರೈಟ್ ಪ್ರವಾಸ ವೇತನ ಪಡೆದು ಭಾಷಾವಿಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆಯಲು ಅಮೆರಿಕದ ಇಂಡಿಯಾನಾ ವಿಶ್ವವಿದ್ಯಾಲಯಕ್ಕೆ ತೆರಳಿದರು. ಇಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಉತ್ಪಾದನಾತ್ಮಕ ವ್ಯಾಕರಣವನ್ನು ಬರೆದು ಪಿಎಚ್.ಡಿ. ಪದವಿ ಗಳಿಸಿದರು (1961). ಅನಂತರ ವಿಸ್ಕಾನ್‌ಸಿನ್, ಬರ್ಕ್‌ಲಿ, ಮಿಶಿಗನ್ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಕರಾಗಿ ಕೆಲಸಮಾಡಿ, ಷಿಕಾಗೊ ವಿಶ್ವವಿದ್ಯಾಲಯದ ಡಿಪಾರ್ಟ್‌ಮೆಂಟ್ ಆಫ್ ಸೌತ್ ಏಷ್ಯನ್ ಲ್ಯಾಂಗ್ವೇಜಸ್ ಅಂಡ್ ಸಿವಿಲೈಸ್ಸೇಷನ್–ಈ ವಿಭಾಗದಲ್ಲಿ ಭಾಷಾವಿಜ್ಞಾನ ಪ್ರಾಧ್ಯಾಪಕರಾಗಿದ್ದರು, ಡಿಪಾರ್ಟ್‌ಮೆಂಟ್ ಆಫ್ ಲಿಂಗ್ವಿಸ್ಟಿಕ್ಸ್ ಅಂಡ್ ದಿ ಕಮಿಟಿ ಆನ್ ಸೋಷಿಯಲ್ ಥಾಟ್‌ನ ಸದಸ್ಯರಾಗಿದ್ದರು.

ಇವರ ಪ್ರಥಮ ಕೃತಿ ಗಾದೆಗಳು (1955) ಬಹುಜನರ ಮನ್ನಣೆ ಪಡೆದಿತ್ತು. ಇದರಲ್ಲಿ ಗಾದೆಯ ರೂಪರಚನೆ, ಕನ್ನಡ ಗಾದೆಗಳ ವಿಶ್ಲೇಷಣೆ ಉಂಟು. ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಬಗ್ಗೆ ವೈಜ್ಞಾನಿಕ ಮನೋಭಾವ ಅಷ್ಟಾಗಿ ಕಾಣಿಸಿಕೊಂಡಿರದ ಸಮಯದಲ್ಲಿ ಈ ಕೃತಿ ಪ್ರಕಟವಾಗಿ ಅನೇಕ ಹೊಸ ಸಂಗತಿಗಳನ್ನು ಬಿಂಬಿಸಿದ್ದು ಮಹತ್ತ್ವದ ವಿಚಾರ. ಅದುವರೆಗೆ ಹೆಚ್ಚಾಗಿ ಗ್ರಂಥಸ್ಥ ಹಾಗೂ ಜನಪದ ಗಾದೆಗಳ ಸಂಗ್ರಹಕಾರ್ಯ ನಡೆದಿತ್ತು. ಆದರೆ ಗಾದೆಗಳ ವಿಶ್ಲೇಷಣೆ ನಡೆದಿರಲಿಲ್ಲ.

ಇಂದಿಗೂ ಗಾದೆಗಳನ್ನು ಕುರಿತ ಅಧ್ಯಯನಕ್ಕೆ ಈ ಕೃತಿ ಒಂದು ಉತ್ತಮ ಕೈಪಿಡಿ.

ರಾಮಾನುಜನ್ ನವ್ಯಕವಿಯಾಗಿಯೇ ಹೆಚ್ಚು ಪ್ರಸಿದ್ಧರು. ಹೊಕ್ಕುಳಲ್ಲಿ ಹೂವಿಲ್ಲ (1969) ಇವರ ಮೊದಲನೆಯ ಕವನ ಸಂಕಲನ. ಮತ್ತು ಇತರ ಪದ್ಯಗಳು (1977), ಕುಂಟೋಬಿಲ್ಲೆ (1990) ಇವರ ಇನ್ನೆರಡು ಕವನ ಸಂಕಲನಗಳು. ನವ್ಯಪಂಥದ ಕವಿಗಳಲ್ಲಿ ತಮ್ಮದೇ ಆದ ವಿಶಿಷ್ಟ ಬಗೆಯ ಭಾಷೆಯನ್ನು ಕಾವ್ಯದ ಪ್ರಮುಖ ಲಕ್ಷಣವನ್ನಾಗಿಸಿಕೊಂಡು ಕಾವ್ಯ ಬರೆದ ಈ ಕವಿ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸ ಬಗೆಯ ಬಳಕೆ ದೃಷ್ಟಿಯಿಂದ ರಾಮಾನುಜನ್ನರ ಕಾವ್ಯಕ್ಕೆ ವಿಶೇಷ ಸ್ಥಾನವುಂಟು.

ರಾಮಾನುಜನ್ನರ ಇಂಗ್ಲಿಷ್ ಕವನಗಳು ಇವರ ಕನ್ನಡ ಕವನಗಳಷ್ಟು ಆತ್ಮೀಯವಾಗುವುದಿಲ್ಲ. ತಮ್ಮ ಜೀವನದಲ್ಲಿ ಎದುರಾದ ಸಾಂಸ್ಕೃತಿಕ ಸಂಘರ್ಷವನ್ನು ಈ ಇಂಗ್ಲಿಷ್ ಕವನಗಳು ನೇರವಾಗಿ ಬಿಂಬಿಸುತ್ತವೆ. ದಿ ಸ್ಟ್ರೈಡರ್ಸ್ (1966), ರಿಲೇಶನ್ಸ್ (1971), ಕಲೆಕ್ಟೆಡ್ ಪೋಯಮ್ಸ್, ಸೆಕೆಂಡ್ ಸೈಟ್– ಇವರ ಇಂಗ್ಲಿಷ್ ಕವನ ಸಂಕಲನಗಳು. ರಾಮಾನುಜನ್ ಅವರ ಕಾವ್ಯದಲ್ಲಿ ಸಾಕ್ಷಿಪ್ರಜ್ಞೆ ಸದಾ ಎಚ್ಚರವಾಗಿರುತ್ತದೆ. ಮೊದಮೊದಲು ಬರೆದ ಕವನಗಳಲ್ಲಿ ವಿಜ್ಞಾನಿಯ ಹಾಗೆ ತಮ್ಮ ಕವನದ ವಸ್ತುವನ್ನು ಭಾವರಹಿತ ದೃಷ್ಟಿಯಿಂದ ವೀಕ್ಷಿಸುತ್ತಾರೆ. ತರುವಾಯದ ಕವನಗಳಲ್ಲಿ ಭಾವ–ಭಾರ ಪಡೆದುಕೊಂಡಿರುವ ಪದಬಳಕೆಯನ್ನು ನೋಡುತ್ತೇವೆ. ಹಾಗೆಂದೇ ಈ ಕವನಗಳು ಭಾವುಕತೆಯಿಂದ ಬಿಡಿಸಿಕೊಂಡ ಕಾರಣದಿಂದಾಗಿ ಲಭಿಸಿದ ಹೊಸತನ ಓದುಗರಿಗೆ ಹೆಚ್ಚು ಆಕರ್ಷಕವಾಗಿ ಕಂಡಿವೆ.

ರಾಮಾನುಜನ್ ಶ್ರೇಷ್ಠ ಭಾಷಾಂತರಕಾರರು. ಇವರ ಭಾಷಾಂತರಗಳು ಅಂತಾರಾಷ್ಟ್ರೀಯ ಮನ್ನಣೆ ಗಳಿಸಿವೆ. ಅನುವಾದ ಕ್ಷೇತ್ರದಲ್ಲಿ ತಮಿಳು ಮತ್ತು ಕನ್ನಡದಿಂದ ಇವರು ಭಾಷಾಂತರಿಸಿದ್ದೇ ಹೆಚ್ಚು. ದಿ ಇಂಟೀರಿಯರ್ ಲ್ಯಾಂಡ್ ಸ್ಕೇಪ್ (1970) ಪ್ರಾಚೀನ ತಮಿಳು ಸಂಗಂ ಸಾಹಿತ್ಯದಿಂದ ಆಯ್ದ ಭಾಗಗಳ ಅನುವಾದ. ಸ್ಪೀಕಿಂಗ್ ಆಫ್ ಶಿವ (1973) ಹನ್ನೆರಡನೆಯ ಶತಮಾನದ ಪ್ರಮುಖ ವಚನಕಾರರಾದ ದೇವರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ– ಇವರ ಆಯ್ದ ವಚನಗಳ ಭಾಷಾಂತರ. ಸಾಂಗ್ ಆಫ್ ಅರ್ತ್ ಅಂಡ್ ಅದರ್ ಪೊಯಮ್ಸ್ (1968)– ಎಂ.ಜಿ. ಕೃಷ್ಣಮೂರ್ತಿ ಅವರೊಡಗೂಡಿ ಗೋಪಾಲಕೃಷ್ಣ ಅಡಿಗರ ಕೆಲವು ಕವನಗಳನ್ನು ಭಾಷಾಂತರಿಸಿದ್ದಾರೆ. ಹಿಮ್ಸ್ ಫಾರ್ ದಿ ಡ್ರೋವಿಂಗ್ ಎಂಬುದು ನಮ್ಮಾಳ್ವಾರ್ ಅವರ ಕೆಲವು ಕೃತಿಗಳ ಭಾಷಾಂತರ. ಪೊಯಮ್ಸ್ ಆಫ್ ಲವ್ ಅಂಡ್ ವಾರ್ ತಮಿಳಿನ ಜನಪದ ಪ್ರಣಯ ಗೀತೆಗಳ ಅನುವಾದ. ಫೋಕ್ ಟೇಲ್ಸ್ ಫ್ರಂ ಇಂಡಿಯಾ ಎಂಬುದು ಭಾರತದ

ಬೇರೆ ಬೇರೆ ಭಾಷೆಗಳ ಐವತ್ತು ಜನಪದ ಕಥೆಗಳನ್ನು ಅನುವಾದಿಸಿ, ಭಾರತೀಯ ಸಾಹಿತ್ಯದ ಮತ್ತೊಂದು ಸ್ವರೂಪವನ್ನು ಪಾಶ್ಚಾತ್ಯರಿಗೆ ತಿಳಿಸಿಕೊಟ್ಟಿರುವಂಥ ಕೃತಿ. ಜ್ಞಾನಪೀಠ ಪ್ರಶಸ್ತಿ ಪಡೆದ ಯು.ಆರ್. ಅನಂತ ಮೂರ್ತಿ ಅವರ ಸಂಸ್ಕಾರ ಕಾದಂಬರಿಯನ್ನು ಇವರು ಇಂಗ್ಲಿಷಿಗೆ ಅನುವಾದಿಸಿದ್ದಾರೆ.

ಮಧುರೆಯಲ್ಲಿ ಕಂಡ ತಲೆ, ಅಣ್ಣಯ್ಯನ ಮಾನವಶಾಸ್ತ್ರ–ಇವು ಇವರ ಬಿಡಿ ಕಥೆಗಳು. ಮತ್ತೊಬ್ಬನ ಆತ್ಮಚರಿತ್ರೆ (1978) ಇವರ ಸ್ವತಂತ್ರ ಕಾದಂಬರಿ. ಹಳದಿ ಮೀನು ಎಂಬ ಕೃತಿ ಶೌರಿಯವರ ಇಂಗ್ಲಿಷ್ ಕಾದಂಬರಿಯ ಅನುವಾದ. ಇವರ ಕಥಾನಿರೂಪಣೆ ಸರಳವಾದುದು. ಆದರೂ ಹೆಚ್ಚು ಸೂಚ್ಯವಾಗಿರುವಂಥದು. ರಾಮಾನುಜನ್ ಅವರ ಗದ್ಯದ ಸೊಗಸು ಅವರಿಗೇ ವಿಶಿಷ್ಟವಾದದ್ದು. ಆಧುನಿಕ ಕನ್ನಡ ಕಥಾಸಾಹಿತ್ಯಕ್ಕೆ ಇವರ ಈ ಕೃತಿಗಳು ಉತ್ತಮ ಕೊಡುಗೆಗಳಾಗಿವೆ. ಹಾಗೆಯೇ ವಿಶೇಷವಾಗಿ ಚರ್ಚೆಗೊಳಗಾಗಿವೆ.

ರಾಮಾನುಜನ್ ಅವರಿಗೆ ಅನೇಕ ಗೌರವ ಪ್ರಶಸ್ತಿಗಳು ಲಭ್ಯವಾಗಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಇವರಿಗೆ ವಿಶೇಷ ಪ್ರಶಸ್ತಿ ನೀಡಿ ಗೌರವಿಸಿದೆ (1983). ಅಮೆರಿಕದ ಮೆಕಾರ್ಥರ್ ಫೌಂಡೇಷನ್ ಇವರಿಗೆ ಜೀನಿಯಸ್ ಅವಾರ್ಡ್ ನೀಡಿ ಗೌರವಿಸಿದೆ. ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ (1976). ರಾಮಾನುಜನ್ ರಜೆಯಲ್ಲಿ ಭಾರತಕ್ಕೆ ಬಂದಾಗಲೆಲ್ಲ ಮದರಾಸು, ಧಾರವಾಡ, ಬೆಂಗಳೂರು, ಮೈಸೂರು–ಹೀಗೆ ಎಲ್ಲ ಕಡೆ ಸಂಚರಿಸಿ ಉಪನ್ಯಾಸಗಳನ್ನು ನೀಡಿ ಹೊಸ ಹೊಸ ವಿಚಾರಗಳನ್ನು ಮುಂದಿಡುತ್ತಿದ್ದರು. ಇವರು 1993 ಜುಲೈ 13ರಂದು ಅಮೆರಿಕದಲ್ಲಿ ನಿಧನಹೊಂದಿದರು. *

**ರಾಮಾನುಜಯ್ಯಂಗಾರ್, ಎಂ.ಎ.:** 1862–1937. ಹೊಸಗನ್ನಡ ಅರುಣೋದಯ ಕಾಲದ ಲೇಖಕರು, ಪತ್ರಿಕೋದ್ಯಮಿಗಳು. ಹುಟ್ಟಿದ್ದು ಮಂಡ್ಯದಲ್ಲಿ. ಇವರು ಪೆರಿಯಸ್ವಾಮಿ ತಿರುಮಲಾಚಾರ್ಯರಲ್ಲಿ ಸಂಸ್ಕೃತ ಅಭ್ಯಾಸಮಾಡಿ, ಅನಂತರ ಮೈಸೂರು ಮಹಾರಾಜ ಕಾಲೇಜು, ಮದರಾಸಿನ ಕ್ರಿಶ್ಚಿಯನ್ ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿ ಪಡೆದು ಮೈಸೂರು ವೆಸ್ಲಿಯನ್ ಮಿಶನ್ ಸ್ಕೂಲಿನಲ್ಲಿ ಉಪಾಧ್ಯಾಯ ರಾಗಿ ತಮ್ಮ ವೃತ್ತಿ ಜೀವನ ವನ್ನು ಪ್ರಾರಂಭಿಸಿದರು. ಮುಂದೆ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು. ಅನಂತರ ಮೈಸೂರು ಸರ್ಕಾರದ ಭಾಷಾಂತರಕಾರರಾಗಿ ನೇಮಕಗೊಂಡರು. ಆ ಹುದ್ದೆಯಲ್ಲಿ ಕೆಲವು ವರ್ಷಗಳಿದ್ದು ನಿವೃತ್ತರಾದರು.

ಆರ್ಯಮತ ಸಂಜೀವಿನಿ ಎಂಬ ಮಾಸಪತ್ರಿಕೆಯನ್ನು 1894ರಲ್ಲಿ ಪ್ರಾರಂಭಿಸಿದ ಇವರು ಅದನ್ನು ಸುಮಾರು ನಾಲ್ಕು ವರ್ಷಗಳ ಕಾಲ ನಡೆಸಿದರು. ಅನಂತರ ಕಾವ್ಯಮಂಜರಿ ಎಂಬ ಪತ್ರಿಕೆಯನ್ನು ಆರಂಭಿಸಿ ಮುಂದೆ ಆ ಪತ್ರಿಕೆಯನ್ನು ಕಾವ್ಯಕಲಾನಿಧಿ **(ನೋಡಿ)** ಎಂದು ಮಾರ್ಪಡಿಸಿ ಸುಮಾರು 25 ವರ್ಷಗಳ ಕಾಲ ಅದರ ಪ್ರಕಟಣೆಯನ್ನು ನಿರ್ವಹಿಸಿದರು. ಕನ್ನಡದ ಅನೇಕ ಹಳಗನ್ನಡ ಗ್ರಂಥಗಳನ್ನು ಪ್ರಥಮ ಬಾರಿಗೆ ಪ್ರಕಟಿಸಿದ ಕೀರ್ತಿ ಈ ಪತ್ರಿಕೆಯದು. ಎಂ.ಕೆ. ತಿರುಮಲಾಚಾರ್ ಮತ್ತು ಎಸ್.ಜಿ. ನರಸಿಂಹಾಚಾರ್ಯರು ಈ ಪತ್ರಿಕೆಯ ಪ್ರಕಟಣ ಕಾರ್ಯದಲ್ಲಿ ಇವರಿಗೆ ಸಹಾಯಕರಾಗಿದ್ದರು.

ಕವಿಕಾರ್ಯ ಪ್ರಶಂಸೆ (1913), ಕವಿಸಮಯಂ (1908), ಸುವೃತ್ತ ಅಥವಾ ಕರ್ಮವಿಲಾಸ (1915), ಮಹಾಭಾರತ ಕಥಾಪ್ರಸಂಗ ಮತ್ತು ಇತರ ಕಥೆಗಳು ಇವು ಇವರ ಕೆಲವು ಪ್ರಮುಖ ಕೃತಿಗಳು.

ಪಂಪನ ಆದಿಪುರಾಣ, ಹರಿಹರನ ಪಂಪಾಶತಕಂ, ದುರ್ಗಸಿಂಹನ ಪಂಚತಂತ್ರ, ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನಂ, ಕನಕದಾಸರ ಮೋಹನತರಂಗಿಣಿ, ನೇಮಿಚಂದ್ರನ ಲೀಲಾವತಿ ಪ್ರಬಂಧ, ಅರ್ಧನೇಮಿ ಪುರಾಣಂ, ತಿರುಮಲಾರ್ಯನ ಚಿಕದೇವರಾಜ ವಿಜಯ, ಹೊನ್ನಮ್ಮನ ಹದಿಬದೆಯಧರ್ಮ, ಮುದ್ದಣನ ರಾಮಾಶ್ವಮೇಧ–ಇವು ಇವರು ಪರಿಷ್ಕರಿಸಿದ ಕೆಲವು ಮುಖ್ಯ ಗ್ರಂಥಗಳು. *

**ರಾಮಾನುಜಾಚಾರ್ಯ:** 1017–1137. ವಿಶಿಷ್ಟಾದ್ವೈತ ವೇದಾಂತದ ಪ್ರಮುಖ ಪ್ರತಿಪಾದಕರು. ಆಚಾರ್ಯಪರಂಪರೆಯ ಪ್ರಮುಖರಲ್ಲೊಬ್ಬರಾದ ಯಾಮುನಾಚಾರ್ಯರ ಶಿಷ್ಯ ಪರಂಪರೆಗೆ ಸೇರಿದವರು. ಮದರಾಸಿನ ಸಮೀಪದಲ್ಲಿರುವ ಶ್ರೀಪೆರುಂಬುದೂರಿನಲ್ಲಿ 1017ರಲ್ಲಿ ಜನಿಸಿದರು. ತಂದೆ ಕೇಶವ ಸೋಮಯಾಜಿ (ಕೇಶವಾಚಾರ್ಯ), ತಾಯಿ ಕಾಂತಿಮತಿ. ರಾಮಾನುಜರಿಗೆ ಹದಿನೈದು ವರ್ಷಗಳಾದಾಗ ರಕ್ಷಾಂಬಾಳ್ ಎಂಬವರೊಂದಿಗೆ ವಿವಾಹವಾಯಿತು. ಯಾದವಪ್ರಕಾಶರ ಶಿಷ್ಯನಾಗಿ ಅಧ್ಯಯನ ಮಾಡುವುದನ್ನು ರಾಮಾನುಜರು ಬಿಟ್ಟರು. ಸ್ವತಂತ್ರವಾಗಿ ಯೋಚಿಸಲು ಆರಂಭಿಸಿದರು.

ರಾಮಾನುಜರು ಗೊಂದಲದಲ್ಲಿದ್ದಾಗಲೆಲ್ಲ ಅವರಿಗೆ ಧೈರ್ಯ ಮತ್ತು ವಿಶ್ವಾಸವನ್ನು ತುಂಬುತ್ತಿದ್ದವರು ಕಾಂಚೀಪೂರ್ಣರು. ಶ್ರೀರಂಗದಲ್ಲಿ ಯಾಮುನಾಚಾರ್ಯರು ಆರೋಗ್ಯವಿಲ್ಲದೆ ತಮ್ಮ ಉತ್ತರಾಧಿಕಾರಿಗಾಗಿ ಶೋಧದಲ್ಲಿದ್ದಾಗ ರಾಮಾನುಜರ ಹೆಸರು ಅವರ ಕಿವಿಗೆ ಬಿತ್ತು. ಅವರನ್ನೇ ತಮ್ಮ ಮುಂದಿನ ಉತ್ತರಾಧಿಕಾರಿಯನ್ನಾಗಿ ಮಾಡಲು ಸಂಕಲ್ಪಮಾಡಿ ತಮ್ಮ ಮತ್ತೊಬ್ಬ ಶಿಷ್ಯರಾದ ಮಹಾಪೂರ್ಣ ಎಂಬವರನ್ನು ಕಳುಹಿಸಿ ರಾಮಾನುಜರನ್ನು ಶ್ರೀರಂಗಕ್ಕೆ ಕರೆಸಿಕೊಂಡರು. ಆದರೆ ರಾಮಾನುಜರು ಬರುವುದರೊಳಗೆ ಯಾಮುನಾಚಾರ್ಯರು ನಿಧನರಾಗಿದ್ದರು. ಅವರ ಮೂರು ಕೈಬೆರಳುಗಳು ಮುಡಚಿಕೊಂಡಿದ್ದವು. ಇವು ಯಾಮುನಾಚಾರ್ಯರ ಮೂರು ಮನೋರಥಗಳ ಸಂಕೇತವೆಂದು ರಾಮಾನುಜರು ತಿಳಿದು ನೆರೆದ ಜನಸ್ತೋಮದ ಎದುರಲ್ಲಿ ತಮ್ಮ ಗುರುಗಳ ಇಷ್ಟಾರ್ಥವನ್ನು ಈಡೇರಿಸುವುದಾಗಿ ತಿಳಿಸಿದರು. ಬ್ರಹ್ಮಸೂತ್ರಗಳಿಗೆ ವಿಶಿಷ್ಟಾದ್ವೈತಪರವಾದ ವ್ಯಾಖ್ಯಾನ ಬರೆಯುವುದು, ವಿಷ್ಣು ಸಹಸ್ರನಾಮದ ಭಾಷ್ಯ ಮತ್ತು ದಿವ್ಯಪ್ರಬಂಧಗಳಿಗೆ ಟೀಕೆ ಬರೆಯುತ್ತೇನೆಂದು ಪ್ರತಿಜ್ಞೆ ಮಾಡಿದರು. ಆಗ ಮುಡಚಿಕೊಂಡಿದ್ದ ಯಾಮುನಾಚಾರ್ಯರ ಕೈ ಬೆರಳುಗಳು ತೆರೆದುಕೊಂಡವಂತೆ. ಇದು ಬ್ರಹ್ಮಸೂತ್ರಕ್ಕೆ ಹೊಸದೊಂದು ಭಾಷ್ಯವನ್ನು ಶ್ರೀವೈಷ್ಣವ ಸಿದ್ಧಾಂತದ ಪ್ರಕಾರ ಬರೆಯುವುದಕ್ಕೆ ನಾಂದಿಯಾಯಿತು.

ಆಧ್ಯಾತ್ಮಿಕ ವಿಷಯಗಳಿಗೆ ಮನಸ್ಸಿಟ್ಟ ರಾಮಾನುಜರ ಮನೋಧರ್ಮದ ಸಲುವಾಗಿ ಅವರ ಮತ್ತು ಅವರ ಮಡದಿ ರಕ್ಷಾಂಬಾಳ್ ನಡುವೆ ಪರಸ್ಪರ ಹೊಂದಾಣಿಕೆ ಇಲ್ಲದಾಯಿತು. ಹೆಂಡತಿಯ ಮನೋರಥವನ್ನು ಅರಿತ ಇವರು ಆಕೆಗೆ ಬೇಕಾದುದೆಲ್ಲವನ್ನು ನೀಡಿ ತವರಿಗೆ ಕಳಿಸಿದರು. ಲೌಕಿಕವಾದ ಆಸೆ ಆಕಾಂಕ್ಷೆಗಳನ್ನು ತ್ಯಜಿಸಿ ಸಂನ್ಯಾಸಾಶ್ರಮ ಪ್ರವೇಶಿಸಿದರು. ರಾಮಾನುಜರಲ್ಲಿ ಮನಸೋತ ಹಲವರು ಶಿಷ್ಯತ್ವವನ್ನು ಪಡೆದರು.

ಅನಂತರ ಇವರು ಕಾಂಚೀಪುರದ ಮಠಕ್ಕೆ ಬಂದು ನೆಲೆಸಿದರು. ಇದರಿಂದ ತತ್ತ್ವಪ್ರಸಾರಕ್ಕೆ ಹೆಚ್ಚಿನ ಅನುಕೂಲವೇ ಆಯಿತು. ಕೆಲವು ದಿವಸಗಳ ಅನಂತರ ಕಾಂಚೀಪುರವನ್ನು ತ್ಯಜಿಸಿ ಶ್ರೀರಂಗಕ್ಕೆ ಬಂದು ಯಾಮುನಾ ಚಾರ್ಯರ ಮಠದ ಆಧಿಪತ್ಯವನ್ನು ವಹಿಸಿಕೊಂಡರು. ಗೋಷ್ಠೀಪೂರ್ಣ ರಿಂದ ಮಂತ್ರೋಪದೇಶವನ್ನು ಪಡೆದರು. ಗುರುಗಳಿಂದ ಪಡೆದ ಮಂತ್ರವನ್ನು ಗೋಪ್ಯವಾಗಿಡಬೇಕೆಂದು ನಿಯಮಿತವಾಗಿದ್ದರೂ ಜಗದೋದ್ಧಾರಕ್ಕಾಗಿ ದೇವಸ್ಥಾನದ ಗೋಪುರವನ್ನೇರಿ ನೆರೆದಿದ್ದ ಜನಸ್ತೋಮಕ್ಕೆ ಉಪದೇಶ ಮಾಡಿದರು.

ಶ್ರೀರಂಗದ ಅರಸ ಕುಲೋತ್ತುಂಗ ಚೋಳರಾಜ ಶೈವಭಕ್ತನಾಗಿದ್ದ. ಆತ ರಾಮನುಜರ ವೈಷ್ಣವ ಸಿದ್ಧಾಂತ ಪ್ರಚಾರಕ್ಕೆ ಕೋಪಗೊಂಡ. ರಾಜನ ಕ್ರೋಧಕ್ಕೊಳಗಾದ ರಾಮಾನುಜರು ಶ್ರೀರಂಗವನ್ನು ತ್ಯಜಿಸಿ ಅಲ್ಲಿಂದ ಮೈಸೂರಿಗೆ ಬಂದರು. ಇವರಿಗೆ ಇಲ್ಲಿ ಭವ್ಯಸ್ವಾಗತ ದೊರೆಯಿತು. ಆಗ ಮೈಸೂರನ್ನು ಆಳುತ್ತಿದ್ದವನು ಹೊಯ್ಸಳ ಬಿಟ್ಟಿದೇವ. ಇವನಿಗೆ ವೈಷ್ಣವಧರ್ಮದ ದೀಕ್ಷೆಯನ್ನು ನೀಡಿ ವಿಷ್ಣುವರ್ಧನ ಎಂಬ ಹೆಸರು ಕೊಟ್ಟರು. ವಿಷ್ಣುವರ್ಧನ ರಾಮಾನುಜರ ಅಪೇಕ್ಷೆಯಂತೆ ಬೇಲೂರಿನಲ್ಲಿ ಚೆನ್ನಕೇಶವನ ಗುಡಿ, ತಲಕಾಡಿನಲ್ಲಿ ಕೀರ್ತಿನಾರಾಯಣ, ಗದಗಿನಲ್ಲಿ ವೀರನಾರಾಯಣ, ಮೇಲುಕೋಟೆಯಲ್ಲಿ ಚೆಲುವನಾರಾಯಣನ ಗುಡಿಗಳನ್ನು ಕಟ್ಟಿಸಿದ. ರಾಮಾನುಜರು ತಮ್ಮ ಪ್ರಯಾಣದ ಅವಧಿಯಲ್ಲಿ ಸಾಲಿಗ್ರಾಮ, ತೊಂಡನೂರುಗಳಿಗೆ (ತೊಣ್ಣೂರು) ಭೇಟಿನೀಡಿ ಅಲ್ಲೆಲ್ಲ ವಿಶಿಷ್ಟಾದ್ವೈತ ದರ್ಶನದ ಪ್ರಚಾರ ಕೈಗೊಂಡರು. ಬಳಿಕ ಮೇಲುಕೋಟೆಗೆ ಬಂದು ಅಲ್ಲಿ ಸುಮಾರು ಹದಿನಾಲ್ಕು ವರ್ಷಗಳ ಕಾಲ ನೆಲೆಸಿದ್ದು ಅನಂತರ ಶ್ರೀರಂಗಕ್ಕೆ ಹಿಂತಿರುಗಿದರು. ಅನೇಕ ವಿಷ್ಣುದೇವಾಲಯಗಳಲ್ಲಿ ಪಾಂಚರಾತ್ರ ಆಗಮಗಳ ಪ್ರಕಾರ ಪೂಜಾವಿಧಾನಗಳನ್ನು ಏರ್ಪಡಿಸಿದರು. ತಮ್ಮ ವ್ಯಾಖ್ಯಾನಗಳ ಮೂಲಕ ವಿಶಿಷ್ಟಾದ್ವೈತ ವೇದಾಂತವನ್ನು ಯಶಸ್ವಿಯಾದ ರೀತಿಯಲ್ಲಿ ಪ್ರಚಾರ ಮಾಡಿದರು. ರಾಮಾನುಜರು 1137ರಲ್ಲಿ ದೇಹತ್ಯಾಗ ಮಾಡಿದರು.

ರಾಮಾನುಜರ ತರುವಾಯ ಇವರ ಪಂಥ ಎರಡು ಶಾಖೆಗಳಾಗಿ ಒಡೆಯಿತು. ಈ ಶಾಖೆಗಳು ತೆಂಕಲೈ ಮತ್ತು ವಡಕಲೈ. ಈ ಶಾಖೆಗಳಿಗೆ ಪರಸ್ಪರ ಹದಿನೆಂಟು ಅಂಶಗಳಲ್ಲಿ ಸಿದ್ಧಾಂತ ಭೇದಗಳಿವೆ. ತೆಂಕಲೈ ಮತದ ಪ್ರಧಾನ ಆಚಾರ್ಯರು ಶ್ರೀಪಿಳ್ಳೈ ಲೋಕಾಚಾರ್ಯರು (ಹದಿಮೂರನೆಯ ಶತಮಾನ). ವಡಕಲೈ ಮತದ ಪ್ರಸಿದ್ಧ ಆಚಾರ್ಯರು ಲೋಕಾಚಾರ್ಯರ ಸಮಕಾಲೀನರೇ ಆದ ವೆಂಕಟನಾಥರು ಅಥವಾ ವೇದಾಂತ ದೇಶಿಕರು.

*

**ರಾಯಚೂರು:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ತಾಲ್ಲೂಕು ಮತ್ತು ಜಿಲ್ಲೆಯ ತಾಲ್ಲೂಕಿನ ಆಡಳಿತ ಕೇಂದ್ರ ನಗರ. ಈ ಜಿಲ್ಲೆಯನ್ನು ಉತ್ತರದಲ್ಲಿ ಗುಲ್ಬರ್ಗ ಜಿಲ್ಲೆ, ವಾಯವ್ಯದಲ್ಲಿ ಬಿಜಾಪುರ ಜಿಲ್ಲೆ, ಪಶ್ಚಿಮದಲ್ಲಿ ಬಾಗಲಕೋಟೆ, ಕೊಪ್ಪಳಜಿಲ್ಲೆಗಳೂ ದಕ್ಷಿಣದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವ ಮತ್ತು ದಕ್ಷಿಣದಲ್ಲಿ ಆಂಧ್ರಪ್ರದೇಶವೂ ಸುತ್ತುವರೆದಿವೆ. 1997ರ ಆಗಸ್ಟ್‌ನಲ್ಲಿ ರಾಯಚೂರುಜಿಲ್ಲೆಯನ್ನು ಎರಡು ಭಾಗವಾಗಿ ವಿಂಗಡಿಸಿ ಕೊಪ್ಪಳಜಿಲ್ಲೆಯನ್ನು ನಿರ್ಮಿಸಲಾಯಿತು. ಈಗಿನ ರಾಯಚೂರು ಜಿಲ್ಲೆಯಲ್ಲಿ ದೇವದುರ್ಗ, ಲಿಂಗಸುಗೂರು, ಮಾನ್ವಿ, ರಾಯಚೂರು, ಸಿಂಧನೂರು–ಈ ಐದು ತಾಲ್ಲೂಕುಗಳಿದ್ದು 37 ಹೋಬಳಿಗಳು ಒಟ್ಟು 878 ಗ್ರಾಮಗಳಿದ್ದು ಅದರಲ್ಲಿ 70 ಬೇಚಿರಾಗ್ ಗ್ರಾಮಗಳಿವೆ. ಈ ಜಿಲ್ಲೆಯ ವಿಸ್ತೀರ್ಣ 5,559 ಚ.ಕಿಮೀ. ಒಟ್ಟು ಜನಸಂಖ್ಯೆ 16,69,762.

ಕರ್ನಾಟಕದ ಉತ್ತರದಲ್ಲಿ ಪೂರ್ವಭಾಗಕ್ಕಿರುವ ಈ ಜಿಲ್ಲೆ ಉ.ಅ. $15^0$ 10" ನಿಂದ $16^0$ 50" ವರೆಗೂ ಪೂ.ರೇ. $75^0$ 80" ನಿಂದ $77^0$ 50" ವರೆಗೂ ಹರಡಿದ್ದು ಜಿಲ್ಲೆ ಕಪ್ಪು ಜೇಡಿಮಣ್ಣಿನ ಮೈದಾನ ಪ್ರದೇಶದಿಂದ, ಅಲ್ಲಲ್ಲಿ ಹರಡಿದಂತಿರುವ ಗುಡ್ಡಗಳಿಂದ, ಕೆಂಪುಮಣ್ಣಿನ ಭೂಮಿಯಿಂದ, ಪೊದೆಯಂಥ ಮರಗಿಡಗಳ ಕಾಡುಗಳಿಂದ ಕೂಡಿದೆ. ಸಿಂಧನೂರಿಗೆ ಆಗ್ನೇಯದಲ್ಲಿ ಸು. 26 ಕಿಮೀ ದೂರದಲ್ಲಿರುವ ಮೊರಿಗುಡ್ಡ, ಕನಕಗಿರಿಯ ಈಶಾನ್ಯದಲ್ಲಿ 11 ಕಿಮೀ ದೂರದಲ್ಲಿರುವ ನಿಶಾನಿಗುಡ್ಡ, ಸಿಂಧನೂರಿಗೆ ಆಗ್ನೇಯದಲ್ಲಿ ಸು. 2 ಕಿಮೀ ದೂರದಲ್ಲಿರುವ ದುರ್ಗದಗುಡ್ಡ, ರಾಯಚೂರಿನ ದಕ್ಷಿಣದಲ್ಲಿ ಸು. 6 ಕಿಮೀ ದೂರದಲ್ಲಿರುವ ಮಲ್ಲಬಾದ ಶಿಖರ, ಮಾನ್ವಿ ಶಿಖರ ಹಾಗೂ ಮೊಸರಕಲ್ಲು ಶಿಖರಗಳು ಈ ಜಿಲ್ಲೆಯ ಮುಖ್ಯ ಬೆಟ್ಟಗಳು. ಈ ಬೆಟ್ಟಗಳೆಲ್ಲ ಬೆಣಚುಕಲ್ಲುಗಳಿಂದ ಕೂಡಿದ್ದು ಬೋಳಾಗಿವೆ. ಇಲ್ಲಿನ ಬೆಟ್ಟಗಳೆಲ್ಲ ಪ್ರಾಕೃತಿಕವಾಗಿ ರೂಪಾಂತರ ಹೊಂದಿದ ಪ್ರಾಚೀನ ಶಿಲಾಯುಗಕ್ಕೆ ಸೇರಿದವು.

ಕರ್ನಾಟಕ ರಾಜ್ಯದಲ್ಲಿ ಕೋಲಾರಜಿಲ್ಲೆಯನ್ನು ಬಿಟ್ಟರೆ ರಾಯಚೂರು ಜಿಲ್ಲೆಯೊಂದೇ ಚಿನ್ನದ ನಿಕ್ಷೇಪವನ್ನು ಹೊಂದಿರುವ ಪ್ರದೇಶ. ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಚಿನ್ನದಗಣಿಯಲ್ಲಿ ಚಿನ್ನ ದೊರೆಯುತ್ತದೆ. ಸಾಮಾನ್ಯ ಮತ್ತು ಮಧ್ಯಮ ದರ್ಜೆಯ ಕಬ್ಬಿಣದ ಅದಿರು ಕುಷ್ಟಗಿ ಶ್ರೇಣಿಯಲ್ಲಿ ಜಡಗುಡ್ಡ ಬೆಟ್ಟದ ಬಳಿಯಲ್ಲಿ ಮಚ್ನೂರು, ಮಂದರ್ಗಿ, ಚಿಕ್ಕಹೆಸರೂರು ಮತ್ತು ಹಿರೇಹೆಸರೂರು ಬಳಿ ತಾಮ್ರದ ಅದಿರು ದೊರೆಯುತ್ತದೆ. ನಂದಿಹಾಳ ಬೆಟ್ಟದಲ್ಲಿ ದೊರೆಯುವ ಶಿಲೆಯಿಂದ ಕಲ್ಲು ಹಲಗೆಗಳನ್ನೂ ನೆಲಕ್ಕೆ ಹಾಸಲು ಕಲ್ಲು ಹಾಸುಗಳನ್ನೂ ತಯಾರಿಸುವರು.

ಕೃಷ್ಣಾ ಮತ್ತು ತುಂಗಭದ್ರಾ ಈ ಜಿಲ್ಲೆಯ ಮುಖ್ಯ ನದಿಗಳು. ಕೃಷ್ಣಾ ನದಿ ಜಿಲ್ಲೆಯ ಉತ್ತರದ ಗಡಿಯಾಗಿ ಹರಿದು ಬಿಜಾಪುರ, ಗುಲ್ಬರ್ಗಜಿಲ್ಲೆಗಳನ್ನು ಆಂಧ್ರಪ್ರದೇಶವನ್ನೂ ಬೇರ್ಪಡಿಸಿದರೆ ತುಂಗಭದ್ರಾ ಈ ಜಿಲ್ಲೆಯ ದಕ್ಷಿಣದ ಗಡಿಯಾಗಿ ಹರಿದು ಬಳ್ಳಾರಿಜಿಲ್ಲೆಯನ್ನು ಮತ್ತು ಆಂಧ್ರಪ್ರದೇಶವನ್ನೂ ಬೇರ್ಪಡಿಸಿದೆ. ಕೃಷ್ಣಾನದಿಯ ಬಲದಂಡೆ, ತುಂಗಭದ್ರಾ ನದಿಯ ಎಡದಂಡೆ ರಾಯಚೂರುಜಿಲ್ಲೆಯ ಎರಡು ಸಮೃದ್ಧ ಪ್ರದೇಶಗಳು. ಕೃಷ್ಣಾನದಿ ರಾಯಚೂರುಜಿಲ್ಲೆಯನ್ನು ಲಿಂಗಸುಗೂರು ತಾಲ್ಲೂಕಿನ ಉಪ್ಪಿನಹಾಳ ಗ್ರಾಮದ ಉತ್ತರದಲ್ಲಿ ಮುಟ್ಟಿ ಪೂರ್ವಾಭಿಮುಖ ವಾಗಿ ಸು. 168 ಕಿಮೀ ದೂರ ಹರಿಯುವುದು. ಗುಲ್ಬರ್ಗಜಿಲ್ಲೆಯಿಂದ ಹರಿದು ಬರುವ ಭೀಮಾನದಿ ರಾಯಚೂರು ತಾಲ್ಲೂಕಿನ ಕಡಲೂರು ಗ್ರಾಮದ ಉತ್ತರದಲ್ಲಿ ಕೃಷ್ಣಾ ನದಿಯನ್ನು ಕೂಡಿಕೊಳ್ಳುವುದು. ಜೊತೆಗೆ ಈ ನದಿಗೆ ಹುತ್ತಿ ನಾಲಾ, ಮಂದರ್ಗಿ ನಾಲಾ, ಕೋಡಿಹಾಳ ನಾಲಾ, ಹಿರೆಬುದುರ ನಾಲಾ, ತಿಮ್ಮಾಪುರ ನಾಲಾ, ಬುಡದಿಪಾಡು ನಾಲಾ ಮುಂತಾದವುಗಳು ಸೇರಿ ಒಟ್ಟು 36 ಹಿರಿ–ಕಿರಿಯ ತೊರೆಗಳು ಸೇರುತ್ತವೆ. ಕೃಷ್ಣಾನದಿ ರಾಯಚೂರು ತಾಲ್ಲೂಕಿನ ಬುಡದಿಪಾಡು ಗ್ರಾಮದ ಉತ್ತರದಲ್ಲಿ ಈ ಜಿಲ್ಲೆಯನ್ನು ಬಿಟ್ಟು ಆಂಧ್ರಪ್ರದೇಶವನ್ನು ಪ್ರವೇಶಿಸುವುದು. ತುಂಗಭದ್ರಾ ನದಿ ಈ ಜಿಲ್ಲೆಯನ್ನು ಮಾನ್ವಿ ತಾಲ್ಲೂಕಿನ ಚಿಕ್ಕಕೋಟಕಲ್‌ನ ದಕ್ಷಿಣದಲ್ಲಿ ಮುಟ್ಟುತ್ತದೆ. ಸಿಂಧನೂರು, ಮಾನ್ವಿ ಮತ್ತು ರಾಯಚೂರು ತಾಲ್ಲೂಕುಗಳ ಮುಖಾಂತರ ಜಿಲ್ಲೆಯ ದಕ್ಷಿಣದಲ್ಲಿ ಹರಿಯುವ ಈ ನದಿ ರಾಯಚೂರು ತಾಲ್ಲೂಕಿನ ತೆಲಮರಿ ಗ್ರಾಮದ ಆಗ್ನೇಯದಲ್ಲಿ ಜಿಲ್ಲೆಯನ್ನು ಬಿಟ್ಟು ಆಂಧ್ರ ಪ್ರದೇಶವನ್ನು ಪ್ರವೇಶಿಸುವುದು. ತುಂಗಭದ್ರಾ ನದಿಗೆ ಅನೇಕ ತೊರೆಗಳು ಬಂದು ಕೂಡುತ್ತದೆ. ಇವುಗಳಲ್ಲಿ ಮಸ್ಕಿ ನಾಲಾ, ಹಿರೇಹಳ್ಳ, ಆಲವಂದಿ ನಾಲ, ಸಿಂಧನೂರು ನಾಲ, ಸಿದ್ಧಾಪುರ ಮತ್ತು ಮಾರ್ಲಿ ತೊರೆ. ಇಂಚನಾಳ, ಕನಕಗಿರಿ, ನಂದಿ ಮತ್ತು ಕಪ್ಗೋಳನಾಲಾಗಳು ಮುಖ್ಯವಾದವು.



ಸಾಕಷ್ಟು ಮಳೆ ಬೀಳದ ಪ್ರದೇಶವಾಗಿದ್ದು ಮತ್ತು ಉಷ್ಣ ಹವಾಮಾನ ದಿಂದಾಗಿ ಮಾನ್ವಿ, ಲಿಂಗಸುಗೂರು, ದೇವದುರ್ಗ ಮತ್ತು ಸಿಂಧನೂರು ತಾಲ್ಲೂಕುಗಳಲ್ಲಿ ಮಾತ್ರ ಅರಣ್ಯಪ್ರದೇಶಗಳಿವೆ. ಇಲ್ಲಿನ ಕಾಡುಗಳಲ್ಲಿ ಕಕ್ಕೆ, ಜಾಲ, ಹುಣಿಸೆ, ಹೊಂಗೆ, ಮುತ್ತುಗ, ದಿಂಡಿಗ, ಚುಜ್ಜಲು, ಹುರಗಲು, ಹೊನ್ನೆ, ಮತ್ತಿ, ಸೀತಾಫಲ ಮುಂತಾದ ಮರಗಳು ಬೆಳೆಯುವುವು. 405 ಹೆಕ್ಟೇರ್‌ಗಳಿಗೂ ಹೆಚ್ಚಾದ ಪ್ರದೇಶವನ್ನೊಳಗೊಂಡ ಹಿರಬರ್ಗಿ, ಹನುಮಸಾಗರ, ಮುನಿರಾಬಾದ್ (ತುಂಗಭದ್ರ ಯೋಜನೆ) ಮತ್ತು ಗುಂಟುಗಾಲೆ ಪ್ಲಾಂಟೇಷನ್‌ಗಳಿವೆ. ಭೂಸವಕಳಿಯನ್ನು ತಡೆಯಲು ಈಗ ನೆಡುತೋಪುಗಳನ್ನು ಬೆಳೆಸುತ್ತಿದೆ. ಈ ಅರಣ್ಯಗಳಲ್ಲಿ ಅಪರೂಪವಾಗಿ ಚಿರತೆಗಳು ಕಂಡುಬರುವುವು.

ಈ ಜಿಲ್ಲೆಯಲ್ಲಿ ಡಿಸೆಂಬರ್‌ನಲ್ಲಿ ಹೆಚ್ಚು ಚಳಿ. ಫೆಬ್ರವರಿಯಿಂದ ಏಪ್ರಿಲ್ ತಿಂಗಳವರೆಗೂ ಬೇಸಗೆ ಕಾಲ. ಬೇಸಗೆಯಲ್ಲಿ ಗರಿಷ್ಠ ಉಷ್ಣಾಂಶ $39.8^0$ ಸೆಂ ($103.7^0$ ಫ್ಯಾ) ಚಳಿಗಾಲದ ಕನಿಷ್ಠ ಉಷ್ಣಾಂಶ 17.7 ಸೆಂ ($63.9^0$ ಫ್ಯಾ) ಜೂನ್‌ನಿಂದ ಮಳೆಗಾಲ ಪ್ರಾರಂಭ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 631 ಮಿಮೀ. ಸಹಜವಾಗಿ ಬಿದ್ದಮಳೆ 640 ಮಿಮೀ (2000).

ಜಿಲ್ಲೆಯ ಹೆಚ್ಚು ಭಾಗ ಹತ್ತಿ ಬೆಳೆಯ ಕಪ್ಪುಮಣ್ಣಿನ ಪ್ರದೇಶ. ಹೆಚ್ಚು ಆಳವಾಗಿರುವ ಕೆಂಪುಮಣ್ಣು ಪ್ರದೇಶ ಕಬ್ಬು ಸೇರಿದಂತೆ ಎಲ್ಲ ಬಗೆಯ ಬೆಳೆಗೆ ಅನುಕೂಲವಾಗಿದೆ. ತೆಳು ಕೆಂಪುಮಣ್ಣು ಪ್ರದೇಶಗಳಲ್ಲಿ ಎಣ್ಣೆಬೀಜವನ್ನು ಬೆಳೆಯುವರು. ಜಿಗಟು ಕಪ್ಪುಮಣ್ಣಿನ ಪ್ರದೇಶಗಳಲ್ಲಿ ಮಳೆಗಾಲದ ಕೊನೆಯಲ್ಲಿ ಖಾರಿಫ್ ಬೆಳೆಗಳನ್ನು ಬೆಳೆಯುವರು.

ರಾಯಚೂರು ಜಿಲ್ಲೆ ದೋಅಬ್ ಪ್ರದೇಶವಾಗಿದ್ದು ಬಹುಭಾಗ ನೀರಾವರಿಗೆ ಒಳಪಟ್ಟಿದೆ. ಹಿಂದಿನಿಂದಲೂ ಜಿಲ್ಲೆಯಲ್ಲಿ ವಿಜಯನಗರದ ಕಾಲದ ಕಾಲುವೆಗಳಿಂದ ಕೆರೆ ಬಾವಿಗಳಿಂದ ನೀರೊದಗಿಸಿಕೊಳ್ಳುತ್ತಿದ್ದರು. ತುಂಗಭದ್ರಾ ಜಲಾಶಯ ನಿರ್ಮಾಣ ಈ ಜಿಲ್ಲೆಗೆ ಒಂದು ವರಪ್ರಧಾನವಾಗಿ ಇದರ ಯೋಜನೆಯಂತೆ ಜಲಾಶಯದ ಎಡದಂಡೆ ನಾಲೆ 225 ಕಿಮೀ ದೂರ ಸಾಗಿ 5.8 ಲಕ್ಷ ಎಕರೆಗಳಲ್ಲಿ ನೀರುಣಿಸುವುದು. ರಾಯಚೂರು, ಮಾನ್ವಿ ಮತ್ತು ದೇವದುರ್ಗ ತಾಲ್ಲೂಕುಗಳಲ್ಲಿ ಕೆರೆಯ ನೀರಾವರಿ ಹೆಚ್ಚು. ಆಂಧ್ರ ಮತ್ತು ಕರ್ನಾಟಕ ರಾಜ್ಯಗಳೆರಡೂ ಸೇರಿ ಮಾನ್ವಿ ತಾಲ್ಲೂಕಿನ ರಾಜೋಲಿಬಂಡ ಗ್ರಾಮದ ಹತ್ತಿರ ತುಂಗಭದ್ರಾ ನದಿಗೆ ಸುಮಾರು 820 ಮೀ ಉದ್ದದ ರಾಜೋಲಿಬಂಡ ನೀರು ತಿರುಗಣೆ ಅಣೆಕಟ್ಟನ್ನು ಕಟ್ಟಿದ್ದು ಇದರಿಂದ ಹೊರಡುವ 116 ಕಿಮೀ ಉದ್ದದ ನಾಲೆಯಲ್ಲಿ ಸು. 44 ಕಿಮೀ ಮಾತ್ರ ಈ ಜಿಲ್ಲೆಯಲ್ಲಿ ಸಾಗಿ ಮುಂದೆ ಆಂಧ್ರಪ್ರದೇಶವನ್ನು ಸೇರುವುದು. ರಾಯಚೂರುಜಿಲ್ಲೆಯ ಉತ್ತರದಲ್ಲಿ ಗಡಿಯಾಗಿ ಹರಿಯುವ ಕೃಷ್ಣಾನದಿಯ ಸುಮಾರು 168 ಕಿಮೀ ದೂರದ ಬಲದಂಡೆ ರಾಯಚೂರುಜಿಲ್ಲೆಗೆ ಸೇರಿದ್ದು ಫಲವತ್ತಾದ ಭೂಮಿ ಮತ್ತು ಜಲಸೌಕರ್ಯ ಪಡೆದಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಂತೆ ಮುದ್ದೇಬಿಹಾಳ ತಾಲ್ಲೂಕಿನ ಸಿದ್ಧಾಪುರದ ಬಳಿ ನಿರ್ಮಿಸುವ ನಾರಾಯಣ ಪುರ ಬಲದಂಡೆ ಯೋಜನೆಯಿಂದಲೂ ರಾಯಚೂರಿನ ಲಿಂಗಸುಗೂರು, ದೇವದುರ್ಗ, ರಾಯಚೂರು ಮತ್ತು ಮಾನ್ವಿ ತಾಲ್ಲೂಕುಗಳಿಗೆ ನೀರೊದಗುವುದು. ಒಟ್ಟನಲ್ಲಿ ಇಡೀ ರಾಜ್ಯದಲ್ಲೇ ಈ ಜಿಲ್ಲೆ ಹೆಚ್ಚು ನೀರಾವರಿ ಪ್ರದೇಶವನ್ನು ಪಡೆದಿದೆ.

ಜಿಲ್ಲೆಯ ವ್ಯವಸಾಯಾಭಿವೃದ್ಧಿಗೆ ನೆರವಾಗುವಂಥ ಅನೇಕ ಅಭಿವೃದ್ಧಿ ಕಾರ್ಯಗಳೂ ಯೋಜನೆಗಳೂ ಕೆಲಸ ಮಾಡುತ್ತಿರುವುದಲ್ಲದೆ, ಜಿಲ್ಲೆಯಲ್ಲಿ ಕೆಲವು ತರಬೇತಿ ಕೇಂದ್ರಗಳೂ ಇವೆ. ತೋಟಗಾರಿಕೆ ಅಭಿವೃದ್ಧಿಯಾಗುತ್ತಿದೆ. ಮಾವು, ಸಪೋಟ, ಬಾಳೆ, ಸೀಬೆ, ನಿಂಬೆ, ದಾಳಿಂಬೆ, ಅಂಜೂರ ಮುಂತಾದ ಹಣ್ಣುಗಳನ್ನು ಬೆಳೆಯುವರು. ಜಿಲ್ಲೆಯಲ್ಲಿ ಪಶುಪಾಲನೆಗೂ ಗಮನ ಕೊಡಲಾಗುತ್ತಿದೆ. ಮುನಿರಾಬಾದಿನಲ್ಲಿ ಪಶು ಮತ್ತು ಕುರಿ ಸಂತಾನ ಅಭಿವೃದ್ಧಿ ಕೇಂದ್ರ, ಸಿಂಧನೂರು ತಾಲ್ಲೂಕಿನ ಜವಾಲ್ಗೇರದಲ್ಲಿ ಪಶು ಅಭಿವೃದ್ಧಿ ಕೇಂದ್ರ ಇವೆ. ಜಿಲ್ಲೆಯ ತಾಲ್ಲೂಕು ಕೇಂದ್ರ ಮತ್ತು ಮುಖ್ಯ ಊರುಗಳಲ್ಲಿ ಪಶುವೈದ್ಯಾಲಯ ಮತ್ತು ಔಷಧಾಲಯಗಳಿವೆ. ಜಿಲ್ಲೆಯ ಮತ್ಸ್ಯೋದ್ಯಮದ ಬೆಳವಣಿಗೆಗೆ ತುಂಗಭಧ್ರಾ ಜಲಾಶಯ ಮುಖ್ಯವಾಗಿದ್ದು ಮುನಿರಾಬಾದಿನಲ್ಲಿ ಒಂದು ಮೀನುಸಾಕಣೆ ಕೇಂದ್ರವಿದೆ. ಕೃಷ್ಣಾ ಮತ್ತು ತುಂಗಭದ್ರಾ ನದಿಗಳಲ್ಲೂ ಕೆಲವು ಮುಖ್ಯ ಕೆರೆಗಳಲ್ಲೂ ಮೀನು ಸಾಕಲಾಗುತ್ತಿದೆ.

ಈ ಜಿಲ್ಲೆಯಲ್ಲಿ ಚಿನ್ನ, ಕಬ್ಬಿಣ, ತಾಮ್ರ, ಸೀಸದ ಅದಿರು, ಫೆಲ್‌ಸ್ಪಾರ್, ಕಾವಿಮಣ್ಣು, ಅಭ್ರಕ, ಸ್ಫಟಿಕ ಶಿಲೆ, ಕಟ್ಟಡಗಳಿಗೆ ಉಪಯೋಗಿಸುವ ಶಿಲೆಗಳು ಮತ್ತು ಜಂಬುಮಣ್ಣು ಸಿಗುತ್ತದೆ. ಅಶೋಕನ ಕಾಲದಿಂದಲೂ ಈ ಜಿಲ್ಲೆಯಲ್ಲಿ ಚಿನ್ನ ತೆಗೆಯುತ್ತಿದ್ದರೆಂದು ತಿಳಿದುಬರುತ್ತದೆ.

ತುಂಗಭದ್ರಾ ಜಲಾಶಯದ ನಿರ್ಮಾಣ ಮತ್ತು ಜಲವಿದ್ಯುತ್ ಉತ್ಪಾದನೆ ಈ ಜಿಲ್ಲೆಯ ಹೊಸ ಕೈಗಾರಿಕೆಗಳ ನಿರ್ಮಾಣಕ್ಕೆ, ಬೆಳವಣಿಗೆಗೆ ಮೂಲ ತಿರುವನ್ನು ಕೊಟ್ಟವು. ಸಾಕಷ್ಟು ವಿದ್ಯುತ್ತಿನ ಸರಬರಾಜಿನಿಂದ ಹಳೆ ಕೈಗಾರಿಕೆಗಳು ಕೆಲವು ವಿಸ್ತರಿಸಿದರೆ, ಹತ್ತಿನೂಲು, ಎಣ್ಣೆ ಮತ್ತು ಸಕ್ಕರೆ ಕಾರ್ಖಾನೆಗಳು ಕೆಲವು ವಿಸ್ತರಿಸಿದರೆ, ಹತ್ತಿನೂಲು, ಎಣ್ಣೆ ಮತ್ತು ಸಕ್ಕರೆ ಕಾರ್ಖಾನೆಗಳು ಹೊಸದಾಗಿ ಪ್ರಾರಂಭವಾದವು. ಹಟ್ಟಿ ಚಿನ್ನದ ಗಣಿ ಅಭಿವೃದ್ಧಿಯಾಗಿದ್ದು ಕಾರ್ಮಿಕ ಕಲ್ಯಾಣದ ಕಡೆ ಹೆಚ್ಚು ಗಮನ ಹರಿಸುತ್ತಿದೆ. ಮುನಿರಾಬಾದಿನಲ್ಲಿರುವ ಸಾಲಾರಜಂಗ್ ಸಕ್ಕರೆ ಕಾರ್ಖಾನೆ, ತುಂಗಭದ್ರಾ ಪಲ್ಪ್ ಅಂಡ್ ಬೋರ್ಡ್ ಮಿಲ್ಸ್, ಚಾಮುಂಡಿ ರಸಾಯನಿಕ ಮತ್ತು ಗೊಬ್ಬರ ತಯಾರಿಕಾ ಕಾರ್ಖಾನೆ, ಫರೂಕ್ ಅನ್ವರ್ ಎಣ್ಣೆ ಕಾರ್ಖಾನೆ, ಸಹಕಾರಿ ನೂಲು ಕಾರ್ಖಾನೆ, ಹತ್ತಿ ಪರಿಷ್ಕೃತ ಕಾರ್ಖಾನೆಗಳನ್ನು ಹೇಳಬಹುದು. ಸಿಮೆಂಟ್ ಪೈಪುಗಳನ್ನು ತಯಾರಿಸುವ ಕಾರ್ಖಾನೆ ರಾಯಚೂರಿನಲ್ಲಿದೆ. ಜಿಲ್ಲೆಯಲ್ಲಿ ಕಂಬಳಿ ತಯಾರಿಕೆ, ಚರ್ಮ ಹದಗೊಳಿಸುವುದು, ಮಡಕೆ ಮಾಡುವುದು, ಮರ ಮತ್ತು ಕಬ್ಬಿಣದ ಕೆಲಸ, ಬುಟ್ಟಿ, ಮಂದಲಿಗೆ ತಯಾರಿಕೆ, ಪಾದರಕ್ಷೆಗಳ ತಯಾರಿಕೆ–ಇವುಗಳ ಜೊತೆಗೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ನೆರವಿನಿಂದ ಕೆಲವು ಗ್ರಾಮೀಣ ಉದ್ಯಮಗಳೂ ಅಭಿವೃದ್ಧಿಯಾಗುತ್ತಿವೆ.

ಕಾರ್ಖಾನೆ ಮತ್ತು ಇತರ ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗುವಂಥ ಕಾರ್ಮಿಕರನ್ನು ತರಬೇತುಗೊಳಿಸಲು ರಾಯಚೂರಿನಲ್ಲಿ ಒಂದು ಕೈಗಾರಿಕಾ ತರಬೇತಿ ಸಂಸ್ಥೆ ಇದೆ. ಕಿನ್ನಾಳ ಮತ್ತು ಭಾಗ್ಯನಗರಗಳಲ್ಲಿ ಕುಟೀರ ಕೈಗಾರಿಕಾ ತರಬೇತಿ ಕೇಂದ್ರಗಳೂ ಕೊಪ್ಪಳದಲ್ಲಿ ಒಂದು ಗ್ರಾಮ ಕೈಗಾರಿಕಾ ತರಬೇತಿ ಸಂಸ್ಥೆಯೂ ಕಿನ್ನಾಳದಲ್ಲಿ ಮರದ ಬೊಂಬೆ ತಯಾರಿಕಾ ಕೇಂದ್ರವೂ ಇದೆ. ಇದರ ಜೊತೆಗೆ ಸರ್ಕಾರ ಮತ್ತು ಖಾಸಗಿ ಸಹಕಾರ ಸಂಘಗಳು ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡುತ್ತಿವೆ.

ಜಿಲ್ಲೆಯ ವ್ಯಾಪಾರ ವಾಣಿಜ್ಯ ಹೆಚ್ಚಾಗಿ ಕೃಷಿ ಸರಕುಗಳನ್ನು ಅವಲಂಬಿಸಿದೆ. ಈ ಜಿಲ್ಲೆಯಿಂದ ಪ್ರತಿವರ್ಷ ಹತ್ತಿ, ಎಣ್ಣೆಬೀಜಗಳು, ಸೇಂಗಾ ಎಣ್ಣೆ, ದ್ವಿದಳ ಧಾನ್ಯಗಳು ರಫ್ತಾಗುವುವು. ಜಿಲ್ಲೆಯಲ್ಲಿ ಬೆಳೆಯುವ ಅಪಾರ ಹತ್ತಿಯನ್ನು ಸೋಲಾಪುರ, ಮುಂಬಯಿ ಮತ್ತು ಕೊಯಮತ್ತೂರುಗಳಿಗೂ ಸೇಂಗಾ ಎಣ್ಣೆಯನ್ನು ಪುಣೆ, ಮುಂಬಯಿ ಮತ್ತು ಇತರ ಕಡೆಗಳಿಗೂ ಎಣ್ಣೆಬೀಜಗಳನ್ನು ಗದಗ ಮತ್ತು ಬಿಜಾಪುರಗಳಿಗೂ ಕಳುಹಿಸಲಾಗುವುದು.

ಜಿಲ್ಲೆಯ ಕೈಮಗ್ಗಗಳಿಗೆ ಬೇಕಾದ ಹತ್ತಿನೂಲು, ರೇಷ್ಮೆ ಮತ್ತು ಕೃತಕ ರೇಷ್ಮೆದಾರ, ಕಂಬಳಿ, ಹೊಗೆಸೊಪ್ಪು, ಬೀಡಿ ಎಲೆಗಳು,

ಮರ, ವನಸ್ಪತಿ, ತೆಂಗಿನ ಕಾಯಿ, ಬೆಲ್ಲ, ಕೆಲವು ಬಗೆಯ ಧಾನ್ಯಗಳು ಮುಂತಾದವನ್ನು ಹೊರಗಿನಿಂದ ಆಮದು ಮಾಡಿಕೊಳ್ಳುವರು. ಜಿಲ್ಲೆಯ ಮುಖ್ಯ ಮಾರುಕಟ್ಟೆ ಪ್ರದೇಶ ರಾಯಚೂರು. ಹತ್ತಿ ಸೇಂಗಾ, ಜೋಳ, ಹುಣಿಸಿಹಣ್ಣು, ಮೆಣಸಿನಕಾಯಿ ಮತ್ತು ಕೈಮಗ್ಗದ ಬಟ್ಟೆಗಳಿಗೆ ಕೊಪ್ಪಳ ಒಂದು ದೊಡ್ಡ ವ್ಯಾಪಾರ ಕೇಂದ್ರ. ಬತ್ತ, ಜೋಳ, ಸೇಂಗಾ, ಬೆಲ್ಲ, ಹರಳು, ಸಜ್ಜೆ, ಮುಂತಾದವುಗಳಿಗೆ ಗಂಗಾವತಿ ಮುಖ್ಯ ವ್ಯಾಪಾರ ಕೇಂದ್ರ. ಇದೇ ರೀತಿ ಕುಷ್ಟಗಿ, ಯಲಬುರ್ಗ, ಕುಕನೂರು, ಕಿನ್ನಾಳ, ಸಿಂಧನೂರು, ಮಾನ್ವಿ, ಲಿಂಗಸುಗೂರು, ಮುದಗಲ್ಲು, ಮಸ್ಕಿ, ದೇವದುರ್ಗ, ಹನುಮಸಾಗರ ಮತ್ತು ಜಾಲಹಳ್ಳಿ ಈ ಜಿಲ್ಲೆಯ ಮುಖ್ಯ ವ್ಯಾಪಾರ ಕೇಂದ್ರಗಳು.



ರಾಯಚೂರು ಕೋಟೆ

ರಾಯಚೂರು-ಲಿಂಗಸುಗೂರು ನಡುವಣ ರಸ್ತೆಯೇ ಜಿಲ್ಲೆಯಲ್ಲಿ 1855ರಲ್ಲಿ ನಿರ್ಮಿಸಿದ ಮೊದಲ ರಸ್ತೆ. ಎರಡು ಮಹಾನದಿಗಳ ಮಧ್ಯೆ ಇರುವ ಈ ದೋಅಬ್ ಪ್ರದೇಶಕ್ಕೆ ಅನೇಕ ವರ್ಷಗಳವರೆಗೆ ಅಕ್ಕಪಕ್ಕದ ಪ್ರದೇಶಗಳೊಂದಿಗೆ ಸಂಪರ್ಕ ಕಷ್ಟವಾಗಿತ್ತು. ರೈಲುಮಾರ್ಗ ನಿರ್ಮಾಣದ ಪರಿಣಾಮವಾಗಿ ನದಿಗಳಿಗೆ ಸೇತುವೆ ಕಟ್ಟಿ ಇತರ ಮುಖ್ಯ ರಸ್ತೆಗಳನ್ನು ನಿರ್ಮಿಸಿದಾಗ ಸಂಪರ್ಕ-ಸಾಗಣೆಗಳು ಹೆಚ್ಚು ಅಭಿವೃದ್ಧಿಯಾಗತೊಡಗಿದವು. ಈಗ ಒಟ್ಟು 105 ಕಿಮೀ ಉದ್ದದ ರೈಲುಮಾರ್ಗವಿರುವ ಈ ಜಿಲ್ಲೆಯ ಪೂರ್ವದಲ್ಲಿ ಗುಂತಕಲ್ಲು-ವಾಡಿ ಬ್ರಾಡ್‌ಗೇಜ್ ರೈಲುಮಾರ್ಗ ರಾಯಚೂರು ಮುಖಾಂತರ ಹಾದುಹೋಗುತ್ತದೆ. ತುಂಗಭದ್ರಾ ಮತ್ತು ಕೃಷ್ಣಾ ನದಿಗಳಿಗೆ ಕಟ್ಟಿರುವ ಕೆಲವು ಸೇತುವೆಗಳು ನೆರೆ ರಾಜ್ಯಗಳಿಗೆ ಸಂಪರ್ಕ ಕಲ್ಪಿಸಿವೆ.

ರಾಯಚೂರಿನಲ್ಲಿ ಜಿಲ್ಲಾ ಮಟ್ಟದ ನ್ಯಾಯಾಲಯವಿದ್ದು ತಾಲ್ಲೂಕು ಮಟ್ಟದ ನ್ಯಾಯಾಲಯಗಳು ರಾಯಚೂರು, ಮಾನ್ವಿ, ಸಿಂಧನೂರು, ಲಿಂಗಸುಗೂರು, ದೇವದುರ್ಗದಲ್ಲಿವೆ. ರಾಯಚೂರು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ 1,75,796 ಮಂದಿ ವ್ಯವಸಾಯಗಾರರೂ 2,64,178 ಮಂದಿ ಕೃಷಿಕಾರ್ಮಿಕರೂ 6,462 ಹೈನುಗಾರಿಕೆ ಘಟಕಗಳೂ 5,603 ಗಣಿಗಾರಿಕೆಯ ಘಟಕಗಳೂ 6,322 ಗೃಹ ಕೈಗಾರಿಕಾ ಕೇಂದ್ರಗಳೂ ಇದ್ದವು (1991). 2001ರ ಅಂಕಿಅಂಶದ ಪ್ರಕಾರ 12,29,203 ಮಂದಿ ಗ್ರಾಮೀಣರೂ 4,19,099 ಮಂದಿ ನಗರವಾಸಿಗಳೂ ಇದ್ದರು. ಜಿಲ್ಲೆಯಲ್ಲಿ 18,167 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಸು. 40,641 ಹೆಕ್ಟೇರ್ ಭೂಮಿ ಸಾಗುವಳಿಗೆ ಲಭ್ಯವಿಲ್ಲವಾಗಿದ್ದು 6,44,274 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಲಾಗಿತ್ತು. 1,17,347 ಹೆ.ನಲ್ಲಿ ಬತ್ತ, 1,74,386 ಹೆ.ನಲ್ಲಿ ಜೋಳ, 65,722 ಹೆ.ನಲ್ಲಿ ಸಜ್ಜೆ, 249 ಹೆ.ನಲ್ಲಿ ಮುಸುಕಿನ ಜೋಳ, 4,158 ಹೆ.ನಲ್ಲಿ ಗೋಧಿ, 47,030 ಹೆ.ನಲ್ಲಿ ವಿವಿಧ ಧಾನ್ಯಗಳು, 50,040 ಹೆ.ನಲ್ಲಿ ನೆಲಗಡಲೆ, 134 ಹೆ.ನಲ್ಲಿ ಕಬ್ಬು, 49,208 ಹೆ.ನಲ್ಲಿ ಹತ್ತಿಯನ್ನು ಬೆಳೆಯಲಾಗಿತ್ತು (1999). ರೇಷ್ಮೆ ಉತ್ಪಾದನೆಗಾಗಿ 138 ಹೆ.ನಲ್ಲಿ ಹಿಪ್ಪುನೇರಳೆ ಬೆಳೆಯಲಾಗಿತ್ತು (2001). ಜಿಲ್ಲೆಯಲ್ಲಿ ಪಶುಸಂಪತ್ತು ಸಾಕಷ್ಟಿದ್ದು ಅವುಗಳಿಗೆ ಸಂಬಂಧಿಸಿದ 5 ಆಸ್ಪತ್ರೆಗಳೂ 13 ಚಿಕಿತ್ಸಾಲಯಗಳೂ 44 ಪ್ರಾಥಮಿಕ ಪಶುವೈದ್ಯ ಕೇಂದ್ರಗಳೂ 4 ಸಂಚಾರಿ ಚಿಕಿತ್ಸಾಲಯಗಳೂ ಇದ್ದವು (2000). 2000-2001ರ ಸಾಲಿನಲ್ಲಿ 3,410 ಮೆಟ್ರಿಕ್ ಟನ್ ಮೀನು ಹಿಡಿಯಲಾಗಿತ್ತು.

ರಾಯಚೂರು ಜಿಲ್ಲೆಯಲ್ಲಿ ಕೈಗಾರಿಕೆಗಳೂ ಅಭಿವೃದ್ಧಿ ಹೊಂದುತ್ತಿವೆ. 88 ಬಟ್ಟೆ ಕಾರ್ಖಾನೆಗಳೂ 11 ರಾಸಾಯನಿಕ, 8 ಎಂಜಿನಿಯರಿಂಗ್, 129 ಇತರ ಕಾರ್ಖಾನೆಗಳಿವೆ. ಒಟ್ಟು 236 ಕಾರ್ಖಾನೆಗಳಿದ್ದು 9148 ಮಂದಿಗೆ ಉದ್ಯೋಗ ದೊರಕಿತ್ತು (2001). ಜಿಲ್ಲೆಯಲ್ಲಿ ಒಟ್ಟು 15 ನಿಯಂತ್ರಿತ ಮಾರುಕಟ್ಟೆಗಳಿದ್ದವು. ವಾಣಿಜ್ಯ ವ್ಯಾಪಾರ ಅಭಿವೃದ್ಧಿಗೆ ಆರ್ಥಿಕ ಸಹಕಾರ ನೀಡುವಂತಹ 48 ವಾಣಿಜ್ಯ ಬ್ಯಾಂಕುಗಳು, 46 ಗ್ರಾಮೀಣ ಬ್ಯಾಂಕುಗಳಿದ್ದು ಒಟ್ಟು ಠೇವಣಿ ರೂ. 52,666 ಲಕ್ಷಗಳಷ್ಟಿತ್ತು (2001).

ಜಿಲ್ಲೆಯ ಸಾರಿಗೆ ಮತ್ತು ಸಂಪರ್ಕಗಳಿಗೆ ನೆರವಾಗುವಂತೆ 51 ಕಿಮೀ ಬ್ರಾಡ್‌ಗೇಜ್ ರೈಲುಮಾರ್ಗವಿದ್ದು 6 ರೈಲು ನಿಲ್ದಾಣಗಳಿವೆ. 27 ಸೇತುವೆಗಳನ್ನು ಒಳಗೊಂಡ ಒಟ್ಟು 6,449 ಕಿಮೀ ರಸ್ತೆಯಿದ್ದು ಇದರಲ್ಲಿ 2,594 ಕಿಮೀ ಪಕ್ಕಾರಸ್ತೆ ಸೇರಿದೆ (1999). ಅಂಚೆಕಚೇರಿಗಳೂ ದೂರವಾಣಿ ಕೇಂದ್ರಗಳೂ ಜಿಲ್ಲೆಯಲ್ಲಿ ಸಾಕಷ್ಟಿವೆ.

ಸಾಕ್ಷರತೆಯಲ್ಲಿ ಜಿಲ್ಲೆ ಹೆಚ್ಚು ಪ್ರಗತಿ ಸಾಧಿಸಿಲ್ಲ. ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಇದೇ ಕೊನೆಯದು. ಸಾಕ್ಷರತಾ ಪ್ರಮಾಣ ಶೇ. 49.54 (2001). ಜಿಲ್ಲೆಯಲ್ಲಿ 1,242 ಪ್ರಾಥಮಿಕ ಶಾಲೆಗಳೂ 155 ಪ್ರೌಢಶಾಲೆಗಳೂ 34 ಪದವಿಪೂರ್ವ ಕಾಲೇಜುಗಳೂ ಇದ್ದವು (2000-2001). 3 ಪಾಲಿಟೆಕ್ನಿಕ್, 1 ಎಂಜಿನಿಯರಿಂಗ್, 1 ಆಯುರ್ವೇದ ವೈದ್ಯಪದ್ಧತಿ ಕಾಲೇಜು ಮತ್ತು 1 ದಂತವೈದ್ಯ ಕಾಲೇಜು ಇದ್ದವು (2001). ಅನೇಕ ವಿದ್ಯಾರ್ಥಿ ನಿಲಯಗಳಿದ್ದು ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲಾಗುತ್ತಿದೆ.

ಜಿಲ್ಲೆಯಲ್ಲಿ 4 ಸರ್ಕಾರಿ ಆಸ್ಪತ್ರೆಗಳು, 3 ಭಾರತೀಯ ವೈದ್ಯಪದ್ಧತಿ ಆಸ್ಪತ್ರೆಗಳು, 47 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 6 ಘಟಕಗಳು, 23 ಕುಟುಂಬ ಕಲ್ಯಾಣ ಕೇಂದ್ರಗಳೂ ಆರೋಗ್ಯಕ್ಕೆ ಸಂಬಂಧಿಸಿದ ಇತರೇ ವ್ಯವಸ್ಥೆಗಳೂ (2001) ಇದ್ದವು.

ಈ ಜಿಲ್ಲೆಯ ಧಾರ್ಮಿಕ, ಐತಿಹಾಸಿಕ ಮತ್ತು ಪ್ರಾಚೀನ ಸ್ಥಳಗಳಲ್ಲಿ ದೇವದುರ್ಗ ತಾಲ್ಲೂಕಿನ ಗಬ್ಬೂರು, ಯರಡೋಣ, ಆನೆಗುಂದಿ ಗ್ರಾಮಪ್ರದೇಶ, ಲಿಂಗಸುಗೂರು ತಾಲ್ಲೂಕಿನ ದೇವರಭೂಪುರ, ಜಲದುರ್ಗ, ಮಸ್ಕಿ ಮತ್ತು ಮುದುವಾಳ, ಮಾನ್ವಿ ತಲ್ಲೂಕಿನ ಕೋಟೆಕಲ್ಲು, ಕೌತಾಳ, ಕಲ್ಲೂರು, ರಾಯಚೂರು ತಾಲ್ಲೂಕಿನ ದೇವರಸುಗೂರು, ಕಡ್ಲೂರು, ರಾಮಗಡ್ಡೆ ಕೊರ್ವ (ಮಟ್ಮರಿ), ಗಾಣಧಾಳ, ಸಿಂಧನೂರು ತಾಲ್ಲೂಕಿನ ಸೋಮಲಾಪುರ, ಮುಕುಂದ, ರೌದಕುಂದ, ಇವುಗಳನ್ನು ಉಲ್ಲೇಖಿಸಬಹುದು. ಈ ಜಿಲ್ಲೆಯಲ್ಲಿ ಅನೇಕ ಜಾತ್ರೆಗಳೂ ನಡೆಯುವುವು. ಅವುಗಳಲ್ಲಿ ಶ್ರೀಪಾದ ಶ್ರೀವಲ್ಲಭ ದೇವಾಲಯದ ಜಾತ್ರೆ, ಮಾನ್ವಿಯ ಮಹಾಮಲ್ಲೇಶಪ್ಪ ಮತ್ತು ಕರೆಮ್ಮ ಜಾತ್ರೆ, ಎಲ್ಲಮ್ಮ ಜಾತ್ರೆ, ಸಂಜೀವರಾಯ ಜಾತ್ರೆ, ಲಿಂಗಸುಗೂರು ತಾಲ್ಲೂಕಿನ ಅಮರೇಶ್ವರ ಜಾತ್ರೆ, ಕಡಲೂರಿನ ಕಡಲೂರಯ್ಯ ಜಾತ್ರೆ, ಸಿಂಧನೂರು ತಾಲ್ಲೂಕಿನ ಬಳಗನೂರು ಹನುಮಂತನ ಜಾತ್ರೆ ಪ್ರಸಿದ್ಧವಾಗಿವೆ.

ರಾಯಚೂರು ಜಿಲ್ಲೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಕೊಡುಗೆ ಸಲ್ಲಿಸಿದೆ. ಹಿಂದೆ ಜಿಲ್ಲೆಯ ದೇವಾಲಯಗಳು, ವೀರಶೈವ ಮಠಗಳು ಸಾಹಿತ್ಯ ಸಂಸ್ಕೃತಿಯ ಕೇಂದ್ರಗಳಾಗಿದ್ದವು. ಚಾಳುಕ್ಯ, ರಾಷ್ಟ್ರಕೂಟ, ವಿಜಯನಗರ, ಬಹಮನೀ ಮತ್ತು ಆದಿಲ್‌ಶಾಹೀ ರಾಜರುಗಳು ಜಿಲ್ಲೆಯ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯಗಳ ಅಭಿವೃದ್ಧಿಗೆ ಅಪಾರ ಪ್ರೋತ್ಸಾಹ ನೀಡಿದ್ದಾರೆ. ಈ ಜಿಲ್ಲೆಯ ಶಿವಶರಣರು ಮತ್ತು ಹರಿದಾಸರು ಕನ್ನಡ ಸಂಸ್ಕೃತಿ ಹಾಗೂ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ವಚನಕಾರ ರಲ್ಲಿ ಶಂಕರದಾಸಿಮಯ್ಯ, ಲಿಂಗಸುಗೂರು ತಾಲ್ಲೂಕಿನ ನವಲಿಯವನು ಢಕ್ಕೆಯ ಮಾರಯ್ಯ, ಆಯ್ದಕ್ಕಿಯ ಮಾರಯ್ಯ ಮತ್ತು ಈತನ ಪತ್ನಿ ಆಯ್ದಕ್ಕಿಯ ಲಕ್ಕಮ್ಮ ಇವರೂ ಇದೇ ತಾಲ್ಲೂಕಿನ ಅಮರೇಶ್ವರದವರು. ಬಿಬ್ಬಬಾಚಯ್ಯ ದೇವದುರ್ಗ ತಾಲ್ಲೂಕಿನ ಗಬ್ಬೂರಿನವನು. 16ನೆಯ ಶತಮಾನದಲ್ಲಿ ವರರಮ್ಯರತ್ನಾಕರ ಗ್ರಂಥ ಬರೆದ ಲಿಂಗಣ್ಣಾಚಾರ್ಯ ಮಾನ್ವಿ ತಾಲ್ಲೂಕಿನ ಕಲ್ಲೂರಿನವನು. ಪ್ರಸಿದ್ಧ ಹರಿದಾಸರಾದ ವಿಜಯದಾಸರು ಮಾನ್ವಿ ತಾಲ್ಲೂಕಿನ ಚೀಕಲಪರವಿಯವರು. ಇವರ ಶಿಷ್ಯರೂ ಅನೇಕ ದೇವರ ನಾಮಗಳನ್ನು ಬರೆದ ಗೋಪಾಲದಾಸರೂ ದೇವದುರ್ಗ ತಾಲ್ಲೂಕಿನ ಮೊಸರ ಕಲ್ಲಿನವರು. ಹರಿಕಥಾಮೃತಸಾರ ರಚಿಸಿದ ಜಗನ್ನಾಥದಾಸರು ಮಾನ್ವಿ ತಾಲ್ಲೂಕಿನವರು. ಅನೇಕ ಗ್ರಂಥಗಳನ್ನು ಬರೆದ ಮನೋಹರ ವಿಠಲರು ಮಾನ್ವಿ ತಾಲ್ಲೂಕಿನ ಬುದ್ದಿನ್ನಿಯವರು. 13 ಸಂಸ್ಕೃತ ಗ್ರಂಥಗಳನ್ನೂ ಕನ್ನಡದಲ್ಲಿ ಉಗಾಭೋಗಗಳನ್ನೂ ಸುಳಾದಿಗಳನ್ನೂ ಮತ್ತು ಪದಗಳನ್ನೂ ಬರೆದ ಪರಮಹಂಸ ವ್ಯಾಸ ತತ್ತ್ವಜ್ಞರೆಂದೂ ಪ್ರಸಿದ್ಧರಾದ ವೆಂಕಟರಾಮಾಚಾರ್ಯರು ಇದೇ ಜಿಲ್ಲೆಯವರು. ಅನೇಕ ಗ್ರಂಥಗಳನ್ನೂ ಹನ್ನೆರಡು ಇತರ ಹರಿಕಥೆಗಳನ್ನೂ ಉಗಾಭೋಗ, ಸುಳಾದಿ ಮತ್ತು ಪದಗಳನ್ನೂ ಬರೆದು ಪ್ರಾಣೇಶ ವಿಠಲರೆಂದು ಪ್ರಸಿದ್ಧರಾದ ಪ್ರಾಣೇಶದಾಸ ಯೋಗಪ್ಪನವರು ಲಿಂಗಸುಗೂರಿನವರು. ಪಂಗನಾಮ ತಿಮ್ಮಣ್ಣದಾಸ, ಆನಂದದಾಸ ಇವರೂ ಈ ಜಿಲ್ಲೆಯ ಪ್ರಸಿದ್ಧ ಹರಿದಾಸರು. ಕುಮಾರವಿಜಯ, ಬಸವಶತಕ ಮೊದಲಾದ ಕಾವ್ಯಗಳನ್ನೂ ಪಂಪಾಶತಕ ಮತ್ತು ಭುವನೈಕ ನಾಯಕಿ ಬರೆದ ಸಂಗವಿಭು ಇದೇ ಜಿಲ್ಲೆಯ ಗಣೇಕಲ್ಲಿನವನು. ಭಕ್ತಿ ಸುಧಾರಸ ಗ್ರಂಥ ಬರೆದ ಘನಮಠದಾರ್ಯನೂ ಇದೇ ಜಿಲ್ಲೆಗೆ ಸೇರಿದವನು. ಇವರಲ್ಲದೆ ಇನೂ ಅನೇಕ ಕವಿಗಳು ಈ ಜಿಲ್ಲೆಯ ಸಾಹಿತ್ಯಕ್ಕೆ ಕೊಡುಗೆ ಸಲ್ಲಿಸಿದ್ದಾರೆ. ದಾಸ ಸಾಹಿತ್ಯದಲ್ಲಿ ಸಂಶೋಧನೆ ನಡೆಸಿ 50ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ ಗೋರೆಬಾಳ ಹನುಮಂತರಾಯರು ಲಿಂಗಸುಗೂರಿನವರು. ಹಮ್‌ದರ್ದ್ ಪ್ರೌಢಶಾಲೆಯನ್ನು ಸ್ಥಾಪಿಸಿದ, ಅನೇಕ ಗ್ರಂಥಗಳನ್ನು ಬರೆದ ಪಂಡಿತ ತಾರಾನಾಥರು ಈ ಜಿಲ್ಲೆಯವರು. ಆಧುನಿಕ ಸಾಹಿತಿಗಳಲ್ಲಿ ಶಬ್ದಮಣಿದರ್ಪಣದ ಪಾಠಾಂತರಗಳು, ಹರಿಕಥಾಮೃತ, ಹೂಮಾಲೆ ಮೊದಲಾದ ಗ್ರಂಥಗಳನ್ನು ರಚಿಸಿದ ಡಿ.ಕೆ. ಭೀಮಸೇನರಾಯರು ಮಾನ್ವಿ ತಾಲ್ಲೂಕಿನ ಬೀಡಗಿಯವರು. ಸರಸ್ವತಿ ತತ್ತ್ವ, ಕನ್ನಡ ಯಾತ್ರೆ ಮೊದಲಾದ ಕೃತಿಗಳನ್ನು ರಚಿಸಿದ ಮಾನ್ವಿ ನರಸಿಂಗರಾಯರು ಈ ಜಿಲ್ಲೆಗೆ ಸೇರಿದವರು.

**ಇತಿಹಾಸ:** ರಾಯಚೂರು ಜಿಲ್ಲೆಯ ಇತಿಹಾಸ ವೈಶಿಷ್ಟ್ಯ ಪೂರ್ಣವಾದದ್ದು. ರಾಮಾಯಣದ ಕಿಷ್ಕಿಂಧೆ ಈ ಜಿಲ್ಲೆಯ ಆನೆಗುಂದಿಯೆಂದು ಪ್ರತೀತಿ. ಮಹಾಭಾರತದ ಧರ್ಮರಾಯ ರಾಜಸೂಯಯಾಗ ಮಾಡುವ ಸಂದರ್ಭದಲ್ಲಿ ಒಂದು ದಿಗ್ವಿಜಯದ ತಂಡದ ನಾಯಕನಾಗಿ ಬಂದ ಸಹದೇವ ಈ ಸ್ಥಳದಲ್ಲಿ ತಂಗಿದ್ದು ಆತಿಥ್ಯ ಸ್ವೀಕರಿಸಿದನೆಂದೂ ಇದರಿಂದ ಈ ಜಿಲ್ಲೆಯ ಪ್ರದೇಶ ಪುರಾಣಗಳ ಕಾಲದಿಂದ ಪ್ರಸಿದ್ಧವೆಂದೂ ಪ್ರತೀತಿ. ಕೃಷ್ಣಾ ಮತ್ತು ತುಂಗಭದ್ರಾ ಎರಡು ಮಹಾನದಿಗಳ ಮಧ್ಯದ ಈ ಪ್ರದೇಶ ಇತಿಹಾಸಪೂರ್ವದ ಪ್ರಾಚೀನ ಮಾನವ ನೆಲೆಯಾಗಿತ್ತು. ಈ ಜಿಲ್ಲೆಯ ಬೆಣಕಲ್ಲು, ಮಸ್ಕಿ, ಕಲ್ಲೂರು, ಕವಿತಾಳ ಮತ್ತು ಸಿರವಾರ ಮೊದಲಾದ 31 ಸ್ಥಳಗಳಲ್ಲಿ ಇತಿಹಾಸಪೂರ್ವದ ನಾಗರಿಕತೆಯ ಅವಶೇಷಗಳು ಕಂಡುಬಂದಿವೆ. ಇವುಗಳಲ್ಲಿ ಮಸ್ಕಿ ಮುಖ್ಯವಾದದ್ದು. ಇಲ್ಲಿ ಚಿನ್ನದ ಅದುರು ಕಂಡುಬರುವುದರಿಂದ ಗಣಿ ಕೆಲಸ ನಡೆಯುತ್ತಿದ್ದಿರಬಹುದೆಂದೂ ಇದೇ ಮಸ್ಕಿಯ ಪ್ರಾಮುಖ್ಯತೆಗೆ ಕಾರಣವಿರಬೇಕೆಂದೂ ಹೇಳುವರು. ಈ ಜಿಲ್ಲೆಯ ಇತಿಹಾಸ ಪೂರ್ವ ಪ್ರದೇಶಗಳಲ್ಲಿ ಶಿಲಾಯುಧಗಳು. ಹರಳಿನ ಮಣಿಗಳು, ಮಣ್ಣಿನ ಮಡಕೆಗಳು, ಟೆರ್ರಾಕೋಟ (ಮೃಣ್ಮಯ) ಮೂರ್ತಿಗಳು, ಲೋಹವನ್ನು ಕರಗಿಸುವ ಕುಲುಮೆಗಳು, ದೊಡ್ಡ ಕಲ್ಲುಗಳ ಸಮಾಧಿಗಳು ಮತ್ತು ರೇಖಾ ಹಾಗೂ ವರ್ಣ ಚಿತ್ರಗಳು ಸಿಕ್ಕಿವೆ. ಇಲ್ಲಿನ ಜನರು ಬಹಳ ಹಿಂದೆಯೇ ಕಬ್ಬಿಣ ಮತ್ತು ತಾಮ್ರದ ಉಪಯೋಗವನ್ನು ಅರಿತಿದ್ದರೆಂದೂ ಈ ಜಿಲ್ಲೆಯ ಸಂಸ್ಕೃತಿಗೂ ಹರಪ್ಪ ಮತ್ತು ಮೊಹೆಂಜೋದಾರೊ ಸಂಸ್ಕೃತಿಗೂ ಹೋಲಿಕೆಯಿಂದ ಎಂದೂ ವಿದ್ವಾಂಸರ ಅಭಿಪ್ರಾಯ.

ಇತಿಹಾಸದ ಪ್ರಕಾರ ಈ ಜಿಲ್ಲೆಯ ಮೌರ್ಯರ ಆಳ್ವಿಕೆಗೆ ಸೇರಿತ್ತು. ಈ ಜಿಲ್ಲೆಯ ಮಸ್ಕಿ, ಗವಿಮಠ, ಪಾಲ್ಕಿಗುಂಡು ಈ ಸ್ಥಳಗಳಲ್ಲಿ ಅಶೋಕನ ಶಾಸನಗಳು ಸಿಕ್ಕಿವೆ. ಮುಂದೆ ಕದಂಬರು, ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟರು, ಸಾತವಾಹನರು, ಕಲ್ಯಾಣಿ ಚಾಳುಕ್ಯರ ಕಳಚುರಿಗಳು ದೇವಗಿರಿಯ ಸೇವುಣರು ಅನಂತರ ಚೋಳ, ಹೊಯ್ಸಳ ಮುಂತಾದ ರಾಜಮನೆತನಗಳು ಈ ಜಿಲ್ಲೆಯನ್ನು ಆಳಿದವು. ಇವರಿಗೆ ಸಂಬಂಧಪಟ್ಟ ಅನೇಕ ಶಾಸನಗಳು ಈ ಜಿಲ್ಲೆಯಲ್ಲಿ ದೊರಕಿವೆ. ಮುಂದೆ ವಿಜಯನಗರ ಮತ್ತು ಬಹಮನೀ ರಾಜ್ಯಗಳ ನಡುವೆ ನಡೆದ ಯುದ್ಧಗಳಲ್ಲಿ ಈ ಜಿಲ್ಲೆ ರಣರಂಗವಾಗಿ ಕಷ್ಟನಷ್ಟ ಅನುಭವಿಸಿದ್ದಲ್ಲದೆ ಆಗಾಗ್ಗೆ ಒಬ್ಬರಿಂದ ಒಬ್ಬರ ಕೈಗೆ ಬದಲಾಗುತ್ತ ಹೋಯಿತು. ಬಹಮನೀ ರಾಜ್ಯ ಒಡೆದು ಐದು ಶಾಹೀ ರಾಜ್ಯಗಳಾದವು. ಈ ಶಾಹೀ ರಾಜ್ಯಗಳಿಗೂ ವಿಜಯನಗರ ಅರಸರಿಗೂ ಯುದ್ಧ ನಡೆಯುತ್ತಲೇ ಇತ್ತು. ಅದರಲ್ಲಿ ಕೃಷ್ಣ ದೇವರಾಯ 1520ರಲ್ಲಿ ರಾಯಚೂರು ಬಳಿಯ ಯುದ್ಧದಲ್ಲಿ ಇಸ್ಮಾಯಿಲ್ ಆದಿಲ್ ಷಾನನ್ನು ಸೋಲಿಸಿ ಈ ಜಿಲ್ಲೆಯನ್ನು ವಶಪಡಿಸಿಕೊಂಡ.

ವಿಜಯನಗರದ ಪತನದ ಅನಂತರ ಗೋಲ್ಕೊಂಡ, ಅಹಮದ್‌ನಗರ ಮತ್ತು ಬಿಜಾಪುರದ ಸುಲ್ತಾನರು ರಾಯಚೂರನ್ನು ವಶಪಡಿಸಿಕೊಂಡರು. ಅಂದಿನಿಂದ ಈ ಜಿಲ್ಲೆ ಬಿಜಾಪುರದ ಆದಿಲ್ ಶಾಹೀ ವಂಶದವರಿಗೆ ಸೇರಿತು. ಬಿಜಾಪುರ ಮೊಗಲರ ವಶವಾದ ಮೇಲೆ ಈ ಜಿಲ್ಲೆ ಹೈದರಾಬಾದಿನ ನಿಜಾಮನ ಆಡಳಿತಕ್ಕೆ ಸೇರಿತು. ಸ್ವಲ್ಪಕಾಲ ಈ ಜಿಲ್ಲೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟು ಮತ್ತೆ 1858ರಲ್ಲಿ ನಿಜಾಮನ ಆಡಳಿತಕ್ಕೆ ಒಳಪಟ್ಟಿತು.

ಈ ಮಧ್ಯೆ ಜಿಲ್ಲೆಯಲ್ಲಿ ಕೆಲವು ಸ್ವಾತಂತ್ರ್ಯ ಹೋರಾಟಗಳೂ ನಡೆದುವು. ಮುಂಡರಗಿ ಭೀಮರಾಯ, ನಾಡಗೌಡ ಮತ್ತು ಕೆಂಚನಗೌಡ ಮೊದಲಾದವರು ಬ್ರಿಟಿಷರ ವಿರುದ್ಧ ಹೋರಾಡಿ ಮಡಿದರು. ಜಿಲ್ಲೆಯಲ್ಲಿ ರಾಷ್ಟ್ರೀಯ ಏಕತಾಭಾವನೆಯನ್ನು, ರಾಜಕೀಯ ಜಾಗೃತಿಯನ್ನು ನಾನಾರೂಪದಲ್ಲಿ ಉಂಟುಮಾಡಿದವರಲ್ಲಿ ಆರ್.ಬಿ. ದೇಸಾಯಿ, ಪಂಡಿತ ತಾರಾನಾಥ, ಅಡವೀರಾವ್ ಫಡ್ನವೀಸ್, ಆರ್.ಜಿ. ಜೋಶಿ, ಗಾಣಧಾಳ ನಾರಾಯಣಪ್ಪ, ವೀರಣ್ಣ ಮಾಸ್ತರ ಮೊದಲಾದವರನ್ನು ಉದಾಹರಿಸಬಹುದು. 1338ರಲ್ಲಿ ಹೈದರಾಬಾದು ರಾಜ್ಯ ಕಾಂಗ್ರೆಸ್ ಸ್ಥಾಪನೆಯಾಗಿ ಅದರ ಮುಖಾಂತರ ಅನೇಕರು ಗಾಂಧಿ ಮಾರ್ಗದರ್ಶನದಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಈ ರೀತಿ ರಾಯಚೂರು ಜಿಲ್ಲೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ತನ್ನ

ಕಾಣಿಕೆ ಸಲ್ಲಿಸಿದೆ. ಹೈದರಾಬಾದಿನ ನಿಜಾಮ 27–8–1947ರಲ್ಲಿ ತಾನು ಸ್ವತಂತ್ರನೆಂದು ಸಾರಿಕೊಂಡು ಭಾರತದ ಒಕ್ಕೂಟದಲ್ಲಿ ಸೇರಲು ನಿರಾಕರಿಸಿದ. ನಿಜಾಮನ ಆಡಳಿತಕ್ಕೆ ವಿರೋಧ ನಿಂತವರು ಸೆರೆಮನೆ ಕಂಡರು. ನಾನಾಬಗೆಯ ಚಳವಳಿ ಪ್ರಾರಂಭವಾಯಿತು. ಇವನ್ನೆಲ್ಲ ಹತ್ತಿಕ್ಕಲು ರಜಾಕಾರರು ಮುಂದಾಗಿ ಹೀನಕೃತ್ಯಗಳನ್ನೆಸಗಿ ಭಯೋತ್ಪಾದನೆಯುಂಟು ಮಾಡಿದರು. ಅವರ ದೌರ್ಜನ್ಯ ಮಿತಿಮೀರಿತು. ಭಾರತ ಸರ್ಕಾರ 13–9–1948ರಂದು ಈ ಹಾವಳಿ ತಡೆದು ಹೈದರಾಬಾದನ್ನು ಸರಿಯಾದ ಮಾರ್ಗಕ್ಕೆ ತರಲು ನಿರ್ಧರಿಸಿತು. ಈ ನಿರ್ಧಾರದ ಕಾರ್ಯಕ್ರಮದಿಂದ 18–9–1948ರಂದು ಹೈದರಾಬಾದು ನಿಜಾಮನ ಆಡಳಿತದಿಂದ ಮುಕ್ತವಾಗಿ ಭಾರತದಲ್ಲಿ ಸೇರಿಹೋಯಿತು. ಅನಂತರ ರಾಯಚೂರು ಜಿಲ್ಲೆ ರಾಜ್ಯಪುನರ್ವಿಂಗಡಣೆಯಿಂದಾಗಿ 1–11–1956ರಿಂದ ಕರ್ನಾಟಕದ ಒಂದು ಭಾಗವಾಯಿತು.



ಥರ್ಮಲ್ ಪ್ಲಾಂಟ್, ರಾಯಚೂರು

**ತಾಲ್ಲೂಕು:** ರಾಯಚೂರು ತಾಲ್ಲೂಕು ಜಿಲ್ಲೆಯ ಪೂರ್ವದಲ್ಲಿದ್ದು ಉತ್ತರದಲ್ಲಿ ಗುಲ್ಬರ್ಗ ಜಿಲ್ಲೆ, ದಕ್ಷಿಣ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶ, ಪಶ್ಚಿಮದಲ್ಲಿ ದೇವದುರ್ಗ ಮತ್ತು ಮಾನ್ವಿ ತಾಲ್ಲೂಕುಗಳಿಂದ ಸುತ್ತುವರೆದಿದೆ. ರಾಯಚೂರು, ಕಿಲ್ಲೆಸುಗೂರು, ಯರಗೇರ, ಕಲ್ಮಲ, ಚಂದ್ರಬಂಡೆ, ದೇವರಸುಗೂರು– ಇವು ತಾಲ್ಲೂಕಿನ 6 ಹೋಬಳಿಗಳು. 160 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1531.5 ಚ.ಕಿಮೀ. ಜನಸಂಖ್ಯೆ 4,35,380.

ರಾಯಚೂರು ತಾಲ್ಲೂಕು ತುಂಗಭದ್ರಾ ಮತ್ತು ಕೃಷ್ಣಾನದಿಗಳ ಮಧ್ಯದ ದೋಅಬ್ ಪ್ರದೇಶ. ತಾಲ್ಲೂಕಿನ ಉತ್ತರದಲ್ಲಿ ಅರಸಣಗಿ ಗ್ರಾಮದ ಬಳಿ ಕೃಷ್ಣಾನದಿ ತಾಲ್ಲೂಕನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಹರಿದು ತಾಲ್ಲೂಕನ್ನು ಬುಡದಿ ಪಾಡು ಗ್ರಾಮದ ಉತ್ತರದಲ್ಲಿ ಬಿಟ್ಟು ಆಂಧ್ರ ಪ್ರದೇಶವನ್ನು ಈ ತಾಲ್ಲೂಕಿನಿಂದ ಬೇರ್ಪಡಿಸಿದೆ. ದಕ್ಷಿಣದಲ್ಲಿ ತುಂಗಭದ್ರಾ ನದಿ ಕಟಕನೂರಿನ ದಕ್ಷಿಣದಲ್ಲಿ ತಾಲ್ಲೂಕನ್ನು ಮುಟ್ಟಿ ಪೂರ್ವಾಭಿಮುಖವಾಗಿ ಹರಿದು ತಲಮಾರಿ ಗ್ರಾಮದ ಆಗ್ನೇಯದಲ್ಲಿ ತಾಲ್ಲೂಕನ್ನು ಬಿಟ್ಟು ಆಂಧ್ರ ಪ್ರದೇಶವನ್ನು ಪ್ರವೇಶಿಸುವುದು. ಹಾಗೂ ತಾಲ್ಲೂಕು ಗಡಿಯಾಗಿ ಹರಿದು ಆಂಧ್ರ ಪ್ರದೇಶವನ್ನು ಬೇರ್ಪಡಿಸಿರುವುದು. ಕೃಷ್ಣಾನದಿಯ ಬಲದಂಡೆ ಮತ್ತು ತುಂಗಭದ್ರಾ ನದಿಯ ಎಡದಂಡೆಯ ಫಲವತ್ತಾದ ಪ್ರದೇಶ ಈ ತಾಲ್ಲೂಕಿಗೆ ಸೇರಿದೆ. ತಾಲ್ಲೂಕಿನಲ್ಲಿ ಸಣ್ಣ ಬೋಳು ಗುಡ್ಡಗಳು ಕಂಡುಬರುತ್ತವೆ. ಇವುಗಳಲ್ಲಿ ರಾಯಚೂರಿನ ದಕ್ಷಿಣಕ್ಕೆ ಸು. 6 ಕಿಮೀ ದೂರದಲ್ಲಿರುವ ಮಲ್ಲಾಬಾದಗುಡ್ಡ ದೊಡ್ಡದಾದದ್ದು. ವರ್ಷದಲ್ಲಿ ಬೇಸಗೆ ಕಾಲ ಬಿಟ್ಟು ಉಳಿದಂತೆ ಹವೆ ಸಹ್ಯವಾಗಿರುವುದು. ವಾರ್ಷಿಕ ಸರಾಸರಿ ಮಳೆ 713.30 ಮಿಮೀ.

ಈ ತಾಲ್ಲೂಕಿನ ನದಿ ದಡಗಳ ಉದ್ದಕ್ಕೂ ಸ್ವಲ್ಪ ಕಾಡನ್ನು ಕಾಣಬಹುದು. ಈ ತಾಲ್ಲೂಕಿನಲ್ಲಿ ಸು. 364 ಹೆಕ್ಟೇರ್ (1966–67) ಕಾಡು ಇದೆ. ಕಪ್ಪು ಮಣ್ಣಿನ ಈ ತಾಲ್ಲೂಕಿನ ವ್ಯವಸಾಯ ನೀರಾವರಿಯ ಮೇಲೆ ಹೆಚ್ಚು ಅವಲಂಬಿತ. ಈ ತಾಲ್ಲೂಕಿನಲ್ಲಿ 1968–69ರಲ್ಲಿ 729 ಕೆರೆಗಳಿದ್ದು 3,775 ಹೆಕ್ಟೇರ್‌ಗಳಿಗೆ ನೀರೊದಗಿಸುತ್ತಿದ್ದವು. ತುಂಗಭದ್ರಾ ಎಡದಂಡೆ ನಾಲೆ ಮತ್ತು ರಾಜೋಲಿ ಬಂಡ ಅಣೆಕಟ್ಟಿನ ಎಡನಾಲೆಗಳಿಂದ ತಾಲ್ಲೂಕಿನ ವ್ಯವಸಾಯಕ್ಕೆ ನೀರೊದಗಿ ಹೆಚ್ಚು ಭೂಮಿ ಬೇಸಾಯಕ್ಕೆ ಒಳಪಟ್ಟಿದೆ. ಬತ್ತ, ಜೋಳ, ಸಜ್ಜೆ, ದ್ವಿದಳ ಧಾನ್ಯಗಳು, ಗೋದಿ, ತೊಗರಿ, ಹೆಸರು, ಕಬ್ಬು, ಸೇಂಗಾ, ಹರಳು, ಹತ್ತಿ ಇವನ್ನು ಬೆಳೆಯುವರು.

ಈ ತಾಲ್ಲೂಕಿನಲ್ಲಿರುವ ಹತ್ತಿ ಮತ್ತು ಎಣ್ಣೆ ಗಿರಣಿಗಳನ್ನು ಬಿಟ್ಟರೆ ಬೇರೆ ದೊಡ್ಡ ಕೈಗಾರಿಕೆಗಳಿಲ್ಲ. ಹತ್ತಿಯನ್ನು ಸಂಸ್ಕರಿಸುವುದು, ಹರಳು, ಸೇಂಗಾ ಮುಂತಾದ ಎಣ್ಣೆಬೀಜಗಳಿಂದ ಎಣ್ಣೆ ತೆಗೆಯುವುದು ಇಲ್ಲಿನ ದೊಡ್ಡ ಉದ್ಯಮ. 1946ರಲ್ಲಿ ಪ್ರಾರಂಭವಾದ ಸಿಮೆಂಟ್ ಕೊಳವೆ ತಯಾರಿಕಾ ಕಾರ್ಖಾನೆಯೊಂದು ಈ ತಾಲ್ಲೂಕಿನಲ್ಲಿದೆ. ಕೈಮಗ್ಗದ ಬಟ್ಟೆ, ಕಂಬಳಿ, ಚರ್ಮಸಂಸ್ಕರಣ ಮತ್ತು ಆ ಸಂಬಂಧ ವಸ್ತುಗಳ ತಯಾರಿಕೆ, ಮರಗೆಲಸ–ಇವು ಈ ತಾಲ್ಲೂಕಿನ ಇತರ ಗೃಹಕೈಗಾರಿಕೆಗಳು.

ತಾಲ್ಲೂಕಿನಲ್ಲಿ ವಾಣಿಜ್ಯ, ಕೈಗಾರಿಕಾ ಮತ್ತು ಸಹಕಾರ ಬ್ಯಾಂಕುಗಳಿವೆ. ಅಂಚೆ, ತಂತಿ, ವಿದ್ಯುತ್, ಶಾಲಾ ಕಾಲೇಜುಗಳೂ ಆಸ್ಪತ್ರೆ ಮತ್ತು ಔಷಧಾಲಯ ಮುಂತಾದ ಸೌಲಭ್ಯಗಳಿವೆ. ಈ ತಾಲ್ಲೂಕಿನ ಮಧ್ಯದಲ್ಲಿ ಉತ್ತರದಕ್ಷಿಣವಾಗಿ ಗುಂತಕಲ್ಲು–ವಾಡಿ ಬ್ರಾಡ್‌ಗೇಜ್ ರೈಲುಮಾರ್ಗ ಹಾದುಹೋಗಿದೆ. ರಾಯಚೂರು ಇದರ ಮುಖ್ಯ ನಿಲ್ದಾಣ. ಮಾನ್ವಿ–ರಾಯಚೂರು, ಲಿಂಗಸುಗೂರು–ರಾಯಚೂರು, ಕಿಲ್ಲೆಸುಗೂರು–ರಾಯಚೂರು–ದೇವರಸುಗೂರು ಮುಂತಾದ ರಾಜ್ಯ ಹೆದ್ದಾರಿಗಳು ಜಿಲ್ಲಾ ಹೆದ್ದಾರಿಗಳೂ ಈ ತಾಲ್ಲೂಕಿನಲ್ಲಿ ಹಾದುಹೋಗಿದ್ದು ಉತ್ತಮ ವಾಹನ ಸೌಕರ್ಯ ಮುಂತಾದವುಗಳಿಂದ ಇಲ್ಲಿನ ಪಟ್ಟಣ ಮತ್ತು ಗ್ರಾಮಗಳಿಗೆ ಒಳ್ಳೆಯ ಸಂಪರ್ಕವಿದೆ.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ದೇವರಸುಗೂರು ಒಂದು. ಇದು ರಾಯಚೂರಿನ ಉತ್ತರಕ್ಕೆ 19 ಕಿಮೀ ದೂರದಲ್ಲಿ ಕೃಷ್ಣಾನದಿಯ ಬಲದಂಡೆಯ ಮೇಲಿದೆ. ಇಲ್ಲಿನ ವೀರಭದ್ರ ದೇವಾಲಯ ಪ್ರಸಿದ್ಧವಾದದ್ದು. ಮಾರ್ಗಶಿರದಲ್ಲಿ ನಡೆಯುವ ಇಲ್ಲಿನ ಜಾತ್ರೆಗೆ ಬಹು ಜನ ಬರುವುದುಂಟು. ರಾಯಚೂರಿನ ವಾಯವ್ಯದಲ್ಲಿ 24 ಕಿಮೀ ದೂರದಲ್ಲಿ ಕೃಷ್ಣಾನದಿಯ ಬಲದಂಡೆಗಿರುವ ಕೂಡಲೂರು ಬಳಿ ಭೀಮಾನದಿ ಕೃಷ್ಣಾನದಿಯನ್ನು ಸೇರಿಕೊಳ್ಳುವುದು. ಇದೊಂದು ಪವಿತ್ರ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ವಿಜಯನಗರದ ದೊರೆ ಕೃಷ್ಣದೇವರಾಯ ಕುಟುಂಬಸಮೇತ ಇಲ್ಲಿಗೆ ಬಂದು ಪೂಜೆ ಸಲ್ಲಿಸಿದನೆಂದು ಇಲ್ಲಿನ ಒಂದು ಶಾಸನದಿಂದ ತಿಳಿದು ಬರುತ್ತದೆ. ರಾಮಗಡ್ಡೆ ಎಂಬುದು ಕೃಷ್ಣಾನದಿಯ ಮಧ್ಯದಲ್ಲಿರುವ ಪುಟ್ಟದ್ವೀಪ. ರಾಯಚೂರಿನ ಈಶಾನ್ಯಕ್ಕೆ 32 ಕಿಮೀ ದೂರದಲ್ಲಿದೆ. ಇಲ್ಲಿ ಶ್ರೀರಾಮಚಂದ್ರ ಲಿಂಗ ಪ್ರತಿಷ್ಠಾಪಿಸಿ ಶಿವನನ್ನು ಪೂಜಿಸಿದನೆಂದು ಪ್ರತೀತಿ. ಇಲ್ಲಿ ಒಂದು ವೀರಶೈವ ಮಠವಿದೆ. ನಾರದಗಡ್ಡೆ ಕೃಷ್ಣಾನದಿ ಮಧ್ಯದ ಒಂದು ಸುಂದರ ದ್ವೀಪ. ರಾಯಚೂರಿಗೆ ಈಶಾನ್ಯದಲ್ಲಿರುವ ಒಂದು ಪವಿತ್ರ ಕ್ಷೇತ್ರ. ಇಲ್ಲಿ ನಾರದ ತಪಸ್ಸನ್ನು ಆಚರಿಸಿದ್ದನೆಂದು ಪ್ರತೀತಿ. ಇಲ್ಲಿ ನಾರದ ದೇವಾಲಯವಿದೆ. ವೈರಾಗ್ಯ ಚನ್ನಬಸವಸ್ವಾಮಿ ಮತ್ತು ಶ್ರೀಪಾದ ವಲ್ಲಭಸ್ವಾಮಿ ಇವರ ಸಮಾಧಿಗಳಿವೆ. ಶಿವಯೋಗ ಪೀಠ, ಬಸವಣ್ಣ ಮಂದಿರ ಮತ್ತು ದತ್ತಾತ್ರೇಯ ಪೀಠ ಇದ್ದು ವರ್ಷಕ್ಕೊಮ್ಮೆ ಜಾತ್ರೆಯಾಗುವುದು. ಮಟ್ಮರಿ ಗ್ರಾಮ ರಾಯಚೂರಿಗೆ ನೈಋತ್ಯದಲ್ಲಿ 36 ಕಿಮೀ ದೂರದಲ್ಲಿದೆ. ಇಲ್ಲಿ ಪ್ರಸಿದ್ಧ ವೀರಭದ್ರ ದೇವಾಲಯ ಮತ್ತು ಚನ್ನವೀರ ಶಿವಾಚಾರ್ಯಸ್ವಾಮಿ ಮಠವಿದೆ. ಗಾಣಧಾಳ

ಗ್ರಾಮ ರಾಯಚೂರಿನ ಆಗ್ನೇಯಕ್ಕೆ 30 ಕಿಮೀ ದೂರದಲ್ಲಿದೆ. ಈ ಊರಿನ ಹತ್ತಿರದ ಗುಡ್ಡದ ಮೇಲೆ ಪಂಚಮುಖಿ ಹನುಮಂತನ ಪ್ರಸಿದ್ಧ ದೇವಾಲಯವಿದೆ. ಇದೇ ತಾಲ್ಲೂಕಿನ ಬಿಚ್ಚಾಲಿ ಗ್ರಾಮದಲ್ಲಿ ಶ್ರೀಸಾವಿರದೇವರು ಚನ್ನವೀರಶಿವಾಚಾರ್ಯಸ್ವಾಮಿ ಮಠವಿದೆ. ಕಲ್‌ಮಲದಲ್ಲಿ ಸಂತ ಕರಿಯಪ್ಪ ತಾತನ ಸಮಾಧಿ ಇದೆ.

**ಪಟ್ಟಣ:** ಇದು ಜಿಲ್ಲೆ ಮತ್ತು ತಾಲ್ಲೂಕುಗಳ ಆಡಳಿತ ಕೇಂದ್ರ. ಬೆಂಗಳೂರಿನ ಉತ್ತರಕ್ಕೆ 475 ಕಿಮೀ ದೂರದಲ್ಲೂ ಬಳ್ಳಾರಿಯಿಂದ ಉತ್ತರಕ್ಕೆ 174 ಕಿಮೀ ದೂರದಲ್ಲೂ ಇದೆ. ಜಿಲ್ಲೆಯ ಪೂರ್ವಕ್ಕಿರುವ ಈ ನಗರದ ಮುಖಾಂತರ ಗುಂತಕಲ್ಲು-ವಾಡಿ ಬ್ರಾಡ್‌ಗೇಜ್ ರೈಲುಮಾರ್ಗ ಹಾದುಹೋಗಿದೆ. ಜನಸಂಖ್ಯೆ 2,26,404.

ಮುಂಬಯಿ-ಮದರಾಸು ಮಧ್ಯ ರೈಲ್ವೆ ಪ್ರಾರಂಭವಾದಂದಿನಿಂದ (1871) ಪ್ರಮುಖ ವ್ಯಾಪಾರ ಕೇಂದ್ರವಾಗಿ ಈ ಪಟ್ಟಣ ಬೆಳೆಯುತ್ತ ಬಂದಿದೆ. ಮುಂಬಯಿಯಿಂದ ಬರುವ ರೈಲ್ವೆಗಾಡಿಗಳಿಗೆ, ಮದರಾಸಿನಿಂದ ಬರುವ ದಕ್ಷಿಣ ರೈಲ್ವೆಗಾಡಿಗಳಿಗೆ ರಾಯಚೂರು ಒಂದು ಪ್ರಮುಖ ಸಂಧಿಸ್ಥಳ. ರಾಯಚೂರಿನಿಂದ ಎಲ್ಲ ತಾಲ್ಲೂಕು ಕೇಂದ್ರಗಳಿಗೂ ಸಾರಿಗೆ ಸಂಪರ್ಕ ಉಂಟು. ರಾಯಚೂರಿನ ಉತ್ತರಕ್ಕೆ 8 ಕಿಮೀ ದೂರದಲ್ಲಿ 1942ರಲ್ಲಿ ನಿರ್ಮಿಸಿದ ತಾತ್ಕೂರ್ತಿಕ ವಿಮಾನ ನಿಲ್ದಾಣವಿದೆ.

ರಾಯಚೂರು ಔದ್ಯೋಗಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಪಟ್ಟಣವಾಗಿದ್ದು ಇಲ್ಲಿ ಹತ್ತಿಗಿರಣಿಗಳು, ಎಣ್ಣೆ ಗಿರಣಿಗಳು, ಸಾಮಾನ್ಯ ಯಂತ್ರ ಕಾರ್ಖಾನೆಗಳು, ಬತ್ತದ ಗಿರಣಿಗಳು, ಕಟ್ಟಿಗೆ ಕೊರೆಯುವ ಯಂತ್ರಗಳು ಮತ್ತು ಮುದ್ರಣಾಲಯಗಳು, ಅಗರಬತ್ತಿ ಕಾರ್ಖಾನೆ ಮುಂತಾದುವುಗಳಿವೆ. ಬಹಮನೀ ಅರಸರ ಕಾಲದಲ್ಲಿ ಸುಂದರವಾದ ಬಟ್ಟೆ ತಯಾರಿಕೆಗೆ ಈ ಪಟ್ಟಣ ಖ್ಯಾತಿಪಡೆದಿತ್ತು. ಹತ್ತಿ, ಸೇಂಗಾ, ಬತ್ತ ಮತ್ತು ಕಬ್ಬು ವಿಪುಲವಾಗಿ ಬೆಳೆಯುವ ಹಿನ್ನಾಡು ಇರುವುದರಿಂದ ಅವುಗಳ ವ್ಯಾಪಾರಕ್ಕೆ ರಾಯಚೂರು ಕೇಂದ್ರವಾಗಿದೆ. ಇಲ್ಲಿ ನಿಯಂತ್ರಿತ ಮಾರುಕಟ್ಟೆ ಇದೆ (ರಾಜೇಂದ್ರಗಂಜ್) ಅಲ್ಲಿ ಹತ್ತಿ, ಜೋಳ, ಸೇಂಗಾ, ಎಣ್ಣೆಯ ಕಾಳು, ಬತ್ತ, ಗೋದಿ ಇವುಗಳ ಮಾರಾಟ ನಡೆಯುತ್ತದೆ. ಹತ್ತಿಯ ವ್ಯಾಪಾರಕ್ಕೆ ಈ ಸ್ಥಳ ರಾಜ್ಯದಲ್ಲಿ ಪ್ರಥಮ ಸ್ಥಾನವನ್ನು, ಭಾರತದಲ್ಲಿ ಮೂರನೆಯ ಸ್ಥಾನವನ್ನು ಪಡೆದಿದೆ. ತುಂಗಭದ್ರಾ ಯೋಜನೆಯ ಅಭಿವೃದ್ಧಿ ಕಾರ್ಯಗಳು ನಡೆದ ಮೇಲೆ ಈ ಮಾರುಕಟ್ಟೆಯ ಮಹತ್ತ್ವ ಇನ್ನೂ ಹೆಚ್ಚಿದೆ. ಇಲ್ಲಿ 10 ವಾಣಿಜ್ಯ ಬ್ಯಾಂಕುಗಳೂ ಒಂದು ಕೃಷಿ ಸಾಲ ಸಹಕಾರ ಸಂಘ ಮತ್ತು 20 ಕೃಷಿಯೇತರ ಸಾಲ ಸಹಕಾರ ಸಂಘಗಳು ಇವೆ. ಇಲ್ಲಿರುವ ತಾರಾನಾಥ ಸಂಸ್ಥೆ ಮತ್ತು ಠಾಕೂರ್ ಮೆಮೋರಿಯಲ್ ಸಂಸ್ಥೆಗಳು ಕೆಲವು ಶಾಲಾ ಕಾಲೇಜುಗಳನ್ನು ನಡೆಸುತ್ತಿವೆ. ಜೊತೆಗೆ ಸರ್ಕಾರಿ ಶಾಲೆಗಳೂ ಇದ್ದು ಪಟ್ಟಣದಲ್ಲಿ ವಿಜ್ಞಾನ, ಕಲೆ ಮತ್ತು ವಾಣಿಜ್ಯ ಕಾಲೇಜುಗಳೂ ಸರ್ಕಾರಿ ತಾಂತ್ರಿಕ ಶಾಲೆ, ಆಯುರ್ವೇದ ವೈದ್ಯ ಶಿಕ್ಷಣ ಕಾಲೇಜೂ ಉಪಾಧ್ಯಾಯ ತರಬೇತಿ ಶಾಲೆಗಳೂ ಕೃಷಿ ತರಬೇತಿ ಕೇಂದ್ರ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪಂಡಿತ ತಾರಾನಾಥರು ಸ್ಥಾಪಿಸಿದ (1920) ಹಮ್‌ದರ್ದ್ ಪ್ರೌಢಶಾಲೆಯೂ ಸೇರಿದಂತೆ ಕೆಲವು ಪ್ರೌಢಶಾಲೆಗಳೂ ಇವೆ. ಪಟ್ಟಣ ಪೌರಾಡಳಿತಕ್ಕೆ ಸೇರಿದೆ.

ಈ ಪಟ್ಟಣದಲ್ಲಿ ಅನೇಕ ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳಿವೆ. ಅವುಗಳಲ್ಲಿ ಇಲ್ಲಿರುವ ಎರಡು ಸುತ್ತಿನ ಕೋಟೆ ಮುಖ್ಯವಾದುದು. ಇದರಲ್ಲಿ ಒಳಗಿನ ಸುತ್ತು ರಾಜ ವಿಠ್ಠಲ ಕಟ್ಟಿಸಿದ್ದು, ಹೊರಗಿನ ಸುತ್ತು ಮುಸಲ್ಮಾನ ದೊರೆಗಳು ಕಟ್ಟಿಸಿದ್ದೆಂದು ತಿಳಿದುಬರುವುದು. ಹೊರಕೋಟೆಗೆ ಪಶ್ಚಿಮದಲ್ಲಿ ಕಾಡಿ ದರವಾಜ, ದಕ್ಷಿಣದಲ್ಲಿ ಮತ್ತು ನೈಋತ್ಯದಲ್ಲಿ ದೊಡ್ಡಿ ದರವಾಜ ಮತ್ತು ಪಶ್ಚಿಮದಲ್ಲಿ ಸೈಲಾನಿ ದರವಾಜ ಮತ್ತು ನೈಋತ್ಯದಲ್ಲಿ ದೊಡ್ಡಿ ದರವಾಜ, ಪೂರ್ವದಲ್ಲಿ ಸಿಕಂದರಿ ದರವಾಜ ಮತ್ತು ಪಶ್ಚಿಮದಲ್ಲಿ ಸೈಲಾನಿ ದರವಾಜ ಎಂಬ ಎರಡು ಬಾಗಿಲುಗಳಿವೆ. ಹೊರಸುತ್ತಿನ ಕೋಟೆಯ ಉತ್ತರದ ನೌರಂಗಿ ದರವಾಜದ ಕೆತ್ತನೆಯ ಕೆಲಸ ಹಿಂದೆ ರೀತಿಯದಾಗಿದ್ದು ವಿಜಯನಗರದ ಶಿಲ್ಪಕ್ಕೆ ಸಂಬಂಧಿಸಿದಂತಿದೆ. ಇಲ್ಲಿನ ಜುಮ್ಮಾ ಮಸೀದಿ, ಸು. 20 ಮೀ ಎತ್ತರವಿರುವ ಏಕ್ ಮೀನಾರ್ ಪ್ರಸಿದ್ಧವಾದವುಗಳು. ನೌರಂಗಿ ದರವಾಜದ ಬಳಿ ಕಲ್ಲಿನ ಒಂದು ಆನೆಯೂ ಬಜಾರಿನ ಮಧ್ಯೆ ಕಲ್ಲಿನ ಎರಡು ಆನೆಗಳೂ ಇವೆ. ರಾಮಲಿಂಗೇಶ್ವರ, ನಗರೇಶ್ವರ ಮತ್ತು ಮಾಣಿಕ ಪ್ರಭು ದೇವಾಲಯಗಳು ನೋಡುವಂತಹವು. ಸಾವಿರದೇವರ ಕಲ್ಲೇಶ್ವರ ಮಠ ಪುರಾತನವಾದುದು. ನಗರದ ಮಧ್ಯದಲ್ಲಿರುವ ತೀನ ಕಂದೀಲು ಎದುರಿಗೆ ಇರುವ ಮಸೀದಿ ಕೂಡ ನೋಡುವಂತಹುದು. ಇಲ್ಲಿನ ಕೆಲವು ಸರ್ಕಾರಿ ಕಾರ್ಯಗಳೆಲ್ಲವೂ ಸಾತ್ ಕಚೇರಿ ಎಂಬ ಒಂದು ಹಳೆಯ ಕಟ್ಟಡದಲ್ಲಿವೆ. ಇಲ್ಲಿ ಅನೇಕ ಶಾಸನಗಳು ದೊರೆತಿವೆ. ಕೋಟೆಗೋಡೆಯ ಬಳಿ ಇರುವ ಕಲ್ಲುಬಂಡೆಯ ಮೇಲಿನ ಶಾಸನ ಕಾಕತೀಯ ಅರಸ ಎರಡನೆಯ ಪ್ರತಾಪರುದ್ರನ ಕಾಲದ್ದು. ಕಾಕತೀಯ ರಾಣಿ ರುದ್ರಮ್ಮದೇವಿಯ ಮಂತ್ರಿ ರಾಜಗೊರೆ ಗಂಗಯ್ಯರೆಡ್ಡಿಯ ಆದೇಶದಂತೆ ರಾಜ ವಿಠ್ಠಲನಾಥನೆಂಬುವನು ಪ್ರಜಾರಕ್ಷಣಾರ್ಥವಾಗಿ ಭದ್ರವಾದ ಕೋಟೆಯನ್ನು ಕಟ್ಟಿಸಿದನೆಂದು ಈ ಶಾಸನದಲ್ಲಿ ಹೇಳಿದೆ. ಇದರಲ್ಲಿ ಈ ಊರನ್ನು ರಾಚೂರು ಎಂದು ನಿರ್ದೇಶಿಸಿದೆ. ಹೊಯ್ಸಳ ವಿಷ್ಣುವರ್ಧನನ ಒಂದು ಶಾಸನದಲ್ಲಿ ರಾಯಚೂರನ್ನು ಪೆರ್ಮನ ರಾಚವೂರ ಎಂದು ಕರೆಯಲಾಗಿದೆ. ರಾಚಪುರವೇ ರಾಯಚೂರು ಆಗಿರಬೇಕೆಂದೂ ತೆಲುಗಿನಲ್ಲಿ ರಾಯಿ ಎಂದರೆ ಕಲ್ಲು ಎಂದರ್ಥವಿದ್ದು ಹೆಚ್ಚು ಕಲ್ಲುಬಂಡೆಗಳಿರುವ ಈ ಊರನ್ನು ಮೊದಲು ರಾಯೂರು ಎಂದು ಕರೆದಿದ್ದು ಹಾಗೇ ರಾಯಚೂರು ಆಯಿತೆಂದೂ ಪ್ರತೀತಿ. ಈ ಪಟ್ಟಣ ವಿಜಯನಗರದ ಕಾಲದಲ್ಲಿ ಬಹು ಮಹತ್ತ್ವದ ಪಾತ್ರವಹಿಸಿತ್ತು. ಬಿಜಾಪುರದ ಇಸ್ಮಾಯಿಲ್ ಆದಿಲ್‌ಷಾ ಮತ್ತು ವಿಜಯನಗರದ ಕೃಷ್ಣದೇವರಾಯ ಇವರ ನಡುವೆ ನಡೆದ ಕಾಳಗದಲ್ಲಿ (1520ರ ಮೇ) ಆದಿಲ್‌ಷಾನ ಸೈನ್ಯ ಸೋತಿತು. ವಿಜಯನಗರದ ಆಳ್ವಿಕೆಯ ಅನಂತರ ಎಡೆದೊರೆನಾಡು ಆದಿಲ್‌ಶಾಹೀ ಆಡಳಿತಕ್ಕೆ ಒಳಪಟ್ಟಿತು. ಮುಂದೆ ದೆಹಲಿ ಅರಸರ ರಾಜ್ಯಕ್ಕೆ ಸೇರಿತು. ಕೆಲವು ವರ್ಷಗಳ ಬಳಿಕ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಮುಂದೆ 1860ರ ಒಪ್ಪಂದದ ಪ್ರಕಾರ ಹೈದರಾಬಾದಿನ ನಿಜಾಮನ ಆಡಳಿತಕ್ಕೆ ಸೇರಿತು. 1948ರಲ್ಲಿ ಹೈದರಾಬಾದು ಸ್ವತಂತ್ರ ಭಾರತದ ಒಂದು ಸಂಸ್ಥಾನವಾಗಿ ಸೇರಿಹೋಯಿತು. ಅನಂತರ ನಡೆದ ಪ್ರಾದೇಶಿಕ ಪ್ರಾಂತ್ಯಗಳ ನಿರ್ಮಾನದಿಂದಾಗಿ ಕರ್ನಾಟಕ ರಾಜ್ಯಕ್ಕೆ ಸೇರಿತು. (ಎಸ್.ಎಸ್.ಬಿ.)

**ರಾಯಬಾಗ:** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬೆಳಗಾಂವಿಯ ಈಶಾನ್ಯ ದಿಕ್ಕಿಗೆ ಇರುವ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಗೋಕಾಕ, ಪಶ್ಚಿಮದಲ್ಲಿ ಚಿಕ್ಕೋಡಿ, ಉತ್ತರದಲ್ಲಿ ಅಥಣಿ ತಾಲ್ಲೂಕುಗಳೂ ಪೂರ್ವದಲ್ಲಿ ಬಿಜಾಪುರ ಜಿಲ್ಲೆಯ ಜಮಖಂಡಿ ಮತ್ತು ಮುಧೋಳ ತಾಲ್ಲೂಕುಗಳೂ ಸುತ್ತುವರಿದಿವೆ. ಎರಡು ಪಟ್ಟಣಗಳೂ ಒಟ್ಟು 52 ಗ್ರಾಮಗಳೂ ಇರುವ ಈ ತಾಲ್ಲೂಕಿನ ವಿಸ್ತೀರ್ಣ 959.2 ಚ.ಕಿಮೀ. ಜನಸಂಖ್ಯೆ 1,55,69..

ಈ ತಾಲ್ಲೂಕು ಮೈದಾನ ಪ್ರದೇಶದಿಂದ ಕೂಡಿದ್ದು, ಪೂರ್ವಕ್ಕೆ ಇಳಿಜಾರಾಗಿದೆ. ತಾಲ್ಲೂಕಿನಲ್ಲಿ ಮರಳು ಮಿಶ್ರಿತ ಭೂಭಾಗ ಹೆಚ್ಚು. ವ್ಯವಸಾಯಪ್ರಧಾನವಾದ ಈ ತಾಲ್ಲೂಕಿನಲ್ಲಿ ಜೋಳ, ಸಜ್ಜೆ, ದ್ವಿದಳ

ಧಾನ್ಯಗಳನ್ನು ಬೆಳೆಯುತ್ತಾರೆ. ಮೆಣಸಿನಕಾಯಿ ಮತ್ತು ಹಣ್ಣುಗಳನ್ನು ಸಾಕಷ್ಟು ಬೆಳೆಯುತ್ತಾರೆ.

ಕೃಷ್ಣಾ ಈ ತಾಲ್ಲೂಕಿನ ಮುಖ್ಯನದಿ. ಇದು ತಾಲ್ಲೂಕಿನ ಉತ್ತರದಲ್ಲಿ ಪೂರ್ವಾಭಿಮುಖವಾಗಿ ಹರಿಯುವುದಲ್ಲದೆ ಚಿಕ್ಕೋಡಿ ಮತ್ತು ಅಥಣಿ ತಾಲ್ಲೂಕುಗಳನ್ನು ರಾಯಬಾಗ ತಾಲ್ಲೂಕಿನಿಂದ ಬೇರ್ಪಡಿಸುವ ತಾಲ್ಲೂಕು ಗಡಿಯಾಗಿದೆ. ರಾಯಬಾಗ ಪಟ್ಟಣಕ್ಕೆ ವಾಯವ್ಯದಲ್ಲಿ ನವದತ್ತಿ ಗ್ರಾಮದ ಪಶ್ಚಿಮದಲ್ಲಿ ಈ ತಾಲ್ಲೂಕನ್ನು ಪ್ರವೇಶಿಸುವ ಕೃಷ್ಣಾನದಿ ರಾಯಬಾಗ ಪಟ್ಟಣದ ಈಶಾನ್ಯಕ್ಕಿರುವ ಸಿದ್ದಾಪುರದ ಉತ್ತರದಲ್ಲಿ ಈ ತಾಲ್ಲೂಕನ್ನು ಪ್ರವೇಶಿಸುವ ಕೃಷ್ಣಾನದಿ ರಾಯಬಾಗ ಪಟ್ಟಣದ ಈಶಾನ್ಯಕ್ಕಿರುವ ಸಿದ್ದಾಪುರದ ಉತ್ತರದಲ್ಲಿ ಈ ತಾಲ್ಲೂಕನ್ನು ಬಿಟ್ಟು ಅಥಣಿ ತಾಲ್ಲೂಕನ್ನು ಪ್ರವೇಶಿಸುವುದು. ಈ ನದಿಯ ಉದ್ದಕ್ಕೂ ಇರುವ ಫಲವತ್ತಾದ ಬಲದಂಡೆ ರಾಯಬಾಗ ತಾಲ್ಲೂಕಿಗೆ ಸೇರಿದೆ. ತಾಲ್ಲೂಕಿನಲ್ಲಿ ಕೆಲವು ಸಣ್ಣ ತೊರೆಗಳೂ ಇದ್ದು ಕೃಷ್ಣಾನದಿಯನ್ನು ಸೇರಿಕೊಳ್ಳುತ್ತವೆ. ಈ ತಾಲ್ಲೂಕಿನ ಹವೆ ಸಹ್ಯವಾಗಿದ್ದು ಉತ್ತಮವೆನಿಸಿದೆ. ವಾರ್ಷಿಕ ಸರಾಸರಿ ಮಳೆ 495.34 ಮಿಮೀ.

ಈ ತಾಲ್ಲೂಕಿನಲ್ಲಿ ಕೈಗಾರಿಕೆ ಅಷ್ಟಾಗಿ ಮುಂದುವರಿದಿಲ್ಲ. ಸೇಂಗಾ ಎಣ್ಣೆ ಉತ್ಪಾದನೆ ಪ್ರಮುಖವಾಗಿದ್ದು ಇತ್ತೀಚೆಗೆ ಸಿಮೆಂಟ್ ಕೊಳವೆಗಳನ್ನು ತಯಾರಿಸಿ ಹೊರಗೆ ಕಳುಹಿಸಲಾಗುತ್ತಿದೆ.

ತಾಲ್ಲೂಕಿನಲ್ಲಿ ವಾಣಿಜ್ಯ, ಕೃಷಿ ಮತ್ತು ಕೃಷಿಯೇತರ ಬ್ಯಾಂಕುಗಳಿವೆ. ಪ್ರಥಮ, ಮಧ್ಯಮ ಮತ್ತು ಪ್ರೌಢಶಾಲೆಗಳು, ಆರೋಗ್ಯ ಕೇಂದ್ರ ಮತ್ತು ಔಷಧಾಲಯಗಳೂ ಇವೆ. ವಿದ್ಯುತ್, ಅಂಚೆ, ದೂರವಾಣಿ ಸೌಲಭ್ಯಗಳಿವೆ. ಹುಬ್ಬಳ್ಳಿ-ಪುಣೆ ರೈಲುಮಾರ್ಗ ಈ ತಾಲ್ಲೂಕಿನಲ್ಲಿ ಹಾದುಹೋಗಿದೆ. ರಾಯಬಾಗಕ್ಕೆ ಪೂರ್ವದಲ್ಲಿ 5 ಕಿಮೀ ದೂರದಲ್ಲಿ ರಾಯಬಾಗ ರೋಡ್ ರೈಲ್ವೆ ನಿಲ್ದಾಣವಿದೆ. ಕುಡಚಿ ಈ ತಾಲ್ಲೂಕಿನ ಇನ್ನೊಂದು ರೈಲುನಿಲ್ದಾಣ. ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳು ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ಸಂಪರ್ಕ ಕಲ್ಪಿಸಿವೆ.

ಈ ತಾಲ್ಲೂಕಿನಲ್ಲಿರುವ ಪ್ರಮುಖ ಸ್ಥಳಗಳಲ್ಲಿ ಕುಡಚಿ **(ನೋಡಿ)** ಕೃಷ್ಣಾನದಿಯ ಬಲದಂಡೆಯ ಮೇಲಿದೆ. ಈ ಊರಿನ ಹತ್ತಿರ ದೊಡ್ಡ ಸೇತುವೆಯಿದ್ದು ರಾಯಬಾಗಕ್ಕೆ ಮಹಾರಾಷ್ಟ್ರದ ಸಂಪರ್ಕ ಕಲ್ಪಿಸಿದೆ. ಇಲ್ಲಿ ಇತ್ತೀಚೆಗೆ ಶಿಲಾ ತಾಮ್ರಯುಗದ ನೆಲೆಯೊಂದನ್ನು ಪತ್ತೆಮಾಡಲಾಗಿದೆ. ರಾಯಬಾಗದ ಈಶಾನ್ಯಕ್ಕೆ 8 ಕಿಮೀ ದೂರದಲ್ಲಿರುವ ಚಿಂಚಲಿ ಗ್ರಾಮದಲ್ಲಿನ ಮಾಯಮ್ಮನ ಮಂದಿರ ಪ್ರಸಿದ್ಧವಾದದ್ದು. ತಾಲ್ಲೂಕಿನ ಪೂರ್ವದಂಚಿನಲ್ಲಿ ರಾಯಬಾಗಕ್ಕೆ ಆಗ್ನೇಯದಲ್ಲಿ 21 ಕಿಮೀ ದೂರದಲ್ಲಿರುವ ಮುಗಳಖೋಡ ದಲ್ಲಿ ಯಲ್ಲಿಂಗ (ಎಲ್ಲಪ್ಪ) ಮಹಾರಾಜರು ಸ್ಥಾಪಿಸಿದ ಪ್ರಸಿದ್ಧ ಮಠವಿದೆ. ರಾಯಬಾಗಕ್ಕೆ ಸು. 5 ಕಿಮೀ ದೂರದಲ್ಲಿರುವ ರಾಮಗಟ್ಟಿ ಪವಾಡಸಿದ್ಧರ ಕ್ಷೇತ್ರ. ಇಲ್ಲಿನ ಹೊಂಡಗಳ ನೀರು ಚರ್ಮರೋಗಗಳನ್ನು ಗುಣಪಡಿಸುತ್ತದೆಂದು ಪ್ರತೀತಿ.

ರಾಯಬಾಗ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬೆಳಗಾಂವಿಯ ಈಶಾನ್ಯಕ್ಕೆ 96 ಕಿಮೀ ದೂರದಲ್ಲೂ ಚಿಕ್ಕೋಡಿಯ ಈಶಾನ್ಯಕ್ಕೆ 29 ಕಿಮೀ ದೂರದಲ್ಲೂ ರಾಯಬಾಗ ರೋಡ್ ರೈಲು ನಿಲ್ದಾಣದ ಪಶ್ಚಿಮಕ್ಕೆ 5 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 1,241.

ಈ ಪಟ್ಟಣ ಸುತ್ತಲ ಗ್ರಾಮಗಳಿಗೆ ಮುಖ್ಯ ವ್ಯಾಪಾರಕೇಂದ್ರ. ಆರೋಗ್ಯ ಮತ್ತು ಔಷಧಾಲಯಗಳಿವೆ. ಶಾಲೆಗಳೂ ಇತರ ಸರ್ಕಾರಿ ಆಡಳಿತ ಕಚೇರಿಗಳೂ ಇದ್ದು ಅಂಚೆ, ದೂರವಾಣಿ, ವಿದ್ಯುತ್ ಮುಂತಾದವುಗಳ ಸೌಲಭ್ಯಗಳಿವೆ. ಪಟ್ಟಣದಲ್ಲಿ ಪಂಚಾಯಿತಿ ಆಡಳಿತವಿದೆ. *

**ರಾವ್, ಎಸ್.ಆರ್.:** 1922- . ಪ್ರಸಿದ್ಧ ಪುರಾತತ್ತ್ವಶಾಸ್ತ್ರಜ್ಞ ಹಾಗೂ ಸಿಂಧೂಲಿಪಿತಜ್ಞ. ಇವರ ಪೂರ್ಣ ಹೆಸರು ಶಿಕಾರಿಪುರ ರಂಗನಾಥರಾವ್. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಆನಂದಾಪುರದಲ್ಲಿ 1922ರಲ್ಲಿ ಜನಿಸಿದರು. ಜಡೆ, ಶಿವಮೊಗ್ಗಗಳಲ್ಲಿ ಪ್ರೌಢಶಾಲೆಯವರೆಗಿನ ವ್ಯಾಸಂಗವನ್ನು ಪೂರೈಸಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು ಅನಾಥಾಲಯದಲ್ಲಿದ್ದು ಇತಿಹಾಸದಲ್ಲಿ ಬಿ.ಎ. (ಆನರ್ಸ್) ಪದವಿ ಮಾಡಿದರು. ಆಗ

ಇವರು 15 ರೂಪಾಯಿಗಳ ವಿದ್ಯಾರ್ಥಿವೇತನ ಪಡೆಯುತ್ತಿದ್ದರು. ಮೆಕಿಂತಾಷ್ ಮತ್ತು ಎಂ.ಎಚ್. ಕೃಷ್ಣ ಅವರಿಂದ ಇವರು ಹೆಚ್ಚು ಪ್ರಭಾವಿತರಾದರು. ಪ್ರಥಮ ಶ್ರೇಣಿಯಲ್ಲಿ ಪದವಿ ಗಳಿಸಿದ ಇವರಿಗೆ ಸರ್ ಹ್ಯೂಕ್ವಾಂಡಿ ಚಿನ್ನದ ಪದಕ ದೊರೆಯಿತು. ಅನಂತರ ನಾಗಪುರ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಗಳಿಸಿದರು.

ಪೋಸ್ಟ್‌ಮಾಸ್ಟರ್, ಒಪ್ಪೊತ್ತಿನ ಅಧ್ಯಾಪಕ, 'ನಾಗಪುರಟೈಮ್ಸ್' ಆಂಗ್ಲಪತ್ರಿಕೆಯ ಉಪಸಂಪಾದಕ ಹಾಗೂ ಜನವಾಹಿನಿ ಮತ್ತು ಪ್ರಜಾಮತ ಪತ್ರಿಕೆಗಳಲ್ಲಿ ಮ್ಯಾನೇಜರ್- ಹೀಗೆ ವಿವಿಧ ವೃತ್ತಿಗಳಲ್ಲಿ ಸೇವೆ ಸಲ್ಲಿಸಿದ ಇವರು 1947ರಲ್ಲಿ ಬರೋಡ ಸಂಸ್ಥಾನದ ಪುರಾತತ್ತ್ವ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿದ್ದರು.

ಶಾಸನಶಾಸ್ತ್ರ ಮತ್ತು ನಾಣ್ಯಶಾಸ್ತ್ರಗಳಲ್ಲಿಯೂ ತರಬೇತಿ ಹೊಂದಿದ ಇವರಿಗೆ ಬರೋಡದ ಕಲಾಭವನದಿಂದ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಹಾಗೂ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ವಿಭಾಗದಿಂದ ಸಂರಕ್ಷಣೆ ಮತ್ತು ಉತ್ಖನನ ವಿಷಯಗಳಲ್ಲಿಯೂ ಪರಿಣತಿ ದೊರೆಯಿತು. ಹಾಗೆಯೇ ಪ್ರಾಗೈತಿಹಾಸಿಕ ಪುರಾತತ್ತ್ವ ಕ್ಷೇತ್ರದಲ್ಲಿ ಝೂಯ್ನರ್ ಅವರಿಂದ ಕಂಚುಯುಗದ ಪಶ್ಚಿಮ ಏಷ್ಯದ ಪುರಾತತ್ತ್ವದಲ್ಲಿ ಕ್ಲಾಡ್ ಸೊಬೊರ್ನ್ ಅವರಿಂದ ಹಾಗೂ ಪ್ರಾಚೀನ ಲಿಪಿಶಾಸ್ತ್ರದಲ್ಲಿ ನೌಗಯರ್ಡ್ ಅವರಿಂದ ತರಬೇತಿ ಹೊಂದಿದರು.

ಪ್ರಾಂತಗಳ ಪುನರ್ವಿಂಗಡಣೆಯಿಂದಾಗಿ ಇವರು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ವಿಭಾಗದಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆರ್ಕಿಯಾಲಜಿಸ್ಟ್ ಆಗಿ ನೇಮಕಗೊಂಡರು. ನಿವೃತ್ತರಾಗುವವರಿಗೂ (1980) ಇವರು ಈ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. ಇವರು ತಾವು ಕೆಲಸ ಮಾಡಿದ ಕಡೆಗಳಲ್ಲೆಲ್ಲ ತಮ್ಮ ಸಾಧನೆ-ಸಿದ್ಧಿಗಳ ಗುರುತುಗಳನ್ನು ಮೂಡಿಸಿದ್ದಾರೆ. ಯುರೋಪಿನ ರಾಷ್ಟ್ರಗಳು, ಪಶ್ಚಿಮ ಏಷ್ಯ, ರಷ್ಯ ಮತ್ತು ಅಮೆರಿಕಗಳಲ್ಲಿ ಪ್ರವಾಸ ಮಾಡಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಸಿಂಧೂ ಸಂಸ್ಕೃತಿಯನ್ನು ಕುರಿತು ಮತ್ತು ತಮ್ಮ ಸಂಶೋಧನೆಯ ಬಗ್ಗೆ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. 1981ರಲ್ಲಿ ಇವರು ಲೋಥಲ್ ಅಂಡ್ ದಿ ಇಂಡಸ್ ಸಿವಿಲಿಸೇಷನ್ ಎಂಬ ಕೃತಿಗೆ ಮೈಸೂರು ವಿಶ್ವವಿದ್ಯಾನಿಲಯ ಡಿ.ಲಿಟ್ ಪದವಿ ನೀಡಿ ಗೌರವಿಸಿತು.

ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಆರ್ಥಿಕ ನೆರವಿನಿಂದ ಭಾರತದ ಸಮುದ್ರಗಳಿಗೆ ಸಂಬಂಧಿಸಿದಂತೆ ಸಾಗರಪುರಾತತ್ತ್ವ ಅಧ್ಯಯನಗಳು ಎಂಬ ಸಂಶೋಧನ ಯೋಜನೆಯ ನೇತೃತ್ವ ವಹಿಸಿ ಕೆಲಸ ಮಾಡಿದ ಹೆಮ್ಮೆ ಇವರದು.

1948ರಲ್ಲಿ ಶಿಶುಪಾಲಗಡದಲ್ಲಿ ನಡೆಸಲಾದ ಉತ್ಖನನದಲ್ಲಿ ತಂತ್ರವಿಧಾನಗಳ ಬಗ್ಗೆ ಅನುಭವಗಳಿಸಿದ ಇವರು ಗುಜರಾತಿನ ಅಮ್ರೇಲಿಯಲ್ಲಿ ಚಿಕ್ಕ ಪ್ರಮಾಣದಲ್ಲಿಯಾದರೂ ವೈಜ್ಞಾನಿಕ ಸ್ವರೂಪದ ಉತ್ಖನನ ನಡೆಸಿ ಅಲ್ಲಿ ಬೌದ್ಧವಿಹಾರದ ಅವಶೇಷಗಳನ್ನು ಕಂಡುಹಿಡಿದರು. ಅಲ್ಲಿ ಬೃಹತ್ ಶಿಲಾಯುಗೀನ ಲಕ್ಷಣದ ದಹನಾನಂತರ ಹೂಳುಶಿವಸಂಸ್ಕಾರದ ವಿಶಿಷ್ಟ ಪದ್ಧತಿಯೊಂದನ್ನು ಇವರು ಬೆಳಕಿಗೆ ತಂದರು.

ಸಿಂಧು ಸಂಸ್ಕೃತಿಗೆ ಸಂಬಂಧಿಸಿದಂತೆ ಗುಜರಾತ್-ಕಛ್ ಪ್ರದೇಶದಲ್ಲಿಯೇ ಸುಮಾರು ಐವತ್ತಕ್ಕೂ ಹೆಚ್ಚು ನೆಲೆಗಳನ್ನು ಪತ್ತೆ ಮಾಡಿದರು. ಇವುಗಳಲ್ಲಿ ಅತ್ಯಂತ ಪ್ರಮುಖವಾದ ರಂಗಪುರ ಮತ್ತು ಲೋಥಲ್‌ಗಳಲ್ಲಿ ಉತ್ಖನನಗಳನ್ನು ನಡೆಸಿ ಇಲ್ಲಿ ರಚನೆಗಳು ಮತ್ತು ಮಾನವ ನಿರ್ಮಿತ ವಸ್ತುಗಳು ಸಿಂಧೂ ಸಂಸ್ಕೃತಿಯ ಪ್ರೌಢಹಂತವೊಂದನ್ನು ಪ್ರತಿನಿಧಿಸುವಲ್ಲಿ ಹೇಗೆ ಮಹತ್ವದ್ದಾಗಿವೆ ಎಂಬುದನ್ನು ಪ್ರಮಾಣೀಕರಿಸಿದರು.

ಲೋಥಲ್ 1954ರಲ್ಲಿ ಪರಿಶೋಧಿತವಾಯಿತು. 1955ರಿಂದ 62ರವರೆಗೆ ಅಲ್ಲಿ ನಡೆದ ಉತ್ಖನನಗಳಿಂದ ಸಿಂಧೂ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕು ಬಿದ್ದಿತು. ಲೋಥಲ್ ಪ್ರಪಂಚದಲ್ಲಿಯೇ ಪ್ರಾಚೀನ ಬಂದರುಗಳಲ್ಲೊಂದಾಗಿದ್ದು ಅಲ್ಲಿನ ಜನರು ಬೆಹರಿನ್‌ದ್ವೀಪ, ಇರಾನ್ ಮತ್ತು ಇರಾಕ್‌ಗಳ ಪ್ರಾಚೀನ ಜನರೊಂದಿಗೆ ಸಮುದ್ರ ವ್ಯಾಪಾರ ಸಂಬಂಧವನ್ನು ಹೊಂದಿದ್ದರೆಂದು ತಿಳಿಯಲಾಗಿದೆ. ಇದರಿಂದ ಸಿಂಧೂಸಂಸ್ಕೃತಿಗೆ ಹೆಚ್ಚಿನ ಆಯಾಮ ದೊರೆಯಿತು. ಈ ವಿಚಾರಗಳನ್ನು ವಿದ್ವಾಂಸರು ಪುನರಾಲೋಚಿಸುವಂತಾಯಿತು. ಲೋಥಲ್‌ನಲ್ಲಿ 710 ಅಡಿ ಉದ್ದ ಮತ್ತು 124 ಅಡಿ ಅಗಲದ ಮೊತ್ತಮೊದಲ ಡಾಕ್‌ಯಾರ್ಡ್ ಗೋಚರಿಸಿತ್ತು.

ಸಮುದ್ರ ಹಾಗೂ ನದೀತೀರದ ನೆಲೆಗಳು ಪ್ರವಾಹಗಳಿಗೆ ತುತ್ತಾಗಿ ನಾಶಹೊಂದುತ್ತಿದ್ದ ಅಂಶವನ್ನು ಲೋಥಲ್ ಸ್ಪಷ್ಟವಾಗಿ ತೋರಿಸಿಕೊಟ್ಟಿತು. ಪ್ರ.ಶ.ಪೂ. 1900ರ ತರುವಾಯ ಸಿಂಧೂ ಸಂಸ್ಕೃತಿಯ ಜನರು ಹಂಚಿಹರಡಿ ಹೋಗಿ ಹಳ್ಳಿಗಳನ್ನು ಕಟ್ಟಿಕೊಂಡು ವಾಸಮಾಡತೊಡಗಿದರು. ಕಾಲಿಬಂಗನ್ ಮತ್ತು ಲೋಥಲ್ ಉತ್ಖನನಗಳಿಂದ ಜನರು ಯಜ್ಞಯಾಗಾದಿಗಳನ್ನು ಮಾಡುತ್ತಿದ್ದ ಅಂಶ ಬೆಳಕಿಗೆ ಬಂದಿದೆ. ಸಿಂಧೂ ಜನರಿಗೆ ಕುದುರೆಗಳ ಪರಿಚಯವಿರಲಿಲ್ಲ ಎಂಬ ವಾದಕ್ಕೆ ಪ್ರತ್ಯುತ್ತರವಾಗಿ ಕುದುರೆಯ ಎಲುಬುಗಳು ಲೋಥಲ್ ಮತ್ತು ಸುರ್‌ಕೋಟ್ಡಾಗಳಲ್ಲಿ ದೊರೆತಿವೆ. ಭಾರತದಲ್ಲಿ ಸಮುದ್ರದಲ್ಲಿ ಮುಳುಗಿಹೋದ ಬಂದರು ನೆಲೆಗಳ ಅಧ್ಯಯನಕ್ಕೆ ಇವರ ಕೊಡುಗೆ ದೊಡ್ಡದು. ಬೆಟ್‌ದ್ವಾರಕಾ ಮತ್ತು ವಿದ್ಯಾನಗರಗಳಲ್ಲಿ ನಡೆಸಿದ ಪರಿಶೋಧನೆಗಳಿಂದ ಹೆಚ್ಚಿನ ಮಾಹಿತಿ ದೊರೆತಿದೆ. ಪ್ರ.ಶ.ಪೂ. 14ನೆಯ ಶತಮಾನದಿಂದ ದ್ವಾರಕೆಯು ಹಲವು ಸಲ ಸಮುದ್ರದಲ್ಲಿ ಮುಳುಗಿಹೋದ ವಿಷಯ ಬೆಳಕಿಗೆ ಬಂದಿದೆ.

ತಮಿಳುನಾಡಿನ ಪೈಯಂಪಲ್ಲಿ ಮತ್ತು ಆಂಧ್ರಪ್ರದೇಶದ ಶಿವವರಂಗಳಲ್ಲಿ ರಾಯರು ಪ್ರಾಗ್ಯೈತಿಹಾಸಿಕ ಸಂಸ್ಕೃತಿಯನ್ನು ಕಂಡುಹಿಡಿದರು. ಐಹೊಳೆ, ಪಟ್ಟದಕಲ್ಲುಗಳಲ್ಲಿ ಶಾತವಾಹನ ಕಾಲದ ವಸತಿಯನ್ನು ತೋರಿಸಿಕೊಟ್ಟರು. ಕಾವೇರಿಪಟ್ಟಣ, ಎಲಿಫೆಂಟ, ಚಂದ್ರಪುರನ ಮುಂತಾದ ಹಲವೆಡೆ ಇವರ ಪರಿಶೋಧನಾ ಕಾರ್ಯಗಳು ನಡೆದವು. ಮಧ್ಯಕಾಲೀನ ಇತಿಹಾಸಕ್ಕೆ ಸಂಬಂಧಿಸಿದಂತೆ ಇವರು ಪರಿಶೋಧನೆ ನಡೆಸಿದ ನೆಲೆಗಳಲ್ಲಿ ಮಹಾರಾಷ್ಟ್ರದ ರಾಯಗಡ ಮತ್ತು ಕರ್ನಾಟಕದ ಹಂಪೆ ಮುಖ್ಯವಾದವು. ಹಂಪೆಯಲ್ಲಿ ಪತ್ತೆಯಾದ ಬೌದ್ಧಶಾಸನ ಮತ್ತು ಕಟ್ಟಡ ಅವಶೇಷಗಳಿಂದ ಹಂಪಿಯ ಪ್ರಾಚೀನತೆ ಒಮ್ಮೆಲೇ ಸುಮಾರು ಒಂದೂವರೆ ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಯಿತು.

ಇವರ ಸೇವಾವಧಿಯಲ್ಲಿ ಸಂರಕ್ಷಿತವಾದ ಸ್ಮಾರಕಗಳು ನೂರಾರು. ಇವುಗಳಲ್ಲಿ ಮುಖ್ಯವಾದವೆಂದರೆ ಅಜಂತಾಗುಹೆಗಳು, ಎಲ್ಲೋರದ ಕೈಲಾಸದೇವಾಲಯ, ತಾಜಮಹಲ್, ಚಿತ್ತೂರುಗಡದ ಕೋಟೆ, ಕಾರ್ಲೆ ಮತ್ತು ಎಲಿಫೆಂಟ ಗುಹೆಗಳು, ದ್ವಾರಕಾ, ಮೊಧೇರ, ತಂಜಾವೂರು, ಗೋವ, ಮಹಾಬಲಿಪುರ ಹಾಗೂ ಕರ್ನಾಟಕದ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಳ್ಳಿಗಾವೆ, ಲಕ್ಕುಂಡಿ, ಹಳೇಬೀಡು, ಬೇಲೂರು, ಚೌಡದಾನಪುರ, ಹಂಪೆ, ಬಿಜಾಪುರ, ಬೀದರ್, ಶ್ರೀರಂಗಪಟ್ಟಣ ಇತ್ಯಾದಿ ಸ್ಥಳಗಳ ಹಲವು ಸ್ಮಾರಕಗಳ ಸಂರಕ್ಷಣೆಯ ಕಾರ್ಯ ನಡೆಯಿತು.

ಇವರು ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಳ್ಳಿಗಾವೆ, ಲಕ್ಕುಂಡಿ ಮುಂತಾದ ಕಡೆಗಳಲ್ಲಿ ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಿದರು. ಭಾರತದ ಪ್ರಾಚೀನಕಾಲದ ಗಣಿತೋಡಿಕೆ ಮತ್ತು ಲೋಹವಿದ್ಯೆ ಎಂಬ ವಿಷಯವನ್ನು ಕುರಿತು ಇತರ ತಜ್ಞರೊಡನೆ ಸೇರಿ ಪ್ರಬಂಧವೊಂದನ್ನು ಸಿದ್ಧಪಡಿಸಿ 1977ರಲ್ಲಿ ಎಡಿನ್‌ಬರ್ಗ್‌ನಲ್ಲಿ ಸೇರಿದ ಹದಿನೈದನೆಯ ಅಂತಾರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ಮಂಡಿಸಿ ಮೆಚ್ಚುಗೆ ಗಳಿಸಿದರು.

ಸಿಂಧೂಲಿಪಿಯನ್ನು ಓದುವಲ್ಲಿ ಇವರು ನಡೆಸಿದ ಸತತ ಸಂಶೋಧನೆ ಇವರ ಅತಿಮುಖ್ಯ ಸಾಧನೆಗಳಲ್ಲಿ ಒಂದು. ಇವರು 1960ರಲ್ಲಿ ಸಿಂಧೂ ಮುದ್ರೆಗಳ ಮೇಲಿನ ಲಿಪಿಯ ಅಧ್ಯಯನವನ್ನು ಆರಂಭಿಸಿದರು. ಬ್ರಾಹ್ಮೀಲಿಪಿಯನ್ನು ಆಧಾರವಾಗಿಟ್ಟುಕೊಂಡು ಸಿಂಧೂಲಿಪಿಯ ಮೂಲಚಿಹ್ನೆಗಳನ್ನು ಪತ್ತೆ ಹಚ್ಚುವಲ್ಲಿ ಹೆಚ್ಚು ಸಫಲರಾದರು. ಅವುಗಳಿಗೆ ಧ್ವನಿಮೌಲ್ಯ ಕೊಡುವ ನಿಟ್ಟಿನಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಛಾಡ್ವಿಕ್ ಅವರ ಸಲಹೆಯಂತೆ ಸೆಮೆಟಿಕ್ ಲಿಪಿಯನ್ನು ಅಭ್ಯಸಿಸಿ ಎರಡು ಲಿಪಿಗಳ ನಡುವಣ ಸಾದೃಶ್ಯವನ್ನು ಗಮನಿಸಿದರು. ಸೆಮೆಟಿಕ್ ಲಿಪಿಯ ಧ್ವನಿಮೌಲ್ಯವನ್ನು ಇಲ್ಲಿನ ಸಿಂಧೂಲಿಪಿಗೆ ಅನ್ವಯಿಸಿದಾಗ ಸಿಂಧೂ ಲಿಪಿಯ ಭಾಷೆ ವೇದಪೂರ್ವ ಸಂಸ್ಕೃತ ಎಂಬುದು ಇವರಿಗೆ ಮನವರಿಕೆಯಾಯಿತು. ಈ ನಿಟ್ಟಿನಲ್ಲಿ ರಾಯರ ಪಾಠ ಅನೇಕ ವಿದ್ವಾಂಸರಿಗೆ ಒಪ್ಪಿಗೆಯಾಗಿದೆ. ಸಮುದ್ರದಲ್ಲಿ ಮುಳುಗಿದ ಶ್ರೀಕೃಷ್ಣನ ದ್ವಾರಕೆ (2005) ಇವರ ಇತ್ತೀಚಿನ ಕೃತಿ.

ಇವರ ಸಾಧನೆ ಸಿದ್ಧಿಗಳಿಗಾಗಿ ಅನೇಕ ಸನ್ಮಾನಗಳು ದೊರೆತಿವೆ. ರಂಗವಲ್ಲಿ ಎಂಬುದು ಇವರಿಗೆ ಅರ್ಪಿಸಲಾದ ಅಭಿನಂದನಗ್ರಂಥ. ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯದ ಆರನೆಯ ವಾರ್ಷಿಕ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಇಲ್ಲಿ ಇವರಿಗೆ ತಾಮ್ರಪತ್ರ ನೀಡಿ ಗೌರವಿಸಲಾಯಿತು. ನೆಹರು ಫೆಲೋಶಿಪ್ (1977) ಪಡೆದ ಮೊದಲ ಕನ್ನಡಿಗ ಇವರು. ಮಿಥಿಕ್ ಸೊಸೈಟಿ ಇವರನ್ನು ವರ್ಷದ ವಿದ್ವಾಂಸ (1981) ಎಂದು ಗೌರವಿಸಿದೆ. ದ್ವಾರಕಾಪೀಠ ಮತ್ತು ಅಖಿಲ ಭಾರತ ಮಾಧ್ವಮಹಾಮಂಡಳಿ ಇವರಿಗೆ ಕ್ರಮವಾಗಿ ಪ್ರಾಚ್ಯವಿದ್ಯಾವಿಶಾರದ ಮತ್ತು ಸಮಾಜಭೂಷಣ ಎಂಬ ಬಿರುದುಗಳನ್ನು ನೀಡಿವೆ. **(ಎಚ್.ಎಂ.ಎನ್.ಆರ್.)**

**ರಾವ್ ಬಹದ್ದೂರ್:** 1910-84. ಕನ್ನಡದ ಮಹತ್ತ್ವದ ಲೇಖಕರು. ಕಾದಂಬರಿಕಾರ, ಕತೆಗಾರ, ಹರಟೆಗಾರ, ಗಾಂಧೀವಾದಿ. ಇವರ ಪೂರ್ಣ ಹೆಸರು ರಾಮಚಂದ್ರ ಭೀಮರಾವ್ ಕುಲಕರ್ಣಿ. ಬಿಜಾಪುರ ಜಿಲ್ಲೆಯ ಕೃಷ್ಣಾತೀರದಲ್ಲಿರುವ ಹಿರೇಪಡಸಲಗಿ ಇವರ ಜನ್ಮಸ್ಥಳ. ತಂದೆ ಭೀಮರಾವ್ ಕುಲಕರ್ಣಿ, ತಾಯಿ ಸುಭದ್ರಾಬಾಯಿ. ಪ್ರಾಥಮಿಕ ಶಿಕ್ಷಣ ಹಿರೇಪಡಸಲಗಿ, ಪ್ರೌಢಶಿಕ್ಷಣ ಹಿರೆಕೆರೂರು, ಕಾಲೇಜು ಶಿಕ್ಷಣ ಕರ್ನಾಟಕ ಕಾಲೇಜು ಧಾರವಾಡದಲ್ಲಿ ನಡೆಯಿತು. ಇವರಿಗೆ ವಿದ್ಯಾರ್ಥಿ ಜೀವನದಿಂದಲೂ ಹಲವಾರು ವಿದ್ವಾಂಸರ, ಮಹನೀಯರ ಹಾಗೂ ಗಣ್ಯವ್ಯಕ್ತಿಗಳ ಪರಿಚಯ ಹಾಗೂ ಸಂಪರ್ಕವಿತ್ತು. ಆ ಸಂಪರ್ಕವೇ ಇವರ ಯುವ ಮನಸ್ಸನ್ನು ರೂಪಿಸಿ ಸಾಹಿತ್ಯಕ ಅಭಿರುಚಿಗೆ ತಿರುಗಿಸಿದ ಶಕ್ತಿಗಳು.

ಇವರು ಒಕ್ಕಲು ಮನೆತನದಿಂದ ಬಂದವರು. ಕಾಲೇಜು ಶುಲ್ಕ ಕಟ್ಟಲೂ ಕೈಲಾಗದಷ್ಟು ಆರ್ಥಿಕ ದುಸ್ಥಿತಿಯಿಂದಾಗಿ ವಿದ್ಯಾರ್ಥಿ ಜೀವನದಲ್ಲೇ

ಓದಿನ ಜೊತೆಗೆ ಬ್ಯಾಂಕೊಂದರಲ್ಲಿ ಬಿಡುವಿನ ವೇಳೆಯಲ್ಲಿ ನೌಕರಿ ಮಾಡುತ್ತ ಬಿ.ಎ. ಮಾಡಿದ್ದೆ ಒಂದು ಸಾಹಸ. ಮುಂದೆ ಹಿಡಿದ ನೌಕರಿಯಲ್ಲಿ ಯಾವುದನ್ನೂ ಓದಲು ಬಿಡುವಾಗದಷ್ಟು, ಬಿಡುವುಮಾಡಿಕೊಳ್ಳಲಾಗದಷ್ಟು ತಲ್ಲೀನತೆ, ಏಕತಾನತೆ. ಹೀಗಾಗಿ ರಾವ್ ಬಹದ್ದೂರರು ಪಡೆದ ಸಮಕಾಲೀನ ಸಾಹಿತ್ಯ ಕೃತಿಗಳ ಅಧ್ಯಯನ ತೀರಾ ಕಡಿಮೆ ಎಂದೇ ಹೇಳಬೇಕು. ಆದರೆ ಇವರು ಬದುಕಿನಿಂದ ಪಡೆದದ್ದು, ಅನುಭವಿಸಿದ್ದು ಅಪಾರ.



ಕನ್ನಡ ಸಾಹಿತ್ಯಕ್ಕೆ ರಾವ್ ಬಹಾದ್ದೂರರು ಉತ್ತರ ಕರ್ನಾಟಕದ ಬದುಕು, ಜನಜೀವನ, ಪ್ರಾದೇಶಿಕ ಸೊಗಡನ್ನು ಕೊಟ್ಟಿರುವಂತೆ ಅಲ್ಲಿನ ವಿಶಿಷ್ಟಭಾಷೆ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿಗತಿ, ಗಾಂಧೀಯುಗದ ಆದರ್ಶಗಳು, ಮೌಲ್ಯಗಳು ಹಾಗೂ ಗಾಂಧೀ ಅನಂತರ ಭಾರತ ಕಂಡ ಸ್ಥಿತ್ಯಂತರಗಳನ್ನು ಆರ್ಷೇಯ ಮೌಲ್ಯಗಳ ಹಿನ್ನೆಲೆಯಲ್ಲಿ ವಿವೇಚಿಸುವುದರ ಮೂಲಕ ಉದಾತ್ತ ಜೀವನದೃಷ್ಟಿ ನೀಡಿದ್ದಾರೆ. ಇವರ ಸಾಹಿತ್ಯ ಕೃತಿಗಳಲ್ಲಿ ಸ್ವಸ್ಥ ಮನಸ್ಸೊಂದು ಮಾನವ ಹಿತಕ್ಕಾಗಿ ಮಿಡಿಯುವುದನ್ನು ಉದ್ದಕ್ಕೂ ಕಾಣುತ್ತೇವೆ.

ಇವರು ತಮ್ಮ ಬದುಕಿನ ಬವಣೆಗಳನ್ನು ನೀಗಲು ಎಷ್ಟೋ ಅವಸರದ ಬರೆವಣಿಗೆಗಳನ್ನು ಮಾಡಿದರೆಂಬುದು ನಿಜ. ಆದರೆ ಎಂದೂ ನೈತಿಕ ಮೌಲ್ಯಗಳ ನೆಲಗಟ್ಟನ್ನೂ ತಮ್ಮ ಜೀವನದೃಷ್ಟಿಯನ್ನೂ ಗಾಂಧೀದರ್ಶನವನ್ನೂ ಮಾನವೀಯ ಅನುಕಂಪವನ್ನೂ ತೊರೆದು ಅಗ್ಗದ ಜನಪ್ರಿಯತೆಗಾಗಿ ಬರೆಯಲಿಲ್ಲ. ಈ ದೃಷ್ಟಿಯಿಂದ ಇವರ ಕೃತಿಗಳು ಜೀವನಾನುಭವಗಳ ಮೂಸೆಯಲ್ಲಿ ಮೂಡಿಬಂದವು. ಸೂಜಿಗಲ್ಲು ಕಾದಂಬರಿಯಲ್ಲಿ ತ್ಯಾಗ–ಸೇವಾಭಾವನೆಗಳು ಸೂಜಿಗಲ್ಲಿನಂತೆ ಜನರನ್ನು ಆಕರ್ಷಿಸುವ ದಿವ್ಯಶಕ್ತಿಯನ್ನು ಮನುಷ್ಯನಿಗೆ ನೀಡುವುದೆಂಬುದನ್ನು ಬ್ರಹ್ಮಚಾರಿ ನಾರಾಯಣನ ಮರಣಾನಂತರದ ಘಟನೆಗಳಿಂದ ಚಿತ್ರಿಸಿದ್ದಾರೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸೇರಿದವರು ಪಟ್ಟ ಕಷ್ಟಗಳು, ಅವರು ಮಾಡಿದ ತ್ಯಾಗ–ಬಲಿದಾನ, ನಿಸ್ವಾರ್ಥ ಭಾವನೆಯಿಂದ ಬದುಕಿನಲ್ಲಿ ಸಂಘರ್ಷ ನಡೆಸಿದವರ ಚಿತ್ರಣವನ್ನು ಕನಸು ನನಸು, ತಬ್ಬಲಿಗಳು, ಬಿತ್ತಿ ಬೆಳೆದವರು, ವೃಂದಾವನ– ಈ ಕಾದಂಬರಿಗಳಲ್ಲಿ ಕಾಣುತ್ತೇವೆ. ಯಾವ ಜನತೆಯ ಸ್ವಾತಂತ್ರ್ಯ ಹೋರಾಟ ನಡೆಸಲಾಯಿತೊ ಆ ಹೋರಾಟದ ಮುಂಚೂಣಿಯಲ್ಲಿದ್ದವರೇ ಸ್ವತಂತ್ರ ಭಾರತದಲ್ಲಿ ಅಧಿಕಾರದ ಗದ್ದುಗೆ ಹಿಡಿದು ಜನತೆಯ ಶೋಷಣೆಯನ್ನು ಅಬಾಧಿತವಾಗಿ ನಡೆಸಿದ್ದು ಈ ದೇಶದ ದುರಂತ ಎಂಬ ವಿಷಾದದ ದನಿಯನ್ನು ಒಟ್ಟಾರೆ ಇವರ ಎಲ್ಲ ಕಾದಂಬರಿಗಳಲ್ಲೂ ಕಾಣಬಹುದು. ಅನರ್ಹರಿಗೆ ಅಧಿಕಾರ ಪಟ್ಟ, ದುಡಿಯದೇ ಹಣ ಪಡೆಯುವ ದುರಾಸೆ, ದುಡ್ಡಿದ್ದರೆ ಎಲ್ಲವನ್ನೂ ಪಡೆಯಬಹುದು ಎಂಬ ಭ್ರಮೆಯಿಂದ ಧನಸಂಚಯ ಮಾಡುವವರ ನೈತಿಕ ಅಧೋಗತಿಯ ಚಿತ್ರಗಳನ್ನು ಧೂಮಕೇತು, ಕಾಂಚನಮೃಗ, ತಬ್ಬಲಿಗಳು ಕೃತಿಗಳಲ್ಲಿ ಕಾಣಬಹುದು. ಪ್ರಜೆಗಳ ಹಿತಕ್ಕೆಂದು ರೂಪಿಸಿದ ಯೋಜನೆಗಳ ಪ್ರಯೋಜನ ಕೆಲವೇ ಸ್ವಾರ್ಥಿಗಳು ಪಡೆಯುತ್ತಿರುವುದರಿಂದ ಪ್ರಜಾಪ್ರಭುತ್ವದ ಬಗ್ಗೆ ಜನತೆಗಿದ್ದ ವಿಶ್ವಾಸವೇ ಬತ್ತಿಹೋಗುವ ದುರಂತಸ್ಥಿತಿಯನ್ನು ಗೌಡರ ಕೋಣ ಕೃತಿಯಲ್ಲಿ ಚಿತ್ರಿಸಲಾಗಿದೆ.

ಇವರ ಉತ್ತಮ ಕೃತಿಗಳಲ್ಲೊಂದಾದ 'ಗ್ರಾಮಾಯಣ' ಭಾರತೀಯ ಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆ ಎನ್ನಬಹುದು. ಯಾವುದೇ ಲೇಖಕನೊಬ್ಬನ ಚೊಚ್ಚಲು ಕೃತಿಯೊಂದು ಈ ಬಗೆಯ ಗೌರವ, ಹೆಗ್ಗಳಿಕೆಯನ್ನು ಪಡೆದಿರುವುದು ಅಪರೂಪದ ಘಟನೆ. 'ಗ್ರಾಮಾಯಣ' ಕಾದಂಬರಿ ರಚನೆಯಾದದ್ದೇ ಪ್ರೇಮ–ಕಾಮ ಒಂದೇ ಮನುಷ್ಯನನ್ನು ಕಾಡುವ ಸಮಸ್ಯೆ ಅಲ್ಲ, ಅವನನ್ನು ಕಾಡುವ ಅನಂತ ಸಮಸ್ಯೆಗಳಿವೆ; ಅವನ್ನು ಅಭಿವ್ಯಕ್ತಿಗೊಳಿಸುವ ಕಾದಂಬರಿಯನ್ನು ಏಕೆ ಬರೆಯಬಾರದೆಂಬ ಸವಾಲನ್ನು ಸ್ವೀಕರಿಸಿದ್ದರಿಂದ ಗ್ರಾಮಾಯಣದಲ್ಲಿ ಹಳ್ಳಿಯ ನೂರು ಮುಖಗಳ ಚಿತ್ರಣವಿದ್ದು ಇಡೀ ಹಳ್ಳಿಯೇ ಅಲ್ಲಿ ಸಾಕಾರಗೊಂಡಿದೆ.

ಇವರು ಪತ್ರಿಕೋದ್ಯಮಿಯಾಗಿ ಕನ್ನಡ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆ ಮಹತ್ತ್ವದ್ದು. ಕನ್ನಡ ಪತ್ರಿಕೋದ್ಯಮ ಇನ್ನೂ ಶೈಶವಾವಸ್ಥೆಯಲ್ಲಿದ್ದ ದಿನಗಳು ಅವು. ಸ್ವಾತಂತ್ರ್ಯಪೂರ್ವ ಕಾಲದಲ್ಲಂತೂ ಸರ್ಕಾರದ ವಕ್ರದೃಷ್ಟಿಗೆ ತುತ್ತಾಗಿ ಇಡೀ ಪತ್ರಿಕಾ ಕಚೇರಿ, ಮುದ್ರಣಾಲಯಗಳಿಗೆ ಬೀಗಮುದ್ರೆ ಹಾಕಿ ಸಂಪಾದಕರನ್ನು ಸೆರೆಹಿಡಿದು ಯಾವಾಗ ಜೈಲಿಗೆ ಕಳಿಸುವರೋ ಎಂಬ ಭಯದಲ್ಲಿಯೇ ಕೆಲಸ ಮಾಡಬೇಕಾಗಿತ್ತು. ಅಂಥ ದಿನಗಳಲ್ಲಿ ಇವರು ಪತ್ರಿಕೋದ್ಯಮಿಯಾಗಿ ಕೆಲಸ ಮಾಡಿದರು. ಸುಮಾರು ಒಂದೂವರೆ ದಶಕಗಳಷ್ಟು ಕಾಲ ಕರ್ನಾಟಕದ ಪ್ರಮುಖ ದಿನಪತ್ರಿಕೆ ಸಂಯುಕ್ತ ಕರ್ನಾಟಕದ ಸಹಸಂಪಾದಕರಾಗಿ ದುಡಿದರು. ಸಂಯುಕ್ತ ಕರ್ನಾಟಕ ಬಿಟ್ಟ ಬಳಿಕ ರಾವ್ ಬಹದ್ದೂರರು ಇನ್ನಿತರ ಒಂದೆರಡು ಪತ್ರಿಕೆಗಳ ಸಂಪಾದಕತ್ವವನ್ನು ವಹಿಸಿಕೊಂಡರಾದರೂ ಹೆಚ್ಚುಕಾಲ ಅಲ್ಲಿ ನಿಲ್ಲಲಿಲ್ಲ. ಇವರು ನಿಷ್ಠಾವಂತ ಗಾಂಧೀವಾದಿ. ಗಾಂಧೀಜಿಯ ಪ್ರಭಾವಕ್ಕೆ ಸಿಲುಕಿ ಅವರ ರಚನಾತ್ಮಕ ಕಾರ್ಯಗಳನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವನ್ನಾಗಿ ಸ್ವೀಕರಿಸಿದರು.

ಇವರ ಸಾಹಿತ್ಯ ಬದುಕು ಆರಂಭಗೊಂಡದ್ದೇ ಸಣ್ಣಕತೆಗಳಿಂದ. ಇವರ 'ಇತಿಹಾಸ ಭೂತ' ಕತೆಗೆ 1951ರಲ್ಲಿ ಜಾಗತಿಕ ಕಥಾಸ್ಪರ್ಧೆಯಲ್ಲಿ ಎರಡನೆಯ ಬಹುಮಾನ ಲಭಿಸಿತು. ಸಣ್ಣಕತೆಗಾರರಾಗಿ, ಕತೆಗಳನ್ನು ಹೇಳುವ ಕಲೆಯಲ್ಲಿ ಇವರಿಗೆ ಸಿದ್ಧಿಸಿದ್ದ ಶೈಲಿ ಬೆರಗುಗೊಳಿಸುವಂಥದ್ದು. ಅನುಭವಗಳ ಗಟ್ಟಿ ನೆಲದ ಮೇಲೆ ಬದುಕಿನ ಸಹಸ್ರಮುಖ ದರ್ಶನ ಮಾಡಿಸುವ ಕಲೆಗಾರಿಕೆ ಇವರದು.

ಇವರು ಹುಟ್ಟು ರೈತರು. ಒಕ್ಕಲತನ ಇವರ ಕುಟುಂಬದ ವೃತ್ತಿ. ಸಾಯುವ ತನಕ ಮಣ್ಣಿನ ಬದುಕಿನ ಜೀವಂತ ಸಂಪರ್ಕವನ್ನಿಟ್ಟುಕೊಂಡಿದ್ದರು. 1960ರಿಂದೀಚೆಗೆ ವ್ಯವಸಾಯವನ್ನೇ ಮುಖ್ಯವೃತ್ತಿಯನ್ನಾಗಿಸಿಕೊಂಡು ಬರೆವಣಿಗೆಯನ್ನು ಹವ್ಯಾಸವಾಗಿ ಮಾಡಿಕೊಂಡಿದ್ದರು. ಇವರು ಉತ್ತಮ ವಾಗ್ಮಿಯಾಗಿದ್ದರು. ಹುಟ್ಟೂರಿನ ಭಾಷೆಯ ಎಲ್ಲ ಸೊಗಡು ಸೊಗಸನ್ನು ಬೆರೆಸಿ ಇವರು ಆಡುವ ಮಾತುಗಳನ್ನು ಕೇಳುವುದೇ ಒಂದು ಆನಂದವಾಗಿತ್ತು. ಇವರು ಒಮ್ಮೆ ಬಾಂಗ್ಲಾದೇಶದಲ್ಲಿ ಪ್ರವಾಸಮಾಡಿದ್ದರು. ಈ ಪ್ರವಾಸದ ಅನುಭವವನ್ನು 'ನಾ ಕಂಡ ಬಾಂಗ್ಲಾದೇಶ'ದಲ್ಲಿ ದಾಖಲಿಸಿದ್ದಾರೆ.

ಇವರು ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾಗಿದ್ದರು (ವೃಂದಾವನ). ಸುಧಾ ಕಾದಂಬರಿ ಸ್ಪರ್ಧೆಯಲ್ಲಿ ಇವರ ಧೂಮಕೇತು ಕಾದಂಬರಿ ಪ್ರಥಮ ಬಹುಮಾನ ಪಡೆಯಿತು. ಗ್ರಾಮಾಯಣ, ಧೂಮಕೇತು, ಬಿತ್ತಿ ಬೆಳೆದವರು, ವೃಂದಾವನ, ಕನಸು–ನನಸು, ದೇವದಾಸಿ, ಸೂಜಿಗಲ್ಲು,

ಗೌಡರಕೋಣ, ಕಾಂಚನಮೃಗ, ತಬ್ಬಲಿಗಳು–ಇವು ಕಾದಂಬರಿಗಳು. ಮನೆಸುಟ್ಟಕಿಡಿ, ಮನ ಬೆಳಗಿತು, ಇತಿಹಾಸ ಭೂತ, ನೆರೆಹೊರೆ–ಇವು ಕಥಾಸಂಕಲನಗಳು. ಮರೆಯದ ನೆನಹುಗಳು ಅನುಭವ ಸಾಹಿತ್ಯ (ಅನುಭವ ಹರಟೆ). *

**ರಾವ್, ಯು.ಆರ್.:** 1932 – . ಪ್ರಪಂಚದ ಆಕಾಶರಾಷ್ಟ್ರಗಳ ಸಾಲಿನಲ್ಲಿ ಭಾರತಕ್ಕೆ ನೆಲೆ ದೊರಕಿಸುವ ದಿಶೆಯಲ್ಲಿ ಪ್ರಧಾನ ಪಾತ್ರವಹಿಸಿದ ಹಿರಿಯ ವಿಜ್ಞಾನಿ. ಉಡುಪಿ ರಾಮಚಂದ್ರರಾವ್ ಇವರ ಪೂರ್ಣ ಹೆಸರು. ಭಾರತದ ಪ್ರಥಮ ಕೃತಕ ಉಪಗ್ರಹ ಆರ್ಯಭಟದ ಅಲೇಖ್ಯ, ಆದಿಮ ರೂಪದ ರಚನೆ, ಅಂತ್ಯ ರೂಪದ ನಿರ್ಮಾಣ ಹಾಗೂ ಸೋವಿಯತ್ ಆಕಾಶ ನಿಲ್ದಾಣದಿಂದ ಯಶಸ್ವೀ ಉಡಾವಣೆ (1974–1975) ಈ ಕ್ರಿಯೆಗಳ ನೇತಾರರಾಗಿ ನಿಂತು ಜಯ ಗಳಿಸಿ ಕೊಟ್ಟವರಿವರು. ರಾವ್ ಅವರು ಈ ಸಿದ್ಧಿಯಿಂದ ಭಾರತೀಯ ವಿಜ್ಞಾನ ಹಾಗೂ ತಂತ್ರವಿದ್ಯೆ ಪ್ರಬುದ್ಧ ಹಂತ ವನ್ನು ಐದಿವೆ ಎಂದೂ ಸ್ಥಳೀಯ ಪ್ರತಿಭೆಯ ಉದ್ದಿಷ್ಟ ಬಳಕೆಯಿಂದ ಭಾರತ ಕೂಡ ಪ್ರಪಂಚದ ಇತರ ಮಹಾರಾಷ್ಟ್ರಗಳಂತೆ ಆಕಾಶಸಾಹಸಗಳನ್ನು ನಿರ್ವಹಿಸಬಲ್ಲದು ಎಂದೂ ಸ್ಪಷ್ಟವಾಗಿದೆ. ಭಾರತದ



ವಿಜ್ಞಾನ ಹವೆಗೂ ತಂತ್ರವಿದ್ಯೆಯ ಅಭಿವೃದ್ಧಿಗೂ ಈ ಯಶಸ್ಸಿನಿಂದ ಲಭಿಸಿರುವ ಕುಮ್ಮಕ್ಕು ಅಸಾಧಾರಣವಾದುದ್ದು.

ಉಡುಪಿ ತಾಲ್ಲೂಕಿನ ಮಾರ್ಪಳ್ಳಿಯಲ್ಲಿ 1932ರ ಮಾರ್ಚ್ 10ರಂದು ಕೃಷಿಕ ಕುಟುಂಬದಲ್ಲಿ ಜನಿಸಿದ ರಾವ್ ಅವರು ಉಡುಪಿ ಮತ್ತು ಅನಂತಪುರಗಳಲ್ಲಿ ಓದಿ ಮುಂದೆ ಬನಾರಸ್ ಹಿಂದು ವಿಶ್ವವಿದ್ಯಾಲಯದ ಎಂ.ಎಸ್ಸಿ. (ಭೌತವಿಜ್ಞಾನ) ಪದವೀಧರರಾದರು (1953). ಒಂದು ವರ್ಷ ಕಾಲ ಅಹಮದ್‍ನಗರ ಮತ್ತು ಮೈಸೂರುಗಳಲ್ಲಿ ಭೌತವಿಜ್ಞಾನದ ಉಪನ್ಯಾಸಕರಾಗಿ ಕೆಲಸ ಮಾಡಿ, 1954ರಲ್ಲಿ ವಿಕ್ರಮ್ ಸಾರಭಾಯಿಯವರ ಸಂಶೋಧನ ತಂಡವನ್ನು ಸೇರಿಕೊಂಡರು. ಪ್ರಪಂಚ ಆಕಾಶಯುಗದ ಹೊಸ್ತಿಲಲ್ಲಿದ್ದ ಆ ದಿನಗಳಿಂದು (ಆಕಾಶಯುಗದ ಆರಂಭ 1957) ಭೌತವಿಜ್ಞಾನಿ ರಾಯರು ಆ ಹರವಿನಲ್ಲಿ ಹೊಸ ಹಸುರನ್ನು ಕಂಡದ್ದು ಸಹಜವೇ. ಇವರ ಸಂಶೋಧನೆಯ ವಿಷಯ ವಿಶ್ವಕಿರಣಗಳು. ಬಾಗಿದ ದೂರದರ್ಶಕಗಳ ನೆರವಿನಿಂದ ವಿಶ್ವಕಿರಣಗಳ ಅನ್ವೇಷಣೆ ಎಂಬ ಮಹಾಪ್ರಬಂಧಕ್ಕೆ ಗುಜರಾತ್ ವಿಶ್ವವಿದ್ಯಾಲಯ ಇವರಿಗೆ 1960ರಲ್ಲಿ ಡಾಕ್ಟರೇಟ್ ಪದವಿಯನ್ನು ನೀಡಿತು.

1961–66 ಅವಧಿಯಲ್ಲಿ ಇವರು ಅಮೆರಿಕ ದೇಶದಲ್ಲಿ ಆಕಾಶ ವಿಜ್ಞಾನದ ವಿವಿಧ ರಂಗಗಳಲ್ಲಿ ಸಂಶೋಧನೆ ನಡೆಸಿದರು ಹಾಗೂ ಕೆಲಸ ಮಾಡಿದರು. ಅಮೆರಿಕದ ಪಯೋನಿರ್ ಹಾಗೂ ಎಕ್ಸ್‍ಪ್ಲೋರರ್ ನೌಕೆಗಳು ನಿರ್ವಹಿಸಿದ ವಿಶ್ವಕಿರಣ ಪ್ರಯೋಗಗಳ ಪ್ರಧಾನ ಅನ್ವೇಷಕರು ಇವರೇ.

ಭಾರತ ಆಕಾಶಯುಗದಲ್ಲಿ ಕಾಲಿಡುತ್ತಿದ್ದ ದಿನಗಳಂದು ಇವರು ವಿಕ್ರಮ್ ಸಾರಭಾಯಿಯವರ ಆಹ್ವಾನದ ಮೇರೆಗೆ ಭಾರತಕ್ಕೆ ಮರಳಿ (1966) ಅಹಮದಾಬಾದಿನ ಫಿಸಿಕಲ್ ರಿಸರ್ಚ್ ಲ್ಯಾಬೋರೇಟರಿಯನ್ನು ಸೇರಿದರು. ಇವರನ್ನು ತಿರುವನಂತಪುರದ ವಿಕ್ರಮ್ ಸಾರಾಭಾಯಿ ಆಕಾಶ ಕೇಂದ್ರದ ಉಪಗ್ರಹ ವ್ಯವಸ್ಥಾ ವಿಭಾಗದ ಮುಖ್ಯರನ್ನಾಗಿ ನೇಮಿಸಲಾಯಿತು. ಈ ವಿಭಾಗದ ಕ್ಷಿಪ್ರ ಅಭಿವರ್ಧನೆಯಿಂದ ಉತ್ತೇಜಿತರಾದ ನಾಡಿನ ಹಿರಿಯರು ಭಾರತೀಯ ಆಕಾಶ ಸಂಶೋಧನ ವ್ಯವಸ್ಥಾಪನೆಯ (ಐ.ಎಸ್.ಆರ್.ಓ) ವತಿಯಿಂದ ಬೆಂಗಳೂರಿನಲ್ಲಿ ಉಪಗ್ರಹ ವ್ಯವಸ್ಥಾ ಯೋಜನೆಯನ್ನು ಪ್ರಾರಂಭಿಸಿ, ಅದರ ನಿರ್ದೇಶಕತ್ವದ ಹೊಣೆಯನ್ನು ಇವರಿಗೆ ವಹಿಸಿದರು. ಇದು ಇವರ ಧುರೀಣತ್ವಕ್ಕೆ ಸಂದ ಮರ್ಯಾದೆ ಎಂತೋ ಅಂತೆ ದೇಶದ ತಂತ್ರವಿದ್ಯೆ ಸೀಮೋಲ್ಲಂಘನ ಮಜಲು ಮುಟ್ಟಿದ್ದೆ ಎನ್ನುವುದಕ್ಕೆ ದ್ಯೋತಕವೂ ಹೌದು. ಮುಂದೆ ಆರ್ಯಭಟದ ಯಶಸ್ಸು ಈ ನಂಬಿಕೆಯನ್ನು ದೃಢವಾಗಿ ಪುಷ್ಟೀಕರಿಸಿತು. ಇದರ ಪರಿಣಾಮ ವಾಗಿ ರಾಷ್ಟ್ರದ ಉಪಗ್ರಹ ನಿರ್ವಹಣೆಯ ಸಮಸ್ತ ಹೊಣೆಗಾರಿಕೆಯನ್ನೂ ಬೆಂಗಳೂರಿನ ಕೇಂದ್ರಕ್ಕೆ ವಹಿಸಲಾಯಿತು.

ರಾವ್ ಅವರು ಸ್ವತಂತ್ರವಾಗಿ ಹಾಗೂ ಇತರರೊಡನೆ ಸಹಯೋಗ ದಿಂದ ಬರೆದು ಅಂತಾರಾಷ್ಟ್ರೀಯ ವಿಜ್ಞಾನ ಪತ್ರಿಕೆಗಳಲ್ಲಿ ಪ್ರಕಟಿಸಿರುವ ಸಂಶೋಧನ ಲೇಖನಗಳು ಅಧಿಕ ಸಂಖ್ಯೆಯಲ್ಲಿವೆ. ದೇಶವಿದೇಶಗಳಿಂದ ಇವರಿಗೆ ಸಂದಿರುವ ಗೌರವ ಮತ್ತು ಪ್ರಶಸ್ತಿಗಳು ಹಲವಾರು. ಮುಖ್ಯವಾಗಿ ಹೆಸರಿಬೇಕಾದವು ನಾಸಾದಿಂದ (ಅಮೆರಿಕದ ನ್ಯಾಶನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಶನ್) ಸಮುದಾಯಸಿದ್ಧಿ ಗೌರವ (1973), ಸೋವಿಯತ್ ವಿಜ್ಞಾನ ಸಂಸ್ಥೆಯ ಗೌರವ ಪದಕ (1975), ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ (1975), ಕರ್ನಾಟಕ ರಾಜ್ಯ ಪ್ರಶಸ್ತಿ (1975), ಹರಿ ಓಂ ಆಶ್ರಮ ಪ್ರೇರಿತ ವಿಕ್ರಮ್ ಸಾರಾಭಾಯಿ ಸಂಶೋಧನ ಪ್ರಶಸ್ತಿ (1976), ಭಾರತ ಸರ್ಕಾರದಿಂದ ಪದ್ಮಭೂಷಣ ಬಿರುದು (1976), ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ (1976). *

**ರಾವ್, ವಿ.ಕೆ.ಆರ್.ವಿ.:** 1908– . ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ ಭಾರತೀಯ ಅರ್ಥಶಾಸ್ತ್ರಜ್ಞರು. ಇವರ ಪೂರ್ಣ ಹೆಸರು ವಿಜಯೇಂದ್ರ ಕಸ್ತೂರಿರಂಗ ವರದರಾಜಾರಾವ್. 1908ರ ಜುಲೈ 8ರಂದು ಚಿದಂಬರಂನಲ್ಲಿ ಹುಟ್ಟಿದರು. ರಾವ್ ಅವರ ಮನೆತನದವರು ಕನ್ನಡಿಗರು. ಇವರ ತಂದೆ ತಮಿಳುನಾಡು ಸರ್ಕಾರದ ನೌಕರಿಯಲ್ಲಿದ್ದರು. ತಾಯಿಯ ತೌರೂರು ಮೈಸೂರು. ರಾವ್ ಅವರ ವಿದ್ಯಾಭ್ಯಾಸ ಮದರಾಸು ಮತ್ತು ಮುಂಬಯಿಯಲ್ಲಿ ನಡೆಯಿತು. ಮೊದಲಿನಿಂದಲೂ ಅತ್ಯಂತ ಪ್ರಭಾವಿತ ವಿದ್ಯಾರ್ಥಿಯಾಗಿದ್ದ ಇವರು ಬಿ.ಎ. ಮತ್ತು ಎಂ.ಎ. ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಕೇಂಬ್ರಿಡ್ಜ್‍ನಲ್ಲಿ ಇವರು ಭಾರತದ ರಾಷ್ಟ್ರೀಯ ವರಮಾನ ಕುರಿತು ಸಂಶೋಧನೆ ನಡೆಸಿ ಪಿಎಚ್.ಡಿ. ಪಡೆದರು.

ಭಾರತಕ್ಕೆ ಮರಳಿದ ಮೇಲೆ ಇವರು ಸ್ವಲ್ಪಕಾಲ ವಾಲ್ಟೇರ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾಗಿದ್ದರು. ಅನಂತರ ಅಹಮದಾಬಾದಿಗೆ ತೆರಳಿ ಅಲ್ಲಿನ ಕಾಲೇಜೊಂದರಲ್ಲಿ ಐದು ವರ್ಷಕಾಲ ಪ್ರಾಚಾರ್ಯರಾಗಿದ್ದರು. ಈ ಮಧ್ಯೆ 1934–35ರಲ್ಲಿ ಒಂದು ವರ್ಷಕಾಲ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. 1942ರಲ್ಲಿ ದೆಹಲಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕಗೊಂಡರು. ರಾಯರ ಪ್ರತಿಭೆ ಮತ್ತು ವಿದ್ವತ್ತನ್ನು ಗುರುತಿಸಿದ ಅಂದಿನ ಕೇಂದ್ರ ಸರ್ಕಾರ ಇವರನ್ನು 1944ರಲ್ಲಿ ಅಂಕಿ ಅಂಶಗಳ ಇಲಾಖೆಯ ನಿರ್ದೇಶಕರನ್ನಾಗಿ ನೇಮಿಸಿತು. ಅನಂತರ ಇವರು ಆಹಾರ ಯೋಜನೆಯ ಸಲಹೆಗಾರರಾಗಿಯೂ ಕೆಲಸ ಮಾಡಿದರು. ಸ್ವಲ್ಪಕಾಲ ಅಮೆರಿಕದ ವಾಷಿಂಗ್ಟನ್ನಿನಲ್ಲಿ ಭಾರತ ಸರ್ಕಾರದ ಪರವಾಗಿ ಕರ್ತವ್ಯ ನಿರ್ವಹಿಸಿದರು. 1947–50ರ ವರೆಗೆ ವಿಶ್ವಸಂಸ್ಥೆಯ ಆರ್ಥಿಕ ಉಪಸಂಸ್ಥೆಯ

ಅಧ್ಯಕ್ಷರಾಗಿ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯ ಯೋಜನೆಯನ್ನು ರೂಪಿಸಲು ಸಹಾಯ ಮಾಡಿದರು.

ದೆಹಲಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಅಧ್ಯಯನಕ್ಕಾಗಿ ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್ ಎಂಬ ಸಂಸ್ಥೆಯನ್ನೂ ಅನಂತರ ಅಭ್ಯುದಯಶಾಸ್ತ್ರದ (ಡೆವಲಪ್‌ಮೆಂಟ್ ಸೈನ್ಸ್) ಅಧ್ಯಯನಕ್ಕಾಗಿ ಇನ್‌ಸ್ಟಿಟ್ಯೂಟ್ ಆಫ್ ಎಕನಾಮಿಕ್ ಗ್ರೋತ್ ಎಂಬ ಸಂಸ್ಥೆಯನ್ನೂ ಸ್ಥಾಪಿಸಿದರು. ಅನಂತರ ಇವರು ದೆಹಲಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ನೇರ ವೈಯುಕ್ತಿಕ ಸಂಪರ್ಕವನ್ನುಂಟುಮಾಡಲು ವಿಶೇಷ ರೀತಿಯ ಬೋಧನ ವ್ಯವಸ್ಥೆಯನ್ನು ಜಾರಿಗೆ ತಂದರು. ಸ್ವಲ್ಪಕಾಲ ಯೋಜನ ಮಂಡಳಿಯ ಸದಸ್ಯರಾಗಿ ಕೆಲಸ ಮಾಡಿದರು.

1967ರಲ್ಲಿ ಬಳ್ಳಾರಿ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾಗಿ ಕೇಂದ್ರ ಸರ್ಕಾರದ ಸಾರಿಗೆ ಸಚಿವರಾಗಿಯೂ ಅನಂತರ ವಿದ್ಯಾ ಸಚಿವರಾಗಿಯೂ ಕೆಲಸ ನಿರ್ವಹಿಸಿದರು. 1971ರಲ್ಲಿ ಮತ್ತೆ ಅದೇ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದರು. 1972ರಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಾಗಿ ಸಂಸ್ಥೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಅದರ ನಿರ್ದೇಶಕರಾದರು.

ರಾವ್ ಅವರು ಅನೇಕ ಗ್ರಂಥಗಳನ್ನೂ ಪ್ರಬಂಧಗಳನ್ನೂ ಬರೆದಿದ್ದಾರೆ. ಭಾರತದಲ್ಲಿ ವರಮಾನ ತೆರಿಗೆ, ಭಾರತದ ರಾಷ್ಟ್ರೀಯ ಆದಾಯ, ಯುದ್ಧ ಮತ್ತು ಅಂತರರಾಷ್ಟ್ರೀಯ ನಾಣ್ಯ ಯೋಜನೆ, ಸಮರೋತ್ತರದಲ್ಲಿ ರೂಪಾಯಿ, ನಿರಾಶ್ರಿತರ ಪುನರ್ ವ್ಯವಸ್ಥೆಯ ಆರ್ಥಿಕ ಸಮೀಕ್ಷೆ, ವಿಶ್ವವಿದ್ಯಾಲಯದ ಶಿಕ್ಷಣ ಹಾಗೂ ನೌಕರಿ, ಭಾರತದ ಆರ್ಥಿಕ ಅಭಿವೃದ್ಧಿ ಹಾಗೂ ವಿದೇಶಿ ಸಹಾಯ, ಆರ್ಥಿಕ ಅಭಿವೃದ್ಧಿ ಬಗ್ಗೆ ಪ್ರಬಂಧಗಳು, ಶಿಕ್ಷಣ ಮತ್ತು ಮಾನವ ಸಂಪತ್ತಿನ ಸಂವರ್ಧನೆ, ಭಾರತದಲ್ಲಿ ಕೃಷಿ ಕಾರ್ಮಿಕರು–ಅವುಗಳಲ್ಲಿ ಕೆಲವು. 1974ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. *

**ರಾವ್, ಸಿ.ಎನ್.ಆರ್.:** 1934– . ಅಂತಾರಾಷ್ಟ್ರೀಯ ಖ್ಯಾತಿಗಳಿಸಿರುವ ಭಾರತೀಯ ರಸಾಯನವಿಜ್ಞಾನಿ. ಪೂರ್ಣ ಹೆಸರು ಚಿಂತಾಮಣಿ ನಾಗೇಶ ರಾಮಚಂದ್ರರಾವ್. ಬೆಂಗಳೂರಿನಲ್ಲಿ 1934 ಜೂನ್ 30 ರಂದು ಜನಿಸಿದರು. ತಂದೆ ನಾಗೇಶರಾವ್. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವಿ ವ್ಯಾಸಂಗ ನಡೆಯಿತು. ಮುಂದೆ ರಸಾಯನವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು (ಎಂ.ಎಸ್.ಸಿ.) ಬನಾರಸ್ ಹಿಂದು ವಿಶ್ವವಿದ್ಯಾಲಯದಿಂದ ಪಡೆದರು (1953). ಅನಂತರ ಅಮೆರಿಕ ಸಂಯುಕ್ತಸಂಸ್ಥಾನದ ಇಂಡಿಯಾನ ರಾಜ್ಯದ ಪರ್ಡ್ಯೂ ವಿಶ್ವವಿದ್ಯಾಲಯದಿಂದ ಡಾಕ್ಟೊರೇಟ್ (ಪಿಎಚ್.ಡಿ.) ಪದವಿ ಗಳಿಸಿದರು (1958). ಇದಾದ ಬಳಿಕ ಭಾರತಕ್ಕೆ ಹಿಂತಿರುಗಿದ ರಾವ್ ಅವರಿಗೆ 1960ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಡಾಕ್ಟರ್ ಆಫ್ ಸೈನ್ಸ್ (ಡಿ.ಎಸ್‌ಸಿ.) ಪದವಿಯನ್ನು ನೀಡಿತು. ಇವರು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇದಲ್ಲದೆ ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಒಂದು ದಶಕಕ್ಕೂ ಹೆಚ್ಚುಕಾಲ ರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿಯೂ ಸೇವೆಸಲ್ಲಿಸಿದ್ದಾರೆ. 1976ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಸಂಸ್ಥೆಯಲ್ಲಿ ನೂತನವಾಗಿ ಪ್ರಾರಂಭಿಸಿದ ಘನಸ್ಥಿತಿ ರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದುಕೊಂಡು ರೋಹಿತ ವಿಜ್ಞಾನದ ಬಗ್ಗೆ ವಿಶೇಷ ಸಂಶೋಧನೆ ಕೈಗೊಂಡರು. ಈ ವೇಳೆಯಲ್ಲಿ ಇವರು ಘನಸ್ಥಿತಿ ರಸಾಯನ ವಿಜ್ಞಾನ ಘಟಕ ಮತ್ತು ಪದಾರ್ಥ ಸಂಶೋಧನ ಪ್ರಯೋಗಶಾಲೆಗಳನ್ನು ಸಂಸ್ಥೆಯಲ್ಲಿ ಸ್ಥಾಪಿಸಿದರು. ಅನಂತರ 1984ರಿಂದ ಒಂದು ದಶಕದ ತನಕ ಆ ಸಂಸ್ಥೆಯ ನಿರ್ದೇಶಕರಾಗಿಯೂ ಸೇವೆಸಲ್ಲಿಸಿದರು.

ಇವರ ವಿದ್ವತ್ತು ಹಾಗೂ ಸಾಧನೆಗಳನ್ನು ಗಮನಿಸಿದ ಇಂಗ್ಲೆಂಡಿನ ಪ್ರತಿಷ್ಠಿತ ರಾಯಲ್ ಸೊಸೈಟಿ ಇವರನ್ನು ತನ್ನ ಸದಸ್ಯರನ್ನಾಗಿ ಸ್ವೀಕರಿಸಿತು. 1982ರಲ್ಲಿ ಇದರ ಫೆಲೋ ಆದರು. ಅಮೆರಿಕ, ರಷ್ಯ ಹಾಗೂ ಯುರೋಪಿನ ಅನೇಕ ದೇಶಗಳ ಸುಮಾರು ಇಪ್ಪತ್ತೆರಡು ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟೊರೇಟ್ ಪ್ರಶಸ್ತಿ ನೀಡಿ ಸನ್ಮಾನಿಸಿವೆ. ರಾವ್ ಅವರು ಕೆಲವು ಮುಂದುವರೆದ ದೇಶಗಳ ವಿಜ್ಞಾನ ಹಾಗೂ ಕಲಾ ಅಕಾಡೆಮಿಗಳ ಸದಸ್ಯರೂ ಆಗಿದ್ದಾರೆ. ತೃತೀಯ ಪ್ರಪಂಚದ (ಥರ್ಡ್ ವರ್ಲ್ಡ್) ವಿಜ್ಞಾನಗಳ ಅಕಾಡೆಮಿಯನ್ನೂ ಸ್ಥಾಪಿಸಿ ರಾಯರು ಅದರ ಫೆಲೋ ಸಹ ಆಗಿದ್ದಾರೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವೈಜ್ಞಾನಿಕ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವ ಸಂಘಸಂಸ್ಥೆಗಳ ಸ್ಥಾಪನೆಯ ಪ್ರಾಮುಖ್ಯದ ಬಗ್ಗೆ ಇವರಿಗೆ ಹೆಚ್ಚಿನ ಕಾಳಜಿ ಇದೆ.

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾವ್ ಅವರಿಗೆ ಅನೇಕ ಗೌರವ ಹಾಗೂ ಪ್ರಶಸ್ತಿಗಳು ಸಂದಿವೆ. ಇವುಗಳ ಪೈಕಿ ಭಾರತ ಸರ್ಕಾರದಿಂದ ಸಂದ ಪದ್ಮಶ್ರೀ (1974) ಹಾಗೂ ಪದ್ಮವಿಭೂಷಣ ಪ್ರಶಸ್ತಿಗಳು (1985), ವಿಶ್ವವಿದ್ಯಾಲಯ ಅನುದಾನ ಆಯೋಗ ನೀಡುವ ಸರ್. ಸಿ.ವಿ. ರಾಮನ್ ಪ್ರಶಸ್ತಿ (1975), ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ನೀಡುವ ಮೇಘನಾದ ಸಹಾ ಪದಕ (1990)–ಇವು ಪ್ರಮುಖವಾದವು. ಇಂಗ್ಲೆಂಡಿನ ಫ್ಯಾರಡೆ ಸೊಸೈಟಿ ನೀಡಿರುವ ಮಾರ್ಲೋ ಪದಕ (1967), ರಾಯಲ್ ಕೆಮಿಕಲ್ ಸಂಸ್ಥೆಯ ಪದಕ (1981), ಯುನೆಸ್ಕೋದ ಐನ್‌ಸ್ಟೈನ್ ಸ್ವರ್ಣಪದಕ (1996)– ಇವೆಲ್ಲ ಇವರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವವನ್ನು ತಂದುಕೊಟ್ಟಿವೆ. ಇಷ್ಟೇ ಅಲ್ಲದೇ ಇವರು ಅನೇಕ ವಿದೇಶಿ ವೈಜ್ಞಾನಿಕ ಸಂಘ ಸಂಸ್ಥೆಗಳ ಫೆಲೋಷಿಪ್‌ಗಳನ್ನೂ ಪಡೆದುಕೊಂಡಿದ್ದಾರೆ. ಇವರಿಗೆ ರಾಯಲ್ ಸೊಸೈಟಿಯು ಹ್ಯೂಗ್ ಪದಕ ನೀಡಿ ಗೌರವಿಸಿದೆ (2000). ಇಂಡಿಯ ಸೈನ್ಸ್ ಅವಾರ್ಡನ್ನು ಪಡೆದ ಮೊತ್ತಮೊದಲ ಭಾರತೀಯರಾಗಿದ್ದಾರೆ (2004). ಮುಂದೆ ಟೆಲ್ ಅವೀವ್ ವಿಶ್ವವಿದ್ಯಾಲಯದ ಡಾನ್ ಡೇವಿಡ್ ಫೌಂಡೇಷನ್ನಿನ ಡಾನ್ ಡೇವಿಡ್ ಬಹುಮಾನ ಸಂದಾಯವಾಗಿದೆ (2005). ಇದನ್ನು ಇವರು ಜಾರ್ಜ್ ಹೈವ್‌ಟ್‌ಸೈಡ್ಸ್ ಮತ್ತು ರಾಬರ್ಟ್ ಲ್ಯಾಂಗರ್ ಅವರೊಂದಿಗೆ ಹಂಚಿಕೊಂಡಿದ್ದಾರೆ. ಇದಲ್ಲದೆ ಇವರಿಗೆ ಫ್ರಾನ್ಸ್ ಸರ್ಕಾರ ನೀಡುವ ಅದರ ಅತ್ಯುನ್ನತ ನಾಗರಿಕ ಪ್ರಶಸ್ತಿಯೂ (2005), ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ಪ್ರಶಸ್ತಿಯೂ (2006) ಲಭಿಸಿವೆ.

ರಾವ್ ಅವರು ಶುದ್ಧ ಹಾಗೂ ಆನ್ವಯಿಕ ರಸಾಯನವಿಜ್ಞಾನ ಅಂತಾರಾಷ್ಟ್ರೀಯ ಸಂಘದ (ಐ.ಯು.ಪಿ.ಎ.ಸಿ)ಅಧ್ಯಕ್ಷತೆಯನ್ನು 1985–87ರ ಅವಧಿಯಲ್ಲಿ ವಹಿಸಿದ್ದರು. ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಅಧ್ಯಕ್ಷತೆಯನ್ನು 1985 ರಿಂದ 86ರ ತನಕ, ಭಾರತದ ವಿಜ್ಞಾನಗಳ ಅಕಾಡೆಮಿಯ ಅಧ್ಯಕ್ಷತೆಯನ್ನು 1989ರಿಂದ 91ರ ತನಕ

ಮತ್ತು ಭಾರತದ ವಿಜ್ಞಾನ ಕಾಂಗ್ರೆಸ್ ಸಂಘದ ಅಧ್ಯಕ್ಷತೆಯನ್ನು 1987ರಿಂದ 88ರ ತನಕ ವಹಿಸಿದ್ದರು. ಇವರು ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವೈಜ್ಞಾನಿಕ ಸಂಘಸಂಸ್ಥೆಗಳ ಸದಸ್ಯರಾಗಿ ಮುಂದುವರೆದಿದ್ದಾರೆ. ಇವುಗಳ ಪೈಕಿ ಯುಎಸ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್, ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಸ್ ಮತ್ತು ಲಂಡನ್ನಿನ ರಾಯಲ್ ಸೊಸೈಟಿಗಳ ಸದಸ್ಯತ್ವಗಳು ಪ್ರಮುಖವಾಗಿವೆ.

ರಾವ್ ಅವರು ತಮ್ಮ ಸಂಶೋಧನೆಯೊಂದಿಗೆ ಸುಮಾರು ಮೂವತ್ತು ಪುಸ್ತಕಗಳನ್ನು ಸ್ವತಃ ತಾವೇ ಇಲ್ಲವೆ ಇತರರೊಂದಿಗೂಡಿ ರಚಿಸಿದ್ದಾರೆ. ಸಂಪಾದಿತ ಕೃತಿಗಳೂ ಇವೆ. ಸುಮಾರು ಎಂಟುನೂರು ಸಂಶೋಧನ ಪ್ರಬಂಧಗಳನ್ನು ಸ್ವತಃ ತಾವೇ ಇಲ್ಲವೇ ಇತರರ ಸಹಯೋಗದಿಂದ ಪ್ರಕಟಿಸಿದ್ದಾರೆ. ಸುಮಾರು ಹದಿನೈದು ವೈಜ್ಞಾನಿಕ ನಿಯತಕಾಲಿಕಗಳ ಸಂಪಾದಕ ಸಮಿತಿಗಳಲ್ಲೂ ಇವರು ಸೇವೆ ಸಲ್ಲಿಸುತ್ತಿದ್ದಾರೆ.

ಇವರು ಆಲ್ಬರ್ಟ್ ಐನ್‌ಸ್ಟೈನ್ ಸಂಶೋಧನ ಪ್ರಾಧ್ಯಾಪಕರೂ ಬೆಂಗಳೂರಿನಲ್ಲಿರುವ ಜವಾಹರಲಾಲ್ ನೆಹರು ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್ ಸೆಂಟರ್ ಕೇಂದ್ರದ ಮುಖ್ಯಸ್ಥರೂ ಆಗಿದ್ದಾರೆ. ಇವರು ಅಮೆರಿಕದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯಕ್ಕೆ ಆಗಿಂದಾಗ್ಗೆ ಭೇಟಿ ನೀಡುವ ಗೌರವಾನ್ವಿತ ಪ್ರಾಧ್ಯಾಪಕರೂ ಹೌದು. ಇವಲ್ಲದೆ ಭಾರತದ ಕೇಂದ್ರ ಸರ್ಕಾರದ ಕ್ಯಾಬಿನೆಟ್‌ನ ವೈಜ್ಞಾನಿಕ ಸಲಹಾ ಸಮಿತಿಯ ಮುಖ್ಯಸ್ಥರಾಗಿ ಇವರ ಸೇವೆ ಸಂದಿದೆ.

ರೋಹಿತವಿಜ್ಞಾನ ಹಾಗೂ ರಸಾಯನವಿಜ್ಞಾನ ಕ್ಷೇತ್ರದಲ್ಲಿ, ಅದರಲ್ಲೂ ಪದಾರ್ಥಗಳ ರಾಸಾಯನಿಕ ಸಂಯೋಜನೆ ಹಾಗೂ ರಚನೆಗಳನ್ನು ಅರಿಯುವಲ್ಲಿ ರೋಹಿತವಿಜ್ಞಾನವನ್ನು ಅನ್ವಯಿಸುವ ವಿಧಾನಗಳನ್ನು ಕುರಿತಂತೆ ಹಾಗೂ ಅಣುಗಳು ಪರಸ್ಪರವಾಗಿ ವರ್ತಿಸುವ ವಿಚಾರ ಕುರಿತಂತೆ ರಾಯರು ಸಂಶೋಧನೆಗಳನ್ನು ನಡೆಸಿದ್ದಾರೆ. 1980ರ ದಶಕದ ಮಧ್ಯಭಾಗದಲ್ಲಿ ಪ್ರಪಂಚಾದ್ಯಂತ ಕುತೂಹಲವನ್ನು ಕೆರಳಿಸಿದ ಅತಿವಾಹಕತೆ (ಸೂಪರ್ ಕಂಡಕ್ಟಿವಿಟಿ) ವಿಷಯದಲ್ಲೂ ಆಸಕ್ತಿಯನ್ನು ತಳೆದ ಇವರು ಆ ನಿಟ್ಟಿನಲ್ಲಿ ನಡೆದ ಸಂಶೋಧನೆಗಳಲ್ಲೂ ಭಾಗವಹಿಸಿ ಕಿರಿಯ ವಿಜ್ಞಾನಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ.

ಇವರಿಗೆ ಶಾಸ್ತ್ರೀಯ ಸಂಗೀತ ಮತ್ತು ನಾಟಕಗಳಲ್ಲಿ ಅಪಾರ ಆಸಕ್ತಿ.

*

**ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ:** ರಾಷ್ಟ್ರಕವಿ ಗೋವಿಂದಪೈ ಅವರ ನೆನಪಿನಲ್ಲಿ ಉಡುಪಿಯ ಮಹಾತ್ಮಗಾಂಧಿ ಸ್ಮಾರಕ ಕಾಲೇಜಿನ ಒಂದು ಅಂಗಸಂಸ್ಥೆಯಾಗಿ ಸ್ಥಾಪನೆಯಾದ ಸಂಶೋಧನ ಕೇಂದ್ರ (1965). ಗೋವಿಂದಪೈಯವರು ನಿಧನರಾದಾಗ ಅವರ ಸಂಗ್ರಹದಲ್ಲಿ ಸುಮಾರು ಐದು ಸಾವಿರ ಗ್ರಂಥಗಳಿದ್ದವು. ಕು.ಶಿ. ಹರಿದಾಸಭಟ್ಟ, ದೇ. ಜವರೇಗೌಡ ಹಾಗೂ ಸೂರ್ಯನಾರಾಯಣ ಅಡಿಗ ಇವರ ಸಹಾಯದಿಂದ ಆ ಗ್ರಂಥಭಂಡಾರ ಎಂ.ಜಿ.ಎಂ. ಕಾಲೇಜಿಗೆ ಬಂತು. ಗೋವಿಂದಪೈ ಅವರ ನೆನಪಿನಲ್ಲಿ ಪ್ರಾರಂಭವಾದ ಈ ಸಂಸ್ಥೆ ಮೊದಲ ಹತ್ತು ವರ್ಷಗಳ ಕಾಲ ಸಂಶೋಧಕರ ಪರಾಮರ್ಶನ ಗ್ರಂಥಾಲಯವಾಗಿ ಸೇವೆಸಲ್ಲಿಸಿತು. ಆ ಸಂದರ್ಭದಲ್ಲಿ ವಿದ್ವಾಂಸರುಗಳಿಂದ ಭಾಷಣ, ವಿಚಾರಗೋಷ್ಠಿ, ಪುಸ್ತಕ ಪ್ರಕಾಶನ ಮುಂತಾದ ಕಾರ್ಯಕ್ರಮಗಳು ವಿಶ್ವವಿದ್ಯಾಲಯ ಹಾಗೂ ವಿದ್ವಾಂಸರ ಗಮನ ಸೆಳೆದವು. ಪ್ರಾಕ್ತನಶಾಸ್ತ್ರಜ್ಞರಾದ ಗುರುರಾಜ ಭಟ್ಟರ ಸಹಕಾರದಿಂದ ಅನೇಕ ಪ್ರಾಚೀನ ಶಿಲಾಶಾಸನಗಳು, ವಿಗ್ರಹಗಳು, ಹಸ್ತಪ್ರತಿಗಳು ಮುಂತಾದವುಗಳ ಸಂಗ್ರಹ ನಡೆದು ಇದೊಂದು ಪ್ರಾಚ್ಯವಸ್ತುಸಂಗ್ರಹಾಲಯವೂ ಆಯಿತು. ಒಂದು ಪ್ರತ್ಯೇಕ ಕಟ್ಟಡವನ್ನು ಕಟ್ಟಿ ಗೋವಿಂದಪೈಯವರ ಗ್ರಂಥ ಭಂಡಾರವನ್ನು ಓರಣವಾಗಿರಿಸಿ ಸಂಶೋಧಕರಿಗೆ ಅನುವು ಮಾಡಿಕೊಡಲಾಯಿತು. ಸಂದರ್ಶಕರು ಹಾಗೂ ಸಂಶೋಧಕರಿಗಾಗಿ ಅತಿಥಿ ಗೃಹ ಮೊದಲಾದ ಸೌಕರ್ಯಗಳೂ ಏರ್ಪಟ್ಟವು. ಮೈಸೂರು ವಿಶ್ವವಿದ್ಯಾನಿಲಯ 1975 ಏಪ್ರಿಲ್ 1ರಂದು ಈ ಸಂಸ್ಥೆಯನ್ನು ಪಿಎಚ್.ಡಿ. ಪದವಿ ತರಬೇತಿಗೆ ಕೇಂದ್ರವೆಂದು ಪರಿಗಣಿಸಿ ಮಾನ್ಯತೆ ನೀಡಿತು.

ಈ ಕೇಂದ್ರದ ಸಂಶೋಧನ ಕಾರ್ಯಕಲಾಪಗಳು ಹೀಗಿವೆ: ಪಿಎಚ್.ಡಿ. ಮಟ್ಟದ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ; ಪ್ರಾಧ್ಯಾಪಕರು ಹಾಗೂ ಸಂಶೋಧಕರಿಂದ ಕರಾವಳಿ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಇತಿಹಾಸ, ಕಲೆ ಮುಂತಾದವುಗಳ ಬಗ್ಗೆ ಸಂಶೋಧನೆ; ತುಳು ನಿಘಂಟು ಯೋಜನೆ ಹಾಗೂ ತುಳುವಿನ ಬಗ್ಗೆ ವಿಶೇಷ ಅಧ್ಯಯನ; ಕೊಂಕಣಿ ಭಾಷೆ ಹಾಗೂ ಸಂಸ್ಕೃತಿ ಕುರಿತು ಸಂಶೋಧನೆ; ವಿಚಾರಗೋಷ್ಠಿ, ಕಮ್ಮಟಗಳ ನಿರ್ವಹಣೆ, ಸಂಶೋಧನ ಗ್ರಂಥಗಳ ಪ್ರಕಟಣೆ; ಪುರಾತತ್ತ್ವ ಹಾಗೂ ಜಾನಪದ ವಸ್ತುಸಂಗ್ರಹಾಲಯ; ಪ್ರಾಚೀನ ಹಸ್ತಪ್ರತಿಗಳ ಶೇಖರಣೆ, ಸಂರಕ್ಷಣೆ ಹಾಗೂ ಪ್ರಕಟಣೆ; ಪ್ರಚಾರೋಪನ್ಯಾಸಗಳ ನಿರ್ವಹಣೆ, ಗ್ರಂಥಾಲಯ ಸೇವೆ, ವಿದ್ವಾಂಸರು ಹಾಗೂ ಸಂಶೋಧಕರ ಸಾಧನೆಗಳನ್ನು ಗುರುತಿಸಿ ಸನ್ಮಾನಿಸುವುದು ಇತ್ಯಾದಿ.

ಗೋವಿಂದಪೈಗಳ ಗ್ರಂಥ ಸಂಗ್ರಹದಿಂದ ಪ್ರಾರಂಭವಾದ ಈ ಗ್ರಂಥಾಲಯ ಅನಂತರ ಯಜ್ಞನಾರಾಯಣ ಉಡುಪ, ಎನ್.ಎಸ್. ಕಿಲ್ಲೆ, ಮರಿಯಪ್ಪ ಭಟ್ಟ, ಬಿ.ಜಿ.ಎಲ್. ಸ್ವಾಮಿ, ಕಟಪಾಡಿ ನರಸಿಂಹಮಲ್ಯ, ಕೀಕಾನ ರಾಮಚಂದ್ರ, ಕಡಂಬಿಲ ಶ್ಯಾಮಭಟ್, ಅನಂತ ನಾರಾಯಣಾಚಾರ್, ಬೈಕಾಡಿ ವೆಂಕಟ ಕೃಷ್ಣರಾವ್, ಬಿ. ದಾಮೋದರರಾವ್, ಎ. ಶ್ರೀರಮಣ ಆಚಾರ್ಯ ಮೊದಲಾದವರ ಗ್ರಂಥಗಳ ಕೊಡುಗೆಯಿಂದ ಬೆಳೆದಿದೆ. ಈಗ ಸುಮಾರು ಹದಿನೈದು ಸಾವಿರ ಅಮೂಲ್ಯ ಗ್ರಂಥಗಳ ಸಂಗ್ರಹ ಇಲ್ಲಿದೆ.

ಕರ್ನಾಟಕ ಸರ್ಕಾರದ ಕನ್ನಡ ಸಂಸ್ಕೃತಿ ಇಲಾಖೆ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯ, ವಿಶ್ವವಿದ್ಯಾಲಯ ಅನುದಾನ ಆಯೋಗ, ಭಾರತೀಯ ಇತಿಹಾಸ ಸಂಶೋಧನ ಇಲಾಖೆ, ಶಾಸನಶಾಸ್ತ್ರ ವಿಭಾಗ, ದ್ರಾವಿಡ ಭಾಷಾವಿಜ್ಞಾನ ಪರಿಷತ್ತು, ಶಾಸನಶಾಸ್ತ್ರ ವಿದ್ವಾಂಸರ ಪರಿಷತ್ತು, ಅಖಿಲಭಾರತ ಸ್ಥಳನಾಮ ಸಂಘ, ಕೇಂದ್ರ ಸಾಹಿತ್ಯ ಅಕಾಡೆಮಿ, ಸಂಗೀತ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ರಂಗಾಯಣ, ನೀನಾಸಂ, ರೋಮ್ ವಿಶ್ವವಿದ್ಯಾಲಯ ಮುಂತಾದ ಹಲವಾರು ಸಂಸ್ಥೆಗಳ ಸಹಯೋಗದಿಂದ ಈ ಕೇಂದ್ರ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ವಿಚಾರಸಂಕಿರಣಗಳನ್ನು ನಡೆಸಿ ಗ್ರಂಥಗಳನ್ನು ಪ್ರಕಟಿಸಿದೆ. ಕರ್ನಾಟಕ ಸರ್ಕಾರದ ನೆರವಿನಿಂದ ತುಳು ನಿಘಂಟು ಯೋಜನೆಯನ್ನು ನಿರ್ವಹಿಸಿ (ಹದಿನೆಂಟು ವರ್ಷಗಳು) ಆರು ಸಂಪುಟಗಳಲ್ಲಿ ತುಳು ನಿಘಂಟನ್ನು ಪ್ರಕಟಿಸಿದೆ.

ಪ್ರಾರಂಭದಲ್ಲಿ ಮದರಾಸು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಎಂ. ಮರಿಯಪ್ಪಭಟ್ಟರೂ ಖ್ಯಾತ ಲೇಖಕರೂ ಯಕ್ಷಗಾನ

ವಿದ್ವಾಂಸರೂ ಆದ ಕೆ. ಶಿವರಾಮ ಕಾರಂತರೂ ತುಳುನಾಡಿನ ಇತಿಹಾಸ ವಿದ್ವಾಂಸರಾದ ಪಿ. ಗುರುರಾಜಭಟ್ಟರೂ ಮಾರ್ಗದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ತುಳು ನಿಘಂಟು ಯೋಜನೆ ಪ್ರಾರಂಭವಾದ ಮೇಲೆ (1981) ಯು.ಪಿ. ಉಪಾಧ್ಯಾಯ ಹಾಗೂ ಸುಶೀಲಾ ಪಿ. ಉಪಾಧ್ಯಾಯ–ಇವರು ನಿಘಂಟು ಯೋಜನೆಯ ಕಾರ್ಯದೊಂದಿಗೆ ಸಂಶೋಧನ ಕೇಂದ್ರದ ಪ್ರಾಧ್ಯಾಪಕರಾಗಿ ಸಂಶೋಧಕರಿಗೆ ಮಾರ್ಗದರ್ಶಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಉಪ್ಪಂಗಳ ರಾಮಭಟ್ಟರು ಸಂಶೋಧನ ಮಾರ್ಗದರ್ಶಕರಾಗಿದ್ದರು (1992). ಇದುವರೆಗೆ ಹದಿಮೂರು ಸಂಶೋಧಕರು ಈ ಕೇಂದ್ರದಲ್ಲಿ ಅಧ್ಯಯನ ನಡೆಸಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಸದ್ಯದಲ್ಲಿ ಒಂಬತ್ತು ಜನ ಸಂಶೋಧಕರು ಅಧ್ಯಯನ ನಡೆಸುತ್ತಿದ್ದಾರೆ. ಅಮೆರಿಕ, ಯುರೋಪ್, ಬ್ರಿಟನ್, ಜಪಾನ್ ಮುಂತಾದ ಕಡೆಗಳಿಂದಲೂ ಸಂಶೋಧಕ ವಿದ್ವಾಂಸರು ಇಲ್ಲಿಗೆ ಬಂದು ಅಧ್ಯಯನ ನಡೆಸಿದ್ದಾರೆ.

ಕಡೆಂಗೋಡ್ಲು ಕಾವ್ಯಪ್ರಶಸ್ತಿ, ಇನಾಂದಾರ್ ವಿಮರ್ಶಾ ಪ್ರಶಸ್ತಿ, ಸೇಡಿಯಾಪು ಪ್ರಶಸ್ತಿ, ಕು.ಶಿ. ಜಾನಪದ ಪ್ರಶಸ್ತಿ, ಪೊಳಲಿ ಶೀನಪ್ಪ ಹೆಗ್ಗಡೆ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ಈ ಕೇಂದ್ರ ಪ್ರತಿವರ್ಷ ನೀಡುತ್ತಿದೆ.

ಈ ಕೇಂದ್ರ ಸುಮಾರು ಐವತ್ತಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಮುಖ್ಯವಾದವು ತುಳು ನಿಘಂಟು (ಆರು ಸಂಪುಟಗಳು), ಹವ್ಯಕ– ಇಂಗ್ಲಿಷ್ ನಿಘಂಟು, ಯಕ್ಷಗಾನ ಪದಕೋಶ, ಗೋವಿಂದ ಪೈ ಸಂಶೋಧನ ಸಂಪುಟ, ಇಂಡಿಯಾನ (ಗೋವಿಂದ ಪೈಯವರ ಆಂಗ್ಲ ಬರೆಹಗಳು), ತುಳುನಾಡಿನ ಶಾಸನಗಳು, ಎ ಕಂಪಾರಿಟಿವ್ ಸ್ಟಡಿ ಆಫ್ ತುಳು ಡೈಲೆಕ್ಟ್ಸ್, ಭೂತ ವರ್ಷಿಪ್, ಫೋಕ್ ಎಪಿಕ್ಸ್ ಆಫ್ ತುಳುನಾಡು, ತಾಡವಾಲೆ ಗ್ರಂಥಸೂಚಿ, ಕೊಂಕಣಿ ಭಾಷೆ ಸಾಹಿತ್ಯ ಇತ್ಯಾದಿ. ಈಗ ಎಚ್. ಕೃಷ್ಣಭಟ್ಟರು ಇದರ ನಿರ್ದೇಶಕರಾಗಿದ್ದಾರೆ.

**(ಯು.ಪಿ.ಯು.)**

**ರಾಷ್ಟ್ರಕೂಟ ವಂಶ:** 8ನೆಯ ಶತಮಾನದ ಮಧ್ಯಭಾಗದಿಂದ 10ನೆಯ ಶತಮಾನದ ಕೊನೆಯ ಪಾದದವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗಗಳನ್ನು ಆಳಿದ ರಾಜಮನೆತನ. ಪ್ರಾರಂಭದಲ್ಲಿ ಬಾದಾಮಿ ಚಳುಕ್ಯರ ಆಶ್ರಿತರಾಗಿದ್ದು ಸ್ವಶ್ರಮದಿಂದ ರಾಜ್ಯ ಸಾಧಿಸಿ, ಚಳುಕ್ಯರ ರಾಜಕೀಯ ಉತ್ತರಾಧಿಕಾರಿಗಳಾಗಿ, 1ನೆಯ ಕೃಷ್ಣ, ಧ್ರುವ, 3ನೆಯ ಗೋವಿಂದ, 1ನೆಯ ಅಮೋಘವರ್ಷ (ನೃಪತುಂಗ), 3ನೆಯ ಕೃಷ್ಣ ಮುಂತಾದ ಹೆಸರಾಂತ ರಾಜರ ಪರಿಶ್ರಮದಿಂದ ಕರ್ನಾಟಕದ ಕ್ಷಾತ್ರಪ್ರಭಾವವನ್ನು ದಕ್ಷಿಣ ಭಾರತದಲ್ಲಷ್ಟೇ ಅಲ್ಲದೆ ಉತ್ತರ ಭಾರತದಲ್ಲಿ ಒಂದು ಕಡೆ ಕನೂಜಿನವರೆಗೂ ಇನ್ನೊಂದು ಕಡೆ ಮಿಥಿಲೆಯವರೆಗೂ ಹಬ್ಬಿಸಿ ಸಮಕಾಲೀನ ಭಾರತೀಯ ರಾಜಕೀಯದಲ್ಲಿ ಪರಮೋಚ್ಚ ಶಕ್ತಿಯಾಗಿ ಮೆರೆದ ಕನ್ನಡ ಮೂಲದ ರಾಜವಂಶ. ಈ ಇತಿಹಾಸ ಕರ್ನಾಟಕದಲ್ಲಿ ಒಂದು ಹೆಮ್ಮೆಯ ಅಧ್ಯಾಯ.

**ರಾಜಕೀಯ ಇತಿಹಾಸ:** ರಾಷ್ಟ್ರಕೂಟ–ಇದೊಂದು ಅಧಿಕಾರ ಸೂಚಕ ಪದ. ಇದರ ಪ್ರಾಚೀನತೆಯನ್ನು ಮೌರ್ಯರ ಶಾಸನಗಳಲ್ಲಿ ಬಳಸಲಾದ ರಆಷ್ಟಿಕ ಎಂಬ ಮಾತಿನಲ್ಲಿ ಗುರುತಿಸಬಹುದು. ಈ ಪದ ಪ್ರಾಕೃತದಲ್ಲಿ ರಠಿ ಎಂದಾಯಿತು. ರಠಿ, ಮಹಾರಠಿ ಎಂದು ಬಿರುದಾಂಕಿತರಾದ ಕೆಲವರು ಸಾಮಂತರು ದಕ್ಷಿಣ ಹಾಗೂ ಪಶ್ಚಿಮ ಭಾರತದಲ್ಲಿ ಆಳುತ್ತಿದ್ದುದು ತಿಳಿದಿದೆ. ರಾಷ್ಟ್ರಕೂಟ ಎಂಬುದು ಸಂಸ್ಕೃತದ ರಾಷ್ಟ್ರ (ದೇಶ, ಪ್ರದೇಶ) ಮತ್ತು ಕೂಟ (ಮುಖ್ಯಸ್ಥ) ಎಂಬ ಪದಗಳಿಂದ ಉಂಟಾದ ನಾಮಪದ. ಗ್ರಾಮಕೂಟ (ಗಾವುಂಡ, ಗೌಡ) ಗ್ರಾಮಕ್ಕೆ ಅಧಿಪತಿ ಇದ್ದಂತೆ, ರಾಷ್ಟ್ರಕೂಟ ಒಂದು ಪ್ರದೇಶದ ಅಧಿಪತಿ. ಆಂಧ್ರಪ್ರದೇಶದ ಪ್ರಾಚೀನ ಶಾಸನಗಳಲ್ಲಿ ರಟ್ಟಂಗಡಿ ಎಂಬ ಹೆಸರಿನ ಪ್ರಾದೇಶಿಕ ಅಧಿಕಾರಿ ಕಾಣಿಸಿಕೊಂಡಿದ್ದಾನೆ. ಇದು ಸಹ ರಾಷ್ಟ್ರಕೂಟಕ್ಕೆ ಸಮಾನ ಪದ. ವಾಸ್ತವದಲ್ಲಿ 'ಅಕಾಲ ವರ್ಷ, ಧಾರಾವರ್ಷ, ಪ್ರಭೂತವರ್ಷ, ಅಮೋಘವರ್ಷ ಹಾಗೂ ಸುವರ್ಣವರ್ಷ' ಎಂಬಲ್ಲಿನ ವರ್ಷ 'ವೃಷ್ಟಿ' ಎಂಬ ಶಬ್ದದ ತದ್ಭವರೂಪ. ವೃಷ್ಟಿ>ರಿಷ್ಟಿ>ರಟ್ಟ ಆಗಿದೆ. ಇಲ್ಲಿ 'ರಟ್ಟ' ಎಂಬ ಮಳೆಯ ಶಾಸ್ತ್ರವನ್ನು ಜ್ಞಾಪಿಸಿಕೊಳ್ಳಬಹುದು.

ಬಾದಾಮಿಯ ಚಳುಕ್ಯರ ಕಾಲದಲ್ಲಿ ರಾಷ್ಟ್ರಕೂಟರ ಕೆಲವು ಮನೆತನಗಳು ಇದ್ದುವು. ಮಾನಾಂಕ, ದೇವರಾಜ, ಭವಿಷ್ಯ, ಅಭಿಮನ್ಯು ಈ ರೀತಿ ಪುತ್ರಾನುಕ್ರಮದಲ್ಲಿ ಸು. 7ನೆಯ ಶತಮಾನದಲ್ಲಿ ಮಾನಾಪುರ ರಾಜಧಾನಿಯಿಂದ ಆಳುತ್ತಿದ್ದರು. ಇವರು ಮಧ್ಯಪ್ರದೇಶದ ಹೋಷಂಗಾಬಾದ್ ಪ್ರದೇಶದಲ್ಲಿ ಆಳುತ್ತಿದ್ದರೆಂದು ಕೆಲವರೂ ಮಹಾರಾಷ್ಟ್ರದ ಸತಾರ ಜಿಲ್ಲೆಯ ಮಾನ್ ಇವರ ರಾಜಧಾನಿ ಎಂದು ಮತ್ತೆ ಕೆಲವರೂ ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರಕೂಟ ಶಿವರಾಜನ ಮಗ ಗೋವಿಂದರಾಜ ಎಂಬುವನು ಚಾಳುಕ್ಯ ವಿಕ್ರಮಾದಿತ್ಯನ (ಇಮ್ಮಡಿ) ಮಾಂಡಲಿಕನಾಗಿದ್ದ. ಇವನ ರಾಜಧಾನಿ ಮಾನಾಪುರ, ಸತಾರದ ಬಳಿಯ ಮಾನವೇ ಇದಾಗಿದ್ದಿರಬಹುದು. ರಾಷ್ಟ್ರಕೂಟರ ಇನ್ನೊಂದು ಮನೆತನ ಅಚಲಪುರದಲ್ಲಿತ್ತು. (ಈಗಿನ ಮಹಾರಾಷ್ಟ್ರದ ಅಮರಾವತೀ ಜಿಲ್ಲೆಯ ಎಲಿಚ್‍ಪುರ) ಈ ಮನೆತನದ ಧ್ರುವರಾಜ, ಸ್ವಾಮಿಕರಾಜ ಮತ್ತು ನನ್ನರಾಜ ಎಂಬ ಮೂರು ತಲೆಮಾರಿನ ಮಾಂಡಲಿಕರು ಕಾಣಿಸಿಕೊಂಡಿದ್ದಾರೆ. ಇವರು ಚಾಳುಕ್ಯ ವಿನಯಾದಿತ್ಯ ಮತ್ತು ವಿಜಯಾದಿತ್ಯರ ಸಾಮಂತರಾಗಿದ್ದರು.

ಗುಲ್ಬರ್ಗ ಜಿಲ್ಲೆಯ ಮಾನ್ಯಖೇಟದಿಂದ (ಮಳಖೇಡ) ಆಳಿದ ರಾಷ್ಟ್ರಕೂಟ ವಂಶೀಯರ ಕಾರ್ಯಸ್ಥಾನವೆಲ್ಲ ಮಹಾರಾಷ್ಟ್ರದಲ್ಲೇ ಇರುವುದರಿಂದ ಇವರು ಮೂಲತಃ ಮಹಾರಾಷ್ಟ್ರದವರು ಎಂಬ ಅಭಿಪ್ರಾಯವಿದೆ. ಆದರೆ ವಿದ್ವಾಂಸರಾದ ಅಳತೇಕರರು ತೋರಿಸಿರುವ ಆಧಾರಗಳು ರಾಷ್ಟ್ರಕೂಟರು ಕರ್ನಾಟಕದವರು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ವಂಶದವರಲ್ಲಿ ಲತ್ತಲೂರ ಪುರವರಾಧೀಶ್ವರ ಎಂಬ ಬಿರುದು ಇರುವ ಕಾರಣ ಈ ಮನೆತನದ ಮೂಲ ಸ್ಥಾನ ಲತ್ತಲೂರು (ಈಗ ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯಲ್ಲಿರುವ ಲಾತೂರು) ಆಗಿರಬೇಕು. ಮೂಲತಃ ರಟ್ಟನ ಊರಾಗಿದ್ದ ಇದು ಕ್ರಮೇಣ ಲತ್ತನ ಊರು ಲತ್ತಲೂರು ಎಂದು ಪರಿವರ್ತಿತವಾದಂತೆ ಕಾಣುತ್ತದೆ. ಈಗಿನ ಕರ್ನಾಟಕದ ಗುಲ್ಬರ್ಗ, ಬೀದರ್ ಜಿಲ್ಲೆಗಳ ಎಲ್ಲೆಗೆ ಹೊಂದಿಕೊಂಡಿರುವ ಈ ಪ್ರದೇಶದಲ್ಲಿ ದೊರೆತಿರುವ ಕನ್ನಡ ಶಾಸನಗಳು ಆ ಭಾಗವೆಲ್ಲ ಹಿಂದೆ ಕರ್ನಾಟಕದ ಭಾಗವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿವೆ. ಬಾದಾಮಿ ಚಳುಕ್ಯ ರಾಜ್ಯ ಉತ್ತರ ದಖನ್, ಗುಜರಾತ್, ಆಂಧ್ರಪ್ರದೇಶಕ್ಕೆಲ್ಲ ವಿಸ್ತರಿಸಿದಾಗ ಆ ಮನೆತನದವರು ಅಲ್ಲಲ್ಲ ನೆಲಸಿದ್ದಂತೆ, ಕರ್ನಾಟಕದಲ್ಲಿದ್ದ ಅವರ ನಿಷ್ಠಸಾಮಂತರಿಗೂ ಚಳುಕ್ಯರು ಬೇರೆ ಬೇರೆ ಪ್ರಾಂತ್ಯಗಳ ಅಧಿಕಾರವನ್ನು ವಹಿಸಿಕೊಟ್ಟಿದ್ದು, ಅವರಲ್ಲಿ ರಾಷ್ಟ್ರಕೂಟರು ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ನೆಲೆಗೊಂಡಿರಬೇಕು. ಆದರೆ ಕರ್ನಾಟಕದ ಹೊರಗೆ ನೆಲೆಸಿದ್ದರೂ ಇವರು ಮೂಲತಃ ಕನ್ನಡನಾಡಿನವರೆಂಬುದನ್ನು ಅವರ ಶಾಸನಗಳೇ ತೋರಿಸುತ್ತವೆ. ಜಬ್ಬಲಪುರದ ಬಳಿಯ ಜುರಾ ಎಂಬಲ್ಲಿ ದೊರೆತ ಮೂರನೆಯ ಕೃಷ್ಣನ ಪ್ರಶಸ್ತಿ ಇತರ ರಾಷ್ಟ್ರಕೂಟರ ಶಾಸನಗಳು, ಉತ್ತಮ ಶೈಲಿಯ ಕನ್ನಡದಲ್ಲಿ ಇದೆ. ಗುಜರಾತಿನಲ್ಲಿ ನೆಲೆಯೂರಿದ ರಾಷ್ಟ್ರಕೂಟ ಮನೆತನದವರು ಶಾಸನಗಳಿಗೆ ಆ ಪ್ರದೇಶದ ಲಿಪಿಯನ್ನೇ ಉಪಯೋಗಿಸಿದ್ದರೂ ರಾಜರ ರುಜು ಮಾತ್ರ ಕನ್ನಡ ಅಕ್ಷರಗಳಲ್ಲಿ ಇರುತ್ತವೆ. ಮೇಲಾಗಿ ಅಸಗವ್ವೆ, ಅಬ್ಬಲಬ್ಬೆ, ಇಮ್ಮಡಿ ರೇವಕ್ಕ ಮುಂತಾದ ಹೆಸರುಗಳು ಅವರ ಕನ್ನಡತನವನ್ನು ಸಾರಿ ಹೇಳುತ್ತವೆ. ರಾಷ್ಟ್ರಕೂಟರು ಕನ್ನಡ ಸಾಹಿತ್ಯಕ್ಕೂ ಅಪಾರ ಪ್ರೋತ್ಸಾಹವನ್ನಿತ್ತಿರುವುದು ಇವರು ಕನ್ನಡನಾಡಿನವರೆಂಬುದನ್ನು ಸಮರ್ಥಿಸುತ್ತದೆ.

ರಾಷ್ಟ್ರಕೂಟ ಮನೆತನದ ರಾಜ ಲಾಂಛನ ಗರುಡ. ನಾಣ್ಯಗಳು ಮತ್ತು ತಾಮ್ರಪತ್ರಗಳ ಮೇಲೆ ಗರುಡನಲ್ಲದೆ ಶಿವನ ಚಿತ್ರವಿರುವುದೂ ಉಂಟು.

ರಾಷ್ಟ್ರಕೂಟರು ತಮ್ಮ ಶಾಸನಗಳಲ್ಲಿ ಶಿವ, ವಿಷ್ಣು ಇಬ್ಬರನ್ನೂ ಸ್ತುತಿಸುವರಾದ ಕಾರಣ ಇವರು ಮತೀಯ ವಿಚಾರಗಳಲ್ಲಿ ಉದಾರಿಗಳಿದ್ದರೆಂದು ಹೇಳಬಹುದು. ಈ ಅರಸರು ಜೈನಧರ್ಮಕ್ಕೆ ಕೊಟ್ಟ ವಿಶೇಷ ಆಶ್ರಯವೂ ಈ ಧೋರಣೆಯನ್ನೇ ವ್ಯಕ್ತಪಡಿಸುತ್ತದೆ.

**ರಾಷ್ಟ್ರಕೂಟರ ವಂಶಾವಳಿ :**




ರಾಷ್ಟ್ರಕೂಟರು ಶ್ರೀ ಪೃಥ್ವೀವಲ್ಲಭ ಮುಂತಾದ ಅನೇಕ ಬಾದಾಮಿಯ ಚಳುಕ್ಯರ ಬಿರುದುಗಳನ್ನು ಉಪಯೋಗಿಸಿಕೊಂಡರು. ಅರಬ ಪ್ರವಾಸಿಗರು ತಮ್ಮ ಬರೆಹಗಳಲ್ಲಿ ಇವರನ್ನು ವಲ್ಲಭ, ಬಲ್ಲಹ ಎಂದು ಹೆಸರಿಸಿದ್ದಾರೆ.

ರಾಷ್ಟ್ರಕೂಟ ಮನೆತನದ ಮೊದಲ ಅರಸರ ಕಾಲದಲ್ಲಿ ಲತ್ತಲೂರು ಇವರ ರಾಜಧಾನಿಯಾಗಿದ್ದಿರಬಹುದು. ದಂತಿದುರ್ಗನ ಕಾಲದಲ್ಲಿ ಎಲ್ಲೋರ ರಾಷ್ಟ್ರಕೂಟ ರಾಜಧಾನಿಯಾಗಿತ್ತು. ಸಾಮ್ರಾಜ್ಯ ವಿಸ್ತಾರವಾದಂತೆ ಅಗತ್ಯಕ್ಕನುಗುಣವಾಗಿ ರಾಜ್ಯಮಧ್ಯದಲ್ಲಿದ್ದ ಮಾನ್ಯಖೇಟವನ್ನು (ಮಳಖೇಡ) ನೃಪತುಂಗನು ನಿರ್ಮಿಸಿ ಅಲಂಕರಿಸಿದನು. ಅನಂತರ ಕೊನೆಯವರೆಗೂ ಅದು ಸಾಮ್ರಾಜ್ಯದ ಪ್ರಮುಖ ರಾಜಧಾನಿಯಾಗಿ ಉಳಿಯಿತು. ಮಾನ್ಯಖೇಟದ ವೈಭವದ ವರ್ಣನೆ ಶಾಸನಗಳಲ್ಲಿಯೂ ಸಾಹಿತ್ಯ ಗ್ರಂಥಗಳಲ್ಲಿಯೂ ವಿದೇಶೀ ಪ್ರವಾಸಿಗಳ ಲೇಖನಗಳಲ್ಲಿಯೂ ಸಿಗುತ್ತದೆ. ಮಯೂರಖಿಂಡಿ (ನಾಸಿಕ್ ಜಿಲ್ಲೆಯ ಮಾರ್ಖಂಡ ಅಥವಾ ಚಆಂದಾ ಜಿಲ್ಲೆಯ ಮಾರ್ಕಂಡಿ), ಕಂಧರಪುರ (ನಾಂದೇಡ್ ಜಿಲ್ಲೆಯ ಕಂಧಾರ) ಮತ್ತು ಪ್ರತಿಷ್ಠಾನಗಳು (ಪೈಠಣ) ಸಹ ಕೆಲವು ಸಂದರ್ಭಗಳಲ್ಲಿ ಇವರ ರಾಜಧಾನಿಗಳಾಗಿದ್ದುವೆಂದು ತಿಳಿಯುತ್ತದೆ.

ಚಳುಕ್ಯ ವಂಶದ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಪ್ರಾಬಲ್ಯಕ್ಕೆ ಬಂದ ಮೊದಲ ರಾಷ್ಟ್ರಕೂಟ ಅರಸ ದಂತಿದುರ್ಗ. ಎಲ್ಲೋರದ ಶಾಸನದಲ್ಲಿ ಅವನ ಪೂರ್ವಜರಾದ ದಂತಿವರ್ಮ, ಇಂದ್ರ I, ಗೋವಿಂದರಾಜ, ಕರ್ಕ II, ಇಂದ್ರ II – ಇವರನ್ನು ಆ ಕ್ರಮದಲ್ಲಿ ನಮೂದಿಸಿದೆ.

ದಂತಿದುರ್ಗ (ಸು. 735–56) ಇಮ್ಮಡಿ ಇಂದ್ರನ ಮಗ. ಇವನು ತನ್ನ ಸಾಹಸಕ್ಕೆ ತಕ್ಕುದಾದ ಖಡ್ಗಾವಲೋಕ ಎಂಬ ಬಿರುದು ಧರಿಸಿದ್ದ. ಈತ ಮೊದಲು ಬಾದಾಮಿಯ ಚಳುಕ್ಯರ ಸಾಮಂತನಾಗಿ ಮಹಾರಾಷ್ಟ್ರದ ಉತ್ತರಭಾಗದಲ್ಲಿ ಆಳುತ್ತಿದ್ದ. ಕಾಂಚಿ ವಿಜಯ ಯಾತ್ರೆಯಲ್ಲಿ ಇಮ್ಮಡಿ ಚಳುಕ್ಯ ವಿಕ್ರಮಾದಿತ್ಯನಿಗೂ ಅರಬರ ಮುನ್ನಡೆಯನ್ನು ತಡೆಯುವುದರಲ್ಲಿ ಗುಜರಾತಿನ ಮಂಡಲೇಶ್ವರನಾದ ಅವನಿಜನಾಶ್ರಯ ಪುಲಕೇಶಿಗೂ ಸಹಾಯಕನಾಗಿದ್ದು ಯುದ್ಧರಂಗದಲ್ಲಿ ಪರಿಣತಿ ಪಡೆದ ದಂತಿದುರ್ಗ, ಸಾಮ್ರಾಟ ವಿಕ್ರಮಾದಿತ್ಯನ ಮರಣಾನಂತರ ಸ್ವತಂತ್ರನಾಗಲು ಹವಣಿಸಿದ. ಮೊದಲು ದಕ್ಷಿಣ ಗುಜರಾತಿನ ಚಳುಕ್ಯರನ್ನೂ ನಾಂದೀಪುರೀಯ ಗೂರ್ಜರರನ್ನೂ ಸೋಲಿಸಿ ರಾಜ್ಯ ಆಕ್ರಮಣ ಮಾಡಿಕೊಂಡುದಲ್ಲದೆ ಮಾಳವ, ಕೋಸಲ ರಾಜ್ಯಗಳ ಮೇಲೂ ಪ್ರಭುತ್ವವನ್ನು ಸಾರಿ ಉತ್ತರ ದಖನ್ನಿನಲ್ಲಿ ಪ್ರಬಲನಾದ. ಸಾಮ್ರಾಟರಾದ ಚಳುಕ್ಯರು ಪಲ್ಲವಯುದ್ಧಗಳಲ್ಲಿ ನಿರತರಾಗಿದ್ದುದೂ ಮಹತ್ವಾಕಾಂಕ್ಷಿಯಾದ ದಂತಿದುರ್ಗನಿಗೆ ಒಳ್ಳೆಯ ಅವಕಾಶವನ್ನು ಒದಗಿಸಿದ್ದಿತು. ಮೊದಲು ಪಲ್ಲವರ ಸ್ನೇಹ ಸಾಧಿಸಿ ಅನಂತರ ಕೀರ್ತಿವರ್ಮನ ಮೇಲೆ ಯುದ್ಧ ಹೂಡಿ ಜಯ ಗಳಿಸಿ ದಕ್ಷಿಣ ಮಹಾರಾಷ್ಟ್ರದ ಭಾಗಗಳನ್ನೂ ಆಕ್ರಮಿಸಿದ. ಆದರೆ ಚಳುಕ್ಯ ಮೂಲೋತ್ಪಾಟನ ಮಾಡುವಷ್ಟರಲ್ಲಿ ಮೃತನಾದ (ಸು. 756).

ಕೃಷ್ಣ (ಸು. 756–74) ಸಹ ಇನ್ನೊಮ್ಮೆ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ, ಪ್ರಾಯಶಃ ರಣರಂಗದಲ್ಲಿ ಕೊಂದು ಅಳಿದುಳಿದ ಚಳುಕ್ಯರ ಅಧಿಕಾರವನ್ನು ಕಿತ್ತುಕೊಂಡ. ಚಳುಕ್ಯ ಸಾಮ್ರಾಜ್ಯದ ಮೇಲೆ ರಾಷ್ಟ್ರಕೂಟರ ಪತಾಕೆಯನ್ನು ಹಾರಿಸಿದ್ದಲ್ಲದೆ, ದಕ್ಷಿಣದಲ್ಲಿ ತಲಕಾಡು ಗಂಗರನ್ನೂ ಪೂರ್ವದಲ್ಲಿ ವೆಂಗಿಯ ಚಳುಕ್ಯರನ್ನೂ ಬಗ್ಗುಬಡಿದು ಉತ್ತರದಲ್ಲಿ ವಿಂಧ್ಯದಿಂದ ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯವರೆಗೆ ಮತ್ತು ಪಶ್ಚಿಮ ಸಮುದ್ರದಿಂದ ಹಿಡಿದು ಸುಮಾರು ಓರಂಗಲ್ಲಿನವರೆಗಿನ ವಿಶಾಲ ಪ್ರದೇಶದ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿ, ದಕ್ಷಿಣ ಭಾರತದಲ್ಲಿ ರಾಷ್ಟ್ರಕೂಟ ಶಕ್ತಿಯನ್ನು ಅದ್ವಿತೀಯವಾಗಿ ಬೆಳೆಸಿ ಮುಂದೆ ಉತ್ತರಭಾರತ ಮತ್ತು ತಮಿಳು ನಾಡಿನಲ್ಲಿ ರಾಷ್ಟ್ರಕೂಟ ಬಲ ಹಬ್ಬಲು ಅಡಿಪಾಯವನ್ನು ಹಾಕಿದ.

ಯುವರಾಜನಾಗಿದ್ದಾಗ ಗಂಗವಾಡಿ ಮತ್ತು ವೇಂಗಿಯ ಯುದ್ಧಗಳಲ್ಲಿ ಯಶಸ್ಸು ಪಡೆದಿದ್ದ ಕೃಷ್ಣನ ಹಿರಿಯ ಮಗ ಇಮ್ಮಡಿ ಗೋವಿಂದ (ಸು. 774–80) ಪಟ್ಟಕ್ಕೆ ಬಂದ ಅನಂತರ ವಿಲಾಸಪ್ರಿಯನಾಗಿ ಆಡಳಿತದಲ್ಲಿ ಆಸಕ್ತಿ ಕಳೆದುಕೊಂಡ. ಸಹಜವಾಗಿಯೇ ಇವನಿಗಿಂತಲೂ ಹೆಚ್ಚು ದಕ್ಷನಾದ ಇವನ ತಮ್ಮ ಧ್ರುವ ತನ್ನ ಅಧಿಕಾರವನ್ನು ಹೆಚ್ಚಿಸಿಕೊಂಡ. ಸೋದರನನ್ನು ಗೋವಿಂದ ಎದುರಿಸಿದನೆಂಬುದೊಂದು ಊಹೆ. ಆದರೆ ಆಗತಾನೇ ಪ್ರಾಬಲ್ಯಕ್ಕೆ ಬರತೊಡಗಿದ್ದ ಧೀಮಂತನಾದ ಧ್ರುವನಿಗೆ ಗೋವಿಂದ ಸ್ವಸಮ್ಮತಿಯಿಂದಲೇ ರಾಜ್ಯಾಧಿಕಾರವನ್ನೊಪ್ಪಿಸಿಬಿಟ್ಟನೆಂಬ ಇನ್ನೊಂದು ಅಭಿಪ್ರಾಯವೂ ಇದೆ.

ಧ್ರುವ (ಸು. 780–93) ರಾಷ್ಟ್ರಕೂಟ ವಂಶದ ಅತಿ ಸಮರ್ಥ ಅರಸ. ಪಟ್ಟಕ್ಕೆ ಬರುತ್ತಿದ್ದಂತೆಯೇ, ಈ ಹಿಂದೆ ತನ್ನ ಅಣ್ಣನ ಪಕ್ಷ ವಹಿಸಿದ್ದ ಗಂಗರು ಮತ್ತು ಪಲ್ಲವರನ್ನು ಸೋಲಿಸಿ ಸೇಡನ್ನು ತೀರಿಸಿಕೊಂಡದ್ದಲ್ಲದೆ, ಗಂಗವಾಡಿಯನ್ನು ಆಕ್ರಮಿಸಿ ಅಲ್ಲಿ ತನ್ನ ಮಗ ಸ್ತಂಭನನ್ನು ಪ್ರಾಂತ್ಯಾಧಿಕಾರಿಯಾಗಿ ಮಾಡಿ, ರಾಷ್ಟ್ರಕೂಟ ರಾಜ್ಯದ ಎಲ್ಲೆಯನ್ನು ಕಾವೇರಿ ನದಿಯವರೆಗೆ ವಿಸ್ತರಿಸಿದ. ಈ ಸಮಯದಲ್ಲಿ ಗೂರ್ಜರ ಪ್ರತೀಹಾರ ವಂಶದ ಅರಸನಾದ ವತ್ಸರಾಜ ಮತ್ತು ಬಂಗಾಲದ ಧರ್ಮಪಾಲ ಇವರುಗಳು ಉತ್ತರಾಪಥದಲ್ಲಿ ಕೀರ್ತಿವೆತ್ತಿದ್ದ ಕನೂಜಿನ ಆಕ್ರಮಣಕ್ಕಾಗಿ ಹೋರಾಡಿದರು. ಆಗ ಕನೂಜಿನಲ್ಲಿ ಆಳುತ್ತಿದ್ದ ಪರಸ್ಪರ ಸೆಣಸುತ್ತಿದ್ದರು. ಈ ಸಂದರ್ಭದಲ್ಲಿ ಧ್ರುವನು ಉತ್ತರ ಭಾರತಕ್ಕೆ ನುಗ್ಗಿ, ವತ್ಸರಾಜನನ್ನು ರಾಜಸ್ತಾನದ ಮರಳುಗಾಡಿಗೆ ಅಟ್ಟಿ, ಧರ್ಮಪಾಲನನ್ನೂ ಸದೆಬಡಿದು, ಅಪಾರ ಐಶ್ವರ್ಯವನ್ನು ದೋಚಿದ. ಈ ಸಾಧನೆಯಿಂದ ರಾಷ್ಟ್ರಕೂಟ ರಾಜ್ಯವೇನೂ ವಿಸ್ತಾರಗೊಳ್ಳಲಿಲ್ಲವಾದರೂ ಈ ಅರಸುಮನೆತನದ ಖ್ಯಾತಿ ಭಾರತದಲ್ಲೆಲ್ಲ ಹಬ್ಬಿತು. ದಕ್ಷಿಣದಲ್ಲಿ ವೇಂಗಿಯ ಚಳುಕ್ಯ ಮನೆತನದ ವಿಷ್ಣುವರ್ಧನ ತನ್ನ ಮಗಳು ಶೀಲಭಟ್ಟಾರಿಕೆಯನ್ನು ಧ್ರುವನಿಗೆ ಮದುವೆಮಾಡಿಕೊಟ್ಟು ಅವನ ಸ್ನೇಹ ಸಂಪಾದಿಸಿದ. ದಕ್ಷಿಣದಲ್ಲಿ ಗಂಗರ ಎರಡನೆಯ ಶಿವಮಾರನನ್ನು ಸೋಲಿಸಿ ಸೆರೆಯಲ್ಲಿಟ್ಟ. ಪಲ್ಲವರ ನಂದಿವರ್ಮ (I) ಈತನ ಸಾಮಂತಿಕೆಯನ್ನು ಒಪ್ಪಿದ. ಹೀಗೆ ಧ್ರುವ ಇಡೀ ಭರತಖಂಡದ ಏಕೈಕ ಸಾಮ್ರಾಟನಾಗಿ ಮೆರೆದ. ರಾಷ್ಟ್ರಕೂಟ ರಾಜ್ಯ ಸಮಕಾಲೀನ ಭಾರತದ ಬೃಹತ್ ಸಾಮ್ರಾಜ್ಯವಾಯಿತು.

ಧ್ರುವನ ಇಚ್ಛೆಯಂತೆ ಅವನ ಮೂರನೆಯ ಮಗನಾದ ಮುಮ್ಮಡಿ ಗೋವಿಂದ (ಸು. 793–814) ಅನಂತರ ಪಟ್ಟಕ್ಕೆ ಬಂದ. ಈತ ಪಟ್ಟಕ್ಕೆ ಬಂದ ತರುಣದಲ್ಲಿ ಅಣ್ಣನಾದ ಸ್ತಂಭನಿಂದ ತೊಂದರೆಗಳು ಉದ್ಭವಿಸಿದರೂ ಅದೇ ನೆವದಲ್ಲಿ ಅಣ್ಣನ ಸಹಕಾರಿಗಳಾಗಿದ್ದ ಗಂಗ, ನೊಳಂಬ, ಪಲ್ಲವರನ್ನೆಲ್ಲಾ ಬಗ್ಗಿಸಿ ದಕ್ಷಿಣಾಪಥದ ಆಧಿಪತ್ಯವನ್ನು ಭದ್ರವಾಗಿ ಸ್ಥಾಪಿಸಿಕೊಂಡು ಉತ್ತರ ಭಾರತದಲ್ಲಿ ವಿಜಯಯಾತ್ರೆಯನ್ನು ಕೈಗೊಂಡ. ಅಲ್ಲಿ ಗೂರ್ಜರ ಪ್ರತೀಹಾರ ವಂಶದ 2ನೆಯ ನಾಗಭಟ್ಟ, ಕನೂಜಿನ ಚಕ್ರಾಯುಧ, ಬಂಗಾಲದ ಧರ್ಮಪಾಲರನ್ನು ಸೋಲಿಸಿ ರಾಷ್ಟ್ರಕೂಟರ ಪ್ರಭಾವವನ್ನು ಉತ್ತರಾಪಥದಲ್ಲೆಲ್ಲ ಹಬ್ಬಿಸಿದ (ಸು. 800). ಅಷ್ಟರಲ್ಲಿ ದಕ್ಷಿಣದಲ್ಲಿ ಹಲವು ರಾಜರು ಒಟ್ಟುಗೂಡಿ ಗೋವಿಂದನ ರಾಜ್ಯಾಕ್ರಮಣಕ್ಕೆ ಸನ್ನಾಹ ನಡೆಸಿದ್ದರು. ಇದೂ ಗೋವಿಂದನ ಶೌರ್ಯ ಪ್ರದರ್ಶನಕ್ಕೆ ಕೀರ್ತಿವೃದ್ಧಿಗೆ ಕಾರಣವೇ ಆಯಿತು. ದಕ್ಷಿಣಕ್ಕೆ ಬಂದ ಗೋವಿಂದ ಗಂಗರೇ ಮೊದಲಾದ ದಕ್ಷಿಣದ ಅರಸರ ಸಂಯುಕ್ತ ಸೈನ್ಯವನ್ನು ತುಂಗಭದ್ರೆಯ ಬಳಿ ಧ್ವಂಸಮಾಡಿ (ಸು. 802), ಅಲ್ಲಿಂದ ಮುನ್ನಡೆದು ಪಲ್ಲವ, ಪಾಂಡ್ಯ, ಕೇರಳ ದೇಶಗಳ ಮೇಲೂ ದಾಳಿ ಮಾಡಿದ. ಈ ಸಾಧನೆಗಳನ್ನು ಕೇಳಿದ ಸಿಂಹಳದ ಅರಸು ಗೋವಿಂದನ ಸ್ನೇಹ ಯಾಚಿಸಿ ತನ್ನ ಹಾಗೂ ತನ್ನ ಪ್ರಧಾನಿಯ ವಿಗ್ರಹಗಳನ್ನು ಕಾಣಿಕೆಯಾಗಿ ನೀಡಿದ. ಇವುಗಳನ್ನು ಕಾಂಚೀಪುರದ ಶಿವಾಲಯದಲ್ಲಿ ಕೀರ್ತಿಸ್ತಂಭಗಳಂತೆ ಸ್ಥಾಪಿಸಲಾಯಿತು. ವೇಂಗಿಯ ಚಳುಕ್ಯ ಅರಸು ಇಮ್ಮಡಿ ವಿಜಯಾದಿತ್ಯ ಸ್ವತಂತ್ರನಾಗಲು ಪ್ರಯತ್ನಿಸಿದಾಗ ಅಲ್ಲೂ ನುಗ್ಗಿ ತನಗೆ ಅನುಕೂಲನಾದ ಭೀಮನಿಗೆ ರಾಜ್ಯ ವಹಿಸಿದ.

ರಾಜ್ಯ ವಿಸ್ತರಣೆ, ಸಂಘಟನೆ, ಮುತ್ಸದ್ದಿತನ, ಅಸಾಧಾರಣ ಶೌರ್ಯ ಧೈರ್ಯ ಯುಕ್ತಿಗಳಲ್ಲಿ ಮತ್ತು ರಾಷ್ಟ್ರಕೂಟರ ಶ್ರೇಷ್ಠತೆಯನ್ನು ಸ್ಥಾಪಿಸುವಲ್ಲಿ ಮೂರನೆಯ ಗೋವಿಂದ ತನ್ನ ತಂದೆ ಧ್ರುವನಿಗಿಂತ ಒಂದು ಕೈಮೇಲಾಗಿದ್ದ. ಸಿಂಹಳದಿಂದ ಹಿಮಾಲಯದವರೆಗೆ ಸೌರಾಷ್ಟ್ರದಿಂದ ಬಂಗಾಲದವರೆಗೆ ಭಾರತವರ್ಷ ರಾಷ್ಟ್ರಕೂಟ ಸೈನ್ಯದ ಪದಾಘಾತಕ್ಕೆ ಬಾಗಿತ್ತು. ಗೋವಿಂದ ರಾಷ್ಟ್ರಕೂಟ ಅರಸರಲ್ಲಿಯೇ ಅತ್ಯಂತ ಪ್ರತಾಪಶಾಲಿ ಎಂಬುದರಲ್ಲಿ ಸಂದೇಹವಿಲ್ಲ.

ಉತ್ತರದಲ್ಲಿ ಗೆದ್ದ ರಾಜ್ಯಗಳಲ್ಲಿ ತಮ್ಮ ಪ್ರಭುತ್ವವನ್ನು ಕಾಪಾಡಿಕೊಳ್ಳಲು ಗೋವಿಂದ ಗುಜರಾತ್ ಪ್ರಾಂತವನ್ನೇರ್ಪಡಿಸಿ ಅಲ್ಲಿ ತಮ್ಮನಾದ ಇಂದ್ರನನ್ನು ಅವನ ಅನಂತರ ಅವನ ಮಗನಾದ ಕರ್ಕಸುವರ್ಣವರ್ಷನನ್ನೂ ಮಹಾಮಂಡಲೇಶ್ವರರೆಂದು ನೇಮಿಸಿದ. ಇದೇ ಮುಂದೆ ಗುಜರಾತಿನ ರಾಷ್ಟ್ರಕೂಟ ಶಾಖೆಯಾಯಿತು.

ಗೋವಿಂದ ಸಾಯುವಾಗ ಅಮೋಘವರ್ಷ ಚಿಕ್ಕವನಾಗಿದ್ದ ಕಾರಣ ಅವನ ರಕ್ಷಣೆ ಮತ್ತು ಸಾಮ್ರಾಜ್ಯ ರಕ್ಷಣೆಗಾಗಿ ಗುಜರಾತಿನಲ್ಲಿದ್ದ ಕರ್ಕಸುವರ್ಣವರ್ಷನನ್ನು ಕರೆಸಿಕೊಂಡ. ಆತನನ್ನು ರಾಜಕುಮಾರನ ಪಾಲಕನೆಂದು ನೇಮಿಸಿದ.

1ನೆಯ ಅಮೋಘವರ್ಷನ (ನೃಪತುಂಗ, ಸು. 814–78) ಆಳ್ವಿಕೆ ಶಾಂತಿಯುತವಾಗಿ ನಡೆಯಲು ಸಾಧ್ಯವಿರಲಿಲ್ಲ. ವಿಸ್ತಾರವಾದ ಸಾಮ್ರಾಜ್ಯ, ಅಪ್ರಬುದ್ಧ ಬಾಲಕ ಚಕ್ರವರ್ತಿ, ಅಸಂತುಷ್ಟ ತಳಮಳದಲ್ಲಿಯೇ ಕಸಿವಿಸಿ ಪಡುತ್ತಿದ್ದ ಸಾಮಂತ ಅರಸರು, ಹೆಚ್ಚಿನ ಲಾಭದಾಯಕ ಅಧಿಕಾರಸ್ಥಾನಗಳಿಗಾಗಿ ಮೇಲಾಡುತ್ತಿದ್ದ ಅರಮನೆಯ ಪರಿವಾರ, ಇವರೆಲ್ಲರ ಸಂಯುಕ್ತ ಪ್ರಯತ್ನದಿಂದ ಸಾಮ್ರಾಜ್ಯದಲ್ಲಿ ದಂಗೆಗಳಾದುವು. ಆದರೆ ಕರ್ಕನು ವಿಪ್ಲವ, ವಿದ್ರೋಹಿಗಳನ್ನೆಲ್ಲ ಹತ್ತಿಕ್ಕಿ ಸಿಂಹಾಸನವನ್ನು ಭದ್ರಪಡಿಸಿದ. ಆಳ್ವಿಕೆಯ ಪ್ರಾರಂಭದಲ್ಲೇ ಹುಟ್ಟಿದ ತೊಂದರೆಗಳು ಇವನ ರಾಜ್ಯಕಾಲದ ಅಂತ್ಯದವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಮುಂದುವರಿದುವು. ದಕ್ಷಿಣದಲ್ಲಿ ತಲಕಾಡಿನ ಗಂಗರು; ಪೂರ್ವದಲ್ಲಿ ವೇಂಗಿಯ ಚಳುಕ್ಯರು ಸ್ವತಂತ್ರವಾಗಲು ಸತತ ಪ್ರಯತ್ನಗಳನ್ನು ನಡೆಸುತ್ತಿದ್ದುದರಿಂದ ಅಮೋಘವರ್ಷ ತನ್ನ ಕಾಲವನ್ನೆಲ್ಲ ರಾಜ್ಯದ ಭದ್ರತೆಗಾಗಿಯೇ ವ್ಯಯಮಾಡಬೇಕಾಯಿತು. ಉತ್ತರದಲ್ಲಿ ಇವನ ಜ್ಞಾತಿಗಳಾದ ಗುಜರಾತಿನ ರಾಷ್ಟ್ರಕೂಟರು ವಲ್ಲಭನೆಂಬ ಅರಸನಿಂದ ಸೋಲಿಸಲ್ಪಟ್ಟುದಾಗಿ ತಿಳಿದಿದೆ. ಈ ವಲ್ಲಭ ಅಮೋಘವರ್ಷನೆಂಬುದು ಹಲವರ ಅಭಿಪ್ರಾಯ. ಆದರೆ ಅಮೋಘವರ್ಷನಿಗೆ ಅವರು ನಿಷ್ಠೆಯನ್ನೇ ತೋರಿದ್ದರು. ಆಪತ್ಸಹಾಯಕರಾಗಿದ್ದರು. ಆದ್ದರಿಂದ ವಲ್ಲಭ ಚಳುಕ್ಯ ಮನೆತನದ ಒಬ್ಬ ಅರಸಾಗಿರಬಹುದೆಂಬುದು ಹೆಚ್ಚು ಸಮಂಜಸವಿದ್ದಂತೆ ತೋರುತ್ತದೆ. ರಾಜ್ಯದ ಸುತ್ತಲೂ ನಡೆಯುತ್ತಿದ್ದ ಈ ಯುದ್ಧಗಳಿಂದಾಗಿ ರಾಜ್ಯ ವಿಸ್ತಾರದ ಯೋಚನೆಯೂ ಸಾಧ್ಯವಿರಲಿಲ್ಲ. ಪ್ರಾಯಶಃ ಈ ವಿದ್ಯಮಾನಗಳಿಂದ ಜುಗುಪ್ಸೆಗೊಂಡ ಅಮೋಘವರ್ಷ, ರಾಜ್ಯಾಡಳಿತಕ್ಕಿಂತಲೂ ಹೆಚ್ಚಾಗಿ ಧರ್ಮ, ಸಾಹಿತ್ಯದ ಕಡೆಗೇ ತನ್ನ ಒಲವನ್ನು ಹರಿಸಿದಂತೆ ತೋರುತ್ತದೆ. ಇಂಥ ಸಂದರ್ಭದಲ್ಲಿ ರಾಷ್ಟ್ರಕೂಟ ರಾಜ್ಯ ಉಳಿದು ಬಂದುದು ಪ್ರಾಯಶಃ ಇವನ ತಂದೆ ಗಳಿಸಿದ್ದ ಬಲದ ಮುಂದುವರಿಕೆ ಮತ್ತು ಕರ್ಕ, ಬಂಕೇಶ ಮುಂತಾದ ನಿಷ್ಠಾವಂತ ಯೋಧರ ಶ್ರಮದಿಂದಾಗಿ ಎಂದೇ ಹೇಳಬಹುದು.

ಇಮ್ಮಡಿ ಕೃಷ್ಣ (878–914) ತನ್ನ ತಂದೆ ಅಮೋಘವರ್ಷನ ಮರಣಾನಂತರ ಪಟ್ಟಕ್ಕೆ ಬಂದ. ತನ್ನ ತಂದೆಯ ಮೆದು ನೀತಿಯಿಂದ ಶತ್ರುಗಳು ಆಕ್ರಮಣಕಾರಿ

ಮನೋಭಾವವನ್ನು ತಾಳಿದ್ದರು. ಈತ ತನ್ನ ಆಳ್ವಿಕೆಯ ಆರಂಭದಲ್ಲಿಯೇ ಗೂರ್ಜರ ಪ್ರತೀಹಾರ ವಂಶದ ಭೋಜನ ದಾಳಿಯನ್ನು ಎದುರಿಸಬೇಕಾಯಿತು. ನರ್ಮದಾ ನದಿಯ ದಡದಲ್ಲಿ ನಡೆದ ಕದನದಲ್ಲಿ ಭೋಜನ ಕೈ ಮೇಲಾಗಿ ಕೃಷ್ಣ ಹಿಂಜರಿದ. ಇದರಿಂದ ಉತ್ತೇಜಿತನಾದ ಭೋಜ ಪಶ್ಚಿಮಕ್ಕೆ ಸಾಗಿ ಗುಜರಾತಿನಲ್ಲಿ ಅಧಿಕಾರದಲ್ಲಿದ್ದ ರಾಷ್ಟ್ರಕೂಟ ವಂಶದ ಸಾಮಂತ ಇಮ್ಮಡಿ ಕೃಷ್ಣನೊಡನೆ ಕಾದಿದ. ಈ ಕೃಷ್ಣನು ಭೋಜನನ್ನು ಸೋಲಿಸಿ ಉಜ್ಜಯಿನಿಯ ವರೆಗೂ ಬೆನ್ನಟ್ಟಿ ಹೋಗಿ ಆ ನಗರವನ್ನು ವಶಪಡಿಸಿಕೊಂಡ. ಹೀಗೆ ಇನ್ನೊಮ್ಮೆ ಮೂಲ ರಾಷ್ಟ್ರಕೂಟ ಮನೆತನದ ಹಿತರಕ್ಷಣೆಯ ಜವಾಬ್ದಾರಿ



ಕೈಲಾಸ ದೇವಾಲಯ, ಎಲ್ಲೋರ

ಯನ್ನು ಸಾಮಂತ ಮನೆತನದ ಇಮ್ಮಡಿ ಕೃಷ್ಣ ಹೊತ್ತ. ರಾಜ್ಯದ ಪೂರ್ವದಲ್ಲಿ ವೇಂಗಿಯ ಗುಣಗ ವಿಜಯಾದಿತ್ಯ ಹಿಂದಿನ ಸೋಲನ್ನು ನೆನೆದು ಸೇಡು ತೀರಿಸಲೆಂಬಂತೆ ಕೃಷ್ಣನು ಭೋಜನೊಡನೆ ಸೆಣಸುತ್ತಿದ್ದ ಸಂದರ್ಭವನ್ನು ಉಪಯೋಗಿಸಿ ರಾಜ್ಯದ ಉತ್ತರ ಭಾಗಗಳನ್ನು ಆಕ್ರಮಿಸಲು ಹೋರಾಡಿದನಾದರೂ ವೇಂಗಿಯರ ಕೈಮೇಲಾಯಿತು. ವಿಜಯಾದಿತ್ಯನು ಹಿಂದೆ ತಮ್ಮದಾಗಿದ್ದ ಎಲ್ಲ ಪ್ರದೇಶಗಳನ್ನೂ ಮರಳಿ ಪಡೆದುದಲ್ಲದೆ ಅಚಲಪುರ, ಕಿರಣಪುರಗಳನ್ನು ತಾತ್ಕಾಲಿಕವಾಗಿ ಸ್ವಾಧೀನ ಪಡಿಸಿಕೊಂಡ. ಚಳುಕ್ಯರ ಸೇನಾನಿ ಪಾಂಡುರಂಗ ಕದನಗಳಲ್ಲಿ ಪ್ರಮುಖ ಪಾತ್ರವಹಿಸಿದ. ಆದರೆ ಗುಣಗ ವಿಜಯಾದಿತ್ಯ ಸತ್ತಕೂಡಲೆ ಇಮ್ಮಡಿ ಕೃಷ್ಣ ವೇಮುಲವಾಡದ ಚಳುಕ್ಯ ಮನೆತನದ ಬದ್ದೆಗನ ನೆರವಿನಿಂದ ವೇಂಗಿನಾಡಿನ ಮೇಲೆ ದಂಡೆತ್ತಿ ಭೀಮ Iನನ್ನು ಸೆರೆಹಿಡಿದ. ಶೀಘ್ರದಲ್ಲಿಯೇ ಭೀಮ ಸ್ವತಂತ್ರನಾಗಿ ಹೋರಾಟಗಳು ಮುಂದುವರಿದವಾದರೂ ಕೊನೆಗೆ ಉಭಯತ್ರರ ನಡುವೆ ಕದನವಿರಾಮವೇರ್ಪಟ್ಟಿತು.

ಈ ಹೊತ್ತಿಗೆ ದಕ್ಷಿಣದಲ್ಲಿ ಚೋಳರು ಕ್ರಮೇಣ ಪ್ರಬಲರಾಗುತ್ತಿದ್ದ ಕಾರಣ ಕೃಷ್ಣ ಅವರ ಸ್ನೇಹ ಬಯಸಿ ತನ್ನ ಮಗಳನ್ನು ಚೋಳರ ಮೊದಲನೆಯ ಆದಿತ್ಯನೊಂದಿಗೆ ಮದುವೆ ಮಾಡಿಕೊಟ್ಟ. ಈ ದಂಪತಿಗಳಿಗೆ ಹುಟ್ಟಿದ ಮಗ ಕನ್ನರ. ಆದಿತ್ಯನ ಇನ್ನೊಬ್ಬಳು ಹೆಂಡತಿಯ ಮಗನಾದ ಒಂದನೆಯ ಪರಾಂತಕನು ಈ ಒಂದನೆಯ ಕನ್ನರನ ಪ್ರತಿಸ್ಪರ್ಧಿಯಾಗಿ ನಿಂತ. ಉತ್ತರಾಧಿಕಾರಕ್ಕಾಗಿ ಇವರೀರ್ವರ ನಡುವೆ ಹೋರಾಟಗಳಾದುವು. ಇಮ್ಮಡಿ ಕೃಷ್ಣ ಮೊಮ್ಮಗನ ನೆರವಿಗೆ ಧಾವಿಸಿದನಾದರೂ ವಲ್ಲಾಳದಲ್ಲಿ ನಡೆದ ಕದನದಲ್ಲಿ ಪರಾಂತಕ ಗೆದ್ದ.

ಚಾಳುಕ್ಯ ಇಮ್ಮಡಿ ವಿಕ್ರಮಾದಿತ್ಯನ ವೇಳೆಗೆ ಗುಜರಾತಿನ ತೀರಪ್ರದೇಶಗಳಲ್ಲಿ ದಾಳಿಮಾಡುತ್ತಿದ್ದ ಅರಬರು ಕಾಲದ ತಮ್ಮ ಧೋರಣೆಯನ್ನು ಬದಲಿಸಿಕೊಂಡು ಶಾಂತಿಪ್ರಿಯರಾಗಿದ್ದರು. ಇಮ್ಮಡಿ ಕೃಷ್ಣ ಇವರೊಡನೆ ಸ್ನೇಹ ಬೆಳೆಸಿದ. ತಜ್ಜಿಕರೆಂದು (ತಾಜಿಕ) ಕರೆಯಲ್ಪಟ್ಟ ಇವರು ಈತನ ರಾಜ್ಯದಲ್ಲಿ ಅಧಿಕಾರಿಗಳೂ ಆಗಿದ್ದರು. ಸಂಜಾನ್ ಪ್ರಾಂತಾಧಿಕಾರಿ ಒಬ್ಬ ತಾಜಿಕ. ಈತನ ಮಂತ್ರಿ ಒಬ್ಬ ಹಿಂದು ಧರ್ಮೀಯ. ಉತ್ತರದಲ್ಲಿ ಕಳಚುರಿಗಳೊಡನೆ, ದಕ್ಷಿಣದಲ್ಲಿ ಚೋಳರೊಡನೆ ವೈವಾಹಿಕ ಸಂಬಂಧವನ್ನು ಬೆಳೆಸಿದರೂ ಅವು ಬಯಸಿದ ಫಲ ನೀಡಲಿಲ್ಲ. ಪೂರ್ವಜರು ವಿಸ್ತರಿಸಿದ್ದ ರಾಜ್ಯದ ಹಲವು ಭಾಗಗಳು ಕೈಬಿಟ್ಟವು. ಆದರೂ ರಾಷ್ಟ್ರಕೂಟ ಗಡಿಗಳನ್ನು ಕಾಯ್ದುಕೊಂಡ ಕೀರ್ತಿ ಈತನಿಗೆ ಸಲ್ಲುತ್ತದೆ.

ಇಮ್ಮಡಿ ಕೃಷ್ಣ ಜೀವಿಸಿರುವಾಗಲೇ ಇವನ ಮಗ ಜಗತ್ತುಂಗ ಮರಣಹೊಂದಿದ್ದ ಕಾರಣ ಮೊಮ್ಮಗನಾದ ಮುಮ್ಮಡಿ ಇಂದ್ರ 914ರಲ್ಲಿ ಪಟ್ಟಕ್ಕೆ ಬಂದ. ಅನಿರೀಕ್ಷಿತವಾಗಿ ರಾಷ್ಟ್ರಕೂಟ ಸಾಮ್ರಾಜ್ಯದ ಉತ್ತರ ಗಡಿಯಲ್ಲಿ ದಾಳಿ ಮಾಡಿದ ನಾಸಿಕದ ಹತ್ತಿರದ ಗೋವರ್ಧನನನ್ನು ಆಕ್ರಮಿಸಿದ. ಪರಮಾರ ವಂಶದ ಉಪೇಂದ್ರನನ್ನು ಸೋಲಿಸಿ ಹಿಮ್ಮೆಟ್ಟಿಸಿದುದು ಇವನ ಮೊದಲ ಸಾಧನೆ. ಆ ಬಳಿಕ ತನ್ನ ಪೂರ್ವಜರಂತೆ ಉತ್ತರ ದಿಗ್ವಿಜಯವನ್ನು ಬಯಸಿದ ಅರಸನಿಗೆ ಗೂರ್ಜರ ಪ್ರತೀಹಾರ ವಂಶದ ಎರಡನೆಯ ಭೋಜ ಮತ್ತು ಮಹೀಪಾಲರ ನಡುವೆ ಏರ್ಪಟ್ಟಿದ್ದ ವಿರಸ ಅವಕಾಶ ಒದಗಿಸಿತು. ಕನೂಜನ್ನು ವಶಪಡಿಸಿಕೊಂಡ ಇಂದ್ರ ಪಲಾಯನ ಮಾಡುತ್ತಿದ್ದ ಮಹೀಪಾಲನ ಬೆನ್ನಟ್ಟಲು ತನ್ನ ಸಾಮಂತನಾದ ವೇಮುಲವಾಡದ ಚಳುಕ್ಯ ಇಮ್ಮಡಿ ನರಸಿಂಹನನ್ನು ಕಳಿಸಿದ. ಈ ಘಟನೆಗಳನ್ನು ಪಂಪಕವಿ ತನ್ನ ಭಾರತದಲ್ಲಿ ಪ್ರಸ್ತಾಪಿಸಿದ್ದಾನೆ. ಕೃಷ್ಣ ಹಿಂದಿರುಗಿದ ಬಳಿಕ ಮಹೀಪಾಲ ಚಂದೇಲ ಮನೆತನದ ಹರ್ಷನ ನೆರವಿನಿಂದ ಕನೂಜನ್ನು ಪುನಃ ವಶಪಡಿಸಿಕೊಂಡ.

ಇಂದ್ರನ ಬಳಿಕ ಇವನ ಹಿರಿಯ ಮಗ ಎರಡನೆಯ ಅಮೋಘವರ್ಷ (929–30) ಪಟ್ಟಕ್ಕೆ ಬಂದನಾದರೂ ಒಂದು ವರ್ಷದೊಳಗೇ ಅವನ ತಮ್ಮ ನಾಲ್ಕನೆಯ ಗೋವಿಂದ (930–35) ಇವನನ್ನು ಬದಿಗೊತ್ತಿ ಸಿಂಹಾಸನವನ್ನೇರಿದ. ಆದರೆ ಈತ ಪ್ರಜೆಗಳ ಮನ್ನಣೆಗೆ ಪಾತ್ರವಾಗಲಿಲ್ಲ. ಈತನ ವಿರುದ್ಧ ಹೂಡಲಾದ ಸಂಚಿನಲ್ಲಿ ಗಂಗರ ಇಮ್ಮಡಿ ಬೂತುಗ ಹಾಗೂ ವೇಮುಲವಾಡದ ಅರಿಕೇಸರಿ ಪ್ರಮುಖ ಪಾತ್ರ ವಹಿಸಿದರು. ಗೋವಿಂದನು ಅರಿಕೇಸರಿಯನ್ನು ಕದನದಲ್ಲಿ ಎದುರಿಸಿದನಾದರೂ ಇವನ ಚಿಕ್ಕಪ್ಪನಾದ ಮುಮ್ಮಡಿ ಅಮೋಘವರ್ಷನನ್ನು (ಸು. 935–39) ಸಾಮಂತರು ಪಟ್ಟಕ್ಕೆ ತಂದರು. ಈ ವೇಳೆಗಾಗಲೇ ವಯೋವೃದ್ಧನಾದ ಅಮೋಘವರ್ಷ ಸ್ವಭಾವತಃ ಧಾರ್ಮಿಕ ಪ್ರವೃತ್ತಿಯವನೂ ಆದಕಾರಣ ರಾಜಕಾರ್ಯವನ್ನೆಲ್ಲ ತನ್ನ ಮಗನಾದ ಯುವರಾಜ ಮೂರನೆಯ ಕೃಷ್ಣನಿಗೆ ವಹಿಸಿದ. ಇಮ್ಮಡಿ ಬೂತುಗ ಕೃಷ್ಣನ ಸೋದರಿ ರೇವಕ ನಿಮ್ಮಡಿಯನ್ನು ಲಗ್ನವಾಗಿದ್ದ. ಕೃಷ್ಣನ ಬೆಂಬಲದಿಂದ ಸೋದರನಾದ ಮುಮ್ಮಡಿ ರಾಚಮಲ್ಲನನ್ನು ಯುದ್ಧದಲ್ಲಿ ಕೊಂದು, ಗಂಗವಾಡಿಗೆ ಸ್ವತಃ ಅಧಿಕಾರಿಯಾಗಿ ಕೃಷ್ಣನಿಗೆ ನಿಷ್ಠೆಯನ್ನು ತೋರಿಸಿದ. ಕೃಷ್ಣನ ತಾಯಿ ಕಳಚುರಿ ಮನೆತನಕ್ಕೆ ಸೇರಿದವಳು. ತಂದೆ ಬಹುಕಾಲ ಮಾವನ ರಾಜ್ಯದಲ್ಲೇ ನೆಲಸಿದ್ದ. ಆದರೂ ಯಾವುದೋ ಕಾರಣ ದಿಂದ ಅವರ ಮೇಲೂ ದಂಡೆತ್ತಿ ಕಳಚುರಿಯ ಯುವರಾಜ ಸಾಹಸ ತುಂಗನನ್ನು ಸೋಲಿಸಿದ. ಇದರಿಂದ ಅವರೀರ್ವರ ನಡುವಣ ಸೌಹಾರ್ದಕ್ಕೆ ಧಕ್ಕೆಯುಂಟಾಯಿತು.

ಇಷ್ಟು ಸಾಲದೆ ಗೂರ್ಜರ ಪ್ರತೀಹಾರರ ಮೇಲೆ ದಂಡೆತ್ತಿ ಹೋಗಿ ಚಿತ್ರಕೂಟ, ಕಾಲಂಜರ ಕೋಟೆಗಳನ್ನು ವಶಪಡಿಸಿಕೊಂಡು, ಹೆಸರಿಗೆ ಮಾತ್ರ ಅರಸನಾಗಿದ್ದ ಅಮೋಘವರ್ಷನ ಮರಣಾನಂತರ (ಸು. 939) ಮೂರನೆಯ ಕೃಷ್ಣ ಪಟ್ಟಕ್ಕೆ ಬಂದ. ರಾಜ್ಯದ ಆಂತರಿಕ ವ್ಯವಸ್ಥೆಯನ್ನು ಭದ್ರಮಾಡಿ ಸ್ಥಿತ್ಯಂತರವಾಗಿದ್ದ ತಮಿಳುನಾಡಿನ ರಾಜಕೀಯದಲ್ಲಿ ಕೈಹಾಕಿದ

ಚೋಳರ ಪರಾಂತಕ ಈ ಮೊದಲೇ ರಾಷ್ಟ್ರಕೂಟರ ವಿರೋಧಿಯಾಗಿದ್ದ. ರಾಜ್ಯಭ್ರಷ್ಟನಾಗಿದ್ದ ನಾಲ್ವಡಿ ಗೋವಿಂದನಿಗೆ ಆಶ್ರಯ ನೀಡಿ ವೈರತ್ವವನ್ನು ವೃದ್ಧಿಸಿದ. ಈಗ ಕೃಷ್ಣ ಗಂಗ ಬೂತುಗನ ಸಹಾಯದೊಡನೆ ಚೋಳರ ವಿರುದ್ಧ ದಂಡೆತ್ತಿ ತಕೋಟದಲ್ಲಿ ನಡೆದ ಕದನದಲ್ಲಿ ಚೋಳರ ಯುವರಾಜನಾದ ರಾಜಾದಿತ್ಯನನ್ನು ಕೊಂದ. ತೊಂಡೈಮಂಡಲವನ್ನು ಗೆದ್ದು ಕಾಂಚೀಪುರದಿಂದ ತಂಜಾವೂರುವರೆಗಿನ ಪ್ರದೇಶವನ್ನು ಆಕ್ರಮಿಸಿ, ರಾಮೇಶ್ವರದವರೆಗೂ ಸಾಗಿ ಅಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದ. ಪಾಂಡ್ಯರೂ ಕೇರಳರೂ ಸಿಂಹಳೀಯರೂ ವಿನಮ್ರರಾದರು. ಉತ್ತರ ಆರ್ಕಾಟು ಜಿಲ್ಲೆಯ ಮೇಲ್ಪಾಡಿ ಕೆಲಕಾಲ ಇವನ ರಾಜಧಾನಿಯಾಯಿತು.

ಈ ಹೊತ್ತಿಗೆ ಉತ್ತರದಲ್ಲಿ ಗೂರ್ಜರ ಪ್ರತೀಹಾರರು ಮತ್ತೆ ಪ್ರಬಲರಾಗಿದ್ದರು. ಹೊಸದಾಗಿ ಅಧಿಕಾರಕ್ಕೆ ಬಂದಿದ್ದ ಬುಂದೇಲಖಂಡದ ಚಂದೇಲರು ಚಿತ್ರಕೂಟ ಮತ್ತು ಕಾಲಂಜರ ಕೋಟೆಗಳನ್ನು ಹಿಡಿದುಕೊಂಡಿದ್ದರು (ಸು. 950). ಗಂಗ ಇಮ್ಮಡಿ ಮಾರಸಿಂಹನ ಮುಖಂಡತ್ವದಲ್ಲಿ ರಾಷ್ಟ್ರಕೂಟ ಸೈನ್ಯ ಉತ್ತರ ದಂಡಯಾತ್ರೆಯನ್ನು ಕೈಗೊಂಡು (ಸು. 963) ಚಂದೇಲರನ್ನೂ ಮಾಳವದ ಪರಮಾರ ವಂಶದ ಸೀಯಕ ಹರ್ಷನನ್ನೂ ಸೋಲಿಸಿತು. ರಾಷ್ಟ್ರಕೂಟ ಅಧಿಕಾರ ನರ್ಮದೆಯ ಉತ್ತರಕ್ಕೂ ಹಬ್ಬಿತು.

ಪೂರ್ವತೀರದಲ್ಲಿ ವೇಂಗಿಮಂಡಲದಲ್ಲಿ ತಲೆ ಎತ್ತಿದ ಅಂತಃಕಲಹಗಳಲ್ಲಿ ಪ್ರವೇಶಿಸಿ ತನಗೆ ಅನುಕೂಲನಾದ ಇಮ್ಮಡಿ ಯುದ್ಧಮಲ್ಲನ ಮಗ ಬಾಡಪನಿಗೆ ವೇಂಗಿ ರಾಜ್ಯವನ್ನು ವಹಿಸಿ ಅವನು ರಾಷ್ಟ್ರಕೂಟ ಸಾಮಂತತ್ವವನ್ನು ಒಪ್ಪಿಕೊಂಡಿರುವ ವ್ಯವಸ್ಥೆ ಮಾಡಲಾಯಿತು. ಈ ವಿಧದಲ್ಲಿ ಮೂರನೆಯ ಕೃಷ್ಣ ಹಿರಿಯರ ಬೃಹತ್ ಸಾಧನೆಗಳನ್ನು ಅನುಕರಿಸಿ ದಕ್ಷಿಣ ಭಾರತವನ್ನೆಲ್ಲ ರಾಷ್ಟ್ರಕೂಟ ಏಕಚ್ಛತ್ರದಡಿಗೆ ತಂದು ಉತ್ತರ ಭಾರತದಲ್ಲೂ ಪ್ರಭಾವಿಯಾಗಿ ಮೆರೆದ.

ಕೃಷ್ಣನ ಸೋದರ ಖೊಟ್ಟಿಗನ ಸಿಂಹಾಸನಾರೋಹಣದಿಂದ (967) ರಾಷ್ಟ್ರಕೂಟರ ಅವನತಿ ಪ್ರಾರಂಭವಾಯಿತು. ಪಟ್ಟಕ್ಕೇರುವಾಗಲೇ ಮುದುಕನಾಗಿದ್ದ ಈತ ಆಡಳಿತದಲ್ಲಿಯೂ ಶೌರ್ಯದಲ್ಲಿಯೂ ದುರ್ಬಲನಾಗಿದ್ದ. ಎಂತಲೇ ಕೃಷ್ಣನ ದಂಡಯಾತ್ರೆಗಳಲ್ಲಿ ನೊಂದ ರಾಜರೆಲ್ಲ ಈಗ ತಲೆಯೆತ್ತಿದರು. ಪರಮಾರ ವಂಶದ ಸೀಯಕ ಹರ್ಷ ರಾಜಧಾನಿ ಮಳಖೇಡಕ್ಕೆ ನುಗ್ಗಿ ಅದನ್ನು ಸಂಪೂರ್ಣವಾಗಿ ಲೂಟಿ ಮಾಡಿದ. ಗಂಗರ ಇಮ್ಮಡಿ ಮಾರಸಿಂಹ ಪರಮಾರನನ್ನು ಹಿಮ್ಮೆಟ್ಟಿಸಿದನಾದರೂ ಈ ಹೊಡೆತದಿಂದ ರಾಷ್ಟ್ರಕೂಟರ ಪ್ರತಿಷ್ಠೆ ಪರಮಾಧಿಕಾರಗಳಿಗೆ ಧಕ್ಕೆಯುಂಟಾಯಿತು. ಇದಾದ ಸ್ವಲ್ಪವೇ ದಿನಗಳಲ್ಲಿ ಖೊಟ್ಟಿಗ ಸತ್ತ (972).

ಇವನ ಅನಂತರ ಇನ್ನೊಬ್ಬ ಸುಂದರ ನಿರುಪಮನ ಮಗ 2ನೆಯ ಕರ್ಕ ಒಂದು ವರ್ಷ ಮಾತ್ರ ರಾಜ್ಯವಾಳಿದ. ರಾಜನ ಅಸಾಮರ್ಥ್ಯ, ದುರ್ವ್ಯವಹಾರಗಳು ರಾಜ್ಯದ ಅಧಃಪತನಕ್ಕೆ ಕಾರಣವಾದುವು. ಮಾಂಡಲಿಕರು, ಅಧಿಕಾರಿಗಳು, ಪ್ರಜೆಗಳು ಅತೃಪ್ತರಾದರು. ಗೊಂದಲ ಅಶಾಂತಿ ಹೆಚ್ಚಿತು. ಈ ಸಮಯದಲ್ಲಿ ರಾಷ್ಟ್ರಕೂಟರ ಅಧೀನ ಅಧಿಕಾರಿಯಾಗಿದ್ದ ಚಾಳುಕ್ಯ ವಂಶದ ಇಮ್ಮಡಿ ತೈಲಪ ಕ್ರಾಂತಿಯ ಮುಂದಾಳತ್ವವನ್ನು ವಹಿಸಿದ. ಎರಡು ನೂರು ವರ್ಷಗಳ ಹಿಂದೆ ತನ್ನ ಚಳುಕ್ಯ ಪೂರ್ವಜರಿಂದ ಅಧಿಕಾರ ಕಿತ್ತುಕೊಂಡಿದ್ದ ರಾಷ್ಟ್ರಕೂಟ ದಂತಿದುರ್ಗನ ಯುಕ್ತಿಯನ್ನೇ ತಾನೂ ಮಾಡಿ ಕಳೆದುಹೋದ ಚಾಳುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸುವ ಧ್ಯೇಯದಿಂದ ತೈಲಪನು ಮುನ್ನಡೆದ. ರಾಷ್ಟ್ರಕೂಟರಿಂದ ಅವಮಾನಿತನಾಗಿದ್ದ ಚೇದಿಯ ಕಳಚುರಿಗಳು ನಿರಾಸಕ್ತರಾಗಿ ಘಟನಾವಳಿಗಳ ಮೂಕಪ್ರೇಕ್ಷಕರಾಗಿದ್ದರು. ತೈಲಪ ಬಲವಾದ ಸೈನ್ಯದೊಂದಿಗೆ ರಾಷ್ಟ್ರಕೂಟ ರಾಜಧಾನಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡ. ಕರ್ಕನೇನೋ ಪಾರಾಗಿ 991ರವರೆಗೂ ಶಿವಮೊಗ್ಗ ಜಿಲ್ಲೆಯ ಒಂದು ಗ್ರಾಮದಲ್ಲಿ ಬಹು ದೀನಸ್ಥಿತಿಯಲ್ಲಿ ಬದುಕಿದ. ರಾಷ್ಟ್ರಕೂಟ ವಂಶದ ಅಭಿಮಾನಿಯೂ ಹಿತೈಷಿಯೂ ಬಂಧುವೂ ಆದ ಇಮ್ಮಡಿ ಮಾರಸಿಂಹ ಮುಂತಾದವರು ಕೃಷ್ಣನ ಮೊಮ್ಮಗ ನಾಲ್ಕನೆಯ ಇಂದ್ರನನ್ನು ಬೆಂಬಲಿಸಿ ಹೋರಾಡಿದರಾದರೂ ಸಫಲರಾಗಲಿಲ್ಲ. 967ರಲ್ಲಿ ಮೂರನೆಯ ಕೃಷ್ಣನ ಆಳ್ವಿಕೆಯಲ್ಲಿ ಉಚ್ಛ್ರಾಯದ ತುದಿಗೇರಿದ್ದ ರಾಷ್ಟ್ರಕೂಟ ಸಾಮ್ರಾಜ್ಯ ಕೇವಲ ಆರು ವರ್ಷಗಳಲ್ಲಿ ಅಂದರೆ 973ರಲ್ಲಿ ಅಸ್ತಂಗತವಾಯಿತು.

ಭಾರತದ ಕೆಲವೇ ಮಹಾಸಾಮ್ರಾಜ್ಯಗಳಾದ ಮೌರ್ಯ, ಗುಪ್ತ, ಪ್ರತೀಹಾರ, ವಿಜಯನಗರ ಸಾಮ್ರಾಜ್ಯಗಳ ಜೊತೆಯಲ್ಲಿ ಸರಿಸಮವಾಗಿ ನಿಲ್ಲಬಲ್ಲ ಸಾಮ್ರಾಜ್ಯ ರಾಷ್ಟ್ರಕೂಟರದು. ಸಮಕಾಲೀನ ಅರಬ್ ಲೇಖಕ ಸುಲೇಮಾನ್‌ನ ಪ್ರಕಾರ ಆಗಿನ ಪ್ರಪಂಚದ ನಾಲ್ಕು ಮಹಾಸಾಮ್ರಾಜ್ಯಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಒಂದಾಗಿತ್ತು. **(ಜಿ.ಆರ್.ಪಿ.;ಬಿ.ಆರ್.ಜಿ.)**

ರಾಷ್ಟ್ರಕೂಟ ಶಾಖೆಗಳು ಬಹಳ ಇವೆ. ಅವು ಭಾರತದ ತುಂಬ ವ್ಯಾಪಿಸಿಕೊಂಡಿವೆ. ಗುಜರಾತ್, ರಾಜಸ್ಥಾನ (ಬಿಕನೇರ್ ರಾಜಮನೆತನ, 1947ರಲ್ಲಿ ಭಾರತ ಸರ್ಕಾರದಲ್ಲಿ ವಿಲೀನವಾಯಿತು), ಮಿಥಿಲೆ (ಬಿಹಾರ) ಮತ್ತೆ ಕರ್ನಾಟಕದಲ್ಲೇ ಬನವಾಸಿ ಹಾಗೂ ಬೆಳಗಾಂವಿ ಜಿಲ್ಲೆಗಳಲ್ಲಿ ಎರಡು ಮನೆತನಗಳಿದ್ದವು. ಸೌಂದತ್ತಿಯ ರಟ್ಟರು ಬೆಳಗಾಂವಿ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದರೆ ಬನವಾಸಿಯ ರಾಷ್ಟ್ರಕೂಟರು ಬನವಾಸಿಯಿಂದ ಚಿತ್ರದುರ್ಗ ಜಿಲ್ಲೆಯವರೆಗೆ ರಾಜ್ಯವಾಳಿದರು; ಮಹಾಮಂಡಲೇಶ್ವರರಾಗಿ ಮೆರೆದರು. ಈ ಶಾಖೆಯ ಶಂಕರಗಂಡ (II) ಹಾಗೂ ಸಿಂಗಣದೇವ ಬಹಳ ಪ್ರಸಿದ್ಧ ರಾಜರು. ಶಂಕರಗಂಡನು ಕೊಪ್ಪಳದಲ್ಲಿ ಜಯಧೀರ ಜಿನಾಲಯವನ್ನು ಕಟ್ಟಿಸಿದ್ದಾನೆ. ಸಿಂಗಣದೇವನು ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಆಹವಮಲ್ಲ ಸೋಮೇಶ್ವರ (I) ದೊರೆಯ ಅಳಿಯನಾಗಿದ್ದ. ಚಾಳುಕ್ಯ ಸಾಮ್ರಾಜ್ಯವನ್ನು ಚೋಳರಿಂದ ಕೊಳ್ಳಿಪಾಕೆಯಲ್ಲಿ ರಕ್ಷಿಸಿದ. ಅಂತೆಲೆ ಇವನಿಗೆ 'ಕೊಳ್ಳಿಪಾಕೆಯ ಗೋವ' ಹಾಗೂ 'ಮಾವನ ಗಂಧವಾರಣ' ಎಂಬ ಬಿರುದುಗಳಿದ್ದವು. ಆರಂಭದಲ್ಲಿ ಇವರು ಓರಂಗಲ್ಲಿನ ಹತ್ತಿರವಿದ್ದರು. ಇವರ ಒಂದು ಕನ್ನಡ ಶಿಲಾಶಾಸನ ಆ ಜಿಲ್ಲೆಯ ಜಾಫರಗದ್ದ ಸ್ಥಳದಲ್ಲಿ ದೊರಕಿದೆ. ವಂಶವೃಕ್ಷ ಇಂತಿದೆ:

**ಯಾದವವಂಶ**

ಪೆರದ
|
ಹರಿಯಮ್ಮ
|
ಘಾಣರಾಜ
|
ಶಂಕರಗಂಡ (I)
|
ಆಪ್ಪುವರಾಜನ್
|
ಗೊಮ್ಮರಸ
|
ಅಸಗಮರಸ (I)
|
ಶಂಕರಗಂಡ (II)
- ಸಿಂಗಣದೇವ (ಚಿತ್ರದುರ್ಗ)
- ಅಸಗಮರಸ (II) (1074)
- ಸಂಕರಗಂಡರಸ (III) (1077)

**ಆಡಳಿತ ವ್ಯವಸ್ಥೆ:** ಕೇಂದ್ರ ಸರ್ಕಾರ ರಾಜನನ್ನೊಳಗೊಂಡ ಮಂತ್ರಿಮಂಡಲದಿಂದ ಕೂಡಿದ್ದಾಗಿತ್ತು. ರಾಜತ್ವವು ವಂಶಪಾರಂಪರ್ಯವಾಗಿತ್ತು. ಸಾಮಾನ್ಯವಾಗಿ ರಾಜನ ಜ್ಯೇಷ್ಠಪುತ್ರ ಯುವರಾಜನಾಗಿ, ಮುಂದೆ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗುತ್ತಿದ್ದ. ಆದರೆ ದಕ್ಷತೆಯನ್ನು ಆಧರಿಸಿ ಯುವರಾಜನನ್ನು ಆಯ್ಕೆ ಮಾಡುವ ಪದ್ಧತಿಯೂ ಇದ್ದಿತೆಂಬುದು ಸ್ಪಷ್ಟ. ಯುವರಾಜ ಸಾಮಾನ್ಯವಾಗಿ ರಾಜಧಾನಿಯಲ್ಲಿರುತ್ತಿದ್ದ. ಆದರೆ ಕಿರಿಯ ರಾಜಕುಮಾರರನ್ನು ಪ್ರಾಂತ್ಯಾಧಿಕಾರಿಗಳಾಗಿ ನೇಮಿಸುತ್ತಿದ್ದರು. ರಾಜನು ಪ್ರಾಪ್ತವಯಸ್ಕನಾಗಿಲ್ಲದಿದ್ದರೆ ಒಬ್ಬ ಪುರುಷಸಂಬಂಧಿಯನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸುತ್ತಿದ್ದರು. ಮಂತ್ರಿಮಂಡಲದ ಗಾತ್ರ ಇತ್ಯಾದಿಗಳು ಸ್ಪಷ್ಟವಾಗಿ ತಿಳಿಯದಿದ್ದರೂ ಸಾಮಾನ್ಯವಾಗಿ ಪ್ರಧಾನಿ, ಸಂಧಿವಿಗ್ರಹಿ, ಭಂಡಾರಿ, ಕಂದಾಯ ಇಲಾಖೆಯ ಮುಖ್ಯಾಧಿಕಾರಿ, ಸೇನಾಪತಿ ಮತ್ತು ಪುರೋಹಿತರು ಮಂತ್ರಿಮಂಡಲದ ಸದಸ್ಯರಾಗಿರುತ್ತಿದ್ದರು. ಇವರೆಲ್ಲರೂ ದಕ್ಷ ಸೈನಿಕರೂ ಆಗಿದ್ದು ಕದನದಲ್ಲಿ ಭಾಗವಹಿಸುತ್ತಿದ್ದರು. ಮಂತ್ರಿಗಳಲ್ಲಿ ಕೆಲವರು ಸಣ್ಣ ಪ್ರಾಂತ್ಯಗಳ ಸಾಮಂತರೂ ಆಗಿದ್ದರು. ಈ ಅಧಿಕಾರಿಗಳಿಗೆ ಭೂಮಿಗಳನ್ನು ಗ್ರಾಮಗಳನ್ನು ಸರ್ವಮಾನ್ಯ ದತ್ತಿಗಳಾಗಿ ಕೊಡುವುದರ ಮೂಲಕ ಅವರ ಸಂಬಳಗಳನ್ನು ಪೂರೈಸಲಾಗುತ್ತಿತ್ತು. ನಿರ್ದಿಷ್ಟ ಮೊತ್ತವನ್ನು ಹಣದ ರೂಪದಲ್ಲಿ ಪಾವತಿ ಮಾಡುತ್ತಿರಲಿಲ್ಲ. ರಾಷ್ಟ್ರಕೂಟರ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕೋಸ್ಕರ ಅನೇಕ ರಾಷ್ಟ್ರಗಳನ್ನಾಗಿ ವಿಂಗಡಿಸಲಾಗಿದ್ದಿತು. ರಾಷ್ಟ್ರಪತಿಯು ಪ್ರತಿಯೊಂದು ರಾಷ್ಟ್ರದ ಮುಖ್ಯ ಅಧಿಕಾರಿ. ಈಗಿನ ಡಿವಿಷನ್‌ಗಳಿಗೆ ಸಮಾನವಾಗಿರಬಹುದಾದ ಒಂದೊಂದು ರಾಷ್ಟ್ರದಲ್ಲೂ ಜಿಲ್ಲೆಗಳಂತಹ ನಾಲ್ಕೈದು ವಿಷಯಗಳಿದ್ದು ಇವುಗಳ ಆಡಳಿತ ವಿಷಯಪತಿಗೆ ಒಳಪಟ್ಟಿತ್ತು. ಪ್ರತಿ ವಿಷಯದಲ್ಲೂ ಸು. 1,000 ದಿಂದ 4,000ದವರೆಗೆ ಗ್ರಾಮಗಳಿದ್ದವು. ಪುಣಕ ವಿಷಯದಲ್ಲಿ 1,000 ಗ್ರಾಮಗಳಿದ್ದರೆ ಕರಹಾಟಕ ವಿಷಯದಲ್ಲಿ 4,000 ಗ್ರಾಮಗಳಿದ್ದುವು. ಭುಕ್ತಿಗಳು ವಿಷಯಗಳ ಒಳವಿಭಾಗಗಳು. ಒಂದೊಂದು ಭುಕ್ತಿಯಲ್ಲೂ ಸು. 50ರಿಂದ 70 ಗ್ರಾಮಗಳಿರುತ್ತಿದ್ದವು. ಗ್ರಾಮ ಆಡಳಿತ ವಿಭಾಗಗಳಲ್ಲಿ ಕನಿಷ್ಠ ಘಟಕ. ರಾಷ್ಟ್ರಪತಿಯು ತನ್ನ ಆಡಳಿತ ಕಕ್ಷೆಗೊಳಪಟ್ಟ ಪ್ರದೇಶದ ಶಾಂತಿಪಾಲನೆಗೆ, ರಕ್ಷಣೆಗೆ ಜವಾಬ್ದಾರನಾಗಿದ್ದ. ಸೈನ್ಯದ ಪೌರಾಡಳಿತದ ಮುಖ್ಯಾಧಿಕಾರಿಯಾಗಿದ್ದ ಈತ ಸಾಮಂತರ ಕಿರಿಯ ಅಧಿಕಾರಿಗಳ ನಿಷ್ಠೆಯ ವಿಷಯದಲ್ಲಿ ಎಚ್ಚರ ವಹಿಸಿ, ಅವರನ್ನು ಹತೋಟಿಯಲ್ಲಿಡುತ್ತಿದ್ದ. ಆಯಾ ಪ್ರದೇಶದ ಕಂದಾಯದ ವಸೂಲಿ ಆತನ ಜವಾಬ್ದಾರಿ. ಅರಸನ ಅನುಮತಿಯಿಲ್ಲದೆ ಆದಾಯದಲ್ಲಿ ವ್ಯತ್ಯಯಗಳನ್ನು ಮಾಡುವ ಹಿರಿಯ ಕಿರಿಯ ಅಧಿಕಾರಿಗಳನ್ನು ನೇಮಿಸುವ ಹಕ್ಕು ಈತನಿಗಿರಲಿಲ್ಲ. ಸುಮಾರು ಇದೇ ವಿಧದ ಜವಾಬ್ದಾರಿಗಳು ತಮ್ಮ ತಮ್ಮ ಆಡಳಿತ ಕ್ಷೇತ್ರಗಳಲ್ಲಿ ವಿಷಯಪತಿ, ಭೋಗಪತಿಗಳಿಗೂ ಇದ್ದಿತು. ಹಲವೊಮ್ಮೆ ಈ ಅಧಿಕಾರಿಗಳ ದಕ್ಷತೆಯನ್ನು ಪರಿಗಣಿಸಿ ಈ ಹುದ್ದೆಗಳು ವಂಶಪಾರಂಪರ್ಯವಾಗಿರುತ್ತಿದ್ದವು.

ವಿಷಯಗಳ ಅಧಿಕಾರಿಗಳಾಗಿದ್ದ ವಿಷಯಪತಿಗಳು ರಾಷ್ಟ್ರಪತಿಗಳಿಗೆ ಜವಾಬ್ದಾರಿ ಹೊಂದಿದ್ದರು. ವಿಷಯ ಅಥವಾ ಜಿಲ್ಲೆಗಳನ್ನು ಭುಕ್ತಿಗಳೆಂದು ಪುನರ್ವಿಂಗಡಿಸಿ ಇವುಗಳ ಆಡಳಿತವನ್ನು ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಭೋಗಪತಿ ಅಥವಾ ಭೋಕರ ಎಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದ. ಭುಕ್ತಿಗಳನ್ನು 10ರಿಂದ 30 ಗ್ರಾಮಗಳನ್ನೊಳಗೊಂಡ ವೃತ್ತಗಳನ್ನಾಗಿ ಪುನರ್ವಿಂಗಡಿಸಲಾಗಿತ್ತು. ಇವುಗಳ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಅಥವಾ ಪ್ರಾಂತ್ಯಾಧಿಕಾರಿಗಳ ನೆರವಿನಿಂದ ಆಡಳಿತ ನಡೆಸುತ್ತಿದ್ದರು. ಪ್ರತಿ ಗ್ರಾಮವು ಗಾವುಂಡ ಎಂಬ ವಂಶಪಾರಂಪರ್ಯ ಅಧಿಕಾರಿಯ ಹತೋಟಿಯಲ್ಲಿದ್ದಿತು. ಈತನು ಜನಗಳ ಪ್ರತಿನಿಧಿಯಾಗಿದ್ದ. ಪ್ರತಿಗ್ರಾಮಕ್ಕೂ ಒಬ್ಬ ಗಾವುಂಡನಿದ್ದ. ಈತ ಗ್ರಾಮ ಸೈನ್ಯದ ಮೇಲ್ವಿಚಾರಣೆಯನ್ನು ಹೊಂದಿದ್ದನಲ್ಲದೆ ಗ್ರಾಮದ ಕಂದಾಯ ವಸೂಲಿಗೂ ಜವಾಬ್ದಾರಿ ಹೊಂದಿದ್ದು ಗ್ರಾಮಸಭೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ. ಸ್ವಲ್ಪಮಟ್ಟಿಗೆ ನ್ಯಾಯಾಡಳಿತವೂ ಇವನ ಅಧಿಕಾರದ ವ್ಯಾಪ್ತಿಗೊಳಪಟ್ಟಿತ್ತು. ಒಟ್ಟಿನಲ್ಲಿ ಈತ ಗ್ರಾಮಾಡಳಿತದ ಮುಖ್ಯಾಧಿಕಾರಿಯಾಗಿದ್ದ. ಈತನ ಸಂಭಾವನೆ ಕಂದಾಯರಹಿತ ಜಮೀನಾಗಿದ್ದಿತು. ಈತನ ಸಹಾಯಕ್ಕೆ ಗ್ರಾಮದ ಲೆಕ್ಕಿಗ ಇರುತ್ತಿದ್ದ. ಗ್ರಾಮಸಭೆಗಳಿದ್ದುವು. ಅಗ್ರಹಾರಗಳಲ್ಲಿ ಬ್ರಾಹ್ಮಣರನ್ನೊಳಗೊಂಡ ಮಹಾಜನ ಸಭೆಗಳಿದ್ದುವು. ನಗರ ಮತ್ತು ಪಟ್ಟಣಗಳು ಪುರಪತಿ ಅಥವಾ ನಗರಪತಿಗಳೆಂಬ ಅಧಿಕಾರಿಗಳ ಹತೋಟಿಯಲ್ಲಿದ್ದುವು. ಅವರು ಸಮಿತಿಗಳ ನೆರವಿನಿಂದ ಪೌರಾಡಳಿತವನ್ನು ನೋಡಿಕೊಳ್ಳುತ್ತಿದ್ದರು. ಶಾಸನಗಳಲ್ಲಿ ಒಮ್ಮೊಮ್ಮೆ ಗ್ರಾಮಮಹತ್ತರ, ವಿಷಯಮಹತ್ತರ, ರಾಷ್ಟ್ರಮಹತ್ತರ ಮುಂತಾದ ಪದಗಳು ಕಂಡುಬಂದಿದ್ದು, ಇವು ಗ್ರಾಮವಿಷಯ ಅಥವಾ ರಾಷ್ಟ್ರದ ಸಭೆಗಳ ಸದಸ್ಯರನ್ನು (ಹಿರಿಯರನ್ನು) ಸೂಚಿಸುತ್ತವೆ.

(ಎ.ವಿ.ಎನ್.;ಬಿ.ಆರ್.ಜಿ)

**ಆರ್ಥಿಕ ಸಾಮಾಜಿಕ ಸ್ಥಿತಿ:** ರಾಷ್ಟ್ರಕೂಟರ ಕಾಲದ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಲು ರಾಷ್ಟ್ರಕೂಟರ ಶಾಸನಗಳನ್ನಲ್ಲದೆ ಸಮಕಾಲೀನ ದಕ್ಷಿಣ ಭಾರತದ ದಾಖಲೆಗಳನ್ನು ಅವಲಂಬಿಸಬೇಕು. ರಾಜ್ಯಕ್ಕೆ ಆದಾಯ ಮುಖ್ಯವಾಗಿ ಪ್ರಕೃತಿಸಂಪನ್ಮೂಲಗಳಿಂದಲೂ ದಂಡಯಾತ್ರೆಗಳಿಂದಲೂ ಬರುತ್ತಿತ್ತು. ವ್ಯವಸಾಯ ಜನರ ಮುಖ್ಯ ಕಸಬಾಗಿದ್ದಿತು. ದಖನ್ ಪ್ರಸ್ಥಭೂಮಿಯ ಉತ್ತರ ಭಾಗದಲ್ಲಿ ಜೋಳ, ಸಜ್ಜೆ, ಎಣ್ಣೆಬೀಜಗಳು ಮತ್ತು ಹತ್ತಿಯನ್ನು ಬೆಳೆಯುತ್ತಿದ್ದರು. ಹತ್ತಿಯನ್ನು ಹೇರಳವಾಗಿ ದಕ್ಷಿಣ ಗುಜರಾತ್, ಖಾನ್‌ದೇಶ ಮತ್ತು ಬೀರಾರ್‌ನಲ್ಲಿ ಬೆಳೆಯುತ್ತಿದ್ದರು. ಕೊಂಕಣ ಪ್ರದೇಶದಲ್ಲಿ ತೆಂಗು, ಅಡಕೆ ಮತ್ತು ಬತ್ತವನ್ನು ಬೆಳೆಯುತ್ತಿದ್ದರು. ಪಶ್ಚಿಮ ಘಟ್ಟಗಳಲ್ಲಿ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಗಂಧ, ತೇಗ, ಎಬೊನಿ (ಕರಿಯ ಮರ) ಮರಗಳ ಸಂಪತ್ತು ವಿಪುಲವಾಗಿತ್ತು. ಈ ಮರಗಳಲ್ಲಿ ತಯಾರಿಸಿದ ವಸ್ತುಗಳನ್ನು ಬೇರೆ ದೇಶಕ್ಕೆ ರಫ್ತು ಮಾಡುತ್ತಿದ್ದರು. ತೀರಪ್ರದೇಶಗಳಲ್ಲಿ ಸಾಂಬಾರ ಪದಾರ್ಥಗಳನ್ನು ಬೆಳೆಯುತ್ತಿದ್ದರು. ರಾಜ್ಯದ ಹಲವು ಭಾಗಗಳಲ್ಲಿ ಮುಖ್ಯವಾಗಿ ತೀರಪ್ರದೇಶಗಳಲ್ಲಿ ಹೇರಳವಾಗಿ ಮಳೆಯಾಗುತ್ತಿತ್ತು. ರಾಷ್ಟ್ರಕೂಟ ಅರಸರು ಅನೇಕ ಕೆರೆಗಳನ್ನು ಕಟ್ಟಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟಂಥ ನಿದರ್ಶನಗಳು ಬೇಕಾದಷ್ಟಿವೆ. ಕುಂಬಾರಿಕೆ, ನೇಯ್ಗೆ, ಮರಗೆಲಸ, ಲೋಹದ ಕೆಲಸ, ದಂತದ ಕೆತ್ತನೆ ಮೊದಲಾದುವು ಜನರ ಇತರ ಕಸಬಾಗಿದ್ದವು.

ಖನಿಜಸಂಪತ್ತು ಹೇರಳವಾಗಿತ್ತು. ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರದ ಕೆಲವು ಭಾಗಗಳಲ್ಲಿ ತಾಮ್ರದ ಗಣಿಗಳಿದ್ದವು. ಕಡಪ, ಬಳ್ಳಾರಿ, ಕರ್ನೂಲು, ಗೋಲ್ಕೊಂಡ ಪ್ರದೇಶಗಳಲ್ಲಿ ಅಮೂಲ್ಯವಾದ ರತ್ನದ ಹರಳುಗಳು ದೊರೆಯುತ್ತಿದ್ದವು. ಇಂದಿಗೂ ಕೂಡ ಆಂಧ್ರದ ಅನಂತಪುರ ಜಿಲ್ಲೆಯ ವಜ್ರಕರೂರು ಮುಂತಾದ ಕೆಲವು ಭಾಗಗಳಲ್ಲಿ ವಜ್ರದ ಹರಳುಗಳು ದೊರೆಯುತ್ತವೆ. ರಾಷ್ಟ್ರಕೂಟರ ರಾಜಧಾನಿಯಾದ ಮಾನ್ಯಖೇಟ ವಜ್ರವೈಡೂರ್ಯಗಳ ಮಾರುಕಟ್ಟೆಯ ಮುಖ್ಯಕೇಂದ್ರವಾಗಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಅನೇಕ ಕೈಗಾರಿಕೆಗಳು ಬೆಳಕಿಗೆ ಬಂದಿವೆ. ಬಟ್ಟೆ ಕೈಗಾರಿಕೆ ಅತಿ ಮುಖ್ಯವಾದುದಾಗಿತ್ತು. ಮಿನ್ನಾಗರ, ಗುಜರಾತ್, ಉಜ್ಜಯಿನಿ, ಪೈಥಾನ್ ಮತ್ತು ತಗರ ಬಟ್ಟೆಗಿರಣಿಗಳ ಕೇಂದ್ರಗಳಾಗಿದ್ದವು. ಪೈಥಾನ್ ಮತ್ತು ವಾರಂಗಲ್ಲುಗಳು ಮಸ್ಲಿನ್ ಬಟ್ಟೆಯ ತಯಾರಿಕೆಗೆ ಪ್ರಸಿದ್ಧಿಯಾಗಿದ್ದವು. ಚರ್ಮದ ಕೈಗಾರಿಕೆ ಈ ಕಾಲದ ಮತ್ತೊಂದು ಮುಖ್ಯವಾದ ಕೈಗಾರಿಕೆಯಾಗಿತ್ತು. ಹದಮಾಡಿದ ಚರ್ಮವನ್ನು ಇಂದಿನ ಮಹಾರಾಷ್ಟ್ರದ ಥಾಣಾದಿಂದ ಅರೇಬಿಯ ಮತ್ತು ಪರ್ಷಿಯ ದೇಶಗಳಿಗೆ ರಫ್ತುಮಾಡುತ್ತಿ

ದ್ದರು. ಚಾಪೆ ಕೈಗಾರಿಕೆ ಪ್ರಸಿದ್ಧಿಯಾಗಿತ್ತು ಬಣ್ಣಬಣ್ಣದ ಚಾಪೆಗಳನ್ನು ತಯಾರಿಸಿ ರಫ್ತು ಮಾಡುತ್ತಿದ್ದರು. ಮೈಸೂರಿನಲ್ಲಿ ಆನೆಗಳು ಹೇರಳವಾಗಿದ್ದುದರಿಂದ ಅದು ದಂತದ ಕೈಗಾರಿಕೆಯ ಕೇಂದ್ರವಾಗಿತ್ತು.

ಪಾಶ್ಚಾತ್ಯ ರಾಷ್ಟ್ರಗಳೊಡನೆ ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚು ವ್ಯಾಪಾರ ಸಂಪರ್ಕವಿದ್ದಿತು. ಬ್ರೋಚ್, ಕಲ್ಯಾಣ ಮುಖ್ಯವಾದ ಬಂದರುಗಳು. ನೌಸಾರಿ, ಸೊಪಾರ, ಥಾಣಾ, ಸೈಮೂರ್, ದಾಬೋಲ್, ಜಯಗಡ, ದೇವಗಡ ಇತರ ಬಂದರುಗಳು. ಬೆಲೆಬಾಳುವ ವಜ್ರ, ನೀಲಿ, ಸುಗಂಧ ದ್ರವ್ಯ ಮತ್ತು ಪರಿಮಳ ವಸ್ತುಗಳು, ಹತ್ತಿಯ ನೂಲು, ಹತ್ತಿಬಟ್ಟೆ, ಮಸ್ಲಿನ್ ಬಟ್ಟೆ, ಹದಮಾಡಿದ ಚರ್ಮ, ಗಂಧದ ಮತ್ತು ತೇಗದ ಮರದಿಂದ ತಯಾರಿಸಿದ ವಸ್ತುಗಳು, ದಂತದ ವಸ್ತುಗಳು–ಇವು ಹೊರದೇಶಕ್ಕೆ ರಫ್ತಾಗುತ್ತಿದ್ದವು. ಖರ್ಜೂರ, ಇಟಲಿಯ ದ್ರಾಕ್ಷಾರಸ, ಅಮೃತಶಿಲೆ, ಗಾಜು, ತವರ, ಸೀಸ ಮತ್ತು ಇತರ ಪದಾರ್ಥಗಳನ್ನು ಆಮದುಮಾಡಿಕೊಳ್ಳುತ್ತಿದ್ದರು. ವಿದೇಶ ವ್ಯಾಪಾರ ಅತಿ ಬಿರುಸಿನಿಂದ ನಡೆಯುತ್ತಿದ್ದು, ಎತ್ತಿನ ಗಾಡಿಯು ಆಂತರಿಕ ಸಾರಿಗೆಯ ಮುಖ್ಯ ಸಾಧನವಾಗಿತ್ತು. ಎತ್ತಿನ ಗಾಡಿಯ ಜೊತೆಗೆ ಕುದುರೆಯನ್ನು ಸಾರಿಗೆಯ ಸಾಧನವನ್ನಾಗಿ ಉಪಯೋಗಿಸುತ್ತಿದ್ದರು. ಗ್ರಾಮದ ಕುಶಲಕರ್ಮಿಗಳಾದ ಬಡಗಿಗಳು, ಲೋಹಗೆಲಸದವರು, ಕುಂಬಾರರು ತಮ್ಮದೇ ಆದ ಸಮುದಾಯವನ್ನು ಹೊಂದಿದ್ದರು. ಇವರು ರೈತರಿಗೆ ತಮ್ಮ ಸಹಾಯವನ್ನು ನೀಡಿ ಅವರು ಬೆಳೆದುದರಲ್ಲಿ ಸ್ವಲ್ಪಭಾಗವನ್ನು ಪಡೆಯುತ್ತಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ಕೂಡ ಆರ್ಥಿಕ ಕ್ಷೇತ್ರದಲ್ಲಿ ಸಾಮಾನ್ಯವಾಗಿ ವಸ್ತುವಿನಿಮಯ ಪದ್ಧತಿ ಮುಂದುವರಿಯಿತು. ಇದರ ಜೊತೆಗೆ ನಾಣ್ಯಪದ್ಧತಿಯು ಬಳಕೆಯಲ್ಲಿತ್ತು. ರಾಷ್ಟ್ರಕೂಟ ಅರಸರು ಅನೇಕ ರೀತಿಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಅಚ್ಚುಹಾಕಿಸಿದ್ದರು. ದ್ರಮ್ಮ, ಸುವರ್ಣ, ಗದ್ಯಾಣಕ, ಕಲಂಜು ಮತ್ತು ಕಾಸು ಮುಖ್ಯವಾಗಿ ಬಳಕೆಯಲ್ಲಿದ್ದ ನಾಣ್ಯಗಳು. ವ್ಯಾಪಾರಕ್ಕೆ ಮತ್ತು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಸಾಲ ದೊರೆಯುತ್ತಿತ್ತು. ಆಗಿನ ವ್ಯಾಪಾರ ಶ್ರೇಣಿಗಳು ಆಧುನಿಕ ಬ್ಯಾಂಕಿನ ರೀತಿಯಲ್ಲಿ ವ್ಯಾಪಾರಿಗಳಿಗೆ ಮತ್ತು ಕೈಗಾರಿಕೋದ್ಯಮಿಗಳಿಗೆ ಸಾಲ ನೀಡುತ್ತಿದ್ದವು. ಮೇಲೆ ವಿವರಿಸಿದ ಅಂಶಗಳಿಂದಾಗಿ ರಾಷ್ಟ್ರಕೂಟರ ಕಾಲದಲ್ಲಿ ದಕ್ಷಿಣ ಭಾರತ ಆರ್ಥಿಕ ಸಮೃದ್ಧಿಯಿಂದ ಕೂಡಿತ್ತೆಂಬುದು ತಿಳಿದುಬರುತ್ತದೆ. ವಿದೇಶಿವ್ಯಾಪಾರ, ಕಟ್ಟಡಗಳ ರಚನೆ, ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆ ಮತ್ತು ಅವರು ನೀಡುತ್ತಿದ್ದ ದಾನದತ್ತಿಗಳು ಆ ಕಾಲದ ಆರ್ಥಿಕ ಸಮೃದ್ಧಿಯನ್ನು ಪ್ರದರ್ಶಿಸುತ್ತವೆ.

ಇಬನ್ ಖುರ್ದಾದ್ ಬೇ ಸುಲೇಮಾನ್, ಅಲ್‌ಮಸೂದಿ ಮತ್ತು ಅಲ್ಬೆರೂನಿ ಅವರ ಗ್ರಂಥಗಳು ರಾಷ್ಟ್ರಕೂಟರ ಕಾಲದ ಸಾಮಾಜಿಕ ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ಅನುಕೂಲವಾಗಿವೆ. ಸಮಾಜದಲ್ಲಿ ಏಳು ಜಾತಿಗಳಿದ್ದವೆಂದು ಇಬನ್ ಖುರ್ದಾದ್ ಬೇ ವಿವರಿಸಿದ್ದಾನೆ. ಇವುಗಳಲ್ಲಿ ಹಿಂದಿನಿಂದಲೂ ರೂಢಿಯಲ್ಲಿದ್ದ ನಾಲ್ಕು ವರ್ಣಗಳೂ ಸೇರಿಕೊಂಡಿವೆ. ಅವನು ತನ್ನ ಗ್ರಂಥದಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರ ಬಗ್ಗೆ ವಿವರಣೆ ನೀಡಿದ್ದಾನೆ.

ಬ್ರಾಹ್ಮಣರು ಹೋಮ, ವ್ರತ, ಪೂಜೆ, ವೇದಾಧ್ಯಯನ ಮೊದಲಾದ ಕಾರ್ಯಗಳಲ್ಲಿ ತೊಡಗಿದ್ದರು. ಆಗಿನ ಕಾಲದಲ್ಲಿ ಸಾಮಾನ್ಯವಾಗಿ ವಿದ್ಯಾಭ್ಯಾಸ ಕ್ಷೇತ್ರ ಬ್ರಾಹ್ಮಣರಿಗೆ ಮೀಸಲಾಗಿದ್ದುದರಿಂದ ಅನೇಕ ವಿದ್ವಾಂಸರು ಈ ಜಾತಿಗೆ ಸೇರಿದವರಾಗಿದ್ದರು. ಆಡಳಿತ ಕ್ಷೇತ್ರದಲ್ಲೂ ಬ್ರಾಹ್ಮಣರು ಅಧಿಕ ಸಂಖ್ಯೆಯಲ್ಲಿದ್ದರು. ಆದರೆ ಶಂಕರಾಚಾರ್ಯರು ವಿವರಿಸಿರುವಂತೆ ರಾಷ್ಟ್ರಕೂಟರ ಕಾಲದಲ್ಲಿ ನಾಲ್ಕು ವರ್ಣದವರು ಧರ್ಮಗ್ರಂಥಗಳಲ್ಲಿ ವಿವರಿಸಿರುವಂತೆ ಕಟ್ಟುನಿಟ್ಟಾಗಿ ತಮ್ಮ ತಮ್ಮ ವೃತ್ತಿಗಳನ್ನು ಅನುಸರಿಸುತ್ತಿರಲಿಲ್ಲ. ಅವರು ವಿವಿಧ ಕಸಬುಗಳನ್ನು ಅವಲಂಬಿಸಿದ್ದರು. ಅನೇಕ ಬ್ರಾಹ್ಮಣರು ವ್ಯಾಪಾರ, ವ್ಯವಸಾಯ, ಸೈನಿಕ ವೃತ್ತಿ ಮೊದಲಾದ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಲು ಪ್ರಾರಂಭಿಸಿದ್ದರು. ತೆರಿಗೆ ಮತ್ತು ಮರಣದಂಡನೆಯಿಂದ ಬ್ರಾಹ್ಮಣರು ತಪ್ಪಿಸಿಕೊಂಡಿದ್ದರೆಂದು ಆ ಕಾಲದ ಆಧಾರಗಳು ತಿಳಿಸುತ್ತವೆ. ಆದರೆ ಈ ವಿನಾಯಿತಿಯು ಎಲ್ಲ ಬ್ರಾಹ್ಮಣರಿಗೂ ಅನ್ವಯಿಸಿರಲಿಲ್ಲ. ಅದು ಕೇವಲ ಕೆಲವು ಧರ್ಮಗುರುಗಳಿಗೆ ಮತ್ತು ವಿದ್ವಾಂಸರಿಗೆ ಮಾತ್ರ. ಅಲ್ಲದೆ ರಾಷ್ಟ್ರಕೂಟರ ಕಾಲದಲ್ಲಿ ಬ್ರಾಹ್ಮಣರು ಮರಣದಂಡನೆಗೆ ಗುರಿಯಾದಂಥ ಯಾವ ಘಟನೆಯೂ ತಿಳಿದುಬಂದಿಲ್ಲ. ಬಹುಶಃ ಬ್ರಾಹ್ಮಣರಿಗೆ ಅತಿ ಹೆಚ್ಚಿನ ಅಥವಾ ಕ್ರೂರಶಿಕ್ಷೆ ಎಂದರೆ ಕೈ ಅಥವಾ ಕಾಲನ್ನು ಕತ್ತರಿಸುವ ಪದ್ಧತಿಯಾಗಿತ್ತೆಂದು ತಿಳಿದುಬರುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಅರಬ್ ದೇಶದ ಕೆಲವು ಮಹಮದೀಯ ಪ್ರವಾಸಿಗರು ಕ್ಷತ್ರಿಯರಿಗೆ ಬ್ರಾಹ್ಮಣರು ವಿಧೇಯರಾಗಿದ್ದರು ಎಂಬುದಾಗಿ ವಿವರಿಸಿದ್ದಾರೆ. ಸತ್‌ಕ್ಷತ್ರಿಯರು ಕ್ಷತ್ರಿಯರಲ್ಲೇ ಉನ್ನತವರ್ಗಕ್ಕೆ ಸೇರಿದವರಾಗಿದ್ದರು. ಸತ್‌ಕ್ಷತ್ರಿಯರು ಬ್ರಾಹ್ಮಣರಿಗಿಂತ ಮೇಲ್ಮಟ್ಟದವರೆಂದು ಪರಿಗಣಿಸಲ್ಪಟ್ಟಿದ್ದರು. ಕ್ಷತ್ರಿಯರು ಕೂಡ ತಮಗೆ ಮೀಸಲಾಗಿದ್ದ ಯುದ್ಧ ಮತ್ತು ಆಡಳಿತ ಕ್ಷೇತ್ರಕ್ಕೆ ಮಾತ್ರ ಹೊಂದಿಕೊಂಡಿರದೆ ವಿವಿಧ ವೃತ್ತಿಗಳನ್ನು ಅವಲಂಬಿಸಿದ್ದರು. ಕ್ಷತ್ರಿಯರು ಈ ಕಾಲದಲ್ಲಿ ಯಜ್ಞ ಯಾಗಗಳನ್ನು ಮಾಡುವುದಕ್ಕೆ ಅಷ್ಟೊಂದು ಪ್ರಾಮುಖ್ಯ ನೀಡಿರಲಿಲ್ಲ. ಅವರು ವೇದಗಳನ್ನು ಅಧ್ಯಯನ ಮಾಡುವ ಅವಕಾಶ ಹೊಂದಿದ್ದರೂ ಅವುಗಳಿಗೆ ಹೆಚ್ಚು ಮಹತ್ತ್ವ ನೀಡಲಿಲ್ಲ. ಅದರ ಬದಲು ಅವರು ಪುರಾಣಗಳಲ್ಲಿ ಹೇಳಿರುವ ಕಟ್ಟಳೆಗಳಿಗೆ ಹೆಚ್ಚು ಮಹತ್ತ್ವ ನೀಡಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ವೈಶ್ಯರ ಸ್ಥಾನಮಾನಗಳು ಕಡಿಮೆಯಾಗಿದ್ದವು. ವೈಶ್ಯರು ಮತ್ತು ಶೂದ್ರರ ನಡುವೆ ಇದ್ದಂಥ ಅಂತರ ಬಹು ಕಡಿಮೆ. ಶೂದ್ರರು ಕೂಡ ಶತಮಾನಗಳಿಂದಲೂ ಬೆಳೆದು ಬಂದಿದ್ದಂತಹ ಮೇಲ್ವರ್ಗದವರ ಸೇವೆ ಮಾಡಬೇಕೆಂಬ ನಂಬಿಕೆಯನ್ನು ಬದಿಗೊತ್ತಿ ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮ ಪ್ರಭಾವ ಬೀರಲು ಪ್ರಾರಂಭಿಸಿದರು. ವ್ಯಾಪಾರ ಮಾಡುವುದು, ಯುದ್ಧದಲ್ಲಿ ತೊಡಗುವುದು ಮೊದಲಾದ ಕಸಬುಗಳನ್ನು ಆರಿಸಿಕೊಂಡು ಐಶ್ವರ್ಯ ಸಂಪಾದನೆಯಲ್ಲಿ ತೊಡಗಿದರು.

ಈ ಕಾಲದಲ್ಲೂ ಮೊದಲಿನಿಂದಲೂ ಬೆಳೆದು ಬಂದಿದ್ದಂತಹ ಅವಿಭಕ್ತ ಕುಟುಂಬ ಪದ್ಧತಿಯೇ ಮುಂದುವರಿಯಿತು. ಅಂತರ್ಜಾತೀಯ ವಿವಾಹಗಳು ಅಪರೂಪವಾಗಿದ್ದರೂ ಅಸಂಭವವೇನಾಗಿರಲಿಲ್ಲ. ಸ್ತ್ರೀಯರಲ್ಲಿ ಘೋಷಾಪದ್ಧತಿ ಇರಲಿಲ್ಲ. ಸತಿಸಹಗಮನ ಪದ್ಧತಿಯು ರಾಷ್ಟ್ರಕೂಟರ ಕಾಲದಲ್ಲಿ ಅಷ್ಟೇನೂ ರೂಢಿಯಲ್ಲಿರಲಿಲ್ಲ. ರಾಷ್ಟ್ರಕೂಟರ ಕಾಲದಲ್ಲಿ ಸ್ತ್ರೀಯರು ಆಡಳಿತದಲ್ಲಿ ಪಾಲ್ಗೊಂಡ ಉದಾಹರಣೆಗಳಿವೆ.

ರಾಷ್ಟ್ರಕೂಟ ಅರಸರು ವಿದ್ಯಾಭ್ಯಾಸಕ್ಕೂ ಹೆಚ್ಚು ಪ್ರೋತ್ಸಾಹ ನೀಡಿದರು. ಮಠಗಳು ಮತ್ತು ಅಗ್ರಹಾರಗಳು ಆಗಿನ ಕಾಲದ ವಿದ್ಯಾಕೇಂದ್ರಗಳಾಗಿದ್ದವು. ಈ ಸಂಸ್ಥೆಗಳಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದುದಲ್ಲದೆ ಸಾರ್ವಜನಿಕರು ಉದಾರ ಕೊಡುಗೆಯನ್ನು ಕೊಡುತ್ತಿದ್ದರು. ಉಚ್ಚವ್ಯಾಸಂಗದ ವಿದ್ಯಾರ್ಥಿಗಳು ವೇದ, ವ್ಯಾಕರಣ, ಜ್ಯೋತಿಷ್ಯ, ಸಾಹಿತ್ಯ, ಮೀಮಾಂಸೆ, ಧರ್ಮಶಾಸ್ತ್ರ, ಪುರಾಣ, ನ್ಯಾಯ ಮೊದಲಾದ ವಿಷಯಗಳನ್ನು ಓದಬೇಕಾಗಿತ್ತು. ಕೆಲವು ಶಾಸನಗಳು ಈ ಕಾಲದಲ್ಲಿದ್ದ ಕೆಲವು ವಿದ್ಯಾಕೇಂದ್ರಗಳನ್ನು ವಿವರಿಸಿವೆ. ಧಾರವಾಡ ಜಿಲ್ಲೆಯ ಹೆಬ್ಬಾಳಿನಲ್ಲಿ ಒಂದು ದೊಡ್ಡ ಮಠವಿದ್ದಿತ್ತು. ನಾಲ್ಕನೆಯ ಗೋವಿಂದನ ಶಾಸನ

ಧಾರವಾಡ ಜಿಲ್ಲೆಯಲ್ಲಿದ್ದ ಮತ್ತೊಂದು ವಿದ್ಯಾಕೇಂದ್ರವಾದ ಕಳಸ ಅಗ್ರಹಾರಕ್ಕೆ ದತ್ತಿನೀಡಿದುದನ್ನು ವಿವರಿಸುತ್ತದೆ. ದತ್ತಿಯ ಒಂದು ಭಾಗವನ್ನು ಪ್ರಾಧ್ಯಾಪಕರಿಗೆ ಸಂಬಳ ನೀಡುವುದಕ್ಕೆಂದು ಮೀಸಲಾಗಿಡಲಾಗಿತ್ತು. ಸಾಲೊಟಗಿ ರಾಷ್ಟ್ರಕೂಟರ ಕಾಲದ ಬಹುಪ್ರಸಿದ್ಧ ವಿದ್ಯಾಸಂಸ್ಥೆಯಾಗಿತ್ತು. ಇದರ ಮೂಲ ಹೆಸರು ಪಾವಿಟ್ಟಗೆ. ಇದು ರಾಷ್ಟ್ರಕೂಟರ ಅರಸ ಮುಮ್ಮಡಿ ಕೃಷ್ಣನ ಕಾಲಕ್ಕೆ ಸೇರಿದುದು. ಇಲ್ಲಿಗೆ ವಿದ್ಯಾರ್ಥಿಗಳು ದೇಶದ ನಾನಾ ಭಾಗಗಳಿಂದ ಬರುತ್ತಿದ್ದರು. ವಿದ್ಯಾರ್ಥಿಗಳಿಗೋಸ್ಕರ ಇಪ್ಪತ್ತೇಳು ವಸತಿಗೃಹಗಳಿದ್ದವು. ಈ ವಿದ್ಯಾಸಂಸ್ಥೆಯ ಮುಖ್ಯಸ್ಥನಿಗೆ ಸು. 250 ಎಕರೆ ಜಮೀನಿನ ಆದಾಯ ನೀಡಲಾಗಿತ್ತು. ಮುಮ್ಮಡಿ ಇಂದ್ರನ ಕಾಲದಲ್ಲಿ ನಾಗಾವಿಯಲ್ಲಿ ಒಂದು ದೊಡ್ಡ ವಿದ್ಯಾಕೇಂದ್ರ ವಿದ್ದಿತು. ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ ಕೂಡ ಒಂದು ಪ್ರೌಢ ವಿದ್ಯಾಕೇಂದ್ರವಾಗಿತ್ತೆಂಬುದರಲ್ಲಿ ಯಾವ ಸಂಶಯವೂ ಇಲ್ಲ. **(ಎಸ್.)**

**ವಾಸ್ತು-ಶಿಲ್ಪ:** ಮೌರ್ಯ ಚಕ್ರವರ್ತಿ ಅಶೋಕನ ಕಾಲದಿಂದ ಪ್ರಾರಂಭವಾದ ಕಲ್ಲುಗುಡ್ಡಗಳನ್ನು ಕೊರೆದು ಸೃಜಿಸುವ ಕಲಾಸಂಪ್ರದಾಯ ರಾಷ್ಟ್ರಕೂಟರ ಕಾಲದಲ್ಲಿ ಅತ್ಯಂತ ಶ್ರೇಷ್ಠಮಟ್ಟವನ್ನೂ ಪ್ರಬುದ್ಧತೆಯನ್ನೂ ಮುಟ್ಟಿತು. ಕಲ್ಪನಾಶಕ್ತಿಯಲ್ಲಿ, ಸೃಜನಸಾಮರ್ಥ್ಯದಲ್ಲಿ, ಭವ್ಯತೆಯಲ್ಲಿ ಮಹಾರಾಷ್ಟ್ರದಲ್ಲಿ ಇರುವ ಎಲ್ಲೋರದ (ವೇರೂಳ್) ಕೈಲಾಸ ದೇವಾಲಯವನ್ನು, ಎಲಿಫೆಂಟಾ ದ್ವೀಪದಲ್ಲಿ (ಮಹಾರಾಷ್ಟ್ರ) ಮಹಾದೇವ ಶಿಲ್ಪವನ್ನು ಸರಿಗಟ್ಟುವ ಕಲಾಕೃತಿಗಳು ಪ್ರಾಚೀನ ಭಾರತದ ವಾಸ್ತು ಹಾಗೂ ಮೂರ್ತಿಶಿಲ್ಪ ಇತಿಹಾಸದಲ್ಲೇ ವಿರಳವಾಗಿದ್ದು ಅವು ವಿಶಿಷ್ಟ ಸ್ಥಾನವನ್ನು ಹೊಂದಿವೆ. ಪ್ರಸಿದ್ಧ ಇತಿಹಾಸಜ್ಞರಾದ ಪರ್ಸಿ ಬ್ರೌನ್‌ರವರು ಒಂದು ಉದಾತ್ತಧ್ಯೇಯ ಸಾಧನೆಯಲ್ಲಿ ಮಾನವರ ಕೈಗಳು, ಮನಸ್ಸು, ಹೃದಯ ಏಕಪ್ರಕಾರವಾಗಿ ತನ್ಮಯತೆಯಿಂದ ಕೆಲಸಮಾಡುವ ಅಪೂರ್ವಶ್ರಮದ ಉದಾಹರಣೆ ಈ ಕೈಲಾಸ ದೇವಾಲಯವೆಂದು ಉದ್ಗಾರವೆತ್ತಿದ್ದಾರೆ. ಭವ್ಯ ಪ್ರವೇಶದ್ವಾರವುಳ್ಳ ಈ ದೇವಾಲಯದ ಮುಂಭಾಗದ ಎರಡು ಬದಿಗಳಲ್ಲಿ ಎರಡು ಎತ್ತರದ ಶೈವ ಧ್ವಜಸ್ತಂಭಗಳಿವೆ. ಅಧಿಷ್ಠಾನದಲ್ಲಿ ಸುತ್ತಲೂ ಆನೆಗಳಿದ್ದು ಕೈಲಾಸವನ್ನು ಹೊತ್ತು ನಿಂತಿವೆಯೇನೊ ಎನ್ನುವ ಹಾಗಿದೆ. ಮುಂದೆ ನಂದಿಮಂಟಪ, ದೇವಾಲಯ ಮೂರು ಮುಖಮಂಟಪಗಳುಳ್ಳ ವಿಶಾಲವಾದ ಸಭಾಮಂಟಪ, ಅಂತರಾಳ ಮತ್ತು ಗರ್ಭಗೃಹಗಳಿಂದ ಕೂಡಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಪ್ರವೇಶದ್ವಾರದಿಂದ ಹಿಡಿದು ಗರ್ಭಗುಡಿಯವರೆಗೆ ಒಳಗೂ ಹೊರಗೂ ಶಿವನ ಹಲವಾರು ರೂಪಗಳನ್ನು, ಪುರಾಣ ಕಥೆಗಳಲ್ಲಿ ರಾಮಾಯಣ, ಮಹಾಭಾರತ, ಹರಿವಂಶಗಳಲ್ಲಿನ ಮುಖ್ಯ ಘಟನೆಗಳ ಚಿತ್ರಣಗಳನ್ನು, ಶಿವನ ಸೇವೆಗೆ ನಿಂತಿರುವ ಅಷ್ಟದಿಕ್ಪಾಲಕರ, ಗಂಗೆ, ಯಮುನೆ, ಸರಸ್ವತಿ ಮುಂತಾದ ದೇವತೆಗಳ ಶಿಲ್ಪಗಳನ್ನು ಬಿಡಿಸಲಾಗಿದೆ. ದೇವಾಲಯದ ಸುತ್ತಲೂ ವಿಶಾಲವಾದ ಅಂಗಳವಿದೆ. ಬದಿಯಲ್ಲಿ ಸುತ್ತಲೂ ಪ್ರಾಕಾರದಲ್ಲಿ ದೇವಕೋಷ್ಠಗಳಿದ್ದು ಎಲ್ಲದರಲ್ಲೂ ಚೆಲುವಾದ ದೇವರ ವಿವಿಧ ರೂಪಗಳ ಮೂರ್ತಿಶಿಲ್ಪಗಳಿವೆ. ಒಟ್ಟಿನಲ್ಲಿ ಮಹಾಶಿಲ್ಪಿಯು ದೇವಲೋಕವಾದ ಇಡೀ ಕೈಲಾಸವನ್ನು ಮರ್ತ್ಯಲೋಕದವರಿಗೆ ದರ್ಶನ ಮಾಡಿಸುತ್ತಿದ್ದಾನೆಯೋ ಎಂಬಂತಿದೆ ಈ ಕಲಾಕೃತಿ.

ಇದರಲ್ಲಿಯ ಗಜಲಕ್ಷ್ಮಿ, ಮಹಿಷಾಸುರನನ್ನು ಬೆನ್ನಟ್ಟಿಹೋಗುತ್ತಿರುವ ಸಿಂಹವಾಹಿನಿ ದುರ್ಗೆ, ಅನ್ನಪೂರ್ಣೆ, ಯೋಗಿ, ಮಹಾಶಿವ, ತನ್ನ ಒಂದೊಂದೇ ತಲೆಯನ್ನು ಶಿವನಿಗೆ ಅರ್ಪಿಸುತ್ತಿರುವ ಮಹಾಭಕ್ತ ದಶಕಂಠ ರಾವಣ, ತ್ರಿವೇಣೀ ಸಂಗಮವನ್ನು ಸೂಚಿಸುವ ಗಂಗೆ ಯಮುನೆಯರ ಜೊತೆಗೆ ಸರಸ್ವತಿಯ ಶಿಲ್ಪಗಳು ಅಪೂರ್ವವಾಗಿವೆ. ಈ ತ್ರಿವೇಣೀಸಂಗಮ ಗಂಗಾನದಿ ಬಯಲುಪ್ರದೇಶವನ್ನು ರಾಷ್ಟ್ರಕೂಟ ಚಕ್ರವರ್ತಿ ಗೆದ್ದುದರ ಸ್ಮರಣಾರ್ಥವಾಗಿ ಕೆತ್ತಲಾಗಿದೆಯೆಂದು ತೋರುತ್ತದೆ.

ಇದಲ್ಲದೆ ಇಲ್ಲಿ ಅದೇ ಕಾಲದ ಕಗ್ಗಲ್ಲಿನಲ್ಲಿ ಕೊರೆದು ರಚಿಸಿದ 33 ದೇವಾಲಯಗಳಿವೆ. ಇವುಗಳಲ್ಲಿ 17 ಬ್ರಾಹ್ಮಣ ಧರ್ಮದವು. ಉಳಿದವು ಜೈನಧರ್ಮದವು. 14ನೆಯ ಸಂಖ್ಯೆಯ ದೇವಾಲಯದ ಸಪ್ತಮಾತೃಕೆಯರ ಶಿಲ್ಪಗಳು ಗಮನಾರ್ಹ. 30ನೆಯ ಸಂಖ್ಯೆಯ ಜೈನಧರ್ಮದ ದೇವಾಲಯ ಕೈಲಾಸ ದೇವಾಲಯದ ಪ್ರತಿರೂಪವಾಗಿದ್ದು ಅದನ್ನು ಛೋಟಾ ಕೈಲಾಸ ವೆಂದು ಕರೆಯಲಾಗಿದೆ. ಮತ್ತು ಇಂದ್ರಸಭೆ, ಜಗನ್ನಾಥ ಸಭೆಗಳಲ್ಲಿಯ ತೀರ್ಥಂಕರರ, ಯಕ್ಷಯಕ್ಷಿಯರ ಶಿಲ್ಪಗಳು ತುಂಬ ಸೊಗಸಾಗಿವೆ.

ಎಲಿಫೆಂಟ ಗುಹೆಯಲ್ಲಿನ ತ್ರಿಮೂರ್ತಿಶಿಲ್ಪ

ಎಲಿಫೆಂಟಾದ ಬೃಹದಾಕಾರದ ಮಹಾದೇವನ ಮೂರ್ತಿ ಮೂರ್ತಿ ಶಿಲ್ಪಗಳಲ್ಲೆ ಒಂದು ಅಪೂರ್ವ ಕಲಾಕೃತಿ. ಮೂರು ಮುಖಗಳುಳ್ಳ ಈ ಮೂರ್ತಿಯನ್ನು ಮೊದಲು ತ್ರಿಮೂರ್ತಿಯೆಂದು ತಪ್ಪಾಗಿ ತಿಳಿಯಲಾಗಿತ್ತು. ಇದು ಮಹಾದೇವನ ಸದ್ಯೋಜಾತ, ಅಘೋರ ಮತ್ತು ತತ್ಪುರುಷನ ಸ್ವರೂಪವೆಂದು ಕ್ರಮೇಣ ಸರಿಯಾಗಿ ಗುರುತಿಸಲಾಗಿದೆ.

ಈ ಕಾಲದ ಶಿಲ್ಪಕಲಾಪ್ರತಿಭೆ, ಔನ್ನತ್ಯಗಳು ಇದುವರೆಗೆ ಇವೆರಡು ಸ್ಥಳಗಳಲ್ಲಿ ಮಾತ್ರ ಕಂಡುಬಂದಿದೆ. ಈ ವಲಯದಿಂದ ಹೊರಗೆ ಈಗಿನ ಗುಲ್ಬರ್ಗ, ಬಿಜಾಪುರ ಜಿಲ್ಲೆಗಳ ದಕ್ಷಿಣ ಭಾಗ, ಧಾರವಾಡ ಜಿಲ್ಲೆಯ ಉತ್ತರಭಾಗ ಮತ್ತು ರಾಯಚೂರು ಜಿಲ್ಲೆಯ ಪಶ್ಚಿಮದ ಭಾಗಗಳಲ್ಲಿಯ ಸುಮಾರು 30 ಸ್ಥಳಗಳಲ್ಲಿ ಈ ಕಾಲದ ಒಂದೆರಡು ದೇವಾಲಯಗಳಿವೆ. ರಾಜಧಾನಿಯಾಗಿದ್ದ ಮಳಖೇಡದಲ್ಲಿ ಆ ಕಾಲದ ಒಂದೇ ಒಂದು ಜೈನಬಸದಿಯು ಈಗ ದುಃಸ್ಥಿತಿಯಲ್ಲಿ ಉಳಿದಿದೆ. 1975ರಲ್ಲಿ ಗುಲ್ಬರ್ಗ ಜಿಲ್ಲೆಯ ಶಾಹಪುರ ತಾಲ್ಲೂಕಿನ ಸಿರವಾಳದಲ್ಲಿ 15 ದೇವಾಲಯಗಳ ಒಂದು ಸಮೂಹವೇ ಬೆಳಕಿಗೆ ಬಂದಿದೆ; ಜೊತೆಗೆ ಮುಮ್ಮಡಿ ಕೃಷ್ಣನ ಕಾಲದ ಒಂದು ಶಿಲಾಶಾಸನವೂ (861) ದೊರೆತಿದೆ. ಇವುಗಳಲ್ಲಿ ಹೆಚ್ಚು ಸಂಖ್ಯೆಯವು ಶೈವದೇವಾಲಯಗಳು; ಉಳಿದವು ಜೈನ, ವೈಷ್ಣವ ಮತ್ತು ತ್ರೈಪುರುಷ (ತ್ರಿಮೂರ್ತಿ) ದೇವಾಲಯಗಳು. ಐಹೊಳೆಯಲ್ಲಿ ದೇವಾಲಯಗಳಿಗೆ ಸೇರಿದ ಹಾಗೆ ಅಪೂರ್ವವಾಗಿ ಸಭಾಮಂದಿರಗಳು, ಬಿಜಾಪುರ ಜಿಲ್ಲೆಯ ಮುಧೋಳ ಹಾಗೂ ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಒಂದೊಂದು ತೋರಣಗಳು ಇವೆ.

ಬಿಜಾಪುರ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿಯ ದೇವಾಲಯಗಳನ್ನು ನಸುಗೆಂಪು ಬಣ್ಣದ ಮರಳುಕಲ್ಲಿನಲ್ಲಿ ಕಟ್ಟಲಾಗಿದೆ. ಉಳಿದ ಕೆಲವೆಡೆಗಳಲ್ಲಿ ಉತ್ತಮ ಜಾತಿಯ ಕರಿಕಲ್ಲನ್ನು ಉಪಯೋಗಿಸ

ಲಾಗಿದೆ. ಈ ದೇವಾಲಯಗಳ ತಳವಿನ್ಯಾಸದಲ್ಲಿ ವೈವಿಧ್ಯವಿದೆ. ಪಟ್ಟದಕಲ್ಲಿನ ಜೈನನಾರಾಯಣ ಎಂದು ಕರೆಯಲಾದ ಜೈನದೇವಾಲಯದಲ್ಲಿ ಹೊರಗೋಡೆಯಿಂದ ಒಮ್ಮೆ ಆವರಿಸಲ್ಪಟ್ಟಿದ್ದ ಪ್ರದಕ್ಷಿಣಪಥವುಳ್ಳ ಗರ್ಭಗುಡಿ, ಅಂತರಾಳ, ಸಭಾಮಂಟಪ ಮತ್ತು ಸಭಾಮಂದಿರದಷ್ಟೆ ಅಗಲದ ಅಪೂರ್ವವಾದ ಮುಖಮಂಟಪಗಳಿವೆ. ಈ ಲಕ್ಷಣ ಜೈನದೇವಾಲಯಗಳಲ್ಲಿ ಕಂಡುಬರುತ್ತದೆ. ಕೆಲವು ದೇವಾಲಯಗಳಲ್ಲಿ ಚಚ್ಚೌಕವಾದ ದೊಡ್ಡ ಗರ್ಭಗೃಹವಿದ್ದು, ಮುಂದೆ ಅದಕ್ಕೆ ಸಣ್ಣ ಮುಖಮಂಟಪವಿರುತ್ತದೆ. ಸೂಡಿಯಲ್ಲಿರುವ ಗಣೇಶ ದೇವಾಲಯ ಇದಕ್ಕೆ ಉತ್ತಮ ನಿದರ್ಶನ. ಬಹಳಷ್ಟು ದೇವಾಲಯಗಳು ಮೇಲೆ ಹೇಳಿದಂತಿದ್ದರೂ ಪ್ರದಕ್ಷಿಣಪಥವಿರುವುದಿಲ್ಲ. ಮುಖಮಂಟಪ ಸಭಾಮಂಟಪಕ್ಕಿಂತ ಚಿಕ್ಕದಿರುತ್ತದೆ. ಹೊಸ ಮಹಾಕೂಟದ ಅಡಕೇಶ್ವರ ದೇವಾಲಯ, ರೋಣದ ಮೂರು ಈಶ್ವರ ದೇವಾಲಯಗಳು, ನರೇಗಲ್ಲಿನ ತ್ರಿಪುರಾಂತಕೇಶ್ವರ, ಬಾಳೇಶ್ವರ ಇವೆಲ್ಲವೂ ಈ ವಿಧದ್ದಾಗಿವೆ.

ಈ ವಿಧದ ಕೆಲವು ದೇವಾಲಯಗಳಲ್ಲಿ ಒಂದೆರಡು ವಿಶಿಷ್ಟ ಲಕ್ಷಣಗಳಿವೆ. ರೋಣದಲ್ಲಿಯ ಜೈನದೇವಾಲಯ, ಐಹೊಳೆಯಲ್ಲಿಯ ಚರಂತಿಮಠ ಗುಂಪಿನ ಒಂದು ಜೈನದೇವಾಲಯ (ಹಾಗೂ ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿ)– ಇವುಗಳ ಗರ್ಭಗುಡಿಯ ಎರಡು ಬದಿಗಳಲ್ಲಿ ಒಂದೊಂದು ಸಣ್ಣ ಕೋಣೆಯಿರುತ್ತದೆ. ಇದು ಜೈನಮುನಿಗಳ ಧ್ಯಾನಕ್ಕೋಸ್ಕರ ಉಪಯೋಗಿಸಲಾಗುತ್ತಿತ್ತೆಂದು ತೋರುವುದು. ಕೆಲವು ದೇವಾಲಯಗಳಲ್ಲಿ ಮುಖಮಂಟಪವೇ ಇರುವುದಿಲ್ಲ. ಪಟ್ಟದಕಲ್ಲಿನ ಚಂದ್ರಶೇಖರನ ದೇವಾಲಯ, ಐಹೊಳೆಯಲ್ಲಿಯ ಅಳ್ಳಿಬಸಪ್ಪನೆಂಬ ಶಿವದೇವಾಲಯ ಈ ರೀತಿಯದ್ದಾಗಿವೆ. ಮತ್ತೆ ಕೆಲವು ದೇವಾಲಯಗಳಲ್ಲಿ ಸಭಾಮಂಟಪದ ಎರಡು ಬದಿಗಳಲ್ಲಿ ಸಭಾಮಂಟಪದಷ್ಟೇ ಉದ್ದವಿರುವ ಕಿರಿದಾದ ಕೋಣೆಗಳಿರುತ್ತವೆ. ನರೇಗಲ್ಲಿನ ಮೂಲತಃ ಜೈನದೇವಾಲಯವಾಗಿದ್ದ ನಾರಾಯಣ ದೇವಾಲಯ (853) ಹೀಗಿದೆ. ಈ ಕೋಣೆಯಲ್ಲಿ 24 ತೀರ್ಥಂಕರರ ಮೂರ್ತಿಗಳನ್ನಿಡಲಾಗಿತ್ತು. ಇನ್ನು ಕೆಲವು ದೇವಾಲಯಗಳಲ್ಲಿ ಒಂದೇ ಸಾಲಿನಲ್ಲಿ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಲು ಅನುಕೂಲವಾಗುವುದಕ್ಕೋಸ್ಕರ ಗರ್ಭಗುಡಿಯನ್ನು ಹೆಚ್ಚು ಅಗಲವಾಗಿ ಮಾಡಿದ್ದು ಮತ್ತು ಸಭಾಮಂಟಪದ ಮುಂದೆ ವಿಶಾಲವಾದ ರಂಗಮಂಟಪವಿರುವುದು. ಬಾದಾಮಿಯ ಸಮೀಪದಲ್ಲಿರುವ ಬೇಲೂರಿನ ತ್ರಿಮೂರ್ತಿ ದೇವಾಲಯದಲ್ಲಿ ಈ ಲಕ್ಷಣಗಳನ್ನು ಕಾಣಬಹುದು.

ವಿರಳವಾಗಿ ಕೆಲವು ದೇವಾಲಯಗಳಲ್ಲಿ ಗರ್ಭಗುಡಿಯು ನಕ್ಷತ್ರಾಕೃತಿಯ ತಳವಿನ್ಯಾಸದಲ್ಲಿರುತ್ತದೆ. ಕೊಣ್ಣೂರಿನ (ಧಾರವಾಡ ಜಿಲ್ಲೆ) ಪರಮೇಶ್ವರ (ಮೂಲತಃ ಜೈನ) ದೇವಾಲಯ ಮತ್ತು ಸವಡಿಯ ಬ್ರಹ್ಮೇಶ್ವರ ದೇವಾಲಯಗಳ ಗರ್ಭಗುಡಿ ಈ ವಿನ್ಯಾಸದಲ್ಲಿವೆ. ಪರಮೇಶ್ವರ ದೇವಾಲಯವನ್ನು ಅಮೋಘವರ್ಷನ (ನೃಪತುಂಗ) ಮಹಾದಂಡನಾಯಕ ಬಂಕೆಯರಸ ಕಟ್ಟಿಸಿದ. ಬ್ರಹ್ಮೇಶ್ವರ ದೇವಾಲಯ ಒಂದು ತ್ರೈಪುರುಷ ದೇವಾಲಯ. ಇದರ ಸಭಾ ಮಂಟಪದಲ್ಲಿ 68 ಮಧ್ಯಗಂಬಗಳಿದ್ದು ತುಂಬ ವಿಶಾಲವಾಗಿದೆ.

ಈ ಕಾಲದ ದೇವಾಲಯದ ವಾಸ್ತುಶಿಲ್ಪದ ಮತ್ತೊಂದು ವೈಶಿಷ್ಟ್ಯವೆಂದರೆ ದ್ವಿಕೂಟಾಚಲ ದೇವಾಲಯದ ನಿರ್ಮಾಣ. ಇಂಥ ದೇವಾಲಯಗಳಲ್ಲಿ ಅಂತರಾಳ ಸಹಿತ ಎರಡು ಗರ್ಭಗೃಹಗಳು ಎದುರುಬದುರಾಗಿದ್ದು ಮಧ್ಯದಲ್ಲಿ ಒಂದೇ ಸಭಾಮಂಟಪವಿರುತ್ತದೆ. ಸವಡಿಯ ನಾರಾಯಣ ದೇವಾಲಯ, ರೋಣದ ಸೋಮೇಶ್ವರ ದೇವಾಲಯ ಈ ರೀತಿ ಇವೆ. ಹತ್ತರಗಿಯ (ಬೆಳಗಾಂವಿ ಜಿಲ್ಲೆ) ಶಿವದೇವಾಲಯದಲ್ಲಿ ಪೂರ್ವ ಮತ್ತು ದಕ್ಷಿಣಾಭಿಮುಖವಾಗಿ ಅಂತರಾಳ ಸಹಿತ ಎರಡು ಗರ್ಭಗೃಹಗಳಿದ್ದು ಅಂತರಾಳ ಮತ್ತು ಸಭಾಮಂಟಪ ಮಾತ್ರ ಒಂದೇ ಇದೆ. ಈ ಸಭಾಮಂಟಪಕ್ಕೆ ಪೂರ್ವ ಮತ್ತು ದಕ್ಷಿಣ ಬದಿಗಳಲ್ಲಿ ಮುಖಮಂಟಪಗಳಿವೆ. ತ್ರಿಕೂಟಾಚಲಗಳಲ್ಲಿ ಸಭಾಮಂಟಪದ ಮೂರು ಬದಿಗಳಲ್ಲಿ ಅಂತರಾಳ ಸಹಿತ ಒಂದೊಂದು ಗರ್ಭಗೃಹವಿರುತ್ತದೆ. ಮುಂಬದಿಯಲ್ಲಿ ಮುಖಮಂಟಪವಿರುತ್ತದೆ. ಇದರ ಮುಂದೆ ಒಂದು ಸುಂದರವಾದ ತೋರಣ ಕೆಲವೆಡೆಗಳಲ್ಲಿ ಇರುತ್ತದೆ. ಸೂಡಿಯ ಮಲ್ಲಿಕಾರ್ಜುನ ದೇವಾಲಯ ಇದಕ್ಕೆ ಒಳ್ಳೆಯ ಉದಾಹರಣೆ.

ಮೇಲೆ ಹೇಳಿದ ದೇವಾಲಯಗಳ ಗರ್ಭಗೃಹದ ಮೇಲೆ ಸಾಮಾನ್ಯವಾಗಿ ನಾಗರ ವಿಮಾನ ಶೈಲಿಯಲ್ಲಿ ಅಥವಾ ಅಪರೂಪವಾಗಿ ಕದಂಬನಾಗರ (ಕಾಳಿಂಗ) ಶೈಲಿಯಲ್ಲಿ ಶಿಖರವಿರುತ್ತದೆ. ಜೈನದೇವಾಲಯದ ಶಿಖರದಲ್ಲಿ ಕೆಳಗಿನ ತಳ ಮತ್ತೊಂದು ಸಣ್ಣ ಗರ್ಭಗೃಹವೇ ಆಗಿರುತ್ತದೆ. ಪಟ್ಟದಕಲ್ಲಿನ ಜೈನನಾರಾಯಣ ದೇವಾಲಯದಲ್ಲಿ ಈ ಲಕ್ಷಣಗಳಿವೆ. ಹತ್ತರಗಿಯ ದೇವಾಲಯದ ಪೂರ್ವಾಭಿಮುಖವಾಗಿರುವ ಗರ್ಭಗೃಹಕ್ಕೆ ರೇಖಾನಾಗರ ಶೈಲಿಯ ಶಿಖರವಿದೆ. ಮತ್ತೊಂದು ಗರ್ಭಗೃಹ ಬಿದ್ದುಹೋಗಿದೆ.

ಬಾದಾಮಿಯ ಚಳುಕ್ಯರ ಕಾಲದ ಮಂಟಪಶೈಲಿಯ ದೇವಾಲಯಗಳನ್ನು ಹೋಲುವ ಶಿಖರವಿಲ್ಲದ ಸಮತಲಛತ್ತನುಳ್ಳ ದೇವಾಲಯಗಳು ಹೆಚ್ಚಾಗಿ ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿ ಇವೆ. ಐಹೊಳೆಯ ಕೊಂತಿಗುಡಿಗಳ ಸಮೂಹದಲ್ಲಿ ಎರಡು ಈ ಕಾಲದ್ದು. ಒಂದು ಪಶ್ಚಿಮಾಭಿಮುಖವಾಗಿದ್ದು ಚೌಕೋನದ ಮಂಟಪದಲ್ಲಿ ಹಿಂದಿನ ಗೋಡೆಗೆ ಸೇರಿಸಿ ಕಟ್ಟಲಾದ ಗರ್ಭಗುಡಿಯಿದೆ. ಮಂಟಪದ ಮುಂದೆ ಅದರಷ್ಟೇ ಅಗಲದ ಮುಖಮಂಟಪವಿದೆ. ಇದೇ ಸ್ಥಳದ ಬಡಿಗೇರ ದೇವಾಲಯವೆಂದು ಕರೆಯಲಾದ ಸೂರ್ಯದೇವಾಲಯ ಇದೇ ರೀತಿಯಲ್ಲಿದೆ. ಇದಕ್ಕೆ ಇರುವ ಕದಂಬ ನಾಗರ ಶೈಲಿಯ ಶಿಖರವನ್ನು ಅನಂತರ ಸೇರಿಸಿದ್ದು. ಇಲ್ಲಿಯ ಅಳ್ಳಿಬಸಪ್ಪನೆಂದು ಕರೆಯಲಾದ ದೇವಾಲಯದ ಛತ್ತಿನ ನಿರ್ಮಾಣ ವಿಶಿಷ್ಟರೀತಿಯಲ್ಲಿದೆ. ಮಧ್ಯಭಾಗದಲ್ಲಿ ಎತ್ತರಿಸಿದ ಸಮತಳದ ಛತ್ತಿದ್ದು ಬದಿಗಳಲ್ಲಿ ಅದು ಇಳಿಜಾರಾಗಿದೆ. ಉಳಿದೆಲ್ಲ ದೇವಾಲಯಗಳಲ್ಲಿ ಛತ್ತು ಸಮತಲವಾಗಿರುತ್ತದೆ.

ಈ ಮಾದರಿಗಳಿಗೆ ಸರಿಹೊಂದದ ತನ್ನದೇ ಆದ ವೈಶಿಷ್ಟ್ಯವನ್ನುಳ್ಳ ದೇವಾಲಯಗಳೂ ಇವೆ. ಕುಕ್ಕನೂರಿನಲ್ಲಿರುವ ನವಲಿಂಗ ದೇವಾಲಯದಲ್ಲಿ 9 ಗರ್ಭಗೃಹಗಳಿದ್ದು ಅವು ಅಸಮವಾದ ತಳವಿನ್ಯಾಸದಲ್ಲಿ ಇವೆ. ಐಹೊಳೆಯಲ್ಲಿ ಗಳಗನಾಥ ದೇವಾಲಯಗಳ ಸಮೂಹದಲ್ಲಿ ಒಂದು ಚೌಕೋನ ಮಂಟಪವಾಗಿದ್ದು, ಅದನ್ನು ಗರ್ಭಗೃಹ ಮತ್ತು ಸಭಾಮಂಟಪಗಳಾಗಿ ಮಧ್ಯದ ಅಡ್ಡಗೋಡೆಗಳಿಂದ ವಿಂಗಡಿಸಲಾಗಿದೆ. ಈ ಅಡ್ಡಗೋಡೆಯ ಮಧ್ಯದಲ್ಲಿ ಗರ್ಭಗೃಹಕ್ಕೆ ಬಾಗಿಲು ಇದೆ. ಇದಕ್ಕೆ ಎದುರಾಗಿ ಸಭಾಮಂಟಪದ ಮುಂದಿನ ಗೋಡೆಯಲ್ಲಿ ಪ್ರವೇಶದ್ವಾರವಿಲ್ಲದೆ ಇದರ ಬದಿಗಳ ಗೋಡೆಗಳಲ್ಲಿ ಬಾಗಿಲುಗಳಿರುವುದು ಗಮನಾರ್ಹ. ಗರ್ಭಗುಡಿಯೊಳಗೆ ಒಂದು ಉದ್ದನೆಯ ಪೀಠವಿದ್ದು, ಅದರಲ್ಲಿ ಲಿಂಗಗಳನ್ನಿಡಲು ಸಾಲಾಗಿ ಐದು ಕುಳಿಗಳಿವೆ. ಆದ್ದರಿಂದ ಅದು ಮೂಲತಃ ಪಂಚಲಿಂಗೇಶ್ವರ ದೇವಾಲಯವಿದ್ದಿರಬೇಕು. ಇದಕ್ಕೆ ಸಮತಲ ಛತ್ತು ಇದೆ. ಅಂಬಿಗೇರ (ಸೂರ್ಯ) ದೇವಾಲಯದ ಹತ್ತಿರವಿರುವ ಮತ್ತೊಂದು ದೇವಾಲಯದ ಸಭಾಮಂಟಪಕ್ಕೂ ಮುಂಭಾಗಕ್ಕೂ ಗೋಡೆಯಲ್ಲಿ ಪ್ರವೇಶದ್ವಾರವಿಲ್ಲದೆ ಎರಡೂ ಬದಿಗಳ ಗೋಡೆಗಳಲ್ಲಿ ಇವೆ. ಈ ದೇವಾಲಯಕ್ಕೆ ನಾಗರವಿಮಾನ ಶೈಲಿಯ ಶಿಖರವಿದೆ.

ಸಾಮಾನ್ಯವಾಗಿ ಈ ದೇವಾಲಯಗಳ ಅಧಿಷ್ಠಾನವು ಉಪಾನ, ಜಗತಿ, ಕುಮುದಪಟ್ಟಿ, ಕೂಡುವರಿ ಮೊದಲಾದ ಅಡ್ಡಪಟ್ಟಿಕೆಗಳಿಂದ

ಕೂಡಿದ ಪದ್ಮಬಂಧಶೈಲಿಯಲ್ಲೂ ಅಪೂರ್ವವಾಗಿ ಎತ್ತರದ ಕಂಠವುಳ್ಳ ಮಂಚಬಂಧಶೈಲಿಯಲ್ಲೂ ಇರುತ್ತದೆ. ಗೋಡೆಯ ಹೊರಮೈ ಸಮತಲವಾಗಿದ್ದು, ನಿರ್ದಿಷ್ಟ ಅಳತೆಯ ಉಬ್ಬುಗಳು ಇರುತ್ತವೆ. ಏನೂ ಚಿತ್ರಗಳಿಲ್ಲದೇ ಇರುವುದೂ ಉಂಟು ಅಥವಾ ಉಬ್ಬುತಗ್ಗುಗಳಿದ್ದು ಅವುಗಳಿರುವಲ್ಲಿ ಮಕರತೋರಣವುಳ್ಳ ಸಣ್ಣಸಣ್ಣ ಉಬ್ಬುಶಿಲ್ಪಗಳಿರುತ್ತವೆ. ಗರ್ಭಗುಡಿಯ ಹೊರಮೈಯಲ್ಲಿ ಒಂದೊಂದು ದಿಕ್ಕಿಗೆದುರಾಗಿ ಒಂದೊಂದು ದೇವಕೋಷ್ಠವಿರುತ್ತದೆ. ಅಪೂರ್ವವಾಗಿ ಗೋಡೆಯ ಮೇಲ್ಭಾಗದಲ್ಲಿ ಕಪೋತಕ್ಕೆ ಸೇರಿಸಿದ ಹಾಗೆ ಚಿತ್ರಫಲಕಗಳು ಇರುವುದೂ ಉಂಟು. ಸಭಾಮಂಟಪದ ಕಂಬಗಳು ಸಾಮಾನ್ಯವಾಗಿ ಸರಳವಾಗಿದ್ದು ಅಪೂರ್ವವಾಗಿ ಅವುಗಳಲ್ಲಿ ಸಣ್ಣಸಣ್ಣ ಉಬ್ಬುಶಿಲ್ಪಗಳು ಇರುತ್ತವೆ. ಕಂಬಗಳಲ್ಲಿ ಪೀಠ, ಕಾಂಡ, ಪದ್ಮಬಂಧ, ತಾಡಿ, ಕುಂಭ ಇವಿಷ್ಟೇ ಭಾಗಗಳಿದ್ದು ಫಲಕಗಳಿರುವುದಿಲ್ಲ. ಸಭಾಮಂಟಪದ ಮಧ್ಯಭಾಗದ ಛತ್ತು ಹಾಗೂ ಗರ್ಭಗೃಹದ ಛತ್ತು ಸಾಮಾನ್ಯವಾಗಿ ಅಷ್ಟಕೋನ ವಿನ್ಯಾಸದಲ್ಲಿರುತ್ತದೆ.

ಐಹೊಳೆಯಲ್ಲಿ ಏಣಿಯರ್ ಗುಡಿಗಳ ಗುಂಪಿನಲ್ಲಿ ತ್ರಿಕೂಟಾಚಲ ಮಾದರಿಯ ಎರಡು ದೇವಾಲಯಗಳು ಈ ಕಾಲದ್ದು. ಇವುಗಳ ಹತ್ತಿರದಲ್ಲೇ ಎರಡು ಚಚ್ಚೌಕವಾದ ಸಭಾಗೃಹಗಳಿವೆ. ಹಾಗೆಯೇ ಹುಚ್ಚಪ್ಪನ ಮಠ ಎಂದು ಕರೆಯಲಾದ ದೇವಾಲಯದ ಹತ್ತಿರ ಇರುವ ಒಂದು ಕಟ್ಟಡದಲ್ಲಿ ಕಂಬಗಳುಳ್ಳ ಸಭಾಮಂಟಪವಿದ್ದು ಮುಂದೆ ಕಕ್ಷಾಸನವುಳ್ಳ ಮುಖಮಂಟಪ ವಿದ್ದು ಈ ಮಂಟಪ ಮಾತ್ರ ರಾಷ್ಟ್ರಕೂಟರ ಕಾಲದ್ದು. ಈ ರೀತಿ ದೇವಾಲಯಗಳಿಗೆ ಸೇರಿದ ಹಾಗೆ ಪ್ರತ್ಯೇಕ ಸಭಾಮಂಟಪಗಳಿರುವುದು ಈ ಕಾಲದ ವಾಸ್ತುಶಿಲ್ಪದ ವೈಶಿಷ್ಟ್ಯ.

ಬಹುಶಃ ಊರಿನ ಪ್ರಮುಖ ಪ್ರವೇಶ ಸ್ಥಳದಲ್ಲಿ ತೋರಣಗಳನ್ನು ಕಟ್ಟಲಾಗಿತ್ತೆಂದು ತೋರುವುದು. ಎರಡು ಬಹು ಎತ್ತರದ ಕಂಬಗಳ ಮೇಲೆ ಅಲಂಕೃತ ಅಡ್ಡಜಂತಿಯನ್ನು ನಿಲ್ಲಿಸಿ ತೋರಣ ಕಟ್ಟುವುದು ಒಂದು ಪದ್ಧತಿಯಾಗಿದ್ದು, ಅಡ್ಡ ಜಂತಿಯ ಮೇಲೆ ಶುಭಸೂಚಕವಾದ ಕಳಶ, ಕನ್ನಡಿ, ಮೀನದ್ವಯ ಮುಂತಾದ ಅಷ್ಟಮಂಗಳ ಚಿಹ್ನೆಗಳ ಮತ್ತು ಗಜಲಕ್ಷ್ಮಿಯ ಉಬ್ಬುಶಿಲ್ಪಗಳಿರುತ್ತವೆ. ಇಂಥ ತೋರಣಗಳು ಮುಧೋಳ ಮತ್ತು ಲಕ್ಷ್ಮೇಶ್ವರಗಳಲ್ಲಿವೆ.

ಬೇಲೂರು, ನಿಡಗುಂದಿ, ರೋಣ, ಸವಡಿ, ಗದಗ (ಇಲ್ಲಿಯ ತ್ರಿಕೂಟೇಶ್ವರ ದೇವಾಲಯವು ಮೂಲತಃ ರಾಷ್ಟ್ರಕೂಟ ಕಾಲದ ತ್ರೈಪುರುಷ ದೇವಾಲಯವಾಗಿದ್ದು ಅದನ್ನು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ವಿಸ್ತರಿಸಿ ತ್ರಿಕೂಟೇಶ್ವರ ದೇವಾಲಯವಾಗಿ ಮಾರ್ಪಡಿಸಿರುವಂತೆ ತೋರುವುದು)– ಇಲ್ಲಿರುವ ತ್ರೈಪುರುಷ ದೇವಾಲಯಗಳ ಗರ್ಭಗುಡಿಯ ಪೀಠದಲ್ಲಿ ಸಮಭಂಗದಲ್ಲಿರುವ ಬ್ರಹ್ಮ–ವಿಷ್ಣು–ಶಿವನ ಸುಂದರ ದುಂಡುಶಿಲ್ಪಗಳಿವೆ. ಬೇಲೂರಿನ ದೇವಾಲಯದ ಮೂರ್ತಿಗಳು ಉತ್ತಮ ನಿದರ್ಶನ. ಸೂಡಿಯಲ್ಲಿಯ ಗಣೇಶ ದೇವಾಲಯದಲ್ಲಿನ ಕುಳಿತ ಭಂಗಿಯಲ್ಲಿರುವ ಚತುರ್ಭುಜ ಗಣೇಶವಿಗ್ರಹ ಒಂದು ಭವ್ಯ ದುಂಡು ಶಿಲ್ಪ. ಸುಮಾರು 2.50 ಮೀ ಎತ್ತರ ಮತ್ತು 1.75 ಮೀ ಅಗಲವಿರುವ ಈ ಶಿಲ್ಪದ ಕೈಗಳಲ್ಲಿ ದಂತ, ಪರಶು, ಕಮಲ ಮತ್ತು ಮೋದಕ ಪಾತ್ರೆ ಇವೆ. ಇಲ್ಲಿಯ ಮಲ್ಲಿಕಾರ್ಜುನ ದೇವಾಲಯದ ದಕ್ಷಿಣ ಮತ್ತು ಉತ್ತರ ದಿಕ್ಕಿನ ಗರ್ಭಗೃಹಗಳಲ್ಲಿ ಅನಂತಶಯನ ಮತ್ತು ಉಮಾಮಹೇಶ್ವರನ ಚೆಲುವಾದ ಮೂರ್ತಿಗಳಿವೆ. ಅನಂತಶಯನ ಮೂರ್ತಿಯ ಪ್ರಭಾವಳಿಯಲ್ಲಿ ವಿಷ್ಣುವಿನ ಮೊದಲನೆಯ ಐದು ಅವತಾರಗಳನ್ನು ಮಾತ್ರ ತೋರಿಸಿರುವುದು ನಿಜಕ್ಕೂ ಗಮನಾರ್ಹ. ಐಹೊಳೆಯ ಸೂರ್ಯನಾರಾಯಣ ದೇವಾಲಯದ ವಾಸ್ತುಶಿಲ್ಪ ಬಾದಾಮಿ ಚಳುಕ್ಯರ ಕಾಲದ್ದಾಗಿಯೂ ಗರ್ಭಗುಡಿಯಲ್ಲಿರುವ ಸೂರ್ಯನ ಮೂರ್ತಿ ಮಾತ್ರ ರಾಷ್ಟ್ರಕೂಟ ಕಾಲದ್ದೆಂದೂ ತೋರುವುದು. ಈ ಶಿಲ್ಪದ ಪ್ರಭಾವಳಿಯಲ್ಲಿ ಅಷ್ಟಗ್ರಹಗಳನ್ನು ತೋರಿಸಲಾಗಿದೆ. ಗದಗದ ಸಮೀಪದ ಬೆಟಗೇರಿಯಲ್ಲಿ ಉತ್ತಮ ಕೆತ್ತನೆಯ ಬ್ರಹ್ಮನ ಮೂರ್ತಿ ಒಂದು ಕಡೆ ಬಿದ್ದಿದೆ. ಇದು ಪ್ರಾಯಶಃ ಗದುಗಿನ ಮೂಲತಃ ತ್ರೈಪುರುಷ ದೇವಾಲಯವಾಗಿದ್ದ ತ್ರಿಕೂಟೇಶ್ವರ ದೇವಾಲಯಕ್ಕೆ ಸೇರಿದ್ದೆಂದು ಅನಿಸುವುದು. ರೋಣದಲ್ಲಿ ಬ್ರಹ್ಮ ಮತ್ತು ಸೂರ್ಯನ ಶಿಲ್ಪಗಳು ಒಂದು ಕೆರೆ ದಂಡೆಯ ಮೇಲೆ ಬಿದ್ದಿವೆ. ಮುಧೋಳದಲ್ಲಿ ಮಾಧವನ ಒಂದು ಶಿಲ್ಪವಿದ್ದು ಅದು ಅಲ್ಲಿಯ ಪಾಳುಬಿದ್ದ ರಾಷ್ಟ್ರಕೂಟ ಕಾಲದ ಸಿದ್ಧೇಶ್ವರ ದೇವಾಲಯದ್ದೆಂದು ಕಾಣುತ್ತದೆ.

ಐಹೊಳೆಯ ಅಳ್ಳಿಬಸಪ್ಪ ದೇವಾಲಯದ ಮುಂಬಾಗಿಲಿನ ಎರಡು ಬದಿಗಳಲ್ಲಿ ಇರುವ ಗಂಗೆ ಮತ್ತು ಯಮುನೆಯರ ದೊಡ್ಡ ಪ್ರಮಾಣದ ಉಬ್ಬುಶಿಲ್ಪಗಳು ಅಪೂರ್ವವಾಗಿದ್ದು ನಿಜಕ್ಕೂ ಈ ಕಾಲದ ಶ್ರೇಷ್ಠ ಚಿತ್ರಗಳು. ಹಾಗೆಯೇ ರಾಜೂರಿನ (ಧಾರವಾಡ ಜಿಲ್ಲೆ) ರಾಮಲಿಂಗೇಶ್ವರ ದೇವಾಲಯದ ದ್ವಾರಪಾಲಕರ ಉಬ್ಬುಶಿಲ್ಪಗಳು ಮಧ್ಯಮ ಪ್ರಮಾಣದಲ್ಲಿವೆ.

ಕೆಲವೊಂದು ದೇವಾಲಯಗಳ ಗೋಡೆಗಳ ಹೊರಮೈಯಲ್ಲಿ ದಶಾವತಾರದ ಭೂವರಾಹ, ನರಸಿಂಹ, ತ್ರಿವಿಕ್ರಮ ಮುಂತಾದ ಚಿತ್ರಗಳ ಪೌರಾಣಿಕ ಕಥೆಗಳ ಮುಖ್ಯ ಸನ್ನಿವೇಶಗಳನ್ನು ನಿರೂಪಿಸುವ ತ್ರಿಪುರಾಂತಕೇಶ್ವರ, ಗಜಾಸುರಮರ್ದನ, ಜ್ಯೋತಿರ್ಲಿಂಗ, ಪಂಚತಂತ್ರದ ಕಥೆಗಳ ಮುಖ್ಯಾಂಶಗಳನ್ನು ತೋರಿಸುವ, ತೀರ್ಥಂಕರರ ಉಬ್ಬುಶಿಲ್ಪ ಗಳಿರುತ್ತವೆ. ಗರ್ಭಗುಡಿಯ ದೇವಕೋಷ್ಠಲ್ಲಿ ಬ್ರಹ್ಮ, ಉಗ್ರನರಸಿಂಹ ಅಥವಾ ವಿಷ್ಣು, ದ್ವಿಭುಜಗಣೇಶನ ಶಿಲ್ಪಗಳಿರುತ್ತವೆ. ರಾಷ್ಟ್ರಕೂಟರು ಬಾದಾಮಿಯ ಚಳುಕ್ಯ ಶಿಲ್ಪಶೈಲಿಯನ್ನು ಮುಂದುವರಿಸಿದ್ದರೂ ಅದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ದೇಹವಿನ್ಯಾಸದಲ್ಲಿ ಆಭರಣದ ವೈವಿಧ್ಯದಲ್ಲಿ ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ.

ರಾಷ್ಟ್ರಕೂಟ ಕಾಲದ ವೀರಗಲ್ಲುಗಳೂ ಕೂಡ ಶಿಲ್ಪಕಲೆಯ ಉತ್ತಮ ಕೃತಿಗಳೆಂದೇ ಹೇಳಬೇಕು. ಮುಧೋಳ, ರೋಣ ಮತ್ತು ಬೆಟಗೇರಿಗಳ ವೀರಗಲ್ಲುಗಳನ್ನು ಇಲ್ಲಿ ಉದಾಹರಿಸಬಹುದು.

ಒಟ್ಟಿನಲ್ಲಿ ಕರ್ನಾಟಕದ ವಾಸ್ತುಶಿಲ್ಪದಲ್ಲಿ ರಾಷ್ಟ್ರಕೂಟರ ಕೊಡುಗೆ ಬಹು ಮಹತ್ತ್ವದ್ದು. ನಕ್ಷತ್ರಾಕೃತಿಯ ತಳವಿನ್ಯಾಸ, ದ್ವಿಕೂಟಾಚಲ, ತ್ರಿಕೂಟಾಚಲ ಶೈಲಿಯ ವೃದ್ಧಿ, ತ್ರೈಪುರುಷ, ಪಂಚಲಿಂಗ ದೇವಾಲಯ ಗಳ ನಿರ್ಮಾಣ, ದೇವಾಲಯಗಳಿಗೆ ಸಭಾಮಂದಿರಗಳನ್ನು ಸೇರಿಸುವುದು, ಜೈನಬಸದಿಗಳಲ್ಲಿ ಗರ್ಭಗುಡಿಗೆ ಧ್ಯಾನದ ಕೋಣೆಗಳನ್ನು ಸೇರಿಸುವುದು– ಇವೇ ಮೊದಲಾದ ಮಹತ್ತ್ವದ ಅಂಶಗಳನ್ನು ವಾಸ್ತುಶಿಲ್ಪದಲ್ಲಿ ಪ್ರಪ್ರಥಮವಾಗಿ ಕಾಣಬಹುದು. **(ಎ.ಎಸ್.)**

**ನಾಣ್ಯಗಳು:** ದ್ರಮ್ಮ, ಸುವರ್ಣ, ಗದ್ಯಾಣ, ಕಾಸು, ಕಳಂಜು, ಮುಂಜಾಡಿ ಮತ್ತು ಅಕ್ಕಂ ಎಂಬ ಹೆಸರಿನ ನಾಣ್ಯಗಳನ್ನು ರಾಷ್ಟ್ರಕೂಟರ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಇವುಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿ ಲಭಿಸುವುದಿಲ್ಲ. ದ್ರಮ್ಮಗಳಲ್ಲಿ ಎರಡು ರೀತಿ–ಚಿನ್ನದ ಮತ್ತು ಬೆಳ್ಳಿಯ ದ್ರಮ್ಮಗಳು. ಶಾಸನಗಳ ಆಧಾರದ ಮೇಲೆ ಸುವರ್ಣವೆಂಬ ನಾಣ್ಯ ವಿಶೇಷವಾಗಿ ಪ್ರಚಾರದಲ್ಲಿತ್ತೆಂದೂ ತೂಕದ್ದಾಗಿರಬೇಕೆಂದೂ ಅಳತೇಕರ್ ಊಹಿಸಿದ್ದಾರೆ. ಒಂದು ಗದ್ಯಾಣಕ್ಕೆ ಎರಡು ಕಳಂಜುಗಳು ಸಮ ಎಂದು ಶಾಸನವೊಂದರಲ್ಲಿ ಹೇಳಿದೆ. ಅಂದರೆ ಇದು 48 ಗ್ರೇನ್ ತೂಕದ್ದಾಗಿರಬೇಕು. 20 ಕಾಸುಗಳಿಗೆ 7 ಕಳಂಜುಗಳು ಸಮವೆಂದು ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ಕಳಂಜು ನಾಣ್ಯದ ಇಪ್ಪತ್ತನೆಯ ಒಂದು ಭಾಗದ ನಾಣ್ಯಕ್ಕೆ ಮುಂಜಾಡಿ ಎಂದು ಹೆಸರಿದ್ದಿತು.

ಬಹುಶಃ ಇದು ಎರಡೂವರೆ ಗ್ರೇನ್ ತೂಕದ ನಾಣ್ಯ. ಒಂದು ಕಾಸಿನ ಇಪ್ಪತ್ತನೆಯ ಒಂದು ಭಾಗವೇ ಅಕ್ಕಂ ಎಂಬ ನಾಣ್ಯ.

ಮಹಾರಾಷ್ಟ್ರದಲ್ಲಿ ದೊರಕಿದ ಕೆಲವು ನಾಣ್ಯಗಳಲ್ಲಿ ಶ್ರೀಕೃಷ್ಣರಾಜಸ್ಯ ಎಂಬ ಬರೆಹವಿದೆ. ಇವು ರಾಷ್ಟ್ರಕೂಟ ಒಂದನೆಯ ಕೃಷ್ಣನ ನಾಣ್ಯಗಳೆಂದು ಕೆಲವರು ಭಾವಿಸಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇವು ಕಳಚುರಿ ನಾಣ್ಯಗಳೆಂದು ತಿಳಿದುಬಂದಿದೆ. ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡದಲ್ಲಿ 140 ಗ್ರೇನ್ ತೂಕದ 3/4 ಅಂಗುಲ ವ್ಯಾಸದ ತಾಮ್ರದ ನಾಣ್ಯಗಳು ದೊರಕಿದ್ದು ಅವುಗಳ ಮೇಲಿನ ಬರೆಹದಲ್ಲಿ ಕಾಕರಾಯ ಎಂಬ ಹೆಸರಿದೆಯೆಂದು ಓದಿ ಕೆಲವು ವಿದ್ವಾಂಸರು ಇವು ರಾಷ್ಟ್ರಕೂಟ ಇಮ್ಮಡಿ ಕರ್ಕರಾಜನದ್ದೆಂದು ಅಭಿಪ್ರಾಯಪಟ್ಟರು. ಆದರೆ ಮತ್ತೆ ಕೆಲವರು ಈ ಬರೆಹವನ್ನು ಕಾಕತೀಯ ಎಂದು ಓದಿ ಅವುಗಳು ಆ ರಾಜವಂಶಕ್ಕೆ ಸೇರಿದವೆಂದು ಹೇಳಿದ್ದಾರೆ. ಒಟ್ಟಿನಲ್ಲಿ ಈ ವಿಷಯದಲ್ಲಿ ಒಮ್ಮತವಿಲ್ಲ. ಎಂ.ಎಚ್.ಕೃಷ್ಣ ಅವರು 57.9 ಗ್ರೇನ್ ತೂಕದ ಕೆಲವು ಚಿನ್ನದ ನಾಣ್ಯಗಳನ್ನು ರಾಷ್ಟ್ರಕೂಟರ ನಾಣ್ಯಗಳೆಂದು ಹೇಳಿದ್ದಾರೆ. ಅವುಗಳಲ್ಲಿ ಒಂಬತ್ತು ಮುದ್ರೆಗಳಿವೆ ಮತ್ತು ಪರ ಶ್ರೀ ಎಂಬ ಬರೆಹವಿದೆ. ಮಾನ್ಯ ಎಂಬ ಕನ್ನಡ ಬರೆಹವಿರುವುದು ಮಾನ್ಯಖೇಟವನ್ನು ನಿರ್ದೇಶಿಸಿದೆಯೆಂದೂ ಅವರ ವಾದ. ಆದರೆ ಇವಿನ್ನೂ ಖಚಿತವಾಗಿಲ್ಲ. ಹೀಗಾಗಿ ಖಚಿತವಾಗಿ ರಾಷ್ಟ್ರಕೂಟರಿಗೇ ಸೇರಬಹುದಾದ ನಾಣ್ಯಗಳಿನ್ನೂ ದೊರಕಿಲ್ಲವೆಂದೇ ಹೇಳಬೇಕಾಗಿದೆ. (ಎ.ವಿ.ಎನ್.)

**ಶಾಸನಗಳು:** ಇದುವರೆಗೂ ರಾಷ್ಟ್ರಕೂಟರ ಹಲವಾರು ಶಿಲಾಶಾಸನಗಳು, ಸು. 35 ತಾಮ್ರಶಾಸನಗಳು ದೊರೆತಿವೆ. ತಾಮ್ರಶಾಸನಗಳಲ್ಲಿ ಕೆಲವು ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪಕನಾದ ದಂತಿದುರ್ಗನ ಪೂರ್ವಜರ ಹಾಗೂ ಈ ರಾಜನ ಅನಂತರ ಬಂದ ಚಕ್ರವರ್ತಿಗಳ ವಂಶಾವಳಿಯನ್ನು ನೀಡುತ್ತವೆ. ಈ ವಂಶದ ಅರಸರ ರಾಜಕೀಯ ಸಾಧನೆಗಳು, ಅವರು ಧರಿಸಿದ ವಿವಿಧ ಬಿರುದಾವಳಿಗಳು, ಮಾಡಿದ ದಾನಧರ್ಮಗಳು, ಇತರ ಸಾಂಸ್ಕೃತಿಕ ಚಟುವಟಿಕೆಗಳು ಮುಂತಾದವುಗಳನ್ನು ಇವರ ಶಾಸನಗಳಿಂದ ತಿಳಿಯಬಹುದು. ತಾಮ್ರಶಾಸನಗಳು ಸಾಮಾನ್ಯವಾಗಿ ನಾಗರೀಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿವೆ. ಬ್ರಿಟಿಷ್ ಮ್ಯೂಸಿಯಮ್‌ನಲ್ಲಿರುವ ಕನ್ನಡ ಲಿಪಿ ಮತ್ತು ಭಾಷೆಯನ್ನೊಳಗೊಂಡ ಗೋವಿಂದನ ಶಾಸನವೊಂದು ಇದಕ್ಕೆ ಅಪವಾದ. ಈ ಮನೆತನದ ಹಲವಾರು ಶಾಖೆಗಳು ಸು. 7–8ನೆಯ ಶತಮಾನಗಳಲ್ಲಿ ಗುಜರಾತ್ (ಖೇಟ್ ಮಂಡಳ), ಅಮರಾವತಿ (ಮಹಾರಾಷ್ಟ್ರ) ಪ್ರದೇಶಗಳಲ್ಲಿ 10–12ನೆಯ ಶತಮಾನಗಳಲ್ಲಿ ಪಠಾರಿ (ಭೋಪಾಲ್ ಪ್ರದೇಶ), ಧನೋಪ ಮತ್ತು ಬಿಜಾಪುರ (ರಾಜಸ್ಥಾನ), ಮಗಧ ಪ್ರದೇಶಗಳಲ್ಲಿ ಆಳುತ್ತಿದ್ದರೆಂದು ಶಿಲಾ ಮತ್ತು ತಾಮ್ರಶಾಸನಗಳಿಂದ ತಿಳಿದುಬರುತ್ತದೆ. ಇವುಗಳಲ್ಲಿ ಔರಂಗಾಬಾದ್ ಖಾನ್ದೇಶ, ನಾಸಿಕ್ ಪ್ರದೇಶಗಳನ್ನು ಎಲ್ಲೋರದಿಂದ ರಟ್ಟರೆಂಬ ಶಾಖೆಯು ಆಡಳಿತ ನಡೆಸಿ ಹೆಚ್ಚು ಪ್ರಸಿದ್ಧವಾಗಿದೆ.

ಇವರ ತಾಮ್ರಶಾಸನಗಳ ಮುದ್ರೆಗಳಲ್ಲಿ ವೀರಾಸನದಲ್ಲಿ ಕುಳಿತು ಕೈಮುಗಿದುಕೊಂಡಿರುವ ಗರುಡನ ಅಥವಾ ತೆಕ್ಕೆಹಾಕಿಕೊಂಡಿರುವ ಎರಡು ಸರ್ಪಗಳ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು, ಆ ಸರ್ಪಗಳ ಹೆಡೆಗಳನ್ನು ಕೈಗಳಲ್ಲಿ ಹಿಡಿದುಕೊಂಡ ಗರುಡನ ಚಿತ್ರವಿರುತ್ತದೆ. ಜೊತೆಗೆ, ಬಲಭಾಗದಲ್ಲಿ ಗಣೇಶ, ಚಾರಿ, ದೀಪಸ್ತಂಭ, ಕೆಳಗೆ ಸ್ವಸ್ತಿಕವಿರುತ್ತದೆ. ಚಾರಿಯ ಮೇಲೆ ಸೂರ್ಯ ಚಂದ್ರರು, ಮತ್ತೊಂದು ಬದಿಯಲ್ಲಿ ಲಿಂಗ ಅಂಕುಶ ಮೊದಲಾದ ಚಿತ್ರಗಳಿರುತ್ತವೆ. ಅಪೂರ್ವವಾಗಿ ಚತುರ್ಬಾಹು ವಿಷ್ಣುವಿನ ಮೂರ್ತಿ ಇರುತ್ತದೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲೂ ಇವರ ಶಿಲಾಶಾಸನಗಳು ಲಭಿಸಿವೆ. ತಮಿಳುನಾಡಿನ ಶಿಲಾಶಾಸನಗಳು ತಮಿಳು ಭಾಷೆ ಮತ್ತು ಲಿಪಿಗಳಲ್ಲಿವೆ. ರಾಷ್ಟ್ರಕೂಟರ ಶಿಲಾಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿರುವುದು ಕರ್ನಾಟಕದಲ್ಲಿ; ಅದರಲ್ಲೂ ಧಾರವಾಡ ಜಿಲ್ಲೆಯಲ್ಲಿ.

ಈ ವಂಶದವರ ಆಳ್ವಿಕೆಯ ಅನಂತರದ ಶತಮಾನಗಳ ಶಾಸನಗಳಿಗೆ ಹೋಲಿಸಿದಾಗ ಇವರ ಶಿಲಾಶಾಸನಗಳು ಸಂಕ್ಷಿಪ್ತ ರೂಪದಲ್ಲಿವೆ ಎನ್ನಬಹುದು. ಆರಂಭದ ಪ್ರಾರ್ಥನಾ ಶ್ಲೋಕಗಳು ಅಪೂರ್ವವಾಗಿದ್ದು, ನೇರಾಗಿ ಅರಸನ ಆಳ್ವಿಕೆಯ ಪ್ರಸ್ತಾಪ, ಆತನ ಸಾಮಂತಾಧಿಕಾರಿಯ ಉಲ್ಲೇಖ, ಶಾಸನದ ಕಾಲ ಮತ್ತು ಉದ್ದೇಶಗಳ ವಿವರಣೆಗಳನ್ನು ಇವರ ಕನ್ನಡ ಶಾಸನಗಳಲ್ಲಿ ಕಾಣಬಹುದು. ಶಕಕಾಲವನ್ನು ಅಂಕೆಗಳಿಗಿಂತ ಹೆಚ್ಚಾಗಿ 'ಶಕನೃಪಕಾಲಾತೀತ ಸಂವತ್ಸರಶತಂಗಳೆಣ್ಬುನೂರನಾಲ್ವತ್ತಾರು' ಎಂದು ಅಕ್ಷರಗಳಲ್ಲಿ ಸೂಚಿಸುವ ಪದ್ಧತಿ ಸಾಮಾನ್ಯ. ಹೆಚ್ಚು ವಸ್ತುನಿಷ್ಠವಾದ ಈ ಶಾಸನಗಳಲ್ಲಿ ಸಾಹಿತ್ಯಾಂಶ ಬಹು ಕಡಿಮೆ; ಅಕ್ಷರಗಳು ಹೆಚ್ಚು ದುಂಡಾಗಿದ್ದು ಮುಂದಿನ ಶತಮಾನಗಳಲ್ಲಿ ಹೆಚ್ಚಿನ ಮಾರ್ಪಾಡುಗಳಿಗೆ ಅವಕಾಶವಿಲ್ಲದೆ ಸ್ಥಿರರೂಪವನ್ನು ಈಗ ಪಡೆದುವೆನ್ನಬಹುದು. ಸಮಕಾಲೀನ ಗಂಗರ ಶಾಸನಗಳಿಗಿಂತ ರಾಷ್ಟ್ರಕೂಟರ ಶಾಸನಗಳಲ್ಲಿ ಕನ್ನಡ ಭಾಷೆಯ ಬಳಕೆ ಹೆಚ್ಚು. ಭಾಷೆಯ ರಚನೆ, ಶಾಸನಗಳನ್ನು ಬರೆಯುವ ಒಂದು ಕ್ರಮ ಈಗ ಕಾಣಿಸಿಕೊಂಡು ಭಾಷೆ ಸಂಸ್ಕಾರಗೊಂಡಿತು. ಪದ್ಯಶಾಸನಗಳಿಗಿಂತ ಗದ್ಯಶಾಸನಗಳೇ ಸಂಖ್ಯೆಯಲ್ಲಿ ಹೆಚ್ಚು. ತಮಿಳುನಾಡಿನ ತಮಿಳುಶಾಸನಗಳೆಲ್ಲ ಮೂರನೆಯ ಕೃಷ್ಣನ ಕಾಲಕ್ಕೆ ಸೇರಿದವು. ಅನ್ಯಭಾಷಾಪ್ರದೇಶ ಸ್ವಾಧೀನವಾದಾಗ ಅಲ್ಲಿನ ಪ್ರಜೆಗಳಿಗೆ ಅರ್ಥವಾಗುವಂತೆ ಅವರ ಭಾಷೆಯನ್ನೇ ಬಳಸಿದುದೂ ಗಮನಾರ್ಹ ಸಂಗತಿ.

ದಂತಿದುರ್ಗನ ಎಲ್ಲೋರ ತಾಮ್ರಶಾಸನ (ಶ.ವ. 663) ಮತ್ತು ಸಾಮನಗಡ ತಾಮ್ರಶಾಸನಗಳಿಂದ (ಶ.ವ. 675) ಈ ಮನೆತನದ ಆರನೆಯವನಾದ ಇವನು ಕಲಿತನದಿಂದ ಮಾಳವ ಪ್ರದೇಶದಲ್ಲಿ ರಾಜ್ಯಾಧಿಕಾರವನ್ನು ಪಡೆದು ಅದನ್ನು ವಿಸ್ತರಿಸುತ್ತ ಕೊನೆಗೆ ಬಾದಾಮಿ ಚಳುಕ್ಯ ಚಕ್ರವರ್ತಿ ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಇವನ ರಾಜ್ಯದಲ್ಲಿ ನಾಲ್ಕು ಲಕ್ಷ ಗ್ರಾಮಗಳಿದ್ದು ಪ್ರತಿಯೊಂದರಿಂದಲೂ ಇವನ ತಾಯಿ ಭೂದಾನ ಮಾಡಿದಳೆಂದು ತಿಳಿಸುತ್ತದೆ. ಇದು ಇವನ ಮಾತೃಭಕ್ತಿಯ ದ್ಯೋತಕವಾಗಿದೆ.

ಇವನ ಅನಂತರ ಇವನ ಅಣ್ಣನ ಮಗನಾದ ಒಂದನೆಯ ಕೃಷ್ಣನ ರಾಜ್ಯ ವಿಸ್ತರಣೆಯ ವಿವರಗಳು ಇವನ ಮಗ ಧ್ರುವಮಹಾರಾಜನ ಪಿಂಪಾರಿಶಾಸನ ಮತ್ತು ಅವನ ರಾಣಿ ಶೀಲಮಹಾದೇವಿಯ ಜಟಾಯಿ ತಾಮ್ರಶಾಸನದಿಂದಲೂ ತಿಳಿದುಬರುತ್ತದೆ. ಗಂಗರ ರಾಜಧಾನಿಯಾದ ಮಣ್ಣೆಯನ್ನು ಆಕ್ರಮಣ ಮಾಡಿ, ತಮಿಳುನಾಡಿನ ಕಾಂಚಿಯವರೆಗೂ ದಿಗ್ವಿಜಯ ಸಾಧಿಸಿದ್ದನೆಂಬ ವಿಷಯ ತಳೆಗಾಂವ ತಾಮ್ರಶಾಸನದಲ್ಲಿ ಪ್ರಸ್ತಾಪವಾಗಿದೆ. ಈತನದೇ ಆದ ಪುಣೆ–ತಳೆಗಾಂವ ಮತ್ತು ಭಾಂಡಕ ಶಾಸನಗಳಿಂದ ಈತನು ನೀಡಿದ ದಾನಗಳ ವಿಷಯ ತಿಳಿದುಬರುತ್ತದೆ. ಗುಜರಾತಿನ ಸುವರ್ಣವರ್ಷ ಕರ್ಕರಾಜನ ಬರೋಡಾ ಶಾಸನ ಎಲಾಪುರದಲ್ಲಿ ಅದ್ಭುತವಾದ ಶಂಭುಗೃಹವನ್ನು ಒಂದನೆಯ ಕೃಷ್ಣ ನಿರ್ಮಾಣ ಮಾಡಿಸಿದನೆಂದು ತಿಳಿಸುತ್ತದೆ. ಇದನ್ನು ದೇವ್ಲೋಲಿ ತಾಮ್ರಶಾಸನ ಪುಷ್ಟೀಕರಿಸುತ್ತದೆ. ಇವನಿಗೆ ಅಕಾಲವರ್ಷ, ಶುಭತುಂಗ, ಮಹಾಪ್ರಲಯ ವರಾಹ ಮುಂತಾದ ಬಿರುದಾವಳಿಗಳಿದ್ದುವು.

ಒಂದನೆಯ ಕೃಷ್ಣನ ಮಗ ಇಮ್ಮಡಿ ಗೋವಿಂದರಾಜ ಸ್ವಲ್ಪಕಾಲದವರೆಗೆ ಚಕ್ರವರ್ತಿಯಾಗಿದ್ದು ವಿಷಯಲಂಪಟನಾದುದರಿಂದ ತನ್ನ ತಮ್ಮ ಧ್ರುವನಿಗೆ

ರಾಜ್ಯಭಾರವನ್ನು ಒಪ್ಪಿಸಿದನೆಂದು ಮೂರನೆಯ ಕೃಷ್ಣನ ರಾಧನಪುರ ಮತ್ತು ದೇವ್ಳೋಲಿ ಶಾಸನಗಳಲ್ಲಿ ಹೇಳಿದೆ. ಧ್ರುವನ ಕೀರ್ತಿಯನ್ನು ದೌಲತಾಬಾದ್ ಶಾಸನದಲ್ಲಿ (ಶ.ವ. 715) ವರ್ಣಿಸಲಾಗಿದೆ.

ಮೂರನೆಯ ಗೋವಿಂದನ ಸು. 14 ತಾಮ್ರಶಾಸನಗಳು ದೊರೆತಿವೆ. ನವಸಾರಿ ಶಾಸನದ (ಶ.ವ. 738) ಪ್ರಕಾರ ಇವನ ಅಣ್ಣ ಕಂಬಯ್ಯನು ಹನ್ನೆರಡು ಪ್ರಬಲ ರಾಜರೊಡಗೂಡಿ ಗೋವಿಂದನ ಮೇಲೆ ದಂಗೆ ಎದ್ದನೆಂದೂ ಸಿಸವಾಯಿ ಮತ್ತು ರಾಧನಪುರ ಶಾಸನಗಳಿಂದ ಈ ಬಂಡನ್ನು ಗೋವಿಂದನು ಅಡಗಿಸಿದನೆಂದೂ ತಿಳಿಯುತ್ತದೆ. ಇವನು ಪ್ರಭೂತವರ್ಷ, ಜಗತ್ತುಂಗ, ಅನುಪಮ, ಕೀರ್ತಿನಾರಾಯಣ, ವೃತ್ತಭುಜ, ತ್ರಿಭುವನಧವಳ ಮುಂತಾದ ಬಿರುದುಗಳನ್ನು ಹೊಂದಿದ್ದ.

ಗೋವಿಂದನ ಮಗ ಸುಪ್ರಸಿದ್ಧ ಒಂದನೆಯ ಅಮೋಘವರ್ಷನ ಸಂಜಾನ ತಾಮ್ರಶಾಸನ ಅವನ ಚರಿತ್ರೆಗೆ ಬಹಳ ಮಹತ್ತ್ವದ್ದಾಗಿದೆ. ಇದರಲ್ಲಿ ಅವನ ತಂದೆಯ ಪರಾಕ್ರಮದ ವರ್ಣನೆ, ಮಂತ್ರಿವರ್ಗಕ್ಕೆ ಕೊಟ್ಟ ಗೌರವ, ಶತ್ರುನಿಗ್ರಹ, ಉತ್ತರಭಾರತದಲ್ಲಿ ಹಿಮಾಲಯದವರೆಗೂ ನಡೆಸಿದ ದಿಗ್ವಿಜಯ, ನರ್ಮದಾ ನದಿಯ ಭಾಗದಲ್ಲಿ ಬೀಡುಬಿಟ್ಟಾಗ ಕೋಸಳ, ವೃಂಗಿ, ಡಹಳ, ಓಡ್ರಕ, ಮಾಳವರನ್ನು ಸೋಲಿಸಿದ್ದು, ವಿಂಧ್ಯ ಪರ್ವತದ ತಟದಲ್ಲಿ ಅನೇಕ ಪುಣ್ಯಕರ್ಮಗಳನ್ನು ಮಾಡಿಸಿ ಕೇರಳ ಪಾಂಡ್ಯ ಚೋಳ ಪಲ್ಲವ ರಾಜರನ್ನು ತನ್ನ ಪ್ರತಾಪದಿಂದ ನಿಸ್ತೇಜರನ್ನಾಗಿ ಮಾಡಿ, ಸಿಂಹಳದ ರಾಜರು ಮತ್ತು ಅವನ ಮುಖ್ಯಮಂತ್ರಿಯು ಈ ಚಕ್ರವರ್ತಿಯ ಶಿಲಾಪ್ರತಿಮೆಗಳನ್ನು ಮಾಡಿಸಿ ಏಲಾಪುರಕ್ಕೆ ತಂದು ಕಾಣಿಕೆ ಕೊಟ್ಟ ವಿಷಯಗಳು ಉಲ್ಲೇಖವಾಗಿವೆ. ಇವನು ಲೋಕದಲ್ಲಿ ಶಾಂತಿಗೋಸ್ಕರ ಮಹಾಲಕ್ಷ್ಮಿಗೆ ತನ್ನ ಎಡಗೈ ಹೆಬ್ಬೆಟ್ಟನ್ನು ಕತ್ತರಿಸಿ ದಾನಮಾಡಿದನೆಂದೂ ಹಲವು ಸಲ ವಿರಕ್ತಿಯಿಂದ ರಾಜ್ಯವನ್ನು ಪರಿತ್ಯಾಗ ಮಾಡಿದನೆಂದೂ ಹೇಳಲಾಗಿದೆ. ಕೊಣ್ಣೂರು ಶಿಲಾಶಾಸನದಿಂದ ಅಮೋಘವರ್ಷನ ಮಹಾದಂಡನಾಯಕ ಬಂಕೇಶನು ಸಾಮಂತರ ಸಹಾಯವಿಲ್ಲದೆ ಏಕಾಕಿಯಾಗಿ ಹೋಗಿ ಗಂಗರಾಜನ ನೀತಿಮಾರ್ಗನನ್ನು ಸೋಲಿಸಿ ತನ್ನ ಚಕ್ರವರ್ತಿಗೆ ಸಂತೋಷವನ್ನುಂಟುಮಾಡಿದ ಕೊಳನೂರಿನಲ್ಲಿ (ಕೊಣ್ಣೂರು) ಒಂದು ಅಪೂರ್ವ ಶೈಲಿಯ ಜಿನದೇವಾಲಯವನ್ನು ಕಟ್ಟಿಸಿದ ವಿಷಯ ತಿಳಿಯುತ್ತದೆ.

ಬಾಗುಂಬ್ರ ಶಾಸನದಲ್ಲಿ ಮುಮ್ಮಡಿ ಇಂದ್ರನು ಇಮ್ಮಡಿ ಕೃಷ್ಣನ ಅನಂತರ ಪಟ್ಟಕ್ಕೆ ಬಂದದ್ದು, ಕುರಂದಕ ಕ್ಷೇತ್ರದಲ್ಲಿ ಇವನ ಪಟ್ಟಬಂಧ ಮಹೋತ್ಸವ ಆದದ್ದು, ಕ್ಯಾಂಬೆ ಶಾಸನಗಳಲ್ಲಿ ಇವನು ಪಟ್ಟಕ್ಕೆ ಬರುವ ಮುಂಚೆಯೇ ಕನೂಜ್ ರಾಜ್ಯವನ್ನು ಗೆದ್ದದ್ದು ಹೇಳಲಾಗಿದೆ. ಇವನ ಸಂಜಾನ ತಾಮ್ರಶಾಸನ (ಶ.ವ. 848) ತಾಜಿಕರು ಅವನ ಮಂಡಲಾಧಿಕಾರಿಗಳಾಗಿದ್ದು ಸಂಜಾನಮಂಡಲವನ್ನು ಈ ವಂಶದ ಮಧುಮತಿ (ಮಹಮ್ಮದ್) ಸುಗತಿಪ ಎಂಬ ಹೆಸರಿನಿಂದ ಆಳುತ್ತಿದ್ದನೆಂದು ಹೇಳಿದೆ.

ಮುಮ್ಮಡಿ ಗೋವಿಂದನ ಕ್ಯಾಂಬೆ ತಾಮ್ರಶಾಸನದಲ್ಲಿ ಈ ರಾಜನು ತನ್ನ ಪಟ್ಟಬಂಧ ಮಹೋತ್ಸವವನ್ನು ಗೋದಾವರಿ ತೀರದಲ್ಲಿದ್ದ ಕಪಿತ್ಥರ ಎಂಬ ಗ್ರಾಮದಲ್ಲಿ ಮಾಡಿಸಿಕೊಂಡನೆಂದೂ, ಈ ಸಂದರ್ಭದಲ್ಲಿ ಬ್ರಾಹ್ಮಣರಿಗೆ 600 ಅಗ್ರಹಾರಗಳನ್ನು, 2 ಲಕ್ಷ ಸುವರ್ಣಗಳನ್ನು, ದೇವಾಲಯಗಳಿಗೆ 800 ಗ್ರಾಮಗಳನ್ನು, 4 ಲಕ್ಷ ಸುವರ್ಣಗಳನ್ನು, 32 ಲಕ್ಷ ದ್ರಮ್ಮಗಳನ್ನು ದಾನಮಾಡಿದನೆಂದೂ ಹೇಳಿದೆ. ಸಾಂಗ್ಲಿ ಶಾಸನದ ಪ್ರಕಾರ ಇವನು ನಿತ್ಯ ಬ್ರಹ್ಮಧೇಯ ಭೂದಾನವನ್ನು ಮತ್ತು ದೇವಭೋಗ ಅಗ್ರಹಾರಗಳನ್ನು ದಾನಕೊಟ್ಟನೆಂದು ತಿಳಿದುಬರುತ್ತದೆ.

ಮುಮ್ಮಡಿ ಅಮೋಘವರ್ಷನ ಮೂವರು ಮಕ್ಕಳಲ್ಲಿ ಹಿರಿಯವನಾದ ಮುಮ್ಮಡಿ ಕೃಷ್ಣ ಯುವರಾಜನಾಗಿದ್ದು, ಚಿತ್ರದುರ್ಗ ತಾಲ್ಲೂಕಿನ ಒಂದು ಶಾಸನ (ಶ.ವ. 861) ಆತ ಪಟ್ಟಕ್ಕೆ ಬಂದ ವರ್ಷವನ್ನು ಹೇಳುತ್ತದೆ. ಮಧ್ಯಪ್ರದೇಶ ಜುರಾದಲ್ಲಿಯ ಕನ್ನಡ ಶಾಸನವು ಸುಪ್ರಸಿದ್ಧ ಕರಹಾಡ ಶಾಸನದಲ್ಲಿ ಚೋಳರನ್ನು ಬೇರುಸಹಿತ ಕಿತ್ತು ಪಾಂಡ್ಯ, ಚೇರ, ಸಿಂಹಳ ರಾಜರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡು ರಾಮೇಶ್ವರದಲ್ಲಿ ಜಯಸ್ತಂಭವನ್ನು ನಡೆಸಿದನೆಂದು ಹೇಳಿದೆ. ಆತಕೂರು ಶಿಲಾಶಾಸನದಲ್ಲಿ (ಶ.ವ. 892) ಇವನು ಚೋಳರ ಮೇಲೆ ತೆಕ್ಕೋಲದಲ್ಲಿ ನಡೆಸಿದ ಯುದ್ಧ ಅದರಲ್ಲಿ ಚೋಳ ರಾಜ ಪರಾಂತಕನ ಮಗ ರಾಜಾದಿತ್ಯನ ಮರಣ ಮುಂತಾದ ವಿವರಗಳಿವೆ. ಸಾಲೋಟಗಿ ಸ್ತಂಭಶಾಸನ (ಶ.ವ. 867) ಕೃಷ್ಣನ ಪ್ರಧಾನಮಂತ್ರಿ ಮಹಿಷ ವಿಷಯದಲ್ಲಿಯ ಕಾಂಚನ–ಮುದುವೊಳಲ ನಾರಾಯಣನು ವಿದ್ಯಾಶಾಲೆಯನ್ನು ಕಟ್ಟಿಸಿದ್ದು, ಅದಕ್ಕೆ ಪಾವಿಟ್ಟಿಗೆ ಗ್ರಾಮದ ಅಧಿಪತಿ ಚಕ್ರಾಯುಧ ಬುಧ ದಾನಮಾಡಿದ್ದನ್ನು ವಿಸ್ತಾರವಾಗಿ ತಿಳಿಸುತ್ತದೆ. ಇವನಿಗೆ ಅಕಾಲವರ್ಷ, ಶ್ರೀವಲ್ಲಭ, ಪರನಾರೀಸಹೋದರ ಮುಂತಾದ ಬಿರುದುಗಳಿದ್ದವು.

ಮುಮ್ಮಡಿ ಕೃಷ್ಣನ ಅನಂತರ ಪಟ್ಟಕ್ಕೆ ಬಂದ ಅವನ ತಮ್ಮ ಖೊಟ್ಟಿಗನ ಕೆಲವು ಶಾಸನಗಳಿವೆ. ಇವನಿಗೆ ಯಶಕನಲ್ಲಾತನೆಂಬ ಬಿರುದು ಇದ್ದಿತೆಂದು ಕ್ಯಾಸನೂರು ಶಾಸನ ತಿಳಿಸುತ್ತದೆ.

ಈ ಅರಸರ ತಾಮ್ರಶಾಸನಗಳಲ್ಲಿ ಅವುಗಳನ್ನು ರಚಿಸಿದ ಹಲವಾರು ಕವಿಗಳ ಉಲ್ಲೇಖಗಳಿವೆ. ಒಂದನೆಯ ಕೃಷ್ಣನ ಪುಣೆ ತಾಮ್ರಶಾಸನದ ಕರ್ತೃ ಇಂದ್ರ, ಧ್ರುವನ ವಿಂಪಾರಿ ಮತ್ತು ಜಟ್ವಾಯಿ ಶಾಸನಗಳನ್ನು ಬರೆದ ಮಹಾಸಂಧಿವಿಗ್ರಹಾಧಿಕೃತ ಪ್ರೇಮಾಂದಲ ಮತ್ತು ವಸುದೇವ, ಗೋವಿಂದನ ಶಾಸನಗಳ ಕರ್ತೃಗಳೆಂದು ಹೆಸರಿಸಲಾದ ಕಕ್ಕಯ್ಯ, ಅರುಣಾದಿತ್ಯ ಮತ್ತು ಶ್ರೀಧರ ಮುಂತಾದವರು ಗಮನಾರ್ಹರು. **(ಎಎಸ್.;ಬಿ.ಆರ್.ಜಿ.)**

**ಸಾಹಿತ್ಯ:** ರಾಷ್ಟ್ರಕೂಟರ ವೈಭವಪೂರ್ಣ ಆಳ್ವಿಕೆಯ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳೆರಡಕ್ಕೂ ಹೆಚ್ಚಿನ ಪ್ರೋತ್ಸಾಹ ದೊರಕಿತು. ಈ ಎರಡು ಭಾಷೆಗಳಲ್ಲೂ ಅನೇಕ ಉದ್ಗ್ರಂಥಗಳು ರಚನೆಯಾದುವು. ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ರಾಷ್ಟ್ರಕೂಟರ ಕಾಲ ಒಂದು ಪರ್ವಕಾಲವೆಂದು ಹೇಳಿದರೆ ತಪ್ಪಾಗಲಾರದು. ಕನ್ನಡ ಸಾಹಿತ್ಯದ ಉಪಲಬ್ಧ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದ ಕವಿರಾಜಮಾರ್ಗ **(ನೋಡಿ)** ಈ ಕಾಲದ್ದು. ಆದಿಕವಿ ಪಂಪ **(ನೋಡಿ)** ರಾಷ್ಟ್ರಕೂಟರ ಕಾಲದ ಮತ್ತೊಬ್ಬ ಪ್ರಸಿದ್ಧ ಕವಿ. ಇವನು ರಾಷ್ಟ್ರಕೂಟರ ಸಾಮಂತನಾದ ಚಾಳುಕ್ಯ ಅರಿಕೇಸರಿಯ ಆಶ್ರಯದಲ್ಲಿದ್ದು ಆದಿಪುರಾಣ, ವಿಕ್ರಮಾರ್ಜುನವಿಜಯ ಎಂಬ ಎರಡು ಕಾವ್ಯಗಳನ್ನು ರಚಿಸಿದ. ಈ ಕಾಲದ ಮತ್ತೊಬ್ಬ ಕವಿ ಪೊನ್ನ **(ನೋಡಿ)**. ಈತ ಪ್ರಖ್ಯಾತ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಆಸ್ಥಾನಕವಿಯಾಗಿದ್ದ. ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತು ರಚಿತವಾದ ಶಾಂತಿಪುರಾಣ ಇವನ ಮಹಾಕಾವ್ಯ. ಇದಲ್ಲದೆ ಭುವನೈಕರಾಮಾಭ್ಯುದಯ ಮೊದಲಾದ ಕಾವ್ಯಗಳನ್ನು ಈತ ರಚಿಸಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವಡ್ಡಾರಾಧನೆಯೂ ರಾಷ್ಟ್ರಕೂಟರ ಕಾಲದ್ದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗುಣನಂದಿ, ಗುಣವರ್ಮ ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಉಳಿದ ಪ್ರಸಿದ್ಧ ಕವಿಗಳು.

ರಾಷ್ಟ್ರಕೂಟ ರಾಜರು ಸಂಸ್ಕೃತಕ್ಕೂ ಹೆಚ್ಚು ಪ್ರೋತ್ಸಾಹ ನೀಡಿದರು. ಆದ್ದರಿಂದ ಈ ಕಾಲದಲ್ಲಿ ಉತ್ತಮ ಗ್ರಂಥಗಳು ಸಂಸ್ಕೃತದಲ್ಲಿಯೂ ರಚಿತವಾದವು. ವೀರಸೇನ, ಜಿನಸೇನ ಹಾಗೂ ಗುಣಭದ್ರರು ಪ್ರಸಿದ್ಧ ಲೇಖಕರು. ಧವಲ, ಮಹಾಧವಲ, ಜಯಧವಲ ಹಾಗೂ ಮಹಾಪುರಾಣಗಳು ಇವರಿಂದ ಬರೆಯಲ್ಪಟ್ಟವೆ. ವ್ಯಾಕರಣಕ್ಕೆ ಸಂಬಂಧಿಸಿದಂತೆ ಅನೇಕ

ಗ್ರಂಥಗಳು ಸಂಸ್ಕೃತದಲ್ಲಿಯೂ ರಚಿತವಾದವು. ವ್ಯಾಕರಣ ವಿದ್ವಾಂಸನಾದ ದುರ್ಗಸಿಂಹ ಕಾತಂತ್ರಸೂತ್ರಗಳ ಮೇಲೆ ವೃತ್ತಿಯನ್ನು ಬರೆದ. ಒಂದನೆಯ ಅಮೋಘವರ್ಷನ ಆಸ್ಥಾನದಲ್ಲಿದ್ದ ಶಾಕಟಾಯನ ಶಬ್ದಾನುಶಾಸನವೆಂಬ ಸೂತ್ರಗ್ರಂಥವನ್ನು ರಚಿಸಿದ್ದಲ್ಲದೆ ಇದೇ ಗ್ರಂಥವನ್ನು ಕುರಿತು ವೃತ್ತಿಯನ್ನೂ ಬರೆದ. ತನ್ನ ಆಶ್ರಯದಾತನ ಗೌರವಾರ್ಥವಾಗಿ ಆ ವೃತ್ತಿಗೆ ಅಮೋಘವೃತ್ತಿ ಎಂದು ಹೆಸರಿಟ್ಟ. ನಳಚಂಪೂ ಕಾವ್ಯವನ್ನು ಬರೆದ ತ್ರಿವಿಕ್ರಮ ಈ ಕಾಲದವನು. ಇವನ ಮತ್ತೊಂದು ಗ್ರಂಥ ಮದಾಲಸ ಚಂಪೂ. ಸ್ವಯಂ ಕವಿಯಾಗಿದ್ದ ಅಮೋಘವರ್ಷ ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಇವನ ಪ್ರಶ್ನೋತ್ತರಮಾಲಿಕಾ ಸಂಸ್ಕೃತದ ಜ್ಞಾನಭಂಡಾರಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿದೆ. ಅಮೋಘವರ್ಷನ ಆಶ್ರಯದಲ್ಲೇ ಮಹಾವೀರಾಚಾರ್ಯನು ಗಣಿತಸಾರಸಂಗ್ರಹ ಎಂಬ ಗ್ರಂಥವನ್ನು ರಚಿಸಿದ. ಮುಮ್ಮಡಿ ಕೃಷ್ಣನ ಕಾಲಕ್ಕೆ ಸೇರಿದ ಹಲಾಯುಧ ಹಲಾಯುಧ ಕೋಶವೆಂಬ ನಿಘಂಟು, ಕವಿರಹಸ್ಯ ಹಾಗೂ ಮೃತ ಸಂಜೀವಿನಿ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಈ ಕಾಲದಲ್ಲಿ ಬಾಳಿದ ಭಾರತದ ಶ್ರೇಷ್ಠ ತತ್ತ್ವಜ್ಞಾನಿಗಳಲ್ಲೊಬ್ಬರಾದ ಶಂಕರಾಚಾರ್ಯರು ಅದ್ವೈತದ ಮಹಾ ಸಂಪ್ರದಾಯ ಹರಡುವುದಕ್ಕೆ ಮುಖ್ಯ ಕಾರಣರಾದರು. ಮತ್ತೊಬ್ಬ ಸಂಸ್ಕೃತ ವಿದ್ವಾಂಸ ಜೈನ ಸೋಮದೇವಸೂರಿಯು ರಾಷ್ಟ್ರಕೂಟರ ಮಾಂಡಲಿಕರಾದ ವೇಮುಲವಾಡದ ಚಾಳುಕ್ಯರ ಆಶ್ರಯದಲ್ಲಿದ್ದ. ಇವನು ಯಶಸ್ತಿಲಕ ಎಂಬ ಚಂಪೂಗ್ರಂಥವನ್ನು ರಚಿಸಿದ್ದಾನೆ. ನೀತಿವಾಕ್ಯಾಮೃತ ಇವನ ಮತ್ತೊಂದು ಉದ್ಗ್ರಂಥ. ಇದು ಕೌಟಿಲ್ಯನ ಅರ್ಥಶಾಸ್ತ್ರದ ಮಾದರಿಯಲ್ಲಿ ರಚಿತವಾದ ಷಟ್ಖಂಡಾಗಮ ಒಂದು ಅಮೂಲ್ಯ ಕೃತಿ. ರಾಷ್ಟ್ರಕೂಟ ಅರಸರ ಆಶ್ರಯದಲ್ಲಿಯೇ ಇದ್ದ ಗುರು ಶಿಷ್ಯರಾದ ವೀರಸೇನ ಮತ್ತು ಜಿನಸೇನರು ಧವಳ ಮತ್ತು ಜಯಧವಳಾ ಎಂಬ ಒಂದು ಲಕ್ಷ ಶ್ಲೋಕ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಅದನ್ನು ಪೂರ್ಣಗೊಳಿಸಿದ ಕೀರ್ತಿ ಜಿನಸೇನರ ಶಿಷ್ಯರಾದ ಗುಣಭದ್ರರಿಗೆ ಸಲ್ಲುತ್ತದೆ. ಪ್ರಸಿದ್ಧ ಜೈನ ತಾರ್ಕಿಕನಾದ ವಿದ್ಯಾನಂದ ಸಮಂತಭದ್ರರ ಆಪ್ತಮೀಮಾಂಸಾ ಎಂಬ ಗ್ರಂಥದ ಮೇಲೆ ಅಷ್ಟಸಾಹಸೀ ಎಂಬ ಭಾಷ್ಯವನ್ನು ಬರೆದ. ಅವನು ಆಪ್ತಪರೀಕ್ಷಾ ಎಂಬ ಗ್ರಂಥವನ್ನು ಕೂಡ ರಚಿಸಿದ. ಮತ್ತೊಬ್ಬ ತಾರ್ಕಿಕನಾದ ಮಾಣಿಕ್ಯನಂದಿಯಿಂದ ರಚಿಸಲ್ಪಟ್ಟ ಪರೀಕ್ಷಾ ಮುಖ ಸೂತ್ರ ಮತ್ತು ಪ್ರಭಾಚಂದ್ರನ ಪ್ರಮೇಯ ಕಮಲಮಾರ್ತಾಂಡ ಮೊದಲಾದ ಜೈನಸಿದ್ಧಾಂತ ಗ್ರಂಥಗಳು ಕೂಡ ರಾಷ್ಟ್ರಕೂಟರ ಕಾಲದಲ್ಲಿ ರಚಿತವಾದ ಗ್ರಂಥಗಳೆಂದು ಅಭಿಪ್ರಾಯಪಡಲಾಗಿದೆ. ಮಿಥಿಲೆಯ ರಾಷ್ಟ್ರಕೂಟ ದೊರೆ ಶಾಕ್ಯದೇವನು ನಾಟ್ಯಶಾಸ್ತ್ರಕ್ಕೆ ವ್ಯಾಖ್ಯಾನವನ್ನು ಬರೆದಿದ್ದಾನೆ. (ಎ.ಎಸ್.ಜಿ.)

**ರಾಷ್ಟ್ರೀಯ ಪ್ರಯೋಗಾಲಯಗಳು:** ಭಾರತ ಸರ್ಕಾರದ ಔದ್ಯೋಗಿಕ ಮತ್ತು ವೈಜ್ಞಾನಿಕ ಸಂಶೋಧನ ಮಂಡಲಿ ಔದ್ಯೋಗಿಕ ಪ್ರಗತಿಗೆ ಅಗತ್ಯವಾದ ಸಂಶೋಧನೆ ಮತ್ತು ಮಾದರಿಗಳ ನಿರ್ಮಾಣ ಕಾರ್ಯಗಳನ್ನು ನಡೆಸಲು ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಮೂವತ್ತೇಳಕ್ಕೂ ಹೆಚ್ಚು ಪ್ರಯೋಗಾಲಯಗಳನ್ನೂ ವಸ್ತು ಸಂಗ್ರಹಾಲಯಗಳನ್ನೂ ಸ್ಥಾಪಿಸಿದೆ. ಆ ಶ್ರೇಣಿಯ ಎರಡು ಪ್ರಯೋಗಾಲಯಗಳೂ ಒಂದು ವಸ್ತು ಸಂಗ್ರಹಾಲಯವೂ ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆಯಾಗಿ ಕೆಲಸ ಮಾಡುತ್ತಿವೆ. ಆ ಸಂಸ್ಥೆಗಳನ್ನೂ ಅವುಗಳ ಉದ್ದೇಶ ಮತ್ತು ಕಾರ್ಯಸ್ವರೂಪವನ್ನೂ ಮುಂದೆ ಪರಿಶೀಲಿಸಿದೆ.

1. ರಾಷ್ಟ್ರೀಯ ವಾಯುಯಾನ ಸಂಶೋಧನ ಪ್ರಯೋಗಾಲಯ : ಇದು 1959ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ಭಾರತದಲ್ಲಿ ಆಧುನಿಕ ರೀತಿಯ ವಿಮಾನ ತಯಾರಿಕೆಯ ಉದ್ಯೋಗ ವಿಜ್ಞಾನಕ್ಕೆ ಸಂಬಂಧಿಸಿದಂತೆ ಮೂಲರೂಪದ ವಿಮಾನವಿನ್ಯಾಸಗಳಿಗೆ ನೆರವಾಗುವ ಸಂಶೋಧನೆ ಮತ್ತು ನಿರ್ಮಾಣ ಕಾರ್ಯಗಳನ್ನು ನಡೆಸುವುದು ಇದರ ಕರ್ತವ್ಯ. ಈ ಕರ್ತವ್ಯ ನಿರ್ವಹಣೆಗಾಗಿ ಸಂಸ್ಥೆ ಆರು ವಿಭಾಗಗಳನ್ನು ವ್ಯವಸ್ಥೆಗೊಳಿಸಿದೆ. ವಾಯುಯಾನ ವಿಜ್ಞಾನ, ಮುನ್ನೂಕುವ ಶಕ್ತಿ, ಸಂರಚನಾ ವಿಜ್ಞಾನ, ಸಾಮಗ್ರಿ (ಮೆಟೀರಿಯಲ್) ವಿಜ್ಞಾನ, ಎಲೆಕ್ಟ್ರಾನಿಕ್ಸ್–ಈ ಕ್ಷೇತ್ರಗಳನ್ನಾಗಿ ವಿಂಗಡಿಸಿಕೊಂಡು ಸಂಶೋಧನೆ ಮತ್ತು ಮಾದರಿ ನಿರ್ಮಾಣಗಳನ್ನು ನಡೆಸುತ್ತಿದೆ.

1967ರಲ್ಲಿ ಈ ಪ್ರಯೋಗಾಲಯ ನಾಲ್ಕಡಿ ತ್ರಿಸೂತ್ರಿ ವಾಯುಸುರಂಗದ (ಟ್ರೈಸೋನಿಕ್ ವಿಂಡ್ ಟನಲ್) ವಿನ್ಯಾಸ, ಕಟ್ಟಡ, ಕಾರ್ಯಾರಂಭ ನಿಷ್ಕೃಷ್ಟತೆಯ ಕ್ರಮಾಂಕ ನಿರ್ಣಯ–ಈ ಸಂಕೀರ್ಣ ಯೋಜನೆಯನ್ನು ಹಾಕಿಕೊಂಡು ಅದರ ಸಂಶೋಧನೆ ಮತ್ತು ನಿರ್ಮಾಣ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿತು. ಈ ವಾಯುಸುರಂಗವನ್ನು ಈಚೆಗೆ ವಿಮಾನ ನಮೂನೆಗಳ ಪರೀಕ್ಷೆಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಇದು ಕ್ಷಿಪಣಿಗಳ ಮತ್ತು ಅಂತರಿಕ್ಷ ಉಡಾವಣೆಯ ವಾಹನಗಳ ಮಾದರಿ ಪರೀಕ್ಷೆಯಲ್ಲೂ ಬಳಕೆಗೆ ಬರುತ್ತಿದೆ. ಹಿಂದೆ ವಿದೇಶೀ ವಾಯುಸುರಂಗದ ಮೂಲಕ ನಡೆಸುತ್ತಿದ್ದ ಪ್ರತಿಯೊಂದು ಪರೀಕ್ಷಾ ಚಾಲನಕ್ಕೂ ಒಂದು ಸಹಸ್ರ ಡಾಲರುಗಳಷ್ಟು ಖರ್ಚಾಗುತ್ತಿತ್ತು. ಈಚೆಗೆ ಇಂಥ 3,000ಕ್ಕೂ ಹೆಚ್ಚು ಪರೀಕ್ಷಾ ಚಾಲನೆಗಳು (ಟೆಸ್ಟ್‌ರನ್) ನಡೆದಿದ್ದು ಕೋಟಿಗಟ್ಟಲೆ ವಿದೇಶೀ ಹಣದ ಉಳಿತಾಯವಾಗಿದೆ.

ಈಚೆಗೆ ಈ ಪ್ರಯೋಗಾಲಯ ದೇಶೀಯವಾಗಿ, ಶುದ್ಧ ಮತ್ತು ಆನ್ವಯಿಕ ವಾಯುಯಾನ ವಿಜ್ಞಾನ ಸಂಶೋಧನೆಗಳಿಗೆ ಬೇಕಾಗುವ ಒಂದಡಿ ತ್ರಿಸೂತ್ರಿ ವಾಯುಸುರಂಗವನ್ನು ನಿಯೋಜಿಸಿ, ನಿರ್ಮಿಸಿ ಬಳಸುತ್ತಿದೆ.

ಇದರ ಸಾಮಗ್ರಿ ವಿಜ್ಞಾನ ವಿಭಾಗ ನಿಷ್ಕೃಷ್ಟತೆಯ ಲೋಹ ಛಾಪಾಯಂತ್ರಗಳ ರಚನೆಗೆ ಬೇಕಾಗುವ ಕಿಡಿ–ಸವೆತದ ಯಂತ್ರ ಮತ್ತು ಒತ್ತಡ–ಪಾತ್ರೆಯ ಉದ್ಯೋಗ ವಿಜ್ಞಾನಕ್ಕೆ ಬೇಕಾಗುವ ತಂತುಗಳ ಸುತ್ತುವ ಯಂತ್ರಗಳನ್ನು ನೂತನವಾಗಿ ರಚಿಸಿಕೊಟ್ಟಿದೆ. ವಿಮಾನ ಚಾಲಕಯಂತ್ರದ ಫಲಕಗಳನ್ನು (ಬ್ಲೇಡ್) ಶೀಘ್ರವಾಗಿ ತಯಾರಿಸಲು ನೆರವಾಗುವ ವಿದ್ಯುದ್ರಾಸಾಯನಿಕ ರೇಖಾಂಕನ ಯಂತ್ರದ ತಯಾರಿಕೆಯಲ್ಲಿ ಈಗ ತೊಡಗಿದೆ. ತಂತುಗಾಜಿನ (ಫೈಬರ್ ಗ್ಲಾಸ್) ಪ್ರೇರಕ ಗ್ರಾಹಕಗಳು, ಆಡುಬೆಣೆಯುಂಗುರಗಳು (ಪಿಸ್ಟನ್ ರಿಂಗ್), ಕ್ಷಿಪಣಿಯ ಗಾಧಮಾಪಕ ನಾಸಿಕಾಶಂಖುಗಳು (ಸೌಂಡಿಂಗ್ ರಾಕೆಟ್ ನೋಸ್ ಕೋನ್), ಉನ್ನತ ವಿದ್ಯುತ್ಪ್ರವಾಹದ ನಿರೋಧಕಗಳು (ಪೃಥಕ್ಕಾರಿ) (ಹೈವೋಲ್ಟೇಜ್ ಇನ್ಸುಲೇಟರ್) ಮುಂತಾದವನ್ನೂ ತಯಾರಿಸಿದೆ. ಭಾರತದ ಪವನಶಾಸ್ತ್ರ ಶಾಖೆಗೆ ಇಪ್ಪತ್ತು ಅಡಿ ವ್ಯಾಸದ ರೇಡೋಮುಗಳನ್ನು ನಿರ್ಮಿಸಿಕೊಡುತ್ತಿದೆ.

ವಿಮಾನಯಾನದಲ್ಲಿ ವಿಮಾನಭಾಗಗಳು ದುರ್ಬಲವಾಗುವ ಅಂಶ ಒಂದು ತೀವ್ರ ರೀತಿಯ ಸಮಸ್ಯೆ. ಪ್ರಯೋಗಾಲಯದ ಸಂರಚನಾ ವಿಭಾಗ ವಿಮಾನ ಭಾಗಗಳು ದುರ್ಬಲವಾಗುವ ಕಾಲವನ್ನು ನಿಷ್ಕರ್ಷಿಸುವ ಯಂತ್ರಗಳನ್ನು ತಯಾರಿಸಿರುವುದಲ್ಲದೆ, ವಿಮಾನದ ಒಟ್ಟಾರೆ ಆಯಸ್ಸನ್ನು ನಿರ್ಧರಿಸುವ ಪರೀಕ್ಷಾ ಯಂತ್ರಗಳನ್ನೂ ತಯಾರಿಸಿದೆ. ಈಚೆಗೆ ತೂರು ಹಾಯಿಕೆಯ ಉದ್ಯೋಗ ವಿಜ್ಞಾನದಲ್ಲಿ ಮಾಪನ ಶಿಲ್ಪಕ್ಕೆ ಬೇಕಾದ ಉಪಕರಣಗಳ ತಯಾರಿಕೆಯಲ್ಲಿ ತೊಡಗಿದೆ. ಒತ್ತಡದ ಮತ್ತು ಪಲ್ಲಟದ (ವಿಸ್ಥಾಪನ) ತೂರುಹಾಯ್ಕೆಯಂತ್ರಗಳು (ಟ್ರಾನ್ಸ್‌ಡ್ಯೂಸರ್), ಅದಕ್ಕೆ ಬೇಕಾಗುವ ಪ್ರವರ್ಧಕಗಳು (ಆಂಪ್ಲಿಫೈಯರ್), ಕಂಪನಗ್ರಾಹಕಗಳು (ಪಿಕ್ ಅಪ್), ಕಂಪನಮಾಪಕಗಳು (ವೈಬ್ರೇಷನ್ ಮೀಟರ್), ಕಂಪನ ಗೊಳಿಸುವ ಯಂತ್ರಗಳು, ವಿಕೃತಿ ಮಾಪನ ಸೇತುಗಳು (ಸ್ಟ್ರೇನ್ ಮೆಷರಿಂಗ್ ಬ್ರಿಡ್ಜ್), ತಂತಿಯ ಮತ್ತು ಕಣಗಳ ವಿಕೃತಿ ಮಾಪನ ಸಾಧನಗಳು

(ವೈರ್ ಮತ್ತು ಫಾಯಿಲ್ ಮೆಷರಿಂಗ್ ಟೂಲ್ಸ್), ಉಷ್ಣ ಗ್ರಾಹಕಗಳು ಮುಂತಾದವುಗಳ ನಿರ್ಮಾಣದಲ್ಲೂ ತೊಡಗಿದೆ.

ಭಾರತದಲ್ಲಿ ಪ್ರಪ್ರಥಮವಾಗಿ ಎಲೆಕ್ಟ್ರಾನಿಕ್ ಡೆಸ್ಕ್ ಕಾಲ್ಕ್ಯುಲೇಟರನ್ನು ತಯಾರಿಸುವಲ್ಲಿ ತನ್ನ ಸಂಶೋಧನೆ ಮತ್ತು ನಿರ್ಮಾಣಗಳಿಂದ ಪ್ರಯೋಗಾಲಯ ನೆರವಾಗಿದೆ. ವಾಯುಯಾನ ಸಂಶೋಧನೆಗಳಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಿ ರೂಢಿಸಿಕೊಳ್ಳಲು ಬೇಕಾದ ವಿಶಿಷ್ಟ ಗಣಕ ಯಂತ್ರಗಳನ್ನೂ ತಯಾರಿಸಿಕೊಂಡಿದೆ. ಕಾರ್ಖಾನೆ ಕಾರ್ಯಾಲಯಗಳ ಬಳಕೆಗೆ ಬೇಕಾಗುವ ಹತ್ತು ಲಕ್ಷ ರೂಪಾಯಿಗಳ ಬೆಲೆಯ ಗಣಕ ಯಂತ್ರಗಳನ್ನೂ ರಚಿಸಿ ಒದಗಿಸಿದೆ.

ಈ ಪ್ರಯೋಗಾಲಯ ತನ್ನ ಸಂಶೋಧನೆ ಮತ್ತು ನಿರ್ಮಾಣಗಳ ಮೂಲಕ ವಿದೇಶೀ ತಂತ್ರಜ್ಞಾನದ ಅನಿವಾರ್ಯವನ್ನು ನಿವಾರಿಸಿರುವುದಲ್ಲದೆ ಆಮದು ಪ್ರತಿ ವಸ್ತುಗಳನ್ನು ತಯಾರಿಸಿ ತಾಂತ್ರಿಕ ಕ್ಷೇತ್ರದಲ್ಲಿ ಸ್ವಾವಲಂಬನೆಯ ಸ್ಥಾಪನೆಗೆ ನಿರ್ದಿಷ್ಟವಾಗಿ ನೆರವಾಗುತ್ತಿದೆ.

2. ಕೇಂದ್ರೀಯ ಆಹಾರ ಸಂಶೋಧನಾಲಯ (ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್): ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಮಂಡಲಿಯ ಅಂಗವಾಗಿ 1950ರ ಅಕ್ಟೋಬರಿನಲ್ಲಿ ಮೈಸೂರು ನಗರದ ರಾಜಕುಮಾರಿ ಚೆಲುವಾಂಬಾ



ಕೇಂದ್ರೀಯ ಆಹಾರ ಸಂಶೋಧನಾಲಯ, ಮೈಸೂರು

ಅರಮನೆಯ ವಿಶಾಲ ಮೈದಾನದಲ್ಲಿ ಆಹಾರ ರಂಗಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ಕೈಕೊಳ್ಳಲು ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಉತ್ಪಾದನೆಯ ಹಂತದಿಂದ ಸೇವಿಸುವವರೆಗಿನ ವಿವಿಧ ಮಟ್ಟಗಳಲ್ಲಿ ಆಹಾರವನ್ನು ಸಂರಕ್ಷಿಸಿ ಲಾಭದಾಯಕವಾಗಿ ಬಳಸುವ ವಿಧಾನಗಳಲ್ಲಿ ಸಂಶೋಧನೆ ನಡೆಸಿ ರಾಷ್ಟ್ರದ ಆಹಾರ ಸಮಸ್ಯೆಗೆ ಪರಿಹಾರ ದೊರಕಿಸುವ ಕಾರ್ಯದಲ್ಲಿ ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತ ಬಂದಿರುವ ಈ ಸಂಸ್ಥೆ 1976ರಲ್ಲಿ ತನ್ನ ಬೆಳ್ಳಿಹಬ್ಬವನ್ನೂ ಅನಂತರ ಚಿನ್ನದ ಹಬ್ಬವನ್ನೂ ಆಚರಿಸಿದೆ.

ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆ, ಎಣ್ಣೆ ಹಿಂಡಿಯಿಂದ ಪೌಷ್ಟಿಕಾಂಶಗಳ ತಯಾರಿಕೆ, ಸದ್ಯದಲ್ಲಿ ಬಳಕೆಯಲ್ಲಿರುವ ಆಹಾರ ಸಾಮಗ್ರಿಗಳಿಂದ ನೂತನ ಆಹಾರ ವಸ್ತುಗಳನ್ನು ತಯಾರಿಸಿ ಬಳಸುವ ವಿಧಾನಗಳ ಸಂಶೋಧನೆ, ಆಹಾರ ತಯಾರಿಕೆಯ ಉದ್ಯಮಗಳಿಗೆ ತಾಂತ್ರಿಕ ನೆರವು ನೀಡುವುದು, ಆಹಾರೋದ್ಯಮದ ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸಿಕೊಡುವುದು, ಆಹಾರ ಸಿದ್ಧವಸ್ತುಗಳ ಗುಣ ನಿಯಂತ್ರಣ ಮಾಡುವುದು ಇವೇ ಮುಂತಾದ ಕ್ಷೇತ್ರಗಳಲ್ಲಿ ಇದು ಸಲ್ಲಿಸಿರುವ ಸಾರ್ಥಕ ಸೇವೆಯ ಫಲವಾಗಿ ರಾಷ್ಟ್ರ ತನ್ನ ಆಹಾರ ಕ್ಷೇತ್ರದ ಅನೇಕ ಜಟಿಲ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಂಡಿದೆ. ಕಳೆದ ಕಾಲು ಶತಮಾನದಲ್ಲಿ ಇದು ನಿರ್ವಹಿಸಿರುವ ಕಾರ್ಯವನ್ನು ಮುಂದೆ ವಿವರಿಸಿದೆ.

**ಆಹಾರ ವಸ್ತುಗಳ ಸಂರಕ್ಷಣೆ:** ಭಾರತದಲ್ಲಿ ಕೀಟಾದಿಗಳ ಕಾಟದಿಂದಲೂ ಸಂಗ್ರಹಣೆಯ ನ್ಯೂನತೆಗಳಿಂದಲೂ ಗಣನೀಯ ಪ್ರಮಾಣದಲ್ಲಿ ಆಹಾರ ನಷ್ಟವಾಗುತ್ತಿದೆ. ಇದನ್ನು ತಪ್ಪಿಸಿ ರಾಷ್ಟ್ರದ ಆಹಾರ ಸಂಗ್ರಹಣಕ್ಕೆ ಪರಿಣಾಮಕಾರಿ ವಿಧಾನಗಳನ್ನು ಕಂಡುಹಿಡಿದು ಪ್ರಚಾರಕ್ಕೆ ತಂದಿದೆ. ದೊಡ್ಡ ಪ್ರಮಾಣದಲ್ಲಿ ಉಗ್ರಾಣಗಳಲ್ಲಿ ಆಹಾರವನ್ನು ಸಂಗ್ರಹಿಸಿ ರಕ್ಷಿಸಿಡಲು ನೆರವಾಗುವಂತೆ ಇದು ಸಂಶೋಧಿಸಿರುವ ಪ್ರಧೂಪನ (ಹೊಗೆಯಾಡಿಸುವ) ವಿಧಾನ ತುಂಬ ಪರಿಣಾಮಕಾರಿಯೆನಿಸಿದೆ. ಗೃಹಬಳಕೆಗಾಗಿ ಸಣ್ಣಪ್ರಮಾಣದಲ್ಲಿ ರಕ್ಷಿಸಿಡಲು ನೆರವಾಗುವಂತೆ ಅಲ್ಪಬೆಲೆಯ ಗುಳಿಗೆಗಳನ್ನು ತಯಾರಿಸಿದೆ. ಒಂದು ಗುಳಿಗೆಯಿಂದ ಒಂದು ಮೂಟೆ ಧಾನ್ಯ ಅಥವಾ ಬಿತ್ತನೆ ಬೀಜವನ್ನು ಸಂಸ್ಕರಿಸಿ ಸಂರಕ್ಷಿಸಿ ಇಡಬಹುದು. ಕೀಟನಾಶಕವಾಗಿ ಇದು ತಯಾರಿಸಿರುವ ಲಿಂಡೇನ್ ಎಂಬ ರಾಸಾಯನಿಕ ವಸ್ತು ಈಗ ಎಲ್ಲೆಲ್ಲೂ ಬಳಕೆಗೆ ಬರುತ್ತಿದೆ. ಇದರ ತಯಾರಿಕೆಯಲ್ಲಿ ದೊರಕಿರುವ ಎಕ್ಸ್‌ಫ್ಯಾಕ್ಟರ್ ಎಂಬ ಉಪ-ಉತ್ಪನ್ನವು ಗೆದ್ದಲು ಮುಂತಾದ ಕೀಟನಾಶಕ್ಕೆ ಪರಿಣಾಮಕಾರಿಯೆನಿಸಿದೆ. ಈಗ ತಮಿಳುನಾಡಿನ ಹಾಗೂ ಗುಜರಾತಿನ ಸಂಸ್ಥೆಗಳು ಲಿಂಡೇನನ್ನು ತಯಾರಿಸಿ ಮಾರಾಟಕ್ಕೆ ಒದಗಿಸುತ್ತಿವೆ. ಗಿರಣಿಗಳಲ್ಲಿ ಅಕ್ಕಿ ತಯಾರಿಕೆಯಲ್ಲಿ ಆಗುವ ನಷ್ಟವನ್ನು ತಪ್ಪಿಸಲು ಹೊಸತಂತ್ರವನ್ನು ರೂಪಿಸಿದೆ. ಕುಸುಬಲು ಅಕ್ಕಿ ಮಾಡಲು ನಾಲ್ಕೈದು ದಿನಗಳ ತನಕ ಹಬೆಗೊಡ್ಡುವ ಬದಲು ಕೇವಲ ಕೆಲವೇ ಗಂಟೆಗಳಲ್ಲಿ ಆ ಕಾರ್ಯ ಸಾಧಿಸುವ ನೂತನ ವಿಧಾನವನ್ನು ಅನುಷ್ಠಾನಕ್ಕೆ ತಂದಿದೆ. ಹೊಸ ಅಕ್ಕಿಯನ್ನು ಬಳಸಿದಾಗ ಉಂಟಾಗುವ ಕೆಲವು ತೊಂದರೆಗಳನ್ನು ತಪ್ಪಿಸಿ ಹಬೆಯಾಡಿಸಿ ಹಳೆಯ ಅಕ್ಕಿಯ ಗುಣಧರ್ಮಗಳನ್ನು ಹೊಂದಿರುವಂತೆ ಮಾಡುವ ವಿಧಾನವನ್ನು ಕಂಡುಹಿಡಿದು ಗ್ರಾಹಕರಿಗೆ ಉಪಕಾರ ಮಾಡಿದೆ.

**ಅಕ್ಕಿ ತೌಡಿನಿಂದ ಖಾದ್ಯತೈಲ:** ಭಾರತದಲ್ಲಿ ಬತ್ತದ ತೌಡು ಅಧಿಕ ಪ್ರಮಾಣದಲ್ಲಿ ಲಭ್ಯವಾಗುತ್ತದೆ. ಅದರ ಬಹುಭಾಗ ಇಂಧನದ ರೂಪದಲ್ಲಿ ವ್ಯಯವಾಗುತ್ತಿತ್ತು. ಆದರೆ ಅದರಲ್ಲಿ ಪುಷ್ಟಿಕರವಾದ ಖಾದ್ಯತೈಲ ಅಡಗಿದೆ. ಈ ಸಂಸ್ಥೆ ಅದರಿಂದ ಎಣ್ಣೆಯನ್ನು ಹಿಂಡುವ ಕಾರ್ಖಾನೆಗಳನ್ನು ಸ್ಥಾಪಿಸಲು ನೆರವು ನೀಡಿ ವ್ಯರ್ಥವಾಗುತ್ತಿದ್ದ ಲಕ್ಷಾಂತರ ಟನ್ ತೌಡು ಉಪಯುಕ್ತ ಆಹಾರವಾಗಲು ಸಹಾಯ ಮಾಡಿದೆ.

**ತರಕಾರಿ, ಹಣ್ಣು ಮುಂತಾದವುಗಳ ಸಂಸ್ಕರಣ :** ಭಾರತದಲ್ಲಿ ವಿವಿಧ ತರಕಾರಿಗಳು ಹೇರಳವಾಗಿ ಬೆಳೆದರೂ ಕೆಲವೇ ದಿನಗಳಲ್ಲಿ ಕೆಟ್ಟುಹೋಗುತ್ತವೆ. ಒಂದು ನಿರ್ದಿಷ್ಟ ಕಾಲದಲ್ಲಿ ದೊರೆಯುವ ತರಕಾರಿಯನ್ನು ದೀರ್ಘಕಾಲ ಇಟ್ಟು ಬಳಸಲು ಅನುಕೂಲವಾಗುವಂತೆ ನೂತನ ಸಂಸ್ಕರಣ ವಿಧಾನಗಳನ್ನೂ ಈ ಸಂಸ್ಥೆ ರೂಪಿಸಿದೆ. ಹಾಗೆಯೇ ದೇಶದಲ್ಲಿ ಅನೇಕ ಜಾತಿಯ ಖಾದ್ಯ ಹಣ್ಣುಹಂಪಲುಗಳು ವರ್ಷದ ವಿವಿಧ ಕಾಲದಲ್ಲಿ ದೊರಕುತ್ತವೆ. ಹಿಂದೆ ಅವನ್ನೆಲ್ಲ ಕೂಡಲೇ ಉಪಯೋಗಿಸಬೇಕಾಗಿತ್ತು. ಈಚೆಗೆ ಅವನ್ನು ಹಲವಾರು ತಿಂಗಳು ರಕ್ಷಿಸಿಡುವ ವಿಧಾನಗಳನ್ನು ಕಂಡುಹಿಡಿದು ಅದಕ್ಕಾಗಿ ಕಾರ್ಖಾನೆಗಳನ್ನು ಸ್ಥಾಪಿಸಲು ನೆರವು ನೀಡಿದೆ. ಬಾಳೆಹಣ್ಣು ಬೇಕಾದ ಹಾಗೆ ದೇಶದಲ್ಲಿ ಬೆಳೆದರೂ ರಫ್ತು ಮಾಡಲು ಬರುತ್ತಿರಲಿಲ್ಲ. ಸಂಶೋಧನಾಲಯ ಅದಕ್ಕೆ ಬೂಷ್ಟು ಹಿಡಿದು ಕೆಡದಂಥ ರೀತಿಯಲ್ಲಿ ಸಂರಕ್ಷಿಸಿ ರಫ್ತುಮಾಡಲು ನೆರವಾಗುವಂಥ ಬೂಷ್ಟು ನಿರೋಧಕಗಳನ್ನು ತಯಾರಿಸಿದೆ. ಅದರಿಂದ ಈಗ ಬಾಳೆಹಣ್ಣು ಅನ್ಯದೇಶಗಳಿಗೆ ರಫ್ತಾಗುತ್ತಿದ್ದು ವಿದೇಶೀ ವಿನಿಮಯಗಳಿಸುತ್ತಿದೆ. ಕೆಲವು ಹಣ್ಣುಗಳಿಂದ ಪಾನೀಯಗಳನ್ನೂ ಪುಡಿಮಿಠಾಯಿಯನ್ನೂ ತಯಾರಿಸುವ ವಿಧಾನವನ್ನು ಕಾರ್ಖಾನೆಗಳಿಗೆ ಹೇಳಿಕೊಟ್ಟಿದೆ. ಪರಂಗಿ ಹಣ್ಣಿನಿಂದ ಪೆಕ್ಟಿನ್ ಮತ್ತು ಪಪಾಯಿನ್ ಎಂಬ ವಸ್ತುಗಳನ್ನೂ

ನಿಂಬೆಹಣ್ಣಿನಿಂದ ಪೆಕ್ಟಿನ, ನಿಂಬೆಎಣ್ಣೆ, ಕ್ಯಾಲ್ಸಿಯಂ ಸಿಟ್ರೇಟ್ ಮುಂತಾದ ಉಪಯುಕ್ತ ಆಹಾರಾಂಶಗಳನ್ನೂ ತಯಾರಿಸಿದೆ. ಅದನ್ನು ಮಹಾರಾಷ್ಟ್ರದ ಕಾರ್ಖಾನೆ ಇಂದು ದೊಡ್ಡ ಪ್ರಮಾಣದಲ್ಲಿ ತಯಾರಿಸಿ ಮಾರುಕಟ್ಟೆಗೆ ತಂದಿದೆ. ಅದು ಕಂಡುಹಿಡಿದ ಹುಣಿಸೆಹಣ್ಣಿನ ರಸವೂ ಈಗ ಮಾರಾಟಕ್ಕೆ ಬಂದಿದೆ.

ಭಾರತದಲ್ಲಿ ಬೆಳೆಯುವ ಹಲವಾರು ಸಂಬಾರ ಪದಾರ್ಥಗಳಿಗೆ ಅನ್ಯದೇಶಗಳಲ್ಲಿ ಹೆಚ್ಚಿನ ಬೇಡಿಕೆಯಿದ್ದರೂ ಅಲ್ಲಿನವರ ರುಚಿಗೊಪ್ಪುವಂತೆ ಸಂಸ್ಕರಿಸುವ ವಿಧಾನ ಪ್ರಚಾರದಲ್ಲಿರಲಿಲ್ಲ. ಆಹಾರ ಸಂಶೋಧನಾಲಯ ಆ ಕ್ಷೇತ್ರದಲ್ಲೂ ಸಂಶೋಧನೆ ನಡೆಸಿದೆ. ಕಪ್ಪು ಮೆಣಸಿನ ಸಿಪ್ಪೆಯನ್ನು ತೆಗೆದು ಸ್ವಚ್ಛ ಬಿಳಿಮೆಣಸು ಮಾಡುವ ಯಂತ್ರವನ್ನೂ ಹಸಸಿರು ಮೆಣಸನ್ನೂ ನಿರ್ದ್ರವಗೊಳಿಸುವ ವಿಧಾನವನ್ನೂ ಕಂಡುಹಿಡಿದಿದೆ. ಕೆಲವು ಸಂಬಾರ ವಸ್ತುಗಳ ಎಣ್ಣೆಯನ್ನು ತಯಾರಿಸುವ ವಿಧಾನವನ್ನೂ ಕಂಡುಹಿಡಿದಿದೆ. ಇದರಿಂದ ಸಂಸ್ಕರಿಸಿದ ಸಂಬಾರ ವಸ್ತುಗಳ ರಫ್ತು ಹೆಚ್ಚಿ ವಿದೇಶೀ ವಿನಿಮಯ ಲಭ್ಯವಾಗುತ್ತಿದೆ.

**ಶಾಖಾಹಾರದ ಕ್ಷೇತ್ರದಲ್ಲಿ :** ಮಾಂಸಾಹಾರಕ್ಕೆ ಸಂಬಂಧಿಸಿದಂತೆಯೂ ಸಂಸ್ಥೆ ಹಲವು ಮೌಲಿಕ ಸಂಶೋಧನೆಗಳನ್ನು ನಡೆಸಿದೆ. ಮಾಂಸ ಮತ್ತು ಮೊಟ್ಟೆ ಹೆಚ್ಚು ಕಾಲ ಕೆಡದಂತೆ ರಕ್ಷಿಸಿಡುವ ವಿಧಾನವನ್ನು ರೂಪಿಸುವುದರ ಜೊತೆಗೆ ಮಾಂಸ, ತರಕಾರಿ, ಸಂಬಾರವಸ್ತು–ಇವುಗಳ ಸಂಯೋಜನೆ ಯಿಂದ ಬಹು ರುಚಿಕರವಾದ ಆಹಾರವಸ್ತುಗಳನ್ನು ತಯಾರಿಸಿದೆ. ಕೋಳಿಮೊಟ್ಟೆಯಿಂದ ಶೀಘ್ರ (ದಿಢೀರ್) ಬಳಕೆಗೆ ಬರುವ ಒಂದು ರೀತಿಯ ಪುಡಿಯನ್ನು ತಯಾರಿಸಿದೆ.

**ಸಸಾರಜನಕಾದಿ ಪುಷ್ಟಿಕರವಾದ ಆಹಾರ :** ಸಸ್ಯಾಹಾರಗಳಿಗೆ ದ್ವಿದಳ ಧಾನ್ಯಗಳು ಹಾಗೂ ಕೆಲವು ಎಣ್ಣೆಬೀಜಗಳು ಪ್ರಮುಖ ಪುಷ್ಟಿದಾಯಕ ಆಹಾರ ವಸ್ತುಗಳು. ಆಹಾರ ಸಂಶೋಧನಾಲಯ ದ್ವಿದಳ ಧಾನ್ಯಗಳನ್ನು ಒಡೆದು ಒಪ್ಪವಾಗಿ ಬೇಳೆಮಾಡುವ ನೂತನ ಯಂತ್ರಗಳನ್ನು ತಯಾರಿಸಿದೆ. ಕೆಲವು ಅನುಪಯುಕ್ತ ಎಣ್ಣೆಬೀಜಗಳಿಂದ ಪುಷ್ಟಿಕರವಾದ ಆಹಾರವಸ್ತುಗ ಳನ್ನು ತಯಾರಿಸಿದೆ. ಹೀಗೆ ತಯಾರಿಸಿದ ಆಹಾರ ಮಕ್ಕಳಿಗೆ ಪೌಷ್ಟಿಕ ಆಹಾರಾಂಶ ಕಾರ್ಯಕ್ರಮದಲ್ಲಿ ಬಳಕೆಯಾಗುತ್ತಿದೆ. ಗೋದಿಹಿಟ್ಟು, ಕಡಲೆ ಹಿಟ್ಟು, ಕಡಲೆಕಾಯಿಹಿಟ್ಟು ಮತ್ತು ಬೆಲ್ಲ–ಇವುಗಳಿಂದ ತಯಾರಿಸಿದ ಬಹುರುಚಿಕರವಾದ ತಿಂಡಿ ಇಂಥ ಕಾರ್ಯಕ್ರಮದಲ್ಲಿ ಬಳಕೆಯಾಗಿದೆ.

ಈ ಸಂಸ್ಥೆ ತಯಾರಿಸಿರುವ ವಿವಿಧೋದ್ದೇಶ ಆಹಾರ ಈಗಾಗಲೆ ವಾಣಿಜ್ಯವಸ್ತುವಾಗಿ ಬಳಕೆಗೆ ಬಂದಿದೆ. ಮೈಸೂರಿನಲ್ಲೂ ಉತ್ತರಪ್ರದೇಶದ ಕೋಟದ್ವಾರದಲ್ಲೂ ಅದನ್ನು ತಯಾರಿಸುವ ಕಾರ್ಖಾನೆಗಳು ಆರಂಭವಾಗಿವೆ.

ಗುಜರಾತಿನ ಆನಂದ್‍ನಲ್ಲಿ ತಯಾರಾಗುತ್ತಿರುವ ಅಮೂಲ್ ಸ್ಪ್ರೇ ಮತ್ತು ಅಮೂಲ್ ಆಹಾರ ವಸ್ತುಗಳು ಎಳೆಯಮಕ್ಕಳಿಗೂ ಬೆಳೆದ ಐದು ವರ್ಷದ ವಯಸ್ಸಿನ ಮಕ್ಕಳಿಗೂ ಉಪಯುಕ್ತ ಆಹಾರವಾಗಿದ್ದು ದೇಶಾದ್ಯಂತ ಪ್ರಚಾರದಲ್ಲಿದೆ. ಇದನ್ನು ಕಂಡುಹಿಡಿದು ಆ ಸಂಸ್ಥೆಯನ್ನು ಸ್ಥಾಪಿಸಲು ಈ ಸಂಶೋಧನಾಲಯ ಮುಖ್ಯ ಪಾತ್ರವಹಿಸಿತ್ತು.

ಕಡಲೆಕಾಯಿ ಹಿಂಡಿಯಿಂದ ಪ್ರೋಟೀನ್ ತಯಾರಿಸುವ ವಿಧಾನವನ್ನು ಈ ಸಂಸ್ಥೆ ಕಂಡುಹಿಡಿದಿದೆ. ಅದರಿಂದ ತಯಾರಾಗುವ ಮಿಲ್ಟೋನ್ ಎಂಬ ಪೇಯ ಈ ಸಂಸ್ಥೆಗೆ ಅಂತಾರಾಷ್ಟ್ರೀಯ ಖ್ಯಾತಿಗಳಿಸಿಕೊಟ್ಟಿದೆ. ಈಗ ಇದನ್ನು ಬೆಂಗಳೂರಿನ ಡೈರಿಯಲ್ಲಿ ತಯಾರಿಸಲಾಗುತ್ತಿದೆ. ಇದು ಕಂಡುಹಿಡಿದ ವಿಧಾನಗಳು ಉದ್ಯಮ ಕ್ಷೇತ್ರದಲ್ಲಿ ಬಳಕೆಗೆ ಬಂದ ಮೇಲೆ ದುಗ್ಧಾಹಾರಕ್ಕಾಗಿ ವ್ಯಯವಾಗುತ್ತಿದ್ದ ಕೋಟ್ಯಂತರ ರೂಪಾಯಿಗಳ ವಿದೇಶೀ ವಿನಿಮಯವನ್ನು ಉಳಿಸಿದಂತಾಗಿದೆ.

ಇಡ್ಲಿ, ದೋಸೆ, ವಡೆ, ರಸಂ, ಸಾಂಬಾರ್, ಚಕ್ಕುಲಿ, ಮುಚ್ಚೋರೆ, ಗುಲಾಬ್ ಜಾಮೂನ್, ಜಿಲೇಬಿ ಮುಂತಾದವನ್ನು ಶೀಘ್ರವಾಗಿ ತಯಾರಿಸಲು ಅನುಕೂಲಿಸುವ ಪುಡಿಗಳನ್ನೂ ಈ ಸಂಸ್ಥೆ ಕಂಡುಹಿಡಿದಿದೆ. ಅವನ್ನು ಮಾರಾಟಕ್ಕೆ ಸಿದ್ಧಪಡಿಸುವ ಸಂಸ್ಥೆಗಳಿಗೂ ನೆರವು ನೀಡಿದೆ.

ತಂತ್ರಜ್ಞಾನದ ಬಿಡುಗಡೆ : ಸಾಮಾನ್ಯವಾಗಿ ಯಾವ ಸಂಶೋಧನೆಯೇ ಆಗಲಿ ಅದು ಜೀವನಕ್ಷೇತ್ರದಲ್ಲಿ ಆನ್ವಯಿಕ ಮೌಲ್ಯವನ್ನು ಪಡೆದಾಗಲೆ ಅದರ ಪ್ರಾಮುಖ್ಯ ಹೆಚ್ಚಾಗುವುದು. ಆಹಾರ ಸಂಶೋಧನಾಲಯ ಈಗಾಗಲೆ ರೂಪಿಸಿರುವ ಅನೇಕ ತಯಾರಿಕಾ ವಿಧಾನಗಳಲ್ಲಿ ಕೆಲವನ್ನು ಸು. 300 ಉದ್ಯಮಗಳಿಗೆ ಬಿಡುಗಡೆ ಮಾಡಿದೆ. ಇನ್ನೂ ಹಲವು ವಿಧಾನಗಳನ್ನು ಬಿಡುಗಡೆ ಮಾಡಿ ಕಾರ್ಖಾನೆಗಳ ಮೂಲಕ ಮಾರುಕಟ್ಟೆಗೆ ಉತ್ಪನ್ನಗಳನ್ನು ಒದಗಿಸಬೇಕಾಗಿದೆ.

**3. ಸರ್ ಎಂ. ವಿಶ್ವೇಶ್ವರಯ್ಯ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ:** ಭಾರತ ಸರ್ಕಾರದ ಔದ್ಯೋಗಿಕ ಮತ್ತು ವೈಜ್ಞಾನಿಕ ಸಂಶೋಧನ ಮಂಡಲಿ ಆರಂಭಿಸಿದ ಎರಡು ವಸ್ತು ಸಂಗ್ರಹಾಲಯಗಳಲ್ಲಿ ಒಂದು. ಇದು ಬೆಂಗಳೂರಿನಲ್ಲಿದೆ. 1962ರಲ್ಲಿ ಇದನ್ನು ಮಂಡಲಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಇದರ ಪ್ರಧಾನ ಉದ್ದೇಶಗಳು ಹೀಗಿವೆ:

1. ವಿಜ್ಞಾನ, ತಂತ್ರಜ್ಞಾನ ಮತ್ತು ಉದ್ಯೋಗ ಈ ಕ್ಷೇತ್ರಗಳಲ್ಲಿ ಆಗಿರುವ ಪ್ರಗತಿಯನ್ನು ಪ್ರತಿನಿಧಿಸುವಂಥ ಚಾರಿತ್ರಿಕ ವಸ್ತುಗಳ ಸಂಗ್ರಹ, ರಕ್ಷಣೆ ಮತ್ತು ಪಾಲನೆ.

2. ಉದ್ಯೋಗ ಮತ್ತು ಮಾನವ ಕಲ್ಯಾಣ ಕಾರ್ಯಕ್ಕೆ ಸಂಬಂಧಿಸಿದ ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯನ್ನು ಸೂಚಿಸುವುದು.

3. ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರ ಉಪಯೋಗಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವುದು.

4. ಶಾಲಾಕಾಲೇಜುಗಳಲ್ಲಿ ನೀಡಿರುವ ವಿಜ್ಞಾನ ಶಿಕ್ಷಣಕ್ಕೆ ಪೂರಕ ವಾಗುವಂತೆ ಪ್ರಸಾರ ವ್ಯವಸ್ಥೆ ಮಾಡುವುದು.

5. ವಿದ್ಯಾರ್ಥಿಗಳಿಗೆ ವಿಜ್ಞಾನ ಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡಲು ವೈಜ್ಞಾನಿಕ ಪಾಠೋಪಕರಣಗಳನ್ನು ಉತ್ತಮಪಡಿಸುವುದಕ್ಕೂ ಬಳಸುವುದಕ್ಕೂ ಅಧ್ಯಾಪಕರಿಗೆ ತರಬೇತು ನೀಡುವುದು.

6. ಶಾಲಾ ಕಾಲೇಜುಗಳಲ್ಲೂ ಇತರೆ ಸಂಸ್ಥೆಗಳಲ್ಲೂ ವಿಜ್ಞಾನ ವಸ್ತು ಸಂಗ್ರಹಾಲಯಗಳ ಸ್ಥಾಪನೆಗೆ ಎಲ್ಲ ರೀತಿಯ ಅನುಕೂಲಗಳನ್ನು ಒದಗಿಸುವುದು ಮತ್ತು ವಸ್ತು ಸಂಗ್ರಹಾಲಯದ ಕಾರ್ಯಸಿಬ್ಬಂದಿಗೆ ತರಬೇತು ನೀಡುವುದು.

7. ಭಾರತಕ್ಕೆ ಸಂಬಂಧಿಸಿದಂತೆ ವಿಜ್ಞಾನ ಮತ್ತು ತಂತ್ರಶಾಸ್ತ್ರದ ಇತಿಹಾಸವನ್ನು ಕುರಿತಂತೆ ಸಂಶೋಧನೆ ನಡೆಸುವುದು.

8. ವಿಜ್ಞಾನ ಶಿಕ್ಷಣವನ್ನು ಉತ್ತಮಪಡಿಸಲು ಆ ಕಾರ್ಯಕ್ಕೆ ಬೇಕಾದ ಸಲಕರಣೆಗಳನ್ನು ಪೀಠೋಪಕರಣಗಳನ್ನು ನಿಯೋಜಿಸಿ ತಯಾರಿಸುವುದು.

ಈ ಸಂಗ್ರಹಾಲಯದಲ್ಲಿ ನಾಲ್ಕು ವ್ಯವಸ್ಥಾವೇದಿಕೆಗಳಿವೆ (ಗ್ಯಾಲರಿ): 1. ಎಲೆಕ್ಟ್ರೋಟೆಕ್ನಿಕ್, 2. ಮೋಟೀವ್ ಪವರ್, 3. ಪಾಪ್ಯುಲರ್ ಸೈನ್ಸ್, 4. ಟಿಂಬರ್ ಅಂಡ್ ಪೇಪರ್. ಈ ಸಂಸ್ಥೆ ಸಂಚಾರ ಸಂಗ್ರಹಾಲಯವನ್ನು ವ್ಯವಸ್ಥೆಗೊಳಿಸಿಕೊಂಡು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರದರ್ಶನ ಏರ್ಪಡಿಸುತ್ತದೆ.

ಮೇಲಿನ ಉದ್ದೇಶಗಳಿಗನುಗುಣವಾಗಿ ಈ ಸಂಗ್ರಹಾಲಯ ಕರ್ನಾಟಕದ ಬೇರೆ ಬೇರೆ ವಿಭಾಗಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಜನಸಾಮಾನ್ಯರಿಗೂ ವಿಜ್ಞಾನದ ಪ್ರಗತಿಯ ಬಗ್ಗೆ ಪರಿಚಯ ಮಾಡಿಕೊಡುತ್ತಿದೆ. ಶಾಲಾ ಕಾಲೇಜುಗಳಲ್ಲಿ ವಿಜ್ಞಾನ ಶಿಕ್ಷಣವನ್ನು ಸಂವರ್ಧಿಸಲು ಈ ಸಂಗ್ರಹಾಲಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

**ತಾಂತ್ರಿಕ ಸೇವಾ ವ್ಯವಸ್ಥೆ :** ಸರ್ಕಾರದ ಮತ್ತು ಖಾಸಗಿ ತಯಾರಿಕಾ ಸಂಸ್ಥೆಗಳಿಂದ ಬರುವ ಕೋರಿಕೆಗಳನ್ನನುಸರಿಸಿ ಪ್ರತಿವರ್ಷ 3,000–4,000 ಸಮಸ್ಯೆಗಳಿಗೆ ತಾಂತ್ರಿಕ ಪರಿಹಾರವೊದಗಿಸುತ್ತಿರುವ ಈ ಸಂಸ್ಥೆ ವಿವಿಧ ಆಹಾರಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಮೀಕ್ಷೆಗಳನ್ನು ನಡೆಸಿ 27 ವರದಿಗಳನ್ನು ಪ್ರಕಟಿಸಿದೆ.

**ತರಪೇತು ವ್ಯವಸ್ಥೆ:** ಸರ್ಕಾರದ ಮತ್ತು ಖಾಸಗಿ ತಯಾರಿಕಾ ಕೇಂದ್ರದಲ್ಲಿ ತೊಡಗಿರುವ ಉದ್ಯಮಗಳ ಆವಶ್ಯಕತೆಯನ್ನು ಪೂರೈಸಲು ಸಂಸ್ಥೆ ಒಂದು ತರಪೇತು ಕೇಂದ್ರವನ್ನೂ ನಡೆಸುತ್ತಿದೆ. ಇಲ್ಲಿಗೆ ದೇಶವಿದೇಶಗಳಿಂದ ಹಾಗೂ ಆಗ್ನೇಯ ಏಷ್ಯದ ರಾಷ್ಟ್ರಗಳಿಂದ ವರ್ಷಂಪ್ರತಿ ಅನೇಕರು ಬಂದು ತಾಂತ್ರಿಕ ತರಪೇತು ಪಡೆದು ಹೋಗುತ್ತಿದ್ದಾರೆ.

ಈ ಸಂಸ್ಥೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಸಂಶೋಧನ ಕೇಂದ್ರಗಳನ್ನೂ ಪ್ರಯೋಗಾಲಯಗಳನ್ನೂ ಹೊಂದಿದೆ. ತಿರುಚ್ಚೂರು, ನಾಗಪುರ, ಲಕ್ನೊ, ಮುಂಬಯಿ, ಮಂಗಳೂರು, ಶ್ರೀಲಂಕ, ಜಮ್ಮು ತಾವಿ, ಕಡಪ – ಈ ಸ್ಥಳಗಳಲ್ಲಿ ಪ್ರಾದೇಶಿಕ ಹಣ್ಣು ಮತ್ತು ತರಕಾರಿ ಸಂರಕ್ಷಣ ಕೇಂದ್ರಗಳನ್ನು ನಡೆಸುತ್ತಿದೆ. **ನೋಡಿ:ವಸ್ತು ಸಂಗ್ರಹಾಲಯಗಳು.**

**(ಎನ್.ಎಸ್.ವಿ)**

**ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ:** ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿರುವ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಚಿಕಿತ್ಸಾ ವೈದ್ಯಕೀಯ ಕೇಂದ್ರ ಸಂಸ್ಥೆ. ಇಲ್ಲಿ ಮಿದುಳು, ನರ ಮತ್ತು ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ನೀಡುವುದಲ್ಲದೆ ಇವುಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಶಿಕ್ಷಣ ನೀಡುವ ಈ ರಾಷ್ಟ್ರೀಯ ಸಂಸ್ಥೆ ನಿಮ್ಹಾನ್ಸ್ ಎಂದು ಪ್ರಸಿದ್ಧಿ. ಇದರ ಪೂರ್ಣ ಹೆಸರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಆಂಡ್ ನ್ಯೂರೋ ಸೈನ್ಸಸ್.

ಬೆಂಗಳೂರಿನಲ್ಲಿ 1948ರಲ್ಲಿ ಮನೋರೋಗಿಗಳ ಒಂದು ಆಶ್ರಯ ತಾಣ ಸ್ಥಾಪನೆಯಾಗಿತ್ತು. 1925ರಲ್ಲಿ ಇದನ್ನು ಮಾನಸಿಕ ರೋಗಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಯಿತು. ಆಗಿನ ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜರ ಮತ್ತು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಇವರುಗಳ ಆಸಕ್ತಿ ಹಾಗೂ ಸಹಾಯದಿಂದ ಈಗಿನ ಹೊಸೂರು ರಸ್ತೆಯ ವಿಶಾಲ ಪ್ರದೇಶಕ್ಕೆ 1937ರಲ್ಲಿ ಈ ಮಾನಸಿಕ ಆಸ್ಪತ್ರೆಯನ್ನು ಸ್ಥಳಾಂತರಿಸಲಾಯಿತು. 1954ರಲ್ಲಿ ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆಯಾಗಿ ಮತ್ತಷ್ಟು ವಿಶಾಲವಾಗಿ ಬೆಳೆಯಿತು. ಕೇಂದ್ರ ಸರ್ಕಾರದ ವತಿಯಿಂದ 1955ರಲ್ಲಿ ಕಾರ್ಯರೂಪಕ್ಕೆ ಬಂದ ಈ ಸಂಸ್ಥೆಯಲ್ಲಿ ಮನೋವಿಜ್ಞಾನದಲ್ಲಿ ಮತ್ತು ಚಿಕಿತ್ಸಾ ಮನೋವಿಜ್ಞಾನದಲ್ಲಿ ಎರಡು ವರ್ಷಗಳ ಶಿಕ್ಷಣವನ್ನು ಪ್ರಾರಂಭಿಸಿ ಭಾರತದಲ್ಲಿ ಪ್ರಪ್ರಥಮವಾಗಿ ಮನೋವೈದ್ಯರನ್ನೂ ಚಿಕಿತ್ಸಾ ಮನೋವಿಜ್ಞಾನಿಗಳನ್ನೂ ತಯಾರು ಮಾಡಿತು. ಎಂ.ವಿ. ಗೋವಿಂದಸ್ವಾಮಿಯವರು ಸಂಸ್ಥೆಯ ಮೊದಲ ನಿರ್ದೇಶಕರಾದರು. ಸಂಸ್ಥೆ ಮುಂದೆ ಅನೇಕ ಜನೋಪಯೋಗಿ ಕೆಲಸಗಳನ್ನು ಹಮ್ಮಿಕೊಳ್ಳುತ್ತಾ ಹೊಸಬರಿಗೆ ತರಬೇತಿ ನೀಡುತ್ತಾ ಸಂಶೋಧನೆಗಳಿಗೆ ಮಾರ್ಗ ತೋರುತ್ತ ಬಂದು ನರರೋಗ ವಿಭಾಗ ಮತ್ತು ನರಶಾಸ್ತ್ರ ಕ್ರಿಯಾವಿಭಾಗಗಳನ್ನು ಪ್ರಾರಂಭಿಸಿತು. ನಿಮ್ಹಾನ್ಸ್ 1974ರಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಬೆಳೆಯಿತು.

ಇಡೀ ರಾಷ್ಟ್ರದಲ್ಲಿ ಮನೋರೋಗಿಗಳಿಗೆ ಒಂದು ಮಾದರಿ ಮಾನಸಿಕ ಆಸ್ಪತ್ರೆ ರೂಪುಗೊಂಡು ಮಾನವೀಯ ವಿಧಾನದಲ್ಲಿ, ಆಧುನಿಕ ಚಿಕಿತ್ಸೆ ಉಪಚಾರವನ್ನು ನೀಡತೊಡಗಿತು. ಫ್ರಾಂಕ್ ನರೋನಾ, ಅನಂತರ ಎಂ.ವಿ. ಗೋವಿಂದಸ್ವಾಮಿಯವರು ಆಸ್ಪತ್ರೆಯ ಅಧೀಕ್ಷಕರಾಗಿ ಉನ್ನತ ಗುಣಮಟ್ಟದ ಸೇವಾಸೌಲಭ್ಯಗಳಿಗೆ ಭದ್ರ ಬುನಾದಿಯನ್ನು ಹಾಕಿದರು. ಐರೋಪ್ಯ ದೇಶಗಳಲ್ಲಿ ಪ್ರಚಲಿತವಿದ್ದ ವಿದ್ಯುತ್ ಕಂಪನ ಚಿಕಿತ್ಸೆ, ಜಲಚಿಕಿತ್ಸೆ, ಇನ್‌ಸುಲಿನ್ ಕೋಮಾ ಚಿಕಿತ್ಸೆ, ಪ್ರೀಫ್ರಾಂಟಲ್ ಲೋಬಾಟಮಿ (ಮಿದುಳಿನ ಶಸ್ತ್ರಚಿಕಿತ್ಸೆ)ಯಂತಹ ಚಿಕಿತ್ಸಾ ವಿಧಿವಿಧಾನಗಳನ್ನು ಅಳವಡಿಸಲಾಗಿದೆ. ಈ ಆಸ್ಪತ್ರೆಯಲ್ಲಿ ಇತರ ಮಾನಸಿಕ ಆಸ್ಪತ್ರೆಗಳಂತೆ 'ಜೈಲಿನ' ವಾತಾವರಣವಿಲ್ಲ. ಹಸಿರು ಗಿಡಮರಗಳ ಚೇತೋಹಾರಿ ಮುಕ್ತ ವಾತಾವರಣದಲ್ಲಿ ರೋಗಿಗಳ ವಾಸ್ತವ್ಯ ಇರುತ್ತಿತ್ತು. ಎಂ.ವಿ. ಗೋವಿಂದಸ್ವಾಮಿಯವರು ಸಂಸ್ಥೆಯ ಮೊದಲ ನಿರ್ದೇಶಕರಾದರು. 1955ರಲ್ಲಿ ಮನೋವೈದ್ಯ ಮತ್ತು ಚಿಕಿತ್ಸಾ ಮನಶ್ಶಾಸ್ತ್ರದಲ್ಲಿ ಡಿಪ್ಲೊಮಾ ಶಿಕ್ಷಣಗಳು ಪ್ರಾರಂಭವಾದುವು. 1956ರಲ್ಲಿ ಮನೋವೈದ್ಯ ಶುಶ್ರೂಷೆಯಲ್ಲಿ ಡಿಪ್ಲೊಮಾ ಪ್ರಾರಂಭವಾಯಿತು. ದೂರದ ಇಂಗ್ಲೆಂಡಿಗೆ ಹೋಗಿ ತರಬೇತಿ ಶಿಕ್ಷಣ ಪಡೆಯಬೇಕಾದ ಅನಿವಾರ್ಯತೆ ಹೋಗಿ, ನಮ್ಮ ದೇಶದೊಳಗೇ ಮಾನಸಿಕ ಆರೋಗ್ಯ ತಜ್ಞ ತರಬೇತಿ ಹೀಗೆ ಪ್ರಾರಂಭವಾಯಿತು. ಅರವತ್ತರ ದಶಕದಲ್ಲಿ ಮನೋವೈದ್ಯದಲ್ಲಿ ಎಂ.ಡಿ. ಶಿಕ್ಷಣ (1966), ಎಪ್ಪತ್ತರ ದಶಕದಲ್ಲಿ ನರರೋಗ ಶಾಸ್ತ್ರದಲ್ಲಿ ಡಿ.ಎಂ. ಶಿಕ್ಷಣ ಹಾಗೂ ನರಶಸ್ತ್ರ ಕ್ರಿಯಾ ವಿಭಾಗದಲ್ಲಿ ಎಂ.ಸಿ.ಎಚ್., ಮನೋವೈದ್ಯ ಸಮಾಜ ಕಾರ್ಯದಲ್ಲಿ ಡಿಪ್ಲೊಮಾ ಹಾಗೂ ಅನಂತರ ವಿವಿಧ ವಿಭಾಗಗಳಲ್ಲಿ ಪಿಎಚ್.ಡಿ ಶಿಕ್ಷಣಗಳು ಪ್ರಾರಂಭವಾದುವು.

ನಿಮ್ಹಾನ್ಸ್, ಬೆಂಗಳೂರು

ಇಂದು ನಿಮ್ಹಾನ್ಸ್ ದೇಶದಲ್ಲಿಯೇ ಅತಿದೊಡ್ಡ ತರಬೇತಿ ಮತ್ತು ಶಿಕ್ಷಣ ಕೇಂದ್ರವಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ಆಯ್ಕೆಯಾಗಿ ತರಬೇತಿ ಪಡೆಯುವುದು, ಡಿಪ್ಲೊಮಾ–ಡಿಗ್ರಿ ಪಡೆಯುವುದು ವಿದ್ಯಾರ್ಥಿಗಳಿಗೆ ಪ್ರತಿಷ್ಠೆಯ ವಿಷಯವೆನಿಸಿದೆ. ಈ ಸಂಸ್ಥೆಯಲ್ಲಿ ಈ ಮುಂದಿನ ಶಿಕ್ಷಣಗಳನ್ನು ನೀಡಲಾಗುತ್ತಿದೆ. ಮನೋವೈದ್ಯದಲ್ಲಿ ಎಂ.ಡಿ.; ನರರೋಗಶಾಸ್ತ್ರದಲ್ಲಿ ಡಿಎಂ.; ನರಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಎಂ.ಸಿ.ಎಚ್.; ಚಿಕಿತ್ಸಾ ಮನಶಾಶಸ್ತ್ರದಲ್ಲಿ ಎಂ.ಫಿಲ್.; ಚಿಕಿತ್ಸಾ ಮನಶಾಶಸ್ತ್ರದಲ್ಲಿ ಪಿಎಚ್.ಡಿ; ಮನೋವೈದ್ಯ ಸಮಾಜ ಕಾರ್ಯದಲ್ಲಿ ಎಂ.ಫಿಲ್ ಮತ್ತು ಪಿಎಚ್.ಡಿ.; ಮನೋವೈದ್ಯ ಶುಶ್ರೂಷೆ ಡಿಪ್ಲೊಮಾ; ಮನೋವೈದ್ಯ ಶುಶ್ರೂಷೆ ಎಂ.ಎಸ್‌ಸಿ. ಮತ್ತು ಪಿಎಚ್.ಡಿ; ನರರೋಗಿ ಶುಶ್ರೂಷೆಯಲ್ಲಿ ಡಿಪ್ಲೊಮಾ, ನ್ಯೂರೋ ರೇಡಿಯಾಲಜಿಯಲ್ಲಿ ಡಿ.ಎಂ; ನ್ಯೂರೋ ಫಿಸಿಯಾಲಜಿಯಲ್ಲಿ ಎಂ.ಫಿಲ್; ಬಯೋಫಿಸಿಕ್ಸ್‌ನಲ್ಲಿ ಎಂ.ಫಿಲ್; ನ್ಯೂರೋ ಸೈನ್ಸಸ್‌ನಲ್ಲಿ ಎಂ.ಫಿಲ್; ನ್ಯೂರೋಮೈಕ್ರೋ ಬಯಾಲಜಿಯಲ್ಲಿ ಪಿಎಚ್.ಡಿ; ನ್ಯೂರೋವೈರಾಲಜಿಯಲ್ಲಿ ಪಿಎಚ್.ಡಿ; ಸೈಕೋಫಾರ್ಮಕಾಲಜಿಯಲ್ಲಿ ಪಿಎಚ್.ಡಿ; ಬಯೋಸ್ಟಾಟಿಸ್ಟಿಕ್ಸ್‌ನಲ್ಲಿ ಪಿಎಚ್.ಡಿ; ನ್ಯೂರೋಫಿಸಿಯಾಲಜಿಯಲ್ಲಿ ಡಿಪ್ಲೊಮಾ; ನ್ಯೂರೋಪೆಥಾಲಜಿಯಲ್ಲಿ ಪೋಸ್ಟ್ ಡಾಕ್ಟರಲ್ ಫೆಲೋಷಿಪ್; ನ್ಯೂರೋ–

ಅನಿಸ್ತೀಸಿಯಾದಲ್ಲಿ ಪೋಸ್ಟ್ ಡಾಕ್ಟರಲ್ ಫೆಲೋಷಿಪ್; ನ್ಯೂರೋ ಇಮೇಜಿಂಗ್‌ನಲ್ಲಿ ಸರ್ಟಿಫಿಕೇಟ್ ಶಿಕ್ಷಣ.

ಯಾವುದೇ ಅವಧಿಯಲ್ಲಿ ನಿಮ್ಹಾನ್ಸ್‌ನಲ್ಲಿ 150ಕ್ಕಿಂತ ಹೆಚ್ಚಿನ ಪದವಿಯೋತ್ತರ ವಿದ್ಯಾರ್ಥಿಗಳಿರುತ್ತಾರೆ. ಇವರಲ್ಲದೆ ಭಾರತದ ವಿವಿಧ ರಾಜ್ಯಗಳಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳೂ ವಿಶ್ವ ಆರೋಗ್ಯ ಸಂಸ್ಥೆಯ ಫೆಲೋಷಿಪ್ ಪಡೆದ ವಿದ್ಯಾರ್ಥಿಗಳೂ ಹಲವು ದೇಶಗಳ ತಜ್ಞರೂ ಭಿನ್ನ ಅವಧಿಯ ತರಬೇತಿ, ಶಿಕ್ಷಣ ಪಡೆಯಲು ನಿಮ್ಹಾನ್ಸ್‌ಗೆ ಬರುತ್ತಾರೆ. ಅಲ್ಪಾವಧಿಯ ತರಬೇತಿಗಾಗಿ ಸಾಮಾನ್ಯ ವೈದ್ಯರು, ದಾದಿಯರು, ವೃತ್ತಿ ತರಬೇತಿ ಶಿಕ್ಷಕರು, ಶಾಲಾ-ಕಾಲೇಜುಗಳ ಶಿಕ್ಷಕರು, ಸೇವಾ ಸಂಸ್ಥೆಗಳ ಕಾರ್ಯಕರ್ತರು ಇಲ್ಲಿಗೆ ಬರುತ್ತಾರೆ. ಇಲ್ಲಿ ಪದವಿ ಪಡೆದ ತಜ್ಞರು ಇಂದು ಪ್ರಪಂಚದಾದ್ಯಂತ ವಿವಿಧ ದೇಶಗಳಲ್ಲಿ ಕೆಲಸ ಮಾಡುತ್ತಾ ತಮಗೆ, ನಿಮ್ಹಾನ್ಸ್ ಸಂಸ್ಥೆಗೆ ಹಾಗೂ ಭಾರತ ದೇಶಕ್ಕೆ ಗೌರವವನ್ನು ತಂದಿದ್ದಾರೆ.

ಇಂದು ನಿಮ್ಹಾನ್ಸ್ ಸಂಸ್ಥೆಯಲ್ಲಿ ಒಟ್ಟು 22 ವಿಭಾಗಗಳಿದ್ದು ಇವು ರೋಗಿಗಳ ಆರೈಕೆ, ಚಿಕಿತ್ಸೆ, ತಜ್ಞರ ತರಬೇತಿ ಮತ್ತು ಶಿಕ್ಷಣ ಹಾಗೂ ಸಂಶೋಧನೆಗಳಲ್ಲಿ ನಿರತವಾಗಿವೆ. 1994ರಲ್ಲಿ ನಿಮ್ಹಾನ್ಸ್ ಪರಿಗಣಿತ (ಡೀಮ್ಡ್) ವಿಶ್ವವಿದ್ಯಾಲಯವಾಗಿ ಮಾನ್ಯತೆ ಪಡೆಯಿತು. ನಿಮ್ಹಾನ್ಸ್‌ನ ಸರ್ವಾಂಗೀಣ ಬೆಳವಣಿಗೆಗೆ ವೈದ್ಯರಾದ ಆರ್.ಎಂ. ವರ್ಮ, ಡಿ.ಎಲ್.ಎನ್. ಮೂರ್ತಿರಾವ್, ಸೂರ್ಯ, ಮಸಾನಿ, ಭಾಸ್ಕರನ್, ಕೆ.ಎಸ್.ಮಣಿ, ಎಂ. ಗೌರೀದೇವಿ ಹಾಗೂ ಪ್ರಸಕ್ತ ನಿರ್ದೇಶಕರೂ ಕುಲಪತಿಗಳೂ ಆದ ಡಿ. ನಾಗರಾಜ್ ಅವರಲ್ಲದೆ ಅನೇಕ ಮಹನೀಯರುಗಳು ತಮ್ಮ ಕೊಡುಗೆಯನ್ನು ನೀಡಿದ್ದಾರೆ.

**ಚಿಕಿತ್ಸೆ ಮತ್ತು ಉಪಚಾರ:** ನಿಮ್ಹಾನ್ಸ್‌ನಲ್ಲಿ ಒಟ್ಟು 900 ಹಾಸಿಗೆಗಳ ಒಳರೋಗಿ ಘಟಕಗಳು ಮತ್ತು ಪ್ರತಿನಿತ್ಯ ಕೆಲಸ ನಿರ್ವಹಿಸುವ ಹೊರರೋಗಿ ಘಟಕಗಳೂ ನಿತ್ಯ 24 ಗಂಟೆಗಳ ಅವಿರತ ತುರ್ತುಸೇವೆಯನ್ನು ಒದಗಿಸುವ ಅಪಘಾತ ಮತ್ತು ತುರ್ತುವಿಭಾಗವೂ ಇವೆ. ಮನೋವೈದ್ಯ ವಿಭಾಗವು ಸೋಮವಾರದಿಂದ ಶನಿವಾರದವರೆಗೆ ಪ್ರತಿದಿನ ಹೊರರೋಗಿ ಸಲಹಾ ವಿಭಾಗವನ್ನು ನಡೆಸಿದರೆ, ನರರೋಗ ವಿಭಾಗವು ಪ್ರತಿ ಸೋಮವಾರ, ಗುರುವಾರ ಮತ್ತು ಶುಕ್ರವಾರ, ನರಶಸ್ತ್ರ ಚಿಕಿತ್ಸಾ ವಿಭಾಗವು ಪ್ರತಿ ಸೋಮವಾರ, ಬುಧವಾರ ಮತ್ತು ಶುಕ್ರವಾರ ಹೊಸರೋಗಿಗಳಿಗೂ ಉಳಿದ ಮೂರು ದಿನಗಳು ಹಳೆಯ ರೋಗಿಗಳಿಗೂ ಸಲಹೆ ನೀಡುತ್ತವೆ. ಮಾತು ಮತ್ತು ಶ್ರವಣ ವಿಭಾಗವು ನಿತ್ಯ ಸಲಹೆ ಮಾರ್ಗದರ್ಶನ ನೀಡುತ್ತದೆ. ಹಾಗೆಯೇ ಆಯುರ್ವೇದ ವಿಭಾಗ ಕೂಡ ತನ್ನದೇ ಆದ ಹೊರರೋಗಿ ಮತ್ತು ಒಳರೋಗಿ ಘಟಕವನ್ನು ಹೊಂದಿದೆ. ಇದಲ್ಲದೆ ವಿವಿಧ ವಿಭಾಗಗಳು ವಿಶೇಷ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಿವೆ.

**ಒಳರೋಗಿ ಘಟಕಗಳು:** ಮನೋವೈದ್ಯ ವಿಭಾಗದಲ್ಲಿ ತೀವ್ರರೀತಿಯ ಮನೋರೋಗಿಗಳಿಗೆ ಹಾಗೂ ಮಾನಸಿಕ ಅಸ್ವಸ್ಥ ವಿಚಾರಣಾಧೀನ ಖೈದಿಗಳು ಅಥವಾ ಶಿಕ್ಷೆಯನ್ನು ಅನುಭವಿಸುತ್ತಿರುವ ಖೈದಿಗಳಿಗಾಗಿ ಮುಚ್ಚಿದ ವಾರ್ಡ್‌ಗಳೂ ರೋಗಿಯ ಜೊತೆಗೆ ಮನೆಯವರೂ ಇದ್ದು ಚಿಕಿತ್ಸೆಯಲ್ಲಿ ಭಾಗಿಯಾಗುವ ತೆರೆದ ವಾರ್ಡ್‌ಗಳೂ ಸ್ಪೆಷಲ್ ವಾರ್ಡ್‌ಗಳೂ ಇಡೀ ಕುಟುಂಬವೇ ಸಲಹೆ, ಚಿಕಿತ್ಸೆ ಪಡೆಯುವ ಫ್ಯಾಮಿಲಿವಾರ್ಡ್‌ಗಳೂ ಮದ್ದು ಮದ್ಯವ್ಯಸನ ವಿಮೋಚನ ವಿಶೇಷವಾರ್ಡ್‌ಗಳೂ ಮಕ್ಕಳು ಹದಿಹರೆಯದವರಿಗಾಗಿ ಮಕ್ಕಳವಾರ್ಡ್‌ಗಳೂ ಇವೆ. ನರರೋಗಿಗಳಿಗೆ, ಮಿದುಳಿನ ಶಸ್ತ್ರಕ್ರಿಯೆ ನಡೆಸಬೇಕಾದ ರೋಗಿಗಳಿಗೆ, ತಲೆಗೆ ಪೆಟ್ಟುಬಿದ್ದ ರೋಗಿಗಳಿಗೆ, ಪಾರ್ಶ್ವವಾಯುಪೀಡಿತರಿಗೆ, ಮಿದುಳಿನ ಕಾಯಿಲೆ ಇರುವ ಮಕ್ಕಳಿಗಾಗಿ ವಿಶೇಷವಾರ್ಡ್‌ಗಳು, ನ್ಯೂರೋಸೆಂಟರ್ ಕಟ್ಟಡದಲ್ಲಿವೆ. ಆಯುರ್ವೇದ ಚಿಕಿತ್ಸೆ ಬಯಸುವ ರೋಗಿಗಳಿಗೆ ವಿಶೇಷ ಆಯುರ್ವೇದ ಸಂಶೋಧನ ವಿಭಾಗವಿದೆ.

ವಿವಿಧ ವಿಭಾಗಗಳ ತಜ್ಞರು ಪರಸ್ಪರ ಚರ್ಚೆ ಸಹಕಾರಗಳಿಂದ ರೋಗಿಗಳಿಗೆ ಉತ್ತಮ ಚಿಕಿತ್ಸೆ ಉಪಚಾರವನ್ನು ಆಯೋಜಿಸಿ ನೀಡುವುದು (ಮಲ್ಟಿಡಿಸಿಪ್ಲಿನರಿ ಅಪ್ರೋಚ್) ನಿಮ್ಹಾನ್ಸ್ ಸಂಸ್ಥೆಯ ಹೆಗ್ಗಳಿಕೆ. ಮಾನಸಿಕ ಅಥವಾ ನರರೋಗಗಳಿಂದ ಅಂಗವೈಕಲ್ಯವನ್ನು ಅನುಭವಿಸುತ್ತಿರುವವರಿಗೆ ಫಿಸಿಯೋಥೆರಪಿ (ಅಂಗಮರ್ದನ ಚಿಕಿತ್ಸೆ) ಉದ್ಯೋಗ ತರಬೇತಿ, ಪುನರ್ವಸತಿಗಾಗಿ ಪ್ರತ್ಯೇಕ ವಿಭಾಗವಿದ್ದು ಒಳ ಮತ್ತು ಹೊರ ರೋಗಿಗಳಿಗೆ ಸೇವೆ, ಮಾರ್ಗದರ್ಶನವನ್ನು ನೀಡುತ್ತಿದೆ. ಸುಮಾರು 20ಕ್ಕಿಂತ ಹೆಚ್ಚಿನ ವೃತ್ತಿ ತರಬೇತಿ ವಿಭಾಗಗಳನ್ನು (ಹೊಲಿಗೆ, ನೇಯ್ಗೆ, ಮುದ್ರಣ, ಚಾಪೆ, ಬುಟ್ಟಿ, ಸೋಪ್, ಬ್ರೆಡ್ ಮಾಡುವುದು ಇತ್ಯಾದಿ) ಹೊಂದಿದೆ.

ರೋಗ ನಿದಾನ, ಚಿಕಿತ್ಸೆ, ನಿವಾರಣೆಯಲ್ಲಿ ನೆರವಾಗಲು ನರಜೀವ ರಸಾಯನಶಾಸ್ತ್ರ, ನರರೋಗ ವಿಧಾನಶಾಸ್ತ್ರ, ಸೂಕ್ಷ್ಮಾಣು ಜೀವಿಶಾಸ್ತ್ರ, ವೈರಾಣುಶಾಸ್ತ್ರ, ತಳಿಶಾಸ್ತ್ರ, ಸರ್ವೇಕ್ಷಣಾ ಶಾಸ್ತ್ರ, ಅಂಕಿಅಂಶಶಾಸ್ತ್ರ, ಆರೋಗ್ಯ ಶಿಕ್ಷಣ ವಿಭಾಗಗಳು ಕೆಲಸ ಮಾಡುತ್ತಿವೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಆನೇಕಲ್ಲು, ಗೌರಿಬಿದನೂರು, ಮದ್ದೂರು, ಮಧುಗಿರಿ, ಕನಕಪುರ, ಗುಂಜೂರು, ಯಳಂದೂರು ತಾಲ್ಲೂಕುಗಳಲ್ಲಿ ಮಾನಸಿಕ ಆರೋಗ್ಯ ಚಿಕಿತ್ಸಾ ಶಿಬಿರಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ಆರು ವರ್ಷಗಳ ಕಾಲ, ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ, ಮನೋರೋಗಿಗಳಿಗೆ ಮೂರ್ಛೆರೋಗಿಗಳಿಗೆ, ಬುದ್ಧಿಮಾಂದ್ಯರಿಗೆ ಸ್ಥಳೀಯ ವೈದ್ಯರು, ವೈದ್ಯೇತರ ಸಿಬ್ಬಂದಿಯ ನೆರವಿನಿಂದ ಸಲಹೆ ಚಿಕಿತ್ಸೆ ನಡೆಸಲಾಯಿತು. ವೈದ್ಯರು, ವೈದ್ಯೇತರ ಸಿಬ್ಬಂದಿಗೆ ನೀಡಬೇಕಾದ ತರಬೇತಿಯ ವಿವರಗಳನ್ನು, ಕೈಪಿಡಿಗಳನ್ನು ಸಿದ್ಧಪಡಿಸಲಾಗಿದೆ. ನಿಮ್ಹಾನ್ಸ್‌ನ ಈ ಎಲ್ಲ ಸಮುದಾಯ ಕಾರ್ಯಕ್ರಮಗಳ ಯಶಸ್ಸನ್ನು ಕಂಡು, ಕೇಂದ್ರ ಸರ್ಕಾರ 1982ರಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ರೂಪಿಸಿತು. ಹಾಗೆಯೇ ರಾಷ್ಟ್ರೀಯ ಮೂರ್ಛೆರೋಗ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಮದ್ದು ಮಾದಕ ಪಾನೀಯ ಸೇವನೆ ಚಟ ನಿಯಂತ್ರಣ ಕಾರ್ಯಕ್ರಮಗಳೂ ಜಾರಿಗೆ ಬಂದಿವೆ. ಬಳ್ಳಾರಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮಾದರಿಯಲ್ಲಿ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ದೇಶದ 28 ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ರಮವನ್ನು ಒಂದು ನೂರು ಜಿಲ್ಲೆಗಳಿಗೆ ವಿಸ್ತರಿಸಲು ಕೇಂದ್ರ ಸರ್ಕಾರ 190 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಈ ಕಾರ್ಯಕ್ರಮದ ಅನುಷ್ಠಾನದ ಉಸ್ತುವಾರಿಯನ್ನು ನಿಮ್ಹಾನ್ಸ್ ಸಂಸ್ಥೆಗೇ ವಹಿಸಲು ಆಲೋಚಿಸಲಾಗಿತ್ತು.

ನಿಮ್ಹಾನ್ಸ್ ಸಿದ್ಧಪಡಿಸಿರುವ ಸಮುದಾಯ ಮಾನಸಿಕ ಆರೋಗ್ಯ ಕಾರ್ಯಕ್ರಮದ ರೂಪುರೇಖೆಗಳನ್ನು ಶ್ರೀಲಂಕಾ, ಬಾಂಗ್ಲಾದೇಶ, ಭೂತಾನ, ಪಾಕಿಸ್ತಾನ, ಇರಾನ್, ಯೆಮೆನ್, ಬರ್ಮಾ ಇತ್ಯಾದಿ ರಾಷ್ಟ್ರಗಳು ಅನುಸರಿಸುತ್ತಿರುವುದು ಹೆಮ್ಮೆಯ ಸಂಗತಿ. ಮಾನಸಿಕ ಹಾಗೂ ನರವಿಜ್ಞಾನ ತಜ್ಞರ ಸಂಖ್ಯೆ ಅತ್ಯಂತ ಕಡಿಮೆ ಇರುವ ನಮ್ಮ ದೇಶದಲ್ಲಿ (ಹತ್ತುಲಕ್ಷ ಜನಸಂಖ್ಯೆಗೆ ಮೂರು-ನಾಲ್ಕು ತಜ್ಞರು ಮಾತ್ರ ಇದ್ದಾರೆ) ಮಾನಸಿಕ ಹಾಗೂ ನರರೋಗಗಳಿಗೆ ಸೇವಾ ಸೌಲಭ್ಯಗಳನ್ನು ತಜ್ಞರಲ್ಲದವರಿಂದ (ಸಾಮಾನ್ಯ ವೈದ್ಯರು, ನರ್ಸ್‌ಗಳು) ಅಥವಾ ವೈದ್ಯೇತರರಿಂದ (ಶಾಲೆ-ಕಾಲೇಜು ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು, ಸಮಾಜಸೇವಾ

ಕಾರ್ಯಕರ್ತರು, ಸ್ವಯಂ ಸೇವಕರು) ಜನರಿಗೆ ತಲುಪಿಸಲು ಮತ್ತು ಅವುಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ನಿಮ್ಹಾನ್ಸ್ ಪ್ರಯೋಗಗಳನ್ನು ಮಾಡುತ್ತಿದೆ.

**ಸಂಶೋಧನೆ:** ಐವತ್ತು ವರ್ಷಗಳ ಹಿಂದೆ ಮಾನಸಿಕ ಹಾಗೂ ನರರೋಗಗಳ ಬಗ್ಗೆ ನಮಗೆ ತಿಳಿದದ್ದು ಅತ್ಯಲ್ಪ. ಸಮಾಜದಲ್ಲಿ ಈ ಕಾಯಿಲೆಗಳು ಎಷ್ಟು ಜನಕ್ಕೆ ಇರುತ್ತವೆ, ಹೇಗೆ ಎಷ್ಟು ಕಾಲ ವ್ಯಕ್ತಿಯನ್ನು ಕಾಡುತ್ತವೆ, ಕಾಯಿಲೆ ಪ್ರಕಟಗೊಳ್ಳಲು ಪ್ರೇರಣೆ ನೀಡುವ ಅಂಶಗಳು ಯಾವುವು, ಈ ಕಾಯಿಲೆಗಳಲ್ಲಿ ಮಿದುಳಿನ ನರಕೋಶಗಳಲ್ಲಿ ಏನೇನು ಬದಲಾವಣೆಗಳಾಗುತ್ತವೆ, ಕಾಯಿಲೆಗಳು ಬರದಂತೆ ಮಾಡುವ ನಿವಾರಣೋಪಾಯಗಳು ಇವೆಯೇ ಈ ಎಲ್ಲ ವಿಷಯಗಳ ಬಗ್ಗೆ ನಿಮ್ಹಾನ್ಸ್ ಸಂಶೋಧನ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ದೇಶದ ಪ್ರಥಮ ಸರ್ವೇಕ್ಷಣಾ ಕಾರ್ಯವನ್ನು ಎಂ.ವಿ. ಗೋವಿಂದಸ್ವಾಮಿಯವರು ಮಾಡಿದರು. ವಂಶವಾಹಿನಿಗಳ ಅಧ್ಯಯನ, ಮಿದುಳಿನ ನರಕೋಶಗಳಲ್ಲಿ ಆಗುವ ಬದಲಾವಣೆಗಳು, ಕಾಯಿಲೆಗಳ ಸರ್ವೇಕ್ಷಣೆ, ಆಗಿಂದಾಗ್ಗೆ ಹೊಸದಾಗಿ ಬಳಕೆಗೆ ಬರುವ ಚಿಕಿತ್ಸಾ ವಿಧಾನಗಳು ಮತ್ತು ಅವುಗಳ ಉಪಯುಕ್ತತೆ, ಔಷಧಿಗಳ ಅಡ್ಡಪರಿಣಾಮಗಳು, ಕಾಯಿಲೆಗಳಿಗೆ ಪ್ರೇರಣೆ ನೀಡುವ ಜೈವಿಕ, ಸಾಮಾಜಿಕ ಅಂಶಗಳು, ಜನರ ನಂಬಿಕೆ, ಧೋರಣೆ, ಆಚರಣೆಗಳು, ಅವುಗಳಲ್ಲಿ ಸೂಕ್ತ ಬದಲಾವಣೆ ತರುವ ಮಾರ್ಗೋಪಾಯಗಳು ಇತ್ಯಾದಿಗಳ ಬಗ್ಗೆ ದೇಶದಲ್ಲಿ ನಡೆಯುತ್ತಿರುವ ಅಧ್ಯಯನಗಳಲ್ಲಿ ನಿಮ್ಹಾನ್ಸ್ ಮುಂಚೂಣಿ ಸ್ಥಾನದಲ್ಲಿದೆ.

2002-03ನೆಯ ಸಾಲಿನಲ್ಲಿ ನಿಮ್ಹಾನ್ಸ್‌ನ ವಿವಿಧ ಭಾಗಗಳಲ್ಲಿ ಒಟ್ಟು 114 ಸಂಶೋಧನ ಪ್ರಾಜೆಕ್ಟ್‌ಗಳು ಅಸ್ತಿತ್ವದಲ್ಲಿದ್ದುವು. ಒಟ್ಟು 11.5 ಕೋಟಿ ಹಣವನ್ನು ಈ ಚಟುವಟಿಕೆಗಳಲ್ಲಿ ತೊಡಗಿಸಲಾಗಿತ್ತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳಾದ ಭಾರತೀಯ ವೈದ್ಯ ಸಂಶೋಧನ ಸಂಸ್ಥೆ, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕೇಂದ್ರ ಮತ್ತು ರಾಜ್ಯ ಆರೋಗ್ಯ, ಅಂಗವಿಕಲ ಕಲ್ಯಾಣ, ಸಮಾಜ ಕಲ್ಯಾಣ ಇಲಾಖೆಗಳು, ಲೈಫ್‌ಸೈನ್ಸಸ್ ರಿಸರ್ಚ್ ಬೋರ್ಡ್, ಅಟಾಮಿಕ್ ಎನರ್ಜಿ ವಿಭಾಗ, ಅಖಿಲ ಭಾರತ ತಾಂತ್ರಿಕ ಶಿಕ್ಷಣದ ಕೌನ್ಸಿಲ್, ಭಾರತ ಸರ್ಕಾರದ ಗ್ರಾಮೀಣ ಸಂಸ್ಥೆಗಳ ಕೌನ್ಸಿಲ್, ಕೇರ್ ಇಂಡಿಯಾ, ವಿಶ್ವ ಆರೋಗ್ಯ ಸಂಸ್ಥೆ, ಭಾರತ ಮತ್ತು ಅಮೆರಿಕ ಸಂಯುಕ್ತ ಯೋಜನೆಗಳು, ಫೋರ್ಡ್ ಪೌಂಡೇಶನ್, ಇಂಗ್ಲೆಂಡಿನ ವೆಲ್‌ಕಮ್ ಟ್ರಸ್ಟ್, ಕೆನಡದ ಸೆಂಟರ್ ಫಾರ್ ಗ್ಲೋಬಲ್ ಹೆಲ್ತ್, ರಿಸರ್ಚ್ ಇತ್ಯಾದಿ ಸಂಸ್ಥೆಗಳು ನಿಮ್ಹಾನ್ಸ್ ನೊಂದಿಗೆ ಕೈಜೋಡಿಸಿವೆ. ಹೀಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ರೋಗಿಗಳ ಆರೈಕೆ, ತಜ್ಞರ ತರಬೇತಿ ಮತ್ತು ಶಿಕ್ಷಣ, ಸಂಶೋಧನೆಯ ಚಟುವಟಿಕೆಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದೆ.

**ನಿಮ್ಹಾನ್ಸ್ ಸಂಸ್ಥೆಯ ಧ್ಯೇಯೋದ್ದೇಶಗಳು :**

1) ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಹಾಗೆ ಮಾನಸಿಕ ಮತ್ತು ನರವಿಜ್ಞಾನ ಕ್ಷೇತ್ರದಲ್ಲಿ ಶೈಕ್ಷಣಿಕ ಮತ್ತು ವೃತ್ತಿಪರ ಚಟುವಟಿಕೆಗಳಿಂದ ಬೆಳವಣಿಗೆ ಮತ್ತು ವಿಕಾಸವನ್ನು ಸಾಧಿಸುವುದು.

2) ಈ ಕ್ಷೇತ್ರದಲ್ಲಿ ರೋಗಿಗಳ ಚಿಕಿತ್ಸೆ, ತಜ್ಞರ ತರಪೇತಿ ಮತ್ತು ವಿಷಯಗಳ ಅಧ್ಯಯನದಲ್ಲಿ ಸಂಸ್ಥೆಯು ಮುಂಚೂಣಿಯಲ್ಲಿರುವಂತೆ ನೋಡಿಕೊಳ್ಳುವುದು.

3) ಮಿದುಳು, ಮನಸ್ಸು-ನಡೆವಳಿಕೆಗಳನ್ನು ಜೀವಕೋಶಗಳ ಮಟ್ಟದಲ್ಲಿ, ಜೈವಿಕ-ಮಾನಸಿಕ ಹಾಗೂ ಸಾಮಾಜಿಕ ಮಟ್ಟಗಳಲ್ಲಿ ಅರ್ಥ ಮಾಡಿಕೊಂಡು, ಮಾನಸಿಕ ಹಾಗೂ ನರರೋಗಗಳ ಕಾರಣ-ಪರಿಹಾರಗಳನ್ನು ರೂಪಿಸುವುದು.

4) ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಂಶೋಧನೆ, ಮಾಪನ, ತರಬೇತಿ, ಸಲಹೆ ಮತ್ತು ಮಾರ್ಗದರ್ಶನವನ್ನು ಮಾಡುವುದು.

5) ಮಾನಸಿಕ ಮಾಹಿತಿಯನ್ನು ಅಕ್ಷರ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಅಂದರೆ ನಿಯತಕಾಲಿಕೆಗಳೂ ಸಂಶೋಧನ ಪ್ರಬಂಧಗಳು, ವೈಜ್ಞಾನಿಕ ಸಮ್ಮೇಳನ, ವಿಚಾರ ಸಂಕಿರಣಗಳ ನಡಾವಳಿಗಳು, ಪಠ್ಯಪುಸ್ತಕಗಳು, ಕೈಪಿಡಿಗಳು ಹಾಗೂ ಕರಪತ್ರಗಳ ಮೂಲಕ ಹರಡುವುದು.

6) ಸಂಸ್ಥೆಯ ಧ್ಯೇಯೋದ್ದೇಶಗಳನ್ನು ವ್ಯಾಪಕವಾಗಿ ಪ್ರಸಾರ ಮಾಡಲು ಗ್ರಂಥಭಂಡಾರ ಹಾಗೂ ಮಾಹಿತಿ ಸೇವಾಜಾಲವನ್ನು ರೂಪಿಸಿ ವೃದ್ಧಿಸುವುದು.

7) ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆ-ಆವಿಷ್ಕಾರ, ತರಬೇತಿ ಶಿಕ್ಷಣವನ್ನು ಹಮ್ಮಿಕೊಂಡಿರುವ ಇತರ ದೇಶೀಯ ಹಾಗೂ ಅಂತಾರಾಷ್ಟ್ರೀಯ ಸಂಘಸಂಸ್ಥೆಗಳೊಂದಿಗೆ ಸಹಕರಿಸುವುದು. ಮಾಹಿತಿ ಅಂಕಿಅಂಶಗಳು ಹಾಗೂ ಸಿಬ್ಬಂದಿಯ ಸೇವೆಯನ್ನು ಇತರರಿಗೆ ನೀಡುವುದು ಹಾಗೂ ಪಡೆಯುವುದು.

8) ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ವಿಷಯಗಳ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡುವುದು ಮತ್ತು ಅವರ ಅರಿವನ್ನು ಹೆಚ್ಚಿಸುವುದು.

(ಸಿ.ಆರ್.ಸಿ.)

**ರಾಹುಲ್ ದ್ರಾವಿಡ್:** 1973-. ಭಾರತ ಕ್ರಿಕೆಟ್ ತಂಡದ, ಅಂತಾರಾಷ್ಟ್ರೀಯ ಖ್ಯಾತಿಯ ಆಟಗಾರ. ರಾಹುಲ್ 'ದ ವಾಲ್' ದ್ರಾವಿಡ್ (ಗೋಡೆ) ಎಂದೇ ಪ್ರಸಿದ್ಧರು. ಇವರು 1973 ಜನವರಿ 11ರಂದು ಇಂದೋರಿನಲ್ಲಿ ಜನಿಸಿದರು. ಶಾಲಾ ದಿನಗಳಿಂದಲೇ ಕ್ರಿಕೆಟ್ ಆಸಕ್ತಿ ಬೆಳೆಸಿಕೊಂಡರು. ಇವರ ತಂದೆ ಹಾಗೂ ಚಿಕ್ಕಪ್ಪ ಕ್ರಿಕೆಟ್ ಪ್ರೇಮಿಗಳಾಗಿದ್ದುದು ಇವರ ಮೇಲೆ ಪ್ರಭಾವ ಬೀರಿತು. ಬೆಂಗಳೂರಿನ ಸೇಂಟ್ ಜೋಸೆಫ್ ಶಾಲೆಯ

ಕ್ರಿಕೆಟ್ ತಂಡದಲ್ಲಿ ತಮ್ಮ ಪ್ರತಿಭೆ ತೋರಿದ ಇವರು 15, 17 ಹಾಗೂ 19 ವರ್ಷದೊಳಗಿನವರ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಗಮನ ಸೆಳೆದರು. ಕ್ರಿಕೆಟ್ ಆಟಗಾರರಾದ ಜಿ.ಆರ್.ವಿಶ್ವನಾಥ್, ಕೆ.ಕೆ.ತಾರಾಪೂರ್, ರೋಜರ್ ಬಿನ್ನಿ ಹಾಗೂ ಬ್ರಿಜೇಶ್ ಪಟೇಲ್ ಮೊದಲಾದವರು ಇವರಿಗೆ ಪ್ರೋತ್ಸಾಹ ನೀಡಿದರು.

1991ರಲ್ಲಿ ಮಹಾರಾಷ್ಟ್ರದ ವಿರುದ್ಧ ಮೊದಲ ರಣಜಿ ಪಂದ್ಯ ಆಡಿದರು. ಅನಂತರ ಪಶ್ಚಿಮ ಬಂಗಾಲ, ಗೋವ ಹಾಗೂ ಕೇರಳ ತಂಡಗಳ ವಿರುದ್ಧ ಗಮನಾರ್ಹ ಪ್ರದರ್ಶನ ನೀಡಿದರು. ಈ ವೇಳೆಗೆ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಪದವಿ ಅಧ್ಯಯನವನ್ನೂ ನಡೆಸಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಭಾರತದ ಅಂತಾರಾಷ್ಟ್ರೀಯ ಕ್ರಿಕೆಟ್ ತಂಡದಲ್ಲಿ ಪ್ರವೇಶ ಪಡೆದ ಇವರು ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್

ವಿರುದ್ಧ ಎರಡನೆಯ ಟೆಸ್ಟ್‌ನಲ್ಲಿ(1996) ಮೊದಲ ಟೆಸ್ಟ್ ಪಂದ್ಯವನ್ನೂ ಸಿಂಗಪುರ ದಲ್ಲಿ ಶ್ರೀಲಂಕಾ ವಿರುದ್ಧ ಸಿಂಗರ್ ಕಪ್‌ಗಾಗಿ ನಡೆದ ಪಂದ್ಯದಲ್ಲಿ ಮೊದಲ ಏಕದಿನ ಪಂದ್ಯವನ್ನೂ (1995–96) ಆಡಿದರು. ತರುವಾಯ ಭಾರತ ತಂಡದ ಅನಿವಾರ್ಯ ಸದಸ್ಯರಾದರು. ಬಲಗೈ ಬ್ಯಾಟ್ಸ್‌ಮನ್ ಆದ ಇವರು ಬಲಗೈ ಆಫ್ ಸ್ಪಿನ್ ಬೌಲರ್ ಆಗಿಯೂ ಅತ್ಯುತ್ತಮ ವಿಕೆಟ್ ಕೀಪರ್ ಆಗಿಯೂ ಗಮನಸೆಳೆದಿದ್ದಾರೆ. ಟೆಸ್ಟೊಂದರ ಪ್ರತೀ ಇನ್ನಿಂಗ್ಸ್‌ನಲ್ಲಿ ಸೆಂಚುರಿ ಬಾರಿಸಿದ ಮೂವರು ಭಾರತೀಯರಲ್ಲಿ (ವಿಜಯ್ ಹಜಾರೆ ಹಾಗೂ ಸುನಿಲ್ ಗವಾಸ್ಕರ್ ಉಳಿದ ಇಬ್ಬರು) ಇವರೂ ಒಬ್ಬರು. ನ್ಯೂಜಿಲೆಂಡ್ ವಿರುದ್ಧ 1999ರಲ್ಲಿ ಇವರು ಈ ಗುಂಪಿಗೆ ಸೇರಿದರು.

ನಾಗಪುರದ ವೈದ್ಯೆ ವಿಜೇತಾ ಪೆಂಡಾರ್ಕರ್‌ರನ್ನು ವಿವಾಹವಾದ (2003) ಇವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರಿಗೆ ಹಲವಾರು ಪುರಸ್ಕಾರಗಳು ಸಂದಿವೆ. ಪದ್ಮಶ್ರೀ(2004), ವಿಸ್ಡನ್ ಕ್ರಿಕೆಟರ್(2004), ಐ.ಸಿ.ಸಿ.ಪ್ರಶಸ್ತಿ(2004), ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಮೊದಲಾದುವು ಇವುಗಳಲ್ಲಿ ಪ್ರಮುಖವಾದುವು. ಈಗ ಭಾರತ ಕ್ರಿಕೆಟ್ ತಂಡದ ಕ್ಯಾಪ್ಟನ್ ಆಗಿದ್ದಾರೆ. *

**ರೀತ್ ಅಬ್ರಹಾಂ:** 1962– . ಕರ್ನಾಟಕದ ಹೆಸರಾಂತ ಕ್ರೀಡಾಪಟು (ಅಥ್‌ಲೀಟ್). ಹೆಪ್ಟತ್ಲಾನ್ ಸೇರಿ ಒಟ್ಟು ಮೂರು ಸ್ಪರ್ಧೆಗಳಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಪಡೆದಿದ್ದಾರೆ. 1962 ಸೆಪ್ಟೆಂಬರ್ 28ರಂದು ಮೈಸೂರಿನಲ್ಲಿ ಜನಿಸಿದರು. ವಿದ್ಯಾಭ್ಯಾಸವನ್ನು ಮೈಸೂರಿನ ಕ್ರೈಸ್ಟ್ ದ ಕಿಂಗ್ ಮತ್ತು ಮಹಾರಾಣಿ ಕಲಾ ಕಾಲೇಜಿನಲ್ಲಿ ನಡೆಸಿದರು. ಶಾಲಾ ಮತ್ತು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಉತ್ತಮ ಕ್ರೀಡಾಪಟು ಆಗಿದ್ದರು. ರಾಷ್ಟ್ರೀಯ ಮಟ್ಟದಲ್ಲಿ ಹಿಸ್ಸಾರ್‌ನಲ್ಲಿ ನಡೆದ ಅಂತರ ರಾಜ್ಯ ಕಿರಿಯರ ಚಾಂಪಿಯನ್‌ಷಿಪ್‌ನ (1980) ಪೆಂಟಥ್ಲಾನ್‌ನಲ್ಲಿ ಚಿನ್ನದ ಪದಕ ಗೆದ್ದು ಬೆಳಕಿಗೆ ಬಂದರು. ಮರುವರ್ಷವೇ ಲಖನೌದಲ್ಲಿ ನಡೆದ ರಾಷ್ಟ್ರೀಯ ಮುಕ್ತ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದರು.

ರಾಷ್ಟ್ರೀಯ ಕ್ರೀಡೆ, ಮಾಸ್ಟರ್ಸ್ ಮೀಟ್, ಒಲಂಪಿಕ್ಸ್ ಮತ್ತು ವಿಶ್ವ ಅಥ್ಲೆಟಿಕ್ಸ್ ಸೇರಿ ರಾಷ್ಟ್ರ ಮಟ್ಟದಲ್ಲಿ ಒಟ್ಟು 16 ಚಿನ್ನ ಮತ್ತು 11 ಬೆಳ್ಳಿ ಪದಕಗಳನ್ನು ಇವರು ಗೆದ್ದರು. ಹೆಪ್ಟಥ್ಲಾನ್ 100ಮೀ ಅಡೆತಡೆ (100ಮೀ ಹರ್ಡಲ್ಸ್) ಮತ್ತು ಉದ್ದ ಜಿಗಿತದ ಚಾಂಪಿಯನ್ ಆಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಅಥ್ಲೆಟಿಕ್ ತಂಡದ ನಾಯಕರಾಗಿ ವಿವಿಧ ಘಟ್ಟಗಳಲ್ಲಿ ಸ್ಪರ್ಧಿಸಿದ್ದಾರೆ. ಮೊತ್ತಮೊದಲು ಇವರು 1982ರಲ್ಲಿ ದೆಹಲಿಯಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಹೆಪ್ಟಥ್ಲಾನ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ 6ನೆಯ ಸ್ಥಾನವನ್ನೂ 5056 ಅಂಕಗಳನ್ನೂ ಗಳಿಸಿದರು. 1985–86ರಲ್ಲಿ ನಡೆದ ಏಷ್ಯನ್ ಟ್ರಾಕ್ ಮತ್ತು ಫೀಲ್ಡ್ ಮೀಟ್‌ನಲ್ಲಿ ತಮ್ಮ ಸ್ಥಾನವನ್ನು ಅನುಕ್ರಮವಾಗಿ 5 ಮತ್ತು 4ನೆಯ ಸ್ಥಾನಗಳಿಗೆ ಏರಿಸಿದರು. ಇವರು ಕೋಲ್ಕತ್ತದಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾವೇಶದಲ್ಲಿ 5.88 ಮೀ ಉದ್ದ ನೆಗೆದು ಬೆಳ್ಳಿಪದಕ ಪಡೆದರು. ಅನಂತರ ಇಸ್ಲಾಮಾಬಾದ್‌ನಲ್ಲಿ ನಡೆದ 'ಸಾಫ್' ಗೇಮ್ಸ್‌ನಲ್ಲಿ ಹರ್ಡಲ್ಸ್ ಹಾಗೂ ಉದ್ದಜಿಗಿತದಲ್ಲಿ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡರು. 1989ರಲ್ಲಿ ದೆಹಲಿಯಲ್ಲಿ ನಡೆದ ಎ.ಪಿ.ಟಿ.ಯಲ್ಲಿ 6.15 ಮೀ ಉದ್ದನೆಗೆದು ಕಂಚಿನ ಪದಕ ಮತ್ತು ಹರ್ಡಲ್ಸ್‌ನಲ್ಲಿ 4ನೆಯ ಸ್ಥಾನಗಳಿಸಿದರು. 1984ರ ಒಲಂಪಿಕ್ಸ್ ರಿಲೇ ತಂಡದ ಸದಸ್ಯರಾಗಿದ್ದ ಇವರು ಬಹಳ ಕಾಲ ಭಾರತ ತಂಡದ 4 X 4000 ಮೀ ರಿಲೇಯಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿ ಕೊಂಡಿದ್ದರು.

ಇವರು ಬೆಂಗಳೂರಿನಲ್ಲಿ ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ ಉದ್ಯೋಗಿ. ಇವರ ಕ್ರೀಡಾಸಾಧನೆಯನ್ನು ಭಾರತ ಸರ್ಕಾರ ಗುರುತಿಸಿ ಅತ್ಯುನ್ನತ ಮನ್ನಣೆಯಾದ ಅರ್ಜುನ ಪ್ರಶಸ್ತಿಯನ್ನು 1997ರಲ್ಲಿ ನೀಡಿತು. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ದಸರ ಪ್ರಶಸ್ತಿ, ರೋಟರಿ ಪ್ರಶಸ್ತಿ ಮತ್ತು ಲಯನ್ಸ್ ಪ್ರಶಸ್ತಿಗಳನ್ನು ಇವರು ಪಡೆದಿದ್ದಾರೆ. **(ಎಸ್.ಆರ್.ಯು.)**

**ರೀವ್, ವಿಲಿಯಂ:** ಸು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡವನ್ನು ಇಂಗ್ಲಿಷ್ ಸಾಹಿತ್ಯ ಪ್ರಪಂಚಕ್ಕೆ ಪರಿಚಯ ಮಾಡಿಕೊಟ್ಟ ಪಾಶ್ಚಾತ್ಯ ವಿದ್ವಾಂಸರಲ್ಲೊಬ್ಬ. ಕ್ರೈಸ್ತಧರ್ಮ ಪ್ರಸಾರಕ್ಕೆಂದು ಭಾರತಕ್ಕೆ ಬಂದ. ಸು. 1827ರಲ್ಲಿ ಈತ ಮದರಾಸಿನ ಫೋರ್ಟ್ ಸೇಂಟ್ ಜಾರ್ಜ್ ಕಚೇರಿಯಲ್ಲಿ ಪ್ರಮುಖ ಭಾಷಾ ಪಂಡಿತನಾಗಿ ಕೆಲಸಮಾಡಿದ. ಕನ್ನಡ, ತಮಿಳು, ಒರಿಯ, ಬಂಗಾಲಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಒಳ್ಳೆಯ ಪಾಂಡಿತ್ಯ ಗಳಿಸಿಕೊಂಡಿದ್ದ ಈತ ಶಿಕ್ಷಣ ತಜ್ಞನೂ ಆಗಿದ್ದ. ಈತ ಮಾಡಿದ ಒಂದು ಮಹತ್ತ್ವಪೂರ್ಣವಾದ ಕೆಲಸವೆಂದರೆ ಮೊದಲ ಬಾರಿಗೆ ಕನ್ನಡ–ಇಂಗ್ಲಿಷ್ ನಿಘಂಟನ್ನು ರಚಿಸಿ ಪ್ರಕಟಿಸಿದ್ದು. 1817ರಲ್ಲಿ ಈ ನಿಘಂಟಿನ ರಚನೆಯನ್ನು ಆರಂಭಿಸಿದ ಈತ 1832ರಲ್ಲಿ ಅದನ್ನು ಮುಗಿಸಿ ಪ್ರಕಟಿಸಿದ. ಹಳೆಯ ಒಡಂಬಡಿಕೆಯ ಕನ್ನಡ ಅನುವಾದವನ್ನು ಮೋಸೆಯ ಮೊದಲನೆಯ ಕಾಂಡವೆಂಬ ಹೆಸರಿನಲ್ಲಿ ಪ್ರಕಟಿಸಿದ್ದಾನೆ. 1830ರಿಂದ 1839ರವರೆಗೆ ಬೈಬಲ್ ಭಾಷಾಂತರದಲ್ಲಿ ನಿರತನಾಗಿದ್ದ ಈತ 1839ರಲ್ಲಿ 1,200 ಪುಟಗಳಿಗೂ ಮೀರಿದ ಕನ್ನಡ ಬೈಬಲನ್ನು ಪ್ರಕಟಿಸಿದ. **(ಜಿ.ಎಸ್.ಪಿ.ಎಂ.)**

**ರುದ್ರಪ್ಪ, ಎಚ್.ಎಸ್.:** ರೈತ ಚಳವಳಿಯ ಧುರೀಣರು; ವಕೀಲರು. ವಿಧಾನಸಭೆಯ ಮಾಜಿ ಅಧ್ಯಕ್ಷರು (1954–56) ಇಪ್ಪತ್ತನೆಯ ಶತಮಾನದ ಪ್ರಾರಂಭ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಇವರು ಹೊಸ ಜಾಗೃತಿ ಯುಗದ ಪ್ರತಿನಿಧಿಯಾಗಿ ರೂಪುಗೊಂಡರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ವ್ಯಾಸಂಗದಲ್ಲಿ ಮುಂದಿದ್ದು ಶಿಸ್ತು, ಸಂಯಮಗಳನ್ನು ರೂಢಿಸಿಕೊಂಡರು. ಉನ್ನತ ಶಿಕ್ಷಣದತ್ತ ಮುಖಮಾಡಿದ ಇವರು ಬಿ.ಎಸ್ಸಿ. ಮತ್ತು ಎಲ್‌ಎಲ್.ಬಿ. ಪದವಿಗಳನ್ನು ಪಡೆದು ಆ ಕಾಲದಲ್ಲಿ ವಿರಳವಾಗಿದ್ದ ವಕೀಲ ವೃತ್ತಿಗೆ ಸೇರಿದರು.

ಸ್ವಾತಂತ್ರ್ಯ ಚಳವಳಿ ಪ್ರಖರವಾಗಿದ್ದ ಕಾಲದಲ್ಲಿ ಇವರು ಸಾರ್ವಜನಿಕ ಆಗುಹೋಗುಗಳಲ್ಲಿ ಭಾಗವಹಿಸಿದರು. 1930ರ ದಶಕದಲ್ಲಿ ಮಹತ್ವ ಪಡೆದಿದ್ದ ಜವಾಬ್ದಾರಿ ಸರ್ಕಾರದ ಬೇಡಿಕೆಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಇವರ ಮುಂದಾಳತ್ವ ಗುಣ ಕಾಂಗ್ರೆಸ್ ಪಕ್ಷದ ಹಿರಿಯರ ಗಮನ ಸೆಳೆಯಿತು. ಇದರ ಫಲವಾಗಿ ಇವರು 1942ರ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಚುನಾಯಿತರಾದರು. ಸ್ವತಃ ಕಾನೂನು ತಜ್ಞರಾಗಿದ್ದ ರುದ್ರಪ್ಪನವರು ಶಾಸನ ರಚನಾ ಕಲಾಪದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಿದರು. ಗಾಂಧೀಜಿಯವರ ತತ್ತ್ವಚಿಂತನೆಗಳಿಗೆ ಹಾಗೂ ಆಚರಣೆಗೆ ಮಾರುಹೋದ ಇವರು ಅಪ್ಪಟ ಖಾದಿಧಾರಿಯಾಗಿ ಗಾಂಧೀಜಿಯವರ ಅನುಯಾಯಿಯಾದರು.

ಸ್ವಾತಂತ್ರ್ಯಾನಂತರ ಇವರು ಕಾಂಗ್ರೆಸ್ ಪಕ್ಷದ ವತಿಯಿಂದ ವಿಧಾನಸಭೆಗೆ ಚುನಾಯಿತರಾದರು. ಪ್ರಬುದ್ಧ ರಾಜಕಾರಣಿಯಾಗಿ ರೂಪುಗೊಂಡಿದ್ದ ಇವರು ಉತ್ತಮ ಸಂಸದೀಯ ಪಟುವಾಗಿ ಹೆಸರು ಮಾಡಿದರು. 1954ರಲ್ಲಿ ಅಂದಿನ ವಿಧಾನಸಭಾ ಅಧ್ಯಕ್ಷರಾಗಿದ್ದ ಹಾಗೂ ಶಿವಮೊಗ್ಗ ಜಿಲ್ಲೆಯವರೇ ಆದ ಎಚ್. ಸಿದ್ದಯ್ಯನವರು ನಿಧನರಾದಾಗ ಇವರು ಆ ಸ್ಥಾನವನ್ನು ತುಂಬಿದರು. 1954 ಅಕ್ಟೋಬರ್ 13 ರಿಂದ 1956 ನವಂಬರ್ 1ರವರೆಗೂ ವಿಧಾನಸಭಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.ಅಂದಿನ ಹಳೆಯ ಮೈಸೂರು ರಾಜ್ಯ ಪ್ರಮುಖ ರಾಜಕೀಯ ತುಮುಲವನ್ನು ಕಂಡ ಈ ಅವಧಿಯಲ್ಲಿ ಇವರು ವಿಧಾನಸಭಾಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿದರು.

ವಿಶಾಲ ಮೈಸೂರು ರಾಜಕೀಯದಲ್ಲೂ ಇವರು ಪಕ್ಷ ಮತ್ತು ಸರ್ಕಾರಿ ಅಂಗಗಳಲ್ಲಿ ಸಕ್ರಿಯರಾಗಿದ್ದರು. ಅನಂತರ ರಾಜಕೀಯದಿಂದ ಹಿಂದೆ ಸರಿದರೂ ಸಾಮಾಜಿಕ ಕಳಕಳಿ ಇವರ ಸ್ವಭಾವಕ್ಕಂಟಿಬಂದ ಗುಣವಾಗಿತ್ತು. ಶಿವಮೊಗ್ಗ ಜಿಲ್ಲೆ ಮೊದಲಿನಿಂದಲೂ ರೈತ ಚಳವಳಿಗೆ ಹೆಸರಾದದ್ದು. ಸ್ವಾತಂತ್ರ್ಯಾನಂತರ ಈ ಜಿಲ್ಲೆಯಲ್ಲಿ ಕಿಸಾನ್ ಮಜ್ದೂರ್ ಪಕ್ಷವೆಂಬ ಸಂಘಟನೆ ಚುನಾವಣೆಗಳಲ್ಲಿ ಸ್ಪರ್ಧಿಸುವಷ್ಟು ಪ್ರಬಲವಾಗಿತ್ತು. ಇವರು ಗ್ರಾಮೀಣ ಜನರ ಆಶೋತ್ತರಗಳಿಗೆ ಸದಾ ಸ್ಪಂದಿಸುತ್ತಾ ಬಂದವರು. 1970–80ರ ದಶಕಗಳಲ್ಲಿ ಕ್ಷಾಮಡಾಮರಗಳಿಂದ ರೈತರ ಸ್ಥಿತಿ ಚಿಂತಾಜನಕ ವಾದಾಗ ರಾಜ್ಯದಲ್ಲಿ ರೈತ ಸಂಘಟನೆ ಹೊಸ ಸಾಮಾಜಿಕ ಶಕ್ತಿಯಾಗಿ ಬೆಳೆಯಿತು. ಈ ಸಂಘಟನೆಯಲ್ಲಿ ತೊಡಗಿಸಿಕೊಂಡ ಇವರು 1980ರ ದಶಕದಲ್ಲಿ ಅದರ ರಾಜ್ಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಇವರ ನೇತೃತ್ವದಲ್ಲಿ ರಾಜ್ಯದಲ್ಲಿ ರೈತ ಸಂಘಟನೆ ಪ್ರಬಲ ಸಾಮಾಜಿಕ ಶಕ್ತಿಯಾಯಿತು. ಅನಂತರದಲ್ಲಿ ರೈತಸಂಘ ನಂಜುಂಡಸ್ವಾಮಿ, ಸುಂದರೇಶ ಮೊದಲಾದವರ ಪ್ರಯತ್ನದಿಂದಾಗಿ ರಾಜಕೀಯ ಶಕ್ತಿಯಾಗಿ ಬೆಳೆಯಲು ಪ್ರಯತ್ನಿಸಿತು. **(ಡಿ.ಎಸ್.ಜಿ.;*)**

**ರುದ್ರಪ್ಪ ಹಂಜಿ:** 1911–80. ಕರ್ನಾಟಕದಲ್ಲಿ ರುದ್ರಹಂಜಿ ಎಂದೇ ಖ್ಯಾತರಾಗಿದ್ದ ಕಲಾವಿದ, ಶಿಲ್ಪಿ. ತಮ್ಮ ಸೃಜನಶೀಲ ಕೃತಿಗಳಿಗೆ ಹೆಸರಾದ ಇವರು ಮಧ್ಯಪ್ರದೇಶದ ಸರ್ಕಾರ ಹಾಗೂ ಗ್ವಾಲಿಯರ್ ರಾಜ ಮನೆತನದವರ ಪ್ರೋತ್ಸಾಹದಿಂದ ಮುಂದೆ ಬಂದರು. ಹುಟ್ಟಿದ್ದು ತರೀಕೆರೆಯಲ್ಲಿ. ತಂದೆ ಶಂಕರಪ್ಪ ಹಂಜಿ. ಇವರ ಪ್ರಾಥಮಿಕ ವಿದ್ಯಾಭ್ಯಾಸ ತರೀಕೆರೆಯಲ್ಲಿ ನಡೆಯಿತು. ಅನಂತರ ಮೈಸೂರಿನಲ್ಲಿ ವ್ಯಾಸಂಗ ಮುಂದುವರಿಸಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಟರ್ ಮಿಡಿಯೇಟ್ ಶಿಕ್ಷಣ ಮುಗಿಸಿದರು. ಕವಿ ಮನೋಭಾವದ ಗಂಭೀರ ಪ್ರವೃತ್ತಿಯ ಇವರು ಚಿಕ್ಕಂದಿನಿಂದಲೂ ಮಣ್ಣಿನಲ್ಲಿ ಮೂರ್ತಿಗಳನ್ನು ಮಾಡುವುದು ಹಾಗೂ ಚಿತ್ರ ಬರೆಯುವುದನ್ನು ರೂಢಿಸಿಕೊಂಡು ಬಂದರು. ಜೊತೆಗೆ ಕವನಗಳನ್ನೂ ರಚಿಸತೊಡಗಿದರು. ಆಗಿನ ಮೈಸೂರು ಮಹಾರಾಜರ ಕೃಪೆಯಿಂದ ಶಾಂತಿನಿಕೇತನಕ್ಕೆ ಹೋದರು (1927).

ಶಾಂತಿನಿಕೇತನದಲ್ಲಿ ರವೀಂದ್ರನಾಥ ಠಾಕೂರ್ ಹಾಗೂ ಅವನೀಂದ್ರನಾಥ ಠಾಕೂರ್ ಮೊದಲಾದವರಿಂದ ಪ್ರಭಾವಿತರಾಗಿ ನಂದಲಾಲ್ ಬೋಸ್ ಹಾಗೂ ರಾಮಕಿಂಕರ ಅವರಲ್ಲಿ ಶಿಷ್ಯವೃತ್ತಿ ಆರಂಭಿಸಿದರು. ಮಹಾರಾಜರ ವಿದ್ಯಾರ್ಥಿವೇತನದ ಕಾಲಾವಧಿ ಮುಗಿದರೂ 1936ರವರೆಗೆ ಶಾಂತಿನಿಕೇತನ ದಲ್ಲಿದ್ದರು. ಅನಂತರ 1944ರ ತನಕ ಬನಾರಸ್ ವಸಂತ ಮಹಲ್ ವಿದ್ಯಾಲಯದಲ್ಲಿ ಕಲಾಶಿಕ್ಷಕರಾಗಿ, ಗ್ವಾಲಿಯರ್ ಪದ್ಮ ವಿದ್ಯಾಲಯದಲ್ಲಿ ಕಲಾ ಆಚಾರ್ಯರಾಗಿ ಸೇವೆ ಸಲ್ಲಿಸಿದರು. 1972ರಲ್ಲಿ ರಾಜಮಾತೆ ವಿಜಯರಾಜೆ ಸಿಂಧ್ಯ ಅವರ ಅಪೇಕ್ಷೆ ಮೇರೆಗೆ ಗ್ವಾಲಿಯರ್‌ನ ಸಿಂಧಿಯಾ ಕನ್ಯಾ ವಿದ್ಯಾಲಯದಲ್ಲಿ ಹಿರಿಯ ಕಲಾಶಿಕ್ಷಕರಾಗಿ ದುಡಿದರು. 1976ರಲ್ಲಿ ಸೇವೆಯಿಂದ ನಿವೃತ್ತರಾದರು. ಅಲ್ಲಿಯೇ ಮತ್ತೆ ಮೂರು ವರ್ಷಗಳ ಕಾಲ ಮುಂದುವರಿದರು. ಇವರಿಗೆ 1979ರಲ್ಲಿ ಕೇಂದ್ರ ಸರ್ಕಾರ ಮೂರು ವರ್ಷಗಳ ಫೆಲೋಶಿಪ್ ನೀಡಿ ಗೌರವಿಸಿತು. ಇವರು 1980 ಫೆಬ್ರವರಿ 8ರಂದು ನಿಧನರಾದರು.

1940ರಲ್ಲಿ ಮಾಡ್ರನ್ ರಿವ್ಯೂ ಹಾಗೂ ಸ್ಟುಡಿಯೋ ಆಫ್ ಲಂಡನ್ ಪತ್ರಿಕೆಗಳು ಇವರ ಕಲಾಪ್ರತಿಭೆಯನ್ನು ಗುರುತಿಸಿ ಮೆಚ್ಚುಗೆ ಸೂಚಿಸಿದವು. 1943ರಲ್ಲಿ ದೆಹಲಿಯ ಏಷ್ಯ ಕಲಾಪ್ರದರ್ಶನದಲ್ಲಿ, 1949ರಲ್ಲಿ ಏಷ್ಯ ಆರ್ಟ್ಸ್ ಪ್ರದರ್ಶನದಲ್ಲಿ, 1958ರಲ್ಲಿ ಉಜ್ಜಯಿನಿ ಅಖಿಲ ಭಾರತೀಯ ಕಾಳಿದಾಸ ಚಿತ್ರ ಮತ್ತು ಮೂರ್ತಿ ಕಲಾಪ್ರದರ್ಶನಗಳಲ್ಲಿ ಇವರನ್ನು ಪುರಸ್ಕರಿಸಲಾಯಿತು. 1954ರಲ್ಲಿ ಅಖಿಲ ಭಾರತೀಯ ಪ್ರತಿನಿಧಿ ಮಂಡಲದ ಸದಸ್ಯರಾಗಿ ಚೀನ ಹಾಗೂ 1964ರಲ್ಲಿ ನೇಪಾಳಕ್ಕೆ ಹೋಗಿ ಬಂದರು. 1975ರಲ್ಲಿ ಮಧ್ಯಪ್ರದೇಶ ಕಲಾಪರಿಷತ್ ಇವರನ್ನು ಸನ್ಮಾನಿಸಿತು.

ಇವರ ಕಲಾಕೃತಿಗಳು ಶಾಂತಿನಿಕೇತನ, ಬನಾರಸ್, ವಸಂತ್ ಮಹಲ್ ವಿದ್ಯಾಲಯ, ಪಟಿಯಾಲ ಮಹಲ್, ಗ್ವಾಲಿಯರ್ ಪದ್ಮ ವಿದ್ಯಾಲಯ, ಸಿಂಧಿಯಾ ವಿದ್ಯಾಲಯಗಳಲ್ಲಿ ಇವೆ. ಇವರ ಜೀವನ ಹಾಗೂ ಕಲೆ ಕುರಿತಂತೆ ಮಧ್ಯಪ್ರದೇಶದ ಕಲಾಪರಿಷತ್ ವ್ಯಕ್ತಿ ಪರಿಚಯವನ್ನು ಹೊರತಂದಿದೆ. ಮಧ್ಯಪ್ರದೇಶ ಸರ್ಕಾರ ರುದ್ರ ಆರ್ಟ್ ಗ್ಯಾಲರಿ ಎಂಬ ಹೆಸರಿನಲ್ಲಿ ಇವರ ಎಲ್ಲ ಕಲಾಕೃತಿಗಳನ್ನು ಸಂಗ್ರಹಿಸಿದೆ.

ಸಿಮೆಂಟ್ ಹಾಗೂ ಪ್ಲಾಸ್ಟರ್‌ನಲ್ಲಿ ಮೂರ್ತಿಗಳನ್ನು, ಬಣ್ಣದ ರೇಖೆಯಲ್ಲಿ ಚಿತ್ರಗಳನ್ನು ಸೃಜಿಸಿರುವ ಇವರು ನಂದಲಾಲ್ ಬೋಸರ ಚಿತ್ರರಚನಾಶೈಲಿ, ರಾಮಕಿಂಕರರ ಮೂರ್ತಿರಚನಾ ಶೈಲಿಯನ್ನು ಅಳವಡಿಸಿ ಕೊಂಡು ತಮ್ಮದೇ ಆದ ವೈಶಿಷ್ಟ್ಯಪೂರ್ಣ ಶೈಲಿಯಲ್ಲಿ ಬೆಳಗಿದ್ದಾರೆ. ಇವರು ರಚಿಸಿದ ಮೂರ್ತಿಶಿಲ್ಪಗಳಲ್ಲಿ ಗ್ವಾಲಿಯರ್‌ನ ಪದ್ಮ ವಿದ್ಯಾಲಯದ ಅಂಗಳದಲ್ಲಿರುವ ಸರಸ್ವತಿ ವಿಗ್ರಹ, ಆರು ದಂತಗಳ ಆನೆ, ಬಾರಾದಾರಿ ಹೂದೋಟದಲ್ಲಿರುವ ಪಾವನ ಪರಿವಾರ, ತೀನ್ ಕನ್ಯಾ, ಭಗವಾನ್ ಬುದ್ಧ, ನಟರಾಜ, ಕುಲು ಶ್ರಮಿಕರು ಮುಂತಾದವು ಇವರ ಕಲಾಪ್ರೌಢಿಮೆಯ ದ್ಯೋತಕಗಳಾಗಿವೆ.

ಜೇಲಮನ ಗೀತೆ ಎಂಬ ಚಿತ್ರ ಇವರ ವರ್ಣಚಿತ್ರಗಳಲ್ಲಿ ಶ್ರೇಷ್ಠಮಟ್ಟದ್ದು. ಕಾಶ್ಮೀರದ ಇತಿಹಾಸ, ಜನಜೀವನ, ಋತುಮಾನವನ್ನು ಗಮನಿಸಿ ರೇಷ್ಮೆ ವಸ್ತ್ರದ ಮೇಲೆ 15 ಅಡಿ ಉದ್ದ 1 ಅಡಿ ಅಗಲದಲ್ಲಿ ರಚಿತವಾದ (1960) ಈ ಚಿತ್ರ ಗ್ವಾಲಿಯರ್ ಸಂಗ್ರಹಾಲಯದಲ್ಲಿದೆ. ಹಾಗೆಯೇ 24 ಅಡಿ ಎತ್ತರದ ಸರಸ್ವತಿ ವಿಗ್ರಹ ಒಂದು ಭವ್ಯ ಮೂರ್ತಿಯೂ ಶ್ರೇಷ್ಠ ಕಲಾಕೃತಿಯೂ ಆಗಿದೆ. ಪದ್ಮ ವಿದ್ಯಾಲಯದ ಅಂಗಳದಲ್ಲಿರುವ ಆರು ದಂತಗಳ ಆನೆಯ ಕಲಾಕೃತಿ ಸಿಮೆಂಟ್ ಕಾಂಕ್ರೀಟಿನಿಂದ ಮಾಡಿದ 14X16 ಅಡಿಗಳ ಬೃಹತ್ ರಚನೆ.

ಚೀನ ಹಾಗೂ ಜಪಾನ್ ದೇಶಗಳ ಕಲೆ, ಸಂಸ್ಕೃತಿ, ಜನಜೀವನ ಅರಿತಿದ್ದ ಇವರು ತಮ್ಮ ಮೂರ್ತಿಶಿಲ್ಪಗಳಲ್ಲಿ, ಚಿತ್ರಗಳಲ್ಲಿ ಅಲ್ಲಿನ ಕಲೆಯ ಅಂಶಗಳ ಮಿಶ್ರಣ ಮಾಡಿರುವುದನ್ನು ನಾವು ಕಾಣಬಹುದಾಗಿದೆ.

*

**ರುದ್ರಭಟ್ಟ:** ಸು. 1185. ಕನ್ನಡದ ವೈಷ್ಣವ ಕವಿಗಳಲ್ಲಿ ಮೊದಲನೆಯವನು. ಜಗನ್ನಾಥವಿಜಯ, ರಸಕಲಿಕೆ ಎಂಬ ಗ್ರಂಥಗಳ ಕರ್ತೃ. ನೇಮಿಚಂದ್ರನ ಸಮಕಾಲೀನನಾದ ಈತ ಹೊಯ್ಸಳ ವೀರಬಲ್ಲಾಳನಿಂದ (1173–1220) ಪೋಷಿತನಾಗಿದ್ದಂತೆ ತೋರುತ್ತದೆ. ಜಗನ್ನಾಥ ವಿಜಯವನ್ನು ಚಂದ್ರಮೌಳಿ ಪ್ರಮುಖ ನಿಖಿಲ ವಿದ್ವಜ್ಜನಂ ಮೆಚ್ಚೆ ಪೇಳ್ದೆಂ ಎಂದು ಕವಿ

ಹೇಳಿಕೊಂಡಿರುವುದರಿಂದ ಚಂದ್ರಮೌಳಿ ಎಂಬ ವಿದ್ವಾಂಸ ಈತನ ಕಾವ್ಯವನ್ನು ಮೆಚ್ಚಿಕೊಂಡಿರಬೇಕು. ಈ ಚಂದ್ರಮೌಳಿ ವೀರಬಲ್ಲಾಳನ ಮಂತ್ರಿಯಾಗಿದ್ದಂತೆ 1181ರ ಶ್ರವಣಬೆಳಗೊಳದ ಒಂದು ಶಾಸನದಿಂದ ತಿಳಿಯುತ್ತದೆ. ಕವಿಗೆ ಕೃತಿಶಾರದಾಂಬ ಚಂದ್ರಾತಪ, ಕವಿರಾಜ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಪೂರ್ವಕವಿಗಳಲ್ಲಿ ಪಂಪ, ಪೊನ್ನ, ಗಜಾಂಕುಶ, ಗುಣವರ್ಮ, ಕರ್ಣಪಾರ್ಯ ಮೊದಲಾದವರನ್ನು ಸ್ತುತಿಸಿದ್ದಾನೆ. ಇವನನ್ನು ದೇವಕವಿ, ಚೌಂಡರಸ ಮೊದಲಾದವರು ಸ್ಮರಿಸಿದ್ದಾರೆ.

ಜಗನ್ನಾಥವಿಜಯ 18 ಆಶ್ವಾಸಗಳುಳ್ಳ ಚಂಪೂಗ್ರಂಥ. ವಿಕ್ರಮಾರ್ಜುನ ವಿಜಯದಲ್ಲಿ ಪಂಪ ಅರಿಕೇಸರಿಯನ್ನು ಅರ್ಜುನನೊಡನೆ, ಸಾಹಸಭೀಮ ವಿಜಯದಲ್ಲಿ ರನ್ನ ಸತ್ಯಾಶ್ರಯನನ್ನು ಭೀಮನೊಡನೆ ಸಮೀಕರಿಸಿ ಕಾವ್ಯ ರಚಿಸಿದ ಹಾಗೆಯೇ ರುದ್ರಭಟ್ಟ ವೀರಬಲ್ಲಾಳನನ್ನು ಜಗನ್ನಾಥನೊಡನೆ ಸಮೀಕರಿಸಿ ಈ ಕಾವ್ಯ ರಚಿಸಿದ್ದಾನೆ. ಅರಿಕಾಮಧ್ವಂಸಿ, ರಾಜರಾಜನೆಂಬ ಚೋಳದೊರೆಯನ್ನು ಸಿಂಹಾಸನದಲ್ಲಿ ಪ್ರತಿಷ್ಠಿಸಿದ್ದರಿಂದ ರಾಜರಾಜ ಪ್ರತಿಷ್ಠಾನಿರತ, ಇವನ ರಾಣಿ ಉಮಾದೇವಿಯಾಗಿದ್ದರಿಂದ ಉಮಾಕಾಮಿ ನೀಜೀವಿತೇಶ-ಹೀಗೆ ಕವಿ ತನ್ನ ದೊರೆಯನ್ನು ಅಲ್ಲಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಜಗನ್ನಾಥನೊಂದಿಗೆ ಸಮೀಕರಿಸಿ ಹೇಳಿದ್ದಾನೆ. ಜಗನ್ನಾಥ ವಿಜಯವೆಂಬ ಹೆಸರಿನ ಸಾರ್ಥಕತೆ ಹೀಗೆ ಚಾರಿತ್ರಿಕ ದೃಷ್ಟಿಯಿಂದಲೂ ಮಹತ್ತ್ವದ್ದಾಗಿದೆ.

ಜಗನ್ನಾಥವಿಜಯ ಕೃಷ್ಣನ ಚರಿತ್ರೆಯನ್ನು ಹೇಳುವ ಕಾವ್ಯ. ಇದರಲ್ಲಿ ಕೃಷ್ಣನ ಜನನದಿಂದ ಮೊದಲಗೊಂಡು ಆತ ಸಾಲ್ವ ವಧೆಯನ್ನು ಮಾಡಿ ದ್ವಾರಕಾ ಪಟ್ಟಣದಲ್ಲಿ ನೆಲಸುವ ವರೆಗಿನ ಕಥೆ ಚಿತ್ರಿತವಾಗಿದೆ. ಈ ಕಾವ್ಯಕ್ಕೆ ಮೂಲ ಸಂಸ್ಕೃತ ವಿಷ್ಣುಪುರಾಣವಾದರೂ ಕವಿ ಬರಿಯ ಭಾಷಾಂತರಕಾರನಲ್ಲ. ಮೂಲ ಕಥೆಯ ನೀರಸಭಾಗಗಳನ್ನು ತನ್ನ ಪ್ರತಿಭೆಯಿಂದ ರಸಾರ್ದ್ರಗೊಳಿಸಿದ್ದಾನೆ. ವಿಷ್ಣುಪುರಾಣದ ಪಂಚಮಾಂಶದಲ್ಲಿ ಕೃಷ್ಣಜನನ, ಪೂತನಿ, ಶಕಟ, ಧೇನುಕ, ರಜಕ, ಕೇಶಿ, ಮುಷ್ಟಿಕ, ಚಾಣೂರ ಮೊದಲಾದ ರಾಕ್ಷಸರ ಸಂಹಾರ, ಕಾಳಿಂಗಮರ್ದನ, ಗೋವರ್ಧನೋದ್ಧರಣ, ರಾಸಕ್ರೀಡೆ, ಅಕ್ರೂರಾಗಮನ, ಕಾರ್ಮುಕೋತ್ಸವ, ಕಂಸಸಂಹಾರ, ಪಾರಿಜಾತಾಪಹರಣ, ನರಕಾಸುರವಧೆ, ಉಷಾ-ಅನಿರುದ್ಧ ವಿವಾಹ, ಬಾಣಾಸುರ ಪರಾಜಯ ಮೊದಲಾದ ಕಥೆಗಳು ವಿವರವಾಗಿ ನಿರೂಪಿತವಾಗಿದ್ದರೂ ಕೇವಲ ವಾರ್ತಾರೂಪವಾಗಿದೆ. ಇವುಗಳಲ್ಲಿ ಕಾವ್ಯಸೌಂದರ್ಯವಾಗಲಿ, ರಸಾನುಭೂತಿಯಾಗಲಿ, ಪ್ರತಿಭಾಸೃಷ್ಟಿಯಾಗಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಆದರೆ ಜಗನ್ನಾಥ ವಿಜಯದಲ್ಲಿ ಈ ಒಂದೊಂದು ಸನ್ನಿವೇಶವೂ ರಸವತ್ತಾಗಿ ನಿರೂಪಿತವಾಗಿದೆ. ಅದರಲ್ಲೂ ಕೃಷ್ಣನ ಬಾಲಲೀಲೆ, ಅಕ್ರೂರಾಗಮನ, ಪಾರಿಜಾತಾಪಹರಣ, ಗೋಪಿಯರು ಕೃಷ್ಣನ ಕೊಳಲಗಾನಕ್ಕೆ ಮನಸೋತು ಓಡಿಬರುವ ಪ್ರಸಂಗ- ಮೊದಲಾದವು ಕಾವ್ಯಮಯವಾಗಿವೆ. ಅಷ್ಟೇ ಅಲ್ಲ, ಮೂಲದೊಂದಿಗೆ ಈ ಕೃತಿಯನ್ನು ಹೋಲಿಸಿ ನೋಡಿದರೆ ರುದ್ರಭಟ್ಟನ ಪ್ರತಿಭಾದರ್ಶನ ಸಹೃದಯರಿಗಾಗುತ್ತದೆ.

ದೀರ್ಘವಾದ ಸಮಾಸಪದಗಳಿಂದಲೂ ಅಪೂರ್ವವಾದ ಸಂಸ್ಕೃತ ಶಬ್ದಗಳಿಂದಲೂ ಕೂಡಿರುವ ರುದ್ರಭಟ್ಟನ ಶೈಲಿ ಪ್ರೌಢವಾದುದು. ಆದರೆ ಕವಿ ಮನಸ್ಸು ಮಾಡಿದರೆ ತಿಳಿಯಾದ ಕನ್ನಡ ಪದಗಳನ್ನೇ ಬಳಸಿ ಚೆನ್ನಾಗಿ ಕಾವ್ಯ ಬರೆಯಬಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಸಾಕಷ್ಟು ನಿದರ್ಶನಗಳು ಕಾವ್ಯದಲ್ಲಿ ಕಾಣಸಿಗುತ್ತವೆ. ಕಾವ್ಯದ ತುಂಬ ಬರುವ ಹದಿನೆಂಟು ವರ್ಣನೆಗಳಲ್ಲಿಯೂ ಸಂದರ್ಭಗಳನ್ನು ಬೆಳೆಸಿ ನಿರೂಪಿಸುವುದರಲ್ಲಿಯೂ ಕವಿಗೆ ಸಾಕಷ್ಟು ಶಕ್ತಿಯಿರುವುದು ವಿದಿತವಾಗುತ್ತದೆ. ವಿಷ್ಣುಭಕ್ತಿ ಈ ಕಾವ್ಯದ ಮುಖ್ಯರಸ. ಇದಕ್ಕೆ ಅದ್ಭುತ ರಸ ಪೋಷಕವಾಗಿದೆ.

ರಸಕಲಿಕೆ ಅಲಂಕಾರ ಗ್ರಂಥವಾಗಿದ್ದು ಸಂಸ್ಕೃತದಲ್ಲಿ ರಚಿತವಾಗಿರುವಂತೆ ತಿಳಿದುಬರುತ್ತದೆ. ಸಾಳ್ವ ತನ್ನ ರಸರತ್ನಾಕರದಲ್ಲಿ ಈ ಗ್ರಂಥದ ಅನೇಕ ಭಾಗಗಳನ್ನು ತೆಗೆದುಕೊಂಡಿರುವುದಾಗಿ ಹೇಳಿದ್ದಾನೆ. ಸರಸ್ವತೀತಿಲಕಕಾರ ತನ್ನ ಗ್ರಂಥದ ವ್ಯಂಗ್ಯ ಪ್ರಕರಣದಲ್ಲಿ ಜಗನ್ನಾಥವಿಜಯದ ಪದ್ಯಗಳನ್ನು ಉದಾಹರಿಸಿ ವ್ಯಾಖ್ಯಾನ ಮಾಡಿದ್ದಾನೆ. ಶಬ್ದಾನುಶಾಸನಕಾರ ತನ್ನ ವ್ಯಾಕರಣ ಗ್ರಂಥದಲ್ಲಿ ಈ ಗ್ರಂಥದಿಂದ ಲಕ್ಷ್ಯಪದ್ಯಗಳನ್ನಾಗಿ ಉದಾಹರಿಸಿದ್ದಾನೆ. ಸೂಕ್ತಿಸುಧಾರ್ಣವ ಹಾಗೂ ಕಾವ್ಯಸಾರಗಳಲ್ಲಿಯೂ ಈ ಗ್ರಂಥದ ಅನೇಕ ಪದ್ಯಗಳು ದೊರೆಯುತ್ತವೆ.

ಸಂಸ್ಕೃತ ಪಂಡಿತನೊಬ್ಬ ಜಗನ್ನಾಥವಿಜಯದ ಮಂಗಳಶ್ಲೋಕಗಳಿಗೆ ಸಂಸ್ಕೃತದಲ್ಲಿ ಪಾಷಾಣವ್ಯಾಖ್ಯಾ ಎಂಬ ವ್ಯಾಖ್ಯಾನವೊಂದನ್ನು ಬರೆದಿದ್ದಾನೆ.

(ಪಿ.ವಿ.ಸಿ.)

**ರುದ್ರಮುನಿ:** ಸು. 12ನೆಯ ಶತಮಾನ. ವೀರಶೈವ ಧರ್ಮದ ಪುನರುಜ್ಜೀವನದ ಸಂದರ್ಭದಲ್ಲಿ ಮಹತ್ತರ ಪಾತ್ರವಹಿಸಿದ ಮಹಾಪುರುಷ. ರೇವಣಸಿದ್ಧರ ಔರಸ ಪುತ್ರ. ಇವನ ವಿದ್ಯಾಭ್ಯಾಸ ಕಲ್ಯಾಣ ಪಟ್ಟಣದಲ್ಲಿ ನಡೆಯಿತು. ಎಂಟನೆಯ ವರ್ಷದಲ್ಲಿ ವೀರಶೈವ ದೀಕ್ಷೆ ಪಡೆದ. ಪ್ರಭವಂಶೋದ್ಭವರಾದ ಗುರುಲಿಂಗಣಾಚಾರ್ಯರಿಂದ ಈತನಿಗೆ ಷಟ್ಸ್ಥಲ ಜ್ಞಾನೋದಯವಾಯಿತು. ಇವನಿಗೆ ಅನುಗ್ರಹ ದೀಕ್ಷೆಯೂ ಆಗಿತ್ತು. ಈ ದೀಕ್ಷೆಯ ಅನಂತರ ಈತ ರುದ್ರಮುನಿದೇವರು ಎಂಬ ಹೆಸರು ಪಡೆದ. ಇವನು ಚರಪಟ್ಟಾಧಿಕಾರಿಯೂ ಆಗಿದ್ದ. ಆಚಾರ್ಯ ರೇವಣಸಿದ್ಧರ ಆಜ್ಞೆಯ ಮೇರೆಗೆ ಅದನ್ನು ತ್ಯಜಿಸಿದ. ಚನ್ನಬಸವೇಶ್ವರನ ತರುವಾಯ ಶೂನ್ಯಸಿಂಹಾಸನದ ಅಧಿಕಾರವನ್ನು ವಹಿಸಿಕೊಂಡಿದ್ದ. ಈತ ಶ್ರೀಶೈಲದಲ್ಲಿ ಸಿಂಹಾಸನ ಮಠವನ್ನು ಕಟ್ಟಿಸಿದನೆಂದೂ ಕಾಲಜ್ಞಾನ (1202) ಎಂಬ ಗ್ರಂಥವನ್ನು ಬರೆದಿರುವನೆಂದೂ ತಿಳಿದುಬರುತ್ತದೆ. *

**ರುಮಾಲೆ ಚೆನ್ನಬಸವಯ್ಯ:** 1910-88. ಪ್ರಸಿದ್ಧ ಜಲವರ್ಣ ಹಾಗೂ ತೈಲವರ್ಣ ಚಿತ್ರಕಲಾವಿದರು. 1910 ಸೆಪ್ಟೆಂಬರ್ 6ರಂದು ದೊಡ್ಡಬಳ್ಳಾಪುರದಲ್ಲಿ ಜನಿಸಿದರು. ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಅಭಿರುಚಿ ಇದ್ದ ಇವರು ಬೆಂಗಳೂರಿನ ಕಲಾಮಂದಿರದಲ್ಲಿ (1929) ಮತ್ತು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಚಿತ್ರಕಲಾಭ್ಯಾಸ ಮಾಡಿದರು (1934-36). ಕಾಂಗ್ರೆಸ್ ಸೇವಾದಳದ ಸಂಘಟಕರೂ 'ತಾಯಿನಾಡು' ಪತ್ರಿಕೆಯ ಸಂಪಾದಕರೂ ಆಗಿದ್ದರು. ಮಹಾತ್ಮ ಗಾಂಧಿಯವರಿಂದ ಪ್ರಭಾವಿತರಾಗಿ ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿ ಒಂದು ವರ್ಷ ಸೆರೆಮನೆಯ ಕಠಿಣ ಶಿಕ್ಷೆ ಅನುಭವಿಸಿದರು (1939-40). ಹೀಗೆ ಸತ್ಯಾಗ್ರಹ, ಸೇವಾದಳ, ಪತ್ರಿಕೋದ್ಯಮ, ಸಮಾಜಸೇವೆ ಮೊದಲಾದ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುವುದರ ಜೊತೆಗೆ ಕಲಾಭ್ಯಾಸದಲ್ಲೂ ತೊಡಗಿ (1936-40) ಕಲಾವಿದರಾಗಿ ಹೆಚ್ಚು ಜನಪ್ರಿಯರಾದರು. ತಪಸ್ವಿಜೀ ಅವರು ಇವರ ಆಧ್ಯಾತ್ಮಿಕ ಗುರುಗಳು. 6ನೆಯ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಚೆನ್ನಬಸವಯ್ಯನವರ ಕಲಾಕೃತಿಗಳ ಪ್ರದರ್ಶನ ಏರ್ಪಾಡಾಗಿತ್ತು (1946).

ಪ್ರಕೃತಿಯನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಸಿಸಿ ತಮ್ಮ ಕಲಾಕೃತಿಗಳಲ್ಲಿ ವಿಧವಿಧವಾದ ಮರಗಿಡಬಳ್ಳಿ ಕೊಂಬೆ ರೆಂಬೆ ಹೂಗಳ ತೀಕ್ಷ್ಣ ವರ್ಣಗಳ ವೈಖರಿಯನ್ನು ಮೆರೆದಿದ್ದಾರೆ. ಮುಕ್ತ ಮನಸ್ಸು, ಸೂಕ್ಷ್ಮ ನಿರೀಕ್ಷಣೆ, ಸುತ್ತಲಿನ ಬದುಕು, ಪರಿಸರಗಳಿಗೆ ಸ್ಪಂದಿಸುವ ಹೃದಯ, ಕ್ರಿಯೆಯನ್ನು ಕಲಾತ್ಮಕತೆಗೊಳಿಸುವ ಬಯಕೆ, ಸೌಂದರ್ಯವನ್ನು ಕಾಣುವ ಪ್ರವೃತ್ತಿ ಅಭಿವ್ಯಕ್ತಗೊಂಡಾಗ ಹೇಗೆ ಸುಂದರವಾಗುತ್ತವೆಂಬುದು ಇವರ ಕೃತಿಯಲ್ಲಿ ಮೂಡಿಬಂದಿದೆ. ಇವರು ತಮ್ಮ ಕಲಾಕೃತಿಗಳನ್ನು

ಶಿವಬಾಲಯೋಗಿ, ಮಹಾತ್ಮಗಾಂಧಿ, ಹರ್ಡೀಕರ್ ಅವರಿಗೆ ಅರ್ಪಿಸಿದ್ದಾರೆ. ಇವರು ರಚಿಸಿರುವ ಶರಾವತಿಯ ಜಲಪಾತದ ದೃಶ್ಯ ಹಾಗೂ ವಿವಿಧ ಭಾಗದ ಚಿತ್ರಕಲಾಕೃತಿಗಳು ಪ್ರತ್ಯಕ್ಷವಾಗಿ ನೋಡಿದರೆ ಆಗುವಷ್ಟೇ ಅನಿರ್ವಚನೀಯ ರೋಮಾಂಚನವನ್ನು ಉಂಟುಮಾಡುತ್ತವೆ. ತಾವು ಕಂಡ ದೃಶ್ಯಗಳಿಗೆ ಯಥಾವತ್ತತೆಯ ಜೊತೆಗೆ ತಮ್ಮ ಕಲ್ಪನಾ ಚಾತುರ್ಯವನ್ನೂ ಮೇಳೈಸಿ ಕಲಾಕೃತಿಗೆ ಜೀವತುಂಬುವುದು ಇವರ ವೈಶಿಷ್ಟ್ಯ. ಕಲಾಕೃತಿಗಳಲ್ಲಿ ಸಂಯೋಗ, ಸಂವಿಧಾನ, ಸಮರಸತೆಗಳ ವಿನೂತನ ರೇಖೆ, ವರ್ಣ, ವಾತಾವರಣಗಳನ್ನು ನೈಜತೆಗೆ ತರುವ ಜಾಣ್ಮೆ ಇವರದು. ಇವರು ಬಳಸುವ ಜಲವರ್ಣಗಳೆಲ್ಲ ಶುದ್ಧ ವಿದೇಶೀಯ. ಇವರು ಕೊಡಗು, ಶರಾವತಿ, ಜೋಗಜಲಪಾತ ಮುಂತಾದೆಡೆಗೆ ಹೋಗಿ ಚಿತ್ರಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಶರಾವತಿ ಜಲಪಾತದ ಜಲವರ್ಣದ ನಿಸರ್ಗ ಕಲಾಕೃತಿ ಈಗ ದೆಹಲಿಯಲ್ಲಿರುವ ಅಮೆರಿಕನ್ ದೂತವಾಸದ ರೂಸ್‍ವೆಲ್ಟ್ ಭವನವನ್ನು ಅಲಂಕರಿಸಿದೆ. ಇವರ 'ರಿಕಲೆಕ್ಷನ್ಸ್' ಜಲವರ್ಣದ ಚಿತ್ರ ಕೋಲ್ಕತದಲ್ಲಿ ನಡೆದ ಕಲಾಪ್ರದರ್ಶನದಲ್ಲಿ ಬಹುಮಾನ ಪಡೆಯಿತು (1935). ಹಾಗೆಯೇ ಮೈಸೂರು ದಸರ ಪ್ರದರ್ಶನದಲ್ಲೂ ಶ್ರೇಷ್ಠ ಪ್ರಶಸ್ತಿ ಗಳಿಸಿಕೊಂಡಿತು(1962). ಇವರ ಕಲಾಕೃತಿಗಳು ಬೆಂಗಳೂರಿನ ವಸ್ತುಸಂಗ್ರಹಾಲಯ ಹಾಗೂ ಇತರೆಡೆಗಳಲ್ಲಿ ಪ್ರದರ್ಶನಗೊಂಡಿವೆ. ಖ್ಯಾತ ಕಲಾವಿದರಾದ ಎಸ್. ರೋರಿಕ್, ಮದರಾಸಿನ ಕಲಾಕಾಲೇಜಿನ ಪ್ರಾಂಶುಪಾಲರಾದ ಕೆ.ಸಿ.ಎಸ್. ಪಣಿಕರ್ ಮೊದಲಾದವರು ಇವರ ಕಲಾಕೃತಿಗಳನ್ನು ಮೆಚ್ಚಿಕೊಂಡಿದ್ದರು. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ರಾಜ್ಯಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1972), ಕೇಂದ್ರ ಸರ್ಕಾರದ ತಾಮ್ರಪತ್ರ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1983)ಗಳಿಂದ ಪುರಸ್ಕರಿಸಲಾಗಿದೆ. ಇವರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ನಾಮಕರಣಗೊಂಡಿದ್ದರು (1952). ತಮ್ಮ ಮನೆಯಲ್ಲಿಯೇ ಕಲಾಕೃತಿಗಳ ಗ್ಯಾಲರಿಯೊಂದನ್ನು ಸ್ಥಾಪಿಸಿಕೊಂಡಿದ್ದರು (1973). ಆದರ್ಶ ಕಲಾಪ್ರೇಮಿಯಾದ ಇವರು 1988ರ ಫೆಬ್ರವರಿಯಲ್ಲಿ ನಿಧನ ಹೊಂದಿದರು. ಇವರ ಆಸ್ತಿ ಹಾಗೂ ಕಲಾ ಗ್ಯಾಲರಿಯ ಮೇಲುಸ್ತುವಾರಿ ಟ್ರಸ್ಟ್ ಒಂದನ್ನು ತಪಸ್ವಿಜೀ ಮಹಾರಾಜರ ಹೆಸರಿನಲ್ಲಿ ಸ್ಥಾಪಿಸಲಾಗಿದೆ.



(ಆರ್.ಜಿ.ಆರ್.)

**ರೆಡ್ಡಿ, ಸಿ.ಆರ್.:** 1880–1951. ಶಿಕ್ಷಣತಜ್ಞ, ರಾಜಕೀಯ ಮುತ್ಸದ್ದಿ, ಪ್ರಬಂಧಕಾರ, ಆರ್ಥಿಕ ಚಿಂತಕ, ಉತ್ತಮ ವಾಗ್ಮಿ, ಕವಿ, ವಿಮರ್ಶಕ, ದೇಶೀಯತೆಯ ಸೊಗಡಿನ ಸಮಕಾಲೀನ ಪಾಶ್ಚಾತ್ಯ ಚಿಂತನೆಯ ಪ್ರವೃತ್ತಿಯುಳ್ಳ ಭಾರತೀಯ ವಿದ್ವಾಂಸರು. ಇವರ ಪೂರ್ಣಹೆಸರು ಕಟ್ಟಮಂಚಿ ರಾಮಲಿಂಗರೆಡ್ಡಿ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕಟ್ಟಮಂಚಿ ಎಂಬ ಹಳ್ಳಿಯಲ್ಲಿ ವಿದ್ವತ್ತಿಗೆ ಹೆಸರಾದ ಕುಟುಂಬದಲ್ಲಿ 1880 ಡಿಸೆಂಬರ್ 10ರಂದು ಜನಿಸಿದರು. ತಂದೆ ಸುಬ್ರಹ್ಮಣ್ಯ ರೆಡ್ಡಿ. ಕಟ್ಟಮಂಚಿ, ಚಿತ್ತೂರುಗಳಲ್ಲಿ ಪ್ರಾಥಮಿಕ, ಪ್ರೌಢ ವಿದ್ಯಾಭ್ಯಾಸವನ್ನೂ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನೂ (1901) ಪಡೆದು ಕೇಂಬ್ರಿಜ್‍ನ ಸೇಂಟ್‍ಜಾನ್ಸ್ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಮಾಡಿದರು. ಕೇಂಬ್ರಿಜ್‍ನಲ್ಲಿ ರೈಟ್ ಬಹುಮಾನ ಪಡೆದದ್ದಲ್ಲದೆ (1903) 'ದತ್ತಿ ವಿದ್ವಾಂಸ'ರೂ ಆದರು. ಅಲ್ಲಿಯ ಲಿಬರಲ್ ಕ್ಲಬ್ಬಿನ ಕಾರ್ಯದರ್ಶಿಯಾಗಿ ಅನಂತರ ಕೇಂಬ್ರಿಜ್ ಯೂನಿಯನ್ನಿನ ಉಪಾಧ್ಯಕ್ಷರಾಗಿದ್ದರು (1905). ಇದಕ್ಕೆ ಆಯ್ಕೆಗೊಂಡ ಭಾರತೀಯರಲ್ಲಿ ಇವರು ಮೊದಲಿಗರು. ಆ ಯೂನಿಯನ್ನಿನ ಸಭೆಗಳಿಗೆ ಲಾಲಾಲಜಪತರಾಯ್, ಗೋಖಲೆ ಮೊದಲಾದವರನ್ನು ಅತಿಥಿ ಭಾಷಣಕಾರರನ್ನಾಗಿ ಆಹ್ವಾನಿಸಿ ದೇಶಪ್ರೇಮ ತೋರಿದರು.

ಇಂಗ್ಲೆಂಡಿನಿಂದ ಭಾರತಕ್ಕೆ ಹಿಂದಿರುಗಿದ ಮೇಲೆ (1908) ಬರೋಡ ಗಾಯಕ್ವಾಡ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಅನಂತರ ವೈಸ್‍ಪ್ರಿನ್ಸಿಪಾಲರಾದರು. ಇಂಗ್ಲಿಷ್ ಸಾಹಿತ್ಯ, ಐರೋಪ್ಯ ಇತಿಹಾಸ, ಭಾರತೀಯ ಅರ್ಥಶಾಸ್ತ್ರ ಬೋಧಿಸುತ್ತಿದ್ದ ಇವರಿಂದ ವಿದ್ಯಾರ್ಥಿಗಳು ಪ್ರಭಾವಿತರಾದರು. ಬರೋಡ ಗಾಯಕ್ವಾಡರ ಒತ್ತಾಯದ ಮೇರೆಗೆ ಕೆನಡ, ಜಪಾನ್ ಮತ್ತು ಫಿಲಿಪ್ಪೈನ್ಸ್ ದ್ವೀಪಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಂಡಿದ್ದರು.

1909ರಲ್ಲಿ ವಿಶ್ವವಿದ್ಯಾನಿಲಯ ಸುಧಾರಣೆ ಕುರಿತು ಉಪನ್ಯಾಸ ನೀಡಲು ಮೈಸೂರಿಗೆ ಆಹ್ವಾನಿತರಾದ ಇವರನ್ನು ದಿವಾನ್ ಪಿ.ವಿ. ಮಾಧವರಾವ್ ಮೈಸೂರು ರಾಜ್ಯಸೇವೆಗೆ ಸೇರಲು ಒತ್ತಾಯಿಸಿದರು. ಬಳಿಕ ಇವರು ಮೈಸೂರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದರು. ಮೈಸೂರಿಗೆ ಬಂದ ಪ್ರಾರಂಭದ ಎರಡು ಮೂರು ವರ್ಷಗಳಲ್ಲೇ (1913) ಮೈಸೂರಿನ ಯುವರಾಜರ ಜೊತೆ ಯುರೋಪ್ ಪ್ರವಾಸ ಕೈಗೊಂಡು ಬೇರೆ ಬೇರೆ ದೇಶಗಳ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿದರು. ಪ್ರಾಚ್ಯ ಹಾಗೂ ಪಾಶ್ಚಾತ್ಯ ಶಿಕ್ಷಣ ವಿಧಾನಗಳ ಬಗೆಗೆ ಸರ್ಕಾರಕ್ಕೆ 'ಪ್ರತಿನಿಧಿವರದಿ' ನೀಡಿದರು. ಸರ್ಕಾರದ ಮನವಿಯ ಮೇರೆಗೆ ಮೈಸೂರ ವಿಶ್ವವಿದ್ಯಾನಿಲಯ ಸ್ಥಾಪಿಸಲು ಯೋಜನೆ ರೂಪಿಸಿ ವರದಿ ತಯಾರಿಸಿದರು (1915). ಬೋಧನೆ, ಸಂಶೋಧನೆ ಮತ್ತು ಕೆಲವು ಕಾಲೇಜುಗಳ ಸೇರ್ಪಡೆಯೊಂದಿಗೆ ಹೊಸ ವಿಶ್ವವಿದ್ಯಾನಿಲಯ ಮೈಸೂರಿನಲ್ಲಿ ಅಸ್ತಿತ್ವಕ್ಕೆ ಬಂತು (1916). ಅನಂತರ ಇವರು ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದರು (1916–17). ಮಹಾರಾಜ ಕಾಲೇಜಿನ ಕೆಲವು ಹಳೆಯ ವಿಭಾಗಗಳಿಗೆ ಹೊಸ ರೂಪಕೊಟ್ಟು ಭಾರತೀಯ ಭಾಷೆಗಳ ಹೊಸ ವಿಭಾಗಗಳನ್ನು ಪ್ರಾರಂಭಿಸಿದರು. 1918ರಲ್ಲಿ ಮೈಸೂರು ರಾಜ್ಯಕ್ಕೆ ಉನ್ನತ ಶಿಕ್ಷಣಾಧಿಕಾರಿಯಾಗಿ ನೇಮಕಗೊಂಡರು. ಇದೊಂದು ಅಪರೂಪದ ಗೌರವ. ಹೊಸ ಹುದ್ದೆಗೆ ಬಂದ ಕೂಡಲೇ ತುಕ್ಕು ಹಿಡಿದಿದ್ದ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು, ಶಾಲೆಯಿಲ್ಲದ ಪ್ರತಿಯೊಂದು ಹಳ್ಳಿಯಲ್ಲೂ ಶಾಲೆ ತೆರೆಯುವ ಕಾರ್ಯಕ್ರಮ ಹಮ್ಮಿಕೊಂಡರು. ಶಿಕ್ಷಣಕ್ಕೆ ಸರ್ಕಾರದ ಧನಸಹಾಯ ಹೆಚ್ಚಾಗುವಂತೆ ಮಾಡಿದರು. ಮಹಾತ್ಮಗಾಂಧೀಯವರ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಕ್ಕೆ ಮುಂಚೆಯೇ ಇವರು ಹರಿಜನರಿಗೆ ಎಲ್ಲ ಶಾಲೆಗಳಲ್ಲೂ ಪ್ರವೇಶಾವಕಾಶ ಕಲ್ಪಿಸಿದರು.

1921ರಲ್ಲಿ ಉನ್ನತ ಶಿಕ್ಷಣಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ ಮದರಾಸಿನಲ್ಲಿ ರಾಜಕೀಯ ಪ್ರವೇಶಿಸಿದರು. ಮದರಾಸಿನ ವಿಧಾನ ಪರಿಷತ್ತಿಗೆ

ಆಯ್ಕೆಗೊಂಡರು (1922). ಅನಂತರ ಆಂಧ್ರಮಹಾಸಭೆಯ ಆಧ್ಯಕ್ಷರಾದರು (1924). ಮೈಸೂರಿನಿಂದ ಮದರಾಸಿಗೆ ಹೋದ ಬಳಿಕ ಅಲ್ಲಿ 'ಯುನೈಟೆಡ್ ನ್ಯಾಷನಲ್ ಪಕ್ಷ' ರೂಪಿಸಿದರು.

1926ರಲ್ಲಿ ಹೊಸದಾಗಿ ಸ್ಥಾಪನೆಗೊಂಡ ಆಂಧ್ರವಿಶ್ವವಿದ್ಯಾಲಯಕ್ಕೆ ವ್ಯವಸ್ಥಾಪಕ ಕುಲಪತಿಯಾಗಿ ನೇಮಕಗೊಂಡು ಅನಂತರ ಕುಲಪತಿಗಳಾದರು (1930). ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳಲು ಕುಲಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದರು (1935). ಸ್ವಲ್ಪ ಸಮಯದ ಬಳಿಕ ಸ್ಥಳೀಯ ರಾಜಕೀಯಕ್ಕೆ ಇಳಿದು ಚಿತ್ತೂರು ಜಿಲ್ಲಾ ಮಂಡಳಿ ಅಧ್ಯಕ್ಷರಾಗಿ ಆಯ್ಕೆಗೊಂಡರು (1935). ಪುನಃ ಆಂಧ್ರವಿಶ್ವವಿದ್ಯಾಲಯದ ಕುಲಪತಿಯಾದರು (1936). ಅನಂತರ ಅಂತರ ವಿಶ್ವವಿದ್ಯಾಲಯ ಮಂಡಲಿ ಅಧ್ಯಕ್ಷರಾದರು (1937). ಮೈಸೂರು ರಾಜ್ಯದ ಶೈಕ್ಷಣಿಕ ಪರಿಸ್ಥಿತಿಯ ಬಗೆಗೆ ವರದಿ ಸಲ್ಲಿಸಲು ಪುನಃ ಇವರನ್ನು ಮೈಸೂರಿಗೆ ಆಹ್ವಾನಿಸಲಾಯಿತು (1949). ಅದೇ ವರ್ಷ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳನ್ನಾಗಿ (ಪ್ರೊ ಛಾನ್ಸಲರ್) ನೇಮಕ ಮಾಡಲಾಯಿತು.

ಇವರು ತೆಲುಗಿನಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಮುಸಲಮ್ಮ ಮರಣಮು 107 ಪದ್ಯಗಳಿರುವ ಕಥನಗೀತೆ. ಇದು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ (1899) ಆಂಧ್ರಭಾಷಾಭಿರಂಜನಿ ಸಂಘ ಏರ್ಪಡಿಸಿದ್ದ ಸ್ಪರ್ಧೆಗೆ ಬರೆದು ಬಹುಮಾನ ಗಳಿಸಿದ ಕೃತಿ. ಕೆರೆ ಒಡೆದು ಮಹಾಪೂರ ಬಂದಾಗ ಮುಸಲಮ್ಮ ಎಂಬ ಯುವತಿಯನ್ನು ಬಲಿಕೊಡುವುದೇ ಈ ಕೃತಿಯ ವಸ್ತು. ಅರ್ಥಶಾಸ್ತ್ರಮು ಎಂಬ ಕೃತಿಗೆ ಬರೆದ (1911) ಅರ್ಪಣೆಯ ಪದ್ಯಗಳು, 'ಕವಿತ್ವ ತತ್ತ್ವವಿಚಾರಮು'ವಿಗೆ (1913) ಬರೆದ ಪೀಠಿಕಾ ಪದ್ಯಗಳು, ದತ್ತುಪುತ್ರಿಯ ಮದುವೆ (1919) ಸಂದರ್ಭದಲ್ಲಿ ಬೀಳ್ಕೊಡುವಾಗ ಬರೆದ ಅಂಪಕಾಲು ಎಂಬ ಪದ್ಯಗಳು, ತೆಲುಗು ಮಹಾಭಾರತಕ್ಕೆ ಟೀಕುರೂಪದಲ್ಲಿ ಬರೆದ 'ಭಾರತ ಪ್ರಶಂಸ'- ಇವು ಇವರ ಕೆಲವು ಕವಿತೆಗಳು. ನವಯಾಮಿನಿ ಎಂಬ 30 ಪದ್ಯಗಳಿರುವ ಕೃತಿ ಬಿಲ್ಹಣ ಎಂಬ ಗುರುವಿಗೂ ಕಾಶ್ಮೀರದ ಯುವರಾಣಿ ಯಾಮಿನಿಗೂ ನಡೆದ ರಹಸ್ಯ ಪ್ರಣಯದ ಕಥೆ.

ಕವಿತ್ವ ತತ್ತ್ವವಿಚಾರಮು ಎಂಬ ಕೃತಿ ಆಧುನಿಕ ತೆಲುಗು ವಿಮರ್ಶೆಯಲ್ಲಿ ಒಂದು ಮೈಲುಗಲ್ಲು. ಪಾಶ್ಚಾತ್ಯ ವಿಮರ್ಶಾ ಪದ್ಧತಿಯಿಂದ ಪ್ರಭಾವಿತರಾಗಿ ಈ ವಿಮರ್ಶಾಕೃತಿಯನ್ನು ರಚಿಸಿದ್ದಾರೆ. 'ವ್ಯಾಸಮಂಜರಿ' ಬೇರೆಯವರ ಕೃತಿಗಳಿಗೆ ಬರೆದ ಪೀಠಿಕೆ ಅಥವಾ ಮುನ್ನುಡಿ ಹಾಗೂ ಭಾಷಣಗಳಿರುವ ಪ್ರಬಂಧ ಸಂಕಲನ.

ಭಾರತ ಅರ್ಥಶಾಸ್ತ್ರಮು ಕೃತಿ ಮೇಲುನೋಟಕ್ಕೆ ಭಾರತದ ಅರ್ಥಶಾಸ್ತ್ರವನ್ನು ಕುರಿತಾದ ಗ್ರಂಥವಾದರೂ ಭಾರತೀಯ ಸಮಾಜದ ಸಂಪ್ರದಾಯವನ್ನು ಕುರಿತ ವ್ಯಾಖ್ಯಾನ. 1909-12ರ ಅವಧಿಯಲ್ಲಿ ಮೈಸೂರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ನೀಡಿದ ಉಪನ್ಯಾಸಗಳೇ ಈ ಕೃತಿಗೆ ಮೂಲ. ಸಾಮಾಜಿಕ ವಿಜ್ಞಾನದ ಅಭಿವ್ಯಕ್ತಿ ಮಾಧ್ಯಮವಾಗಿ ತೆಲುಗನ್ನು ಬಳಸುವುದರಲ್ಲೂ ಇದು ಪ್ರಥಮ ಹಾಗೂ ಗಂಭೀರ ಪ್ರಯತ್ನ. ಹಿಂದು ಪದ್ಧತಿಯ ಯೋಚನಾ ಸರಣಿಯ ಆಧಾರದಿಂದ ಸಾಂಪ್ರದಾಯಿಕ ಭಾರತೀಯ ಸಮಾಜವನ್ನು ಕುರಿತ ವಿಮರ್ಶೆ ಇದರಲ್ಲಿದೆ.

ಇವರು ಕೇಂಬ್ರಿಜ್‌ನ ರೈಟ್ ಬಹುಮಾನ (1903), ಆಂಧ್ರ ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಲೆಟರ್ಸ್ ಗೌರವ (1938), ಬ್ರಿಟಿಷ್ ಸರ್ಕಾರದಿಂದ ಸರ್ ಬಿರುದು (1942) ಪಡೆದಿದ್ದರು.

ಇವರು 1951 ಫೆಬ್ರವರಿ 24ರಂದು ಮದರಾಸಿನಲ್ಲಿ ನಿಧನರಾದರು.

*

**ರೆಮ್ಮವ್ವೆ:** 12ನೆಯ ಶತಮಾನದ ಶಿವಶರಣೆ ಹಾಗೂ ವಚನಕಾರ್ತಿ. ಈಕೆ ಏಲೇರಿ ಎಂಬ ಊರಿನವಳೆಂದು ತಿಳಿದುಬರುತ್ತದೆ. ಏಲೇಶ್ವರಲಿಂಗ ಈಕೆಯ ಇಷ್ಟದೈವ. ಏಲೇಶ್ವರದ ಕೇತಯ್ಯ ಇವಳ ಗುರು. ಈಕೆ ಪತಿಯ ಮರಣದ ಅನಂತರ ತನ್ನ ಇಬ್ಬರು ಮಕ್ಕಳೊಂದಿಗೆ ಒಕ್ಕಲುತನ ಕೈಕೊಂಡಿದ್ದಳು. ತತ್ತ್ವನಿಷ್ಠಳಾಗಿ, ಭಾವಶುದ್ಧಿಯ ಕಾಯಕದಲ್ಲಿ ತೊಡಗಿದ್ದು ಕಾಯಕದಿಂದ ಗಳಿಸಿದ ಹಣವನ್ನು ಗುರುಲಿಂಗಜಂಗಮರ ಸೇವೆಗಾಗಿ ವಿನಿಯೋಗಿಸುತ್ತಿದ್ದಳು. ಕಾಯಕವೇ ಕೈಲಾಸವೆಂಬ ಬಸವೇಶ್ವರರ ತತ್ತ್ವ ಈಕೆಗೆ ಬಹಳ ಮೆಚ್ಚುಗೆಯಾಗಿತ್ತು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ ಎಂಬುದು ಇವಳ ವಚನಗಳ ಅಂಕಿತ. ಮಾಹೇಶ್ವರ ಸ್ಥಲದ ನಿಷ್ಠೆ ಇವಳ ವಚನಗಳಲ್ಲಿ ಕಂಡುಬರುತ್ತದೆ. (ಎಸ್.ಎಂ.)

**ರೇಚವ್ವೆ:** 12ನೆಯ ಶತಮಾನದ ಶಿವಶರಣೆ ಹಾಗೂ ವಚನಕಾರ್ತಿ. ಈಕೆ ಕಾಳಕೂಟಯ್ಯ ಎಂಬ ಶರಣನ ಪತ್ನಿಯಾಗಿ, ಆದರ್ಶಸತಿಯಾಗಿ ಬಾಳಿ ನಿಜಶಾಂತೇಶ್ವರಾ (ಅಥವಾ ಕುಂಭೇಶ್ವರಾ) ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿರುವಂತೆ ತಿಳಿಯುತ್ತದೆ. ಆದರೆ ಈಕೆಯ ಊರಾಗಲೀ ವಚನಸಂಖ್ಯೆಯಾಗಲೀ ತಿಳಿಯದು. ಇವಳ ಒಂದು ವಚನವನ್ನು ಇಲ್ಲಿ ಉದ್ಧರಿಸಬಹುದು:

ಬಂಜೆಯಾವಿಂಗೆ ಕ್ಷೀರವುಂಟೆ, ವ್ರತಹೀನನ ಬೆರೆಯಲುಂಟೆ, ನೀ ಬೆರೆದಡೂ ಬೆರೆ ನಾನೊಲ್ಲೆ ನಿಜಶಾಂತೇಶ್ವರಾ. (ಎಚ್.ಸಿ.ಎಸ್.)

**ರೇವಕನಿಮ್ಮಡಿ[1]:** ರಾಷ್ಟ್ರಕೂಟ ಚಕ್ರವರ್ತಿ 3ನೆಯ ಇಂದ್ರನ (914-29) ಪುತ್ರಿ. ಬೋಧನದ ಚಾಳುಕ್ಯ ವಂಶದ ಇಮ್ಮಡಿ ಅರಿಕೇಸರಿಯ ಪತ್ನಿ. ಅರಿಕೇಸರಿಯ ಮೊಮ್ಮಗ 3ನೆಯ ಅರಿಕೇಸರಿಯ ಪರಭಣಿತಾಮ್ರ ಶಾಸನದಲ್ಲಿ ಇಮ್ಮಡಿ ಅರಿಕೇಸರಿಯ ಪತ್ನಿ ಲೋಕಾಂಬಿಕೆ ಎಂದು ಹೇಳಲಾಗಿದೆ. ಲೋಕಾಂಬಿಕೆ ಎಂಬುದು ರೇವಕನಿಮ್ಮಡಿಯ ಇನ್ನೊಂದು ಹೆಸರಿರಬಹುದು ಅಥವಾ ಅವಳು ಇವಳ ಸವತಿಯಿರಬಹುದು. ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಈ ರಾಜ್ಞಿಯರ ಬಗ್ಗೆ ಏನನ್ನೂ ಹೇಳಿಲ್ಲ. (ಎಸ್.ಜಿ.)

**ರೇವಕನಿಮ್ಮಡಿ[2]:** ಗಂಗರಾಜ ಬೂತುಗನ ಪತ್ನಿ. ರಾಷ್ಟ್ರಕೂಟ 3ನೆಯ ಅಮೋಘವರ್ಷನ ಮಗಳು. ಬೂತುಗನಿಗೆ ಈಕೆಯ ಹೊಟ್ಟೆಯಲ್ಲಿ ಮರುಳನೆಂಬ ಪುತ್ರ ಜನಿಸಿದ. ರೇವಕನಿಮ್ಮಡಿಯ ಸಹೋದರ 3ನೆಯ ಕೃಷ್ಣನ ಪುತ್ರಿಯನ್ನು ಮರಳನಿಗೆ ಕೊಟ್ಟು, ಮರುಳನ ಪುತ್ರಿಯನ್ನು ಕೃಷ್ಣನ ಪುತ್ರನೊಬ್ಬನಿಗೆ ತಂದುಕೊಳ್ಳಲಾಗಿತ್ತು. ಈ ವಂಶದ ಕುಡಿಯೇ ರಾಷ್ಟ್ರಕೂಟ ನಾಲ್ಕನೆಯ ಇಂದ್ರ. ಹೀಗೆ ರಾಷ್ಟ್ರಕೂಟ ಹಾಗ ಗಂಗಮನೆತನಗಳಲ್ಲಿ ಒಂದು ಬಗೆಯ ವಿಶೇಷ ಬೆಸುಗೆಗೆ ಈ ರೇವಕನಿಮ್ಮಡಿ ಕಾರಣವಾದಳು. ಈಕೆ ಚಾಗವೆಡಂಗಿ ಎಂದೂ ಪ್ರಸಿದ್ಧಳಾಗಿದ್ದಳು. (ಎಸ್.ಜಿಆರ್.)

**ರೇವಣಸಿದ್ಧ:** ಸುಮಾರು ಹತ್ತು ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಪರಿಸರದಲ್ಲಿ ಜನ್ಮವೆತ್ತಿ ವಿಭೂತಿಪುರುಷರಾಗಿ ಮೆರೆದು ಸಮಾಜಸೇವೆ ಸಲ್ಲಿಸಿ ಬಯಲಾದರೆನ್ನಲಾದ ಪ್ರಸಿದ್ಧ ವೀರಶೈವ ಆಚಾರ್ಯರು. ಇವರ ಜೀವನದ ಚಾರಿತ್ರಿಕ ಅಂಶಗಳು ಪೌರಾಣಿಕಾಂಶಗಳೊಂದಿಗೆ ಬೆರೆತು ಮುಸುಕಾಗಿವೆ. ಸಂಪ್ರದಾಯದ ಪ್ರಕಾರ ರೇವಣಸಿದ್ಧರು ವೀರಶೈವ ಪಂಚಾಚಾರ್ಯರಲ್ಲೊಬ್ಬರು. ಸು. 12ನೆಯ ಶತಮಾನದ ಸಿರಿವಾಳ ಶಾಸನದಲ್ಲಿ ಸಿದ್ಧರೇವಣ, ರೇವಣಾಚಾರ್ಯರನ್ನು (ರೇಣುಕಾಚಾರ್ಯ) ಮಹಾನ್ ಸಿದ್ಧಪುರುಷರೆಂದು ಉಲ್ಲೇಖಿಸಲಾಗಿದೆ. ಇವರನ್ನು ಕೈಲಾಸದ ಪ್ರಮಥ ರೇಣುಕನೊಂದಿಗೆ ಹೋಲಿಸಲಾಗಿದೆ. ಬಸವಾದಿಗಳಿಗೆ ಸಮಕಾಲೀನರಾಗಿದ್ದು ಧರ್ಮಗುರುವೆನಿಸಿದ್ದ ರೇವಣಸಿದ್ಧರೇ ಈ ಸಿದ್ಧರೇವಣ. ಆದರೆ

ಸಿದ್ಧರಾಮ, ಆದಯ್ಯ ಇವರ ವಚನಗಳಲ್ಲಿ ರೇವಣಸಿದ್ಧರ ಉಲ್ಲೇಖವಿದೆ. ಶಿವತತ್ತ್ವರತ್ನಾಕರದ ಕರ್ತೃ ಬಸವಭೂಪಾಲನು ರೇವಣ ಸಿದ್ಧೇಶ್ವರರು ಶೃಂಗೇರಿಯ ಪ್ರಸಿದ್ಧ ಚಂದ್ರಮೌಳೀಶ್ವರ ಲಿಂಗದ ದಾತೃವೆಂದು ಉಲ್ಲೇಖಿಸಿದ್ದಾನೆ.

ಹರಿಹರಾದಿಗಳು ತಿಳಿಸುವಂತೆ ರಾಜೇಂದ್ರ ಚೋಳ ರೇವಣಸಿದ್ಧರ ಸಮಕಾಲೀನ. ಈತ ರೇವಣಸಿದ್ಧಗಿರಿಯಿಂದ ಶಿವರಾತ್ರಿ ಶಿವಯೋಗಿಗಳನ್ನು ಕರೆದೊಯ್ದು ಕಪಿಲಾ ನದೀ ತೀರದಲ್ಲಿ ಸುತ್ತೂರು ಮಠವನ್ನು ಸ್ಥಾಪಿಸಿದ. ಶಿವರಾತ್ರೀಶ್ವರರ ಗದ್ದುಗೆ ಇಲ್ಲಿರುವುದೇ ಇದಕ್ಕೆ ಸಾಕ್ಷಿ. ಮಾಯಾಕೋಲಾಹಲ ಮಲೆಯ ಮಾದೇಶ್ವರರೂ ಈ ಮಠದಲ್ಲಿ ಸ್ವಲ್ಪಕಾಲ ಇದ್ದರಂತೆ.

ಬಸವಣ್ಣನವರ ಅನಂತರ ವೀರಶೈವಧರ್ಮದ ಪುನರುಜ್ಜೀವನವನ್ನು ಕೈಗೊಳ್ಳಲು ಧಾರ್ಮಿಕ ಕ್ರಾಂತಿಯನ್ನು ಮುಂದುವರಿಸಲು ವೀರಶೈವರು ರುದ್ರಮುನಿಯನ್ನು ನಾಯಕನನ್ನಾಗಿ ಆರಿಸಿದರಂತೆ. ಆ ರುದ್ರಮುನಿ ರೇವಣಸಿದ್ಧರ ಔರಸಪುತ್ರ. ಕಲ್ಯಾಣದ ಬಿಲ್ವವನದ ಮಧ್ಯೆ ಈಗಲೂ ಇರುವ ರುದ್ರಮುನಿ ಗದ್ದುಗೆ ಇದಕ್ಕೆ ಜ್ವಲಂತ ಸಾಕ್ಷಿಯಾಗಿದೆ. ಕಲ್ಯಾಣದ ಸಮೀಪದಲ್ಲಿ ಸಿದ್ಧಗಿರಿಯೆಂದು ಹೆಸರಾದ ತಾಣ ಈ ರೇವಣಸಿದ್ಧರ ತಪೋಭೂಮಿ ಎನ್ನಲಾಗಿದೆ. ಇವಲ್ಲದೆ ರೇವಣಸಿದ್ಧ ಗದ್ದುಗೆ, ರುದ್ರಮುನಿ ಗದ್ದುಗೆ ಎಂಬ ತೋರು ಗದ್ದುಗೆಗಳು ಕರ್ನಾಟಕದಲ್ಲಿ ಅನೇಕವಿವೆ. ಬೆಂಗಳೂರು ತಾಲ್ಲೂಕಿನ ರಾಮನಗರದ ಬಳಿ ಇರುವ ರೇವಣಸಿದ್ಧೇಶ್ವರ ಬೆಟ್ಟ ಈ ಭಾಗದಲ್ಲಿ ಪವಿತ್ರ ಕ್ಷೇತ್ರವಾಗಿ ಇಂದಿಗೂ ಪ್ರಸಿದ್ಧವಿದೆ. ರೇವಣಸಿದ್ಧರಿಂದ ರಚಿತವಾದ ಗ್ರಂಥಗಳ ಬಗ್ಗೆಯಾಗಲೀ ಅವರ ವೈಯಕ್ತಿಕ ಜೀವನದ ಹೆಚ್ಚಿನ ವಿವರಗಳಾಗಲೀ ತಿಳಿದುಬಂದಿಲ್ಲ. **(ಜಿ.ಎಂ.)**

**ರೇಷ್ಮೆ ಉದ್ಯಮ:** ಕರ್ನಾಟಕದ ಮುಖ್ಯ ವಾಣಿಜ್ಯ ಉದ್ಯಮಗಳಲ್ಲೊಂದು. ಆದರೆ ಇದರ ಉಗಮವನ್ನು ಖಚಿತವಾಗಿ ನಿರ್ಧರಿಸಲಾಗಿಲ್ಲ. ಪ್ರಾಚೀನ ಮತ್ತು ಅರ್ವಾಚೀನ ತಂತ್ರಗಳ ಸಂಲಯನದಿಂದ ತಯಾರಾಗುತ್ತಿರುವ ಇಂದಿನ ರೇಷ್ಮೆಗೆ ಸು.3000 ವರ್ಷಗಳ ರೋಚಕ ಇತಿಹಾಸವಿದೆ. ಪ್ರ.ಶ.ಪೂ. ಸು. 2700 ಆಸುಪಾಸಿನಲ್ಲಿ ಚೀನದಲ್ಲಿ ರೇಷ್ಮೆಯ ಆವಿಷ್ಕಾರವಾಯಿತೆಂದು ಪ್ರತೀತಿ. ಈ ಕುರಿತಾದ ಚೀನೀ ಐತಿಹ್ಯದ ಪ್ರಕಾರ ಚೀನದ ಖ್ಯಾತ ಚಕ್ರವರ್ತಿ ಹುವಾಂಗ್ ತೈ ಎಂಬಾತನ ಪತ್ನಿ ಸಿ-ಲಿಂಗ್-ಚೈಗೆ ರೇಷ್ಮೆಹುಳುವನ್ನೂ ಅದು ಉತ್ಪಾದಿಸುವ ದಾರವನ್ನೂ ಆವಿಷ್ಕರಿಸಿದ ಖ್ಯಾತಿ ಸಲ್ಲುತ್ತದೆ. ರೇಷ್ಮೆಕೃಷಿ ಹಾಗೂ ರೇಷ್ಮೆ ವಸ್ತ್ರ ತಯಾರಿಕೆಯ ವಿಧಾನಗಳ ರೂವಾರಿಯೂ ಆಕೆಯೇ ಎನ್ನಲಾಗಿದೆ. 'ರೇಷ್ಮೆಹುಳುಗಳ ದೇವತೆ' ಎಂದು ಆಕೆಯನ್ನು ಚೀನೀಯರು ಪರಿಗಣಿಸುತ್ತಾರೆ. ಜಗತ್ತಿನಾದ್ಯಂತ ಬಲು ಬೇಡಿಕೆ ಇದ್ದ ಅಮೂಲ್ಯ ಪದಾರ್ಥವಾಗಿದ್ದರೂ ರೇಷ್ಮೆಕೃಷಿಯ ವಿಧಿವಿಧಾನಗಳನ್ನು ಚೀನೀಯರು ಅತಿ ಗೋಪ್ಯವಾಗಿರಿಸಿ ಸು. 3ನೆಯ ಶತಮಾನದವರೆಗೂ ರೇಷ್ಮೆಯ ಉತ್ಪಾದನೆ ಹಾಗೂ ಮಾರಾಟದ ಮೇಲೆ ಏಕಸ್ವಾಮ್ಯ ಸಾಧಿಸಿದ್ದರು. ಮೆಡಿಟರೇನಿಯನ್ ಸಾಗರದಿಂದ ಪೂರ್ವ ಚೀನದವರೆಗಿನ ಹೆದ್ದಾರಿಯನ್ನು ರೇಷ್ಮೆ ದಾರಿ (ಸಿಲ್ಕ್ ರೂಟ್) ಎಂದು ಹೆಸರಿಸಲು ಇದೇ ಕಾರಣ. ಆ ಶತಮಾನದ ಆದಿಭಾಗದಲ್ಲಿ ರೇಷ್ಮೆಕೃಷಿ ಕೊರಿಯದ ಮೂಲಕ ಜಪಾನನ್ನು ತಲುಪಿತು. ತದನಂತರ ಭಾರತದಲ್ಲಿ ಪ್ರವೇಶಿಸಿತು. ಚೀನಿ ರಾಜಕುಮಾರಿಯೊಬ್ಬಳು ಹಿಪ್ಪನೇರಿಳೆ ಅಥವಾ ಉಪ್ಪುನೇರಳೆ (ಮಲ್‌ಬೆರಿ) ಗಿಡದ ಬೀಜ ಮತ್ತು ರೇಷ್ಮೆಹುಳುವಿನ ಮೊಟ್ಟೆಯನ್ನು ತನ್ನ ಮುಂಡಾಸಿನಲ್ಲಿ ಅಡಗಿಸಿ ಭಾರತಕ್ಕೆ ಒಯ್ದಳು ಎಂದೂ 522ರಲ್ಲಿ ಪರ್ಷಿಯನ್ ಸನ್ಯಾಸಿಗಳು ಮೊಟ್ಟೆಗಳನ್ನೂ ರೇಷ್ಮೆಕೃಷಿ ರಹಸ್ಯವನ್ನೂ ರೋಮನ್ ಸಾಮ್ರಾಜ್ಯಕ್ಕೆ ಚೀನದಿಂದ ಕದ್ದೊಯ್ದರು ಎಂದೂ ಪ್ರತೀತಿ. ತದನಂತರ ಯುರೋಪಿನ ಅನೇಕ ರಾಷ್ಟ್ರಗಳಿಗೆ ಹರಡಿದ ರೇಷ್ಮೆಕೃಷಿಯ ವಿಧಿವಿಧಾನಗಳಲ್ಲಿ ಅನೇಕ ಸುಧಾರಣೆಗಳಾಗಿವೆ.

ಭಾರತದ ರೇಷ್ಮೆ ಕೃಷಿಯ ಬಗ್ಗೆ ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಉಲ್ಲೇಖಗಳು ದೊರಕುತ್ತವೆ. ಪೌರಾಣಿಕ ಕಥೆಯೊಂದರಲ್ಲಿ ಕ್ರಿ.ಪೂ. ಸು. 140ರಷ್ಟು ಹಿಂದೆ ರೇಷ್ಮೆ ಹುಳುವಿನ ಮೊಟ್ಟೆ ಮತ್ತು ಹಿಪ್ಪುನೇರಳೆ ಬೀಜಗಳನ್ನು ಖೋಟಾನ್‌ಗೆ (ದಕ್ಷಿಣ ಚೀನದ ಒಂದು ಪ್ರಾಂತ) ಸಾಗಿಸಿದುದರ ಉಲ್ಲೇಖವಿದೆ. ಬ್ರಹ್ಮಪುತ್ರಾ ಮತ್ತು ಗಂಗಾ ನದೀ ಬಯಲುಗಳಲ್ಲಿ ಮೊದಲು ರೇಷ್ಮೆಕೃಷಿ ನಡೆಯಿತೆಂದೂ ತರುವಾಯ ಪಶ್ಚಿಮ ಪರ್ಷಿಯ, ಮಧ್ಯ ಏಷ್ಯಗಳಿಗೆ ಹರಡಿತೆಂದೂ ಹೇಳಲಾಗುತ್ತದೆ.

ಕರ್ನಾಟಕದ ರಾಜವಂಶಗಳು ರೇಷ್ಮೆಯನ್ನು ವಿಶೇಷವಾಗಿ ಬಳಸುತ್ತಿದ್ದವೆಂಬುದನ್ನು ಗಮನಿಸಿದಾಗ ಅದರ ಬಳಕೆ ಶತಮಾನಗಳಷ್ಟು ಹಿಂದಿನದೆಂಬುದು ವೇದ್ಯವಾಗುತ್ತದೆ. ಈ ಕೈಗಾರಿಕೆಯನ್ನು ಕ್ರಮಬದ್ಧವಾಗಿ ಕರ್ನಾಟಕದಲ್ಲಿ ಪ್ರಾರಂಭಿಸಿದವರೆಂದರೆ ಹೈದರ್ ಅಲಿ ಮತ್ತು ಆತನ ಪುತ್ರ ಟಿಪ್ಪುಸುಲ್ತಾನ್ ಎಂಬುದು ದಾಖಲೆಗಳಿಂದ ತಿಳಿಯುತ್ತದೆ. ಇವರ ಕಾಲದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿದ್ದ ಈ ಉದ್ಯಮ ಕಾಲಾನುಕ್ರಮದಲ್ಲಿ

ಚಂದ್ರಿಕೆಯಲ್ಲಿ ರೇಷ್ಮೆಹುಳು ಸಾಕಣೆ

ಇಳಿಮುಖವಾಯಿತು. ಅನಂತರ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಸಕ್ರಿಯ ಪ್ರಯತ್ನದ ಫಲವಾಗಿ 1914ರಲ್ಲಿ ರೇಷ್ಮೆಕೃಷಿ ಇಲಾಖೆ ಕಾರ್ಯೋನ್ಮುಖವಾಯಿತು. ಕೃಷಿಪ್ರಧಾನವಾದ ಈ ಉದ್ಯಮ ನಿರುದ್ಯೋಗ ನಿವಾರಣೆಯ ಹಾದಿಯಲ್ಲಿ ಪ್ರಮುಖ ಪಾತ್ರ ವಹಿಸಿದೆಯಲ್ಲದೆ, ಗ್ರಾಮಾಂತರ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ದೇಶಕ್ಕೆ ವಿದೇಶಿ ವಿನಿಮಯವನ್ನು ಗಳಿಸಿಕೊಡುತ್ತಿದೆ. ಇಲ್ಲಿ ಪ್ರಚಲಿತವಾಗಿರುವ ಮಲ್ಟಿವೋಲ್ಟೈನ್ ತಳಿಗಳಿಂದ ವರ್ಷದಲ್ಲಿ ಹಲವು ಬೆಳೆಗಳನ್ನು ಪಡೆಯಬಹುದು. ಈ ತಳಿಗೆ ಹಲವಾರು ವಿಶಿಷ್ಟ ಗುಣಗಳಿವೆ; ಅದ್ವಿತೀಯವಾದ ಹೊಳಪು, ನಯ, ನಾಜೂಕು, ಯಾವ ಬಣ್ಣಕ್ಕೇ ಆಗಲಿ ಹೊಂದಿಕೊಳ್ಳುವ ಸ್ವಭಾವ ಹಾಗೂ ರೋಗ ನಿರೋಧಕ ಸಾಮರ್ಥ್ಯ, ಇಷ್ಟೆಲ್ಲ ಒಳ್ಳೆಯ ಗುಣಗಳಿದ್ದರೂ ರೇಷ್ಮೆಯ ಇಳುವರಿ ಒಂದು ಗೂಡಿಗೆ ಕೇವಲ 200ರಿಂದ 300 ಗಜಗಳು ಮಾತ್ರ. ರೇಷ್ಮೆ ಬಿಚ್ಚಾಣಿಕೆಯಲ್ಲಿಯೂ ಹೆಚ್ಚು ದಾರ ನಷ್ಟವಾಗುತ್ತದೆ. ಇದರಿಂದಾಗಿ ಸ್ಥಳೀಯ ತಳಿಗಳನ್ನು ಅಭಿವೃದ್ಧಿಪಡಿಸಿ, ಹೆಚ್ಚು ಪ್ರಮಾಣದಲ್ಲಿ ರೇಷ್ಮೆ ದಾರವನ್ನು ಪಡೆಯಬೇಕೆಂಬ ಪ್ರಯತ್ನ ನಡೆದು ಮಿಶ್ರತಳಿಗಳ ಉತ್ಪಾದನೆಗೆ ನಾಂದಿಯಾಯಿತು. ರೋಗರಹಿತವಾದ ಬಿತ್ತನೆ ಮೊಟ್ಟೆಗಳನ್ನು ಪ್ರತ್ಯೇಕಿಸಲು ಪ್ರತಿ ತಾಯಿಚಿಟ್ಟೆಯನ್ನು ಅರೆದು ಸೂಕ್ಷ್ಮದರ್ಶಕದಲ್ಲಿ ಪ್ಯಾಶ್ಚರ್ ಸಿಸ್ಟಮ್ ಮಾದರಿಯ ಮೊಟ್ಟೆ ಉತ್ಪಾದನೆಯನ್ನು ತೋರಿಸಿಕೊಟ್ಟವ ಇಟಲಿ

ದೇಶದಿಂದ 1913ರಲ್ಲಿ ಭಾರತಕ್ಕೆ ಆಗಮಿಸಿದ್ದ ರೇಷ್ಮೆ ಕೃಷಿ ಪರಿಣತರಾದ ಸೈನರ್ ವಾಷಿಂಗ್ಟನ್ ಮಾರಿ ಎಂಬಾತ.

ಮಿಶ್ರತಳಿ ಉತ್ಪಾದನೆಗೆ ಬೇಕಾದ ಬಿತ್ತನೆಯನ್ನು ಅಂದರೆ– ಗಂಡು ಚಿಟ್ಟೆಯನ್ನು–ಜಪಾನ್, ಇಟಲಿ, ಚೀನಗಳಲ್ಲಿ ರೂಢಿಯಲ್ಲಿದ್ದ ಉತ್ಕೃಷ್ಟವಾದ ಯುನಿವೋಲ್ಟೈನ್ ಮತ್ತು ಬೈವೋಲ್ಟೈನ್ ತಳಿಗಳನ್ನು ಆಮದು ಮಾಡಿಕೊಳ್ಳಲಾಯಿತು. ಈ ಕಾರ್ಯಕ್ಕಾಗಿ 1919ರಲ್ಲಿ ಜಪಾನ್ ದೇಶದ ಯೋನಿಮುರ ಎಂಬ ತಜ್ಞರ ಸೇವೆಯನ್ನು ಪಡೆಯಲಾಯಿತು. ಆಮದು ಮಾಡಿಕೊಂಡ ಯೂನಿವೋಲ್ಟೈನ್ ಮತ್ತು ಬೈವೋಲ್ಟೈನ್ ತಳಿಗಳಿಂದ ಉತ್ಪತ್ತಿಯಾದ ಗೂಡುಗಳಲ್ಲಿ ಉತ್ತಮ ದರ್ಜೆಯ ರೇಷ್ಮೆದಾರ ಹೆಚ್ಚು ಪ್ರಮಾಣದಲ್ಲಿದೆ. ಇಂಥ ಗೂಡುಗಳಿಂದ ಬರುವ ಗಂಡು ಚಿಟ್ಟೆಯನ್ನು ಸ್ಥಳೀಯ ಮಲ್ಟಿವೋಲ್ಟೈನ್ ಗೂಡಿನಿಂದ ಬರುವ ಹೆಣ್ಣು ಚಿಟ್ಟೆಯೊಂದಿಗೆ ಸಂಕರ ಮಾಡಲಾಯಿತು. ಇದರಿಂದ ಉತ್ಪಾದನೆಗೊಂಡ ರೇಷ್ಮೆಗೂಡು ಗಣನೀಯವಾಗಿ ಉತ್ತಮ ದರ್ಜೆಯದಾಗಿತ್ತು. ಇದರಿಂದಾಗಿ ಒಳ್ಳೆಯ ಧಾರಣೆಯೂ ಸಿಕ್ಕಿತಲ್ಲದೆ ರೇಷ್ಮೆ ಬಿಚ್ಚುವವರಿಗೆ ಹಿಂದೆ ಇದ್ದ ನಷ್ಟ, ತೊಡಕುಗಳು ಇಲ್ಲವಾದವು; ಮಿಶ್ರ ತಳಿಗಳನ್ನು ಸಾಕುವುದು ಜನಾದರಣೀಯವಾಯಿತು.

**ಮಿಶ್ರತಳಿಗೆ ಬೇಕಾದ ವಿದೇಶಿ ಮತ್ತು ಸ್ವದೇಶಿ ತಳಿಗಳನ್ನು ಬಿತ್ತನೆಗೆ ಒದಗಿಸಿಕೊಳ್ಳುವ ಕ್ರಮ :** ಈ ಎರಡೂ ತಳಿಗಳ ಮೂಲ ಸಂತತಿಯನ್ನು ಸದೃಢವಾಗಿಯೂ ರೋಗರಹಿತವಾಗಿಯೂ ಬೆಳೆಸಬೇಕಾದುದು ಅಗತ್ಯ. ಇದಕ್ಕಾಗಿ ವಿಶೇಷ ಸೌಲಭ್ಯಗಳು ಬೇಕು. ವೈಜ್ಞಾನಿಕ ರೀತಿಯಲ್ಲಿ ಯೋಗ್ಯ ಮತ್ತು ಹೊಂದಿಕೊಳ್ಳುವ ಹವಾಗುಣದಲ್ಲಿ ಪಾಲನೆಮಾಡಿ ಈ ಮೂಲ ತಳಿಗಳನ್ನು ವೃದ್ಧಿಪಡಿಸಬೇಕಾದುದು ಅಗತ್ಯ ಮತ್ತು ಅನಿವಾರ್ಯ.

ವಿದೇಶಿ ತಳಿ, ಅಭಿವೃದ್ಧಿಗಾಗಿ ಬೆಟ್ಟದ ಮೇಲೆ ಸಾಕಣೆ (ಹಿಲ್ ಅಮಿಲಿಯೋರೇಷನ್); ಈ ಕ್ರಮದಲ್ಲಿ ಪಾಲನೆಗೊಂಡ ವಿದೇಶಿ ತಳಿಗಳು ತಮ್ಮ ಮೂಲ ಸ್ವಭಾವದಂತೆಯೇ ವರ್ತಿಸುವುವು. ಅವುಗಳ ಮೂಲ ಸ್ಥಳದ ಹವಾಗುಣವನ್ನು ಬಹಳ ಹೋಲುವ ವಾತಾವರಣ ಬೆಟ್ಟ ಪ್ರದೇಶದಲ್ಲಿರುವುದನ್ನು ಮನಗಂಡ ಕರ್ನಾಟಕ ಸರ್ಕಾರ ಸಮುದ್ರಮಟ್ಟ ದಿಂದ ಸು. 1,400 ಮೀ ಎತ್ತರವಿರುವ ಬಿಳಿಗಿರಿರಂಗನಬೆಟ್ಟದಲ್ಲಿ ಒಂದು ಕೃಷಿ ಕ್ಷೇತ್ರವನ್ನು ಪ್ರಾರಂಭಿಸಿತು. ಇಲ್ಲಿ ಸಾಕಲಾಗುತ್ತಿರುವ ತಳಿಗಳನ್ನು $P_3$ ಪೀಳಿಗೆಯವು ಎಂದು ಕರೆಯಲಾಗುತ್ತದೆ. ಇಲ್ಲಿ ಬೆಳೆದ ಗೂಡುಗಳಿಂದ ಬರುವ ಚಿಟ್ಟೆಗಳಿಂದ ಬರುವ ಚಿಟ್ಟೆಗಳನ್ನು ಪರಸ್ಪರ ಸಂಕರ ಮಾಡಿ ಪಡೆಯುವ ಮೊಟ್ಟೆಗಳನ್ನು ಬಯಲು ಪ್ರದೇಶದ ಲ್ಲಿರುವ ಸರ್ಕಾರಿ ಸ್ವಾಮ್ಯದ ಕೃಷಿಕ್ಷೇತ್ರಗಳಲ್ಲಿ ಬಹಳ ಎಚ್ಚರಿಕೆಯಿಂದ ತಾಂತ್ರಿಕ ವಿಧಿವಿಧಾನಗಳನ್ನು ಅನುಸರಿಸಿ ಸ್ಥಳೀಯ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಸಾಕಣೆ ಮಾಡಲಾಗುವುದು. ಈ ಹುಳುಗಳು ಕಟ್ಟಿದ ಗೂಡುಗಳಿಂದ ಹೊರಬರುವ ಚಿಟ್ಟೆಗಳನ್ನು ಸಂಕರಣಮಾಡಿ ಪಡೆದ ಮೊಟ್ಟೆಗಳಿಗೆ $P_2$ ಪೀಳಿಗೆಯವು ಎಂದು ಹೆಸರು. ಈ ಮೊಟ್ಟೆಗಳನ್ನು ಇಲಾಖೆಯ ವತಿಯಿಂದ ತರಬೇತಿ ಪಡೆದ, ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿರುವ ಆಯ್ಕೆ ಮಾಡಲ್ಪಟ್ಟ ರೈತರಿಗೆ ಹಂಚಲಾಗುವುದು. ಈ ರೈತರು ಸಾಕುವ ಹುಳುಗಳಿಂದ ಕಟ್ಟಲ್ಪಟ್ಟ ಗೂಡುಗಳು $P_1$ ಪೀಳಿಗೆಯವು ಎನಿಸುತ್ತದೆ. ಈ ಗೂಡುಗಳನ್ನೇ ಮಿಶ್ರತಳಿ ತಯಾರಿಕೆಯಲ್ಲಿ ಗಂಡು ಚಿಟ್ಟೆಗಾಗಿ ಉಪಯೋಗಿಸಲಾಗುತ್ತಿದೆ. ಮಿಶ್ರತಳಿ ಉತ್ಪಾದನೆಗೆ ಉಪಯೋಗಿಸುವ ವಿದೇಶಿ ತಳಿಯ ಬಣ್ಣ ಬಿಳಿಯದಾಗಿರುವುದರಿಂದ ರೂಢಿಯಲ್ಲಿ ಬಿಳಿಗೂಡು ಎಂದೇ ಕರೆಯಲಾಗುತ್ತಿದೆ. ಅಧಿಕ ರೇಷ್ಮೆ ಉತ್ಪನ್ನಕ್ಕೆ ಮಿಶ್ರತಳಿ ಉತ್ಪಾದನೆಯೇ ಮೂಲ. ಬಿಳಿಗೂಡಿಗಾಗಿ ಈ ತಳಿಗಳನ್ನು ದ್ವಿಗುಣಗೊಳಿಸಿಕೊಂಡು ಮಿಶ್ರತಳಿ ಉತ್ಪನ್ನದಲ್ಲಿ ಪ್ರಗತಿ ಸಾಧಿಸಲಾಗುತ್ತಿದೆ.

**ಮೈಸೂರು ತಳಿ:** ಮಿಶ್ರತಳಿಗೆ ಬೇಕಾದ ಮಲ್ಟಿವೋಲ್ಟೈನ್ ಸಂತತಿಯನ್ನು (ಮೈಸೂರು ತಳಿ) ತುಮಕೂರು ಜಿಲ್ಲೆಯ ಕುಣಿಗಲು, ಕೆಂಪಹಳ್ಳಿ, ಹುಲಿಯೂರುದುರ್ಗ, ಹೆಬ್ಬೂರು, ಸಂತೆಮಾವತ್ತೂರು ಇತ್ಯಾದಿ ಸ್ಥಳಗಳಲ್ಲಿಯೂ ಬೆಂಗಳೂರು ಜಿಲ್ಲೆಯ ಮಾಗಡಿ, ಬಿಡದಿ, ದೊಡ್ಡಬಳ್ಳಾಪುರ ಕಡೆಗಳಲ್ಲಿಯೂ ಬೆಳೆಸಲಾಗುತ್ತಿದೆ. ಸರ್ಕಾರಿ ಮೂಲದಿಂದ ತಯಾರಾದ ಮೊಟ್ಟೆಗಳನ್ನು ಮಾತ್ರವೇ ರೈತರು ಸಾಕಬೇಕು. ತಾಂತ್ರಿಕ ಸಲಹೆ ಸಹಾಯಗಳಿಗಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸರ್ಕಾರಿ ಸ್ವಾಮ್ಯದ ರೇಷ್ಮೆ ಕೃಷಿ ಕ್ಷೇತ್ರಗಳಲ್ಲಿ ಒಂದು ತಾಯಿಚಿಟ್ಟೆ ಇಟ್ಟ ಮೊಟ್ಟೆಗಳನ್ನು ಪ್ರತ್ಯೇಕವಾಗಿ ಸಾಕಣೆ ಮಾಡಿ (ಸೆಲ್ಯುಲಾರ್ ರೇರಿಂಗ್) ಇದೇ ರೀತಿ ಮತ್ತೊಂದು ಚಿಟ್ಟೆಯ ಮೊಟ್ಟೆಗಳನ್ನು ಪ್ರತ್ಯೇಕವಾಗಿ ಸಾಕಿ ಇವುಗಳ ಗೂಡಿನಿಂದ ಬರುವ ಚಿಟ್ಟೆಗಳನ್ನು ಸಂಕರಣ ಮಾಡಿ ಮೂಲತಳಿಯನ್ನಾಗಿಟ್ಟು ಅಭಿವೃದ್ಧಿಪಡಿಸಲಾಗುತ್ತಿದೆ. ಸೆಲ್ಯುಲರ್ ರೇರಿಂಗ್‌ನಲ್ಲಿ ಪಡೆದ ಗೂಡುಗಳು ($P_3$ ಪೀಳಿಗೆ) ಮೂಲ ಬಿತ್ತನೆಯೆನಿಸು ತ್ತವೆ. ಹೀಗೆ ಪಡೆಯಲಾದ ಮೊಟ್ಟೆಗಳನ್ನು ಆಯ್ಕೆ ಮಾಡಲ್ಪಟ್ಟ ಪರಿಣತ ರೈತರಿಗೆ ಕೊಟ್ಟೋ ಇಲ್ಲವೆ ಸರ್ಕಾರಿ ಸ್ವಾಮ್ಯದಲ್ಲಿರುವ ಹಿಪ್ಪುನೇರಳೆ ತೋಟವುಳ್ಳ ಕ್ಷೇತ್ರಗಳಲ್ಲೋ ದ್ವಿಗುಣಗೊಳಿಸಲಾಗುವುದು. ಈ ಗೂಡುಗಳು $P_2$ ಪೀಳಿಗೆಯವು ಎನಿಸುವವು. ಈ ಗೂಡುಗಳಿಂದ ಸಿದ್ಧವಾದ ಮೊಟ್ಟೆಗಳನ್ನು ಪರವಾನಿಗೆ ಪಡೆದ ಉಳಿದ ರೈತರು ಸಾಕಣೆ ಮಾಡುತ್ತಾರೆ. ಅಲ್ಲಿಂದ ಉತ್ಪತ್ತಿಯಾಗುವ ಗೂಡುಗಳು $P_1$ ಪೀಳಿಗೆಯವು ಎನಿಸುತ್ತದೆ ಹಾಗೂ ಈ ಗೂಡುಗಳನ್ನು ಮಿಶ್ರತಳಿಗೆ ಬೇಕಾಗುವ ತಾಯಿ ಚಿಟ್ಟೆಯ ಉತ್ಪಾದನೆಗೆ ಉಪಯೋಗ ಮಾಡಲಾಗುತ್ತದೆ. ಮೈಸೂರು ತಳಿಯನ್ನುಳಿದು ಬೇರೆ ಇನ್ನಾವ ತಳಿಯನ್ನೂ ಸಾಕದಂತೆ, ಬೆಳೆದ ಗೂಡುಗಳನ್ನು ಸರ್ಕಾರದ ಅಧಿಕೃತ ಮಾರುಕಟ್ಟೆಗಳಲ್ಲಿ ನಿಯಮಗಳಿಗನು ಸಾರವಾಗಿ ಅನುಜ್ಞಾಪತ್ರ ಪಡೆದವರಿಗೆ ಮಾತ್ರ ಮಾರುವಂತೆ, ಬಿತ್ತನೆಗೂಡಿನ ಹಂಚಿಕೆ ಮತ್ತು ಸರಬರಾಜಿನ ನಿಯಂತ್ರಣವನ್ನು ಜಾರಿಗೆ ತಂದಿರುವುದ ರಿಂದಲೂ ಬಿತ್ತನೆ ಕ್ಷೇತ್ರವನ್ನು ಹಲವು ವಲಯಗಳನ್ನಾಗಿ ವಿಂಗಡಿಸಿ ಪ್ರತಿ ವಲಯಕ್ಕೂ ಒಬ್ಬ ಅಧಿಕಾರಿಯನ್ನು ನೇಮಿಸಿರುವುದರಿಂದ ಮಿಶ್ರತಳಿಗೆ ಬೇಕಾದ ತಾಯಿಚಿಟ್ಟೆಯನ್ನು ಕೊಡುವ ರೋಗರಹಿತ ಗೂಡುಗಳನ್ನು ಆಯ್ಕೆಮಾಡಲು ಬಲು ಸುಲಭವಾಗಿದೆ. ವರ್ಷಕ್ಕೆ 52 ಕೋಟಿ ಮೈಸೂರು ತಳಿ ಬಿತ್ತನೆಗೂಡು ಬೇಕಾಗಿದ್ದರೆ ಸು. 90 ಕೋಟಿ ಗೂಡು ಉತ್ಪಾದನೆ ಯಾಗುತ್ತಿದ್ದು ಯೋಗ್ಯವಾದ ಗೂಡುಗಳನ್ನು ಆಯ್ಕೆ ಮಾಡಿಕೊಳ್ಳಲು ಹೆಚ್ಚು ಅವಕಾಶ ಒದಗಿದೆಯೆನ್ನಬೇಕು.

ಮಿಶ್ರತಳಿ ಮೊಟ್ಟೆಗಳನ್ನು ರೈತರಿಗೆ ಪೂರೈಸಲು ಸರ್ಕಾರದ ವತಿಯಿಂದ ಮಾತ್ರ ನಡೆಸಲಾಗುತ್ತಿರುವ ರೇಷ್ಮೆ ಮೊಟ್ಟೆ ಉತ್ಪಾದನಾ ತಾಣಗಳಿಗೆ ಸಾಧ್ಯವಾಗುವುದಿಲ್ಲವಾದ್ದರಿಂದ ತರಬೇತಿ ಪಡೆದ ಅನುಜ್ಞಾಪತ್ರ ಹೊಂದಿರುವ ಖಾಸಗಿ ಜನ ಸಹ ಮಿಶ್ರತಳಿ ಉತ್ಪಾದನೆಯನ್ನು ಮಾಡಿ ರೈತರಿಗೆ ಹಂಚುವರು. ಕಾನೂನಿನ ರಕ್ಷೆಗೊಳಪಟ್ಟಿರುವ ಸರ್ಕಾರದವರೇ ಆಗಲಿ ಖಾಸಗಿಯವರೇ ಆಗಲಿ ಅಲ್ಲಿಂದ ಮಾತ್ರವೇ ಸಂಗ್ರಹಿಸಿಕೊಳ್ಳ ಬೇಕಾಗುತ್ತದೆ. ಮೊಟ್ಟೆ ಹಂಚುವುದರಿಂದ ಹಿಡಿದು ಗೂಡು ಉತ್ಪಾದನೆ ಯಾಗುವವರೆಗೆ ಸರ್ಕಾರದ ನಿಯೋಜಿತ ಸಿಬ್ಬಂದಿ ತಾಂತ್ರಿಕ ಸಲಹೆಗಳನ್ನು ಕೊಡುತ್ತ ಬೆಳೆಯನ್ನು ಪ್ರತಿ ಹಂತದಲ್ಲಿಯೂ ಪರೀಕ್ಷಿಸುವರು. ರೋಗ ರಹಿತವಾದ ಮಿಶ್ರತಳಿ ಬಿತ್ತನೆ ತಯಾರಿಕೆಗೆ ಒದಗುವುದಕ್ಕಾಗಿ ಎಲ್ಲ

ವ್ಯವಸ್ಥೆಯನ್ನೂ ಮಾಡಲಾಗಿದೆ. ಬಿತ್ತನೆ ಗೂಡುಗಳ ಉತ್ಪತ್ತಿಯನ್ನು ಹೆಚ್ಚು ಮಾಡುವುದಕ್ಕೂ ಎಲ್ಲ ಕಾಲದಲ್ಲಿಯೂ ಒದಗುವಂತೆ ಮಾಡುವುದಕ್ಕೂ ಬಿತ್ತನೆ ಕ್ಷೇತ್ರವನ್ನು ವಿಸ್ತರಿಸಲಾಗುತ್ತಿದೆ. ಹೊಸ ರೇಷ್ಮೆ ಕ್ಷೇತ್ರಗಳ ಸ್ಥಾಪನೆಗೂ ವ್ಯವಸ್ಥೆಯಾಗುತ್ತಿದೆ.

**ರೇಷ್ಮೆ ಹುಳುವಿನ ಆಹಾರವಾದ ಹಿಪ್ಪನೇರಳೆ (ಉಪ್ಪುನೇರಳೆ) ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮ:** ಕರ್ನಾಟಕದ ಹವಾಮಾನ, ಭೂಗುಣ ಹಿಪ್ಪನೇರಳೆ ಬೇಸಾಯಕ್ಕೆ ತುಂಬ ಯೋಗ್ಯವಾಗಿದೆ. ಆಮ್ಲೀಯ, ಕ್ಷಾರೀಯ ಮತ್ತು ಲ್ಯಾಟರೈಟ್ ಸ್ವಭಾವದ ಭೂಮಿಯನ್ನು ಬಿಟ್ಟರೆ ಇನ್ನುಳಿದ ಎಲ್ಲ ತೆರನ ಮಣ್ಣಿನಲ್ಲಿ ಬೆಳೆಯುವ ಹಿಪ್ಪನೇರಳೆಯು ರೇಷ್ಮೆ ಹುಳು ಸಾಕಣೆಗೆ ಆಧಾರ. ನಮ್ಮ ರಾಜ್ಯದಲ್ಲಿ ಬಹಳ ಕಾಲದಿಂದ ರೂಢಿಯಲ್ಲಿದ್ದ ಮೂರು ತಳಿಗಳು; ಬೂದಿಕಡ್ಡಿ, ಎಣ್ಣೆರಂಗಿನ ಕಡ್ಡಿ ಮತ್ತು ಸುಲ್ತಾನಿ ಕಡ್ಡಿ, ಕಾಂಡದ ಬಣ್ಣ ಸ್ವಭಾವಕ್ಕನುಗುಣವಾಗಿ ಈ ಹೆಸರು ಚಾಲ್ತಿಯಲ್ಲಿದ್ದವೆಂದು ಅವುಗಳ ಹೆಸರುಗಳಿಂದ ತಿಳಿಯಬಹುದು. ಈ ಎಲ್ಲ ತಳಿಗಳಲ್ಲೂ ಎಲೆಗಳಲ್ಲಿ ಛಿದ್ರತೆ ಹೆಚ್ಚು. ಇಳುವರಿ ಪ್ರೋತ್ಸಾಹದಾಯಕವಾಗಿರಲಿಲ್ಲ. ಈ ಶತಮಾನದ ಪ್ರಾರಂಭದಲ್ಲಿ ಸುಲ್ತಾನಿ ಕಡ್ಡಿಯನ್ನು ದೂರ ಮಾಡಿ ಜನಪ್ರಿಯವಾದ ತಳಿಗಳೆಂದರೆ ಬೂದಿಕಡ್ಡಿ ಮತ್ತು ಎಣ್ಣೆರಂಗಿನ ಕಡ್ಡಿ, ಆರ್ಥಿಕವಾಗಿ ಲಾಭದಾಯಕವಲ್ಲದ ಕಾರಣ ಹಿಪ್ಪನೇರಳೆಯನ್ನು ಮರಗಳ ಮಾದರಿಯಲ್ಲಿ ಬೆಳೆಸುವ ಪದ್ಧತಿ ಹೆಚ್ಚು ರೂಢಿಯಾಗಲಿಲ್ಲ.

**ಅಭಿವೃದ್ಧಿ:** ಕಚ್ಚಾ ರೇಷ್ಮೆಯ ಉತ್ಪಾದನಾ ವೆಚ್ಚದ ಬಹುಪಾಲು ಹಿಪ್ಪನೇರಳೆಯ ಮೇಲೆಯೇ ಅವಲಂಬಿತವಾಗಿರುವುದು ಸ್ಪಷ್ಟವೇ ಆಗಿದೆ. ಹಿಂದಿನ ಮೈಸೂರು ರಾಜ್ಯದಲ್ಲಿ ರೂಢಿಯಾಗಿದ್ದ ತಳಿಗಳಲ್ಲಿ ಇಳುವರಿ ಬಹಳ ಕಡಿಮೆಯಾಗಿತ್ತು. ಬೇಸಾಯ ಕ್ರಮವೇ ಆಗಲಿ ಹದವರಿತು ಗೊಬ್ಬರ ಒದಗಿಸುವುದೇ ಆಗಲಿ ವೈಜ್ಞಾನಿಕ ತಳಹದಿಯ ಮೇಲೆ ಅವಲಂಬಿತವಾಗಿರಲಿಲ್ಲ. ಇದಕ್ಕಾಗಿ ಜಪಾನ್ ದೇಶದಿಂದ ಉತ್ತಮ ತಳಿಗಳನ್ನು ಆಮದು ಮಾಡಿಕೊಳ್ಳಲಾಯಿತು. ಅವುಗಳ ಪೈಕಿ ಇಚಿಹೈ, ಕೈರಿಯೋ–ನೆಜುಮಿಗೈಷಿ, ಇಚೆನೋಸ, ಕೋಸೆನ್, ಗೋಷಿಯೋ ಇರಾಮಿ ಮುಖ್ಯವಾದುವು. ಹೀಗೆ ಹೊರದೇಶಗಳಿಂದ ಆಮದು ಮಾಡಿಕೊಂಡ ತಳಿಗಳನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ಪ್ರಶ್ನೆ ಎದುರಾಯಿತು. ನಿರಂತರ ಪ್ರಯೋಗ, ಪರಿಶೋಧಗಳ ಪರಿಣಾಮವಾಗಿ ಕಸಿ ಕಡ್ಡಿಗಳ ತಯಾರಿಕೆ ಇಂದು ಸಾಧ್ಯವಾಗಿದೆ. ಸ್ಥಳೀಯವಾಗಿದ್ದ ಮೋರಸ್ ಇಂಡಿಕ (ಎಣ್ಣೆ ರಂಗು ಮತ್ತು ಬೂದಿಕಡ್ಡಿ ಅಥವಾ ಸುಲ್ತಾನಿಕಡ್ಡಿ) ತಳಿಗಳ ಬೇರಿನ ಮೇಲೆ ವಿದೇಶಿ ತಳಿಗಳ ಕಾಂಡ ಭಾಗವನ್ನು ಸೇರಿಸಿ ಕಸಿ ಮಾಡಲಾಯಿತು. ಇದಕ್ಕಾಗಿ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಚನ್ನಪಟ್ಟಣ ತಾಲ್ಲೂಕು ಕಣ್ವ ಮತ್ತು ಮೈಸೂರು ಜಿಲ್ಲೆಯ ಕೊಳ್ಳೇಗಾಲದಲ್ಲಿ ಕಸಿಕಡ್ಡಿಗಳ ಉತ್ಪಾದನೆ, ಹಂಚಿಕೆಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಯಿತು. ಇದಕ್ಕಾಗಿ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಚನ್ನಪಟ್ಟಣ ತಾಲ್ಲೂಕು ಕಣ್ವ ಮತ್ತು ಮೈಸೂರು ಜಿಲ್ಲೆಯ ಕೊಳ್ಳೇಗಾಲಗಳಲ್ಲಿ ಕಸಿಕಡ್ಡಿಗಳ ಉತ್ಪಾದನೆ, ಹಂಚಿಕೆಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಯಿತು. ಗುಣಮಟ್ಟದಲ್ಲಿ ಈ ಕಸಿಕಡ್ಡಿಗಳಿಂದ ಬೆಳೆದ ಸೊಪ್ಪು ಉತ್ತಮವಾಗಿದೆ ಎಂದು ಕಂಡುಬಂದರೂ ಸ್ಥಳೀಯ ತಳಿಗಳಿಂದ ವರ್ಷದಲ್ಲಿ 5ರಿಂದ 8 ಬಾರಿ ಬೆಳೆಯುತ್ತಿದ್ದ ರೈತರಿಗೆ ಕಸಿ ಕಡ್ಡಿಗಳಿಂದ ದೊರೆಯುತ್ತಿದ್ದ 3–4 ಬಾರಿಯ ಬೆಳೆ ಲಾಭದಾಯಕವೆನಿಸಲಿಲ್ಲ. ನೀರಾವರಿ ಆಸರೆಯ ತೋಟಗಳಲ್ಲಿ ಮಾತ್ರ ಈ ಕಸಿಕಡ್ಡಿಗಳಿಂದ ಫಲಿತಾಂಶ ಪ್ರೋತ್ಸಾಹದಾಯಕವಾಗಿತ್ತು. ಮಳೆಯ ಆಸರೆಯ ಜಮೀನುಗಳಿಗೆ ಇವನ್ನು ಹಾಕುವಂತಿರಲಿಲ್ಲ. ಇದರಿಂದಾಗಿ ಕಸಿಕಡ್ಡಿಗಳು ಆರ್ಥಿಕವಾಗಿ ಅನುಕೂಲವೆನಿಸಲಿಲ್ಲ. ವರ್ಷಕ್ಕೊಮ್ಮೆ ಸವರಬೇಕಾಗಿದ್ದುದರಿಂದ (ಪ್ರೂನಿಂಗ್) ಕ್ರಮೇಣ ಬರುವ ಸೊಪ್ಪು ಕಿರಿದಾಗಿರುತ್ತಿತ್ತು. ಇಳುವರಿ ಕಡಿಮೆಯಾಯಿತು. ಎಳೆಯ ರೇಷ್ಮೆ ಹುಳುಗಳಿಗೆ ಸೊಪ್ಪನ್ನು ಬಳಸಲು ಆಗುತ್ತಿರಲಿಲ್ಲ. ಸುಧಾರಿತ ರೇಷ್ಮೆ ತಳಿಗಳ ಸಾಕಣೆಯಲ್ಲಿ ಈ ಸೊಪ್ಪು ಉತ್ತಮ ಫಲಿತಾಂಶ ಕೊಟ್ಟಿತೇ ಹೊರತಾಗಿ ಸ್ಥಳೀಯವಾಗಿ ರೂಢಿಯಲ್ಲಿದ್ದ ಹುಳುಗಳಿಗೆ ಪ್ರಿಯವಾಗಿ ಯಶಸ್ವಿಯಾಗಲಿಲ್ಲ. ಪರಿಸ್ಥಿತಿ ಹೀಗಾದಾಗ ಇಲ್ಲಿನ ಹವೆಗೆ ಹೊಂದಿಕೊಳ್ಳುವ, ಸ್ಥಳೀಯ ತಳಿಗಳಿಗೆ ಅನುಕೂಲವಾಗಿ ಒದಗುವ, ವರ್ಷದಲ್ಲಿ ಅನೇಕ ಬಾರಿ ಬೆಳೆ ತೆಗೆಯಲು ಸಾಧ್ಯವಿರುವ ತಳಿಗಳನ್ನು ಅಭಿವೃದ್ಧಿಪಡಿಸಬೇಕಾಯಿತು. ಈ ಕಾರ್ಯಕ್ರಮದ ಅಂಗವಾಗಿ ಮೋರಸ್ ಇಂಡಿಕ ತಳಿಗಳ ಹಣ್ಣುಗಳಿಂದ ಬೀಜ ಸಂಗ್ರಹಿಸಿ ಸಹಸ್ರಾರು ಸಂಖ್ಯೆಯಲ್ಲಿ ಸಸಿಗಳನ್ನು ಬೆಳೆಸಲಾಯಿತು. ಈ ಸಸಿಗಳಲ್ಲಿ ಉತ್ತಮವಾಗಿ ಬೆಳೆದವನನ್ನು ಪ್ರತ್ಯೇಕಿಸಲಾಯಿತು. ನಿರಂತರ ಪರಿಶ್ರಮದಿಂದ ಅಪೇಕ್ಷಿತ ಗುಣಗಳಿಗಾಗಿ ಆಯ್ಕೆ ನಡೆಸಲಾಯಿತು. ಎಲೆಗಳ ಉದ್ದಗಲ ಹೆಚ್ಚಾಗಿರುವ, ಗಿಣ್ಣುಗಳ ಉದ್ದಗಲ ಹೆಚ್ಚಾಗಿರುವ, ಗಿಣ್ಣುಗಳ ಅಂತರದಲ್ಲಿ ಕಡಿಮೆಯಾಗಿರುವ, ಹೆಚ್ಚು ಪೋಷಕಾಂಶಗಳು ಇರುವ, ಛಿದ್ರತೆ ಕಡಿಮೆಯಾಗಿರುವ, ಎಲೆಗಳುಳ್ಳ ಉತ್ತಮ ಸಸಿಗಳನ್ನು ಪ್ರತ್ಯೇಕವಾಗಿ ಬೆಳೆಸಲಾಯಿತು. ಇದನ್ನು ಸುಧಾರಿತ ತಳಿ ಅಥವಾ ಆಯ್ಕೆಗೊಂಡ ತಳಿ ಎಂದು ಕರೆಯಲಾಗುತ್ತಿದೆ. ಇದರ ಎಲೆಯ ಇಳುವರಿ ಹಳೆಯ ತಳಿಗಿಂತ ಸೇಕಡಾ 3ರಷ್ಟು ಹೆಚ್ಚು. ಇವಕ್ಕೆ ಉತ್ತಮ ಗೊಬ್ಬರ, ಮಧ್ಯಂತರ ಬೇಸಾಯ, ನೀರು ಒದಗಿಸಿದರೆ ಕಸಿಗಿಡಗಳಷ್ಟೇ ಉತ್ಕೃಷ್ಟವಾದ ಗುಣವುಳ್ಳ ಎಲೆಗಳನ್ನು ಇವುಗಳಿಂದ ಪಡೆಯಬಹುದು. ಮಳೆಯ ಆಸರೆಯ ತೋಟಗಳೇ ಇಂದು ರಾಜ್ಯದಲ್ಲಿ ಹೆಚ್ಚಾಗಿವೆ. ನೀರಾವರಿ ಆಸರೆಯ ತೊಟಗಳು ಕೂಡ ಹಿಂದಿಗಿಂತ ಈಗ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿವೆ.

**ಬೇಸಾಯ ಕ್ರಮ:** ಆಳವಾದ ಅಗತೆ, ಹೆಪ್ಪು ಹೊಡೆಯುವುದು, ಕಳೆ ಬೇರ್ಪಡಿಸುವುದು, ಸಮತಟ್ಟು ಮಾಡುವುದು, ಗೊಬ್ಬರ ಬಳಸುವುದು, ಮಣ್ಣು ತಿರುವಿ ಸಾಲು ಹೊಡೆಯುವುದು ಈ ಕ್ರಮವನ್ನು ಪ್ರಾರಂಭದಲ್ಲಿ ತೋಟ ಮಾಡ ಬಯಸುವವರು ಕೈಗೊಳ್ಳಬೇಕಾಗುತ್ತದೆ.

ವರ್ಷದಲ್ಲಿ 5ರಿಂದ 8 ಬಾರಿ ಎಲೆಗಳನ್ನು ಕೀಳುವುದರಿಂದ ಭೂಸಾರ ಕಡಿಮೆಯಾಗುತ್ತಿರುತ್ತದೆ. ಆದ್ದರಿಂದ ಯೋಗ್ಯ ಪ್ರಮಾಣದಲ್ಲಿ ಒದಗಿಸುವುದು ತುಂಬ ಅಗತ್ಯ. ಈ ಗೊಬ್ಬರದಲ್ಲಿ ನೈಟ್ರೋಜನ್, ಫಾಸ್ಫರಸ್ ಮತ್ತು ಪೊಟ್ಯಾಸಿಯಮ್ ಮತ್ತು ಮೈಕ್ರೊನ್ಯೂಟ್ರಿಯಂಟ್‌ಗಳನ್ನು ಒದಗಿಸುವಂತಿರಬೇಕು. ಬರೀ ರಸಗೊಬ್ಬರವನ್ನು ಉಪಯೋಗಿಸಿದರೆ ಭೂಮಿಯ ಸ್ವಾಭಾವಿಕ ಗುಣ ಕುಂಠಿತವಾಗಿರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್ ಗೊಬ್ಬರವನ್ನೂ ಬಳಸಬೇಕು.

ರಾಜ್ಯದಲ್ಲಿ ಹಿಪ್ಪನೇರಳೆ ಬೇಸಾಯ ಎರಡು ತೆರನಾಗಿದೆ. ಕೋಲಾರ ಜಿಲ್ಲೆಯಲ್ಲಿ ಸಾಲಂಗಡ್ಡಿಯಾಗಿ ಗಿಡದಿಂದ ಗಿಡಕ್ಕೆ 7.5 ಸೆಂ.ಮೀ. ಸಾಲಿನಿಂದ ಸಾಲಿಗೆ 22.5 ಸೆಂಮೀ ಅಂತರದಲ್ಲಿ ಬೆಳೆಸುವರು. ಈ ತೆರನಾದ ತೋಟಗಳು ಬಹುಪಾಲು ನೀರಾವರಿಗೆ ಒಳಪಟ್ಟಿವೆ. ಸಾಲುಗಡ್ಡಿ ತೋಟದಲ್ಲಿ ಪ್ರತಿ ಬಾರಿಯೂ ಕಾಂಡ ಭಾಗವನ್ನು ಕತ್ತರಿಸಲಾಗುತ್ತದೆ. ಅಂತರಬೇಸಾಯ ಮಾನವ ಶಕ್ತಿಯಿಂದಲೇ ಆಗಬೇಕು. ಇಂಥ ತೋಟಗಳು ಕಳೆಯಿಂದ ವಿಮುಕ್ತವಾಗಿರುತ್ತವೆ. ಯಥೇಚ್ಛವಾಗಿ ಗೊಬ್ಬರ ಹಾಕುವುದರಿಂದ ಕಡಿಮೆ ಪ್ರದೇಶದಲ್ಲಿ ಹೆಚ್ಚು ಉತ್ಪತ್ತಿಯಾಗುತ್ತದೆ.

ಗುಣಮಟ್ಟದಲ್ಲಿಯೂ ಇವು ಉತ್ತಮವೇ ಆಗಿವೆ. ರಾಜ್ಯದ ಇನ್ನಿತರ ಪ್ರದೇಶಗಳಲ್ಲಿ ಹಿಪ್ಪುನೇರಳೆಯಲ್ಲಿ ಗುಣಿಕಡ್ಡಿಯಾಗಿ ಬೆಳೆಸುತ್ತಾರೆ ಮತ್ತು ಸಾಲಿನಿಂದ ಸಾಲಿಗೆ ಗಿಡದಿಂದ ಗಿಡಕ್ಕೆ 5ರಿಂದ 7.7 ಸೆಂಮೀ ಅಂತರ ಬಿಟ್ಟು ಪ್ರತ್ಯೇಕ ಗುಣಿಗಳಲ್ಲಿ ಬೆಳೆಸುತ್ತಾರೆ. ಒಟ್ಟಾರೆ ಯಾವ ಕ್ರಮವನ್ನು ಅನುಸರಿಸಿದರೂ ಆಯ್ಕೆಗೊಂಡ ತಳಿ 5 ಉತ್ತಮ ಫಲಿತಾಂಶ ನೀಡುತ್ತಿದೆ.

**ಕೇಂದ್ರ ಸರ್ಕಾರದ ಪ್ರೋತ್ಸಾಹ:** 1875ರಲ್ಲಿ ಇಪ್ಪತ್ತು ಲಕ್ಷ ಪೌಂಡು ರೇಷ್ಮೆಯನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದ ಭಾರತದ ರೇಷ್ಮೆ ಉತ್ಪಾದನೆ ಕ್ರಮೇಣ ಕ್ಷೀಣಿಸತೊಡಗಿತು. ಇದಕ್ಕೆ ಕಾರಣವೆಂದರೆ ರೇಷ್ಮೆ ಹುಳುಗಳಿಗೆ ಮಾರಕವಾಗಿ ಗಂಟುರೋಗದ ಹಾವಳಿ. ರೇಷ್ಮೆ ಕೃಷಿಯನ್ನು ಮಾರಕ ರೋಗಗಳಿಂದ ಮುಕ್ತಗೊಳಿಸಿ ಸುಧೃಢವಾಗಿ ಬೆಳೆಸಿ ಉಳಿಸಲೆಂದು ಈ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಪ್ರತ್ಯೇಕ ಇಲಾಖೆ 1915ರಲ್ಲಿ ಪ್ರಾರಂಭವಾಯಿತೆಂಬುದನ್ನು ಈ ಮೊದಲೇ ತಿಳಿಸಿದೆ. ಉತ್ಪಾದನಾ ವೆಚ್ಚಕ್ಕಿಂತ ಅತಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕಾದ ಪರಿಸ್ಥಿತಿ 1928ನೆಯ ಇಸವಿಯಲ್ಲಿ ಒದಗಿತು. ರೇಷ್ಮೆ ಮಾರಾಟ ತೀವ್ರ ಪೈಪೋಟಿಗೆ ಒಳಗಾಯಿತು. ಈ ಕೃಷಿಯಲ್ಲಿ ತೊಡಗಿದ್ದವರು ವಿವಂಚನೆಗೊಳಗಾಗಬೇಕಾಯಿತು. ರಫ್ತು ವ್ಯಾಪಾರ ಸ್ಥಗಿತಗೊಂಡಿತು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಚೀನ ತನ್ನ ರೇಷ್ಮೆಯನ್ನು ಕಡಿಮೆ ದರದಲ್ಲಿ ಭಾರತಕ್ಕೆ ರಫ್ತು ಮಾಡಲು ಪ್ರಾರಂಭಮಾಡಿತು. ಜೊತೆಗೆ ಕೃತಕ ರೇಷ್ಮೆಯೂ ಜನಾದರಣೀಯವಾಯಿತು. ಮೊದಲೇ ದುರವಸ್ಥೆಯಲ್ಲಿದ್ದ ಈ ಉದ್ಯಮಕ್ಕೆ ಮತ್ತಷ್ಟು ಪೆಟ್ಟು ಬಿತ್ತು. ಇದನ್ನು ಮನಗಂಡ ಭಾರತ ಸರ್ಕಾರ 1932ರಲ್ಲಿ ಈ ಕೈಗಾರಿಕೆಯ ರಕ್ಷಣೆಗೆ ಮುಂದಾಯಿತು. ವಿದೇಶಗಳಿಂದ ಆಮದಾಗುತ್ತಿದ್ದ ರೇಷ್ಮೆಯ ಮೇಲೆ ಕರಭಾರ ಹೇರಿತು. ಇದರ ಪರಿಣಾಮವಾಗಿ ಸ್ಥಳೀಯ ರೇಷ್ಮೆಯ ಬೆಲೆ ಚೇತರಿಸಿಕೊಂಡಿತು.

**ರೇಷ್ಮೆ ಕೃಷಿಯನ್ನು ಉತ್ತಮಪಡಿಸಲು ರೂಪುಗೊಂಡ ಸಲಹಾ ಸಮಿತಿ:** ಕರ್ನಾಟಕದಲ್ಲಿ 1951ರಲ್ಲಿ ನಡೆದ ರೇಷ್ಮೆ ಕೈಗಾರಿಕೆಯ ವಿಚಾರಗೋಷ್ಠಿ ಈ ಉದ್ಯಮ ಪ್ರಗತಿ ಪಥದಲ್ಲಿ ನಡೆಯುವುದಕ್ಕೆ ಚಾಲನೆಕೊಟ್ಟಿತು. ಈ ಕೈಗಾರಿಕೆಯ ವಿವಿಧ ಕ್ಷೇತ್ರಗಳಲ್ಲಿ ದುಡಿದ ಅನುಭವಿಗಳನ್ನು, ವಿಜ್ಞಾನಿಗಳನ್ನು ಒಳಗೊಂಡ ಸಮಿತಿ ನೀಡಿದ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಇಲಾಖೆ ನಿರ್ದಿಷ್ಟ ಯೋಜನೆಗಳನ್ನು ಹಾಕಿಕೊಂಡಿತು. ಸಮಿತಿ ನೀಡಿದ ಅತಿ ಮುಖ್ಯ ಸಲಹೆಗಳೆಂದರೆ ರೇಷ್ಮೆ ಕೃಷಿ ಸಂಶೋಧನೆ, ಶಿಕ್ಷಣ, ರೋಗ ರಹಿತ ಮೊಟ್ಟೆಗಳ ಉತ್ಪಾದನೆ, ರೇಷ್ಮೆಗೂಡಿನ ವಿತರಣೆ, ಹತೋಟಿಯನ್ನು ಕಾನೂನಿನ ಕಕ್ಷೆಗೊಳಪಡಿಸುವುದು. ರೇಷ್ಮೆ ವ್ಯಾಪಾರದ ಲ್ಲಿನ ಅಹಿತಕರ ಬೆಳೆವಣಿಗೆಗಳನ್ನು ತಪ್ಪಿಸುವುದು ಇತ್ಯಾದಿಗಳು.

**ಇಂದಿನ ಸ್ಥಿತಿ:** ರೇಷ್ಮೆ ಉದ್ಯಮ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಿನ ವ್ಯಾಪ್ತಿಯಲ್ಲಿದೆ. ಇತ್ತೀಚೆಗೆ ಈ ಉದ್ಯಮವನ್ನು ಧಾರವಾಡ, ಬಿಜಾಪುರ, ಬೆಳಗಾಂವಿ, ಬಳ್ಳಾರಿ, ರಾಯಚೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಿಗೂ ವಿಸ್ತರಿಸಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈಗಾಗಲೇ ಬಿಜಾಪುರ, ಬೆಳಗಾಂವಿ, ಧಾರವಾಡ ಜಿಲ್ಲೆಗಳ ರೈತರು ಹುಳು ಸಾಕಣೆಯಲ್ಲಿ ಆಸಕ್ತಿ ತೋರಿದ್ದಾರೆ. ಈ ಉದ್ಯಮ ಕೃಷಿ ಪ್ರಧಾನವಾಗಿದ್ದು ಗ್ರಾಮಾಂತರದಲ್ಲಿನ ಲಕ್ಷಾಂತರ ಜನಗಳ ಜೀವನಾಧಾರವೆನಿಸಿದೆ. ಹಿಪ್ಪುನೇರಳೆಯ ವಿಸ್ತೀರ್ಣ ಲಕ್ಷಾಂತರ ಹೆಕ್ಟೇರ್‌ಗಳಿಗೆ ವಿಸ್ತರಿಸಿದ್ದು ಸಾಕಷ್ಟು ನಿರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಕುಟುಂಬಗಳೇ ಹೆಚ್ಚಿನ ಪ್ರಮಾಣದಲ್ಲಿ ಈ ಕೃಷಿಯಲ್ಲಿ ನಿರತರಾಗಿದ್ದಾರೆ. ರೇಷ್ಮೆ ಕೃಷಿ ಇಲಾಖೆಯ ಬಹುಮುಖ್ಯ ಉದ್ದೇಶವೆಂದರೆ ಒಂದು ನಿಶ್ಚಿತ ವಿಸ್ತೀರ್ಣದಲ್ಲಿ ಹಿಪ್ಪುನೇರಳೆಯ ಗುಣಮಟ್ಟವನ್ನು, ಇಳುವರಿಯನ್ನು ಅಭಿವೃದ್ಧಿಗೊಳಿಸಿ ತನ್ಮೂಲಕ ಅಂತರರಾಷ್ಟ್ರೀಯ ಮಟ್ಟಕ್ಕೆ ಸಮನಾದ ರೇಷ್ಮೆ ಉತ್ಪಾದನೆಗೆ ಶ್ರಮಿಸಬೇಕೆಂಬುದು.

ಹೊಸ ಹೊಸ ಮಿಶ್ರತಳಿಗಳನ್ನು ಸಾಕಲು ರೈತರು ಮುಂದೆ ಬರುತ್ತಿದ್ದಾರೆ. ಮಲಿವೋಲ್ಟೈನ್ ಸ್ವಭಾವದ ಮೈಸೂರು ತಳಿಯಲ್ಲಿರುವ ರೋಗ ನಿರೋಧಕ ಶಕ್ತಿ, ಅತ್ಯಂತ ಹೊಳಪುಳ್ಳ ರೇಷ್ಮೆ, ವಿದೇಶಿ ತಳಿಯಲ್ಲಿರುವ ಹೆಚ್ಚು ಪ್ರಮಾಣದ ರೇಷ್ಮೆ–ಈ ವಿಶಿಷ್ಟ ಗುಣಗಳ ಸಂಗಮವನ್ನು ಇಂದು ಮಿಶ್ರತಳಿ ರೇಷ್ಮೆಗೂಡುಗಳಲ್ಲಿ ಕಾಣಬಹುದು. ಮೈಸೂರು ತಳಿಯ ಹೆಣ್ಣುಚಿಟ್ಟೆಯನ್ನೂ ವಿದೇಶಿ ತಳಿಯ ಗಂಡುಚಿಟ್ಟೆಯನ್ನೂ ಅಡ್ಡಹಾಯಿಸಿ ತಾಯಿಚಿಟ್ಟೆಯನ್ನು ಅರೆದು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸುವುದರಿಂದ ತಾಯಿಚಿಟ್ಟೆ ಇಟ್ಟಿರುವ ಮೊಟ್ಟೆಗಳು ರೋಗರಹಿತ ವಾಗಿಯೇ ಎಂಬುದನ್ನು ಖಾತರಿ ಪಡಿಸಿಕೊಂಡಂತಾಗುತ್ತದೆ. ರೋಗದ ಸುಳಿವು ಸಿಕ್ಕರೆ ಆ ಮೊಟ್ಟೆಗಳನ್ನು ತಿರಸ್ಕರಿಸಲಾಗುವುದು.

ಮೈಸೂರು ತಳಿ ಸಾಕಣೆಗೆ ಬೇಕಾಗುವ ದಿನಗಳಿಗಿಂತ ಬಹಳ ಕಡಿಮೆ ದಿನಗಳೊಳಗಾಗಿ ಮಿಶ್ರತಳಿಗಳು ಫಲ ಕೊಡುವುದರಿಂದ, –ಕಡಿಮೆ ಅವಧಿಯಲ್ಲಿ ಉತ್ತಮ ಗುಣಮಟ್ಟದ, ಹಿಂದಿನ ತಳಿಗಳಿಗಿಂತ ಹೆಚ್ಚು ಬೆಲೆ ತರುವ ಗೂಡುಗಳನ್ನು ಬೆಳೆಯುವುದು ರೇಷ್ಮೆ ಬೆಳೆಗಾರರಿಗೂ ರೇಷ್ಮೆ ಬಿಚ್ಚುವವರಿಗೂ ಅನುಕೂಲವಾಗಿರುವುದರಿಂದ ಈ ತಳಿಗಳ ಸಾಕಣೆ ಹೆಚ್ಚು ಜನಪ್ರಿಯವಾಗಿದೆ.

**ರೇಷ್ಮೆಹುಳು ಸಾಕಣೆಯಲ್ಲಿ ಸುಧಾರಣೆ :** ರೇಷ್ಮೆ ಹುಳುಗಳು ತಮ್ಮ ಲಾರ್ವ ಅವಸ್ಥೆಯಲ್ಲಿ ನಾಲ್ಕು ಬಾರಿ ಪೊರೆ ಕಳಚುತ್ತವೆ. ಆಗತಾನೆ ಮೊಟ್ಟೆಯಿಂದ ಹೊರಬಂದ ಮರಿಗಳಿಗೆ ರೂಢಿಯಲ್ಲಿ 'ಚಾಕಿ' ಎಂದೂ ಪೊರೆ ಕಳಚುವ ಅವಸ್ಥೆಯಲ್ಲಿರುವ ಮರಿಗಳಿಗೆ 'ಜ್ವರ' ಎಂದೂ ಹೆಸರು. ಎಳೆಯ ಹುಳುಗಳನ್ನು ಮೂರನೆಯ ಜ್ವರದವರೆಗೆ ಸಾಕುವ ತನಕ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಏಕೆಂದರೆ ಬೆಳೆ ಸದೃಢ ವಾಗಿ ಒಳ್ಳೆಯ ಫಲ ನೀಡಬೇಕಾದರೆ ಎಳೆಯ ವಯಸ್ಸಿನ ಹುಳುಗಳ ಸಾಕಣೆ ಅತಿ ಮುಖ್ಯ. ಈ ಕಾರಣಕ್ಕಾಗಿಯೇ ಸರ್ಕಾರದ ವತಿಯಿಂದ ಸ್ಥಾಪಿತವಾಗಿರುವ ಚಾಕಿ ಸಾಕಣೆ ಕೇಂದ್ರದಲ್ಲಿ, ರೈತರು ತಂದುಕೊಡುವ ಮೊಟ್ಟೆಗಳನ್ನು 2–3ನೆಯ ಜ್ವರದವರೆಗೆ ಇಲಾಖೆಯ ತಾಂತ್ರಿಕ ಸಿಬ್ಬಂದಿಯ ನೇರ ಉಸ್ತುವಾರಿಯಲ್ಲಿ ಸಾಕಿ ರೈತರಿಗೆ ಕೊಡಲಾಗುವುದು. ವಯಸ್ಸಿಗೆ ಅನುಗುಣವಾಗಿ ಉತ್ತಮ ಸೊಪ್ಪು ಕೊಡುವುದು, ಉಷ್ಣಾಂಶ, ಆರ್ದ್ರತೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅಗತ್ಯ. ಹುಳು ಸಾಕಣೆಯಲ್ಲಿ ಬೇಕಾದ ಉಷ್ಣಾಂಶ ಮತ್ತು ಶೈತ್ಯಾಂಶಗಳ ವಿವರ :

| ಹುಳುವಿನ ಹಂತ | ಉಷ್ಣಾಂಶ | ಆರ್ದ್ರತೆ |
|---|---|---|
| 1ನೆಯ ಹಂತ | 75–800 ಫ್ಯಾ | 80%–90% |
| 2ನೆಯ ಹಂತ | 74–790 ಫ್ಯಾ | 80%–90% |
| 3ನೆಯ ಹಂತ | 73–780% ಫ್ಯಾ | 80% |
| 4ನೆಯ ಹಂತ | 72–770 ಫ್ಯಾ | 70%–75% |
| 5ನೆಯ ಹಂತ | 70%–76% ಫ್ಯಾ | 65%–70% |

ಈಗ ಪ್ರಚಲಿತವಿರುವ ಮಿಶ್ರತಳಿಗಳ ಜೊತೆಗೆ ಹೊಸದಾಗಿ ಬೈವೋಲ್ಟೈನ್ ಮಾದರಿಯ ವಿದೇಶಿ ತಳಿಗಳನ್ನು ಪ್ರಚಾರಕ್ಕೆ ತರಲಾಗಿದೆ. ಈ ತಳಿಗಳ ಮೊಟ್ಟೆಗಳು ಚಾಕಿಯಾಗಲು 4–6 ತಿಂಗಳುಗಳು ಬೇಕಾಗುತ್ತವೆ. ಅವುಗಳನ್ನು ಕೃತಕ ರೀತಿಯಲ್ಲಿ ಚಾಕಿಯಾಗುವಂತೆ ಮಾಡಿ ರೈತರಿಗೆ ಹಂಚಲಾಗುತ್ತಿದೆ.

ಇವುಗಳಿಂದ ಬೆಳೆಯಲಾಗಿರುವ ಗೂಡುಗಳು ಶ್ರೇಷ್ಠ ಗುಣಮಟ್ಟದವು. ಇಳುವರಿ ಆಶಾದಾಯಕವಿದ್ದು ಪ್ರೋತ್ಸಾಹ ಗಣನೀಯವಾಗಿ ಹೆಚ್ಚುತ್ತಿದೆ.

**ಗೂಡಿನ ಮಾರಾಟದ ವ್ಯವಸ್ಥೆ:** 1970ಕ್ಕೂ ಹಿಂದೆ ಖಾಸಗಿಯವರ ಹಿಡಿತದಲ್ಲಿದ್ದ ಮಾರುಕಟ್ಟೆಗಳನ್ನು ನಿಲ್ಲಿಸಿ ಸರ್ಕಾರವೇ ಅಧಿಕೃತ ಮಾರುಕಟ್ಟೆಗಳನ್ನು ತೆರೆದಿದೆ. ಅನುಜ್ಞಾ ಪತ್ರ ಪಡೆದಿರುವ ರೇಷ್ಮೆ ಬಿಚ್ಚುವವರೂ ಸರ್ಕಾರದ ರೇಷ್ಮೆ ಫಿಲೇಚರಿನ ಪ್ರತಿನಿಧಿಗಳೂ ಭಾಗವಹಿಸುವ ಈ ಮಾರುಕಟ್ಟೆಗಳಲ್ಲಿ ರೇಷ್ಮೆಗೂಡು ಬಹಿರಂಗ ಹರಾಜಿನಲ್ಲಿ ಮಾರಾಟವಾಗುತ್ತದೆ. ಈಗ ರಾಜ್ಯದಲ್ಲಿ 56 ಮಾರುಕಟ್ಟೆಗಳು ಕೆಲಸ ಮಾಡುತ್ತಿವೆ.

**ರೇಷ್ಮೆ ನೂಲು ಬಿಚ್ಚುವಿಕೆ:** ರಾಜ್ಯದಲ್ಲಿ ಉತ್ಪನ್ನವಾಗುವ 328 ಲಕ್ಷ ಕೆಜಿ ರೇಷ್ಮೆಗೂಡನ್ನು ಬಿಚ್ಚಲು ಒಟ್ಟು 3,350 ಬೇಸಿನ್‌ಗಳು ಖಾಸಗಿ ಕಾರ್ಖಾನೆಗಳಲ್ಲೂ ಸರ್ಕಾರದಸ್ವಾಮ್ಯದಲ್ಲಿನ 7 ಫಿಲೇಚರ್ ಕಾರ್ಖಾನೆಗಳಲ್ಲೂ ಇವೆ. ಖಾಸಗಿಯವರ ಬಳಿ 4,337 ಗೃಹ ಬೇಸಿನ್‌ಗಳು 8,675 ಚರಕಾಗಳು ಈ ಕಾರ್ಯದಲ್ಲಿ ನಿರತವಾಗಿವೆ. ಈ ಮೂರು ಬಗೆಯ ಯಂತ್ರೋಪಕರಣಗಳಿಂದ 22 ಲಕ್ಷ ಕೆಜಿ ರೇಷ್ಮೆ ಸಿದ್ಧವಾಗುತ್ತದೆ. ರೇಷ್ಮೆ ಬಿಚ್ಚುವಾಗ ದೊರೆಯುವ ನಟ್ಟಿ ಅಥವಾ ಜೂಟನ್ನು ಸ್ಪನ್ ರೇಷ್ಮೆಗೆ ಉಪಯೋಗಿಸಲಾಗುತ್ತದೆ.

**ಸ್ಪನ್ ಸಿಲ್ಕ್ ಗಿರಣಿಗಳು:** ಭಾರತದಲ್ಲಿಯೇ ಪ್ರಪ್ರಥಮವಗಿ ಕರ್ನಾಟಕ ರಾಜ್ಯದ ಚನ್ನಪಟ್ಟಣದಲ್ಲಿ 1936ರಲ್ಲಿ ಈ ಕಾರ್ಖಾನೆ ಸ್ಥಾಪಿತವಾಯಿತು. ಪ್ರಾರಂಭಕ್ಕೆ ಇಲ್ಲಿ 6,000 ಕದಿರುಗಳಿದ್ದವು. 1966ರಲ್ಲಿ 1,500 ಕದಿರುಗಳನ್ನು ಜಪಾನಿನಿಂದ ಆಮದು ಮಾಡಿಕೊಳ್ಳಲಾಯಿತು. ರಾಜ್ಯದಲ್ಲಿ ಉತ್ಪನ್ನವಾಗುವ ಸು. 8,.25 ಲಕ್ಷ ಕೆಜಿ ನಟ್ಟಿಯಲ್ಲಿ 2–3 ಲಕ್ಷ ಕೆಜಿಗಳನ್ನು ಈ ಕಾರ್ಖಾನೆಯಲ್ಲಿ ಉಪಯೋಗಿಸಿಕೊಂಡು 36,000 ಕೆಜಿ ಸ್ಪನ್ ರೇಷ್ಮೆ ದಾರವನ್ನೂ ಇದರ ತಯಾರಿಕೆಯ ಹಂತದಲ್ಲಿ ಸಿಕ್ಕುವ ಉಪ–ಉತ್ಪನ್ನದಿಂದ 50,000 ಕೆಜಿ ನಾಯಿಲ್ ದಾರವನ್ನೂ ಪಡೆಯಲಾಗುತ್ತಿತ್ತು. ನಾಯಿಲ್ ದಾರ ತಯಾರಿಕೆಯಲ್ಲಿ ಬರುವ ಉಪ–ಉತ್ಪನ್ನದಿಂದ ಜಮಖಾನೆಗಳಿಗೆ ಬೇಕಾದ ದಾರವನ್ನೂ ತಯಾರಿಸಲಾಗುತ್ತಿದೆ. ಈ ಎಲ್ಲ ದಾರಗಳನ್ನೂ ಪಡೆದ ಅನಂತರ ಕಡೆಯಲ್ಲಿ ಉಳಿಯುವ ಪುಡಿ ಗೊಬ್ಬರಕ್ಕೆ ಉಪಯೋಗವಾಗುವುದು. ಹೀಗೆ ಒದಗುವ ಎಲ್ಲ ವಸ್ತುಗಳೂ ಲಾಭದಾಯಕವಾಗಿಯೇ ಇವೆ. ಸ್ಪನ್ ಸಿಲ್ಕ್ ಮಿಲ್ಲಿನ ಉತ್ಪನ್ನಗಳು ವಿದೇಶಗಳಲ್ಲಿ ಜನಾದರಣೀಯವಾಗಿ ವಿದೇಶಿ ವಿನಿಮಯಗಳಿಸುತ್ತಿವೆ.

ರೇಷ್ಮೆ ಉದ್ಯಮದಲ್ಲಿ ದೊರೆಯುವ ಇತರ ಉಪ–ಉತ್ಪನ್ನಗಳು : 1 ರೇಷ್ಮೆ ಹುಳು ಸಾಕಣೆಯಲ್ಲಿ ಬೀಳುವ ಹಿಕ್ಕೆ. 2 ರೇಷ್ಮೆ ನೂಲು ಬಿಚ್ಚಲು ಉಪಯೋಗಿಸಿದ ನೀರು. ಇವೆರಡೂ ಉತ್ತಮ ಗೊಬ್ಬರವಾಗಿ ಉಪಯೋಗಕ್ಕೆ ಬರುತ್ತವೆ. 3 ನೂಲು ಬಿಚ್ಚಿದ ಅನಂತರ ಉಳಿಯುವ ಹುಳು ಹಿಂದೆ ಗೊಬ್ಬರವಾಗಿ ಉಪಯೋಗವಾಗುತ್ತಿತ್ತು. ಆದರೆ ಇಂದು ಇವುಗಳಿಂದ ಎಣ್ಣೆಯನ್ನೂ ಪ್ರೋಟೀನನ್ನೂ ತೆಗೆಯಲಾಗುತ್ತದೆ. ಎಣ್ಣೆಯನ್ನು ಸೋಪು ತಯಾರಿಕೆಯಲ್ಲಿಯೂ ಪ್ರೋಟೀನನ್ನು ಕೋಳಿಗಳ ಆಹಾರವಾಗಿಯೂ ಬಳಸಲಾಗುತ್ತಿದೆ.

**ರೇಷ್ಮೆ ಕೃಷಿ ಶಿಕ್ಷಣ:** ತಾಂತ್ರಿಕ ಸಿಬ್ಬಂದಿಗೆ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣದಲ್ಲಿರುವ ರಾಜ್ಯ ಸರ್ಕಾರದ ಶಿಕ್ಷಣ ಶಾಲೆಯಲ್ಲಿಯೂ ಮೈಸೂರಿನಲ್ಲಿರುವ ಕೇಂದ್ರ ಸರ್ಕಾರದ ಕೇಂದ್ರ ರೇಷ್ಮೆ ಕೃಷಿ ಮತ್ತು ಸಂಶೋಧನ ಶಾಲೆಗಳಲ್ಲಿಯೂ ತರಬೇತಿ ನೀಡಲಾಗುತ್ತಿದೆ. ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎರಡು ವರ್ಷಗಳ ಡಿಪ್ಲೊಮಾ ಶಿಕ್ಷಣವನ್ನು ನೀಡಲಾಗುತ್ತಿದೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೆಳಕಾಣಿಸಿರುವಂತೆ ಕೇಂದ್ರದ ನೆರವಿನೊಡನೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು:

I. 35,000 ಎಕರೆ ಮಳೆ ಆಸರೆಯ ಹಿಪ್ಪನೇರಳೆಯನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸುವುದು.

II. 27.50 ಲಕ್ಷ ಕೆಜಿ ಕಚ್ಚಾ ರೇಷ್ಮೆಯನ್ನು ಉತ್ಪಾದಿಸುವುದು.

III. 600 ಮೆಟ್ರಿಕ್ ಟನ್ ಬೈವೋಲ್ಟೈನ್ ರೇಷ್ಮೆಯನ್ನು ಉತ್ಪಾದಿಸುವುದು.

IV. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉಳಿಕೆಯಾಗಿರುವ ಕಾರ್ಯಗಳನ್ನು ಮುಂದುವರಿಸುವುದು :

1. ಮೈಸೂರು ತಳಿ ಬಿತ್ತನೆಯನ್ನು ಅಧಿಕಗೊಳಿಸಲು 5 ಹೊಸ ಕೃಷಿ ಕ್ಷೇತ್ರಗಳನ್ನು ಪ್ರಾರಂಭಿಸುವುದು.
2. ವಿದೇಶಿ ತಳಿ ಬಿತ್ತನೆಯನ್ನು ಅಧಿಕಗೊಳಿಸಲು 5 ಹೊಸ ಕೃಷಿ ಕ್ಷೇತ್ರಗಳನ್ನು ಪ್ರಾರಂಭಿಸುವುದು.
3. ಮಿಶ್ರತಳಿ ತತ್ತಿ ಉತ್ಪಾದನೆಗಾಗಿ 25 ಹೊಸ ಠಾಣಗಳನ್ನು ಪ್ರಾರಂಭಿಸುವುದು.
4. ರೇಷ್ಮೆಗೂಡಿನ ಮಾರುಕಟ್ಟೆಗಳಿಗೆ ವಿಸ್ತೃತ ಸೌಲಭ್ಯ ನೀಡುವುದು.
5. 125 ಸಹಕಾರ ಸಂಘಗಳ ಸ್ಥಾಪನೆ.
6. ಟಸ್ಸಾರ್ ರೇಷ್ಮೆಯ ಅಭಿವೃದ್ಧಿ.
7. ದೊಡ್ಡ ಪ್ರಮಾಣದಲ್ಲಿ ಬೈವೋಲ್ಟೈನ್ ಸಾಕಣೆ ಕೇಂದ್ರವನ್ನು ಧರ್ಮಪುರಿಯಲ್ಲಿ ಸ್ಥಾಪಿಸುವುದು.
8. ಎಲ್ಲರಿಗೂ ಅನ್ವಯವಾಗುವಂತೆ ಹುಳುಸಾಕಣೆ ಮನೆಗಳು, ಬಾವಿ ತೋಡಲು ಉಪಕರಣ ಕೊಳ್ಳಲು, ಗ್ರೆ ನೇಜು ಮತ್ತು ಹುಳು ಸಾಕಣೆಗೆ ಮನೆ ಕಟ್ಟಲು ಸಾಲ, ಪರಿಶಿಷ್ಟ ಜಾತಿ ಬುಡಕಟ್ಟು ಜನಾಂಗದವರಿಗೆ ಸಹಾಯ ಧನದ ಸೌಲಭ್ಯ.
9. ಹೊಸ ಪ್ರದೇಶಗಳಲ್ಲಿ ರೇಷ್ಮೆ ಕೃಷಿ ಕೈಗೊಳ್ಳಲು ಕ್ರಮ.
10. ಸುಧಾರಿತ ಕ್ರಮಗಳನ್ನುಸರಿಸಿ  ತೋಟ, ಹುಳುಸಾಕಣೆಗಾಗಿ ಅಭಿವೃದ್ಧಿ ಕಾರ್ಯ.
11. ಬೈವೋಲ್ಟೈನ್ ತಳಿಗಳ ಸಾಕಣೆಗೆ ಕಾರ್ಯಕ್ರಮಗಳ ಅಭಿವೃದ್ಧಿ.

ಇವುಗಳ ಜೊತೆಗೆ 66 ಕೋಟಿ ರೂಪಾಯಿಗಳ ವೆಚ್ಚಳದಲ್ಲಿ 16 ಕಾರ್ಯಕ್ರಮಗಳ ಕ್ಷಿಪ್ರಯೋಜನೆಯನ್ನು ಮಂಜೂರು ಮಾಡಿದೆ. ರೈತರು ಸಂಘಗಳನ್ನು ಸ್ಥಾಪಿಸಿಕೊಂಡು ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದು ತೋಟಗಳಿಗೆ ನೀರಾವರಿ ಸೌಲಭ್ಯ ಪಡೆದುಕೊಳ್ಳುವುದು. ಹುಳು ಸಾಕಣೆಗೆ ಪ್ರತ್ಯೇಕ ಮನೆಗಳನ್ನು ಕಟ್ಟುವುದು. ಹುಳು ಸಾಕಣೆ ಸಾಮಗ್ರಿಗಳನ್ನು ಕೊಳ್ಳುವುದು, ತೋಟಗಳಿಗೆ ರಸಗೊಬ್ಬರ ಕೊಳ್ಳುವುದು, ರೇಷ್ಮೆ ನೂಲಿನ ವ್ಯಾಪಾರಕ್ಕೆ, ರೇಷ್ಮೆ ಬಿಚ್ಚುವುದಕ್ಕೆ ಬೇಕಾಗುವ ಉಪಕರಣಗಳಿಗಾಗಿ ಅನುಕೂಲ ಕಲ್ಪಿಸುವುದು ಈ ಕ್ಷಿಪ್ರ ಯೋಜನೆಯ ಮೂಲ ಉದ್ದೇಶಗಳು.

**ಆರ್ಥಿಕ ಸ್ಥಿತಿಗತಿ:** ಕರ್ನಾಟಕದಲ್ಲಿ ಈಗ 22 ಲಕ್ಷ ಕೆಜಿಗೂ ಹೆಚ್ಚು ರೇಷ್ಮೆ ಉತ್ಪತ್ತಿಯಾಗುತ್ತಿದೆ. ಇದಲ್ಲದೆ ರಾಜ್ಯದಿಂದ ಪರದೇಶಕ್ಕೆ ರೇಷ್ಮೆದಾರ, ಜೂಟು, ರೇಷ್ಮೆ ವಸ್ತ್ರಗಳು ನಿರ್ಯಾತವಾಗುತ್ತಿದ್ದು ವಿದೇಶಿ ವಿನಿಮಯಗಳಿಕೆಯಾಗುತ್ತಿದೆ. ಮಳೆ ಆಶ್ರಯದ ಭೂಮಿಯಲ್ಲಿ ಪ್ರತಿ ಎಕರೆಗೆ ಖರ್ಚು ಕಳೆದು ರೈತನ ಉತ್ಪನ್ನ ಸು. 2000 ರೂಪಾಯಿಗಳು, ನೀರಾವರಿ ಪ್ರದೇಶದಲ್ಲಿ ಸು. 5,000 ರೂಪಾಯಿಗಳು.

**ಕರ್ನಾಟಕ ರೇಷ್ಮೆ ಕೃಷಿಗೆ ಸಂಬಂಧಿಸಿದ ಅಂಕಿ ಅಂಶಗಳು :**

| | | |
|---|---|---|
| 1 | ಬಿತ್ತನೆಗಾಗಿ ಹುಳುಗಳನ್ನು ಸಾಕಲು ಹಿಪ್ಪನೇರಳೆ ತೋಟಗಳು | 39 |
| 2 | ಹಿಪ್ಪನೇರಳೆ ಕಡ್ಡಿ ಮತ್ತು ಗಿಡಗಳ ಸರಬರಾಜಿಗೆ ನರ್ಸರಿಗಳು | 7 |
| 3 | ಮೈಸೂರು ತಳಿ ಸಾಕಣೆ ಮಾಡುವ ರೈತರು | 11,961 |
| 4 | ಮೈಸೂರು ತಳಿ ಮೊಟ್ಟೆ ಉತ್ಪಾದನಾ ತಾಣಗಳು | 15 |
| 5 | ವಿದೇಶಿ ತಳಿ ಸಾಕಣೆ ಮಾಡುವ ರೈತರು | 1992 |
| 6 | ವಿದೇಶಿ ತಳಿ ಮೊಟ್ಟೆ ಉತ್ಪಾದನಾ ತಾಣಗಳು | 9 |
| 7 | ಮಿಶ್ರತಳಿ ಮೊಟ್ಟೆ ಉತ್ಪಾದನಾ ತಾಣಗಳು | 52 |
| 8 | ಚಾಕಿ ಸಾಕಣೆ ಕೇಂದ್ರಗಳು | 58 |
| 9 | ರೇಷ್ಮೆಗೂಡಿನ ಅಧಿಕೃತ ಮಾರುಕಟ್ಟೆಗಳು | 56 |
| 10 | ಮಿಶ್ರತಳಿ ಮೊಟ್ಟೆ ಉತ್ಪಾದಿಸುವ ಖಾಸಗಿಯವರು | 779 |
| 11 | ಬಿತ್ತನೆ ಕ್ಷೇತ್ರದಲ್ಲಿ ರೇಂಜುಗಳು | 49 |
| 12 | ಮಿಶ್ರತಳಿ ಪ್ರದೇಶದಲ್ಲಿ ರೇಂಜುಗಳು | 200 |

ಮೇಲಿನ ಯೋಜನೆಗಳಲ್ಲದೆ, ಬರಗಾಲ ಪೀಡಿತ ಪ್ರದೇಶಗಳ ಕಾರ್ಯಕ್ರಮಗಳ ಅಂಗವಾಗಿ ಬೆಳಗಾಂವಿ ಧಾರವಾಡ, ರಾಯಚೂರು, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ, 85,65 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಾಲ್ಕು ವರ್ಷದಲ್ಲಿ ಸರಕಾರಿ ಹಿಪ್ಪನೇರಳೆ ತೋಟ ಮಾಡಲು ಮತ್ತು ಹುಳು ಸಾಕಲು ಬೇಕಾದ ಖರ್ಚಿಗೆ ಧನಸಹಾಯ ಒದಗಿಸುವುದು ಹಾಗೂ ವಿಶ್ವಬ್ಯಾಂಕಿನ ಸಹಾಯದಿಂದ ಬಿಜಾಪುರ ಜಿಲ್ಲೆಯಲ್ಲಿ ಸು. 25 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಸರ್ಕಾರಿ ಹಿಪ್ಪನೇರಳೆ ತೋಟ ಮತ್ತು ಹುಳು ಸಾಕಣೆ ಕೇಂದ್ರ ಸ್ಥಾಪನೆ, ರೈತರಿಗೆ ಶಿಕ್ಷಣ, ಪ್ರತಿ ರೈತನೂ ಒಂದು ಹೆಕ್ಟೇರು ಹಿಪ್ಪನೇರಳೆ ತೋಟ ಮಾಡಲು 5,600 ರೂಪಾಯಿ ಸಾಲ ಕೊಡುವ ಕಾರ್ಯಕ್ರಮವನ್ನು ಈಗಾಗಲೇ ಜಾರಿಗೆ ತರಲಾಗಿದೆ.

ಕೇಂದ್ರ ರೇಷ್ಮೆ ಸಂಶೋಧನ ಮತ್ತು ತರಬೇತಿ ಸಂಸ್ಥೆ : 1951ರಲ್ಲಿ ಸಲಹಾ ಸಮಿತಿ ನೀಡಿದ ಸಲಹೆ ಮೇರೆಗೆ ರಾಜ್ಯ ಸರ್ಕಾರ ಸಂಶೋಧನ ಕೇಂದ್ರವನ್ನು ಸ್ಥಾಪಿಸಿ, ಅನಂತರ ಕೇಂದ್ರ ರೇಷ್ಮೆ ಮಂಡಲಿಗೆ ವಹಿಸಿಕೊಟ್ಟಿತ್ತು. ಇಲ್ಲಿ ರೇಷ್ಮೆ ಕೈಗಾರಿಕೆಯ ವಿವಿಧ ಅಂಗಗಳ ಬಗ್ಗೆ ಸಂಶೋಧನೆ ನಡೆಯುತ್ತ ಇದೆ. ಈಗಾಗಲೇ ನಮ್ಮ ರಾಜ್ಯದ ವಾತಾವರಣಕ್ಕೆ ತಕ್ಕಮಟ್ಟಿಗೆ ಹೊಂದಿಕೊಂಡು, ರೈತರು ಸಾಕಬಹುದಾದ ಅಧಿಕ ಇಳುವರಿ ಕೊಡುವ ಬೈವೋಲ್ಟೈನ್ ತಳಿಗಳನ್ನು ಹೊರ ತಂದಿದೆ. ಇದಲ್ಲದೆ ಉತ್ಕೃಷ್ಟ ಜಾತಿಯ ಹಿಪ್ಪನೇರಳೆ ಗಿಡಗಳನ್ನು ಹೊರ ತರುವ ಸಂಶೋಧನ ಕಾರ್ಯದಲ್ಲಿ ನಿರತವಾಗಿದೆ. ಈಗಾಗಲೇ ಪ್ರಯೋಗಾಲಯ ಮಟ್ಟದಲ್ಲಿ ಕೆಲವೊಂದು ತಳಿಗಳು (S54, S36, S30) ಆಶಾದಾಯಕವಾಗಿ ಕಾಣಬರುತ್ತಿವೆ.

2000–2001ನೆ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾವಾರು ರೇಷ್ಮೆ ಉತ್ಪಾದನೆಯ ಅಂಕಿಅಂಶ ಈ ರೀತಿ ಇದೆ.

| | ಜಿಲ್ಲೆಗಳು | ಹಿಪ್ಪನೇರಳೆ ಬೆಳೆ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ರೇಷ್ಮೆ ಉತ್ಪಾದನೆ (ಟನ್ನುಗಳಲ್ಲಿ) |
|---|---|---|---|
| 01. | ಬೆಂಗಳೂರು(ನಗರಜಿಲ್ಲೆ) | 1,893 | 1,347 |
| 02. | ಬೆಂಗಳೂರು(ಗ್ರಾ) | 21,625 | 15,518 |
| 03. | ಚಿತ್ರದುರ್ಗ | 3,340 | 1,716 |
| 04. | ದಾವಣಗೆರೆ | 212 | 84 |
| 05. | ಕೋಲಾರ | 32,492 | 23,099 |
| 06. | ಶಿವಮೊಗ್ಗ | 184 | 47 |
| 07. | ತುಮಕೂರು | 11,015 | 6,088 |
| 08. | ಬೆಳಗಾಂವಿ | 500 | 205 |
| 09. | ಬಿಜಾಪುರ | 259 | 91 |
| 10. | ಬಾಗಲಕೋಟೆ | 303 | 83 |
| 11. | ಧಾರವಾಡ | 136 | 49 |
| 12. | ಗದಗ | 163 | 39 |
| 13. | ಹಾವೇರಿ | 208 | 69 |
| 14. | ಉತ್ತರಕನ್ನಡ | 317 | 69 |
| 15. | ಬಳ್ಳಾರಿ | 541 | 293 |
| 16. | ಬೀದರ್ | 75 | 25 |
| 17. | ಗುಲ್ಬರ್ಗ | 278 | 122 |
| 18. | ರಾಯಚೂರು | 138 | 28 |
| 19. | ಕೊಪ್ಪಳ | 164 | 39 |
| 20. | ಚಿಕ್ಕಮಗಳೂರು | 158 | 37 |
| 21. | ದಕ್ಷಿಣಕನ್ನಡ | 172 | 35 |
| 22. | ಉಡುಪಿ | 148 | 19 |
| 23. | ಹಾಸನ | 2,012 | 1,046 |
| 24. | ಕೊಡಗು | 134 | 29 |
| 25. | ಮಂಡ್ಯ | 10,349 | 6,506 |
| 26. | ಮೈಸೂರು | 8,698 | 4,201 |
| 27. | ಚಾಮರಾಜನಗರ | 14,004 | 5,020 |

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಹಿಪ್ಪನೇರಳೆ ಬೆಳೆ ವಿಸ್ತೀರ್ಣದಲ್ಲಿ ಮತ್ತು ರೇಷ್ಮೆ ಉತ್ಪಾದನೆಯಲ್ಲಿ ಕೋಲಾರ ಜಿಲ್ಲೆ ರಾಜ್ಯಕ್ಕೆ ಪ್ರಥಮವಾದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಎರಡನೆಸ್ಥಾನದಲ್ಲಿದೆ.

ಭಾರತದ ಒಟ್ಟು ರೇಷ್ಮೆಯಲ್ಲಿ ಸೇಕಡ 80ರಷ್ಟು ರೇಷ್ಮೆಯನ್ನು ಕರ್ನಾಟಕ ರಾಜ್ಯ ಪೂರೈಸುತ್ತಿದೆ.

**ಟಸ್ಸಾರ್ ರೇಷ್ಮೆ:** ರಾಜ್ಯದ ಶಿರಸಿ, ಧಾರವಾಡ, ಬೆಳಗಾಂವಿ, ಬಿಳಿಗಿರಿ ರಂಗನಬೆಟ್ಟ ಹಾಗೂ ರಾಣೆಬೆನ್ನೂರು ಪ್ರಾಂತ್ಯಗಳಲ್ಲಿ ಕರಿ ಮತ್ತು ಬಿಳಿ ಮತ್ತಿ ಮರಗಳು ಹಾಗೂ ಹಾರ್ಡಿವಿಕೆಯ ಮರಗಳು ಅತಿ ಸಮೃದ್ಧಿಯಾಗಿ ಬೆಳೆಯುತ್ತವೆ. ಇವುಗಳ ಎಲೆಗಳು ಟಸ್ಸಾರ್ ಜಾತಿಯ ರೇಷ್ಮೆ ಹುಳುಗಳಿಗೆ ಒಳ್ಳೆಯ ಆಹಾರ. ಇದನ್ನು ಉಪಯೋಗಿಸಿಕೊಂಡು ಟಸ್ಸಾರ್ ಬೆಳೆಯನ್ನು ಅಭಿವೃದ್ಧಿ ಮಾಡಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. *

**ರೈತ ಚಳವಳಿ:** ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಸಮಕಾಲೀನ ವ್ಯವಸ್ಥೆಯ ಪ್ರತಿಭಟನೆಯೊಡನೆ ಹುಟ್ಟಿಕೊಂಡ ಒಂದು ಸಂಘಟನೆ. ಭಾರತದಲ್ಲಿ ಇಲ್ಲಿಯವರೆಗೆ ಸುಮಾರು ನೂರು ರೈತ ಚಳವಳಿಗಳು ನಡೆದಿವೆ ಎಂದು ಅಂದಾಜುಮಾಡಲಾಗಿದೆ. ಮುಗಲರ ಕಾಲದಿಂದ ಈವರೆಗೆ ಭಾರತದಲ್ಲಿ 77 ರೈತ ಹೋರಾಟಗಳ ದಾಖಲೆಯನ್ನು ಕ್ಯಾಥಲೀನ್ ಗಾಫೆ ಎಂಬಾಕೆ ಕೊಟ್ಟಿದ್ದಾಳೆ. ಇಂಥ ಚಳವಳಿಗಳನ್ನು ಆಕೆ ಐದು ವಿಧವಾಗಿ ವಿಂಗಡಿಸಿದ್ದಾಳೆ. ಈ ಪಟ್ಟಿಗೆ ಡಿ.ಎನ್. ಧನಗರೆ ಎಂಬಾತ ಮತ್ತೊಂದು ಪ್ರಕಾರವನ್ನು ಸೇರಿಸಿದ್ದಾನೆ. ರೈತ ಚಳವಳಿಯ ಆರು ವಿಧಗಳು ಹೀಗಿವೆ:

1. ಪುನಸ್ಥಾಪನ ದಂಗೆಗಳು 2. ಧಾರ್ಮಿಕ ಚಳವಳಿಗಳು 3. ಸಮಾಜನಿಷ್ಠ ದರೋಡೆಗಳು 4. ಭಯೋತ್ಪಾದಕ ಪ್ರತೀಕಾರಗಳು 5. ಜನತಾ ಚಳವಳಿಗಳು ಮತ್ತು 6. ಸುಧಾರಣಾವಾದಿ ಚಳವಳಿಗಳು.

ಸ್ವಾತಂತ್ರ್ಯಪೂರ್ವ ರೈತ ಚಳವಳಿಗಳು ಹೆಚ್ಚಾಗಿ ಪರಕೀಯರ ವಿರುದ್ಧ ನಡೆದವು. ಭೂಸಂಬಂಧವುಳ್ಳ ಎಲ್ಲ ವರ್ಗದ ರೈತರೂ ಇಂಥ ಚಳವಳಿಗಳಲ್ಲಿ ಭಾಗವಹಿಸಿದ್ದಾರೆ. ಮೊದಲ ಎರಡು ಹಂತದ ಚಳವಳಿಗಳಲ್ಲಿ ಪರಕೀಯರಿಂದಾಗಿ ಭೂಮಿ ಕಳೆದುಕೊಂಡ ಪಾಳೆಯಗಾರರು, ಹಳೆಯ ಪ್ರಭುಗಳು, ಆಡಳಿತಗಾರರು, ದಿವಾಳಿ ಎದ್ದ ರೈತರು, ಕೈ ಕಸಬುಗಳನ್ನು ಕಳೆದುಕೊಂಡವರು, ಕೂಲಿ ಕಾರ್ಮಿಕರು, ಧರ್ಮಗುರುಗಳು ಹಾಗೂ ಆದಿವಾಸಿ ಮುಖಂಡರು ಭಾಗವಹಿಸಿದ್ದಾರೆ.

ಶ್ರೀಮಂತರು ಹಾಗೂ ಭೂಮಾಲೀಕರ ಕಿರುಕುಳದಿಂದ ಬದುಕುಗೆಟ್ಟ ಶಕ್ತಿಶಾಲಿಗಳು ಅವರ ವಿರುದ್ಧ ನಿಂತು, ಅವರ ಆಸ್ತಿ-ಪಾಸ್ತಿಯನ್ನು ದರೋಡೆ ಮಾಡಿದರು. ದರೋಡೆ ಮಾಡಿದ ಆಸ್ತಿಯಲ್ಲಿ ಬಹುಪಾಲನ್ನು ನೊಂದವರಿಗೆ, ಬಡವರಿಗೆ ಹಂಚಿದರು. ಈ ಕಾರಣವಾಗಿ ಇವರ ದರೋಡೆಗಳು ಸಮಾಜನಿಷ್ಠವಾಗಿದ್ದವು ಎನ್ನಬಹುದು. 17 ಹಾಗೂ 18ನೆಯ ಶತಮಾನಗಳಲ್ಲಿ ಮಧ್ಯಭಾರತದ ಠಕ್ಕರು, ಮದರಾಸು ಪ್ರಾಂತದ ಕಳ್ಳರು, ಕೇರಳದ ಸನ್ಯಾಸಿ-ಫಕೀರರು ಈ ಕ್ರಿಯೆಯಲ್ಲಿ ತೊಡಗಿದ್ದರು.

ಭಯೋತ್ಪಾದಕ ಪ್ರತೀಕಾರದ ಹಲವು ಹೋರಾಟಗಳು ನಡೆದಿವೆ. ಶ್ರೀಮಂತರು, ಭೂ ಮಾಲೀಕರು, ಸರ್ಕಾರಿ ಅಧಿಕಾರಿಗಳಿಂದ ಒಕ್ಕಲೆಬ್ಬಿಸುವಿಕೆ, ಅಧಿಕ ಕಂದಾಯ, ಬಿಟ್ಟಿ ಕೆಲಸಗಳಂಥ ಹಿಂಸಾತ್ಮಕ ಒತ್ತಡಗಳಿಂದ ಈ ಹೋರಾಟಗಳು ಹುಟ್ಟಿಕೊಂಡಿವೆ. ತೀವ್ರಗಾಮಿ ಎಡಪಂಥೀಯ ಹೋರಾಟಗಳು ಈ ಗುಂಪಿನಲ್ಲಿ ಬರುತ್ತವೆ. ಸ್ವಾತಂತ್ರ್ಯ ಹೋರಾಟ ಸಂದರ್ಭದ ರೈತ ಚಳವಳಿಗಳು ಜನತಾ ಆಂದೋಲನದೊಳಗೆ ಸೇರಿಕೊಂಡು ಬಂದವು. ಸ್ವಾತಂತ್ರ್ಯಪೂರ್ವ ಹಾಗೂ ಅನಂತರದಲ್ಲಿ ಸುಧಾರಣಾ ನೆಲೆಯ ಚಳವಳಿಗಳು ನಡೆದಿವೆ.

ಬಹುಶಃ ಮುಗಲ್ ಸಾಮ್ರಾಜ್ಯದ ಬೆಳವಣಿಗೆಯ ಆರಂಭ ಭಾರತದ ರೈತ ಹೋರಾಟಗಳಿಗೆ ನೆಲೆ ಕಲ್ಪಿಸಿಕೊಟ್ಟಂತೆ ಕಾಣುತ್ತದೆ. ಹೊಸ ರೀತಿಯ ಭೂ ವಿಂಗಡನೆ, ಹಂಚಿಕೆ ಹಾಗೂ ಕಂದಾಯ ನಿಗದಿ ಕ್ರಮ ಭಾರತದ ಭೂ ಒಡೆತನದ ನೆಲೆಯನ್ನು ಅಲ್ಲಾಡಿಸಿತು. ಅದರ ಪರಿಣಾಮವಾಗಿ ಬೇರೆ ಬೇರೆ ರೀತಿಯಲ್ಲಿ ರೈತರು ಸಂಘಟಿತರಾದರು. ಕೆಲಮಟ್ಟಿಗೆ ಆಡಳಿತ ವ್ಯವಸ್ಥೆಯನ್ನೂ ಪ್ರಶ್ನಿಸಿದರು. ಕೈಗಾರಿಕಾ ಕ್ರಾಂತಿಗೆ ಮೊದಲು ಭೂಒಡೆತನದಲ್ಲಿ ಆದ ಬದಲಾವಣೆಗಳು ರಾಜ್ಯಗಳ ನಾಶ ಹಾಗೂ ಉದಯದ ಕಥೆಗಳಾಗಿವೆ. ಇವು ರೈತರ ಭೂಮಿಯನ್ನು ಕುರಿತ ನಿಜ ಕಥೆಗಳು. ಮುಗಲರೂ ಈ ದೇಶದ ಪ್ರಜೆಗಳೇ ಆಗಿ ಕರಗಿ ಹೋದುದರಿಂದ ಆ ಕಾಲದ ರೈತ ಪ್ರತಿಭಟನೆಗಳು ಹೆಚ್ಚು ಸಾಮೂಹಿಕ ಸ್ವರೂಪ ಪಡೆದುಕೊಂಡಂತೆ ಕಾಣುವುದಿಲ್ಲ.

ಬ್ರಿಟಿಷರು ಹೊರಗಿನಿಂದ ಭಾರತಕ್ಕೆ ಬಂದರಾದರೂ ಇಲ್ಲಿಯವರಾಗಲಿಲ್ಲ. ಅವರು ಇಲ್ಲಿಂದ ಸಂಪತ್ತನ್ನು ಒಯ್ಯುವ ವ್ಯಾಪಾರಿ ರಾಜಪ್ರಭುಗಳಾಗಿದ್ದರು. ವ್ಯವಸಾಯ ಜೀವನಕ್ಕೆ ಸ್ಪರ್ಧಿಯಾಗಿ ಕೈಗಾರಿಕಾ ಸಂಸ್ಕೃತಿಯನ್ನು ಬೆಳೆಸತೊಗಿದರು. ಭಾರತದ ವ್ಯವಸಾಯಿಕ ಉತ್ಪನ್ನಗಳು ಇಂಗ್ಲೆಂಡಿನ ಕೈಗಾರಿಕೀಕರಣವನ್ನು ಅಭಿವೃದ್ಧಿಗೊಳಿಸುವ ಸಾಧನವಾದವು. ಸರ್ಕಾರದ ಬೊಕ್ಕಸ ತುಂಬಲು ಹಾಗೂ ತಮ್ಮ ಯುದ್ಧ ವೆಚ್ಚವನ್ನು ಭರಿಸಲು ಅವರು ಭಾರತದ ವ್ಯವಸಾಯಗರ ಮೇಲೆ ಹೆಚ್ಚು ಕಂದಾಯ ವಿಧಿಸಿದರು. ನೇರ ಕಂದಾಯ ವಸೂಲಿಯಾಗಲು ಕೃಷಿಕರ ಮಧ್ಯೆ ಅನೇಕ ಬಗೆಯ ಮಧ್ಯವರ್ತಿಗಳನ್ನು ತಂದರು. ಹೊಸ ಭೂಮಾಲೀಕರು, ಜಹಗೀರುದಾರರು, ಇನಾಂದಾರರು, ವ್ಯಾಪಾರಿಗಳು, ಅಧಿಕಾರಿಗಳು ಸ್ಥಾಪಿತರಾದರು. ಅನೇಕ ರೈತರು ಭೂಮಿ ಕಳೆದುಕೊಂಡು ಕೂಲಿಗಳಾದರು. ಸ್ವಯಂ ಬೇಸಾಯ ಸಂಸ್ಕೃತಿಯ ಆದಿವಾಸಿಗಳ ಮೇಲೆ ಇದು ತೀವ್ರ ಪರಿಣಾಮ ಬೀರಿತು. ಅವರು ಹೊಸ ಜಮೀನುದಾರರ ಕೈಕೆಳಗೆ ಬರುವಂತಾಯಿತು. ಸ್ಥಳೀಯ ಗುಡಿಕೈಗಾರಿಕೆಗಳು ನಾಶವಾದುವು. ಯಾರ್ಕ್‌ಷೈರ್‌ನಿಂದ ಬಟ್ಟೆಬರೆಗಳನ್ನು ಕೊಳ್ಳುವ ಸ್ಥಿತಿ ಉಂಟಾಯಿತು. ವಾಣಿಜ್ಯ ಬೆಳೆಗಳನ್ನು ಬೆಳೆಯಲು ಒತ್ತಾಯ, ಹಿಂಸೆ ಕೊಡಲಾಯಿತು. ಆಹಾರ ಬೆಳೆಗಳು ಗಣನೀಯವಾಗಿ ಕಡಿಮೆಯಾದವು. ಸಾಮಾನ್ಯರ ಜೀವನ ನಿರ್ವಹಣೆ ಕಷ್ಟವಾಯಿತು. ತೆರಿಗೆ ಕೊಟ್ಟು ಉಳಿದುದರಲ್ಲಿ ಜೀವನ ಸಾಗಿಸುವುದು ದುಸ್ತರವಾಯಿತು. ಈ ಕಾರಣದ ಮೇಲೆ ಆದಿವಾಸಿ ಕೃಷಿಕರು, ಬೇರೆ ಬೇರೆ ನೆಲೆಯಲ್ಲಿ ಕೃಷಿ ಮಾಡುತ್ತಿದ್ದ ರೈತರು ಸ್ಥಳೀಯ ನೆಲೆಯಲ್ಲಿ ಸಂಘಟನೆಗೊಂಡು ಪ್ರತ್ಯಕ್ಷವಾಗಿ ಸ್ಥಳೀಯ ಭೂಮಾಲೀಕರನ್ನು, ಪರೋಕ್ಷವಾಗಿ ಬ್ರಿಟಿಷರನ್ನು ವಿರೋಧಿಸುವುದು ಅನಿವಾರ್ಯವಾಯಿತು.

ಸ್ವಾತಂತ್ರ್ಯಪೂರ್ವದ ರೈತ ಹೋರಾಟಗಳು ಪ್ರಾದೇಶಿಕವಾದುವು; ಅವುಗಳ ಉದ್ದೇಶಕೂಡ ಸೀಮಿತವಾಗಿರುತ್ತಿತ್ತು. ಸದ್ಯದ ನೋವಿಗೆ ಪರಿಹಾರ ಕಂಡುಕೊಳ್ಳುವುದು ಮುಖ್ಯ ಅಪೇಕ್ಷೆಯಾಗಿತ್ತು. ಶತ್ರುಗಳನ್ನೂ ಸಮಸ್ಯೆಗಳನ್ನೂ ಸ್ಪಷ್ಟವಾಗಿ ಗುರುತಿಸಿ ಹೋರಾಡುವ ಭೂಮಿಕೆ ಇನ್ನೂ ಸಿದ್ಧವಾಗಿರಲಿಲ್ಲ. ಬಹಳ ಮುಖ್ಯವಾಗಿ ಈ ಹೋರಾಟಗಳು ತಮ್ಮ ಪೂರ್ವಾಶ್ರಮ ಜೀವತತ್ತ್ವ ಹಾಗೂ ವರ್ಗಗಳಿಂದ ಹೊರಗೆ ಬರಲು ಇಚ್ಛಿಸಲಿಲ್ಲ. ಆದುದರಿಂದಲೆ ಈ ರೈತ ಹೋರಾಟಗಳ ಜೊತೆಗೆ ಮತ, ಧರ್ಮ ಮುಂತಾದ ನಿರ್ಬಂಧಗಳು ಹೇರಿಕೊಂಡಿದ್ದವು. ಈ ಸನ್ನಿವೇಶದಲ್ಲಿ ಕಂಡು ಬಂದ ಮುಖ್ಯ ನೆಲೆಯ ಹೋರಾಟಗಳಿವು:

1772-80 ಸಂನ್ಯಾಸಿ - ಫಕೀರರ ದಂಗೆಗಳು

1855 ಸಂತಾಲ ದಂಗೆ

1860 ನೀಲಿ ಬೆಳೆಗಾರರ ಚಳವಳಿ

1875 ದಕ್ಷಿಣದ ದಂಗೆಗಳು

1836-1931 ಮಾಪಿಳ್ಳೆ ದಂಗೆಗಳು

1928 ಬಾರ್ಡೋಲಿಯ ರೈತ ಸತ್ಯಾಗ್ರಹ

1945-46 ವಾರಲಿ ಆದಿವಾಸಿಗಳ ಹೋರಾಟ ಹಾಗೂ

1946-47 ತೇಭಾಗ ಚಳವಳಿ

ರೈತರು ತಮ್ಮ ಹಿಂಸೆಗೆ ಸಂನ್ಯಾಸಿ, ಫಕೀರರ ವೇಷದಲ್ಲಿ ಸಂಘಟನೆಗೊಂಡು ಪ್ರತಿಕ್ರಿಯಿಸಿದ ರೀತಿಯೇ ಸಂನ್ಯಾಸಿ-ಫಕೀರರ ದಂಗೆ. ಇವು ರೈತಾಪಿ ಜನರ ಪ್ರಥಮ ಪ್ರತಿಭಟನೆಗಳು, ಬ್ರಿಟಿಷರ ವಿರುದ್ಧದ ಮೊದಲ ಯುದ್ಧಗಳು. ಬ್ರಿಟಿಷರ ಆಡಳಿತ ಹಾಗೂ ಕಂದಾಯ ನೀತಿಯನ್ನು ಪ್ರತಿಭಟಿಸಿದಾಗ ಬ್ರಿಟಿಷ್ ಸೈನ್ಯ ಹಳ್ಳಿ ಹಳ್ಳಿಗಳನ್ನೇ ನಾಶಮಾಡುತ್ತಿತ್ತು. ಈ ಘಟನೆಗಳಿಂದ ನೆಲೆ ಕಳೆದುಕೊಂಡವರು ಸಂಘಟಿತರಾಗಿ ಬ್ರಿಟಿಷರ ಪರವಾಗಿದ್ದ ಭೂಮಾಲೀಕರನ್ನೂ ಆಡಳಿತಗಾರರನ್ನೂ ಅವರ ಸೇವಕರನ್ನೂ ಹಿಡಿದು ಬಡಿಯುತ್ತಿದ್ದರು. ಬ್ರಿಟಿಷ್ ಸರ್ಕಾರಕ್ಕೆ ಸೇರಬೇಕಾದ ಹಣವನ್ನು ಕೊಳ್ಳೆ ಹೊಡೆಯುತ್ತಿದ್ದರು. ಬಿಹಾರ, ಬಂಗಾಲ ಹಾಗೂ ಪೂರ್ವ-ಈಶಾನ್ಯ ಭಾರತದ ಹಲವು ಪ್ರದೇಶಗಳಿಗೆ ಈ ದಂಗೆಗಳು ಹರಡಿದ್ದವು.

ಸಂತಾಲರ ದಂಗೆ ಭಾರತದ ಆರ್ಥಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಮೇಲೆ ಬ್ರಿಟಿಷರು ಹಾಕಿದ ಒಂದು ದೊಡ್ಡ ಬರೆ. ಸಂತಾಲರು ನಿಜವಾದ ಬೇಸಾಯಗಾರರು. ಇವರದು ಬೇಸಾಯವನ್ನು ಆಧರಿಸಿದ ರಾಜ್ಯ ಪದ್ಧತಿ ಹಾಗೂ ಸಾಂಸ್ಕೃತಿಕ ಜೀವನ. ಬ್ರಿಟಿಷರ ಹೊಸ ಭೂ ಹಂಚಿಕೆ ಹಾಗೂ

ಬಡತನದ ಕಾರಣವಾಗಿ ಇವರು ಹೊಸ ಭೂಮಾಲೀಕರಿಗೆ ತಮ್ಮ ಜಮೀನಿನ ಒಡೆತನ ಬಿಟ್ಟುಕೊಟ್ಟು ಅವರಲ್ಲಿ ಕನಿಷ್ಠ ಕೂಲಿಗಾಗಿ ದುಡಿಯುವ ಕೂಲಿಕಾರರಾಗಬೇಕಾಯಿತು. 'ನೆಲಬಿಡಿ ಇಲ್ಲವೆ ಗೇಣಿಕೊಡಿ' ಎಂದು ಹೊಸ ಮಾಲೀಕರು ಇವರಿಗೆ ತಾಕೀತು ಮಾಡಿದರು. ಜಮೀನುದಾರರ, ಪೊಲೀಸರ, ಅಧಿಕಾರಿಗಳ ಮತ್ತು ಸಾಲಗಾರರ ಹಿಂಸೆ, ಹೆಂಡತಿ ಮಕ್ಕಳ ಮೇಲಿನ ಅವರ ದೌರ್ಜನ್ಯ, ತೂಕ ಮತ್ತು ಮಾರಾಟದಲ್ಲಿ ಮೋಸ–ಈ ಕಾರಣಗಳಿಂದಾಗಿ ಮುಗ್ಧರಾದ ಈ ಬುಡಕಟ್ಟು ಜನ ತತ್ತರಿಸಿ ಹೋದರು. ಬದುಕುವ ಕೊನೆಯ ಆಸೆಯಾಗಿ ಹೋರಾಟಕ್ಕೆ ನಿಂತರು. ಸಾವಿರ ಸಾವಿರ ಸಂಖ್ಯೆಯಲ್ಲಿ ಸಂಘಟಿತರಾಗಿ ಹಿಂಸೆಯ ಮಾರ್ಗ ಹಿಡಿದು ತಮ್ಮ ಅಸ್ತಿತ್ವ ಸ್ಥಾಪಿಸಿಕೊಳ್ಳಲು ಹೊರಟರು. ಬ್ರಿಟಿಷ್ ಸೈನ್ಯ ಸಂತಾಲ ಸಮುದಾಯವನ್ನು ಸದೆ ಬಡಿಯಿತು. ಸಂತಾಲರು ತಮ್ಮ ಬಿಲ್ಲು ಬಾಣ ಮತ್ತು ದೈಹಿಕ ಶಕ್ತಿಗಳಿಂದಲೇ ನೈತಿಕ ಹೋರಾಟವನ್ನು ಮುಂದುವರಿಸಿದರು. ಈ ದಂಗೆಯಲ್ಲಿ ಸು. 25 ಸಾವಿರ ಸಂತಾಲರು ಸತ್ತರೆಂದು ವರದಿ.

ಬಂಗಾಲ, ಬಿಹಾರ ಪ್ರದೇಶದ ನೀಲಿ ಬೆಳೆಗಾರರೆಂದರೆ ಆ ಕಾಲದ ಬ್ರಿಟಿಷ್ ಹಾಗೂ ಬ್ರಿಟಿಷ್ ಪರ ಭೂಮಾಲೀಕರು, ಗುಲಾಮರು ಎಂದೇ ಹೇಳಬೇಕು. ತಮ್ಮ ಹೊಟ್ಟೆಗೆ ಅನ್ನ ಬೆಳೆದುಕೊಳ್ಳುವುದಕ್ಕೆ ಅವಕಾಶವಿಲ್ಲದೆ ಆಳುವ ಪ್ರಭುಗಳ ಬಟ್ಟೆಗೆ ಬೇಕಾದ ನೀಲಿ ಬಣ್ಣಕೊಡುವ ಬೆಳೆ ಬೆಳೆದು ಕೊಡುವ ಕೈದಿಗಳಂತೆ ಇವರು ದುಡಿದರು. ಇವರ ಮೇಲಿನ ಹಿಂಸೆ ಹೇಳಲಸದಳ. ಬದುಕು ತೀರ ಕಷ್ಟ. ನೀಲಿ ಬೆಳೆಗಾರರಾದ ಹಿಂದು ಮುಸ್ಲಿಮ್ ನೌಕರರು ತಮ್ಮ ಶೋಷಣೆಯನ್ನು ಪ್ರತಿಭಟಿಸಿದರು. ಶೋಷಕರಿಗೆ ಮುತ್ತಿಗೆ ಹಾಕಿದರು. ಸರ್ಕಾರದ ಮಧ್ಯಪ್ರವೇಶದಿಂದ ಸ್ವಲ್ಪ ಪರಿಹಾರವನ್ನೂ ಪಡೆದರು.

ದಖನ್ ದಂಗೆಯ ಮೂಲಸ್ಥಾನ ಮುಂಬಯಿ ಪ್ರಾಂತದ ಪುಣೆ ಮತ್ತು ಅಹಮದ್‍ನಗರ ಪ್ರದೇಶಗಳು. ಇವು ರೈತವಾರಿ ಜಿಲ್ಲೆಗಳಾಗಿದ್ದವು. ಮುಂಬಯಿ ಸರ್ಕಾರ ಕಂದಾಯ ಹೆಚ್ಚಿಸುತ್ತಹೋಯಿತು. ಸ್ಥಳೀಯ ಸಾಹುಕಾರರ ಬಡ್ಡಿ ವ್ಯವಹಾರ ಜನರ ಮೈಮೇಲೆ ಅಮರಿಕೊಂಡಿತು. ಇದರಿಂದಾಗಿ ಚಿಕ್ಕಪುಟ್ಟ ರೈತರೆಲ್ಲ ಜಮೀನು ಕಳೆದುಕೊಳ್ಳುತ್ತ ಹೋದರು. ಸಿಟ್ಟುಗೊಂಡ ಅವರು ಸಂಘಟಿತರಾಗಿ ಬಡ್ಡಿ ವ್ಯಾಪಾರಿಗಳಿಗೆ ಮುತ್ತಿಗೆ ಹಾಕಿದರು. ಸಾಲ ಪತ್ರಗಳನ್ನು ಕಿತ್ತು ಸುಟ್ಟುಹಾಕಿದರು. ದಂಗೆ ಅಡಗಿಸಲು ಸೈನ್ಯ ಬಂತು. ಸೆರೆಸಿಕ್ಕವರಿಗೆ ಹಿಂಸೆಯ ಜೊತೆಗೆ ಪುಂಡುಗಂದಾಯ ಹಾಕಲಾಯಿತು.

ಮಾಪಿಳ್ಳೆಗಳ ದಂಗೆ ಆರ್ಥಿಕ ಸ್ವರೂಪದಲ್ಲಿ ಕಾಣಿಸಿಕೊಂಡರೂ ಅದರ ಅಂತರಂಗ ಅವರ ಧಾರ್ಮಿಕ ಅಸ್ತಿತ್ವದಲ್ಲಿದೆ. ಅರಬ್ ದೇಶಗಳಿಂದ ಬಂದ ವ್ಯಾಪಾರಿಗಳು ಹಾಗೂ ಕೇರಳದ ಸ್ಥಳೀಯ ಹೆಣ್ಣುಗಳ ವೈವಾಹಿಕ ಸಂಬಂಧದಿಂದ ಹುಟ್ಟಿದವರು ಮಾಪಿಳ್ಳೆಗಳು. ಇವರು ಕೇರಳದ ಆ ಕಾಲದ ಭೂಒಡೆಯರಾದ ನಂಬೂದರಿಗಳು ಹಾಗೂ ಅವರ ಸಹವಾಸಿಗ ಳಾದ ನಾಯರ್‌ಗಳಲ್ಲಿ ಕೃಷಿಕೂಲಿಗಾಗಿ ಕೆಲಸ ಮಾಡುತ್ತಿದ್ದರು. ಇವರು ಹೆಚ್ಚಿನ ಗೇಣಿ ಕೊಡಬೇಕಿತ್ತು, ಕೊಡದಿದ್ದರೆ ಒಕ್ಕಲೆಬ್ಬಿಸುತ್ತಿದ್ದರು. ಸಾಮಾಜಿಕವಾಗಿ ಹೀನವಾಗಿ ನೋಡಿಕೊಳ್ಳುತ್ತಿದ್ದರು. ಬಹಳಕಾಲದ ಈ ಹಿಂಸೆಯಿಂದಾಗಿ ಅವರು ಸಿಡಿದೆದ್ದರು. 1863ರಿಂದ 1921ರ ವರೆಗೆ ಸುಮಾರು ಐವತ್ತು ದಂಗೆಗಳಾದವು. ಅನೇಕ ಹಿಂಸಾಕೃತ್ಯಗಳು ನಡೆದವು. ಸಾವಿರಾರು ಮಾಪಿಳ್ಳೆಗಳು ಸತ್ತರು. ಈ ಎಲ್ಲದಕ್ಕೆ ಅವರ ಧಾರ್ಮಿಕ ಗುರುಗಳ ಬೆಂಬಲವೂ ಇತ್ತು. ಒಂದು ಕಡೆ ತಮ್ಮ ಭೂ ಮಾಲೀಕರ ವಿರುದ್ಧ ಹೋರಾಡಿದರು. ಮತ್ತೊಂದು ಕಡೆ ಹಿಂದೂ ಧರ್ಮದವರಿಂದ ಬಹಿಷ್ಕೃತರಾಗಿ ದೂರವಿರಿಸಲ್ಪಟ್ಟ ಜನರೊಂದಿಗೆ ಸ್ನೇಹ–ವೈವಾಹಿಕ ಸಂಬಂಧ ಬೆಳೆಸಿಕೊಂಡು ತಮ್ಮ ಜನಸಂಖ್ಯೆಯನ್ನು ವೃದ್ಧಿಸಿಕೊಂಡರು. ಕೊನೆಗೆ ಒಂದು ರಾಜಕೀಯ ಬಲವಾಗಿ ರೂಪುಗೊಂಡರು.

ಗಾಂಧೀಯವರ ಸತ್ಯಾಗ್ರಹ ಪರಿಕಲ್ಪನೆ ರೂಪುಗೊಳ್ಳುವವರೆಗಿನ ರೈತ ಹೋರಾಟಗಳು ದೈಹಿಕ ಹಿಂಸೆಗಳಾಗಿದ್ದವು. ಸತ್ಯಾಗ್ರಹ ರೈತ ಹೋರಾಟದ ಅಸ್ತ್ರವಾದ ಮೇಲೆ ಅವು ಮಾನಸಿಕ ಹಿಂಸೆ – ಪ್ರತಿ ಹಿಂಸೆಯ ಸ್ವರೂಪ ಪಡೆದವು. ಕೆಲಮಟ್ಟಿಗೆ ರೈತರ ಸಮಸ್ಯೆಗಳ ಪರವಾಗಿ ಹೋರಾಡಲು ಕಾಂಗ್ರೆಸ್ ನಿರ್ಧರಿಸಿತು. 1928ರ ಬಾರ್ಡೋಲಿಯ ರೈತ ಸತ್ಯಾಗ್ರಹ ಇದಕ್ಕೊಂದು ಉದಾಹರಣೆ. ಈ ಹೋರಾಟ ಎರಡು ಹಂತದಲ್ಲಿ ನಡೆಯಿತು. ಇದರ ನೇತೃತ್ವವನ್ನು ಗಾಂಧೀಯವರ ಸಮ್ಮತಿಯಂತೆ ಸರ್ದಾರ್ ವಲ್ಲಭಭಾಯಿ ಪಟೇಲ್ ವಹಿಸಿದ್ದರು. ಅವರನ್ನು 'ಬಾರ್ಡೋಲಿಯ ವೀರ' ಎಂದೂ ಕರೆಯಲಾಯಿತು.

ಸೂರತ್ ಪ್ರಾಂತದ ಭೂಮಾಲೀಕರು ಮತ್ತು ಅವರ ಗೇಣಿದಾರರ ಮಧ್ಯೆ ವೈಮನಸ್ಯ ಉಂಟಾಯಿತು. ದೂಬ್ಲಾ, ನಾಯಿಕ, ಚೋಧ್ರಾ, ದೂಧಿಂಯಾ, ಗಾಮಿಟ ಮುಂತಾದ ಕೂಲಿಕಾರ ಜನ ಪಟಿದಾರ ಭೂಮಾಲೀಕ–ವ್ಯಾಪಾರಿಗಳ ವಿರುದ್ಧ ತಿರುಗಿ ಬಿದ್ದರು. ಪಟಿದಾರರಿಂದ ಪಡೆದ ಸಾಲಕ್ಕೆ ತಮ್ಮ ಚಿಕ್ಕಪುಟ್ಟ ಭೂಮಿಯನ್ನೂ ಕಳೆದುಕೊಂಡರು. ಜೊತೆಗೆ ಮುಂಬಯಿ ಸರ್ಕಾರ ಸೇ. 22ರಷ್ಟು ಕಂದಾಯ ಏರಿಸಿತು. ಇದರ ಹೊರೆ ಗೇಣಿದಾರ ಕೂಲಿಕಾರ್ಮಿಕರ ಮೇಲೆ ಬಿತ್ತು. ಸಾಯುವವನ ಮೇಲೆ ಕಲ್ಲು ಎತ್ತಿಹಾಕಿದಂತಾಯ್ತು. ಇದನ್ನು ಎಲ್ಲ ರೈತರೂ ವಿರೋಧಿಸಿ ಒಂದಾದರು. ಚಳವಳಿ ಸರ್ಕಾರದ ವಿರುದ್ಧವಾಯಿತು. ಸರ್ಕಾರ ಇವರನ್ನು ಹತ್ತಿಕ್ಕಲು ಅನಾಗರಿಕ ಕ್ರಮಗಳನ್ನು ಅನುಸರಿಸಿತು. ವಲ್ಲಭಭಾಯಿ ಪಟೇಲ್ ಹಾಗೂ ಇತರ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಸರ್ಕಾರದ ವಿರುದ್ಧ ಸತ್ಯಾಗ್ರಹ ನಡೆಯಿತು. ಸೇ. 22 ಕಂದಾಯವನ್ನು 6 $^{1}/_{4}$ಕ್ಕೆ ಇಳಿಸುವ ಮೂಲಕ ಸತ್ಯಾಗ್ರಹ ಯಶಕಂಡಿತು.

ವಾರಲಿ ಆದಿವಾಸಿಗಳ ಹೋರಾಟ ಸಂತಾಲ ದಂಗೆಯ ರೀತಿಯದಾದರೂ ಕಮ್ಯೂನಿಸ್ಟ್ ಪಕ್ಷದ ಬೆಂಬಲದೊಂದಿಗೆ ವ್ಯವಸ್ಥಿತವಾಗಿ ನಡೆಯಿತು. ಒಂದು ಕಾಲಕ್ಕೆ ಭೂಮಿ ಹೊಂದಿ ಉತ್ತಮ ಸ್ಥಿತಿಯಲ್ಲಿದ್ದ ಇವರನ್ನು ಮುಂಬಯಿಯ ವಿವಿಧ ವರ್ಗದ ಜನ ಶೋಷಣೆ ಮಾಡುತ್ತಿದ್ದರು. ಕೊನೆಗೆ ಅತ್ಯಂತ ದೀನಸ್ಥಿತಿಯ ಕೂಲಿಕಾರ್ಮಿಕರನ್ನಾಗಿ ಮಾಡಿದರು. ಸರ್ಕಾರ, ಸಾಹುಕಾರ, ಅಧಿಕಾರಿ, ದಲ್ಲಾಳಿಗಳು ಸೇರಿಕೊಂಡು ಇವರ ಬದುಕನ್ನು ನರಕ ಸಮಾನ ಮಾಡಿದರು. ಕಮ್ಯೂನಿಸ್ಟ್ ಪಕ್ಷದ ತಾತ್ವಿಕತೆಯ ಅಡಿಯಲ್ಲಿ ಒಂದಾಗಿ ತಮ್ಮ ದಾಸ್ಯದ ವಿರುದ್ಧ ಇವರು ತೀವ್ರ ಹೋರಾಟ ನಡೆಸಿದರು. ಭಾರತ ಕಿಸಾನ್ ಸಭಾ ನಾಯಕತ್ವದ ಈ ಹೋರಾಟ ಕೆಲಮಟ್ಟಿಗಾದರೂ ಸಫಲತೆ ಪಡೆಯಿತು.

ಬಂಗಾಲದಲ್ಲಿ ನಡೆದ ತೇಭಾಗ ರೈತ ಚಳವಳಿ ಮೂರನೆಯ ಎರಡು ಪಾಲು ಫಸಲು ತಮಗೆ ಇರಬೇಕು ಎಂದು ಗೇಣಿದಾರರು ನಡೆಸಿದ ಹೋರಾಟ. ಅಖಿಲ ಭಾರತ ಕಿಸಾನ್‌ಸಭಾ ಹಾಗೂ ಬಂಗಾಲ ಕಿಸಾನ್‌ಸಭಾ ನಾಯಕತ್ವದಲ್ಲಿ ಈ ಹೋರಾಟ ತನ್ನ ಬೇಡಿಕೆಯನ್ನು ಈಡೇರಿಸಿಕೊಂಡಿತು.

ಐದು ವರ್ಷಗಳ ಕಾಲ ನಡೆದ ತೆಲಂಗಾಣ ರೈತ ಹೋರಾಟ ವಿಶಿಷ್ಟ ಬಗೆಯದು. ಮೂಲತಃ ಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನ ಇದರ ಗುರಿ. ಉರ್ದು ಭಾಷೆಗಿದ್ದ ರಾಜ ಮನ್ನಣೆಯಿಂದಾಗಿ ತೆಲುಗು ಸಾಹಿತ್ಯ ಸಂಸ್ಕೃತಿಗಳು ಕಳಾಹೀನವಾಗಿದ್ದವು. ಇದನ್ನು ಮನಗಂಡ ಮಧ್ಯಮ ವರ್ಗದ ಸಾಹಿತಿ–ಚಿಂತಕರು 1921ರಲ್ಲಿ ಆಂಧ್ರ ಜನಸಂಘಮ್ ಎಂಬ ಸಂಸ್ಥೆಯನ್ನು ಕಟ್ಟಿಕೊಂಡರು. 1928ರ ಹೊತ್ತಿಗೆ ಇದು 'ಆಂಧ್ರ ಮಹಾಸಭಾ'

ಆಗಿ ವಿಸ್ತೃತಗೊಂಡಿತು. ಆರ್ಥಿಕ ಸಮಸ್ಯೆಗಳಾದ ಬಿಟ್ಟಿ ಚಾಕರಿ, ಪುಕ್ಕಟೆ ವಸ್ತುಗಳನ್ನು ಕೊಡುವ ಪದ್ಧತಿ ಹಾಗೂ ಅಸ್ಪೃಶ್ಯತೆ, ಬಾಲ್ಯವಿವಾಹ, ವಿಧವಾ ಸಮಸ್ಯೆಯಂಥ ಸಾಂಸ್ಕೃತಿಕ ಅಂಶಗಳನ್ನು ಈ ಸಭೆ ತನ್ನ ಕಾರ್ಯಕ್ರಮಗಳನ್ನಾಗಿ ಸ್ವೀಕರಿಸಿತು.

ಹೈದರಾಬಾದ್ ನಿಜಾಮ ಅಪಾರ ಆಸ್ತಿ ಹೊಂದಿದ್ದು ಅಲ್ಲಿ ರೈತರು ಪುಕ್ಕಟೆ ದುಡಿದು ಬೆಳೆಕೊಡಬೇಕಾಗಿತ್ತು. ಮತ್ತೊಂದು ಕಡೆ ಹೆಚ್ಚಿನ ತೆರಿಗೆ ಕೊಡಬೇಕಿತ್ತು. ಭೂಮಾಲೀಕರು ತುಂಡರಸರಾಗಿ ಭೂಮಿಯಲ್ಲಿ ದುಡಿಯುವವರನ್ನು ಜೀವಂತ ಹಿಂಡುತ್ತಿದ್ದರು. ಇದನ್ನು ಆಂಧ್ರ ಮಹಾಸಭಾ ಖಂಡಿಸಿ ಜನಸಂಘಟನೆ ಮಾಡಿತು. ಇದರಲ್ಲಿ ಕಿಸಾನ್‌ಸಭಾದ ಕಮ್ಯೂನಿಸ್ಟರು ಬಹಳ ಸಂಖ್ಯೆಯಲ್ಲಿ ಭಾಗವಹಿಸಿದರು. 1946 ಜುಲೈ ಹೊತ್ತಿಗೆ ತೆಲಂಗಾಣ ರೈತ ಚಳವಳಿಗೆ ಒಂದು ಸ್ಪಷ್ಟ ರೂಪ ಬಂತು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಈ ಹೋರಾಟಕ್ಕೆ ಮತ್ತೊಂದು ತಿರುವು ಉಂಟಾಯಿತು. ನಿಜಾಮ ತಾನು ಭಾರತಕ್ಕೆ ಸೇರುವುದಿಲ್ಲವೆಂದ. ದೇಶೀ ಚಿಂತಕರಿಗೆ ಇದು ಸಾಕಾಗಿತ್ತು. ಭಾರತ ಸರ್ಕಾರಕ್ಕೂ ಈ ಸಂದರ್ಭ ಸೂಕ್ತವೆನಿಸಿತು. ಹಲವು ಕಡೆಯಿಂದ ಹೋರಾಟಕ್ಕೆ ಬೆಂಬಲ ದೊರಕಿತು. ಹೈದರಾಬಾದ್ ಬಿಡುಗಡೆಯೂ ದುಡಿಯುವ ರೈತರ ಬಿಡುಗಡೆಯೂ ಒಂದೇ ವೇದಿಕೆಯ ಆಸಕ್ತಿಗಳಾದವು. ಇದು ಸತ್ಯಾಗ್ರಹವಾಗಿರಲಿಲ್ಲ, ಅಂತರ್‌ಯುದ್ಧವಾಗಿತ್ತು. ಹಿಂಸೆ–ಪ್ರತಿಹಿಂಸೆಗಳು ತಾಂಡವವಾಡಿದವು. ಹೈದರಾಬಾದ್ ಪ್ರಾಂತ ಭಾರತದೊಳಗೆ ವಿಲೀನಗೊಂಡ ಅನಂತರ ಹೋರಾಟ ತಣ್ಣಗಾಯಿತು. ಕಾಂಗ್ರೆಸ್ಸಿಗರು ಮತ್ತು ಇತರರು ಸೇರಿ ಕಮ್ಯೂನಿಸ್ಟರನ್ನು ಒಂಟಿ ಮಾಡಿದರು. ಚುನಾವಣಾ ಹೋರಾಟದ ಕಡೆಗೆ ನಡೆದರು.

ಈ ಹೋರಾಟ ಭಾರತದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ರೈತ ಹೋರಾಟಗಳ ಪ್ರವೃತ್ತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಭಾರತೀಯ ಪಕ್ಷ ಸಿದ್ಧಾಂತಗಳ ನೆಲೆಗಳನ್ನು ಪರಿಚಯ ಮಾಡಿಕೊಡುತ್ತದೆ. ವಿವಿಧ ರೈತ ವರ್ಗಗಳ ಹಿತಾಸಕ್ತಿಯನ್ನು ವಿಂಗಡಿಸಿ ತಿಳಿಸಿಕೊಡುತ್ತದೆ. ನಕ್ಸಲ್‌ಬಾರಿ, (1960) ಶ್ರೀಕಾಕುಲಂ (1965–70) ರೈತ ಹೋರಾಟದ ಬೀಜಗಳನ್ನು ಹುಟ್ಟಿಸಿತು. ಸಾಮಾಜಿಕ–ಆರ್ಥಿಕ ಹೋರಾಟಕ್ಕೆ ರಾಜಕೀಯ ಶಕ್ತಿಯನ್ನು ಬಳಸುವ ಅನಿವಾರ್ಯತೆಯನ್ನು ಈ ಮೂರೂ ರೈತ ಹೋರಾಟಗಳು ತಿಳಿಸುತ್ತವೆ.

ಭಾರತಕ್ಕೆ ಸ್ವಾತಂತ್ರ್ಯ ಬರುವ ಸಾಧ್ಯತೆ ಕಂಡಂತೆಲ್ಲ, ಸ್ವಾತಂತ್ರ್ಯ ಸಿಕ್ಕಿದ ಆರಂಭದ ದಿನಗಳ ತನಕ ರೈತ ಹೋರಾಟಗಳು ಹೊಸ ದಿಕ್ಕನ್ನು ಪಡೆದವು. ಬೇಡಿಕೆಗಳು ಸಮಾನತಾ ಅವಕಾಶಗಳಾಗಿ ಮಾರ್ಪಟ್ಟವು. ಸರ್ವಾಧಿಕಾರದ ವಿರೋಧ ಪ್ರಜಾಪ್ರಭುತ್ವವನ್ನು ಬಲಪಡಿಸುವ ಶಕ್ತಿಯಾಗಿ ಮಾರ್ಪಟ್ಟಿತು. ಬೇಡಿಕೆಗಳನ್ನು ಹಕ್ಕುಗಳ ಒತ್ತಾಯಗಳಾಗಿ ಕೆಳಗಿನಂತೆ ಮಂಡಿಸಲಾಯಿತು:

1. ಉಳುವವನಿಗೆ ಭೂಮಿ. ಹೆಚ್ಚಿನ ಭೂಮಿಯನ್ನು ಭೂಹೀನರಿಗೆ ಹಂಚುವುದು
2. ಲಾಭದಾಯಕ ಬೆಲೆಗಾಗಿ ಹೋರಾಟ
3. ಸಾಲದ ಹೊರೆಯಿಂದ ಮುಕ್ತಿ
4. ಲೆವಿ, ತೆರಿಗೆ, ಸರ್‌ಚಾರ್ಜುಗಳ ವಿರುದ್ಧ ಚಳವಳಿ
5. ಕೃಷಿ ಕೂಲಿಗಳಿಗೆ ಕನಿಷ್ಠ ವೇತನ ನಿಗದಿ
6. ಭೂಹೀನರಿಗೆ ನಿವೇಶನ
7. ಗುಡಿ ಕೈಗಾರಿಕೆಗಳಿಗೆ ಆದ್ಯತೆ
8. ಕೈಗಾರಿಕೆ ಮತ್ತು ಕೃಷಿ ಬೆಳೆಗಳ ಬೆಲೆಗಳಲ್ಲಿ ಸಮಾನತೆ ತರುವುದು
9. ಸಾಗುವಳಿಯಾಗದ ಭೂಮಿಗೆ ಕೃಷಿ ಸೇನೆ
10. ಚತುಸ್ತಂಭ ರಾಷ್ಟ್ರ ನಿರ್ಮಾಣ

ರೈತ ಹೋರಾಟಗಳಿಂದ ಕರ್ನಾಟಕ ಹೊರಗೆ ಉಳಿದಿರಲಿಲ್ಲ. ಬೇರೆ ಬೇರೆ ಹೆಸರು ಹಾಗೂ ಉದ್ದೇಶದಿಂದ ಹಲವು ರೈತರ ಹಿತಾಸಕ್ತಿಯನ್ನು ಕುರಿತ ಹೋರಾಟಗಳು ನಡೆದವು. 1799ರ ದೋಂಡಿಯಾ ವಾಘ ಮತ್ತು ಸಂಗಡಿಗರ ಆದಿವಾಸಿಗಳ ದಂಗೆ, 1803ರ ಬಳ್ಳಾರಿಯ ಪಾಳೆಗಾರರ ದಂಗೆ, 1830ರ ಸಂಗೊಳ್ಳಿ ರಾಯಣ್ಣನ ಬಂಡು, 1830–31ರ ಬೂದಿಬಸಪ್ಪನ ಬಂಡು, 1857ರ ಹಲಗಲಿಯ ಬೇಡರ ಬಂಡು, ನರಗುಂದದ ಬಾಬಾ ಸಾಹೇಬನ ಬಂಡು ಮುಖ್ಯವಾದವು. ನೇರವಾಗಿ ರೈತರ ಸಾಮಾನ್ಯ ಸಮಸ್ಯೆಗಳನ್ನು ಮುಂದಿರಿಸಿಕೊಂಡು ಅಂಕೋಲ, ಶಿರಸಿ, ಸಿದ್ಧಾಪುರ, ಹಿರೆಕೆರೂರು ಮುಂತಾದ ಕಡೆ ಕರನಿರಾಕರಣೆ ಚಳವಳಿಗಳು ನಡೆದವು. ಸ್ವಾತಂತ್ರ್ಯಾನಂತರದ ಪ್ರಮುಖ ರೈತ ಹೋರಾಟಗಳಿವು:

ಕಾಗೋಡು ಸತ್ಯಾಗ್ರಹ (1950–51)

ಸಾಗರ–ತೀರ್ಥಹಳ್ಳಿ ತಾಲ್ಲೂಕುಗಳ ಗೇಣಿದಾರರ ಹೋರಾಟ (1950–51)

ಹಳಿಯಾಳ ರೈತ ಕೂಲಿಕಾರರ ಚಳವಳಿ (1979)

ಕರ್ನಾಟಕ ರಾಜ್ಯ ರೈತ ಸಂಘದ ಚಳವಳಿ (1980)

ಮೊದಲೆರಡು ಹೋರಾಟಗಳು ಒಂದರ ಮುಂದುವರಿಕೆಯೇ ಮತ್ತೊಂದು ಎನ್ನುವಂತಿವೆ. ಕಾಂಗ್ರೆಸ್‌ನ ಸತ್ಯಾಗ್ರಹದಿಂದ ಆರಂಭಗೊಂಡ ಈ ಚಳವಳಿಗಳು ಕೊನೆಗೆ ಸಮಾಜವಾದಿಗಳ ಕೈಗೆ ಬಂದವು. ಅವು ಹೋರಾಟದ ಪ್ರಜ್ಞೆಯನ್ನು ಮೂಡಿಸಿ ಹಿಂದೆ ಸರಿದವು.

ಕಾಗೋಡು ಗ್ರಾಮದಲ್ಲಿದ್ದ ಏಳೂರಿನ ಹೆಸರಾದ ಗೌಡರ ಭೂಒಡೆತನದಲ್ಲಿ ಕೂಲಿಗಳಾಗಿದ್ದವರು ನಡೆಸಿದ ಹೋರಾಟ ತುಂಬ ಪ್ರಸಿದ್ಧವಾಗಿದೆ. 70 ದೀವರ ಕುಟುಂಬ, 18 ದಲಿತ ಕುಟುಂಬ, 3 ಮಡಿವಾಳ ಕುಟುಂಬ ಹಾಗೂ ಒಂದು ಅಕ್ಕಸಾಲಿ ಕುಟುಂಬಗಳು ಗೌಡರ ಗೇಣಿದರ, ಅಳತೆ, ಶೋಷಣೆ ವಿರುದ್ಧ ಪ್ರತಿಭಟಿಸಿದರು. ಇವರ ಪರವಾಗಿ ಮಲೆನಾಡ ಗೇಣಿದಾರರ ಸಂಘ (1946), ಸಾಗರ ತಾಲ್ಲೂಕು ರೈತಸಂಘ (1948) ಬೆಂಬಲಕ್ಕೆ ನಿಂತವು. ಕಾಗೋಡು ಸತ್ಯಾಗ್ರಹದ ಬೀಜಬಿತ್ತಿದ್ದು ಗಣಪತಿಯಪ್ಪ. ಇದನ್ನು ನಿರ್ವಹಿಸಿದ ಮುಖ್ಯರೆಂದರೆ ಕಡಿದಾಳ್ ಮಂಜಪ್ಪ, ಗರುಡಶರ್ಮ, ಜಿ.ಸದಾಶಿವರಾಯ, ಭಾ.ಸು.ಕೃಷ್ಣಮೂರ್ತಿ, ಸೀತಾರಾಮ ಐಯ್ಯಂಗಾರ್, ಶಾಂತವೇರಿ ಗೋಪಾಲಗೌಡ, ಎಸ್.ರಾಮಯ್ಯ, ಎಸ್.ಜಿ.ಗೋವಿಂದಪ್ಪ ಮುಂತಾದವರು. ಈ ಹೋರಾಟಕ್ಕೆ ದೆಹಲಿಯಿಂದ ರಾಮಮನೋಹರ ಲೋಹಿಯಾ ಬಂದರು, ನೇರವಾಗಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಸ್ಥಳೀಯ ಹೋರಾಟಗಾರರನ್ನು ಹುರಿದುಂಬಿಸಿದರು. ಈ ಹೋರಾಟದ ಅಗತ್ಯವನ್ನು ಒತ್ತಿ ಹೇಳಿದರು.

ಕರ್ನಾಟಕದಲ್ಲಿ ಬಹು ದೊಡ್ಡದಾಗಿ ಬೆಳೆದ ಚಳವಳಿ ಕರ್ನಾಟಕ ರಾಜ್ಯ ರೈತ ಸಂಘ ನಡೆಸಿದ್ದು. ಇದು 1980ರಲ್ಲಿ ಹುಟ್ಟಿಕೊಂಡಿತು. ಇದಕ್ಕೆ ಮೂಲ ಪ್ರೇರಣೆ ದೊರಕಿದ್ದು ಮಲಪ್ರಭಾ ನೀರಾವರಿ ಪ್ರದೇಶದ ನರಗುಂದ, ನವಲಗುಂದ ಘಟನೆಗಳ ಮೂಲಕ. ಮಲಪ್ರಭಾ ಅಣೆಯ ನೀರು ತಮಗೆ ವರದಾನವಾಗುತ್ತದೆ ಎಂದು ನರಗುಂದ, ನವಲಗುಂದ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕಿನ ರೈತರು ನಂಬಿದ್ದರು. ಆ ಮಣ್ಣಿನ ಗುಣದಿಂದಾಗಿ ಅಣೆಯ ನೀರು ಕಾಲುವೆಗಳಲ್ಲಿ ಸರಿಯಾಗಿ ಹರಿಯಲಿಲ್ಲ. 1976ರಲ್ಲಿ ನೀರು ಬಂದರೂ ಸರ್ಕಾರ 1974ರಿಂದ ನೀರು ಹಾಗೂ ಅಭಿವೃದ್ಧಿ ತೆರಿಗೆಯನ್ನು ವಿಧಿಸಿತು. ಭೂಮಿ ಕಳೆದುಕೊಂಡವರಿಗೆ ಪರಿಹಾರ ಸಿಗುವುದು ತಡವಾಯಿತು. ಇದಕ್ಕೆ ಪೂರಕವಾಗುವಂತೆ ಈ ಅಣೆಯ ನೀರನ್ನು ನೀರಾವರಿ ಬೆಳೆಗೆ ಬಳಸುವಂತಿಲ್ಲ ಎಂದು ಸರ್ಕಾರ ಕಟ್ಟುಮಾಡಿತು. ಇದೇ ಸಂದರ್ಭದಲ್ಲಿ ಸರ್ಕಾರದ ವರಲಕ್ಷ್ಮಿ ಹತ್ತಿ

ಬೀಜ ಪಡೆದು ಬೆಳೆ ಬೆಳೆದರೆ ಹಾಕಿದ ಹಣ ಕೈಗೆ ಬರದೆಹೋಯಿತು. ಅಧಿಕಾರಿಗಳ ಹಿಂಸೆ ಅಪಾರವಾಯಿತು. 1980 ಜುಲೈ 21ರಂದು ರೈತಜಾತಾ ನಡೆಯಿತು. ಅಧಿಕಾರಿಗಳ ಧಿಮಾಕಿನಿಂದಾಗಿ ಕೆಲ ರೈತರು ಗುಂಡೇಟಿಗೆ ಬಲಿಯಾದರು. ಇದು ಆ ಭಾಗದಲ್ಲಿ ರೈತ ಚಳವಳಿ ಹುಟ್ಟಲು ಕಾರಣವಾಯಿತು. ಅದರ ನೇತೃತ್ವವನ್ನು ಹಳಕಟ್ಟಿ, ಹೊಸಕೇರಿ, ಯಾವಗಲ್, ಕಪ್ಪಣ್ಣವರ್ ಮುಂತಾದ ಕಮ್ಯೂನಿಸ್ಟ್ ಚಿಂತಕರು ವಹಿಸಿದರು.

ಶಿವಮೊಗ್ಗ, ಹಾಸನ, ಮಡಿಕೇರಿ, ಮೈಸೂರು, ಮಂಡ್ಯ ರಾಯಚೂರು, ಬೆಳಗಾಂವಿ, ಧಾರವಾಡ ಜಿಲ್ಲೆಗಳಲ್ಲಿ ಚಳವಳಿ ವ್ಯಾಪಕವಾಯಿತು. ನೀರಿನ ಕರದ ವಿರುದ್ಧ ಆರಂಭವಾದ ಈ ರೈತ ಚಳವಳಿ ರೈತರ ಮೇಲೆ ಹೇರಿಕೊಂಡಿದ್ದ ವಿವಿಧ ಸಾಲ ಮನ್ನಾಕ್ಕಾಗಿ ಮುನ್ನಡೆಯಿತು. ಮುಂದುವರಿದು ಲೆವಿ ವಿರೋಧ, ಕೃಷಿ ಬೆಳೆಗಳಿಗೆ ನ್ಯಾಯಬೆಲೆ ಕೇಳುವ ಹಂತವನ್ನು ತಲುಪಿತು. ಸರ್ಕಾರದ ಸಾಲ ಜಪ್ತಿಗೆ ಪ್ರತಿಯಾಗಿ ಮರುಜಪ್ತಿ ಚಳವಳಿ ಶುರುವಾಯಿತು. ಈ ವಿಸ್ತೃತ ರೈತ ಚಳವಳಿಯ ನೇತೃತ್ವವನ್ನು ಶಿವಮೊಗ್ಗದ ಹಿರಿಯ ಗಾಂಧೀವಾದಿ ಹಾಗೂ ಕಾಂಗ್ರೆಸ್ ಮುಖಂಡ ಎಚ್.ಎಸ್.ರುದ್ರಪ್ಪ ವಹಿಸಿಕೊಂಡರು. ಇದರ ಕಾರ್ಯದರ್ಶಿಯಾಗಿ ಎನ್.ಡಿ.ಸುಂದರೇಶ್ ನೇಮಕಗೊಂಡರು. ನಂಜುಂಡಸ್ವಾಮಿ ಸಂಚಾಲಕರೆಂದು ನಿಯೋಜಿತರಾದರು. ಈ ಚಳವಳಿಗೆ ಬಹುಬೇಗ ಆಕರ್ಷಿತರಾದವರೆಂದರೆ ಕರ್ನಾಟಕದ ಹಳೆಯ ಹಾಗೂ ಹೊಸ ಸಮಾಜವಾದಿಗಳು. ಶಿವಮೊಗ್ಗ ಜಿಲ್ಲೆಯ ಕಡಿದಾಳ್ ಶಾಮಣ್ಣ, ಗಣಪತಿಯಪ್ಪ, ಹಾಸನದ ಮಂಜುನಾಥ ದತ್ತ, ಆರ್.ಪಿ.ವೆಂಕಟೇಶ ಮೂರ್ತಿ, ಎಚ್.ಎಮ್. ವಿಶ್ವನಾಥ್, ಜಾನಕೆರೆ ಮೋಹನ್, ವಾಸು, ಕೆ.ಎಚ್.ಹನುಮಂತೇಗೌಡ, ರಾಜೇಗೌಡ ಸೋಮವಾರಪೇಟೆ, ಡಿ.ಜೆ.ಶಿವರಾಮ್, ಮೈಸೂರಿನ ವೆಂಕಟಾಚಲಯ್ಯ, ಅರಸು, ನಾಯಕ್, ಮಂಡ್ಯದ ಎಸ್.ಡಿ. ಜಯರಾಮ್, ಎಚ್.ಶ್ರೀನಿವಾಸ್, ಪುಟ್ಟಣ್ಣಯ್ಯ, ಬಳ್ಳಾರಿಯ ಚನ್ನಬಸಪ್ಪ ಬೆಟ್ಟದೂರ್, ರಾಯಚೂರಿನ ಬಸವರಾಜ ತಂಬಾಕಿ, ಬೆಳಗಾಂವಿಯ ಬಾಬೂಗೌಡ ಪಾಟೀಲ್, ಸುರೇಶ್‌ಬಾಬು ಪಾಟೀಲ್, ಧಾರವಾಡದ ಹೇಮಂತ ಪಾಂಚಾಲ್, ಚನ್ನಪಟ್ಟಣದ ಸೋಮಣ್ಣ, ಅನಸೂಯಮ್ಮ ಮೊದಲಾದವರು ಮುಖ್ಯರು. ಮೈಸೂರಿನಿಂದ ಹಿ.ಶಿ.ರಾಮ ಚಂದ್ರೇಗೌಡ, ಕೆ.ಸಿ. ಬಸವರಾಜು, ಬೆಂಗಳೂರಿನ ಅಡ್ವೋಕೇಟ್ ರವಿವರ್ಮ ಕುಮಾರ್, ಎಸ್.ಆರ್.ನಾಯಕ್, ತುಮಕೂರಿನ ರಾಮಚಂದ್ರ ಮುಂತಾದವರು ಜೊತೆಗೂಡಿದರು.

ಕರ್ನಾಟಕ ರಾಜ್ಯ ರೈತ ಚಳವಳಿ ತನ್ನ ಪ್ರಣಾಳಿಕೆಯನ್ನು ಹೀಗೆ ಮುಂದಿಟ್ಟಿತು :

'ರೈತಾಪಿ ಜನರ ಬಡತನಕ್ಕೆ ಮತ್ತು ಋಣಬಾಧೆಗೆ ಕಾರಣಗಳು ರೈತಾಪಿ ಜನರಲ್ಲ, ಬೇಸಾಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಲೆವಿ ನೀತಿ, ಬೆಲೆ ನೀತಿ, ಸಾಲ ನೀತಿ ಮತ್ತು ಕಂದಾಯ ನೀತಿಗಳು ಅವರ ಬಡತನಕ್ಕೆ ನೇರ ಕಾರಣಗಳು. ಸರ್ಕಾರದ ಯೋಜನಾ ನೀತಿ ಎಲ್ಲಕ್ಕಿಂತ ಮುಖ್ಯಕಾರಣ'. ಆದ್ದರಿಂದ ಈ ಮುಂದಿನ ಬೇಡಿಕೆಗಳನ್ನು ಈಡೇರಿಸಬೇಕು:

1. ಕಾರ್ಮಿಕರಿಗೆ ಹೆಚ್ಚಿನ ಕೂಲಿ
2. ಗೇಣಿದಾರರಿಗೆ ಭೂಮಿ
3. ಗ್ರಾಮಗಳಿಗೆ ಸೇ.80 ಯೋಜನಾ ವೆಚ್ಚ
4. ಬೇಸಾಯಗಾರರ ಮಕ್ಕಳಿಗೆ ಸೇ.80 ಹುದ್ದೆ ಮೀಸಲು
5. ಎಲ್ಲಾ ಕಂದಾಯ ರದ್ದು
6. ರೈತರ ಬೆಳೆಗಳಿಗೆ ನ್ಯಾಯಬೆಲೆ : ವೈಜ್ಞಾನಿಕ ಬೆಲೆ
7. ರೈತರ ಎಲ್ಲಾ ಸಾಲ ರದ್ದು (ಲೆವಿ ಮೂಲಕ ಅವರು ಸಾಲದ ನೂರು ಪಟ್ಟು ಹಣವನ್ನು ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ)
8. ರೈತರ ವಸ್ತುಗಳನ್ನು ಜಪ್ತಿ ಮಾಡಿದರೆ ಮರುಜಪ್ತಿ ಮಾಡಲಾಗುವುದು.

ಹೀಗೆ ಆರ್ಥಿಕ ಬೇಡಿಕೆಗಳ ಮೂಲಕ ಕರ್ನಾಟಕದ ಬಹುಭಾಗವನ್ನು ವ್ಯಾಪಿಸಿದ ಈ ರೈತ ಚಳವಳಿ ಸಾಂಸ್ಕೃತಿಕ ಆಂದೋಲನಕ್ಕೂ ಕೈಹಾಕಿತು. ಜಾತಿ ನಿರ್ಮೂಲನೆ, ಸರಳ ಮದುವೆ, ಸಾಂಸ್ಕೃತಿಕ ಸಮಾನತೆ, ಸ್ವಾಭಿಮಾನ, ಲಂಚ ನಿರ್ಮೂಲನೆ, ಸ್ತ್ರೀ ಸಮಾನತೆ–ಹೀಗೆ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ರೈತ ಸಾಹಿತ್ಯ ರಚನೆ ಮಾಡುವುದರ ಜೊತೆಗೆ ಸಾವಿರಾರು ಸರಳ ಮದುವೆಗಳನ್ನು ವರದಕ್ಷಿಣೆ ಹಾಗೂ ಸಂಪ್ರದಾಯ ಬಿಟ್ಟು ಕಾರ್ಯರೂಪಕ್ಕೆ ತಂದಿತು.

ಚರಿತ್ರೆಯ ಒತ್ತಡ ಎನ್ನುವಂತೆ 1980–1990ರ ದಶಕ ದಕ್ಷಿಣ ಭಾರತದ ರೈತ ಚಳವಳಿಗಳ ಸುಗ್ಗಿ ಎನ್ನಬಹುದು. ತಮಿಳುನಾಡಿನಲ್ಲಿ ಬಹಳ ವರ್ಷಗಳಿಂದ ಇದ್ದ ನಾರಾಯಣಸ್ವಾಮಿ ನಾಯಿಡು ಹಾಗೂ ಶಿವಸ್ವಾಮಿ ನೇತೃತ್ವದ ರೈತ ಚಳವಳಿ ಒಂದು ದೊಡ್ಡ ಸಮೂಹ ಪ್ರವಾಹವಾಯಿತು. ಕೇರಳದಲ್ಲಿ ಎಡಪಂಥೀಯರ ನೇತೃತ್ವದಲ್ಲಿ ಜಿಲ್ಲಾ ಮಟ್ಟದಲ್ಲೂ ರಾಜ್ಯ ಮಟ್ಟದಲ್ಲೂ ರೈತರ ಸಮಸ್ಯೆಗಳನ್ನು ಎತ್ತಿಕೊಂಡು ಚಳವಳಿಗಳು ನಡೆದವು. ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡು ತೆಲುಗು ದೇಶಂ ಅಧಿಕಾರಕ್ಕೆ ಬರಲು ಎಡಪಂಥೀಯ ಹಾಗೂ ಇತರ ಪಂಥಗಳ ನಾಯಕತ್ವದ ರೈತ–ಆದಿವಾಸಿ ಹೋರಾಟಗಳು ಕಾರಣವಾದವು. ಒರಿಸ್ಸದಲ್ಲಿ ಕಿಶನ್ ಪಟ್ನಾಯಕ್ ಅವರ ನೇತೃತ್ವದಲ್ಲಿ ಸಮಾಜವಾದಿ ಚಿಂತನೆಯ ಆಧಾರದ ಮೇಲೆ ರೈತರನ್ನು ಸಂಘಟಿಸಲಾಯಿತು. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರೈತ ಚಳವಳಿಗಳ ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಉತ್ತರ ಭಾರತದ ಅದರಲ್ಲೂ ಉತ್ತರ ಪ್ರದೇಶ, ಹರ್ಯಾಣ ರೈತನಾಯಕರ ಜೊತೆಗೆ ತಾತ್ತ್ವಿಕ ಸಂಬಂಧ ವನ್ನು ಹೊಂದಿತು. ಉತ್ತರ ಪ್ರದೇಶದ ಮಹೇಂದ್ರಸಿಂಗ್ ಟಿಕಾಯತ್‌ರ ರೈತ ಚಳವಳಿ ದಕ್ಷಿಣದ ರೈತನಾಯಕರ ನೆರವು ಪಡೆಯಿತು. ಈ ಮಧ್ಯೆ ಭಾರತ ಮಟ್ಟದ ಎಲ್ಲ ರೈತ ಸಂಘಟನೆಗಳ ಸಮಾವೇಶ ಬಿಹಾರದಲ್ಲಿ ಸೇರಿತು. 1990ರ ಅನಂತರ ಈ ಚಳವಳಿಗಳು ಮೊದಲ ಬಿರುಸನ್ನು ಕಳೆದುಕೊಂಡವು. ಪ್ರಾದೇಶಿಕ ಪಕ್ಷಗಳ ಶಕ್ತಿ ಹೆಚ್ಚುತ್ತ ಬಂದಂತೆಲ್ಲ ರೈತ ಚಳವಳಿಗಳ ಕಾವು ಕಡಿಮೆಯಾದುದನ್ನು ಗಮನಿಸಬಹುದು.

*

**ರೈಸ್,ಇ.ಪಿ.:** 1849–1939. ಕನ್ನಡಕ್ಕಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸರಲ್ಲೊಬ್ಬರು. ರೈಸ್ ಎಡ್ವರ್ಡ್ ಪೀಟರ್ ಇವರ ಪೂರ್ಣ ಹೆಸರು. ಹುಟ್ಟಿದ್ದು ಇಂಗ್ಲೆಂಡಿನ ಹ್ಯಾರೋ ಪಟ್ಟಣದಲ್ಲಿ. ಕ್ರೈಸ್ತಮತ ಪ್ರಸಾರಕರಾಗಿದ್ದ ಇವರ ತಂದೆ ಬೆಂಜಮಿನ್ ಹಾಲ್ಟ್‌ರು ಬೆಂಗಳೂರಿನ ಲಂಡನ್ ಮಿಶನರಿ ಸೊಸೈಟಿಯಲ್ಲಿ ಸ್ವಲ್ಪಕಾಲ ಕೆಲಸಮಾಡಿದರು. ತಂದೆಯೊಂದಿಗೆ ಬೆಂಗಳೂರಿನಲ್ಲಿ ಬೆಳೆದ ರೈಸರು ಕ್ರೈಸ್ತಧರ್ಮದ ಜೊತೆಗೆ ಕನ್ನಡ ಭಾಷೆ ಸಾಹಿತ್ಯಗಳನ್ನೂ ಅಭ್ಯಾಸಮಾಡಿದರು. ಬೆಂಗಳೂರು ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಕ್ರೈಸ್ತಮತ ಪ್ರಸಾರಕರಾಗಿ 1873–1895 ರವರೆಗೆ ಕೆಲಸ ಮಾಡಿದ ರೈಸರು, ಬೆಂಗಳೂರು ಲಂಡನ್ ಮಿಶನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ರಾಗಿಯೂ ಸೇವೆಸಲ್ಲಿಸಿ 1915ರಲ್ಲಿ ಸ್ವದೇಶಕ್ಕೆ ತೆರಳಿದರು.

ರೈಸರು ಕನ್ನಡಕ್ಕಾಗಿ ಹಲವು ಬಗೆಯಲ್ಲಿ ದುಡಿದಿದ್ದಾರೆ. ಹಳೆಯ ಒಡಂಬಡಿಕೆಯನ್ನು ಸರಳಗನ್ನಡದಲ್ಲಿ ರಚಿಸಿದ್ದಲ್ಲದೆ, ಮೋಸೆಯ ಧರ್ಮಶಾಸ್ತ್ರದಲ್ಲಿ ಆದಿಕಾಂಡವು (1908), ಮೋಸೆಯ ಧರ್ಮಶಾಸ್ತ್ರದಲ್ಲಿ ಯಾತ್ರಾಕಾಂಡವು ಎಂಬ ದ್ವಿತೀಯ ಭಾಗವು (1909) ಎಂಬ ಎರಡು ಗ್ರಂಥಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ರೈಸರು 1915ರಲ್ಲಿ ಪ್ರಕಟಿಸಿದ

ಎ ಹಿಸ್ಟರೀ ಆಫ್ ಕೆನರೀಸ್ ಲಿಟರೇಚರ್ ಎಂಬುದು ಇಂಗ್ಲಿಷ್‌ನಲ್ಲಿ ರಚಿತವಾದ ಮೊದಲ ಕನ್ನಡ ಸಾಹಿತ್ಯ ಚರಿತ್ರೆ. ಐತಿಹಾಸಿಕ ಮಹತ್ತ್ವವುಳ್ಳ ಈ ಗ್ರಂಥದಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವರಗಳಲ್ಲಿ ಸಾಹಿತ್ಯ ಚರಿತ್ರೆ ಎಂಬ ದೃಷ್ಟಿಯಿಂದ ಈ ಕೃತಿಗೆ ಮಹತ್ತ್ವ ಸಂದಿದೆ.

(ಡಿ.ವಿ.)

**ರೈಸ್, ಬಿ.ಎಲ್:** 1837–1927. ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಸಿದ್ಧಪಡಿಸಿ ಕನ್ನಡದ ಅಭಿವೃದ್ಧಿಗಾಗಿ ದುಡಿದ ಪ್ರಖ್ಯಾತ ವಿದ್ವಾಂಸರು. ಬೆಂಜಮಿನ್ ಲೂಯಿ ರೈಸ್ ಎಂಬುದು ಇವರ ಪೂರ್ಣ ಹೆಸರು. 1837 ಜುಲೈ 17ರಂದು ಭಾರತದಲ್ಲಿ ಜನಿಸಿದ ಇವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡಿ 1860ರಲ್ಲಿ ಭಾರತಕ್ಕೆ ಬಂದು ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನಲ್ಲಿ 5 ವರ್ಷ ಮುಖ್ಯೋಪಾಧ್ಯಾಯರಾಗಿದ್ದು ಅನಂತರ ಮೈಸೂರು ಮತ್ತು ಕೊಡಗು ಶಾಲಾ ಇನ್ಸ್‌ಪೆಕ್ಟರ್ ಆದರು. 1868ರಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾಗಿಯೂ 1883ರಲ್ಲಿ ಮೈಸೂರು ಸರ್ಕಾರದ ವಿದ್ಯಾಶಾಖೆಯ ಪ್ರಥಮ ಕಾರ್ಯದರ್ಶಿಯಾಗಿಯೂ ನೇಮಕಗೊಂಡರು.



ಕನ್ನಡದಲ್ಲಿ ಪಾಂಡಿತ್ಯವನ್ನು ಪಡೆದುಕೊಂಡಿದ್ದ ಇವರು ವಿದ್ಯಾಭ್ಯಾಸದ ಇಲಾಖೆಯಲ್ಲಿದ್ದು ಸಂಸ್ಥಾನದಲ್ಲೆಲ್ಲ ಸಂಚರಿಸುತ್ತಿದ್ದಾಗ ಸ್ಥಳಪುರಾಣಗಳು, ಚಾರಿತ್ರಿಕ ವಿಷಯಗಳು, ಪುರಾತನ ಗ್ರಂಥಗಳು ಮೊದಲಾದುವನ್ನು ಸಂಗ್ರಹಿಸುತ್ತ ಅಲ್ಲಲ್ಲಿ ದೊರೆಯುತ್ತಿದ್ದ ಶಾಸನಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡು ಶಾಸನ ವಿಷಯಗಳನ್ನು ಆಗಾಗ ಪ್ರಕಟಿಸುತ್ತಿದ್ದರು. ಈ ನಾಡಿನ ಸಂಚಾರದಿಂದ ಉಂಟಾದ ಅಪಾರ ಅನುಭವದ ಫಲವಾಗಿ ಮೈಸೂರು ಗೆಜೆಟಿಯರಿನ ಎರಡು ಸಂಪುಟಗಳನ್ನು 1877–78ರಲ್ಲಿ ಪ್ರಕಟಿಸಿದರು. 1881ರಲ್ಲಿ ಮೈಸೂರು ದೇಶದಲ್ಲಿ ನಡೆದ ಮೊದಲನೆಯ ಖಾನೇಷುಮಾರಿಯ ಲೆಕ್ಕದ ವರದಿ ಮಾಡಿದರು.

ಮೈಸೂರು ಸರ್ಕಾರ 1884ರಲ್ಲಿ ಪ್ರಾಚ್ಯವಸ್ತು ಶಾಖೆಯನ್ನಾರಂಭಿಸಿದಾಗ ರೈಸ್ ಅವರು ತಮ್ಮ ಹುದ್ದೆಯ ಜೊತೆಗೆ ಈ ಶಾಖೆಯ ಅಧಿಕಾರವನ್ನು ವಹಿಸಿಕೊಂಡರು. ವಿದ್ಯಾಶಾಖೆಯ ಕಾರ್ಯದರ್ಶಿಯಾಗಿದ್ದಾಗಲೇ ಕೊಡಗಿನ ಶಾಸನಗಳನ್ನು ಸಂಗ್ರಹಿಸಿ ಒಂದು ಸಂಪುಟವನ್ನಾಗಿ ಇವರು ಪ್ರಕಟಿಸಿದುದು (1886) ಎಪಿಗ್ರಾಫಿಯ ಕರ್ನಾಟಿಕ ಮಾಲೆಗೆ ನಾಂದಿಯಾಯಿತು. ಅಪಾರವಾಗಿದ್ದ ಶಾಸನ ಸಂಪತ್ತಿನ ಪ್ರಾಮುಖ್ಯತೆಯನ್ನು ಅರಿತ ಆಗಿನ ಸರ್ಕಾರ ಇವರನ್ನು ಪುರಾತತ್ತ್ವ ಶಾಖೆಯ ಪೂರ್ಣಕಾಲದ ಅಧಿಕಾರಿಯನ್ನಾಗಿ 1890ರಲ್ಲಿ ನೇಮಿಸಿತು. ಮುಂದೆ ಹದಿನಾರು ವರ್ಷಗಳ ಕಾಲ ಪ್ರತಿ ಜಿಲ್ಲೆಯ ಹಳ್ಳಿ ಹಳ್ಳಿಗಳನ್ನೂ ಸುತ್ತಿ ಶಾಸನಗಳನ್ನು ಸಂಗ್ರಹಿಸಿ ಹನ್ನೆರಡು ಸಂಪುಟಗಳಲ್ಲಿ ಅವುಗಳನ್ನು ಪ್ರಕಟಿಸಿದರು. ಇವರು ಪ್ರಕಟಿಸಿದ ಶಾಸನಗಳ ಒಟ್ಟು ಸಂಖ್ಯೆ 8,869. ಈ ಶಾಸನಗಳಿಂದ ತಿಳಿದುಬರುವ ರಾಜಕೀಯ ಇತಿಹಾಸವನ್ನು ಸಂಗ್ರಹವಾಗಿ ತಿಳಿಸುವ ಮೈಸೂರ್ ಅಂಡ್ ಕೂರ್ಗ್ ಫ್ರಮ್ ಇನ್‌ಸ್ಕ್ರಿಪ್ಷನ್ಸ್ ಎಂಬ ಗ್ರಂಥವನ್ನು ಇವರು ಹೊರತಂದರು. ಇವರು ಸಂಚಾರ ಮಾಡುತ್ತಿದ್ದಾಗ ಸಂಗ್ರಹಿಸಿದ ಸಹಸ್ರಾರು ಓಲೆಗರಿ ಗ್ರಂಥಗಳಿಗಾಗಿ ಓರಿಯಂಟಲ್ ಲೈಬ್ರರಿ ಎಂಬ ಪ್ರಾಚ್ಯ ಗ್ರಂಥ ಭಂಡಾರವೊಂದು ಆರಂಭವಾಯಿತು. ಪಂಪಭಾರತ, ಪಂಪ ರಾಮಾಯಣ, ಶಬ್ದಾನುಶಾಸನ ಮುಂತಾದ ಮುಖ್ಯವಾದ ಕೆಲವು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಬಿಬ್ಲಿಯೋಥಿಕ ಕರ್ನಾಟಿಕ ಗ್ರಂಥಮಾಲೆಯಲ್ಲಿ ಹೊರತಂದಿರುವುದಲ್ಲದೆ ಕನ್ನಡ ನಾಡಿನ ಚರಿತ್ರೆಗೆ ಸಂಬಂಧಿಸಿದಂತೆ ನೂರಾರು ಲೇಖನಗಳನ್ನು ಹಲವು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

1906ರ ವರೆಗೆ ಈ ದೇಶದ ಪುರಾತನ ಅಧ್ಯಯನ ರಂಗದಲ್ಲಿ ಅವಿಶ್ರಾಂತವಾಗಿ ದುಡಿದು ತಮ್ಮ 70ನೆಯ ವಯಸ್ಸಿನಲ್ಲಿ ನಿವೃತ್ತರಾಗಿ ತಾಯ್ನಾಡಿಗೆ ಮರಳಿ ಹ್ಯಾರೋ ಪಟ್ಟಣದಲ್ಲಿ ನೆಲಸಿದರು. ಅನಂತರ 1927ರ ಜುಲೈ ತಿಂಗಳಲ್ಲಿ ತಮ್ಮ 90ನೆಯ ವಯಸ್ಸಿನಲ್ಲಿ ನಿಧನರಾದರು.

(ಎಂ.ಎಚ್.)

**ರೊದ್ದ ಶ್ರೀನಿವಾಸರಾವ್:** 1850–1829. ಕನ್ನಡ ಭಾಷಾ ಸೇವಕರು, ಶಿಕ್ಷಣ ತಜ್ಞರು. ಇವರ ಪೂರ್ಣ ಹೆಸರು ಶ್ರೀನಿವಾಸ ಕೋನ್ಹೇರರಾವ್ ರೊದ್ದ. ಇವರ ಮನೆತನ ಮೂಲತಃ ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪೆನುಗೊಂಡೆಯ ಹತ್ತಿರದ ರೊದ್ದಮ್ ಎಂಬುದು. ಇವರ ಮನೆತನದವರು ಬಳ್ಳಾರಿಯ ಕಲೆಕ್ಟರನ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಆಗ್ಗೆ ಬಳ್ಳಾರಿಯ ಕಲೆಕ್ಟರನಾಗಿದ್ದ ಚಾಪ್ಲಿನ್ ಎಂಬುವನು ಧಾರವಾಡದ ಕಲೆಕ್ಟರನಾಗಿ ಬಂದಾಗ ಈ ಮನೆತನವೂ ಧಾರವಾಡಕ್ಕೆ ಬಂದು ಮದಿಹಾಳದಲ್ಲಿ ನೆಲಸಿತು. ಶ್ರೀನಿವಾಸರಾಯರು 1850 ಸೆಪ್ಟೆಂಬರ್ 17ರಂದು ಮದಿಹಾಳದಲ್ಲಿ ಜನಿಸಿದರು. ಇವರ ಕಾಲಕ್ಕೆ ಮನೆಯಲ್ಲಿ ಕಡು ಬಡತನ. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಪೋಷಣೆಯಲ್ಲಿ ಬೆಳೆದರು. ಪ್ರಾರಂಭದ ವ್ಯಾಸಂಗವನ್ನು ಮದಿಹಾಳದಲ್ಲಿ ಮುಗಿಸಿ ಹುಯಿಲಗೋಳ ಭುಜಂಗರಾವ್, ರಸೆಲ್ ಮುಂತಾದವರ ನೆರವಿನಿಂದ ಪುಣೆಯ ಡೆಕ್ಕನ್ ಕಾಲೇಜನ್ನು ಸೇರಿದರಾದರೂ ಆರ್ಥಿಕ ತೊಂದರೆಗಳಿಂದಾಗಿ ಶಿಕ್ಷಣವನ್ನು ಮಧ್ಯಕ್ಕೆ ಬಿಟ್ಟು ಉದ್ಯೋಗಸ್ಥರಾದರು. 1872ರಲ್ಲಿ ಕಾರವಾರದ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು ಅನಂತರ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾಗಿಯೂ ಧಾರವಾಡದ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಸೇವೆ ಸಲ್ಲಿಸಿ 1908 ರಂದು ನಿವೃತ್ತರಾದರು. ಬಡತನದ ಬವಣೆಯನ್ನು ಅನುಭವಿಸಿದ್ದ ಶ್ರೀನಿವಾಸರಾಯರು ತಮ್ಮ ಅಧಿಕಾರಾವಧಿಯಲ್ಲಿ ಮಹಮ್ಮಡನ್ ಬರ್ಸರಿ ಫಂಡ್, ಧಾರವಾಡದ ಟ್ರೈನಿಂಗ್ ಕಾಲೇಜಿನ ಜನರಲ್ ಪ್ರೈಜ್ ಫಂಡ್, ವೆಂಕಸಾನಿ ಸ್ಕಾಲರ್‌ಷಿಪ್ ಮುಂತಾದ ಹಲವು ಬಗೆಯ ಸೌಲಭ್ಯಗಳನ್ನು ಕಲ್ಪಿಸಿ, ಬಡ ವಿದ್ಯಾರ್ಥಿಗಳ ಅಭಿವೃದ್ಧಿಗೆ ನೆರವಾದರು. ಸರ್ಕಾರಿ ವೃತ್ತಿಯಿಂದ ನಿವೃತ್ತರಾದ ಮೇಲೆ ಇವರು ಮಾಡಿದ ಸಮಾಜ ಸೇವೆಯೂ ಗಣ್ಯವಾದುದು. ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಕನ್ನಡ ಪ್ರಚಾರವನ್ನು ಮಾಡಿದರಲ್ಲದೆ, ಹಲವು



ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಬೊಂಬಾಯಿಯ ಲೆಜಿಸ್ಲೇಟಿವ್ ಕೌನ್ಸಿಲಿನ ಚುನಾಯಿತ ಸದಸ್ಯರಾಗಿ 1910–1915ರವರೆಗೆ ಕೆಲಸ ಮಾಡಿದ ಇವರು, ಆ ಸಮಯದಲ್ಲಿ ಸರ್ ಫಿರೋಜ ಶಹಾ ಮೆಹತಾ, ಸರ್ ಲಲ್ಲೂಭಾಯಿ ಶಾಮಲದಾಸ್, ಸರ್ ಚಿಮಣಲಾಲ್ ಸೆಟಲ್‌ವಾಡ್ ಮೊದಲಾದ ಶ್ರೀಮಂತರ ಸಹಾಯವನ್ನು ದೊರಕಿಸಿಕೊಂಡು ಧಾರವಾಡದ ಕರ್ನಾಟಕ ಕಾಲೇಜಿಗಾಗಿ ಒಂದು ಲಕ್ಷ ರೂಪಾಯಿ ವಂತಿಗೆ ಕೂಡಿಸಿ, ದಿವಾನ್ ಬಹದ್ದೂರ್ ಅರಟಾಳ ರುದ್ರಗೌಡರ ಸಹಾಯದಿಂದ 1917ರಲ್ಲಿ ಕರ್ನಾಟಕ ಕಾಲೇಜನ್ನು ಸ್ಥಾಪಿಸಿದರು. ಧಾರವಾಡ ನಗರಸಭೆಯ ಅಧ್ಯಕ್ಷರಾಗಿಯೂ (1912–15) ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರಾಗಿಯೂ (1917–25) ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದರು.

ಸಾಹಿತ್ಯಪ್ರೇಮಿಗಳೂ ಲೇಖಕರೂ ಆಗಿದ್ದ ಇವರು, ನಂದಿನಿ (ಬುದ್ಧನ ಚರಿತ್ರೆ) ಮತ್ತು ಸ್ತ್ರೀಶಿಕ್ಷಣದ ಅವಶ್ಯಕತೆ ಎಂಬ ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಇವರಿಗೆ ಹಲವು ಬಗೆಯ ಗೌರವ ಪ್ರಶಸ್ತಿಗಳು ಲಭಿಸಿದ್ದವು. 1909ರಲ್ಲಿ ರಾವ್‌ಬಹದ್ದೂರ್, 1923ರಲ್ಲಿ ದಿವಾನ್ ಬಹದ್ದೂರ್ ಎಂಬ ಬಿರುದುಗಳು ಇವರಿಗೆ ಬಂದವು. 1924ರಲ್ಲಿ ಬ್ರಿಟಿಷ್ ಸರ್ಕಾರದಿಂದ ಇ.ಐ.ಇ. ಎಂಬ ಉನ್ನತ ಪ್ರಶಸ್ತಿ ಲಭಿಸಿತು. ಹೊಸಪೇಟೆಯಲ್ಲಿ 1920ರಲ್ಲಿ ನಡೆದ 6ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶ್ರೀನಿವಾಸರಾಯರನ್ನು ಅಧ್ಯಕ್ಷರನ್ನಾಗಿ ಆರಿಸಿ ಕನ್ನಡಿಗರು ಗೌರವಿಸಿದರು. ಇವರು 1929ರಲ್ಲಿ ನಿಧನರಾದರು.

**(ಆರ್.ವೈ.ಡಿ.)**

**ರೋಣ:** ಗದಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಜಿಲ್ಲೆಯ ಈಶಾನ್ಯ ದಿಕ್ಕಿನಲ್ಲಿರುವ ಈ ತಾಲ್ಲೂಕನ್ನು ದಕ್ಷಿಣದಲ್ಲಿ ಗದಗ, ನೈಋತ್ಯದಲ್ಲಿ ನವಲಗುಂದ, ಪಶ್ಚಿಮದಲ್ಲಿ ನರಗುಂದ ತಾಲ್ಲೂಕುಗಳೂ ಉತ್ತರದಲ್ಲಿ ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕು, ಪೂರ್ವದಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳು ಸುತ್ತುವರೆದಿವೆ. ಗದಗ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನಲ್ಲಿ 93 ಗ್ರಾಮಗಳೂ 3 ಪಟ್ಟಣಗಳೂ ಇವೆ. ನರೇಗಲ್ಲ, ರೋಣ, ಹೊಳೆಆಲೂರು ಹೋಬಳಿಗಳು. ತಾಲ್ಲೂಕಿನ ವಿಸ್ತೀರ್ಣ 1,290.6 ಚ.ಕಿಮೀ. ಜನಸಂಖ್ಯೆ 2,47,645.

ತಾಲ್ಲೂಕು ಹೆಚ್ಚುಮಟ್ಟಿಗೆ ಬಯಲು ಪ್ರದೇಶ. ತಾಲ್ಲೂಕಿನ ಉತ್ತರದಲ್ಲಿ ಮಲಪ್ರಭಾನದಿ ಪೂರ್ವಾಭಿಮುಖವಾಗಿ ಹಡಗಲಿಯವರೆಗೂ ಹರಿದು, ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕನ್ನು ರೋಣದಿಂದ ಬೇರ್ಪಡಿಸಿದೆ. ಮುಂದೆ ಈ ನದಿ ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ತಾಲ್ಲೂಕಿನಲ್ಲಿ ಮಲಪ್ರಭಾನದಿಯನ್ನು ಕೂಡಿಕೊಳ್ಳುವ ಕೆಲವು ಹಳ್ಳಗಳುಂಟು. ಅವುಗಳಲ್ಲಿ ಬೆಣ್ಣೆಹಳ್ಳ ಮುಖ್ಯವಾದದ್ದು. ನರಗುಂದ, ರೋಣ ತಾಲ್ಲೂಕುಗಳ ಮಧ್ಯೆ ಈಶಾನ್ಯಾಭಿಮುಖವಾಗಿ ಹರಿದು ಮಾಳವಾಡದ ಉತ್ತರದಲ್ಲಿ ತಾಲ್ಲೂಕನ್ನು ಪ್ರವೇಶಿಸಿ, ಮೆಣಸಗಿಯ ಪೂರ್ವಕ್ಕೆ ಮಲಪ್ರಭಾನದಿಯನ್ನು ಸೇರಿಕೊಳ್ಳುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 609 ಮಿಮೀ. ತಾಲ್ಲೂಕಿನ ಹೆಚ್ಚು ಭಾಗ ಎರೆ ಮತ್ತು ಒಂದು ಅಥವಾ ನೆರೆಮಣ್ಣಿನಿಂದ ಕೂಡಿದೆ. ಕಪ್ಪುಮಣ್ಣಿನ ಪ್ರದೇಶವೇ ಹೆಚ್ಚೆನ್ನಬಹುದು. ರೋಣದ ಬಳಿ ಕರೇಕಲ್ಲು ಹಾಗೂ ಕೆಲವು ಮೋಡಿಯ ಕಲ್ಲುಗಳುಂಟು. ಮಲಪ್ರಭಾ ಯೋಜನೆಯಿಂದ ಈ ತಾಲ್ಲೂಕಿನಲ್ಲಿ ನೀರಾವರಿ ಸೌಕರ್ಯ ಹೆಚ್ಚಿ ವ್ಯವಸಾಯ ಪ್ರದೇಶದ ವಿಸ್ತೀರ್ಣ ಹೆಚ್ಚಿದೆ. ಈ ತಾಲ್ಲೂಕಿನ ಮುಖ್ಯಬೆಳೆ ಜೋಳ, ಗೋದಿ, ಸಜ್ಜೆ ಮತ್ತು ಸೇಂಗಾ, ಹತ್ತಿ, ಹರಳು, ಎಳ್ಳು ಮುಂತಾದ ತೈಲೋತ್ಪಾದಕ ಕಾಳುಗಳು, ಇತರ ದ್ವಿದಳ ಧಾನ್ಯಗಳನ್ನು ಬೆಳೆಯುವರಲ್ಲದೆ ವಿವಿಧ ಹಣ್ಣು ಮತ್ತು ತರಕಾರಿಗಳನ್ನೂ ಬೆಳೆಯುತ್ತಾರೆ.

ರೋಣ ತಾಲ್ಲೂಕಿನಲ್ಲಿ ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳೂ ಆರೋಗ್ಯ ಕೇಂದ್ರಗಳೂ ಇವೆ. ಅಂಚೆ ತಂತಿ, ವಿದ್ಯುಚ್ಛಕ್ತಿ ಸೌಲಭ್ಯವಿದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳುಂಟು. ತಾಲ್ಲೂಕಿನ ಪಶ್ಚಿಮದಲ್ಲಿ ಹುಬ್ಬಳ್ಳಿ–ಗದಗ–ಹುಟಗಿ ರೈಲ್ವೆ ಮಾರ್ಗ ಹಾದು ಹೋಗಿದ್ದು ತಾಲ್ಲೂಕಿನಲ್ಲಿ ಮುಲ್ಲಾಪುರ, ಸವಡಿ, ಹೊಳೆಆಲೂರುಗಳಲ್ಲಿ ರೈಲ್ವೆನಿಲ್ದಾಣಗಳಿವೆ. ತಾಲ್ಲೂಕಿನಿಂದ ಸುತ್ತಲ ಗ್ರಾಮ ಮತ್ತು ಪಟ್ಟಣಗಳಿಗೆ ಮಾರ್ಗಗಳಿವೆ.

ಈ ತಾಲ್ಲೂಕಿನ ಗಜೇಂದ್ರಗಡದ ಕಾಲಕಾಲೇಶ್ವರನ ಜಾತ್ರೆ, ನರೇಗಲ್ಲಿನ ವೀರಪ್ಪಜ್ಜನ ಜಾತ್ರೆ ಪ್ರಸಿದ್ಧವಾದವು. ಗಜೇಂದ್ರಗಡ **(ನೋಡಿ)** ರೋಣದ ಪೂರ್ವಕ್ಕಿದೆ. ಇಲ್ಲಿನ ಬೆಟ್ಟದ ಮೇಲೆ ಶಿವಾಜಿ ಕಟ್ಟಿಸಿದ ಒಂದು ಕೋಟೆಯಿದೆ. ರೋಣದ ಆಗ್ನೇಯದಲ್ಲಿರುವ ನರೇಗಲ್ಲ **(ನೋಡಿ)** ದೇವಸ್ಥಾನಗಳಿಗೂ ಶಾಸನಗಳಿಗೂ ಪ್ರಸಿದ್ಧ. ರೋಣಕ್ಕೆ ನೈಋತ್ಯದಲ್ಲಿ 8 ಕಿಮೀ ದೂರದಲ್ಲಿರುವ ಸವಡಿಯಲ್ಲಿ ಬ್ರಹ್ಮದೇವ ಮತ್ತು ನಾರಾಯಣ ದೇವಾಲಯಗಳಿವೆ. ಇಲ್ಲಿ ಮೂರು ಶಿಲಾಶಾಸನಗಳಿದ್ದು ಒಂದು ರಾಷ್ಟ್ರಕೂಟ ಖೊಟ್ಟಿಗನ ಕಾಲದ್ದು (970), ಮತ್ತೊಂದು ಆರನೆಯ ವಿಕ್ರಮಾದಿತ್ಯನಿಗೆ ಸೇರಿದ್ದು (1082) ರೋಣದ ಪೂರ್ವಕ್ಕೆ ಸು. 20ಕಿಮೀ ದೂರದಲ್ಲಿರುವ ಸೂಡಿ ಗ್ರಾಮವನ್ನು 11ನೆಯ ಶತಮಾನದ ಶಾಸನಗಳಲ್ಲಿ ರಾಜಧಾನಿ ಎಂದು ಕರೆಯಲಾಗಿದೆ. 1010ರ ಒಂದು ಶಾಸನದ ಪ್ರಕಾರ ಚಾಳುಕ್ಯ ರಾಣಿ ಅಕ್ಕಾದೇವಿ ಈ ಪ್ರಾಂತ್ಯವನ್ನು ಆಳುತ್ತಿದ್ದಳೆಂದು ತಿಳಿದುಬರುತ್ತದೆ.

ರೋಣ ಈ ತಾಲ್ಲೂಕಿನ ಆಡಳಿತ ಕೇಂದ್ರ. ಹುಬ್ಬಳ್ಳಿ–ಬಿಜಾಪುರ ರೈಲ್ವೆ ದಾರಿಯಲ್ಲಿ ಮುಲ್ಲಾಪುರ ರೈಲ್ವೆ ನಿಲ್ದಾಣದ ಪೂರ್ವಕ್ಕೆ ಸು 13 ಕಿಮೀ ದೂರದಲ್ಲಿದೆ. ಜನಸಂಖ್ಯೆ 66,554. ಕಾಲೇಜು ಮಟ್ಟದವರೆಗೂ ವಿವಿಧ ಶಿಕ್ಷಣ ಸಂಸ್ಥೆಗಳಿವೆ. ಪಶು ವೈದ್ಯಾಲಯ ಮತ್ತು ಆರೋಗ್ಯ ಕೇಂದ್ರ ಮೊದಲಾದವುಗಳು ಇವೆ. ಈ ಪಟ್ಟಣ ನಗರ ಪಂಚಾಯಿತಿ ಆಡಳಿತಕ್ಕೆ ಸೇರಿದೆ.

ರೋಣ ಹಿಂದೆ ಪ್ರಸಿದ್ಧ ವಿದ್ಯಾಕೇಂದ್ರವಾಗಿದ್ದು, ದೊಡ್ಡ ಅಗ್ರಹಾರವಾಗಿತ್ತು. ಇಲ್ಲಿಯ ಆಡಳಿತವನ್ನು 104 ಮಹಾಜನರು ನೋಡಿಕೊಳ್ಳುತ್ತಿದ್ದರೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ರಾಷ್ಟ್ರಕೂಟ 1ನೆಯ ಅಮೋಘವರ್ಷನ ಆಡಳಿತ ಕಾಲದ (874) ಒಂದು ಶಾಸನ ಇಲ್ಲಿದೆ. ಇಲ್ಲಿನ ಪುರಾಣ ಪ್ರಸಿದ್ಧ ದ್ರೋಣಾಚಾರ್ಯರ ಗುಡಿಯ ಬಳಿ ಸಭಾಗೃಹ ಮತ್ತು ಅಭ್ಯಾಸಗೃಹಗಳ ದೀಪಕ್ಕಾಗಿ, ವಿದ್ಯಾದೇವತೆಯ ಪೂಜೆಗಾಗಿ ದಾನವಿತ್ತ ಶಾಸನಗಳಿವೆ. ದ್ರೋಣಾಚಾರ್ಯರ ಗುಡಿಯಲ್ಲಿ ನಂದಿ ವಿಗ್ರಹ ಒಳಗಡೆಯೂ ದ್ರೋಣಾಚಾರ್ಯರ ಮೂರ್ತಿ ಹೊರಗಡೆಯೂ ಇವೆ. ರೋಣವೆಂಬ ಹೆಸರು ದ್ರೋಣದಿಂದ ಬಂದಿದೆ ಎಂದು ಪ್ರತೀತಿ ಇಲ್ಲಿನ ಅನಂತಶಯನ, ಲೋಕನಾಥ ಮತ್ತು ಸಂಗಮೇಶ್ವರ ದೇವಾಲಯಗಳು ನೋಡತಕ್ಕವಾಗಿವೆ. ಇಲ್ಲಿಯ ಬಸ್ತಿಗುಡಿಯಲ್ಲಿ ಪಾರ್ಶ್ವನಾಥನ ಮೂರ್ತಿ ಇದೆ.

**(ಪಿ.ಆರ್.ಪಿ.)**

# ಲ

**ಲಂಕೇಶ್, ಪಿ.:** 1935 –2000. ನವ್ಯಪೀಳಿಗೆಯ ಪ್ರಸಿದ್ಧ ಲೇಖಕರು. ಚಲನಚಿತ್ರ ನಿರ್ದೇಶಕರು.ಲಂಕೇಶ್ ಪ್ರತಿಕೆ ಎಂಬ ವಿಶಿಷ್ಟ ಬಗೆಯ ಪ್ರತಿಕೆಯನ್ನು ಪ್ರಕಟಿಸಿ ಕನ್ನಡ ಪತ್ರಿಕಾ ಲೋಕದಲ್ಲಿಯೂ ಹೆಸರಾದವರು. ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿಯಲ್ಲಿ 1935 ಮಾರ್ಚ್ 8ರಂದು ಹುಟ್ಟಿದರು. ಇವರ ಮನೆತನದವರು ಮೊದಲು ಹರಿಹರದ ಬಳಿಯ ನಂದಿತಾವರೆಯಲ್ಲಿದ್ದರು. ಇವರ ತಾತ ಕೊನಗವಳ್ಳಿಗೆ ಬಂದು ನೆಲಸಿದರು. ತಾಯಿತಂದೆಗೆ ಐದನೆಯ ಮಗುವಾಗಿ ಹುಟ್ಟಿದ ಇವರಿಗೆ ಮೂವರು ಸೋದರಿಯರು ಮತ್ತು ಒಬ್ಬ ಸೋದರ. ಅವರ ಪೈಕಿ ಲಂಕೇಶ್ ಒಬ್ಬರೇ ಉನ್ನತ ಶಿಕ್ಷಣ ಪಡೆದವರು. ಎಳೆತನದಲ್ಲೇ ಲಂಕೇಶರಿಗೆ ಓದುವ ಅಭ್ಯಾಸ ಬೆಳೆದದ್ದು ಇವರ ಹಳ್ಳಿಯಲ್ಲಿ ವಯಸ್ಕರ ಶಿಕ್ಷಣ ಪಡೆದವರಿಗಾಗಿ ತೆರೆಯಲಾಗಿದ್ದ ಪುಸ್ತಕ ಭಂಡಾರದಿಂದಾಗಿ. ಲಂಕೇಶರ ಮನೆಯ ವಾತಾವರಣ ಅಷ್ಟೇನೂ ಹಿತಕರವಾಗಿರಲಿಲ್ಲ. ತಂದೆತಾಯಿ ಸದಾ ಜಗಳವಾಡುತ್ತಿದ್ದರು. ಇವರೇ ಹೇಳಿಕೊಂಡಿರುವಂತೆ ಅತ್ಯಂತ ಹೆಚ್ಚು ಪ್ರೀತಿಯ ಅಥವಾ ಅತ್ಯಂತ ಹೆಚ್ಚು ಉಪೇಕ್ಷೆಗೆ ಒಳಗಾದ ಮಗುವಾಗಿದ್ದ ಲಂಕೇಶರು ಸಹಜವಾಗಿಯೇ ಚಿಂತನ ಶೀಲತೆಯನ್ನು ಬೆಳೆಸಿಕೊಂಡರು. ಪ್ರತಿಯೊಂದು ಸಂಸಾರವೂ ಒಂದಿಲ್ಲೊಂದು ರೀತಿಯಲ್ಲಿ ಅಸುಖಿಯೇ ಎಂಬುದು ಗೊತ್ತಾಗುವ ವೇಳೆಗೆ ಇವರು ಅಂತರ್ಮುಖಿಯಾಗಿದ್ದರು. ಮನೆಯಲ್ಲಿದ್ದ ಜೈಮಿನಿಭಾರತ, ವೀರಶೈವ ಗ್ರಂಥಗಳು ಇವುಗಳನ್ನು ಓದುವುದರಲ್ಲಿ ಬಾಹ್ಯಪ್ರಪಂಚದ ವಾಸ್ತವತೆಯನ್ನು ಮರೆಯಲು ಯತ್ನಿಸುತ್ತಿದ್ದರು.

ಪ್ರೌಢಶಾಲೆಯಲ್ಲಿ ಉತ್ತಮ ವಿದ್ಯಾರ್ಥಿ ಎನಿಸಿಕೊಂಡಿದ್ದ ಇವರು ವೈದ್ಯಶಿಕ್ಷಣ ಪಡೆಯಬೇಕೆಂಬುದು ತಂದೆತಾಯಿಯರ ಇಚ್ಛೆಯಾಗಿತ್ತು. ಆದರೆ ಲಂಕೇಶ್ ಲೇಖಕರಾಗಿ ವಿಕಾಸಗೊಳ್ಳುತ್ತಿದ್ದರು. ಅಧ್ಯಾಪಕರೊಬ್ಬರ ವರ್ತನೆಗೆ ಪ್ರತಿಭಟನೆಯಾಗಿಯೇ ಇವರು ಬರೆಯತೊಡಗಿದ್ದು. ಹೀಗಾಗಿ ಸ್ವೀಕೃತವಾದ, ಸಂಭಾವಿತವೆನಿಸಿಕೊಂಡ ವ್ಯವಸ್ಥೆಯ ಹಾಗೂ ವಿಚಾರಗಳ ಪ್ರತಿಭಟನೆಯಾಗಿ, ಬಂಡಾಯದ ಸಂಕೇತವಾಗಿ ಇವರು ಲೇಖನಿಯನ್ನು ರೂಪಿಸಿಕೊಂಡರೆನ್ನಬಹುದು.

ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಮತ್ತು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಎಂ.ಎ. ಪದವಿ ಗಳಿಸಿ ಶಿವಮೊಗ್ಗದ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾದರು (1952–62). ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಮೂರುವರ್ಷ (1962–65), ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಒಂದು ವರ್ಷ ಬೋಧಿಸಿ, ಬಳಿಕ 1966ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸೇರಿ 1978ರಲ್ಲಿ ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿದರು. ಅನಂತರ ಪ್ರಜಾವಾಣಿ ಪತ್ರಿಕೆಗೆ ಅಂಕಣ ಬರೆಯಲು ಪ್ರಾರಂಭಿಸಿ (ಬಂ ಮತ್ತು ಗುಂ), ತಾವೇ ಸಂಪಾದಕರಾಗಿ ‘ಲಂಕೇಶ್ ಪತ್ರಿಕೆ’ಯನ್ನು ಆರಂಭಿಸಿದರು (1980 ಜುಲೈ). ಈ ಪತ್ರಿಕೆಯಲ್ಲಿ ಇವರು ಬರೆಯುತ್ತಿದ್ದ ಟೀಕೆ ಟಿಪ್ಪಣಿ ಎಂಬ ಅಂಕಣ ಅತ್ಯಂತ ಜನಪ್ರಿಯವಾಗಿತ್ತು.

ಲಂಕೇಶರ ಮೊದಲನೆಯ ಕೃತಿ ಕೆರೆಯ ನೀರನು ಕೆರೆಗೆ ಚೆಲ್ಲಿ (1963) ಎಂಬುದು ಸಣ್ಣಕಥೆಗಳ ಸಂಕಲನ. ನಾನಲ್ಲ (1970), ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ (1973), ಕಲ್ಲುಕರಗುವ ಸಮಯ (1990), ಉಲ್ಲಂಘನೆ (1996)–ಇವು ಇವರ ಇನ್ನಿತರ ಸಣ್ಣಕಥಾಸಂಕಲನಗಳು. ಬಿಚ್ಚು ಹಾಗೂ ತಲೆಮಾರು ಕವನಸಂಕಲನಗಳು. 1950–70ರ ಅವಧಿಯಲ್ಲಿ ಕನ್ನಡದಲ್ಲಿ ಪ್ರಕಟವಾದ ಕವನಗಳ ಪೈಕಿ ಕೆಲವನ್ನು ಆಯ್ದು ಸಂಗ್ರಹಿಸಿ ಅಕ್ಷರ ಹೊಸ ಕಾವ್ಯ ಎಂಬ ಹೆಸರಿನಲ್ಲಿ ಇವರು ಪ್ರಕಟಿಸಿದ್ದಾರೆ (1970). ಬೋದಿಲೇರ್ ಕವಿಯ ಕವನಗಳನ್ನು ಅನುವಾದಿಸಿ ಪಾಪದ ಹೂವುಗಳು ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಟಿ.ಪ್ರಸನ್ನನ ಗೃಹಸ್ಥಾಶ್ರಮ (1964), ತೆರೆಗಳು (1965), ನನ್ನ ತಂಗಿಗೊಂದು ಗಂಡುಕೊಡಿ, ಗಿಳಿಯು ಪಂಜರದೊಳಿಲ್ಲ, ಸಿದ್ಧತೆ, ಪೋಲೀಸರಿದ್ದಾರೆ ಎಚ್ಚರಿಕೆ, ಕ್ರಾಂತಿ ಬಂತು ಕ್ರಾಂತಿ, ಸಂಕ್ರಾಂತಿ, ಗುಣಮುಖ ಇವು ಇವರ ನಾಟಕಗಳು. ಆಷಾಢ ಭೂತಿತನ, ಸಿನಿಕತೆ, ವ್ಯವಸ್ಥೆಯ ನಿಷ್ಫಲತೆಯ ಬಗ್ಗೆ ಹತಾಶೆ, ಆಕ್ರೋಶ, ಸಾಮಾಜಿಕ ಅಸಮಾನತೆಯ ವಿರುದ್ಧ ಪ್ರತಿಭಟನೆ ಇವರ ಎಲ್ಲ ನಾಟಕಗಳ ಮುಖ್ಯ ವಸ್ತು. ದೊರೆ ಈಡಿಪಸ್ ಹಾಗೂ ಅಂತಿಗೊನೆ–ಇವು ಪ್ರಮುಖ ಅನುವಾದಿತ ನಾಟಕಗಳು. ಬಿರುಕು (1967), ಮುಸ್ಸಂಜೆಯ ಕಥಾಪ್ರಸಂಗ (1978) ಮತ್ತು ಅಕ್ಕ (1991)– ಇವರ ಕಾದಂಬರಿಗಳು.

ಪ್ರಸ್ತುತ (1970), ಕಂಡದ್ದು ಕಂಡ ಹಾಗೆ (1975), ಟೀಕೆಟಿಪ್ಪಣಿ (ಎರಡು ಭಾಗಗಳಲ್ಲಿ) ಇವು ಇವರ ಲೇಖನ, ಭಾಷಣ, ಅಂಕಣ ಬರೆಹಗಳ ಸಂಕಲನ. ಈ ಕೃತಿಗಳಲ್ಲಿ ಸಾಹಿತ್ಯವನ್ನು ಕುರಿತ ಇವರ ಧೋರಣೆ, ಸ್ವವಿಮರ್ಶೆ, ಲೋಕವನ್ನು ಇವರು ನೋಡುವ ದೃಷ್ಟಿ ವ್ಯಕ್ತವಾಗಿವೆ. ಹುಳಿಮಾವಿನ ಮರ (1997) ಇವರ ಆತ್ಮಕಥನ.

ಸಾಹಿತ್ಯದಲ್ಲಿ ಹೇಗೋ ಹಾಗೆ ಚಲನಚಿತ್ರದಲ್ಲೂ ಇವರು ಪ್ರಯೋಗ ಶೀಲರೆನಿಸಿದ್ದಾರೆ. ಪಲ್ಲವಿ, ಅನುರೂಪ, ಖಂಡವಿದೆಕೋ ಮಾಂಸವಿದೆಕೋ, ಎಲ್ಲಿಂದಲೋ ಬಂದವರು ಎಂಬ ಚಲನಚಿತ್ರಗಳನ್ನು ಇವರು ನಿರ್ದೇಶಿಸಿದ್ದಾರೆ. ಪಲ್ಲವಿಯ ಉತ್ತಮ ನಿರ್ದೇಶನಕ್ಕಾಗಿ (1976) ಕೇಂದ್ರ ಸರ್ಕಾರದ ಬಹುಮಾನ ಇವರಿಗೆ ದೊರಕಿದೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವಪ್ರಶಸ್ತಿ (1986), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1993) ದೊರೆತಿವೆ. ಇವರು 2000 ಜನವರಿ 26ರಂದು ನಿಧನರಾದರು. ಇವರ ಮಕ್ಕಳಾದ ಗೌರಿ ಲಂಕೇಶ್ ಮತ್ತು ಇಂದ್ರಜಿತ್ ಈಗ ಲಂಕೇಶ್ ಪ್ರತಿಕೆಯನ್ನು ಬೇರೆ ಬೇರೆಯಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇನ್ನೊಬ್ಬ ಮಗಳು ಕವಿತಾ ಲಂಕೇಶ್ **(ನೋಡಿ)** ಪ್ರಸಿದ್ಧ ಚಲನಚಿತ್ರ ನಿರ್ದೇಶಕಿ. **(ಎಚ್.ಎಸ್.ಕೆ.)**

**ಲಕ್ಕಣ್ಣ ದಂಡೇಶ:** ಸು. 1410–63. ವಿಜಯನಗರದ ಪ್ರೌಢದೇವರಾಯನ (1424–46) ಆಶ್ರಯದಲ್ಲಿದ್ದ ದಂಡನಾಯಕ ಹಾಗೂ ಪ್ರಾಂತ್ಯಾಧಿಕಾರಿ. ಶಿವತತ್ತ್ವ ಚಿಂತಾಮಣಿ ಎಂಬ ಗ್ರಂಥದ ಕರ್ತೃ. ಇವನಿಗೆ ಲಕ್ಕಣ್ಣನಾಯಕ, ಲಕ್ಕಣಾಮಾತ್ಯ, ಲಕ್ಕಮಂತ್ರಧರ, ಲಕ್ಕಣ್ಣವೊಡೆಯ, ಲಕ್ಕಣ್ಣದಣ್ಣಾಯಕ ಎಂಬ ಬೇರೆ ಬೇರೆ ಹೆಸರುಗಳಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ.

ಇವನ ತಂದೆ ಹೆಗ್ಗಡದೇವ, ತಾಯಿ ಒಮ್ಮಾಯಮ್ಮ, ಸಹೋದರ ಮಾದಣ್ಣ. ಹೊಸಪಟ್ಟಣ (ಕೋಲಾರ ಜಿಲ್ಲೆ ಮುಳಬಾಗಲು ತಾಲ್ಲೂಕಿನ ವಿರೂಪಾಕ್ಷಪುರ) ಇವನ ಜನ್ಮಸ್ಥಳವೆಂದು ತೋರುತ್ತದೆ.

ಲಕ್ಕಣ್ಣದಂಡೇಶ ತನ್ನ ಗ್ರಂಥದಲ್ಲಿ 'ಧರೆಗಧಿಕ ಮೂರುರಾಯರಗಂಡನ ಪ್ರತಿಮಬಿರುದಂಕಗಜವೇಂಟೆಕಾರ ದೇವೇಂದ್ರಭೂವರನಮಹದೈಶ್ವರ್ಯ ಶರಧಿ ಚಂದ್ರೋದಯನುದಾರಕರುಣಾಧಾರ, ಧರಣೀಶ ದೇವರಾಜೇಂದ್ರನುನ್ನತ ಕಳೆಯ, ಪ್ರೌಢಮತಿ ದೇವರಾಜೇಂದ್ರನ ಮಹಾಪ್ರಧಾನಂ' ಎಂದು ಹೇಳಿಕೊಂಡಿದ್ದಾನೆ. ಅಲ್ಲದೆ ತನ್ನನ್ನು ಕೀರ್ತಿಯುತ, ಸಕಲಸಜ್ಜನ ಕಲ್ಪತರು, ಕರುಣಾಳು, ಲೋಕೈಕ ಬಂಧು ಮುಂತಾಗಿ ವಿಶೇಷಿಸಿಕೊಂಡಿದ್ದಾನೆ. ಇದುವರೆಗೆ ಇವನ ವಿಚಾರವಾಗಿ ಕೋಲಾರ, ಮಂಡ್ಯ, ಚಿತ್ರದುರ್ಗ, ಬೆಂಗಳೂರು, ತಿರುಚ್ಚಿರಾಪಳ್ಳಿ, ತಂಜಾವೂರು, ದಕ್ಷಿಣ ಕನ್ನಡ, ಸೇಲಂ ಜಿಲ್ಲೆಗಳಲ್ಲಿ ಒಟ್ಟು ಹದಿನೇಳು ಶಾಸನಗಳು ದೊರೆತಿವೆ. ಇವು 1410–1463ರ ನಡುವಣ ಅವಧಿಯವು.

ದೇವರಾಯನಲ್ಲಿ ಈತ ಮೊದಲಿಗೆ ಮಾಂಡಲಿಕನಾಗಿದ್ದು, ಬಳಿಕ ಸೇನಾನಿಯಾಗಿ ಅನಂತರ ಮಹಾಮಂತ್ರಿಯಾದ. 1405–55ರ ಅವಧಿಯಲ್ಲಿ ದಕ್ಷಿಣ ದೇಶದ ಪ್ರಾಂತ್ಯಗಳಲ್ಲಿ ದಂಗೆಕೋರರ ಉಪಟಳವನ್ನು ಅಡಗಿಸಿ, ಅಲ್ಲಿಯ ಆಡಳಿತವನ್ನು ಸುವ್ಯವಸ್ಥೆಗೊಳಿಸಿ, ಸಾಮ್ರಾಜ್ಯದ ವ್ಯವಹಾರಗಳನ್ನು ಬಹುದಕ್ಷತೆಯಿಂದಲೂ ನಿಷ್ಠೆಯಿಂದಲೂ ನಿರ್ವಹಿಸಿದ. ಪ್ರೌಢದೇವರಾಯ ಇವನ ಕಾರ್ಯದಕ್ಷತೆಗೆ ಮೆಚ್ಚಿ ದಕ್ಷಿಣಪ್ರಾಂತ್ಯದ ಆಡಳಿತವನ್ನೆಲ್ಲ ಇವನಿಗೇ ವಹಿಸಿದ್ದ. 1430–40ರವರೆಗೆ ಟೇಕಲ್, ಮುಳಬಾಗಲು, ತುಂಡೀರ, ಬಾರಕೂರು ಮೊದಲಾದ ಪ್ರಾಂತ್ಯಗಳಿಗೆ ಮಾಂಡಲಿಕನಾಗಿದ್ದ. 1440ರ ಅನಂತರ ಪುನಃ ಮಧುರೆಗೆ ಮಾಂಡಲಿಕನಾಗಿ ಬಳಿಕ ರಾಜಪ್ರತಿನಿಧಿಯೂ ಆದ. 1431ರಲ್ಲಿ ಪಾಂಡ್ಯ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಅಲ್ಲಿಯ ಅರಸರನ್ನು ವಶಪಡಿಸಿಕೊಂಡು ರಾಜಪ್ರತಿನಿಧಿಯಾಗಿ ರಾಜ್ಯಭಾರವನ್ನು ವಹಿಸಿಕೊಂಡ.

ಈತ ಆ ಕಾಲದಲ್ಲಿ ತನ್ನ ಹೆಸರಿರುವ ನಾಣ್ಯಗಳನ್ನು ಅಚ್ಚು ಹಾಕಿಸಿ ತಿರುಚ್ಚಿರಾಪಳ್ಳಿ, ತಂಜಾವೂರು ಪ್ರಾಂತ್ಯಗಳಲ್ಲಿ ಅವನ್ನು ಪ್ರಚಾರಕ್ಕೆ ತಂದ. ಇವನ ನಾಣ್ಯಗಳಲ್ಲಿ ಒಂದು ಮುಖದಲ್ಲಿ ಆನೆಯ ಚಿಹ್ನೆ, ಮತ್ತೊಂದು ಮುಖದಲ್ಲಿ ಲಕುಮಣ ದಣಾಯಕರು ಎಂಬ ಲಿಪಿ ಇರುತ್ತದೆ. ಇವನಿಗೆ ಶ್ರೇಯಸ್ಸನ್ನು ಕೋರಿ 1440ರಲ್ಲಿ ನಾಗರಸ ಎಂಬುವನು ತಿರುವಾರೂರಿನ ದೇವಸ್ಥಾನದ ಗೋಪುರವನ್ನು ಕಟ್ಟಿಸಿಕೊಟ್ಟನೆಂದು ಶಾಸನದ ಉಲ್ಲೇಖವಿದೆ. ಅದೇ ಸುಮಾರಿನಲ್ಲಿ ಸಿಂಹಳ ಭಾಷೆಯ ಕಾವ್ಯಗಳಲ್ಲೂ ಕನ್ನಡಿಗರ ಈ ದಿಗ್ವಿಜಯ ಸಂಗತಿಯ ಉಲ್ಲೇಖವಿದೆ. ಸಿಂಹಳ ದಂಡಯಾತ್ರೆಯ ಅನಂತರ ದೊರೆ ದೇವರಾಯನಿಗೆ ಅಲಾಉದ್ದೀನನಿಂದ ಒದಗಿದ ಕಿರುಕುಳವನ್ನು ತಪ್ಪಿಸಲು ಬಹಮನೀ ರಾಜ್ಯದಲ್ಲಿ ನುಗ್ಗಿ ಕಲ್ಬುರ್ಗಿ ಪ್ರಾಂತ್ಯವನ್ನು ಕೊಳ್ಳೆಹೊಡೆದು ರಣಾಂಗಣ ದಲ್ಲಿ ಕಲಿವೀರಭದ್ರನಾಗಿ ಕಾದಾಡಿ ತುರುಷ್ಕ ಸೇನೆಯನ್ನು ಹಾಳುಮಾಡಿ ವಿಜಯ ಸಾಧಿಸಿದ ಲಕ್ಕಣ್ಣ ದಂಡೇಶನ ಪರಾಕ್ರಮವನ್ನು ಸಿದ್ಧನಂಜೇಶ ತನ್ನ ಕಾವ್ಯದಲ್ಲಿ 'ಕೀರ್ತ್ಯಂಗನೆಯ ತೋಳೊಳೊರಗಿರುವ ಪ್ರೌಢನರೇಂದ್ರನುರುದಂಡನಾಯಕಂ ಹರಭಕ್ತಲಕ್ಕಣಾಮಾತ್ಯರ್' ಎಂದು ಪ್ರಶಂಸಿಸಿದ್ದಾನೆ. ಪರ್ಷಿಯ ದೇಶದ ರಾಯಭಾರಿ ಅಬ್ದುಲ್ ರಜಾಕ್ ಇವನ ಬಗ್ಗೆ ಹೊಗಳಿಕೆಯ ಮಾತುಗಳನ್ನಾಡಿದ್ದಾನೆ.

ಲಕ್ಕಣ್ಣ ದಂಡೇಶ ಸಂಸ್ಕೃತ ಮತ್ತು ಕನ್ನಡ ಈ ಎರಡು ಭಾಷೆಗಳಲ್ಲಿಯೂ ದೊಡ್ಡ ವಿದ್ವಾಂಸನಾಗಿದ್ದ. ಇವನು ಕೈಗೊಂಡ ಸಾಹಿತ್ಯ ಮತ್ತು ಸಂಸ್ಕೃತಿ ಸಂವರ್ಧನಕಾರ್ಯ ರಾಜಕಾರ್ಯದಷ್ಟೇ ಮಹತ್ತ್ವವುಳ್ಳದ್ದು. ವೀರಶೈವ ಸಂಸ್ಕೃತಿ ನಾಡಿನ ಮೂಲೆ ಮೂಲೆಗಳಲ್ಲಿಯೂ ಹರಡುವಂತೆ ಜನಜಾಗೃತಿಯನ್ನುಂಟುಮಾಡಿದ ಕೀರ್ತಿ ಈತನದು. (ಎಸ್.ಬಿ.)

ಈತನ ಶಿವತತ್ತ್ವ ಚಿಂತಾಮಣಿ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 54 ಸಂಧಿಗಳೂ 2,221 ಪದ್ಯಗಳೂ ಇವೆ. ಈ ಕಾವ್ಯ ವೀರಶೈವ ಲಿಂಗತತ್ತ್ವದ ವಿವರಣೆಯೊಂದಿಗೆ ಪ್ರಾರಂಭವಾಗಿ, ಶಿವನ 25 ಲೀಲೆಗಳು, ಬಸವೇಶ್ವರರ ಜನನ, ಬಾಲ್ಯ, ಅಧಿಕಾರಪ್ರಾಪ್ತಿ, ಪವಾಡಗಳು, ಪ್ರಮಥರ ಕಥೆಗಳು, ನೂತನ ಗಣಂಗಳ ಹೆಸರು, ಊರು, ಕಾಯಕಗಳು, ನೂರೊಂದು ಸ್ಥಲಗಳು, ಅವುಗಳಲ್ಲಿ ಪ್ರಮುಖವಾದ ಅಷ್ಟಾವರಣ ಷಟ್‌ಸ್ಥಲಗಳ ವಿವರಣೆಯೊಂದಿಗೆ ಲಿಂಗಾಂಗ ಸಾಮರಸ್ಯವನ್ನು ಪ್ರತಿಪಾದಿಸುವುದರ ಮೂಲಕ ಮುಕ್ತಾಯಗೊಂಡಿದ್ದು ವೀರಶೈವ ಧರ್ಮದ ತತ್ತ್ವಕೋಶದಂತಿದೆ. ಇದರ ಪ್ರತಿಪದ್ಯದ ಅಂತ್ಯ 'ಚರಣಾಂಬುಜಕ್ಕೆ ಶರಣು' ಎಂಬ ಅಂಕಿತದಿಂದ ಕೂಡಿರುವುದನ್ನು ನೋಡಿದರೆ ಇದು ದಾಸೋಹಂ ಎಂಬ ಭಕ್ತಿಸಿದ್ಧಾಂತದ ತತ್ತ್ವದಿಂದ ಮೈತುಂಬಿರುವ ಕಾವ್ಯವೆಂದು ಹೇಳಬಹುದು. ಕಾವ್ಯದೃಷ್ಟಿಯಲ್ಲಿ ಇದೊಂದು ಪುರಾಣದಂತಿದ್ದರೂ ಹೊಸ ರೀತಿಯ ವರ್ಣನೆಗಳಿಂದ ಕೃತಿಕಾರ ಒಂದು ಸುಂದರ ಕಾವ್ಯವನ್ನಾಗಿ ಮಾಡಿದ್ದಾನೆ. ಭಕ್ತಿರಸದೊಂದಿಗೆ ಉಳಿದ ರಸಗಳು ಪೋಷಕವಾಗಿ ಕಾವ್ಯದ ಸಂಪತ್ತನ್ನು ಹೆಚ್ಚಿಸಿವೆ. ಕಾವ್ಯದ ಪ್ರಧಾನ ಲಕ್ಷ್ಯ ಮಾನವರನ್ನು ಶಿವಪದದತ್ತ ಸಾಗುವಂತೆ ಮಾಡುವುದು. ಶೈಲಿ ಸರಳವೂ ಸುಂದರವೂ ಆಗಿದೆ. ಸಾವಿರಾರು ಜನ ಶಿವಶರಣರ ಚರಿತೆ ನಿರೂಪಿತವಾಗಿರುವ ಈ ಕಾವ್ಯದಲ್ಲಿ ಐತಿಹಾಸಿಕ ದೃಷ್ಟಿಯಿಂದ ಸಮಕಾಲೀನ ಶರಣರ ಹೆಸರು ಹಾಗೂ ಅವರ ಸ್ಥಳಗಳು ಉಲ್ಲೇಖಿತವಾಗಿದ್ದು ಆ ಮೂಲಕ ತನ್ನ ಮಹತ್ತ್ವವನ್ನು ಹೆಚ್ಚಿಸಿಕೊಂಡಿದೆ. ಇದರಲ್ಲಿ ಉಕ್ತವಾಗಿರುವ ವಿಷಯಗಳು ಆಗಮ ಮತ್ತು ಪುರಾಣಗಳಿಂದ ಆಯ್ದವುಗಳಾಗಿವೆ. ಅಲ್ಲಲ್ಲಿ ಪಾರಸೀ ಶಬ್ದಗಳ ಪ್ರಯೋಗ ಹಿತಮಿತವಾಗಿದೆ. ಸಂಸ್ಕೃತ ಪದಗಳನ್ನು ಛಂದಸ್ಸಿಗೆ ಅನುಕೂಲವಾಗುವಂತೆ ಬಳಸಲಾಗಿದೆ. ನೂತನ ಗಣಂಗಳ ಚರಿತ್ರೆಯನ್ನು ಬರೆದ ವೀರಶೈವ ಕವಿಗಳಲ್ಲಿ ಲಕ್ಕಣ್ಣನೇ ಮೊದಲಿಗ. ಅನಂತರ ಬಂದ ಗುಬ್ಬಿಯ ಮಲ್ಲಣಾರ್ಯ, ಸಿದ್ಧನಂಜೇಶ ಮೊದಲಾದ ಕವಿಗಳು ಇವನ ಕೃತಿಗೆ ಋಣಿಯಾಗಿದ್ದಾರೆ. (ಪಿ.ಎಂ.)

**ಲಕ್ಕಮ್ಮ:** ಸು. 1160. ಶಿವಶರಣೆ ಹಾಗೂ ವಚನಕಾರ್ತಿ. ರಾಯಚೂರು ಜಿಲ್ಲೆಯ ಅಮರೇಶ್ವರದ ಆಯ್ದಕ್ಕಿ ಮಾರಯ್ಯನ ಹೆಂಡತಿ. ಈಕೆ ಆಯ್ದಕ್ಕಿ ಲಕ್ಕಮ್ಮನೆಂದೇ ಪ್ರಸಿದ್ಧಳಾಗಿದ್ದಾಳೆ. ಈಕೆಯ ಪತಿ ಬಸವಾದಿ ಪ್ರಮಥರ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತರುವ ಕಾಯಕದವ. ಹೀಗೆ ತಂದ ಅಕ್ಕಿಯಿಂದ ದಾಸೋಹ ನಡೆಸುತ್ತಿದ್ದ ದಂಪತಿಗಳಿವರು. ಈ ತನಕ ಈಕೆಯ 25 ವಚನಗಳು ಉಪಲಬ್ಧವಾಗಿವೆ. ವಚನಗಳ ಅಂಕಿತ 'ಮಾರಯ್ಯಪ್ರಿಯ ಅಮರೇಶ್ವರ ಲಿಂಗ'. ಕಾಯಕವೇ ಕೈಲಾಸ, ಪತಿ ಕರ್ತವ್ಯಚ್ಯುತನಾಗದಂತೆ ಎಚ್ಚರಿಸುವುದು ಮತ್ತು ಅವನನ್ನು ಅನುಸರಿಸುವುದು ತನ್ನ ಧರ್ಮವೆಂದು ನಂಬಿದ್ದವಳು. ಎಂಥ ಪರಿಸ್ಥಿತಿ ಬಂದರೂ ಕಾಯಕಮಾಡಿ ಬದುಕಬೇಕು, ಯಾರಲ್ಲೂ ಯಾಚನೆ ಮಾಡಬಾರದು, ಅಂದಂದಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಶೇಖರಿಸಬೇಕೆಂಬ ಆದರ್ಶವಿದ್ದ ಗೃಹಿಣಿ ಈಕೆ. ಒಮ್ಮೆ ಈಕೆಯ ಪತಿ ಹೆಚ್ಚು ಅಕ್ಕಿ ಆಯ್ದುತಂದಾಗ 'ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ತವಕ ಹಿಂಗಿತೆ; ಆಯ್ದಿಹೆನೆಂಬ ಕಾಯಕದ ಅರಿಕೆ ಹಿಂಗಿತೆ, ನಾ ಮಾಡಿಹೆನೆಂಬ ತವಕ ಹಿಂಗಿತೆ; ನಮಗೆ ಎಂದಿನಂದವೆ ಸಾಕು ಸ್ವಾಮಿ, ಹೆಚ್ಚಿನ ಅಕ್ಕಿಯ ಅಲ್ಲಿಯೇ ಸುರಿದು ಬನ್ನಿರಿ' ಎಂದು ಹಿಂದಕ್ಕೆ ಕಳುಹಿಸಿದಳಂತೆ.

ಕಾಯಕದ ಮಹಿಮೆ ಹೇಳುವ ಈಕೆಯ ಒಂದು ವಚನ ಹೀಗಿದೆ:

ಮಾಡಿನೀಡಿಹೋದೆನೆಂಬಾಗ ಕೈಲಾಸವೇನು ಕೈಕೂಲಿಯೇ?
ಮುಂದೊಂದ ಕಲ್ಪಿಸದೆ ಹಿಂದೊಂದ ಭಾವಿಸದೆ ಸಲೆಸಂದಿದ್ದಾಗವೆ
ಮಾರಯ್ಯ ಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ *

**ಲಕ್ಕವಳ್ಳಿ:** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿರುವ ಒಂದು ಗ್ರಾಮ; ಹೋಬಳಿ ಕೇಂದ್ರ. ತರೀಕೆರೆ–ನರಸಿಂಹರಾಜಪುರ ಮಾರ್ಗದಲ್ಲಿ ತರೀಕೆರೆಯ ವಾಯವ್ಯಕ್ಕೆ 14 ಕಿಮೀ ದೂರದಲ್ಲಿದೆ. ಇಲ್ಲಿ ಪದವಿ ಪೂರ್ವ ಕಾಲೇಜು, ಆರೋಗ್ಯ ಕೇಂದ್ರ, ಅಂಚೆ ಮತ್ತು ತಂತಿ ಕಚೇರಿ ಹಾಗೂ ವಿವಿಧ ಸಹಕಾರ ಸಂಘಗಳಿವೆ.

ಈ ಗ್ರಾಮಕ್ಕೆ ಸಮೀಪದಲ್ಲಿ ಭದ್ರಾನದಿಗೆ ಜಲಾಶಯ ನಿರ್ಮಿಸಲಾಗಿದೆ. ಒಂದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 40.81 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಜಲಾಶಯದ ಅಣೆಕಟ್ಟೆಯನ್ನು ಕಲ್ಲುಗಾರೆಯಿಂದ ಕಟ್ಟಿದೆ. ಇದರ ಉದ್ದ 440ಮೀ, ಎತ್ತರ 59ಮೀ. ಜಲಾನಯನ ಪ್ರದೇಶ 40 ಚದರ ಮೈಲಿಗಳು. ಈ ಜಲಾಶಯ ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ನೀರೊದಗಿಸುತ್ತದೆ. ಈ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದಿರುವ ಒಟ್ಟು ಪ್ರದೇಶ 99,010 ಹೆಕ್ಟೇರುಗಳು. ಭದ್ರಾ ಯೋಜನೆಯಲ್ಲಿ ವಿದ್ಯುತ್ ಉತ್ಪಾದನಾ ಯೋಜನೆಯೂ ಇದೆ. ಇದರಿಂದ 25 ಸಾವಿರ ಕಿವಾಗೂ ಹೆಚ್ಚಿನ ವಿದ್ಯುತ್ ಉತ್ಪಾದನೆಯಾಗುತ್ತದೆ.

ಈ ಜಲಾಶಯದ ಎದುರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಸ್ಥಾಪನೆಯಾಗಿ (1973) ಮೊದಲಿಗೆ ಕನ್ನಡ, ಅರ್ಥಶಾಸ್ತ್ರ, ಗಣಿತಶಾಸ್ತ್ರ ಮತ್ತು ಔದ್ಯಮಿಕ ರಸಾಯನ ವಿಜ್ಞಾನ ವಿಭಾಗಗಳು ಆರಂಭವಾದವು. ಈ ಸ್ನಾತಕೋತ್ತರ ಕೇಂದ್ರ ಅನಂತರದಲ್ಲಿ ಕುವೆಂಪು ವಿಶ್ವವಿದ್ಯಾಲಯವಾಯಿತು(1987). **(ನೋಡಿ: ಕುವೆಂಪು ವಿಶ್ವವಿದ್ಯಾಲಯ).** *

**ಲಕ್ಕುಂಡಿ:** ಗದಗ ಜಿಲ್ಲೆಯ ಅದೇ ತಾಲ್ಲೂಕಿಗೆ ಸೇರಿದ ಒಂದು ಐತಿಹಾಸಿಕ ಸ್ಥಳ. ಗದಗ–ಬೆಟಗೇರಿಯಿಂದ 11 ಕಿಮೀ ದೂರದಲ್ಲಿದೆ. ಜನಸಂಖ್ಯೆ 11,305. ಪ್ರಾಚೀನ ಕಾಲದಲ್ಲಿ ಲೊಕ್ಕಿಯಗುಂಡಿ ಎಂದು ಪ್ರಸಿದ್ಧವಾಗಿದ್ದ ಈ ಊರು ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಬೆಳ್ವೊಲ 300 ಪ್ರಾಂತ್ಯಕ್ಕೆ ಸೇರಿತ್ತು. ಬೆಳ್ವೊಲದ 18 ಅಗ್ರಹಾರಗಳಲ್ಲಿ ಇದೂ ಒಂದಾಗಿತ್ತು. ಶಾಸನಗಳಲ್ಲಿ ಈ ಊರನ್ನು 'ಶ್ರೀಗೆ ವಿಭೂತಿಗೆ ಧರ್ಮಕ್ಕಾಗರಮೆನಲಿಂದ್ರನಗ್ಗದಮರಾವತಿಗಂ ಭೋಗಾವತಿಗಂ ಸಲೆಮೇಲಾಗಿಪ್ಪುದು ಧರೆಗೆ' ಎಂದು ಪ್ರಕಟಿಸಲಾಗಿತ್ತು. ದಾಶರಥಿ ವಿನಿರ್ಮಿತ ರಾಮರದತ್ತಿ, ಶ್ರೀಮದ್ರಾಮಮಹೇಂದ್ರದತ್ತ ಎಂದು ಕರೆದಿದೆ. ಇಲ್ಲಿನ ಮಹಾ ಜನರನ್ನು ವಿದಿತವೇದಾರ್ಥವಿದ್ಯಾಪಾರಗರ್, ಷಟ್ಕರ್ಮ ನಿರತರ್, ಸಪ್ತಸೋಮಸಂಸ್ಥಾವಭೃತಾವಗಾಹನಪವಿತ್ರೀ ಕೃತಶರೀರರ್, ಅಷ್ಟಾದಳಧರ್ಮಶಾಸ್ತ್ರಕುಶಳರ್, ಶಾಪಾನುಗ್ರಹಸಮರ್ತ್ಥರ್, ವೈಷ್ಣವಗೀತ ಮನೋಹರರ್ ದ್ವಿಜಕುಳತಿಳಕರ್ ಎಂದು ವರ್ಣಿಸಲಾಗಿದೆ.

ಲೊಕ್ಕಿಗುಂಡಿಯೊಂದಿಗೆ ರನ್ನಕವಿಯ ಆಶ್ರಯದಾತೆಯಾಗಿದ್ದ ದಾನ ಚಿಂತಾಮಣಿ ಎಂದು ಖ್ಯಾತಳಾಗಿದ್ದ ಅತ್ತಿಮಬ್ಬೆಯ ಹೆಸರು ಬೆಸೆದು ಕೊಂಡಿದೆ. ಈಕೆ ಇಲ್ಲಿ ಬ್ರಹ್ಮಜಿನಾಲಯವೊಂದನ್ನು ಕಟ್ಟಿಸಿದ ಸಂಗತಿ, ಈ ಜಿನಾಲಯಕ್ಕೆ ದತ್ತಿಬಿಡುವಂತೆ ಕಲ್ಯಾಣದ ಚಾಳುಕ್ಯರ ದೊರೆ ಇಱಿವಬೆಡಂಗ ಸತ್ಯಾಶ್ರಯನಲ್ಲಿ ಬಿನ್ನವಿಸಿಕೊಂಡ ಸಂಗತಿ ಇಲ್ಲಿನ ಎರಡು ಶಾಸನಗಳಿಂದ ತಿಳಿದುಬರುತ್ತದೆ.

ಲೊಕ್ಕಿಗುಂಡಿ ಕೆಲಕಾಲ ಒಂದು ಉಪರಾಜಧಾನಿಯಾಗಿತ್ತು. ಹೊಯ್ಸಳ ಇಮ್ಮಡಿ ಬಲ್ಲಾಳ ಇದನ್ನು ತನ್ನ ನೆಲೆವೀಡಾಗಿ ಮಾಡಿಕೊಂಡಿದ್ದ. ಇಲ್ಲಿ ಬಲವಾದ ಕೋಟೆಯೊಂದಿದ್ದು ಅದನ್ನು ಆಕ್ರಮಿಸಲು ಈತನಿಗೂ ಸೇವುಣರ ಭಿಲ್ಲಮನಿಗೂ ನಡುವೆ ಕದನಗಳಾದುವೆಂದು ತಿಳಿದುಬರುತ್ತದೆ. 1189–90ರಲ್ಲಿ ಭಿಲ್ಲಮ ಹೊಯ್ಸಳರಿಗೆ ಸೇರಿದ್ದ ಪ್ರದೇಶಗಳನ್ನು ಆಕ್ರಮಿಸಲು ತನ್ನ ರಾಜ್ಯದ ದಕ್ಷಿಣಕ್ಕೆ ದಂಡೆತ್ತಿ ಸೊರಟೂರನ್ನು ಆಕ್ರಮಿಸಿದ. ಇದನ್ನು ಕಂಡ ಹೊಯ್ಸಳ ಬಲ್ಲಾಳ ಭಿಲ್ಲಮನನ್ನು ಅಲ್ಲಿಂದ ಹೊರದೂಡಲು ಸೈನ್ಯಾಚರಣೆ ಕೈಗೊಂಡ. ಆಗ ನಡೆದ ಪ್ರಸಿದ್ಧವಾದ ಸೊರಟೂರಿನ ಕದನದಲ್ಲಿ ಭಿಲ್ಲಮನನ್ನು ಬಲ್ಲಾಳ ಹಿಮ್ಮೆಟ್ಟಿಸಿದ. ಅನಂತರ ಆತ



ಜೈನಬಸದಿ (ಬ್ರಹ್ಮಜಿನಾಲಯ)

ಮುಂಜಾಗರೂಕತೆಯ ದೃಷ್ಟಿಯಿಂದ ಕೆಲಕಾಲ ಲೊಕ್ಕಿಗುಂಡಿಯನ್ನೇ ತನ್ನ ನೆಲೆವೀಡಾಗಿ ಮಾಡಿಕೊಂಡ. ಈ ಸುತ್ತಲಿನ ಪ್ರದೇಶಕ್ಕಾಗಿ ಈ ಎರಡು ಬಣಗಳ ನಡುವೆ ಕಲಹಗಳಾಗುತ್ತಲೇ ಇದ್ದುವು. ಭಿಲ್ಲಮನ ಅನಂತರ ಜೈತುಗಿ ಲಕ್ಕುಂಡಿಯನ್ನು ಪ್ರಯಾಸಪಟ್ಟು ಆಕ್ರಮಿಸಿದನಾದರೂ ಮತ್ತೊಮ್ಮೆ ಬಲ್ಲಾಳ ಅದನ್ನು ಕಸಿದುಕೊಂಡ. 12ನೆಯ ಶತಮಾನದ ಅನಂತರ ಲೊಕ್ಕಿಗುಂಡಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಕಲ್ಯಾಣದ ಚಾಳುಕ್ಯರ ಆಳಿಕೆಯ ಕಾಲದಲ್ಲಿ ಇದೊಂದು ಪ್ರಮುಖ ಟಂಕಸಾಲೆಯಾಗಿತ್ತು. ಅನೇಕ ಶಾಸನಗಳಲ್ಲಿ ಪ್ರಸ್ತಾಪಿಸಲ್ಪಟ್ಟ ಇತಿಹಾಸ ಪ್ರಸಿದ್ಧ ಲೊಕ್ಕಿಯ ಪೊಂಗದಾಣ್ಯ ಇಲ್ಲಿನ ಟಂಕಸಾಲೆಯಲ್ಲಿ ಅಚ್ಚಾದುದು.

ಲಕ್ಕುಂಡಿಯಲ್ಲಿ ಮಲ್ಲಿಕಾರ್ಜುನ, ಸೋಮೇಶ್ವರ, ನನ್ನೇಶ್ವರ, ವೀರಭದ್ರ, ಚಂದ್ರಮೌಳೀಶ್ವರ, ಮಾಣಿಕೇಶ್ವರ ಮುಂತಾದ 20ಕ್ಕೂ ಹೆಚ್ಚು ದೇವಾಲಯಗಳಿವೆ. ಇವುಗಳನ್ನು ಕಟ್ಟಿಸಿದ ಕಾಲ ಸ್ಪಷ್ಟವಿಲ್ಲವಾದರೂ ಇಲ್ಲಿ ಲಭ್ಯವಾಗಿರುವ ಶಾಸನಗಳೆಲ್ಲ ಕಲ್ಯಾಣದ ಚಾಳುಕ್ಯ ಅರಸ ವಿಕ್ರಮಾದಿತ್ಯ ಹಾಗೂ ಅನಂತರ ಆಳಿದ ಮುಮ್ಮಡಿ ತೈಲಪ ಹಾಗೂ ನಾಲ್ವಡಿ ಸೋಮೇಶ್ವರರ ಮತ್ತು ಕಳಚುರಿ ಹಾಗೂ ಹೊಯ್ಸಳ ಅರಸರ ಶಾಸನಗಳು ಅತಿ ಪ್ರಾಚೀನವಾದುವು.

ಕಾಶೀವಿಶ್ವನಾಥನ ದೇವಾಲಯದಲ್ಲಿ ಹೊಯ್ಸಳರ ಕಲೆಯ ಭವ್ಯತೆಯನ್ನು ಕಾಣಬಹುದು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ವೈಭವದಿಂದ ಮೆರೆಯುತ್ತಿದ್ದ ಈ ದೇವಾಲಯ ಚೋಳರ ದುರಾಕ್ರಮಣ ಮತ್ತು ಅತ್ಯಾಚಾರಗಳಿಗೊಳಗಾಗಿ ಭಗ್ನವಾಗಿತ್ತು. ಇಲ್ಲಿನ ಗರ್ಭಗುಡಿಯ ಮುಂದಿನ ಪಡಸಾಲೆಯ ತೊಲೆಯ ಕಂಬದಲ್ಲಿ ಮುಮ್ಮಡಿ ತೈಲಪನ ಎರಡು ಶಾಸನಗಳಿವೆ. ಅಲ್ಲದೆ, ಈ ಭಾಗದ ಕಲೆಯನ್ನು ದೇವಾಲಯದ ಹೊರಾಂಗಣದ ಹಾಗೂ ಮಹಾದ್ವಾರದ ಕಲೆಗೆ ಹೋಲಿಸಿ ನೋಡಿದಾಗ ಈ ಒಳಭಾಗ ಮೂಲತಃ ಚಾಳುಕ್ಯರ ಕಾಲದ ಕಟ್ಟಡ ಎಂಬುದು

ಸ್ಪಷ್ಟವಾಗುತ್ತದೆ. ಈ ದೇವಾಲಯವನ್ನು ಹಿಂದೆ ಕವತಾಳೇಶ್ವರಾಲಯ ಎಂದು ಕರೆಯುತ್ತಿದ್ದಂತೆ ದೇವಾಲಯದ ತೊಲೆಗಳಲ್ಲಿನ ಶಾಸನಗಳಿಂದ ಕಂಡುಬರುತ್ತದೆ. 1162ರಲ್ಲಿ ಬಾಚಿರಾಜ ಮತ್ತು ಮಾಚಿಕವ್ವೆಗಳ ಪುತ್ರ, ಲೊಕ್ಕಿಗುಂಡಿಯ ಶ್ರೀಸಾಸಿರ್ವ್ವರ ಪ್ರಿಯಪುತ್ರನೆನಿಸಿದ ಪೆಗ್ಗಡೆಯರ ತ್ರಿಭುವನಮಲ್ಲ ಕೇಶದೇವನು ಗ್ರಾಮಾಧಿದೈವವಾದ ಕವತಾಳೇಶ್ವರದ ಆಚಾರ್ಯರಾದ ಸೋಮೇಶ್ವರಪಂಡಿತರಿಗೆ ವರ್ಷಂಪ್ರತಿ 3 ಹೊನ್ನನ್ನು ದೇವರ್ಗ್ಗೆ ಪ್ರಭಾತದ ತುಯ್ಯಲನಿವೇದ್ಯಕ್ಕೆಂದು ದಾನಮಾಡಿದನೆಂದು ತಿಳಿದುಬರುತ್ತದೆ. ದೇವಾಲಯದ ಹೊರಗೋಡೆಯ ಮೇಲೆ ರಾಮಾಯಣದ ಕೆಲವು ಚಿತ್ರಗಳನ್ನು ಕೆತ್ತಲಾಗಿದೆ.

ಲಕ್ಕುಂಡಿಯ ದೇವಾಲಯಗಳಲ್ಲೆಲ್ಲ ಜೈನಬಸದಿಯೇ (ಬ್ರಹ್ಮಜಿನಾಲಯ) ಪ್ರಾಚೀನವಾದದ್ದು. ಕಲ್ಯಾಣದ ಚಾಳುಕ್ಯರ ಕಾಲದ ವಾಸ್ತುಶೈಲಿಯ ಒಂದು ಅಂಶವಾದ ಕಲಾಪೂರ್ಣವಾದ ದ್ವಾರಗಳಿಗೆ ಪ್ರಾಚೀನ ಹಾಗೂ ಉತ್ತಮ ನಿದರ್ಶನವನ್ನು ಈ ಬಸದಿಯಲ್ಲಿ ಕಾಣಬಹುದು. ಎರಡು ಪಕ್ಕಗಳಲ್ಲಿ ಇನ್ನೆರಡು ಸಣ್ಣಗೋಡೆಗಂಬಗಳು, ಅವುಗಳಿಂದ ಹೊಮ್ಮಿ ಗೋಪುರದ ಮೇಲೆ ಬಾಗಿದಂತೆ ತೋರುವ ಸುಳಿ ಸುಂದರವಾಗಿದೆ. ಇಲ್ಲಿನ ಗರ್ಭಗುಡಿಯ ಸಿಂಹಾಸನದಲ್ಲಿರುವ ಕಪ್ಪುಶಿಲೆಯ ಮಹಾವೀರನ ವಿಗ್ರಹ ಈಗ ಭಗ್ನವಾಗಿದೆ. ಜಿನನ ಎರಡೂ ಪಕ್ಕದಲ್ಲಿ ಚೌರಿಯನ್ನು ಹೊತ್ತ ಸೇವಕರಿದ್ದಾರೆ. ಅಲ್ಲದೆ ಗರ್ಭಗುಡಿಯ ಎರಡೂ ಕಡೆ ಬ್ರಹ್ಮ ಹಾಗೂ ಸರಸ್ವತಿಯ ವಿಗ್ರಹಗಳಿವೆ. ಈಗ ಸರಸ್ವತಿಯ ವಿಗ್ರಹ ಶಿಥಿಲವಾಗಿದೆ.

ಇದಲ್ಲದೆ ಈ ಗ್ರಾಮದಲ್ಲಿ ಇನ್ನೂ ಎರಡು ಬಸದಿಗಳಿವೆ. ಇವುಗಳಲ್ಲಿ ಒಂದನ್ನು ಈಗ ನಾಗನಾಥಾಲಯವೆನ್ನುತ್ತಾರೆ. ಆದರೆ ವಾಸ್ತವಿಕವಾಗಿ ಇದು ಪಾರ್ಶ್ವನಾಥ ಬಸದಿ. ಈಗ ಅದರ ಗರ್ಭಗುಡಿಯಲ್ಲಿ ವಿಗ್ರಹದ ಪೀಠ ಹಾಗೂ ಪಾರ್ಶ್ವನಾಥನ ತಲೆಯ ಮೇಲಿರಬೇಕಾದ ಹೆಡೆಯುಳ್ಳ ಸರ್ಪ ಮಾತ್ರ ಇದೆ. ಆದರೆ ಬಸದಿಯ ಹಿಂಭಾಗದಲ್ಲಿ ಗೋಪುರದ ಬಳಿ ಇರುವ ಪಾರ್ಶ್ವನಾಥನ ಶಿಲ್ಪದಿಂದ ಇದು ಪಾರ್ಶ್ವನಾಥನ ಬಸದಿಯೆಂದು ಊಹಿಸಬಹುದು. ಈ ಜೈನ ಬಸದಿಗೆ ಘಟಾಂತಿಕೆಯ ಬಸದಿ ಎಂಬ ಇನ್ನೊಂದು ಬಸದಿ ಪ್ರತಿಬದ್ಧವಾಗಿತ್ತೆಂದು ಶಾಸನಗಳಲ್ಲಿ ಹೇಳಿದೆ. ಇವುಗಳಲ್ಲದೆ ನೋಂಪಿಯ ಬಸದಿ, ಕಮ್ಮಟ ಜಿನಾಲಯ ಎಂಬ ಇನ್ನೂ ಎರಡು ಬಸದಿಗಳ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಈಗಿನ ಗಣೇಶನ ಗುಡಿಯ ಮಾಳಿಗೆಗೆ ಸೇರಿಸಿರುವ ಕಲ್ಲಿನಲ್ಲಿರುವ ಶಾಸನ (1165) ಚಾಳುಕ್ಯ ನಾಲ್ಕನೆಯ ಸೋಮೇಶ್ವರನದು. ಇದರಲ್ಲಿ ನೋಂಪಿಯ ಬಸದಿಯ ದೇವರಿಗೆ, ಕಮ್ಮಟೇಶ್ವರ ದೇವರಿಗೆ ಮತ್ತು ಕಮ್ಮಟ ಜಿನಾಲಯದ ಶಾಂತಿನಾಥ ದೇವರಿಗೆ ನೀಡಲಾದ ದಾನಗಳನ್ನು ನಿರೂಪಿಸಲಾಗಿದೆ.

**(ಬಿ.ಆರ್.ಜಿ.)**

**ಲಕ್ಷ್ಮಕವಿ:** ಸು. 1723. ಭಾರತ, ರುಕ್ಮಾಂಗದಚರಿತೆ ಎಂಬ ಕಾವ್ಯಗಳ ಕರ್ತೃ. ಬೆಂಗಳೂರು ಜಿಲ್ಲೆ ಆನೇಕಲ್ಲಿಗೆ ಹತ್ತಿರದ ಹಾರುಗದ್ದೆ (ಖಗಪುರ) ಇವನ ಜನ್ಮಸ್ಥಳ. ಇವನ ತಂದೆ ರಾಮಚಂದ್ರ, ಗುರು ದೇಶಿಕೋತ್ತಮ. ಇವನಿಗೆ ಪುಂಭಾವಭಾರತಿ, ಗಂಡುಶಾರದೆ ಎನ್ನುವ ಬಿರುದುಗಳು ಇದ್ದಂತೆ ತಿಳಿಯುತ್ತದೆ. ಲಕ್ಷ್ಮಿಯ ಕೃಪೆಯಿಂದ ಜನಿಸಿದ್ದರಿಂದ ತನಗೆ ಲಕ್ಷ್ಮಕವಿ ಎನ್ನುವ ಹೆಸರು ಬಂತೆಂದು ಸ್ವತಃ ಕವಿಯೇ ಹೇಳಿಕೊಂಡಿದ್ದಾನೆ. ಕಾವ್ಯಗಳನ್ನು ತನ್ನ ಅಧಿದೇವತೆ ಚೆನ್ನಿಗರಾಯನ ಅಂಕಿತದಲ್ಲಿ ರಚಿಸಿದ್ದಾನೆ. ಈತ ಒಂದು ನೀತಿಗ್ರಂಥವನ್ನೂ ಬರೆದಿದ್ದು ಅದು ಕಂದರೂಪದಲ್ಲಿದೆ.

ಭಾರತ ವಾರ್ಧಕ ಷಟ್ಪದಿಯಲ್ಲಿದ್ದು ಇದರಲ್ಲಿ ಸು. 99 ಸಂಧಿ ಮತ್ತು 4,000ಕ್ಕೂ ಹೆಚ್ಚು ಪದ್ಯಗಳು ಇವೆ. ಕನ್ನಡ ಕಾವ್ಯ ಕೃತಿಗಳಲ್ಲಿ ಈ ಭಾರತ ಹದಿನಾಲ್ಕನೆಯದು. ಈತನ ದೃಷ್ಟಿಯಲ್ಲಿ ಭಾರತದ ಕಥೆ ಹೀಗಿದೆ:ಸಕಲ ವೇದಶಾಸ್ತ್ರ ಪುಣ್ಯನದಿಗಳ ವಾರಾಶಿ ಭಾರತ–ಅದನ್ನು ಬ್ರಹ್ಮನು ವ್ಯಾಸನೆಂಬ ಮಂದರದಿಂದ ಕಡೆದ. ದ್ರೌಪದಿ, ಲಕ್ಷ್ಮಿ, ಭೀಷ್ಮ, ಕಲ್ಪವೃಕ್ಷ, ಧರ್ಮ, ಚಂದ್ರ, ಭೀಮ, ಐರಾವತ, ಅರ್ಜುನ, ಉಚ್ಚೈಶ್ರವಸ್ಸು, ಕೃಷ್ಣ, ಅಮೃತ, ಕೌರವ, ಹಾಲಾಹಲ, ವಿದುರ, ಕಾಮಧೇನು, ದ್ರೋಣ, ಚಿಂತಾರತ್ನ, ಗಾಂಧಾರಿ, ಜ್ಯೇಷ್ಠಾದೇವಿ ಹುಟ್ಟಿದರು. ಹೀಗೆ ಒಂದು ಬೃಹತ್ ಕಲ್ಪನೆಯ ಹಿನ್ನೆಲೆಯಿಂದ ಪ್ರಚೋದಿತವಾದ ಈ ಕೃತಿ ಗಾತ್ರದಲ್ಲಿಯೂ ಬೃಹತ್ ಆಗಿದೆ.

ರುಕ್ಮಾಂಗದ ಚರಿತ್ರೆಯೂ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 17 ಸಂಧಿಗಳೂ 900ಕ್ಕೂ ಹೆಚ್ಚು ಪದ್ಯಗಳೂ ಇವೆ. ಏಕಾದಶೀ ಮಹಾತ್ಮೆ ಇದರ ಕಥಾವಸ್ತು. ವಸಿಷ್ಠರು ಮಾಂಧಾತನಿಗೆ ನಿರೂಪಿಸಿದ ನಾರದೀಯ ಪುರಾಣದ ಅಂಶ ಈ ಕೃತಿಗೆ ಮೂಲವಾಗಿದೆ.

ನೀತಿಕಂದದಲ್ಲಿರುವ ಈತನ ಕಂದಪದ್ಯಗಳ ರಚನೆ ಮನೋಹರವಾಗಿದ್ದು ಇವುಗಳಲ್ಲಿ ಸಹಜವಾದ ಲೋಕನೀತಿ ವ್ಯಕ್ತವಾಗಿದೆ. ಇವನ ಕಾವ್ಯಗಳ ಭಾಷೆ ಸುಲಲಿತವಾಗಿದೆ. ಅಲ್ಲಲ್ಲಿ ಅಗಾಧವಾದ ನಾದಪ್ರಜ್ಞೆ ಮತ್ತು ಅರ್ಥಭಾರ ಹೊಮ್ಮಿರುವುದೂ ಕಂಡುಬರುತ್ತದೆ. **(ಪಿ.ಎಚ್.ಎಂ.)**

**ಲಕ್ಷ್ಮಣ್, ಆರ್.ಕೆ.:** 1924–. ಭಾರತದ ಶ್ರೇಷ್ಠ ವ್ಯಂಗ್ಯ ಚಿತ್ರಕಾರರು. ಇವರ ಪೂರ್ಣ ಹೆಸರು ರಾಶಿಪುರಂ ಕೃಷ್ಣಸ್ವಾಮಿ ಲಕ್ಷ್ಮಣ್. ಮೂಲತಃ ಕನ್ನಡಿಗರಾದ ಲಕ್ಷ್ಮಣ್ 1924 ನವೆಂಬರ್ 24ರಂದು ಜನಿಸಿದರು. ತಂದೆ ಕೃಷ್ಣಸ್ವಾಮಿ, ಪ್ರೌಢಶಾಲೆಯೊಂದರ ಮುಖ್ಯೋಪಾಧ್ಯಾಯರಾಗಿದ್ದರು. ಇಂಗ್ಲಿಷ್ ಭಾಷೆಯ ಪ್ರಮುಖ ಭಾರತೀಯ ಲೇಖಕರಾದ ಆರ್. ಕೆ. ನಾರಾಯಣ್ **(ನೋಡಿ)** ಇವರ ಹಿರಿಯ ಸಹೋದರ.

ಲಕ್ಷ್ಮಣ್ ಅವರಿಗೆ ಚಿಕ್ಕಂದಿನಿಂದಲೂ ಚಿತ್ರಕಲೆಯಲ್ಲಿ ಅಪಾರ ಆಸಕ್ತಿ. ಸಣ್ಣ ಹುಡುಗನ ಕೈಯಲ್ಲಿ ಯಾವಾಗಲೂ ಒಂದು ಪುಸ್ತಕ ಮತ್ತು ಲೇಖನಿ. ನೆಲದ ಮೇಲೆ ಹೆಚ್ಚಾಗಿ ರೇಖಾಚಿತ್ರಗಳನ್ನು ಬಿಡಿಸುವ ಚಟ ಇವರದು. ಸಣ್ಣ ಹುಡುಗನಾಗಿ ಮನೆಯಲ್ಲಿಯ ಇತರ ಮಕ್ಕಳ ಹಾಗೂ ತಂದೆ, ತಾಯಿ ಮತ್ತು ಅಣ್ಣಂದಿರ ರೇಖಾಚಿತ್ರಗಳನ್ನು ಬಿಡಿಸುವುದು ಇವರ ಹವ್ಯಾಸವಾಗಿತ್ತು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫೇಲಾದರು. ಚಿತ್ರಕಲೆಯಲ್ಲಿಯ ಆಸಕ್ತಿಯಿಂದಾಗಿ ಮುಂಬಯಿನ ಜೆ.ಜೆ. ಕಲಾಶಾಲೆಯಲ್ಲಿ ಚಿತ್ರಕಲೆ ಕಲಿಯಬೇಕೆಂಬ ಹೆಬ್ಬಯಕೆ ಇವರದಾಗಿತ್ತು. ಆದರೆ ಇವರಿಗೆ ಅಲ್ಲಿ ಪ್ರವೇಶ ಸಿಗಲಿಲ್ಲ. ಮೈಸೂರಿನ ಮಹಾರಾಜ ಕಾಲೇಜು ಸೇರಿ ಬಿ.ಎ. ಪದವಿ ಪಡೆದರು. ಆದರೆ ಮುಂದೊಂದು ದಿನ ಜೆ.ಜೆ. ಕಲಾಶಾಲೆಯವರು ಇವರನ್ನು ತಮ್ಮ ಶಾಲಾವಾರ್ಷಿಕೋತ್ಸವಕ್ಕೆ ಕರೆಸಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿಸಿದ ಘಟನೆ ನಡೆದದ್ದು ಗಮನಾರ್ಹ ಸಂಗತಿಯಾಗಿದೆ.

ವಿದ್ಯಾರ್ಥಿಯಾಗಿರುವಾಗಲೇ ಚಿತ್ರಕಾರರೆಂದು ಪ್ರಸಿದ್ಧಿಗೆ ಬಂದ ಇವರು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಿಗೆ ಪ್ರಾರಂಭದಲ್ಲಿ ವ್ಯಂಗ್ಯಚಿತ್ರಗಳನ್ನು ಬಿಡಿಸಿದರು. ಚಿಕ್ಕ ವಯಸ್ಸಿನಲ್ಲೆ ಇವರು ಶ್ರೇಷ್ಠ ವ್ಯಂಗ್ಯಚಿತ್ರಕಾರ ಡೇವಿಡ್ ಲೋ ಅವರ ವ್ಯಂಗ್ಯಚಿತ್ರಗಳಿಂದ ಬಹಳ ಪ್ರಭಾವಿತರಾದರು. ಇವರನ್ನು ವ್ಯಂಗ್ಯ ಚಿತ್ರಕಾರನನ್ನಾಗಿ ಬೆಳಕಿಗೆ ತಂದ ಕೀರ್ತಿ ಕೊರವಂಜಿ ಪತ್ರಿಕೆಯ ರಾ.ಶಿ.ಅವರಿಗೆ ಸಲ್ಲುತ್ತದೆ. ಕೊರವಂಜಿ ಪತ್ರಿಕೆ ಇವರ ಪ್ರತಿಭೆಯ ವಿಕಸನಕ್ಕೆ ಹಾದಿಮಾಡಿಕೊಟ್ಟಿತು.

ಕೆಲಕಾಲ ಇವರು ಮದರಾಸಿನ ಜೆಮಿನಿ ಸ್ಟುಡಿಯೋದಲ್ಲಿ ಕಲಾವಿದರಾಗಿ ದುಡಿದರು. ಅನಂತರ ಕೆಲಸ ಹುಡುಕಿಕೊಂಡು 1947ರಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದರು. ಅಲ್ಲಿಂದ ಮುಂಬಯಿಗೆ ಹೋದರು. 1947ರಲ್ಲಿ

ಫ್ರೀ ಪ್ರೆಸ್ ಪತ್ರಿಕೆಯಲ್ಲಿ ವ್ಯಂಗ್ಯಚಿತ್ರಕಾರರಾಗಿ ಸೇರಿದರು. ಆರು ತಿಂಗಳ ಕಾಲಅಲ್ಲಿ ಕೆಲಸ ಮಾಡಿ ಕಾರಣಾಂತರದಿಂದ ಅದನ್ನು ತೊರೆದು 'ಟೈಮ್ಸ್ ಆಫ್ ಇಂಡಿಯ' ಪತ್ರಿಕೆಯನ್ನು ಸೇರಿದರು. ಇವರು ಈ ಪತ್ರಿಕೆಗೆ ಸೇರುವವರೆಗೆ ಅದರಲ್ಲಿ ವ್ಯಂಗ್ಯ ಚಿತ್ರಗಳು ಪ್ರತಿದಿನವೂ ಪ್ರಕಟವಾಗುತ್ತಿರಲಿಲ್ಲವೆಂಬುದು ಗಮನಾರ್ಹ. 'ಟೈಮ್ಸ್ ಆಫ್ ಇಂಡಿಯ' ಪತ್ರಿಕೆಯಲ್ಲಿ ವ್ಯಂಗ್ಯಚಿತ್ರಗಳನ್ನು ಪ್ರಥಮವಾಗಿ ಪ್ರಾರಂಭಿಸಿದ ಕೀರ್ತಿ ಲಕ್ಷ್ಮಣ್ ಅವರಿಗೆ ಸಲ್ಲುತ್ತದೆ. ಪ್ರಾರಂಭದಲ್ಲಿ ರೇಖಾಚಿತ್ರಗಳನ್ನು ಬಿಡಿಸುತ್ತಿದ್ದ ಇವರು ಮುಂದೆ ವ್ಯಂಗ್ಯಚಿತ್ರಕಾರರಾಗಿ ಬೆಳಕಿಗೆ ಬಂದರು. ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿಯೂ ಸೆಡ್ ಇಟ್ ಎಂಬ ಜನಪ್ರಿಯ ತಲೆಬರಹದ ಅಡಿ

ಅಚ್ಚಾಗುವ ಇವರ ವ್ಯಂಗ್ಯಚಿತ್ರಗಳು ರಾಜಕೀಯ ರಂಗದಲ್ಲಿ ಸ್ಥಿರತೆ, ಅಸ್ಥಿರತೆಯನ್ನು ಸೂಚಿಸುವಂಥವಾಗಿವೆ. ಇವರು ಸಾವಿರಾರು ಸಾಮಾಜಿಕ-ರಾಜಕೀಯ ವ್ಯಂಗ್ಯಚಿತ್ರಗಳನ್ನು ಬಿಡಿಸಿದ್ದಾರೆ.

ಇವರ ಪ್ರತಿಭೆಗೆ ಸಂದ ಪುರಸ್ಕಾರಗಳು ಅನೇಕ. 1958ರಲ್ಲಿ ಲಂಡನ್ನಿನಲ್ಲಿ ನಡೆದ ಅಂತಾರಾಷ್ಟ್ರೀಯ ವ್ಯಂಗ್ಯಚಿತ್ರಗಳ ಪ್ರದರ್ಶನದಲ್ಲಿ ಭಾರತದಿಂದ ಮೊಟ್ಟ ಮೊದಲ ಬಾರಿಗೆ ಲಕ್ಷ್ಮಣ್‌ರ ಚಿತ್ರಗಳನ್ನು ಪ್ರದರ್ಶಿಸಲಾಯಿತು. 1969ರಲ್ಲಿ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆಗಾಗಿ ಬಿ.ಜೆ. ಹಾರ್ನಿಮನ್‌ರ ಶ್ರೇಷ್ಠ ಪತ್ರಿಕೋದ್ಯಮಿ ಎಂಬ ಪ್ರಶಸ್ತಿಯನ್ನು ನೀಡಲಾಯಿತು. 1971ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. 1974ರಲ್ಲಿ ದುರ್ಗಾರತನ್ ಪ್ರಶಸ್ತಿ ಪಡೆದರು. ಮರಾಠವಾಡ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ (1979) ನೀಡಿ ಗೌರವಿಸಿದೆ. ಇವರಿಗೆ ಕರ್ನಾಟಕ ಸರ್ಕಾರ 1983ರಲ್ಲಿ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆಗಾಗಿ ಪ್ರಶಸ್ತಿ ನೀಡಿದೆ. 1984ರಲ್ಲಿ ಇವರಿಗೆ ಮ್ಯಾಗ್ಸಸೇ ಪ್ರಶಸ್ತಿ ದೊರಕಿತು. ಇಂಡಿಯನ್ ಎಕ್ಸ್‌ಪ್ರೆಸ್ ಬಳಗದ ಬಿ.ಡಿ.ಗೊಯೆಂಕಾ ಪ್ರಶಸ್ತಿಯೂ ಇವರಿಗೆ ಲಭಿಸಿದೆ.

ಪ್ರಪಂಚದ ಗಣ್ಯವ್ಯಕ್ತಿಗಳನ್ನು ಭೇಟಿ ಮಾಡಿದಾಗಲೆಲ್ಲ ಅವರ ವ್ಯಂಗ್ಯ ಚಿತ್ರವನ್ನು ಬಿಡಿಸಿ ಅದರ ಮೇಲೆ ಅವರ ಹಸ್ತಾಕ್ಷರ ಪಡೆಯುವುದು ಇವರ ಪ್ರಮುಖ ಹವ್ಯಾಸಗಳಲ್ಲೊಂದು. ಅಣ್ಣ ಆರ್. ಕೆ. ನಾರಾಯಣ್ ಅವರ ಅನೇಕ ಪುಸ್ತಕಗಳಿಗೆ ರೇಖಾಚಿತ್ರಗಳನ್ನು ಇವರು ಬಿಡಿಸಿದ್ದಾರೆ. ಕೇವಲ ವ್ಯಂಗ್ಯಚಿತ್ರಗಳಲ್ಲದೆ ಚಿತ್ರಕಲೆಯಲ್ಲೂ ಇವರು ಅಪಾರ ಪರಿಣಿತಿಯನ್ನು ಹೊಂದಿದ್ದಾರೆ. ಪ್ರಾಣಿಪಕ್ಷಿಗಳ, ವಸ್ತುಗಳ ಅನೇಕ ವರ್ಣಚಿತ್ರಗಳನ್ನು ರಚಿಸಿದ್ದಾರೆ. ಲಕ್ಷ್ಮಣ್‌ರ ವ್ಯಂಗ್ಯಚಿತ್ರಗಳು ಮಿ ಆ್ಯಂಡ್ ಮಿಸಸ್ 55 ನಂಥ ಹಿಂದಿ ಸಿನಿಮಾದಲ್ಲೂ ಕಾಣಿಸಿಕೊಂಡಿವೆ.

ಉತ್ತಮ ಬರೆಹಗಾರರೂ ಆಗಿರುವ ಇವರು ಡುಡಲ್ಸ್, ಸಾರಿ ನೋ ರೂಮ್ ಎಂಬ ಕೃತಿಗಳನ್ನು ರಚಿಸಿದ್ದಾರೆ; ಪ್ರವಾಸಕಥನ ಹಾಗೂ ಸಣ್ಣಕಥೆಗಳನ್ನೂ ಬರೆದಿದ್ದಾರೆ.

*

**ಲಕ್ಷ್ಮಣತೀರ್ಥ:** ಕಾವೇರಿನದಿಗೆ ಅದರ ಬಲದಂಡೆಯಲ್ಲಿ ಬಂದು ಸೇರುವ ಉಪನದಿಗಳಲ್ಲೊಂದು. ಕೊಡಗಿನ ದಕ್ಷಿಣಭಾಗದಲ್ಲಿರುವ ಬ್ರಹ್ಮಗಿರಿಯ ದೇವಸಿ ಬೆಟ್ಟದಲ್ಲಿ, ಮುನಿಕಾಡು ಅರಣ್ಯ ಪ್ರದೇಶದಲ್ಲಿ ಈ ನದಿ ಉಗಮಿಸುತ್ತದೆ. ನದಿಯ ಹರಿವಿನ ಒಟ್ಟು ಉದ್ದ ಸು. 180 ಕಿಮೀ. ಲಕ್ಷ್ಮಣತೀರ್ಥ ಹಾಗೂ ಇದರೊಡನೆ ಸಂಗಮಿಸುವ ರಾಮತೀರ್ಥ ಮತ್ತು ಕೆರೆಹೊಳೆ ನದಿಗಳು ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಆಗ್ನೇಯ ಭಾಗಕ್ಕೆ ನೀರಾವರಿ ಸೌಲಭ್ಯಗಳನ್ನು ಒದಗಿಸುತ್ತವೆ. ಬ್ರಹ್ಮಗಿರಿಯಿಂದ ತೀವ್ರ ಇಳುಕಲು ನೆಲೆಯಲ್ಲಿ ಹರಿಯುವ ಈ ನದಿ ಬಹುಮಟ್ಟಿಗೆ ಲಂಬರೇಖೆಯುವಾಗಿರುವ ಗೋಡೆಯಂಥ ಭೂಪ್ರದೇಶದೊಡನೆ ಸಂಘಟಿಸುತ್ತದೆ. ಈ ಕಾರಣದಿಂದ ಈ ಎಡೆಯ ಪ್ರಾಕೃತಿಕ ದೃಶ್ಯ ರಮಣೀಯವಾಗಿದೆ. ಈ ಭಾಗದ ಇರ್ಪು ಎಂಬ ಸ್ಥಳದಲ್ಲಿ ಲಕ್ಷ್ಮಣತೀರ್ಥದ ಒಂದು ಜಲಪಾತವಿದೆ. ಆಳವಾದ ಮರಳಿನ ತಳವನ್ನು ಹೊಂದಿರುವ ಮಣ್ಣಿನ ಅಥವಾ ಜೇಡಿಮಣ್ಣಿನ ದಡಗಳನ್ನು ಹೊಂದಿರುವ ಈ ನದಿಯ ಇಕ್ಕೆಲಗಳಲ್ಲಿ ದಟ್ಟವಾದ ಅರಣ್ಯ (ಬಿದಿರು ಮೆಳೆ) ಕಾಣಬರುತ್ತದೆ. ಈ ನದಿ ಹುಣಸೂರು ತಾಲ್ಲೂಕಿನ ಚಿಕ್ಕಹೆಜ್ಜೂರಿನ ದಕ್ಷಿಣಕ್ಕೆ ಸು. 3 ಕಿಮೀ ದೂರದಲ್ಲಿ ಮೈಸೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮುಂದೆ ಹನಗೋಡು, ಹುಣಸೂರು ಮತ್ತು ಕಟ್ಟೆಮಳಲವಾಡಿಯ ಮೂಲಕ ಹರಿದು ಕೃಷ್ಣರಾಜನಗರ ತಾಲ್ಲೂಕನ್ನು ಪ್ರವೇಶಿಸಿ ಸಾಗರಕಟ್ಟೆ ಬಳಿ ಕಾವೇರಿ ನದಿಯೊಡನೆ ಸಂಗಮಿಸುತ್ತದೆ. ಇದು ಚಿಕ್ಕನದಿಯಾದರೂ ಎಲ್ಲ ಕಾಲಗಳಲ್ಲಿಯೂ ಇದರಲ್ಲಿ ನೀರು ಹರಿಯುತ್ತಿರುತ್ತದೆ. ಈ ನದಿಯ ಉದ್ದಕ್ಕೂ ಹಲವು ಅಣೆಕಟ್ಟುಗಳನ್ನು ಕಟ್ಟಿ ನೀರಾವರಿ ಸೌಲಭ್ಯವನ್ನು ದೊರಕಿಸಿಕೊಳ್ಳಲಾಗಿದೆ. ಕೊಡಗಿನಲ್ಲಿ ಲಕ್ಷ್ಮಣತೀರ್ಥ ಜಲಾಶಯವನ್ನು 1893ರಲ್ಲಿ ನಿರ್ಮಿಸಲಾಯಿತು. ಇದರಿಂದ ಸು. 45 ಚ.ಮೈಲಿ ಭೂಮಿಗೆ ನೀರು ಪೂರೈಕೆಯಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಹನಗೋಡು, ರಾಮೇನಹಳ್ಳಿ, ಕಟ್ಟೆಮಳಲವಾಡಿ, ಹಂಗರಹಳ್ಳಿ, ಮಾರ್ಚಳ್ಳಿ, ಸಾಗರಕಟ್ಟೆ ಮತ್ತು ಜೋಳನಹಳ್ಳಿ ಈ ಸ್ಥಳಗಳಲ್ಲಿ ಚಿಕ್ಕ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಸಾಗರಕಟ್ಟೆ ಅಣೆಕಟ್ಟನ್ನು ಕಟ್ಟಿಸಿದವರು ದಿವಾನ್ ಪೂರ್ಣಯ್ಯನವರು.

(ಪಿ.ಜಿ.;ಡಿ.ಸಿ.ಜಿ.;ವಿ.ಜಿ.ಕೆ.)

**ಲಕ್ಷ್ಮೀನಾರಾಯಣ, ಎನ್.:** ಅಂತಾರಾಷ್ಟ್ರೀಯ ಖ್ಯಾತಿಯ ಚಲನಚಿತ್ರ ನಿರ್ದೇಶಕರು. 1961ರಲ್ಲಿ ಲಂಡನ್ನಿನ ಬ್ರಿಟಿಷ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನ ನೆರವಿನೊಡನೆ ತೆಗೆದ ಬ್ಲಿಸ್ ಎಂಬ 8 ನಿಮಿಷಗಳ ಪ್ರಾಯೋಗಿಕ

ಕಿರುಚಿತ್ರದಿಂದ ಇವರಿಗೆ ಅಂತಾರಾಷ್ಟ್ರೀಯ ಮನ್ನಣೆ ದೊರಕಿದುದರ ಜೊತೆಗೆ 1962ರಲ್ಲಿ ಈ ಚಿತ್ರಕ್ಕೆ ಸ್ಯಾನ್‌ಫ್ರಾನ್ಸಿಸ್ಕೊ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಪ್ರಶಸ್ತಿ ಕೂಡ ಲಭಿಸಿತು. ಕಿರುಚಿತ್ರವೊಂದರ ತಯಾರಿಕೆಗೆ ಬ್ರಿಟಿಷ್ ಫಿಲ್ಮ್ ಇನ್‌ಸ್ಟಿಟ್ಯೂಟಿನ ಮನ್ನಣೆ ಪಡೆದ ಪ್ರಥಮ ಭಾರತೀಯರೂ ಇವರೇ. ಕೆಲಕಾಲ ಬಿ.ಆರ್. ಕೃಷ್ಣಮೂರ್ತಿ, ಆರ್. ನಾಗೇಂದ್ರರಾವ್ ಅವರ ಬಳಿ ಸಹನಿರ್ದೇಶಕರಾಗಿ ಕೆಲಸಮಾಡಿದ ಲಕ್ಷ್ಮೀನಾರಾಯಣರು ಸ್ವತಂತ್ರ ನಿರ್ದೇಶಕರಾದದ್ದು 1964ರಲ್ಲಿ; ತಾವೇ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ ಮೊದಲ ಚಿತ್ರ 'ನಾಂದಿ'ಯ ಮೂಲಕ. ಕುರುಡು ಮೂಗರ ಜೀವನವನ್ನು ಕುರಿತ ಈ ಮನೋಜ್ಞ ಕಲಾತ್ಮಕ ಚಿತ್ರ ಕರ್ನಾಟಕದಲ್ಲಿ ಅಪಾರ ಹೆಸರುಗಳಿಸಿತಲ್ಲದೆ 1965ರಲ್ಲಿ ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್ ಚಿತ್ರೋತ್ಸವಕ್ಕೆ ಪ್ರವೇಶ ಪಡೆಯಿತು. ಭಾರತದ ಹೊರಗೆ ಪ್ರದರ್ಶಿತವಾದ ಪ್ರಥಮ ಕನ್ನಡ ಚಿತ್ರ ಇದು.

ಇವರ ಎರಡನೆಯ ಚಿತ್ರ ಉಯ್ಯಾಲೆ (1969) ಕೂಡ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ನಡೆದ ಏಷ್ಯನ್ ಚಿತ್ರೋತ್ಸವ (1970) ಹಾಗೂ ರಷ್ಯದ ಬೈಲೊರಷ್ಯದಲ್ಲಿ ನಡೆದ ಚಿತ್ರೋತ್ಸವಗಳಲ್ಲಿ (1971) ಪ್ರದರ್ಶನ ಕಂಡು ವಿದೇಶೀಯರ ಮೆಚ್ಚುಗೆಗೆ ಪಾತ್ರವಾಯಿತು. ಇವರ ಇನ್ನೊಂದು ಚಿತ್ರ ಮುಕ್ತಿ (1971) ಅದೇ ವರ್ಷ ರೋಮನ್ ಗ್ರ್ಯಾಂಡ್‌ಪ್ರಿ ಸ್ಪರ್ಧೆಗೂ ನಾಮಕರಣ ಹೊಂದಿತ್ತು. 1973ರಲ್ಲಿ ಇವರು ನಿರ್ದೇಶಿಸಿದ ಪೂರ್ಣಚಂದ್ರ ತೇಜಸ್ವಿಯವರ ಸಣ್ಣಕಥೆಯಾಧಾರಿತ ಅಬಚೂರಿನ ಪೋಸ್ಟ್ ಆಫೀಸ್ ಎಂಬ ಚಿತ್ರಕ್ಕೆ ರಾಷ್ಟ್ರಪತಿಯ ರಜತಪದಕ ಪ್ರಶಸ್ತಿ ದೊರೆಯಿತು. ಈ ಚಿತ್ರ ಟೆಹರಾನ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿಯೂ ಪ್ರದರ್ಶಿತವಾಗಿತ್ತು (1974).

ಇವರು 1971ರಲ್ಲಿ ಲಂಡನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವ ದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ತಮಗಾದ ಅನುಭವಗಳನ್ನು ನಿರ್ದೇಶಕನ ವಿದೇಶಯಾತ್ರೆ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ (1974).

(ಎಸ್.ಎಸ್.ಎಂ.ಯು.)

**ಲಕ್ಷ್ಮೀಶ:** ಸು. 1550. ಜೈಮಿನಿ ಭಾರತ ಎಂಬ ಪ್ರಸಿದ್ಧ ಕಾವ್ಯದ ಕರ್ತೃ. ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ದೇವನೂರು ಇವನ ಜನ್ಮಸ್ಥಳವೆಂದು ಕೆಲವರು ವಿದ್ವಾಂಸರೂ ಸುರಪುರ ತಾಲ್ಲೂಕಿನ ದೇವಪುರವೆಂದು ಕೆಲವರು ವಿದ್ವಾಂಸರೂ ಅಭಿಪ್ರಾಯಪಟ್ಟಿದ್ದಾರೆ. ಇತ್ತೀಚೆಗೆ ಕಾವ್ಯದ ಆಂತರಿಕ (ಕೃಷ್ಣಾನದಿ) ಸಂಗತಿಗಳನ್ನೂ ಪೆರ್ದೊರೆ ಎಂಬ ಮಾತಿನ ಆಧಾರವನ್ನೂ ಗ್ರಹಿಸಿ ಸುರಪುರ ತಾಲ್ಲೂಕಿನ ದೇವನೂರೇ ಕವಿಯ ಜನ್ಮಸ್ಥಳವೆಂದು ವಿದ್ವಾಂಸರಾದ ಸೀತಾರಾಮ ಜಾಗೀರದಾರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವನ ತಂದೆ ಅಣ್ಣಮಾಂಕ. ಕವಿಗೆ ಲಕ್ಷ್ಮೀಪತಿ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಕರ್ಣಾಟಕವಿಚೂತವನ ಚೈತ್ರ ಎಂಬುದು ಈತನ ಬಿರುದು. ಈತ ಕಾವ್ಯವನ್ನು ವಿದ್ವತ್ಸಭಾವ ಲಯಮರಿಯೆ ವಿರಚಿಸಿದೆಂ ಎಂದು ಹೇಳಿಕೊಂಡಿರುವುದರಿಂದ ಈ ಗ್ರಂಥವನ್ನು ತನ್ನ ಸಮಕಾಲೀನ ವಿದ್ವಾಂಸರ ಸಭೆಯಲ್ಲಿ ಓದಿ ಅವರಿಂದ ಮೆಚ್ಚುಗೆ ಪಡೆದಂತೆ ತೋರುತ್ತದೆ. ಕಾವ್ಯರಚನೆಯನ್ನು ತನ್ನ ಇಷ್ಟದೈವ ದೇವಪುರದರಸು ಲಕ್ಷ್ಮೀರಮಣಸ್ವಾಮಿಯ ಅಂಕಿತದಲ್ಲಿ ಕೈಗೊಂಡಿದ್ದಾನೆ. ಕವಿಯ ಕಾಲನಿರ್ಣಯದ ಬಗ್ಗೆಯೂ ವಿದ್ವಾಂಸರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯ ಗಳಿವೆ. ಜೈಮಿನಿ ಭಾರತ 1345-47ರ ಅವಧಿಯಲ್ಲಿ ರಚಿತವಾಗಿದೆ ಎಂಬುದು ಇತ್ತೀಚಿನ ಒಂದು ಅಭಿಪ್ರಾಯ. ಪೂರ್ವಕವಿಗಳಲ್ಲಿ ಈತ ಯಾರನ್ನೂ ಸ್ಮರಿಸಿಲ್ಲ. ಈತನನ್ನು ಲಕ್ಷ್ಮಕವಿ, ಕೋನಯ್ಯ, ಬಬ್ಬೂರ ರಂಗ, ಗೋವಿಂದ ಮೊದಲಾದ ಕವಿಗಳು ಗೌರವದಿಂದ ಸ್ಮರಿಸಿದ್ದಾರೆ.

ಜೈಮಿನಿ ಭಾರತ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 34 ಸಂಧಿಗಳೂ 1907 ಪದ್ಯಗಳೂ ಇವೆ. ಇದು ಸಂಸ್ಕೃತ ಜೈಮಿನಿ ಭಾರತದ ಅನುವಾದ. ಕಥಾವಸ್ತುವಿನಲ್ಲೂ ಬಹುಮಟ್ಟಿಗೆ ಮೂಲವನ್ನೇ ಅನುಸರಿಸಿರುವುದು ಕಂಡುಬರುತ್ತದೆ. ಆದರೂ ಮೂಲದಲ್ಲಿರುವ ಅಪ್ರಯೋಜಕವಾದ ನೀರಸವಾದ, ಬಹುದೀರ್ಘವಾದ ಭಾಗಗಳನ್ನು ಬಿಟ್ಟು ಮಧ್ಯೆ ಮಧ್ಯೆ ತನ್ನ ರಸಿಕತೆಯನ್ನೂ ವರ್ಣನಾ ವೈಖರಿಯನ್ನೂ ಪ್ರದರ್ಶಿಸುವ ಭಾಗಗಳನ್ನು ಸೇರಿಸಿದ್ದಾನೆ. ಕವಿ ತನ್ನ ಕೃತಿಯ ಸ್ವರೂಪವನ್ನು ಒಂದು ಪದ್ಯದಲ್ಲಿ ಹೀಗೆ ವ್ಯಕ್ತಪಡಿಸಿದ್ದಾನೆ:

ಪುಣ್ಯಮಿದು ಕೃಷ್ಣಚರಿತಾಮೃತಂ ಸುಕವೀಂದ್ರ
ಗಣ್ಯಮಿದು ಶೃಂಗಾರಕುಸುಮತರುತುರುಗಿದಾ
ರಣ್ಯಮಿದು ನವರಸಪ್ರೌಢಲಾಲಿತ್ಯ ನಾನಾವಿಚಿತ್ರಾರ್ಥಂಗಳ
ಗಣ್ಯಮಿದು ಶಾರದೆಯ ಸನ್ಮೋಹನಾಂಗ ಲಾ
ವಣ್ಯಮಿದು ಭಾವಕರ ಕಿವಿದೊಡವಿಗೊದವಿದ ಹಿ
ರಣ್ಯಮಿದು ಭೂತಳದೊಳಿನೆ ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯರಚನೆ

ಈ ಕಾವ್ಯದಲ್ಲಿ ಪಾಂಡವರ ಕಥೆ ಆನುಷಂಗಿಕವಾಗಿದ್ದು ಕೃಷ್ಣಚರಿತೆಯ ಪ್ರಕಾಶನಕ್ಕೆ ಹೆಚ್ಚು ಮಹತ್ತ್ವ ನೀಡಿ ಕೃತಿಯನ್ನು ಸಂಪೂರ್ಣವಾಗಿ ಕೃಷ್ಣಭಕ್ತರ ಕಥಾಗುಚ್ಛವನ್ನಾಗಿಸಿದ್ದಾನೆ. ಕೃಷ್ಣಭಕ್ತರಾದ ವೃಷಕೇತು, ಯೌವನಾಶ್ವ, ಮುರುತ್ತರಾಯ, ಅನುಸಾಲ್ವ, ನೀಲಧ್ವಜ, ಹಂಸಧ್ವಜ, ಸುಧನ್ವ, ಬಭ್ರುವಾಹನ, ತಾಮ್ರಧ್ವಜ, ಮಯೂರಧ್ವಜ, ಚಂದ್ರಹಾಸ ಮೊದಲಾದವರ ಕಥೆಗಳು ಅನುಸೂತ್ಯವಾಗಿ ಚಿತ್ರಿತವಾಗಿವೆ. ಕವಿ ಈ ಕಥೆಗಳನ್ನು ಹೇಳುವುದರಲ್ಲಿ, ಪ್ರಾರಂಭಿಸುವುದರಲ್ಲಿ, ಬೆಳೆಸುವುದರಲ್ಲಿ, ಮುಗಿಸುವುದರಲ್ಲಿ ತನ್ನ ಕಥಾಕೌಶಲವನ್ನು ತೋರ್ಪಡಿಸಿದ್ದಾನೆ. ಈತ ಶ್ರೇಷ್ಠಮಟ್ಟದ ಕಥೆಗಾರ ಎಂಬುದು ಇಂಥ ಕಥೆಗಳಿಂದ ವ್ಯಕ್ತವಾಗುತ್ತದೆ.

ಜೈಮಿನಿ ಭಾರತ ವೀರರಸ ಪ್ರಧಾನ ಕಾವ್ಯವಾದರೂ ಇತಿಮಿತಿಯಿಂದ ಕೂಡಿದ ಶೃಂಗಾರ ವರ್ಣನೆಗಳನ್ನೂ ಒಳಗೊಂಡಿದೆ; ಉತ್ತಮ ನೀತಿಗ್ರಂಥವೂ ಆಗಿದೆ. ಯುದ್ಧವರ್ಣನೆಗಳು ವೀರರಸಯುಕ್ತವಾ ಗಿವೆ. ಪ್ರಕೃತಿ ವರ್ಣನೆಗಳು ಪರಿಚಿತರೂಪಕ ಉಪಮೆಗಳಿಂದ ಕಣ್ಣಿಗೆ ಕಟ್ಟುವಂತಿವೆ. ಕಾವ್ಯವನ್ನು ಕೃಷ್ಣಚರಿತಾಮೃತಂ ಎಂದು ಕವಿ ಹೇಳಿಕೊಂಡಿ ರುವುದರಿಂದ ಭಕ್ತಿರಸಕ್ಕೂ ಅವಕಾಶ ಮಾಡಿಕೊಂಡಿದ್ದಾನೆ. ಭಕ್ತಿರಸ ಪ್ರತಿಪಾದನೆಯಲ್ಲಿಯೂ ಕವಿ ಸಿದ್ಧಹಸ್ತನೆನಿಸಿದ್ದಾನೆ. ವಿಷ್ಣುಭಕ್ತಿಯನ್ನು ಪ್ರತಿಪಾದನೆ ಮಾಡುವಲ್ಲಿ ಅನ್ಯದೈವಗಳಲ್ಲಿ ಸಹನೆ ತೋರಿದ್ದಾನೆ. ಕವಿಯ ಹರಿಹರಾಭೇದ ದೃಷ್ಟಿಗೆ ಕಾವ್ಯದಲ್ಲಿ ಸಾಕಷ್ಟು ನಿದರ್ಶನಗಳು ದೊರಕುತ್ತವೆ. ವಿಸ್ತಾರವಾಗಿರುವ ಮೂಲಕಥೆಯನ್ನು ಸಂಗ್ರಹಿಸುವಲ್ಲಿ ಕವಿಯ ಸ್ವೋಪಜ್ಞತೆ ಕಂಡುಬರುತ್ತದೆ. ಸ್ತ್ರೀಪಾತ್ರಗಳ ಚಿತ್ರಣದಲ್ಲಿ ವೈವಿಧ್ಯ ಎದ್ದು ತೋರುತ್ತದೆ. ಸತ್ಯಭಾಮೆ, ಜ್ವಾಲೆ, ಪ್ರಭಾವತಿ, ಪ್ರಮೀಳೆ, ಚಿತ್ರಾಂಗದೆ, ವಿಷಯೆ, ಸೀತಾದೇವಿ, ಚಂಡಿ ಈ ಒಂದೊಂದೂ ಪಾತ್ರಗಳೂ ಒಂದೊಂದು ಬಗೆಯಾಗಿದ್ದು ಓದುಗರ ಮೇಲೆ ಅಚ್ಚಳಿಯದ ಪ್ರಭಾವ ಬೀರುವಂತಿವೆ. ಚಂಡಿಯ ಕಥೆ, ಚಂದ್ರಹಾಸನ ಕಥೆ, ಸೀತಾದೇವಿಯ ಕಥೆಗಳಲ್ಲಿ ಕರುಣ ರಸ ಉಕ್ಕಿ ಹರಿಯುತ್ತದೆ. ಚಂಡಿಯ ಕಥೆಯಲ್ಲಿ ಹಾಸ್ಯದ ಜೊತೆಗೆ ವಿರಸದಾಂಪತ್ಯ ಚಿತ್ರಣ ಸುಂದರವಾಗಿ ಮೂಡಿದೆ. ಸೀತಾದೇವಿಯ ಕಥೆ ಮೂಲಕ್ಕಿಂತಲೂ ಪ್ರಭಾವಪೂರ್ಣವಾಗಿದೆ, ಧ್ವನಿಪೂರ್ಣವಾಗಿದೆ. ಚಂದ್ರಹಾಸನ ಕಥೆಯಲ್ಲಿ ಕವಿಯ ವಿಷ್ಣುಭಕ್ತಿ ಗರಿಗೆದರಿದೆ.

ಭಾಷಾಬಳಕೆಯಲ್ಲಿ ಕವಿಯ ರಸಿಕತೆ, ಪಾಂಡಿತ್ಯ, ಪ್ರತಿಭಾಸಾಮರ್ಥ್ಯ ದರ್ಶಿತವಾಗುತ್ತದೆ. ಉಪಮೆ ರೂಪಕಗಳ ಬಳಕೆಯಲ್ಲಿ ಮನೋಹರತೆ ಕಂಡುಬರುತ್ತದೆ. ಉಪಮೆಗಳು ಜೀವಂತವಾಗಿವೆ, ರಸಾರ್ದ್ರವಾಗಿವೆ. ಕಟುಕರ ಕೈಯಲ್ಲಿ ಸಿಕ್ಕ ಚಂದ್ರಹಾಸನ ಪರಿಸ್ಥಿತಿಯನ್ನು ಕಾಕಸಂಘಾತ ದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ ಎಂದೂ ದುಃಖಿಸುವ ಧರ್ಮರಾಯನ ಸ್ಥಿತಿಯನ್ನು ಅನಿಲ ಸಂಚಾರಮೊಂದಿನಿತಿಲ್ಲದುರಿವ ಕಡುವೇಸಗೆಯ ಬಿಸಿಲಿಂದೆ ಬಸವಳಿದ ಕೋಮಲ ರಸಾಲದಂತೆ ಎಂದೂ ಉದ್ದಾಲಕ ಚಂಡಿಯರ ವಿರಸ ದಾಂಪತ್ಯವನ್ನು ಮುಳ್ಳಿಡಿದ ಮರನೇರಿದಂತೆ ಎಂದೂ ಲಕ್ಷ್ಮಣನ ಮಾತು ಸೀತಾದೇವಿಯ ಕಿವಿಗೆ ಬಿದ್ದಾಗ ಗರ್ಭಿಣಿಯಾದ ಸೀತೆ ನೆಲಕ್ಕೆ ಬಿದ್ದಳೆಂಬುದನ್ನು ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ ಎಂದೂ ಹೇಳುವ ಇಂತಹ ಕಲ್ಪನೆಗಳು ಸುಂದರವಾಗಿವೆ. ಉಪಮಾಲೋಲ ಎಂಬ ಮಾತಿಗೆ ಸಾಕ್ಷಿಯಾಗಿ ಇಂಥ ಹಲವಾರು ನಿದರ್ಶನಗಳು ಕೃತಿಯ ಒಡಲಲ್ಲಿ ತುಂಬಿಕೊಂಡಿವೆ.

ಬಿಡಿಬಿಡಿಯಾಗಿ ಈತ ಹೇಳಿರುವ ಒಂದೊಂದು ಕಥೆಯೂ ತನಗೆ ತಾನೇ ಪ್ರತ್ಯೇಕವಾಗಿ ನಿಂತುಕೊಳ್ಳುವ ಕಾವ್ಯಮಹತ್ತ್ವವನ್ನು ಪಡೆದು ಕೊಂಡಿವೆ. ಈ ಕಾವ್ಯವನ್ನು ಒಂದು ಕಥಾ ಸರಿತ್ಸಾಗರ ಎಂದೂ ಕರೆಯಬಹುದು. ಷಟ್ಪದಿಯ ರಚನೆ ಕವಿಯ ಮನೋಭಾವವನ್ನು ಸಮರ್ಥವಾಗಿ ಸಹೃದಯರಿಗೆ ಸಂವಹನಿಸುವಲ್ಲಿ ಸಹಾಯಕವಾಗಿದೆ. ಇಷ್ಟಾದರೂ ಇವನ ಕಾವ್ಯ ಸಂಪ್ರದಾಯದ ಜಾಡಿನಲ್ಲಿ, ಪಾಂಡಿತ್ಯದ ಭರದಲ್ಲಿ ನಡೆಯುವ ಕೃತಿ. ನಾರಣಪ್ಪನ ಪ್ರತಿಭಾ ಪ್ರಭಾವವನ್ನೂ ಸ್ವತಂತ್ರ ಮನೋಧರ್ಮವನ್ನೂ ಇಲ್ಲಿ ಕಾಣಲಾಗುವುದಿಲ್ಲ. ಸಂಭಾಷಣಾ ವೈಖರಿಯಲ್ಲಿ ಈತ ರನ್ನ, ರಾಘವಾಂಕ, ಕುಮಾರವ್ಯಾಸ ಇವರಿಗೆ ಋಣಿಯಾಗಿರುವಂತೆ ತೋರುತ್ತದೆ. ಕವಿ ಸಂಸ್ಕೃತ–ಕನ್ನಡ ಭಾಷೆಗಳೆರಡಲ್ಲಿಯೂ ಪಂಡಿತನಾಗಿದ್ದಂತೆ ಒಳ್ಳೆಯ ತತ್ತ್ವಜ್ಞಾನಿಯೂ ಆಗಿದ್ದನೆಂಬುದಕ್ಕೆ ಕಾವ್ಯದಲ್ಲಿ ಸಾಕಷ್ಟು ಸಂದರ್ಭಗಳು ದೊರೆಯುತ್ತವೆ. ಆಧ್ಯಾತ್ಮಿಕ ವಿಚಾರಗಳನ್ನು ಹೇಳುವಲ್ಲಿ ಕವಿಗೆ ಅಪಾರ ಲೋಕಾನುಭವವಿರುವುದು ವ್ಯಕ್ತವಾಗುತ್ತದೆ. ಈ ಎಲ್ಲ ದೃಷ್ಟಿಗಳಿಂದ ಲಕ್ಷ್ಮೀಶನನ್ನು ಮಹಾ ಕವಿ ಎಂದು ಕರೆಯಲಾಗದಿದ್ದರೂ ಕನ್ನಡದ ಉತ್ತಮ ಕವಿಗಳಲ್ಲಿ ಒಬ್ಬ ಎನ್ನಬಹುದು.

ಜೈಮಿನಿ ಭಾರತ ಒಂದು ಕಾಲಕ್ಕೆ ಕರ್ನಾಟಕದಾದ್ಯಂತ ಪ್ರಚಲಿತವಾಗಿದ್ದು ರಾತ್ರಿಯ ಹೊತ್ತು ಹಳ್ಳಿಯಲ್ಲಿ ಇದನ್ನು ನಿತ್ಯಪಾರಾಯಣ ಮಾಡುತ್ತಿದ್ದ ರಂತೆ. ಅಷ್ಟೇ ಅಲ್ಲ, ಜೈಮಿನಿ ಭಾರತವನ್ನು ಓದಿ ಅರ್ಥ ಹೇಳುವಷ್ಟು ತಿಳಿವಳಿಕೆ ಒಬ್ಬ ವ್ಯಕ್ತಿಗೆ ಬಂದರೆ ಆತ ಪಂಡಿತ, ಬುದ್ಧಿವಂತ ಎಂಬ ನಂಬಿಕೆಯೂ ಜನರಲ್ಲಿತ್ತೆಂದು ಹೇಳುವುದುಂಟು. ಈ ಕಾವ್ಯವನ್ನು ಆಧರಿಸಿ ಸೋಲೂರು ಹುಚ್ಚಕವಿ ಎಂಬಾತ ಯಾಗಚರಿತೆ ಎಂಬ ಹೆಸರಿನಿಂದ ಯಕ್ಷಗಾನವನ್ನು ಬರೆದಿದ್ದಾನೆ. ಜೈಮಿನಿ ಭಾರತವನ್ನೇ ಆಧರಿಸಿ ಪ್ರಮೀಳಾರ್ಜುನೀಯ, ಸುಧನ್ವಾರ್ಜುನರ ಕಾಳಗ, ಬಭ್ರುವಾಹನಾರ್ಜುನರ ಕಾಳಗ, ಚಂದ್ರಹಾಸ ನಾಟಕ, ಕುಶಲವರ ಕಾಳಗ ಇತ್ಯಾದಿ ನಾಟಕಗಳು ರಚಿತವಾಗಿವೆ. (ಎನ್.ಎಆರ್.)

**ಲಕ್ಷ್ಮೇಶ್ವರ:** ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನಲ್ಲಿ ಕಸಬೆಯಿಂದ ನೈಋತ್ಯಕ್ಕೆ 21 ಕಿಮೀ ದೂರದಲ್ಲಿರುವ ಇತಿಹಾಸ ಪ್ರಸಿದ್ಧ ಪಟ್ಟಣ. ಜನಸಂಖ್ಯೆ 33,417.

ಪ್ರಾಚೀನ ಶಿಲಾ ಶಾಸನಗಳಲ್ಲಿ ಮತ್ತು ಗ್ರಂಥಗಳಲ್ಲಿ ಈ ಊರಿನ ಹೆಸರು ಪುಲಿಗೆರೆ, ಪುರಿಗೆರೆ ಮೊದಲಾದ ರೂಪಗಳಲ್ಲಿ ಕಂಡುಬರುತ್ತದೆ. ಲಕ್ಷ್ಮರಸನೆಂಬುವನು ಸು. 11ನೆಯ ಶತಮಾನದಲ್ಲಿ ಲಕ್ಷ್ಮೇಶ್ವರ ಎಂಬ ದೇವಾಲಯವನ್ನು ಕಟ್ಟಿಸಿದುದರಿಂದ ಅದರ ಹೆಸರೇ ಕ್ರಮೇಣ ಊರಿಗೆ ಬಂದಿರಬೇಕೆಂದು ಊಹೆಯಿದೆ. ಬಾದಾಮಿಯ ಚಳುಕ್ಯರ ಕಾಲದಿಂದ ಹಿಡಿದು ಸು. 16ನೆಯ ಶತಮಾನದ ಅಂತ್ಯದವರೆಗೆ ಇದು ಪುಲಿಗೆರೆ 200 ವಿಭಾಗದ ಆಡಳಿತ ಕೇಂದ್ರವಾಗಿತ್ತು. ಕವಿರಾಜಮಾರ್ಗ ಹಾಗೂ ವಿಕ್ರಮಾರ್ಜುನವಿಜಯದಲ್ಲಿ ಇದನ್ನು ತಿರುಳಗನ್ನಡದ ಸೀಮೆಯಲ್ಲಿ ಒಂದೆಂದು ವರ್ಣಿಸಿದೆ.

ಇಲ್ಲಿ ಹಲವು ದೇವಾಲಯಗಳು, ಜೈನ ಬಸದಿಗಳು ಮತ್ತು ಜುಮ್ಮಾ ಮಸೀದಿ (ಲಾಡ್‌ಖಾನ್) ಇವೆ. ಇಲ್ಲಿಯ ಶಂಖಬಸದಿ ಅಥವಾ ಜಿನಭಟ್ಟಾರಕ ಜಿನಾಲಯ ಮೂಲಸಂಘಕ್ಕೆ ಸಂಬಂಧಿಸಿದ್ದು ಇದು ಇಲ್ಲಿನ ಅತ್ಯಂತ ಪ್ರಾಚೀನ ಬಸದಿ. ಪ್ರಾಯಶಃ ಬಾದಾಮಿಯ ಚಳುಕ್ಯರ ಕಾಲದ್ದು. ಇಲ್ಲಿನ ಆನೆಸಜ್ಜೆ ಬಸದಿಯನ್ನು ಚಳುಕ್ಯ ವಿಜಯಾದಿತ್ಯನ ತಂಗಿ ಕುಂಕುಮ ಮಹಾದೇವಿ ಕಟ್ಟಿಸಿದಳು ಎಂಬುದಕ್ಕೆ ಶಾಸನೋಲ್ಲೇಖವಿದೆ. 12ನೆಯ ಶತಮಾನದಿಂದ ಇಲ್ಲಿ ಶೈವಧರ್ಮ ಪ್ರಬಲವಾಯಿತು. ಹಲವು ಶೈವದೇವಾಲಯಗಳನ್ನು ಕಟ್ಟಲಾಯಿತು. ಇವುಗಳಲ್ಲಿ ಸೋಮೇಶ್ವರ ದೇವಾಲಯ ಬಹುಪ್ರಸಿದ್ಧವಾಗಿತ್ತು. ಹರಿಹರನ ಆದಯ್ಯನ ರಗಳೆ ಮತ್ತು ರಾಘವಾಂಕನ ಸೋಮನಾಥಚರಿತೆಗಳಲ್ಲಿ ಈ ಸೋಮನಾಥನ ಪ್ರತಿಮೆಯ ವಿಷಯವಿದೆ. ಹೋಜೇಶ್ವರ ಅಥವಾ ವಾಜೇಶ್ವರ ಇಲ್ಲಿನ ಮತ್ತೊಂದು ಮುಖ್ಯ ದೇವಾಲಯ. ಇದು ಕಲ್ಯಾಣ ಚಾಳುಕ್ಯರ ಕಾಲಕ್ಕಿಂತಲೂ ಪೂರ್ವದ್ದು. ಇಲ್ಲಿ ಸು. 50ಕ್ಕೂ ಹೆಚ್ಚು ಕನ್ನಡ ಹಾಗೂ ಸಂಸ್ಕೃತ ಶಾಸನಗಳು ದೊರೆತಿವೆ. ಇವುಗಳಲ್ಲಿ ಅರ್ಧದಷ್ಟು ಜೈನಧರ್ಮಕ್ಕೆ ಸಂಬಂಧಪಟ್ಟವು. ಇಲ್ಲಿರುವ 12 ಮತ್ತು 13ನೆಯ ಶತಮಾನದ ಶಾಸನಗಳ ಪ್ರಕಾರ ಇಲ್ಲಿ ಲಕ್ಷ್ಮೀನಾರಾಯಣ ಮತ್ತು ರಾಮಚಂದ್ರ ದೇವಾಲಯಗಳು, ರಾಮೇಶ್ವರ, ಸಿಂಧೇಶ್ವರ, ಸೋಭನೇಶ್ವರ, ಮುದ್ದೇಶ್ವರ, ಓಬಳೇಶ್ವರ, ಕರ್ಮಟೇಶ್ವರ, ಬಾಳೇಶ್ವರ, ಧವಳಜಿನಾಲಯ, ಚತುರ್ಮುಖ ಜಿನಾಲಯ, ಗೊಗ್ಗಿಯ ಬಸದಿ, ವಿಜಯ ಬಸದಿಗಳು ಇದ್ದುವು. ಈ ಊರು ಪಂಚಮಠಸ್ಥಾನವಾಗಿತ್ತು. ವೀರಶೈವ ಪಂಚಾಚಾರ್ಯರುಗಳಲ್ಲಿ ಒಬ್ಬರಾದ ರೇವಣಸಿದ್ಧರ ಹಾಗೂ ಮೂರುಜಾವ ದೇವಮುನಿಯ ಉಲ್ಲೇಖಗಳು ಇಲ್ಲಿನ ಶಾಸನಗಳಲ್ಲಿವೆ.

12ನೆಯ ಶತಮಾನದಲ್ಲಿ ಇಲ್ಲಿ ಒಂದು ಘಟಿಕಾಸ್ಥಾನವಿತ್ತು. ಕಳಚುರಿ ಬಿಜ್ಜಳನ ಕಾಲದ ಶ್ರೀಧರನೆಂಬ ಅಧಿಕಾರಿ ಬ್ರಾಹ್ಮಣರಿಗಾಗಿ ಒಂದು ಬ್ರಹ್ಮಪುರಿಯನ್ನೂ ರಾಷ್ಟ್ರಕೂಟ ಜಯಕೇಶಿ ಅರಸನು ಒಂದು ಪುರವನ್ನೂ ನಿರ್ಮಿಸಿದರು. ಕರ್ನಾಡ ಸುಕವಿ, ನಾಗಾರ್ಜುನ ಕವಿ, ನಾಗದೇವ ಎಂಬ ಕವಿಗಳ ಉಲ್ಲೇಖಗಳು ಇಲ್ಲಿನ ಶಾಸನಗಳಲ್ಲಿದೆ. 1152ರ ಒಂದು ಶಾಸನದಲ್ಲಿ ನಯಸೇನ ಸೂರಿ ಎಂಬ ಕವಿಯ ಕೀರ್ತಿಯನ್ನು ಮನೋಹರವಾಗಿ ವರ್ಣಿಸಲಾಗಿದೆ. ಬ್ರಹ್ಮಶಿವ, ಪುಲಿಗೆರೆ ಸೋಮ, ಮಹಾಲಿಂಗದೇವ, ಸುರಕವಿ, ಸಿಂಹರಾಜ ಎಂಬ ಕವಿಗಳು ಈ ಸ್ಥಳದವರೆಂದು ತೋರುತ್ತದೆ. ಮುಮ್ಮರಿ ದಂಡಗಳು ಎಂಬ ವಾಣಿಜ್ಯ ಸಂಘದ ಶಾಖೆಯೂ ಇಲ್ಲಿತ್ತು.

ಸುಮಾರು ಸಾವಿರ ವರ್ಷಗಳವರೆಗೆ ವಿವಿಧ ಧರ್ಮಗಳು, ವಾಸ್ತು ಮತ್ತು ಮೂರ್ತಿಶಿಲ್ಪ, ಕಾವ್ಯರಚನೆ, ವ್ಯಾಪಾರ ಮತ್ತು ಆಡಳಿತ ಕೇಂದ್ರವಾಗಿದ್ದ ಕರ್ನಾಟಕ ಸಂಸ್ಕೃತಿಯ ಹಿರಿಮೆಯುಳ್ಳ ಸ್ಥಳಗಳಲ್ಲಿ ಇದೊಂದು ಪ್ರಮುಖ ಸ್ಥಳವಾಗಿದೆ. (ಎ.ಎಸ್.)

**ಲಾಲ್‌ಬಾಗ್**: ಬೆಂಗಳೂರಿನಲ್ಲಿರುವ ಕರ್ನಾಟಕದ ಅತ್ಯಂತ ಪ್ರಸಿದ್ಧ ಸಸ್ಯೋದ್ಯಾನಗಳಲ್ಲೊಂದು. ಇದನ್ನು ಶಿರಾದ ಮುಗಲ್ ಉದ್ಯಾನವನದ ಮಾದರಿಯಲ್ಲಿ ಹೈದರ್ ಅಲಿ ಸಣ್ಣ ಪ್ರಮಾಣದಲ್ಲಿ ಆರಂಭಿಸಿದ. ಇವನ ಮಗ ಟಿಪ್ಪುಸುಲ್ತಾನ ಇದನ್ನು ಅಭಿವೃದ್ಧಿಪಡಿಸಿದ. ಕಾಬೂಲ್, ಪರ್ಷಿಯ, ಮಾರಿಷಸ್ ಹಾಗೂ ಟರ್ಕಿಗಳಿಂದ ಹಲವು ಬಗೆಯ ಸಸ್ಯಬೀಜಗಳನ್ನು ತರಿಸಿ ನೆಡಿಸಿದ. ತರುವಾಯ ಮಾರ್ಕ್ ಕಬ್ಬನ್ ಇದರ ಉಸ್ತುವಾರಿ ವಹಿಸಿ (1856), ಕ್ಲೆಗ್‌ಹಾರ್ನ್‌ನಿಂದ ಸಸ್ಯೋದ್ಯಾನವನ್ನಾಗಿ ರೂಪಿಸಿದ. ಪ್ರಸ್ತುತ ಇದು ಪ್ರಧಾನವಾಗಿ ಆಲಂಕಾರಿಕ ಸಸ್ಯ ಸಂಬಂಧಿ ಸಂಶೋಧನೆ, ವಿಸ್ತರಣೆ ಹಾಗೂ ಅಭಿವೃದ್ಧಿ ಚಟುವಟಿಕೆಗಳ ಕೇಂದ್ರವಾಗಿದೆ.

ಲಾಲ್‌ಬಾಗ್ ಇದರ ಮೂಲ ಹೆಸರಾಗಿರಲಿಲ್ಲ. 1856 ರವರೆಗೆ ಇದಕ್ಕೆ ಈ ಹೆಸರಿದ್ದ ಬಗ್ಗೆ ದಾಖಲೆಗಳಿಲ್ಲ. ಮೊದಲು ಇದನ್ನು ಮಾವಿನ ತೋಪು ಮತ್ತು ಸೈಪ್ರಸ್ ಗಾರ್ಡನ್ ಎಂದು ಕರೆಯುತ್ತಿದ್ದರು. ಶ್ರೀರಂಗಪಟ್ಟಣ ದಲ್ಲಿದ್ದ ಲಾಲ್‌ಬಾಗ್ ಉದ್ಯಾನವನ್ನು ನೋಡಿದ ಜನ ಇದನ್ನೂ ಅದೇ ಹೆಸರಿನಿಂದ ಕರೆಯಲಾರಂಭಿಸಿದರು. ಆ ಉದ್ಯಾನವನ್ನೂ ಹೈದರ್ ಹಾಗೂ ಟಿಪ್ಪುಸುಲ್ತಾನರೇ ಬೆಳೆಸಿದ್ದರು. ಅಲ್ಲಿ ಹೈದರ್ ಹಾಗೂ

ಟಿಪ್ಪುಸುಲ್ತಾನರ ಗೋರಿಗಳಿರುವ ಗುಂಬಜ್ ಲಾಲ್‌ಬಾಗ್‌ನ ಮಧ್ಯದಲ್ಲಿ ಸ್ಥಾಪಿತವಾಗಿತ್ತು.

ಟಿಪ್ಪುಸುಲ್ತಾನನ ಮರಣಾನಂತರ ಈಸ್ಟ್ ಇಂಡಿಯ ಕಂಪನಿ ಲಾಲ್‌ಬಾಗನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಮೇಜರ್ ವಾ ಇಲ್ಲಿ ವಿದೇಶಿ ಸಸ್ಯ, ತರಕಾರಿ, ಆಕರ್ಷಕ ಸಸ್ಯಗಳನ್ನೂ ಹಣ್ಣಿನ ಗಿಡಗಳನ್ನೂ ನೆಡಿಸಿದ. ತರುವಾಯ ಇದು ಮೈಸೂರಿನ ಮುಖ್ಯ ಕಮಿಷನರ್‌ನ ಸುಪರ್ದಿಗೆ ಬಂದಿತು (1831). 1836ರಲ್ಲಿ ಇದನ್ನು ಕೃಷಿ-ತೋಟಗಾರಿಕೆ ಸಂಸ್ಥೆಗೆ



ಆಕರ್ಷಕ ಗಾಜಿನ ಮನೆ

ವಹಿಸಲಾಯಿತು. 1856ರಲ್ಲಿ ಇದು ಸರ್ಕಾರಿ ಸಸ್ಯೋದ್ಯಾನವಾಗಿ ಸರ್ಕಾರದ ಆಡಳಿತಕ್ಕೊಳಪಟ್ಟಿತು. 1881ರಲ್ಲಿ ಇದು ಮತ್ತೆ ಮೈಸೂರು ಅರಸರ ಒಡೆತನಕ್ಕೆ ಬಂದಿತು. ಮೊದಲು 40 ಎಕರೆಗಳಷ್ಟಿದ್ದ ಇದರ ವ್ಯಾಪ್ತಿ ಎರಡರಷ್ಟಾಯಿತು. ಉದ್ಯಾನದ ಹರಹು ವಿಸ್ತಾರವಾಗುತ್ತ ಬಂದು ಈಗ 120 ಎಕರೆಗಳಷ್ಟು ವಿಶಾಲವಾಗಿದೆ.

ಹೈದರ್ ಅಲಿಯ ಕಾಲದಲ್ಲಿ ಮಾವು, ಬಾಳೆ, ದಾಳಿಂಬೆಗಳನ್ನು ಇಲ್ಲಿ ಕೃಷಿಮಾಡುತ್ತಿದ್ದರು. ಟಿಪ್ಪು ಕಾಲದಲ್ಲಿ ಸೈಪ್ರಸ್, ತೂಜ, ದ್ರಾಕ್ಷಿ, ಸೀಬೆ, ಸ್ಟ್ರಾಬೆರಿ ಮೊದಲಾದುವನ್ನು ಬೆಳೆಯಲಾಯಿತು. ಆದರೆ ಈ ಉದ್ಯಾನಕ್ಕೆ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ. 1794ರಲ್ಲಿ ಟಿಪ್ಪು ಬೆಂಗಳೂರನ್ನು ಬ್ರಿಟಿಷರಿಗೆ ನೀಡಬೇಕಾದಾಗ ಇಲ್ಲಿನ ಸಸ್ಯರಾಶಿ ಹೆಚ್ಚು ಕಡಿಮೆ ನಾಶವಾಗಿತ್ತು. ಬ್ರಿಟಿಷ್ ಅಧಿಕಾರಿ ವಾ ಈ ಸಸ್ಯರಾಶಿಗೆ ಪುನರುಜ್ಜೀವನ ನೀಡಿದ. ಜೊತೆಗೆ ಓಕ್, ಎಲ್ಮ್, ಸೀಡರ್, ಪೈನ್, ಗುಲಾಬಿ, ಮ್ಯಾಗ್ನೋಲಿಯ ಮುಂತಾದುವನ್ನು ನೆಡಿಸಿದ. 1858ರಲ್ಲಿ ಅಧೀಕ್ಷಕನಾಗಿ ನೇಮಕಗೊಂಡ ವಿಲಿಯಮ್ ನ್ಯೂ ಎಂಬಾತ ಸಿಂಕೋನ, ಕಾಫಿ, ಟೀ, ಅನಾನಸ್, ಪಾಮ್, ಸಪೋಟ, ಸೀಬೆ, ದ್ರಾಕ್ಷಿ ಮುಂತಾದ ವಾಣಿಜ್ಯ ಸಸ್ಯಗಳಲ್ಲದೆ ಅಜೇಲಿಯ, ರೋಡೋಡೆಂಡ್ರನ್, ಮ್ಯಾಗ್ನೋಲಿಯ, ಕ್ರೋಕಸ್ ಮೊದಲಾದ ಹೂ ಗಿಡಗಳನ್ನು ನೆಡಿಸಿದ. ಇವುಗಳೊಂದಿಗೆ ಯೂಕಲಿಪ್ಟಸ್, ಕ್ಯಾಸರೀನ, ಸಿಲ್ವರ್ ಓಕ್ ಮೊದಲಾದ ಮರಗಳನ್ನೂ ನೆಡಿಸಿದ.

ಅನಂತರದಲ್ಲಿ ಅಧೀಕ್ಷಕನಾದ ಜಾನ್ ಕೆಮರಾನ್‌ನ ಅವಧಿ ಲಾಲ್‌ಬಾಗಿನ ಸ್ವರ್ಣಯುಗವೆಂದು ಹೆಸರಾಗಿದೆ. ಈತ ಹೂ ಸಸ್ಯಗಳೊಂದಿಗೆ ಮರ, ಔಷಧೀಯ ಸಸ್ಯ, ಸಾಂಬಾರ ಸಸ್ಯಗಳನ್ನು ನೆಡಿಸಿದನಲ್ಲದೆ 17 ಬಗೆಯ ಸೇಬಿನ ಗಿಡಗಳನ್ನು ಹೊರಗಿನಿಂದ ತರಿಸಿದ. ಇವುಗಳಲ್ಲಿ ರೋಮ್ ಬ್ಯೂಟಿ ಆ್ಯಪಲ್ ಮುಖ್ಯವಾದುದು. ಕೋಸು, ಹೂಕೋಸು, ಕ್ಯಾರೆಟ್, ಮೂಲಂಗಿ, ಸ್ಪಿನಿಜ್ ಮುಂತಾದ ತರಕಾರಿಗಳನ್ನು ಇಲ್ಲಿ ಬೆಳೆಯಲಾಗುತ್ತಿತ್ತು.

ಸಸ್ಯ ಸಂರಕ್ಷಣೆಗೆ ಗಾಜಿನಮನೆ ಅಗತ್ಯವೆಂದರಿತ ಕೆಮರಾನ್ ಅಗತ್ಯ ವಸ್ತುಗಳನ್ನು ಇಂಗ್ಲೆಂಡಿನಿಂದ ತರಿಸಿಕೊಂಡು ಕೇವಲ 12 ಗಂಟೆಗಳ ಅವಧಿಯಲ್ಲಿ ಗ್ಲಾಸ್‌ಹೌಸ್ ಸ್ಥಾಪಿಸಿದ (1888). ತರುವಾಯ ಇಲ್ಲಿ ವರ್ಷಕ್ಕೊಮ್ಮೆ ಪುಷ್ಪ ಪ್ರದರ್ಶನವೂ ಆರಂಭವಾಯಿತು. ಜಿ.ಎಚ್. ಕ್ರಂಬೀಗಲ್‌ನ ಅವಧಿಯಲ್ಲಿ ಅಮೂಲ್ಯ ಕೆಲಸಗಳು ನಡೆದವು. ಭೋಜಪತ್ರ, ಆಲಿವ್, ಹೀಮಟಾಕ್ಸಿಲೋನ್, ಗಂಧಮೆಣಸು ಮೊದಲಾದ ಅಸಂಖ್ಯ ಗಿಡ-ಮರಗಳನ್ನು ಇಲ್ಲಿ ನೆಡಲಾಯಿತು.

ಲಂಡನ್ನಿನ ಕ್ರಿಸ್ಟಲ್ ಪ್ಯಾಲೆಸ್‌ಗೂ (1851) ಗಾಜಿನಮನೆಗೂ ಹೋಲಿಕೆ ಇದೆ ಎಂದು ಹೇಳಲಾಗುತ್ತದೆ. ಗಾಜಿನ ಮನೆಯನ್ನು ಕಚೇರಿ, ಗ್ರಂಥಾಲಯ ಹಾಗೂ ಸಸ್ಯ ಸಂರಕ್ಷಣೆಗಾಗಿ ಬಳಸುವ ಉದ್ದೇಶ ಮೊದಲು ಇತ್ತಾದರೂ ತರುವಾಯ ಪ್ರದರ್ಶನಕ್ಕೆ ಮಾತ್ರ ಸೀಮಿತಗೊಳಿಸಲಾಯಿತು. ಇದಕ್ಕೆ ವೇಲ್ಸ್ ರಾಜಕುಮಾರ ಆಲ್ಬರ್ಟ್ ವಿಕ್ಟರ್ ಸಂರಕ್ಷಣಾಲಯವೆಂದೂ ಕರೆಯಲಾಗುತ್ತದೆ.

ಇಲ್ಲಿ ಅತ್ಯಂತ ಪ್ರಾಚೀನ ಶಿಲಾವರ್ಗಕ್ಕೆ ಸೇರಿದ ನೈಸ್ ಶಿಲೆಯ ಬಂಡೆಯ ಮೇಲೆ ಬೆಂಗಳೂರು ನಿರ್ಮಾತೃ ಕೆಂಪೇಗೌಡ ನಿರ್ಮಿಸಿದ ಅಪರೂಪದ ಗಡಿ ಗೋಪುರವೂ ಇದೆ. ಆತ ಬೆಂಗಳೂರಿನ ಸುತ್ತ ನಾಲ್ಕು ದಿಕ್ಕಿನಲ್ಲಿ ಸ್ಥಾಪಿಸಿದ ಗೋಪುರಗಳಲ್ಲಿ ಇದೂ ಒಂದು. ಎಂ.ಎಚ್. ಮರೀಗೌಡ ಎಂಬುವರ ಆಡಳಿತ ಅವಧಿಯಲ್ಲಿ ಈ ಸಸ್ಯೋದ್ಯಾನ ಇನ್ನೂ ಹೆಚ್ಚಿನ ಚೆಲುವನ್ನೂ ಸುರಕ್ಷತೆಯನ್ನೂ ಪಡೆದುಕೊಂಡಿತು. ಆನೆಹುಣಿಸೆ (ಬಾವೊಬಾಬ್), ನೊಬೆಲ್ ಆಮ್‌ಹರ್ಸ್ಟಿಯ, ಬ್ರೌನಿಯ ಮೊದಲಾದ ಅಪರೂಪದ ಮರಗಳು ಲಾಲ್‌ಬಾಗ್‌ನಲ್ಲಿವೆ. *

**ಲಾಲಗುಳಿ ಜಲಪಾತ:** ಬೆಳಗಾಂವಿ ಜಿಲ್ಲೆ ಯಲ್ಲಾಪುರ ತಾಲ್ಲೂಕಿನಲ್ಲಿ ಯಲ್ಲಾಪುರದ ಉತ್ತರಕ್ಕೆ 13 ಕಿಮೀ ದೂರದಲ್ಲಿ, ಯಲ್ಲಾಪುರ-ಬೆಳಗಾಂವಿ ರಸ್ತೆಯಲ್ಲಿರುವ ಲಾಲಗುಳಿ ಗ್ರಾಮದ ಹತ್ತಿರ ಕಾಳಿನದಿಯಿಂದಾಗಿರುವ ಒಂದು ಜಲಪಾತ. ತಟ್ಟೆಹೊಳೆ ಕಾಳಿನದಿಗೆ ಸೇರುವ ಸ್ಥಳದಲ್ಲಿ ಕಾಳಿನದಿ ಸು. 91 ಮೀ ಎತ್ತರದಿಂದ 5ರಿಂದ 7 ಮೀ ಘಟ್ಟಗಳಲ್ಲಿ ಹಂತಹಂತವಾಗಿ ದುಮುಕುತ್ತದೆ. ಈ ಜಲಪಾತದ ಸಪ್ಪಳ ಶಾಂತ ವೇಳೆಯಲ್ಲಿ ಸು. 16 ಕಿಮೀವರೆಗೆ ಕೇಳುವುದಂತೆ. ಹಿಂದೆ ಸೋದೆಯ ಅರಸರು ಮರಣದಂಡನೆಗೆ ಗುರಿಯಾದ ದುಷ್ಕರನ್ನು, ಅಪರಾಧಿಗಳನ್ನು ತಂದು ಇಲ್ಲಿಂದ ದೂಡಿ ಕೊಲ್ಲುತ್ತಿದ್ದರೆಂದು ಪ್ರತೀತಿ. ಜಲಪಾತದ ಸಮೀಪದ ಎತ್ತರದ ಗುಡ್ಡದ ಮೇಲೆ ಹನುಮಂತ ದೇವಾಲಯವಿದೆ.

(ಆರ್.ಜಿ.ಆರ್.)

**ಲಿಂಗಣಾರಾಧ್ಯ:** ಸು. 1724. ವೀರಶೈವ ಕವಿ. ಕೇಶಿರಾಜನ ಶಬ್ದಮಣಿ ದರ್ಪಣಕ್ಕೆ ಸೂತ್ರಾನ್ವಯ ರತ್ನಮಾಲೆ ಎಂಬ ವೃತ್ತಿಯನ್ನು ಬರೆದಿದ್ದಾನೆ. ಈ ಗ್ರಂಥದ ತಾಳಪ್ರತಿಯಲ್ಲಿ ಇದನ್ನು 1724ರಲ್ಲಿ ಬೇಲೂರು ಅಪ್ಪಾಜಯ್ಯನ ಮಗನಾದ ಚಲುವಯ್ಯ ಪ್ರತಿಮಾಡಿದುದಾಗಿ ತಿಳಿಸಿರುವುದರಿಂದ ಲಿಂಗಣಾರಾಧ್ಯ 1724ಕ್ಕೂ ಹಿಂದೆ ಇದ್ದವನೆಂದು ಹೇಳಬಹುದಾಗಿದೆ. ಗ್ರಂಥದ ಕೆಲವು ಪ್ರಕರಣಾಂತ್ಯದ ಗದ್ಯದಲ್ಲಿ 'ಇದು ಸಂಸ್ಕೃತ ಕರ್ಣಾಟಕೋಭಯಭಾಷಾವಿಶಾರದ ಶ್ರೀವೀರಶಯವ ಲಿಂಗಣಾರಾಧ್ಯ ವಿರಚಿತಮಪ್ಪ ಸೂತ್ರಾನ್ವಯರತ್ನಮಾಲೆಯೆನಿಪ ಶಬ್ದಮಣಿದರ್ಪಣವೃತ್ತಿಯೊಳ್' ಎಂದಿರುವುದು ಕಾಣಬರುತ್ತದೆ.

ಸಂಸ್ಕೃತ ವೃತ್ತಿಕಾರರಂತೆ ಲಕ್ಷಣಗಳಲ್ಲಿರುವ ಪದಪ್ರಯೋಜನವನ್ನು ಪ್ರಶ್ನೆಗಳ ದ್ವಾರದಿಂದ ವ್ಯಕ್ತಪಡಿಸಿರುವುದು, ಕೇಶಿರಾಜನ ಸೂತ್ರಗಳಿಗೆ ಕೆಲವೆಡೆಗಳಲ್ಲಿ ಉತ್ತಮ ಪಾಠಗಳನ್ನು ಕೊಟ್ಟಿರುವುದು, ಕೆಲವನ್ನು ಮಾರ್ಪಡಿಸಿರುವುದು, ಕೆಲವನ್ನು ಹೆಚ್ಚಾಗಿ ಕೊಟ್ಟಿರುವುದು, ಕೆಲವನ್ನು ಬಿಟ್ಟಿರುವುದು, ಕೆಲವೆಡೆಗಳಲ್ಲಿ ಕೇಶಿರಾಜನ ಮೂಲವೃತ್ತಿಯನ್ನು ವಿಸ್ತರಿಸಿರುವುದಲ್ಲದೆ ಹೆಚ್ಚಿನ ವಿವರಗಳನ್ನೂ ಕೊಟ್ಟು ಜೊತೆಗೆ ಸ್ವಂತ

ವ್ಯಾಖ್ಯಾನವನ್ನು ಮಾಡಿರುವುದು–ರತ್ನಮಾಲೆ ವೃತ್ತಿಯ ಕೆಲವು ವೈಶಿಷ್ಟ್ಯಗಳಾಗಿವೆ. ಈ ಗ್ರಂಥದ 61ನೆಯ ಸೂತ್ರದಲ್ಲಿ ಈತ ಪ್ರಸ್ತಾಪಿಸಿರುವ ಕೆಲವು ಮಾತುಗಳಿಂದ ಲಿಂಗಣಾರಾಧ್ಯನಿಗಿಂತ ಹಿಂದೆಯೇ ಕೇಶಿರಾಜನ ಸೂತ್ರಗಳಿಗೆ ವ್ಯಾಖ್ಯಾನ ಬರೆದವನೊಬ್ಬನಿದ್ದನೆಂದು ತಿಳಿದುಬರುತ್ತದೆ.

(ಎ.ಎಸ್.ಕೆ.)

**ಲಿಂಗಣ್ಣಕವಿ:** ಸು. 1750. ಕೆಳದಿನೃಪವಿಜಯಂ ಎಂಬ ಗ್ರಂಥದ ಕರ್ತೃ. ಕೆಳದಿ ಸಂಸ್ಥಾನದ ಆಸ್ಥಾನಕವಿ. ಈತ ಕೆಳದೀವರಬಸವೇಂದ್ರಾಶ್ರಿತ ಎಂದು ಕೃತಿಯಲ್ಲಿ ಹೇಳಿಕೊಂಡಿರುವುದರಿಂದ ಎರಡನೆಯ ಬಸವಪ್ಪ ನಾಯಕನ ಕಾಲದಲ್ಲಿ (1739–54) ಇದ್ದಿರಬಹುದು. ಕೃತಿಯ ಆದಿಯಲ್ಲಿ ಪೀಠಿಕಾ ಪ್ರಕರಣ ಇಲ್ಲದಿರುವುದರಿಂದ ಕವಿಯ ವಿಚಾರ ತಿಳಿದುಬರುವುದಿಲ್ಲವಾದರೂ ಕಾವ್ಯದ ಒಂದು ಕಡತದ ಪ್ರತಿಯ ಕೊನೆಯಲ್ಲಿ ಮೆರೆವೀ ಸತ್ಕೃತಿಯಂ ತಾಂ ವಿರಚಿಸಿದಂ ಸಕಲನೃಪಶಿರೋಮಣಿ ಕೆಳದೀಬಸವೇಂದ್ರಾಶ್ರಿತ ಭೂಸುರಕುಲಮಣಿ ವೆಂಕಪಾತ್ಮಜಂ ಲಿಂಗಬುಧಂ ಎಂದು ಹೇಳಿದೆ. ಈತ ಶಿವಕಲ್ಯಾಣ ಎಂಬ ಯಕ್ಷಗಾನ ಕೃತಿಯನ್ನೂ ರಚಿಸಿರುವಂತಿದೆ.

ಕೆಳದಿನೃಪವಿಜಯ 12 ಆಶ್ವಾಸಗಳನ್ನುಳ್ಳ ಚಂಪೂ ಗ್ರಂಥ. ಕೆಳದಿ ರಾಜರ ಚರಿತ್ರೆ ಈ ಗ್ರಂಥದ ವಸ್ತು. ಒಂದನೆಯ ಆಶ್ವಾಸದಲ್ಲಿ ಚೌಡಪ್ಪ ನಾಯಕ, ಎರಡನೆಯ ಆಶ್ವಾಸದಲ್ಲಿ ಸದಾಶಿವರಾಯನಾಯಕ, ಮೂರನೆಯ ಆಶ್ವಾಸದಲ್ಲಿ ದೊಡ್ಡಸಂಕಣ್ಣನಾಯಕ, ನಾಲ್ಕನೆಯ ಆಶ್ವಾಸದಲ್ಲಿ ಚಿಕ್ಕಸಂಕಣ್ಣನಾಯಕ, ಐದನೆಯ ಆಶ್ವಾಸದಲ್ಲಿ ರಾಮರಾಜನಾಯಕ, ಆರನೆಯ ಆಶ್ವಾಸದಲ್ಲಿ ವೀರಭದ್ರನಾಯಕ, ಏಳನೆಯ ಆಶ್ವಾಸದಲ್ಲಿ ಶಿವಪ್ಪನಾಯಕ ಮತ್ತು ವೆಂಕಟಪ್ಪನಾಯಕ, ಎಂಟನೆಯ ಆಶ್ವಾಸದಲ್ಲಿ ಭದ್ರಪ್ಪನಾಯಕ, ಹಿರಿಯ ಸೋಮಶೇಖರ ನಾಯಕ, ಮತ್ತು ಕುತ್ಸಿತ ಶಿವಪ್ಪನಾಯಕ, ಒಂಬತ್ತನೆಯ ಆಶ್ವಾಸದಲ್ಲಿ ಚೆನ್ನಮ್ಮಾಜಿ, ಹತ್ತನೆಯ ಆಶ್ವಾಸದಲ್ಲಿ ಹಿರಿಯ ಬಸವಪ್ಪ ನಾಯಕ ಮತ್ತು ಸೋಮಶೇಖರ ನಾಯಕ, ಹನ್ನೊಂದನೆಯ ಆಶ್ವಾಸದಲ್ಲಿ ಬಸವಪ್ಪನಾಯಕ ಮತ್ತು ಚೆನ್ನಬಸವ ನಾಯಕ, ಹನ್ನೆರಡನೆಯ ಆಶ್ವಾಸದಲ್ಲಿ ವೀರಮ್ಮಾಜಿ ಮತ್ತು ಸೋಮಶೇಖರ ನಾಯಕ–ಈ ರಾಜರ ವಿಚಾರಗಳಿವೆ. ಗ್ರಂಥದಲ್ಲಿ ಕೆಳದಿ ಅರಸರ ಚರಿತ್ರೆಯ ನಿರೂಪಣೆ ಪ್ರಧಾನವಾದರೂ ಚಿತ್ರದುರ್ಗದ ನಾಯಕರು, ಬೇಲೂರು ಅರಸರು, ವಿಜಯನಗರದ ಅರಸರು, ಶಾಹೀರಾಜರು, ಮರಾಠರು, ದೆಹಲಿಯ ಸುಲ್ತಾನರು ಇವರ ವಿಷಯವೂ ಪ್ರಾಸಂಗಿಕವಾಗಿ ಉಕ್ತವಾಗಿದೆ. ಚಂಪೂ ಸಂಪ್ರದಾಯವನ್ನು ಅನುಸರಿಸಿ ಗ್ರಂಥಾದಿಯಲ್ಲಿ ಸಮುದ್ರ, ಮೇರುಪರ್ವತ, ಜಂಬೂದ್ವೀಪ, ಕರ್ನಾಟಕ ದೇಶ ಮೊದಲಾದವನ್ನು ಕವಿ ವರ್ಣಿಸಿದ್ದಾನೆ. ಕೃತಿಯಲ್ಲಿ ಕಂದ ಮತ್ತು ಗದ್ಯ ಹೆಚ್ಚು; ವೃತ್ತಗಳಿರುವುದು ಕಡಿಮೆ. ಕಾವ್ಯಾಂಶಕ್ಕಿಂತ ಚಾರಿತ್ರ್ಯಾಂಶವೇ ಅಧಿಕ.

ಕೆಳದಿ ನೃಪವಿಜಯವನ್ನು ಸಂಪೂರ್ಣವಾಗಿ ಐತಿಹಾಸಿಕ ಆಧಾರಗ್ರಂಥವೆಂದು ಪರಿಗಣಿಸದಿದ್ದರೂ ಕೆಳದಿಯ ಇತಿಹಾಸಕ್ಕೆ ಸಂಬಂಧಪಟ್ಟ ವಿವರಣೆಗಳನ್ನು ಹೊಂದಿರುವುದರಿಂದ ಈ ಗ್ರಂಥ ಇತಿಹಾಸಕಾರರಿಗೆ ಕೆಳದಿ ಅರಸರ ಚರಿತ್ರೆಯನ್ನು ಬರೆಯುವಲ್ಲಿ ಅಮೂಲ್ಯ ಆಕರವಾಗಿದೆ.

(ಕೆ.ಟಿ.ಆರ್.;ಎಸ್.ಎನ್.ಕೆ.)

**ಲಿಂಗದ ಬೀರ:** ಶೈವಸಂಪ್ರದಾಯಕ್ಕೆ ಸೇರಿದ ಒಂದು ಜನಪದ ಧಾರ್ಮಿಕ ವೀರನೃತ್ಯ. ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಜನಪ್ರಿಯವಾಗಿದೆ. ಲಿಂಗಬೀರ, ಲಿಂಗಧೀರ, ಲಿಂಗವೀರ ಎಂದು ಕರೆಯಲ್ಪಡುವ ವೀರಶೈವ ಸಂಪ್ರದಾಯಕ್ಕೆ ಸೇರಿದವರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಲಿಂಗದ ಬೀರರ ನೃತ್ಯದಲ್ಲಿ ಸಾಮಾನ್ಯವಾಗಿ ಒಬ್ಬ ನರ್ತಕನಿರುತ್ತಾನೆ. ವಿರಳವಾಗಿ ಇಬ್ಬರು ಸೇರುವುದೂ ಉಂಟು. ಲಿಂಗದ ಬೀರರ ವೇಷಭೂಷಣಗಳು ಆಕರ್ಷಕವಾಗಿರುತ್ತವೆ. ತಲೆಗೆ ಮಿರಗ ಚೌಲಿ, ಹಣೆಯ ಮೇಲೆ ಕಿರೀಟದಾಕಾರ ಹೋಲುವ ಹಿತ್ತಾಳೆಯ ಲಿಂಗಸರ, ಸೊಂಟಕ್ಕೆ ಹಿತ್ತಾಳೆಯ ದಕ್ಷಬ್ರಹ್ಮನ ತಲೆಗಳು, ಬೆನ್ನಿಗೆ ಹಿತ್ತಾಳೆಯ ವೀರಭದ್ರನ ಹಲಗೆ, ಎಡಗೈಯಲ್ಲಿ ತೋಪಡ, ಬಲಗೈಯಲ್ಲಿ ಕತ್ತಿ ಇರುತ್ತವೆ. ಎರಡು ಕಾಲಿಗೂ ಗೆಜ್ಜೆಗಳನ್ನು ಧರಿಸಿ, ಬಲಗಾಲಿಗೆ ಜಂಗು ಕಟ್ಟಿಕೊಳ್ಳುತ್ತಾರೆ. ಕಾವಿಯ ನಿಲುವಂಗಿ (ಕೆಲವೊಮ್ಮೆ ಬಣ್ಣದ ಶರಾಯಿ) ಮತ್ತು ದಟ್ಟಿಯನ್ನು ಧರಿಸಿ ಮುಖವನ್ನು ವಿಭೂತಿ ಗಂಧ ಕುಂಕುಮಗಳಿಂದ ಅಲಂಕರಿಸಿಕೊಳ್ಳುತ್ತಾರೆ. ಕೊರಳಲ್ಲಿ ರುದ್ರಾಕ್ಷಿ ಸರವಿರುತ್ತದೆ. ನೃತ್ಯದಲ್ಲಿ ಓಲಗ, ತಮ್ಮಟೆ, ಕೆಲವು ಕಡೆಗಳಲ್ಲಿ ತಮ್ಮಟೆಯ ಬದಲು ಕರಡೆ ವಾದ್ಯವನ್ನು ಬಳಸುತ್ತಾರೆ. ಲಿಂಗದ ಬೀರರು ವೀರಭದ್ರನ ಖಡ್ಗಗಳನ್ನು (ಹಾಡುಗಳನ್ನು) ಹೇಳುತ್ತ, ಕೈಗಳಲ್ಲಿರುವ ತೋಪಡ ಮತ್ತು ಕತ್ತಿಗಳನ್ನು ಝಳಪಿಸುತ್ತ, ವೀರಾವೇಶದಿಂದ ವಾದ್ಯಗಳ ಗತ್ತಿಗೆ ತಕ್ಕಂತೆ ಲಯಬದ್ಧವಾಗಿ ವೃತ್ತಾಕಾರದಲ್ಲಿ ನರ್ತಿಸುತ್ತಾರೆ. ಆ ಸಮಯದಲ್ಲಿ ವಿಶಿಷ್ಟ ವೇಷವೇನೂ ಇಲ್ಲದ ಸಾಮಾನ್ಯ ವ್ಯಕ್ತಿಯೊಬ್ಬ ಭಲರೇ ವೀರ, ಹರೋಹರಾ ಎಂದು ಕಾಕು ಹೇಳುತ್ತ, ಜಾಗಟೆ ಬಡಿಯುತ್ತ ಸಾವಧಾನವಾಗಿ ವೃತ್ತಾಕಾರದಲ್ಲಿ ಕುಣಿಯುತ್ತಾನೆ.

ಮದುವೆ, ಗೃಹಪ್ರವೇಶ ಮುಂತಾದ ಶುಭಸಂದರ್ಭಗಳಲ್ಲಿ ಈ ನೃತ್ಯದ ಏರ್ಪಾಡಿರುತ್ತದೆ. ಅರಸು ಮನೆತನದವರು, ವೀರಶೈವರು, ಕೆಲವು ಕಡೆಗಳಲ್ಲಿ ಒಕ್ಕಲಿಗರು, ಕುರುಬರು, ಮಡಿವಾಳರೂ ಲಿಂಗದ ಬೀರರನ್ನು ಬರಮಾಡಿಕೊಳ್ಳುತ್ತಾರೆ. ಗೊತ್ತಾದ ದಿನ ಅವರು ಕಾರ್ಯದ ಮನೆಗೆ ಬಂದು ಅಲ್ಲಿ ವೇಷಭೂಷಣಗಳನ್ನು ಮತ್ತು ಲಾಂಛನಗಳನ್ನು ಧರಿಸಿ ಮನೆಯಿಂದ ನಡೆಮಡಿಯ ಮೇಲೆ ಗೊತ್ತುಪಡಿಸಿರುವ ಸ್ಥಳಕ್ಕೆ (ಸಾಮಾನ್ಯವಾಗಿ ದೇವಸ್ಥಾನ) ಹೋಗುತ್ತಾರೆ. ಅಲ್ಲಿಂದ ಮನೆಗೆ ಬರುವಾಗ ನೃತ್ಯ ಮಾಡುತ್ತಾರೆ. ನೃತ್ಯ ಮುಗಿಯುವ ತನಕ ಅವರು ಉಪವಾಸ ಇರುತ್ತಾರೆ. ಅನಂತರ ಪಡಿ ಮತ್ತು ಕಾಣಿಕೆ ಹಾಗೂ ಪಂಚೆ ವಸ್ತ್ರಗಳನ್ನು ಪಡೆಯುತ್ತಾರೆ. ಮನೆ ಪ್ರವೇಶ ಮಾಡುವ ಮುಂಚೆ ತೆಂಗಿನ ಕಾಯಿಗಳನ್ನು ಅವರ ಮುಖಕ್ಕೆ ಇಳಿ ತೆಗೆದು ಒಡೆಯುವ ರೂಢಿಯುಂಟು.

ಲಿಂಗದ ಬೀರರು ಹೇಳುವ ಖಡ್ಗಗಳಲ್ಲಿ ಒಂದು ಹೀಗಿದೆ; ಮೆಟ್ಟಿದಾವಿಗೆ । ತೊಟ್ಟುರುಳಿ ಪದಕ । ವುಟ್ಟ ಚಲ್ಲಣಕಾಸೆ । ವುಡಿಯ ಬಾಕು । ರಮಿಯ ಚೂರಿ । ಕಕ್ಕಡವಂತಿ । ಅಂಬು । ಗಂಡುಗತ್ತರಿ । ಪಾಂಡಿವಾಳ । ರತ್ನದ ಕಿರೀಟ । ಕೈಯಲ್ಲಿ ಕಠಾರಿ । ಇಷ್ಟು । ಆಯುಧಗಳನ್ನೇ ಪಿಡಿದು । ಎತ್ತಲಿಂದ ಬಂದೋ । ಸುತ್ತ ದೇವತೆಯ ಗಂಡ । ಕಲಿವೀರಭದ್ರ । ನಮಗ ರುದ್ರಾ। ಕದನಕ್ಕೆ ಕುಠಾರ । ಮದನ ಸಂಹಾರ । ರಣದೊಳಗೆ ಭಯಂಕರ । ಕರುಣಿಸೊ । ಕರುಣ ಕೃಪಾಲ। ಕರೆಕಾಳಿಂಗರುದ್ರಾ.

(ಟಿ.ಎಸ್.ಆರ್.)

**ಲಿಂಗದಹಳ್ಳಿ:** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ. ತರೀಕೆರೆಯಿಂದ 15 ಕಿಮೀ ದೂರದಲ್ಲಿದೆ. ಜನಸಂಖ್ಯೆ 5,933. ಕೃಷ್ಣರಾಜೇಂದ್ರ ಗಿರಿಧಾಮಕ್ಕೆ (ಕೆಮ್ಮಣ್ಣುಗುಂಡಿ) ತರೀಕೆರೆ ಕಡೆಯಿಂದ ಹೋಗುವ ದಾರಿಯಲ್ಲಿರುವ ಮೊದಲ ಹಳ್ಳಿ. ಮಲೆನಾಡಿನ ಗಿರಿ ಶ್ರೇಣಿಗೆ ಪ್ರವೇಶಿಸುವ ಹೆಬ್ಬಾಗಿಲಿನಲ್ಲಿ ಈ ಊರು ಇದೆ. ಇಲ್ಲಿ ಕರಿಯಮ್ಮ ಹಾಗೂ ವೀರಭದ್ರ ದೇವಾಲಯಗಳಿವೆ. ವೀರಭದ್ರ ದೇವರ ದೇವಾಲಯದ ಜಾತ್ರೆ ಪ್ರತಿವರ್ಷ ಮೇ ತಿಂಗಳಿನ ಸುಮಾರಿನಲ್ಲಿ ಜರುಗುತ್ತದೆ.

ಚಾರಿತ್ರಿಕವಾಗಿ ಈ ಗ್ರಾಮ ಹಳೆಯ ಶಿಲಾಯುಗದ ಒಂದು ನಿವೇಶನ. ಇಲ್ಲಿ ಆ ಕಾಲದ ಕೆಲವು ಆಯುಧಗಳು ಉಪಲಬ್ಧವಾಗಿವೆ. ಇಲ್ಲಿರುವ ಹೊಯ್ಸಳರ ಕಾಲದ ಶಾಸನವೊಂದು ಐತಿಹಾಸಿಕ ಮಹತ್ವದ ವಿಷಯವೊಂದನ್ನು ತಿಳಿಸುತ್ತದೆ.ಹೊಯ್ಸಳ ಚಕ್ರವರ್ತಿ ಮುಮ್ಮಡಿ ಬಲ್ಲಾಳನೂ ಆತನ ಮಹಾಪ್ರಧಾನನೂ ರಾಜ್ಯವಾಳುತ್ತಿದ್ದಾಗ 1331ರ ಏಪ್ರಿಲ್ 29ನೆಯ ದಿವಸದಂದು ತುರಕರ ಸೈನ್ಯವು ಅರಸೀಕೆರೆ ತಾಲ್ಲೂಕಿನ ಕಣೆಕಟ್ಟೆ ಊರುಗಳ ಮಧ್ಯದ ಜೈನಯತಿಗಳ ಸಮಾಧಿಯ ಸ್ಥಳ ಗೊರವಕಲ್ಲಿಗೆ ಸಮೀಪದಲ್ಲಿ ಬಂದಾಗ 'ಕಟಕತೋಟಕಾರೆ ಮರೆವೊಕ್ಕಡೆ ಕಾವ' ಲಿಂಗದಹಳ್ಳಿಯ ಬಲಗೌಡನ ಮಗ ಮಾರಗೌಡನು ತುರಕರನ್ನು ಎದುರಿಸಿ ಯುದ್ಧದಲ್ಲಿ ಅವರ ಕುದುರೆಗಳನ್ನು ಸೆರೆಹಿಡಿದನು. ಆ ಕಾರ್ಯಕ್ಕೆ ಮೆಚ್ಚಿದ ಮಂತ್ರಿಯೂ ದೊರೆಯೂ ಲಿಂಗದಹಳ್ಳಿಯ ಮಾರಗೌಡನಿಗೆ ಕಲ್ಲುಂಡಿ ಇತ್ಯಾದಿಗಳನ್ನು ನೆತ್ತರ ಕೊಡುಗೆಯಾಗಿ ಕೊಟ್ಟರು. ಈಗ ಈ ಊರು ಪಟ್ಟಣವಾಗಿ ಬೆಳೆಯುತ್ತಿದೆ. (ಎಸ್.ಜಿಎ.)

**ಲಿಂಗನಮಕ್ಕಿ:** ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಲಿಂಗನಮಕ್ಕಿ ಎಂಬಲ್ಲಿ ಶರಾವತಿ ಜಲವಿದ್ಯುದುತ್ಪಾದನಾ ಯೋಜನೆಗಾಗಿ ಶರಾವತಿ ನದಿಗೆ ಅಣೆಕಟ್ಟು ನಿರ್ಮಿಸಿರುವ ಒಂದು ಜಲಾಶಯ. ಈ ಜಲಾಶಯ ಸಾಗರಕ್ಕೆ ಪಶ್ಚಿಮದಲ್ಲಿ 32 ಕಿಮೀ ದೂರದಲ್ಲೂ ಬೀರೂರು–ತಾಳಗುಪ್ಪ ಮಾರ್ಗದ ಕೊನೆಯ ರೈಲು ನಿಲ್ದಾಣ ತಾಳಗುಪ್ಪದಿಂದ ಸು. 15 ಕಿಮೀ ದೂರದಲ್ಲೂ ಇದೆ. ಜೋಗ ಜಲಪಾತಕ್ಕೆ 5 ಕಿಮೀ ಮೇಲುಗಡೆ ಈ ಜಲಾಶಯವನ್ನು ನಿರ್ಮಿಸಿದ್ದು ಇದರಲ್ಲಿ ಹಿಂದೆ ಕಟ್ಟಲಾಗಿದ್ದ ಹಿರೇಭಾಸ್ಕರ್ ಜಲಾಶಯ ಮುಳುಗಿಹೋಗಿದ್ದು ಅದರ ಕಾರ್ಯವೂ ಈಗ ಈ ಜಲಾಶಯಕ್ಕೆ ಸೇರಿದೆ.



ಲಿಂಗನಮಕ್ಕಿ ಅಣೆಕಟ್ಟು

ಈ ಜಲಾಶಯದ ಜಲಾನಯನ ಪ್ರದೇಶದ ವಿಸ್ತೀರ್ಣ 1,992 ಚ.ಕಿಮೀ. ಲಿಂಗನಮಕ್ಕಿ ಜಲಾಶಯದ ಶೇಖರಣಾಸಾಮರ್ಥ್ಯ 4,368 ದಶಲಕ್ಷ ಘನ ಮೀ. ಗಳಷ್ಟು; ಅಂದರೆ ಕೃಷ್ಣರಾಜಸಾಗರದ ಸುಮಾರು ಮೂರೂವರೆಪಟ್ಟು, ಭದ್ರಾ ಜಲಾಶಯದ 2ರಷ್ಟು, ತುಂಗಭದ್ರಾ ಜಲಾಶಯದ ಒಂದೂಕಾಲರಷ್ಟು. ಕಟ್ಟೆಯ ಒಟ್ಟು ಉದ್ದವಾದ 2,424 ಮೀ. ಕಟ್ಟೆಯ ಎಡಭಾಗದ 1,780 ಮೀ ಉದ್ದಕ್ಕೆ ಸುರ್ಕಿಗಾರೆಯಲ್ಲಿ ಕಟ್ಟಿದ ಕಲ್ಲುಕಟ್ಟಡ. ಉಳಿದ ಭಾಗ ಮುಂದುಗಡೆಗೆ ಕಲ್ಲುಬಂಡೆಗಳನ್ನು ಪೇರಿಸಿರುವ ಮಣ್ಣಿನ ಏರಿ ಕಟ್ಟೆಯ ಅತ್ಯಂತ ಆಳವಾದ ತಳಪಾಯದಿಂದ ಕಟ್ಟೆಯ ಎತ್ತರ 61.7ಮೀ. ಹೊಳೆಯಲ್ಲಿ ಬರುವ ಗರಿಷ್ಠ ಪ್ರವಾಹ ಸೆಕೆಂಡಿಗೆ 16,744 ಘ.ಮೀ ಎಂದು ಅಂದಾಜು ಮಾಡಲಾಗಿದೆ. ಇದಕ್ಕೆ ಅನುಕೂಲವಾಗಿ ನದಿಯ ಭಾಗದಲ್ಲಿನ ಕಟ್ಟೆಯಲ್ಲಿ ಓಗಿ ಆಕಾರದ ಕೋಡಿಯನ್ನು ಬಿಡಲಾಗಿದೆ. ಇದರ ಮೇಲಿನ ಹರಿವನ್ನು ನಿಯಂತ್ರಿಸಲು 15.5 ಮೀ ಅಗಲ 7.44 ಮೀ ಎತ್ತರವಿರುವ 11 ಅರೀಯ ಶಿಖರ ಬಾಗಿಲುಗಳನ್ನು (ರೇಡಿಯಲ್ ಕ್ರೆಸ್ಟ್‌ಗೇಟ್ಸ್) ಅಳವಡಿಸಿದೆ. ಕಟ್ಟೆಯ ಎಡದಂಡೆಯಲ್ಲಿ ವಿದ್ಯುತ್ ನಾಲೆಗೆ ನೀರು ಬರಲೆಂದು 2.48 ಮೀ x 4.34 ಮೀ ಅಳತೆಯ 3 ತೂಬುಗಳನ್ನಿಟ್ಟಿದೆ. ಇವುಗಳ ಎಡಭಾಗದಲ್ಲಿ ಕಟ್ಟೆಯ ಕೆಳಗೆ, ಮುಂದೆ ನಿರ್ಮಿಸಬಹುದಾದ ವಿದ್ಯುತ್ ಕೇಂದ್ರಕ್ಕೆ ಅಗತ್ಯವಾಗುವಂಥ 4.96 ಮೀ ವ್ಯಾಸದ 2 ಕೊಳವೆಗಳನ್ನು ಜೋಡಿಸಿದೆ. ಇದರ ಹತ್ತಿರವಿರುವ ಆನೆಬೈಲು ಜಲವಿದ್ಯುತ್ ಉತ್ಪಾದನೆ ಕೇಂದ್ರ ಇಡೀ ಆಗ್ನೇಯ ಏಷ್ಯದಲ್ಲೇ ದೊಡ್ಡದು. (ಕೆ.ವಿ.ಎಸ್‌ಯು.)

**ಲಿಂಗಪ್ಪ, ಕೆ.ಆರ್.:** 1922– . ಹೆಸರಾಂತ ಜನಪದ ಹಾಡುಗಾರರು, ವಕೀಲರು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕನ್ನಡ ಜಾನಪದ ಅಧ್ಯಯನದ ನಿಜವಾದ ಶಕೆ ಆರಂಭವಾಯಿತು. ಜನಪದ ಸಾಹಿತ್ಯವೆಂದರೆ ಬರೀ ಜನಪದ ಗೀತೆಗಳು ಎಂದು ಭಾವಿಸಿದ್ದ ಕಾಲ ಅದು. ಆಗ ಜಾನಪದದೊಂದಿಗೆ ನಿಕಟ ಸಂಬಂಧ ಹೊಂದಿ ಅದರ ವಿಶಿಷ್ಟತೆಗೆ ಮಾರುಹೋಗಿ ಅದರ ಪ್ರಸಾರ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದವರು ಇವರು. ಇವರು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಶಿವನಿ ಹೋಬಳಿಯ ಕಲ್ಲೇನಹಳ್ಳಿಯಲ್ಲಿ 1922 ಜೂನ್ 8ರಂದು ಜನಿಸಿದರು. ಪಟೇಲ್ ರಂಗಪ್ಪ, ಬಸಮ್ಮ–ಇವರ ತಂದೆ ತಾಯಿ. ಮಗು ಜನಿಸಿದಾಗ ಇವರ ತಾಯಿ "ನನ್ನ ಹೊಟ್ಟೇಲೊಂದು ಚಿನ್ನ ಹುಟ್ಟಿತು ತಾಯಿ" ಎಂದು ಹಾಡಿದ್ದರಂತೆ. ಬಡತನದ ನಡುವೆ ಅಜ್ಜಂಪುರ, ದಾವಣಗೆರೆ, ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಶಿಕ್ಷಣ ಪಡೆದರು. ಆಹಾರ ಇಲಾಖೆಯ ಬಿಲ್‌ಕ್ಲರ್ಕ್ ಕೆಲಸ ಬಿಟ್ಟು ವಕೀಲರಾದರು. ಲಿಂಗಪ್ಪನವರ ಪತ್ನಿ ಪಾರ್ವತಮ್ಮ. ಈ ದಂಪತಿಗಳಿಗೆ ಹತ್ತು ಜನ ಮಕ್ಕಳು.

ವೃತ್ತಿಯಲ್ಲಿ ವಕೀಲರಾಗಿದ್ದರೂ ಜನಪದ ಸಾಹಿತ್ಯಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು. ಚಿಕ್ಕಂದಿನಲ್ಲೆ ರಕ್ತಗತವಾಗಿದ್ದ ಹಾಡುವ ಗುಣ ವೃತ್ತಿಜೀವನದಲ್ಲಿ ಮತ್ತಷ್ಟು ಹೊಮ್ಮಲು ಕಾರಣವಾಯಿತು. ಇವರು ಜನಪದಗೀತೆಗಳನ್ನು ಹಾಡುವುದರಲ್ಲಿ ಮತ್ತು ವ್ಯಾಖ್ಯಾನ ಮಾಡುವುದರಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಗೆ ಹೆಸರಾದವರು. ಆ ಮಾತುಗಾರಿಕೆಯ ಸೊಗಸು, ಇಂಪಾದ ಹಾಡಿನ ಸಿರಿಕಂಠದ ಮೋಡಿ ಮುದುಕರಿಂದ ಹಿಡಿದು ಮಕ್ಕಳವರೆಗೂ ಎಲ್ಲರನ್ನೂ ಮಾಯಾಲೋಕಕ್ಕೆ ಕೊಂಡೊಯ್ಯುವ ಗುಣ ಹೊಂದಿದೆ. ಇವರ ಹಾಡು ಕೇಳುವ ಜನ ತಮ್ಮ ತಮ್ಮ ಹಳ್ಳಿಗಳಲ್ಲಿ ನಿಂತು ಹಾಡು ಕೇಳಿದಂಥ ಅನುಭವ ಪಡೆಯುತ್ತಾರೆ. ಜನಪದ ಹಾಡುಗಳನ್ನು ಸೊಗಸಾಗಿ ಹಾಡುವಂತೆಯೇ ಪ್ರಾಚೀನ ಕವಿಗಳಾದ ಪಂಪ, ರಾಘವಾಂಕ, ಹರಿಹರ ಮೊದಲಾದವರ ಕಾವ್ಯಗಳನ್ನು ಸುಶ್ರಾವ್ಯವಾಗಿ ವಾಚಿಸಬಲ್ಲವರಾಗಿದ್ದರು. ಅದಕ್ಕಾಗಿಯೇ ನಮ್ಮ ಜನ ಲಿಂಗಪ್ಪನವರನ್ನು 'ಜಾನಪದ ಕೋಗಿಲೆ' ಎಂದು ಕರೆದರು. ಇವರ ಹಾಡುಗಾರಿಕೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಗುಣಗಾನ ಮಾಡಿದ್ದುಂಟು. ಪಾಟೀಲ ಪುಟ್ಟಪ್ಪ ಅವರು ತಮ್ಮ 'ಪ್ರಪಂಚ' ಪತ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ: "ಇವರ ಕಂಠದಲ್ಲಿ ಏನೋ ಒಂದು ಗಾರುಡಿ ಇದೆ. ಇವರ ಧ್ವನಿಯಲ್ಲಿ ಏನೋ ಒಂದು ಸಮ್ಮೋಹನ ಇದೆ. ಜಾನಪದದಿಂದ ಲಿಂಗಪ್ಪನವರಿಗೆ ಮೆರುಗು ಬಂದಿತೋ ಅಥವಾ ಲಿಂಗಪ್ಪನವರಿಂದ ಜಾನಪದಕ್ಕೆ ಮೆರುಗು ಬಂದಿದೆಯೋ ಪೃಥಕ್ಕರಿಸಿ ಹೇಳುವುದು ಕಷ್ಟ. ಹಾಲುಸಕ್ಕರೆ ಸಮ್ಮಿಳಿತವಾದಂತೆ".

ಬೆಂಗಳೂರು, ಉಡುಪಿ, ಶಿವಮೊಗ್ಗ ಸಾಹಿತ್ಯ ಸಮ್ಮೇಳನಗಳಲ್ಲಿ ಲಿಂಗಪ್ಪ ಮಾಡಿದ ಭಾಷಣಗಳು ಜನರ ಮನದಲ್ಲಿ ಇನ್ನೂ ಅಚ್ಚಳಿಯದೆ

ಉಳಿದಿವೆ. ಲಿಂಗಪ್ಪ ಕೇವಲ ಹಾಡುಗಾರರಷ್ಟೇ ಅಲ್ಲ ಜಾನಪದ ಸಂಗ್ರಾಹಕರಾಗಿಯೂ ಸೇವೆಸಲ್ಲಿಸಿದ್ದಾರೆ. ಕಣ್ಮರೆಯಾಗುತ್ತಿದ್ದ ಮಾನೌಮಿ ಪದಗಳನ್ನು ಪುಸ್ತಕರೂಪದಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ (1949). ಇದರಲ್ಲಿ ಮಾರ್ನವಮಿ ಸಂಪ್ರದಾಯಕ್ಕೆ ಸಂಬಂಧಿಸಿದ ಎಲ್ಲ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಜೊತೆಗೆ ಸಾಂದರ್ಭಿಕ ವಿವರಣೆಯನ್ನು ನೀಡುವುದರ ಮೂಲಕ ಸಹೃದಯರಿಗೆ ಅದರ ಒಟ್ಟು ಪರಿಕಲ್ಪನೆ ದೊರಕುವಂತೆ ಮಾಡಿದ್ದಾರೆ. ಮಲೆನಾಡಿನ ಮಡಿಲಲ್ಲಿ (1954) ಕೃತಿಯಲ್ಲಿ ಭೂಮಿತಾಯಿ ಪೂಜೆ ಮಾಡುವ ಹಾಡು, ಅರ್ಜುನ ಸ್ವಾಮಿಯ ಹಾಡು, ಉತ್ತರ ದೇವಿಯ ಹಾಡು ಸೇರಿವೆ. ಇವರು ಸ್ಟಿತ್ ಥಾಂಸನ್, ಅಲನ್ ಡಂಡೆಸ್, ರಿಚರ್ಡ್ ಡಾರ್‌ಸನ್, ಆರ್ನೆಆಂಟೆ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ವಿಚಾರಧಾರೆಗಳನ್ನು ಅಧ್ಯಯನ ಮಾಡಿದ್ದರು. 'ತರೀಕೆರೆ ತೆರೆದದಾರಿ' ಲೇಖನ ಇವರ ಸೈದ್ಧಾಂತಿಕ ನಿಲುವುಗಳನ್ನು ತೋರುತ್ತದೆ. ಲಿಂಗಪ್ಪನವರ ಪ್ರೇರಣೆಯಿಂದ ಅಖಿಲ ಕರ್ನಾಟಕದಲ್ಲಿ ಜಾನಪದ ಸಂಶೋಧನೆ, ವಿಮರ್ಶೆಗೆ ಸಂಬಂಧಿಸಿದ ಹೊನ್ನಬಿತ್ತೇವು ಹೊಲಕೆಲ್ಲ ಎಂಬ ಸಂಸ್ಮರಣ ಗ್ರಂಥವನ್ನು ಹೊರತರಲಾಯಿತು. ಜಾನಪದ ಸರಸ್ವತಿಯ ತೇರು ಹೊರಟಿದ್ದೆ ತರೀಕೆರೆ ಸಮ್ಮೇಳನದಿಂದ.

ಲಿಂಗಪ್ಪನವರ ಈ ಸಾಧನೆಗಳನ್ನು ಗಮನಿಸಿ ಜನ ಪ್ರೀತಿಯಿಂದ ಗೌರವಿಸಿದ್ದಾರೆ, ಸನ್ಮಾನಿಸಿದ್ದಾರೆ. 1976ರಲ್ಲಿ ಚಿತ್ರದುರ್ಗದ ಶ್ರೀಮುರುಘ ರಾಜೇಂದ್ರ ಸ್ವಾಮೀಜಿಯವರು ಜಾನಪದ ಸಾಹಿತ್ಯರತ್ನ ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ (1965). ಜಾನಪದ ಜಂಗಮ, ನುಡಿಗಾರುಡಿಗ, ಸಾಹಿತ್ಯಭಾಸ್ಕರ ಮುಂತಾದ ಬಿರುದುಗಳು ಇವರಿಗೆ ದೊರೆತಿವೆ. 1976ರಲ್ಲಿ ಕರ್ನಾಟಕ ಸರ್ಕಾರ ರಾಜ್ಯ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಿದೆ. ಹಲವಾರು ಸಂಘಸಂಸ್ಥೆಗಳು, ಶಾಲಾಕಾಲೇಜುಗಳು ಲಿಂಗಪ್ಪನವರನ್ನು ಅನೇಕ ಬಾರಿ ಸನ್ಮಾನಿಸಿವೆ. ಇವರು ಕರ್ನಾಟಕ ಜಾನಪದ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. 'ಬೆಳಕು' ಪತ್ರಿಕೆಯ ಸಂಪಾದಕರೂ 'ಪುಸ್ತಕ ಪ್ರಪಂಚ'ದ ಉಪಸಂಪಾದಕರೂ ಆಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದರು. ಲಿಂಗಪ್ಪನವರ ಜಾನಪದ ಸಾಧನೆ ಗುರುತಿಸಿ ಇವರ ಅಭಿಮಾನಿಗಳು ಗ್ರಾಮಜ್ಯೋತಿ (ಸಂ:ಗೊ.ರು. ಚನ್ನಬಸಪ್ಪ) ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದ್ದಾರೆ. 1991ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜಾನಪದ ತಜ್ಞ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ. ಗೊ.ರು. ಚನ್ನಬಸಪ್ಪನವರ ನೇತೃತ್ವದಲ್ಲಿ ಇವರ ಸ್ಮರಣಾರ್ಥ 'ಕೆ.ಆರ್. ಲಿಂಗಪ್ಪ ಜಾನಪದ ಪ್ರತಿಷ್ಠಾನ'ವನ್ನು ಸ್ಥಾಪಿಸಲಾಗಿದೆ. ಈ ಪ್ರತಿಷ್ಠಾನ ಜಾನಪದ ಕ್ಷೇತ್ರದಲ್ಲಿ ಉತ್ತಮ ಸೇವೆಸಲ್ಲಿಸಿದವರಿಗೆ ಪ್ರಶಸ್ತಿ ನೀಡುತ್ತದೆ. **(ಜಿ.ಆರ್.ಟಿ.)**

**ಲಿಂಗಮ್ಮ:** 12ನೆಯ ಶತಮಾನದ ವಚನಕಾರ್ತಿ. ವಚನಕಾರ ಹಡಪದ ಅಪ್ಪಣ್ಣನ ಪತ್ನಿ. ದಲಿತ ವರ್ಗದ ಶರಣೆ. ಈಕೆಯ ಜೀವನದ ವಿವರಗಳೇನೂ ಸಿಕ್ಕಿಲ್ಲವಾದರೂ ಈಕೆಯ ಉಜ್ಜ್ವಲ ವಚನಗಳಿಂದ ಸ್ಥೂಲವಾಗಿ ಇವಳ ಜೀವನರೇಖೆಗಳನ್ನು ಗುರುತಿಸಬಹುದು.

ಲಿಂಗಮ್ಮ ಬಡತನದಲ್ಲಿ ಹುಟ್ಟಿ ಚಿಕ್ಕಂದಿನಿಂದ ಕಷ್ಟವನ್ನು ಅನುಭವಿಸಿದವಳು. ಆದರೂ ಶಿವನ ಮೇಲಿದ್ದ ಭಕ್ತಿ ಕಡಿಮೆಯಾಗಲಿಲ್ಲ; ದಿನೇ ದಿನೇ ವೃದ್ಧಿಸುತ್ತಲೇ ಇತ್ತು. ಪ್ರಾಪ್ತವಯಸ್ಕಳಾದ ಮೇಲೆ ಇವಳನ್ನು ಶಿವಭಕ್ತನಿಗಿಂತ ಹೆಚ್ಚಾಗಿ ಬಸವಭಕ್ತನಾಗಿದ್ದ ಹಡಪದ ಅಪ್ಪಣ್ಣನಿಗೆ ಕೊಟ್ಟು ವಿವಾಹವಾಯಿತು. ಲಿಂಗಮ್ಮನ ಪಾಲಿಗೆ ಶಿವನೇ ಅಪ್ಪಣ್ಣ, ಅಪ್ಪಣ್ಣನೇ ಶಿವ. ಪತಿಯ ಸಹವಾಸದಿಂದ ಲಿಂಗಮ್ಮನ ಭಕ್ತಿ, ಜ್ಞಾನ ಮತ್ತೂ ಹೆಚ್ಚಿದವು. ಶಿವಭಕ್ತರ ಸೇವೆ, ದಾಸೋಹಗಳೇ ಇವರ ಪರಮಪ್ರಿಯ ಕಾಯಕಗಳಾದವು. ಪತಿಯ ಮಾತೇ ವೇದವಾಕ್ಯವಾಯ್ತು. ಹೀಗೇ ಇರಲು ಅಂಗಲಿಂಗವೆಂಬ ಭೇದ ಅಳಿಯುವಷ್ಟು ದೊಡ್ಡವಳಾದಳು. ಕಡೆಗೆ ಒಂದು ದಿವಸ ಶಿವನಲ್ಲೇ ಐಕ್ಯಳಾದಳು.

ಚೆನ್ನಮಲ್ಲೇಶ್ವರ ಇವಳ ಗುರು. ಅಪ್ಪಣ್ಣಪ್ರಿಯ ಚೆನ್ನಬಸವಣ್ಣ ಎಂಬುದು ಇವಳ ವಚನಗಳ ಅಂಕಿತ. ಇದುವರೆಗೆ ಇವಳ 113 ವಚನಗಳು ದೊರೆತಿವೆ. ಒಂದು ವಚನದಲ್ಲಿ ತಾನು ಚೆನ್ನಬಸವಣ್ಣನ ಕರುಣದ ಶಿಶು ಎಂದು ಹೇಳಿಕೊಂಡಿದ್ದಾಳೆ. ಕೈಲಾಸ–ಮರ್ತ್ಯವೆಂಬ ಭೇದ ಲಿಂಗಮ್ಮನಿಗೆ ಒಪ್ಪಿಗೆಯಿಲ್ಲ. ನಿಜವಾದ ಶರಣರು ಯಾರೆಂಬುದಕ್ಕೆ ಆಸೆಯನಳಿದು, ರೋಷವನಳಿಸಿ, ಜಗದ ಪಾಶವ ಹರಿದು, ಈಶ್ವರನೆನಿಸಿಕೊಂಬವರು ಶರಣರು ಎಂದು ನುಡಿದಿದ್ದಾಳೆ. ಘನವ ಕಾಂಬುದಕ್ಕೆ ಮನವೆಂತಿರಬೇಕೆಂದು ಕೇಳಿದರೆ ಮನನಿರ್ಮಳವಾದಲ್ಲದೆ ಘನವ ಕಾಣಬಾರದು ಎಂದು ಒಂದೇ ಮಾತಿನಲ್ಲಿ ಉತ್ತರ ಕೊಡುತ್ತಾಳೆ. ನೋಡಿಹೆನೆಂದರೆ ನೋಟವಿಲ್ಲ, ನೆನೆದಿಹೆನೆಂದರೆ ಮನವಿಲ್ಲ, ಇಂತು ನೆನಹು ನಿಷ್ಪತ್ತಿಯಾಗಿ ಶರಣರ ಪಾದದಲ್ಲಿಯೇ ಬೆರೆದು ಸುಖಿಯಾದೆನಯ್ಯಾ, ತೊಟ್ಟು ಬಿಟ್ಟು ಬಟ್ಟಬಯಲೊಳಗೆ ಬಿದ್ದು ನಾನೆತ್ತ ಹೋದೆನೆಂದರಿಯೆನಯ್ಯ, ಅಂಗಲಿಂಗವೆಂಬ ಉಭಯವಳಿಯಿತ್ತು ಸಂಗಸುಖ ಹಿಂಗಿತ್ತು ಮಂಗಳದ ಮಹಾಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯ ಎಂಬ ವಚನ ಇವಳ ಅನುಭಾವ ಸಂಪತ್ತಿಗೆ ಸಾಕ್ಷಿಯಾಗಿದೆ. ಇವಳ ಅನುಪಮ ಗಂಭೀರ ವ್ಯಕ್ತಿತ್ವ ಇವಳ ವಚನಗಳಲ್ಲಿ ಪ್ರತಿಬಿಂಬಿತವಾಗಿದೆ. **(ಕೆ.ವೈ.ಎಸ್.)**

**ಲಿಂಗರಾಜ ಅರಸು, ಎಚ್.:** 1860–1936. ಕರ್ನಾಟಕ ರಾಮಾಯಣ ಸಂಗ್ರಹ, ಯದುನೃಪವಿಜಯ ಎಂಬ ಗ್ರಂಥಗಳ ಕರ್ತೃ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಹಗಿನವಾಳು ಇವರ ಜನ್ಮಸ್ಥಳ. ಇವರು ತಮ್ಮ ಎರಡು ಕಾವ್ಯಗಳ ಪೀಠಿಕಾಸಂಧಿಗಳಲ್ಲಿಯೂ ಗೋವದ ಲಿಂಗವನ್ನು ಸ್ತೋತ್ರ ಮಾಡಿರುವುದರಿಂದ ಇವರ ಕುಲದೈವ. ಗೋವದ ಲಿಂಗವೆಂದೂ ಇವರ ಪೂರ್ವಜರು ಗೋವೆಯ ಪ್ರಾಂತ್ಯದಿಂದ ಬಂದು ಮೈಸೂರು ನಾಡಿನಲ್ಲಿ ನೆಲಸಿದರೆಂದೂ ತಿಳಿದುಬರುತ್ತದೆ. ಇವರ ತಂದೆ ದೊಡ್ಡಲಿಂಗರಾಜ ಅರಸು. ಲಿಂಗರಾಜ ಅರಸು ಅವರ ವಿದ್ಯಾಭ್ಯಾಸ ಹಗಿನವಾಳಿನಲ್ಲೇ ನಡೆಯಿತು. ಏಳು ವರ್ಷದವರಿದ್ದಾಗಲೇ ಮೈಸೂರು ಅರಮನೆಯಲ್ಲಿ ರಾಜಕುಮಾರ ಚಾಮರಾಜ ಒಡೆಯರ ಸಂಗಡಿಗರಾಗಿ ಅರಮನೆಯನ್ನು ಸೇರುವ ಅವಕಾಶ ಲಭಿಸಿತು. ಚಿಕ್ಕ ವಯಸ್ಸಿನಿಂದಲೂ ಅರಮನೆಯ ಭೋಗಜೀವನದಲ್ಲಿ ಬೆಳೆದರು. ಅನಂತರ ಮರಾಮತ್ ಇಲಾಖೆಯಲ್ಲಿ ಮೊಖ್ತೇಸರ ಆಗಿ ತುಂಬ ಶ್ರದ್ಧೆಯಿಂದ ರಾಜಕಾರ್ಯವನ್ನು ನಿರ್ವಹಿಸಿದರು. ತಮ್ಮ 68ನೆಯ ವಯಸ್ಸಿನಲ್ಲಿ ಉದ್ಯೋಗದಿಂದ ನಿವೃತ್ತರಾದ ಇವರು 1936ರಲ್ಲಿ ನಿಧನರಾದರು.

ಇವರು ವಿದ್ವತ್ಪ್ರೇಮಿಯೂ ಸಾಹಿತ್ಯಾಭಿಮಾನಿಯೂ ಸ್ವಯಂ ಕವಿಯೂ ಆಗಿದ್ದರು. ಆಸ್ಥಾನದ ಮಹಾವಿದ್ವಾಂಸರಾದ ಪಿ.ಆರ್.ಕರಿಬಸವಶಾಸ್ತ್ರೀ, ತಿಮ್ಮಪ್ಪಯ್ಯಶಾಸ್ತ್ರೀ ಮೊದಲಾದವರು ಇವರ ಪರಮ ಆಪ್ತಮಿತ್ರರು. ಇವರಿಗೆ ಛಂದೋಲಂಕಾರಶಾಸ್ತ್ರಗಳಲ್ಲಿ ವಿಶೇಷ ಪಾಂಡಿತ್ಯವಿತ್ತು. ಕನ್ನಡ,

ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಾಕಷ್ಟು ಪಾಂಡಿತ್ಯವಿತ್ತು. ಪ್ರಾಚೀನ ಕಾವ್ಯ ವ್ಯಾಸಂಗದಲ್ಲಿ ಅತೀವ ಆಸಕ್ತಿಯಿತ್ತು.ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಇಪ್ಪತ್ತೆಂಟನೆಯ ವರ್ಷ ವರ್ಧಂತಿಯ ಜ್ಞಾಪಕಾರ್ಥವಾಗಿ 1912ರಲ್ಲಿ ರಾಮಾಯಣದ ಬಾಲಕಾಂಡವನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿ ರಾಜಸನ್ನಿಧಿಗೆ ಅರ್ಪಿಸಿದರು. ಮಹಾರಾಜರು ಬಾಲಕಾಂಡವನ್ನು ಪರಾಮರ್ಶಿಸಿ ಅದು ಜನಸಾಮಾನ್ಯರಿಗೂ ಓದಲು ಸುಲಭವಾಗಿಯೂ ಲಲಿತವಾಗಿಯೂ ಇರುವಂತೆ ಬರೆದು ಅಚ್ಚು ಮಾಡಿಸಿದರೆ ಬಹಳ ಪ್ರಯೋಜನವಾಗುವುದೆಂದು ತಿಳಿಸಿದರು. ಅದರಂತೆಯೇ ಇವರು ಕರ್ಣಾಟಕ ರಾಮಾಯಣ ಸಂಗ್ರಹ ಎಂಬ ಕಾವ್ಯವನ್ನು (1919) ರಚಿಸಿ ಮಹಾರಾಜರಿಗೆ ಅರ್ಪಣೆ ಮಾಡಿದರು. ಇದರಿಂದ ಇವರಿಗೆ ಮೈಸೂರು ದರ್ಬಾರಿನಿಂದ ರಾಜಕವಿ ಭೂಷಣ ಎಂಬ ಪ್ರಶಸ್ತಿಯೂ ರಾಜಸನ್ಮಾನವೂ ಲಭಿಸಿದುವು.

ಕರ್ಣಾಟಕ ರಾಮಾಯಣ ಸಂಗ್ರಹದಲ್ಲಿ 6 ಕಾಂಡಗಳೂ 1,764 ಪದ್ಯಗಳೂ ಇವೆ. 1924ರಲ್ಲಿ ಯದುನೃಪವಿಜಯ ಎಂಬ ಪದ್ಯಕಾವ್ಯವನ್ನು ಷಟ್ಪದಿ ಛಂದಸ್ಸಿನಲ್ಲಿ ರಚಿಸಿ, ಮಹಾಮಾತೃ ಶ್ರೀವಾಣಿ ವಿಲಾಸ ಅವರಿಗೆ ಅರ್ಪಣೆ ಮಾಡಿದರು. ಇದರಲ್ಲಿ ಪೀಠಿಕಾ ಸಂಧಿಯೂ ಸೇರಿದಂತೆ 7 ಸಂಧಿಗಳೂ 282 ಪದ್ಯಗಳೂ ಇವೆ. ಈ ಕಾವ್ಯದಲ್ಲಿ ಮೈಸೂರರಸರ ಮೂಲಪುರುಷರಾದ ಯದುರಾಯ ಕೃಷ್ಣರಾಯ ಸಹೋದರರ ಚರಿತ್ರೆಯಿದೆ. ಅವರು ಮೈಸೂರಿಗೆ ಬಂದು ರಾಜ್ಯಾಧಿಕಾರವನ್ನು ವಹಿಸಿಕೊಂಡ ಬಗೆಯನ್ನು ವಿವರವಾಗಿ ಚಿತ್ರಿಸಲಾಗಿದೆ.

ವಿದ್ಯಾಪಕ್ಷಪತಿಯಾದ ಇವರು ಕವಿತಾರಚನೆಯಲ್ಲಿ ಸಮರ್ಥರಾದ ಸಂಸ್ಕೃತ ವಿದ್ಯಾರ್ಥಿಗಳಿಗೆ ಪಾರಿತೋಷಕವನ್ನು ಕೊಟ್ಟು ಪ್ರೋತ್ಸಾಹಿಸಲು ಮೈಸೂರು ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ತಮ್ಮ ತಂದೆಯ ಹೆಸರಿನಲ್ಲಿ ನಿಧಿಯೊಂದನ್ನು ಏರ್ಪಡಿಸಿದರು. ಇವರು ಮೈಸೂರು ಕರ್ನಾಟಕ ಸಂಘದ ಅಧ್ಯಕ್ಷರೂ (1934) ಬಳ್ಳಾರಿಯಲ್ಲಿ ನಡೆದ ಅಖಿಲ ಕರ್ನಾಟಕ ಕೀರ್ತನ ಸಮ್ಮೇಳನದ ಅಧ್ಯಕ್ಷರೂ (1926) ಆಗಿದ್ದರು. (ಒ.ಎನ್.ಎಲ್.;ಬಿ.ಎಸ್.ಎಸ್.)

**ಲಿಂಗರಾಜೇಂದ್ರ I:** ಕೊಡಗನ್ನು ಆಳಿದ ಹಾಲೇರಿ ವಂಶದ ಅರಸು (1775–80). ಮುದ್ದುರಾಜನ ಸೋದರ. 1770ರಲ್ಲಿ ಮುದ್ದುರಾಜ ತೀರಿಕೊಂಡ. ಅವನ ಮಗ ಅಪ್ಪಾಜಿರಾಜನಿಗೆ ಪಟ್ಟವೇರಲು ಅವಕಾಶ ಕೊಡದೆ ಕಿರಿಯ ಹೊರಮತಿಶಾಖೆಯ ದೇವಪ್ಪರಾಜನಿಗೆ ಪಟ್ಟವಾದಾಗ ಲಿಂಗರಾಜ ತನ್ನ ಅಣ್ಣನ ಮಗ ಅಪ್ಪಾಜಿರಾಜನ ಪರ ಹೈದರ್ ಅಲಿಯ ಸಹಾಯಹಸ್ತವನ್ನು ಯಾಚಿಸಿದ. ಕೊಡಗನ್ನು ಗೆಲ್ಲಲು ಹಾತೊರೆಯುತ್ತಿದ್ದ ಹೈದರ್ ಈ ಅಂತಃಕಲಹದ ಲಾಭಪಡೆದು 1773ರಲ್ಲಿ ಕೊಡಗನ್ನು ಗೆದ್ದು ಅಪ್ಪಾಜಿರಾಜನಿಗೆ ಸಿಂಹಾಸನವೇರಲು ನೆರವಾದ. ಮುಂದೆ ಅಪ್ಪಾಜಿರಾಜ ನಿಧನ ಹೊಂದಲು 1775ರಲ್ಲಿ ಲಿಂಗರಾಜನಿಗೇ ಪಟ್ಟವಾಯಿತು. ಹೈದರನ ನೆರವಿನಿಂದ ಮಲಬಾರಿನ ವೈನಾಡು ಪ್ರದೇಶವನ್ನು ಗೆದ್ದುಕೊಂಡ. ಪ್ರತಿಯಾಗಿ ಹೈದರನಿಗೆ ವರ್ಷಕ್ಕೆ 24,000 ರೂಪಾಯಿಗಳನ್ನು ಆತನ ದಂಡಯಾತ್ರೆಯ ವೆಚ್ಚವಾಗಿ ನೀಡಲು ಒಪ್ಪಿಕೊಂಡ. ವಾಸ್ತವವಾಗಿ ಈ ಕೊಡುಗೆ ಕಪ್ಪದ ಸ್ವರೂಪವನ್ನೇ ಪಡೆಯಿತು. 1779ರಲ್ಲಿ ಕೇರಳದ ಕೋಟೆಯ ಅರಸ ವೈನಾಡನ್ನು ಮತ್ತೆ ಗೆದ್ದುಕೊಂಡ. ಅದನ್ನು ರಕ್ಷಿಸಲು ಲಿಂಗರಾಜ ಕಳುಹಿಸಿದ್ದ ಸೇನೆಯನ್ನು ಸೋಲಿಸಿ, ಅದರ ಜೊತೆ ಬಂದಿದ್ದ ಇಬ್ಬರು ಕೊಡಗಿನ ರಾಜಕುಮಾರರನ್ನೂ (ಅಪ್ಪಾಜಿರಾಜನ ಮಕ್ಕಳು) ಕೊಂದ. ಇದಾಗಿ ಅಲ್ಪ ಕಾಲದಲ್ಲಿಯೇ 1780ರ ಫೆಬ್ರವರಿಯಲ್ಲಿ ಲಿಂಗರಾಜ ತೀರಿಕೊಂಡ. ಈತನನ್ನು ಮಾದಾಪುರದಲ್ಲಿ (ಸೋಮವಾರಪೇಟೆ ತಾಲ್ಲೂಕು) ಸಮಾಧಿ ಮಾಡಲಾಯಿತು. ಈತನ ಮಕ್ಕಳಾದ ವೀರರಾಜ ಮತ್ತು ಲಿಂಗರಾಜೇಂದ್ರರು ವಯಸ್ಸಿನಲ್ಲಿ ತೀರ ಚಿಕ್ಕವರೆಂಬ ನೆಪ ಒಡ್ಡಿ ಹೈದರ್ ಕೊಡಗಿನ ಆಡಳಿತ ವನ್ನು ತಾನೇ ವಹಿಸಿಕೊಂಡು ಕರಣಿಕ ಸುಬ್ಬರಸಯ್ಯನೆಂಬುವವನನ್ನು ಅಮಲ್ದಾರನನ್ನಾಗಿ ಮಡಿಕೇರಿಯಲ್ಲಿ ನೇಮಿಸಿದ. (ಎಸ್.ಕೆ.)

**ಲಿಂಗರಾಜೇಂದ್ರ II:** ಕೊಡಗಿನಲ್ಲಿ ಆಳಿದ ಹಾಲೇರಿ ವಂಶದ ಅರಸು (1811–20). ಒಂದನೆಯ ಲಿಂಗರಾಜನ ಎರಡನೆಯ ಮಗ. ಒಂದನೆಯ ಲಿಂಗರಾಜನ ಮರಣಾನಂತರ ಹೈದರ್ ಮತ್ತು ಟಿಪ್ಪು ಇಬ್ಬರೂ ಇವನು ಮತ್ತು ಇವನ ಅಣ್ಣ ವೀರರಾಜೇಂದ್ರರನ್ನು ಆರಂಭದಲ್ಲಿ ಗೊರೂರಿನಲ್ಲೂ ಮುಂದೆ ಪಿರಿಯಾಪಟ್ಟಣದಲ್ಲೂ ಸೆರೆಯಲ್ಲಿಟ್ಟಿದ್ದರು. ವೀರರಾಜೇಂದ್ರ 1788ರಲ್ಲಿ ಧೀರತನದಿಂದ ಯತ್ನಿಸಿ ಕೊಡಗಿನ ಸ್ವಾತಂತ್ರ್ಯವನ್ನು ಮತ್ತೆ ಪಡೆದ. ಆದರೆ 1793ರಲ್ಲಿ ಬ್ರಿಟಿಷರ ಜೊತೆ ಒಪ್ಪಂದ ಮಾಡಿಕೊಂಡು ಅವರಿಗೆ ಕಪ್ಪ ಕೊಡಲು ಒಪ್ಪಿಕೊಂಡ. 1809ರಲ್ಲಿ ವೀರರಾಜೇಂದ್ರ ಮರಣ ಹೊಂದಿ, ಅವನ ಮಗಳಾದ ದೇವಮ್ಮಾಜಿಗೆ ಪಟ್ಟವಾದರೂ ಲಿಂಗರಾಜೇಂದ್ರ ಉಪಾಯದಿಂದ ಅವಳಿಂದ ರಾಜ್ಯಾಧಿಕಾರವನ್ನು ಕಸಿದುಕೊಂಡು ತಾನೇ ರಾಜನಾದ (1811). ಅಧಿಕಾರವನ್ನು ಅಕ್ರಮವಾಗಿ ಗಳಿಸಿದ್ದರಿಂದ ಬ್ರಿಟಿಷ್ ಕಂಪನಿ ಸರ್ಕಾರದ ಜೊತೆ ತೀರ ನಯವಿನಯದಿಂದ ವರ್ತಿಸುತ್ತಿದ್ದ. ಇವನು 1820ರಲ್ಲಿ ನಿಧನನಾದ. ಅನಂತರ ಇವನ ಮಗ ಎರಡನೆಯ ವೀರರಾಜನಿಗೆ ಪಟ್ಟವಾಯಿತು.

ಲಿಂಗರಾಜೇಂದ್ರ ಪಟ್ಟಕ್ಕೆ ಬಂದ ಅನಂತರ ಆಡಳಿತ ಸಂಬಂಧವಾಗಿ ಇವನು ಹೊರಡಿಸಿದ ಹುಕುಂ ನಾಮೆಯಲ್ಲಿರುವ 52 ಆಜ್ಞೆಗಳು ಒಬ್ಬ ತಜ್ಞ ಆಡಳಿತಗಾರನ ಬುದ್ಧಿಮತ್ತೆಯನ್ನು ಪ್ರದರ್ಶಿಸುತ್ತವೆ. ಅರಮನೆಯ ಕೇಂದ್ರ ಕಚೇರಿಯ ನೌಕರರಿಗೆ, ನಾಡುಗಳ ಅಧಿಕಾರಿಗಳಿಗೆ, ಶಾನುಭೋಗರಿಗೆ, ಕಂದಾಯ ವಸೂಲಿ ಸಂಬಂಧ ಮುಂತಾಗಿ ಇವನು ನೀಡಿದ ಸೂಚನೆಗಳು ಮನನೀಯವಾಗಿವೆ. ಭೂಮಿಯ ಉತ್ಪನ್ನದ ಹತ್ತನೆಯ ಒಂದಂಶವನ್ನಷ್ಟೇ ಇವನು ಕಂದಾಯವಾಗಿ ಸಂಗ್ರಹಿಸುತ್ತಿದ್ದ. ಕಂದಾಯವನ್ನು ವರ್ಷಕ್ಕೆ ನಾಲ್ಕು ಕಂತುಗಳಲ್ಲಿ ಸಲ್ಲಿಸಲು ಅವಕಾಶವಿತ್ತಲ್ಲದೆ ಕಂದಾಯ ಸಂದ ರಶೀತಿ ನೀಡಬೇಕೆಂದು ಅಧಿಕಾರಿಗಳಿಗೆ ಕಟ್ಟಪ್ಪಣೆ ನೀಡಿದ್ದ. ಈ ಹುಕುಂಗಳಲ್ಲಿ ನ್ಯಾಯ ತೀರ್ಮಾನ, ಜಾತಿ ಕಟ್ಟಳೆಗಳ ರಕ್ಷಣೆ, ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದ ಸೂಚನೆಗಳು ಇವೆ. ರಾಜ್ಯದ ವ್ಯಾಪಾರ ವಹಿವಾಟುಗಳನ್ನು ಹೆಚ್ಚಿಸಲು ಬೈರಾಮಜಿ ಎಂಬ ಪಾರಸೀ ವರ್ತಕನನ್ನು ಇಟ್ಟುಕೊಂಡಿದ್ದು, ಅವನ ನೆರವಿನಿಂದ ವಾಣಿಜ್ಯಾದಾಯವನ್ನು ಲಿಂಗರಾಜ ಹೆಚ್ಚಿಸಿಕೊಂಡಿದ್ದ.

ವಂಚನೆಯಿಂದ ಅಧಿಕಾರ ಪಡೆದಿದ್ದ ಲಿಂಗರಾಜೇಂದ್ರ ತನ್ನ ರಾಜ್ಯದೊಳಗಿನ ಯಾವುದೇ ಸುದ್ದಿ ಕಂಪನಿಗೆ ಮುಟ್ಟಬಾರದೆಂದು ಬಹಳ ಎಚ್ಚರ ವಹಿಸಿ, ಭಾರಿ ಬಂದೋಬಸ್ತನ್ನು ಮಾಡಿದ್ದ. ಆಫ್ರಿಕದ ಸಿದ್ಧಿಗಳನ್ನು ತನ್ನ ಅಂಗರಕ್ಷಕರಾಗಿ ಇಟ್ಟುಕೊಂಡು ತನಗೆ ಕೇಡು ಬಗೆಯುವವರೆಂದು ಕಂಡುಬಂದ ಅನೇಕ ಜನರ ಕೊಲೆ ಮಾಡಿಸಿದ್ದ. ಹೀಗಿದ್ದರೂ ಇವನ ಕಾಲದಲ್ಲಿ ಒಳ್ಳೆಯ ಯುದ್ಧಮುಕ್ತ ಶಾಂತಿಯ ವಾತಾವರಣ, ಸಂಪತ್ತು ಸಮೃದ್ಧಿಗಳು ಕೊಡಗಿಗೆ ಲಭಿಸಿದವು.

ಇವನು ಚತುರ ಗುರಿಕಾರನೂ ಒಳ್ಳೆಯ ಬೇಟೆಗಾರನೂ ದಂಡಾಳೂ ಆಗಿದ್ದು ಇವನ ಕ್ರೀಡಾಕೌಶಲಗಳನ್ನು ಅನೇಕ ಆಂಗ್ಲ ಸಂದರ್ಶಕರು ಹೊಗಳಿದ್ದಾರೆ. ನಿಜ ಗುಣಶಿವಯೋಗಿಯ ವಿವೇಕ ಚಿಂತಾಮಣಿಯನ್ನು ಇವನು ಸಂಸ್ಕೃತ ಭಾಷೆಗೆ ಭಾಷಾಂತರಿಸಿದನೆಂದು ಹೇಳಲಾಗಿದೆ. ಕನ್ನಡದಲ್ಲಿ ಇವನು ಕವಿತೆಗಳನ್ನು ರಚಿಸಿದ್ದಾನೆ. ಇವನು 1812ರಲ್ಲಿ ಮಡಿಕೇರಿಯ ಅರಮನೆಯನ್ನು ಕಟ್ಟಿಸಿದ. ಮಡಿಕೇರಿಯಲ್ಲಿರುವ ಓಂಕಾರೇಶ್ವರ ದೇವಾಲಯವೂ ಇವನೇ ಕಟ್ಟಿಸಿದ್ದು (1820). (ಎಸ್.ಕೆ.)

**ಲಿಂಗಸುಗೂರು:** ರಾಯಚೂರು ಜಿಲ್ಲೆಯ ಒಂದು ಉಪವಿಭಾಗ, ತಾಲ್ಲೂಕು ಮತ್ತು ಪಟ್ಟಣ. ಈ ಉಪವಿಭಾಗ ಲಿಂಗಸುಗೂರು, ಸಿಂಧನೂರು ಮತ್ತು ಮಾನ್ವಿ ತಾಲ್ಲೂಕುಗಳನ್ನೊಳಗೊಂಡಿದೆ. ಈ ತಾಲ್ಲೂಕನ್ನು ದಕ್ಷಿಣದಲ್ಲಿ ಕೊಪ್ಪಳ ಜಿಲ್ಲೆ, ಪೂರ್ವಕ್ಕೆ ಮಾನ್ವಿ ದೇವದುರ್ಗ ತಾಲ್ಲೂಕುಗಳೂ ಉತ್ತರಕ್ಕೆ ಗುಲ್ಬರ್ಗ ಜಿಲ್ಲೆ, ಪಶ್ಚಿಮದಲ್ಲಿ ಬಾಗಲಕೋಟೆ ಜಿಲ್ಲೆ ಸುತ್ತುವರೆದಿವೆ. ಮುದ್ಗಲ್ಲು, ಲಿಂಗಸುಗೂರು, ಗುರ್ಗುಂಟೆ ಮತ್ತು ಮಸ್ಕಿ ಹೋಬಳಿಗಳು. ಒಟ್ಟು ಗ್ರಾಮಗಳ ಸಂಖ್ಯೆ 192, ವಿಸ್ತೀರ್ಣ 1,947 ಚ.ಕಿಮೀ. ಜನಸಂಖ್ಯೆ 3,20,879.

ತಾಲ್ಲೂಕಿನ ಹೆಚ್ಚಿನ ಭಾಗ ವಿಸ್ತಾರವಾದ ಬಯಲುಗಳಿಂದ ಕೂಡಿದ ಪ್ರದೇಶ. ಧಾರವಾಡ ಶಿಲೆ ತಳಶಿಲೆಯಾಗಿದ್ದು ಎರೆಮಣ್ಣಿನಿಂದ ಕೂಡಿದ ಈ ಪ್ರದೇಶದಲ್ಲಿ ಕೆಲವು ಸ್ಥಳಗಳಲ್ಲಿ ಚಿನ್ನ ದೊರೆಯುತ್ತದೆ. ಹಟ್ಟಿ, ಮಸ್ಕಿ ಇವುಗಳ ಬಳಿಯ ಚಿನ್ನದ ನಿಕ್ಷೇಪಗಳು ಪ್ರಸಿದ್ಧವಾದವು. ತಾಲ್ಲೂಕಿನ ಉತ್ತರಭಾಗದಲ್ಲಿ ಉತ್ತರಗಡಿಯಾಗಿ ಕೃಷ್ಣಾನದಿ ಇದೆ. ಇದು ಉಪ್ಪಿನಹಳ್ಳ ಗ್ರಾಮದ ಬಳಿ ತಾಲ್ಲೂಕನ್ನು ತಾಗಿ ಪೂರ್ವಾಭಿಮುಖವಾಗಿ ಸಾಗುತ್ತದೆ. ಇದನ್ನು ಬಿಟ್ಟರೆ ತಾಲ್ಲೂಕಿನಲ್ಲಿ ಕೆಲವು ಹಳ್ಳಗಳು ಮಾತ್ರ ಇವೆ. ಅವುಗಳಲ್ಲಿ ಮುಖ್ಯವಾದವು ಹಟ್ಟಿಹಳ್ಳ ಮತ್ತು ಹಿರೇಹಳ್ಳ. ಹಟ್ಟಿಹಳ್ಳ ತಾಲ್ಲೂಕಿನ ಪೂರ್ವಭಾಗದಲ್ಲಿ ಹರಿದು ದಕ್ಷಿಣದಿಂದ ಉತ್ತರಕ್ಕೆ ಗುರ್ಗುಂಟೆಯ ಉತ್ತರದಲ್ಲಿ ಕೃಷ್ಣಾನದಿಯನ್ನು ಕೂಡುವುದು. ಹಿರೇಹಳ್ಳ ತಾಲ್ಲೂಕಿನ ದಕ್ಷಿಣಭಾಗದಲ್ಲಿ ನೈಋತ್ಯದಿಂದ ಈಶಾನ್ಯಕ್ಕೆ ಸ್ವಲ್ಪದೂರ ಹರಿದು, ಅನಂತರ ಆಗ್ನೇಯಕ್ಕೆ ತಿರುಗಿ, ಮುಂದೆ ಪೂರ್ವಾಭಿಮುಖವಾಗಿ ಮಾನ್ವಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ತಾಲ್ಲೂಕಿನ ಪೂರ್ವದಲ್ಲಿ ಸ್ವಲ್ಪದೂರ ಮಸ್ಕಿ ಹೋಬಳಿ ಮುಖಾಂತರ ತುಂಗಭದ್ರಾ ಎಡದಂಡೆಯ ಮುಖ್ಯನಾಲೆ ಹಾದು ಹೋಗಿದೆ. ಕೃಷ್ಣಾನದಿಯ ಹರಿವಿನಿಂದ ತಾಲ್ಲೂಕಿನ ಪೂರ್ವದಲ್ಲಿ ಫಲವತ್ತಾದ ಕೆಲವು ನಡುಗಡ್ಡೆಗಳಿವೆ. ಆ ನದಿಯ ತೀರದ ಉದ್ದಕ್ಕೂ ಕಪ್ಪುಮರಳ ಪ್ರದೇಶವಿದ್ದು ಅರಣ್ಯದಿಂದ ಕೂಡಿದೆ. ಜೋಳ, ನೆಲಗಡಲೆ, ಹತ್ತಿ ಈ ತಾಲ್ಲೂಕಿನ ಮುಖ್ಯ ಬೆಳೆಗಳು. ದ್ವಿದಳ ಧಾನ್ಯಗಳು, ಸಜ್ಜೆ, ಬತ್ತ, ಗೋದಿ ಮತ್ತು ಸ್ವಲ್ಪ ಕಬ್ಬನ್ನೂ ಬೆಳೆಯುತ್ತಾರೆ. ಕೆಲವೊಂದು ಹಣ್ಣುಗಳನ್ನೂ ತರಕಾರಿಗಳನ್ನೂ ಬೆಳೆಯುತ್ತಾರೆ.

ಈ ತಾಲ್ಲೂಕಿನ ಹೆಸರಿಸಬಹುದಾದ ಕೈಗಾರಿಕಾ ಉದ್ಯಮವೆಂದರೆ ಹಟ್ಟಿ ಚಿನ್ನದ ಗಣಿ. ಹಿಂದೆ ಮಸ್ಕಿಯಲ್ಲೂ ಗಣಿಕೆಲಸ ನಡೆಯುತ್ತಿತ್ತು. ಈಗ ನಿಂತಿದೆ. ತಾಲ್ಲೂಕಿನಲ್ಲಿ ಹತ್ತಿ ಎಕ್ಕುವ ಕೆಲವು ಕಾರ್ಖಾನೆಗಳಿವೆ. ಕೈಮಗ್ಗದ ಬಟ್ಟೆ ತಯಾರಿಕೆಯುಂಟು. ತಾಲ್ಲೂಕಿನ ವ್ಯಾಪಾರ ವಾಣಿಜ್ಯಕ್ಕೆ ಆರ್ಥಿಕ ನೆರವು ನೀಡಲು ಇಲ್ಲಿ ಕೆಲವು ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಗಂಗಾವತಿ–ಲಿಂಗಸುಗೂರು–ಸುರಪುರಮಾರ್ಗ ತಾಲ್ಲೂಕಿನ ಹೆದ್ದಾರಿ. ಮುದ್ಗಲ್–ಕುಷ್ಟಗಿ, ಮುದ್ಗಲ್–ಹುನಗುಂದ, ಲಿಂಗಸುಗೂರು–ಸಿಂಧನೂರು, ಲಿಂಗಸುಗೂರು–ರಾಯಚೂರು ರಸ್ತೆಮಾರ್ಗಗಳು ತಾಲ್ಲೂಕಿನ ಮತ್ತು ಹೊರಜಿಲ್ಲೆಗಳ ಭಾಗಗಳಿಗೆ ಸಂಪರ್ಕ ಒದಗಿಸುತ್ತವೆ.

ಈ ತಾಲ್ಲೂಕಿನ ಮುಖ್ಯಸ್ಥಳಗಳಲ್ಲಿ ದೇವರಭೂಪುರ ಲಿಂಗಸುಗೂರಿಗೆ ಈಶಾನ್ಯ ದಿಕ್ಕಿನಲ್ಲಿ 17 ಕಿಮೀ ದೂರದಲ್ಲಿದೆ. ಈ ಊರು ಬೆಲ್ಲ ತಯಾರಿಕೆಗೆ ಮತ್ತು ಇಲ್ಲಿರುವ ಅಮರೇಶ್ವರ ದೇವಾಲಯಕ್ಕೆ ಪ್ರಸಿದ್ಧ. ಲಿಂಗಸುಗೂರಿಗೆ ಈಶಾನ್ಯದಲ್ಲಿರುವ ಗುರ್ಗುಂಟೆ ಹೋಬಳಿ ಕೇಂದ್ರ. ಹಿಂದೆ ಇದೊಂದು ಚಿಕ್ಕ ಸಂಸ್ಥಾನವಾಗಿತ್ತು. ಲಿಂಗಸುಗೂರಿಗೆ ಸು. 17 ಕಿಮೀ ದೂರದಲ್ಲಿ ಹಟ್ಟಿ ಚಿನ್ನದ ಗಣಿಗಳಿವೆ **(ನೋಡಿ)**. ಲಿಂಗಸುಗೂರಿನ ವಾಯವ್ಯಕ್ಕೆ ಸು. 13 ಕಿಮೀ ದೂರದಲ್ಲಿರುವ ಜಲದುರ್ಗ **(ನೋಡಿ)** ಕೃಷ್ಣಾ ನದಿಯಿಂದ ಸುತ್ತುವರಿದ ಪ್ರದೇಶ. ಇಲ್ಲಿ ಒಂದು ಹಳೆಯ ಕೋಟೆ ಇದೆ. ಲಿಂಗಸುಗೂರಿನ ಆಗ್ನೇಯದಲ್ಲಿ ಸು. 27 ಕಿಮೀ ದೂರದಲ್ಲಿರುವ ಮಸ್ಕಿ **(ನೋಡಿ)**, ನೈಋತ್ಯದಲ್ಲಿ 16 ಕಿಮೀ ದೂರದಲ್ಲಿರುವ ಮುದ್ಗಲ್ಲು **(ನೋಡಿ)** ಹೋಬಳಿ ಕೇಂದ್ರಗಳು ಹಾಗೂ ಇತಿಹಾಸ ಪ್ರಸಿದ್ಧ ಸ್ಥಳಗಳು. ಲಿಂಗಸುಗೂರಿನ ಆಗ್ನೇಯದಲ್ಲಿ, ಮಸ್ಕಿಯ ಉತ್ತರದಲ್ಲಿ ಸು. 5 ಕಿಮೀ ದೂರದಲ್ಲಿರುವ ವೆಂಕಟಾಪುರ ಗ್ರಾಮದ ಬಳಿ ಇರುವ ಎರಡು ಬೆಟ್ಟಗಳ ನಡುವೆ ಬೃಹತ್ ಶಿಲಾಯುಗದ ಸಮಾಧಿಗಳಿವೆ.

ಲಿಂಗಸುಗೂರು ಈ ತಾಲ್ಲೂಕು ಮತ್ತು ಉಪವಿಭಾಗದ ಆಡಳಿತ ಕೇಂದ್ರ. ರಾಯಚೂರಿನ ಪಶ್ಚಿಮಕ್ಕೆ 93 ಕಿಮೀ ದೂರದಲ್ಲಿದೆ. 1905ರವರೆಗೆ ಇದೇ ಜಿಲ್ಲಾ ಕೇಂದ್ರವಾಗಿತ್ತು. ಜನಸಂಖ್ಯೆ 20,730. ಇಲ್ಲಿಂದ ರಾಯಚೂರು, ಮುದ್ಗಲ್ಲು, ಸುರಪುರ, ಸಿಂಧನೂರುಗಳಿಗೆ ನೇರ ರಸ್ತೆಗಳಿವೆ. ಗುಲ್ಬರ್ಗ, ಬೆಂಗಳೂರು, ರಾಯಚೂರು, ಬಾಗಲಕೋಟೆಗಳಿಗೆ ಮಾರ್ಗಸಂಪರ್ಕವಿದೆ. ಈ ಸುತ್ತಲಪ್ರದೇಶಕ್ಕೆ ಇದು ಮುಖ್ಯ ವ್ಯಾಪಾರ ಸ್ಥಳ. ನೆಲಗಡಲೆ ಮತ್ತು ಹತ್ತಿಯ ವ್ಯಾಪಾರಕ್ಕೆ ಪ್ರಸಿದ್ಧ. ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ.

ಈ ಪಟ್ಟಣದ ಬಳಿ ಒಂದು ದೊಡ್ಡಕೆರೆ ಇದೆ. ಪಟ್ಟಣದಲ್ಲಿರುವ ಕುಪ್ಪೇರಾಯನ ದೇವಾಲಯ ಪ್ರಸಿದ್ಧ. ರಾಯರ ಮಠದ ವರದೇಂದ್ರರ ವೃಂದಾವನ ಇಲ್ಲಿದೆ. (*;ಪಿ.ಆರ್.ಪಿ.)

**ಲೀಲಾವತಿ, ಎಚ್. ಆರ್.:** 1934–. ಪ್ರಸಿದ್ಧ ಸುಗಮ ಸಂಗೀತಗಾರ್ತಿ. ಕರ್ನಾಟಕ ಸುಗಮ ಸಂಗೀತ ಮಾಧುರ್ಯವನ್ನು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಪಡಿಸಿದವರು. ಇವರು 1934ರಲ್ಲಿ ಹಾಸನದಲ್ಲಿ ಜನಿಸಿದರು. ತಂದೆ ರಾಮಣ್ಣ, ತಾಯಿ ಜಯಮ್ಮ. ತಂದೆಯವರು

ಉತ್ತಮ ಗಮಕ ಹಾಗೂ ಭಾವಗೀತೆ ಗಾಯಕರಾಗಿದ್ದರು. ತಾಯಿ ಸಂಗೀತದಲ್ಲಿ ವಿಶೇಷ ಪರಿಣತಿ ಪಡೆದಿದ್ದರು. ಇಂತಹ ಕೌಟುಂಬಿಕ ಹಿನ್ನೆಲೆ ಇವರಿಗೆ ಬಾಲ್ಯದಿಂದಲೇ ಸಂಗೀತದಲ್ಲಿ ವಿಶೇಷ ಆಸಕ್ತಿ ಮೂಡಿಸಿತು.

ಕಲಾ ಪದವೀಧರೆಯಾದ ಇವರು ಆರಂಭದಲ್ಲಿ ಸುಪ್ರಸಿದ್ಧ ಕರ್ನಾಟಕ ಶಾಸ್ತ್ರೀಯ ಸಂಗೀತಗಾರ ಎನ್. ಚನ್ನಕೇಶವಯ್ಯನವರ ಬಳಿ ಸಂಗೀತಾಭ್ಯಾಸ ಮಾಡಿದರು. ಸಂಗೀತದಲ್ಲಿ ಒಳ್ಳೆಯ ಅಡಿಪಾಯ ಪಡೆದು ಅನಂತರ ಎಂ.ವಿ. ಕೃಷ್ಣಮಾಚಾರ್ ಅವರಿಂದ ಸಂಗೀತದ ಹೊಸ ಆಯಾಮವನ್ನು ಕಂಡುಕೊಂಡರು. ಸಂಗೀತ ನಿರ್ದೇಶಕ ಪದ್ಮಚರಣ್ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ಸಂಗೀತ ಹಾಗೂ ಲಘು ಸಂಗೀತದಲ್ಲಿ ವಿಶೇಷ ಪರಿಶ್ರಮ ಹೊಂದಿ ರವೀಂದ್ರರ ಸಂಗೀತದ ಬಗ್ಗೆ ರಾಬಿನ್ ರಾಯ್ ಅವರಿಂದ ತರಬೇತಿ ಪಡೆದರು. ಸುಗಮ ಸಂಗೀತದ ಎಲ್ಲಾ ಪ್ರಕಾರಗಳಲ್ಲೂ ಪರಿಣತಿ ಗಳಿಸಿದರು.

ಇವರದು ಸುಗಮಸಂಗೀತದಲ್ಲಿ ಸುಮಾರು ಐದು ದಶಕಗಳಿಗೂ ಮೀರಿದ ಕಲಾರಾಧನೆ. ಕನ್ನಡ ಕಾವ್ಯ ಲೋಕದ ಭಾವ ವೈವಿಧ್ಯ ಕನ್ನಡಿಗರ ಹೃನ್ಮನಗಳನ್ನು ತಟ್ಟುವಂತೆ ಇವರು ಸಂಗೀತ ಕಾಯಕ ನಿರ್ವಹಿಸಿದ್ದಾರೆ. ಆಕಾಶವಾಣಿಯಲ್ಲಿ 'ಎ' ದರ್ಜೆ ಕಲಾವಿದರಾಗಿ ಸಾವಿರಾರು ಭಾವಗೀತೆಗಳನ್ನು ಹಾಡಿರುವುದಲ್ಲದೆ ಅನೇಕ ಸಂಗೀತ ರೂಪಕಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಕನ್ನಡ ಚಲನಚಿತ್ರಗಳಲ್ಲಿ ಹಿನ್ನೆಲೆ ಗಾಯಕಿಯಾಗಿಯೂ ಹಾಡಿದ್ದಾರೆ. ಇವರು ಉತ್ತಮ ಗಾಯಕಿ ಮಾತ್ರವಲ್ಲದೆ ಉತ್ತಮ ಲೇಖಕಿಯೂ ಹೌದು. ಅನೇಕ ಕಥೆ, ಮಕ್ಕಳ ಕಥೆಗಳನ್ನೂ, ಭಾವಗೀತೆಗಳನ್ನೂ ಬರೆದಿದ್ದಾರೆ. ಇವರ ಮಧುಚಂದ್ರ ನಾಟಕಕ್ಕೆ ಭಾರತ ಸರ್ಕಾರದ ಕುಟುಂಬ ಯೋಜನಾ ಇಲಾಖೆ ಪ್ರಶಸ್ತಿ ಲಭಿಸಿದೆ.

ಇವರು ಸಲ್ಲಿಸಿದ ಕಲಾಸೇವೆಗಾಗಿ ಅನೇಕ ಬಿರುದು, ಗೌರವ, ಪ್ರಶಸ್ತಿಗಳು ಲಭಿಸಿವೆ. ಎಸ್.ಕೆ. ಕರೀಂಖಾನ್ ಪ್ರಶಸ್ತಿ, ಶಿವಮೊಗ್ಗದ ಭುವನೇಶ್ವರಿ ಕನ್ನಡ ಸಂಘದ ಗಾನಕಲಾಪರಿಪೂರ್ಣೆ, ಮೈಸೂರಿನ ನಾಗರಿಕ ಸೇವಾ ಸಮಿತಿಯ ಗಾನಕಲಾಶಾರದೆ, ಕನ್ನಡ ಚಳವಳಿ ಹೋರಾಟ ಸಮಿತಿಯ ಕನ್ನಡ ಗಾನ ಕೋಗಿಲೆ, ಮೈಸೂರು ರೋಟರಿ ವೆಸ್ಟ್ ಸಂಸ್ಥೆಯ ಸುಗಮಸಂಗೀತ ಪ್ರವೀಣೆ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1992), ಕರ್ನಾಟಕ ಸರ್ಕಾರದ ಸಂತ ಶಿಶುನಾಳ ಪ್ರಶಸ್ತಿ (1997) ಇವು ಮುಖ್ಯವಾದವು. ಇವರ ಅಭಿಮಾನಿಗಳೂ ಶಿಷ್ಯರೂ ಇವರಿಗೆ ನಾದಲೀಲೆ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದ್ದಾರೆ.

ಇವರು ರಾಜ್ಯ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. (ಎಸ್.ಯು.ಎಂ.)

**ಲೀಲಾವತಿ, ಎಂ.:** 1938–. ಕನ್ನಡ ಚಲನಚಿತ್ರರಂಗದ ಪ್ರಸಿದ್ಧ ನಾಯಕಿನಟಿ, ಚತುರ್ಭಾಷಾತಾರೆ, ನಿರ್ಮಾಪಕಿ. ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ 1938ರಲ್ಲಿ ಜನಿಸಿದರು. ಹುಟ್ಟು ಹೆಸರು ಲೀಲಾಕಿರಣ್. ಬಡತನದ ಕಾರಣ ಮೂರನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದರು. ಇವರ ರೂಪಸೌಂದರ್ಯವನ್ನು ಗಮನಿಸಿದ ಆತ್ಮೀಯರೊಬ್ಬರು ಚಲನಚಿತ್ರ ಕ್ಷೇತ್ರ ಪ್ರವೇಶಿಸಿದರೆ ಒಳ್ಳೆಯ ಭವಿಷ್ಯವಿದೆಯೆಂದು ಹೇಳಿದ್ದರು. ಅದೇ ಸಮಯಕ್ಕೆ ಪತ್ರಿಕೆಯೊಂದರಲ್ಲಿ ನಟ–ನಟಿಯರು ಬೇಕಾಗಿದ್ದಾರೆ ಎಂಬ ಜಾಹೀರಾತೊಂದು ಪ್ರಕಟವಾಗಿತ್ತು. ಧೈರ್ಯಮಾಡಿ ತಮ್ಮ ಚಿಕ್ಕಮ್ಮನೊಂದಿಗೆ ಇವರು ಮೈಸೂರಿಗೆ ಪ್ರಯಾಣ ಬೆಳೆಸಿದರು. ಚಲನಚಿತ್ರೋದ್ಯಮಿ ಶಂಕರಸಿಂಗರನ್ನೂ ವಿಠಲಾಚಾರ್ಯರನ್ನೂ ಕಂಡು ತಮ್ಮ ಆಸೆಯನ್ನು ನಿವೇದಿಸಿಕೊಂಡರು. ರಂಗಭೂಮಿಯಲ್ಲಿ ಪಳಗಿ ಅನುಭವ ಗಳಿಸಿಕೊಳ್ಳಬೇಕೆಂಬ ಹಿರಿಯರ ಸಲಹೆಯಂತೆ ಇವರು ಹುಬ್ಬಳ್ಳಿಯಲ್ಲಿದ್ದ ಸುಬ್ಬಯ್ಯನಾಯ್ಡು ಅವರ ನಾಟಕ ಸಂಸ್ಥೆಯಲ್ಲಿ ಪ್ರವೇಶ ಪಡೆದುಕೊಂಡು ಸಣ್ಣಪುಟ್ಟ ಪಾತ್ರಗಳಲ್ಲಿ ಅಭಿನಯಿಸುವ ಮೂಲಕ ಅಭಿನಯದಲ್ಲಿ ಸಾಕಷ್ಟು ಅನುಭವ ಗಳಿಸಿಕೊಂಡರು.

ಸುಬ್ಬಯ್ಯನಾಯ್ಡು ಅವರ ಭಕ್ತಪ್ರಹ್ಲಾದ (1958) ಇವರ ಅಭಿನಯದ ಮೊದಲ ಚಿತ್ರ. ಈ ಚಿತ್ರದಲ್ಲಿ ಇವರು ಹಿರಣ್ಯಕಶಿಪುವಿನ ಪತ್ನಿ ಕಯಾಧುವಿನ ಸಖಿಯಾಗಿ ಪುಟ್ಟ ಪಾತ್ರದಲ್ಲಿ ನಟಿಸಿದರು. 1949ರಲ್ಲಿ ತೆರೆಕಂಡ ನಾಗಕನ್ನಿಕಾ ಚಿತ್ರದಲ್ಲಿಯೂ ಇವರದ್ದು ಸಖಿಯ ಪಾತ್ರ. ಇವರು ನಾಯಕಿಯಾಗಿ ಅಭಿನಯಿಸಿದ ಮೊದಲ ಚಿತ್ರ 'ಮಾಂಗಲ್ಯ ಯೋಗ' (1959). ಸುಮಾರು ಮುನ್ನೂರು ಚಲನಚಿತ್ರಗಳಲ್ಲಿ ಅಭಿನಯಿಸಿದ ಖ್ಯಾತಿ ಇವರದು. ಇವರು ಅನೇಕ ನಟರೊಡನೆ ನಾಯಕಿಯಾಗಿ ಅಭಿನಯಿಸಿದ್ದಾರೆ. ಒಂದು ಕಾಲಕ್ಕೆ ರಾಜಕುಮಾರ್–ಲೀಲಾವತಿ ಜೋಡಿ ಅತ್ಯಂತ ಜನಪ್ರಿಯ ನಾಯಕ–ನಾಯಕಿ ಜೋಡಿಯಾಗಿತ್ತು. ರಾಜಕುಮಾರ್ ಅವರೊಂದಿಗೆ ಅಭಿನಯಿಸಿದ ಮೊದಲಚಿತ್ರ 'ರಣಧೀರ ಕಂಠೀರವ'. ರಾಣಿ ಹೊನ್ನಮ್ಮ (1960), ಮನಮೆಚ್ಚಿದ ಮಡದಿ, ಪ್ರತಿಜ್ಞೆ, ಕುಲವಧು (1963), ಚಂದ್ರಹಾಸ (1965), ಸಂಚಿಹೊನ್ನಮ್ಮ, ಪ್ರೇಮಮಯಿ, ಗಂಗೆ–ಗೌರಿ (1967), ವೀರಕೇಸರಿ (1963), ಭಕ್ತಕುಂಬಾರ(1974), ಭಾಗ್ಯದೇವತೆ (1968), ಶರಪಂಜರ (1971), ಉಪಾಸನೆ (1974) ಮೊದಲಾದ ಚಿತ್ರಗಳಲ್ಲಿ ಅತ್ಯುತ್ತಮ ಅಭಿನಯ ನೀಡಿದ್ದಾರೆ.

ಎಪ್ಪತ್ತರ ದಶಕದ ಅನಂತರ ಪೋಷಕ ನಟಿಯಾಗಿ ಅಭಿನಯಿಸಿ ಜನಪ್ರಿಯತೆ ಗಳಿಸಿದರು. ಸಿಪಾಯಿ ರಾಮು, ಗೆಜ್ಜೆಪೂಜೆ (1970) ಮೊದಲಾದ ಚಲನಚಿತ್ರಗಳಲ್ಲಿನ ಉತ್ತಮ ಅಭಿನಯಕ್ಕಾಗಿ ಮೂರುಬಾರಿ ಪೋಷಕ ನಟಿ ಪ್ರಶಸ್ತಿ ಪಡೆದ ಖ್ಯಾತಿ ಇವರದು. ಗಣೇಶಪ್ರಸಾದ್ ಮೂವೀಸ್ ಅವರ ಸಂತ ತುಕಾರಾಂ (1963), ವಿಜಯ ಪ್ರೊಡಕ್ಷನ್ಸ್ ಅವರ ಮದುವೆ ಮಾಡಿ ನೋಡು ಮೊದಲಾದ ಚಿತ್ರಗಳು ಇವರ ಶ್ರೇಷ್ಠ ಅಭಿನಯಕ್ಕೆ ಸಾಕ್ಷಿಗಳು. ಕಾಲೇಜ್ ಹೀರೋ, ನಾಯಕ, ಕನ್ನಡದ ಕಂದ ಮೊದಲಾದ ಚಿತ್ರಗಳ ಮೂಲಕ ಇವರು ನಿರ್ಮಾಪಕಿಯೂ ಆದರು. ಇವರಿಗೆ ಕರ್ನಾಟಕ ಸರ್ಕಾರ ಡಾ.ರಾಜಕುಮಾರ್ ಪ್ರಶಸ್ತಿ ನೀಡಿ ಗೌರವಿಸಿದೆ (1999–2000). ಇವರು ಸರಳ ಸಜ್ಜನಿಕೆಗೆ ಹೆಸರಾದವರು. ಡ್ಯಾನ್ಸ್ ರಾಜ ಡ್ಯಾನ್ಸ್ ಎಂಬ ಚಿತ್ರದ ನಾಯಕ ನಟರಾಗಿ ಪ್ರಸಿದ್ಧರಾದ ವಿನೋದ್ ರಾಜ್ ಇವರ ಪುತ್ರ. (ಎಸ್.ಜಿ.ಪಿ.)

**ಲೊಕ್ಕಿಕೆರೆ:** ದಾವಣಗೆರೆ ಜಿಲ್ಲೆಯ ಅದೇ ತಾಲ್ಲೂಕಿನಲ್ಲಿ ಕಸಬೆಯ ದಕ್ಷಿಣಕ್ಕೆ 21 ಕಿಮೀ ದೂರದಲ್ಲಿರುವ ಒಂದು ಗ್ರಾಮ. ಜನಸಂಖ್ಯೆ 5,805. ಊರಿನ ಮುಂದಿರುವ ದೊಡ್ಡಕೆರೆಯಿಂದ ಈ ಊರಿಗೆ ಲೊಕ್ಕಿಕೆರೆ ಅಥವಾ ಲೋಕೀಕೆರೆ ಎಂಬ ಹೆಸರು ಬಂದಿದೆ. ಹನ್ನೊಂದನೆಯ ಶತಮಾನದಲ್ಲಿ ಇದೊಂದು ಅಗ್ರಹಾರವಾಗಿತ್ತು. ಕೆರೆಯ ತೂಬಿನ ಬಳಿ ಇರುವ ಕೋಡಿಕಲ್ಲೇಶ್ವರ ದೇವಾಲಯ ಇಲ್ಲಿಯ ಪುರಾತನ ದೇವಾಲಯ. ಹೊಯ್ಸಳ ಇಮ್ಮಡಿ ನರಸಿಂಹನ ಕಾಲದಲ್ಲಿ ಈ ದೇವಾಲಯಕ್ಕೆ ಕೆಲವು ದತ್ತಿಗಳನ್ನು ಬಿಟ್ಟಿರುವ ವಿಷಯ ದೇವಾಲಯದ ಕಂಬಗಳ ಮೇಲಿರುವ ಶಾಸನಗಳಿಂದ ತಿಳಿದುಬರುತ್ತದೆ. ಇದು ದಕ್ಷಿಣಾಭಿಮುಖವಾಗಿದ್ದು ಮೂರು ಗರ್ಭಗುಡಿಗಳಿಂದ ಕೂಡಿದೆ. ದೇವಾಲಯದ ಹೊರಭಾಗ ಪೂರ್ಣವಾಗಿ ಮಣ್ಣಿನಿಂದ ಮುಚ್ಚಿಹೋಗಿರುವುದರಿಂದ ಇದರ ಹೊರನೋಟ ಕಾಣಿಸುವುದಿಲ್ಲ. ಶಿಥಿಲವಾಗಿರುವ ಈ ದೇವಾಲಯದ ಸೂರ್ಯನ ಗುಡಿಯಲ್ಲಿ ಈಗ ಸಪ್ತಮಾತೃಕೆಯರು, ಮಹಿಷಮರ್ಧಿನಿ, ಚಂಡಿಕೆ ಮೂರ್ತಿಗಳನ್ನು ಇಡಲಾಗಿದೆ.

ಊರಿನ ಮುಂದಿರುವ ಕೇತೇಶ್ವರ ದೇವಾಲಯ ಸುಂದರವಾದುದು. ಇದು 11ನೆಯ ಶತಮಾನದಲ್ಲಿ ಕಟ್ಟಿದ್ದೆಂದು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಬಳಪದಕಲ್ಲಿನಲ್ಲಿ ನಿರ್ಮಿಸಿರುವ ಈ ದೇವಾಲಯ ಚಾಳುಕ್ಯ ಶೈಲಿಯಲ್ಲಿದ್ದು, ಇದರ ಹೊರಗೋಡೆಗಳಲ್ಲಿ ಅರೆಗಂಬಗಳೂ ಆಳವಾದ ಗೂಡುಗಳೂ ಅವುಗಳ ಮೇಲೆ ಅರೆಗೋಪುರಗಳೂ ಇವೆ. ನವರಂಗದ ಗುಂಡು ಕಂಬಗಳ ಮೇಲೆ ಅರೆಗೋಳವಿ ಆಕಾರದ ಪಟ್ಟಿಕೆಗ

ಳಿವೆ. ಭುವನೇಶ್ವರಿಯಲ್ಲಿ ತಾಂಡವೇಶ್ವರ, ಒಳಮಂಟಪಗಳಲ್ಲಿ ಗಣೇಶ ಮತ್ತು ಮಹಿಷಮರ್ದಿನಿ ವಿಗ್ರಹಗಳಿವೆ.

ಊರಿನ ದಕ್ಷಿಣಕ್ಕಿರುವ ನಾರಾಯಣ ದೇವಾಲಯ ಇದೇ ಕಾಲಕ್ಕೆ ಸೇರಿದ್ದರೂ ಹೊರಗೋಡೆಗಳು ಬಿದ್ದುಹೋಗಿ ಹೆಚ್ಚುಭಾಗ ಶಿಥಿಲವಾಗಿದೆ. ಗರ್ಭಗುಡಿಯಲ್ಲಿರುವ ಮೂರ್ತಿ ಭಿನ್ನವಾಗಿದ್ದರೂ ಸುಂದರವಾಗಿದೆ. ಇತ್ತೀಚೆಗೆ ಈ ಊರಿನಲ್ಲಿ ಮೈಲಾರದೇವ, ವೀರಭದ್ರ ಮತ್ತು ಆಂಜನೇಯನ ದೇವಾಲಯಗಳನ್ನು ಕಟ್ಟಲಾಗಿದೆ. (ಎಂ.ಎಚ್.)

**ಲೋಂಡಾ:** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನಲ್ಲಿ ಕಸಬೆಯಿಂದ 25 ಕಿಮೀ ದಕ್ಷಿಣಕ್ಕಿರುವ ಒಂದು ಪಟ್ಟಣ. ಜನಸಂಖ್ಯೆ 6,273. ಇದು ಗೋವ–ಹುಬ್ಬಳ್ಳಿ ಹಾಗೂ ಮೀರಜ್–ಹುಬ್ಬಳ್ಳಿ ಮೀಟರ್‌ಗೇಜ್ ರೈಲುದಾರಿಗಳ ಸಂಧಿಸ್ಥಳ. ಉರುವಲು ಕಟ್ಟಿಗೆ ಹಾಗೂ ಕಟ್ಟಡ ನಿರ್ಮಾಣಕ್ಕೆ ಬೇಕಾದ ತೊಲೆಗಳು, ಮ್ಯಾಂಗನೀಸ್ ಮತ್ತು ಇದ್ದಿಲು ಇಲ್ಲಿಂದ ವಿವಿಧ ಸ್ಥಳಗಳಿಗೆ ರವಾನಿಸಲ್ಪಡುತ್ತವೆ. (ಎಸ್‌ಎ.ಎನ್.)

**ಲೋಕಪಾವನಿ:** ಕಾವೇರಿಯ ಉಪನದಿ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಹೊನಕೆರೆ ಹೋಬಳಿಯಲ್ಲಿ ಹುಟ್ಟುವುದು. ಈ ನದಿ ಮಂಡ್ಯ ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಾಭಿಮುಖವಾಗಿ ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳಲ್ಲಿ ಹರಿದು ಶ್ರೀರಂಗಪಟ್ಟಣ ತಾಲ್ಲೂಕಿನ ಬಾಬುರಾಯನ ಕೊಪ್ಪಲಿನ ಬಳಿ ಕಾವೇರಿ ನದಿಯನ್ನು ಸೇರುವುದು. ಎಲ್ಲ ಕಾಲಗಳಲ್ಲೂ ಹರಿಯುವ ಈ ನದಿಯ ಅಗಲ ಸು. 45.72 ಮೀ ಕಾವೇರಿಯನ್ನು ಸೇರುವ ಮೊದಲು ಈ ನದಿಗೆ ಮೋತಿತಲಾಬ್‌ನಿಂದ ಹರಿದುಬರುವ ತೊರೆಯೊಂದು ಕೂಡಿಕೊಳ್ಳುವುದು. ಈ ನದಿಗೆ ನಾಗಮಂಗಲ ತಾಲ್ಲೂಕಿನ ಉಯ್ಯನ ಹಳ್ಳಿ ಬಳಿ ಒಂದು ಅಣೆಕಟ್ಟನ್ನು ಕಟ್ಟಲಾಗಿದೆ. ಇದರ ಉದ್ದ ಸು. 112.56 ಮೀ. ಮೇಲುಕೋಟೆ ಹೋಬಳಿಯ ಬೋಳೇನಹಳ್ಳಿ ಬಳಿ ಇನ್ನೊಂದು ಅಣೆಕಟ್ಟನ್ನು ಕಟ್ಟಿದ್ದಾರೆ. ಇದರ ಉದ್ದ ಸು. 40.33 ಮೀ. ಈ ಅಣೆಕಟ್ಟು ಮಾದರಹಳ್ಳಿ ಕೆರೆಗೆ ನೀರನ್ನು ಒದಗಿಸುತ್ತದೆ. ಈ ಎರಡು ಅಣೆಕಟ್ಟುಗಳ ನೀರು ಸುತ್ತಲ ಗ್ರಾಮಗಳ ವ್ಯವಸಾಯಕ್ಕೆ ಬಳಕೆಯಾಗುತ್ತದೆ. *

**ಲೋಕಾಯುಕ್ತ:** ಆಡಳಿತ ವ್ಯವಸ್ಥೆಯಲ್ಲಿ ನಡೆಯಬಹುದಾದ ಭ್ರಷ್ಟಾಚಾರ ಹಾಗೂ ಲಂಚ ಪ್ರಕರಣಗಳನ್ನು ಪತ್ತೆಹಚ್ಚಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಸ್ವಚ್ಛ ಆಡಳಿತಕ್ಕೆ ಅನುವು ಮಾಡಿಕೊಡುವ ಉದ್ದೇಶವುಳ್ಳ ಒಂದು ಕಾನೂನು ವ್ಯವಸ್ಥೆ. ನ್ಯೂಜಿಲೆಂಡ್, ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯ ದೇಶಗಳಲ್ಲಿ ಆಡಳಿತಾತ್ಮಕ ಕಾನೂನು ಪರಿಣಾಮಕಾರಿಯಾಗಿ ಕೆಲಸಮಾಡುತ್ತಿದ್ದರೂ ದುರಾಡಳಿತ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿತು. ಇದರಿಂದಾಗಿ ಸಾಮಾಜಿಕ ಹಾಗೂ ಆರ್ಥಿಕ ಕಾರ್ಯಕ್ರಮಗಳು ಯಶಸ್ವಿಯಾಗದೆ ವಿಫಲವಾದುವು. ಆಗ ಅಲ್ಲಿ ಇಂಥ ವ್ಯವಸ್ಥೆಯನ್ನು ಒಪ್ಪಿಕೊಳ್ಳಲಾಯಿತು.

ಕರ್ನಾಟಕ ಲೋಕಾಯುಕ್ತ 1984ರ ಕಾಯಿದೆ ಪ್ರಕಾರ ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರನ್ನು ನೇಮಕಮಾಡುವ ಅಧಿಕಾರವನ್ನು ರಾಜ್ಯಪಾಲರಿಗೆ ಕೊಟ್ಟಿದೆ. ಲೋಕಾಯುಕ್ತರಾಗಿ ನೇಮಕಗೊಳ್ಳುವ ವ್ಯಕ್ತಿ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಕೆಲಸ ನಿರ್ವಹಿಸಿರಬೇಕು, ಇಲ್ಲವೇ ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿರಬೇಕು. ಯಾವುದೇ ಸಾರ್ವಜನಿಕ ನೌಕರನ ವಿರುದ್ಧ ಮಾಡುವ ಆರೋಪಗಳನ್ನೂ ದೂರುಗಳನ್ನೂ ತನಿಖೆ ಮಾಡುವ ಅಧಿಕಾರ ಲೋಕಾಯುಕ್ತಕ್ಕೆ ಇದೆ. ಅನ್ಯಾಯಕ್ಕೆ ಅಥವಾ ಸಂಕಷ್ಟಕ್ಕೆ ಒಳಗಾದವರಿಗೆ ಶೀಘ್ರ ಪರಿಹಾರ ಒದಗಿಸುವುದು ಇದರ ಪ್ರಧಾನ ಉದ್ದೇಶ. ಲೋಕಾಯುಕ್ತ ಕಾಯ್ದೆ ವ್ಯಾಪ್ತಿಯಲ್ಲಿ ತನಿಖೆಗೆ ಒಳಪಡುವ ಆಸ್ತಿಯ ವಿವರಗಳು, ಪತ್ರಗಳು ಹಾಗೂ ಇತರೆ ದಾಖಲೆಗಳನ್ನು ಪಡೆದುಕೊಳ್ಳುವ ಅಧಿಕಾರವನ್ನು ಲೋಕಾಯುಕ್ತರಿಗೆ ನೀಡಲಾಗಿದೆ. ಉದಾಹರಣೆಗೆ ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪಡೆದುಕೊಳ್ಳುವ, ತನಿಖೆಗೆ ಬೇಕಾಗುವ ಪ್ರಮಾಣಪತ್ರ (ಅಫಿಡವಿಟ್) ಮತ್ತು ಸಾಕ್ಷ್ಯಗಳನ್ನು ಸ್ವೀಕರಿಸುವ ಅಧಿಕಾರವನ್ನು ಇವರಿಗೆ ನೀಡಲಾಗಿದೆ. ಸುಳ್ಳು ಫಿರ್ಯಾದು ಅಥವಾ ದೂರು ನೀಡುವ ವ್ಯಕ್ತಿಯ ವಿರುದ್ಧ ಕ್ರಮ ಜರಗಿಸುವ, ಶಿಕ್ಷೆಗೆ ಶಿಫಾರಸು ಮಾಡುವ ಅಧಿಕಾರವೂ ಇವರಿಗಿದೆ.

ಈ ವ್ಯವಸ್ಥೆಯಲ್ಲಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಶಿಫಾರಸು ಮಾಡುವ ಅಧಿಕಾರವಿದೆಯೇ ಹೊರತು ಶಿಕ್ಷೆಗೊಳಪಡಿಸುವ ಅಧಿಕಾರವಿಲ್ಲ. ಸರ್ಕಾರ ಈ ಶಿಫಾರಸುಗಳನ್ನು ತನ್ನ ಇಷ್ಟಕ್ಕೆ ಅನುಗುಣವಾಗಿ ಜಾರಿಗೊಳಿಸಬಹುದು. ಎನ್. ವೆಂಕಟಾಚಲ ಅವರು ಕರ್ನಾಟಕದ ಮೊದಲ ಲೋಕಾಯುಕ್ತರು. ಇವರ ಅನಂತರ ಸಂತೋಷ ಹೆಗಡೆ ಲೋಕಾಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡದ ಹೊರತು ಅವರ ನೇಮಕದ ಉದ್ದೇಶ ಈಡೇರುವುದಿಲ್ಲವೆಂಬ ಸಾರ್ವಜನಿಕ ಅಭಿಪ್ರಾಯ ವ್ಯಾಪಕವಾಗಿದೆ. *

**ಲೋಕೇಶ್:** 1947–2004. ಪ್ರಸಿದ್ಧ ರಂಗಭೂಮಿ ಹಾಗೂ ಚಲನಚಿತ್ರ ನಟ, ನಿರ್ಮಾಪಕ, ನಿರ್ದೇಶಕ. ಇವರು 1947ರಲ್ಲಿ ಜನಿಸಿದರು. ಕನ್ನಡ ಚಲನಚಿತ್ರರಂಗದ ಆರಂಭಕಾಲದಲ್ಲಿ ನಾಯಕನಟರಾಗಿದ್ದ ಎಂ. ವಿ. ಸುಬ್ಬಯ್ಯನಾಯ್ಡು ಇವರ ತಂದೆ. ಬ್ಯಾಲ್ಯದಿಂದಲೂ ಇವರಿಗೆ ಸಂಗೀತ, ನೃತ್ಯ, ಅಭಿನಯಗಳಲ್ಲಿ ಆಸಕ್ತಿಯಿತ್ತು. ಇವರು ತಮ್ಮ 9ನೆಯ ವಯಸ್ಸಿನಲ್ಲಿ 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ಬಾಲನಟ ಪ್ರಹ್ಲಾದನಾಗಿ ನಟಿಸುವ ಮೂಲಕ ಚಲನಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಪೂರ್ಣಕಾಲಿಕ



ನಟನಾಗುವ ಮೊದಲು ರಾಜ್ಯ ಸರ್ಕಾರದ ವಾರ್ತಾ ಇಲಾಖೆಯ ಸಂಗೀತ ಮತ್ತು ನಾಟಕ ವಿಭಾಗದಲ್ಲಿ ಕಲಾವಿದರಾಗಿ ಸೇವೆಸಲ್ಲಿಸಿದರು (1970–82). ಅಭಿನಯದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ ಇವರು 250ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ.

ವೃತ್ತಿರಂಗಭೂಮಿಯಲ್ಲಿ ಇವರ ತಂದೆ ಸುಬ್ಬಯ್ಯನಾಯ್ಡು ಅವರು ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯನ್ನು ತಮ್ಮ ಸಹೋದರಿ ಬಂಗಾರಮ್ಮನವರ ಜೊತೆಗೂಡಿ ಅನೇಕ ವರ್ಷಗಳ ಕಾಲ ನಟಿಸಿದ್ದರು. ಲೋಕೇಶ್ ಅವರ ನಟರಂಗ ತಂಡ ಹವ್ಯಾಸಿರಂಗ ಪ್ರಯೋಗಗಳ ಸುಗ್ಗಿಗೆ ಕಾರಣವಾಯಿತು. ಸಿ.ಆರ್. ಸಿಂಹ, ಶ್ರೀನಾಥ್, ಗಿರಿಜಾ ಲೋಕೇಶ್ ಮುಂತಾದವರು ಈ ತಂಡದ ಸದಸ್ಯರು.

ಲೋಕೇಶ್ ಅವರು ಮಾಸ್ತಿಯವರ ಕಾಕನಕೋಟೆ ನಾಟಕದಿಂದ ಪ್ರಸಿದ್ಧರಾದರು. ತುಘಲಕ್, ಮಿಡ್ ಸಮ್ಮರ್ ನೈಟ್ಸ್ ಡ್ರೀಂ, ಪೋಲಿಕಿಟ್ಟಿ ಮೊದಲಾದ ನಾಟಕಗಳೂ ಇವರಿಗೆ ಹೆಸರು ತಂದುಕೊಟ್ಟವು. ಅನಂತರ ಹುಣಸೂರು ಕೃಷ್ಣಮೂರ್ತಿ ನಿರ್ದೇಶನದ 'ಅಡ್ಡದಾರಿ' ಚಿತ್ರದಲ್ಲಿ ಯುವ

ನಾಯಕನಟನಾಗಿ ನಟಿಸುವ ಮೂಲಕ ಕನ್ನಡ ಚಲನ ಚಿತ್ರ ಕ್ಷೇತ್ರ ಪ್ರವೇಶಿಸಿದರು. ಪರಸಂಗದ ಗೆಂಡೆತಿಮ್ಮ, ಭೂತಯ್ಯನ ಮಗ ಅಯ್ಯು ಚಿತ್ರಗಳು ಇವರಿಗೆ ಅಪಾರಕೀರ್ತಿ ಹಾಗೂ ಜನಪ್ರಿಯತೆಯನ್ನು ತಂದುಕೊಟ್ಟವು. ಭೂಲೋಕದಲ್ಲಿ ಯಮರಾಜ, ಭೂಮಿಗೆ ಬಂದ ಭಗವಂತ, ಭಕ್ತ ಸಿರಿಯಾಳ, ಪಟ್ಟಣಕ್ಕೆ ಬಂದ ಪತ್ನಿಯರು, ದೇವರ ದುಡ್ಡು, ದೇವರ ಕಣ್ಣು, ಬ್ಯಾಂಕರ್ ಮಾರ್ಗಯ್ಯ, ಮುಂಗಾರಿನ ಮಿಂಚು, ಕಾಕನಕೋಟೆ, ನಿನಗಾಗಿ ನಾನು, ಸಂಕ್ರಾಂತಿ, ಸಂಗೀತಾ, ಗಾನಯೋಗಿ ಪಂಚಾಕ್ಷರಿ ಮುಂತಾದ ಚಿತ್ರಗಳಲ್ಲಿ ನಾಯಕನಟ, ಖಳನಟ, ಪೋಷಕನಟರಾಗಿ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದ್ದರು. ಇವರ ಕೊನೆಯ ಚಿತ್ರ ಶ್ರಾವಣ ಸಂಭ್ರಮ.

ಭೂತಯ್ಯನ ಮಗ ಅಯ್ಯು ಚಿತ್ರ ಪ್ರಸಿದ್ಧವಾದ್ದರಿಂದ ತಮಿಳು ಮತ್ತು ತೆಲುಗು ಚಿತ್ರಗಳ ಅವತರಣಿಕೆಗಳಲ್ಲಿ ಅಯ್ಯುಪಾತ್ರವನ್ನು ಇವರೇ ನಿರ್ವಹಿಸಬೇಕಾಯಿತು. ಇದು ಅವರ ಪ್ರತಿಭೆಗೆ ಹಿಡಿದ ಕನ್ನಡಿ. ಇವರ ಇಡೀ ಕುಟುಂಬ ಚಲನಚಿತ್ರ, ರಂಗಭೂಮಿ ಹಾಗೂ ಕಿರುತೆರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದೆ. ಇವರ ಪತ್ನಿ ಗಿರಿಜಾ ಲೋಕೇಶ್ ಉತ್ತಮ ಪೋಷಕ ನಟಿ. ಮಗಳು ಪೂಜಾ ಲೋಕೇಶ್, ಮಗ ಸೃಜನ್ ಕಿರುತೆರೆಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ.

ಇವರು ಹಲವಾರು ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ, ಫಿಲಂಫೇರ್ ಪ್ರಶಸ್ತಿ, ಮೂರು ಬಾರಿ ರಾಜ್ಯಪ್ರಶಸ್ತಿ ಇವರಿಗೆ ಲಭಿಸಿವೆ. ಭೂತಯ್ಯನ ಮಗ ಅಯ್ಯು (1973), ಪರಸಂಗದ ಗೆಂಡೆತಿಮ್ಮ (1978), ಬ್ಯಾಂಕರ್ ಮಾರ್ಗಯ್ಯ (1983) ಚಿತ್ರಗಳಲ್ಲಿ ಉತ್ತಮ ಅಭಿನಯಕ್ಕಾಗಿಯೂ ಪ್ರಶಸ್ತಿಗಳು ದೊರೆಕಿವೆ. ಇವರು ನಿರ್ದೇಶಿಸಿದ ಶ್ರೀಕೃಷ್ಣ ಆಲನಹಳ್ಳಿಯವರ ಕಾದಂಬರಿ ಆಧಾರಿತ ‘ಭುಜಂಗಯ್ಯನ ದಶಾವತಾರಗಳು’ ಚಲನ ಚಿತ್ರಕ್ಕೆ ರಾಷ್ಟ್ರೀಯ ಪುರಸ್ಕಾರ, ಆರ್ಯಭಟ ಪ್ರಶಸ್ತಿ, ಆರ್.ಎನ್.ಆರ್. ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಪ್ರಾಪ್ತವಾಗಿವೆ. ಇವರು 2004 ಅಕ್ಟೋಬರ್ 10 ರಂದು ಬೆಂಗಳೂರಿನಲ್ಲಿ ನಿಧನರಾದರು. ನಿಧನರಾಗುವುದಕ್ಕೆ ಮೊದಲು ವೈದ್ಯ ಸಂಶೋಧನೆಗೆ ತಮ್ಮ ದೇಹವನ್ನು ದಾನ ಮಾಡುವಂತೆ ಉಯಿಲು ಬರೆದಿದ್ದರು. ಅದರಂತೆ ಇವರ ನಿಧನಾನಂತರ ಇವರ ದೇಹವನ್ನು ವೈದ್ಯಕೀಯ ಸಂಶೋಧನೆಗೆ ನೀಡಲಾಯಿತು. ಹೀಗೆ ಇವರು ಸಾವಿನಲ್ಲೂ ಶ್ರೇಷ್ಠತೆ ಮೆರೆದಿದ್ದಾರೆ. (ಎಸ್.ಜಿ.ಪಿ.)

# ವ

**ವಂದನಾರಾವ್, ಕರ್ವಾಲೋ:** 1963–. ಅರ್ಜುನ ಪ್ರಶಸ್ತಿ ಪಡೆದ ಪ್ರಸಿದ್ಧ ಕ್ರೀಡಾಪಟು. ಇವರು 1963 ಏಪ್ರಿಲ್ 21 ರಂದು ಮಂಗಳೂರಿನಲ್ಲಿ ಜನಿಸಿದರು. ಸೇಂಟ್ ಮೇರೀಸ್ ಬಾಲಕಿಯರ ಶಾಲೆಯಲ್ಲಿ ಓದಿ, ಬೆಸೆಂಟ್ ಮಹಿಳಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದರು. ಇವರು ಉತ್ತಮ ಕ್ರೀಡಾಪಟು ಆಗಿದ್ದರೂ ಟೆನ್ನಿಸ್, ಬ್ಯಾಡ್ಮಿಂಟನ್ ಹಾಗೂ ಈಜು ಕ್ರೀಡೆಗಳಲ್ಲಿಯೂ ಆಸಕ್ತಿ ವಹಿಸಿದರು. ಮಂಗಳೂರು ವಿಶ್ವವಿದ್ಯಾಲಯ ತಂಡದ ನಾಯಕಿಯಾಗಿ ಕರ್ನಾಟಕ ತಂಡವನ್ನು ಮುನ್ನಡೆಸಿದರು.

ಇವರು ಅನೇಕ ಬಾರಿ ಎರಡು ಫರ್ಲಾಂಗ್ (400 ಮೀ) ಓಟದ ಸ್ಪರ್ಧೆಯಲ್ಲಿ ಉತ್ತಮವಾಗಿ ಓಡಿ ಪಿ.ಟಿ. ಉಷಾಳ ಅನಂತರದ ಅಂದರೆ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

1982 ರಲ್ಲಿ ದೆಹಲಿಯ ಏಷ್ಯನ್‌ಕ್ರೀಡೆಗಳಲ್ಲಿ ಭಾಗವಹಿಸಿ ದೇಶದ ಗಮನ ಸೆಳೆದರು. ಅನಂತರ ಸು. 8 ವರ್ಷಗಳ ಕಾಲ ರಾಷ್ಟ್ರದ ಪ್ರಮುಖ ಅಥ್ಲೆಟ್‌ಗಳಲ್ಲಿ ಒಬ್ಬರಾಗಿ 4X 400 ಮೀ ರಿಲೇ ಪಂದ್ಯದಲ್ಲಿ ಪರಿಣತಿ ಪಡೆದರು. ಅನೇಕ ಬಾರಿ ಭಾರತವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿ ವೈಯಕ್ತಿಕವಾಗಿ ಉತ್ತಮ ಸಾಧನೆ ಗಳಿಸಿದರು; ತಂಡದ ಯಶಸ್ಸಿಗೂ ದುಡಿದರು.

1984ರ ಒಲಂಪಿಕ್ಸ್ ಕ್ರೀಡೆಗಳಲ್ಲಿ 7ನೆಯ ಸ್ಥಾನ ಗಳಿಸಿದ 4X 400 ಮೀ ರಿಲೇ ತಂಡದಲ್ಲಿ ಇವರೂ ಒಬ್ಬ ಸದಸ್ಯೆಯಾಗಿದ್ದರು. ಈ ತಂಡದ ಇತರ ಸದಸ್ಯರೆಂದರೆ ಪಿ.ಟಿ. ಉಷಾ, ವಲ್ಸಮ್ಮ ಮತ್ತು ಶೈನೀ ಅಬ್ರಹಾಂ. ಅನಂತರ ರೋಮ್‌ನಲ್ಲಿ ನಡೆದ (1987) ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಈ ತಂಡ ತನ್ನ ಸ್ಥಾನವನ್ನು ಉತ್ತಮಪಡಿಸಿಕೊಂಡಿತು. ಕ್ರಮವಾಗಿ ಜಕಾರ್ತ ಮತ್ತು ಸಿಂಗಪುರ್‌ನಲ್ಲಿ 1985 ಮತ್ತು 1987 ರಲ್ಲಿ ನಡೆದ ಏಷ್ಯನ್ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗೆದ್ದರು. 4X 400 ಮೀ ರಿಲೇ ತಂಡದ ಸದಸ್ಯರಾಗಿದ್ದರು. ಸಿಂಗಪುರ್‌ನಲ್ಲಿ ನಡೆದ ಎ.ಟಿ.ಎಫ್. ಕೂಟದಲ್ಲಿ ಬೆಳ್ಳಿ ಪದಕ ಗಳಿಸಿಕೊಂಡ ರಿಲೇ ತಂಡದಲ್ಲಿಯೂ ಇವರು ಸದಸ್ಯರಾಗಿದ್ದರು. ಸಿಯೋಲ್‌ನ ಏಷ್ಯನ್ ಕ್ರೀಡೆಯಲ್ಲಿ ಈ ತಂಡ ಚಿನ್ನದ ಪದಕವನ್ನು ಗೆದ್ದು ದೇಶದ ಪ್ರತಿಷ್ಠೆಯನ್ನು ಹೆಚ್ಚಿಸಿತು. ಭಾರತ ಸರ್ಕಾರ ಇವರ ಸಾಧನೆಯನ್ನು ಗುರುತಿಸಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿತು (1987). ಇಂಗ್ಲಿಷ್ ಕಾದಂಬರಿಗಳನ್ನು ಓದುವುದು, ಪಾಪ್ ಸಂಗೀತ ಕೇಳುವುದು ಇವರಿಗೆ ಪ್ರಿಯವಾದ ಹವ್ಯಾಸಗಳು. ಈಗ ಇವರು ಮಂಗಳೂರಿನ ಪಾಂಡೇಶ್ವರದಲ್ಲಿ ಕಾರ್ಪೊರೇಷನ್ ಬ್ಯಾಂಕಿನಲ್ಲಿ ಕ್ರೀಡಾ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎಸ್.ಆರ್.ಯು.)

**ವಚನ:** ಒಂದು ಕಾವ್ಯಪ್ರಕಾರ. ಹಳಗನ್ನಡ ಚಂಪೂಕಾವ್ಯಗಳಲ್ಲಿ ವಚನ ಎಂಬ ಮಾತು ಗದ್ಯ ಎಂಬರ್ಥದಲ್ಲಿ ಬರುತ್ತದೆ. ಹನ್ನೆರಡನೆಯ ಶತಮಾನದ ವೀರಶೈವ ವಚನಕಾರರು ಬರೆದ ವಚನಗಳು ಚಂಪೂಕಾವ್ಯಗಳ ಗದ್ಯವಲ್ಲ. ಗದ್ಯ ಅನಿರ್ದಿಷ್ಟವಾದ ಸಾಲುಗಳುಳ್ಳದ್ದು; ಅದನ್ನು ಪಾದಗಳಾಗಿ ವಿಂಗಡಿಸಲು ಸಾಧ್ಯವಿಲ್ಲ. ಸ್ಪಷ್ಟವಾದ ಲಯ ಅಲ್ಲಿ ಕೇಳಬರುವುದಿಲ್ಲ. ಆದರೆ ವೀರಶೈವ ಕೃತಿಕಾರರು ಬರೆದ ವಚನಗಳು ಚಿಕ್ಕ ಚಿಕ್ಕ ಕೃತಿಗಳು. ಇವುಗಳಲ್ಲಿ ಸಾಲುಗಳು ಇಷ್ಟೇ ಇರಬೇಕೆಂಬ ನಿಯಮವಿರದಿದ್ದರೂ ಸಾಮಾನ್ಯವಾಗಿ ಒಂದರಿಂದ ಹತ್ತುಹದಿನೈದು ಸಾಲುಗಳಿರುತ್ತವೆ (ಕೆಲವು ವಚನಗಳು ಇನ್ನೂ ದೊಡ್ಡದಾಗಿರುವುದುಂಟು). ಈ ಸಾಲುಗಳನ್ನು ಕೃತಿಕಾರರೇ ಇಷ್ಟು ಪಾದಗಳಾಗಿ ವಿಂಗಡಿಸಬೇಕೆಂದು ಸೂಚನೆಗಳನ್ನು ಕೊಟ್ಟಿರದಿದ್ದರೂ ಅರ್ಥಲಯಗಳನ್ನನುಸರಿಸಿ ಪದವಿಂಗಡಣೆ ಸಾಧ್ಯ. ಪದ್ಯದ ನಿಯತವಾದ ಲಯವಿರದಿದ್ದರೂ ಲಯವಿಲ್ಲವೆಂದು ಹೇಳಲು

ಬರುವಂತಿಲ್ಲ. ಇದರಿಂದ ವಚನಗಳು ಗದ್ಯ, ಪದ್ಯಗಳ ಮಧ್ಯದ ಒಂದು ಪ್ರಕಾರವೆಂದು ಭಾವಿಸಬೇಕಾಗುತ್ತದೆ. ಇವುಗಳನ್ನು ಪದ್ಯಾತ್ಮಕವಾದ ಗದ್ಯವೆಂದು ಕರೆಯಬಹುದು.

ವಚನ ಹೇಗೆ ಹುಟ್ಟಿತು ಎಂಬುದನ್ನು ನಿರ್ಧರಿಸಲು ಸಾಧ್ಯವಾಗಿಲ್ಲ. ಅದರ ಉಗಮದ ಬಗ್ಗೆ ಪರಸ್ಪರ ಭಿನ್ನವಾದ ಅಭಿಪ್ರಾಯಗಳು ಹೊರಟಿವೆ. ಅವುಗಳನ್ನು ಬಿಟ್ಟು ನೋಡಿದರೂ ವಚನಗಳು ಮೊತ್ತಮೊದಲು ಕಾಣಿಸುವುದು ಹನ್ನೊಂದನೆಯ ಶತಮಾನದ ಮಧ್ಯಭಾಗದಲ್ಲಿ. ದೇವರ ದಾಸಿಮಯ್ಯ (ಸು. 11ನೆಯ ಶತಮಾನದ ಉತ್ತರಾರ್ಧ, 12ನೆಯ ಶತಮಾನದ ಪೂರ್ವಾರ್ಧ) ನಮಗೆ ತಿಳಿದಮಟ್ಟಿಗೆ ಮೊತ್ತಮೊದಲ ವಚನಕಾರ. ಇವನ ವಚನಗಳು ಬಹು ಸುಂದರವಾಗಿದ್ದು ಮುಂದಿನವರ ವಚನಗಳಿಗಿಂತ ಹೆಚ್ಚು ಸ್ಪಷ್ಟವಾದ ಪದ್ಯಲಯವನ್ನೂ ಪ್ರಾಸವಿನ್ಯಾಸವನ್ನೂ ಒಳಗೊಂಡಿವೆ. ಇವನ ಅನೇಕ ವಚನಗಳಲ್ಲಿ ತ್ರಿಪದಿಯ ಲಕ್ಷಣಗಳು ಎದ್ದುಕಾಣುತ್ತವೆ. ಇವನಿಗಿಂತ ಹಿಂದೆ ವಚನಗಳನ್ನು ಬರೆದವರು ಇದ್ದುದೂ ಅಸಂಭವವಲ್ಲ (ಅವು ಸದ್ಯಕ್ಕೆ ಉಪಲಬ್ಧವಾಗಿಲ್ಲ).

ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಧಾರ್ಮಿಕ ನಾಯಕರು ಸಾಮಾಜಿಕ-ಧಾರ್ಮಿಕ ಕ್ರಾಂತಿಗಾಗಿ ಪಣ ತೊಟ್ಟಾಗ, ಅವರು ಕನ್ನಡವನ್ನು ಸಹಜವಾಗಿಯೇ ತಮ್ಮ ಮಾಧ್ಯಮವನ್ನಾಗಿ ಮಾಡಿಕೊಂಡರು. ಕನ್ನಡ ಅವರ ಅನುಭವಗಳ ಅಭಿವ್ಯಕ್ತಿಗೆ, ಜನಸಾಮಾನ್ಯರಲ್ಲಿ ಧರ್ಮಪ್ರಚಾರಕ್ಕೆ ಮಾಧ್ಯಮವಾಗಿ ಪರಿಣಮಿಸಿತು. ಆ ನಾಯಕರ ಗಮನದಲ್ಲಿದ್ದುದು ಜನಸಾಮಾನ್ಯರಾದ್ದರಿಂದ ಅವರಿಗೆ ಅರ್ಥವಾಗುವ ಭಾಷೆಯನ್ನು ಬಳಸುವ ಅಗತ್ಯ ಅನಿವಾರ್ಯವಾಗಿದ್ದಿತು. ಇದರಿಂದ ಅವರು ಹಳಗನ್ನಡದ ಕ್ಲಿಷ್ಟಭಾಷೆಯನ್ನು ತ್ಯಜಿಸಿ ನಡುಗನ್ನಡದ ಸರಳ ಭಾಷೆಯನ್ನು, ತಮ್ಮ ಸಮಕಾಲೀನವಾದ ಶಿಷ್ಟಭಾಷೆಯನ್ನು ಬಳಸಿದರು. ಅವರ ಉದ್ದೇಶ ಕಾವ್ಯಗಳನ್ನು ಬರೆಯುವುದಾಗಿರಲಿಲ್ಲವಾದ್ದರಿಂದ ವೃತ್ತ, ಕಂದ, ರಗಳೆಗಳ ಚೌಕಟ್ಟನ್ನು ಅವರು ಆರಿಸಿಕೊಳ್ಳಲಿಲ್ಲ. ಅದರ ಬದಲು, ಮೊದಲೇ ದೇವರದಾಸಿಮಯ್ಯನಿಂದ ರಚಿತವಾಗಿದ್ದ ವಚನಗಳ ರೀತಿ ಅವರಿಗೆ ಪ್ರಿಯವಾಗಿದ್ದು, ಆ ಮಾರ್ಗವನ್ನೇ ಅವರು ಅನುಸರಿಸಿದರು. ವಚನಗಳನ್ನು ಬರೆಯಲು ಭಾಷಾಪಾಂಡಿತ್ಯ ಬೇಕಾಗಿಲ್ಲ. ಛಂದಸ್ಸಿನ ನಿಯಮಗಳನ್ನು ತಿಳಿದಿರಬೇಕಾಗಿಲ್ಲ. ಅಲ್ಲಿ 'ನಿಯಮ'ಗಳೆಂಬುವೇ ಇಲ್ಲ. ಇದರಿಂದಾಗಿ ಬಸವಣ್ಣ, ಅಲ್ಲಮಪ್ರಭು ಮುಂತಾದ ವಿದ್ವಾಂಸರು ಮಾತ್ರವಲ್ಲದೆ, ಬೇರೆ ಬೇರೆ ವೃತ್ತಿಗಳನ್ನವಲಂಬಿಸಿದ್ದ ಅಷ್ಟೊಂದು ವಿದ್ಯಾವಂತರಲ್ಲದ ನೂರಾರು ಸ್ತ್ರೀಯರೂ ತಮ್ಮ ಅನುಭವಗಳನ್ನು ವಚನಗಳಲ್ಲಿ ಹರಿಸುವುದು ಸಾಧ್ಯವಾಯಿತು.

ಬಸವಣ್ಣನವರು ಒಂದು ಕಡೆ ತಮಗೆ ಸಂಗೀತ ಜ್ಞಾನವಾಗಲಿ, ಛಂದೋಜ್ಞಾನವಾಗಲಿ ಇಲ್ಲವೆಂದೂ ಅದು ಒಲಿದಂತೆ ಹಾಡುವವನೆಂದೂ ಹೇಳಿಕೊಂಡಿದ್ದಾರೆ. ಇಲ್ಲಿ ಹಾಡು ಎನ್ನುವ ಮಾತು ಮುಖ್ಯ. ವಚನಗಳು ಶುದ್ಧ ಪದ್ಯಗಳಲ್ಲದಿದ್ದರೂ ಅವು ಹಾಡಿಗೆ, ರಾಗಾಲಾಪನೆಗೆ ಅಳವಡುತ್ತಿದ್ದುದರಿಂದ ಅವುಗಳನ್ನು ಹಾಡುತ್ತಿದ್ದರು (ಇಂದಿಗೂ ವಚನಗಾಯನವನ್ನು ನಾವು ಕೇಳಬಹುದು). ಅಲ್ಲಮಪ್ರಭು ಕೈಯಲ್ಲಿ ದಂಡಿಗೆ ಹಿಡಿದು ವಚನಗಳನ್ನು ಹಾಡುತ್ತ ಲೋಕದಲ್ಲಿ ಸಂಚರಿಸುತ್ತಿದ್ದನೆಂದು ಶೂನ್ಯಸಂಪಾದನೆಯಲ್ಲಿ ಹೇಳಿದೆ. ಹರಿಹರನ ರಗಳೆಗಳಲ್ಲಿ ಬಸವಣ್ಣ, ಅಕ್ಕಮಹಾದೇವಿ ಮೊದಲಾದವರು 'ಅಂದಂದಿನುಚಿತಕೆ ಗೀತಮಂ ಪಾಡುತ್ತಿದ್ದ' ಉಲ್ಲೇಖಗಳಿವೆ. ಯಾವುದೋ ಸನ್ನಿವೇಶ ಮನಸ್ಸನ್ನು ಕಲಕಿದಾಗ, ಅಪೂರ್ವ ಅನುಭವವಾದಾಗ ಅದು ವಚನದ ಮೂಲಕ ಹೊರಬರುತ್ತಿದ್ದಿತು. ಶಿವಾನುಭವ ಸುಖ ಉಕ್ಕಿ ಹರಿದದ್ದೇ ವಚನವಾಯಿತು ಎಂಬ ಕಲ್ಲುಮಠದ ಪ್ರಭುದೇವನ ಮಾತು ಈ ದೃಷ್ಟಿಯಿಂದ ಅರ್ಥಪೂರ್ಣವಾಗುತ್ತದೆ. ಸಿದ್ಧರಾಮನ ವಚನಗಳನ್ನು ಅವನ ಶಿಷ್ಯರು ಶುದ್ಧ ಭೈರವಿ ರಾಗದಲ್ಲಿ ಹಾಡುತ್ತಿದ್ದರೆಂಬ ರಾಘವಾಂಕನ ಮಾತನ್ನು ಇಲ್ಲಿ ಲಕ್ಷಿಸಬಹುದು. ಅಂತರಂಗದ ಅನುಭವ ವ್ಯಕ್ತವಾಗುವ ವಚನಗಳು ಒಂದು ಭಾಗವಾದರೆ, ನೀತಿನಿರೂಪಣೆಯನ್ನು ಮಾಡುವ ವಚನಗಳು ಇನ್ನೊಂದು ಭಾಗವಾಗುತ್ತದೆ. ಇದರಿಂದಾಗಿ ಒಟ್ಟಾರೆ ವಚನಗಳನ್ನು ಸಾಹಿತ್ಯವೆಂದೋ ಶಾಸ್ತ್ರವೆಂದೋ ಕರೆಯುವುದು ಕಷ್ಟವಾಗುತ್ತದೆ.

ಎಲ್ಲ ವಚನಕಾರರೂ ಒಂದೇ ಮಟ್ಟದವರಲ್ಲ. ಅವರವರ ಶಕ್ತಿ, ಪಾಂಡಿತ್ಯ, ಅನುಭವ, ಜೀವನದೃಷ್ಟಿ, ಸಂಸ್ಕಾರ ಇತ್ಯಾದಿಗಳಿಂದ ಒಬ್ಬೊಬ್ಬನೂ ಬೇರೆಬೇರೆಯಾಗಿರುವುದು ಸಹಜವೇ. ಅವರಲ್ಲಿ ಬಸವಣ್ಣನಂಥ ಅತಿಶ್ರೇಷ್ಠ ವಚನಕಾರರಿರುವಂತೆ, ಆದಯ್ಯನಂಥ ಸಾಮಾನ್ಯ ವಚನಕಾರರೂ ಇದ್ದಾರೆ. ಸಾಹಿತ್ಯದ ದೃಷ್ಟಿಯಿಂದಲೋ ಅಥವಾ ಇನ್ನಾವುದೇ ದೃಷ್ಟಿಯಿಂದಲೋ ಅನೇಕರು ಬಹು ಸಾಮಾನ್ಯ ಕೃತಿಕಾರರಾಗಿ ಕಂಡುಬಂದರೂ ಇಡೀ ಭರತಖಂಡದಲ್ಲಿ ಜನಸಾಮಾನ್ಯರು ಈ ಪ್ರಮಾಣದಲ್ಲಿ ಕೃತಿರಚನೆ ಮಾಡಲು ಎಂದೂ ಮುಂದೆ ಬಂದಿರಲಿಲ್ಲ. ಈ ದೃಷ್ಟಿಯಿಂದಲೂ ವಚನ ಸಾಹಿತ್ಯ ಅಪೂರ್ವವಾದುದು. ಇದರ ಜೊತೆಗೆ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದ್ದವರು ತಮ್ಮ ತಮ್ಮ ವೃತ್ತಿಗಳ ಚೌಕಟ್ಟಿನಲ್ಲೇ ತಮ್ಮ ತಮ್ಮ ಅನುಭವಗಳನ್ನು ಕಂಡುಕೊಳ್ಳಲು, ಅಭಿವ್ಯಕ್ತಗೊಳಿಸಲು ಪ್ರಯತ್ನಗಳನ್ನು ಮಾಡಿರುವುದೂ ವಚನಸಾಹಿತ್ಯದ ಒಂದು ವೈಶಿಷ್ಟ್ಯವೆನ್ನಬಹುದು.

ವಚನರಚನೆಯಲ್ಲಿ ಶ್ರೇಷ್ಠ ಕಲೆಗಾರಿಕೆ ಕೆಲವರಲ್ಲಿ ಮಾತ್ರ ಕಂಡುಬರುತ್ತದೆ. ಉದಾಹರಣೆಗೆ ದೇವರ ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಗಣೇಶ ಮಸಣಯ್ಯ ಮೊದಲಾದವರು. ವಚನ ಸಾಹಿತ್ಯದ ಶ್ರೇಷ್ಠ ಪ್ರತಿನಿಧಿಯೆಂದರೆ ಬಸವಣ್ಣನವರು. ಅವರೇ ಆ ಕಾಲದ ಕ್ರಾಂತಿಯ ನಾಯಕರೂ ಆಗಿದ್ದರು.

ಹನ್ನೆರಡನೆಯ ಶತಮಾನದಲ್ಲಿ ಒಂದು ಸಾಹಿತ್ಯಪ್ರಕಾರವಾಗಿ ಬೆಳೆದು ನಿಂತ ವಚನ ಕನ್ನಡ ಸಾಹಿತ್ಯಕ್ಕೆ ಹೊಸ ಅನುಭವ, ಕನ್ನಡ ಭಾಷೆಗೆ ಹೊಸ ಹದವನ್ನು ತಂದುಕೊಟ್ಟಿತು. ಮುಂದೆ ಹರಿಹರ, ರಾಘವಾಂಕರಿಗೆ ಪ್ರಚೋದನೆಯನ್ನು ನೀಡಿ ಅವರಿಂದ ಹೊಸ ಕಾವ್ಯಮಾರ್ಗಗಳನ್ನು ನಿರ್ಮಾಣಮಾಡಿಸಿತು. ಆದರೆ ಬಸವಣ್ಣ ಮೊದಲಾದ ವಚನಕಾರರಾದ ಮೇಲೆ ಕೆಲವು ಶತಮಾನಗಳವರೆಗೆ ವಚನಗಳನ್ನು ಯಾರೂ ಬರೆಯಲಿಲ್ಲ. ಹದಿನೈದನೆಯ ಶತಮಾನದಲ್ಲಿ ತೋಂಟದ ಸಿದ್ಧಲಿಂಗಯತಿ ಮತ್ತು ಅವರ ಪರಂಪರೆಯ ಕೆಲವರು ವಚನಗಳನ್ನು ಬರೆದರು. ಆದರೆ ಅವು ಗುಣ ಮೌಲ್ಯದಲ್ಲಿ ಬಸವಣ್ಣ ಮುಂತಾದವರ ವಚನಗಳಿಗೆ ಸರಿಸಮಾನವಾಗಲಾರವು. ವಚನ ಒಂದು ಪ್ರಕಾರ ಎಂದು ಭಾವಿಸಿ ಹೇಳುವುದಾದರೆ, ಪ್ರಾಚೀನ ಸಾಹಿತ್ಯದಲ್ಲಿ ಕನ್ನಡ ಭಾಷೆ ತನ್ನದು ಎಂದು ಹೇಳಿಕೊಳ್ಳಬಹುದಾದ್ದು, ವಚನವೆಂದೇ ಕಾಣುತ್ತದೆ. ಇಂಥ ಪ್ರಕಾರ ಇತರ ಭಾಷೆಗಳಲ್ಲಿದ್ದಂತೆ ತೋರುವುದಿಲ್ಲ. ವಚನಗಳಲ್ಲಿ ಬೆಡಗಿನ ವಚನಗಳು ಎಂಬ ಒಂದು ವರ್ಗವನ್ನೂ ಗುರುತಿಸಬಹುದು. (ಎಂ.ಸಿ.)

ವಚನಕಾರರಲ್ಲಿ ಕೆಲವರು ತತ್ತ್ವವಿಷಯವನ್ನು ನಿರೂಪಿಸುವಲ್ಲಿ ಈ ಬೆಡಗಿನ ರೀತಿಯನ್ನು ಬಳಸಿದ್ದಾರೆ. ಹೇಳಬೇಕಾಗಿರುವ ವಿಷಯವನ್ನು ವಿರುದ್ಧಾರ್ಥಕವೆನಿಸುವ, ಆದರೆ ತಾತ್ತ್ವಿಕ ದೃಷ್ಟಿಯಿಂದ ತನ್ನದೇ ಆದ ಪರಂಪರೆಯ ಅರ್ಥವುಳ್ಳ ಶಬ್ದಗಳಿಂದ ಹೇಳುವುದು ಬೆಡಗಿನ ರೀತಿ. ಇಲ್ಲಿ ಬಳಕೆಯಾಗುವ ಮಾತುಗಳಿಗೂ ಆ ಮಾತುಗಳಿಂದ ಹೊಮ್ಮುವ ಭಾವನೆಗೂ ಸಂಬಂಧವೇ ಇಲ್ಲವೆನಿಸಿದರೂ ಆಳವಾಗಿ ವಿಚಾರ ಮಾಡಿದಾಗ

ಆ ಮಾತುಗಳಿಗೆ ತಾತ್ತ್ವಿಕ ದೃಷ್ಟಿಯಲ್ಲಿ ವಿಶಿಷ್ಟ ಅರ್ಥವಿರುವುದು ವ್ಯಕ್ತವಾಗುತ್ತದೆ.

ಇಂಥ ಅನೇಕ ಸೊಗಸಾದ ವಚನಗಳನ್ನು ಅಲ್ಲಮಪ್ರಭು ಬರೆದಿದ್ದಾನೆ. ದೇವರ ದಾಸಿಮಯ್ಯ, ಸಿದ್ಧರಾಮ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಮೋಳಿಗೆ ಮಾರಯ್ಯ, ತುರುಗಾಹಿ ರಾಮಣ್ಣ, ಕೋಲಶಾಂತಯ್ಯ, ಅರಿವಿನ ಮಾರಿತಂದೆ, ಬಿಬ್ಬಿಬಾಚಯ್ಯ, ಮಧುವಯ್ಯ, ಆದಯ್ಯ, ರೇಮ್ಮವ್ವ, ಮಾದಾರ ಧೂಳಯ್ಯ, ವೀರಗೊಲ್ಲಾಳ, ಕಲಕೇತಯ್ಯ, ಅಮುಗಿದೇವಯ್ಯ, ಹಡಪದ ಅಪ್ಪಣ್ಣ, ತೋಂಟದ ಸಿದ್ಧಲಿಂಗೇಶ್ವರ ಮೊದಲಾದ ವಚನಕಾರರೂ ಅಲ್ಲಲ್ಲಿ ಈ ಬೆಡಗಿನ ಶೈಲಿಯನ್ನು ಬಳಸಿಕೊಂಡು ತಾತ್ತ್ವಿಕ ವಿಚಾರವನ್ನು ಪ್ರತಿಪಾದಿಸಿದ್ದಾರೆ. ಇಂಥ ವಚನಗಳು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗಲಿ ಎಂಬ ದೃಷ್ಟಿಯಿಂದ ಅವುಗಳಿಗೆ ಟೀಕೆ ಬರೆಯುವ ಸಂಪ್ರದಾಯವೊಂದು ಪ್ರಚಲಿತವಿತ್ತೆಂದು ತಿಳಿದುಬರುತ್ತದೆ. ಕಲ್ಲಮಠದ ಪ್ರಭುದೇವ, ಮಹಾಲಿಂಗದೇವರು, ಸಿದ್ಧಬಸವರಾಜದೇವರು, ಸೋಮಶೇಖರ ಶಿವಯೋಗಿ ಮೊದಲಾದವರು ಬೆಡಗಿನ ವಚನಗಳಿಗೆ ಟೀಕೆಗಳನ್ನು ಬರೆದಿದ್ದಾರೆ. ಈ ರೀತಿಯ ಟೀಕೆಯುಳ್ಳ ಒಂದು ವಚನವನ್ನು ಗಮನಿಸಬಹುದು:

ಐದು ಸರ್ಪಂಗಳಿಗೆ ತನುವೊಂದು ದಂತವೆರಡು;
ಸರ್ಪ ಕಡಿದು ಸತ್ತ ಹೆಣ ಸುಳಿದಾಡುವುದು ಕಂಡೆ
ಈ ನಿತ್ಯವನಱಿಯದ ಠಾವಿನಲ್ಲಿ ಭಕ್ತಿಯೆಲ್ಲಿಯದೋ ಗುಹೇಶ್ವರಾ

ಎಂಬ ಅಲ್ಲಮಪ್ರಭುವಿನ ಈ ವಚನದಲ್ಲಿ ಬರುವ ಐದು ಸರ್ಪ, ತನು, ದಂತ, ಸತ್ತ ಹೆಣ ಸುಳಿದಾಡುವುದು ಇವೇ ಮೊದಲಾದ ಶಬ್ದಗಳಲ್ಲಿ ಸಂಬಂಧವಿಲ್ಲದಿರುವುದನ್ನು ಗಮನಿಸಬಹುದು. ತಾತ್ತ್ವಿಕ ದೃಷ್ಟಿಯಿಂದ ವಿಚಾರ ಮಾಡಿದರೆ ಮನಸ್ಸೆಂಬ ದೇಹಕ್ಕೆ ಪಂಚೇಂದ್ರಿಯಗಳು ಐದು ಮುಖಗಳು. ಮನಸ್ಸು ತನ್ನ ಸಂಕಲ್ಪ–ವಿಕಲ್ಪಗಳೆಂಬ ಚಂಚಲತೆಯಿಂದ ಜೀವನವನ್ನು ಆವರಿಸಿದಾಗ ಅವನು ತನ್ನ ಸ್ವರೂಪವನ್ನು ಕಳೆದುಕೊಂಡು ಮೃತಪ್ರಾಯನಾಗುತ್ತಾನೆ. ಆ ಅರ್ಥದಲ್ಲಿ ಅವನು ಸತ್ತ ಹಾಗೆ. ಆದರೆ ಅವನು ಅಜ್ಞಾನಿಯಾಗಿ ಭವಚಕ್ರದಲ್ಲಿ ಸುತ್ತುತ್ತಾನೆ. ಸತ್ತ ಹೆಣ ಸುಳಿದಾಡಿದಂತೆ ಈ ಅಜ್ಞಾನಿಯ ತೊಳಲಾಟ. ಪರವನ್ನು ಅರಿತಾಗ ಈ ವಿಷ ವಿಮುಕ್ತವಾಗುವುದು. ಈ ವಿಷ ವಿಮುಕ್ತವಾಗದಿದ್ದರೆ ಲಿಂಗಭಕ್ತಿ ಒಳಕೊಳ್ಳದು ಎಂಬ ಅರ್ಥವುಂಟಾಗುತ್ತದೆ.

ಬೆಡಗು ಶೈಲಿಗೂ ಸಾಂಕೇತಿಕತೆಗೂ ಸಂಪರ್ಕವಿದೆ. ಹಾಗೆಯೇ ಅದ್ಭುತ, ಅತಿಶಯತೆ, ಅರ್ಥಾಂತರತೆ, ವಿರೋಧಾಭಾಸ, ದೀಪಕ, ಅನ್ಯಾಪದೇಶ, ಅಲಂಕಾರಗಳಿಗೂ ಸಂಬಂಧವಿದೆ. ಬೆಡಗಿನಲ್ಲಿ ಬರುವ ಸಾಂಕೇತಿಕತೆಗೆ ತಾತ್ತ್ವಿಕ ಅರ್ಥವಿರುವುದು ಬಹು ಮುಖ್ಯವಾದ ಅಂಶ.

ಬೆಡಗಿನ ವಚನಕ್ಕೆ ಒಗಟಿನ ಜನಪದ ಗೀತೆಗಳು ಮೂಲವಿರಬಹುದೆಂಬ ಅಭಿಪ್ರಾಯವೂ ಇದೆ. ಆದರೆ ಬೆಡಗಿನ ವಚನಗಳು ತಾತ್ತ್ವಿಕ ಅಥವಾ ಯೌಗಿಕ ಅನುಭವಗಳಿಗೆ ಸಂಬಂಧಿಸಿದಂತೆಯೇ ಹೆಚ್ಚಾಗಿರುವುದರಿಂದ ಒಗಟುಗಳು ಇವುಗಳಿಗೆ ಮೂಲ ಎಂದು ಒಪ್ಪುವುದು ಕಷ್ಟ. ಪ್ರಾಯಶಃ ಈ ವಚನಗಳಿಗೆ ವೇದಗಳಲ್ಲಿ, ಅನಂತರ ಬಂದ ತಂತ್ರಸಾಹಿತ್ಯದಲ್ಲಿ ಬೆಳೆದುಬಂದಿರುವ ಬರೆವಣಿಗೆಯೇ ಮೂಲವಾಗಿರಬೇಕೆಂಬುದು ಹೆಚ್ಚು ಸಮರ್ಥನೀಯವಾಗಿ ತೋರುತ್ತದೆ. (ಆರ್.ಆರ್.)

**ವಚನಭಂಡಾರಿ ಶಾಂತರಸ:** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಬಸವೇಶ್ವರರ ಸಮಕಾಲೀನ. ಹನ್ನೆರಡನೆಯ ಶತಮಾನದಲ್ಲಿ ತಲೆದೋರಿದ ಅಸಂಖ್ಯಾತ ವಚನಕಾರರ ವಚನಗಳನ್ನು ಗ್ರಂಥಭಂಡಾರದಲ್ಲಿ ಸಂಗ್ರಹಿಸಿಡುತ್ತಿದ್ದರೆಂಬುದಕ್ಕೆ ಬಸವಪುರಾಣವೇ ಮೊದಲಾದ ಕಾವ್ಯಗಳಲ್ಲಿ ಆಧಾರ ಸಿಕ್ಕುತ್ತದೆ. ಶಾಂತರಸನಿಗೆ ಈ ಕಾರ್ಯದ ಮೇಲ್ವಿಚಾರಣೆ ವಹಿಸಿದ್ದಂತೆ ತೋರುತ್ತದೆ. ಆದುದರಿಂದಲೇ ಈತನಿಗೆ ವಚನಭಂಡಾರಿ ಶಾಂತರಸ ಎಂಬ ಹೆಸರು ಬಂದಿರಬೇಕು.

ಈತನ ಸ್ವಂತ ವಿಷಯಗಳೇನೂ ತಿಳಿದುಬಂದಿಲ್ಲ. ಈತ ಕೇವಲ ವಚನ ಭಂಡಾರಿಯಷ್ಟೇ ಅಲ್ಲದೆ ವಚನಕಾರನೂ ಶ್ರೇಷ್ಠ ಅನುಭಾವಿಯೂ ಆಗಿದ್ದ. ಇದುವರೆಗೆ ಈತನ 62 ವಚನಗಳು ದೊರಕಿವೆ. ವೀರಶೈವ ಧರ್ಮದ ಪ್ರಕ್ರಿಯೆಗಳನ್ನು ಈತ ಚೆನ್ನಾಗಿ ಅರಿತುಕೊಂಡಿದ್ದ ಎಂಬುದಕ್ಕೆ ಈ ವಚನ ಸಾಕ್ಷಿಯಾಗಿದೆ :

ಸ್ಥಳಕುಳವನರಿಯಬೇಕೆಂಬರು, ಭಕ್ತನಾಗಿ ಮಹೇಶ್ವರನಾಗಬೇಕೆಂಬರು
ಮಹೇಶ್ವರನಾಗಿ ಪ್ರಸಾದಿಯಾಗಬೇಕೆಂಬರು,
ಪ್ರಸಾದಿಯಾಗಿ ಪ್ರಾಣಲಿಂಗಿಯಾಗಬೇಕೆಂಬರು
ಪ್ರಾಣಲಿಂಗಿಯಾಗಿ ಶರಣನಾಗಬೇಕೆಂಬರು,
ಶರಣನಾಗಿ ಐಕ್ಯನಾಗ ಬೇಕೆಂಬರು
ಐಕ್ಯ ಏತರಿಂದ ಕೂಟ ನಾನರಿಯೆ, ಒಳಗಣ ಮಾತು ಹೊರಹೊಮ್ಮಿಯಲ್ಲದೆ ಎನಗೆ–ಅರಿಯಬಾರದು
ಶರಣನಾಗಿ ಪ್ರಾಣಲಿಂಗಿಯಾಗಬೇಕು,
ಪ್ರಾಣಲಿಂಗಿಯಾಗಿ ಪ್ರಸಾದಿ ಯಾಗಬೇಕು
ಪ್ರಸಾದಿಯಾಗಿ ಮಹೇಶ್ವರನಾಗಬೇಕು, ಮಹೇಶ್ವರನಾಗಿ ಭಕ್ತನಾಗಬೇಕು
ಭಕ್ತನಾಗಿ ಸಕಲಯುಕ್ತನಾಗಬೇಕು, ಯುಕ್ತಿ ನಿಶ್ಚಯವಾದಲ್ಲಿಯೇ ಐಕ್ಯಸ್ಥಳ
ಒಳಹೊರಗಾಯಿತ್ತು, ಅಲೇಖ ಲೇಖವಾಯಿತ್ತು, ಎನಗೆ ಕಾಣಬಂದಿತ್ತು
ಅಲೇಖನಾದ ಶೂನ್ಯಶಿಲೆಯ ಹೊರಹೊಮ್ಮಿ ಕಂಡೆ ನಿನ್ನನು.

(ಎಸ್.ಬಿ.)

**ವಡ್ಡಾರಾಧನೆ:** ದೊರೆತಿರುವ ಕನ್ನಡ ಗದ್ಯಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುದು (ಸು. 920). ಶಿವಕೋಟ್ಯಾಚಾರ್ಯ ಇದರ ಕರ್ತೃವೆನ್ನುವ ಮತ್ತು ಇದನ್ನು ಒಪ್ಪದಿರುವ ಅಭಿಪ್ರಾಯಗಳು ವಿದ್ವಾಂಸರಲ್ಲಿವೆ.

ಇದು ಜೈನ ಧಾರ್ಮಿಕ ಕಥೆಗಳ ಸಂಗ್ರಹ. ಜ್ಞಾನ, ದರ್ಶನ, ಚಾರಿತ್ರ್ಯ, ತಪಸ್ಸು–ಈ ನಾಲ್ಕನ್ನು ಸ್ಥಿರಮನಸ್ಸಿನಿಂದ ಸಾಧಿಸುವುದನ್ನು ಬೋಧಿಸುವ ಗ್ರಂಥಕ್ಕೆ ಆರಾಧನೆ ಎಂದು ಹೆಸರು. ಜೈನ ವಾಙ್ಮಯದಲ್ಲಿ ಇಂಥ ಅನೇಕ ಗ್ರಂಥಗಳಿದ್ದು ಅವುಗಳಲ್ಲಿ ಸುಮಾರು ಒಂದನೆಯ ಶತಮಾನದಲ್ಲಿದ್ದ ಶಿವಕೋಟಿ ಆಚಾರ್ಯನ ಭಗವತೀ–ಆರಾಧನಾ (ಮೂಲ ಆರಾಧನಾ) ಎಂಬ ಜೈನ ಶೌರಸೇನೀ ಪ್ರಾಕೃತ ಗ್ರಂಥ ಪ್ರಾಚೀನವೂ ಪ್ರಸಿದ್ಧವೂ ಆಗಿದೆ. ಇದರಲ್ಲಿ ಬರುವ ಗಾಥೆಗಳಲ್ಲಿ ಸೂಚಿತವಾಗುವ ಕಥೆಗಳನ್ನು ಮುಂದೆ ಬಂದ ವ್ಯಾಖ್ಯಾನಕಾರರು ವಿಸ್ತರಿಸಿಕೊಂಡರು. ಹೀಗೆ ವಿಸ್ತರಿಸಿಕೊಂಡು ಸಂಸ್ಕೃತದಲ್ಲಿ ಹರಿಷೇಣ ಬೃಹತ್ಕಥಾಕೋಶ ಎಂಬ ಗ್ರಂಥವನ್ನು ರಚಿಸಿದ. ಇದರಲ್ಲಿ ಬರುವ ಕಥಾಸಂಖ್ಯೆ 126–144ರವರೆಗಿನ ಹತ್ತೊಂಬತ್ತು ಕಥೆಗಳು ಕನ್ನಡ ವಡ್ಡಾರಾಧನೆಯಲ್ಲಿ ಬರುತ್ತವೆ. ಅವು ಈ ಕ್ರಮದಲ್ಲಿವೆ: ಸುಕುಮಾರಸ್ವಾಮಿಯ ಕಥೆ, ಸುಕೌಶಳಸ್ವಾಮಿಯ ಕಥೆ, ಗಜಕುಮಾರನ ಕಥೆ, ಸನತ್ಕುಮಾರ ಚಕ್ರವರ್ತಿಯ ಕಥೆ, ಅಣ್ಣಿಕಾಪುತ್ರನ ಕಥೆ, ಭದ್ರಬಾಹು ಭಟಾರರ ಕಥೆ, ಲಲಿತಘಟೆಯ ಕಥೆ, ಧರ್ಮಘೋಷ ಭಟಾರರ ಕಥೆ, ಸಿರಿದಿಣ್ಣ ಭಟಾರರ ಕಥೆ, ವೃಷಭಸೇನ ಭಟಾರರ ಕಥೆ, ಕಾರ್ತಿಕ ಋಷಿಯ ಕಥೆ, ಅಭಯಘೋಷರೆಂಬ ಮುನಿಯ ಕಥೆ, ವಿದ್ಯುಚ್ಚೋರರಿಸಿಯ ಕಥೆ, ಗುರುದತ್ತ ಭಟಾರರ ಕಥೆ, ಚಿಲಾತಪುತ್ರನ ಕಥೆ, ದಂಡಕರಿಸಿಯ

ಕಥೆ, ಮಹೇಂದ್ರದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ ಕಥೆ, ಚಾಣಾಕ್ಯ ರಿಸಿಯ ಕಥೆ, ವೃಷಭಸೇನರೆಂಬ ರಿಸಿಯರ ಕಥೆ. ಈ ಕಥೆಗಳನ್ನು ಉಪಸರ್ಗ ಕೇವಲಿಗಳ ಕಥೆ ಎಂದು ಕರೆಯುವುದೂ ರೂಢಿಯಲ್ಲಿದೆ.

ವಡ್ಡಾರಾಧನೆಯ ಕಥೆಗಳಿಗೆ ಮೂಲವಸ್ತು ಬೃಹತ್ ಕಥಾಕೋಶವೇ ಆದರೂ ಆ ಮೂಲ ಸಾಮಗ್ರಿಯನ್ನು ವಿಸ್ತರಿಸಿ, ಸ್ವಾರಸ್ಯವಾಗಿ ಕಥೆಯನ್ನು ಹೇಳುವ ಕಲೆಗಾರಿಕೆ ಇಲ್ಲಿ ವ್ಯಕ್ತವಾಗಿದೆ. ವಡ್ಡಾರಾಧನೆಯ ಕಥೆಗಳ ಪೀಠಿಕೆಯಲ್ಲಿ ಬರುವ 'ಶ್ರೀ ವೀರವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂಗೆಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪಸರ್ಗ ಮೆಂದಿತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಕೆ ಮೊದಲಾ ಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿ ಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶ ವಿಧಮಪ್ಪ ತಪದೊಳ್ ನೆಗಟ್ದು ಪ್ರಾಯೋಪಗಮನದಿಂ ಸಂನ್ಯಸನಂ ಗೆಯ್ದು ಕರ್ಮಕ್ಷಯಂ ಗೆಯ್ದು ಮೋಕ್ಷಕ್ಕೆ ಪೋದ ಮತ್ತಂ ಸರ್ವಾರ್ಥ ಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಕಳ ಕಥೆಗಳಂ ಪೇೞ್ವಲ್ಲಿ' ಎಂಬ ಮಾತುಗಳಲ್ಲಿ ಗ್ರಂಥಕಾರ ಕಥೆಗಳಲ್ಲಿ ಬರುವ ವಿಷಯನಿರೂಪಣೆ ಮಾಡಿದ್ದಾನೆ. ಅಲ್ಲದೆ ಪ್ರತಿಯೊಂದು ಕಥೆಯ ಪ್ರಾರಂಭದಲ್ಲಿ ಒಂದೊಂದು ಪ್ರಾಕೃತ ಗಾಥೆ ಇದ್ದು ಇದು ಆಯಾ ಕಥೆಯ ಸಾರವನ್ನು ಸಂಕ್ಷೇಪವಾಗಿ ಒಳಗೊಂಡಿರುತ್ತದೆ.

ವಡ್ಡಾರಾಧನೆಯ ಗದ್ಯಶೈಲಿ ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವ ವಾದುದು. ಇಲ್ಲಿ ಕನ್ನಡ ದೇಸಿಗೆ ವಿಶೇಷ ಪ್ರಾಧಾನ್ಯ ದೊರಕಿದೆ. ಸಂಸ್ಕೃತವನ್ನು ಸಮತೂಕದಲ್ಲಿ ಬಳಸಿಕೊಂಡಿದೆ. ಆದರೂ ಅಚ್ಚಗನ್ನಡ ಪದಗಳ ಕಡೆಗೆ ಗ್ರಂಥಕರ್ತೃವಿನ ಒಲವು ನಿಚ್ಚಳವಾಗಿದೆ. ಇಲ್ಲಿನ ಎಲ್ಲ ಕಥೆಗಳ ರಚನೆಯ ಚೌಕಟ್ಟು ಒಂದೇ ರೀತಿಯದಾದರೂ ಕಥೆಗಳಲ್ಲಿ ವೈವಿಧ್ಯ ಕಂಡುಬರುತ್ತದೆ. ಆಗಾಗ ಕಥೆಗಳಲ್ಲಿ ಪುನರುಕ್ತವಾಗುವ ಅತ್ಯಂತ ರೂಪಲಾವಣ್ಯಕಾಂತಿಹಾವಭಾವ ವಿಲಾಸ ವಿಭ್ರಮಂಗಳ ನೊಡೆಯಳ್; ಅಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ; ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ತೆಱದಿಂದಂ ಗ್ರಾಮ ನಗರ ಖೇಡಖರ್ವಡಮಡಂಬಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ-ಈ ಮುಂತಾದ ಕೆಲವು ಪದಸಮುಚ್ಚಯಗಳು, ಸಿದ್ಧ ವಾಕ್ಯಗಳು ಗದ್ಯಶೈಲಿಗೆ ಮೆರುಗನ್ನಿತ್ತಿವೆ. ಕಥೆಗಳೆಲ್ಲ ಸಾಂಪ್ರದಾಯಿಕ, ವೈರಾಗ್ಯ ಬೋಧಕ, ನೀತಿಪರವಾದರೂ ಆಕರ್ಷಕವಾಗಿವೆ. ಸನ್ನಿವೇಶ ರಚನೆ, ಪಾತ್ರಸೃಷ್ಟಿ, ಸಂವಾದಗಳಲ್ಲಿ ಸಜೀವತೆಯಿದೆ. ಯಾವುದೇ ಕಥೆಯಲ್ಲಿಯ ಸಂದರ್ಭವನ್ನೆತ್ತಿ ಪರೀಕ್ಷಿಸಿದರೂ ಈ ಮಾತಿನ ಸತ್ಯತೆ ಮನದಟ್ಟಾಗುತ್ತದೆ. ವಡ್ಡಾರಾಧನೆ ಓದುಗನ ಮನವನ್ನು ಸೆರೆಹಿಡಿದು ಬಿಡುತ್ತದೆ; ಧರ್ಮದ ಪ್ರಭಾವವನ್ನು ಬೀರುತ್ತದೆ. ಪಾತ್ರಗಳ ನಿಚ್ಚಳ ಚಿತ್ರವನ್ನು ಮನದೆರೆಯ ಮೇಲೆ ಸ್ಥಿರವಾಗಿ ನಿಲ್ಲಿಸುತ್ತದೆ. ಈ ಎಲ್ಲ ದೃಷ್ಟಿಗಳಿಂದ ಈ ಕೃತಿ ಪಂಪಪೂರ್ವಯುಗದ ಶ್ರೇಷ್ಠ ಗದ್ಯಗ್ರಂಥವಾಗಿದ್ದು ಇಡೀ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಂತನವಾಗಿ ನಿಲ್ಲತಕ್ಕ ಕೃತಿಯಾಗಿದೆ. ಈ ಗ್ರಂಥವನ್ನು ಕುರಿತು ಆ.ನೇ.ಉಪಾಧ್ಯೆ ಮತ್ತು ಡಿ.ಎಲ್.ನರಸಿಂಹಾಚಾರ್, ಹಂಪ ನಾಗರಾಜಯ್ಯ ಮೊದಲಾದವರು ಸಂಶೋಧನೆ ನಡೆಸಿದ್ದಾರೆ. (ಎಂ.ಎ.)

**ವಯಲೆಟ್ ಆಳ್ವ:** 1908-69. ಸ್ವಾತಂತ್ರ್ಯ ಹೋರಾಟಗಾರರು. ಸಂಸದೀಯಪಟು, ಸಮಾಜ ಸೇವಕಿ ಹಾಗೂ ಪತ್ರಕರ್ತೆ. ಇವರು 1908 ಏಪ್ರಿಲ್ 24 ರಂದು ಅಹಮದಾಬಾದ್‌ನಲ್ಲಿ ಜನಿಸಿದರು. ಇವರ ತಂದೆ ತಾಯಿಯವರ ಒಂಬತ್ತು ಮಕ್ಕಳಲ್ಲಿ ಇವರು ಎಂಟನೆಯವರು. ಮುಂಬಯಿಯ ಸೇಂಟ್ ಜೇವಿಯರ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಎಂ.ಎ. ಪದವಿ ಮುಗಿಸಿದರು. ಸರ್ಕಾರಿ ಕಾಲೇಜಿನಲ್ಲಿ ಎಲ್‌ಎಲ್.ಬಿ. ಶಿಕ್ಷಣ ಪಡೆದರು. ಕರ್ನಾಟಕ ಮೂಲದ, ಮುಂಬೈನಲ್ಲಿ ವಕೀಲ ಶಿಕ್ಷಣ ಪಡೆದ ಜೋಕಿಂ ಆಳ್ವರ ಸಂಗಡ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ದುಮುಕಿದರು. 1937 ನವೆಂಬರ್ 20 ರಂದು ಜೋಕಿಂ ಆಳ್ವರನ್ನು ವಿವಾಹವಾದರು.

ಅನಂತರ ಇಬ್ಬರೂ ವಕೀಲವೃತ್ತಿಯನ್ನು ಕೂಡಿಯೇ ಆರಂಭಿಸಿದರು. ಜೋಕಿಂ ಆಳ್ವ ಅವರು 1941ರ ಉಗ್ರಚಳವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಆ ಸಂದರ್ಭದಲ್ಲಿ ಇವರು ತಮ್ಮ ವಕೀಲಿ ವೃತ್ತಿಯನ್ನೇ ನೆಚ್ಚಿ ಜೀವನ ಸಾಗಿಸಬೇಕಾಯಿತು. ಇವರೂ ಕೂಡ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದರು. ಆಗ ಇವರ ಎರಡನೆಯ ಮಗ ಐದು ತಿಂಗಳ ಕೂಸು. ಇಬ್ಬರೂ ಸೆರೆವಾಸದಿಂದ ಬಿಡುಗಡೆಯಾದ ಮೇಲೆ ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಘಟ್ಟದಲ್ಲಿ ಫೋರಂ ಎಂಬ ರಾಷ್ಟ್ರೀಯ ಇಂಗ್ಲಿಷ್ ಪತ್ರಿಕೆಯನ್ನು 1943 ಆಗಸ್ಟ್ 9 ರಂದು ಆರಂಭಿಸಿದರು. ಇದು ಭಾರತದ ಅತ್ಯಂತ ಪ್ರಭಾವಶಾಲಿ ಪತ್ರಿಕೆಯಾಗಿ ಹೆಸರು ಗಳಿಸಿತು. ವಯಲೆಟ್ ಆಳ್ವ ಅವರು ಬೇಗಂ ಎಂಬ ಮಾಸಪತ್ರಿಕೆ ಆರಂಭಿಸಿದರು. ಮುಂದೆ ಇದೇ ಪತ್ರಿಕೆ ಇಂಡಿಯನ್ ವುಮನ್ ಎಂದು ಪ್ರಸಿದ್ಧಿ ಪಡೆಯಿತು. ಅಖಿಲ ಭಾರತ ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನದ ನಿರ್ದೇಶಕರ ಸಮಿತಿಗೆ ಆಯ್ಕೆಯಾದ ಪ್ರಪ್ರಥಮ ಮಹಿಳೆ ಎಂಬ ದಾಖಲೆ ಇವರದು. ಅಲ್ಲದೆ 1944ರಲ್ಲಿ ಮುಂಬಯಿಯ ಉಚ್ಚನ್ಯಾಯಾಲಯದ ಪೂರ್ಣ ನ್ಯಾಯಾಧೀಶರ ಪೀಠದ ಮುಂದೆ ಮಹಿಳಾ ನ್ಯಾಯವಾದಿಯಾಗಿ ವಾದಿಸಿದ್ದು ಐತಿಹಾಸಿಕ ಮಹತ್ವದ ಘಟನೆಯಾಗಿದೆ. ಇವರು ಮಹಿಳಾ ವಕೀಲರ ಅಂತಾರಾಷ್ಟ್ರೀಯ ಸಂಸ್ಥೆಯ ಉಪಾಧ್ಯಕ್ಷೆಯಾಗಿ ವಿಶೇಷ ಮನ್ನಣೆ ಗೌರವಕ್ಕೂ ಪಾತ್ರರಾದರು.

ರಾಧಾಕೃಷ್ಣನ್, ಜಾಕೀರ್ ಹುಸೇನ್, ವಿ.ವಿ. ಗಿರಿ, ಜವಾಹರಲಾಲ್ ನೆಹರು ಅವರಂಥ ಮಹಾನ್ ವ್ಯಕ್ತಿಗಳ ಕೈಕೆಳಗೆ ಕೆಲಸ ಮಾಡಿದ ಖ್ಯಾತಿ ಇವರದು. 1952 ರಲ್ಲಿ ಇವರು ರಾಜ್ಯಸಭೆಗೆ ಆಯ್ಕೆಯಾಗಿ, ಜೋಕಿಂ ಆಳ್ವ ಅವರು ಲೋಕಸಭೆಗೆ ಆಯ್ಕೆಯಾಗಿ ಏಕಕಾಲದಲ್ಲಿ ಹೋದ ಪ್ರಥಮ ದಂಪತಿಗಳು. ಇವರು ನೆಹರು ಅವರ ಸಂಪುಟದಲ್ಲಿ ಕೇಂದ್ರ ಸರ್ಕಾರದಲ್ಲಿ ಗೃಹಖಾತೆಯ ಉಪಮಂತ್ರಿಯಾಗಿದ್ದರು. 1962 ರಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ರಾಜ್ಯಸಭೆಗೆ ಆಯ್ಕೆಯಾದರು. ಅಲ್ಲಿ ರಾಜ್ಯಸಭೆಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸಿದ ಪ್ರಥಮ ಮಹಿಳೆ ಎಂಬ ಖ್ಯಾತಿ ಇವರದು.

ಭಾರತೀಯ ಸಂಸದೀಯ ನಿಯೋಗದ ಸದಸ್ಯೆಯಾಗಿ ನೈಜೀರಿಯ, ಅಮೆರಿಕ, ಜರ್ಮನಿ, ಜಪಾನ್, ಫಿಲಿಪೀನ್ಸ್, ಆಸ್ಟ್ರೇಲಿಯ ದೇಶಗಳ ಪ್ರವಾಸ ಕೈಗೊಂಡರು. ಇವರು 1969 ನವೆಂಬರ್ 20 ರಂದು ನಿಧನಹೊಂದಿದರು. (ಆರ್.ಜಿ.ಆರ್.)

**ವಯಸ್ಕರ ಶಿಕ್ಷಣ:** ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಪ್ರಧಾನವಾಗಿ ಎರಡು ಸಂಸ್ಥೆಗಳು ಸೇವೆ ಸಲ್ಲಿಸಿವೆ. 1. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, 2.ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿ, ಬೆಳಗಾಂವಿ.

ಭಾರತ ಸರಕಾರದ ಸಾಮೂಹಿಕ ಅಭಿವೃದ್ಧಿ ಯೋಜನೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲೂ ಸಹ 1952ರಲ್ಲಿ ಆ ಕಾರ್ಯಕ್ರಮ ಪ್ರಾರಂಭವಾಯಿತು. ಅದರ ಅಂಗವಾಗಿ ಸಮಾಜ ಶಿಕ್ಷಣ ಕಾರ್ಯಕ್ರಮಗಳೂ ಪ್ರಾರಂಭವಾದವು. ಈ ಕಾರ್ಯಕ್ರಮವನ್ನು ಕಾರ್ಯಗತ ಮಾಡಲು ಪ್ರತಿಯೊಂದು ಅಭಿವೃದ್ಧಿ

ಕ್ಷೇತ್ರಕ್ಕೂ ಒಬ್ಬ ಸಮಾಜ ಶಿಕ್ಷಣ ಕಾರ್ಯಕರ್ತ ಮತ್ತು ಮುಖ್ಯ ಸೇವಕಿಯೊಬ್ಬಳು ಇರುವರು.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಒಂದು ಖಾಸಗಿ ಸಂಸ್ಥೆ. ಇದು ಸರಕಾರದಿಂದ ಅಂಗೀಕೃತವಾದ ತನ್ನದೇ ಆದ ಅಂಗರಚನೆಯನ್ನು ಹೊಂದಿದೆ. ಈ ಸಂಸ್ಥೆ ಪ್ರಾರಂಭದಲ್ಲಿ ಒಬ್ಬ ಚುನಾಯಿತ ಅಧ್ಯಕ್ಷರನ್ನು ಮತ್ತು ಪ್ರಧಾನ ಕಾರ್ಯದರ್ಶಿಯವರನ್ನು ಹೊಂದಿತ್ತು. 1965ರಿಂದ ಕರ್ನಾಟಕ ರಾಜ್ಯ ಸರಕಾರ ಸಮಿತಿಯ ಅಧ್ಯಕ್ಷರನ್ನು ನಾಮಕರಣ ಮಾಡುತ್ತಿತ್ತು.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪತ್ರಿಕೆ

ಸಮಿತಿ ತನ್ನ ಕಾರ್ಯಕ್ಕೆ ನೆರವಾಗುವಂತೆ ಹನ್ನೆರಡು ತಜ್ಞರ ಉಪಸಮಿತಿಗಳನ್ನು ರಚಿಸಿದೆ. ಈ ಉಪಸಮಿತಿಗಳು ತಮಗೆ ಸೀಮಿತವಾದ ವಿಷಯಗಳ ಬಗ್ಗೆ ಪರ್ಯಾಲೋಚಿಸಿ ಕೇಂದ್ರ ಸಮಿತಿಗೆ ಸಲಹೆ ನೀಡುವುವು. ಆ ಉಪಸಮಿತಿಗಳು ಈ ರೀತಿ ಇವೆ: 1 ಜನಪದ ಕಲೆ, 2 ಲೋಕವ್ಯವಹಾರ ಶಿಕ್ಷಣ, 3 ಕನ್ನಡ ಲಿಪಿ ಸಂಸ್ಕರಣ, 4 ಪುಸ್ತಕ ಭಂಡಾರ, 5 ಪ್ರಕಟಣೆ, 6 ಪುಸ್ತಕ ಪ್ರಪಂಚ ಸಂಪಾದಕ ಮಂಡಳಿ, 7 ವಿದ್ಯಾಪೀಠ, 8 ಉಗ್ರಾಣ, 9 ಸಂಶೋಧನೆ ಮತ್ತು ಅಂಕಿಅಂಶಗಳ ಸಂಗ್ರಹ, 10 ಚಲನಚಿತ್ರ ತಯಾರಿಕೆ, 11 ಮಹಿಳಾ ಸಮಿತಿ, 12 ಬೆಳಕು ಸಂಪಾದಕ ಮಂಡಳಿ, ಆವಶ್ಯಕತೆ ಬಿದ್ದಾಗ ಕೇಂದ್ರ ಸಮಿತಿ ಇಂತಹ ಉಪಸಮಿತಿಗಳನ್ನು ರಚಿಸುವುದು. ಈಗ 3,9,11 ಮತ್ತು 12ನೆಯ ಉಪಸಮಿತಿಗಳಿಲ್ಲ.

ಪ್ರತಿಯೊಂದು ಜಿಲ್ಲೆಗೆ ಒಂದು ಜಿಲ್ಲಾ ಸಮಿತಿ ಇರುತ್ತದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳೇ ಅದರ ಅಧ್ಯಕ್ಷರು. ಮೈಸೂರು ನಗರ ಮತ್ತು ಬೆಂಗಳೂರು ನಗರಗಳಿಗೆ ಪ್ರತ್ಯೇಕ ನಗರ ಸಮಿತಿಗಳಿವೆ. ಆಯಾ ನಗರದ ಕಾರ್ಪೊರೇಷನ್ನಿನ ನಗರಸಭಾಧ್ಯಕ್ಷರು ಅದರ ಅಧ್ಯಕ್ಷರು.

ರೈತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆ ಭಾರತ ಸರ್ಕಾರದ ರಾಷ್ಟ್ರೀಯ ಕಾರ್ಯಕ್ರಮ. ಶಕ್ತಿಮಾನ್ ಆಹಾರ ತಳಿಗಳ ವಿಚಾರದಲ್ಲಿ ಅನಕ್ಷರಸ್ಥ ರೈತರಿಗೆ ಮಾಹಿತಿ ಮತ್ತು ಸಾಕ್ಷರತೆಯಿಂದ ಕೂಡಿದ ಸಮಗ್ರ ಸಾಕ್ಷರತಾ ಕಾರ್ಯಕ್ರಮವನ್ನು ನಡೆಸುವುದು ಈ ಯೋಜನೆಯ ಉದ್ದೇಶ. ಈ ಕಾರ್ಯಕ್ರಮ ಈಗ ರಾಜ್ಯದ ಎಂಟು ಜಿಲ್ಲೆಗಳಲ್ಲಿ ನಡೆಯುತ್ತಿದೆ. ಅದಕ್ಕೆ ಬೇಕಾದ ಪಠ್ಯಪುಸ್ತಕ ಮತ್ತು ಪೂರಕ ಪುಸ್ತಕಗಳನ್ನು ಸಮಿತಿಯ ಸಂಶೋಧನಾ ಶಾಖೆ ರಚಿಸಿಕೊಟ್ಟಿದೆ. ಅಲ್ಲದೆ ಈ ಯೋಜನೆಯಲ್ಲಿ ನಿರತರಾದ ಉಪಾಧ್ಯಾಯರ, ಮೇಲ್ವಿಚಾರಕರ ಮತ್ತು ಇತರ ಕಾರ್ಯಕರ್ತರ ತರಬೇತನ್ನು ಸಮಿತಿ ಕೈಕೊಳ್ಳುವುದು.

1976–77ನೆಯ ಸಾಲಿಗೆ 15–25ರ ವಯೋಮಿತಿಯ ಗ್ರಾಮೀಣ ಯುವಕರಿಗೆ ಅನೌಪಚಾರಿಕ ಶಿಕ್ಷಣ ಯೋಜನೆಯನ್ನು ಎರಡು ಜಿಲ್ಲೆಗಳಿಗೆ ಅನ್ವಯಿಸಲಾಯಿತು; 1977–78ನೆಯ ಸಾಲಿನಲ್ಲಿ ಇನ್ನು ನಾಲ್ಕು ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಒಂದು ಜಿಲ್ಲೆಯಲ್ಲಿ ನಡೆಯಲಿರುವ ಅನೌಪಚಾರಿಕ ಶಿಕ್ಷಣ ಯೋಜನೆಯ ಖರ್ಚನ್ನು ಭಾರತ ಸರ್ಕಾರ, ಇನ್ನೊಂದು ಜಿಲ್ಲೆಯಲ್ಲಿ ವೆಚ್ಚವನ್ನು ಆಯಾ ರಾಜ್ಯ ಸರ್ಕಾರ ವಹಿಸಬೇಕೆಂಬ ನಿಯಮವಿದೆ. ಈ ಯೋಜನೆಯನ್ನು ಕಾರ್ಯಗತ ಮಾಡಲು ಬೇಕಾಗುವ ಸೂಕ್ತ ಸಾಹಿತ್ಯ ರಚನೆ ಮತ್ತು ಕಾರ್ಯಕರ್ತರ ತರಬೇತಿಯ ಜವಾಬ್ದಾರಿಯನ್ನು ಸರ್ಕಾರ ಸಮಿತಿಗೆ ವಹಿಸಿದೆ.

**ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕ್ರಮಗಳು:** ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ವಯಸ್ಕರ ನಿರಕ್ಷರತಾ ನಿವಾರಣಾ ಯೋಜನೆಯನ್ನು ಪ್ರಾರಂಭಿಸಿದ ಕೀರ್ತಿ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಸಲ್ಲುವುದು. ಆ ಯೋಜನೆಯ ಪ್ರಕಾರ 1912ರಲ್ಲಿ ಸಂಸ್ಥಾನದಾದ್ಯಂತ ವಯಸ್ಕರಿಗೆ 7,000 ಅಕ್ಷರ ಪ್ರಚಾರ ತರಗತಿಗಳು ಪ್ರಾರಂಭವಾದುವು. ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರಿ ಪುಸ್ತಕ ಭಂಡಾರಗಳು ಅಸ್ತಿತ್ವಕ್ಕೆ ಬಂದವು. ಜನತೆಯಲ್ಲಿ ವೈಜ್ಞಾನಿಕ ಮನೋಭಾವನೆಯನ್ನುಂಟು ಮಾಡಲು ವಿಜ್ಞಾನ ಎಂಬ ಪತ್ರಿಕೆ ಪ್ರಕಟವಾಯಿತು. ಆದರೆ ವಿಶ್ವೇಶ್ವರಯ್ಯನವರ ಈ ಯೋಜನೆ ಬಹುಕಾಲ ಮುಂದುವರಿಯಲಿಲ್ಲ.

1940ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಸಮಾಜ ಸೇವಾ ಉಪಸಮಿತಿ ಅಲ್ಪಪ್ರಮಾಣದ ಅಕ್ಷರ ಪ್ರಚಾರ ಕಾರ್ಯಕ್ರಮವನ್ನು ಕೈಗೊಂಡಿತು. ಈ ಕಾರ್ಯಕ್ಕೆ ಸಂಘ 300 ರೂಪಾಯಿಗಳನ್ನು ಮಂಜೂರು ಮಾಡಿತು. ಸಂಘದ ಕರೆಗೆ ಓಗೊಟ್ಟು 600 ಮಂದಿ ವಿದ್ಯಾರ್ಥಿಗಳು ಅಕ್ಷರ ಪ್ರಚಾರ ಸೇವೆ ಕೈಗೊಳ್ಳಲು ಮುಂದಾದರು. ಅವರೆಲ್ಲರಿಗೂ ವಯಸ್ಕರ ಮನಶ್ಶಾಸ್ತ್ರ ಬೋಧನಾಕ್ರಮ ಮತ್ತು ತರಗತಿ ನಡೆಸುವ ಬಗ್ಗೆ ತರಬೇತಿ ಕೊಡಲಾಯಿತು. ಮೈಸೂರು ಪುರಸಭೆಯೂ ಈ ಕಾರ್ಯದಲ್ಲಿ ಸಹಕರಿಸಿತು.

ಸಮಿತಿಯ ಕಾರ್ಯ ವಿಸ್ತಾರವಾದಂತೆ 1941ರ ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂದಿನ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಮೈಸೂರು ಅಕ್ಷರ ಪ್ರಚಾರ ಸಮಿತಿ ಜನ್ಮ ತಾಳಿತು. ಸಮಿತಿ ಇಡೀ ಮೈಸೂರು ಸಂಸ್ಥಾನಕ್ಕೆ ಅನ್ವಯವಾಗುವಂತೆ ಅಕ್ಷರ ಪ್ರಚಾರ ಯೋಜನೆಯನ್ನು ತಯಾರಿಸಿ ಸರ್ಕಾರದ ಒಪ್ಪಿಗೆಗೆ ಕಳುಹಿಸಿತು. 1941ರ ಅಕ್ಟೋಬರಿನಲ್ಲಿ ಆಗಿನ ವಿದ್ಯಾಮಂತ್ರಿಗಳು ವಯಸ್ಕರ ಶಿಕ್ಷಣ ಕಾರ್ಯಕರ್ತರ ಮತ್ತು ಮುಂದಾಳುಗಳ ಸಭೆಯನ್ನು ಕರೆದು ಸಮಿತಿಯ ಯೋಜನೆಯ ಬಗ್ಗೆ ವಿಚಾರವಿನಿಮಯ ಮಾಡಿದರು. ತತ್ಪರಿಣಾಮವಾಗಿ ಬಿ.ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ ಅಸ್ತಿತ್ವಕ್ಕೆ ಬಂತು. ಸರ್ಕಾರ ಸಮಿತಿಯ ಯೋಜನೆಯನ್ನು ಪರಿಶೀಲಿಸಿ ಮೊದಲನೆಯ ಸಾರಿಗೆ 5,000 ರೂಪಾಯಿಗಳನ್ನು ಮಂಜೂರು ಮಾಡಿತು. ಸಮಿತಿಯ ಕಾರ್ಯಕ್ರಮಗಳು ವಿಸ್ತಾರವಾದಂತೆ ಸರ್ಕಾರ ತನ್ನ ಅನುದಾನವನ್ನು ಹೆಚ್ಚಿಸಿ ಪ್ರೋತ್ಸಾಹಿಸಿಕೊಂಡು ಬಂದಿದೆ. ಅಕ್ಷರ ಪ್ರಚಾರದ

ಕೆಲಸ ವ್ಯಾಪಕವಾಗಿ ನಡೆಯಲು ರಾಜ್ಯಸರ್ಕಾರ ತಾಲ್ಲೂಕು ಮಂಡಳಿ ಮತ್ತು ಪುರಸಭೆಗಳು ತಮ್ಮ ಆಯವ್ಯಯದಲ್ಲಿ ಸೇ. 5ರಷ್ಟು ಹಣವನ್ನು ನಿರಕ್ಷರತಾ ನಿವಾರಣೆಗೆ ಮೀಸಲಾಗಿಡಲು ತಿಳಿಸಿದೆ.

ಈ ಸಮಿತಿ ಅಕ್ಷರ ಪ್ರಚಾರದ ಜೊತೆಗೆ ಇತರ ಪೂರಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿತು. ಆದ್ದರಿಂದ 1945ರಲ್ಲಿ ಸಮಿತಿ ತನ್ನ ಹೆಸರನ್ನು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಎಂಬುದಾಗಿ ಬದಲಾಯಿಸಿಕೊಂಡಿತು. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಎಂದಾಯಿತು. ಸಮಿತಿ ತನ್ನ ಕಾರ್ಯವನ್ನು ಹಳೆಯ ಮೈಸೂರಿನ ಹತ್ತು ಜಿಲ್ಲೆಗಳಲ್ಲಿ ವ್ಯಾಪಕವಾಗಿ ವಿಸ್ತರಿಸಿಕೊಂಡಿತು. ಗಾಂಧೀ ಶತಾಬ್ದಿ ವರ್ಷದಲ್ಲಿ ಸಮಿತಿ ತನ್ನ ಕಾರ್ಯಕ್ರಮವನ್ನು ಇತರ ಹೊಸ ಜಿಲ್ಲೆಗಳಿಗೆ ಸ್ವಲ್ಪಮಟ್ಟಿಗೆ ಹರಡಿತು. ಅದರ ಕಾರ್ಯಕ್ರಮಗಳಲ್ಲಿ ನಿರಕ್ಷರತಾ ನಿವಾರಣೆ, ವಿದ್ಯಾಪೀಠಗಳ ಸ್ಥಾಪನೆ, ಪುಸ್ತಕ ಭಂಡಾರಗಳ ವ್ಯವಸ್ಥೆ, ಪ್ರಕಟನೆ, ಗ್ರಾಮಸೇವಾ ಶಿಬಿರ, ಜನತಾ ಶಿಕ್ಷಣ ಕ್ಷೇತ್ರ ಮುಂತಾದ ಯೋಜನೆಗಳು ಸೇರಿದ್ದವು.

ವಯಸ್ಕರ ನಿರಕ್ಷರತಾ ನಿವಾರಣೆ ಸಮಿತಿಯ ಪ್ರಧಾನ ಕಾರ್ಯಕ್ರಮ: 15ರಿಂದ 45 ವಯೋಮಿತಿಯ ಅನಕ್ಷರಸ್ಥ ವಯಸ್ಕರಿಗೆ ಓದುಬರೆಹ ಮತ್ತು ಲೆಕ್ಕ ಹೇಳಿಕೊಡಲಾಗುತ್ತಿತ್ತು. ವೃತ್ತಪತ್ರಿಕೆಗಳಲ್ಲಿ ಅಚ್ಚಾಗುವ ಸುದ್ದಿ, ಇತರ ಪ್ರಕಟಣೆಗಳನ್ನು ಓದಿ ಅರ್ಥಮಾಡಿಕೊಳ್ಳುವುದು, ಬಳಕೆಯಲ್ಲಿರುವ ತೂಕ, ಅಳತೆ ಮತ್ತು ನಾಣ್ಯಗಳ ವ್ಯವಹಾರದ ಸುಲಭ ಲೆಕ್ಕಾಚಾರವನ್ನು ತಿಳಿದುಕೊಳ್ಳುವುದು, 1ರಿಂದ 10ರ ಮಗ್ಗಿಯನ್ನು ಹೇಳುವುದು, ನೆಂಟರಿಷ್ಟರಿಗೆ ಕಾಗದವನ್ನು, ಕಚೇರಿಗೆ ಒಂದು ಅರ್ಜಿ ಬರೆಯುವ ಶಕ್ತಿಯನ್ನು ಪಡೆಯುವುದು, ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳ ಸಾಮಾನ್ಯ ತಿಳಿವಳಿಕೆಯುನ್ನು ಪಡೆಯುವುದು-ಇವು ಸಾಧಿಸಬೇಕಾದ ಸಾಕ್ಷರತೆಯ ಮಟ್ಟ.

**ತರಗತಿಗಳು:** ಅಕ್ಷರ ಪ್ರಚಾರ ತರಗತಿಯ ಅವಧಿ ಐದು ತಿಂಗಳು. ಇದು ಎರಡು ಹಂತಗಳಲ್ಲಿ ನಡೆಯುವುದು. ಮೊದಲನೆಯ ಹಂತ ಎರಡೂವರೆ ತಿಂಗಳು. ಈ ಅವಧಿಯಲ್ಲಿ ಅಕ್ಷರ ಪರಿಚಯ, ಕಾಗುಣಿತ ಮತ್ತು ಒತ್ತಕ್ಷರಗಳನ್ನು ಪದಪದ್ಧತಿಯ ಮೂಲಕ ಕಲಿಸಲಾಗುವುದು. ಅದಕ್ಕಾಗಿಯೇ ಶಾಸ್ತ್ರೀಯವಾಗಿ ರಚಿಸಿದ ಬಾ ಅಣ್ಣ ಓದು ಕಲಿ ಮತ್ತು ಇದನ್ನು ಓದಣ್ಣ ಎಂಬ ಎರಡು ಪಠ್ಯ ಪುಸ್ತಕಗಳಿವೆ. ವಯಸ್ಕರು ಓದುವ ಪುಸ್ತಕ, ಬೋಧನೆಯ ಎರಡನೆಯ ಹಂತ ಮೊದಲನೆಯ ಹಂತದಲ್ಲಿ ಕಲಿತ ಓದು ಸ್ಥಾಯಿಯಾಗಿ ನಿಲ್ಲಲು ಪೋಷಕವಾಗುವಂತೆ ವಯಸ್ಕರು ಓದುವ ಪುಸ್ತಕ ಬಳಸಲಾಗುವುದು. ಜೊತೆಗೆ ಸುಲಭ ಲೆಕ್ಕಾಚಾರವನ್ನು ಕಲಿಸಲಾಗುವುದು. ಇದು ಸಾಂಪ್ರದಾಯಿಕ ಸಾಕ್ಷರತಾ ತರಗತಿಯ ವಿವರ. ಒಟ್ಟಿನಲ್ಲಿ ಸಮಿತಿ ಮೂರು ತೆರನಾದ ಅಕ್ಷರ ಪ್ರಚಾರ ತರಗತಿಗಳನ್ನು ನಡೆಸುತ್ತಿದೆ. ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ರಾಷ್ಟ್ರೀಯ ಸೇವಾಯೋಜನೆಯ (ಎನ್.ಎಸ್.ಎಸ್.) ವಿದ್ಯಾರ್ಥಿಗಳು ಸಹ ಈ ಕಾರ್ಯದಲ್ಲಿ ನಿರತರಾಗಿರುವರು. ಪ್ರಾರಂಭದಿಂದ 1976-77ನೆಯ ಸಾಲಿನವರೆಗೆ 9,45,254 ಮಂದಿ ವಯಸ್ಕರು ಅಕ್ಷರಸ್ಥರಾಗಿದ್ದರು. ಅನಂತರದ ವರ್ಷಗಳ ಅಕ್ಷರಸ್ಥರ ಸಂಖ್ಯೆ ದ್ವಿಗುಣ, ತ್ರಿಗುಣಗೊಂಡಿದೆ.

**ಪುಸ್ತಕ ಭಂಡಾರ ಮತ್ತು ವಾಚನಾಲಯ:** ಹೊಸದಾಗಿ ಅಕ್ಷರ ಕಲಿತವರು ವಯಸ್ಕರ ಶಿಕ್ಷಣಮಾಲೆಯ ಪುಸ್ತಕಗಳಿಂದ ಆಕರ್ಷಿತರಾದರು. ಅವರು ಅಂತಹ ಪುಸ್ತಕಗಳಿಗೆ ಹೆಚ್ಚೆಚ್ಚು ಬೇಡಿಕೆಗಳನ್ನು ಸಲ್ಲಿಸಿದರು. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ಶಾಲೆಯನ್ನು ಬಿಟ್ಟವರಿಗೆ ಮತ್ತು ಇತರ ಗ್ರಾಮಸ್ಥರಿಗೆ ಪುಸ್ತಕಗಳು ಪ್ರಿಯವಾಗಿದ್ದುವು. ಹಳ್ಳಿಗಳಲ್ಲಿ ವಿವಿಧ ವರ್ಗದ ಓದುಗರ ಆವಶ್ಯಕತೆಗಳನ್ನು ಪೂರೈಸಲು ಗ್ರಾಮಪುಸ್ತಕ ಭಂಡಾರ ಯೋಜನೆ ಪ್ರಾರಂಭವಾಯಿತು. 1941ರ ಬೇಸಗೆಯಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿಯಲ್ಲಿ ಮೊದಲನೆಯ ಪುಸ್ತಕ ಭಂಡಾರ ಪ್ರಾರಂಭವಾಯಿತು.

ಗ್ರಾಮಪುಸ್ತಕ ಭಂಡಾರವನ್ನು ಸ್ಥಾಪಿಸಲು ಆಯಾ ಗ್ರಾಮ ಪಂಚಾಯಿತಿ, ಸಹಕಾರ ಸಂಘ ಇಲ್ಲವೆ ಆ ಗ್ರಾಮದ ಉದಾರಿ ಮಹನೀಯರಲ್ಲಿ ಯಾರಾದರೂ ನಿಗದಿಯಾದ ಚಂದಾಹಣವನ್ನು ಕೊಡಬೇಕೆಂಬ ನಿಯಮವಿದೆ. ವಯಸ್ಕರ ಶಿಕ್ಷಣ ಅಧಿಕಾರಿಗಳು ಗ್ರಾಮಪುಸ್ತಕ ಭಂಡಾರವನ್ನು ಮಂಜೂರು ಮಾಡುವ ಮುನ್ನ ಈ ಅಂಶಗಳನ್ನು ಪರಿಶೀಲಿಸುವರು. 1 ಗ್ರಾಮದ ಜನಸಂಖ್ಯೆ, 2 ವಿದ್ಯಾವಂತರ ಸಂಖ್ಯೆ, 3 ಪುಸ್ತಕ ಭಂಡಾರ ಯಶಸ್ವಿಯಾಗಿ ನಡೆಯಲು ಇರುವ ಸಂಪನ್ಮೂಲಗಳು, 4 ಪುಸ್ತಕ ಭಂಡಾರವನ್ನು ಇಡುವ ಸ್ಥಳ, 5 ಗ್ರಾಮದವರ ಉತ್ಸಾಹ ಹಾಗೂ ಅವರಿಂದ ದೊರಕಬಹುದಾದ ಪೀಠೋಪಕರಣ ಮುಂತಾದ ಸೌಕರ್ಯಗಳು. ಪ್ರಾರಂಭದಲ್ಲಿ ಪುಸ್ತಕಭಂಡಾರ ಪಡೆಯಲು 25 ರೂಪಾಯಿ ಚಂದಾ ಹಣ ಕೊಡಬೇಕಿತ್ತು. ಅನಂತರ ಅದನ್ನು 160 ರೂಪಾಯಿಗೆ ಏರಿಸಲಾಯಿತು.

ಗ್ರಾಮಸ್ಥರು ನೀಡುವ ವಂತಿಕೆಗೆ ಸಮನಾದ ಅನುದಾನವನ್ನು ಸಮಿತಿ ನೀಡುತ್ತಿತ್ತು. ಅನುದಾನದ ಗರಿಷ್ಠ ಮಿತಿ 100 ರೂ. ಮೀರುವಂತಿಲ್ಲ. ಪ್ರತಿಯೊಂದು ಗ್ರಾಮಪುಸ್ತಕ ಭಂಡಾರವು ತನ್ನ ಆಯವ್ಯಯ ಪಟ್ಟಿಯನ್ನು ರಚಿಸಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಮಂಜೂರಾತಿಗೆ ಕಳುಹಿಸುವುದು.

ವಾಚನಾಲಯ ಪುಸ್ತಕ ಭಂಡಾರದ ಒಂದು ಭಾಗ. ಪುಸ್ತಕ ಭಂಡಾರದ ಆಡಳಿತಕ್ಕಾಗಿ ರಚಿಸುವ ಸಮಿತಿಯು ತನ್ನ ಆಯವ್ಯಯ ಪಟ್ಟಿಗೆ ಒಳಪಟ್ಟಂತೆ ತನಗೆ ಬೇಕಾದ ಪತ್ರಿಕೆಗಳನ್ನು ತರಿಸಿಕೊಳ್ಳಬಹುದು.

ಕೇಂದ್ರ ಪುಸ್ತಕ ಭಂಡಾರ : ಗ್ರಾಮ ಪುಸ್ತಕ ಭಂಡಾರಗಳ ಹೆಚ್ಚಿನ ಮತ್ತು ವಿಶೇಷ ಪುಸ್ತಕಗಳ ಬೇಡಿಕೆಯನ್ನು ಜಿಲ್ಲಾ ಕೇಂದ್ರ ಪುಸ್ತಕ ಭಂಡಾರಗಳು ಪೂರೈಸುವುವು. ಗ್ರಾಮ ಪುಸ್ತಕ ಭಂಡಾರಗಳು ಜಿಲ್ಲಾ ಕೇಂದ್ರ ಪುಸ್ತಕಭಂಡಾರಗಳ ಸದಸ್ಯರಾಗಿರಬೇಕು. ಪುಸ್ತಕಗಳನ್ನು ಕೇಂದ್ರ ಭಂಡಾರದಿಂದ ಎರವಲಾಗಿ ಪಡೆದು ತಿಂಗಳ ಅನಂತರ ವಾಪಸು ಮಾಡಬೇಕೆಂಬ ನಿಯಮವಿದೆ. ಈಗ ಹತ್ತು ಜಿಲ್ಲಾ ಕೇಂದ್ರ ಪುಸ್ತಕ ಭಂಡಾರಗಳು ಮತ್ತು ಎರಡು ನಗರಕೇಂದ್ರ ಪುಸ್ತಕ ಭಂಡಾರಗಳಿವೆ.

ಕ್ಷೇತ್ರೀಯ ಪುಸ್ತಕಭಂಡಾರ ಮತ್ತು ವಾಚನಾಲಯ : ಗ್ರಾಮಸ್ಥರಲ್ಲಿ ಪುಸ್ತಕ ಬೇಡಿಕೆ ಹೆಚ್ಚಾಗಿ ಅವರು ತಮ್ಮದೇ ಆದ ಒಂದು ಕೇಂದ್ರ ಪುಸ್ತಕ ಭಂಡಾರವನ್ನು ಹೊಂದಲು ಅಪೇಕ್ಷಿಸಬಹುದು. ಅಂಥ ಬೇಡಿಕೆಯನ್ನು ಪೂರೈಸುವುದೇ ಕ್ಷೇತ್ರೀಯ ಪುಸ್ತಕಭಂಡಾರ ಮತ್ತು ವಾಚನಾಲಯ ಯೋಜನೆಯ ಉದ್ದೇಶ. ಸಾಧಾರಣವಾಗಿ 3,000ಕ್ಕೂ ಮೇಲ್ಪಟ್ಟು ಜನ ವಾಸಿಸುವ ಕ್ಷೇತ್ರಗಳಲ್ಲಿ ಕ್ಷೇತ್ರೀಯ ಪುಸ್ತಕಭಂಡಾರಗಳನ್ನು ತೆರೆಯಬಹುದು. ಆದರೆ ಆಯಾ ಕ್ಷೇತ್ರೀಯ ಪುಸ್ತಕಭಂಡಾರ ಒಟ್ಟಾರೆ ಖರ್ಚಿನಲ್ಲಿ ಸೇ. 50ರಷ್ಟು ಹಣವನ್ನು ಆಯಾ ಗ್ರಾಮಸ್ಥರು ಕೊಡಬೇಕು. ಜೊತೆಗೆ ಪುಸ್ತಕಭಂಡಾರವನ್ನಿಡಲು ಒಂದು ಕಟ್ಟಡ ಒದಗಿಸಬೇಕು. ಪುಸ್ತಕ ಭಂಡಾರದ ಕೆಲಸವನ್ನು ನಿರ್ವಹಿಸಲು ಒಪ್ಪೊತ್ತಿನ ಕೆಲಸಗಾರನನ್ನು ನೇಮಿಸಿಕೊಳ್ಳುವುದು. ಆತನ ಸಂಬಳವನ್ನು ಆಯಾ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿ ವಹಿಸಿಕೊಳ್ಳುವುದು. ರಾಜ್ಯದಲ್ಲಿ 28 ಕ್ಷೇತ್ರೀಯ ಪುಸ್ತಕ ಭಂಡಾರಗಳಿವೆ. ಒಂದೆರಡು ಕಡೆಗಳಲ್ಲಿ ಗ್ರಾಮಸ್ಥರು ಪುಸ್ತಕ ಭಂಡಾರದ ಅಭಿವೃದ್ಧಿಗೆ ಜಮೀನನ್ನು ಬಿಟ್ಟುಕೊಟ್ಟಿರುವ ಉದಾಹರಣೆಗಳುಂಟು.

**ಗ್ರಾಮಸೇವಾ ಶಿಬಿರಗಳು:** ಪ್ರಾರಂಭದಿಂದಲೂ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಅಕ್ಷರಪ್ರಚಾರ ಕಾರ್ಯದಲ್ಲಿ ನೆರವು ನೀಡುತ್ತಿರುವರು. ಆದ್ದರಿಂದ ಪ್ರೌಢಶಾಲೆಯ ವಿದ್ಯಾರ್ಥಿಗಳ ನೆರವಿನಿಂದ

ಬೇಸಗೆ ರಜಾಕಾಲದಲ್ಲಿ ಗ್ರಾಮಸೇವಾ ಶಿಬಿರಗಳು ಪ್ರಾರಂಭವಾದವು. ಬೆಳಗ್ಗೆ ಪ್ರಾರ್ಥನೆ, ಪ್ರಭಾತಫೇರಿ, ಗ್ರಾಮನಿರ್ಮಲೀಕರಣ, ಅಕ್ಷರಪ್ರಚಾರ, ಸಾಂಸ್ಕೃತಿಕ ಮತ್ತು ಮನರಂಜನ ಕಾರ್ಯಕ್ರಮ–ಇವೇ ಶಿಬಿರದ ಪ್ರತಿನಿತ್ಯದ ಕಾರ್ಯಕ್ರಮಗಳು.

**ಸಮಗ್ರ ಗ್ರಾಮಸೇವಾ ಯೋಜನೆ:** ಸೇವಾಮನೋಭಾವವುಳ್ಳ ಸ್ವಯಂ ಸೇವಕರ ಸಹಕಾರ ಪಡೆದು ಗ್ರಾಮಾಂತರ ಪ್ರದೇಶಗಳಲ್ಲಿ ಸಮಗ್ರ ವಯಸ್ಕರ ಶಿಕ್ಷಣ ಚಟುವಟಿಕೆಗಳನ್ನು ನಡೆಸುವುದು ಈ ಯೋಜನೆಯ ಗುರಿ. ಈ ಕಾರ್ಯಕ್ರಮವನ್ನು ನಡೆಸಲು ಸರ್ವತೋಮುಖವಾದ ಅಭಿವೃದ್ಧಿಗೆ ಆಯಾ ಗ್ರಾಮಸ್ಥರು ಕಾರ್ಯಕರ್ತನೊಂದಿಗೆ ಸಹಕರಿಸಬೇಕು. ಈ ಪ್ರಯೋಗ ಕೆಲವು ಕಾಲ ಮಂಡ್ಯ ಜಿಲ್ಲೆಯಲ್ಲಿ ನಡೆಯಿತು.

**ವಿದ್ಯಾಪೀಠಗಳು:** ಸಮಿತಿ 12 ವಿದ್ಯಾಪೀಠಗಳನ್ನು ನಡೆಸುತ್ತಿತ್ತು. ಅವುಗಳ ಪೈಕಿ ನಂಜನಗೂಡು ಮತ್ತು ಕೆಂಗೇರಿ ವಿದ್ಯಾಪೀಠಗಳು ಮಹಿಳೆಯರಿಗಾಗಿ ಪರಿವರ್ತನೆಯಾಗಿದ್ದವು.

ಜನತಾ ಶಿಕ್ಷಣ ಕೇಂದ್ರ, ಚಲನಚಿತ್ರ ಪ್ರದರ್ಶನ, ಪ್ರಚಾರ ಸಭೆಗಳ ಮೂಲಕ ಜ್ಞಾನಪ್ರಸಾರ ಗ್ರಾಮಕಲೆಗಳಿಗೆ ಪ್ರೋತ್ಸಾಹ; ಸಮಿತಿ 9 ಚಲನಚಿತ್ರ ಘಟಕಗಳನ್ನು ಹೊಂದಿದೆ. ಈ ಘಟಕಗಳು ಗ್ರಾಮಾಂತರದಲ್ಲಿ ಸಂಚರಿಸಿ ವ್ಯವಸಾಯ, ಕೈಗಾರಿಕೆ, ಪಶುಪಾಲನೆ ಮುಂತಾದ ಚಲನಚಿತ್ರಗಳನ್ನು ಪ್ರದರ್ಶಿಸುವುವು. ನಮ್ಮ ಮೈಸೂರು, ಈರಬೀರಿ, ವಿದ್ಯಾಪೀಠ ಎಂಬ ಚಲನಚಿತ್ರಗಳನ್ನು ಸಮಿತಿ ತಯಾರಿಸಿದೆ. ಶಿಲ್ಪಕಲೆ, ಕೈಗಾರಿಕಾಸಂಪತ್ತು ಮುಂತಾದ ವಿವರಣೆ ಸೂಚಿಸುವ ವರ್ಣರಂಜಿತ ಚಿತ್ರ ನಮ್ಮ ಮೈಸೂರು; ಸಾಕ್ಷರತೆಯ ಮಹತ್ತ್ವವನ್ನು ತಿಳಿಸುವ ಚಿತ್ರ ಈರಬೀರಿ. ಸಮಿತಿಯ ಕಾರ್ಯಕರ್ತರು ಆಗಾಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರಸಭೆಗಳನ್ನು ಮತ್ತು ಚಲನಚಿತ್ರಗಳನ್ನು ಏರ್ಪಡಿಸುವರು. ಪ್ರತಿವರ್ಷ ಗಣರಾಜ್ಯದಿನದಂದು ದೆಹಲಿಯಲ್ಲಿ ಆಯಾ ರಾಜ್ಯದ ಉತ್ತಮ ಜನಪದ ಕಲೆಯ ಪ್ರದರ್ಶನ ನಡೆಯುವುದು.

**ಸಂಶೋಧನೆ:** ಕನ್ನಡ ಲಿಪಿ ಸಂಸ್ಕರಣ ನಡೆಸಲು 1946ರಲ್ಲಿ ಒಂದು ಉಪಸಮಿತಿ ರಚನೆ ಆಯಿತು. 1947ರ ನವೆಂಬರಿನಲ್ಲಿ ನಡೆದ ಸಭೆಯ ನಡೆವಳಿಗಳ ಪ್ರಕಾರ ಹೊಸ ಲಿಪಿಯನ್ನು ಅನುಸರಿಸಿ 1,000 ಪುಸ್ತಕಗಳನ್ನು ಅಚ್ಚುಮಾಡಿ ಅವುಗಳನ್ನು ಮೈಸೂರು ನಗರದ ಕೆಲವು ಪ್ರಾಥಮಿಕ ಶಾಲೆಗಳಲ್ಲಿ ಪ್ರಯೋಗಿಸಬೇಕೆಂದು ನಿರ್ಧರಿಸಲಾಯಿತು. ಆದರೆ ಕಾರಣಾಂತರಗಳಿಂದ ಆ ಕೆಲಸ ನಡೆಯಲಿಲ್ಲ.

ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿ, ಬೆಳಗಾಂವಿ: ಮುಂಬಯಿ ಪ್ರಾಂತ್ಯದಲ್ಲಿ ವಯಸ್ಕರ ಶಿಕ್ಷಣ ಪ್ರಾರಂಭವಾದಾಗ ಈ ಸಮಿತಿ ಅಸ್ತಿತ್ವಕ್ಕೆ ಬಂದಿತು. ಅನಂತರ ಈ ಸಮಿತಿಯನ್ನು ಸರ್ಕಾರ ರದ್ದು ಮಾಡಿರುವುದಾಗಿ ತಿಳಿದು ಬಂದಿದೆ. 1947–48ರಿಂದ 1967–68ರವರೆಗೆ 1,15,519 ಮಂದಿಯನ್ನು ಅಕ್ಷರಸ್ಥರನ್ನಾಗಿ ಮಾಡಲಾಗಿದೆ. ಪ್ರಕಾಶ ಎಂಬುದು ಸಮಿತಿ ಪ್ರಕಟಿಸುತ್ತಿದ್ದ ಮಾಸಪತ್ರಿಕೆ. ಇಲ್ಲಿಯವರೆಗೆ ಇಪ್ಪತ್ತು ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳು ಪ್ರಕಟವಾಗಿವೆ.

ಕೊಡಗಿನಲ್ಲಿ 1951ರಲ್ಲಿ ಸಮಾಜ ಶಿಕ್ಷಣ ಪ್ರಾರಂಭವಾಯಿತು. ಅದರ ಅಂಗವಾಗಿ ಅಕ್ಷರ ಪ್ರಚಾರ ತರಗತಿಗಳು ವ್ಯವಸ್ಥೆಯಾದವು. ಅದಕ್ಕೆ ಪೋಷಕವಾಗಿ 104 ಗ್ರಾಮ ಪುಸ್ತಕ ಭಂಡಾರಗಳು ಸ್ಥಾಪನೆಯಾದವು. ಅವು ಸಾಮಾನ್ಯವಾಗಿ ಸಮಾಜ ಶಿಕ್ಷಣ ಕೇಂದ್ರ, ಪ್ರಾಥಮಿಕ ಶಾಲೆ ಮತ್ತು ಮಹಿಳಾ ಸಮಾಜಗಳಲ್ಲಿ ಕೆಲಸ ಮಾಡುತ್ತಿವೆ. ಪ್ರಾರಂಭದಲ್ಲಿ ಕೆಲವು ಪುಸ್ತಕ ಭಂಡಾರಗಳಿಗೆ ರೇಡಿಯೋಗಳನ್ನು ಒದಗಿಸಲಾಗಿದೆ. ಅಲ್ಲೊಂದು ಚಲನಚಿತ್ರ ಘಟಕವಿದೆ. ಈಗ ಕೊಡಗಿನಲ್ಲಿ ರೈತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆ ನಡೆಯುತ್ತಿದೆ.

ಸಾಮೂಹಿಕ ಅಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಅಕ್ಷರ ಪ್ರಚಾರ ಮತ್ತು ಪುಸ್ತಕ ಭಂಡಾರ ಕಾರ್ಯಕ್ರಮಗಳ ಜೊತೆಗೆ ಯುವಕ ಮಂಡಳಿ, ಮಹಿಳಾಮಂಡಳಿ, ಗ್ರಾಮ ಮುಖಂಡರ ತರಬೇತು, ರೈತರ ವಿಚಾರಗೋಷ್ಠಿ ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದೆ. ಪೌಷ್ಟಿಕ ಆಹಾರ ಯೋಜನಾ ಕೇಂದ್ರಗಳು ಅಲ್ಲಲ್ಲೇ ನಡೆಯುತ್ತಿವೆ. ಗ್ರಾಮಾಂತರ ಜನರಿಗೆ ಔದ್ಯೋಗಿಕ ತರಬೇತಿ ಕೇಂದ್ರಗಳಿವೆ. ರೇಡಿಯೊ ಗೋಷ್ಠಿಗಳ ಮೂಲಕ ಜ್ಞಾನಪ್ರಸಾರ ನಡೆಯುತ್ತಿದೆ. ಹಳ್ಳಿಗಳಲ್ಲಿ ಭಜನೆ, ಕೋಲಾಟ, ನಾಟಕ, ಜನಪದ ಕಲೆ ಮುಂತಾದ ಮನರಂಜನೆಯ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಜನರ ಸುಪ್ತಚೇತನವನ್ನು ಹೊರಹೊಮ್ಮಿಸಲು ಸೂಕ್ತ ಪ್ರೋತ್ಸಾಹ ನೀಡಲಾಗುತ್ತಿದೆ.

**ವಯಸ್ಕರ ಸಾಹಿತ್ಯ:** ವಯಸ್ಕರು ಓದು ಬರೆಹ ಕಲಿತಮೇಲೆ ಓದನ್ನು ಮುಂದುವರಿಸಿಕೊಂಡು ಜ್ಞಾನಾರ್ಜನೆಮಾಡಲು ಸಹಕಾರಿಯಾಗುವಂಥ ಪೂರಕ ಸಾಹಿತ್ಯರಚನೆ ಅತ್ಯಗತ್ಯ. ಹೊಸದಾಗಿ ಅಕ್ಷರ ಕಲಿತವರಿಗೆ ಸಾಹಿತ್ಯ ರಚಿಸುವುದು ಒಂದು ಕಲೆ. ಅಷ್ಟೇ ಅಲ್ಲ, ರಚನೆಮಾಡುವ ವಿಧಾನ ಒಂದು ವಿಜ್ಞಾನವೂ ಹೌದು. ಆದ್ದರಿಂದ ಅದು ಶಾಸ್ತ್ರೀಯವಾಗಿ ಮತ್ತು ವ್ಯವಸ್ಥಿತವಾಗಿ ನಡೆಯಬೇಕಾದ ಕಾರ್ಯ. ಈ ಕಾರ್ಯದಲ್ಲಿ ಸಮಿತಿ ಸಾಕಷ್ಟುಯಶಸ್ವಿಯಾಗಿ ಸಾಹಿತ್ಯರಚನಾ ಕಾರ್ಯವನ್ನು ಕೈಗೊಂಡಿದೆ. ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿಯು ಸಹ ಈ ದಿಸೆಯಲ್ಲಿ ಸೇವೆಯನ್ನು ಸಲ್ಲಿಸುತ್ತಿದೆ. ಕೆಲವು ಖಾಸಗಿ ವ್ಯಕ್ತಿಗಳೂ ಈ ಕಾರ್ಯದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಮರೆಯುವಂತಿಲ್ಲ. ಈ ಕೆಳಕಂಡ ಮಾಲೆಗಳಲ್ಲಿ ವಯಸ್ಕರ ಸಾಹಿತ್ಯ ರಚನೆಗೊಂಡಿದೆ:

1. ಪಠ್ಯಪುಸ್ತಕ ರಚನೆ, 2. ಸಾಹಿತ್ಯರಚನಾಲಯದ ಪ್ರಕಟಣೆಗಳು, 3. ವಯಸ್ಕರ ಶಿಕ್ಷಣಮಾಲೆ, 4. ಪುಸ್ತಕಭಂಡಾರಮಾಲೆ, 5. ಜೀವವಿಜ್ಞಾನ ಮಾಲೆ, 6. ಪೌರಾಣಿಕ ಸಾಹಿತ್ಯಮಾಲೆ, 7.ಬೆಳ್ಳಿಯ ಹಬ್ಬದ ವಿಶೇಷ ಗ್ರಂಥಮಾಲೆ, 8. ಭಾಷಾಂತರ ಮಾಲೆ, 9. ವಿಶೇಷ ಪ್ರಕಟಣೆಗಳು, 10. ಖಾಸಗಿಯವರಿಂದ ರಚಿತವಾದ ಪ್ರಕಟಣೆಗಳು, 11. ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ.

ರಾಮಾಯಣ ಮತ್ತು ಭಾರತ ನಮ್ಮ ಜನರ ಸಾಂಸ್ಕೃತಿಕ ಮುನ್ನಡೆಯ ಪ್ರತೀಕಗಳಾಗಿವೆ. ಜನಸಾಮಾನ್ಯರು ಓದಿ ಅರ್ಥಮಾಡಿಕೊಳ್ಳುವಂತೆ ಜನಪ್ರಿಯ ವಾಲ್ಮೀಕಿ ರಾಮಾಯಣವನ್ನು ಪ್ರಕಟಿಸಲಾಗಿದೆ (ಲೇಖಕರು: ಕುವೆಂಪು). ಹೆಸರಿಗೆ ತಕ್ಕಂತೆ ಈ ಪುಸ್ತಕ ಜನಪ್ರಿಯವಾಗಿರುವ ಕಾರಣ ಹಲವಾರು ಮುದ್ರಣಗಳನ್ನು ಕಂಡಿದೆ. ಕನ್ನಡನಾಡಿನ ಶಿವಶರಣೆಯರ ಬಗ್ಗೆ ಸಿದ್ಧಯ್ಯ ಪುರಾಣಿಕರು ಬರೆದಿರುವ ಶರಣಚರಿತಾಮೃತ ಗ್ರಂಥವನ್ನು ಸಮಿತಿ ಪ್ರಕಟಿಸಿದೆ. ಸಮಿತಿ ತನ್ನ 25 ವರ್ಷದ ಸಾರ್ಥಕ ಸೇವೆಯ ಸವಿನೆನಪಿಗಾಗಿ ಬೆಳ್ಳಿಯ ಹಬ್ಬದ ವಿಶೇಷ ಗ್ರಂಥಮಾಲೆಯಲ್ಲಿ ಎರಡು ಪುಸ್ತಕಗಳನ್ನು ಪ್ರಕಟಿಸಿದೆ.

ವಯಸ್ಕರ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳಿಗೆ ಮತ್ತು ಹೊಸದಾಗಿ ಅಕ್ಷರ ಕಲಿತವರಿಗೆ ಅನುಕೂಲವಾಗುವಂತೆ ಸಮಿತಿ 'ಬೆಳಕು' ವಾರಪತ್ರಿಕೆಯನ್ನು ಪ್ರಕಟಿಸುತ್ತಿತ್ತು. ವ್ಯವಸಾಯ, ಪಶುಪಾಲನೆ, ಆರೋಗ್ಯ ಮತ್ತು ನೈರ್ಮಲ್ಯ ಮುಂತಾದ ಉಪಯುಕ್ತ ವಿಷಯಗಳನ್ನು ಮತ್ತು ಆಯಾ ವಾರದ ಪ್ರಮುಖ ಸುದ್ದಿ ಸಮಾಚಾರಗಳನ್ನು ತಿಳಿಯಾದ ಭಾಷೆಯಲ್ಲಿ 14 ಪಾಯಿಂಟು ಅಕ್ಷರಗಳಲ್ಲಿ ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿತ್ತು (ಬೆಳಗಾಂವಿ ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿ, ಪ್ರಕಾಶ ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿತ್ತು). ಕನ್ನಡ ಮತ್ತು ಇತರ ಭಾಷೆಗಳಲ್ಲಿ ಅಚ್ಚಾಗುವ ಪುಸ್ತಕಗಳ ಪರಿಚಯ ಮಾಡಿಕೊಡುವ ಉದ್ದೇಶದಿಂದ

ರೀಡರ್ಸ್ ಡೈಜೆಸ್ಟ್ ಮಾದರಿಯಲ್ಲಿ ಪುಸ್ತಕ ಪ್ರಪಂಚ (**ನೋಡಿ**) ಮಾಸಪತ್ರಿಕೆಯನ್ನು ಸಮಿತಿ ಪ್ರಕಟಿಸುತ್ತಿದೆ. ಬೊಮ್ಮನಹಳ್ಳಿಯ ಕಿಂದರಿಜೋಗಿ ಮತ್ತು ಗೋವಿನಕಥೆಯ ವಿಷಯವನ್ನು ಗದ್ಯರೂಪದಲ್ಲಿ ತಿಳಿಗನ್ನಡದಲ್ಲಿ ಸಚಿತ್ರವಾಗಿ ಪ್ರಕಟಿಸಲಾಗಿದೆ. ಇವುಗಳ ಪ್ರಕಟಣೆಗೆ ಯುನೆಸ್ಕೊ ನೆರವು ನೀಡಿದೆ.

ಪ್ರಚಾರದ ದೃಷ್ಟಿಯಿಂದ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಇತರರಿಗೆ ಪರಿಚಯ ಮಾಡಿಕೊಡಲು ಇಂಗ್ಲಿಷ್ ಭಾಷೆಯಲ್ಲಿ ಅಡಲ್ಟ್ ಎಜುಕೇಷನ್ ಇನ್ ಮೈಸೂರು ಎಂಬ ಪುಸ್ತಕವನ್ನು ಪ್ರಕಟಿಸಲಾಗಿದೆ. ಸಮಿತಿ ಇದುವರೆಗೆ ವಿವಿಧ ಮಾಲೆಗಳಿಂದ ಒಟ್ಟು 243 ಪುಸ್ತಕಗಳನ್ನು ಪ್ರಕಟಿಸಿದೆ.

ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಶಾಖೆಗಳು ಪ್ರಚಾರೋಪನ್ಯಾಸ ಮಾಲೆಯಲ್ಲಿ ನೂರಾರು ಹೊತ್ತಿಗೆಗಳನ್ನು ಪ್ರಕಟಿಸಿವೆ. ಈ ಹೊತ್ತಿಗೆಗಳು ಜನಪ್ರಿಯವಾಗಿವೆ; ಕೆಲವು ಅನೇಕ ಮುದ್ರಣಗಳು ಕಂಡಿವೆ. ವಯಸ್ಕರ ಸಾಹಿತ್ಯ ರಚನೆಯ ವಿಧಾನದಲ್ಲಿ ತಿಳಿವಳಿಕೆ ನೀಡಲು ಸಾಕ್ಷರತಾ ಸಾಹಿತ್ಯಸೂತ್ರಗಳು ಎಂಬ ಹೊತ್ತಿಗೆಯನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದೆ. ವಯಸ್ಕರ ಶಿಕ್ಷಣ ಸಮಿತಿಯ ಅನೇಕ ಕಾರ್ಯಯೋಜನೆಗಳು ಮತ್ತು ಪ್ರಕಟಣೆಗಳನ್ನು ರಾಜ್ಯ ಸಂಪನ್ಮೂಲ ಕೇಂದ್ರ ವಹಿಸಿಕೊಂಡಿತು. ಇಂದು ವಯಸ್ಕರ ಶಿಕ್ಷಣ ಸಮಿತಿ ಕವಲುದಾರಿಯಲ್ಲಿದೆ. ಅದನ್ನು ಸರ್ಕಾರ ರದ್ದುಪಡಿಸಿದ್ದು ಮತ್ತೆ ಅದರ ಪುನರುಜ್ಜೀವನವಾಗಬೇಕೆಂದು ಉದ್ದೇಶಿಸಲಾಗಿದೆ. ವಯಸ್ಕರ ಶಿಕ್ಷಣ ಅವಿರತವಾಗಿ ನಡೆಯಬೇಕಾದ ಪ್ರಕ್ರಿಯೆಯಾಗಿದ್ದು ಇಂದು ಆ ನಿಟ್ಟಿನಲ್ಲಿ ಹಲವಾರು ಸಂಘ ಸಂಸ್ಥೆಗಳು ಗಮನಹರಿಸಿವೆ. **(ಟಿ.ಆರ್.ಎಸ್.ಎ)**

**ವರದರಾಜರಾವ್,ಜಿ.:** 1918–87. ಪ್ರಸಿದ್ಧ ಸಂಶೋಧಕ, ಸಂಪಾದಕ, ಕವಿ ಹಾಗೂ ವಿಮರ್ಶಕರು. 1918 ಜನವರಿ 3ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಗುಂಡಮರಾಜು ವರದರಾಜರಾವ್. ತಂದೆ ವೆಂಕಟರಾವ್, ತಾಯಿ ಜಾನಕಮ್ಮ. ವರದರಾಜರಾವ್ ಅವರು ಆರಂಭಿಕ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಮುಗಿಸಿ ಮೈಸೂರಿಗೆ ಬಂದು ಬಿ.ಎ. ಆನರ್ಸ್, ಎಂ.ಎ. ಹಾಗೂ ಪಿಎಚ್.ಡಿ. ಪದವಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದರು. ವಿದ್ಯಾರ್ಥಿ ದೆಸೆಯಲ್ಲಿಯೇ ತಮ್ಮ ಅಪ್ರತಿಮ ಪ್ರತಿಭೆಯಿಂದ ಕೇಣಿಸಿದ್ದಪ್ಪ ಚಿನ್ನದಪದಕ, ರಜತೋತ್ಸವ ಸ್ವರ್ಣಪದಕ, ಹೊನ್ನಸೆಟ್ಟಿ ಬಹುಮಾನ ಮೊದಲಾದವುಗಳನ್ನು ಪಡೆದಿದ್ದರು. ಸಾಹಿತ್ಯದ ಯಾವುದೇ ವಿಷಯದ ಬಗೆಗೆ ನಿರರ್ಗಳವಾಗಿ ಭಾಷಣ ಮಾಡುವಂತಹ ಪಾಂಡಿತ್ಯ ಪಡೆದಿದ್ದ ಇವರ ಮೇಲೆ ಗಾಢ ಪ್ರಭಾವ ಬೀರಿದ ಸಾಹಿತಿಗಳೆಂದರೆ ಬಿ.ಎಂ.ಶ್ರೀ. ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ, ಮಂಗಳೂರು ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ಅದೇ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಅನಂತರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ವತಿಯಿಂದ ಆರಂಭವಾದ ಹರಿದಾಸ ಸಾಹಿತ್ಯದ ಶಾಸ್ತ್ರೀಯ ಸಂಪಾದನ ಯೋಜನೆಯಲ್ಲಿ ಗೌರವ ಸಂಪಾದಕರಾಗಿ ಸೇವೆ ಸಲ್ಲಿಸಿದರು.

ಇವರು ಕಾವ್ಯ, ವಿಮರ್ಶೆ, ಸಂಪಾದನೆ, ಸಂಶೋಧನೆ ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ 25 ಕೃತಿಗಳನ್ನು ರಚಿಸಿದ್ದಾರೆ. ತೋರಣ, ವಿಜಯದಶಮಿ, ಸೆರೆಯಾಳು, ತೊಟ್ಟಿಲು-ಇವು ಕವನ ಸಂಕಲನಗಳು; ಪಡಿನುಡಿ, ಸಾಹಿತ್ಯಸಾನ್ನಿಧ್ಯ, ಕುಮಾರರಾಮನ ಸಾಂಗತ್ಯಗಳು, ಶ್ರೀಪುರಂದರ ದಾಸರು ಮತ್ತು ಅವರ ಕೀರ್ತನೆಗಳು-ಇವು ವಿಮರ್ಶೆಯ ಕೃತಿಗಳು; ಮಹಾಸತಿ ಕಸ್ತೂರ ಬಾ ಎಂಬ ಜೀವನ ಚರಿತ್ರೆಯನ್ನೂ ಬುಡಬುಡಕೆ ಎಂಬ ಬಾಲಸಾಹಿತ್ಯ ಕೃತಿಯನ್ನೂ ಓಬವ್ವ ಎಂಬ ಕಥಾಸಂಕಲನವನ್ನೂ

ರಚಿಸಿದ್ದಾರೆ. ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಇವರ ಸಂಪಾದಿತ ಕೃತಿಗಳು ಇವರ ಅಪಾರ ವಿದ್ವತ್ತಿಗೆ ಸಾಕ್ಷಿಗಳಾಗಿವೆ. ಶ್ರೀಪಾದ ರಾಜರ ಕೃತಿಗಳು, ಶ್ರೀಮಹಿಪತಿದಾಸರ ಕೃತಿಗಳು-ಇವು ಬಹುಮುಖ್ಯ ಕೃತಿಗಳು. ಹರಿದಾಸ ಸಾಹಿತ್ಯ ಸಮೀಕ್ಷೆ ಎಂಬ ಕೃತಿಯನ್ನೂ ರಚಿಸಿದ್ದಾರೆ. ಅತ್ಯಂತ ಪ್ರಾಚೀನವಾದ, ಶುದ್ಧಪಾಠವಿರುವ, ಖಚಿತ ಕಾಲನಿರ್ಣಯದ ಹಸ್ತಪ್ರತಿಗಳಿಗೆ ಆದ್ಯತೆ ನೀಡಿ ಅದಕ್ಕೆ ಲಭಿಸುವ ಸಮಸ್ತ ಪಾಠಾಂತರಗಳನ್ನೂ ಕ್ರೋಡೀಕರಿಸಿ ಅಂಕಿತವನ್ನು ನಿರ್ಧರಿಸಿ ಶಾಸ್ತ್ರೀಯ ಕ್ರಮವನ್ನು ದಾಸಸಾಹಿತ್ಯದ ಸಂಪಾದನ ಕಾರ್ಯದಲ್ಲಿ ಮೆರೆದಿರುವುದು ಇವರ ವೈಶಿಷ್ಟ್ಯ. ಸಂಪಾದನೆಯ ಕ್ರಮದೊಂದಿಗೆ ಮೇಳೈಸಿರುವ ಇವರ ಶೈಕ್ಷಣಿಕ ಶಿಸ್ತು ಹಾಗೂ ವಿದ್ವತ್ತುಗಳು ಇವರ ಕಾರ್ಯ ಘನತೆಯನ್ನು ಹೆಚ್ಚಿಸಿವೆ. ಇದೇ ಬಗೆಯ ವಿಶಿಷ್ಟತೆಯನ್ನು ನಾವು ಸಾಹಿತ್ಯ ಚರಿತ್ರೆಯಲ್ಲಿ, ಗ್ರಂಥಸಂಪಾದನೆಯ ಚರಿತ್ರೆಯಲ್ಲಿ ಕಾಣಬಹುದಾಗಿದೆ. ಇವರಿಗೆ ದೇವರಾಜ ಬಹದ್ದೂರ್ ಬಹುಮಾನ, ಹರಿದಾಸ ಸಾಹಿತ್ಯ ಸೇವಾ ಪ್ರಶಸ್ತಿ ಮೊದಲಾದ ಹಲವು ಬಹುಮಾನ ಪ್ರಶಸ್ತಿಗಳು ಲಭ್ಯವಾಗಿವೆ. ಇವರು 1987 ನವೆಂಬರ್ 13ರಂದು ನಿಧನರಾದರು. *

**ವರದಾ:** ತುಂಗಭದ್ರಾ ನದಿಯ ಒಂದು ಉಪನದಿ. ಇಕ್ಕೇರಿಯ ಸಮೀಪದ ವರದಾ ಮೂಲದಲ್ಲಿ ಇದರ ಉಗಮ. ಅಲ್ಲಿಂದ ಉತ್ತರಾಭಿಮುಖವಾಗಿ ಚಂದ್ರಗುತ್ತಿಯ ಪಕ್ಕದಲ್ಲಿ ಹರಿದು ಶಿವಮೊಗ್ಗ ಜಿಲ್ಲೆಯನ್ನು ಬಿಟ್ಟು, ಉತ್ತರ ಕನ್ನಡ ಜಿಲ್ಲೆಯಲ್ಲಿ ಬನವಾಸಿ ಮುಟ್ಟಿ, ಈಶಾನ್ಯಕ್ಕೆ ತಿರುಗಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಸ್ವಲ್ಪ ದೂರ ಹರಿದು ಹಾನಗಲ್ಲು ತಾಲ್ಲೂಕಿನ ಗೊಂದಿಯ ಬಳಿ ಹಾವೇರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಅಲ್ಲಿಯೂ ಈಶಾನ್ಯಾಭಿಮುಖವಾಗಿ ಮೊದಲು ಹಾನಗಲ್ಲು ತಾಲ್ಲೂಕಿನ ಆಗ್ನೇಯ ಭಾಗದಲ್ಲಿ ಹರಿದು, ಅಲ್ಲಿಂದ ಉತ್ತರಕ್ಕೆ ತಿರುಗಿ, ಹಾನಗಲ್ಲು ಮತ್ತು ಹಾವೇರಿ ತಾಲ್ಲೂಕುಗಳ ಗಡಿಯಲ್ಲಿ ಸ್ವಲ್ಪದೂರ ಹರಿದು, ಮುಂದೆ ಸವಣೂರು-ಹಾವೇರಿ ತಾಲ್ಲೂಕುಗಳನ್ನು ಬೇರ್ಪಡಿಸುತ್ತ ಪೂರ್ವಕ್ಕೆ ಸಾಗಿ, ಅಲ್ಲಿಂದ ಅದೇ ನೇರದಲ್ಲಿ ಹಾವೇರಿ ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಹರಿದು ಕೊನೆಗೆ ಆ ತಾಲ್ಲೂಕಿನ ಗಳಗನಾಥದ ಬಳಿ ತುಂಗಭದ್ರಾ ನದಿಯನ್ನು ಕೂಡಿಕೊಳ್ಳುತ್ತದೆ. ನದಿಯ ಹರಿವಿನ ಒಟ್ಟು ಉದ್ದ ಸು. 185 ಕಿಮೀ. **(ಟಿ.ಪಿ.ಎಸ್.ಆರ್.)**

ಧರ್ಮಾ ಈ ನದಿಯ ಮುಖ್ಯ ಉಪನದಿ. ಇದು ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸು. 32 ಕಿಮೀ ದೂರ ಹರಿದು ಮುಂದೆ ಧಾರವಾಡ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನಲ್ಲಿ ಸು. 56 ಕಿಮೀ ದೂರ ಸಾಗಿ ಆ ತಾಲ್ಲೂಕಿನ ಈಶಾನ್ಯದ ಅಂಚಿನಲ್ಲಿ ಕೂಡಲ ಬಳಿ

ವರದಾ ನದಿಯನ್ನು ಕೂಡಿಕೊಳ್ಳುತ್ತದೆ. ಇದಲ್ಲದೆ ಮಳೆಗಾಲದಲ್ಲಿ ಪ್ರವಹಿಸುವ ಅನೇಕ ಸಣ್ಣ ಹಳ್ಳಗಳೂ ವರದಾ ನದಿಯನ್ನು ಸೇರುತ್ತವೆ.

ವರದಾ ಜೀವನದಿ. ನದಿಯಲ್ಲಿ ಪ್ರವಹಿಸುವ ನೀರಿನ ಪ್ರಮಾಣ ಹೆಚ್ಚಿಲ್ಲದಿದ್ದರೂ ಇದಕ್ಕೆ ಹಾಗೂ ಇದರ ಉಪನದಿ ಧರ್ಮಾಕ್ಕೆ ಅನೇಕ ಒಡ್ಡುಗಳನ್ನು ಕಟ್ಟಿ ಸಾಕಷ್ಟು ನೀರಾವರಿ ಸೌಕರ್ಯವನ್ನು ಒದಗಿಸಿಕೊಳ್ಳಲಾಗಿದೆ. ಬನವಾಸಿ, ಕೂಡಲ ಮತ್ತು ಗಳಗನಾಥ ಈ ನದಿಯ ದಂಡೆಯಲ್ಲಿರುವ ಪುಣ್ಯಕ್ಷೇತ್ರಗಳು. ಶಿವ ತನ್ನ ಬ್ರಹ್ಮಹತ್ಯಾಪಾಪವನ್ನು ಕಳೆದುಕೊಳ್ಳಲು ಶೃಂಗಋಷಿಯ ಆಶ್ರಮವಿದ್ದ ವರದಾಮೂಲ ಪ್ರದೇಶದ ಬಳಿ ತಪೋನಿರತನಾಗಿದ್ದ. ಆಗ ಉದ್ಭವಿಸಿದ ಅವನ ತಪೋಜ್ವಾಲೆ ದೇವತೆಗಳನ್ನು ಸುಡುವಷ್ಟು ಹೆಚ್ಚಾಯಿತು. ಅದನ್ನು ಪರಿಹರಿಸಲು ನಾರಾಯಣ ಭಾಗೀರಥೀ ನದಿಯ ನೀರನ್ನು ತನ್ನ ಶಂಖದಿಂದ ಶಿವನ ತಲೆಯ ಮೇಲೆ ಹೊಯ್ದ. ಅದರಿಂದ ವರದಾ ನದಿಯ ಉಗಮವಾಯಿತು ಎಂದು ಪುರಾಣದ ಕಥೆ. *

**ವರದಾಚಾರ್ಯ, ಎ.ವಿ.:** 1869–1926. ಸುಪ್ರಸಿದ್ಧ ರಂಗಭೂಮಿ ನಟ. 1869 ಫೆಬ್ರವರಿ 2ರಂದು ಜನಿಸಿದರು. ಇವರ ತಂದೆ ಅನುಮನಪಲ್ಲಿ ರಂಗಸ್ವಾಮಿ ಅಯ್ಯಂಗಾರ್ಯರು ರೆವಿನ್ಯೂ ಇಲಾಖೆಯಲ್ಲಿ ಶಿರಸ್ತೇದಾರರಾಗಿದ್ದರು. ಎಳಮೆಯಲ್ಲಿಯೇ ವರದಾಚಾರ್ಯರು ಸಂಗೀತ ಅಭಿನಯಕಲೆಗಳಲ್ಲಿ ಅತೀವ ಆಸಕ್ತಿ ವಹಿಸಿದ್ದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಎಫ್.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ಅನಂತರ, ತಮ್ಮ ಮನೋಹರವಾದ ರೂಪ, ದೇಹದಾರ್ಢ್ಯ ಹಾಗೂ ಇಂಪಾದ ಶಾರೀರದಿಂದಾಗಿ ಕಲಾವಿಲಾಸೀ ತಂಡಗಳ ಗಮನ ಸೆಳೆದು ಪಾತ್ರವಹಿಸತೊಡಗಿದರು. ಇವರು ನಾಯಕ ಭೂಮಿಕೆಯಲ್ಲಿ ನಿಂತ ಮೊದಲ ನಾಟಕ ವಿಕ್ರಮೋರ್ವಶೀಯ. ಅನಂತರ 1892ರಲ್ಲಿ ಮೈಸೂರಿನಲ್ಲಿದ್ದ ಗೌರೀನರಸಿಂಹಯ್ಯನವರ ಶ್ರೀಸರಸ್ವತೀ ವಿಲಾಸ ರತ್ನಾವಳಿ ನಾಟಕ ಸಭಾಮಂಡಲಿಯನ್ನು ಸೇರಿ ಪ್ರಚಲಿತ ಪೌರಾಣಿಕ ನಾಟಕಗಳಲ್ಲಿ ನಾಯಕ ಪಾತ್ರಗಳನ್ನು ನಿರ್ವಹಿಸತೊಡಗಿದರು. ಆ ಮಂಡಳಿ ನಿಂತ ಅನಂತರ 1896ರಲ್ಲಿ ಬೆಂಗಳೂರಿಗೆ ಹಿಂದಿರುಗಿ ಬ್ರಿಟಿಷ್ ರೆಸಿಡೆಂಟರ ಕಛೇರಿಯಲ್ಲಿ ನೌಕರಿ ಹಿಡಿದರು. ಆದರೆ ರಂಗದ ಗೀಳು ಅವರನ್ನು ಮತ್ತೆ ಸೆಳೆಯಿತು. ಕೆಲಸಕ್ಕೆ ರಾಜೀನಾಮೆ ಕೊಟ್ಟು ಬೆಂಗಳೂರು ಯೂನಿಯನ್ ಕ್ಲಬ್ ಸಂಘವನ್ನು ಸೇರಿದರು. ಅಷ್ಟರಲ್ಲಿ ಪ್ಲೇಗು ರೋಗದಿಂದ ಹೆಂಡತಿ ಮತ್ತು ಇದ್ದ ಒಬ್ಬನೇ ಮಗ ತೀರಿಕೊಂಡರು. ಈ ಸಾಂಸಾರಿಕ ಕ್ಲೇಶದಿಂದ ಬಳಲುತ್ತಿದ್ದ ಇವರು ಅಭಿಮಾನಿಗಳ ಒತ್ತಾಸೆಯಿಂದ ಮತ್ತೆ ಮೈಸೂರಿಗೆ ಮರಳಿ, ಗೌರೀನರಸಿಂಹಯ್ಯನವರ ಮರಣದಿಂದ ದಾರಿಗಾಣದಂತಾಗಿದ್ದ ರತ್ನಾವಳಿ ನಾಟಕ ಸಭಾ ಮಂಡಳಿಯ ಮೇಲ್ವಿಚಾರಣೆ ವಹಿಸಿಕೊಂಡು, ಅದನ್ನು ಸ್ವಲ್ಪ ಕಾಲ ನಡೆಯಿಸಿ, ಹಿತೈಷಿಗಳ ಒತ್ತಾಯದಿಂದ 1902ರಲ್ಲಿ ಮಂಡಳಿಯನ್ನು ಸ್ವಂತ ಆಡಳಿತಕ್ಕೆ ತೆಗೆದುಕೊಂಡು ಮೈಸೂರು ರತ್ನಾವಳೀ ಥಿಯಟ್ರಿಕಲ್ ಕಂಪನಿ ಎಂಬ ಹೆಸರಿನಿಂದ ಅದನ್ನು ಸುಮಾರು ಇಪ್ಪತ್ತು ವರ್ಷಗಳ ಕಾಲ ನಡೆಸಿ ಮೈಸೂರು ವೃತ್ತಿರಂಗಭೂಮಿಯ ಸಾಮ್ರಾಟ ನಟರೆನಿಸಿಕೊಂಡರು. ಅವರ ಆ ಕಾಲವನ್ನು ಕನ್ನಡ ರಂಗಭೂಮಿಯ ಸ್ವರ್ಣಯುಗವೆಂದೇ ಕರೆಯುತ್ತಿದ್ದರು.

ವರದಾಚಾರ್ಯರು ನಾಯಕ ನಟರು; ಅಷ್ಟೇ ಪ್ರಭಾವಶಾಲೀ ಗಾಯಕ ನಟರೂ ನಾಟಕಕಾರರೂ ಆಗಿದ್ದರು. ಶಾಕುಂತಲ, ರತ್ನಾವಳೀ, ಮನ್ಮಥ ವಿಜಯ, ಹರಿಶ್ಚಂದ್ರ, ಮಂದಾರವಲ್ಲೀ ಪರಿಣಯ, ಮಾಳವಿಕಾಗ್ನಿಮಿತ್ರ, ನಿರುಪಮ, ರಾಮವರ್ಮ–ಲೀಲಾವತಿ, ಪ್ರತಾಪಸಿಂಹ, ಸದಾರಮೆ, ಮಕರಂಧಿಕಾಪರಿಣಯ, ಭಕ್ತಪ್ರಹ್ಲಾದ, ವಿಷ್ಣುಲೀಲೆ ಹಾಗೂ ತಾವೇ ಬರೆದ ಇಂದಿರಾನಂದ ಮತ್ತು ವಿಮಲಾವಿಜಯ ನಾಟಕಗಳಲ್ಲಿ ಇವರು ನಿರ್ವಹಿಸಿದ ನಾಯಕ ಪಾತ್ರಗಳು, ವೈಯಕ್ತಿಕವಾಗಿ ಇವರಿಗೂ ಇವರ ಪರಿಣತ ನಟಮಂಡಳಿಗೂ ದಕ್ಷಿಣ ಭಾರತದಲ್ಲಿ ಅಪೂರ್ವವಾದ ಕೀರ್ತಿಯಶಸ್ಸುಗಳನ್ನು ತಂದುಕೊಟ್ಟವು. ಇವರು ನಿರ್ವಹಿಸಿದ ದುಷ್ಯಂತ (ಶಾಕುಂತಲ ನಾಟಕದಲ್ಲಿ), ಹಿರಣ್ಯಕಶಿಪು (ಭಕ್ತಪ್ರಹ್ಲಾದ ನಾಟಕದಲ್ಲಿ), ಸಂತಾಪಕ (ನಿರುಪಮ ನಾಟಕದಲ್ಲಿ), ವಸಂತ ರತ್ನಾವಳಿ ನಾಟಕದಲ್ಲಿ),



ರಾಮವರ್ಮ (ರಾಮವರ್ಮ–ಲೀಲಾವತಿ ನಾಟಕದಲ್ಲಿ) ಈ ಮುಂತಾದ ಪಾತ್ರಗಳ ವೈಭವವನ್ನು ನೋಡಿ ಜನ ಮರೆಯದಾದರು. ಮೈಸೂರಿನಲ್ಲಿ 1919ರಲ್ಲಿ ಇವರು ಪ್ರದರ್ಶಿಸಿದ ಪ್ರಹ್ಲಾದಚರಿತ್ರೆ ನಾಟಕದಲ್ಲಿ ಇವರ ಅಭಿನಯವನ್ನು ರವೀಂದ್ರನಾಥ ಠಾಕೂರರು ನೋಡಿ ಬಹುವಾಗಿ ಮೆಚ್ಚಿಕೊಂಡರು.

ಮೈಸೂರಿನ ವೃತ್ತಿರಂಗಭೂಮಿಗೆ ವರದಾಚಾರ್ಯರ ಕೊಡುಗೆ ದೊಡ್ಡ ಮಟ್ಟದ್ದು. ರಂಗಪ್ರದರ್ಶನದ ವೈಭವವನ್ನು ಹಿಗ್ಗಿಸಿ, ಕರ್ಣಾಟಕ ಶಾಸ್ತ್ರೀಯ ಸಂಗೀತ ರಾಗಗಳಿಗೆ ಗಮಕದ ಮೆರಗು ಕೊಟ್ಟು ರಂಗಸಂಗೀತದ ಹೊಸದೊಂದು ಪರಂಪರೆಯನ್ನೇ ರೂಪಿಸಿ, ಪಾತ್ರದ ವೇಷಭೂಷಣಗಳಿಗೆ ಸಹಜತೆ, ಠೀವಿಗಳನ್ನೂ, ಅಭಿನಯವನ್ನೂ ಹಾಸ್ಯವನ್ನೂ ಪರಿಷ್ಕಾರಗೊಳಿಸಿದ ಕೀರ್ತಿ ಇವರದು.

ಇವರ ಅಭಿನಯಕೌಶಲವನ್ನೂ ಕನ್ನಡ ರಂಗಭೂಮಿಯ ಮುನ್ನಡೆಗಾಗಿ ಇವರು ಸಲ್ಲಿಸಿದ ಸೇವೆಯನ್ನೂ ಮೆಚ್ಚಿಕೊಂಡ ಮೈಸೂರು ಜನತೆ 1913ರಲ್ಲಿ ಇವರಿಗೆ ಗಿಫ್ಟೆಡ್ ಆ್ಯಕ್ಟರ್ (ವರನಟ) ಎಂಬ ಪ್ರಶಸ್ತಿಯನ್ನೂ ಉಡುಪಿ ಅಷ್ಟಮಠಾಧೀಶರು ನಾಟ್ಯಕಲಾಚತುರ ಎಂಬ ಪ್ರಶಸ್ತಿಯನ್ನೂ ಕೊಟ್ಟು ಗೌರವ ತೋರಿದರು. 1918ರಲ್ಲಿ ತಿರುಚನಾಪಳ್ಳಿಯ ಜನತೆ ಆ್ಯನಿಬೆಸೆಂಟರ ನೇತೃತ್ವದಲ್ಲಿ ಇವರಿಗೆ ನಾಟಕಶಿರೋಮಣಿ ಎಂಬ ಮಹಾಪ್ರಶಸ್ತಿಯನ್ನು ಕೊಟ್ಟು ಪುರಸ್ಕರಿಸಿತು.

ಉದಾರಸ್ವಭಾವದವರಾಗಿದ್ದ ವರದಾಚಾರ್ಯರು ತಮ್ಮ ಸಂಪಾದನೆಯ ಬಹುಭಾಗವನ್ನು ಕಷ್ಟಸ್ಥಿತಿಯಲ್ಲಿರುತ್ತಿದ್ದ ನಾನಾ ವರ್ಗದ ಜನತೆಗೆ ಧಾರಾಳವಾಗಿ ಹಂಚಿ ಕೊಡುಗೈ ದೊರೆ ಎಂದು ಹೆಸರಾಗಿದ್ದರು. ಈ ಧಾರಾಳತನದಿಂದಾಗಿ ಜೀವನದ ಕೊನೆಯ ದಿನಗಳಲ್ಲಿ ಆರ್ಥಿಕವಾಗಿ ಇವರು ಬಹುವಾಗಿ ಬಳಲಿದರು. 1926 ಏಪ್ರಿಲ್ 4ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಸ್ಥಾಪಿಸಿದ ನಾಟಕ ಮಂಡಳಿ ಟಿ.ಪಿ.ಕೈಲಾಸಂ ಅವರ ಒತ್ತಾಸೆಯಿಂದ ಇವರು ನಿಧನರಾದ ಮೇಲೂ ಸುಮಾರು ಎರಡು ವರ್ಷಗಳ ಕಾಲ ನಡೆದು ಕೊನೆಗೆ ನಿಂತುಹೋಯಿತು. ಇವರ ಶಿಷ್ಯರೂ ಅಭಿಮಾನಿಗಳೂ ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ರಂಗಮಂದಿರವೊಂದನ್ನು ಸ್ಥಾಪಿಸಿದ್ದಾರೆ. (ಎಚ್.ಕೆ.ಆರ್.)

**ವರುಣ:** ಮೈಸೂರು ತಾಲ್ಲೂಕಿನ ಒಂದು ಗ್ರಾಮ. ಮೈಸೂರಿನ ಆಗ್ನೇಯಕ್ಕೆ 10 ಕಿಮೀ ದೂರದಲ್ಲಿ ತಿರುಮಕೂಡಲು ನರಸೀಪುರದ ರಸ್ತೆಯಲ್ಲಿದೆ. ಜನಸಂಖ್ಯೆ 2,162. ಈ ಊರು 9–10ನೆಯ ಶತಮಾನಗಳಲ್ಲಿ ಚಾಳುಕ್ಯಾನ್ವಯಕ್ಕೆ ಸೇರಿದ್ದ ಒಂದು ಕಿರು ಸಾಮಂತ ಶಾಖೆಯ

ನೆಲೆಯಾಗಿತ್ತು. ಆ ಕಾಲದ ಇಲ್ಲಿನ ಶಾಸನಗಳಲ್ಲಿ ಆ ವಂಶದ ಗೊಗ್ಗಿ, ನರಸಿಂಹ ಎಂಬುವರ ಉಲ್ಲೇಖಗಳು ದೊರಕುತ್ತವೆ. ಈ ಗ್ರಾಮದಲ್ಲಿ ಅದೇ ಕಾಲಕ್ಕೆ ಸಂಬಂಧಿಸಿದಂತೆ ಕೆಲವು ಪ್ರಾಚೀನ ಅವಶೇಷಗಳಿವೆ. ಅವುಗಳಲ್ಲಿ ಮಹಾಲಿಂಗೇಶ್ವರ (ಶಾಸನಗಳಲ್ಲಿ ಭೂತೇಶ್ವರ) ಗುಡಿ ಮುಖ್ಯವಾದುದು. ಇದು ಗರ್ಭಗುಡಿ ಮತ್ತು ಸುಕನಾಸಿಗಳನ್ನು ಮಾತ್ರ

ಜೈನ ಬಸದಿ

ಒಳಗೊಂಡಿರುವ ಚಿಕ್ಕ ಕಟ್ಟಡ. ದೇವಾಲಯದ ಹೊರಭಿತ್ತಿಯ ಅಲಂಕರಣ ಒಳಗಿನ ವಿನ್ಯಾಸ ಇವೆಲ್ಲವೂ ಗಂಗ ಶೈಲಿಯಲ್ಲಿ ಇವೆ. ಈ ದೇವಾಲಯದ ಹೊರಗೋಡೆಗಳ ಮೇಲೆ, ಕಪೋತದ ಕೆಳಗೆ ಪುರಾಣದ ಕಥೆಗಳನ್ನು ಒಳಗೊಂಡ ಶಿಲ್ಪಪಟ್ಟಿಕೆಗಳು ಇವೆ. ಇಲ್ಲಿನ ರಾಮಾಯಣ ಪಟ್ಟಿಕೆಗಳು ವಿಶಿಷ್ಟ ರೀತಿಯದಾಗಿವೆ. ಈ ಗುಡಿಯ ನವರಂಗದ 9–10ನೆಯ ಶತಮಾನಕ್ಕೆ ಸೇರುವ ಕೆಲವು ವಿಗ್ರಹಗಳಿವೆ. ವರುಣದಲ್ಲಿ ಸು. 11–12ನೆಯ ಶತಮಾನಕ್ಕೆ ಸೇರಿದ ಕೆಲವು ಜೈನ ಅವಶೇಷಗಳೂ ದೊರಕಿವೆ.

ಮಹದೇಶ್ವರ ದೇವಾಲಯ ಸ್ವಲ್ಪ ದೊಡ್ಡ ಕಟ್ಟಡ. ಇದನ್ನು 1828ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಧರ್ಮಪತ್ನಿ ಲಕ್ಷ್ಮೀವಿಲಾಸದ ದೇವಮ್ಮಣ್ಣಿ ಕಟ್ಟಿಸಿದರು. ನವರಂಗದಲ್ಲಿ ಪಾರ್ವತಿ, ನಂದಿ, ವಿದ್ಯಾಗಣಪತಿ ಮತ್ತು ಕೃಷ್ಣನ ಮೂರ್ತಿಗಳಿವೆ. ಗರ್ಭಗುಡಿಯಲ್ಲಿ ಗೋಳಾಕಾರದ ಶಿಲಾ ಲಿಂಗವಿದೆ. ತಾಮ್ರದ ಸದಾಶಿವ ಸಮೂಹವೂ ಸಹ ಇಲ್ಲಿದೆ. ವರುಣದ ಬಳಿ ಒಂದು ದೊಡ್ಡ ಕೆರೆ ಇದೆ. (ಎಂ.ಎಲ್.ಎಸ್.)

**ವರ್ಣಕ:** ಪ್ರಾಚೀನ ಕನ್ನಡ ಕಾವ್ಯಪ್ರಭೇದಗಳಲ್ಲಿ ಒಂದು. ನಾಗವರ್ಮ ತನ್ನ ಕಾವ್ಯಾವಲೋಕನದಲ್ಲಿ (ಕವಿಸಮಯಾಧಿಕರಣಂ, ಸೂತ್ರ 245) ಆಖ್ಯಾಯಿಕೆ, ಚಂಪೂ, ಮೆಲ್ವಾಡು, ಬೆದಂಡೆಗಬ್ಬ, ಬಾಜನಗಬ್ಬ ಮೊದಲಾದ ಕಾವ್ಯ ಪ್ರಭೇದಗಳನ್ನು ಹೇಳಿ, ಕೊನೆಗೆ ನಗರಾರ್ಣವ ಸಂದಟವೀ (ಸಂಭೋಗ) ನಗಚಂದ್ರಾರ್ಕೋದಯರ್ತುಸಲಿಲಕ್ರೀಡಾದಿ ಗಳಾದಿಯಾಗೆ ಸರಸೋಕ್ತಿಗಳಿಂ ವರ್ಣಿಸುಗೆ ವರ್ಣಕಂಗಳನದಱೊಳ್ ಎಂದು ವರ್ಣಕ ಕಾವ್ಯಲಕ್ಷಣವನ್ನು ಕೊಟ್ಟಿದ್ದಾನೆ. 'ಅಱುವತ್ತೇೞುಂ ಕಂದದೊಳ್ ಉಱುವ ಮಹಾಭಾರತದೀ ವರ್ಣಕ ಕೃತಿಯೊಳ್ ತುರುಗಿಹ ಶಬ್ದಾರ್ಥಕ್ಕೋಸ್ಕರಮಾಗಿಯೆ ಪೇೞಿನಖಿಲ ಶಬ್ದಾನ್ತರಮಂ ವರ್ಣಕಮೊಡಂಬಡೆ' ಎಂದು ಕವಿಗಳು ತಮ್ಮ ಕೃತಿ ವರ್ಣಕ ಎಂದು ಹೇಳಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು. ಪದದ ವಾಚ್ಯಾರ್ಥವನ್ನು ಗಮನಿಸಿ ಹೇಳುವುದಾದರೆ ವರ್ಣನಾಪ್ರಧಾನವಾದದ್ದು ವರ್ಣಕ ಕಾವ್ಯ. ರೂಢಿಯಲ್ಲಂತೂ ವರ್ಣಕವೆಂದರೆ ಗೀತಪ್ರಧಾನ ಪದ್ಯಕಾವ್ಯ ಎಂದರ್ಥ. ಯಶೋಧರ ಚರಿತದ (ವಾದಿರಾಜ) ಟೀಕಾಕಾರನಾದ ಲಕ್ಷ್ಮಣ ಉಪಮೋತ್ಪ್ರೇಕ್ಷಾದಿ ವರ್ಣನಾಂಕಿತಾ ಕವಿತಾ ಕವಿತ್ವಂ ವರ್ಣಕಂ ಎಂದಿದ್ದಾನೆ. ಬಾಹುಬಲಿಕುಮಾರ ವರ್ಣಕವನ್ನು ಚಿಪ್ಪು ಕಳೆದು ಸರಗೈದ ಸುಪ್ಪಾಣಿ ಮುತ್ತಿನ ಹಾರ ಎಂದು ಹೊಗಳಿದ್ದಾನೆ. ವರ್ಣಕದ ಕ್ಷೇತ್ರ ಸೀಮಿತವಾದದ್ದು. ಇದರಲ್ಲಿ ಧರ್ಮದ ಲೇಪ ಅತ್ಯಲ್ಪ. ಸೌಂದರ್ಯದ ದೃಷ್ಟಿ ಅಧಿಕ. ಒಟ್ಟಿನಲ್ಲಿ ಧರ್ಮಕಥಾ ನಿರೂಪಣೆಗೆ ಸ್ಥಾನವಿಲ್ಲದ, ಆದರೆ ಅಲಂಕಾರಗಳ ಚಮತ್ಕಾರಕ್ಕೆ ಪರಮಪ್ರಾಶಸ್ತ್ಯವಿರುವ ಲಘುರಚನೆಗಳೆಲ್ಲವೂ ವರ್ಣಕವೆನಿಸುವುದು.

ಭಾವಪ್ರಧಾನತೆ ವರ್ಣಕದ ಇನ್ನೊಂದು ಮುಖ್ಯಗುಣ. ದೇವನೃಪಾದ ಪ್ರಶಂಸೆ, ಸ್ತೋತ್ರಗಳೆಲ್ಲ ಕಥಾಪ್ರಧಾನವಾಗುವುದಕ್ಕಿಂತ ಭಾವಪ್ರಧಾನವಾಗುವುದೇ ಹೆಚ್ಚು. ಆದುದರಿಂದ ಶಿವ, ಶಿವಗಣಾದಿ ಪ್ರಶಂಸೆಗೆ ಹೊರಟ ವೀರಶೈವಕವಿಗಳು ತಮ್ಮ ರಗಳೆ, ವಚನ ಮುಂತಾದ ರಚನೆಗಳನ್ನು ವಸ್ತುಕವೆನ್ನದೆ ವರ್ಣಕವೆಂದೇ ಭಾವಿಸುತ್ತ ಬಂದಂತೆ ತೋರುತ್ತದೆ. ಧರ್ಮ, ಕಾವ್ಯಧರ್ಮಗಳೆರಡನ್ನು ಸಂಘಟಿಸಿ ಕನ್ನಡದಲ್ಲಿ ಜೈನಕವಿಚಕ್ರವರ್ತಿಗಳು ಬರೆದ ನೂತನಪುರಾಣಕಾವ್ಯ ಸಂಪ್ರದಾಯಕಥಾವಸ್ತುವಿನ ಮಾಹಾತ್ಮ್ಯ ದೃಷ್ಟಿಯಿಂದ ವಸ್ತುಕವೆನಿಸುವ ಅಂಶಗಳನ್ನೂ ವರ್ಣನಾಚಮತ್ಕಾರ ದೃಷ್ಟಿಯಿಂದ ವರ್ಣಕವೆನಿಸುವ ಅಂಶಗಳನ್ನೂ ಕಡಿಮೆ ಒಳಗೊಳ್ಳುತ್ತಿದ್ದವು. ಒಂದು ಕಾಲದಲ್ಲಿ ವಸ್ತುಕಕ್ಕೆ ಪ್ರಾಧಾನ್ಯವಿದ್ದರೆ, ಮತ್ತೊಂದು ಕಾಲದಲ್ಲಿ ವರ್ಣಕಕ್ಕೆ ಪ್ರಾಧಾನ್ಯ ದೊರಕಿಸಿಕೊಂಡಿದೆ. ಈ ಎರಡೂ ಕಾವ್ಯ ಪ್ರಭೇದಗಳ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. (ಸಿ.ಜಿ.ಪಿ.;ಕೆ.ಕೆ.)

**ವಸ್ತುಕ:** ಸಂಸ್ಕೃತ ಲಾಕ್ಷಣಿಕರು ಎಲ್ಲಿಯೂ ಹೆಸರಿಸದ ಆದರೆ ಕನ್ನಡದ ಕವಿಗಳೂ ಕೆಲವರು ಕನ್ನಡಿಗರಾದ ಸಂಸ್ಕೃತ ಕವಿಗಳೂ ಪ್ರಸ್ತಾಪಿಸಿರುವ ಒಂದು ಕಾವ್ಯ ಪ್ರಭೇದ. ಸಂಸ್ಕೃತ–ಕನ್ನಡ ಕವಿಗಳ ವ್ಯಾಖ್ಯಾನಕಾರರ, ಆಲಂಕಾರಿಕರ ಎಲ್ಲ ವಿವರಣೆಗಳನ್ನೂ ಸೂಕ್ಷ್ಮವಾಗಿ ಕಲೆಹಾಕಿ ಪರಿಶೀಲಿಸಿದರೆ. ಕೆಲವೊಂದು ತೀರ್ಮಾನಗಳಿಗೆ ಬರಬಹುದು. ಶಾರ್ಙ್ಗದೇವನ ಸಂಗೀತರತ್ನಾಕರದಲ್ಲಿ ಬರುವ ವರೋ ವಸ್ತುಕವಿರ್ವಣಕವಿರ್ಮಧ್ಯಮ ಉಚ್ಯತೇ ಎಂಬ ಮಾತಿಗೆ ಕಲ್ಲಿನಾಥನ ವ್ಯಾಖ್ಯಾನದಲ್ಲಿ, ವಸ್ತುಕಕವಿಯನ್ನು ಕಥಾಕವಿ ಎಂದು ಕರೆಯಲಾಗಿದೆ. ಅಂದರೆ, ಯಾವ ಕಾವ್ಯದಲ್ಲಿ ಕಥೆಗೆ ಪ್ರಾಧಾನ್ಯವೋ ಅದು ವಸ್ತುಕ ಕಾವ್ಯವೆಂದರೆ ಚಂಪೂಕಾವ್ಯ ಎಂದರ್ಥ. ಈ ಮಾತನ್ನು ವಾದಿರಾಜನ ಯಶೋಧರ ಚರಿತೆಗೆ ವ್ಯಾಖ್ಯಾನ ಬರೆದಿರುವ ಲಕ್ಷ್ಮಣನೂ ಪುಷ್ಟೀಕರಿಸುತ್ತಾನೆ. ಈತ ಯಥಾವತ್ ವಸ್ತುಕಥನಂ ವಸ್ತುಕಂ ಎಂದಿದ್ದಾನೆ. ಅಂದರೆ, ಕಥೆಯನ್ನು ನೇರವಾಗಿ ನಡೆದಂತೆ ನಿರೂಪಿಸುವುದು ವಸ್ತುಕ ಮಾರ್ಗ. ಇಲ್ಲಿ ಭಾವಕ್ಕಿಂತ ಕಥೆ ಪ್ರಧಾನ. ಉಪಮೆ ಉತ್ಪ್ರೇಕ್ಷೆಗಳ ಅಗತ್ಯ ಅಷ್ಟಾಗಿಲ್ಲ. ಕಥಾನಿರೂಪಣೆ ಮುಖ್ಯ. ಆದರೆ ಒಂದೇ ಚಂಪೂಕಾವ್ಯದಲ್ಲಿ ವಸ್ತುಕಾಂಶಗಳೂ ಇರಬಹುದು. ವಸ್ತುಕವೆಂದರೆ ಸಕಲ ಲಕ್ಷಣಬದ್ಧ ಕವಿತೆ ಎಂಬ ಅಭಿಪ್ರಾಯ ಪ್ರಾಚೀನರಲ್ಲಿ ಇದ್ದುದು ವಿರೂಪಾಕ್ಷಪಂಡಿತ ಮೊದಲಾದ ಷಟ್ಪದಿಕಾರರಿಂದ ತಿಳಿದುಬರುತ್ತದೆ. ಬಾಹುಬಲಿಕುಮಾರ ತನ್ನ ನಾಗಕುಮಾರಚರಿತೆಯಲ್ಲಿ ಈ ಕಾವ್ಯಮಾರ್ಗವನ್ನು ಚಿಪ್ಪಿನೊಳಿಹ ಮುತ್ತು ಎಂದು ಪ್ರಶಂಸಿಸಿದ್ದಾನೆ. (ಕೆ.ಕೆ.;ಸಿ.ಜಿ.ಪಿ.)

**ವಸ್ತುಸಂಗ್ರಹಾಲಯಗಳು:** ಕರ್ನಾಟಕದಲ್ಲಿ ಪ್ರಾಚ್ಯ ಇಲಾಖೆ ಮತ್ತು ವಸ್ತು ಸಂಗ್ರಹಾಲಯ ಸಂಸ್ಥೆ ರೂಪುಗೊಂಡ ಮೇಲೆ ಸಂಗ್ರಹಾಲಯಗಳ ಬೆಳವಣಿಗೆ ಆಗತೊಡಗಿತು. ಈಗ ಕರ್ನಾಟಕದಲ್ಲಿ ಅನೇಕ ವಸ್ತು ಸಂಗ್ರಹಾಲಯಗಳಿವೆ. ಇವು ಜನರ ಕಲಾಶಕ್ತಿಯನ್ನು ಕೆರಳಿಸುವುದರ ಜೊತೆಗೆ ಜ್ಞಾನಾಭಿವೃದ್ಧಿಯ ಕೆಲಸವನ್ನೂ ಮಾಡುತ್ತ ಬರುತ್ತಿವೆ. ರಾಜ್ಯ ಪ್ರಾಚ್ಯ ಇಲಾಖೆಯವರ ಅಧೀನದಲ್ಲಿ 9 ಸಂಗ್ರಹಾಲಯಗಳಿವೆ. ಭಾರತ

ಪುರಾತತ್ವ ಸರ್ವೇಕ್ಷಣ ಇಲಾಖೆಯ ಅಧೀನದಲ್ಲಿ 4 ಸಂಗ್ರಹಾಲಯಗಳು ಮತ್ತು 3 ಶಿಲ್ಪಕಲಾ ಸಂಗ್ರಹಾಲಯಗಳಿವೆ. ವಿಜ್ಞಾನ ಮತ್ತು ತಾಂತ್ರಿಕ ಸಂಶೋಧನ ಇಲಾಖೆಗೆ ಸೇರಿದ 3 ಸಂಗ್ರಹಾಲಯಗಳಿವೆ. 9 ಖಾಸಗಿ ಸಂಗ್ರಹಾಲಯಗಳಿವೆ. ಇವಲ್ಲದೆ 3 ವಿಶ್ವ ವಿದ್ಯಾನಿಲಯಗಳ ಸಂಗ್ರಹಾಲಯಗಳಿವೆ. ಈ ಲೇಖನದಲ್ಲಿ ಸಂಗ್ರಹಾಲಯಗಳ ಸ್ಥೂಲ ಸಮೀಕ್ಷೆಯನ್ನು ಕೊಡಲಾಗಿದೆ.

1960 ಕ್ಕೂ ಮೊದಲು ಸರ್ಕಾರಿ ಸಂಗ್ರಹಾಲಯಗಳು ಕೈಗಾರಿಕಾ ಇಲಾಖೆಗೆ ಸೇರಿದ್ದುವು. 1960 ರಲ್ಲಿ ಇವೆಲ್ಲವನ್ನೂ ಪ್ರಾಚ್ಯ ಇಲಾಖಾ ನಿರ್ದೇಶನಾಲಯಕ್ಕೆ ವರ್ಗಾಯಿಸಲಾಯಿತು.

ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯ 1865ಕ್ಕೂ ಹಿಂದೆ ಬಾಡಿಗೆ ಕಟ್ಟಡದಲ್ಲಿತ್ತು. ಪಾಶ್ಚಾತ್ಯ ರೀತಿಯ ನೂತನ ಕಟ್ಟಡ 1879 ರಲ್ಲಿ ಕಬ್ಬನ್ ಪಾರ್ಕಿನಲ್ಲಿ ಸಿದ್ಧವಾಗಿ 180ರಲ್ಲಿ ಸಂಗ್ರಹಾಲಯ ಪ್ರಾರಂಭವಾ

ಮೈಸೂರು ವಿಶ್ವವಿದ್ಯಾನಿಲಯ ವಸ್ತುಸಂಗ್ರಹಾಲಯ ಸಮುಚ್ಚಯ

ಯಿತು. ಇಲ್ಲಿ ಪ್ರಾಚೀನ ಕಾಲದ ನಾಣ್ಯಗಳು, ಶಿಲ್ಪ ಕೃತಿಗಳು, ತಾಳೆಗರಿಗಳು, ಪ್ರಾಚ್ಯ ಇಲಾಖೆಯ ಸಂಶೋಧನ ಸಾಮಗ್ರಿಗಳನ್ನು ಪ್ರದರ್ಶಿಸಲಾಗಿದೆ. ಇಲ್ಲಿ ಚಿತ್ರ ಶಿಲ್ಪ ಕಲಾವಸ್ತುಗಳ ಪ್ರದರ್ಶನಕ್ಕೆ ಪ್ರತ್ಯೇಕ ಅವಕಾಶ ಕೂಡ ಇದೆ. 1935 ರಿಂದ ಅನೇಕ ಅಪರೂಪದ ವಸ್ತುಗಳನ್ನು ಕೊಳ್ಳುವುದರ ಮೂಲಕ, ದಾನ ಪಡೆಯುವುದರ ಮೂಲಕ ಸಂಗ್ರಹಾಲಯವನ್ನು ಅಭಿವೃದ್ಧಿಪಡಿಸಲಾಯಿತು. ಎರಡು ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಕೇಂದ್ರ ಸರ್ಕಾರ ಈಗಿನ ಕಟ್ಟಡವನ್ನು ಹಿಗ್ಗಿಸಿ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ಧನಸಹಾಯ ನೀಡಿತು.

ಚಿತ್ರದುರ್ಗದ ವಸ್ತು ಸಂಗ್ರಹಾಲಯ ಅಪರೂಪವಾದ ಅನೇಕ ಕಲಾ ವಸ್ತುಗಳನ್ನು ಹೊಂದಿದೆ. ಪ್ರಸಿದ್ಧ ವಿದ್ವಾಂಸರಾದ ಹುಲ್ಲೂರು ಶ್ರೀನಿವಾಸ ಜೋಯಿಸರ ಶ್ರಮದ ಫಲವಾಗಿ ಈ ಸಂಗ್ರಹಾಲಯ ಪ್ರಾರಂಭವಾಯಿತು. ಮೊದಲು ಚಂದ್ರವಳ್ಳಿ, ಬ್ರಹ್ಮಗಿರಿ ಪ್ರದೇಶದಲ್ಲಿ ದೊರೆತ ಅವಶೇಷಗಳು ಮಾತ್ರ ಇಲ್ಲಿ ಪ್ರದರ್ಶನಗೊಂಡಿದ್ದುವು. 1947ರಲ್ಲಿ ಈ ಸಂಗ್ರಹಾಲಯ ರಾಜ್ಯ ಪ್ರಾಚ್ಯ ಇಲಾಖೆಯ ಆಡಳಿತಕ್ಕೆ ಸೇರಿತು. ಇಲ್ಲಿ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದಂತೆ ಅನೇಕ ಆಯುಧೋಪಕರಣಗಳನ್ನೂ ವಸ್ತು ವಿಶೇಷಗಳನ್ನೂ ನೋಡಬಹುದಾಗಿದೆ.

ಶಿವಮೊಗ್ಗದಲ್ಲಿರುವ ಜಿಲ್ಲಾ ವಸ್ತು ಸಂಗ್ರಹಾಲಯ ಅಲ್ಲಿನ ಜಿಲ್ಲಾ ಕೇಂದ್ರ ಗ್ರಂಥಾಲಯದ ಕಟ್ಟಡದಲ್ಲಿದೆ. ಈ ಪ್ರದೇಶದಲ್ಲಿ ಆಳಿದ ರಾಜರು, ಪಾಳೆಯಗಾರರು ಬಳಸುತ್ತಿದ್ದಂಥ ಅನೇಕ ವಸ್ತುಗಳನ್ನು ಸಂಗ್ರಹಿಸಲಾಗಿದೆ. ಕೆಳದಿ ಅರಸರ ಕಾಲದ ವಿಗ್ರಹಗಳು, ನಾಣ್ಯಗಳು, ಆಯುಧಗಳು, ಫಿರಂಗಿಗಳು, ವೇಷ ಭೂಷಣಕ್ಕೆ ಸಂಬಂಧಿಸಿದ ವಸ್ತುಗಳು ಮುಂತಾದವನ್ನು ಇಲ್ಲಿ ನೋಡಬಹುದು. ಇಲ್ಲಿನ ಸಂಗ್ರಹದಲ್ಲಿರುವ ಅಪೂರ್ವ ವಸ್ತುವೆಂದರೆ ಆಮ್ಸ್ಟರ್‌ಡ್ಯಾಂನಲ್ಲಿ ತಯಾರಿಸಲಾದ ಒಂದು ಗಂಟೆ. ಇದು ಕೆಳದಿಯ ಚೆನ್ನಮ್ಮಾಜಿಯ ಕಾಲದ್ದು. ಸಾಗರ, ಸೊರಬ ಮುಂತಾದ ಕಡೆಯ ಹಿಂದಿನ ಹಾಗೂ ಇಂದಿನ ಗುಡಿಗಾರರ ದಂತದ ಕುಸುರಿ ಕೆತ್ತನೆ ವಸ್ತುಗಳನ್ನೂ ಇಲ್ಲಿ ಪ್ರದರ್ಶಿಸಲಾಗಿದೆ.

ಮಡಿಕೇರಿಯ ಜಿಲ್ಲಾ ವಸ್ತು ಸಂಗ್ರಹಾಲಯ 1971 ರಲ್ಲಿ ಕೋಟೆಯ ಒಳಭಾಗದಲ್ಲಿರುವ ಹಳೆಯ ಕಾಲದ ಸುಂದರ ಚರ್ಚಿನಲ್ಲಿ ಪ್ರಾರಂಭವಾಯಿತು. ಈ ಜಿಲ್ಲೆಯ ಪ್ರದೇಶದಲ್ಲಿ ಸಂಗ್ರಹಿಸಿದ ವಿವಿಧ ಶಿಲಾಮೂರ್ತಿಗಳು, ನಾಣ್ಯಗಳು, ಕೊಡಗಿನ ರಾಜರ ಕಾಲದ ಹಸ್ತಪ್ರತಿಗಳು, ವೇಷಭೂಷಣಗಳು, ಕತ್ತಿ, ಕಠಾರಿಗಳು ಅಲ್ಲದೆ ತೀರ್ಥಂಕರ ವಿಗ್ರಹಗಳು ಮುಂತಾದುವು ಇಲ್ಲಿ ಪ್ರದರ್ಶಿತವಾಗಿವೆ.

ಮಂಗಳೂರಿನ ಶ್ರೀಮಂತಿಬಾಯಿ ವಸ್ತು ಸಂಗ್ರಹಾಲಯ ಎತ್ತರವಾದ ಗುಡ್ಡದ ಮೇಲಿರುವ ಕಟ್ಟಡದಲ್ಲಿ ಇದೆ. ಖ್ಯಾತ ಕರ್ನಲ್ ವಿ.ಆರ್.ಮಿರಜ್‌ಕರ್ ಅವರು ತಮ್ಮ ತಾಯಿಯವರ ಸ್ಮರಣೆಗಾಗಿ 1906 ರಲ್ಲಿ ಈ ಸಂಗ್ರಹಾಲಯವನ್ನು ಪ್ರಾರಂಭಿಸಿ ಅನಂತರ ಸರ್ಕಾರದ ವಶಕ್ಕೆ ಕೊಟ್ಟರು. ದಕ್ಷಿಣ ಕನ್ನಡದ ಗುರುಮಠಗಳಲ್ಲಿ, ಖಾಸಗಿ ಶ್ರೀಮಂತರ ಮನೆಗಳಲ್ಲಿ ಇದ್ದ ಅಪರೂಪದ ವಸ್ತುಗಳನ್ನು ಸಂಗ್ರಹಿಸಿ ತಂದು ಈ ಸಂಗ್ರಹಾಲಯವನ್ನು ಶ್ರೀಮಂತಗೊಳಿಸಲಾಗಿದೆ. ಈ ಸಂಗ್ರಹಾಲಯದಲ್ಲಿ ವರ್ಣಚಿತ್ರಗಳು, ಲೋಹಮೂರ್ತಿಗಳು, ಶಿಲಾಪ್ರತಿಮೆಗಳು, ಪ್ರಾಚ್ಯವಸ್ತುಗಳು ಹಾಗೂ ಆಯುಧ ವಿಶೇಷಗಳು, ಟ್ಯಾಕ್ಸಿಡರ್ಮಿ ಕಲಾವಸ್ತುಗಳು ಹೆಚ್ಚಾಗಿವೆ.

ಕಿತ್ತೂರು ರಾಣಿ ಚೆನ್ನಮ್ಮ ಸ್ಮಾರಕ ವಸ್ತುಸಂಗ್ರಹಾಲಯ 1967 ರಲ್ಲಿ ಕಿತ್ತೂರಿನಲ್ಲಿ ಪ್ರಾರಂಭವಾಯಿತು. ಈ ಸಂಗ್ರಹಾಲಯ ಕಿತ್ತೂರು ಕೋಟೆಯ ಒಳಗೇ ಇದೆ. ಇಲ್ಲಿ ಕಿತ್ತೂರು ಮನೆತನಕ್ಕೆ ಸಂಬಂಧಪಟ್ಟ ವಸ್ತುಗಳು ಹಾಗೂ ಆ ಪ್ರದೇಶದಲ್ಲಿ ಬಳಕೆಯಾಗುತ್ತಿದ್ದ ಯುದ್ಧದ ಸಾಮಗ್ರಿಗಳು, ನಾಣ್ಯಗಳು, ವಿಗ್ರಹಗಳು, ವೇಷಭೂಷಣ ಇತ್ಯಾದಿಗಳನ್ನು ಪ್ರದರ್ಶಿಸಲಾಗಿದೆ. ಸಂಗ್ರಹಾಲಯವನ್ನು ನೂತನ ಕಟ್ಟಡಕ್ಕೆ ವರ್ಗಾಯಿಸಲು ಸಿದ್ಧತೆ ನಡೆಯುತ್ತಿದೆ.

ಗುಲ್ಬರ್ಗದ ಸರ್ಕಾರಿ ವಸ್ತುಸಂಗ್ರಹಾಲಯ ಅಲ್ಲಿನ ಎರಡು ಗುಮ್ಮಟಗಳಲ್ಲಿ ಆವಿಷ್ಕಾರಗೊಂಡಿದ್ದು ಇಲ್ಲಿ ಪ್ರದರ್ಶಿಸಿರುವ ಬೆಲೆಬಾಳುವ ಪುರಾತನ ವಸ್ತುಗಳು ಅಪೂರ್ವವಾದುವು, ಅಲ್ಲದೆ ಪ್ರಾಚ್ಯ ಸಂಶೋಧನೆಯಲ್ಲಿ ದೊರೆತ ಮಣ್ಣಿನ ಹಾಗೂ ಶಿಲ್ಪದ ಅವಶೇಷಗಳನ್ನು ಇಲ್ಲಿ ಸಂಗ್ರಹಿಸಿಡಲಾಗಿದೆ. ಶಿಲಾಮೂರ್ತಿಗಳು, ನಾಣ್ಯಗಳು, ಆಯುಧಗಳು, ವೇಷಭೂಷಣಗಳು, ಮೈಸೂರು ಶೈಲಿಯ ವರ್ಣಚಿತ್ರಗಳು, ಆಧುನಿಕ ಚಿತ್ರಗಳು ಇಲ್ಲಿ ಗಮನಿಸಬೇಕಾದ ವಸ್ತುಗಳು, ಕ್ರಿ.ಪೂ. 3ನೆಯ ಶತಮಾನಕ್ಕೂ ಹಿಂದಿನದೆನ್ನಲಾದ ಅನೇಕ ಅವಶೇಷಗಳು ಇಲ್ಲಿ ಮುಖ್ಯ ಸಂಗ್ರಹಗಳಾಗಿವೆ. ಅಲ್ಲದೆ ಗುಲ್ಬರ್ಗ ವಿಭಾಗದಲ್ಲಿರುವ ಸಂಚಿಹೊನ್ನಮ್ಮ, ಶಿರವಾಳ, ಮಳಖೇಡ, ಸೇಡಂ, ಉಪ್ಪುರ, ಮಣುರ,ಕಾಳಗಿ ಇವುಗಳಲ್ಲಿಯ ಶೈವ ಮತ್ತು ಜೈನ ಶಿಲಾಲೇಖಗಳ ಮತ್ತು ಶಿಲ್ಪಕಲೆಯ ಸಂಗ್ರಹ ವಿಶೇಷವನ್ನು ಇಲ್ಲಿ ಕಾಣಬಹುದು. ಸುರಪುರದ ಅರಸರ ಕಾಲದ ಅವಶೇಷಗಳೂ ಇಲ್ಲಿವೆ.

ಬಿದರೆ ಜಿಲ್ಲೆಯ ಬಸವಕಲ್ಯಾಣದ ಸರ್ಕಾರಿ ವಸ್ತು ಸಂಗ್ರಹಾಲಯ ಬಸವ ಕಲ್ಯಾಣ ನಗರಕ್ಕೆ ಹೊಂದಿಕೊಂಡಂತಿರುವ ಚಿಕ್ಕ ಹಾಗೂ ಸುಂದರವಾದ ಒಂದು ಕೋಟೆಯಲ್ಲಿದೆ. ಈ ಸಂಗ್ರಹಾಲಯದಲ್ಲಿ ಶಿಲಾಲೇಖಗಳು, ಶಿಲಾಮೂರ್ತಿಗಳು ಮೊದಲಾದುವನ್ನು ಪ್ರದರ್ಶಿಸಲಾಗಿದೆ. ಅವುಗಳೆಲ್ಲ ಆ ಸುತ್ತಿನ ಪ್ರದೇಶದಲ್ಲಿ ಸಂಗ್ರಹಿಸಿದವೇ ಆಗಿವೆ.

ಕರ್ನಾಟಕದ ಖ್ಯಾತ ಕಲಾವಿದರಾದ ವೆಂಕಟಪ್ಪನವರ ಸ್ಮಾರಕವಾಗಿ ಸ್ಥಾಪನೆಗೊಂಡ ವೆಂಕಟಪ್ಪ ಆರ್ಟ್ ಗ್ಯಾಲರಿ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದ ಪಕ್ಕದಲ್ಲೇ ಇದೆ. ಈ ಸಂಗ್ರಹಾಲಯದಲ್ಲಿ ವೆಂಕಟಪ್ಪನವರು ರಚಿಸಿದ ಅನೇಕ ಕಲಾಕೃತಿಗಳನ್ನು ಸುವ್ಯವಸ್ಥಿತವಾಗಿ ಪ್ರದರ್ಶಿಸಲಾಗಿದೆ. ಅಲ್ಲದೆ ಇವರು ಬಳಸಿದ ಸಂಗೀತ ವಾದ್ಯಗಳನ್ನೂ ಇವರು ಉಪಯೋಗಿಸಿದ ಕಲಾಸಾಮಗ್ರಿಗಳು ಮತ್ತು ಬಟ್ಟೆ ಬರೆಗಳನ್ನೂ ಇಲ್ಲಿ ನೋಡಬಹುದಾಗಿದೆ. ಈ ಸಂಗ್ರಹಾಲಯದ ಮೊದಲ ಮಹಡಿಯಲ್ಲಿ ರಾಜ್ಯದ ಹಾಗೂ ಇತರ ರಾಜ್ಯದ ಖ್ಯಾತ ಕಲಾವಿದರ ಚಿತ್ರಗಳನ್ನೂ ಶಿಲ್ಪಗಳನ್ನೂ ಕಾಣಬಹುದು. ಇವುಗಳಲ್ಲಿ ಬಹುಪಾಲು ಆಗಿಂದಾಗ್ಗೆ ಕಲಾವಿದರಿಂದಲೇ ಕೊಂಡ ಕಲಾವಸ್ತುಗಳು, ಎರಡನೆಯ ಮಹಡಿಯ ವಿಶಾಲವಾದ ಸಭಾಂಗಣದಲ್ಲಿ ಕಲಾವಿದರ ಕೃತಿಗಳ ಪ್ರದರ್ಶನಕ್ಕೆ ಅಣಿಮಾಡಿಕೊಡಲಾಗಿದೆ. ಅಲ್ಲದೆ ಈ ಗ್ಯಾಲರಿಯ ಕೆಳಭಾಗದಲ್ಲಿ ಅನೇಕ ಕಲಾಪ್ರದರ್ಶನಗಳು ನಡೆದಿವೆ. ಸರ್ಕಾರಿ ವಸ್ತುಸಂಗ್ರಹಾಲಯದ ಕ್ಯೂರೇಟರ್ ಈ ಗ್ಯಾಲರಿಯ ಮೇಲ್ವಿಚಾರಕರು.

ಕೇಂದ್ರ ಪ್ರಾಚ್ಯ ಇಲಾಖಾ ವಸ್ತು ಸಂಗ್ರಹಾಲಯಗಳು: ಭಾರತ ಸರ್ಕಾರದ ಪ್ರಾಚ್ಯ ಇಲಾಖೆಯ ಆಶ್ರಯದಲ್ಲಿ ರೂಪಿಸಲಾದ ಸಂಗ್ರಹಾಲಯಗಳಲ್ಲಿ ಹಳೇಬೀಡು, ಹಂಪೆ, ಬಿಜಾಪುರ, ಶ್ರೀರಂಗಪಟ್ಟಣ, ಬಿದರೆ ಮುಂತಾದ ಕಡೆಗಳಲ್ಲಿರುವ ವಸ್ತು ಸಂಗ್ರಹಾಲಯಗಳು ಕಲೋಪಾಸಕರ ಪ್ರಮುಖ ಆಕರ್ಷಣೆಗಳಾಗಿವೆ.

ಹಳೇಬೀಡಿನ ಸಂಗ್ರಹಾಲಯ ಹೊಯ್ಸಳೇಶ್ವರ ದೇವಾಲಯದ ಆವರಣದಲ್ಲಿದೆ. ಇಲ್ಲಿನ ಸುತ್ತಮುತ್ತಲ ಪ್ರದೇಶದಲ್ಲಿ ದೊರೆತ ಅನೇಕ ವಿಗ್ರಹಗಳನ್ನು ಸಂಗ್ರಹಿಸಿ ಇಲ್ಲಿ ಪ್ರದರ್ಶಿಸಲಾಗಿದೆ.

ವಿಜಯನಗರದ ಗತವೈಭವ ಸ್ಮಾರಕವಾಗಿ ಉಳಿದಿರುವ ಹಂಪೆಯಲ್ಲಿ ಅಲ್ಲಿನ ಗಜಶಾಲೆಯಲ್ಲಿ ಕೆಲವಾರು ಮೂರ್ತಿಶಿಲ್ಪ ಕೃತಿಗಳನ್ನು ಜೋಡಿಸಲಾಗಿದೆ. ಇವೆಲ್ಲವೂ ಆ ಸುತ್ತಿನಲ್ಲಿ ಸಂಗ್ರಹಿಸಿದ ಕೃತಿಗಳು. ಈ ಸಂಗ್ರಹಾಲಯಕ್ಕೆ ನೂತನ ಕಟ್ಟಡ ರೂಪಗೊಳ್ಳಲಿದೆ.

ಬಿಜಾಪುರದ ವಸ್ತುಸಂಗ್ರಹಾಲಯ ಪ್ರಖ್ಯಾತ ಗೋಳಗುಮ್ಮಟದ ಪಕ್ಕದಲ್ಲಿರುವ ನಗರ್‌ಖಾನ್ ಕಟ್ಟಡದಲ್ಲಿದೆ. ಈ ಸಂಗ್ರಹಾಲಯದಲ್ಲಿರುವ ಅಪೂರ್ವ ವಸ್ತುಗಳೆಂದರೆ ಬಹುಮನೀ ಶೈಲಿಯ ಸೂಕ್ಷ್ಮ ವರ್ಣಚಿತ್ರಗಳು, ಇವುಗಳ ಜೊತೆಗೆ ಶಿಲ್ಪಕೃತಿಗಳೂ ನಾಣ್ಯಗಳೂ ಸೇರ್ಪಡೆಗೊಂಡಿವೆ.

ಶ್ರೀರಂಗಪಟ್ಟಣದಲ್ಲಿರುವ ಟಿಪ್ಪುಸುಲ್ತಾನನ ಬೇಸಗೆ ಅರಮನೆಯನ್ನು (ದರಿಯಾದೌಲತ್) 1959 ರಲ್ಲಿ ವಸ್ತುಸಂಗ್ರಹಾಲಯವಾಗಿ ಮಾರ್ಪಡಿಸಲಾಯಿತು. ಇಲ್ಲಿ ಹೈದರ್ ಅಲಿ, ಟಿಪ್ಪು ಕಾಲದ ನಾಣ್ಯಗಳು, ವೇಷಭೂಷಣಗಳು, ತೈಲ, ಜಲವರ್ಣ ಹಾಗೂ ಸೀಸದ ಕಡ್ಡಿಯಲ್ಲಿ ರಚಿಸಿದ ರೂಪಚಿತ್ರಗಳನ್ನೂ ಕೋಟೆ ಕೊತ್ತಲಗಳ ನಿಸರ್ಗ ಚಿತ್ರಗಳನ್ನೂ ಪ್ರದರ್ಶಿಸಲಾಗಿದೆ.

ಕೇಂದ್ರ ಪ್ರಾಚ್ಯ ಇಲಾಖೆಯ ವತಿಯಿಂದ ಇತಿಹಾಸ ಪ್ರಸಿದ್ಧ ಸ್ಥಳಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಆಯಾ ಭಾಗದ ಶಿಲ್ಪಕೃತಿಗಳನ್ನು ಸಂಗ್ರಹಿಸಿ ಇಡುವ ವ್ಯವಸ್ಥೆ ಮಾಡಲಾಗಿದೆ.

ವಿಜ್ಞಾನ ವಸ್ತುಸಂಗ್ರಹಾಲಯ (ಕೈಗಾರಿಕಾ ಪ್ರಾಯೋಗಿಕ ಸಂಗ್ರಹಾಲಯಗಳು): ಕೇಂದ್ರ ಕೈಗಾರಿಕಾ ಪ್ರಯೋಗ ಶಾಖೆಯವರು ಭಾರತದಲ್ಲಿ 2 ವಿಜ್ಞಾನ ಸಂಗ್ರಹಾಲಯಗಳನ್ನು ರಚಿಸಿದ್ದಾರೆ. ಒಂದು ಕಲ್ಕತ್ತದಲ್ಲೂ ಮತ್ತೊಂದು ಬೆಂಗಳೂರಿನಲ್ಲೂ ಸ್ಥಾಪಿತವಾಗಿವೆ. ಬೆಂಗಳೂರಿನಲ್ಲಿರುವ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯದಲ್ಲಿ ವಿಜ್ಞಾನದ ನಾನಾ ಪ್ರಕಾರದ ಪ್ರಗತಿಯನ್ನು ಪ್ರತ್ಯಕ್ಷವಾಗಿ ತೋರುವ ವಿವಿಧ ಮಾದರಿಯ ಯಂತ್ರಗಳನ್ನು ಪ್ರದರ್ಶಿಸಲಾಗಿದೆ. ಅಲ್ಲದೆ ವಿಶ್ವೇಶ್ವರಯ್ಯನವರು ಸಾಧಿಸಿದ ಕೈಗಾರಿಕಾ ಪ್ರಗತಿಯನ್ನೂ ಸಾಕ್ಷ್ಯಚಿತ್ರಗಳ ಮಾದರಿಯೊಡನೆ ಪ್ರದರ್ಶಿಸಲಾಗಿದೆ.

ರೀಜನಲ್ ಸೈನ್ಸ್ ಸೆಂಟರ್ ಒಂದನ್ನು ಗುಲ್ಬರ್ಗದಲ್ಲಿ ತೆರೆಯಲಾಗಿದೆ. ಸಂಚಾರಿ ವಿಜ್ಞಾನ (ಮೊಬೈಲ್ ಸೈನ್ಸ್) ಪ್ರದರ್ಶನಗಳನ್ನು ಆಗಾಗ್ಗೆ ನಡೆಸಲಾಗುತ್ತಿದೆ.

ಕರ್ನಾಟಕದಲ್ಲಿ ವಿಶ್ವವಿದ್ಯಾಲಯಗಳೂ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎರಡು, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಒಂದು ಸಂಗ್ರಹಾಲಯ ಇವೆ. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿನ ಪ್ರಾಚ್ಯ ಸಂಶೋಧನಾಲಯ ಪ್ರಾಚ್ಯ ಸಂಶೋಧನೆಯನ್ನು ಕುರಿತು ಅಧ್ಯಯನ ನಡೆಸುತ್ತಿದೆ. ಇಲ್ಲಿ ಮೂರ್ತಿಶಿಲ್ಪಗಳೇ ಅಲ್ಲದೆ ಅಪೂರ್ವ ಕಲಾಸಂಗ್ರಹಗಳನ್ನು ಗಮನಿಸಬಹುದಾಗಿದೆ. ಇದೇ ರೀತಿಯ ವಸ್ತು ಸಂಗ್ರಹಾಲಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಇಲಾಖೆಯೂ ಹೊಂದಿದೆ. ಇಲ್ಲಿ ಅನೇಕ ಬಗೆಯ ಪ್ರಾಚ್ಯವಸ್ತುಗಳನ್ನು ಪ್ರದರ್ಶಿಸಲಾಗಿದೆ.



ಬೆಂಗಳೂರಿನ ವಿಶ್ವೇಶ್ವರಯ್ಯ ವಸ್ತುಸಂಗ್ರಹಾಲಯದ ಒಂದು ನೋಟ

ಜಾನಪದ ವಸ್ತುಸಂಗ್ರಹಾಲಯ: ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯ ಭಾರತದಲ್ಲೇ ದೊಡ್ಡದು. ಈ ಸಂಗ್ರಹಾಲಯದಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳ ಜನಪದ ಕಲಾವಸ್ತುಗಳನ್ನು ಸಂಗ್ರಹಿಸಿಡಲಾಗಿದೆ. ಪ್ರಸಿದ್ಧ ಜಾನಪದ ವಿದ್ವಾಂಸರಾದ ದೇಜಗೌ, ಹಾ.ಮಾ.ನಾಯಕ, ಜೀ.ಶಂ. ಪರಮಶಿವಯ್ಯ ಇವರ ಮಾರ್ಗದರ್ಶನದಲ್ಲಿ ಕಲಾವಿದರೂ ಕ್ಯೂರೇಟರೂ ಆದ ಪಿ.ಆರ್.ತಿಪ್ಪೇಸ್ವಾಮಿಯವರ ಸಹಕಾರದಲ್ಲಿ ಈ ಸಂಗ್ರಹಾಲಯ ಬಹುಬೇಗ ಬೆಳೆಯಿತು. ಈಗ ಈ ಸಂಗ್ರಹಾಲಯದಲ್ಲಿ ಸೂತ್ರ ಬೊಂಬೆಗಳು, ತೊಗಲುಬೊಂಬೆಗಳು, ವಾದ್ಯವಿಶೇಷಗಳು, ಮರದ ವಿವಿಧ ಕೆತ್ತನೆ ಮಾದರಿಗಳು, ಮಕ್ಕಳ ಆಟದ ಸಾಮಗ್ರಿಗಳು, ನಿತ್ಯಬಳಕೆಯ ವಸ್ತುಗಳು, ಆಯುಧ ವಿಶೇಷಗಳು, ಉಡುಗೆತೊಡುಗೆಗಳು, ಮೀನುಗಾರ, ನೇಕಾರ, ಕಮ್ಮಾರ, ಬಡಗಿ, ಅಕ್ಕಸಾಲಿಗ, ಚಮ್ಮಾರ ಮುಂತಾದವರ ವೃತ್ತಿಸಂಬಂಧವಾದ ಹತ್ಯಾರುಗಳು, ಮಣ್ಣಿನ, ಮರದ, ಲೋಹದ, ವಸ್ತುಗಳು ಮತ್ತು ವ್ಯವಸಾಯ ಸಾಧನಗಳು, ಯಕ್ಷಗಾನ ವೇಷಭೂಷಣಗಳು, ದೇವತಾಸಾಮಗ್ರಿಗಳು ಮತ್ತು ಆದಿವಾಸಿಗಳ ಮಾದರಿ ಗುಡಿಸಲುಗಳು ಹಾಗೂ ಅವರು ಬಳಸುತ್ತಿದ್ದ ವಸ್ತುಗಳನ್ನು ಪ್ರದರ್ಶಿಸಲಾಗಿದೆ. ಇಲ್ಲಿನ

ಈ ಎಲ್ಲ ವಸ್ತುಗಳು ಬಹುಪಾಲು ದಾನರೂಪದಲ್ಲಿ ಪಡೆದವೇ ಆಗಿವೆ. ಈ ಸಂಗ್ರಹಾಲಯದ ಮತ್ತೊಂದು ವಿಶೇಷವೆಂದರೆ ಕನ್ನಡನಾಡಿನ ಖ್ಯಾತ ಸಾಹಿತಿಗಳು, ಕಲಾವಿದರು ಬಳಸುತ್ತಿದ್ದ ವಸ್ತುಗಳು, ಅವರ ಬರೆಹ ಮುಂತಾದುವನ್ನು ಇಲ್ಲಿ ಪ್ರದರ್ಶಿಸಲಾಗಿರುವುದು. ಮೈಸೂರು ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗ ಸಸ್ಯಶಾಸ್ತ್ರ ವಿಭಾಗ ಹಾಗೂ ಭೂವಿಜ್ಞಾನ ವಿಭಾಗಗಳು ತಮ್ಮದೇ ಆದ ವಸ್ತುಸಂಗ್ರಹಾಲಯಗಳನ್ನು ಹೊಂದಿವೆ. ಹಾಲಿ ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಜಯಲಕ್ಷ್ಮೀ ವಿಲಾಸ ಅರಮನೆಯನ್ನು ವಸ್ತುಸಂಗ್ರಹಾಲಯಗಳ ಸಮುಚ್ಚಯವಾಗಿ ಪರಿವರ್ತಿಸಿದೆ. ಈ ಸಮಗ್ರ ಕಟ್ಟಡದ ಜೀರ್ಣೋದ್ಧಾರಕ್ಕೆ ಇನ್‌ಫೋಸಿಸ್‌ನ ನಾರಾಯಣಮೂರ್ತಿಯವರ ಪತ್ನಿ ಸುಧಾ ಮೂರ್ತಿ ಧನಸಹಾಯ ಮಾಡಿದ್ದಾರೆ. (ಪಿ.ಆರ್.ಟಿ.)

ಖಾಸಗಿ ವಸ್ತುಸಂಗ್ರಹಾಲಯಗಳಲ್ಲಿ ಮೈಸೂರಿನಲ್ಲಿರುವ ಜಯಚಾಮ ರಾಜೇಂದ್ರ ಚಿತ್ರಶಾಲೆ ಪ್ರಮುಖವಾದುದು. 1861ರಲ್ಲಿ ಕಟ್ಟಲಾದ ಜಗನ್ ಮೋಹನ ಅರಮನೆಯನ್ನು 1915ರಲ್ಲಿ ಸಂಗ್ರಹಾಲಯವಾಗಿ ಪರಿವರ್ತಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ಭಾರತೀಯ ಚಿತ್ರಕಲೆ ಹಾಗೂ ಕುಶಲ ಕೈಗಾರಿಕಾ ಕಲಾಕೃತಿಗಳ ಸಂಗ್ರಹಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟರು. 1924ರ ವೇಳೆಗೆ ಭಾರತದ ನಾನಾ ಶೈಲಿಯ ಖ್ಯಾತ ಚಿತ್ರಕಾರರ ಚಿತ್ರಗಳನ್ನು ಇಲ್ಲಿ ಸಂಗ್ರಹಿಸಲಾಯಿತು. 1932–37ರ ಸುಮಾರಿನಲ್ಲಿ ಪಿ. ಮೆಕಾಲ್ಫ್, ಬಿ. ವೆಂಕಟಾಚಲಂ ಅವರ ಸಹಕಾರದೊಂದಿಗೆ ಈ ಸಂಗ್ರಹಾಲಯ ವಿಸ್ತಾರಗೊಂಡಿತು. ಕೇರಳದ ಕಲಾವಿಭಾಗದಲ್ಲಿದ್ದ ಡಾ. ಜೇಮ್ಸ್ ಎಚ್. ಕಸಿನ್ಸ್ ಅವರನ್ನು ಕೃಷ್ಣರಾಜ ಒಡೆಯರು ಮೈಸೂರಿಗೆ ಕರೆಸಿ ಈ ಸಂಗ್ರಹಾಲಯವನ್ನು ಓರಣಗೊಳಿಸಿದರು. ದಸರ ವಸ್ತುಪ್ರದರ್ಶನದಲ್ಲಿ ಬಹುಮಾನ ಪಡೆದ ಕೃತಿಗಳನ್ನು ಕೊಂಡು ಈ ಸಂಗ್ರಹಾಲಯದಲ್ಲಿ ಇರಿಸಲಾಯಿತು. ಇಲ್ಲಿರುವ ವಸ್ತುಗಳಲ್ಲಿ ಬಹುಮಂದಿ ಪ್ರೇಕ್ಷಕರ ಗಮನ ಸೆಳೆದಿರುವಂಥದು 'ದೀಪ ಹಿಡಿದ ಹೆಣ್ಣು ಮಗಳ ಜಲವರ್ಣಚಿತ್ರ' (ದೀಪದಮಲ್ಲಿ). ಮುಂಬಯಿಯ ಖ್ಯಾತ ಕಲಾವಿದ ಎಸ್.ಜಿ. ಹಾಲ್‌ಡಂಕರ್ ಈ ಚಿತ್ರ ರಚಿಸಿದವರು.

ಈ ಸಂಗ್ರಹಾಲಯದಲ್ಲಿ ಐರೋಪ್ಯ, ಭಾರತೀಯ, ರಜಪೂತ್, ಮುಗಲ್ ಶೈಲಿಯ ಕಲಾಕೃತಿಗಳನ್ನು ಕಾಣಬಹುದು. ದಂತ, ಪಿಂಗಾಣಿ, ಗಂಧದ ಕಲಾಕೃತಿಗಳನ್ನು ಬೇರೆ ಬೇರೆ ವಿಭಾಗಗಳಲ್ಲಿ ಇರಿಸಲಾಗಿದೆ. ಸಂಗೀತವಾದ್ಯಗಳನ್ನೂ ಆಲಂಕಾರಿಕ ವಸ್ತುಗಳನ್ನೂ ಎರಡನೆಯ ಮಹಡಿಯ ವಸಂತ ಕೋಣೆಯಲ್ಲಿ ಪ್ರದರ್ಶಿಸಲಾಗಿದೆ. ಹೈದರ್ ಅಲಿ, ಟಿಪ್ಪು ಇವರಿಗೆ ಸಂಬಂಧಿಸಿದ ಮರದ ಕೆತ್ತನೆ ಹಾಗೂ ಛಾಯಾಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ.

1950ರಲ್ಲಿ ಜಯಚಾಮರಾಜ ಒಡೆಯರ್‌ರವರು ಈ ಸಂಗ್ರಹಾಲಯದ ಆಡಳಿತವನ್ನು ಒಂದು ಖಾಸಗಿ ಟ್ರಸ್ಟಿಗೆ ಒಳಪಡಿಸಿದರು. ರಾಜಾ ರವಿವರ್ಮರಿಂದ ಬರೆಸಿದ ಬಹು ಬೆಲೆಬಾಳುವ ತೈಲವರ್ಣಚಿತ್ರಗಳನ್ನು ಜಯಚಾಮರಾಜ ಒಡೆಯರ್‌ರವರು ಈ ಸಂಗ್ರಹಾಲಯಕ್ಕೆ ದಾನವಾಗಿ ನೀಡಿದರು. 1960ರಲ್ಲಿ ಈ ಸಂಗ್ರಹಾಲಯ ಪುನಃ ಕಾಯಕಲ್ಪ ಪಡೆಯಿತು. ಅವನೀಂದ್ರನಾಥ ಠಾಕೂರ್, ಅನಿತ್‌ಕುಮಾರ್ ಹಲ್ದಾರ್, ಆಗಾ ಹುಸೇನ್, ಈಶ್ವರದಾಸ್, ಇನಾಮತಿ, ಕನು ದೇಸಾಯಿ, ಖಾನ್‌ಬಹದ್ದೂರ್, ಎ.ಡಿ. ಥಾಮಸ್, ಸುಬ್ಬುಕೃಷ್ಣ, ಎಂ. ವೀರಪ್ಪ, ಕೆ. ವೆಂಕಟಪ್ಪ, ರೋರಿಚ್, ನಂದಲಾಲ ಬಸು ಮೊದಲಾದವರ ಪ್ರಖ್ಯಾತ ಚಿತ್ರಗಳು ಇಲ್ಲಿವೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ: ಉಡುಪಿಯ ಮಹಾತ್ಮಗಾಂಧಿ ಸ್ಮಾರಕ ಕಾಲೇಜಿನಲ್ಲಿದೆ. ಈ ಸಂಗ್ರಹಾಲಯದಲ್ಲಿ ಶಿಲ್ಪಮೂರ್ತಿಗಳು, ಮರದ ವಿಗ್ರಹಗಳು, ವರ್ಣಚಿತ್ರಗಳು, ಕಂಚಿನ ಪ್ರತಿಮೆಗಳನ್ನು ಪ್ರದರ್ಶಿಸಲಾಗಿದೆ. ಜೊತೆಗೆ ದೊಡ್ಡ ಗ್ರಂಥರಾಶಿಯೂ ಇದೆ. ಪ್ರಸಿದ್ಧ ಇತಿಹಾಸ ವಿದ್ವಾಂಸರಾದ ಪಿ. ಗುರುರಾಜಭಟ್ಟರಿಂದ ಸ್ಥಾಪಿಸಲ್ಪಟ್ಟ ಇಂಡಲಾಜಿಕಲ್ ಮ್ಯೂಜಿಯಂ ಕಲ್ಯಾಣಪುರದಲ್ಲಿದೆ.ಇಲ್ಲಿ ಅನೇಕ ತಾಮ್ರಶಾಸನಗಳು, ವಿಗ್ರಹಗಳು, ಚಾರಿತ್ರಿಕ ದಾಖಲೆಗಳನ್ನು ಕಾಣಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಕ್ಷೇತ್ರದಲ್ಲಿ ಒಂದು ಬೃಹತ್ ವಸ್ತುಸಂಗ್ರಹಾಲಯ ಸ್ಥಾಪಿತವಾಗಿದೆ. ಅಲ್ಲಿ ಜನಜೀವನ ಮತ್ತು ಸಂಸ್ಕೃತಿಯ ವಸ್ತುಗಳನ್ನು ಪ್ರಧಾನವಾಗಿ ಸಂಗ್ರಹಿಸಲಾಗಿದೆ.

ಚಿತ್ತಾಪುರದ ಶ್ರೀಗಳವರ ಮಠದ ಸಂಗ್ರಹಾಲಯ ಒಂದು ಅಪೂರ್ವ ಸಂಗ್ರಹದಿಂದ ಕೂಡಿದೆ. ಈ ಮಠದ ಮಹಡಿಯಲ್ಲಿ ಅನೇಕ ಲೋಹದ, ಕಲ್ಲಿನ, ಮರದ ಹಾಗೂ ದಂತದ ವಿಗ್ರಹಗಳನ್ನು, ಸೂಕ್ಷ್ಮ ಕುಸುರಿನ ಕೆತ್ತನೆ ಕಲಾಕೃತಿಗಳನ್ನು, ಗಾಜಿನ ಮೇಲೆ ರಚಿಸಿದ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಕೆಲವು ಜನಪದ ವಸ್ತುವಿಶೇಷಗಳನ್ನೂ ಇಲ್ಲಿ ಗಮನಿಸಬಹುದಾಗಿದೆ. ಈ ಸಂಗ್ರಹಾಲಯಕ್ಕೆ ಹೊಸ ಕಟ್ಟಡದ ವ್ಯವಸ್ಥೆ ನಡೆದಿದೆ.

ವಿಶ್ವೇಶ್ವರಯ್ಯನವರು ಭಾರತದ ಕೈಗಾರಿಕಾ ಪ್ರಗತಿಗೆ ಬಹುವಾಗಿ ಶ್ರಮಿಸಿದ ನೆನಪಿಗಾಗಿ ಇವರ ಹುಟ್ಟೂರಾದ ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ನ್ಯಾಷನಲ್ ಟ್ರಸ್ಟ್ ಮ್ಯೂಜಿಯಂ ಅನ್ನು 1972 ಮೇ 14 ರಂದು ಸ್ಥಾಪಿಸಲಾಗಿದೆ. ಇದರಲ್ಲಿ ವಿಶ್ವೇಶ್ವರಯ್ಯನವರು ಉಪಯೋಗಿಸುತ್ತಿದ್ದ ವಸ್ತುಗಳನ್ನು ಇರಿಸಲಾಗಿದೆ. ಶಿವಮೊಗ್ಗ ಜಿಲ್ಲೆಯ ಕೆಳದಿ ಗ್ರಾಮದಲ್ಲಿ ಏಕವ್ಯಕ್ತಿ ವಸ್ತುಸಂಗ್ರಹಾಲಯವೊಂದು ರೂಪಗೊಂಡಿದೆ. ಕೆಳದಿ ಗುಂಡಾ ಜೋಯಿಸರು ಇದರ ನೇತಾರರು. ಇಲ್ಲಿ ಬಹುಪಾಲು ಕೆಳದಿ ನಾಯಕರ ಕಾಲದ ತಾಮ್ರ ಶಾಸನಗಳು, ಓಲೆಗರಿ ಬರೆಹಗಳು ಮತ್ತು ಶಿಲ್ಪಮೂರ್ತಿಗಳು ಇತ್ಯಾದಿ ವಸ್ತು ವಿಶೇಷಗಳು ಸಂಗ್ರಹಗೊಂಡಿವೆ. ಪ್ರತಿ ಸಂಶೋಧನ ಸಂಸ್ಥೆಯೂ ಒಂದಲ್ಲ ಒಂದು ರೂಪದಲ್ಲಿ ತನ್ನದೇ ಆದ ಕಿರು ವಸ್ತುಸಂಗ್ರಹಾಲಯವನ್ನು ಹೊಂದಿರುತ್ತದೆ. ಬಹುತೇಕ ವಿಜ್ಞಾನ ಸಂಸ್ಥೆಗಳಲ್ಲಿ ಇಂಥ ಸಂಗ್ರಹಾಲಯಗಳು ಕಂಡುಬರುತ್ತವೆ. ಇನ್ನು ಪಾರಂಪರಿಕ ವಸ್ತು ವೈವಿಧ್ಯಗಳನ್ನು ಮೆರೆಯುವ ಸಂಗ್ರಹಾಲಯಗಳೂ ಇವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣದ ಬಳಿ ಇರುವ 'ಜಾನಪದ ಲೋಕ' ಒಂದು ಮುಖ್ಯ ವಸ್ತುಸಂಗ್ರಹಾಲಯ. ಇದನ್ನು ಜಾನಪದ ತಜ್ಞರಾದ ಎಚ್.ಎಲ್. ನಾಗೇಗೌಡರು ಸ್ಥಾಪಿಸಿದರು. ಮೈಸೂರು ನಗರದಲ್ಲಿ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಒಂದು ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸಿದೆ. ಕೆಲವೆಡೆ ಪ್ರಾಚೀನ ಅವಶೇಷಗಳನ್ನು ಸಂಗ್ರಹಿಸಿ ಬಯಲು ವಸ್ತುಸಂಗ್ರಹಾಲಯಗಳಲ್ಲಿಯೂ ಸಂರಕ್ಷಿಸಿಡಲಾಗಿದೆ. (ಎ.ವಿ.ವಿ.)

**ವಾಗ್ಗೇಯಕಾರರು:** ಕರ್ನಾಟಕ ಸಂಗೀತಕ್ಕೆ ಕೃತಿ ರಚನೆಗಳನ್ನು ನೀಡಿದ ವಾಗ್ಗೇಯಕಾರರಲ್ಲಿ ಅತಿ ಪ್ರಾಚೀನರಾದವರು ಯಾರೆಂಬ ವಿಷಯ ಇನ್ನೂ ಖಚಿತವಾಗಿಲ್ಲ. 5ನೆಯ ಶತಮಾನದಲ್ಲಿ ರಚಿತವಾದ ಮತಂಗನ ಬೃಹದ್ದೇಶಿಯಲ್ಲಿ ಕನ್ನಡದ ಪ್ರಬಂಧಗಳ ಬಗ್ಗೆ ಕೆಲವು ಹೇಳಿಕೆಗಳಿರುವುದಾದರೂ ಅದರ ಸ್ವರೂಪ ಸ್ಪಷ್ಟವಾಗಿ ಕಾಣಬರುವುದಿಲ್ಲ. ಅದನ್ನು ಬಿಟ್ಟರೆ 12ನೆಯ ಶತಮಾನದಲ್ಲಿ ಬಸವಾದಿ ಶರಣರಿಂದ ರಚಿತವಾದ ವಚನಗಳನ್ನೇ ಅತಿ ಪ್ರಾಚೀನವಾದ ಹಾಡುಗಳೆನ್ನಬಹುದು. ಆದರೆ ಇವುಗಳಲ್ಲಿ ಸಂಗೀತ ದೃಷ್ಟಿಗಿಂತ ತತ್ತ್ವಬೋಧೆಯೇ ಪ್ರಮುಖ ಉದ್ದೇಶವಾಗಿರುವುದು ಕಂಡುಬರುತ್ತದೆ.

ಮುಂದೆ ಪುರಂದರದಾಸರ ಕಾಲಕ್ಕೆ ಮುಂಚೆ ಎಂದರೆ 15ನೆಯ ಶತಮಾನದವರೆನ್ನಲಾದ ನಿಜಗುಣ ಶಿವಯೋಗಿಗಳನ್ನು ಕರ್ನಾಟಕದ ಪ್ರಥಮ ವಾಗ್ಗೇಯಕಾರರೆನ್ನಬಹುದು. ಇವರಿಂದ ರಚಿತವಾದ ವಿವೇಕ

ಚಿಂತಾಮಣಿಯ ಕೆಲವು ಅಧ್ಯಾಯಗಳಲ್ಲಿ ಕಂಡುಬರುವ ವಿವರಣೆಯಿಂದ ಇವರಿಗೆ ಸಂಗೀತಶಾಸ್ತ್ರದಲ್ಲಿದ್ದ ಅಪಾರ ಪ್ರೌಢಿಮೆ ಅಭಿವ್ಯಕ್ತವಾಗುತ್ತದೆ. ಇವರ ಮತ್ತೊಂದು ಗ್ರಂಥವಾದ ಕೈವಲ್ಯ ಪದ್ಧತಿಯ ಹಾಡುಗಳು ರಾಗತಾಳಸಮನ್ವಿತವಾದ ಕೃತಿಗಳಾಗಿವೆ. ಪಲ್ಲವಿ, ಅನುಪಲ್ಲವಿ, ಚರಣಗಳನ್ನು ಹೊಂದಿ ಬಳಕೆಯಲ್ಲಿರುವ ಇಂದಿನ ಕೃತಿರೂಪಕ್ಕೆ ಇವರೇ ಮೂಲಪುರುಷ ರೆಂಬುದೂ ಕೆಲವರ ಅಭಿಪ್ರಾಯವಾಗಿದೆ.

ಶ್ರೀಪಾದರಾಯರು (ಸು.1450) ದಾಸಕೂಟದ ಆದ್ಯಪ್ರವರ್ತಕರಾದ ನರಹರಿತೀರ್ಥರ ಶಿಷ್ಯರು. ದಾಸಸಾಹಿತ್ಯವನ್ನು ಬೆಳೆಸಿದವರಲ್ಲಿ ಮೊದಲಿಗರು. ಸಂಸ್ಕೃತ ಮತ್ತು ಸಂಗೀತದಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಇವರು ರಂಗವಿಠಲ ಎಂಬ ಅಂಕಿತದಲ್ಲಿ ಉಗಾಭೋಗ ವೃತ್ತನಾಮ ಮತ್ತು ದೇವರನಾಮಗಳನ್ನು ರಚಿಸಿರುವರು. ಇವರ ಅನಂತರ ವ್ಯಾಸರಾಯರು (1447–1559) ಹರಿದಾಸ ಪಂಥ ಉನ್ನತಮಟ್ಟದಲ್ಲಿದ್ದ ಕಾಲದಲ್ಲಿದ್ದವರು. ಕನ್ನಡ, ಸಂಸ್ಕೃತ ಮತ್ತು ಸಂಗೀತದಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಇವರು ಕೃಷ್ಣ, ಸಿರಿಕೃಷ್ಣ ಎಂಬ ಅಂಕಿತದಲ್ಲಿ ವೃತ್ತನಾಮ ಉಗಾಭೋಗ ಮತ್ತು ಪದಗಳನ್ನು ವಿಪುಲವಾಗಿ ರಚಿಸಿರುವರು. ವ್ಯಾಸರಾಯರ ಶಿಷ್ಯರಾದ ಪುರಂದರದಾಸರು (1484–1564) ಅಭ್ಯಾಸ ಗಾನಗಳನ್ನೇ ಅಲ್ಲದೆ (ಸರಳೆ, ಅಲಂಕಾರ, ಗೀತೆ) ಕೃತಿಗಳು, ಸುಳಾದಿಗಳು, ಸುವ್ವಾಲೆ ಹಾಗೂ ಊಗಾಭೋಗಗಳನ್ನು ಅಸಂಖ್ಯಾತವಾಗಿ ರಚಿಸಿ ಕರ್ಣಾಟಕ ಸಂಗೀತಕ್ಕೆ ಭದ್ರ ಬುನಾದಿಯನ್ನು ಹಾಕಿ ಕರ್ಣಾಟಕ ಸಂಗೀತ ಪಿತಾಮಹ ಎನಿಸಿದ್ದಾರೆ. ಕನಕದಾಸರು (1508–1606) ಪುರಂದರದಾಸರಂತೆಯೇ ವ್ಯಾಸರಾಯರಲ್ಲಿ ಶಿಷ್ಯವೃತ್ತಿಯನ್ನು ವಹಿಸಿದ್ದವರು. ಇವರು ಕಾಗಿನೆಲೆ ಆದಿಕೇಶವ ಎಂಬ ಅಂಕಿತವನ್ನು ತಮ್ಮ ಕೃತಿಗಳಲ್ಲಿ ಬಳಸಿದ್ದಾರೆ. ಕನಕದಾಸರ ಅನಂತರ, ಅನೇಕ ಸಂಖ್ಯೆಯಲ್ಲಿ ಉಗಾಭೋಗಗಳನ್ನೂ ದೇವರನಾಮಗಳನ್ನೂ ರಚಿಸಿದ ವಾಗ್ಗೇಯಕಾರರುಗಳಲ್ಲಿ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಪ್ರಸನ್ನವೆಂಕಟದಾಸರು ಮತ್ತು ಹೆಳವನಕಟ್ಟೆ ಗಿರಿಯಮ್ಮ– ಈ ಹೆಸರುಗಳು ಕಾಣಬರುತ್ತವೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಆಸ್ಥಾನ ವಿದ್ವಾಂಸರಾಗಿದ್ದ ಮೈಸೂರು ಸದಾಶಿವರಾಯರು ತ್ಯಾಗರಾಜರನ್ನು ಪ್ರತ್ಯಕ್ಷವಾಗಿ ಕಂಡು ಅವರಿಂದ ಅನುಗ್ರಹೀತರಾದವರು. ಇವರು ಸ್ವನಾಮ ಮುದ್ರೆಯಲ್ಲಿ ಅನೇಕ ಪದವರ್ಣಗಳನ್ನೂ ಕೃತಿಗಳನ್ನೂ ವಿದ್ವತ್ಪೂರ್ಣವಾಗಿ ರಚಿಸಿರುವರು. ಇವರ ಶೈಲಿಯಲ್ಲಿ ಬಹುವಾಗಿ ತ್ಯಾಗರಾಜರ ಶೈಲಿಯ ಹೋಲಿಕೆಯಿರುವು ದನ್ನು ಕಾಣುತ್ತೇವೆ. ವೀಣೆ ಪದ್ಮನಾಭಯ್ಯನವರು ಮತ್ತು ಕರಿಗಿರಿರಾಯರು ಮೈಸೂರಿನ ಪ್ರಸಿದ್ಧ ವಾಗ್ಗೇಯಕಾರರೂ ಆಸ್ಥಾನವಿದ್ವಾಂಸರೂ ಆಗಿದ್ದು ಅನೇಕ ಮಂದಿ ಶಿಷ್ಯರನ್ನು ತಯಾರು ಮಾಡಿದರು. ಪದ್ಮನಾಭಯ್ಯನವರು ಜತಿಸ್ವರ, ಕೃತಿ ಮುಂತಾದ ರಚನಾ ಪ್ರಕಾರಗಳನ್ನು ರಚಿಸಿರುವರು. ವಾಸುದೇವಾಚಾರ್ಯರು, ಸುಂದರಶಾಸ್ತ್ರಿಗಳು ಮತ್ತು ಕೇಶವಭಟ್ಟರು ಇವರ ಶಿಷ್ಯವರ್ಗದಲ್ಲಿ ಖ್ಯಾತಿಗಳಿಸಿದವರು. ಕರಿಗಿರಿರಾಯರು ರಾಜಸಭೆಯ ಲ್ಲಿದ್ದ ಪ್ರಸಿದ್ಧ ವಿದ್ವನ್ಮಣಿಗಳ ನಡುವೆ ಇದ್ದವರು. ಲಕ್ಷ್ಯಲಕ್ಷಣಗಳೆರಡರಲ್ಲೂ ಪಾಂಡಿತ್ಯವನ್ನು ಪಡೆದಿದ್ದ ಇವರು ಸಂಗೀತ ವಿದ್ಯಾಕಂಠೀರವ ಎಂಬ ಪ್ರಶಸ್ತಿಯನ್ನು ಪಡೆದಿದ್ದರು. ಸಂಗೀತಸುಬೋಧಿನಿ ಮತ್ತು ಗಾನವಿದ್ಯಾರಹಸ್ಯಪ್ರಕಾಶಿನೀ ಎಂಬ ಗ್ರಂಥಗಳನ್ನು ರಚಿಸಿರುವ ಇವರು ಹಲವಾರು ವರ್ಣಗಳನ್ನೂ ಕೀರ್ತನೆಗಳನ್ನೂ ದೇವರನಾಮಗಳನ್ನೂ ನೃಸಿಂಹ ಎಂಬ ಅಂಕಿತದಿಂದ ರಚಿಸಿದ್ದಾರೆ. ಪ್ರಖ್ಯಾತ ಸಂಗೀತಗಾರರಾದ ವೀಣೆ ಶೇಷಣ್ಣನವರು (1852–1946) ಮತ್ತು ಸುಬ್ಬಣ್ಣನವರು ವಾಗ್ಗೇಯ ಕಾರರಾಗಿ ಸ್ವರಜತಿ, ಕೃತಿ, ತಿಲ್ಲಾನ ಮುಂತಾದ ರಚನಾ ಪ್ರಕಾರಗಳನ್ನು ರಚಿಸಿ ಸಂಗೀತ ಪ್ರಪಂಚದಲ್ಲಿ ಮೆರೆದಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರು (1866–1931) ಶ್ರೀ ಕೃಷ್ಣ ಎಂಬ ಅಂಕಿತದಲ್ಲಿ ಅನೇಕ ಕೃತಿಗಳನ್ನು ರಚಿಸಿರುವರು.

ಪ್ರಸಿದ್ಧ ಸಂಗೀತಜ್ಞರಾದ ಕಾನಕಾನಹಳ್ಳಿ (ಮೈಸೂರು) ವಾಸುದೇವಾ ಚಾರ್ಯರು ಗಾಯಕರಾಗಿದ್ದುದಕ್ಕಿಂತ ವಾಗ್ಗೇಯಕಾರರಾಗಿಯೇ ಜನಮನದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಇವರಿಂದ ರಚಿತವಾಗಿರುವ ಕೃತಿ ಮತ್ತು ವರ್ಣಗಳು ಸಂಖ್ಯೆಯಲ್ಲಿ 200 ಕ್ಕೂ ಮೇಲ್ಪಟ್ಟಿವೆ. ಅವು ವಾಸುದೇವ ಎಂಬ ಅಂಕಿತದಲ್ಲಿ ರಚಿತವಾಗಿವೆ. ವೈಣಿಕಪ್ರವೀಣ ವೆಂಕಟಗಿರಿಯಪ್ಪನವರೂ ಕೆಲವು ಕೃತಿಗಳನ್ನು ರಚಿಸಿದ್ದಾರೆ. ಸಂಗೀತರತ್ನ ಚೌಡಯ್ಯನವರು ತ್ರಿಮಕುಟ ಎಂಬ ಅಂಕಿತದಿಂದ ಕನ್ನಡ, ತೆಲುಗು ಹಾಗೂ ಸಂಸ್ಕೃತದಲ್ಲಿ ವರ್ಣ, ಕೃತಿ, ತಿಲ್ಲಾನ ಮುಂತಾದುವು ಗಳನ್ನು ರಚಿಸಿದ್ದಾರೆ. ಜಯಚಾಮರಾಜ ಒಡೆಯರ್ (1919–74) ಇತ್ತೀಚಿನ ವಾಗ್ಗೇಯಕಾರರಲ್ಲಿ ಪ್ರಸಿದ್ಧರು. ಇವರು ಶ್ರೀವಿದ್ಯಾ ಎಂಬ ಅಂಕಿತದಲ್ಲಿ ವಿದ್ವತ್ಪೂರ್ಣವೂ ಸುಂದರವೂ ಆದ ಅನೇಕ ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿರುವರು. (ವಿ.ಆರ್.)

**ವಾಗ್ಭೂಷಣ:** ಧಾರವಾಡದಿಂದ 1896ರಲ್ಲಿ ಪ್ರಕಟವಾಗಲಾರಂಭಿಸಿದ, ಸಾಹಿತ್ಯಕ್ಕೆ ಸಂಪೂರ್ಣವಾಗಿ ಮೀಸಲಾಗಿದ್ದ ಮಾಸಪತ್ರಿಕೆ. ಗ್ರಂಥಪ್ರಚಾರದ ಸಾಧನವಾಗಿ ಹಾಗೂ ಭಾಷಾಭಿವೃದ್ಧಿಗಾಗಿ ಮತ್ತು ಕರ್ನಾಟಕ–ಮೈಸೂರು ಭಾಗಗಳ ಗ್ರಂಥಭಾಷೆ ಒಂದೇ ಇರುವಂತೆ ಮಾಡುವುದಕ್ಕಾಗಿ ಈ ಪತ್ರಿಕೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘ ಪ್ರಾರಂಭಿಸಿತು. 1902ರಲ್ಲಿ ಮತ್ತು 1924ರಲ್ಲಿ ತೊಂದರೆಗಳು ಬಂದರೂ ಹೇಗೋ ಮುಂದುವರಿದು

ಕೊನೆಗೆ 1931ರಲ್ಲಿ ನಿಂತಿತು. 1941ರಲ್ಲಿ ಮತ್ತೆ ಪ್ರಾರಂಭ ವಾಗಿ ಏಳು ವರ್ಷಗಳ ಕಾಲ ನಡೆಯಿತು. ಅನಂತರ ಅವಶ್ಯ ವೆನಿಸಿದಾಗ ಪ್ರಕಟವಾಗುವ ಪತ್ರಿಕೆಯಾಯಿತು. 1973ರಲ್ಲಿ 25 ವರ್ಷಗಳ ಅನಂತರ ಇದು ಮತ್ತೆ ಚೇತರಿಸಿಕೊಂಡು ನಿಯತಕಾಲಿಕೆಯಾಗಿ ಪ್ರಕಟ ವಾಗತೊಡಗಿತು.

ಕಥೆ–ಕವನ, ಹರಟೆ, ಪ್ರಬಂಧಗಳು ಮತ್ತು ಧಾರಾವಾಹಿ ಕಾದಂಬರಿಗಳು ಇದರಲ್ಲಿ ಪ್ರಕಟವಾಗುತ್ತಿದ್ದವು. ಉತ್ತಮ ಕಾದಂಬರಿಕಾರರು ಮತ್ತು ಲೇಖಕರನ್ನು ಸೃಷ್ಟಿಸುವ ಉದ್ದೇಶದಿಂದ ಉತ್ತಮ ಕೃತಿಗಳಿಗೆ ಇದು ಬಹುಮಾನಗಳನ್ನು ನೀಡುತ್ತಿತ್ತು. ಪ್ರಸಿದ್ಧ ಕಾದಂಬರಿಕಾರ ಗಳಗನಾಥರು ಅಂಥ ಬಹುಮಾನದ ಆಸೆಯಿಂದಲೇ ತಮ್ಮ ಮೊದಲ ಕಾದಂಬರಿಯನ್ನು ಬರೆದರು. ರಾ.ಹ. ದೇಶಪಾಂಡೆ, ಧೋಂಡೋ ನರಸಿಂಹ ಮುಳಬಾಗಲ, ವೆಂಕಟ ರಂಗೋ ಕಟ್ಟಿ, ಮುದವೀಡು ಕೃಷ್ಣರಾವ್, ಫ.ಗು. ಹಳಕಟ್ಟಿ, ಹೊನ್ನಾಪುರಮಠ, ಮ.ಪ್ರ.ಪೂಜಾರ, ಕೇಶವಶರ್ಮ ಗಲಗಲಿ, ಶಾಂತಾಬಾಯಿ ನೀಲಗಾರ, ಶಾಂತಕವಿ, ಆರ್.ವಿ. ಜಹಗೀರದಾರ ಇವರು ಈ ಪತ್ರಿಕೆಯಲ್ಲಿ ಲೇಖನ, ಕಥೆ, ಕಾದಂಬರಿಗಳನ್ನು ಬರೆದ ಪ್ರಮುಖ ಲೇಖಕರು. ನಾರಾಯಣರಾವ್ ಕರಗುದರಿ, ರಾ.ಹ. ದೇಶಪಾಂಡೆ, ಆಲೂರು ವೆಂಕಟರಾವ್, ಆರ್.ವಿ. ಜಹಗೀರದಾರ ಇವರು ಈ ಪತ್ರಿಕೆಯ ಸಂಪಾದಕರಾಗಿದ್ದರು. (ಎಸ್.ವಿ.ಪಿ.)

**ವಾಟೆಕೊಲ್ಲಿ:** ಕೊಡಗು ಜಿಲ್ಲೆಯ ವಿರಾಜಪೇಟೆಯಿಂದ ಕಣ್ಣಾನೂರಿಗೆ (ಕೇರಳ) ಪೆರಿಯಂಬಾಡಿ ಘಟ್ಟದ ಮೂಲಕ ಹಾದುಹೋಗುವ ರಾಜ್ಯದ ಹೆದ್ದಾರಿಯ ಮೇಲಿರುವ ಒಂದು ಹಳ್ಳಿ. ಕೇರಳದ ಗಡಿಗೆ ತುಂಬ ಹತ್ತಿರದಲ್ಲಿರುವ ಈ ಹಳ್ಳಿ ಸಮುದ್ರಮಟ್ಟದಿಂದ ಸು. 3.141 ಅಡಿ ಎತ್ತರದಲ್ಲಿದೆ. ಕಾವೇರಿ ನದಿಯ ಒಂದು ಶಾಖೆ ಉತ್ತರದಿಂದ ಹರಿದು ಬಂದು ವಾಟೆಕೊಲ್ಲಿಯಲ್ಲಿ ಒಂದು ಜಲಾಶಯವನ್ನು ನಿರ್ಮಿಸಿದೆ. 1855ರ ಸುಮಾರಿಗೆ ಇಲ್ಲಿ ವಾಸವಾಗಿದ್ದ ಬ್ರಿಟಿಷ್ ತೋಟಗಾರರು ಸದಾ ನೀರಿನಿಂದ ತುಂಬಿರುವ ಈ ತಾಣವನ್ನು ವಾಟರ್ ಕೊಲ್ಲಿ ಎಂದು ಕರೆಯುತ್ತಿದ್ದರಂತೆ. ಕಾಲಕ್ರಮೇಣ ವಾಟರ್ ಕೊಲ್ಲಿ ಎಂಬ ಶಬ್ದ ರೂಪಾಂತರಗೊಂಡು ವಾಟೆಕೊಲ್ಲಿ ಎಂದಾಗಿರಬಹುದೆಂದು ಊಹೆ.

ಹೆಸರೇ ಸೂಚಿಸುವಂತೆ ವಾಟೆಕೊಲ್ಲಿ ಕಿರುಬಿದಿರು ಬೆಳೆವ ಗೊಂಡಾರಣ್ಯ. ಈ ಸ್ಥಳ ನಿಬಿಡವಾದ ಕಾಡಿನ ಮಧ್ಯೆ ಇರುವುದರಿಂದ ಹಾಗೂ ನೈಋತ್ಯ ಮಾರುತಗಳನ್ನು ತಡೆಹಿಡಿಯುವ ಪೆರಿಯಂಬಾಡಿ ಘಟ್ಟ ಪಕ್ಕದಲ್ಲಿರುವುದರಿಂದ ಇಲ್ಲಿ ಮಳೆ ಹೆಚ್ಚು (ಸು. 7,000 ಮಿಮೀ). ಭಾಗಮಂಡಲವನ್ನು ಬಿಟ್ಟರೆ ಕೊಡಗಿನಲ್ಲಿ ಅತಿ ಹೆಚ್ಚು ಮಳೆಯಾಗುವ ಸ್ಥಳವಾದುದರಿಂದ ವಾಟೆಕೊಲ್ಲಿ ಕೊಡಗಿನ ಚಿರಾಪುಂಜಿ ಎಂದು ಹೆಸರುಗಳಿಸಿದೆ.

ಬರಪೊಳೆ ನದಿ ವಾಟೆಕೊಲ್ಲಿಯ ಸಮೀಪದಲ್ಲಿ ಹಾದುಹೋಗಿ ಆಳವಾದ ಕಣಿವೆಯಲ್ಲಿ ದುಮುಕಿ ಜಲಪಾತವನ್ನು ನಿರ್ಮಿಸಿದೆ. ನಿಸರ್ಗ ಸೌಂದರ್ಯದ ಮಧ್ಯೆ ಇರುವ ಈ ಜಲಪಾತ ಮನೋಹರವಾಗಿದೆ.

(ವಿ.ಎನ್.ಎಸ್.)

**ವಾಡಿ:** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಒಂದು ಗ್ರಾಮ ಹಾಗೂ ಪ್ರಮುಖ ರೈಲು ನಿಲ್ದಾಣ. ಗುಲ್ಬರ್ಗ ನಗರದ ಆಗ್ನೇಯಕ್ಕೆ 50 ಕಿಮೀ ದೂರದಲ್ಲೂ ಚಿತ್ತಾಪುರದ ನೈಋತ್ಯಕ್ಕೆ 20 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 30,038. ಇದು ಹಿಂದೆ ಜೈನ ಕೇಂದ್ರವಾಗಿತ್ತೆಂದು ಈ ಗ್ರಾಮಕ್ಕೆ ಸಮೀಪದ ತೆಂಗಳಿ ಗ್ರಾಮದಲ್ಲಿ ದೊರಕಿದ ಶಾಸನವೊಂದರಿಂದ ತಿಳಿದುಬರುತ್ತದೆ. ವಾಡಿ–ಹೈದರಾಬಾದು ರೈಲುಮಾರ್ಗದ ನಿರ್ಮಾಣವಾ ಗುವವರೆಗೂ ಒಂದು ಸಾಮಾನ್ಯ ಹಳ್ಳಿಯಾಗಿತ್ತು. ಅನಂತರ ಮದರಾಸು–ಮುಂಬಯಿ, ಸಿಕಂದರಾಬಾದು–ಮುಂಬಯಿ, ರಾಯಚೂರು–ಗುಲ್ಬರ್ಗ ರೈಲ್ವೆ ಮಾರ್ಗಗಳ ಸಂಧಿಸ್ಥಳವಾಯಿತು. ರೈಲ್ವೆ ನಿಲ್ದಾಣದ ಬಳಿಯಲ್ಲೇ ದೊಡ್ಡ ರೈಲ್ವೆ ಲೋಕೋಷೆಡ್ ಇದೆ. ಇಲ್ಲಿ ಹಾಸುಗಲ್ಲುಗಳನ್ನು ತೆಗೆದು ಸುತ್ತಲ ಊರುಗಳಿಗೆ ಕಳಿಸುವುದೂ ಉಂಟು. ಇಲ್ಲಿ ಒಂದು ದೊಡ್ಡ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸಲಾಗಿದೆ. (ಎಸ್.ಜಿ.ಆರ್)

**ವಾಣಿ:** 1917–88. ಕನ್ನಡದ ಪ್ರಸಿದ್ಧ ಲೇಖಕಿ, ಕಥೆಗಾರ್ತಿ, ಕಾದಂಬರಿಕಾರ್ತಿ. ಕನ್ನಡ ಸಾರಸ್ವತ ಲೋಕಕ್ಕೆ ಇವರು ವಾಣಿ ಎಂದು ಚಿರಪರಿಚಿತರಾಗಿದ್ದರೂ ಇವರ ಮೂಲ ಹೆಸರು ಸುಬ್ಬಮ್ಮ. ಇವರು 1917 ಆಗಸ್ಟ್ 12 ರಂದು ಶ್ರೀರಂಗಪಟ್ಟಣದಲ್ಲಿ ಜನಿಸಿದರು. ಇವರ ತಂದೆ ಬಿ. ನರಸಿಂಹರಾವ್, ತಾಯಿ ಹಿರಿಯಕ್ಕಮ್ಮ. ತಂದೆ ಪ್ರಸಿದ್ಧ ಲೇಖಕರೂ ಪ್ರತಿಭಾವಂತರೂ ಆಗಿದ್ದು ರಾಜಸೇವಾಸಕ್ತ ಎಂಬ ಬಿರುದನ್ನು ಪಡೆದಿದ್ದರು. ರಾಜಕೀಯ ರಂಗದಲ್ಲೂ ಹೆಸರು ಮಾಡಿದ್ದರು. ಶಾಸನಸಭೆಯಲ್ಲಿ ಬಹುಕಾಲ ಸದಸ್ಯರಾಗಿದ್ದರು. ವಾಣಿಯವರು ಕಾಲೇಜು ಶಿಕ್ಷಣ ಪಡೆದವರಲ್ಲ. ಇವರ ಬದುಕಿನ ವಿಸ್ತಾರ ಅನುಭವ ಮತ್ತು ಮನೆತನದ ಸುಸಂಸ್ಕೃತ ಪರಿಸರ ಇವರ ಸಾಹಿತ್ಯ ಕೃಷಿಗೆ ಮೂಲ ಪ್ರೇರಣೆಯಾಯಿತು. ಕನ್ನಡದ ಹೆಸರಾಂತ ಕಾದಂಬರಿಕಾರ್ತಿ ತ್ರಿವೇಣಿಯವರು ವಾಣಿಯವರ ಅಕ್ಕನ ಮಗಳು. ಬಿ.ಎಂ.ಶ್ರೀ.ಯವರು ವಾಣಿಯವರ ಭಾವನ ಅಣ್ಣ (ದೊಡ್ಡಭಾವ).

ವಾಣಿಯವರು ತಮ್ಮ 15ನೆಯ ವಯಸ್ಸಿನಲ್ಲಿಯೇ ಬರೆವಣಿಗೆ ಪ್ರಾರಂಭಿಸಿದರು. 1941ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ದತ್ತಿನಿಧಿ ಕಥಾಸ್ಪರ್ಧೆಯಲ್ಲಿ ಮಿಂಚು ಎಂಬ ಇವರ ಕಥೆಗೆ ದೊರೆತ ಬಹುಮಾನ ಇವರ ಮುಂದಿನ ಬರೆವಣಿಗೆಗೆ ಪ್ರೋತ್ಸಾಹ ನೀಡಿತ್ತು. ಸಣ್ಣಕಥೆಗಳ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶ ಮಾಡಿದ ಇವರು ನೂರ ಇಪ್ಪತ್ತಕ್ಕೂ ಹೆಚ್ಚು ಸಣ್ಣ ಕಥೆಗಳನ್ನು ರಚಿಸಿದ್ದಾರೆ. ಈ ಕಥೆಗಳು

ಏಳು ಸಂಕಲನಗಳಲ್ಲಿ ಪ್ರಕಟವಾಗಿವೆ. ಇವುಗಳನ್ನು ಕನ್ನಡದ ಹೆಸರಾಂತ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಪ್ರಕಟಿಸಿವೆ. ಇವರು ಸ್ತ್ರೀಪರ ಕಾಳಜಿಯ ಭಾವನೆಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿ ಆದರ್ಶ ಮನೋಭಾವವನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಕಸ್ತೂರಿ (1944), ಅರ್ಪಣೆ (1957), ನಾಣಿಯ ಮದುವೆ (1962), ಅಪರೂಪದ ಅತಿಥಿ (1971), ಬಾಬು ಬರ್‍ತಾನೆ (1976), ಹ್ಯಾಪಿ ಬರ್ತ್‌ಡೆ (1986), ತಾರಮ್ಮಯ್ಯ (1988)–ಇವು ಇವರ ಸಣ್ಣಕಥಾಸಂಕಲನಗಳು. ಇವರ ಸಾಹಿತ್ಯದ ಮೇಲೆ ಬಿ. ವೆಂಕಟಾಚಾರ್, ಗಳಗನಾಥ ಹಾಗೂ ಮಾಸ್ತಿ ಮೊದಲಾದ ಹಿರಿಯರು ವಿಶೇಷ ಪ್ರಭಾವ ಬೀರಿದ್ದಾರೆ.

ವಾಣಿಯವರು ಕಾದಂಬರಿಕಾರರಾಗಿ ಹೆಚ್ಚು ಚಿರಪರಿಚಿತರಾದವರು. ಹತ್ತೊಂಬತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಬಿಡುಗಡೆ (1955), ಚಿನ್ನದ ಪಂಜರ (1958), ಎರಡು ಕನಸು (1960), ಶುಭಮಂಗಳ (1962), ಹೊಸಬೆಳಕು (1969), ಹೂವು ಮುಳ್ಳು (1972), ಶಿಶಿರಗಾನ (1974), ಸುಲಗ್ನಾ ಸಾವಧಾನ (1981), ನೆರಳು–ಬೆಳಕು (1984) – ಇವು ಕೆಲವು ಮುಖ್ಯ ಕಾದಂಬರಿಗಳು. ಇವರ ಕಾದಂಬರಿಗಳು ಮಧ್ಯಮ ವರ್ಗದ ಜನರ ಆಸೆ–ಆಕಾಂಕ್ಷೆಗಳನ್ನೂ ಬದುಕಿನ ದಟ್ಟ ಅನುಭವಗಳನ್ನೂ ಚಿತ್ರಿಸುತ್ತವೆ. ಎರಡು ಕನಸು, ಹೊಸಬೆಳಕು, ಶುಭಮಂಗಳ ಮೊದಲಾದ ಕಾದಂಬರಿಗಳು ಚಲನಚಿತ್ರಗಳಾಗಿ ಜನಪ್ರಿಯತೆಯನ್ನೂ ಪ್ರಶಸ್ತಿಗಳನ್ನೂ ಪಡೆದಿವೆ.

ಇವರು ವಾಗೀಶ್ವರಿ ಎಂಬ ಅಂಕಿತದಿಂದ ನವನೀತ ಎಂಬ 518 ವಚನಗಳನ್ನೂ ರಚಿಸಿದ್ದಾರೆ. ಸರಳ ಹಾಗೂ ನೈಜತೆಯಿಂದ ಕೂಡಿರುವ ಇವರ ವಚನಗಳು ಧ್ವನಿ ಪ್ರಚುರವಾಗಿವೆ. ಇವುಗಳಲ್ಲಿ ಜೀವನ ಕುರಿತ ಗಂಭೀರ ತಾತ್ತ್ವಿಕ ಚಿಂತನಗಳು, ಸಾಮಾಜಿಕ ವಿಚಾರಗಳು, ಸ್ತ್ರೀ ಸಂವೇದನೆಯ ತುಡಿತಗಳು ದಾಖಲಾಗಿವೆ. ಇವಲ್ಲದೆ ಇವರು ಅನೇಕ ನಾಟಕ, ಹರಟೆ, ಬಿಡಿ ಲೇಖನಗಳನ್ನು ಬರೆದಿದ್ದಾರೆ. 'ಅಧಿಕಮಾಸ' ಇವರ ಒಂದು ನಾಟಕ. ಇವರ ಸಾಹಿತ್ಯ ಸೇವೆಗೆ ಸಂದ ಬಹುಮಾನ ಹಾಗೂ ಪ್ರಶಸ್ತಿಗಳು ಹಲವು. ಮನೆಮಗಳು ಕಾದಂಬರಿಗೆ ರಾಜ್ಯ ಸರ್ಕಾರದ ಬಹುಮಾನ (1961), ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸನ್ಮಾನ (1970) ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1972) ದೊರಕಿವೆ. 1980ರ ರಾಜ್ಯಮಟ್ಟದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನವನ್ನು ಉದ್ಘಾಟಿಸಿದ ಹಿರಿಮೆ ಇವರದು. ಇವರು 1988 ಫೆಬ್ರವರಿ 14 ರಂದು ಮೈಸೂರಿನಲ್ಲಿ ನಿಧನಹೊಂದಿದರು.

(ಐ.ಎಸ್.)

**ವಾದಿರಾಜ:** 1480–1600. ಮಾಧ್ವಯತಿಗಳು, ವಿದ್ವಾಂಸರು, ಪ್ರಸಿದ್ಧ ಹರಿದಾಸರು. ಉಡುಪಿಯ ಬಳಿಯ ಕುಂಭಾಸಿಯ ಹತ್ತಿರದ ಹೂವಿನಕೆರೆ ಇವರ ಜನ್ಮಸ್ಥಳ, ತಂದೆ ರಾಮಾಚಾರ್ಯ, ತಾಯಿ ಗೌರಮ್ಮ. ಹುಟ್ಟು ಹೆಸರು ಭೂವರಾಹ. ಮನೆಯೊಳಗೆ ಜನನವಾದರೆ ಅದು ಮನೆತನಕ್ಕೆ, ಹೊರಗೆ ಹುಟ್ಟಿದರೆ ಆ ಮಗು ಮಠಕ್ಕೆ ಎಂದು ಒಮ್ಮೆ ಒಬ್ಬ ಗುರುಗಳು ಇವರ ತಂದೆತಾಯಿಗಳಿಗೆ ಹೇಳಿದ್ದರಂತೆ. ಒಂದು ಸಾಧನ ದ್ವಾದಶಿಯ ದಿನ ಬೆಳಗ್ಗೆ ಎಲ್ಲರೂ ಗದ್ದೆಯ ಮಧ್ಯದ ಮನೆಯಲ್ಲಿ ಊಟಕ್ಕೆ ಕುಳಿತಿರುವಾಗ, ಬೆಳೆದ ಪೈರು ದನದ ಪಾಲಾಗುವುದನ್ನು ತಪ್ಪಿಸಲು ದಿನ ತುಂಬಿದ ಗರ್ಭಿಣಿಯಾಗಿದ್ದ ಮನೆಯೊಡತಿ (ಇವರ ತಾಯಿ) ಧಾವಿಸಬೇಕಾಗಿ ಬಂದು, ಮರದ ನೆರಳಿನಲ್ಲಿ ಪ್ರಸವವಾಯಿತಂತೆ. ಈ ಸ್ಥಳ ಈಗಲೂ ಗೌರೀಗದ್ದೆ ಎಂದು ಪ್ರಸಿದ್ಧವಾಗಿದೆ. ಆದ್ದರಿಂದ ಇವರು ಬಾಲ್ಯದಲ್ಲೇ ಸಂನ್ಯಾಸ ಪಡೆದರು. ವಾದಿರಾಜತೀರ್ಥ ಇವರ ಸಂನ್ಯಾಸಾಶ್ರಮನಾಮ. ವಾಗೀಶ ತೀರ್ಥರು ಇವರ ಗುರು. ವಾದಿರಾಜರು ಮಧ್ವಾಚಾರ್ಯ ಪರಂಪರೆಯ ಅಷ್ಟಮಠಗಳಲ್ಲೊಂದರ ಪೀಠಾಧಿಪತಿಗ ಳಾದರು. ಸೋದೆಯ (ಶಿರಸಿಯಿಂದ ಸು. 22 ಕಿಮೀ ದೂರ) ಮಠದ ಅಧಿಪತಿಗಳಾಗಿದ್ದು ಅಲ್ಲಿನ ರಾಜ ಅರಸಪ್ಪ ನಾಯಕನಿಂದ ಗೌರವಾದರಗ ಳನ್ನು ಪಡೆದರು. ತಮ್ಮ ಬಾಳಿನ ಬಹುಭಾಗವನ್ನು ಅಲ್ಲಿಯೇ ಕಳೆದರು.

ವಾದಿರಾಜರು ವಾದದಲ್ಲಿ ಪ್ರವೀಣರಾಗಿದ್ದರೆಂದೂ ಒಮ್ಮೆ ವಾದದಲ್ಲಿ ನಾರಾಯಣಭೂತವೆಂಬ ಬ್ರಹ್ಮರಾಕ್ಷಸನನ್ನು ಸೋಲಿಸಿ ಅದರ ಮೂಲಕ ಅನೇಕ ಅತಿಮಾನುಷ ಕಾರ್ಯಗಳನ್ನು ಮಾಡಿಸಿದರೆಂದೂ ಹಿಮಾಲಯದ ಬದರಿಕಾಶ್ರಮದಿಂದ ತ್ರಿವಿಕ್ರಮದೇವರನ್ನು ಕಲ್ಲಿನ ರಥ ಸಮೇತ ತಂದು ಸೋದೆಯಲ್ಲಿ ಪ್ರತಿಷ್ಠಾಪಿಸಿದರೆಂದೂ ಪ್ರತೀತಿ. ಇವರು ದ್ವೈತಸಿದ್ಧಾಂತ ಪ್ರಚಾರ, ದೀನದಲಿತರ ಉದ್ಧಾರ, ಪಂಡಿತ ಮಂಡಳಿಯ ಸಂರಕ್ಷಣೆ, ಸಂವರ್ಧನೆ, ಸಮಾಜಸುಧಾರಣೆ, ಸದ್ಗ್ರಂಥ ರಚನೆ ಮುಂತಾದ ಕಾರ್ಯಗಳನ್ನು ನಡೆಸಿದ್ದರು. ಈಗ ಪ್ರಸಿದ್ಧವಾಗಿರುವ ಧರ್ಮಸ್ಥಳದ ಮಂಜುನಾಥಸ್ವಾಮಿ ಯನ್ನು ಕದ್ರಿಯಿಂದ ತಂದು ಅಲ್ಲಿ ಪ್ರತಿಷ್ಠಾಪಿಸಿದವರು ವಾದಿರಾಜರೇ. ಉಡುಪಿಯ ದ್ವೈವಾರ್ಷಿಕ ಪರ್ಯಾಯೋತ್ಸವವನ್ನು ವ್ಯವಸ್ಥೆಗೊಳಿಸಿದವರೂ ಇವರೇ.

ಇವರು ಯುಕ್ತಿಮಲ್ಲಿಕಾ, ಗುರ್ವರ್ಥದೀಪಿಕಾ, ಶ್ರುತ್ಯರ್ಥಪ್ರಕಾಶಿಕೆ, ತಾತ್ಪರ್ಯ ನಿರ್ಣಯ ಟೀಕೆ, ಉಪನ್ಯಾಸಭಾರತೀ, ಸರಸಭಾರತೀವಿಲಾಸ, ತೀರ್ಥಪ್ರಬಂಧ ಮುಂತಾದ ಹದಿನಾರು ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ಹಯವದನ ಮುದ್ರಿಕೆಯಲ್ಲಿ ಅನೇಕ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ವೈಕುಂಠವರ್ಣನೆ, ಲಕ್ಷ್ಮೀಶೋಭಾನೆ, ಗುಂಡಕ್ರಿಯೆ, ಸ್ವಪ್ನಗದ್ಯ, ಮಧ್ವಸುವಾಲಿ, ಭ್ರಮರಗೀತೆ, ಕೀಚಕವಧೆ–ಇವು ಇವರ ಕನ್ನಡ ಕೃತಿಗಳು. ಇವರ ಎಲ್ಲ ಗ್ರಂಥಗಳಲ್ಲಿ ಹಾಗೂ ಕೀರ್ತನೆಗಳಲ್ಲಿ ಮಧ್ವಮತದ ತತ್ತ್ವಗಳು ಪ್ರತಿಪಾದಿತವಾಗಿವೆ.

ಇವರು ಶಾಸ್ತ್ರೀಯ ವಾಙ್ಮಯವನ್ನು ಸಾಹಿತ್ಯ ಶೈಲಿಯಲ್ಲಿ ರಚಿಸಿದ್ದಾರೆ. ರುಕ್ಮಿಣೀಶವಿಜಯ ಇವರ ಕಾವ್ಯರಚನಾಕೌಶಲ್ಯಕ್ಕೆ ಹಿರಿದಾದ ಸಾಕ್ಷಿಯಾಗಿದೆ. ತಮ್ಮ ವಾಗ್ವೈಖರಿ, ರಚನಾಕೌಶಲ, ಯುಕ್ತಿಚಾತುರ್ಯ, ವಿಷಯವಿನ್ಯಾಸ ನೈಪುಣ್ಯ, ಅಗಾಧ ಪಾಂಡಿತ್ಯ ಇವುಗಳಿಂದ ಶಾಸ್ತ್ರಸಾಹಿತ್ಯ ರಂಗದಲ್ಲಿ ಇವರು ತಮ್ಮದೇ ಆದ ವಾದಿರಾಜವೀಥಿಯನ್ನೇ ನಿರ್ಮಿಸಿದ್ದಾರೆ. ಉಡುಪಿಯ ಅಷ್ಟ ಮಠಗಳ ಯತಿಗಳಲ್ಲಿ ಕನ್ನಡ ಕೃತಿಗಳನ್ನು ರಚಿಸಿದವರಲ್ಲಿ ಇವರು ಮೊದಲಿಗರು. ಇವರ ಲಕ್ಷ್ಮೀಮಿನಾರಾಯಣ ಎಂಬ ಹಾಡನ್ನು ನೃತ್ಯಕ್ಕೆ ಅಳವಡಿಸಿ ಈಗಲೂ ಅಷ್ಟಮಠಗಳಲ್ಲಿ ರಾತ್ರಿ ಪೂಜಾಕಾಲದಲ್ಲಿ ಹಾಡುವುದುಂಟು.

ವಾದಿರಾಜರು ಜ್ಯೋತಿಷ್ಯದ ಹೇಳಿಕೆಯ ಪ್ರಕಾರ 120 ವರ್ಷ ಪೂರ್ಣಾಯಸ್ಸು ಪಡೆದು ಅರವತ್ತನಾಲ್ಕೂ ವಿದ್ಯೆಗಳಲ್ಲಿ ಪರಿಣಿತರಾಗಿದ್ದು ಸಾರ್ಥಕ ಜೀವನವನ್ನು ನಡೆಸಿದವರು. ಇವರ ವೃಂದಾವನ ಸೋದೆಯಲ್ಲಿದೆ. ಇಲ್ಲಿ ಪ್ರತಿನಿತ್ಯ ಪೂಜೆ ನಡೆಯುತ್ತಿದ್ದು ಇದೊಂದು ಯಾತ್ರಾಸ್ಥಳವಾಗಿದೆ.

(ಕೆ.ಎಂ.ಕೆ.)

**ವಾಮನರಾವ್ ಮಾಸ್ತರ:** 1883–1935. ಹೆಸರಾಂತ ರಂಗಭೂಮಿ ನಟ ಮತ್ತು ನಾಟಕಕಾರ. ಜನಿಸಿದ್ದು ರಬಕವಿಯಲ್ಲಿ. ಆಗಿನ ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ರಬಕವಿ ಹಾಗೂ ಬಾಗಲಕೋಟೆಗಳಲ್ಲಿ ಸ್ವಲ್ಪಕಾಲ ಶಾಲಾಮಾಸ್ತರರಾಗಿ ಕೆಲಸಮಾಡಿದರು. ಚಿಕ್ಕಂದಿನಲ್ಲಿಯೇ ಸಂಗೀತದಲ್ಲಿ ಆಸಕ್ತಿ ವಹಿಸಿದ್ದ ಇವರು ಗೆಳೆಯರೊಬ್ಬರ ನೆರವಿನಿಂದ ರಂಗಭೂಮಿಯನ್ನು ಪ್ರವೇಶಿಸಿದರು. ಹಾಗೆ ಇವರು ಮೊದಲು ಪ್ರವೇಶಿಸಿದ್ದು ಬಾಗಲಕೋಟೆಯಲ್ಲಿದ್ದ ಶಿರಹಟ್ಟಿ ವೆಂಕೋಬರಾಯರ ನಾಟಕ ಸಂಸ್ಥೆಯನ್ನು. ಪ್ರಾರಂಭದಲ್ಲಿ ಗಾಯಕರಾಗಿ, ಅನಂತರ ನಟರಾದ ಇವರು ಆ ನಾಟಕ ಕಂಪನಿಯ ಇತರ ಪಾತ್ರಧಾರಿಗಳಿಗೆ ಹಾಡು ಮತ್ತು ಮಾತುಗಳನ್ನು ಕಲಿಸುವ ಕೆಲಸವನ್ನೂ ಮಾಡಿದರು. ಇದರಿಂದಾಗಿ ಇವರು ಮಾಸ್ತರ್ ಎಂಬ ಅಭಿಧಾನಕ್ಕೂ ಪಾತ್ರರಾದರು. ಒಳ್ಳೆಯ ಮೈಕಟ್ಟು ಹಾಗೂ ಸಹಜ ಅಭಿನಯಗಳನ್ನು ಹೊಂದಿದ್ದ ವಾಮನರಾಯರು ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ಅನೇಕ ಪಾತ್ರಗಳನ್ನು ಅಭಿನಯಿಸಿ ಹೆಸರಾದರು. ಇವರಿಗೆ ಅಖಿಲ ಕರ್ನಾಟಕ ಮಟ್ಟದ ಖ್ಯಾತಿ ತಂದುಕೊಟ್ಟಿದ್ದು– ಕವಿರತ್ನ ಕಾಳಿದಾಸ ನಾಟಕದ ಕಾಳಿದಾಸನ ಪಾತ್ರ. 1910 ರಲ್ಲಿ ಮೈಸೂರು ಅರಮನೆ ಯಲ್ಲಿ ಪ್ರದರ್ಶಿಸಿದ ಭೋಜಪ್ರಬಂಧ ನಾಟಕದಲ್ಲಿನ ಅಭಿನಯ ಕ್ಕಾಗಿ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಇವರಿಗೆ ಸುವರ್ಣ ಪದಕವೂ ಲಭಿಸಿತು.

ಇವರು ಸ್ವತಂತ್ರವಾಗಿ ಕೆಲವು ನಾಟಕಗಳನ್ನು ಬರೆದು ಅವುಗಳಲ್ಲಿ ತಾವೇ ಅಭಿನಯಿಸಿದರಲ್ಲದೆ ವಿಶ್ವಗುಣಾದರ್ಶ ನಾಟಕ ಮಂಡಳಿ ಎಂಬ ಸ್ವತಂತ್ರ ನಾಟಕ ಮಂಡಳಿಯನ್ನು ಆರಂಭಿಸಿ ಸುಮಾರು 20 ವರ್ಷಗಳ ಕಾಲ (1914–34) ನಡೆಸಿದರು. ಈ ನಾಟಕ ಮಂಡಳಿ ಕರ್ನಾಟಕದ ನಾನಾ ಸ್ಥಳಗಳಲ್ಲಿ ಭಕ್ತಪುಂಡಲೀಕ, ವೀರ ಅಭಿಮನ್ಯು, ಬಾಜೀರಾವ್ ಪೇಶ್ವೆ, ಸಂತ ಸಕ್ಕೂಬಾಯಿ ಮುಂತಾದ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿ ಜನಪ್ರಿಯವಾಯಿತು. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಕೃಷ್ಣರಾಜ ಒಡೆಯರ್ ಅವರ ಸಮ್ಮುಖ ದಲ್ಲಿ ಇದೇ ನಾಟಕ ಮಂಡಳಿ ಮಹಾನಂದ ಮತ್ತು ಭಕ್ತಪುಂಡಲೀಕ ಎಂಬ ಎರಡು ನಾಟಕಗಳನ್ನು ಅಭಿನಯಿಸಿ ಪ್ರಭುಗಳ ಮೆಚ್ಚುಗೆಗೂ ಪಾತ್ರವಾಯಿತು.

ಮೂರು ದಶಕಗಳ ಕಾಲ ರಂಗಭೂಮಿಯ ಸೇವೆ ಮಾಡಿದ ವಾಮನರಾವ್ ಮಾಸ್ತರರು ತಮ್ಮ ಬದುಕಿನ ಕೊನೆಯ ದಿನಗಳನ್ನು ಧಾರವಾಡದಲ್ಲಿ ಕಳೆದು, ತಮ್ಮ ಐವತ್ತೆರಡನೆಯ ವಯಸ್ಸಿನಲ್ಲಿ 1935ರಲ್ಲಿ ನಿಧನರಾದರು.

(ಎನ್.ಕೆ.ಆರ್.)

**ವಾಸುದೇವಯ್ಯ, ಚ.:** 1852–1943. ಹೊಸಗನ್ನಡದ ಆದ್ಯರಲ್ಲೊಬ್ಬರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣದಲ್ಲಿ 1852 ಆಗಸ್ಟ್ 2 ರಂದು ಜನಿಸಿದರು. ಇವರು ಅಲ್ಲಿನ ಆ್ಯಂಗ್ಲೋವರ್ನಾ ಕ್ಯುಲರ್ ಸ್ಕೂಲಿನಲ್ಲಿ ತಮ್ಮ ಆರಂಭದ ವ್ಯಾಸಂಗವನ್ನು ಮುಗಿಸಿ ಮುಂದೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಯಲ್ಲಿ ಉತ್ತೀರ್ಣರಾದರು. ಅನಂತರ ಮೊದಲನೆಯ ವರ್ಷದ ಎಫ್.ಎ. ತರಗತಿಗೆ ಸೇರಿದರಾದರೂ ಕಾರಣಾಂತರಗಳಿಂದ ತಮ್ಮ ವ್ಯಾಸಂಗವನ್ನು ಮುಂದುವರಿಸಲಾಗಲಿಲ್ಲ. ಇವರು ಸೆಂಟ್ರಲ್ ಕಾಲೇಜಿನಲ್ಲಿ ಸ್ವಲ್ಪಕಾಲ

ಉಪಾಧ್ಯಾಯರಾಗಿ ಕೆಲಸ ಮಾಡಿದ ಬಳಿಕ ವಿದ್ಯಾಭ್ಯಾಸ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರ ಕಚೇರಿಯಲ್ಲಿ ಗುಮಾಸ್ತರಾದರು. ಕ್ರಮೇಣ ಆ ಕಚೇರಿಯ ಮ್ಯಾನೇಜರ್ ಮತ್ತು ಆಫೀಸ್ ಅಸಿಸ್ಟೆಂಟ್ ಹುದ್ದೆಗೇರಿ 1910 ರಲ್ಲಿ ನಿವೃತ್ತರಾದರು.

ವಾಸುದೇವಯ್ಯನವರ ಮನೆಮಾತು ತೆಲುಗು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ಬಂಗಾಲಿ ಭಾಷೆಗಳಲ್ಲಿಯೂ ಒಳ್ಳೆಯ ಪರಿಶ್ರಮವನ್ನು ಸಂಪಾದಿಸಿಕೊಂಡಿದ್ದರು. ಇವರು ಮಕ್ಕಳಿಗಾಗಿ ರಚಿಸಿದ ಕನ್ನಡ ಬಾಲಬೋಧೆಗಳು ಸರಳವಾದ ಗದ್ಯ, ಆಕರ್ಷಕ ನಿರೂಪಣೆಗಳಿಂದ ಕೂಡಿದ್ದು ಜನಪ್ರಿಯವಾಗಿದ್ದುದಲ್ಲದೆ, ಅನೇಕ ವರ್ಷಗಳ ಕಾಲ ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕಗಳಾಗಿದ್ದವು. ಬಂಗಾಲಿ ಭಾಷೆಯಲ್ಲಿ ರಜನೀಕಾಂತ ಗುಪ್ತ ಅವರು ಬರೆದಿದ್ದ ರಾಜಪುತ್ರ ಮಹಿಮೆ ಎಂಬ ಪುಸ್ತಕವನ್ನು ಇವರು ಆರ್ಯಕೀರ್ತಿ–ಭಾಗ 1 ಎಂಬ ಹೆಸರಿನಿಂದ ಕನ್ನಡಕ್ಕೆ ಭಾಷಾಂತರಿಸಿದರು (1896). ಹಾಗೆಯೇ ಸತ್ಯಚರಣಶಾಸ್ತ್ರಿಗಳ ಮಹಾರಾಷ್ಟ್ರಾಧಿಪತಿ ಶಿವಾಜಿ ಮಹಾರಾಜನ ಚರಿತ್ರೆಯನ್ನು ಆರ್ಯಕೀರ್ತಿ–ಭಾಗ 2 ಎಂಬ ಹೆಸರಿನಿಂದ ಭಾಷಾಂತರಿಸಿದರು (1898). ರಾಜಪುತ್ರರ ಧೈರ್ಯ, ದೇಶಾಭಿಮಾನ, ರಾಜಪುತ್ರಿಯರ ಉಗ್ರವ್ರತನಿಷ್ಠೆ, ಶಿವಾಜಿಯ ಸ್ವಧರ್ಮದೀಕ್ಷೆ ಈ ವಿಷಯಗಳನ್ನು ಈ ಪುಸ್ತಕದಲ್ಲಿ ಕಾಣಬಹುದು. ಮಹಾಭಾರತವನ್ನು ಆಧರಿಸಿ ಇವರು ರಚಿಸಿರುವ ಭೀಷ್ಮಚರಿತ್ರೆಯಲ್ಲಿ (1927) ಭೀಷ್ಮರ ಸತ್ಯಪ್ರತಿಜ್ಞೆ, ಭಗವದ್ಭಕ್ತಿಯಿಂದ ಭೀಷ್ಮರಿಗೆ ಸಾಧ್ಯವಾಗಿದ್ದ ಮನೋದಾರ್ಢ್ಯ ಮತ್ತು ಶಾಂತಚಿತ್ತತೆಗಳನ್ನು ಬಲು ಸೊಗಸಾಗಿ ನಿರೂಪಿಸಿದ್ದಾರೆ. ಇವರ ಸರಳವಾದ ಗದ್ಯ, ಮನಮುಟ್ಟುವ ಶೈಲಿಗಳಿಗೆ ಈ ಪುಸ್ತಕಗಳು ಸಾಕ್ಷಿಯಾಗಿವೆ.

ಸರಳತೆ ಮತ್ತು ಸಜ್ಜನಿಕೆಗಳಿಗೆ ಹೆಸರಾಗಿದ್ದ ವಾಸುದೇವಯ್ಯನವರಿಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ 1926 ರಲ್ಲಿ ಒಂದು ಬಿನ್ನವತ್ತಳೆಯನ್ನು ಅರ್ಪಿಸಿ ಗೌರವಿಸಿತು. ಕನ್ನಡ ಸಾಹಿತ್ಯ ಪರಿಷತ್ತು 1942ರಲ್ಲಿ ಇವರನ್ನು ಸನ್ಮಾನಿಸಿತು. ಇವರು 1943 ಡಿಸೆಂಬರ್ 26 ರಂದು ನಿಧನರಾದರು. ಇವರ ಪುತ್ರ ಚ.ವಾ. ರಾಘವೇಂದ್ರಯ್ಯನವರು ಇವರನ್ನು ಕುರಿತ ಜೀವನಚರಿತ್ರೆಯೊಂದನ್ನು ಬರೆದಿದ್ದಾರೆ. (ಕೆ.ಎಸ್.ಕೆ.)

**ವಾಸುದೇವರಾವ್, ಎಂ.ವಿ.:** 1921– . ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ನಟ. ಮೂಡಬಿದರೆ ವೆಂಕಟರಾವ್ ವಾಸುದೇವರಾವ್ ಇವರ ಪೂರ್ಣ ಹೆಸರು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯವರು. ಶಿಕ್ಷಕ ವೃತ್ತಿಯಲ್ಲಿದ್ದ ತಂದೆ ಬಿ. ವೆಂಕಟರಾವ್ ಅವರಿಗೆ ಕವಿತೆ, ನಾಟಕ ಹಾಗೂ ಸಂಗೀತಗಳಲ್ಲಿ ಅಪಾರ ಆಸಕ್ತಿಯಿತ್ತು. ವಾಸುದೇವರಾವ್ ಅವರು ರಂಗಭೂಮಿಯ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡದ್ದು ತಮ್ಮ ತಂದೆಯವರ ಮೂಲಕ. ದಕ್ಷಿಣ ಕನ್ನಡ ಜಿಲ್ಲೆಯ ಕಟೀಲಿನಲ್ಲಿ ಶ್ರೀನಿವಾಸ ಅಯ್ಯಂಗಾರ್ ನಾಟಕ ಕಂಪನಿಗೆ ಬಾಲನಟನಾಗಿ ಸೇರುವ ಮೂಲಕ ರಂಗಭೂಮಿ ಪ್ರವೇಶಿಸಿದರು. ಒಂದೆರಡು ವರ್ಷಗಳಲ್ಲಿ ಗುಬ್ಬಿ ವೀರಣ್ಣನವರ ನಾಟಕ ಕಂಪನಿಯನ್ನು ಸೇರಿಕೊಂಡರು. ಆಗ ಇವರಿಗೆ ಎಂಟು ವರ್ಷ ವಯಸ್ಸು. ಅಂದಿನಿಂದ ಕೊನೆಯವರೆಗೆ ಇದೇ ಕಂಪನಿಯ ನಟರಾಗಿದ್ದರು. ಇಲ್ಲಿ ಸಹೋದ್ಯೋಗಿಗಳಿಗೆ ಇವರು ಹೆಚ್ಚಾಗಿ ಪರಿಚಿತರಾಗಿದ್ದುದು 'ಬೇಬಿ' ಎಂಬ ಅಡ್ಡ ಹೆಸರಿನಿಂದ. ಇವರ ಭಾವಾಭಿನಯ ಕೌಶಲ ಅದ್ಭುತವಾದ್ದು. ಕಂಠಶ್ರೀ ಶ್ರೀಮಂತವಾಗಿದ್ದ ಇವರು ಯಾವ ಪಾತ್ರವನ್ನೂ ಲೀಲಾಜಾಲವಾಗಿ ನಿರ್ವಹಿಸುತ್ತಿದ್ದರು. ಕುರುಕ್ಷೇತ್ರದಲ್ಲಿ ಅಭಿಮನ್ಯು, ದಶಾವತಾರದಲ್ಲಿ ಭೀಷ್ಮ ಮೊದಲಾದ ಪಾತ್ರಗಳನ್ನು ವಹಿಸುತ್ತಿದ್ದರು. ಪರಶುರಾಮನ ಪಾತ್ರ ಇವರಿಗೆ ಅಪಾರ ಕೀರ್ತಿ ತಂದುಕೊಟ್ಟಿತು. ರಂಗಭೂಮಿಯಲ್ಲಿ ಸುಮಾರು ಐದು ದಶಕಗಳಷ್ಟು ದೀರ್ಘಕಾಲ ಅನುಭವ ಪಡೆದ ಇವರಿಗೆ ಅಂತಾರಾಷ್ಟ್ರೀಯ ಮಟ್ಟದ ಕೀರ್ತಿಗೆ ಪಾತ್ರವಾಗುವ ಸಂದರ್ಭ ಒದಗಿಬಂದದ್ದು 'ಚೋಮನ ದುಡಿ' ಚಿತ್ರದಲ್ಲಿ ನಟಿಸುವ ಮೂಲಕ. ಶಿವರಾಮ ಕಾರಂತರ ಚೋಮನ ದುಡಿ ಕಾದಂಬರಿಯನ್ನು ಬಿ.ವಿ.ಕಾರಂತರು ಸಿನಿಮಾ ಮಾಧ್ಯಮಕ್ಕೆ ಪರಿವರ್ತಿಸಿದಾಗ ಒಮ್ಮೆ ತಮ್ಮ ಸಹನಟರಾಗಿದ್ದ ಎಂ.ವಿ.ವಾಸುದೇವರಾವ್ ಅವರಿಗೆ ಚೋಮನ ಪಾತ್ರವನ್ನು ನೀಡಿದರು. ಅಪಾರ ತಾಳ್ಮೆ ಹಾಗೂ ಶ್ರದ್ಧೆಯಿಂದ ಪಾತ್ರದ ಆಳ ಆಯಾಮಗಳನ್ನು ಅಭ್ಯಸಿಸಿದ ಇವರು ಅದನ್ನು ತಾದಾತ್ಮ್ಯದಿಂದ ಅಭಿನಯಿಸಿ ಮೊದಲ ಚಿತ್ರದಲ್ಲಿಯೇ ತಮ್ಮ ಅಭಿನಯ ಪ್ರತಿಭೆಯನ್ನು ತೋರಿದರು. ಈ ಚಿತ್ರದಲ್ಲಿನ ಇವರ ಅಭಿನಯಕ್ಕಾಗಿ 1975ರಲ್ಲಿ ಇವರಿಗೆ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಲಭಿಸಿತು. ಅದೇ ವರ್ಷ ಇವರಿಗೆ ಕರ್ನಾಟಕ ರಾಜ್ಯಪ್ರಶಸ್ತಿಯೂ ದೊರಕಿತು. ಮುಂಬಯಿಯಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿಯೂ ಇವರ ಅಭಿನಯ ಮೆಚ್ಚುಗೆಗೆ ಪಾತ್ರವಾಯಿತು. ಈ ಚಿತ್ರೋತ್ಸವದಲ್ಲಿ ಇವರೂ ಭಾಗವಹಿಸಿದ್ದರು.



ಇವರು ಅನೇಕ ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಹುಲಿ ಬಂತು ಹುಲಿ (1978) ಚಿತ್ರದಲ್ಲಿ ಜೇನುಕುರುಬರ ಮುಖ್ಯನ ಪಾತ್ರದಲ್ಲಿ ಅಭಿನಯಿಸಿದ್ದರು. ದೇವರೇ ದಿಕ್ಕು ಇವರ ಇನ್ನೊಂದು ಕನ್ನಡ ಚಿತ್ರ. ಮೃಣಾಲ್ ಸೇನರ ಒಕ ಊರಿ ಕಥೆ (ಪ್ರೇಮಚಂದರ ಕಫನ್ ಎಂಬ ಹೆಸರಿನ ಕಥೆಯಾಧಾರಿತ) ತೆಲುಗು ಚಿತ್ರದ ಮೂಲಕ ಅನ್ಯಭಾಷಾ ಚಿತ್ರರಂಗಕ್ಕೂ ಕಾಲಿಟ್ಟರು. ಬಿ.ವಿ.ಕಾರಂತ್, ಜಿ.ವಿ.ಅಯ್ಯರ್, ಬಾಲಕೃಷ್ಣ, ರಾಜಕುಮಾರ್ ಮೊದಲಾದವರು ಗುಬ್ಬಿ ಕಂಪನಿಯಲ್ಲಿ ಇವರ ಸಹನಟರಾಗಿದ್ದರು. (ಎಸ್.ಎಸ್.ಎಂಯು.)

**ವಾಸುದೇವಾರ್ಯ:** ಸು. 1725–90. ಪ್ರಸಿದ್ಧ ವೇದಾಂತೋಪದೇಶಕರು; ಜ್ಞಾನಭಕ್ತಿವೈರಾಗ್ಯಸಂಪನ್ನರು. ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಇವರ ಸ್ಥಳ. ಇವರು ಪತ್ನಿ ತೀರಿಕೊಂಡ ಮೇಲೆ ಸಂನ್ಯಾಸ ಸ್ವೀಕರಿಸಿ, ಯತಿಯಾಗಿ ಪ್ರಸಿದ್ಧರಾದಂತೆ ತಿಳಿದುಬರುತ್ತದೆ. ವಾಸುದೇವಯತಿ ಶಿಷ್ಯನಿಂದ ರಚಿತವಾದ ವಿವೇಕಸಾರದಲ್ಲಿ, ಕನ್ನಡ ಭಾಷೆಯೊಳ್ ವಿರಚಿಸಿದ ವಾಸುದೇವಯತೀಂದ್ರೋಕ್ತವಾದ ವಿವೇಕಸಾರ ಎಂಬ ವಾಕ್ಯವಿದೆ. ಆದ್ದರಿಂದ ಆರ್. ನರಸಿಂಹಾಚಾರ್ಯರು ಊಹಿಸಿರುವಂತೆ ವಾಸುದೇವಾರ್ಯರು ಸಂಸ್ಕೃತದಲ್ಲಿ ವಿವೇಕಸಾರ ಎಂಬ ಗ್ರಂಥವನ್ನು ರಚಿಸಿದ್ದರೆಂದು ತಿಳಿಯಬಹುದು. ವಾಸುದೇವ ಮನನ ಎಂಬುದು ಇವರ ಇನ್ನೊಂದು ಸಂಸ್ಕೃತ ಗ್ರಂಥ. ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿ

ಸುವ ಈ ಗ್ರಂಥವನ್ನು ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು ಕನ್ನಡಕ್ಕೆ ಅನುವಾದ ಮಾಡಿದ್ದಾರೆ (1897). ಪೂಜಾವಿಧಾನ ಕೀರ್ತನೆಗಳು, ಧ್ರುವಚರಿತ್ರೆ, ಪರಬ್ರಹ್ಮಪ್ರಕಾಶಿಕೆ ಮುಂತಾದ ಅನೇಕ ಕನ್ನಡ ಕೃತಿಗಳನ್ನು ಬರೆದಿರುವ ತಿಮ್ಮಪ್ಪದಾಸರು ಇವರ ಪೌತ್ರರು ಹಾಗೂ ಶಿಷ್ಯರು. ವಾಸುದೇವಾರ್ಯರ ದೌಹಿತ್ರರೂ ಪ್ರಶಿಷ್ಯರೂ ಆದ ವೆಂಕಟದಾಸಾರ್ಯರು ಅಖಂಡಾನಂದಸ್ವರೂಪ ಎಂಬ ತಮ್ಮ ಕನ್ನಡ ಗದ್ಯಗ್ರಂಥದ ಸಮಾಪ್ತಿ ವಾಕ್ಯದಲ್ಲಿ ಗುರುಪರಂಪರೆಯನ್ನು ಹೇಳುವಾಗ ವಾಸುದೇವಾರ್ಯರನ್ನು ವರಬಾಲಕವಿ ಎಂದು ವಿಶೇಷಿಸಿರುವುದರಿಂದ ಇವರು ಸಂಸ್ಕೃತದಲ್ಲೊ ಕನ್ನಡದಲ್ಲೊ ಪದ್ಯಗ್ರಂಥಗಳನ್ನೂ ರಚಿಸಿರುವರೆಂದು ಊಹಿಸಬಹುದು. ಇವರು ತಮ್ಮ ಶಿಷ್ಯರ ಮೂಲಕ ಭಗವನ್ನಾಮಸಂಕೀರ್ತನರೂಪದ ಭಜನೆಯ ಸಂಪ್ರದಾಯವನ್ನು ರೂಢಿಗೆ ತಂದರು. ಇವರು ಅನೇಕ ಮಹಿಮೆಗಳನ್ನು ಮೆರೆದರೆಂದು ಪ್ರತೀತಿಯಿದೆ. ಇವರು ಗುಹಾಪ್ರವೇಶ ಮಾಡಿ ಯೋಗಾರೂಢರಾಗಿ ತಮ್ಮ ಕಳೇಬರವನ್ನು ತ್ಯಜಿಸಿದರು. ಇವರ ಸಮಾಧಿಯ ಮೇಲೆ ಕಟ್ಟಿದ ಬೃಂದಾವನ ಈಗಲೂ ಚಿಕ್ಕನಾಯಕನ ಹಳ್ಳಿಯಲ್ಲಿದೆ.

(ಎಂ.ವಿ.ಎಸ್.)

**ವಾಸ್ತುಕಲೆ:** ಕರ್ನಾಟಕದ ವಾಸ್ತುಕಲೆ ಭಾರತೀಯ ವಾಸ್ತುಕಲೆಯ ಒಂದು ಭಾಗವೇ ಆಗಿದ್ದರೂ ಇದಕ್ಕೆ ವಿಶೇಷವಾದ ಒಂದು ಮಹತ್ತ್ವವಿದೆ. ಭಾರತದ ಉಳಿದೆಡೆ ಕಾಣದಷ್ಟು ವೈವಿಧ್ಯಮಯ ವಾಸ್ತುಶೈಲಿಗಳು ಕರ್ನಾಟಕದಲ್ಲಿ ಗೋಚರಿಸುತ್ತವೆ. ಇದರಿಂದಾಗಿ ಭಾರತದ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ವಿಶಿಷ್ಟ ಸ್ಥಾನವಿದೆ. ತನ್ನ ಸುತ್ತಮುತ್ತ ಬೆಳೆದ ಬೇರೆ ಬೇರೆ ಶೈಲಿಗಳನ್ನು ಮೈಗೂಡಿಸಿಕೊಂಡುದೇ ಅಲ್ಲದೆ, ಅವುಗಳ ಸಂಯೋಜನೆಯಿಂದ ತನ್ನದೇ ಆದ ಹೊಸಶೈಲಿಯನ್ನು ನಿರ್ಮಾಣ ಮಾಡಿ ಅದ್ಭುತವಾಗಿ ಬೆಳೆಸಿ ಪ್ರಪಂಚದ ವಾಸ್ತುಕಲೆಯ ಸಾಲಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯವನ್ನು ಕರ್ನಾಟಕದ ವಾಸ್ತುಕಲೆ ಪಡೆದುಕೊಂಡಿದೆ. ಈ ವೈವಿಧ್ಯಕ್ಕೆ ಇಲ್ಲಿನ ಬೇರೆ ಬೇರೆ ಭಾಗಗಳಲ್ಲಿ ದೊರೆಯುವ ಬೇರೆ ಬೇರೆ ರೀತಿಯ ಮೂಲಸಾಮಗ್ರಿಯೂ ಕಾರಣ. ಕರ್ನಾಟಕದ ಪಶ್ಚಿಮ ಭಾಗದಲ್ಲಿ ಮಿದುವಾದ ಧಾರವಾಡ ಶಿಲಾಪದರವೂ ಪೂರ್ವಭಾಗ ದಲ್ಲಿ ಗಟ್ಟಿಯಾದ ಗ್ರಾನೈಟ್ ಕಲ್ಲೂ ನಡುವೆ ಕೆಂಪು ಮರಳುಶಿಲೆ ಮತ್ತು ಹಸಿರು ಬೆರೆತ ಬಿಳಿಯ ಶಾಹಬಾದ ಕಲ್ಲಿನ ಪದರಗಳೂ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಜಂಬೂಕಲ್ಲೂ ಹೇರಳವಾಗಿ ದೊರೆಯುತ್ತಿದ್ದು ವಾಸ್ತುರೀತಿಗಳು ಈ ಮೂಲ ಸಾಮಗ್ರಿಗಳಿಗೆ ಹೊಂದಿ ಕೊಂಡು ಬೆಳೆದು ಬಂದಿವೆ. ಆಯಾ ಸ್ಥಳಗಳಲ್ಲಿ ದೊರೆಯದ ಮೂಲ ಸಾಮಗ್ರಿಯನ್ನು ದೂರದಿಂದ ತರಿಸಿ ವಾಸ್ತುನಿರ್ಮಾಪಕರು ತಮ್ಮ ಅಭಿರುಚಿಗನುಗುಣವಾಗಿ ಆ ಪ್ರಾಂತ್ಯದಲ್ಲಿಲ್ಲದ ನೂತನ ಶೈಲಿಯಲ್ಲಿ ಕಟ್ಟಡಗಳನ್ನು ಕಟ್ಟಲು ಪ್ರಯತ್ನಿಸಿದ್ದರೂ ಇಂಥ ಸಂದರ್ಭಗಳು ಅಪರೂಪ. ವಾಯುಗುಣದ ವ್ಯತ್ಯಾಸವೂ ವಾಸ್ತುಶೈಲಿಯನ್ನು ರೂಪಿಸುವಲ್ಲಿ ತನ್ನ ಪ್ರಭಾವವನ್ನು ಬೀರಿದೆ. ವಾಸ್ತು ನಿರ್ಮಾಣಕ್ಕೆ, ಅದನ್ನೊಂದು ಕಲೆಯಾಗಿ ಬೆಳೆಸುವುದಕ್ಕೆ ಮೂಲ ತಳಹದಿ ಮತಧರ್ಮಗಳು. ಹಲವು ಮತಧರ್ಮ ಗಳಿಗೆ ತವರೂ ಆಶ್ರಯಸ್ಥಾನವೂ ಆಗಿದ್ದ ಕರ್ನಾಟಕದಲ್ಲಿ ಪ್ರತಿಯೊಂದು ಮತದವರೂ ತಮ್ಮದೇ ಆದ ಮಂದಿರಗಳನ್ನು ಹೊಂದುವುದರಲ್ಲಿ ತೋರಿಸಿದ ಹುರುಡು ಸಮೃದ್ಧವಾಗಿ ವಾಸ್ತು ನಿರ್ಮಾಣವಾಗಲು ಸಾಧಕ ವಾಯಿತು. ಇದೆಲ್ಲವನ್ನೂ ಮೀರಿ ಕರ್ನಾಟಕದಲ್ಲಿ ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರಗಳಂತಹ ಪ್ರಸಿದ್ಧವಾದ ರಾಜಮನೆತನಗಳು ಸುಭದ್ರವಾದ ಸಾಮ್ರಾಜ್ಯಗಳನ್ನು ಕಟ್ಟಿ ದೇವಾಲಯ, ಬಸದಿ, ಮಠ, ಮತ್ತಿತರ ಕಟ್ಟಡಗಳನ್ನು ನಿರ್ಮಿಸಲು ಹೇರಳವಾಗಿ ಸಹಾಯ ಮಾಡುತ್ತಿದ್ದುದರಿಂದ, ಅವುಗಳನ್ನು ನಡೆಸಿಕೊಂಡು ಬರಲು ಉದಾರವಾಗಿ ದತ್ತಿಗಳನ್ನು ಬಿಟ್ಟುದರಿಂದ, ದೇವಾಲಯ ಮೊದಲಾದುವನ್ನು ಕಟ್ಟಿಸುವುದು ಒಂದು ಪುಣ್ಯ ಕಾರ್ಯವೆಂದು ಜನ ಸಾಮಾನ್ಯರೂ ಭಾವಿಸಿದ್ದರಿಂದ ವಾಸ್ತುಕಲೆ ಇಲ್ಲಿ ಬಹುವಾಗಿ ಬೆಳೆದು ಬರಲು ಅನುವಾಯಿತು.

ಈಗ ಬೆಳೆದು ಬಂದಿರುವ ವಾಸ್ತುಶೈಲಿ ಆರಂಭ ಕಾಲದಲ್ಲಿ ಹೇಗಿತ್ತು ಎನ್ನುವುದನ್ನು ತಿಳಿಯುವುದು ಸಾಧ್ಯವಿಲ್ಲವಾದರೂ ಬಹುಶಃ ಆಗ ಮರ, ಬೊಂಬು, ಮಣ್ಣು ಮುಂತಾದ ಬೇಗ ನಾಶವಾಗಬಹುದಾದಂಥ ವಸ್ತುಗಳಿಂದ ಕಟ್ಟಡಗಳ ನಿರ್ಮಾಣ ಆರಂಭವಾಗಿದ್ದಿರಬೇಕು. ಸತ್ತವರ ನೆನಪಿಗಾಗಿ ಸಮಾಧಿ ನಿರ್ಮಿಸುವುದು, ಭೂತ ಅಥವಾ ದೈವಗಳಿಗಾಗಿ ತಮ್ಮ ವಾಸದ ಮನೆಗಳನ್ನನುಕರಿಸಿ ಬೇರೆಯಾಗಿ ಕಟ್ಟಡಗಳನ್ನು ಕಟ್ಟುವುದು ಆರಂಭದೆಸೆಯಲ್ಲಿ ಇದ್ದಿರಬಹುದಾದ ವಾಸ್ತುರೀತಿಗಳು, ನಡುವೆ ಒಂದು ಎತ್ತರವಾದ ಮರದ ಕಂಬ, ಅದನ್ನು ಬಳಸಿಕೊಂಡು ಗುಂಡಾದ ಅಥವಾ ಚೌಕಾಕಾರದ ಮಣ್ಣಿನ ಗೋಡೆಗಳು, ಕಂಬದ ತುದಿಯಿಂದ ಸುತ್ತಲೂ ಇಳಿಜಾರಾಗಿರುವಂತೆ ಹುಲ್ಲಿನ ಚಾವಣಿ, ಕಂಬದ ತುದಿಗೆ ಮಳೆಯ ನೀರು ಒಳಗಿಳಿಯದಂತೆ ಬೋರಲು ಹಾಕಿರುವ ಒಂದು ಮಡಕೆ, ಬಾಗಿಲಿಗೆ ಎದುರಾಗಿ ಒಳಗೋಡೆಯ ಮೇಲೆ ಮೃಣ್ಮೂರ್ತಿಗಳನ್ನು ಅರೆಯುಬ್ಬಿನಲ್ಲಿ ಬಿಡಿಸಿ ಬಣ್ಣ ಹಾಕುವ ಪದ್ಧತಿ ಇದ್ದಿರಬೇಕು. ಅನೂಚಾನವಾಗಿ ನಡೆದುಕೊಂಡು ಬಂದಿರುವ ಗ್ರಾಮದೇವತೆಗಳು, ಇತರ ಶಕ್ತಿದೇವತೆಗಳ ಇಂಥ ಸಾಮಾನ್ಯ ಗುಡಿಗಳು ಹಳ್ಳಿಗಳಲ್ಲಿ ಕಂಡುಬರುತ್ತಿದ್ದು ಅವು ಅತಿ ಪ್ರಾಚೀನವಾದ ವಾಸ್ತುಪದ್ಧತಿಯ ಅವಶೇಷ ಗಳೆಂಬುದು ಸ್ಪಷ್ಟ.

ಚರಿತ್ರೆಯ ಆರಂಭಕಾಲಕ್ಕೆ ಕರ್ನಾಟಕದಲ್ಲಿ ಇಟ್ಟಿಗೆಯ ಕಟ್ಟಡಗಳನ್ನು ಕಾಣುತ್ತೇವೆ. ಪೂರ್ಣರೂಪದಲ್ಲಿ ಈ ಕಟ್ಟಡಗಳು ಈಗ ಉಳಿದುಬಂದಿಲ್ಲ ವಾದರೂ ಅವುಗಳ ಅವಶೇಷಗಳಿಂದ ಅವುಗಳ ಸ್ಥೂಲ ರೂಪರೇಖೆ ಗಳನ್ನರಿಯಬಹುದು. ಕರ್ನಾಟಕದಲ್ಲಿ ಮೌರ್ಯ ಮತ್ತು ಸಾತವಾಹನರ ಕಾಲದಲ್ಲಿ ಬೌದ್ಧ ರೀತಿಯ ಚೈತ್ಯ, ಸ್ತೂಪ, ವಿಹಾರಗಳನ್ನು ಇಟ್ಟಿಗೆಗಳಿಂದ ನಿರ್ಮಿಸಿರುವುದು ಅಲ್ಲಲ್ಲಿ ಕಂಡು ಬಂದಿದೆ. ಬ್ರಹ್ಮಗಿರಿ ಮತ್ತು ಬನವಾಸಿಯಲ್ಲಿ ಲಾಳದಾಕಾರದ ಹಿಂಭಾಗವನ್ನುಳ್ಳ ಇಂಥ ಕಟ್ಟಡಗಳ ಅವಶೇಷಗಳು ಉಳಿದು ಬಂದಿವೆ. ಬನವಾಸಿಯ ಚೈತ್ಯದಲ್ಲಿ ಮೂರು ಸುತ್ತು ದಪ್ಪನಾದ ಗೋಡೆಗಳಿರುವುದನ್ನು ಗಮನಿಸಬಹುದು. ಸನ್ನತಿಯಲ್ಲಿ ವೃತ್ತಾಕಾರದ ಸ್ತೂಪದ ಅವಶೇಷವು, ಸ್ತೂಪವು ಶಿಲ್ಪಫಲಕಗಳಿಂದ ಆಚ್ಛಾದಿತವಾಗಿದ್ದು ದನ್ನೂ ಇದಕ್ಕೆ ಆಯಕ ಸ್ತಂಭಗಳಿದ್ದುದನ್ನೂ ಸೂಚಿಸುವುದಲ್ಲದೆ ಅದು ಭಟ್ಟಿಪ್ರೋಲು, ಅಮರಾವತಿ, ನಾಗಾರ್ಜುನಕೊಂಡ ಮುಂತಾದೆಡೆಗಳಲ್ಲಿದ್ದ ವಾಸ್ತುರೀತಿಯನ್ನು ಬಹುಮಟ್ಟಿಗೆ ಹೋಲುತ್ತಿತ್ತೆಂಬುದು ಗೊತ್ತಾಗುತ್ತದೆ. ಹೀಗೆಯೇ ಈ ಕಾಲದ ನೇರವಾದ ಗೋಡೆಯನ್ನುಳ್ಳ ಇಟ್ಟಿಗೆ ಕೋಟೆಯನ್ನೂ ಇಲ್ಲಿ ಕಾಣಬಹುದು. ಐಹೊಳೆ, ಪಟ್ಟದಕಲ್ಲುಗಳಲ್ಲಿನ ಎರಡು ಸಾಲು ಕಂಬಗಳನ್ನೊಳಗೊಂಡು ವಿಶಾಲವಾದ ಹಜಾರವನ್ನುಳ್ಳ ದೀರ್ಘಚತುರ ಸ್ರಾಕಾರದ ಇಟ್ಟಿಗೆಯ ದೇವಾಲಯದ ಅವಶೇಷವೂ ಸಾತವಾಹನರ ಕಾಲಕ್ಕೆ ಸೇರಿದ್ದು ಅಲ್ಲಿ ಬೆಳೆದು ಬಂದ ವಾಸ್ತುಶೈಲಿಗೆ ಮೂಲ ಮಾದರಿಯಾಗಿದೆ. ಚಂದ್ರವಳ್ಳಿಯಲ್ಲಿ ಇಟ್ಟಿಗೆಯ ಕಟ್ಟಡಗಳಿದ್ದ ಕುರುಹುಗಳು ಹೇರಳವಾಗಿ ದೊರೆತಿದ್ದರೂ ಆ ಕಾಲದ ವಾಸದ ಮನೆಗಳ ವಾಸ್ತು ರೀತಿಯನ್ನರಿಯಲು ತಕ್ಕಷ್ಟು ತಲವಿನ್ಯಾಸಗಳು ಉಳಿದುಬಂದಿಲ್ಲ.

ಸರಿಸುಮಾರು ಮೌರ್ಯಸಾತವಾಹನರ ಕಾಲದಲ್ಲಿ ಪಸರಿಸಿದ್ದ ಬೃಹತ್ ಶಿಲಾಯುಗದ ಹಲವು ಸಮಾಧಿಗಳು ಕರ್ನಾಟಕದ ನಾನಾ ಭಾಗಗಳಲ್ಲಿ ದೊರೆತಿದ್ದು ಇವುಗಳಲ್ಲಿ ದೊಡ್ಡದಾದ ಕಲ್ಲಿನ ಚಪ್ಪಡಿಗಳನ್ನು ಸ್ವಸ್ತಿಕದ ಆಕಾರದಲ್ಲಿ ಜೋಡಿಸಿ ಮೇಲೊಂದು ವಿಶಾಲವಾದ ಹಾಸುಗಲ್ಲನ್ನು

ಮುಚ್ಚಿ ನಿರ್ಮಿಸಿರುವ ಶವಪೆಟ್ಟಿಗೆಗಳು ಈಗ ಉಳಿದುಬಂದಿರುವ ಅತಿ ಪ್ರಾಚೀನವಾದ ಕಲ್ಲಿನ ಕಟ್ಟಡಗಳೆನ್ನಬಹುದು. ಪೂರ್ವ ದಿಕ್ಕಿನ ಅಡ್ಡಚಪ್ಪಡಿಯಲ್ಲಿ ಗುಂಡುರಂಧ್ರವಿರುವುದೊಂದು ವಿಶೇಷ. ಇವುಗಳನ್ನು ಸುತ್ತಿಕೊಂಡಂತೆ ಗುಂಡಾಗಿ, ಬ್ರಹ್ಮಗಿರಿಯಲ್ಲಿರುವಂತೆ, ಕಲ್ಲಿನ ಗೋಡೆಗಳಿರಬಹುದು; ಅಥವಾ ದಪ್ಪ ಗುಂಡುಗಳನ್ನು ಒಂದು ಅಥವಾ ಎರಡು ವೃತ್ತಗಳಲ್ಲಿ ಅವುಗಳ ಸುತ್ತಲೂ ಜೋಡಿಸಿರಬಹುದು. ಇವುಗಳನ್ನು ಮುಚ್ಚಿಕೊಂಡು ಚಿಕ್ಕಚಿಕ್ಕ ಕಲ್ಲಿನ ತುಂಡುಗಳನ್ನು ಗೋಪುರವಾಗಿ ಪೇರಿಸಿರಬಹುದು. ಕಲೆಯ ದೃಷ್ಟಿಯಿಂದ ಇವು ಅಷ್ಟೇನು ಗಮನಾರ್ಹ ರಚನೆಗಳಲ್ಲದಿದ್ದರೂ ಮುಂದಿನ ಉತ್ಕೃಷ್ಟ ವಾಸ್ತುಶೈಲಿಗೆ ನಾಂದಿ ಹಾಡಿದವೆಂದು ಹೇಳಬಹುದು.

ಸಾತವಾಹನರ ಕಾಲದಲ್ಲಿಯೇ ಬೌದ್ಧಸ್ತೂಪ, ಚೈತ್ಯಗಳ ಜೊತೆಗೆ ವೈದಿಕ ದೇವಾಲಯಗಳಿದ್ದುದಕ್ಕೆ ಶಾಸನಗಳಲ್ಲಿ ಸೂಚನೆಗಳಿದ್ದರೂ ಕಟ್ಟಡಗಳ ಸ್ವರೂಪ ಹೇಗಿತ್ತೆಂಬುದನ್ನರಿಯಲು ಅವು ಉಳಿದು ಬಂದಿಲ್ಲ. ಮಳವಳ್ಳಿಯ ಮಳ್ಳಪಳ್ಳಿ ದೇವರು, ತಾಳಗುಂದದ ಪ್ರಣವೇಶ್ವರ ದೇವರ

ಗಳಗನಾಥ ದೇವಾಲಯ, ಪಟ್ಟದಕಲ್ಲು

ದೇವಾಲಯಗಳಲ್ಲಿ ಸಾತವಾಹನರು ಆ ದೇವರುಗಳನ್ನು ಪೂಜಿಸಿದ್ದರೆಂಬುದು ತಿಳಿದುಬರುತ್ತದೆ. ಈ ದೃಷ್ಟಿಯಿಂದ ಕದಂಬರ ಕಾಲ ಶಿಲಾವಾಸ್ತುವಿನ ಆರಂಭಕಾಲವೆನ್ನಬಹುದು. ಅವರು ವಾಸ್ತುಶಿಲ್ಪಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದಾರೆ. ದೇವಾಲಯಗಳ ಜೊತೆಗೆ ಜೈನಬಸದಿಗಳೂ ಆ ಕಾಲದಲ್ಲಿ ನಿರ್ಮಿತವಾಗಿವೆ. ಕದಂಬ ಶೈಲಿ ಎಂದು ವಾಸ್ತುಶಿಲ್ಪದಲ್ಲಿ ಬೇರೆ ಬೇರೆಯಾಗಿ ಗುರುತಿಸಲು ತಕ್ಕಷ್ಟು ಉದಾಹರಣೆಗಳಿಲ್ಲದಿದ್ದರೂ ಸ್ಥೂಲವಾಗಿ ಅದರ ವೈಶಿಷ್ಟ್ಯವನ್ನು ಹೀಗೆ ಸೂಚಿಸಬಹುದು: ಚತುರಸ್ರ ಅಥವಾ ದೀರ್ಘಚತುರಸ್ರವಾದ ತಲವಿನ್ಯಾಸ, ಸರಳವಾದ ಗೋಡೆಗಳು, ಅವುಗಳಿಗೆ ಅಡ್ಡಲಾಗಿ ಮಧ್ಯೆ ಹೂ ಸಾಲಿನಿಂದ ಕೂಡಿದ ದೊಡ್ಡಪಟ್ಟಿಕೆ, ಗರ್ಭಗೃಹದ ಮೇಲೆ ಪಿರಮಿಡ್ಡಿನ ಆಕೃತಿಯಲ್ಲಿ ಮೆಟ್ಟಿಲುಮೆಟ್ಟಿಲಾಗಿ ಮೇಲೆ ಹೋದಂತೆ ಚಿಕ್ಕದಾಗುವ ಚಪ್ಪಟೆ ಸ್ತರಗಳು; ಒಮ್ಮೊಮ್ಮೆ ಅವುಗಳಿಗೆ ಮೇಲೆದ್ದ ದಂತಾಕೃತಿಯ ಸಾಲುಗಳು ಇದ್ದು ಇದನ್ನು ಕದಂಬನಾಗರಶೈಲಿ ಎಂದು ಕರೆಯಲಾಗುತ್ತದೆ. ಈಗ ಉಳಿದು ಬಂದಿರುವ ಕದಂಬರ ಕಾಲದ ಕಟ್ಟಡಗಳಲ್ಲಿ ಉರುಟು ಕಲ್ಲುಗಳಿಂದ ನಿರ್ಮಿತವಾದ ಗರ್ಭಗೃಹಕ್ಕಿಂತ ಸುಕನಾಸಿಯು ದೊಡ್ಡದಾಗಿರುವ, ಯಾವ ರೀತಿಯ ಶಿಲ್ಪಾಲಂಕರಣವೂ ಇಲ್ಲದ ಹಲಸಿಯ ಜೈನಬಸದಿ ಅತ್ಯಂತ ಪ್ರಾಚೀನವೆನ್ನಬಹುದು. ಬಹುಶ: ಈಗ ಉಳಿದು ಬಂದಿರುವ ಅತಿಪ್ರಾಚೀನ ಶಿಲಾನಿರ್ಮಿತ ಕಟ್ಟಡವೂ ಇದೇ. ಈ ಊರಿನಲ್ಲಿರುವ ಹತ್ತಿಕೇಶ್ವರ, ಕಲ್ಲೇಶ್ವರ, ಸುವರ್ಣೇಶ್ವರ, ರಾಮೇಶ್ವರ ದೇವಾಲಯಗಳೂ ಕದಂಬರ ಕಾಲಕ್ಕೆ ಸೇರಿದವು. ಬನವಾಸಿ, ತಾಳಗುಂದಗಳಲ್ಲಿರುವ ದೇವಾಲಯಗಳು ಹೆಚ್ಚು ಬೆಳೆದುಬಂದು ಬದಲಾವಣೆ ಹೊಂದಿರುವುದರಿಂದ ಅವುಗಳ ಮೂಲರೂಪ ತಿಳಿಯದು. ಆದರೂ ಬನವಾಸಿಯಲ್ಲಿರುವ ಕೆಲವು ಚಿಕ್ಕ ಚಿಕ್ಕ ಗುಡಿಗಳು ಆ ಕಾಲದ ವಾಸ್ತುಶೈಲಿಗೆ ಮಾದರಿಗಳೆಂದು ಹೇಳಬಹುದು.

ಕದಂಬರ ಸಮಕಾಲೀನವಾಗಿ ಕರ್ನಾಟಕದ ಆಗ್ನೇಯ ಭಾಗದಲ್ಲಿ ಆಳಲಾರಂಭಿಸಿದ ಗಂಗರು ಮುಂದೆ 11ನೆಯ ಶತಮಾನದವರೆಗೂ ಆಳುತ್ತಿದ್ದು, ತಮ್ಮ ರಾಜ್ಯದಲ್ಲಿ ವಾಸ್ತುಕಲೆ ಹಲವು ಬಗೆಯಲ್ಲಿ ಬೆಳೆಯಲು ಕಾರಣರಾಗಿದ್ದಾರೆ. ಇವರ ವಾಸ್ತುಶೈಲಿಯನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಇಲ್ಲಿಯೇ ಹುಟ್ಟಿ ಬೆಳೆದ ತೀರ ಸಾಮಾನ್ಯವಾದ ಕಟ್ಟಡಗಳು; ಚೆನ್ನಾಗಿ ಅಭಿವೃದ್ಧಿ ಹೊಂದಿದ ಉತ್ತಮ ಮಟ್ಟದ ಪಲ್ಲವ ಅಥವಾ ಚಾಳುಕ್ಯಶೈಲಿಗಳಿಂದ ಪ್ರಭಾವಿತವಾದ ಕಟ್ಟಡಗಳು; ಈ ಎರಡು ರೀತಿಗಳನ್ನೂ ಒಗ್ಗೂಡಿಸಿರುವ ಮೂರನೆಯ ರೀತಿ. ಹೊಸಶೈಲಿಯನ್ನು ಗಂಗರು ಆರಂಭಿಸದಿದ್ದರೂ ತಮ್ಮ ಸುತ್ತಮುತ್ತ ಆಗಲೇ ಬೆಳೆದು ಅಭಿವೃದ್ಧಿ ಹೊಂದಿದ ಮಾದರಿಗಳನ್ನು ಉತ್ತಮವಾಗಿ ಬಳಸಿಕೊಂಡು ಅವುಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಅಳವಡಿಸಿದ್ದಾರೆ. ಹೀಗೆ ಬಳಸುವಲ್ಲಿ ಗಂಗ ವಾಸ್ತುಕಾರರಿಗೆ ಚಾಳುಕ್ಯ ಮತ್ತು ಪಲ್ಲವ ಎರಡು ಕಡೆಗಳಿಂದಲೂ ಸ್ಫೂರ್ತಿ ಪಡೆಯಲು ಅವಕಾಶವಿದ್ದರೂ ಅವರ ಮೇಲೆ ಹೆಚ್ಚು ಪರಿಣಾಮ ಬೀರಿರುವುದು ಪಲ್ಲವರ (ದ್ರಾವಿಡ) ಶೈಲಿ.

ಗಂಗರ ಆರಂಭದ ಕಟ್ಟಡಗಳು ಬಹುಶಃ ಇಟ್ಟಿಗೆ ಗಾರೆ ಮರಗಳಿಂದ ಕಟ್ಟಿದ್ದವಾಗಿದ್ದು ಇಂಥ ದೇವಾಲಯ ಹಾಗೂ ಬಸದಿಗಳು ಮಾಧವ, ಅವಿನೀತ, ದುರ್ವಿನೀತ ಮೊದಲಾದ ಗಂಗರಾಜರ ಕಾಲದಲ್ಲಿದ್ದುವೆಂದು ಶಾಸನಗಳಿಂದ ತಿಳಿದು ಬಂದರೂ ಅವು ಈಗ ಉಳಿದುಬಂದಂತೆ ತೋರುವುದಿಲ್ಲ. ಇಲ್ಲಿಯೇ ಹುಟ್ಟಿದ, ಕಲೆಯ ದೃಷ್ಟಿಯಿಂದ ಗಣನೆಗೆ ಬಾರದ ಕೆಲವು ಕಟ್ಟಡಗಳು ಬೃಹತ್ ಶಿಲಾ ಸಮಾಧಿಗಳಂತೆ ತೆಳುಚಪ್ಪಡಿಗಳನ್ನು ಗೋಡೆಗಳಿಗೆ ನಿಲ್ಲಿಸಿ ಅಂಥವೇ ಚಪ್ಪಡಿಗಳನ್ನು ಚಾವಣಿಗೂ ಹೊದಿಸಿ ನಿರ್ಮಿಸಿದುವು. ತೋಟಗೆರೆಯ ಅರ್ಜುನ ರಾಯನಗುಡಿ, ಸಂಪಿಗೆಪುರದ ಈಶ್ವರ ದೇವಾಲಯಗಳು ಈ ಗುಂಪಿಗೆ ಸೇರುತ್ತವೆ. ಹೊರಗೋಡೆಯನ್ನು ಇಟ್ಟಿಗೆಯಿಂದ ಕಟ್ಟಿದ, ಒಳಗೆ ಕಲ್ಲಿನ ಕಂಬ ಚಾವಣಿಗಳನ್ನುಳ್ಳ ಇವರ ಕಾಲದ ಹಲವಾರು ದೇವಾಲಯಗಳು ಉಳಿದುಬಂದಿವೆ. ಹೊರಗೋಡೆಗಳು ಪುನರ್ನಿರ್ಮಾಣಗೊಂಡು ತೀರ ಸಾಮಾನ್ಯವಾಗಿ ಕಾಣುವ ಈ ದೇವಾಲಯಗಳು ಒಳಗೆ ಒಮ್ಮೊಮ್ಮೆ ಅದ್ಭುತವಾದ ಶಿಲ್ಪವನ್ನು ಹೊಂದಿರುತ್ತವೆ. ಗರ್ಜಿ, ನೊಣವಿನ ಕೆರೆ, ಹಳೇ ಆಲೂರು, ಅರಳಗುಪ್ಪೆ, ಹಿರೇಮಗಳೂರು ಮೊದಲಾದೆಡೆ ಇರುವ ದೇವಾಲಯಳು ಇಂಥವು. ಅವುಗಳಲ್ಲಿ ಅರಳಗುಪ್ಪೆ ಕಲ್ಲೇಶ್ವರ ದೇವಾಲಯ ತನ್ನ ಚಾವಣಿಯ ಅತಿ ಸುಂದವಾದ ಶಿಲ್ಪಕ್ಕೆ ಪ್ರಸಿದ್ಧವಾಗಿವೆ. ಇವಲ್ಲದೆ ಇಟ್ಟಿಗೆ ದೇವಾಲಯುದ ಮೂಲ ಹೊರಗೋಡೆಯು ಅಚ್ಚಳಿಯದೆ ಉಳಿದಿದ್ದು ಇಟ್ಟಿಗೆಯದೇ ಆದ ಗೋಪುರ, ಅದರ ಮೇಲೆ ಗಚ್ಚಿನ ಮೂರ್ತಿಗಳನ್ನು ಹೊಂದಿ ಅಪೂರ್ವವೆನಿಸಿರುವ ನರಸಮಂಗಲದ ರಾಮೇಶ್ವರ ದೇವಾಲಯ ವಿಶಿಷ್ಟವಾದುದು. ಮಣ್ಣೆಯಲ್ಲಿ ಉಳಿದುಬಂದಿರುವ ಇಟ್ಟಿಗೆಯ ಗುಡಿಗಳನ್ನೂ ಇಲ್ಲಿ ನೆನೆಯಬಹುದು.

ಈ ಎಲ್ಲ ದೇವಾಲಯಗಳಿಗೂ ಮತ್ತು ಇವರ ಶಿಲಾನಿರ್ಮಿತ ದೇವಾಲಯ ಬಸದಿಗಳಿಗೂ ಪಲ್ಲವರ ದ್ರಾವಿಡ ವಾಸ್ತುಶೈಲಿಯೇ ಮಾದರಿ. ಗಂಗರು ನಿರ್ಮಿಸಿದ ಇಂಥ ಕಟ್ಟಡಗಳ ಸಾಮಾನ್ಯ ಸ್ವರೂಪವನ್ನು ಹೀಗೆ ವಿವರಿಸಬಹುದು; ಈ ಕಟ್ಟಡಗಳು ಸಾಮಾನ್ಯವಾಗಿ ಸಣ್ಣ ಪ್ರಮಾಣದವು. ಇವುಗಳ ಎತ್ತರ ಕಡಿಮೆ. ನೆಲದಿಂದ ಚಾವಣಿಯ ಹಂತದವರೆಗೆ ಸು. 7 ಅಡಿಗಳು. ಇವುಗಳನ್ನು ಪೂರ್ತಿಯಾಗಿ ಗ್ರಾನೈಟ್ ಶಿಲೆಯಲ್ಲಿ ಕಟ್ಟರ

ಬಹುದು ಅಥವಾ ಒಳಭಾಗ ಮಾತ್ರ ಗ್ರಾನೈಟ್ ಶಿಲೆಯದಾಗಿದ್ದು ಹೊರಗೋಡೆಗಳು ಇಟ್ಟಿಗೆಯದಾಗಿರಬಹುದು. ಚೌಕ ಅಥವಾ ದೀರ್ಘ ಚತುರಸ್ರಾಕಾರದಲ್ಲಿರುವ ಈ ದೇವಾಲಯಗಳಲ್ಲಿ ಸಣ್ಣ ಪ್ರಮಾಣದ ಗರ್ಭಗುಡಿ, ತೆರೆದ ಸುಕನಾಸಿ ಮತ್ತು ನವರಂಗಗಳಿರುತ್ತವೆ. ನವರಂಗದ ಕಂಬಗಳು ಕುಳ್ಳಾಗಿ ಬುಡ ಚೌಕನಾಗಿದ್ದು ಕಾಂಡ ತೆಳುವಾಗಿ ಗುಂಡಾಗಿರುತ್ತದೆ. ಮೇಲೆ ಕಳಸ ಅಥವಾ ಹೂಜಿಯಾಕೃತಿ, ಅದರ ಮೇಲೆ ಬನ್ನಿನಾಕಾರದ ಬೋದಿಗೆ, ಗುಂಡಗಿರುವುದರ ಬದಲು ಒಮ್ಮೊಮ್ಮೆ ಅಷ್ಟಕೋನಾಕೃತಿಯಲ್ಲಿಯೂ ಇರಬಹುದು. ಇವು ಸರಳವಾಗಿರಬಹುದು, ಇಲ್ಲವೆ ಅವುಗಳ ಮೇಲೆ ಕೀರ್ತಿಮುಖಗಳ ಸಾಲು. ಅವುಗಳ ಕಟವಾಯಿಗಳಿಂದ ಹೊರಟಂತಿರುವ ಮಣಿಹಾರಗಳು, ಹಾರಗಳೊಳಗೆ ಹಲವು ನರ್ತನ ಭಂಗಿಗಳಲ್ಲಿರುವ ಸಣ್ಣ ಸಣ್ಣ ಮೂರ್ತಿಗಳು ಕಿರುಪ್ರಮಾಣದಲ್ಲಿದ್ದರೂ ಎಲ್ಲವೂ ಸ್ಪಷ್ಟವಾಗಿ ಕಂಡರಿಸಲ್ಪಟ್ಟಿರುತ್ತವೆ. ತೀರ ಅಪೂರ್ವವಾಗಿ, ನರಸಮಂಗಲದ ರಾಮೇಶ್ವರ ದೇವಾಲಯದಲ್ಲಿರುವಂತೆ ದಪ್ಪ ಕಂಬಗಳಿದ್ದು ಗಂಟೆಯಾಕೃತಿಯನ್ನು ಪಡೆದಿರಬಹುದು. ಹಾಗೆಯೇ ಪಲ್ಲವ ರೀತಿಯ ಸಿಂಹ ಸ್ತಂಭಗಳನ್ನು ಗಂಗಾವಾರ ಮತ್ತು ಕಿತ್ತೂರುಗಳಲ್ಲಿ ಕಾಣಬಹುದು. ನವರಂಗದ ಚಾವಣಿಯ ಮಧ್ಯದ ಅಂಕಣ ದೊಡ್ಡದಾಗಿದ್ದು ಅದರಲ್ಲಿ ಮಾತ್ರ ಅಷ್ಟದಿಕ್ಪಾಲಕರು ನಡುವೆ ಶಿವ ಅಥವಾ ಜಿನನ ಮೂರ್ತಿಗಳಿರುತ್ತವೆ. ಹಾಗಿಲ್ಲದಾಗ ಪೂರ್ಣವಾಗಿ ಅರಳಿದ ದೊಡ್ಡದಾದ ಕಮಲ ಪುಷ್ಪವನ್ನು ಉಬ್ಬುಶಿಲ್ಪದಲ್ಲಿ ಬಿಡಿಸಿರಬಹುದು. ಈ ಮಧ್ಯ ಅಂಕಣದ ಸುತ್ತಲೂ ಅಂಕಣದ ಕಡೆ ಕಿರಿದಾಗಿದ್ದು ಹೊರಚಾಚುವಾಗ ಅಗಲವಾಗುತ್ತ ಹೋಗುವಂತೆ ಜೋಡಿಸಿರುವ ಹಾಸುಗಲ್ಲುಗಳು ಅಂಕಣದ ಸುತ್ತಲೂ ಕಿರಣಗಳು ಹೊರಸೂಸುವಂತೆ ಇರುತ್ತವೆ. ಹೊರಗೋಡೆಗಳ ಮೇಲೆ ದೂರ ದೂರದಲ್ಲಿ ಅರೆಗಂಬಗಳಿರಬಹುದು. ಗೋಡೆಗಳ ಮಧ್ಯ ಅಂಕಣದಲ್ಲಿ ಆಳವಿಲ್ಲದ ಗೂಡು, ಎಲ್ಲವೂ ಸರಳ. ಹೆಚ್ಚು ಪ್ರಬುದ್ಧವಾದ ದೇವಾಲಯಗಳಲ್ಲಿ ಲೋವೆಯ ಕೆಳಗೆ ಹಂಸ, ಯಾಳಿ ಅಥವಾ ನೀರ್ಗುದುರೆಗಳ ಸಾಲು, ಕಿರುಲೋವೆಯ ಮೇಲೆ ಅಲ್ಲಲ್ಲಿ ಕೀರ್ತಿಮುಖವುಳ್ಳ ಲಾಳದಾಕೃತಿಯ ಕಮಾನುಗಳು ಕೈಪಿಡಿಗೋಡೆಯಲ್ಲಿ ಪಂಜರ, ಗಜಪೃಷ್ಠಾಕೃತಿ ಮೊದಲಾದವುಗಳಿದ್ದು ಅವುಗಳ ಮುಂಭಾಗದಲ್ಲಿ ಮೂರ್ತಿಶಿಲ್ಪವನ್ನು ಬಿಡಿಸಿರಬಹುದು. ಗರ್ಭಗೃಹಗಳ ಮೇಲೆ ಒಂದೇ ಅಂತಸ್ತಿನ ಗೋಪುರವಿರಬಹುದು ಅಥವಾ ಅದು ಮೂರು ಅಂತಸ್ತುಗಳಲ್ಲಿ ಮೇಲೆದ್ದು ಒಂದೊಂದು ಅಂತಸ್ತಿನಲ್ಲಿಯೂ ಪಂಜರ, ಗಜಪೃಷ್ಠಾಕೃತಿ ಮೊದಲಾದವುಗಳ ಅಲಂಕರಣ ಇರುತ್ತವೆ. ತುದಿಯಲ್ಲಿ ಗ್ರೀವ ಮತ್ತು ಅಮಲಕ, ಚಂದ್ರಗುಪ್ತ ಬಸದಿ, ವರುಣದ ಮಹಲಿಂಗೇಶ್ವರ, ಬನ್ನೂರಿನ ಹನುಮಂತೇಶ್ವರ, ಗಂಗಾವಾರದ ಸೋಮೇಶ್ವರ ಮುಂತಾದವು ಸರಳವಾದ, ಶಿಲ್ಪ ಬಾಹುಳ್ಯವಿಲ್ಲದ ದೇವಾಲಯಗಳಾದರೆ, ನಂದಿಯ ಭೋಗನಂದೀಶ್ವರ, ಬೇಗೂರಿನ ನಾಗೇಶ್ವರ, ಕಂಬದ ಹಳ್ಳಿಯ ಆದಿನಾಥ ಬಸದಿ, ಶ್ರವಣಬೆಳಗೊಳದ ಚಾವುಂಡರಾಯ ಬಸದಿ– ಇವು ಪ್ರಬುದ್ಧವಾದ ಕಟ್ಟಡಗಳು. ಇವುಗಳಲ್ಲಿ ಗಂಗರ ಕಾಲದ ವಾಸ್ತುಶಿಲ್ಪದ ಪೂರ್ಣವಿಕಾಸವನ್ನು ಕಾಣಬಹುದು. ಹನ್ನೊಂದನೆಯ ಶತಮಾನದಲ್ಲಿ ಗಂಗವಾಡಿಯ ಬಹುಭಾಗವನ್ನಾಕ್ರಮಿಸಿದ್ದ ಚೋಳರು ತಮ್ಮ ರಾಜ್ಯದಲ್ಲಿ ನಿರ್ಮಿಸಿದಂತೆ ಕರ್ನಾಟಕ ಭಾಗಗಳಲ್ಲಿ ಬೃಹತ್ ದೇವಾಲಯಗಳನ್ನು ನಿರ್ಮಿಸದಿದ್ದರೂ ಸಣ್ಣ ಪ್ರಮಾಣದ ಹಲವಾರು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಹಿಂದೆ ಇದ್ದ ಇಟ್ಟಿಗೆಯ ದೇವಾಲಯಗಳಲ್ಲಿ ಕೆಲವನ್ನು ಕಲ್ಲಿನ ಕಟ್ಟಡಗಳಾಗಿ ಮಾರ್ಪಡಿಸಿದ್ದಾರೆ. ಮೊದಲೇ ಇದ್ದ ದೇವಾಲಯಗಳಿಗೆ ಬೇರೆ ಬೇರೆ ಭಾಗಗಳನ್ನು ಜೋಡಿಸಿದ್ದಾರೆ. ಇವರೂ ದ್ರಾವಿಡ ಶೈಲಿಯನ್ನೇ ಮುಂದುವರೆಸಿ ಬೆಳೆಸಿರುವುದರಿಂದ ಈ ಭಾಗದಲ್ಲಿ ಬೆಳೆದ ವಾಸ್ತು ರೀತಿಯಲ್ಲೇ ಕೆಲವು ಬೆಳವಣಿಗೆಗಳನ್ನು ಬಿಟ್ಟರೆ ಹಿಂದಿನದಕ್ಕಿಂತ ಹೆಚ್ಚು ವ್ಯತ್ಯಾಸವಿಲ್ಲ. ಅಗರದ ದುರ್ಗಾದೇವಾಲಯ ಕರ್ನಾಟಕದಲ್ಲಿನ ಚೋಳ ವಾಸ್ತುಶೈಲಿಗೆ ಮಾದರಿಯಾಗಿದೆ. ಅದೇ ಊರಿನ ನರಸಿಂಹ ದೇವಾಲಯದ ಗರ್ಭಗೃಹ ವೃತ್ತಾಕಾರದ ವಿನ್ಯಾಸ ಹೊಂದಿದೆ. ಕೋಲಾರದ ಕೋಲಾರಮ್ಮನ ಗುಡಿ ಬಹುಶಃ ಚೋಳರ ಈ ಭಾಗದ ಗುಡಿಗಳಲ್ಲೆಲ್ಲ ದೊಡ್ಡದು. ಹಿಂದೆ ಇದ್ದ ಇಟ್ಟಿಗೆಯ

ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು

ಕಟ್ಟಡವನ್ನು ತೆಗೆದು ಇವರು ಈ ಶಿಲಾ ದೇವಾಲಯವನ್ನು ನಿರ್ಮಿಸಿದರು. ನಂದಿಯ ಭೋಗನಂದೀಶ್ವರ ದೇವಾಲಯದ ಮುಂದೆ ರಾಜೇಂದ್ರ ಚೋಳನ ಕಾಲದಲ್ಲಿ ಕಟ್ಟಿಸಿರಬಹುದಾದ ಕಲ್ಯಾಣ ಮಂಟಪದ ಕಂಬಗಳು ಕುಸುರಿನ ಕೆಲಸದಿಂದ ತುಂಬಿವೆ. ಬೇಗೂರಿನಲ್ಲಿರುವ ಚೋಳೇಶ್ವರ ದೇವಾಲಯ ಅಲ್ಲಿನ ಗಂಗರ ಕಾಲದ ನಾಗೇಶ್ವರ ದೇವಾಲಯದ ಪ್ರತಿಕೃತಿ.

ಕರ್ನಾಟಕದಲ್ಲಿ ವಾಸ್ತುಶೈಲಿಯ ಹಲವು ಬಗೆಯ ಪ್ರಯೋಗಗಳು ನಡೆದುದು ಮುಖ್ಯವಾಗಿ ಬಾದಾಮಿ ಚಾಳುಕ್ಯರ ಆಳ್ವಿಕೆಯಲ್ಲಿ; ಅವರ ಮುಖ್ಯ ನಗರಗಳಾಗಿದ್ದ ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲುಗಳಲ್ಲಿ, ವಾಸ್ತವವಾಗಿ ಈ ಚಾಳುಕ್ಯರೇ ಕರ್ನಾಟಕದ ವಿಶಿಷ್ಟ ವಾಸ್ತುಶೈಲಿಯ ಆದ್ಯ ಪ್ರವರ್ತಕರು. ಇವರಿಗೆ ಮುಂಚೆ ಕರ್ನಾಟಕದಲ್ಲಿ ಶಿಲಾಕಟ್ಟಡಗಳ ರಚನೆ ಅಷ್ಟೇನೂ ಪ್ರಚಲಿತವಿರಲಿಲ್ಲ. ಗುಹಾಶಿಲ್ಪ ಮತ್ತು ಇಟ್ಟಿಗೆಯ ಕಟ್ಟಡಗಳೇ ರೂಢಿಯಲ್ಲಿದ್ದುದು. ಆದ್ದರಿಂದಲೇ ಆರಂಭಕಾಲದಲ್ಲಿ ಇವರು ಸ್ವತಂತ್ರವಾಗಿ ಪ್ರಯೋಗಗಳನ್ನು ನಡೆಸಿ ಅದಕ್ಕೊಂದು ರೂಪ ಕೊಟ್ಟರು. ಮುಂದಿನ ವಾಸ್ತುಶೈಲಿಗೆ ಮಾದರಿ ಹಾಕಿಕೊಟ್ಟರು. 5ನೆಯ ಶತಮಾನದಲ್ಲಿಯೇ ಇವರು ಕಟ್ಟಿದ ಗೌಡರಗುಡಿ, ಲಾಡಖಾನ್, ಕೊಂತಿಗುಡಿ ಮೊದಲಾದುವು ಪ್ರಯೋಗಾತ್ಮಕ ದೇವಾಲಯಗಳು, ಬಹುಶಃ ಅವು ಆಗಲೇ ಅಲ್ಲಿದ್ದ ಸಾತವಾಹನರ ಇಟ್ಟಿಗೆ ಕಟ್ಟಡಗಳ ಮಾದರಿಗಳನ್ನು ಅನುಕರಿಸಿರಬೇಕು. ಈ ದೇವಾಲಯಗಳಲ್ಲಿ ಒಂದು ದೊಡ್ಡ ಮಂಟಪ ಮಾತ್ರ ಇರುತ್ತದೆ. ದೀರ್ಘ ಚತುರಸ್ರಾಕಾರದ ಮಂಟಪದ ನಡುವಣ ಅಂಕಣವನ್ನು ಗೋಡೆಗಳಿಂದ ಮುಚ್ಚಿ ದೇವಕೋಷ್ಠವಾಗಿ ಪರಿವರ್ತಿಸಿದ, ಗೌಡರಗುಡಿಗೆ ಮುಖಮಂಟಪವಿಲ್ಲ; ಕೊಂತಿಗುಡಿಯು ಗುಜ್ಜ ಮತ್ತು ದಪ್ಪಚೌಕ ಕಂಬಗಳ ಮೇಲೆ ನಿರ್ಮಿತವಾದ ದೇವಾಲಯ; ಲಾಡಖಾನ್ ಸ್ಥೂಲವಾದ ರಚನೆಯನ್ನು ಹೊಂದಿರುವ ಎರಡು ಸಾಲು ದಪ್ಪ ಕಂಬಗಳಿರುವ ಸು.50 ಅಡಿ ಚದರದ ದೊಡ್ಡ ಹಜಾರ. ಇದರ ಹಿಂದಿನ ಮಧ್ಯದಂಕಣವನ್ನು ಗರ್ಭಗುಡಿಯಾಗಿ ಪರಿವರ್ತಿಸಿದೆ. ಮುಂದೆ ಮೂರು ಅಂಕಣದ ಮುಖಮಂಟಪವಿದೆ. ಹಜಾರದ ನಡುವಣಂಕಣದ ಮೇಲೆ ಮೇಲಂತಸ್ತಿನ ಗುಡಿಯೂ ಇದೆ. ಇವುಗಳಲ್ಲಿ ಒಂದು ನಿಶ್ಚಿತ ವಿನ್ಯಾಸವಿಲ್ಲ; ಇವು ಸ್ಥೂಲ ಮತ್ತು ಕುಬ್ಜ, ರಚನೆಯಲ್ಲಿ ಒರಟುತನ–ಇವನ್ನೆಲ್ಲ ನೋಡಿದರೆ ಕಲ್ಲಿನ

ದೇವಾಲಯಗಳ ನಿರ್ಮಾಣದಲ್ಲಿ ಇವು ಮೊದಲ ಪ್ರಯತ್ನಗಳೆಂಬುದು ಸ್ಪಷ್ಟವಾಗುತ್ತದೆ.

ಮುಂದಿನ ಹೆಜ್ಜೆ ಐಹೊಳೆಯ ದುರ್ಗದಗುಡಿ. ಸು. 6ನೆಯ ಶತಮಾನದ ಆರಂಭಕಾಲಕ್ಕೆ ಸೇರಿರಬಹುದಾದ ಈ ದೇವಾಲಯ ಹೊಸರೀತಿಯ ಪ್ರಯೋಗಕ್ಕೊಳಗಾಗಿದೆ. ಬೇರೆ ಬೇರೆ ಕಡೆ ಪ್ರಚಲಿತವಾಗಿದ್ದ ಶೈಲಿಗಳನ್ನು ಇದರಲ್ಲಿ ಅಳವಡಿಸುವ ಪ್ರಯತ್ನ ನಡೆದಿದೆ. ಬೌದ್ಧರ ಚೈತ್ಯಾಲಯಗಳಂತೆ ಅರ್ಧವರ್ತುಲಾಕಾರದ ಗರ್ಭಗುಡಿ, ಅದಕ್ಕೆ ಸೇರಿದಂತೆ ಆಯಾಕಾರದ ಮಂಟಪ, ಇವೆರಡಕ್ಕೂ ಹೊಂದಿಕೊಂಡಂತೆ ಪ್ರದಕ್ಷಿಣಾಪಥ ಮುಂಭಾಗದಲ್ಲಿ

ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು

ಮುಖಭದ್ರ, ಎತ್ತರವಾದ ಜಗತಿಯ ಮೇಲೆ ನಿರ್ಮಿತವಾದ ಈ ಗುಡಿಯ ಕೈಸಾಲೆಗಳ ಚಾವಣಿ ಸ್ವಲ್ಪ ಮಟ್ಟಿಗೆ ಇಳಿಜಾರು ಆಗಿದ್ದು ಗರ್ಭಗುಡಿಯ ಮೇಲೆ ಔತ್ತರೇಯ ಪದ್ಧತಿಯ ಶಿಖರವನ್ನು ಹೊಂದಿದೆ. ಹೀಗೆ ಗುಹಾಶೈಲಿ, ಔತ್ತರೇಯ ನಾಗರಶೈಲಿ ಮತ್ತು ಬೌದ್ಧ ಚೈತ್ಯಶೈಲಿಗಳನ್ನು ಇಲ್ಲಿಯೇ ಹುಟ್ಟಿದ ಶಿಲಾಕಟ್ಟಡಗಳ ಶೈಲಿಯೊಂದಿಗೆ ಮೇಳವಿಸಿ ವಿನೂತನ ಮಾದರಿಯನ್ನು ಇಲ್ಲಿ ಸೃಷ್ಟಿಸಿದೆ.

ಸುಮಾರು ಇದೇ ಕಾಲದಲ್ಲಿ ಐಹೊಳೆಯಲ್ಲಿ ಎರಡು, ಬಾದಾಮಿಯಲ್ಲಿ ನಾಲ್ಕು ಗುಹಾ ದೇವಾಲಯಗಳನ್ನು ಕೊರೆದಿದ್ದಾರೆ. ಇವುಗಳ ವಿನ್ಯಾಸ ಒಂದೇ ಬಗೆಯದು. ಒಂದೊಂದರಲ್ಲಿಯೂ ಕಂಬದ ಸಾಲುಗಳಿಂದ ಕೂಡಿದ ಮೊಗಸಾಲೆ, ದೊಡ್ಡದಾದ ಹಜಾರ, ಹಿಂದೆ ಚಿಕ್ಕದೊಂದು ಗರ್ಭಗುಡಿ. ಇವು ಗೋಡೆಗಳ ಮೇಲೆ ಹೆಚ್ಚು ಉಬ್ಬಿನಿಂತಿರುವ ಬೃಹತ್ ಪ್ರಮಾಣದ ಮೂರ್ತಿ ಶಿಲ್ಪಗಳಿಗೆ ಪ್ರಸಿದ್ಧವಾಗಿವೆ. ಹಿಂದು ಮತ್ತು ಜೈನ ಗುಹಾವಾಸ್ತು ರೀತಿಗೆ ಈ ಗುಹಾ ದೇವಾಲಯಗಳು ಆದಿ ಎಂದು ಹೇಳಲಾಗಿದೆ. ಇವುಗಳಲ್ಲಿ ಒಂದಾದ ವೈಷ್ಣವ ಗುಹೆಯನ್ನು ಮಂಗಲೀಶ 578 ರಲ್ಲಿ ಕೊರೆಸಿದ.

ಏಳನೆಯ ಶತಮಾನದಲ್ಲಿ ಇಲ್ಲಿ ದ್ರಾವಿಡ ವಾಸ್ತುಶೈಲಿಯನ್ನು ಅಳವಡಿಸಿ ಕಟ್ಟಿರುವ ಗುಡಿಗಳನ್ನು ಕಾಣುತ್ತೇವೆ. ಇಮ್ಮಡಿ ಪುಲಕೇಶಿಯ ಕಾಲದ ಮೇಗುಟಿ, ಮಹಾಕೂಟೇಶ್ವರ, ಮಾಲೆಗಿತ್ತಿ ಶಿವಾಲಯ ಈ ಶೈಲಿಗೆ ಸೇರಿದ್ದು, ಇವುಗಳಲ್ಲಿ ಮಾಲೆಗಿತ್ತಿ ಶಿವಾಲಯ ದ್ರಾವಿಡ ಸಂಪ್ರದಾಯದ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ಆದರೂ ದಪ್ಪ ಏಕಶಿಲಾಸ್ತಂಭಗಳು ದಪ್ಪ ಬೋದಿಗೆಗಳು ಹಾಗೂ ಕಿರುಲೋವೆಗಳು ಮುಂತಾದವು ಇದರಲ್ಲಿ ಗುಹಾಶಿಲ್ಪದ ಕುರುಹು ಉಳಿದಿರುವುದನ್ನು ಸೂಚಿಸುತ್ತದೆ. ಮುಂದೆ ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯರ ಕಾಲದಲ್ಲಿ ಚಾಳುಕ್ಯರು ಕಂಚಿಯ ವರೆಗೆ ನುಗ್ಗಿದಾಗ ಕಂಚಿಯಲ್ಲಿ ರಾಜ ಸಿಂಹೇಶ್ವರ ದೇವಾಲಯದ ಸೌಂದರ್ಯಕ್ಕೆ ಮಾರುಹೋದರು. ಬಹುಶಃ ಆಗ ಅಲ್ಲಿಂದ ಹಲವು ರೂವಾರಿಗಳನ್ನು ತಮ್ಮ ರಾಜಧಾನಿಗೆ ಅವರು ಕರೆತಂದಿರಬೇಕು. ದ್ರಾವಿಡ ಶೈಲಿಯ ಹಲವಾರು ಕಟ್ಟಡಗಳು ಆಗ ನಿರ್ಮಾಣಗೊಂಡವು. ಇದೇ ಕಾಲದಲ್ಲಿಯೇ ಔತ್ತರೇಯ ನಾಗರಶೈಲಿಯ ಕಟ್ಟಡಗಳನ್ನೂ ಇಲ್ಲಿ ಕಟ್ಟಿರುವುದು ಕಂಡುಬರುತ್ತದೆ. ಪಟ್ಟದಕಲ್ಲಿನಲ್ಲಿ ಈ ಎರಡು ಶೈಲಿಗಳ ದೇವಾಲಯಗಳನ್ನೂ ಜೊತೆಜೊತೆಯಾಗಿ ಕಟ್ಟಿರುವುದನ್ನು ನೋಡಬಹುದು. ಚಾಳುಕ್ಯ ಶಿಲ್ಪದ ಉಚ್ಛ್ರಾಯವನ್ನು ಕಾಣುವುದೂ ಅಲ್ಲಿಯೇ. ಹೆಚ್ಚು ಬೆಳವಣಿಗೆ ಹೊಂದದ ಪಾಪನಾಥ, ಜಂಬುಲಿಂಗ, ಕರಿಸಿದ್ಧೇಶ್ವರ ಮತ್ತು ಕಾಶೀನಾಥ ದೇವಾಲಯಗಳು ಔತ್ತರೇಯ ರೀತಿಯಲ್ಲಿ ನೇರವಾಗಿ ಮೇಲೆದ್ದು ಕೊನೆಯಲ್ಲಿ ಒಳಕ್ಕೆ ಬಾಗುವ, ಮೇಲೆ ಅಮಲಕವನ್ನು ಹೊಂದಿದ ಶಿಖರಗಳನ್ನು ಹೊಂದಿದ್ದರೆ, ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ ಮತ್ತು ಗಳಗನಾಥ ದೇವಾಲಯಗಳು ಅಂತಸ್ತುಗಳಾಗಿ ಮೇಲೇಳುವ ದ್ರಾವಿಡ ಶಿಖರಗಳನ್ನು ಹೊಂದಿವೆ. ಇವು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ದೇವಾಲಯಗಳ ಎಲ್ಲ ಭಾಗಗಳನ್ನೂ ಒಳಗೊಂಡ ದೇವಾಲಯಗಳು. ತಾವು ಆಳಿದ 200 ವರ್ಷಗಳ ಕಾಲದಲ್ಲಿ ಬಾದಾಮಿ ಚಳುಕ್ಯರು ಅವರ ಕಾಲದ ಅನಂತರ ವಿಸ್ತಾರವಾಗಿ ಬೆಳೆದು ಹಬ್ಬಿದ ವಾಸ್ತುಶೈಲಿಗಳಿಗೆ ಭದ್ರವಾದ ಬುನಾದಿಯನ್ನು ಹಾಕಿದರು. ಈ ಎಲ್ಲ ರೀತಿಯ ವಾಸ್ತುಶೈಲಿಗಳಿಗೂ ಅವರು ಉಪಯೋಗಿಸಿದುದು ಕೆಂಪು ಮರಳು ಶಿಲೆಯ ಕಲ್ಲು.

ಬಾದಾಮಿ ಚಳುಕ್ಯರ ಉತ್ತರಾಧಿಕಾರಿಗಳಾದ ರಾಷ್ಟ್ರಕೂಟರೂ ವಾಸ್ತುಶಿಲ್ಪ ಕಲೆಯನ್ನು ಉತ್ತಮವಾಗಿ ಬೆಳೆಸಿದರು. ಎಲ್ಲೋರ, ಎಲಿಫೆಂಟಗಳಲ್ಲಿನ ಇವರ ಸಾಧನೆ ಭಾರತದಲ್ಲಿಯೇ ಅತ್ಯುಚ್ಚ ಅಭಿವ್ಯಕ್ತಿ ಮತ್ತು ಸಿದ್ಧಿಗಳನ್ನು ಪಡೆದುವೆಂದು ಗೋಸ್ವಾಮಿಯವರು ಅಭಿಪ್ರಾಯಪಡುತ್ತಾರೆ. ಕರ್ನಾಟಕ ದಲ್ಲಿ ಇವರ ವಾಸ್ತು ರೀತಿಗಳು ಉಳಿದುಬಂದಿರುವುದು ಸ್ವಲ್ಪ. ಅದರಲ್ಲಿ ಸಿರಿವಾಳದಲ್ಲಿರುವ ಒಂದು ಚಿಕ್ಕ ಗುಡಿಯ ಸುಕನಾಸಿಯಲ್ಲಿರುವ ಪಲ್ಲವ ರೀತಿಯ ಸಿಂಹಸ್ತಂಭಗಳು ಗಮನಾರ್ಹ.

ಕಲ್ಯಾಣದ ಚಾಳುಕ್ಯರು 10ನೆಯ ಶತಮಾನದ ಉತ್ತರಾರ್ಧದಲ್ಲಿ ಆಡಳಿತಕ್ಕೆ ಬಂದಾಗ ಕರ್ನಾಟಕದ ವಾಸ್ತುಕಲೆಯಲ್ಲಿ ಹೊಸ ಮಜಲು ಆರಂಭವಾಯಿತು. ಮೂಲತಃ ಬಾದಾಮಿ ಚಳುಕ್ಯರ ವಾಸ್ತುಸಂಪ್ರದಾಯವನ್ನೇ ಇವರು ಮುಂದುವರಿಸಿದರೂ ಅದರಲ್ಲಿ ಅನೇಕ ಬದಲಾವಣೆಗಳನ್ನು ತಂದು ನೂತನ ಶೈಲಿಯನ್ನು ಬೆಳೆಸಿದರು. ಅಲ್ಲಿಯವರೆಗೆ ಕಟ್ಟಡಗಳು ಹೆಚ್ಚು ಸರಳವಾಗಿ ಸ್ಥೂಲವಾಗಿ ಉನ್ನತವಾಗಿರುತ್ತದ್ದುವು; ಅಲಂಕರಣ ಹೆಚ್ಚು ಇರುತ್ತಿರಲಿಲ್ಲ. ಅವುಗಳ ಮೇಲಿನ ಮೂರ್ತಿಶಿಲ್ಪಗಳ ಪ್ರಮಾಣ ದೊಡ್ಡದು, ಹೆಚ್ಚು ಸರಳ. ಕಟ್ಟಡಗಳಿಗೆ ಉಪಯೊಗಿಸುತ್ತಿದ್ದುದು ನಸುಗೆಂಪಿನ ಮರಳುಶಿಲೆ. ಕಲ್ಯಾಣದ ಚಾಳುಕ್ಯರು ಗುಹಾವಾಸ್ತುವಿನ ಸ್ಥೂಲತೆಯನ್ನು ಪೂರ್ಣವಾಗಿ ಕೈಬಿಟ್ಟರು. ಮರಳು ಶಿಲೆಯ ಬದಲು ಕ್ಲೋರೈಟಿಕ್ ಶಿಸ್ಟ್ ಎಂಬ ಹಸುರು ಬೆರೆತ ಕಪ್ಪು ಕಲ್ಲನ್ನು ಬಳಸಿದರು. ಇದು ಹೆಚ್ಚು ಮೃದುವಾದ್ದರಿಂದ ದೊಡ್ಡಗಾತ್ರದ ಕಂಬಗಳಾಗಲಿ, ಹೆಚ್ಚು ತೂಕ ತಡೆಯುವ ಸಾಮರ್ಥ್ಯವಾಗಲಿ ಇಲ್ಲದ್ದರಿಂದ ದೇವಾಲಯಗಳ ಪ್ರಮಾಣ ಕಡಿಮೆಯಾಯಿತು. ದ್ರಾವಿಡ ಶೈಲಿಯ ಅಡ್ಡಗೆರೆಗಳ ಮಾಟ ನಾಗರ ಶೈಲಿಯ ಲಂಬಮಾಟಗಳನ್ನು ಹಿತಮಿತವಾಗಿ ಸಂಯೋಜಿಸಿ ಸಂಕರ ರೂಪವನ್ನು ಕೊಡಲಾಯಿತು. ಕಲ್ಯಾಣ ಚಾಳುಕ್ಯರ ದೇವಾಲಯಗಳ ತಲವಿನ್ಯಾಸ ಚೌಕ ಅಥವಾ ದೀರ್ಘ ಚತುರಸ್ರಾಕಾರವಾಗಿಯೇ ಮುಂದುವರಿ ದರೂ ಗೋಡೆಗಳು ಸರಳವಾಗಿ ನೇರವಾಗಿಲ್ಲದೆ ಕೋಚು ಕೋಚಾಗಿ ಉಬ್ಬಿರುತ್ತವೆ. ಒಂದೊಂದು ಕೋಚಿನ ಮೂಲೆಗೂ ಅರೆಗಂಬಗಳ ನಡುವೆ ಕುಳ್ಳಾದ, ಆದರೆ ಹೆಚ್ಚು ಉಬ್ಬಿನಿಂತ ಹಲವು ಭಂಗಿಗಳ ಮೂರ್ತಿ ಶಿಲ್ಪಗಳೂ ಇರುತ್ತವೆ. ಇದರೊಂದಿಗೆ ಗೋಡೆಗಳ ಮೇಲೆ ಕಿರಿದಾಗಿ

ಬಾಗಿದ್ದ ಲೋವೆಯ ಬದಲು ಎರಡು ಬಾಗುಗಳಲ್ಲಿ 'S' ಆಕಾರದಲ್ಲಿ ಬಳುಕಿರುವ ಅಗಲವಾದ ಲೋವೆಗಳನ್ನು ಉಪಯೋಗಿಸಲಾರಂಭವಾಯಿತು. ಇದು ಕೇವಲ ಆಲಂಕಾರಿಕವಲ್ಲದೆ ಕೆಳಗಿನ ಶಿಲ್ಪಾಲಂಕರಣಕ್ಕೆ ರಕ್ಷಣೆಯೂ ಆಯಿತು. ಬಾಗಿಲುವಾಡಗಳನ್ನು ವಿಸ್ತಾರವಾಗಿ ನವುರಾಗಿ ಹಲವು ಪಟ್ಟಿಕೆಗಳಿಂದ ಅಲಂಕರಿಸಿ ಶಿಲ್ಪ ವೈವಿಧ್ಯದಿಂದ ತುಂಬಿಸಿರುತ್ತಾರೆ. ಕಂಬಗಳು ತೆಳುವಾಗಿ ಕೆಳಗೆ ಮೇಲೆ ಘನಾಕೃತಿಗಳನ್ನು ಹೊಂದಿ, ನಡುವೆ ಗುಂಡು ಅಥವಾ ಅಷ್ಟಮುಖಗಳ ಮೇಲೆ ಹಲವು ಆಲಂಕಾರಿಕ ರೂಪಗಳನ್ನು ಕೊಟ್ಟಿರುವುದುಂಟು. ಈ ದೇವಾಲಯಗಳಲ್ಲಿ ಗರ್ಭಗೃಹ, ಸುಕನಾಸಿ, ಹಲವು ಕಂಬಗಳುಳ್ಳ ತೆರೆದ ಮಂಟಪಗಳಿರುವುದೇ ಸಾಮಾನ್ಯ. ಶಿವದೇವಾಲಯಗಳಲ್ಲಿ ಮುಂದೆ ಬೇರೆಯಾಗಿ ಒಂದು ನಂದಿಮಂಟಪವಿರಬಹುದು. ಸುಕನಾಸಿ ಅಥವಾ ಅರ್ಧಮಂಟಪಕ್ಕೆ ಗೋಡೆ, ಬಾಗಿಲುಗಳಿಲ್ಲದೆ ಎರಡು ತೆಳುಗಂಬಗಳ ಮೇಲೆ ಸುಂದರವಾಗಿ ಕಂಡರಿಸಿದ ಮಕರ ತೋರಣಗಳಿರುತ್ತವೆ. ಇದನ್ನು ಮೀರಿದ ಕೆಲವು ವೈಲಕ್ಷಣ್ಯಗಳನ್ನು ಕೆಲವು ದೇವಾಲಯಗಳಲ್ಲಿ ಕಾಣಬಹುದು. ಸಿರಿವಾಳ, ಮುದೆನೂರು, ಕೆಂಬಾವಿ ಮೊದಲಾದ ಕಡೆ ಮಧ್ಯದಲ್ಲಿ ಚತುರಸ್ರವಾದ ಗರ್ಭಗುಡಿ, ಅದರ ನಾಲ್ಕು ಕಡೆಗೂ ಅರ್ಧಮಂಟಪ, ಮಹಾಮಂಟಪ, ಮತ್ತೆ ಅರ್ಧಮಂಟಪ ಮತ್ತು ಗರ್ಭಗೃಹಗಳಿದ್ದು ನಾಲ್ಕು ಬೇರೆ ಬೇರೆ ದೇವಾಲಯಗಳು ಮಧ್ಯದ ದೇವಾಲಯಕ್ಕೆ ಕೂಡಿಕೊಂಡಂತಿರುವ ವಿಶಿಷ್ಟ ವಿನ್ಯಾಸವುಳ್ಳ ದೇವಾಲಯಗಳುಂಟು. ಅಪೂರ್ವವಾಗಿ ಡಂಬಳದ ದೊಡ್ಡಬಸಪ್ಪ ದೇವಾಲಯ ನಕ್ಷತ್ರಾಕಾರದ ವಿನ್ಯಾಸದಲ್ಲಿದೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ಬಿಟ್ಟರೆ ಕರ್ನಾಟಕದಲ್ಲಿಯೇ ಇದು ಅತ್ಯಂತ ಸುಂದರ ದೇವಾಲಯ ಎಂದು ಕಸಿನ್ಸ್ ಅಭಿಪ್ರಾಯಪಡುತ್ತಾರೆ. ಬಿದರೆ, ಗುಲ್ಬರ್ಗ, ಬಿಜಾಪುರ, ಧಾರವಾಡ, ಬೆಳಗಾಂವಿ, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಇಂಥ ದೇವಾಲಯಗಳೋ ಅವುಗಳ ಅವಶೇಷಗಳೋ ವಿಪುಲವಾಗಿ ಕಂಡುಬರುತ್ತವೆ. ಚಾಳುಕ್ಯರ ಆಳ್ವಿಕೆ ಮುಗಿದ ಮೇಲೂ ಹೊಯ್ಸಳರು, ಸೇವುಣರು, ಕಾಕತೀಯರು ತಮ್ಮ ತಮ್ಮ ಪ್ರಾಂತಗಳಲ್ಲಿ ಇದೇ ಮಾದರಿಯಂಥ ವಾಸ್ತುಶೈಲಿಯನ್ನು ಮುಂದುವರಿಸಿ ಬೆಳೆಸಿದರು.

ಕಲ್ಯಾಣ ಚಾಳುಕ್ಯರು ಕರ್ನಾಟಕದಲ್ಲಿ ವಿಶಿಷ್ಟ ವಾಸ್ತುಶೈಲಿಯನ್ನು ವ್ಯಾಪಕವಾಗಿ ಪ್ರಚುರಪಡಿಸಿದರೆ, ಅವರ ಸಾಮಂತರಾಗಿದ್ದು ಅನಂತರ ಸ್ವತಂತ್ರವಾಗಿ ಚಕ್ರಾಧಿಪತ್ಯವನ್ನು ಸ್ಥಾಪಿಸಿ ಆಳಿದ ಹೊಯ್ಸಳರು ಅದನ್ನು ಶ್ರೀಮಂತಗೊಳಿಸಿದರು. ಚಾಳುಕ್ಯ ಶೈಲಿಯನ್ನು ವಾಸ್ತುವಿನಲ್ಲಿ ಅಳವಡಿಸಿಕೊಂಡ ಹೊಯ್ಸಳರು ಮುಂದೆ ಅದನ್ನು ವೈವಿಧ್ಯಮಯವಾಗಿ ಅಪೂರ್ವ ವಿನ್ಯಾಸಗಳೊಡನೆ ಬೆಳೆಸಿ ತಮ್ಮದೇ ಆದ ಶೈಲಿಯನ್ನಾಗಿ ಮಾರ್ಪಡಿಸಿದರು. ಇವರ ಕಾಲದಲ್ಲಿ ಶೈವ, ವೈಷ್ಣವ, ಜೈನ ಹಾಗೂ ಮತ್ತಿತರ ಮತಗಳ ದೇವಾಲಯಗಳು ನಿರ್ಮಾಣವಾಗಲು, ಬೆಳೆಯಲು ಸಮಾನವಾದ ಪ್ರೋತ್ಸಾಹ ದೊರೆಯಿತು. ಆದ್ದರಿಂದ ಒಂದೊಂದು ಮತದವರೂ ಹುರುಡಿನಿಂದ ತಮ್ಮ ತಮ್ಮ ದೇವಾಲಯಗಳನ್ನು ಯಥೇಚ್ಛವಾಗಿ ನಿರ್ಮಿಸಿದರು. ಇವರು ಕಟ್ಟಿಸಿದ ದೇವಾಲಯಗಳಲ್ಲಿ ಸರಳವಾದ ಆಯತಾಕಾರದ ಅರೆಗಂಬಗಳಿಂದ ಕೂಡಿದ ಗೋಡೆಗಳನ್ನುಳ್ಳ ದೇವಾಲಯಗಳು ಅನೇಕವಿದ್ದರೂ ಇವರ ವಿಶಿಷ್ಟವೂ ಸಂಕೀರ್ಣವೂ ಆದ ವಿನ್ಯಾಸದ ಪ್ರೌಢಾವಸ್ಥೆಯನ್ನು ತೋರುವ ಪರಿಪೂರ್ಣ ದೇವಾಲಯಗಳು ಹೆಚ್ಚು ಗಮನಾರ್ಹವಾಗಿವೆ. ಈ ದೇವಾಲಯಗಳ ಮುಖ್ಯ ಲಕ್ಷಣವೆಂದರೆ ಅವುಗಳನ್ನು ಎತ್ತರವಾದ ಜಗತಿಯ ಮೇಲೆ ಕಟ್ಟಿರುವುದು. ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳು ಹೆಚ್ಚು ಎತ್ತರವಿರುವುದಿಲ್ಲ. ಆದ್ದರಿಂದ ಈ ಜಗತಿಗಳು ಅವಕ್ಕೊಂದು ಎತ್ತರವನ್ನು ಒದಗಿಸುತ್ತವೆ. ಜಗತಿಗಳು ದೇವಾಲಯಗಳ ತಲವಿನ್ಯಾಸವನ್ನೇ ಅನುಸರಿಸಿದ್ದು ವಿಶಾಲವಾಗಿರುವುದರಿಂದ, ಅವು ಪ್ರದಕ್ಷಿಣ ಪಥವಾಗಿಯೂ ಉಪಯುಕ್ತವಾಗಿವೆ. ವೈವಿಧ್ಯಮಯವಾದ ಹೊಯ್ಸಳ ದೇವಾಲಯಗಳ ತಲವಿನ್ಯಾಸ ಹೆಚ್ಚು ಸಂಕೀರ್ಣವಾದದ್ದು. ಅಚ್ಚುಕಟ್ಟಾಗಿ ಉಬ್ಬಿದ ಆಯಾಕಾರದ ಗೋಡೆಗಳಿಂದ ಕೂಡಿರಬಹುದು. ಅಷ್ಟಭದ್ರಾಕಾರದಲ್ಲಿರಬಹುದು ಅಥವಾ ಅಷ್ಟಭದ್ರಾ ಮತ್ತು ಅಷ್ಟಕೋನ ನಕ್ಷತ್ರಗಳ ಸಂಕೀರ್ಣವಾಗಿರಬಹುದು ಅಥವಾ 16 ಮೂಲೆಗಳ ನಕ್ಷತ್ರಾಕಾರವಾಗಿರಬಹುದು. ಹೀಗೆ ಗೋಡೆಗಳನ್ನು ಹಲವು ಮುಖಗಳಾಗಿ ಒಡೆಯುವುದರಿಂದ ರೂವಾರಿಗಳಿಗೆ ಕೆತ್ತನೆಯ ಕೆಲಸಕ್ಕೆ ಹೆಚ್ಚು ಅವಕಾಶ

ಭೂವರಾಹ–ನರಸಿಂಹ ದೇವಾಲಯ, ಹಲಶಿ (12ನೆಯ ಶತಮಾನ)

ದೊರೆಯಿತಲ್ಲದೆ ಶಿಲ್ಪಗಳ ಮೇಲೆ ನೆಳಲು ಬೆಳಕುಗಳ ಪ್ರಭಾವ ಬೀರಲು ಅನುಕೂಲವಾಯಿತು. ಹೊಯ್ಸಳ ದೇವಾಲಯಗಳು ಅಡಿಯಿಂದ ಮುಡಿಯವರೆಗೂ ಕುಸುರಿ ಶಿಲ್ಪದಿಂದ ತುಂಬಿರುವುದು ಇನ್ನೊಂದು ವೈಶಿಷ್ಟ್ಯ. ಇಲ್ಲಿ ವಾಸ್ತುಶಿಲ್ಪ ಮೂರ್ತಿಶಿಲ್ಪಕ್ಕೆ ಒಂದು ಆಸರೆ ಮಾತ್ರ. ಜಗತಿಯ ಮೇಲಿನ ತಳಹದಿ ಹಲವಾರು ಅಡ್ಡಪಟ್ಟಿಕೆಗಳಾಗಿ ವಿಂಗಡಣೆಗೊಂಡು ಒಂದೊಂದು ಪಟ್ಟಿಕೆಯಲ್ಲೂ ಆನೆಸಾಲು, ಕುದುರೆಸಾಲು, ಸಿಂಹಸಾಲು, ಸಾಲುಹಂಸ, ಬಳ್ಳಿಸುರುಳಿ, ರಾಮಾಯಣ, ಭಾರತ, ಭಾಗವತಗಳ ಶಿಲ್ಪ ನವುರಾಗಿ ಕೆತ್ತನೆಗೊಂಡಿವೆ. ಮೇಲಿನ ಗೋಡೆಗಳ ಮೇಲೆ, ಅರೆಗೋಪುರಗಳ ಕೆಳಗೋ ಬಳ್ಳಿವಿತಾನಗಳ ಕೆಳಗೋ ದೇವಾನುದೇವತೆಗಳ ಅವರ ಪರಿವಾರವರ್ಗದ ಮೂರ್ತಿಶಿಲ್ಪಗಳ ವಿವಿಧ ಭಂಗಿಗಳು ಸಾಲುಗೋಡೆಯನ್ನು ತುಂಬಿರುತ್ತದೆ. ಗಾಳಿಬೆಳಕಿನ ವ್ಯವಸ್ಥೆಗಾಗಿ ಇರುವ ಜಾಲಂಧ್ರಗಳೂ ಹಲವು ಬಗೆಯ ಶಿಲ್ಪಗಳಿಂದ ಕೂಡಿವೆ. ಸಾಮಾನ್ಯವಾಗಿ ಗರ್ಭಗೃಹದ ಮೂರು ಕಡೆಯೂ ಊರೆಯನ್ನೊದಗಿಸುವ ಸಲುವಾಗಿ ಆಲಂಕಾರಿಕವಾದ ದೊಡ್ಡ ಮಂಟಪಗಳಿಂದ ಕೂಡಿರುವ ಗೂಡುಗಳಿರುತ್ತವೆ. ಎರಡು ಬಳುಕಿನ ದೊಡ್ಡ ಲೋವೆಗಳ ಮೇಲೂ ಕೀರ್ತಿಮುಖ, ಮಣಿಹಾರಗಳ ಅಲಂಕರಣವಿರುತ್ತದೆ. ಒಮ್ಮೊಮ್ಮೆ ಲೋವೆಯ ಕೆಳಗೆ ಮದನಿಕೆಗಳಿರುವುದುಂಟು. ತಲವಿನ್ಯಾಸವನ್ನೇ ಅನುಸರಿಸಿ ಮೇಲೆದ್ದ ಶಿಖರಗಳು ಸರ್ವಾಲಂಕೃತವಾಗಿರುತ್ತವೆ.

ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳ ರಚನೆಯಲ್ಲಿ ಒಂದು ಗರ್ಭಗೃಹ, ಅದರ ಮುಂದೆ ಸುಕನಾಸಿ ಮತ್ತು ನವರಂಗಗಳು, ನವರಂಗದ ಮುಂದೆ ಒಂದಂಕಣದ ಮುಖಭದ್ರ ಇರುತ್ತದೆ. ಇದೇ ರೀತಿಯ ಜೋಡಿ ದೇವಾಲಯಗಳನ್ನು ಒಂದರ ಪಕ್ಕ ಒಂದು ಕಟ್ಟುವುದು ಇಂಥ ಎರಡು ದೇವಾಲಯಗಳನ್ನು ಒಂದೇ ಹಜಾರದಿಂದ ಕೂಡಿಸುವುದೂ ಉಂಟು. ನವರಂಗದ ಮೂರು ಕಡೆ ಮೂರು ಗರ್ಭಗೃಹಗಳಿದ್ದು ನಾಲ್ಕನೆಯ ಕಡೆ ಮುಖಭದ್ರ ಪ್ರವೇಶದ್ವಾರಗಳಿರುವ ತ್ರಿಕೂಟಾಚಲಗಳು ಈ ಶೈಲಿಯಲ್ಲಿ ಕಂಡುಬರುವುದು ಸಾಮಾನ್ಯ. ಮೂರು ಗರ್ಭಗೃಹಗಳ ಮೇಲೂ ಒಂದೇ

ಬಗೆಯ ಗೋಪುರಗಳಿರಬಹುದು ಅಥವಾ ಮಧ್ಯದ ಗರ್ಭಗೃಹದ ಮೇಲೆ ಮಾತ್ರ ಗೋಪುರವಿರಬಹುದು.

ಅಲಂಕಾರಪಟ್ಟಿಕೆಗಳಿಂದ ಕೂಡಿರುವ ಬಾಗಿಲುವಾಡಗಳ ಮೇಲೆ ಸುಂದರವಾದ ಮೂರ್ತಿಗಳನ್ನು ಕಂಡರಿಸುವುದು. ನವರಂಗದಲ್ಲಿ ವಿಶಿಷ್ಟವಾದ ತಿರುಗಣಿಯಲ್ಲಿ ಕಂಡರಿಸಿದ ಕಂಬಗಳಿರುವುದು, ಭುವನೇಶ್ವರಿಗಳು ಆಳವಾಗಿದ್ದು ಒಂದೊಂದೂ ಸೂಕ್ಷ್ಮವಾದ ಶಿಲ್ಪದಿಂದ ತುಂಬಿರುವುದು. ಎಷ್ಟೋ ವೇಳೆ ಕಂಬಗಳ ಮೇಲೆ ಮದನಿಕೆಗಳಿರುವುದು, ತೊಲೆಗಳ ಮೇಲೂ ಶಿಲ್ಪಸಾಲುಗಳನ್ನು ತುಂಬಿರುವುದು ಈ ದೇವಾಲಯಗಳಲ್ಲಿ ಕಂಡುಬರುತ್ತವೆ.

ಒಂದೇ ಗರ್ಭಗುಡಿಯುಳ್ಳ, ಕೋರಮಂಗಲದ ಬೂಚೇಶ್ವರ ದೇವಾಲಯ, ಅಮೃತಾಪುರದ ಅಮೃತೇಶ್ವರ ದೇವಾಲಯ, ಅರಸೀಕೆರೆಯ ಈಶ್ವರ ದೇವಾಲಯ, ಹಾರನಹಳ್ಳಿಯ ಸೋಮೇಶ್ವರ ದೇವಾಲಯ, ಅರಳಗುಪ್ಪೆಯ ಕೇಶವ ದೇವಾಲಯ, ಬಸರಾಳಿನ ಮಲ್ಲಿಕಾರ್ಜುನ ದೇವಾಲಯ ಮೊದಲಾದವುಗಳಿಗೆ ನವರಂಗದಲ್ಲಿ ಬಗೆಬಗೆಯ ಕಂಬಗಳು, ಮದನಿಕೆಗಳು, ಆಳವಾದ ಭುವನೇಶ್ವರಿಗಳಿಂದ ಕೂಡಿ ಪ್ರಸಿದ್ಧವಾಗಿರುವ ಬೇಲೂರಿನ ಚೆನ್ನಕೇಶವ ದೇವಾಲಯ ಮಾದರಿ. ಮರಲೆ, ಮರಸೆಗಳಲ್ಲಿ ಒಂದೇ ಬಗೆಯ ಎರಡು ದೇವಾಲಯಗಳನ್ನು ಒಂದರ ಪಕ್ಕ ಒಂದು ಕಟ್ಟಿದ್ದರೆ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವೂ ಜೋಡಿ ದೇವಾಲಯವಾಗಿದ್ದು ಅವುಗಳನ್ನು ಮೂರಂಕಣದ ಒಂದು ಹಜಾರ ಸೇರಿಸಿದೆ. ಎರಡರ ಮುಂದೆಯೂ ನಂದಿ ಮಂಟಪಗಳಿದ್ದು ಹೊಯ್ಸಳರ ದೇವಾಲಯಗಳಲ್ಲಿಯೇ ದೊಡ್ಡದೂ ಅತಿ ಸುಂದರವಾದುದೂ ಆಗಿದೆ. ಸೋಮನಾಥಪುರದಲ್ಲಿರುವ ಕೇಶವ ದೇವಾಲಯ ಹೊಯ್ಸಳ ದೇವಾಲಯಗಳ ಎಲ್ಲ ಲಕ್ಷಣಗಳನ್ನೂ ಹೊಂದಿರುವ ತ್ರಿಕೂಟಾಚಲ.

ಹೊಯ್ಸಳ ದೇವಾಲಯಗಳಲ್ಲಿ ಭದ್ರತೆಯ ದೃಷ್ಟಿ ಕಡಿಮೆ. ಅತಿಯಾದ ಅಲಂಕರಣ, ಕುಸುರಿಯ ಕೆಲಸದ ಪರಾಕಾಷ್ಠೆಗಳನ್ನು ಇಲ್ಲಿ ಕಾಣಬಹುದು. ಹೊಯ್ಸಳರ ಅವನತಿಯ ಅನಂತರ ಅವರ ವಾಸ್ತುಶೈಲಿ ನಿಂತುಹೋಯಿತು.

14ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಕರ್ನಾಟಕದಲ್ಲಿ ಎರಡು ವಿಭಿನ್ನ ವಾಸ್ತುಶೈಲಿಗಳು ಬೆಳೆಯಲಾರಂಭಿಸಿದುವು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಅಲ್ಲಿ ವಿಜಯನಗರದ ಅರಸರು ದ್ರಾವಿಡ ಶೈಲಿಯನ್ನು ಪುನರುಜ್ಜೀವನಗೊಳಿಸಿದರು. ಜೊತೆಗೆ ಹಿಂದಿನ ದೇವಾಲಯಗಳನ್ನು ವಿಸ್ತರಿಸಿದರು. ತೀರ್ಥಮಂಟಪ, ಕಲ್ಯಾಣಮಂಟಪ, ಸಾವಿರಕಂಬದ ಮಂಟಪಗಳು, ಪ್ರವೇಶದ್ವಾರದ ಮಹಾಗೋಪುರಗಳು ಇವುಗಳಿಗೆ ಸೇರಿಕೊಂಡುವು. ಗ್ರಾನೈಟ್ ಕಲ್ಲನ್ನು ಇವರು ದೇವಾಲಯಗಳಿಗೆ ಉಪಯೋಗಿಸಿದರೂ ಇವರ ದೇವಾಲಯಗಳು ಚಾಳುಕ್ಯ, ಹೊಯ್ಸಳ ದೇವಾಲಯಗಳಂತೆ ಮೂರ್ತಿ ಶಿಲ್ಪಗಳಿಂದ ಅಲಂಕೃತಗೊಂಡುವು. ಈ ದೇವಾಲಯಗಳಲ್ಲಿನ ಕಂಬಗಳು ಸಂಕೀರ್ಣ ರೀತಿಯಲ್ಲಿ ವಿಕಾಸಗೊಂಡವು. ಸಾಲುಗಂಬಗಳಿಗೆ ಸೇರಿದಂತೆ ಕುದುರೆಯಾಳಿಗಳ ಬೃಹತ್ ಶಿಲ್ಪಗಳನ್ನು ಹಿಂಗಾಲಿನ ಮೇಲೆ ಚಿಮ್ಮಿ ನಿಂತಂತೆ ಬಿಡಿಸಿರುವುದು, ನಡುವಣ ಚಪ್ಪಕಂಬದ ಸುತ್ತಲೂ ತೆಳುವಾದ ಕಿರುಗಂಬಗಳನ್ನು ಜೋಡಿಸುವುದು, ದೊಡ್ಡದಾದ ಬಾಗು ಲೋವೆಗೆ ಕಲ್ಲಿನ ಬಳೆಗಳನ್ನು ತೂಗುಬಿಡುವುದು ಇವುಗಳ ವೈಶಿಷ್ಟ್ಯ. ಅನೇಕ ಕಂಬಗಳ ಮೇಲೆ ನಿಂತ ವಿಶಾಲ ಹಜಾರಗಳು ಮಂಟಪಗಳಂತೆ ತೆರೆದಿದ್ದು ಗಾಳಿಬೆಳಕು ಧಾರಾಳವಾಗಿ ಒಳಹುಗುವಂತಿರುತ್ತದೆ. ಈ ಕಂಬಗಳ ಮುಖಗಳ ಮೇಲೆಲ್ಲ ಹಲವು ಬಗೆಯ ಮೂರ್ತಿಗಳನ್ನು ಹೆಚ್ಚು ಉಬ್ಬಿಸಿ ಬಿಡಿಸಿರುತ್ತದೆ. ಗಟ್ಟಿಕಲ್ಲಿನಲ್ಲಿ ಕಟ್ಟಿದುವಾದ್ದರಿಂದ ಈ ದೇವಾಲಯಗಳು ಬೃಹತ್ ಗಾತ್ರವನ್ನು ತಳೆದುವು. ಹೊಯ್ಸಳರ ಕಾಲದಲ್ಲಿ ಕೇವಲ ಮೂರ್ತಿಶಿಲ್ಪಗಳಿಗೆ ಪ್ರಾಧಾನ್ಯ ದೊರೆತಿದ್ದರೆ ವಿಜಯನಗರದ ಅರಸರ ಕಾಲದಲ್ಲಿ ವಾಸ್ತು ಮತ್ತು ಶಿಲ್ಪ ಎರಡಕ್ಕೂ ಸಮಾನ ಪ್ರಾಧಾನ್ಯ ದೊರೆಯಿತು. ಅವರು ಕಟ್ಟಡಗಳನ್ನು ಅತ್ಯಂತ ಭದ್ರವಾಗಿ ನಿರ್ಮಿಸಿದರು. ದೀರ್ಘಚತುರಸ್ರಾಕಾರದ ವಿನ್ಯಾಸದಲ್ಲಿ ಈ ದೇವಾಲಯಗಳು ನಿರ್ಮಿತವಾಗಿದ್ದು ಇವುಗಳ ಗೋಡೆಗಳ ಮೇಲೂ ಪೌರಾಣಿಕ ಕಥೆಗಳು, ರಾಮಾಯಣ, ಭಾರತ, ಶಿವಲೀಲೆಗಳು, ನೃತ್ಯ, ಬಳ್ಳಿಸುರುಳಿ, ಪ್ರಾಣಿ ಪಕ್ಷಿಗಳು ಮೊದಲಾದ ಶಿಲ್ಪಗಳು ತುಂಬಿದ್ದು ಮೂರ್ತಿಶಿಲ್ಪ ಮನವನ್ನಾಕರ್ಷಿಸುವಂತಿದ್ದರೆ ಕಟ್ಟಡಗಳ ರಚನೆ ಗಾತ್ರಗಳು ಬೆರಗುಗೊಳಿಸುತ್ತವೆ. ವಿಜಯನಗರದ ಕಾಲಕ್ಕೆ ದೇವಾಲಯಗಳು ಪ್ರತಿ ಊರಿನ ಧರ್ಮ, ಸಂಸ್ಕೃತಿ, ಕಲೆ, ಸಾಮಾಜಿಕ ನಡವಳಿಕೆಗಳು, ಊರೊಟ್ಟಿನ ಕರ್ತವ್ಯಗಳು, ವಿದ್ಯಾಭ್ಯಾಸ ಮುಂತಾದುವುಗಳ ಕೇಂದ್ರಬಿಂದುವಾಗಿ ಬೆಳೆದುದರಿಂದ ಇವುಗಳ ಪ್ರಾಶಸ್ತ್ಯ ಹೆಚ್ಚಾಯಿತು. ಆದ್ದರಿಂದಲೇ ಈ ದೇವಾಲಯಗಳ ವಿಸ್ತರಣೆ ಆವಶ್ಯಕವಾಯಿತು. ಹಂಪೆಯಲ್ಲಿ ವಿರೂಪಾಕ್ಷ ದೇವಾಲಯದ ವಿಸ್ತರಣೆ ಮತ್ತು ಬೃಹದ್ಗೋಪುರ, ವಿಜಯ ವಿಠ್ಠಲಸ್ವಾಮಿ ದೇವಾಲಯ, ಕೃಷ್ಣರಾಯನಗುಡಿ, ಅಚ್ಯುತರಾಯನಗುಡಿ, ಹಜಾರರಾಮಸ್ವಾಮಿ ದೇವಾಲಯ ಮೊದಲಾದುವೂ ಲೇಪಾಕ್ಷಿಯ ವೀರಭದ್ರ ದೇವಾಲಯ, ತಾಡಪತ್ರಿಯಲ್ಲಿ ಚಿಂತಲರಾಯ ಕಟ್ಟಿಸಿದ ಶಿವಾಲಯ, ಕಂಚಿ, ಶ್ರೀರಂಗ, ಚಿದಂಬರ ಮೊದಲಾದೆಡೆ ಅಲ್ಲಿದ್ದ ದೇವಾಲಯಗಳಿಗೆ ಸೇರಿಸಿದ ತೀರ್ಥ ಮಂಟಪ, ವಿಶಾಲವಾದ ಮಂಟಪಗಳು, ಪ್ರವೇಶದ್ವಾರದ ಮಹಾಗೋಪುರಗಳು ಇವರ ಕಾಲದ ವಾಸ್ತು ವೈವಿಧ್ಯಕ್ಕೆ ಸಾಕ್ಷಿಯಾಗಿ ನಿಂತಿವೆ. ಇವುಗಳೊಂದಿಗೆ ಶೃಂಗೇರಿಯಲ್ಲಿ ದ್ರಾವಿಡ ಹೊಯ್ಸಳ ಮತ್ತು ಇತರ ಶೈಲಿಗಳ ಸಮ್ಮಿಶ್ರಣದಿಂದ ಎತ್ತರವಾದ ಜಗತಿಯ ಮೇಲೆ ಕಗ್ಗಲ್ಲಿನಲ್ಲಿ ಕಟ್ಟಿರುವ, ಮುಂಭಾಗ ಹಿಂಭಾಗಗಳು ಅರ್ಧವೃತ್ತಾಕಾರದಲ್ಲಿದ್ದು ಗೋಪುರ ವೃತ್ತಾಕಾರವಾಗಿ ಮೆಟ್ಟಲುಮೆಟ್ಟಲಾಗಿ ಮೇಲೆದ್ದಿರುವ ಅಪೂರ್ವ ಶೈಲಿಯ ವಿದ್ಯಾಶಂಕರ ದೇವಾಲಯ ಈ ಕಾಲದ ವಾಸ್ತು ವೈಶಿಷ್ಟ್ಯಗಳಲ್ಲೊಂದು. ವಿಜಯನಗರ ಕಾಲದ ಲೌಕಿಕ ಕಟ್ಟಡಗಳು ಕೆಲವು ಉಳಿದು ಬಂದಿದ್ದು ಇವುಗಳಲ್ಲಿ ಹಿಂದು-ಮುಸ್ಲಿಂ ಶೈಲಿಯ ಛಾಯೆ ಇದೆ. ಈ ಕಟ್ಟಡಗಳು ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿದ್ದು ಅರೆಗೋಲಾಕೃತಿಗಳನ್ನು ಹೊಂದಿದ ಕಮಾನು, ಗುಮ್ಮಟಗಳಿಂದ ಕೂಡಿವೆ. ವಿಜಯನಗರದ ಕಮಲಮಂದಿರ, ಆನೆಲಾಯ, ಚಂದ್ರಗಿರಿಯ ಅರಮನೆಗಳನ್ನು ನೋಡಬಹುದು. ಇವಲ್ಲದೆ ವಿದೇಶೀ ಯಾತ್ರಿಕರು ಭವ್ಯವಾಗಿ ವರ್ಣಿಸಿರುವ ಇವರ ಅರಮನೆಗಳು ಚಿತ್ರಗಳಿಂದ, ನೃತ್ಯಭಂಗಿಗಳ ಮೂರ್ತಿಗಳಿಂದ ತುಂಬಿದ್ದುವೆಂದು ತಿಳಿದುಬರುತ್ತದೆ. ಮಹಾನವಮಿ ದಿಬ್ಬ ಒಂದು ವಿಶಿಷ್ಟವಾದ ರಚನೆ. ಎತ್ತರವಾದ ದಿಬ್ಬದ ಮುಖಗಳ ಮೇಲೆ ಸಾಲು ಸಾಲಾಗಿ ಉಬ್ಬುಚಿತ್ರಗಳಲ್ಲಿ ಕಂಡರಿಸಿರುವ ಬಗೆಬಗೆಯ ನೃತ್ಯಭಂಗಿಗಳು, ಬೇಟೆಯ ದೃಶ್ಯಗಳು, ಆನೆ ಕುದುರೆಗಳ ಮೆರವಣಿಗೆಗಳು, ಪ್ರಾಣಿಪಕ್ಷಿಗಳು ತುಂಬಿಕೊಂಡಿವೆ. ಇದರ ಮೇಲೆ ಒಂದು ಮಂಟಪವಿದ್ದಿತೆಂದು ಪ್ರವಾಸಿಗಳು ದಾಖಲೆ ಮಾಡಿದ್ದಾರೆ.

ಕರ್ನಾಟಕದ ಉತ್ತರ ಭಾಗದಲ್ಲಿ ಬಹಮನೀ ರಾಜ್ಯ ಸ್ಥಾಪನೆಯಾಗಿ ವಾಸ್ತು ರೀತಿಯಲ್ಲಿ ಸಂಪೂರ್ಣ ಬದಲಾವಣೆಯಾಯಿತು. ಆ ಪ್ರಾಂತ್ಯದಲ್ಲಿ ಹಿಂದು ಧಾರ್ಮಿಕ ಶೈಲಿ ನಿಂತು ಹೋಗಿ ಇಸ್ಲಾಂ ಧರ್ಮದಿಂದ ಪ್ರಚೋದಿತವಾದ ಹಿಂದು-ಮುಸ್ಲಿಂ ಶೈಲಿ ವ್ಯಾಪಕವಾಗಿ ಹರಡಿತು. ಈ ಪ್ರಾಂತ್ಯವನ್ನಾಕ್ರಮಿಸಿಕೊಂಡ ಹೊಸದರಲ್ಲಿ ಹಿಂದು ದೇವಾಲಯಗಳನ್ನೆ ಮಸೀದಿಗಳನ್ನಾಗಿ ಮಾರ್ಪಡಿಸಿರುವುದುಂಟು ಅಥವಾ ಆ ದೇವಾಲಯಗಳ ಕಂಬಗಳು ತೊಲೆಗಳನ್ನು ಉಪಯೋಗಿಸಿ ಅವರದೇ ಆದ ರೀತಿಯಲ್ಲಿ

ಕಟ್ಟಡಗಳನ್ನು ಕಟ್ಟಿರುವುದುಂಟು. ಆದರೆ ಅವರು ಪೂರ್ಣವಾಗಿ ಹಿಂದು–ಮುಸ್ಲಿಂ ಶೈಲಿಗಳನ್ನಳವಡಿಸಿ ಕಟ್ಟಡಗಳನ್ನು ಕಟ್ಟಲಾರಂಭಿಸಿದಾಗ ಆರಂಭದಲ್ಲಿ ತುಗಲಕ್ ವಾಸ್ತುಶೈಲಿಯನ್ನು ಅಳವಡಿಸಿಕೊಂಡುದನ್ನು ನೋಡಬಹುದು. ಮೊದಲು ಕಟ್ಟಿದ ಇವರ ಗೋರಿ ಕಟ್ಟಡಗಳಲ್ಲಿ ಇದು ಸ್ಪಷ್ಟವಾಗಿದೆ. ಎತ್ತರವಾದ ಜಗತಿಯ ಮೇಲೆ ಚೌಕನಾದ ಕಟ್ಟಡವಿದ್ದು ದಪ್ಪ ಗೋಡೆಗಳು ಬುಡದಲ್ಲಿ ಅಗಲವಾಗಿದ್ದು ಓಟವಾಗಿ ಮೇಲೇರುತ್ತವೆ. ಗುಮ್ಮಟ ತಗ್ಗಾಗಿರುತ್ತದೆ. ಇದು ಸೂಕ್ಷ್ಮವಾಗಿದ್ದು ಹೆಚ್ಚು ಭದ್ರತೆಯ ದೃಷ್ಟಿಯಿಂದ ಕಟ್ಟಿದುವು. ಈ ಶೈಲಿ ಹೆಚ್ಚು ಕಾಲ ಉಳಿದು ಬರಲಿಲ್ಲ. ಬಹಮನೀ ಅರಸರು ಉತ್ತರ ಭಾರತದ ಶಿಲ್ಪಿಗಳಿಗಿಂತ ಪರ್ಷಿಯಾ ಮುಂತಾದ ದೇಶಗಳಿಂದ ಶಿಲ್ಪಿಗಳನ್ನು ಕರೆಸಿದುದರಿಂದ ಪರ್ಷಿಯನ್ ಶೈಲಿಯ ಪ್ರಭಾವ ಮುಂದೆ ಬೆಳೆದು ಅದರೊಂದಿಗೆ ಸ್ಥಳೀಯ ಹಿಂದು ಶೈಲಿಯೂ ಕ್ರಮೇಣ ಹೆಚ್ಚು ಹೆಚ್ಚು ವ್ಯಾಪಕವಾಗಿ ಮಿಲನವಾಗಿ ನೂತನ ಬಹುಮನೀ ಶೈಲಿಯೊಂದು ಬೆಳೆದು ಬಂತು. ಗುಲ್ಬರ್ಗದ ಕೋಟೆಯೊಳಗಿನ ದೊಡ್ಡ ಮಸೀದಿಯನ್ನು ಇರಾನಿನಿಂದ ಬಂದ ರಫಿ ಎಂಬ ಶಿಲ್ಪಿ ನಿರ್ಮಿಸಿದ್ದಾನೆ. ವಿಶಾಲವಾದ ಈ ಕಟ್ಟಡ ಪೂರ್ಣವಾಗಿ ಗುಮ್ಮಟಗಳಿಂದ ಕೂಡಿದ ಚಾವಣಿಯಿಂದ ಆಚ್ಛಾದಿತವಾಗಿದ್ದು ಸ್ಪೇನಿನ ಕಾರ್ಡೋವದ ಪ್ರಸಿದ್ಧ ಮಸೀದಿಯ ಮಾದರಿಯಲ್ಲಿದೆ. ಬಹಮನೀ ಅರಸರ ಭವ್ಯವಾದ ಕಟ್ಟಡಗಳನ್ನು ಬಿದರೆಯಲ್ಲಿ ನೋಡಬಹುದು. ಇಲ್ಲಿನ ಇವರ ಕಟ್ಟಡಗಳಲ್ಲಿ ಸ್ಥೂಲವಾದ ರಚನೆ ವಿವಿಧ ರೀತಿಯ ಎತ್ತರವಾದ ಕಮಾನುಗಳು, ಗೋಲದ ಮುಕ್ಕಾಲು ಭಾಗವನ್ನಿಟ್ಟಂತಿರುವ ಉನ್ನತವಾದ ಗುಮ್ಮಟಗಳು, ಗೋಡೆಗಳಿಗೆ ಬಗೆಬಗೆಯ ಬಣ್ಣದ, ವಿವಿಧ ಆಕಾರದ ಮನೋಹರವಾದ ರೀತಿಯ ಸೂಡುಚಿತ್ರ ಬಿಲ್ಲೆಗಳ ಜೋಡಣೆ ಮತ್ತು ಹೂವು ಬಳ್ಳಿ, ಎಲೆಗಳನ್ನೊಳಗೊಂಡ ಹಿಂದು ರೀತಿಯ ಶಿಲ್ಪಾಲಂಕರಣ ಇರುತ್ತವೆ. ಅಹಮದ್ ಷಾವಲಿಯ ಅರಮನೆ, ಅಲಾ ಉದ್ದೀನ್ ಮತ್ತು ಹಜರತ್ ಖಲೀ ಉಲ್ಲಾರ ಗೋರಿಗಳು ಮಹ್ಮೂದ್ ಗಾವಾನನ ಮದರಸಾಗಳು ಬಹಮನೀ ಸುಲ್ತಾನರ ವಾಸ್ತುಕಲೆಯ ಸುಂದರ ಉದಾಹರಣೆಗಳು. ಇವುಗಳಲ್ಲಿ ಮಹ್ಮೂದ್ ಗಾವಾನನ ಮದರಸಾ ಪರ್ಷಿಯ ದೇಶದ ಅಂಥ ಕಟ್ಟಡಗಳನ್ನನುಸರಿಸಿ ಕಟ್ಟಿದ ಅಪರೂಪದ ಕಟ್ಟಡ. ಬಹಮನೀ ಸುಲ್ತಾನರ ಅನಂತರ ಬಂದ ಬರೀದ್‌ಶಾಹೀ ಅರಸರು ಕಟ್ಟಿಸಿದ ಕಟ್ಟಡಗಳಲ್ಲಿ ಹಲವು ಬದಲಾವಣೆಗಳನ್ನು ಗಮನಿಸಬಹುದು. ಇವರ ಕಟ್ಟಡಗಳಲ್ಲಿ ದಢೂತಿತನದ ಭಾವನೆ ಬರುವುದಿಲ್ಲ. ಬಹಮನೀ ಸುಲ್ತಾನರ ಕಟ್ಟಡಗಳಲ್ಲಿರುವ ವಿಸ್ತಾರವಾಗಲಿ, ಭವ್ಯತೆಯಾಗಲಿ ಇಲ್ಲ. ಹಿಂದು ಶೈಲಿಯ ಅನುಕರಣೆ ಹೆಚ್ಚು. ಅಲಂಕರಣ ಹೆಚ್ಚಾಗಿದ್ದು ಭದ್ರತೆಯ ಅಭಾವವಿದೆ. ಸೂಕ್ಷ್ಮವಾಗಿ ಕೆತ್ತಿರುವ ಮರದ ಕಂಬಗಳು ಸುಂದರವಾಗಿವೆ. ಬಣ್ಣದ ಬಿಲ್ಲೆಗಳಿಂದ ಮಾಡಿದ ಅಲಂಕಾರ, ಮುತ್ತಿನ ಚಿಪ್ಪಿನ ಕೆಲಸ ತುಂಬ ನವುರಾಗಿದೆ. ಈ ಲಕ್ಷಣಗಳನ್ನು ರಂಗೀನ್ ಮಹಲ್ ಅರಮನೆ ಮತ್ತು ಅಲಿಬರೀದಿಯ ನಾಲ್ಕು ಕಡೆಯೂ ತೆರೆದ ಕಮಾನುಗಳಿಂದ ಕೂಡಿದ ಮಂಟಪದಂತಿರುವ ಗೋರಿಯಲ್ಲಿಯೂ ಕಾಣಬಹುದು. ಇದೇ ಕಾಲದಲ್ಲಿಯೇ ಬಿಜಾಪುರದಿಂದ ಆಳುತ್ತಿದ್ದು, ಮುಂದೆ ಕರ್ನಾಟಕದ ಉತ್ತರ ಭಾಗವನ್ನೆಲ್ಲ ಆಕ್ರಮಿಸಿಕೊಂಡ ಆದಿಲ್ ಶಾಹೀ ಅರಸರು ಅನೇಕ ಮಹತ್ತರವಾದ ಕಟ್ಟಡಗಳನ್ನು ಕಟ್ಟಿಸಿದರು. ಅವುಗಳಲ್ಲಿ ಅರಮನೆಗಳು, ಮಸೀದಿಗಳು, ಗೋರಿಗಳು, ಕೋಟೆಗಳು, ಬುರುಜುಗಳು ಸೇರಿವೆ. ಇವುಗಳಲ್ಲೆಲ್ಲ ನವುರಾದ ಅತ್ಯುತ್ತಮವಾದ ಆಲಂಕರಣಗಳಿಂದ ಕೂಡಿದ ಇಬ್ರಾಹಿಂ ರೋಜಾ ತನ್ನ ಸೌಂದರ್ಯಕ್ಕೆ ಹೆಸರಾಗಿದ್ದರೆ, ಅತಿದೊಡ್ಡ ಹಜಾರ, ಉನ್ನತವೂ ವಿಸ್ತಾರವೂ ಆದ ಗುಮ್ಮಟ, ಪಿಸುಗುಟ್ಟಿದರೆ ಹಲವು ಬಾರಿ ಪ್ರತಿಸ್ಪಂದಿಸುವ ಆಶ್ಚರ್ಯಕರವಾದ ಒಳಕೈಸಾಲೆಗಳಿಂದ ಕೂಡಿದ ಗೋಳಗುಮ್ಮಟ ಪ್ರಪಂಚದಲ್ಲಿಯೇ ಒಂದು ಅದ್ಭುತ ರಚನೆ ಎನಿಸಿದೆ.

ವಿಜಯನಗರ ಸಾಮ್ರಾಜ್ಯದ ಪತನದ ಅನಂತರ ಹೇಳಿಕೊಳ್ಳಬಹುದಾದಂಥ ವಾಸ್ತುಶಿಲ್ಪದ ಬೆಳವಣಿಗೆ ಕಾಣಿಸುವುದಿಲ್ಲವಾದರೂ ಕೆಳದಿ ಅರಸರು, ಮೈಸೂರು ಒಡೆಯರು, ಚಿತ್ರದುರ್ಗದ, ಮಾಗಡಿಯ ಪಾಳೆಯಗಾರರು ತಮ್ಮ ತಮ್ಮ ಮಿತಿಯಲ್ಲಿ ವಾಸ್ತುಕಲೆಯನ್ನು ಬೆಳೆಸಿದ್ದಾರೆ. ಕೆಳದಿಯ ನಾಯಕರು ವಿಜಯನಗರದ ಶೈಲಿಯಿಂದ ಸ್ಫೂರ್ತಿ ಪಡೆದರೂ ತಮ್ಮ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡರು. ಗಟ್ಟಿ ಕಲ್ಲಿನಲ್ಲಿ ನಿರ್ಮಿಸಿದ ಇವರ ದೇವಾಲಯಗಳಲ್ಲಿ ದ್ರಾವಿಡ, ಹೊಯ್ಸಳ ಶೈಲಿಗಳೆರಡೂ ಹೊಂದಿಕೊಂಡಿವೆ; ಮುಸ್ಲಿಂ ಶೈಲಿಯ ಪ್ರಭಾವವನ್ನೂ ನೋಡಬಹುದು. ಇಕ್ಕೇರಿಯ ಅಘೋರೇಶ್ವರ ದೇವಾಲಯ, ಕೆಳದಿಯ ವೀರಭದ್ರ ದೇವಾಲಯ ಈ ಮಾದರಿಗೆ ಉತ್ತಮ ಉದಾಹರಣೆಗಳು. ಇವರ ಕಾಲದಲ್ಲಿ ಹಲವೆಡೆಗಳಲ್ಲಿ ಕಟ್ಟಿರುವ ಸಣ್ಣ ಸಣ್ಣ ಗುಡಿಗಳು ಆ ಕಾಲದ ವಾಸ್ತು ಕಲೆಯ ವೈಶಿಷ್ಟ್ಯವನ್ನು ಪ್ರತಿಬಿಂಬಿಸುತ್ತವೆ. ಇವುಗಳಲ್ಲಿ ಎತ್ತರವಾದ ಜಗತಿಯ ಮೇಲೆ ಸಣ್ಣ ಪ್ರಮಾಣದ ಗರ್ಭಗೃಹ, ಇದೇ ಪ್ರಮಾಣದ ಸುಕನಾಸಿ ಮಾತ್ರ ಇದ್ದು ಮುಂದೆ ಜಗತಿಯಿಲ್ಲದೆ ನೆಲದಿಂದ ಮೇಲೆದ್ದ ನೀಳ ಕಂಬಗಳ ಮೇಲೆ ನಿಂತಿರುವ ಮುಖಭದ್ರ, ದೀರ್ಘಚತುರಸ್ರಾಕಾರದ ಈ ಗುಡಿಗಳ ಹೊರ ಗೋಡೆಗಳ ಮೇಲೆ ಮೂರ್ತಿಶಿಲ್ಪಗಳಿರುತ್ತವೆ. ತೀರ್ಥಹಳ್ಳಿ, ನಗರ, ಸಾಲಿಗೆರೆ ಶೃಂಗೇರಿ ಮುಂತಾದೆಡೆಗಳಲ್ಲಿ ಇರುವ ಇಂಥ ಕಿರುದೇವಾಲಯಗಳಲ್ಲಿ ಅತ್ಯುತ್ತಮವಾದುದು ಜಂಬಿಟ್ಟಿಗೆಯಲ್ಲಿರುವ ನೀಲಕಂಠೇಶ್ವರ ದೇವಾಲಯ, ಮೈಸೂರು ಅರಸರು ಹಲವಾರು ದ್ರಾವಿಡ ಶೈಲಿಯ ದೇವಾಲಯಗಳನ್ನು ನಿರ್ಮಿಸಿದ್ದರೂ ಅವುಗಳಲ್ಲಿ ಭವ್ಯತೆ, ನಯನಾಜೂಕು ಅಷ್ಟಾಗಿ ಕಂಡುಬರುವುದಿಲ್ಲ. ಗುಂಡ್ಲುಪೇಟೆಯ ಪರವಾಸುದೇವ ದೇವಾಲಯ, ಹರದನಹಳ್ಳಿಯ ಗೋಪಾಲಕೃಷ್ಣ ದೇವಾಲಯ, ಶ್ರೀರಂಗಪಟ್ಟಣದ ನರಸಿಂಹಸ್ವಾಮಿ ದೇವಾಲಯ, ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ ಮೊದಲಾದುವುಗಳನ್ನು ಇಲ್ಲಿ ಹೆಸರಿಸಬಹುದು. ಚಿತ್ರದುರ್ಗದ ಪಾಳೆಯಗಾರರೂ ಹೈದರ್ ಮತ್ತು ಟಿಪ್ಪು ಕಟ್ಟಿಸಿದ ಹಲವಾರು ಸುಭದ್ರವಾದ ಕೋಟೆಗಳೂ ಇಲ್ಲಿ ಉಲ್ಲೇಖನಾರ್ಹ. ಪಾಳೆಯಗಾರರು ಕಟ್ಟಿಸಿದ ವಾಸ್ತುಗಳಲ್ಲಿ ನೀರ್ತಡಿಯ ರಂಗನಾಥ ದೇವಾಲಯ, ಚಿತ್ರದುರ್ಗದ ಉಚ್ಚಂಗಮ್ಮನ ದೇವಾಲಯ ಇವೆಲ್ಲಕ್ಕಿಂತ ಹೆಚ್ಚಾಗಿ ರಾಮದುರ್ಗದಲ್ಲಿ ಗುಡ್ಡವೊಂದನ್ನು ಕೊರೆದು ಸುಂದರವಾಗಿ ರಚಿಸಿರುವ ಗುಹಾದೇವಾಲಯ ಅಪೂರ್ವವಾದುವು.

ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ವಾಸ್ತುಕಲೆ ಬೇರೆ ರೀತಿಯಾಗಿಯೇ ಬೆಳೆದು ಬಂದಂತೆ ತೋರುತ್ತದೆ. ಇಲ್ಲಿನ ದೇವಾಲಯಗಳು ನೇಪಾಳದ ತುರಾಯಿಗಳಂತೆ ಇರುವುದಾಗಿ ಕೆಲವರ ಅಭಿಪ್ರಾಯ. ಇಲ್ಲಿನ ದೇವಾಲಯಗಳನ್ನು ಜಂಬುಕಲ್ಲಿನಲ್ಲಿ ಕಟ್ಟಿರುವುದೇ ಹೆಚ್ಚು. ಆದ್ದರಿಂದ ಹೊರಗೋಡೆಯ ಮೇಲಿನ ಅಲಂಕರಣ ಹೆಚ್ಚಿರುವುದಿಲ್ಲ. ಮಳೆಯಿಂದ ಕಟ್ಟಡಗಳನ್ನು ರಕ್ಷಿಸುವುದು ಅನಿವಾರ್ಯವಾದ್ದರಿಂದ ಚಾವಣಿಗಳು ಇಳಿಜಾರಾಗಿರುತ್ತವೆ. ದೇವಾಲಯಗಳ ತಳವಿನ್ಯಾಸ ವೃತ್ತಾಕಾರವಾಗಿರುವುದುಂಟು. ಇದಕ್ಕಿಂತ ಹೆಚ್ಚಾಗಿ ಬೌದ್ಧ ವಾಸ್ತುವನ್ನನುಸರಿಸುವ ಚೈತ್ಯಾಕಾರದ ದೇವಾಲಯಗಳು ಹೆಚ್ಚು. ಮೇಲ್ಚಾವಣಿಗಳು ಎರಡು ಮೂರು ಅಂತಸ್ತುಗಳಿಲ್ಲದ್ದು ಇಳಿಜಾರಾಗಿರುತ್ತವೆ. ಸಾಮಾನ್ಯವಾಗಿ ಇವುಗಳಿಗೆ ತಾಮ್ರದ ತಗಡನ್ನು ಹೊದಿಸಿರುತ್ತದೆ.

ಕರ್ನಾಟಕದ ಭಾಗಗಳಲ್ಲಿ ಪಾಶ್ಚಾತ್ಯರ ಪ್ರಾಬಲ್ಯ ಬೆಳೆದಂತೆ ಐರೋಪ್ಯ ರೀತಿಯ ವಾಸ್ತು ನಿರ್ಮಾಣ ಆರಂಭವಾಯಿತು. ಮೊದಲಿಗೆ ಕಟ್ಟಡಗಳು ಪಾಶ್ಚಾತ್ಯ ಎಂಜಿನಿಯರುಗಳಿಂದ ರೂಪಿಸಲ್ಪಟ್ಟು ಯುರೋಪಿನ ಬೇರೆ ಬೇರೆ ವಾಸ್ತುಶೈಲಿಗಳಲ್ಲಿವೆ. ಈ ಕಾಲದಲ್ಲಿ ಅನೇಕ ಚರ್ಚುಗಳು ಗಾಥಿಕ್ ಶೈಲಿಯಲ್ಲಿ ನಿರ್ಮಾಣವಾದುವು. ಬೆಂಗಳೂರಿನ ಟ್ರಿನಿಟಿ ಚರ್ಚು,

ಮಂಗಳೂರಿನ ಸೇಂಟ್ ಅಲೋಷಿಯಸ್ ಚರ್ಚು, ಮೈಸೂರಿನ ಸೇಂಟ್ ಫಿಲೋಮಿನ ಚರ್ಚುಗಳು ಈ ಶೈಲಿಯ ಅತ್ಯಂತ ಆಕರ್ಷಕ ಕಟ್ಟಡಗಳು, ಚರ್ಚುಗಳು ಮತ್ತು ಇತರ ಮತೀಯ ಕಟ್ಟಡಗಳಿಗಿಂತ ಈ ಕಾಲದಲ್ಲಿ ಹೆಚ್ಚಾಗಿ ಸಾರ್ವಜನಿಕ ಕಟ್ಟಡಗಳ ನಿರ್ಮಾಣವಾದವು. ಈ ಕಟ್ಟಡಗಳಲ್ಲಿ ಗಾಥಿಕ್ ಶೈಲಿಯೇ ಅಲ್ಲದೆ ಗ್ರೀಸ್, ಇಟಲಿ, ಫ್ರಾನ್ಸ್‌ಗಳ ಪುನರುಜ್ಜೀವನ ಶೈಲಿಯ ಅನುಕರಣೆ ಕಂಡುಬರುತ್ತದೆ. ಗಾಥಿಕ್ ಶೈಲಿಯ ಕಟ್ಟಡಗಳಿಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕಟ್ಟಡ ಉತ್ತಮ ಉದಾಹರಣೆ. ಬೆಂಗಳೂರಿನ ಅಠಾರಾ ಕಚೇರಿ, ವಸ್ತುಸಂಗ್ರಹಾಲಯ, ಡ್ಯಾಲಿ ಮೆಮೋರಿಯಲ್ ಹಾಲ್, ಮೈಸೂರಿನ ಮಹಾರಾಜ ಕಾಲೇಜು, ಜೂಬಿಲಿ ಕಟ್ಟಡ, ಜಿಲ್ಲಾಧಿಕಾರಿ ಕಚೇರಿ ಕಟ್ಟಡಗಳು ಪುನರುಜ್ಜೀವನ ಶೈಲಿಯಲ್ಲಿವೆ. ಬೆಂಗಳೂರಿನ ಅರಮನೆ ಇಂಗ್ಲೆಂಡ್ ಮತ್ತು ನಾರ್ಮಂಡ್‌ಗಳಲ್ಲಿ ನಿರ್ಮಿತ ವಾದ ಮಧ್ಯಯುಗದ ದುರ್ಗಗಳಂತೆ ಇದ್ದು ವಿಂಡ್ಸರ್ ಅರಮನೆಯ ಮಾದರಿಯಲ್ಲಿದೆ. ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಂಥ ಹಲವು ಕಟ್ಟಡಗಳಲ್ಲಿ ಪುನರುಜ್ಜೀವನ ಗುರುತಿಸಬಹುದು. ಆಧುನಿಕ ಕಟ್ಟಡಗಳಲ್ಲಿ ಅತ್ಯಂತ ಸುಂದರವೂ ಭವ್ಯವೂ ಆದ ಮೈಸೂರಿನ ಅರಮನೆ ಹಿಂದು, ಮುಸ್ಲಿಂ ಮತ್ತು ಪಾಶ್ಚಾತ್ಯ ಶೈಲಿಗಳ ಆಕರ್ಷಣೀಯ ಸಂಗಮ. ಇತ್ತೀಚಿನ ಕಟ್ಟಡವಾದ ವಿಧಾನಸೌಧ ಬೃಹತ್ಪ್ರಮಾಣದಲ್ಲಿದ್ದು ಪ್ರಾಚೀನ ದ್ರಾವಿಡ ರೀತಿಯ ದೇವಾಲಯಗಳ ಗೋಪುರಗಳ ಮಾದರಿಗಳನ್ನಳವಡಿಸಿ ಗಾಂಭೀರ್ಯ ಮತ್ತು ಭವ್ಯತೆಗಳು ಎದ್ದು ಕಾಣುವಂತೆ ಮಾಡಲಾಗಿದೆ. ಅದೇ ಮಾದರಿಯಲ್ಲಿ ಇದರ ಪಕ್ಕದಲ್ಲೇ ವಿಕಾಸಸೌಧವನ್ನು ಈಗ ನಿರ್ಮಿಸಲಾಗಿದೆ. ಇತ್ತೀಚಿಗೆ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ನವೀನ ಶೈಲಿ ರೂಪುಗೊಳ್ಳುತ್ತಿದೆ. ಗಗನಚುಂಬಿ ಕಟ್ಟಡಗಳು ಮೇಲೇಳುತ್ತಿವೆ. ಅಮೆರಿಕದ ಎಂಪೈರ್ ಸ್ಟೇಟ್ ಬಿಲ್ಡಿಂಗ್ ಮಾದರಿಯಲ್ಲಿ ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿ ನಿರ್ಮಿಸಿರುವ ಯುಟಿಲಿಟಿ ಬಿಲ್ಡಿಂಗ್ ಇಲ್ಲಿ ಉಲ್ಲೇಖಾರ್ಹ. ಬೆಂಗಳೂರಿಗೆ ಬಹುರಾಷ್ಟ್ರೀಯ ಕಂಪನಿಗಳು, ಐ.ಟಿ. ಮತ್ತು ಬಿ.ಟಿ. ತಂತ್ರಜ್ಞಾನ ಉದ್ದಿಮೆಗಳು ಕಾಲಿಟ್ಟ ಮೇಲೆ ಕಟ್ಟಡ ಗಳ ವಾಸ್ತು ವಿನ್ಯಾಸದಲ್ಲಿ ಬಹಳಷ್ಟು ಬದಲಾವಣೆಗಳು ಕಂಡುಬಂದಿವೆ. ಬಹು ಅಂತಸ್ತುಗಳ ಮತ್ತು ವಿಶಾಲವಾದ ಹಜಾರಗಳ ಬೃಹತ್ ಕಟ್ಟಡಗಳು ತಲೆಎತ್ತಿವೆ. ಈ ಎಲ್ಲ ಕಟ್ಟಡಗಳ ಒಳಾಲಂಕರಣವೂ ವೈಭವೋಪೇತ ವಾಗಿ ಭಿನ್ನ ಅಭಿರುಚಿ, ವೈಶಿಷ್ಟ್ಯಗಳಿಂದ ಕೂಡಿಬೆಳೆದಿದೆ. (ಎಂ.ಎಚ್.)

**ವಿಕ್ರಮಾದಿತ್ಯ I:** ಬಾದಾಮಿ ಚಳುಕ್ಯ ಅರಸು ಮನೆತನದ ಶೂರ ದೊರೆ (ಸು. 655–81). ಎರಡನೆಯ ಪುಲಕೇಶಿಯ ಐವರು ಮಕ್ಕಳಲ್ಲಿ ಒಬ್ಬ. ಇವನಿಗೆ ರಣರಸಿಕ, ಪರಮಮಾಹೇಶ್ವರ, ಅನಿವಾರಿತ, ರಾಜಮಲ್ಲ, ಶ್ರೀವಲ್ಲಭ ಇತ್ಯಾದಿ ಬಿರುದುಗಳಿದ್ದುವು.

ಸು. 642 ರಲ್ಲಿ ಪಲ್ಲವ ನರಸಿಂಹವರ್ಮ ಬಾದಾಮಿಯ ಮೇಲೆ ದಾಳಿ ಮಾಡಿ ಆಕ್ರಮಿಸಿದ್ದ. ಇದರಿಂದ ನಷ್ಟವಾಗಿದ್ದ ಚಳುಕ್ಯ ರಾಜ್ಯಶ್ರೀಯನ್ನು ಮರಳಿ ಪಡೆಯುವುದು ವಿಕ್ರಮಾದಿತ್ಯನ ಮೊದಲ ಕೆಲಸವಾಯಿತು. ಅವನಿಪತಿ ತ್ರಿತಯಾಂತರಿತವಾಗಿದ್ದ ಚಳುಕ್ಯ ಸಾಮ್ರಾಜ್ಯವನ್ನು ಈತ ಸ್ವಶ್ರಮದಿಂದ ಬಿಡಿಸಿಕೊಂಡುದಾಗಿ ಶಾಸನಗಳು ತಿಳಿಸುತ್ತವೆ. ಈ ಮೂವರು ಅವನಿಪತಿಗಳು ಪಲ್ಲವ ಸಾಮಂತರಾದ ಚೋಳ, ಪಾಂಡ್ಯ, ಕೇರಳ ಅರಸರಿರಬೇಕೆಂಬ ಊಹೆ ಇದೆಯಾದರೂ ಈ ವಿಷಯ ಸ್ಪಷ್ಟವಾಗಿಲ್ಲ. ಗಂಗ ದುರ್ವಿನೀತ ಕಾಡುವೆಟ್ಟಿಯನ್ನು (ಪಲ್ಲವರಾಜ) ಸೆರೆಹಿಡಿದು ಮೊಮ್ಮಗ ಜಯಸಿಂಹ ವಲ್ಲಭನಿಗೆ ಚಳುಕ್ಯ ಸಿಂಹಾಸನವನ್ನು ದೊರಕಿಸಿದ ನೆಂದು ಒಂದು ಶಾಸನದ ಹೇಳಿಕೆ. ಆದರೆ ಈ ವಿಷಯದಲ್ಲೂ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಏನೇ ಆದರೂ ಪಲ್ಲವರಿಂದ ತನ್ನ ಸಾಮ್ರಾಜ್ಯವನ್ನು ಸಾಧಿಸಿಕೊಳ್ಳಲು ವಿಕ್ರಮಾದಿತ್ಯ ಹಲವು ವರ್ಷಗಳ ಕಾಲ ಶ್ರಮಿಸಿರಬೇಕು. ಆದರೆ 655ರ ಹೊತ್ತಿಗೆ ಈತ ಚಳುಕ್ಯ ಸಾಮ್ರಾಜ್ಯಾಧಿಕಾರವನ್ನು ನಿರ್ವಹಿಸುತ್ತಿದ್ದನೆಂಬುದು ಸ್ಪಷ್ಟವಾಗಿ ತಿಳಿದಿದೆ.

ಚಳುಕ್ಯ ಸಾಮ್ರಾಜ್ಯದ ಪುನಃಸ್ಥಾಪನೆಯ ಆನಂತರ ಆ ವಂಶಕ್ಕೆ ಹತ್ತಿಕೊಂಡಿದ್ದ ಕಳಂಕವನ್ನು ತೆಡೆಯುವುದು ಇವನ ಮುಖ್ಯ ಕೆಲಸವಾಯಿತು. ಈ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ. ಪಲ್ಲವ ನರಸಿಂಹವರ್ಮ, ಅವನ ಮಗ ಇಮ್ಮಡಿ ಮಹೇಂದ್ರವರ್ಮ, ಅವನ ಮಗ ಒಂದನೆಯ ಪರಮೇಶ್ವರವರ್ಮ– ಈ ಮೂರು ರಾಜರುಗಳ ಕಾಲದಲ್ಲೂ ಅವರ ರಾಜ್ಯದ ಮೇಲೆ ದಾಳಿ ಮಾಡಿದ. 670ರ ಸುಮಾರಿನಲ್ಲಿ ಕಂಚಿಯನ್ನು ಆಕ್ರಮಿಸುವ ಉದ್ದೇಶದಿಂದ, ಆ ನಗರದ ಸಮೀಪದ ಮಲ್ಲಿಯೂರಿನವರೆಗೂ ನಡೆದಿದ್ದ. 674 ರಲ್ಲಿ ಚೋಳ ವಿಷಯದಲ್ಲಿದ್ದ ತಿರುಚಿರಾಪಳ್ಳಿ ಬಳಿಯ ಉರಗಪುರದಲ್ಲಿ (ಉರೈಯೂರ್) ಬೀಡುಬಿಟ್ಟಿದ್ದ. ಶತ್ರು ರಾಜ್ಯವನ್ನು ಜಾಲಾಡಿದ್ದ. ಪಲ್ಲವ ಶಾಸನಗಳಲ್ಲಿ ಪಲ್ಲವರು ವಿಕ್ರಮಾದಿತ್ಯನನ್ನು ಹಲವೆಡೆ ಸೋಲಿಸಿದರೆಂಬ ಉಲ್ಲೇಖಗಳು ದೊರಕುತ್ತವೆಯಾದರೂ ಈ ಎಲ್ಲ ಯುದ್ಧಗಳೂ ತಮಿಳುನಾಡಿನ ಭಾಗಗಳಲ್ಲೇ ನಡೆದವಾದ್ದರಿಂದ ವಿಕ್ರಮಾದಿತ್ಯ ಪಲ್ಲವರನ್ನು ಬಗ್ಗು ಬಡಿಯಲು ಪ್ರಯತ್ನಿಸುತ್ತ ಆ ರಾಜ್ಯದ ಎಲ್ಲೆಗಳೊಳಗೇ ಘರ್ಷಣೆಗಳು ಸೀಮಿತವಾಗುವಷ್ಟು ಶಕ್ತಿಶಾಲಿಯಾಗಿದ್ದನೆಂದು ತಿಳಿಯ ಬಹುದಾಗಿದೆ.

ವಿಕ್ರಮಾದಿತ್ಯ ನಿರ್ವಹಿಸಿದ ಈ ಅನೇಕ ಯುದ್ಧಗಳಲ್ಲಿ ಇವನ ಮಗ ವಿನಯಾದಿತ್ಯ ಮತ್ತು ಮೊಮ್ಮಗ ವಿಜಯಾದಿತ್ಯ ಸಹ ಪಾಲ್ಗೊಳ್ಳುತ್ತಿದ್ದ ರೆಂದು ಶಾಸನಗಳಿಂದ ತಿಳಿಯುತ್ತವೆ. ಹಲವು ಸಮಯಗಳಲ್ಲಿ ವಿಕ್ರಮಾದಿತ್ಯ ಯುದ್ಧಾರ್ಥವಾಗಿ ರಾಜಧಾನಿಯಿಂದ ಹೊರಗಿರುತ್ತಿದ್ದಾಗ ರಾಜ್ಯ ನಿರ್ವಹಣೆಯ ಭಾರವನ್ನು ಈ ಮಗ ಮತ್ತು ಮೊಮ್ಮಗ ಹೊತ್ತಿರುತ್ತಿದ್ದರು.

ಚಳುಕ್ಯ ರಾಜ್ಯಶ್ರೀಯನ್ನು ಕೀರ್ತಿಪೀಠದ ಮೇಲೆ ನಿಲ್ಲಿಸಿದ ವಿಕ್ರಮಾದಿತ್ಯ ಸು. 26 ವರ್ಷಗಳ ಕಾಲ ರಾಜ್ಯವಾಳಿ 681ರಲ್ಲಿ ಮೃತನಾದ. ವಿಕ್ರಮಾದಿತ್ಯನ ಆನಂತರ ಇವನ ಮಗ ವಿನಯಾದಿತ್ಯ ಪಟ್ಟವೇರಿದ. (ಆರ್.ಟಿ.ಎಸ್.)

**ವಿಕ್ರಮಾದಿತ್ಯ II:** ಬಾದಾಮಿ ಚಳುಕ್ಯ ಮನೆತನದ ಅರಸು (ಸು. 733–45). ವಿಜಯಾದಿತ್ಯನ ಮಗ. ಈತ ತಂದೆಯ ಆಳ್ವಿಕೆಯ ಕಾಲದಲ್ಲಿ 710ರ ಸುಮಾರಿನಿಂದಲೇ ಯುವರಾಜ ಪದವಿಯಲ್ಲಿದ್ದು ಚಳುಕ್ಯ ರಾಜ್ಯದ ಪಶ್ಚಿಮ ಭಾಗಗಳ ಆಳ್ವಿಕೆ ನಡೆಸುತ್ತಿದ್ದಂತೆ ತೋರುತ್ತದೆ. ಯುವರಾಜನಾಗಿದ್ದಾಗಲೇ ಸು. 730–31ರಲ್ಲಿ ಕಂಚಿಯ ಮೇಲೆ ದಂಡೆತ್ತಿ ಹೋಗಿ ಅಲ್ಲಿಯ ರಾಜ ಇಮ್ಮಡಿ ಪರಮೇಶ್ವರವರ್ಮನನ್ನು ಸೋಲಿಸಿದ. ಪಟ್ಟಕ್ಕೆ ಬಂದ ತರುಣದಲ್ಲಿ ಮತ್ತೊಮ್ಮೆ ಪಲ್ಲವ ರಾಜ್ಯದ ಮೇಲೆ ದಾಳಿಮಾಡಿ, ಆಗತಾನೇ ಪಲ್ಲವ ಸಿಂಹಾಸನವನ್ನು ಏರಿದ್ದ ಇಮ್ಮಡಿ ನಂದಿವರ್ಮನನ್ನು ಓಡಿಸಿ ಕಂಚಿಯನ್ನು ವಶಪಡಿಸಿಕೊಂಡ. ಆಗ ಕಂಚಿಯ ರಾಜಸಿಂಹೇಶ್ವರ (ಈಗಿನ ಕೈಲಾಸನಾಥ) ದೇವಾಲಯದ ಐಶ್ವರ್ಯವನ್ನು ಕಂಡು, ಅದನ್ನು ದೋಚದೆ ದೇವಸ್ಥಾನಕ್ಕೇ ಬಿಟ್ಟ ಎಂದು ಕಂಚಿಯ ಅದೇ ದೇವಾಲಯದಲ್ಲಿರುವ ಇವನ ಕನ್ನಡ ಶಾಸನವೊಂದು ತಿಳಿಸುತ್ತದೆ. ಇವನ ಮತ್ತು ಇವನ ಮಗ ಕೀರ್ತಿವರ್ಮನ ಶಾಸನಗಳು ಈ ಕಂಚಿ ವಿಜಯದ ಅನಂತರ ಪಾಂಡ್ಯ, ಚೋಳ, ಕೇರಳ, ಕಳಭ್ರರನ್ನೂ ಗೆದ್ದು ದಕ್ಷಿಣಾರ್ಣವದಲ್ಲಿ ಜಯಸ್ತಂಭವೊಂದನ್ನು ನೆಟ್ಟನು ಎಂದು ತಿಳಿಸಿದರೂ ಈ ಹೇಳಿಕೆಯ ಸತ್ಯಾಂಶ ಸ್ಪಷ್ಟವಾಗಿಲ್ಲ. ಈ ಚಳುಕ್ಯರ ಏಕೈಕ ಪ್ರಬಲ ಶತ್ರುಗಳಾಗಿದ್ದ ಪಲ್ಲವರ ಬಲವೂ ಮೊಂಡಾದ ಮೇಲೆ ಕಂಚೀವಿಜಯದ ಅನಂತರ ಇಮ್ಮಡಿ ವಿಕ್ರಮಾದಿತ್ಯ ಇಡೀ ದಕ್ಷಿಣ ಭಾರತದ ಅಪ್ರತಿಮ ಚಕ್ರವರ್ತಿಯಾದ. (ಪಿ.ಜಿ.ಬಿ.)

ಆದರೆ ಇದರಿಂದ ತೃಪ್ತನಾದ ಇವನು ಮುಂದೆ ತನ್ನ ಸಾಹಸೀವೃತ್ತಿಯನ್ನು ಮುಂದುವರಿಸಲಿಲ್ಲ. ಸು. 739 ರಲ್ಲಿ ಇವನ ಸಾಮಂತನಾಗಿ ಗುಜರಾತಿನಲ್ಲಿ ಆಳುತ್ತಿದ್ದ ಚಾಳುಕ್ಯರಾಜ ಅವನಿಜನಾಶ್ರಯ ಪುಲಕೇಶಿ ಅರಬ್ಬರ ದಾಳಿಯನ್ನು ಎದುರಿಸಿ ಹಿಮ್ಮೆಟ್ಟಿಸಿದರೂ ವಿಕ್ರಮಾದಿತ್ಯ ಈ ಸಂದರ್ಭದಲ್ಲಿ ವಿಶೇಷ ಆಸಕ್ತಿಯನ್ನು ತೋರಿದಂತೆ ಕಾಣುವುದಿಲ್ಲ. ವಿಕ್ರಮಾದಿತ್ಯನ ನಿರಾಸಕ್ತಿ ಅನೇಕ ಸಾಮಂತರ ಸ್ವಪ್ರತಿಷ್ಠೆಗೆ ಸಹಾಯಕವಾಗಿದ್ದಿರಬೇಕು. ಇದರಿಂದ ಲಾಭ ಪಡೆದ ರಾಷ್ಟ್ರಕೂಟ ವಂಶದ ದಂತಿದುರ್ಗ ಚಳುಕ್ಯ ರಾಜ್ಯದ ಉತ್ತರ ಭಾಗದಲ್ಲಿ ತನ್ನ ಬಲಸಂವರ್ಧನೆ ಮಾಡಿಕೊಂಡು ಮುಂದೆ ವಿಕ್ರಮಾದಿತ್ಯನ ಮರಣಾನಂತರ ಚಾಳುಕ್ಯ ರಾಜ್ಯದ ವಿನಾಶಕ್ಕೆ ಕಾರಣನಾದ. ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಯುವರಾಜನಾಗಿದ್ದ ಇವನ ಮಗ ಕೀರ್ತಿವರ್ಮ ಮತ್ತೊಮ್ಮೆ ಕಂಚಿಯ ಮೇಲೆ ದಾಳಿ ಮಾಡಿದ. ವಿಕ್ರಮಾದಿತ್ಯನ ಜೀವಿತದಲ್ಲಿ ನಡೆದ ಈ ಮೂರು ಕಂಚಿ ವಿಜಯಗಳಿಂದಾಗಿ, ಪಟ್ಟದಕಲ್ಲಿನ ಒಂದು ಶಾಸನ ಈತನನ್ನು 'ಮೂಮೆ ಕಂಚಿಯನ್ ಪರಾಜಿಸಿದೋರ್' ಎಂದು ಹೊಗಳುತ್ತದೆ. ವಿಕ್ರಮಾದಿತ್ಯ ಸು. 745ರಲ್ಲಿ ಮರಣಹೊಂದಿದ.

ಹೈಹಯ ವಂಶದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿ ಎಂಬ ಇಬ್ಬರು ಸೋದರಿಯರು ಈತನ ಪತ್ನಿಯರು. ಇವನಿಗೆ ಇಮ್ಮಡಿ ಕೀರ್ತಿವರ್ಮ ಎಂಬ ಮಗನೂ ವಿನಯವತಿ ಎಂಬ ಮಗಳೂ ಇದ್ದರು. ಕಲ್ಯಾಣದ ಚಾಳುಕ್ಯ ವಂಶದ ಪರಂಪರೆಯಲ್ಲಿ ಬರುವ ಭೀಮ ಈತನ ತಮ್ಮ.

ವಿಕ್ರಮಾದಿತ್ಯನ ಕಾಲದಲ್ಲಿ ಈತನ ಹೆಂಡತಿಯರು ತಮ್ಮ ಹೆಸರಿನಲ್ಲಿ ಲೋಕೇಶ್ವರ (ಈಗಿನ ಸುಪ್ರಸಿದ್ಧ ವಿರೂಪಾಕ್ಷ) ಮತ್ತು ತ್ರೈಲೋಕೇಶ್ವರ ದೇವಾಲಯಗಳನ್ನು ಪಟ್ಟದಕಲ್ಲಿನಲ್ಲಿ ಕಟ್ಟಿಸಿದರೆಂದು ಶಾಸನಗಳಿಂದ ತಿಳಿಯುತ್ತದೆ.

*

**ವಿಕ್ರಮಾದಿತ್ಯ V:** ಕಲ್ಯಾಣದ ಚಾಳುಕ್ಯ ವಂಶದ ಅರಸ (1008–15). ಇಱಿವಬೆಡಂಗ ಸತ್ಯಾಶ್ರಯನ (997–1008) ಸೋದರನಾದ ದಶವರ್ಮ ಈತನ ತಂದೆ. ತಾಯಿ ಭಾಗ್ಯವತಿ. ದೊಡ್ಡಪ್ಪನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಆಡಳಿತದಲ್ಲಿ ಸಮಭಾಗಿಯಾಗಿದ್ದ ಈತ 1008ರಲ್ಲಿ ಪಟ್ಟಕ್ಕೆ ಬಂದ. ಪಟ್ಟಕ್ಕೆ ಬಂದ ಅನಂತರ ಇವನ ರಾಜ್ಯದ ಮೇಲೆ ದಕ್ಷಿಣದ ಚೋಳರೂ ಉತ್ತರದ ಪರಮಾರ ಅರಸ ಭೋಜನೂ ಆಕ್ರಮಣ ನಡೆಸಿದರು. ರಾಜವಲ್ಲಭನ ಭೋಜ ಚರಿತ್ರದಲ್ಲಿ ನಿರೂಪಿಸಲಾದ ಘಟನೆಯೊಂದನ್ನಾಧರಿಸಿ ಪರಮಾರ ಭೋಜನು ಚಾಳುಕ್ಯರ ವಿರುದ್ಧ ದಂಡೆತ್ತಿ, ವಿಕ್ರಮಾದಿತ್ಯನನ್ನು ಕೊಂದು, ತನ್ನ ಪೂರ್ವಜರ ಸೇಡು ತೀರಿಸಿಕೊಂಡನೆಂಬ ಒಂದು ಅಭಿಪ್ರಾಯವಿದೆ. ಆದರೆ ಇದು ಸಾಧಾರವಲ್ಲವೆಂದು ತೋರಿಸಲಾಗಿದೆ. ದೊಡ್ಡಪ್ಪನಿಂದ ಪಡೆದ ರಾಜ್ಯವನ್ನು ಕುಂದುಂಟಾಗದಂತೆ ಕಾಪಾಡಿಕೊಂಡು ಬಂದ ಯಶಸ್ಸು ಈತನದು. ಈತನ ಆಳ್ವಿಕೆಯ ಅಂತಿಮ ವರ್ಷಗಳಲ್ಲಿ ಈತನ ಕಿರಿಯ ಸೋದರ ಈತನೊಡನೆ ರಾಜ್ಯವಾಳಿದ.

(ಬಿ.ಆರ್.ಜಿ.)

**ವಿಕ್ರಮಾದಿತ್ಯ VI:** ಕಲ್ಯಾಣದ ಚಾಳುಕ್ಯ ವಂಶದ ಸುಪ್ರಸಿದ್ಧ ಚಕ್ರವರ್ತಿ (1076 –1127). ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿದ್ದ ಈತ ಒಂದನೆಯ ಸೋಮೇಶ್ವರನ ಮಗ, ಎರಡನೆಯ ಸೋಮೇಶ್ವರನ ತಮ್ಮ ಮತ್ತು ಉತ್ತರಾಧಿಕಾರಿ.

ವಿಕ್ರಮಾದಿತ್ಯ ತನ್ನ ತಂದೆಯ ಕಾಲದಿಂದಲೇ ಚಾಳುಕ್ಯ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸಿದ್ದ. ಆಗ ಉತ್ತರದಲ್ಲಿ ಜಯಸಿಂಹ ಮತ್ತು ಉದಯಾದಿತ್ಯ ಎಂಬುವರು ಪರಮಾರ ಸಿಂಹಾಸನಕ್ಕಾಗಿ ಸೆಣಸುತ್ತಿದ್ದಾಗ ವಿಕ್ರಮಾದಿತ್ಯ ಜಯಸಿಂಹನ ಪರವಾಗಿ ಹೋರಾಡಿ ಅವನಿಗೆ ರಾಜ್ಯವನ್ನು ದೊರಕಿಸಿಕೊಟ್ಟ. ಒಂದನೆಯ ಸೋಮೇಶ್ವರ ಇವನ ಶೌರ್ಯವನ್ನು ಮೆಚ್ಚಿ ಇವನನ್ನೇ ಯುವರಾಜನನ್ನಾಗಿ ಮಾಡಲು ಇಚ್ಛಿಸಿದ್ದನೆಂಬ ಹೇಳಿಕೆ ಇದೆ. ಆದರೆ ತಂದೆಯ ಮರಣಾನಂತರ ಇವನ ಹಿರಿಯಣ್ಣ 2ನೆಯ ಸೋಮೇಶ್ವರ ಪಟ್ಟಕ್ಕೆ ಬಂದ. ಅಂದಿನಿಂದ ಅಣ್ಣ ತಮ್ಮಂದಿರಲ್ಲಿ ಸಾಮರಸ್ಯವಿರಲಿಲ್ಲ. 2ನೆಯ ಸೋಮೇಶ್ವರ ವಿಕ್ರಮಾದಿತ್ಯನ ನಿಷ್ಠೆಯನ್ನು ಸಂದೇಹಿಸಿದ. ಉತ್ತರದ ಪರಮಾರ, ಚಾಳುಕ್ಯ, ಕಳಚುರಿಗಳೊಡನೆ ಇವನು ಸಾಧಿಸಿಕೊಂಡಿದ್ದ ಸ್ನೇಹಬಲದಿಂದ ತನ್ನ ಅಧಿಕಾರಕ್ಕೇ ಕುಂದು ತರಬಹುದೆಂಬ ಶಂಕೆಯಿಂದ ಸೋಮೇಶ್ವರ ವಿಕ್ರಮಾದಿತ್ಯನನ್ನು ಪರಮಾರ ರಾಜ್ಯದಿಂದ ಹಿಂದಕ್ಕೆ ಕರೆಸಿಕೊಂಡ. ತಾನೇ ನೇರವಾಗಿ ಅಲ್ಲಿನ ರಾಜಕೀಯ ಪರಿಸ್ಥಿತಿಯನ್ನು ಸರಿಪಡಿಸಲು ನಡೆದನಾದರೂ ಸೋಲನ್ನನುಭವಿಸಬೇಕಾಯಿತು. ಇದರಿಂದ ವಿಕ್ರಮಾದಿತ್ಯನ ವರ್ಚಸ್ಸು ಹೆಚ್ಚಿತೆಂದೇ ಹೇಳಬಹುದು. ಉತ್ತರದಿಂದ ಹಿಂದೆ ಬಂದ ವಿಕ್ರಮಾದಿತ್ಯ ತನ್ನ ಜೀವ ಅಥವಾ ಗೌರವಕ್ಕೆ ಸೋಮೇಶ್ವರನಿಂದ ಹಾನಿಯಾಗಬಹುದೆಂದು ಬಗೆದು ತನ್ನ ತಮ್ಮ ಜಯಸಿಂಹನನ್ನು ಜೊತೆಯಲ್ಲಿಟ್ಟುಕೊಂಡು ರಾಜಧಾನಿ ಕಲ್ಯಾಣದಿಂದ ಹೊರಬಿದ್ದ. ಇವನನ್ನು ಹಿಂಬಾಲಿಸಿದ ಸೋಮೇಶ್ವರನ ಸೈನ್ಯಕ್ಕೂ ಇವನಿಗೂ ಯುದ್ಧವಾದರೂ ವಿಕ್ರಮಾದಿತ್ಯನಿಗೆ ತೊಂದರೆಯೇನೂ ಆಗಲಿಲ್ಲ. ಮುಂದೆ ಸ್ವಲ್ಪಕಾಲ ತುಂಗಭದ್ರಾ ದಂಡೆಯಲ್ಲಿ ಕಳೆದು ಅನಂತರ ಚೋಳ ಆಕ್ರಮಣವನ್ನು ತಡೆಯಲು ಬನವಾಸಿಗೆ ಹೋದ. ಅಲ್ಲಿಂದ ಕದಂಬ ಜಯಕೇಶಿಯ ಮೇಲೆ ಬಿದ್ದು ಅವನನ್ನು ಸಾಮಂತನಾಗಿಸಿಕೊಂಡ. ಅವನ ಜೊತೆ ಸೇರಿ ಚೋಳ ದೊರೆ ವೀರರಾಜೇಂದ್ರನನ್ನು ಸೋಲಿಸಿದ. ವೀರರಾಜೇಂದ್ರ ತನ್ನ ಮಗಳನ್ನು ಇವನಿಗೆ ಮದುವೆ ಮಾಡಿಕೊಟ್ಟು ಸ್ನೇಹ ಬೆಳೆಸಿದ (ಸು. 1069). ಅತಿ ಶೀಘ್ರದಲ್ಲಿಯೇ ಆಗ ತಾನೇ ಹಿಂತಿರುಗಿದ್ದ ವೀರರಾಜೇಂದ್ರನ ಮರಣ ವಾರ್ತೆಯನ್ನು ಕೇಳಿ ವಿಕ್ರಮಾದಿತ್ಯ ಚೋಳ ರಾಜಧಾನಿ ಗಂಗೈಕೊಂಡಚೋಳಪುರಕ್ಕೆ ಧಾವಿಸಿ ಅಲ್ಲಿ ಕಂಟಕಪ್ರಾಯರಾಗಿದ್ದವರನ್ನು ನಿಗ್ರಹಿಸಿ ತನ್ನ ಮೈದುನ ಅಧಿರಾಜೇಂದ್ರನನ್ನು ಚೋಳ ಸಿಂಹಾಸನದ ಮೇಲೆ ಕೂರಿಸಿದ.

1073–76ರ ಸಮಯದಲ್ಲಿ ವೆಂಗಿಯ ಇಮ್ಮಡಿ ರಾಜೇಂದ್ರ ಚೋಳ ಚಕ್ರವರ್ತಿಯಾಗಿ ಅಧಿಕಾರ ವಹಿಸಿದ ಮೇಲೆ ವೆಂಗಿ ಸಹ ಚೋಳ ರಾಜ್ಯದ ಭಾಗವಾಯಿತು. ಇದು ಚಾಳುಕ್ಯರ ಗೌರವಕ್ಕೆ ಹಾನಿಯುಂಟು ಮಾಡಿತು. ಸೋಮೇಶ್ವರನ ನಿರ್ವೀರ್ಯ ವರ್ತನೆಯೇ ಇದಕ್ಕೆ ಕಾರಣವೆಂದು ತರ್ಕಿಸಿದ ವಿಕ್ರಮಾದಿತ್ಯ ತಾನೇ ರಾಜ್ಯವನ್ನು ವಹಿಸಿಕೊಳ್ಳುವ ಸನ್ನಾಹ ಮಾಡಿದ. 1071ರ ಕೆಲವು ಶಾಸನಗಳು ವಿಕ್ರಮಾದಿತ್ಯನನ್ನು ಚಾಳುಕ್ಯ ಸಮ್ರಾಟನೆಂದು ಹೇಳಿರುವುದು ಆ ಹೊತ್ತಿಗೆ ವಿಕ್ರಮಾದಿತ್ಯ ಈ ದಿಶೆಯಲ್ಲಿ ಕಾರ್ಯಪ್ರವೃತ್ತನಾಗಿದ್ದನೆಂಬ ಸೂಚನೆಯನ್ನು ಒದಗಿಸುತ್ತವೆ. 1076ರ ಹೊತ್ತಿಗೆ ಸೋಮೇಶ್ವರನಿಗೂ ವಿಕ್ರಮಾದಿತ್ಯನಿಗೂ ಯುದ್ಧ ನಡೆದು ವಿಕ್ರಮಾದಿತ್ಯ ಜಯಗಳಿಸಿದ. 1075–76ರ ಹೊತ್ತಿಗೆ ಚಾಳುಕ್ಯ ರಾಜ್ಯ ವಿಕ್ರಮಾದಿತ್ಯನ ಕೈವಶವಾದರೂ ಹಲವು ಆಂತರಿಕ ಶತ್ರುಗಳನ್ನು ನಿಗ್ರಹ ಮಾಡಬೇಕಾಗಿದ್ದು ಕೊನೆಗೆ ಪಿಂಗಳ ಸಂವತ್ಸರದ ಚೈತ್ರಶುದ್ಧ ಪಾಡ್ಯಮಿಯಂದು (1077 ಫೆಬ್ರವರಿ 26) ಪಟ್ಟಾಭಿಷಿಕ್ತನಾದ. ಅಂದಿನಿಂದ ಚಾಳುಕ್ಯ ವಿಕ್ರಮಶಕೆ ಎಂಬ ಕಾಲಗಣನೆಯನ್ನು ಉದ್ಘಾಟಿಸಿದ (ಈ ಗಣನೆ ಮುಂದೆ ಸುಮಾರು ಐವತ್ತು ವರ್ಷಗಳ ಕಾಲ ಪ್ರಚಲಿತವಾಗಿದ್ದಿತು).

ವಿಕ್ರಮಾದಿತ್ಯ ಸಿಂಹಾಸನವನ್ನೇರಿದಾಗ ಚೋಳ ಕುಲೋತ್ತುಂಗ ಪ್ರಬಲನಾಗಿದ್ದ. ಇದನ್ನು ಗಮನಿಸಿದ ವಿಕ್ರಮಾದಿತ್ಯ ಚಾಳುಕ್ಯರ ಕೈಬಿಟ್ಟ ವೆಂಗಿಯನ್ನು ಹಿಂತೆಗೆದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಅತ್ತ ಕುಲೋತ್ತುಂಗನೂ ಸೋಮೇಶ್ವರನಿಗೂ ಸಹಾಯ ಮಾಡಿ ವಿಕ್ರಮಾದಿತ್ಯನ

ಏಳ್ಗೆಯನ್ನು ತಡೆಯುವ ಪ್ರಯತ್ನದಲ್ಲಿ ಅಸಫಲನಾದ್ದರಿಂದ, ಇಬ್ಬರೂ ಪರಸ್ಪರರ ಶಕ್ತಿಯನ್ನು ಅರಿತು ತೆಪ್ಪಗಾದರು. ಆದರೆ ಇವನ ರಾಜ್ಯದಲ್ಲೇ ತಮ್ಮನಾದ ಯುವರಾಜ ಜಯಸಿಂಹ ದಂಗೆಯೆದ್ದ ಹಿಂದೆ ಅಣ್ಣನಿಗೆ ಸಹಾಯ ಮಾಡಿದ್ದರ ಪ್ರತಿಫಲವಾಗಿ ಯುವರಾಜ ಪದವಿಯನ್ನೂ ಅನೇಕ ಪ್ರಾಂತ್ಯಗಳ ಅಧಿಕಾರವನ್ನೂ ವಹಿಸಿಕೊಂಡಿದ್ದ ಜಯಸಿಂಹ ಕುಲೋತ್ತುಂಗನ ಸ್ನೇಹ ಬಯಸಿ ಅಣ್ಣನ ವಿರುದ್ಧ ನಿಂತಿದ್ದರಿಂದ ಎಲ್ಲ ಅಧಿಕಾರಗಳನ್ನು ಕಳೆದುಕೊಂಡ (1082). ಅದೇ ವರ್ಷ ವಿಕ್ರಮಾದಿತ್ಯನ ಮಗ ಮಲ್ಲಿಕಾರ್ಜುನನಿಗೆ ಯುವರಾಜತ್ವ ದಕ್ಕಿತು.

ವಿಕ್ರಮಾದಿತ್ಯ ಮೂರು ಬಾರಿ ಮಾಳವದ ಮೇಲೆ ದಾಳಿ ಮಾಡಿದ. ಪಟ್ಟಾಭಿಷಿಕ್ತನಾದ ತರುಣದಲ್ಲೇ ಸು. 1077 ರಲ್ಲಿ, ಹಿಂದೆ ತನ್ನ ಅಣ್ಣ ಸೋಮೇಶ್ವರ ಅಲ್ಲಿಯ ಉದಯಾದಿತ್ಯನಿಂದ ಅನುಭವಿಸಿದ್ದ ಸೋಲಿನ ಸೇಡು ತೀರಿಸಲು ತೆರಳಿದನಾದರೂ ಇದರ ಫಲಿತಾಂಶ ಸ್ಪಷ್ಟವಾಗಿಲ್ಲ. ಪ್ರಾಯಶಃ ಉದಯಾದಿತ್ಯನ ಮಗ ಜಗದ್ದೇವನಿಗೆ ಸಿಂಹಾಸನ ದೊರಕಿಸಿ ಕೊಡುವ ಉದ್ದೇಶದಿಂದ ಪುನಃ 1088ರ ಹೊತ್ತಿಗೆ ಮಾಳವಕ್ಕೆ ನುಗ್ಗಿ ಉದಯಾದಿತ್ಯನನ್ನು ಸೋಲಿಸಿ, ಪ್ರಾಯಶಃ ಕೊಂದು ರಾಜಧಾನಿ ಧಾರಾ ನಗರವನ್ನು ಸುಟ್ಟ. ಮತ್ತೊಮ್ಮೆ 1096–97ರಲ್ಲಿ ಧಾರಾನಗರವನ್ನು ಇವನು ಹಾಳುಗೆಡವಿದನೆಂದು ಶಾಸನಗಳಿಂದ ತಿಳಿಯುತ್ತದೆ. ಈ ದಾಳಿಗಳಿಂದಾಗಿ ನರ್ಮದೆಯ ದಕ್ಷಿಣಕ್ಕಿದ್ದ ಪ್ರದೇಶವೆಲ್ಲ ಚಾಳುಕ್ಯ ರಾಜ್ಯಕ್ಕೆ ಸೇರಿತು.

ಅಲ್ಲದೆ, ವಿಕ್ರಮಾದಿತ್ಯ ಪೈವೆಯ (ಹೈವೆಯ) ಗೊಗ್ಗಿ, ನಾಗವರ್ಮ, ಕರಾಡದ ಶಿಲಾಹಾರ ವಂಶದ ಒಂದನೆಯ ಭೋಜ ಇವರನ್ನು ನಿಗ್ರಹಿಸಿದ. ಇವನ ಸೇನಾನಿ ಶ್ರೀಪತಿಯರಸ ರತ್ನಪುರಿಯ ಕಳಚುರಿಗಳ ಮೇಲೆ ವಿಜಯ ಸಾಧಿಸಿದ.

ವಿಕ್ರಮಾದಿತ್ಯ ಮೊದಲು ವೆಂಗಿ ರಾಜ್ಯದ ಆಸೆಯನ್ನು ಬಿಟ್ಟಿದ್ದರೂ ಕೆಲಕಾಲಾನಂತರ ಅಲ್ಲಿ ಉಂಟಾಗಿದ್ದ ರಾಜಕೀಯ ಅಸ್ತವ್ಯಸ್ತ ಪರಿಸ್ಥಿತಿಯ ಲಾಭ ಪಡೆಯಲು ಉದ್ದೇಶಿಸಿದ. 1087, 1098, 1118ರಲ್ಲಿ ಕೊಂಡೆಯ ಮಹಾರಾಜ ಮತ್ತು ದಂಡನಾಯಕ ಚಿದ್ದರಸರು ಕೊಲ್ಲಿಪಾಕೆಯನ್ನು ಇವನ ಸಾಮಂತನಾಗಿ ಆಳುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಸು.1120ರ ಹೊತ್ತಿಗೆ ವೆಂಗಿ ಪೂರ್ಣವಾಗಿ ವಿಕ್ರಮಾದಿತ್ಯನ ಕಕ್ಷೆಗೆ ಬಂದು ಇವನ ಸಾಮ್ರಾಜ್ಯ ಪೂರ್ವ ಪಶ್ಚಿಮ ಸಮುದ್ರಪರ್ಯಂತ ಹರಡಿತು.

ಇವನ ಆಳ್ವಿಕೆಯ ಕೊನೆಗಾಲದಲ್ಲಿ ಹೊಯ್ಸಳರು ಸ್ವತಂತ್ರರಾಗುವ ಪ್ರಯತ್ನಗಳನ್ನು ನಡೆಸಿದರು. ಹೊಯ್ಸಳ ಎರೆಯಂಗ ವಿಕ್ರಮಾದಿತ್ಯನ ಬಲಗೈಯಂತಿದ್ದು ಚಾಳುಕ್ಯರು ನಡೆಸಿದ ಹಲವು ಯುದ್ಧಗಳಲ್ಲಿ ಪಾಲ್ಗೊಂಡಿದ್ದರೂ ಅವನ ಮಗ ಬಲ್ಲಾಳ ಸ್ವತಂತ್ರನಾಗಲೆಚ್ಚಿಸಿದ. ಬೆಳೆಯುತ್ತಿದ್ದ ಇವನ ಬಲವನ್ನು ಮುರಿಯಲು ವಿಕ್ರಮಾದಿತ್ಯ ತನ್ನ ನೆಚ್ಚಿನ ದಂಡನಾಯಕ ಪರಮಾರ ಜಗದ್ದೇವನನ್ನು ಇವನ ನಿಗ್ರಹಕ್ಕಾಗಿ ನಿಯೋಜಿಸಿದ. ಆದರೆ ಬಲ್ಲಾಳ ಮತ್ತು ಅವನ ತಮ್ಮ ವಿಷ್ಣುವರ್ಧನರ ಪ್ರತಾಪದೆದುರು ಜಗದ್ದೇವ ಸೋತ. ಇದರಿಂದ ಉತ್ತೇಜಿತನಾದ ಬಲ್ಲಾಳ ಉಚ್ಚಂಗಿಯ ಪಾಂಡ್ಯರೇ ಮೊದಲಾದ ವಿಕ್ರಮಾದಿತ್ಯನ ಇತರ ಸಾಮಂತರೊಡನೆ ಸಮರ ಹೂಡಿದ. ಈ ಉದ್ಧಟತನವನ್ನು ಸಹಿಸದ ವಿಕ್ರಮಾದಿತ್ಯ ತನ್ನ ಸಾಮಂತ ಸಿಂದ ಆಚುಗಿಯನ್ನು ಕಳುಹಿಸಿ ಬಲ್ಲಾಳನನ್ನು ಸೋಲಿಸಿದ. ಬಲ್ಲಾಳ ಕೊನೆಗೆ ಸಾಮಂತತ್ವವನ್ನು ಒಪ್ಪಿದ. ಅವನ ಉತ್ತರಾಧಿಕಾರಿ ವಿಷ್ಣುವರ್ಧನ ಮೊದಲು ಚೋಳರನ್ನು ತಲಕಾಡಿನಿಂದ ಓಡಿಸಿ, ನೀಲಗಿರಿ ಮುಂತಾದ ಪ್ರಾಂತ್ಯಗಳನ್ನು ವಶಪಡಿಸಿಕೊಂಡ. ಚಾಳುಕ್ಯ ಸಾಮ್ರಾಟ ತಲೆದೂಗುವಂತೆ ಮಾಡಿದ. ಆದರೆ ಮುಂದೆ ಆಳುಪರ ಮೇಲೆ ಮತ್ತು ನಿಡುಗಲ್ಲು, ಹೆಂಜೇರುಗಳ ಮೇಲೆ ವಿಷ್ಣುವರ್ಧನ ದಂಡೆತ್ತಿಹೋದುದನ್ನು ವಿಕ್ರಮಾದಿತ್ಯ ಸಹಿಸದೆ ಅನೇಕ ಮಂಡಲೇಶ್ವರರು ಮತ್ತು ಸಾಮಂತರನ್ನು ಕೂಡಿಸಿ ವಿಷ್ಣುವರ್ಧನನ ನಿಗ್ರಹಕ್ಕೆ ಕಳುಹಿಸಿದ. ಸು.1117–18ರಲ್ಲಿ ಕಣ್ಣೇಗಾಲದಲ್ಲಿ ನಡೆದ ಕದನದಲ್ಲಿ ವಿಷ್ಣುವರ್ಧನನ ದಂಡನಾಯಕ ಗಂಗರಾಜ ಚಾಳುಕ್ಯ ಸೈನ್ಯವನ್ನು ಸದೆಬಡಿದ. ಅಲ್ಲದೆ ಈ ವಿಜಯ ಹೊಯ್ಸಳ ರಾಜ್ಯದ ವಿಸ್ತರಣೆಗೆ ನಾಂದಿಯಾಯಿತು. ವಿಷ್ಣುವರ್ಧನ ಹಾನುಗಲ್ಲು, ಬಳ್ಳಾರಿ, ಕುಮ್ಮಟ ಮೊದಲಾದುವನ್ನಲ್ಲದೆ ಬೆಳ್ವೊಲವನ್ನು ವಶಪಡಿಸಿಕೊಂಡು ಮಲಪ್ರಭಾ ನದಿಯವರೆಗೂ ಮುನ್ನಡೆದ. ಈ ಸಂದರ್ಭದಲ್ಲಿ ವಿಷ್ಣುವರ್ಧನನ ಪೆಟ್ಟಿಗೆ ಸಿಕ್ಕಿ ಅವಮಾನಿತರಾಗಿದ್ದ ಹಾನುಗಲ್ಲು ಮತ್ತು ಗೋವೆಯ ಕದಂಬರು ಮತ್ತು ಸಿಂದರನ್ನು ವಿಕ್ರಮಾದಿತ್ಯ ಒಟ್ಟುಕೂಡಿಸಿ ವಿಷ್ಣುವರ್ಧನನನ್ನು ತುಳಿಯಲು ಸನ್ನಾಹ ನಡೆಸಿದ. 1122ರ ಸುಮಾರಿನಲ್ಲಿ ಶಿವಮೊಗ್ಗ ಜಿಲ್ಲೆಯ ಹಲಸೂರು, ಮೈಸೂರು ಜಿಲ್ಲೆಯ ಹೊಸವೀಡುಗಳ ಬಳಿ ನಡೆದ ಯುದ್ಧಗಳಲ್ಲಿ ವಿಷ್ಣುವರ್ಧನ ಸೋತು, ಅವನು ಹೊಸದಾಗಿ ಆಕ್ರಮಿಸಿದ ಭಾಗಗಳನ್ನೆಲ್ಲ ಬಿಟ್ಟುಕೊಡಬೇಕಾಯಿತು. ಆದರೂ ಹೊಯ್ಸಳರು ನಿಗ್ರಹಿಸಲಾಗದಷ್ಟು ಪ್ರಬಲರಾದುದರಿಂದ ವಿಕ್ರಮಾದಿತ್ಯ ಮೌನವಾಗಿ ಅವರ ಉರುಟಣೆಯನ್ನು ಸಹಿಸಿಕೊಳ್ಳಬೇಕಾಯಿತು.

ಸು.50 ವರ್ಷಗಳ ದೀರ್ಘ ಆಳ್ವಿಕೆಯ ಅನಂತರ 1127ರಲ್ಲಿ ವಿಕ್ರಮಾದಿತ್ಯ ಮರಣಹೊಂದಿದ. ಇವನಿಗೆ ಚಂದಲದೇವಿ, ಮಲಯಮತೀದೇವಿ, ಪದ್ಮಲದೇವಿ, ಚೌಕಲದೇವಿ ಮೊದಲಾದ ಹಲವಾರು ಪತ್ನಿಯರಿದ್ದರು. ಇವರಲ್ಲಿ ಚಂದಲದೇವಿ **(ನೋಡಿ)** ಶಿಲಾಹಾರ ವಂಶದವಳು. ಇವಳು ನೃತ್ಯವಿದ್ಯಾಧರೆ, ಅಭಿನವಸರಸ್ವತಿ, ಇತ್ಯಾದಿಯಾಗಿ ಬಿರುದು ಗಳಿಸಿದ್ದು ಹಲವು ಕಲೆಗಳಲ್ಲಿ ನಿಪುಣಳಾಗಿದ್ದಳಲ್ಲದೆ, ಕವಿಕಲಾಪೋಷಕಳಾಗಿದ್ದಳು. ಮಲ್ಲಿಕಾರ್ಜುನ, ಸೋಮೇಶ್ವರ III, ಜಯಕರ್ಣ ಮತ್ತು ತೈಲಪ ವಿಕ್ರಮಾದಿತ್ಯನ ಮಕ್ಕಳು. ಯುವರಾಜನೂ ಹಿರಿಯ ಮಗನೂ ಆಗಿದ್ದ ಮಲ್ಲಿಕಾರ್ಜುನ ತಂದೆಗಿಂತ ಮೊದಲೇ ಗತಿಸಿದ್ದರಿಂದ, 3ನೆಯ ಸೋಮೇಶ್ವರ ಇವನ ಅನಂತರ ಪಟ್ಟಕ್ಕೆ ಬಂದ.

ವಿಕ್ರಮಾದಿತ್ಯನ ಆಳ್ವಿಕೆಯ ಕಾಲ ವೈಭವಯುತವಾಗಿತ್ತು. ಹಲವು ದೇವಾಲಯಗಳ ನಿರ್ಮಾಣ, ಧರ್ಮ, ದತ್ತಿಗಳ ಸ್ಥಾಪನೆ ಇವನ ಕಾಲದಲ್ಲಿ ಆದುವೆಂದು ಇವನ ನೂರಾರು ಶಾಸನಗಳು ಸಾರುತ್ತವೆ. ವಿಕ್ರಮಾದಿತ್ಯ ತನ್ನ ಆಸ್ಥಾನದಲ್ಲಿ ಪ್ರಭಾವಿತರಾದ ವಿದ್ವಾಂಸರಿಗೆ ಪ್ರೋತ್ಸಾಹವನ್ನಿತ್ತಿದ್ದ. ಬಿಲ್ಹಣ ವಿಕ್ರಮಾದಿತ್ಯನ ಆಸ್ಥಾನಕವಿಯಾಗಿದ್ದು ವಿಕ್ರಮಾಂಕದೇವಚರಿತವೆಂಬ ಗ್ರಂಥವನ್ನು ರಚಿಸಿದ. ಇದರಲ್ಲಿ ತನ್ನ ಪ್ರಭುವಿನ ಮಹಾಕಾರ್ಯಗಳನ್ನು ಮೂರ್ತಿಮತ್ತಾಗಿ ಅಡಕವಾಗಿಸಿದ್ದಾನೆ. ಮಿತಾಕ್ಷರವನ್ನು ಬರೆದ ಪ್ರಸಿದ್ಧ ನ್ಯಾಯವಾದಿ ವಿಜ್ಞಾನೇಶ್ವರ **(ನೋಡಿ)** ಇವನ ಆಸ್ಥಾನದಲ್ಲಿದ್ದ. ಈ ಗ್ರಂಥ ಇಂದಿಗೂ ಹಿಂದು ನ್ಯಾಯಶಾಸ್ತ್ರದ ಮೂಲಾಧಾರವಾಗಿ ಬಳಕೆಯಲ್ಲಿದೆ. ಕಲ್ಯಾಣದಂಥ ನಗರವಾಗಲೀ ವಿಕ್ರಮಾದಿತ್ಯನಂಥ ಅರಸಾಗಲೀ ಬೇರೆಲ್ಲೂ ಇಲ್ಲ ಎಂದು ಈ ಗ್ರಂಥದಲ್ಲಿ ಹೊಗಳಲಾಗಿದೆ. **(ವಿ.ಜಿ.ಬಿ.)**

**ವಿಘ್ನಸಂತೆ:** ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿ ಕಸಬೆಯಿಂದ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿ, ನೊಣವಿನಕೆರೆಯಿಂದ ಸು. 5 ಕಿಮೀ ನೈಋತ್ಯದಲ್ಲಿ ಇರುವ ಗ್ರಾಮ. ಈ ಹಳ್ಳಿಯ ಪ್ರಾಚೀನ ಹೆಸರು ಇಗನಸಂತೆ. ಹೊಯ್ಸಳರ ಕಾಲದಲ್ಲಿ ಇದೊಂದು ಪ್ರಮುಖ ಸ್ಥಳವಾಗಿತ್ತು. ಈ ಗ್ರಾಮ ಈಗ ಆ ಕಾಲದ ದೇವಾಲಯಗಳಿಂದ ಪ್ರಸಿದ್ಧವಾಗಿದೆ.

ಲಕ್ಷ್ಮೀನರಸಿಂಹ ದೇವಾಲಯ ಇಲ್ಲಿಯ ಪ್ರಧಾನ ಆಕರ್ಷಣೆ. ಹೊಯ್ಸ ಮೂರನೆಯ ನರಸಿಂಹನ ದಂಡನಾಯಕರೂ ಮಲ್ಲಿದೇವದಂಡನಾಯಕನ ಮಕ್ಕಳೂ ಆದ ಅಪ್ಪಯ್ಯ, ಗೋಪಾಲ ಮತ್ತು ಮಾಧವ ಎಂಬವರು 1286ರಲ್ಲಿ ಈ ದೇವಾಲಯವನ್ನು ಕಟ್ಟಿಸಿದರೆಂದು ಇಲ್ಲಿನ ಒಂದು ಶಾಸನ

ತಿಳಿಸುತ್ತದೆ. ಲಕ್ಷ್ಮೀನರಸಿಂಹ ದೇವಾಲಯ ಹೊಯ್ಸಳ ಶೈಲಿಯಲ್ಲಿರುವ ತ್ರಿಕೂಟಾಚಲ. ಉತ್ತರಾಭಿಮುಖವಾಗಿರುವ ಈ ದೇವಾಲಯದ ತಳವಿನ್ಯಾಸ ಅನೇಕ ಸಮಕೋಣಗಳ ಹಿನ್‌ಸರಿತ ಮುನ್‌ಸರಿತಗಳ ಅಂಚುಳ್ಳ ಗಿಡ್ಡು ಶಿಲುಬೆಯಾಕಾರದಲ್ಲಿದೆ. ಮಧ್ಯದಲ್ಲಿ ನವರಂಗವೂ ಇದಕ್ಕೆ ತೆರೆದಂತೆ ಪೂರ್ವ ಪಶ್ಚಿಮಗಳಲ್ಲಿ ಒಂದೊಂದು ಗರ್ಭಗೃಹಗಳು ಮತ್ತು ದಕ್ಷಿಣದಲ್ಲಿ ಸುಕನಾಸಿಯುತ ಗರ್ಭಗೃಹವೂ ಪೂರ್ವದಲ್ಲಿ ಮುಖಮಂಟಪವೂ ಇವೆ. ದೇವಾಲಯದ ಹೊರಮೈನಲ್ಲಿ ಸುರುಳಿ, ಕುಂಭಾಕೃತಿ, ಮಕರಮುಖ ಮುಂತಾದ ಕೆತ್ತನೆಗಳುಳ್ಳ ಅಧಿಷ್ಠಾನ ಪಟ್ಟಿಕೆಗಳಿವೆ. ಭಿತ್ತಿ ಭಾಗ ಅನೇಕ ಅರೆಗಂಬಗಳಿಂದ ಕೂಡಿದೆ. ಕಪೋತದೆಡೆಯಲ್ಲಿ ಕುಂಭ, ಮಕರ ಮತ್ತು



ಲಕ್ಷ್ಮೀನರಸಿಂಹ ದೇವಾಲಯ

ಕಿರುಗೋಪುರಗಳ ಅಲಂಕರಣವಿದೆ. ದೇವಾಲಯದ ಶಿಖರ ಸುಂದರ ರಚನೆ. ನಾಲ್ಕು ಘಟ್ಟಗಳಲ್ಲಿ ಮೇಲೆದ್ದಿರುವ ಈ ಶಿಖರದ ಪ್ರತಿಘಟ್ಟವೂ ಚಿಕ್ಕ ಅಲ್ಪ ಉಬ್ಬಿನ ಶಿಖರಗಳಿಂದ ಅಲಂಕೃತವಾಗಿದೆ. ಸುಕನಾಸಿಯ ಮೇಲೆ ಶಿಖರದ ನಾಲ್ಕೂ ಕಡೆಗಳಲ್ಲೂ ಯೋಗಾನರಸಿಂಹ, ನಟರಾಜ, ಮಾಧವ ಮೊದಲಾದ ಶಿಲ್ಪಗಳಿವೆ. ಮುಖಮಂಟಪದ ಮುಂಭಾಗದ ಎರಡು ಕಂಬಗಳು ಹಾಗೂ ಇತರ ಭಾಗಗಳನ್ನು ಬಹುನಾಜೂಕಾಗಿ ಕೆತ್ತಲಾಗಿವೆ. ನವರಂಗದ ಕಂಬಗಳು ಅದರ ಹಾಗೂ ಸುಕನಾಸಿ ಗರ್ಭಗೃಹಗಳ ಬಾಗಿಲುವಾಡಗಳು ಮತ್ತು ಭುವನೇಶ್ವರಿಗಳು ಹೊಯ್ಸಳ ಶೈಲಿಗೆ ಸಹಜವಾಗಿ ಸುಂದರ ವಿನ್ಯಾಸದ ಸೂಕ್ಷ್ಮ ಕೆತ್ತನೆಗಳಿಂದ ಕೂಡಿವೆ. ದೇವಾಲಯದ ಮುಖ್ಯ ಗರ್ಭಗೃಹದಲ್ಲಿ ಕೇಶವ, ಪಶ್ಚಿಮದ ಗರ್ಭಗುಡಿಯಲ್ಲಿ ಲಕ್ಷ್ಮೀನಾರಾಯಣ ಮತ್ತು ದಕ್ಷಿಣದ ಗರ್ಭಗುಡಿಯಲ್ಲಿ ವೇಣುಗೋಪಾಲ ವಿಗ್ರಹಗಳು ಪ್ರತಿಷ್ಠಾಪಿತವಾಗಿವೆ. ಇವೂ ಸುಂದರ ಹೊಯ್ಸಳ ಕೃತಿಗಳು. ವಿಶಿಷ್ಟ ವಿನ್ಯಾಸ ಮತ್ತು ಸೂಕ್ಷ್ಮ ಶಿಲ್ಪಾಲಂಕರಣಗಳಿಂದ ಕೂಡಿದ ಹೊಯ್ಸಳ ಶೈಲಿಯಲ್ಲೇ ಪೂರ್ಣವಾಗಿ ರಚಿತವಾಗಿರುವ ದೇವಾಲಯಗಳಲ್ಲಿ ಈ ಲಕ್ಷ್ಮೀನರಸಿಂಹ ದೇವಾಲಯ ಬಹುಶಃ ಕೊನೆಯದು. ಇದರಲ್ಲೂ ಹೊರಭಿತ್ತಿಯ ಮೇಲೆ ಶಿಲ್ಪಾವಳಿಯಿಲ್ಲದೆ ಬರಿಯ ಅರೆಗಂಬಗಳಿರುವುದು ಮತ್ತು ಶಿಖರದ ವಿನ್ಯಾಸ ಮಾಮೂಲಿಗಿಂತ ಸ್ವಲ್ಪ ವ್ಯತ್ಯಸ್ತವಾಗಿರುವುದು ಗಮನಾರ್ಹ ಬದಲಾವಣೆಗಳು. *

ಬಾಲಲಿಂಗೇಶ್ವರ ದೇವಾಲಯ, ಲಕ್ಷ್ಮೀನರಸಿಂಹ ದೇವಾಲಯ ಉತ್ತರ–ಈಶಾನ್ಯ ದಿಶೆಯಲ್ಲಿ ಚಿಕ್ಕ ಹಳ್ಳವೊಂದರ ಪಕ್ಕದಲ್ಲಿದೆ. ಇದೂ ಮೇಲಿನ ದೇವಾಲಯದ ವಿನ್ಯಾಸದಲ್ಲಿಯೇ ಇರುವ ತ್ರಿಕೂಟಾಚಲ. ಆದರೆ ಹೊರಭಿತ್ತಿ ಅಲಂಕಾರ ರಹಿತವಾಗಿ ಬಹು ಸರಳವಾಗಿದೆ. ಇದರ ಶಿಖರ ಮೆಟ್ಟಲು ಮೆಟ್ಟಲಾಗಿ ಏಳು ಘಟ್ಟಗಳಲ್ಲಿ ಮೇಲೆದ್ದಿದೆ. ಗರ್ಭಗುಡಿಗಳಲ್ಲಿದ್ದ ಮೂಲ ವಿಗ್ರಹಗಳು ಬದಲಾಗಿವೆ. ದೇವಾಲಯವೂ ಸ್ವಲ್ಪಮಟ್ಟಿಗೆ ನವೀಕೃತವಾಗಿದೆ. ಭೈರವ (ಬೋರೆದೇವ) ದೇವಾಲಯ ಗರ್ಭಗೃಹ ಮತ್ತು ಮುಖಮಂಟಪಗಳನ್ನುಳ್ಳ ಚಿಕ್ಕ ಗುಡಿ. ಇದರಲ್ಲಿ ಸು. 13–14ನೆಯ ಶತಮಾನದ ಕೆಲವು ವಿಗ್ರಹಗಳಿವೆ. ಗ್ರಾಮದ ಉತ್ತರಕ್ಕೆ ಹೊಲವೊಂದರಲ್ಲಿ ಬನಶಂಕರಿ ದೇವಾಲಯವಿದೆ. ಗರ್ಭಗೃಹ ಮತ್ತು ಸುಕನಾಸಿ ಮಾತ್ರವಿರುವ ಈ ದೇವಾಲಯದಲ್ಲಿ ಸುಖಾಸನಾರೂಢವಾದ ಬಹುಶಃ ಹೊಯ್ಸಳ ಕಾಲಕ್ಕೆ ಸೇರಿದ ದೇವಿಯ ವಿಗ್ರಹವಿದೆ. ಈ ದೇವಿ ಅಲ್ಲಿಯ ನೇಕಾರರ ಅಧಿದೇವತೆ. (ಎಂ.ಎಲ್.ಎಸ್.)

**ವಿಜಯದಾಸ:** ಸು. 18ನೆಯ ಶತಮಾನ. ಕನ್ನಡದ ಪ್ರಮುಖ ಹರಿದಾಸರಲ್ಲಿ ಒಬ್ಬರು. ಮಾನ್ವಿ ತಾಲ್ಲೂಕಿನ ಚೀಕಲಪರವಿ ಇವರ ಜನ್ಮಸ್ಥಳ. ತಂದೆ ಶ್ರೀನಿವಾಸಪ್ಪ, ತಾಯಿ ಕೂಸಮ್ಮ. ದಾಸಪ್ಪ ಎಂಬುದು ಇವರ ಪೂರ್ವಾಶ್ರಮದ ಹೆಸರು. ಕಡುಬಡತನದಲ್ಲಿ ಬೆಳೆದ ಇವರಿಗೆ ಪುರಂದರದಾಸರಿಂದ ಸ್ವಪ್ನದಲ್ಲಿ ಅಂಕಿತ ಪ್ರಧಾನವಾಗಿ ವಿಜಯದಾಸರಾದರೆಂದು ತಿಳಿಯುತ್ತದೆ. ವಿಜಯವಿಠಲ ಎಂಬುದು ಇವರ ಅಂಕಿತ. ಕಾಲ, ಸಾಧನೆ, ಸಿದ್ಧಿಗಳ ದೃಷ್ಟಿಯಿಂದ ಇವರನ್ನು ಹರಿದಾಸ ಸಾಹಿತ್ಯದ ದ್ವಿತೀಯ ಘಟ್ಟದ ಪ್ರಮುಖರೆನ್ನಬಹುದು. ಪುರಂದರ, ಕನಕಾದಿ ದಾಸರುಗಳಿಂದ ಕಾವ್ಯಮಯವಾಗಿ ಹೊಮ್ಮಿದ ದಾಸಸಾಹಿತ್ಯ ಇವರ ಕೈಯಲ್ಲಿ ಶಾಸ್ತ್ರಜ್ಞಾನ ಹಾಗೂ ಪಾಂಡಿತ್ಯದ ಕುರುಹಾಯಿತು. ಹರಿನಾಮ ಮಹಿಮೆ, ಬಿಂಬರೂಪಿ ಭಗವಂತನನ್ನು ಒಲಿಸಿಕೊಳ್ಳುವ ಬಗೆ, ಜ್ಞಾನ ಭಕ್ತಿ ವೈರಾಗ್ಯಗಳ ಸಂಪಾದನೆ, ಹರಿಸರ್ವೋತ್ತಮತ್ವ ಹರಿಯ ಸರ್ವವ್ಯಾಪಕತ್ವ, ದೇವತಾ ತಾರತಮ್ಯ, ಗುರುಕರುಣೆಯ ಅಪಾರತೆ, ಭಗವತ್ಪ್ರಸಾದದ ಆವಶ್ಯಕತೆ –ಈ ಎಲ್ಲ ಮಾಧ್ಯಮವಾಗಿ ನಿಂತ ಇವರ ಕೃತಿಗಳಲ್ಲಿ ಲಾಲಿತ್ಯದ ಅಂಶ ಕಡಿಮೆ. ಇತರ ದಾಸರಲ್ಲಿ ಕಂಡುಬರುವಷ್ಟು ವೈವಿಧ್ಯವೂ ಇಲ್ಲ. ಇವರಲ್ಲಿ ಗಹನವಾದ ವಸ್ತುವಿಗೆ ಅನುಗುಣವಾಗಿ ಸುಳಾದಿಗಳ ರಚನೆ ಹೆಚ್ಚು, ಕೀರ್ತನೆಗಳ ವಸ್ತು, ಬಂಧುಗಳು ಬಿಗಿಯಾಗಿದ್ದರೂ ಭಾಷೆ ಹಾಗೂ ನಿರೂಪಣೆಗಳು ಸರಳವಾಗಿವೆ. ಎಲ್ಲರೊಳು ವ್ಯಾಪಕನಾಗಿಪ್ಪನೆ ಬಲ್ಲಿದ ದೊರೆಯೇ ಜ್ಞಾನಿಗಳರಸನೆ ಎಲ್ಲಿ ನೋಡಲು ಸರಿಗಾಣೆ ವಿಜಯವಿಠಲ ಬಾ, ಅಪ್ರತಿಮಲ್ಲ ಬಾ, ಭಕುತವತ್ಸಲ ಬಾ, ಹಸೆಯ ಜಗುಲಿಗೆ–ಇದು ಶೋಭಾನೆಯ ಪದವೊಂದರಲ್ಲಿ ಪರಮಾತ್ಮನನ್ನು ಹಸೆಮಣೆಗೆ ಕರೆದಿರುವ, ಆ ಮೂಲಕ ಹರಿಯ ಸರ್ವಶಕ್ತ ಹಾಗೂ ಸರ್ವವ್ಯಾಪಕ–ಎಂಬ ತತ್ತ್ವವನ್ನು ಪ್ರತಿಪಾದನೆ ಮಾಡುವ ರೀತಿ. ಈ ರೀತಿಯ ತಾತ್ತ್ವಿಕತೆಯೊಂದಿಗೆ ಮನಸ್ಸಿನ ಚಂಚಲತೆ, ಮನೋನಿಗ್ರಹದ ಕಷ್ಟಸಾಧ್ಯತೆ, ಮನುಷ್ಯನ ಜೀವನದಲ್ಲಿ ಋಣದ ಪಾತ್ರ, ಹಬ್ಬಗಳ ಆಚರಣೆ ಇತ್ಯಾದಿಗಳನ್ನೂ ಇವರು ವಿಚಾರ ಮಾಡಿದ್ದಾರೆ. ವಸುಧೆಯೊಳಗೆ ಒಂದು ಕಾಸು ಕೊಟ್ಟವನ ಋಣ ವಸುಧೆಯೆಲ್ಲಾ ತಿರುಗೆಪೋಗದಯ್ಯ ಎಂಬ ಮಾತು, ದಂಪತಿಗಳು ಏಕವಾಗಿಪ್ಪುದೇ ಹಬ್ಬ ಎಂಬ ವ್ಯಾಖ್ಯಾನ ಇವರ ಅನುಭವ, ತಿಳಿವಳಿಕೆ ಹಾಗೂ ವಿಶಾಲದೃಷ್ಟಿಗಳ ದ್ಯೋತಕವಾಗಿದೆ. ಅಂತೆಯೇ ಆತ್ಮಯಜ್ಞಸುಳಾದಿ, ಹರಿಸ್ವತಂತ್ರಸುಳಾದಿ, ಅಭಯಸುಳಾದಿ, ಕಂಕಣ ಸುಳಾದಿಗಳಲ್ಲಿನ ಇವರ ಶಾಸ್ತ್ರಜ್ಞಾನ ಮೆಚ್ಚುವಂಥದು.

ಪುರಂದರದಾಸರ ಜೀವನ ಪರಿಚಯಕ್ಕೆ ವಿಜಯದಾಸರ ಉಪಲಬ್ಧವಿರುವ ಕೀರ್ತನೆಗಳೆ ಪ್ರಾಚೀನ ಪ್ರಮಾಣಗಳು. ಜೊತೆಗೆ ಶ್ರೀಪಾದರಾಯ, ಟೀಕಾಚಾರ್ಯ, ವ್ಯಾಸರಾಯ–ಇವರುಗಳ ಬಗ್ಗೆಯೂ ಸಾಕಷ್ಟು ವಿಷಯ ಸಂಗ್ರಹಣೆ ಮಾಡಿಕೊಟ್ಟಿದ್ದಾರೆ. ಮತಸಾಹಿತ್ಯವಾಗಿ ಇವರ ಕೃತಿಗಳು ವಿಶೇಷ ಮೌಲ್ಯವನ್ನೊಳಗೊಂಡಿವೆಯೆನ್ನಬಹುದು.

ಸುಮಾರು ಎಪ್ಪತ್ತಮೂರು ವರ್ಷಗಳ ತುಂಬು ಜೀವನವನು ಬಾಳಿ, ಗುಂತಕಲ್ಲಿನ ಬಳಿಯಿರುವ ಚಿಪ್ಪಗಿರಿ ಎಂಬ ಸ್ಥಳದಲ್ಲಿ ದಿವಂಗತರಾದರು. ಇವರು ಭೃಗುಮುನಿಗಳ ಅವತಾರವೆಂಬ ಒಂದು ನಂಬಿಕೆಯೂ ಪುರಂದರ ದಾಸರ ನಾಲ್ಕನೆಯ ಮಗ ಮಧ್ವಪತಿಯೆ ವಿಜಯದಾಸರಾಗಿ ಹುಟ್ಟಿದರೆಂಬ ಪ್ರತೀತಿಯೂ ಇದೆ. ಇವರ ಶಿಷ್ಯ ಮೋಹನದಾಸರು ಮುಂದೆ ಪ್ರಸಿದ್ಧ ಹರಿದಾಸರಾದರು.

**(ಟಿ.ಎಸ್.ಎಸ್.)**

**ವಿಜಯನಗರ:** 14–17 ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ, ಕನ್ನಡ ಸಂಸ್ಕೃತಿಯನ್ನು ಅದರಲ್ಲೂ ಹಿಂದು ಸಂಸ್ಕೃತಿಯನ್ನು ಎತ್ತಿಹಿಡಿದ ಪ್ರಸಿದ್ಧ ಸಾಮ್ರಾಜ್ಯ.

**ರಾಜಕೀಯ ಇತಿಹಾಸ:** ವಿಜಯನಗರ ಸಾಮ್ರಾಜ್ಯ 1336ರ ವೇಳೆಗೆ ಅಸ್ತಿತ್ವಕ್ಕೆ ಬಂತು. ಸಂಗಮಪುತ್ರರಾದ ಹರಿಹರ ಬುಕ್ಕರು ಈ ಸಾಮ್ರಾಜ್ಯವನ್ನು ಸ್ಥಾಪಿಸುವುದರಲ್ಲಿ ವಿಶೇಷವಾದ ಪಾತ್ರವನ್ನು ವಹಿಸಿದರು. ಇವರ ಕಿರಿಯ ಸೋದರರಾದ ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಇವರಿಗೆ ಬೆನ್ನೆಲುಬಾಗಿ ನಿಂತು ಸಹಾಯ ಮಾಡಿದರು. ಈ ಸೋದರರು ಮೂಲತಃ ಆಂಧ್ರಪ್ರದೇಶ ದವರೆಂದೂ ಕಾಕತೀಯ ಪ್ರತಾಪರುದ್ರನ ಅಧಿಕಾರಿಗಳಾಗಿದ್ದ ಇವರು, ಆ ರಾಜ್ಯ ಮುಸ್ಲಿಮರ ವಶವಾದ ಅನಂತರ ಹಂಪೆಯ ಪರಿಸರದ ಪ್ರದೇಶಕ್ಕೆ ಬಂದು ಕಂಪಿಲಿಯ ರಾಮನಾಥನ ಅಧಿಕಾರಿಗಳಾದರೆಂದೂ ಕಂಪಿಲಿಯೂ ಮುಸ್ಲಿಮರ ಆಘಾತಕ್ಕೆ ಈಡಾದ ಸಂದರ್ಭದಲ್ಲಿ ಸೆರೆಸಿಕ್ಕಿದ ಇವರು ದೆಹಲಿಗೆ ಒಯ್ಯಲ್ಪಟ್ಟರೆಂದು ಆದರೆ ಮಹಮ್ಮದ್-ಬಿನ್-ತುಗಲಕನು ಕರ್ನಾಟಕದಲ್ಲಿ ತಲೆಯೆತ್ತಿದ ದಂಗೆಯನ್ನಡಗಿಸಲು ಇವರನ್ನೇ ಇಲ್ಲಿನ ಪ್ರಾಂತ್ಯಾಧಿಕಾರಿಗಳಾಗಿ ನೇಮಿಸಿ ಕಳಿಸಿದನೆಂದೂ ಇಲ್ಲಿಗೆ ಹಿಂತಿರುಗಿದ ಇವರು ವಿದ್ಯಾರಣ್ಯರ ಪ್ರಭಾವಕ್ಕೊಳಗಾಗಿ, ಆ ವೇಳೆಗೆ ಮತಾಂತರಗೊಂಡಿದ್ದರೂ ಮತ್ತೊಮ್ಮೆ ಹಿಂದು ಮತವನ್ನಪ್ಪಿ ಆ ಗುರುಗಳ ಕೃಪೆಯಿಂದ ಇಲ್ಲಿಯೇ ಸ್ವತಂತ್ರವಾದ ರಾಜ್ಯಸ್ಥಾಪನೆ ಮಾಡಿದರೆಂದೂ ಒಂದು ವಾದವಿದೆ.

ಈ ಸಂದರ್ಭದಲ್ಲಿ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಗೋಜಲವೀಡು ಗ್ರಾಮದಲ್ಲಿ ದೊರೆತ ಶಾಸನವೊಂದನ್ನು (ಶಾಸನದ ಕಾಲ 1314 ಎಂದು ನೆಲ್ಲೂರು ಜಿಲ್ಲೆಯ ಶಾಸನ ಸಂಪುಟಗಳ ಎರಡನೆಯ ಭಾಗದಲ್ಲಿ ಪ್ರಕಟವಾಗಿದೆ) ಆಧರಿಸಿ ಈ ಶಾಸನೋಕ್ತ ಬುಕ್ಕನು ಒಂದನೆಯ ಬುಕ್ಕನೆಂದೂ ಈತ ಕಾಕತೀಯ ಪ್ರತಾಪರುದ್ರನ ಸಾಮಂತನಾಗಿದ್ದನೆಂದೂ ಕೆಲವರು ವಾದಿಸಿದ್ದಾರೆ. ಆದರೆ ವಾಸ್ತವವಾಗಿ ಶಾಸನದ ಮೂಲವನ್ನು ಪರೀಕ್ಷಿಸಿ, ಅದರ ಪ್ರತಿಯನ್ನು ಪರಿಶೀಲಿಸಿದಾಗ ಶಾಸನದ ಕಾಲ ಶಕವರ್ಷ 1296, 1236 ಅಲ್ಲ ಎಂಬುದು ಸ್ಪಷ್ಟವಾಗಿದೆ. 1373–74ರಲ್ಲಿ ಈ ಅರಸ ಸ್ವತಂತ್ರವಾಗಿ ಆಳುತ್ತಿದ್ದುದು ಕಂಡುಬರುತ್ತದೆಯಾಗಿ ಈ ಶಾಸನದಿಂದ ವಿಜಯನಗರ ಸಾಮ್ರಾಜ್ಯದ ಮೂಲಪುರುಷರು ಆಂಧ್ರರೆಂಬ ವಾದಕ್ಕೆ ಇದು ಪುಷ್ಟಿ ನೀಡುವುದಿಲ್ಲ ಎಂಬುದು ಖಚಿತವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಈ ಸೋದರರು

**ವಿಜಯನಗರದ ಅರಸರ ವಂಶಾವಳಿ**

**ಸಂಗಮ ವಂಶ**



### ಸಾಳುವ ಮನೆತನ

- ಗುಂಡ
  - ನರಸಿಂಹ I (1485–91)
    - ತಿಮ್ಮ
    - ನರಸಿಂಹ II (1491–1505)

### ತುಳುವ ಮನೆತನ

- ತಿಮ್ಮ
  - ಈಶ್ವರನಾಯಕ
    - ನರಸನಾಯಕ
      - ವೀರನರಸಿಂಹ (1505–09)
      - ಕೃಷ್ಣದೇವರಾಯ (1509–29)
        - ತಿರುಮಲ
      - ಅಚ್ಯುತರಾಯ (1529–42)
        - ವೆಂಕಟಾದ್ರಿ
      - ರಂಗ
        - ಸದಾಶಿವ (1542–70)

### ಆರವೀಡು ಮನೆತನ

- ಪಿನ್ನಮ
  - ಬುಕ್ಕ
    - ಸಿಂಗರಾಜ
    - ರಾಮರಾಜ
      - ತಿಮ್ಮ
      - ಪೆದ್ದುಕೊಂಡ
        - (ಅಳಿಯ)ರಾಮರಾಯ
          - ಪೆದ್ದ ತಿರುಮಲ
          - ಶ್ರೀರಂಗ
            - ವೆಂಕಟಪತಿ II (1632–42)
            - ಚಿನ್ನವೆಂಕಟ ಶ್ರೀರಂಗ III (1642–46)
        - ತಿರುಮಲ (1570–78)
          - ಶ್ರೀರಂಗ I (1578-86)
          - ರಾಮ
            - ತಿರುಮಲ
            - ಶ್ರೀರಂಗ II
              - ರಾಮದೇವ (1617–32)
          - ವೆಂಕಟಪತಿ I (1586-1614)
        - ವೆಂಕಟಾದ್ರಿ
      - ಶ್ರೀರಂಗ

ಆರಂಭದಿಂದಲೂ ಕನ್ನಡಿಗರೆಂದೂ ಹಂಪೆಯ ಪರಿಸರದಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದ ಇವರು ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಮಾಂಡಲಿಕರಾಗಿದ್ದುದಲ್ಲದೇ ಆ ಅರಸನೊಡನೆ, ಆತನ ಬಂಧುಗಳು ಮತ್ತು ಅಧಿಕಾರವರ್ಗದವರೊಡನೆ ರಕ್ತ ಸಂಬಂಧ ಬೆಳೆಸಿದ್ದರೆಂದೂ ಮುಮ್ಮಡಿ ಬಲ್ಲಾಳನೇ ಈ ಸೋದರರಿಗೆ ಪ್ರೋತ್ಸಾಹ ನೀಡಿ ದೇಶಕ್ಕೆ ಮಹಮದೀಯರಿಂದ ಒದಗಿದ್ದ ಕುತ್ತನ್ನು ಪರಿಹರಿಸಲು ಇವರಿಗೆ ಎಲ್ಲ ಬೆಂಬಲವನ್ನೂ ನೀಡಿದನೆಂದೂ ಸ್ವತಂತ್ರವಾಗಿ ಆಳತೊಡಗಿದರೂ ವಿಧೇಯತೆಯ ಕುರುಹಾಗಿ ಮೊದಲ ಇಬ್ಬರು ಸೋದರರು ಮಂಡಲೇಶ್ವರರೆಂಬ ಬಿರುದನ್ನು ಮುಂದುವರಿಸಿಕೊಂಡು ಬಂದರೆಂದೂ ವಿದ್ಯಾರಣ್ಯರ ಸಂಪರ್ಕ ಇವರಿಗೆ ಬಂದುದು ಅನಂತರದ ದಶಕಗಳಲ್ಲೆಂದೂ ಇನ್ನೊಂದು ವಾದವಿದೆ. ಮೊದಲನೆಯ ವಾದಕ್ಕೆ ಶತಮಾನಗಳ ಅನಂತರದ ವಿದ್ಯಾರಣ್ಯ ಕಾಲಜ್ಞಾನ ಮುಂತಾದ ಸಾಹಿತ್ಯ ಕೃತಿಗಳು, ಫೆರಿಸ್ತ ಮುಂತಾದ ಪರಕೀಯರ ಬರೆವಣಿಗೆಗಳೂ ಆಧಾರವಾಗಿದ್ದರೆ, ಎರಡನೆಯ ವಾದ ಸಮಕಾಲೀನ ಶಾಸನಗಳನ್ನು ಆಧರಿಸಿದೆ. ಇವು ಹೇಗೇ ಇದ್ದರೂ ಈ ಸೋದರರು, ಅನಂತರ ಬಂದವರು ಹಂಪೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಅಲ್ಲಿನ ದೇವತೆಯಾದ ವಿರೂಪಾಕ್ಷನನ್ನು ಕುಲದೈವವಾಗಿ ಪರಿಗಣಿಸಿ ಆ ದೈವದ ಪ್ರತಿನಿಧಿಗಳಾಗಿ ರಾಜ್ಯವಾಳುತ್ತಿದ್ದರೆಂದು ತೋರಿಸಲು ತಮ್ಮ ಶಾಸನಗಳಲ್ಲಿ ಶ್ರೀವಿರೂಪಾಕ್ಷ ಎಂಬ ಅಂಕಿತಗಳನ್ನು ಹಾಕುತ್ತಿದ್ದುದನ್ನೆಲ್ಲ ಕಂಡಾಗ ಇವರಿಗೆ ಕನ್ನಡನಾಡು ನುಡಿ ಸಂಸ್ಕೃತಿಗಳ ಬಗೆಗೆ ವಿಶೇಷವಾದ ಪ್ರೀತಿ ಆದರಗಳಿದ್ದುವೆಂಬುದು ಸ್ಪಷ್ಟವಾಗುತ್ತದೆ. ಇವರು ಕನ್ನಡಿಗರೇ ಆಗಿದ್ದರೆನ್ನಲು ಹಿಂಜರಿಯಬೇಕಾದ ಪ್ರಬಲವಾದ ಅಂಶಗಳಾವುವೂ ಇಲ್ಲ.

ಹರಿಹರ ಸೋದರರು 1336ರಲ್ಲಿ ರಾಜ್ಯವನ್ನು ಸ್ಥಾಪಿಸಿದರು. 1342ರಲ್ಲಿ ಮುಮ್ಮಡಿ ಬಲ್ಲಾಳ ಕೊಲ್ಲಲ್ಪಟ್ಟ. ಈ ಆರು ವರ್ಷಗಳಲ್ಲಿ ರಾಜ್ಯವನ್ನು ಬಲಪಡಿಸುವ ಕಾರ್ಯದಲ್ಲಿ ಹರಿಹರ ನಿರತನಾಗಿದ್ದ. 1346ರಲ್ಲಿ ಸೋದರರೊಡನೆ ಶೃಂಗೇರಿಗೆ ಹೋಗಿ ಅಲ್ಲಿನ ಗುರುಗಳಾದ ವಿದ್ಯಾತೀರ್ಥ ಶ್ರೀಪಾದಂಗಳಿಗೆ ಗೌರವ ಸಲ್ಲಿಸಿದ. ರಾಜ್ಯಾಡಳಿತದಲ್ಲಿ ತನ್ನ ಸಹೋದರರಾದ ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪರ ನೆರವನ್ನು ಪಡೆದ. ಬುಕ್ಕ ಯುವರಾಜ ಪದವಿಯಲ್ಲಿದ್ದು ರಾಜ್ಯದ ಮಧ್ಯಭಾಗವಾದ ದೋರಸಮುದ್ರದ ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದ. ಕಂಪಣನು ಉದಯಗಿರಿ ರಾಜ್ಯದಲ್ಲೂ ಮಾರಪ್ಪನು ಪಶ್ಚಿಮತೀರದ ಮಲೆರಾಜ್ಯದಲ್ಲೂ ಮುದ್ದಪ್ಪನು ಮುಳಬಾಗಲಿನ ಸುತ್ತಲ ಪ್ರದೇಶದಲ್ಲಿಯೂ ಅಧಿಕಾರದಲ್ಲಿದ್ದರು. 1347ರಲ್ಲಿ ಗುಲ್ಬರ್ಗದಲ್ಲಿ ಬಹಮನೀ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಅಲಾಉದ್ದಿನ್ ಬಹಮನ್ ಷಾ ಎಂದು ಬಿರುದಾಂಕಿತನಾದ ಹಸನ್ ಅಥವಾ ಜಾಫರ್‌ಖಾನನು ಇದರ ಸಂಸ್ಥಾಪಕ. ಇದೊಂದು ವಿಶೇಷವಾದ ಘಟನೆ. ಈ ರಾಜ್ಯ ಅನಂತರದ ಶತಮಾನಗಳಲ್ಲಿ ನೆರೆಯ ವಿಜಯನಗರ ರಾಜ್ಯದೊಡನೆ ಸತತವಾಗಿ ಕದನಗಳಲ್ಲಿ ತೊಡಗಿತ್ತು.

1347ರ ಸುಮಾರಿಗೆ ಅಸ್ತಿತ್ವಕ್ಕೆ ಬಂದ ಬಹಮನೀ ರಾಜ್ಯದ ಸುಲ್ತಾನರು ವಿಜಯನಗರದ ಪ್ರತಿಸ್ಪರ್ಧಿಗಳಾಗಿದ್ದರು. ದಕ್ಷಿಣದಲ್ಲಿ ಮಧುರೆಯ ಸುಲ್ತಾನರು ಕಂಟಕಪ್ರಾಯರಾಗಿದ್ದರು. ಇವರನ್ನು ಹೊರತುಪಡಿಸಿ, ಇತರ ಮಾಂಡಲಿಕರು, ಸಾಮಂತರು ಹರಿಹರನ ಸಾರ್ವಭೌಮತ್ವವನ್ನು ಒಪ್ಪಿದರು. 1356ರಲ್ಲಿ ಹರಿಹರನ ಸೋದರನಾದ ಬುಕ್ಕ ಪಟ್ಟಾಭಿಷಿಕ್ತನಾದ. ಆವರೆವಿಗೂ ಹಿರಿಯನಿಗೆ ಆಡಳಿತದಲ್ಲಿ ನೆರವಾಗಿ ರಾಜ್ಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ ಈತ ಸಿಂಹಾಸನಾರೂಢನಾದ ಅನಂತರ ಎರಡು ದಶಕಗಳ ಕಾಲ ಅಧಿಕಾರದಲ್ಲಿ ಮುಂದುವರಿದು ರಾಜ್ಯವನ್ನು ವಿಸ್ತರಿಸಿ ಬಲಪಡಿಸಿದ. ತಮಿಳುನಾಡಿನ ಚೆಂಗಲ್ಪೇಟ್ ಮತ್ತು ಆರ್ಕಾಟ್ ಜಿಲ್ಲೆಗಳನ್ನೊಳಗೊಂಡ ಭಾಗ ಆಗ ರಾಜಗಂಭೀರ ರಾಜ್ಯವೆನಿಸಿತ್ತು. ಅಲ್ಲಿ ಶಂಬುವರಾಯ ಮನೆತನದ ರಾಜಗಂಭೀರ ರಾಜನಾರಾಯಣನೂ ಸ್ವತಂತ್ರವಾಗಿ ಆಳಿ ವಿಜಯನಗರದ ಸಾರ್ವಭೌಮತ್ವವನ್ನು ಅಲ್ಲಗಳೆದಿದ್ದ. ಅವನ ವಿರುದ್ಧ ಈಗ ಸೈನ್ಯಾಚರಣೆ ನಡೆಸಲು ಬುಕ್ಕನು ತನ್ನ ಸೋದರನಾದ ಕಂಪಣನನ್ನು ನಿಯೋಜಿಸಿದ. ರಾಜಗಂಭೀರನ್‌ಮಲೈ ಎನಿಸಿದ್ದ ಈಗಿನ ಉತ್ತರ ಆರ್ಕಾಟ್ ಜಿಲ್ಲೆಯ ಪಡೈವೀಡನ್ನು ಕಂಪಣ ಮುತ್ತಿ ಶಂಬುವರಾಯನನ್ನು ಸೆರೆಹಿಡಿದ. ಶಂಬುವರಾಯ ಅನಂತರ ಬುಕ್ಕನ ಮಾಂಡಲಿಕತ್ವವನ್ನು ಒಪ್ಪಿದ. ಇಲ್ಲಿಂದ ಕಂಪಣ ದಕ್ಷಿಣದ ಕಡೆ ದಿಗ್ವಿಜಯ ಯಾತ್ರೆಗೆ ತೆರಳಿ ಮಧುರೆಯ ಸುಲ್ತಾನನ ಮೇಲೆರಗಿ ಅಲ್ಲಿನ ಸುಲ್ತಾನನೊಬ್ಬನನ್ನು ಕೊಂದ (1371). ಕಂಚಿಯ ರಾಜ ಸಿಂಹೇಶ್ವರಾಲಯದಲ್ಲಿ, ಶ್ರೀರಂಗದ ರಂಗನಾಥಾಲಯದಲ್ಲಿ ದೇವರ ವಿಗ್ರಹಗಳನ್ನು ಪುನಃ ಪ್ರತಿಷ್ಠಾಪಿಸಿದ. ಆದರೂ ಮಧುರೆಯ ಸುಲ್ತಾನನೆನಿಸಿಕೊಂಡ ಅಲಾಉದ್ದೀನ್ ಸಿಕಂದರ್ 1377ರ ವರೆಗೂ ಅಲ್ಲಲ್ಲಿ ತಲೆಮರೆಸಿಕೊಂಡಿದ್ದ. ಈ ದಿಗ್ವಿಜಯಗಳಲ್ಲಿ ಕಂಪಣನ ಸೇನಾನಿಗಳಾದ ಗೋಪಣ ಮತ್ತು ಸಾಳುವ ಮಂಗು ವಿಶಿಷ್ಟವಾದ ಪಾತ್ರವನ್ನು ವಹಿಸಿದ್ದರು. ಕಂಪಣನ ಪತ್ನಿಯಾದ ಗಂಗಾದೇವಿ ರಾಜಕುಮಾರನ ಸಾಧನೆಗಳನ್ನು ಮಧುರಾವಿಜಯಂ ಅಥವಾ ವೀರಕಂಪಣರಾಯ ಚರಿತೆ ಎಂಬ ಸಂಸ್ಕೃತ ಐತಿಹಾಸಿಕ ಕಾವ್ಯದಲ್ಲಿ ಚಿತ್ರಿಸಿದ್ದಾಳೆ.

ಬುಕ್ಕರಾಯನ ಕಾಲದಲ್ಲಿ ಬಹಮನೀ ರಾಜ್ಯದೊಡನೆ ಕದನಗಳು ಆರಂಭವಾಗಿ ತೀವ್ರಸ್ವರೂಪವನ್ನು ತಾಳಿದವು. ಭಿನ್ನಧರ್ಮಗಳಿಗೆ ಸೇರಿದ ಈ ರಾಜ್ಯಗಳ ನಡುವಣ ಕಲಹಗಳು ಕೇವಲ ಧಾರ್ಮಿಕವಾಗಿರದೆ ತುಂಗಭದ್ರಾ–ಕೃಷ್ಣಾನದಿಗಳ ನಡುವಣ ಫಲವತ್ತಾದ ಪ್ರದೇಶವನ್ನು ಆಕ್ರಮಿಸುವ ಹೋರಾಟವೂ ಆಗಿತ್ತು. ಎರಡು ಕಡೆಯವರೂ ರಾಯಚೂರು ದೋಅಬ್‌ನ ಕೆಲವು ಭಾಗಗಳನ್ನು ತಮ್ಮದಾಗಿ ಮಾಡಿಕೊಂಡಿದ್ದರೂ ಅಲ್ಲಿನ ಎಲ್ಲ ಪ್ರದೇಶವನ್ನು ಆಕ್ರಮಿಸಬೇಕೆಂಬ ಆಸೆ ಅವರೀರ್ವರೂ ನಿರಂತರ ಕದನಗಳಲ್ಲಿ ತೊಡಗುವಂತೆ ಮಾಡಿತು. ಈ ಸಂದರ್ಭದಲ್ಲಿ ಫೆರಿಸ್ತನ ಹೇಳಿಕೆಗಳು ಉತ್ಪ್ರೇಕ್ಷೆಯಿಂದ ಕೂಡಿದ್ದು ಕಟ್ಟುಕಥೆಗಳನ್ನೊಳಗೊಂಡಿವೆ ಎಂಬುದನ್ನು ಮರೆಯುವಂತಿಲ್ಲ. ಬಹಮನಿಯ ಮಹಮ್ಮದ್ ಆ ಬುಕ್ಕನನ್ನು ಕಾಡುಮೇಡುಗಳಲ್ಲಿ ಆರು ತಿಂಗಳುಗಳ ಕಾಲ ಬೆನ್ನಟ್ಟಿ ಆತ ರಾಮೇಶ್ವರದವರೆಗೂ ಅಲೆಯುವಂತೆ ಮಾಡಿದನೆಂಬುದು ಇಂಥ ಒಂದು ಹೇಳಿಕೆ. ವಾಸ್ತವವಾಗಿ ಬಹಮನೀ ಅರಸರಾಗಲೀ ವಿಜಯನಗರದ ಅರಸರಾಗಲೀ ಖಚಿತವಾದ ಅಂತಿಮವೆನಿಸಬಹುದಾದ ಜಯವನ್ನು ಪಡೆಯಲೇ ಇಲ್ಲ. ಅಂಥ ಘಟನೆ ನಡೆದುದು ಎರಡು ಶತಮಾನಗಳ ಅನಂತರ ನಡೆದ ರಕ್ಕಸತಂಗಡಗಿ ಕದನದಲ್ಲಿ ಮಾತ್ರ. ಈ ಹೋರಾಟ ಧಾರ್ಮಿಕವಾಗಿರಲಿಲ್ಲ ಎಂಬ ವಾದವನ್ನು ಸಹ ಒಪ್ಪಲಾಗದು. ವಾಸ್ತವವಾಗಿ ಮಹಮದೀಯ ಅರಸರು ಹಿಂದೂ ಧರ್ಮವನ್ನು ಅಲ್ಲಗಳೆದು ತಮ್ಮ ಮತವನ್ನು ಬಲವಂತವಾಗಿ ಪ್ರಜೆಗಳ ಮೇಲೆ ಹೇರುವ ಯತ್ನ ಮಾಡಿದರು. ಉತ್ತರ ಭಾರತದಲ್ಲಿ ಅವರ ಈ ಯತ್ನಗಳನ್ನು ತಡೆಗಟ್ಟಲು ಸರಿಸಮವಾದ ಬಲ ಯಾವ ರಾಜನಿಗೂ ಇರಲಿಲ್ಲ. ದಕ್ಷಿಣದಲ್ಲಿ, ತಡವಾಗಿಯಾದರೂ ತಮ್ಮ ಧರ್ಮಕ್ಕೆ ಚ್ಯುತಿಬಂದಿದೆ ಎಂಬುದನ್ನು ಮನಗಂಡ ಅರಸರು, ಸಾಮಂತರು, ಪ್ರಜೆಗಳು ದೃಢಮನಸ್ಸಿನಿಂದ ಒಗ್ಗಟ್ಟಾಗಿ ಅದನ್ನು ತಡೆಯುವ, ಧರ್ಮರಕ್ಷಣೆ ಮಾಡಿಕೊಳ್ಳುವ ಕಾರ್ಯದಲ್ಲಿ ತೊಡಗಿದರು. ಎಂತಲೇ ಈ ಕಾಲದಲ್ಲಿ ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪಗಳಲ್ಲಿ ಧರ್ಮಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಯಿತು. ಬುಕ್ಕನು ಸಾಯಣಾಚಾರ್ಯ ಮತ್ತು ಮಾಧವಾಚಾರ್ಯರ ನೇತೃತ್ವದಲ್ಲಿ ವೇದಗಳಿಗೆ ಭಾಷ್ಯಗಳನ್ನು ಬರೆಸುವ ಯೋಜನೆಯನ್ನು 1360ರಲ್ಲಿ ಕಾರ್ಯಗತ ಮಾಡಿದುದು ಇಂಥ ಮನೋಭಾವದಿಂದಲೇ.

ಈ ದೃಷ್ಟಿಯಿಂದ ಬುಕ್ಕನು ಕಾಕತೀಯ ಪ್ರತಾಪರುದ್ರನ ಮೊಮ್ಮಗನಾದ ವಿನಾಯಕದೇವನೊಡನೆ ಸ್ನೇಹಸಂಬಂಧಗಳನ್ನು ಬೆಳೆಸಿದ. ಇಬ್ಬರೂ

ಕೂಡಿ ದೆಹಲಿ ಸುಲ್ತಾನನಾಗಿದ್ದ ಫಿರೋಜನ ಆಸ್ಥಾನಕ್ಕೆ ಪ್ರತಿನಿಧಿಗಳನ್ನು ಕಳಿಸಿದರು. ಆದರೆ ಸ್ವತಃ ಸುಲ್ತಾನನೇ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಲುಕಿದ್ದ ಕಾರಣ ಈ ನಿಯೋಗ ಏನೂ ಸಾಧಿಸಲಿಲ್ಲ. ಮಹಮ್ಮದ್ ಓರಂಗಲ್ಲನ್ನು ಮುತ್ತಿ ವಿನಾಯಕದೇವನನ್ನು ಕೊಂದ. ಇನ್ನೊಮ್ಮೆ ಗೋಲ್ಕೊಂಡವನ್ನು ಆಕ್ರಮಿಸಿದ. ಆಂಧ್ರದಲ್ಲಿನ ಪ್ರೋಲಯನಾಯಕ, ಕಾಪಯನಾಯಕ ಮೊದಲಾದ ನಾಯಕರು ಕೆಲಕಾಲ ಧೈರ್ಯದಿಂದ ಶತ್ರುವನ್ನು ಎದುರಿಸಿ ಸ್ವತಂತ್ರರಾದರು. ಆದರೆ ಕ್ರಮೇಣ ಆಂತರಿಕ ಕಲಹಗಳು ತಲೆಯೆತ್ತಿ ಅವರ ಬಲ ಕುಗ್ಗಿತು. ಓರಂಗಲ್ಲಿನ ಸುತ್ತಲು ವೇಲಮರು ಪ್ರಬಲರಾಗಿ ವಿಜಯನಗರದ ವಿರುದ್ಧ ಕಾದಿದರು. ಗೋದಾವರಿ, ಕೃಷ್ಣಾನದಿಗಳ ಪ್ರದೇಶದಲ್ಲಿ ರೆಡ್ಡಿ ವಂಶಸ್ಥರು ರಾಜಮಹೇಂದ್ರಿ ಮತ್ತು ಕೊಂಡವೀಡುಗಳನ್ನು ನೆಲೆವೀಡಾಗಿ ಮಾಡಿಕೊಂಡು ಆಳುತ್ತಿದ್ದರು. ಮಹಮದ್ ಓರಂಗಲ್ಲಿನಲ್ಲಿ ಜಯಗಳಿಸಿದ ಅನಂತರ ಎರಡು ಬಾರಿ ಬುಕ್ಕನನ್ನು ರಣರಂಗದಲ್ಲಿ ಎದುರಿಸಿದ. ಸಮಾನಬಲದ ಈರ್ವರಲ್ಲಿ ಯಾರೊಬ್ಬರಿಗೂ ಜಯ



ವಿಠಲ ದೇವಾಲಯ, ಹಂಪೆ

ಲಭಿಸಲಿಲ್ಲ. ಬುಕ್ಕನ ಸೋದರನಾದ ಮಾದಪ್ಪನ ಮಂತ್ರಿ ಚಾವುಂಡನ ಮಗ ಮಾಧವನು ಕೊಂಕಣ ಪ್ರಾಂತ್ಯದಲ್ಲಿ ದಂಡೆತ್ತಿ ಗೋವೆಯನ್ನು ವಶಪಡಿಸಿಕೊಂಡ. ಅಂದಿನಿಂದ ಸುಮಾರು ಒಂದು ಶತಮಾನದ ಕಾಲ ಗೋವೆ ವಿಜಯನಗರದ ಅಧೀನದಲ್ಲಿತ್ತು.

ರಾಜ್ಯವನ್ನು ಬಲಪಡಿಸಲು ಬುಕ್ಕ ಹಲವಾರು ಕ್ರಮಗಳನ್ನು ಕೈಗೊಂಡ. ರಾಜಧಾನಿಯಾದ ಹಂಪೆಯ ಸುತ್ತಲೂ ಕೋಟೆಯನ್ನು ಕಟ್ಟಿಸಿ ಪ್ರಜೆಗಳ ವಾಸಕ್ಕೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿದ. ವ್ಯವಸಾಯ, ವ್ಯಾಪಾರಗಳಿಗೆ ಉತ್ತೇಜನ ನೀಡಿದ. ಸಿಂಹಳದ ಅರಸರು, ಮಲಬಾರಿನ ನಾಯಕರು ಅರಸನ ಆಸ್ಥಾನಕ್ಕೆ ರಾಜಪ್ರತಿನಿಧಿಗಳನ್ನು ಕಳಿಸಿದರು. ದೂರದ ಚೀನಾ ದೇಶದಲ್ಲಿ ಆಳುತ್ತಿದ್ದ ಮಿಂಗ್ ವಂಶದ ಅರಸನ ಆಸ್ಥಾನಕ್ಕೆ ಬುಕ್ಕ 1374ರಲ್ಲಿ ರಾಯಭಾರಿಗಳನ್ನು ಕಳಿಸಿದ. ಬುಕ್ಕನ ಮಕ್ಕಳಾದ ವಿರೂಪಾಕ್ಷ ಮತ್ತು ಭಾಸ್ಕರರು ಆರಗ ಮತ್ತು ಮುಳುವಾಯಿ (ಮುಳಬಾಗಲು) ಪ್ರಾಂತ್ಯಾಧಿಕಾರಿಗಳಾದರು. ಸೋದರನಾದ ಕಂಪಣ್ಣ ತಮಿಳುದೇಶದಲ್ಲಿ ಅಧಿಕಾರ ವಹಿಸಿದ. ರಾಷ್ಟ್ರದ ಹಿತಕ್ಕಾಗಿ ಪ್ರಜೆಗಳು ತಮ್ಮ ತಮ್ಮ ಜಾತಿಮತಗಳಲ್ಲಿನ ವೈಷಮ್ಯಗಳನ್ನು ತೊಡೆದು ಶಾಂತಿಯುತ ಸಹಜೀವನ ನಡೆಸುವುದು ಆವಶ್ಯಕವಾಗಿತ್ತು. ಎಂತಲೇ ಒಮ್ಮೆ ಶ್ರಣಬೆಳಗೊಳದಲ್ಲಿ ಜೈನರಿಗೂ ಶ್ರೀವೈಷ್ಣವರಿಗೂ ಕಲಹವಾದಾಗ ಅರಸನು ಅವರನ್ನು ಸಮಾಧಾನಗೊಳಿಸಿ ಎಲ್ಲ ಧರ್ಮಗಳೂ ಒಂದೇ, ಯಾವುದನ್ನೂ ಯಾರೊಬ್ಬರೂ ತೆಗಳಲಾಗದು ಎಂದು ಅವರಿಗೆ ಉಪದೇಶ ನೀಡಿ ಅವರನ್ನು ಸಾಂತ್ವನಗೊಳಿಸಿದ. ಇದು ಅಂದಿನ ಅರಸರ ಧಾರ್ಮಿಕ ನೀತಿಗೆ ಸಾಕ್ಷಿಯಾಗಿದೆ.

1377ರಲ್ಲಿ ಇಮ್ಮಡಿ ಹರಿಹರ ತಂದೆಯ ಉತ್ತರಾಧಿಕಾರಿಯಾಗಿ ಆಡಳಿತ ಸೂತ್ರ ವಹಿಸಿದ. 1374ರಲ್ಲಿ ಕಂಪಣ ನಿಧನನಾದ ಬಳಿಕ ತಮಿಳುನಾಡಿನಲ್ಲಿ ತುಂಡೀರ, ಚೋಳ ಮತ್ತು ಪಾಂಡ್ಯ ದೇಶಗಳ ಮಾಂಡಲಿಕರು ದಂಗೆ ಎದ್ದಿದ್ದರು. ಈ ಬಾರಿ ಹರಿಹರನ ಸೋದರನಾದ ವಿರೂಪಾಕ್ಷ ಅಲ್ಲಿಗೆ ಹೋಗಿ ದಂಗೆಗಳನ್ನು ಅಡಗಿಸಿ, ಅಂತಿಮವಾಗಿ ಮಧುರೆಯ ಸುಲ್ತಾನನನ್ನು ಸೋಲಿಸಿ ಹೊರದೂಡಿ, ಸಿಂಹಳ ದ್ವೀಪದವರೆಗೂ ಹೋಗಿ ಅಲ್ಲಿನ ಅರಸನಾದ ಭುವನೈಕಬಾಹುವಿನಿಂದ ಕಪ್ಪವನ್ನು ವಸೂಲಿ ಮಾಡಿದ. 1391ರಲ್ಲಿ ಉತ್ತರದಲ್ಲಿ ಚೌಲ್, ದಭೋಲ್ ಮತ್ತು ಖಾರೇಪಟ್ಟಣಗಳು ವಿಜಯನಗರದ ವಶವಾದುವು. ಇದರ ಫಲವಾಗಿ ಸಾಮ್ರಾಜ್ಯ ಕೃಷ್ಣಾತೀರದವರೆಗೂ ವಿಸ್ತರಿಸಿದಂತಾಯಿತು. ಬಹಮನಿಯ ಫಿರೋಜ್ ಷಾ ಕದನ ಹೂಡಿದನಾದರೂ ಫಲಿತಾಂಶ ಶೂನ್ಯ. ಇದರಲ್ಲಿ ಗುಂಡ ದಂಡಾಧಿನಾಥನು ವಿಶಿಷ್ಟವಾದ ಪಾತ್ರ ವಹಿಸಿದ. ಉದಯಗಿರಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಯುವರಾಜನಾದ ದೇವರಾಯನು ವೇಮನ ಹಾಗೂ ಅವರ ಸಹಾಯಕ್ಕೆ ಬಂದ ಬಹಮನೀ ಸುಲ್ತಾನನನ್ನು ಸೋಲಿಸಿ ಮೆಹಬೂಬ್‌ನಗರ ಜಿಲ್ಲೆಯ ಪನಗಲ್ ಕೋಟೆಯನ್ನು ವಶಪಡಿಸಿಕೊಂಡ. ಅರಸನು ರಾಜ್ಯದ ಆರ್ಥಿಕಾಭಿವೃದ್ಧಿಗಾಗಿ ಹಲವಾರು ನೀರಾವರಿ ಯೋಜನೆಗಳನ್ನು ಕೈಗೊಂಡು ನದಿಗಳಿಗೆ ಅಣೆಕಟ್ಟನ್ನು ಕಟ್ಟಿ, ಕಾಲುವೆಗಳನ್ನು ತೋಡಿಸಿದ. ಸಿಂಗಮಭಟ್ಟ ನೆಂಬಾತ ಅಂದಿನ ಖ್ಯಾತ ವಾಸ್ತುಶಿಲ್ಪಿ ಪೆನುಗೊಂಡೆಗೆ ನೀರನ್ನು ಒದಗಿಸಲು ಹೊನ್ನೆ ನದಿಯಿಂದ ಕಾಲುವೆಯೊಂದನ್ನು ಈತ ತೋಡಿಸಿದ. ಬುಕ್ಕ ಆರಂಭಿಸಿದ್ದ ವೇದಗಳಿಗೆ ಭಾಷ್ಯವನ್ನು ಬರೆಯಿಸುವ ಯೋಜನೆ ಹರಿಹರನ ಕಾಲದಲ್ಲಿ ಪೂರ್ಣಗೊಂಡಿತು. ಅರಸನು ವೈದಿಕಮಾರ್ಗಸ್ಥಾಪನಾಚಾರ್ಯನೆನಿಸಿದ. ಕನ್ನಡ ಮತ್ತು ಸಂಸ್ಕೃತ ಭಾಷೆ–ಸಾಹಿತ್ಯಗಳಿಗೆ ಈತ ವಿಶೇಷವಾದ ಪ್ರೋತ್ಸಾಹ ನೀಡಿ ಕರ್ನಾಟಕ ವಿದ್ಯಾವಿಲಾಸನೆನಿಸಿಕೊಂಡ. ಜೈನ ಹಾಗೂ ವೀರಶೈವ ಕೃತಿಗಳು ಆಗ ಬೆಳಕಿಗೆ ಬಂದುವು.

1404ರಲ್ಲಿ ಹರಿಹರ ಮಡಿದ. ಸಿಂಹಾಸನಕ್ಕಾಗಿ ಬುಕ್ಕ (II) ಮತ್ತು ವಿರೂಪಾಕ್ಷರ ನಡುವೆ ಸ್ಪರ್ಧೆ ಏರ್ಪಟ್ಟಿತು. ಬುಕ್ಕ ಜಯಶಾಲಿಯಾದರೂ ಬಹುಕಾಲ ಬಾಳಲಿಲ್ಲ. 1406ರಲ್ಲಿ ಅವನ ಕಿರಿಯ ಸೋದರ ದೇವರಾಯ ರಾಜ್ಯಸೂತ್ರಗಳನ್ನು ವಹಿಸಿದ. ಈತ ಬಹಮನೀ ಸುಲ್ತಾನನಾದ ಫಿರೋಜನೊಡನೆ ಸತತವಾಗಿ ಕಾದಬೇಕಾಯಿತು. ಮುದಗಲ್ಲಿನ ಅಕ್ಕಸಾಲಿಗನೊಬ್ಬನ ಮಗಳಲ್ಲಿ ಈತ ಅನುರಕ್ತನಾದನೆಂದೂ ಆಕೆಯ ರಕ್ಷಣೆಗಾಗಿ ಫಿರೋಜ್ ವಿಜಯನಗರವನ್ನು ಮುತ್ತಿದನೆಂದೂ ಫಿರೋಜನ ಮಗ ದೇವರಾಯನ ಮಗಳನ್ನು ಮದುವೆಯಾದನೆಂದೂ ಫೆರಿಸ್ತನ ಹೇಳಿಕೆ. ಇದು ಕಟ್ಟುಕತೆ ಎಂಬುದು ಸ್ಪಷ್ಟ. ಕೊಂಡವೀಡಿನ ರೆಡ್ಡಿಮನೆತನದ ಪೆದಕೋಮಟಿ ವೇಮನು ಉದಯಗಿರಿಯನ್ನು ಮುತ್ತಿದನಾದರೂ ದೇವರಾಯ ಅವನನ್ನು ಅಲ್ಲಿಂದ ಹೊರದೂಡಿದ. ಅನಂತರ ವೇಮನ ರಾಜಮಹೇಂದ್ರಿಯ ಕಾಟಯವೇಮನನ ವಿರುದ್ಧ ದಂಡೆತ್ತಿದ. ಕಾಟಯನು ದೇವರಾಯನ ಮೈದುನ. ಎಂತಲೇ ದೇವರಾಯನು ಅವನ ನೆರವಿಗೆ ಧಾವಿಸಿದ. ಆದರೆ ಸ್ವಲ್ಪಕಾಲದ ಅನಂತರ ಬಹಮನೀ ಸುಲ್ತಾನನ ನೆರವಿನಿಂದ ಪೆದಕೋಮಟಿಯು ಕಾಟಯವೇಮನನ್ನು ಸೋಲಿಸಿ ಕೊಂದನಾದರೂ ಕಾಟಯನ ಮಂತ್ರಿಯಾದ ಅಲ್ಲಾಡ 1415ರ ಸುಮಾರಿನಲ್ಲಿ ಶತ್ರುವನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದ. ಇವುಗಳ ಪರಿಣಾಮವಾಗಿ ಒರಿಸ್ಸಾದಲ್ಲಿ ಆಳುತ್ತಿದ್ದ ಗಜಪತಿ ವಂಶದ ಭಾನುದೇವ ದೇವರಾಯನ ಶತ್ರುವಾದ. ತನ್ನ ದಕ್ಷಿಣ ದಿಗ್ವಿಜಯಗಳಿಗೆ ದೇವರಾಯನಿಂದ ಅಡಚಣೆಯುಂಟಾಗುವುದೆಂಬುದೊಂದು ಇದಕ್ಕೆ ಕಾರಣ.

ದೇವರಾಯ ಸಹ ತನ್ನ ತಂದೆಯಂತೆ ನೀರಾವರಿ ಯೋಜನೆಗಳನ್ನು ಹಾಕಿಕೊಂಡು ತುಂಗಭದ್ರೆಯಿಂದ ರಾಜಧಾನಿಗೆ ಎತ್ತರವಾದ ಕಲ್ಲಿನ ಕಾಲುವೆಯನ್ನು ಕಟ್ಟಿಸಿದನಲ್ಲದೆ ಅಣೆಕಟ್ಟೊಂದನ್ನು ಸಹ ನಿರ್ಮಿಸಿದ. ಹರಿಹರದ ಸಮೀಪದ ಹರಿದ್ರಾ ನದಿಗೂ ಒಂದು ನೀರಾವರಿ ಕಟ್ಟನ್ನು ಕಟ್ಟಿಸಿದ. ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹ ನೀಡಿದ. ಶೃಂಗೇರಿಯ ಗುರುಗಳಾದ ಚಂದ್ರಶೇಖರಭಾರತಿಗಳು ಈತನ ಗುರುಗಳಾಗಿದ್ದರು.

ಒಂದು ಸಂದರ್ಭದಲ್ಲಿ ಅರಸನ ಜೀವವನ್ನು ಉಳಿಸಿದ ಲಕ್ಷ್ಮೀಧರ ಖ್ಯಾತ ಅಮಾತ್ಯ ನಾಗಪ್ಪ ಆಪ್ತನಾಗಿದ್ದ ಸೇನಾನಿ. 1422ರಲ್ಲಿ ದೇವರಾಯ ದಿವಂಗತನಾದ. 1424ರಲ್ಲಿ ಆತನ ಮೊಮ್ಮಗ ಇಮ್ಮಡಿ ದೇವರಾಯ ಪಟ್ಟಕ್ಕೆ ಬಂದ. ಪ್ರೌಢದೇವರಾಯ, ಪ್ರತಾಪದೇವರಾಯ, ಅಭಿನವ ವೀರದೇವರಾಯ ಎಂಬುವು ಈತನ ಇತರ ಹೆಸರುಗಳು. ಗಜಬೇಂಟೆಕಾರ ಎಂಬುದು ವಿಶಿಷ್ಟವಾದ ಬಿರುದು. ಈತನ ಕಾಲದಲ್ಲಿ ವೇಲಮರೊಡಗೂಡಿ ಭಾನುದೇವ ರಾಜಮಹೇಂದ್ರಿಯ ರೆಡ್ಡಿಯನ್ನು ಸೋಲಿಸಿ ಕೊಂಡವೀಡನ್ನೂ ಆಕ್ರಮಿಸಿದ. ದೇವರಾಯ ಎಚ್ಚೆತ್ತು ಭಾನುದೇವನನ್ನು ಎದುರಿಸಿ ಸೋಲಿಸಿ ಕೊಂಡವೀಡನ್ನು ಹಿಂದಕ್ಕೆ ಪಡೆದುಕೊಂಡ. ರಾಜಮಹೇಂದ್ರಿಯ ರೆಡ್ಡಿ ಪುನಃ ಪ್ರತಿಷ್ಠಾಪಿಸಲ್ಪಟ್ಟ. 1436ರಲ್ಲಿ ಭಾನುದೇವನ ಉತ್ತರಾಧಿಕಾರಿಯಾದ ಕಪಿಲೇಂದ್ರ ಇನ್ನೊಮ್ಮೆ ದಾಳಿಮಾಡಿದನಾದರೂ ಹಿಮ್ಮೆಟ್ಟಬೇಕಾಯಿತು. ಸೇನಾನಿಯಾದ ಮಲ್ಲಪ್ಪ ಒಡೆಯ ಶತ್ರುವಿನೊಡನೆ ಶೌರ್ಯದಿಂದ ಕಾದಿದ. ಬಹಮನೀ ಸುಲ್ತಾನ ಅಹಮದ್ ಷಾ 1422–23ರಲ್ಲಿ ವಿಜಯನಗರದ ವಿರುದ್ಧ ದಂಡೆತ್ತಿದಾಗ ರಾಜ್ಯಾಡಳಿತದಲ್ಲಿ ಪಾತ್ರವಹಿಸಿದ್ದ ಯುವರಾಜನಾದ ದೇವರಾಯನಿಂದ ಸೋಲಿಸಲ್ಪಟ್ಟ. ಶತ್ರುವಿನಿಂದ ದೂರವಿರಲೆಂಬಂತೆ ರಾಜಧಾನಿಯನ್ನು ಗುಲ್ಬರ್ಗದಿಂದ ಬಿದರೆಗೆ ಬದಲಿಸಿದ. 1435–36ರಲ್ಲಿ ಸುಲ್ತಾನ್ ಅಲಾಉದ್ದಿನ ಮುದಗಲ್ಲಿನ ಕೋಟೆಯನ್ನಾಕ್ರಮಿಸಲು ಯತ್ನಿಸಿದ. ಮುದಗಲ್ಲು ಅವನ ವಶವಾಯಿತೆಂದು ಫೆರಿಸ್ತ ತಿಳಿಸುತ್ತಾನಾದರೂ ಅದೇ ಕಾಲದ ಶಾಸನದಲ್ಲಿ ದೇವರಾಯನ ಅಧಿಕಾರಿಯಾದ ವರದಣ್ಣ ನಾಯಕನು ಅಲ್ಲಿ ಆಳುತ್ತಿದ್ದನೆಂದೇ ಅಲಾಉದ್ದೀನನ ಯತ್ನ ಫಲಿಸಲಿಲ್ಲವೆನ್ನಲಾಗಿದೆ. ಲಕ್ಕಣ್ಣ ದಂಡನಾಯಕ ಸಿಂಹಳದ ಅರಸರ ವಿರುದ್ಧ ನೌಕಾಬಲವೊಂದನ್ನು ಒಯ್ದು, ಅಲ್ಲಿನ ಅರಸನಿಂದ ಕಪ್ಪಕಾಣಿಕೆಗಳನ್ನು ಪಡೆದ. ಈತನ ಕಾಲದಲ್ಲಿ ರಾಜ್ಯ ವಿಸ್ತರಿಸಿ ಉತ್ತರದಲ್ಲಿ ಕೃಷ್ಣಾತೀರದವರೆಗೂ ಹಬ್ಬಿತು. **(ಬಿ.ಆರ್.ಜಿ.)**

ಕೇರಳ, ಸಿಂಹಳ, ಪುಲಿಕಾಡು, ಪೆಗು ಮತ್ತು ಬರ್ಮದ ಅರಸರು ಈತನಿಗೆ ಕಪ್ಪವನ್ನು ಸಲ್ಲಿಸಿದರೆಂದು ಈತನ ಕಾಲದಲ್ಲಿ ಪರ್ಷಿಯಾದಿಂದ ಬಂದ ರಾಯಭಾರಿಯಾದ ಅಬ್ದುಲ್ ರಜಾಕ್ (1443) ಬರೆದಿಟ್ಟಿದ್ದಾನೆ. ಇಟಲಿಯಿಂದ ಬಂದ ನಿಕೊಲೊ ಡಿ ಕೊಂಟಿ (1420–21) ಇನ್ನೊಬ್ಬ ಯಾತ್ರಿಕ. ಈತ ವೆನಿಸ್ ನಗರದ ಗಣ್ಯಮನೆತನಕ್ಕೆ ಸೇರಿದ್ದ. ಡಮಾಸ್ಕಸ್‌ನಲ್ಲಿ ನೆಲೆಸಿದ ವರ್ತಕ. ಅರಬ್ಬೀ ಭಾಷೆ ಕಲಿತ ಈತ ಆರುನೂರು ವರ್ತಕರ ತಂಡದೊಡನೆ ಪ್ರವಾಸ ಹೊರಟು ಭಾರತಕ್ಕೂ ಬಂದಿದ್ದ. ಇಲ್ಲಿದ್ದಾಗ ವಿಜಯನಗರಕ್ಕೆ ಬಂದಿದ್ದ. ಆಗ ಆಳುತ್ತಿದ್ದ ಅರಸ ಇಮ್ಮಡಿ ದೇವರಾಯ. ಸು.1440ರಲ್ಲಿ ವೆನಿಸ್‌ಗೆ ಹಿಂದಿರುಗಿದ ಅನಂತರ ಇಟಲಿಯ ಪೋಪನ ಆದೇಶದ ಮೇರೆಗೆ ತನ್ನ ಪ್ರವಾಸವನ್ನು ಪೋಪನ ಕಾರ್ಯದರ್ಶಿ ಪೊಡ್ಜಿಯೋ ಬ್ರಟ್ಟಿಯೋಲಿನಿ ಎಂಬಾತನಿಗೆ ಹೇಳಿದ. ಆತ ಇದನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದುಕೊಂಡ. ಆ ಬಳಿಕ ಅದು ಪೋರ್ಚುಗೀಸ್ ಭಾಷೆಗೆ ದುಮೇಸಿಯೋ ಎಂಬವರಿಂದ ಇಟಾಲಿಯನ್ ಭಾಷೆಗೆ ಭಾಷಾಂತರ ಮಾಡಲ್ಪಟ್ಟು ಕೊನೆಗೆ ಮೇಜರ್ ಎಂಬಾತನಿಂದ ಆಂಗ್ಲ ಭಾಷಾಂತರವನ್ನು ಕಂಡಿತು.

ಈತನ ಮಾತಿನಲ್ಲಿ ವಿಜಯನಗರ ಬಿಜೆನೆಗಾಲಿಯ ಎಂದಾಗಿದೆ. ನಗರದ ಸುತ್ತಳತೆ ಅರವತ್ತು ಮೈಲುಗಳು. ಸುತ್ತಕಟ್ಟಿರುವ ಕೋಟೆ ಪರ್ವತಗಳಷ್ಟು ಎತ್ತರವಾಗಿದೆ. ತೊಂಬತ್ತುಸಾವಿರ ಶಸ್ತ್ರಾಸ್ತ್ರಪ್ರವೀಣರು ಇಲ್ಲಿದ್ದಾರೆ. ಭಾರತದ ಎಲ್ಲ ರಾಜರಿಗಿಂತ ಬಲಾಢ್ಯನಾದ ಇಲ್ಲಿಯ ರಾಜನಿಗೆ 12,000 ಜನ ಹೆಂಡತಿಯರಿದ್ದಾರೆ. ಇವರಲ್ಲಿ 4,000 ಜನ ಅರಸ ಹೋದಲ್ಲೆಲ್ಲ ಕಾಲ್ನಡಿಗೆಯಲ್ಲಿ, ಇನ್ನು 4,000 ಜನ ಕುದುರೆಗಳ ಮೇಲೂ ಇತರರು ಪಲ್ಲಕ್ಕಿಗಳಲ್ಲೂ ಹೋಗುತ್ತಾರೆ. ಇವರಲ್ಲಿ ಎರಡು–ಮೂರು ಸಾವಿರ ಜನ ಅರಸ ಸತ್ತಾಗ ಆತ್ಮಸಂತೋಷದಿಂದ ಪ್ರಾಣತ್ಯಾಗ ಮಾಡುತ್ತಾರೆ. ರಾಜಧಾನಿಯಲ್ಲಿ ಮೂರು ದೊಡ್ಡ ಹಬ್ಬಗಳನ್ನು (ಬಹುಶಃ ಉಗಾದಿ, ದೀಪಾವಳಿ ಮತ್ತು ನವರಾತ್ರಿ ಹಬ್ಬಗಳು) ಆಚರಿಸುತ್ತಾರೆ. ಮದುವೆಗಳನ್ನು ಬಹಳ ವೈಭವದಿಂದ ಮಾಡುತ್ತಾರೆ ಎಂದೆಲ್ಲ ಬರೆದಿಟ್ಟಿದ್ದಾನೆ.

ಅಬ್ದುಲ್ ರಜಾಕ್ ಎಂಬಾತ ಇದೇ ಸುಮಾರಿನಲ್ಲಿ ಭಾರತದಲ್ಲಿ ಪ್ರವಾಸ ಮಾಡಿದ ಪರ್ಷಿಯಾ ದೇಶದ ಯಾತ್ರಿಕ. ಈತ 1441ರಲ್ಲಿ ಹಖ್‌ಷಾನ ರಾಯಭಾರಿಯಾಗಿ ವಿಜಯನಗರಕ್ಕೆ ಬಂದ. ಕಲ್ಲಿಕೋಟೆಯಲ್ಲಿ ಇಳಿದು ಅಲ್ಲಿನ ಜಾಮೊರಿನ್‌ನ್ನು ಕಂಡು ಅನಂತರ ಮಂಗಳೂರು ಮಾರ್ಗವಾಗಿ ವಿಜಯನಗರಕ್ಕೆ ಬಂದ. ಈತ ಭಾರತದಲ್ಲಿ ಸುಮಾರು ಎರಡು ವರ್ಷಗಳ ಕಾಲ ಇದ್ದು 1443ರಲ್ಲಿ ಹೊನ್ನಾವರದಲ್ಲಿ ಹಡಗನ್ನು ಹತ್ತಿ ಓರ್ಮುಜ್‌ಗೆ ಹಿಂದಿರುಗಿದ. ಈತ ತನ್ನ ಪ್ರವಾಸಕಥನವನ್ನು ಮತ್ಲ ಅಸ್ ಸದೈನ್ ಎಂಬ ಗ್ರಂಥದಲ್ಲಿ ಬರೆದಿಟ್ಟಿದ್ದಾನೆ.



ಆನೆಲಾಯ, ಹಂಪೆ

ವಿಜಯನಗರ ಬಹಳ ದೊಡ್ಡ ಜನಸಂಖ್ಯೆಯ ಊರು. ರಾಜ್ಯ ಸೆರೆನ್ ದಿಬ್‌ದ (ಸಿಂಹಳ) ಗಡಿಯಿಂದ ಕಲ್ಬರ್ಗದ ಕೊಟ್ಟಕೊನೆಯವರೆಗೆ, ಬಂಗಾಲದಿಂದ ಮಲಬಾರ್ ಕೊನೆಯವರೆಗೆ ಸಾವಿರ ಫರೆಸಾಂಗ್‌ಗಳಷ್ಟು ವಿಸ್ತರಿಸಿದೆ. ಮುನ್ನೂರು ಬಂದರುಗಳಿವೆ. ಸೈನ್ಯದಲ್ಲಿ 11 ಲಕ್ಷ ಯೋಧರಿದ್ದಾರೆ. ಸಾವಿರಕ್ಕೂ ಹೆಚ್ಚಿನ ಪೆಡಂಭೂತಗಳಂತಹ ಆನೆಗಳಿವೆ. ಈ ರಾಯನಂತಹ ಶ್ರೇಷ್ಠ ದೊರೆ ಹಿಂದುಸ್ಥಾನದಲ್ಲಿ ಎಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಬಿಜನಗರದಂತಹ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ; ಈ ನಗರವನ್ನು ಏಳು ದುರ್ಗಗಳೂ ಏಳುಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿದೆ. ಅಂಗಡಿಬೀದಿಗಳು ಬಹು ಉದ್ದವಾಗಿಯೂ ಅಗಲವಾಗಿಯೂ ಇವೆ. ಬೀದಿಗಳಲ್ಲೆಲ್ಲ ಗುಲಾಬಿ ಹೂವಿನ ವಾಸನೆ. ಈ ಜನಗಳು ಗುಲಾಬಿ ಹೂಗಳಿಲ್ಲದೆ ಬದುಕುವಂತೆಯೇ ಇಲ್ಲ. ರತ್ನಪಡಿ ವ್ಯಾಪಾರಿಗಳು ಅಂಗಡಿಬೀದಿಗಳಲ್ಲಿ ಬಹಿರಂಗವಾಗಿ ವಜ್ರವೈಡೂರ್ಯಗಳನ್ನು ಮುತ್ತುಗಳನ್ನೂ ಮಾರುತ್ತಾರೆ. ರಾಜನನ್ನು ಸ್ವತಃ ಕಂಡ ರಜಾಕ್ ಆತನ ವರ್ಣನೆಯನ್ನು ಮಾಡಿದ್ದಾನೆ. ಆಗ ಅರಮನೆಯಲ್ಲಿ ಅರಸನ ಹತ್ಯೆಗಾಗಿ ನಡೆಯಿತೆನ್ನಲಾದ ಘಟನೆಯ ವಿವರಗಳನ್ನೂ ನೀಡಿದ್ದಾನೆ. ಮಹಾನವಮಿಯ ದಿನ ರಾಜನ ದರ್ಬಾರಿನ ವರ್ಣನೆಯೂ ಇದೆ. **(ಜಿ.ಆರ್.ಆರ್.;ಸಿ.ಕೆ.ಎಸ್.)**

ದೇವರಾಯನ ಅನಂತರ ಆಳಿದ ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷರು ದಕ್ಷರಾಗಿರಲಿಲ್ಲ. ಅರಮನೆಯಲ್ಲಿ ಸೋದರಸಂಬಂಧಿಗಳಲ್ಲಿ ವೈಮನಸ್ಯಗಳೂ ಕಲಹಗಳೂ ಕಾಣಿಸಿಕೊಂಡವು. ಗಜಪತಿ ಕಪಿಲೇಂದ್ರನು ರಾಜಮಹೇಂದ್ರಿಯ ರೆಡ್ಡಿಯನ್ನೂ ಸೋಲಿಸಿ ಕೊಂಡವೀಡು, ಪೆನುಕೊಂಡೆ ಕೋಟೆಗಳನ್ನು ವಶಪಡಿಸಿಕೊಂಡ (1454). 1463ರಲ್ಲಿ ಕಪಿಲೇಂದ್ರನ ಹಮ್ಮೀರನು ಕಾವೇರಿ ನದಿಯವರೆಗೂ ದಂಡೆತ್ತಿ ಹೋಗಿ ಉದಯಗಿರಿ, ಚಂದ್ರಗಿರಿ ಮುಂತಾದ ನಗರಗಳನ್ನು ಆಕ್ರಮಿಸಿದ. ಬಹಮನಿಯ ಮಹಮದ್‌ನ (111) ಪ್ರಧಾನಿಯಾಗಿದ್ದ ಮಹ್ಮೂದ್ ಗಾವಾನನು ಪಶ್ಚಿಮ ಕರಾವಳಿಯ ಮೇಲೆ

ದಾಳಿ ಮಾಡಿ ಕೊಂಕಣ, ಗೋವೆಗಳನ್ನು ಆಕ್ರಮಿಸಿದನು. ಬೆಳಗಾಂವಿ ಸಹ ಆತನ ವಶವಾಯಿತು. ಇಷ್ಟರಲ್ಲಿ ವಿರೂಪಾಕ್ಷನ ಅಧಿಕಾರಿ ವರ್ಗದಲ್ಲಿದ್ದ ಚಂದ್ರಗಿರಿಯ ಮಹಾಮಂಡಲೇಶ್ವರನಾಗಿದ್ದ ಸಾಳುವ ವಂಶದ ನರಸಿಂಹನು ರಾಜ್ಯಕ್ಕೆ ಒದಗಿದ್ದ ಕುತ್ತನ್ನು ಪರಿಹರಿಸಲು ದಂಡನಾಯಕನಾಗಿದ್ದ ತುಳುವಂಶದ ನರಸನಾಯಕನೊಡಗೂಡಿ ಶತ್ರುಗಳನ್ನು ಹಿಮ್ಮೆಟ್ಟಿಸುವುದರಲ್ಲಿ ನಿರತನಾದ. ಅಂತಃಪುರದ ಕಲಹಗಳ ಪರಿಣಾಮವಾಗಿ ವಿರೂಪಾಕ್ಷ 1485ರಲ್ಲಿ ಕೊಲ್ಲಲ್ಪಟ್ಟಾಗ ಚಂದ್ರಗಿರಿಯಿಂದ ರಾಜಧಾನಿಗೆ ಧಾವಿಸಿದ ನರಸಿಂಹ ಅಲ್ಲಿನ ಪರಿಸ್ಥಿತಿಗಳನ್ನು ಹತೋಟಿಗೆ ತಂದು ಅಂತಿಮವಾಗಿ ತಾನೇ ಸಿಂಹಾಸನಾರೂಢನಾದ (1485).

ನರಸಿಂಹನಿಂದ ವಿಜಯನಗರದ ಎರಡನೆಯ ವಂಶದ ಆಳ್ವಿಕೆ ಆರಂಭವಾಯಿತು. ಈತನ ತಂದೆ ಸಾಳುವ ಗುಂಡ. ಪೂರ್ವಜರಲ್ಲೊಬ್ಬನಾದ ಮಂಗು ಇಮ್ಮಡಿ ಕಂಪಣ್ಣ ಕೈಕೊಂಡ ದಕ್ಷಿಣದ ದಿಗ್ವಿಜಯಗಳಲ್ಲಿ ಭಾಗವಹಿಸಿದ್ದ. 1452ರಿಂದಲೇ ಅರಸನ ನೆಚ್ಚಿನ ಅಧಿಕಾರಿಗಳಲ್ಲೊಬ್ಬನಾಗಿದ್ದ ನರಸಿಂಹ ಅಂದಿನ ರಾಜಕೀಯ ಪರಿಸ್ಥಿತಿಗಳನ್ನು ಮನಗಂಡು ರಾಜ್ಯದ ಹಿತಕ್ಕೆಂತಲೇ ಪದವಿಯನ್ನು ಬಲವಂತವಾಗಿ ಕಸಿದುಕೊಳ್ಳಬೇಕಾಯಿತು. 1463ರ ಸುಮಾರಿನಲ್ಲಿಯೇ ಹಮ್ಮೀರನನ್ನು ಹಿಂದಕ್ಕೆ ದೂಡಿದ ನರಸಿಂಹನು ಅನಂತರ ದಕ್ಷಿಣದ ಮಧುರೆಯಲ್ಲಿ ದಂಗೆ ಎದ್ದಿದ್ದ ಸಮರ ಕೋಲಾಹಲ ನೆಂಬ ನಾಯಕನನ್ನು ಅಡಗಿಸಿದ. ಅರಸನಾದ ಬಳಿಕ ಕೇವಲ ಆರು ವರ್ಷಗಳ ಕಾಲ ಆಳಿದ ನರಸಿಂಹ ಶಾಂತಿಯುತ ವಾತಾವರಣವನ್ನು ಕಲ್ಪಿಸಿದ. ಆದರೂ ಕಪಿಲೇಂದ್ರನ ಮಗ ಪುರುಷೋತ್ತಮ ಗಜಪತಿ ಮತ್ತೊಮ್ಮೆ ದಂಡೆತ್ತಿ ಗುಂಟೂರುವರೆಗಿನ ಪೂರ್ವತೀರಪ್ರದೇಶಗಳನ್ನೂ ಉದಯಗಿರಿ ಕೋಟೆಯನ್ನೂ ಆಕ್ರಮಿಸಿದ. ದೈಹಿಕವಾಗಿ ಬಲಗುಂದುತ್ತಲಿದ್ದ ನರಸಿಂಹ ಶತ್ರುಗಳನ್ನು ಹಿಮ್ಮೆಟ್ಟಿಸುವ ಜವಾಬ್ದಾರಿಯನ್ನು ತನ್ನ ಸೇನಾನಿಯಾದ ನರಸನಾಯಕನಿಗೆ ಒಪ್ಪಿಸಿದ. 1491ರಲ್ಲಿ ನರಸಿಂಹ ಸತ್ತ ಬಳಿಕ ನರಸನಾಯಕ ಆತನ ಅಪ್ರಾಪ್ತವಯಸ್ಕರಾದ ಮಕ್ಕಳ ಪ್ರತಿನಿಧಿಯಾಗಿ ಆಡಳಿತಸೂತ್ರವನ್ನು ವಹಿಸಿದ. ನರಸಿಂಹನ ಹಿರಿಯ ಮಗ ತಿಮ್ಮನನ್ನು ಸಿಂಹಾಸನದ ಮೇಲೆ ಕೂರಿಸಿದ. ಆದರೆ ಆತ ಕುತಂತ್ರಗಳಿಗೆ ಬಲಿಯಾಗಿ ಕೊಲ್ಲಲ್ಪಟ್ಟ. ಆನಂತರದ ಸರದಿ ಎರಡನೆಯ ಮಗನಾದ ಎರಡನೆಯ ನರಸಿಂಹನದು. ಅನಿರೀಕ್ಷಿತವಾಗಿ ಈತ ನರಸನಾಯಕನನ್ನು ವಿರೋಧಿಸಿದ. ಪರಿಣಾಮವಾಗಿ ಈತನನ್ನು ಪೆನುಗೊಂಡೆಗೆ ಸಾಗಿಸಿ ಅಲ್ಲಿ ಸೆರೆಮನೆಯಲ್ಲಿಡಲಾಯಿತು.

ಸರ್ವಾಧಿಕಾರಿಯಾದ ನರಸನಾಯಕ ದಕ್ಷಿಣ ಹಾಗೂ ಪಶ್ಚಿಮ ದಿಶೆಗಳಲ್ಲಿನ ದಂಗೆಕೋರರನ್ನು ಅಡಗಿಸಿದ. ಈ ವೇಳೆಗಾಗಲೇ ಬಹಮನಿ ಯಲ್ಲಿ ಆಂತರಿಕ ಕಲಹಗಳುಂಟಾಗಿದ್ದವು. ಅವುಗಳ ಪ್ರಯೋಜನ ಪಡೆದು ರಾಯಚೂರು ಮುದಗಲ್ಲು ಕೋಟೆಗಳನ್ನು ಆಕ್ರಮಿಸಿದ. ಗಜಪತಿ ಪ್ರತಾಪರುದ್ರನನ್ನು ಸೋಲಿಸಿ ಹಿಂದಕ್ಕೆ ಓಡಿಸಿದ. ಇವನಿಗೆ ರಾಜ್ಯವನ್ನು ಬಲವಂತವಾಗಿ ಕಸಿದುಕೊಂಡನೆಂಬ ಅಪಖ್ಯಾತಿ ಬಂದರೂ ವಾಸ್ತವಿಕವಾಗಿ ಈತ ರಾಜ್ಯಕ್ಕೆ ಒಳಿತನ್ನು ಮಾಡಿದ. ಮೊದಲಿನ ಸ್ಥೈರ್ಯ ಈಗ ಮತ್ತೊಮ್ಮೆ ಕಾಣಿಸಿಕೊಂಡಿತು. ಖ್ಯಾತಿ ಹೆಚ್ಚಿತು.

ನರಸನಾಯಕ 1503ರಲ್ಲಿ ಮಡಿದ. ಇವನ ಮಗ ವೀರನರಸಿಂಹ ತಂದೆಯ ಅಧಿಕಾರಗಳನ್ನು ಪಡೆದ. ಸಾಳುವ ಇಮ್ಮಡಿ ನರಸಿಂಹ ಸ್ವತಃ ಆಳಬಲ್ಲವ ನಾಗಿದ್ದರೂ ವೀರನರಸಿಂಹ ಅವನನ್ನು ಹಿಂದಕ್ಕೆ ಸರಿಸಿ 1505ರಲ್ಲಿ ಆತನನ್ನು ಕೊಲ್ಲಿಸಿದ. ಅಂದಿನಿಂದ ತುಳುವ ಮನೆತನದ ಆಳ್ವಿಕೆ ಆರಂಭವಾಯಿತು. 1505–09ರ ವರೆಗೆ ವೀರನರಸಿಂಹ ಆಳಿದ. ರಾಜ್ಯದಲ್ಲಿ ಮತ್ತೊಮ್ಮೆ ಕಾಣಿಸಿಕೊಂಡ ಅನಿಶ್ಚಿತ ಘಟನೆಗಳು ಶೈಥಿಲ್ಯಕ್ಕೆ ಎಡೆಗೊಟ್ಟುವು. ಬಹಮನಿಯ ಯೂಸುಫ್ ಆದಿಲ್‌ಖಾನನು ರಾಯಚೂರು ಮುದಗಲ್ಲುಗ ಳನ್ನು ಪುನಃ ಪಡೆದುಕೊಂಡನಾದರೂ ವೀರನರಸಿಂಹ ಅವುಗಳನ್ನು ಮತ್ತೊಮ್ಮೆ ಸಾಧಿಸಿಕೊಂಡ. ಪೋರ್ಚುಗೀಸರ ಸ್ನೇಹ ಸಂಪಾದಿಸಿ ಉತ್ತಮ ವಾದ ಅಶ್ವಗಳನ್ನು ಅವರಿಂದ ಖರೀದಿಸಿದ. ಸೈನಿಕರಿಗೆ ಯುದ್ಧಕಲೆಯಲ್ಲಿ ಹೆಚ್ಚಿನ ವಿಶಿಷ್ಟ ತರಬೇತಿ ನೀಡಿದ.

1509ರಲ್ಲಿ ವೀರನರಸಿಂಹ ಮರಣ ಹೊಂದಿದ. ಆತನ ಮಲಸೋದರ ಕೃಷ್ಣದೇವರಾಯ ಪಟ್ಟಕ್ಕೆ ಬಂದ. ವಿಜಯನಗರದ ಅರಸರಲ್ಲಿ ಅತಿಶ್ರೇಷ್ಠನೂ ಭಾರತದ ಇತಿಹಾಸದಲ್ಲಿಯೇ ಖ್ಯಾತಿವೆತ್ತವನೂ ಆದ ಈತ ಕೇವಲ 20 ವರ್ಷಗಳ ಕಾಲ ಆಳಿದರೂ ಆ ಅಲ್ಪಕಾಲದಲ್ಲಿಯೇ ಸಾಮ್ರಾಜ್ಯದ ಕೀರ್ತಿ ದೇಶಾದ್ಯಂತ ಹರಡಲು ಕಾರಣನಾದ. ಪಟ್ಟಕ್ಕೆ ಬಂದಾಗ ರಾಜ್ಯದ ವಾತಾವರಣ ಉತ್ತೇಜಕವಾಗಿರಲಿಲ್ಲ. ನಿರಂತರ ಕದನಗಳಲ್ಲಿ ತೊಡಗಿದ್ದ ಅರಸರು ಪ್ರಜೆಗಳಿಂದ ಅನೇಕ ಕರಗಳನ್ನು ಪಡೆಯುತ್ತಿದ್ದರು. ಶ್ರೀರಂಗಪಟ್ಟಣದ ಸುತ್ತಲಿನ ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಉಮ್ಮತ್ತೂರಿನ ಪಾಳೆಯಗಾರರು ದಂಗೆ ಎದ್ದಿದ್ದರು. ಬಹಮನೀ ರಾಜ್ಯದಲ್ಲಿ ಈ ವೇಳೆಗೆ ಛಿದ್ರಗಳು ಕಂಡುಬಂದು ಅಂತಿಮವಾಗಿ ಅದು ಐದು ಸ್ವತಂತ್ರ ಪಾಳೆಯ ಪಟ್ಟುಗಳಾಗಿ ಒಡೆದರೂ ಬಿಜಾಪುರದ ಯೂಸುಫ್ ಆದಿಲ್‌ಖಾನನು ವಿಜಯನಗರದ ಮೇಲೇರಿ ಬರಲು ಕಾದಿದ್ದ. ಗಜಪತಿಯಂತೂ ಉದಯಗಿರಿ ಮುಂತಾದ ಈಶಾನ್ಯಭಾಗದ ಕೋಟೆಗಳನ್ನು ಆಕ್ರಮಿಸಿಕೊಂಡೇ ಇದ್ದ. ಪಶ್ಚಿಮತೀರದಲ್ಲಿ ಪೋರ್ಚುಗೀಸರು ಪ್ರಬಲರಾಗಿದ್ದರು.

ಇಂತಹ ಸಂದರ್ಭದಲ್ಲಿ ರಾಜ್ಯಸೂತ್ರಗಳನ್ನು ವಹಿಸಿದ ಅರಸ ಚಾಕಚಕ್ಯತೆಯಿಂದ ತನ್ನ ನೀತಿಯನ್ನು ರೂಪಿಸಿಕೊಂಡ. ಪ್ರಜೆಗಳ ಕರಭಾರವನ್ನು ಕಡಿಮೆ ಮಾಡಲೆಂದು ರಾಜ್ಯಾದ್ಯಂತ ಮದುವೆಯ ಮೇಲೆ ವಿಧಿಸಲಾಗಿದ್ದ ತೆರಿಗೆಯನ್ನು, ಇತರ ಕೆಲವು ತೆರಿಗೆಗಳನ್ನು ತೆಗೆದುಹಾಕಿದ. ಪ್ರಾಂತಾಧಿಕಾರಿಗಳು, ಸಾಮಂತ ನಾಯಕರು ನಿಶ್ಚಿತಗೊಳಿಸಿದ ಸಂಖ್ಯೆಯ ಸೈನಿಕ ಬಲವನ್ನು ಕೇಂದ್ರಕ್ಕೆ ಒದಗಿಸಿಕೊಡುವಂತೆ ಕಡ್ಡಾಯಮಾಡಿದ. ಬೀಳುಬಿದ್ದಿದ್ದ ಭೂಮಿಗಳನ್ನೆಲ್ಲ ಸಾಗುವಳಿಗೆ ಅಣಿಗೊಳಿಸಿ ಪ್ರಜೆಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವಂತಹ ಕಾರ್ಯಕ್ರಮಗಳನ್ನು ಕೈಗೊಂಡ. ಪೋರ್ಚುಗೀಸರೊಡನೆ ಸ್ನೇಹ ಬೆಳೆಸಿದ. ಇದರಿಂದ ಆತನು ತೀರಪ್ರದೇಶದ ಕೆಲವು ಭಾಗಗಳನ್ನು ಅವರು ವಶಪಡಿಸಿಕೊಳ್ಳುವುದನ್ನು ನಿಸ್ಸಹಾಯಕವಾಗಿ ನೋಡುತ್ತಿರಬೇಕಾಯಿತಾದರೂ ಹೊರಗಿನ ಶತ್ರುಗಳ ದಮನಕ್ಕೆ ಪೋರ್ಚು ಗೀಸರಿಂದ ಸರಬರಾಜಾಗುತ್ತಿದ್ದ ಅಶ್ವಬಲ ಹೆಚ್ಚು ಆವಶ್ಯಕವಾಯಿತು. ಪೋರ್ಚುಗೀಸರು ಬಿಜಾಪುರದ ಸುಲ್ತಾನನ ವಿರುದ್ಧ ಹೋರಾಡಿ ಅಂತಿಮವಾಗಿ ಗೋವೆಯನ್ನು ಸ್ವಾಧೀನಪಡಿಸಿಕೊಂಡರು. ಉಮ್ಮತ್ತೂರಿನ ಪಾಳೆಯಗಾರರನ್ನು ಸೋಲಿಸಿ ಶ್ರೀರಂಗಪಟ್ಟಣ, ಶಿವಸಮುದ್ರಗಳನ್ನು ಆಕ್ರಮಿಸಿ, ಅಲ್ಲಿನ ಆಡಳಿತವನ್ನು ನೆಚ್ಚಿನ ಅಧಿಕಾರಿಗಳಿಗೆ ವಹಿಸಿದ.

ಬಹಮನೀ ಸುಲ್ತಾನನಾದ ಮಹಮೂದ್ (1) ದುರ್ಬಲಗೊಳ್ಳುತ್ತಿದ್ದ ರಾಜ್ಯವನ್ನು ಉಳಿಸಿಕೊಳ್ಳಲು ಜೀಹಾದ್‌ನ ನೆಪದಲ್ಲಿ ವಿಜಯನಗರದ ವಿರುದ್ಧ ದಂಡೆತ್ತಿದ. ಬಿಜಾಪುರದ ಯೂಸುಫ್ ಆದಿಲ್‌ಖಾನನು ಇವನೊಡಗೂಡಿದ. ಆದರೆ ಬಹಮನೀ ಸೈನ್ಯವನ್ನು ಎರಡು ಬಾರಿ ಸೋಲಿಸಿದ ರಾಯ ಅವನನ್ನು ಬೆನ್ನತ್ತಿದ. ಯೂಸುಫ್ ಕದನದಲ್ಲಿ ಅಸುನೀಗಿದ (1510). 1523ರಲ್ಲಿ ಇನ್ನೊಮ್ಮೆ ರಾಯನು ಗುಲ್ಬರ್ಗದವರೆಗೂ ಹೋಗಿ ಅಲ್ಲಿ ಮಹಮೂದನ ಮೂವರು ಮಕ್ಕಳನ್ನು ಸೆರೆಯಿಂದ ಬಿಡಿಸಿ, ಹಿರಿಯನನ್ನು ಸುಲ್ತಾನ ಪಟ್ಟಕ್ಕೇರಿಸಿ, ಇನ್ನಿಬ್ಬರನ್ನು ತನ್ನೊಡನೆ ರಾಜಧಾನಿಗೆ ಕರೆತಂದು ಅವರನ್ನು ಪ್ರೀತಿ ಗೌರವಗಳಿಂದ ಕಂಡ. ಯವನರಾಜ್ಯ ಸ್ಥಾಪನಾಚಾರ್ಯನೆಂಬ ಬಿರುದನ್ನು ಪಡೆದ. ಬಿಜಾಪುರದಲ್ಲಿ ಯೂಸುಫ್‌ನ ಮಗ ಇಸ್ಮಾಯಿಲ್ ಅಧಿಕಾರಕ್ಕೆ ಬಂದ. ರಾಯಚೂರು–ಮುದಗಲ್ಲು ಕೋಟೆಗಳು ಈತನ ವಶದಲ್ಲಿದ್ದವು. ಅದನ್ನು ಮರಳಿ ಪಡೆಯಲು ರಾಯನು 1520ರಲ್ಲಿ ರಾಯಚೂರನ್ನು ಮುತ್ತಿದ. ಭೀಕರ ಕದನದಲ್ಲಿ ಪೋರ್ಚುಗೀಸರ

ತುಪಾಕಿಗಳ ನೆರವಿನಿಂದ ಕೋಟೆಯನ್ನು ವಶಪಡಿಸಿಕೊಂಡ. ಇನ್ನೂ ಎರಡು ಬಾರಿ ಈ ಶತ್ರುಗಳು ಕದನ ಹೂಡಿದರು. 1523ರಲ್ಲಿ ಸಾಗರದಲ್ಲಿ ನಡೆದ ಅಂತಿಮ ಕದನದಲ್ಲಿ ಇಸ್ಮಾಯಿಲ್ ಸೋತ.

ರಾಯ ಹೂಡಿದ ಕದನಗಳಲ್ಲಿ ವಿಶಿಷ್ಟವಾದುದು ಆತನ ಒರಿಸ್ಸಾದ ದಂಡಯಾತ್ರೆ. ಅಲ್ಲಿನ ಗಜಪತಿ ಅರಸರು ವಿಜಯನಗರದ ವಿರುದ್ಧ ಸೆಣಸುತ್ತಿದ್ದರು. ದೇಶದ ಸ್ವಾತಂತ್ರ್ಯ, ಧರ್ಮ, ಸಂಸ್ಕೃತಿಗಳಿಗೇ ಧಕ್ಕೆಯುಂಟಾಗಿದ್ದ ಸಂದರ್ಭದಲ್ಲಿ ಹಿಂದುಗಳೇ ಆಗಿದ್ದ ಗಜಪತಿ, ಮಿತ್ರರಾಗಿರುವ ಬದಲು ಶತ್ರುತ್ವವನ್ನು ಬೆಳೆಸಿದುದು ನಾಡಿಗೆ ಹಿತಕರವಾಗಿರ

ಮಹಾದ್ವಾರ, ಹಂಪೆ

ಲಿಲ್ಲ. ಎಂತಲೇ ಅವರಿಗೆ ಪಾಠ ಕಲಿಸಲೆಂದೇ ಕೃಷ್ಣದೇವರಾಯ ತನ್ನ ದಂಡಯಾತ್ರೆಗೆ ಸಕಲ ಸನ್ನಾಹಗಳನ್ನೂ ಮಾಡಿಕೊಂಡು, ಅಚ್ಚುಕಟ್ಟಾದ ರೀತಿಯಲ್ಲಿ ಐದು ಘಟ್ಟಗಳಲ್ಲಿ ಗಜಪತಿಯನ್ನು ಸೋಲಿಸಿದ. 1513ರಲ್ಲಿ ಉದಯಗಿರಿ, 1517ರಲ್ಲಿ ಕೊಂಡವೀಡು, ಕಂದುಕೂರು ವಿನುಕೊಂಡ, ನಾಗಾರ್ಜುನಕೊಂಡ, 1517ರಲ್ಲಿ ವಿಜಯವಾಡ ಮತ್ತು ಕೊಂಡಪಲ್ಲಿಗಳನ್ನು ಗೆದ್ದುಕೊಂಡು ಸಿಂಹಾಚಲಕ್ಕೆ ಹೋಗಿ, ಪೋತನೂರಿನಲ್ಲಿ ಒಂದು ವಿಜಯಸ್ತಂಭವನ್ನು ನೆಟ್ಟು ಅಂತಿಮವಾಗಿ ಗಜಪತಿಯ ರಾಜಧಾನಿಯಾದ ಕಟಕ್ ನಗರವನ್ನು ಮುತ್ತಿ ಪ್ರತಾಪರುದ್ರನನ್ನು ಸಂಪೂರ್ಣವಾಗಿ ಸೋಲಿಸಿದ. ಆತನ ಮಗಳಾದ ಜಗನ್ಮೋಹಿನಿಯನ್ನು ಮದುವೆಯಾದ. ಪ್ರತಾಪರುದ್ರ ಮಿತ್ರನಾಗಿರುವುದು ಹಿತವೆಂದು ಆತನಿಗೆ ಬೋಧಿಸಿ ಆತನ ರಾಜ್ಯವನ್ನು ಆತನಿಗೇ ಉದಾರವಾಗಿ ಹಿಂದಿರುಗಿಸಿದ. ಗೋಲ್ಕೊಂಡದ ಕುತುಬ್ ಷಾಹಿ ಸುಲ್ತಾನನು ಈ ಸಂದರ್ಭದ ಪ್ರಯೋಜನ ಪಡೆದು ಒರಿಸ್ಸದ ಮೇಲೆ ದಾಳಿ ನಡೆಸಿದಾಗ ಆತನನ್ನು ಸೋಲಿಸಿ ಹಿಂದಕ್ಕೆ ಅಟ್ಟಿದ. ದಕ್ಷಿಣದಲ್ಲಿ ಸಿಂಹಳದ್ವೀಪದಲ್ಲಿ ಎದ್ದಿದ್ದ ದಂಗೆಯನ್ನಡಗಿಸಿ ವಿಜಯಬಾಹುವಿನ ಮಗನಾದ ಭುವನೈಕಬಾಹುವನ್ನು ರಾಜ್ಯದಲ್ಲಿ ಪ್ರತಿಷ್ಠಾಪಿಸಿದ.

ಈ ಅರಸನ ಅಂತಿಮ ದಿನಗಳು ದುಃಖದಾಯಕವಾಗಿದ್ದುವು. ಆರು ವರ್ಷದ ಮಗ ತಿರುಮಲನಿಗೆ ಯುವರಾಜ ಪದವಿ ನೀಡಿದ್ದ. ಆದರೆ ಆತ ಒಂದು ವರ್ಷದೊಳಗೇ ಮಡಿದ. ರಾಯನ ನೆಚ್ಚಿನ ಸೇನಾನಿಯಾದ ಅಮಾತ್ಯ ಸಾಳುವ ತಿಮ್ಮರಸನ ಮಗ ತಿಮ್ಮ ದಂಡನಾಯಕ ಗುತ್ತಿಯ ಕೋಟೆಯಲ್ಲಿ ಕುತಂತ್ರಕ್ಕೊಳಗಾಗಿ ಬಂಧಿಸಲ್ಪಟ್ಟ. ಅಲ್ಲಿಂದ ಆತ ತಪ್ಪಿಸಿ ಕೊಳ್ಳಲು ಯತ್ನಿಸಿ ವಿಫಲನಾದ. ಕುಪಿತಗೊಂಡ ಅರಸ ತಂದೆಮಕ್ಕಳಿಬ್ಬರ ಕಣ್ಣುಗಳನ್ನು ಕೀಳಿಸಿದ ಎಂಬುದು ನ್ಯೂನಿಜ್‍ನ ಹೇಳಿಕೆ. ಇದರ ಸತ್ಯಾಸತ್ಯತೆ ಯನ್ನು ಕುರಿತು ವಾದಗಳಿವೆ. ಹೇಗೇ ಇದ್ದರೂ ಇಂತಹ ಒಂದು ಘಟನೆ ಅರಸನನ್ನು ಘಾಸಿಗೊಳಿಸಿತು. ಈತ ಸ್ವಾಸ್ಥ್ಯ ಕಳೆದುಕೊಂಡು 1529ರ ನವೆಂಬರ್‌ನಲ್ಲಿ ಮರಣಹೊಂದಿದ. **(ಬಿ.ಆರ್.ಜಿ)**

ಈ ಅರಸನ ಕಾಲದಲ್ಲಿ ಅನೇಕರು ಪ್ರವಾಸಿಗಳಾಗಿ ವಿಜಯನಗರಕ್ಕೂ ಬಂದಿದ್ದರು. ಅವರಲ್ಲಿ ಪೋರ್ಚುಗೀಸರಾದ ಬಾರ್ಬೋಸ ಮತ್ತು ಡೊಮಿಂಗೊ ಪೇಯಿಸ್ ಪ್ರಮುಖರು. ಬಾರ್ಬೋಸ ಬಹುಮಟ್ಟಿಗೆ ಪೀಡ್ರೋ ಅಲ್ವಾರಿಸ್ ಕಾಟ್ರಲ್‌ನ ನೌಕಾಪಡೆಯೊಡನೆ ಸು. 1500ರಲ್ಲಿ ಭಾರತಕ್ಕೆ ಬಂದಂತೆ ತೋರುತ್ತದೆ. ಇಲ್ಲಿ ಮಲೆಯಾಳಂ ಭಾಷೆಯನ್ನು ಚೆನ್ನಾಗಿ ಕಲಿತ ಈತ ಆಲ್ಬುಕರ್ಕ್‌ನ ದುಭಾಷಿಯಾಗಿ ಕಣ್ಣಾನೂರು ಮತ್ತು ಕೊಚ್ಚಿನ್‌ಗಳ ಅರಸರೊಡನೆ ಮಾತುಕತೆ ನಡೆಸಿದ್ದ. ಇಲ್ಲಿ ಈತನಿಗೆ ಕೆಲಸದಲ್ಲಿ ಬಡತಿ ಸಿಕ್ಕದ ಕಾರಣ ನಿರಾಶನಾಗಿ 1519ರಲ್ಲಿ ಮರುಪ್ರಯಾಣ ಮಾಡಿದ. ಈತ 1521ರಲ್ಲಿ ಫಿಲಿಫೈನ್ಸಿನ ಸೆಬುದ್ವೀಪಕ್ಕೆ ಬಂದಾಗ ಅಲ್ಲಿನ ರಾಜನಿಂದ ಕೊಲ್ಲಿಸಲ್ಪಟ್ಟ. ಸುಮಾರು 1515ರ ವೇಳೆಗೆ ಈತ ಪೋರ್ಚುಗೀಸ್ ಭಾಷೆಯಲ್ಲಿ ಬರೆದಿಟ್ಟ ಪ್ರವಾಸಕಥನವನ್ನು 1563ರಲ್ಲಿ ರಾಮುಸ್ಸಿಬೋ ಇಟಲಿ ಭಾಷೆಗೆ ಪರಿವರ್ತಿಸಿದ. ಈ ಶತಮಾನದ ಆರಂಭದಲ್ಲಿ ಮಾನ್ಸೆಲ್ ಲಾಂಗ್‌ವರ್ತ್ ಡೇಮ್ಸ್ ಎಂಬಾತನೂ 1865ರಲ್ಲಿ ಹೆನ್ರಿ ಎಂಬಾತನೂ ನೇರವಾಗಿ ಆಂಗ್ಲ ಭಾಷೆಗೆ ಅನುವಾದಿಸಿ ಪ್ರಕಟಿಸಿದರು. ಈತ ಹಿಂದುಗಳನ್ನು ಜಂಟೈಲ್‌ಗಳೆಂದೂ ಮಹಮದೀಯರನ್ನು ಮೂರರೆಂದೂ ಕರೆದಿದ್ದಾನೆ. ವಿಜಯನಗರವನ್ನು ನರಸಿಂಗ ಮಹಾರಾಜ್ಯ ಎಂದೂ ಹೆಸರಿಸಿದ ಈತ ಈ ರಾಜ್ಯ ಶ್ರೀಮಂತಿಕೆಯಿಂದ ಕೂಡಿದ್ದು ಧನಧಾನ್ಯಗಳಿಂದ ಕೂಡಿದ ನಗರಗಳೂ ಪಟ್ಟಣಗಳೂ ಇಲ್ಲಿವೆ; ಬೇಕಾದಷ್ಟು ವ್ಯಾಪಾರ, ಹಡಗಿನಲ್ಲಿ ರವಾನೆಯೂ ಇಲ್ಲಿ ನಡೆಯುತ್ತದೆ ಎಂದಿದ್ದಾನೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ, ಮಿರ್ಜಾನ್, ಭಟ್ಕಳ, ದಕ್ಷಿಣ ಕನ್ನಡ ಜಿಲ್ಲೆಯ ಮಯಂಮೂರು (ಬೈಂದೂರು), ಬಾರಕೂರು, ಬಸರೂರು ಮುಂತಾದ ಊರುಗಳ ವರ್ಣನೆಯನ್ನು ಇವನ ಬರೆಹದಲ್ಲಿ ಕಾಣಬಹುದು. ಬಿಜನಗರ್ ರಾಜ್ಯದ ಒಳನಾಡಿನ ದೊಡ್ಡ ನಗರ, ರಾಜ ಇಲ್ಲಿ ವಾಸಿಸುತ್ತಾನೆ. ಇವನನ್ನು ರಾಹೆನಿ (ರಾಯ) ಎಂದು ಕರೆಯುತ್ತಾರೆ. ಇಲ್ಲಿಗೆ ತಾಮ್ರ, ಪಾದರಸ, ಸಿಂಧೂರ, ಕೇಸರಿ, ಗುಲಾಬಿ, ಅತ್ತರು, ಅಫೀಮು ಇತ್ಯಾದಿಗಳು ಬರುತ್ತವೆ. ಅಗಾಧವಾಗಿ ಮೆಣಸನ್ನು ಉಪಯೋಗಿಸುತ್ತಾರೆ. ಪರ್ದೊ (ಪ್ರತಾಪ?) ಎಂಬ ನಾಣ್ಯ ಚಲಾವಣೆಯಲ್ಲಿದೆ. ರಾಜನೂ ಆಡಳಿತವನ್ನು ರಾಜ್ಯಪಾಲಕ ರುಗಳಿಗೆ ವಹಿಸಿ ತಾನು ರಾಜಧಾನಿಯಲ್ಲಿ ಸುಖವಾಗಿರುತ್ತಾನೆ. ಅರಮನೆಯ ಊಳಿಗಕ್ಕೆ ರಾಜ್ಯದಲ್ಲೆಲ್ಲ ಆರಿಸಿದ ರೂಪವತಿಯರನ್ನು ನೇಮಿಸಿಕೊಳ್ಳುತ್ತಾರೆ. ರಾಜನ ಅಶ್ವದಳ, ಕಾಲುದಳಗಳಲ್ಲಿ ಹತ್ತು ಲಕ್ಷ ಜನರಿದ್ದಾರೆ. ಯುದ್ಧಕ್ಕೆ ಹೋದಾಗ ಸೈನಿಕರ ಸಂಖ್ಯೆಗನುಗುಣವಾಗಿ ಸ್ತ್ರೀಯರನ್ನು ಕಳಿಸುತ್ತಾರೆ. ಬ್ರಾಹ್ಮಣರನ್ನು ಜನ ಗೌರವಿಸುತ್ತಾರೆ. ಇವೇ ಮುಂತಾದ ಅಂದಿನ ಸಮಾಜದ ವಿವರಗಳು ಈತನ ಬರೆವಣಿಗೆಗಳಿಂದ ಲಭಿಸುತ್ತದೆ.

ಡೊಮಿಂಗೊ ಪೇಯಿಸ್ ಕೃಷ್ಣದೇವರಾಯನ ಕಾಲದಲ್ಲಿ (1520) ವಿಜಯನಗರಕ್ಕೆ ಬಂದಿದ್ದ. ಇವನ ಬರೆಹಗಳು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಬಹಳ ಉಪಯುಕ್ತವಾಗಿವೆ. ಈತನೂ ಅನಂತರ ಬಂದ ನ್ಯೂನಿಜನೂ ಪೋರ್ಚುಗೀಸರೇ. ಈ ಇಬ್ಬರೂ ಬರೆದಿಟ್ಟಿದ್ದನ್ನು ಡೇವಿಟ್ ಲೋಪ್ 1897ರಲ್ಲಿ ಡೋಸ್‌ರೈಸ್-ದೆ-ಬಿಸ್ನಾಗ ಎಂಬ ಪುಸ್ತಕದಲ್ಲಿ ಪ್ರಕಟಿಸಿದ. ಇವರು ಬರೆದ ವೃತ್ತಾಂತಗಳನ್ನು ಗೋವದಿಂದ ಪೋರ್ಚು ಗಲ್‌ಗೆ ಕಳುಹಿಸಿದಾತನ ಹೆಸರು ಗೊತ್ತಿಲ್ಲ. ಆತ ಅದನ್ನು ಲಿಸ್ಬನ್‌ನ ಪ್ರಸಿದ್ಧ ಇತಿಹಾಸಕಾರನಾದ ಬರ‍್ರೂಷನಿಗೆ ಕಳಿಸಿದ. ಪೇಯಿಸ್ ಸಹ ವಿಜಯನಗರವನ್ನು ನರಸಿಂಗನ ರಾಜ್ಯವೆಂದು ಕರೆದಿದ್ದಾನೆ. ಇತರರಂತೆ ಈತನೂ ಇಲ್ಲಿನ ರೇವುಪಟ್ಟಣಗಳಾದ ಅಹೋಲ, ಮಿರ್ಜಾನ್, ಹೊನ್ನಾವರ, ಭಟ್ಕಳ, ಮಂಗಳೂರು, ಬಸರೂರು, ಬಾರಕೂರುಗಳ ಪ್ರಸ್ತಾಪ ಮಾಡಿದ್ದಾನೆ. ಬಿಸ್ನಗರದ (ವಿಜಯನಗರ) ವರ್ಣನೆ ಇವನ ಬರೆಹದಲ್ಲಿ ಕಂಡುಬಂದಿದೆ. ರಾಜ ತನ್ನ ಮಡದಿಯ ಹೆಸರಿನಲ್ಲಿ ಹೊಸ

ನಗರವನ್ನು (ನಾಗಲಾಪುರ) ಕಟ್ಟಿಸಿದುದನ್ನು ತಿಳಿಸಿದ್ದಾನೆ. ಅರಸನನ್ನು ಸ್ವತಃ ಕಂಡಿದ್ದ ಈತ ಅವನನ್ನು ಸುಮಾರು ಎತ್ತರವಾಗಿದ್ದು ಲಕ್ಷಣವಾಗಿ ದ್ದಾನೆ; ಮೈ ತೆಳುವಾಗಿರುವುದಕ್ಕಿಂತ ಸ್ಥೂಲವಾಗಿದೆ ಎಂದು ಹೇಳಬಹುದು. ಮುಖದ ಮೇಲೆ ಸಿಡುಬಿನ ಕಲೆಗಳಿರುವಂತೆ ಕಾಣುತ್ತವೆ. ಹಸನ್ಮುಖನಾಗಿ ಉಲ್ಲಾಸದಿಂದಿರುತ್ತಾನೆ. ದೊರೆಯನ್ನು ಕ್ರಿಸ್ನರಾವ್ ಮಕಾಗಾವ್ (ಕೃಷ್ಣರಾಯ ಮಹಾರಾಯ) ರಾಜಾಧಿರಾಜ, ಮಹಾಮಂಡಲೇಶ್ವರ, ಮೂರು ಸಮುದ್ರಗಳಿ ಗೊಡೆಯ ಇತ್ಯಾದಿಯಾಗಿ ಹೊಗಳುತ್ತಾರೆ ಎಂದೆಲ್ಲ ವರ್ಣಿಸಿದ್ದಾನೆ. ಈ ನಗರದ ಜನಸಂಖ್ಯೆ ಹೇಳಲಸಾಧ್ಯವಾದುದೆಂದೂ ಆತ ನೋಡಿದಷ್ಟು ಭಾಗವೇ ರೋಮ್ ನಗರದಷ್ಟಿತ್ತೆಂದೂ ಹೇಳಿದ್ದಾನೆ. ಮಾರುಕಟ್ಟೆಯಲ್ಲಿ ಸಿಗುವ ಆಹಾರ ಸಾಮಗ್ರಿಗಳು ತರಕಾರಿ ಹಾಗೂ ಮಾಂಸಗಳ ಅತಿ ಕಡಿಮೆ ಬೆಲೆಗಳನ್ನು ಸೂಚಿಸಿದ್ದಾನೆ. ದಸರ ಹಬ್ಬದ ಒಂಬತ್ತು ದಿನಗಳಲ್ಲಿ ನಡೆಯುವ ವೈಭವಗಳನ್ನು ವಿವರಿಸಿದ್ದಾನೆ. ದಸರೆಯ ಹಬ್ಬವನ್ನು ಅರಸನೂ ಪ್ರಜೆಗಳೂ ಸಂಭ್ರಮದಿಂದ ಆಚರಿಸುತ್ತಿದ್ದರು. ಅಂದು ಸಾಮಂತರು, ಅಧಿಕಾರಿಗಳು, ರಾಯಭಾರಿಗಳು, ಅರಸನಿಗೆ ಗೌರವ ಸಲ್ಲಿಸಿ ನಿಷ್ಠೆಯನ್ನು ತೋರಿಸುತ್ತಿದ್ದರು.

ತನ್ನ ಒರಿಸ್ಸದ ವಿಜಯವನ್ನು ಸೂಚಿಸಲೆಂಬಂತೆ ಮಹಾನವಮಿ ದಿಬ್ಬವನ್ನು ಕಟ್ಟಿಸಿದ ಅನಂತರ ನವರಾತ್ರಿಯ ಉತ್ಸವಗಳೂ ವಿಶೇಷ ಸಮಾರಂಭಗಳೂ ಇಲ್ಲಿಯೇ ನೆರವೇರುತ್ತಿದ್ದುವು. ಅರಸನು ರಾಜ್ಯದ ತೀರ್ಥಕ್ಷೇತ್ರಗಳಿಗೆ ಅಪರಿಮಿತವಾದ ದಾನಗಳನ್ನು ಮಾಡಿದ. ರಾಜಧಾನಿ ಯಲ್ಲೂ ಹೊರಗಡೆಯೂ ನೂತನ ದೇವಾಲಯಗಳನ್ನು ಕಟ್ಟಿಸಿದುದಲ್ಲದೆ, ಮೊದಲಿನ ದೇವಾಲಯಗಳಲ್ಲಿ ನೂತನ ಸಭಾಮಂಟಪ, ನೃತ್ಯಮಂಟಪ ಮುಂತಾದವುಗಳನ್ನು ಸೇರಿಸಿ, ಚೋಳರ ದೇವಾಲಯಗಳಲ್ಲಿ ಆ ಮೊದಲು ಕಂಡುಬಂದಂತಹ ಗೋಪುರಗಳನ್ನು ದೇವಾಲಯದ ದ್ವಾರದಲ್ಲಿ, ಹೆಚ್ಚು ಕಲಾತ್ಮಕವಾಗಿ ಭವ್ಯವಾಗಿ, ಉನ್ನತವಾಗಿ ಕಟ್ಟಿಸಿದ. ಇಂತಹ ಗೋಪುರಗಳು ಅನಂತರ ರಾಯಗೋಪುರಗಳೆಂದೇ ಹೆಸರಾದುವು. ಕಲೆ, ಸಾಹಿತ್ಯಗಳಿಗೂ ಈತ ಹೆಚ್ಚಿನ ಪ್ರೋತ್ಸಾಹ ನೀಡಿದ. ಅಷ್ಟದಿಗ್ಗಜರು ಈತನ ಆಸ್ಥಾನವನ್ನು ಅಲಂಕರಿಸಿದ್ದರು. ಸಂಸ್ಕೃತ, ಕನ್ನಡ, ತೆಲುಗು, ತಮಿಳು ಭಾಷೆಗಳಿಗೆ ಸಮಾನವಾದ ಸ್ಥಾನಮಾನಗಳನ್ನು ನೀಡಿದ್ದ ಈತ ಸ್ವತ: ಕವಿ. ಆಮುಕ್ತ ಮಾಲ್ಯದಾ ಎಂಬ ತೆಲುಗು ಕೃತಿ ಈತನಿಂದ ರಚಿತವಾದದ್ದೆಂಬ ಹೇಳಿಕೆ ಇದೆ. ಆಂಧ್ರಕವಿತಾ ಪಿತಾಮಹನೆನಿಸಿದ ಅಲ್ಲಸಾನಿ ಪೆದ್ದನ, ನಂದಿ ತಮ್ಮಯ್ಯ, ತಮ್ಮಣ್ಣ ಕವಿ, ಗುಬ್ಬಿಯ ಮಲ್ಲಣ್ಣ, ವಿರುಪರಾಜ, ನಂಜುಂಡ, ಓದುವ ಗಿರಿಯ, ಚೇರಮಾಂಕ ಮೊದಲಾದವರು ಈತನ ಕಾಲದ ತೆಲುಗು ಕನ್ನಡ ಕವಿಗಳು. ಅರಸನು ಮದಾಲಸಾಚರಿತೆ, ರಸಮಂಜರೀ ಮುಂತಾದ ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾನೆಂದು ಆಮುಕ್ತಮಾಲ್ಯದಾ ಕೃತಿಯಲ್ಲಿ ಹೇಳಿದೆ. **(ಸಿ.ಕೆ.ಎನ್.)**

ಕೃಷ್ಣದೇವರಾಯನ ಮಲಸೋದರ ಅಚ್ಯುತರಾಯ. ಈತ 1529ರಲ್ಲಿ ಸಿಂಹಾಸನವನ್ನೇರಿದನಾದರೂ ದಾಯಾದಿಗಳ ವಿರೋಧವನ್ನು ಎದುರಿಸ ಬೇಕಾಯಿತು. ಕೃಷ್ಣದೇವರಾಯನ ಇನ್ನೊಬ್ಬ ಮಗನಿಗೆ ಆಗಿನ್ನೂ ಒಂದೂವರೆ ವರ್ಷ. ಆ ಮಗುವಿನ ಪರವಾಗಿ ಸೋದರಮಾವನಾದ ಹುಚ್ಚ ತಿರುಮಲ, ಅಳಿಯನಾದ ರಾಮರಾಯ ಈತನ ಪ್ರತಿಸ್ಪರ್ಧಿಗಳು. ಇವರ ಅಂತಃಕಲಹಗಳ ಸಮಯದಲ್ಲಿ ಬಿಜಾಪುರದ ಇಸ್ಮಾಯಿಲ್ ಎರಡು ಬಾರಿ ರಾಜಧಾನಿಯನ್ನು ಮುತ್ತಿದ. ಮೊದಲ ಬಾರಿ ರಾಯಚೂರು, ಮುದಗಲ್ಲು ಕೋಟೆಗಳು ಅವನ ವಶವಾದುವು. ಆದರೆ ಕೊನೆಗೊಮ್ಮೆ ಅಚ್ಯುತರಾಯ ಅವನನ್ನು ಯಶಸ್ವಿಯಾಗಿ ಸೋಲಿಸಿದ. ಮತ್ತೊಮ್ಮೆ ಅಲ್ಲಲ್ಲಿ ದಂಗೆಗಳು ಕಾಣಿಸಿ ಕೊಂಡವು. ಕೃಷ್ಣದೇವರಾಯನ ಶಕ್ತಿ ಸಾಮರ್ಥ್ಯಗಳು ಈತನಿಗಿರಲಿಲ್ಲ. ಹೇಗೋ 1542ರ ವರೆಗೆ ಆಳಿದ. ಆನಂದನಿಧಿ ಎಂಬ ದತ್ತಿಯನ್ನು ಸ್ಥಾಪಿಸಿ ದಾನಧರ್ಮಗಳನ್ನು ಮಾಡಿದ ಯಶಸ್ಸು ಈತನದು.

ಅಚ್ಯುತರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದ ಇನ್ನೊಬ್ಬ ಪೋರ್ಚುಗೀಸ್ ಯಾತ್ರಿಕ ನ್ಯೂನಿಜ್. ಈತ ವಿಜಯನಗರಕ್ಕೆ ಬಂದುದು ಸು. 1536–37ರಲ್ಲಿ. ವಿಜಯನಗರದ ಪೂರ್ವೇತಿಹಾಸವನ್ನು ತಿಳಿಸಿರುವುದು ಈತನ ಬರವಣಿಗೆಯ ವೈಶಿಷ್ಟ್ಯ. ಈತನ ಬರವಣಿಗೆ ಸಹ ಗೋವಾದ ಒಬ್ಬ ಅನಾಮಿಕನಿಂದ ಲಿಸ್ಬನ್ನಿನ ಬರ್ರೂಷನಿಗೆ ತಲುಪಿತು. ಆದರೆ ಆ ಅನಾಮಿಕ ಇದನ್ನು ಲಿಸ್ಬನ್ನಿಗೆ ಕಳುಹುವಾಗ ಕುದುರೆ ವ್ಯಾಪಾರಕ್ಕೋಸ್ಕರ ವಿಜಯನಗರಕ್ಕೆ (ಬಿಸ್ನಗ) ಹೋಗಿದ್ದು ಮೂರು ವರ್ಷಗಳ ಕಾಲ ಅಲ್ಲಿದ್ದ ಫರ್ನಾಂವ್ ನ್ಯೂನಿಜನಿಂದ ಆತ ಬರೆದಿಟ್ಟಿದುದನ್ನು ಪಡೆದುಕೊಂಡು ಕಳಿಸುತ್ತಿರುವುದಾಗಿ ಬರೆದಿದ್ದಾನೆ. ನ್ಯೂನಿಜ್‌ನಿಗೆ ಕುದುರೆ ವ್ಯಾಪಾರದಿಂದ ಏನೂ ಗಿಟ್ಟಲಿಲ್ಲವಂತೆ.

ವಿಜಯನಗರದ ಅರಸರ ಹೆಸರುಗಳನ್ನು, ಇತರ ವಿವರಗಳನ್ನು ಕೊಡುವಲ್ಲಿ ನ್ಯೂನಿಜ್ ಎಡವಿದ್ದಾನೆ. ವಿಜಯನಗರದ ಮೊದಲ ಅರಸನನ್ನು ದೆಹೋರಾವ್ ಎಂದು ಕರೆದಿದ್ದಾನೆ. ವೈದಿಯುಜುಗ (ವಿದ್ಯಾರಣ್ಯ) ಸ್ವಾಮಿಗಳು ಕಾಲವಾದ ಮೇಲೆ ಒಂದು ದೇವಸ್ಥಾನವನ್ನು ಆತ ಕಟ್ಟಿಸಿದ್ದಾ ನೆಂದಿದ್ದಾನೆ. ಅನಂತರ ಪಟ್ಟಕ್ಕೆ ಬಂದ ಬುಕರಾವ್ ಕೈತಪ್ಪಿಹೋಗಿದ್ದ ರಾಜ್ಯಗಳನ್ನು ಗೆದ್ದುದಲ್ಲದೆ ಒರಿಯಾ ರಾಜ್ಯವನ್ನು ಗೆದ್ದನಂತೆ. ಬುಕರಾವ್‌ನ ಮಗ ಅಜರಾವ್ ಎಂದಿದ್ದಾನೆ. ಇವೆಲ್ಲ ಗೊಂದಲಮಯವಾದ ಬರೆಹಗಳು. ಆದರೆ ಸಮಕಾಲೀನ ಮತ್ತು ಅದಕ್ಕೆ ಸ್ವಲ್ಪ ಹಿಂದಿನ ಘಟನೆಗಳನ್ನು ಕುರಿತು ಬರೆಯುವಲ್ಲಿ ಈತ ಹೆಚ್ಚು ನಂಬಿಕೆಗೆ ಅರ್ಹನಾಗಿದ್ದಾನೆ. ಸಾಳುವ ನರಸಿಂಹನನ್ನು ನರಸಿಂಗುವಾ ಎಂದು ಕರೆದು ಬಿಸ್ನಾಗ್ರ ರಾಜ್ಯವನ್ನು ನರಸಿಂಗುವಾ ರಾಜ್ಯವೆಂದಿದ್ದಾನೆ. ಕೃಷ್ಣದೇವರಾಯನ ದಂಡಯಾತ್ರೆಗಳ ವಿವರಗಳನ್ನು ನೀಡಿದ್ದಾನೆ. ಅಚ್ಯುತರಾಯ ಅನೀತಿ ಮತ್ತು ದಬ್ಬಾಳಿಕೆಗಳಿಗೆ ಕೈಹಾಕಿದನು. ಪ್ರಾಮಾಣಿಕತೆ ಎನ್ನುವುದೇ ಇರಲಿಲ್ಲ. ಈತನ ನಡತೆಯ ಬಗ್ಗೆ ಯಾರಿಗೂ ಗೌರವವಿಲ್ಲ. ತನ್ನ ರಾಜ್ಯಭಾರದ ವಿಚಾರದಲ್ಲಿ ಈತನಿಗೆ ಕಿಂಚಿತ್ತೂ ಆಸಕ್ತಿಯಿಲ್ಲ ಎಂದೂ ಹೇಳಿದ್ದಾನೆ. ಜೊತೆಗೆ ರಾಜ್ಯದಲ್ಲಿ ಪ್ರಜೆಗಳ ಆಚಾರ ವ್ಯವಹಾರಗಳು, ಸಾಮಾಜಿಕ ಪದ್ಧತಿಗಳು ಇಂತಹ ಇತರ ವಿಷಯಗಳನ್ನು ಸಹ ತನ್ನ ಬರೆಹದಲ್ಲಿ ಈತ ಕಾಣಿಸಿದ್ದಾನೆ.

ಅಚ್ಯುತರಾಯನ ಮರಣಾನಂತರ ಮತ್ತೊಮ್ಮೆ ಕಲಹಗಳುಂಟಾದುವು. ಅಂತಿಮವಾಗಿ ಅಳಿಯ ರಾಮರಾಯ ಅಚ್ಯುತರಾಯನ ಮೇಲುಗೈ ಪಡೆದ. ಈ ಬಾರಿ ರಾಮರಾಯ ಅಚ್ಯುತನ ಸೋದರನಾದ ರಂಗನ ಮಗ ಸದಾಶಿವನ ಹಕ್ಕನ್ನು ಎತ್ತಿಹಿಡಿದ. ಆದರೆ ಸದಾಶಿವರಾಯನನ್ನು ತನ್ನ ಕೈಗೊಂಬೆಯಾಗಿ ಮಾಡಿಕೊಂಡು ಅವನ ಹೆಸರಿನಲ್ಲಿ ತಾನೇ ಸರ್ವಾಧಿಕಾರಿ ಯಾದ. ಪ್ರಾಪ್ತವಯಸ್ಕನಾದ ಸದಾಶಿವ 1550ರ ಸುಮಾರಿನಲ್ಲಿ ಸ್ವತಃ ಆಳಲು ಯತ್ನಿಸಿದಾಗ ಆತನನ್ನು ಸೆರೆಯಲ್ಲಿಟ್ಟು ತನ್ನ ಸೋದರರಾದ ತಿರುಮಲ ಮತ್ತು ವೆಂಕಟಾದ್ರಿಗಳನ್ನು ಮಂತ್ರಿ, ಸೇನಾಪತಿ ಪದವಿಗಳಲ್ಲಿ ನೇಮಿಸಿ ಅವರ ನೆರವಿನಿಂದ ರಾಜ್ಯವನ್ನು ಆಳಿದ. ಆದರೆ ಸದಾಶಿವರಾಯನ ಹೆಸರನ್ನು ಬಳಸಲು ಮರೆಯಲಿಲ್ಲ.

ರಾಮರಾಯ ದಕ್ಷ ಸೇನಾನಿ, ನುರಿತ ರಾಜನೀತಿಜ್ಞ. ಅಧಿಕಾರ ವಹಿಸಿದ ಕೂಡಲೇ ಆಯಕಟ್ಟಿನ ಸ್ಥಾನಗಳಲ್ಲಿ ನಿಷ್ಠಾವಂತರನ್ನು ಸಂಬಂಧಿಕರನ್ನು ನೇಮಿಸಿ, ಸೈನ್ಯವನ್ನು ಬಲಗೊಳಿಸಿ, ಅವರಲ್ಲಿ ಪರಿಣತರಾದ ಮಹಮದೀಯ ರಿಗೆ ಉನ್ನತ ಸ್ಥಾನಗಳನ್ನಿತ್ತು, ಆಡಳಿತವನ್ನು ಬಿಗಿಗೊಳಿಸಿದ. ಪ್ರಜೆಗಳ ವಿಶ್ವಾಸ ಗಳಿಸಲು ಭಾರವಾಗಿದ್ದ ನಾವಿದರ ಮೇಲಿನ ತೆರಿಗೆ ಮುಂತಾದ ಕರಗಳನ್ನು ಮಾನ್ಯ ಮಾಡಿದ. ಆ ವೇಳೆಗೆ ಐದು ಭಾಗಗಳಾಗಿ ಒಡೆದಿದ್ದ

ಬಹಮನೀ ರಾಜ್ಯದ ಐವರು ಸುಲ್ತಾನರು ಪರಸ್ಪರ ಕಲಹಗಳಲ್ಲಿ ತೊಡಗುವಂತೆ ಮಾಡಿ, ಅವರ ರಾಜಕೀಯದಲ್ಲಿ ಪ್ರವೇಶಿಸಿ, ಅವರಿಗೆ ಸಹಾಯ ಮಾಡುವಂತೆ ತೋರಿಸಿಕೊಂಡು, ಅವರ ಬಲವನ್ನು ಕುಗ್ಗಿಸಿದ. ಅಂತೆಯೇ ರಾಜ್ಯವನ್ನೂ ವಿಸ್ತರಿಸಿದ. ಕೃಷ್ಣದೇವರಾಯನ ಅನಂತರ ಮತ್ತೊಮ್ಮೆ ಶತ್ರುಗಳ ವಶವಾಗಿದ್ದ ಕೋಟೆಗಳನ್ನು ವಶಪಡಿಸಿಕೊಂಡುದಲ್ಲದೆ, ಕಲ್ಯಾಣ, ಕೋವಿಲ್ಕೊಂಡ, ಘಂಪುರ, ಯಾದಗೀರ್ ಮುಂತಾದ ಇತರ ಕೋಟೆಗಳನ್ನೂ ಆಕ್ರಮಿಸಿದ. ಇವನ ಈ ಆಕ್ರಮಣನೀತಿ ಹೊಸದಾಗಿತ್ತು. ಸಾಮಾನ್ಯವಾಗಿ ರಕ್ಷಣಾನೀತಿಯನ್ನು ಈವರೆಗೆ ಅವಲಂಬಿಸಿದ್ದ ರಾಜ್ಯ ಈಗ ಇಂತಹ ನೀತಿಯನ್ನು ಪಾಲಿಸಿದುದರ ಪರಿಣಾಮವಾಗಿ ವಿಜಯನಗರದ ಬಲ ಹೆಚ್ಚಿತಾದರೂ ಅದು ಶತ್ರುಗಳ ಕಣ್ಣು ತೆರೆಯಿಸಿತು. ಆಗ ಐವರು ಸುಲ್ತಾನರು ತಮ್ಮ ನೈಜಪರಿಸ್ಥಿತಿಯನ್ನು ಅರಿತು ಒಟ್ಟುಗೂಡಲು ಸನ್ನದ್ಧರಾದರು. ಅಹಮದ್‍ನಗರದ ಹುಸ್ಸೈನ್ ನಿಜಾಂ ಷಾ ತನ್ನ ಮಗಳಾದ ಚಾಂದಬೀಬಿಯನ್ನು ಬಿಜಾಪುರದ ಅಲಿ ಆದಿಲ್ ಷಾನಿಗೆ ಮದುವೆ ಮಾಡಿಕೊಟ್ಟು, ಆತನ ಸೋದರಿಯನ್ನು ರಾಜಕುಮಾರ ಮುರ್ತಾಜನಿಗೆ ತಂದುಕೊಂಡ. ಈ ಐವರಲ್ಲಿ ಬೀರಾರಿನ ಸುಲ್ತಾನನನ್ನು ಹೊರತುಪಡಿಸಿ ಇತರರು ತಮ್ಮ ಸೈನ್ಯಗಳನ್ನು ಒಟ್ಟುಗೂಡಿಸಿ ರಾಮರಾಯನ ವಿರುದ್ಧ ದಂಡೆತ್ತಿದರು. ಬಿಜಾಪುರದ ಸುಲ್ತಾನನಾದ ಆಲಿಯನ್ನು ರಾಮರಾಯ ತನ್ನ ಸ್ವಂತ ಮಗನಂತೆಯೇ ಕಾಣುತ್ತಿದ್ದ. ಎಂತಲೇ ಆರಂಭದಲ್ಲಿ ಈ ಸುಲ್ತಾನ ಇತರರನ್ನು ಸೇರಲು ಒಪ್ಪಲಿಲ್ಲ. ಆದರೆ ಕೊನೆಯ ಘಳಿಗೆಯಲ್ಲಿ ತನ್ನ ನಿರ್ಧಾರವನ್ನು ಬದಲಾಯಿಸಿದ. ಕೃಷ್ಣಾನದಿಯ ಉತ್ತರತೀರದ ತಾಳೀಕೋಟೆ ಸಮೀಪದ ರಕ್ಕಸಗಿ–ತಂಗಡಗಿ ಎಂಬ ಎರಡು ಗ್ರಾಮಗಳ ನಡುವಣ ಬಯಲಿನಲ್ಲಿ ಶತ್ರು ಸೈನ್ಯ ಸೇರಿತು. 1565 ಜನವರಿ 23 ರಂದು ನಡೆದ ತೀವ್ರವಾದ ಕದನದಲ್ಲಿ ರಾಮರಾಯನ ಇಬ್ಬರು ಮಹಮದೀಯ ಸೇನಾಪತಿಗಳು ಒಮ್ಮೆಲೇ ಪಕ್ಷಾಂತರ ಮಾಡಿ ಶತ್ರುವನ್ನು ಸೇರಿದರು. ಇದು ಕದನದ ಸ್ವರೂಪವನ್ನೇ ಬದಲಾಯಿಸಿತು. ಮಿತ್ರರೇ ಆಗಿದ್ದವರ ಆಕಸ್ಮಿಕ ದಾಳಿ ಸೈನ್ಯದಲ್ಲಿ ಕೋಲಾಹಲವನ್ನುಂಟುಮಾಡಿತು. ಈ ವೇಳೆಗೆ ಆಕಸ್ಮಿಕವಾಗಿ ರಾಮರಾಯ ಶತ್ರುವಿನ ಕೈಸೆರೆಯಾದ. ಹುಸ್ಸೈನ್ ನಿಜಾಮ್ ಷಾ ಆತನ ಶಿರಶ್ಛೇದನ ಮಾಡಿಸಿ ಪ್ರದರ್ಶಿಸಿದ. ಸೈನ್ಯದಲ್ಲಿ ಹಾಹಾಕಾರವೆದ್ದಿತು. ವಿಜಯನಗರದ ಸೈನ್ಯ ಹಿಮ್ಮೆಟ್ಟಿತು. ತಿರುಮಲ ತೀವ್ರಗತಿಯಲ್ಲಿ ರಾಜಧಾನಿಗೆ ಹಿಂತಿರುಗಿ ಅರಮನೆಯಲ್ಲಿದ್ದ ಸ್ತ್ರೀಯರನ್ನು, ಸಂಬಂಧಿಕರನ್ನು ಮತ್ತು ಸಾಧ್ಯವಿದ್ದಷ್ಟು ಸಂಪತ್ತನ್ನು ಸುಮಾರು 1550 ಆನೆಗಳ ಮೇಲೆ ಹೇರಿಸಿ ಚಂದ್ರಗಿರಿಗೆ ಸಾಗಿಸಿದ. ರಾಜನೆನಿಸಿದ್ದ ಸದಾಶಿವನನ್ನು ಒಯ್ಯಲಾಯಿತು. ಇವರ ಬೆನ್ನಟ್ಟಿಬಂದ ಶತುಸೈನ್ಯ ರಾಜಧಾನಿಯಲ್ಲಿ ಐದು ತಿಂಗಳುಗಳ ಕಾಲ ನೆಲೆಸಿ, ಅಲ್ಲಿನ ಪ್ರಜೆಗಳನ್ನು ತುಂಡರಿಸಿ, ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿ, ದೇವಾಲಯಗಳನ್ನು ಅರಮನೆಗಳನ್ನು ವಿಗ್ರಹಗಳನ್ನು ಭೇದಿಸಿದರು. ಬೆಂಕಿಯಿಂದ, ಕತ್ತಿಗಳಿಂದ, ಹಾರೆಗುದ್ದಲಿಗಳಿಂದ ಒಂದೊಂದು ದಿನವೂ ಅವರು ವಿನಾಶಕಾರ್ಯವನ್ನು ಮುಂದುವರಿಸಿಕೊಂಡು ಬಂದರು. ಪ್ರಪಂಚದ ಇತಿಹಾಸದಲ್ಲಿ ಇಂತಹ ಭವ್ಯವಾದ ನಗರದಲ್ಲಿ ಇಂತಹ ಅತ್ಯಾಚಾರ ಬೇರಾವ ಕಡೆಯೂ ನಡೆದಂತಿಲ್ಲ. (ಬಿ.ಆರ್.ಜಿ)

ಈ ಕದನವನ್ನು ತಪ್ಪು ತಿಳಿವಳಿಕೆಯಿಂದ ತಾಳಿಕೋಟೆಯುದ್ಧ ಎಂದು ಕರೆಯಲಾಗಿತ್ತು. ಸುಲ್ತಾನರ ಸಂಘಟಿತ ಸೇನೆ ಮೂರು ಲಕ್ಷ ಪ್ರಮಾಣದ್ದು. ಇದು ಬಿಜಾಪುರದಿಂದ 1564 ಡಿಸೆಂಬರ್ 25ರಂದು ವಿಜಯನಗರದತ್ತ ಸಾಗಿತು. ದಾರಿಯಲ್ಲಿ ತಾಳಿಕೋಟೆಯಲ್ಲಿ ಶಿಬಿರ ಹೂಡಿ ವಿಶ್ರಮಿಸಿತು. ಅಲ್ಲಿಂದ ದಕ್ಷಿಣಕ್ಕೆ ಸು. 40 ಕಿಮೀ ದೂರದಲ್ಲಿರುವ ಕೃಷ್ಣಾನದಿಯನ್ನು ದಾಟಿ ವಿಜಯನಗರ ಪ್ರದೇಶವನ್ನು ಪ್ರವೇಶಿಸುವ ಉದ್ದೇಶ ಅದಕ್ಕಿತ್ತು. ಆದರೆ ಆರು ಲಕ್ಷ ಸೈನ್ಯಬಲದ ವಿಜಯನಗರದ ಸೈನ್ಯ ರಾಮರಾಯನ ನೇತೃತ್ವದಲ್ಲಿ ನದಿಯ ದಕ್ಷಿಣ ತೀರದುದ್ದಕ್ಕೂ ಗೋಡೆಯನ್ನೆಬ್ಬಿಸಿ ಕಾವಲು ಭಟರನ್ನು ಇರಿಸಿ ಸೈನ್ಯದ ಮುಖ್ಯ ಭಾಗ ಹೊಳೆಯನ್ನು ದಾಟಿ ಉತ್ತರದಲ್ಲಿದ್ದ ಶತ್ರು ಸೈನ್ಯವನ್ನೆದುರಿಸಿತು. ಇದು ನಡೆದುದು ರಕ್ಕಸಗಿ–ತಂಗಡಗಿ ಎಂಬ ಎರಡು ಊರುಗಳ ನೆರೆಯಲ್ಲಿ. ರಾಮರಾಯನ ಬಖೈರ್ ಎಂಬ ಗ್ರಂಥದಲ್ಲಿ ಇದನ್ನು ರಾಕ್ಷಸತಂಗಡಿ ಎಂದು ನಿರ್ದೇಶಿದೆ. ಭಾರತದ ಇತಿಹಾಸದಲ್ಲಿ ರುದ್ರಭಯಾನಕವಾದ ಈ ಯುದ್ಧ ಇತಿಹಾಸದ ಗತಿಯನ್ನೇ ಬದಲಿಸಿತು. (ವಿ.ಬಿ.ಡಿ.)

ಈ ಕದನದೊಂದಿಗೆ ವಿಜಯನಗರ ಕಣ್ಮರೆಯಾಯಿತು. ಹಂಪೆ ಕೊಂಪೆಯಾಯಿತು. ದಕ್ಷಿಣಭಾರತದಲ್ಲೆಲ್ಲ ಪಾಳೆಯಗಾರರು, ನಾಯಕರು ತಲೆ ಎತ್ತಿ ಮತ್ತೊಮ್ಮೆ ಪ್ರಬಲರಾದರು. ಆದರೆ ಚಂದ್ರಗಿರಿಗೆ ಓಡಿಹೋದ ತಿರುಮಲ ಮತ್ತೊಮ್ಮೆ ರಾಜ್ಯ ಕಟ್ಟಲು ಯತ್ನಿಸಿದ. ಈತ ಆರವೀಡು ಮನೆತನಕ್ಕೆ ಸೇರಿದಾತ. ಕರ್ನೂಲು ಜಿಲ್ಲೆಯ ಆರವೀಡು ಎಂಬ ಗ್ರಾಮದಿಂದ ಬಂದ ಇವರು ತಮ್ಮ ಹೆಸರನ್ನೇ ವಂಶಕ್ಕೂ ಬಳಸಿದರು. ತಿರುಮಲನ ಸೋದರನಾದ ರಾಮರಾಯನು ಕೃಷ್ಣದೇವರಾಯನ ಅಳಿಯ. ಅಳಿಯ ರಾಮರಾಯನೆಂದೇ ಪ್ರಸಿದ್ಧನಾದ. ಸದಾಶಿವನನ್ನು ಚಂದ್ರಗಿರಿಯ ಸೆರೆಮನೆಯಲ್ಲಿಟ್ಟು ತಿರುಮಲ ತನ್ನ ಹೆಸರಿನಲ್ಲೇ ಆಳತೊಡಗಿದ. ಎರಡು ವರ್ಷಗಳ ಬಳಿಕ ರಾಜಧಾನಿಯನ್ನು ಪೆನುಗೊಂಡೆಗೆ ಬದಲಾಯಿಸಿದ. ವಿಜಯನಗರಕ್ಕೆ ಹಿಂದಿರುಗುವ ಯೋಜನೆಯನ್ನೂ ಬಿಟ್ಟುಬಿಟ್ಟ. 1570ರಲ್ಲಿ ಸದಾಶಿವನನ್ನು ಕೊಲ್ಲಿಸಿದ. ಹೆಚ್ಚು ಕಡಿಮೆ ಭಾಷೆಯ ಆಧಾರದ ಮೇಲೆ ಅಳಿದುಳಿದ ರಾಜ್ಯವನ್ನು ಆಡಳಿತಕ್ಕಾಗಿ ವಿಂಗಡಿಸಿ, ತೆಲುಗಿನ ಪ್ರದೇಶಕ್ಕೆ ಹಿರಿಯ ಮಗ ಶ್ರೀರಂಗನನ್ನೂ ಕನ್ನಡ ಪ್ರದೇಶಕ್ಕೆ ಎರಡನೆಯ ಮಗನಾದ ರಾಮರಾಯನನ್ನೂ ತಮಿಳು ಪ್ರದೇಶಕ್ಕೆ ವೆಂಕಟಪತಿಯನ್ನೂ ನೇಮಿಸಿದ. ರಾಮರಾಯ ಶ್ರೀರಂಗಪಟ್ಟಣದಿಂದ ಆಳತೊಡಗಿದ. ಆದರೆ ಈ ವ್ಯವಸ್ಥೆ ಆಂತರಿಕ ಕಲಹಗಳಿಗೆ ಇಂಬುಗೊಟ್ಟು, ಶತ್ರುಗಳು ದಾಳಿಮಾಡಲು ಪ್ರೋತ್ಸಾಹಿಸಿತು.

1578ರಲ್ಲಿ ತಿರುಮಲನ ಮಗ ಶ್ರೀರಂಗ (11) ಪಟ್ಟಕ್ಕೆ ಬಂದು ಸುಮಾರು 8 ವರ್ಷಗಳ ಕಾಲ ಆಳಿದ. ಅನಂತರ 1586ರಿಂದ ವೆಂಕಟಪತಿ ಆಳತೊಡಗಿದ. ತಿರುಮಲ ಅಲಿ ಆದಿಲ್ ಷಾನ ದಾಳಿಯನ್ನು ಎದುರಿಸಲು ಗೋಲ್ಕೊಂಡೆಯ ಕುತುಬ್ ಷಾನ ಸಹಾಯ ಪಡೆದನು. ಆದರೂ ಎರಡನೆಯ ಬಾರಿ ಆದಿಲ್ ಷಾ ತಿರುಮಲನ ರಾಜ್ಯವನ್ನು ಮುತ್ತಿ ಅರಸನನ್ನು ಸೋಲಿಸಿದ. ಪೆನುಗೊಂಡೆಯ ಉತ್ತರಭಾಗ ಶತ್ರುವಶವಾಯಿತು. ಬಂಧಿಯಾಗಿದ್ದ ಶ್ರೀರಂಗ ಅಪಾರವಾದ ಧನವನ್ನು ದಂಡವಾಗಿ ಕೊಟ್ಟು ಪೆನುಗೊಂಡೆಗೆ ಹಿಂತಿರುಗಿದ. ಅನಂತರ ಇನ್ನೊಮ್ಮೆ ಆದಿಲ್ ಷಾ ದಂಡೆತ್ತಿ ಬಂದಾಗ ಮಾತ್ರ ಶ್ರೀರಂಗನ ಬಂಧುವಾದ ಜಗದೇವರಾಯ ಆತನನ್ನು ಸೋಲಿಸಿದ. ಆದರೆ ಅವನಿಗೆ ಬಾರಾಮಹಲಿನಿಂದ ಪಶ್ಚಿಮಘಟ್ಟಗಳವರೆಗೆ ವಿಸ್ತಾರವಾದ ಪ್ರದೇಶವನ್ನು ಬಹುಮಾನವಾಗಿ ಕೊಡಬೇಕಾಯಿತು. ಗೋಲ್ಕೊಂಡದ ಸುಲ್ತಾನ, ಶ್ರೀರಂಗನಿಂದ ವಿನುಕೊಂಡ, ಬೆಲ್ಲಂಕೊಂಡ, ಕೊಂಡವೀಡು, ಉದಯಗಿರಿಗಳನ್ನು ಕಸಿದುಕೊಂಡ. ಆಂತರಿಕ ದಂಗೆಗಳು ರಾಜ್ಯದ ಬಲವನ್ನು ಇನ್ನಷ್ಟು ಕುಗ್ಗಿಸಿದುವು. ವೆಂಕಟಪತಿಯೂ ಗೋಲ್ಕಂಡ ಮತ್ತು ಬಿಜಾಪುರದ ಷಾಹಿಗಳನ್ನು ಎದುರಿಸಬೇಕಾಯಿತು. ಉತ್ತರ ಭಾರತದಲ್ಲಿ ಆಗ ಆಳುತ್ತಿದ್ದ ಮುಗಲ್ ಮನೆತನದ ಅಕ್ಬರ್ 1600 ರಲ್ಲಿ ಅಹಮದ್‍ನಗರವನ್ನು ಗೆದ್ದುಕೊಂಡು, ಅನಂತರ ಎರಡು ಬಾರಿ ವೆಂಕಟಪತಿಯ ರಾಜ್ಯಕ್ಕೆ ರಾಯಭಾರಿಗಳನ್ನು ಕಳಿಸಿದ. ಆದರೆ ಇದು ಮುಂದಿನ ಆಕ್ರಮಣಗಳಿಗೆ ನಾಂದಿಯಾಗಬಹುದೆಂದು ಭಾವಿಸಿದ. ವೆಂಕಟಪತಿ ಅಕ್ಬರನೊಡನೆ ಹೆಚ್ಚಿನ ಸಂಬಂಧಗಳನ್ನು ಇಟ್ಟುಕೊಳ್ಳಲಿಲ್ಲ. ವೆಂಕಟಪತಿಯನ್ನು ಶ್ರೀರಂಗಪಟ್ಟಣದಲ್ಲಿದ್ದ ರಾಮರಾಯನ ಮಗ ತಿರುಮಲ ಗೌರವದಿಂದ

ಕಾಣಲಿಲ್ಲ. ಮೈಸೂರಿನ ರಾಜ ಒಡೆಯ ಈ ಸಂದರ್ಭವನ್ನುಪಯೋಗಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ. ವೆಂಕಟಪತಿ ರಾಜ ಒಡೆಯನನ್ನು ಕ್ಷಮಿಸಿದುದೇ ಅಲ್ಲದೆ, ಈಗ ಶ್ರೀರಂಗಪಟ್ಟಣ ಹಾಗೂ ಉಮ್ಮತ್ತೂರುಗಳನ್ನು ಆತನಿಗೆ ಬಿಟ್ಟುಕೊಟ್ಟ. ಸಾಹಿತ್ಯ ಕಲೆಗಳಿಗೆ ವೆಂಕಟಪತಿ ಪ್ರೋತ್ಸಾಹ ನೀಡಿದ. ಸುಮಾರು ಮೂರು ದಶಕಗಳ ಕಾಲ ಆಳಿದ ಈತ ರಾಜ್ಯದ ಗತವೈಭವವನ್ನು ಪುನರುಜ್ಜೀವನಗೊಳಿಸಿದನಾದರೂ ಇದು ಬಹುಕಾಲ ಬಾಳಲಿಲ್ಲ.

ವೆಂಕಟಪತಿಯ ಅನಂತರ ಅಧಿಕಾರಕ್ಕಾಗಿ ಅಂತಃಕಲಹಗಳು ಏರ್ಪಟ್ಟವು. ಆತನಿಗೆ ಗಂಡುಮಕ್ಕಳಿಲ್ಲದ ಕಾರಣ ರಾಜ್ಯ ಆತನ ಸೋದರನಾದ ರಾಮರಾಯನ ಮಗ ಮುಮ್ಮಡಿ ಶ್ರೀರಂಗನ ವಶವಾಯಿತು. ಆದರೆ ಜಗರಾಯನೆಂಬ ವೆಂಕಟಪತಿಯ ಭಾವಮೈದುನನು ವೆಂಕಟಪತಿಯ ಮಗನೆಂದು ಹೇಳಲಾದ ಚಿಕ್ಕರಾಯನ ಪರವಾಗಿ ನಿರಾಧಾರವಾದ ಹಕ್ಕನ್ನು ಸ್ಥಾಪಿಸಲು ಯತ್ನಿಸಿದ. ಪೆಲುಗೋಡಿನ ಎಚ್ಚಮನಾಯಕನೂ ತಂಜಾವೂರು ಹಾಗೂ ಇತರ ಪಾಳೆಯಪಟ್ಟುಗಳ ನಾಯಕರೂ ಚೋಪೂರು ಎಂಬಲ್ಲಿ ನಡೆದ ಕದನದಲ್ಲಿ ಜಗರಾಯನನ್ನೂ ಆತನ ಬೆಂಬಲಿಗರಾದ ಮಧುರೆ, ಜಿಂಜಿ ಮುಂತಾದ ಸ್ಥಳಗಳ ನಾಯಕರನ್ನೂ ಸೋಲಿಸಿದರು. ಆ ಬಳಿಕ ರಾಜ್ಯದಲ್ಲಿ 12–13 ವರ್ಷಗಳ ಬಾಲಕನಾದ ರಾಮದೇವನನ್ನು ಸಿಂಹಾಸನದ

ಕೋಟೆ ಬುರುಜು, ಹಂಪೆ

ಮೇಲೆ ಸ್ಥಾಪಿಸಲಾಯಿತು. ಈತ 1617–32 ರವರೆಗೆ ಆಳಿದ. ಅನಂತರ ಅಳಿಯ ರಾಮರಾಯನ ಮೊಮ್ಮಗ ಇಮ್ಮಡಿ ವೆಂಕಟಪತಿ ಯುವರಾಜನಾದ. ಆದರೂ ಇವರಾರೂ ರಾಜ್ಯದ ಶಕ್ತಿಯನ್ನು ವರ್ಧಿಸಲಿಲ್ಲ. ಬಿಜಾಪುರ, ಗೋಲ್ಕೊಂಡಗಳ ಸುಲ್ತಾನರು ಹಲಕೆಲವು ಕೋಟೆಗಳನ್ನು ಗೆದ್ದುಕೊಂಡರು. ಅಂತಿಮವಾಗಿ ಕೊನೆಯ ಅರಸನಾದ ಮುಮ್ಮಡಿ ಶೀರಂಗ ಮೊದಲು ಬಿದನೂರಿಗೂ ಅನಂತರ ಮೈಸೂರಿಗೂ ಹೋಗಿ ಅಲ್ಲಿ ಹಿಂದೆ ತಮ್ಮ ಸಾಮಂತರಾಗಿದ್ದು ಈಗ ಪ್ರಬಲರಾಗಿದ್ದವರ ಆಶ್ರಯಪಡೆದ (1646). ಅಧಿಕಾರವನ್ನು ಮರಳಿ ಪಡೆಯಲು ಆಗಿಂದಾಗ್ಗೆ ಯತ್ನಿಸಿ ವಿಫಲನಾಗಿ 1681ರಲ್ಲಿ ನಿಧನನಾದ. (ಬಿ.ಆರ್.ಜಿ.;ಎ.ವಿ.ವಿ.)

**ಆಡಳಿತ ವ್ಯವಸ್ಥೆ :** ವಿಜಯನಗರ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವವಿತ್ತು. ಕೇಂದ್ರೀಯ ಆಡಳಿತ ರಾಜನಲ್ಲಿ ಕೇಂದ್ರೀಕೃತವಾಗಿತ್ತು. ಪಟ್ಟಾಭಿಷೇಕ ಮಹೋತ್ಸವ ಮಹತ್ತ್ವದ್ದಾಗಿದ್ದು ರಾಜನಿಗೆ ರಾಜ್ಯವಾಳುವ ನ್ಯಾಯಯುತ ವಾದ ಹಕ್ಕನ್ನು ನೀಡುತ್ತಿತ್ತು. ಇದಕ್ಕೆ ಅಧೀನ ರಾಜರು ಮತ್ತು ಜನಸಾಮಾನ್ಯರ ಮುಖಂಡರು ಹಾಜರಿದ್ದು ಆ ಸಮಯದಲ್ಲಿ ಕಪ್ಪಕಾಣಿಕೆ ಗಳನ್ನು ಒಪ್ಪಿಸಿ ತಮ್ಮ ನಿಷ್ಠೆಯನ್ನು ತೋರ್ಪಡಿಸುತ್ತಿದ್ದರು.

ವಿಜಯನಗರ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವವಿದ್ದರೂ ನಿರಂಕುಶಪ್ರಭುತ್ವ ಇರಲಿಲ್ಲ. ರಾಜನ ಕರ್ತವ್ಯ ಧರ್ಮವನ್ನು ರಕ್ಷಿಸುವುದಾಗಿತ್ತು. ರಾಜತ್ವವು ಧರ್ಮದ ಆಳ್ವಿಕೆಗೆ ಒಳಪಟ್ಟಿತ್ತು. ಸ್ವಧರ್ಮವನ್ನು ಪಾಲಿಸಲು ರಾಜ ಸಮಯಾಚಾರ್ಯರೆಂಬ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದ. ಸಂಪ್ರದಾಯ ಮತ್ತು ಸಾರ್ವಜನಿಕ ಅಭಿಪ್ರಾಯ ರಾಜನ ನಿರಂಕುಶಪ್ರಭುತ್ವಕ್ಕೆ ತಡೆಯಾಗಿತ್ತು. ತೆರಿಗೆಗಳನ್ನು ಸಂಪ್ರದಾಯಬದ್ಧವಾಗಿ ವಿಧಿಸಲಾಗುತ್ತಿತ್ತು. ಅಲ್ಲದೆ ವ್ಯವಸ್ಥೆಗೊಂಡಿದ್ದ ಸಂಘಗಳು ಮತ್ತು ಶ್ರೇಣಿಗಳು ನಿರಂಕುಶತ್ವಕ್ಕೆ ತಡೆಯಾಗಿದ್ದುವು. ಕೇಂದ್ರಸರ್ಕಾರವು ಅವುಗಳ ಮೇಲ್ವಿಚಾರಣೆ ಹೊಂದಿದ್ದು ಆವಶ್ಯಕವಾದರೆ ಸಾಮರಸ್ಯ ಸ್ಥಾಪಿಸಲು ಮಧ್ಯ ಪ್ರವೇಶಿಸುತ್ತಿತ್ತು. ರಾಜನ ನಿರಂಕುಶತ್ವಕ್ಕೆ ಮಂತ್ರಿಮಂಡಲವೂ ಒಂದು ತಡೆಯಾಗಿತ್ತು. ರಾಜನ ಮಂತ್ರಿಮಂಡಲವು ಅವನು ನೇಮಿಸಿದ ಮಂತ್ರಿಗಳು ಮತ್ತು ಶ್ರೀಮಂತರನ್ನೊಳ ಗೊಂಡಿತ್ತು. ರಾಜ್ಯ ವ್ಯವಹಾರದಲ್ಲಿ ರಾಜನು ಮಂತ್ರಿಮಂಡಲದ ಸಲಹೆಗಳನ್ನು ತೆಗೆದುಕೊಳ್ಳುತ್ತಿದ್ದ.

ರಾಜರು ರಾಜ್ಯದಲ್ಲಿ ಮಠಗಳಿಗೆ ದ್ರವ್ಯಸಹಾಯ ಮಾಡಿ ಅವನ್ನು ಉಳಿಸಿಕೊಂಡು ಬರುತ್ತಿದ್ದರು. ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಲು ಕಾಡುಗಳನ್ನು ಕಡಿದು, ಹೊಸ ಹಳ್ಳಿಗಳನ್ನು ಸ್ಥಾಪಿಸುತ್ತಿದ್ದರು. ದೇಶದ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಶಾಂತಿ ಮತ್ತು ನ್ಯಾಯದ ಪಾಲನೆ ರಾಜನ ಕರ್ತವ್ಯವಾಗಿತ್ತು. ರಾಜನೇ ಶ್ರೇಷ್ಠ ನ್ಯಾಯಾಧೀಶನಾಗಿದ್ದ. ವಿದ್ಯೆ ಮತ್ತು ಸಂಸ್ಕೃತಿಯ ಪೋಷಣೆಯಲ್ಲಿ ರಾಜ ಅಧ್ವರ್ಯುವಾಗಿರುತ್ತಿದ್ದ.

ರಾಜ ಸಾಮಾನ್ಯವಾಗಿ ತನ್ನ ಉತ್ತರಾಧಿಕಾರಿಯನ್ನು ನಿರ್ಧರಿಸಿ, ಆತನಿಗೆ ಯುವರಾಜ ಎಂದು ಪಟ್ಟಕಟ್ಟುತ್ತಿದ್ದ. ರಾಜನ ಹಿರಿಯ ಮಗನೇ ಹಕ್ಕುದಾರನಾಗಿರುತ್ತಿದ್ದರೂ ಕೆಲವು ವೇಳೆ ಇದು ಸಂದರ್ಭವಶಾತ್ ಬದಲಾಗುತ್ತಿತ್ತು. ಉತ್ತರಾಧಿಕಾರಿಯ ಆಯ್ಕೆ ಬಹುಮಟ್ಟಿಗೆ ಮಂತ್ರಿಗಳು ಮತ್ತು ಶ್ರೀಮಂತರ ಸಮ್ಮುಖದಲ್ಲಿ ನಡೆಯುತ್ತಿತ್ತು. ರಾಜನು ಯುವರಾಜ ಮತ್ತು ಇತರ ರಾಜಕುಮಾರರನ್ನು ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸುತ್ತಿದ್ದ. ಇದರಿಂದ ಉತ್ತರಾಧಿಕಾರಿಗೆ ಆಡಳಿತದಲ್ಲಿ ತರಬೇತು ಸಿಗುತ್ತಿತ್ತು. ಉತ್ತರಾಧಿಕಾರಿ ಚಿಕ್ಕವನಾಗಿದ್ದರೆ, ಅವನು ವಯಸ್ಸಿಗೆ ಬರುವವರೆಗೆ ದೇಶವನ್ನಾಳಲು ರಾಜಪ್ರತಿನಿಧಿಯನ್ನು ನೇಮಿಸುತ್ತಿದ್ದರು. ವಿಜಯನಗರದ ಚರಿತ್ರೆಯಲ್ಲಿ ರಾಜಪ್ರತಿನಿಧಿ ಆ ಪದವಿಯನ್ನು ದುರುಪಯೋಗಪಡಿಸಿಕೊಂಡ ದೃಷ್ಟಾಂತಗಳೂ ಇವೆ.

ಬೃಹತ್ ಸೈನ್ಯವನ್ನು ರಾಜ ಸ್ವಂತವಾಗಿ ಇಟ್ಟುಕೊಳ್ಳುತ್ತಿದ್ದುದಲ್ಲದೆ, ಅದಕ್ಕೆ ಉತ್ತಮ ತರಬೇತಿ ಮತ್ತು ಸಲಕರಣೆಗಳನ್ನು ಒದಗಿಸಿ ಶಿಸ್ತಿನಲ್ಲಿ ಇಟ್ಟು, ಒಳಹೊರ ಶತ್ರುಗಳ ನಿಗ್ರಹಕ್ಕಾಗಿ ಬಳಸುತ್ತಿದ್ದ. ಹಲವಾರು ದಂಡನಾಯಕರು ವಿವಿಧ ವಿಭಾಗಗಳ ಮತ್ತು ತುಕಡಿಗಳ ನೇತೃತ್ವವನ್ನು ವಹಿಸುತ್ತಿದ್ದರು. ಅಲ್ಲದೆ ಪ್ರಾಂತ್ಯಾಧಿಕಾರಿಗಳೂ ಸಾಮಂತರೂ ಅವಶ್ಯ ವಿದ್ದಾಗ ರಾಜನಿಗೆ ಸೈನ್ಯವನ್ನು ಒದಗಿಸಿ ತಾವೂ ಯುದ್ಧಗಳಲ್ಲಿ ಪಾಲ್ಗೊಳ್ಳಬೇಕಾಗಿದ್ದಿತು.

ಆಡಳಿತದ ಅನುಕೂಲಕ್ಕಾಗಿ ವಿಜಯನಗರ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಇವುಗಳು ರಾಜ್ಯ, ಮಂಡಲ ಮತ್ತು ನಾಡುಗಳೆಂದು ಕರೆಯಲ್ಪಡುತ್ತಿದ್ದುವು. ರಾಜ್ಯಗಳ ಸಂಖ್ಯೆ ಕಾಲಾನುಗುಣ ವಾಗಿ ಬದಲಾಗುತ್ತಿತ್ತು. ಆಡಳಿತ ದೃಷ್ಟಿಯಿಂದ ಹೊಸ ರಾಜ್ಯಗಳು ಸ್ಥಾಪನೆಯಾಗುತ್ತಿದ್ದವು. ಉದಾಹರಣೆಗೆ ತುಳುವ ನಾಡಿಯಲ್ಲಿ ಎರಡು ರಾಜ್ಯಗಳಿದ್ದವು. ಉತ್ತರ ತುಳು ರಾಜ್ಯಕ್ಕೆ ಬಾರಕೂರು ರಾಜಧಾನಿಯಾಗಿತ್ತು; ದಕ್ಷಿಣ ತುಳು ರಾಜ್ಯಕ್ಕೆ ಮಂಗಳೂರು ರಾಜಧಾನಿಯಾಗಿತ್ತು. ಇವಲ್ಲದೆ ಉದಯಗಿರಿ ರಾಜ್ಯ, ಪೆನುಕೊಂಡೆ ರಾಜ್ಯ, ಮುಳವಾಯಿ ರಾಜ್ಯ ಮತ್ತು

ರಾಜಗಂಭೀರ ರಾಜ್ಯಗಳಿದ್ದವು. ರಾಜಗಂಭೀರ ರಾಜ್ಯದ ದಕ್ಷಿಣಕ್ಕೆ ತಿರುವಡಿಗೈ ರಾಜ್ಯ ಮತ್ತು ಮಧುರಾ ರಾಜ್ಯಗಳಿದ್ದವು. ಪ್ರತಿ ಪ್ರಾಂತ್ಯಕ್ಕೂ ಒಬ್ಬ ಪ್ರಾಂತ್ಯಾಧಿಕಾರಿಯಿದ್ದ. ಅವರು ಸಾಮಾನ್ಯವಾಗಿ ರಾಜಮನೆತನಕ್ಕೆ ಸೇರಿದವರಾಗಿದ್ದರು. ಸಂಗಮ ವಂಶದ ರಾಜಕುಮಾರರು ಪ್ರಾಂತ್ಯಾಧಿಕಾರಿಗಳಾಗಿ ನೇಮಕರಾದ ಅನಂತರ ಒಡೆಯ ಅಥವಾ ಒಡೆಯರ್ ಎಂಬ ಬಿರುದನ್ನು ಧರಿಸುತ್ತಿದ್ದರು. ಹೀಗೆ ರಾಜಮನೆತನದಿಂದ ನೇಮಕಗೊಂಡ ಪ್ರಾಂತ್ಯಾಧಿಕಾರಿಗಳನ್ನು ಮಹಾಮಂಡಲೇಶ್ವರರೆಂದೂ ಕರೆಯುತ್ತಿದ್ದರು. ಎರಡನೆಯ ದೇವರಾಯನ ಕಾಲದಿಂದ ಪ್ರಾಂತ್ಯಾಧಿಕಾರಿಗಳ ನೇಮಕದ ರೀತಿಯಲ್ಲಿ ಸ್ವಲ್ಪ ಬದಲಾವಣೆಯಾಯಿತು. ರಾಜಮನೆತನದವರಲ್ಲದೆ ಸಾಮಂತ ರಾಜರ ಮನೆತನಗಳಿಗೆ ಮತ್ತು ಶ್ರೀಮಂತ ಮನೆತನಗಳಿಗೆ ಸೇರಿದವರೂ ನೇಮಕಗೊಳ್ಳುತ್ತಿದ್ದರು. ಇದಕ್ಕೆ ಹಲವು ಕಾರಣಗಳಿದ್ದವು. ರಾಜಮನೆತನದಲ್ಲಿ ಶಕ್ತಿಸಾಮರ್ಥ್ಯವುಳ್ಳವರು ಸಾಕಷ್ಟು ಸಿಗುತ್ತಿರಲಿಲ್ಲ. ಅಲ್ಲದೆ ಸಾಮ್ರಾಜ್ಯವು ವಿಸ್ತರಿಸಿದಂತೆ ಹೆಚ್ಚು ಪ್ರಾಂತ್ಯಗಳಾಗಿ ಹೆಚ್ಚಿನ ಪ್ರಾಂತ್ಯಾಧಿಕಾರಿಗಳ ಆವಶ್ಯಕತೆ ಇತ್ತು. ಹೀಗೆ ನೇಮಕಗೊಂಡ ಪ್ರಾಂತ್ಯಾಧಿಕಾರಿಗಳು ದಳಪತಿಯಾಗಿಯೂ ಮಂತ್ರಿಯಾಗಿಯೂ ಇರುತ್ತಿದ್ದರು. ಇವರನ್ನು ದಂಡನಾಯಕರೆಂದು ಕರೆಯುತ್ತಿದ್ದರು. ಇವರಿಗೆ ಸಾಕಷ್ಟು ಸ್ವಾಯತ್ತತೆ ಇದ್ದಿತು. ಇವರು ತಮ್ಮದೇ ಆದ ನ್ಯಾಯಾಸ್ಥಾನಗಳನ್ನು ಹೊಂದಿದ್ದು ಸೈನ್ಯವನ್ನಿಟ್ಟುಕೊಂಡಿದ್ದರು. ಇವರ ಮುಖ್ಯ ಕರ್ತವ್ಯ ಶತ್ರುಗಳಿಂದ ಪ್ರಾಂತ್ಯ ರಕ್ಷಣೆ. ಇವರು ಪ್ರಾಂತ್ಯದ ಕಂದಾಯ ವಸೂಲಿಯ ಅಧಿಕಾರಿಯಾಗಿಯೂ ಶ್ರೇಷ್ಠ ನ್ಯಾಯಾಧೀಶರಾಗಿಯೂ ಇದ್ದರು. ಪ್ರಾಂತ್ಯದಲ್ಲಿ ಶಾಂತಿಪರಿಪಾಲನೆಯೂ ಇವರ ಕರ್ತವ್ಯವಾಗಿತ್ತು. ಇವರು ಹೊಸ ತೆರಿಗೆಗಳನ್ನು ವಿಧಿಸಬಹುದಾಗಿತ್ತು; ಹಳೆಯ ತೆರಿಗೆಗಳನ್ನು ರದ್ದುಮಾಡಬಹುದಾಗಿತ್ತು. ಪ್ರಾಂತ್ಯಗಳಲ್ಲಿ ಆಡಳಿತ ಹದಗೆಟ್ಟರೆ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸುತ್ತಿತ್ತು.

ಅರಸರು ತಮ್ಮ ಆಕ್ರಮಣಕಾಲದಲ್ಲಿ ಅನೇಕ ರಾಜ್ಯಗಳನ್ನು ಗೆದ್ದರೂ ಹಲವಾರು ಸಂದರ್ಭಗಳಲ್ಲಿ ಆಯಾ ರಾಜರುಗಳಿಗೆ ಅವರ ರಾಜ್ಯಗಳನ್ನು ಹಿಂದಿರುಗಿಸುತ್ತಿದ್ದರು. ಇವರು ವಿಜಯನಗರದ ಸಾಮ್ರಾಟನಿಗೆ ಪೊಗದಿ ಕೊಡುವ ಸಾಮಂತರಾಗಿದ್ದರು. ಇದಕ್ಕೆ ನಾಯಕರ ಪದ್ಧತಿ ಎಂದೂ ಕರೆಯುತ್ತಿದ್ದರು. ಈ ನಾಯಕರು ವಿಜಯನಗರ ಸಾಮ್ರಾಟನಿಗೆ ಪಟ್ಟಾಭಿಷೇಕ ಸಮಯದಲ್ಲಿ, ರಾಜಕುಮಾರ ಅಥವಾ ರಾಜಕುಮಾರಿ ಹುಟ್ಟಿದ ಸಂದರ್ಭದಲ್ಲಿ, ರಾಜನ ವರ್ಧಂತಿಯಲ್ಲಿ ಮತ್ತು ಮಹಾನವಮಿ ಉತ್ಸವದಲ್ಲಿ ಆಸ್ಥಾನದಲ್ಲಿ ಹಾಜರಿದ್ದು ಕಾಣಿಕೆಗಳನ್ನು ಸಲ್ಲಿಸಬೇಕಾಗಿತ್ತು. ನೂತನ ವರ್ಷದ ದಿನ ರಾಜನಿಗೆ ಬಹುಮಾನಗಳನ್ನು ನೀಡಬೇಕಾಗಿತ್ತು. ಸಾಮಂತರು ಕರ್ತವ್ಯಪರಿಪಾಲನೆ ಮಾಡದಿದ್ದರೆ ಶಿಕ್ಷೆಗೆ ಗುರಿಯಾಗುತ್ತಿದ್ದರು. ಪ್ರಾಂತ್ಯಾಧಿಕಾರಿಗಳು ವರ್ಗಾಯಿಸಲ್ಪಡುತ್ತಿದ್ದರಾದರೆ ಸಾಮಾನ್ಯವಾಗಿ ನಾಯಕರನ್ನು ವರ್ಗ ಮಾಡುತ್ತಿರಲಿಲ್ಲ. ಪ್ರಾರಂಭದಲ್ಲಿ ನಾಯಕತನ ವೈಯಕ್ತಿಕವಾಗಿತ್ತು. ಆದರೆ ಕ್ರಮೇಣ ಕೇಂದ್ರ ಸರ್ಕಾರದ ದುರ್ಬಲತೆಯಿಂದ ವಂಶಪಾರಂಪರ್ಯವಾಯಿತು. ನಾಯಕರು ರಾಜಾಸ್ಥಾನದಲ್ಲಿ ಇಬ್ಬರು ಅಧಿಕಾರಿಗಳನ್ನು ಇಟ್ಟುಕೊಳ್ಳುತ್ತಿದ್ದರು. ಅದರಲ್ಲಿ ಒಬ್ಬ ಅಧಿಕಾರಿಯು ರಾಜಧಾನಿಯಲ್ಲಿದ್ದ ನಾಯಕನ ಸೈನ್ಯದ ಹೊಣೆಗಾರಿಕೆ ಹೊತ್ತಿದ್ದ. ಮತ್ತೊಬ್ಬ ಅಧಿಕಾರಿಯು ಸ್ಥಾನಪತಿ ಎಂದು ಕರೆಯಲ್ಪಟ್ಟು ರಾಜಧಾನಿಯಲ್ಲಿ ತನ್ನ ನಾಯಕನ ಹಿತಪರಿಪಾಲನೆ ಮಾಡುತ್ತಿದ್ದ. ಕೇಂದ್ರ ಸರ್ಕಾರದಲ್ಲಿ ಸಾಮಂತಾಧಿಕಾರಿಗಳು ಮತ್ತು ಮಹಾನಾಯಕಾಚಾರ್ಯರೆಂಬ ಅಧಿಕಾರಿಗಳು ಸಾಮಂತರಾಜರ ಇಲಾಖೆಯ ಮೇಲ್ವಿಚಾರಣೆ ಹೊಂದಿದ್ದರು.

ವಿಜಯನಗರ ಕಾಲದಲ್ಲಿ ಅನೇಕ ಬಗೆಯ ಸ್ಥಳೀಯ ಸಂಸ್ಥೆಗಳು ಕಾಣಬರುತ್ತವೆ. ಆ ಕಾಲದಲ್ಲಿ ಗ್ರಾಮಸಭೆಗಳು, ಮಹಾಜನಸಭೆಗಳು, ಮಹಾನಾಡು ಮತ್ತು ನಾಡುಸಭೆಗಳು, ಪೌರಸಭೆಗಳು ಮತ್ತು ಅನೇಕ ಶ್ರೇಣಿಗಳ ವ್ಯವಸ್ಥೆ ಇದ್ದಿತೆಂದು ತಿಳಿದುಬರುತ್ತದೆ. ಗ್ರಾಮಸಭೆಗೆ ಊರು, ಒಕ್ಕಲು, ಪ್ರಜೆ, ಹಲರು, ಜಗತ್ತು ಮುಂತಾದ ಹೆಸರುಗಳಿದ್ದವು. ಅಗ್ರಹಾರಗಳಲ್ಲಿ ಮಹಾಜನರ ಸಭೆ ಇದ್ದಿತು. ನಾಡು ವಿಭಾಗದಲ್ಲಿ; ನಾಡುಸಭೆ ಇತ್ತು. ಈ ಸಭೆಗಳು ಭೂಮಿಯನ್ನು ಸಾರ್ವಜನಿಕ ಉಪಯೋಗಕ್ಕೆ ಅಥವಾ ದಾನಧರ್ಮಕ್ಕೆ ಪಡೆಯುತ್ತಿತ್ತು ಮತ್ತು ಕ್ರಯಮಾಡುತ್ತಿತ್ತು. ಈ ಸ್ಥಳೀಯ ಸಂಸ್ಥೆಗಳು ಸಾಮಾನ್ಯ ಪ್ರಜೆಯ ಸೌಕರ್ಯಗಳಿಗೆ ಗಮನವೀಯುತ್ತಿದ್ದವು ; ಜನರ ಏಳಿಗೆಗಾಗಿ ಕೆಲಸ ಮಾಡುತ್ತಿದ್ದವು. ಇವು ಆಧುನಿಕ ಸರ್ಕಾರಗಳು ಮಾಡುವ ಕಾರ್ಯನಿರ್ವಾಹಕ ಶಾಖೆ. ಶಾಸನರಚನೆ ಮತ್ತು ನ್ಯಾಯನಿರ್ವಹಣೆ ಕೆಲಸಗಳನ್ನು ಮಾಡುತ್ತಿದ್ದವು. ತೆರಿಗೆಗಳನ್ನು ವಸೂಲು ಮಾಡುವ, ಮಾಫಿ ಮಾಡುವ ಮತ್ತು ಹೊಸ ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ಪಡೆದಿದ್ದುವು. ಹಲವು ಸಂದರ್ಭಗಳಲ್ಲಿ ನ್ಯಾಯ ವಿತರಣೆ ಮಾಡುತ್ತಿತ್ತು. ಇವುಗಳ ವ್ಯಾಪ್ತಿಗೊಳಪಟ್ಟ ದೇವಸ್ಥಾನಗಳ ಹತೋಟಿ ಹೊಂದಿದವು. ಇದೂ ಅಲ್ಲದೆ ಅನೇಕ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು. ಜನರ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಜೀವನಕ್ಕೆ ಸಂಬಂಧಿಸಿದಂತೆ ಕಾನೂನು ಮಾಡಿ ಹತೋಟಿ ಹೊಂದಿದ್ದವು. ಇವು ಪೌರಕರ್ತವ್ಯಗಳನ್ನು ಮಾಡಿ ಸಾಮಾನ್ಯ ಆಡಳಿತಕ್ಕೆ ಸಹಾಯ ಮಾಡುತ್ತಿದ್ದವು. ನಗರ ಅಥವಾ ಪೌರಸಭೆಯಲ್ಲಿ ಶ್ರೇಣಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಈ ಎಲ್ಲ ಸ್ಥಳೀಯ ಸಂಸ್ಥೆಗಳ ಚಟುವಟಿಕೆಗಳ ಅಧ್ಯಯನದಿಂದ ಇವು ಸ್ವಾಯತ್ತತೆಯನ್ನು ಹೊಂದಿದ್ದವೆಂದು ನಿಸ್ಸಂಶಯವಾಗಿ ಹೇಳಬಹುದು. ಗ್ರಾಮಸಭೆಗಳಲ್ಲಿ ಗ್ರಾಮದ ಗೌಡರು ಅಥವಾ ಒಕ್ಕಲು ಅಥವಾ ಸಮಸ್ತ ಪ್ರಜೆಗಳೂ ಸದಸ್ಯರಾಗಿದ್ದರು. ಗೌಡಿಕೆ ಅಥವಾ ಗ್ರಾಮದ ಮುಖಂಡತ್ವವು ಬಹಳ ಆಕರ್ಷಣೀಯಾದ ಹುದ್ದೆಯಾಗಿದ್ದಿತು. ಗ್ರಾಮದ ಮುಖಂಡ ಗ್ರಾಮಸಭೆಯ ಮುಖ್ಯ ಅಧಿಕಾರಿಯಾಗಿದ್ದ. ಅಗ್ರಹಾರಗಳಲ್ಲಿದ್ದ ಮಹಾಜನ ಸಭೆಯಲ್ಲಿ ವೃತ್ತಿಕಾರರು ಸದಸ್ಯರಾಗಿದ್ದರು. ಅವರ ಮುಖಂಡರನ್ನು ಬುದ್ಧಿವಂತರು, ಗ್ರಾಮ ಹೆಬ್ಬಾರುವ, ಪ್ರಭು, ಒಡೆಯ, ಮೂಲಿಗ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ನಾಡಿನ ಸಭೆಯಲ್ಲಿ ನಾಡಿಗೆ ಸೇರಿದ ಗ್ರಾಮಗಳ ಮುಖಂಡರು, ನಾಡಿನ ಜನರ ಪ್ರತಿನಿಧಿಗಳು ಮತ್ತು ಹಲವು ಸಂದರ್ಭಗಳಲ್ಲಿ ವ್ಯಾಪಾರ ಶ್ರೇಣಿಗಳ ಪ್ರತಿನಿಧಿಗಳು ಇದ್ದರು. ಶ್ರೇಣಿಗಳು ಪೌರ ಕರ್ತವ್ಯಗಳನ್ನು ಮಾಡುತ್ತಿದ್ದವು. ಶ್ರೇಣಿಯ ಅಧ್ಯಕ್ಷನನ್ನು ಪಟ್ಟಣಸ್ವಾಮಿ ಎಂದು ಕರೆಯುತ್ತಿದ್ದರು. ಅನೇಕ ವೇಳೆ ಪಟ್ಟಣಸ್ವಾಮಿಯು ಪೌರಸಭಾಧ್ಯಕ್ಷನಾಗುತ್ತಿದ್ದ. ಈ ಸ್ಥಳೀಯ ಸಂಸ್ಥೆಗಳಲ್ಲಿ ತೀರ್ಮಾನಗಳನ್ನು ಒಮ್ಮತದಿಂದ ತೆಗೆದುಕೊಳ್ಳುತ್ತಿದ್ದರು. ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ಇತ್ತು. **(ಎ.ವಿ.ವಿ.)**

**ಆರ್ಥಿಕ ಸಾಮಾಜಿಕ ಸ್ಥಿತಿ:** ಧರ್ಮರಕ್ಷಣೆಗಾಗಿ ನಿರಂತರವಾಗಿ ಕದನಗಳಲ್ಲಿ ಭಾಗವಹಿಸಬೇಕಾಗಿದ್ದುದರಿಂದ ಸಾಮ್ರಾಜ್ಯಕ್ಕೆ ವಿಶೇಷವಾಗಿ ಧನ ಬೇಕಾಗಿತ್ತು. ಅರಸರಿಗೆ ಯುದ್ಧಕ್ಕೆ ಬೇಕಾದ ಕುದುರೆಗಳ ಆವಶ್ಯಕತೆ ಹೆಚ್ಚಾಗಿದ್ದು ಆ ಕಾರಣದಿಂದಲೇ ಅರಸರು ಪೋರ್ಚುಗೀಸರೊಡನೆ ಹಾರ್ದಿಕ ಸಂಬಂಧಗಳನ್ನಿಟ್ಟುಕೊಂಡು ಅವರಿಂದ ಕುದುರೆಗಳನ್ನು ಪಡೆಯುತ್ತಿದ್ದರು. ಈ ಅಶ್ವಪಡೆಗೆ ವಿಶೇಷವಾದ ಧನ ವ್ಯಯವಾಗುತ್ತಿತ್ತು. ಧನಸಂಗ್ರಹಕ್ಕಾಗಿ ಉತ್ಪನ್ನಮೂಲಗಳನ್ನು ರೂಪಿಸಿಕೊಳ್ಳಬೇಕಾಗಿತ್ತು. ಆದುದರಿಂದಲೇ ಅರಸರೂ ಅಧಿಕಾರಿಗಳೂ ರಾಜ್ಯದ ಆರ್ಥಿಕಾಭಿವೃದ್ಧಿಗಾಗಿ ಶ್ರಮಿಸಿದರು. ಬೀಳು ಬಿದ್ದಿದ್ದ ಸಾವಿರಾರು ಎಕರೆ ಭೂಮಿಯನ್ನು ಸಾಗುವಳಿಗೆ ತರಲಾಯಿತು. ಕಾಡುಗಳನ್ನು ಕಡಿದು ಹೆಚ್ಚಿನ ಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಲಾಯಿತು. ಅದಕ್ಕೆಂದೇ ಆ ಹೊಸ ಪ್ರದೇಶಗಳಲ್ಲಿ ನೆಲಸಿದವರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿ ತೆರಿಗೆಗಳಲ್ಲಿ ರಿಯಾಯಿತಿಗಳನ್ನು ತೋರಿಸಲಾಗಿತ್ತು. ಅನೇಕ ಗ್ರಾಮಗಳನ್ನು ನಗರಗಳಾಗಿ

ಪರಿವರ್ತಿಸಿ ಅಲ್ಲಿ ವ್ಯವಸಾಯೋತ್ಪನ್ನಗಳನ್ನು ಮಾರಲು ಸಂತೆಗಳನ್ನು ಏರ್ಪಡಿಸಲಾಯಿತು.

ರಾಜ್ಯದಲ್ಲಿ–ಹೆಚ್ಚಿನ ಮಟ್ಟಿಗೆ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿ–ರತ್ನದ, ವಜ್ರದ ಗಣಿಗಳಿದ್ದುವು. ರಾಜ್ಯದಲ್ಲಿ ನೂರಾರು ದೊಡ್ಡ ಸಣ್ಣ ರೇವುಗಳಿದ್ದುವು. ರಾಜ್ಯವು ಮಲಯ, ಬರ್ಮಾ, ಚೀನ, ಅರೇಬಿಯ, ಪರ್ಷಿಯ, ದಕ್ಷಿಣ ಆಫ್ರಿಕ, ಅಬಿಸೀನಿಯ ಮತ್ತು ಪೋರ್ಚುಗಲ್ ದೇಶಗಳೊಡನೆ ವ್ಯಾಪಾರ ಸಂಬಂಧ ಹೊಂದಿತ್ತು. ಬಟ್ಟೆ, ಅಕ್ಕಿ, ಕಬ್ಬಿಣದ ಅದಿರು, ಮರ, ಸಂಬಾರ ಪದಾರ್ಥಗಳು, ಸಕ್ಕರೆ–ಇವು ರಫ್ತು ಸಾಮಗ್ರಿಗಳು. ಹೀಗೆ ಭೂಮಿಯಿಂದ ಬರುವ ವಿಪುಲ ಆದಾಯ, ದೇಶಾಂತರಗಳ ವ್ಯಾಪಾರೋದ್ಯಮ ಸಾಧನೆಗಳಿಂದ ಹರಿದುಬರುವ ಧನಪ್ರವಾಹದಿಂದ ಸಾಮ್ರಾಜ್ಯ ಸಮೃದ್ಧವೂ ಧನಾಢ್ಯವೂ ಆಗಿತ್ತು. ಇಷ್ಟೆಲ್ಲ ಆದರೂ ವಿವಿಧ ರೀತಿಯ ತೆರಿಗೆಗಳಿಂದ ಜನರು ಕೆಲವೊಮ್ಮೆ ಸಹನಶಕ್ತಿಯನ್ನೇ ಕಳೆದುಕೊಂಡಂತೆ ತೋರುತ್ತದೆ. ನಾವಿದರೆಲ್ಲ ಒಟ್ಟುಗೂಡಿ ಸದಾಶಿವರಾಯನಿಗೆ ನಾವಿದವಾರಿಯನ್ನು ತೆಗೆಯಬೇಕೆಂದು ಪ್ರಾರ್ಥನೆ ಮಾಡುವ ಅಂಶ ನೂರಾರು ಶಾಸನಗಳಿಂದ ತಿಳಿದಿದೆ. ಅಂತೆಯೇ ರಾಜ್ಯಾದ್ಯಂತ ಮದುವೆಯ ಸುಂಕವನ್ನು ಕೃಷ್ಣದೇವರಾಯ ಮನ್ನಾ ಮಾಡಿದ ವಿಷಯವೂ ತಿಳಿದಿದೆ.

ಪ್ರಾಚೀನ ಕಾಲದಿಂದಲೂ ನಡೆದುಬಂದ ವರ್ಣಾಶ್ರಮಗಳನ್ನು ನಡೆಸಿಕೊಂಡು ಬರುವುದು ತಮ್ಮ ಕರ್ತವ್ಯವೆಂದು ಅರಸರು ಭಾವಿಸಿದ್ದರು. ಪರಕೀಯರಿಂದ ದೇಶಕ್ಕೆ ಉಂಟಾಗಿದ್ದ ಕುತ್ತಿನಿಂದ ಪಾರಾಗಲು ಪ್ರಜೆಗಳೆಲ್ಲರೂ ಒಟ್ಟಾಗಿ ಧರ್ಮದಿಂದ ಬಾಳಬೇಕೆಂದು ಅರಸರೂ ಅವರಂತೆಯೇ ಪ್ರಜೆಗಳೂ ತಿಳಿದಿದ್ದರು. ಬ್ರಾಹ್ಮಣರಲ್ಲಿ ಕೆಲವರು ದೇವಾಲಯಗಳಲ್ಲಿ ಪೂಜಾದಿ ಕಾರ್ಯಗಳನ್ನು ಮಾಡುತ್ತಿದ್ದರು. ಇನ್ನು ಕೆಲವರು ರಾಜಕೀಯದಲ್ಲಿ ಪ್ರಮುಖ ಸ್ಥಾನ ಪಡೆದಿದ್ದವರು. ಅಧಿಕಾರ ವರ್ಗಗಳಲ್ಲಿದ್ದವರು ಈ ಕಾಲದಲ್ಲಿ ಕಾಣಿಸಿಕೊಂಡಿದ್ದಾರೆ. ಇವರು ವಿಶೇಷವಾದ ಪಾಂಡಿತ್ಯ ಪಡೆದಿದ್ದರು. ಆದರೆ ಎಲ್ಲರೂ ಹೆಚ್ಚಿನ ಗೌರವಕ್ಕೆ ಪಾತ್ರರಾಗಿದ್ದಾರೆಂದು ಹೇಳಲಾಗುವುದಿಲ್ಲ. ಬಾರ್ಬೋಸ, ನ್ಯೂನಿಜ್ ಮೊದಲಾದ ಯಾತ್ರಿಕರು ಬ್ರಾಹ್ಮಣರನ್ನು ಕುರಿತು ಬರೆಯುವಾಗ ಇವರು ಹೊಟ್ಟೆಬಾಕರೆಂದೂ ಆಸೆಬುರುಕರೆಂದೂ ಬರೆದಿದ್ದಾರೆ.

ಅಂದಿನ ಸಮಾಜದಲ್ಲಿ ವಿಶಿಷ್ಟವಾಗಿ ಕಂಡುಬರುವವರು ವಿಪ್ರವಿನೋದಿ, ಪಾಂಚಾಳ, ಕೈಕೊಳ, ಡೊಂಬ, ನಾವಿದ ಮುಂತಾದ ಕುಶಲಕರ್ಮಿ ಹಾಗೂ ಇತರ ಕಸಬುಗಳವರು. ಇವರೆಲ್ಲ ಆಗ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ತಮ್ಮದೇ ಆದ ಸಂಘಗಳನ್ನು ರಚಿಸಿಕೊಂಡಿದ್ದರು. ಇದು ಅಂದಿನ ಸಮಾಜ ಜಾಗೃತವಾಗಿತ್ತೆನ್ನಲು ಒಂದು ಉದಾಹರಣೆಯಾಗಿದೆ. ವಿಜಯನಗರ ಸಾಮ್ರಾಜ್ಯ ಸಮಗ್ರ ದಕ್ಷಿಣ ಭಾರತಕ್ಕೂ ವಿಸ್ತರಿಸಿದ್ದರಿಂದ ಭಿನ್ನಭಾಷೆಗಳಿಗೆ ಸೇರಿದ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದುದೂ ಸಾಮಾಜಿಕ ಸಂಘರ್ಷಗಳಿಗೆ ಒಂದು ಕಾರಣವಾಗಿತ್ತು.

ಸಾಂಘಿಕ ಜೀವನ ಜಾಗೃತವಾಗಿದ್ದ ಕಾರಣ ಪ್ರಜೆಗಳು ಸರ್ಕಾರದ ನೆರವಿಗಾಗಿ ಕಾಯದೆ ತಮ್ಮ ತಮ್ಮ ಆವಶ್ಯಕತೆಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಅನೂಚಾನವಾಗಿ ನಡೆದುಬಂದಿದ್ದ ನಗರಗಳ ಹಾಗೂ ಗ್ರಾಮೀಣ ಸ್ವಯಮಾಡಳಿತ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ಹೆಚ್ಚು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿದ್ದುವು.

ಸಮಾಜದಲ್ಲಿ ಸ್ತ್ರೀ ಬಹು ಗಣ್ಯಸ್ಥಾನ ಪಡೆದಿದ್ದಳೆಂಬುದು ನಿಜವಾದರೂ ಬಹುಪಾಲು ಸಾಂಸಾರಿಕ ಸ್ತ್ರೀಯರು ವಿಶೇಷವಾಗಿ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರಲಿಲ್ಲವೆಂದೇ ಹೇಳಬೇಕು. ಯಾತ್ರಿಕ ಪೇಯಿಸ್ ಇಂತಹ ಸಾಂಸಾರಿಕ ಸ್ತ್ರೀಯರನ್ನು ತಾನು ಹೊರಗೆ ಕಂಡುದೇ ಇಲ್ಲವೆಂದಿದ್ದಾನೆ. ಆದರೆ ಅರಸರ ಅಂತಃಪುರದಲ್ಲಿ ಅನೇಕ ಸ್ತ್ರೀಯರಿದ್ದರು. ರಾಣೀವಾಸದವರ ಸೇವೆಗೆಂದೇ ನೂರಾರು ದಾಸಿಯರು ನಿಯಮಿತರಾಗಿದ್ದರು. ಇಂತಹವರು ನ್ಯಾಯವಿಧಾನ, ರಕ್ಷಣಾ ವಿಧಾನ, ಗಣಿತ, ಲೇಖನಕಲೆ, ಕಾವ್ಯ, ಸಂಗೀತ, ನೃತ್ಯ, ವಾದನ ಇತ್ಯಾದಿಗಳಲ್ಲಿ ಪರಿಣತರಾಗಿದ್ದರು. ಕೃಷ್ಣದೇವರಾಯನ ಆಸ್ಥಾನದಲ್ಲಿ 400 ಜನ ಇಂತಹ ಸ್ತ್ರೀಸೇವಕಿಯರಿದ್ದರು. ಹೊನ್ನಮ್ಮ ಎಂಬಾಕೆ ಪ್ರೌಢದೇವರಾಯನ ಆಸ್ಥಾನದಲ್ಲಿ ವರದಿಗಾರಳಾಗಿದ್ದಳು. ಓದುವ ತಿರುಮಲಾಂಬೆ ಅಚ್ಯುತರಾಯನ ಕಾಲದಲ್ಲಿ ಬಹುಶಃ ಇಂತಹುದೇ ಪದವಿಯನ್ನಲಂಕರಿಸಿದ್ದಳು. ಗ್ರಾಮಗಳಲ್ಲಿ ಸ್ತ್ರೀಯರು ಬೇಸಾಯದಲ್ಲಿ ಸಹಕರಿಸಿ ಬತ್ತದ ಮಡಿಗಳನ್ನು ಕಾಯುವ, ಹಕ್ಕಿಬೆದರಿಸುವ ಕೆಲಸಗಳಲ್ಲಿ ನಿರತರಾಗಿದ್ದರು. ಕನಕದಾಸರ ಪದವೊಂದರಲ್ಲಿ ಸ್ತ್ರೀವ್ಯಾಪಾರಿಗಳ ವರ್ಣನೆಯೊಂದಿದೆ. ನಟ ತಿಮ್ಮಯ್ಯನ ಮಗಳಾದ ಪಾತ್ರಿ ಎಂಬುವಳು ನಟಿಯಾಗಿ ತಾಯಿಕುಂದ ನಾಟಕದಲ್ಲಿ ಪಾತ್ರವಹಿಸಿದ್ದಳೆಂದು ಒಂದು ಶಾಸನದಿಂದ ತಿಳಿದಿದೆ. ದೇವಾಲಯಗಳಲ್ಲಿ ಹಲವಾರು ಸ್ತ್ರೀಯರು ವಿಭಿನ್ನಕಾರ್ಯಗಳಲ್ಲಿ ತೊಡಗಿದ್ದರು. ವೇಶ್ಯಾವೃತ್ತಿ ಹಾಗೂ ದೇವದಾಸೀ ಪದ್ಧತಿ ಈ ಕಾಲದಲ್ಲಿ ಹೆಚ್ಚಿತ್ತು. ಅನೇಕ ವೇಶ್ಯೆಯರು ವೈಭವೋಪೇತ ಜೀವನ ನಡೆಸುತ್ತಿದ್ದರೆಂದೂ ಶ್ರೀಮಂತರಾಗಿದ್ದರೆಂದೂ ಬಾರ್ಬೋಸ ತಿಳಿಸಿದ್ದಾನೆ. ದೇವಾಲಯಗಳಲ್ಲಿ ನಡೆವ ಉತ್ಸವಗಳಲ್ಲಿ, ಶ್ರೀಮಂತರ ಮದುವೆ ಮುಂತಾದ ಇತರ ಸಂದರ್ಭಗಳಲ್ಲಿ ಈ ಸ್ತ್ರೀಯರು ವಿಶೇಷವಾಗಿ ಭಾಗವಹಿಸುತ್ತಿದ್ದರು.

ಜನ ಉತ್ಸವಪ್ರಿಯರಾಗಿದ್ದರು. ಹಬ್ಬಹುಣ್ಣಿಮೆಗಳಲ್ಲಿ, ಆಟಪಾಟಗಳಲ್ಲಿ ತೊಡಗಿ ಸಮುದಾಯಕ್ಕೆ ಸಂತಸವನ್ನೀಯುತ್ತಿದ್ದರು. ಅರಸರೂ ಇದನ್ನು ಪ್ರೋತ್ಸಾಹಿಸಿದರು. ಈ ಕಾಲದಲ್ಲಿ ಬಹಳ ಪ್ರಾಶಸ್ತ್ಯ ಪಡೆದ ಹಬ್ಬ ನವರಾತ್ರಿ. ಕೃಷ್ಣದೇವರಾಯನ ಕಾಲದಲ್ಲಿ ಅರಮನೆಯಲ್ಲಿ ಆಚರಿಸಲಾದ ಈ ಹಬ್ಬದ ವೈಭವವನ್ನು ಪೇಯಿಸ್ ವರ್ಣಿಸಿದ್ದಾನೆ. ಈತನ ಹೇಳಿಕೆಗಳನ್ನು ಕವಿ ರತ್ನಾಕರವರ್ಣಿಯ ಭರತೇಶವೈಭವದಲ್ಲಿನ ನವರಾತ್ರಿಸಂಧಿಯಲ್ಲಿ ಬಣ್ಣಿಸಲಾದ ವಿವರಗಳೊಡನೆ ಹೋಲಿಸಬಹುದು. ಈ ಕಾಲದಲ್ಲಿ ಸಂಗೀತಕ್ಕೆ ಅಮಿತವಾದ ಪ್ರೋತ್ಸಾಹ ದೊರೆತಿತ್ತು. ಹಲವಾರು ಸಂಗೀತ ಗ್ರಂಥಗಳು ರಚಿತವಾದುವು. ಭಕ್ಷ್ಯಭೋಜ್ಯಗಳನ್ನು ತಯಾರಿಸುವುದರಲ್ಲಿ ಉತ್ತಮ ಅಭಿರುಚಿಯನ್ನು ಅಂದಿನ ಜನ ವ್ಯಕ್ತಗೊಳಿಸುತ್ತಿದ್ದರು. ಮಂಗರಸನ (ಸು.1508) ಸೂಪಶಾಸ್ತ್ರ ಈ ಕಾಲದ ಒಂದು ಗ್ರಂಥ.

**ಲಲಿತಕಲೆ–ಸಾಹಿತ್ಯ :** ವಿಜಯನಗರದ ಅರಸರ ಆಳ್ವಿಕೆ ಕರ್ನಾಟಕ ಸಂಸ್ಕೃತಿಯ ಉಚ್ಛ್ರಾಯಕಾಲ; ಕಲೆ ಸಾಹಿತ್ಯಗಳು ಪುನರುಜ್ಜೀವನಗೊಂಡ ಕಾಲ. ಇವರು ಎಲ್ಲ ರೀತಿಯ ಕಲೆಗಳಿಗೂ ಅಮಿತ ಪ್ರೋತ್ಸಾಹ ನೀಡಿದರು. ಈ ಕಾಲದಲ್ಲಿ ಕಲೆಗೆ ಹೊಸ ತಿರುವು, ಹೊಸ ಉತ್ಸಾಹ ಮೂಡಿತು. ರಾಜಮನೆತನಗಳ ಪ್ರೋತ್ಸಾಹವಷ್ಟಕ್ಕೇ ಸೀಮಿತವಾಗದೆ ಹಲವು ಕಾರಣಗಳಿಂದಾಗಿ ಜನಸಾಮಾನ್ಯರಲ್ಲೂ ಕಲಾಪ್ರಜ್ಞೆ ಮೂಡಿ ಪ್ರೌಢವಾದ ವಿದ್ವತ್ಕಲೆ ಮತ್ತು ಜನಪದ ಕಲೆಗಳ ಸಮ್ಮಿಳನವಾಗಿ ಪಂಡಿತಪಾಮರರಿಬ್ಬರನ್ನೂ ರಂಜಿಸಬಲ್ಲ ನೂತನ ವಿಸ್ತಾರವನ್ನು ಕಲೆಗಳು ಕಂಡುಕೊಂಡವು.

ವಿಜಯನಗರ ಕಾಲದ ಚಿತ್ರಕಲೆ ಈಗ ಉಳಿದು ಬಂದಿರುವುದು ಬಹಳ ಕಡಿಮೆಯೆ. ಆದರೆ ಆ ಕಾಲದಲ್ಲಿ ಚಿತ್ರಕಲೆಗೆ ವಿಜಯನಗರದ ಅರಸರು ಅದರಲ್ಲಿಯೂ ಕೃಷ್ಣದೇವರಾಯ, ಅಚ್ಯುತರಾಯರು ಕೊಟ್ಟ ಪ್ರೋತ್ಸಾಹ, ಚಿತ್ರಕಾರರಲ್ಲಿ ಆಗ ಇದ್ದ ಉತ್ಸಾಹಗಳನ್ನು ಹೊರದೇಶದ ಪ್ರವಾಸಿಗಳು ಬರೆದಿಟ್ಟಿರುವ ಭವ್ಯವಾದ ವರ್ಣನೆಯಿಂದ ತಿಳಿಯಲವಕಾಶವಿದೆ. ಇವರ ಕಾಲದ ಚಿತ್ರಗಳು ಹಂಪೆಯ ವಿರೂಪಾಕ್ಷ ದೇವಾಲಯ, ಆನೆಗೊಂದಿಯ ಒಂದು ಮಂಟಪ, ಲೇಪಾಕ್ಷಿ, ಸೋಂಡಲ್ಲೆ ದೇವಾಲಯಗ

ಳಲ್ಲಿ, ಕಂಚಿ ವರದರಾಜ ದೇವಾಲಯ, ತಂಜಾವೂರಿನ ಬೃಹದೀಶ್ವರ ದೇವಾಲಯಗಳಲ್ಲಿ, ಚಂದ್ರಗಿರಿಯಲ್ಲಿ ಉಳಿದುಬಂದಿವೆ. ಆ ಕಾಲದ ಸಾಹಿತ್ಯದಲ್ಲಿ ಬರುವ ವರ್ಣನೆಗಳಿಂದ ಆ ರಾಜ್ಯದಲ್ಲಿದ್ದ ಶ್ರೀಮಂತರು ತಮ್ಮ ಮನೆಗಳನ್ನು ವರ್ಣಚಿತ್ರಗಳಿಂದ ಅಲಂಕರಿಸುತ್ತಿದ್ದ ಪದ್ಧತಿ ಇದ್ದಂತೆ ತೋರುತ್ತದೆ. ಇವು ಪೌರಾಣಿಕ ವಸ್ತುಗಳನ್ನಾಧರಿಸಿದ್ದುವು; ಸಮುದ್ರಮಥನ, ಕಾಮಸಂಹಾರಮೂರ್ತಿ, ಗಿರಿಜಾಕಲ್ಯಾಣ, ನಳದಮಯಂತಿ, ಪ್ರಾಣಿಪಕ್ಷಿಗಳ ಪಂಕ್ತಿಗಳು ಇತ್ಯಾದಿ. ಇವಲ್ಲದೆ ಜನಸಾಮಾನ್ಯರೂ ತಮ್ಮ ಮನೆಗಳ ಮುಂದೆ, ಗೋಡೆಗಳ ತಳಭಾಗದಲ್ಲಿ ಗಿಡ ಗಿಣಿಗಳ ಆಕೃತಿಗಳು, ರಂಗವಲ್ಲಿಯ ಬಗೆಬಗೆಯ ಆಕಾರಗಳನ್ನು ಬಿಡಿಸುವುದರಲ್ಲಿ ಆಸಕ್ತಿ ತೋರುತ್ತಿದ್ದುದು ಕಂಡುಬರುತ್ತದೆ.

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅವನ ಅರಮನೆಯನ್ನು ಸಂದರ್ಶಿಸಿದ್ದ ಪೋರ್ಚುಗೀಸ್ ಪ್ರವಾಸಿ ಡೊಮಿಂಗೊ ಪೇಯಿಸನು ಅರಮನೆಯ ವಿವಿಧ ಭಾಗಗಳಲ್ಲಿ ಕಂಡುಬಂದ ಚಿತ್ರಗಳ ಬಗೆಗೆ, ಅಲ್ಲಿ ಚಿತ್ರಿಸುತ್ತಿದ್ದ ಚಿತ್ರಕಾರರ ಉತ್ಸಾಹದ ಬಗೆಗೆ ವಿಸ್ತಾರವಾಗಿ ವರ್ಣಿಸಿದ್ದಾನೆ. ಅರಮನೆಯ ಪ್ರವೇಶದ್ವಾರದ ಬಳಿ ಎರಡು ಕಡೆಯೂ ಗೋಡೆಗಳ ಮೇಲೆ ಕೃಷ್ಣದೇವ ರಾಯ ಮತ್ತು ಅವನ ತಂದೆಯ ಆಳೆತ್ತರದ ಆಕೃತಿಗಳನ್ನು ಕೆತ್ತಿಸಿದ್ದರು. ರಾಜನ ಪೋಷಾಕುಗಳು, ಆಭರಣಗಳು, ರಾಜಯೋಗ್ಯವಾದ ಅವರ ನಿಲುವು ಗಾಂಭೀರ್ಯಗಳನ್ನು ಅತ್ಯಂತ ಸ್ವಾಭಾವಿಕವಾಗಿ ಚಿತ್ರಿಸಿದ್ದಂತೆ ತಿಳಿಸಿದ್ದಾನೆ. ಇದೇ ರೀತಿ ದಂತಶಾಲೆಯಲ್ಲಿ ಬೇರೆ ಬೇರೆ ದೇಶಗಳ ಜನರ ಉಡುಪು, ರೀತಿನೀತಿಗಳು, ನಡವಳಿಕೆಗಳನ್ನೆಲ್ಲ ಯಥಾವತ್ತಾಗಿ ಚಿತ್ರಿಸಿದ್ದು ಅವುಗಳಲ್ಲಿ ಪೋರ್ಚುಗೀಸರನ್ನು ಚಿತ್ರಿಸಿರುವುದನ್ನೂ ಪೇಯಿಸ್ ಗುರುತಿಸಿದ್ದಾನೆ. ಅರಮನೆಯ ಮೇಲಂತಸ್ತಿನ ಒಂದು ಕೋಣೆಯ ಎಲ್ಲ ಭಾಗಗಳೂ ಚಿತ್ರಿತವಾಗಿದ್ದುವು. ಇಲ್ಲಿ ಶಿಲ್ಪಭಾಗಗಳನ್ನು ಕೂಡ ಬಣ್ಣದಿಂದ ಚಿತ್ರಿಸಿದ್ದರು. ರಾಜಸಭಾಭವನವೂ ಇದೇ ರೀತಿ ಚಿತ್ರಿತವಾಗಿತ್ತು. ನೃತ್ಯಶಾಲೆಯಲ್ಲಿ ಅದರ ಹಿಂಭಾಗದಲ್ಲೆ ನೃತ್ಯಗಾತಿಯರು ವಿರಮಿಸಿ ಕೈಕಾಲುಗಳನ್ನು ಚಾಚಿ ಸಡಿಲಗೊಳಿಸುತ್ತಿದ್ದ ಅಂಗಣದಲ್ಲಿಯೂ ಸುತ್ತಲೂ ನಾಟ್ಯಭಂಗಿಯ ಬಗೆಬಗೆಯ ಚಿತ್ರಗಳಿದ್ದವು. ಅರಮನೆಯ ಆನೆಗಳಿಗೂ ಅವುಗಳ ತಲೆಯ ಮುಂಭಾಗದಲ್ಲಿ ಹಲವು ಬಗೆಯ ರಾಕ್ಷಸಾಕೃತಿಗಳನ್ನೂ ಮೃಗಗಳ ಆಕೃತಿಗಳನ್ನೂ ಚಿತ್ರಿಸಿದ್ದುದನ್ನು ಪೇಯಿಸ್ ಕಂಡಿದ್ದಾನೆ. ಪೇಯಿಸನ ವರದಿಯಂತೆ ಕೃಷ್ಣದೇವರಾಯನ ಅರಮನೆಯಲ್ಲಿನ ಚಿತ್ರಗಳು ಉನ್ನತಮಟ್ಟದವಾಗಿದ್ದುವು; ಯಥಾರ್ಥವಾದ ಆಕಾರಗಳು, ಅನುರೂಪವಾದ ಬಣ್ಣಗಳನ್ನು ಬಳಸುವಲ್ಲಿ ಆ ಚಿತ್ರಕಾರರು ನಿಷ್ಣಾತರಾಗಿದ್ದರು.

ಇಮ್ಮಡಿ ವೆಂಕಟನ ಕಾಲದಲ್ಲಿ ಸಂದರ್ಶಿಸಿದ್ದ ಜೆರಿಕ್ ಚಂದ್ರಗಿರಿಯಲ್ಲಿ ಅನೇಕ ಚಿತ್ರಗಾರರಿದ್ದುದಾಗಿ ತಿಳಿಸಿದ್ದಾನೆ. ಯುರೋಪಿನಿಂದ ಬಂದ ಪ್ರವಾಸಿಗಳು ರಾಜನಿಗೆ ಚಿತ್ರಗಳನ್ನು ಕಾಣಿಕೆ ಕೊಡುತ್ತಿದ್ದುದಾಗಿಯೂ ಅವುಗಳ ಮಟ್ಟಕ್ಕೆ ದೇಶೀಯ ಚಿತ್ರಗಳು ಬರುತ್ತಿರಲಿಲ್ಲವೆಂದೂ ಅವನ ಅಭಿಪ್ರಾಯ.

ಈಗ ಉಳಿದುಬಂದಿರುವ ಚಿತ್ರಗಳಲ್ಲಿ ಬಹುಶಃ ಆನೆಗೊಂದಿಯ ಹುಚ್ಚುಮಲ್ಲಪ್ಪನ ಮಠ ಎಂದು ಈಗ ಕರೆಯಲ್ಪಡುವ ಒಂದು ದೊಡ್ಡಮಂಟಪ ಗಮನಾರ್ಹ. ಇದರ ಚಾವಣಿಯಲ್ಲಿನ ಚಿತ್ರಗಳೆಲ್ಲ ಬಹುಮಟ್ಟಿಗೆ ನಾಶವಾಗಿದ್ದು ಚಿತ್ರಗಳಿದ್ದ ಕುರುಹುಗಳು ಮಾತ್ರ ಈಗ ಉಳಿದಿವೆ. ಹಂಪೆಯ ವಿರೂಪಾಕ್ಷ ದೇವಾಲಯದ ಮುಂದಿನ ವಿಶಾಲವಾದ ಭವ್ಯವಾದ ರಂಗಮಂಟಪದ ಚಾವಣಿ. ತೊಲೆಗಳ ಮೇಲಿನ ಚಿತ್ರಗಳು ಅನಂತರದ ಕಾಲದ್ದು. ಈ ಮಂಟಪವನ್ನು 1509–10ರಲ್ಲಿ ಕೃಷ್ಣದೇವರಾಯ ತನ್ನ ಕಿರೀಟಧಾರಣ ಮಹೋತ್ಸವದ ಅಂಗವಾಗಿ ಕಟ್ಟಿಸಿದ, ಆಗಲೇ ಈ ಚಿತ್ರಗಳನ್ನೂ ರಚಿಸಿರಬೇಕು. ಇವುಗಳಲ್ಲಿ ಒಂದು ಸಾಲಿನಲ್ಲಿ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಬ್ರಹ್ಮಸರಸ್ವತಿಯರ ಚಿತ್ರಗಳೂ ಎರಡನೆಯದರಲ್ಲಿ ಎಡಬಲಗಳಲ್ಲಿ ಬ್ರಹ್ಮ, ವಿಷ್ಣು, ತುಂಬುರು ನಾರದರು, ಪರಿವಾರದೇವತೆಗಳೂ ನಿಂತಿರುವಂತೆ ವಿಸ್ತಾರವಾಗಿ ಚಿತ್ರಿಸಿರುವ ಗಿರಿಜಾ ಕಲ್ಯಾಣ, ಮತ್ತೊಂದು ಅಷ್ಟದಿಕ್ಪಾಲಕರ ಸಾಲು, ಹಾಗೆಯೇ ಇನ್ನೊಂದರಲ್ಲಿ ಶಿವನ ತಪೋಭಂಗ, ತ್ರಿಪುರದಹನಗಳೂ ಕೊನೆಯ ಸಾಲಿನಲ್ಲಿ ವಿಷ್ಣುವಿನ ದಶಾವತಾರಗಳೂ ಚಿತ್ರಿತವಾಗಿವೆ. ಮುಂಭಾಗದ ತೊಲೆಯೊಂದರ ಮೇಲಿನ ಪಲ್ಲಕ್ಕಿಯೊಂದರಲ್ಲಿ ಕುಳಿತ ಸಂನ್ಯಾಸಿಯೊಬ್ಬನ ಮೆರವಣಿಗೆಯನ್ನು ವಿದ್ಯಾರಣ್ಯರೆಂದೋ ವ್ಯಾಸರಾಯರೆಂದೋ ಗುರುತಿಸುತ್ತಾರೆ. ಆದರೆ ಇವುಗಳಿಗೆ ಅನಂತರದ ಕಾಲದಲ್ಲಿ ಪುನಃ ಬಣ್ಣ ಹಾಕಿರುವುದರಿಂದ ಅವುಗಳ ಮೂಲಸ್ವರೂಪದ ಸ್ಪಷ್ಟ ಅರಿವು ಸಾಧ್ಯವಾಗದು. ಈ ದೃಷ್ಟಿಯಿಂದ ಅಚ್ಯುತರಾಯನ ಕಾಲದಲ್ಲಿ ಲೇಪಾಕ್ಷಿಯಲ್ಲಿ ನಿರ್ಮಿತವಾದ ವೀರಭದ್ರ ದೇವಾಲಯದ ವ್ಯಾಪಕವಾದ ಚಿತ್ರಸಮೂಹ ಅಮೂಲ್ಯವಾದುದು. ಈ ತ್ರಿಕೂಟಾಚಲದ ಮಧ್ಯದ ನಾಟ್ಯಮಂಟಪ, ಅರ್ಧಮಂಟಪಗಳ ಚಾವಣಿಗಳು, ಗೋಡೆಗಳು, ಸುತ್ತಲೂ ಇರುವ ಕೈಸಾಲೆಯ ಚಾವಣಿಗಳ ಮೇಲೆಲ್ಲ ಚಿತ್ರಗಳು ತುಂಬಿವೆ. ಕೈಸಾಲೆಯ ಚಿತ್ರಗಳು ಖಿಲವಾಗಿದ್ದರೂ ದೇವಾಲಯದ ಒಳಗಿನ ಚಿತ್ರಗಳು ಉಳಿದು ಬಂದಿದ್ದು ಇಲ್ಲಿನ ಹಲವು ಚಿತ್ರಗಳು ಕಲೆಗಾರನ ನೈಪುಣ್ಯವನ್ನು ಪ್ರದರ್ಶಿಸುತ್ತವೆ. ನಾಟ್ಯಮಂಟಪದಲ್ಲಿ ಗಿರಿಜಾಕಲ್ಯಾಣ, ದಕ್ಷಿಣಾಮೂರ್ತಿ, ಶ್ರೀರಾಮಪಟ್ಟಾಭಿಷೇಕ, ವಟಪತ್ರಶಾಯಿ, ಕಿರಾತಾರ್ಜುನೀಯ, ಶಿವಪಾರ್ವತಿಯರ ಪಗಡೆಯಾಟ ಇತ್ಯಾದಿ ಚಿತ್ರಗಳಿದ್ದು ಮಧ್ಯದಲ್ಲಿ ಬೃಹದಾಕಾರದಲ್ಲಿ ಚಿತ್ರಿತವಾದ ವೀರಭದ್ರನ ಮೂರ್ತಿಯ ಮುಂದೆ ಆ ದೇವಾಲಯವನ್ನು ಕಟ್ಟಿಸಿದ ವಿರಪಣ್ಣ, ವೀರಪ್ಪ ಮತ್ತು ಅವರ ಪರಿವಾರಗಳು ಪ್ರಸಾದ ಸ್ವೀಕರಿಸುತ್ತಿರುವುದನ್ನು ವಿಸ್ತಾರವಾಗಿ ಚಿತ್ರಿಸಲಾಗಿದೆ. ಅರ್ಧಮಂಟಪದಲ್ಲಿ ಹಲವು ಬಗೆಯ ಶಿವಲೀಲಾಮೂರ್ತಿಗಳಿದ್ದು ಕೆಲವು ಅವುಗಳ ರಚನಾಕೌಶಲ್ಯಕ್ಕೆ ಹೆಸರಾಗಿವೆ. ಇವುಗಳಲ್ಲಿ ರಾಕ್ಷಸನ ಮೇಲೆ ನರ್ತಿಸುತ್ತಿರುವ ಶಿವನ ಭವ್ಯವಾದ ನಾಟ್ಯಭಂಗಿ ಅದ್ಭುತವಾದ ಚಿತ್ರ. ಶಿವನ ಸುಂದರವಾದ ಭಂಗಿ, ನೀಳಕಾಯದ ಸೊಬಗು, ಚಲನೆಯ ಸಾಮರಸ್ಯ, ಅತ್ಯಂತ ಅನುರೂಪವಾದ ನಿಲವು, ಪ್ರಶಾಂತ ಮುಖ ಮುದ್ರೆಗಳು ನುರಿತ ಚಿತ್ರಗಾರನೊಬ್ಬನ ಕೃತಿ ಇದೆಂದು ವ್ಯಕ್ತಪಡಿಸುತ್ತವೆ. ಇಲ್ಲಿನ ಮತ್ತೊಂದು ಅತಿ ಸುಂದರ ಚಿತ್ರವೆಂದರೆ ಗಂಗಾಧರ ಶಿವನು ಗೌರಿಯನ್ನು ಸಾಂತ್ವನಗೊಳಿಸುತ್ತಿರುವುದು. ಅತ್ಯಂತ ನವುರಾದ ಭಾವನೆಯನ್ನು ಅಷ್ಟೇ ನವುರಾಗಿ ಬಿಡಿಸಿರುವ ಇಲ್ಲಿನ ಕಲೆ ಅಮೋಘವಾದುದು. ಜಟೆಯಲ್ಲಿ ಅಡಗಿಸಿಟ್ಟುಕೊಂಡಿದ್ದ ತನ್ನ ಹೊಸ ಹೆಣ್ಣು ಗಂಗೆಯು ಭಗೀರಥನ ಬೇಡಿಕೆಗೆ ಓಗೊಟ್ಟು ದುಮ್ಮಿಕ್ಕಿದುದನ್ನು ಕಂಡ ಪಾರ್ವತಿಯ ಅಸಹನೆ, ಶಿವನ ಪೇಚು, ಆದರೂ ಮುಖದಿರುಹಿದ ಆ ಕೋಪದ ಮುಂದೆ ಶಾಂತ ಭಾವದಿಂದ ಗಲ್ಲಕ್ಕೆ ಕೈಚಾಚಿ ರಮಿಸಲೆತ್ನಿಸುತ್ತಿರುವ ಆ ಭಂಗಿ–ಎಲ್ಲವೂ ಸೂಕ್ಷ್ಮ, ಪಾದದಿಂದ ಕಟಿಯವರೆಗೆ ಹಿಂದಕ್ಕೆ ಚಾಚಿಕೊಂಡಂತಿದ್ದು ಅಲ್ಲಿಂದ ಮೇಲೆ ನೇರ ನಿಲುವಿರುವುದು ಇಲ್ಲಿ ನಿಂತಿರುವ ಸಾಲು ಚಿತ್ರಗಳ ವೈಶಿಷ್ಟ್ಯ. ವಿಜಯನಗರದ ಕಡೆಯ ಕಾಲಕ್ಕೆ ಸೇರಬಹುದಾದ ಬೃಹದೀಶ್ವರ ದೇವಾಲಯದ ಚಿತ್ರಗಳಲ್ಲಿ ಒರಟುತನ, ಅಸಹಜತೆ ಕಂಡುಬಂದು ಚಿತ್ರಕಲೆ ಅವನತಿ ಹೊಂದುತ್ತಿದ್ದುದನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ವಿಜಯನಗರದ ಉಚ್ಛ್ರಾಯಕಾಲದ ಚಿತ್ರಗಳು ಅತ್ಯಂತ ನವುರಾದ ಸುಂದರವಾದ ಭಾವಭಂಗಿಗಳನ್ನು ಸೆರೆಹಿಡಿಯುವಲ್ಲಿ, ಆಯಾ ಸಂದರ್ಭಕ್ಕೆ ತಕ್ಕಂತೆ ಮನದ ಇಂಗಿತವನ್ನು ಹೊಮ್ಮಿಸುವಲ್ಲಿ, ಅನುರೂಪವಾದ ವರ್ಣಸಂಯೋಜನೆಯಲ್ಲಿ, ಗೆರೆಗಳಲ್ಲಿ ನಿಶ್ಚಿತವಾದ ಆಕೃತಿಗಳನ್ನು

ಮೂಡಿಸುವಲ್ಲಿ, ಬಾಗುಬಳಕುಗಳನ್ನು ತರುವಲ್ಲಿ ಆ ಕಾಲದ ಚಿತ್ರಕಾರರು ನಿಷ್ಣಾತರಾಗಿದ್ದರೆಂಬುದನ್ನು ತೋರಿಸುತ್ತವೆ.

ಸಂಗೀತ, ನೃತ್ಯಕಲೆಗಳಿಗೆ ವಿಜಯನಗರದ ಅರಸರು ಕೊಟ್ಟ ಪ್ರೋತ್ಸಾಹದಿಂದ ಅವು ಹಲವು ಬಗೆಯಲ್ಲಿ ಅಭಿವೃದ್ಧಿಹೊಂದಿದವು. ದಾಕ್ಷಿಣಾತ್ಯ ಸಂಗೀತ ಪದ್ಧತಿಗೆ ಕರ್ಣಾಟಕ ಸಂಗೀತ ಎಂಬ ಹೆಸರು ಚಾಳುಕ್ಯ ಸೋಮೇಶ್ವರನ ಕಾಲದಲ್ಲಿಯೇ ಬಂದಿತೆಂದು ಹೇಳಲಾಗಿದ್ದರೂ ಅದು ಪ್ರಚಲಿತವಾದದ್ದು ವಿಜಯನಗರದ ಕಾಲದಲ್ಲಿಯೇ. ಈ ಕಾಲದಲ್ಲಿ ಲಕ್ಷ್ಯವಿಭಾಗಗಳು ಬಹುವಾಗಿ ಅಭಿವೃದ್ಧಿ ಹೊಂದಿದವು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಮೂಲ ಕಾರಣರೆಂದು ಪ್ರಸಿದ್ಧರಾದ ವಿದ್ಯಾರಣ್ಯರು ಸಂಗೀತ ತಜ್ಞರಾಗಿದ್ದು ಸಂಗೀತಸಾರವೆಂಬ ಲಕ್ಷಣಗ್ರಂಥವನ್ನು ರಚಿಸಿದ್ದುದಾಗಿ ತಿಳಿದುಬರುತ್ತದೆ. ಈ ಮೂಲಗ್ರಂಥ ದೊರೆತಿಲ್ಲವಾದರೂ ತಂಜಾವೂರಿನ ರಾಜ ರಘುನಾಥ ನಾಯಕನ ಹೆಸರಿನಲ್ಲಿ ರಚಿತವಾದ ಗೋವಿಂದ ದೀಕ್ಷಿತನ ಸಂಗೀತಸುಧಾ ಎಂಬ ಲಕ್ಷಣಗ್ರಂಥದಲ್ಲಿ ವಿದ್ಯಾರಣ್ಯರ ಸಂಗೀತಸಾರವನ್ನು ಅನುಸರಿಸಿ ಈ ಗ್ರಂಥವನ್ನು ರಚಿಸಿದುದಾಗಿ ಕೃತಿಕಾರ ಹೇಳಿಕೊಂಡಿದ್ದಾನೆ. ಅದರಲ್ಲಿ ರಾಗ ಅಥವಾ ಆಲಾಪದ ಬಗೆಗೆ ವಿವರಗಳನ್ನು ಕೊಡುತ್ತ ತಾನು ಅವುಗಳನ್ನು ವಿದ್ಯಾರಣ್ಯರ ಸಂಗೀತಸಾರದಲ್ಲಿನ ರಾಗಾಧ್ಯಾಯದಿಂದ ನೇರವಾಗಿ ಎತ್ತಿಕೊಂಡುದಾಗಿ ತಿಳಿಸಿದ್ದಾನೆ ಮತ್ತು 15 ಮೇಳಗಳಿಂದ ಕೂಡಿದ ಅವರ ಮೇಳಪದ್ಧತಿಯೇ ಬಹು ಪ್ರಾಚೀನವೆಂದೂ ತಿಳಿಸಿದ್ದಾನೆ. ಇಮ್ಮಡಿ ಪ್ರೌಢದೇವರಾಯನ ಅಸ್ಥಾನದಲ್ಲಿದ್ದ ಅಭಿನವಭರತಾಚಾರ್ಯ, ರಾಯವಾಗ್ಗೇಯಕಾರ ಮುಂತಾದ ಬಿರುದುಗಳನ್ನು ಹೊಂದಿದ್ದ ಕಲ್ಲಪ್ಪ ದೇಶಿಕ ಅಥವಾ ಚತುರ ಕಲ್ಲಿನಾಥನು ಶಾರ್ಙ್ಗದೇವನ ಸಂಗೀತರತ್ನಾಕರಕ್ಕೆ ಕಲಾನಿಧಿ ಎಂಬ ವಿದ್ವತ್ ಪೂರ್ಣವಾದ ವಾಖ್ಯಾನವನ್ನು ರಚಿಸಿದ. ಅದರಲ್ಲಿ ಅಲ್ಲಿಯವರೆಗೆ ಸಂಗೀತಶಾಸ್ತ್ರದ ಬಗೆಗೆ ಬೆಳೆದು ಬಂದಿದ್ದ ಸಾಹಿತ್ಯವನ್ನು ಕೂಲಂಕಷವಾಗಿ ವಿಚಾರ ಮಾಡಿದ್ದಾನೆ. ಇದು ಸಂಗೀತ ಶಾಸ್ತ್ರದ ವಿಕಾಸಕ್ಕೆ ಮುಂದೆ ಮಾರ್ಗದರ್ಶಕವಾಯಿತು. ಅವನ ಈ ಗ್ರಂಥ ಸಂಗೀತದ ಬಗೆಗೆ ಒಂದು ಕಿರುವಿಶ್ವಕೋಶವೆನ್ನಬಹುದು. ಅದು ಮುಂದಿನ ಲಕ್ಷಣಕಾರರ ಮೇಲೂ ತನ್ನ ಪ್ರಭಾವ ಬೀರಿತು. ಅಲ್ಲದೆ ಕಲ್ಲಿನಾಥಮತ ವೆಂಬ ಒಂದು ವಿಶಿಷ್ಟ ಸಂಪ್ರದಾಯವೇ ಪ್ರಚಲಿತವಾಯಿತು. ಗಾಂಧರ್ವಗುಣ ಗಂಭೀರನಾಗಿದ್ದ ಪ್ರೌಢದೇವರಾಯನಿಂದ ಈತನಿಗೆ ಅಪಾರ ಪ್ರೋತ್ಸಾಹ ದೊರೆಯಿತೆಂದು ತಿಳಿಯುತ್ತದೆ.

ಕೃಷ್ಣದೇವರಾಯ ಸಂಗೀತದಲ್ಲಿ ಕುಶಲಿಯಾಗಿದ್ದ. ಸಂಗೀತದಲ್ಲಿ ಆತನನ್ನು ಮೀರಿಸುವವರೇ ಇರಲಿಲ್ಲವೆಂದು ಶಾಸನವೊಂದು ತಿಳಿಸುತ್ತದೆ. ಕಲ್ಲಿನಾಥನಿಂದೀಚೆಗೆ ಸಂಗೀತಶಾಸ್ತ್ರ ವಿಪುಲವಾಗಿ ಬೆಳೆದುದಲ್ಲದೆ ಸಂಗೀತ ಕಲೆಯೂ ಅಪಾರವಾಗಿ ಬೆಳೆದು ಮನೆಮನೆಯಲ್ಲಿಯೂ ಅದು ಒಂದು ಆವಶ್ಯಕ ಕಲೆಯಾಗಿ ಪರಿಗಣಿಸಲ್ಪಟ್ಟಿತು. ಹಲವರು ಸಂಗೀತದ ಬಗೆಗೆ ಉದ್ಗ್ರಂಥಗಳನ್ನು ಬರೆದರು(1500-50). ಈ ಕಾಲದ ಲಕ್ಷಣಗ್ರಂಥಗಳೆಂದರೆ ದೇವಣಭಟ್ಟನ ಸಂಗೀತ ಮುಕ್ತಾವಳಿ, ಲಕ್ಷ್ಮಣಭಟ್ಟ ಅಥವಾ ಲಕ್ಷ್ಮೀಧರ ರಚಿಸಿದ ಸಂಗೀತಸೂರ್ಯೋದಯ, ಗೋಪೇಂದ್ರ ತಿಪ್ಪಭೂಪಾಲನ ತಾಳದೀಪಿಕೆ, ಕಾಮದೇವಿ ಬರೆದ ಸಂಗೀತ ಮತ್ತು ನಾಟ್ಯವನ್ನು ವಿವರಿಸುವ ಸಂಗೀತಯುಗದರ್ಪಣ ಮತ್ತು ಸಂಗೀತವಿದ್ಯಾವಿನೋದ ಮುಂತಾದುವು. ಇದೇ ಕಾಲದಲ್ಲಿದ್ದ ಕರ್ನಾಟಕದವನೇ ಆಗಿದ್ದ ಪುಂಡರೀಕ ವಿಠಲನು ಉತ್ತರದ ಮುಸ್ಲಿಂ ದೊರೆಗಳ ಆಶ್ರಯದಲ್ಲಿದ್ದು ಸದ್ರಾಗಚಂದ್ರೋದಯ, ರಾಗಮಂಜರಿ, ರಾಗಮಾಲಾ ಮತ್ತು ನರ್ತನ ನಿರ್ಣಯ ಎಂಬ ನಾಲ್ಕು ಶಾಸ್ತ್ರಗ್ರಂಥಗಳನ್ನು ರಚಿಸಿದ.

ಕೃಷ್ಣದೇವರಾಯನ ಅಳಿಯ ರಾಮರಾಯನಿಗಂತೂ ಸಂಗೀತದಲ್ಲಿ ಅಪಾರ ಆಸಕ್ತಿ. ಆತನ ಇಚ್ಛೆಯ ಮೇರೆಗೆ ರಾಮಾಮಾತ್ಯನು ಸ್ವರಮೇಳ ಕಲಾನಿಧಿ ಎಂಬ ಗ್ರಂಥವನ್ನು ರಚಿಸಿದನು. ಈ ರಾಮಾಮಾತ್ಯ ತಾನು ಕಲ್ಲಿನಾಥನ ಮೊಮ್ಮಗನೆಂದು ಹೇಳಿಕೊಂಡಿದ್ದಾನೆ. ವಿಜಯನಗರದ ಕಡೆಯ ಕಾಲದಲ್ಲಿ ಕರ್ನಾಟಕದಿಂದ ತಂಜಾವೂರಿಗೆ ಹೋಗಿ ಅಲ್ಲಿ ರಘುನಾಥಭೂಪಾಲನ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತನ ಕೃತಿ ಸಂಗೀತಸುಧಾ ಮತ್ತು ಅವನ ಮಗ ವೆಂಕಟಮಖಿಯ ಚತುರ್ದಂಡಿ ಪ್ರಕಾಶಿಕಾ ಸಂಗೀತಶಾಸ್ತ್ರದಲ್ಲಿ ಮೈಲಿಗಲ್ಲುಗಳಾಗಿವೆ.

ವಿಜಯನಗರದ ಕಾಲದಲ್ಲಿ ಸಂಗೀತ ಸಾಮಾಜಿಕ, ಧಾರ್ಮಿಕ, ತಾತ್ತ್ವಿಕ ರಂಗಗಳಲ್ಲಿ ಜನಮನವನ್ನು ಉನ್ನತಮಟ್ಟಕ್ಕೊಯ್ಯುವ ಸಾಧನವಾಯಿತು. ಆಸ್ಥಾನದಲ್ಲಿ ಪ್ರೌಢಾವಸ್ಥೆಯನ್ನು ಪಡೆದ ಸಂಗೀತ ಆಸ್ಥಾನದ ಹೊರಗೂ ಭಕ್ತಿಪಂಥದ ಸಾಧುಸಂತರ ಮೂಲಕ ಹೊಸದಿಕ್ಕುಗಳನ್ನು ಹಿಡಿದು ಬೆಳೆಯಿತು. ಸಾಮಾನ್ಯ ಜನತೆಯನ್ನು ಸಂಗೀತ ಮಾಧ್ಯಮದಿಂದ ಭಕ್ತಿಮಾರ್ಗದಲ್ಲೊಯ್ಯುವ ಈ ಹೊಸ ಪಂಥ ದಾಸಪಂಥ ಎನ್ನಿಸಿಕೊಂಡಿತು. ಈ ಪಂಥ ಶ್ರೀಪಾದರಾಯರು, ನರಹರಿತೀರ್ಥರು ಮತ್ತು ವ್ಯಾಸರಾಯರಿಂದ ಪ್ರಚಾರಕ್ಕೆ ಬಂದಿತು. ವ್ಯಾಸರಾಯರ ನೇತೃತ್ವದಲ್ಲಿ ಅವರ ಹಲವಾರು ಶಿಷ್ಯರು ಅಸಂಖ್ಯಾತ ಕೃತಿಗಳನ್ನು ರಚಿಸಿ ಜನತೆಯಲ್ಲಿ ಹರಡಿದರು; ಸಂಗೀತಕಲೆಗೆ ಒಂದು ಜೀವಂತಸ್ವರೂಪವನ್ನು ಕೊಟ್ಟರು. ಇವರಲ್ಲಿ ಪುರಂದರದಾಸರು ಮತ್ತು ಕನಕದಾಸರು ಪ್ರಮುಖರು. ಪುರಂದರದಾಸರು ಈಗ ಪ್ರಚಾರದಲ್ಲಿರುವ ಸಂಗೀತಕಲೆಗೆ ಆದ್ಯಪ್ರವರ್ತಕರಾಗಿ ಕರ್ನಾಟಕ ಸಂಗೀತ ಪಿತಾಮಹರೆನ್ನಿಸಿಕೊಂಡಿದ್ದಾರೆ. ಇವರು ಲಕ್ಷಾವಧಿ ಕೀರ್ತನೆಗಳನ್ನು ರಚಿಸಿದ್ದರೆನ್ನಲಾಗಿದೆ. ಅನೇಕ ಜನಪದ ಮಟ್ಟುಗಳಿಗೆ ಶಾಸ್ತ್ರೀಯವಾದ ಸಂಗೀತ ರಾಗಗಳ ಸ್ವರೂಪ ಕೊಟ್ಟುದೂ ಸಾಮಾನ್ಯ ಜನತೆಗೆ ಸುಲಭವಾಗಿ ಗ್ರಹಿಸಬಲ್ಲಂತೆ ಸಾಹಿತ್ಯವಿದ್ದುದೂ ಮತ್ತು ಭಕ್ತಿಮಾರ್ಗದ ಮೂಲಕ ಭಗವತಾರಾಧಾನೆಯೆಂಬ ಸಂದೇಶಕ್ಕೆ ವಾಹಕವಾದದ್ದೂ ಕೀರ್ತನೆಗಳು ಜನಪ್ರಿಯವಾಗಲು ಕಾರಣವಾದುವು. ಹರಿದಾಸರಂತೆ ಶಿವಶರಣರೂ ಈ ಕಾಲದಲ್ಲಿ ಶಿವಭಕ್ತಿಯನ್ನು ಸಾರುವಲ್ಲಿ ವಿಶಿಷ್ಟ ಸಂಗೀತಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರು. ಸಂಗೀತ ಪ್ರಪಂಚಕ್ಕೆ ಹೆಚ್ಚಿನ ಕೊಡುಗೆಯನ್ನು ಕೊಟ್ಟ ಶಿವಶರಣರಲ್ಲಿ ನಿಜಗುಣಶಿವಯೋಗಿ ಪ್ರಮುಖ. ಈತನ ವಿವೇಕಚಿಂತಾಮಣಿಯಲ್ಲಿ ಸಂಗೀತಕಲೆಯನ್ನು ಕುರಿತ ಒಂದು ಭಾಗವಿದೆ. ಶ್ರುತಿ, ಸ್ವರ, ಅಲಂಕಾರ, ರಾಗ ಮತ್ತು ವಾದ್ಯಗಳನ್ನು ಇವನು ವಿವರಿಸಿದ್ದಾನೆ. ತ್ರಿಪದಿ ಸಾಂಗತ್ಯ ಮುಂತಾದ ಹಾಡುಗಳಲ್ಲಿ ಷಟ್ಸ್ಥಲಗಳನ್ನು ವಿವರಿಸಿರುವುದಲ್ಲದೆ ರಾಗತಾಳಗಳಿಂದ ಕೂಡಿದ ಸಂಗೀತಕೃತಿಗಳನ್ನು ಕೈವಲ್ಯಪದ್ಧತಿಯ ಹಾಡುಗಳು ಎಂಬ ಹೆಸರಿನಲ್ಲಿ ಈತನು ರಚಿಸಿದ್ದಾನೆ.

ವಿಜಯನಗರದ ಕಾಲದ ಕಡೆಯ ದಿನಗಳಲ್ಲಿದ್ದ ರತ್ನಾಕರವರ್ಣಿ ಭರತೇಶ ವೈಭವದಲ್ಲಿ ಸಂಗೀತ ಮತ್ತು ನೃತ್ಯಗಳ ವಿಷಯವಾಗಿ ಅಲ್ಲಲ್ಲಿ ತಿಳಿಸುವ ಚಿತ್ರವತ್ತಾದ ವರ್ಣನೆಗಳು ಸ್ವಾರಸ್ಯಕರವೂ ಕುತೂಹಲಕರವೂ ಆಗಿವೆ. ಭರತನ ಆಸ್ಥಾನದ ಸಂಗೀತಮೇಳಗಳನ್ನು ವಿವರಿಸುತ್ತ ನಾನಾ ರಾಗಭೇದಗಳನ್ನೂ ಗಾಯಕದೋಷಗಳನ್ನೂ ತಿಳಿಸಿರುತ್ತಾನೆ. ಧ್ವನಿ, ಲಯ, ಮೇಳ, ಜತಿ, ಜಾತಿ, ಕಟ್ಟಣೆ, ಗಮಕ, ಆಲಾಪಗಳನ್ನು ಹೆಸರಿಸಿ ವಿವರಿಸಿರುವುದಲ್ಲದೆ ವೀಣೆ, ಚೆಂಗು, ಉಪಾಂಗ, ರಿಂಚೆಯ, ಚಿನುಚಿಂಪೆ, ತುಡುಮು, ದಂಡಿಗೆ, ಸ್ವರಮಂಡಲ, ಕಿನ್ನರಿ ಮುಂತಾದ ಹಲವು ವಾದ್ಯಗಳನ್ನೂ ಹೆಸರಿಸಿದ್ದಾನೆ.

ನೃತ್ಯದ ಬಗೆಗೆ ಹೇಳುವುದಾದರೆ ವಿಜಯನಗರದ ಆಸ್ಥಾನದಲ್ಲಿ ಅದಕ್ಕೆ ಅತಿ ಹೆಚ್ಚಿನ ಮನ್ನಣೆ ದೊರೆತಿತ್ತು. ಅಂತಃಪುರ ಸ್ತ್ರೀಯರು ನಿತ್ಯವೂ ನೃತ್ಯವನ್ನು ಅಭ್ಯಾಸ ಮಾಡುತ್ತಿದ್ದುದನ್ನು ಡೊಮಿಂಗೊ ಪೇಯಿಸ್ ವರ್ಣಿಸಿದ್ದಾನೆ. ಕೃಷ್ಣದೇವರಾಯನ ಅರಮನೆಯಲ್ಲಿ ನೃತ್ಯ ಸಭಾಗೃಹ ವೊಂದಿತ್ತು. ವಿಸ್ತಾರವಾದ ಆ ಸಭಾಗೃಹದಲ್ಲಿ ಅವುಗಳ ಕಂಬಳ

ಹಾಗೂ ಗೋಡೆಗಳ ಮೇಲೆಲ್ಲಾ ನಾಟ್ಯಭಂಗಿಗಳನ್ನು ಚಿತ್ರಿಸಿದ್ದು ಅವು ಒಂದೊಂದೂ ನಾಟ್ಯದ ಅಂತಃಸ್ಥಿತಿಯನ್ನು ಸೂಚಿಸುವಂತಿದ್ದು ನಾಟ್ಯ ಕಲಿಯುವವರಿಗೆ ಮುಕ್ತಾಯದ ಹಂತದಲ್ಲಿ ಹೇಗೆ ನಿಲ್ಲಿಸಬೇಕೆಂಬುದರ ಕಲ್ಪನೆಯನ್ನು ಮಾಡಿಕೊಡುತ್ತಿದ್ದುವೆಂದೂ ನರ್ತಕಿಯರು ತಮ್ಮ ದೇಹಸೌಷ್ಠವವನ್ನು ಕಾಪಾಡಿಕೊಳ್ಳಲು ಮೈಚಾಚಿ ಕೈಕಾಲು ಸಡಿಲಿಸಿ ಕೊಳ್ಳುವ ಬಗೆಯನ್ನು ಕೂಡ ಮತ್ತೊಂದೆಡೆ ತೋರಿಸಿಕೊಡಲಾಗುತ್ತಿ ತ್ತೆಂದೂ ಪೇಯಿಸ್ ತಿಳಿಸಿದ್ದಾನೆ. ಆದರೆ ಈಗ ಆ ನಾಟ್ಯಮಂದಿರವಾಗಲಿ ನೃತ್ಯಭಂಗಿಗಳ ಚಿತ್ರ, ಶಿಲ್ಪಗಳಾಗಲಿ ಉಳಿದುಬಂದಿಲ್ಲ.

ದೇವಾಲಯಗಳಲ್ಲಿ ದೇವರ ಪೂಜಾಸಮಯದಲ್ಲಿ ಉತ್ಸವದ ಕಾಲಗಳಲ್ಲಿ ನೃತ್ಯ ಸೇವೆ ಒಂದು ಅಗತ್ಯವಾದ ಅಂಗವಾಗಿ ಈ ಕಾಲದಲ್ಲಿ ಬೆಳೆದು ಬಂದಿತ್ತು. ಅದಕ್ಕಾಗಿ ವಿಶಾಲವಾದ ನೃತ್ಯಮಂಟಪಗಳ ನಿರ್ಮಾಣವಾಗಿತ್ತು. ಇಂಥ ನಾಟ್ಯ ಸೇವೆಗಾಗಿಯೇ ದೇವದಾಸಿಯರಿರುತ್ತಿದ್ದರು. ಇವರಲ್ಲದೆ ವೇಶ್ಯೆಯರೂ ನಾಟ್ಯಕಲೆಯಲ್ಲಿ ಪರಿಣತಿಯನ್ನು ಪಡೆದು ದೇವಾಲಯಗಳಲ್ಲಿ ವಿಶೇಷ ಉತ್ಸವಾದಿಗಳಲ್ಲಿ ತಮ್ಮ ನೃತ್ಯ ವೈಖರಿಯನ್ನು ಪ್ರದರ್ಶಿಸುತ್ತಿದ್ದರು. ಇದಲ್ಲದೆ ಸಮಾಜದ ಗಣ್ಯ ವರ್ಗದ, ಶ್ರೀಮಂತ ವರ್ಗದ ಮನೋರಂಜನೆಗಾಗಿಯೂ ಇವರು ನಾಟ್ಯಪ್ರದರ್ಶನಗಳನ್ನು ನಡೆಸುತ್ತಿದ್ದರು. ನಾಟ್ಯಕಲೆಯಲ್ಲಿ ನಿಷ್ಣಾತರಾಗಿದ್ದ ವೇಶ್ಯೆಯರಿಗೆ ಸಮಾಜದಲ್ಲಿ ಗೌರವವಾದ ಸ್ಥಾನವಿತ್ತು. ರಾಜರಂತೆ ಅವರ ಸಾಮಂತರು, ಅಧಿಕಾರಿಗಳು, ಇತರ ಪ್ರತಿಷ್ಠಿತರು ಇವರಿಗೆ ಹೇರಳವಾಗಿ ಪ್ರೋತ್ಸಾಹ ಕೊಟ್ಟಿದ್ದರಿಂದ ಈ ಕಲೆಗಳು ಅವರಲ್ಲಿ ಮನೆಮಾಡಿಕೊಂಡುವು. ಇಂಥ ವೇಶ್ಯಾವಾಟಿಕೆಗಳ ವರ್ಣನೆಗಳು ಆ ಕಾಲದ ಕಾವ್ಯಗಳಲ್ಲಿ ಕಂಡುಬರುತ್ತವೆ. ಆದರೆ ಆ ಕಾಲದ ನಾಟ್ಯದ ಪೂರ್ಣಸ್ವರೂಪ, ಅವರು ಪಡೆದಿದ್ದ ಪರಿಣತಿಯ ರೀತಿಯನ್ನು ಈಗ ಅರಿಯುವುದು ಅಸಾಧ್ಯವಾದರೂ ದೇವಾಲಯಗಳ ಗೋಡೆಗೋಪುರಗಳ ಮೇಲಿರುವ ನೃತ್ಯಭಂಗಿಗಳು ಆ ಕಾಲದ ನಾಟ್ಯವಿದ್ಯೆಯ ತಜ್ಞತೆಯನ್ನು ಸೂಚಿಸುತ್ತವೆ. ಚಿದಂಬರ ಗೋಪುರದ ಮೇಲೆ ವಿಜಯನಗರದ ಕಾಲದ ಇಂಥ ನೂರೆಂಟು ನೃತ್ಯಭಂಗಿಗಳನ್ನು ನೋಡಬಹುದು. ಇವುಗಳೊಂದಿಗೆ ಜನಪದ ನೃತ್ಯ, ಜನಪದ ಮೇಳ ಮಹಾನವಮಿ ಹಬ್ಬ, ಹಜಾರ ರಾಮಸ್ವಾಮಿ ದೇವಾಲಯ ಮೊದಲಾದುವುಗಳ ಮೇಲಿರುವ ಕೋಲಾಟ, ಯಕ್ಷಗಾನ ಮೇಳ ಮುಂತಾದ ಸುಂದರ ಶಿಲ್ಪಗಳಿಂದ ಇದನ್ನರಿಯಬಹುದು. **(ಎಂ.ಎಚ್.)**

ವಿಜಯನಗರ ಕಾಲದಲ್ಲಿ ಪಂಡಿತರಿಗೆ ಕವಿಗಳಿಗೆ ರಾಜಾಶ್ರಯ, ಮನ್ನಣೆ. ಪ್ರೋತ್ಸಾಹ ದೊರೆತುದರ ಫಲವಾಗಿ ಸಾಹಿತ್ಯಕೃಷಿ ವಿಪುಲವಾಗಿ ನಡೆಯಿತು. ಈ ಕಾಲದಲ್ಲಿ ಕನ್ನಡ, ಸಂಸ್ಕೃತ ಹಾಗೂ ತೆಲುಗು ಭಾಷೆಗಳ ಕೃತಿಗಳು ರಚಿತವಾದುವು. ಸ್ವತಂತ್ರ ಕೃತಿಗಳ ರಚನೆ ಸಂಖ್ಯಾದೃಷ್ಟಿಯಿಂದ ಕಡಿಮೆ ಎಂದು ಹೇಳಬಹುದಾದರೂ ವ್ಯಾಖ್ಯಾನಗ್ರಂಥಗಳು ಗಣನೀಯ ಸಂಖ್ಯೆಯಲ್ಲಿ ಕಂಡುಬರುತ್ತವೆ. ಮೌಲ್ಯದ ದೃಷ್ಟಿಯಿಂದ ಹೆಚ್ಚಿನ ಪುರಸ್ಕಾರ ಸಲ್ಲದೆ ಇದ್ದರೂ ಸಾಹಿತ್ಯ ಬೆಳೆವಣಿಗೆಯ ದೃಷ್ಟಿಯಿಂದ ಗಮನಾರ್ಹವಾದ ಸಾಧನೆ ಈ ಕಾಲದಲ್ಲಾಗಿದೆ ಎನ್ನಬಹುದು.

ಬಾಹುಬಲಿ (ಸು.1352) ಮತ್ತು ಮಧುರ (ಸು.1385)– ಎಂಬ ಕವಿಗಳು 15ನೆಯ ತೀರ್ಥಂಕರನಾದ ಧರ್ಮನಾಥನ ಜೀವನವನ್ನು ಕುರಿತಂತೆ ಸಾಂಪ್ರದಾಯಿಕ ಚಂಪೂಶೈಲಿಯಲ್ಲಿ ಕಾವ್ಯವನ್ನು ರಚಿಸಿದ್ದಾರೆ. ಮಂಗರಸ (ಸು.1508) ನೇಮಿಜಿನೇಶ ಸಂಗತಿ ಮುಂತಾದ ಐದು ಕೃತಿಗಳನ್ನು ರಚಿಸಿದ್ದಾನೆ. ಪಿರಿಯಾಪಟ್ಟಣದ ದೊಡ್ಡಯ್ಯ (ಸು. 1550) ಚಂದ್ರಪ್ರಭಚರಿತೆ ಎಂಬ ಕಾವ್ಯವನ್ನು ರಚಿಸಿದ್ದಾನೆ. ರತ್ನಾಕರವರ್ಣಿ (ಸು. 1557) ಈ ಕಾಲದ ದೊಡ್ಡ ಕವಿ. ಈತನ ಭರತೇಶವೈಭವ ಎಂಬತ್ತು ಸಂಧಿಗಳನ್ನೂ ಹತ್ತುಸಾವಿರ ಸಾಂಗತ್ಯ ಪದ್ಯಗಳನ್ನೂ ಉಳ್ಳ ದೀರ್ಘಕಾವ್ಯ. ಸಾಳ್ವ (ಸು. 1550) ಬರೆದ ಭಾರತ ಸಾಳ್ವಭಾರತ ಎಂದೇ ಹೆಸರಾಗಿದೆ. ರಸರತ್ನಾಕರ, ವೈದ್ಯಸಾಂಗತ್ಯ, ಶಾರದಾವಿಲಾಸಗಳು ಈತನ ಇತರ ಕೃತಿಗಳು. ಈ ಕಾಲದ ಮೂವರು ಕವಿಗಳು ಜೀವಂಧರಚರಿತೆಯನ್ನು ಕಾವ್ಯಕ್ಕಾಗಿ ಬಳಸಿಕೊಂಡಿದ್ದಾರೆ. ಭಾಸ್ಕರನ (ಸು. 1424) ಜೀವಂಧರಚರಿತೆ ಈ ಸಾಲಿನಲ್ಲಿ ಗಮನಾರ್ಹ ಕೃತಿ. ತೆರಕಣಾಂಬಿಯ ಬೊಮ್ಮರಸ (ಸು. 1485), ಕೋಟೇಶ್ವರ (ಸು. 1500) ಎಂಬ ಕವಿಗಳು ಕ್ರಮವಾಗಿ ಜೀವಂಧರಸಾಂಗತ್ಯ, ಜೀವಂಧರ ಷಟ್ಪದಿ ಎಂಬ ಕಾವ್ಯಗಳನ್ನು ರಚಿಸಿದ್ದಾರೆ. ಕಲ್ಯಾಣಕೀರ್ತಿಯ (ಸು. 1439) ಜ್ಞಾನಚಂದ್ರಾಭ್ಯುದಯ ಮತ್ತು ಕಾಮನ ಕಥೆ ಗಮನಾರ್ಹವಾದವು. ತೆರಕಣಾಂಬಿಯ ಬೊಮ್ಮರಸನ ಸನತ್ಕುಮಾರನ ಕಥೆ ಮತ್ತು ಬಾಹುಬಲಿಯ (ಸು. 1560) ನಾಗಕುಮಾರನ ಕಥೆ, ಶ್ರುತಕೀರ್ತಿಯ (ಸು. 1567) ವಿಜಯಕುಮಾರಿಯ ಕಥೆ–ಇವು ಹಳೆಯ ಮಾದರಿಗಳನ್ನು ಅನುಸರಿಸಿ ರಚಿತವಾದ ಕೃತಿಗಳು.

ವ್ಯಾಖ್ಯಾನ ಕೃತಿಗಳು ಕನ್ನಡದಲ್ಲಿ ವಿರಳವಾದರೂ 1359ರಲ್ಲಿ ಕೇಶವವರ್ಣಿಯು (ಸು. 1359) ನೇಮಿಚಂದ್ರನ ಗೊಮ್ಮಟಸಾರದ ಮೇಲೆಯೂ ಅಮಿತಗತಿಯ ಶ್ರಾವಕಾಚಾರದ ಮೇಲೆಯೂ ಬರೆದ ವಿವರಣಾತ್ಮಕ ಟೀಕೆಗಳು ಗಮನಾರ್ಹವಾದುವು. ವಿದ್ಯಾನಾಥ (ಸು. 1455) ತನ್ನ ಸಂಸ್ಕೃತ ಗ್ರಂಥವಾದ ಪ್ರಾಯಶ್ಚಿತ್ತಕ್ಕೆ ತಾನೇ ಟೀಕೆಯನ್ನು ರಚಿಸಿದ್ದಾನೆ. ಧರ್ಮಶರ್ಮಾಭ್ಯುಯದಯದ ಟೀಕೆಯನ್ನು ಬರೆದ ಯಶಃಕೀರ್ತಿಯನ್ನೂ (ಸು. 1500) ಇಲ್ಲಿ ಹೆಸರಿಸಬಹುದು.

ಯಾವ ನಿರ್ದಿಷ್ಟವಾದ ಕಥನಮೌಲ್ಯವನ್ನೂ ಹೊಂದದೆ ಕೇವಲ ತತ್ತ್ವ ಮತ್ತು ಜೈನ ನೀತಿನಿಯಮಗಳನ್ನು ಪ್ರತಿಪಾದಿಸುವ ಮಿಶ್ರಕಾವ್ಯಗಳೆಂದು ಗುರುತಿಸಬಹುದಾದ ಕೃತಿಗಳಲ್ಲಿ ಆಯತವರ್ಮನ (ಸು. 1400) ರತ್ನಕರಂಡಕ, ಚಂದ್ರಕೀರ್ತಿಯ (ಸು. 1400) ಪರಮಾಗಮಸಾರ, ಕಲ್ಯಾಣಕೀರ್ತಿ ಮತ್ತು ವಿಜಯಣ್ಣರ ಅನುಪ್ರೇಕ್ಷೆ, ನೇಮಣ್ಣನ (ಸು. 1559) ಜ್ಞಾನಭಾಸ್ಕರಚರಿತ್ರೆ ಇವುಗಳನ್ನು ಹೆಸರಿಸಬಹುದು. ಮಧುರನ ಗೊಮ್ಮಟಸ್ತುತಿ, ಕಲ್ಯಾಣ ಕೀರ್ತಿಯ ಜಿನಸ್ತುತಿ ಇವು ಭಕ್ತಿಪರವಾದ ಜಿನಸ್ತುತಿಗಳಾಗಿವೆ.

ಈ ಕಾಲದಲ್ಲಿ ವೀರಶೈವ ಪುರಾಣಗಳ ಕೃಷಿ ವಿಪುಲವಾಗಿ ನಡೆದಿದೆ. ಇದಕ್ಕೆ ಜಕ್ಕಣಾಚಾರ್ಯ ಹಾಗೂ ಲಕ್ಕಣದಂಡೇಶರಂಥ ಕೆಲವು ಸೇನಾಧಿಪತಿಗಳ ಪೋಷಣೆ, ಅಲ್ಲದೆ ತೋಂಟದ ಸಿದ್ಧಲಿಂಗಯತಿಗಳ ಮಾರ್ಗದರ್ಶನವೂ ಕಾರಣವೆನ್ನಬಹುದು. ವೀರಶೈವ ಪುರಾಣ ಸಾಹಿತ್ಯವನ್ನು ಅರವತ್ತುಮೂವರು ಪುರಾತನರ, ಬಸವಾದಿ ತತ್ಸಮಕಾಲೀನರಾದ ನೂತನ ಪುರಾತನರ, ಆಧುನಿಕ ಶರಣರ ಮತ್ತು ವೀರಶೈವ ಧರ್ಮಕ್ಕೆ ಸಂಬಂಧಿಸಿದ ವಿವಿಧ ಕಥೆಗಳ ಸಾರ ಸಂಗ್ರಹಗಳೆಂದು ವಿಂಗಡಿಸಬಹುದು.

ನಂಜುಂಡನ (ಸು. 1525) ಕುಮಾರರಾಮಸಾಂಗತ್ಯ ಕಲ್ಪಿತ ಹಾಗೂ ಸಾಹಸ ಕಥನಗಳೊಡನೆ ಬೆರೆತ ಮಹತ್ತ್ವದ ಐತಿಹಾಸಿಕ ಕೃತಿಯಾಗಿದ್ದು ಸಾಂಗತ್ಯಗ್ರಂಥಗಳಲ್ಲಿ ಎತ್ತರದ ಸ್ಥಾನವನ್ನು ಪಡೆದುಕೊಂಡಿದೆ. ಓದುವಗಿರಿಯ (ಸು. 1525) ಮತ್ತು ಬೊಂಬೆಯ ಲಕ್ಕ (ಸು. 1538) ಈ ಇಬ್ಬರೂ ರಾಘವಾಂಕ ನಿರೂಪಿಸಿದ್ದ ಹರಿಶ್ಚಂದ್ರನ ಕಥೆಯನ್ನು ವಸ್ತುವನ್ನಾಗಿಟ್ಟುಕೊಂಡು ಹಾಡುಗಬ್ಬವಾದ ಸಾಂಗತ್ಯದಲ್ಲಿ ಕೃತಿಗಳನ್ನು ರಚಿಸಿದರು. ಓದುವಗಿರಿಯನು ಸಾನಂದಗಣೇಶಸಾಂಗತ್ಯ ಎಂಬ ಇನ್ನೊಂದು ಕೃತಿಯನ್ನು ರಚಿಸಿದ್ದಾನೆ. ರಾಮರಸ ವಿರೂಪಾಕ್ಷ (ಸು. 1538) ಹರಿಶ್ಚಂದ್ರಸಾಂಗತ್ಯ ಎಂಬ ಕೃತಿಯನ್ನು ರಚಿಸಿದ್ದಾನೆ. ವೀರಭದ್ರ ರಾಜನ (ಸು. 1530) ವೀರಭದ್ರವಿಜಯ, ಗುರುಲಿಂಗವಿಭುವಿನ (ಸು.1550)

ಭಿಕ್ಷಾಟನಚರಿತೆ, ಬಸವಪುರಾಣದಲ್ಲಿ ಉಕ್ತವಾಗಿದ್ದ ಕಥೆಯನ್ನಾಧರಿಸಿ ರಚಿತವಾದ ಮಲ್ಲಿಕಾರ್ಜುನನ (ಸು. 1485) ಶ್ವೇತನ ಸಾಂಗತ್ಯ-ಇವು ಹೆಸರಿಸತಕ್ಕವು. ಅರವತ್ತುಮೂವರು ಪುರಾತನರಲ್ಲಿ ಒಬ್ಬನಾದ ಸುಂದರನಂಬಿಯ ಕಥೆಯನ್ನು (ನಂಬಿಯಣ್ಣನ ರಗಳೆ) ಮೊಟ್ಟಮೊದಲಿಗೆ ತಿಳಿಯಾದ ಹಾಗೂ ನಯವಾದ ಹಾಸ್ಯದಿಂದ ಕನ್ನಡದಲ್ಲಿ ಹೇಳಿದವನು ಹರಿಹರ. ಬೊಮ್ಮರಸ (ಸು.1450) ಇದೇ ಕಥೆಯನ್ನು ಮತ್ತೆ ಹೊಸದಾಗಿ ರಚಿಸಿ ಅದನ್ನು ಸೌಂದರಪುರಾಣವೆಂದು ಕರೆದಿದ್ದಾನೆ. ಸುರಂಗಕವಿ (1500) ತ್ರಿಷಷ್ಟಿಪುರಾತನ ಚರಿತ್ರೆಯನ್ನು ಚಂಪೂವಿನಲ್ಲಿ ಬರೆದಿದ್ದಾನೆ. ಇದೇ ವಸ್ತುವನ್ನು ಬಳಸಿಕೊಂಡಿರುವ ಕೃತಿಗಳೆಂದರೆ ಗುಬ್ಬಿಯ ಮಲ್ಲಣಾರ್ಯನ (ಸು. 1513) ಭಾವಚಿಂತಾರತ್ನ ಮತ್ತು ಲಿಂಗಕವಿಯ ಚೋಳರಾಜ ಸಾಂಗತ್ಯ. ಮೊದಲನೆಯದು ತಮಿಳಿನ ಆಕರವೊಂದರಿಂದ ಸ್ಫೂರ್ತಿ ಪಡೆದದ್ದು. ಪಂಚಾಕ್ಷರೀ ಮಹಿಮೆಯನ್ನು ಮೆರೆಯುವುದೇ ಕಥೆಯ ಮುಖ್ಯ ಆಶಯ. ವಿರುಪರಾಜ (ಸು. 1519) ಮತ್ತು ಚೇರಮ (ಸು. 1526) ಇಬ್ಬರೂ ಅರವತ್ತುಮೂವರು ಪುರಾತನರಲ್ಲಿ ಒಬ್ಬನಾದ ಚೇರಮನ ಕಥೆಯನ್ನು ಕಾವ್ಯದ ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ.

ಬಸವಣ್ಣನವರ ಜೀವನವನ್ನು ಕುರಿತಂತೆ ರಚಿತವಾದ ಗ್ರಂಥಗಳಲ್ಲಿ ಭೀಮಕವಿಯ (ಸು. 1369) ಬಸವಪುರಾಣ ಬಹುಮುಖ್ಯವಾದದ್ದು. ಇದರಲ್ಲಿ ಬಸವಚಾರಿತ್ರದ ಜೊತೆಗೆ ಶೈವಪುರಾತನರ ಹಾಗೂ ಬಸವೇಶ್ವರರ ಸಮಕಾಲೀನರ ಕಥೆಗಳಿವೆ. ಲಕ್ಕಣ್ಣದಂಡೇಶನ (ಸು. 1428) ಶಿವತತ್ತ್ವಚಿಂತಾಮಣಿ, ಇವನ ಅನುಯಾಯಿ ಸಿಂಗಿರಾಜನ (ಸು. 1510) ಅಮಲಬಸವಚಾರಿತ್ರ (ಸಿಂಗಿರಾಜ ಪುರಾಣ), ಕೆರೆಯ ಪದ್ಮರಸನಿಗೆ ಸಂಬಂಧಿಸಿದ ಪದ್ಮಣಾಂಕನ (ಸು. 1385) ಪದ್ಮರಾಜಪುರಾಣ, ಅಲ್ಲಮಪ್ರಭುವಿಗೆ ಸಂಬಂಧಿಸಿದ ಚಾಮರಸನ (ಸು.1430) ಪ್ರಭುಲಿಂಗಲೀಲೆ, ವಿರಕ್ತ ತೋಂಟದಾರ್ಯನ (ಸು. 1560) ಪಾಲ್ಕುರಿಕೆ ಸೋಮೇಶ್ವರನ ಪುರಾಣ-ಇವು ಶಿವಶರಣರಿಗೆ ಸಂಬಂಧಿಸಿದ ಕೃತಿಗಳು.

ಹರಿಹರನ ಅನಂತರ ಅಕ್ಕಮಹಾದೇವಿಯ ಜೀವನಚರಿತ್ರೆಯನ್ನು ಬರೆದ ಚೆನ್ನಬಸವಾಂಕನ (ಸು. 1550) ಮಹಾದೇವಿಯಕ್ಕಪುರಾಣ, ತೋಂಟದ ಸಿದ್ಧಲಿಂಗಯತಿಯ ಮಹಾಮಹಿಮೆಗಳನ್ನು ಪ್ರಶಂಸಿಸುವ ಸಿದ್ಧೇಶ್ವರಪುರಾಣ ಮತ್ತು ತೋಂಟದ ಸಿದ್ಧೇಶ್ವರ ಪುರಾಣವೆಂದು ಅಂಕಿತವಾದ ಶಾಂತೇಶನ (ಸು. 1561) ಕೃತಿಗಳು, ಗುಬ್ಬಿಯ ಮಲ್ಲಣಾರ್ಯನ (ಸು. 1513) ವೀರಶೈವಾಮೃತ ಮಹಾಪುರಾಣ-ಇವು ಷಟ್ಪದಿ ಛಂದಸ್ಸಿನಲ್ಲಿರುವ ಬೃಹತ್ ಕೃತಿಗಳು. ಈ ಕಾಲದಲ್ಲಿ ಬೆಳಕು ಕಂಡವು. ವಚನಕಾರರಲ್ಲಿ ತೋಂಟದ ಸಿದ್ಧಲಿಂಗಯತಿ, ಜಕ್ಕಣಾರ್ಯ ಮೊದಲಾದವರು ಕೃತಿಗಳ ಜೊತೆಗೆ ಕೆಲವು ವಚನಗಳನ್ನು ಬರೆದಿದ್ದಾರೆ. ಈ ದಿಸೆಯಲ್ಲಿ ಶೂನ್ಯ ಸಂಪಾದನೆ ಯನ್ನು ಶ್ರೇಷ್ಠಗ್ರಂಥವೆಂದು ಪರಿಗಣಿಸಬಹುದು.

ಈ ಕಾಲದಲ್ಲಿ ಕೆಲವರು ಸಂಸ್ಕೃತ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಬರೆದಿರುವುದಲ್ಲದೆ ಕನ್ನಡ ಕೃತಿಗಳಿಗೂ ವ್ಯಾಖ್ಯಾನಗಳನ್ನು ರಚಿಸಿರುವುದುಂಟು. ಅವುಗಳಲ್ಲಿ ಗುರುದೇವನಿಂದ (ಸು. 1530) ವ್ಯಾಖ್ಯಾನಿತವಾದ ಸಂಸ್ಕೃತ ಸ್ತೋತ್ರ, ಭಟ್ಟ ಭಾಸ್ಕರನ ಯಜುರ್ವೇದ ಭಾಷ್ಯದ ಮೇಲಣ ಗುರುನಂಜನ (ಸು. 1500) ಕನ್ನಡ ವ್ಯಾಖ್ಯಾನ. ಸಾರಸ್ವತ ವ್ಯಾಕರಣಕ್ಕೆ ಬರೆದ ಚನ್ನವೀರನ ವ್ಯಾಖ್ಯಾನ ಇವುಗಳ ಜೊತೆಗೆ ಶ್ರೀಧರಾಂಕ (ಸು. 1550) ಮತ್ತು ಸಾನಂದ ಶಿವಯೋಗಿ (ಸು. 1480) ಇವರ ಬೃಹದ್ವ್ಯಾಖ್ಯಾನಗಳು ಪ್ರಮುಖವಾದವುಗಳು. ವಿರಕ್ತ ತೋಂಟದಾರ್ಯನು ಮಗ್ಗೆಯ ಮಾಯಿದೇವನ ಶತಕತ್ರಯಕ್ಕೆ ವ್ಯಾಖ್ಯಾನ ರಚಿಸಿದ್ದಾನೆ.

ವಿಜಯನಗರದ ರಾಜಮನೆತನಕ್ಕೆ ಸೇರಿದ ದೇಪರಾಜ (ಸು. 1410) ಸೊಬಗಿನ ಸೋನೆ ಮತ್ತು ಅಮರುಕ ಎಂಬೆರಡು ಕೃತಿಗಳನ್ನು ರಚಿಸಿದ್ದಾನೆ. ಸೊಬಗಿನ ಸೋನೆ ಮೊಟ್ಟಮೊದಲ ಸಾಂಗತ್ಯಕೃತಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಅಮರುಕ ಸಂಸ್ಕೃತ ಗ್ರಂಥದ ಅನುವಾದ.

ಈ ಕಾಲದಲ್ಲಿ ವೈಷ್ಣವಧರ್ಮ ಜನಸಾಮಾನ್ಯರ ಮೇಲೆ ತನ್ನ ಪ್ರಭಾವದ ಮುದ್ರೆಯನ್ನು ಒತ್ತಿತು. ಈವರೆಗೂ ದೇವಭಾಷೆ ಎಂದು ತಿಳಿದಿದ್ದ ಸಂಸ್ಕೃತದಲ್ಲಿಯೇ ಕೃತಿಗಳನ್ನು ರಚಿಸುತ್ತಿದ್ದ ಬ್ರಾಹ್ಮಣ ಕವಿಗಳು ದೇಶೀಸಾಹಿತ್ಯದ ಕೃಷಿಗೆ ಕೈಹಾಕಿದರು. ಪವಿತ್ರ ಗ್ರಂಥಗಳೆನಿಸಿದ ಮಹಾಭಾರತ, ರಾಮಾಯಣ, ಮತ್ತು ಭಾಗವತಗಳನ್ನು ದೇಶಭಾಷೆಗಳಿಗೆ ಅನುವಾದ ಮಾಡುವುದರಲ್ಲಿ ನಿರತರಾದರು.

ಈ ಕಾಲದ ಮಹತ್ತ್ವದ ಕವಿಗಳಲ್ಲಿ ಕುಮಾರವ್ಯಾಸನದು (ಸು. 1430) ದೊಡ್ಡ ಹೆಸರು. ಈತ ಮಹಾಭಾರತದ ಕಥೆಯನ್ನು ಬಳಸಿಕೊಂಡು ಜನಸಾಮಾನ್ಯರಿಗೆ ಮೆಚ್ಚುಗೆಯಾಗುವಂತೆ ಸರಳವಾಗಿ ಭಾಮಿನೀ ಷಟ್ಪದಿ ಯಲ್ಲಿ ಕರ್ಣಾಟ ಭಾರತ ಕಥಾಮಂಜರಿ ಎಂಬ ಮಹಾಕಾವ್ಯವನ್ನು ರಚಿಸಿದ. ಇದು ಹತ್ತು ಪರ್ವಗಳಲ್ಲಿದ್ದು ಗದುಗಿನ ಭಾರತ, ಕುಮಾರ ವ್ಯಾಸ ಭಾರತ ಎಂಬ ಹೆಸರುಗಳಲ್ಲಿ ಪ್ರಸಿದ್ಧವಾಗಿದೆ. ಮಹಾಭಾರತದ ಕೊನೆಯ ಎಂಟು ಪರ್ವಗಳ ಕಥೆಯನ್ನು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ತಿಮ್ಮಣ್ಣ ಎಂಬ ಕವಿ ಕನ್ನಡಕ್ಕೆ ತಂದಿದ್ದಾನೆ. ಚಾಯಣ ಎಂಬ ಹೆಸರಿನಿಂದ ಸುಕುಮಾರಭಾರತಿ (ಸು. 1550) ರಚಿಸಿದ ಮಹಾಭಾರತದ ಅನುವಾದ ವೊಂದಿದ್ದು ಅದು ಪೂರ್ಣವಾಗಿ ಲಭ್ಯವಾಗಿಲ್ಲ. ರಾಮಾಯಣಕ್ಕೆ ಸಂಬಂಧಿಸಿದ ಕೃತಿಗಳಲ್ಲಿ ಕುಮಾರವಾಲ್ಮೀಕಿಯ (ಸು. 1550) ತೊರವೆರಾಮಾಯಣ ಬಹುಪ್ರಖ್ಯಾತವಾದುದು. ಇದೇ ಕಾಲದಲ್ಲಿ ಬತ್ತಲೇಶ್ವರನಿಂದ ರಚಿತವಾದ ಕೌಶಿಕ ರಾಮಾಯಣವೂ ಗಮನಾರ್ಹವಾದ ಕೃತಿ.

ಈ ಕಾಲದಲ್ಲಿ ಅನೇಕ ಕವಿಗಳು ಭಾಗವತವನ್ನು ಕನ್ನಡಕ್ಕೆ ತಂದರು. ನಾರಾಯಣ (ಸು. 1450) ಎಂಬುವವನು ಭಾಗವತವನ್ನು ಗದ್ಯಕ್ಕೆ ಭಾವಾನುವಾದ ಮಾಡಿರುವಂತೆ ತಿಳಿದುಬರುತ್ತದೆ. ಕೃತಿ ಉಳಿದುಬಂದಿಲ್ಲ. ನಿತ್ಯಾತ್ಮಶುಕನೆಂದು ಪ್ರಸಿದ್ಧನಾದ ಸದಾನಂದಯೋಗಿ (ಸು. 1530) ಭಾಗವತವನ್ನು ಪದ್ಯದಲ್ಲಿ ರಚಿಸಿದ್ದಾನೆ. ಈ ಕೃತಿಯಲ್ಲಿ ಅನೇಕ ಪ್ರಕ್ಷೇಪಗಳಿವೆ ಎಂಬುದು ವಿದ್ವಾಂಸರ ಅಭಿಮತ.

ಈ ಕಾಲದ ಹರಿದಾಸರಲ್ಲಿ ಕನಕದಾಸರದು ದೊಡ್ಡ ಹೆಸರು. ಇವರು ಪದಗಳ ಜೊತೆಗೆ ನಳಚರಿತ್ರೆ, ಮೋಹನತರಂಗಿಣಿ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ ಎಂಬ ಕೃತಿಗಳನ್ನು ರಚಿಸಿದ್ದಾರೆ. ಕನಕದಾಸರಲ್ಲದೆ ಶ್ರೀಪಾದರಾಯರು (ಸು. 1500), ವ್ಯಾಸರಾಯರು (ಸು. 1520) ಮತ್ತು ಪುರಂದರದಾಸರು (ಸು. 1540) ಮುಂತಾದವರು ಹರಿಸರ್ವೋತ್ತಮತ್ವವನ್ನೂ ವಿಷ್ಣುಮಹಿಮೆಯನ್ನೂ ಕುರಿತಂತೆ ಕೀರ್ತನೆಗಳನ್ನು ರಚಿಸಿದ್ದಾರೆ. ಇವು ದಾಸರ ಪದಗಳೆಂದೇ ಪ್ರಸಿದ್ಧವಾಗಿವೆ.

ಈ ಕಾಲದಲ್ಲಿ ಅನೇಕ ಶತಕಗ್ರಂಥಗಳು ರಚಿತವಾದವು. ಮಗ್ಗೆಯ ಮಾಯಿದೇವ (ಸು.1430) ಪ್ರಾರಂಭದ ಶತಕಕಾರ. ಚಂದ್ರ (ಸು. 1430), ಗುಮ್ಮಟಾರ್ಯ (ಸು. 1500), ಸಿರಿನಾಮಧೇಯ (ಸು. 1560), ಚನ್ನಮಲ್ಲಿ ಕಾರ್ಜುನ (ಸು. 1560) ಮುಂತಾದವರು ಶತಕಗಳನ್ನು ರಚಿಸಿದ್ದಾರೆ.

ಲೌಕಿಕ ವಿದ್ಯಾ ಶಾಸ್ತ್ರಗಳಾದ ಪಶುವೈದ್ಯ, ಅಶ್ವವೈದ್ಯ, ಅಲಂಕಾರ, ನಿಘಂಟು, ಜ್ಯೋತಿಷ್ಯ, ಕಾಮಶಾಸ್ತ್ರ, ಪಾಕಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಗ್ರಂಥಗಳೂ ಈ ಕಾಲದಲ್ಲಿ ರಚಿತವಾಗಿವೆ. ಶ್ರೀಧರದೇವನ (ಸು. 1500) ವೈದ್ಯಾಮೃತ, ಸಾಳ್ವನ (ಸು. 1550) ವೈದ್ಯಸಾಂಗತ್ಯ, ಮಂಗರಾಜನ (ಸು. 1360) ಖಗೇಂದ್ರ ಮಣಿದರ್ಪಣ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳು. ಅಭಿನವಚಂದ್ರ (ಸು. 1400) ಮತ್ತು ಬಾಚರಸ (ಸು. 1500) ಇವರು ಅಶ್ವಶಾಸ್ತ್ರಕ್ಕೆ ಸಂಬಂಧಿಸಿದಂತೆ ಗ್ರಂಥಗಳನ್ನು ರಚಿಸಿದ್ದಾರೆ.

ಅಲಂಕಾರಶಾಸ್ತ್ರವನ್ನು ಕುರಿತಂತೆ ಸಾಳ್ವನ ರಸರತ್ನಾಕರ ಮತ್ತು ಶಾರದಾ ವಿಲಾಸ, ಈಶ್ವರಕವಿಯ (ಸು. 1550) ಕವಿಜಿಹ್ವಾಬಂಧನ, ದಂಡಿಯ ಕಾವ್ಯಾದರ್ಶದ ಅಕ್ಷರಶಃ ಭಾಷಾಂತರವಾದ ಮಾಧವನ (ಸು.1308) ಮಂಗಾಭಿಧಾನ, ಬೊಮ್ಮರಸನ (ಸು. 1450) ಚತುರಾಸ್ಯ ನಿಘಂಟು, ಲಿಂಗಮಂತ್ರಿಯ (ಸು. 1530) ಕಬ್ಬಿಗರ ಕೈಪಿಡಿ, ವಿರಕ್ತತೋಂಟದಾರ್ಯನ (ಸು. 1560) ಕರ್ಣಾಟಕ ಶಬ್ದಮಂಜರಿ– ಇವು ನಿಘಂಟುಗಳು. ಶುಭಚಂದ್ರನ ನರಪಿಂಗಲಿ, ಲಕ್ಷ್ಮಣಾಂಕನ ಶಕುನಸಾರ, ಚಾಕರಾಜನ ಶಕುನಪ್ರಪಂಚ, ಗಂಗಾಧರನ (ಸು. 1550) ರಟ್ಟಜಾತಕಗಳು ಜ್ಯೋತಿಷ್ಯ ಹಾಗೂ ಶಕುನಗಳನ್ನು ಕುರಿತ ಗ್ರಂಥಗಳು. ಕಲ್ಲರಸನ (ಸು. 1450) ಜನವಶ್ಯ ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಕೃತಿ. ಮೂರನೆಯ ಮಂಗರಸನ ಸೂಪಶಾಸ್ತ್ರ ಪಾಕಶಾಸ್ತ್ರಕ್ಕೆ ಸಂಬಂಧಿಸಿದ ಕೃತಿ.

ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಕಾಲದ ಉತ್ತಮ ಕೃತಿ ಎಂದರೆ ವೇದಾರ್ಥ ಪ್ರಕಾಶ. ವೇದಗಳಿಗೆ ಸ್ಪಷ್ಟವಾದ ಸರಳವಾದ ವ್ಯಾಖ್ಯಾನ ಬರೆಯುವ ಕಾರ್ಯವನ್ನು ಸಾಯಣರಿಗೆ ವಹಿಸಲಾಯಿತು. ಅವರು ಪಂಚಾಗ್ನಿ ಮಾಧವ, ನರಹರಿ ಸೋಮಯಾಜಿ, ನಾರಾಯಣ ವಾಜಪೇಯಿ, ನಾಗಾಭರಣ, ವಾಮನಭಟ್ಟ ಮೊದಲಾದವರ ನೆರವಿನಿಂದ ವೇದಗಳಿಗೆ ಭಾಷ್ಯಗಳನ್ನು ರಚಿಸಿದರು. ಯಜ್ಞಗಳಲ್ಲಿ ನಡೆಸುವ ಕರ್ಮಕ್ರಮಗಳನ್ನು ವಿವರಿಸುವ ಯಜ್ಞತಂತ್ರಸುಧಾನಿಧಿ ಎಂಬ ಕೈಪಿಡಿಯು ಇಮ್ಮಡಿ ಹರಿಹರನ ಕಾಲದಲ್ಲಿ ರಚಿತವಾಯಿತು. ಅದೇ ರೀತಿ ಚೌಂಡಪಾರ್ಯ (ಸು. 1404) ವೈದಿಕ ಕರ್ಮತಂತ್ರಗಳಿಗೆ ಸಂಬಂಧಿಸಿದಂತೆ ಪ್ರಯೋಗರತ್ನ ಮಾಲಾ ಅಥವಾ ಆಪಸ್ತಂಭ ಅಧ್ವರ ತಂತ್ರವ್ಯಾಖ್ಯಾ ಎಂಬ ಕೃತಿಯನ್ನು ರಚಿಸಿದ. ಪರಾಶರಮಾಧವೀಯವು ಪರಾಶರಸ್ಮೃತಿಗೆ ವಿದ್ಯಾರಣ್ಯರು ರಚಿಸಿದ ವ್ಯಾಖ್ಯಾನ. ಬುಕ್ಕರಾಜನ ಅಪೇಕ್ಷೆಯ ಪ್ರಕಾರ ಸಾಯಣರು 'ಪುರುಷಾರ್ಥ ಸುಧಾನಿಧಿ'ಯನ್ನು ರಚಿಸಿದರು. ದೇವಣಭಟ್ಟ (ಸು. 1445) ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ 'ಸ್ಮೃತಿಚಂದ್ರಿಕೆ' ಯನ್ನು ಬರೆದ. ಅಂಥದೇ ಇನ್ನೊಂದು ಗ್ರಂಥ 'ಸ್ಮೃತಿಕೌಸ್ತುಭ'. ಇದರ ಕರ್ತೃ ನರಹರಿ. ಮಾಧವಮಂತ್ರಿಯು ಸೂತಸಂಹಿತೆಯ ವಾಖ್ಯಾನವನ್ನು ರಚಿಸಿ ಅದನ್ನು ತಾತ್ಪರ್ಯದೀಪಿಕಾ ಎಂದು ಕರೆದ. ಕೃಷ್ಣದೇವರಾಯನ ಪ್ರೇರಣೆಯಿಂದ ಈಶ್ವರದೀಕ್ಷಿತನು ರಾಮಾಯಣದ ಮೇಲೆ ಎರಡು ವ್ಯಾಖ್ಯಾನಗಳನ್ನು ಬರೆದ.

ವ್ಯಾಸರಾಯರ ಸಮಕಾಲೀನನಾದ ವರದರಾಜಾಚಾರ್ಯನು ಆನಂದ ತೀರ್ಥರ ಮಹಾಭಾರತತಾತ್ಪರ್ಯ ನಿರ್ಣಯಕ್ಕೆ ವರದರಾಜೀಯ ಎಂಬ ವಾಖ್ಯಾನವನ್ನು ಬರೆದಿದ್ದಾನೆ. ಉಡುಪಿಯ ಪೇಜಾವರ ಮಠಾಧಿಪತಿಯಾದ ವಿಜಯಧ್ವಜತೀರ್ಥರು (1378–1439) ಭಾಗವತಕ್ಕೆ ವ್ಯಾಖ್ಯಾನವನ್ನು ರಚಿಸಿದರು. ಶಂಕರ ವಿಜಯ ಮತ್ತು ರಾಜಕಾಲನಿರ್ಣಯ ಎಂಬೆರಡು ಗ್ರಂಥಗಳನ್ನೂ ವಿದ್ಯಾರಣ್ಯರು ರಚಿಸಿರುವರೆಂಬ ಅಭಿಪ್ರಾಯವಿದೆ. ಇವು ಕ್ರಮವಾಗಿ ಅದ್ವೈತಾಚಾರ್ಯರಾದ ಶಂಕರರ ಜೀವನ ಚರಿತ್ರೆಯನ್ನೂ ವಿಜಯನಗರ ಚರಿತ್ರೆಯನ್ನೂ ನಿರೂಪಿಸುತ್ತವೆ. ಸಾಯಣರ ಸುಭಾಷಿತ ಸುಧಾನಿಧಿ– ಈ ಕೃತಿಯ ಸಂಪೂರ್ಣ ಪಾಠ ದೊರೆತಿಲ್ಲ. ಸಾಯಣರ ಸೋದರರಲ್ಲೊಬ್ಬನಾದ ಭೋಗನಾಥನು ಉದಾಹರಣಮಾಲಾ, ರಾಮೋಲ್ಲಾಸ, ತ್ರಿಪುರವಿಜಯ, ಶೃಂಗಾರಮಂಜರಿ, ಮಹಾಗಣಪತಿಸ್ತವ ಮತ್ತು ಗೌರೀನಾಥಾಷ್ಟಕಗಳೆಂಬ ಆರು ಕೃತಿಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಆದರೆ ಕೃತಿಗಳು ಉಪಲಬ್ಧವಿಲ್ಲ.

ಗಂಗಾದೇವಿ, ಕಾಮಾಕ್ಷಿ, ತಿರುಮಲಾಂಬಾ ಎಂಬ ಸ್ತ್ರೀಯರು ಸಂಸ್ಕೃತ ಸಾಹಿತ್ಯಕ್ಕೆ ಅಮೂಲ್ಯವಾದ ಸೇವೆ ಸಲ್ಲಿಸಿದ್ದಾರೆ. ಗಂಗಾದೇವಿಯ ಮಧುರಾ ವಿಜಯ ಅಥವಾ ವೀರಕಂಪಣರಾಯಚರಿತೆ ಎಂಬ ಕಾವ್ಯ ಆಕೆಯ ಪತಿಯಾದ ಕಂಪಣರಾಯನ ವಿಜಯಯಾತ್ರೆಯನ್ನು ಸರಳ ಸುಂದರ ಶೈಲಿಯಲ್ಲಿ ನಿರೂಪಿಸಿದೆ. ವೇದಾಂತದೇಶಿಕರೆನಿಸಿದ ವೆಂಕಟನಾಥರ ಹಂಸಸಂದೇಶ, ಪಾದುಕಾಸಹಸ್ರಗಳು, ಮಾಧವನ ನರಕಾಸುರವಿಜಯ, ಗಂಗಾಧರನ ಗಂಗದಾಸಪ್ರತಾಪವಿಲಾಸ, ಸಾಳುವ ನರಸಿಂಹ ರಚಿಸಿದನೆನ್ನಲಾದ ರಾಮಾಭ್ಯುದಯ, ಕೃಷ್ಣದೇವರಾಯ ಸ್ವತಃ ರಚಿಸಿದನೆನ್ನಲಾದ ಸತ್ಯವಧೂಸ್ವಾಂತನ, ಸಕಲಕಥಾಸಾರಸಂಗ್ರಹ, ರಸಮಂಜರಿ ಮತ್ತು ಜ್ಞಾನಚಿಂತಾಮಣಿ ಎಂಬ ಕಾವ್ಯಗಳು, ಇವನ ಆಸ್ಥಾನದಲ್ಲಿದ್ದ ದಿವಾಕರನ ಭಾರತಾಮೃತ, ಅಭಿನವಕಾಮಾಕ್ಷಿಯ ಅಭಿನವರಾಮಾಭ್ಯುದಯ, ತಿರುಮಲಾಂಬೆಯ ವರದಾಂಬಿಕಾ ಪರಿಣಯ ಎಂಬ ಚಂಪೂಕಾವ್ಯ, ಸ್ವಯಂಭೂವಿನ ಮಗನೂ ಎರಡನೆಯ ರಾಜನಾಥನ ಸೋದರಪುತ್ರನೂ ಆದ ಶಿವಸೂರ್ಯನ ಪಾಂಡಾಭ್ಯುದಯ, ಡಿಂಡಿಮ ವಂಶದ ಮೂರನೆಯ ರಾಜನಾಥನ ಅಚ್ಯುತರಾಯಾಭ್ಯುದಯ, ಎರಡನೆಯ ಅರುಣಗಿರಿನಾಥನ ಸೋದರ ಪುತ್ರನಾದ ಸ್ವಯಂಭೂನಾಥನ ಕೃಷ್ಣವಿಲಾಸ ಮೊದಲಾದ ಕೃತಿಗಳು ಇಲ್ಲಿ ಉಲ್ಲೇಖನೀಯ.

ಸೋದೆಮಠದ ಪೀಠಾಧಿಪತಿಗಳಾಗಿದ್ದ ವಾದಿರಾಜರು 16ನೆಯ ಶತಮಾನದ ಕಡೆಯ ಭಾಗದಲ್ಲಿ ರುಕ್ಮಿಣೀಶವಿಜಯ, ತೀರ್ಥಪ್ರಬಂಧ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ವಾದಿರಾಜರ ಶಿಷ್ಯನಾದ ನರಹರಿಯು ಶ್ರೀಹರ್ಷನ ನೈಷಧ ಮಹಾಕಾವ್ಯದ ವ್ಯಾಖ್ಯಾನವಾಗಿ ನೈಷಧದೀಪಿಕೆಯನ್ನು ಬರೆದಿದ್ದಾನೆ. ಶಂಕರಾಚಾರ್ಯರ ಸೌಂದರ್ಯಲಹರಿಗೆ ಅರುಣಗಿರಿನಾಥ ಬರೆದಿರುವ ವ್ಯಾಖ್ಯಾನ ಸಹ ಸ್ಮರಣೀಯ.

ಅನಂತಭಟ್ಟ (ಸು.1500) ಭಾರತ ಚಂಪೂ ಕಾವ್ಯದ ಕರ್ತೃ. ಆತನ ಸೋದರ ಪುತ್ರನಾದ ಸೋಮನಾಥನ ವ್ಯಾಸಯೋಗೀಚರಿತವೆಂಬ ಚಂಪೂಗ್ರಂಥದಲ್ಲಿ ವ್ಯಾಸರಾಯರ ಜೀವನಚರಿತ್ರೆಯನ್ನು ನಿರೂಪಿಸಿದ್ದಾನೆ. ಮುಮ್ಮಡಿ ರಾಜನಾಥನು ಶ್ರೀಕೃಷ್ಣನ ಚರಿತ್ರೆಯನ್ನು ನಿರೂಪಿಸುವ ಭಾಗವತಚಂಪೂವನ್ನು ರಚಿಸಿ ದೊರೆ ಅಚ್ಯುತರಾಯನಿಗೆ ಅರ್ಪಿಸಿದ್ದಾನೆ. ಸ್ವಯಂಭೂನಾಥನು ಶಂಕರಾನಂದ ಚಂಪೂವನ್ನು ರಚಿಸಿದ್ದಾನೆ. ಅವನ ಸೋದರ ಗುರುರಾಮನು ಹರಿಶ್ಚಂದ್ರ ಚಂಪೂವಿನ (ಸು. 1610) ಕರ್ತೃ.

ಮಹಾನಾಟಕ ಸುಧಾನಿಧಿ ಎಂಬುದು ಪ್ರೌಢದೇವರಾಯನ (1424–46) ಕೃತಿ. ಈ ಕೃತಿಯ ಕರ್ತೃತ್ವದ ವಿಚಾರದಲ್ಲಿಯೂ ಭಿನ್ನಾಭಿಪ್ರಾಯ ವಿದೆ. ಕೃಷ್ಣದೇವರಾಯನ ಮಂತ್ರಿ ಸಾಳುವ ತಿಮ್ಮನು ಅಗಸ್ತ್ಯ ರಚಿತ ಚಂಪೂಭಾರತಕ್ಕೆ ಮನೋಹರ ಎಂಬ ವ್ಯಾಖ್ಯಾನವನ್ನು ರಚಿಸಿದ. ಈ ಅಗಸ್ತ್ಯ ಓರಂಗಲ್ಲಿನ ಪ್ರತಾಪರುದ್ರನ ಆಸ್ಥಾನಕವಿಯಾಗಿದ್ದನೆಂದು ತಿಳಿದುಬರುತ್ತದೆ.

ವಾಮನಭಟ್ಟ ಬಾಣನು ಶೃಂಗಾರಭೂಷಣಬಾಣ ಎಂಬ ಲಘುನಾಟಕ ವನ್ನು ವಿರೂಪಾಕ್ಷನ ಉತ್ಸವಕಾಲದಲ್ಲಿ ಬರೆದ. ಇದು ಸಭಿಕರ ಮನರಂಜನೆಗೆ, ಪ್ರದರ್ಶಿಸುವುದಕ್ಕಾಗಿ ರಚಿಸಿದಂತೆ ತಿಳಿದುಬರುತ್ತದೆ. ಕೃಷ್ಣಮಿಶ್ರನ ಪ್ರಬೋಧ ಚಂದ್ರೋದಯದ ಮಾದರಿಯಲ್ಲಿ ವೆಂಕಟನಾಥನು ಸಂಕಲ್ಪಸೂರ್ಯೋದಯ ವೆಂಬ ತಾತ್ವಿಕ ನಾಟಕವನ್ನು ರಚಿಸಿದ್ದಾನೆ.

ಕೃಷ್ಣದೇವರಾಯನ ಜಾಂಬವತೀಪರಿಣಯ ಮತ್ತು ಉಷಾಪರಿಣಯಗಳು ಮಲ್ಲಿಕಾರ್ಜುನ ಅಥವಾ ಸ್ಫುಲಿಂಗಕವಿಯ ಸತ್ಯಭಾಮಾಪರಿಣಯ, ಗುರುರಾಯನ ಸುಭದ್ರಾಧನಂಜಯ ಮತ್ತು ರತ್ನೇಶ್ವರಪ್ರಸಾದ ಇವು ನಾಟಕಗಳು. ನಾದಿಂಡ್ಲಗೋಪನು ಪ್ರಬೋಧ ಚಂದ್ರೋದಯ ಎಂಬ ನಾಟಕಕ್ಕೆ ವಾಖ್ಯಾನವನ್ನು ಬರೆದಿದ್ದಾನೆ.

ಅಲಂಕಾರ, ಸಂಗೀತ ಮತ್ತು ಇತರ ಶಾಸ್ತ್ರ ಗ್ರಂಥಗಳು ಈ ಕಾಲದಲ್ಲಿ ವಿಪುಲವಾಗಿ ರಚನೆಗೊಂಡವು. ಸಾಯಣರ ಅಲಂಕಾರ ಸುಧಾನಿಧಿಯ

ಸಂಪೂರ್ಣ ಹಸ್ತಪ್ರತಿ ದೊರೆತಿಲ್ಲ. ಹತ್ತು ಉನ್ಮೇಷ (ಅಧ್ಯಾಯ)ಗಳಿದ್ದಂತೆ ತೋರುವ ಇದರಲ್ಲಿ ಉತ್ತಮವಾಗಿರುವ ಉದಾಹರಣಾ ಪದ್ಯಗಳೆಲ್ಲವೂ ಭೋಗನಾಥನ ಉದಾಹರಣ ಮೂಲದಿಂದ ತೆಗೆದುಕೊಳ್ಳಲಾಗಿದ್ದು ಅವೆಲ್ಲವೂ ಸಾಯಣರ ಪ್ರಶಂಸಾಪರವಾದುವೇ ಆಗಿವೆ. ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಇನ್ನೊಂದು ಗ್ರಂಥ ರಸಮಂಜರಿ ಕೃಷ್ಣದೇವರಾಯನದೆಂಬ ಪ್ರತೀತಿ ಇದೆ. ನರಹರಿಯೂ ಕಾವ್ಯಪ್ರಕಾಶಕ್ಕೆ ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ. ಸಾಳುವ ಗೋಪತಿಪ್ಪ ಭೂಪಾಲನು ವಾಮನನ ಕಾವ್ಯಾಲಂಕಾರಸೂತ್ರವೃತ್ತಿಗೆ ಕಾಮಧೇನು ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಈ ಕೃತಿ ಅಲಂಕಾರಶಾಸ್ತ್ರಕ್ಕೊಂದು ಪ್ರಮುಖ ಕೊಡುಗೆ.

ಸಂಗೀತಕ್ಕೆ ಸಂಬಂಧಿಸಿದ, ವಿದ್ಯಾರಣ್ಯರೇ ರಚಿಸಿದರೆಂದು ಹೇಳುವ ಸಂಗೀತಸಾರ ಎಂಬ ಕೃತಿ, ಗೋಪತಿಪ್ಪಭೂಪಾಲನ ತಾಳದೀಪಿಕಾ ಮತ್ತು ದೇವಣ್ಣಭಟ್ಟನ (ಸು. 1445) ಸಂಗೀತಮುಕ್ತಾವಳೀ ಇವು ಸಂಗೀತ ಶಾಸ್ತ್ರಗ್ರಂಥಗಳು. ಕೃಷ್ಣದೇವರಾಯನ ಆಸ್ಥಾನದಲ್ಲಿ ನಾಟ್ಯಾಚಾರ್ಯನಾಗಿದ್ದು ಅಭಿನವಭರತನೆಂದು ಪ್ರಸಿದ್ಧಿಯನ್ನು ಪಡೆದಿದ್ದ ಲಕ್ಷ್ಮೀನಾರಾಯಣನು ಸಂಗೀತ ಸೂರ್ಯೋದಯವನ್ನೂ ಕಲ್ಲರಸನು ಶಾರ್ಙ್ಗದೇವನ ಸಂಗೀತ ರತ್ನಾಕರಕ್ಕೆ ಕಲಾನಿಧಿ ಎಂಬ ವ್ಯಾಖ್ಯಾನವನ್ನೂ ರಚಿಸಿದ್ದಾರೆ.

ಇಮ್ಮಡಿ ದೇವರಾಯನಿಂದ ರಚಿತವಾದ ರತಿರತ್ನಪ್ರದೀಪಿಕಾ ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಕೃತಿ. ಇದರಲ್ಲಿ ಏಳು ಅಧ್ಯಾಯಗಳಿವೆ. ಕಾಮಶಾಸ್ತ್ರ ಮತ್ತು ಕಾಮಕಲೆ ಇದರ ವಸ್ತು. ಸಾಯಣ ರಚಿತವಾದ ಆಯುರ್ವೇದ ಸುಧಾನಿಧಿ ಒಂದು ವೈದ್ಯಗ್ರಂಥ. ಲಕ್ಷ್ಮಣಪಂಡಿತನೂ ವೈದ್ಯರಾಜವಲ್ಲಭ ಎಂಬ ವೈದ್ಯಗ್ರಂಥವನ್ನು ರಚಿಸಿದ್ದಾನೆ.

ಸಾಯಣರ ಧಾತುವೃತ್ತಿ ವ್ಯಾಕರಣಕ್ಕೆ ಸಂಬಂಧಿಸಿದ ಒಂದು ಗಮನಾರ್ಹ ಗ್ರಂಥ. ಇದು ಪಾಣಿನಿಯ ಧಾತುಪಾಠದ ಮೇಲಿನ ಒಂದು ವ್ಯಾಖ್ಯಾನ. ವಿದ್ಯಾರಣ್ಯರ ಕಾಲಮಾಧವ ಎಂಬ ಕೃತಿ ಕಾಲ, ಅದರ ಸ್ವಭಾವ, ಅದರ ವಿಭಾಗಗಳನ್ನು ಕುರಿತಂತೆ ವಿವರಣೆ ನೀಡುತ್ತದೆ. ವಿದ್ಯಾಮಾಧವಸೂರಿ (14ನೆಯ ಶತಮಾನ) ಎಂಬ ಖಗೋಳಶಾಸ್ತ್ರಜ್ಞನು ಮುಹೂರ್ತ ದರ್ಶನ ಎಂಬ ಗ್ರಂಥದ ಕರ್ತೃ. ಇದೊಂದು ಜ್ಯೋತಿಷ ಗ್ರಂಥ. ಇದಕ್ಕೆ ವಿದ್ಯಾಮಾಧವೀಯ ಎಂಬ ಹೆಸರೂ ಇದೆ. ಇವನ ಮಗ ವಿಷ್ಣುಸೂರಿ (ಸು. 1363)ವಿದ್ಯಾಮಾಧವೀಯಕ್ಕೆ ಮುಹೂರ್ತದೀಪಿಕಾ ಎಂಬ ವಾಖ್ಯಾನವನ್ನು ಬರೆದಿದ್ದಾನೆ. ಲೊಲ್ಲ ಲಕ್ಷ್ಮೀಧರನು ಜ್ಯೋತಿಷದರ್ಪಣದ ಒಂದು ಭಾಗವನ್ನು ರಚಿಸಿದ್ದಾನೆ. ಇದು ಖಗೋಳಶಾಸ್ತ್ರಕ್ಕೆ ಸಂಬಂಧಿಸಿದ ವಿಶ್ವಕೋಶ ಮಾದರಿಯ ಗ್ರಂಥವಾಗಿದೆ. ಸರ್ವದರ್ಶನ ಸಂಗ್ರಹ ಎಂಬ ಕೃತಿಯ ಕರ್ತೃತ್ವದ ಬಗೆಗೆ ಭಿನ್ನಾಭಿಪ್ರಾಯವಿದ್ದರೂ ಇದು ವೇದಾಂತಕ್ಕೆ ಸಂಬಂಧಿಸಿದ ಉತ್ತಮ ಕೃತಿಯಾಗಿದ್ದು ಬಹುಶಃ ಸಾಯಣಕೃತ ಇರಬಹುದೆಂದು ನಂಬಲಾಗಿದೆ.

ವಿದ್ಯಾರಣ್ಯರ ಗುರು ಭಾರತೀತೀರ್ಥರು ಬ್ರಹ್ಮಸೂತ್ರಗಳನ್ನು ಸಂಗ್ರಹಿಸಿ, ವೈಯಾಸಿಕ ನ್ಯಾಯಮಾಲಾ ಎಂಬ ಕೃತಿಯನ್ನೂ ಅದಕ್ಕೆ ಗದ್ಯದಲ್ಲಿ ವಿಸ್ತಾರ ಎಂಬ ವ್ಯಾಖ್ಯಾನವನ್ನೂ ರಚಿಸಿದ್ದಾರೆ. ಸರಳವಾದ ಶ್ಲೋಕಗಳಲ್ಲಿ ಪ್ರತಿಯೊಂದು ಅಧಿಕರಣದಲ್ಲಿ ಅಡಕವಾಗಿರುವ ವಿಷಯಗಳನ್ನು ಸಂಗ್ರಹಿಸಿರುವುದಲ್ಲದೆ, ವಿದ್ಯಾರಣ್ಯರು ಜೀವನ್ಮುಕ್ತಿವಿವೇಕ ಎಂಬ ಕೃತಿಯ ಕರ್ತೃ. ಭಾರತೀತೀರ್ಥರು ಹಾಗೂ ವಿದ್ಯಾರಣ್ಯರಿಬ್ಬರೂ ಸೇರಿ ಬರೆದಿರುವಂತೆ ತೋರುವ ಪಂಚಶಿಖ ಎಂಬ ಕೃತಿಯಲ್ಲಿ ಅದ್ವೈತವೇದಾಂತದ ಸಿದ್ಧಾಂತಗಳಿವೆ. ಜೀವನ್ಮುಕ್ತಿವಿವೇಕದಲ್ಲಿ ಜೀವನ್ಮುಕ್ತಿಯನ್ನು ಕುರಿತು ವಿವೇಚನೆ ಇದೆ. ಅದರೊಂದಿಗೆ ಪ್ರಾಸಂಗಿಕವಾಗಿ ಸಂನ್ಯಾಸ ಮತ್ತು ವಿದೇಹಮುಕ್ತಿಗಳ ವಿಷಯದ ಚರ್ಚೆಯನ್ನೂ ಮಾಡಲಾಗಿದೆ. ಅನುಭೂತಿ ಪ್ರಕಾಶದಲ್ಲಿ ವಿದ್ಯಾರಣ್ಯರು ಉಪನಿಷತ್ತುಗಳ ಉಪದೇಶವನ್ನು ಸಂಗ್ರಹವಾಗಿ ಹೇಳಿದ್ದಾರೆ. ವಿವರಣಪ್ರಮೇಯ ಸಂಗ್ರಹ ಕೂಡ ವಿದ್ಯಾರಣ್ಯರಚಿತ ಮತ್ತೊಂದು ಕೃತಿ. ಇದು ಪ್ರಕಾಶಾತ್ಮರ ಪಂಚಪಾದಿಕಾ ವಿವರಣದ ಸಂಗ್ರಹ ನಿರೂಪಣೆ. ಇಮ್ಮಡಿ ದೇವರಾಯನು ಬ್ರಹ್ಮಸೂತ್ರದ ಮೇಲೆ ಒಂದು ವೃತ್ತಿಯನ್ನೂ ನಾದಿಂಡ್ಲಗೋಪನು ಪ್ರಬೋಧಚಂದ್ರೋದಯಕ್ಕೆ ಚಂದ್ರಿಕಾ ಎಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಸೇಶ್ವರಮೀಮಾಂಸಾ, ನ್ಯಾಯಸಿದ್ಧಾಂಜನ, ತತ್ತ್ವಮುಕುಟ ಕಲಾಪ, ತಾಳವಾಲಿಕ, ತಾತ್ಪರ್ಯ ಚಂದ್ರಿಕಾಗಳು–ಇವು ರಾಮಾನುಜರ ಶ್ರೀಭಾಷ್ಯ ಮತ್ತು ಗೀತಭಾಷ್ಯಗಳ ಮೇಲೆ ಶ್ರೀವೇದಾಂತದೇಶಿಕರು ರಚಿಸಿದ ವ್ಯಾಖ್ಯಾನಗಳು. ದ್ವೈತವೇದಾಂತಕ್ಕೆ ಸಂಬಂಧಿಸಿದಂತೆ ಅಕ್ಷೋಭ್ಯತೀರ್ಥರ ಮಧ್ವತತ್ತ್ವಸಾರಸಂಗ್ರಹ ಟೀಕಾಚಾರ್ಯರೆಂದು ಪ್ರಸಿದ್ಧರಾಗಿರುವ ಜಯತೀರ್ಥರ ಪ್ರಮಾಣಪದ್ಧತಿ, ದ್ವೈತದರ್ಶನದಲ್ಲಿ ಜ್ಞಾನಮೂಲಗಳೆಂದು ಅಂಗೀಕರಿಸಿರುವ ಪ್ರತ್ಯಕ್ಷ, ಅನುಮಾನ, ಆಗಮ ಎಂಬ ಪ್ರಮಾಣ ತ್ರಯಗಳನ್ನು ಕುರಿತಂತೆ ಕೃತಿಯನ್ನು ರಚಿಸಲಾಗಿದೆ. ವಾದಾವಳಿ ಮತ್ತು ಅಧ್ಯಾತ್ಮತರಂಗಿಣಿ ಇವುಗಳು, ಅವರದೇ ಆದ ಭಗವದ್ಗೀತೆಯ ಮೇಲಿನ ತತ್ತ್ವಪ್ರಕಾಶಿಕಾ, ಪ್ರಮೇಯ ದೀಪಿಕಾ ಮತ್ತು ಋಗ್ಭಾಷ್ಯಟೀಕಾಗಳು ಪ್ರಮುಖವಾದವು. ರಘೋತ್ತಮನ (ಸು.1500) ಭಾವಬೋಧ ಎಂಬ ಕೃತಿ ಆನಂದತೀರ್ಥರ ನ್ಯಾಯವಿವರಣ ವಾಗ್ವಜ್ರದ ವ್ಯಾಖ್ಯಾನ. ಶ್ರೀಪಾದನು ವಾಗ್ವಜ್ರ ಎಂಬ ಕೃತಿಯನ್ನು ರಚಿಸಿದ್ದನೆಂಬ ಪ್ರತೀತಿ ಇದೆ.

ವ್ಯಾಸರಾಯರು (ಸು. 1447–1539) ತಾತ್ಪರ್ಯಚಂದ್ರಿಕಾ, ನ್ಯಾಯಾಮೃತ, ತರ್ಕತಾಂಡವ ಎಂಬ ಕೃತಿಗಳ ಕರ್ತೃ. ಜಯತೀರ್ಥರ ತತ್ತ್ವಪ್ರಕಾಶವೆಂಬ ಪ್ರಸಿದ್ಧ ವ್ಯಾಖ್ಯಾನದ ವ್ಯಾಖ್ಯಾನ ತಾತ್ಪರ್ಯ ಚಂದ್ರಿಕಾ. ತರ್ಕತಾಂಡವ ಎಂಬ ಕೃತಿ ನ್ಯಾಯ ವಾದಗಳಿಗೆ ಸಂಬಂಧಿಸಿದ್ದು. ವ್ಯಾಸರಾಯರ ಮತ್ತೊಂದು ಸ್ವತಂತ್ರ ಕೃತಿ ಭೇದೋಜ್ಜೀವನ.

ಮಾಧವಮಂತ್ರಿಯು ಶೈವಸಿದ್ಧಾಂತಕ್ಕೆ ಸಂಬಂಧಿಸಿದ ಶೈವಾಮ್ನಾಯಸಾರ ಎಂಬ ಸಂಕಲನ ಕೃತಿಯನ್ನು ಬರೆದಿದ್ದಾನೆ. ಸೋಸಲೆ ವೀರಣಾರಾಧ್ಯನ (15ನೆಯ ಶತಮಾನ) ಪಂಚರತ್ನ ಎಂಬ ಕೃತಿಗೆ ರೇವಣಾರಾಧ್ಯ ವ್ಯಾಖ್ಯಾನ ಬರೆದಿದ್ದಾನೆ. ಪಾಲ್ಕುರಿಕೆ ಸೋಮನಾಥನು ಸೋಮನಾಥಭಾಷ್ಯ (ಬಸವರಾಜೀಯ) ಎಂಬ ಕೃತಿಯನ್ನು ರಚಿಸಿದ್ದಾನೆ. ಇದಲ್ಲದೆ ರುದ್ರಭಾಷ್ಯ ಅಷ್ಟಕ, ಪಂಚಕ, ನಮಸ್ಕಾರಗದ್ಯ, ಅಕ್ಷರಾಂಕಗದ್ಯ, ಬಸವೋದಾಹರಣ, ಚತುರ್ವೇದ ತಾತ್ಪರ್ಯಸಂಗ್ರಹ ಎಂಬ ಕೃತಿಗಳನ್ನೂ ರಚಿಸಿದ್ದಾನೆ. ಶಕ್ತಿವಿಶಿಷ್ಟಾದ್ವೈತಕ್ಕೆ ಸಂಬಂಧಿಸಿದ ಬ್ರಹ್ಮಸೂತ್ರಗಳನ್ನು ಕುರಿತು ಶ್ರೀಪತಿ ಪಂಡಿತ ರಚಿಸಿರುವ ಶ್ರೀಕರಭಾಷ್ಯ ಅಪೂರ್ವ ಕೃತಿಗಳಲ್ಲೊಂದೆನಿಸಿದೆ. ಮಾಧವ ಸಂಕಲಿಸಿದ ಏಕಾಕ್ಷರ ರತ್ನಮಾಲಾ, ಇರುಗಪ್ಪದಂಡಾಧಿನಾಥನ ನಾನಾರ್ಥರತ್ನಮಾಲಾ, ವಾದಿರಾಜರ ಲಕ್ಷಾಭರಣ–ಇವು ಈ ಕಾಲದ ಕೆಲವು ನಿಘಂಟುಗಳು.

ಈ ಕಾಲದ ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯಾಭಿವೃದ್ಧಿಯನ್ನು ಗಮನಿಸಿದಾಗ ತೆಲುಗು ಸಾಹಿತ್ಯಕ ಕೃತಿಗಳು ಕಡಿಮೆಯೆಂದೇ ಹೇಳಬಹುದು. ಆದರೂ ಕೆಲವು ಗಮನಾರ್ಹ ಕೃತಿಗಳೂ ಈ ಕಾಲದಲ್ಲಿ ರಚಿತವಾಗಿವೆ. ವ್ಯಾಸಭಾರತವನ್ನು ತೆಲುಗಿಗೆ ಅನುವಾದಿಸಿದ ಕವಿತ್ರಯರಲ್ಲಿ ಒಬ್ಬನಾದ ತಿಕ್ಕನನು ಹರಿಹರ ಅದ್ವೈತ ಮತ್ತು ಉತ್ತರ ರಾಮಾಯಣಗಳನ್ನು ರಚಿಸಿದ. ತೆಲುಗು ಭಾಷೆಯನ್ನು ಈತ ತನ್ನ ಕಾವ್ಯದಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾನೆ. ತೆಲುಗು ಸಾಹಿತ್ಯದಲ್ಲಿ ಮಹಾಕವಿ ಎಂದು ಗಣಿಸಲ್ಪಟ್ಟಿದ್ದಾನೆ. ಕವಿತ್ರಯರಲ್ಲಿ ಎರ್ರನ ಕೊನೆಯವನು (ಸು.14ನೆಯ ಶತಮಾನ). ಈತ ಮಹಾಭಾರತದ ಅರಣ್ಯಪರ್ವವನ್ನು ಪಾಂಡಿತ್ಯಪೂರ್ಣ

ವಾಗಿ ಅನುವಾದಿಸಿ ಮಹಾಭಾರತ ಕಥೆಯನ್ನು ಪೂರ್ಣಗೊಳಿಸಿದ್ದಾನೆ. ಹರಿವಂಶಮು, ನೃಸಿಂಹ ಪುರಾಣಮು ಎಂಬ ಇನ್ನೆರಡು ಕೃತಿಗಳನ್ನೂ ಈತ ರಚಿಸಿದ್ದಾನೆ. ಪಾಲ್ಕುರಿಕೆ ಸೋಮನಾಥ ಕನ್ನಡಾಂಧ್ರಕವಿ ಎಂದು ಪ್ರಸಿದ್ಧನಾಗಿದ್ದಾನೆ. ಬಸವಪುರಾಣಮು ಮತ್ತು ಪಂಡಿತಾರಾಧ್ಯ ಚರಿತಮು ಎಂಬೆರಡು ಕೃತಿಗಳನ್ನೂ ದ್ವಿಪದಿ ಛಂದಸ್ಸಿನಲ್ಲಿ ರಚಿಸಿದ್ದಾನೆ. ಈತನ ಕೃತಿಗಳು ಕನ್ನಡ, ಸಂಸ್ಕೃತ, ತಮಿಳು ಭಾಷೆಗಳಿಗೆ ಅನುವಾದವಾಗಿವೆ.

ಶ್ರೀನಾಥ ಮತ್ತು ಪೋತನರ ಕಾಲವನ್ನು ತೆಲುಗು ಸಾಹಿತ್ಯದ ಪೌರಾಣಿಕ ಹಾಗೂ ಪ್ರಬಂಧಯುಗಗಳ ಸಂಧಿಕಾಲವೆಂದು ಗುರುತಿಸಬಹುದು. ಪ್ರಬಂಧವೆಂಬ ಹೊಸಕಾವ್ಯಪ್ರಕಾರ ಕೃಷ್ಣದೇವರಾಯನ ಕಾಲದಲ್ಲಿ ರೂಪುಗೊಂಡಿತು. ಈ ಕಾವ್ಯಪ್ರಕಾರಕ್ಕೆ ಅಸ್ತಿಭಾರವನ್ನು ಹಾಕಿದವರಲ್ಲಿ ಶ್ರೀನಾಥ ಮೊದಲಿಗ. ಶೃಂಗಾರನೈಷಧಂ ಎಂಬ ಹೆಸರುಳ್ಳ ಈತನ ಕೃತಿ ಹರ್ಷನ ನೈಷಧೀಯಚರಿತಂ ಎಂಬ ಕೃತಿಯ ಭಾಷಾಂತರ. ಭೀಮಕಂಡಮು ಮತ್ತು ಕಾಶೀಖಂಡಮು ಎಂಬೆರಡು ಕೃತಿಗಳು ತೀರ್ಥಕ್ಷೇತ್ರಗಳ ಸ್ಥಳಪುರಾಣ ಕಥೆಗಳನ್ನೊಳಗೊಂಡಿದೆ. ಕ್ರೀಡಾಭಿರಾಮಂ ಎಂಬ ನಾಟಕದ ಕರ್ತೃವೂ (ವೀಧಿನಾಟಕ) ಈತನೇ ಇರಬೇಕೆಂಬ ಅಭಿಪ್ರಾಯವಿದೆ. ಈತನ ಹರವಿಲಾಸಮು ಎಂಬ ಕೃತಿಯಲ್ಲಿ ಶಿವನಿಗೆ ಸಂಬಂಧಿಸಿದ ಅನೇಕ ಕಥೆಗಳಿವೆ. ಇದೇ ಕವಿಯ ಗಾಥಾಸಪ್ತಶತಿಯು ಪ್ರಾಕೃತದ ಅನುವಾದಿತ ಕೃತಿಯಾಗಿದ್ದು ಉಪಲಬ್ಧವಿಲ್ಲ. ಈತನ ಪದ್ಯಗಳನ್ನು ತೆಲುಗಿನಲ್ಲಿ ಚಾಟುಪದ್ಯಗಳೆಂದು ಕರೆಯುತ್ತಾರೆ.

ಪೋತನ ಶ್ರೀನಾಥನ ಸಮಕಾಲೀನ. ಈತನ ಭಾಗವತ ಚಿತ್ತಾಕರ್ಷಕ ವಾದ ಉಪಕಥೆಗಳಿಂದ ಕೂಡಿದೆ. ಈತನ ಗಜೇಂದ್ರಮೋಕ್ಷ, ಧ್ರುವಚರಿತ್ರೆ, ಪ್ರಹ್ಲಾದ ಕಥಾ ಹಾಗೂ ರುಕ್ಮಿಣೀಕಲ್ಯಾಣಗಳು ಪ್ರಸಿದ್ಧ ಉಪಾಖ್ಯಾನಗಳಾಗಿವೆ.

ಗೌರನ, ಜಕ್ಕನ, ಅನಂತಾಮಾತ್ಯ ಹಾಗೂ ಪಿನವೀರನ ಇವರು ಶ್ರೀನಾಥ ಹಾಗೂ ಪೋತನರ ಸಮಕಾಲೀನರಾದ ಇತರ ಕವಿಗಳು. ಕೃಷ್ಣದೇವರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂದು ಪ್ರಸಿದ್ಧರಾಗಿದ್ದ ಎಂಟು ಜನ ಕವಿಗಳಿದ್ದ ವಿಷಯ ಪ್ರಖ್ಯಾತವಾದುದು. ಈ ಕವಿಗಳ ಹೆಸರಿನ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೃಷ್ಣದೇವರಾಯನ ಅಮುಕ್ತಮಾಲ್ಯದಾ ತೆಲುಗು ಪಂಚಮಹಾಕಾವ್ಯಗಳಲ್ಲಿ ಒಂದೆನಿಸಿದೆ. ಇದರಲ್ಲಿ ಗೋದಾದೇವಿ ಮತ್ತು ಶ್ರೀರಂಗನಾಥರಿಗೆ ಸಂಬಂಧಿಸಿದ ಕಥೆಯ ವರ್ಣನೆ ಇದೆ. ಕೃಷ್ಣದೇವರಾಯನ ಆಸ್ಥಾನಕವಿಗಳಲ್ಲೊಬ್ಬನಾದ ಪೆದ್ದನನ ಮನುಚರಿತಮು ಎಂಬ ಕೃತಿ, ಕೃಷ್ಣದೇವರಾಯನಿಗೆ ಅರ್ಪಿಸಲಾದ ನಂದಿ ತಿಮ್ಮಣ್ಣನ ಪಾರಿಜಾತಾಪಹರಣ, ಶಿವಭಕ್ತನೂ ಕೃಷ್ಣದೇವರಾಯನ ಆಸ್ಥಾನಕವಿಯೂ ಆಗಿದ್ದ ಧೂರ್ಜಟಿಯ ಶ್ರೀಕಾಳಹಸ್ತಿ ಮಾಹಾತ್ಮ್ಯಮು, ಕಾಳಹಸ್ತೀಶ್ವರಶತಕಮು ಎಂಬೆರಡು ಕೃತಿಗಳು, ಪಿಂಗಳಿ ಸೂರಣನ ಕಳಾಪೂರ್ಣೋದಯಮು, ಪ್ರಭಾವತೀ ಪ್ರದ್ಯುಮ್ನಮು, ರಾಮರಾಜ ಭೂಪಣನ ಗೇಯಕಾವ್ಯವಾದ ವಸುಚರಿತ್ರ–ಇವು ತೆಲುಗು ಸಾಹಿತ್ಯಕ್ಕೆ ಈ ಕಾಲದ ಅಪೂರ್ವ ಕೊಡುಗೆಗಳು. ಹಾಸ್ಯಕವಿ ಎಂದು ಪ್ರಸಿದ್ಧನಾದ ತೆನಾಲಿ ರಾಮಕೃಷ್ಣನು ಪಾಂಡುರಂಗ ಮಾಹಾತ್ಮ್ಯಮು ಎಂಬ ಪಾಂಡಿತ್ಯ ಪೂರ್ಣ ಮಹಾಕಾವ್ಯವನ್ನು ರಚಿಸಿದ್ದಾನೆ. ಕೃಷ್ಣದೇವರಾಯನ ಕಾಲದಲ್ಲಿ ರಚಿತವಾದ ಕೃತಿಗಳಲ್ಲೆಲ್ಲ ಇದು ಉತ್ತಮ ಕೃತಿ ಎನಿಸಿದೆ. ಅಯ್ಯಲರಾಜು, ರಾಮಭದ್ರ, ಮಲ್ಲನ, ರಾಧಾ ಮಾಧವಕವಿ, ಕಂದುಕುರು ರುದ್ರಕವಿ–ಇವರು ಈ ಕಾಲದ ಇನ್ನಿತರ ಕವಿಗಳು. ಆಟವೆಲದಿ ಎಂಬ ದೇಸೀ ಛಂದಸ್ಸಿನಲ್ಲಿ ರಚಿತವಾಗಿರುವ ವೇಮನನ ಪದ್ಯಗಳು ವಿಚಾರಪರಿಪ್ಲುತವಾಗಿವೆ. ಇವು ಸರ್ವಜ್ಞನ ತ್ರಿಪದಿಗಳನ್ನು ಹೋಲುತ್ತವೆ. ನವುರಾದ ಭಾಷೆಯಲ್ಲಿ ಸಮಾಜವನ್ನು ವಿಡಂಬಿಸಿದ್ದಾನೆ**(ನೋಡಿ:ಕನ್ನಡ ಸಾಹಿತ್ಯ)**. (ಕೆ.)

**ವಾಸ್ತುಶಿಲ್ಪ:** ವಿಜಯನಗರದ ಆಶ್ರಯದಲ್ಲಿ, ಹಿಂದು ಸಂಸ್ಕೃತಿಯ ಪುನರುಜ್ಜೀವನದ ಅನಂತರ ದ್ರಾವಿಡ ವಾಸ್ತುಶಿಲ್ಪ ಒಂದು ಹೊಸ ತಿರುವು ಹೊಂದಿತು. ಸುಮಾರು ಇದೇ ವಿಜಯನಗರ ಕಾಲದ ಹೊತ್ತಿಗೆ ದಕ್ಷಿಣ ಭಾರತೀಯ, ಬಹುತೇಕ ಬದುಕುಳಿದ ದೇವಾಲಯಗಳ ಗೋಪುರ ಗಳು, ವಿಜಯ ನಗರದ ಅರಸರ ವಾಸ್ತುಶಿಲ್ಪದ ಮಹತ್ವಾಕಾಂಕ್ಷೆಗೆ ಚಿರಋಣಿಯಾಗಿವೆ.

ಕೃಷ್ಣದೇವರಾಯ ಹಾಗೂ ಅಚ್ಯುತರಾಯರ ಆಳಿಕೆಯಲ್ಲಿ, ದ್ರಾವಿಡ ಶೈಲಿ ಒಂದು ಅತ್ಯುನ್ನತ ಮಟ್ಟವನ್ನು ತಲುಪಿತು. ವಿಜಯನಗರದ ಭವ್ಯ ದೇವಾಲಯಗಳು ಈ ಕಾಲದಲ್ಲಿಯೇ ನಿರ್ಮಾಣಗೊಂಡವೆಂದು ಹೇಳಬಹುದು. ವಿಜಯನಗರ ಕಾಲದ ದ್ರಾವಿಡ ಶೈಲಿಯ ದೇವಾಲಯಗಳು ದಕ್ಷಿಣ ಭಾರತದ ಕೆಲವು ಸ್ಥಳಗಳಲ್ಲಿ ನಿರ್ಮಾಣಗೊಂಡಿವೆ; ಹಾಗೂ ಜೀರ್ಣಹೊಂದಿದ ಹಳೆಯ ದೇವಾಲಯಗಳು ಜೀರ್ಣೋದ್ಧಾರ ಹೊಂದಿವೆ. ಜೀರ್ಣವಾಗಿ ಶಿಥಿಲಗೊಂಡ ಬೇಲೂರು ದೇವಾಲಯವನ್ನು ಗುಂಡಪ್ಪ ದಂಡನಾಯಕನೆಂಬುವನು ಜೀರ್ಣೋದ್ಧಾರ ಮಾಡಿಸಿದ. ಮೇಲುಕೋಟೆಯ ಲಕ್ಷ್ಮೀ ದೇವಾಲಯದ ಮುಂದಿನ ಅಂಗಳದಲ್ಲಿರುವ ಮಂಟಪವನ್ನು ಪ್ರೌಢದೇವರಾಯನ ಮಂತ್ರಿ ತಿಮ್ಮದಂಡನಾಯಕನ ಧರ್ಮಪತ್ನಿ ರಂಗನಾಯಕಿ 1458ರಲ್ಲಿ ಕಟ್ಟಿಸಿದಳೆಂದು ಒಂದು ಶಾಸನದಿಂದ ತಿಳಿಯುತ್ತದೆ.

ಕಂಬಗಳಿಂದ ಕೂಡಿದ ಮಂಟಪಗಳು ಹಾಗೂ ಕಂಬಸಾಲುಗಳಿಂದ ಕೂಡಿದ ದೇವಾಲಯಗಳೇ ವಿಜಯನಗರ ವಾಸ್ತುಶಿಲ್ಪದ ವೈಶಿಷ್ಟ್ಯ. ವೈವಿಧ್ಯಮಯವಾದ ಹಾಗೂ ಸೂಕ್ಷ್ಮ ಕೆತ್ತನೆಯ ಕಲಾಕೃತಿಗಳುಳ್ಳ ಕಂಬ ರಚನೆ ವಿಜಯನಗರ ದೇವಾಲಯಗಳ ಮುಖ್ಯ ಲಕ್ಷಣ. ಒಂದೊಂದು ದೇವಾಲಯವೂ ಭವ್ಯ ಕಂಬಗಳಿಂದ ಕಟ್ಟಲ್ಪಟ್ಟಿದೆ. ವಿಜಯನಗರದ ದೇವಾಲಯಗಳು ಕಂಬಗಳಿಂದಲೇ ಸೌಂದರ್ಯ, ಸಂಕೀರ್ಣತೆಯನ್ನೂ ಪಡೆದಿವೆ. ಇಲ್ಲಿಯ ಕೆಲ ಕಂಬಗಳು ಚೌಕವಾಗಿದ್ದು, ಅದರ ಸುತ್ತಲೂ ಅಷ್ಟಮುಖಗಳ, ಅಷ್ಟಕೋನಾಕೃತಿಯ ಚಿಕ್ಕಚಿಕ್ಕ ಕಂಬಗಳನ್ನು ಹೊಂದಿರುತ್ತವೆ. ಇವೆಲ್ಲ ಕಂಬಗಳು ಒಂದೇ ಕಲ್ಲಿನಲ್ಲಿ ಕೊರೆದವಾಗಿವೆ. ಕೆಲ ಕಂಬಗಳ ಸುತ್ತಲೂ ಮೂರ್ತಿಶಿಲ್ಪ ಕೊರೆಯಲ್ಪಟ್ಟಿರುತ್ತದೆ. ಕಂಬಗಳ ಮೇಲೆ ಕಲಾತ್ಮಕ ಕೆತ್ತನೆಯ ಕೆಲಸ ಮಾಡಿದೆ.

ವಿಜಯನಗರ ಶೈಲಿಯ ವಾಸ್ತುಶಿಲ್ಪದ ಕಟ್ಟಡಗಳು ದಕ್ಷಿಣಭಾರತದ ಎಲ್ಲ ಭಾಗಗಳಲ್ಲಿ ನಿರ್ಮಾಣಗೊಂಡವು. ಉದಾಹರಣೆಯಾಗಿ ವೆಲ್ಲೂರು, ಕುಂಭಕೋಣಂ, ಕಾಂಚೀವರಂ, ತಾಡಪತ್ರಿ, ವಿರಿನ್‌ಜಿಪುರಂ, ಶ್ರೀರಂಗಂ, ಮಧುರೆ, ಚಿದಂಬರಂ. ಇವುಗಳಲ್ಲಿ ವೆಲ್ಲೂರು ಕೋಟೆಯ ದೇವಸ್ಥಾನ ಅತಿ ಶ್ರೇಷ್ಠವಾದುದು. ಕೃಷ್ಣದೇವರಾಯ ಚಿದಂಬರದ ದೇವಾಲಯಕ್ಕೆ ಪುನಃಕೆಲವು ಹೊಸ ಭಾಗಗಳನ್ನು ಸೇರಿಸಿ, ಆ ದೇವಾಲಯಕ್ಕೆ ಒಂದು ಗೋಪುರ ಕಟ್ಟಿಸಿದ. ಮಧುರೆಯಲ್ಲಿ ಪುದುಮಂಟಪ ಅಥವಾ ವಸಂತ ಮಂಟಪವನ್ನು ಕಟ್ಟಿಸಿದವನೂ ಇವನೇ.

ವಿಜಯನಗರದ ದೇವಾಲಯದ ಮಂಟಪಗಳು ಪತ್ರಾಕೃತಿಯ ಕಮಾನುಗ ಳನ್ನು ಹೊಂದಿವೆ. ಈ ಕಮಾನುಗಳು ಮುಂದೆ ಸುರುಳಿಸುರುಳಿಯಾದ ಅಲಂಕಾರವನ್ನು ಹೊಂದಿವೆ. ಕಲಶಗಳೂ ಸಹ ಕಮಾನಿನ ಆಕೃತಿ ಪಡೆದಿವೆ. ಕಮಾನುಗಳು ವಿಜಯನಗರ ಕಾಲದಲ್ಲಿಯೂ ಸಹ ಕಟ್ಟಲ್ಪಡುತ್ತಿದ್ದವು. ಕಾವಲುಗಾರರ ವಸತಿಗಳು, ಗಜಶಾಲೆ, ಕಮಲ ಮಹಲ್ (ಲೋಟಸ್ ಮಹಲ್) ಮುಂತಾದ ಕಟ್ಟಡಗಳು ವಿಜಯನಗರ ಕಾಲದ ಕಮಾನುಗಳುಳ್ಳ ಕಟ್ಟಡಗಳಿಗೆ ನಿದರ್ಶನಗಳಾಗಿವೆ.

ಪಾಂಡ್ಯರ ಕಾಲದ ಗೋಪುರಗಳು ವಿಜಯನಗರ ಕಾಲದಲ್ಲಿಯೂ ಮುಂದುವರೆದವು. ಈ ಗೋಪುರಗಳ ಮಾದರಿಗಳು ದ್ರಾವಿಡ ಶೈಲಿಯ

ಪ್ರಾಧಾನ್ಯವನ್ನು ಹೊಂದಿರುತ್ತವೆ. ವಿಜಯನಗರದ ಅರಸರು ಉತ್ತುಂಗ ಗೋಪುರ ನಿರ್ಮಿಸುವುದರಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಈ ಗೋಪುರಗಳು ದಕ್ಷಿಣ ಭಾರತದಲ್ಲೆಲ್ಲ ರಾಯಗೋಪುರಗಳೆಂದು ಪ್ರಸಿದ್ಧವಾಗಿವೆ. ವಿಜಯನಗರದ ಪತನಾನಂತರವೂ ತಂಜಾವೂರು ಹಾಗೂ ಮಧುರೆಯ ನಾಯಕರು ಈ ಗೋಪುರನಿರ್ಮಾಣ ಶೈಲಿಯ ವೈಖರಿಯನ್ನು ಮುಂದುವರೆಸಿದರು. ಗೋಪುರಗಳು ಅತಿ ಎತ್ತರವಾಗಿದ್ದು, ಅನೇಕ ಶಿಲ್ಪಕಲಾಕೃತಿಗಳನ್ನು ಹೊಂದಿ ಸುಂದರ ಕೃತಿಗಳಾಗಿವೆ. ಗೋಪುರ, ಪ್ರವೇಶದ್ವಾರ ಹೊಂದಿದ್ದು ಮಧ್ಯದಲ್ಲಿ ಪತ್ರತೋರಣ ಇರುತ್ತದೆ; ಹೊಸ್ತಿಲಲ್ಲಿ ವೃಶ್ಚಿಕ ಚಿಹ್ನೆ ಕಂಡುಬರುತ್ತದೆ. ಗೋಪುರದ ಅಡಿಭಾಗ ಭವ್ಯವಾದ ಶಿಲ್ಪಕಲಾಕೃತಿಗಳನ್ನು ಒಳಗೊಂಡಿದ್ದು, ದೇವತೆಗಳ ವಿವಿಧ ಮೋಹಕ ನೃತ್ಯಭಂಗಿಗಳನ್ನು ಸೊಗಸಾಗಿ ಕೆತ್ತಲಾಗಿದೆ.

ಮುಖ್ಯ ದೇವಾಲಯಕ್ಕೆ ಸಂಕಲನವಾಗಿ ದೇವಾಲಯದ ಮಧ್ಯದಲ್ಲಿ ಬೇರೆ ಕೆಲವು ಪರಿವಾರ ಗುಡಿಗಳು, ಕಂಬಗಳುಳ್ಳ ದೊಡ್ಡ ಪಡಸಾಲೆ, ಹಜಾರಗಳು, ರಂಗಮಂಟಪಗಳು ಈ ಕಾಲದ ದೇವಾಲಯಗಳ ನಿರ್ಮಾಣದಲ್ಲಿ ಕಟ್ಟಲ್ಪಡುತ್ತಿದ್ದವು. ಇಂಥ ಪ್ರತಿಯೊಂದು ಮಂಟಪ, ಹಜಾರಕ್ಕೆ ಅದಕ್ಕೆ ತಕ್ಕಂತೆ ಪ್ರತ್ಯೇಕ ಉದ್ದೇಶ ಹಾಗೂ ಉಪಯೋಗ ಇರುತ್ತಿತ್ತು.

ಮತ್ತೊಂದು ಮುಖ್ಯ ಕಟ್ಟಡವೆಂದರೆ ಕಲ್ಯಾಣಮಂಟಪ ಅಥವಾ ವಸಂತ ಮಂಟಪ. ದೇವಾಲಯದ ಸಂಕೀರ್ಣ ಭಾಗವೆಂದು ಈ ಕಲ್ಯಾಣ ಮಂಟಪ ಕಟ್ಟಲ್ಪಡುತ್ತಿತ್ತು. ಮುಖ್ಯ ದೇವಾಲಯದ ಎಡಭಾಗ ಹಾಗೂ ಪೂರ್ವದಿಕ್ಕಿನ ಪ್ರವೇಶದ್ವಾರದ ಮುಂದಿನ ಪ್ರದೇಶದಲ್ಲಿಯೇ ಈ ಮಂಟಪವನ್ನು ಕಟ್ಟಲಾಗುತ್ತಿತ್ತು. ಇದು ಛಾವಣಿ ಇಲ್ಲದೇ ಇರುವ, ತೆರೆದ ಕಂಬಗಳ ರಂಗಮಂಟಪವಾಗಿರುತ್ತಿತ್ತು.

ಹಂಪೆಯ ಹಳೆಯ ಮಹಾದ್ವಾರದ ಪ್ರವೇಶಮಾರ್ಗದ ಹತ್ತಿರವಿದ್ದ ಹನುಮಾನ್ ದೇವಾಲಯದಲ್ಲಿ ಎರಡು ಶಾಸನಗಳು ಕೆತ್ತಲ್ಪಟ್ಟಿವೆ. ಮಹಾದ್ವಾರದ ಎರಡು ಬದಿಗೂ ಒಂದು ಶಾಸನ ಕೆತ್ತಲ್ಪಟ್ಟಿದೆ. ಈ ಶಾಸನದ ಮೇಲೆಯೇ ಎರಡು ಮಾನವ ಆಕೃತಿಯ ಮೂರ್ತಿಗಳಿವೆ. ಈ ಎರಡು ಮೂರ್ತಿಗಳಲ್ಲಿ ಒಂದು ಪ್ರೌಢದೇವರಾಯನ ಮಗ ಮಲ್ಲಿಕಾರ್ಜುನ ಮೂರ್ತಿ ಎಂದು ಈ ಶಾಸನ ತಿಳಿಸುತ್ತದೆ. ಇದುವರೆಗೆ ಕಂಡುಬಂದಿರುವ, ಸಂಗಮ ವಂಶದ ಅರಸರಲ್ಲೊಬ್ಬನನ್ನು ಪ್ರತಿನಿಧಿಸುವ ಮೂರ್ತಿಶಿಲ್ಪ ಇದೊಂದೇ.

ವಿಠ್ಠಲ ದೇವಾಲಯದ ಹತ್ತಿರವಿರುವ ಕೃಷ್ಣದೇವರಾಯನ ತುಲಾಭಾರ ಮಂಟಪದ ಎಡಗಡೆಯ ಕಂಬದ ಕೆಳಭಾಗದ ಅಡಿಯಲ್ಲಿ ಒಬ್ಬ ಅರಸನ ಮೂರ್ತಿ ಶಿಲ್ಪವಿದ್ದು ಈ ಅರಸನ ಪಕ್ಕದಲ್ಲಿ ಇಬ್ಬರು ರಾಣಿಯರು ಗೋಚರಿಸುತ್ತಾರೆ. ಈ ಮೂರ್ತಿಶಿಲ್ಪ ಯಾವುದೇ ಗುರುತಿನ ಪಟ್ಟಿಯನ್ನೂ ಹೊಂದಿಲ್ಲ. ಆದರೆ ಈ ಮೂರ್ತಿಶಿಲ್ಪ ಕೃಷ್ಣದೇವರಾಯ ಹಾಗೂ ಆತನ ಇಬ್ಬರು ರಾಣಿಯರು ಎಂದು ಊಹಿಸಬಹುದು.

ವಿಜಯನಗರದ ಪಟ್ಟಣದ ತುಂಬೆಲ್ಲ ಆಚೀಚೆ, ಎಲ್ಲೆಲ್ಲಿಯೂ ಪಾಳುಬಿದ್ದ ದೇವಾಲಯಗಳೂ ಮಂಟಪಗಳೂ ಭವ್ಯ ವಿಗ್ರಹಗಳೂ ಗೋಚರಿಸುತ್ತವೆ. 1528ರಲ್ಲಿ, ಕೃಷ್ಣದೇವರಾಯನ ಆಳ್ವಿಕೆಯಲ್ಲಿ, 22 ಅಡಿ ಎತ್ತರದ, ಪದ್ಮಾಸನಸ್ಥ ಏಕಶಿಲಾ ನಾರಸಿಂಹ ವಿಗ್ರಹ ಕೊರೆಯಲ್ಪಟ್ಟಿತು. ನಾರಸಿಂಹ ವಿಗ್ರಹದ ತೊಡೆಯ ಮೇಲೆ ಕುಳಿತಿರುವ ಲಕ್ಷ್ಮೀ ವಿಗ್ರಹ ಭಗ್ನವಾಗಿದೆ. 12 ಅಡಿಗಿಂತ ಎತ್ತರವಿರುವ ಸಾಸಿವೆಕಾಳು ಹಾಗೂ ಕಡಲೆಕಾಳು ಗಣೇಶ ವಿಗ್ರಹಗಳು ಇಲ್ಲಿವೆ. ಇವು ಅಖಂಡ ಶಿಲೆಯಲ್ಲಿ ಕೊರೆಯಲ್ಪಟ್ಟ ಬೃಹದ್ ವಿಗ್ರಹಗಳು. ವಿಜಯನಗರ ಕಾಲದ ಹಂಪೆಯ ಕೆಲವು ದೇವಾಲಯಗಳಲ್ಲಿ ವಿಸ್ತಾರವಾದ ನೆಲ ಮಾಳಿಗೆಗಳಿರುವುದು ಒಂದು ವಿಶೇಷ. ಈ ನೆಲಮಾಳಿಗೆಗಳ ನಿರ್ಮಾಣ ಅಂದಿನ ವಾಸ್ತು ಕೌಶಲಕ್ಕೆ ಸಾಕ್ಷಿ. ಈಗ ಈ ನೆಲಮಾಳಿಗೆಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ.

1513ರಲ್ಲಿ ಕೃಷ್ಣದೇವರಾಯನು ಒರಿಸ್ಸದ ಅರಸರನ್ನು ಗೆದ್ದ ಜ್ಞಾಪಕಾರ್ಥವಾಗಿ ಹಂಪೆಯಲ್ಲಿ ಮಹಾನವಮಿ ದಿಬ್ಬವನ್ನು ನಿರ್ಮಾಣ ಮಾಡಿಸಿದ. ಈ ದಿಬ್ಬ ಸಿಂಹಾಸನದ ಜಗತಿಯಾಗಿತ್ತು; ಇದರ ಅಡಿಭಾಗದಲ್ಲಿ ಮೂರ್ತಿಶಿಲ್ಪಗಳನ್ನು ಕೆತ್ತಲಾಗಿದೆ. ಇದರ ವೇದಿಕೆಯ ಪೀಠದ ಮೇಲೆ ಮೋಹಕ ನೃತ್ಯವಿನ್ಯಾಸಗಳು, ಬೇಟೆಯ ದೃಶ್ಯಗಳು ಗೋಚರಿಸುತ್ತವೆ. ದಿಬ್ಬದ ಮೇಲೆ ಕೊರೆಯಲ್ಪಟ್ಟ ಶಿಲ್ಪಗಳು ಸಮಕಾಲೀನ ಜೀವನವನ್ನು ಪ್ರತಿಬಿಂಬಿಸುತ್ತವೆ. ರಾಜನು ನವರಾತ್ರಿ ಉತ್ಸವವನ್ನು ಈ ದಿಬ್ಬದ ಮೇಲೆಯೇ ಆಚರಿಸುತ್ತಿದ್ದ.

ಹಂಪೆಯ ಪಂಪಾವತಿ ಅಥವಾ ವಿರೂಪಾಕ್ಷ ದೇವಾಲಯ ತುಂಬಾ ಪ್ರಸಿದ್ಧವಾದುದು. ವಿಜಯನಗರದ ದೇವಾಲಯಗಳಲ್ಲೆಲ್ಲ ಇದು ಅತ್ಯಂತ ಪುರಾತನವಾದುದು. ಇದು ಹೊಯ್ಸಳರ ಕಾಲದ್ದು. ಗುರು ವಿದ್ಯಾರಣ್ಯರ ಸಲುವಾಗಿ ಒಂದನೆಯ ಹರಿಹರ ಈ ದೇವಾಲಯದ ಕೆಲ ಭಾಗಗಳನ್ನು ಕಟ್ಟಿಸಿದನೆಂದು ಲಾಂಗ್‌ಹರ್ಸ್ಟ್ ಎಂಬ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಲಂಕೃತ ಮೇಲ್ಛಾವಣಿ, ಸೊಗಸಾಗಿ ಕೆತ್ತಿದ ಕಂಬಗಳು, ಸುಂದರ ಕೆತ್ತನೆಯ ಬಾಗಿಲುಗಳನ್ನು ಈ ದೇವಾಲಯ ಹೊಂದಿದೆ. ಮುಖಮಂಟಪಗಳು, ಕೈಸಾಲೆಗಳು, ವರಾಂಡಗಳನ್ನು ವಿಜಯನಗರದ ರಾಜರುಗಳು ನಿರ್ಮಿಸಿದರು. 1509–10ರಲ್ಲಿ ಕೃಷ್ಣದೇವರಾಯ ತನ್ನ ಪಟ್ಟಾಭಿಷೇಕಮಹೋತ್ಸವದ ಸ್ಮಾರಕವಾಗಿ ಈ ದೇವಾಲಯದ ಮುಂದೆ ರಂಗಮಂಟಪವನ್ನು ಕಟ್ಟಿಸಿದನೆಂದು ಇಲ್ಲಿರುವ ಶಾಸನ ಉಲ್ಲೇಖಿಸುತ್ತದೆ. ಈ ದೇವಾಲಯ ಉನ್ನತವಾದ ಮಹಾದ್ವಾರವನ್ನು ಹೊಂದಿದ್ದು, ಅದರ ಮೇಲೆ ಭವ್ಯಗೋಪುರವಿದೆ. ಬಹುಶಃ ಈ ಗೋಪುರ ಕೃಷ್ಣದೇವರಾಯನ ಅನಂತರದ ಕಾಲದ್ದಿರಬೇಕು.

ವಾಸ್ತುಶಿಲ್ಪದ ದೃಷ್ಟಿಯಿಂದ ಹಂಪೆಯ ವಿಠ್ಠಲ ಹಾಗೂ ಹಜಾರರಾಮಸ್ವಾಮಿ ದೇವಾಲಯಗಳು ಪ್ರಮುಖವಾದವುಗಳು. ವಿಠ್ಠಲ ದೇವಾಲಯ ಪ್ರೌಢದೇವರಾಯನ ಕಾಲದಲ್ಲಿಯೇ ನಿರ್ಮಿತವಾಯಿತು. 1513ರಲ್ಲಿ ಕೃಷ್ಣದೇವರಾಯ ಈ ದೇವಾಲಯದ ಕಟ್ಟಡ ಕಾರ್ಯದ ಉಳಿದ ಭಾಗದ ನಿರ್ಮಾಣಕಾರ್ಯವನ್ನು ಮುಂದುವರಿಸಿದ. ಈ ಕಾರ್ಯ ಅಚ್ಯುತರಾಯನ ಕಾಲದಲ್ಲಿಯೂ (1529–42) ಮುಂದುವರಿಯಿತು. ಆಗಲೂ ದೇವಾಲಯದ ಕಾರ್ಯ ಮುಕ್ತಾಯಗೊಳ್ಳಲಿಲ್ಲ. 1513ರಲ್ಲಿ ತನ್ನ ದಿಗ್ವಿಜಯದ ಅನಂತರ ಕೃಷ್ಣದೇವರಾಯ ಈ ದೇವಾಲಯಕ್ಕೆ ಕಲಾತ್ಮಕವಾದ ಮುಂಭಾಗ ಹಾಗೂ ಫಲಪೂಜಾ ಹಾಗೂ ಕಲ್ಯಾಣ ಮಂಟಪಗಳೆರಡನ್ನೂ ನಿರ್ಮಿಸಿ ಸೇರಿಸಿದ. ಸಂಪೂರ್ಣ ಒಂದೇ ಒಂದು ಬೆಣಚುಗಲ್ಲಿನಲ್ಲಿ ಈ ದೇವಾಲಯ ನಿರ್ಮಿತವಾಗಿದೆ. ಬಹುಕೋನಗಳುಳ್ಳ ಮೇಲುಪಾಯದ ಮೇಲೆ ನಿರ್ಮಾಣವಾದ ಈ ಬೃಹದ್ ಯೋಜನೆಯ ಸಂಯುಕ್ತ ಕಂಬಗಳು ಅತ್ಯಂತ ಸೂಕ್ಷ್ಮವಾಗಿ, ಒಂದೇ ಶಿಲೆಯಿಂದ ಕೊರೆಯಲ್ಪಟ್ಟು ಪಂಕ್ತಿಯಲ್ಲಿವೆ. ಬಳ್ಳಿ, ಪಕ್ಷಿ, ಪ್ರಾಣಿಗಳ ಸುಂದರ ಚಿತ್ರಗಳು ಈ ಕಂಬಗಳ ಮೇಲೆ ಕೆತ್ತಲ್ಪಟ್ಟಿವೆ. ಈ ಕಂಬಗಳ ಅಡಿಪಾಯದ ಅಡ್ಡಪಟ್ಟಿಕೆಗಳೂ ಕುಸುರಿನ ಕೆತ್ತನೆಯನ್ನು ಪ್ರದರ್ಶಿಸುತ್ತವೆ. ಈ ದೇವಾಲಯ ಸು. 538 ಅಡಿ ಉದ್ದ 310 ಅಡಿ ಅಗಲದ ಅಂಗಳದ ಮಧ್ಯಭಾಗದಲ್ಲಿದೆ. ಈ ದೇವಾಲಯವನ್ನು ಪ್ರವೇಶಿಸಲು ಮೂರು ದಿಕ್ಕಿನಲ್ಲಿಯೂ ಗೋಪುರ ದ್ವಾರಗಳಿವೆ. 230 ಅಡಿ ಉದ್ದ ಹಾಗೂ 25 ಅಡಿ ಎತ್ತರವಾಗಿರುವ ಗರ್ಭಗೃಹ ಈ ದೇವಾಲಯಕ್ಕೆ ಇದೆ. ಪೂರ್ವ ದಿಕ್ಕಿನ ಪ್ರವೇಶದ್ವಾರದ ಹೊರಗೆ ಒಂದು ಭವ್ಯವಾದ ದೀಪಸ್ತಂಭವಿದ್ದು ಹೊರ ಆವರಣದಲ್ಲಿ

ಸೊಗಸಾದ ಕೆತ್ತನೆಯುಳ್ಳ ಎರಡು ರಂಗಮಂಟಪಗಳಿವೆ. ಕಲ್ಲುಕಂಬಗಳ ಆರು ಮಂಟಪಗಳು ಇಲ್ಲಿಯ ಆವರಣದಲ್ಲಿವೆ. 12 ಅಡಿ ಎತ್ತರವಿರುವ 56 ಕಂಬಗಳು ಮುಖಮಂಟಪವನ್ನು ಹೊತ್ತು ನಿಂತಿವೆ. ಇದರ ಪ್ರತಿಯೊಂದು ಕಂಬವೂ ಸೊಗಸಾದ ಕೆತ್ತನೆಯ ಕೆಲಸ ಹಾಗೂ ಮೂರ್ತಿಶಿಲ್ಪದಿಂದ ಕೂಡಿದೆ. ದೇವಾಲಯದ ಆವರಣದ ಮುಖಮಂಟಪದ ಎದುರಿಗೆ ಇರುವ ಕಲ್ಲಿನ ರಥ ಗಮನಾರ್ಹವಾದುದು. ಈ ಕಲ್ಲು ರಥದ ಮೇಲಿನ ಚಿತ್ರಪಟ್ಟಿಕೆಗಳಲ್ಲಿ ಸೈನಿಕರ, ಸವಾರರ, ಬೇಟೆಗಾರರ ಚಿತ್ರಗಳನ್ನು ಕೊರೆಯಲಾಗಿದೆ. ಸಂಗೀತದ ಸಪ್ತಸ್ವರಗಳನ್ನು ಈ ದೇವಾಲಯದ ಕಂಬಗಳಿಂದ ನುಡಿಸಬಹುದು. ದ್ರಾವಿಡ ಶೈಲಿಯ ಸೊಗಸಾದ, ಅಪ್ರತಿಮ ಶಿಲ್ಪಕಲೆಯಿಂದ ಈ ದೇವಾಲಯ ಉತ್ಕೃಷ್ಟವಾಗಿದೆ.

ಹಂಪೆಯ ಕೋಟೆಯೊಳಗಣ ಹಜಾರ ರಾಮಸ್ವಾಮಿ ದೇವಾಲಯವನ್ನು 1513ರಲ್ಲಿ ಕೃಷ್ಣದೇವರಾಯ ಕಟ್ಟಿಸಿದ. ಈ ದೇವಾಲಯ ರಾಜಮನೆತನದವರ ಪೂಜೆಗಾಗಿ ಮೀಸಲಾಗಿತ್ತು. ಈ ದೇವಾಲಯದ ಮುಂದಿನ ಅಂಗಳದಲ್ಲಿಯೇ ಸೊಗಸಾಗಿ ಕೊರೆದ ಕಂಬಗಳು ಹಾಗೂ ಚಪ್ಪಟೆ ಆಕಾರದ ಮೇಲ್ಛಾವಣಿಗಳಿಂದ ಕೂಡಿದ ಒಂದು ದ್ವಾರಮಂಟಪ ಇದೆ. ಇದರ ಮುಂದೆ ದೊಡ್ಡ ದೊಡ್ಡ ಕಂಬಗಳ ಒಂದು ರಂಗಮಂಪಟವಿದೆ. ಕಂಬಗಳು ದ್ರಾವಿಡ ಶೈಲಿಯಲ್ಲಿ ಕೆತ್ತಲ್ಪಟ್ಟಿವೆ. ಈ ಮಂಟಪಕ್ಕೆ ಉತ್ತರ–ದಕ್ಷಿಣ ದಿಕ್ಕುಗಳಿಂದಲೂ ಬಾಗಿಲುಗಳಿವೆ. ಈ ಬಾಗಿಲುಗಳು ದ್ವಾರಮಂಟಪಗಳಾಗಿವೆ. ದೇವಾಲಯದ ಗರ್ಭಗೃಹದ ಮೇಲಿನ ವಿಮಾನ ಚಿಕ್ಕದಾಗಿದ್ದರೂ ಸೊಗಸಾಗಿದೆ. ದೇವಾಲಯದ ಗೋಡೆಗಳ ಮೇಲೆಲ್ಲ ಚಿತ್ರ ಪಟ್ಟಿಕೆಗಳಿವೆ. ವೈಷ್ಣವ ದೇವತೆಗಳು ರಾಮಾಯಣ ಹಾಗೂ ಮಹಾಭಾರತದ ಕೆಲ ದೃಶ್ಯಗಳು ಈ ಗೋಡೆಗಳ ಮೇಲೆ ಕಂಗೊಳಿಸುತ್ತಿವೆ.

ಹೊಯ್ಸಳ ಹಾಗೂ ದ್ರಾವಿಡ ವಾಸ್ತುಶಿಲ್ಪದ ಶೈಲಿಯನ್ನು ಅನುಸರಿಸಿ, 1356–58ರಲ್ಲೇ ಶೃಂಗೇರಿಯಲ್ಲಿ ನಿರ್ಮಾಣಗೊಂಡ ವಿದ್ಯಾಶಂಕರ ದೇವಾಲಯ ಅತ್ಯುತ್ತಮವಾದುದು. ತುಂಗಾನದಿಯ ದಡದ ಮೇಲಿರುವ ಈ ದೇವಾಲಯ ಎತ್ತರವಾದ ವೇದಿಕೆಯ ಮೇಲೆ ನಿಂತಿದೆ. ಮೂರ್ತಿಶಿಲ್ಪ ದೇವಾಲಯದ ತುಂಬೆಲ್ಲ ಅಲಂಕೃತಗೊಂಡಿದೆ. ಶಂಕರಾಚಾರ್ಯರ ವಿಗ್ರಹಗಳು, ಶೈವಪ್ರತಿಮೆಗಳು ಈ ದೇವಾಲಯದ ಭಿತ್ತಿವಿಗ್ರಹಗಳಾಗಿವೆ. ಗರ್ಭಗುಡಿಯ ಮೇಲೆ ಗೋಪುರವಿದೆ.

ಕೃಷ್ಣದೇವರಾಯ 1513ರಲ್ಲಿ ಕೃಷ್ಣಸ್ವಾಮಿ ದೇವಾಲಯವನ್ನು ಕಟ್ಟಿಸಿದ. ಆತನ ಸಹೋದರ ಅಚ್ಯುತರಾಯ 1539ರಲ್ಲಿ ಅಚ್ಯುತರಾಯ ದೇವಾಲಯವನ್ನು ಕಟ್ಟಿಸಿದ. ಇವೆರಡೂ ದೇವಾಲಯಗಳು ದ್ರಾವಿಡ ಶೈಲಿಯಲ್ಲಿದ್ದು ಇವುಗಳ ಕಲ್ಯಾಣಮಂಟಪಗಳು, ವಿಠ್ಠಲಸ್ವಾಮಿ ದೇವಾಲಯದಲ್ಲಿರುವ ಕಲ್ಯಾಣಮಂಟಪದ ಪ್ರತಿಬಿಂಬಗಳಂತಿವೆ. ಇಲ್ಲಿಯೂ ಏಕಶಿಲೆಯಲ್ಲಿ ನಿರ್ಮಿತವಾದ ಕಂಬಗಳ ಮೇಲೆ ಕೆತ್ತಿದ ಪೌರಾಣಿಕ ಚಿತ್ರಕಥೆಗಳು ಗಮನಾರ್ಹವಾದವು.

ವಿಜಯನಗರದಲ್ಲಿನ ಇತರ ಕಟ್ಟಡಗಳೆಂದರೆ ಅಷ್ಟಕೋನಾಕೃತಿಯ ರಂಗಮಂಟಪಗಳು ಹಾಗೂ ಸ್ನಾನಗೃಹಗಳು (ರಾಣಿಯರ), ಶಿಲಾದ್ವಾರ, ರಾಜನ ದರ್ಬಾರು, ನೆಲಮನೆಯ ದೇವಾಲಯ, ವಿಷ್ಣುವಿನ ಚಿಕ್ಕ ದೇವಾಲಯ, ಜೈನ ದೇವಾಲಯುಗಳು, ಹಂಪೆಯ ಪೇಟೆ, ಕೋದಂಡರಾಮ ದೇವಾಲಯ, ರಾಜನ ತುಲಾಭಾರ, ಮಾಲ್ಯವಂತ ರಘುನಾಥ ದೇವಾಲಯ, ಗಾಣಿಗಿತ್ತಿ ಜೈನ ದೇವಾಲಯ, ಚಂದ್ರಶೇಖರ ದೇವಾಲಯ, ಪಟ್ಟಾಭಿರಾಮ ದೇವಾಲಯ ಮೊದಲಾದುವು.

ಇಂಡೊ–ಮುಸ್ಲಿಂ (ಸಾರ್‌ಸೆನಿಕ್) ಶೈಲಿಯು ವಿಜಯನಗರ ವಾಸ್ತುಶಿಲ್ಪದ ಮೇಲೆ ಅಪಾರ ಪ್ರಭಾವ ಬೀರಿದೆ. ಈ ಮಾದರಿಯ ದೇವಾಲಯಗಳ ನಿರ್ಮಾಣವನ್ನೂ ಕೈಗೊಳ್ಳಲಾಯಿತು. ರಾಣಿಯರ ಸ್ನಾನಗೃಹ, ಅಷ್ಟಕೋನಾಕಾರದ ಮಂಟಪ, ರಾಣಿಯ ಅರಮನೆ, ಕಾವಲುಗೋಪುರಗಳು, ಕಮಲ ಮಹಲ್, ಗಜಶಾಲೆ, ರಕ್ಷಣಾ ಸ್ಥಲ ಅಥವಾ ಕಾವಲುಕೋಣೆ, ಮುಸ್ಲಿಂ ಕಾವಲುಬುರುಜು ಮೊದಲಾದವುಗಳು ಈ ಇಂಡೊ–ಮುಸ್ಲಿಂ ಶೈಲಿಗೆ ಸೇರಿದವುಗಳು. ಕೆಲವೆಡೆ ಶಿಲೆಗಳ ನಡುವೆ ಸುರಂಗಗಳಿವೆ. ಅವುಗಳಲ್ಲೊಂದು ರಾಜನು ಸಚಿವರು ಅಥವಾ ಗೂಢಚಾರರೊಂದಿಗೆ ರಹಸ್ಯವಾಗಿ ಸಮಾಲೋಚನೆಗೆ ಉಪಯೋಗಿಸಲು ನಿರ್ಮಾಣವಾಗಿತ್ತೆಂದು ತಿಳಿದುಬರುತ್ತದೆ.

ಹಂಪೆಯ ಶಿಲಾಮಯ ಪರ್ವತ ಪ್ರದೇಶ ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪದ ಕಟ್ಟಡ ಕಾರ್ಯಕ್ಕೆ ತುಂಬಾ ಸಹಾಯಕವಾಯಿತು. ವಿಜಯನಗರದ ಅರಸರಿಗೆ ಸೃಷ್ಟಿ ನೈಸರ್ಗಿಕವಾಗಿತ್ತ ಕೊಡುಗೆ ಇದು.

ವಿಜಯನಗರದ ವಾಸ್ತುಶಿಲ್ಪವು ಚಾಳುಕ್ಯ, ಹೊಯ್ಸಳ ಹಾಗೂ ದ್ರಾವಿಡ ವಾಸ್ತುಶಿಲ್ಪದ ಮಾದರಿಯ ತ್ರಿವೇಣಿಸಂಗಮವಾಗಿದೆ. ವಿಜಯನಗರ ಸಾಮ್ರಾಜ್ಯದ ಹಿಂದು ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿದ್ದುವು. ವಾಸ್ತುಶಿಲ್ಪದ ಸೃಷ್ಟಿಯಲ್ಲಿ ವಿಜಯನಗರದ ದೇವಾಲಯಗಳು ಒಂದು ಹೊಸ ಯುಗವನ್ನು ಪ್ರಾರಂಭಿಸಿದವು. (ಎಸ್.ಜಿ.ಎ.)

**ಶಾಸನಗಳು:** ದಕ್ಷಿಣ ಭಾರತದಲ್ಲಿ ದೊರೆತಿರುವ ಹಲವಾರು ಮನೆತನಗಳ ಶಾಸನಗಳಲ್ಲಿ ಬಹುಶಃ ವಿಜನಗರದ ಅರಸರದೇ ಅತ್ಯಧಿಕ ಸಂಖ್ಯೆಯ ಶಾಸನಗಳು. ಈ ಸಾಮ್ರಾಜ್ಯ ಸಮಗ್ರ ದಕ್ಷಿಣ ಭಾರತದ ವ್ಯಾಪ್ತಿಯನ್ನು ಪಡೆದಿದ್ದುದರಿಂದ ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಶಾಸನಗಳು ದೊರೆತಿವೆ. ಸು. 9,000 ಶಾಸನಗಳು ಈವರೆಗೆ ಗಮನಕ್ಕೆ ಬಂದಿವೆ. ಅವುಗಳಲ್ಲಿ ಅತಿಸ್ವಲ್ಪ ಭಾಗ ಪ್ರಕಟವಾಗಿವೆ. ಇವರ ಶಾಸನಗಳಲ್ಲಿನ ಲಿಪಿಗಳನ್ನು ಕುರಿತು ಒಂದೆರಡು ಅಂಶಗಳನ್ನು ಗಮನಿಸಬಹುದು. ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ ಈವರೆಗೆ ಬಹಳಷ್ಟು ಶಾಸನಗಳು ಕಪ್ಪು ಬಳಪದ ಶಿಲೆಯ ಮೇಲೆ ಬರೆದವುಗಳಾಗಿದ್ದುವು. ಎಂತಲೇ ಅಕ್ಷರಗಳನ್ನು ಮುದ್ದಾಗಿ, ನಾಜೂಕಾಗಿ ಕೆತ್ತುವುದು ಒಂದು ವಿಶಿಷ್ಟ ಕಲೆಯಾಗಿ ಪರಿಗಣಿತವಾಗಿತ್ತು. ಆದರೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಶಾಸನ ಬರೆಯಲು ಬಳಸಿದುದು ಗಟ್ಟಿಯಾದ ಗ್ರಾನೈಟ್ ಶಿಲೆ. ಇದರಲ್ಲಿ ಸಣ್ಣ ಪ್ರಮಾಣದ ಅಕ್ಷರಗಳನ್ನು ಕೆತ್ತುವುದು ಸುಲಭವಾಗಿರಲಿಲ್ಲ. ಅಲ್ಲದೆ ಆ ಸಾಮ್ರಾಜ್ಯ ಅಸ್ತಿತ್ವದಲ್ಲಿದ್ದ ಸುಮಾರು ಮೂರು ಶತಮಾನಗಳ ಕಾಲ ದಕ್ಷಿಣ ಭಾರತದಲ್ಲಿ ಪ್ರಕ್ಷುಬ್ಧ ವಾತಾವರಣವಿದ್ದು ಯಾವಾಗಲೂ ನೆರೆಯ ಶತ್ರುಗಳೊಡನೆ ಕದನದಲ್ಲಿ ತೊಡಗಿರಬೇಕಾದ ಪರಿಸ್ಥಿತಿಯಿತ್ತು. ಹೀಗಾಗಿ ಜನತೆ ರಾಜ್ಯದ ರಕ್ಷಣೆಗಾಗಿ ಸದಾ ಉದ್ಯೋಗಗಳಲ್ಲಿ ನಿರತವಾಗಿದ್ದು ಶಾಂತಿ ತೃಪ್ತಿಗಳು ಅಪರೂಪವಾಗಿದ್ದಾಗ ಶಾಸನಗಳನ್ನು ಸ್ಪಷ್ಟವಾಗಿ, ನಾಜೂಕಾಗಿ ಬರೆಯುವ, ಬರೆಸುವ ವ್ಯವಧಾನವಿರಲಿಲ್ಲವೆನ್ನಬಹುದು. ಅಲ್ಲದೆ ಅಸಂಖ್ಯಾತ ಶಾಸನಗಳನ್ನು ಬರೆದಿಡಬೇಕಾದಾಗ ಪ್ರತಿಯೊಂದಕ್ಕೂ ಉತ್ತಮವಾದ ಶಿಲೆಯನ್ನು ಆರಿಸಿ ತರುವುದೂ ಸುಲಭವಾಗಿರಲಿಲ್ಲ. ಈ ಕಾರಣಗಳಿಂದ ಶಾಸನಗಳ ಅಕ್ಷರಗಳು ಸುಂದರವಾಗಿರದೆ ದಪ್ಪವಾಗಿ, ಮನಬಂದಂತೆ ಕೆತ್ತಿದವುಗಳಾಗಿದ್ದುವು. ಈ ದೃಷ್ಟಿಯಿಂದ ಒಂದು ವಿಧದಲ್ಲಿ ಶಾಸನಕಲೆಯಲ್ಲಿ ಪ್ರತಿಭೆ ಇಳಿಮುಖವಾಗಿತ್ತು.

ಭಾಷೆಯ ವಿಷಯದಲ್ಲೂ ಸಹ ಇವೇ ಮಾತುಗಳನ್ನು ಹೇಳಬಹುದು. ಈ ಕಾಲದ ಶಾಸನಗಳಲ್ಲಿ ಸಾಹಿತ್ಯಕ ಅಂಶ ಬಹಳ ಕಡಿಮೆ. ಅರಸರು ತಮ್ಮ ಆಸ್ಥಾನ ಕವಿಗಳಿಂದ ಬರೆಸಿದ ಶಾಸನಗಳನ್ನು ಹೊರತುಪಡಿಸಿದರೆ, ಇತರ ಶಾಸನಗಳು ವಿಷಯಕ್ಕೆ ನೇರವಾಗಿ ಸಂಬಂಧಿಸಿದ್ದವುಗಳಾಗಿದ್ದವು.

ಸಮಕಾಲೀನ ಸಾಹಿತ್ಯದಲ್ಲಿದ್ದಂತೆ ಶಾಸನಗಳಲ್ಲೂ ಸಂಖ್ಯೆ ಅಪಾರವಾದರೂ ಪ್ರೌಢಿಮೆ ಲಾಲಿತ್ಯಗಳಲ್ಲಿ ಹಿಂದಿನ ಶತಮಾನಗಳಲ್ಲಿ ಬೆಳಕು ಕಂಡ ಶಾಸನಸಾಹಿತ್ಯಕ್ಕೆ ಇವು ಸಾಟಿಯಲ್ಲವೆಂಬುದು ಕಟುಸತ್ಯ. ಲೌಕಿಕದ ತುದಿಯನ್ನು ಮುಟ್ಟಿತೆಂಬಂತೆ ಅದರಲ್ಲಿ ಬರುವ ಶಾಪಭಾಗಗಳಲ್ಲಿ ಅನೇಕವೇಳೆ ಅಶ್ಲೀಲ, ಅವಾಚ್ಯ ಶಬ್ದಗಳ ಪ್ರಯೋಗವನ್ನು ನಾವು ಕಾಣುತ್ತೇವೆ.

ಈ ಅರಸರ ನೂರಾರು ತಾಮ್ರಶಾಸನಗಳು ಲಭಿಸಿವೆ. ಇವುಗಳ ಭಾಷೆ ಸಂಸ್ಕೃತ. ಬಹುಮಟ್ಟಿಗೆ ಲಿಪಿ ನಂದಿನಾಗರೀ ಎನಿಸಿಕೊಳ್ಳುವ ನಾಗರೀಲಿಪಿ. ಈ ತಾಮ್ರಶಾಸನಗಳು ಸಾಮಾನ್ಯವಾಗಿ ಹಿರಿಯ ಆಕಾರ–ಗಾತ್ರಗಳದ್ದಾಗಿದ್ದು, ಅನೇಕ ಶಾಸನಗಳಲ್ಲಿ ಅರಸರ ವಂಶಾವಳಿಗಳನ್ನು ನೀಡಿದೆ. ಈ ವಿಷಯಕ್ಕೆ ಸಂಬಂಧಿಸಿದ ಭಾಗದ ಶಾಸನಪಾಠಗಳು ಬಹುಮಟ್ಟಿಗೆ ಒಂದೇ ಪಡಿಯಚ್ಚಿನವು. ಪ್ರತಿಯೊಬ್ಬ ಅರಸನ ಗಣನೀಯ ವೆನ್ನಬಹುದಾದ ಸಾಧನೆಗಳ ಉಲ್ಲೇಖಗಳನ್ನು ಇವುಗಳಲ್ಲಿ ಕಾಣುತ್ತೇವೆ. ಅರಸರು ಬದಲಾದಂತೆಲ್ಲ ಹಿಂದಿನ ಅರಸರಿಗೆ ಸಂಬಂಧಿಸಿದ ಅದೇ ಶಾಸನಪಾಠಗಳನ್ನಿರಿಸಿಕೊಂಡು ಅನಂತರದ ಅರಸರಿಗೆ ಸಂಬಂಧಿಸಿದ ಹೊಸ ವಿವರಗಳನ್ನು ಕಾಣುತ್ತೇವೆ. ಬಹುಮಟ್ಟಿಗೆ ಇವು ಅರಮನೆಯ ಶಾಸನಾಧಿಕಾರಿಯಿಂದ ರಚಿತವಾದ ಕಾರಣ ಆತ ಮೂಲತಃ ಹಿಂದಣ ದಾಖಲೆಯನ್ನು ಆಧರಿಸಿ ಕರಡುಪ್ರತಿಗಳನ್ನು ತಯಾರಿಸಿರುತ್ತಾನೆ. ಅನಂತರದ ಅಧಿಕಾರಿಗಳೂ ಅದೇ ದಾಖಲೆಯನ್ನು ಬಳಸಿ ಅದಕ್ಕೆ ಹೊಸ ವಿಷಯಗಳನ್ನು ಸೇರಿಸುತ್ತ ಹೋಗುವುದರಿಂದ ಈ ಶಾಸನಗಳು ಒಂದೇ ರೂಪದಲ್ಲಿರುವುದು ಸಹಜ. ಅಲ್ಲದೆ ಈ ಶಾಸನಗಳನ್ನು ರಚಿಸಿದ ಕವಿಗಳಲ್ಲಿ ಕೆಲವರು ವಂಶಪಾರಂಪರ್ಯವಾಗಿ ಆಸ್ಥಾನ ಕವಿಗಳಾಗಿದ್ದು, ತಮ್ಮ ಹಿರಿಯರು ಬರೆದಿಟ್ಟಿದ್ದುದರ ಮುಂದಿನ ಭಾಗಗಳನ್ನು ತಾವೂ ರಚಿಸಿದ್ದಾರೆಂಬುದು ಸ್ಪಷ್ಟ. ತಾಮ್ರಶಾಸನಗಳ ಕೊನೆಯ ಭಾಗದಲ್ಲಿ ವೃತ್ತಿಗಳನ್ನು ಪಡೆದವರ ಹೆಸರುಗಳೂ ದತ್ತಿ ಬಿಟ್ಟ ಗ್ರಾಮ ಅಥವಾ ಭೂಮಿಯ ಮೇರೆಗಳೂ ಅನೇಕ ಸಂದರ್ಭಗಳಲ್ಲಿ ಕನ್ನಡ ಭಾಷೆಯಲ್ಲಿರುತ್ತವೆ. ಪ್ರಾದೇಶಿಕ ಭಾಷೆಗಳ ವೈಲಕ್ಷಣ್ಯಗಳನ್ನೂ ಜನಪದ ಭಾಷೆಯನ್ನೂ ಈ ಶಾಸನಗಳಲ್ಲಿ ಕಾಣಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳ ಭಾಷೆ ಒಳನಾಡಿನ ಸಮಕಾಲೀನ ಭಾಷೆಗಿಂತ ಭಿನ್ನವಾಗಿದ್ದು ತನ್ನ ಪ್ರಾದೇಶಿಕ ವೈಶಿಷ್ಟ್ಯತೆಯನ್ನುಳಿಸಿಕೊಂಡು ಬಂದಿದೆ ಎಂಬುದನ್ನು ಗಮನಿಸಬಹುದು.

ಅಂದಿನ ಆರ್ಥಿಕ–ಸಾಮಾಜಿಕ ಸ್ಥಿತಿಗೆ ಅನುಗುಣವಾಗಿ ಈ ಕಾಲದ ಶಾಸನಗಳಲ್ಲಿ ಹಳ್ಳಿಗಳನ್ನು ಪಟ್ಟಣಗಳಾಗಿ ಪರಿವರ್ತಿಸಿದಾಗ, ಬೀಡು ಬಿಟ್ಟಿದ್ದ ಭೂಮಿಗಳನ್ನು ಸಾಗುವಳಿಗೆ ತಂದಾಗ, ಅಧಿಕಾರವರ್ಗದವರು ಹೊಸದಾಗಿ ಅಲ್ಲಿ ನೆಲಸಿದ ಜನತೆ ನೀಡುವ ಸೌಲಭ್ಯಗಳನ್ನು ಕುರಿತಾದ ಒಪ್ಪಂದಗಳು, ಅಧಿಕಾರಿಗಳ ಶೋಷಣೆಯ ವಿರುದ್ಧ ಜನತೆ ಅರಸನಲ್ಲಿ ಅಥವಾ ಸಾಮಂತನಲ್ಲಿ ನೀಡಿದ ದೂರುಗಳು ಹಾಗೂ ಅವುಗಳ ಪರಿಣಾಮವಾಗಿ ಜನತೆಗೆ ನೀಡಿದ ಆಶ್ವಾಸನೆಗಳು, ಭಾರವಾಗಿದ್ದು ಕಸಬುದಾರರನ್ನು ಮುಕ್ತಗೊಳಿಸುವುದು–ಇವೇ ಮುಂತಾದ ವಿಷಯಗಳನ್ನು ಕಾಣಬಹುದಾಗಿದೆ. ಧರ್ಮರಕ್ಷಣೆಗಾಗಿಯೇ ಸಾಮ್ರಾಜ್ಯ ಮೈವೆತ್ತಿತ್ತು ಎಂಬುದನ್ನು ಗಮನಿಸಿದಾಗ ಬುಕ್ಕ, ಇಮ್ಮಡಿ ದೇವರಾಯ, ಕೃಷ್ಣದೇವರಾಯ ಮುಂತಾದ ಪ್ರಮುಖ ಅರಸರು ದೇವಾಲಯಗಳಿಗೆ ವಿಶೇಷವಾಗಿ ನೀಡಿದ ಅಪಾರ ದತ್ತಿಗಳ ಹಿನ್ನೆಲೆ ಅರ್ಥವಾಗುತ್ತದೆ. (ಬಿ.ಆರ್.ಜಿ.)

**ನಾಣ್ಯಗಳು:** ವಿಜಯನಗರ ಕಾಲದಲ್ಲಿ ನಾಣ್ಯ ಪದ್ಧತಿ ವಿಶೇಷವಾಗಿ ಸುಧಾರಿತವಾಯಿತು. ಇಮ್ಮಡಿ ದೇವರಾಯನ ಕಾಲದಲ್ಲಿ ಜಾರಿಗೆ ಬಂದ ಆಡಳಿತ ಸುಧಾರಣೆಗಳಲ್ಲಿ ಮುಖ್ಯವಾದದ್ದು ನಾಣ್ಯಗಳಿಗೆ ಸಂಬಂಧಿಸಿದುದು. ತೆರಿಗೆಗಳನ್ನು ಧಾನ್ಯರೂಪದ ಬದಲು ಚಿನ್ನದ ನಾಣ್ಯಗಳಲ್ಲಿ ಕೊಡಬೇಕೆಂದು ಇವನು ಮಾಡಿದ ಆಜ್ಞೆಯ ಫಲವಾಗಿ ಹೊಸ ನಮೂನೆಯ ನಾಣ್ಯಗಳು ಬಳಕೆಗೆ ಬಂದವು. ಚಿನ್ನದ ನಾಣ್ಯಗಳ ತೂಕ ಮತ್ತು ಶುದ್ಧತೆಯನ್ನು ಪರೀಕ್ಷಿಸಲು ಒಂದು ಶಾಖೆಯೇ ಇದ್ದಿತೆಂದು ಕೆಲವು ಸಮಕಾಲೀನ ಇತಿಹಾಸಕಾರರಿಂದ ತಿಳಿಯುತ್ತದೆ. ಚಿನ್ನದ ನಾಣ್ಯಗಳೇ ವಿಜಯನಗರ ಕಾಲದಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದರೂ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳೂ ಅಚ್ಚಾಗುತ್ತಿದ್ದುವು. ವರಹ (ಗದ್ಯಾಣ, ಪೊನ್, ಪಗೋಡ), ಪಣ, ಹಾಗ ಎಂಬುವು ಚಿನ್ನದ ನಾಣ್ಯಗಳು. ತಾರ ಎನ್ನುವುದು ಬೆಳ್ಳಿಯ ನಾಣ್ಯ. ಪಣ, ಚಿತಲ್ ಮತ್ತು ಕಾಸು ತಾಮ್ರದ ನಾಣ್ಯಗಳು. ವರಹ ಸುಮಾರು 52 ಗ್ರೇನ್ ತೂಕದ್ದು. ಸುಮಾರು 250 ಗ್ರೇನ್ ತೂಕದಿಂದ ಪ್ರಾರಂಭವಾಗಿ 15 ಗ್ರೇನ್ ತೂಕದವರೆಗಿನ ತಾಮ್ರದ ನಾಣ್ಯಗಳು ಬೆಳಕಿಗೆ

ಕೃಷ್ಣದೇವರಾಯನ ಕಾಲದ ನಾಣ್ಯಗಳು

ಬಂದಿವೆ. ಶಾಸನಗಳಲ್ಲಿ ದೊರಕುವ ಮಾಹಿತಿಗಳಿಂದ ಮತ್ತು ಸಮಕಾಲೀನ ವಿದೇಶೀಯ ಇತಿಹಾಸಕಾರರ ಬರೆವಣಿಗೆಯಿಂದ ವಿಜಯನಗರ ಕಾಲದಲ್ಲಿದ್ದ ನಾಣ್ಯಗಳ ಕೋಷ್ಟಕವನ್ನು ಈ ರೀತಿ ತೋರಿಸಬಹುದು:

1 ದೊಡ್ಡ ವರಹ = 2 ವರಹ, 1 ವರಹ = 2 ಪ್ರತಾಪ, 1 ಪ್ರತಾಪ = 2 ಕಾಟಿ, 1 ಪಣ = 1/10 ವರಹ, 1 ಚಿನ್ನ = 1/8 ವರಹ, 1 ಪಣ = 4 ಹಾಗ, 1 ಹಾಗ = 2 ಬೇಳೆ.

ಹನುಮಂತ, ಗರುಡ, ವೆಂಕಟೇಶ್ವರ, ಬಾಲಕೃಷ್ಣ, ಲಕ್ಷ್ಮೀನಾರಾಯಣ, ಶ್ರೀರಾಮ, ಶಂಖ–ಚಕ್ರ, ದುರ್ಗಿ, ಗಂಡಭೇರುಂಡ, ವರಾಹ, ಆನೆ,

ಉಮಾಮಹೇಶ್ವರ, ನಂದಿ ಮುಂತಾದವುಗಳು ವಿಜಯನಗರದ ನಾಣ್ಯಗಳ ಮುಮ್ಮುಖದಲ್ಲಿರುತ್ತವೆ. ಹಿಮ್ಮುಖದಲ್ಲಿ ಸಾಮಾನ್ಯವಾಗಿ ಬರೆಹವಿರುತ್ತದೆ. ಈ ಬರೆಹ ಕನ್ನಡ, ನಾಗರೀ ಅಥವಾ ತೆಲುಗು ಲಿಪಿಯಲ್ಲಿರುತ್ತದೆ. ವಿಜಯನಗರದ ಸ್ಥಾಪಕರು ಕನ್ನಡ ಲಿಪಿಯನ್ನೇ ತಮ್ಮ ನಾಣ್ಯಗಳಲ್ಲಿ ಬಳಸಿದ್ದರು ಎಂಬುದು ಗಮನಿಸಬೇಕಾದ ಅಂಶ. ಅನಂತರದ ರಾಜರು ನಾಗರೀ ಮತ್ತು ಕನ್ನಡ ಲಿಪಿಯ ಬರೆಹಗಳನ್ನು ಅಚ್ಚುಹಾಕಿಸಿದರು. ಆದರೆ ಕೊನೆಯ ರಾಜರ ಬರೆಹಗಳು ತೆಲುಗಿನಲ್ಲಿವೆ. ಸಾಮಾನ್ಯವಾಗಿ ಬರೆಹಗಳು ರಾಜನ ಹೆಸರು ಮತ್ತು ಅವರ ಬಿರುದುಗಳನ್ನು ತಿಳಿಸುತ್ತವೆ.

ತಾಂತ್ರಿಕದೃಷ್ಟಿಯಿಂದ ವಿಜಯನಗರ ನಾಣ್ಯಗಳು ಗಮನಾರ್ಹವಾದವು. ಸರಿಯಾದ ಅಚ್ಚುಗಳನ್ನು ಮಾಡಿ ಅವುಗಳಿಂದ ನಾಣ್ಯಗಳನ್ನು ತಯಾರಿಸುತ್ತಿದ್ದರು. ತೂಕ ಮತ್ತು ಆಕಾರಗಳಲ್ಲಿ ಖಚಿತತೆ ಕಾಣಬರುತ್ತದೆ. ಅವುಗಳ ಮೇಲಿನ ಚಿತ್ರಗಳು ಕಲಾತ್ಮಕ, ಬರೆವಣಿಗೆ ಸ್ಫುಟ.

ಒಂದನೆಯ ಹರಿಹರನ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನ ನಾಣ್ಯಗಳಲ್ಲಿ ಹನುಮಂತ ಅಥವಾ ಗರುಡನ ಚಿತ್ರವುಳ್ಳ ಮುಮ್ಮುಖ ಮತ್ತು ಶ್ರೀ ವೀರ ಹರಿಹರ ಎಂಬ ಕನ್ನಡ ಬರೆವಣಿಗೆ ಕಾಣಬರುತ್ತದೆ. ಒಂದನೆಯ ಬುಕ್ಕನ ಚಿನ್ನ ಮತ್ತು ತಾಮ್ರದ ನಾಣ್ಯಗಳ ಮುಮ್ಮುಖದಲ್ಲಿ ಹನುಮಂತನ ಚಿತ್ರ, ಒಮ್ಮುಖದಲ್ಲಿ ಶ್ರೀ ವೀರಬುಕ್ಕರಾಯ ಎಂಬ ಬರೆಹ ಕನ್ನಡ ಅಥವಾ ನಾಗರೀಲಿಪಿಯಲ್ಲಿ ಕಾಣಬರುತ್ತದೆ. ಇಮ್ಮಡಿ ಹರಿಹರ ವೀರ ಎನ್ನುವ ಬಿರುದಿಗೆ ಬದಲಾಗಿ ಪ್ರತಾಪ ಎನ್ನುವ ಪದವನ್ನು ತನ್ನ ನಾಣ್ಯಗಳ ಮೇಲೆ ಅಚ್ಚುಹಾಕಿಸಿದ. ಇವನ ನಾಣ್ಯಗಳ ಮೇಲೆ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಲಕ್ಷ್ಮೀನರಸಿಂಹ, ಸರಸ್ವತಿ, ಬ್ರಹ್ಮ ಮತ್ತು ನಂದಿಯ ಚಿತ್ರಗಳಿರುತ್ತವೆ. ತಾಂತ್ರಿಕ ದೃಷ್ಟಿಯಿಂದಲೂ ಇಮ್ಮಡಿ ಹರಿಹರನ ನಾಣ್ಯಗಳು ಬಹಳ ಉತ್ತಮವಾದವು. ಇವನ ಅನಂತರ ಬಂದ ಅನೇಕ ರಾಜರು ಇವನ ನಾಣ್ಯಗಳನ್ನೇ ವಿಶೇಷವಾಗಿ ಅನುಕರಿಸಿದರು. ಇವನ ಒಂದೆರಡು ಮುಖ್ಯ ನಮೂನೆಗಳನ್ನು ಗಮನಿಸಬಹುದು. ಮುಮ್ಮುಖದಲ್ಲಿ ಶಿವನೊಡನೆ ಕುಳಿತಿರುವ ಪಾರ್ವತಿ, ಇಬ್ಬರೂ ಕಿರೀಟಧಾರಿಗಳಾಗಿದ್ದಾರೆ; ಶಿವನು ಡಮರು ಮತ್ತು ತ್ರಿಶೂಲಧಾರಿಯಾಗಿದ್ದಾನೆ; ಶಿವನ ತಲೆಯ ಮೇಲೆ ಸೂರ್ಯ ಮತ್ತು ಚಂದ್ರರು ಇದ್ದಾರೆ. ಹಿಮ್ಮುಖದಲ್ಲಿ ಶ್ರೀ ಪ್ರತಾಪ ಹರಿಹರ ಎಂಬ ಮೂರು ಸಾಲುಗಳ ನಾಗರೀ ಬರವಣಿಗೆ ಇದೆ. ಮತ್ತೊಂದು ಚಿನ್ನದ ನಾಣ್ಯದಲ್ಲಿ ಮುಮ್ಮುಖದಲ್ಲಿ ಪದ್ಮಾಸನದಲ್ಲಿರುವ ಬ್ರಹ್ಮ ಮತ್ತು ಸರಸ್ವತಿ; ಬ್ರಹ್ಮನ ಒಂದು ಕೈ ಅಭಯ ಮುದ್ರೆಯಲ್ಲಿಯೂ ಇತರ ಕೈಗಳಲ್ಲಿ ಪುಸ್ತಕ ಇತ್ಯಾದಿಗಳಿವೆ. ಸರಸ್ವತಿ ವೀಣೆಯನ್ನು ಹಿಡಿದಿದ್ದಾಳೆ. ಹಿಮ್ಮುಖದಲ್ಲಿ ನಾಗರಿಲಿಪಿಯ ಶ್ರೀ ಪ್ರತಾಪ ಹರಿಹರ ಎಂಬ ಬರೆಹ ಇದೆ. ಇನ್ನೊಂದರಲ್ಲಿ ಲಕ್ಷ್ಮೀ ಮತ್ತು ನಾರಾಯಣ ಕುಳಿತಿದ್ದಾರೆ. ನಾರಾಯಣನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಮತ್ತೊಂದು ಕೈಯಲ್ಲಿ ಲಕ್ಷ್ಮಿಯನ್ನು ಬಳಸಿದ್ದಾನೆ. ಇನ್ನೊಂದು ಕೈ ಅಭಯಮುದ್ರೆಯಲ್ಲಿದೆ. ಇವನ ತಾಮ್ರದ ನಾಣ್ಯದ ಮುಮ್ಮುಖದಲ್ಲಿ ಚುಕ್ಕೆಗಳಿಂದ ಮಾಡಿದ ವೃತ್ತಾಕಾರದಲ್ಲಿ ಎಡಕ್ಕೆ ಹೋಗುತ್ತಿರುವ, ಘಂಟೆಗಳಿಂದ ಅಲಂಕೃತವಾದ ನಂದಿಯ ಚಿತ್ರ; ಅದರ ಮುಂದೆ ಖಡ್ಗ; ಮೇಲೆ ಚಂದ್ರ ಇವೆ. ಹಿಮ್ಮುಖದಲ್ಲಿ ಪ್ರತಾಪ ಹರಿಹರ ಎಂಬ ಎರಡು ಸಾಲುಗಳ ನಾಗರೀ ಬರೆವಣಿಗೆಯಿದೆ.

ಎರಡನೆಯ ಬುಕ್ಕನ ತಾಮ್ರನಾಣ್ಯ ನಂದಿ ನಮೂನೆಗೆ ಸೇರಿದ್ದು, ಇಮ್ಮಡಿ ಹರಿಹರನ ನಾಣ್ಯದಂತೆಯೇ ಇದೆ. ಒಂದನೆಯ ಮತ್ತು ಎರಡನೆಯ ದೇವರಾಯರ ನಾಣ್ಯಗಳನ್ನು ಬೇರ್ಪಡಿಸುವುದು ಕಷ್ಟ. ಎರಡನೆಯ ದೇವರಾಯ ವೀರಶೈವಧರ್ಮಕ್ಕೆ ಪ್ರೋತ್ಸಾಹ ಕೊಟ್ಟನೆಂತಲೂ ಮತ್ತು ಅವನು ಆನೆಗಳ ಬೇಟೆಯಲ್ಲಿ ವಿಶೇಷ ಆಸಕ್ತಿವಹಿಸಿದ್ದನೆಂದೂ ಊಹಿಸಿ ಶೈವಧರ್ಮಕ್ಕೆ ಸಂಬಂಧಪಟ್ಟ ಆನೆಯ ಚಿತ್ರವನ್ನು ಹೊಂದಿರುವ ನಾಣ್ಯಗಳು ಎರಡನೆಯ ದೇವರಾಯನಿಗೆ ಸೇರಿದ್ದೆಂದು ವಿದ್ವಾಂಸರ ಭಾವನೆ. ಒಂದನೆಯ ದೇವರಾಯನ ಐದು ವಿಧವಾದ ಚಿನ್ನದ ನಾಣ್ಯಗಳು ಬೆಳಕಿಗೆ ಬಂದಿವೆ. ಇವುಗಳ ಮುಮ್ಮುಖದಲ್ಲಿ ಲಕ್ಷ್ಮೀನಾರಾಯಣ, ಉಮಾಮಹೇಶ್ವರ ದೇವತೆಗಳೂ ಹಿಮ್ಮುಖದಲ್ಲಿ ಶ್ರೀಪ್ರತಾಪದೇವರಾಯ ಎಂಬ ನಾಗರೀ ಬರೆಹವೂ ಕಾಣಬರುತ್ತದೆ. ಇವನ ತಾಮ್ರದ ನಾಣ್ಯಗಳ ಮೇಲೆ ನಂದಿಯ ಚಿತ್ರ ಮತ್ತು ಹಿಮ್ಮುಖದಲ್ಲಿ ಶ್ರೀ ದೇವರಾಯ ಎಂಬ ಕನ್ನಡ ಅಥವಾ ನಾಗರೀ ಬರೆಹವಿದೆ.

ಕೆಲವು ನಾಣ್ಯಗಳ ಹಿಮ್ಮುಖದಲ್ಲಿ ರಾಯ ಗಜಗಂಡಭೇರುಂಡ, ಶ್ರೀದೇವರಾಯ, ಗಜವೇಂಟೆಕಾರ ಎಂಬ ಬರೆವಣಿಗೆಯಿದೆ. ಎರಡನೆಯ ವಿಜಯರಾಯನ ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಆನೆ, ಹಿಮ್ಮುಖದಲ್ಲಿ ವಿಜಯರಾಯ ಎಂಬ ಕನ್ನಡ ಬರೆಹವಿದೆ. ಮಲ್ಲಿಕಾರ್ಜುನನ ತಾಮ್ರದ ನಾಣ್ಯದ ಮೇಲೂ ಆನೆ ಮತ್ತು ಮಲ್ಲಿಕಾರ್ಜುನರಾಯರು ಎಂಬ ಕನ್ನಡ ಬರೆಹವಿದೆ.

ಕೃಷ್ಣದೇವರಾಯ ಹಳೆಯ ನಾಣ್ಯ ನಮೂನೆಗಳನ್ನು ಮುಂದುವರಿಸಿದುದಲ್ಲದೆ ಹೊಸ ನಮೂನೆಗಳನ್ನು ಬಳಕೆಗೆ ತಂದ. ಸುಮಾರು 117 ಗ್ರೇನ್ ತೂಕದ ಚಿನ್ನದ ನಾಣ್ಯಗಳು ಗಮನಾರ್ಹವಾದವು. ಈ ನಾಣ್ಯಗಳ ಮೇಲೆ ಅಲಂಕೃತನಾದ ತಿರುಪತಿ ವೆಂಕಟೇಶ್ವರನ ಚಿತ್ರವಿದೆ. ಈ ನಾಣ್ಯಗಳನ್ನು ಕೃಷ್ಣದೇವರಾಯ ತನ್ನ ಒರಿಸ್ಸ ವಿಜಯದ ಜ್ಞಾಪಕಾರ್ಥವಾಗಿ, ತಿರುಪತಿಯ ವೆಂಕಟೇಶ್ವರನಿಗೆ ಕನಕಾಭಿಷೇಕ ಮಾಡಿಸಿದ ಸಮಯದಲ್ಲಿ ಅಚ್ಚು ಹಾಕಿಸಿರಬಹುದೆಂದು ಊಹೆ. ಇವನ ವರಹ ಮೌಲ್ಯದ ಚಿನ್ನದ ನಾಣ್ಯಗಳ ಮೇಲೆ ಬಾಲಕೃಷ್ಣನ ಚಿತ್ರವಿದೆ. ಹಿಮ್ಮುಖದಲ್ಲಿ ಶ್ರೀ ಪ್ರತಾಪ ಕೃಷ್ಣರಾಯ ಎಂಬ ಮೂರು ಸಾಲುಗಳ ಬರೆಹವಿದೆ. ಇವನ ಉಮಾಮಹೇಶ್ವರ ನಮೂನೆಯ ನಾಣ್ಯಗಳು ಹಿಂದಿನ ನಾಣ್ಯಗಳಂತೆಯೇ ಇವೆ. ಇವನ ತಾಮ್ರದ ನಾಣ್ಯಗಳಲ್ಲಿ ಗರುಡ ಮತ್ತು ನಂದಿ ನಮೂನೆಗಳು ಮುಖ್ಯವಾದುವು. ಇವು 247 ಗ್ರೇನ್‌ನಿಂದ 15 ಗ್ರೇನ್ ತೂಕದವರೆಗೂ ದೊರೆಯುತ್ತವೆ.

ಅಚ್ಯುತರಾಯನ ನಾಣ್ಯಗಳಲ್ಲಿ ಮುಖ್ಯವಾದುದು ಗಂಡಭೇರುಂಡ ನಮೂನೆಯ ಚಿನ್ನದ ನಾಣ್ಯ. ಇದರ ಮುಮ್ಮುಖದಲ್ಲಿ ಹಾರುತ್ತಿರುವ ಅಲಂಕೃತ ಗಂಡಭೇರುಂಡ; ಅದರ ಎರಡು ಕೊಕ್ಕುಗಳಲ್ಲಿ ಆನೆಯನ್ನು ಹಿಡಿದಿರುವ ಚಿತ್ರವಿದೆ. ಹಿಮ್ಮುಖದಲ್ಲಿ ಶ್ರೀ ಪ್ರತಾಪಾಚ್ಯುತರಾಯ ಎಂಬ ಬರೆಹವಿದೆ. ಸದಾಶಿವರಾಯನ ನಾಣ್ಯಗಳಲ್ಲಿ ಲಕ್ಷ್ಮೀನಾರಾಯಣ, ಉಮಾಮಹೇಶ್ವರ ಮತ್ತು ಗರುಡ ನಮೂನೆ ಮುಖ್ಯವಾದವು. ಇವುಗಳ ಹಿಂಭಾಗದಲ್ಲಿ ತಿರುಮಲರಾಯುಲು ಎಂಬ ಬರೆಹವಿದೆ. ಇವೇ ರಾಮಟಂಕಿ ನಾಣ್ಯಗಳಿಗೆ ನಾಂದಿಯಾದವು. ಇವನ ತಾಮ್ರದ ನಾಣ್ಯಗಳಲ್ಲಿ ಗರುಡನ ಚಿತ್ರವಿದೆ. ರಾಮರಾಯ ವೆಂಕಟಾದ್ರಿ ಎಂಬ ಬರೆಹವುಳ್ಳ ತಾಮ್ರದ ನಾಣ್ಯಗಳು ವೆಂಕಟಾದ್ರಿಯದೆಂದು ಹೇಳಬಹುದು.

ಇಮ್ಮಡಿ ಶ್ರೀರಂಗರಾಯ ವೆಂಕಟೇಶ್ವರ ನಮೂನೆಯ ನಾಣ್ಯಗಳನ್ನು ಮತ್ತೆ ಬಳಕೆಗೆ ತಂದ. ಇಮ್ಮಡಿ ವೆಂಕಟಪತಿರಾಯ ಇದೇ ನಮೂನೆಯ ನಾಣ್ಯಗಳನ್ನು ಮುಂದುವರಿಸಿದ. ಇವನ ತಾಮ್ರದ ನಾಣ್ಯಗಳಲ್ಲಿ ಗರುಡ ಮತ್ತು ಹನುಮಂತನ ಚಿತ್ರ; ಹಿಮ್ಮುಖದಲ್ಲಿ ಶ್ರೀವೆಂಕಟರಾಯ ಎಂಬ ನಾಗರೀ ಬರೆಹವಿದೆ. ನಾಲ್ಕನೆಯ ಶ್ರೀರಂಗರಾಯ ವೆಂಕಟೇಶ್ವರ ನಮೂನೆಯ ನಾಣ್ಯಗಳನ್ನು ಮುಂದುವರಿಸಿದ. ಇವುಗಳ ಮುಮ್ಮುಖದಲ್ಲಿ ವೆಂಕಟೇಶ್ವರನ ಚಿತ್ರ; ಹಿಮ್ಮುಖದಲ್ಲಿ ಶ್ರೀವೆಂಕಟೇಶ್ವರಾಯ ನಮಃ ಎಂಬ ನಾಗರೀ ಬರೆಹವಿದೆ.

**(ಎ.ವಿ.ಎನ್.)**

**ವಿಜಯಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಒಂದು ಪಟ್ಟಣ ಹಾಗೂ ಹೋಬಳಿ ಕೇಂದ್ರ. ಬೆಂಗಳೂರು–ಕೋಲಾರ ಮಾರ್ಗದಲ್ಲಿ, ದೇವನಹಳ್ಳಿಗೆ ಈಶಾನ್ಯದಲ್ಲಿ 12 ಕಿಮೀ ದೂರದಲ್ಲೂ ಬೆಂಗಳೂರಿಗೆ ಈಶಾನ್ಯದಲ್ಲಿ 47 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 29,458.

ಈ ಪಟ್ಟಣ ದೇವನಹಳ್ಳಿ ತಾಲ್ಲೂಕಿನ ಒಂದು ಪ್ರಮುಖ ವ್ಯಾಪಾರ ಕೇಂದ್ರ. ರೇಷ್ಮೆ, ಆಲೂಗೆಡ್ಡೆ, ಈರುಳ್ಳಿ ಇಲ್ಲಿಂದ ನಿರ್ಯಾತವಾಗುವ ಮುಖ್ಯವಸ್ತುಗಳು. ದ್ರಾಕ್ಷಿ ಹಾಗೂ ಹಿಪ್ಪುನೇರಳೆಯನ್ನು ಬೆಳೆಯುತ್ತಾರೆ. ರೇಷ್ಮೆ ಹುಳು ಸಾಕಣೆ, ನೂಲು ತೆಗೆಯುವುದು ಇಲ್ಲಿನ ಉದ್ಯಮ. ಇಲ್ಲಿ ಪ್ರತಿ ಶುಕ್ರವಾರ ಸಂತೆ ಸೇರುತ್ತದೆ. ಈ ಪಟ್ಟಣದಲ್ಲಿ ಒಂದು ಸರ್ಕಾರದ ರೇಷ್ಮೆ ಮಾರಾಟ ಮಳಿಗೆಯಿದೆ.

ಈ ಪಟ್ಟಣದಲ್ಲಿ ಕೇಶವ, ಓಂಕಾರೇಶ್ವರ, ರಾಮ, ಕಾಲಭೈರವೇಶ್ವರ, ರುದ್ರದೇವ, ಗಂಗಾತಾಯಿ, ಸಂಗಮೇಶ್ವರ, ಬೈಲು ಬಸವೇಶ್ವರಸ್ವಾಮಿ ದೇವಾಲಯಗಳಿವೆ. ಇವುಗಳಲ್ಲಿ ಊರ ಮಧ್ಯದಲ್ಲಿರುವ ಓಂಕಾರೇಶ್ವರ ದೇವಾಲಯ ಪ್ರಾಚೀನವಾದದ್ದು. ಕಾಮನಹಬ್ಬದಂದು ಇಲ್ಲಿ ಧರ್ಮರಾಯ ಸ್ವಾಮಿ ಕರಗವೂ ಚೈತ್ರಹುಣ್ಣಿಮೆಯಂದು ಎಲ್ಲಮ್ಮ ಕರಗವೂ ನಡೆಯುತ್ತದೆ. ಈ ಪಟ್ಟಣದಿಂದ ಚಿಕ್ಕಬಳ್ಳಾಪುರ, ಕೋಲಾರ, ಶಿಡ್ಲಘಟ್ಟ, ಬೆಂಗಳೂರು ಮೊದಲಾದೆಡೆಗೆ ವಾಹನ ಸೌಕರ್ಯವಿದೆ. ದೇವನಹಳ್ಳಿ ರೈಲ್ವೆ ನಿಲ್ದಾಣ ಈ ಪಟ್ಟಣಕ್ಕೆ ಹತ್ತಿರವಿರುವ ರೈಲುಮಾರ್ಗ. ವಿಜಯಪುರಕ್ಕೆ ಹಿಂದೆ ವಡಿಗೇನಹಳ್ಳಿಯೆಂಬ ಹೆಸರಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. (ಡಿ.ಇ.ಕೆ.ಆರ್.)

**ವಿಜಯ ಭಾಸ್ಕರ್:** 1924–2002. ಕನ್ನಡದ ಸೃಜನಶೀಲ ಚಲನಚಿತ್ರ ಸಂಗೀತ ನಿರ್ದೇಶಕ. 1924 ಸೆಪ್ಟೆಂಬರ್ 19 ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಕ್ರೀಡಾಪಟು ವಿ.ಕೆ.ಕೃಷ್ಣಮೂರ್ತಿ. ತಾಯಿ ಜೀಜಾಬಾಯಿ ಮಗನಿಗೆ ಬಾಲ್ಯದಿಂದಲೂ ಸಂಗೀತದ ಸ್ಫೂರ್ತಿ ತುಂಬಿದವರು. ವಿಜಯಭಾಸ್ಕರ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಪದವಿ ಗಳಿಸಿದರೂ ಇವರ ಆಸಕ್ತಿಯ ಕೇಂದ್ರಬಿಂದು ಸಂಗೀತವಾಗಿತ್ತು. ಆಚಾರ್ಯ ಪಂಡಿತ್ ಗೋವಿಂದ ವಿಠ್ಠಲಭಾವೆ ಮತ್ತು ನೌಷದ್ ಅಲಿ ಅವರಲ್ಲಿ ಕ್ರಮವಾಗಿ ಕರ್ನಾಟಕ ಹಾಗೂ ಹಿಂದುಸ್ಥಾನಿ ಸಂಗೀತವನ್ನು ಚಿಕ್ಕಂದಿನಿಂದಲೇ ಕಲಿತರು. ಮುಂದೆ ವಿಶೇಷ ತರಬೇತಿಗಾಗಿ ಮಾಧವಲಾಲ್ ಮಾಸ್ಟರರ ಬಳಿಗೆ ಬಂದರು. ಅವರು ಹಿಂದುಸ್ಥಾನಿ, ಕರ್ನಾಟಕ – ಈ ಎರಡು ಸಂಗೀತ ಶೈಲಿಗಳಲ್ಲೂ ಪರಿಣತರಾಗಿದ್ದವರು. ಪಿಯಾನೊ ಭಾಸ್ಕರರ ಪ್ರಿಯ ವಾದ್ಯ. ಲಂಡನ್ ಸಂಗೀತ ಶಾಲೆಯಲ್ಲಿ ಪಾಶ್ಚಾತ್ಯ ಸಂಗೀತವನ್ನು ಕಲಿತದ್ದೂ ಇವರ ಹೆಗ್ಗಳಿಕೆ. ಕನ್ನಡದ ಜೊತೆಗೆ ತಮಿಳು. ತೆಲುಗು, ಮಲಯಾಳಂ, ತುಳು, ಕೊಂಕಣಿ, ಬಂಗಾಲಿ, ಮರಾಠಿ, ಹಿಂದಿ ಮೊದಲಾದ ಇತರ ಭಾರತೀಯ ಭಾಷೆಗಳನ್ನು ಅರಿತಿದ್ದರು.

ಬಿ.ಆರ್. ಕೃಷ್ಣಮೂರ್ತಿ ಅವರ 'ಶ್ರೀರಾಮಪೂಜಾ' ಕನ್ನಡ ಚಲನಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡುವ (1954) ಮೂಲಕ ಇವರು ಸ್ವತಂತ್ರ ಸಂಗೀತ ನಿರ್ದೇಶಕರಾಗಿ ಚಲನಚಿತ್ರರಂಗವನ್ನು ಪ್ರವೇಶಿಸಿದರು. ಅನಂತರ ಇವರ ಕ್ರಿಯಾತ್ಮಕತೆ ಸಂಗೀತ ನಿರ್ದೇಶನಕ್ಕಷ್ಟೇ ಮೀಸಲಾಗದೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಹೆಣೆಯುವುದರಲ್ಲಿಯೂ ಯಶಸ್ಸು ಗಳಿಸಿತು. ರಾಣಿ ಹೊನ್ನಮ್ಮ ಚಿತ್ರದ ಮೂಲಕ ಎಲ್ಲರ ಗಮನವನ್ನು ಸೆಳೆದರು. ಸಂಗೀತ ನಿರ್ದೇಶಕರಾಗಿ ಸುಮಾರು ಐದು ದಶಕಗಳ ಕಾಲಾವಧಿಯಲ್ಲಿ ಕನ್ನಡ ಮಾತ್ರವಲ್ಲದೆ ತಮಿಳು, ತೆಲುಗು, ಮಲಯಾಳಂ, ಹಿಂದಿ, ಇಂಗ್ಲಿಷ್ ಹೀಗೆ ಬೇರೆ ಬೇರೆ ಭಾಷೆಯ ಸು. 605 ಚಲನಚಿತ್ರಗಳಿಗೆ (1954–2002) ಸಂಗೀತ ನಿರ್ದೇಶನ ಮಾಡಿದ ಕೀರ್ತಿ ಇವರದು. ಇಷ್ಟಲ್ಲದೆ ರೇಡಿಯೋ, ದೂರದರ್ಶನಗಳ ಧಾರಾವಾಹಿಗಳಿಗೂ ಸಂಗೀತ ನಿರ್ದೇಶನ ಮಾಡಿದ್ದಾರೆ.

ರೋಮ್‌ನಲ್ಲಿ ನಡೆದ ಭಾರತೀಯ ಸಂಯೋಜಕರ ಮತ್ತು ಬರೆಹಗಾರರ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ (1982) ನಾಯಕ ಪ್ರತಿನಿಧಿಯಾಗಿ,

ರಷ್ಯದ ಸಾಂಸ್ಕೃತಿಕ ಅಕಾಡೆಮಿ ತಾಷ್ಕೆಂಟ್‌ನಲ್ಲಿ ನಡೆಸಿದ ಪ್ರಪಂಚ ಚಿತ್ರೋತ್ಸವದಲ್ಲಿ ವಿಶೇಷ ಆಹ್ವಾನಿತರಾಗಿ (1985), ಅಮೆರಿಕದ ಸಂಗೀತಗಾರರ ಒಕ್ಕೂಟ ಏರ್ಪಡಿಸಿದ್ದ ಚರ್ಚಾಕೂಟದ ಅಧ್ಯಕ್ಷರಾಗಿ (1987), ಬರೆಹಗಾರರ ಮತ್ತು ಸಂಯೋಜಕರ ಪ್ರಪಂಚ ಕಾಂಗ್ರೆಸ್‌ನಲ್ಲಿ ಭಾರತದ ಪ್ರತಿನಿಧಿಯಾಗಿ ಹಾಗೂ ಭಾಷಣಕಾರರಾಗಿ (1996) ಭಾಗವಹಿಸಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತರಾಗಿದ್ದರು. ಮುಂಬೈನ ಇಂಡಿಯನ್ ಪರ್‌ಫಾರ್ಮಿಂಗ್ ಆರ್ಟ್ಸ್ ಸೊಸೈಟಿಯ ನಿರ್ದೇಶಕರಾಗಿಯೂ ಮದರಾಸು ಚಿತ್ರಸಂಗೀತದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಒಡನಾಡಿ ಕಲಾವಿದರನ್ನು ಪ್ರೋತ್ಸಾಹಿಸಿ ಬೆಳೆಸುವುದು ಇವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿತ್ತು.

ಇವರ ನಿಷ್ಠಾವಂತ ಕಲಾ ಸಾಧನೆಗೆ ದೊರೆತ ಪ್ರಶಸ್ತಿ ಪುರಸ್ಕಾರಗಳು ಅಸಂಖ್ಯಾತ. ಇವರಿಗೆ ಕರ್ನಾಟದ ಸರ್ಕಾರ ಎರಡು ಬಾರಿ (1985 ಮತ್ತು 2001) ರಾಜ್ಯೋತ್ಸವ ಪ್ರಶಸ್ತಿಯನ್ನೂ ಏಳು ಬಾರಿ ಅತ್ಯುತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿಯನ್ನೂ ನೀಡಿ ಗೌರವಿಸಿರುವುದು ಇವರ ಪ್ರತಿಭೆಗೆ ಸಾಕ್ಷಿಯಾಗಿದೆ. ರಾಷ್ಟ್ರೀಯ ಪ್ರಶಸ್ತಿ (1951), ಲಂಡನ್ ಚಿತ್ರೋತ್ಸವ ಪ್ರಶಸ್ತಿ (1959) ಇವು ಇವರು ಪಡೆದ ಇತರ ಪ್ರಶಸ್ತಿಗಳು. ಸು. 30–40 ಚಿತ್ರಗಳ ಸಂಗೀತ ನಿರ್ದೇಶನಕ್ಕೆ ಇವರಿಗೆ ಪ್ರಶಸ್ತಿಗಳು ಲಭಿಸಿವೆ. ಭಾರತದಾದ್ಯಂತ ವಿವಿಧ ಸಂಘಸಂಸ್ಥೆಗಳು ಇವರಿಗೆ ಸಂಗೀತ ಸಾಮ್ರಾಟ್, ಸಂಗೀತಬ್ರಹ್ಮ, ನಾದಬ್ರಹ್ಮ, ಸ್ವರಶಿಲ್ಪಿ, ರಸೇಶ್ವರ, ರಾಗಋಷಿ ಮೊದಲಾದ ಅನೇಕ ಬಿರುದುಗಳನ್ನು ನೀಡಿ ಗೌರವಿಸಿವೆ. ಇವರು 2002 ಮಾರ್ಚ್ 3 ರಂದು ನಿಧನರಾದರು. (ಎಸ್.ಜಿ.ಪಿ.)

**ವಿಜಯಾದಿತ್ಯ:** ಬಾದಾಮಿ ಚಳುಕ್ಯ ವಂಶದ ರಾಜ (696–733). ವಿನಯಾದಿತ್ಯನ ಮಗ. ವಿನಯಾದಿತ್ಯ ತನ್ನ ತಂದೆ ಮತ್ತು ತಾತ ಇವರ ಕಾಲದಲ್ಲಿ ರಾಜ್ಯದ ಆಡಳಿತದಲ್ಲೂ ಅನೇಕ ಯುದ್ಧಗಳಲ್ಲೂ ಭಾಗವಹಿಸಿದ್ದ. ಇವನು ತನ್ನ ತಂದೆಯ ಕಾಲದಲ್ಲಿ ಉತ್ತರ ಭಾರತದಲ್ಲಿ ಯುದ್ಧ ಮಾಡಿ ಗಂಗಾ, ಯಮುನಾ ಪ್ರತಿಮೆಗಳನ್ನೂ ಢಕ್ಕ ಮತ್ತು ಪಾಳಿ ಧ್ವಜವನ್ನೂ ಶತ್ರುಗಳಿಂದ ವಶಪಡಿಸಿಕೊಂಡನೆಂದು ಕೆಲವು ಶಾಸನಗಳು ತಿಳಿಸುತ್ತವೆ. ಈತ ಉತ್ತರ ಭಾರತದಲ್ಲಿ ವಜ್ರಟ ಎಂಬುವನ ಮೇಲೆ ಅಥವಾ ಯಶೋವರ್ಮ ಎಂಬುವನ ಮೇಲೆ ಸೆಣಸಿರಬಹುದು. ಯಾವುದೋ ಸಂದರ್ಭದಲ್ಲಿ ಈತನನ್ನು ಶತ್ರುಗಳು ಸೆರೆಹಿಡಿದಿದ್ದರೆಂದೂ ಅಲ್ಲಿಂದ ತಾನೇ ತಪ್ಪಿಸಿಕೊಂಡನೆಂದೂ ಕೆಲವು ಶಾಸನ ಹೇಳಿಕೆಗಳಿವೆ. ಇವನ ಆಳ್ವಿಕೆಯ ಕಾಲದಲ್ಲಿ ಯುವರಾಜ ಇಮ್ಮಡಿ ವಿಕ್ರಮಾದಿತ್ಯ ಕಾಂಚಿಯ

ಮೇಲೆ ದಾಳಿಮಾಡಿ, ಅಲ್ಲಿಯ ರಾಜನಾದ ಇಮ್ಮಡಿ ಪರಮೇಶ್ವರವರ್ಮನನ್ನು ಜಯಿಸಿ ಅವನಿಂದ ಕಪ್ಪಕಾಣಿಕೆಗಳನ್ನು ವಸೂಲಿ ಮಾಡಿದನೆಂದು ಉಳ್ವಾಲ (ಕರ್ನೂಲು ಜಿಲ್ಲೆ) ಶಾಸನದಿಂದ ತಿಳಿದುಬರುತ್ತದೆ.

ಬಾದಾಮಿ ಚಳುಕ್ಯ ರಾಜರುಗಳ ಪೈಕಿ ಇವನ ಆಳಿಕೆಯ ಕಾಲ ಅತಿ ದೀರ್ಘವಾದುದೂ ಶಾಂತಿ ಮತ್ತು ಸುಭಿಕ್ಷೆಯಿಂದ ಕೂಡಿದ್ದೂ ಆಗಿತ್ತು. ವಿಜಯಾದಿತ್ಯ ತನ್ನ ತಂದೆ ವಿನಯಾದಿತ್ಯನ ರೀತಿಯಲ್ಲೇ ಆಡಳಿತದ ಸುವ್ಯವಸ್ಥೆಗಾಗಿ ರಾಜ್ಯದಲ್ಲಿ ಆಗಿಂದಾಗ್ಗೆ ಸಂಚರಿಸುತ್ತಿದ್ದನೆಂದೂ ಹಾಗೂ ತನ್ನ ಆಳಿಕೆಯ ಕಾಲದಲ್ಲಿ ಏಲಾಪುರ, ಹತಂಪುರ, ರಕ್ತಪುರ ಹೀಗೆ ಅನೇಕ ಕಡೆ ಬೀಡು ಬಿಟ್ಟಿದ್ದನೆಂದು ಶಾಸನಗಳಿಂದ ತಿಳಿಯುತ್ತದೆ. ಬಾಣರು, ರೇನಾಡುವಿನ ತೆಲುಗು ಚೋಡರು, ಭೂಪಾದಿತ್ಯ, ಉಪೇಂದ್ರ ಮುಂತಾದ ರಾಜರು ಇವನ ಸಾಮಂತರಾಗಿದ್ದರು.

ವಿಜಯಾದಿತ್ಯನ ಕಾಲ ದೇವಾಲಯ ನಿರ್ಮಾಣಕ್ಕೂ ಪ್ರಸಿದ್ಧವಾಗಿದೆ. ಪಟ್ಟದಕಲ್ಲಿನಲ್ಲಿ ವಿಜಯೇಶ್ವರ ಎಂಬ ಈಶ್ವರ ದೇವಸ್ಥಾನವನ್ನು (ಈಗಿನ ಸಂಗಮೇಶ್ವರ ದೇವಾಲಯ) ಕಟ್ಟಿಸಿದ. ವಿಜಯಾದಿತ್ಯ ಜೈನಧರ್ಮಕ್ಕೂ ತನ್ನ ಗೌರವಾದರವನ್ನು ತೋರಿಸಿ ಅನೇಕ ಜೈನಗುರುಗಳಿಗೆ ದತ್ತಿಗಳನ್ನು ನೀಡಿದ. ಇವನ ಸಹೋದರಿ, ಆಳುಪ ಚಿತ್ರವಾಹನನ ಹೆಂಡತಿ ಕುಂಕುಮ ಮಹಾದೇವಿ ಜೈನಧರ್ಮದಲ್ಲಿ ಅಪಾರ ನಿಷ್ಠೆಯನ್ನು ಹೊಂದಿದ್ದಳು. ಈಕೆ ಲಕ್ಷ್ಮೇಶ್ವರದಲ್ಲಿ ಒಂದು ಜೈನ ದೇವಸ್ಥಾನವನ್ನು ಕಟ್ಟಿಸಿದಳು. ವಿಜಯಾದಿತ್ಯ 733ರಲ್ಲಿ ನಿಧನನಾದ. (ಎಸ್.)

**ವಿಜ್ಞಾನ:** ವಿಜ್ಞಾನ ವಿಷಯಗಳಿಗೇ ಮೀಸಲಾಗಿದ್ದ ಪ್ರಥಮ ಕನ್ನಡ ಮಾಸಪತ್ರಿಕೆ. 1917ರಲ್ಲಿ ಬೆಂಗಳೂರಿನ ಕರ್ನಾಟಕ ವಿಜ್ಞಾನ ಪ್ರಚಾರಿಣೀ ಸಮಿತಿ ಪತ್ರಿಕೆಯನ್ನು ಆರಂಭಿಸಿತು. ಸಮಿತಿಯ ಸಂಸ್ಥಾಪಕರೂ ಸೆಂಟ್ರಲ್ ಕಾಲೇಜಿನ ಭೌತವಿಜ್ಞಾನದ ಪ್ರಾಧ್ಯಾಪಕರೂ ಆಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರೂ ಮತ್ತು ಆಗಿನ ಮೈಸೂರು ಸರಕಾರದ ಪವನಶಾಸ್ತ್ರ ವೀಕ್ಷಣಾಲಯದ ಮುಖ್ಯಸ್ಥರಾಗಿದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರೂ ಈ ಪತ್ರಿಕೆಯ ಸಂಪಾದಕರಾಗಿದ್ದರು.



ಡಿಮ್ಮೈ (1/8) ಆಕಾರದಲ್ಲಿರುತ್ತಿದ್ದ ಈ ಪತ್ರಿಕೆಯಲ್ಲಿ 30–40 ಪುಟಗಳಿರುತ್ತಿದ್ದವು. ಪ್ರತಿ ಸಂಚಿಕೆಯಲ್ಲಿ ಮೂರು ನಾಲ್ಕು ವಿಜ್ಞಾನ ಲೇಖನಗಳಿರುತ್ತಿದ್ದವು. ಜೊತೆಗೆ ವಿವಿಧ ವಿಜ್ಞಾನ ವಿಷಯ ಸಂಗ್ರಹ ಎಂಬ ಶೀರ್ಷಿಕೆಯಲ್ಲಿ ವಿಜ್ಞಾನದ ಪ್ರಗತಿಯನ್ನು ಕುರಿತ ಸುದ್ದಿಗಳನ್ನು ನೇಚರ್, ಸೈಂಟಿಫಿಕ್ ಅಮೆರಿಕನ್ ಮುಂತಾದ ಪ್ರಸಿದ್ಧ ವೈಜ್ಞಾನಿಕ ಪತ್ರಿಕೆಗಳಿಂದ ಆಯ್ದು ಪ್ರಕಟಿಸಲಾಗುತ್ತಿತ್ತು.

ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಎಟಕುವಂತಿದ್ದ ಈ ಪತ್ರಿಕೆಯ ಲೇಖನಗಳು ನಿರ್ದುಷ್ಟ ವಿಷಯ ನಿರೂಪಣೆ, ಭಾಷಾ ಶುದ್ಧತೆ ಮತ್ತು ಶೈಲಿಯ ದೃಷ್ಟಿಯಿಂದ ಒಳ್ಳೆಯ ಮಾದರಿಗಳಾಗಿದ್ದುದರಿಂದ ಅವು ಮೈಸೂರು ದೇಶದ ಶಾಲೆಗಳ ಕನ್ನಡ ಪಠ್ಯಪುಸ್ತಕಗಳನ್ನು ಪ್ರವೇಶಿಸಿ ಹತ್ತಿಪ್ಪತ್ತು ವರ್ಷ ಕಾಲ ವಿದ್ಯಾರ್ಥಿಗಳಿಗೆ ಚಿರಪರಿಚಿತವಾಗಿದ್ದುವು. ಪತ್ರಿಕೆಗೆ ಪ್ರೋತ್ಸಾಹ ದೊರಕದೆ ಹನ್ನೆರಡು ಸಂಚಿಕೆಗಳನ್ನು ಪ್ರಕಟಿಸಿದ ಅನಂತರ ನಿಂತುಹೋಯಿತು. (ಜಿ.ಆರ್.ಎಲ್.)

**ವಿಜ್ಞಾನೇಶ್ವರ:** 11–12ನೆಯ ಶತಮಾನದಲ್ಲಿದ್ದ ಪ್ರಸಿದ್ಧ ಧರ್ಮಶಾಸ್ತ್ರಕಾರ. ಯಾಜ್ಞವಲ್ಕ್ಯಸ್ಮೃತಿಯ ಮೇಲೆ ಮಿತಾಕ್ಷರಾ ಎಂಬ ವ್ಯಾಖ್ಯಾನವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಇವನು ಕಲ್ಯಾಣ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ (1076–1127) ಆಸ್ಥಾನವನ್ನಲಂಕರಿಸಿದ್ದು ಚಕ್ರವರ್ತಿಯಿಂದ ಪ್ರೇರಿತನಾಗಿ ಮಿತಾಕ್ಷರಾ ಗ್ರಂಥವನ್ನು ಬರೆದಿರುವನೆಂಬುದು ವಿದ್ವಾಂಸರ ಅಭಿಪ್ರಾಯ. ಇವನು ತನ್ನನ್ನು ಗ್ರಂಥದಲ್ಲಿ ವಿಜ್ಞಾನಯೋಗಿನ್ ಎಂದು ಕರೆದುಕೊಂಡಿದ್ದಾನೆ. ಗ್ರಂಥದ ಸಮಾಪ್ತಿ ವಚನಗಳಿಂದ ತಿಳಿದು ಬರುವಂತೆ ಪದ್ಮನಾಭಭಟ್ಟ ಇವನ ತಂದೆ, ಉತ್ತಮ ಇವನ ಗುರು.


ವಿಜ್ಞಾನೇಶ್ವರ ಸ್ಮಾರಕ ಮಂದಿರದ ಪ್ರತಿಕೃತಿ, ಗುಲ್ಬರ್ಗ

ವ್ಯಾಕರಣಶಾಸ್ತ್ರದಲ್ಲಿ ಪತಂಜಲಿಯ ಮಹಾಭಾಷ್ಯದಂತೆ ಅಥವಾ ಅಲಂಕಾರಶಾಸ್ತ್ರದಲ್ಲಿ ಮಮ್ಮಟನ ಕಾವ್ಯಪ್ರಕಾಶದಂತೆ ಧರ್ಮಶಾಸ್ತ್ರ ಇತಿಹಾಸದಲ್ಲಿ ಮಿತಾಕ್ಷರಾ ಗ್ರಂಥದ ಸ್ಥಾನ ಅತಿ ವಿಶಿಷ್ಟವಾದುದು. ಈ ಗ್ರಂಥ ತನ್ನ ಕಾಲಕ್ಕಿಂತ ಸು. 2000 ವರ್ಷ ಮುಂಚಿನ ಧರ್ಮಶಾಸ್ತ್ರ ವಿಚಾರದ ಸಾರವನ್ನು ನಮ್ಮ ಮುಂದಿಡುವುದು ಮಾತ್ರವಲ್ಲದೆ, ನೂತನ ವ್ಯಾಖ್ಯಾನ ಪ್ರವಾಹಗಳಿಗೆ ಆದಿಮೂಲದಂತಿದೆ. ಇದು ಅನಂತರ ಬೆಳೆದು ಬಂದ ನಿಬಂಧಗಳಿಗೆ ಪೂರ್ವಗಾಮಿಯಾಗಿದ್ದು, ಗ್ರಂಥದ ಪ್ರತಿ ಪಂಕ್ತಿಯಲ್ಲೂ ಎದ್ದು ಕಾಣುವ ಪಾಂಡಿತ್ಯ, ವಿವೇಕಯುಕ್ತ ನಿರ್ಣಯ, ಪದವಿನ್ಯಾಸದಲ್ಲಿ ಸಂಕ್ಷಿಪ್ತತೆ ಮುಂತಾದ ಗುಣಗಳಲ್ಲಿ ಆ ನಿಬಂಧಗಳಿಗಿಂತ ಶ್ರೇಷ್ಠತರವೆನಿಸಿದೆ. ಹೆಸರೇ ಸೂಚಿಸುವಂತೆ, ಮಿತಾಕ್ಷರಾ ವಿಷಯನಿರೂಪಣೆಯಲ್ಲಿ ಸಂಕ್ಷಿಪ್ತ ಹಾಗೂ ಪ್ರಸಕ್ತ ವಿಷಯಕ್ಕೆ ಎಷ್ಟೋ ಅಷ್ಟು ಎನ್ನುವಂತಿದ್ದರೂ ಕೆಲವು ಕಡೆ ಸುದೀರ್ಘವಾದ ವ್ಯಾಖ್ಯಾನಗಳಿರುವುದೂ ಉಂಟು. ತನ್ನ ಗ್ರಂಥ ಧರ್ಮಶಾಸ್ತ್ರದ ವಿವಿಧ ಆದೇಶಗಳ ಭಂಡಾರ ಹಾಗೂ ಸಂಶ್ಲೇಷಣವಾಗಬೇಕೆಂಬ ವ್ಯಾಖ್ಯಾನಕಾರನ ಆಕಾಂಕ್ಷೆಯೇ ಇದಕ್ಕೆ ಪ್ರಧಾನ ಕಾರಣ.

ವಿದ್ವಾಂಸರು ಲೆಕ್ಕ ಹಾಕಿರುವಂತೆ, ಮಿತಾಕ್ಷರಾದಲ್ಲಿ ಉಲ್ಲೇಖಿತವಾಗಿರುವ ಸ್ಮೃತಿಗಳ, ಸ್ಮೃತಿಕಾರರ ಒಟ್ಟು ಸಂಖ್ಯೆ 89. ಅಲ್ಲದೆ ವೇದ, ಉಪನಿಷತ್, ನಿರುಕ್ತ, ಯೋಗಸೂತ್ರ, ಭರತ (ನಾಟ್ಯಶಾಸ್ತ್ರ), ಪಾಣಿನಿಯ ವ್ಯಾಕರಣ, ಸುಶ್ರುತ ಸಂಹಿತೆ, ಸ್ಕಂದಪುರಾಣ, ವಿಷ್ಣುಪುರಾಣ, ಅಮರ ಮತ್ತು ಗುರು (ಪ್ರಭಾಕರ)–ಈ ಆಕರಗಳೂ ಉಲ್ಲೇಖಿತವಾಗಿದೆ. ವಿಜ್ಞಾನೇಶ್ವರನಿಗಿಂತ ಹಿಂದಿನ ಸ್ಮೃತಿ ವ್ಯಾಖ್ಯಾನಕಾರರಾದ ಮತ್ತು ಸಾರಸಂಗ್ರಹಕಾರರಾದ ಅಸಹಾಯ, ವಿಶ್ವರೂಪ, ಮೇಧಾತಿಥಿ, ಶ್ರೀಕರ, ಭಾರುಚಿ ಮತ್ತು ಭೋಜದೇವ ಇವರನ್ನು ಹೆಸರಿಸುತ್ತದೆ.

ಮಿತಾಕ್ಷರಾ ಕೇವಲ ಯಾಜ್ಞವಲ್ಕ್ಯ ಸ್ಮೃತಿಯ ಮೇಲಿನ ವ್ಯಾಖ್ಯಾನವಾಗಿರದೆ, ಸ್ಮೃತಿ ವಿಷಯಗಳ ಸಾರಸಂಗ್ರಹವಾಗಿದ್ದು, ಹೆಚ್ಚು ಕಡಿಮೆ ಒಂದು ಸ್ವತಂತ್ರ ಗ್ರಂಥದಂತಿದೆ. ಎಲ್ಲ ಪ್ರಮುಖ ಸ್ಮೃತಿಕಾರರ ಅಭಿಪ್ರಾಯ

ಗಳನ್ನೂ ಕೂಲಂಕಷವಾಗಿ ಚರ್ಚಿಸಿ, ಎಲ್ಲ ವಿಷಯಗಳಲ್ಲೂ ಕಡೆಗೆ ತನ್ನದೇ ಆದ ನಿರ್ಧಾರಕ್ಕೆ ಬರುವುದು ಈ ಕೃತಿಯ ವೈಶಿಷ್ಟ್ಯ. ಹಲವಾರು ಧರ್ಮಶಾಸ್ತ್ರಗಳಲ್ಲಿ ಉದ್ಧೃತ ಭಾಗಗಳನ್ನು ಒಂದೆಡೆಗೆ ತಂದು ಚರ್ಚಿಸುವಾಗ, ಅವುಗಳಲ್ಲಿ ಕಂಡುಬರುವ ವಿರೋಧೋಕ್ತಿಗಳನ್ನು ಮೀಮಾಂಸಾ ಶಾಸ್ತ್ರದ ಅರ್ಥವಿವರಣೆಯ ನಿಯಮಗಳನ್ನು ಅನುಸರಿಸಿ ತಿದ್ದಿತೇಲಿಸಿ, ವಿವಿಧ ಸೂಕ್ತಿಗಳಿಗೆ ನಿಷ್ಕೃಷ್ಟವಾದ ವ್ಯಾಪ್ತಿಯನ್ನು ನಿರ್ದೇಶಿಸಿ (ವಿಷಯ ವ್ಯವಸ್ಥಾ) ಒಂದು ಸರಿಯಾದ ಕ್ರಮವನ್ನುಂಟುಮಾಡುತ್ತದೆ. ಅಲ್ಲದೆ, ಅಸಂಬದ್ಧವೆಂದು ತೋರುವ ಸ್ಮೃತ್ಯಾದೇಶಗಳಲ್ಲಿಯೂ ಸಿದ್ಧಾಂತ ಸಮನ್ವಯವನ್ನು ಸಾಧಿಸುತ್ತದೆ.

ಮತ್ತೊಂದು ಗಮನಾರ್ಹವಾದ ಅಂಶವೆಂದರೆ, ಆಧುನಿಕ ಭಾರತದ ರಚನೆಯಲ್ಲಿ ಮಿತಾಕ್ಷರಾ ವಹಿಸಿರುವ ಅತ್ಯಂತ ಪ್ರಮುಖಪಾತ್ರ. ಬಂಗಾಳ ಮತ್ತು ಮಹಾರಾಷ್ಟ್ರ ವಿನಾ ಭಾರತದ ಉಳಿದ ಪ್ರದೇಶಗಳಲ್ಲೆಲ್ಲ (ಉದಾ : ದತ್ತುಸ್ವೀಕಾರ, ಪಿತ್ರಾರ್ಜಿತ ಆಸ್ತಿ, ಸ್ಥಿರಾಸ್ತಿಯ ಹಂಚಿಕೆ ಇತ್ಯಾದಿ) ಹಿಂದು ನ್ಯಾಯಶಾಸ್ತ್ರದ ಹಲವಾರು ವಿಷಯಗಳಿಗೆ ಸಂಬಂಧಪಟ್ಟಂತೆ ಮಿತಾಕ್ಷರಾ ಇಂದಿಗೂ ಪ್ರಮಾಣಗ್ರಂಥವಾಗಿದೆ.

11–12ನೆಯ ಶತಮಾನಗಳ ಕರ್ನಾಟಕದ ಜನಜೀವನವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಮಿತಾಕ್ಷರಾ ಒಂದು ಪ್ರಧಾನವಾದ ಆಕರಗ್ರಂಥ. ಹಲವಾರು ಸಂದರ್ಭಗಳಲ್ಲಿ ವ್ಯಾಖ್ಯಾನಮಾಡುವಾಗ, ಮೂಲದಲ್ಲಿಲ್ಲದ, ಆದರೆ ತನ್ನ ಸಮಕಾಲೀನ ಸಮಾಜದಲ್ಲಿ ಕಂಡುಬರುವ, ವಿಷಯ–ವಿವರಗಳನ್ನು ವಿಜ್ಞಾನೇಶ್ವರ ಒದಗಿಸಿದ್ದಾನೆ. (ಎಸ್.ಜಿ.)

**ವಿಜ್ಜಿಕೆ:** ಸು. 7ನೆಯ ಶತಮಾನ. ಸಂಸ್ಕೃತ ಕವಯಿತ್ರಿ. ಈಕೆಗೆ ವಿಜ್ಜಕಾ, ವಿಜ್ಜಾಕಾ, ವಿಜ್ಜಿಕಾ, ವಿಜಾ, ವಿಜ್ಜಕ, ವಿಜಯಾಂಬಿಕಾ ಎಂಬ ಹೆಸರುಗಳೂ ಇವೆ.

ಈಕೆ ಬಾದಾಮಿ ಚಳುಕ್ಯವಂಶದ ಚಂದ್ರಾದಿತ್ಯನ ಹೆಂಡತಿ. ವಿಜಯಭಟ್ಟಾರಿಕಾ ಈಕೆಯೇ ಇರಬಹುದೆಂಬ ಊಹೆ ಇದೆ. 855ರಲ್ಲಿದ್ದ ಕಾಶ್ಮೀರದ ಅರಸ ಅವಂತಿವರ್ಮನ ಸಮಕಾಲೀನ, ಭಟ್ಟಕಲ್ಲಟನ ಮಗ ಮುಕುಲಭಟ್ಟ ತನ್ನ ಅಭಿಧಾವೃತ್ತಿ ಮಾತೃಕ ಎಂಬ ವ್ಯಾಕರಣ ಗ್ರಂಥದಲ್ಲಿ ಈಕೆಯದೆಂದು ಹೇಳಬಹುದಾದ ಒಂದು ಶ್ಲೋಕವನ್ನು ಉದಾಹರಣೆಗಾಗಿ ಆಯ್ದುಕೊಂಡಿದ್ದಾನೆ. ವಿಜ್ಜಿಕೆಯದೇ ಎಂದು ಪ್ರಸಿದ್ಧವಾದ ಮತ್ತೊಂದು ಶ್ಲೋಕದಿಂದ ಈಕೆ ಪ್ರಸಿದ್ಧ ಸಂಸ್ಕೃತ ಆಲಂಕಾರಿಕ ದಂಡಿಗಿಂತ (7ನೆಯ ಶತಮಾನ) ಈಚಿನವಳೆಂಬುದು ನಿರ್ವಿವಾದ. ರಾಜಶೇಖರ (10ನೆಯ ಶತಮಾನ) ಈಕೆಯ ಕವಿತಾಶೈಲಿಯನ್ನು ವೈದರ್ಭೀಶೈಲಿಯೆಂದು ಹೊಗಳಿದ್ದಾನೆ.

ಕೌಮುದೀ ಮಹೋತ್ಸವ ಎಂಬ ಐದಂಕದ ಐತಿಹಾಸಿಕ ನಾಟಕ ಈಕೆಯದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಈ ನಾಟಕದಲ್ಲಿ ಯಥಾಪ್ರಕಾರ ರಾಜ, ಋತು, ರಸಿಕತೆ, ರಾಸಕ್ರೀಡೆ ಇತ್ಯಾದಿ ಎಲ್ಲ ವರ್ಣನೆಗಳೂ ಬಂದಿದ್ದು ರಸಪೋಷಣೆ ಪಡೆದಿವೆ. ಈ ನಾಟಕದಲ್ಲಿ ಭಾಸನಂತೆ ಸ್ಥಾಪನಾ ಎಂಬುದು ಪ್ರಸ್ತಾವನಾ ಎಂಬುದರ ಬದಲಿಗೆ ಪ್ರಯೋಗಗೊಂಡಿದೆ. ಈಕೆಯವೇ ಎಂಬ ಸುಮಾರು 30–40 ಬಿಡಿ ಪದ್ಯಗಳನ್ನು ಪ್ರಾಯಶಃ ಎಲ್ಲ ಪ್ರಸಿದ್ಧ ಆಲಂಕಾರಿಕರೂ ಉದಾಹರಿಸಿದ್ದಾರೆ. ಪದ್ಯಗಳಿಂದ ಪದ್ಯಕರ್ತೃವನ್ನು ಅಳೆಯುವುದಾದರೆ ಈಕೆ ವಿಲಾಸಪ್ರಿಯಳಂತೆ ವಿನೋದಪ್ರಿಯಳೂ ಪ್ರತಿಭಾನ್ವಿತಳೂ ಹೌದು. ಕವಿ ದಂಡಿ ತನ್ನನ್ನು ನೋಡಿದ್ದಲ್ಲಿ ಸರಸ್ವತಿಯನ್ನು ಸರ್ವಶುಕ್ಲಳೆನ್ನುತ್ತಿರಲಿಲ್ಲ ಎನ್ನುವಷ್ಟರಮಟ್ಟಿನ ಸ್ವಾಭಿಮಾನ ಇವಳದು. ಈಕೆ ಉತ್ತಮ ಕವಯಿತ್ರಿ. ಕುಟ್ಟುವುದು ಕುಣಿಯುವುದು ಹಾಡುವುದು ಮುಂತಾದ ನಿತ್ಯಜೀನವದ ಭೋಗವಿಲಾಸಗಳೇ ಈಕೆಯ ಕಾವ್ಯವಸ್ತುಗಳು. (ಜಿ.ಎಂ.)

**ವಿಟ್ಲ:** ಬಂಟ್ವಾಳ ತಾಲ್ಲೂಕಿನ ಒಂದು ಗ್ರಾಮ. ಮಂಗಳೂರಿನ ಆಗ್ನೇಯಕ್ಕೆ 41 ಕಿಮೀ ದೂರದಲ್ಲೂ ಬಂಟ್ವಾಳದಿಂದ 17 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 15,650. ಇಲ್ಲಿ ಪಂಚಲಿಂಗೇಶ್ವರ, ಸುಬ್ರಹ್ಮಣ್ಯ, ವಿಠೋಬ ಮತ್ತು ಅನಂತೇಶ್ವರ ದೇವಾಲಯಗಳಿವೆ. ಶಾಸನಗಳಲ್ಲಿ ಈ ಊರಿನ ಹೆಸರು ಇಷ್ಟಕಾಪುರ ಎಂದಿದೆ. ಹಿಂದೆ ಇದು ಸ್ಥಳೀಯ ಅರಸು ಮನೆತನವೊಂದರ ಆಡಳಿತಕ್ಕೆ ಒಳಪಟ್ಟಿತ್ತು. ಈ ಅರಸುಗಳ ಅರಮನೆ ಇಲ್ಲಿದ್ದುದರಿಂದ ಇವರಿಗೆ ವಿಟ್ಲದ ಹೆಗಡೆಗಳು ಎಂದೇ ಹೆಸರಾಯಿತು. (ಡಿ.ಎನ್.ಕೆ.)

ಈ ಅರಸು ಮನೆತನದವರಿಗೆ ಡೊಂಬಹೆಗ್ಗಡೆ ಎಂಬ ವಂಶನಾಮವೂ ಇವರ ಸಿಂಹಾಸನಕ್ಕೆ ಪಾರ್ಥಂಪಾಡಿ ಎಂಬ ಹೆಸರೂ ಇದ್ದಿತು. ಈ ವಂಶದವರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಈ ಮನೆತನದ ಅತ್ಯಂತ ಪ್ರಾಚೀನ ಉಲ್ಲೇಖ ಇಲ್ಲಿನ ಪಂಚಲಿಂಗೇಶ್ವರ ದೇವಾಲಯದ ಒಂದು ಶಾಸನದಲ್ಲಿದೆ. 1436ರಲ್ಲಿ ಕುಞ್ಞಣ್ಣಶೇಖ ಡೊಂಬ ಹೆಗ್ಗಡೆಯ ಮಗ ಮುಂಡಿಸಿದ್ಧಶೇಖ ಎಂಬವನು ಇಷ್ಟಕಾಪುರದ ಪಂಚಲಿಂಗೇಶ್ವರ ಗುಡಿಗೆ ಹೊನ್ನಕಳಶವನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ. 1571ರಲ್ಲಿ ಕುಂನಿದೇವರಸ ಡೊಂಬ ಹೆಗ್ಗಡೆ ಇದ್ದ. 1608ರ ಹೊತ್ತಿಗೆ ಇಲ್ಲಿಯ ಹೆಗ್ಗಡೆಗಳು ಕೆಳದಿಯ ನಾಯಕರ ಸಾಮಂತರಾದರು. ಆದರೆ 1629–30ರಲ್ಲಿ ಆಗಿನ ಕೆಳದಿ ವಿರುದ್ಧ ದಂಗೆಯೆದ್ದು, ಬಹುಶಃ ಸ್ವತಂತ್ರರಾದರು. ಆದರೆ ಪ್ರಾಯಶಃ ಇವರು ಪುನಃ ಕೆಳದಿ ಅರಸರ ಅಧೀನತ್ವವನ್ನು ಒಪ್ಪಬೇಕಾಯಿತು. 1719ರ ಒಂದು ಶಾಸನದಲ್ಲಿ ಕಪ್ಪವನ್ನು ಕೊಡದ ತಪ್ಪಿಗಾಗಿ ವಿಟ್ಲದ ಹೆಗ್ಗಡೆಯನ್ನು ಸೆರೆಹಿಡಿದು ಕೆಳದಿಗೆ ಕರೆದೊಯ್ದ ಮತ್ತು ನಿರ್ವಾಣಶೆಟ್ಟಿ ಎಂಬವನ ನೆರವಿನಿಂದ ಅವನು ಬಿಡುಗಡೆಯಾದ ಪ್ರಸ್ತಾಪವಿದೆ. ಮುಂದೆ 1721ರಲ್ಲಿ ಶ್ರೀಮಲದೇವಿಯರ ಪುತ್ರ ನರಸಿಂಹ ಅರಸ ಡೊಂಬಹೆಗ್ಗಡೆಯ ಅಳಿಯ ಚೆನ್ನಮ್ಮದೇವಿಯರ ಮಗ ಪಾಂಡ್ಯಪ್ಪರಸ ಡೊಂಬಹೆಗ್ಗಡೆ, 1727ರಲ್ಲಿ ಪಾರ್ಥಂಪಾಡಿ ನರಸಿಂಹ ಅರಸ ಡೊಂಬಹೆಗ್ಗಡೆಯ ಅಳಿಯ ನರಸಿಂಹ ಕೃಷ್ಣಪ್ಪರಸ ಡೊಂಬ ಹೆಗ್ಗಡೆ, 1730ರಲ್ಲಿ ಕೃಷ್ಣಪ್ಪ ಅರಸನ ತಮ್ಮ ನರಸಿಂಹರಸ ಡೊಂಬ ಹೆಗ್ಗಡೆ, 1744ರಲ್ಲಿ ಮತ್ತೊಬ್ಬ ನರಸಿಂಹ ಅರಸ ಡೊಂಬಹೆಗ್ಗಡೆ– ಇವರ ಹೆಸರು ಶಾಸನಗಳಲ್ಲಿ ದೊರಕುತ್ತವೆ. ಹೈದರ್ ಕೆಳದಿಯನ್ನು ಆಕ್ರಮಿಸುವವರೆಗೂ ಇಲ್ಲಿಯ ಹೆಗ್ಗಡೆಗಳು ಆ ಸಂಸ್ಥಾನದ ಅಧೀನರಾಗಿದ್ದರು. ಅನಂತರ 1765ರಲ್ಲಿ ಹೆಗ್ಗಡೆಗಳು ಕೊಡಬೇಕಾಗಿದ್ದ ಕಪ್ಪದ ಮೊತ್ತವನ್ನು ಹೈದರ್ ಹೆಚ್ಚಿಸಿದ. ಆಗ ಇದ್ದ ಅಚ್ಯುತ ಹೆಗ್ಗಡೆ ಇಂಗ್ಲಿಷರೊಡನೆ ಕೂಡಿಕೊಂಡ. ಇದರಿಂದ ರೋಷಗೊಂಡ ಹೈದರ್ ಅಚ್ಯುತ ಹೆಗ್ಗಡೆಯನ್ನು ಉಚ್ಚಾಟಿಸಿದ. ಇಂಗ್ಲಿಷರು ಇವನಿಗೆ ಆಶ್ರಯಕೊಟ್ಟು ನೂರು ರೂಪಾಯಿ ವರ್ಷಾಶನ ನೀಡಿ ತಲಚೇರಿಯಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟರು. ಆದರೂ ಹೆಗ್ಗಡೆ ಆಗಾಗ್ಗೆ ತನ್ನ ರಾಜ್ಯವನ್ನು ಪುನಃ ಆಕ್ರಮಿಸುವ ಸನ್ನಾಹ ನಡೆಸುತ್ತಿದ್ದ. ಇಂಥ ಒಂದು ಸಂದರ್ಭದಲ್ಲಿ 1784ರಲ್ಲಿ ಟಿಪ್ಪು ಅಚ್ಯುತ ಹೆಗ್ಗಡೆಯನ್ನು ಹಿಡಿದು ಅವನ ತಲೆ ಹೊಡೆಸಿದ. ವಿಟ್ಲದಲ್ಲಿದ್ದ ಈ ರಾಜರ ಅರಮನೆಯನ್ನು ಸುಟ್ಟುಹಾಕಿದ. ಆದರೆ ಇವನ ವಂಶಸ್ಥರು ಇಂಗ್ಲಿಷರ ಆಶ್ರಯದಲ್ಲಿ ತಲಚೇರಿಯಲ್ಲಿ ಮುಂದುವರಿದರು. 1792ರಲ್ಲಿ ಆಗಿನ ಹೆಗ್ಗಡೆಯ ವರ್ಷಾಶನವನ್ನು 200 ರೂಪಾಯಿಗಳಿಗೆ ಹೆಚ್ಚಿಸಲಾಯಿತು. ವಿಟ್ಲದ ಹೆಗ್ಗಡೆಗಳು ತಮ್ಮ ಕೃತಜ್ಞತೆಯ ಕುರುಹಾಗಿ ಟಿಪ್ಪುವಿನ ವಿರುದ್ಧದ ಕಾರ್ಯಾಚರಣೆಗಳಲ್ಲಿ ಇಂಗ್ಲಿಷರಿಗೆ ಅನೇಕ ರೀತಿಯ ನೆರವು ನೀಡಿದರು. 1799ರಲ್ಲಿ ಟಿಪ್ಪುವಿನ ವಿರುದ್ಧ ಇಂಗ್ಲಿಷರು ಜಯಗಳಿಸಿದರೂ ಹೆಗ್ಗಡೆಗಳಿಗೆ ತಮ್ಮ ರಾಜ್ಯ ಪುನಃ ದಕ್ಕಲಿಲ್ಲ. ವಿಟ್ಲದ ಹೆಗ್ಗಡೆ ಇಂಗ್ಲಿಷರ ವಿರುದ್ಧ ದಂಗೆಯೆದ್ದ. ಕೊಯಮತ್ತೂರಿನಿಂದ ಬಂದಿದ್ದ ಸುಬ್ಬರಾವ್ ಎಂಬುವನೂ ಇವನ ಜೊತೆ ಸೇರಿದ. ಆದರೆ ಆ ವರ್ಷದ ಜುಲೈ ತಿಂಗಳ

ಹೊತ್ತಿಗೆ ವಿಟ್ಲದ ಹೆಗ್ಗಡೆ ಮನೆತನದ ಒಂಬತ್ತು ಜನರನ್ನು ಸೆರೆಹಿಡಿದು ಆಗ ಹೆಗ್ಗಡೆ ಭದ್ರಯ್ಯನನ್ನು ಗಲ್ಲಿಗೇರಿಸಲಾಯಿತು. ಉಳಿದವರನ್ನು ತಲಚೇರಿಯಲ್ಲಿ ಬಂಧಿಸಲಾಯಿತು. ಮುಂದಿನ ಹಕ್ಕುದಾರ ನರಸಿಂಹರಾಜನಿಗೆ 200 ರೂಪಾಯಿ ವರ್ಷಾಶನ ನೀಡಿ ಸೇಂಟ್ ಎಡ್ವರ್ಡ್ ದ್ವೀಪದಲ್ಲಿ ಬಂಧಿಸಿಡಲಾಯಿತು. ಅನಂತರ ಮುಪ್ಪಿನ ಕಾಲದಲ್ಲಿ ಅವನು ವಿಟ್ಲದಲ್ಲಿ ನೆಲೆಸಲು ಅವಕಾಶ ಮಾಡಿಕೊಡಲಾಯಿತು. ಈ ಹೆಗ್ಗಡೆ ವಂಶಸ್ಥರು ಈಗಲೂ ವಿಟ್ಲದಲ್ಲಿರುವರೆಂದು ತಿಳಿದುಬರುತ್ತದೆ.

ವಿಟ್ಲದಲ್ಲಿ ಹೆಗ್ಗಡೆಗಳ ಆಳಿಕೆಗೆ ಸಂಬಂಧಿಸಿದ ಒಂದು ಮಣ್ಣಿನ ಕೋಟೆ ಮತ್ತು ಅರಮನೆಯ ಅವಶೇಷಗಳು ಉಳಿದುಬಂದಿವೆ. ಅರಮನೆಯ ಸಮೀಪದಲ್ಲಿ ದೇಶದ್ರೋಹಕ್ಕಾಗಿ ಸಜೀವವಾಗಿ ಸಮಾಧಿ ಮಾಡಲ್ಪಟ್ಟ ಶಂಭುಲಿಂಗ ಭಟ್ಟ ಎಂಬ ಮಂತ್ರಿಯ ಸಮಾಧಿ ಇದೆ. ಆದರೆ ಈಗ ವಿಟ್ಲದ ಪ್ರಮುಖ ಆಕರ್ಷಣೆ ಇಲ್ಲಿನ ಪಂಚಲಿಂಗೇಶ್ವರ ಗುಡಿ. ಗಜಪೃಷ್ಠಾಕಾರದ ವಿನ್ಯಾಸದಲ್ಲಿ ಗರ್ಭಗೃಹ, ಮಧ್ಯಮಂಟಪ ಮತ್ತು ಮುಖಮಂಟಪಗಳನ್ನೊಳಗೊಂಡಿದ್ದು ಮೂರು ಘಟ್ಟಗಳ ಇಳಿಜಾರು ಚಾವಣಿಯನ್ನು ಹೊಂದಿರುವ ಈ ದೇವಾಲಯ ಮೂಲತಃ ಸು. 7–8ನೆಯ ಶತಮಾನದ್ದೆನ್ನಲಾಗಿದೆ. ಉತ್ತಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳಿಗೆ ಈ ಊರು ಹೆಸರಾಗಿದೆ. ಕೇಂದ್ರ ಸರ್ಕಾರ ಇಲ್ಲೊಂದು ಅಡಕೆ ಸಂಶೋಧನ ಕೇಂದ್ರವನ್ನು ಸ್ಥಾಪಿಸಿದೆ.

**ವಿಠಲ್, ಎಂ.ಆರ್.:** 1908– . ಕನ್ನಡ ಚಿತ್ರರಂಗದ ಪ್ರತಿಭಾವಂತ ನಿರ್ದೇಶಕರಲ್ಲೊಬ್ಬರು. ಮೈಸೂರು ರಾಘವೇಂದ್ರರಾವ್ ವಿಠಲ್ ಎಂಬುದು ಇವರ ಪೂರ್ಣ ಹೆಸರು.

ಇವರು 1908 ಆಗಸ್ಟ್ 19ರಂದು ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಎಂ. ರಾಘವೇಂದ್ರರಾವ್, ತಾಯಿ ಗಂಗಾಬಾಯಿ. ವಿಠಲ್ ಮೈಸೂರು ಮಹಾರಾಜ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿದರು. ಅನಂತರ ಇಂಟರ್ ಮೀಡಿಯೇಟ್ ಮುಗಿಸಿ, ಎಂಜಿನಿಯರಿಂಗ್ ಅಂಡ್ ಫ್ಲೈಯಿಂಗ್‌ನಲ್ಲಿ ಮೂರು ವರ್ಷಗಳ ಅವಧಿಯ ಶಿಕ್ಷಣವನ್ನು ಪಡೆಯಲು ಮದರಾಸಿನ ಆಂಧ್ರ ಏವಿಯೇಷನ್ ಸ್ಕೂಲ್‌ಗೆ ಸೇರಿದರು. ಬ್ರಿಟಿಷ್ ಸರ್ಕಾರ ಈ ಶಾಲೆಯನ್ನು ಅನಿರೀಕ್ಷಿತವಾಗಿ ಸ್ಥಗಿತಗೊಳಿಸಿದ್ದರಿಂದ ಮೊದಲನೆಯ ವರ್ಷದ ಶಿಕ್ಷಣವನ್ನು ಪೂರ್ಣಗೊಳಿಸಿ, ಕಾಲೇಜು ಸೇರಿ ಆಟೊಮೊಬೈಲ್ ಎಂಜಿನಿಯರಿಂಗ್‌ನಲ್ಲಿ ಎರಡು ವರ್ಷಗಳ ಶಿಕ್ಷಣ ಪಡೆದು ಆ ಉದ್ಯಮಕ್ಕೆ ಪದಾರ್ಪಣ ಮಾಡಿದರು. ಅನಂತರ 1928–29ರಲ್ಲಿ ಮುಂಬಯಿಗೆ ಹೋದರು. ಅಲ್ಲಿ ಕೆಲವಾರು ವರ್ಷಗಳು ಇದ್ದು, ಅನಂತರ ಕೊಲ್ಲಾಪುರದಲ್ಲಿ ಸ್ವಂತವಾಗಿ ಗ್ಯಾರೇಜ್ ಸ್ಥಾಪಿಸಿದರು. ಆಗ್ಗೆ ಕೊಲ್ಲಾಪುರ ಸಿನಿಟೋನ್ ಎಂಬ ಸಂಸ್ಥೆ ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿತ್ತು. ಅದರ ಮಾಲೀಕರಾಗಿದ್ದ ದಾದಾ ಸಾಹೇಬ್ ನಿಂಬಾಳ್ಕರ್ ಅವರು ವಿಠಲ್ ಅವರನ್ನು ಸೌಂಡ್ ಎಂಜಿನಿಯರ್ ಹುದ್ದೆಗೆ ಆಹ್ವಾನಿಸಿದರು. ಅಲ್ಲಿದ್ದಾಗ ವಿಠಲ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಅವರ ಪರಿಚಯ ಭಾಗ್ಯ ಒದಗಿಬಂತು. ನಿರ್ದೇಶನದ ಅನೇಕ ವಿಚಾರಗಳನ್ನು ಫಾಲ್ಕೆ ಅವರಿಂದ ತಿಳಿದುಕೊಂಡರು. ಅಲ್ಲಿಂದ 1930ರಲ್ಲಿ ಲಾಹೋರಿಗೆ ಪ್ರಯಾಣ ಬೆಳೆಸಿ ಅಲ್ಲಿ ಸೂಪರ್ ಸೌಂಡ್ ಸ್ಟುಡಿಯೋದಲ್ಲಿ ಸೌಂಡ್ ಎಂಜಿನಿಯರ್ ಹುದ್ದೆಯನ್ನು ಪಡೆದು ಅಶೋಕಿ ದುನಿಯಾ ಎಂಬ ಚಿತ್ರಕ್ಕೆ ಪ್ರಪ್ರಥಮವಾಗಿ ಶಬ್ದಗ್ರಹಣ ನೀಡಿದರು. ಅಂದಿಗೆ ಪ್ರಸಿದ್ಧ ನಟನಟಿಯರಾಗಿದ್ದ ಸುರೇಂದ್ರ ಮತ್ತು ಊರ್ಮಿಳಾ ನಾಯಕ–ನಾಯಕಿಯರಾಗಿದ್ದ ಟಾಕಿ ಚಿತ್ರವೊಂದನ್ನು ಪ್ರಪ್ರಥಮವಾಗಿ ದಿಗ್ದರ್ಶಿಸಿ ನಿರ್ದೇಶಕನ ಹಂತಕ್ಕೇರಿದರು. ಕೈತುಂಬ ಕೆಲಸ ವಿದ್ದರೂ ಅಲ್ಲಿಯ ವಾತಾವರಣ ಹಿಡಿಸದೆ ಮುಂಬಯಿಗೆ ವಾಪಸಾದರು.

1939ರಲ್ಲಿ ಮದರಾಸು ಸರ್ಕಾರದ ಆಹ್ವಾನದ ಮೇಲೆ ಸಾಕ್ಷ್ಯಚಿತ್ರಗಳ ತಯಾರಿಕೆಗೆ ಮದರಾಸಿಗೆ ಬಂದರು. ಹಲವಾರು ಸಾಕ್ಷ್ಯಚಿತ್ರಗಳ ನಿರ್ಮಾಣವನ್ನು ಕೈಗೊಂಡರು. ಈ ಮಧ್ಯೆ ಯುದ್ಧಾನಂತರ ಎ.ಜಿ.ಪಟೇಲ್ ಎಂಬುವರು ಸುದ್ದಿಚಿತ್ರಗಳನ್ನು ಭಾರತದಾದ್ಯಂತ ಪ್ರಾರಂಭಮಾಡಿದರು. ಮದರಾಸು ಕಚೇರಿಯ ಮ್ಯಾನೇಜರ್ ಹುದ್ದೆಗೆ ವಿಠಲ್ ಅವರನ್ನು



ಆಯ್ಕೆಮಾಡಿಕೊಂಡರು. ಕಾಲಕ್ರಮೇಣ ಸರ್ಕಾರ ಈ ಶಾಖೆಗಳನ್ನೆಲ್ಲ ಕೊಂಡು ಕೊಂಡಿತು. ಚಿತ್ರರಂಗದಲ್ಲಿ ತಾಂತ್ರಿಕ ವಿಭಾಗದಲ್ಲಿ ಹೆಚ್ಚಿನ ತರಬೇತಿ ಪಡೆಯಲು 1949 ರಲ್ಲಿ ವಿಠಲ್ ಅವರು ಯುರೋಪ್ ಪ್ರವಾಸ ಕೈಗೊಂಡರು. ಬೆಲ್ಜಿಯಮ್‌ನ ಗೇವರ್ಟ್ ಕಾರ್ಖಾನೆಯಲ್ಲಿ ಕಾರ್ಯನಿರತರಾಗಿ, ಆಳವಾದ ಅಧ್ಯಯನ ನಡೆಸಿ ಅಲ್ಲಿಂದ ಫ್ರಾನ್ಸ್‌ಗೆ ತೆರಳಿ ಎಕ್ಲರ್ ಸ್ಟುಡಿಯೋದಲ್ಲಿ ಸ್ವಲ್ಪಕಾಲವಿದ್ದರು. ಅನಂತರ ತಾಂತ್ರಿಕ ವಿಭಾಗದಲ್ಲಿ ಸಾಕಷ್ಟು ತರಬೇತಿ ಪಡೆಯಲು ಇಚ್ಛಿಸಿ ಇಂಗ್ಲೆಂಡಿಗೆ ತೆರಳಿ ಅಲ್ಲಿ ಸ್ವಲ್ಪ ಕಾಲವಿದ್ದು 1950ರಲ್ಲಿ ಭಾರತಕ್ಕೆ ಮರಳಿದರು.

ಮದರಾಸಿನಲ್ಲಿ ನೆಲೆನಿಂತು ಮಲೆಯಾಳಂ ಚಿತ್ರವೊಂದನ್ನು ದಿಗ್ದರ್ಶಿಸಿದರು. ಚಿತ್ರ ಸಾಕಷ್ಟು ಯಶಸ್ವಿಯಾಗದೆ ವಿಠಲ್ ಅವರಿಗೆ ಅಪಾರ ನಷ್ಟವುಂಟಾಯಿತು. ಪರಿಣಾಮವಾಗಿ ಸ್ವಲ್ಪಕಾಲ ಚಿತ್ರರಂಗದಿಂದ ದೂರವಾದರು. ಪುನಿತವತಿ ಎಂಬ ತಮಿಳುಚಿತ್ರದ ನಿರ್ದೇಶಕರಾಗಿ ಮತ್ತೆ ಚಿತ್ರರಂಗ ಪ್ರವೇಶಿಸಿದರು.

1962ರಲ್ಲಿ ಕನ್ನಡ ಚಲನಚಿತ್ರೋದ್ಯಮಕ್ಕೆ ಪ್ರವೇಶಿಸಿ ಮೊತ್ತಮೊದಲನೆಯ ಬಾರಿಗೆ ಧರ್ಮವಿಜಯ ಎಂಬ ಕನ್ನಡ ಚಿತ್ರವನ್ನು ದಿಗ್ದರ್ಶಿಸಿದರು. ಅಲ್ಲಿಂದ ಮುಂದೆ ನಂದಾದೀಪ, ಮಂಗಳಮುಹೂರ್ತ, ಮಿಸ್ ಲೀಲಾವತಿ, ಪ್ರೇಮಮಯಿ, ನಕ್ಕರದೇ ಸ್ವರ್ಗ, ಮನಸ್ಸಿದ್ದರೆ ಮಾರ್ಗ, ಹಣ್ಣೆಲೆ ಚಿಗುರಿದಾಗ, ಕಣ್ಣುಮುಚ್ಚಾಲೆ, ಮಾರ್ಗದರ್ಶಿ, ಎರಡುಮುಖ, ಬಾಳಪಂಜರ, ಯಾರ ಸಾಕ್ಷಿ, ಪ್ರೊಫೆಸರ್ ಹುಚ್ಚೂರಾಯ, ಕೂಡಿಬಾಳೋಣ, ಅಣ್ಣ–ಅತ್ತಿಗೆ, ಪುನರ್ಮಿಲನ, ಮೊದಲಾದ ಕನ್ನಡ ಚಿತ್ರಗಳನ್ನು ದಿಗ್ದರ್ಶಿಸಿದರು. ಇವರ ನಿರ್ದೇಶನದಲ್ಲಿ ತಯಾರಾದ ನಂದಾದೀಪ, ಮಿಸ್ ಲೀಲಾವತಿ, ಹಣ್ಣೆಲೆ ಚಿಗುರಿದಾಗ, ನಕ್ಕರದೇ ಸ್ವರ್ಗ, ಮಾರ್ಗದರ್ಶಿ ಮುಂತಾದ ಚಿತ್ರಗಳಿಗೆ ರಾಜ್ಯ ಪ್ರಶಸ್ತಿ ದೊರೆತಿದೆ. (ಎಸ್.ಎಚ್.ವಿ.)

**ವಿದುರಾಶ್ವತ್ಥ:** ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿರುವ ಪುರಾಣ ಪ್ರಸಿದ್ಧವಾದ ಯಾತ್ರಾಸ್ಥಳ. ಗೌರಿಬಿದನೂರಿನ ಉತ್ತರಕ್ಕೆ ಸು. 6 ಕಿಮೀ ದೂರದಲ್ಲಿ ದೊಡ್ಡ ಕುರುಗೋಡು ಬಳಿ ವಿದುರನೇ ನೆಟ್ಟು ಬೆಳೆಸಿದ್ದೆಂದು ಹೇಳುವ ವಿಶಾಲವಾದ ಒಂದು ಅಶ್ವತ್ಥವೃಕ್ಷವಿದೆ. ಈ ವೃಕ್ಷವನ್ನು ಜನ ಪೂಜಿಸುವುದುಂಟು. ಈ ವೃಕ್ಷ ಉತ್ತರ ಪಿನಾಕಿನಿ ನದಿಯ ಎಡದಂಡೆಯ ಮೇಲಿದೆ. ಇದರ ಬುಡದಲ್ಲಿ ನೂರಾರು ವಿವಿಧಾಕೃತಿಯ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ವೃಕ್ಷದ ಪ್ರಾಕಾರಕ್ಕೆ ಹೊಂದಿಕೊಂಡಂತೆ ಈಶ್ವರ, ನವಗ್ರಹಗಳು, ನಾರಾಯಣ, ಶ್ರೀರಾಮರ ಇತ್ತೀಚಿನ ಕಾಲದ ಸಣ್ಣ ದೇವಸ್ಥಾನಗಳಿವೆ. ಈ ದೇವಸ್ಥಾನದ ಹಿಂಭಾಗದ ಪಶ್ಚಿಮಕ್ಕೆ ಒಂದು ವಿಶಾಲವಾದ ಮರಗಳ ತೋಪಿದೆ. ಪ್ರತಿವರ್ಷ ಚೈತ್ರ ಮಾಸದ ಹುಣ್ಣಿಮೆಯ ದಿನ ದೊಡ್ಡ ಜಾತ್ರೆ ನೆರೆಯುತ್ತದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಇಲ್ಲಿ ನಡೆದ ಒಂದು ಘಟನೆ ಉಲ್ಲೇಖಾರ್ಹವಾಗಿದೆ. 1938ರಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರಮುಖರು ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬರಲು ಶ್ರಮಿಸುತ್ತಿದ್ದರು. ಸತ್ಯಾಗ್ರಹಿಗಳು ಸರ್ಕಾರದ ನಿಷೇಧಾಜ್ಞೆಗಳನ್ನು ಉಲ್ಲಂಘಿಸುತ್ತಿದ್ದರು. ಆ ವರ್ಷದ ಏಪ್ರಿಲ್ 22ರಂದು ವಿದುರಾಶ್ವತ್ಥದಲ್ಲಿ ಜಾತ್ರೆ ನಡೆಯುತ್ತಿದ್ದಾಗ

ಅಶ್ವತ್ಥವೃಕ್ಷ ಮತ್ತು ನಾಗರಕಲ್ಲುಗಳು

ಪೋಲೀಸರು ನೆರೆದಿದ್ದ ಗುಂಪಿನ ಮೇಲೆ ಗುಂಡುಹಾರಿಸಿ ಅನೇಕ ಕಾಂಗ್ರೆಸ್ ನಾಯಕರನ್ನು ಬಂಧಿಸಿದರು. ಮಾರನೆಯ ದಿನವೂ ಜನಸಮುದಾಯ ಸರ್ಕಾರದ ನಿಷೇಧಾಜ್ಞೆಗಳನ್ನು ಉಲ್ಲಂಘಿಸಿತು ಮತ್ತು ಹಲವಾರು ಜನ ಬಂಧಿಸಲ್ಪಟ್ಟರು. 25ರಂದು ಸುಮಾರು 7,000 ಜನ ವಿದುರಾಶ್ವತ್ಥದ ಬಹಿರಂಗ ಸಭೆಯಲ್ಲಿ ಹಾಜರಿದ್ದು, ಧ್ವಜವಂದನೆ ಕಾರ್ಯಕ್ರಮವನ್ನು ಆಚರಿಸಿದರು. ಪೋಲೀಸಿನವರು ಗುಂಪನ್ನು ಚದುರಿಸಲು ಗುಂಡು ಹಾರಿಸಿದಾಗ ಸ್ಥಳದಲ್ಲೇ ಹತ್ತು ಮಂದಿ ಮೃತಪಟ್ಟರು. ಈ ಘಟನೆಯ ಸ್ಮರಣಾರ್ಥವಾಗಿ ಸ್ವಾತಂತ್ರ್ಯಾನಂತರ 1959ರಲ್ಲಿ ಸರ್ವೋದಯ ಮೆಮೋರಿಯಲ್ ಪ್ರೌಢಶಾಲೆಯನ್ನು ಸ್ಥಾಪಿಸಲಾಗಿದೆ. 1962ರಲ್ಲಿ ದೇವಸ್ಥಾನದಲ್ಲಿರುವ ತೋಪಿನಲ್ಲಿ ಮರಣಹೊಂದಿದ ಸತ್ಯಾಗ್ರಹಿಗಳ ನೆನಪಿಗಾಗಿ ಸ್ಮಾರಕಸ್ತಂಭವೊಂದನ್ನು ನಿಲ್ಲಿಸಲಾಗಿದೆ.

(ಬಿ.ಎನ್.ಎಸ್)

**ವಿದ್ಯಾರಣ್ಯ:** 14ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದವರೆಂದು ಐತಿಹ್ಯಗಳಲ್ಲಿ ಪ್ರಸಿದ್ಧರಾಗಿರುವ ಅದ್ವೈತ ಪಂಥದ ಯತಿ; ಶೃಂಗೇರಿ ಮಠಾಧೀಶ; ದರ್ಶನ, ಸಂಗೀತ ಇತ್ಯಾದಿಗಳ ಬಗ್ಗೆ ಮಹತ್ಕೃತಿಗಳನ್ನು ರಚಿಸಿರುವ ಪ್ರತಿಭಾನ್ವಿತ ವಿದ್ವಾಂಸ.

ವಿದ್ಯಾರಣ್ಯರ ಬಗ್ಗೆ ಇತಿಹಾಸಕಾರರಲ್ಲಿ ಅನೇಕ ವಿವಾದಗಳಿವೆ. ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದ ಹಕ್ಕ, ಬುಕ್ಕ ಎಂಬ ಸೋದರರನ್ನು ಇವರು ತಮ್ಮ ಗುರುಗಳ ಅನುಜ್ಞೆಯನ್ನು ಪಡೆದು ಹಿಂದು ಧರ್ಮಕ್ಕೆ ಮತಾಂತರಿಸಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಪ್ರೇರೇಪಿಸಿದರೆಂದು ಕೆಲವು ಐರೋಪ್ಯ ಮತ್ತು ಮುಸ್ಲಿಂ ಗ್ರಂಥಕಾರರ ಬರೆಹಗಳು ಸೂಚಿಸುತ್ತವೆ. ಶಿಥಿಲವಾಗುತ್ತಿದ್ದ ಹಿಂದು ಧರ್ಮದ ಪುನರುದ್ಧಾರಕ್ಕೆ ಶಕ್ತಿಯುತ ಹಿಂದು ರಾಜ್ಯದ ಆವಶ್ಯಕತೆಯಿದೆ ಎಂಬುದನ್ನು ಗಮನಿಸಿದ ವಿದ್ಯಾರಣ್ಯರು, ತುಂಗಭದ್ರಾ ನದಿಯ ದಕ್ಷಿಣ ದಂಡೆಯ ಪಂಪಾ ಕ್ಷೇತ್ರದಲ್ಲಿ ಒಂದು ಪಟ್ಟಣವನ್ನು ಕಟ್ಟಿ, ರಾಜ್ಯಸ್ಥಾಪನೆ ಮಾಡಬೇಕೆಂದು ಹರಿಹರ ಮತ್ತು ಬುಕ್ಕ ಎಂಬ ಸೋದರರನ್ನು ಪ್ರೋತ್ಸಾಹಿಸಿದರೆಂದೂ ಇವರು ಆ ಕಾರ್ಯವನ್ನು ನೆರವೇರಿಸಿ (1336) ತಮ್ಮ ಗುರುಗಳ ಹೆಸರಿನಲ್ಲಿ ವಿದ್ಯಾನಗರ ಎಂದು ಆ ನಗರಕ್ಕೆ ಹೆಸರಿಟ್ಟರೆಂದೂ ಮುಂದೆ ಅದೇ ವಿಜಯನಗರವೆಂದು ಪ್ರಸಿದ್ಧವಾಯಿತು ಎಂಬುದಾಗಿ ಹಲವಾರು ದೇಶಿ ಗ್ರಾಂಥಿಕ ಆಧಾರಗಳ ಮೇಲೆ ಚರಿತ್ರಕಾರರು ಊಹಿಸಿದ್ದಾರೆ. ಈ ವಿಷಯಗಳು 14ನೆಯ ಶತಮಾನದ ಅಂತ್ಯ ಮತ್ತು 15ನೆಯ ಶತಮಾನದ ಹಲವು ಶಾಸನಗಳಲ್ಲೂ ಕಂಡುಬರುತ್ತವೆ.

(ಎಚ್.ವಿ.ಎಚ್.)

ಆದರೆ ವಿದ್ಯಾರಣ್ಯರು ವಿಜಯನಗರ ರಾಜ್ಯ ಸ್ಥಾಪನೆಗೆ ಕಾರಣರಾದರೆಂಬ ವಿಷಯ ಯಾವ ಸಮಕಾಲೀನ ಶಾಸನಗಳಲ್ಲೂ ಪ್ರಸ್ತಾಪವಾಗಿಲ್ಲ; ಅಂದಿನ ಶಾಸನಗಳೆಲ್ಲ ಪಾಶುಪತ ಪಂಥದ ಕ್ರಿಯಾಶಕ್ತಿ ಎಂಬುವರನ್ನೆ ರಾಜಗುರುಗಳಾಗಿ ಹೆಸರಿಸುತ್ತವೆ–ಇತ್ಯಾದಿ ಕಾರಣಗಳಿಂದ ಇವೆಲ್ಲ ಕಟ್ಟುಕಥೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಶೃಂಗೇರಿ ಮಠದ ಗುರುಪರಂಪರೆಯಲ್ಲಿ ವಿದ್ಯಾರಣ್ಯರು 1331ರಲ್ಲಿ ಸಂನ್ಯಾಸ ಸ್ವೀಕಾರ ಮಾಡಿದರೆಂದೂ ಇವರ ಗುರುಗಳಾದ ಭಾರತೀತೀರ್ಥರ ಅನಂತರ 1377ರಿಂದ 1386ರವರೆಗೆ ಪೀಠಾಧಿಪತಿಗಳಾಗಿದ್ದರೆಂದೂ ಉಲ್ಲೇಖಗಳಿವೆ. ವಿಜಯನಗರ ಅರಸರು ಶೃಂಗೇರಿ ಮಠಕ್ಕೆ ವಿಶೇಷ ಗೌರವಸ್ಥಾನವಿತ್ತಿದ್ದರು ಎಂಬುದು ಶಾಸನಗಳಿಂದ ಸ್ಪಷ್ಟವಾಗಿರುವುದಲ್ಲದೆ ವಿದ್ಯಾರಣ್ಯರ ಹೆಸರು ವಿಜಯನಗರ ಸಾಮ್ರಾಜ್ಯದ ಎರಡನೆಯ ದೊರೆ ಒಂದನೆಯ ಬುಕ್ಕನ ಹಲವು ಶಾಸನಗಳಲ್ಲಿ ಕಂಡುಬರುತ್ತದೆ. ಈ ವಿಷಯಗಳನ್ನು ಗಮನಿಸಿದ ಹಲವು ವಿದ್ವಾಂಸರು ವಿಜಯನಗರ ರಾಜ್ಯ ಸ್ಥಾಪನೆಗೆ ಕಾರಣರಾದವರು ವಿದ್ಯಾರಣ್ಯರು. ಆದರೆ ರಾಜ್ಯಸ್ಥಾಪನೆ ಮತ್ತು ಅದರ ಸದ್ಯಃ ಅನಂತರದ ಕಾಲದಲ್ಲಿ ಇವರ ಗುರುಗಳೂ ಪರಮ ಗುರುಗಳೂ ಜೀವಿಸಿದ್ದರಿಂದ ಈ ಕಿರಿಯ ಯತಿಯ ಪ್ರಸ್ತಾಪ ಅಸಾಧುವಾಗುವುದರಿಂದ ಉಲ್ಲೇಖಗಳು ದೊರೆಯುವುದಿಲ್ಲ ಎಂದು ಭಾವಿಸಿದ್ದಾರೆ. ವಿಜಯನಗರದ ಮೊದಲ ಶಾಸನಗಳಲ್ಲಿ ಬಹು ಗೌರವ ವಿಶೇಷಣಗಳೊಡನೆ ಕಂಡುಬರುವ ಪಾಶುಪತಾಚಾರ್ಯ ರಾಜರಾಜ ಗುರು ಕಾಶೀವಿಲಾಸ ಕ್ರಿಯಾಶಕ್ತಿಯೇ ಮುಂದೆ ಅದ್ವೈತಿಯಾಗಿ ಶೃಂಗೇರಿಯ ಮಠದ ಪೀಠವನ್ನು ಅಲಂಕರಿಸಿದರೆಂಬ ಒಂದು ಅಭಿಪ್ರಾಯವೂ ಇದೆ.

ಈ ಕಾಲದಲ್ಲಿದ್ದ ಪ್ರಸಿದ್ಧ ಗ್ರಂಥಕಾರ ಮಾಧವ ಮತ್ತು ವಿದ್ಯಾರಣ್ಯ ಒಬ್ಬರೇ ಅಥವಾ ಬೇರೆ ಬೇರೆ ವ್ಯಕ್ತಿಗಳೇ ಎಂಬುದೂ ವಿವಾದದ ವಿಷಯವಾಗಿದೆ. ಕೆಲವು ವಿದ್ವಾಂಸರು ವಿದ್ಯಾರಣ್ಯರೇ ಮಾಧವರೆಂದೂ ವೇದಭಾಷ್ಯಗಳನ್ನು ರಚನೆ ಮಾಡಿರುವ ಸಾಮುಂತಾಚಾರ್ಯರ ಸೋದರರೆಂದೂ ಅಭಿಪ್ರಾಯಪಡುತ್ತಾರೆ. ಇದಲ್ಲದೆ ಉಪನಿಷತ್ತುಗಳ ವಿವರಣಕಾರರಾದ ಶಂಕರಾನಂದರ ಶಿಷ್ಯರು ಇವರಿದ್ದಿರಬಹುದೆಂಬ ಪ್ರತೀತಿ ಇದೆ. ವಿದ್ಯಾರಣ್ಯ, ಗ್ರಂಥಕಾರ ಮಾಧವ ಮತ್ತು ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದ ಹೊಯ್ಸಳ ಹಾಗೂ ಮಾಧವ ಮಂತ್ರಿ ಒಬ್ಬನೇ ವ್ಯಕ್ತಿ ಎಂದೂ ಕೆಲವರು ಊಹಿಸಿದ್ದಾರೆ. ಆದರೆ ಈ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ದೊರೆತಿಲ್ಲ.

ಸಂಪ್ರದಾಯದಲ್ಲಿ ಪ್ರಸಿದ್ಧರಾಗಿರುವ ವಿದ್ಯಾರಣ್ಯ ಬಹುಮುಖ ಪ್ರತಿಭೆಯ ವ್ಯಕ್ತಿ. ಇವರು ಹಿಂದು ರಾಜ್ಯ ಸ್ಥಾಪನೆಗೆ ಕಾರಣರೂ ಪ್ರಸಿದ್ಧ ಮಠದ ಅಧಿಪತಿಗಳೂ ಆಗಿದ್ದರು. ಇವರು ವಿಖ್ಯಾತ ವೈಚಾರಿಕರು. ಶಂಕರಾಚಾರ್ಯರ ಅನಂತರ ಅದ್ವೈತ ವೇದಾಂತ ಪುಷ್ಟಿ ನಡೆದದ್ದು ಇವರಿಂದಲೇ. ವಿವರಣಾ ಸಂಪ್ರದಾಯ ಎಂದು ಕರೆಯಲ್ಪಡುವ ದ್ವೈತ ಪರಂಪರೆಯನ್ನು ಸ್ಪಷ್ಟವಾಗಿ ನಿರೂಪಿಸಿ ಜನಪ್ರಿಯಗೊಳಿಸಿದವರು ವಿದ್ಯಾರಣ್ಯರು. ಇವರ ವಿವರಣಾಪ್ರಮೇಯ ಸಂಗ್ರಹ ಈ ದೃಷ್ಟಿಯಿಂದ ಬರೆದ ಮಹತ್ತ್ವದ ಕೃತಿ. ಅದ್ವೈತ ವೇದಾಂತ ಸಾರವನ್ನು ನಿರೂಪಿಸುವ ಪಂಚದಶೀ, ಜೀವನ್ಮುಕ್ತಿ ವಿವೇಕ, ಅನುಭೂತಿ ಪ್ರಕಾಶ ಎಂಬ ಗ್ರಂಥಗಳನ್ನೂ ಇವರು ಬರೆದಿದ್ದಾರೆ. ಭಾರತೀಯ ತತ್ತ್ವಶಾಸ್ತ್ರ ಪ್ರಕಾರಗಳ ಸುಲಭ

ಪರಿಚಯುವನ್ನು ಮಾಡಿಕೊಡುವ ಸರ್ವದರ್ಶನ ಸಂಗ್ರಹ ಜ್ಯೋತಿಷ್ಯ ಕೃತಿ ಕಾಲನಿರ್ಣಯ, ಶಂಕರವಿಜಯ ಮುಂತಾದ ಇತರ ಗ್ರಂಥಗಳೂ ಇವರೇ ರಚಿಸಿದರೆಂಬ ನಂಬಿಕೆ ಇದೆ.

ವಿದ್ಯಾರಣ್ಯರು ಸಂಗೀತಸಾರ (ಈಗ ಅನುಪಲಬ್ಧ) ಎಂಬ ಸಂಗೀತ ಗ್ರಂಥವನ್ನೂ ರಚಿಸಿದ್ದಾರೆ. ಅದರಲ್ಲಿ ರಾಗಗಳ ಜನಕ ಜನ್ಯ ರೀತಿಗಳ ಮೊದಲ ನಿರೂಪಣೆ ಕಂಡುಬರುವುದೆಂದೂ ಇವರು ನಿರೂಪಿಸಿ ರುವ ಪ್ರಕಾರದಿಂದಲೇ ದಕ್ಷಿಣಾದಿ ಸಂಗೀತ ರೀತಿಗೆ ಕರ್ಣಾಟಕ ಸಂಗೀತ ಎಂಬ ಹೆಸರು ಬರಲು ಕಾರಣವಾಯಿತೆಂದೂ ಒಂದು ಅಭಿಪ್ರಾಯವಿದೆ.

ವಿದ್ಯಾರಣ್ಯರು ವಿದ್ಯಾಪ್ರೇಮಿಗಳಾಗಿದ್ದರೆಂದೂ ವಿಶಿಷ್ಟಾದ್ವೈತ ವೇದಾಂತ ದೇಶಿಕ, ದ್ವೈತಿ ಟೀಕಾಚಾರ್ಯ ಈ ಸಮಕಾಲೀನರನ್ನು ಗೌರವಿಸಿದ್ದರೆಂದೂ ಪ್ರತೀತಿಗಳಿವೆ.

ವಿದ್ಯಾರಣ್ಯರು 1386ರಲ್ಲಿ ಹಂಪೆಯಲ್ಲಿ ಮೃತರಾದರೆಂದೂ ಅಲ್ಲಿಯ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿ ಇವರ ಸಮಾಧಿ ಇದೆಯೆಂದೂ ಕೆಲವು ದಾಖಲೆಗಳು ತಿಳಿಸುತ್ತವೆ. *

**ವಿದ್ಯುಚ್ಛಕ್ತಿ:** ಭಾರತದಲ್ಲಿ ಪ್ರಪ್ರಥಮವಾಗಿ ಜಲವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ.

ಮೈಸೂರಿನ ದಿವಾನರಾಗಿದ್ದ ಕೆ.ಶೇಷಾದ್ರಿ ಅಯ್ಯರ್ ಅವರ ದೂರದರ್ಶಿತ್ವದಿಂದಾಗಿ ಭಾರತದ ಪ್ರಪ್ರಥಮ ಜಲವಿದ್ಯುತ್ ಯೋಜನೆ ಕೋಲಾರದ ಚಿನ್ನದ ಗಣಿ ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಉದ್ದೇಶದಿಂದ 1902ರಲ್ಲಿ ಶಿವಸಮುದ್ರದಲ್ಲಿ ಕಾರ್ಯಗತವಾಯಿತು. ಕಾವೇರಿ ನದಿಯ ನೀರು ಈ ಯೋಜನೆಗೆ ಆಧಾರ. ಈ ಯೋಜನೆಯ ಪ್ರಥಮ ಹಂತದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 4,300 ಕಿವಾ. ಶಿವಸಮುದ್ರದ ಉತ್ಪಾದನಾ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಪ್ರದೇಶದ ತನಕ ಇದ್ದ 33 ಕಿವಾಗಳ 92 ಮೈಲು ಉದ್ದದ ಹೈವೋಲ್ಟೇಜಿನ ಪ್ರಸರಣ ತಂತಿಗಳು ಆ ಕಾಲದಲ್ಲಿ ಪ್ರಪಂಚದಲ್ಲೇ ಅತ್ಯಂತ ಉದ್ದವಾದ ಸಂಚರಣ ತಂತಿಗಳೆಂದು ದಾಖಲೆಯನ್ನು ಸ್ಥಾಪಿಸಿದ್ದುವು. ವಿದ್ಯುಚ್ಛಕ್ತಿಗೆ ಬೇಡಿಕೆ ಅಧಿಕವಾದಂತೆಲ್ಲ ಶಿವಸಮುದ್ರ ಪ್ರಥಮ ಹಂತದ ಘಟಕಗಳಿಗೆ ಮತ್ತಷ್ಟು ಘಟಕಗಳು ಸೇರಿಸಲ್ಪಟ್ಟವು. ಇಂದಿನ ಅದರ ಸಾಮರ್ಥ್ಯ 42 ಮಿವಾ. ಈಗ ಇಲ್ಲಿ ಹತ್ತು ವಿದ್ಯುಜ್ಜನಕಗಳಿವೆ. ಇಂದು ಇದನ್ನು ಕೆ.ಶೇಷಾದ್ರಿ ಅಯ್ಯರ್ ವಿದ್ಯುತ್ ಕೇಂದ್ರ ಎಂದು ಕರೆಯಲಾಗುವುದು.

ಕರ್ನಾಟಕದ ಎರಡನೆಯ ಜಲವಿದ್ಯುತ್ ಯೋಜನೆ 1940ರಲ್ಲಿ ಮದ್ದೂರಿನಿಂದ ಸು. 38 ಕಿಮೀ ದೂರದಲ್ಲಿರುವ ಶಿಂಷಾಪುರದಲ್ಲಿ ಸ್ಥಾಪಿಸಲ್ಪಟ್ಟಿತು. ಕಾವೇರಿ ನದಿಯ ನೀರಿನ ಸ್ವಲ್ಪಭಾಗವನ್ನು ಶಿಂಷಾ ಕಣಿವೆಗೆ ಹರಿಯಿಸುವುದರ ಮೂಲಕ ವಿದ್ಯುತ್ ಉತ್ಪಾದಿಸಲಾಗುತ್ತದೆ. ಇಲ್ಲಿಯ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 17.2 ಮಿವಾ. ಇಲ್ಲಿ ಎರಡು ವಿದ್ಯುಜ್ಜನಕಗಳಿವೆ.

ಎರಡನೆಯ ಮಹಾಯುದ್ಧಾನಂತರ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯ ಬೇಡಿಕೆ ಹೆಚ್ಚಿ ಆಗಿನ ಸರ್ಕಾರ ವಿದ್ಯುತ್ ಉತ್ಪಾದನೆಗೆ ಶರಾವತಿ ನದಿಯನ್ನೂ ಬಳಸುವ ಯೋಜನೆ ಹಾಕಿಕೊಂಡಿತು. ಜೋಗ ಜಲಪಾತದ ಬಳಿಯಿರುವ ಮಹಾತ್ಮಗಾಂಧಿ ಜಲವಿದ್ಯುತ್ ಯೋಜನೆಯ ಮೊದಲನೆಯ ಹಂತ 1947ರಲ್ಲಿ ಪೂರ್ಣಗೊಂಡಿತು. ಆಗ ಇದು ನಾಲ್ಕು ವಿದ್ಯುಜ್ಜನಕಗಳನ್ನು ಹೊಂದಿದ್ದು, ಅದರ ಉತ್ಪಾದನಾ ಸಾಮರ್ಥ್ಯ 48 ಮಿವಾ ಇತ್ತು. ವಿದ್ಯುತ್ತಿನ ಬೇಡಿಕೆ ಬಹಳವಾಗಿ ಏರಿದುದರಿಂದ ಈ ಯೋಜನೆಯ ಮೊದಲನೆಯ ಹಂತ ಪೂರ್ಣಗೊಳ್ಳುವ ಮೊದಲೇ ಎರಡನೆಯ ಹಂತದ ಕೆಲಸವೂ ಪ್ರಾರಂಭಿಸಲ್ಪಟ್ಟಿತು. ಎರಡನೆಯ ಹಂತ ನಾಲ್ಕು ವಿದ್ಯುಜ್ಜನಕಗಳನ್ನು ಹೊಂದಿದ್ದು ಅದರ ಉತ್ಪಾದನಾ ಸಾಮರ್ಥ್ಯ 72 ಮಿವಾ ಇತ್ತು. ಈಗ ಜೋಗ್‌ನಲ್ಲಿರುವ ಮಹಾತ್ಮಾಗಾಂಧಿ ಜಲವಿದ್ಯುತ್ ಸ್ಥಾವರದ ಒಟ್ಟು ಉತ್ಪಾದನಾ ಸಾಮರ್ಥ್ಯ 120 ಮಿವಾ.

ಭಾಷಾವಾರು ಪ್ರಾಂತ್ಯರಚನೆಯಾದಾಗ ಬಳ್ಳಾರಿ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ವಿಲೀನಗೊಂಡಿತು. ಇದರಿಂದಾಗಿ ತುಂಗಭದ್ರಾ ಯೋಜನೆಯ ಬಲದಂಡೆಯಲ್ಲಿ ಉತ್ಪಾದಿಸಲ್ಪಡುವ ವಿದ್ಯಚ್ಛಕ್ತಿಯಲ್ಲಿ ಕರ್ನಾಟಕವೂ ಒಂದು ಪಾಲು ಪಡೆಯುವಂತಾಯಿತು (1957). ತುಂಗಭದ್ರಾದ ಬಲದಂಡೆಯಲ್ಲಿ ಎರಡು ಕಡೆಗಳಲ್ಲಿ, ಎಂದರೆ ತುಂಗಭದ್ರಾ ಅಣೆಕಟ್ಟಿನ ಬಳಿ ಮತ್ತು ಹಂಪೆಯಲ್ಲಿ, ಉತ್ಪಾದಿಸಲ್ಪಡುವ ಒಟ್ಟು ವಿದ್ಯುಚ್ಛಕ್ತಿಯ ಪ್ರಮಾಣ 72 ಮಿವಾ. ಇದರಲ್ಲಿ ಕರ್ನಾಟಕದ ಪಾಲು 14.4 ಮಿವಾ.



ವಿದ್ಯುತ್ ಪ್ರಸರಣವಾಗುತ್ತಿರುವ ಟ್ರಾನ್ಸ್‌ಫಾರ್ಮರ್‌ಗಳು

ತುಂಗಭದ್ರಾ ನದಿಯ ನೀರನ್ನು ಅವಲಂಬಿಸಿದ ಮುನಿರಾಬಾದ ವಿದ್ಯುತ್ ಸ್ಥಾವರ 1962ರಲ್ಲಿ ಅಸ್ತಿತ್ವಕ್ಕೆ ಬಂತು. ಇಲ್ಲಿ ಮೂರು ವಿದ್ಯುಜ್ಜನಕಗಳಿವೆ. ಇದರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 27.0 ಮಿವಾ.

ಇದೇ ಸಮಯದಲ್ಲಿ ಭದ್ರಾ ಜಲವಿದ್ಯುತ್ ಯೋಜನೆಯೂ ಪ್ರಾರಂಭಿಸಲ್ಪಟ್ಟಿತು. ಇದರ ಪ್ರಥಮ ಹಂತ 1962ರಲ್ಲಿ ಪೂರ್ಣಗೊಂಡಿತು. ಇಂದು ಇದರ ಉತ್ಪಾದನಾ ಸಾಮರ್ಥ್ಯ 33.2 ಮಿವಾ. ಇದು ನಾಲ್ಕು ವಿದ್ಯುಜ್ಜನಕಗಳನ್ನು ಒಳಗೊಂಡಿದೆ.

ಶರಾವತಿಯ ಬೃಹತ್ ಜಲವಿದ್ಯುತ್ ಯೋಜನೆ ಬಹಳ ಹಿಂದಿನಿಂದಲೇ ಸರ್ಕಾರದ ಗಮನದಲ್ಲಿದ್ದಿತಾದರೂ ಹಲವು ಕಾರಣಗಳಿಂದಾಗಿ ಅದರ ಕೆಲಸ 1958ಕ್ಕೆ ಮುನ್ನ ಪ್ರಾರಂಭವಾಗುವುದು ಸಾಧ್ಯವಾಗಲಿಲ್ಲ. 89.1 ಮಿವಾ. ಸಾಮರ್ಥ್ಯದ ಎರಡು ವಿದ್ಯುಜ್ಜನಕಗಳನ್ನು ಒಳಗೊಂಡ ಮೊದಲನೆಯ ಹಂತದ ಕೆಲಸ 1958ರಲ್ಲಿ ಆರಂಭವಾಯಿತು. ಅಷ್ಟೇ ಸಾಮರ್ಥ್ಯದ ಆರು ವಿದ್ಯುಜ್ಜನಕಗಳನ್ನು ಒಳಗೊಂಡ ಎರಡನೆಯ ಹಂತದ ಕೆಲಸವೂ ಸುಮಾರಾಗಿ ಅದೇ ಸಮಯದಲ್ಲೇ ಪ್ರಾರಂಭವಾಯಿತು. ಇಂದು ಈ ವಿದ್ಯುತ್‌ಸ್ಥಾವರದ ಒಟ್ಟು ಸಾಮರ್ಥ್ಯ 891ಮಿವಾ. ಇಲ್ಲಿಯ ವಿದ್ಯುತ್ ಉತ್ಪಾದನೆ ಶರಾವತಿ ನದಿಯು ಹರಿಯುವ ಪ್ರದೇಶದಲ್ಲಿ ಬೀಳುವ ಮಳೆಯ ನೀರನ್ನು ಬಹಳವಾಗಿ ಅವಲಂಬಿಸಿದೆ. ಪ್ರತಿವರ್ಷ 1,62,000 ಮಿಲಿಯ ಘನ ಅಡಿ ನೀರನ್ನು ಬಳಸುವ ಉದ್ದೇಶವಿಟ್ಟುಕೊಂಡು ಈ ಯೋಜನೆ ರೂಪಿಸಲ್ಪಟ್ಟಿದೆ. ಈ ಯೋಜನೆಯ ಮುಖ್ಯ ಜಲಾಶಯ ಲಿಂಗನಮಕ್ಕಿಯಲ್ಲಿದೆ. ಹೆಚ್ಚುವರಿ ನೀರನ್ನು ಸಂಗ್ರಹಿಸಿಟ್ಟು ಬಳಸುವ ಸೌಲಭ್ಯವನ್ನು ಲಿಂಗನಮಕ್ಕಿ ಜಲಾಶಯ ಹೊಂದಿದೆ.

ಕಾಳೀನದಿ ಯೋಜನೆ ಶರಾವತಿ ಯೋಜನೆಯಷ್ಟೇ ಬೃಹತ್ತಾದುದು. ಈ ಯೋಜನೆಗೆ 1971ರಲ್ಲಿ ಅನುಮತಿ ದೊರಕಿತು. ಎರಡು ಹಂತಗಳಲ್ಲಿ ಪೂರ್ಣಗೊಳ್ಳಲಿರುವ ಈ ಜಲವಿದ್ಯುತ್ ಯೋಜನೆ ಐದು ವಿದ್ಯುತ್ ಸ್ಥಾವರಗಳನ್ನು ಒಳಗೊಂಡಿರುತ್ತದೆ.

1 ನಾಗ್ಝರಿಯಲ್ಲಿನ ವಿದ್ಯುತ್ ಸ್ಥಾವರ: ಇದು 810 ಮಿವಾ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

2 ಸುಪಾ ಅಣೆಕಟ್ಟಿನ ಬಳಿಯ ವಿದ್ಯುತ್‌ಸ್ಥಾವರ: ಇದು 100 ಮಿವಾ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ.

3 ದಾಂಡೇಲಿ ಅಣೆಕಟ್ಟಿನ ಬಳಿಯ ವಿದ್ಯುತ್ ಸ್ಥಾವರ: ಇದು 50 ಮಿವಾ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ.

4 ಕೋಡನಳ್ಳಿ ಅಣೆಕಟ್ಟಿನ ವಿದ್ಯುತ್ ಸ್ಥಾವರ: ಇದು 96 ಮಿವಾ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ.

5 ಕಾದ್ರಾ ಅಣೆಕಟ್ಟಿನ ವಿದ್ಯುತ್ ಸ್ಥಾವರ: ಇದು 75 ಮಿವಾ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

ನಾಗ್ಝರಿ ಮತ್ತು ಸುಪಾಗಳು ಮೊದಲನೆಯ ಹಂತದಲ್ಲಿ ಪೂರ್ಣಗೊಂಡು, ಉಳಿದ ಮೂರು ಸ್ಥಾವರಗಳು ಎರಡನೆಯ ಹಂತದಲ್ಲಿ ಪೂರ್ಣಗೊಳ್ಳುತ್ತವೆ. ಈ ಯೋಜನೆ ಪೂರ್ಣಗೊಂಡಾಗ ಒಟ್ಟು 1,131 ಮಿವಾ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಇದಕ್ಕೆ ತಗಲುವ ವೆಚ್ಚ ಸುಮಾರು 154 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಸುಪಾ ಜಲಾಶಯ ಈ ಜಲವಿದ್ಯುತ್ ಯೋಜನೆಯ ಜೀವಾಳವಾಗಿದೆ. ಈ ಜಲಾಶಯ 4,350 ಮಿಲಿಯ ಘನ ಅಡಿಗಳಷ್ಟು ನೀರನ್ನು 129 ಚ.ಕಿಮೀ ಪ್ರದೇಶದಲ್ಲಿ ಶೇಖರಿಸುವುದು. ಇಲ್ಲಿಯ ಅಣೆಕಟ್ಟಿನ ಎತ್ತರ 101 ಮೀ.

ಕರ್ನಾಟಕ ತನ್ನ ಜಲವಿದ್ಯುತ್ ಯೋಜನೆಗಳನ್ನೆಲ್ಲ ಕೈಗೊಂಡು ಪೂರ್ಣಗೊಳಿಸಿದರೆ ಸು. 5,000 ಮಿವಾ ಅಧಿಕ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಶಕ್ತವಾಗುತ್ತದೆ. ಪರಮಾಣು ವಿದ್ಯುತ್ ಸ್ಥಾವರ ಮತ್ತು ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿಗೆ ಹೋಲಿಸಿದರೆ ಜಲವಿದ್ಯುತ್ ಸ್ಥಾವರಗಳು ಕಡಿಮೆ ಖರ್ಚಿನಲ್ಲಿ ನಡೆಯುತ್ತವೆ. ಜಲವಿದ್ಯುತ್ ಕೇಂದ್ರಗಳ ಮೂಲಕ ವಿದ್ಯುತ್ತನ್ನು ಉತ್ಪಾದಿಸಲು ತಗಲುವ ಖರ್ಚು ವಿದ್ಯುತ್ ಮೂಲಮಾನಕ್ಕೆ ಸುಮಾರು 3 ರಿಂದ 6 ಪೈಸೆಗಳು.

ಕರ್ನಾಟಕದಲ್ಲಿ ಸಾಧ್ಯವಿರುವ ಎಲ್ಲ ಜಲವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸಿದರೆ ಆಗ ಇಲ್ಲಿ ಪ್ರತಿವ್ಯಕ್ತಿಯೂ ಸರಾಸರಿ 650 ಯೂನಿಟ್ ವಿದ್ಯುಚ್ಛಕ್ತಿಯನ್ನು ಪಡೆಯಬಹುದೆಂಬುದು ಒಂದು ಅಂದಾಜು.

ಕರ್ನಾಟಕದ ಜಲ ವಿದ್ಯುಚ್ಛಕ್ತಿಯ ಪ್ರಮಾಣ ಇತರ ರಾಜ್ಯಗಳಿಗೆ ಹೋಲಿಸಿದರೆ ಕಡಮೆಯೇನಿಲ್ಲ. ಆದರೆ ಮುಂದೆ ಬರಲಿರುವ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಲು ಇದು ಸಾಲದು. ಕರ್ನಾಟಕದಲ್ಲಿ ಕಲ್ಲಿದ್ದಲಿನ ಗಣಿಗಳಿಲ್ಲ. ನೆರೆಯ ಆಂಧ್ರ ಪ್ರದೇಶದಿಂದ ಕಲ್ಲಿದ್ದಲಿನ ಸರಬರಾಜಾಗುತ್ತದೆ. ಹಾಗಾಗಿ ಕಲ್ಲಿದ್ದಲು ಬಳಸುವ ಉಷ್ಣ ವಿದ್ಯುತ್ ಸ್ಥಾವರಗಳು ಇಲ್ಲಿ ಸ್ವಲ್ಪ ದುಬಾರಿ ಎನಿಸಬಹುದು. ರಾಯಚೂರಿನಲ್ಲಿ ಒಂದು ಉಷ್ಣ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲಾಗಿದೆ.

ಉಷ್ಣಸ್ಥಾವರಗಳು: ಅಧಿಕ ಲೋಡ್‌ಫ್ಯಾಕ್ಟರ್‌ನಲ್ಲಿ ಕೆಲಸ ಮಾಡಿದರೆ ಅವುಗಳಿಗೆ ತಗಲುವ ಖರ್ಚು ಇಳಿಮುಖವಾಗುತ್ತದೆ. ಕರ್ನಾಟಕದ ಈಗಿನ ಲೋಡ್‌ಫ್ಯಾಕ್ಟರ್ ಸುಮಾರು 88%. ಕರ್ನಾಟಕದ ಜಲವಿದ್ಯುತ್ ಸ್ಥಾವರಗಳು 50–60 ಲೋಡ್ ಫ್ಯಾಕ್ಟರಿನಲ್ಲಿ ಕೆಲಸಮಾಡುವಂತೆ ವಿನ್ಯಾಸಗೊಂಡಿವೆ. ಹಾಗಾಗಿ ಉಷ್ಣ ವಿದ್ಯುತ್ ಸ್ಥಾವರ ಮತ್ತು ಪರಮಾಣು ವಿದ್ಯುತ್ ಸ್ಥಾವರಗಳೊಡನೆ ಸೇರಿಕೊಂಡು

ಕರ್ನಾಟಕದ ಜಲವಿದ್ಯುತ್ ಯೋಜನೆಗಳ ಪಕ್ಷಿನೋಟ

| **ಕ್ರಸಂ** | **ಸ್ಥಾವರದ ಹೆಸರು** | **ವಿದ್ಯುಜ್ಜನಕಗಳ ಸಂಖ್ಯೆ** | **ಉತ್ಪಾದನಾ–ಸಾಮರ್ಥ್ಯ (ಮಿಲಿಯ ವಾಟ್ಸ್‌ಗಳಲ್ಲಿ)** |
|---|---|---|---|
| 1. | ಕೆ.ಶೇಷಾದ್ರಿ ಅಯ್ಯರ್ ಜಲವಿದ್ಯುತ್ ಸ್ಥಾವರ, ಶಿವಸಮುದ್ರ | 10 | 42.0 |
| 2. | ಶಿಂಷಾ ಜಲವಿದ್ಯುತ್ ಸ್ಥಾವರ | 2 | 17.2 |
| 3. | ಮಹಾತ್ಮಾಗಾಂಧಿ ಜಲವಿದ್ಯುತ್ ಸ್ಥಾವರ, ಜೋಗ | 8 | 120.0 |
| 4. | ತುಂಗಭದ್ರಾ ಬಲದಂಡೆಯ ಸ್ಥಾವರ (ಕರ್ನಾಟಕದ 20% ಪಾಲು) | – | 14.4 |
| 5. | ಮುನಿರಾಬಾದ ವಿದ್ಯುತ್‌ಸ್ಥಾವರ, ಮುನಿರಾಬಾದ | 3 | 27.0 |
| 6. | ಭದ್ರಾ ಜಲವಿದ್ಯುತ್ ಸ್ಥಾವರ | 4 | 33.2 |
| 7. | ಶರಾವತಿ ಜಲವಿದ್ಯುತ್ ಸ್ಥಾವರ,ಜೋಗ | 10 | 891.0 |
| 8. | ಕಾಳೀನದಿ ಯೋಜನೆ (ಎ)ಸುಪಾ<br>(ಬಿ)ನಾಗ್ಝರಿ | 2<br>6 | 100.0<br>810.0 |
| 9. | ಲಿಂಗನಮಕ್ಕಿ ಅಣೆಕಟ್ಟಿನ ಸ್ಥಾವರ | 2 | 55.0 |
| 10. | ಬೇಡ್ತಿ ಜಲವಿದ್ಯುತ್ ಸ್ಥಾವರ | 4 | 420.0 |
| 11. | ವರಾಹಿ ಜಲವಿದ್ಯುತ್ ಸ್ಥಾವರ | 4 | 460.0 |
| 12. | ಶರಾವತಿ ಹಿಂಬದಿಯ ಸ್ಥಾವರ | – | 240.0 |
| 13. | ಕೋಡನಳ್ಳಿ ಅಣೆಕಟ್ಟಿನ ಸ್ಥಾವರ | 3 | 96.0 |
| 14. | ಕಾದ್ರಾ ಅಣೆಕಟ್ಟಿನ ಸ್ಥಾವರ | 3 | 75.0 |
| 15. | ದಾಂಡೇಲಿ ಅಣೆಕಟ್ಟಿನ ಸ್ಥಾವರ | 2 | 50.0 |
| 16. | ಅಘನಾಶಿನಿ ಸ್ಥಾವರ | – | 300.0 |
| 17. | ಕೃಷ್ಣರಾಜಸಾಗರ ಅಣೆಕಟ್ಟಿನ ಸ್ಥಾವರ | – | 40.0 |
| 18. | ಬರಪೊಳೆ ಜಲವಿದ್ಯುತ್ ಸ್ಥಾವರ | – | 125.0 |
| 19. | ಕಬಿನಿ ಅಣೆಕಟ್ಟಿನ ಸ್ಥಾವರ | – | 32.0 |
| 20. | ಘಟಪ್ರಭಾ ಅಣೆಕಟ್ಟಿನ ಸ್ಥಾವರ | – | 28.4 |
| 21. | ಕೃಷ್ಣಾ ಮೇಲ್ದಂಡೆಯ ಯೋಜನೆ | – | 250.0 |
| 22. | ಮಹಾದಾಯಿ ಸ್ಥಾವರ | – | 30.0 |
| 23. | ನೇತ್ರಾವತಿ ಜಲವಿದ್ಯುತ್ ಯೋಜನೆ | – | 100.0 |
| 24. | ತುಂಗಭದ್ರಾ ಜಲವಿದ್ಯುತ್ ಯೋಜನೆ | – | 32.0 |

ವಿದ್ಯುತ್ ಪೂರೈಕೆ ಮಾಡಲು ಕರ್ನಾಟಕದ ಜಲವಿದ್ಯುತ್ ಸ್ಥಾವರಗಳು ಅನುಕೂಲಕರವಾಗಿವೆ. ಖನಿಜತೈಲಗಳ ಬೆಲೆ ಹೆಚ್ಚಾಗುತ್ತಿರುವುದರಿಂದಲೂ ಕರ್ನಾಟಕದಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳು ದೊರಕದಿರುವುದರಿಂದಲೂ ಕರ್ನಾಟಕ ಪರಮಾಣು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಪ್ರಯತ್ನಿಸುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಕೈಗಾ ಪರಮಾಣು ವಿದ್ಯುತ್ ಉತ್ಪಾದನಾ ಕೇಂದ್ರ ಮೈಲಿಗಲ್ಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಉಷ್ಣಸ್ಥಾವರ (ಥರ್ಮಲ್) ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿಸಲಾಗಿದೆ.

ಹೆಚ್ಚು ಪ್ರಮಾಣದ ವಿದ್ಯುಚ್ಛಕ್ತಿಯನ್ನು ಬಳಸುವ ದೊಡ್ಡ ಕೈಗಾರಿಕೆಗಳು ಮೈಸೂರು, ಬೆಂಗಳೂರು, ಶಿವಮೊಗ್ಗ ಮತ್ತು ಭದ್ರಾವತಿ, ಮಂಗಳೂರು, ಹಾಸನ, ಹುಬ್ಬಳ್ಳಿ ಮತ್ತು ಧಾರವಾಡ, ಬೆಳಗಾಂವಿ, ಮುನಿರಾಬಾದ ಮತ್ತು ಹೊಸಪೇಟೆ, ಹರಿಹರ ಮತ್ತು ದಾವಣಗೆರೆ ಈ ಸ್ಥಳಗಳಲ್ಲಿ ಬೆಳೆಯುತ್ತಿವೆ. ಈ ಸ್ಥಳಗಳಲ್ಲಿ ಮುಖ್ಯವಾದ ಗ್ರಾಹಕಠಾಣ್ಯಗಳು ರಿಸೀವಿಂಗ್ ಸ್ಟೇಷನ್ನುಗಳು ಇರುತ್ತವೆ. 220 ಸಹಸ್ರ ವೋಲ್ಟಿನ ಪ್ರಸರಣ ತಂತಿಗಳು ಮುಖ್ಯ ವಿದ್ಯುತ್ ಸ್ಥಾವರಗಳನ್ನು ಮತ್ತು ರಿಸೀವಿಂಗ್ ಸ್ಟೇಷನ್ನುಗಳನ್ನು ಜೋಡಿಸುತ್ತವೆ. 110, 66 ಮತ್ತು 33 ಸಹಸ್ರ ವೋಲ್ಟಿನ ಪ್ರಸರಣ ತಂತಿಗಳು ರಿಸೀವಿಂಗ್ ಸ್ಟೇಷನ್ ಮತ್ತು ಹಲವಾರು ಸಬ್‌ಸ್ಟೇಷನ್ನುಗಳನ್ನು ಜೋಡಿಸುತ್ತವೆ. ಸಬ್‌ಸ್ಟೇಷನ್ನುಗಳಿಂದ ಹೊರಡುವ 110, 66 ಮತ್ತು 33 ಸಹಸ್ರ ವೋಲ್ಟಿನ ಪ್ರಸರಣ ತಂತಿಗಳು ಬೇರೆ ಬೇರೆ ಜಿಲ್ಲೆ ಮತ್ತು ತಾಲ್ಲೂಕುಗಳ ಸಬ್‌ಸ್ಟೇಷನ್ನುಗಳನ್ನು ಜೋಡಿಸುತ್ತವೆ. ಈ ಚಿಕ್ಕ ಸಬ್‌ಸ್ಟೇಷನ್ನುಗಳಲ್ಲಿ 11 ಸಹಸ್ರ ವೋಲ್ಟಿನ ಪ್ರಸರಣ ತಂತಿಗಳು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತವೆ.

1902ರಲ್ಲಿ ಕರ್ನಾಟಕದಲ್ಲಿ ಉತ್ಪಾದನೆಯಾಗುತ್ತಿದ್ದ ವಿದ್ಯುಚ್ಛಕ್ತಿ ಕೇವಲ 4.3 ಮಿವಾ. 1977ರಲ್ಲಿ ಈ ಉತ್ಪಾದನೆಯ ಪ್ರಮಾಣ 1,144.8 ಮಿವಾ ಗಳಿಗೆ ಏರಿತು. ವಿದ್ಯುತ್ತಿನ ಬೇಡಿಕೆಯು ಕೈಗಾರಿಕೆಗಳಲ್ಲಿನ ಹೆಚ್ಚಳದಿಂದಾಗಿ ಈ ವಿದ್ಯುತ್ ಪೂರೈಕೆ ಇನ್ನೂ ಸಮರ್ಪಕವಾಗಿಲ್ಲದಿದ್ದರೂ ಈ ನಿಟ್ಟಿನಲ್ಲಿ ಗಮನಾರ್ಹ ಸಾಧನೆಯಾಗಿದೆ. ಖಾಸಗಿ ಕ್ಷೇತ್ರದಿಂದಲೂ ಕಿರುಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ನೀಡಿದ್ದು ಅವು ಉತ್ತಮ ಫಲಿತಾಂಶ ನೀಡುವುದರಲ್ಲಿ ಸಂದೇಹವಿಲ್ಲ.

(ಕೆ.ಸಿ.ಜಿ.)

**ವಿಧಾನ ಮಂಡಲ:** ಸಂಸದೀಯ ಪ್ರಜಾಸತ್ತಾತ್ಮಕ ಗಣರಾಜ್ಯ ತತ್ತ್ವ ಮತ್ತು ಪದ್ಧತಿಗಳ ಆಧಾರದ ಮೇಲೆ ಕೇಂದ್ರದ ಸಂಸತ್ತಿನಂತೆಯೇ ರಾಜ್ಯ ವಿಧಾನ ಮಂಡಲವಿದೆ. ಕರ್ನಾಟಕ ರಾಜ್ಯ ವ್ಯವಸ್ಥೆ ಸಂಸದೀಯ ಪ್ರಜಾಪ್ರಭುತ್ವ ನೀತಿಗನುಗುಣವಾಗಿ ರೂಪಿತವಾಗಿದ್ದು ಅವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೆಂದು ವಿಭಾಗಿಸಿದೆ. ವಿಧಾನ ಮಂಡಲವೇ ಶಾಸಕಾಂಗ, ಶಾಸಕಾಂಗ ಒಂದು ದ್ವಿಸದನ ಮಂಡಲ. ಈ ವಿಧಾನ ಮಂಡಲದಲ್ಲಿ ರಾಜ್ಯಪಾಲರನ್ನೊಳಗೊಂಡು ವಿಧಾನ ಸಭೆ ಹಾಗೂ ವಿಧಾನ ಪರಿಷತ್ತು ಎಂಬ ಎರಡು ಸದನಗಳಿವೆ.

ಜನತೆ ನೇರವಾಗಿ ಚುನಾಯಿಸಿದ 224 ಮಂದಿ ಹಾಗೂ ನಾಮನಿರ್ದೇಶಿತ ಒಬ್ಬ ಸದಸ್ಯ ವಿಧಾನ ಸಭೆಯಲ್ಲಿರುತ್ತಾರೆ. ವಿಧಾನ ಸಭಾ ಕ್ಷೇತ್ರಗಳ ವಿಂಗಡಣೆ ಮತ್ತು ಸದಸ್ಯ ಸಂಖ್ಯೆಯ ಪರಿಷ್ಕರಣ 10 ವರ್ಷಕ್ಕೊಮ್ಮೆ ಜನಗಣತಿ ಆಧಾರದ ಮೇಲೆ ನಿರ್ಧರಿಸಲಾಗುವುದು. ರಾಜ್ಯವನ್ನು 216 ಚುನಾವಣಾ ಕ್ಷೇತ್ರಗಳಾಗಿ ವಿಂಗಡಿಸಲಾಗಿದ್ದು, ಆ ಪೈಕಿ 28 ಕ್ಷೇತ್ರಗಳನ್ನು ಅನುಸೂಚಿತ ಜಾತಿಗಳವರಿಗೆ ವರ್ಷಗಳಿಗೊಮ್ಮೆ ಜನಗಣತಿ ಆಧಾರದ ಮೇಲೆ ನಿರ್ಧರಿಸಲಾಗುವುದು. ಈ ಕ್ಷೇತ್ರಗಳನ್ನು ಸಾಮಾನ್ಯ ವರ್ಗಕ್ಕೂ ಅನುಸೂಚಿತ ಮತ್ತು ಆದಿಮ ಜಾತಿಗಳವರಿಗೆ ಮೀಸಲಿರಿಸಿದೆ. ಪ್ರತಿಯೊಂದು ಕ್ಷೇತ್ರಗಳಿಂದಲೂ ಒಬ್ಬೊಬ್ಬ ಸದಸ್ಯರನ್ನು ಚುನಾಯಿಸಲಾಗುತ್ತದೆ. ವಿಧಾನಸಭಾ ಸದಸ್ಯರಾಗಲು 25 ವರ್ಷ ವಯಸ್ಸಾಗಿರಬೇಕು. ಮೀಸಲು ಸ್ಥಾನಗಳಿಗೆ ಅನುಸೂಚಿತ ಜಾತಿ ಅಥವಾ ಅನುಸೂಚಿತ ಆದಿಮ ಜಾತಿಗಳವರನ್ನೇ ಆರಿಸಲಾಗುವುದು. 2006ರಲ್ಲಿ ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯಲ್ಲಿ ಭಾರಿ ಬದಲಾವಣೆ ತರುವ ವರದಿ ಸಲ್ಲಿಸಲಾಗಿದ್ದು ಅದು ಕೇಂದ್ರ ಸರ್ಕಾರದ ಮುಂದಿದೆ. ಸುಮಾರು 2.5 ಲಕ್ಷ ಮತದಾರರಿರುವಂತೆ ವಿಧಾನಸಭಾ ಕ್ಷೇತ್ರಗಳನ್ನು ಪುನರ್ ವಿಂಗಡಿಸಲಾಗಿದೆ. ಇದರಂತೆ 2009ರಿಂದ ಚುನಾವಣೆಗಳು ನಡೆಯಬಹುದೆಂದು ನಿರೀಕ್ಷೆ ಇದೆ. ಆಂಗ್ಲೋ–ಇಂಡಿಯನ್ ಕೋಮಿಗೆ ಸೇರಿದವರೊಬ್ಬರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡುವರು, ವಿಧಾನಸಭೆಯ ಅವಧಿ ಐದು ವರ್ಷಗಳು. ಇದನ್ನು ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವಧಿಗಿಂತ ಮೊದಲೇ ವಿಸರ್ಜಿಸಬಹುದು ಅಥವಾ ಅವಧಿಯನ್ನು ವಿಸ್ತರಿಸಬಹುದು. ಪ್ರತಿ ಸಾರ್ವತ್ರಿಕ ಚುನಾವಣೆಯ ಅನಂತರ ಹೊಸ ವಿಧಾನ ಸಭೆ ಅಸ್ತಿತ್ವಕ್ಕೆ ಬರುತ್ತದೆ. ಸಭೆಯ ಪ್ರಥಮಾಧಿವೇಶನದ ಪ್ರಾರಂಭದಲ್ಲಿ, ಅಧ್ಯಕ್ಷ ಪದವಿ ಮತ್ತು ಉಪಾಧ್ಯಕ್ಷ ಪದವಿ ತೆರವಾದಂತೆಲ್ಲ ವಿಧಾನಸಭೆಯ ಸದಸ್ಯರೊಬ್ಬರನ್ನು ಅಧ್ಯಕ್ಷರನ್ನಾಗಿಯೂ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಚುನಾಯಿಸಲಾಗುತ್ತದೆ. ಚುನಾಯಿತ ಅಧ್ಯಕ್ಷರು ಪಕ್ಷಾತೀತರಾಗಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ತಮ್ಮ ಪಕ್ಷದೊಡನೆ ಸಂಬಂಧವನ್ನು ತ್ಯಜಿಸುವರು. ಸಭಾಧ್ಯಕ್ಷರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸುವರು.

ವಿಧಾನ ಪರಿಷತ್ತಿನಲ್ಲಿ 75 ಮಂದಿ ಸದಸ್ಯರಿದ್ದು, 25 ಮಂದಿಯನ್ನು ವಿಧಾನಸಭೆಯ ಸದಸ್ಯರೂ 25 ಮಂದಿಯನ್ನು ನಗರ ಸಭೆಗಳಂಥ ಸ್ಥಳೀಯ ಸಂಸ್ಥೆಗಳ ಸದಸ್ಯರೂ 7 ಮಂದಿಯನ್ನು ಪದವೀಧರರಾಗಿ ಮೂರು ವರ್ಷಗಳಾಗಿರುವ ನೋಂದಾಯಿತ ಪದವೀಧರರೂ ಮತ್ತು 7 ಮಂದಿಯನ್ನು ಶಾಲಾಕಾಲೇಜುಗಳ ಉಪಾಧ್ಯಾಯರೂ ಚುನಾಯಿಸುವರು. ಇನ್ನುಳಿದ 11 ಮಂದಿಯನ್ನು ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ ಹಾಗೂ ಸಮಾಜ ಸೇವಾ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಪಡೆದಿರುವ ಮತ್ತು ಸೇವೆ ಸಲ್ಲಿಸಿರುವ ವ್ಯಕ್ತಿಗಳನ್ನು ರಾಜ್ಯಪಾಲರು ನಾಮನಿರ್ದೇಶಿಸುವರು. ವಿಧಾನ ಪರಿಷತ್ತಿನ ಸದಸ್ಯರಾಗಲು 30 ವರ್ಷ ವಯಸ್ಸಾಗಿರಬೇಕು.

ವಿಧಾನ ಪರಿಷತ್ತನ್ನು ವಿಸರ್ಜಿಸಲಾಗುವುದಿಲ್ಲ. ಆದರೆ, ಪರಿಷತ್ತನ್ನು ರದ್ದುಗೊಳಿಸುವಂತೆ ವಿಧಾನಸಭೆ ನಿರ್ಣಯವನ್ನು ಅನುಮೋದಿಸಿದಲ್ಲಿ ಸಂಸತ್ತು ಅದನ್ನು ರದ್ದುಗೊಳಿಸಬಹುದು. ಪ್ರತಿ ಎರಡು ವರ್ಷಕ್ಕೊಮ್ಮೆ ಪರಿಷತ್ತಿನ ಮೂರನೆಯ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುವರು. ಸದರಿ ಸ್ಥಾನಗಳನ್ನು ಭರ್ತಿ ಮಾಡಲು ದ್ವೈವಾರ್ಷಿಕ ಚುನಾವಣೆಗಳನ್ನು ನಡೆಸಲಾಗುತ್ತದೆ.

ಸಭಾಪತಿಯವರ ಹಾಗೂ ಉಪಸಭಾಪತಿಯವರ ಸ್ಥಾನಗಳು ಖಾಲಿಯಾದಂತೆಲ್ಲ ವಿಧಾನ ಪರಿಷತ್ತಿನ ಸದಸ್ಯರ ಪೈಕಿ ಒಬ್ಬರನ್ನು ಸಭಾಪತಿಯನ್ನಾಗಿಯೂ ಮತ್ತೊಬ್ಬರನ್ನು ಉಪಸಭಾಪತಿಯನ್ನಾಗಿಯೂ ಚುನಾಯಿಸಲಾಗುತ್ತದೆ. ಸಭಾಪತಿಯ ಗೈರು ಹಾಜರಿಯಲ್ಲಿ ಉಪಸಭಾಪತಿ ಪರಿಷತ್ತಿನ ಅಧ್ಯಕ್ಷತೆ ವಹಿಸುತ್ತಾರೆ.

ಸಾರ್ವತ್ರಿಕ ಚುನಾವಣೆಗಳ ಅನಂತರ ಬಹುಮತ ಪಡೆದ ಪಕ್ಷದ ನಾಯಕನನ್ನು ಮಂತ್ರಿಮಂಡಲ ರಚಿಸುವಂತೆ ರಾಜ್ಯಪಾಲರು ಆಹ್ವಾನಿಸುತ್ತಾರೆ. ಮುಖ್ಯಮಂತ್ರಿಯವರನ್ನು ರಾಜ್ಯಪಾಲರು ನೇಮಿಸಲಿದ್ದು, ಉಳಿದ ಮಂತ್ರಿಗಳನ್ನು ಅವರು ಮುಖ್ಯಮಂತ್ರಿಯವರ ಶಿಫಾರಸಿನ ಮೇರೆಗೆ ನೇಮಿಸುತ್ತಾರೆ. ಮುಖ್ಯಮಂತ್ರಿ ಅಥವಾ ಇತರ ಮಂತ್ರಿಗಳು ಯಾವುದಾದರೂ ಒಂದು ಸದನದ ಸದಸ್ಯರಾಗಿರಬೇಕು. ಹಾಗಿಲ್ಲದಿದ್ದಲ್ಲಿ ಅವರು ಆರು ತಿಂಗಳ ಅವಧಿಯೊಳಗಾಗಿ ಯಾವುದಾದರೊಂದು ಸದನದ ಸದಸ್ಯರಾಗಿ ಆರಿಸಿ ಬರಬೇಕು.

ರಾಜ್ಯದ ಆಡಳಿತ ನಿರ್ವಹಣೆಗಾಗಿ ಹಾಗೂ ಜನತಾ ಕಲ್ಯಾಣಕ್ಕಾಗಿ ವಿಧಾನ ಮಂಡಲ ಕಾನೂನುಗಳನ್ನು ರಚಿಸುತ್ತದೆ. ವಿಧೇಯಕಗಳನ್ನು ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕಾರ ದೊರೆತ ಅನಂತರ ವಿಧಾನ ಪರಿಷತ್ತಿಗೆ ಕಳುಹಿಸಲಾಗುತ್ತದೆ. ಅಲ್ಲಿಯೂ ಅಂಗೀಕಾರ ದೊರೆತ

ಅನಂತರ ರಾಜ್ಯಪಾಲರ ಅನುಮೋದನೆಗಾಗಿ ಕಳುಹಿಸಲಾಗುತ್ತದೆ. ಅನುಮೋದನೆ ದೊರೆತ ಅನಂತರ ಅವು ಶಾಸನಗಳಾಗುತ್ತವೆ. ವಿತ್ತೀಯ ವಿಧೇಯಕಗಳನ್ನು ವಿಧಾನ ಸಭೆಯಲ್ಲಿ;ಮಾತ್ರ ಮಂಡಿಸಲಿದ್ದು ಅವನ್ನು ಅಂಗೀಕರಿಸಿದ ಅನಂತರ ವಿಧಾನ ಪರಿಷತ್ತಿನ ಶಿಪಾರಸುಗಳಿಗಾಗಿ ಅವನ್ನು ಕಳುಹಿಸಲಾಗುತ್ತದೆ.

ತೆರಿಗೆ ಮುಂತಾದವುಗಳ ಮೂಲಕ ಹಣ ಸಂಗ್ರಹಿಸಲು ಅನುಮತಿ ನೀಡುವುದು ಮತ್ತು ಆಡಳಿತ ನಿರ್ವಹಣೆ ಹಾಗೂ ಜನತಾ ಕಲ್ಯಾಣಕ್ಕಾಗಿ ಬೇಕಾಗುವ ಹಣವನ್ನು ಮಂಜೂರು ಮಾಡುವುದು ಮುಂತಾದವು ವಿಧಾನ ಮಂಡಲದ ನಿರ್ಧಾರವನ್ನವಲಂಬಿಸಿರುತ್ತದೆ. ಆಯವ್ಯಯದ ಮುಂಗಡ ಪತ್ರವನ್ನು ಮಂಡಿಸಿದ ಅನಂತರ ಉಭಯ ಸದನಗಳಲ್ಲಿಯೂ ಅದರ ಬಗ್ಗೆ ಚರ್ಚೆ ನಡೆಯುತ್ತದೆ. ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ಬಳಸಲು ಅನುಮತಿ ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದ ಹಣ ವಿನಿಯೋಗ ವಿಧೇಯಕವನ್ನು ಅಂಗೀಕರಿಸಲಾಗುತ್ತದೆ. ಮಂಜೂರು ಮಾಡಿದ ಹಣ ಆ ವರ್ಷಕ್ಕೆ ಸಾಲದಿದ್ದ ಪಕ್ಷದಲ್ಲಿ ಅಂದಾಜು ವೆಚ್ಚಗಳ ಅನುಪೂರಕ ಪಟ್ಟಿಯನ್ನು ಉಭಯ ಸದನಗಳಲ್ಲಿಯೂ ಮಂಡಿಸಬೇಕಾಗುತ್ತದೆ. ಯಾವುದೇ ಇಲಾಖೆ ಮಂಜೂರು ಮಾಡಿದ ಹಣಕ್ಕಿಂತ ಹೆಚ್ಚು ಹಣವನ್ನು ವೆಚ್ಚ ಮಾಡಿದಲ್ಲಿ, ಆ ಹೆಚ್ಚಿನ ವೆಚ್ಚವನ್ನು ಕ್ರಮಗೊಳಿಸ ಬೇಕಾಗುತ್ತದೆ. ಅದಕ್ಕಾಗಿ ಹೆಚ್ಚುವರಿ ಅನುದಾನಗಳಿಗೆ ಸಂಬಂಧಿಸಿದ ಬೇಡಿಕೆಗಳನ್ನು ವಿಧಾನಸಭೆಯಲ್ಲಿ ಮಂಡಿಸಲಾಗುತ್ತದೆ. ವಿಧಾನಮಂಡಲ ನೇರವಾಗಿ ಅಥವಾ ಅದರ ಸಮಿತಿಗಳ ಮೂಲಕ ಕಾರ್ಯಾಂಗವನ್ನು ವಿವಿಧ ರೀತಿಯಲ್ಲಿ ಹತೋಟಿಯಲ್ಲಿಟ್ಟುಕೊಳ್ಳುವುದು.

ಸಾರ್ವಜನಿಕ ಆಸಕ್ತಿಯುಳ್ಳ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಹಾಕುವ ಮೂಲಕ ಸಂಬಂಧಪಟ್ಟ ಮಂತ್ರಿಗಳಿಂದ ಸದಸ್ಯರು ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ. ಪ್ರತಿಯೊಂದು ಅಧಿವೇಶನದ ಪ್ರಾರಂಭದ ಒಂದು ಗಂಟೆಯನ್ನು ಪ್ರಶ್ನೋತ್ತರಗಳಿಗಾಗಿಯೇ ಮೀಸಲಿಡಲಾಗಿದೆ. ಇದರಿಂದ ಸರ್ಕಾರದ ಲೋಪದೋಷಗಳು ಹೊರಬಿದ್ದು ಅವನ್ನು ಸರಿಪಡಿಸಲಾಗುತ್ತದೆ. ರಾಜ್ಯಪಾಲರ ಭಾಷಣದ ಮೇಲಿನ ಹಾಗೂ ಆಯವ್ಯಯದ ಮುಂಗಡ ಪತ್ರದ ಮೇಲಿನ ಚರ್ಚೆಯ ಕಾಲದಲ್ಲಿ ಸದಸ್ಯರು ಸರ್ಕಾರದ ಲೋಪದೋಷಗಳನ್ನು ಹೊರಗೆಡಹಿ ಆ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಒತ್ತಾಯಪಡಿಸುತ್ತಾರೆ. ಜರೂರು ವಿಷಯಗಳ ಬಗ್ಗೆ ಸದಸ್ಯರು ಅಲ್ಪಕಾಲಾವಧಿಯ ಪ್ರಶ್ನೆಗಳನ್ನು ಹಾಕುತ್ತಾರೆ ಅಥವಾ ಮಂತ್ರಿಗಳ ಗಮನ ಸೆಳೆಯುತ್ತಾರೆ; ಅಥವಾ ಅರ್ಧ ಗಂಟೆ ಅಥವಾ ಎರಡೂವರೆ ಗಂಟೆ ಕಾಲಾವಧಿಯವರೆಗೆ ಚರ್ಚೆ ನಡೆಸಲು ಸೂಚನಾ ಪತ್ರ ಕೊಡುತ್ತಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಜರೂರಾದ ಹಾಗೂ ಮಹತ್ತ್ವವಾದ ಘಟನೆಗಳ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸಿ, ಸಭೆಯ ನಿರ್ದಿಷ್ಟ ಕಾರ್ಯಕಲಾಪಗಳನ್ನು ಬದಿಗೊತ್ತಿ ಮುಖ್ಯ ತುರ್ತು ವಿಷಯವನ್ನು ಚರ್ಚಿಸಬಹುದಾಗಿದೆ. ನಿರ್ದಿಷ್ಟ ಕಾರ್ಯಗಳನ್ನು ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಪಡಿಸುವ ನಿರ್ಣಯಗಳನ್ನೂ ಅವರು ಸೂಚಿಸಬಹುದು. ಸದಸ್ಯರಿಗೆ ವಿಧಾನ ಮಂಡಲದಲ್ಲಿ ವಾಕ್ ಸ್ವಾತಂತ್ರ್ಯವಿದ್ದು ಸದನದ ಮುಂದೆ ಬರತಕ್ಕ ವಿಷಯಗಳ ಬಗ್ಗೆ ನಿರ್ಭಯವಾಗಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಅವಕಾಶವಿರುತ್ತದೆ.

ವಿಧಾನ ಮಂಡಲದಲ್ಲಿ ಮೂರು ವಿತ್ತೀಯ ಸಮಿತಿಗಳಿದ್ದು, ಸಾರ್ವಜನಿಕ ವೆಚ್ಚವನ್ನು ಭರಿಸಲು ವಿಧಾನ ಮಂಡಲ ಅನುಮೋದಿಸಿದ ಹಣದ ವಿನಿಯೋಗ ಲೆಕ್ಕಪತ್ರಗಳನ್ನು ಹಾಗೂ ವಿಧಾನ ಮಂಡಲದಲ್ಲಿ ಮಂಡಿಸಿದ ಇತರ ಲೆಕ್ಕಪತ್ರಗಳನ್ನು ಪರಿಶೀಲಿಸಲು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯೂ ರಾಜ್ಯದ ಆಯವ್ಯಯದ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಮಿತವ್ಯಯ, ದಕ್ಷತೆ ಮುಂತಾದುವುಗಳನ್ನು ಸೂಚಿಸಲು ಅಂದಾಜುಗಳ ಸಮಿತಿಯೂ ಮತ್ತು ಸಾರ್ವಜನಿಕ ಉದ್ಯಮಗಳ ಲೆಕ್ಕಪತ್ರಗಳನ್ನು ಹಾಗೂ ವರದಿಗಳನ್ನು ಪರಿಶೀಲಿಸಲು ಸಾರ್ವಜನಿಕ ಉದ್ಯಮಗಳ ಸಮಿತಿಯೂ ಇರುತ್ತವೆ. ಈ ವಿತ್ತೀಯ ಸಮಿತಿಗಳಲ್ಲದೆ ಇತರ ಸಮಿತಿಗಳೂ ಇರುತ್ತವೆ. ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳ ಪ್ರಗತಿ ಹಾಗೂ ಅವರಿಗೋಸ್ಕರ ಇರತಕ್ಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುವುದನ್ನು ಪರಿಶೀಲಿಸಿ ಅತ್ಯಂತ ಕಡಿಮೆ ಸಮಯದಲ್ಲಿ ಅವರ ಸ್ಥಿತಿಗತಿಗಳನ್ನು ಸುಧಾರಿಸುವ ಮಾರ್ಗೋಪಾಯಗಳನ್ನು ಸೂಚಿಸಲು ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರ ಕಲ್ಯಾಣ ಸಮಿತಿಯೊಂದೂ ಇದೆ. ಇವಲ್ಲದೆ ಇತರ ಸಮಿತಿಗಳಾದ ಅಧೀನ ಶಾಸನ ಸಮಿತಿ, ಭರವಸೆಗಳ ಸಮಿತಿ ಮತ್ತು ಮನವಿಗಳಿಗೆ ಸಂಬಂಧಿಸಿದ ಸಮಿತಿಗಳೂ ಉಪಯುಕ್ತ ಸೇವೆಯನ್ನು ಸಲ್ಲಿಸುತ್ತವೆ. ವಿಧಾನಮಂಡಲದ ಎರಡು ಸದನಗಳಲ್ಲೂ ಬಹುಮತ ಪಡೆದ ಆಡಳಿತ ಪಕ್ಷದ್ದೇ ಮೇಲುಗೈ ಆಗಿದ್ದರೂ ಉಳಿದ ವಿರೋಧ ಪಕ್ಷದ ಸದಸ್ಯರು ಸಭೆಗಳ ಕಾರ್ಯಕಲಾಪಗಳು ರಾಜ್ಯದ ಆಡಳಿತಕ್ಕೆ ಉಪಯುಕ್ತವಾಗಿ, ಸುಗಮವಾಗಿ, ಸಾರ್ವಜನಿಕ ಹಿತಾಸಕ್ತಿಗೆ ಅನುಕೂಲವಾಗಿ ಅಭಿವೃದ್ಧಿಯತ್ತ ಸಾಗಲು ಪರಿಣಾಮಕಾರಿಯಾಗಿ ವರ್ತಿಸುತ್ತಾರೆ. ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿರುವ ವಿಧಾನ ಸೌಧದಲ್ಲಿ ವಿಧಾನ ಮಂಡಲಗಳ ಸಭೆ ಮತ್ತು ಪರಿಷತ್ತು ಸೂಕ್ತ ಕಾಲಕ್ಕೆ ಸೇರುತ್ತವೆ.

ಕಾರ್ಯಾಂಗ ಪ್ರಮುಖರಾದ ರಾಜ್ಯಪಾಲರನ್ನು ರಾಷ್ಟ್ರಾಧ್ಯಕ್ಷರು 5 ವರ್ಷಗಳ ಅವಧಿಗೆ ನೇಮಿಸುವರು. ಅವಶ್ಯವೆನಿಸಿದಂತೆಲ್ಲ ಕಾರ್ಯಕಲಾಪ ನಡೆಸಲು ಅವರು ಉಭಯ ಸದನಗಳನ್ನು ಕರೆಯುತ್ತಾರೆ ಹಾಗೂ ಮುಕ್ತಾಯಗೊಳಿಸುತ್ತಾರೆ. ವಿಧಾನಸಭೆಯನ್ನು ವಿಸರ್ಜಿಸುವ ಅಧಿಕಾರ ರಾಜ್ಯಪಾಲರಿಗಿದೆ. ಚುನಾವಣೆಯ ಅನಂತರ ಉಭಯ ಸದನಗಳ ಪ್ರಥಮಾಧಿವೇಶನದ, ಹಾಗೂ ಪ್ರತಿವರ್ಷದ ಪ್ರಥಮಾಧಿವೇಶನದ ಪ್ರಾರಂಭದಲ್ಲಿ ಸದನಗಳ ಸದಸ್ಯರನ್ನುದ್ದೇಶಿಸಿ ಅವರು ಭಾಷಣ ಮಾಡುವರು. ಹಣಕಾಸಿಗೆ ಸಂಬಂಧಿಸಿದ ಹಾಗೂ ಇತರ ವಿತ್ತೀಯ ವಿಧೇಯಕಗಳನ್ನು ವಿಧಾನಸಭೆಯಲ್ಲಿ ಮಂಡಿಸಿ ಉಭಯ ಸದನಗಳು ಅಂಗೀಕರಿಸುವಂತೆ ಅವರು ಶಿಫಾರಸು ಮಾಡುವರು. ಆಯವ್ಯಯದ ಮುಂಗಡ ಪತ್ರವನ್ನು ಉಭಯ ಸದನಗಳ ಮುಂದಿಡುವಂತೆ ಅವರು ವ್ಯವಸ್ಥೆ ಮಾಡುವರು. ಉಭಯಸದನಗಳಿಂದಲೂ ಅಂಗೀಕೃತವಾದ ವಿಧೇಯಕಗಳಿಗೆ ಅವರು ಅನುಮತಿ ನೀಡುವರು. ಯಾವುದೇ ಸದನ ಉಪವೇಶನದಲ್ಲಿಲ್ಲದ ಸಂದರ್ಭದಲ್ಲಿ ಅವರು ಅಧ್ಯಾದೇಶಗಳನ್ನೂ ಹೊರಡಿಸುವರು **(ನೋಡಿ: ಆಡಳಿತ ವ್ಯವಸ್ಥೆ)**. **(ಟಿ.ಎಚ್.)**

**ವಿನಯಾದಿತ್ಯ[1]:** ಬಾದಾಮಿ ಚಳುಕ್ಯ ವಂಶದ ಅರಸು (681–96). ಒಂದನೆಯ ವಿಕ್ರಮಾದಿತ್ಯನ ಮಗ. ಈತ ತನ್ನ ತಂದೆಯ ಕಾಲದಲ್ಲೇ ರಾಜ್ಯದ ಆಡಳಿತದಲ್ಲಿ ಭಾಗವಹಿಸಿ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡಿದ್ದ. ಒಂದು ಶಾಸನದಿಂದ ವಿಕ್ರಮಾದಿತ್ಯನು ತನ್ನ ಮಗ ವಿನಯಾದಿತ್ಯನಿಗೂ ಮೊಮ್ಮಗ ವಿಜಯಾದಿತ್ಯನಿಗೂ ಸರಿಯಾದ ಸಮರ ಶಿಕ್ಷಣವನ್ನು ಒದಗಿಸಿಕೊಟ್ಟನೆಂದು ತಿಳಿದುಬಂದಿದೆ. ವಿಕ್ರಮಾದಿತ್ಯ ದೂರ ಪ್ರಾಂತ್ಯಗಳ ಮೇಲೆ ದಂಡಯಾತ್ರೆಗಳನ್ನು ಕೈಗೊಂಡಾಗ ರಾಜ್ಯದ ಆಡಳಿತವನ್ನು ಅವನ ಮಗ ವಿನಯಾದಿತ್ಯ ಮತ್ತು ಮೊಮ್ಮಗ ವಿಜಯಾದಿತ್ಯ ನಿರ್ವಹಿಸುತ್ತಿದ್ದರು.

ವಿನಯಾದಿತ್ಯನ ಕಾಲದಲ್ಲಿ ರಾಜ್ಯ ಶಾಂತಿಪೂರ್ಣವಾಗಿಯೂ ಸಮೃದ್ಧವಾಗಿಯೂ ಇದ್ದಿತೆಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ.

ಇವನು ಆಡಳಿತದ ವಿಷಯದಲ್ಲಿ ಬಹಳ ಎಚ್ಚರಿಕೆ ವಹಿಸಿದ್ದ. ಆಗಾಗ ಸೇನಾಸಮೇತನಾಗಿ ರಾಜ್ಯದ ನಾಲ್ಕು ಕಡೆಗಳಲ್ಲೂ ಸಂಚರಿಸುತ್ತಿದ್ದ. ಒಮ್ಮೆ ಪಂಪಾತೀರ್ಥದಲ್ಲೂ ಬೀಡುಬಿಟ್ಟಿದ್ದ. ರಾಜ್ಯದ ಆಡಳಿತವನ್ನು ನಿರ್ವಹಿಸಲು ಇವನ ಮಗ ಯುವರಾಜ ವಿಜಯಾದಿತ್ಯ ಎಲ್ಲ ರೀತಿಯಲ್ಲೂ ಸಹಾಯ ಮಾಡುತ್ತಿದ್ದ.

ಇವನ ಕಾಲದಲ್ಲಿ ವಿದೇಶಿ ದಾಳಿಗಳು ಕಡಿಮೆಯಾದವಲ್ಲದೆ, ರಾಜ್ಯದ ಒಳ ಭಾಗದಲ್ಲಿ ಶಾಂತಿ ಕಲಕುವಂಥ ಯಾವ ದುರ್ಘಟನೆಗಳೂ ನಡೆಯಲಿಲ್ಲ. ಪಲ್ಲವರನ್ನು ಒಂದನೆಯ ವಿಕ್ರಮಾದಿತ್ಯ ಸದೆಬಡಿದಿದ್ದರಿಂದ, ಅವರಿಂದ ಯಾವ ತೊಂದರೆಯೂ ಉಂಟಾಗಲಿಲ್ಲ. ಕೆಲವು ಶಾಸನಗಳು ಈತನೇ ಪಲ್ಲವರ ಬಲವನ್ನು ಹುದುಗಿಸಿ ಕವೇರಿ (ಕಾಂಬೋಡಿಯ), ಪಾರಸಿಕ (ಪರ್ಷಿಯ) ಮತ್ತು ಸಿಂಹಳದ ದ್ವೀಪಾಧಿಪರಿಂದ ಕಪ್ಪ ಕಾಣಿಕೆಯನ್ನು ವಸೂಲಿ ಮಾಡಿದನೆಂದು ವಿವರಿಸುತ್ತವೆ.

ವಿಜಯಾದಿತ್ಯನ ಕಾಲದ ಕೆಲವು ಶಾಸನಗಳು ಅವನ ತಂದೆ ವಿನಯಾದಿತ್ಯನ ಉತ್ತರ ಭಾರತದ ದಂಡಯಾತ್ರೆಗಳನ್ನು ವಿವರಿಸುತ್ತವೆ. ಈ ಯುದ್ಧದಲ್ಲಿ ವಿಜಯಾದಿತ್ಯನೂ ಪಾಲ್ಗೊಂಡಿದ್ದ. ವಿಜಯಾದಿತ್ಯ ತನ್ನ ತಂದೆಯ ಸಮಕ್ಷಮದಲ್ಲೇ ವೈರಿ ಸೇನೆಗಳನ್ನು ಧ್ವಂಸಮಾಡಿ, ಪಾಲಿಧ್ವಜ ಶ್ವೇತಚಕ್ರ, ಚಾಮರ ಮೊದಲಾದ ಲಾಂಛನಗಳನ್ನು ವಶಪಡಿಸಿಕೊಂಡು, ತನ್ನ ತಂದೆಗೆ ಅರ್ಪಿಸಿದನೆಂದು ತಿಳಿದುಬರುತ್ತದೆ. ಈ ದಿಸೆಯಲ್ಲಿ ಕೆಲವು ಇತಿಹಾಸಕಾರರು ಚಳುಕ್ಯ ರಾಜನು ಗಂಗಾ ಮತ್ತು ಯಮುನಾ ನದಿಯ ದಡಗಳ ಮೇಲೆ ಕನೂಜಿನ ರಾಜ ಯಶೋವರ್ಮನನ್ನು ಸೋಲಿಸಿದ್ದಾನೆಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಕೆಲವು ಇತಿಹಾಸಕಾರರು ವಜ್ರಟ ಎಂಬುವನನ್ನು ಸೋಲಿಸಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಅಂಶದ ಮೇಲೆ ಸಾಕಷ್ಟು ಬೆಳಕು ಬೀರುವ ಆಧಾರಗಳಿಲ್ಲದೆ ಇರುವುದರಿಂದ ಚಳುಕ್ಯ ವಿನಯಾದಿತ್ಯ ಸೋಲಿಸಿದ ಉತ್ತರ ಭಾರತದ ರಾಜನಾರು ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ.

ಉತ್ತರ ಭಾರತದ ದಂಡಯಾತ್ರೆ ವಿನಯಾದಿತ್ಯನ ಆಳಿಕೆಯ ಅಂತ್ಯಭಾಗದಲ್ಲಿ ನಡೆಯಿತೆಂದು ಅಭಿಪ್ರಾಯಪಡಲಾಗಿದೆ. ಈ ಯುದ್ಧದಲ್ಲಿ ವಿನಯಾದಿತ್ಯನ ಮಗ ವಿಜಯಾದಿತ್ಯ ಸೆರೆಹಿಡಿಯಲ್ಪಟ್ಟನೆಂದು ತಿಳಿದು ಬಂದಿದೆ. ವಿಜಯಾದಿತ್ಯ ಇನ್ನೂ ಶತ್ರುವಿನ ಸೆರೆಮನೆಯಲ್ಲಿರುವಾಗಲೇ ವಿನಯಾದಿತ್ಯ ತೀರಿಕೊಂಡಿರಬಹುದು (ಸು. 696) ಎಂಬ ಊಹೆ ಸಹ ಇದೆ.

ವಿನಯಾದಿತ್ಯನಿಗೆ ಶ್ರೀಪೃಥ್ವೀವಲ್ಲಭ, ಸತ್ಯಾಶ್ರಯ, ರಾಜಾಶ್ರಯ, ಯುದ್ಧಮಲ್ಲ ಎಂಬ ಬಿರುದುಗಳಿದ್ದುವು. ರನ್ನ ತನ್ನ ಗದಾಯುದ್ಧದಲ್ಲಿ ವಿನಯಾದಿತ್ಯನನ್ನು ದುರ್ಧರಮಲ್ಲ ಎಂದು ವರ್ಣಿಸಿದ್ದಾನೆ. ವಿನಯಾದಿತ್ಯನ ರಾಣಿ ವಿನಯವತಿ. ಈಕೆ ವಿನಯಾದಿತ್ಯನ ಅನಂತರವೂ ಜೀವಿಸಿದ್ದು 696ರಲ್ಲಿ ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದಳು. ವಿನಯಾದಿತ್ಯನಿಗೆ ಕುಂಕುಮದೇವಿ ಎಂಬ ಮಗಳಿದ್ದಳು. ಈಕೆ ಆಳುಪವಂಶದ ದೊರೆ ಚಿತ್ರವಾಹನನನ್ನು ಮದುವೆಯಾಗಿದ್ದಳು. (ಎಸ್.)

**ವಿನಯಾದಿತ್ಯ$^2$:** ಹೊಯ್ಸಳರಲ್ಲಿ ಇಬ್ಬರು ವಿನಯಾದಿತ್ಯರು ಆಳಿದ್ದಾರೆ. ಮೊದಲು ಹೊಯ್ಸಳರಲ್ಲಿ ವಿನಯಾದಿತ್ಯ ಎಂಬ ಹೆಸರಿನ ಇಬ್ಬರು ದೊರೆಗಳು ಆಗಿಹೋಗಿರುವ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯವಿದ್ದಿತು. ಡೆರೆಟ್, ಬಿ.ಎಲ್.ರೈಸ್ ಮೊದಲಾದ ವಿದ್ವಾಂಸರು ಚಿಕ್ಕಮಗಳೂರು ತಾಲ್ಲೂಕಿನ ಉಪ್ಪಳ್ಳಿಯ 1012ರ ಶಾಸನವನ್ನು ಉಲ್ಲೇಖಿಸಿ ಒಂದನೆಯ ವಿನಯಾದಿತ್ಯ ಎಂಬವನು ಇದ್ದನೆಂದೂ ಇವನು ಸುಮಾರಾಗಿ 1022 ರವರೆಗೆ ಆಳಿರಬಹುದೆಂದೂ ಅಭಿಪ್ರಾಯಪಟ್ಟಿದ್ದರು. ಇತ್ತೀಚಿಗೆ ಅದೇ ಉಪ್ಪಳ್ಳಿಯಲ್ಲಿ ದೊರೆತಿರುವ ಶಾಸನವೊಂದರಲ್ಲಿ ಹೊಯ್ಸಳ ಮನೆತನದ ಸಮಗ್ರ ವಂಶಾವಳಿ ದೊರೆತ್ತಿದ್ದು ಅದರ ಪ್ರಕಾರ ಒಂದನೆಯ ವಿನಯಾದಿತ್ಯನ ಅಸ್ತಿತ್ವ ಸ್ಪಷ್ಟವಾಗಿದೆ. ಈತ ಗಂಗರ ವೈಶಿಷ್ಟ್ಯವಾದ ರಾಚಮಲ್ಲ, ರಕ್ಕಸಗಂಗ ಎಂಬ ಬಿರುದನ್ನು ತಳೆದಿದ್ದ. ಒಂದೆಡೆ ಈತ ಗಂಗವಾಡಿಯನ್ನು ಆಳುತ್ತಿದ್ದನೆಂಬ ಉಲ್ಲೇಖವೂ ದೊರಕುತ್ತದೆಯಾಗಿ ವಿನಯಾದಿತ್ಯ ಗಂಗವಂಶಕ್ಕೆ ಯಾವುದೋ ರೀತಿಯಲ್ಲಿ ಸಂಬಂಧಿಸಿದ್ದನೆಂಬ ಊಹೆ ಇದೆ. ಅಥವಾ ಹೊಯ್ಸಳರಲ್ಲಿ ತಾವು ಗಂಗರ ರಾಜಕೀಯ ಉತ್ತರಾಧಿಕಾರಿಗಳು ಎಂಬ ಭಾವನೆಯೂ ಇದ್ದಿರಬಹುದು. ಇದರಿಂದ ಇವನು ಹತ್ತನೆಯ ಶತಮಾನದ ಕೊನೆಯ ಭಾಗದಿಂದ ಆಳುತ್ತಿದ್ದದ್ದು ಕಂಡುಬರುತ್ತದೆ. ಎರಡನೆಯ ವಿನಯಾದಿತ್ಯನು ನೃಪಕಾಮನ ಮಗನಾಗಿದ್ದು ಆತ ಸು. 1047 ರಲ್ಲಿ ಸಿಂಹಾಸನವೇರಿದ. ಸೋದರಿ ಹೊಯ್ಸಳದೇವಿ 1ನೆಯ ಸೋಮೇಶ್ವರನನ್ನು ಮದುವೆಯಾಗಿದ್ದಳು. 2ನೆಯ ಸೋಮೇಶ್ವರ ಮತ್ತು 6ನೆಯ ವಿಕ್ರಮಾದಿತ್ಯರೊಡನೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡು ಅವರ ಛಾತ್ರ ಸಾಧನೆಯಲ್ಲಿ ತನ್ನ ಮಕ್ಕಳು ಮತ್ತು ಮೊಮ್ಮಕ್ಕಳು ಪಾಲ್ಗೊಳ್ಳುವಂತೆ ವ್ಯವಸ್ಥೆಮಾಡಿದನಲ್ಲದೆ, ತನ್ನ ಸ್ಥಾನವನ್ನೂ ಭದ್ರಪಡಿಸಿಕೊಂಡು ಚಂಗಾಳ್ವರ ಮತ್ತು ಕೊಂಗಾಳ್ವರ ಮೇಲೆ ವಿಜಯವನ್ನು ಸಾಧಿಸಿದ. ಮೊದಲು 1 ಮತ್ತು 2ನೆಯ ಸೋಮೇಶ್ವರನ ವಿರುದ್ಧ ವಿಕ್ರಮಾದಿತ್ಯ ಬಂಡೆದ್ದು ರಾಜ್ಯಸಾಧಿಸಿಕೊಂಡ ವಿಷಮಕಾಲದಲ್ಲಿ ಗತ್ಯಂತರವಿಲ್ಲದೆ ಅವನ ಸಾಮಂತತ್ವವನ್ನು ಒಪ್ಪಿಕೊಂಡಿರಬಹುದೆನಿಸುತ್ತದೆ. ಚಾಳುಕ್ಯ ಸಾಮಂತತ್ವದ ಕುರುಹಾಗಿ ಇವನು ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿದ್ದ.

ಬೇಲೂರು ಮತ್ತು ದ್ವಾರಸಮುದ್ರ ಇವನ ರಾಜಧಾನಿಗಳು. ಒಂದು ಶಾಸನದಲ್ಲಿ ಕೊಂಕಣ, ಆಳ್ವಖೇಡ, ವೈನಾಡು ಮತ್ತು ತಲಕಾಡು ಇವನ ರಾಜ್ಯದ ಮೇರೆಗಳು ಎಂದು ಹೇಳಿದೆ. ಇದು ಮತ್ತು ಇತರ ಆಧಾರಗಳಿಂದ ವಿನಯಾದಿತ್ಯನ ಆಳಿಕೆ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲದೆ, ಮೈಸೂರು, ತುಮಕೂರು ಮತ್ತು ಶಿವಮೊಗ್ಗ ಜಿಲ್ಲೆಯ ಹಲವು ಭಾಗಗಳಿಗೂ ವಿಸ್ತರಿಸಿದ್ದಿತೆಂದೂ ತಿಳಿಯಬಹುದು.

ವಿನಯಾದಿತ್ಯ ಜೈನಮತಾವಲಂಬಿ, ಶಾಂತಿದೇವನ ಶಿಷ್ಯ. ಇವನಿಗೆ ಕೆಳೆಯಬ್ಬರಸಿ ಎಂಬ ರಾಣಿಯೂ ಎರೆಯಂಗನೆಂಬ ಮಗನೂ ಇದ್ದರು. ಮಹಾಸಂಧಿವಿಗ್ರಹಿ ಪೋಚಿಮಯ್ಯ, ದಂಡನಾಯಕರಾದ ಮರಿಯಾನೆ ಮತ್ತು ಬಾಹುಬಲಿ ಇವನ ಆಸ್ಥಾನದಲ್ಲಿದ್ದ ಮುಖ್ಯ ಅಧಿಕಾರಿಗಳು.

ವಿನಯಾದಿತ್ಯ ಮತ್ತಾವರದ ಬಳಿಯಲ್ಲಿ ಅನೇಕ ಜೈನಬಸದಿಗಳನ್ನು ಕಟ್ಟಿಸಿ ವ್ಯವಸಾಯಕ್ಕಾಗಿ ಕಾಲುವೆಯೊಂದನ್ನು ತೋಡಿಸಿದ. ಇವನ ಕಾಲದಲ್ಲಿ ಸೊಸೆವೂರು ಅಥವಾ ಶಶಕಪುರ, ಶ್ರವಣಬೆಳಗೊಳ, ಚಿಕ್ಕಹನಸೋಗೆ ಮತ್ತು ಇತರ ಸ್ಥಳಗಳಲ್ಲಿ ಜೈನಬಸದಿಗಳು ನಿರ್ಮಾಣವಾದವು. ತೊಣಚಿಯ ಬಸವೇಶ್ವರ, ಕುಬಟೂರಿನ ಕೈಟಬೇಶ್ವರ, ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯಗಳು ಎರಡನೆಯ ವಿನಯಾದಿತ್ಯನ ಆಳಿಕೆಯಲ್ಲಿ ಕಟ್ಟಲ್ಪಟ್ಟವೆಂದು ತಿಳಿದುಬಂದಿದೆ. ಈತನ ಮರಣಾನಂತರ(1098) ಇವನ ಮಗ ಎರೆಯಂಗ ಪಟ್ಟಕ್ಕೆ ಬಂದ. (ಜಿ.ಆರ್.ಆರ್.)

**ವಿನೋದ:** ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ಹಾಸ್ಯ ಪ್ರಧಾನ ಮಾಸಪತ್ರಿಕೆ. ಸ್ವಾತಂತ್ರ್ಯ ಹೋರಾಟಗಾರರಾದ ದೇಶಹಳ್ಳಿ ಜಿ. ನಾರಾಯಣ ಪತ್ರಿಕೆಯ ಸ್ಥಾಪಕ ಸಂಪಾದಕರು. ಮೈಸೂರು ಕಾಂಗ್ರೆಸ್ ಸ್ಥಾಪಕರಲ್ಲಿ ಒಬ್ಬರಾಗಿದ್ದ ಎಚ್.ಕೆ. ವೀರಣ್ಣಗೌಡ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ವಾರ್ತಾ ಪತ್ರಿಕೆ ಮತ್ತು ಚಿತ್ರಗುಪ್ತ ವಾರಪತ್ರಿಕೆಗಳಲ್ಲಿ

(1949) ಕೆಲಸಮಾಡಿ ಅನುಭವ ಪಡೆದಿದ್ದ ಜಿ. ನಾರಾಯಣ ಅವರು ಬೆಂಗಳೂರಿನಿಂದ 'ವಿನೋದ' ಪತ್ರಿಕೆ ಪ್ರಕಟಣೆಯನ್ನು 1951 ಜನವರಿ 26 ರಂದು ಪ್ರಾರಂಭಿಸಿ ಪ್ರಥಮ ಸಂಚಿಕೆ ಹೊರತರಲು ನಿರ್ಧರಿಸಿ ಕಾರ್ಯನಿರತರಾದರು (ಪತ್ರಿಕೆ 1951 ಫೆಬ್ರವರಿಯಲ್ಲಿ ಕನ್ನಡಿಗರ ಕೈಸೇರಿತು). ಆಗ ಕೊರವಂಜಿ ಮತ್ತು ನಗುವನಂದ ಮಾಸಪತ್ರಿಕೆಗಳು ಪ್ರಕಟವಾಗುತ್ತಿದ್ದ




ಕಾಲ. ವಿನೋದ ಪತ್ರಿಕೆ ಡೆಮ್ಮೆ ಅಷ್ಟದಳ ಆಕಾರದಲ್ಲಿದ್ದು ಮೊದಲ ಪತ್ರಿಕೆಯ ಬೆಲೆ ಎರಡು ಆಣೆ ಇದ್ದು ಅನಂತರ 40 ಪೈಸೆ, 50 ಪೈಸೆ, 1 ರೂಪಾಯಿ ಆಯಿತು. ಈಗ ಪತ್ರಿಕೆಯ ಬೆಲೆ 3 ರೂಪಾಯಿ. ಪ್ರತಿ ತಿಂಗಳ ಮೊದಲ ವಾರದಲ್ಲಿ ಪ್ರಕಟವಾಗುವ ಈ ಪತ್ರಿಕೆಯಲ್ಲಿ 30ಕ್ಕೂ ಹೆಚ್ಚು ಪುಟಗಳಿದ್ದು ಹಾಸ್ಯ ಲೇಖನಗಳು, ವ್ಯಂಗ್ಯಚಿತ್ರ, ಹಾಸ್ಯಕವನ ಮುಂತಾದವನ್ನೊಳಗೊಂಡಿರುತ್ತದೆ. ವಿನೋದ ಪತ್ರಿಕೆಗೆ ಬರೆಯುವ ಲೇಖಕರ ಸಂಖ್ಯೆ ಸಾಕಷ್ಟಿದ್ದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಾಸ್ಯ ಲೇಖಕರ ಕೊರತೆಯಿಲ್ಲವೆಂದೂ ವಿನೋದದ 50 ವರ್ಷದಲ್ಲಿ ಪ್ರಕಟವಾಗಿರುವ ಹಾಸ್ಯ ಸಾಹಿತ್ಯ ಲೇಖನಗಳು 6000ಕ್ಕೂ ಹೆಚ್ಚಿವೆ ಎಂದೂ ಸಂಪಾದಕರು ಅಭಿಪ್ರಾಯಪಟ್ಟಿದ್ದಾರೆ. ನಾಡಿಗೇರ ಕೃಷ್ಣರಾಯ, ದಾಶರಥಿ ದೀಕ್ಷಿತ್, ಬೀಚಿ, ಎಂ. ಶಿವರಾಂ (ರಾಶಿ), ಟಿ. ಸುನಂದಮ್ಮ, ಅ.ರಾ. ಮಿತ್ರ, ಹಾ.ಮಾ. ನಾಯಕ, ಎ.ಎನ್. ಸ್ವಾಮಿ, ಸಿ.ಪಿ.ಕೆ., ಬಿ. ಶಾಮಸುಂದರ, ಎಚ್.ಎಲ್. ಕೇಶವಮೂರ್ತಿ, ಬಿ. ಸುಬ್ರಾಯ ಅಡಿಗ, ಶ್ರೀ ವೆಂಕಟರಮಣ, ಪ್ರೇಮಾಭಟ್, ಎಮ್. ಶಾರದಾ ನಾಗಭೂಷಣ, ಕ.ರಾ. ಮೋಹನ್, ತುರುವೇಕೆರೆ ಪ್ರಸಾದ್, ಎ.ಕೆ. ಪಟ್ಟಾಭಿ, ಎನ್. ರಾಘವೇಂದ್ರ, ಕೋ.ಲ. ರಂಗನಾಥರಾವ್, ಎಚ್.ವಿ. ವೆಂಕಟಸುಬ್ಬಯ್ಯ, ಸಿಸು ಸಂಗಮೇಶ, ಕೊತ್ತಲ ಮಹದೇವಪ್ಪ, ಎಲ್. ಚಿಕ್ಕಲಿಂಗೇಗೌಡ, ಎಚ್.ಆರ್. ಚಂದ್ರವದನರಾವ್, ಜಿ. ತಿಪ್ಪೇರುದ್ರಪ್ಪ ಮೊದಲಾದ ನೂರಾರು ಮಂದಿ ವಿನೋದ ಲೇಖಕರ ಬಳಗಕ್ಕೆ ಸೇರಿದವರಾಗಿದ್ದಾರೆ. ಜೊತೆಗೆ ವ್ಯಂಗ್ಯಚಿತ್ರ ರಚನೆಕಾರರಿಗೆ, ಹಾಸ್ಯಕವನ ಕವಿಗಳಿಗೆ, ಲೇಖಕರಿಗೆ ಪತ್ರಿಕೆ ಪ್ರೋತ್ಸಾಹ ನೀಡಿದೆ. ಲಾಭದಾಸೆಯಿಲ್ಲದೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಉಳಿದಿರುವ ಏಕೈಕ ಮಾಸಪತ್ರಿಕೆಯಿದು.

ಪ್ರತಿವರ್ಷ ಆಗಸ್ಟ್ 15 ರಂದು ವಿನೋದ ವಾರ್ಷಿಕ ಸಂಚಿಕೆಯನ್ನು ಪ್ರಕಟಿಸಲಾಗುತ್ತದೆ. 2006 ಆಗಸ್ಟ್ 15 ರಂದು ವಿನೋದದ 55ನೆಯ ವಾರ್ಷಿಕ ವಿಶೇಷ ಸಂಚಿಕೆ ಬಿಡುಗಡೆಯಾಗಿದೆ. ವಿನೋದ ಹಾಸ್ಯ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಲು ಪ್ರತಿವರ್ಷ ವಿನೋದ ಸಾಹಿತ್ಯ ಪ್ರಶಸ್ತಿ ನೀಡುತ್ತಿದೆ. ಆಯ್ಕೆಯಾದ ಕೃತಿಗೆ 5 ಸಾವಿರ ರೂಪಾಯಿ ಬಹುಮಾನ ನೀಡಲಾಗುವುದು.

*

**ವಿರಕ್ತ ತೋಂಟದಾರ್ಯ:** ಸು. 1560. ಸಿದ್ಧೇಶ್ವರ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಕರ್ಣಾಟಕ ಶಬ್ದಮಂಜರಿ, ಮನೋವಿಜಯ ಕಾವ್ಯದ ತಾತ್ಪರ್ಯ, ಮಗ್ಗೆಯ ಮಾಯಿದೇವ ಶತಕತ್ರಯ ಟೀಕೆ ಎಂಬ ಗ್ರಂಥಗಳ ಕರ್ತೃ. ಈತ ತನ್ನ ಪಾಲ್ಕುರಿಕೆ ಸೋಮೇಶ್ವರ ಪುರಾಣದಲ್ಲಿ ಚಿದಾನಂದ ಸಿಂಧು ಎಂಬ ಚಂಪೂ ಗ್ರಂಥವನ್ನೂ ಬರೆದಿರುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಈ ಗ್ರಂಥ ಉಪಲಬ್ಧವಿಲ್ಲ. ಸಿದ್ದಲಿಂಗೇಶ್ವರ ಶತಕ ಮತ್ತು ಪಾಲ್ಕುರಿಗೆ ಸೋಮನಾಥನ ಪಂಚಪದ್ಯಗಳ ಟೀಕೆ ಎಂಬ ಕೃತಿಗಳನ್ನೂ ಈತನೇ ಬರದಿರಬಹುದೆಂಬ ಊಹೆಯಿದೆ. ಇವನ ಎಲ್ಲ ಗ್ರಂಥಗಳಲ್ಲೂ ನಿರಂಜನಲಿಂಗ ಎಂಬ ಅಂಕಿತ ಕಂಡುಬರುತ್ತದೆ.

ಈತನಿಗೆ ತೋಂಟದ ಸಿದ್ಧಲಿಂಗ ದೇಶಿಕ ಎಂಬ ಹೆಸರೂ ಇದ್ದಂತೆ ಕಂಡುಬರುತ್ತದೆ. ಕವಿ ತನ್ನನ್ನು ಗುರುನಿರಂಜನ ಲಿಂಗಪದಕಮಲಸೌರಭಾಸಕ್ತ ಷಟ್ಪದ, ಷಟ್ಸ್ಥಲಾಚಾರಸಂಪನ್ನ, ಶೈವ ಪಂಚಾಕ್ಷರೀಮಂತ್ರ ಹೃದಯ, ಅಖಿಲ ಶಾಸ್ತ್ರಾರ್ಥಕೋವಿದ ಎಂದು ವಿಶೇಷಿಸಿಕೊಂಡಿದ್ದಾನೆ. ಈತ ಪರ್ವತೇಂದ್ರನ ಕರಜಾತ ಗೂಳೂರು ಸಿದ್ಧೇಶ್ವರರ ಶಿಷ್ಯ. ತೋಂಟದ ಸಿದ್ಧಲಿಂಗ ಯತಿಗಳ ಬಗ್ಗೆ ಈತ ಬಹಳ ನಿಷ್ಠೆ ಹೊಂದಿದ್ದ.

ಸಿದ್ಧೇಶ್ವರ ಪುರಾಣ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 25 ಸಂಧಿಗಳೂ 1,535 ಪದ್ಯಗಳೂ ಇವೆ. ನಿರಂಜನಗಣೇಶ್ವರನ ಅಪರಾವತಾರವಾದ ತೋಂಟದ ಸಿದ್ಧಲಿಂಗಯತಿಗಳ ಚರಿತ್ರೆ ಹಾಗೂ ಅವರು ಮೆರೆದ ಪವಾಡಗಳನ್ನು ಇದರಲ್ಲಿ ವಿಸ್ತಾರವಾಗಿ ವರ್ಣಿಸಿದೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣ ವಾರ್ಧಕ ಷಟ್ಪದಿಯಲ್ಲಿದೆ. ಈ ಕಾವ್ಯದಲ್ಲಿ 15 ಸಂಧಿಗಳೂ 1,456 ಪದ್ಯಗಳೂ ಇದ್ದು ಭೃಂಗಿಯ ಅಪರಾವತಾರವಾದ ಪಾಲ್ಕುರಿಕೆ ಸೋಮೇಶ್ವರನ ಚರಿತೆ ಹೇಳಿದೆ. ಈ ಗ್ರಂಥವನ್ನು ಗೂಳೂರು ಸಿದ್ಧೇಶ್ವರರ ಆಜ್ಞಾನುಸಾರ ಬರೆದಂತೆ ಕವಿ ಹೇಳಿಕೊಂಡಿದ್ದಾನೆ.

ಕರ್ಣಾಟಕ ಶಬ್ದಮಂಜರಿ ಹಳಗನ್ನಡ ನಿಘಂಟು. ಇದರಲ್ಲಿ 120 ವಾರ್ಧಕ ಷಟ್ಪದಿಗಳಿವೆ. ಅಚ್ಚಗನ್ನಡ ಗೂಢಪದ ತತ್ಸಮಂ ತದ್ಭವಗಳೆಂಬ ಶಬ್ದನಾಮಗಳನೋರಂತೆ ವಿರಚಿಸಿದೆನೆಲ್ಲಾ ಕವೀಶ್ವರರುದಾಹರಣ ಸನ್ಮಾರ್ಗವಿಡಿದು ಎಂದು ತನ್ನ ನಿಘಂಟಿನ ಬಗೆಗೆ ಹೇಳಿಕೊಂಡಿದ್ದಾನೆ. ಆ ಕಾಲಕ್ಕೆ ಈ ನಿಘಂಟು ತುಂಬ ಪ್ರಖ್ಯಾತವಾಗಿದ್ದಂತೆ ತಿಳಿದುಬರುತ್ತದೆ.

ಮನೋವಿಜಯ ಕಾವ್ಯದ ತಾತ್ಪರ್ಯ ಸಪ್ತಕಾವ್ಯಗಳ ಗುರುಬಸವನ (ಸು. 1430) ಮನೋವಿಜಯ ಕಾವ್ಯಕ್ಕೆ ಬರೆದ ವ್ಯಾಖ್ಯಾನ. ಇದಕ್ಕೆ ಚಂದ್ರಿಕೆ ಎಂಬ ಹೆಸರಿದ್ದಂತೆ ತೋರುತ್ತದೆ.

ಮಗ್ಗೆಯ ಮಾಯಿದೇವ ಶತಕತ್ರಯ ಟೀಕೆ ಮಗ್ಗೆಯ ಮಾಯಿದೇವ (ಸು. 1430) ವಿರಚಿತ ಏಮರೀಶ್ವರ ಶತಕ, ಶಿವಾಧವ ಶತಕ, ಶಿವಾವಲ್ಲಭ ಶತಕ ಇವುಗಳಿಗೆ ಬರೆದ ಟೀಕಾ ಗ್ರಂಥ. **(ಜ)**

**ವಿರಾಜಪೇಟೆ:** ಕೊಡಗು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ದಕ್ಷಿಣ ಕೊಡಗು ಎಂದೂ ಕರೆಯುವ ಈ ತಾಲ್ಲೂಕನ್ನು ಪೂರ್ವದಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳೂ ಉತ್ತರದಲ್ಲಿ ಸೋಮವಾರಪೇಟೆ ತಾಲ್ಲೂಕು ಮತ್ತು ಪಿರಿಯಾಪಟ್ಟಣ ತಾಲ್ಲೂಕಿನ ಸ್ವಲ್ಪ ಭಾಗವೂ ಪಶ್ಚಿಮ ಮತ್ತು ವಾಯವ್ಯದಲ್ಲಿ ಮಡಿಕೇರಿ ತಾಲ್ಲೂಕು ನೈಋತ್ಯ ಮತ್ತು ದಕ್ಷಿಣದಲ್ಲಿ ಕೇರಳರಾಜ್ಯವೂ ಸುತ್ತುವರೆದಿವೆ. ಅಮ್ಮತ್ತಿ, ವಿರಾಜಪೇಟೆ, ಪೊನ್ನಂಪೇಟೆ, ಬಾಳೆಲೆ, ಶ್ರೀಮಂಗಲ ಮತ್ತು ಹುದಿಕೇರಿ ಹೋಬಳಿಗಳಿದ್ದು 98 ಗ್ರಾಮಗಳೂ 3 ಪಟ್ಟಣಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 1,619.8 ಚ.ಕಿಮೀ. ಜನಸಂಖ್ಯೆ 1,78,148.

ಮಲೆನಾಡ ತೌರುಮನೆಯಾದ ಕೊಡಗಿನ ಈ ತಾಲ್ಲೂಕು ಬೆಟ್ಟಗುಡ್ಡಗಳಿಂದ ಕೂಡಿದೆ. ಕಣಿವೆ ಪ್ರದೇಶ ಮತ್ತು ಗುಡ್ಡಗಳ ಇಳಿಜಾರು ಪ್ರದೇಶ ಕಾಡುಗಳಿಂದ, ಬತ್ತದ ಗದ್ದೆಗಳಿಂದ ಮತ್ತು ಕಾಡುಗಳ ಮಧ್ಯೆ ಮಧ್ಯೆ ಇರುವ ಕಾಫಿ, ಕಿತ್ತಳೆಯ ತೋಟಗಳಿಂದ ಕಂಗೊಳಿಸುತ್ತದೆ. ಅಂಬಟೆ ಬೆಟ್ಟ, ಬೆಟ್ಟಂಗಾಲ, ಕುಂಡದಬೆಟ್ಟ ಮತ್ತು ಸಿದ್ಧೇಶ್ವರ ಬೆಟ್ಟ ಈ ತಾಲ್ಲೂಕಿನ ಮುಖ್ಯ ಬೆಟ್ಟಗಳು. ವಿರಾಜಪೇಟೆಯ ಕಡೆಯಲ್ಲಿ ಬೆಪ್ಪುನಾಡು ಮತ್ತು ಕಡ್ಯೆಟ್‌ನಾಡುಗಳಲ್ಲಿ ಅರಣ್ಯ ದಟ್ಟವಾಗಿಲ್ಲ. ಪೂರ್ವ ಎಲ್ಲೆಯ ಬಳಿ ಕಾವೇರಿ, ಲಕ್ಷ್ಮಣತೀರ್ಥ ನದಿಗಳ ನಡುವೆ ಪರ್ಣಪಾತಿ ವೃಕ್ಷಗಳ ವಿಶಾಲ ಕಾಡುಂಟು. ಇದರ ಪಶ್ಚಿಮದಲ್ಲಿ ನಿತ್ಯ ಹಸುರು ಕಾಡು ಇದ್ದು ಬಿದಿರು ಮೆಳೆ ವಿಶೇಷವಾಗಿದೆ.

ಕಾವೇರಿ, ಲಕ್ಷ್ಮಣತೀರ್ಥ ಮತ್ತು ಬರಪೊಳೆ ಈ ತಾಲ್ಲೂಕಿನ ಮುಖ್ಯ ನದಿಗಳು. ಕಾವೇರಿ ಹಲುಗುಂದ ಗ್ರಾಮದ ಉತ್ತರದಲ್ಲಿ ಈ ತಾಲ್ಲೂಕನ್ನು ಮುಟ್ಟುತ್ತದೆ. ಅನಂತರ ಮಡಿಕೇರಿ ಮತ್ತು ಸೋಮವಾರಪೇಟೆ ತಾಲ್ಲೂಕುಗಳನ್ನು ವಿರಾಜಪೇಟೆ ತಾಲ್ಲೂಕಿನಿಂದ ಬೇರ್ಪಡಿಸಿ ಗಡಿಯಾಗಿ ಈಶಾನ್ಯಾಭಿಮುಖವಾಗಿ ಹರಿಯುವುದು. ನದಿಯಬಯಲದಂಡೆ ವಿರಾಜಪೇಟೆ ತಾಲ್ಲೂಕಿಗೆ ಸೇರಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಇದೇ ತಾಲ್ಲೂಕಿನ ಬ್ರಹ್ಮಗಿರಿ ಬೆಟ್ಟಸಾಲಿನ ದೇವಾಸಿಬೆಟ್ಟದ ಮುನಿಕಾಡು ಅರಣ್ಯದಲ್ಲಿ ಲಕ್ಷ್ಮಣತೀರ್ಥ ಹುಟ್ಟಿ ಪೂರ್ವಾಭಿಮುಖವಾಗಿ ಪ್ರವಹಿಸುತ್ತ, ಅರಕೆರೆ ಮತ್ತು ಹತುಗಟ್ಟು ಕಾಡುಗಳ ಮಧ್ಯೆ ಹರಿದು ಪಿರಿಯಾಪಟ್ಟಣ ತಾಲ್ಲೂಕನ್ನು ಪ್ರವೇಶಿಸುವುದು. ರಾಮತೀರ್ಥ ಮತ್ತು ಕರೆಹೊಳೆ ಎರಡು ಉಪನದಿಗಳು ಈ ನದಿಗೆ ಸೇರುವುವು. ವಿರಾಜಪೇಟೆಯ ಆಗ್ನೇಯ ಭಾಗಕ್ಕೆಲ್ಲ ಈ ನದಿಗಳ ನೀರಿನಾಶ್ರಯ ದೊರೆತಿದೆ. ಈ ತಾಲ್ಲೂಕಿನ ಮತ್ತೊಂದು ಮುಖ್ಯನದಿ ಬರಪೊಳೆ. ಲಕ್ಷ್ಮಣತೀರ್ಥ ಮತ್ತು ಪಾಪನಾಶಿನಿ ಹುಟ್ಟುವೆಡೆಯಲ್ಲೇ ಈ ನದಿಯೂ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿಯುವುದು. ಕೇರಳವನ್ನು ಪ್ರವೇಶಿಸುವ ಮುನ್ನ ಬರಪೊಳೆ ಸುಮಾರು ಮೂರು ಕಿಮೀ ದೂರ ಕೊಡಗಿನ ತೀರದ ಗಡಿಯಾಗಿ ಹರಿಯುವುದು. ದಟ್ಟಕಾಡಿನ ಮಧ್ಯೆ ಈ ನದಿ ಹರಿದರೂ ಇದರ ಎಡಬಲ ದಂಡೆಗಳಲ್ಲಿರುವ ವ್ಯವಸಾಯ ಭೂಮಿಗೆ ನೀರುಣಿಸುತ್ತದೆ. ಜಲ ಮತ್ತು ಸಸ್ಯ ಸಮೃದ್ಧವಾದ ಈ ತಾಲ್ಲೂಕಿನಲ್ಲಿ ಮಳೆ ಹೆಚ್ಚು. ಇದರ ವಾರ್ಷಿಕ ಮಳೆ ಸು. 2,839.40 ಮಿಮೀ.

ತಾಲ್ಲೂಕಿನಲ್ಲಿ ಬತ್ತಕ್ಕೆ ಬೇಕಾದಂಥ ಭೂಮಿ ಮತ್ತು ಜಲಪೂರೈಕೆ ಸಮೃದ್ಧಿಯಾಗಿದ್ದು ಇದೇ ಮುಖ್ಯ ಬೆಳೆಯಾಗಿದೆ. ಜೊತೆಗೆ ಕಾಫಿ, ಮೆಣಸು, ಏಲಕ್ಕಿ ಮತ್ತು ಕಿತ್ತಳೆ ಮುಖ್ಯ ತೋಟದ ಬೆಳೆಗಳು. ಇವಲ್ಲದೆ ಬಾಳೆ, ಸ್ವಲ್ಪ ಅಡಕೆ, ಹಲಸು ಮುಂತಾದವನ್ನೂ ಬೆಳೆಯುವುದುಂಟು. ಈ ತಾಲ್ಲೂಕಿನಲ್ಲಿ ಜೇನುಸಾಕಣೆ, ಪಶುಪಾಲನೆ ಮತ್ತು ಮತ್ಸ್ಯೋದ್ಯಮ ಸಾಮಾನ್ಯ. ಕೈಗಾರಿಕೆ ಅಷ್ಟಾಗಿ ಅಭಿವೃದ್ಧಿಯಾಗಿಲ್ಲ. ವಿರಾಜಪೇಟೆ–ಮೈಸೂರು, ವಿರಾಜಪೇಟೆ– ಮಡಕೇರಿ– ಸೋಮವಾರಪೇಟೆ, ಹಾಸನ ಮುಂತಾದ ಜಿಲ್ಲಾ ಹೆದ್ದಾರಿಗಳಿದ್ದು, ಸಾಕಷ್ಟು ಗ್ರಾಮೀಣ ರಸ್ತೆಗಳಿದ್ದು ಸಂಪರ್ಕ ಸಾಧನಗಳಿವೆ. ತಾಲ್ಲೂಕಿನಲ್ಲಿ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ಶಾಲೆಗಳೂ ಒಂದು ಕಾಲೇಜೂ ಇದ್ದು ವಿದ್ಯಾಭ್ಯಾಸಕ್ಕೆ ತಾಲ್ಲೂಕಿನಲ್ಲಿ ಸಾಕಷ್ಟು ಸೌಲಭ್ಯವಿದೆ. ವಿದ್ಯುತ್, ಅಂಚೆ, ತಂತಿ, ದೂರವಾಣಿ, ಆಸ್ಪತ್ರೆ ಮತ್ತು ಔಷಧಾಲಯಗಳ ಸೌಲಭ್ಯಗಳಿವೆ.



ಗಡಿಯಾರದ ಗೋಪುರ, ವೀರಾಜಪೇಟೆ

ವಿರಾಜಪೇಟೆ ದಕ್ಷಿಣದಲ್ಲಿ 10 ಕಿಮೀ ದೂರದಲ್ಲಿರುವ ಹೆಗ್ಗಾಲ ಗ್ರಾಮವು ಹೆಗ್ಗಾಲ (ಹೆಗ್ಗಾಲ ಪಾಸ್) ಕಣಿವೆ ಮಾರ್ಗದಿಂದಾಗಿ ಪ್ರಸಿದ್ಧವಾಗಿದೆ. ಈ ಮಾರ್ಗದ ಮೂಲಕವೇ ಟಿಪ್ಪುಸುಲ್ತಾನ್ ಕೊಚ್ಚಿನ್ ಮತ್ತು ತಿರುವಾಂಕೂರು ರಾಜರ ಮೇಲೆ ದಂಡೆತ್ತಿ ಹೋಗಿದ್ದನೆಂದೂ ಬ್ರಿಟಿಷರ ಸೈನ್ಯ ಸಹ ಕಣ್ಣಾನೂರಿನಿಂದ ಶ್ರೀರಂಗಪಟ್ಟಣಕ್ಕೆ ಇದೇ ಮಾರ್ಗದಲ್ಲಿ ಸಾಗಿತ್ತೆಂದೂ ತಿಳಿದುಬರುತ್ತದೆ. ವಿರಾಜಪೇಟೆಯ ವಾಯವ್ಯದಲ್ಲಿ 6 ಕಿಮೀ ದೂರದಲ್ಲಿರುವ ಅರಮೇರಿ ಗ್ರಾಮದ ಬಳಿ ಬೃಹತ್ ಶಿಲಾ ಸಮಾಧಿಯುಗದ ಕಲ್ಲುಗುಡ್ಡೆ ಸಮಾಧಿಗಳು ದೊರಕಿದ್ದು ಇಲ್ಲಿನ ಇತಿಹಾಸಪೂರ್ವ ಸ್ಥಳಚರಿತ್ರೆಯ ವಿಷಯಗಳ ಮೇಲೆ ಬೆಳಕು ಚೆಲ್ಲಿವೆ. ವಿರಾಜಪೇಟೆಯ ಉತ್ತರದಲ್ಲಿ 13 ಕಿಮೀ ದೂರದಲ್ಲಿರುವ ಬೈರಂಬಡ ಗ್ರಾಮದ ಸುಬ್ರಹ್ಮಣ್ಯ ದೇವಾಲಯ ಪ್ರಸಿದ್ಧವಾದದ್ದು. ವಿರಾಜಪೇಟೆಗೆ ಈಶಾನ್ಯದಲ್ಲಿ 16 ಕಿಮೀ ದೂರದಲ್ಲಿರುವ ಗುಯ್ಯ ಗ್ರಾಮದಲ್ಲಿರುವ ಅಗಸ್ತ್ಯೇಶ್ವರ ದೇವಾಲಯ ಹೆಸರಾದದ್ದು. ವಿರಾಜಪೇಟೆಯ ಆಗ್ನೇಯದಲ್ಲಿರುವ ಪೊನ್ನಂಪೇಟೆಗೆ 11 ಕಿಮೀ ಪೂರ್ವದಲ್ಲಿರುವ ಬೀಳೂರು ಗ್ರಾಮದಲ್ಲಿ 9ನೆಯ ಶತಮಾನಕ್ಕೆ ಸೇರಿದ ಗಂಗರ ಕೆಲವು ಶಾಸನಗಳಿವೆ. ಪೊನ್ನಂಪೇಟೆಯ

ಈಶಾನ್ಯದಲ್ಲಿ 6 ಕಿಮೀ ದೂರದಲ್ಲಿರುವ ಧನುಗಾಲದಲ್ಲಿ ಟಿಪ್ಪುಸುಲ್ತಾನನ ಸೈನ್ಯ ಹಾಳುಗೆಡವಿದ ಕೊಳ್ಳಿನಿಂಗ ಮತ್ತು ಬೆಣ್ಣೆಕೃಷ್ಣ ಇವರು ಕಟ್ಟಿದ್ದೆಂದು ಹೇಳುವ ಕೋಟೆಯ ಅವಶೇಷವಿದೆ. ತಾಲ್ಲೂಕಿನ ದಕ್ಷಿಣದಂಚಿನಲ್ಲಿದ್ದು ಪೊನ್ನಂಪೇಟೆಗೆ 35 ಕಿಮೀ ದೂರದಲ್ಲಿರುವ ಕುಟ್ಟ ಗ್ರಾಮದಲ್ಲಿ ಪ್ರತಿ ಮಾರ್ಚ್–ಏಪ್ರಿಲ್‌ನಲ್ಲಿ ನಡೆಯುವ ಕಾಳಿಕಾದೇವಿಯ ಜಾತ್ರೆ ಪ್ರಸಿದ್ಧ. ತಾಲ್ಲೂಕಿನ ದಕ್ಷಿಣದ ತುದಿಯಲ್ಲಿ ಪೊನ್ನಂಪೇಟೆಗೆ ದಕ್ಷಿಣದಲ್ಲಿ 24 ಕಿಮೀ ದೂರದಲ್ಲಿರುವ ಕುರ್ಚಿ ಗ್ರಾಮದ ಬಳಿ ಶ್ರೀರಾಮನಿಂದ ಸ್ಥಾಪಿತವಾದದ್ದೆಂದು ಹೇಳುವ ಶಿವದೇವಾಲಯವಿದ್ದು ಶಿವರಾತ್ರಿಯಂದು ಸಣ್ಣ ಜಾತ್ರೆ ನಡೆಯುತ್ತದೆ. ಪೊನ್ನಂಪೇಟೆಯ ದಕ್ಷಿಣ ದಲ್ಲಿ 10 ಕಿಮೀ ದೂರದಲ್ಲಿರುವ ಹುದಿಕೇರಿ ಹಿಂದೆ ಕಿಗ್ಗಟ್‌ನಾಡು ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಪೊನ್ನಂಪೇಟೆಗೆ ದಕ್ಷಿಣದಲ್ಲಿ 3 ಕಿಮೀ ದೂರದಲ್ಲಿರುವ ಚಿಕ್ಕಮಂಡೂರು ಗ್ರಾಮದ ಬಳಿ ಇತಿಹಾಸ ಪೂರ್ವ ಶಿಲಾಸಮಾಧಿಗಳು ಇರುವುದು ಪತ್ತೆಯಾಗಿದೆ. ಈ ತಾಲ್ಲೂಕಿನಲ್ಲಿ ಪ್ರಸಿದ್ಧ ನಾಗರ ಹೊಳೆ ಅಭಯಾರಣ್ಯ ಪ್ರದೇಶವಿದೆ. ಪೊನ್ನಂಪೇಟೆಯ ಆಗ್ನೇಯಕ್ಕೆ 35 ಕಿಮೀ ದೂರದಲ್ಲಿರುವ ಈ ಅರಣ್ಯ ಪ್ರದೇಶ ಪ್ರವಾಸಿಗಳ ಕೇಂದ್ರವಾಗಿದೆ. ಪೊನ್ನಂಪೇಟೆ ಹೋಬಳಿಗೆ ಸೇರಿದ ಕುಟ್ಟಂಡಿ ಗ್ರಾಮದ ಬಳಿ ಬರಪೊಳೆ ಜಲವಿದ್ಯುತ್ ಕೇಂದ್ರ ಸ್ಥಾಪನೆಯ ಯೋಜನೆ ಕೈಗೊಳ್ಳಲಾಗಿದೆ. ಈ ಗ್ರಾಮ ಮತ್ತು ಜಲವಿದ್ಯುತ್ ಕೇಂದ್ರದ ಸ್ಥಳ ವಿರಾಜಪೇಟೆಯ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿದೆ. ವಿರಾಜಪೇಟೆಯ ಆಗ್ನೇಯಕ್ಕೆ 5 ಕಿಮೀ ದೂರದಲ್ಲಿರುವ ಬಿಟ್ಟಂಗಾಲ ಗ್ರಾಮದ ಬಳಿ ಅಭಯಾರಣ್ಯ ಪ್ರದೇಶದ ಪ್ರಕೃತಿಸೌಂದರ್ಯ ಹೆಸರಾದದ್ದು. ಇಲ್ಲಿಂದ ಬರಪೊಳೆಯ ಸರತಾಭಿ ಜಲಪಾತಕ್ಕೆ ಮಾರ್ಗವುಂಟು. ವಿರಾಜಪೇಟೆಯ ಪೂರ್ವಕ್ಕೆ 16 ಕಿಮೀ ದೂರದಲ್ಲಿರುವ ಗೋಣಿಕೊಪ್ಪಲು **(ನೋಡಿ)** ಒಂದು ವ್ಯಾಪಾರ ಕೇಂದ್ರ. ವಿರಾಜಪೇಟೆಯ ಆಗ್ನೇಯದಲ್ಲಿ 20ಕಿಮೀ ದೂರದಲ್ಲಿರುವ ಪೊನ್ನಂಪೇಟೆ **(ನೋಡಿ)** ಒಂದು ದೊಡ್ಡ ವ್ಯಾಪಾರಕೇಂದ್ರ. ವಿರಾಜಪೇಟೆಯ ದಕ್ಷಿಣಕ್ಕೆ ಇರುವ ವಾಟೆಕೊಲ್ಲಿ ಗ್ರಾಮ ಪೆರಿಯಂಬಾಡಿ ಘಾಟ್ ಮೂಲಕ ಕಣ್ಣಾನೂರಿಗೆ ಹೋಗುವ ಹೆದ್ದಾರಿಯಲ್ಲಿದೆ. ಹೆಚ್ಚು ಮಳೆ ಬೀಳುವ ಕೊಡಗಿನ ಭಾಗಮಂಡಲ ಬಿಟ್ಟರೆ ವಾಟೆಕೊಲ್ಲಿ ಎರಡನೆಯದು. ಇದನ್ನು ಕೊಡಗಿನ ಚಿರಾಪುಂಜಿ ಎಂದು ಕರೆಯುತ್ತಾರೆ.

ವಿರಾಜಪೇಟೆ ಈ ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕಿನ ವಾಯುವ್ಯದಲ್ಲಿ ಕಣ್ಣಾನೂರು–ಮಡಿಕೇರಿ, ಕಣ್ಣಾನೂರು–ಮೈಸೂರು ಹೆದ್ದಾರಿಯಲ್ಲಿರುವ ಈ ಪಟ್ಟಣ ಮಡಿಕೇರಿಯ ದಕ್ಷಿಣಕ್ಕೆ 32 ಕಿಮೀ ದೂರದಲ್ಲಿದೆ. ಜನಸಂಖ್ಯೆ 22,480. ಇದು ಕೊಡಗಿನ ಎರಡನೆಯ ಮುಖ್ಯ ಪಟ್ಟಣ. ಈ ಪಟ್ಟಣವನ್ನು ಕೊಡಗಿನ ದೊಡ್ಡ ವೀರರಾಜೇಂದ್ರ ಒಡೆಯ 1792ರಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಯಾಗಿದ್ದ ಜನರಲ್ ಸರ್ ರಾಬರ್ಟ್ ಅಬರ್‌ಕ್ರಾಂಬಿಯನ್ನು ಭೇಟಿಯಾದ ಸ್ಥಳದಲ್ಲೇ ಅದರ ನೆನಪಿಗಾಗಿ ಕಟ್ಟಿಸಿ, ವೀರರಾಜೇಂದ್ರಪೇಟೆ ಎಂದು ಹೆಸರಿಟ್ಟ. ಮುಂದೆ ಈ ಪಟ್ಟಣದ ಹೆಸರು ವಿರಾಜಪೇಟೆಯೆಂದು ಬಳಕೆಯಲ್ಲಿ ಬಂತು. ಇಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಗಳೂ ಮುನಿಸೀಫರ ಮತ್ತು ಮೊದಲನೆಯ ದರ್ಜೆಯ ಮ್ಯಾಜಿಸ್ಟ್ರೇಟರ ಕೋರ್ಟುಗಳೂ ಸರ್ಕಾರಿ ಆಸ್ಪತ್ರೆಗಳೂ, ವಿದ್ಯುತ್, ಅಂಚೆ, ತಂತಿ, ದೂರವಾಣಿ ಸೌಲಭ್ಯ, ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳೂ ಇವೆ. ಈ ಪಟ್ಟಣದಲ್ಲಿ 1870ರಿಂದ ಪುರಸಭೆಯಿದೆ. ಇಲ್ಲಿಂದ ಕೇರಳದ ತಲಚೇರಿ, ಕಣ್ಣಾನೂರುಗಳಿಗೂ ಜಿಲ್ಲೆಯ ಮತ್ತು ನೆರೆಜಿಲ್ಲೆಯ ಎಲ್ಲ ಊರುಗಳಿಗೂ ವಾಹನ ಸಂಪರ್ಕವಿದ್ದು, ಇದು ಜಿಲ್ಲೆಯ ಒಂದು ಮುಖ್ಯ ವ್ಯಾಪಾರಕೇಂದ್ರವಾಗಿದೆ ಕಾಫಿ, ಏಲಕ್ಕಿ, ಮೆಣಸು ಮತ್ತು ಅಕ್ಕಿ ಇಲ್ಲಿಯ ಮುಖ್ಯ ವ್ಯಾಪಾರ ಪದಾರ್ಥಗಳು. ಪಟ್ಟಣ ಮಲೆತಂಬಿರಾನ್ ಬೆಟ್ಟದ ಬುಡದಲ್ಲಿದೆ. ಇಲ್ಲಿನ ರೋಮನ್ ಕ್ಯಾತೊಲಿಕ್ ಚರ್ಚ್ ಮತ್ತು ಗಡಿಯಾರದ ಗೋಪುರ ಆಕರ್ಷಣೀಯವಾಗಿದೆ. **(*;ಡಿ.ಎನ್.ಕೆ.)**

**ವಿರುಪರಾಜ:** 16ನೆಯ ಶತಮಾನ. ತ್ರಿಭುವನತಿಲಕಂ ಎಂಬ ಗ್ರಂಥದ ಕರ್ತೃ. ರಾಜವಂಶಕ್ಕೆ ಸೇರಿದ ಈತ ತನ್ನ ವಂಶಾವಳಿಯನ್ನು ಕಾವ್ಯದಲ್ಲಿ ವಿಶದವಾಗಿ ಹೇಳಿಕೊಂಡಿದ್ದಾನೆ. ತನ್ನನ್ನು ನಾನಾಕಲಾರಾಮ, ಚೋಳರ ಭೀಮ, ಭೋಗನನುಜ ಎಂದು ಮುಂತಾಗಿ ವಿಶೇಷಿಸಿಕೊಂಡಿದ್ದಾನೆ.

ತ್ರಿಭುವನತಿಲಕಂ ಸಾಂಗತ್ಯದಲ್ಲಿದ್ದು ಇದರಲ್ಲಿ 27 ಸಂಧಿ, 1,578 ಪದ್ಯಗಳಿವೆ. ರಚನೆಯ ಕಾಲ 1519. ಚೇರಮನೆಂಬ ಶಿವಭಕ್ತನ ಕಥೆ ಈ ಕಾವ್ಯದ ವಸ್ತು. ಪ್ರತಿಸಂಧಿಯ ಆದಿಯಲ್ಲಿ ಮತ್ತು ಅಂತ್ಯದಲ್ಲಿ ಮಲ್ಲಿಕಾರ್ಜುನನನ್ನು ಕುರಿತ ಸ್ತುತಿಪದ್ಯಗಳಿವೆ. ಕಾವ್ಯವನ್ನು ತನ್ನ ಮಡದಿಗೆ ಹೇಳಿದಂತೆ ನಿರೂಪಿಸಿದ್ದಾನೆ.

ತ್ರಿಭುವನ ತಿಲಕದ ಕಥಾವಸ್ತು ಚೇರಮನ ಚರಿತ್ರೆ ಎಂದು ಕವಿ ಹೇಳಿರುವನಾದರೂ ಸೌಂದರನಂಬಿಯ ಕಥೆಯೇ 18 ಸಂಧಿಗಳಷ್ಟು ವಿಸ್ತಾರವಾಗಿದೆ. ಈ ರಸವತ್ತಾದ ಕಥೆಯನ್ನು ಕವಿ ರಮ್ಯವಾಗಿ ಹಾಡಿದ್ದಾನೆ. ಸಾಂಗತ್ಯ ರಚನೆಯಲ್ಲಿ ವಿರುಪರಾಜನಿಗೆ ಪ್ರಭುತ್ವವಿದೆ. ಈ ಕವಿಯ ಮೇಲೆ ಹರಿಹರನ ಪ್ರಭಾವ ಹೆಚ್ಚಾಗಿ ಆಗಿರುವಂತೆ ಕಂಡುಬರುತ್ತದೆ. **(ಎಂ.ಆರ್.ಯು.)**

**ವಿರೂಪಾಕ್ಷ I:** ವಿಜಯನಗರ ಸಂಗಮವಂಶದ ದೊರೆ. ಒಂದನೆಯ ಬುಕ್ಕನ ಮಗ. ಇಮ್ಮಡಿ ಹರಿಹರ ಮತ್ತು ಇಮ್ಮಡಿ ಕಂಪಣ್ಣ ಈತನ ಸೋದರರು. ಯುವರಾಜ ಪದವಿಯಲ್ಲಿಯೇ ಮುಂದುವರಿದು ವಿರೂಪಾಕ್ಷ ರಾಜ್ಯವಾಳಲಿಲ್ಲ. ಈತ ಆರಗ ಪ್ರಾಂತ್ಯ ಅಥವಾ ಮಲೆ ರಾಜ್ಯದ ಪ್ರಾಂತ್ಯಾಧಿಕಾರಿಯಾಗಿದ್ದ. ಹಲವು ಇತಿಹಾಸಕಾರರು ಈತನನ್ನು ಗಣನೆಗೆ ತೆಗೆದುಕೊಳ್ಳದೆ ಇಮ್ಮಡಿ ಹರಿಹರನ ಮಗ ವಿರೂಪಾಕ್ಷನೆಂದು ಪರಿಗಣಿಸಿದ್ದಾರೆ. **(ಬಿ.ಆರ್.ಜಿ.)**

**ವಿರೂಪಾಕ್ಷ II:** ವಿಜಯನಗರ ಸಂಗಮ ವಂಶದ ದೊರೆ (1404–06). ಎರಡನೆಯ ಹರಿಹರ ಮತ್ತು ಅವನ ರಾಣಿಯರಲ್ಲೊಬ್ಬಳಾದ ಮಲ್ಲಾ (ಮೇಲಾ) ದೇವಿಯ ಮಗ. ಪ್ರಾಪ್ತವಯಸ್ಕನಾದ ತರುವಾಯ ಈತ ತನ್ನ ತಂದೆಯ ಆಡಳಿತದಲ್ಲಿ ತನ್ನ ಸಹೋದರನಾದ ಒಂದನೆಯ ದೇವರಾಯ ಮತ್ತು ಮಲಸಹೋದರ ಎರಡನೆಯ ಬುಕ್ಕನೊಡನೆ ಪಾಲ್ಗೊಂಡಿದ್ದ ಈತ, ಸಿಂಹಳ ದ್ವೀಪದ ಮೇಲೆ ದಂಡೆತ್ತಿ ಹೋಗಿ ಅಲ್ಲಿನ ರಾಜನನ್ನು ಸೋಲಿಸಿ, ಅವನು ವಿಜಯನಗರಕ್ಕೆ ಪೊಗದಿ ಸಲ್ಲಿಸುವಂತೆ ಮಾಡಿದ. 1404ರಲ್ಲಿ ಎರಡನೆಯ ಹರಿಹರನ ಮರಣಾನಂತರ, ಅವನ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ಕಾದಾಟಗಳು ನಡೆದಾಗ ಎರಡನೆಯ ಬುಕ್ಕನನ್ನು ಸೋಲಿಸಿ ವಿರೂಪಾಕ್ಷ ಸಿಂಹಾಸನವನ್ನು ಪಡೆದ. ಆದರೆ ಬಹಳ ಕಾಲ ರಾಜನಾಗಿರಲು ಸಾಧ್ಯವಾಗಲಿಲ್ಲ ಈ ಸಹೋದರನೂ ಸಾಹಸಿಯೂ ಆದ ಒಂದನೆಯ ದೇವರಾಯ ಈತನನ್ನು ಸಿಂಹಾಸನದಿಂದ ತಳ್ಳಿ ಅಧಿಕಾರರೂಢನಾದ. ವಿರೂಪಾಕ್ಷ ಅನಂತರ ಪ್ರಾಂತಾಧಿಕಾರಿಯಾಗಿ ಮುಂದುವರಿದನೆಂದು ತಿಳಿದುಬರುತ್ತದೆ. **(ಜಿ.ಆರ್.ಆರ್.)**

**ವಿರೂಪಾಕ್ಷ III:** ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ದೊರೆ (ಸು. 1465–85). ಇಮ್ಮಡಿ ದೇವರಾಯನ ತಮ್ಮ, ಪ್ರತಾಪ ದೇವರಾಯನ ಮಗ. ಹಲವಾರು ವರ್ಷಗಳ ಕಾಲ ಪೆನುಕೊಂಡೆಯ ಅಧಿಪತಿಯಾಗಿದ್ದ. ಈತ ಮಲ್ಲಿಕಾರ್ಜುನನನ್ನು ಬದಿಗೊತ್ತಿ ಪಟ್ಟಕ್ಕೆ ಬಂದ. ಮಲ್ಲಿಕಾರ್ಜುನನನ್ನು ಇವನು ಕೊಲೆ ಮಾಡಿದನೆಂಬ ನಂಬುಗೆಯಿ

ದ್ದರೂ ಮಲ್ಲಿಕಾರ್ಜುನ ಸಿಂಹಾಸನ ಭ್ರಷ್ಟನಾದ ಅನಂತರವೂ ಬದುಕಿದ್ದ ನೆಂಬ ಊಹೆ ಇದೆ.

ವಿರೂಪಾಕ್ಷ ವ್ಯಸನಗಳಿಗೆ ಬಲಿಯಾಗಿ ರಾಜ್ಯರಕ್ಷಣ ಶಕ್ತಿಯನ್ನು ಕಳೆದುಕೊಂಡವನಾಗಿದ್ದ. ಇವನ ಕಾಲದಲ್ಲಿ 1470ರಲ್ಲಿ ಬಹಮನೀ ಸುಲ್ತಾನ 3ನೆಯ ಮಹಮ್ಮದ್‍ಷಾನ ಮಂತ್ರಿ ಮಹ್ಮೂದ್ ಗಾವಾನ್ ಗೋವೆಯನ್ನು, ಅದಕ್ಕೂ ಉತ್ತರದ ಕೊಂಕಣ ಕರಾವಳಿಯನ್ನು, ಬೆಳಗಾಂವಿಯ ಸುತ್ತಲ ಪ್ರದೇಶವನ್ನು ವಶಪಡಿಸಿಕೊಂಡ. ಇದರಿಂದ ಸಮುದ್ರವ್ಯಾಪಾರಕ್ಕೆ ಮುಖ್ಯವಾಗಿದ್ದ ಗೋವೆ, ದಾಬೋಲಿಂ ಮುಂತಾದ ಕರಾವಳಿಯ ಪಟ್ಟಣಗಳು ಬಹಮನಿಗಳ ವಶವಾಗಿ, ರಾಜ್ಯದ ಆರ್ಥಿಕ ಹಿನ್ನಡೆಗೆ ಅವಕಾಶ ಮಾಡಿಕೊಟ್ಟಿತು. ಕೇಂದ್ರ ಪ್ರಭುತ್ವದ ಪ್ರಭಾವ ಕ್ಷೀಣಿಸುತ್ತ ಬಂತು. ವಿಜಯನಗರದ ಭವ್ಯತೆ ಅದೇತಾನೆ ನಾಶವಾಗುವ ಸ್ಥಿತಿಯಲ್ಲಿದ್ದಿತು. ಚಂದ್ರಗಿರಿಯ ಅಧಿಪತಿಯಾಗಿದ್ದ ಸಾಳುವ ನರಸಿಂಹನ ಸಾಮರ್ಥ್ಯದಿಂದ ಸಾಮ್ರಾಜ್ಯ ಉಳಿಯಿತು. ಇಮ್ಮಡಿ ವಿರೂಪಾಕ್ಷ ಸು. 20 ವರ್ಷಗಳ ಕಾಲ ರಾಜನಾಗಿದ್ದ. ಸು. 1485ರಲ್ಲಿ ಇವನನ್ನು ಇವನ ಜ್ಯೇಷ್ಠಪುತ್ರನೇ ಕೊಲೆಮಾಡಿದನೆಂಬ ಹೇಳಿಕೆ ಇದೆ. (ಕೆ.ಎಸ್.ಎಸ್.;ಜಿ.ಆರ್.ಆರ್.)

**ವಿರೂಪಾಕ್ಷ ಪಂಡಿತ:** ಸು. 1584. ಚೆನ್ನಬಸವಪುರಾಣ ಎಂಬ ಕಾವ್ಯದ ಕರ್ತೃ. ಇವನು ವಿಜಯನಗರದ ಹಿರಿಯಮಠದ ಪಟ್ಟಾಧ್ಯಕ್ಷನಾಗಿದ್ದ ನೆಂದು ತೋರುತ್ತದೆ. ವಿಜಯನಗರದ ಮಳೆಯ ಮಲ್ಲೇಶ ಪರಂಪರೆಗೆ ಸೇರಿದ ಸಿದ್ಧವೀರೇಶ ಇವನ ಗುರು. ಹಂಪೆಯ ವಿರೂಪಾಕ್ಷ ಇವನ ಇಷ್ಟದೈವ. ಈತ ತನ್ನನ್ನು ಸಕಲಾಗಮಪುರಾಣಕೋವಿದ, ಸರಸಕರ್ಣಾಟಾದಿ ಭಾಷಾ ವಿಶಾರದ, ವರಕವಿಪ್ರಕರಮಾನಸರಾಜಹಂಸ, ನೂತನಪಂಡಿತಾರಾಧ್ಯ ಎಂದು ಮುಂತಾಗಿ ವಿಶೇಷಿಸಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ರಾಘವಾಂಕ, ಹರಿಹರ, ಮಗ್ಗೆಯ ಮಾಯಿದೇವ, ಚಾಮರಸ, ಕೆರೆಯ ಪದ್ಮರಸ ಮೊದಲಾದ ಕವಿಗಳನ್ನು ಸ್ತುತಿಸಿದ್ದಾನೆ. ಪುರಾತನರಲ್ಲಿ ಪ್ರಭುದೇವನಿಂದ ಕಿನ್ನರಿ ಬೊಮ್ಮಯ್ಯನವರೆಗೆ ಸ್ಮರಿಸಿದ್ದಾನೆ.

ಬಸವ ಮೊದಲಾದ ಶಿವಶರಣರ ಕಥೆಗಳನ್ನು ಹಿಂದಿನ ಕವಿಗಳು ಬರೆದಿರುವರು. ಆದರೆ ಚೆನ್ನಬಸವನನ್ನು ಕುರಿತು ಯಾರೂ ಕಾವ್ಯ ರಚಿಸಿಲ್ಲ. ಆದ್ದರಿಂದ ನೀನು ಅದನ್ನು ರಚಿಸು ಎಂದು ಶಿವಭಕ್ತ ಸಂಕುಲ ಪ್ರಾರ್ಥಿಸಿಕೊಂಡದ್ದರಿಂದ ತಾನು ಕಾವ್ಯ ಬರೆಯಲು ತೊಡಗಿದಂತೆ ಹೇಳಿಕೊಂಡಿದ್ದಾನೆ.

ಚೆನ್ನಬಸವಪುರಾಣ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 5 ಕಾಂಡಗಳೂ 63 ಸಂಧಿಗಳೂ 2,906 ಪದ್ಯಗಳೂ ಇವೆ. ಬಸವಣ್ಣನವರ ಸೋದರಿ ನಾಗಲಾಂಬಿಕೆಯ ಪುತ್ರ ಚೆನ್ನಬಸವಣ್ಣನ ಚರಿತೆ ಕಾವ್ಯವಸ್ತು. ಮೊದಲನೆಯ ಕಾಂಡದಲ್ಲಿ ಚೆನ್ನಬಸವನ ಜನನ, ಬಾಲ್ಯ ಪ್ರೌಢಾದಿ ಅವಸ್ಥೆಗಳೂ ಎರಡು, ಮೂರು ಮತ್ತು ನಾಲ್ಕನೆಯ ಕಾಂಡಗಳಲ್ಲಿ ಪರಶಿವನ ಪಂಚವಿಂಶತಿ ಲೀಲೆಗಳೂ ವರ್ಣಿತವಾಗಿವೆ. ಐದನೆಯ ಕಾಂಡದಲ್ಲಿ ವೀರಶೈವ ಮತತತ್ತ್ವ, 63 ಪುರಾತನರು, 770 ಗಣಂಗಳು ಮತ್ತು 101 ವಿರಕ್ತರ ವರ್ಣನೆಗಳು ಮತ್ತು ಆನೆಗೊಂದಿ ವಿಜಯನಗರದ ರಾಜ್ಯಸ್ಥಿತಿಗತಿಗಳ ಸೂಕ್ಷ್ಮ ಪರಿಚಯ ಮೊದಲಾದ ವಿಷಯಗಳು ಪ್ರತಿಪಾದಿತವಾಗಿವೆ. ಮಹಾಕಾವ್ಯ ಲಕ್ಷಣಗಳೆನಿಸಿದ 18 ವರ್ಣನೆಗಳಿಂದಲೂ ಛಂದಸ್ಸು ಅಲಂಕಾರ ರಸಗಳಿಂದಲೂ ಈ ಕಾವ್ಯ ಬಂಧುರವೂ ಲಲಿತವೂ ಆಗಿದೆ. ವಸಂತವರ್ಣನೆ, ಗಿರಿಜಾ ಪರಿಣಯ, ಸೂರ್ಯಾಸ್ತ, ಚಂದ್ರೋದಯ, ರತಿಪ್ರಲಾಪ ಮೊದಲಾದ ವರ್ಣನೆಗಳು ಮನೋಹರವಾಗಿವೆ. ಈ ಕಾವ್ಯಕ್ಕೂ ಲಕ್ಷ್ಮೀಶನ ಜೈಮಿನಿ ಭಾರತಕ್ಕೂ ಅನೇಕ ಹೋಲಿಕೆಗಳಿವೆಯಾದರೂ ಇವರಿಬ್ಬರಲ್ಲಿ ಯಾರು ಮೊದಲಿಗರು ಎಂಬ ಬಗ್ಗೆ ಪಂಡಿತರಲ್ಲಿ ಭಿನ್ನಾಭಿಪ್ರಾಯವಿದೆ. ಕವಿಯ ಕಾಲಕ್ಕೆ ಹಿಂದೆ ಇದ್ದ ವೀರಶೈವ ಪುರಾತನರ ಮತ್ತು ಕವಿಗಳ ಕಾಲನಿರ್ಣಯಕ್ಕೆ ಈ ಗ್ರಂಥ ಸಾಕಷ್ಟು ಸಹಾಯಕವಾಗಿದೆ. ಕನ್ನಡದ ಷಟ್ಪದಿ ಕಾವ್ಯಗಳಲ್ಲಿ ಈ ಕಾವ್ಯಕ್ಕೆ ಉನ್ನತ ಸ್ಥಾನ ಸಲ್ಲುತ್ತದೆ. (ಎಂ.ಜಿ.ಎನ್.)

**ವಿಲ್ಕ್ಸ್, ಮಾರ್ಕ್ ಕರ್ನಲ್:** 1760–1831. ಯೋಧ, ಚರಿತ್ರಕಾರ; ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟ್ (1803–08).

ಇಂಗ್ಲೆಂಡಿನ ಐಲ್ ಆಫ್ ಮ್ಯಾನ್‍ನಲ್ಲಿ ಜನಿಸಿದ ಈತ ಚರ್ಚಿನ ಸೇವೆಯನ್ನು ಮಾಡುವ ಉದ್ದೇಶದಿಂದ ಉನ್ನತಮಟ್ಟದ ಶಾಸ್ತ್ರೀಯ ಶಿಕ್ಷಣ ಪಡೆದ. 1783ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯ ಸೇರುವ ಉದ್ದೇಶ ದಿಂದ ಮದರಾಸಿಗೆ ಬಂದು ಮದರಾಸಿನ ಸೈನ್ಯ ಮಂಡಳಿಯ ಉಪಕಾರ್ಯದರ್ಶಿಯಾದ. ಅನಂತರ ಮದರಾಸಿನ ಗವರ್ನರ್ ಜಾನ್ ಹಾಲೆಂಡ್‍ನ ಏಡ್–ಡಿ–ಕ್ಯಾಂಪ್ ಆದ. ಟಿಪ್ಪುವಿನ ವಿರುದ್ಧ 1790–92ರವರೆಗೆ ನಡೆದ ಯುದ್ಧದ ವೇಳೆಯಲ್ಲಿ ಕರ್ನಲ್ ಜೇಮ್ಸ್ ಸ್ಟ್ಯೂವರ್ಟನಿಗೆ ಎ.ಡಿ.ಸಿ. ಮತ್ತು ಮಿಲಿಟರಿ ಕಾರ್ಯದರ್ಶಿಯಾಗಿದ್ದ. 1792ರ ಒಪ್ಪಂದದ ಅನಂತರ ಈತ ಅಸಿಸ್ಟೆಂಟ್ ಜನರಲ್ ಆಗಿಯೂ ಅನಂತರ ಜನರಲ್ ಸ್ಟ್ಯೂವರ್ಟನಿಗೆ ಕಾರ್ಯದರ್ಶಿಯಾಗಿಯೂ ಕೆಲಸಮಾಡಿದ. ಅನಾರೋಗ್ಯದ ಕಾರಣ 1794ರಲ್ಲಿ ಯುರೋಪಿಗೆ ಹೋಗಿ ಅಲ್ಲಿ 1799ರವರೆಗಿದ್ದ, ಪುನಃ ಭಾರತಕ್ಕೆ ಹಿಂದಿರುಗಿ ಮದರಾಸಿನ ಗೌವರ್ನರ್ ಆಗಿದ್ದ ಎಡ್ವರ್ಡ್ ಕ್ಲೈವನಿಗೆ ಮಿಲಿಟರಿ ಮತ್ತು ಆಪ್ತಕಾರ್ಯದರ್ಶಿಯಾಗಿದ್ದು ಪೋರ್ಟ್‍ಸೇಂಟ್ ರೆಸಿಡೆಂಟ್ ಆಗಿದ್ದ. 1808ರಲ್ಲಿ ಭಾರತದಿಂದ ಹಿಂದಿರುಗಿದ ಅನಂತರ ಸೇಂಟ್ ಹೆಲೀನ ದ್ವೀಪದಲ್ಲಿ ಗೌವರ್ನರ್ ಆಗಿ ಕೆಲಸಮಾಡಿ (1803–08) ನೆಪೋಲಿಯನ್ ಬೋನಪಾರ್ಟೆ ಅಲ್ಲಿ ಖೈದಿಯಾಗಿದ್ದ ಸಮಯದಲ್ಲಿ ನಿವೃತ್ತನಾದ. 1818ರಲ್ಲಿ ಕೆಲಸದಿಂದಲೂ ನಿವೃತ್ತನಾಗಿ 1831ರಲ್ಲಿ ನಿಧನನಾದ.

ಈತ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಸೌತ್ ಆಫ್ ಇಂಡಿಯಾ ಇನ್ ಎನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್. ಇದು ಮೂರು ಸಂಪುಟಗಳಲ್ಲಿದೆ. ಮೊದಲನೆಯದು 1810ರಲ್ಲೂ ಉಳಿದವು 1817ರಲ್ಲೂ ಪ್ರಕಟವಾದವು. 3ನೆಯ ಮೈಸೂರು ಯುದ್ಧದಲ್ಲಿ ಭಾಗವಹಿಸಿದ್ದ ಕಾಲದಲ್ಲಿ ಮತ್ತು ಅನಂತರ ಈ ಸಂಸ್ಥಾನದಲ್ಲಿ ರೆಸಿಡೆಂಟ್ ಆಗಿದ್ದ ಸಂದರ್ಭದಲ್ಲಿ ತಾನು ಗಳಿಸಿದ ಅನುಭವ ಮತ್ತು ವಿಷಯಜ್ಞಾನದ ಮೇಲೆ ರಚಿತವಾದ ಈ ಇತಿಹಾಸ ಗ್ರಂಥ ಈ ದೇಶದ ಇತಿಹಾಸ ರಚನೆಗೆ ಅದರಲ್ಲೂ 1799ರವರೆಗಿನ ಒಡೆಯರು ಮತ್ತು ಹೈದರ್, ಟಿಪ್ಪು ಕಾಲದ ಇತಿಹಾಸದ ಬಗ್ಗೆ ಇಂದಿಗೂ ಮೂಲ ಆಕರವಾಗಿದೆ. ಬ್ರಿಟಿಷ್ ದೃಷ್ಟಿಕೋನವಷ್ಟೇ ಇಲ್ಲಿದೆಯೆಂಬ ಅಪವಾದವೊಂದನ್ನು ಬಿಟ್ಟರೆ ಹೆಚ್ಚಿನ ಸಮಕಾಲೀನ ಆಧಾರಗಳ ಉಪಯೋಗ, ಉತ್ತಮಶೈಲಿ ಮತ್ತು ವಿಷಯನಿರೂಪಣೆ ಇವುಗಳಿಂದ ಇದೊಂದು ಉತ್ಕೃಷ್ಟ ಗ್ರಂಥವಾಗಿದೆ. ಮೈಸೂರು ಇತಿಹಾಸ ರಚನೆಯ ಜೊತೆಗೆ ಈತ ಮೈಸೂರು ಸಂಸ್ಥಾನದ ಆಂತರಿಕ ಆಡಳಿತವನ್ನು ಕುರಿತು ಒಂದು ವರದಿಯನ್ನೂ ತಯಾರಿಸಿದ್ದಾನೆ. ಸಂಸ್ಥಾನದ ಆದಾಯ ಮೂಲಗಳು ಮತ್ತು ಆಯುವ್ಯಯಕ್ಕೆ ಸಂಬಂಧಿಸಿದಂತೆ ಇವನ ವರದಿ ಅತ್ಯಂತ ಉಪಯುಕ್ತ ದಾಖಲೆಯಾಗಿದೆ. ಹಲವು ಕಾಲ ಇವನು ಇಂಗ್ಲೆಂಡಿನ ಏಷ್ಯಾಟಿಕ್ ಸೊಸೈಟಿಯ ಉಪಾಧ್ಯಕ್ಷನೂ ಆಗಿದ್ದ. ಆಗ ಅರಿಸ್ಟಾಟಲನ ಸಿದ್ಧಾಂತವನ್ನು ಅವಲಂಬಿಸಿ ಟ್ಯೂಸ್ ಪ್ರದೇಶದ ನಾಸಿರುದ್ದೀನ್ ಎಂಬ ವಿದ್ವಾಂಸನಿಂದ ರಚಿತವಾದ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಅಖ್ಲಕ್–ಇ–ನಾಸಿರಿ ಎಂಬ ಗ್ರಂಥದ ವಿಮರ್ಶನಾಕೃತಿಯನ್ನೂ ಬರೆದ.

ಆಡಳಿತ, ಇತಿಹಾಸ, ತತ್ತ್ವ ವಿಮರ್ಶೆಯ ಬಗ್ಗೆ ಗ್ರಂಥಗಳನ್ನು ಬರೆದಿರುವ ಈತನನ್ನು ಜ್ಞಾನಿ, ಮೇಧಾವಿ, ದಯಾವಂತ, ದೃಢತೆಯಿಂದಿರುವ ಆಡಳಿತಗಾರ ಎಂದು ನೆಪೋಲಿಯನ್ (ಸೇಂಟ್ ಹೆಲೀನಲ್ಲಿದ್ದಾಗ) ಬಣ್ಣಿಸಿದ್ದಾನೆ. (ಬಿ.ಎಸ್.ಎ.;ಕೆ.ವಿ.ಟಿ)

**ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ:** ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದಲ್ಲಿರುವ ಗಿರಿಜನರ ಮತ್ತು ಪಂಗಡಗಳ ಸರ್ವತೋಮುಖ ಅಭಿವೃದ್ಧಿಕಾರ್ಯನಿರತ ಸೇವಾಕೇಂದ್ರ (1981). ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮಗಾಂಧೀಜಿಯವರ ಸೇವಾದರ್ಶಗಳನ್ನು ಆಶಯವಾಗುಳ್ಳ ಈ ಸಂಸ್ಥೆ ಯಳಂದೂರು, ಚಾಮರಾಜನಗರ, ಕೊಳ್ಳೇಗಾಲ ತಾಲ್ಲೂಕುಗಳ ಅರಣ್ಯ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಸೋಲಿಗರಿಗೆ (ಸು. 22 ಸಾವಿರ) ಸರ್ಕಾರದ ಯೋಜನೆಗಳ ಮತ್ತು ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ತಿಳಿವಳಿಕೆ ನೀಡಲು ಹಾಗೂ ಅವರ ಆರೋಗ್ಯ,



ವಿವೇಕಾನಂದ ಗಿರಿಜನಕಲ್ಯಾಣಕೇಂದ್ರದ ಕಛೇರಿ, ಬಿಳಿಗಿರಿರಂಗನಬೆಟ್ಟ

ವಸತಿ, ಶಿಕ್ಷಣ, ತರಬೇತಿ ಇತ್ಯಾದಿಗಳ ಬಗ್ಗೆ ಜಾಗೃತಿ ಉಂಟುಮಾಡಲು ಕಳೆದ ಎರಡು ದಶಕಗಳಿಂದ ಕೆಲಸ ಮಾಡುತ್ತ ಬಂದಿದೆ. ಸು. 60 ಕಿಮೀ ವ್ಯಾಪ್ತಿಯಲ್ಲಿ ನೂರಕ್ಕೂ ಹೆಚ್ಚು ಚಿಕ್ಕ ಮತ್ತು ದೊಡ್ಡ ಗಿರಿಜನಪೋಡು, ಹಾಡಿ, ಪಾಳ್ಯ, ದೊಡ್ಡಿ ಮತ್ತು ಕಾಲೊನಿಗಳಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಿದೆ. ಎಲ್ಲ ಕೆಲಸ ಕಾರ್ಯಗಳಲ್ಲಿಯೂ ಗಿರಿಜನರೇ ಸಕ್ರಿಯವಾಗಿ ಪಾಲುಗೊಳ್ಳುವುದು ಈ ಸಂಸ್ಥೆಯ ವಿಶೇಷತೆ. ಈ ಕೇಂದ್ರದ ಕಾರ್ಯಕಾರಿ ಸಮಿತಿ ಸಹ ಬಹುತೇಕ ಗಿರಿಜನರಿಂದ ಕೂಡಿದೆ. ಈ ಕೇಂದ್ರದ ಉದ್ದೇಶಗಳಿವು: ಗಿರಿಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು; ಸೋಲಿಗ ಗಿರಿಜನ ಸಮಾಜವನ್ನು ಅಭಿವೃದ್ಧಿಗೊಳಿಸುವುದು; ಶಿಕ್ಷಣ ಮತ್ತು ತರಬೇತಿಯ ಮೂಲಕ ಗಿರಿಜನರ ಸುಪ್ತ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಪ್ರಕಟಗೊಳಿಸುವುದು; ಗಿರಿಜನರ ಸಂಘಟನೆಗಳನ್ನು ಪ್ರೋತ್ಸಾಹಿಸುವುದು; ಸಮುದಾಯ ಬಾಳ್ವೆ ಮತ್ತು ಒಟ್ಟುಗೂಡಿ ಕೆಲಸ ಮಾಡುವುದು; ಬಡತನ ರೇಖೆಗಿಂತ ಕಡಿಮೆ ಇರುವ ಜನರ ಆರೋಗ್ಯ, ಶಿಕ್ಷಣ, ವೃತ್ತಿಶಿಕ್ಷಣ ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆದ್ಯತೆ ಕೊಟ್ಟು ಅದರ ಕಾರ್ಯ ಚಟುವಟಿಕೆಗಳಿಗೆ ಸಹಕಾರ ನೀಡುವುದು; ಸಮಾಜಕಾರ್ಯ ಮತ್ತು ಸಮುದಾಯ ಸಂಘಟನೆಗೆ ಪ್ರೇರಣೆ; ಸ್ವಾಮಿ ವಿವೇಕಾನಂದರ ತತ್ತ್ವಗಳ ಅರಿವುಂಟುಮಾಡುವುದು ಇತ್ಯಾದಿ.

ಈ ಸಂಸ್ಥೆ ಗಿರಿಜನರ ಶಿಕ್ಷಣ ಹಾಗೂ ವಿದ್ಯಾಭ್ಯಾಸಕ್ಕಾಗಿ ಅನೇಕ ಶಾಲಾಕಾಲೇಜುಗಳನ್ನು, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ದೇಶೀಯ ಹಾಗೂ ವಿದೇಶೀಯ ನೆರವಿನಿಂದ ಅವುಗಳನ್ನು ನಡೆಸಿಕೊಂಡು ಬರುತ್ತಿದೆ. ಸ್ಥಳೀಯ ಆವಶ್ಯಕತೆ, ಸಂಪನ್ಮೂಲ ಮತ್ತು ಅಭಿರುಚಿಗಳನ್ನು ಅನುಸರಿಸಿ ಮರಗೆಲಸ, ಜೇನುಸಾಕಣೆ, ಹೆಣಿಗೆ ಮೊದಲಾದ ಕೈಮಗ್ಗ, ಅನೇಕ ಗೃಹ ಕೈಗಾರಿಕೆಗಳನ್ನೂ ಕೈಕಸಬುಗಳನ್ನೂ ಕಲಿಯಲು ಅವಕಾಶ ಕಲ್ಪಿಸಿ (ಗಿರಿಯ ಯುವಜನರಲ್ಲಿ) ಸ್ವಉದ್ಯೋಗ ಮತ್ತು ಸಮುದಾಯದಲ್ಲಿ ಸ್ವಾವಲಂಬನೆ ಬೆಳೆಯುವಂತೆ ಮಾಡಿದೆ.

ಸಮುದಾಯ ಸಂಘಟನೆ: ಕೊಳ್ಳೇಗಾಲ, ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳ ಗಿರಿಜನ ಪ್ರದೇಶಗಳಿಗೆ ಸಂಬಂಧಿಸಿದಂತೆ ಒಂದೊಂದು ಪೋಡು ಹಾಡಿಯಲ್ಲಿಯೂ ಗ್ರಾಮಮಟ್ಟದ ಸಂಘಗಳು ಮತ್ತು ಇವುಗಳು ಒಟ್ಟುಗೂಡಿ ತಾಲ್ಲೂಕು ಸಂಘಗಳು ಕೆಲಸ ಮಾಡುತ್ತಿವೆ. ಈ ಸಂಘಟನಾ ಕಾರ್ಯದಲ್ಲಿ ಮೊದಲಿಗೆ ಸಮಾಜ ಕಾರ್ಯಕರ್ತರ ನೆರವನ್ನು ಅವಲಂಬಿಸಿದ್ದ ಗಿರಿಜನರು ಈಗ ಅವುಗಳನ್ನು ತಾವೇ ಸಂಘಟಿಸಿ ನಡೆಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮಸಮಸ್ಯೆಗಳ ಪರಿಹಾರ, ಸರ್ಕಾರಿ ಕಾರ್ಯಕ್ರಮಗಳ ಸಂಯೋಜನೆ ಮತ್ತು ಅನುಷ್ಠಾನ ಕಾರ್ಯಗಳನ್ನು ಈಗ ಸಂಘಗಳು ನಡೆಸಿಕೊಂಡು ಹೋಗುತ್ತಿವೆ. ಕುಷ್ಠ, ಕ್ಷಯದಿಂದ ಹಿಡಿದು ವಿವಿಧ ರೋಗಗಳ ಚಿಕಿತ್ಸೆ ಮತ್ತು ಅವುಗಳ ಅರಿವಿಗೆ ಸಮುದಾಯ ಆರೋಗ್ಯ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಕರುಣ ಟ್ರಸ್ಟ್ ಮೂಲಕ ಕುಷ್ಠ, ಮೂರ್ಛೆ ಮತ್ತು ಕ್ಷಯರೋಗ ನಿಯಂತ್ರಣ ಕಾರ್ಯಕ್ರಮಗಳು ನಡೆಯುತ್ತಿವೆ. ಪೌಷ್ಟಿಕ ಆಹಾರ ಕಾರ್ಯಕ್ರಮ ಯೋಜನೆ ಯಲ್ಲಿ ತಾಯಿಮಕ್ಕಳ ಆರೋಗ್ಯಕ್ಕೆ ಮತ್ತು ಪೋಷಣೆಗೆ ಗಮನ ನೀಡಲಾಗಿದೆ. ಗೋರೆಮಡು, ಕೋಣನಕೆರೆಗಳಲ್ಲಿ ಆರೋಗ್ಯ ಉಪಕೇಂದ್ರಗಳಿವೆ. ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಕೋಳಿ ಸಾಕಣೆ, ವಸತಿ ನಿರ್ಮಾಣ, ಅರಣ್ಯ ಬೆಳೆಸುವಿಕೆ ಮೊದಲಾದ ಕಾರ್ಯಕ್ರಮಗಳನ್ನು ಈ ಕೇಂದ್ರ ವಿವಿಧ ಸಂಸ್ಥೆಗಳ ನೆರವಿನಿಂದ ಕೈಗೊಂಡಿದೆ. (ಜಿ.ಎಸ್‌ಎಚ್.)

**ವಿಶಿಷ್ಟ ಶಿಕ್ಷಣ:** ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯಲಾರದ ಅಂಗವಿಕಲರ ಹಾಗೂ ಹಿಂದುಳಿದ ವರ್ಗಗಳ ಮಕ್ಕಳಿಗಾಗಿ ಏರ್ಪಟ್ಟಿರುವ ವಿಶೇಷ ರೀತಿಯ ಸಂಸ್ಥೆಗಳನ್ನು ಈ ಲೇಖನದಲ್ಲಿ ಪರಿಶೀಲಿಸಿದೆ. ಕುರುಡರ ಮತ್ತು ಮೂಗರ ಪಾಠಶಾಲೆ, ವಾಕ್–ಶ್ರವಣ ಸಂಸ್ಥೆ ಹಾಗೂ ಹಿಂದುಳಿದ ವರ್ಗಗಳ ಮಕ್ಕಳ ಶಾಲೆ ಇವನ್ನು ಇಲ್ಲಿ ಪರಿಚಯ ಮಾಡಿಕೊಡಲು ಯತ್ನಿಸಿದೆ.

**ಕುರುಡರ ಮತ್ತು ಮೂಗರ ಪಾಠಶಾಲೆ:** ಮೈಸೂರು ನಗರದಲ್ಲಿ 1901ರಲ್ಲಿ ನಿವೃತ್ತ ಶಾಲಾ ಇನ್ಸ್‌ಪೆಕ್ಟರ್ ಆದ ಎಂ.ಶ್ರೀನಿವಾಸರಾಯರು ತಮ್ಮ ಮನೆಯಲ್ಲಿಯೇ ಒಬ್ಬ ಕುರುಡ ಮತ್ತು ಮೂವರು ಕಿವುಡ ಬಾಲಕರಿಗೆ ಶಿಕ್ಷಣ ಕೊಡಲಾರಂಭಿಸಿದರು. ಕಣ್ಣುಳ್ಳವರಿಗೆ ದೊರಕುವಂತೆ, ಇವರಿಗೂ ಯೋಗ್ಯ ವಿದ್ಯಾಭ್ಯಾಸ ದೊರಕಿ, ತನ್ಮೂಲಕ ಇವರೂ ಉತ್ತಮ ಪ್ರಜೆಗಳಾಗುವಂತೆ, ಮಾಡುವ ಆದರ್ಶವನ್ನಿಟ್ಟುಕೊಂಡು ಈ ಶಾಲೆಯನ್ನಾರಂಭಿಸಿದರು. ಸರ್ಕಾರ ಇವರ ಸೇವೆಯನ್ನು ಮನ್ನಿಸಿ 1902ರಲ್ಲಿ ಒಬ್ಬ ಅಧ್ಯಾಪಕರನ್ನು ನೇಮಿಸಿತು. ಅನೇಕ ಉದಾರಿಗಳು ಈ ಸಂಸ್ಥೆಯ ಬೆಳೆವಣಿಗೆಗೆ ಕಾರಣರಾದರು. ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರೂ ಅವರ ಆಪ್ತಕಾರ್ಯದರ್ಶಿ ಸರ್ ಚಾರ್ಲಸ್ ಹಂಟರ್ ಅವರೂ ವಿದೇಶಗಳಲ್ಲಿರುವ ಇಂಥ ಶಾಲೆಗಳ ಮಟ್ಟಕ್ಕೆ ಈ ಶಾಲೆಯನ್ನು ತರಲು ಬಹಳ ಶ್ರಮಿಸಿದರು. 1927ರಲ್ಲಿ ಸರ್ಕಾರ ಈ ಶಾಲೆಯನ್ನು ತನ್ನ ಅಧೀನಕ್ಕೆ ತೆಗೆದುಕೊಂಡಿತು. ಅಂದಿನಿಂದ ಇಂದಿನವರೆಗೆ ಈ ಶಾಲೆ ಹಲವು ವಿಧಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುತ್ತ ಬಂದಿದೆ. 1901ರಿಂದ 1932ರವರೆಗೆ ಈ ಶಾಲೆಯಲ್ಲಿ ಸಹ ಶಿಕ್ಷಣವೂ ದೊರೆಯುತ್ತಿತ್ತು. 1932ರಲ್ಲಿ ಹೆಣ್ಣುಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ವೃತ್ತಿಶಿಕ್ಷಣ ಶಾಲೆ ಆರಂಭವಾಯಿತು. 1969ರಲ್ಲಿ ಮತ್ತೆ ಇದನ್ನು ಕುರುಡರ ಮತ್ತು ಮೂಗರ ಪಾಠಶಾಲೆಗೇ ವರ್ಗಾಯಿಸಲಾಯಿತು. ಈಗ ಇಲ್ಲಿ ಸಹಶಿಕ್ಷಣ ಕ್ರಮವಿದೆ. ಅನಂತರ ಕರ್ನಾಟಕದಲ್ಲಿ ಗುಲ್ಬರ್ಗದಲ್ಲಿ ಮತ್ತೊಂದು ಕುರುಡರ ಮತ್ತು ಮೂಗರ ಪಾಠಶಾಲೆ ಆರಂಭವಾಯಿತು

(1962). ಇಲ್ಲಿ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನೂ ಸಂಗೀತವನ್ನೂ ಹೇಳಿಕೊಡಲಾಗುತ್ತಿದೆ. ಈಚೆಗೆ ಹುಬ್ಬಳ್ಳಿಯಲ್ಲೂ ಇಂಥ ಶಾಲೆಯನ್ನು ಸರ್ಕಾರದವರು ಸ್ಥಾಪಿಸಿದ್ದಾರೆ. ಇವೆಲ್ಲವೂ ವಸತಿ ವಿದ್ಯಾಲಯಗಳಾಗಿವೆ. ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲೂ ಕುರುಡರಿಗಾಗಿ ಒಂದು ಪ್ರೌಢಶಾಲಾ ಮಟ್ಟದ ಶಿಕ್ಷಣ ಸಂಸ್ಥೆ ಖಾಸಗಿ ಕ್ಷೇತ್ರದಲ್ಲಿ ಆರಂಭವಾಗಿ ನಡೆಯುತ್ತಿದೆ.

ಕುರುಡರ ಮತ್ತು ಮೂಗರ ಶಾಲೆಗಳಲ್ಲಿ 6 ರಿಂದ 10 ವರ್ಷದೊಳಗಿನ ಮಕ್ಕಳನ್ನು ಸೇರಿಸಿಕೊಳ್ಳಲಾಗುತ್ತದೆ. ಶಿಕ್ಷಣ ಉಚಿತ, ಸಾಮಾನ್ಯ ಪ್ರಾಥಮಿಕ ಶಾಲೆಯ ಪಠ್ಯ ಪುಸ್ತಕಗಳನ್ನೇ ಆಧಾರವಾಗಿಟ್ಟುಕೊಂಡು ಶಿಕ್ಷಣವನ್ನು ಕೊಡಲಾಗುತ್ತಿದೆ. ಜೊತೆಗೆ ಔದ್ಯೋಗಿಕ ಶಿಕ್ಷಣವನ್ನೂ ನೀಡಲಾಗುತ್ತಿದೆ.

ಅಂಧಮಕ್ಕಳಿಗೆ ಸಂಗೀತ, ಬೆತ್ತ ಹಾಗೂ ನೇಯ್ಗೆ ಕೆಲಸ ಮುಂತಾದವುಗಳನ್ನು ಹೇಳಿಕೊಡಲಾಗುತ್ತಿದೆ. ದೈಹಿಕ ಶಿಕ್ಷಣ, ತೋಟಗಾರಿಕೆ, ಪಠ್ಯೇತರ ಚಟುವಟಿಕೆಗಳನ್ನೂ ಸ್ಕೌಟಿಂಗ್ ಗೈಡಿಂಗ್ ಚಟುವಟಿಕೆಗಳನ್ನೂ ಶಿಕ್ಷಣ ಕ್ರಮದಲ್ಲಿ ಅಳವಡಿಸಲಾಗಿದೆ. ಈ ಶಾಲೆಗೆ ಸೇರಿರುವ ವಿದ್ಯಾರ್ಥಿನಿಲಯಕ್ಕೆ ಸರ್ಕಾರ ಊಟ, ಬಟ್ಟೆ, ಹಾಸಿಗೆ ಮುಂತಾದುವುಗಳನ್ನೊದಗಿಸುತ್ತದೆ. ಈ ವೆಚ್ಚವನ್ನು ವಿಶೇಷ ಬಜೆಟ್‌ನಲ್ಲಿ ತೋರಿಸಬೇಕೆಂದು ಸಮಾಜ ಶಿಕ್ಷಣ ಇಲಾಖೆಗೆ ಆದೇಶ ನೀಡಲಾಗಿದೆ. ವಿದ್ಯಾರ್ಥಿನಿಲಯಗಳಲ್ಲಿ 130 ಬಾಲಕರನ್ನೂ 50 ಬಾಲಕಿಯರನ್ನೂ ತೆಗೆದುಕೊಳ್ಳಲು ಅವಕಾಶವಿದೆ. ಸರ್ಕಾರದ ಸಹಾಯದೊಂದಿಗೆ ಹದಿನಾಲ್ಕು ಮಂದಿ ದಾನಿಗಳು ಮಾಡಿರುವ ದಾನಪತ್ರದ ಸುಮಾರು ನಲವತ್ತು ಸಹಸ್ರ ರೂಪಾಯಿಗಳ ಮೇಲೆ ಬರುವ ಬಡ್ಡಿಯಿಂದ ಆಗಾಗ್ಗೆ ವಿಶೇಷ ಭೋಜನಗಳನ್ನೂ ಏರ್ಪಡಿಸುತ್ತಾರೆ.

ಕುರುಡರಿಗೆ ಆರು ಚುಕ್ಕಿಗಳ ಸಂಯೋಜನೆಯಿಂದ ಕೂಡಿದ ಒಂದು ಅಪೂರ್ವವಾದ ಮತ್ತು ಸ್ವಾರಸ್ಯಪೂರ್ಣವಾದ ಬ್ರೈಲ್ ಲಿಪಿಯ ಮೂಲಕ ಶಿಕ್ಷಣ ಕೊಡುತ್ತಾರೆ. ಈ ಲಿಪಿಯನ್ನು ಸ್ಪರ್ಶಜ್ಞಾನದ ಮೂಲಕ ಆಯಾ ದೇಶದ ಅಂಧರಿಗೆ ಅಲ್ಲಿನ ಪ್ರಾದೇಶಿಕ ಭಾಷೆ ಮತ್ತು ಇಂಗ್ಲಿಷಿನ ಮೂಲಕ ಶಿಕ್ಷಣ ನೀಡುತ್ತಾರೆ. ಓದು ಬರೆಹಗಳನ್ನಲ್ಲದೆ ಗಣಿತ, ವಿಜ್ಞಾನ, ಇತಿಹಾಸಗಳನ್ನೂ ಬೋಧಿಸಲಾಗುತ್ತದೆ. ಇದರೊಂದಿಗೆ ಭಾರತೀಯ ಬ್ರೈಲ್ ಲಿಪಿಯನ್ನೂ ಬಳಸಲಾಗುತ್ತದೆ. 13 ಪ್ರಾದೇಶಿಕ ಭಾಷೆಗಳಿಗೆ ಅನ್ವಯಿಸುವ ಒಂದು ವಿಶಿಷ್ಟ ಅಕ್ಷರಮಾಲೆಯನ್ನು ಕಂಡುಹಿಡಿಯಲಾಗಿದೆ. ಅಕ್ಷರ ಸ್ವಾಭಾವಿಕ ಕ್ರಮ ಕೆಟ್ಟಿಲ್ಲ. ಕಾಗುಣಿತ ಸಹ ಕೆಟ್ಟಿಲ್ಲ. ಹಿಂದೆ ಮೊದಲು ವರ್ಣಮಾಲೆಯನ್ನು ಕಲಿಸಿ ಅನಂತರ ಪುಸ್ತಕವನ್ನೋದಿಸುವ ಕ್ರಮ ಜಾರಿಯಲ್ಲಿತ್ತು. ಈಚೆಗೆ ನವೀನ ಶಿಕ್ಷಣತಜ್ಞರ ಅಭಿಪ್ರಾಯದಂತೆ ಪದಗಳ ಮೂಲಕ ಭಾಷೆಯನ್ನು ಬೋಧಿಸುವ ಕ್ರಮ ಉತ್ತಮವೆಂದು ಪರಿಗಣಿಸಿ ಅದನ್ನು ಅಳವಡಿಸಲಾಗಿದೆ.

ಮುಂಬಯಿಯ ಕುರುಡರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಒಂದು ಶಾಖೆ ಬೆಂಗಳೂರಿನಲ್ಲಿ ಆರಂಭವಾಗಿದ್ದು, ಕುರುಡರ ಕಲ್ಯಾಣಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಏರ್ಪಡಿಸಿ ನಡೆಸುತ್ತಿದೆ.

ಮೂಗರ ಶಿಕ್ಷಣ: ಸಂಜ್ಞಾಭಾಷೆ ಮತ್ತು ವಾಚ್ಯಕ್ರಮ ಈ ಎರಡು ರೀತಿಗಳನ್ನೂ ಸೇರಿಸಿ ಮೂಗ ಮಕ್ಕಳಿಗೆ ಪಾಠವನ್ನು ಕಲಿಸಲಾಗುತ್ತಿದೆ. ಸಾಮಾನ್ಯ ಶಾಲೆಗಳಲ್ಲಿ ಬಳಸುವ ಪಠ್ಯಪುಸ್ತಕಗಳನ್ನೇ ಇಲ್ಲಿಯೂ ಬಳಸಲಾಗುತ್ತದೆ. ಪಠ್ಯಪುಸ್ತಕದಲ್ಲಿ ಇರುವಷ್ಟು ಅಥವಾ ಇನ್ನೂ ಹೆಚ್ಚು ವಿಷಯವನ್ನು ಕಥಾರೂಪದಲ್ಲಿ ತಿಳಿಸಿ, ಅನಂತರ ವಿಷಯವನ್ನು ಸಂಗ್ರಹಿಸಿ, ಸಂಕ್ಷೇಪವಾಗಿ ಕಪ್ಪುಹಲಗೆಯ ಮೇಲೆ ಬರೆಯುವುದು. ಇದಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಬರೆದು ಮಕ್ಕಳಿಂದ ಉತ್ತರಗಳನ್ನು ಬರೆಸುವುದು, ನೂತನ ಕ್ರಮದ ಪ್ರಶ್ನೆಗಳನ್ನು ಬರೆದು ಉತ್ತರಗಳನ್ನು ಬರೆಸುವುದು–ಇವು ಇಲ್ಲಿ ಅನುಸರಿಸುವ ಕ್ರಮಗಳು.

ಮೊದಲ ಎರಡು ತರಗತಿಗಳಲ್ಲಿ ವಾಚ್ಯಕ್ರಮಕ್ಕೆ ಹೆಚ್ಚು ಪ್ರಾಧಾನ್ಯ. ಮೊದಲನೆಯ ತರಗತಿಯಲ್ಲಿ ಮಕ್ಕಳಿಗೆ ಶಬ್ದೋಚ್ಚಾರ ಮಾಡುವುದನ್ನು ಕಲಿಸಲಾಗುತ್ತದೆ. ಉದಾಹರಣೆಗೆ ಅಧ್ಯಾಪಕ ವಿದ್ಯಾರ್ಥಿಯ ಕೈಯನ್ನು ತಮ್ಮ ಧ್ವನಿಪೆಟ್ಟಿಗೆಯ ಬಳಿ ಇಟ್ಟುಕೊಂಡು 'ಆ' ಎಂದು ಉಚ್ಚರಿಸಿದಾಗ ಮಗುವಿನ ಕೈಗೆ ಒಂದು ರೀತಿಯ ಕಂಪನದ ಅನುಭವವಾಗುತ್ತದೆ. ಅದರಂತೆ ಮಗುವೂ ಉಚ್ಚರಿಸುವಂತೆ ಮಾಡಲಾಗುವುದು. ಎರಡನೆಯ ತರಗತಿಯಲ್ಲಿ ಸಣ್ಣ ಸಣ್ಣ ವಾಕ್ಯಗಳನ್ನು ರಚಿಸುವುದನ್ನು ಕಲಿಸಲಾಗುತ್ತದೆ. ಪ್ರಶ್ನೆಗಳಿಗೆ ಪುಟ್ಟ ವಾಕ್ಯಗಳಲ್ಲಿ ಉತ್ತರಿಸಿ ಬರೆಯುವುದನ್ನು ಅಭ್ಯಾಸ ಮಾಡಿಸಲಾಗುವುದು. ಈಗ ವಿದ್ಯುನ್ಮಾನ ಉಪಕರಣಗಳ ಮೂಲಕ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಬೋಧನೆ ಮತ್ತು ಕಲಿಕೆಗೆ ವ್ಯವಸ್ಥೆ ಮಾಡಲಾಗಿದೆ. ಮೈಸೂರಿನ ಅಖಿಲಭಾರತ ವಾಕ್–ಶ್ರವಣ ಸಂಸ್ಥೆ **(ನೋಡಿ)** ಕಿವುಡ ಮತ್ತು ಮೂಗ ಮಕ್ಕಳಿಗೆ ಚಿಕಿತ್ಸೆ ಹಾಗೂ ಶಿಕ್ಷಣಾಭ್ಯಾಸ ನೀಡುತ್ತಿದೆ.

**ಆಶ್ರಮ ವಸತಿ ಶಾಲೆಗಳು:** ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದುಳಿದ ಪಂಗಡಗಳ ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕಾಗಿ ಹಲವಾರು ಆಶ್ರಮ ವಸತಿ ಶಾಲೆಗಳನ್ನು ತೆರೆದಿದ್ದಾರೆ. ವಿದ್ಯಾ ಇಲಾಖೆಯವರು ಹಾಕಿ ಕೊಟ್ಟಿರುವ ಪಠ್ಯಕ್ರಮಗಳನ್ನು ಈ ಶಾಲೆಗಳಲ್ಲಿ ಅನುಸರಿಸಲಾಗುತ್ತದೆ. ತರಬೇತು ಹೊಂದಿದ ಅಧ್ಯಾಪಕರನ್ನು ಇಲ್ಲಿ ನೇಮಿಸಲಾಗುತ್ತದೆ. ನಾಲ್ಕನೆಯ ತರಗತಿಯವರೆಗೂ ಉಚಿತ ವಿದ್ಯಾಭ್ಯಾಸವನ್ನು, ಉಚಿತ ಊಟ ಮತ್ತು ವಸತಿಗಳೊಂದಿಗೆ ಕೊಡಲಾಗುತ್ತದೆ. ಅಲ್ಲದೆ ಮಕ್ಕಳಿಗೆ ವರ್ಷಕ್ಕೊಮ್ಮೆ ಎರಡು ಜೊತೆ ಉಡುಪನ್ನೂ ಹಾಸಿಗೆ, ಪುಸ್ತಕ, ಮತ್ತಿತರ ಉಪಕರಣಗಳೊಂದಿಗೆ ಕೊಡಲಾಗುತ್ತದೆ. ಈ ಮಕ್ಕಳ ಆರೋಗ್ಯವನ್ನು ವಾರಕ್ಕೊಮ್ಮೆ ಪರೀಕ್ಷಿಸಲು ವೈದ್ಯರನ್ನು ನೇಮಿಸಲಾಗಿದೆ.

**ಪರಿಶಿಷ್ಟ ವರ್ಗ ಮತ್ತು ಅಲೆಮಾರಿ ವರ್ಗದ ಮಕ್ಕಳಿಗೆ ಉಡುಪು ಹಾಗೂ ಉಪಕರಣಗಳ ಕೊಡುಗೆ:** ಆಶ್ರಮ ಶಾಲೆಗಳಿಲ್ಲದ ಸ್ಥಳಗಳಲ್ಲಿ ಈ ಮಕ್ಕಳು ತಮ್ಮ ವಿದ್ಯೆಯನ್ನು ಇತರೆ ಪ್ರಾಥಮಿಕ ಶಾಲೆಗಳಲ್ಲಿ ಮುಂದುವರಿಸಲು ಸಹಾಯವಾಗುವಂತೆ ಅವರಿಗೆ ಉಡುಪು ಮತ್ತು ಉಪಕರಣಗಳ ನೀಡಿಕೆಗಾಗಿ ವ್ಯವಸ್ಥೆ ಮಾಡಲಾಗಿದೆ. ಈ ವರ್ಗದ ಸ್ತ್ರೀಯರಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ. ಇದಕ್ಕೆ ಅನೂಚಾನವಾಗಿ ಬಂದಿರುವ ಸಂಪ್ರದಾಯಗಳೂ ಅವರಿಗೆ ಅನುಕೂಲಿಸುವಂಥ ವಿದ್ಯಾ ಸೌಲಭ್ಯಗಳ ಸೀಮಿತ ಸ್ಥಿತಿಯೂ ಕಾರಣವೆನ್ನಬಹುದು. ಇದನ್ನು ಇಲಾಖೆಯವರು ಮನಗಂಡು ಹಿಂದುಳಿದ ವರ್ಗಗಳ ಬಾಲಕ ಬಾಲಕಿಯರಿಗಾಗಿ ವಸತಿಗೃಹಗಳನ್ನು ಸ್ಥಾಪಿಸಿದ್ದಾರೆ. **(ಕೆ.ಬಿ.ಎ.ಎಸ್.)**

**ವಿಶುಕುಮಾರ್:** 1935–86. ಕನ್ನಡದ ಹೆಸರಾಂತ ಕಾದಂಬರಿಕಾರ, ಚಲನಚಿತ್ರ ನಿರ್ದೇಶಕ. ಕನ್ನಡ ಮತ್ತು ತುಳು ಭಾಷೆಗಳೆರಡರಲ್ಲೂ ಸೃಜನಶೀಲ ಸಾಮರ್ಥ್ಯ ಪಡೆದುಕೊಂಡಿದ್ದವರು. ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರಿಗೆ ಹೊಂದಿಕೊಂಡಿರುವ ಬೋಳೂರು ಇವರ ಜನ್ಮಸ್ಥಳ. 1935 ಮಾರ್ಚ್ 10ರಂದು ಜನಿಸಿದರು. ತಮದೆ ದೋಗಾ ಪೂಜಾರಿ, ತಾಯಿ ಕಾವೇರಿಯಾನೆ ಚಂದ್ರಾವತಿ. ಈ ದಂಪತಿಗಳಿಗೆ ಹತ್ತು ಜನ ಮಕ್ಕಳು. ಆರುಜನ ಗಂಡು ಮಕ್ಕಳಲ್ಲಿ ಇವರೇ ಹಿರಿಯ ಮಗ. ಇವರ ಹುಟ್ಟು ಹೆಸರು ವಿಶ್ವನಾಥ ಬೋಳೂರು, ವಿಶುಕುಮಾರ್ ಎಂಬುದು ಕಾವ್ಯನಾಮ. ಇವರ ತಂದೆ ಕಡುಬಡತನದ ಜೀವನ ನಡೆಸುತ್ತಿದ್ದು ಬೋಳೂರಿನ ಸುಲ್ತಾನ ಬತೇರಿಯ ಸಮೀಪದಲ್ಲಿ ಸಣ್ಣ ಹೋಟೆಲ್ ನಡೆಸಿಕೊಂಡು ಬಂದಿದ್ದರು. ಜೊತೆಗೆ ಯಕ್ಷಗಾನ ಕಲೆಯನ್ನೂ ಮೈಗೂಡಿಸಿಕೊಂಡಿದ್ದರಿಂದ ಸಹಜವಾಗಿ ವಿಶುಕುಮಾರ್ ಅವರಿಗೆ ಬಾಲ್ಯದಲ್ಲಿಯೇ ಕಲೆಯ ಬಗ್ಗೆ ಆಸಕ್ತಿ ಮೂಡಿತು. 1954ರಲ್ಲಿ ಎಸ್.ಎಸ್.ಎಲ್.ಸಿ.

ಪೂರೈಸಿದರು. ಉರ್ವದ ಕೆನರಾ ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಇವರು ಕಥೆಗಳನ್ನು ಬರೆಯುತ್ತಿದ್ದರು. ಅನಂತರ ನಾಟಕ, ಪದ್ಯಗಳನ್ನು ಬರೆಯಲು ಪ್ರಾರಂಭಮಾಡಿದರು. ಇವರ ಮೊದಲ ಕಥೆ 'ದುಶ್ಯಾಸನ' ಚಂದಮಾಮ ಪತ್ರಿಕೆಯಲ್ಲಿ ಸುಮಶರ ಎಂಬ ಕಾವ್ಯನಾಮದಿಂದ ಪ್ರಕಟವಾಗಿತ್ತು. ಇವರಿಗೆ ಕ್ರಿಕೆಟ್, ಸಂಗೀತ, ಕೊಳಲು, ತಬಲ, ಹಾರ್ಮೋನಿಯಂ, ಕತ್ತಿವರಸೆ, ಚಿತ್ರಕಲೆಗಳಲ್ಲಿ ಆಸಕ್ತಿ ಇತ್ತು. ಬಾಲ್ಯದಲ್ಲಿಯೇ ಯಕ್ಷಗಾನದಲ್ಲಿ ಬಾಲಪಾತ್ರಗಳನ್ನು ಅಭಿನಯ ಮಾಡುತ್ತಿದ್ದರು; ಬಹಳ ಸೊಗಸಾಗಿ ಹಾಡುತ್ತಿದ್ದರಂತೆ.

ಬಡತನದಿಂದಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೆ ಮಂಗಳೂರಿನ ಹೆಂಚಿನ ಕಾರ್ಖಾನೆಯೊಂದರಲ್ಲಿ ಉದ್ಯೋಗ ಪಡೆದುಕೊಂಡರು. ಅನಂತರ ಸ್ವಪ್ರಯತ್ನದಿಂದ ಮುಂದಾಗಿ ಸರಕಾರದ ಮುಜರಾಯಿ ಇಲಾಖೆಯಲ್ಲಿ ಎಂಡೋಮೆಂಟ್ ಅಧಿಕಾರಿಯಾಗಿ ನೇಮಕಗೊಂಡರು (1957). ನಾಟಕ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ಇದ್ದುದರಿಂದ ನವೋದಯ ಕಲಾವೃಂದ ಎಂಬ ನಾಟಕ ಸಂಘವನ್ನು ಸ್ಥಾಪನೆ ಮಾಡಿದರು (1954). ತಾವು ಬರೆದ ನಾಟಕಗಳನ್ನು ಈ ಕಲಾವೃಂದದಿಂದ ಪ್ರದರ್ಶಿಸುತ್ತಿದ್ದರು. ಕಲಿಯುಗದ ಕುರುಕ್ಷೇತ್ರ (ತುಳು), ಗರ್ವದ ಎಣ್ಣೆ (ತುಳು), ಮನೆಯಿಂದ

ಮಸಣಕ್ಕೆ (ಕನ್ನಡ), ಸಾಮ್ರಾಟ್ ಪೃಥ್ವಿರಾಜ್ (ಕನ್ನಡ), ರಾಜದ್ರೋಹಿ (ಕನ್ನಡ), ಬೀದಿಯ ಭ್ರಮರ (ಕನ್ನಡ), ಅಸ್ತಮಾನ (ಕನ್ನಡ), ಕುರುಕ್ಷೇತ್ರ (ಕನ್ನಡ), ಬಲತ್ಕಾರದ ಬಯಲಲ್ಲಿ (ಕನ್ನಡ) ಎಂಬ ನಾಟಕಗಳನ್ನು ತುಳು ಮತ್ತು ಕನ್ನಡದಲ್ಲಿ ಬರೆದು ಪ್ರದರ್ಶಿಸಿ ತುಳುನಾಡಿನಲ್ಲಿ ಒಳ್ಳೆಯ ನಾಟಕಕಾರ ಎಂದು ಹೆಸರು ಗಳಿಸಿದರು. ಆದರೆ ಇವು ಯಾವುವೂ ಪ್ರಕಟವಾಗಿಲ್ಲ; ಹಸ್ತಪ್ರತಿಯಲ್ಲಿವೆ. ಆದರೆ ಸ್ನೇಹಿತರ ಒತ್ತಾಯದ ಮೇರೆಗೆ ಕೋಟಿ ಚೆನ್ನಯ (ತುಳು) ನಾಟಕ ಪ್ರಕಟವಾಯಿತು (1967). ಹಗಲಿಗೆ ಹಗಲು (ಕನ್ನಡ, 1965), ತರಂಗ ತರಂಗ ಅಂತರಂಗ (ಕನ್ನಡ, 1968), ಡೊಂಕು ಬಾಲದ ನಾಯಕರು (ಕನ್ನಡ, 1981), ಪೇದೆಗೆ ಬಾಧೆ (1995) ಎಂಬ ಕಿರುನಾಟಕಗಳು ಪ್ರಕಟವಾದವು.

'ಸಹೋದರ ಕಲಾವೃಂದ ನಾಟಕ ಸಂಘ'ವನ್ನು 1958ರಲ್ಲಿ ಸ್ಥಾಪನೆ ಮಾಡಿದರು. ಈ ಸಂಘದಿಂದ ಶಿವರಾಮಕಾರಂತರಾದಿಯಾಗಿ ಅನೇಕ ಸಾಹಿತಿಗಳ ನಾಟಕಗಳನ್ನು ಪ್ರದರ್ಶಿಸಿದರು.

ಇವರು ಅನೇಕ ಕಾದಂಬರಿಗಳನ್ನೂ ಸಣ್ಣಕಥೆಗಳನ್ನೂ ಬರೆದಿದ್ದಾರೆ. ಕುಸುಮ ಕೀರ್ತನ, ಚಲ್ಲಾಟದ ಚದುರೆಯರು ಮತ್ತು ಇತರ ಕಥೆಗಳು ಇವು ಕಥಾಸಂಕಲನಗಳು. ನೇತ್ರಗಾನ ಇವರ ಮೊದಲ ಕಾದಂಬರಿ (1966). ಸಮಾಜದಲ್ಲಿ ಕಂಡುಬರುವ ಅನ್ಯಾಯ, ಮೋಸ, ವಂಚನೆ ಮೊದಲಾದವುಗಳನ್ನು ತಮ್ಮ ಕಾದಂಬರಿಗಳಲ್ಲಿ ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಕರಾವಳಿ, ಮದರ್, ಹಂಸಕ್ಷೀರ, ವಿಪ್ಲವ, ಭಗವಂತನ ಆತ್ಮಕಥೆ, ಕರ್ಮ, ಗಗನಗಾಮಿಗಳು, ಮಿಯಾಂವ್ ಕಾಮತ್, ಈ ಪರಿಯ ಬದುಕು, ಭಟಕಳದಿಂದ ಬೆಂಗಳೂರಿಗೆ, ಕಪ್ಪು ಸಮುದ್ರ, ಭೂಮಿ, ಕಾಮುಕರು (ಮಥನ), ಪ್ರಜೆಗಳು ಪ್ರಭುಗಳು–ಇವು ಇವರ ಕಾದಂಬರಿಗಳು. ಕರಾವಳಿ ಹೆಚ್ಚು ಚರ್ಚಿತವಾದ ಕಾದಂಬರಿ. ಇದು ಇವರ ಪ್ರಾತಿನಿಧಿಕ ಕೃತಿಯೂ ಹೌದು.

ತಾವು ಬರೆದ 'ಕೋಟಿ ಚೆನ್ನಯ' ತುಳು ನಾಟಕವನ್ನು ನಿರ್ದೇಶಿಸಿ ಚಲನಚಿತ್ರವಾಗಿ ಹೊರತಂದರು. ಈ ಚಿತ್ರವು ರಾಜ್ಯ ಪ್ರಶಸ್ತಿ ಪಡೆಯಿತು (1977); ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿತು. ಅನಂತರ ಕರಾವಳಿ, ಮದರ್ ಕಾದಂಬರಿಗಳನ್ನು ಆಧರಿಸಿ ಚಿತ್ರ ನಿರ್ಮಿಸಿದರು. ಕರಾವಳಿ, ಸಂಘರ್ಷ, ಅಖಂಡ ಬ್ರಹ್ಮಚಾರಿಗಳು–ಈ ಚಿತ್ರಗಳಲ್ಲಿ ನಾಯಕ ನಟನಾಗಿ ತೆರೆಯ ಮೇಲೆ ಕಾಣಿಸಿಕೊಂಡರು. ಇವರ ನಿಧನಾನಂತರ ಪ್ರಜೆಗಳು ಪ್ರಭುಗಳು ಕಾದಂಬರಿ ಚಲನಚಿತ್ರವಾಯಿತು.

ವಿಶುಕುಮಾರ್ ಅವರು ಸಾಮಾಜಿಕವಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. 1977ರಲ್ಲಿ ತಮ್ಮ ಉದ್ಯೋಗಕ್ಕೆ ರಾಜೀನಾಮೆ ಸಲ್ಲಿಸಿದ ಅನಂತರ ಕೃಷಿ ಬದುಕಿಗೆ ತೊಡಗಿಸಿಕೊಂಡ ಇವರು ಡಿ. ದೇವರಾಜ ಅರಸು ಮತ್ತು ಎಲ್.ಜಿ. ಹಾವನೂರರ ಹಿಂದುಳಿದ ವರ್ಗಗಳ ಹೋರಾಟದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಬೆಂಗಳೂರು ತುಳುಕೂಟದ ಅಧ್ಯಕ್ಷರಾಗಿ (1980) ನೇಮಕಗೊಂಡು, 1981ರಲ್ಲಿ ಬೆಂಗಳೂರಿನ ಬಿಲ್ಲವ ಅಸೋಸಿಯೇಷನ್ನಿನ ಆಶ್ರಯದಲ್ಲಿ ತುಳವರ ವೈಭವ ಎಂಬ ಕಾರ್ಯಕ್ರಮ ನಡೆಸಿದರು. ಹೈದರಾಬಾದ್‌ನಲ್ಲಿ ನಡೆದ ಅಖಿಲ ಭಾರತ 4ನೆಯ ತುಳು ಸಾಹಿತ್ಯ ಸಮ್ಮೇಳನದಲ್ಲಿ ಇವರಿಗೆ ಶ್ರೇಷ್ಠ ತುಳುವರ್ ಎಂಬ ಪ್ರಶಸ್ತಿಯನ್ನೂ ನೀಡಲಾಯಿತು (1988). ಕರ್ನಾಟಕ ರಾಜ್ಯ ಗೇರು ನಿಗಮದ ಅಧ್ಯಕ್ಷರಾಗಿಯೂ ನೇಮಕಗೊಂಡಿದ್ದರು (1983).

1984–85ರಲ್ಲಿ 'ಸಂಜೀವಾಣಿ' ದಿನಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿದರು. ಪ್ರಜಾಪ್ರಭುತ್ವ ವಾರಪತ್ರಿಕೆಯ ಸಂಪಾದಕರಾಗಿಯೂ ಚಿತ್ರದೀಪ ಎಂಬ ಸಿನಿಮಾ ಪತ್ರಿಕೆಯ ಗೌರವ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. 1984ರಲ್ಲಿ ತರಂಗ ಪತ್ರಿಕೆ ದಾವಣಗೆರೆಯಲ್ಲಿ ಏರ್ಪಡಿಸಿದ ಕಾದಂಬರಿ ಸ್ಪರ್ಧೆಯಲ್ಲಿ ಇವರ ಕಪ್ಪುಸಮುದ್ರ ಕೃತಿಗೆ ಶ್ರೇಷ್ಠ ಕಾದಂಬರಿ ಪ್ರಶಸ್ತಿ ಲಭ್ಯವಾಯಿತು.

ಒಕ್ಕಲಿಗ ಸಮುದಾಯದ ರಾಜ್ಯಮಟ್ಟದ ಕಬಡ್ಡಿ ಆಟಗಾರ್ತಿಯಾದ ವಿಜಯಲಕ್ಷ್ಮಿ ಎಂಬುವವರನ್ನು ಇವರು ವಿವಾಹವಾದರು (1984 ನವೆಂಬರ್ 15). ಶಿಸ್ತು ಮತ್ತು ಸರಳತೆಗೆ, ವಿಚಾರವಂತಿಕೆಗೆ ಹೆಸರಾಗಿದ್ದ ಇವರು ಅನಾರೋಗ್ಯಕ್ಕೆ ತುತ್ತಾಗಿ 1986 ಅಕ್ಟೋಬರ್ 4ರಂದು ನಿಧನರಾದರು. (ಸಿ.ಎಂ.)

**ವಿಶ್ವಕರ್ನಾಟಕ:** ಕನ್ನಡ ವಾರಪತ್ರಿಕೆ. ತಿರುಮಲೆ ತಾತಾಚಾರ್ಯ ಶರ್ಮರು ಮೈಸೂರ್ ಕ್ರಾನಿಕಲ್ ಎಂಬ ಇಂಗ್ಲಿಷ್ ವಾರಪತ್ರಿಕೆಯನ್ನು ಕೆ. ರಂಗ ಅಯ್ಯಂಗಾರ್ ಅವರಿಂದ ವಹಿಸಿಕೊಂಡು, ಅದೇ ಹೆಸರಿನಲ್ಲಿ ಕನ್ನಡದಲ್ಲಿ ಆರು ತಿಂಗಳ ಕಾಲ ನಡೆಸಿ, ಅನಂತರ 1925ರಲ್ಲಿ ಪತ್ರಿಕೆಗೆ ವಿಶ್ವಕರ್ನಾಟಕ ಎಂದು ನಾಮಕರಣ ಮಾಡಿ ಪ್ರಕಟಿಸತೊಡಗಿದರು. ಮಹಾತ್ಮ ಗಾಂಧಿಯವರು ಪತ್ರಿಕೆಯನ್ನು ಹರಸಿದರು. ರಾಷ್ಟ್ರೀಯ ಭಾವನೆಯನ್ನು ಒಂದು ಕಡೆ ಬೆಳಸುತ್ತ ಪತ್ರಿಕಾ ಸ್ವಾತಂತ್ರ್ಯವನ್ನೂ ಎತ್ತಿ ಹಿಡಿಯುತ್ತ ಸಾಗಿದ್ದ ಈ ಪತ್ರಿಕೆ ಆಗ ಜಾರಿಗೆ ಬಂದ ಮೈಸೂರು ರಾಜ್ಯದ ವೃತ್ತಪತ್ರಿಕಾ ಶಾಸನವನ್ನು ಉಗ್ರವಾಗಿ ವಿರೋಧಿಸಿತ್ತು, ಅಗ್ರಲೇಖನವನ್ನು ಬರೆಯುವುದಿಲ್ಲ ಎಂಬ ಪ್ರತಿಜ್ಞೆಯನ್ನು ಕೈಗೊಂಡಿತ್ತು. ಮೈಸೂರು ವೃತ್ತಪತ್ರಿಕೆಗಳ ಕರಾಳ ಶಾಸನವನ್ನು ಶಾಸನ ಕಡತದಿಂದ ತೊಡೆದುಹಾಕುವವರೆಗೂ ನಾವು ಪ್ರಧಾನ ಲೇಖನವನ್ನು ಬರೆಯುವುದೇ ಇಲ್ಲ ಎಂದು ಸಂಪಾದಕೀಯ ಪ್ರಕಟವಾಗುತ್ತಿದ್ದ ಜಾಗದಲ್ಲಿ ವಾರವಾರವೂ ಅಚ್ಚಿಸುತ್ತಿದ್ದರು. 1936ರ ಹೊತ್ತಿಗೆ ವಾರಪತ್ರಿಕೆಯ ಜೊತೆಗೆ ವಿಶ್ವಕರ್ನಾಟಕ ದಿನ ಪತ್ರಿಕೆಯನ್ನು ಆರಂಭಮಾಡಲಾಯಿತು. ಅದರ ಸಂಪಾದಕರೂ ಶರ್ಮರೇ ಆಗಿದ್ದರು.

ದಿನಪತ್ರಿಕೆ ಆರಂಭವಾದ ಮೇಲೆ ಮತ್ತೆ ಅಗ್ರಲೇಖನವನ್ನು ಬರೆಯಲು ಆರಂಭಮಾಡಲಾಯಿತು. 1942 ಹಾಗು 1945ರಲ್ಲಿ ಎರಡು ಸಲ ಸರ್ಕಾರ ವಿಧಿಸಿದ ಮುಟ್ಟುಗೋಲಿನಿಂದಾಗಿ ಪತ್ರಿಕೆ ಕೆಲವು ಕಾಲ ನಿಂತುಹೋಗಿತ್ತು. ಅನಂತರ ತಿ.ತಾ. ಶರ್ಮರ ಅನಾರೋಗ್ಯದಿಂದ ಸಿದ್ದವನ ಹಳ್ಳಿ ಕೃಷ್ಣಶರ್ಮರು ದಿನಪತ್ರಿಕೆಯ ಸಂಪಾದಕರಾಗಿದ್ದರು (1941–43). ಮುಂದೆ ವಾರಪತ್ರಿಕೆ ನಿಂತಿತು. ದಿನಪತ್ರಿಕೆ ಒಂದು ಜಾಯಿಂಟ್ ಸ್ಟಾಕ್ ಕಂಪನಿಯ ಆಡಳಿತಕ್ಕೆ ಸೇರಿತು. ಅಲ್ಲಿಯವರಿಗೆ ಸಂಜೆ ಪತ್ರಿಕೆಯಾಗಿ ಪ್ರಕಟವಾಗುತ್ತಿದ್ದ ವಿಶ್ವಕರ್ನಾಟಕ ಮೊಟ್ಟಮೊದಲನೆಯ ಬೆಳಗಿನ ಕನ್ನಡ ದಿನಪತ್ರಿಕೆಯಾಯಿತು. ಎನ್.ಎಸ್. ವೆಂಕೋಬರಾಯರು ಅದರ ಸಂಪಾದಕರಾಗಿದ್ದರು. ಪತ್ರಿಕೆ 1956ರಲ್ಲಿ ನಿಂತುಹೋಯಿತು.

ರಾಷ್ಟ್ರೀಯ ಚಳವಳಿಗೆ ಬೆಂಬಲ ಕೊಟ್ಟು ಸರ್ಕಾರದ ಕಿರುಕುಳ ಅನುಭವಿಸಿಯೂ ತನ್ನ ಆದರ್ಶವನ್ನು ಬಿಟ್ಟುಕೊಡದೆ ಬಾಳಿದ ವಿಶ್ವಕರ್ನಾಟಕ ಪತ್ರಿಕೆ ಸ್ವತಂತ್ರ, ನಿರ್ಭಯ, ಪ್ರಾಮಾಣಿಕ ಬರೆವಣಿಗೆಗೆ ಹೆಸರಾಗಿತ್ತು. ಅನೇಕ ಸಾಹಿತಿಗಳ ಲೇಖನಗಳನ್ನು ಪ್ರಕಟಿಸಿ ಅವರ ಪ್ರಗತಿಗೂ ಕಾರಣವಾಯಿತು. (ಸಿ.ಕೆ.ಎನ್.)

**ವಿಶ್ವನಾಥ್, ಜಿ.ಆರ್.:** 1949–. ಭಾರತದ ಕ್ರಿಕೆಟ್ ಆಟಗಾರ, ಸುಪ್ರಸಿದ್ಧ ಬ್ಯಾಟುಗಾರರಲ್ಲೊಬ್ಬರು. 1949ರ ಫೆಬ್ರವರಿ 12ರಂದು ಭದ್ರಾವತಿಯಲ್ಲಿ ಜನಿಸಿದರು.

ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲೆ, ಕ್ರಿಕೆಟ್ ಆಟದಲ್ಲಿ ಆಸಕ್ತಿ ತಳೆದ ಇವರು 1967ರಲ್ಲಿ ಕರ್ನಾಟಕ ಆಂಧ್ರ ವಿರುದ್ಧ ನಡೆದ ರಣಜಿ ಪಂದ್ಯದಲ್ಲಿ ಮೊದಲ ಬಾರಿಗೆ ಆಡಿ, 214 ರನ್ನುಗಳನ್ನು ಪಡೆದು, ಹಿಂದಿನ ಎಲ್ಲ ದಾಖಲೆಗಳನ್ನು ಮುರಿಯುವ ಮೂಲಕ ಕ್ರಿಕೆಟ್ ರಂಗವನ್ನು ಪ್ರವೇಶಿಸಿದರು. ಅನಂತರ 1969ರಲ್ಲಿ ಕಾನ್ಪುರದಲ್ಲಿ ನಡೆದ ಭಾರತ ಮತ್ತು ಆಸ್ಟ್ರೇಲಿಯಗಳ ನಡುವೆ ನಡೆದ ಟೆಸ್ಟ್ ಇವರು ಭಾಗವಹಿಸಿದ ಪ್ರಥಮ ಟೆಸ್ಟ್ ಪಂದ್ಯ. ಆಗ 137 ರನ್ನು ಬಾರಿಸಿ ಪ್ರಥಮ ಟೆಸ್ಟಿನಲ್ಲಿಯೇ ಶತಕ ಗಳಿಸಿದ, ಉತ್ತಮ ಬ್ಯಾಟುಗಾರ ಎಂದು ಆಯ್ಕೆ ಸಮಿತಿಯ ಗಮನ ಸೆಳೆದರು; ಅಖಿಲ ಭಾರತ ಮಟ್ಟದ ಕ್ರಿಕೆಟ್ ಆಟಗಾರರೆಂದು ಹೆಸರು ಗಳಿಸಿದರು. ಆಡಿದ ಮೊದಲನೆಯ ಟೆಸ್ಟ್‌ನಲ್ಲಿಯೇ ಶತಕ ಬಾರಿಸಿದ ಭಾರತೀಯ ಕ್ರಿಕೆಟ್ ಆಟಗಾರರಲ್ಲಿ ವಿಶ್ವನಾಥ್ ಆರನೆಯವರು. ಅಲ್ಲದೆ, ಚೊಚ್ಚಲ ಪಂದ್ಯದಲ್ಲಿ ಶತಕ ಬಾರಿಸಿ, ಅನಂತರದ ಟೆಸ್ಟ್ ಪಂದ್ಯದಲ್ಲಿ ಮತ್ತೆ ಶತಕ ರನ್ನುಗಳನ್ನು ಪಡೆದ ಭಾರತೀಯ ಆಟಗಾರರಲ್ಲೇ ವಿಶ್ವನಾಥ್ ಮೊದಲಿಗರು. (ಈ ದಾಖಲೆ ಸ್ಥಾಪಿಸಿದ್ದು 1973ರ ಫೆಬ್ರವರಿ 7ರಂದು ಮುಂಬಯಿಯಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟಿನಲ್ಲಿ).

ದೇಶವಿದೇಶಗಳಲ್ಲಿ ಲಿಟ್ಲ್ ಮಾಸ್ಟರ್ ಎಂದು ಖ್ಯಾತರಾಗಿದ್ದ ವಿಶ್ವನಾಥ್ ಅವರದು ಆಕರ್ಷಕ ಬ್ಯಾಟಿಂಗು. ಅದರಲ್ಲಿಯೂ 'ಸ್ಕ್ವೇರ್ ಕಟ್' ಇವರ ಆಟದ ವೈಶಿಷ್ಟ್ಯ. ಜೊತೆಗೆ ಇವರು ಉತ್ತಮ ಫೀಲ್ಡರ್ ಕೂಡ. ಮೆಲ್ಬರ್ನ್‌ನಲ್ಲಿ ಆಸ್ಟ್ರೇಲಿಯಾದ ವಿರುದ್ಧ ನಡೆದ ಮೂರನೆಯ ಟೆಸ್ಟ್‌ನಲ್ಲಿ (1978). ಭಾರತ ಪ್ರಥಮವಾಗಿ ಆಸ್ಟ್ರೇಲಿಯದಲ್ಲೇ ಯಶಸ್ಸು ಪಡೆಯಿತು. ಈ ಟೆಸ್ಟಿನಲ್ಲಿ ವಿಶ್ವನಾಥ್ ಅವರು ಪ್ರಥಮ ಇನ್ನಿಂಗ್ಸ್‌ನಲ್ಲಿ 59 ರನ್ನುಗಳನ್ನೂ ದ್ವಿತೀಯ ಇನ್ನಿಂಗ್ಸ್‌ನಲ್ಲಿ 54 ರನ್ನುಗಳನ್ನೂ ಪಡೆದು ಭಾರತದ ಐತಿಹಾಸಿಕ ಹಾಗೂ ಅಪೂರ್ವ ಯಶಸ್ಸಿಗೂ ಕಾರಣರಾದರು. 1971ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. (ಎಸ್.ಎಚ್.ಕೆ.)

**ವಿಶ್ವವಾಣಿ:** ಕನ್ನಡ ದಿನಪತ್ರಿಕೆ. 1956ರಲ್ಲಿ ಇದನ್ನು ಆರಂಭಿಸಲಾಯಿತು. ಕರ್ನಾಟಕದ ಹುಬ್ಬಳ್ಳಿ ನಗರದಿಂದ ಪ್ರಕಟವಾಗುವ ಈ ಪತ್ರಿಕೆಯ ಸಂಪಾದಕರು ಹಾಗೂ ಮಾಲೀಕರು ಕನ್ನಡದ ಪ್ರಸಿದ್ಧ ಲೇಖಕರಾದ ಪಾಟೀಲ ಪುಟ್ಟಪ್ಪ. ಉತ್ತರ ಕರ್ನಾಟಕ ಪ್ರಾಂತ್ಯದಲ್ಲಿ ಈ ಪತ್ರಿಕೆಯ ಪ್ರಸಾರ ವಿಶೇಷವಾಗಿದೆ. ಪ್ರಕಟಣೆಯ ಪ್ರಾರಂಭದ ದಿನಗಳಲ್ಲಿ ರಾಯಲ್ ಆಕಾರದ ನಾಲ್ಕು ಪುಟಗಳಲ್ಲಿ ಪ್ರಕಟವಾಗುತ್ತಿತ್ತಲ್ಲದೆ, ಪ್ರತಿ ಪುಟದಲ್ಲಿ ಹತ್ತು ಕಾಲಂಗಳಿರುತ್ತಿದ್ದುವು. ಆಗ ಬಿಡಿ ಪ್ರತಿಯ ಬೆಲೆ ಒಂದು ಆಣೆ. ಆಗ ರೋಟರಿ ಯಂತ್ರದಲ್ಲಿ ಮುದ್ರಣಗೊಳ್ಳುತ್ತಿದ್ದ ಈ ಪತ್ರಿಕೆ, ಈಗ ಆಫ್‌ಸೆಟ್ ಮುದ್ರಣದಲ್ಲಿ ಹೊರಬರುತ್ತಿದೆ. ಡಿಮ್ಮೈ ಆಕಾರದ ನಾಲ್ಕು ಪುಟಗಳ ಈ ಪತ್ರಿಕೆಯ ಬೆಲೆ ಒಂದು ರೂಪಾಯಿ.

ಕರ್ನಾಟಕ ಏಕೀಕರಣ, ರಾಜಕೀಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸುದ್ದಿಗಳ ಜೊತೆಯಲ್ಲಿ ಪ್ರಚಲಿತ ವಿದ್ಯಮಾನಗಳ ಬಗ್ಗೆ ಸವಿವರ ವರದಿಗಳನ್ನು ಈ ಪತ್ರಿಕೆ ಪ್ರಕಟಿಸುತ್ತದೆ. ಜಹಗೀರದಾರ್, ಶಿವಾನಂದ ಜೋಶಿ, ಮೈಸೂರು ಮಠ, ಎಂ. ಸಿದ್ದರಾಮೇಶ, ಎಂ.ಬಿ. ಬೂದಿಹಾಳ ಮಠ, ಶಾಸ್ತ್ರೀಮಠ ಮೊದಲಾದ ಹೆಸರಾಂತ ಪತ್ರಕರ್ತರು ಈ ಪತ್ರಿಕೆಯ ಮೂಲಕ ಬೆಳಕಿಗೆ ಬಂದವರು. ಬಸವರಾಜ ಕಟ್ಟೀಮನಿಯವರ ವಿಚಾರ ಪ್ರಚೋದಕ ಬರೆಹಗಳು ಈ ಪತ್ರಿಕೆಯಲ್ಲಿ ಆಗಾಗ ಪ್ರಕಟವಾಗುತ್ತಿದ್ದುವು.

ಕನ್ನಡನಾಡು, ನುಡಿ ಹಾಗೂ ಜನತೆಯ ಬಗ್ಗೆ ವಿಶೇಷ ಕಾಳಜಿಯುಳ್ಳ ಸಂಪಾದಕೀಯ, ವಿಚಾರಪೂರಿತ ಲೇಖನಗಳು ಈ ಪತ್ರಿಕೆಯ ಗುಣಗಳಾಗಿವೆ. ಕರ್ನಾಟಕ ಗಡಿಸಮಸ್ಯೆ ಕುರಿತಂತೆ ಈ ಪತ್ರಿಕೆ ಹರಿತವಾದ ಲೇಖನಗಳನ್ನು ಪ್ರಕಟಿಸಿದೆ. *

**ವಿಶ್ವವಿದ್ಯಾಲಯ ಶಿಕ್ಷಣ:** ಪ್ರೌಢ ಶಿಕ್ಷಣದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪದವಿಪೂರ್ವ ಹಂತದಲ್ಲಿಯೂ ಉತ್ತೀರ್ಣರಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಿ ಪದವಿಗಳನ್ನು ಪಡೆಯಲೋಸುಗ ಈ ಹಂತಕ್ಕೆ ಪ್ರವೇಶಿಸುತ್ತಾರೆ. ಇಲ್ಲಿ ವಿಶ್ವವಿದ್ಯಾಲಯವು ಶಿಕ್ಷಣಕ್ಕೆ ಸೌಲಭ್ಯಗಳನ್ನು, ಅವಕಾಶಗಳನ್ನು ಒದಗಿಸುವುದರಿಂದ ಇದಕ್ಕೆ ವಿಶ್ವವಿದ್ಯಾಲಯ ಶಿಕ್ಷಣ ಇಲ್ಲವೆ ಉನ್ನತ ಶಿಕ್ಷಣ ಎಂದು ಹೇಳುವುದಿದೆ. ರಾಜ್ಯದಲ್ಲಿ 8 ಸಾಮಾನ್ಯ ವಿಶ್ವವಿದ್ಯಾಲಯಗಳೂ, 2 ಕೃಷಿ ವಿಶ್ವವಿದ್ಯಾಲಯಗಳೂ ಮತ್ತು 6 ಪರಿಗಣಿತ ವಿಶ್ವವಿದ್ಯಾಲಯಗಳೂ ಸೇರಿದಂತೆ ಒಟ್ಟು 16 ವಿಶ್ವವಿದ್ಯಾಲಯಗಳಿವೆ.

**ಸಾಮಾನ್ಯ ವಿಶ್ವವಿದ್ಯಾಲಯಗಳು (8):** ಕರ್ನಾಟಕದಲ್ಲಿ ಸ್ಥಾಪಿತಗೊಂಡ ಮೊತ್ತಮೊದಲ ವಿಶ್ವವಿದ್ಯಾಲಯ ಮೈಸೂರು ವಿಶ್ವವಿದ್ಯಾನಿಲಯ (1916). ಅನಂತರ ಕರ್ನಾಟಕ ವಿಶ್ವವಿದ್ಯಾಲಯ (1949), ಬೆಂಗಳೂರು ವಿಶ್ವವಿದ್ಯಾಲಯ (1964), ಮಂಗಳೂರು ವಿಶ್ವವಿದ್ಯಾಲಯ (1980), ಗುಲ್ಬರ್ಗ ವಿಶ್ವವಿದ್ಯಾಲಯ (1980), ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ (1987), ಕನ್ನಡ ವಿಶ್ವವಿದ್ಯಾಲಯ, ಹಂಪಿ (1991) ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು (1996) ಮುಂತಾದವು ರಾಜ್ಯದಲ್ಲಿ ನೆಲೆಗೊಂಡಿವೆ.

**ಕೃಷಿ ವಿಶ್ವವಿದ್ಯಾಲಯಗಳು (2):** ಬೆಂಗಳೂರಿನಲ್ಲಿ 1965ರಲ್ಲೂ ಮತ್ತು ಧಾರವಾಡದಲ್ಲಿ 1986ರಲ್ಲೂ ಸ್ಥಾಪಿತವಾಗಿವೆ.

**ಪರಿಗಣಿತ ವಿಶ್ವವಿದ್ಯಾಲಯಗಳು (6):** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ್ (ಮಾಹೆ); ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸಸ್ (ನಿಮ್ಹಾನ್ಸ್), ಬೆಂಗಳೂರು; ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯೂನಿವರ್ಸಿಟಿ, ಬೆಂಗಳೂರು; ರಾಜೀವ್‌ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್, ಬೆಂಗಳೂರು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂವಿ.

ಈ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ 32 ವೈದ್ಯಕೀಯ ಕಾಲೇಜುಗಳೂ 43 ದಂತ ಕಾಲೇಜುಗಳೂ 123 ಎಂಜಿನಿಯರಿಂಗ್ ಕಾಲೇಜುಗಳೂ ಒಳಪಟ್ಟಿವೆ. ಕಲೆ, ವಿಜ್ಞಾನ, ವಾಣಿಜ್ಯ, ವ್ಯಾಪಾರ ನಿರ್ವಹಣೆ, ವಾಕ್‌ಶ್ರವಣ ವಿಜ್ಞಾನ, ಕಾನೂನು, ಗ್ರಂಥಾಲಯವಿಜ್ಞಾನ ವಿಷಯಗಳನ್ನು ಅಧ್ಯಯನ ಮಾಡುವುದಕ್ಕಾಗಿ ಅಧಿಕ ಸಂಖ್ಯೆಯ ಪದವಿ ಕಾಲೇಜುಗಳೂ ಪ್ರಾಥಮಿಕ ಮತ್ತು ಪ್ರೌಢಹಂತಗಳಲ್ಲಿ ಬೋಧಿಸುವ ಶಿಕ್ಷಕರ ತರಬೇತಿಗಾಗಿ ಟಿ.ಸಿ.ಎಚ್. ಮತ್ತು ಬಿ.ಎಡ್. ಕಾಲೇಜುಗಳೂ ದೈಹಿಕ ಶಿಕ್ಷಣಕ್ಕಾಗಿ ಫಿಸಿಕಲ್ ಎಜುಕೇಷನ್ ಕಾಲೇಜುಗಳೂ ಇವೆ. ಕರ್ನಾಟಕದಲ್ಲಿರುವ 8 ವಿಶ್ವವಿದ್ಯಾಲಯಗಳಿಗೆ ನ್ಯಾಕ್ (ನ್ಯಾಷನಲ್ ಅಸೆಸ್‌ಮೆಂಟ್ ಅಂಡ್ ಅಕ್ರೆಡಿಟೇಷನ್ ಕೌನ್ಸಿಲ್–ಎನ್.ಎ.ಎ.ಸಿ.) ಅಂಗೀಕಾರ ನೀಡಿದೆ. ರಾಜ್ಯದಲ್ಲಿರುವ 421 ಕಾಲೇಜುಗಳೂ ನ್ಯಾಕ್‌ನಿಂದ ಯೋಗ್ಯತಾ ಪತ್ರಗಳನ್ನು ಪಡೆದುಕೊಂಡಿವೆ. ಯು.ಜಿ.ಸಿ.ಯ ಸ್ವತಂತ್ರ ಸಂಸ್ಥೆಯಾದ ನ್ಯಾಕ್‌ನಿಂದ ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾಲಯಗಳಿಗೆ ಪಂಚತಾರಾ ಸ್ಥಾನ ಲಭ್ಯವಾಗಿದೆ.

ಇದಲ್ಲದೆ ನರ್ಸ್‌ಗಳಿಗೆ ತರಬೇತಿ ಹಾಗೂ ಪಾಲಿಟೆಕ್ನಿಕ್ ಶಿಕ್ಷಣಗಳಿಗಾಗಿಯೂ ರಾಜ್ಯದಲ್ಲಿ ಸಾಕಷ್ಟು ಸಂಸ್ಥೆಗಳಿವೆ. ವಿವಿಧ ಪದವಿಗಳನ್ನು ಪಡೆಯಲೋಸುಗ ವಿದ್ಯಾರ್ಥಿಗಳು ತಮ್ಮ ಅನಿಸಿಕೆ ಇಲ್ಲವೆ ಅಗತ್ಯಕ್ಕೆ ಅನುಗುಣವಾಗಿ ವಿಷಯಗಳನ್ನು ಆಯ್ಕೆಮಾಡಿಕೊಂಡು ಅಧ್ಯಯನ ಮಾಡುತ್ತಿದ್ದಾರೆ: ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಬಿ.ಎಮ್., ಎಲ್.ಎಲ್.ಬಿ., ಗ್ರಂಥವಿಜ್ಞಾನ, ಇಂಜಿನಿಯರಿಂಗ್, ಮೆಡಿಸಿನ್, ಬಿ.ಎಸ್ಸಿ., (ಸ್ಪೀಚ್ ಅಂಡ್ ಹಿಯರಿಂಗ್), ಬಿ.ಎಸ್ಸಿ. (ಸ್ಪೆಷಲ್ ಎಜುಕೇಷನ್), ಬಿ.ಎಸ್.ಸಿ.ಎಡ್. (ಇಂಟಿಗ್ರೇಟೆಡ್ ಕೋರ್ಸ್), ಬಿ.ಪಿ.ಎಡ್. ಇತ್ಯಾದಿ.

**ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆ:** ಒಂದು ಅಥವಾ ಎರಡು ವಿಷಯಗಳಲ್ಲಿ ಪದವಿಯನ್ನು (ಡಿಗ್ರಿ) ಪಡೆದ ಅನಂತರ ತಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಆಳವಾಗಿ ಅಧ್ಯಯನ ಮಾಡುವುದಕ್ಕೆ ಈ ಸಂಸ್ಥೆ ಪೂರಕವಾಗಿದೆ. ಕಲೆ, ವಿಜ್ಞಾನ, ಕಾನೂನು, ವಾಣಿಜ್ಯ, ಶಿಕ್ಷಣ, ಪತ್ರಿಕೋದ್ಯಮ, ಬಿಸಿನೆಸ್ ಮ್ಯಾನೇಜ್‌ಮೆಂಟ್ ಮತ್ತು ಆಡಳಿತ (ಎಂಬಿಎ) ಕಂಪ್ಯೂಟರ್ ಅಪ್ಲಿಕೇಷನ್ಸ್, ಗ್ರಂಥವಿಜ್ಞಾನಗಳ ಪೈಕಿ ಯಾವುದಾದರೊಂದು ಕ್ಷೇತ್ರಕ್ಕೆ ಸಂಬಂಧಿಸಿದ ಯುಕ್ತ ವಿಷಯಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಿದ್ದಾರೆ. ಇದಾದ ಬಳಿಕ ಇನ್ನೂ ಹೆಚ್ಚಿನ ಆಸಕ್ತಿ ಇರುವವರು ಡಾಕ್ಟರೇಟ್ ಪದವಿಗಾಗಿ (ಪಿಎಚ್.ಡಿ.) ಸಂಶೋಧನೆಯನ್ನು ಮಾಡುವ ಸುವರ್ಣಾವಕಾಶವೂ ಇದೆ. ಪ್ರಥಮ ಶ್ರೇಣಿಯಲ್ಲಿ ಅಥವಾ ಹೆಚ್ಚಿನ ಅಂಕಗಳನ್ನು ಪಡೆದಿರುವ ಸ್ನಾತಕೋತ್ತರ ವಿದ್ಯಾರ್ಥಿಗೆ ಸಂಶೋಧನೆ ಮಾಡಲು ವಿದ್ಯಾರ್ಥಿ ವೇತನವೂ ಲಭ್ಯವಿದೆ.

ಸ್ನಾತಕೋತ್ತರ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರು ತಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಆಳವಾಗಿ ಅಧ್ಯಯನ ಮಾಡುವುದಕ್ಕೆ ಪ್ರಾಜೆಕ್ಟ್‌ಗಳ ಮೂಲಕ ತಮ್ಮ ತಮ್ಮ ಕೊಡುಗೆಯನ್ನು ತಮ್ಮ ತಮ್ಮ ಕ್ಷೇತ್ರಗಳಿಗೆ ನೀಡಲೂಬಹುದು.

ಪಿಎಚ್.ಡಿ. ಪದವಿ ಪಡೆದ ನಂತರ ವಿದ್ಯಾರ್ಥಿಗಳಾಗಲೀ ಇಲ್ಲವೇ ಶಿಕ್ಷಕರಾಗಲೀ ಡಿ.ಲಿಟ್ (ಡಾಕ್ಟರ್ ಆಫ್ ಲಿಟ್‌ರೇಚರ್) ಪದವಿ ಪಡೆಯಲು ಅವಕಾಶವಿದೆ.

ಕೆಲವು ಗಮನಾರ್ಹ ಅಂಶಗಳು:

14ನೆಯ ಫೆಬ್ರವರಿ 2004 ರಂದು ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ದೇಶದಲ್ಲಿ ಮೊತ್ತಮೊದಲ ಬಾರಿಗೆ, ವೈಲ್ಡ್ ಲೈಫ್ ಬಯಾಲಜಿ ಮತ್ತು ಕನ್ಸರ್ವೇಷನ್ ಕ್ಷೇತ್ರದಲ್ಲಿ ಎಂ.ಎಸ್‌ಸಿ. ಕೋರ್ಸನ್ನು ಜೈವಿಕ ವಿಜ್ಞಾನಗಳಿಗಾಗಿ ರಾಷ್ಟ್ರೀಯ ಕೇಂದ್ರದಲ್ಲಿ ಪ್ರಾರಂಭಿಸಲಾಗಿದೆ;

ಮೈಸೂರಿನ ಸಿ.ಎಫ್.ಟಿ.ಆರ್.ಐ. ನಿಂದ ಪೌಷ್ಟಿಕತೆ / ಆಹಾರದ ಬಗ್ಗೆ ಇ- ಲರ್ನಿಂಗ್‌ಗಾಗಿ ಸಂಪರ್ಕಿಸಬಹುದು;

ಸರಾಸರಿ ಮಟ್ಟದ ವಿದ್ಯಾರ್ಥಿಗಳಿಗಾಗಿ ಯುನೈಟೆಡ್ ಡಿಗ್ರಿ ಮಿಷನ್ ಕಾಲೇಜು ಇದೆ. ಇದು ಬೆಂಗಳೂರು ವಿಶ್ವವಿದ್ಯಾಲಯದ ಆಂಗಿಕ ಸಂಸ್ಥೆ (affiliated) ಆರ್ಥಿಕವಾಗಿ ಹಿಂದುಳಿದವರು ಮತ್ತು ಅಧಿಕ ಅಂಕಗಳನ್ನು ಪಡೆಯಲಾಗದಿರುವ ವಿದ್ಯಾರ್ಥಿಗಳಿಗೆ ನೆರವು ನೀಡುವ ಉದ್ದೇಶವನ್ನು ಇದು ಇಟ್ಟುಕೊಂಡಿದೆ;

ಮೈಸೂರಿನ 6 ಕಾಲೇಜುಗಳಿಗೆ ಸ್ವಯಮಾಧಿಕಾರ ಲಭ್ಯವಾಗಿದೆ;

ಬೆಂಗಳೂರಿನ ಐ.ಐ.ಎಸ್‌ಸಿ. ಅನ್ನು ವಿಶ್ವದರ್ಜೆಯ ವಿಶ್ವವಿದ್ಯಾಲಯವನ್ನಾಗಿ ಮಾಡುವುದಿದೆ;

ಕುವೆಂಪುರವರ ಹೆಸರಿನಲ್ಲಿ ಅಂತಾರಾಷ್ಟ್ರೀಯ ಭಾಷಾಂತರ ಕೇಂದ್ರ ಸ್ಥಾಪನೆ ಆಗಿದೆ;

ತಳಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಆರಂಭಿಸಲಿದೆ. (ಎ.ಎಸ್.ಆರ್.)

## ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು):

ಕರ್ನಾಟಕದ ಪ್ರಥಮ ತಾಂತ್ರಿಕ ವಿಶ್ವವಿದ್ಯಾಲಯ. ಇದನ್ನು ಬೆಳಗಾಂವಿಯಲ್ಲಿ 1998ರಲ್ಲಿ ಸ್ಥಾಪಿಸಲಾಯಿತು. ಇದರ ವ್ಯಾಪ್ತಿಗೆ ಒಳಪಡುತ್ತವೆ. 103 ಕಾಲೇಜುಗಳು, 31 ಸ್ನಾತಕೋತ್ತರ ಕೇಂದ್ರಗಳು ಆರಂಭದ ವರ್ಷದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಎಂ.ಬಿ.ಎ., ಎಂ.ಸಿ.ಎ. ಕೋರ್ಸುಗಳಿಗೆ 27,370 ವಿದ್ಯಾರ್ಥಿಗಳು ಪ್ರವೇಶ ಪಡೆದರು. ವಿಶ್ವವಿದ್ಯಾಲಯದಲ್ಲಿರುವ ಪ್ರಮುಖ ವಿದ್ವನ್ಮಂಡಲಿಗಳಿವು (ಫ್ಯಾಕಲ್ಟಿ): ಆಟೋಮೊಬೈಲ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ಎಂಜಿನಿಯರಿಂಗ್, ಬಯೋ–ಮೆಡಿಕಲ್ ಎಂಜಿನಿಯರಿಂಗ್, ಮೆಡಿಕಲ್– ಇಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಮತ್ತು ಟೆಲಿಕಮ್ಯೂನಿಕೇಶನ್ ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್, ಇನ್‌ಫರ್ಮೇಶನ್ ಸೈನ್ಸ್ ಎಂಜಿನಿಯರಿಂಗ್, ಕೆಮಿಕಲ್ ಎಂಜಿನಿಯರಿಂಗ್, ಪಾಲಿಮರ್‌ಸೈನ್ಸ್ ಮತ್ತು ಟೆಕ್ನಾಲಜಿ, ಆರ್ಕಿಟೆಕ್ಚರ್, ಇಂಡಸ್ಟ್ರಿಯಲ್ ಮತ್ತು ಪ್ರೊಡಕ್ಷನ್ ಎಂಜಿನಿಯರಿಂಗ್, ಇಂಡಸ್ಟ್ರಿಯಲ್ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಮ್ಯಾನ್ಯುಫ್ಯಾಕ್ಚರಿಂಗ್ ಸೈನ್ಸ್ ಎಂಜಿನೀಯರಿಮಗ್, ಸಿವಿಲ್ ಎಂಜಿನಿಯರಿಂಗ್ ಮತ್ತು ಟ್ರಾನ್ಸ್‌ಪೋರ್ಟೇಷನ್ ಎಂಜಿನಿಯರಿಂಗ್, ಟೆಕ್ಸ್‌ಟೈಲ್ ಟೆಕ್ನಾಲಜಿ ಮತ್ತು ಸಿಲ್ಕ್ ಟೆಕ್ನಾಲಜಿ, ಮಾಸ್ಟರ್ ಆಫ್ ಬಿಸ್‌ನೆಸ್ ಆಡ್ಮಿನಿಸ್ಟ್ರೇಶನ್ (ಎಂ.ಬಿ.ಎ.), ಎನ್ವಿರಾನ್‌ಮೆಂಟಲ್ ಎಂಜಿನಿಯರಿಂಗ್, ಸಿರಾಮಿಕ್ ಮತ್ತು ಸಿಮೆಂಟ್ ಟೆಕ್ನಾಲಜಿ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್, ಬೇಸಿಕ್ ಸೈನ್ಸ್, ಮೆಕ್ಯಾನಿಕಲ್ ಎಂಜಿನಿಯರಿಂಗ್, ಮೈನಿಂಗ್

ಎಂಜಿನಿಯರಿಂಗ್ ಮತ್ತು ಪ್ರಿಂಟಿಂಗ್ ಟೆಕ್ನಾಲಜಿ. ವಿಶ್ವವಿದ್ಯಾಲಯ ಹಾಗೂ ಆಯ್ದ ಕಾಲೇಜುಗಳಲ್ಲಿ ಈ ಎಲ್ಲ ಕ್ಷೇತ್ರಗಳಲ್ಲಿ ಸಂಶೋಧನೆಗೆ ಅವಕಾಶ ಕಲ್ಪಿಸಲಾಗಿದೆ.

**ಎಂಜಿನಿಯರಿಂಗ್ ಶಿಕ್ಷಣ ಹಾಗೂ ಸಂಶೋಧನ ಕೇಂದ್ರಗಳು:** ಬಿ.ಎಂ.ಎಸ್. ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು; ಗೌಸಿಯ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು; ಎಂ.ಎಸ್.ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು; ಆರ್.ವಿ. ಕಾಲೇಜು ಆಫ್ ಎಂಜಿನಿಯರಿಂಗ್, ಬೆಂಗಳೂರು; ಸರ್.ಎಂ.ವಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು; ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್

ಆಡಳಿತ ಕಚೇರಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

ಟೆಕ್ನಾಲಜಿ, ಬೆಂಗಳೂರು; ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್, ದಾವಣಗೆರೆ; ಬಿ.ವಿ.ಬಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಹುಬ್ಬಳ್ಳಿ; ಗೋಗಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಗಾಂವಿ; ಜೆ.ಎಸ್.ಎಸ್. ಕಾಲೇಜ್ ಆಫ್ ಎಂಜಿನಿಯರಿಂಗ್, ಶಿವಮೊಗ್ಗ; ಎನ್.ಎ.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಟ್ಟೆ; ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್, ಮೈಸೂರು (ಎನ್.ಐ.ಇ.), ಪಿ.ಇ.ಎಸ್. ಕಾಲೇಜು ಆಫ್ ಎಂಜಿನಿಯರಿಂಗ್, ಮಂಡ್ಯ; ರೂರಲ್ ಎಂಜಿನಿಯರಿಂಗ್ ಕಾಲೇಜು, ಹೂಕೋಟೆ; ಜಯಚಾಮರಾಜೇಂದ್ರ ಕಾಲೇಜು ಆಫ್ ಎಂಜಿನಿಯರಿಂಗ್, ಮೈಸೂರು (ಜೆ.ಸಿ.ಇ.), ಬಸವೇಶ್ವರ ಎಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ; ಮಲೆನಾಡು ಎಂಜಿನಿಯರಿಂಗ್ ಕಾಲೇಜು, ಹಾಸನ; ಪಿಡಿಎ ಕಾಲೇಜ್ ಆಫ್ ಎಂಜಿನಿಯರಿಂಗ್, ಗುಲಬರ್ಗಾ; ಎಸ್.ಡಿ.ಎಂ. ಕಾಲೇಜ್ ಆಫ್ ಎಂಜಿನಿಯರಿಂಗ್, ಧಾರವಾಡ; ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು, ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು ಮುಂತಾದವು. ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಎಲೆಕ್ಟ್ರಾನಿಕ್ ನಗರದಲ್ಲಿ ಸ್ನಾತಕೋತ್ತರ ಪದವಿ ವಿಸ್ತರಣಾ ಕೇಂದ್ರಗಳನ್ನು ತೆರೆಯುವುದು ವಿಶ್ವವಿದ್ಯಾನಿಲಯದ ಯೋಜನೆಯಾಗಿದೆ. ಎಸ್. ರಾಜಶೇಖರಯ್ಯ ಈ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿ (1998–2001) ಸೇವೆಸಲ್ಲಿಸಿದರು. ಕೆ. ಬಾಲವೀರ ರೆಡ್ಡಿ ಅವರು ಈಗಿನ ಕುಲಪತಿ (2001 ಏಪ್ರಿಲ್ 1 ರಿಂದ). *

**ವಿಶ್ವೇಶ್ವರಯ್ಯ ನಾಲೆ:** ಕೃಷ್ಣರಾಜಸಾಗರದ (ಕೆಆರ್‌ಎಸ್) ಎಡದಂಡೆಯಲ್ಲಿ ನದೀಪಾತ್ರದಿಂದ 18.3 ಮೀ ಎತ್ತರದಲ್ಲಿರುವ ಇರ್ವಿನ್ ನಾಲೆಗೆ ಸ್ವಾತಂತ್ರ್ಯಾನಂತರ (1947) ಇಟ್ಟ ಹೊಸ ಹೆಸರು. ಮೈಸೂರು ನಗರದ ವಾಯವ್ಯಕ್ಕೆ 16 ಕಿಮೀ ದೂರದಲ್ಲಿದೆ ಕೆಆರ್‌ಎಸ್. ಇಲ್ಲಿ ಕಾವೇರಿನದಿಗೆ ಅಡ್ಡಲಾಗಿ ಅಣೆಕಟ್ಟು (1931) ಕಟ್ಟಿ ಈ ಜಲಾಶಯವನ್ನು ನಿರ್ಮಿಸಲಾಗಿದೆ. ಇದರ ನಿರ್ಮಾತೃ ಅಂದಿನ ಮೈಸೂರು ಸಂಸ್ಥಾನದ ಪ್ರಧಾನ ಅಭಿಯಂತರಾಗಿದ್ದ ಎಂ. ವಿಶ್ವೇಶ್ವರಯ್ಯ (1860–1962).

ವಿಶ್ವೇಶ್ವರಯ್ಯ ನಾಲೆಯ ಒಟ್ಟು ಉದ್ದ 45.92 ಕಿಮೀ. ಇದರ ಕವಲುನಾಲೆ, ಸೀಳು ನಾಲೆಗಳ ಒಟ್ಟು ಉದ್ದ 303 ಕಿಮೀ. ಇದು ಈಗಿನ ಮಂಡ್ಯ ಜಿಲ್ಲೆಯ 77,200 ಹೆಕ್ಟೇರ್ ಭೂಮಿಯ ಸಾಗುವಳಿಗೆ ನೀರೊದಗಿಸುತ್ತದೆ. ಇದನ್ನು ಮೂರು ಪ್ರಮುಖ ಭಾಗಗಳಾಗಿ ವಿಂಗಡಿಸಬಹುದು: ಹುಲಿಕೆರೆವರೆಗಿನ 39.2 ಕಿಮೀ, ಹುಲಿಕೆರೆಯ ಸುರಂಗದ ಹಾಗೂ ತೋಡು ಭಾಗದ 6.6 ಕಿಮೀ ಮತ್ತು ಸುರಂಗಾ

ವಿಶ್ವೇಶ್ವರಯ್ಯ ನಾಲೆ, ಪಾಂಡವಪುರ

ನಂತರದ ಭಾಗ. ನಾಲೆಯ ಪ್ರಯೋಜನವಾಗುವುದು ಈ ಕೊನೆ ಭಾಗದಲ್ಲಿಯೇ. ಪ್ರಾರಂಭದಲ್ಲಿ ಇದರ ತಳದ ಅಗಲ 17.6 ಮೀ, ಆಳ 3.66 ಮೀ. ಇದು 6.4 ಕಿಮೀನಲ್ಲಿ ಕಟ್ಟೇರಿ ಹಳ್ಳವನ್ನೂ 14.4 ಕಿಮೀನಲ್ಲಿ ದಾಮದ ಹಳ್ಳವನ್ನೂ 38.4 ಕಿಮೀನಲ್ಲಿ ಲೋಕಪಾವನಿ ನದಿಯನ್ನೂ ಮೇಲ್ಗಾಲುವೆಗಳ ಮೂಲಕ ಹಾಯ್ದುಹೋಗುತ್ತದೆ. ಇವೆಲ್ಲವೂ ಕಲ್ಲುಗಾರೆ ಮೇಲ್ಗಾಲುವೆಗಳು. ನಾಲೆಯ ಹಾದಿಯಲ್ಲಿ ಹುಲಿಕೆರೆಯ ಬಳಿ ಅಡ್ಡಬಂದ ಬೆಟ್ಟವನ್ನು ಕೊರೆದು ಸುರಂಗ ತೋಡಿ, ಅದರ ಮೂಲಕ ನಾಲೆಯನ್ನು ಹಾಯಿಸಲಾಗಿದೆ. ಇದರ ಹೆಸರು ಹುಲಿಕೆರೆ ಸುರಂಗವೆಂದಿತ್ತು. ಈಗ ಇದು ವಿಶ್ವೇಶ್ವರಯ್ಯ ಸುರಂಗವಾಗಿದೆ.

ವಿಶ್ವೇಶ್ವರಯ್ಯ ಸುರಂಗದ ಉದ್ದ 2.805 ಕಿಮೀ. ಇದು ಅಂಡಾಕಾರವಾಗಿದ್ದು, ಇದರ ಖಂಡ ವಿಸ್ತಾರ 16.2 ಚಮೀ. ಸುರಂಗದೊಳಗೆ ನೀರಿನ ವೇಗ ಸೆಕೆಂಡಿಗೆ 3.66 ಮೀ. ಸುರಂಗದ ಒಳ ಮೈಗೆ ಕಾಂಕ್ರೀಟನ್ನು ಲೇಪಿಸಿದೆ. ಸುರಂಗದ ಮುಂಚಿನ ತೋಡುಭಾಗದ ಉದ್ದ 1.4 ಕಿಮೀ. ಸುರಂಗಾನಂತರದ ತೋಡುಭಾಗದ ಉದ್ದ 2.4 ಕಿಮೀ. ಮುಂದೆ ನಾಲೆ ಹಲವು ಕವಲುಗಳಾಗಿ ಹರಿದು, ವ್ಯವಸಾಯಕ್ಕೆ ನೀರೊದಗಿಸುತ್ತದೆ. ಈ ನಾಲೆ ಮಂಡ್ಯ ಜಿಲ್ಲೆಯ ಜೀವನಾಡಿಯಾಗಿದೆ. *

**ವಿಶ್ವೇಶ್ವರಯ್ಯ, ಮೋಕ್ಷಗುಂಡಂ:** 1860–1962. ಪ್ರತಿಭಾವಂತ ಎಂಜಿನಿಯರ್; ದಕ್ಷ ಆಡಳಿತಗಾರ ಮತ್ತು ನಿಷ್ಕಾಮಕರ್ಮಿ; ದೇಶಭಕ್ತ. ಶಿಸ್ತು ಮತ್ತು ದಕ್ಷತೆಗೆ ಮತ್ತೊಂದು ಹೆಸರಂತಿದ್ದ ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನಹಳ್ಳಿಯಲ್ಲಿ 1860ರ ಆಗಸ್ಟ್ 27ರಂದು ಜನಿಸಿದರು. ಪಂಡಿತ ಶ್ರೀನಿವಾಸಶಾಸ್ತ್ರಿ ಇವರ ತಂದೆ, ತಾಯಿ ವೆಂಕಟಲಕ್ಷ್ಮಮ್ಮ. ವಿಶ್ವೇಶ್ವರಯ್ಯನವರಿಗೆ 15 ವರ್ಷವಾಗಿದ್ದಾಗ ತಂದೆ ತೀರಿಕೊಂಡರು. ಚಿಕ್ಕಬಳ್ಳಾಪುರದ ಮಾಧ್ಯಮಿಕ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಮುಗಿಸಿದ ಮೇಲೆ ಸೋದರಮಾವ ಎಚ್. ರಾಮಯ್ಯನವರ ಜೊತೆ ಬೆಂಗಳೂರಿಗೆ ಬಂದು 1875ರಲ್ಲಿ ವೆಸ್ಲಿಯನ್ ಮಿಷನ್ ಪ್ರೌಢಶಾಲೆಗೆ ಸೇರಿದರು. ವಿಶ್ವೇಶ್ವರಯ್ಯನವರು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಅಂದಿನ ಮಹಾರಾಜರ ಮಂತ್ರಿಗಳಾಗಿದ್ದ ಮುದ್ದಯ್ಯನವರು ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಆ ರೀತಿ ಪಾಠ ಹೇಳಿಸಿಕೊಂಡ ನಂಜಪ್ಪನವರು ಮುಂದೆ ರಾಜ್ಯದ ಸೀನಿಯರ್ ಸರ್ಜನ್ ಆಗಿ ಹೆಸರು ಪಡೆದರು. ವಿಶ್ವೇಶ್ವರಯ್ಯನವರು 1881ರಲ್ಲಿ ಬಿ.ಎ. ಪರೀಕ್ಷೆಯನ್ನು ಉನ್ನತ ಶ್ರೇಣಿಯಲ್ಲಿ ಪಾಸುಮಾಡಿದರು. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಚಾರ್ಲ್ಸ್ ವಾಟರ್ಸ್ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ಇವರಿಗೆ ಪ್ರಿನ್ಸಿಪಾಲರು ವೆಬ್‌ಸ್ಟರ್ ನಿಘಂಟನ್ನು ಬಹುಮಾನವಾಗಿ ಕೊಟ್ಟರು; ಎಂಜಿನಿಯರಿಂಗ್ ಓದಲು

ಅವರೇ ಪ್ರೋತ್ಸಾಹಿಸಿ ಆಗಿನ ಮೈಸೂರು ರಾಜ್ಯದ ದಿವಾನರಾಗಿದ್ದ ರಂಗಾಚಾರ್ಲು ಅವರಿಗೆ ಪತ್ರ ಬರೆದು ಸರ್ಕಾರದ ವಿದ್ಯಾರ್ಥಿವೇತನ ದೊರಕುವಂತೆ ಮಾಡಿದರು. ವಿಶ್ವೇಶ್ವರಯ್ಯನವರು ಪುಣೆಯ ಸೈನ್ಸ್ ಕಾಲೇಜನ್ನು ಸೇರಿ ತಮ್ಮ 23ನೆಯ ವಯಸ್ಸಿನಲ್ಲಿ ಎಲ್.ಸಿ.ಇ. ಮತ್ತು ಇ.ಸಿ.ಇ.ಎಲ್. ಎಂಜಿನಿಯರಿಂಗ್ ಪರೀಕ್ಷೆಯನ್ನು 1883ರಲ್ಲಿ ಪ್ರಥಮ ದರ್ಜೆಯಲ್ಲಿ ಪಾಸುಮಾಡಿ ಮುಂಬಯಿ ಪ್ರಾಂತ್ಯಕ್ಕೇ ಪ್ರಥಮ ಸ್ಥಾನ ಗಳಿಸಿದರು.

ವಿಶ್ವೇಶ್ವರಯ್ಯನವರು 1884ರ ಮಾರ್ಚ್‌ನಿಂದ ಮುಂಬಯಿ ಸರ್ಕಾರದಲ್ಲಿ ಅಸಿಸ್ಟೆಂಟ್ ಎಂಜಿನಿಯರ್ ಆಗಿ ತಮ್ಮ ವೃತ್ತಿಜೀವನವನ್ನಾರಂಭಿಸಿದರು.

ವಿಶ್ವೇಶ್ವರಯ್ಯನವರು ಧೂಲಿಯಾ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆ ತಯಾರಿಸುತ್ತಿದ್ದಾಗ 27-12-1887ರಲ್ಲಿ ಮುಂಬಯಿಯಲ್ಲಿ ಮೈಸೂರು ಮಹಾರಾಜರನ್ನು ಕಂಡು ಮಾತುಕತೆ ನಡೆಸಿದರು. ಸೂರತ್ ಜಿಲ್ಲೆಯಲ್ಲಿ ಒಂದು ವರ್ಷ ಕೆಲಸ ಮಾಡಿದ ಮೇಲೆ 1889ರಲ್ಲಿ ಪುಣೆಗೆ ವರ್ಗವಾಗಿ ಬಂದರು. ಪಂಜ್ರಾ ನದಿಯಿಂದ ದತಾರಿ ಹಳ್ಳಿಗೆ 'ಸೈಫನ್' ಕೊಳವೆ ಹಾಕಿ ನೀರು ಒದಗಿಸುವ ಕೆಲಸಮಾಡಿ ಒಳ್ಳೆಯ ಹೆಸರು ಗಳಿಸಿದರು. ಕೆಲಸಕ್ಕೆ ಸೇರಿದ 20 ತಿಂಗಳಲ್ಲೇ ತಮ್ಮ ದಕ್ಷತೆಯಿಂದಾಗಿ ಮೊದಲ ದರ್ಜೆಯ ಎಂಜಿನಿಯರ್ ಆದರು. ಸಿಂಧ್ ವಿಭಾಗಕ್ಕೆ ಸೇರಿದ ಸಕ್ಕೂರಿಗೆ ಕುಡಿಯುವ ನೀರನ್ನು ಶುದ್ಧಮಾಡಲು ಆಗತಕ್ಕ ಅಪಾರ ವೆಚ್ಚವನ್ನು ತಗ್ಗಿಸುವ ಸಲುವಾಗಿ ನದಿ ದಡಗಳಲ್ಲಿ ದೊಡ್ಡ ಬಾವಿಗಳನ್ನು ತೋಡಿಸಿ ಅಲ್ಲಿಂದ ಶುದ್ಧ ನೀರನ್ನು ಪೂರೈಸಿದರು. ಇದರಿಂದಲೂ ಇವರಿಗೆ ಒಳ್ಳೆ ಹೆಸರು ಬಂತು. ಹಾಗೆಯೇ ವಿಶ್ವೇಶ್ವರಯ್ಯನವರು ತಪತಿ ನದಿಯಿಂದ ಸೂರತ್ತಿಗೆ ನೀರೊದಗಿಸುವ ಕಾರ್ಯವನ್ನು ಮಾಡಿ ಮುಗಿಸಿದರು.

ಈ ಸಮಯದಲ್ಲೇ ವಿಶ್ವೇಶ್ವರಯ್ಯನವರು ಸ್ವಯಂಚಾಲಿತ ತೂಬಿನ ಬಾಗಿಲುಗಳನ್ನು ನಿರ್ಮಿಸಿ ಪ್ರಥಮವಾಗಿ ಪುಣೆಯ ಸಮೀಪದಲ್ಲಿರುವ ಖಡಕವಾಸಲಾದ ಫೈಫ್ ಜಲಾಶಯದ ಕೋಡಿಯಲ್ಲಿ ಸ್ಥಾಪಿಸಿದರು. ಮುಂದೆ ಇದೇ ಮಾದರಿಯ ಕವಾಟಗಳನ್ನು ಗ್ವಾಲಿಯರ್‌ನ ಟಿಗ್ರಾ ಅಣೆಕಟ್ಟು ಮತ್ತು ಕೃಷ್ಣರಾಜಸಾಗರ ಅಣೆಕಟ್ಟಿನಲ್ಲಿ ಉಪಯೋಗಿಸಲಾಯಿತು. 1904ರಲ್ಲಿ ಸಿಂಧ್ ಒಳಗೊಂಡ ಮುಂಬಯಿ ಪ್ರಾಂತ್ಯಕ್ಕೆ ಸ್ಯಾನಿಟರಿ ಎಂಜಿನಿಯರಾಗಿ ನೇಮಿತರಾದರು. ಆ ಹುದ್ದೆಗೆ ಬಂದ ಭಾರತೀಯರಲ್ಲಿ ಇವರೇ ಮೊದಲಿಗರು. ಅದುವರೆಗೂ ಆ ಹುದ್ದೆ ಬ್ರಿಟಿಷರಿಗೆ ಮಾತ್ರ ಮೀಸಲಾಗಿತ್ತು. ಇದೇ ಕಾಲದಲ್ಲಿ ಲಂಡನ್ನಿನ ಸಿವಿಲ್ ಎಂಜಿನಿಯರ್ಸ್ ಸಂಸ್ಥೆಗೆ ಸದಸ್ಯರಾಗಿ ಆಯ್ಕೆಯಾದರು. ಸಿಮ್ಲಾದಲ್ಲಿ ನಡೆದ ಅಖಿಲ ಭಾರತ ನೀರಾವರಿ ಎಂಜಿನಿಯರುಗಳ ಸಮ್ಮೇಳನದಲ್ಲಿ ತಮ್ಮ ನಾಲ್ಕು ಪ್ರೌಢ ಪ್ರಬಂಧಗಳನ್ನು ಓದಿದರು. ಮುಂಬಯಿ ವಿಶ್ವವಿದ್ಯಾನಿಲಯದ ನಿಯಮಾವಳಿ ರೂಪಿಸುವ ಮಂಡಳಿಗೆ ಸರ್ಕಾರ ಇವರನ್ನು ಸದಸ್ಯರನ್ನಾಗಿ ನೇಮಿಸಿತು. ಗೋಪಾಲಕೃಷ್ಣ ಗೋಖಲೆಯವರು ಪುಣೆಯ ಪುರಸಭಾ ಸದಸ್ಯರಾಗಿದ್ದ ಕಾಲದಲ್ಲಿ ವಿಶ್ವೇಶ್ವರಯ್ಯನವರು ಆ ನಗರದ ಒಳಚರಂಡಿ ವ್ಯವಸ್ಥೆಯನ್ನು ರೂಪಿಸಿಕೊಟ್ಟರು. 1906ರಲ್ಲಿ ವಿಶ್ವೇಶ್ವರಯ್ಯನವರು ಏಡನ್‌ಗೆ ಹೋಗಿ ಆ ನಗರಕ್ಕೆ ಕುಡಿಯುವ ನೀರಿನ ಮತ್ತು ಒಳಚರಂಡಿ ವ್ಯವಸ್ಥೆಯ ಕೆಲಸಗಳನ್ನು ಪೂರೈಸಿ ಒಳ್ಳೆಯ ಹೆಸರು ಗಳಿಸಿದರು. ಸರ್ಕಾರ ಇವರ ಕಾರ್ಯದಕ್ಷತೆಗೆ ಮೆಚ್ಚಿ ಕೈಸರ್-ಇ-ಹಿಂದ್ ಪ್ರಶಸ್ತಿ ನೀಡಿ ಗೌರವಿಸಿತು. ಕೊಲ್ಲಾಪುರದ ಮಹಾರಾಜರ ಕೋರಿಕೆಯಂತೆ ಅಲ್ಲಿನ ಕೆರೆ ದುರಸ್ತಿ ಮಾಡಿಸಿ ನೀರು ಸರಬರಾಜನ್ನು ವ್ಯವಸ್ಥೆಗೊಳಿಸಿದ ಕೀರ್ತಿ ಇವರದು.

ವಿದೇಶಗಳಲ್ಲಿ ಆಗಿರುವ ಪ್ರಗತಿಯನ್ನು ನೋಡಿ, ಹೊಸದನ್ನು ಕಲಿತು ತಮ್ಮ ದೇಶಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ರೂಪಿಸಿ ರೂಢಿಸಬೇಕೆಂಬ ಉದ್ದೇಶದಿಂದ ವಿಶ್ವೇಶ್ವರಯ್ಯನವರು 1898ರಲ್ಲಿ ಜಪಾನಿಗೆ ಹೋಗಿ ಅಲ್ಲಿನ ಅನೇಕ ಕಾರ್ಖಾನೆಗಳನ್ನು ನೋಡಿ ಬಂದರು. 1905ರಲ್ಲಿ ಮುಂಬಯಿ ಪ್ರಾಂತದ ಸಾನಿಟರಿ ಎಂಜಿನಿಯರ್ ಆದರು (1908). ಮುಂಬಯಿ ಸರ್ಕಾರದ ನೌಕರಿಯಿಂದ ನಿವೃತ್ತರಾಗುವ ಮೊದಲು ರಜೆ ಪಡೆದು ಯೂರೋಪ್, ಅಮೆರಿಕ ಪ್ರವಾಸ ಮಾಡಿದರು. ಇಟಲಿಯ ಮಿಲಾನ್ ನಗರದ ಒಳಚರಂಡಿ ವ್ಯವಸ್ಥೆ ಅರಿಯಲು ಅಲ್ಲಿನ ಚರಂಡಿಯ ಒಳಗೇ ಇಳಿದು ನಡೆದರಂತೆ. ಹಾಗೇ ಜರ್ಮನಿಯ ಡಾಸೆಲ್‌ಡಾರ್ಫ್, ಲಂಡನ್, ಪ್ಯಾರಿಸ್ ಇಲ್ಲಿನ ವ್ಯವಸ್ಥೆಗಳನ್ನು ಅಭ್ಯಸಿಸಿದರು. ಡೆನ್ಮಾರ್ಕ್, ಸ್ವೀಡನ್, ಹಾಲೆಂಡ್, ಕೆನಡ, ಲೆನಿನ್‌ಗ್ರಾಡ್ (ಆಗಿನ ಸೇಂಟ್ ಪೀಟರ್ಸ್ ಬರ್ಗ್) ಮತ್ತು ಮಾಸ್ಕೊ ನಗರಗಳಿಗೆ ಭೇಟಿಕೊಟ್ಟು ಅಲ್ಲಿನ ಪ್ರಗತಿಯನ್ನೆಲ್ಲ ಕಣ್ಣಾರೆ ಕಂಡುಬಂದರು. ಡೆಟ್ರಾಯಿಟ್‌ನ ಫೋರ್ಡ್ ಮೋಟಾರು ಕಂಪನಿಯ ಕೆಲಸಕಾರ್ಯಗಳನ್ನು ಅಭ್ಯಾಸಮಾಡಲು ಅಲ್ಲೇ 2 ತಿಂಗಳು ಉಳಿದರು. ನ್ಯೂಯಾರ್ಕ್ ನಗರಕ್ಕೆ ನೀರೊದಗಿಸುವ ಗ್ರೋಟನ್ ಅಣೆಕಟ್ಟನ್ನೂ ನೋಡಿ ಬಂದರು. ಪುಣೆ, ಹೈದರಾಬಾದು, ಧೂಲಿಯಾ, ಏಡನ್, ಇಂದೂರ್ ಮತ್ತು ಮೈಸೂರು ನಗರಗಳ ಒಳಚರಂಡಿ ವ್ಯವಸ್ಥೆ ಇವರು ಸೂಚನೆ ಮತ್ತು ಸಲಹೆಯ ಮೇಲೆಯೇ ರೂಪಿಸಲಾಯಿತು.

ಹೈದರಾಬಾದು ಮತ್ತು ಸುತ್ತಲ ಹಳ್ಳಿಗಳಿಗೆ ಸಮಸ್ಯೆಯಾಗಿ ಪರಿಣಮಿಸಿದ್ದ ಮೂಸಿ ಮತ್ತು ಇಯಾಸಿ ನದಿಗಳ ಪ್ರವಾಹವನ್ನು ನಿಯಂತ್ರಿಸಲು ಹೈದರಾಬಾದಿನ ನಿಜಾಮರು ಇವರನ್ನು ಕರೆಸಿಕೊಂಡರು. 15-4-1909ರಲ್ಲಿ ಹೈದರಾಬಾದಿಗೆ ಹೋಗಿ ಸ್ಥಳಪರೀಕ್ಷೆ ನಡೆಸಿ ವಿಶ್ವೇಶ್ವರಯ್ಯನವರು 1909ರಲ್ಲಿ ನವೆಂಬರ್‌ನಲ್ಲಿ ಹೈದರಾಬಾದು ನಗರ ಮತ್ತು ಒಳಚರಂಡಿ ವ್ಯವಸ್ಥೆಯ ವರದಿ ಸಲ್ಲಿಸಿದರು. ವಿಶ್ವೇಶ್ವರಯ್ಯನವರ ಸಲಹೆಯಂತೆ ಮೂಸಿ ನದಿಗೆ ಅಡ್ಡಗಟ್ಟೆ ಹಾಕಿ ಉಸ್ಮಾನ್ ಸಾಗರವನ್ನೂ ಈಸಿ ನದಿಗೆ ಕಟ್ಟೆ ಕಟ್ಟಿ ಹಿಮಾಯತ್ ಸಾಗರವನ್ನೂ ಕಟ್ಟಲಾಯಿತು. ಇದರಿಂದ ಹೈದರಾಬಾದು ನಗರವನ್ನು ಪ್ರವಾಹಗಳಿಂದ ರಕ್ಷಿಸಿದುದಲ್ಲದೆ ಸುಂದರವಾಗಿಡಲು ಮತ್ತು ಸುತ್ತಲ ಪ್ರದೇಶದ ಜಲಾಭಾವ ನೀಗಲು ಕಾರಣವಾಯಿತು.

ಮುಂಬಯಿ ಸರ್ಕಾರಕ್ಕೆ 24 ವರ್ಷ ಸೇವೆ ಸಲ್ಲಿಸಿ ವಿಶ್ವೇಶ್ವರಯ್ಯನವರು 1908ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದರು. 1909ರ ನವೆಂಬರ್ 15ರಂದು ಮೈಸೂರು ರಾಜ್ಯದ ಪ್ರಧಾನ ಎಂಜಿನಿಯರ್ ಆಗಿ ಅಧಿಕಾರ ಸ್ವೀಕರಿಸಿದರು. ಮಾದರಿ ರಾಜ್ಯದ ನಿರ್ಮಾಣಕ್ಕಾಗಿ ವಿಶ್ವೇಶ್ವರಯ್ಯನವರು ರಾಜ್ಯದ ಪರಿಸ್ಥಿತಿಯನ್ನೆಲ್ಲ ಅಧ್ಯಯನ ಮಾಡಿ ಎಲ್ಲಿ ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡಬಹುದು, ಜಲಾಶಯಗಳನ್ನು ನಿರ್ಮಿಸಬಹುದು ಎಂಬುದನ್ನು ಪರಿಶೀಲಿಸಿದರು. ಜೊತೆಗೆ, ರೈಲ್ವೆ ಕಾರ್ಯದರ್ಶಿಯಾಗಿಯೂ ಇದ್ದ ಇವರು ಹೊಸ ರೈಲು ಮಾರ್ಗಗಳ ಒಂದು ಯೋಜನೆಯನ್ನು ಸರ್ಕಾರದ ಮುಂದಿಟ್ಟರು. ಇವರ ಶ್ರಮದಿಂದ ಬೀರೂರು-ಶಿವಮೊಗ್ಗ, ಮೈಸೂರು-ನಂಜನಗೂಡು, ಬೆಂಗಳೂರು-ಮೈಸೂರು ರೈಲ್ವೆಗಳ ಆಡಳಿತವನ್ನು ಮೈಸೂರು ಸರ್ಕಾರಕ್ಕೆ ವರ್ಗಾಯಿಸಲಾಯಿತು.

ವಿಶ್ವೇಶ್ವರಯ್ಯನವರು 1912ರಲ್ಲಿ ದಿವಾನ ಪದವಿಯನ್ನು ಒಪ್ಪಿಕೊಂಡರು. ಈ ಸಂದರ್ಭದಲ್ಲಿ ತಮ್ಮ ತಾಯಿ ಮತ್ತು ಬಂಧುಗಳಿಂದ ಕೆಲಸ

ಕೊಡಿಸುವ ಮತ್ತು ಪ್ರಭಾವಬೀರುವುದನ್ನು ತಮ್ಮಿಂದ ಕೇಳಬಾರದೆಂದು ವಾಗ್ದಾನಪಡೆದರಂತೆ.

ಈ ಮೊದಲೇ 1911ರಲ್ಲಿ ಪೂರ್ಣವಾಯಿತು. ಇದೇ ವರ್ಷದಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. 1913ರಲ್ಲಿ ಮೈಸೂರು ಅರಸರಿಗೂ ಬ್ರಿಟಿಷರಿಗೂ ಹೊಸ ಒಪ್ಪಂದವಾಯಿತು. ದಿವಾನರಾಗಿದ್ದ ವಿಶ್ವೇಶ್ವರಯ್ಯನವರ ಸಮಯೋಚಿತ ಚತುರತೆಯಿಂದಾಗಿ ಮೈಸೂರು ಮಹಾರಾಜರಿಗೆ ರಾಜ್ಯದ ಒಳಾಡಳಿತದಲ್ಲಿ ಹೆಚ್ಚು ಸ್ವಾತಂತ್ರ್ಯ ಸಿಕ್ಕಿತು. 1914ರಲ್ಲಿ ಬೆಂಗಳೂರಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲ್ ಸ್ಥಾಪಿತವಾಯಿತು. ಮೈಸೂರಿನ ಶಿಕ್ಷಣಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದ ಇವರು ಜುಲೈ 22. 1916 ರಂದು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಗೂ ಕಾರಣರಾದರು. 1917ರಲ್ಲಿ ಸಂಸ್ಥಾನದ ಪ್ರಥಮ ಎಂಜಿನಿಯರಿಂಗ್ ಕಾಲೇಜನ್ನು ಆರಂಭಿಸಿದರು.

ಇದೇ ಕಾಲದಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆಗಳನ್ನು ಪ್ರಾರಂಭಿಸಲಾಯಿತು. ಈ ಬಗೆಯಲ್ಲಿ ವಿಶ್ವೇಶ್ವರಯ್ಯನವರು ಮೈಸೂರು ರಾಜ್ಯದ ಮುಖ್ಯ ಎಂಜಿನಿಯರ್ ಮತ್ತು ದಿವಾನರಾಗಿದ್ದ ಕಾಲದಲ್ಲಿ ರಾಜ್ಯದ ಸರ್ವತೋಮುಖ ಬೆಳವಣಿಗೆಯಾಗಿ ಮಾದರಿ ಮೈಸೂರು ಎನಿಸಿಕೊಂಡಿತು. ವಿಶ್ವೇಶ್ವರಯ್ಯನವರು 9–12–1918ರಂದು ದಿವಾನ ಪದವಿಗೆ ರಾಜೀನಾಮೆ ಇತ್ತು ದೇಶಪರ್ಯಟನೆಗೆ ಹೊರಟರು. ಹಿಂದಿರುಗಿ ಬಂದಾಗ ಇವರೇ ಸ್ಥಾಪಿಸಿದ್ದ ಭದ್ರಾವತಿ ಕಬ್ಬಿಣ ಕಾರ್ಖಾನೆ (ಇಂದು ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ) ಅಧೋಗತಿಗೆ ಇಳಿದಿರುವುದು ತಿಳಿದುಬಂದು, ಮಹಾರಾಜರ ಬೇಡಿಕೆಯಂತೆ 6 ವರ್ಷಕಾಲ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷರಾಗಿದ್ದು ಕಾರ್ಖಾನೆಯನ್ನು ಅಭಿವೃದ್ಧಿಪಡಿಸಿದರು. ಇದಕ್ಕಾಗಿ ಇವರಿಗೆ ಕೊಟ್ಟ ಸುಮಾರು 2 ಲಕ್ಷ ಗೌರವಧನವನ್ನು ದಾನ ಮಾಡಿದರು. ಇದರಿಂದ 1943ರ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ತಾಂತ್ರಿಕ ಶಾಲೆ ಅಸ್ತಿತ್ವಕ್ಕೆ ಬಂತು. ವಿಶ್ವೇಶ್ವರಯ್ಯನವರು 1949ರಲ್ಲಿ ಗ್ರಾಮ ಓದ್ಯೋಗೀಕರಣದ ಯೋಜನೆ ಸಿದ್ಧಪಡಿಸಿ ಅದನ್ನು ಭಾರತ ಸರ್ಕಾರಕ್ಕೆ ಒಪ್ಪಿಸಿದರು. ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಸ್ಥಾಪನೆಯಾದಾಗಿನಿಂದಲೂ ಆಡಳಿತ ಸಮಿತಿಯ ಸದಸ್ಯರಾಗಿದ್ದು ಆಮೇಲೆ ಅಧ್ಯಷರೂ ಆಗಿದ್ದ ವಿಶ್ವೇಶ್ವರಯ್ಯನವರು 1947ರಲ್ಲಿ ತಾವಾಗಿಯೇ ನಿವೃತ್ತರಾದರು. ತಾತಾ ಕಬ್ಬಿಣ ಮತ್ತು ಉಕ್ಕಿನ ಕಂಪನಿಯಲ್ಲಿ 1927 ರಿಂದ 1955ರವರೆಗೆ 28 ವರ್ಷಕಾಲ ಕಂಪನಿಯ ನಿರ್ದೇಶಕರಾಗಿದ್ದರು. ತುಂಗಭದ್ರಾ ಜಲಾಶಯದ ನಿರ್ಮಾಣದಲ್ಲೂ ಇವರ ಅಮೂಲ್ಯ ಸಲಹೆ ಪಡೆಯಲಾಯಿತು. ದೇಶರಕ್ಷಣೆಯ ಭೂ–ಜಲ–ವಾಯುಪಡೆಗಳಿಗೆ ಅಗತ್ಯವಾದ ಶಸ್ತ್ರಾಸ್ತ್ರಗಳು ಇಲ್ಲಿಯೇ ತಯಾರಾಗಬೇಕು. ದೇಶ ಸರ್ವವಿಧದಲ್ಲೂ ಸ್ವಾವಲಂಬಿಯಾಗಬೇಕು ಎಂಬುದೇ ಇವರ ಬಯಕೆಯಾಗಿ ಭದ್ರಾವತಿ ಕಬ್ಬಿಣ ಕಾರ್ಖಾನೆ ಮತ್ತು ವಿಮಾನ ಕಾರ್ಖಾನೆ ಅಸ್ತಿತ್ವಕ್ಕೆ ಬಂದವು. ಒಟ್ಟಿನಲ್ಲಿ ವಿಶ್ವೇಶ್ವರಯ್ಯನವರ ಜೀವನ ಚರಿತ್ರೆ ಕರ್ನಾಟಕ ರಾಜ್ಯದ ಮತ್ತು ಭಾರತದ ಕೈಗಾರಿಕಾ ಪ್ರಗತಿಯ ಇತಿಹಾಸವೇ ಆಗಿದೆ. ಇವರ ಸಲಹೆ, ಸಹಕಾರ ಮತ್ತು ಉತ್ತೇಜನಗಳಿಂದ ಇಂದು ಅನೇಕ ಕೈಗಾರಿಕೆಗಳೂ ಕಾರ್ಖಾನೆಗಳೂ ಉಳಿದು ಬೆಳೆದು ಬಂದಿವೆ. "ಪೋಲಿನ ವಿರುದ್ಧ ಸಮರ" ಎಂಬ ಮತ್ತೊಂದು ಉದ್ಘೋಷವೂ ಇವರದೇ.

ವಿಶ್ವೇಶ್ವರಯ್ಯನವರು ಗಾಂಧೀಜಿ, ಗೋಖಲೆಯಂತಹ ಮಹನೀಯರ ಸ್ನೇಹ ಸಂಪಾದಿಸಿದ್ದರು. ಜಗತ್ತಿನಾದ್ಯಂತ ವಿಶ್ವೇಶ್ವರಯ್ಯನವರಿಗೆ ಗೌರವವಿತ್ತು. ಅನೇಕ ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿ ಇತ್ತು ಸನ್ಮಾನಿಸಿದವು. ಅವುಗಳಲ್ಲಿ ಇವರೇ ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯವೂ ಒಂದು. 1911ರಲ್ಲಿ ಸಿ.ಐ.ಇ. ಬಿರುದನ್ನೂ 1915ರಲ್ಲಿ ಕೆ.ಸಿ.ಐ.ಇ. ಬಿರುದನ್ನೂ ಕೊಟ್ಟು ಬ್ರಿಟಿಷ್ ಸರ್ಕಾರ ಇವರನ್ನು ಗೌರವಿಸಿತು. 1955ರಲ್ಲಿ ಬಂಗಾಳದ ರಾಯಲ್ ಏಷ್ಯಾಟಿಕ್ ಸೊಸೈಟಿಯು 'ದುರ್ಗಾಪ್ರಸಾದ್ ಖೈತಾನ್' ಸುವರ್ಣ ಪದಕವನ್ನು ಕೊಟ್ಟು ಗೌರವಿಸಿತು. ಅದೇ ವರ್ಷ 'ಭಾರತರತ್ನ' ಪ್ರಶಸ್ತಿಯನ್ನು ನೀಡಿ ಭಾರತ ಸರ್ಕಾರ ಇವರನ್ನು ಗೌರವಿಸಿತು. 1960ರ ಸೆಪ್ಟೆಂಬರ್ 15ರಂದು ಭಾರತಾದ್ಯಂತ ಇವರ ಶತಮಾನೋತ್ಸವವನ್ನು ಆಚರಿಸಿ ಇವರಿಗೆ ಗೌರವ ಸಮರ್ಪಿಸಲಾಯಿತು.

ಅತ್ಯಂತ ದಕ್ಷ, ವಿಚಕ್ಷಣ, ತೀಕ್ಷ್ಣಮತಿಯಾದ ಇವರು ತಮ್ಮ ಇಡೀ ಜೀವಮಾನವನ್ನೇ ಶಿಸ್ತಿಗೆ ಒಳಪಡಿಸಿದ್ದು ಎಂದೂ ನೀತಿ–ನಿಯಮಗಳನ್ನು ತಪ್ಪುತ್ತಿರಲಿಲ್ಲ. ಭಾರತದಲ್ಲಿ ಇಂದು ಇರುವ ಅನೇಕ ಉತ್ತಮ ಎಂಜಿನಿಯರುಗಳು ಇವರ ಮಾರ್ಗದರ್ಶನ ಪಡೆದಿದ್ದಾರೆ. ಇವರು 14–4–1962ರಂದು ಬೆಂಗಳೂರಿನಲ್ಲಿ ಮೃತರಾದರು. ಇವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಮುದ್ದೇನಹಳ್ಳಿಯಲ್ಲಿ ನಡೆಯಿತು. ಈಗ ಮುದ್ದೇನಹಳ್ಳಿಯಲ್ಲಿ ಇವರ ಹೆಸರಿನಲ್ಲಿ ಶಾಲಾ–ಕಾಲೇಜು ಮತ್ತು ಗ್ರಂಥಭಂಡಾರಗಳನ್ನೂ ವಸ್ತುಸಂಗ್ರಹಾಲಯವನ್ನೂ ಆರಂಭಿಸಲಾಗಿದೆ.

ವಿಶ್ವೇಶ್ವರಯ್ಯನವರು ದಕ್ಷ ಆಡಳಿತಗಾರರೂ ಕಾರ್ಯಕರ್ತರೂ ಆಗಿದ್ದಂತೆಯೇ ಎಂಜಿನಿಯರಿಂಗ್ ವಿಷಯಗಳನ್ನು ಕುರಿತಂತೆ ಒಳ್ಳೆಯ ಬರೆಹಗಾರರೂ ಆಗಿದ್ದರು. ಇವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿವೆ. ಕನ್‌ಸ್ಟ್ರಕ್ಟಿಂಗ್ ಇಂಡಿಯಾ (1920). ರೂರಲ್ ಇಂಡಸ್ಟ್ರಿಯಲೈಸೇಷನ್ ಇನ್ ಇಂಡಿಯಾ (1911), ಅನ್‌ಎಂಪ್ಲಾಯ್‌ಮೆಂಟ್ ಇನ್ ಇಂಡಿಯಾ; ಇಟ್ಸ್ ಕಾಸಸ್ ಅಂಡ್ ಕ್ಯೂರ್ (1932), ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ (1934). ನೇಷನ್ ಬಿಲ್ಡಿಂಗ್, ಎ ಫೈವ್ ಇಯರ್ ಪ್ಲಾನ್ ಫಾರ್ ದಿ ಪ್ರಾವಿನ್ಸಸ್ (1937), ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸ್ಕೀಮ್ (1919), ಪಾಸ್ಪೆರಿಟಿ ಥ್ರೂ ಇಂಡಸ್ಟ್ರಿ (1942), ವಿಲೇಜ್ ಇಂಡಸ್ಟ್ರಿಯಲೈಸೇಷನ್ (1945). ಮೆಮ್ವಾರ್ ಆಫ್ ಮೈ ವರ್ಕಿಂಗ್ ಲೈಫ್ (1951), ಎ ಬ್ರೀಫ್ ಮೆಮ್ವಾರ್ ಆಫ್ ಮೈ ಕಂಪ್ಲೀಟ್ ವರ್ಕಿಂಗ್ ಲೈಫ್ (1959)–ಇವು ಇವರ ಮುಖ್ಯ ಕೃತಿಗಳು. ಇವುಗಳಲ್ಲದೆ ಇವರೇ ಅಧ್ಯಕ್ಷರಾಗಿ, ಸದಸ್ಯರಾಗಿ ಸರ್ಕಾರದ ಮತ್ತು ಖಾಸಗಿ ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಯೋಜನೆಗಳ ವರದಿಗಳನ್ನು ತಯಾರಿಸಿ ಪ್ರಕಟಿಸಿದ್ದಾರೆ.

ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಗಳನ್ನು ಕುರಿತಂತೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅನೇಕ ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರ ಕುಲದೀಪಕರು (1942). ವಿ.ಎಸ್. ನಾರಾಯಣ ರಾವ್ ಅವರ ಮೋಕ್ಷಗುಂಡಂ ವಿಶ್ವೇಶ್ವರಯ್ಯ (1960), ಎಸ್.ವಿ. ಪರಮೇಶ್ವರ ಭಟ್ಟರಿಂದ ಸಂಪಾದಿತವಾದ ಭಾಗ್ಯಶಿಲ್ಪಿ (1968), ಯಂತ್ರಶ್ರೀ ಸರ್ ಎಂ. ವಿ. ಜೀವನದ ಆತ್ಮೀಯ ಕಥನಗಳು (1969) ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಂದರ್ಭದಲ್ಲಿ ಪ್ರಕಟವಾದ ಎಂ.ವಿ. ಜನ್ಮದಿನೋತ್ಸವ ವಿಶೇಷ ಸಂಚಿಕೆ (1960), ವಿಶ್ವೇಶ್ವರಯ್ಯ ನ್ಯಾಷನಲ್ ಮೆಮೋರಿಯಲ್ ಟ್ರಸ್ಟ್ ಸವನೀರ್ (1972), ಡಿ.ಎಸ್. ಜಯಪ್ಪಗೌಡರ ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು (1994) ಮೊದಲಾದವುಗಳನ್ನು ಹೆಸರಿಸಬಹುದು.

(ವಿ.ಎಸ್.ಎನ್.)

**ವಿಷ್ಣುಗೋಪ:** ತಲಕಾಡು ಗಂಗವಂಶದ ದೊರೆ (ಸು. 420–40). ಹರಿವರ್ಮನ ಮೂರನೆಯ ಮಗ. ತನ್ನ ಅಣ್ಣ ಇಮ್ಮಡಿ ಮಾಧವನ ಅನಂತರ ಪಟ್ಟಕ್ಕೆ ಬಂದ. ಇಮ್ಮಡಿ ಮಾಧವನಿಗೂ ವಿಷ್ಣುಗೋಪನಿಗೂ ನಡುವೆ ಇದ್ದ ವೀರವರ್ಮ ಇಮ್ಮಡಿ ಮಾಧವನ ಆಳ್ವಿಕೆಯಲ್ಲಿ (ಸು. 400–420) ಯುವರಾಜನಾಗಿರುವಾಗಲೇ ತೀರಿಹೋದುದರಿಂದ ವಿಷ್ಣುಗೋಪ ಪಟ್ಟಕ್ಕೆ ಬಂದ. ವಿಷ್ಣುಗೋಪನ ಅನಂತರವೂ ಅವನ ಪೀಳಿಗೆಯೇ ಮುಂದುವರಿಯುವುದರಿಂದ ಇಮ್ಮಡಿ ಮಾಧವನಿಗೆ ಮಕ್ಕಳಿರಲಿಲ್ಲವೆಂದು

ಹೇಳಬೇಕಾಗುವುದು. ಗಂಗರ ತಾಮ್ರಶಾಸನಗಳಲ್ಲಿ ಆ ವಂಶದ ಪೀಳಿಗೆಯ ವಿವರ ಕೊಡುವಾಗ ಹಲವು ಶಾಸನಗಳು ಹರಿವರ್ಮನ ಅನಂತರ ವಿಷ್ಣುಗೋಪಪಟ್ಟಕ್ಕೆ ಬಂದನೆಂದು ತಿಳಿಸಿ ಇಮ್ಮಡಿ ಮಾಧವನ ಹೆಸರನ್ನು ಕೈಬಿಟ್ಟಿವೆ. ವಿಷ್ಣುಗೋಪನ ಸಂತತಿಯು ಮುಂದೆ ರಾಜ್ಯವಾಳಿದುದೇ ಇದಕ್ಕೆ ಕಾರಣವಿರಬೇಕು. ವಿಷ್ಣುಗೋಪನು ಯಾವದಾಯ; ಖಂಡಿತ ಮನೋತ್ಸಹನಾಗಿದ್ದನೆಂದು ಒಂದು ಶಾಸನ ತಿಳಿಸಿರುವುದರಿಂದ, ಇವನ ಆಳ್ವಿಕೆ ಬಹುಕಾಲ ನಡೆದಿರಬೇಕೆಂದು ರೈಸ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸ್ವಾರಸ್ಯದ ಸಂಗತಿಯೆಂದರೆ ಇದುವರೆಗೆ ಈತನ ಯಾವ ಶಾಸನಗಳೂ ದೊರೆತಿಲ್ಲ. ಇವನ ಪೀಳಿಗೆಯವರ ಶಾಸನಗಳಲ್ಲಿಯೂ ಇವನ ಬಗೆಗೆ ಹೆಚ್ಚಿನ ವಿವರಗಳೇನೂ ಕಂಡುಬರುವುದಿಲ್ಲ. ಇವನು ದ್ವಿಜಗುರುದೇವತಾಪೂಜನಪರನಾಗಿದ್ದನೆಂದೂ ನಾರಾಯಣ ಚರಣಾನುಧ್ಯಾತನಾಗಿದ್ದನೆಂದು ಮಾತ್ರ ತಿಳಿಸುವುದರಿಂದ ಇವನಿಗೆ ರಾಜ್ಯಾಡಳಿತಕ್ಕಿಂತ ಹೆಚ್ಚಾಗಿ ಗುರುಹಿರಿಯರಲ್ಲಿ, ದೇವರಲ್ಲಿ ಇದ್ದ ಗೌರವ ವ್ಯಕ್ತವಾಗುತ್ತದೆ. ಶಕ್ರನಿಗೆ ಸಮಾನವಾದ ಪರಾಕ್ರಮವನ್ನು ಹೊಂದಿದ್ದನೆಂದು ಕೆಲವು ಶಾಸನಗಳು ತಿಳಿಸುತ್ತವೆ. ಇವನು ದ್ವಿಜಗುರುದೇವತಾಪೂಜನಪರನಾಗಿದ್ದನೆಂದೂ ನಾರಾಯಣ ಚರಣಾನುಧ್ಯಾತನಾಗಿದ್ದನೆಂದೂ ಮಾತ್ರ ತಿಳಿಸುವುದರಿಂದ ಇವನಿಗೆ ರಾಜ್ಯಾಡಳಿತಕ್ಕಿಂತ ಹೆಚ್ಚಾಗಿ ಗುರುಹಿರಿಯರಲ್ಲಿ, ದೇವರಲ್ಲಿ ಇದ್ದ ಗೌರವ ವ್ಯಕ್ತವಾಗುತ್ತದೆ. ಶಕ್ರನಿಗೆ ಸಮಾನವಾದ ಪರಾಕ್ರಮವನ್ನು ಹೊಂದಿದ್ದನೆಂದು ಕೆಲವು ಶಾಸನಗಳು ತಿಳಿಸುವುದರಿಂದ ಇವನು ಪರಾಕ್ರಮಿಯೂ ಆಗಿದ್ದಿರಬೇಕು. ಇವನು ಜೈನಮತವನ್ನು ತ್ಯಜಿಸಿ ವೈದಿಕ ಮತವನ್ನವಲಂಬಿಸಿದನೆಂದೂ ವಿಷ್ಣು ಪೂಜಕನಾದನೆಂದೂ ಆದ್ದರಿಂದಲೇ ಹಿಂದೆ ಇಂದ್ರನು ಈ ವಂಶದ ಮೂಲಪುರುಷನಾದ ಪ್ರಿಯಬಂಧುವಿಗೆ ಕೊಟ್ಟಿದ್ದ ಐದು ಕುರುಹುಗಳು ಮಾಯವಾದುವೆಂದೂ ಕೆಲವು ಶಾಸನಗಳಲ್ಲಿ ಹೇಳಿಕೆಯಿದೆ. (ಎಂ.ಎಚ್.)

**ವಿಷ್ಣುವರ್ಧನ[1]:** ಹೊಯ್ಸಳವಂಶದ ಸುಪ್ರಸಿದ್ಧ ರಾಜ (ಸು. 1108–42). ಬಿಟ್ಟಿದೇವ ಇವನ ಇನ್ನೊಂದು ಹೆಸರು. ಎರೆಯಂಗನ 2ನೆಯ ಮಗ. ಅಣ್ಣ ಬಲ್ಲಾಳನ ಮರಣಾನಂತರ ಪಟ್ಟಕ್ಕೆ ಬಂದ. ತಂದೆ ಮತ್ತು ಅಣ್ಣನ ಜೊತೆಯಲ್ಲಿ ಆಡಳಿತದಲ್ಲಿ ಮತ್ತು ಅನೇಕ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದು, ರಾಜನಾದ ಅನಂತರ ಆ ಅನುಭವವನ್ನು ಪೂರ್ಣವಾಗಿ ಉಪಯೋಗಿಸಿಕೊಂಡು, ಹೊಯ್ಸಳ ಬಲವನ್ನು ಸರ್ವತೋಮುಖವಾಗಿ ವರ್ಧಿಸಿ, ಚಿಕ್ಕ ನಾಡಾಗಿದ್ದ ಹೊಯ್ಸಳ ರಾಜ್ಯವನ್ನು ಬಹುಮಟ್ಟಿಗೆ ವಿಸ್ತರಿಸಿ ಸ್ವತಂತ್ರ ಹೊಯ್ಸಳ ಸಾಮ್ರಾಜ್ಯವನ್ನು ಕಟ್ಟಿದ. ಈತ ಸಮಕಾಲೀನ ದಕ್ಷಿಣ ಭಾರತದ ರಾಜಕೀಯದಲ್ಲಿ ವಿಶೇಷ ಶಕ್ತಿಗಳಾಗಿದ್ದ ಚೋಳ–ಚಾಳುಕ್ಯರಿಬ್ಬರನ್ನೂ ಎದುರಿಸಿ, ಈ ಪ್ರದೇಶದ ಮೂರನೆಯ ಶಕ್ತಿಯಾಗಿ ನೆಲೆಗೊಂಡು, ಮುಂದೆ ಸುಮಾರು 200 ವರ್ಷಗಳ ಕಾಲ ಕರ್ನಾಟಕದ್ದೇ ಏಕೆ, ಇಡೀ ದಕ್ಷಿಣ ಭಾರತದ ಇತಿಹಾಸದಲ್ಲಿ ಅಪ್ರತಿಮವಾಗಿ ಮೆರೆದ ಹೊಯ್ಸಳ ಬಲದ ಸ್ಥಾಪಕನಾದ. ಕೀರ್ತಿಶಾಲಿ, ಶೂರ, ಚತುರ ಆಡಳಿತಗಾರ, ಕಲೆ–ಸಾಹಿತ್ಯಗಳ ಪೋಷಕ.

ವಿಷ್ಣುವರ್ಧನ ಚಿಕ್ಕಂದಿನಿಂದಲೇ ತಂದೆಯ ಜೊತೆಯಲ್ಲಿ ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಪರವಾಗಿ ಚಕ್ರಕೂಟ ವಿಜಯದಲ್ಲಿಯೂ ಸೋಮೇಶ್ವರನ ವಿರುದ್ಧ ನಡೆದ ಯುದ್ಧದಲ್ಲೂ ಭಾಗವಹಿಸಿದ್ದ. ಬಹುಶಃ ಕೆಲವುಕಾಲ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಪ್ರಾಂತದ ಪ್ರಾಂತ್ಯಾಧಿಕಾರಿಯೂ ಆಗಿದ್ದ. ಆ ಊರು ವಿಷ್ಣುವರ್ಧನ ಚತುರ್ವೇದಿ ಮಂಗಳ ಎಂದೇ ಪ್ರಸಿದ್ಧವಾಗಿತ್ತು. ಇವನು ತನ್ನ ಅಣ್ಣ ಬಲ್ಲಾಳನ ಆಳ್ವಿಕೆಯಲ್ಲಿ ಅವನಿಗೆ ಬಲಗೈಯಂತಿದ್ದ. ಅಣ್ಣತಮ್ಮಂದಿರಲ್ಲಿದ್ದ ಗಾಢಮೈತ್ರಿಯನ್ನು ವಿವರಿಸುವ ಒಂದು ಶಾಸನ ಇವರನ್ನು ರಾಮ ಲಕ್ಷ್ಮಣರಿಗೆ ಹೋಲಿಸಿದೆ. ಗಂಗವಾಡಿಯಿಂದ ಚೋಳರನ್ನು ಓಡಿಸುವುದು ಹಾಗೂ ರಾಜ್ಯವನ್ನು ವಿಸ್ತರಿಸಿ ಚಾಳುಕ್ಯರ ಪರಮಾಧಿಕಾರವನ್ನು ಕೊನೆಗಾಣಿಸಿ ತನ್ನ ಸಂತತಿ ಸ್ವತಂತ್ರವಾಗಿ ಕನ್ನಡನಾಡಿನಲ್ಲಿ ಆಳುವಂತೆ ಮಾಡುವುದು ಈ ಎರಡು ಇವನ ಮುಖ್ಯಧ್ಯೇಯಗಳಾಗಿದ್ದವು. (ಜಿ.ಆರ್.ಆರ್.)

ಪಟ್ಟಾಭಿಷಿಕ್ತನಾದ ಕೂಡಲೇ ಈ ಧ್ಯೇಯ ಸಾಧನೆಗೆ ಎಚ್ಚರಿಕೆಯಿಂದ ಹೆಜ್ಜೆ ಇಡಲಾರಂಭಿಸಿದ. ಮೊದಲು ಪ್ರಬಲರಾದ ಚೋಳ ಮತ್ತು ಚಾಳುಕ್ಯರ ಮೇಲೆ ನೇರವಾಗಿ ಬೀಳದೆ ಅಂದಿನ ಹೊಯ್ಸಳ ರಾಜ್ಯದ ಸುತ್ತಲಿದ್ದ ತುಂಡರಸರನ್ನು ಹತ್ತಿಕ್ಕಿ, ದೇಶ, ಕೋಶ, ಸೈನ್ಯವರ್ಧನೆಗೆ ತೊಡಗಿದ. ಮೊದಲು ಚೋಳರಾಜ್ಯದ ಉತ್ತರಕ್ಕಿದ್ದ ಕೋಲಾರ, ನಂಗಲಿ ಪ್ರದೇಶಗಳನ್ನು ವಶಪಡಿಸಿಕೊಂಡು ಪಕ್ಕದಲ್ಲಿದ್ದ ಚಾಳುಕ್ಯ ಸಾಮಂತರಾದ ಉಚ್ಚಂಗಿಯ ಪಾಂಡ್ಯರ ಮೇಲೆ ಜಯಸಾಧಿಸಿದ (ಸು. 1111–13) ಈ ಕಾಲದಲ್ಲಿ ಬನವಾಸಿ ಪ್ರಾಂತ್ಯಾಧಿಕಾರಿಗಳಿಗೂ ಚಾಳುಕ್ಯ ಸಾರ್ವಭೌಮರಿಗೂ ವಿರಸವುಂಟಾಗಿದ್ದ ಸೂಚನೆಗಳಿದ್ದುವು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹಾನಗಲ್ಲು ಮತ್ತು ಬನವಾಸಿಯ ಕದಂಬ ಅರಸುಗಳನ್ನು ಹತ್ತಿಕ್ಕಿದ (ಸು. 1113–14). ಹಾಗೆಯೇ ಪಕ್ಕದ ತುಳುನಾಡಿನ ಮೇಲೂ ದಾಳಿಯಿಟ್ಟ (ಸು. 1114–15?) ದಕ್ಷಿಣದಲ್ಲಿ ಕೊಂಗಾಳ್ವ, ಚೆಂಗಾಳ್ವರನ್ನು ಇವನ ದಂಡನಾಯಕನಾದ ಪುಣಿಸ ಬಗ್ಗುಬಡಿದು ನೀಲಗಿರಿಯ ಮೇಲೆ ಹೊಯ್ಸಳ ಧ್ವಜವನ್ನು ಸ್ಥಾಪಿಸಿ, ಮಲೆಯಾಳರನ್ನು ಬೆನ್ನಟ್ಟಿದ. ಆದರೆ 1115–16ರಲ್ಲಿ ಕೊಂಗಾಳ್ವ ಅರಸು ತನ್ನ ಮಗಳು ಚಂಚಲದೇವಿಯನ್ನು ವಿಷ್ಣುವರ್ಧನನಿಗೆ ಮದುವೆಮಾಡಿಕೊಟ್ಟು ರಾಜಿ ಮಾಡಿಕೊಂಡ. ಈ ಎಲ್ಲ ಕ್ಷಾತ್ರ ಸಾಧನೆಗಳಲ್ಲಿ ವಿಷ್ಣುವರ್ಧನನಿಗೆ ಅವನ ನಿಷ್ಠಾವಂತ ದಂಡನಾಯಕರಾದ ಗಂಗರಾಜ, ಪುಣಿಸ, ಮರಿಯಾನೆ, ಭರತ ಮುಂತಾದವರು ನೆರವಾಗಿದ್ದರು. ಸಾಮಾನ್ಯತಃ ಪ್ರಾಚೀನ ಗಂಗಸಾಮಂತ ಕುಲಗಳಿಗೆ ಸೇರಿದ್ದ ಈ ದಂಡನಾಯಕರು ವೀರಗಂಗ, ಗಂಗವಾಡಿ–96000ದ ಅಧಿಪತಿ ಎಂದು ಕರೆದುಕೊಳ್ಳುತ್ತಿದ್ದ ವಿಷ್ಣುವರ್ಧನನಂತೆಯೇ ಚೋಳರ ವಶದಲ್ಲಿದ್ದ ಗಂಗವಾಡಿಯ ಭಾಗಗಳನ್ನು ಬಿಡಿಸಿಕೊಳ್ಳಲು ತವಕಿಸುತ್ತಿದ್ದಿರಬೇಕು. ಈ ಹಿಂದಿನ ವಿಜಯಸರಣಿಯಿಂದ ಉತ್ತೇಜಿತನಾದ ವಿಷ್ಣುವರ್ಧನ, ಚೋಳರಾಜ ಕುಲೋತ್ತುಂಗ ವೆಂಗಿಮಂಡಲದ ಪರಿಸ್ಥಿತಿಯನ್ನು ಸರಿಪಡಿಸಲು ಉದ್ಯುಕ್ತನಾಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ತಲಕಾಡಿನ ಮೇಲೆ ನುಗ್ಗಿದ (1116).

ಆಗ ಆದಿಯಮ ಎಂಬುವನು ತಲಕಾಡು ಪ್ರಾಂತದ ಪ್ರಾಂತ್ಯಾಧಿಕಾರಿಯಾಗಿ ಚೋಳ ಸಾಮ್ರಾಟನಿಂದ ನೇಮಿತನಾಗಿದ್ದ. ಹೊಯ್ಸಳ ಸೈನ್ಯದ ನೇತೃತ್ವವನ್ನು ವಹಿಸಿದ್ದ ಗಂಗರಾಜ ರಕ್ತಪಾತಕ್ಕೆಡೆಗೊಡದೆ ತಲಕಾಡನ್ನು ಒಪ್ಪಿಸುವಂತೆ ಆದಿಯಮನಿಗೆ ದೂತರ ಮೂಲಕ ಹೇಳಿಕಳುಹಿಸಿದ. ಸಾಧ್ಯವಿದ್ದಲ್ಲಿ ಯುದ್ಧ ಮಾಡಿ ಜಯಗಳಿಸಿ ತಲಕಾಡನ್ನು ಪಡೆಯುವಂತೆ ಚೋಳ ಪ್ರಾಂತ್ಯಾಧಿಕಾರಿ ಉತ್ತರಿಸಲು, ವಿಷ್ಣುವರ್ಧನನೂ ಗಂಗರಾಜನೂ ಹೊಯ್ಸಳ ಸೈನ್ಯವನ್ನು ತಲಕಾಡಿನತ್ತ ನಡೆಸಿದರು. ಆದಿಯಮ ಮತ್ತು ಚೋಳಸೈನ್ಯದ ದಂಡನಾಯಕರಾದ ದಾಮೋದರ ಹಾಗೂ ನರಸಿಂಹ ವರ್ಮನ್ ಎಂಬುವರು ಹೊಯ್ಸಳ ಸೈನ್ಯಗಳನ್ನು ಎದುರಿಸಿ ಸೋತು ಓಡಿಹೋದರು.

ತಲಕಾಡು ಹೊಯ್ಸಳರ ವಶವಾಗಿ, ಈ ವಂಶದ ಅರಸರ ಒಂದು ಮುಖ್ಯ ಧ್ಯೇಯ ಸಾಧಿತವಾಯಿತು. ಒಂದು ಚಿಕ್ಕ ಪ್ರಾಂತ್ಯದ ರಾಜನಾಗಿದ್ದ ಒಬ್ಬ ಅರಸು ಬೃಹತ್ ಚೋಳ ಸಾಮ್ರಾಜ್ಯದ ಬಿಗಿ ಪ್ರಾಂತವೊಂದನ್ನು ಸಾಧಿಸಿಕೊಂಡುದು ಹೊಯ್ಸಳ ಇತಿಹಾಸದ ಒಂದು ಮೈಲಿಗಲ್ಲು.

ಹೊಯ್ಸಳರ ಅನೇಕ ಶಾಸನಗಳು ಈ ತಲಕಾಡುವಿಜಯವನ್ನು ಹಲವು ಕಾಲದವರೆಗೆ ಸಕಾರಣವಾಗಿಯೇ ಹೆಮ್ಮೆಯಿಂದ ವರ್ಣಿಸುತ್ತವೆ. ಚೋಳರ ಪ್ರತೀಕಾರ ಯಾವುದೇ ಸಂದರ್ಭದಲ್ಲಾದರೂ ಒದಗಬಹುದೆಂಬುದನ್ನು ಅರಿತ ವಿಷ್ಣುವರ್ಧನ ರಕ್ಷಣೆಗಿಂತಲೂ ಮನ್ನಣೆಯೇ ಉತ್ತಮವೆಂದು ಗ್ರಹಿಸಿ ಓಡುತ್ತಿದ್ದ ಚೋಳ ಪ್ರಾಂತ್ಯಗಳಾಗಿದ್ದ ಘಟ್ಟದ ಕೆಳಗಿನ ಚೆಂಗಿರಿ, ಬೆಂಗಿರಿಗಳ ಮೇಲೂ ದಾಳಿಮಾಡಿದ. ಹಿಂದೊಮ್ಮೆ ಕೇವಲ ದಾಳಿಮಾಡಿದ್ದ ಕೋಲಾರ, ನಂಗಲಿ ಪ್ರಾಂತ್ಯಗಳನ್ನೂ ಕೊಯಮತುರು, ನಿಡುಗಲ್ಲು ಕೋಟೆ, ಹೆಂಜೇರು, ಬೂದಲಿ, ರೊಡ್ಡಂ ವಲ್ಲೂರುಗಳನ್ನೂ ಗೆದ್ದ. ಈ ಪ್ರದೇಶದಿಂದ ಉತ್ತರಕ್ಕೆ ಸರಿದು ಉಚ್ಚಂಗಿಯ ಪಾಂಡ್ಯನನ್ನು ಮತ್ತೊಮ್ಮೆ ಎದುರಿಸಿ ದುಮ್ಮೆ ಎಂಬಲ್ಲಿನ ಕದನದಲ್ಲಿ ಅವನನ್ನು ಕೊಂದು ರಾಜ್ಯವನ್ನು ವಶಪಡಿಸಿಕೊಂಡ (ಸು. 1116–17). ಕೆಲವು ಶಾಸನಗಳ ಪ್ರಕಾರ ಇದೇ ಸಂದರ್ಭದಲ್ಲಿ ವಿಷ್ಣುವರ್ಧನ ಕಂಚಿಯನ್ನೂ ಆಕ್ರಮಿಸಿ, ರಾಮೇಶ್ವರದವರೆಗೂ ಮುನ್ನಡೆದನೆಂದು ಹೇಳಿದರೂ ಇದಕ್ಕೆ ಪೂರಕ ಆಧಾರಗಳು ಸಾಲದಾಗಿವೆ. 1117ರ ಬೇಲೂರ, ಶಾಸನದಲ್ಲಿ ಚೋಳ ಅಧಿಕಾರಿಗಳಾದ ಆದಿಯಮ, ನರಸಿಂಹಬ್ರಹ್ಮ, ಕಳಪಾಳ, ಪಟ್ಟಿಪೆರ್ಮಾಳ, ಚೆಂಗಿರಿ ಪೆರ್ಮಾಳ, ಮುಂತಾದವರನ್ನೂ (ನಿಡುಗಲ್ಲಿನ) ಇರುಂಗೊಳನನ್ನೂ ಸೋಲಿಸಿ, ತಳವನಪುರ (ತಲಕಾಡು), ಕೊಂಗುನಾಡು (ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಯ ಪ್ರದೇಶಗಳು), ನೊಳಂಬವಾಡಿ (ಚಿತ್ರದುರ್ಗ, ಕೋಲಾರ ಮತ್ತು ಸುತ್ತಲ ಪ್ರದೇಶಗಳು), ನೀಲಪರ್ವತ (ನೀಲಗಿರಿ), ಕೋಳಾಳಪುರ (ಕೋಲಾರ), ಕೊಯತೂರು (ಲಡ್ಡಿಗಂ, ಅನಂತಪುರ ಜಿಲ್ಲೆ), ತೆರಿಯೂರು, ವಲ್ಲೂರು, ನಂಗಲಿಪುರ (ಕೋಲಾರ, ಅನಂತಪುರ, ತುಮಕೂರು ಜಿಲ್ಲೆಗಳಲ್ಲಿರುವ ಸ್ಥಳಗಳು), ಕಾಂಚೀಪುರ–ಇವುಗಳನ್ನು ಗೆದ್ದು ಪೂರ್ವದಲ್ಲಿ ನಂಗಲಿಯ ಘಟ್ಟ (ಮುಳಬಾಗಲ ಬಳಿ ನಂಗಲಿ, ಕೋಲಾರ ಜಿಲ್ಲೆ) ಉತ್ತರದಲ್ಲಿ ಸಾವಮಲೆ (ಸಂಡೂರು ಕುಮಾರಸ್ವಾಮಿ ಬೆಟ್ಟ, ಬಳ್ಳಾರಿ ಜಿಲ್ಲೆ), ದಕ್ಷಿಣದಲ್ಲಿ ಕೊಂಗು ಚೇರಮನಮಲೆ (ಕೊಯಮತ್ತೂರು ಜಿಲ್ಲೆ), ಪಶ್ಚಿಮದಲ್ಲಿ ಕೊಂಕಣದ ಬಾರಕನೂರು ಘಟ್ಟ (ಬಾರಕೂರಿಗೆ ಹೋಗುವ ದಾರಿಯಲ್ಲಿನ ಘಟ್ಟ ಪ್ರದೇಶ)–ಇವುಗಳ ಮಧ್ಯದ ಭೂಮಿಯನ್ನು ವಿಷ್ಣುವರ್ಧನ ಆಳುತ್ತಿದ್ದನೆಂದು ಹೇಳಿದೆ.

ಈ ಮಧ್ಯೆ ತನ್ನ ಸಾಮಂತರನ್ನು ಸೋಲಿಸಿ ತನ್ನ ಪರಮಾಧಿಕಾರವನ್ನು ಅಲಕ್ಷಿಸಿದ್ದರಿಂದ ಕೋಪಗೊಂಡ ಚಾಳುಕ್ಯ ಸಾಮ್ರಾಟ ಆರನೆಯ ವಿಕ್ರಮಾದಿತ್ಯ ವಿಷ್ಣುವರ್ಧನನನ್ನು ಶಿಕ್ಷಿಸಲು ನಿರ್ಧರಿಸಿದ. ತನ್ನ ಹನ್ನೆರಡು ಮಹಾಮಂಡಲೇಶ್ವರರ ಸೈನ್ಯವನ್ನು ಕಲೆಹಾಕಿ ಸಿಂಧ ಮಹಾಸಾಮಂತ ಆಚರಸನನ್ನು ಮುಖಂಡನನ್ನಾಗಿ ನೇಮಿಸಿ ದೋರಸಮುದ್ರವನ್ನು ಮುತ್ತಲು ಕಳುಹಿಸಿದ. ಹಾಸನ ಜಿಲ್ಲೆಯ ಕಣ್ಣೇಗಾಲ ಎಂಬ ಗ್ರಾಮದ ಬಳಿ ನಡೆದ ಯುದ್ಧದಲ್ಲಿ ಹೊಯ್ಸಳ ಸೇನಾನಿ ಗಂಗರಾಜ ಚಾಳುಕ್ಯ ಸೈನ್ಯವನ್ನು ಸೋಲಿಸಿದ್ದಲ್ಲದೆ ವೈರಿಗಳನ್ನು ಹೊಯ್ಸಳ ರಾಜ್ಯದಂಚಿನವರೆಗೂ ಬೆನ್ನಟ್ಟಿದ. ಪ್ರಾಯಶಃ ಚಾಳುಕ್ಯ ರಾಜ್ಯದ ಒಳಗೂ ನುಗ್ಗಿ ಬೆಳ್ವೊಲ ಪ್ರಾಂತ್ಯವನ್ನೂ ಅಣ್ಣಿಗೆರೆ, ಗದಗ ಮುಂತಾದ ಪಟ್ಟಣಗಳನ್ನೂ ಗೆದ್ದು ಮಲಪ್ರಹಾರಿಯ (ಮಲಪ್ರಭಾ ನದಿ)ವರೆಗೂ ನುಗ್ಗಿದ. ಈ ವಿಜಯದಿಂದ ಹೊಯ್ಸಳರ ಇನ್ನೊಂದು ಧ್ಯೇಯವಾದ ಸ್ವತಂತ್ರರಾಜ್ಯ ಸ್ಥಾಪನೆ ಸಹ ಹೆಚ್ಚು ಕಡಿಮೆ ಸಾಧಿತವಾಯಿತು. ಆದರೆ 1120–21ರಲ್ಲಿ ಚಾಳುಕ್ಯರ ಪರವಾಗಿ ಇವನನ್ನು ಎದುರಿಸಿದ ಸಿಂಧಪೆರ್ಮಾಡಿದೇವನ ಕೈಮೇಲಾಗಿ ವಿಷ್ಣುವರ್ಧನ ತನ್ನ ರಾಜ್ಯಕ್ಕೆ ಹಿನ್‌ಸರಿದಂತೆ ತೋರುತ್ತದೆ. ಪೂರ್ವದಲ್ಲೂ ಸಹ 1120–30ರ ಸುಮಾರಿನಲ್ಲಿ ಚೋಳವಿಕ್ರಮಗಂಗ ಕೋಲಾರ ಪ್ರದೇಶವನ್ನು ಆಕ್ರಮಿಸಿರಬೇಕೆಂದು ಅಲ್ಲಿ ದೊರಕಿರುವ ಅವನ ಕೆಲವು ಶಾಸನಗಳಿಂದ ತಿಳಿಯಬಹುದು. ಅನಂತರ ವಿಷ್ಣುವರ್ಧನ ಹಲವು ವರ್ಷಗಳ ಕಾಲ ಸುಗಮ ಆಡಳಿತಕ್ಕೆ ಗಮನಕೊಟ್ಟು ಸಾಹಿತ್ಯ ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ. 1127ರಲ್ಲಿ ವಿಕ್ರಮಾದಿತ್ಯ ಮರಣಹೊಂದಿದ ಅನಂತರ ಉತ್ತರದಲ್ಲಿ ತನ್ನ ರಾಜ್ಯವನ್ನು ಕೃಷ್ಣಾ ನದಿಯವರೆಗೂ ವಿಸ್ತರಿಸಲು ಯೋಚಿಸಿದ. 1128ರಲ್ಲಿ ಹಾನುಗಲ್ಲಿನ ಮೇಲೆ ದಾಳಿಮಾಡಿ ಆ ಪ್ರಾಂತ್ಯವನ್ನು ಕೆಲಕಾಲ ಆಕ್ರಮಿಸಿಕೊಂಡಿದ್ದ. ಮುಂದಿನ ವರ್ಷ ಬಹುಶಃ ಚಾಳುಕ್ಯ ಸೋಮೇಶ್ವರ (ಭೂಲೋಕಮಲ್ಲ) ದಕ್ಷಿಣಕ್ಕೆ ಬಂದು ಹೊಯ್ಸಳ ಮುನ್ನಡೆಯನ್ನು ತಡೆದಿರಬೇಕು. ಆದರೆ 1131ರ ಹೊತ್ತಿಗೆ ಬೆಳ್ವೊಲದ ಲೊಕ್ಕಿಗುಂಡಿ (ಗದಗದ ಬಳಿಯ ಲಕ್ಕುಂಡಿ) ಸಹ ವಿಷ್ಣುವರ್ಧನನ ಅಧೀನದಲ್ಲಿತ್ತು. 1133ರ ಸುಮಾರಿನಲ್ಲಿ ಬಂಕಾಪುರ ಇವನ ವಶವಾಯಿತು. ಇದು ಇವನ ಅನೇಕ ಶಾಸನಗಳಲ್ಲಿ ಕೃಷ್ಣಾನದಿ ಹೊಯ್ಸಳ ರಾಜ್ಯದ ಉತ್ತರ ಎಲ್ಲೆಯಾಗಿ ಉಲ್ಲೇಖವಾಗಿದೆ. 1135ರಲ್ಲಿ ಕದಂಬವಂಶದ ಮಲ್ಲಿಕಾರ್ಜುನ ಹಾನುಗಲ್ಲನ್ನು ಪುನರಾಕ್ರಮಿಸಿಕೊಂಡ. ಆದರೂ ಹೊಯ್ಸಳ ಕದಂಬ ಸೆಣಸಾಟ ನಡೆಯುತ್ತಲೇ ಇತ್ತು. ವಿಷ್ಣುವರ್ಧನ ಈ ಸಂದರ್ಭದಲ್ಲಿ ಬಂಕಾಪುರವನ್ನೂ ಒಂದು ಉಪರಾಜಧಾನಿಯಾಗಿ ಮಾಡಿಕೊಂಡು ಆ ಪ್ರದೇಶದ ರಕ್ಷಣೆಗೆ ವಿಶೇಷ ಗಮನವಿತ್ತಿದ್ದ. ಆ ವೇಳೆಗೆ ವೃದ್ಧಾಪ್ಯವನ್ನು ಸಮೀಪಿಸಿದ್ದ ವಿಷ್ಣುವರ್ಧನ 1142ರಲ್ಲಿ ಬಂಕಾಪುರದಲ್ಲಿ ಮೃತನಾದ. ವಿಷ್ಣುವರ್ಧನನ ಪಾರ್ಥಿವ ಶರೀರವನ್ನು ಅವನ ದಂಡನಾಯಕನಾದ ಬೊಪ್ಪ ವಿಶೇಷ ಗೌರವದೊಡನೆ ಸಾಗಿಸಿಕೊಂಡು ಬಂದು ಅಂತ್ಯಕ್ರಿಯೆಯನ್ನು ನೆರವೇರಿಸಿದರು. ಈ ಕುರಿತ ಶಾಸನ ಚಿಕ್ಕಮಗಳೂರು ಜಿಲ್ಲೆಯ ಅದೇ ತಾಲ್ಲೂಕಿನ ಹವಳ್ಳಿ ಗ್ರಾಮದಲ್ಲಿ ದೊರೆತಿರುವುದರಿಂದ ಹಾಗೂ ಮುದುಗೆರೆಯಲ್ಲಿ ರಾಜನ ಸಂಪತ್ತಿಗಾಗಿ ಕದನವಾಯಿತೆಂದು ತಿಳಿಸಿರುವುದರಿಂದ ಬಹುಶಃ ಹೊಯ್ಸಳರ ಮೂಲಸ್ಥಳ ಸೊಪವೂರಿಗೆ ಪಾರ್ಥಿವ ಶರೀರವನ್ನು ಕೊಂಡೊಯ್ಯುತ್ತಿದ್ದು ಸಮೀಪದ ಈಗಿನ ಮೂಡಿಗೆರೆಯಲ್ಲಿ ಈ ಘಟನೆ ಜರುಗಿರಬೇಕು. ವಿಷ್ಣುವರ್ಧನನಿಗೆ ಶಾಂತಲದೇವಿ ಮತ್ತು ಲಕ್ಷ್ಮೀದೇವಿ ಎಂಬ ಪತ್ನಿಯರಿದ್ದರು. ಇವರಲ್ಲದೆ ಬಮ್ಮಲದೇವಿ, ರಾಜಲದೇವಿ, ಶಾಂತಲದೇವಿ (ಕಿರಿಯ) ಮತ್ತು ದೇವಕೀ ದೇವಿ ಎಂಬ ಇತರ ಹೆಂಡತಿಯರೂ ಇದ್ದರೆಂಬುದಕ್ಕೆ ಸೂಚನೆಗಳಿವೆ. ವಿಷ್ಣುವರ್ಧನನ ಮೊದಲ ಶಾಸನಗಳಲ್ಲೆಲ್ಲ ಶಾಂತಲದೇವಿ ಪಟ್ಟಮಹಿಷಿ ಯಾಗಿ ಕಾಣಿಸಿಕೊಳ್ಳುತ್ತಾಳೆ. ಈಕೆ 1131ರಲ್ಲಿ ಮೃತಳಾದ ಮೇಲೆ ಲಕ್ಷ್ಮೀದೇವಿ ಪಟ್ಟದ ರಾಣಿಯಾದಳು. ವಿಷ್ಣುವರ್ಧನನ ಮಕ್ಕಳೆಲ್ಲ ಶಾಂತಲದೇವಿಯಲ್ಲಿ ಜನಿಸಿದ ಬಲ್ಲಾಳ ಮತ್ತು ಹರಿಯಲದೇವಿ, ಲಕ್ಷ್ಮೀದೇವಿಯಲ್ಲಿ ಜನಿಸಿದ ನರಸಿಂಹ ಮುಖ್ಯರಾದವರು. ಈ ಕುಮಾರ ಬಲ್ಲಾಳ ಸು. 1129ರಲ್ಲಿ ಮೃತನಾದ. ಆದರೆ ವಿಷ್ಣುವರ್ಧನನಿಗೆ ಇವರಲ್ಲದೆ ಚಿಕ್ಕಬಿಟ್ಟಿದೇವ ಮತ್ತು ವಿನಯಾದಿತ್ಯ ಎಂಬ ಇತರೆ ಇಬ್ಬರು ಮಕ್ಕಳು ಇದ್ದರೆಂದೂ ಇವರೂ ಮತ್ತು ಹಿರಿಯ ಮಗ ಬಲ್ಲಾಳ ಸಹ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಬದುಕಿದ್ದರೂ ನರಸಿಂಹ ರಾಜ್ಯಾಕ್ರಮಣ ಮಾಡಿಕೊಂಡಿರ ಬೇಕೆಂದು ಒಂದು ಅಭಿಪ್ರಾಯ ಇದೆ. ರಾಜಮನೆತನದ ಶಾಂತಲದೇವಿ, ಲಕ್ಷ್ಮೀದೇವಿ, ಕುಮಾರ ಬಲ್ಲಾಳ ಮತ್ತು ನರಸಿಂಹ ಇವರುಗಳು ರಾಜ್ಯಾಡಳಿತದಲ್ಲಿ ಮುಖ್ಯಪಾತ್ರ ವಹಿಸುತ್ತಿದ್ದರು. ಅಲ್ಲದೆ ವಿಷ್ಣುವರ್ಧನನ ತಮ್ಮನಾದ ಉದಯಾದಿತ್ಯ ತಲಕಾಡನ್ನು ಆಕ್ರಮಿಸಿದ ಅನಂತರ ಆ ಪ್ರಾಂತ್ಯಕ್ಕೆ ಅವನ ಅವಸಾನದವರೆಗೂ (ಸು. 1123–24) ರಾಜಪ್ರತಿನಿಧಿಯಾಗಿದ್ದ. ಮರಿಯಾನೆ, ಅವನ ತಮ್ಮ ಭರತ ಮತ್ತು ಮಗ ಬಿಟ್ಟಿಯಣ್ಣ, ಗಂಗರಾಜ (ಮರಣ 1133), ಅವನ ಮಕ್ಕಳು ಏಚ ಮತ್ತು ಬಪ್ಪ; ಪುಣಿಸಮಯ್ಯ,

ಬೋಕಣ್ಣ, ವಿಷ್ಣುವರ್ಧನನ ಮುಖ್ಯ ದಂಡನಾಯಕರು, ಮಾದಿರಾಜ ಅವನ ಪ್ರಧಾನಿ, ರಾಷ್ಟ್ರಕೂಟ ವಂಶೀಯನಾದ ಗೂಳಿಬಾಚಿ, ಆಸಂದಿಯ ಗಂಗರು ತಮಿಳು ಬ್ರಹ್ಮಾದಿರಾಯರು, ಹುಳಿಯೇರ ಚಟ್ಟ, ಚಾಳುಕ್ಯಕುಲದ ಬಾಚರಸ ಇವನ ಮುಖ್ಯ ಸಾಮಂತರು. ಕರ್ನಾಟಕದ, ವಿಶೇಷವಾಗಿ ದಕ್ಷಿಣ ಕರ್ನಾಟಕ ಭಾಗದಲ್ಲಿ ಆಕ್ರಮಿಸಿದ್ದ ಹೊರಗಿನ ರಾಜಕೀಯ ಶಕ್ತಿಗಳನ್ನು ಕಿತ್ತೊಗೆದ ವಿಷ್ಣುವರ್ಧನ ಮಹಾ ವಿಮೋಚಕನಾಗಿ ಗೋಚರಿಸತ್ತಾನೆ. ಇದರಿಂದ ಅವನು ಅಚ್ಚ ಕರ್ನಾಟಕದ ನಿರ್ಮಾಪಕರಲ್ಲೊಬ್ಬನಾಗಿದ್ದಾನೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ವಿಷ್ಣುವರ್ಧನನ ಕಾಲ ವೈಭವಯುತವಾದ ಸುವರ್ಣಾಧ್ಯಾಯ. ಇವನ ಕಾಲದಲ್ಲಿ ಜೈನ, ವೈಷ್ಣವ, ಶೈವಪಂಥಗಳ ಪುರೋಭಿವೃದ್ಧಿಯಾಯಿತು. ತನ್ನ ಹಿಂದಿನವರಂತೆ ವಿಷ್ಣುವರ್ಧನ ಪ್ರಾರಂಭದಲ್ಲಿ ಜೈನಮತೀಯನಾಗಿದ್ದನೆಂದೂ ರಾಮಾನುಜಾಚಾರ್ಯರ ಆಗಮನಾನಂತರ ವೈಷ್ಣವ ಪಂಥವನ್ನು ಸ್ವೀಕರಿಸದನೆಂದೂ ಪ್ರತೀತಿಯಿದೆ. ಈ ಘಟನೆಗೆ ಸಂಬಂಧಿಸಿದಂತೆ ಅನೇಕ ದಂತಕಥೆಗಳು ಪ್ರಚಲಿತವಾಗಿವೆ. ಒಂದು ಐತಿಹ್ಯದ ಪ್ರಕಾರ ಇವನ ಕುಮಾರಿಯಾದ ಹರಿಯಲದೇವಿ ಗ್ರಹದೋಷದಿಂದ ನರಳುತ್ತಿದ್ದಳೆಂದೂ ಜೈನ ಯತಿಗಳ ಪ್ರಯತ್ನ ಅವಳ ಕುತ್ತನ್ನು ಪರಿಹರಿಸಲು ವಿಫಲವಾಯಿತೆಂದೂ ಅನಂತರ ರಾಮಾನುಜಾಚಾರ್ಯರು ತಮ್ಮ ಮಂತ್ರಶಕ್ತಿಯಿಂದ ರಾಜಕುಮಾರಿಯ ಸಂಕಟವನ್ನು ಪರಿಹರಿಸದರೆಂದೂ ಅದರಿಂದ ಸುಪ್ರೀತನಾದ ವಿಷ್ಣುವರ್ಧನ ವೈಷ್ಣವಧರ್ಮಕ್ಕೆ ಮತಾಂತರ ಹೊಂದಿದನೆಂದೂ ತಿಳಿದುಬರುತ್ತದೆ. ಇನ್ನೊಂದು ಹೇಳಿಕೆಯ ಪ್ರಕಾರ ವಿಷ್ಣುವರ್ಧನನಿಗೆ ಲಕ್ಷ್ಮೀ ಎಂಬ ವೈಷ್ಣವಪಂಥದ ರಾಣಿಯೊಬ್ಬಳಿದ್ದಳೆಂದೂ ಅವಳು ಪ್ರಾರಂಭದಿಂದಲೂ ಆ ಮತವನ್ನು ಸ್ವೀಕರಿಸುವಂತೆ ಅವನನ್ನು ಪ್ರೇರೇಪಿಸುತ್ತಿದ್ದಳೆಂದೂ ಕೊನೆಗೆ ರಾಮಾನುಜಾಚಾರ್ಯರು ಹೊಯ್ಸಳ ರಾಜಧಾನಿಗೆ ಭೇಟಿ ನೀಡಿದ ಅನಂತರ ಅವನು ವೈಷ್ಣವಪಂಥವನ್ನು ಸ್ವೀಕರಿಸಿದನೆಂದೂ ತಿಳಿದುಬರುತ್ತದೆ. ಮತ್ತೊಂದು ಐತಿಹ್ಯದ ಪ್ರಕಾರ ವಿಷ್ಣುವರ್ಧನ ಯುದ್ಧವೊಂದರಲ್ಲಿ ತನ್ನ ಬೆರಳೊಂದನ್ನು ಕಳೆದುಕೊಂಡನೆಂದೂ ಅದರಿಂದ ಜೈನಮತೀಯರು ಅವನಿಗೆ ಸಹಪಂಕ್ತಿಭೋಜನವನ್ನು ನಿರಾಕರಿಸಿದರೆಂದೂ ಈ ಕಾರಣದಿಂದ ವಿಷ್ಣುವರ್ಧನ ವೈಷ್ಣವಧರ್ಮ ಸ್ವೀಕರಿಸಿದನಂತೆ. ಈ ಘಟನೆಗೆ ಪೂರಕವಾಗಿ ಅವನಿಗೆ ಜೈನಮತಾವಲಂಬಿಯಾಗಿದ್ದಾಗ ಬಿಟ್ಟಿದೇವನೆಂಬ ಹೆಸರಿತ್ತೆಂದೂ ವೈಷ್ಣವನಾದಮೇಲೆ ವಿಷ್ಣುವರ್ಧನ ಎಂಬ ಹೆಸರನ್ನು ಪಡೆದನೆಂದೂ ಪ್ರತೀತಿ. ವಿಷ್ಣುವರ್ಧನ ಎಂಬುದು ಅವನ ಹೊಸ ನಾಮಾಂಕಿತವಲ್ಲ. ಇದು ಬಿಟ್ಟಿದೇವ–ವಿತಲದೇವ–ವಿಷ್ಣುವರ್ಧನ ಎಂಬ ಪರಿವರ್ತನೆಯಲ್ಲದೆ ಬೇರಲ್ಲ. ಮಿಗಿಲಾಗಿ ಅವನಿಗೆ ಬಾಲ್ಯದಿಂದಲೂ ವಿಷ್ಣುವರ್ಧನ ಎಂದು ಕರೆಯಲಾಗಿತ್ತೆಂದು ಖಚಿತಪಡುತ್ತದೆ. ಆದ್ದರಿಂದ ವೈಷ್ಣವಮತವನ್ನು ಸ್ವೀಕರಿಸದನೆಂದಾಗಲೀ ಹೊಸ ನಾಮಾಂಕಿತವನ್ನು ಪಡೆದನೆಂದಾಗಲೀ ನಂಬಲು ಸಾಕಷ್ಟು ಆಧಾರಗಳಿಲ್ಲ. ಇವನು ಮತ ಬದಲಾವಣೆಯ ಅನಂತರ ಜೈನಬಸದಿಗಳನ್ನು ನಾಶಪಡಿಸಿ ಅವುಗಳ ಸಾಮಗ್ರಿಗಳಿಂದ ವೈಷ್ಣವ ದೇವಾಲಯಗಳನ್ನು ಕಟ್ಟಿಸಿದನೆಂದೂ ಹೇಳಲಾಗಿದೆ. ಸಮಕಾಲೀನ ಶಾಸನಗಳು ಮತ್ತು ಇತರ ಆಧಾರಗಳಿಂದ ಮೇಲ್ಕಂಡ ಹೇಳಿಕೆ ಹಾಸ್ಯಾಸ್ಪದವೆಂದು ಖಚಿತವಾಗುತ್ತದೆ. ವಿಷ್ಣುವರ್ಧನನ ಅರಮನೆಗೆ ಅನತಿದೂರದಲ್ಲೇ ಸುಪ್ರಸಿದ್ಧವಾದ ಬಸದಿಗಳು ಅವನ ಕಾಲದಲ್ಲೇ ಕಟ್ಟಲ್ಪಟ್ಟವು. ಅವನ ನೆಚ್ಚಿನ ಪಟ್ಟದ ರಾಣಿಯಾಗಿದ್ದ ಶಾಂತಲದೇವಿ ಜೈನಧರ್ಮಾವಲಂಬಿ ಮಿಗಿಲಾಗಿ ವಿಷ್ಣುವರ್ಧನನ ದಂಡನಾಯಕರಾದ ಪುಣಿಸ, ಬಾಹುಬಲಿ, ವಿಷ್ಣು, ಹುಲ್ಲಯ್ಯ, ಬೋಕಿಮಯ್ಯ ಮತ್ತು ಇನ್ನೂ ಇತರರು ಜೈನಧರ್ಮಿಗಳು, ಅದರಲ್ಲೂ ವಿಷ್ಣುವರ್ಧನನ ಬಲಭುಜವೆಂದೂ ಅವನ ಶ್ರೇಯಸ್ಸಿನ ಪೂರ್ಣ ಕುಂಭಸಮಾನವೆಂದೂ ಶಾಸನಗಳಿಂದ ತಿಳಿದುಬರುವ ಅಮಾತ್ಯ ಗಂಗರಾಜನ ಜೈನ. ವಿಷ್ಣುವರ್ಧನನ ಆಸ್ಥಾನದಲ್ಲಿ ಜೈನಕವಿಗಳೂ ಪಂಡಿತರೂ ಇದ್ದರು. ಶ್ರವಣಬೆಳಗೊಳ ಮತ್ತು ಇತರ ಕಡೆಗಳಲ್ಲಿ ಅನೇಕ ಬಸದಿಗಳು ನಿರ್ಮಾಣವಾದವು. ಆದ್ದರಿಂದ ವಿಷ್ಣುವರ್ಧನನ ನಡೆ, ನುಡಿ ಮತ್ತು ಕಾರ್ಯದಲ್ಲಿ ಧಾರ್ಮಿಕ ಅಸಹನೆ ಅಥವಾ ಅಸಮಾನತೆಯ ಕುರುಹು ಕಾಣಬರುವುದಿಲ್ಲ. ಇವನು ವೈಷ್ಣವಪಂಥಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದರೂ ಶೈವ ಮತ್ತು ಜೈನಪಂಥಗಳಿಗೂ ಉದಾರ ಪ್ರೋತ್ಸಾಹ ನೀಡಿದ. ಸರ್ವಧರ್ಮಸಹಿಷ್ಣುವಾಗಿದ್ದ ವಿಷ್ಣುವರ್ಧನನ ಸ್ವಂತ ಧರ್ಮ ವೈಷ್ಣವ ಇರಬಹುದೆಂಬುದು ಮಾತ್ರ ಶಾಸನೋಕ್ತವಾದ 'ಮುಕುಂದ ಪಾದಾರವಿಂದಭ್ರಮರದ' ಎಂಬ ವಿಶೇಷಣದಿಂದ ತಿಳಿಯಬಹುದಾಗಿದೆ. ರಾಮಾನುಜಾಚಾರ್ಯರಿಗೂ ವಿಷ್ಣುವರ್ಧನನಿಗೂ ಇದ್ದ ಸಂಬಂಧ ಶಾಸನಗಳಿಂದ ಖಚಿತವಾಗಿ ತಿಳಿಯುವುದಿಲ್ಲ. ಆದರೆ ಬೇಲೂರು ಮತ್ತು ಸಾಲಿಗ್ರಾಮದ ಶಾಸನಗಳಲ್ಲಿ ಶ್ರೀ ವೈಷ್ಣವರ ಉಲ್ಲೇಖ ದೊರಕುತ್ತದೆ. ವಿಷ್ಣುವರ್ಧನನ ಪ್ರೋತ್ಸಾಹದಿಂದ ಸಾಹಿತ್ಯ ಮತ್ತು ಕಲೆ ಇವುಗಳಲ್ಲಿ ವಿಶೇಷ ಪುರೋಭಿವೃದ್ಧಿಯುಂಟಾಯಿತು. ಇವನ ಆಸ್ಥಾನದಲ್ಲಿ ನಾಗಚಂದ್ರ (ಅಭಿನವ ಪಂಪ), ಕಂತಿ ಮೊದಲಾದ ಕವಿಗಳಿದ್ದರು. ಇವನು ಅನೇಕ ಅಗ್ರಹಾರಗಳ ಸ್ಥಾಪನೆಯ ಮೂಲಕ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ. ಇವನ ಕಾಲದಲ್ಲಿ ಹಳೇಬೀಡಿನ ವಿಜಯ, ಪಾರ್ಶ್ವನಾಥ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ, ತೊಣ್ಣೂರಿನ ನಾರಾಯಣ, ತಲಕಾಡಿನ ಕೀರ್ತಿನಾರಾಯಣ ಮೊದಲಾದ ಸುಂದರ ದೇವಾಲಯಗಳು ನಿರ್ಮಾಣವಾದುವು. **(ಜಿ.ಆರ್.ಆರ್.)**

**ವಿಷ್ಣುವರ್ಧನ[2]:** ಬಾದಾಮಿ ಚಳುಕ್ಯ ವಂಶದ ಎರಡನೆಯ ಪುಲಕೇಶಿಯ ತಮ್ಮ ಮತ್ತು ವೆಂಗಿಯ ಚಾಳುಕ್ಯ ಮನೆತನದ ಸ್ಥಾಪಕ. ಇವನನ್ನು ಶಾಸನಗಳು ಕುಬ್ಜ ಎಂದು ಕರೆದಿವೆ. ಎರಡನೆಯ ಪುಲಕೇಶಿ ಸು. 611ರಲ್ಲಿ ಇವನನ್ನು ಯುವರಾಜನಾಗಿ ನೇಮಿಸಿ ರಾಜಧಾನಿಯಲ್ಲಿರಿಸಿ ತಾನು ಪೂರ್ವದೇಶಗಳ ಕಡೆ ದಂಡಯಾತ್ರೆ ಹೊರಟ. ಪೂರ್ವದೇಶಗಳನ್ನು ಗೆದ್ದು ಹಿಂತಿರುಗಿದ ಆತ ಇವನನ್ನು ಆ ಭಾಗಗಳ ಅಧಿಪತಿಯಾಗಿ ಮಾಡಿದ. ಇದಾದ ಅನಂತರ ಈತ ಸ್ವಂತ ಪರಾಕ್ರಮದಿಂದ ಆಂಧ್ರದ ಅನೇಕ ಭಾಗಗಳನ್ನು ಗೆದ್ದು, ವಿಷಮಸಿದ್ಧಿ ಎಂಬ ಬಿರುದಿನಿಂದ ಶಾಸನಗಳನ್ನು ಬರೆಸಿದ. ಗುಂಟೂರು, ನೆಲ್ಲೂರು ಮುಂತಾದ ಪ್ರದೇಶಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡು ವೆಂಗಿಯ ದೊರೆಯಾಗಿ ಆಳಿದ. ಇವನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದುದನ್ನು ಗಮನಿಸಿದ ಪುಲಕೇಶಿ ಇವನನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳಲು ಇಚ್ಛಿಸದಿದ್ದುದರಿಂದ ಇವನ ಸಂತತಿಯವರೇ ವೆಂಗಿಯ ರಾಜ್ಯದ ಹಕ್ಕುದಾರರಾದರು. ಇದರಿಂದಾಗಿ ಈತ ವೆಂಗಿ ರಾಜ್ಯದ ಸ್ಥಾಪಕನಾದ. *

**ವಿಷ್ಣುವರ್ಧನ[3]:** 1952– . ಕನ್ನಡ ಚಲನಚಿತ್ರರಂಗದ ಪ್ರಸಿದ್ಧ ನಾಯಕ ನಟ. ಕನ್ನಡ, ಹಿಂದಿ, ತಮಿಳು ಚಿತ್ರಗಳಲ್ಲೂ ನಟಿಸಿದ್ದಾರೆ. 1952ರಲ್ಲಿ ಜನಿಸಿದರು. ಗಿರೀಶ್ ಕಾರ್ನಾಡ್ ಮತ್ತು ಬಿ.ವಿ. ಕಾರಂತರು ನಿರ್ದೇಶಿಸಿದ ವಂಶವೃಕ್ಷ ಚಲನಚಿತ್ರದಲ್ಲಿ ಸಣ್ಣ ಪಾತ್ರ ಮಾಡುವ ಮೂಲಕ ಚಲನಚಿತ್ರ ರಂಗವನ್ನು ಪ್ರವೇಶಿಸಿದರು. ಪುಟ್ಟಣ್ಣ ಕಣಗಾಲ್‌ರ ನಾಗರಹಾವು ಚಿತ್ರದಲ್ಲಿ ಹದಿಹರೆಯದ ಹುಡುಗನ ಪಾತ್ರದಿಂದ ಪ್ರೇಕ್ಷಕರನ್ನು ಆಕರ್ಷಿಸಿದರು. ಅನಂತರ ಚಿತ್ರರಂಗದಲ್ಲಿ ಖಾಯಂ ನಾಯಕನಟರಾಗಿ ನಟಿಸತೊಡಗಿದರು. ಕನ್ನಡ ಚಿತ್ರರಂಗದಲ್ಲಿ ಕಳೆದ ಮೂರು ದಶಕಗಳಿಂದಲೂ ಜನಪ್ರಿಯತೆಯನ್ನು

ಉಳಿಸಿಕೊಂಡು ಬಂದಿದ್ದಾರೆ. ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಹಾಗೂ ಸಾಮಾಜಿಕ ಕಳಕಳಿಯುಳ್ಳ ನಾಯಕ ಪಾತ್ರಗಳಲ್ಲಿ ಅಭಿನಯಿಸಿರುವ ಇವರು ಯುವಜನರ ನೆಚ್ಚಿನ ನಟರಾಗಿದ್ದಾರೆ. ತ್ಯಾಗ, ಕರುಣಾಮಯಿ ಪಾತ್ರಗಳಲ್ಲಿ ಹೆಚ್ಚು ಅಭಿನಯಿಸಿದ್ದಾರೆ. ರಾಜೇಂದ್ರಸಿಂಗ್ ಬಾಬು ನಿರ್ದೇಶನದ ಹೆಚ್ಚು ಚಿತ್ರಗಳಿವು: ನಾಗರಹಾವು (1972), ಭೂತಯ್ಯನ ಮಗ ಅಯ್ಯು (1974), ಮಕ್ಕಳ ಭಾಗ್ಯ (1976), ನಾಗರಹೊಳೆ (1977), ಹೊಂಬಿಸಿಲು (1978), ಬಂಧನ (1984), ಮಲಯ ಮಾರುತ (1986), ದಾದ (1988), ಮುತ್ತಿನಹಾರ (1990), ಸಂಘರ್ಷ (1993), ಲಾಲಿ (1997), ವೀರಪ್ಪನಾಯಕ (1998), ಸೂರಪ್ಪ (1999), ಸೂರ್ಯವಂಶ, ಯಜಮಾನ, ಆಪ್ತಮಿತ್ರ. ಕನ್ನಡ ಚಿತ್ರರಂಗದಲ್ಲಿ ವಿಷ್ಣುವರ್ಧನ್–ದ್ವಾರಕೀಶ್ ಜೋಡಿ ಹೆಚ್ಚು ಜನಪ್ರಿಯವಾಗಿದೆ. ದ್ವಾರಕೀಶ್ ನಿರ್ಮಿಸಿರುವ ಕಳ್ಳ ಕುಳ್ಳ, ಸಿಂಗಾಪುರದಲ್ಲಿ ರಾಜಕುಳ್ಳ, ಕಿಲಾಡಿ ಜೋಡಿ, ಕಿಟ್ಟು ಪುಟ್ಟು, ಕಿಲಾಡಿ ಕಿಟ್ಟು, ಮನೆಮನೆ ಕಥೆ ಮುಂತಾದವು ಬಾಕ್ಸ್ ಆಫೀಸಿನಲ್ಲೂ ಗೆದ್ದಿವೆ.

ಇವರಿಗೆ ಅನೇಕ ಪ್ರಶಸ್ತಿಗಳು ದೊರಕಿವೆ. ಮುತ್ತಿನಹಾರ ಚಿತ್ರಕ್ಕೆ ಪ್ರಾದೇಶಿಕ ಪ್ರಶಸ್ತಿ ದೊರಕಿದೆ. ಲಾಲಿ (1997), ವೀರಪ್ಪನಾಯಕ (1999) ಚಿತ್ರಗಳಿಗೆ ಶ್ರೇಷ್ಠನಟ ಪ್ರಶಸ್ತಿ ದೊರಕಿವೆ. ಇವರು ಈಗಲೂ ಜನಪ್ರಿಯ ನಟರಾಗಿದ್ದಾರೆ. ಕನ್ನಡ ಚಿತ್ರರಂಗದ ಜನಪ್ರಿಯ ನಟಿ ಭಾರತಿ ಇವರ ಪತ್ನಿ.

*

**ವೀಣೆ ಲಕ್ಷ್ಮೀನಾರಣಪ್ಪ:** 1878–1934. ಸಂಗೀತ ವಿದ್ವಾಂಸರು. ಇವರು ಸುಪ್ರಸಿದ್ಧ ಸಂಗೀತ ವೀಣಾವಿದ್ವಾಂಸರ ಕುಟುಂಬದಲ್ಲಿ 1878ರಲ್ಲಿ ಜನಿಸಿದರು. ಇವರ ತಂದೆ ವೀಣೆ ಕೃಷ್ಣಪ್ಪನವರು. ಲಕ್ಷ್ಮೀನಾರಣಪ್ಪನವರಿಗೆ ಮೊದಲಿಗೆ ಹಾಡುಗಾರಿಕೆಯಲ್ಲಿಯೂ ವೀಣೆ ನುಡಿಸುವಿಕೆಯಲ್ಲಿಯೂ ಇವರ ದೊಡ್ಡಪ್ಪ ಮತ್ತು ತಂದೆಯವರಿಂದ ಶಿಕ್ಷಣ ನಡೆಯಿತು. ಇವರ ದೊಡ್ಡಪ್ಪ ವೀಣೆ ಶೀನಪ್ಪನವರು ಮೈಸೂರು ಅರಮನೆಯಲ್ಲಿ ರಾಣೀವಾಸದವರಿಗೆ ಸಂಗೀತ ವಿದ್ಯಾಗುರುಗಳಾಗಿದ್ದರು. ಚಾಮರಾಜ ಒಡೆಯರು ಲಕ್ಷ್ಮೀನಾರಣಪ್ಪನವರನ್ನು ಮೊದಲು ತಮ್ಮ ಅರಮನೆ ನಾಟಕ ಸಂಸ್ಥೆಯಲ್ಲಿ ಹಾರ್ಮೋನಿಯಂ ವಾದ್ಯಗಾರರನ್ನಾಗಿ ನೇಮಿಸಿದರು. ತಂದೆ ಮತ್ತು ದೊಡ್ಡಪ್ಪಂದಿರು ಗತಿಸಿದ ಮೇಲೆ ಲಕ್ಷ್ಮೀನಾರಣಪ್ಪನವರು ವೀಣೆ ನುಡಿಸುವಿಕೆಯನ್ನು ಶೇಷಣ್ಣನವರಲ್ಲೂ ಹಾಡುಗಾರಿಕೆಯನ್ನು ಮೈಸೂರು ವಾಸುದೇವಾಚಾರ್ಯರಲ್ಲೂ ಅಭ್ಯಾಸ ಮಾಡಿದರು. ಅರಮನೆ ನಾಟಕ ಸಂಸ್ಥೆ ನಿಂತು ಹೋದ ಮೇಲೆ ಇವರು ಮೈಸೂರು ಅರಮನೆಯ ಆಸ್ಥಾನದ ವೈಣಿಕ ವಿದ್ವಾಂಸರಾದರು. ಹಾಡುಗಾರಿಕೆ ಮತ್ತು ವೀಣಾವಾದನದ ಉಭಯ ಅನುಭವಗಳಿಂದ ಇವರು ತಮ್ಮದೇ ಆದ ವಿಶಿಷ್ಟ ಶೈಲಿಯ ವೀಣಾವಾದನ ಕ್ರಮವನ್ನು ನಿರ್ಮಿಸಿಕೊಂಡರು. ರಾಗ ತಾನ ಪಲ್ಲವಿಗಳ ವಿಸ್ತರಣೆಯಲ್ಲಿ ಇವರಿಗೆ ಅಪಾರ ಪರಿಶ್ರಮವಿತ್ತು. ಸುಮಾರು 1924ರಲ್ಲಿ ಇವರ ಅನೇಕ ವೀಣೆ ಕಚೇರಿಗಳು ಮದರಾಸಿನಲ್ಲಿ ನಡೆದು ಅಲ್ಲಿನ ಅಪಾರ ಸಂಗೀತರಸಿಕರ ಮನಸ್ಸನ್ನು ತಣಿಸಿದುವು. ಆಗ ಮದರಾಸಿನ ವೇಣುಗಾನ ಸಭೆ ಇವರಿಗೆ ಬಂಗಾರದ ಪದಕ ಮತ್ತು ಶಾಲುಜೋಡಿಗಳೊಂದಿಗೆ ಭೈರವಿ ರಾಗವನ್ನೇ ಪ್ರಶಸ್ತಿ ನೀಡಿ ಸನ್ಮಾನಿಸಿತು. ಇವರು 1934 ಜನವರಿ 15ರಂದು ನಿಧನರಾದರು.

(ಎಲ್.ಆರ್.)

**ವೀಣೆ ವೆಂಕಟಗಿರಿಯಪ್ಪ:** 1887–1952. ಪ್ರಸಿದ್ಧ ವೈಣಿಕ ವಿದ್ವಾಂಸರು. 1887 ಜೂನ್ 24ರಂದು ಮೈಸೂರಿನಲ್ಲಿ ಜನಿಸಿದರು. ಇವರು ವೀಣೆಯ ಬಾಲ್ಯ ಪಾಠವನ್ನು ತಮ್ಮ ಮಾತಾಮಹರಾದ ವೀಣಾ ವಿದ್ವಾನ್ ದೊಡ್ಡಸುಬ್ಬರಾಯರಲ್ಲೂ ಪ್ರೌಢಪಾಠವನ್ನುತಮ್ಮ ಸೋದರಮಾವನವರಾದ ಚಿಕ್ಕಸುಬ್ಬರಾಯರಲ್ಲೂ ನಡೆಸಿದರು. ವೈಣಿಕ ಶಿಖಾಮಣಿ ಶೇಷಣ್ಣನವರ ವೀಣಾವಾದನವನ್ನು ವಿಶೇಷವಾಗಿ ಕೇಳಿ ಅದರಿಂದ ಬಹಳ ಪ್ರಭಾವಿತರಾದ ಇವರು, ಅವರಲ್ಲೂ ಕೆಲಕಾಲ ಶಿಷ್ಯರಾಗಿದ್ದರು. ತಮ್ಮ ಪ್ರತಿಭೆಯಿಂದ ಚಿಕ್ಕಂದಿನಲ್ಲಿಯೇ ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡು ಮಹಾರಾಜರ ಅಭಿಮಾನಕ್ಕೆ ಪಾತ್ರರಾದರು. ಅರಮನೆ ಬ್ಯಾಂಡಿನ ನಿರ್ದೇಶಕರಾಗಿ, ಆಸ್ಥಾನ ವಿದ್ವಾಂಸರ ಮುಖ್ಯಸ್ಥರಾಗಿ, ಮಹಾರಾಣಿ ಪ್ರೌಢಶಾಲೆಯ ಸಂಗೀತ ಅಧ್ಯಾಪಕರಾಗಿ, ಮೈಸೂರು ಸರ್ಕಾರದ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಇವರು ಕಾರ್ಯ ನಿರ್ವಹಿಸಿದರು.

ವೆಂಕಟಗಿರಿಯಪ್ಪನವರ ವೀಣಾ ಶೈಲಿಯಲ್ಲಿ ಮೈಸೂರು ವೈಣಿಕ ಸಂಪ್ರದಾಯದ ಎಲ್ಲ ವೈಶಿಷ್ಟ್ಯಗಳು ಸಂಗಮವಾಗಿದ್ದುವು. ವಾದನತಂತ್ರದಲ್ಲಿ ಬೆರಳುಗಳ ವೇಗ, ಮೀಟಿನ ಮಾರ್ದವತೆ ಮತ್ತು ಇಂಪಾದ ನಾದ ಇವರ ವಾದನದಲ್ಲಿದ್ದ ಪ್ರಧಾನ ಗುಣಗಳು. ಪಾಶ್ಚಾತ್ಯ ಸಂಗೀತದಲ್ಲಿ ವಿಶೇಷ ಪರಿಶ್ರಮ ಪಡೆದು ಇಲ್ಲಿನ ಸಂಗೀತಕ್ಕೆ ಅದರ ಕೆಲವು ಅಂಶಗಳನ್ನು ಅಳವಡಿಸಿಕೊಳ್ಳುವ ಪ್ರಯೋಗಗಳನ್ನು ಇವರು ನಡೆಸಿದ್ದರು. ಹಿಂದುಸ್ಥಾನೀ ಸಂಗೀತದ ಬಗೆಗೂ ಇವರಿಗೆ ವಿಶೇಷವಾದ ಒಲವಿತ್ತು. ಭಾರತದಾದ್ಯಂತ ಪ್ರವಾಸ ಮಾಡಿ ತಮ್ಮ ಸುಮಧುರ ವೀಣಾವಾದನದಿಂದ ರಸಿಕರ ಮೆಚ್ಚುಗೆಯನ್ನು ಗಳಿಸಿ ಪ್ರಸಿದ್ಧರಾದರು. ಇವರು ಬರೆದಿರುವ ಸುಗೀತಾಮೃತ ಸಾರ ಎಂಬ ಗ್ರಂಥ ಸಂಗೀತ ಪ್ರಪಂಚಕ್ಕೆ ಇವರು ಕೊಟ್ಟ ಬೆಲೆಯುಳ್ಳ ಕಾಣಿಕೆಯಾಗಿದೆ. ಇವರು ರಚಿಸಿರುವ ವರ್ಣಗಳು, ಕೃತಿಗಳು ಮತ್ತು ತಿಲ್ಲಾನಗಳು ಶ್ರೇಷ್ಠ ರಚನೆಗಳಾಗಿವೆ. ಇವರು ಸಂಗೀತದಲ್ಲಿ ಸಂಪ್ರದಾಯದ ಶುದ್ಧತೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರೂ ಕಲಾ ಸೌಂದರ್ಯವನ್ನು ಹೆಚ್ಚಿಸುವ ಹೊಸ ಪ್ರಯೋಗಗಳಿಗೂ ಮನ್ನಣೆ ನೀಡುತ್ತಿದ್ದರು. ಇವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರವರು ವೈಣಿಕಪ್ರವೀಣ ಎಂಬ ಬಿರುದನ್ನೂ ಜಯಚಾಮರಾಜ ಒಡೆಯರವರು ಸಂಗೀತವಿಶಾರದ ಎಂಬ ಬಿರುದನ್ನೂ ತೋಡಾ ಮತ್ತು ಸ್ವರ್ಣಪದಕಗಳೊಂದಿಗೆ ಇತ್ತು ಗೌರವಿಸಿದರು. ಇವರು 1952 ಜನವರಿ 31ರಂದು ನಿಧನರಾದರು.

(ಆರ್.ಎಸ್.ಡಿ.)

**ವೀಣೆ ವೆಂಕಟಸುಬ್ಬಯ್ಯ:** 1899–1961. ಖ್ಯಾತ ವೈಣಿಕರು. ಆಸ್ಥಾನ ವಿದ್ವಾಂಸರಾಗಿದ್ದು ಪ್ರಸಿದ್ಧ ವೈಣಿಕರಾಗಿದ್ದ ವೀಣೆ ಶಾಮಣ್ಣನವರ ಮೊಮ್ಮಕ್ಕಳಾದ ಇವರು ಈ ಪೀಳಿಗೆಯ ಸಂಗೀತಗಾರರಲ್ಲಿ ಕೊನೆಯವರು. ಜನಿಸಿದ್ದು

ಮೈಸೂರಿನಲ್ಲಿ. ವೀಣಾ ವಿದ್ವಾನ್ ರಾಮಣ್ಣ ಇವರ ತಂದೆ. ವೀಣೆ ಶಿಕ್ಷಣವನ್ನು ತಮ್ಮ ತಾತ ಶಾಮಣ್ಣ, ಚಿಕ್ಕಪ್ಪ ಸುಬ್ರಹ್ಮಣ್ಯ ಅಯ್ಯರ್ ಹಾಗೂ ವೀಣೆ ಶೇಷಣ್ಣನವರ ಬಳಿ ಪಡೆದರು. ಜ್ಯೋತಿಷ್ಯಶಾಸ್ತ್ರದಲ್ಲೂ ಸಾಕಷ್ಟು ಪ್ರೌಢಿಮೆಯನ್ನು ಗಳಿಸಿಕೊಂಡರು. ತಮ್ಮ ವಿದ್ಯಾಪ್ರೌಢಿಮೆಯಿಂದ ರಾಜಮನೆತನದವರ ಮೆಚ್ಚುಗೆಗೆ ಪಾತ್ರರಾಗಿ ಆಸ್ಥಾನವಿದ್ವಾಂಸರಾದರು. ಅನಂತರ ಮೈಸೂರಿನ ಕುರುಡರು ಮೂಗರ ಶಾಲೆಯಲ್ಲಿ ಫಿಡಲ್ ಉಪಾಧ್ಯಾಯರಾಗಿಯೂ ಕೆಲವು ವರ್ಷಗಳ ಕಾಲ ತುಮಕೂರಿನ ಎಂಪ್ರೆಸ್ ಬಾಲಕಿಯರ ಪ್ರೌಢಶಾಲೆಯಲ್ಲೂ ಅನಂತರ ಮೈಸೂರು ಮಹಾರಾಣಿ ಟ್ರೈನಿಂಗ್ ಕಾಲೇಜು ಮತ್ತು ಮಹಾರಾಣಿ ಪ್ರೌಢಶಾಲೆಯಲ್ಲೂ ಸಂಗೀತ ಮತ್ತು ವೀಣಾ ಉಪಾಧ್ಯಾಯರಾಗಿ ಹಲವು ವರ್ಷಗಳ ಕಾಲ ಸೇವೆಸಲ್ಲಿಸಿದರು. ಸರಳಜೀವಿಗಳೂ ಉದಾರಸ್ವಭಾವದವರೂ ಆಗಿದ್ದ ಇವರು 1961ರಲ್ಲಿ ನಿಧನರಾದರು. (ಎ.ಆರ್.ಕೆ.)

**ವೀಣೆ ಶಾಮಣ್ಣ:** 1828–1908. ಖ್ಯಾತ ವೈಣಿಕರು. ದ್ರಾವಿಡ ಬೃಹಚ್ಚರಣ ಸ್ಮಾರ್ತ ಬ್ರಾಹ್ಮಣ ಮನೆತನದವರಾದ ಇವರು ಮೂಲತಃ ತಮಿಳುನಾಡಿನವರು. ಅಣ್ಣಾಮಲೈಯಲ್ಲಿ ಜನಿಸಿದರು. ತಿರುವಣ್ಣಾಮಲೈಯ ವೀಣಾ ವಿದ್ವಾಂಸರಾದ ರಾಮಭಾಗವತರು ಇವರ ತಂದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1854ರಲ್ಲಿ ಮೈಸೂರಿಗೆ ವಲಸೆ ಬಂದ ಇವರ ಕುಟುಂಬ ಪಾಂಡವಪುರ ತಾಲ್ಲೂಕು ಚಿಕ್ಕಾಡೆ ಗ್ರಾಮದಲ್ಲಿ ನೆಲಸಿತು. ಪಿತ್ರಾರ್ಜಿತ ವಿದ್ವತ್ತಿನ ಜೊತೆಗೆ ಸ್ವಂತ ಪ್ರತಿಭೆಯೂ ಸೇರಿ ಶಾಮಣ್ಣನವರು ಶೀಘ್ರವಾಗಿ ರಾಜಾನುಗ್ರಹಕ್ಕೆ ಪಾತ್ರರಾದರು. ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರು ಇವರ ಕಾಲದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು. ಫಿಡಲ್, ಘಟ ಹಾಗೂ ಸ್ವರಬತ್ ವಾದ್ಯಗಳನ್ನು ನುಡಿಸುವುದರಲ್ಲಿಯೂ ಪರಿಶ್ರಮವಿತ್ತು. ದಕ್ಷಿಣ ಭಾರತವನ್ನೆಲ್ಲ ಸಂಚರಿಸಿ ಕೀರ್ತಿಯನ್ನೂ ಅಭಿನವಭೋಜ, ತಾಳಬ್ರಹ್ಮ ಮುಂತಾದ ಬಿರುದುಗಳನ್ನು ಪಡೆದಿದ್ದರು. ಇವರು ಮೈಸೂರಿನಲ್ಲಿ ವಾಸವಾಗಿದ್ದ ಮನೆಯಿದ್ದ ಬೀದಿಗೆ ಇಂದು ವೀಣೆ ಶಾಮಣ್ಣ ಬೀದಿ ಎಂದೇ ಹೆಸರಿದೆ. ಇವರ ಮಗ ಸುಬ್ರಹ್ಮಣ್ಯ ಅಯ್ಯರ್ ಹಾಗೂ ಸೋದರಳಿಯ ಸುಬ್ಬರಾಯರೂ ಕೂಡ ಆಸ್ಥಾನ ವಿದ್ವಾಂಸರಾಗಿದ್ದರು. (ಎ.ಆರ್.ಕೆ.)

**ವೀಣೆ ಶಿವರಾಮಯ್ಯ:** 1886–1946. ಪ್ರಸಿದ್ಧ ವೈಣಿಕರು. ಮೈಸೂರು ಇವರ ಹುಟ್ಟೂರು. ಆಸ್ಥಾನ ವಿದ್ವಾಂಸರಾಗಿದ್ದ ವೀಣೆ ಪದ್ಮನಾಭಯ್ಯ ಇವರ ತಂದೆ. ಇವರು ತುಮಕೂರು ಜಿಲ್ಲೆಯ ಶ್ರೀರಾಮಪುರ ಗ್ರಾಮದವರು. ಪ್ರಸಿದ್ಧ ವಿದ್ವಾಂಸರಾಗಿದ್ದ ತಮ್ಮ ತಂದೆಯ ಬಳಿ ವೀಣಾವಾದನದಲ್ಲಿ ಶಿಕ್ಷಣ ಪಡೆದ ಶಿವರಾಮಯ್ಯನವರು ತಮ್ಮ 14ನೆಯ ವಯಸ್ಸಿಗೇ ವೀಣಾವಾದನದಲ್ಲೂ ಸಂಸ್ಕೃತ ಸಾಹಿತ್ಯದಲ್ಲೂ ಪರಿಶ್ರಮ ಪಡೆದರು. ತಮ್ಮ 16ನೆಯ ವಯಸ್ಸಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದ ವೀಣಾ ವಿದ್ವಾಂಸರಾದರು. ಅನಂತರ ಗಾಯನದಲ್ಲಿ ಮೈಸೂರು ಕರಿಗಿರಿರಾಯರಲ್ಲೂ ವಾಸುದೇವಾಚಾರ್ಯರಲ್ಲೂ ಶಿಕ್ಷಣಪಡೆದು, 1908ರಿಂದ 1916ರ ವರೆಗೆ ವೀಣೆ ಶೇಷಣ್ಣನವರಿಂದ ವೀಣಾವಾದನದ ಶಿಕ್ಷಣ ಪಡೆದರು. ತಮ್ಮ 35ನೆಯ ವಯಸ್ಸಿನಲ್ಲಿ ಪ್ರವಾಸವನ್ನು ಕೈಕೊಂಡು ಇಂದೂರು, ಭೂಪಾಲ್, ಧಾರ್ ಮುಂತಾದ ರಾಜಾಸ್ಥಾನಗಳಲ್ಲಿ ವೀಣಾವಾದನವನ್ನು ಪ್ರದರ್ಶಿಸಿ ಸನ್ಮಾನಿತರಾದರು. ಹಾಗೆಯೇ ದಕ್ಷಿಣ ಭಾರತದ ಸಂಗೀತ ಕಲಾಕೇಂದ್ರಗಳಲ್ಲಿ ತಮ್ಮ ವಿದ್ವತ್ತನ್ನು ಪ್ರದರ್ಶಿಸಿ ಕೀರ್ತಿ ಸಂಪಾದಿಸಿದರು. ತಿರುವಾಂಕೂರಿನ ರಾಜಾಸ್ಥಾನದಲ್ಲಿ ವೀರ ಸಂಗಲಿ ಎಂಬ ತೋಡ ಕಿಲ್ಲತ್ತುಗಳಿಂದ ಸನ್ಮಾನಿಸಲ್ಪಟ್ಟರು. ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಂದ ಅರಮನೆ ಕರ್ಣಾಟಕ ವಾದ್ಯ ಗೋಷ್ಠಿಗಾಗಿ ಸಂಗೀತ ರಚನೆ ಮಾಡಿಸುತ್ತಿದ್ದರು; ಜೊತೆಗೆ ಗ್ರಾಮಫೋನ್ ರಿಕಾರ್ಡ್‌ನ ಸಂಗೀತವನ್ನು ಇವರಿಂದ ಬರೆಸುತ್ತಿದ್ದರು.

ಶಿವರಾಮಯ್ಯನವರು ವಾಗ್ಗೇಯಕಾರರೂ ಆಗಿದ್ದರು. ಇವರು ಸ್ವಯಂಭೂರಾಗದ ಪಂಚರತ್ನ, ಸರಸ್ವತೀನವರತ್ನಮಾಲಿಕಾ, ಅನಂತಪದ್ಮನಾಭ ಚತುರ್ದಶಮಾಲಿಕಾ ಮುಂತಾದುವುಗಳನ್ನು ರಚಿಸಿದ್ದಾರೆ. ಕೇವಲ ಮೂರು ಸ್ವರಗಳುಳ್ಳ ಸ್ವಯಂಭೂ ಸ್ವರರಾಗವನ್ನು ಕಂಡುಹಿಡಿದು ಅದರಲ್ಲಿ ಕೃತಿಯನ್ನು ರಚಿಸಿದ್ದಕ್ಕಾಗಿ ಇವರು ಮದರಾಸಿನ ಸಂಗೀತ ಸಮ್ಮೇಳನದಲ್ಲಿ ಬಹುಮಾನಿತರಾದರು. ಮೈಸೂರಿನ ಮಹಾರಾಜರು ಇವರಿಗೆ ವೈಣಿಕ ಪ್ರವೀಣ ಎಂಬ ಬಿರುದನ್ನಿತ್ತು ಸನ್ಮಾನಿಸಿದರು. ಇವರು 1940ರ ವರೆಗೆ ಮೈಸೂರಿನ ಕುರುಡು ಮೂಗರ ಶಾಲೆಯಲ್ಲಿ ವೀಣಾ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಸರಳಜೀವಿಗಳೂ ಶಾಂತಚಿತ್ತರೂ ಆಗಿದ್ದ ಇವರು 1946 ರಲ್ಲಿ ನಿಧನಹೊಂದಿದರು. (ಎ.ಆರ್.ಕೆ.)

**ಪಿಟೀಲು ವೀಣೆ ಶೇಷಣ್ಣ:** 1852–1946. ಖ್ಯಾತ ವೈಣಿಕರು. ಶ್ರೇಷ್ಠ ವಾಗ್ಗೇಯ ಕಾರರು. ಪ್ರಖ್ಯಾತ ವೈಣಿಕರಾಗಿದ್ದ ತಂಜಾವೂರಿನ ಆದಿ ಅಪ್ಪಯ್ಯ ಇವರ ಪೂರ್ವಜರು. ತಂದೆ ಚಿಕ್ಕರಾಮಪ್ಪನವರೂ ವೀಣಾ ವಿದ್ವಾಂಸರು; ಧಾರಾ ನೆಲ್ಲೂರು ಪ್ರಾಂತ್ಯದಿಂದ ಮೈಸೂರಿಗೆ ವಲಸೆ ಬಂದಿದ್ದು, ಮಹಾರಾಜರ ಆಶ್ರಯದಲ್ಲಿ ಅರಮನೆಯ ಸಂಗೀತ ಇಲಾಖೆಯ ಬಕ್ಷಿಯಾಗಿದ್ದರು. ಶೇಷಣ್ಣನವರು ಹುಟ್ಟಿದ್ದು 1852ರಲ್ಲಿ. ಬಾಲ್ಯದಲ್ಲಿದ್ದಾಗಲೇ ಅಸಾಧಾರಣ ಸ್ವರಲಯವಿತ್ತು, ಹತ್ತನೆಯ ವಯಸ್ಸಿನಲ್ಲಿ ರಾಜಸಮ್ಮುಖದಲ್ಲಿ ಹಾಡುಗಾರಿಕೆಯಿಂದ ಸನ್ಮಾನಿತರಾದರು. ಹದಿನಾರನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ಮೇಲೆ ವೀಣಾ ಸುಬ್ಬಣ್ಣನವರ ತಂದೆ ದೊಡ್ಡ ಶೇಷಣ್ಣ ಹಾಗೂ ಇನ್ನೊಬ್ಬ ವಿದ್ವಾಂಸ ಸದಾಶಿವರಾಯರಲ್ಲಿ ತಮ್ಮ ಸಾಧನೆಯಿಂದ ಸಂಗೀತಶಿಕ್ಷಣವನ್ನು ಮುಂದುವರಿಸಿದರು. ತಮ್ಮ ಸಮರ್ಥ ಸಾಧನೆಯಿಂದ ವಿದ್ವತ್ತನ್ನು ಬಲುಬೇಗ ಗಳಿಸಿ, ಇಪ್ಪತ್ತಾರನೆಯ ವಯಸ್ಸಿನಲ್ಲಿ ಆಸೇತುಹಿಮಾಚಲ ಪರ್ಯಟನ ಮಾಡಿದರು. ತಮ್ಮ ಪಾಂಡಿತ್ಯ ಹಾಗೂ ಪ್ರತಿಭೆಗಳಿಂದ ಪ್ರಖ್ಯಾತ ವಿದ್ವಾಂಸರ ಮೆಚ್ಚಿಗೆಗೆ ಪಾತ್ರರಾದರು. ರಾಮನಾಡ್, ಬರೋಡ ದೊರೆಗಳಾದಿಯಾಗಿ ಹಲವರಿಂದ ಇವರು ಪಡೆದ ಸನ್ಮಾನ ಹಾಗೂ ಕಿಲ್ಲತ್ತುಗಳು ಅಪಾರ. ಚಾಮರಾಜ ಒಡೆಯರ್ ಅವರ ಆಸ್ಥಾನ ವಿದ್ವಾಂಸರಾಗಿದ್ದರು. ನಾಲ್ವಡಿ ಕೃಷ್ಣರಾಜ

ಒಡೆಯರು ಇವರಿಗೆ ವೈಣಿಕಶಿರೋಮಣಿ ಎಂಬ ಬಿರುದಿತ್ತು ಗೌರವಿಸಿದರು. ಪಿಟೀಲು, ಜಲತರಂಗ್, ಪಿಯಾನೊ, ಸ್ವರಬತ್ ಮುಂತಾದ 14 ವಾದ್ಯಗಳ ನುಡಿಸುವಿಕೆಯಲ್ಲಿಯೂ ಶೇಷಣ್ಣನವರಿಗೆ ಪರಿಶ್ರಮವಿತ್ತು. ಮೈಸೂರಿನಲ್ಲಿ ಕೃಷ್ಣೋತ್ಸವದಂಥ ಸಂಗೀತ ಸಭೆಗಳನ್ನು ಆರಂಭಿಸಿದ ಕೀರ್ತಿ ಇವರದು.

ಶೇಷಣ್ಣನವರ ವೀಣಾವಾದನದ ವೈಶಿಷ್ಟ್ಯವೆಂದರೆ ರಾಗ, ಭಾವಮಾಧುರ್ಯ, ಪಲ್ಲವಿ ನೆರವಲ್, ಮನೋಧರ್ಮ, ಸ್ವರಕಲ್ಪನೆ, ಅಪೂರ್ವ ಸಂಚಾರಗಳು, ದಾಟು ಸ್ವರಗಳು, ತಂತಿಗಳ ಕಪಟವಿಲ್ಲದ ಮೃದುಮಧುರವಾದ ಮಾರ್ದವತೆಯಿಂದ ಕೂಡಿದ ಮೀಟು. ರಾಗಾಲಾಪನೆ ಮತ್ತು ಸ್ವರಕಲ್ಪನೆ ಮಾಡುವಾಗ ದಾಟು ಸ್ವರಗಳನ್ನು ಪ್ರಯೋಗಿಸಿ ಮನರಂಜನೆ ಮಾಡುತ್ತಿದ್ದವರಲ್ಲಿ ಇವರೇ ಮೊದಲಿಗರು.

ಶೇಷಣ್ಣನವರು ಶ್ರೇಷ್ಠ ವಾಗ್ಗೇಯಕಾರರೂ ಆಗಿದ್ದರು. ಹನ್ನೊಂದು ಸ್ವರ ಜತಿಗಳು, ಏಳು ವರ್ಣಗಳು, ಎರಡು ರಾಗಮಾಲಿಕಾ, ಹನ್ನೊಂದು ತೆಲುಗು ಕೃತಿಗಳು, ಐದು ಕನ್ನಡ ಕೃತಿಗಳು ಮತ್ತು ಹದಿನೇಳು ತಿಲ್ಲಾನಗಳನ್ನು ರಚಿಸಿ ಸಂಗೀತಸರಸ್ವತಿಯ ಭಂಡಾರವನ್ನು ಹೆಚ್ಚಿಸಿದ್ದಾರೆ. ಇವರಿಗೆ ಶಿಷ್ಯರು ಅನೇಕ. ಅವರಲ್ಲಿ ಪ್ರಮುಖರಾದ ಕೆಲವು ಕಲಾವಿದರು: ವೀಣೆ ವೆಂಕಟಗಿರಿಯಪ್ಪ, ಕಲಾವಿದ ವೆಂಕಟಪ್ಪ, ರಮಾದೇವಿ ಸುಬ್ರಹ್ಮಣ್ಯಶಾಸ್ತ್ರಿ, ನಾರಾಯಣಅಯ್ಯರ್, ಮೊಮ್ಮಕ್ಕಳಾದ ಸ್ವರಮೂರ್ತಿ ವೆಂಕಟನಾರಾಯಣರಾವ್ ಮತ್ತು ಎ.ಎಸ್. ಚಂದ್ರಶೇಖರಯ್ಯ. (ವಿ.ಎಸ್.ಎಸ್.)

**ವೀಣೆ ಸುಬ್ಬಣ್ಣ:** ಸು. 1858–1938. ಮೈಸೂರಿನ ಪ್ರಸಿದ್ಧ ವೈಣಿಕರಲ್ಲಿ ಒಬ್ಬರು. ಹೆಸರಾಂತ ವೈಣಿಕ ಕುಟುಂಬದಲ್ಲಿ ಜನಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ವೀಣೆ ವೆಂಕಟಸುಬ್ಬಯ್ಯನವರು ಇವರ ತಾತ; ಸ್ವತಃ ವೀಣೆ ಮತ್ತು ಸಂಗೀತಗಳಲ್ಲಿ ಪ್ರವೀಣರಾಗಿದ್ದ ದೊಡ್ಡ ಶೇಷಣ್ಣನವರು ಇವರ ತಂದೆ. ಸುಬ್ಬಣ್ಣನವರು ವೀಣಾವಾದನವನ್ನು ತಮ್ಮ ತಂದೆಯಿಂದ ಕಲಿತರು. ಸಂಗೀತಾಭ್ಯಾಸವನ್ನು ಪ್ರಸಿದ್ಧ ವಾಗ್ಗೇಯಕಾರರಾದ ಮೈಸೂರು ಸದಾಶಿವರಾಯರಲ್ಲಿ ನಡೆಸಿದರು. ಆ ಸಂದರ್ಭದಲ್ಲಿ ಸುಬ್ಬಣ್ಣನವರ ಸಮೀಪದ ಬಂಧುಗಳಾದ ವೀಣೆ ಶೇಷಣ್ಣನವರು ಇವರ ಸಹಪಾಠಿಗಳಾಗಿದ್ದರು. ಚಾಮರಾಜ ಒಡೆಯರು ಇವರ ಬಾಲ್ಯಸ್ನೇಹಿತರು ಮತ್ತು ಸಹಪಾಠಿಗಳು.

ವೀಣಾವಾದನ ಮತ್ತು ಸಂಗೀತದಲ್ಲಿ ವಿದ್ವತ್ತನ್ನು ಗಳಿಸಿದ ಅನಂತರ ಸುಬ್ಬಣ್ಣನವರು ದೇಶಪರ್ಯಟನೆ ಮಾಡಿ ಅನೇಕ ಕಡೆಗಳಲ್ಲಿ ಕಚೇರಿಗಳನ್ನು ನಡೆಸಿದರು. ಇವರು ಕೆಲವೊಮ್ಮೆ ವೀಣೆ ಶೇಷಣ್ಣನವರೊಡನೆಯೂ ಕಚೇರಿಗಳನ್ನು ನಡೆಸಿದ್ದುಂಟು. ಅನಂತರ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ವೀಣಾವಿದ್ವಾಂಸರಾದರು. ಇವರಿಗೆ ಶಂಕರಾಭರಣ, ಕಲ್ಯಾಣಿ, ಕಾಂಭೋಜಿ, ಕೇದಾರಗೌಳ ಮುಂತಾದ ರಾಗಗಳಲ್ಲಿ ಅಪಾರ ಪರಿಶ್ರಮವಿತ್ತು. ಇವರು ಉತ್ತಮ ವಾಗ್ಗೇಯಕಾರರೂ ಆಗಿದ್ದರು. ಧರ್ಮಾವತಿ, ಋಷಭಪ್ರಿಯ, ಧೇನುಕ ಮುಂತಾದ ರಾಗಗಳಲ್ಲಿ ಇವರು ಕೆಲವು ಕೃತಿಗಳನ್ನು ರಚಿಸಿದ್ದಾರೆ. ಕಂಠೀರವ ನರಸರಾಜ ಒಡೆಯರ ವಿವಾಹ ಸಂದರ್ಭದಲ್ಲಿ ಇವರು ರಚಿಸಿದ ನವರಾಗ ಮಾಲಿಕ ಪ್ರಸಿದ್ಧವಾದುದು. ಇವರಿಗೆ ಕನ್ನಡ ಸಾಹಿತ್ಯದ ಬಗ್ಗೆಯೂ ಅಪಾರ ಒಲವಿತ್ತು. ಇವರಿಗೆ ಅನೇಕ ಬಿರುದುಗಳು ಲಭಿಸಿವೆ. ಅವುಗಳಲ್ಲಿ ವೈಣಿಕವರಕೇಸರಿ, ವೈಣಿಕಚೂಡಾಮಣಿ, ವೈಣಿಕಪ್ರವೀಣ ಮುಖ್ಯವಾದವು.

ಸುಬ್ಬಣ್ಣನವರ ಶಿಷ್ಯ ಸಂಪತ್ತು ಅಪಾರವಾದುದು. ಚಿಕ್ಕರಾಮರಾಯ, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಆರ್.ಎಸ್. ಕೇಶವಮೂರ್ತಿ, ವಿ. ಶ್ರೀಕಂಠಅಯ್ಯರ್, ಸ್ವರಮೂರ್ತಿ ವೆಂಕಟನಾರಾಯಣರಾಯ, ವಿದುಷಿ ಸುಬ್ಬಮ್ಮ ಈ ಮೊದಲಾದವರು ಇವರಲ್ಲಿ ವೀಣಾಭ್ಯಾಸ ನಡೆಸಿದವರು.

ಸುಬ್ಬಣ್ಣನವರು 1938ರಲ್ಲಿ ನಿಧನರಾದರು. ಇವರು ನುಡಿಸುತ್ತಿದ್ದ ವೀಣೆ ಇವರ ಶಿಷ್ಯರಲ್ಲೊಬ್ಬರಾದ ಆರ್.ಎಸ್. ಕೇಶವಮೂರ್ತಿಯವರ ಬಳಿ ಇದೆ. (ಆರ್.ಎಸ್.ಕೆ.)

**ವೀಣೆ ಸುಬ್ರಮಣ್ಯ ಅಯ್ಯರ್:** 1864–1929. ಪ್ರಸಿದ್ಧ ಸಂಗೀತ ವಿದ್ವಾಂಸರು. 1864ರಲ್ಲಿ ಮೈಸೂರಿನಲ್ಲಿ ಜನಿಸಿದರು. ಮೈಸೂರು ಒಡೆಯರ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದ ವೀಣೆ ಶಾಮಣ್ಣನವರು ಇವರ ತಂದೆ. ಸುಬ್ರಹ್ಮಣ್ಯ ಅಯ್ಯರ್ ಅವರು ಬಾಲ್ಯದಿಂದ ತಮ್ಮ ತಂದೆಯವರ ಬಳಿ ವೀಣೆಯನ್ನು ಅಭ್ಯಾಸ ಮಾಡಿದರು. ಇವರ ಪ್ರೌಢಿಮೆ ಮತ್ತು ಪ್ರತಿಭೆಗಳನ್ನು ಮೆಚ್ಚಿದ ಮಹಾರಾಜರು ಇವರನ್ನು ತಮ್ಮ ಆಸ್ಥಾನ ವಿದ್ವಾಂಸರಾಗಿ ನೇಮಿಸಿ ಗೌರವಿಸಿದರು. ಮೈಸೂರಿನ ಬಾಲಿಕಾ ಪಾಠಶಾಲೆಗಳಲ್ಲಿ ಸಂಗೀತವು ಐಚ್ಛಿಕ ವಿಷಯವಾಗಿ ಜಾರಿಗೆ ಬಂದಾಗ ಸುಬ್ರಹ್ಮಣ್ಯ ಅಯ್ಯರ್ ಅವರನ್ನು ಮೈಸೂರಿನ ನಜರ್‌ಬಾದಿನಲ್ಲಿರುವ ಮಹಾರಾಣಿಯರ ವಾಣಿವಿಲಾಸ ಅರಸು ಜನಾನಶಾಲೆಯ ಗೌರವ ಸಂಗೀತ ಅಧ್ಯಾಪಕರಾಗಿ ನೇಮಿಸಲಾಯಿತು. ಆ ಕಾಲದಲ್ಲಿ ಇವರು ಸಂಗೀತಸಮಯಸಾರ ಎಂಬ ಗ್ರಂಥವನ್ನು ರಚಿಸಿದರು (1915). ಶಾಲೆಗಳಲ್ಲಿ ಸಂಗೀತ ಪಾಠ ಮಾಡುವಾಗ ವಿದ್ಯಾರ್ಥಿಗಳಿಗೆ ಪ್ರಾರಂಭದಿಂದಲೇ ಲಕ್ಷ್ಯ ಮತ್ತು ಲಕ್ಷಣಗಳ ಜ್ಞಾನ ಉಂಟಾಗಬೇಕೆಂಬುದು ಇವರ ಅಭಿಪ್ರಾಯವಾಗಿತ್ತು. ಅದರಂತೆಯೇ ಈ ಗ್ರಂಥದಲ್ಲಿ ಮೊದಲು ಶಾಸ್ತ್ರಭಾಗ, ಅನಂತರ ಬಾಲಪಾಠಕ್ಕೆ ಬೇಕಾದ ಸರಳೆ, ಜಂಟಿ ಸರಳೆ, 35 ಅಲಂಕಾರಗಳು, ಗೀತಗಳು, ವರ್ಣಗಳು, ಲಕ್ಷಣಗಳು, ಲಕ್ಷಣಗೀತಗಳು, ಸ್ವರಜತಿಗಳು, ವರ್ಣಗಳು ಮತ್ತು ಕೃತಿಗಳನ್ನು ವಿವರಿಸಲಾಗಿದೆ. ಈ ಗ್ರಂಥ ಆಗಿನ ಪ್ರಸಿದ್ಧ ಸಂಗೀತ ವಿದ್ವಾಂಸರ ಪ್ರಶಂಸೆಯನ್ನು ಪಡೆಯಿತು.

ಅನೇಕ ಬಾರಿ ದಕ್ಷಿಣ ಭಾರತದಲ್ಲಿ ಪ್ರವಾಸ ಕೈಗೊಂಡು, ತಮ್ಮ ವೀಣಾವಾದನ ಪ್ರಾವೀಣ್ಯವನ್ನು ಪ್ರದರ್ಶಿಸಿ ಧನ ಮತ್ತು ಕೀರ್ತಿಯನ್ನು ಸಂಪಾದಿಸಿದರು. ಇವರಿಗೆ ವೈದ್ಯ, ಕುಸ್ತಿ, ಈಜು ಮೊದಲಾದ ವಿಷಯಗಳಲ್ಲಿಯೂ ಆಸಕ್ತಿ, ಪ್ರಾವೀಣ್ಯಗಳಿದ್ದವು. (ಎ.ಆರ್.ಕೆ.)

**ವೀರಕೇಸರಿ ಸೀತಾರಾಮಶಾಸ್ತ್ರಿ:** 1893–1971. ಹೆಸರಾಂತ ಪತ್ರಿಕೋದ್ಯಮಿ, ಸಾಹಿತಿ ಮತ್ತು ರಾಜಕಾರಣಿ. 1893ರಲ್ಲಿ ನಂಜನಗೂಡಿನಲ್ಲಿ ಜನಿಸಿದರು. ಮದ್ದೂರಿನ ನಾಗೇಶಶಾಸ್ತ್ರಿಗಳು ಇವರ ತಂದೆ. ತಾಯಿ ಪಾರ್ವತಮ್ಮನವರು ನಂಜನಗೂಡಿನವರು. ಶಾಸ್ತ್ರಿಗಳ ಸೋದರಮಾವಂದಿರಲ್ಲಿ

ಒಬ್ಬರಾದ ಶ್ರೀಕಂಠಶಾಸ್ತ್ರಿಗಳು ಶೃಂಗೇರಿ ಮಠದ ಪ್ರತಿನಿಧಿಯಾಗಿದ್ದರು. ಇನ್ನೊಬ್ಬರು ಕೃಷ್ಣಶಾಸ್ತ್ರಿಗಳು ಮೈಸೂರು ಆಸ್ಥಾನದಲ್ಲಿದ್ದರು. ಝಾನ್ಸಿ ಲಕ್ಷ್ಮೀಬಾಯಿಯ ದತ್ತು ಮಗ ದಾಮೋದರರಾಯ ಶೃಂಗೇರಿಗೆ ಬಂದಿದ್ದಾಗ ಶಾಸ್ತ್ರಿಯವರು ಆತನನ್ನು ಭೇಟಿಯಾಗಿದ್ದರು. ಇದರಿಂದಾಗಿ ಅವರಲ್ಲಿ ಸುಪ್ತವಾಗಿದ್ದ ರಾಜಕೀಯ ಪ್ರಜ್ಞೆ ಬೆಳೆಯಲು ಕಾರಣವಾಯಿತು. ಪುರಿಯ ಧರ್ಮಪೀಠವನ್ನೇರಿದ ಶ್ರೀ ವೆಂಕಟರಮಣ ಸರಸ್ವತಿಯರು ಶಾಸ್ತ್ರಿಗಳ ಸಹವಾಸಿಗಳಾಗಿದ್ದರು.

ಶಾಸ್ತ್ರಿಗಳು ತಮ್ಮ ಬಾಲ್ಯವನ್ನು ಕಳೆದದ್ದು ಶೃಂಗೇರಿಯಲ್ಲಿ. ಅಲ್ಲಿನ ಧಾರ್ಮಿಕ ಹಾಗೂ ಪಂಡಿತ ಪರಿಸರ ಇವರ ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಯಿತು. ಬಾಲಕರಾಗಿದ್ದಾಗಲೇ ಒಮ್ಮೆ ಚಿಣ್ಣಿಕೋಲು ಆಟವಾಡುತ್ತಿದ್ದಾಗ ಶಾಸ್ತ್ರಿಯವರು ಚಿಣ್ಣಿಯ ಏಟಿನಿಂದ ಒಂದು ಕಣ್ಣನ್ನು ಕಳೆದುಕೊಂಡರು.

ಶಾಸ್ತ್ರಿಗಳು ಶೃಂಗೇರಿಯಲ್ಲಿದ್ದಾಗಲೇ ಆರ್ಯ ಮಹಿಳಾ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಸುಮಾರು ಒಂದು ವರ್ಷಕಾಲ ನಡೆಸಿಕೊಂಡು ಬಂದರು. ಸುಮಾರು 1919ರಲ್ಲಿ ಶಾಸ್ತ್ರಿಗಳು ಶೃಂಗೇರಿಯಿಂದ ಬೆಂಗಳೂರಿಗೆ ಬಂದು ಶಂಕರ ಮಠದ ಭಾರತೀಯ ಗೀರ್ವಾಣ ಪ್ರೌಢಶಾಲೆಯ ಸಂಸ್ಕೃತ ವಿಭಾಗದಲ್ಲಿ ಕೆಲಸ ಮಾಡಲಾರಂಭಿಸಿದರು. ಮುಂದೆ ಸ್ವಲ್ಪಕಾಲ ತಿರುಚಿರಾಪಳ್ಳಿಯಲ್ಲಿ ಒಂದು ಚಿತ್ರಮಂದಿರವನ್ನು ಕಟ್ಟಿದರು. ಕಾವೇರಿ ನದಿ ಪ್ರವಾಹದಲ್ಲಿ ಆ ಚಿತ್ರಮಂದಿರ ಕೊಚ್ಚಿಹೋಗಿ ಇವರಿಗೆ ಅಪಾರ ನಷ್ಟವಾಯಿತು. ಇದರಿಂದ ಬೇಸರಗೊಂಡು ಇವರು ಕಾಶೀಯಾತ್ರೆ ಹೊರಟು, ಭಾರತದ ವಿದ್ಯಾಕೇಂದ್ರಗಳನ್ನು ಸಂದರ್ಶಿಸಿ, ಪಂಡಿತರೊಡನೆ ವಿಚಾರವಿನಿಮಯ ಮಾಡಿಕೊಂಡು ಅಪಾರ ಅನುಭವದೊಡನೆ ಹಿಂದಿರುಗಿದರು. ಈ ಸಮಯದಲ್ಲೇ ಪಂಡಿತ ಮದನಮೋಹನ ಮಾಳವೀಯರ ಪರಿಚಯವಾಗಿ ಸ್ನೇಹ ಬೆಳೆಯಿತು. ಮಾಳವೀಯರು ಶಾಸ್ತ್ರಿಗಳನ್ನು ಗಾಂಧೀಜಿಗೆ ಪರಿಚಯ ಮಾಡಿಸಿದರು. ಗಾಂಧೀಜಿ ಇವರನ್ನು 'ಸನಾತನ ಶಾಸ್ತ್ರೀಜಿ' ಎಂದು ಸಂಬೋಧಿಸುತ್ತಿದ್ದರಂತೆ. (ಎಂ.ಎಸ್.ಎಂ.)

ಸಂಸ್ಕೃತ ಭಾಷೆ ಸಾಹಿತ್ಯಗಳನ್ನು ಚೆನ್ನಾಗಿ ತಿಳಿದಿದ್ದ ಶಾಸ್ತ್ರಿಗಳು ಆರಂಭದಲ್ಲಿ ಸಂಸ್ಕೃತದಲ್ಲೇ ಕಾವ್ಯರಚನೆಗೆ ಪ್ರಯತ್ನಿಸಿದ್ದರಂತೆ. ಸುಮಾರು 14-15 ವರ್ಷದಲ್ಲೇ ಸಾಧ್ವಿ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರಂತೆ. ಸ್ವಲ್ಪಕಾಲ ಸಂಪದಭ್ಯುದಯ ಮತ್ತು ಸಾಧ್ವಿ ಪತ್ರಿಕೆಗಳಲ್ಲಿ ಕೆಲಸ ಮಾಡಿ 1927ರಲ್ಲಿ ಗ್ರಾಮಜೀವನ ಪತ್ರಿಕೆಯ ಸಂಪಾದಕರಾದರು. ಸ್ವತಂತ್ರಮನೋವೃತ್ತಿಯ ಶಾಸ್ತ್ರಿಗಳು ಆ ಪತ್ರಿಕೆಯ ಮೂಲಕ ಆಳುವ ಸರ್ಕಾರಕ್ಕೆ ಅಡಿಯಾಳಾಗಿ ಇರಲು ಒಪ್ಪಲಿಲ್ಲ. ಜೊತೆಗೆ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಶಾಸ್ತ್ರಿಗಳು ಅವರ ಕರೆಗೆ ಓಗೊಟ್ಟು 1928ರ ಮೇ 2ರಂದು ವೀರಕೇಸರಿ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ವೀರಕೇಸರಿಯ ಕರೆ ಜನತೆಯನ್ನು ಮುಟ್ಟಿತು. ಅದರ ಗರ್ಜನೆ ಸರ್ಕಾರಕ್ಕೆ ಭಯ ತಂದಿತು. ರಾಷ್ಟ್ರದ ಸ್ವಾತಂತ್ರ್ಯಕ್ಕೆ ಪಣತೊಟ್ಟಿದ್ದ ಈ ಪತ್ರಿಕೆ ಸ್ವಾತಂತ್ರ್ಯಾನಂತರವೂ ಕೆಲವು ಕಾಲ ಪ್ರಕಟವಾಗುತ್ತಿತ್ತು. ನಾಡಿನ 'ಸಾರ್ವಜನಿಕ ಜೀವನವನ್ನು ಶುಭ್ರಗೊಳಿಸುವುದು ಪತ್ರಿಕೆಯ ಧ್ಯೇಯವಾಗಿದ್ದು ವೀರಕೇಸರಿಯ ನಿರ್ಭೀತ ಬರೆವಣಿಗೆಯಿಂದ ಶಾಸ್ತ್ರಿಗಳು ವೀರಕೇಸರಿ ಸೀತಾರಾಮಶಾಸ್ತ್ರಿಗಳೆಂದು ಪ್ರಸಿದ್ಧರಾದರು. ಅನೇಕ ಸಂದರ್ಭಗಳಲ್ಲಿ ಸರ್ಕಾರದ ಕಿರುಕುಳ ಸಹಿಸಲಾರದೆ ರಾಜ್ಯದ ಹೊರಗಡೆಯಿಂದ ಪತ್ರಿಕೆಯನ್ನು ಪ್ರಕಟಿಸಿದ ಸಾಹಸ ಇವರದು. ಶಾಸ್ತ್ರಿಗಳು ಕೆಲವು ಕಾಲ ವಾರ್ತಾ ಎಂಬ ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು.

ಮೈಸೂರಿನಲ್ಲಿ ಕಾಂಗ್ರೆಸ್ ಸಂಸ್ಥೆಗೆ ಅಸ್ತಿಭಾರ ಹಾಕಿದವರಲ್ಲಿ ಶಾಸ್ತ್ರಿಗಳೂ ಒಬ್ಬರು. ಇದರಿಂದಾಗಿ ಕೆಲವು ಬಾರಿ ಸೆರೆಮನೆಗೂ ಹೋಗಿಬಂದರು. ಇಷ್ಟೆಲ್ಲ ಕಾರ್ಯಕ್ರಮಗಳ ಮಧ್ಯೆ ಶಾಸ್ತ್ರಿಗಳ ಸಾಹಿತ್ಯರಚನೆ ನಿರಾಂತಕವಾಗಿ ನಡೆಯಿತು. ಇವರು ಸುಮಾರು 60 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಹೆಚ್ಚಿನವು ಕಾದಂಬರಿಗಳು. ದೌಲತ್, ಶ್ರೀರಂಗರಾಯ, ನಗರದ ರಾಣಿ, ಬಿದನೂರು ರಾಣಿ, ಗೋಲ್ಕೊಂಡ ಪತನ, ರಾಜಪಂಜರ, ಆದಿಲ್‌ಷಾಹಿಯ ಕಡೆಯ ದಿನಗಳು, ಛತ್ರಪತಿ ಶಿವಾಜಿ, ಯವನವಿದ್ರೋಹಿ ಶಿವಾಜಿ ಈ ಐತಿಹಾಸಿಕ ಕಾದಂಬರಿಗಳು ಪ್ರಸಿದ್ಧವಾಗಿವೆ.

ಸರಳ ಗದ್ಯದಲ್ಲಿ ಇವರು ವಾಲ್ಮೀಕಿ ರಾಮಾಯಣವನ್ನು ಬರೆದಿದ್ದಾರೆ. ಶ್ರೀಮದ್ಭಾಗವತವನ್ನೂ ಅದೇ ರೀತಿ ಪ್ರಕಟಿಸಬೇಕೆಂದಿದ್ದು ಅದರ ಪ್ರಥಮ ಭಾಗವನ್ನು ಪ್ರಕಟಿಸಿದರು. ದ್ವಿತೀಯ ಭಾಗವನ್ನು ಪ್ರಕಟಿಸುವ ಮೊದಲೇ ಇವರು 1971ರ ಜನವರಿ 5ರಂದು ನಿಧನರಾದರು.

ಪತ್ನಿ ಸುಬ್ಬಮ್ಮನವರು ಇವರಿಗೆ ಒಂಬತ್ತು ಮಕ್ಕಳು. ಕನ್ನಡದ ಪ್ರಸಿದ್ಧ ಪತ್ತೆದಾರಿ ಕಾದಂಬರಿಕಾರ ಮ. ರಾಮಮೂರ್ತಿ ಇವರ ಹಿರಿಯ ಮಗ.

**ವೀರಗಾಸೆ ಕುಣಿತ:** ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಚಮಾಳ, ಕರಡೆ, ದೋಣು, ತಾಳ, ಓಲಗ-ಮೊದಲಾದ ವಾದ್ಯಮೇಳದೊಂದಿಗೆ ನಡೆವ ಧಾರ್ಮಿಕ ವೀರನೃತ್ಯ.

ಇದರಲ್ಲಿ ಎಂಟರಿಂದ ಹನ್ನೆರಡು ಜನರವರೆಗೆ ಪಾಲುಗೊಳ್ಳುವರು. ವೀರಗಾಸೆ ಹಾಕುವವರನ್ನು ಪುರವಂತರೆಂದು ಕರೆಯುತ್ತಾರೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಸಿನ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿಸರ, ಹಣೆಗೆ ವಿಭೂತಿ, ಕಿವಿಯಲ್ಲಿ ಕುಂಡಲ, ಸೊಂಟಕ್ಕೆ ಸೊಂಟಪಟ್ಟಿ, ಕೈಯಲ್ಲಿ ಬಿಚ್ಚುಗತ್ತಿ, ಕಾಲಲ್ಲಿ ಗೆಜ್ಜೆ-ಇವು ಇವರ ವೇಷಭೂಷಣ. ಚಮಾಳ ಬಡಿತ ಇವರ ಕುಣಿತಕ್ಕೆ ಸ್ಫೂರ್ತಿ ನೀಡುತ್ತದೆ. ಚಮಾಳದವನೂ ಕೆಲವು ವೇಳೆ ವೀರಗಾಸೆಯವರೊಂದಿಗೆ ಕುಣಿಯುವುದುಂಟು. 'ಉಲ್ಲಾಸಭರಿತರಾಗಿ ಕುಳಿತಿರುವ ಎಲ್ಲಾ ಜನಂಗಳು ಸಲ್ಲಲಿತವಾಗಿ ಗುಲ್ಲು ಮಾಡದೆ ನೀವು ಕೇಳಿರಿ, ಅಹಹಾ ರುದ್ರಾ..... ಅಹಹ ದೇವಾ' ಎಂದು ವೀರಗಾಸೆಯ ನರ್ತಕ ಹೇಳುವ ಬೆಡಗಿನ ಒಡಪಿನೊಂದಿಗೆ ಕುಣಿತ ಆರಂಭವಾಗುತ್ತದೆ. ಪ್ರತಿಮಾತಿಗೆ ಚಮಾಳದ ಬಡಿತದ ಉತ್ತರವಿರುತ್ತದೆ. ಪೌರಾಣಿಕ ಕತೆಯೊಂದನ್ನು ಹೇಳಿ, ಕೊನೆಯಲ್ಲಿ ಬಹುಪರಾಕ್ ಎಂದು ಮುಗಿಸುತ್ತಿದ್ದಂತೆ ರೋಮಾಂಚಕಾರಿ ಚಮಾಳದ ಬಡಿತ ಮತ್ತು ವಾದ್ಯಮೇಳದೊಂದಿಗೆ ನರ್ತನ ಮುಂದುವರಿಯುತ್ತದೆ.

ವೀರಗಾಸೆಯ ಕುಣಿತದಲ್ಲಿ ನಾಲ್ಕೈದು ಗತಿ (ಕಾಲ) ಗಳಿವೆ. ಒಂದೊಂದು ಗತಿಯ ಕುಣಿತದ ಅನಂತರ ಯಾರಾದರೊಬ್ಬ ನರ್ತಕ ಒಡಪು ಹೇಳುತ್ತಾನೆ. ಒಡಪು ಮುಗಿಯುತ್ತಿದ್ದಂತೆ ಮತ್ತೆ ಮುಂದಿನ ಗತಿಯ ಕುಣಿತ ಆರಂಭವಾಗುತ್ತದೆ. ಗತಿಯಿಂದ ಗತಿಗೆ ಕುಣಿತ-ಬಡಿತಗಳ ವೇಗ ಪರಾಕಾಷ್ಠೆ ಮುಟ್ಟುತ್ತ ಹೋಗುತ್ತದೆ. ಆಗ ಶಸ್ತ್ರಪವಾಡ ನಡೆಯುತ್ತದೆ. ಆವೇಶದಿಂದ

ಮೈತುಂಬಿದ ನರ್ತಕ ಪಂಚಲೋಹದ ಸೂಜಿಯನ್ನು, ಒಂದು ಕೆನ್ನೆ ಹಾದು ಇನ್ನೊಂದು ಕೆನ್ನೆ ದಾಟುವಂತೆ ಚುಚ್ಚಿಕೊಳ್ಳುತ್ತಾನೆ. ಹಾಗೆಯೇ ಸ್ವಲ್ಪ ಹೊತ್ತು ಕುಣಿದ ಅನಂತರ ಆ ಶಸ್ತ್ರವನ್ನು ಹೊರತೆಗೆಯಲಾಗುತ್ತದೆ. ಆವೇಶತುಂಬಿದ ನರ್ತಕರು ಕೊಂಡಹಾಯುವುದೂ ಉಂಟು.

ಗ್ರಾಮಾಂತರ ಪ್ರದೇಶದಲ್ಲಿ ಹಬ್ಬಹರಿದಿನಗಳಲ್ಲಿ, ತೇರು ಜಾತ್ರೆಗಳಲ್ಲಿ, ಮದುವೆ, ಮನೆದೇವರ ಉತ್ಸವಗಳಲ್ಲಿ ವೀರಗಾಸೆ ಕುಣಿತ ಏರ್ಪಡಿಸುತ್ತಾರೆ. ವೀರಗಾಸೆ, ಜನಪದರು ಹೇಳುವಂತೆ, ಪರಶಿವನಿಂದ ಆಜ್ಞಾಪಿತನಾದ ವೀರಭದ್ರ ಅಹಂಕಾರದಿಂದ ಮೆರೆಯುತ್ತಿದ್ದ ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಮಾಡಿ, ಹಿಂತಿರುಗಿದ ವಿಜಯೋತ್ಸವದ ಸಂಕೇತ. ಜಡಕರ್ಮಗಳನ್ನೂ ಯಜ್ಞಯಾಗಾದಿಗಳನ್ನೂ ವಿರೋಧಿಸಿದ ಪ್ರಗತಿಪರ ವೀರವ್ರತ ವೀರಭದ್ರನ ಉದಯ, ಉತ್ಕ್ರಾಂತಿ ಮತ್ತು ವಿಜಯಗಳ ಉದ್ಘೋಷ, ಕಾಲದೊಡನೆ ಬೆಳೆದು ಬಂದ ವೀರಶೈವ ಪರಂಪರೆಯ ಕಲೆಯಾಗಿ, ಒಡಪು ಹೇಳುವುದು ಪುರವಂತರಿಗೆ ಸಿದ್ಧಿಸಿದ ಕಲೆ. ಇವರು ಹೇಳುವ ಬಹುತೇಕ ಒಡಪುಗಳು ಶಿವನನ್ನು, ಶಿವನ ಆಧಿಕ್ಯವನ್ನು ಕುರಿತ ಉಗ್ಗಡಣೆಗಳು. ವೀರಭದ್ರನ ವರ್ಣನೆಯಿಲ್ಲದೆ ವೀರಗಾಸೆ ಕುಣಿತವೇ ಇಲ್ಲ ಎನ್ನಬಹುದು.

ವೀರಭದ್ರದೇವರು ಹುಟ್ಟಿದ ರೂಪೆಂತೆಂದೊಡೆ–ಹುಟ್ಟಿದಾಗಲೆ ಹೂವಿನ ಗಾಸೆ, ಮಂಜುಳಗಾಸೆ, ಬ್ರಹ್ಮಗಾಸೆ, ವಿಷ್ಣುಗಾಸೆ, ರುದ್ರಗಾಸೆ, ಮೆಟ್ಟಿದ ಹೊನ್ನಾವಿಗೆ ಸಾವಿರ ಶಿರ, ಮೂರು ಸಾವಿರ ನಯನ, ಎರಡು ಸಾವಿರ ಭುಜ, ಕೆಕ್ಕರಿಸಿದ ಕಣ್ಣು, ಜುಂಜುಮಂಡೆ–ಇಂತಪ್ಪ ಶ್ರೀ ವೀರಭದ್ರದೇವರು ಹೋಮದ ಕುಂಡದ ಬಳಿಗೆ ಹೇಗೆ ಬರುತ್ತಾರೆಂದರೆ ಲಲಾಟದಲ್ಲಿ ತ್ರಿಪುಂಡ್ರ ಭಸ್ಮ, ಹಸ್ತದಲ್ಲಿ ಹಲಗೆ, ಕತ್ತಿ ಅಲುಗು, ಬಿಲ್ಲುಬಾಣ, ಬಿರುದಿನ ಪಟ್ಟಗತ್ತಿ, ಅದಿರುಗತ್ತಿ, ಕಂಕಣಗತ್ತಿ, ಬಿದಿರುಗತ್ತಿ, ಖಡ್ಗಗತ್ತಿ, ಗರಗಸೆಗತ್ತಿ, ಕಕ್ಕಡವಂಕಿ, ಪಾಂಡುವಾಳ, ಗಂಡುಗತ್ತರಿ, ಕೈಯಂಬು, ಕಠಾರಿ ಈಟಿ, ರಣಚೂರಿ, ಉರಲುಹಗ್ಗ, ಬೀಸುವ ಹಗ್ಗ, ಶೂಲಬಾಣ, ಕೆಂಡಬಾಣ, ಸೂರ್ಯಬಾಣ, ವಂಕಿಬಾಣ, ಉರಿಬಾಣ, ಹೊಗೆ ಬಾಣ–ಹೀಗೆ ಹರಿಯುವ ವೀರಭದ್ರನ ವರ್ಣನೆ ರೋಮಾಂಚಕಾರಿಯಾದುದು.

ಸಾಹಿತ್ಯ, ವಾದ್ಯಸಂಗೀತ, ನೃತ್ಯ ಈ ಮೂರು ಕಲೆಗಳ ಸಂಗಮವಾಗಿ ದೈವೀ ಆರಾಧನೆಯ ಒಂದು ರೂಪವಾಗಿ ಸಾಂಸ್ಕೃತಿಕ ಹಾಗೂ ಮನರಂಜನೆಗಳು ಸಾಧನವಾಗಿ ವೀರಗಾಸೆ ಕುಣಿತ ಉಳಿದುಬಂದಿದೆ. **(ಜಿ.ಆರ್.ಸಿ.)**

**ವೀರಣ್ಣಗೌಡ, ಎಚ್.ಕೆ.:** 1899–1976. ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಸಚಿವರು. ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಅವ್ವೇರಹಳ್ಳಿಯಲ್ಲಿ 1899 ಮೇ 1ರಂದು ಜನಿಸಿದರು. ಇವರ ಪೂರ್ವಿಕರಾದ ಹೋಬಳಿ ವೀರಣ್ಣಗೌಡರೆಂಬುವರು ಶಿಸ್ತಿಗೆ ಹೆಸರಾಗಿದ್ದವರು. ಅವರ ಪ್ರಭಾವ ಎಚ್.ಕೆ. ವೀರಣ್ಣಗೌಡರ ಮನೆತನದ ಮೇಲಾಗಿತ್ತು. ಹೀಗಾಗಿ ವೀರಣ್ಣಗೌಡರ ಮನೆತನದವರನ್ನು ಈಗಲೂ ಹೋಬಳಿ ವೀರಣ್ಣಗೌಡರ ಮನೆಯವರು ಎಂದೇ ಕರೆಯುತ್ತಾರೆ.

ವೀರಣ್ಣಗೌಡರ ಆರಂಭದ ಓದು ಮನೆಯಲ್ಲಿಯೇ ಪ್ರಾರಂಭವಾಯಿತು. ಅಕ್ಕೂರು, ಚನ್ನಪಟ್ಟಣಗಳಲ್ಲಿ ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ಪಡೆದರು. ವಿದ್ಯಾರ್ಥಿದೆಸೆಯಲ್ಲಿಯೇ ವೀರಣ್ಣಗೌಡರಲ್ಲಿ ಗಾಢವಾದ ಸಾಮಾಜಿಕ ಪ್ರಜ್ಞೆ ಬೇರೂರಿತ್ತು. ಚನ್ನಪಟ್ಟಣ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಇವರಿಗೆ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿದ್ದ ಅನೇಕ ಹಿರಿಯರ ಸಂಪರ್ಕ ದೊರೆಯಿತು; ರಾಜ್ಯದ ಹೊರಗೆ ಪ್ರವಾಸ ಮಾಡುವ ಅವಕಾಶಗಳೂ ಒದಗಿದುವು. ಅದೇ ಸಮಯದಲ್ಲಿ ಚನ್ನಪಟ್ಟಣದಲ್ಲಿ ತಮ್ಮ ಮಿತ್ರರೊಡನೆ ಸೇರಿ ಒಕ್ಕಲಿಗರ ವಿದ್ಯಾರ್ಥಿ ಸಂಘವನ್ನು, ಒಕ್ಕಲಿಗರ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಸ್ಕೌಟಿಂಗ್ ಚಳವಳಿ, ಸಮಾಜಸೇವೆ, ಕರ್ನಾಟಕ ವಿದ್ಯಾರ್ಥಿ ಎಂಬ ದ್ವೈಮಾಸಿಕದ ಸಂಪಾದನೆ ಇವೇ ಮೊದಲಾದವು ಯುವಕ ವೀರಣ್ಣಗೌಡರ ಚೈತನ್ಯವನ್ನು ಅರಳಿಸಿದವು.

ಮೈಸೂರು, ಬೆಂಗಳೂರುಗಳಲ್ಲಿ ಉನ್ನತ ಶಿಕ್ಷಣ ಪಡೆದ ಇವರು ಸ್ವಲ್ಪ ಕಾಲ ಉಪಾಧ್ಯಾಯರಾಗಿ ಕೆಲಸ ಮಾಡಿದರು. ಆ ಸಮಯದಲ್ಲಿ ದೇ. ಜವರೇಗೌಡರ ಜೀವನದ ಮಹತ್ತರ ತಿರುವಿಗೆ ಕಾರಣರಾದರೆಂಬುದು ಇಲ್ಲಿ ಉಲ್ಲೇಖನೀಯ.

ಕನ್ನಡ ಪತ್ರಿಕೋದ್ಯಮ ಬೆಳೆವಣಿಗೆಗೆ ವೀರಣ್ಣಗೌಡರು ಸಲ್ಲಿಸಿದ ಕಾಣಿಕೆ ಗಣ್ಯವಾದುದು. ಬೆಂಗಳೂರು ಒಕ್ಕಲಿಗರ ಸಂಘದಲ್ಲಿ ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ಇವರು ನಿರ್ವಹಿಸಿದ ಕೆಲಸ ಹಿರಿದು. 1928ರಲ್ಲಿ

ಆ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಪ್ರಕಟಿಸಿ, ಕನ್ನಡ ಪತ್ರಿಕಾರಂಗಕ್ಕೊಂದು ಹೊಸದಾರಿ ಹಾಕಿಕೊಟ್ಟರು. ಈ ಪತ್ರಿಕೆಯ ವ್ಯವಸ್ಥಾಪಕರಿಗೂ ಇವರಿಗೂ ಮನಸ್ತಾಪ ಬಂದುದರಿಂದ ಒಕ್ಕಲಿಗರ ಪತ್ರಿಕೆಯನ್ನು ಬಿಟ್ಟು ಸ್ವತಂತ್ರವಾಗಿ 1928ರ ಡಿಸೆಂಬರ್‌ನಲ್ಲಿ ಚಿತ್ರಗುಪ್ತ **(ನೋಡಿ)** ಎಂಬ ಪತ್ರಿಕೆಯನ್ನು ಆರಂಭಿಸಿ ಮೂರು ವರ್ಷಗಳ ಕಾಲ ನಡೆಸಿದರು.

ಸಾಮಾಜಿಕ ಮೌಢ್ಯಗಳನ್ನು ಕಿತ್ತೊಗೆಯುವ ದೃಢವ್ಯಕ್ತಿತ್ವ ವೀರಣ್ಣಗೌಡರು ವಿಧವಾ ವಿವಾಹವನ್ನು ಶಾಸ್ತ್ರೋಕ್ತವಾಗಿ ತಾಯಮ್ಮ ಎಂಬುವರೊಂದಿಗೆ (1931 ಮಾರ್ಚ್ 2) ಮಾಡಿಕೊಂಡರು. ಇವರು 1932ರಲ್ಲಿ ನಡೆಸಿದ ಇರ್ವಿನ್ ನಾಲಾ ರೈತರ ಹೋರಾಟ ಇವರಿಗಿದ್ದ ಅದ್ಭುತ ಸಂಘಟನಾಶಕ್ತಿಗೆ ಸಾಕ್ಷಿ. ಮಂಡ್ಯ ಜಿಲ್ಲೆಯ ರೈತರ ಸಂಕಷ್ಟವಿಮುಕ್ತಿಗಾಗಿ ಆ ಕಾಲದಲ್ಲಿ ರೈತರ ಸಂಘಟನೆ ಮಾಡಿ ಬೆಂಗಳೂರಿಗೆ ಜಾಥಾ ಹೊರಡಿಸಿದ್ದು ಇವರ ನೇತೃತ್ವದಲ್ಲಿಯೇ. ಈ ಜಾಥಾ ಇಂದಿಗೂ ಐತಿಹಾಸಿಕ ಘಟನೆಯಾಗಿ ಮಹತ್ತ್ವದ ಸ್ಥಾನವನ್ನು ಪಡೆದುಕೊಂಡಿದೆ; ಅಗ್ರೇರಿಯನ್ ರೆವಲೂಷನ್ ಎಂದು ಪ್ರಸಿದ್ಧವಾಗಿದೆ.

ಇವರು ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಕಾಂಗ್ರೆಸ್ ಜೊತೆ ಸಂಪರ್ಕ ಇಟ್ಟುಕೊಂಡಿದ್ದರು. 1934ರಲ್ಲಿ ಮೈಸೂರು ಜಿಲ್ಲಾ ಮಂಡಳಿಯ ಸದಸ್ಯರಾಗಿ

ಸೇವೆಸಲ್ಲಿಸಿದ ಇವರು, ಕೆಲವು ಕಾಲ ಮದ್ದೂರು ಪುರಸಭೆಯ ಅಧ್ಯಕ್ಷರೂ ಆಗಿದ್ದರು. ಆಗಿನ ಮೈಸೂರು ಸಂಸ್ಥಾನದಲ್ಲಿಯೇ ಮೊದಲನೆಯದಾದ ಶಿವಪುರದ ಐತಿಹಾಸಿಕ ಕಾಂಗ್ರೆಸ್ ರಾಷ್ಟ್ರಕೂಟವನ್ನು ನಡೆಸಿದ ಕೀರ್ತಿ ವೀರಣ್ಣಗೌಡರದು. 1938ರ ಏಪ್ರಿಲ್ ತಿಂಗಳಲ್ಲಿ ಐತಿಹಾಸಿಕ ಧ್ವಜವಂದನೆ ಮತ್ತು ಆರೋಹಣ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಆಳುವ ಸರ್ಕಾರದ ವಿರೋಧದ ಮಧ್ಯೆಯೂ ಹಿಡಿದ ಕೆಲಸವನ್ನು ಯಶಸ್ವಿಯಾಗಿ ಮಾಡಿ ಮುಗಿಸುವ ಛಲ ಗೌಡರಿಗಿತ್ತು. ಭಾರತ ಸ್ವಾತಂತ್ರ್ಯಸಂಗ್ರಾಮದಲ್ಲೂ ಭಾಗವಹಿಸಿ ಸೆರೆಮನೆ ಶಿಕ್ಷೆಯನ್ನು ಅನುಭವಿಸುವ ಇವರು ಸ್ವಾತಂತ್ರ್ಯಾ ನಂತರ ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಮೂರು ಬಾರಿ (1947, 1952, 1958) ಚುನಾಯಿತರಾದರು. 1956ರಲ್ಲಿ ಅಂದಿನ ಮೈಸೂರು ಸಂಸ್ಥಾನದ ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಖಾತೆಯ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಅನಂತರ 1959ರಲ್ಲಿ ಮತ್ತೊಂದು ಸಾರಿ ಸಚಿವರಾಗಿ ಸೇವೆಸಲ್ಲಿಸಿದರು. 1962ರಲ್ಲಿ ಮೈಸೂರು ಶಾಸನ ಸಭೆಗೆ ನಡೆದ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಸ್ಪರ್ಧಿಸಿ ಸೋತ ಇವರು 1964ರಲ್ಲಿ ಲೋಕಸಭಾಸದಸ್ಯರಾಗಿ ಆಯ್ಕೆಯಾದರು.

ಬೆಂಗಳೂರಿನ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡಿದ ವೀರಣ್ಣಗೌಡರು, ಆದಿಚುಂಚನಗಿರಿ ಮಠದ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಸ್ವಲ್ಪಕಾಲ ನಿರ್ವಹಿಸದರು. ಗ್ರಾಮಾಂತರ ಪ್ರದೇಶದ ಮಕ್ಕಳ ವ್ಯಾಸಂಗಕ್ಕೆಂದು ಮದ್ದೂರಿನಲ್ಲಿ ಕಮಲಾ ನೆಹರೂ ಬಾಲಿಕಾ ಪ್ರೌಢಶಾಲೆ ಮತ್ತು ಅರ್ಜುನಪುರಿ ಕಲೆ ಮತ್ತು ವಿಜ್ಞಾನ ಎಂಬ ಎರಡು ಶಿಕ್ಷಣಸಂಸ್ಥೆಗಳನ್ನು ಆರಂಭಿಸಿ ಬೆಳೆಸಿದರು.

ಒಳ್ಳೆಯ ವಾಗ್ಮಿಗಳೂ ಲೇಖಕರೂ ಆಗಿದ್ದ ವೀರಣ್ಣಗೌಡರು ಕನ್ನಡದಲ್ಲಿ ಶಿವಾಜಿವಿಜಯ, ಬುದ್ಧದೇವ ಎಂಬ ಎರಡು ನಾಟಕಗಳನ್ನು ಬರೆದಿದ್ದಾರೆ. ಬದುಕು–ಮೆಲುಕು ಎಂಬುದು ಇವರ ಆತ್ಮಕಥೆ. ಇವರು 1976 ಏಪ್ರಿಲ್ 7 ರಂದು ನಿಧನರಾದರು. (ಎಸ್.ಕೆ.ಕೆ.)

**ವೀರಪ್ಪ, ಕೊಪ್ಪಳದ:** ಸ್ವಾತಂತ್ರ್ಯ ಹೋರಾಟಗಾರ. ಬ್ರಿಟಿಷ್ ಪ್ರಭುತ್ವದ ವಿರುದ್ಧ ನಡೆದ ಕೊಪ್ಪಳದ ದಂಗೆಯ (1819) ನಾಯಕ.

ನಾಲ್ಕನೆಯ ಮೈಸೂರು ಯುದ್ಧಾನಂತರ ಆದ ರಾಜ್ಯ ಪುನರ್ ವ್ಯವಸ್ಥೆಯಿಂದ ಕೊಪ್ಪಳ ಹೈದರಾಬಾದ್ ನಿಜಾಮನ ಆಡಳಿತಕ್ಕೊಳಪಟ್ಟಿತು. ಸಹಾಯಕ ಸೈನ್ಯಪದ್ಧತಿಯ ರಕ್ಷಣೆಯಲ್ಲಿ ಮೈಮರೆತಿದ್ದ ನಿಜಾಮನ ಪ್ರಜಾಪೀಡನೆ ಮೇರೆ ಮೀರಿತು. ನಿಜಾಮಶಾಹಿಯ ದಬ್ಬಾಳಿಕೆಯಿಂದ ಅನೇಕ ಜಮೀನುದಾರರು ರೋಸಿ ಹೋದರು. ಇವರಲ್ಲಿ ವೀರಪ್ಪ ಪ್ರಮುಖನಾಗಿದ್ದ. ಇವನು 1819ರಲ್ಲಿ ಕೊಪ್ಪಳ ಮತ್ತು ಬಹದ್ದೂರಬಂಧ ಎಂಬ ಎರಡು ಕೋಟೆಗಳನ್ನು ಆಕ್ರಮಿಸಿಕೊಂಡು ಕ್ರಾಂತಿಯ ಕಹಳೆಯೂದಿದ.

ಸಹಾಯಕ ಸೈನ್ಯಪದ್ಧತಿಯ ಕಟ್ಟುಪಾಡಿನಂತೆ ಬ್ರಿಟಿಷರು ಈ ಜನಕ್ಷೋಭೆಯನ್ನಡಗಿಸಿ ನಿಜಾಮನ ಅಧಿಕಾರವನ್ನು ಬಿಗಿಗೊಳಿಸಲು ಸನ್ನದ್ಧರಾದರು. 1819ರ ಮೇ 2ರಂದು ಮೇಜರ್ ಡೌಟನ್ ಎಂಬುವನ ನೇತೃತ್ವದಲ್ಲಿ ಸಿಕಂದರಾಬಾದಿನಿಂದ ಒಂದು ಸೈನ್ಯ ಈ ಕಾರ್ಯಕ್ಕಾಗಿ ಹೊರಟಿತು. ಕೃಷ್ಣಾದಂಡೆಯ ಬಳಿಯ ಘಾಟ್ ಬಳಿ ಕ್ಯಾಪ್ಟನ್ ಡೇವಿಸ್ ಎಂಬುವನ ಪಡೆ ಸಹ ಬಂದು ಸೇರಿಕೊಂಡಿತು. ಈ ಸಂಯುಕ್ತ ಪಡೆಗೆ ಬ್ರಿಗೇಡಿಯರ್ ಜನರಲ್ ಪ್ರಿಸ್ಲರ್ ಎಂಬವನು ಮುಂದಾಳಾಗಿದ್ದ. ಮೇ 8ನೆಯ ತಾರೀಕು ಬೆಳಗಿನ ಜಾವದಲ್ಲಿ ಈ ಸೈನ್ಯ ಕೊಪ್ಪಳದ ಬಳಿ ಬಂದು ಬೀಡುಬಿಟ್ಟಿತು. ಪ್ರಸ್ಲರ್ ಮುಂಜಾನೆ ಕೋಟೆಯ ರಕ್ಷಣಾ ಸಾಮರ್ಥ್ಯವನ್ನು ಪರಿಕ್ಷಿಸಿ, ಸಾಯಂಕಾಲ ಪೇಟೆಯನ್ನು ವಶಪಡಿಸಿಕೊಳ್ಳಲು ಹೊರಟ. ಆಗ ಒಬ್ಬ ವ್ಯಕ್ತಿಯು ಪ್ರಿಸ್ಲರನ ಬಳಿ ಬಂದು ತಾನು ವೀರಪ್ಪನ ಸಹೋದರನೆಂತಲೂ ಮತ್ತು ಕೋಟೆಯನ್ನು ಒಪ್ಪಿಸಿಕೊಡುವುದಾಗಿಯೂ ಹೇಳಿದ. ಇವನನ್ನು ನಂಬಿದ ಪ್ರಿಸ್ಲರ್ ತಾನು ಅಲ್ಲಿಯೇ ನಿಂತ ಮತ್ತು ಸ್ವಲ್ಪ ಸೈನ್ಯವನ್ನು ಆ ವ್ಯಕ್ತಿಯ ಸಂಗಡ ಕಳುಹಿಸಿದ. ಇವರು ಕೋಟೆಯ ದ್ವಾರದ ಬಳಿ ಹೋದಾಗ ದುರ್ಗರಕ್ಷಕರು ಪ್ರವೇಶ ನೀಡಲು ನಿರಾಕರಿಸಿದರು. ಬಲಪ್ರಯೋಗವಿಲ್ಲದೆ ದುರ್ಗವನ್ನು ವಶಪಡಿಸಿಕೊಳ್ಳುವುದು ಅಸಾಧ್ಯವೆಂದು ಆಗ ಪ್ರಿಸ್ಲರನಿಗೆ ಖಚಿತವಾಯಿತು. ಮೇ 8ನೆಯ ತಾರೀಕು ರಾತ್ರಿ ನಿಜಾಮನ ಕಡೆಯಿಂದ ಮಹಮ್ಮದ್ ಇದ್ರೂಸ್‌ಖಾನ್ ಎಂಬವನು ಒಂದು ಸೈನ್ಯದೊಡನೆ ಬಂದು ಪ್ರಿಸ್ಲರನನ್ನು ಕೂಡಿಕೊಂಡ. ಪ್ರಿಸ್ಲರ್ ಈ ಸೈನ್ಯವನ್ನು ಬಹದ್ದೂರ್ ಬಂಧವನ್ನು ಆಕ್ರಮಿಸಲು ಕಳುಹಿಸಿದ. ಅಂದೇ ಮಧ್ಯಾಹ್ನ ಎರಡು–ಮೂರು ಗಂಟೆಯ ಸಮಯದಲ್ಲಿ ಪ್ರಸ್ಲರ್ ಶತ್ರುಗಳ ವಿರುದ್ಧ ಗುಂಡು ಹಾರಿಸಲು ಆಜ್ಞೆ ಮಾಡಿದ.

ಮೇ 11ರಂದು ಬಹದ್ದೂರಬಂಧ ವೀರಪ್ಪನ ಕೈಬಿಟ್ಟುಹೋಯಿತು. ಇವನು ಕೊಪ್ಪಳ ದುರ್ಗದಲ್ಲಿ ರಕ್ಷಣೆ ಪಡೆದ. ಮೇ 12ರಂದು ವೀರಪ್ಪ ಇದ್ರೂಸ್ ಖಾನನಿಗೊಂದು ಪತ್ರ ಬರೆದು ಸಂಧಿ ಯಾಚಿಸಿದ. ಆದರೆ ಪ್ರಿಸ್ಲರ್ ತನ್ನವೇ ಷರತ್ತುಗಳನ್ನೊಡ್ಡಿದ್ದಲ್ಲದೆ, ಅವುಗಳನ್ನು ಕೂಡಲೇ ಒಪ್ಪಿಕೊಳ್ಳಬೇಕೆಂದೂ ಇಲ್ಲದಿದ್ದರೆ ಮುತ್ತಿಗೆಯನ್ನು ಮುಂದುವರಿಸುವುದಾಗಿಯೂ ಬೆದರಿಸಿದ. ಸ್ವಾಭಿಮಾನಿಯಾದ ವೀರಪ್ಪನು ಇದಕ್ಕೆ ಯಾವುದೇ ಉತ್ತರವನ್ನು ಕಳುಹಿಸದೆ ತನ್ನೊಂದಿಗಿದ್ದ 500 ಜನರೊಂದಿಗೆ ಹೋರಾಟವನ್ನು ಮುಂದುವರಿಸಿದ. ಪ್ರಿಸ್ಲರನ ಮಾತಿನಲ್ಲೇ ಹೇಳುವುದಾದರೆ ಶತ್ರುಗಳು ಪ್ರತಿ ಅಂಗುಲಕ್ಕೂ ಹೋರಾಡಿ ಎರಡೂ ದ್ವಾರಗಳ ಮೂಲಕ, ಬೆಟ್ಟದ ತುಟ್ಟ ತುದಿಯವರೆಗೂ ಎದುರಿಸಿ ಕೊನೆಗೆ ಶರಣಾದರು. ಈ ಹೋರಾಟದಲ್ಲಿ ಬ್ರಿಟಿಷರ ಕಡೆ 6 ಸೈನಿಕರು ಕೊಲ್ಲಲ್ಪಟ್ಟರು ಮತ್ತು 51 ಸೈನಿಕರು ಗಾಯಗೊಂಡರು.

ಕೊಪ್ಪಳದ ಕೋಟೆ ಬ್ರಿಟಿಷರ ವಶವಾದ ಅನಂತರ ವೀರಪ್ಪನ ಆಗುಹೋಗುಗಳ ಬಗೆಗೆ ಈಗ ದೊರೆತಿರುವ ಚಾರಿತ್ರಿಕ ದಾಖಲೆಗಳೆಲ್ಲ ಮೌನವಾಗಿವೆ. (ಎಚ್.ಪಿ.ಎಸ್.)

**ವೀರಪ್ಪ ಮೊಯಿಲಿ, ಎಂ.:** 1940– . ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (1992–94). ಲೇಖಕ, ಕವಿ ಹಾಗೂ ಕಾದಂಬರಿಕಾರ. ಇಂದಿನ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಮಾರ್ಪಾಡಿಯಲ್ಲಿ 1940 ಜನವರಿ 12ರಂದು ಜನಿಸಿದರು. ತಂದೆ ತಿಮ್ಮಯ್ಯ, ತಾಯಿ ಪೂವಮ್ಮ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮೂಡಬಿದಿರೆಯಲ್ಲಿ ಮುಗಿಸಿ ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಅಧ್ಯಯನ ಮಾಡಿದರು (1962). ಮೀನುಗಾರಿಕೆ ಇಲಾಖೆ ಮತ್ತು ಜೀವವಿಮಾ ನಿಗಮದಲ್ಲಿ ದುಡಿಯುತ್ತ ದುಡಿಯುತ್ತ ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಿಂದ ಪದವಿ ಪಡೆದು ಕಾರ್ಕಳದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಗೇಣಿದಾರರು ಮತ್ತು ಭೂ ಕಾರ್ಮಿಕರ ಪರ ಹೋರಾಟ ನಡೆಸಿದರು. ಕಿಸಾನ ಸಭಾ ಟ್ರಸ್ಟ್ ಆರಂಭಿಸಿ (1969) ಗೇಣಿದಾರರ ಹಿತರಕ್ಷಣೆ ಮಾಡಿದರು. 1968ರಲ್ಲಿ ಇವರು ಕಾಂಗ್ರೆಸ್ ಪಕ್ಷ ಸೇರಿದರು. ಕಾರ್ಕಳ ಕ್ಷೇತ್ರದಿಂದ ಸ್ಪರ್ಧಿಸಿ ಆರು ಬಾರಿ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾದರು (1972–1999). ಕರ್ನಾಟಕ ಸಚಿವ ಸಂಪುಟ ದಲ್ಲಿ ಸಣ್ಣ ಕೈಗಾರಿಕೆ (1974–77), ಹಣಕಾಸು ಮತ್ತು ಯೋಜನೆ (1980–82), ಕಾನೂನು, ಯುವಜನ ಸೇವೆ, ಸಂಸ್ಕೃತಿ, ವಾರ್ತಾ, ಸಂಸದೀಯ ವ್ಯವಹಾರಗಳು, ಶಿಕ್ಷಣ (1991–92) ಮುಂತಾದ ವಿವಿಧ ಖಾತೆಗಳಲ್ಲಿ ಸೇವೆಸಲ್ಲಿಸಿದರು. ಶಾಸನ ಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿಯೂ (1983–85) ಇವರು ಕಾರ್ಯನಿರ್ವಹಿಸಿದ್ದಾರೆ.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ (1992–94) ರಾಜ್ಯ ಪಂಚಾಯತ್ ಕಾನೂನು ಜಾರಿಗೆ ತಂದು (1993) ಹಿಂದುಳಿದ

ವರ್ಗಗಳಿಗೆ ಕಡ್ಡಾಯವಾಗಿ ಮೀಸಲಾತಿ ಸೌಲಭ್ಯ ದೊರೆಯುವಂತೆ ಮಾಡಿದ ಸಾಧನೆ ಇವರದು. ಚಿನ್ನಪ್ಪರೆಡ್ಡಿ ಆಯೋಗದ ವರದಿ ಜಾರಿಗೊಳಿಸಿ ಹಿಂದುಳಿದ ಸಮಾಜದ ತಳಮಟ್ಟದ ವ್ಯಕ್ತಿಗೂ ಲಾಭ ದೊರೆಯುವಂತೆ ಮಾಡಿದರು. ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪರೀಕ್ಷೆ ಮೂಲಕ ಅರ್ಹತೆ ಹಾಗೂ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಎಲ್ಲರಿಗೂ ಸಮಾನ ಅವಕಾಶ ದೊರೆಯುವಂತೆ ಮಾಡಿದರು. ಕಿಸಾನ ಸಭಾ ಟ್ರಸ್ಟ್ ಮೂಲಕ ಬಾಲಕಾರ್ಮಿಕರ, ಶಿಕ್ಷಣ ಅರ್ಧಕ್ಕೆ ನಿಲ್ಲಿಸಿದವರ, ದೀನ ದಲಿತರ ಆರೋಗ್ಯ ಸಂರಕ್ಷಣೆ, ಸಾಮಾಜಿಕ ಅಭಿವೃದ್ಧಿಗೆ ದುಡಿದರು. ಪ್ರಾಥಮಿಕ ಶಾಲೆಗಳಲ್ಲಿ ಸಂಪೂರ್ಣ ಕನ್ನಡ ಮಾಧ್ಯಮ ಜಾರಿಗೊಳಿಸಿದರು. ಇವರ ಮುಂದಾಳತ್ವದಲ್ಲಿಯೇ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ **(ನೋಡಿ)** ಕಾರ್ಯಾರಂಭ ಮಾಡಿತು. ಹಣಕಾಸು ಮಂತ್ರಿಯಾಗಿದ್ದಾಗ ಇವರು ಮುಂಗಡ ಪತ್ರವನ್ನು ಪ್ರಪ್ರಥಮ ಬಾರಿಗೆ ಕನ್ನಡದಲ್ಲಿ ಮಂಡಿಸಿದರು (1981).



ಪುಸ್ತಕ ಸಂಸ್ಕೃತಿ ಬೆಳೆಸಲು ಪುಸ್ತಕ ಪ್ರಾಧಿಕಾರ ಸ್ಥಾಪಿಸಿದರು. ಕನ್ನಡ ಚಲನಚಿತ್ರಗಳಿಗೆ ಸೇ. 50 ತೆರಿಗೆ ವಿನಾಯಿತಿ ದೊರೆಯಲು ನೆರವಾದರು. ಕೃಷ್ಣಾನದಿಯ ನೀರಿನ ಬಳಕೆಗೆ ಸಂಬಂಧಿಸಿದಂತೆ ಕೃಷ್ಣ ಜಲಭಾಗ್ಯ ನಿಗಮ ಸ್ಥಾಪನೆ ಇವರ ಕಾಲದ ಮಹತ್ತ್ವದ ಸಾಧನೆ. ಇದಲ್ಲದೆ ತುಳು, ಕೊಂಕಣಿ, ಕೊಡವ ಮತ್ತು ಶಿಲ್ಪಕಲಾ ಅಕಾಡೆಮಿ ಇವರ ಕಾಲದಲ್ಲಿ ಸ್ಥಾಪನೆಯಾದವು. ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಾನ ಹಕ್ಕು ದೊರಕಿಸುವ ಕಾನೂನು ಮಾಡಿದರು. ವಾಣಿಜ್ಯ ತೆರಿಗೆ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಇವರು ಮಾಡಿರುವ ಕಾರ್ಯ ಗಣನೀಯವಾದದು. ವ್ಯಾಟ್ (ಮೌಲ್ಯಾಧಾರಿತ ತೆರಿಗೆ) ತೆರಿಗೆ ವ್ಯವಸ್ಥೆಯನ್ನು ಅನುಷ್ಠಾನಗೊಳಿಸ ಬೇಕೆಂಬುದು ತೆರಿಗೆ ಸುಧಾರಣಾ ಆಯೋಗದ ಮುಖ್ಯ ಶಿಫಾರಸುಗಳಲ್ಲೊಂದು. ಹಾಲಿ ಕೇಂದ್ರ ಸರ್ಕಾರ ರಚಿಸಿರುವ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ (2005) ಸೇವೆ ಸಲ್ಲಿಸಿದ್ದಾರೆ. 2006ರಲ್ಲಿ ಇವರನ್ನು ಕೇಂದ್ರ ಸರ್ಕಾರವು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ನಿಯುಕ್ತಗೊಳಿಸಿದೆ. ಇವೆಲ್ಲ ಇವರ ವ್ಯಕ್ತಿತ್ವ ಮತ್ತು ಕಾರ್ಯ ಶಕ್ತಿಗಳಿಗೆ ಸಂದ ಮನ್ನಣೆಗಳಾಗಿವೆ.

ಮೊಯಿಲಿಯವರು ಲೇಖಕರಾಗಿಯೂ ಹೆಸರಾಗಿದ್ದಾರೆ. ಹಾಲುಜೇನು, ಮತ್ತೆ ನಡೆಯಲಿ ಸಮರ, ಯಕ್ಷಪ್ರಶ್ನೆ– ಇವು ಇವರ ಕವನ ಸಂಕಲನಗಳು. ಮಿಲನ, ಪಾರಿಜಾತ, ಪ್ರೇಮವೆಂದರೆ– ಇವು ನಾಟಕಗಳು. ಇವರು ಸುಳಿಗಾಳಿ, ಸಾಗರದೀಪ, ಕೊಟ್ಟ, ಥೆಂಬರೆ ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. ಕೊಟ್ಟ ಕಾದಂಬರಿ ಕೊರಗ ಜನಾಂಗದ ವಾಸ್ತವಿಕ ಬದುಕಿನ ಕೈಗನ್ನಡಿಯಾಗಿದೆ. ಕೊರಗರ ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿ ಈ ಕಾದಂಬರಿಗೆ ರೂಪ ಕೊಟ್ಟಿದ್ದಾರೆ. ಸಾಗರ ದೀಪ ಚಲನಚಿತ್ರವಾಗಿದೆ. ಆಧುನಿಕ ಮಹಾಕಾವ್ಯದ ರಚನೆಯಲ್ಲಿಯೂ ತೊಡಗಿ ಇವರು ಶ್ರೀರಾಮಾಯಣ ಮಹಾನ್ವೇಷಣಂ ಎಂಬ ಮಹಾಕಾವ್ಯವನ್ನು ರಚಿಸಿದ್ದಾರೆ. ಇದುವರೆಗೆ ನಾಲ್ಕು ಸಂಪುಟಗಳು ಪ್ರಕಟವಾಗಿವೆ (2004). ಇವರ ಕೊಟ್ಟ ಹಾಗೂ ಥೆಂಬರೆ ಕಾದಂಬರಿಗಳು ಹಿಂದಿ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದವಾಗಿವೆ. ಇವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಾಡಿದ ಭಾಷಣಗಳಲ್ಲಿ 30ನ್ನು ಆಯ್ದು ನುಡಿಕಾಣಿಕೆ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ.

ಇವರ ಸಾಹಿತ್ಯಕ ಮತ್ತು ರಾಜಕೀಯ ಸಾಧನೆಗಳಿಗೆ ಹಲವು ಪ್ರಶಸ್ತಿ, ಗೌರವಗಳು ಸಂದಿವೆ. ಆಲ್ ಅಮೀನ್ ಸದ್ಭಾವನಾ ಪ್ರಶಸ್ತಿ (2000), ದೇವರಾಜ ಅರಸು ಪ್ರಶಸ್ತಿ (2001), ಆರ್ಯಭಟ ಪ್ರಶಸ್ತಿ (2001), ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ (2002) ಇವುಗಳನ್ನು ಹೆಸರಿಸಬಹುದು.

**(ಎಸ್.ಎಂ.ಕೆ.)**

**ವೀರಭದ್ರ ಕುಣಿತ:** ಶೈವ ಸಂಪ್ರದಾಯಕ್ಕೆ ಸೇರಿದ ಕರ್ನಾಟಕದ ಒಂದು ಜನಪದ ಧಾರ್ಮಿಕ ವೀರನೃತ್ಯ. ಹಳೆಯ ಮೈಸೂರು ಪ್ರದೇಶದಲ್ಲಿ ಲಿಂಗಬೀರ, ಲಿಂಗಧೀರ, ಲಿಂಗವೀರ ಕುಣಿತವೆಂದೂ ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದೂ ಜನಪ್ರಿಯವಾಗಿದೆ. ವೀರಭದ್ರನ ಕುಣಿತ, ಪುರವಂತರ ಕುಣಿತ ಎರಡೂ ಒಂದೇ ಮೂಲದವಾಗಿದ್ದರೂ ವೇಷ ಭೂಷಣ ಲಾಂಛನಗಳು ಮತ್ತು ಕುಣಿತದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಾಣಬಹುದು. ವೀರಶೈವ ಸಂಪ್ರದಾಯಕ್ಕೆ ಸೇರಿದವರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ: ಸಾಮೂಹಿಕ ನೃತ್ಯವಲ್ಲ. ಸಾಮೂಹಿಕ ನೃತ್ಯವನ್ನು ವೀರಗಾಸೆ ಕುಣಿತ **(ನೋಡಿ)** ಎನ್ನುತ್ತಾರೆ. ವೀರಭದ್ರನ ವೇಷಭೂಷಣಗಳು ಆಕರ್ಷಕವಾಗಿರುತ್ತವೆ. ತಲೆಗೆ ಚಮರೀಮೃಗದ ಚೌರಿ, ಎರಕದ ನೂರೊಂದು ಲಿಂಗಗಳು, ಹಣೆಗೆ ಭಸ್ಮ, ಗಂಧ, ಕುಂಕುಮಗಳ ಅಲಂಕಾರ, ಕಿವಿಗಳಿಗೆ ರುದ್ರಾಕ್ಷಿ ಸೇರಿಸಿದ ಕುಂಡಲಗಳು, ಕೊರಳಿಗೆ ರುದ್ರಾಕ್ಷಿ ಮಾಲೆ, ಎಡಭುಜಕ್ಕೆ ತಾಮ್ರ ಅಥವಾ ಹಿತ್ತಾಳೆಯಿಂದ ಮಾಡಿದ ವೀರಭದ್ರನ ಹಲಗೆ, ಎರಡು ಭುಜಗಳಿಗೆ ನಾಗಾಭರಣ, ಬಲಗೈಯಲ್ಲಿ ಹಿಡಿಯ ಭಾಗದಲ್ಲಿ ಸಣ್ಣಸಣ್ಣ ನಾಲಗೆಗಳನ್ನು ಜೋಡಿಸಿದ್ದು ಝಳಪಿಸಿದರೆ ಶಬ್ದ ಬರುವ ತೋಪಡ ಎಂದು ಕರೆಯುವ ಖಡ್ಗ, ಎಡಗೈಯಲ್ಲಿ ಮುಳ್ಳಂಬು ಎಂಬ ವಿಶೇಷವಾದ ಚಾಕು, ಸೊಂಟದ ಮಧ್ಯದಲ್ಲಿ ಕೀರ್ತಿಮುಖ, ಎರಡು ಪಕ್ಕಗಳಿಗೆ ರುಂಡಮಾಲೆ, ದಕ್ಷಬ್ರಹ್ಮನ ಶಿರಸ್ಸು, ಸರಪಳಿ, ಹೊಕ್ಕಳಗಂಟೆ, ಮಂಡಿಗಳಿಗೆ ಐದೈದು ಜಂಗುಗಳು, ಕಾಲುಗಳಿಗೆ ಕಿರುಗೆಜ್ಜೆ, ಗಗ್ಗರ ಮತ್ತು ಕಾಲ್ಬಂಧಿಗಳು, ಮೈಮೇಲೆ ಕಾವಿಯ ನಿಲುವಂಗಿ, ಕಾವಿಯ ಚಲ್ಲಣ ಅಥವಾ ಕೆಂಪು ನಿಲುವಂಗಿ ಮತ್ತು ಕೆಂಪು ಚಲ್ಲಣ ಧರಿಸುತ್ತಾರೆ.

ವೀರಭದ್ರನ ಕುಣಿತದಲ್ಲಿ ಓಲಗ, ತಮಟೆ ಕೆಲವು ಕಡೆಗಳಲ್ಲಿ ತಮಟೆಯ ಬದಲು ಕರಡೆ ವಾದ್ಯಗಳನ್ನು ಬಳಸುತ್ತಾರೆ. ವೀರಭದ್ರ ವೇಷಧಾರಿ ದಕ್ಷಯಾಗ, ವೀರಭದ್ರನ ಜನನ ಮತ್ತು ವೀರಭದ್ರವಿಜಯ ಮುಂತಾದವುಗಳನ್ನು ಹೇಳುತ್ತಾನೆ. ಇದಕ್ಕೆ ಖಡ್ಗ ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಒಡಪು ಎಂದು ಕರೆಯುತ್ತಾರೆ. ವೀರಭದ್ರ ಖಡ್ಗಗಳನ್ನು ಹೇಳುತ್ತಾ ಕೈಗಳಲ್ಲಿರುವ ತೋಪಡ ಮತ್ತು ಚಾಕುಗಳನ್ನು ಝಳಪಿಸುತ್ತಾ ವೀರಾವೇಷದಿಂದ ವಾದ್ಯಗಳ ಗತ್ತಿಗೆ ತಕ್ಕಂತೆ ಲಯಬದ್ಧವಾಗಿ ವೃತ್ತಾಕಾರದಲ್ಲಿ ನರ್ತಿಸುತ್ತಾನೆ. ಆ ಸಮಯದಲ್ಲಿ ವಿಶಿಷ್ಟ ವೇಷವೇನೂ ಇಲ್ಲದ ಸಾಮಾನ್ಯ ವ್ಯಕ್ತಿಯೊಬ್ಬ ‘ಭಲರೇ ವೀರ, ಹರೋಹರಾ’ ಎಂದು ಕಾಕು ಹೇಳುತ್ತ, ಜಾಗಟೆ ಬಡಿಯುತ್ತ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ.

ವೀರಭದ್ರ ವೇಷ ಧರಿಸಿರುವ ಉರಿಯುವ ಕರ್ಪೂರವನ್ನು ಅಂಗೈ ಹಾಗೂ ನಾಲಗೆ ಮೇಲಿಟ್ಟುಕೊಳ್ಳುವ, ನೀರು ತುಂಬಿದ ಚೊಂಬನ್ನು

ಹೊತ್ತು ನೀರು ಚೆಲ್ಲದಂತೆ ಸುತ್ತಿಸುವ, ಅಕ್ಕಿ ತುಂಬಿದ ಚೊಂಬನ್ನು ಅಕ್ಕಿ ಚೆಲ್ಲದಂತೆ ತಿರುಗಿಸುವ ಚಮತ್ಕಾರಗಳನ್ನು ಮಾಡುತ್ತಾನೆ. ವಿರಳವಾಗಿ ಶಾಸ್ತ್ರ ಪವಾಡಗಳುಂಟು. ಪುರವಂತರು ಶಾಸ್ತ್ರ ಪವಾಡಗಳನ್ನು ಮಾಡುವುದರಲ್ಲಿ ಅಗ್ರಗಣ್ಯರು, ಕೊಂಡಹಾಯುವುದುಂಟು. ಪುರವಂತರು ಮದುವೆಯ ಸಮಯದಲ್ಲಿ ಆಚರಿಸುವ 'ಗುಗ್ಗಳ' ಎಂಬ ಸೇವೆಯನ್ನು ಮಾಡುವಾಗ ಕಡ್ಡಾಯವಾಗಿ ಇರಲೇಬೇಕು.

ಮದುವೆ, ಗೃಹಪ್ರವೇಶ ಮುಂತಾದ ಶುಭ ಸಂದರ್ಭಗಳಲ್ಲಿ ವೀರಭದ್ರ ಕುಣಿತದ ಏರ್ಪಾಟಿರುತ್ತದೆ. ಹಳೆಯ ಮೈಸೂರು ಪ್ರದೇಶದಲ್ಲಿ ಅರಸುಗಳು, ವೀರಶೈವರು, ಕೆಲವು ಭಾಗಗಳಲ್ಲಿ ಒಕ್ಕಲಿಗರು, ಹಾಲುಮತದವರು ಮತ್ತು ಮಡಿವಾಳರೂ ವೀರಭದ್ರನನ್ನು ಬರಮಾಡಿಕೊಳ್ಳುತ್ತಾರೆ. ವೀರಭದ್ರನ ವೇಷ ಹಾಕುವಾತ ನಿಗದಿಯಾದ ದಿವಸ ಆಚರಿಸುವವರ ಮನೆಗೆ ಆಹ್ವಾನಿತನಾಗಿ ಬಂದು ಅಲ್ಲಿಯೇ ವೇಷಭೂಷಣಗಳನ್ನೂ ಲಾಂಛನಗಳನ್ನೂ ಧರಿಸಿ ಮನೆಯಿಂದ ನಡೆಮುಡಿಯ ಮೇಲೆ ಗೊತ್ತುಪಡಿಸಿರುವ ಸ್ಥಳಕ್ಕೆ (ಸಾಮಾನ್ಯವಾಗಿ ದೇವಸ್ಥಾನ) ಹೋಗುತ್ತಾನೆ. ಅಲ್ಲಿಂದ ಮನೆಗೆ ಬರುವಾಗ ನೃತ್ಯ ಮಾಡುತ್ತಾನೆ. ನೃತ್ಯ ಮುಗಿಯುವ ತನಕ ಉಪವಾಸವಿರುತ್ತಾನೆ. ಅನಂತರ ಪಡಿ, ಕಾಣಿಕೆಗಳ ಜೊತೆಗೆ ಪಂಚೆ ವಸ್ತ್ರಗಳನ್ನು ಪಡೆಯುತ್ತಾನೆ. ಇದಕ್ಕೆ ಹಲಗೆ ಜಂಪ ಎಂದು ಕರೆಯುವುದುಂಟು. ವೀರಭದ್ರ ಆವೇಶದಿಂದ ಕುಣಿದು ಮನೆಯೊಳಗಡೆ ಪ್ರವೇಶ ಮಾಡುವುದು ವಿಳಂಬವಾದರೆ ತೆಂಗಿನಕಾಯಿಯನ್ನು ವೀರಭದ್ರನ ಮುಖದಿಂದ 'ಇಳಿ' ತೆಗೆದು ಒಡೆಯುತ್ತಾರೆ, ಆರತಿ ಬೆಳಗುತ್ತಾರೆ. ವೀರಭದ್ರ ಆವೇಶ ಭರಿತನಾಗಿ ಕುಣಿದು ಕೆಲವೊಮ್ಮೆ ಸುಸ್ತಾಗಿ ಜ್ಞಾನತಪ್ಪಿ ಬೀಳುವುದುಂಟು. ವೀರಭದ್ರನ ಕುಣಿತ ನೋಡುವವರಿಗೆ ರೋಮಾಂಚನವನ್ನುಂಟು ಮಾಡುತ್ತದೆ. ಈ ವೇಷ ಧರಿಸುವವರು ಸಾಮಾನ್ಯವಾಗಿ ಮಡಿಮೈಲಿಗೆ ವಿಚಾರಗಳಲ್ಲಿ ಕಟ್ಟುನಿಟ್ಟಾಗಿರುತ್ತಾರೆ. ವೀರಭದ್ರನನ್ನು ಸಂಪ್ರದಾಯ ಬದ್ಧವಾಗಿ ಬರಮಾಡಿಕೊಳ್ಳುವ ಜನ ಸಾಕ್ಷಾತ್ ವೀರಭದ್ರನೇ ಮನೆಗೆ ಬಂದಿದ್ದಾನೆಂಬ ನಂಬಿಕೆಯಿಂದ ಆರೋಗಣೆ ನಡೆಸುತ್ತಾರೆ. *

**ವೀರಭದ್ರನಾಯಕ:** ಕೆಳದಿಯ ಅರಸು (ಸು. 1629–45) ವೆಂಕಟಪ್ಪ ನಾಯಕನ ಮೊಮ್ಮಗ, ಭದ್ರಪ್ಪನ ಮಗ, ಹಿರೇವೆಂಟಪ್ಪ ನಾಯಕನ ಅನಂತರ ಕೆಳದಿಯ ಸಿಂಹಾಸನವನ್ನು ಏರಿದ.

ಇವನು ಸಾತ್ವಿಕನೂ ಸದ್ಗುಣಿಯೂ ಆಗಿದ್ದರೂ ಇವನ ಆಳ್ವಿಕೆಯೆಲ್ಲ ಅಶಾಂತಿಯಿಂದಲೇ ಕೂಡಿತ್ತು. ಇವನು ತೀರ್ಥರಾಜಪುರದಲ್ಲಿ ಸ್ವಲ್ಪ ಕಾಲ ನೆಲಸಿದ್ದ ಸಮಯದಲ್ಲಿ ರಾಮರಾಜಯ್ಯನ ಮಗ ವೀರಪ್ಪನಾಯಕನಿಗೆ ಸಿಂಹಾಸನ ದೊರಕಿಸಿಕೊಡುವ ಪಿತೂರಿ ನಡೆಯಿತು. ಸೋದೆ, ಬಿಳಗಿಯವರ ಮತ್ತು ಬಿಜಾಪುರ ಸುಲ್ತಾನರ ಕೈವಾಡವೂ ಇದ್ದ ಈ ಒಳಸಂಚನ್ನು ಈತ ಬಗ್ಗುಬಡಿದ. ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ವೀರಭದ್ರ ನಾಯಕ ಪೋರ್ಚುಗೀಸರೊಡನೆ ಸಂಧಾನ ನಡೆಸಿ, ಅವರಿಗೆ ಕಂಬೋಲಿ ದ್ವೀಪವನ್ನು ಒಪ್ಪಿಸಿದ್ದಲ್ಲದೆ ತನ್ನ ರಾಜ್ಯದ ಬಾರಕೂರು ಮುಂತಾದ ಊರುಗಳಲ್ಲಿ ಅವರ ವ್ಯಾಪಾರಕ್ಕಾಗಿ ವಿಶೇಷ ಹಕ್ಕುಗಳನ್ನು ಬಿಟ್ಟುಕೊಟ್ಟ (ಸು. 1631). ಆದರೂ ವೆಂಕಟಪ್ಪನಾಯಕನಿಂದ ಸೋಲಿಸಲ್ಪಟ್ಟಿದ್ದ ಅನೇಕ ಕಿರುಸಾಮಂತರು ಕಿರುಕುಳ ಕೊಡಲಾರಂಭಿಸಿದರು. ವೀರಭದ್ರನಾಯಕನಿಗೆ ಇವನ್ನೆಲ್ಲ ನಿವಾರಿಸಿಕೊಳ್ಳಲು ಸುಮಾರು ಆರು ವರ್ಷಗಳು ಹಿಡಿಯಿತು.

ಆದರೆ ಬಾದನಾವರದ ವೆಂಕಟಪತಿನಾಯಕ ತರೀಕೆರೆಯ ಪಾಳೆಯಗಾರನೊಂದಿಗೆ ಸೇರಿಕೊಂಡು ಬಿಜಾಪುರದ ಆದಿಲ್‌ಷಾನ ಸಹಾಯದೊಂದಿಗೆ ಇಕ್ಕೇರಿ ಸೀಮೆಯ ಮೇಲೆ ದಂಡೆತ್ತಿ ಬರಲು, ಅವರನ್ನು ಎದುರಿಸಲಾಗದೆ ವೀರಭದ್ರ ನಾಯಕ ರಾಜಧಾನಿಯನ್ನು ತೊರೆದು ಕವಲೆದುರ್ಗಕ್ಕೆ ಓಡಿಹೋಗಿ ತಲೆಮರೆಸಿಕೊಳ್ಳಬೇಕಾಯಿತು. ಇಕ್ಕೇರಿ ಮತ್ತು ಇತರ ಅನೇಕ ಕೋಟೆಗಳು ಬಿಜಾಪುರದ ದಳವಾಯಿ ರಣದುಲ್ಲಾಖಾನನ ವಶವಾದುವು (ಸು. 1637). ಈ ಯುದ್ಧಗಳಲ್ಲಿ ರಣದುಲ್ಲಾಖಾನನಿಗೆ ನೆರವಾಗಿದ್ದ ಕೆಂಗೆ ಹನುಮ ಎಂಬವನು ಬಿಜಾಪುರದ ಸುಲ್ತಾನನ ವಿರುದ್ಧ ದಂಗೆಯೆದ್ದಾಗ ರಣದುಲ್ಲಾಖಾನನು ಅವನ ನಿಗ್ರಹಕ್ಕಾಗಿ ಮತ್ತೊಮ್ಮೆ ಬರಬೇಕಾಯಿತು. ಇದು ವೀರಭದ್ರನಾಯಕ ಬಿಜಾಪುರದ ಅರಸರೊಂದಿಗೆ ಸಂಧಿಮಾಡಿಕೊಳ್ಳಲು ಅನುಕೂಲವಾಯಿತು. ಮುಂದೆ ಇವರ ಸ್ನೇಹ ವರ್ಧಿಸಿ ವೀರಭದ್ರನಾಯಕ ರಣದುಲ್ಲಾಖಾನನ ಮೈಸೂರು ದಾಳಿಯ ಕಾಲದಲ್ಲಿ ಸಹಾಯ ಮಾಡಿದ.

ಇವನ ಕಾಲದಲ್ಲಿ ಬ್ರಿಟಿಷ್ ಕಂಪನಿಯವರು ಇವನೊಡನೆ ಸಂಧಾನ ಮಾಡಿಕೊಂಡು ಮೆಣಸಿನ ವ್ಯಾಪಾರಕ್ಕಾಗಿ ಭಟ್ಕಳದಲ್ಲಿ ತಮ್ಮದೊಂದು ಕೋಠಿಯನ್ನು ತೆರೆದರು.

ರಣದುಲ್ಲಾಖಾನನ ದಾಳಿಯಿಂದ ಇಕ್ಕೇರಿ ಹಾಳಾಗಿತ್ತಾಗಿ ವೀರಭದ್ರ ನಾಯಕ ರಾಜಧಾನಿಯನ್ನು ಬಿದನೂರಿಗೆ ವರ್ಗಾಯಿಸಿದ (ಸು. 1639).

ವೀರಭದ್ರನಾಯಕ ಧರ್ಮಿಷ್ಠನಾಗಿದ್ದು ಅನೇಕ ಸಮಯಗಳಲ್ಲಿ ಮಠ, ದೇವಾಲಯಗಳಿಗೆ ದಾನಗಳನ್ನು ನೀಡಿದ. ಅವುಗಳಲ್ಲಿ ತಾವರೆಗೆರೆಯ ಮಸೀದಿ, ಶೃಂಗೇರಿಯ ಅದ್ವೈತಮಠ, ಸಾಗರದ ಮಹತ್ತಿನ ಮಠ–ಇವುಗಳನ್ನು ಹೆಸರಿಸಬಹುದು.

ಕೊಲ್ಲೂರಮ್ಮಾಜಿ ಈತನ ಹೆಂಡತಿ. ಇವನಿಗೆ ಮಕ್ಕಳಿರಲಿಲ್ಲವಾಗಿ, ಕೊನೆಗಾಲದಲ್ಲಿ ಜಿಹಾಸೆಗೊಂಡ ವೀರಭದ್ರನಾಯಕ ರಾಜ್ಯವನ್ನು ತನ್ನ ಚಿಕ್ಕಪ್ಪಂದಿರಾದ ಶಿವಪ್ಪನಾಯಕ ಮತ್ತು ವೆಂಕಟಪ್ಪನಾಯಕರಿಗೆ ವಹಿಸಿಕೊಟ್ಟ (ಸು. 1645), ಶಿವಪ್ಪನಾಯಕ ಈತನನ್ನು ಕೊಂದು ರಾಜ್ಯಾಕ್ರಮಣ ಮಾಡಿದನೆಂಬ ಹೇಳಿಕೆಯೂ ಇದೆ. (ಎಸ್.ಕೆ.ಡಿ.)

**ವೀರಮ್ಮಾಜಿ:** ಕೆಳದಿ ಸಂಸ್ಥಾನವನ್ನು ಆಳಿದ ರಾಣಿ (1758–63). ಇಮ್ಮಡಿ ಬಸವಪ್ಪನಾಯಕನ ಹೆಂಡತಿ. ಬಸವಪ್ಪನಾಯಕನ ಮರಣಾನಂತರ ಅವನ ದತ್ತುಮಗ ಚೆನ್ನಬಸವಪ್ಪನಾಯಕ ರಾಜನಾಗಿ ಕೇವಲ ಮೂರು ವರ್ಷಗಳಲ್ಲಿ ಮರಣಹೊಂದಿದ. ಅವನ ತರುವಾಯ ವೀರಮ್ಮಾಜಿಯು ಸೋಮಶೇಖರನಾಯಕ ಎಂಬ ಬಾಲಕನನ್ನು ದತ್ತು ತೆಗೆದುಕೊಂಡು, ಸಿಂಹಾಸನದ ಮೇಲೆ ಕೂಡಿಸಿ, ತಾನೇ ಆಡಳಿತ ನಡೆಸಲಾರಂಭಿಸಿದಳು.

ಆ ವೇಳೆಗೆ ಮರಾಠರು ಕೆಳದಿ ರಾಜ್ಯದ ಮೇಲೆ ದಂಡೆತ್ತಿ ಬಂದರು. ಅವರ ಪಿಡುಗನ್ನು ಐಶ್ವರ್ಯ ಪ್ರಲೋಭನದಿಂದ ನಿವಾರಿಸಲು ವೀರಮ್ಮಾಜಿ ಪ್ರಜೆಗಳ ಮೇಲೆ ಹೆಚ್ಚು ಕರಭಾರವನ್ನು ವಿಧಿಸಿದಳು. ಇದರಿಂದ ಪ್ರಜಾವರ್ಗ ಅಸಂತುಷ್ಟವಾಯಿತು. ಮಿಗಿಲಾಗಿ ತನ್ನ ದರ್ಪಿಷ್ಟ ನೀತಿಯಿಂದ ವೀರಮ್ಮಾಜಿ ರಾಜ್ಯದ ಹಿತಚಿಂತಕರಾಗಿದ್ದ ಸಚಿವ ವರ್ಗದವರನ್ನು ಸೆರೆಯಲ್ಲಿರಿಸಿ ಕೆಳದಿ ರಾಜ್ಯದ ವಿನಾಶಕ್ಕೆ ದಾರಿಮಾಡಿದಳು.

ಈ ವೇಳೆಗೆ ಮೈಸೂರಿನ ರಾಜಕೀಯದಲ್ಲಿ ಹೈದರ್ ಪ್ರಾಬಲ್ಯಕ್ಕೆ ಬಂದಿದ್ದ. ಅಲ್ಲದೆ ಚಿತ್ರದುರ್ಗದ ಪಾಳೆಯಗಾರನೊಬ್ಬನು ಕೆಳದಿಯ ರಾಜ ಚೆನ್ನಬಸವ ಸತ್ತಿಲ್ಲ; ಮೋಸದಿಂದ ಅವನನ್ನು ರಾಜ್ಯದಿಂದ ಓಡಿಸಲಾಗಿದೆ. ಅವನಿಗೇ ರಾಜ್ಯ ದಕ್ಕಬೇಕೆಂದು ಒಬ್ಬ ವ್ಯಕ್ತಿಯನ್ನು ಚೆನ್ನಬಸವನೆಂದು ಮುಂದುಮಾಡಿ ವಾದಿಸುತ್ತಿದ್ದ. ಆ ಕಲ್ಪಿತ ಚೆನ್ನಬಸವ ನಾಯಕನಿಗೆ ಸಹಾಯ ನೀಡುವ ನೆಪದಿಂದ 1762ರಲ್ಲಿ ಹೈದರ್ ಬಿದನೂರಿನ ಮೇಲೆ ದಂಡೆತ್ತಿಬಂದ. ರಾಣಿ ವೀರಮ್ಮಾಜಿ ಜನಪ್ರಿಯತೆಯನ್ನೂ ಅಧಿಕಾರ ವರ್ಗದವರ ಬೆಂಬಲವನ್ನೂ ಕಳೆದುಕೊಂಡಿದ್ದರಿಂದ ಹೈದರ್‌ನೊಡನೆ ಯುದ್ಧವನ್ನು ನಿವಾರಿಸಲು ಸಂಧಾನಕ್ಕೆ ಪ್ರಯತ್ನಪಟ್ಟಳು. ಆದರೆ ಅದು ಫಲಿಸದಿದ್ದುದರಿಂದ ಯುದ್ಧ ಅನಿವಾರ್ಯವಾಯಿತು. ರಾಣಿಯ ಸೈನ್ಯ ಸೋತುಹೋಯಿತು. ಬಿದನೂರಿನ ಅಪಾರ ಐಶ್ವರ್ಯವೂ ಕೆಳದಿಯ ರಾಜ್ಯವೂ ಹೈದರನ ವಶವಾದವು. ರಾಣಿ ವೀರಮ್ಮಾಜಿ ಮತ್ತು ಅವಳ ದತ್ತು ಪುತ್ರ ಸೋಮಶೇಖರ ನಾಯಕ ಹೈದರನ ಬಂದಿಗಳಾದರು. ಅವರನ್ನು ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಡಲಾಯಿತು (1763). ಸ್ವಲ್ಪ ಕಾಲಾನಂತರ ವೀರಮ್ಮಾಜಿ ಮರಣಹೊಂದಿದಳು. **(ಜಿ.ಆರ್.ಆರ್)**

**ವೀರರಾಜೇಂದ್ರ I:** (ದೊಡ್ಡ ವೀರರಾಜೇಂದ್ರ) ಕೊಡಗಿನ ಅರಸು (1787–1809). ಕೊಡಗಿನ ಹಾಲೇರಿ ಅರಸುಮನೆತನದಲ್ಲಿ ಹೆಸರುವಾಸಿಯಾದವ. ಇವನ ತಂದೆ ಒಂದನೆಯ ಲಿಂಗರಾಜ ಮರಣಹೊಂದಿದಾಗ, ವೀರರಾಜೇಂದ್ರ ಅಪ್ರಾಪ್ತವಯಸ್ಕನೆಂಬ ನೆಪಹೂಡಿ ಹೈದರ್ ಆಲಿ ತಾನೇ ರಾಜ್ಯಾಡಳಿತ ನಿರ್ವಹಿಸತೊಡಗಿ, ರಾಣಿಯನ್ನೂ ವೀರರಾಜೇಂದ್ರ ಮತ್ತು ಅವನ ತಮ್ಮ ಲಿಂಗರಾಜನನ್ನೂ ಗೊರೂರಿನಲ್ಲಿ ಇಟ್ಟ. ಇದು ಕೊಡಗಿನ ಜನರ ಆಗ್ರಹಕ್ಕೆ ಕಾರಣವಾಗಿ 1782ರಲ್ಲಿ ದಂಗೆ ಎದ್ದರು. ಟಿಪ್ಪು ಸುಲ್ತಾನ್ 1785ರಲ್ಲಿ ಮಂಗಳೂರು ವಿಜಯದ ಅನಂತರ ಶ್ರೀರಂಗಪಟ್ಟಣಕ್ಕೆ ಬರುವ ಹಾದಿಯಲ್ಲಿ ಕೊಡಗಿನ ಜನ ತನಗೆ ನಿಷ್ಠೆಯಿಂದ ನಡೆದುಕೊಂಡಲ್ಲಿ ಅವರಿಗೆ ರಕ್ಷಣೆ ನೀಡುವುದಾಗಿ ಭರವಸೆ ನೀಡಿ ಪುನಃ ಕೊಡಗಿನ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದ. ಆದರೆ ಮುಂದೆ ತನ್ನ ನೀತಿಗಳಿಂದ ಕೊಡಗರನ್ನು ಇನ್ನೂ ಉದ್ರೇಕಿಸಿದ. ವೀರರಾಜೇಂದ್ರ ಮತ್ತು ಇತರ ರಾಜಬಂಧುಗಳನ್ನು ಪೆರಿಯಾಪಟ್ಟಣ ಕೋಟೆಯೊಳಗೆ ಸೆರೆಯಿಟ್ಟ. ಪುನಃ ಕೊಡಗಿನ ಜನ ದಂಗೆಯೆದ್ದರು. ಈ ಸುದ್ದಿ ವೀರರಾಜೇಂದ್ರನಿಗೆ ಮುಟ್ಟಿ, ತನ್ನ ಹಿತೈಷಿಗಳೊಡನೆ ಗುಟ್ಟಾಗಿ ಸಂಪರ್ಕ ಬೆಳೆಸಿ, ಅವರ ನೆರವಿನಿಂದ 1788ರ ಡಿಸೆಂಬರ್‌ನಲ್ಲಿ ಒಂದು ರಾತ್ರಿ ತನ್ನ ಬಂಧುಮಿತ್ರರೊಂದಿಗೆ ತಪ್ಪಿಸಿಕೊಂಡು, ತನ್ನ ರಾಜ್ಯದೊಳಕ್ಕೆ ಹೋಗಿ ಸೇರಿಕೊಂಡ. ಅಲ್ಲಿ ದೊಡ್ಡ ಸೈನ್ಯ ಕಟ್ಟಿ ಕೊಡಗಿನ ಕೋಟೆಗಳಲ್ಲಿದ್ದ ಟಿಪ್ಪುಸುಲ್ತಾನನ ಸೈನ್ಯವನ್ನೂ ಕೊಡಗಿನ ಹಲವೆಡೆ ನೆಲಸಿದ್ದ ಮುಸಲ್ಮಾನರನ್ನೂ ಓಡಿಸಲು ಅವನು ಕಾರ್ಯೋನ್ಮುಖನಾದ. ಇದರಿಂದ ಕೆರಳಿದ ಟಿಪ್ಪುಸುಲ್ತಾನ್ ಗುಲಾಮ್ ಆಲಿಯ ನೇತೃತ್ವದಲ್ಲಿ ದೊಡ್ಡ ಸೈನ್ಯವೊಂದನ್ನು ಕಳುಹಿಸಿದ. ಆದರೆ ಈ ಸಂದರ್ಭದಲ್ಲಿ ಚಿರಕಲ್ಲಿನ ರಾಜ ಮಲೆಯಾಳಿ ಸೈನಿಕರನ್ನು ವೀರರಾಜೇಂದ್ರನ ವಿರುದ್ಧ ಕಳುಹಿದ. ಆದರೆ ಕೊಡಗಿನ ಸೈನ್ಯ ಈ ದಾಳಿಗಳನ್ನು ಸಮರ್ಥವಾಗಿ ತಡೆಯಿತು. ಗುಲಾಮ್ ಆಲಿ ಬೆಟ್ಟ ಗುಡ್ಡಗಳ ಕಡೆ ನುಗ್ಗಲು ಸಾಧ್ಯವಾಗದೆ ಕೆಲವು ಬಯಲುಗಳಲ್ಲಷ್ಟೆ ತನ್ನ ಚಲನವಲನಗಳನ್ನು ಸೀಮಿತಗೊಳಿಸ ಬೇಕಾಯಿತು. ಅಷ್ಟರಲ್ಲಿ ಮಲೆಯಾಳದಲ್ಲಿ ದಂಗೆಗಳಾದುದರಿಂದ ಲಾಮ್ ಆಲಿ ಅತ್ತ ನಡೆಯಬೇಕಾಯಿತು. ಈ ಮಧ್ಯದಲ್ಲಿ ಟಿಪ್ಪುಸುಲ್ತಾನ್ ಕುಶಾಲನಗರ, ಮಡಿಕೇರಿ, ಬೆಪ್ಪುನಾಡು, ಭಾಗಮಂಡಲ ಕೋಟೆಗಳಲ್ಲಿದ್ದ ತನ್ನ ಠಾಣ್ಯಗಳನ್ನು ಭದ್ರಪಡಿಸಲು ಬುರ್ಹಾನುದ್ದೀನನ ನೇತೃತ್ವದಲ್ಲಿ ಮತ್ತಷ್ಟು ಸೈನ್ಯವನ್ನು ಸಾಮಗ್ರಿಗಳನ್ನೂ ಕೊಡಗಿಗೆ ಕಳುಹಿಸಿದ. ಆದರೆ ವೀರರಾಜೇಂದ್ರನ ಹೊಡೆತ ಜೋರಾಗಿ ಬುರ್ಹಾನುದ್ದೀನನಿಗೆ ಮಡಿಕೇರಿಯನ್ನು ಮಾತ್ರ ತಲಪಲು ಸಾಧ್ಯವಾಯಿತು. ಬುರ್ಹಾನುದ್ದೀನ್ ಮತ್ತಷ್ಟು ಸೈನ್ಯವನ್ನು ತರಲು ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದ. ವೀರರಾಜೇಂದ್ರ ಈ ಸಂದರ್ಭದಲ್ಲಿ ಕುಶಾಲನಗರ ಕೋಟೆಯನ್ನೂ, ಬೆಪ್ಪುನಾಡು ಕೋಟೆಯನ್ನೂ ವಶಪಡಿಸಕೊಂಡ (1780 ಜೂನ್ ಮತ್ತು ಆಗಸ್ಟ್) ಅನಂತರ ಬುರ್ಹಾನುದ್ದೀನ್ ಬೃಹತ್ ಸೈನ್ಯದೊಂದಿಗೆ ಬಂದರೂ ಈ ಕೋಟೆಗಳನ್ನು ಪುನರ್ವಶಪಡಿಸಿಕೊಳ್ಳಲಾಗಲಿಲ್ಲ. ವೀರರಾಜೇಂದ್ರ ಭಾಗಮಂಡಲ ಕೋಟೆಯನ್ನೂ ಹಿಡಿದ. ಇವನ ಸೈನಿಕರು ಘಟ್ಟದ ಕೆಳಗಣ ಸುಳ್ಯ ಮತ್ತು ಪುತ್ತೂರು ಮಾಗಣೆಯ ಭಾಗಗಳನ್ನು ವಶಪಡಿಸಿಕೊಂಡರು. ಅಲ್ಲದೆ ಟಿಪ್ಪುವಿನ ರಾಜ್ಯದಲ್ಲಿದ್ದ ಅರಕಲಗೂಡು, ಕೊಣನೂರು ಪ್ರದೇಶವನ್ನೂ ಕೊಳ್ಳೆಹೊಡೆದರು. 1790ರ ಹೊತ್ತಿಗೆ ಮಡಿಕೇರಿ ಕೋಟೆಯ ಹೊರತು ಉಳಿದ ಕೊಡಗಿನ ಭಾಗವೆಲ್ಲ ವೀರರಾಜೇಂದ್ರನ ಹಿಡಿತದಲ್ಲಿತ್ತು.

ಇದು ಬ್ರಿಟಿಷರಿಗೂ ಟಿಪ್ಪುವಿಗೂ ವಿರಸ ಬೆಳೆದಿದ್ದ ಕಾಲ. ತಲಚೇರಿಯಲ್ಲಿದ್ದ ಬ್ರಿಟಿಷ್ ಅಧಿಕಾರಿ ರಾಬರ್ಟ್ ಟೇಲರ್ ಮುಂದೆ ಸಂಭವಿಸಬಹುದಾದ ಯುದ್ಧದಲ್ಲಿ ಬ್ರಿಟಿಷರ ಪರ ವಹಿಸಲು ವೀರರಾಜೇಂದ್ರನನ್ನು ಆಹ್ವಾನಿಸಿದ. 1790ರ ಅಕ್ಟೋಬರ್‌ನಲ್ಲಿ ತಲಚೇರಿಯಲ್ಲಿ ಒಂದು ಒಪ್ಪಂದವಾಗಿ ಅದರಂತೆ ಟಿಪ್ಪುಸುಲ್ತಾನನನ್ನು ಈ ಎರಡು ಪಕ್ಷಗಳವರೂ ಶತ್ರುವಾಗಿ ಪರಿಗಣಿಸಬೇಕು, ಬ್ರಿಟಿಷ್ ಸೈನ್ಯಕ್ಕೆ ವೀರರಾಜೇಂದ್ರ ಎಲ್ಲ ರೀತಿಯ ನೆರವು ನೀಡಬೇಕು. ಫಲಿತವಾಗಿ ಬ್ರಿಟಿಷರು ಕೊಡಗಿನ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳುವುದು ಮತ್ತು ಟಿಪ್ಪುವಿನ ಜೊತೆ ಶಾಂತಿ ಒಪ್ಪಂದವಾದ ಪಕ್ಷದಲ್ಲಿ ಕೊಡಗಿನ ಹಿತ ಪಾಲಿಸುವುದಾಗಿ ತೀರ್ಮಾನವಾಯಿತು. ಈ ರಾಜಕೀಯ ಬೆಳೆವಣಿಗೆಯನ್ನು ಗಮನಿಸಿದ ಟಿಪ್ಪುಸುಲ್ತಾನ್ ಪುನಃ ಮಡಿಕೇರಿಗೆ ಸೈನ್ಯಸಹಾಯವನ್ನು ಕಳಿಸಿದ. ಆದರೆ ಕೆಲವೇ ದಿನಗಳಲ್ಲಿ ವೀರರಾಜೇಂದ್ರ ಮಡಿಕೇರಿಯನ್ನೂ ಆಕ್ರಮಿಸಿದ.

1791ರಲ್ಲಿ ಟಿಪ್ಪುವಿನ ವಿರುದ್ಧದ ಕಾರ್ಯಾಚರಣೆಗೆ ಮುಂಬಯಿಯ ಗವರ್ನರ್ ಆಗಿದ್ದ ಜನರಲ್ ಅಬೆರ್‌ಕ್ರಾಂಬಿಯ ಸೈನ್ಯ ಕೊಡಗಿನ ಮೂಲಕ ಸಾಗಿದಾಗ ವೀರರಾಜೇಂದ್ರ ಅದಕ್ಕೆ ಸಾಕಷ್ಟು ಸಹಾಯ ಸೌಕರ್ಯಗಳನ್ನು ಒದಗಿಸಿದ. 1792ರಲ್ಲಿ ಟಿಪ್ಪುವಿನೊಡನೆ ಬ್ರಿಟಿಷರು ಕೌಲು ಮಾಡಿಕೊಂಡಾಗ ವೀರರಾಜೇಂದ್ರ ರಾಜ್ಯ ಟಿಪ್ಪುವಿನ ಕೈಸೇರದಂತೆ ನೋಡಕೊಳ್ಳಲಾಯಿತು. 1793ರ ಮಾರ್ಚ್‌ನಲ್ಲಿ ಮತ್ತೊಂದು ಒಪ್ಪಂದವಾಗಿ ವೀರರಾಜೇಂದ್ರ ಬ್ರಿಟಿಷರಿಗೆ ವಾರ್ಷಿಕವಾಗಿ 24,000 ರೂ. ಕಪ್ಪ ಕೊಡಬೇಕು; ಇವನ ರಾಜ್ಯಕ್ಕೆ ಅವರು ರಕ್ಷಣೆ ಒದಗಿಸುವುದು ಎಂದು ತೀರ್ಮಾನವಾಯಿತು.

4ನೆಯ ಮೈಸೂರು ಯುದ್ಧದ ಕಾಲದಲ್ಲೂ ವೀರರಾಜೇಂದ್ರ ಬ್ರಿಟಿಷರ ಸೈನ್ಯ ಸಾಗಾಣಿಕೆಗೆ ಸಹಾಯ ನೀಡಿದ. ಇದರಿಂದ ಇವರ ಮೈತ್ರಿ

ಬೆಳೆಯಿತು. ಟಿಪ್ಪುವಿನ ಯುದ್ಧಾಶ್ವ, ಪಲ್ಲಕ್ಕಿ ಮತ್ತು ಅಂಬಾರಿಗಳನ್ನು ಬಳುವಳಿಯಾಗಿ ಕೊಟ್ಟುದಲ್ಲದೆ ತಮ್ಮ ಆಶ್ರಯದಲ್ಲಿ ರಾಜ್ಯಭಾರ ನಡೆಸಲು ವೀರರಾಜೇಂದ್ರನಿಗೆ ಅನುವು ಮಾಡಿಕೊಟ್ಟರು. ಮುಂದೆ ತನ್ನ ಸಾವಿನವರೆಗೂ ಬ್ರಿಟಿಷ್ ರೆಸಿಡೆಂಟರು ಗವರ್ನರ್‌ಜನರಲ್ ನೊಡನೆ ಸ್ನೇಹದಿಂದಿದ್ದ. ಈ ಕಾಲದಲ್ಲಿ ವೀರರಾಜೇಂದ್ರ ಕೊಡಗಿನ ಅಭಿವೃದ್ಧಿಗಾಗಿ ಶ್ರಮಿಸಿದ. ರೈತರಿಗೆ ಉತ್ತೇಜನ ಕೊಟ್ಟ. ವ್ಯವಸಾಯ ಅಭಿವೃದ್ಧಿ ಮಾಡಿದ. ಆದರೆ ತನ್ನ ಆಳ್ವಿಕೆಯ ಕೊನೆಗಾಲದಲ್ಲಿ ಸ್ವಲ್ಪ ಕ್ರೂರಿಯಾಗಿ ನಡೆದುಕೊಂಡು ರಾಜಸಂಬಂಧಿಗಳೇ ಮೊದಲಾದ ಹಲವು ಜನರನ್ನು ಕೊಲೆ ಮಾಡಿಸಿದನೆಂದು ಅಭಿಪ್ರಾಯವಿದೆ.

ವೀರರಾಜೇಂದ್ರ 1791ರಲ್ಲಿ ನಾಲ್ಕುನಾಡು ಅರಮನೆಯನ್ನು ಕಟ್ಟಿಸಿದ. 1796ರಲ್ಲಿ ಇದೇ ಅರಮನೆಯಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿಕೊಂಡ. ಅಲ್ಲದೆ ಮಹದೇವಮ್ಮಾಜಿ ಎಂಬಾಕೆಯನ್ನು ಮದುವೆಯಾದ.

1791ರಲ್ಲಿ ಜನರಲ್ ಅಬರ್‌ಕ್ರಾಂಬಿಯನ್ನು ಮೊದಲು ಭೇಟಿಮಾಡಿದ ತಾಣದಲ್ಲಿ ವೀರರಾಜೇಂದ್ರ ಪೇಟೆಯನ್ನು (ಈಗಿನ ವಿರಾಜಪೇಟೆ) ಸ್ಥಾಪಿಸಿದ. ಮುರುಘ ಮಠದ ಶಿಷ್ಯನಾದ ಇವನು ಅದರ ಶಾಖೆಗಳಾಗಿ ಸಿದ್ಧಾಪುರ ಮತ್ತು ಮಹದೇವಪುರ ಮಠಗಳನ್ನೂ ಬಸವೇಶ್ವರ ದೇವಸ್ಥಾನವನ್ನೂ ಸ್ಥಾಪಿಸಿದ. ತನ್ನ ಎರಡನೆಯ ಹೆಂಡತಿಯ ಹೆಸರಿನಲ್ಲಿ ಮಹದೇವಪೇಟೆಯನ್ನು ಸ್ಥಾಪಿಸಿದ.

ವೀರರಾಜೇಂದ್ರ 1809ರ ಜೂನ್ 29ರಂದು ನಿಧನನಾದ. (ಸಿ.ಕೆ.ಎನ್.)

**ವೀರರಾಜೇಂದ್ರ II:** (ಚಿಕ್ಕವೀರರಾಜೇಂದ್ರ) – 1859. ಕೊಡಗಿನ ಹಾಲೇರಿ ಮನೆತನದ ಅರಸು (1820–34). ಎರಡನೆಯ ಲಿಂಗರಾಜೇಂದ್ರನ ಮಗ. ಪಟ್ಟಕ್ಕೆ ಬಂದಾಗ ಇವನು ಹರೆಯದ ವಯಸ್ಸಿನವನು ಮತ್ತು ಅನನುಭವಿ. ಹೀಗಾಗಿ ಇವನು ತನ್ನ ದುರ್ಮಂತ್ರಿಗಳ ಒಡನಾಟದಲ್ಲಿ ದುರ್ವ್ಯಸನಗಳಿಗೆ, ಬಲಿಬಿದ್ದು ಸರ್ವಾಧಿಕಾರಿ ಧೋರಣೆಯಿಂದ ರಾಜ್ಯದಲ್ಲಿ ಹೆಚ್ಚು ಕಡಿಮೆ ಕ್ರೂರವಾಗಿ ನಡೆದುಕೊಂಡ. ತನ್ನ ಬಂಧುಗಳಿಂದ ಅಧಿಕಾರಕ್ಕೆ ಚ್ಯುತಿ ಬರಬಹುದೆಂದು ಭಾವಿಸಿ ಅನೇಕ ಜನ ಸಂಬಂಧಿಗಳನ್ನು ಕೊಲ್ಲಿಸಿದ ಅಥವಾ ಸೆರೆಯಲ್ಲಿಟ್ಟ. 1825ರಲ್ಲಿ ಜದ್ರೋಹದ ಆರೋಪ ಹೊರಿಸಿ ಸಮೀಪಬಂಧುವಾದ ಚನ್ನವೀರನನ್ನೂ ಅವನ ಕುಟುಂಬದವರನ್ನೂ ಕೊಲ್ಲಿಸಿದ. ಕೊಡಗು ರಾಜ್ಯದ ಮೇಲ್ವಿಚಾರಕನಾಗಿದ್ದ ಮೈಸೂರಿನ ರೆಸಿಡೆಂಟ್ ಈ ಕೊಲೆಗಳ ಬಗೆಗೆ ಪ್ರಶ್ನಿಸಿದ. ಇದಕ್ಕೆ 'ನಾನು ಸ್ವತಂತ್ರ ರಾಜ. ಇದು ಒಳಾಡಳಿತ ವಿಷಯ. ವಿವರ ತಿಳಿಸಬೇಕಾಗಿಲ್ಲ' ಎಂದು ಉತ್ತರಿಸಿದ. 1832ರ ಹೊತ್ತಿಗೆ ಪರಿಸ್ಥಿತಿ ಗಡುಸಾಯಿತು. ಬಂಧುಗಳ ಕೊಲೆಗಳಿಂದ ಚಿಕ್ಕವೀರರಾಜೇಂದ್ರನ ಸೋದರಿ ದೇವಮ್ಮಾಜಿಯ ಗಂಡ ಚನ್ನಬಸವಪ್ಪ ದಂಗೆ ಏಳಲು ಸಿದ್ಧತೆ ಮಾಡಿಕೊಂಡ. ರಾಜನಿಗೆ ಸುಳುಹು ತಿಳಿದು ಚನ್ನಬಸವಪ್ಪನನ್ನು ಸೆರೆಹಿಡಿಯಲು ಯತ್ನಿಸಿದ. ಆದರೆ ಅವನು ತನ್ನ ಪತ್ನಿ ಹಾಗೂ ಕೆಲವು ನಿಷ್ಠಾವಂತ ಹಿಂಬಾಲಕರ ಸಮೇತ ಕೊಡಗಿನ ಗಡಿ ದಾಟಿ ಬ್ರಿಟಿಷ್ ರೆಸಿಡೆಂಟರ ಆಶ್ರಯಪಡೆದ. ಇದನ್ನು ತಿಳಿದ ರಾಜ ಅನುಕ್ರಮವಾಗಿ ರೆಸಿಡೆಂಟನಿಗೆ ಮದರಾಸಿನ ಗವರ್ನರ್‌ಗೆ ಹಾಗೂ ಭಾರತದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕ್‌ನಿಗೆ ಬರೆದು ಚನ್ನಬಸವಪ್ಪನನ್ನು ತನಗೆ ಒಪ್ಪಿಸಬೇಕೆಂದು ಕೇಳಿದ. ಆದರೆ ಅದು ಫಲಕಾರಿಯಾಗಲಿಲ್ಲ. ಇದರಿಂದ ಕುಪಿತನಾದ ವೀರರಾಜೇಂದ್ರ ಸುತ್ತಮುತ್ತಲ ರಾಜನಿಗೆ ಸುತ್ತೋಲೆ ಕಳಿಸಿ ಬ್ರಿಟಿಷರ ವಿರುದ್ಧ ಬಂಡಾಯ ಮಾಡಲು ಒಗ್ಗಟ್ಟಿಗಾಗಿ ಚಿತಾವಣೆಮಾಡಿದ. ಇದನ್ನರಿತ ಬ್ರಿಟಿಷರು ಕೊಡಗಿನ ಮೇಲೆ ಚತುರ್ಮುಖಿ ದಾಳಿಗೆ ವ್ಯವಸ್ಥೆಮಾಡಿದರು (1834). ಹೆದರಿದ ರಾಜ ನಾಲ್ಕುನಾಡಿನಲ್ಲಿ ಅಡಗಿ ಕೂತು ಬ್ರಿಟಿಷರ ವಿರುದ್ಧ ಯುದ್ಧ ಮಾಡಬೇಡಿ ಎಂದು ತನ್ನ ಸೈನ್ಯಕ್ಕೆ ಆದೇಶವಿತ್ತು ರಾಜಿಯಾಗಲು ಮುಂದಾದ. ಆದರೆ ಈ ಆದೇಶ ಮುಟ್ಟುವಷ್ಟರಲ್ಲಿ ಸೈನ್ಯ ಆಕ್ರಮಿಸಿತ್ತು (1834ರ ಏಪ್ರಿಲ್ 6). ಚಿಕ್ಕವೀರರಾಜ ನಾಲ್ಕು ನಾಡಿನಿಂದ ಮಡಿಕೇರಿಗೆ ಬಂದು ಶರಣಾದ. ಆದರೆ ರಾಜ ಎಷ್ಟು ಕೇಳಿಕೊಂಡರೂ ಸಿಂಹಾಸನ ಉಳಿಯಲಿಲ್ಲ. ಬ್ರಿಟಿಷ್ ಅಧಿಕಾರಿ ಫ್ರೇಸರ್ ಕೆಲವರನ್ನು ಸಲಹೆ ಕೇಳಿದಂತೆ ಮಾಡಿ, ಜನಾಭಿಪ್ರಾಯದಂತೆ ರಾಜನಿಗೆ ಪದಚ್ಯುತಿ ಎಂದು ಘೋಷಿಸಿ ಬ್ರಿಟಿಷ್ ಆಡಳಿತವನ್ನು ಸ್ಥಾಪಿಸಿದ. ಸಂಧಾನದ ಫಲವಾಗಿ ರಾಜನಿಗೆ ಜೀವದಾನ, ಜೀವನಾಂಶ ದೊರೆತವು. ರಾಜಕುಟುಂಬ ಸಮೇತ ಮೊದಲು ವೆಲ್ಲೂರಿನಲ್ಲೂ ಅನಂತರ ಕಾಶಿಯಲ್ಲೂ ನೆಲೆಗೊಳಿಸ ಲಾಗಿತ್ತು. 1852ರಲ್ಲಿ ಕುಟುಂಬದ ಕೆಲವರ ಸಮೇತ ಇಂಗ್ಲೆಂಡಿಗೆ ಹೋದ. ಅಲ್ಲಿ ಇವನ ಪ್ರೀತಿಯ ಮಗಳು ಕ್ರೈಸ್ತಮತ ಸ್ವೀಕರಿಸಿ ವಿಕ್ಟೋರಿಯಾ ಗೌರಮ್ಮನಾಗಿ ಆಂಗ್ಲನೊಬ್ಬನನ್ನು ಲಗ್ನವಾದಳು. ವೀರರಾಜೇಂದ್ರ 1859 ಸೆಪ್ಟಂಬರ್ 24 ರಂದು ಲಂಡನ್‌ನಲ್ಲಿ ನಿಧನನಾದ.

ಈತನನ್ನು ಬ್ರಿಟಿಷ್ ಚರಿತ್ರಕಾರರು ಬಹು ಕ್ರೂರಿ ಎಂದು ಚಿತ್ರಿಸಿದ್ದಾರೆ; ಆದರೆ ಇವನು ನ್ಯಾಯನಿಷ್ಠ ದೊರೆ, ರೈತರು ಮತ್ತು ಸಾಮಾನ್ಯ ಜನ ಇವನ ರಾಜ್ಯದಲ್ಲಿ ಸಂತುಷ್ಟರಾಗಿದ್ದರು, ದೇಶದ್ರೋಹ ಅಥವಾ ರಾಜದ್ರೋಹದ ವಿಷಯದಲ್ಲಿ ಮಾತ್ರ ಕಠಿಣವಾಗಿ ವರ್ತಿಸುತ್ತಿದ್ದ ಎಂಬ ಅಭಿಪ್ರಾಯ ಸಹ ಇದೆ. (ಸಿ.ಕೆ.ಎನ್.)

**ವೀರಶೈವ ಧರ್ಮ:** ಶೈವಧರ್ಮದ ವಿವಿಧ ಶಾಖೆಗಳಲ್ಲಿ ಒಂದಾದ ವೀರಶೈವಧರ್ಮ ಬಹುಮಟ್ಟಿಗೆ ಕರ್ನಾಟಕದಲ್ಲಿ ರೂಪಗೊಂಡು ಅನಂತರ ನೆರೆಹೊರೆಯ ಪ್ರಾಂತ್ಯಗಳಾದ ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನ ಗಡಿ ಪ್ರಾಂತ್ಯಗಳನ್ನು ವ್ಯಾಪಿಸಿತು. ಅನೇಕ ವಿಚಾರಗಳಲ್ಲಿ ವೈದಿಕಧರ್ಮದಿಂದ ಭಿನ್ನವಾದ ವೀರಶೈವಧರ್ಮ ಕರ್ನಾಟಕದ ಜನಜೀವನ, ಅವರ ಸಂಸ್ಕೃತಿ ಮತ್ತು ಸಾಹಿತ್ಯ ಇವುಗಳ ಮೇಲೆ ಆಳವಾದ ಪ್ರಭಾವವನ್ನು ಬೀರಿದೆ.

ಉಳಿದ ಶೈವಧರ್ಮಗಳಂತೆ ವೀರಶೈವ ಶಿವಾಗಮಗಳ ತಳಹದಿಯ ಮೇಲೆ ರೂಪಿತವಾದ ಒಂದು ಧರ್ಮ. ಸೂಕ್ಷ್ಮಾಗಮ, ಸುಪ್ರಭೇದ, ಸ್ವಾಯಂಭವ, ಕಾರ್ಮಿಕ, ವಾತುಲ ಮೊದಲಾದ ಆಗಮಗಳಲ್ಲಿ ವೀರಶೈವ ಧರ್ಮದ ಮೂಲ ತತ್ತ್ವಗಳು ಕಾಣಲು ಸಿಕ್ಕುತ್ತವೆ. ಇವೇ ಅಲ್ಲದೆ ಶಿವಯೋಗಿ ಶಿವಾಚಾರ್ಯರ ಸಿದ್ಧಾಂತಶಿಖಾಮಣಿ, ಶ್ರೀಪತಿ ಪಂಡಿತರ ಶ್ರೀಕರಭಾಷ್ಯ, ಸವಭಾನಂದ ಶಿವಾಚಾರ್ಯವಿರಚಿತ ಶಿವಾದ್ವೈತಮಂಜರಿ ಮುಂತಾದ ಸಂಸ್ಕೃತಗ್ರಂಥದಲ್ಲಿ ವೀರಶೈವ ವಚನಕಾರರಿಗಿಂತಲೂ ಮೊದಲೇ ಈ ಧರ್ಮ ಪ್ರತಿಪಾದಿತವಾಗಿದ್ದಿತೆಂದು ಹೇಳಿದೆ. ಹನ್ನೆರಡನೆಯ ಶತಮಾನದಲ್ಲಿ ಬಂದ ಬಸವಾದಿ ಪ್ರವಚನ ಸಾಹಿತ್ಯವನ್ನು ಆಧರಿಸಿ ಸಂಪಾದಿತವಾದ ಹಾಗೂ ರೂಪತಳೆದ ಶೂನ್ಯ ಸಂಪಾದನೆ ಲಿಂಗಲೀಲಾವಿಲಾಸ, ಶಿವತತ್ತ್ವ ಚಿಂತಾಮಣಿ, ವೀರಶೈವಾಮೃತಮಹಾ ಪುರಾಣ ಮುಂತಾದ ಕನ್ನಡಗ್ರಂಥಗಳ ವೀರಶೈವಧರ್ಮವನ್ನು ವ್ಯವಸ್ಥಿತ ರೀತಿಯಲ್ಲಿ ವಿವರಿಸಲು ಶಕ್ತವಾಗಿವೆ.

ವೀರಶೈವಧರ್ಮ ಶಾಸ್ತ್ರಾಧಾರಗಳನ್ನು ಗೌರವಿಸುವುದಾದರೂ ಇದಕ್ಕೆ ಯಾವುದೇ ಒಂದು ನಿರ್ದಿಷ್ಟವಾದ ಪ್ರಸ್ಥಾನ ಗ್ರಂಥ ಆಧಾರವಲ್ಲ. ಶಬ್ದ ಪ್ರಮಾಣದ ಹೆಸರಿನಲ್ಲಿ ವಿಚಾರ ಮತ್ತು ಅನುಭವಾತ್ಮಕವಾಗಿ ಸದಾ ವಿನೂತನಗೊಂಡು ಬರುತ್ತಿರುತ್ತವೆ. ಅನುಭವಮಾನ್ಯವಲ್ಲದ ಆಚರಣೆ, ಅದಕ್ಕೆ ಎಷ್ಟೇ ಶಾಸ್ತ್ರ ಆಧಾರವಿದ್ದರೂ ಅದನ್ನು ಗೌರವಿಸಲು ವೀರಶೈವ ಧರ್ಮ ಸಿದ್ಧವಿಲ್ಲ. ಲೌಕಿಕಪ್ರಜ್ಞೆ ಅನುಭವದಿಂದ ದೊರೆಯುವುದಾದರೆ, ಅಲೌಕಿಕ ಅಥವಾ ದೈವಿಕ ಪ್ರಜ್ಞೆ ಅನುಭಾವದಿಂದ ಲಭಿಸುವಂಥದು.

ವೀರಶೈವದರ್ಶನವನ್ನು ಶಕ್ತಿವಿಶಿಷ್ಟದ್ವೈತಸಿದ್ಧಾಂತ ಎಂದು ಕರೆಯಲಾಗಿದೆ. ಈ ಧರ್ಮದ ಪ್ರಕಾರ ಶಕ್ತಿಯುತನಾದ ಶಿವನೊಬ್ಬನೇ ಸತ್ಯ. ವಿಶ್ವದ ಸಕಲ ಪದಾರ್ಥಗಳೂ ಅವನ ಶಕ್ತಿಯ ವಿಕಾಸದಿಂದ ಸಾಧ್ಯಗೊಂಡಿದೆ. ವಿಶ್ವದ ವಿಕಾಸ ಸ್ವಯಂಭು ಶಿವನ ಲೀಲೆಯಿಂದ ಈ ವಿಶ್ವ ಅಂದಮೇಲೆ ಅವನ ಲೀಲೆಗೆ ಬೇರೆ ಕಾರಣ ಬೇಕಿಲ್ಲ. ವೀರಶೈವಸಿದ್ಧಾಂತದ ಪರಶಿವ ಶಂಕರಾಚಾರ್ಯರ ಬ್ರಹ್ಮನಂತೆ ನಿರ್ಗುಣ ನಲ್ಲ. ಶಕ್ತಿಯುಕ್ತನಾದ ಶಿವ ಸದಾ ಸಗುಣನೇ ಆಗಿದ್ದು, ಲೀಲೆಗಾಗಿ ಬೇಕೆಂದಾಗ ತನ್ನ ಶಕ್ತಿಯನ್ನು ವಿಕಾಸಗೊಳಿಸಬಹುದು ಇಲ್ಲವೆ ಸಂಕೀರ್ಣಗೊಳಿಸಿ ಅಚಲನಾಗಿ ನಿರಂಜನನಾಗಿರಬಹುದು. ಶಿವನಿಗೆ ಅವನ ನೆನಹೇ ಶಕ್ತಿ. ಅವನ ಈ ಶಕ್ತಿ ಅದ್ವೈತದಲ್ಲಿ ಕಾಣುವ ಮಾಯೆಯಂತೆ ಅನಿತ್ಯವಾದದ್ದಲ್ಲ.

ಶಿವನ ಹೊರತು ಅನ್ಯಸತ್ಯವಿಲ್ಲ ಎಂದಾದಮೇಲೆ ವೀರಶೈವ ಧರ್ಮದ ಪ್ರಕಾರ ಶಿವನೇ ಜೀವನಾಗುತ್ತಾನೆ. ಲಿಂಗ ಎಂಬುದು ಶಿವನಿಗೂ ಅಂಗ ಎಂಬುದು ಜೀವನಿಗೂ ಈ ಧರ್ಮದಲ್ಲಿ ಬಳಸಿರುವ ಪರ್ಯಾಯ ಪದಗಳು. ಶಿವನ ಶಕ್ತಿಯ ವಿಕಾಸದಿಂದ ಈ ಜಗತ್ತೆಲ್ಲವೂ ಶಿವಮಯ ವಾದದ್ದು. ಆದ್ದರಿಂದ ಇದರಲ್ಲಿ ಯಾವುದೂ ಮಾಯೆಯಲ್ಲ. ಶಿವನ ಲೀಲಾಪ್ರಪಂಚದಲ್ಲಿ ಜೀವ ಕ್ರಿಯಾಶೀಲನಾಗಿ ಆಸ್ಥೆಯಿಂದ ಭಾಗಿಯಾಗ ಬೇಕು. ಶಕ್ತಿಯ ಉತ್ಕರ್ಷದಲ್ಲಿ ಶಿವ ತನ್ನನ್ನು ಮರೆತು ಮಾನವನಾಗಿದ್ದಾನೆ. ಆದ್ದರಿಂದ ಪುನಃ ತನ್ನನ್ನು ಅರಿತು ಶರಣನಾಗಬೇಕು. ಆದ್ದರಿಂದ ವಿಶ್ವದ ಆಗುಹೋಗುಗಳಿಂದ ದೂರವಿದ್ದು, ಸನ್ಯಾಸದ ಹೆಸರಿನಲ್ಲಿ ದೈನಂದಿನ ಸಾಮಾಜಿಕ ಹೊಣೆಗಾರಿಕೆಗಳನ್ನು ನಿರ್ಲಕ್ಷಿಸುವುದು ಇವರಿಗೆ ಸರಿಕಾಣಲಿಲ್ಲ. ಅದಕ್ಕೆ ಬದಲಾಗಿ ಶಕ್ತಿಯಿಂದ ರೂಪಿತಗೊಂಡ ಈ ವಿಶ್ವದ ಕ್ರಿಯಾವಿಧಾನವನ್ನರಿತು ಕೊನೆಗೆ ಅದನ್ನು ಜಯಿಸಿ ನಿಲ್ಲಬೇಕೆಂಬುದೇ ವೀರಶೈವಧರ್ಮದ ಮೂಲಧ್ಯೇಯ. ತನ್ನ ಶಕ್ತಿಗೆ ಅಧೀನನಾಗಿ ತಾನೇ ಜೀವನಾಗಿರುವ ಶಿವನು ತನ್ನ ಶಕ್ತಿಯನ್ನು ಜಯಿಸಿ ತನ್ನ ವಿಭುತ್ವವನ್ನು ತಾನರಿಯುವನು.

ಲಿಂಗಾಂಗ ಸಾಮರಸ್ಯವನ್ನು ಸಾಧ್ಯಗೊಳಿಸಲು ಬೇಕಾದ ಸಾಧನಮಾರ್ಗ ಈ ಧರ್ಮದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಪಂಚಾಚಾರ ಮತ್ತು ಅಷ್ಟಾವರಣಗಳಿಂದ ಪೋಷಿತವಾದ ಷಟ್‌ಸ್ಥಲಸಿದ್ಧಾಂತವೇ ವೀರಶೈವರ ಸಾಧನಮಾರ್ಗ. ಈ ಮಾರ್ಗದಲ್ಲಿ ಭಕ್ತಿ, ಜ್ಞಾನ, ಧ್ಯಾನ, ಕರ್ಮ ವೃತ್ತ ನೀತಿಯ ಆಚರಣೆಗೆ ಸಮಾನಾವಕಾಶವಿದೆ. ವ್ಯಕ್ತಿಯ ಅಂತರಂಗ–ಬಹಿರಂಗ ಜೀವನದ ಪರಿಶುದ್ಧತೆ ಸತ್ಯದ ಸಾಕ್ಷಾತ್ಕಾರಕ್ಕೆ ಅತ್ಯಾವಶ್ಯಕ ಎಂಬುದು ಇವರ ನಿಲುವು. ಜೈನ, ಬೌದ್ಧಧರ್ಮಗಳೂ ಸೇರಿದಂತೆ ಎಲ್ಲ ಭಾರತೀಯ ಧರ್ಮಗಳಲ್ಲಿಯೂ ಮಾನ್ಯವೆನಿಸಿದ ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯ ಮುಂತಾದ ನೈತಿಕ ಆಚರಣೆಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸಿ ಅವುಗಳನ್ನು ಜನಸಾಮಾನ್ಯರೂ ಸಹ ಅರಿತು ಆಚರಿಸುವಂತೆ ಈ ಧರ್ಮದಲ್ಲಿ ಅಳವಡಿಸಲಾಗಿದೆ. ಲಿಂಗಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ ಗಣಾಚಾರ ಎಂಬ ಪಂಚಾಚಾರಗಳಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ನೈತಿಕ ಹೊಣೆಗಾರಿಕೆಗಳ ಆಚರಣೆ ಅಳವಟ್ಟುನಿಂತಿದೆ. ನೀರಿನಲ್ಲಡಗಿರುವ ಅಗ್ನಿಯಂತೆ, ಜೀವನಲ್ಲಡಗಿರುವ ಶಿವರನ್ನು ಸಾಕ್ಷಾತ್ಕಾರಕೊಳ್ಳಲು ಸಾಧಕನಿಗೆ ಅಷ್ಟಾವರಣ ರಕ್ಷಾಕವಚವಿದ್ದಂತೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷ, ಮಂತ್ರ–ಇವು ಸಾಧನೆಗೆ ಬೇಕಾದ ಸಹಕಾರಿ ತತ್ತ್ವಗಳು. ಮಿಕ್ಕ ಯಾವ ಶೈವಧರ್ಮದಲ್ಲಿಯೂ ಇಲ್ಲದೆ ವೀರಶೈವರಲ್ಲಿ ಮಾತ್ರವೇ ಆಚರಣೆಯಲ್ಲಿರುವ ಲಿಂಗಧಾರಣೆ ಅಂದರೆ ಅಂಗದ ಮೇಲೆ ಲಿಂಗವನ್ನು ಸದಾ ಧರಿಸುವ ಕ್ರಮ ಸಾಧಕನ ದೃಷ್ಟಿಯಿಂದ ಬಹು ಅರ್ಥಪೂರ್ಣವಾದದ್ದು. ಶಿವಸ್ವರೂಪಿಯಾದ ಗುರುವು ಅಂಗನೆನಿಸಿದ ಜೀವನಿಗೆ ಲಿಂಗತತ್ತ್ವ ಅಂದರೆ ಶಿವತತ್ತ್ವನ್ನು ಉಪದೇಶಿಸಿ, ಅಂಗನಲ್ಲಿ ಅಮೂರ್ತವಾಗಿ ಅಡಗಿದ್ದ ಶಿವಕಲೆಯನ್ನು ಮೂರ್ತಗೊಳಿಸಿ ಸಾಧಕನ ಸ್ಥೂಲದೇಹದ ಮೇಲೆ ಅದನ್ನು ಸ್ಥಾಪಿಸಿ ಅವನ ಸಾಧನೆಗೆ ನೆರವಾಗುತ್ತಾನೆ. ಅಮೂರ್ತವಾಗಿ ಅಂಗನಲ್ಲಡಗಿದ್ದ ಶಿವಕಲೆ ಅಥವಾ ಚಿತ್ಕಲೆಯನ್ನು ಲಿಂಗರೂಪದಲ್ಲಿ ಮೂರ್ತಗೊಳಿಸಿದ ಅಂಗನಿಗೆ ಲಿಂಗಧಾರಣೆ ಮಾಡಿ ಸಾಧಕನಲ್ಲಿ ಚಿತ್‌ಶಕ್ತಿಯನ್ನು ಜಾಗ್ರತಗೊಳಿಸುವ ಈ ಧಾರ್ಮಿಕ ಕ್ರಿಯೆಯಲ್ಲಿ ಒಂದು ರೀತಿಯ ಯೋಗಸಾಧನೆಯ ಅಂಶ ಅಡಗಿದೆ. ಗುರುವಿನಿಂದ ಅನುಗ್ರಹವಾದ ಈ ಲಿಂಗದ ಉಪಾಸನೆಗೆ ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ, ಮಂತ್ರ–ಇವು ಕೇವಲ ಸಹಕಾರಿಗಳು.

ಮೇಲೆ ಹೇಳಿದಂತೆ ಧಾರ್ಮಿಕ ಸಲಕರಣೆ ಮತ್ತು ನೈತಿಕ ಸಿದ್ಧತೆಯೊಂದಿಗೆ ಶಿವೋಪಾಸಕನು ಸಾಗುವಾಗ ಷಟ್‌ಸ್ಥಲಗಳೆಂಬ ಆರು ಮಜಲುಗಳನ್ನು ಏರಿ ಶೂನ್ಯತೆಯ ಪರಮಪದವನ್ನು ಸಂಪಾದಿಸುತ್ತಾನೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬುವೇ ಆ ಷಟ್‌ಸ್ಥಲಗಳು. ಲಿಂಗ ಮತ್ತು ಅಂಗ ಅಥವಾ ಶಿವ ಮತ್ತು ಜೀವ ಇವರ ನಡುವೆ ಭೇದ ಸಹಜವೆಂಬಂತೆ ಕಾಣುವ ಭಕ್ತಸ್ಥಲದಿಂದ ಮೊದಲಾಗಿ ಹಂತಹಂತವಾಗಿ ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವಭಕ್ತಿ, ಆನಂದಭಕ್ತಿ ಮುಂತಾದ ಸೋಪಾನಗಳನ್ನು ದಾಟಿ ಕೊನೆಗೆ ಸಮರಸಭಕ್ತಿಯಲ್ಲಿ ಲಿಂಗಾಂಗಗಳ ಐಕ್ಯ ಸಾಧ್ಯವಾಗುತ್ತದೆ. ಷಟ್‌ಸ್ಥಲೋಪಾಸನೆಯಲ್ಲಿ ಬಹಿರಂಗದಲ್ಲಿ ಕಾಣುವ ಆಚರಣೆಗಳಿಗಿಂತಲೂ ಅಂತರಂಗದಲ್ಲಿ ಅನುಭವಿಸುವ ಭಾವಕ್ಕೆ ಹೆಚ್ಚು ಪ್ರಾಧಾನ್ಯ, ನಾದವೇದ ಗಳಿಗಿಂತ ಹೆಚ್ಚಾಗಿ ಭಕ್ತಿ, ಜ್ಞಾನ ಮತ್ತು ಪರಿಶುದ್ಧ ಜೀವನದಿಂದ ಜೀವನು ಪರಿಷ್ಕಾರವಾಗಬೇಕು ಎಂಬುದು ವೀರಶೈವ ಶರಣರ ಮತ, ಜಗವೆಲ್ಲವೂ ಶಿವಮಯವಾದ್ದರಿಂದ ಕಾಯವನ್ನು ದಂಡಿಸಿ ಕಾಯಕಮಾಡಿ ಇಂದಿಗೆಂದು ನಾಳಿಗೆಂದು ಸಂಗ್ರಹಿಸದೆ ಗುರುಲಿಂಗಜಂಗಮಸೇವೆಯನ್ನು ಮಾಡುತ್ತ ದಾಸೋಹಭಾವದಿಂದ ಬದುಕುವುದೇ ಇವರ ಪ್ರಕಾರ ನಿಜವಾದ ಧರ್ಮೋಪಾಸನೆ, ಕಾಯಕದಿಂದ ಕೈಲಾಸ ಎಂಬುದು ಇವರ ಧಾರ್ಮಿಕ ಮತ.

ಧಾರ್ಮಿಕ ರಂಗದಲ್ಲಿ ಮಾನವರೆಲ್ಲರೂ ಸಮಾನರು. ಭಗವಂತನ ಸಾಕ್ಷಾತ್ಕಾರ ಮಾನವನ ಹಕ್ಕು ಎಂದು ಬೋಧಿಸಿದ ವೀರಶೈವಧರ್ಮ ಹನ್ನೆರಡನೆಯ ಶತಮಾನದಲ್ಲಿ ಬಂದ ಶರಣಸಂತತಿಯಿಂದಾಗಿ ಕರ್ನಾಟಕ ದಲ್ಲಿ ಸುವರ್ಣ ಯುಗವನ್ನೇ ಕಂಡಿತು. ಸ್ಪೃಶ್ಯ–ಅಸ್ಪೃಶ್ಯ, ಬ್ರಾಹ್ಮಣ, ಶೂದ್ರ, ಸ್ತ್ರೀ–ಪುರುಷ ಎಂಬ ಯಾವ ಭೇದವೂ ಇಲ್ಲದೆ ಪಂಡಿತಪಾಮರ ರೆಲ್ಲರೂ ಈ ಧರ್ಮದ ಬೋಧನೆಗೆ ಕಿವಿಗೊಟ್ಟರು. ವರ್ಣಾಶ್ರಮ ಧರ್ಮಗಳ ಹೆಸರಿನಲ್ಲಿ ಹಿಂದೂ ಸಮಾಜದಲ್ಲಿ ರೂಢಿಯಲ್ಲಿದ್ದ ಮೇಲು–ಕೀಳು ಎಂಬ ಸಾಮಾಜಿಕ ತಾರತಮ್ಯ ಮಾಯವಾಗಿ ಶರಣ ಧರ್ಮದ ನೆರಳಿನಲ್ಲಿ ವರ್ಣರಹಿತ, ವರ್ಗರಹಿತ, ಧಾರ್ಮಿಕ ತೃಷೆಯುಳ್ಳ ಸಮಾಜ ವೊಂದು ರೂಪಿತಗೊಂಡಿತು. ಧರ್ಮದ ಹೆಸರಿನಲ್ಲಿದ್ದ ಅಂಧಶ್ರದ್ಧೆ, ಶುಷ್ಕ ಆಚರಣೆಗಳು, ಆಡಂಬರದ ಪೂಜೆ, ಪಶುಬಲಿ ಮುಂತಾದ ಕುರುಡು ಆಚರಣೆಗಳನ್ನು ವೀರಶೈವಧರ್ಮ ಅತ್ಯಂತ ಕಟುವಾಗಿ ಟೀಕಿಸಿತು. ತನ್ನ ಬಿಟ್ಟರೆ ದೇವರಿಲ್ಲ, ಮಣ್ಣ ಬಿಟ್ಟರೆ ಮಡಕೆ ಇಲ್ಲ ಎಂಬ ಶ್ರೇಷ್ಠ ತತ್ತ್ವವು ಸುಲಭಸಾಧ್ಯ ಎಂದು ಜೀವಂತವಾಗಿ ಬದುಕಿ ತೋರಿಸಿದುದೇ ಈ ಧರ್ಮದ ವಿಶಿಷ್ಟತೆ. ಧಾರ್ಮಿಕ ಆಚರಣೆ ಪರಿಶುದ್ಧಜೀವನ ಮತ್ತು ವೈಚಾರಿಕಸ್ವಾತಂತ್ರ್ಯ ಇವು ಜೊತೆಗೂಡಿ ಹೋಗಬಲ್ಲವೆಂಬುದನ್ನು ವೀರಶೈವಧರ್ಮ ಸಾಧಿಸಿ ತೋರಿಸಿತು.

ಕರ್ನಾಟಕದಲ್ಲಿ ಈ ಧರ್ಮಕ್ಕೆ ಹೆಚ್ಚಿನ ಪುಷ್ಟಿ ದೊರಕಿದ್ದು ಅಂದಿನ ವಚನಕಾರರಿಂದ. ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದವರು ರಚಿಸಿದ ವಚನಗಳು ಮತ್ತು ಅವರು ಕಟ್ಟಿದ ಅನುಭವಮಂಟಪದ ವಿಚಾರಗೋಷ್ಠಿಗಳು ಒಂದು ಕಡೆ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಒದಗಿಸಿದ್ದಲ್ಲದೆ ವೀರಶೈವ ಧರ್ಮದ ಅಪರೂಪವಾದ ತತ್ತ್ವಗಳು ಜನಸಾಮಾನ್ಯರಿಗೂ ನಿಲುಕುವಂಥ ಸನ್ನಿವೇಶ ಇದರಿಂದಾಗಿ ಒದಗಿಬಂತು. ಕಾಯಕವೇ ಕೈಲಾಸ ಎಂಬುದುರ ಅರ್ಥ ಎಲ್ಲರಿಗೂ ಸ್ಪಷ್ಟವಾಯಿತು. ಲಿಂಗಪೂಜೆಗಿಂತ ಜಂಗಮಾತಿಥ್ಯ ಮುಖ್ಯವೆಂಬುದನ್ನು ಅರಿತರು. ದೀನರು ದಲಿತರು ಕೆಳವರ್ಗದವರು ವೀರಶೈವಧರ್ಮದ ವಿಶಾಲಧೋರಣೆಯನ್ನು ಮೆಚ್ಚಿ ಅದನ್ನು ಅನುಮೋದಿಸಿದರು. ಆಚಾರಶೀಲ ಜೀವನ, ಸರಳ ಜೀವನ, ಸನ್ಮಾರ್ಗಪ್ರವರ್ತನೆ–ಇವಕ್ಕೆ ಪ್ರಾಶಸತ್ಯ ಬಂತು. ಇದನ್ನು ಅಂದು ನಡೆದ ಸಾಹಿತ್ಯಕ್ರಾಂತಿ, ವಿಚಾರಕ್ರಾಂತಿ ಎಂದು ಚರಿತ್ರೆಕಾರರು ಉಲ್ಲೇಖಿಸಿದ್ದಾರೆ. (ಎ.ಎಲ್.ಎಸ್.)

**ವೀರೇಂದ್ರ ಪಾಟೀಲ:** 1924–97. ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ (1968–71 ಹಾಗೂ 1989–90) ನ್ಯಾಯವಾದಿ, ರಾಜಕಾರಣಿ, ಸಂಘಟಕ ಮತ್ತು ಆಡಳಿತಗಾರರು. ಗುಲ್ಬರ್ಗ ಜಿಲ್ಲೆಯ ಚಿಂಚೋಳಿಯಲ್ಲಿ 1924 ಫೆಬ್ರವರಿ 6ರಂದು ಜನಿಸಿದರು. ಉಸ್ಮಾನಿಯ ವಿಶ್ವವಿದ್ಯಾಲಯದ ನ್ಯಾಯಶಾಸ್ತ್ರ ಪದವೀಧರರಾಗಿ 1947ರಲ್ಲಿ ವಕೀಲವೃತ್ತಿ ಆರಂಭಿಸಿದರು.

ಅಲ್ಪಕಾಲದಲ್ಲೇ ಅದನ್ನು ತ್ಯಜಿಸಿ ರಜಕಾರರ ಹಾವಳಿಯನ್ನು ಹತ್ತಿಕ್ಕುವ ಆಂದೋಲದಲ್ಲಿ ಸಕ್ರಿಯ ಪಾತ್ರವಹಿಸಿದರು. ಹೈದರಾಬಾದಿನ ಪೊಲೀಸ್ ಕ್ರಮದ ಅನಂತರ ಪೂರ್ಣಾವಧಿಯ ಕಾಂಗ್ರೆಸ್ ಕಾರ್ಯಕರ್ತರಾಗಿ ಪ್ರಾಂತ್ಯಗಳ ಭಾಷಾವಾರು ಪುನರ್ರಚನೆಯ ಕಾಲದವರೆಗೂ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಹೈದರಾಬಾದ್ ರಾಜ್ಯದ ಪ್ರಥಮ ಸಾರ್ವಜನಿಕ ಚುನಾವಣೆಯಲ್ಲಿ ಅಳಂದ ಚುನಾವಣಾ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಿ ಆಯ್ಕೆಗೊಂಡರು. ಹೈದರಾಬಾದಿನ ಹಿಡುವಳಿ ಕೃಷಿ ಕಾಯಿದೆ ಸಮಿತಿಯೂ ಸೇರಿದಂತೆ ಅನೇಕ ಸಮಿತಿಗಳ ಸದಸ್ಯರಾಗಿ ಕೆಲಸ ಮಾಡಿದರು. 1957ರ ಚುನಾವಣೆಯಲ್ಲಿ ಚಿಂಚೋಳಿ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾದರು. ಅದೇ ವರ್ಷ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡದ್ದಲ್ಲದೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯತ್ವಕ್ಕೂ ಚುನಾಯಿತರಾದರು. 1960ರವರೆಗೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯವಸ್ಥಾಪಕ ಕಾರ್ಯದರ್ಶಿಯಾಗಿದ್ದರು. 1960–61ರಲ್ಲಿ ಗುಲ್ಬರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಕೆಲಸಮಾಡಿದ ಇವರು 1957 ಏಪ್ರಿಲ್‌ನಿಂದ 1958ರ ಮೇ 16ರವರೆಗೆ ಗೃಹ ಮತ್ತು ಕೈಗಾರಿಕಾ ಖಾತೆಗಳ ಉಪಮಂತ್ರಿಯಾಗಿದ್ದರು. 1961ರ ಫೆಬ್ರುವರಿಯಿಂದ 1962ರ ಮಾರ್ಚ್‌ವರೆಗೆ ಅಬಕಾರಿ, ಪಾನನಿರೋಧ ಮತ್ತು ಗ್ರಾಮೀಣ ಕೈಗಾರಿಕಾ ಖಾತೆಗಳ ಮಂತ್ರಿಯಾಗಿದ್ದರು. 1962–1967ರವರೆಗೆ ಅವಧಿಗೆ ಮತ್ತೆ ವಿಧಾನಸಭೆಗೆ ಚುನಾಯಿತರಾಗಿ ಲೋಕೋಪಯೋಗಿ ಮತ್ತು ವಿದ್ಯುತ್ ಇಲಾಖೆಗಳ ಮಂತ್ರಿಯಾದರು. 1967ರ ಚುನಾವಣೆಯಲ್ಲಿ ಪುನಃ ಆಯ್ಕೆಗೊಂಡು ಲೋಕೋಪಯೋಗಿ ಇಲಾಖೆಯ ಮಂತ್ರಿಯಾದರು. ಮುಖ್ಯಮಂತ್ರಿ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷಪದವಿಗೇರಿದಾಗ 1968ರ ಮೇ 23ರಂದು ಕಾಂಗ್ರೆಸ್ ವಿಧಾಯಕ ಪಕ್ಷದ ನಾಯಕರಾಗಿ ಆಯ್ಕೆಗೊಂಡು ಮುಖ್ಯಮಂತ್ರಿಯ ಪದವಿಯನ್ನು ವಹಿಸಿಕೊಂಡ ಪಾಟೀಲರು ಮಾರ್ಚ್ 1971ರವರೆಗೂ ಆ ಹುದ್ದೆಯಲ್ಲಿದ್ದರು. ಇವರ ಕಾಲದಲ್ಲಿ ಕನ್ನಡ ವಿಶ್ವಕೋಶ ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಲಾಯಿತು. ಪ್ರಭಾವಶಾಲಿ ಕ್ರಿಯಾತ್ಮಕ ಮುಖ್ಯಮಂತ್ರಿಗಳಲ್ಲೊಬ್ಬರಾಗಿದ್ದ ಇವರು ಕಾವೇರಿ ನದಿಯ ಬೋಗುಣಿ ಯೋಜನೆ, ಬೆಳಗಾಂವಿಯ ಗಡಿವಿವಾದ ಇತ್ಯರ್ಥ ಮುಂತಾದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ದಿಟ್ಟತನದಿಂದ ಉತ್ತರಿಸಿ ತಮ್ಮ ವಾದ ಮಂಡಿಸುತ್ತಿದ್ದರು. 1968ರಲ್ಲಿ ಕಾಂಗ್ರೆಸ್ ಸಂಸ್ಥೆಯಲ್ಲಿ ಬಿಕ್ಕಟ್ಟು ಉಂಟಾದಾಗ ಅದು ಒಡೆಯದಂತೆ ಪ್ರಯತ್ನಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಇವರು ನಿಜಲಿಂಗಪ್ಪನವರ ಬೆಂಬಲಿಗರಾಗಿದ್ದರೆಂಬುದು ಸರ್ವವಿದಿತವಿದ್ದರೂ ಪಕ್ಷದ ಎರಡೂ ಬಣಗಳು ಇವರ ಮಧ್ಯಸ್ಥಿಕೆಯನ್ನು ಒಪ್ಪಿಕೊಂಡವು. ಮುಂದೆ ಸಂಸ್ಥೆಯಲ್ಲಿ ಒಡಕುಂಟಾದಾಗ ನಿಜಲಿಂಗಪ್ಪನವರು ಅಧ್ಯಕ್ಷರಾಗಿದ್ದ ಸಂಸ್ಥಾ ಕಾಂಗ್ರೆಸ್ಸನ್ನೇ ಸೇರಿಕೊಂಡರು. ಇವರು ಕೆಲಕಾಲ ರಾಜ್ಯಸಭಾ ಸದಸ್ಯರೂ ರಾಜ್ಯ ಜನತಾಪಕ್ಷದ ಅಧ್ಯಕ್ಷರೂ ಆಗಿದ್ದರು.

1978ರಲ್ಲಿ ಚಿಕ್ಕಮಗಳೂರು ಲೋಕಸಭಾಕ್ಷೇತ್ರದ ಉಪಚುನಾವಣೆಗೆ ಪ್ರಧಾನಿ ಇಂದಿರಾಗಾಂಧಿಯವರು ಸ್ಪರ್ಧಿಸಿದಾಗ ಅವರಿಗೆ ಎದುರಾಗಿ ಜನತಾಪಕ್ಷದ ಅಭ್ಯರ್ಥಿಯಾಗಿ ಇವರು ಸ್ಪರ್ಧಿಸಿದರು. ಚುನಾವಣೆಯಲ್ಲಿ ಸೋತರೂ ಇವರು ಗಳಿಸಿದ ಮತಗಳು ಗಣನೀಯವಾಗಿದ್ದವು. ಮುಂದೆ ತಾವೇ ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್‌ಗೆ ಸೇರಿ ಲೋಕಸಭೆಗೆ ಆಯ್ಕೆಯಾದರು. 1980ರಲ್ಲಿ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದರು. ಮುಂದೆ ಕರ್ನಾಟಕ ರಾಜ್ಯದ ಕಾಂಗ್ರೆಸ್ ಅಧ್ಯಕ್ಷರಾಗಿ ಕೆಲಸ ಮಾಡಿ 1989ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಬಹುಮತಗಳಿಸುವಂತೆ ಮಾಡುವುದರಲ್ಲಿ ಯಶಸ್ವಿಯಾದರು. 1989 ನವೆಂಬರ್ 30ರಿಂದ 1999 ಅಕ್ಟೋಬರ್ 10ರವರೆಗೆ ಎರಡನೆಯ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಇವರು 1997 ಮಾರ್ಚ್‌ನಲ್ಲಿ ನಿಧನರಾದರು. *

**ವೀರೇಂದ್ರ ಹೆಗ್ಗಡೆ, ಡಿ.:** 1948– . ಕರ್ನಾಟಕದ ಪ್ರಮುಖ ಧಾರ್ಮಿಕ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ. ಸಮಾಜಸೇವಕರು. ಇವರು 1948 ನವೆಂಬರ್ 25ರಂದು ಜನಿಸಿದರು. ತಂದೆ ರತ್ನವರ್ಮ ಹೆಗ್ಗಡೆ, ತಾಯಿ ರತ್ನಮ್ಮ ಹೆಗ್ಗಡತಿ.

ಧರ್ಮಸ್ಥಳ, ಉಜಿರೆ, ಬೆಂಗಳೂರುಗಳಲ್ಲಿ ಶಿಕ್ಷಣ ಪಡೆದು ಪದವೀಧರರಾದರು. ತಂದೆ ರತ್ನವರ್ಮ ಹೆಗ್ಗಡೆಯವರು ಆಕಸ್ಮಿಕವಾಗಿ ನಿಧನರಾದರು. ತಮ್ಮ 20ನೆಯ ವಯಸ್ಸಿನಲ್ಲೇ ಇವರು ಧರ್ಮಾಧಿಕಾರಿ ಪಟ್ಟ ವಹಿಸಿಕೊಂಡರು. ಸರದಿಯಲ್ಲಿ ಇವರು ಧರ್ಮಸ್ಥಳ ದೇಗುಲದ 21ನೆಯ ಮೊಕ್ತೇಸರರು. ಇವರ ಮಾರ್ಗದರ್ಶನದಲ್ಲಿ ಧರ್ಮಸ್ಥಳ ಕ್ಷೇತ್ರ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಸಮಾಜಮುಖಿಯಾಗಿ ಅಭಿವೃದ್ಧಿ ಹೊಂದಿತು.

ಏಕಕಾಲಕ್ಕೆ ಮೂರು ಸಾವಿರ ಜನರಿಗೆ ಉಣಬಡಿಸುವ ‘ಅನ್ನಪೂರ್ಣ’ ಊಟದ ಮಂದಿರದ ನಿರ್ಮಾಣ, ಪ್ರವಾಸಿಗರ ವಸತಿಗಾಗಿ ನೇತ್ರಾವತಿ, ವೈಶಾಲಿ, ಶರಾವತಿ, ಗಾಯತ್ರಿ, ಗಂಗೋತ್ರಿ, ಸಾಕೇತ, ಸನ್ನಿಧಿ ಎಂಬ ಅತಿಥಿ ಗೃಹಗಳು ಇವರ ಕಾಲದಲ್ಲಿ ನಿರ್ಮಾಣಗೊಂಡವು. ರಂಜಾಳ

ಗೋಪಾಲ ಶೆಣೈ ಅವರಿಂದ 39 ಅಡಿ ಎತ್ತರದ ಗೊಮ್ಮಟಮೂರ್ತಿಯ ಕೆತ್ತನೆ, ಧರ್ಮಸ್ಥಳದ ರತ್ನಗಿರಿ ಬೆಟ್ಟದ ಮೇಲೆ ಅದರ ಪ್ರತಿಷ್ಠಾಪನೆ ಇವರ ಇನ್ನೊಂದು ಸಾಧನೆ.

ಕ್ಷೇತ್ರದಲ್ಲಿ 'ಉಚಿತ ಸಾಮೂಹಿಕ ವಿವಾಹ' ಹೆಗ್ಗಡೆಯವರು ಆರಂಭಿಸಿದ ಕ್ರಾಂತಿಕಾರಿ ಸಮಾಜಮುಖಿ ಕಾರ್ಯಕ್ರಮ (1972). ಇಂದು ದೇಶದ ಇನ್ನಿತರ ಕ್ಷೇತ್ರಗಳಲ್ಲಿಯೂ ಇಂಥ ಸಾಮೂಹಿಕ ವಿವಾಹಗಳು ನಡೆಯುತ್ತವೆ. ಧರ್ಮಸ್ಥಳದಲ್ಲಿ 2001ರವರೆಗೆ 9198 ಜೋಡಿ ಸಾಮೂಹಿಕ ವಿವಾಹಗಳು ನಡೆದಿದೆ.

ಮಂಜುನಾಥ ದೇವರಿಗೆ ಬ್ರಹ್ಮರಥ ಅರ್ಪಣೆ (1969). ದೇವಸ್ಥಾನದ ನೂತನ ಗರ್ಭ ಗೃಹ ನಿರ್ಮಾಣ ಹಾಗೂ ಬ್ರಹ್ಮ ಕಲಶೋತ್ಸವ ನೆರವೇರಿಸಿದ್ದು (1991) ಇವರ ಇತರ ಸಾಧನೆಗಳು.

ಛಾಯಾಗ್ರಹಣ, ಪುರಾತನ ವಸ್ತುಗಳ ಸಂಗ್ರಹಣ ಹೆಗ್ಗಡೆ ೦ುವರ ಹವ್ಯಾಸ. ಧರ್ಮಸ್ಥಳದ ಬೃಹತ್ ವಸ್ತು ಸಂಗ್ರಹಾಲಯ 'ಮಂಜೂಷಾ' ಇವರ ಕನಸಿನ ಕೂಸು. ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಮಂಜುವಾಣಿ ಮಾಸಪತ್ರಿಕೆ ಇವರ ಆಸಕ್ತಿಯ ಕುರುಹುಗಳು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸಮುದಾಯ ಅಭಿವೃದ್ಧಿ ಯೋಜನೆಗಳು ಇವರ ದೂರದರ್ಶಿತ್ವಕ್ಕೆ ಉದಾಹರಣೆಗಳು. 1982ರಲ್ಲಿ ಬಾಹುಬಲಿ ಮಸ್ತಕಾಭಿಷೇಕದ ಸಂದರ್ಭದಲ್ಲಿ ಹೆಗ್ಗಡೆಯವರು ಈ ಯೋಜನೆಯನ್ನು ಪ್ರಕಟಿಸಿದರು. ಬೆಳ್ತಂಗಡಿ ತಾಲ್ಲೂಕನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿಯ 24 ಸಾವಿರ ಬಡಕುಟುಂಬಗಳ ಸರ್ವಾಂಗೀಣ ಅಭಿವೃದ್ಧಿಯೇ ಗ್ರಾಮಾಭಿವೃದ್ಧಿ ಯೋಜನೆಯ ಗುರಿ. 'ಬಡ ರೈತ ಬೇರೆ ಕಡೆ ಕೂಲಿಗೆ ಹೋಗದೇ ತನ್ನ ಹೊಲದಲ್ಲಿ ದುಡಿಯಬೇಕು. ಹಾಗೆ ದುಡಿದ ದಿನದ ಅನ್ನ- ಉಪ್ಪಿನ ಖರ್ಚನ್ನು ಯೋಜನೆ ನಿಭಾಯಿಸುತ್ತದೆ' ಎಂಬ ತತ್ತ್ವದ ಮೇಲೆ ಬಡರೈತರು, ಕೂಲಿಕಾರರು ಸ್ವಅಭಿವೃದ್ಧಿಯತ್ತ ಹೆಜ್ಜೆ ಇಡಲು ಇವರು ರೂಪಿಸಿದ ಗ್ರಾಮಾಭಿವೃದ್ಧಿ ಯೋಜನೆ ಸಹಕಾರಿಯಾಗಿದೆ. ಫಲಾನುಭವಿಗಳಿಗೆ ಹಣ ನೀಡದೇ ವಸ್ತುಗಳ ರೂಪದಲ್ಲಿ ಅನುದಾನ ನೀಡುವ ಪದ್ಧತಿಯನ್ನೂ ಯೋಜನೆ ಆರಂಭಿಸಿತು. ಪ್ರಗತಿಬಂಧು ಎಂಬ ಸ್ವಸಹಾಯ ಗುಂಪುಗಳನ್ನು ರಚಿಸಿ ರೈತರ, ಕೂಲಿಕಾರರ ಆರ್ಥಿಕ ಅಭಿವೃದ್ಧಿಗೆ ಒತ್ತುನೀಡಿತು. ಈಗ ಜರ್ಮನಿ, ಮಲೇಷ್ಯ, ನೇಪಾಳ, ಕೆನಡ, ಶ್ರೀಲಂಕಾ ಮುಂತಾದ ದೇಶಗಳಿಂದ ಪರಿಣತರು ಬಂದು ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ವಿಧಾನವನ್ನು ಅಭ್ಯಸಿಸುತ್ತಿದ್ದಾರೆ. ಈ ಯೋಜನೆಯ ಯಶಸ್ವಿಗಾಗಿ ಹೆಗ್ಗಡೆಯವರಿಗೆ ಫಿಕ್ಕಿ ರಾಷ್ಟ್ರೀಯ ಪ್ರಶಸ್ತಿ ನೀಡಲಾಗಿದೆ (1995).

ಇವರು ಆರಂಭಿಸಿದ ಸಮುದಾಯ ಅಭಿವೃದ್ಧಿ ಯೋಜನೆ ಗ್ರಾಮಾಭಿವೃದ್ಧಿ ಯೋಜನೆಯ ಅಂಗಸಂಸ್ಥೆ. ಇದು ಬೆಳ್ತಂಗಡಿ ತಾಲ್ಲೂಕಿನ ಹೊರಗೆ ರಾಜ್ಯದ 11 ಜಿಲ್ಲೆಗಳಲ್ಲಿ ಸಾರ್ವಜನಿಕರ ಹಾಗೂ ಸರ್ಕಾರದ ಸಹಭಾಗಿತ್ವದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು. ಶಾಲೆ ಹಾಗೂ ಅಂಗನವಾಡಿ ಕಟ್ಟಡಗಳ ನಿರ್ಮಾಣ, ಹಳ್ಳಿಗಳಲ್ಲಿ ಸಾರ್ವಜನಿಕರಿಗೆ ಉಪಯುಕ್ತ ಕಟ್ಟಡಗಳ ನಿರ್ಮಾಣ, ನೀರು ಸರಬರಾಜು ಯೋಜನೆ, ಸಂಪರ್ಕ ರಸ್ತೆ ನಿರ್ಮಾಣ, ಶಾಲಾ ಮೈದಾನ ರಚನೆ, ಅರಣ್ಯಾಭಿವೃದ್ಧಿ ಮುಂತಾಗಿ ಜನೋಪಯೋಗಿ ಕಾಮಗಾರಿಗಳನ್ನು ಸಮುದಾಯ ಅಭಿವೃದ್ಧಿ ಯೋಜನೆಯಡಿ ಈವರೆಗೆ ರಾಜ್ಯದ 115 ರುದ್ರಭೂಮಿಗಳನ್ನು ಅಭಿವೃದ್ಧಿಗೊಳಿಸಲಾಗಿದೆ.

ಸಾಂಸ್ಕೃತಿಕ ಮಹತ್ತ್ವದ ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರ. ಅವುಗಳ ಮೂಲ ಮಾದರಿಯನ್ನು ಬದಲಿಸದೇ ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆಯೇ ಧರ್ಮೋತ್ಥಾನ ಟ್ರಸ್ಟ್. ಹೆಗ್ಗಡೆಯವರೇ ಇದರ ಅಧ್ಯಕ್ಷರು. ಊರವರು ಜೀರ್ಣೋದ್ಧಾರ ಸಮಿತಿಯನ್ನು ರಚಿಸಿಕೊಂಡು ತಗಲುವ ನಿಯೋಜಿತ ಖರ್ಚಿನ ಅರ್ಧಭಾಗವನ್ನು ಕೂಡಿಸಿ ಕೊಡಬೇಕು. ಉಳಿದ ಭಾಗವನ್ನು ಧರ್ಮೋತ್ಥಾನ ಟ್ರಸ್ಟ್ ನೀಡುತ್ತದೆ ಹಾಗೂ ದೇಗುಲದ ಪುನರುತ್ಥಾನ ಕಾಮಗಾರಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ. 2001ರವರೆಗೆ 33 ದೇಗುಲಗಳನ್ನು (1 ಕೋಟಿ 60 ಲಕ್ಷ) ಜೀರ್ಣೋದ್ಧಾರ ಮಾಡಲಾಗಿದೆ. ಈ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಮನಗಂಡು ಕರ್ನಾಟಕ ಸರ್ಕಾರ ಧರ್ಮೋತ್ಥಾನ ಟ್ರಸ್ಟಿನ ಜೊತೆ ಕೈ ಜೋಡಿಸಲು ಮುಂದೆ ಬಂದಿದೆ.

ಆರೋಗ್ಯ ಹಾಗೂ ಶೈಕ್ಷಣಿಕ ರಂಗದಲ್ಲಿಯೂ ಇವರ ಸೇವೆ ಹಿರಿದು. ಸಂಚಾರಿ ಆಸ್ಪತ್ರೆ, ಕ್ಷಯರೋಗ ಆಸ್ಪತ್ರೆ, ಮಂಜುಶ್ರೀ ಕಣ್ಣಿನ ಆಸ್ಪತ್ರೆ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಆಸ್ಪತ್ರೆ, ದಂತವೈದ್ಯ ಆಸ್ಪತ್ರೆ, ಆಯುರ್ವೇದ ಆಸ್ಪತ್ರೆ, ಧಾರವಾಡದಲ್ಲಿ ಕಟ್ಟಲಾಗುತ್ತಿರುವ ಬೃಹತ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಮೊದಲಾದವು ಎಸ್‌ಡಿಎಂ ಮೆಡಿಕಲ್ ಟ್ರಸ್ಟ್, ಶಾಂತಿವನ ಟ್ರಸ್ಟ್, ಎಸ್‌ಡಿಎಂ ಎಜ್ಯುಕೇಶನಲ್ ಟ್ರಸ್ಟ್‌ಗಳ ಮೂಲಕ ಕಾರ್ಯನಿರ್ವಹಿಸುತ್ತವೆ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನಲ್ ಸೊಸೈಟಿಯ ಆಶ್ರಯದಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ವೃತ್ತಿಪರ ಕಾಲೇಜುಗಳವರೆಗೆ 28 ಶಿಕ್ಷಣ ಸಂಸ್ಥೆಗಳನ್ನು ನಡೆಸಲಾಗುತ್ತಿದೆ. ಇಲ್ಲಿ ಸು. 15 ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಪ್ರತಿವರ್ಷ ಸು. 7 ಲಕ್ಷ ರೂಪಾಯಿಗೂ ಅಧಿಕ ವಿದ್ಯಾರ್ಥಿವೇತನಗಳನ್ನು ಅರ್ಹ ಬಡ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಸ್ವಉದ್ಯೋಗ ತರಬೇತಿ ಕೇಂದ್ರ (ರುಡ್‌ಸೆಟ್) ಹೆಗ್ಗಡೆಯವರ ಕೀರ್ತಿಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಿದ ಇನ್ನೊಂದು ಸೇವಾಸಂಸ್ಥೆ. ಸಿಂಡಿಕೇಟ್ ಬ್ಯಾಂಕು ಹಾಗೂ ಕೆನರಾಬ್ಯಾಂಕುಗಳೂ ಈ ಸಂಸ್ಥೆಯ ಜೊತೆ ಕೈ ಜೋಡಿಸಿವೆ. ನಿರುದ್ಯೋಗಿ ಯುವಕರಿಗೆ ಸ್ವಉದ್ಯೋಗದ ದೀಕ್ಷೆ ಮತ್ತು ತರಬೇತಿ ನೀಡುವುದು ರುಡ್‌ಸೆಟ್ ಸಂಸ್ಥೆಯ ಉದ್ದೇಶ. ದೇಶದ 17 ಕಡೆಗಳಲ್ಲಿ ಕೇಂದ್ರಗಳನ್ನು ಹೊಂದಿರುವ ರುಡ್‌ಸೆಟ್ ಈವರೆಗೆ 85 ಸಾವಿರಕ್ಕೂ ಹೆಚ್ಚು ಯುವಕರಿಗೆ ಸ್ವಉದ್ಯೋಗ ತರಬೇತಿ ನೀಡಿದೆ. ರುಡ್‌ಸೆಟ್ ಸಂಸ್ಥೆಯ ಮಾದರಿ ದೇಶ-ವಿದೇಶಗಳಲ್ಲಿ ಅನುಷ್ಠಾನ ಯೋಗ್ಯವೆನಿಸಿದೆ. ಈ ಸಂಸ್ಥೆಯ ಸೇವೆಗಾಗಿಯೂ ಫಿಕ್ಕಿ ಪ್ರಶಸ್ತಿಯನ್ನು ಮತ್ತೊಮ್ಮೆ ನೀಡಲಾಯಿತು (1999).

ಧರ್ಮಸ್ಥಳದಲ್ಲಿ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು, ಸರ್ವಧರ್ಮ ಸಮ್ಮೇಳನವನ್ನು ಸಂಘಟಿಸಿದ ಕೀರ್ತಿಗೆ ಹೆಗ್ಗಡೆಯವರು ಭಾಜನರಾಗಿದ್ದಾರೆ. ಇವರಿಗೆ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಸೇವೆಗಳಿಗಾಗಿ ಅನೇಕ ಗೌರವ ಪ್ರಶಸ್ತಿಗಳು ಸಂದಿವೆ. ಕರ್ನಾಟಕ ರಾಜ್ಯೋತ್ಸವ

ಪ್ರಶಸ್ತಿ (1985), ಮಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (1994), ಇಂದಿರಾಗಾಂಧೀ ಪ್ರಿಯದರ್ಶಿನೀ ಪ್ರಶಸ್ತಿ (1994), ಭಾರತೀಯ ಸಾರ್ವಜನಿಕ ಸಂಪರ್ಕ ಸಂಸ್ಥೆಯ ವರ್ಷದ ವ್ಯಕ್ತಿ ಪ್ರಶಸ್ತಿ (1994), ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ (2000) ಇವುಗಳನ್ನು ಹೆಸರಿಸಬಹುದು. ರಾಜರ್ಷಿ, ವೈಷ್ಣವ ಮಾರ್ತಾಂಡ, ಧರ್ಮರತ್ನಾಕರ, ಸಮಾಜರತ್ನ, ಧರ್ಮಯೋಗಿ– ಇವು ಇವರಿಗೆ ಸಂದ ಬಿರುದುಗಳು. ಆರೋಹಣ (1978), ರಾಜರ್ಷಿ (1993), ಪ್ರವರ್ಧಮಾನ (1993) ಇವು ಇವರಿಗೆ ಅರ್ಪಿತವಾಗಿರುವ ಅಭಿನಂದನ ಗ್ರಂಥಗಳು. (ಎಸ್.ಐ.ವಿ.)

**ವೃತ್ತವಿಲಾಸ:** ಸು. 1360. ಜೈನಕವಿ. ಧರ್ಮಪರೀಕ್ಷೆ ಎಂಬ ಕಾವ್ಯದ ಕರ್ತೃ. ಅಮರಕೀರ್ತಿ ಇವನ ಗುರು. ಪೂರ್ವಕವಿಗಳಲ್ಲಿ ಈತ ಯಾರನ್ನೂ ಸ್ಮರಿಸಿಲ್ಲ. ಸ್ವವಿಷಯವಾಗಿ ಹೆಚ್ಚಾಗಿ ಏನನ್ನೂ ಹೇಳಿಕೊಂಡಿಲ್ಲ. ತಾನು ಜನಪದ ಸೇವಕನೆಂದೂ ಜಿನಮುನೀಂದ್ರಪದಾರ್ಚಕನೆಂದೂ ಅನ್ಯದೈವವನ್ನು ಕನಸಿನಲ್ಲಿಯೂ ನೆನೆಯನೆಂದೂ ಉದಾರಮೇರು ಸಜ್ಜನನಿಧಿ ಸತ್ಯಶೌಚಗುಣದಾಗರನೆಂದೂ ಹೇಳಿಕೊಂಡಿದ್ದಾನೆ. ಕವಿತಾಚಾತುರ್ಯರ್ತಿರ್ದುಗೆಮದೀಯ ಕೃತಿಯಂ ದಯೆಯಿಂ ಎಂಬ ಮಾತಿನಲ್ಲಿ ಕವಿಯ ವಿನಯಭಾವ ವ್ಯಕ್ತವಾಗುತ್ತದೆ. ರಾಜಾವಳೀ ಕಥೆಯನ್ನು ಬರೆದ ದೇವಚಂದ್ರ ಇವನನ್ನು ಸ್ಮರಿಸಿದ್ದಾನೆ. ಅಲ್ಲದೆ ಇವನ ಧರ್ಮಪರೀಕ್ಷೆ ಕಾವ್ಯವನ್ನು ವಸ್ತುಕಕಾವ್ಯವೆಂದು ಕರೆದಿದ್ದಾನೆ.

ಧರ್ಮಪರೀಕ್ಷೆ 10 ಆಶ್ವಾಸಗಳುಳ್ಳ ಚಂಪೂಕಾವ್ಯ. ಅಮಿತಗತಿಯ ಸಂಸ್ಕೃತ ಧರ್ಮಪರೀಕ್ಷೆ ಇದಕ್ಕೆ ಮೂಲ. ಆದರೂ ಕವಿ ತನ್ನ ಕಾವ್ಯದಲ್ಲಿ ಎಲ್ಲೂ ಅಮಿತಗತಿಯ ಹೆಸರನ್ನು ಪ್ರಸ್ತಾಪಿಸಿಲ್ಲ. ಜೈನಧರ್ಮದ ತತ್ತ್ವಗಳನ್ನು ಚೆನ್ನಾಗಿ ಅರಿತ ಮನೋವೇಗನೆಂಬ ರಾಜಕುಮಾರ ಜೈನಧರ್ಮವನ್ನು ಮನ್ನಿಸಿದ ತನ್ನ ಬಾಲ್ಯಸ್ನೇಹಿತ ಪವನವೇಗನೊಂದಿಗೆ ಪಾಟಲೀಪುತ್ರಕ್ಕೆ ಬಂದು ಅಲ್ಲಿಯ ಬ್ರಹ್ಮ ಭವನವನ್ನು ಪ್ರವೇಶಿಸಿ, ಗಂಟೆಯನ್ನು ಬಾರಿಸಿ ವಾದಿಗಳನ್ನು ಬರಮಾಡಿಕೊಂಡು ಅವರ ಜೊತೆಯಲ್ಲಿ ಎಂಟು ದಿನ ವಾದ ಮಾಡಿ ತನ್ನ ಸ್ವಂತದ ಅನುಭವವನ್ನು ಪುಟ್ಟಪುಟ್ಟ ಕಥೆಗಳ ಮೂಲಕ ರಂಜಿಸುವಂತೆ ನಿರೂಪಿಸಿ, ಕಥೆಗಳ ಜೊತೆಯಲ್ಲಿ ವೈದಿಕ ಧರ್ಮ ಹಾಗೂ ಪುರಾಣೇತಿಹಾಸಗಳಲ್ಲಿ ಕಾಣಬರುವ ಮೂಢನಂಬಿಕೆಗಳನ್ನು ಖಂಡಿಸಿ, ವಾದದಲ್ಲಿ ಗೆದ್ದು ಜಯಪತ್ರವನ್ನು ಪಡೆದ. ಪರಾಜಿತರಾದ ಪಂಡಿತರು ಜೈನಧರ್ಮವನ್ನೆ ನಂಬಿ ನೆಲಸಿದರು. ಪವನವೇಗ ಸಮ್ಯಕ್ತ್ವಸಿದ್ಧಿಯನ್ನು ಪಡೆದ. ಇದು ಕಥಾವಸ್ತು. ಇಲ್ಲಿ ಜೈನಧರ್ಮದ ಹಿರಿಮೆಯನ್ನು ಹೇಳುವುದು ಕವಿಯ ಮುಖ್ಯ ಗುರಿ.

ಕಾವ್ಯಶೈಲಿ ಸರಳವಾಗಿದೆ, ಲಲಿತವಾಗಿದೆ. ಚಂಪೂ ಶೈಲಿಯ ಹೆಚ್ಚಿನ ಯಾವ ಆಡಂಬರವೂ ಇದರಲ್ಲಿ ಕಂಡುಬರುವುದಿಲ್ಲ. ವರ್ಣನೆಗಳು ಹಿತಮಿತವಾಗಿ ಬಳಕೆಯಾಗಿವೆ. ಸೂರ್ಯೋದಯ ಸೂರ್ಯಾಸ್ತದ ವರ್ಣನೆಗಳಲ್ಲಿ ಒಂದು ವೈಶಿಷ್ಟ್ಯವಿದೆ. ಇಲ್ಲಿಯ ಭಾಷೆ ಕಾಲಕ್ಕನುಗುಣವಾಗಿ ನಡುಗನ್ನಡಕ್ಕೆ ತಿರುಗಿದ್ದರೂ ಚಂಪೂಕಾವ್ಯವಾದುದರಿಂದ ಹಳಗನ್ನಡದ ಬಿಗುವಿನಿಂದ ಕೂಡಿದೆ. ಕಥೆಯ ಓಟಕ್ಕೆ ಉಪಕಥೆಗಳೂ ಪುರಾಣೇತಿಹಾಸದ ಕಥಾಸಂದರ್ಭಗಳೂ ಪೋಷಕವಾಗಿ ಬಂದಿವೆ. ಕಾವ್ಯದಲ್ಲಿರುವ ಸುಮಾರು 26 ಇಂಥ ಕಥೆಗಳಲ್ಲಿ ಕೆಲವು ಹರಿಭದ್ರನ ಧೂರ್ತಾಖ್ಯಾನ (ಸು. 750) ಎಂಬ ಪ್ರಾಕೃತ ಗ್ರಂಥದಲ್ಲಿ ಬರುವ ಕೆಲವು ಕಥೆಗಳನ್ನು ಹೋಲುತ್ತವೆ. ಅಲ್ಲದೆ ಎರಡೂ ಗ್ರಂಥಗಳಲ್ಲಿ ಪುರಾಣೇತಿಹಾಸದ ಕಥೆಗಳನ್ನು ಉದಾಹರಣೆಗಾಗಿ ಕೊಡುವ ರೀತಿ ಒಂದೇ ಬಗೆಯಾಗಿದೆ. ಇದರಿಂದ ಧರ್ಮಪರೀಕ್ಷೆಯಲ್ಲಿ ಬರುವ ಕೆಲವು ಕಥೆಗಳ ಆಕರ ಬಹುಮಟ್ಟಿಗೆ ಧೂರ್ತಾಧ್ಯಾನವೆಂದೇ ಹೇಳಬಹುದಾಗಿದೆ. ಇಲ್ಲಿಯ ಕಥೆಗಳ ಮುಖ್ಯ ಉದ್ದೇಶ ಅನ್ಯಮತವನ್ನು ವಿಡಂಬನಾತ್ಮಕವಾಗಿ ಖಂಡಿಸಿ, ಸ್ವಮತದ ಸರ್ವೋತ್ಕೃಷ್ಟತೆಯನ್ನು ಪ್ರತಿಷ್ಠಾಪನೆ ಮಾಡುವುದೇ ಆಗಿರುವಂತೆ ತೋರುತ್ತದೆ.

ಕವಿ ಅನ್ಯಧರ್ಮದ ಕಥೆಗಳನ್ನು ಬಳಸಿಕೊಂಡರೂ ಹೇಳುವ ಕ್ರಮದಲ್ಲಿ ಜಾಣತನ, ನಯ, ಕಲಾತ್ಮಕತೆ ವ್ಯಕ್ತವಾಗುತ್ತದೆ. ಭಾರತೀಯ ಸಾಹಿತ್ಯದಲ್ಲಿ ತುಂಬ ವಿರಳವಾದ ವಿಡಂಬನಾತ್ಮಕ ಕಾವ್ಯಗಳಲ್ಲಿ ಧರ್ಮಪರೀಕ್ಷೆಗೆ ಒಂದು ಮಿಗಿಲಾದ ಸ್ಥಾನವಿದೆ. ಪ್ರಾಕೃತ, ಅಪಭ್ರಂಶ, ಹಿಂದಿ, ಮರಾಠಿ, ಜರ್ಮನ್ ಭಾಷೆಗಳಲ್ಲಿ ಧರ್ಮಪರೀಕ್ಷೆಯ ಪ್ರತಿಗಳು ದೊರೆಯುವುದು ಈ ಕಾವ್ಯದ ಹಿರಿಮೆಯ ಕುರುಹಾಗಿದೆ.

ವೃತ್ತವಿಲಾಸನು ಶಾಸ್ತ್ರಸಾರ ಎಂಬ ಗ್ರಂಥವನ್ನೂ ಬರೆದಿದ್ದಾನೆ. ಇದರ ಪೂರ್ಣಪಾಠ ಇನ್ನೂ ದೊರೆತಿಲ್ಲ. ಪ್ರಾಕ್ಕಾವ್ಯಮಾಲಿಕೆಯಲ್ಲಿ ಇದರ ಕೆಲವು ಪದ್ಯಗಳು ಮಾತ್ರ ದೊರೆಯುತ್ತವೆ. ಈ ಪದ್ಯಗಳಲ್ಲಿ ನರಕವಿಸ್ತಾರದ ಪ್ರಸ್ತಾಪವಿದೆ. ಧರ್ಮಪರೀಕ್ಷೆಯಲ್ಲಿ ಈ ಗ್ರಂಥದ ಬಗ್ಗೆ ಯಾವುದೇ ವಿಷಯ ಬರುವುದಿಲ್ಲ. (ಆರ್.ಕೆ.)

**ವೃತ್ತಿಗಾಯಕರು:** ಹಾಡುವುದನ್ನೇ ಪ್ರಧಾನ ವೃತ್ತಿಯಾಗಿಸಿಕೊಂಡ ಜನಪದ ಕಥೋಪಜೀವಿಗಳ ಹಲವು ಗುಂಪುಗಳನ್ನು ಕರ್ನಾಟಕದಲ್ಲಿ ಗುರುತಿಸಲಾಗಿದೆ. ಇವರಲ್ಲಿ ಪ್ರಮುಖವಾಗಿ ಧಾರ್ಮಿಕ ಕಥೋಪಜೀವಿಗಳು ಹಾಗೂ ಲೌಕಿಕ ಕಥೋಪಜೀವಿಗಳು ಎಂಬ ಎರಡು ಪಂಗಡಗಳನ್ನು ಕಾಣಬಹುದು. ಯಾವುದೋ ಒಂದು ದೈವದ ಆರಾಧಕರಾಗಿ, ಅದಕ್ಕೇ ಸಂಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡು ಆ ದೇವರ ಮಹಿಮಾತಿಶಯಗಳನ್ನು ಬಣ್ಣಿಸುತ್ತ, ಭಕ್ತರಲ್ಲಿ ಭಕ್ತಿಭಾವದ ಹಸಿವನ್ನು ತುಂಬುವ ಶ್ರೇಷ್ಠವೃತ್ತಿಯನ್ನು ಕೈಗೊಂಡವರು ಧಾರ್ಮಿಕ ಕಥೋಪಜೀವಿಗಳು. ನೀಲಗಾರರು, ದೇವರ ಗುಡ್ಡರು, ಚೌಡಿಕೆಯವರು, ಗೊಂದಲಿಗರು,

ಚೌಡಿಕೆ ವೃತ್ತಿ ಗಾಯಕರು

ಜೋಗಿಯರು, ಗೊರವರು ಹಾಗೂ ಜುಂಜಪ್ಪನ ಸಂಪ್ರದಾಯದವರು ಈ ವರ್ಗಕ್ಕೆ ಸೇರುತ್ತಾರೆ.

ಯಾವ ಒಂದು ಧಾರ್ಮಿಕ ಚೌಕಟ್ಟಿಗೂ ಒಳಪಟ್ಟವರಾಗಿರದೆ ಕೇವಲ ಸಾಹಿತ್ಯವನ್ನಷ್ಟೇ ಅವಲಂಬಿಸಿ ಅದರ ನೆರವಿನಿಂದ ತಮ್ಮ ಬದುಕನ್ನು ನಡೆಸುವ ಮಾರ್ಗವನ್ನು ಕಂಡುಕೊಂಡವರು ಲೌಕಿಕ ಕಥೋಪಜೀವಿಗಳು. ಹೆಳವರು, ಕರಪಾಲದವರು, ದೊಂಬಿದಾಸರು, ತಂಬೂರಿಯವರು ಹಾಗೂ ತೆಲುಗು ಜಂಗಮರು ಮತ್ತು ತೆಲುಗು ಬಣಜಿಗರು ಈ ವರ್ಗಕ್ಕೆ ಸೇರುತ್ತಾರೆ. ವೃತ್ತಿಗಾಯಕರನ್ನು ಹೀಗೆ ಸ್ಥೂಲವಾಗಿ ವಿಂಗಡಿಸ ಬಹುದಾದರೂ ಇದೊಂದು ಲಕ್ಷ್ಮಣಗೆರೆಯೇನೂ ಅಲ್ಲ. ಧಾರ್ಮಿಕ ಕಥೋಪಜೀವಿಗಳೂ ಕೆಲವೊಮ್ಮೆ ಲೌಕಿಕ ಕಥೆಗಳನ್ನು ಕಲಿತಿದ್ದು ಜನ ಬಯಸಿದಾಗ ಹಾಡುವುದುಂಟು. ಇವರು ಬಳಸುವ ವಾದ್ಯ ವಿಶೇಷಗಳು ಹಾಗೂ ಧರಿಸುವ ವೇಷಭೂಷಣಗಳು ಆಕರ್ಷಕವಾಗಿರುತ್ತವೆ.

ವೃತ್ತಿಗಾಯಕರಲ್ಲಿ ಬಹುಪಾಲು ಗಂಡಸರು. ಇವರು ಕಥೆಗಳನ್ನು ಮಾಡುತ್ತ ಜನರಿಗೆ ಮನರಂಜನೆಯನ್ನೊದಗಿಸುತ್ತ ಜೀವಿತಕ್ಕೆ ದವಸಧಾನ್ಯ

ಗಳನ್ನು ಉಡಿಗೆತೊಡಿಗೆಗಳನ್ನು ಉಡುಗೊರೆಯಾಗಿ ಪಡೆಯುತ್ತ ಊರಿಂದೂರಿಗೆ ಸಂಚರಿಸುತ್ತಾರೆ. ಎಲ್ಲಿ ಹೋದರೂ ಇವರಿಗೆ ಗೌರವವುಂಟು. ಜನ ಇವರನ್ನು ತಾವೇ ಬರಮಾಡಿಕೊಂಡು ಕಥೆ ಮಾಡುವುದೂ ಉಂಟು. ಇವರು ಹಾಡುವ ಹಾಗೂ ಹೇಳುವ ಕಥೆಗಳಿಂದ, ಹಾಡುವುದನ್ನೇ ವೃತ್ತಿಯನ್ನಾಗಿ ಕೈಗೊಂಡು ಜೀವಿಸುತ್ತಿರುವ ವಿಶಿಷ್ಟ ಪ್ರವೃತ್ತಿಯಿಂದ ಸಂಪ್ರದಾಯಗಳಿಂದ ಜಾನಪದ ಕ್ಷೇತ್ರದಲ್ಲಿ ಇವರಿಗೆ ಮಹತ್ತ್ವದ ಸ್ಥಾನ ಸಂದಿದೆ. **(ಡಿ.ಕೆ.ಆರ್.)**

**ವೃತ್ತಿ ಮತ್ತು ತಾಂತ್ರಿಕ ಶಿಕ್ಷಣ:** ಔದ್ಯೋಗಿಕ ಮತ್ತು ತಾಂತ್ರಿಕ ಶಿಕ್ಷಣ ಇಂದು ನಾನಾ ರೀತಿಯ ಶಿಕ್ಷಣ ಸಂಸ್ಥೆಗಳಲ್ಲೂ ಹಾಗೂ ಕೈಗಾರಿಕಾ ಸಂಸ್ಥೆಗಳಲ್ಲೂ ನಡೆಯುತ್ತಿದೆ. ದೇಶದ ಅಭ್ಯುದಯವನ್ನು ತಾಂತ್ರಿಕ ಶಿಕ್ಷಣದಿಂದಲೆ ಸಾಧಿಸಲು ಸಾಧ್ಯವೆಂದು ಮನಗಂಡಿದ್ದ ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಿಂದಲೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿ, ತಾಂತ್ರಿಕ ಶಿಕ್ಷಣ ಕರ್ನಾಟಕದಲ್ಲು ಸುಭದ್ರ ಬುನಾದಿಯನ್ನು ಪಡೆದುಕೊಂಡಿದೆ. ಅವರ ಸೇವೆಯ ಸ್ಮಾರಕವಾಗು ಈಚೆಗೆ ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜು ಅವರ ಅಂಕಿತವನ್ನೆ ಪಡೆದುಕೊಂಡಿದೆ. ಸದ್ಯದಲ್ಲಿ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣ ಕೊಡುತ್ತಿರುವ ಸಂಸ್ಥೆಗಳು ಯಾವುವೆಂದರೆ ಎಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಶಾಲೆಗಳು ಮತ್ತು ಕೈಗಾರಿಕಾ ತರಬೇತಿ ಶಾಲೆಗಳು, ಗ್ರಾಮಾಂತರ ಕುಶಲ ಕೈಗಾರಿಕಾ ತರಬೇತಿ ಶಾಲೆಗಳು, ವೃತ್ತಿಪೂರ್ವ ತರಬೇತಿ ಶಾಲೆಗಳು, ಜೂನಿಯರ್ ಟೆಕ್ನಿಕಲ್ ಶಾಲೆಗಳು ಮತ್ತು ಇತರ ಉಮೇದುವಾರಿ ಕೇಂದ್ರಗಳು–ಇವೂ ಈ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿವೆ. ಉಪಾಧ್ಯಾಯರ ತರಬೇತಿ ಕೇಂದ್ರಗಳು, ವ್ಯವಸಾಯ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು, ವಾಣಿಜ್ಯ ಶಾಲೆಗಳು, ಮೀನುಗಾರಿಕೆ ಮತ್ತು ಪಶುಪಾಲನೆ ಕಾಲೇಜುಗಳು, ಪುಸ್ತಕ ಭಂಡಾರ ತರಬೇತಿ ಕೇಂದ್ರಗಳು ಸಂಗೀತ ಮತ್ತು ನಾಟ್ಯಕಲಾ ಕೇಂದ್ರಗಳು, ಚಿತ್ರಕಲಾ ತರಬೇತಿ ಕೇಂದ್ರಗಳು, ತೋಟಗಾರಿಕೆ ಕೇಂದ್ರ, ಜೇನು ಸಾಕಣೆ, ಕೋಳಿಸಾಕಣೆ ಕೇಂದ್ರಗಳು–ಇವು ಆಯಾ ಉದ್ಯೋಗಗಳಿಗೆ ವಿವಿಧ ಮಟ್ಟದ ಶಿಕ್ಷಣವೊದಗಿಸುತ್ತಿವೆ. ಈ ಎಲ್ಲ ಶಿಕ್ಷಣ ಸಂಸ್ಥೆಗಳು ಸರ್ಕಾರದ ಆಯಾ ಇಲಾಖೆಗಳಿಂದ ನಿಯಂತ್ರಿತವಾಗುತ್ತಿವೆ.

**ತಾಂತ್ರಿಕ ಶಿಕ್ಷಣ (ಪಾಲಿಟೆಕ್ನಿಕ್) ಶಾಲೆಗಳು :** ಕರ್ನಾಟಕ ರಾಜ್ಯದಲ್ಲಿ ಈಗ 25 ಸರ್ಕಾರಿ, 1 ಸಂಜೆ, 5, ಸಹಾಯಧನ ಪಡೆಯುತ್ತಿರುವ ಹಾಗೂ ಒಂದು ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆದ ಶಾಲೆ, ಹೀಗೆ ಒಟ್ಟಿನಲ್ಲಿ 32 ಪಾಲಿಟೆಕ್ನಿಕ್ ಶಾಲೆಗಳಿವೆ. ಇಂಥ ಶಾಲೆಗಳ ಪೈಕಿ 1917ರಲ್ಲಿ ಪ್ರಾರಂಭವಾದ ಬೆಂಗಳೂರಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ಶಾಲೆ ಮೊದಲನೆಯದು. ಈ ಎಲ್ಲ ಪಾಲಿಟೆಕ್ನಿಕ್‌ಗಳಲ್ಲೂ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಮಟ್ಟದಲ್ಲಿ ವಿವಿಧ ವಿಷಯಗಳಲ್ಲಿ ಅಧ್ಯಯನ ನಡೆಸಲು ಅವಕಾಶವಿರುತ್ತದೆ. ಈ ಶಾಲೆಗಳಲ್ಲಿ ಸಿವಿಲ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಎಂಜಿನಿಯರಿಂಗ್, ಆರ್ಕಿಟೆಕ್ಚರಲ್ ಎಂಜಿನಿಯರಿಂಗ್, ಪಬ್ಲಿಕ್‌ಹೆಲ್ತ್, ಮೆಷಿನ್‌ಟೂಲ್ ಟೆಕ್ನಾಲಜಿ, ಇನ್‌ಸ್ಟ್ರುಮೆಂಟ್ ಟೆಕ್ನಾಲಜಿ, ಹೀಟ್ ಪವರ ಟೆಕ್ನಾಲಜಿ, ವೆಲ್ಡಿಂಗ್ ಮತ್ತು ಷೀಟ್ ಮೆಟಲ್, ಸಿನಿಮಾಟೋಗ್ರಫಿ, ಸಿರಾಮಿಕ್ಸ್, ಪ್ರಿಂಟಿಂಗ್, ಎಲೆಕ್ಟ್ರಾನಿಕ್ಸ್, ಟೆಲಿ ಕಮ್ಯೂನಿಕೇಷನ್, ಸೌಂಡ್ ಮತ್ತು ರೇಡಿಯೊ ಎಂಜಿನಿಯರಿಂಗ್, ಮೈನಿಂಗ್ ಮತ್ತು ಪೇಂಟಿಂಗ್–ಈ ವಿಷಯಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಅಧ್ಯಯನ ಮಾಡಲು ಅವಕಾಶವಿರುತ್ತದೆ. ಈ ಶಾಲೆಗಳಲ್ಲಿ ಅಧ್ಯಯನ ಮಾಡಲು ಪ್ರೌಢ ಶಾಲಾ 10ನೆಯ ತರಗತಿಯಲ್ಲಿ ಉತ್ತೀರ್ಣರಾಗಿ ಹೆಚ್ಚು ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಸಿಕ್ಕುತ್ತದೆ. ಈ ಶಾಲೆಗಳ ಪರೀಕ್ಷೆಗಳನ್ನು ಬೋರ್ಡ್ ಆಫ್ ಟೆಕ್ನಿಕಲ್ ಎಕ್ಸಾಮಿನೇಷನ್ಸ್ ನಡೆಸಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್‌ಗಳನ್ನು ನೀಡುತ್ತದೆ. 1973–74ರ ಅಂಕಿ ಅಂಶಗಳ ಆಧಾರದ ಮೇಲೆ ಸರ್ಕಾರವು ಸರಾಸರಿ 1,153 ರೂ.ಗಳನ್ನು ಖರ್ಚುಮಾಡುತ್ತಿದೆ. ಈ ಎಲ್ಲ ಶಾಲೆಗಳಲ್ಲಿ 1973–74ರ ಸಾಲಿನಲ್ಲಿ 2,235 ವಿದ್ಯಾರ್ಥಿಗಳು, 433 ವಿದ್ಯಾರ್ಥಿನಿಯರೂ ಅಭ್ಯಾಸ ಮಾಡುತ್ತಿದ್ದರು. ಇಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿನಿಯ ಮೇಲೂ ಸರ್ಕಾರ 1070ರೂ.ಗಳನ್ನು ಖರ್ಚು ಮಾಡುತ್ತದೆ. ಮಂಗಳೂರು, ಹುಬ್ಬಳ್ಳಿ ಬೆಂಗಳೂರಲ್ಲಿರುವ ಹೆಣ್ಣು ಮಕ್ಕಳ ತಾಂತ್ರಿಕ ಶಾಲೆಗಳು, ಹೆಣ್ಣು ಮಕ್ಕಳನ್ನು ದಾಖಲು ಮಾಡಿಕೊಳ್ಳುತ್ತವೆ. ಈ ಶಾಲೆಗಳಲ್ಲಿ ಎಂಜಿನಿಯರಿಂಗ್ ವಿಷಯಗಳಲ್ಲದ ಕೆಲವು ವಿಷಯಗಳಲ್ಲಿ ಅಂದರೆ ಹೊಲಿಗೆ, ಸೆಕ್ರೆಟೇರಿಯಲ್ ಪ್ರಾಕ್ಟೀಸ್, ಉಡುಪು ಮಾಡುವುದು, ಕಸೂತಿ ಕೆಲಸ, ಪುಸ್ತಕ ಭಂಡಾರ ವಿಜ್ಞಾನ, ಫುಡ್ ಕ್ರಾಫ್ಟ್ ಮುಂತಾದ ವಿಷಯಗಳಲ್ಲಿ ಶಿಕ್ಷಣ ಕೊಡಲಾಗುತ್ತಿದೆ. ಈಗ ಆಡಳಿತ ವ್ಯವಸ್ಥೆಯು ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಿಗೆ ಒಳಪಡುತ್ತದೆ. ವಿದ್ಯಾಭ್ಯಾಸವು 3 ವರ್ಷ ಅಥವಾ 2 ವರ್ಷಗಳ ಅವಧಿಯದಾಗಿರುತ್ತದೆ. 3 ವರ್ಷ ಅವಧಿಯ ವಿದ್ಯಾಭ್ಯಾಸ ಡಿಪ್ಲೊಮಾಕ್ಕೂ, 2 ವರ್ಷದ ಅವಧಿಯ ವಿದ್ಯಾಭ್ಯಾಸ ಸರ್ಟಿಫಿಕೇಟ್ ಪರೀಕ್ಷೆಗೂ ಅರ್ಹತೆ ಕೊಡುತ್ತದೆ.

ಮಾಧ್ಯಮಿಕ ಮಟ್ಟದಲ್ಲಿ 6 ಜೂನಿಯರ್ ಶಾಲೆಗಳು ಇದ್ದು ಅವುಗಳ ಹೊಣೆ ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ಸೇರುತ್ತದೆ. ಆದರೆ ಈ ಶಾಲೆಗಳ ಪರೀಕ್ಷೆಗಳನ್ನು ಕರ್ನಾಟಕ ಮಾಧ್ಯಮಿಕ ಪರೀಕ್ಷಾ ಮಂಡಳಿಯೇ ನಡೆಸಿ ಸರ್ಟಿಫಿಕೇಟ್‌ಗಳನ್ನು ನೀಡುತ್ತದೆ. ಜೂನಿಯರ್ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಪ್ರತಿ ವಿದ್ಯಾರ್ಥಿಗೂ ಸರ್ಕಾರ 940 ರೂ.ಗಳನ್ನು ಖರ್ಚು ಮಾಡುತ್ತಿದೆ. ಈ ಶಾಲೆಗಳು ಸಹ ತಾಂತ್ರಿಕ ಶಿಕ್ಷಣವನ್ನು ಕೊಡುತ್ತಿದ್ದು ಇಲ್ಲಿಯ ಸರ್ಟಿಫಿಕೇಟ್‌ಗಳನ್ನು ನೀಡುತ್ತದೆ. ಜೂನಿಯರ್ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಪ್ರತಿ ವಿದ್ಯಾರ್ಥಿಗೂ ಸರ್ಕಾರ 940 ರೂ.ಗಳನ್ನು ಖರ್ಚು ಮಾಡುತ್ತಿದೆ. ಈ ಶಾಲೆಗಳು ಸಹ ತಾಂತ್ರಿಕ ಶಿಕ್ಷಣವನ್ನು ಕೊಡುತ್ತಿದ್ದು ಇಲ್ಲಿಯ ಸರ್ಟಿಫಿಕೇಟ್ ಡಿಪ್ಲೊಮಾ ಮಟ್ಟಕ್ಕಿಂತ ಕಡಿಮೆ ಇರುತ್ತದೆ.

**ಪದವಿಮಟ್ಟದ ಎಂಜಿನಿಯರಿಂಗ್ ಕಾಲೇಜುಗಳು:** ಈ ಕಾಲೇಜುಗಳಲ್ಲಿ ಪ್ರವೇಶಾವಕಾಶವನ್ನು ತಾಂತ್ರಿಕ ಶಿಕ್ಷಣದ ನಿರ್ದೇಶಕರು ನಿಯಂತ್ರಿಸುತ್ತಿದ್ದರು. ಈಗ ಸರ್ಕಾರ ಸಿಇಟಿ ಪ್ರವೇಶದ ಮೂಲಕ ಸೀಟು ಭರ್ತಿಮಾಡುತ್ತಿದೆ. ಆದರೆ ಪರೀಕ್ಷೆ ಮತ್ತು ಅಧ್ಯಯನ ಮೇಲ್ವಿಚಾರಣೆಗಳನ್ನು ವಿಶ್ವವಿದ್ಯಾನಿಲಯಗಳು ನಡೆಸಿ ಪದವೀ ಸರ್ಟಿಫಿಕೇಟ್‌ಗಳನ್ನು ಕೊಡುತ್ತವೆ. ಇಂಥ ಪದವಿಮಟ್ಟದ 21 ಎಂಜಿನಿಯರಿಂಗ್ ಕಾಲೇಜುಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಮೈಸೂರು ಸರ್ಕಾರದ ಕಾಲೇಜುಗಳು 2, ಕೇಂದ್ರ ಸರ್ಕಾರದ ಕಾಲೇಜು ಒಂದು ಸೇರಿದೆ. ವಿಶ್ವವಿದ್ಯಾನಿಲಯದ ಕಾಲೇಜು ಒಂದು, ಮಿಕ್ಕವು ಖಾಸಗಿ ಕಾಲೇಜುಗಳು. ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪದವಿಯನ್ನು ಪಡೆಯಲು ಅವಕಾಶ ವಿರುತ್ತದೆ. ವಿಶ್ವವಿದ್ಯಾನಿಲಯದ ಕಾಲೇಜು ಮತ್ತು ಬೆಂಗಳೂರಿನ ಭಾರತೀಯ ವಿಜ್ಞಾನ ಶಿಕ್ಷಣ ಸಂಸ್ಥೆ ಸ್ನಾತಕೋತ್ತರ ಪದವಿಯನ್ನು ಪಡೆಯಲು ಶಿಕ್ಷಣ ಕೊಡುತ್ತಿವೆ. ಎಂಜಿನಿಯರಿಂಗ್‌ಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಈ ಕಾಲೇಜುಗಳಲ್ಲಿ ಅಧ್ಯಯನ ಮಾಡಲು ಅವಕಾಶವಿರುತ್ತದೆ. ಬೆಂಗಳೂರಿನಲ್ಲಿರುವ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಟೆಕ್ಸ್‌ಟೈಲ್ ಟೆಕ್ನಾಲಜಿಯಲ್ಲಿ ಡಿಗ್ರಿ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಅರ್ಹತೆಗೆ ಶಿಕ್ಷಣ ದೊರೆಯುತ್ತದೆ. ಈ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ

ಪ್ರತಿಯೊಬ್ಬ ವಿದ್ಯಾರ್ಥಿಗೂ ಸರ್ಕಾರ ಸಾವಿರಾಗು ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಈಗಿರುವ ಕಾಲೇಜುಗಳಲ್ಲಿ ವರ್ಷಕ್ಕೆ ಸುಮಾರು 27,000ಕ್ಕು ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೆ.

ಈ ರೀತಿಯಾಗಿ ತಾಂತ್ರಿಕ ಶಿಕ್ಷಣವು ಜೂನಿಯರ್ ಟೆಕ್ನಿಕಲ್ ಶಾಲೆ, ಪಾಲಿಟೆಕ್ನಿಕಲ್ ಶಾಲೆ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಡೆಯುತ್ತಿದೆ. ತಾಂತ್ರಿಕ ಶಿಕ್ಷಣಕ್ಕೆ ನಿರ್ದೇಶನ ನೀಡಲು 1959ರಿಂದ ತಾಂತ್ರಿಕ ಶಿಕ್ಷಣ ನಿರ್ದೇಶನ ಶಾಖೆಯನ್ನು ವಿದ್ಯಾಸಚಿವ ಖಾತೆಯಲ್ಲಿ ಸೇರಿಸಿದೆ. ವಿದ್ಯಾಸಚಿವರು ತಾಂತ್ರಿಕ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿಯೂ ತಾಂತ್ರಿಕ ಶಿಕ್ಷಣ ನಿರ್ದೇಶಕರು ಕಾರ್ಯದರ್ಶಿಗಳಾಗಿಯೂ ಕೆಲಸ ಮಾಡುತ್ತಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ 1947ಕ್ಕೆ ಮೊದಲು 3 ಎಂಜಿನಿಯರಿಂಗ್ ಕಾಲೇಜುಗಳು 2 ಪಾಲಿಟೆಕ್ನಿಕ್‌ಗಳು ಇದ್ದು, ರಾಜ್ಯ ಪುನರ್ವಿಂಗಡನೆಯಾದಾಗ 1956ರಲ್ಲಿ ಕರ್ನಾಟಕದಲ್ಲಿ 6 ಎಂಜಿನಿಯರಿಂಗ್ ಕಾಲೇಜುಗಳಲ್ಲಿ 430 ವಿದ್ಯಾರ್ಥಿಗಳೂ, 14 ಪಾಲಿಟೆಕ್ನಿಕ್‌ಗಳಲ್ಲಿ 1,464 ವಿದ್ಯಾರ್ಥಿಗಳೂ ಇದ್ದರು. 1960ರಲ್ಲಿ 10 ಎಂಜಿನಿಯರಿಂಗ್ ಕಾಲೇಜುಗಳಿದ್ದು 1,320 ವಿದ್ಯಾರ್ಥಿಗಳಿದ್ದರು. ಆಗ 24 ಪಾಲಿಟೆಕ್ನಿಕ್‌ಗಳಿದ್ದು 3,080 ವಿದ್ಯಾರ್ಥಿಗಳಿದ್ದರು.

**ಕೈಗಾರಿಕಾ ತರಬೇತಿ ಶಾಲೆಗಳು:** ಇಂಥ 16 ಶಾಲೆಗಳು ಈಗ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುತ್ತಿವೆ. ಈ ಶಾಲೆಗಳು 1939 ರಿಂದಲೂ ನಡೆದು ಬಂದಿವೆ. ಯುದ್ಧ ಕಾಲದಲ್ಲಿ ಬೇಕಾಗುವ ತಾಂತ್ರಿಕ ಕಾಮಗಾರಿಗೆ ಚತುರ ಕೆಲಸಗಾರರನ್ನು ತರಬೇತು ಮಾಡುವ ಉದ್ದೇಶದಿಂದ ಇವು ಪ್ರಾರಂಭವಾದವು. ಯುದ್ಧಾನಂತರ ಅಂಗವಿಕಲರಿಗೂ ಅಂಗಹೀನರಿಗೂ ಇತರ ಶಾರೀರಿಕ ನ್ಯೂನತೆ ಹೊಂದಿದವರಿಗೂ ಔದ್ಯೋಗಿಕ ತರಬೇತಿ ನೀಡಿ ಜೀವನೋಪಾಯ ಒದಗಿಸುವ ಶಾಲೆಗಳಾಗಿ ಮಾರ್ಪಟ್ಟವು. ಅನಂತರ ಈ ಶಾಲೆಗಳು ಮಧ್ಯಮ ವರ್ಗದ ಜನರಿಗೆ ತರಬೇತಿ ನೀಡುವ ಸಂಸ್ಥೆಗಳಾದವು. ಬೆಂಗಳೂರು, ಬೆಳಗಾಂವಿ, ಬಳ್ಳಾರಿ, ಭದ್ರಾವತಿ, ಬಿಜಾಪುರ, ದಾವಣಗೆರೆ, ಗುಲ್ಬರ್ಗ, ಹಾಸನ, ಹುಬ್ಬಳ್ಳಿ, ಕಾರವಾರ, ಕೋಲಾರ ಚಿನ್ನದಗಣಿ ಪ್ರದೇಶ ಮಂಗಳೂರು, ಮಡಕೇರಿ, ಮೈಸೂರು, ರಾಯಚೂರು ಮುಂತಾದ ಸ್ಥಳಗಳಲ್ಲಿ ಕೈಗಾರಿಕಾ ತರಬೇತಿ ಶಾಲೆಗಳಿವೆ. ಇವುಗಳಲ್ಲಿ ಬೆಂಗಳೂರು ಮತ್ತು ಮಡಿಕೇರಿ ಶಾಲೆಗಳು ಹೆಣ್ಣುಮಕ್ಕಳಿಗೆ ತರಬೇತಿ ನೀಡುತ್ತವೆ. ಒಂದು ಅಥವಾ ಎರಡು ವರ್ಷದ ಕಡೆಯಲ್ಲಿ ಆಯಾ ಕಸಬಿನಲ್ಲಿ ತರಬೇತಿ ಪಡೆದು ಸರ್ಟಿಫಿಕೇಟನ್ನು ಪಡೆದು ಉದ್ಯೋಗವನ್ನು ದೊರಕಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಶಾಲೆಗಳಿಗೆ ಸೇರಲು ಪ್ರೌಢಶಿಕ್ಷಣದ ಎಂಟನೆಯ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಕೆಲವು ಕಸಬುಗಳಿಗೆ ವಿಜ್ಞಾನ ಮತ್ತು ಗಣಿತ ಅಧ್ಯಯನ ಮಾಡಿರಬೇಕು. ಇನ್ನೂ ಕೆಲವು ಕಸಬುಗಳಿಗೆ ಸೇರಲು ಪ್ರೌಢಶಾಲೆಯ 10ನೆಯ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಈ ಶಾಲೆಗಳು ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವ ಶಾಖೆಗೆ ಸೇರಿದ ಉದ್ಯೋಗ ಮತ್ತು ತರಬೇತಿಗಳ ನಿರ್ದೇಶಕರ ಆಡಳಿತಕ್ಕೆ ಒಳಪಡುತ್ತವೆ. ಆದರೆ ಕರ್ನಾಟಕ ರಾಜ್ಯದ ಉದ್ಯೋಗ ಮತ್ತು ತರಬೇತಿಗಳ ನಿರ್ದೇಶಕರು ಅವುಗಳ ಆಡಳಿತವನ್ನು ನಿಯಂತ್ರಿಸುತ್ತಾರೆ.

**ಉಮೇದುವಾರಿ ತರಬೇತಿ ಕೇಂದ್ರಗಳು :** ತಾಂತ್ರಿಕ ಶಿಕ್ಷಣ ಶಾಲೆಗಳಿಂದ ಮತ್ತು ಇತರೇ ರೀತಿಯ ಔದ್ಯೋಗಿಕ ತರಬೇತಿ ಕೇಂದ್ರಗಳಿಂದ ಅರ್ಹತೆ ಪಡೆದುಕೊಂಡು ಬಂದ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಉದ್ಯೋಗಕ್ಕೆ ಸಂಬಂಧಪಟ್ಟ ಹೆಚ್ಚಿನ ತರಬೇತಿ ಪಡೆಯಲು ಅವಕಾಶವಿರುತ್ತದೆ. ಆ ಕಾಲದಲ್ಲಿ ಧನಸಹಾಯ ಸಿಕ್ಕುವ ಅವಕಾಶ ಇರುತ್ತದೆ.

**ಕುಶಲಕಲೆಗಳ ತರಬೇತಿ ಕೇಂದ್ರಗಳು:** ಈ ಶಾಲೆಗಳು ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕಾ ನಿರ್ದೇಶಕರ ಆಡಳಿತಕ್ಕೆ ಒಳಪಟ್ಟು ರಾಜ್ಯದ ನಾನಾ ಭಾಗಗಳಲ್ಲಿರುವ 32 ಕೇಂದ್ರಗಳಲ್ಲಿ ನಡೆಯುತ್ತಿವೆ. ಅಲ್ಲದೆ 22 ಮಾದರಿ ಮರಗೆಲಸ ಮತ್ತು ಕಮ್ಮಾರ ಕೈಗೆಲಸದ ಕೇಂದ್ರಗಳು ಇವೆ. ಇವುಗಳು ಎರಡು ವರ್ಷದಲ್ಲಿ ಕಲಿಯುವ ಕಸಬುಗಳು. ಈ ಶಾಲೆಗಳಿಗೆ ಸೇರಲು ಪ್ರಾಥಮಿಕ 5ನೆಯ ತರಗತಿಯಲ್ಲಿ ತೇರ್ಗಡೆಯಾಗಬೇಕು ಮತ್ತು 13 ರಿಂದ 20 ವರ್ಷದೊಳಗಿರಬೇಕು. ಪ್ರತಿ ವಿದ್ಯಾರ್ಥಿಗೂ 40 ರೂ. ನಂತೆ ವಿದ್ಯಾರ್ಥಿ ವೇತನ ಸಿಕ್ಕುತ್ತದೆ. ಕರಕೌಶಲ ಸಂಪಾದನೆ ಮಾಡಿಕೊಳ್ಳಲು ಈ ಶಾಲೆಗಳು ಸಹಾಯ ಮಾಡುತ್ತವೆ. ಈ ಶಿಕ್ಷಣ ಔದ್ಯೋಗಿಕ ತರಬೇತಿ ಕೊಟ್ಟು ಕುಶಲ ಕೆಲಸಗಾರರನ್ನು ತರಬೇತಿ ಮಾಡುತ್ತದೆ. ಇಂಥ ಶಿಕ್ಷಣ ಕೊಡುವ ಶಾಲೆಗಳಲ್ಲಿ ಮೈಸೂರಿನಲ್ಲಿರುವ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ 1913 ರಲ್ಲಿ ಪ್ರಾರಂಭವಾಯಿತು.

ವೃತ್ತಿಪೂರ್ವ ತರಬೇತಿ ಕೇಂದ್ರಗಳು (ಪ್ರಿ ಟ್ರೈನಿಂಗ್ ಸೆಂಟರ್): ಇವು ಕರ್ನಾಟಕ ರಾಜ್ಯದಲ್ಲಿ ಆನೇಕಲ್ಲು, ಮಳವಳ್ಳಿ, ಆಲಮಟ್ಟಿ ಕೋಟೆ, ಚಳ್ಳಕೆರೆ, ಕೊಪ್ಪಳ, ಹಂಸಬಾವಿ ಕೇಂದ್ರಗಳಲ್ಲಿ ಸ್ಥಾಪಿತವಾಗಿ ನಡೆಯುತ್ತಿವೆ. ಇಲ್ಲಿ ಪ್ರಾಥಮಿಕ 4ನೆಯ ತರಗತಿ ಮುಗಿಸಿದ 11–14 ವಯಸ್ಸಿನ ಮಕ್ಕಳಿಗೆ ಪ್ರವೇಶಾವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ತರಬೇತಿಯ ಅವಧಿ 3 ವರ್ಷ.

**ಹೆಣ್ಣುಮಕ್ಕಳ ಔದ್ಯೋಗಿಕ ತರಬೇತಿ ಕೇಂದ್ರಗಳು :** ಈ ಶಾಲೆಗಳು ಹೆಣ್ಣು ಮಕ್ಕಳಿಗೆ ಮಾತ್ರ ಸೀಮಿತವಾಗಿದ್ದು ಅವರಿಗೆ ಉಚಿತವಾದ ಕಸಬುಗಳನ್ನು ಕಲಿಸುತ್ತವೆ. ಇಂಥ ಶಾಲೆಗಳು ರಾಜ್ಯದ ಶಿಕ್ಷಣ ಇಲಾಖೆಯ ನಿರ್ದೇಶಕರ ಆಡಳಿತಕ್ಕೆ ಒಳಪಡುತ್ತವೆ.

ಈ ಕೆಳಗೆ ಕಾಣಿಸಿರುವ ಶಾಲೆಗಳು ತಾಂತ್ರಿಕ ಶಿಕ್ಷಣಕ್ಕೆ ಸಂಬಮಧಿಸಿದ ಔದ್ಯೋಗಿಕ ಶಿಕ್ಷಣವನ್ನು ಕೊಡುತ್ತಿವೆ.

**ವೈದ್ಯಕೀಯ ಕಾಲೇಜುಗಳು:** ರಾಜ್ಯದ 35 ಕಾಲೇಜುಗಳಲ್ಲಿ ಔಷಧ ತಯಾರಿಕೆ, ದಂತವೈದ್ಯ, ನರ್ಸಿಂಗ್, ಏವಿಯೇಷನ್, ಮೆಡಿಸನ್, ಆಯುರ್ವೇದ ವೈದ್ಯ, ಮಾನಸಿಕ ವೈದ್ಯ ಮುಂತಾದ ಕಾಲೇಜುಗಳಲ್ಲಿ ಸೇರಲು ಪಿಯುಸಿ, ಪರೀಕ್ಷೆ ಪಾಸಾಗಿರಬೇಕು. ನರ್ಸಿಂಗ್ ಕಾಲೇಜಿಗೆ ಸೇರಲು ಪ್ರೌಢಶಿಕ್ಷಣದಲ್ಲಿ ಉತ್ತೀರ್ಣರಾಗಿರಬೇಕು. ವ್ಯಾಸಂಗದ ಅವಧಿ 4 ವರ್ಷಗಳು. ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗದ ಅವಧಿಯು $5^1/_2$ ವರ್ಷಗಳು, ದಂತವೈದ್ಯ ಕಾಲೇಜಿನಲ್ಲಿ ವ್ಯಾಸಂಗದ ಅವಧಿ 5 ವರ್ಷಗಳು, ಫಾರ್ಮೆಸಿ ಕಾಲೇಜಿನಲ್ಲಿ 4 ವರ್ಷಗಳು. ಈ ಕಾಲೇಜುಗಳು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತವೆ. ಈ ಕಾಲೇಜುಗಳು ಆರೋಗ್ಯ ಇಲಾಖೆಯ ನಿರ್ದೇಶಕರ ಆಢಳಿತಕ್ಕೆ ಒಳಪಡುತ್ತವೆ. ಪರೀಕ್ಷೆಗಳನ್ನು ಮಾತ್ರ ವಿಶ್ವವಿದ್ಯಾನಿಲಯಗಳು ನಡೆಸುತ್ತವೆ.

**ವ್ಯವಸಾಯ ಪಶುಪಾಲನೆ ಮತ್ತು ಮೀನುಗಾರಿಕೆ ಕಾಲೇಜುಗಳು:** ರಾಜ್ಯದಲ್ಲಿನ 4 ಕಾಲೇಜುಗಳ ಪೂರ್ಣ ಆಡಳಿತ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿರುತ್ತದೆ. ಈ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಪಿಯುಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ವ್ಯಾಸಂಗದ ಅವಧಿ ಸೆಮಿಸ್ಟರ್ ರೀತಿಯಲ್ಲಿ ನಡೆಯುತ್ತಿದೆ. ಸಾಮಾನ್ಯ ವಿದ್ಯಾರ್ಥಿ 4 ವರ್ಷಗಳಲ್ಲಿ ಮುಗಿಸಬಹುದು. ವ್ಯವಸಾಯ ಕಾಲೇಜುಗಳು ಗ್ರಾಮಾಂತರ ಪ್ರದೇಶಗಳಲ್ಲಿ ವಿಸ್ತರಣಾ ಕಾರ್ಯದ ಮೂಲಕ ರೈತರಿಗೆ ಸಹಾಯ ಮಾಡುತ್ತಿವೆ. ಈ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆಯಲೂ ಅವಕಾಶವಿದೆ. ಇಲ್ಲಿನ ಪದವೀಧರರು ವ್ಯವಸಾಯ, ಪಶುಪಾಲನೆ, ಮತ್ಸ್ಯೋದ್ಯಮ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಬಹುದು ಅಥವಾ

ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಳ್ಳಬಹುದು. ಕೃಷಿ ವಿಶ್ವವಿದ್ಯಾನಿಲಯಗಳು ಬರುವ ಮುಂಚೆ ವ್ಯವಸಾಯ ಶಾಲೆಗಳು ಡಿಪ್ಲೊಮಾ ಪರೀಕ್ಷೆಗೆ ತರಬೇತು ನೀಡುತ್ತಿದ್ದವು. ಈ ಶಾಲೆಗಳನ್ನು ಪುನರ್ ನಾಮಕರಣ ಮಾಡಿ ಗ್ರಾಮಸೇವಕ, ಗ್ರಾಮಸೇವಿಕಾ ತರಬೇತಿ ಕೇಂದ್ರಗಳಾಗಿ ಬದಲಾಯಿಸಲಾಯಿತು. ಇಂಥ ಶಾಲೆಗಳು ಮಂಡ್ಯ, ಧಾರವಾಡ, ಕೂಡಿಗೆ, ಗಂಗಾವತಿ ಮುಂತಾದ ಸ್ಥಳಗಳಲ್ಲಿವೆ. ಈ ಶಾಲೆಗಳು ಸಹ ವ್ಯವಸಾಯದ ಉದ್ಯೋಗಕ್ಕೆ ತರಬೇತು ಕೊಡುತ್ತವೆ. ಮೀನುಗಾರಿಕೆಯ ಕಾಲೇಜು ಮಂಗಳೂರಲ್ಲಿದೆ.

**ವಾಣಿಜ್ಯ ಶಾಲೆಗಳು:** ಇವು ಜೂನಿಯರ್ ಮತ್ತು ಸೀನಿಯರ್ ಟೈಪ್‌ರೈಟಿಂಗ್, ಪ್ರೊಫಿಶಿಯೆನ್ಸಿ, ಸ್ಟೆನೋಗ್ರಫಿ ಮುಂತಾದ ಪರೀಕ್ಷೆಗಳಿಗೆ ತರಬೇತು ನೀಡುತ್ತವೆ. ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಗಳು ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಆಗಿ ಸಾರ್ವಜನಿಕ ಸಂಸ್ಥೆ, ಕಚೇರಿಗಳಲ್ಲಿ ಉದ್ಯೋಗ ದೊರಕಿಸಿಕೊಳ್ಳಬಹುದು. ಈ ಶಾಲೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು (ವಾಣಿಜ್ಯ ವಿಭಾಗ) ನಿಯಂತ್ರಿಸಿ ಆಡಳಿತ ನಡೆಸುತ್ತಾರೆ. ಈ ಶಾಲೆಗಳ ಮಂಜೂರಾತಿ ಅಂಗೀಕಾರಗಳನ್ನು ಶಿಕ್ಷಣ ಇಲಾಖೆಯ ನಿರ್ದೇಶಕರು ಕೊಡುತ್ತಾರೆ. ಕರ್ನಾಟಕ ಮಾಧ್ಯಮಿಕ ಶಿಕ್ಷಣ ಪರೀಕ್ಷಾ ಮಂಡಳಿ ಪರೀಕ್ಷೆಗಳನ್ನು ನಡೆಸಿ ಸರ್ಟಿಫಿಕೇಟುಗಳನ್ನು ಕೊಡುತ್ತದೆ.

**ಗ್ರಂಥಾಲಯ ವಿಜ್ಞಾನ ತರಬೇತಿ:** ಈ ತರಬೇತಿಯು ಮೂರು ಹಂತಗಳಲ್ಲಿ ನಡೆಯುತ್ತದೆ. ಪದವಿ ಮಟ್ಟದಲ್ಲಿ, ಡಿಪ್ಲೊಮಾ ಮಟ್ಟದಲ್ಲಿ ಮತ್ತು ಸರ್ಟಿಫಿಕೇಟ್ ಮಟ್ಟದಲ್ಲಿ, ಗ್ರಂಥಾಲಯ ವಿಜ್ಞಾನದಲ್ಲಿ ಪದವೀ ಮಟ್ಟದ ಶಿಕ್ಷಣವನ್ನು ಬೆಂಗಳೂರು, ಮೈಸುರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಪ್ರಾರಂಭಿಸಿವೆ. ಬೆಂಗಳೂರಿನಲ್ಲಿರುವ ಹೆಣ್ಣುಮಕ್ಕಳ ಶಾಲೆ ಗ್ರಂಥಾಲಯ ವಿಜ್ಞಾನದ ಡಿಪ್ಲೊಮಾವನ್ನೂ, ರಾಜ್ಯ ಗ್ರಂಥಾಲಯ ಇಲಾಖೆಯು 3 ತಿಂಗಳ ಸರ್ಟಿಫಿಕೇಟ್ ಕೋರ್ಸನ್ನೂ ನಡೆಸುತ್ತಿವೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ಸ್ಫೋಟದಿಂದ ವೃತ್ತಿ ಶಿಕ್ಷಣದ ವ್ಯಾಪ್ತಿ ವಿಸ್ತರಿಸಿದೆ. **(ಕೆ.ಎಸ್.ಬಿ.)**

**ವೆಂಕಟಕೃಷ್ಣಯ್ಯ, ಎಂ.:** 1814–1933. ಸಮಾಜಸೇವಕರು, ಪತ್ರಿಕಾಕರ್ತರು, ಗ್ರಂಥಕರ್ತರು. ಮೈಸೂರು ನಗರದ ಸಾರ್ವಜನಿಕ ಜೀವನದ ಶ್ರೇಯಸ್ಸಿಗೆ ಶ್ರಮಿಸಿದ ಇವರು ಮೈಸೂರು ತಾತಯ್ಯ ಎಂದೇ ಪ್ರಸಿದ್ಧರಾದವರು. ದಯಾಸಾಗರ, ಭೀಷ್ಮಾಚಾರ್ಯ, ವೃದ್ಧಪಿತಾಮಹ ಎಂದೂ ಖ್ಯಾತರಾದರು. ಹೆಗ್ಗಡದೇವನಕೋಟೆ ತಾಲ್ಲೂಕು ಮಗ್ಗೆಗ್ರಾಮದ ಬಡಕುಟುಂಬದಲ್ಲಿ 5–9–1844ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಮೈಸೂರಿಗೆ ಬಂದು ರಾಜಾಸ್ ಸ್ಕೂಲ್, ವೆಸ್ಲಿಯನ್ ಮಿಶನ್ ಹೈಸ್ಕೂಲ್‌ಗಳಲ್ಲಿ ವ್ಯಾಸಂಗ ಮಾಡಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆದರೆ ಬಡತನದಿಂದಾಗಿ ಓದನ್ನು ಮುಂದುವರಿಸಲಾಗದೆ ಉಪಾಧ್ಯಾಯ ವೃತ್ತಿಯನ್ನು ಆರಂಭಿಸಿ, ಸದ್ವಿದ್ಯಾ ಪಾಠಶಾಲೆ, ಗುರಿಕಾರ ಮಲ್ಲಪ್ಪನವರ ಪ್ರೌಢಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ತಮ್ಮ ಉಪಾಧ್ಯಾಯ ವೃತ್ತಿಯ ಜೊತೆಗೆ ಪತ್ರಿಕೋದ್ಯಮ ಮತ್ತು ಸಮಾಜಸೇವೆಯನ್ನು ಮಾಡಿದರು. ಮರಿಮಲ್ಲಪ್ಪ ಶಾಲೆ, ಶಾರದಾವಿಲಾಸ ವಿದ್ಯಾಸಂಸ್ಥೆ, ಅನಾಥಾಲಯ ಮುಂತಾದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಕೀರ್ತಿ ಇವರದು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್, ಪೌರಸಭೆ ಹಾಗೂ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ–ಇಂಥ ಉನ್ನತ ಮಟ್ಟದ ಸಂಘಸಂಸ್ಥೆಗಳ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದಾರೆ.

ಮಹತ್ವಾಕಾಂಕ್ಷೆಯ ಪತ್ರಿಕೋದ್ಯಮಿಗಳಾಗಿದ್ದ ವೆಂಕಟಕೃಷ್ಣಯ್ಯನವರು ಹಿತಬೋಧಿನೀ, ವಿದ್ಯಾದಾಯಿನೀ, ಸಾಧ್ವಿ **(ನೋಡಿ)** ಸಂಪದಭ್ಯುದಯ, ಗ್ರಾಮಜೀವನ, ಪೌರಸಾಮಾಜಿಕ ಪತ್ರಿಕೆ ಮುಂತಾದ ಕನ್ನಡ ಪತ್ರಿಕೆಗಳನ್ನು, ವೆಲ್ತ್ ಆಫ್ ಮೈಸೂರು, ಮೈಸೂರು ಪೇಟ್ರಿಯಟ್, ನೇಚರ್ ಕ್ಯೂರ್ ಮುಂತಾದ ಇಂಗ್ಲಿಷ್ ಪತ್ರಿಕೆಗಳನ್ನು ಕೊಟ್ಟ ಕಾರಣದಿಂದಾಗಿ ಆಗಿನ ಬ್ರಿಟಿಷ್ ಸರ್ಕಾರ ಪತ್ರಿಕೆಗಳನ್ನು ಹಲವುಬಾರಿ ಪ್ರತಿಬಂಧಿಸಿತು.

ವೆಂಕಟಕೃಷ್ಣಯ್ಯನವರು ಮಾಡಿದ ಸಾಹಿತ್ಯ ಸೇವೆಯೂ ಗಣ್ಯವಾದುದು. ವಿದ್ಯಾರ್ಥಿ ಕರಭೂಷಣ, ಧನಾರ್ಜನೆಯ ಕ್ರಮ, ಚೋರಗ್ರಹಣ ತಂತ್ರ, ಅರ್ಥಸಾಧನ, ಆರೋಗ್ಯಸಾಧನ ಪ್ರಕಾಶಿಕೆ, ದೇಶಾಭಿಮಾನ ಈ ಮುಂತಾದವು ಇವರ ಕೃತಿಗಳು. ಇವರನ್ನು ದಾವಣಗೆರೆಯಲ್ಲಿ 1922ರಲ್ಲಿ ನಡೆದ 8ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಕನ್ನಡ ಜನತೆ ಗೌರವಿಸಿತು. ಇವರು 1933 ನವೆಂಬರ್ 8ರಂದು ಮೈಸೂರಿನಲ್ಲಿ ನಿಧನರಾದರು. **(ಎ.ಆರ್.)**

**ವೆಂಕಟಗಿರಿಗೌಡ, ಕೆ.:** 1923– . ಅಂತಾರಾಷ್ಟ್ರೀಯ ಪ್ರಸಿದ್ಧ ಅರ್ಥಶಾಸ್ತ್ರಜ್ಞ, ವಿಚಾರವಾದಿ, ಶಿಕ್ಷಕ ಮತ್ತು ಮಾಜಿ ಸಂಸದ, ಲೇಖಕ ಹಾಗೂ ಗ್ರಂಥಕರ್ತರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಬೈರಾಪಟ್ಟಣ ಗ್ರಾಮದಲ್ಲಿ 1923 ಜೂನ್ 26ರಂದು ಜನಿಸಿದರು. ತಂದೆ ಕೃಷ್ಣದಾಸೇಗೌಡ. ವೆಂಕಟಗಿರಿಗೌಡರು 1948ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪ್ರಥಮ ದರ್ಜೆಯೊಂದಿಗೆ ಪಡೆದರು. 1956ರಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಪಿಎಚ್.ಡಿ. ಪದವಿ ಪಡೆದರು. ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ ಬೋಧನೆ ಕೈಗೊಂಡರು. 1967ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಹೋದರು. 1983ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾಲಯದ ಸೆನೆಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯರಾಗಿ ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಸೇವೆ ಸಲ್ಲಿಸಿದರು. ನಿವೃತ್ತರಾದ ಮೇಲೆ ರಾಷ್ಟ್ರರಾಜಕಾರಣದತ್ತ ಆಸಕ್ತಿ ತೋರಿ ಚುನಾವಣೆಯಲ್ಲಿ ಸ್ಪರ್ಧಿಸಿ ಲೋಕಸಭೆಯ ಸದಸ್ಯರಾದರು (1991–96). ಸಂಸತ್ತಿನಲ್ಲಿ ಹೆಚ್ಚಾಗಿ ದೇಶದ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಅಮೂಲ್ಯ ಸಲಹೆಗಳನ್ನು ನೀಡಿ ತಮ್ಮ ಪ್ರತಿಭೆ ಮೆರೆದರು.

ಅರ್ಥಶಾಸ್ತ್ರದಲ್ಲಿನ ಇವರ ಪ್ರತಿಭೆ ಮತ್ತು ಪಾಂಡಿತ್ಯಗಳು ಅಂತಾರಾಷ್ಟ್ರೀಯ ಅರ್ಥಶಾಸ್ತ್ರಜ್ಞರ ಗಮನ ಸೆಳೆದವು. 1978ರಲ್ಲಿ ಅಮೆರಿಕದ ಆಹ್ವಾನದ ಮೇಲೆ ತೈಲಬಿಕ್ಕಟ್ಟು ಕುರಿತಂತೆ ಹಾರ್ವರ್ಡ್, ಶಿಕಾಗೊ, ವಾಷಿಂಗ್ಟನ್, ಲಾಸ್‌ಆಂಜಲೀಸ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೊ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸ ನೀಡಿದರು. ಈ ಉಪನ್ಯಾಸಗಳು ಅಲ್ಲಿಯ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿ ಪತ್ರಿಕೆಗಳಿಂದ ಪ್ರಶಂಸೆ ಪಡೆದವು. 1969ರಲ್ಲಿ ಮದರಾಸು ವಿಶ್ವವಿದ್ಯಾಲಯದಲ್ಲಿ ಸರ್ ವಿಲಿಯಂ

ಮೆಯರ್ ದತ್ತಿ ಉಪನ್ಯಾಸ ನೀಡಿ ಅರ್ಥಶಾಸ್ತ್ರಜ್ಞರ ಗೌರವಕ್ಕೆ ಪಾತ್ರರಾಗಿದ್ದರು.

ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಇವರು ಮಾಡಿದ ಸೇವೆ, ಬರೆದ ಬರೆಹಗಳು, ಗ್ರಂಥಗಳು ಪ್ರಪಂಚದ ವಿವಿಧ ಭಾಗಗಳ ವಿದ್ವಾಂಸರ ಮೆಚ್ಚುಗೆ ಪಡೆದುದಲ್ಲದೆ ವಿವಿಧ ಗೌರವ, ಸನ್ಮಾನಗಳನ್ನೂ ತಂದುಕೊಟ್ಟವು. ಲಂಡನ್ನಿನಲ್ಲಿ ಲಾರ್ಡ್ ಲಿವರ್‌ಹುಲ್ಮೆ ಸಂಶೋಧನ ಪ್ರಶಸ್ತಿ ಪಡೆದು 1953–1956ರ ವರೆಗೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಸಂಶೋಧನೆ ಮುಂದುವರಿಸಿದರು. ಇವರಿಗೆ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಅಮೆರಿಕ ಸಂಯುಕ್ತಸಂಸ್ಥಾನದ ಮ್ಯಾನ್ ಆಫ್ ದಿ ಮಿಲೆನಿಯಮ್ (ಎಬಿಐ) ಬಯಾಗ್ರಫಿಕಲ್ ಸಂಸ್ಥೆಯ ಮಿಲೆನಿಯಮ್ ಸ್ವರ್ಣಪದಕ ಪಡೆದ ಗೌರವಕ್ಕೆ ಇವರು ಪಾತ್ರರಾದರು. ಇವಲ್ಲದೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ವಿವಿಧ ಗೌರವ ಮತ್ತು ಸನ್ಮಾನಗಳು ಇವರಿಗೆ ಸಂದಿವೆ.

ವೆಂಕಟಗಿರಿಗೌಡರು ಉತ್ತಮ ಚಿಂತಕರು, ವಾಗ್ಮಿ. ಇವರು ಅರ್ಥಶಾಸ್ತ್ರ ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಈ ಎಲ್ಲ ಗ್ರಂಥಗಳು ಪ್ರಪಂಚದ ಅರ್ಥಶಾಸ್ತ್ರಜ್ಞರ ಮೆಚ್ಚುಗೆಗೆ ಪಾತ್ರವಾಗಿವೆ. ಫಿಸ್ಕಲ್ ಪಾಲಿಸಿ ಅಂಡ್ ಇನ್‌ಫ್ಲಮೇಷನ್ (1958), ಅಪ್ರಿಷಿಯೇಷನ್ ಆಫ್ ಇಂಡಿಯನ್ ರುಪಿ (1960), ಕೇನ್ಸ್–ಟ್ರಿಫಿನ್ ಪ್ಲಾನ್ ಫಾರ್ ಇಂಟರ್ ನ್ಯಾಷನಲ್ ಲಿಕ್ವಿಡಿಟಿ (1962), ಯುರೋಪಿಯನ್ ಕಾಮನ್ ಮಾರ್ಕೆಟ್ ಅಂಡ್ ಇಂಡಿಯ (1962), ಇಂಟರ್‌ನ್ಯಾಷನ್ ಕರೆನ್ಸಿ ಪ್ಲಾನ್ಸ್ ಅಂಡ್ ಎಕ್ಸ್‌ಪ್ಯಾನ್ಷನ್ ಆಫ್ ವರ್ಲ್ಡ್ ಟ್ರೇಡ್ (1964), ಕಾಮನ್‌ವೆಲ್ತ್ ಕಾಮನ್ ಮಾರ್ಕೆಟ್ (1964), ಯುರೊ–ಡಾಲರ್ ಫ್ಲೊವ್ಸ್ ಅಂಡ್ ಇಂಟರ್‌ನೇಷನ್ ಮಾನಿಟರಿ ಸ್ಟಬಿಲಿಟಿ (1979), ಫಿಸ್ಕಲ್ ರೆವೆಲ್ಯೂಷನ್ ಇನ್ ಇಂಡಿಯ (1985), ಎರಾಡಿಕೇಷನ್ ಆಫ್ ಬ್ಲಾಕ್ ವೆಲ್ತ್ ಅಂಡ್ ಬ್ಲಾಕ್ ಮನಿ (1986), ಇಂಡಿಯಾಸ್ ಸವೆನ್ತ್ ಫೈವ್ ಇಯರ್ ಪ್ಲಾನ್ (1986), ಪೆರಿಸ್ಟ್ರೊಯ್ಕ ಅಂಡ್‌ಗ್ಲಾಸ್ನಾಸ್ಟ್‌ಫಾರ್ ಇಂಡಿಯ (2 ಸಂಪುಟಗಳು, 1988), ಡೆಮಾಕ್ರಸಿ ಇನ್ ಡಿಫಿಸಿಟ್ಸ್ (2 ಸಂಪುಟಗಳು 1994), ನ್ಯೂಡೈಮೆನ್ಷನ್ಸ್ ಫಾರ್ ಇಂಡಿಯನ್‌ಪ್ಲಾನಿಂಗ್ (1994), ಫ್ರಂ ಆರ್ಡರ್ ಟು ಅನಾರ್ಕಿ (ಪಾಲಿಟಿಕ್ಸ್ ಅಂಡ್ ಎಕನಾಮಿಕ್ಸ್ ಆಫ್ ದಿ ಯುನೈಟೆಡ್ ಫ್ರಾಂಟ್ ಗೌವರ್ನಮೆಂಟ್, 1996), ಎಕನಾಮಿಕ್ ಪರ್ಫಾರ್ಮೆನ್ಸ್ ಆಫ್ ದಿ ಯುನೈಟೆಡ್ ಫ್ರಾಂಟ್ ಗೌವರ್ನಮೆಂಟ್ (1997) – ಇವು ಇವರು ರಚಿಸಿದ ಕೆಲವು ಮುಖ್ಯ ಕೃತಿಗಳು. ಇವರ ಶಿಷ್ಯರು ಪ್ರಪಂಚದಾದ್ಯಂತ ಚದರಿಹೋಗಿದ್ದಾರೆ; ಇವರ ವಿದ್ವತ್ತನ್ನು ಗೌರವಿಸಿದ್ದಾರೆ; ಸ್ಮರಿಸುತ್ತಾರೆ. ವೆಂಕಟಗಿರಿಗೌಡರು ಬೆಂಗಳೂರಿನ ಒಕ್ಕಲಿಗರ ಸಂಘದ ಅಭಿವೃದ್ಧಿಗೂ ತಮ್ಮ ಸೇವೆ ಸಲ್ಲಿಸಿದ್ದಾರೆ.

**(ಸಿ.ಕೆ.ಆರ್.)**

**ವೆಂಕಟಪತಿ I:** ವಿಜಯನಗರದ ಅರವೀಡು ವಂಶದ ರಾಜ (ಸು. 1586–1614). ಒಂದನೆಯ ಶ್ರೀರಂಗನ ತಮ್ಮ. ಶ್ರೀರಂಗನಿಗಿಂತ ಮೊದಲೇ ಅವನ ಸೋದರ ರಾಮದೇವ ಮೃತನಾಗಿದ್ದ. ರಾಮದೇವನ ಮಕ್ಕಳು ಪ್ರಾಪ್ತವಯಸ್ಕರಾಗಿರಲಿಲ್ಲ. ಆದ್ದರಿಮದ ಶ್ರೀರಂಗನ ತಮ್ಮನಾದ ವೆಂಕಟಪತಿದೇವನೇ ಮಂತ್ರಿ ಸಾಮಂತರ ಒಪ್ಪಿಗೆಯಿಂದ ಕಿರೀಟಧಾರಣೆ ಮಾಡಿದ (ಸು 1586). ಪೆನುಕೊಂಡ ಇವನ ರಾಜಧಾನಿಯಾಗಿತ್ತು.

ಇವನ ಆಳ್ವಿಕೆಯ ಕಾಲದಲ್ಲಿ ಗೋಲ್ಕೊಂಡದ ಕುತುಬ್ ಷಾ ಅಪಾರ ಸೇನೆಯೊಡನೆ ಬಂದು ಪೆನುಕೊಂಡಗೆ ಮುತ್ತಿಗೆ ಹಾಕಿದ. ವೆಂಕಟಪತಿ ಸಂಧಾನದ ಮಾತುಕತೆಯಾಡುವಂತೆ ನಟಿಸುತ್ತಲೇ ಇದ್ದ. ಸೈನ್ಯ ಸಜ್ಜೀಕರಣ ಮಾಡತೊಡಗಿದ. ಕುತುಬ್ ಷಾ ಮುತ್ತಿಗೆ ಮುಂದುವರಿಸಿದ. ಆದರೆ ವಿಜಯನಗರದ ಸೇನೆಗಳ ಮುಂದೆ ಅವನ ಆಟ ನಡೆಯದಾಯಿತು. ವೆಂಕಟಪತಿಯ ಸೇನೆಗಳು ವೈರಿಯ ಸೈನ್ಯರಾಶಿಯನ್ನು ತೊತ್ತಳ ತುಳಿದು, ಗೋಲ್ಕೊಂಡದ ಸೀಮೆಯವರೆಗೂ ಬೆನ್ನಟ್ಟಿದುವು. ವಿಜಯನಗರದ ವಿಜಯಭೇರಿಯಿಂದ ಉತ್ತೇಜಿತರಾದ ನೆರೆಯ ನಾಯಕರು ಗೋಲ್ಕೊಂಡದ ವಿರುದ್ಧ ಬಂಡಾಯ ಕೈಕೊಂಡು, ವಿಜಯನಗರದ ಅಧಿರಾಜತೆಯನ್ನು ಒಪ್ಪಿಕೊಂಡರು. ಈ ಯುದ್ಧಗಳಲ್ಲಿ ವೆಂಕಟಪತಿದೇವನ ಸೇನಾನಿ ಮಾಟ್ಲೆ ಅನಂತ ಅತಿಶಯಪರಾಕ್ರಮ ತೋರಿದ. ಸೋತ ಕುತುಬ್ ಷಾ ಸಂಧಿಯಾಚನೆ ಮಾಡಿದ. ವೆಂಕಟಪತಿದೇವ ಕೊಮಡವೀಡನ್ನು ಗೋಲ್ಕೊಂಡಕ್ಕೆ ಬಿಟ್ಟುಕೊಟ್ಟು, ಕೃಷ್ಣಾನದಿಯೇ ವಿಜಯನಗರದ ಉತ್ತರದ ಗಡಿಯಾಗಲು ಒಪ್ಪಿದ.

ಈ ನಡುವೆ ಬಿಜಾಪುರದ ಇಬ್ರಾಹಿಂ ಆದಿಲ್ ಷಾ ಪಶ್ಚಿಮ ಪ್ರಾಂತಗಳಲ್ಲಿ ಕಿರುಕುಳ ಕೊಡತೊಡಗಿದ. ವೆಂಕಟಪತಿದೇವ ಅವನ ವಿರುದ್ಧವಾಗಿ ನಿಜಾಮ್ ಷಾ ನೊಡನೆ ಸಂಧಾನ ಮಾಡಿಕೊಂಡ. ಆದಿಲ್ ಷಾ ಪೆನುಕೊಂಡೆಯ ಮೇಲೇರಿ ಬಂದ. ಆದರೆ ಸೋತು ಮುತ್ತಿಗೆ ತೆಗೆದು ಪಲಾಯನ ಮಾಡಿದ.

ಇಷ್ಟಾಗುವ ಹೊತ್ತಿಗೆ ದಕ್ಷಿಣ ದಂಡಯಾತ್ರೆಗೆ ಹೊರಟಿದ್ದ ಮುಗಲ ಸಾಮ್ರಾಟ ಅಕ್ಬರ್ ವೆಂಕಟಪತಿದೇವನಲ್ಲಿಗೆ ರಾಯಭಾರಿಗಳನ್ನು ಕಳುಹಿದ. ಆದರೆ ಈತ ರಾಯಭಾರವನ್ನು ಮನ್ನಿಸದೆ ಹಿಂದೆ ಕಳುಹಿಸಿದ.

ಈ ನಡುವೆ ಇವನ ಸಾಮ್ರಾಜ್ಯದೊಳಗೆ ಹಲವು ಮಾಂಡಲಿಕರು ಬಂಡಾಯ ಹೂಡತೊಡಗಿದರು. ಉತ್ತರಮೇರೂರಿನಲ್ಲಿ ನಡೆದ ಸಮರದಲ್ಲಿ ವೇಲುಗೋಟಿ ಏಚವ ನಾಯಕನೂ ತಿಮ್ಮಯ್ಯ ತಗ್ಗಿಸಲು ತಂಜಾವೂರಿನ ರಘುನಾಥನಾಯಕನೂ ಈ ಬಂಡಾಯಗಳನ್ನು ತಗ್ಗಿಸಲು ರಾಯನಿಗೆ ನೆರವಾದರು.

ಈ ಕಾಲಕ್ಕೆ ಪೋರ್ಚುಗೀಸ್, ಡಚ್, ಇಂಗ್ಲಿಷ್ ಮುಂತಾದ ವಿದೇಶೀಯ ಪ್ರಭುಗಳು ದಕ್ಷಿಣ ಭಾರತದಲ್ಲಿ ತಮ್ಮ ಅಧಿಕಾರ ಸ್ಥಾಪನೆಗೆ ಯತ್ನಿಸುತ್ತಿದ್ದರು. 1608ರಲ್ಲಿ ಜಿಂಜಿಯ ಕೃಷ್ಣಪ್ಪನಾಯಕನಿಂದ ಡಚ್ಚರು ಕಡಲೂರು ಬಳಿ ಕೋಟೆ ಕಟ್ಟಲು ಅನುಮತಿ ಪಡೆದರು. ವೆಂಕಟಪತಿ ಇದರಿಂದ ಅಸಮಾಧಾನಗೊಂಡು ಡಚ್ಚರನ್ನು ಅಲ್ಲಿಂದ ಹೊರಡಿಸುವಂತೆ ನಾಯಕನಿಗೆ ನಿರೂಪ ಕಳುಹಿಸಿದ. ಅದನ್ನು ನಾಯಕ ತಿರಸ್ಕರಿಸಿದ. ಮತ್ತೊಮ್ಮೆ ವೆಂಕಟಪತಿ ಆಗ್ರಹಪೂರ್ವಕವಾಗಿ ನಿರೂಪ ಕಳುಹಿಸಿದಾಗ ನಾಯಕ ಒಪ್ಪಿದ. 1609ರಲ್ಲಿ ಡಚ್ಚರು ಇನ್ನಷ್ಟು ಉತ್ತರಕ್ಕೆ ಪುಲಿಕಾಟ್‌ನಲ್ಲಿ ನೆಲೆಯೂರಿದರು. ಪೋರ್ಚುಗೀಸರು ಪುಲಿಕಾಟ್ ಪಾಳ್ಯವನ್ನು ಧ್ವಂಸ ಮಾಡಿದರೂ ಮತ್ತೆ ವೆಂಕಟಪತಿಯ ಬೆಂಬಲದಿಂದ ಅದನ್ನು ವಶಪಡಿಸಕೊಂಡರು. ಪುಲಿಕಾಟ್‌ನಲ್ಲಿ ನೆಲೆ ಪಡೆಯಲು ಇಂಗ್ಲಿಷರು ಯತ್ನಿಸಿ ವಿಫಲರಾದರು.

ವೆಂಕಟಪತಿದೇವ ಅರವೀಡು ಕುಲದ ಅತ್ಯಂತ ಪ್ರಸಿದ್ಧ ರಾಜ. ಇವನ ಆಳ್ವಿಕೆ ಪ್ರಜಾರಂಜಕವಾಗಿ ಸರ್ವಧರ್ಮ ಸಮನ್ವಯಕ್ಕೆ ಹೆಸರಾಗಿತ್ತು.

ಸಾಹಿತ್ಯ ಕಲೆಗಳಿಗೆ ಉದಾರಾಶ್ರಯ ನೀಡಿ, ವಿಜಯನಗರದ ಗತವೈಭವವನ್ನು ಬಹುಮಟ್ಟಿಗೆ ಪುನಃ ಗಳಿಸಿ ಕೃಷ್ಣದೇವರಾಯನ ಸುವರ್ಣಯುಗವನ್ನು ನೆನಪಿಗೆ ತರುವಂತಿತ್ತು. ಆದರೆ, ತಾಳಿಕೋಟೆಯ ಯುದ್ಧಾನಂತರ ತಲೆದೋರಿದ ಶೈಥಿಲ್ಯದಿಂದ ಹಲವಾರು ವಿಚ್ಛಿದ್ರಕಾರಕ ಶಕ್ತಿಗಳು ಬಲಿತು ಕೊಂಡು, ಸಾಮ್ರಾಜ್ಯದ ಸರ್ವನಾಶಕ್ಕೆ ಕಾರಣವಾದುವು. ವೆಂಕಟಪತಿದೇವ ಅಕ್ಟೋಬರ್ 1614ರಲ್ಲಿ ತನ್ನ 67ನೆಯ ವಯಸ್ಸಿನಲ್ಲಿ ಮೃತನಾದ.

(ಎಂ.ಕೆ.ಬಿ.)

**ವೆಂಕಟಪತಿ II:** ವಿಜಯನಗರದ ಅರವೀಡು ವಂಶದ ರಾಜ (1632–42). ಪೆದ್ದವೆಂಕಟ ಎಂಬ ಹೆಸರನ್ನೂ ಹೊಂದಿದ್ದ ಈತ ಅಳಿಯ ರಾಮರಾಯನ ಮೊಮ್ಮಗ. ಶ್ರೀರಂಗನ ಮಗ. 1632ರವರೆಗೆ ಆಳಿದ ಮುಮ್ಮಡಿ ಶ್ರೀರಂಗನ ಮಗ ರಾಮದೇವನ ಮರಣದ ಅನಂತರ ಮತ್ತೊಮ್ಮೆ ಸಿಂಹಾಸನಕ್ಕಾಗಿ ನಡೆದ ಯಾದವೀಕಲಹಗಳಲ್ಲಿ ಈತನೂ ಒಬ್ಬ ಸ್ಪರ್ಧಿಯಾಗಿದ್ದ. ರಾಮದೇವನ ಚಿಕ್ಕಪ್ಪನಾದ ತಿಮ್ಮ ಮತ್ತು ಕಂದನವೋಲಿನ ಗೋಪಾಲರಾಜನ ದತ್ತು ಮಗ ಶ್ರೀರಂಗ ಇನ್ನಿಬ್ಬರು ಸ್ಪರ್ಧಿಗಳು. ಅಂತಿಮವಾಗಿ ಸಿಂಹಾಸನವನ್ನೇರಿದ ಇಮ್ಮಡಿ ವೆಂಕಟಪತಿ ಆಂತರಿಕ ದಂಗೆಗಳನ್ನು ಎದುರಿಸಬೇಕಾಯಿತು. ಇಕ್ಕೇರಿಯ ಬಿಜಾಪುರದ ರಣದುಲ್ಲಾಖಾನನ ದಾಳಿಯ ಪರಿಣಾಮವಾಗಿ ಕಣ್ಮರೆಯಾಯಿತು. ಬೆಂಗಳೂರನ್ನು ಕೆಂಪೇಗೌಡನಿಂದ ಕಸಿದು ಶಿವಾಜಿಯ ತಂದೆ ಶಹಾಜಿಯನ್ನು ಅಲ್ಲಿನ ಅಧಿಕಾರಿಯಾಗಿ ನೇಮಿಸಲಾಯಿತು. ರಣದುಲ್ಲಾಖಾನನನ್ನು ಮೈಸೂರಿನ ಕಂಠೀರವ ನರಸರಾಜ ಒಡೆಯ ಹಿಮ್ಮೆಟ್ಟಿಸಿದರೂ ಪೂರ್ಣವಾಗಿ ಹತ್ತಿಕ್ಕಲಾಗಲಿಲ್ಲ. ಆದರೆ ಈ ವೇಳೆಗೆ ವೆಂಕಟನ ರಾಜಧಾನಿ ವೆಲ್ಲೂರಿಗೆ ಬದಲಾಗಿದ್ದು, ಅದನ್ನು ಅಲ್ಲಿನ ಈತನ ಸಾಮಂತರು ರಕ್ಷಿಸಿದರು. ಆದರೂ ವಿಜಯನಗರದ ಪತನವನ್ನು ಈತ ತಡೆಯಲಾಗದೆ ಹೋದ. (ಬಿ.ಆರ್.ಜಿ.)

**ವೆಂಕಟಪ್ಪ,ಕೆ.:** 1888–1965. ವಿಖ್ಯಾತ ಕಲಾವಿದರು. ಶಿಲ್ಪ, ವರ್ಣಚಿತ್ರ, ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನಲ್ಲಿ ಉಬ್ಬುಶಿಲ್ಪ. ತಾಮ್ರದ ತಗಡಿನ ಮೇಲೆ ಉಬ್ಬುಶಿಲ್ಪ, ವೀಣೆಗಳ ರಚನೆ, ವೀಣಾವಾದನ–ಇವುಗಳಲ್ಲಿ ಸಿದ್ಧಹಸ್ತರಾಗಿದ್ದರು.

ಪ್ರಸಿದ್ಧ ಚಿತ್ರಕಾರರಾಗಿದ್ದ ಚಿತ್ರದುರ್ಗದ ವೆಂಕಟಪ್ಪನವರು ಇವರ ತಾತ. ಇವರ ತಂದೆ ಕೃಷ್ಣಪ್ಪ. ವೆಂಕಟಪ್ಪನವರ ವಂಶದವರು ಮೂಲತಃ ಚಿತ್ರದುರ್ಗದವರು. ಅನಂತರ ಮೈಸೂರಿಗೆ ಬಂದು ನೆಲಸಿದರು. ವೆಂಕಟಪ್ಪ ನವರು ತಮ್ಮ ಬಾಲ್ಯ, ಯೌವನಗಳನ್ನು ವಿಶೇಷವಾಗಿ ಮೈಸೂರಿನಲ್ಲೇ ಕಳೆದರು. ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲಾಭ್ಯಾಸ ಮಾಡಿದರು. ಹೊಸ ಅರಮನೆಯನ್ನು ಕಟ್ಟುವ ಕಾಲದಲ್ಲಿ ನೂರಾರು ಜನ ಕಲಾವಿದರು ಕೆಲಸ ಮಾಡಬೇಕಾದ ಸಂದರ್ಭ ಬಂದಾಗ ಅವಕಾಶ ಸಿಕ್ಕಿತು. ಇವರ ಕಲಾಪ್ರತಿಭೆಯನ್ನು ಮೆಚ್ಚಿದ ನಾಲ್ವಡಿ ಕೃಷ್ಣರಾಜ ಒಡೆಯರು ಇವರ ಹೆಚ್ಚಿನ ಕಲಾಶಿಕ್ಷಣಕ್ಕೆ ಅನುಕೂಲ ಮಾಡಿಕೊಟ್ಟು ಪ್ರೋತ್ಸಾಹಿಸಿದರು. ಈ ಮೊದಲೇ ಪಾಶ್ಚಾತ್ಯ ಕಲಾಸಂಪ್ರದಾಯವನ್ನು ಕೈಗೂಡಿಸಿಕೊಂಡು ಮದರಾಸು ಚಿತ್ರಕಲಾ ಪರೀಕ್ಷೆಗಳಲ್ಲಿ ಡಿಪ್ಲೊಮಾ ಗಳಿಸಿದ್ದ ವೆಂಕಟಪ್ಪ ನವರು 1908ರಲ್ಲಿ ಸರ್ಕಾರದ ವಿದ್ಯಾರ್ಥಿವೇತನ ಪಡೆದು ಉನ್ನತ ಶಿಕ್ಷಣಕ್ಕಾಗಿ ಕಲ್ಕತ್ತ ಕಲಾಶಾಲೆಯನ್ನು ಪ್ರವೇಶಿಸಿದರು. ಅಲ್ಲಿ ಪರ್ಸಿ ಬ್ರೌನ್ ಹಾಗೂ ಅನೀಂದ್ರನಾಥ ಠಾಕೂರ್ ಅವರ ಮಾರ್ಗದರ್ಶನದಲ್ಲಿ ತಮ್ಮ ಕಲಾಭ್ಯಾಸವನ್ನು ಮುಂದುವರಿಸಿದರು. ಕಲ್ಕತ್ತದಲ್ಲಿ ಇವರು ಆರೇಳು ವರ್ಷಗಳ ಕಾಲವಿದ್ದು ಬೌದ್ಧ ರಜಪೂತ ಮತ್ತು ಮುಗಲ್ ಸಂಪ್ರದಾಯಗಳನ್ನು ಅಭ್ಯಾಸ ಮಾಡಿದರು. ಅನಂತರ 1916ರಲ್ಲಿ ಕಲ್ಕತ್ತದಿಂದ ಮೈಸೂರಿಗೆ ಹಿಂದಿರುಗಿದ ಮೇಲೆ ಸಂಗೀತದ ಅಭಿರುಚಿಯಿಂದ ವೈಣಿಕ ಶಿಖಾಮಣಿ ಶೇಷಣ್ಣನವರಲ್ಲಿ ಏಳು ವರ್ಷಗಳ ಕಾಲ ವೀಣಾಭ್ಯಾಸವನ್ನು ಮಾಡಿದರು. ಇದೇ ಸಂದರ್ಭದಲ್ಲಿ ಇವರ ಶ್ರೇಷ್ಠ ಕೃತಿ ವೀಣಾ ಹುಚ್ಚು ಜಲವರ್ಣದಲ್ಲಿ ರಚಿತವಾಯಿತು. ಇದೇ ಸಂದರ್ಭದಲ್ಲಿ ಅಬನೀಂದ್ರನಾಥರು ಬಿಟ್ಟುಕೊಟ್ಟ ಕಲ್ಕತ್ತ ಕಲಾಶಾಲೆಯ ಮುಖ್ಯ ಪ್ರಾಧ್ಯಾಪಕ ಸ್ಥಾನಕ್ಕೆ ವೆಂಕಟಪ್ಪನವರಿಗೆ ಆಹ್ವಾನ ಬಂದಾಗ ಅದನ್ನು ನಿರಾಕರಿಸಿ, ಮೈಸೂರಿನಲ್ಲಿಯೇ ಉಳಿದರು.



1923ರಲ್ಲಿ ಮೈಸೂರು ಅರಮನೆಯಲ್ಲಿ ಶಿಲ್ಪಕೃತಿಗಳ ರಚನೆಗೆ ಇವರು ತೊಡಗಿದರು. ಆಗ ಇವರು ರಚಿಸಿದ ಕೆಲವು ಉಬ್ಬುಶಿಲ್ಪಗಳು (ಬಾಸ್) ಈಗಲೂ ಅರಮನೆಯಲ್ಲಿವೆ.

ವೆಂಕಟಪ್ಪನವರು ಜಲವರ್ಣ ಪ್ರಕೃತಿ ಚಿತ್ರಗಳ ಜೊತೆಗೆ ದಂತದ ಫಲಕದ ಮೇಲೆ ನೀರು ಬಣ್ಣದಲ್ಲಿ ರೂಪ ಚಿತ್ರ ಹಾಗೂ ಕಾವ್ಯ ಕಥಾ ಚಿತ್ರಗಳನ್ನು ರಚಿಸಿದ್ದಾರೆ. ಮೈಸೂರಿನ ಜಗನ್ಮೋಹನ ಕಲಾಶಾಲೆಯಲ್ಲಿ ಇವರ ವೀಣಾ ಹುಚ್ಚು, ರಾಧಾ ಹರಿಣಿ, ಅರ್ಧನಾರೀಶ್ವರ, ಶಿವರಾತ್ರಿ ಮತ್ತು ನೀಲಗಿರಿಯ ದೃಶ್ಯಗಳು ಇಂದಿಗೂ ಕಲಾಭಿಮಾನಿಗಳನ್ನು ಆಕರ್ಷಿಸುತ್ತವೆ. ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ಉಬ್ಬುಶಿಲ್ಪರಚನೆಯಲ್ಲಿ ಇವರು ಚಿತ್ರಕಲೆಯಲ್ಲಿನ ಅದ್ವಿತೀಯವಾದ ಪ್ರೌಢಿಮೆಯನ್ನು ತೋರಿಸಿದ್ದಾರೆ. ಏಕಲವ್ಯನ ಧನುರ್ವಿದ್ಯಾಭ್ಯಾಸ; ಕೌರವ ಪಾಂಡವರಿಗೆ ಬೀಳ್ಕೊಡುಗೆ, ಸಿದ್ಧಾರ್ಥನ ನಿರ್ಗಮನ–ಈ ಮುಂತಾದ ಉಬ್ಬುಶಿಲ್ಪಗಳು ಗಮನಾರ್ಹವಾದುವು.

ಶಿಲ್ಪಕಲೆಯಲ್ಲಿಯೂ ನಿಷ್ಣಾತರಾಗಿದ್ದ ಇವರು ರಚಿಸಿದ ಪ್ರತಿಮೆಗಳಲ್ಲಿ ರವೀಂದ್ರರದು ವಿಶಿಷ್ಟವಾದುದು. 1922ರಲ್ಲಿ ರವೀಂದ್ರರು ಮೈಸೂರಿಗೆ ಬಂದಿದ್ದಾಗ ಅವರ ಭಾವಚಿತ್ರಗಳ ನೆರವಿನಿಂದ ರಚಿಸಿದ ಕೃತಿ ಇದು. ಇವರ 'ಮಾಣಿ' ಇಂಥದ್ದೇ ಇನ್ನೊಂದು ಅಪೂರ್ವಕೃತಿ. ಆಕಸ್ಮಿಕವಾಗಿ ಭಿನ್ನವಾಗಿರುವ ಸಿದ್ಧಾರ್ಥ ಕೂಡ ಅತ್ಯಂತ ಮೋಹಕವಾದ ತಾಮ್ರದ ಉಬ್ಬುಶಿಲ್ಪ. ಇವರಿಗೆ ಕೇಂದ್ರ ಲಲಿತ ಕಲಾ ಅಕಾಡೆಮಿ 1962ರಲ್ಲಿ ಪ್ರಶಸ್ತಿಯ ಜೊತೆಗೆ ಗೌರವ ಸದಸ್ಯತ್ವವನ್ನು ಕೊಟ್ಟು ಸನ್ಮಾನಿಸಿತು.

ತಮ್ಮ ಬದುಕಿನ ಕೊನೆಯವರೆಗೂ ಕಲಾಸೇವೆಯಲ್ಲಿಯೇ ನಿರತರಾಗಿದ್ದ ಇವರು 1956 ಮೇ 25ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರ ಹೆಸರಿನಲ್ಲಿ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದ ಪಕ್ಕದಲ್ಲೇ ಕಲಾಸಂಗ್ರಹಾಲಯವನ್ನು ತೆರೆಯಲಾಗಿದೆ. ಇಲ್ಲಿ ವೆಂಕಟಪ್ಪ ಸಮಗ್ರ ಚಿತ್ರಗಳನ್ನು, ಶಿಲ್ಪಕೃತಿಗಳನ್ನು, ಇವರು ಬಳಸುತ್ತಿದ್ದ ವಸ್ತುಗಳನ್ನು ಪ್ರದರ್ಶಿಸಲಾಗಿದೆ.

(ಪಿ.ಆರ್.ಟಿ)

**ವೆಂಕಟಪ್ಪ, ಎಂ.ವಿ.:** 1932– . ಕರ್ನಾಟಕದ ಮಾಜಿ ವಿಧಾನ ಸಭಾಧ್ಯಕ್ಷರು. ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಮೋತಕಪಲ್ಲಿ ಗ್ರಾಮದಲ್ಲಿ 1932 ಏಪ್ರಿಲ್ 12ರಂದು ಜನಿಸಿದರು. ಮೈಸೂರು ಹಾಗೂ ದೆಹಲಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ ಬಿ.ಎ. ಹಾಗೂ ಬಿ.ಎಲ್. ಪದವಿಗಳನ್ನು ಗಳಿಸಿದರು. ಮೈಸೂರು ಸತ್ಯಾಗ್ರಹಿಗಳ ಚಳವಳಿಯಲ್ಲಿ ಭಾಗವಹಿಸಿ, ಸತ್ಯಾಗ್ರಹಿಗಳ ಶಿಬಿರಗಳನ್ನು ಸಂಘಟಿಸಿ ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಕಾರಾಗೃಹವಾಸ ಅನುಭವಿಸಿದರು (1947). ಪ್ರಾರಂಭ

ದಿಂದಲೂ ಸಾಮಾಜಿಕ ಅಭಿವೃದ್ಧಿಯಲ್ಲಿ ತೀವ್ರ ಆಸಕ್ತಿ ಹೊಂದಿದ ಇವರು ಕಾಲೇಜು ದಿನಗಳಲ್ಲಿ ವಿದ್ಯಾರ್ಥಿ ಸಂಘಟಕರಾಗಿ, ಕಾರ್ಯದರ್ಶಿಯಾಗಿ ಹಾಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಸೇವಾದಳ ಹಾಗೂ ಸಾಮಾಜಿಕ ಸೇವಾ ಶಿಬಿರಗಳನ್ನು ಸಂಘಟಿಸಿದ್ದಾರೆ.

ಇವರು ಮುಳಬಾಗಿಲು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿದ್ದು (1960), ಆಗ ಅಖಿಲಭಾರತ ಕಾಂಗ್ರೆಸ್ ಅಧಿವೇಶನದ ಸಾರಿಗೆ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಮುಳಬಾಗಿಲು ತಾಲ್ಲೂಕು ಟಿ.ಎ.ಪಿ.ಸಿ.ಎಂ.ಎಸ್.ನ ನಿರ್ದೇಶಕರಾಗಿ (1961–64), ಬೆಂಗಳೂರು ಡೈರಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರಾಗಿ ಕೋಲಾರ ಜಿಲ್ಲೆ ಅಭಿವೃದ್ಧಿ ಸಮಿತಿ ಸದಸ್ಯರಾಗಿ (1973–74), ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ (1990–99).

ಪ್ರಥಮ ಬಾರಿಗೆ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾದರು (1966). ಅನಂತರ 1972ರಲ್ಲಿ ಪುನರ್ ಆಯ್ಕೆಗೊಂಡರು. ಅಧೀನ ಶಾಸನ ರಚನಾ ಸಮಿತಿ (1969–71), ಭೂಸುಧಾರಣಾ ಸಮಿತಿ (1972–74), ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ (1968–71). ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ (1971–74). ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾಗಿಯೂ ಈ ಅವಧಿಯಲ್ಲಿ ವಿಧಾನಪರಿಷತ್ತಿನ ನಿಯಮಗಳ ಸಮಿತಿ ಹಾಗೂ ಗ್ರಂಥಾಲಯ ಸಮಿತಿಗಳ ಅಧ್ಯಕ್ಷರಾಗಿದ್ದರು. ಪರಿಷತ್ತಿನ ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕರ್ನಾಟಕ ವಿಭಾಗದ ಕಾಮನ್‌ವೆಲ್ತ್ ಸಾಂಸದಿಕ ಸಂಘದ ಸಂಯುಕ್ತ ಅಧ್ಯಕ್ಷರಾಗಿ ಲಂಡನ್‌ನಲ್ಲಿ ಜರುಗಿದ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತ ನಿಯೋಗದ ಸದಸ್ಯರಾಗಿ ಭಾಗವಹಿಸಿದರು (1976). ಈಜಿಪ್ಟ್, ಯುರೋಪ್, ಅಮೆರಿಕ, ಜಪಾನ್, ಹಾಂಗ್‌ಕಾಂಗ್, ಸಿಂಗಪುರ್‌ಗಳಿಗೂ ಭೇಟಿ ನೀಡಿದ್ದಾರೆ. ಒಂಬತ್ತನೆಯ ವಿಧಾನಸಭೆಗೆ ಮುಳಬಾಗಿಲು ಕ್ಷೇತ್ರದಿಂದ ಆಯ್ಕೆಯಾಗಿ ವಿಧಾನಸಭಾ ಸದಸ್ಯರಾದರು (1989–94). ವಿಧಾನಸಭೆಯ ನಿಯಮಾವಳಿಗಳ ಉಪಸಮಿತಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ (1992–94). ಇವರು ಅತ್ಯುತ್ತಮ ಶಾಸಕರೆಂಬ ಪ್ರಶಸ್ತಿಯನ್ನು ರಾಜ್ಯಪಾಲರಿಂದ ಪಡೆದರು. ಹನ್ನೊಂದನೆಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ (1999) ಮುಳಬಾಗಿಲು ಕ್ಷೇತ್ರದಿಂದ ಚುನಾಯಿತರಾದರು. ಅನಂತರ ಸಭಾಧ್ಯಕ್ಷರಾಗಿ ಆಯ್ಕೆಯಾಗಿ (1999 ಅಕ್ಟೋಬರ್ 26) ಸೇವೆಸಲ್ಲಿಸಿದರು. (ಎಸ್.ಎನ್.ಜಿ.)

**ವೆಂಕಟಪ್ಪನಾಯಕ (ಸುರಪುರದ):** ಸುರಪುರದ ಸಂಸ್ಥಾನದ ದೊರೆ (1842–58). ಕೃಷ್ಣಪ್ಪನಾಯಕ ಮತ್ತು ಈಶ್ವರಮ್ಮ ಇವರ ಮಗ ಬಾಲ್ಯದಲ್ಲೆ ತಂದೆಯನ್ನು ಕಳೆದುಕೊಂಡು ತಾಯಿಯ ಪೋಷಣೆಯಲ್ಲಿ ಬೆಳೆದ. ಈತ ಅಪ್ರಾಪ್ತವಯಸ್ಕನಾಗಿದ್ದುದರಿಂದ ಇವನ ಹೆಸರಿನಲ್ಲಿ ಇವನ ತಾಯಿ ಸುರಪುರ ಸಂಸ್ಥಾನವನ್ನು ಆಳುತ್ತಿದ್ದಳು. ಈ ಸಂದರ್ಭದಲ್ಲಿ ಕೃಷ್ಣಪ್ಪನಾಯಕನ ತಮ್ಮ ಪಿಡ್ಡನಾಯಕನನ್ನು ವೆಂಕಟಪ್ಪನಾಯಕನ ಪಾಲಕನನ್ನಾಗಿ ನೇಮಿಸಬೇಕೆಂಬ ಪ್ರಯತ್ನಗಳು ನಡೆದವು. ರಾಣಿಯ ವಿರೋಧವನ್ನೂ ಕಡೆಗಣಿಸಿ ಬ್ರಿಟಿಷ್ ಸರ್ಕಾರವೂ ಪಿಡ್ಡನಾಯಕನನ್ನೆ ಪಾಲಕನನ್ನಾಗಿ ನೇಮಿಸಬೇಕೆಂಬ ನಿರ್ಧಾರ ತಳೆಯಿತು. ಈ ಕಾಲದಲ್ಲಿ ಮೆಡೋಸ್ ಟೇಲರ್ ಎಂಬಾತ ಇಲ್ಲಿಗೆ ಬ್ರಿಟಿಷ್ ಪ್ರತಿನಿಧಿಯಾಗಿ ಬಂದ. ಅಧಿಕಾರಕ್ಕಾಗಿ ನಡೆಯುತ್ತಿದ್ದ ಒಳಜಗಳಗಳನ್ನು ನಿವಾರಿಸಲು ಯತ್ನಿಸುತ್ತ ಸಂಸ್ಥಾನದ ಸುಧಾರಣೆಗೆ ದುಡಿದು ಸ್ಥಳೀಯ ಜನರ ವಿಶ್ವಾಸವನ್ನು ಗಳಿಸಿದ. ಈತ ವೆಂಕಟಪ್ಪನಾಯಕನ ಶಿಕ್ಷಣದ ಸಲುವಾಗಿ ಮುರ್ರೆ ಎಂಬ ವಿದ್ವಾಂಸನನ್ನು ನೇಮಿಸಿ ಇಂಗ್ಲಿಷ್ ಕಲಿಸುವ ವ್ಯವಸ್ಥೆ ಮಾಡಿದ. ಹಾಗೆಯೇ ತೆಲುಗು ಮರಾಠಿ ಹಾಗೂ ಪಾರಸೀ ಭಾಷೆಗಳನ್ನೂ ಕಲಿಸುವ ವ್ಯವಸ್ಥೆಯನ್ನು ಮಾಡಿದ. ಇದೇ ಸಂದರ್ಭದಲ್ಲಿ ರಾಜಕುಮಾರನನ್ನು ಕೊಲೆಗೈಯುವ ಶತ್ರುಗಳ ಯತ್ನ ಟೇಲರನ ಮುಂಜಾಗರೂಕತೆಯಿಂದಾಗಿ ಸಫಲವಾಗಲಿಲ್ಲ.

1853ರ ಜೂನ್ ತಿಂಗಳಲ್ಲಿ ವೆಂಕಟಪ್ಪನಾಯಕ ಟೇಲರನಿಂದ ರಾಜ್ಯಾಡಳಿತವನ್ನು ವಹಿಸಿಕೊಂಡ. ಟೇಲರ್ ಸಂಸ್ಥಾನದಲ್ಲಿ ರಾಜಕೀಯ ಪ್ರತಿನಿಧಿಯಾಗಿರಬೇಕೆಂಬ ಸಲಹೆ ನಾಯಕನಿಗೆ ಪ್ರಿಯವಾದುದಾಗಿದ್ದರೂ ಭಾರಿ ಮೊತ್ತದ ವೇತನ ನೀಡಲು ಅಶಕ್ಯವಿದ್ದುದರಿಂದ ಅದನ್ನೊಪ್ಪಿಕೊಳ್ಳಲಿಲ್ಲ. ನಾಯಕ ಅಧಿಕಾರವಹಿಸಿಕೊಂಡಾಗ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು. ಸಂಬಳ ಸಾರಿಗೆ ಸರಿಯಾಗಿ ಪಾವತಿಯಾಗದೆ ಸೈನ್ಯದಲ್ಲಿ ಗೊಂದಲವೆದ್ದಿತು. ಜೊತೆಗೆ ನಿಜಾಮನಿಗೆ ಸಲ್ಲಬೇಕಾಗಿದ್ದ ಬಂಡಣೆಯನ್ನೂ ಸಲ್ಲಿಸಿರಲಿಲ್ಲ. ಈ ಮಧ್ಯೆ ಪಿಡ್ಡನಾಯಕನ ಮಕ್ಕಳ ಜಹಗೀರಿಯನ್ನು ವೆಂಕಟಪ್ಪನಾಯಕ ಕಿತ್ತುಕೊಂಡದ್ದರಿಂದ ಅವರೂ ಬ್ರಿಟಿಷರಿಗೆ ದೂರಿತ್ತರು. ಈ ಸಲುವಾಗಿ ನಾಯಕನಿಗೂ ಅವನ ತಾಯಿಗೂ ಮನಸ್ತಾಪ ಉಂಟಾಗಿತ್ತು. ರಾಜ್ಯದಲ್ಲೂ ಎರಡು ಗುಂಪುಗಳಾಗಿದ್ದವು.

ದೇಶದ ರಾಜಕೀಯ ಪರಿಸ್ಥಿತಿ 1857ರಲ್ಲಿ ಗಂಭೀರವಾಗತೊಡಗಿತು. ಎಲ್ಲ ಕಡೆ ಬ್ರಿಟಿಷರ ವಿರುದ್ಧ ಬಂಡಾಯಗಳು ಏಳತೊಡಗಿದವು. ವೆಂಕಟಪ್ಪನಾಯಕನೂ ಈ ಬಂಡಾಯದಲ್ಲಿ ತೊಡಗಿರಬಹುದೆಂಬ ಸಂದೇಹ ಬ್ರಿಟಿಷರಿಗೆ ತಲೆದೋರಿತು. ವೆಂಕಟಪ್ಪನಾಯಕ ತನ್ನ ಸೈನ್ಯಕ್ಕೆ ಅಶ್ವ ಮತ್ತು ಕಾಲ್ದಳಗಳನ್ನು ಸೇರಿಸಿ ಸೈನ್ಯವನ್ನು ಬಲಪಡಿಸಿಕೊಂಡದ್ದು, ಬ್ರಿಟಿಷರಿಗೆ ಆಗದ ರೋಹಿಲೆ ಮತ್ತು ಅರಬರನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಸೈನ್ಯಕ್ಕೆ ನೇಮಿಸಿಕೊಂಡದ್ದು, ಬ್ರಿಟಿಷರಿಗೆ ಸೆರೆಸಿಕ್ಕ ಮಹಿಪಾಲ್‌ಸಿಂಗ್ (ಜವಾಹರ್‌ಸಿಂಗ್) ನಾಯಕನೇ ತನ್ನನ್ನು ಕಳುಹಿಸಿದ ನೆಂದು ಹೇಳಿದ್ದು, ನಾನಾಸಾಹೇಬನ ಬಳಿಗೆ ನಾಯಕ ನಾನಾಸಂಕೇಶ್ವರ ನೆಂಬ ಬ್ರಾಹ್ಮಣನನ್ನು ಒಪ್ಪಂದಕ್ಕಾಗಿ ಕಳಿಸಿದ್ದಾನೆಂಬ ದಟ್ಟ ವದಂತಿ–ಈ ಮುಂತಾದ ಸಂಗತಿಗಳು ಬ್ರಿಟಿಷರು ಸಂದೇಹಪಡಲು ಪ್ರಮುಖ ಕಾರಣಗಳಾದವು.

1857ರ ಡಿಸೆಂಬರ್‌ನಲ್ಲಿ ಬ್ರಿಟಿಷರು ಕ್ಯಾಪ್ಟನ್ ಕ್ಯಾಂಬೆಲ್ ಎಂಬಾತನನ್ನು ಪರಿಶೀಲನೆಗಾಗಿ ಸುರಪುರಕ್ಕೆ ಕಳಿಸಿದರು. ಅವನ ಆದೇಶದಂತೆ ಫೆಬ್ರವರಿ ತಿಂಗಳಲ್ಲಿ ಲಿಂಗಸುಗೂರಿನಿಂದ ಸೈನ್ಯದ ತುಕಡಿಯೊಂದ ಕ್ಯಾಪ್ಟನ್ ವಿಂಡ್ಹ್ಯಾಮಿನ ನೇತೃತ್ವದಲ್ಲಿ ಸುರಪುರಕ್ಕೆ ಬಂದು ಊರ ಹೊರಗಿನ ಬಯಲಲ್ಲಿ ಬೀಡುಬಿಟ್ಟಿತು. ಕಲಾದಗಿಯಿಂದ ಮಾಲ್ಕಮ್ ಸಾಹೇಬನ ಸೈನ್ಯವೂ ಬಂದು ಸೇರಿತು. ಸೈನ್ಯ ಊರ ಮೇಲೆ ದಾಳಿಮಾಡಿತು. ನಾಯಕ ತಲೆತಪ್ಪಿಸಿಕೊಂಡು ಹೈದರಾಬಾದಿನ ಹಾದಿ ಹಿಡಿದ. ರಾಣಿಯರು ತಲೆಮರೆಸಿಕೊಂಡು ಸುರಪುರದಲ್ಲಿ ಶಾಂತಿ ನೆಲಸಿದ ಮೇಲೆ ಅಲ್ಲಿಗೆ ಬಂದು ಸೇರಿದರು.

ಹೈದರಾಬಾದಿನಲ್ಲಿ ವನಪರ್ತಿ ರಾಜನು ನಾಯಕನನ್ನು ಬ್ರಿಟಿಷರಿಗೊಪ್ಪಿಸಿದ. ಸಿಕಂದರಾಬಾದಿನ ಸೆರೆಮನೆಯಲ್ಲಿ ಈತನನ್ನು ಸೆರೆಯಿಟ್ಟರು. ಆಗ ಟೇಲರ್ ಬಂದು ನಾಯಕನನ್ನು ಭೇಟಿಯಾಗಿ ಸಂಧಾನಕ್ಕಾಗಿ ಪ್ರಯತ್ನಿಸಿದ. ನಾಯಕನಿಗೆ ವಿಧಿಸಿದ್ದ ಮರಣದಂಡನೆ ಜೀವಾವಧಿಶಿಕ್ಷೆಗೆ ಇಳಿಯಿತು. ಕೊನೆಗೆ ಅದೂ ಕಡಿಮೆಯಾಗಿ ನಾಲ್ಕುವರ್ಷಗಳ ಸೆರೆವಾಸದ ಅನಂತರ ರಾಜ್ಯವನ್ನು ವೆಂಕಟಪ್ಪನಾಯಕನಿಗೊಪ್ಪಿಸಬೇಕೆಂಬ ತೀರ್ಮಾನವಾಯಿತು.

ಮದರಾಸು ಬಳಿಯ ಚೆಂಗಲ್‌ಪೇಟೆಯಲ್ಲಿ ಈತ ತನ್ನ ರಾಣಿಯರೊಂದಿಗೆ ಇರುವ ವ್ಯವಸ್ಥೆ ಮಾಡಲಾಯಿತು. ರಾಣಿಯರು ಕರ್ನೂಲಿನಲ್ಲಿ ಈತನನ್ನು ಸೇರಿಸಿಕೊಳ್ಳುವ ವ್ಯವಸ್ಥೆ ನಡೆಯಿತು. ಆದರೆ ಅಷ್ಟರಲ್ಲೇ ನಾಯಕ ಗುಂಡೇಟಿನಿಂದ ಮರಣ ಹೊಂದಿದ. ಈ ಮರಣ ಆಕಸ್ಮಿಕವೆ, ಕೊಲೆಯ ಅಥವಾ ಆತ್ಮಹತ್ಯೆಯೇ ಎಂಬ ಸಂಗತಿ ಇನ್ನೂ ನಿಗೂಢವಾಗಿ ಉಳಿದಿದೆ. ಮರಣಹೊಂದಿದಾಗ ನಾಯಕನಿಗಿನ್ನೂ ಶಿಕ್ಷಾವಧಿಯ ಒಂದು ವರ್ಷವೂ ತುಂಬಿರಲಿಲ್ಲ. ಅಷ್ಟರೊಳಗೆ ಆತ ಮರಣಹೊಂದುತ್ತಾನೆಂಬ ಭವಿಷ್ಯವನ್ನು ಬರೆದಿಟ್ಟುದನ್ನು ಟೇಲರ್ ತನ್ನ ಆತ್ಮಕಥೆಯಲ್ಲಿ ಉಲ್ಲೇಖಿಸಿದ್ದಾನೆ.

ಅನಂತರ ಸುರಪುರ ಸಂಸ್ಥಾನ ಎರಡು ವರ್ಷಗಳ ಕಾಲ ಬ್ರಿಟಿಷರ ಅಧೀನದಲ್ಲಿದ್ದು, ಬಂಡಾಯಕಾಲದಲ್ಲಿ ತಮಗೆ ಮಾಡಿದ ಸಹಾಯಕ್ಕಾಗಿ ಅದನ್ನು ನಿಜಾಮನಿಗೆ ಒಪ್ಪಿಸಲಾಯಿತು. (ಎಚ್.ಎಂ.ಎನ್.ಆರ್.)

**ವೆಂಕಟಪ್ಪನಾಯಕ I:** ಕೆಳದಿ ರಾಜಮನೆತನದ ಅರಸು (ಸು. 1582–1629). ಇವನನ್ನು ವೆಂಕಟಪ್ಪನಾಯಕ ಎಂದೂ ಕರೆಯುವುದುಂಟು. ಅಣ್ಣನಾದ ರಾಮರಾಜಯ್ಯನ ಅನಂತರ ಪಟ್ಟಕ್ಕೆ ಬಂದ ಈತ ವಿಜಯನಗರ ಸಾಮಂತತ್ವವನ್ನು ಕೇಳದೆ, ಪೂರ್ಣವಾಗಿ ಸ್ವತಂತ್ರನಾಗಿ ಅಳಲಾರಂಭಿಸಿದ ನಲ್ಲದೆ, ತನ್ನ ರಾಜ್ಯವನ್ನು ಎಲ್ಲ ಕಡೆಗಳಿಗೂ ವಿಸ್ತರಿಸಿದ. ಕೆಳದಿಯ ಪ್ರಭಾವವನ್ನು ಮುರಿಯಲು ಬಂದ ಬಿಜಾಪುರ ದಂಡನಾಯಕ ಮಂಜೂಲಖಾನನ್ನು ಇವನು ಹಿಮ್ಮೆಟ್ಟಿಸಿದನಲ್ಲದೆ, ಇನ್ನೊಮ್ಮೆ ದಂಡೆತ್ತಿ ಬಂದಿದ್ದ ಬಿಜಾಪುರದ ಸೇನಾನಿ ಷೇರ್‌ವುಲ್‌ಮುಲ್ಕ್‌ನನ್ನು ಸೋಲಿಸಿದ. ಆದಿಲ್‌ಷಾನ ಸಾಮಂತತ್ವವನ್ನು ಒಪ್ಪಿದ್ದ ಮೆಣಸಿನ ರಾಣಿ ಎನಿಸಿದ್ದ ಗೇರುಸೊಪ್ಪೆಯ ಭೈರಾದೇವಿಯನ್ನೂ ಸೋಲಿಸಿ ಸೆರೆಹಿಡಿದ. ಪಶ್ಚಿಮ ಕರಾವಳಿಯಲ್ಲಿ ಹಲಕೆಲವು ಸಣ್ಣಪುಟ್ಟ ಪಾಳೆಯಗಾರರು ಇವನ ಅಧೀನರಾದರು. ಇವನ ರಾಜ್ಯ ಮಲಬಾರಿನ ಗಡಿಯವರೆಗೂ ಹಬ್ಬಿತ್ತು. ಇವನ ಕಾಲದಲ್ಲಿ 1623ರಲ್ಲಿ ಇಕ್ಕೇರಿಗೆ ಭೇಟಿ ಕೊಟ್ಟಿದ್ದ ಇಟಲಿಯ ಪೀಟರ್ ಡೆಲ್ಲಾವೆಲ್ಲೊ ಎಂಬುವನು 'ರಾಜಕುಮಾರ ವೆಂಕಟಪ್ಪನಾಯಕ ವಿದ್ಯಾನಗರ ಮಹಾರಾಜನ ಮಂತ್ರಿಗಳ ಕೈಕೆಳಗಿನವನಾಗಿ ಕೆಲಸಮಯವಿದ್. ಆದರೆ ಮಹಾರಾಜನ ಪತನಾನಂತರ ಸ್ವತಂತ್ರ ಸಾರ್ವಭೌಮನಾದ. ಅವನು ಸ್ವತಃ ಒಳ್ಳೆಯ ಸೈನಿಕನಾದುದರಿಂದ ಆ ರಾಜ್ಯವನ್ನು ಮತ್ತಷ್ಟು ವಿಸ್ತರಿಸಿದ' ಎಂದು ಬರೆದಿದ್ದಾನೆ. ತಮ್ಮ ಪ್ರಭಾವವನ್ನು ಪಶ್ಚಿಮ ಕರಾವಳಿ ಪ್ರದೇಶದಲ್ಲಿ ವಿಸ್ತರಿಸಲು ಯತ್ನಿಸುತ್ತಿದ್ದ ಪೋರ್ಚುಗೀಸರನ್ನು ವೆಂಕಟಪ್ಪನಾಯಕ ಎದುರಿಸಿದ್ದರಿಂದ ಅವರು ಈ ಪ್ರದೇಶದಲ್ಲಿ ತಮ್ಮ ಪ್ರಭಾವ ಮತ್ತು ಗೌರವಗಳನ್ನು ಕಳೆದುಕೊಂಡರು. ಅವರ ವ್ಯಾಪಾರ ಪೂರ್ತಿಯಾಗಿ ವೆಂಕಟಪ್ಪ ನಾಯಕನ ವಶವಾಯಿತು. ವೆಂಕಟಪ್ಪನಾಯಕನ ಈ ಧೋರಣೆಯಿಂದ ಮುಂದಿನ ರಾಜರಿಗೆ ಸಹಾಯವಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮ ಗೊಂಡಿತು. ಮುಂದೆ ಸಂಧಾನಕ್ಕಾಗಿ ಪೋರ್ಚುಗೀಸರು ಇವನ ಆಸ್ಥಾನಕ್ಕೆ ರಾಯಭಾರಿಗಳನ್ನು ಕಳುಹಿಸಿ ಸ್ನೇಹ ಸಂಪಾದಿಸಲು ಯತ್ನಿಸಿದರು.

ವೆಂಕಟಪ್ಪ ತನ್ನ ಆಳ್ವಿಕೆಯ ಕಾಲದಲ್ಲಿ ಹನುಮನಾಯಕನನ್ನು ಸೋಲಿಸಿ ಶಿವಮೊಗ್ಗ, ಗಾಜನೂರು ಮತ್ತು ಲಕ್ಕವಳ್ಳಿ ಪ್ರದೇಶಗಳನ್ನು ಆಕ್ರಮಿಸಿದ ನಲ್ಲದೆ ದಾನಿವಾಸ, ಕುಂಬೇಸಿ ಯಳವಂದೂರು, ಹೆಬ್ಬೆ, ಮಂಡಗದ್ದೆ, ಕರಬೂರು, ಸಾಲನಾಡು ಮುಂತಾದೆಡೆಗಳ ಶತ್ರುಪಾಳೆಯಗಾರರನ್ನು ಸೋಲಿಸಿದ. ತನ್ನ ರಾಜ್ಯದ ರಕ್ಷಣೆಗೆ ಹೆಬ್ಬೆ, ಸಾಗರ, ಕೊಂಡೂರು, ಮಲಕಾಡು ಹೊಳೆಬೈಲೂರು, ಬಾರಕೂರು, ನಗರಿ ಮತ್ತು ಪರಿಯಾಗಳಲ್ಲಿ ಕೋಟೆಗಳನ್ನು ಕಟ್ಟಿಸಿದ. ಈತ ಹೊಸಂಗಡಿ, ಹೊನ್ನಕಂಬಳಿ, ಕೆದರಿ, ಬಗ್ಗವಾಡಿ, ಕಲ್ಲೂರು–ಇಲ್ಲಿಯ ಪಾಳೆಯಗಾರರನ್ನು ಸೋಲಿಸಿ ಕೊಂಡೂರು ಕೋಟೆ, ಕಲಿದುರ್ಗ ಮುಂತಾದ ಕೋಟೆಗಳನ್ನು ವಶಪಡಿಸಿಕೊಂಡ.

ಇವನು ಮೆಣಸಿನ ವ್ಯಾಪಾರದಲ್ಲಿ ಲಾಭಪಡೆಯಲು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಜೊತೆಯಲ್ಲೂ ಸಂಧಾನ ನಡೆಸಿದ್ದ. ವೆಂಕಟಪ್ಪ ನಾಯಕ ಧರ್ಮ ಮತ್ತು ಪ್ರಜಾಕ್ಷೇಮದಲ್ಲಿ ಹೆಚ್ಚು ಆಸಕ್ತಿ ತೋರಿಸಿದ. ಹಲವಾರು ಹೊಸ ಅಗ್ರಹಾರಗಳನ್ನು ಸ್ಥಾಪಿಸಿದ. ಇಕ್ಕೇರಿಯ ಶಿಖರೇಶ್ವರ, ವಿಶ್ವೇಶ್ವರ, ಲಕ್ಷ್ಮೀನಾರಾಯಣ, ಮೈಲಾರ, ಬಾಣಾವರದ ಗಣಪತಿ ಮುಂತಾದ ಅನೇಕ ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ದತ್ತಿದಾನಗಳನ್ನು ಒದಗಿಸಿದ. ಹಿಂದುಗಳ ಪರಂಪರೆಗೆ ಅನುಗುಣವಾದ ಧಾರ್ಮಿಕ ಸಹಿಷ್ಣುತೆಯನ್ನು ಅನುಸರಿಸಿದ. ಭುವನಗಿರಿ ದುರ್ಗದಲ್ಲಿ ಇವನು ಮುಸಲ್ಮಾನರ ಮಸೀದಿಗೆ ದತ್ತಿ ಕೊಟ್ಟುದು ಇದಕ್ಕೊಂದು ಉದಾಹರಣೆ. ಶೃಂಗೇರಿಯ ಅಭಿನವ ನೃಸಿಂಹಭಾರತಿ ಸ್ವಾಮಿಗೆ ಅಲ್ಲಿ ಮಠವೊಂದನ್ನು ಕಟ್ಟಿಸಿಕೊಟ್ಟ. ಹಲವು ವೀರಶೈವ ಮಠಗಳಿಗೂ ದತ್ತಿಗಳನ್ನು ಬಿಟ್ಟ. ಇದಲ್ಲದೆ ಕಾವ್ಯ, ನಾಟಕ, ಧರ್ಮಶಾಸ್ತ್ರ ಮತ್ತು ಇತರ ವಿಷಯಗಳ ಸಾಹಿತ್ಯ ಕೃತಿಗಳ ರಚನೆಗೆ ಪ್ರೋತ್ಸಾಹವನ್ನು ಕೊಟ್ಟ. ತಿರುಮಲಭಟ್ಟನ ಕನ್ನಡ ಶಿವಗೀತಾ, ಸಂಸ್ಕೃತದ ಶಿವಾಷ್ಟಪದಿ, ರಂಗನಾಥ ದೀಕ್ಷಿತನ ತಂತ್ರಸಾರದ ವ್ಯಾಖ್ಯೆ, ಅಶ್ವಪಂಡಿತನ ಮಾನಪ್ರಿಯ ಎಂಬ ಅಶ್ವಶಾಸ್ತ್ರ ಗ್ರಂಥ, ಭಟ್ಟೋಜ ದೀಕ್ಷಿತನ ತತ್ತ್ವ ಕೌಸ್ತುಭ ಮುಂತಾದ ಕೃತಿಗಳು ಇವನ ಕಾಲದಲ್ಲಿ ಹುಟ್ಟಿದುವು.

ವೆಂಕಟಪ್ಪನಾಯಕನಿಗೆ ಅಭಿನವ ವೀರಮಾಂಬ ಮತ್ತು ಭದ್ರಮ್ಮ ಎಂಬ ಹೆಂಡತಿಯರೂ ಹಿರಿಯಮ್ಮ ಮತ್ತು ಭದ್ರಪ್ಪ ಎಂಬ ಮಕ್ಕಳೂ ಇದ್ದರು. ಭದ್ರಪ್ಪ ವೆಂಕಟಪ್ಪನಿಗಿಂತ ಮುಂಚೆಯೇ ಸತ್ತ. ವೆಂಕಟಪ್ಪನ ದೀರ್ಘಕಾಲದ ಆಳ್ವಿಕೆ 1629ರಲ್ಲಿ ಕೊನೆಗೊಂಡಿತು. ಅನಂತರ ರಾಜ್ಯಾಡಳಿತದಲ್ಲಿ ಇವನ ಜೊತೆ ಸಹಕರಿಸುತ್ತಿದ್ದ ಇವನ ಮೊಮ್ಮಗ ವೀರಭದ್ರನಾಯಕ ಪಟ್ಟಕ್ಕೆ ಬಂದ. (ಕೆ.ಎಸ್.ಎಸ್.)

**ವೆಂಕಟಪ್ಪನಾಯಕ II:** ಕೆಳದಿಯ ರಾಜಮನೆತನದ ಅರಸು (1660–61). ಶಿವಪ್ಪನಾಯಕನ ತಮ್ಮ ಅಣ್ಣನ ಮರಣಾನಂತರ ವೆಂಕಟಪ್ಪ ನಾಯಕ ಅರಸನಾದ.

ಶಿವಪ್ಪನಾಯಕ ಪೋರ್ಚುಗೀಸರನ್ನು ರಾಜ್ಯದಿಂದ ಹೊರಹಾಕಿದ್ದನಾದ್ದ ರಿಂದ ಪೋರ್ಚುಗೀಸರು ಕರ್ನಾಟಕದ ವ್ಯಾಪಾರವನ್ನು ಸಾಧ್ಯವಾದಷ್ಟು ಪಲ್ಲಟ ಮಾಡುತ್ತಿದ್ದರು. ಅವರು ವೆಂಕಟಪ್ಪನಾಯಕನ ಧ್ವಜವನ್ನು ಹೊಂದಿದ್ದ ಒಂದು ಹಡಗನ್ನು ಸೆರೆಹಿಡಿದು, ಹಲವು ನಾವಿಕರನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸಿದರು. ಈ ಸುದ್ದಿಯಿಂದ ವೆಂಕಟಪ್ಪ ನಾಯಕ ಕ್ರುದ್ಧನಾಗಿ ಗೋವಕ್ಕೆ ಪ್ರಯಾಣ ಮಾಡುತ್ತಿದ್ದ ಒಬ್ಬ ಐರೋಪ್ಯ ಪಾದ್ರಿಯನ್ನು ಬಂಧನದಲ್ಲಿಟ್ಟ. ಶಿವಪ್ಪನಾಯಕನು ಪೋರ್ಚುಗೀಸರಿಂದ ಸೆರೆಹಿಡಿದಿದ್ದ ಯುದ್ಧದ ಏಳು ಕಾವಲು ಹಡಗುಗಳನ್ನು ಹಿಂತಿರುಗಿಸಲಿಲ್ಲ. ಪೋರ್ಚುಗೀಸರು ಅರಿಕೆಮಾಡಿಕೊಂಡ ಮೇಲೆ ಅವುಗಳನ್ನು ಬಿಟ್ಟುಕೊಟ್ಟ. ಅವರ ಮೈತ್ರಿಯನ್ನು ಬೆಳೆಸಲು ಪ್ರಯತ್ನಿಸಿದ ವೆಂಕಟಪ್ಪನಾಯಕ ಡಚ್ಚರೊಡನೆಯೂ ಮೈತ್ರಿ ಹೊಂದಿದ್ದ.

ಇವನ ಕಾಲದಲ್ಲಿ ಬಿಜಾಪುರದ ಆದಿಲ್ ಷಾ ಕೆಳದಿ ರಾಜ್ಯವನ್ನು ಪೊಗದಿ ರಾಜ್ಯವನ್ನಾಗಿ ಮಾಡಲು ಪ್ರಯತ್ನಿಸಿ ವೆಂಕಟಪ್ಪನಾಯಕನಿಂದ ಹಣವನ್ನು ಕಸಿದುಕೊಳ್ಳಲು ಸೇನಾಪತಿ ಸಲಾಬತ್‌ಖಾನನಿಗೆ ಅಣಿಮಾಡಿದ. ಆದರೆ ಇದು ಸಫಲವಾಗಲಿಲ್ಲ.

ವೆಂಕಟಪ್ಪನಾಯಕ ವಿಜಯನಗರದ ಶ್ರೀರಂಗನಾಯಕನಿಗೆ ಶ್ರೀರಂಗಪಟ್ಟಣದಿಂದ ಆಗಾಗ್ಗೆ ಉಂಟಾಗುತ್ತಿದ್ದ ಕಿರುಕುಳವನ್ನು ತಪ್ಪಿಸಲು ಅಲ್ಲಲ್ಲೇ ಗಡಿಗಳಲ್ಲಿ ಸೈನ್ಯವನ್ನಿಟ್ಟಿದ. ಆದರೂ ಮೈಸೂರು ಸೈನ್ಯ 1661ರ ಅಂತ್ಯದಲ್ಲಿ ಹೆಬ್ಬಾಲೆ ಕೋಟೆಯನ್ನು ವಶಪಡಿಸಿಕೊಂಡಿತು.

ಈತ ಮಠಗಳು ಮತ್ತು ಇತರ ಧಾರ್ಮಿಕ ಸಂಸ್ಥೆಗಳಿಗೆ ಕೆಳದಿ ರಾಜರು ತಲೆಮಾರುಗಳಿಂದ ನೀಡುತ್ತಿದ್ದ ಪ್ರೋತ್ಸಾಹವನ್ನು ಮುಂದುವರಿಸಿದ. ಶಿವತತ್ತ್ವರತ್ನಾಕರದ ಪ್ರಕಾರ ಇವನು ಸ್ವಲ್ಪಕಾಲ ರಾಜ್ಯವಾಳಿ ಈತನ ಸೋದರ ಭದ್ರಪ್ಪನಿಗೆ ಪಟ್ಟ ಕಟ್ಟಿದ. (ಎ.ವಿ.ವಿ.)

**ವೆಂಕಟಮಖಿ:** ಸು. 16–17ನೆಯ ಶತಮಾನ. ಕರ್ನಾಟಕ ಸಂಗೀತದ 72 ಮೇಳ ರಾಗಗಳನ್ನು ವ್ಯವಸ್ಥೆಗೊಳಿಸಿದ ಸಂಗೀತಶಾಸ್ತ್ರಜ್ಞ. ತಂದೆ ಗೋವಿಂದ ದೀಕ್ಷಿತ, ತಾಯಿ ನಾಗಮ್ಮ. ವೆಂಕಟಮಖಿ ಈ ದಂಪತಿಗಳ ದ್ವಿತೀಯ ಪುತ್ರ. ನಾಯಕವಂಶದ 140 ವರ್ಷಗಳ ಆಳಿಕೆಯನ್ನು ಸ್ಥಾಪಿಸಿದಾತ ಗೋವಿಂದ ದೀಕ್ಷಿತ. ಈತ ಚೆನ್ನಪ್ಪನಾಯಕನ ಪ್ರಧಾನಮಂತ್ರಿಯಾಗಿದ್ದ. ಚೋಳಮಂಡಲದ ಯಶಸ್ಸಿಗೆ ಕಾರಣನಾದ.

ಗೋವಿಂದ ದೀಕ್ಷಿತ ಕನ್ನಡಿಗ, ಶಿವಮೊಗ್ಗ ಸೀಮೆಯವ. ಈತನ ತಂದೆ ಮತ್ತು ಅಣ್ಣ ಯಜ್ಞನಾರಾಯಣ ದೀಕ್ಷಿತ ಇಬ್ಬರೂ ವೇದ ಪಾರಂಗತರು, ಅದ್ವೈತಾಚಾರ್ಯರು, ಸಾಹಿತಿಗಳು ಆಗಿದ್ದರು. ಶ್ರೌತವಿದ್ಯೆಯಲ್ಲಿ ಉಕ್ತವಾಗಿರುವ ಎಲ್ಲ ಯಜ್ಞಗಳನ್ನೂ ನೆರವೇರಿಸಿ ದೀಕ್ಷಿತರೆನಿಸಿಕೊಂಡಿದ್ದರು. ಗೋವಿಂದ ದೀಕ್ಷಿತ ತಂಜಾವೂರಿನ ನಾಯಕ ದೊರೆಗಳ ಪೈಕಿ ಒಬ್ಬನಾದ ರಘುನಾಥ ನಾಯಕನ ಪ್ರಧಾನಿಯಾಗಿದ್ದ.

ಸಹಜವಾಗಿ ವೆಂಕಟಮಖಿ ಹುಟ್ಟಿನಿಂದಲೂ ಶಿಕ್ಷಣದಿಂದಲೂ ಸಕಲವೇದ ವಿದ್ಯಾಪಾರಂಗತನಾದ. ಜೊತೆಗೆ ಕಾವ್ಯ, ನಾಟಕ, ಸಂಗೀತ, ಛಂದಸ್ಸು ಮುಂತಾದ ಶಾಸ್ತ್ರ ಪ್ರಕಾರಗಳಲ್ಲಿ ಪ್ರಾವೀಣ್ಯ ಕೂಡ ಗಳಿಸಿದ. ಈತ ಬೋಧಾಯನ ಸೂತ್ರಶಾಸ್ತ್ರ, ದರ್ಶಪೂರ್ಣಮಾಸಪ್ರಯೋಗ, ಮೀಮಾಂಸ, ಚತುರ್ದಂಡೀ ಪ್ರಕಾಶಿಕಾ(ಸಂಗೀತಶಾಸ್ತ್ರ ಗ್ರಂಥ) ಮುಂತಾದ ಕೃತಿಗಳನ್ನು ರಚಿಸಿದ್ದಾನೆ. ಕುಮಾರಿಲ ಭಟ್ಟನ 'ಲಘುವಾರ್ತಿಕ'ಕ್ಕೆ ವಾರ್ತಿಕಾಭರಣ ಎಂಬ ವ್ಯಾಖ್ಯಾನ ಬರೆದಿದ್ದಾನೆ.

ಸ್ವತಃ ಶಾಸ್ತ್ರಜ್ಞ, ವಾಗ್ಗೇಯಕಾರ, ಗಾಯಕ ಮತ್ತು ವೈಣಿಕ ಆಗಿದ್ದ ವೆಂಕಟಮಖಿ ದೊರೆ ವಿಜಯರಾಘವನ (ರಘುನಾಥನಾಯಕನ ಮಗ) ಆಣತಿಯಂತೆ ಚತುರ್ದಂಡೀ ಪ್ರಕಾಶಿಕಾ ಎಂಬ ಶಾಸ್ತ್ರಗ್ರಂಥ ರಚಿಸಿದ (ಸು. 1660). ಈ ಕುರಿತು ಗ್ರಂಥದಲ್ಲೇ ಉಲ್ಲೇಖಿಸಿದ್ದಾನೆ. ಆಧುನಿಕ ಕರ್ನಾಟಕ ಸಂಗೀತಕ್ಕೆ ಭದ್ರಬುನಾದಿ ಹಾಕಿಕೊಟ್ಟಿರುವ ಆಕರ ಗ್ರಂಥವಿದು.

ದಂಡಿ ಅಂದರೆ ಆಧಾರಸ್ತಂಭ. ಸಂಗೀತದ ನಾಲ್ಕು ಸ್ತಂಭಗಳಾದ ಗೀತ, ಠಾಯ, ಆಲಾಪ, ಪ್ರಬಂಧ ಮತ್ತು ಅವುಗಳ ಅವಯವಗಳನ್ನು ವಿಶದಪಡಿಸುತ್ತದೆ. ಇದು ಸಂಸ್ಕೃತ ಭಾಷೆಯ ಅನುಷ್ಟುಪ್ ಛಂದಸ್ಸಿನಲ್ಲಿದೆ. ಇದರಲ್ಲಿ ಹತ್ತು ಪ್ರಕರಣಗಳಿವೆ. 1. ವೀಣಾ, 2. ಶ್ರುತಿ, 3. ಸ್ವರ, 4. ಮೇಳ, 5. ರಾಗ, 6. ಆಲಾಪ, 7. ಠಾಯ, 8. ಗೀತ, 9. ಪ್ರಬಂಧ ಹಾಗೂ 10. ತಾಳಪ್ರಕರಣ. ತಾಳಪ್ರಕರಣ ಈಗ ಅಲಭ್ಯ.

ವೀಣಾ ಪ್ರಕರಣದಲ್ಲಿ ವೀಣೆಯ ರಚನೆ, ವೈವಿಧ್ಯ, ವಾದ್ಯದ ಬಗೆ, ವಾದಕ, ವಾದನತಂತ್ರ ಮುಂತಾದ ವಿವರಗಳಿವೆ. ಶುದ್ಧಮೇಳವೀಣ, ಮಧ್ಯಮೇಳವೀಣ, ರಘುನಾಥೇಂದ್ರ ಮೇಳವೀಣಗಳ ಬಗ್ಗೆ ವಿವರವಿದೆ. ಮೊದಲೆರಡು ವೀಣೆಗಳಲ್ಲಿ ರಾಗಕ್ಕೆ ತಕ್ಕಂತೆ ಮೆಟ್ಟುಗಳ ಹೊಂದಾಣಿಕೆ ಮತ್ತು ಮೂರನೆಯ ವೀಣೆಯಲ್ಲಿ ಅಚಲಮೆಟ್ಟುಗಳ ಬಗ್ಗೆ ವಿವರಣೆ ಇದೆ. ಸ್ವರಾಷ್ಟಕದಲ್ಲಿರುವ ಸ್ವರಗಳ ಸ್ಥಾನ ಹನ್ನೆರಡು ಎಂದು ಹೇಳಿ, ಆ ಕಾಲದಲ್ಲಿ ಸಂಗೀತ ವಿದ್ವಾಂಸರು ಹಾಡುತ್ತಿದ್ದ ರಾಗಗಳ ಹೆಸರಿನೊಡನೆ ಸಮೀಕರಿಸಿ ಬೇರೆ ಬೇರೆ ರಾಗಗಳನ್ನು ನುಡಿಸುವಾಗ ಯಾವ ತಂತಿಯನ್ನು ಹೇಗೆ ಶ್ರುತಿ ಮಾಡಬೇಕು ಎಂಬ ವಿವರಣೆ ನೀಡಿದ್ದಾನೆ. ಇದರಲ್ಲಿ ಮೊತ್ತ ಮೊದಲಬಾರಿಗೆ ಸಾರಣೆಯ ಕಲ್ಪನೆ ಬರುತ್ತದೆ. ಸಪ್ತಸ್ವರಗಳಲ್ಲಿ ಇಪ್ಪತ್ತೆರಡು ಶ್ರುತಿಗಳು ಹೇಗೆ ಅಡಕವಾಗಿವೆ ಎಂಬ ಅಂಶವೂ ವೀಣೆಯಲ್ಲಿ ಇದನ್ನು ಪ್ರಾಯೋಗಿಕವಾಗಿ ಅರಿತು ಕೊಳ್ಳುವ ಬಗೆಗಿನ ವಿವರಣೆಯೂ ಶ್ರುತಿಪ್ರಕರಣದಲ್ಲಿವೆ.

ಸ್ವರಪ್ರಕರಣದಲ್ಲಿ ದೀರ್ಘ ವಿವರಣೆಯೊಂದಿಗೆ ಶ್ರುತಿಗಳಿಂದ ಹುಟ್ಟುವ ಸ್ವರಗಳನ್ನು ನಿರೂಪಿಸಲಾಗಿದೆ. ಏಳು ಶುದ್ಧಸ್ವರಗಳೂ ಐದು ವಿಕೃತಸ್ವರಗಳೂ ಸೇರಿ ಒಟ್ಟು ಹನ್ನೆರಡು ಪ್ರಸಿದ್ಧವಾಗಿವೆ. ಸ್ವರ ಸಮೂಹವನ್ನು ಗ್ರಾಮ ಎಂದು ಕರೆದು, ಷಡ್ಜಗ್ರಾಮವೊಂದೇ ಉಪಯುಕ್ತವಾದುದೆಂದು ಸ್ಪಷ್ಟಪಡಿಸುತ್ತಾನೆ. ಪುರಂದರದಾಸರಿಂದ ರೂಢಿಗೆ ಬಂದ ಸುಳಾದಿ ಸಪ್ತತಾಳಾಲಂಕಾರಗಳನ್ನು ನಿರೂಪಿಸಿ, ಗಮಕ ಬಲು ಮುಖ್ಯವೆಂದೂ 'ಸ್ವರಸ್ಯ ಕಂಪೋಗಮಕಃ ಶ್ರೋತೃ ಚಿತ್ತಸುಖಾವಹಃ' ಎಂದೂ ವಿವರಿಸುತ್ತಾನೆ.

ಚತುರ್ದಂಡೀ ಪ್ರಕಾಶಿಕಾ ಕೃತಿ ಪ್ರಸಿದ್ಧಿ ಪಡೆದದ್ದು ಮುಖ್ಯವಾಗಿ ಮೇಳ ಪ್ರಕರಣದಿಂದ. ಎಪ್ಪತ್ತೆರಡು ಮೇಳಗಳನ್ನು ಕಲ್ಪಿಸಲು ಸ್ವರಗಳ ವಿಕೃತಿ ಭೇದಗಳು ಸೇರಿ ಒಟ್ಟು ಹದಿನಾರು ಸ್ವರಗಳಾಗುತ್ತವೆ. 'ರಿ, ಗ, ದ, ನಿ'ಗಳಿಗೆ ಮೂರು ಮೂರು ಭೇದಗಳು. ಅವುಗಳ ಸಂಜ್ಞೆ 'ರ, ರಿ, ರು, ಗ, ಗಿ, ಗು' ಹೀಗೆ. ಮಧ್ಯಮಸ್ವರಕ್ಕೆ ಮಾತ್ರ ಎರಡು ಭೇದಗಳು ಶುದ್ಧ ಮತ್ತು ಪ್ರತಿ, ಸ್ವರ ಸಂಜ್ಞೆ – 'ಮ, ಮಿ'. ಎಲ್ಲ ರಾಗಗಳಿಗೂ ಷಡ್ಜ, ಪಂಚಮ ಸ್ವರಗಳು ಆವಶ್ಯಕ. ಏಳು ಸ್ವರಗಳ ಸೇರುವಿಕೆಯೇ ಮೇಳವೆಂದು ಗೀತ ಬಲ್ಲವರು ಹೇಳುತ್ತಾರೆ ಎಂದಿದ್ದಾನೆ. ಎಪ್ಪತ್ತೆರಡು ಭೇದಗಳನ್ನು ವಿವರಿಸಲು ಸ್ಫುಟವಾದ ಉಪಾಯವನ್ನು ಹೇಳುತ್ತೇನೆಂದು ಹೀಗೆ ವಿವರಿಸಿದ್ದಾನೆ:

ಮೊದಲ ಆರು ರಾಗಗಳು –

| | ಪೂರ್ವಾಂಗ ಸ್ವರ | ಉತ್ತರಾಂಗಸ್ವರ |
|---|---|---|
| (ಅ) | ರ, ಗ | ಧ, ನ |
| (ಆ) | ರ, ಗ | ಧ, ನಿ |
| (ಇ) | ರ, ಗ | ಧ, ನು |
| (ಈ) | ರ, ಗ | ಧಿ, ನಿ |
| (ಉ) | ರ, ಗ | ಧಿ, ನು |
| (ಊ) | ರ, ಗ | ಧು, ನು |

| | | |
|---|---|---|
| ಎರಡನೆಯ ಆರು ರಾಗಗಳು | – | ರ, ಗಿ |
| ಮೂರನೆಯ ಆರು ರಾಗಗಳು | – | ರ, ಗು |
| ನಾಲ್ಕನೆಯ ಆರು ರಾಗಗಳು | – | ರಿ, ಗಿ |
| ಐದನೆಯ ಆರು ರಾಗಗಳು | – | ರಿ, ಗು |
| ಆರನೆಯ ಆರು ರಾಗಗಳು | – | ರು, ಗು |

ಉಳಿದ ಆರು ಗುಂಪುಗಳಿಗೂ ಪೂರ್ವಾಂಗ ಸ್ವರ ಹೀಗೇ ಇರುತ್ತದೆ: 1ನೆಯ ಗುಂಪು+7ನೆಯ ಗುಂಪು ಒಂದೇ ರೀತಿ, 2+8, 3+9, 4+10, 5+11, 6+12. ಇದೇ ಕ್ರಮದಲ್ಲಿದ್ದು ಮೊದಲ ಆರು ಗುಂಪಿನ ಮೂವತ್ತಾರು ರಾಗಗಳು ಶುದ್ಧ ಮಧ್ಯಮವನ್ನು ಹೊಂದಿ ಪೂರ್ವಮೇಳವೆಂದೂ ಅನಂತರದ ಆರುಗುಂಪಿನ ಮೂವತ್ತಾರು ರಾಗಗಳು ಪ್ರತಿಮಧ್ಯಮವನ್ನು ಹೊಂದಿ ಉತ್ತರ ಮೇಳವೆಂದೂ ಪ್ರಸಿದ್ಧಿ ಪಡೆದಿವೆ. ಒಟ್ಟು ಎಪ್ಪತ್ತೆರಡು ಮೇಳಗಳಾಗಿವೆ. ಹಾಡುವಾಗ ಸ್ವರ ಪ್ರತೀಕ 'ಸರಿಗಮಪದನಿ'ಯೆಂದೇ ವ್ಯವಹರಿಸಬೇಕು.

ವೆಂಕಟಮಖಿ ಈ ಎಪ್ಪತ್ತೆರಡು ಮೇಳಗಳಿಗೆ ಹೆಸರು ಸೂಚಿಸಿಲ್ಲ. ಆತನ ಮೊಮ್ಮಗ ಮುದ್ದು ವೆಂಕಟಮಖಿ ಮೇಳಗಳಿಗೆ ಹೆಸರಿಟ್ಟು ಅನುಬಂಧವಾಗಿ 'ಚತುರ್ದಂಡೀ ಪ್ರಕಾಶಿಕಾ' ಗ್ರಂಥದೊಡನೆ ಸೇರಿಸಿದ ನೆಂದು ವಿದ್ವಾಂಸರು ಹೇಳುತ್ತಾರೆ.

ಇನ್ನು ಐದನೆಯ ರಾಗ ಪ್ರಕರಣದಲ್ಲಿ ಕೇಳುಗರ ಮನಸ್ಸನ್ನು ರಂಜಿಸುವುದೇ ರಾಗವೆಂದು ಹೇಳಿ ಅದಕ್ಕೆ ದಶಲಕ್ಷಣಗಳನ್ನೂ ಸ್ವರಗಳ ಲಂಘನ, ಅಲಂಘನಗಳನ್ನೂ ವಾದಿ ಸಂವಾದಿ ಸ್ವರಗಳನ್ನೂ ವಿವರಿಸುತ್ತಾನೆ. ಗುರು ತಾನಪ್ಪಾಚಾರ್ಯರಿಂದ ಲಕ್ಷ್ಯದಲ್ಲಿ ಹೇಳಲ್ಪಟ್ಟ ಐವತ್ತನಾಲ್ಕು ರಾಗಗಳ ವಿವರಣೆ, ಅವುಗಳ ಗಾನಕಾಲ ನಿಯಮವನ್ನು ತಿಳಿಸುತ್ತಾನೆ. ರಾಗಾಂಗ, ಭಾಷಾಂಗ, ಉಪಾಂಗ, ಕ್ರಿಯಾಂಗ ಇವು ದೇಶೀರಾಗಗಳೆಂದು ವರ್ಣಿಸಿದ್ದಾನೆ.

ಆಲಾಪನೆ ಮಾಡುವ ಬಗೆಯನ್ನು ಆಲಾಪ ಪ್ರಕರಣದಲ್ಲಿ ಹೇಳಿದೆ. ಆಲಾಪನೆಯ ಪ್ರಾರಂಭಭಾಗ ಆಕ್ಷಿಪ್ತಿಕಾ, ಎರಡನೆಯದು ರಾಗವರ್ಧಿನಿ. ಆಕ್ಷಿಪ್ತಿಕಾದಿಂದ ಆರಂಭಗೊಂಡ ಆಲಾಪ ಸ್ಫುಟವಾಗಿ ವರ್ಧಿಸುವುದು. ಅನಂತರ ಮುಕ್ತಾಯ ಬರುವುದು.

ಉದ್ದಿಷ್ಟ ರಾಗಕ್ಕೆ ತಕ್ಕಂತೆ ಒಂದು ಸ್ವರದಲ್ಲಿ ನ್ಯಾಸಮಾಡಬೇಕು. ಆ ಸ್ವರದಿಂದ ಮುಂದೆ ನಾಲ್ಕು ಸ್ವರಗಳಲ್ಲಿ ತಾನವನ್ನು ಆರೋಹಣ, ಅವರೋಹಣ ಕ್ರಮದಲ್ಲಿ ಹಾಡಿ ಅನಂತರ ಮಂದ್ರಷಡ್ಜದಲ್ಲಿ ನ್ಯಾಸಮಾಡ ಬೇಕು. ಇದು ಏಳನೆಯ ಠಾಯ ಪ್ರಕರಣದ ಸಾರ.

ಎಂಟನೆಯದು ಗೀತ ಪ್ರಕರಣ. ಗೀತ ಎಂದರೆ ಹಾಡು ಎಂಬರ್ಥದಲ್ಲಿ ಹೇಳಲಾಗಿದೆ. ಸಾಲಗಸೂಡವೆಂಬ ಗೀತದ ಬಗ್ಗೆ ನಿರೂಗೀತವು ಪ್ರತ್ಯೇಕ ತಾಳದಲ್ಲಿ ನಿಬದ್ಧವಾಗಿದೆ. ಇಲ್ಲಿ ರಸಾಭಿವ್ಯಕ್ತಿಯ ಬಗ್ಗೆ ವಿವರಿಸಿದ್ದಾನೆ.

ಆರು ಅಂಗಗಳಿಂದ ಮತ್ತು ನಾಲ್ಕು ಧಾತುಗಳಿಂದ ರಚಿತವಾದ ರಚನೆಯನ್ನು ಪ್ರಬಂಧವೆಂದು ಕೊನೆಯ ಒಂಬತ್ತನೆಯ ಪ್ರಕರಣದಲ್ಲಿ ವಿವರಿಸುತ್ತಾನೆ. ಆರು ಅಂಗಗಳಿವು: ಸ್ವರ, ಬಿರುದ, ಪದ, ತೇನಕ, ಪಾಟ, ತಾಳ. ಇವು ಪ್ರಬಂಧದಲ್ಲಿ ಮುಖ್ಯ. ಪ್ರಬಂಧದ ಧಾತು ಅಂದರೆ ಅವಯವಗ ಳಿವು: ಉದ್ಗ್ರಾಹ, ಮೇಲಾಪಕ, ಧ್ರುವ, ಆಭೋಗ. ಇವು ಆಧುನಿಕಕಾಲದ ಪಲ್ಲವಿ, ಅನುಪಲ್ಲವಿ, ಚರಣ, ಮಧ್ಯಮಕಾಲ ಸಾಹಿತ್ಯವೆಂದು ಮಾರ್ಪಾ ಡಾಗಿವೆ. ಕರ್ತೃ ಏಕಧಾತು, ದ್ವಿಧಾತು, ತ್ರಿಧಾತು, ಚತುರ್ಧಾತು ಪ್ರಬಂಧ ರಚನೆಗಳನ್ನು ನೀಡಿದ್ದಾನೆ.

ಹತ್ತನೆಯದು (ತಾಳಪ್ರಕರಣ) ಲಭ್ಯವಾಗಿಲ್ಲದಿರುವುದರಿಂದ ಗ್ರಂಥ ಅಪೂರ್ಣವಾಗಿದೆ.

*

**ವೆಂಕಟರಂಗೋ ಕಟ್ಟಿ:** 1833–1909. ಸಮಾಜಸುಧಾರಕ, ಪತ್ರಿಕೋದ್ಯಮಿ ಹಾಗೂ ಶಿಕ್ಷಕರು ಹುಟ್ಟಿದ್ದು ಬಿಜಾಪುರ ಜಿಲ್ಲೆಯ ಮುಧೋಳದಲ್ಲಿ; ಮನೆಯಲ್ಲಿಯೇ ಸಂಸ್ಕೃತ ಕಾವ್ಯಶಾಸ್ತ್ರಗಳನ್ನು ಓದಿಕೊಂಡ ಇವರು ಪುಣೆಗೆ ಹೋಗಿ ಇಂಗ್ಲಿಷ್ ಶಿಕ್ಷಣವನ್ನು ಪಡೆದು ಅಲ್ಲಿಯ ಟ್ರೈನಿಂಗ್ ಕಾಲೇಜೊಂದರಲ್ಲಿ ಸು. 10 ವರ್ಷಗಳ ಕಾಲ ಅಧ್ಯಾಪಕ ರಾಗಿದ್ದರು. ಅನಂತರ ಬೆಳಗಾಂವಿಯ ನಾರ್ಮಲ್ ಸ್ಕೂಲಿನಲ್ಲಿ ಅಧ್ಯಾಪಕ ರಾಗಿ ಕೆಲಸ ಮಾಡಿದರು. ಮುಂದೆ ಧಾರವಾಡದ ಟ್ರೈನಿಂಗ್ ಕಾಲೇಜಿನ ಅಧ್ಯಾಪಕ ವರ್ಗಕ್ಕೆ ಸೇರಿದ ಇವರು, ಆ ಕಾಲೇಜಿನ ಪ್ರಿನ್ಸಿಪಲರಾಗಿ ಸುಮಾರು 14 ವರ್ಷಗಳ ಕಾಲ (1876–90) ಕೆಲಸ ಮಾಡಿ ನಿವೃತ್ತರಾದರು.

ಪುಣೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಅಲ್ಲಿ ನಡೆಯುತ್ತಿದ್ದ ಭಾಷಾಭಿವೃದ್ಧಿಗೆ ಸಂಬಂಧಿಸಿದ ಚಟುವಟಿಕೆಗಳಿಂದ ಕಟ್ಟಿಯವರು ಪ್ರಭಾವಿತರಾಗಿದ್ದರು. ಉತ್ತರ ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನಗಳಿಗಾಗಿ ತಮ್ಮ ಜೀವನದ ಕೊನೆಯವರೆಗೂ ಹಲವು ಬಗೆಯಲ್ಲಿ ದುಡಿದರು; ಸ್ವತಃ ಲೇಖಕರೂ ಆಗಿದ್ದ ಇವರು ಶಾಲಾ ವಿದ್ಯಾರ್ಥಿಗಳಿಗೆಂದು ಬರೆದ

ಕನ್ನಡ ಕ್ರಮಿಕ ಪುಸ್ತಕಗಳು ತುಂಬ ಜನಪ್ರಿಯವಾಗಿದ್ದವು. ಇವರು ಬರೆದ ಇತರ ಮುಖ್ಯ ಕೃತಿಗಳಿವು; ಜ್ಯೋತಿಷಶಾಸ್ತ್ರ; ಪದಾರ್ಥ, ವಿಜ್ಞಾನ ಶಾಸ್ತ್ರ; ವನಸ್ಪತಿಶಾಸ್ತ್ರ, ಖನಿಜಶಾಸ್ತ್ರ, ಲಘುವ್ಯಾಕರಣ, ಕರ್ನಾಟಕದ ವರ್ಣನೆಯೂ ಇತಿಹಾಸವ, ಕರ್ನಾಟಕ ಗೆಜೆಟ್ಟಿಯರು (ಭಾಷಾಂತರ).

ಧಾರವಾಡದ ವಿದ್ಯಾ ವರ್ಧಕ ಸಂಘದ ಸ್ಥಾಪಕರ ಲ್ಲೊಬ್ಬರಾದ ವೆಂಕಟ ರಂಗೋ ಕಟ್ಟಿಯವರು ಆ ಸಂಘದ ಮೊದಲ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದರು. ಇವರು ಶಾಲಾಪತ್ರಿಕೆ ಮತ್ತು ಕರ್ನಾಟಕ ಪತ್ರ ಎಂಬ ಎರಡು ಪತ್ರಿಕೆಗಳನ್ನು ಸ್ವಲ್ಪಕಾಲ ಪ್ರಕಟಿಸಿದರು. ಇವರು 1909 ಮೇ 1ರಂದು ನಿಧನರಾದರು.

(ವಿ.ಎಸ್.)

**ವೆಂಕಟರಾಮಯ್ಯ, ಸಿ.ಕೆ.:** 1896–1973. ಹೆಸರಾಂತ ಕನ್ನಡ ವಿದ್ವಾಂಸರು. ಹುಟ್ಟಿದ್ದು ಚನ್ನಪಟ್ಟಣ ತಾಲ್ಲೂಕಿನ ಪೊಟ್ಟು ಎಂಬ ಗ್ರಾಮದಲ್ಲಿ. ತಂದೆ ಕೃಷ್ಣಪ್ಪ, ತಾಯಿ ನಂಜಮ್ಮ. ಆರಂಭದ ಶಿಕ್ಷಣವನ್ನು ಪೊಟ್ಟು, ಚನ್ನಪಟ್ಟಣ ಮತ್ತು ಮಾಗಡಿಗಳಲ್ಲಿ ಮುಗಿಸಿದ ಇವರು, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿಯನ್ನು ಪಡೆದರು. ಅನಂತರ ಮುಂಬಯಿಯಲ್ಲಿ ವ್ಯಾಸಂಗಮಾಡಿ ಎಂ.ಎ. ಪದವಿಯ ಜೊತೆಗೆ ಎಲ್.ಎಲ್.ಬಿ. ಪದವಿಯನ್ನು ಗಳಿಸಿಕೊಂಡರು. ಶ್ರೀರಂಗಪಟ್ಟಣದಲ್ಲಿ ಸ್ವಲ್ಪಕಾಲ ವಕೀಲವೃತ್ತಿಯನ್ನು ನಡೆಸಿದ ಇವರು ಆಗಿನ ಮೈಸೂರು ಸರ್ಕಾರ ಏರ್ಪಡಿಸಿದ ಭಾಷಾಂತರ ಸ್ಪರ್ಧಾಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಹೊಂದಿ 1924 ಮಾರ್ಚ್ 1ರಂದು ಸರ್ಕಾರದ ಭಾಷಾಂತರ ಕಾರರಾಗಿ ನೇಮಕಗೊಂಡು ದೀರ್ಘಕಾಲ ಆ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ಆ ಹುದ್ದೆಯಿಂದ ನಿವೃತ್ತರಾದ ಮೇಲೆ ಆಗತಾನೆ ಸರ್ಕಾರ ಆರಂಭಿಸಿದ್ದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಮೊಟ್ಟಮೊದಲನೆಯ ನಿರ್ದೇಶಕರಾಗಿ (1955–55) ನೇಮಗೊಂಡು ಸೇವೆ ಸಲ್ಲಿಸಿ ವಿಶ್ರಾಂತಿ ಪಡೆದರು. ತಮ್ಮ ಜೀವನದ ಕೊನೆಯ ದಿನಗಳನ್ನು ಚನ್ನಪಟ್ಟಣದಲ್ಲಿ ಕಳೆದ ಇವರು 1973 ಏಪ್ರಿಲ್ 3ರಂದು ಬೆಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಒಳ್ಳೆಯ ಪಾಂಡಿತ್ಯ ವನ್ನು ಗಳಿಸಿಕೊಂಡಿದ್ದ ವೆಂಕಟರಾಮಯ್ಯನವರು ಮಾಡಿರುವ ಸಾಹಿತ್ಯಸೇವೆ ಗಣ್ಯವಾದುದು. ವಿದ್ಯಾರ್ಥಿದೆಸೆಯಲ್ಲಿಯೇ ಸಾಹಿತ್ಯದಲ್ಲಿ ಆಸಕ್ತಿ ವಹಿಸಿದ್ದ ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ, ಅಲ್ಲಿ ತಮ್ಮ ಗುರುಗಳಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾಗಿ ಅವರಿಂದ ಕನ್ನಡ ದೀಕ್ಷೆಯನ್ನು ಪಡೆದರು. ಪ್ರಾರಂಭದಲ್ಲಿ ಇಂಗ್ಲಿಷ್‌ನಿಂದ ಕೆಲವು ಕಾದಂಬರಿಗಳನ್ನು ಕನ್ನಡಕ್ಕೆ ತಂದರು. 1917ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಏರ್ಪಡಿಸಿದ್ದ ಗ್ರಂಥ ರಚನಾ ಸ್ಪರ್ಧೆಯಲ್ಲಿ

ಭಾಗವಹಿಸಿ ಬಹುಮಾನಿತರಾದ ಇವರು ಅಲ್ಲಿಂದ ಮುಂದಕ್ಕೆ ಅನೇಕ ಕೃತಿಗಳನ್ನು ಬರೆದು ಪ್ರಕಟಿಸಿದರು. ಇವರ ಕೆಲವು ಮುಖ್ಯ ಕೃತಿಗಳಿವು; ಹಳ್ಳಿಯ ಕಥೆಗಳು, ತುರಾಯಿ-ಇವು ಸಣ್ಣ ಕಥೆಗಳ ಸಂಗ್ರಹಗಳು; ಬುದ್ಧ, ಪೈಗಂಬರ್, ಲಿಂಕನ್, ಹರ್ಷವರ್ಧನ, ಆಳಿದ ಮಹಾಸ್ವಾಮಿಯವರು-ಇವು ಜೀವನಚರಿತ್ರೆಗಳು; ಸುಂದರಿ, ನಮ್ಮ ಸಮಾಜ, ಮಂಡೋದರಿ, ನಚಿಕೇತ ಮತ್ತು ಬ್ರಹ್ಮವಾದಿ-ಇವು ನಾಟಕಗಳು. ಈ ನಾಟಕಗಳೆಲ್ಲ ರಂಗದ ಮೇಲೆ ಯಶಸ್ವೀ ಪ್ರಯೋಗಗಳಾಗಿವೆ. ಭಾಸ ಮತ್ತು ಕಾಳಿದಾಸರ ಮೇಲೆ ಬೃಹತ್ತಾದ ವಿಮರ್ಶಾಗ್ರಂಥಗಳನ್ನು ಬರೆದಿದ್ದಾರೆ. ಗಾತ್ರ, ಪಾಂಡಿತ್ಯ ಎರಡು ದೃಷ್ಟಿಯಿಂದಲೂ ಇವರ ಕೃತಿಗಳು ಉನ್ನತ ಸ್ಥಾನವನ್ನು ಪಡೆದುಕೊಂಡಿವೆ.

ಇವರು ಸಲ್ಲಿಸಿದ ಸಾಹಿತ್ಯ ಸೇವೆಯೂ ಗಣ್ಯವಾದುದು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟವಾದ ಸಂಪರ್ಕ ಹೊಂದಿದ್ದ ಇವರು ಅದರ ಗೌರವ ಕಾರ್ಯದರ್ಶಿಯಾಗಿ (1930-37 ಹಾಗೂ 1938-40)ಗಳಾಗಿಯೂ ಸೇವೆ ಸಲ್ಲಿಸಿದರು.

ವೆಂಕಟರಾಮಯ್ಯನವರು ಸಲ್ಲಿಸಿದ ಸಾಹಿತ್ಯ ಮತ್ತು ಸಮಾಜಸೇವೆಗೆ ಮನ್ನಣೆ ಎಂಬಂತೆ ಇವರಿಗೆ ಹಲವು ಬಗೆಯ ಗೌರವಪ್ರಶಸ್ತಿಗಳು ಲಭಿಸಿವೆ. 1947ರಲ್ಲಿ ಹರಪನಹಳ್ಳಿಯಲ್ಲಿ ನಡೆದ 30ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. 1950ರಲ್ಲಿ ಮೈಸೂರರಸರು ಇವರಿಗೆ ರಾಜಸೇವಾಸಕ್ತ ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. 1962ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿತು. 1971ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂತು. ಅದೇ ವರ್ಷ ಕನಕಪುರದಲ್ಲಿ ನಡೆದ ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. **(ಸಿ.ಕೆ.ಎನ್.)**

**ವೆಂಕಟರಾಮಯ್ಯ, ಇ.ಎಸ್.:** 1924-97. ಭಾರತದ ಪರಮೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯನ್ಯಾಯಾಧೀಶರು, ಲೇಖಕರು. ಇವರು 1924 ಡಿಸೆಂಬರ್ 18ರಂದು ಮಂಡ್ಯ ಜಿಲ್ಲೆಯ ಇಂಗಳಗುಪ್ಪೆಯಲ್ಲಿ ಜನಿಸಿದರು. ತಂದೆ ಟಿ.ವಿ. ಸೀತಾರಾಮಯ್ಯ, ತಾಯಿ ನಂಜಮ್ಮ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ (1943), ಬೆಳಗಾಂವಿಯ ಆರ್.ಎಲ್.ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ. ಪದವಿ ಗಳಿಸಿದರು (1945). ವ್ಯಾಸಂಗದ ಅವಧಿಯಲ್ಲಿ ಹಲವು ಚಿನ್ನದ ಪದಕಗಳನ್ನು ಗಳಿಸಿರುವುದು ಇವರ ಹೆಗ್ಗಳಿಕೆ.

ವೃತ್ತಿಯ ಆರಂಭದಲ್ಲಿ ಬೆಂಗಳೂರಿನಲ್ಲಿ ಪ್ಲೀಡರ್ ಆಗಿ ನೋಂದಾಯಿಸಿಕೊಂಡು (1946) ಅನಂತರ ನ್ಯಾಯವಾದಿಗಳಾದರು (1948). ಮೊದಲಿನಿಂದಲೂ ಚತುರಮತಿಗಳೆನಿಸಿದ್ದ ಇವರು ಸಿವಿಲ್, ಕ್ರಿಮಿನಲ್, ಸಂವಿಧಾನಿಕ ಹಾಗೂ ಸಾರ್ವಜನಿಕ ಕಾನೂನು ವಿಭಾಗಗಳಲ್ಲಿ ಸಮರ್ಥವಾದಿ ಎಂದು ಪ್ರಸಿದ್ಧರಾಗಿದ್ದರು.

ಇವರು ಕಾನೂನು ಪಾಂಡಿತ್ಯದಿಂದಾಗಿ ಕರ್ನಾಟಕ ಉಚ್ಚನ್ಯಾಯಾಲಯದ ಪ್ಲೀಡರ್ (1966), ಸರ್ಕಾರಿ ವಕೀಲ (1969), ಕರ್ನಾಟಕ ಅಡ್ವೊಕೇಟ್ ಜನರಲ್ (1970) ಮೊದಲಾದ ಹೊಣೆಗಾರಿಕೆಯ ಹುದ್ದೆಗಳು ಇವರನ್ನು ಅರಸಿಬಂದವು. ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ಮಾತ್ರವಲ್ಲದೆ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿಯೂ (1979) ಮುಖ್ಯನ್ಯಾಯಾಧೀಶರಾಗಿಯೂ (1989) ಸೇವೆಸಲ್ಲಿಸಿ ನಿವೃತ್ತರಾದರು. ಇವರು ನ್ಯಾಯಾಧೀಶರಾಗಿದ್ದ ಎರಡು ದಶಕಗಳಲ್ಲಿ ಅನೇಕ ಮಹತ್ತ್ವದ ತೀರ್ಪುಗಳನ್ನು ನೀಡಿ ನ್ಯಾಯಾಂಗದ ಗೌರವ ಹೆಚ್ಚಿಸಿದ್ದರು. ನ್ಯಾಯನಿಷ್ಠುರತೆ, ವೃತ್ತಿ ಪ್ರಾಮಾಣಿಕತೆ, ಕಾನೂನು ಪ್ರಿಯತೆ, ಸತ್ಯನಿಷ್ಠುರತೆ ಇಂತಹ ಮೌಲ್ಯಗಳಿಗೆ ಇವರು ಪ್ರಸಿದ್ಧರಾಗಿದ್ದರು.

ಕಾನೂನು ಬೋಧನೆಯಲ್ಲಿಯೂ ಅಪಾರ ಒಲವಿದ್ದ ಇವರು ಬೆಳಗಾಂವಿಯ ಆರ್.ಎಲ್. ಕಾನೂನು ಕಾಲೇಜು (1946), ಬೆಂಗಳೂರಿನ ಬಿ.ಎಂ. ಎಸ್.ಕಾನೂನು ಕಾಲೇಜು (1963-66)ಗಳಲ್ಲಿ ಬೋಧಕರಾಗಿ, ಪ್ರಾಂಶುಪಾಲರಾಗಿ (1966-69), ಬೆಂಗಳೂರು ವಿಶ್ವವಿದ್ಯಾಲಯದ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಸಂಸ್ಥೆಯಲ್ಲಿ ಎಂ.ಕೆ. ನಂಬಿಯಾರ್ ಪೀಠದ ಆಶ್ರಯದಲ್ಲಿ ಸಂವಿಧಾನಾತ್ಮಕ ಕಾನೂನಿನ ಬೋಧಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಕಾನೂನು ಸೇವೆಯ ಕಾರ್ಯಾನುಭವ ರಾಜ್ಯ ಹಾಗೂ ರಾಷ್ಟ್ರ ವ್ಯಾಪಿಯಾದದ್ದು. ಬೆಂಗಳೂರಿನ ಲೀಗಲ್ ಏಯ್ಡ್ ಸೊಸೈಟಿಯ ಕಾರ್ಯದರ್ಶಿಯಾಗಿ (1948-56), ಕರ್ನಾಟಕದ ಕಾನೂನು ನೆರವು ಮತ್ತು ಸಲಹಾ ಮಂಡಳಿಯ ಅಧ್ಯಕ್ಷರಾಗಿ (1976-79), ಸರ್ವೋಚ್ಚ ನ್ಯಾಯಾಲಯದ ಕಾನೂನು ನೆರವು ಸಮಿತಿಯ ಅಧ್ಯಕ್ಷರಾಗಿ ಇವರು ಸೇವೆ ಸಲ್ಲಿಸಿದ್ದಾರೆ.

ಇವರು ನಿವೃತಿಯ ಅನಂತರವೂ ಸೇವಾತತ್ಪರರಾಗಿದ್ದರು. ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ (ಬೆಂಗಳೂರು), ಭಾರತೀಯ ವಿದ್ಯಾಭವನ (ಬೆಂಗಳೂರು ಕೇಂದ್ರ), ಏಷ್ಯ ಸೆಂಟರ್ (ಬೆಂಗಳೂರು), ಅರಬಿಂದೊ ಸೊಸೈಟಿ (ಬೆಂಗಳೂರು), ಸರ್ವೋದಯ ಇಂಟರ್‌ನ್ಯಾಷನಲ್ ಟ್ರಸ್ಟ್ (ಬೆಂಗಳೂರು), ಪೂರ್ಣಪ್ರಜ್ಞ ಎಜುಕೇಷನಲ್ ಇನ್‌ಸ್ಟಿಟ್ಯೂಟ್ (ಬೆಂಗಳೂರು) - ಈ ಹಲವಾರು ಸಂಸ್ಥೆಗಳ ಅಧ್ಯಕ್ಷರಾಗಿ ಆ ಸಂಸ್ಥೆಗಳ ಬೆಳವಣಿಗೆಗೂ ಕಾರಣರಾಗಿದ್ದರು. ಹಿರಿಯ ನಾಗರಿಕ ಘಟಕದ ಪೋಷಕರಾಗಿ, ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾದ ಹಣಕಾಸು ಮೇಲ್ವಿಚಾರಣಾ ಸಲಹಾ ಘಟಕದ ಸದಸ್ಯರಾಗಿ, ಹೈದರಾಬಾದಿನ ಅಡ್ಮೈಸರಿ ಸ್ಟ್ಯಾಫ್ ಕಾಲೇಜಿನ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ.



ಕಾನೂನು, ಸಮಾಜ ಮತ್ತು ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಇವರು ರಚಿಸಿದ್ದಾರೆ. ಫ್ರೀಡಂ ಆಫ್ ಪ್ರೆಸ್ - ರೀಸೆಂಟ್ ಟ್ರೆಂಡ್ಸ್, ಫ್ರೀ ಆ್ಯಂಡ್ ಬ್ಯಾಲೆನ್ಸ್‌ಡ್ ಪ್ರೆಸ್, ವುಮನ್ ಆ್ಯಂಡ್ ಲಾ, ಇಂಡಿಯನ್ ಫೆಡರಲಿಸಂ, ಜಸ್ಟೀಸ್ ಇಂಪಿರಿಲ್ಡ್, ಬಿ.ಎಸ್.

ರಾವ್– ಕಾನ್‌ಸ್ಟಿಟ್ಯೂಷನಲ್ ಅಡ್ವೈಸರ್ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಹ್ಯೂಮನ್ ರೈಟ್ಸ್ ಇನ್ ಎ ಚೇಂಜಿಂಗ್ ವರ್ಲ್ಡ್ ಎಂಬುದು ಇವರ ಸಂಪಾದಿತ ಕೃತಿ.

ಇವರ ನ್ಯಾಯಾಂಗ ಸೇವೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ (1989), ಆಂಧ್ರಪ್ರದೇಶದ ನಾಗಾರ್ಜುನ ವಿಶ್ವವಿದ್ಯಾಲಯ (1993) ಎಲ್.ಎಲ್.ಡಿ ಪದವಿಯನ್ನು ನೀಡಿ ಗೌರವಿಸಿವೆ. ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ (1996). ಇವರು 1997 ಸೆಪ್ಟೆಂಬರ್ 25ರಂದು ನಿಧನರಾದರು. **(ಎಸ್.ಎಂ.ಕೆ.)**

**ವೆಂಕಟರಾವ್, ಆಲೆಮನೆ:** 1889–1935. ಕನ್ನಡಕ್ಕಾಗಿ ಕೆಲಸಮಾಡಿದ ಮಹನೀಯರು. ಇವರ ತಂದೆ ಆಲೆಮನೆ ರಾಮರಾಯರು ಆಂಧ್ರದ ಕರ್ನೂಲು, ಅನಂತಪುರ ಪ್ರಾಂತ್ಯಗಳಿಂದ ಬಂದು, ಮಂಗಳೂರು ಜಿಲ್ಲೆಯಲ್ಲಿ ರೆವಿನ್ಯೂ ಅಧಿಕಾರಿಗಳಾಗಿದ್ದರು. ವೆಂಕಟರಾವ್ ಅವರು ಪ್ರಾರಂಭದಲ್ಲಿ ವೈದ್ಯಕೀಯ ವ್ಯಾಸಂಗಕ್ಕಾಗಿ ಮದರಾಸು ವೈದ್ಯಕೀಯ ಕಾಲೇಜು ಸೇರಿ, ಎರಡು ವರ್ಷಗಳ ಕಾಲ ವ್ಯಾಸಂಗಮಾಡಿ ಅದರಲ್ಲಿ ಒಲವಿಲ್ಲದೆ ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜನ್ನು ಸೇರಿ ಬಿ.ಎ. ಪದವಿ ಗಳಿಸಿದರು. ಅನಂತರ ಎಲ್.ಟಿ. ಪದವಿಯನ್ನು ಪಡೆದು ಸ್ವಲ್ಪಕಾಲ ಬಳ್ಳಾರಿ ಜಿಲ್ಲೆಯಲ್ಲಿ ಶಾಲಾ ಇನ್ಸ್‌ಪೆಕ್ಟರಾಗಿಯೂ ಕೆಲವು ಕಾಲ ಕೇರಳದ ಮಲಬಾರಿನ ಬಡಗರ ಮಿಷನ್ ಶಾಲೆಯಲ್ಲಿ ಗಣಿತದ ಅಧ್ಯಾಪಕರಾಗಿಯೂ ಕೆಲಸ ಮಾಡಿದರು. ಅನಂತರ ತಾವು ಓದಿದ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಮದರಾಸು ವಿಶ್ವ ವಿದ್ಯಾಲಯ ಕನ್ನಡ ವಿಭಾಗವನ್ನು ಆರಂಭಿಸಿದಾಗ (1927) ಇವರು ಆ ವಿಭಾಗದ ಮೊದಲ ಪ್ರಾಧ್ಯಾಪಕರಾಗಿ ನೇಮಕಗೊಂಡು ಆ ಇಲಾಖೆಯ ಅಭಿವೃದ್ಧಿಗಾಗಿ ಶ್ರಮಿಸಿದರು. ಇವರ ನೇತೃತ್ವದಲ್ಲಿ ಕೆಲವು ಅಮೂಲ್ಯ ಕನ್ನಡ ಕಾವ್ಯಗಳು ಮದರಾಸು ವಿಶ್ವವಿದ್ಯಾಲಯದ ಮೂಲಕ ಬೆಳಕು ಕಂಡವು. ನೃಪತುಂಗನ ಕವಿರಾಜಮಾರ್ಗ, ಗುಣವರ್ಮನ ಪುಷ್ಪದಂತ ಪುರಾಣ, ಕೇಶಿರಾಜನ ಶಬ್ದಮಣಿದರ್ಪಣ (ಲಿಂಗಣಾರಾಧ್ಯನ ಟೀಕೆ ಸಹಿತ), ಪೊನ್ನನ ಶಾಂತಿಪುರಾಣ–ಇವು ಮುಖ್ಯವಾದುವು. ಇವುಗಳ ಸಂಪಾದನೆಯಲ್ಲಿ ಇವರ ಪಾತ್ರ ಹಿರಿದಾಗಿತ್ತು. ಕನ್ನಡದ ಕೆಲಸಕಾರ್ಯಗಳನ್ನು ಹುರುಪಿನಿಂದ ಮಾಡುತ್ತಿದ್ದಾಗಲೆ 1935ರಲ್ಲಿ ಆಕಸ್ಮಿಕವಾಗಿ ಇವರು ಮರಣ ಹೊಂದಿದರು.

ಇವರು ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲೂ ಉತ್ತಮ ಪಾಂಡಿತ್ಯ ಗಳಿಸಿದ್ದರು. 1917ರಲ್ಲಿ ಇವರು ಚಂದ್ರಗುಪ್ತ ಚಕ್ರವರ್ತಿ ಎಂಬ ತೆಲುಗು ಕಾದಂಬರಿಯನ್ನು ಸರಳವಾದ ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಆರಂಭದ ದಿನಗಳಲ್ಲಿ ಇವರು ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮದರಾಸು ಪ್ರಾಂತ್ಯವನ್ನು ಪ್ರತಿನಿಧಿಸಿದರು. **(ಪಿ.ಎಸ್.ಎಸ್.)**

**ವೆಂಕಟರಾವ್, ತಲಗೇರಿ:** –1978. ಕನ್ನಡ ರಂಗಭೂಮಿಯ ಹವ್ಯಾಸಿ ಕಲಾವಿದ, ಚಿತ್ರನಟ. ಇವರು ಶಿವಮೊಗ್ಗ ಜಿಲ್ಲೆಯ ಹುಲಿಯೂರು ದುರ್ಗದಲ್ಲಿ ಹುಟ್ಟಿದರು. ತಂದೆ ಸುಬ್ಬರಾವ್ ಯಕ್ಷಗಾನ ಕಲಾವಿದರಾಗಿದ್ದರು. ಹಳ್ಳಿಗೆ ಬರುತ್ತಿದ್ದ ಕಂಪನಿಗಳ ನಾಟಕಗಳನ್ನೆಲ್ಲ ನೋಡುತ್ತಿದ್ದ ವೆಂಕಟರಾಯರಿಗೆ ಚಿಕ್ಕಂದಿನಲ್ಲೇ ಈ ಕಲೆಯಲ್ಲಿ ವಿಶೇಷವಾದ ಅಭಿರುಚಿ ಮೂಡಿತು. ತಮ್ಮ ಹದಿನಾರನೆಯ ವಯಸ್ಸಿನಲ್ಲಿ, ಇನ್ನೂ ವಿದ್ಯಾರ್ಥಿಯಾಗಿದ್ದಾಗ, ಸಾಗರದಲ್ಲಿ ನಾಟಕವೊಂದರಲ್ಲಿ ಇವರು ಸ್ತ್ರೀಪಾತ್ರವೊಂದನ್ನು ನಿರ್ವಹಿಸಿದರು.

ನೌಕರಿ ಪಡೆಯುವ ಉದ್ದೇಶದಿಂದ ಮುಂಬಯಿಗೆ ಹೋಗಿ ನೆಲಸಿದ ಇವರಿಗೆ ನಾಟಕದಲ್ಲಿ ಆಸಕ್ತಿ ಬೆಳೆಯುತ್ತಲೇ ಇತ್ತು. ಅಲ್ಲಿಯ ಗಣೇಶೋತ್ಸವದ ಸಂದರ್ಭದಲ್ಲಿ ರಾಮಪಟ್ಟಾಭಿಷೇಕ ಎಂಬ ಮರಾಠೀ ನಾಟಕದಲ್ಲಿ ಸಣ್ಣ ಪಾತ್ರವೊಂದು ಇವರಿಗೆ ದೊರಕಿತು. ಕ್ರಮೇಣ ಇವರು ನಾಟಕಗಳಲ್ಲಿ ಹೆಚ್ಚು ಅಭಿನಯಿಸತೊಡಗಿದರು. ಗೆಳೆಯರೊಂದಿಗೆ ಕೂಡಿ ಸರಸ್ವತಿ

ಅಮೆಚೂರ್ಸ್ ಎಂಬ ಹವ್ಯಾಸಿ ನಾಟಕ ಕಲಾವಿದರ ಸಂಘವನ್ನು ಸ್ಥಾಪಿಸಿದರು.

ಕಾಲ ಸಂದಂತೆ ಇವರ ಕಲಾವಂತಿಕೆ ಅನೇಕ ಲಕ್ಷ್ಯ ಸೆಳೆಯಿತು. ಕೀಚಕ, ಸಂಸಾರ ನೌಕ ಮುಂತಾದ ನಾಟಕಗಳಲ್ಲಿ ಇವರ ಅಭಿನಯ ಮೆಚ್ಚುವಂತಿತ್ತು. ಎಸ್.ಎಲ್. ಭೈರಪ್ಪನವರ ನಾಯಿ ನೆರಳು ಕಾದಂಬರಿಯನ್ನು ರಂಗ ಭೂಮಿಗೆ ಅಳವಡಿಸಿದರು. ಇದು ವಿಶೇಷ ಪ್ರಶಂಸೆ ಗಳಿಸಿತು. ಇವರ ಕೊಂಕಣಿ ಭಾಷೆಯ ಹರಿಶ್ಚಂದ್ರ ಎಂಬ ರೇಡಿಯೋ ನಾಟಕಕ್ಕೆ ಬಹುಮಾನ ಲಭಿಸಿದೆ. ಎಸ್.ಎಲ್. ಭೈರಪ್ಪನವರ ವಂಶವೃಕ್ಷ ಕಾದಂಬರಿಯನ್ನು ಆಧರಿಸಿ ನಿರ್ಮಿಸಲಾದ ಚಲನಚಿತ್ರದಲ್ಲಿ ಇವರು ಪ್ರಧಾನಪಾತ್ರ ವಹಿಸಿ (ಶ್ರೀನಿವಾಸ ಶ್ರೋತ್ರಿ) ಉತ್ತಮ ನಟರೆಂದು ಅಖಿಲ ಭಾರತ ಖ್ಯಾತಿ ಗಳಿಸಿದರು. ಈ ಚಿತ್ರಕ್ಕೆ ವರ್ಷದ ರಾಜ್ಯಮಟ್ಟದ (1971–72) ಅತ್ಯುತ್ತಮ ಚಿತ್ರವೆಂದೂ ಇವರಿಗೆ ಅತ್ಯುತ್ತಮ ನಟನೆಂದೂ ಕೇಂದ್ರ ಪ್ರಶಸ್ತಿಗಳು ದೊರಕಿದುವು. ಈ ಚಿತ್ರದಲ್ಲಿ ಇವರು ತುಂಬ ಅರಿವಿನಿಂದ ಕೂಡಿದ ಹಿತಮಿತ ಅಭಿನಯ ನೀಡಿದ್ದಾರೆ. ಇವರು ಬೂತಯ್ಯನ ಮಗ ಅಯ್ಯು, ಉಪಾಸನೆ, ಆಶೀರ್ವಾದ ಚಿತ್ರಗಳಲ್ಲೂ ಅಭಿನಯಿಸಿದ್ದಾರೆ. ಇವರು 1978ರಲ್ಲಿ ನಿಧನರಾದರು. **(ಎಚ್.ಎಸ್.ಕೆ.)**

**ವೆಂಕಟಲಕ್ಷ್ಮಮ್ಮ, ಕೆ:** 1906–2002. ಸುಪ್ರಸಿದ್ಧ ನೃತ್ಯ ಕಲಾವಿದೆ. ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ತಂಗಲಿ ತಾಂಡ್ಯದ ಬಣಜಾರ್

ಜನಾಂಗದಲ್ಲಿ 1906ರಲ್ಲಿ ಜನಿಸಿದರು. ವಿದ್ಯಾಭ್ಯಾಸ ಸಲುವಾಗಿ ಇವರ ಹಿರಿಯರು ಇವರನ್ನು ಮೈಸೂರಿಗೆ ಕರೆತಂದರು. ಮೈಸೂರಿನಲ್ಲಿ ನಾಟ್ಯಸರಸ್ವತಿ ಎಂದು ಹೆಸರಾಗಿದ್ದ ಜಟ್ಟಿತಾಯಮ್ಮ **(ನೋಡಿ)** ಅವರಲ್ಲಿ ನೃತ್ಯಾಭ್ಯಾಸವನ್ನು ಆರಂಭಿಸಿ 20 ವರ್ಷಗಳ ಕಾಲ ಶಿಕ್ಷಣ ಪಡೆದರು. ಅವರ ನೇತೃತ್ವದಲ್ಲಿಯೇ ಅನೇಕ ವಿದ್ವಾಂಸರುಗಳ ಸಮ್ಮುಖದಲ್ಲಿ ನೃತ್ಯಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮೆಚ್ಚುಗೆಗೆ ಪಾತ್ರರಾದರು. ಇದೇ ಅವಧಿಯಲ್ಲಿ ಆಸ್ಥಾನ್ ವಿದ್ವಾನ್ ಬಿ. ದೇವೇಂದ್ರಪ್ಪನವರಲ್ಲಿಯೂ ಆಸ್ಥಾನ್‌ವಿದ್ವಾನ್

ಚಿಕ್ಕರಾಮ ರಾಯರಲ್ಲಿಯೂ ಸಂಗೀತ ಅಭ್ಯಾಸವನ್ನು ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅವರ ಆಸ್ಥಾನ ವಿದುಷಿಯಾಗಿ ಸುಮಾರು 20 ವರ್ಷಗಳ ಕಾಲ ಸೇವೆಸಲ್ಲಿಸಿದರು.

ಇವರು ಶಾಸ್ತ್ರೀಯವಾದ ಮೈಸೂರು ಸಂಪ್ರದಾಯದ ಭರತನಾಟ್ಯ ಶಿಕ್ಷಣವನ್ನು ನೀಡುವ ಸಲುವಾಗಿ 1954ರಲ್ಲಿ ಭರತ ಕಲಾನಿಕೇತನವೆಂಬ ಸಂಸ್ಥೆಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಪಾಶ್ಚಾತ್ಯ ಮಹಿಳೆಯರೂ ಬಂದು ಇದರಲ್ಲಿ ನೃತ್ಯ ಶಿಕ್ಷಣ ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲೆಗಳ ಕಾಲೇಜನ್ನು ಆರಂಭಿಸಿದಾಗ (1965) ಇವರನ್ನು ನೃತ್ಯ ವಿಭಾಗದ ಉಪಪ್ರಾಧ್ಯಾಪಕರಾಗಿ ನೇಮಿಸಿತು. ಇಲ್ಲಿ ಇವರು 9 ವರ್ಷಗಳ ಕಾಲ ಸೇವೆಸಲ್ಲಿಸಿದ್ದರು.

ವೆಂಕಟಲಕ್ಷ್ಮಮ್ಮನವರು ರಾಜ್ಯಸಂಗೀತ ಅಕಾಡೆಮಿಯ ಸದಸ್ಯರಾಗಿದ್ದರಲ್ಲದೆ ರಾಜ್ಯದ ಹಲವು ಸಂಗೀತ ನೃತ್ಯ ಸಂಸ್ಥೆಗಳೊಂದಿಗೆ ಸಂಪರ್ಕ ವಿಟ್ಟುಕೊಂಡಿದ್ದರು. ರಾಜ್ಯ ಸಂಗೀತ ನಾಟಕ ಅಕಾಡೆಮಿ 1962ರಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರಿನ ಗಾನಕಲಾ ಪರಿಷತ್ತು ಇವರಿಗೆ ನಾಟ್ಯ ವಿಶಾರದೆ ಎಂಬ ಬಿರುದನ್ನಿತ್ತು ಸನ್ಮಾನಿಸಿದೆ. 1964ರಲ್ಲಿ ಇವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಬಂತು. ಮೈಸೂರು ವಿಶ್ವವಿದ್ಯಾನಿಲಯ 1977ರಲ್ಲಿ ಇವರಿಗೆ ಗೌರವ ಡಿ.ಲಿಟ್ ಪದವಿಯನ್ನಿತ್ತು ಗೌರವಿಸಿತು. ಇವರು 2002 ಜುಲೈ 3ರಂದು ನಿಧನರಾದರು. (ಎಂ.ಎಸ್‌ಎ.)

**ವೆಂಕಟಸುಬ್ಬಯ್ಯ:** 1885–1965. ಕರ್ನಾಟಕದ ಪ್ರಸಿದ್ಧ ಪಿಟೀಲು ವಿದ್ವಾಂಸರು. 1885 ಅಕ್ಟೋಬರ್ 5ರಂದು ತಿರುಮಕೂಡಲು ನರಸೀಪುರದಲ್ಲಿ ಜನಿಸಿದರು. ತಂದೆ ಸಂಪಿಗೆರಾಯರು ತುಮಕೂರು ಜಿಲ್ಲೆಯ ಕಡಬ ಗ್ರಾಮದಲ್ಲಿ ಶ್ಯಾನುಭೋಗರಾಗಿದ್ದವರು. ತಾಯಿ ಗುಂಡಮ್ಮ. ವೆಂಕಟ ಸುಬ್ಬಯ್ಯನವರಿಗೆ ಬಾಲ್ಯದಿಂದಲೇ ಸಂಗೀತದಲ್ಲಿ ವಿಶೇಷ ಆಸಕ್ತಿ ಇತ್ತು. ಇವರ ಸಂಗೀತಾಸಕ್ತಿಯನ್ನು ಗಮನಿಸಿದ ತಿರುಮಕೂಡಲು ನರಸೀಪುರದ ಪಿಟೀಲು ವಿದ್ವಾಂಸರಾಗಿದ್ದ ಶಾಮಣ್ಣನವರು ಇವರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಸತತ ಅಭ್ಯಾಸ ಹಾಗೂ ಸಜ್ಜನಿಕೆಗಳಿಂದಾಗಿ ಗುರುಕೃಪೆಗೆ ಪಾತ್ರರಾದ ಇವರು ಮುಂದೆ ಲಾಲ್‌ಗುಡಿ ರಾಮಯ್ಯರ್ ಹಾಗೂ ತಿರುಕ್ಕೋಡಿಕಾವಲ್ ಕೃಷ್ಣ ಅಯ್ಯರ್ ಎಂಬ ವಿದ್ವಾಂಸರುಗಳಿಂದ ಪ್ರಭಾವಿತರಾಗಿ ಅಪ್ರತಿಮ ಪಿಟೀಲು ವಾದಕರೆನಿಸಿದರು. ಗುರುಕುಲವಾಸದ ಬಳಿಕ 1935–36ರಲ್ಲಿ ಇವರ ಚಿಕ್ಕಪ್ಪ ವೆಂಕಟರಾಯರು ಇವರನ್ನು ಮೈಸೂರಿಗೆ ಕರೆಯಿಸಿಕೊಂಡರು.

ಇವರು ತಿರುಮಕೂಡಲು ನರಸೀಪುರದಲ್ಲಿದ್ದಾಗ ಸಂಗೀತಾರಾಧನೆಯೊಂದಿಗೆ ಶ್ಯಾನುಭೋಗ ವೃತ್ತಿಯನ್ನೂ ಮಾಡಿಕೊಂಡಿದ್ದರು. ರಾತ್ರಿ ಹಗಲುಗಳೆನ್ನದೆ ಇವರ ಪಿಟೀಲುವಾದನ ಸಾಧನೆ ನಡೆಯುತ್ತಿತ್ತು. ಕೆಲವೊಮ್ಮೆ ಇವರ ಸಂಗೀತಸುಧೆಯನ್ನು ಸವಿಯಬೇಕೆಂಬ ಉದ್ದೇಶದಿಂದ ಕಲಾಪ್ರಿಯರು ಇವರು ಮಲಗುವ ಕೋಣೆಯಲ್ಲೇ ತಾವೂ ಮಲಗಿ ಸಂಗೀತವನ್ನು ಆಲಿಸುತ್ತಿದ್ದರು.

ಇವರದು ಸಂಕೋಚ ಮತ್ತು ಅಧೈರ್ಯದ ಸ್ವಭಾವ. ಹೆಚ್ಚಾಗಿ ಜನರೊಂದಿಗೆ ಬೆರೆಯುತ್ತಿರಲಿಲ್ಲ. ಆದರೆ ಇವರಿಗಿದ್ದ ಸಂಗೀತ ವಿದ್ಯೆಯಿಂದಾಗಿ ಹಿರಿಯ ವಿದ್ವಾಂಸರೆಲ್ಲ ಇವರಲ್ಲಿ ಗೌರವವನ್ನಿಟ್ಟಿದ್ದರು. ಒಮ್ಮೆ ಮೈಸೂರು ಆಸ್ಥಾನದ ವಿದ್ವಾಂಸರಾಗುವಂತೆ ಮಹಾರಾಜರಿಂದ ಆಹ್ವಾನವೂ ಬಂದಿತ್ತು. ಆದರೆ ಇವರು ಅದನ್ನು ವಿನಯಪೂರ್ವಕವಾಗಿಯೇ ನಿರಾಕರಿಸಿದರು. ಅಂತೆಯೇ ಸ್ವಇಚ್ಛೆಯಿಂದ ನಾಡಿನ ವಿವಿಧೆಡೆಗಳಲ್ಲಿ ಕಾರ್ಯಕ್ರಮ ನೀಡದಿದ್ದರೂ ಗೆಳೆಯರ ಒತ್ತಾಯಕ್ಕೆ ಮಣಿದು ತಿರುಚ್ಚಿರಾಪಳ್ಳಿ, ಮದರಾಸು, ಮೈಸೂರು ಮುಂತಾದ ಸ್ಥಳಗಳಲ್ಲಿ ಸಂಗೀತ ಕಚೇರಿಗಳನ್ನು ನೀಡಿದ್ದರು. ಇವರಿಗೆ 1963, 1964 ಮತ್ತು 1965ರಲ್ಲಿ ಸರ್ಕಾರದ ಪುರಸ್ಕಾರ ಲಭಿಸಿತ್ತು.

ಮೈಸೂರಿಗೆ ಬಂದು ನೆಲಸಿದ ಬಳಿಕ ಮನೆಯಲ್ಲಿ ರಾಮೋತ್ಸವಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಗಾಯನ, ವಾದನ ಕಚೇರಿಗಳನ್ನು ಏರ್ಪಡಿಸುತ್ತಿದ್ದರು. ಇನ್ನಿತರ ದಿನಗಳಲ್ಲಿ ವಿದ್ವಾನ್ ಚನ್ನಕೇಶವಯ್ಯ, ಸೋಸಲೆ ರಾಮದಾಸ ಮೊದಲಾದ ವಿದ್ವಾಂಸರೊಂದಿಗೆ ಸಂಗೀತಾಭ್ಯಾಸ ನಡೆಸುತ್ತಿದ್ದರು. ಇವರು ಸಹಜ ಸಂಗೀತ ಕಲಾವಿದರಾಗಿದ್ದರು. ಇವರ ಸಂಗೀತದಲ್ಲಿ ರಾಗಭಾವಲಯವೈವಿಧ್ಯಗಳು ಜೊತೆಗೂಡಿರುತ್ತಿದ್ದವು. ಸ್ವರಕಲ್ಪನೆಯಲ್ಲಿ, ಅತೀತ–ಅನಾಗತದ ಮಾದರಿಗಳು ಅನಾಯಾಸವಾಗಿ ಮೂಡಿ ಬರುತ್ತಿದ್ದವು. ಹೀಗಾಗಿ ಅಂದಿನ ಹೆಸರಾಂತ ಕಲಾವಿದರಾಗಿದ್ದ ಟೈಗರ್ ವರದಾಚಾರ್ಯ, ಬೇಲೂರು ಕೇಶವದಾಸ, ಸೋಸಲೆ ರಾಮದಾಸ, ಮೈಸೂರು ವಾಸುದೇವಾಚಾರ್ಯ, ಪಿಟೀಲು ಟಿ. ಚೌಡಯ್ಯ, ರಂಗಾಚಾರ್ಯ, ನವರತ್ನ ರಾಮರಾಯ, ವೈಣಿಕ ಶಿಖಾಮಣಿ ವೆಂಟಗಿರಿಯಪ್ಪ, ವೈಣಿಕ ವಿದ್ವಾನ್ ಸುಬ್ಬಣ್ಣ, ಮೃದಂಗ ವಿದ್ವಾನ್ ಟಿ.ಎಂ. ಪುಟ್ಟಸ್ವಾಮಯ್ಯ, ಬಿ.ಕೆ. ಪದ್ಮನಾಭರಾಯ ಇವರೆಲ್ಲ ಇವರ ಪಿಟೀಲು ವಾದನ ಶೈಲಿಯನ್ನು ಬಲು ಮೆಚ್ಚಿಕೊಂಡಿದ್ದರು. ಟೈಗರ್ ವರದಾಚಾರ್ಯರಿಗಂತೂ ಕಚೇರಿಯಲ್ಲಿ ಇವರ ಪಕ್ಕವಾದ್ಯವಿದ್ದರೆ ಮನೋಧರ್ಮ ಉಕ್ಕಿ ಹರಿಯುತ್ತಿತ್ತಂತೆ. ಇವರು ತಮ್ಮ ಮಧುರ ವಾದನ ಶೈಲಿಯಿಂದ ದೇಶ–ವಿದೇಶದವರನ್ನೂ ಆಕರ್ಷಿಸುತ್ತಿದ್ದರು. ಇವರಿಗೆ ಕೀರ್ತಿಕಾಮನೆ ಇರಲಿಲ್ಲ. ಸು. 80 ವರ್ಷಗಳ ಕಾಲ ಬಾಳಿಬದುಕಿದ ಇವರು ಮೈಸೂರಿನಲ್ಲಿದ್ದ ತಮ್ಮ ಕಿರಿಯ ಮಗಳು ಲಕ್ಷ್ಮಮ್ಮನ ಮನೆಯಲ್ಲಿ 1965 ಮಾರ್ಚ್ 21ರಂದು ನಿಧನರಾದರು. ಇವರ ಮಕ್ಕಳು, ಮೊಮ್ಮಕ್ಕಳು ವಂಶವಾಹಿಯಾಗಿ ಬಂದ ಸಂಗೀತವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. *

**ವೆಂಕಟಸುಬ್ಬಯ್ಯ, ಎ.:** 1886–1969. ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ ಸಂಶೋಧಕರು, ಸಂಸ್ಕೃತ ಭಾಷಾ ಪಂಡಿತರು, ಬಹುಭಾಷಾ ವಿಶಾರದರು. ಕನ್ನಡ ಕವಿಗಳ ಜೀವನ ಕಾಲ ವಿಚಾರ ಕುರಿತು ಅದ್ವಿತೀಯ ಕೆಲಸ ಮಾಡಿದವರು. ಇವರ ಪೂರ್ವಿಕರು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಅಂಬಳೆಗೆ ಸೇರಿದವರು; ತಮಿಳು ಮನೆಮಾತಿನ ಬೃಹಚ್ಚರಣಂ ಸ್ಮಾರ್ತ ಬ್ರಾಹ್ಮಣ ಪಂಗಡದವರು. ತಂದೆ ಅಂಬಳೆ ವೆಂಕಟೇಶಯ್ಯ, ತಾಯಿ ಪಾರ್ವತಮ್ಮ. ಈ ದಂಪತಿಗಳ ದೊಡ್ಡಮಗನಾದ ವೆಂಕಟಸುಬ್ಬಯ್ಯನವರು 1886 ಮೇ 26ರಂದು ಮೈಸೂರಿನಲ್ಲಿ ಜನಿಸಿದರು. ತಮ್ಮ ಆರಂಭದ ವಿದ್ಯಾಭ್ಯಾಸವನ್ನು ಮೈಸೂರಿನಲ್ಲೇ ನಡೆಸಿದರು. ಮೈಸೂರಿನ ಮಹಾರಾಜ ಕಾಲೇಜಿನ ಮೂಲಕ ಬಿ.ಎ. ಪದವಿ, ಮದರಾಸು ವಿಶ್ವವಿದ್ಯಾಲಯದಿಂದ ಸಂಸ್ಕೃತ ಎಂ.ಎ. ಪದವಿ, ಬಾಂಬೆ ವಿಶ್ವವಿದ್ಯಾನಿಲಯದಿಂದ ಎಲ್.ಎಲ್.ಬಿ ಪದವಿ ಪಡೆದರು. ಶಿಷ್ಯವೇತನ ಪಡೆದು ಜರ್ಮನಿಗೆ ಹೋಗಿ ಮುಲ್ಲರ್ ಹೆಸ್ ಎಂಬವರ ಮಾರ್ಗದರ್ಶನದಲ್ಲಿ ಸಂಸ್ಕೃತದಲ್ಲಿ ಸಂಶೋಧನೆ ಕೈಗೊಂಡು ಸ್ವಿಟ್ಜರ್‌ಲ್ಯಾಂಡ್‌ನ ಬರ್ನ್

ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದರು (1910). ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಇವರು ಕೆಲಕಾಲ ಕಾಶಿಯ ಸೆಂಟ್ರಲ್ ಹಿಂದು ಕಾಲೇಜಿನಲ್ಲಿ ಅಧ್ಯಾಪಕರಾಗಿ, ಬಳಿಕ ಮೈಸೂರಿನ ಪುರಾತತ್ವ ಇಲಾಖೆಯ ಸಹಾಯಕ ನಿರ್ದೇಶಕರಾಗಿ (ಸು. 1915–22) ಕೆಲಸ ಮಾಡಿದರು. ಎರಡೂ ಕಡೆ ಮೇಲಧಿಕಾರಿಗಳೊಂದಿಗೆ ಹೊಂದಿಕೊಂಡು ಕೆಲಸ ಮಾಡಲು ಸಾಧ್ಯವಾಗದೆ ರಾಜೀನಾಮೆ ಕೊಟ್ಟರು. ಮುಂದೆ ಯಾವುದೇ ಉದ್ಯೋಗ ಮಾಡದೆ ಅಧ್ಯಯನ–ಸಂಶೋಧನೆಗಳಲ್ಲಿ ನಿರತರಾದರು. 16ರ ಹರಯದಲ್ಲೇ ಮದುವೆಯಾಗಿದ್ದು ಆ ತರುಣದಲ್ಲೇ ಹೆಂಡತಿಯನ್ನು ಕಳೆದುಕೊಂಡದ್ದರಿಂದ ಒಂಟಿಯಾಗಿಯೇ ಉಳಿದರು. ಸೋದರರೊಂದಿಗೆ ಜೀವಿಸುತ್ತಿದ್ದ ಇವರು 1969 ಮೇ 6ರಂದು ನಿಧನಹೊಂದಿದರು.

ವೆಂಕಟಸುಬ್ಬಯ್ಯನವರು ಕನ್ನಡದಲ್ಲಿ ಮಾತ್ರವಷ್ಟೇ ಅಲ್ಲ ಸಂಸ್ಕೃತ ಮತ್ತು ಭಾರತೀಯ ವಿದ್ಯೆಗಳಲ್ಲಿ ಒಬ್ಬ ಘನವಿದ್ವಾಂಸರು; ಪ್ರಗಲ್ಭ ಪಂಡಿತರು. ಇವರಿಗೆ ಸಂಸ್ಕೃತ, ಪಾಲಿ–ಪ್ರಾಕೃತ, ತಮಿಳು, ಕನ್ನಡ, ಇಂಗ್ಲಿಷ್, ಜರ್ಮನ್, ಫ್ರೆಂಚ್ ಮತ್ತು ಡಚ್ ಭಾಷೆಗಳ ಪರಿಚಯವಿತ್ತು. ಖರ್ಗೆ, ಅರ್ಟೋಲಾ, ಎಡ್ಗರ್ಟನ್ ಮೊದಲಾದ ಐರೋಪ್ಯ ವಿದ್ವಾಂಸರ ಸಂಪರ್ಕವಿತ್ತು. ವಿಂಟರ್‌ನಿಟ್ಜ್ ಅವರು ಇವರ ಅಭಿಪ್ರಾಯಗಳನ್ನು ಉದ್ಧರಿಸಿದ್ದಾರೆ. ಇವರ ಕೆಲವು ಜರ್ಮನ್ ಭಾಷೆಯ ಲೇಖನಗಳು ಜರ್ಮನ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ; ಅಲ್ಲದೆ ಆ ಕಾಲದ ಅತಿಮುಖ್ಯ ಪತ್ರಿಕೆಗಳಾದ ಇಂಡಿಯನ್ ಆ್ಯಂಟಿಕ್ವೆರಿ, ಇಂಡಿಯನ್ ಕಲ್ಚರ್, ಪೂನಾ ಓರಿಯಂಟಲಿಸ್ಟ್, ಅನಲ್ಸ್ ಆಫ್ ದಿ ಭಂಡಾರ್ಕರ್ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಏಷ್ಯ ಮೇಜರ್ ಮುಂತಾದವುಗಳಲ್ಲಿ ಇವರ 60ಕ್ಕೂ ಹೆಚ್ಚು ಲೇಖನಗಳು ಬೆಳಕು ಕಂಡಿವೆ. ಇದು ಇವರ ನಿರಂತರ ವ್ಯಾಸಂಗದ, ವಿದ್ವತ್ತಿನ ಸಾಕ್ಷ್ಯಗಳು.

ದಿ ಕಲಾಸ್, ಸಮ್ ಶಕಡೇಟ್ಸ್ ಇನ್ ಇನ್‌ಸ್ಕ್ರಿಪ್ಷನ್ಸ್, ವೇದಿಕ್ ಸ್ಟಡೀಸ್, ಕಾಂಟ್ರಿಬ್ಯೂಷನ್ಸ್ ಟು ದಿ ಇಂಟರ್‌ಪ್ರಿಟೇಷನ್ ಆಫ್ ದಿ ಋಗ್ವೇದ– ಇವು ಇವರ ಇಂಗ್ಲಿಷ್ ಗ್ರಂಥಗಳು. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ಮನುಧರ್ಮಸಾರ, ವೇದಾರ್ಥ ಮೀಮಾಂಸೆ ಇವರ ಕನ್ನಡ ಗ್ರಂಥಗಳು. ಸಹಲೇಖಕರಾಗಿ ಎಸ್ಸೇಸ್ ಆನ್ ಗೀತಾ ಎಂಬ ಅರವಿಂದರ ಗ್ರಂಥವನ್ನು ಇವರು ಅನುವಾದಿಸಿದ್ದಾರೆ. ಈ ಎಲ್ಲವುಗಳಲ್ಲೂ ಕಂಡುಬರುವುದು ಆರ್ಷೇಯ ವಿದ್ವತ್ತು, ವೇದಾರ್ಥ ವಿಚಾರ, ಪಂಚತಂತ್ರ ಪಾಠ ಸಂಪ್ರದಾಯ, ಜ್ಯೋತಿರ್ವಿಜ್ಞಾನ ಮತ್ತು ಕಾಲಗಣನೆಯ ವಿಧಾನಗಳು, ಕನ್ನಡ ಕವಿಗಳ ಮತ–ಕಾಲ ವಿಷಯ ಇವರು ಪ್ರಧಾನವಾಗಿ ಕೆಲಸಮಾಡಿದ ಕ್ಷೇತ್ರಗಳು. 350 ವೈದಿಕ ಸಾಹಿತ್ಯ ಶಬ್ದಗಳ ಅರ್ಥವನ್ನು ಇವರು ವಿವರಿಸಿದ್ದಾರೆ. ವಸುಭಾಗಭಟ್ಟನ ಪಂಚತಂತ್ರ ಸ್ವರೂಪವನ್ನೂ ಅದರ ಪಾಠಸಂಪ್ರದಾಯವನ್ನೂ ನಿರ್ಧರಿಸಿದ್ದಾರೆ. ರಾಜಾದಿತ್ಯ, ದುರ್ಗಸಿಂಹ, ಚಂದ್ರರಾಜ, ಕರ್ಣಪಾರ್ಯ, ನೇಮಿಚಂದ್ರ, ಮಲ್ಲಿಕಾರ್ಜುನ, ಶಿಶುಮಾಯಣ ಮುಂತಾದ ಕನ್ನಡ ಕವಿಗಳ ಬಗೆಗಿನ ಆರ್. ನರಸಿಂಹಾಚಾರ್ಯರ ಅಭಿಪ್ರಾಯಗಳನ್ನು ಮರುಪರಿಶೀಲನೆಗೆ ಗುರಿಮಾಡಿದ್ದಾರೆ. ಶಾಸನ–ಚರಿತ್ರೆ, ಭಾಷೆ–ಸಾಹಿತ್ಯ, ಛಂದಸ್ಸು–ಗ್ರಂಥ ಸಂಪಾದನೆ ಹೀಗೆ ನಾನಾ ಕ್ಷೇತ್ರಗಳಲ್ಲಿ ಕಲಸಮಾಡಿದ್ದಾರೆ. "ನಮ್ಮ ನಾಡಿನ ಮತ್ತು ಇಡೀ ಭರತಖಂಡದ ವಿಖ್ಯಾತ ವಿದ್ವಾಂಸರ ಶ್ರೇಣಿಯಲ್ಲಿ ದಿವಂಗತ ಡಾ.ಎ. ವೆಂಕಟಸುಬ್ಬಯ್ಯನವರು ಅಗ್ರಗಣ್ಯರಾಗಿದ್ದರು. ಅವರು ದೇಶ ವಿದೇಶಗಳ ಸಂಸ್ಕೃತ ವಿದ್ವಜ್ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿ ಕೊಂಡಿದ್ದರು. ಅವರ ಸಂಶೋಧನೆಗಳಲ್ಲಿ ಪ್ರಮಾಣಭೂತವಾದವು ಬಹುಸಂಖ್ಯೆಯಲ್ಲಿ ಅಂಗೀಕೃತವಾಗಿವೆ. 'ಪಂಚತಂತ್ರ'ದ ಸಾಹಿತ್ಯವನ್ನು ಕುರಿತ ಅವರ ಅನೇಕ ಲೇಖನಗಳು ಪ್ರಸಿದ್ಧವಾಗಿವೆ. ಆ ವಿಷಯದಲ್ಲಿ ಅವರು ಇಡೀ ಪ್ರಪಂಚದಲ್ಲಿ ಅಧಿಕಾರವಾಣಿಯಿಂದ ಮಾತಾಡುವ ಕೆಲವೇ ವಿದ್ವಾಂಸರಲ್ಲಿ ಮೊದಲಿಗರಾಗಿದ್ದರು" ಎಂಬ ಡಿ.ಎಲ್. ನರಸಿಂಹಾಚಾರ್ಯರ ಮಾತುಗಳು ಇವರ ಹಿರಿಮೆ ಮತ್ತು ಮಹತ್ವ ಹೇಳುತ್ತವೆ. (ಎನ್.ಎಸ್.ಟಿ.)

**ವೆಂಕಟಸುಬ್ಬಯ್ಯ, ಪಿ.:** 1921– . ಕರ್ನಾಟಕದ ಮಾಜಿ ರಾಜ್ಯಪಾಲರು ಹಾಗೂ ಸ್ವಾತಂತ್ರ್ಯ ಹೋರಾಟಗಾರರು. ವೆಂಕಟಸುಬ್ಬಯ್ಯ ಪೆಂಡೆಕಂಟಿ ಇವರ ಪೂರ್ಣ ಹೆಸರು. ಆಂಧ್ರ ಪ್ರದೇಶದ ಬಂಗಾನ ಪಲ್ಲಿಯಲ್ಲಿ 1921 ಜೂನ್ 18ರಂದು ಜನಿಸಿದರು. ತಂದೆ ಪಿ. ಸುಬ್ಬಯ್ಯ, ತಾಯಿ ಕನಕಮ್ಮ. ವಿದ್ಯಾರ್ಥಿದೆಸೆಯಲ್ಲಿ ಇವರು ಭಾರತ ಬಿಟ್ಟು ತೊಲಗಿ (1942)

ಚಳವಳಿಯಲ್ಲಿ ಭಾಗವಹಿಸಿದ್ದರು. ತಮ್ಮ ಹುಟ್ಟೂರಿನಲ್ಲಿ ರಾಜ್ಯ ಕಾಂಗ್ರೆಸ್ ಅನ್ನು ಸ್ಥಾಪಿಸಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸ್ವಾತಂತ್ರ್ಯಾನಂತರ ಭಾರತ ಒಕ್ಕೂಟದಲ್ಲಿ ಹೈದರಾಬಾದ್ ಸಂಸ್ಥಾನ ವಿಲೀನಗೊಳ್ಳುವುದರ ಪರವಾಗಿಯೂ ದುಡಿದರು (1948). ಸಹಕಾರಿ ಆಂದೋಲನ ಹಾಗೂ ವಿವಿಧ ಸಂಘಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಸಹಕಾರಿ ಧುರೀಣ ಎನಿಸಿಕೊಂಡರು. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಅಖಿಲಭಾರತ (ಒ) ಕಾಂಗ್ರೆಸ್ ಸಮಿತಿ– ಇವುಗಳ ಪ್ರಧಾನ ಕಾರ್ಯದರ್ಶಿಯಾಗಿ ದಕ್ಷತೆಯಿಂದ ಕೆಲಸ ಮಾಡಿದರು (1969–71).

ಮದರಾಸು ವಿಧಾನಸಭೆಯ ಸದಸ್ಯರಾಗಿದ್ದ (1949–52) ಇವರು ಲೋಕಸಭೆಯ ಸದಸ್ಯರಾಗಿಯೂ (1957 ಹಾಗೂ 1984) ಆಯ್ಕೆಗೊಂಡರು. ಕೇಂದ್ರ ಸರ್ಕಾರದಲ್ಲಿ ಗೃಹ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದರು. ಅನಂತರ ಬಿಹಾರದ ರಾಜ್ಯಪಾಲರಾಗಿ (1985–88), ಕರ್ನಾಟಕದ ರಾಜ್ಯಪಾಲರಾಗಿ (1988–90) ಸೇವೆಸಲ್ಲಿಸಿದರು. (ಟಿ.ಜಿ.)

**ವೆಂಕಟಾಚಲ, ಎನ್.:** 1930– . ಕರ್ನಾಟಕದ ಮಾಜಿ ಲೋಕಾಯುಕ್ತರು, ಸರ್ವೋಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು. ಇವರು 1930 ಜುಲೈ 3ರಂದು ಕೋಲಾರ ಜಿಲ್ಲೆ ಮುಳಬಾಗಲು ತಾಲ್ಲೂಕಿನ ಮಿಟ್ಟೂರು ಗ್ರಾಮದಲ್ಲಿ ಜಮೀನುದಾರ ಮನೆತನದಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ನಂಜೇಗೌಡ ವೆಂಕಟಾಚಲ, ಅನಸೂಯ ಇವರ ಪತ್ನಿ. ಇವರು ಮಿಟ್ಟೂರು, ಕೋಲಾರ, ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ ಬಿಎಸ್.ಸಿ. ಪದವಿ ಪಡೆದ ಅನಂತರ ಬೆಂಗಳೂರಿನ ಸರಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದು, ಮೈಸೂರು ಉಚ್ಚನ್ಯಾಯಾಲಯದಲ್ಲಿ ವಕೀಲ ವೃತ್ತಿ ಆರಂಭಿಸಿದರು (1955). ವಕೀಲ ವೃತ್ತಿಯ ಜೊತೆಗೆ ಉಪನ್ಯಾಸಕರಾಗಿಯೂ ಕೆಲಸ ಮಾಡಿದರು. ಸರ್ಕಾರಿ ವಕೀಲರಾಗಿ ಸೇವೆಸಲ್ಲಿಸುತ್ತಿದ್ದ ಇವರು ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡರು (1977 ನವೆಂಬರ್ 28). ಅನಂತರ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದರು (1992 ಜುಲೈ 3). ನಿವೃತ್ತಿಯ ತರುವಾಯ ಬೆಂಗಳೂರಿಗೆ ಬಂದು ನೆಲಸಿದ ಇವರ ಶಿಸ್ತು, ನ್ಯಾಯನಿಷ್ಠುರತೆ,

ಪ್ರಾಮಾಣಿಕತೆ, ಆಳವಾದ ವ್ಯಾಸಂಗ, ಸಾಮಾಜಿಕ ಕಾಳಜಿಯನ್ನು ಗಮನಿಸಿ ಕರ್ನಾಟಕ ಸರ್ಕಾರ ಇವರನ್ನು ಲೋಕಾಯುಕ್ತರನ್ನಾಗಿ ನೇಮಿಸಿತು.

ಲೋಕಾಯುಕ್ತರಾದ ಇವರು ಭ್ರಷ್ಟಾಚಾರದ ವಿರುದ್ಧ ಬಹಿರಂಗವಾಗಿ ದನಿಯೆತ್ತಿದರು. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಓಡಾಡಿ ಆಸ್ಪತ್ರೆ, ಸರ್ಕಾರಿ, ಖಾಸಗಿ, ಅರೆಖಾಸಗಿ ಕಚೇರಿಗಳು, ಶಾಲೆಗಳು ಮೊದಲಾದ ಸ್ಥಳಗಳ ಭ್ರಷ್ಟಾಚಾರದ ವಿವಿಧ ರೂಪಗಳನ್ನು ಬಯಲಿಗೆಳೆದರು. ಅನೇಕ ಭ್ರಷ್ಟ ಅಧಿಕಾರಿಗಳ ಲೆಕ್ಕಕ್ಕೆ ಸಿಗದ ಆಸ್ತಿಪಾಸ್ತಿಗಳನ್ನು ಹೊರಕ್ಕೆ ತೆಗೆದರು. ಭ್ರಷ್ಟಾಚಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಸೇವೆಯಿಂದ ಅಮಾನತು ಗೊಳಿಸಲು ಶಿಫಾರಸು ಮಾಡಿದರು. ಬೆಂಗಳೂರಿನ ಸುತ್ತಮುತ್ತ ಇರುವ ಐದು ನಗರ ಸಭೆಗಳಲ್ಲಿ ನಡೆದ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ಬಯಲಿಗೆಳೆದರು. ಇವರ ಕಾರ್ಯವೈಖರಿಯನ್ನು ವಿರೋಧಿಸಿದವರೂ ಕೊನೆಗೆ ಇವರ ಕ್ಷಮೆ ಕೇಳುವಂತಾಯಿತು. ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡದಿದ್ದರೆ ಅದರ ಸ್ಥಾಪನೆಯ ಉದ್ದೇಶ ಸಫಲವಾಗದು ಎಂದು ಪ್ರತಿಪಾದಿಸಿದರು. ಇವರು ಭ್ರಷ್ಟಾಚಾರ ರಹಿತ ಶುದ್ಧ ಸಮಾಜ ನಿರ್ಮಾಣಕ್ಕಾಗಿ ಸಮಾಜದಲ್ಲಿ ಜಾಗೃತಿ ಉಂಟುಮಾಡಿದವರು. ಈಗ ನಿವೃತ್ತರಾಗಿರುವ (2006) ಇವರು 2005ರ ವರ್ಷದ ಕನ್ನಡಿಗರಾಗಿ ಆಯ್ಕೆಗೊಂಡಿದ್ದಾರೆ.

**(ಎಸ್.ಎಂ.ಕೆ.)**

**ವೆಂಕಟಾಚಲಶಾಸ್ತ್ರೀ, ಟಿ.ವಿ.:** 1933–. ಕನ್ನಡ ಭಾಷೆ–ಸಾಹಿತ್ಯಗಳ ಹೆಸರಾಂತ ವಿದ್ವಾಂಸರು; ಸಂಶೋಧಕರು, ಗ್ರಂಥ ಸಂಪಾದನಕಾರರು. 1933 ಆಗಸ್ಟ್ 26 ರಂದು ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿ ಜನಿಸಿದರು. ಇವರ ಪೂರ್ಣಹೆಸರು ತೋಗರೆ ವೆಂಕಟಸುಬ್ಬಶಾಸ್ತ್ರಿ ವೆಂಕಟಾಚಲಶಾಸ್ತ್ರೀ. ತಂದೆ ವೆಂಕಟಸುಬ್ಬಶಾಸ್ತ್ರಿ, ತಾಯಿ ಸುಬ್ಬಮ್ಮ. ವ್ಯಾಸಂಗ ಪ್ರಿಯರಾಗಿದ್ದ ತಂದೆಯವರು ಅಧ್ಯಾತ್ಮಜೀವಿಗಳಾಗಿದ್ದು ರಾಮಕೃಷ್ಣ–ವಿವೇಕಾನಂದರ ಸಾಹಿತ್ಯವನ್ನು ವ್ಯಾಪಕವಾಗಿ ಅಭ್ಯಾಸ ಮಾಡಿದ್ದರು. ಮನೆಯಲ್ಲಿದ್ದ ಸಾಂಸ್ಕೃತಿಕ ವಾತಾವರಣ ಹಾಗೂ ತಂದೆಯವರ ವ್ಯಾಸಂಗ ಮನೋಧರ್ಮಗಳು ಬಾಲ್ಯದಿಂದಲೂ ಶಾಸ್ತ್ರಿಗಳ ಮೇಲೆ ಪ್ರಭಾವ, ಪರಿಣಾಮಗಳನ್ನು ಬೀರಿದವು. ಶ್ರಮನಿಷ್ಠ ವ್ಯಾಸಂಗ, ಅಧ್ಯಯನಾಸಕ್ತಿಗಳನ್ನು ಬಾಲ್ಯದಿಂದಲೇ ರೂಢಿಸಿಕೊಂಡ ಇವರು ಮುಂದೆ ಘನವಿದ್ವಾಂಸರಾಗಿದ್ದ ಡಿ.ಎಲ್.ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ ಮೊದಲಾದವರ ಸಾನ್ನಿಧ್ಯ–ಸಂಪರ್ಕಗಳನ್ನು ಪಡೆದು ಅದೇ ಮಾರ್ಗದಲ್ಲಿಯೇ ಮುಂದುವರಿದರು. ಹಳಗನ್ನಡ ಶಬ್ದಗಳ ರೂಪ, ಅರ್ಥ, ಲಯಗಳ ಒಬ್ಬ ಅಪೂರ್ವ ಚಿಂತಕರಾಗಿ, ಶಬ್ದಶಾಸ್ತ್ರಜ್ಞರಾಗಿ ಬೆಳೆದರು.

ಇವರು ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾವ್ಯಾಸಂಗಗಳನ್ನು ಕನಕಪುರದಲ್ಲಿ ನಡೆಸಿದರು. ಇಂಟರ್‌ಮೀಡಿಯಟ್, ಬಿ.ಎ. ಆನರ್ಸ್ ಹಾಗೂ ಕನ್ನಡ ಎಂ.ಎ. ಪದವಿಗಳನ್ನು ಮೈಸೂರಿನ ಯುವರಾಜ, ಮಹಾರಾಜ ಕಾಲೇಜುಗಳಲ್ಲಿ ಅಧ್ಯಯನ ಮಾಡಿ ಗಳಿಸಿದರು. ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ ಎಂಬುದು ಇವರಿಗೆ ಪಿಎಚ್.ಡಿ. ಪದವಿ ಗಳಿಸಿಕೊಟ್ಟ ಮಹಾಪ್ರಬಂಧ(1973). ಕನಕಪುರ ರೂರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ (1955–56) ವೃತ್ತಿಯನ್ನು ಆರಂಭಿಸಿದ ಇವರು ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜು (1957–59), ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದ ಮಹಿಳಾ ಕಾಲೇಜು ಮತ್ತು ಆರ್ಟ್ಸ್‌ಕಾಲೇಜುಗಳಲ್ಲಿ (1959–68)ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ 1968ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾದರು. ಅನಂತರ ರೀಡರ್, ಪ್ರೊಫೆಸರ್ ಆಗಿ, ಸಂಸ್ಥೆಯ ನಿರ್ದೇಶಕರಾಗಿ(1991–93), ಕಲಾವಿಭಾಗದ ಡೀನ್ ಆಗಿ(1992–93) ನಿವೃತ್ತರಾದರು(1994). ಸು.40 ವರ್ಷಗಳ ಸುದೀರ್ಘ ಬೋಧನಾನುಭವ ಇವರದು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ(1997) ಸೇವೆಸಲ್ಲಿಸಿ ದರು. ಇವರ ಬಹುಮುಖ್ಯ ಆಸಕ್ತಿಯ ಕ್ಷೇತ್ರ ಕನ್ನಡ ಭಾಷೆ, ಛಂದಸ್ಸು, ಗ್ರಂಥಸಂಪಾದನೆ, ನಿಘಂಟು ರಚನೆ, ಸಾಹಿತ್ಯಚರಿತ್ರೆ ಮೊದಲಾದ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದೆ.

ಮೈಸೂರು ವಿಶ್ವವಿದ್ಯಾನಿಲಯ ಹೊರತರುತ್ತಿರುವ ಪ್ರಬುದ್ಧ ಕರ್ಣಾಟಕ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿ(1970–75), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿದ ಕನ್ನಡ ಸಾಹಿತ್ಯ ಚರಿತ್ರೆಯ ಸಂಪಾದಕರಾಗಿ (1972–94), ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕರಣ ಮತ್ತು ಪುನರ್‌ಮುದ್ರಣ ಯೋಜನೆಯ ಗೌರವ ಸಮಾಲೋಚಕರಾಗಿ(1973–93), ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಸಮಿತಿಯ ಸದಸ್ಯರಾಗಿ(1976–95), ಮೈಸೂರು ವಿಶ್ವವಿದ್ಯಾನಿಲಯದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂಪುಟದ ಸಂಪಾದಕೀಯ ಸಲಹಾ ಸಮಿತಿಯ ಸದಸ್ಯರಾಗಿ (1978–79), ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಕರ್ನಾಟಕ ಲೋಚನದ (ತ್ರೈಮಾಸಿಕ) ಸಂಪಾದಕೀಯ ಸಮಿತಿಯ ಸದಸ್ಯರಾಗಿ (1982–92), ಇದೇ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ(1992), ಅಧ್ಯಕ್ಷರಾಗಿ(2001–06) ಬಹುಭಾಷಾ ನಿಘಂಟು ಯೋಜನೆ, ಏಷ್ಯನ್ ಅಧ್ಯಯನಗಳ ಸಂಸ್ಥೆ, ಚೆನ್ನೈ ಇದರ ಸಂಪಾದಕೀಯ ಸಲಹಾ ಸಮಿತಿಯ ಸದಸ್ಯರಾಗಿ(1988), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಇದರ ಜನಪ್ರಿಯ ಪ್ರಾಚೀನ ಸಾಹಿತ್ಯ ಮಾಲೆಯ ಸಲಹಾಸಮಿತಿಯ ಸದಸ್ಯರಾಗಿ(1992), ಕೇಂದ್ರ ಸಾಹಿತ್ಯ ಅಕಾಡೆಮಿಯ ಸಾಮಾನ್ಯಸಭೆ ಮತ್ತು ಸಲಹಾ ಸಮಿತಿಯ ಸದಸ್ಯರಾಗಿ(1992), ಶ್ರವಣ ಬೆಳಗೊಳದ ಪ್ರಾಕೃತಅಧ್ಯಯನ ಮತ್ತು ಸಂಶೋಧನ ರಾಷ್ಟ್ರೀಯ ಸಂಸ್ಥೆಯ ನಿರ್ದೇಶಕಮಂಡಲಿಯ ಸದಸ್ಯರಾಗಿ (1993), ಭುವನೇಶ್ವರದ ರಾಷ್ಟ್ರೀಯ ವಿಶ್ವಕೋಶ ಕೇಂದ್ರದ ಸಲಹಾಸಮಿತಿಯ ಸದಸ್ಯರಾಗಿ(1993), ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಾಚೀನ ಭಾರತೀಯ ಸಾಹಿತ್ಯ ಸಂಕಲನ ಯೋಜನೆಯ ಕನ್ನಡ ಭಾಷಾ ಸಂಪಾದಕರಾಗಿ(1993–95), ಕನ್ನಡ

ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ–ಇಂಗ್ಲಿಷ್ ನಿಘಂಟು, ಸಂಪುಟ–1 ಈ ಯೋಜನೆಯ ಪ್ರಧಾನ ಸಂಪಾದಕರಾಗಿ(1998),ಮೈಸೂರು ಮುಲಕನಾಡು ಸಭೆಯ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾಗಿ (1999–2001), ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಕಾವ್ಯಗಳಲ್ಲಿ ಅಲಂಕಾರಗಳು ಸಂಪುಟ ಯೋಜನೆಯ ಸಂಪಾದಕ ಸಮಿತಿಯ ಸದಸ್ಯರಾಗಿ(2003), ಕೇಂದ್ರ ಸಾಹಿತ್ಯಅಕಾಡೆಮಿಯ ಲ್ಯಾಂಗ್ವೇಜ್ ಡೆವಲಪ್‌ಮೆಂಟ್ ಬೋರ್ಡಿನ ಸದಸ್ಯರಾಗಿ(2006), ಕರ್ನಾಟಕ ಸರ್ಕಾರದ ಗೆಜೆಟಿಯರ್ ಇಲಾಖೆಯ ಸುವರ್ಣ ಕರ್ನಾಟಕ ಸಂಪುಟಗಳ ಪ್ರಕಟಣಾ ಯೋಜನೆಯ ಸದಸ್ಯರಾಗಿ (2005–06), ಹಂಪಿ ಕನ್ನಡ ವಿಶ್ವವಿದ್ಯಾಲಯದ ಜೈನ ಸಂಪುಟಗಳ ಯೋಜನೆಯ ಸಲಹಾಸಮಿತಿಯ ಸದಸ್ಯರಾಗಿ(2005–06)ಸೇವೆ ಸಲ್ಲಿಸಿದ್ದಾರೆ.

ಇವರು ಸಾಹಿತ್ಯಚರಿತ್ರೆ, ವ್ಯಾಕರಣ, ಗ್ರಂಥಸಂಪಾದನೆ, ಛಂದಸ್ಸು, ಕಾವ್ಯಮೀಮಾಂಸೆ, ನಿಘಂಟು, ವಿಮರ್ಶೆ ಮೊದಲಾದ ಪ್ರಕಾರಗಳಲ್ಲಿ ವಿಪುಲವಾಗಿ ಕೆಲಸಮಾಡಿದ್ದಾರೆ; ಅನೇಕ ಜೀವನಚರಿತ್ರೆಗಳನ್ನು ಬರೆದಿದ್ದಾರೆ; ನಾಟಕಗಳನ್ನು ಅನುವಾದಿಸಿದ್ದಾರೆ; ಪ್ರಬಂಧಗಳನ್ನು ರಚಿಸಿದ್ದಾರೆ. ನೂರಾರು ಉಪನ್ಯಾಸಗಳನ್ನು ನೀಡಿದ್ದಾರೆ. ಇವರು ರಚಿಸಿರುವ ಒಟ್ಟು ಕೃತಿಗಳ ಸಂಖ್ಯೆ 75ರ ಗಡಿಯನ್ನು ದಾಟಿದೆ. ಬದ್ಧಪ್ರಮೀತ್ಯೂಸ್(ಅನು, 1966), ಎ ಬಿಬ್ಲಿಯಾಗ್ರಫಿ ಆಫ್ ಕರ್ನಾಟಕ ಸ್ಟಡೀಸ್(1966), ಕನ್ನಡ ಛಂದಸ್ಸು(1970), ಶ್ರೀವತ್ಸ ನಿಘಂಟು(1971), ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ (1972), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯಚರಿತ್ರೆಯ 5 ಸಂಪುಟಗಳು(1974–77, 1981), ಟ್ರಾಕಿಯ ಪೆಣ್ಗಳ್(ಅನು, 1978), ಮಹಾಮಹೋಪಾಧ್ಯಾಯ ಡಾ.ಆರ್. ಶಾಮಶಾಸ್ತ್ರಿ(1980), ಪ್ರಾಚೀನ ಕನ್ನಡ ಸಾಹಿತ್ಯ ಕೆಲವು ನೋಟಗಳು(1981), ಹೊಸಗನ್ನಡ ಸಾಹಿತ್ಯ ಕೆಲವು ನೋಟಗಳು(1982), ಪಂಪ(1983), ಸಾಹಿತ್ಯಶಿಲ್ಪಿಗಳು(1985), ಎಸ್.ಜಿ. ನರಸಿಂಹಾಚಾರ್ಯರ ಕವಿತೆಗಳು(1986), ಕನ್ನಡ ಚಿತ್ರಕಾವ್ಯ(1987), ಮೆಲುಗಾಳಿಯ ಮಾತುಗಳು (1990), ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ(1990), ಹೊಸಗನ್ನಡ ವ್ಯಾಕರಣ(1990), ಕನ್ನಡ ರಾಮಾಯಣ ಗ್ರಂಥಸೂಚಿ (1997), ಎ.ಆರ್.ಕೃಷ್ಣಶಾಸ್ತ್ರೀ (2000), ಅರ್ಧನೇಮಿ ಪುರಾಣಕಥಾಸಾರ, ವಸ್ತುವಿಮರ್ಶೆ(2002), ಕನ್ನಡ ಛಂದೋಮೀಮಾಂಸೆ(2003), ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರ ಪೂರ್ವಜರು(2004), ಆಪ್ತರು ಆಚಾರ್ಯರು(2005), ಪಂಪ ಸಂಪುಟ(2006), ನಾಗವರ್ಮನ ಛಂದೋಂಬುಧಿ(2007) ಇವು ಇವರ ಕೆಲವು ಗಮನಾರ್ಹ ಕೃತಿಗಳು.

ಇವರ ಸಾಹಿತ್ಯ ಸೇವೆಗೆ ಸಂದಿರುವ ಪ್ರಶಸ್ತಿ, ಸನ್ಮಾನ, ಗೌರವಗಳು ಅನೇಕ. ಅವುಗಳಲ್ಲಿ ಮುಖ್ಯವಾಗಿ ಕರ್ನಾಟಕ ಸರ್ಕಾರದ ರಾಜ್ಯಪ್ರಶಸ್ತಿ (1988), ಕನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(1997), ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಸಮ್ಮಾನ್ ಪ್ರಶಸ್ತಿ(2002), ಕನ್ನಡ ಸಾಹಿತ್ಯ ಪರಿಷತ್ತಿನ ಚಾವುಂಡರಾಯ ಪ್ರಶಸ್ತಿ(2003), ಆರ್ಯಭಟ ಪ್ರಶಸ್ತಿ(2007)– ಇವುಗಳನ್ನು ಹೆಸರಿಸಬಹುದು. ಅನೇಕ ಸಂಘ ಸಂಸ್ಥೆಗಳು ಇವರ ಸಾಹಿತ್ಯಸೇವೆ ಹಾಗೂ ಸಂಶೋಧನೆಗಳಿಗಾಗಿ ಇವರನ್ನು ಪುರಸ್ಕರಿಸಿ ಸನ್ಮಾನಿಸಿವೆ. ವಿದ್ವಾಂಸ ರತ್ನ, ಪಾಂಡಿತ್ಯವೀರ, ಶಬ್ದಶಾಸ್ತ್ರಜ್ಞ ಮೊದಲಾದ ಬಿರುದುಗಳನ್ನು ವಿದ್ವಜ್ಜನರು ನೀಡಿ ಗೌರವಿಸಿದ್ದಾರೆ. ಕನಕಪುರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ(1991), ಮೈಸೂರು ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಜಯಪುರ(1995), ಧರ್ಮಸ್ಥಳದ 70ನೆಯ ಕ್ಷೇತ್ರ ಸಾಹಿತ್ಯ ಸಮ್ಮೇಳನಗಳ (2002) ಅಧ್ಯಕ್ಷರಾಗಿ ಇವರು ಗೌರವಕ್ಕೆ ಪಾತ್ರರಾಗಿದ್ದಾರೆ.

ಶಾಸ್ತ್ರಿಗಳದ್ದು ವ್ಯರ್ಥ ಊಹೆಗಳಿಲ್ಲದ, ಪಕ್ಷಪಾತ, ಕೃಪಣತೆ, ಅಪ್ರಾಮಾಣಿಕತೆಗಳು ಇಣುಕದ ಶ್ರೇಷ್ಠ ಸಂಶೋಧನ ಮನೋಧರ್ಮ. ಹಳಗನ್ನಡ ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು ಮೊದಲಾದ ಕ್ಷೇತ್ರಗಳಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲ ಕೆಲವೇ ಜನ ವಿದ್ವಾಂಸರಲ್ಲಿ ಇವರ ಹೆಸರೂ ಒಂದು. *

**ವೆಂಕಟಾಚಾರ್ಯ, ಬಿ.:** 1845–1914. ಬಂಗಾಲಿ ಭಾಷೆಯ ಅನೇಕ ಕಾದಂಬರಿಗಳನ್ನು ಕನ್ನಡಕ್ಕೆ ತಂದ ಹೆಸರಾಂತ ಲೇಖಕರು. ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕು ಬಿಂಡಿಗನವಿಲೆಯವರು. ಚಿತ್ರದುರ್ಗ ಹಾಗೂ ತುಮಕೂರುಗಳಲ್ಲಿ ವ್ಯಾಸಂಗಮಾಡಿದ ಇವರು ಆಗಿನ ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೈಸೂರು ಸರ್ಕಾರದ ಕಂದಾಯ

ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ನಂಜನಗೂಡು, ಚಿಕ್ಕಬಳ್ಳಾಪುರ, ಕೋಲಾರ, ಮೈಸೂರು ಮುಂತಾದ ಸ್ಥಳಗಳಲ್ಲಿ ಜಿಲ್ಲಾ ಕೋರ್ಟ್ ಶಿರಸ್ತೇದಾರರಾಗಿ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರಾಗಿ ಕೆಲಸಮಾಡಿ ನಿವೃತ್ತರಾದರು (1912).

ಸ್ವಭಾವತಃ ಕಾವ್ಯಶಾಸ್ತ್ರ ವಿನೋದಿಯಾಗಿದ್ದ ಆಚಾರ್ಯರು ಯಾವುದೋ ಒಂದು ಸಂದರ್ಭದಲ್ಲಿ ಬಂಗಾಲಿ ಭಾಷೆಗೆ ಒಲಿದು, ಈಶ್ವರಚಂದ್ರ ವಿದ್ಯಾಸಾಗರ ನೆರವಿನಿಂದ ಆ ಭಾಷೆ ಮತ್ತು ಸಾಹಿತ್ಯವನ್ನು ಅಭ್ಯಸಿಸಿದರು. ವಿರಾಮಸಾಧನವಾಗಿದ್ದ ಇವರ ಸಾಹತ್ಯವ್ಯಾಸಂಗ ಮುಂದೆ ಕೃತಿರಚನೆಗೆ ಸ್ಪೂರ್ತಿಯನ್ನು ಒದಗಿಸಿತು. ಪ್ರಯೋಗಾರ್ಥವಾಗಿ ಇವರು ವಿದ್ಯಾಸಾಗರರ ನೆರವಿನಿಂದ ಆ ಭಾಷೆ ಮತ್ತು ಸಾಹಿತ್ಯವನ್ನು ಅಭ್ಯಸಿಸಿದರು. ವಿರಾಮ ಸಾಧನವಾಗಿದ್ದ ಇವರ ಸಾಹಿತ್ಯವ್ಯಾಸಂಗ ಮುಂದೆ ಕೃತಿರಚನೆಗೆ ಸ್ಫೂರ್ತಿಯನ್ನು ಒದಗಿಸಿತು. ಪ್ರಯೋಗಾರ್ಥವಾಗಿ ಇವರು ವಿದ್ಯಾಸಾಗರರ ಭ್ರಾಂತಿವಿಲಾಸ ಎಂಬ ಕಾದಂಬರಿಯನ್ನು ಕನ್ನಡಿಸಿದರು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅದೊಂದು ಹೊಸ ಹೆಜ್ಜೆಯಾಯಿತಲ್ಲದೆ ಒಳ್ಳೆಯ ಪ್ರೋತ್ಸಾಹವೂ ದೊರೆಯಿತು. ಇದರಿಂದ ಉತ್ತೇಜನಗೊಂಡ ಇವರು ಬಂಗಾಲಿ ಭಾಷೆಯ ಅನೇಕ ಕಾದಂಬರಿಗಳನ್ನೂ ನೀಳ್ಗತೆ, ಪ್ರಬಂಧಗಳನ್ನೂ ಕನ್ನಡಕ್ಕೆ ತಂದರು; ಹಲವು ಸ್ವತಂತ್ರ ಕೃತಿಗಳನ್ನು ರಚಿಸಿದರು. ಇವರ ಕೃತಿಗಳ ಒಟ್ಟು ಸಂಖ್ಯೆ ಸುಮಾರು 80. ಕೆಲವು ಮುಖ್ಯ ಕೃತಿಗಳಿವು; ಇಂದಿರೆ (1897), ಆನಂದಮಠ (1899), ವಿಷವೃಕ್ಷ (1900), ವೆನಿಸ್ ನಗರದ ವಣಿಕ (1901), ದುರ್ಗೇಶ ನಂದಿನಿ (1902), ದೇವಿ ಚೌಧುರಾಣಿ (1902), ಅತ್ತಿಗೆ (1907), ಭ್ರಾಂತಿ ವಿಲಾಸ (1907), ಕೃಷ್ಣಕಾಂತನ ಉಯಿಲು (1909), ಕಮಲಾಕಾಂತ (1909).

ಒಳ್ಳೆಯ ಟೆನ್ನಿಸ್ ಆಟಗಾರರೂ ಪತ್ರಿಕೋದ್ಯಮಿಗಳೂ ಆಗಿದ್ದ ವೆಂಕಟಾಚಾರ್ಯರು ಅವಕಾಶತೋಷಿಣಿ ಎಂಬ ಪತ್ರಿಕೆಯನ್ನು ಒಂದು ವರ್ಷಕಾಲ (1906) ನಡೆಸಿದರು. ಇವರು 1914 ಜೂನ್ 26ರಂದು ನಿಧನರಾದರು. (ವಿ.ಎಸ್.)

**ವೆಂಕಟೇಶ ಪ್ರಸಾದ್:** 1969– . ಅರ್ಜುನ ಪ್ರಶಸ್ತಿ ಪಡೆದ ಸುಪ್ರಸಿದ್ಧ ಕ್ರಿಕೆಟ್ ಆಟಗಾರ. ವೆಂಕಿ ಎಂಬ ಜನಪ್ರಿಯ ಹೆಸರಿನಿಂದ ಪ್ರಸಿದ್ಧರಾದ ಇವರ ಪೂರ್ಣ ಹೆಸರು ಬಾಪು ಕೃಷ್ಣರಾವ್ ವೆಂಕಟೇಶ

ಪ್ರಸಾದ್. 1969 ಆಗಸ್ಟ್ 5ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರು 1993–94ರಲ್ಲಿ ಕ್ರಿಸ್ಟ್ ಚರ್ಚ್‌ನಲ್ಲಿ ನ್ಯೂಜಿ಼ಲೆಂಡ್ ವಿರುದ್ಧ ನಡೆದ ಏಕದಿನ ಪಂದ್ಯದಲ್ಲಿ ಆಡುವ ಮೂಲಕ ಭಾರತದ ಕ್ರಿಕೆಟ್ ತಂಡಕ್ಕೆ ಸೇರ್ಪಡೆಯಾದರು. ಇಂಗ್ಲೆಂಡ್ ಎದುರಾಗಿ ಬರ್ಮಿಂಗ್‌ಹ್ಯಾಮ್‌ನಲ್ಲಿ 1996ರಲ್ಲಿ ನಡೆದ ಟೆಸ್ಟ್ ಆಟದಲ್ಲಿ ಮೊದಲ ಪ್ರವೇಶ ಪಡೆದರು.

ಇವರು ಮಧ್ಯಮ ವೇಗದ ಬಲಗೈ ಬೌಲರ್. 33 ಟೆಸ್ಟ್ ಕ್ರಿಕೆಟ್ ಪಂದ್ಯಗಳಲ್ಲಿ 96 ವಿಕೆಟ್‌ಗಳನ್ನೂ 161 ಏಕದಿನ ಪಂದ್ಯಗಳಲ್ಲಿ 196 ವಿಕೆಟ್‌ಗಳನ್ನೂ ಪಡೆದಿದ್ದಾರೆ. 1996ರಲ್ಲಿ ದಕ್ಷಿಣ ಆಫ್ರಿಕದ ಟೆಸ್ಟ್ ಆಟದಲ್ಲಿ 10 ವಿಕೆಟ್ ಗಳಿಸಿದ್ದು, 1999ರಲ್ಲಿ 33 ರನ್ನುಗಳಿಗೆ 6 ವಿಕೆಟ್‌ಗಳನ್ನು ಪಾಕಿಸ್ತಾನದ ವಿರುದ್ಧ ನಡೆದ ಪಂದ್ಯದಲ್ಲಿ ಗಳಿಸಿದ್ದು ಇವರ ಗಣನೀಯ ಸಾಧನೆ. 1996ರಲ್ಲಿ ವಿಶ್ವಕಪ್ ಪಂದ್ಯದಲ್ಲಿ ಆಡಿ ತಮ್ಮ ಪೂರ್ಣ ಪ್ರತಿಭೆಯನ್ನು ಪ್ರಕಾಶಿಸಿದ್ದಾರೆ.

ಇವರು ತಮ್ಮ 35ನೆಯ ವಯಸ್ಸಿನಲ್ಲಿ 2005 ಮೇ ತಿಂಗಳಿನಲ್ಲಿ ತಂಡದಿಂದ ನಿವೃತ್ತಿ ಪಡೆದರು. ಶ್ರೀಲಂಕಾ ಎದುರು 2001ರಲ್ಲಿ ಕೊಲಂಬೋದಲ್ಲಿ ಆಡಿದ್ದು ಇವರ ಕೊನೆಯ ಟೆಸ್ಟ್ ಪಂದ್ಯ. ಏಕದಿನ ಅಂತಾರಾಷ್ಟ್ರೀಯ ಪಂದ್ಯವನ್ನು ಕೀನ್ಯದ ವಿರುದ್ಧ ಪೋರ್ಟ್ ಎಲಿಜ಼ಬೆತ್‌ನಲ್ಲಿ ಆಡಿದ್ದರು. ಇವರು ಕರ್ನಾಟಕಕ್ಕೆ 2 ರಣಜಿ ಟ್ರೋಫಿಗಳನ್ನು ಗಳಿಸಿಕೊಟ್ಟಿದ್ದಾರೆ. ಪ್ರಸ್ತುತ ಬೆಂಗಳೂರಿನ ನ್ಯಾಷನಲ್ ಕ್ರಿಕೆಟ್ ಅಕಾಡೆಮಿಯಲ್ಲಿ ಕ್ರಿಕೆಟ್ ತಂಡಗಳಿಗೆ ತರಬೇತು ನೀಡುತ್ತಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿಯ ಸದಸ್ಯರಾಗಿರುವ ಇವರಿಗೆ 2001ರಲ್ಲಿ ಭಾರತ ಸರ್ಕಾರ ಅರ್ಜುನ ಪ್ರಶಸ್ತಿ ನೀಡಿದೆ. ಕರ್ನಾಟಕ ಸರ್ಕಾರ 2006ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. **(ಆರ್.)**

**ವೆಂಕಣ್ಣ ಕವಿ:** ಸು. 1750. ಯಕ್ಷಗಾನ ಕವಿ. ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಗೆ ಸೇರಿದವನಾದ ಈತ ಪ್ರಸಿದ್ಧ ಭಾಗವತನೂ ಹರಿದಾಸನೂ ಆಗಿದ್ದ. ಮುಲ್ಕಿ ವೆಂಕಣ್ಣ ಕವಿ ಎಂದೇ ಪ್ರಸಿದ್ಧನಾಗಿದ್ದ ಇವನು ಮುಲ್ಕಿಯ ಮಟ್ಟಿ ವಾಸುದೇವ ಪ್ರಭುಗಳ ಗುರು ಎಂಬುದಾಗಿ ತಿಳಿದುಬರುತ್ತದೆ.

ಇವನು ಜ್ಞಾನಮಾರ್ಗದ ಕವಿತೆಗಳನ್ನೂ ಯಕ್ಷಗಾನಗಳನ್ನೂ ಕನ್ನಡ ಸುಭಾಷಿತಗಳನ್ನೂ ಬರೆದಿದ್ದಾನೆ. ಒಳಲಂಕೆಯ ಶ್ರೀನೃಸಿಂಹ ಎಂಬ ಅಂಕಿತದಿಂದ ಅನೇಕ ದೇವರನಾಮಗಳನ್ನು ರಚಿಸಿದ್ದಾನೆ. ನೃಸಿಂಹವತಾರವನ್ನು ಕುರಿತ 15 ಚರಣಗಳ ಒಂದು ಪ್ರೌಢಪದ್ಯ, ವಾಸುದೇವಪ್ರಭುಗಳೊಂದಿಗೆ ಮುಲ್ಕಿಯ ಶ್ರೀ ವೆಂಕಟರಮಣ ಮಹೋತ್ಸವದ ವೈಭವವನ್ನು ವರ್ಣಿಸುವ ಪದ್ಯಾವಳಿಗಳು ಮುಖ್ಯವಾದುವು.

ವೆಂಕಣ್ಣ ಕವಿಯ ಪೂರ್ವಜೀವನ ತಿಳಿಯದು. ಇವನು ತನ್ನ ಜೀವನದ ಉತ್ತರ ಭಾಗವನ್ನು ಮುಲ್ಕಿಯಲ್ಲಿ ಕಳೆದುದಾಗಿ ತಿಳಿದುಬರುತ್ತದೆ. ಯಾವುದೋ ಸಂದರ್ಭದಲ್ಲಿ ಸಂಸಾರದಲ್ಲಿ ವಿರಕ್ತನಾಗಿ ಮುಲ್ಕಿಗೆ ಬಂದನೆಂದೂ ಅಲ್ಲಿಯ ದೇವಾಲಯದಲ್ಲಿ ನಡೆಯುತ್ತಿದ್ದ ರಾಮಾಯಣ ಪ್ರವಚನವನ್ನು ಆಲಿಸಿ ಕೇಳಿ ತಪ್ಪುತಪ್ಪಾಗಿ ಓದುತ್ತಿದ್ದುದ್ದನ್ನು ತಿದ್ದಿದನೆಂದೂ ಇದರಿಂದ ಇವನಿಗೆ ಮುಂದೆ ಆ ಊರಿನಲ್ಲಿ ಆಶ್ರಯ ದೊರಕಿತೆಂದೂ ಅಲ್ಲಿಗೆ ಬರುವ ಮುಂಚೆ ಈತನಿಗೆ ಹೆಚ್ಚಿಗೆ ಸನ್ಮಾನ ಉಡುಪಿಯಲ್ಲಿ ದೊರೆತ್ತಿತ್ತೆಂದೂ ಈತ ಬಂಕಾಪುರ ಸೀಮೆಗೆ ಸೇರಿದ ದೇಶಸ್ಥ ಬ್ರಾಹ್ಮಣನೆಂದೂ ಹೇಳಿಕೆಯಿದೆ. ಈತ ಬರೆದಿರುವ ಮಾನಸಚರಿತೆ ಎಂಬ ಯಕ್ಷಗಾನ ಪ್ರಕಟವಾಗಿಲ್ಲ. ಈ ಪ್ರಸಂಗ ಪ್ರಬೋಧಚಂದ್ರೋದಯ ನಾಟಕದಂತೆ ತತ್ತ್ವಜ್ಞಾನಪರವಾದ ಒಂದು ಕಥಾನಕ. ಈ ಯಕ್ಷಗಾನ ಪ್ರಸಂಗವನ್ನು ಇದುವರೆಗೆ ಯಾರೂ ಆಡಿದಂತೆ ಕಂಡುಬಂದಿಲ್ಲ.

ಕೇವಲ ಒಂದೇ ಒಂದು ಯಕ್ಷಗಾನವನ್ನು ರಚಿಸಿ ಈತ ಇಷ್ಟು ಪ್ರಸಿದ್ಧನಾಗಿರುವುದನ್ನು ಗಮನಿಸಿದರೆ, ದಶಾವತಾರ ಆಟಗಳ ಭಾಗವತನಾಗಿದ್ದ ಈತ ದಶಾವತಾರಕ್ಕೆ ಸಂಬಂಧಿಸಿದ ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಿರಬೇಕೆಂದು ಊಹಿಸಲು ಸಾಧ್ಯವಿದೆ. ಸಭಾವಂದನೆ ಅಥವಾ ಸಭಾಲಕ್ಷಣವೆಂಬ ಯಕ್ಷಗಾನ ಶಾಸ್ತ್ರಗ್ರಂಥದ ಕರ್ತೃವಿನ ಬಗೆಗಿನ ಚರ್ಚೆಯಲ್ಲಿ ಪಾರ್ತಿಸುಬ್ಬ, ಕಿಕ್ಕೇರಿ ರಾಮಾಚಾರ್ಯರೊಡನೆ ವೆಂಕಣ್ಣಕವಿಯ ಹೆಸರೂ ಸೇರಿರುವುದು ಗಮನಾರ್ಹವಾಗಿದೆ. **(ಎಚ್.ಬಿ.ವೈ.)**

**ವೆಂಕಣ್ಣಯ್ಯ, ಟಿ.ಎಸ್.:** 1885–1939. ಹೊಸಗನ್ನಡ ಸಾಹಿತ್ಯದ ಅಶ್ವಿನೀ ದೇವತೆಗಳಲ್ಲಿ ಒಬ್ಬರೆಂದು ಖ್ಯಾತರಾಗಿದ್ದ ವಿದ್ವಾಂಸರು. ಮೈಸೂರು ವಿಶ್ವವಿದ್ಯಾನಿಲಯದ ಮೊದಲ ಕನ್ನಡ ಪ್ರಾಧ್ಯಾಪಕರು. ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ತಳುಕು ಗ್ರಾಮದಲ್ಲಿ, 1885ನೆ ಅಕ್ಟೋಬರ್ 1ರಂದು ಕನ್ನಡದ ಆಶುಕವಿಗಳೂ ನಾಟಕಕಾರರೂ ಆಗಿದ್ದ ಸುಬ್ಬಣ್ಣನವರ ತಂದೆ; ಪ್ರಾಚೀನ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಿ, ಅರ್ಥ ಹೇಳಬಲ್ಲವರಾಗಿದ್ದ ಲಕ್ಷ್ಮಿದೇವಮ್ಮ ಇವರ ತಾಯಿ. ಇಂಥ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ವೆಂಕಣ್ಣಯ್ಯನವರು ಹುಟ್ಟೂರಿನ ಶಾಲೆಯಲ್ಲಿ ಓದಿ ಲೋಯರ್ ಸೆಕೆಂಡರಿ ಪರೀಕ್ಷೆಯನ್ನೂ ಚಿತ್ರದುರ್ಗದ ಪ್ರೌಢ ಶಾಲೆಯಲ್ಲಿ ಮುಗಿಸಿ, ಎಫ್.ಎ. ಪರೀಕ್ಷೆಗೆ ಓದಲೆಂದು 1904ರಲ್ಲಿ ಮೈಸೂರಿಗೆ ಬಂದರು. ಮೊದಲನೆಯ ವರ್ಷದ ಪರೀಕ್ಷೆಯನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿಯೂ ಕಡೆಯ ವರ್ಷದ ಪರೀಕ್ಷೆಯನ್ನು ಬಳ್ಳಾರಿಯಲ್ಲಿದ್ದ ವಾರ್ಡ್ಲಾ ಕಾಲೇಜಿನಲ್ಲಿಯೂ ಮುಗಿಸಿ, 1906ರಲ್ಲಿ ಮತ್ತೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಚರಿತ್ರೆ, ಅರ್ಥಶಾಸ್ತ್ರಗಳನ್ನು ವಿಶೇಷ ವಿಷಯಗಳನ್ನಾಗಿ ಓದಿ 1909ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಎಲ್‌ಎಲ್‌ಬಿ ಪರೀಕ್ಷೆಗೆ ಓದಲೆಂದು ಮುಂಬಯಿಗೆ ಹೋದ ಇವರು ಅಲ್ಲಿಯ ಅಂಚೆ ಇಲಾಖೆಯಲ್ಲಿ ಗುಮಾಸ್ತರಾಗಿದ್ದುಕೊಂಡು, ಮೊದಲ ಪರೀಕ್ಷೆಯನ್ನು ಮುಗಿಸಿ, ಎರಡನೆಯ ಪರೀಕ್ಷೆಗೆ ಓದುತ್ತಿದ್ದಾಗ ಕನ್ನಡ ಎಂ.ಎ. ಓದಬೇಕೆಂಬ ಸಂಕಲ್ಪದಿಂದ ಮೈಸೂರಿಗೆ ಹಿಂದಿರುಗಿದರು. ಕೆಲಕಾಲ ಧಾರವಾಡದ ಮಿಷನ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಇವರು 1914ರಲ್ಲಿ ಎಂ.ಎ. ಪದವಿಯನ್ನು ಪಡೆದ ಮೇಲೆ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಸ್ವಲ್ಪಕಾಲ ಅಧ್ಯಾಪಕರಾಗಿದ್ದರು. 1917ರಲ್ಲಿ ದೊಡ್ಡಬಳ್ಳಾಪುರದ ಕನ್ನಡ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದು 1918ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಕ್ರಮೇಣ ಅಲ್ಲಿಯೇ ಉಪಪ್ರಾಧ್ಯಾಪಕರಾದರು. 1927ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡ ಇವರು ಕನ್ನಡ ಇಲಾಖೆಯನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಕಟ್ಟಿ ಬೆಳೆಸುವಲ್ಲಿ ಹಲವು ಬಗೆಯಲ್ಲಿ ಶ್ರಮಿಸಿದರು.

ವೆಂಕಣ್ಣಯ್ಯನವರ ವ್ಯಕ್ತಿತ್ವ ಬಹುಮುಖವಾದುದು. ಸುತ್ತಲಿರುವ ಜನರ ನಿಲುವಿಗಿಂತ ಎತ್ತರವಾಗಿ ಕಾಣಿಸುತ್ತಿದ್ದ ಇವರ ಶರೀರದ ನಿಲುವು,

ಇವರ ಮನಸ್ಸು ಶೀಲಗಳ ನಿಲವೇ ಆಗಿತ್ತು. ಹೊಸಗನ್ನಡ ಸಾಹಿತ್ಯವನ್ನು ನೆಟ್ಟು ಬೆಳೆಸಬೇಕಾಗಿದ್ದ ಪರ್ವಕಾಲದಲ್ಲಿ ಇವರು ವಹಿಸಿದ ಪಾತ್ರ ಚಿರಸ್ಮರಣೀಯವಾದುದು. ಇವರ ಅಧ್ಯಾಪನದಲ್ಲಿ ವಿದ್ಯಾರ್ಥಿಗಳಾಗಿದ್ದವರು ಪ್ರಾಚೀನ ಸಾಹಿತ್ಯದ ಸಾರಸತ್ತ್ವವನ್ನು ಹೀರಿಕೊಳ್ಳುವ ಮತ್ತು ಆಗತಾನೆ ಕಣ್ತೆರೆಯುತ್ತಿದ್ದ ಆಧುನಿಕ ಸಾಹಿತ್ಯ ನವೋದಯದ ಉಷಃಕಾಂತಿಯಲ್ಲಿ ಬುದ್ಧಿಗೆ ಸಾಣೆಯನ್ನೂ ಹೃದಯಕ್ಕೆ ವಿಕಾಸವನ್ನೂ ಪಡೆದುಕೊಳ್ಳುವ ಸಾಧನೆಯಲ್ಲಿ ದೀಕ್ಷಾಬದ್ಧರಾದರು. ನಿಜವಾದ ಪ್ರತಿಭೆಯನ್ನು, ಅದು ಎಲ್ಲಿಂದೇ ಇರಲಿ, ಯಾರಲ್ಲಿಯೇ ಇರಲಿ, ಕಾಣುವ ವಿಶಾಲಬುದ್ಧಿಯೂ ಅದನ್ನು ಗುರುತಿಸುವ ಔದಾರ್ಯವೂ ವೆಂಕಣ್ಣಯ್ಯನವರಿಗೆ ಇದ್ದುದರಿಂದ ಇವರ ವಿದ್ಯಾರ್ಥಿವೃಂದ ಆಧುನಿಕ ಕನ್ನಡ ಸಾಹಿತ್ಯ ಪ್ರಚಾರ, ಪ್ರಸಾರಗಳಲ್ಲಿ ಅದ್ವಿತೀಯ ಪಾತ್ರವಹಿಸಲು ಸಾಧ್ಯವಾಯಿತು.

ಜನರ ಯೋಗ್ಯತೆ, ಸಾಮರ್ಥ್ಯ, ದೌರ್ಬಲ್ಯಗಳನ್ನು ಅರ್ಥಮಾಡಿಕೊಳ್ಳಬಲ್ಲವರಾಗಿದ್ದ ಇವರು, ಪ್ರೀತಿ, ವಿನೋದ, ಸಹಾಯ, ಸೌಜನ್ಯಾದಿಗಳಿಂದ ಜನರನ್ನು ಒಲಿಸಿಕೊಂಡು, ಕನ್ನಡದ ಕೆಲಸಗಳು ಸರಾಗವಾಗಿ ನಡೆಯುವಂತೆ ನೋಡಿಕೊಂಡರು. ಇವರು ತರ್ಕ, ವ್ಯಾಜ್ಯ, ಪ್ರತಿಭಟನೆಗಳಲ್ಲಿ ಎಂದೂ ಪ್ರವೇಶಿಸದೆ ಪ್ರಶಾಂತ ಮನಸ್ಕರಾಗಿರುತ್ತಿದ್ದರು. ಸತ್ಸಂಗ, ಆತ್ಮವಿಮರ್ಶೆ, ಅಂತರ್ಮುಖತೆಗಳಿಂದ ಸುಸಂಸ್ಕೃತರಾಗಿ ಸಾಧುಗಳಂತಿದ್ದರು. ಆದ್ದರಿಂದಲೇ ಇವರು ಆಗತಾನೆ ಅಂಕುರಿಸುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತು, ಸೆಂಟ್ರಲ್ ಕಾಲೇಜು ಮತ್ತು ಮಹಾರಾಜ ಕಾಲೇಜುಗಳ ಕರ್ನಾಟಕ ಸಂಘಗಳು, ಸುಪ್ರಸಿದ್ಧ ಕನ್ನಡ ತ್ರೈಮಾಸಿಕ ಪತ್ರಿಕೆಯಾದ ಪ್ರಬುದ್ಧ ಕರ್ಣಾಟಕ–ಇತ್ಯಾದಿ ಸಂಸ್ಥೆಗಳನ್ನೂ ಪತ್ರಿಕೆಗಳನ್ನೂ ಪೋಷಿಸಿ ಬೆಳೆಸುವುದರಲ್ಲಿಯೂ ಹೊಸಗನ್ನಡ ಸಾಹಿತ್ಯ ಸರ್ವತೋಮುಖವಾಗಿ ಹಬ್ಬಿಹರಡುವುದರಲ್ಲಿಯೂ ಅದ್ವಿತೀಯವಾದ ಪಾತ್ರವನ್ನು ವಹಿಸಲು ಸಾಧ್ಯವಾಯಿತು.

ವೆಂಕಣ್ಣಯ್ಯನವರು ಕನ್ನಡದ ಜೊತೆಗೆ ತೆಲುಗು, ಇಂಗ್ಲಿಷ್, ಬಂಗಾಲಿ ಮತ್ತು ತಮಿಳು ಭಾಷಾ ಸಾಹಿತ್ಯಗಳಲ್ಲಿ ಆಳವಾದ ಪಾಂಡಿತ್ಯವನ್ನು ಗಳಿಸಿಕೊಂಡಿದ್ದರು. ಸಾಹಿತ್ಯ ಸೃಷ್ಟಿಗಿಂತ ಸಾಹಿತ್ಯ ಪ್ರಸಾರದ ಕಡೆಗೆ ಹೆಚ್ಚು ಗಮನ ಕೊಟ್ಟಿದ್ದರಿಂದ ಇವರು ಸ್ವತಃ ರಚಿಸಿರುವ ಕೃತಿಗಳು ಸಂಖ್ಯಾದೃಷ್ಟಿಯಿಂದ ಕಡಿಮೆ ಎನಿಸಿದರೂ ಬೆಲೆಯುಳ್ಳ ಕೃತಿಗಳಾಗಿವೆ. ಇವರು ಶ್ರೀ ರಾಮಕೃಷ್ಣಮಠಕ್ಕಾಗಿ ಶ್ರೀ ರಾಮಕೃಷ್ಣ ಪರಮಹಂಸರ (ಎ.ಆರ್.ಕೃ. ಅವರೊಂದಿಗೆ) ಜೀವನಚರಿತ್ರೆಯನ್ನು ಬರೆದಿದ್ದಾರೆ. ಶ್ರೀ ರಾಮಕೃಷ್ಣ ಲೀಲಾ ಪ್ರಸಂಗದ ಒಂದು ಭಾಗವನ್ನು ಬಂಗಾಲಿಯಿಂದ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ರವೀಂದ್ರನಾಥ ಠಾಕೂರರು ಸಾಹಿತ್ಯ ವಿಷಯವಾಗಿ ಬರೆದ ಅನೇಕ ಪ್ರಬಂಧಗಳನ್ನು ಬಂಗಾಲಿಯಿಂದ ಭಾಷಾಂತರಿಸಿ ಪ್ರಾಚೀನ ಸಾಹಿತ್ಯವೆಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಹರಿಶ್ಚಂದ್ರ ಕಾವ್ಯಸಂಗ್ರಹ, ಕಾದಂಬರೀ ಸಂಗ್ರಹ, ಬಸವರಾಜ ದೇವರ ರಗಳೆ, ಸಿದ್ಧರಾಮ ಚರಿತ್ರೆಯ ಸಂಗ್ರಹ–ಇವು ಇವರ ಸಂಪಾದಿತ ಗ್ರಂಥಗಳು. ಕಾದಂಬರೀ ಸಂಗ್ರಹಕ್ಕೂ ಬಸವರಾಜ ದೇವರ ರಗಳೆಗೂ ಇವರು ಬರೆದಿರುವ ಮುನ್ನುಡಿಗಳು ಇವರ ಅದ್ಭುತ ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ ಕನ್ನಡ ಕೈಪಿಡಿಗೆ ಹಳಗನ್ನಡ ವ್ಯಾಕರಣ ಮತ್ತು ಭಾಷಾಚರಿತ್ರೆಯ ಭಾಗಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಪಂಪ ಭಾರತ ಮತ್ತು ಪ್ರಾಚ್ಯ ವಿದ್ಯಾ ಸಂಶೋಧನಾಲಯ ಪ್ರಕಟಿಸಿದ ಕುಮಾರವ್ಯಾಸ ಭಾರತ–ಇವುಗಳ ಸಂಪಾದನಾಕಾರ್ಯದಲ್ಲೂ ಇವರು ಮುಖ್ಯ ಪಾತ್ರವಹಿಸಿದ್ದರು.

ವೆಂಕಣ್ಣಯ್ಯನವರು 1939 ಫೆಬ್ರವರಿ 24ರಂದು ನಿಧನರಾದರು. ಇವರ ನೆನಪಿಗಾಗಿ ಇವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಕುರಿತ ಸವಿನೆನಪು (ಸಂಪಾದಕರು: ಕುವೆಂಪು) ಎಂಬ ಸ್ಮರಣ ಗ್ರಂಥವನ್ನು 1970ರಲ್ಲಿ ಪ್ರಕಟಿಸಲಾಯಿತು. ಕುವೆಂಪು ಅವರು ಇವರ ವ್ಯಕ್ತಿತ್ವದಿಂದ ಅತ್ಯಂತ ಪ್ರಭಾವಿತವಾಗಿದ್ದು ಅಪೂರ್ವವಾದ ಗೌರವಾದರಗಳನ್ನು ಇವರ ಬಗೆಗೆ ತಾಳಿದ್ದರು. ಇದರ ಕುರುಹಾಗಿ ಶ್ರೀ ರಾಮಾಯಣದರ್ಶನಂ ಮಹಾಕಾವ್ಯವನ್ನು ವೆಂಕಣ್ಣಯ್ಯ ನವರಿಗೆ ಅರ್ಪಿಸಿದ್ದಾರೆ. (ಟಿ.ಎಸ್.ಎಸ್.)

**ವೆಬ್, ಜೋಸೈಯ:** ಮೈಸೂರು ಸಂಸ್ಥಾನದಲ್ಲಿದ್ದ ಬ್ರಿಟಿಷ್ ರೆಸಿಡೆಂಟ್ (1803–04). 1783ರಲ್ಲಿ ಮದರಾಸು ಪೋರ್ಟ್ ಸೇಂಟ್‌ಜಾರ್ಜ್ ಕೋಟೆಯಲ್ಲಿ ಗುಮಾಸ್ತೆಯಾಗಿ ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿ ಸೇರಿದ ಇವನು, ತರುವಾಯ ಮಿಲಿಟರಿ ಇಲಾಖೆಯ ಕಾರ್ಯದರ್ಶಿಗೆ ಸಹಾಯಕ, ಡೆಪ್ಯುಟಿ ಕಮಿಸರಿ ಜನರಲ್ ಮತ್ತು ಮರಾಠಿ ಭಾಷಾಂತರಕಾರ (1786), ಲೋಕೋಪಯೋಗಿ ಮತ್ತು ರೆವಿನ್ಯೂ ಇಲಾಖೆಯ ಕಾರ್ಯದರ್ಶಿ (1790), ಆ ಮಂಡಲಿಯ ಸದಸ್ಯ (1790), ಸರ್ಕಾರದ ಕಾರ್ಯದರ್ಶಿ (1797), ಮದರಾಸು ಸರ್ಕಾರದ ಪ್ರಪ್ರಥಮ ಪ್ರಧಾನ ಕಾರ್ಯದರ್ಶಿ ಹಾಗೂ ಮರಾಠಿ ಭಾಷಾಂತರಕಾರ (ಜುಲೈ 1800) – ಈ ಹುದ್ದೆಗಳನ್ನು ನಿರ್ವಹಿಸಿ 1803ರಲ್ಲಿ ಮೈಸೂರು ಸಂಸ್ಥಾನದ ರೆಸಿಡೆಂಟ್ ಆಗಿ ನೇಮಿತನಾದ. 1804ರಲ್ಲಿ ನಾಗಪುರ ಮತ್ತು ಗ್ವಾಲಿಯರ್‌ಗಳಲ್ಲಿ ರೆಸಿಡೆಂಟ್ ಆಗಿದ್ದು ಅದೇ ವರ್ಷ ನವೆಂಬರ್ 9ರಂದು ಮಧ್ಯಪ್ರದೇಶದ ಹೋಶಂಗಾಬಾದ್‌ನಲ್ಲಿ ನಿಧನನಾದ.

ಮದರಾಸು ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಟಿಪ್ಪುವಿನ ವಿರುದ್ಧ ಬ್ರಿಟಿಷರು ಯುದ್ಧವನ್ನು ಮುಂದುವರಿಸಬಾರದು ಎಂದು ಭಿನ್ನಾಭಿಪ್ರಾಯ ವರದಿಯನ್ನು ಕಳುಹಿಸಿದ್ದ. ಆದರಿಂದ ಲಾರ್ಡ್ ಮಾರ್ನಿಂಗ್‌ಟನ್ (ಮಾರ್ಕ್ವಿಸ್ ವೆಲ್ಲೆಸ್ಲಿ) ಹಾಗೂ ಲಂಡನ್ನಿನ ಈಸ್ಟ್ ಇಂಡಿಯಾ ಕಂಪನಿಯ ಡೈರೆಕ್ಟರುಗಳಿಗೆ ಇವನ ಬಗ್ಗೆ ಅಸಮಾಧಾನವಿತ್ತು. ಆದಾಗ್ಯೂ ದಕ್ಷನೌಕರನಾಗಿದ್ದ ಇವನನ್ನು ಇಂಗ್ಲೆಂಡಿಗೆ ವಾಪಸು ಕರೆಸಿಕೊಳ್ಳಬಾರದೆಂದು ಮಾರ್ನಿಂಗ್‌ಟನ್ ಡೈರೆಕ್ಟರುಗಳಿಗೆ ಬರೆದ. ಟಿಪ್ಪುವಿನ ಮೇಲೆ ಯುದ್ಧ ಹೂಡಿದಾಗ (1799 ಫೆಬ್ರವರಿ 14) ವೆಬ್ ಯುದ್ಧದ ಬಗ್ಗೆ ಮದರಾಸು ಕೇಂದ್ರದಿಂದ ಪೂರ್ಣವಾಗಿ ಸಹಕರಿಸಿ ಮಾರ್ನಿಂಗ್‌ಟನ್ನನ ವಿಶ್ವಾಸವನ್ನು ಗಳಿಸಿದ. 1799 ಮೇ 4ರಂದು ರಣರಂಗದಲ್ಲಿ ಟಿಪ್ಪು ಮಡಿದು, ಬ್ರಿಟಿಷರು ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡಾಗ, ಪ್ರಧಾನ ಕಾರ್ಯದರ್ಶಿಯಾಗಿದ್ದ ವೆಬ್, ಗವರ್ನರ್ ಜನರಲ್ ಪರವಾಗಿ, ಮೇ 4ನೆಯ ದಿನಾಂಕದ ಘಟನೆಗಳು ಗವರ್ನರ್ ಜನರಲ್ ಅವರ ನಿರೀಕ್ಷೆಗೂ ಮೀರಿದಂತೆ, ಪ್ರಪಂಚದ ಸೈನಿಕ ಇತಿಹಾಸ ದಲ್ಲೇ ಅತ್ಯಂತ ಅಮೋಘವೆನಿಸುವ ಘನತೆಗೌರವಗಳನ್ನು ಬ್ರಿಟಿಷ್ ಸೈನ್ಯಕ್ಕೆ ದೊರಕಿಸಿಕೊಟ್ಟಿವೆ. ಬ್ರಿಟಿಷರು ಇಂಡಿಯಾ ದೇಶದಲ್ಲಿ ಸಂಪಾದಿಸಿಕೊಂಡಿರುವ ರಾಜ್ಯಗಳಲ್ಲಿ ಶಾಂತಿಸ್ಥಾಪನೆ ಮತ್ತು ಶಿಸ್ತುಪಾಲನೆ ಈ ವಿಜಯದಿಂದ ಸಾಧ್ಯ, ತನ್ನ ಶತ್ರುಗಳ ದುಷ್ಟ ಯೋಚನೆಗಳೇ ಇಂಗ್ಲೆಂಡಿನ ಏಳಿಗೆ, ಖ್ಯಾತಿ ಮತ್ತು ಬಲವನ್ನು ಹೆಚ್ಚಿಸಿವೆ ಎಂದು ಮದರಾಸಿನಿಂದ ಸರ್ಕಾರಿ ಸಂದೇಶವನ್ನು ಹೊರಡಿಸಿದ (15ನೆಯ ಮೇ 1799).

ವೆಬ್ ಮತ್ತು ದಿವಾನ್ ಪೂರ್ಣಯ್ಯನ ನಡುವೆ ಗಾಢ ಸ್ನೇಹವಿತ್ತು. ವೆಬ್‌ನ ಆದರ್ಶ ವ್ಯಕ್ತಿತ್ವದ ಸ್ಮರಣೆಗಾಗಿ ಪೂರ್ಣಯ್ಯ ಶ್ರೀರಂಗ ಪಟ್ಟಣದ ಸಮೀಪದ ಫ್ರೆಂಚ್‌ರಾಕ್ಸ್ (ಪಾಂಡವಪುರ) ಬಳಿ ನಿಲುಗಂಬವನ್ನು (ವೆಬ್ ಮಾನ್ಯುಮೆಂಟ್) ನಿಲ್ಲಿಸಿದ (ಅದನ್ನು ಸ್ಥಳೀಯರು ರಣಕಂಬ ವೆಂದು ತಪ್ಪಾಗಿ ಕರೆಯುತ್ತಾರೆ). ವೆಬ್ ತನ್ನ ಜೀವಿತವನ್ನೆಲ್ಲ ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿ ಕಳೆದ. ತಾನು ರೆಸಿಡೆಂಟನಾಗಿದ್ದ ಸಂಸ್ಥಾನಗಳ ಅರಸರ ಮತ್ತು ಪ್ರಜೆಗಳ ಗೌರವವನ್ನು ಸಂಪಾದಿಸಿದ್ದ. ವೆಬ್‌ನ ಸ್ಮರಣೆಗಾಗಿ ಮದರಾಸಿನ ಫೋರ್ಟ್ ಸೇಂಟ್ ಜಾರ್ಜ್ ಕೋಟೆಯ ಸೇಂಟ್ ಮೇರಿ ಚರ್ಚಿನಲ್ಲಿ ಸ್ಮಾರಕವನ್ನು ಕಟ್ಟಿಸಲಾಯಿತು. ಕರ್ನಲ್ ಆರ್ಥರ್ ವೆಲ್ಲೆಸ್ಲಿ (ಡ್ಯೂಕ್ ಆಫ್ ವೆಲ್ಲಿಂಗ್‌ಟನ್) ವೆಬ್‌ನನ್ನು ತನ್ನ ಆಪ್ತಸ್ನೇಹಿತನೆಂದು ಪರಿಗಣಿಸಿದ್ದ. ವೆಲ್ಲೆಸ್ಲಿಯ ಅಭಿಪ್ರಾಯದಲ್ಲಿ ಇವನು ಸತ್ಯವಂತನಾದ ಹಾಗೂ ದಕ್ಷನಾದ ಅಧಿಕಾರಿಯಾಗಿದ್ದ. (ವಿ.ಜಿ.ಕೆ.)

**ವೇಣೂರು:** ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಒಂದು ಹಳ್ಳಿ. ಬೆಳ್ತಂಗಡಿಯಿಂದ 19 ಕಿಮೀ ದೂರದಲ್ಲಿದೆ. ಇದೊಂದು ಪ್ರಸಿದ್ಧ ಜೈನ ತೀರ್ಥಕ್ಷೇತ್ರ. ಶಾಸನಗಳಲ್ಲಿ ಏಣೂರೆಂದು ಉಲ್ಲೇಖವಾಗಿದೆ. ಈ ಊರು ಮೊದಲಿಗೆ ಅಜಿಲರ ರಾಜಧಾನಿಯಾಗಿತ್ತು. ವಿಜಯನಗರದ ಕಾಲದಲ್ಲಿ ಇದು ಮಂಗಳೂರು ರಾಜ್ಯಪಾಲರ ಅಧೀನದಲ್ಲಿತ್ತು. ಅನಂತರ ಕೆಳದಿ ನಾಯಕರ, ಬ್ರಿಟಿಷರ ವಶವಾಯಿತು.

ಇಲ್ಲಿ ಎಂಟು ಜೈನಬಸದಿಗಳು ಮತ್ತು ಏಕಶಿಲೆಯಲ್ಲಿ ಕೆತ್ತಿರುವ 35' ಎತ್ತರದ ಗೊಮ್ಮಟ ವಿಗ್ರಹ ಇವೆ. ಈ ವಿಗ್ರಹ ಗುರುಪುರ ಹೊಳೆಯ ದಕ್ಷಿಣದಂಡೆಯಲ್ಲಿ ವಿಶಾಲ ಬಂಡೆಯ ಮೇಲಿದೆ. ಈ ವಿಗ್ರಹವನ್ನು 1604ರಲ್ಲಿ ವೀರ ತಿಮ್ಮಣ್ಣ ಅಜಿಲ ಪ್ರತಿಷ್ಠಾಪಿಸಿದ. ಬಸದಿಯಲ್ಲಿರುವ ತೀರ್ಥಂಕರರ ವಿಗ್ರಹಗಳನ್ನು ಸುಂದರವಾಗಿ ಕೆತ್ತಲಾಗಿದೆ. ಇಲ್ಲಿ ಒಂದು ಮಹಾದೇವ ದೇವಾಲಯವಿದೆ. ಈ ಸ್ಥಳದ ಮೂಲಕ ಫಲ್ಗುಣಿ ನದಿ ಹಾದುಹೋಗುತ್ತದೆ. **(ಪಿ.ಜಿ.ಬಿ.)**

**ವೇದಾವತಿ:** ತುಂಗಭದ್ರಾ ನದಿಯ ಒಂದು ಉಪನದಿ. ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ (ಚಂದ್ರದ್ರೋಣ) ಗಿರಿಗಳ ಪೂರ್ವಭಾಗದಲ್ಲಿ ಹುಟ್ಟುವ ವೇದ ಮತ್ತು ಆವತಿ ಎಂಬೆರಡು ನದಿಗಳು ಸೇರಿ ವೇದಾವತಿ ನದಿಯಾಗಿದೆ. ವೇದ, ಮುಳ್ಳಯ್ಯನಗಿರಿ ಸಮೀಪದ ಗೌರಿಹಳ್ಳದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಇದಕ್ಕೆ ಶಕುನಗಿರಿಯ ಹತ್ತಿರ ಅಣೆಕಟ್ಟು ಕಟ್ಟಲಾಗಿದೆ. ಇಲ್ಲಿಯೇ ಅಯ್ಯನಕೆರೆ ಸರೋವರವಿದೆ. ಮುಂದೆ ಸಕ್ಕರೆಪಟ್ಟಣದ ದಕ್ಷಿಣಕ್ಕೆ ಹರಿದು ಅನಂತರ ಈಶಾನ್ಯಕ್ಕೆ ತಿರುಗುವ ಕಡೂರಿನ ಸಮೀಪ ಆವತಿ ಹಾಗೂ ಇತರ ಚಿಕ್ಕಪುಟ್ಟ ಹಳ್ಳಗಳೊಂದಿಗೆ ಕೂಡಿಕೊಂಡು ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮತ್ತೋಡು ಹೊಸದುರ್ಗಗಳ ನಡುವೆ ಹರಿವ ಈ ನದಿಗೆ ಹಿರಿಯೂರಿನಲ್ಲಿ ರೈಲ್ವೆ ಸೇತುವೆ ನಿರ್ಮಿಸಲಾಗಿದೆ. ಇದು ಬ್ರಿಟಿಷರ ಆಡಳಿತ ಕಾಲದಲ್ಲಿ ಕರ್ನಾಟಕದಲ್ಲಿ ನಿರ್ಮಿಸಲಾದ ಪ್ರಥಮ ಸೇತುವೆಯಾಗಿದೆ. ಮುಂದೆ ಗುಡ್ಡಬೆಟ್ಟಗಳ ನಡುವೆ ನುಗ್ಗಿ ಮಾರಿಕಣಿವೆಯ ದಾರಿಯಾಗಿ ಭರಮಗಿರಿದುರ್ಗದ ದಕ್ಷಿಣ ಮತ್ತು ಹಿರಿಯೂರಿನ ಮೂಲಕ ಸಾಗುತ್ತದೆ. ಈ ಭಾಗದಲ್ಲೆಲ್ಲ ನದಿ ಈಶಾನ್ಯಾಭಿಮುಖವಾಗಿ ಹರಿಯುತ್ತದೆ. ಮುಂದೆ ಶಿರಾ ಮತ್ತು ಹಾಗಲವಾಡಿ ಕಡೆಗಳಿಂದ ಬರುವ ನಾಲೆಗಳನ್ನೂ ಸೇರಿಸಿಕೊಂಡು ಉತ್ತರದತ್ತ ತಿರುಗುತ್ತದೆ. ಇಲ್ಲಿಯೇ ಇದು ಹಗರಿ ಎಂಬ ಹೆಸರನ್ನು ಪಡೆಯುತ್ತದೆ. ಅನಂತರ ಬಯಲು ಪ್ರದೇಶದಲ್ಲಿ ಹರಿದು ಚಳ್ಳಕೆರೆ ತಾಲ್ಲೂಕಿನ ಘಟಪರ್ತಿಯಿಂದ ಸುಮಾರು 8 ಕಿಮೀ ದೂರದಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರಿ ಬಳ್ಳಾರಿಯಿಂದ ಉತ್ತರಕ್ಕೆ ತಿರುಗಿ ಹುಚ್ಚ ಹಳ್ಳಿಯ ಸಮೀಪ ತುಂಗಭದ್ರಾ ನದಿಯನ್ನು ಸೇರುತ್ತದೆ. ಮಳೆಗಾಲದಲ್ಲಿ ಮಾತ್ರ ಈ ನದಿ ತುಂಬಿ ಹರಿಯುತ್ತದೆ. ಬೇಸಗೆ ಕಾಲದಲ್ಲಿ ಮರಳು ಹಾಸಿರುವ ನದಿಯ ಪ್ರದೇಶದಲ್ಲಿ ಕಪಿಲೆ ಬಾವಿಗಳನ್ನು ತೋಡಿ ನೀರು ಪಡೆಯಲಾಗುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸೇರುವ ಜನಗನಹಳ್ಳ ವೇದಾವತಿಯ ಮುಖ್ಯ ಉಪ ನದಿಗಳಲ್ಲೊಂದು. ವೇದಾವತಿ ನದಿ ಚಿತ್ರದುರ್ಗ ಜಿಲ್ಲೆಯ ಪೂರ್ವಭಾಗ ಮತ್ತು ಚಿತ್ರದುರ್ಗ ಜಿಲ್ಲೆಯ ದಕ್ಷಿಣ ಭಾಗಗಳಿಗೆ ನೀರಾವರಿ ಸೌಕರ್ಯ ಒದಗಿಸುತ್ತದೆ. ಇದಕ್ಕೆ ಅಡ್ಡಲಾಗಿ ಮಾರಿಕಣಿವೆಯಲ್ಲಿ ದೊಡ್ಡ ಕಟ್ಟೆಯೊಂದನ್ನು (ವಾಣಿವಿಲಾಸ ಸಾಗರ) ಕಟ್ಟಲಾಗಿದೆ. **(ಎಚ್.ಜಿ.)**

**ವೈಕುಂಠದಾಸ:** 15ನೆಯ ಶತಮಾನದ ಉತ್ತರಾರ್ಧ ಹಾಗೂ 16ನೆಯ ಶತಮಾನದ ಪೂರ್ವಾರ್ಧದಲ್ಲಿ ಆಗಿಹೋದ ಹರಿದಾಸರು. ವ್ಯಾಸರಾಯರು, ವಾದಿರಾಜರು. ಪುರಂದರದಾಸರು, ಕನಕದಾಸರು ಇವರ ಸಮಕಾಲೀನರು. ಹಾಸನ ಜಿಲ್ಲೆಯ ಬೇಲೂರು ಇವರ ಜನ್ಮಸ್ಥಳ. ಪೂರ್ವಾಶ್ರಮದ ಹೆಸರು ಕೇಶವ. ಇವರು ಬಾಲ್ಯದಿಂದಲೂ ವೈರಾಗ್ಯಭಕ್ತಿ ಭರಿತರಾಗಿದ್ದರು. ಲೋಕಕ್ಕೆ ಮಂಕನಂತೆಯೆ ಕಾಣುತ್ತಿದ್ದರೂ ಅಂತರಂಗ ವಿಕಾಸ ಹೊಂದುತ್ತಿದ್ದ ಮಹಾವ್ಯಕ್ತಿಯಾಗಿದ್ದರು. ಸೌಮ್ಯನಾಯಕಿ ಎಂಬುವರೊಂದಿಗೆ ವಿವಾಹವಾದ ಮೇಲೂ ಹಿರಿಯರ ನಿರೀಕ್ಷೆ ಫಲಿಸದೆ ತನ್ನ ಪ್ರವೃತ್ತಿಯಲ್ಲಿ ಪಲ್ಲಟವಾಗದೆ ಲೋಕಾಸಕ್ತಿಯಿಂದ ಅತಿದೂರರಾಗಿ, ಚೆನ್ನಕೇಶವಸ್ವಾಮಿಯನ್ನು ಒಲಿಸಿಕೊಳ್ಳುವುದರಲ್ಲಿಯೇ ಪೂರ್ಣಾಸಕ್ತರಾಗಿದ್ದರು. ಚೆನ್ನಕೇಶವ ಸಾಕ್ಷಾತ್ಕಾರವನ್ನು ಹೊಂದಿದ ಅನಂತರ ವೈಕುಂಠಕೇಶವನೆಂಬ ಮುದ್ರಿಕೆಯಿಂದ ಕನ್ನಡದಲ್ಲಿ ದೇವರನಾಮಗಳನ್ನು ರಚಿಸಲು ಆರಂಭಿಸಿ, ಅಂದಿನಿಂದ ವೈಕುಂಠದಾಸರೆಂದು ಪ್ರಸಿದ್ಧರಾದರು.

ದೊರೆತಿರುವ ಇವರ ಕೃತಿಗಳಲ್ಲಿ ಹೆಚ್ಚಿನವರು ಅನುಭಾವ ಗೀತೆಗಳು. ಇವುಗಳಲ್ಲಿ ಚೆನ್ನಕೇಶವ ವೇಷಾಂತರಗಳಿಂದ ತಮ್ಮೊಂದಿಗೆ ಆಟವಾಡಿದ ಸನ್ನಿವೇಶಗಳನ್ನು, ಮೆರೆದ ಪವಾಡಗಳನ್ನು ಚೆನ್ನಾಗಿ ಬಣ್ಣಿಸಿದ್ದಾರೆ.

ಅಚ್ಯುತದಾಸರೆಂಬುವರು ಬಿರುದು ಬಾವಲಿಗಳ ಬಯಕೆಯಿಂದ, ವಿದ್ಯಾಹಂಕಾರದಿಂದ ದಾಸರನ್ನು ಎದುರಿಸಿದ ಪರಿಣಾಮವಾಗಿ ಕಣ್ಣು ಕಳೆದುಕೊಂಡು ಒದ್ದಾಡಿದಾಗ ಕೇಶವನನ್ನು ಪ್ರಾರ್ಥಿಸಿ ವೈಕುಂಠದಾಸರೇ ಅವರಿಗೆ ದೃಷ್ಟಿದಾನ ನೀಡಿದರಂತೆ. ಅಚ್ಯುತದಾಸರು ವೈಕುಂಠದಾಸರನ್ನು ಮಹಾಮಹಿಮರೆಂದು ಸ್ತುತಿಸಿರುವ ಕೃತಿಯೊಂದು ಇದೆ.

ಉಡುಪಿಯ ಸೋದೆ ಮಠದ ಗುರುಗಳಾದ ವಾದಿರಾಜರು ಬೇಲೂರಿಗೆ ಬಂದಾಗ ವೈಕುಂಠದಾಸರೊಂದಿಗೆ ಹಲವು ಕಾಲ ಇದ್ದರೆಂದು ಪ್ರತೀತಿ. ಅವರು ವೈಕುಂಠದಾಸರನ್ನು ಕುರಿತು ವೇಲಾಪುರದರಸನ ಪ್ರತಿಬಿಂಬರಾದ ವೈಕುಂಠ ದಾಸೋತ್ತಮ, ಎನಗೆ ಶ್ರೀಹರಿಯನ್ನು ತೋರಿ ಧನ್ಯ ಮಾಡಿದೆ ಎಂದು ಹಾಡಿದ್ದಾರೆ. ವೈಕುಂಠದಾಸರು ವಾದಿರಾಜರನ್ನು ಕುರಿತು ಸ್ತೋತ್ರ ಮಾಡಿರುವ ಕೃತಿಗಳೂ ಇವೆ. ಸುಮಾರು ಎಪ್ಪತ್ತು ವರ್ಷಗಳಷ್ಟು ಕಾಲ ಬೇಲೂರಿನಲ್ಲಿ ವೈರಾಗ್ಯಭಕ್ತಿಪ್ರಧಾನವಾದ ಆಧ್ಯಾತ್ಮಿಕ ಬದುಕನ್ನು ಬಾಳಿ ಮಹಿಮಾಪುರುಷರೂ ಪವಾಡಪುರುಷರೂ ಲೋಕೋಪಕಾರಿಗಳೂ ಎಂದು ಪ್ರಸಿದ್ಧರಾದ ವೈಕುಂಠದಾಸರು ಕನ್ನಡದಲ್ಲಿ ನೂರಾರು ಕೃತಿಗಳನ್ನು ರಚಿಸಿರುವರಾದರೂ ಅವುಗಳ ಶೋಧನೆ ಪ್ರಕಟಣೆ ಇನ್ನೂ ಆಗಬೇಕಾಗಿದೆ.

ದಾಸರಿಗೆ ಒಬ್ಬ ಹೆಣ್ಣುಮಗಳು ಇದ್ದಂತೆ ತಿಳಿಯುತ್ತದೆ. ಇವರು ಹೇಳುತ್ತಿದ್ದ ಕೀರ್ತನೆಗಳನ್ನು ಇವರ ಶಿಷ್ಯ ವರದನೆಂಬುವನ ತಾಳೆಯೋಲೆಯಲ್ಲಿ ಬರೆದಿಡುತ್ತಿದ್ದನಂತೆ. **(ಕೆ.ಎಂ.ಕೆ.)**

**ವೈಕುಂಠ ಬಾಳಿಗ, ಬಿ.:** 1895– . ವಿಧಾನ ಸಭೆಯ ಮಾಜಿ ಅಧ್ಯಕ್ಷರು; ಸ್ವಾತಂತ್ರ್ಯ ಹೋರಾಟಗಾರರು. ಇವರು ದಕ್ಷಿಣ ಕನ್ನಡ ಜಿಲ್ಲೆ ಬಂಟವಾಳದಲ್ಲಿ 1895 ಏಪ್ರಿಲ್ 10ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಸಮೀಪದ ಮಂಗಳೂರಿನಲ್ಲಿ ಪಡೆದು ಇಂಟರ್ ಮೀಡಿಯೆಟ್‌ವರೆಗೂ ವ್ಯಾಸಂಗ ಮಾಡಿದರು. ಮುಂದೆ ಮದರಾಸಿನಲ್ಲಿ ಬಿ.ಎ. ಪದವಿ ಶಿಕ್ಷಣ ಮುಗಿಸಿ ವಿಶ್ವವಿದ್ಯಾಲಯಕ್ಕೇ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾದರು. ಇದರಿಂದ ಇವರಿಗೆ 1916–17ನೆಯ ಸಾಲಿನ ಮ್ಯಾಕ್‌ಡೊನಾಲ್ಡ್ ಚಿನ್ನದ ಪದಕ ಲಭಿಸಿತು. ಅನಂತರ ಮದರಾಸಿನಲ್ಲಿ ಕಾನೂನು ಶಿಕ್ಷಣ ವ್ಯಾಸಂಗ ಮಾಡಿ ಬಿ.ಎಲ್. ಪದವಿ ಪಡೆದರು. ಮಂಗಳೂರಿನಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿ ಜನಪ್ರಿಯ ವ್ಯಕ್ತಿಯಾದರು.

1926ರಲ್ಲಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್‌ನ ನಿರ್ದೇಶಕರಾಗಿ ನೇಮಕವಾಗಿ 1957ರವರೆಗೂ ಆ ಹುದ್ದೆಯಲ್ಲಿ ಮುಂದುವರಿದರು. ಮಂಗಳೂರಿನ ದೀನಬಂಧು ಸೇವಾಸಂಘದ ಅಧ್ಯಕ್ಷರಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡರು. ಜಿಲ್ಲಾ ಬೋರ್ಡ್ ಪಕ್ಷದ ನಾಯಕರಾಗಿ ಜವಾಬ್ದಾರಿ ನಿರ್ವಹಿಸಿದರು. 1952ರಲ್ಲಿ ಮದರಾಸು ಪ್ರಾಂತದ ವಿಧಾನಸಭೆಗೆ ಪಾಣಿ ಮಂಗಳೂರು ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರು. ಮದರಾಸು ಸರ್ಕಾರ ರಚಿಸಿದ ವಿವಿಧ ಶಾಸಕಾಂಗ ಸಮಿತಿಗಳಲ್ಲಿ ಕೆಲಸ ಮಾಡಿ ಸಂಸದೀಯ ನಡಾವಳಿಯ ಬಗ್ಗೆ ಅನುಭವ ಪಡೆದರು. ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಜಿಲ್ಲೆಯ ಏಳಿಗೆಗೆ ಶ್ರಮಿಸಿದರು.

ಭಾಷಾವಾರು ಪ್ರಾಂತ ರಚನೆಯಾದಾಗ 1957ರ ಸಾರ್ವತ್ರಿಕ ಚುನಾವಣೆಯಲ್ಲಿ ಮಂಗಳೂರು (I) ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ವಿಶಾಲ ಮೈಸೂರು ರಾಜ್ಯದ ಶಾಸನಸಭೆ ಪ್ರವೇಶಿಸಿದರು. ಇವರ ಹಿರಿತನ, ಅನುಭವ ಮತ್ತು ದಕ್ಷತೆಗಳಿಂದಾಗಿ ಇವರಿಗೆ ಸಚಿವರಾಗುವ ಅವಕಾಶ ದೊರೆಯಿತು. ಕಾರ್ಮಿಕ ಮತ್ತು ಕಾನೂನು ಖಾತೆ ನಿರ್ವಹಿಸಿದರು (1957 ಏಪ್ರಿಲ್–1958 ಮೇ). ಮತ್ತೆ ಅನಂತರ ಮತ್ತೆ ಇದೇ ಖಾತೆಯನ್ನು 1961ರ ಫೆಬ್ರವರಿಯಿಂದ 1962ರ ಮಾರ್ಚ್‌ವರೆಗೆ ನೋಡಿಕೊಂಡರು.

ಇವರದು ಮಾಗಿದ ವ್ಯಕ್ತಿತ್ವ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ವಿವಿಧ ಬ್ಯಾಂಕಿಂಗ್ ಸಂಸ್ಥೆಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಇವರು ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪನಿಯ ನಿರ್ದೇಶಕ ಮಂಡಳಿಯ ಅಧ್ಯಕ್ಷರಾಗಿ, ಕೆನರಾ ಮ್ಯೂಚ್ಯುಯಲ್ ಅಶ್ಯೂರೆನ್ಸ್ ಕಂಪನಿಯ ಅಧ್ಯಕ್ಷರಾಗಿ ಅವುಗಳ ಅಭಿವೃದ್ಧಿಗೆ ಕಾರಣರಾದರು. ಕೆನರಾ ಛೇಂಬರ್ ಆಫ್ ಕಾಮರ್ಸ್‌ನ ಆಜೀವ ಗೌರವ ಸದಸ್ಯರಾಗಿ ಮತ್ತು ಒಂದು ವರ್ಷದ ಅವಧಿಗೆ ಅಧ್ಯಕ್ಷರಾಗಿ ಹಾಗೂ ಜನರಲ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ನ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದರು. ಇದೇ ಅವಧಿಯಲ್ಲಿ ಮಣಿಪಾಲದ ಸಾಮಾನ್ಯ ಶಿಕ್ಷಣ ಅಕಾಡೆಮಿಯ ಅಧ್ಯಕ್ಷರಾಗಿ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಬೆಳೆಸಿದರು. ಮಣಿಪಾಲದಲ್ಲಿ ವೃತ್ತಿ ಶಿಕ್ಷಣಕ್ಕೆ ಮಹತ್ವದ ಸ್ಥಾನ ದೊರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ರಾಜಕೀಯ, ಸಾಮಾಜಿಕ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಎಡೆಬಿಡದೆ ತೊಡಗಿಕೊಂಡದ್ದು ಬಾಳಿಗರ ಹೆಗ್ಗಳಿಕೆ. ಇವರು 1962ರ ವಿಧಾನಸಭಾ ಚುನಾವಣೆಯಲ್ಲಿ ಬೆಳ್ತಂಗಡಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಗಳಿಸಿದು. ಅದೇ ವರ್ಷ ಮಾರ್ಚ್ 15ರಂದು ವಿಧಾನ ಸಭಾಧ್ಯಕ್ಷರಾಗಿ ಆಯ್ಕೆಗೊಂಡರು. ಅಜಾತಶತ್ರುವೆಂದೇ ಹೆಸರು ಮಾಡಿದ್ದ ಇವರು ಕರ್ನಾಟಕ ವಿಧಾನಸಭೆ ಕಂಡ ಅತ್ಯಂತ ದಕ್ಷ ಅಧ್ಯಕ್ಷರ ಸಾಲಿನಲ್ಲಿ ಮೊದಲಿಗರಾಗಿ ದಾಖಲೆ ನಿರ್ಮಿಸಿದರು. ಇವರ ಕಾಲದ ಕಲಾಪಗಳಲ್ಲಿನ ಅಚ್ಚುಕಟ್ಟುತನ ಮತ್ತು ಇವರು ತೆಗೆದುಕೊಳ್ಳುತ್ತಿದ್ದ ನಿಷ್ಪಕ್ಷಪಾತ ನಿರ್ಧಾರಗಳ ಬಗ್ಗೆ ಅನಂತರದ ದಶಕಗಳಲ್ಲಿ ಶಾಸನ ಸಭೆಯಲ್ಲಿ ವಿಶೇಷವಾಗಿ ಪ್ರಸ್ತಾಪವಾಗುತ್ತಿದ್ದದ್ದು ಇವರ ಕಾರ್ಯಕ್ಷಮತೆಯ ಪ್ರತೀಕವಾಗಿದೆ. ಅಧ್ಯಕ್ಷ ಸ್ಥಾನಕ್ಕೆ ಬಾಳಿಗರು ಒಂದು ಘನತೆ ತಂದುಕೊಟ್ಟರು. 1967ರ ಚುನಾವಣೆಯಲ್ಲಿ ಬೆಳ್ತಂಗಡಿ ಕ್ಷೇತ್ರದಿಂದ ವಿಧಾನ ಸಭೆಗೆ ಚುನಾಯಿತರಾದರು. ಎಲ್ಲ ಪಕ್ಷಗಳ ಮೆಚ್ಚುಗೆಗೆ ಪಾತ್ರರಾಗಿದ್ದ ಇವರು ಮತ್ತೆ ಸಭಾಧ್ಯಕ್ಷ ಸ್ಥಾನವನ್ನೇ ಅಲಂಕರಿಸಿದರು; ಇದರಲ್ಲಿ 1968ರ ಜೂನ್ 6ರವರೆಗೂ ಮುಂದುವರಿದರು. ಒಂದು ಉನ್ನತ ಸಂಸದೀಯ ಪರಂಪರೆ ಸೃಷ್ಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. *

**ವೈದಿಕಧರ್ಮ:** ಈ ಲೇಖನದಲ್ಲಿ ಕರ್ನಾಟಕದಲ್ಲಿ ವೈದಿಕಧರ್ಮದ ಸೂಕ್ಷ್ಮಾವಲೋಕನ ಮಾಡಿ ಅನಂತರ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತದ ಬಗ್ಗೆ ಕಿರುಲೇಖನಗಳನ್ನು ಅಳವಡಿಸಿದೆ.

ವೈದಿಕಧರ್ಮ ಎಂದರೆ ವೇದಾನುಸಾರಿಯಾದ ಅಥವಾ ವೇದೋಕ್ತ ಧರ್ಮ ಎಂದು ಅರ್ಥವಾಗುತ್ತದೆ. ಭಾರತೀಯರು ತಮ್ಮ ಧರ್ಮ ಮತ ಸಂಪ್ರದಾಯಗಳ ಮೂಲವನ್ನು ವೇದಗಳಲ್ಲಿ ಅರಸುತ್ತಾರೆ. ವೇದಗಳನ್ನು ಅಪೌರುಷೇಯವೆಂದೂ ಅವು ದೋಷರಹಿತವಾದ ಸ್ವತಃ ಪ್ರಮಾಣಗಳೆಂದೂ ನಂಬಿದ್ದಾರೆ. ಆದುದರಿಂದ ವೇದೋಕ್ತವಾದುದೇ ಧರ್ಮ, ಅದಕ್ಕೆ ವಿರುದ್ಧವಾದುದೆಲ್ಲವೂ ಅಧರ್ಮ ಎಂಬ ಭಾವನೆಯೂ ಅವರಲ್ಲಿದೆ.

ವೇದಗಳಲ್ಲದೆ ವೈದಿಕ ವಾಙ್ಮಯದಲ್ಲಿ ಬ್ರಾಹ್ಮಣ, ಅರಣ್ಯಕ, ಉಪನಿಷತ್ತುಗಳು; ವೇದಾಂಗಗಳೆಂದು ಪ್ರಸಿದ್ಧವಿರುವ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಹಾಗೂ ಕಲ್ಪಸೂತ್ರಗಳು; ವೇದಾರ್ಥವನ್ನು ಜನತೆಗೆ ಸುಲಭವಾಗಿ ತಿಳಿಸುವುದಕ್ಕಾಗಿ ರಚಿತವಾದುವೆಂದು ನಂಬಿರುವ ಭಾರತ, ರಾಮಾಯಣಗಳು; ಕಾಲಪ್ರಭಾವಕ್ಕೊಳಗಾಗಿ ಲುಪ್ತವಾಗಿ ಹೋಗಿರುವ ವೇದಮಂತ್ರಗಳನ್ನು ಸ್ಮರಿಸಿಕೊಂಡು ಬರೆಯಲಾಗಿರುವ ಸ್ಮೃತಿಗ್ರಂಥಗಳು, ಹದಿನೆಂಟು ಪುರಾಣಗಳು; ಇತ್ತೀಚೆಗೆ ಅಂದರೆ ಐತಿಹಾಸಿಕ ಯುಗಕ್ಕೆ ಸೇರಿದ ಭಾಷ್ಯ, ಟೀಕಾ, ಟಿಪ್ಪಣಿ ಗ್ರಂಥಗಳು– ಹೀಗೆ ವೈದಿಕ ವಾಙ್ಮಯ ವಿಪುಲವಾಗಿದೆ. ಇವುಗಳಲ್ಲಿ ಪ್ರಾಚೀನತಮವೆಂದು ನಿರ್ವಿವಾದವಾಗಿ ನಂಬಲಾಗಿರುವ ಋಗ್ವೇದ ಇಡೀ ಮಾನವ ಜನಾಂಗದ ಪ್ರಾಚೀನತಮ ಗ್ರಂಥವಾಗಿವೆ.

ಭಾರತೀಯರು ವೇದಗಳನ್ನು ಅನಾದಿನಿತ್ಯವೆಂದು ನಂಬಿರುವುದರಿಂದ ತಮ್ಮ ಧರ್ಮವನ್ನು ಸನಾತನಧರ್ಮವೆಂದು ಕರೆದಿರುತ್ತಾರೆ. ಭಾರತವನ್ನು ಹಿಂದು ದೇಶವೆಂದು ಕರೆಯುವುದು ವಾಡಿಕೆಯಾದ ಮೇಲೆ ಇಲ್ಲಿನ ಬಹುಸಂಖ್ಯಾತರ ಧರ್ಮವನ್ನು ಹಿಂದು ಧರ್ಮವೆಂದು ಕರೆಯುತ್ತಾರೆ. ಅಂತೆಯೇ ಈ ಧರ್ಮಕ್ಕೆ ಆಕರವಾದ ವೇದಾದಿ ವಾಙ್ಮಯವನ್ನು ವಂಶಪಾರಂಪರ್ಯವಾಗಿ ಅಭ್ಯಾಸ ಮಾಡುತ್ತ ಬಂದವರು ಬ್ರಾಹ್ಮಣರಾದ್ದರಿಂದ ಈ ಧರ್ಮವನ್ನು ಜೈನಬೌದ್ಧಾದಿ ಧರ್ಮದಿಂದ ಭಿನ್ನವಾಗಿ ಗುರುತಿಸಲು ಬ್ರಾಹ್ಮಣಧರ್ಮ ಎಂದು ಹೆಸರಿಸಿಸುವುದೂ ವಾಡಿಕೆ, ಒಟ್ಟಿನಲ್ಲಿ ವೈದಿಕ ಧರ್ಮ, ಸನಾತನಧರ್ಮ, ಹಿಂದು ಧರ್ಮ, ಬ್ರಾಹ್ಮಣ ಧರ್ಮ ಎಲ್ಲವೂ ಪರ್ಯಾಯವಾಚಿಗಳಾಗಿವೆ.

ಕರ್ನಾಟಕದಲ್ಲಿ ವೈದಿಕ ಧರ್ಮ ಎಂದು ಹೇಗೆ ಬಂದಿತೆಂದು ಹೇಳಲು ಖಚಿತವಾದ ದಾಖಲೆಗಳು ಪುರಾವೆಗಳು ಇಲ್ಲ. ಭಾರತದ ಅವಿಭಾಜ್ಯ ಅಂಗವಾದ ಕರ್ನಾಟಕ ಪ್ರಾಗೈತಿಹಾಸಿಕ ಕಾಲದಿಂದಲೂ ವೈದಿಕಧರ್ಮದ ಪ್ರಭಾವಕ್ಕೆ ಒಳಗಾಗಿತ್ತೆಂದು ಹೇಳಬಹುದು. ವೇದೋಕ್ತವಾದ ಅನೇಕ ಐತಿಹ್ಯಗಳು ಹಾಗೂ ಆಖ್ಯಾಯಿಕೆಗಳು ತಲೆತಲಾಂತರದಿಂದ ಕನ್ನಡನಾಡಿನ ಜನರಲ್ಲಿ ಜೀವನ ಶ್ರದ್ಧೆ ಮತ್ತು ಚೈತನ್ಯವನ್ನು ತುಂಬುತ್ತ ಬಂದಿವೆ.

ಇದರಂತೆ ರಾಮಾಯಣ, ಮಹಾಭಾರತ ಹಾಗೂ ಪುರಾಣಗಳೂ ತಮ್ಮ ಅಚ್ಚಳಿಯದ ಪ್ರಭಾವವನ್ನು ರಾಜಕೀಯ ಸ್ವರೂಪ, ಆಡಳಿತ, ಗೃಹಕೃತ್ಯ, ಕಲೆ, ಶಿಲ್ಪ ಮುಂತಾದುವುಗಳ ಮೇಲೆ ಬೀರಿರುವುದನ್ನು ಗಮನಿಸಬಹುದಾಗಿದೆ.

ಕರ್ನಾಟಕದ ಸ್ಥಳಪುರಾಣಗಳು ಮತ್ತು ಸ್ಥಳಗಳ ಹೆಸರುಗಳ ಅಧ್ಯಯನ ಮಾಡಿದರೆ ಪ್ರಾಗೈತಿಹಾಸಿಕ ಆ ಕಾಲದಿಂದಲೂ ವೈದಿಕ ಹಾಗೂ ಪೌರಾಣಿಕ ಆಖ್ಯಾಯಿಕೆಗಳ ಸಮರ್ಥನೆ ದೊರೆಯುತ್ತದೆ. ಗಾಲವ ಋಷಿಗಳ ಸಂಬಂಧವನ್ನು ಗಲಗಲಿಗೆ ಜನ ಹಚ್ಚಿದ್ದಾರೆ. ಮಾಂಡವ್ಯ ಋಷಿಗಳು ತುಂಗಾ ನದಿಯ ನಡು ದಿಬ್ಬ ಒಂದರಲ್ಲಿ ಆಶ್ರಮ ಮಾಡಿಕೊಂಡಿದ್ದರೆಂದು ಇಂದಿಗೂ ಮಂಡಗದ್ದೆಯಲ್ಲಿ ಆ ದಿಬ್ಬವನ್ನು ತೋರಿಸಿ ಹೇಳುತ್ತಾರೆ. ಅಗಸ್ತ್ಯರಿಂದ ಹತನಾದ ವಾತಾಪಿ ಎಂಬ ದೈತ್ಯನ ನೆನಪನ್ನು ಬಾದಾಮಿ ಎಂಬ ಸ್ಥಳ ಮಾಡಿಕೊಡುತ್ತದೆ. ಅಗಸ್ತ್ಯಯರ ಕಮಂಡಲದಲ್ಲಿದ್ದ ಗಂಗೆಯೇ ಕಾವೇರಿ ನದಿಯಾಗಿ ಹರಿಯುತ್ತಿರುವಳೆಂಬ ನಂಬಿಕೆಯಿದೆ. ಪರಶುರಾಮ ಕ್ಷೇತ್ರವೆಂದು ಪಶ್ಚಿಮ ಕರಾವಳಿ ಕ್ಷೇತ್ರ ಪ್ರಸಿದ್ಧವಿದೆ. ತೀರ್ಥಹಳ್ಳಿ ಎಂಬಲ್ಲಿರುವ ತುಂಗಾನದಿಯ ರಾಮತೀರ್ಥದಲ್ಲಿ ಪರಶುರಾಮ ತನ್ನ ಕೊಡಲಿಯನ್ನು ತೊಳೆದಾಗ ಅದಕ್ಕೆ ಅಂಟಿಕೊಂಡಿದ್ದ ಮಾತೃಹತ್ಯಾ ಪಾಪದ ಸಂಕೇತವಾದ ರಕ್ತದ ಕಲೆ ಅಳಿಸಿಹೋಯಿತೆಂದು ಇಂದಿಗೂ ಅಲ್ಲಿ ಎಳ್ಳಮಾವಾಸ್ಯೆ ಎಂಬ ಜಾತ್ರೆಯನ್ನು ನಡೆಸುತ್ತಾರೆ.

ರಾಮಾಯಣದ ಸಂಬಂಧವಂತೂ ಇಲ್ಲಿನ ಅನೇಕ ಸ್ಥಳಗಳೊಂದಿಗೆ ಇರುವುದು ಸುಸ್ಪಷ್ಟ. ಕರ್ನಾಟಕದ ಅನೇಕ ಭಾಗಗಳಲ್ಲಿ ವಾಲ್ಮೀಕಿಯ ಆಶ್ರಮವನ್ನು ಗುರುತಿಸಲಾಗಿದೆ. ಉದಾಹರಣೆಗೆ ಕೋಲಾರ ಜಿಲ್ಲೆ ಅವನಿ ಎಂಬಲ್ಲಿ ಲವಕುಶರ ಜನ್ಮವಾಗಿತ್ತೆಂದೂ ಅಲ್ಲೇ ರಾಮನ ಅಶ್ವಮೇಧದ ಕುದುರೆಯನ್ನು ಕಟ್ಟಿಹಾಕಿದ್ದರೆಂದೂ ಐತಿಹ್ಯ. ಅಂಜನೀಪರ್ವತ, ಪಂಪಾ ಸರೋವರ, ವಾಲೀ ದಿಬ್ಬ, ಕಿಷ್ಕಿಂಧೆ (ಈಗಿನ ಆನೆಗೊಂದಿ), ಮತಂಗ, ಋಷ್ಯಮೂಕ, ಮರುವಸಿ (ಮಹಿಷೀ ಸಮೀಪದಲ್ಲಿದೆ), ಜಟಿಂಗರಾಮೇಶ್ವರ ಗುಡ್ಡ–ಇವೆಲ್ಲವೂ ರಾಮಾಯಣದ ನೆನಹನ್ನು ಜೀವಂತವಾಗಿಟ್ಟಿವೆ. ಗೋಕರ್ಣೇಶ್ವರನ ಸಂಬಂಧಲ್ಲಿರುವ ಐತಿಹ್ಯ ರಾವಣಾಸುರನ ಶಿವಭಕ್ತಿಗೂ ದುಷ್ಟರ ಇಷ್ಟಾರ್ಥಕ್ಕೆ ವಿಘ್ನವನ್ನು ತಂದೊಡ್ಡುವ ವಿಘ್ನೇಶ್ವರನ ಮಹಿಮೆಗೂ ಸಾಕ್ಷೀಭೂತವಾಗಿದೆ.

ಇದರಂತೆ ಮಹಾಭಾರತದ ಸವಿನೆನಪಿನೊಡನೆ ಚೈತನ್ಯಭರಿತವಾಗಿರುವ ಹಲವಾರು ಪ್ರದೇಶಗಳಿವೆ. ಧಾರವಾಡ ಜಿಲ್ಲೆಯ ಹಾನಗಲ್ಲು ವಿರಾಟನ ರಾಜಧಾನಿಯಾಗಿತ್ತೆಂದು ಐತಿಹ್ಯ. ಚಿತ್ರದುರ್ಗದೊಂದಿಗೆ ಹಿಡಿಂಬಾಸುರನ ಸಂಬಂಧವನ್ನೂ ಕೋಲಾರ ಜಿಲ್ಲೆಯ ಕೈವಾರದ ಬಳಿಯ ಬೆಟ್ಟಕ್ಕೆ ಬಕಾಸುರನ ಸಂಬಂಧವನ್ನೂ ಹೇಳುತ್ತಾರೆ. ಶೃಂಗೇರಿ, ಹರಿಹರ, ಶಿವಮೊಗ್ಗೆಯ ಬಳಿ ಇರುವ ಹರಕೇರಿ ಕ್ಷೇತ್ರಗಳಲ್ಲಿ ಋಷ್ಯಶೃಂಗರನ್ನು ಕರೆತರುವಾಗ ಭೀಮಸೇನ ಸಹಸ್ರಲಿಂಗವನ್ನು ಒಡಮೂಡುವಂತೆ ಮಾಡಿದ್ದನೆಂದು ಪ್ರತೀತಿ. ಭೀಮನಕೋಣೆ, ಭೀಮನಮಡು, ಭೀಮನಕಲ್ಲು ಮುಂತಾದ ಹೆಸರುಗಳು ಪಾಂಡವಮಧ್ಯಮನೊಡನೆ ಸಂಬಂಧ ಹೊಂದಿದ್ದವೆಂಬುದು ಸ್ಥಳಪುರಾಣ. ಇಂಥ ಐಗಿಹ್ಯ ಆಖ್ಯಾಯಿಕೆಗಳನ್ನು ಸಮರ್ಥಿಸುವ ಅನೇಕ ಸ್ಥಳಗಳ ಹೆಸರನ್ನು ಉದಾಹರಿಸುತ್ತ ಹೋಗಬಹುದು.

ವೇದೋಕ್ತ ಯಜ್ಞಯಾಗಾದಿಗಳು ಕರ್ನಾಟಕದಲ್ಲಿ ಪ್ರಚಲಿತವಿದ್ದ ವೆಂಬುದಕ್ಕೆ ಅನೇಕ ಹೆಸರುಗಳು ಸಾಕ್ಷಿಗಳಾಗಿವೆ. ಉದಾ: ಇಟ್ಟಗಿ (ಇಷ್ಟಿಕಾ) ಎಂಬ ಊರಿನ ಹೆಸರು. ಅಲ್ಲಿ ನಡೆಸಿದ ಉತ್ಖನನದಿಂದ ಅಲ್ಲಿ ಗರುಡಚಯನ ಮತ್ತು ಅಗ್ನಿಷ್ಟೋಮ ಯಾಗಗಳು ನಡೆದಿದ್ದವೆಂಬುದಕ್ಕೆ ಇಟ್ಟಗಿಯ ಕುಳಿಯಲ್ಲಿ ದೊರೆತ ಉಖಪಾತ್ರದಿಂದ ಸಮರ್ಥನೆ ದೊರೆಯುತ್ತದೆ. ಯೂಪಸ್ತಂಭಗಳು ಕರ್ನಾಟಕದ ಹಲವೆಡೆಗಳಲ್ಲಿವೆ.

ಕರ್ನಾಟಕದಲ್ಲಿ ಪ್ರಚಲಿತವಿದ್ದ ಜನಪದ, ಮಹಾಜನಪದ, ಮಹಾಜನ ಹಾಗೂ ದೈವವೆಂಬ ಸಂಸ್ಥೆಗಳು ವೈದಿಕ ಕಾಲದಿಂದಲೂ ಗ್ರಾಮದ ಆಡಳಿತ ನಡೆದು ಬಂದ ಕ್ರಮವನ್ನು ಸೂಚಿಸುತ್ತವೆ. ಪ್ರಾಚೀನ ಕನ್ನಡ ಶಾಸನಗಳಲ್ಲಿ ಕಂಡು ಬರುವ ಪದಿನೆಣ್ಬರುಂ ಪದಿನಾರ್ವರುಂ ಕಾಪಾಡುವರ್ ಎಂಬ ವಿಧಿ ವೈದಿಕ ಬೌದ್ಧ ರೀತಿಯಲ್ಲಿ ಭಾರತವನ್ನು ಹದಿನೆಂಟು ಹಾಗೂ ಹದಿನಾರು ಸಮಾನಾಧಿಕಾರವುಳ್ಳ ಜನಪದಗಳಾಗಿ ವಿಭಾಗಿ ಸಿದ್ದುದನ್ನು ಸಮರ್ಥಿಸುತ್ತದೆ.

ಕರ್ನಾಟಕದ ರಾಜಕೀಯ ಇತಿಹಾಸ ಕ್ರಿ.ಪೂ. ಎರಡನೆಯ ಶತಮಾನ ದಿಂದ ಆರಂಭವಾಗುತ್ತದೆ. ಆಗ ಸಾತವಾಹನರು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಇವರ ಅನಂತರ ಕರ್ನಾಟಕದ ದೊರೆಮನೆತನಗಳಲ್ಲಿ ವೈಜಯಂತಿಯಲ್ಲಿ (ಬನವಾಸಿ) ಆಳಿದ ಕದಂಬರ ಹೆಸರು ಬರುತ್ತದೆ. ನಾನಾಂಕನೆಂಬ ದೊರೆಯ ನಾನಾಘಾಟ್ ಶಾಸನ ವೈದಿಕ ಹಾಗೂ ಪೌರಾಣಿಕ ದೇವರುಗಳ ನಮಸ್ಕಾರದೊಡನೆ ಪ್ರಾರಂಭವಾಗುತ್ತದೆ. ಧರ್ಮ, ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರ, ಸೂರ್ಯ, ಯಮ, ವರುಣ, ಕುಬೇರ ಮತ್ತು ವಾಸವ–ಇವರ ಹೆಸರು ಆ ಶಾಸನದಲ್ಲಿದೆ. ನಾಸಿಕದ ಪುಳಮಾಮಿಯ ಶಾಸನದಲ್ಲಿ ಸಾತಕರ್ಣಿಯನ್ನು ರಾಮ ಕೇಶವ ಭೀಮಾದಿ ಗಳಂತೆ ಪರಾಕ್ರಮಿ ಎಂದು ವರ್ಣಿಸಲಾಗಿದೆ. ಒಟ್ಟಿನಲ್ಲಿ ಐತಿಹಾಸಿಕ ಯುಗ ಪ್ರಾರಂಭವಾಗುವುದಕ್ಕೆ ಮೊದಲು ರಾಜಮನೆತನಗಳ ಮೇಲೆ ವೈದಿಕ ಹಾಗೂ ಪೌರಾಣಿಕ ಮತಗಳ ಪ್ರಭಾವವಿತ್ತೆಂದು ಹೇಳಬಹುದು. ಕದಂಬರು, ವೈದಿಕ ಋಷಿಗಳ ಸಂತತಿಯುವರೆಂದು ಕೊಂಡಿದ್ದಾರೆ. ತಲಕಾಡಿನ ಗಂಗರು, ಬಾದಾಮಿ ಮತ್ತು ಕಲ್ಯಾಣದ ಚಾಳುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಳಚುರಿಗಳು, ಯಾದವರು, ಹೊಯ್ಸಳರು ಮುಂತಾದವರೆಲ್ಲರೂ ತಮ್ಮ ವಂಶದ ಮೂಲಪುರುಷ ಯಾವುದಾದರೊಬ್ಬ ವೈದಿಕ ದೇವತೆ ಅಥವಾ ಋಷಿ ಅಥವಾ ದೇವಾಂಶ ಸಂಜಾತ ಎಂದು ಹೇಳಿರುವುದು ಶಾಸನಗಳಿಂದ ಸಮರ್ಥಿತವಾಗುತ್ತದೆ. ಅಂತೆಯೇ ರಾಜಚಿಹ್ನೆ ಗಳು ಹಾಗೂ ನಾಣ್ಯಗಳ ಅಧ್ಯಯನದಿಂದಲೂ ವೈದಿಕ ಸಂಸ್ಕೃತಿಯ ಪ್ರಭಾವ ಸಿದ್ಧವಾಗುತ್ತದೆ. ಸಿಂಹವಾಹಿನಿಯನ್ನು ಪ್ರತಿನಿಧಿಸುವ ಸಿಂಹ, ವಿಷ್ಣುವಿನ ವಾಹನವಾದ ಗರುಡ, ರಾಮಭಕ್ತನಾದ ಹನುಮಂತ, ವಿಷ್ಣುವಿನ ಆಯುಧವಾದ ಸುದರ್ಶನಚಕ್ರ, ಶಿವನ ತ್ರಿಶೂಲ, ಭೂಮಿಯನ್ನು ಸಮುದ್ರದ ಅಡಿಯಿಂದ ಮೇಲೆ ತಂದಿಟ್ಟ ವರಾಹ–ಇವುಗಳ ಚಿಹ್ನೆಗಳೇ ಇದಕ್ಕೆ ಸಾಕ್ಷಿ. ಹೀಗಿರುವಾಗ ಆಗಿನ ಜನಜೀವನದ ಮೇಲೆ ವೈದಿಕ ಧರ್ಮವೂ ತದನುಸಾರಿಯಾದ ಪೌರಾಣಿಕ ಧರ್ಮವು ಸಾಕಷ್ಟು ಮಹತ್ತ್ವದ ಪ್ರಭಾವ ಬೀರಿದ್ದವೆಂದು ಸಮರ್ಥಿತವಾಗುತ್ತದೆ.

ಚುಟುಕುಲಾನಂದ ಸಾತಕರ್ಣಿಯ ಮಳವಳ್ಳಿ ಶಾಸನದ ಪ್ರಕಾರ ಬ್ರಹ್ಮದೇಯದಾನವನ್ನು ಕೌಂಡಿಣ್ಯ ಗೋತ್ರದ ಕೊಂಡಮಾನ ಎಂಬುವನಿಗೆ ಕೊಡಲಾಗಿತ್ತು. ಇದರಿಂದ ಗೋತ್ರ ವ್ಯವಸ್ಥೆ ಕೂಡ ಕರ್ನಾಟಕದಲ್ಲಿ ಪ್ರಾಕ್ತನವಾದುವೆಂದು ತಿಳಿದುಬರುತ್ತದೆ.

ಪ್ರಾಗೈತಿಹಾಸಿಕ ಕಾಲದಿಂದಲೂ ಕರ್ನಾಟಕದಲ್ಲಿ ಶಿವಸರ್ವೋತ್ತಮತ್ವ ವನ್ನು ಪ್ರತಿಪಾದಿಸುವ ವೈದಿಕ ಶೈವಮತ ಇದ್ದಿತೆಂದು ಐತಿಹ್ಯಗಳಿಂದಲೂ ರಾಮಾಯಣ ಮಹಾಭಾರತಗಳಿಂದಲೂ ತಿಳಿದುಬರುತ್ತದೆ. ಇಲ್ಲಿ ದೊರೆತಿರುವ ನಾಣ್ಯಗಳು, ವಾಸ್ತುಶಿಲ್ಪಗಳು, ಶಿವಲೀಲೆಯನ್ನು ಚಿತ್ರಿಸುವ ಭಿತ್ತಿಚಿತ್ರಗಳು ಮತ್ತು ಉಪಲಬ್ಧ ಸಾಹಿತ್ಯದಲ್ಲಿ ದೊರೆಯುವ ಮಾಹಿತಿ ಗಳಿಂದಲೂ ಸಮರ್ಥಿತವಾಗುತ್ತದೆ. ಕರ್ನಾಟಕದ ಆದಿಕದಂಬರು ತ್ರಿಣೇತ್ರ

ಅಥವಾ ಮುಕ್ಕಣ್ಣ ಕದಂಬರಿಂದ ತಮ್ಮ ವಂಶ ಪ್ರಾರಂಭವಾಯಿತೆಂದು ಹೇಳುತ್ತಾರೆ. ತಾಳಗುಂದದ ಶಾಸನ ನಮಃಶಿವಾಯ ಎಂದು ಪ್ರಾರಂಭವಾಗುತ್ತದೆ. ಬಾದಾಮಿಯ ಚಳುಕ್ಯರು ಶೈವಾಗಮಕ್ಕೆ ಆಶ್ರಯದಾತರಾಗಿದ್ದರು. ನಟರಾಜ, ಹರಿಹರ, ಅರ್ಧನಾರೀಶ್ವರ ಮತ್ತು ಮಹಿಷಾಸುರಮರ್ದಿನಿ–ಈ ಮೂರ್ತಿಗಳು ಪೂಜಿಸಲ್ಪಡುತ್ತಿದ್ದುವೆಂದು ತೋರುತ್ತದೆ.

ಶೈವಪಂಥದಲ್ಲಿ ಲಕುಲೀಶನಿಂದ ಸ್ಥಾಪಿತವಾದದ್ದೇ ಹಳೆಯದು. ಈ ಮತ ಕರ್ನಾಟಕದಲ್ಲಿ ಆರನೆಯ ಶತಮಾನದಿಂದ ಹದಿನೈದನೆಯ ಶತಮಾನದವರೆಗೂ ಅತ್ಯಂತ ಪ್ರಭಾವಶಾಲಿಯಾಗಿಯೂ ಜನಪ್ರಿಯವಾಗಿಯೂ ಇತ್ತೆಂಬುದು ಶಾಸನಾಧಾರಗಳಿಂದ ಸಮರ್ಥಿತವಾಗುತ್ತದೆ. ಲಕುಲೀಶನಿಗೆ ಸಮರ್ಪಿತವಾದ ಒಂದು ದೇವಾಲಯ ಮಹಾಕೂಟದಲ್ಲಿದೆ. ಇದೇ ಪ್ರಾಚೀನವಾದುದು. 602ರ ಮಂಗಲೀಶನ ಶಾಸನದ ಪ್ರಕಾರ ಮಹಾಕೂಟ ಪ್ರಸಿದ್ಧ ಪುಣ್ಯಕ್ಷೇತ್ರವಾಗಿತ್ತು. ಆಗಿನ ಶಾಸನಗಳಲ್ಲಿ ಈ ಪಂಥಕ್ಕೆ ಸೇರಿದ ಆಚಾರ್ಯರುಗಳಿಗೆ ದಾನದತ್ತಿಯನ್ನು ಕೊಡುವಾಗ ಲಾಕುಲಸಮಯಸ್ತಂಭ, ಲಾಕುಲಾಗಮಪಂಡಿತರೆಂದು ಅವರು ಉಲ್ಲೇಖಿತರಾಗಿದ್ದಾರೆ. ಇಂಥ ಆಚಾರ್ಯರು ವೇದಗಳು, ವೇದಾಂಗಗಳು, ನ್ಯಾಯ ವೈಶೇಷಿಕ ಮೀಮಾಂಸೆ ಮುಂತಾದ ಶಾಸ್ತ್ರಗಳು ಹಾಗೂ ಕಾವ್ಯನಾಟಕಾದಿಗಳು–ಇವುಗಳಲ್ಲಿ ಪರಿಣತಿಯನ್ನು ಪಡೆದವರಾಗಿರುತ್ತಿದ್ದರು. ಆದ್ದರಿಂದಲೇ ಬಾದಾಮಿಯ ಚಳುಕ್ಯರಿಂದ ಮೊದಲುಗೊಂಡು ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯವನ್ನಾಳಿದ ದೊರೆಗಳವರೆಗೆ ಎಲ್ಲರೂ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು, ದತ್ತಿಯನ್ನೀಯುತ್ತಿದ್ದರು. ಈ ಪಂಥದ ಯತಿವರೇಣ್ಯರನ್ನು ಶಾಸನಗಳಲ್ಲಿ ರಾಜಗುರುಗಳೆಂದೂ ರಾಯರಾಜಗುರುಗಳೆಂದೂ ಹೊಗಳುತ್ತಿರುವುದರಿಂದ ರಾಜಮನೆತನಗಳ ಮೇಲೆ ಇವರ ಪ್ರಭಾವ ಸಾಕಷ್ಟಿತ್ತೆಂಬುದು ವೇದ್ಯವಾಗುತ್ತದೆ. ಶೈವಪಂಥದ ಇತರ ಶಾಖೋಪಶಾಖೆಗಳೂ ಕರ್ನಾಟಕದಲ್ಲಿದ್ದುವು.

ವೈದಿಕ ಧರ್ಮಗಳಲ್ಲಿ ವಿಷ್ಣುವಿನ ಸರ್ವೋತ್ತಮತ್ವವನ್ನು ಪ್ರತಿಪಾದಿಸುವ ವೈಷ್ಣವಧರ್ಮ ಭಾಗವತ ಧರ್ಮವಾಗಿ ಮಾರ್ಪಟ್ಟದ್ದು ಎಂದು ಯಾವಾಗ ಯಾರಿಂದ ಎಂದು ತಿಳಿದುಬರುವುದಿಲ್ಲ. ಇದರಲ್ಲಿ ಅನೇಕ ವಿಚಾರಧಾರೆಗಳ ಸಮ್ಮಿಲಿತ ಸಮನ್ವಿತ ರೂಪವನ್ನಂತೂ ಕಾಣಹುದು. ವೇದದೇವತೆಯಾದ ವಿಷ್ಣು, ಐತಿಹಾಸಿಕ ದೇವತೆಯಾದ ವಾಸುದೇವ, ವಿಶ್ವಾತ್ಮಕನೂ ತಾತ್ತ್ವಿಕ ದೇವತೆಯೂ ಆದ ನಾರಾಯಣ, ಗೋವಳರ ದೇವತೆಯಾದ ವಾಸುದೇವ, ಕೃಷ್ಣ ಅಥವಾ ಗೋಪಾಲಕೃಷ್ಣ–ಇವರು ಅಭಿನ್ನರೆಂದು ಸಾರಿ ಇವರು ಉಪನಿಷದ್ ಪ್ರತಿಪಾದ್ಯ ಬ್ರಹ್ಮನಿಂದ ಅತ್ಯಂತ ಅಭಿನ್ನರೆಂದು ಪ್ರತಿಪಾದಿಸಿದ್ದು ಒಂದು ದೊಡ್ಡ ಪವಾಡವೂ ಈ ಸಿದ್ದಾಂತ ಸಂಬಂಧೀಯ ವೇದಿಕೆಯೂ ಆಯಿತು. ಇದು ಅವತಾರವಾದಕ್ಕೆ ಇಂಬುಕೊಟ್ಟು ವಿಕಸಿತವಾಯಿತು. ಇದರ ಪ್ರಾಚೀನತೆಯನ್ನು ಪಾಣಿನಿಗಿಂತ ಅಂದರೆ ಕ್ರಿ.ಪೂ. 5ನೆಯ ಶತಮಾನಕ್ಕಿಂತ ಹಿಂದಿನ ವರೆಗಂತೂ ನಿರ್ವಿವಾದವಾಗಿ ತಳ್ಳಬಹುದು. ಕರ್ನಾಟಕದಲ್ಲಿ ಸಾತವಾಹನರು ಬಹಳ ಪ್ರಾಚೀನ ವೈಷ್ಣವ ದೊರೆಗಳು. ಇದಕ್ಕೆ ಪೂರ್ವದಲ್ಲಿ ಅಶೋಕನ ಶಿಲಾಲೇಖನಗಳು ಸಿಗುವ ಕ್ರಿ.ಪೂ. ಶತಮಾನಗಳವರೆಗೆ ಜೈನ, ಬೌದ್ಧ ಮತಗಳ ಬಗ್ಗೆ ಐತಿಹಾಸಿಕ ದಾಖಲೆಗಳಿವೆ. ವೈಷ್ಣವ ಮತ ಕರ್ನಾಟಕಕ್ಕೆ ಈ ವೈದಿಕ ಮತಗಳಿಂದ ಸಿಡಿದೆದ್ದ ಬೌದ್ಧ ಹಾಗೂ ಜೈನಮತಗಳಿಗಿಂತಲೂ ಮುಂಚೆ ಬಂದದ್ದೊ ಅಲ್ಲವೊ ಎಂದು ನಿರ್ಧರಿಸಲು ಸಾಕ್ಷ್ಯಾಧಾರಗಳಿಲ್ಲ. ಆದರೆ ಈ ಭಾಗವತ ವೈಷ್ಣವ ಪಂಥ ಪುಷ್ಟವಾದುದು ಕರ್ನಾಟಕದ ನೆಲದಲ್ಲಿ ಎಂದು ನಿರ್ವಿವಾದವಾಗಿ ಹೇಳಬಹುದು. ಕ್ರಿ.ಪೂ. ಒಂದು ಅಥವಾ ಎರಡನೆಯ ಶತಮಾನದ ಸಾತಕರ್ಣಿಯ ಶಿಲಾಲೇಖನಗಳಿಂದ ಅದರ ಐತಿಹಾಸಿಕ ಪ್ರಾಚೀನತೆ ಸಿದ್ಧವಾಗುತ್ತದೆ. ಅನಂತರ ಕದಂಬರು ಕ್ರಿಸ್ತಶಕದ ಆದಿಭಾಗದಲ್ಲಿ ಈ ಧರ್ಮಕ್ಕೆ ಇಂಬುಕೊಟ್ಟರು. ಗಂಗರಾಜರು ಜೈನರಾಗಿದ್ದರೂ ವೈಷ್ಣವಧರ್ಮವನ್ನು ಪೋಷಿಸಿದರು. ಆರನೆಯ ಶತಮಾನದಲ್ಲಿ ಬಾದಾಮಿಯಲ್ಲಿ ಆಳಿದ ಪಶ್ಚಿಮ ಚಳುಕ್ಯರು ಪರಮಭಾಗವತರು. ಅವರು ನಿರ್ಮಿಸಿದ ಗುಹೆ, ಗೋಪುರ ದೇಗುಲಗಳು ಅವರ ಧಾರ್ಮಿಕ ಒಲವನ್ನು ಸಮರ್ಥಿಸುತ್ತವೆ. ಪೂರ್ವ ಚಳುಕ್ಯರು ಸಹ ವೈಷ್ಣವರಾಗಿದ್ದರು.

ಬಹು ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳು ವೈಚಾರಿಕ ಕ್ಷೇತ್ರದಲ್ಲೂ ಸಾಹಿತ್ಯ ಕ್ಷೇತ್ರದಲ್ಲೂ ಪ್ರಭಾವಪೂರ್ಣಸ್ಥಾನದಲ್ಲಿದ್ದುವೆಂಬುದು ಶಾಸನಾಧಾರಗಳಿಂದಲೂ ಉಪಲಬ್ಧ ಕೃತಿಗಳಲ್ಲಿ ಬರುವ ಉಲ್ಲೇಖಗಳಿಂದಲೂ ಸ್ಪಷ್ಟವಾಗುತ್ತದೆ. ವೇದವೇದಾಂಗಗಳ ಅಧ್ಯಯನ ಈ ನಾಡಿನಲ್ಲಿ ಪ್ರಾಗೈತಿಹಾಸಿಕ ಯುಗದಿಂದಲೂ ನಡೆದುಬಂದಿದೆ. ವೈದಿಕ ಸಂಸ್ಕೃತಿಯನ್ನು ವಾಸ್ತುಶಿಲ್ಪ ಮೂರ್ತಿಶಿಲ್ಪಗಳಲ್ಲೂ ದೇವಸ್ಥಾನದಲ್ಲಿ ಪ್ರಚಲಿತವಿರುವ ಪೂಜಾಪದ್ಧತಿಯಲ್ಲೂ ಕಾಣಬಹುದಾಗಿದೆ.

ರಾಷ್ಟ್ರಕೂಟರ ಕಾಲದಲ್ಲಿ ಮೂಲಭೂತ ಧಾರ್ಮಿಕ ನಂಬಿಕೆಗಳಲ್ಲಿ ವಿಶೇಷ ಬದಲಾವಣೆಗಳೇನೂ ಕಾಣುವುದಿಲ್ಲ. ವೈದಿಕ ಋಷಿಗಳ ಅತ್ಯದಾರ ವಿಚಾರ ಸರಣಿಯಲ್ಲಿ ಬೆಳೆದು ಬಂದ ಜನ ಅನ್ಯಧರ್ಮಸಹಿಷ್ಣುತೆ ಹಾಗೂ ಔದಾರ್ಯಾದಿ ಸದ್ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ಜೈನ, ಬೌದ್ಧ ಶೈವ, ವೈಷ್ಣವ ಪಂಥದವರೆಲ್ಲರೂ ಪರಸ್ಪರ ಸ್ನೇಹಭಾವದಿಂದಿದ್ದು ಪರಸ್ಪರ ಪ್ರಭಾವಿತರಾದುದು ಕಂಡುಬರುತ್ತದೆ. ಆದ್ದರಿಂದಲೇ ಚಳುಕ್ಯರಂತೆ ರಾಷ್ಟ್ರಕೂಟರು ಯಜ್ಞಯಾಗಾದಿಗಳಲ್ಲಿ ನಿರತರಾಗಿದ್ದಂತೆ ಯಾವ ಶಾಸನ ಅಥವಾ ಬೇರಾವ ಪುರಾವೆಗಳಿಂದಲೂ ಸಮರ್ಥಿತವಾಗುವುದಿಲ್ಲ. ಆದರೆ ತನ್ನ ರಾಜ್ಯದಲ್ಲಿ ಹರಡಿದ್ದ ಯಾವುದೇ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಅಮೋಘವರ್ಷ ಸ್ವತಃ ಜೈನನಾಗಿದ್ದರೂ ವೈದಿಕ ದೇವತೆಯಾದ ಮಹಾಲಕ್ಷ್ಮಿಗೆ ಪೂಜೆ ಸಲ್ಲಿಸಿ ಒಂದು ಕೈಬೆರಳನ್ನು ಕತ್ತರಿಸಿ ಬಲಿಯಾಗಿ ಒಪ್ಪಿಸಿದುದಾಗಿ ಉಲ್ಲೇಖವಿದೆ. ಹೀಗೆ ವಿವಿಧ ನಂಬಿಕೆಗಳನ್ನು ಮನ್ನಿಸುವ ಸಂಕೀರ್ಣ ಸಂಸ್ಕೃತಿ ಅಸ್ತಿತ್ವದಲ್ಲಿತ್ತು.

ವೈದಿಕಧರ್ಮದ ಏಕಚಕ್ರಾಧಿಪತ್ಯವನ್ನು ಸ್ಥಾಪಿಸಲು ಕುಮಾರಿಲಭಟ್ಟರು ಈ ಕಾಲದಲ್ಲಿ ದೊಡ್ಡ ಆಂದೋಳನವನ್ನು ನಡೆಸಿದರು. ಅವರು ಯಜ್ಞಯಾಗಾದಿಗಳಲ್ಲಿ ಪ್ರಾಣಿವಧೆಯನ್ನು ಸಮರ್ಥಿಸಿದರು. ಸಂನ್ಯಾಸವನ್ನು ಅಶಾಸ್ತ್ರೀಯವೆಂದು ಘೋಷಿಸಿದರು. ಪ್ರಬಲವಾದ ತರ್ಕವನ್ನು ಹೂಡಿ ಇತರರ ಬಾಯಿ ಬಡಿದರು. ಆದರೆ ಅವರ ಸಮಕಾಲೀನರಾದ ಶಂಕರಾಚಾರ್ಯರು ಅಖಿಲಭಾರತ ವ್ಯಕ್ತಿತ್ವವನ್ನು ಪಡೆದ ಅತ್ಯಂತ ಮೇಧಾವಿಯಾದ ಧಾರ್ಮಿಕ ನೇತಾರರಾಗಿ ವೈದಿಕ ಧರ್ಮದಲ್ಲಿ ಹೊಸ ಬಗೆಯ ತಿರುವನ್ನು ತಂದರು. ಅವರು ಹುಟ್ಟಿದ್ದು ಕೇರಳದಲ್ಲಿಯಾದರೂ ಅದ್ವೈತ ಸಿದ್ಧಾಂತದ ಪ್ರಚಾರ ದೃಷ್ಟಿಯಿಂದ ಶೃಂಗೇರಿಯಲ್ಲಿ ಸ್ಥಾಪಿಸಿದ ಶಂಕರಮಠದ ಸ್ಥಾಪನೆಯನ್ನು ಒಂದು ಮೈಲಿಗಲ್ಲೆಂದು ಪರಿಗಣಿಸಬೇಕು. ಸ್ಮೃತಿಸಮ್ಮತವಾದ ಧಾರ್ಮಿಕ ವಿಧಿಗಳಿಗೆ ಮುಖ್ಯವಾಗಿ ದೇವಾಲಯಗಳು ಕೇಂದ್ರವಾಗಿ ಬೆಳೆದು ಬಂದುವು. ರಾಷ್ಟ್ರಕೂಟರು, ಅವರ ಸೈನ್ಯಾಧಿಕಾರಿಗಳು ಮತ್ತು ಶ್ರೀಮಂತ ಪ್ರಜೆಗಳು ಇಂಥ ದೇವಸ್ಥಾನಗಳಿಗೂ ವಿದ್ಯಾಕೇಂದ್ರಗಳಾದ ಅಗ್ರಹಾರದಲ್ಲಿ ವಾಸವಾಗಿದ್ದ ಬ್ರಾಹ್ಮಣ ವಿದ್ವಾಂಸರ ಹಾಗೂ ವೈದಿಕರ ಉದರಂಭರಣಪೋಷಣಕ್ಕೂ ವಿಶೇಷ ದಾನದತ್ತಿಗಳನ್ನು ಕೊಟ್ಟಿದ್ದಕ್ಕೆ ತಾಮ್ರ ಶಾಸನಗಳು ಹೇರಳವಾಗಿ ಸಾಕ್ಷ್ಯ ಹೇಳುತ್ತವೆ.

ವೈದಿಕ ಧರ್ಮದೊಡನೆಯೇ ನೆಂಟುಗಂಟಾಗಿ ಬೆಳೆದು ಬಂದಿರುವ ಸಂಸ್ಕೃತದ ಪ್ರಾಬಲ್ಯ ಪ್ರಾಗೈತಿಹಾಸಿಕ ಕಾಲದಿಂದಲೂ ಕರ್ನಾಟಕದಲ್ಲಿತ್ತು. ಕನ್ನಡ ಭಾಷೆಯ ಪ್ರಾರಂಭಿಕ ಶಿಲಾಶಾಸನಗಳಲ್ಲಿ ಸಂಸ್ಕೃತದ ಪ್ರಭಾವವನ್ನು

ನೋಡಬಹುದು. ಈ ಪ್ರಾಬಲ್ಯ ವೇದವೇದಾಂಗಗಳೂ ಧರ್ಮಶಾಸ್ತ್ರ, ನ್ಯಾಯ, ಸ್ಮೃತಿ–ಇವೆಲ್ಲವೂ ಸೇರಿದ್ದುವು. ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿದ್ದುವು. ದೇವಸ್ಥಾನಗಳು ಸಾಮಾಜಿಕ ಜೀವನದ ಕೇಂದ್ರವೂ ಕಲೆಯ ತೌರೂರೂ ಆಗಿ ಬೆಳೆದವು. ಮಠಗಳು ಪ್ರೌಢ ವಿದ್ವಾಂಸರ ಉನ್ನತ ವ್ಯಾಸಂಗಕ್ಕೆ ಮೀಸಲಾಗಿದ್ದುವು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಶೈವ ಪಾಶುಪಾತಾದಿ ಮತಗಳು ಪ್ರಾಬಲ್ಯಕ್ಕೆ ಬಂದರೂ ಕರ್ನಾಟಕದಲ್ಲಿ ರಾಮಾನುಜಾಚಾರ್ಯರು ತಮ್ಮ ಅನುಯಾಯಿಗಳನ್ನು ಸಂಪಾದಿಸಿಕೊಳ್ಳಲು ಏನೂ ಅಡ್ಡಿ ಆತಂಕಗಳಿರಲಿಲ್ಲ. ವೈಷ್ಣವರ ದೇವಾಲಯಗಳನ್ನೂ ಶ್ರೀವೈಷ್ಣವ ಪಂಥದ ಮಠಗಳನ್ನೂ ಸ್ಥಾಪಿಸುವಲ್ಲಿ ಅವರು ಯಶಗಳಿಸಿದರು. ಒಟ್ಟಿನಲ್ಲಿ ರಾಷ್ಟ್ರಕೂಟರ ಹಾಗೂ ಕಡೆ ಕಡೆಯ ಚಾಳುಕ್ಯರ ಕಾಲದಲ್ಲಿ ಶ್ರುತಿಸ್ಮೃತಿಗಳ ಸಾರ್ವಭೌಮತ್ವ ವರ್ಣಾಶ್ರಮಧರ್ಮದ ಹತೋಟಿಯೂ ಶಿಥಿಲವಾಗುತ್ತ ಬಂದಿದ್ದರೂ ಹೊಸ ಸನ್ನಿವೇಶಕ್ಕೆ ತಕ್ಕಂತೆ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಅನುವಾದ ಸ್ಮೃತಿಗಳು ರಚಿತವಾಗಿ ಹಿಂದುಧರ್ಮ ಅಥವಾ ಸನಾತನ ಧರ್ಮವು ಸಾಮಾಜಿಕ ಧರ್ಮವಾಗಿರುವಂತೆ ಮಾಡಿದ್ದಿತು.

ಆದರೂ ಉತ್ತರ ಕರ್ನಾಟಕದಲ್ಲಿ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ ಮುಂತಾದ ಧಾರ್ಮಿಕ ನಾಯಕರ ನೇತೃತ್ವದಲ್ಲಿ ಜಾತೀಯತೆ, ವರ್ಣಾಶ್ರಮ, ಕರ್ಮಕಾಂಡಗಳ ವಿರುದ್ಧ ನಡೆದ ಆಂದೋಳನವನ್ನು ವೈದಿಕಧರ್ಮ ಎದುರಿಸಿ ನಿಲ್ಲಬೇಕಾದ ಕಾಲ ಇದಾಗಿತ್ತು. ವೈದಿಕಧರ್ಮದ ರಕ್ಷಣೆಗೆ ರಾಮಾನುಜಾಚಾರ್ಯರು ಆಗಿನ ಕಾಲದಲ್ಲಿ ಸಾಕಷ್ಟು ದಿಟ್ಟತನದ ಪ್ರಯತ್ನಗಳನ್ನು ಯಶಸ್ವಿಯಾಗಿ ನಡೆಸಿದರು. ಹದಿಮೂರನೆಯ ಶತಮಾನದಲ್ಲಿ ಮಧ್ವಾಚಾರ್ಯರು ದಕ್ಷಿಣ ಕನ್ನಡ ಜಿಲ್ಲೆಯಿಂದ ಅತ್ಯಂತ ತರ್ಕಬದ್ಧವಾದ ವಾದಸರಣಿಯನ್ನು ಮುಂದೊಡ್ಡಿ ದ್ವೈತದರ್ಶನವನ್ನು ಪ್ರತಿಪಾದಿಸಿದರು. ಇದು ಭಕ್ತಿಪಂಥಕ್ಕೆ ಭದ್ರವಾದ ತಾತ್ತ್ವಿಕ ಬುನಾದಿಯನ್ನೊದಗಿಸಿತು. ಅಂತೂ ಹೊಯ್ಸಳರ ಕಾಲದಲ್ಲಿ ವರ್ಣಾಶ್ರಮ ಧರ್ಮವನ್ನು ನಿರ್ದುಷ್ಟವಾಗಿ ಉಳಿಸಿಕೊಂಡು ಬರುವ ಪ್ರಯತ್ನದಲ್ಲಿ ಭಕ್ತಿ ಆಂದೋಳನ ಮೈಲಿಗಲ್ಲಾಗಿ ಪರಿಣಮಿಸಿತು. ಜನತೆಯ ಆಡುಭಾಷೆಯು ಭಕ್ತಿಸಾಹಿತ್ಯದಿಂದ ಶ್ರೀಮಂತಿಕೆಯನ್ನು ಪಡೆಯಿತು. ಸಂಸ್ಕೃತ ದಾರ್ಶನಿಕರ, ಮೀಮಾಂಸಕರ ಹಾಗೂ ತಾರ್ಕಿಕರ ವ್ಯವಹಾರ ಭಾಷೆಯಾಗಿ ಭಕ್ತಿಗೆ ಪೋಷಕವಾದ ತ್ತ್ವದ ಬುನಾದಿಯನ್ನೊದಗಿಸಿತು.

ಹೊಯ್ಸಳರ ಆಳ್ವಿಕೆಯ ಅನಂತರ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯವರೆಗಿನ ಜನಜೀವನ ಮುಸ್ಲಿಂ ದಾಳಿಯಿಂದಾಗಿ ಗೊಂದಲಕ್ಕೀಡಾಗಿತ್ತು. ಹದಿನೈದು ಶತಮಾನಗಳಿಗೂ ಹೆಚ್ಚು ಕಾಲದಿಂದ ಜೈನ ಬೌದ್ಧಾದಿ ಅವೈದಿಕ ಮತಗಳೊಂದಿಗೆ ಕಾಲಕಾಲಕ್ಕೆ ತನ್ನಲ್ಲಿ ಹೊಸ ತತ್ತ್ವಗಳನ್ನು ಜೀರ್ಣಿಸಿಕೊಂಡು ವಿಕಾಸೋನ್ಮುಖವಾಗಿ ಜನಜೀವನದ ಪ್ರತಿ ಹಂತದಲ್ಲೂ ಪರಿಣಾಮಕಾರಿ ಪ್ರಭಾವ ಬೀರುತ್ತ ಬಂದಿದ್ದ ವೈದಿಕ ಧರ್ಮ ದಾಳಿಕಾರರನ್ನು ತಡೆದು ನಿಲ್ಲಿಸುವ ಪ್ರಯತ್ನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಯಿತು. ಈ ಸಾಮ್ರಾಜ್ಯ ಸ್ಥಾಪನೆಗೆ ವಿದ್ಯಾರಣ್ಯರ ಮುತ್ಸದ್ದಿತನ ಕಾರಣವೆಂಬುದು ಐತಿಹ್ಯ. ಹಿಂದೂ ರಾಯಸುರತ್ರಾಣ ಎಂದು ವಿಜಯನಗರದ ಅರಸರು ಬಿರುದು ಧರಿಸಿದರು. ವರಾಹದೇವ ಹಿರಣ್ಯಾಕ್ಷ ದಾನವನಿಂದ ಭೂಮಿಯನ್ನು ಸಂರಕ್ಷಿಸಿದುದನ್ನು ಜ್ಞಾಪಕಕ್ಕೆ ತಂದು ಕೊಡುವಂತೆ ಅರಾಜಕ ಸ್ಥಿತಿಯನ್ನುಂಟು ಮಾಡಿದ್ದ ವಿಧರ್ಮೀಯ ಅಸಂಸ್ಕೃತ ರಾಜರಿಂದ ನಾಡನ್ನು ಕಾಪಾಡಿದ ಸಂಕೇತವಾಗಿ ವರಾಹ ಲಾಂಛನವನ್ನು ಅವರು ಧರಿಸಿದರು. ಅತ್ಯಂತ ವಿನಮ್ರರಾಗಿ ತಾವು ನಾಡಿನ ಅಧಿದೇವತೆಯಾದ ವಿರೂಪಾಕ್ಷನ ಸೇವಕರೆಂದು ಸಾರುವಂತೆ ತಮ್ಮ ಶಾಸನಗಳನ್ನೆಲ್ಲ ವಿರೂಪಾಕ್ಷನ ಅಂಕಿತದಿಂದಲೇ ಬರೆಸಿದರು. ಒಟ್ಟಿನಲ್ಲಿ ಹಿಂದು ಸಂಸ್ಕೃತಿಯ, ಪರಂಪರಾಗತ ಎಲ್ಲ ಧರ್ಮ ಪಂಥಗಳು ಪೋಷಣೆಯ ಹೊಣೆಗಾರಿಕೆಯನ್ನು ನಿರ್ವಹಿಸಿ ಹೊಸ ಅಧ್ಯಾಯವನ್ನು ಈ ರಾಜರುಗಳು ಸ್ಥಾಪಿಸಿದರು.

ವಿಜಯನಗರ ಸಾಮ್ರಾಜ್ಯವನ್ನಾಳಿದ ಎಲ್ಲ ರಾಜರೂ ಸಂಸ್ಕೃತಿಯ ಪೋಷಕರಾಗಿದ್ದ ಕಾರಣ ಅದ್ವೈತ, ವಿಶಿಷ್ಟಾದ್ವೈತ ಹಾಗೂ ದ್ವೈತದರ್ಶನಗಳ ವಿವರಣೆಯನ್ನು ಕೊಡುವ ಅನೇಕ ಉದ್ಗ್ರಂಥಗಳು ಈ ಕಾಲದಲ್ಲಿ ರಚಿತವಾದವು. ಸುಮಾರು ಹದಿನಾಲ್ಕರಿಂದ ಹದಿನೇಳನೆಯ ಶತಮಾನಗಳಲ್ಲಿ ವೈಷ್ಣವ ಧರ್ಮ ಅಖಿಲ ಭಾರತ ವ್ಯಾಪ್ತಿಯನ್ನೂ ಪಡೆಯಿತು. ಕರ್ನಾಟಕದಲ್ಲಿ ಈ ಕಾಲದಲ್ಲಿ ದಾಸಸಾಹಿತ್ಯ ಜನತೆಯ ಆಡುಭಾಷೆಯಲ್ಲಿ ತತ್ತ್ವ ಪ್ರಸಾರ ಮಾಡಿ ಕನ್ನಡದ ಸಂಪತ್ತನ್ನು ಹೆಚ್ಚಿಸಿತು. ಇದೇ ಕಾಲದಲ್ಲಿ ಶರಣ ಸಂಪ್ರದಾಯದವರ ಧರ್ಮ ಪ್ರಸಾರದ ಶ್ರದ್ಧೆಯ ಫಲವಾಗಿ ಪೂರ್ವದಲ್ಲಿ ಆಂಧ್ರ ಹಾಗೂ ತಮಿಳುನಾಡಿನಲ್ಲೂ ಪಶ್ಚಿಮದಲ್ಲಿ ಮಹಾರಾಷ್ಟ್ರದಲ್ಲೂ ವೀರಶೈವ ಪಂಥ ಪ್ರಚಾರಕ್ಕೆ ಬಂದಿತು. ಹಿಂದು ಧರ್ಮದ ಪ್ರಸಾರ ಕಾರ್ಯದಲ್ಲಿ ವೈದಿಕರು ಅನುಸರಿಸಿದ ಮಾರ್ಗವನ್ನೇ ಅನುಸರಿಸಿ ವೀರಶೈವ ತತ್ತ್ವಜ್ಞರಾದ ಶ್ರೀಪತಿ ಪಂಡಿತರು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಷ್ಠಾಪನೆಗೆ ಆಕರವಾದ ಶ್ರೀಕರಭಾಷ್ಯವನ್ನು ರಚಿಸಿದರು. ವೀರಶೈವ ಮತಕ್ಕೂ ಸಹ ಆಗಿನ ಕಾಲದಲ್ಲಿ ವಿಶೇಷ ಪ್ರೋತ್ಸಾಹ ದೊರಕಿತು. ಒಟ್ಟಿನಲ್ಲಿ ಜನತೆಯು ಪರಧರ್ಮಸಹಿಷ್ಣುತೆಯ ಪರಂಪರೆಯನ್ನು ಕಾಯ್ದುಕೊಂಡು ಬಂದಿತ್ತು. ವಿಜಯನಗರದ ರಾಜರು ಅದಕ್ಕೆ ಬೆಂಬಲಿಗರಾಗಿದ್ದುದರಿಂದಲೇ ಈ ಎಲ್ಲ ವೈದಿಕ ಧರ್ಮಗಳು ಪ್ರೋತ್ಸಾಹ ಪಡೆದುದು ಮಾತ್ರವಲ್ಲ ಅವೈದಿಕವೆಂದುಕೊಳ್ಳುವ ಜೈನಾದಿ ಧರ್ಮಗಳು ಸಹ ಮನ್ನಣೆಯನ್ನೂ ಪ್ರೋತ್ಸಾಹವನ್ನೂ ಪಡೆದು ಉತ್ತಮ ಸ್ಥಿತಿಯಲ್ಲಿದ್ದುವು.

ವಿಜಯನಗರದ ಸಾಮ್ರಾಜ್ಯ ಶಕ್ತಿಗುಂದಿದ ಮೇಲೆ ಕರ್ನಾಟಕದಲ್ಲಿ ಗೊಂದಲಮಯ ಪರಿಸ್ಥಿತಿ ಮತ್ತೆ ತಲೆದೋರಿತು. ಜನರ ಶಾಂತಿ ಕದಡಿ ಹೋಯಿತು. ಪೋರ್ಚುಗೀಸರು, ಇಂಗ್ಲಿಷರು ಮುಂತಾದ ಯೂರೋಪಿನ ಜನಾಂಗಗಳು ವ್ಯಾಪಾರಕ್ಕಾಗಿ ಬಂದವರು ಇಲ್ಲಿನ ಸನ್ನಿವೇಶಗಳನ್ನು ಸ್ವಂತಲಾಭಕ್ಕೆ ಉಪಯೋಗಿಸಿಕೊಂಡು ಅಸ್ಥಿರ ವಾತಾವರಣಕ್ಕೆ ಆದಷ್ಟು ಪ್ರೋತ್ಸಾಹ ನೀಡಿದರು. ಇಂಥ ಸನ್ನಿವೇಶದಲ್ಲಿ ಧರ್ಮಪ್ರಾಣರಾದ ಭಾರತೀಯರ ಜೀವನವನ್ನು ವೈಯಕ್ತಿಕ ಸಾಧನೆಯ ತಳಹದಿಯ ಮೇಲೆ ಸತ್ಯನಿಷ್ಠೆ, ಶೀಲ ಮತ್ತು ದೈವಭಕ್ತಿಯ ಮಾರ್ಗದಲ್ಲಿ ನಡೆಸಿಕೊಂಡು ಹೋಗುವ ಕಾರಣದಿಂದಾಗಿ ಏನೊಂದೂ ಆಘಾತವಾಗಲಿಲ್ಲವೆನ್ನಬಹುದು. ಪರಕೀಯರು ತಮ್ಮ ಮತಸಂಪ್ರದಾಯಗಳನ್ನು ಮತಾಂತರಗೊಳಿಸುವ ಮೂಲಕವೂ ಪರಮತದ ಕೇಂದ್ರಗಳನ್ನು ನಾಶಮಾಡುವ ಮೂಲಕವೂ ಸಾಕಷ್ಟು ಗೊಂದಲವನ್ನೆಬ್ಬಿಸಿದರೂ ಅದು ಹಿಂದು ಧರ್ಮಾನುಯಾಯಿಗಳ ಸಂಖ್ಯೆಯನ್ನು ಕುಗ್ಗಿಸಿತೇ ವಿನಾ ಸತ್ತ್ವವನ್ನು ನಾಶಪಡಿಸಲಿಲ್ಲ. ಆದ್ದರಿಂದಲೇ ಅನಂತರವೂ ಇಲ್ಲಿ ವೇದೋಪನಿಷತ್ತುಗಳ ಸಾರವನ್ನು ಮನೆ ಮನೆಗೆ ಸಂಚಾರ ಮಾಡಿ ತಂಬೂರಿಯ ಇಂಪಾದ ಶ್ರುತಿಯೊಡನೆ ಹಾಡಿ ಪಾಡಿ ಜನರಲ್ಲಿದ್ದ ಸಾತ್ತ್ವಿಕತೆಯನ್ನು ಜಾಗ್ರತಗೊಳಿಸುವ ಹಾಗೂ ಈಸಬೇಕು ಇದ್ದು ಜೈಸಬೇಕೆಂಬ ಆಶಾವಾದದ ಸಂದೇಶವನ್ನು ಬೀರುವ ಹರಿದಾಸರ ಪಡೆ ನಿರ್ಮಾಣವಾಯಿತು. ಕನ್ನಡದ ಸಿರಿವಂತಿಕೆ ಹೆಚ್ಚಾಯಿತು. ಹದಿನಾರರಿಂದ ಇಪ್ಪತ್ತನೆಯ ಶತಕದವರೆಗೆ ಹರಿದಾಸ ಸಾಹಿತ್ಯದಂತೆಯೇ ವೀರಶೈವ ಸಾಹಿತ್ಯವೂ ಬೆಳೆಯಿತು. ಶೈವ ಪಂಥದಲ್ಲಿ ವೈದಿಕ ಮಾರ್ಗಾನುಯಾಯಿಗಳು, ತದ್ವಿರೋಧಿಗಳೆಂಬ ಎರಡು ಗುಂಪುಗಳು ತಾತ್ವಿಕವಾಗಿ ಕಂಡುಬಂದರೂ ಜೀವನದ ಮೌಲ್ಯಗಳು, ನಡೆವಳಿಕೆಗಳು ಈ ದೃಷ್ಟಿಯಿಂದ ಸಾಮಾನ್ಯರಲ್ಲಿ ಅಂಥ ವ್ಯತ್ಯಾಸವೇನೂ ತೋರಿಬರುತ್ತಿರಲಿಲ್ಲ.

ವೈದಿಕ ಧರ್ಮವನ್ನು ಕುರಿತು ವಿಚಾರ ಮಾಡುವಾಗ ಇಪ್ಪತ್ತನೆ ಶತಕವನ್ನು ಪುನರುಜ್ಜೀವನ ಕಾಲವೆಂದು ಹೆಸರಿಸಬಹುದು. ಪಾಶ್ಚಾತ್ಯರ ಸಾಹಿತ್ಯ, ಸಂಸ್ಕೃತಿ ಹಾಗೂ ವಿಚಾರ ಸರಣಿಯಿಂದ ಪ್ರಭಾವಿತರಾದ ಜನ, ಮುಸಲ್ಮಾನರ ದಾಳಿಯಿಂದ ಕಂಗೆಟ್ಟು ಆತ್ಮ ರಕ್ಷಣೆಗಾಗಿ ಅಂಗೀಕರಿಸಿ, ಸಂಪ್ರದಾಯವಾಗಿಯೋ ಎಂಬಂತೆ ನಡೆದು ಬಂದ ಅನೇಕ ಸಾಂಪ್ರದಾಯಿಕ ಆಚಾರ ವ್ಯವಹಾರಗಳನ್ನು ತೊಡೆದು ಹಾಕಿ ಶುದ್ಧ ವೈದಿಕ ಸಾತ್ತ್ವಿಕ ಮಾರ್ಗಾನುಯಾಯಿಗಳಾಗಬೇಕೆಂಬ ಸುಧಾರಕ ಪಂಥವನ್ನು ಅವಲಂಬಿಸಿತು. ಬ್ರಹ್ಮ ಸಮಾಜ, ಆರ್ಯ ಸಮಾಜಗಳ ಚಟುವಟಿಕೆ ಹಾಗೂ ವಿಚಾರಗಳಿಗೆ ಕನ್ನಡ ನಾಡಿನಲ್ಲಿ ಮಾನ್ಯತೆ ದೊರೆಯಿತು. ಇದೇ ನಿಟ್ಟಿನ ಪ್ರಯತ್ನವೆನ್ನಬಹುದು ತಿಯಾಸಾಫಿಕಲ್ ಚಳವಳಿ. ಅದಕ್ಕೂ ಎಂದಿನಂತೆ ಈ ನೆಲ ಆಶ್ರಯ ಕೊಟ್ಟಿತು. ಸರ್ವಧರ್ಮಸಮನ್ವಯ ಹಾಗೂ ಸೇವಾಭಾವ ದಿಂದ ರಾಮಕೃಷ್ಣ ಮಠಗಳು (ಆಶ್ರಮಗಳು) ಈ ನೆಲದಲ್ಲಿ ಸ್ಥಾಪಿತವಾಗಿ ಬೆಳೆದು ಬಂದವು. ಅದ್ವೈತ, ವಿಶಿಷ್ಟಾದ್ವೈತ ಹಾಗೂ ಶಕ್ತಿವಿಶಿಷ್ಟಾದ್ವೈತಾದಿ ವೈದಿಕ ತತ್ತ್ವ ಪಂಥಗಳು ಪುನರುಜ್ಜೀವನಗೊಂಡು ಜನಸಾಮಾನ್ಯರಲ್ಲಿ ಸಿದ್ಧಾಂತ ಪ್ರಚಾರ ಮಾಡುವ ಯೋಜನೆಗಳನ್ನು ಹಾಕಿಕೊಂಡು ಮುಂದುವರಿದವು. (ಎಂ.ಕೆ.ಬಿ.ಆರ್.)

**ಶ್ರೀ ವೈಷ್ಣವಧರ್ಮ (ವಿಶಿಷ್ಟಾದ್ವೈತದರ್ಶನ):** ಕರ್ನಾಟಕಕ್ಕೆ ಶ್ರೀವೈಷ್ಣವ ಧರ್ಮ ಅದರ ಆಚಾರ್ಯರಾದ ರಾಮಾನುಜರೊಡನೆ ಪ್ರವೇಶ ಮಾಡಿತು. ಆಗ ಹೊಯ್ಸಳರ ರಾಜ್ಯಭಾರ ಉಚ್ಛ್ರಾಯ ಸ್ಥಿತಿಯಲ್ಲಿ ಸಾಗುತ್ತಿತ್ತು. ರಾಮಾನುಜರು ದಕ್ಷಿಣದಲ್ಲಿ ಚೋಳರಾಜನ ಉಪಟಳಕ್ಕೆ ಸಿಕ್ಕಿ ಅದರಿಂದ ಪಾರಾಗಲು ಕರ್ನಾಟಕದ ಕಡೆ ಹೊರಟರು. ಕಾವೇರಿಯ ಮಾರ್ಗವನ್ನನು ಸರಿಸಿ ರಾಮನಾಥಪುರವನ್ನು ಬಂದು ಸೇರಿದರು. ರಾಮನಾಥಪುರದಿಂದ ವಾಯವ್ಯ ದಿಕ್ಕಿನಲ್ಲಿ ಸಾಗಿ ಮಿರ್ಲೆ ಮತ್ತು ಸಾಲಿಗ್ರಾಮ ಎಂಬ ಗ್ರಾಮಗಳಿಗೆ ಬಂದರು. ಸಾಲಿಗ್ರಾಮದಲ್ಲಿ ಇವರು ಕೆಲವು ಕಾಲ ತಂಗಿದ್ದರೆಂಬುದಕ್ಕೆ ಇವರ ಪಾದುಕೆಗಳನ್ನು ಇಲ್ಲಿ ಸ್ಥಾಪಿಸಿ ಒಂದು ದೇವಾಲಯವನ್ನು ಕಟ್ಟಿರುವುದೇ ಸಾಕ್ಷಿಯಾಗಿದೆ. ಅಲ್ಲದೆ, ಅಲ್ಲಿನ ಒಂದು ದ್ವಾರದಲ್ಲಿರುವ ಶಿಥಿಲವಾದ ಶಾಸನವೂ ಇವರು ಅಲ್ಲಿ ನೆಲಸಿದ್ದುದನ್ನು ತಿಳಿಸುತ್ತದೆ. ಅನಂತರ ಅಲ್ಲಿಂದ ತೊಂಡನೂರು ಎಂಬ ಗ್ರಾಮದ ಮಾರ್ಗವಾಗಿ ಮೈಸೂರಿಗೆ ಸು. 50 ಕಿಮೀ ದೂರದಲ್ಲಿರುವ ಮೇಲುಕೋಟೆ ಕ್ಷೇತ್ರವನ್ನು ಸೇರಿದರು. ಆ ಕಾಲಕ್ಕೆ ತೊಂಡನೂರು ಹೊಯ್ಸಳ ರಾಜರ ರಾಜಧಾನಿಯಾದ ದ್ವಾರಸಮುದ್ರದ ಗಡಿಯಾಗಿತ್ತು. ರಾಮಾನುಜರು ಬಂದಾಗ ವಿಠಲದೇವರಾಜ (ಬಿಟ್ಟಿದೇವ) ಎಂಬ ಆಗಿನ ಅರಸ ತೊಂಡನೂರಿನಲ್ಲಿಯೇ ತಂಗಿದ್ದ. ಆ ಸಂದರ್ಭದಲ್ಲಿ ಯಾವುದೋ ಮನೋರೋಗದಿಂದ ನರಳುತ್ತಿದ್ದ ರಾಜಕುಮಾರಿಯನ್ನು ರಾಮಾನುಜರು ಗುಣಪಡಿಸಿ ರಾಜರಾಣಿಯರ ಕೃತಜ್ಞತೆಯನ್ನು ಪಡೆದರೆಂಬ ಇತಿಹಾಸವಿದೆ. 1093ರಲ್ಲಿ ಹೊಯ್ಸಳ ವಿಠಲದೇವ ರಾಮಾನುಜರ ಮಹಿಮೆಗೆ ಮಾರುಹೋಗಿ ವೈಷ್ಣವದೀಕ್ಷೆಯನ್ನು ಸ್ವೀಕರಿಸಿ ವಿಷ್ಣುವರ್ಧನನೆಂದು ಪ್ರಸಿದ್ಧನಾದ. ಇದನ್ನು ಶ್ರವಣಬೆಳಗೊಳದ ಸ್ಥಳಪುರಾಣದ ಶಾಸನದಲ್ಲಿ ಕಾಣಿಸಲಾಗಿದೆ. ಆತ ರಾಮಾನುಜರ ಅನುಗ್ರಹ ಸ್ಮರಣೆಗಾಗಿ ಬೇಲೂರಿನ ಚೆನ್ನಕೇಶವ ದೇವಾಲಯ, ತಲಕಾಡಿನ ಕೀರ್ತಿ ನಾರಾಯಣ ದೇವಾಲಯ, ತೊಂಡನೂರು ಮತ್ತು ಹರದನಹಳ್ಳಿ ಎಂಬ ಸ್ಥಳಗಳ ವಿಜಯನಾರಾಯಣ ದೇವಾಲಯ ಗಳನ್ನು ನಿರ್ಮಿಸಿದ. ತಿರುಮಲಸಾಗರವೆಂಬ ಕೊಳವನ್ನೂ ತೊಂಡನೂರಿನ ಮೋತಿತಲಾಬ್ ಎಂಬ ಕೆರೆಯನ್ನೂ ಕಟ್ಟಿಸಿದ.

ತೊಂಡನೂರಿನಲ್ಲಿ ರಾಮಾನುಜಾಚಾರ್ಯರು ನೃಸಿಂಹ ದೇವಾಲಯದಲ್ಲಿ ಶ್ರೀವೈಷ್ಣವಧರ್ಮವನ್ನು ಬೋಧಿಸಿದರು. ಅಲ್ಲಿ ಒಂದು ರಾತ್ರಿ ಕನಸಿನಲ್ಲಿ ನಾರಾಯಣ ಮೇಲುಕೋಟೆಗೆ ಬಂದು ತನ್ನನ್ನು ಕಾಣಲು ಹೇಳಿದಂತೆ ಆಯಿತು. ವಿಷ್ಣುವರ್ಧನನಿಗೆ ಕನಸಿನ ವಿಚಾರವನ್ನು ತಿಳಿಸಿದ ಕೂಡಲೇ ಆತ ಮಾರ್ಗದಲ್ಲಿರುವ ಕಾಡುಮೇಡುಗಳನ್ನು ತೆಗೆಸಿ ಮೇಲುಕೋಟೆಗೆ ಸೇರುವ ಮಾರ್ಗವನ್ನು ಸರಿಪಡಿಸಿಕೊಟ್ಟು ತಾನೂ ಇವರನ್ನು ಹಿಂಬಾಲಿಸಿ ಬಂದ. ಅಲ್ಲಿನ ವೇದಪುಷ್ಕರಣಿಯನ್ನು 1090ರಲ್ಲಿ ಸೇರಿದರು. ಅಲ್ಲಿ ರಾಮಾನುಜರು ನಾರಾಯಣ ವಿಗ್ರಹವನ್ನು 1100ರಲ್ಲಿ ಸ್ಥಾಪಿಸಿ ಪೂಜಾ ವಿಧಿಗಳನ್ನು ನಡೆಸಿದರು (ಆಗ ಇವರಿಗೆ 80 ವರ್ಷ ವಯಸ್ಸಾಗಿತ್ತು). ಯತಿರಾಜಮಠವೆಂಬ ಮಠವನ್ನು ಸ್ಥಾಪಿಸಿದರು. ಅನಂತರ ದೆಹಲಿಗೆ ಹೋಗಿ ಮುಸಲ್ಮಾನರಿಂದ ಅಪಹೃತವಾಗಿದ್ದ. ಅಲ್ಲಿನ ರಾಜಕುಮಾರಿಯ ಪ್ರೇಮಮೂರ್ತಿಯಾಗಿದ್ದ ಶೆಲ್ವಪಿಳ್ಳೆ (ಸಂಪತ್ಕುಮಾರ) ಎಂಬ ಉತ್ಸವ ವಿಗ್ರಹವನ್ನು ಸಂಪಾದಿಸಿ ಮೇಲುಕೋಟೆಗೆ ತಂದು ಪ್ರತಿಷ್ಠಾಪಿಸಿದರು. ಮುಸ್ಲಿಂ ರಾಜಕುಮಾರಿ ಆ ವಿಗ್ರಹವನ್ನು ಅಗಲಿರಲಾರದೆ ಮೇಲುಕೋಟೆಗೆ ಬಂದು ಅಲ್ಲಿಯೇ ಸಮಾಧಿಸ್ಥಳಾದಳೆಂದು ಯದುಗಿರಿಮಹಾತ್ಮ್ಯೆ ಎಂಬ ಗ್ರಂಥದಲ್ಲಿ ತಿಳಿಸಿದೆ. ಅಲ್ಲಿ ಬೀಬಿ ನಾಚಿಯಾರ್ ಎಂದು ಕರೆಸಿಕೊಳ್ಳುವ ಈಕೆಗೆ ಇಂದಿಗೂ ಪೂಜಾಗೌರವ ಸಲ್ಲುತ್ತಿದೆ.

ರಾಮಾನುಜಾಚಾರ್ಯರು ಶ್ರೀವೈಷ್ಣವಧರ್ಮದ ಪ್ರಚಾರವನ್ನು ಕೈಗೊಂಡು ಕರ್ನಾಟಕದ ಸಹಸ್ರಾರು ಮಂದಿಗೆ ದೀಕ್ಷೆಯನ್ನು ಅನುಗ್ರಹಿಸಿ ದರು. ಅಸ್ಪೃಶ್ಯರನ್ನು ತಿರುಕುಲತ್ತರ್ ಎಂದು ಕರೆದು ದೇವಾಲಯ ಪ್ರವೇಶಕ್ಕೆ ಅರ್ಹರೆಂದು ಸಿದ್ಧಪಡಿಸಿ ಅವರನ್ನು ವೈರಮುಡಿ ಉತ್ಸವಕಾಲದಲ್ಲಿ ಮೂರು ದಿನಗಳಲ್ಲಿ ದೇವರ ಸೇವೆಗೆ ಬಿಡುವಂತೆ ಸಂಪ್ರದಾಯವನ್ನು ಮೊಟ್ಟಮೊದಲು ಸ್ಥಾಪಿಸಿದವರು ಇವರೇ. ಅನೇಕ ಜೈನರೂ ಶೈವಪಂಥದ ವರೂ ಬ್ರಾಹ್ಮಣೇತರರೂ ಶ್ರೀವೈಷ್ಣವ ಧರ್ಮವನ್ನು ಅವಲಂಬಿಸಿದರು. ರಾಮಾನುಜರು ತಮ್ಮೊಡನೆ ಬಂದ ಆಪ್ತ ಶಿಷ್ಯವರ್ಗದವರನ್ನು ವಿಶಿಷ್ಟಾದ್ವೈತದ ತತ್ತ್ವಪ್ರತಿಪಾದನೆಗೂ ಶ್ರೀವೈಷ್ಣವ ಧರ್ಮಪ್ರಸಾರಕ್ಕೂ ಹಲವೆಡೆಗಳಲ್ಲಿ ನೇಮಿಸಿದರು.

ವಿಜಯನಗರ ಸಾಮ್ರಾಜ್ಯದ ವೈಭವಕಾಲದಲ್ಲಿ ಶ್ರೀವೈಷ್ಣವಧರ್ಮಕ್ಕೆ ಮನ್ನಣೆ ದೊರಕಿತು. ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾಶಿವರಾಯರ ಕಾಲದಲ್ಲಿ ಶ್ರೀವೈಷ್ಣವಧರ್ಮ ಪ್ರೋತ್ಸಾಹ ಪಡೆಯಿತು. ತಮಿಳುನಾಡಿನ ಆಳ್ವಾರರ ಬೋಧನೆಗೂ ವೈದಿಕತತ್ತ್ವಕ್ಕೂ ಭೇದವನ್ನು ಎಣಿಸದೆ ಸಮಾನ ಸ್ಥಾನವನ್ನು ಕೊಟ್ಟ ರಾಮಾನುಜಾಚಾರ್ಯರು ಉಭಯ ವೇದಾಂತ ಆಚಾರ್ಯರೆನಿಸಿಕೊಂಡಿದ್ದರು. ಕೃಷ್ಣದೇವರಾಯ ಆಳ್ವಾರರ ಪ್ರಭಾವಕ್ಕೆ ಒಳಗಾಗಿ ಆಮುಕ್ತಮಾಲ್ಯದಾ ಎಂಬ ತೆಲುಗು ಕಾವ್ಯವನ್ನು (ಆಳ್ವಾರರಲ್ಲಿ ಏಕೈಕ ಸ್ತ್ರೀಯಾದ ಆಂಡಾಳನ್ನು ಕುರಿತು) ರಚಿಸಿದ್ದಾನೆ.

ವಿದ್ಯಾರಣ್ಯರ ಸಮಕಾಲೀನರಾದ ವಿಶಿಷ್ಟಾದ್ವೈತ ಪ್ರತಿಪಾದಕರಾದ ವೇದಾಂತ ದೇಶಿಕರು ಶ್ರೀವೈಷ್ಣವಧರ್ಮದ ಕವಿತಾರ್ಕಿಕಸಿಂಹರೆಂದು ಅಪ್ಪಯ್ಯ ದೀಕ್ಷಿತರಿಂದ ಸ್ತುತಿಗೊಂಡವರು. ಮಾಧವಾಚಾರ್ಯರು ತಮ್ಮ ಸರ್ವದರ್ಶನ ಸಂಗ್ರಹದಲ್ಲಿ ವಿಶಿಷ್ಟಾದ್ವೈತವನ್ನು ಕುರಿತು ಶ್ಲಾಘಿಸಿದ್ದಾರೆ. ವಿಜಯನಗರದ ಅರಸರು ಶ್ರೀರಂಗ ಕ್ಷೇತ್ರದಲ್ಲಿ ಮುಸಲ್ಮಾನರ ಹಾವಳಿಯನ್ನು ತೊಡೆದುಹಾಕಿ ವೇದಾಂತ ದೇಶಿಕರು ಅಲ್ಲಿಗೆ ಹಿಂತಿರುಗುವಂತೆ ಮಾಡಿ ಉತ್ಸವ ವಿಗ್ರಹವನ್ನು ಒದಗಿಸಿದರು. ದಾರಿದ್ರ್ಯದಿಂದ ಪೀಡಿತರಾಗಿದ್ದ ವೇದಾಂತ ದೇಶಿಕರನ್ನು ವಿದ್ಯಾರಣ್ಯರು ವಿಜಯನಗರ ಆಸ್ಥಾನದಲ್ಲಿ ಆಶ್ರಯ ಪಡೆಯಬೇಕೆಂದು ಕೋರಿದರು. ಆದರೆ ಇವರು ಹಣದಾಸೆಯನ್ನು ಬಿಟ್ಟ ವಿಷ್ಣುಭಕ್ತರಾಗಿದ್ದರು. ವಿಶಿಷ್ಟಾದ್ವೈತ ಪಂಥದಲ್ಲಿ ಕ್ರಮೇಣ ಸಂಸ್ಕೃತ ಶಾಸ್ತ್ರಗ್ರಂಥಗಳಿಗೆ ಪ್ರಾಧಾನ್ಯ ಕೊಡುವ ವಡಗಲೈ ಪಂಗಡವೂ ಆಳ್ವಾರರ ತಮಿಳು ಪ್ರಬಂಧಗಳಿಗೆ ಪ್ರಾಧಾನ್ಯ ಕೊಡುವ ತೆಂಗಲೈ ಪಂಗಡವೂ ಹುಟ್ಟಿದುವು. ವೇದಾಂತ ದೇಶಿಕರು ವಡಗಲೈ ಪಂಗಡದ ಪ್ರತಿಪಾದಕ

ರೆಂದು ಪ್ರಸಿದ್ಧರಾಗಿದ್ದಾರೆ. ಪಿಳ್ಳೈಲೋಕಾಚಾರ್ಯ ಮತ್ತು ಮಣವಾಳ ಮಾಮುನಿಗಳು ತೆಂಗಲೈ ಪಂಗಡದ ಪ್ರತಿಪಾದಕರು.

ಮೈಸೂರು ಒಡೆಯರ ಕಾಲದಲ್ಲಿ ಶ್ರೀ ವೈಷ್ಣವಧರ್ಮಕ್ಕೆ ಅತಿಯಾದ ಪ್ರೋತ್ಸಾಹ ದೊರಕಿತು. ಚಿಕ್ಕದೇವರಾಯರು ಈ ಧರ್ಮದ ಮೂವತ್ತು ಮುಖ್ಯ ತತ್ತ್ವಗಳನ್ನು ಕುರಿತು ಚಿಕ್ಕದೇವರಾಜಬಿನ್ನಪಂ ಎಂಬ ಕಾವ್ಯವನ್ನು ಕನ್ನಡ ಭಾಷೆಯಲ್ಲಿ ರಚಿಸಿ ಮೇಲುಕೋಟೆಯ ನಾರಾಯಣನಿಗೆ ಭಕ್ತಿಪೂರ್ವಕವಾಗಿ ಸಮರ್ಪಿಸಿದ್ದಾರೆ. ಈ ಗ್ರಂಥವನ್ನು ತಿರುನಾರಾಯಣ ಅಯ್ಯಂಗಾರ್ಯರು ತಮಿಳಿಗೂ ಇಂಗ್ಲಿಷಿಗೂ ಭಾಷಾಂತರಿಸಿದ್ದಾರೆ. ಚಿಕ್ಕದೇವರಾಯರ ಮಂತ್ರಿಗಳಲ್ಲಿ ಒಬ್ಬನಾದ ತಿರುಮಲಾರ್ಯ ಮೈಸೂರಿನ ಪರಕಾಲಮಠವನ್ನು ಸ್ಥಾಪಿಸಲು, ಶ್ರೀವೈಷ್ಣವ ಗ್ರಂಥಗಳು ಕನ್ನಡ ಭಾಷೆಯಲ್ಲಿ ರಚಿತವಾಗಲು ಪ್ರೋತ್ಸಾಹ ನೀಡಿದ. ಪರಕಾಲ ಮಠಾಧೀಶರು ಮೈಸೂರಿನ ರಾಜಗುರುಗಳೂ ಆದರು. ರಾಮಾನುಜರಂತೆಯೇ ಅವರ ಪ್ರಮುಖ ಅನುಯಾಯಿಗಳಾದ ಪರಾಶರಭಟ್ಟರು, ವೇದವ್ಯಾಸಭಟ್ಟರು, ವೇದಾಂತ ದೇಶಿಕರು ಮತ್ತು ವರವರಮುನಿಗಳು ಕರ್ನಾಟಕಕ್ಕೆ ಬಂದು ವಿಶೇಷವಾಗಿ ಧರ್ಮಪ್ರಚಾರವನ್ನು ಕೈಗೊಂಡರು.

ಕರ್ನಾಟಕದಲ್ಲಿರುವ ಶ್ರೀವೈಷ್ಣವರ ಮುಖ್ಯ ಯಾತ್ರಾಸ್ಥಳಗಳಲ್ಲಿ ಶ್ರೀರಂಗ ಮತ್ತು ಕಾಂಚೀಪುರಗಳಿಗೆ ಸಮಾನವೆನಿಸಿಕೊಂಡ ಮೇಲುಕೋಟೆ ಸುಪ್ರಸಿದ್ಧವಾಗಿದೆ. ಅಲ್ಲಿಯ ವೈರಮುಡಿ ಉತ್ಸವ ಲೋಕವಿಖ್ಯಾತವಾದುದು. ಶ್ರೀರಂಗಪಟ್ಟಣ, ತೊಂಡನೂರು, ಸಾಲಿಗ್ರಾಮ, ಬೇಲೂರು, ರಾಮನಾಥ ಪುರ, ನುಗ್ಗೇಹಳ್ಳಿ, ಮಳೂರು, ಗೊರೂರು ಮೊದಲಾದವು ಶ್ರೀವೈಷ್ಣವಭಕ್ತರ ಯಾತ್ರಾಸ್ಥಳಗಳಾಗಿವೆ. ಇಲ್ಲೆಲ್ಲ ಅನೇಕ ಉತ್ಸವಗಳೂ ತೆಪ್ಪೋತ್ಸವಗಳೂ ವಿಜೃಂಭಣೆಯಿಂದ ನಡೆಯುತ್ತವೆ. **(ಎಸ್.ಎಸ್.ಆರ್.)**

**ವೈಷ್ಣವಧರ್ಮ (ದ್ವೈತದರ್ಶನ):** ಕರ್ನಾಟಕದಲ್ಲಿ ಈ ಧರ್ಮ ಬಾದಾಮಿಯ ಚಳುಕ್ಯರ ಕಾಲದಲ್ಲಿ (ಸು. 6-8ನೆಯ ಶತಮಾನದ ವರೆಗೆ) ಅತ್ಯಂತ ಜನಪ್ರಿಯವಾಗಿದ್ದಿತು. ಅವರ ತರುವಾಯ ಪ್ರಾಬಲ್ಯಕ್ಕೆ ಬಂದ ರಾಷ್ಟ್ರಕೂಟರು ಶೈವರಾದ ಕಂಚಿಪಲ್ಲವರೊಂದಿಗೂ ಜೈನರಾದ ತಲಕಾಡಿನ ಗಂಗರಸರೊಂದಿಗೂ ಮಾಡಿದ ವಿವಾಹ ಸಂಬಂಧಗಳ ಪರಿಣಾಮವಾಗಿ ಅವರ ಕಾಲದಲ್ಲಿಯೂ ಸು. 8-10ನೆಯ ಶತಮಾನದವರೆಗೆ ಅವರ ತರುವಾಯ ಪ್ರಾಬಲ್ಯಕ್ಕೆ ಬಂದ ಕಲ್ಯಾಣದ ಚಾಳುಕ್ಯರ ಕಾಲದಲ್ಲಿಯೂ ವೈಷ್ಣವ, ಶೈವ ಮತ್ತು ಜೈನ ಧರ್ಮಗಳು ಮೂರೂ ಪ್ರಚಲಿತವಾಗಿದ್ದುವು. ಸು. 12ನೆಯ ಶತಮಾನದ ಕೊನೆಯಲ್ಲಿ ಚಾಳುಕ್ಯ ರಾಜ್ಯ ಪೂರ್ವದಲ್ಲಿ ಕಾಕತೀಯರಿಂದಲೂ ಉತ್ತರದಲ್ಲಿ ಯಾದವರಿಂದಲೂ ದಕ್ಷಿಣದಲ್ಲಿ ಹೊಯ್ಸಳರಿಂದಲೂ ಆಕ್ರಮಿಸಲ್ಪಟ್ಟಿತು. ಹೊಯ್ಸಳರು ಕೂಡ ವೈಷ್ಣವಧರ್ಮವನ್ನು ಪ್ರೋತ್ಸಾಹಿಸಿದರು.

ಕರ್ನಾಟಕದಲ್ಲಿ ವೈಷ್ಣವಧರ್ಮಕ್ಕೆ ನಿರ್ದಿಷ್ಟವಾದ ವೇದಾಂತದ ಹಿನ್ನೆಲೆಯನ್ನು ಒದಗಿಸಿದವರು 13ನೆಯ ಶತಮಾನದಲ್ಲಿದ್ದ ಮಧ್ವಾಚಾರ್ಯರು. ಇವರಿಗೆ ಮುಂಚೆಯೇ ಶಂಕರರು 8ನೆಯ ಶತಮಾನದಲ್ಲಿ ಮತ್ತು ರಾಮಾನುಜರು 12ನೆಯ ಶತಮಾನದಲ್ಲಿ ವಿಷ್ಣುಭಕ್ತಿಯನ್ನು ಕರ್ನಾಟಕದಲ್ಲಿ ಪ್ರಚಾರ ಮಾಡಿದ್ದರು. ಶಂಕರರು ಅದ್ವೈತಿಗಳಾದರೂ ವಿಷ್ಣುಸಹಸ್ರನಾಮಕ್ಕೆ ಟಿಪ್ಪಣಿಯನ್ನು ಬರೆದು ಮೋಹಮುದ್ಗರ (ಭಜಗೋವಿಂದಂ) ಮುಂತಾದ ಕೃತಿಗಳನ್ನು ರಚಿಸಿ ವಿಷ್ಣುಭಕ್ತಿಯ ಅನಿವಾರ್ಯತೆಯನ್ನು ಪ್ರತಿಪಾದಿಸಿದ್ದರು; ರಾಮಾನುಜರು ತಮ್ಮ ವಿಶಿಷ್ಟಾದ್ವೈತದರ್ಶನದಲ್ಲಿ ಸಗುಣಬ್ರಹ್ಮನನ್ನು ಪರಮ ವಸ್ತುವೆಂದು ಸಮರ್ಥಿಸಿ, ಸಗುಣಬ್ರಹ್ಮವೇ ವಿಷ್ಣುವೆಂದು ನಿರೂಪಿಸಿ, ವಿಷ್ಣುಭಕ್ತಿಯ ಪ್ರಾಮುಖ್ಯವನ್ನು ಎತ್ತಿಹಿಡಿದರು. ಆದರೆ ಮಧ್ವಾಚಾರ್ಯರು ಹುಟ್ಟಿನಿಂದ ಕನ್ನಡಿಗರೇ ಆಗಿದ್ದುದಲ್ಲದೆ ಅವರು ಪ್ರತಿಪಾದಿಸಿದ ವೇದಾಂತದರ್ಶನ ಶಂಕರ, ರಾಮಾನುಜರ ದರ್ಶನ ಗಳಲ್ಲಿಲ್ಲದ ಕೆಲವು ನಿರ್ದಿಷ್ಟವಾದ ಅಂಶಗಳನ್ನು ಒಳಗೊಂಡಿತು.

ಕರ್ನಾಟಕದಲ್ಲಿ ಮಧ್ವರ ತರುವಾಯ ವೈಷ್ಣವಧರ್ಮವನ್ನು ಬೆಳೆಸಿದವರು ಅವರ ಶಿಷ್ಯಪರಂಪರೆ. ಈ ಪರಂಪರೆಯಲ್ಲಿ ಮುಖ್ಯವಾಗಿ ಎರಡು ಸಂಪ್ರದಾಯಗಳಿವೆ-ಒಂದು ವ್ಯಾಸಕೂಟ, ಮತ್ತೊಂದು ದಾಸಕೂಟ. ದ್ವೈತವೇದಾಂತದ ಪ್ರತಿಪಾದನೆಯನ್ನು ವ್ಯಾಸಕೂಟದವರು ಸಂಸ್ಕೃತ ಗ್ರಂಥಗಳ ಮೂಲಕ ಮಾಡಿದರು; ದಾಸಕೂಟದವರು ಅದೇ ದರ್ಶನದ ತಿರುಳನ್ನು ಸಾಮಾನ್ಯರಿಗೆ ಸುಲಭವಾಗಿ ತಿಳಿಯುವಂತೆ ಕನ್ನಡದ ಹಾಡುಗಳ ರೂಪದಲ್ಲಿ ಬೋಧಿಸಿದರು. ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು ಮತ್ತು ರಾಘವೇಂದ್ರರು ವ್ಯಾಸಕೂಟಕ್ಕೂ ಪುರಂದರದಾಸರು, ಕನಕದಾಸರು, ವಿಜಯದಾಸರು, ಪ್ರಸನ್ನವೆಂಕಟ ದಾಸರು, ಜಗನ್ನಾಥದಾಸರು, ಗೋಪಾಲದಾಸರು ಮುಂತಾದವರು ದಾಸಕೂಟಕ್ಕೂ ಸೇರಿದವರೆಂದು ಸ್ಥೂಲವಾಗಿ ಹೇಳಬಹುದು. ಆದರೆ ಈ ಎರಡು ಕೂಟಗಳಿಗಿರುವ ವ್ಯತ್ಯಾಸ ಭಾಷಾ ಮಾಧ್ಯಮದಲ್ಲಿಯೇ ಹೊರತು ಮೂಲ ಸಿದ್ಧಾಂತದಲ್ಲಲ್ಲ; ಅಲ್ಲದೆ, ಇವರಲ್ಲಿ ಕೆಲವರು ಸಂಸ್ಕೃತ ಮತ್ತು ಕನ್ನಡಗಳೆರಡರಲ್ಲಿಯೂ ಗ್ರಂಥಗಳನ್ನು ರಚಿಸಿ ಎರಡು ಕೂಟಗಳಿಗೂ ಸೇರಿದವರಾಗಿದ್ದರು.

ಕರ್ನಾಟಕದ ಅನೇಕ ಕಡೆಗಳಲ್ಲಿ ಮಧ್ವರ ತರುವಾಯ ಅವರ ವೇದಾಂತ ದರ್ಶನದ ಹಿನ್ನೆಲೆಯಲ್ಲಿ ವೈಷ್ಣವಧರ್ಮವನ್ನು ಪ್ರಚಾರ ಮಾಡಿದ ಭಕ್ತಶ್ರೇಷ್ಠರು ಹರಿದಾಸರೆಂದು ಪ್ರಸಿದ್ಧರಾದರು. ಇವರ ಕಾಲ ಸುಮಾರು 15ನೆಯ ಶತಮಾನದಿಂದ 19ನೆಯ ಶತಮಾನದವರೆಗೆಂದು ಹೇಳಬಹುದು. ಇವರಲ್ಲಿ ಮುಖ್ಯರಾದವರ ಹೆಸರನ್ನು ಮೇಲೆಯೇ ಹೇಳಿದೆ. ಎಲ್ಲ ಹರಿದಾಸರೂ ಪ್ರಾಪಂಚಿಕ ಜೀವನದ ನಶ್ವರತೆ, ನಿಸ್ಸಾರತೆಗಳನ್ನು ಒತ್ತಿಹೇಳಿ, ಮಾನವ ಜೀವನದಲ್ಲಿ ನೈತಿಕ ಶುದ್ಧಿ, ನಿಸ್ಸ್ವಾರ್ಥ ಮನೋಭಾವ, ವಿರಕ್ತಿ, ಭಗವದ್ಭಕ್ತಿ ಮತ್ತು ಆಧ್ಯಾತ್ಮಿಕ ಜ್ಞಾನಗಳ ಅನಿವಾರ್ಯತೆಯನ್ನು ಕುರಿತು ಬೋಧಿಸಿದರು. ಹರಿದಾಸರು ಮುಖ್ಯವಾಗಿ ಅಪರೋಕ್ಷಜ್ಞಾನಿಗಳು ಮತ್ತು ಅನುಭಾವಿಗಳು; ಮಾನವನಿಗೂ ದೇವರಿಗೂ ಇರುವ ನಿಕಟ ಸಂಬಂಧವನ್ನು ತಾವು ಅನುಭವಿಸಿ ಇತರರಿಗೂ ಬೋಧಿಸಿದ ಮಹನೀಯರು. ಅವರು ರಚಿಸಿದ ಸಾಹಿತ್ಯಸಿರಿ ಅಪಾರ; ಅದರಲ್ಲಿ ಅವರು ದೈವಭಕ್ತಿಯಲ್ಲಿ ತಲ್ಲೀನನಾದ ಭಕ್ತನು ಅನುಭವಿಸುವ ಶಾಂತಭಾವ, ದಾಸಭಾವ, ಸಖ್ಯಭಾವ, ಮಧುರಭಾವ, ವಾತ್ಸಲ್ಯಭಾವ ಗಳನ್ನು ಹೃದಯಂಗಮವಾಗಿ ವ್ಯಕ್ತಪಡಿಸಿದ್ದಾರೆ.

**ಅದ್ವೈತ ದರ್ಶನ:** ತಮ್ಮ ಕಾಲದ ಅನಂತರವೂ ವೈದಿಕಧರ್ಮ ಭಾರತದಲ್ಲಿ ಚಿರಸ್ಥಾಯಿಯಾಗಿ ನೆಲಸಬೇಕೆಂಬ ಉದ್ದೇಶದಿಂದ ಶಂಕರರು ನಾಲ್ಕು ಮಠಗಳನ್ನು ಶೃಂಗೇರಿ, ಬದರಿ, ಪುರಿ ಮತ್ತು ದ್ವಾರಕೆಗಳಲ್ಲಿ ಸ್ಥಾಪಿಸಿದರೆಂದು ಪ್ರತೀತಿ. ಇದರೊಂದಿಗೆ ಕರ್ನಾಟಕದಲ್ಲಿ ಅದ್ವೈತವೇದಾಂತ ಪ್ರಚಾರ ಪ್ರಾರಂಭವಾಯಿತು.

ಶೃಂಗೇರಿಯಲ್ಲಿ ಸ್ಥಾಪಿತವಾದ ಮಠ ಅತ್ಯಂತ ಪ್ರಾಚೀನವಾದವುಗಳಲ್ಲೊಂದೆಂದು ಇದರಿಂದ ಅರ್ಥವಾಗುತ್ತದೆ. ಕೇರಳದ ಶಂಕರರು ಕರ್ನಾಟಕದ ಶೃಂಗೇರಿಗೆ ಬಂದು ಮಠವನ್ನು ಸ್ಥಾಪಿಸಿದ್ದು ಅವರ ವಿಶಾಲವಾದ ಸಾಂಸ್ಕೃತಿಕ ದೃಷ್ಟಿಗೆ ಒಂದು ಸ್ಪಷ್ಟವಾದ ಸಾಕ್ಷಿ. ತಮ್ಮ ನಾಲ್ವರು ಪ್ರಮುಖ ಶಿಷ್ಯರಾದ ಪದ್ಮಪಾದ, ಸುರೇಶ್ವರ, ಹಸ್ತಾಮಲಕ ಮತ್ತು ತೋಟಕರೊಂದಿಗೆ ಅವರು ಆಗಮಿಸಿದರೆಂದು ತಿಳಿದುಬರುತ್ತದೆ. ಇಲ್ಲಿನ ಪೀಠಕ್ಕೆ ಶಾರದಾಪೀಠವೆಂದೂ ಹೆಸರು. ಇದಕ್ಕೆ ಕಾರಣ, ಮುಖ್ಯವಾಗಿ ಶಂಕರಾಚಾರ್ಯರು ಶೃಂಗೇರಿಯಲ್ಲಿ ದೊಡ್ಡ ದೇವಾಲಯವೊಂದನ್ನು ಕಟ್ಟಿಸಿ, ಅದರಲ್ಲಿ

ಶಾರದಾದೇವಿಯನ್ನು ಪ್ರತಿಷ್ಠಾಪಿಸಿದ್ದು. ಈ ರೀತಿ ಶಂಕರಾಚಾರ್ಯರಿಂದ ಆದಿಯಾಗಿ ಶೃಂಗೇರಿ ಮಠದಲ್ಲಿ ಅದ್ವೈತ ವೇದಾಂತದ ಬೋಧನೆಗೆ ಮೀಸಲಾದ ಗುರುಪರಂಪರೆ ಬೆಳೆದು ಬಂತು. ಆದರೆ ಐತಿಹಾಸಿಕ ಅನಿರ್ದಿಷ್ಟತೆಯಿಂದಾಗಿ ಈ ಪರಂಪರೆಯ ನಿರ್ದಿಷ್ಟ ನಿರೂಪಣೆ ನಮಗೆ ಸಿಗುವುದಿಲ್ಲ. ಆದರೂ ಈ ಪರಂಪರೆಯಲ್ಲಿ ಸುಮಾರು 35 ಗುರುಗಳು ಇರಬಹುದೆಂದು ಒಂದು ಅಭಿಪ್ರಾಯ. ಅದು ಹೇಗೇ ಇರಲಿ, ಶೃಂಗೇರಿಯ ಪೀಠವನ್ನು ಅಲಂಕರಿಸಿದ ಗುರುಗಳಲ್ಲಿ ತಾತ್ತ್ವಿಕ ಕೊಡುಗೆಯ ದೃಷ್ಟಿಯಿಂದ ಸ್ಮರಿಸಲೇಬೇಕಾದವರು ಸುರೇಶ್ವರಾಚಾರ್ಯರು ಮತ್ತು ಸಾಯಣ ಮಾಧವರು (ವಿದ್ಯಾರಣ್ಯರು). ಇವರ ಅತಿ ಮುಖ್ಯವಾದ ಗ್ರಂಥಗಳು: ಸುರೇಶ್ವರರ ಬೃಹದಾರಣ್ಯಕವಾರ್ತಿಕ, ತೈತ್ತಿರೀಯವಾರ್ತಿಕ, ನೈಷ್ಕರ್ಮ್ಯಸಿದ್ಧಿ ಮತ್ತು ಸಾಯಣ ಮಾಧವರ ಸರ್ವದರ್ಶನಸಂಗ್ರಹ.

ತಾತ್ತ್ವಿಕ ದೃಷ್ಟಿಯಿಂದ ಗುರುಗಳ ಸಂಖ್ಯೆಯಾಗಲೀ ಅನುಕ್ರಮವಾಗಲೀ, ಇವರು ಬರೆದಿರಬಹುದಾದ ಗ್ರಂಥಗಳ ಹೆಸರಾಗಲೀ ಮುಖ್ಯವಲ್ಲ. ಕಾರಣ, ಇವರೆಲ್ಲರೂ ಅದ್ವೈತವೇದಾಂತವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನ, ಉಪದೇಶ, ಗ್ರಂಥಗಳ ಮೂಲಕ ಅದನ್ನು ಪ್ರಚಲಿತವನ್ನಾಗಿ ಮಾಡಿ ಸಾಮಾನ್ಯ ಜನರ ಜೀವನ–ದೃಷ್ಟಿಕೋನಕ್ಕೆ ವೇದಾಂತದ ತಿರುವನ್ನು ಕೊಟ್ಟರು; ಇವರೆಲ್ಲರ ಪ್ರಭಾವ ಇಂದಿಗೂ ಜನರ ಮನೋಭಾವದಲ್ಲಿ ಸ್ವಲ್ಪವಾದರೂ ಉಳಿದುಕೊಂಡು ಬಂದಿದೆ.

ಕರ್ನಾಟಕದಲ್ಲಿ ಶಂಕರರಿಂದಲೇ ಸ್ಥಾಪಿತವಾದ ಶೃಂಗೇರಿಯಲ್ಲಿರುವ ಅತ್ಯಂತ ಪ್ರಾಚೀನವಾದ ಮಠವೇ ಅಲ್ಲದೆ ಶಿವಮೊಗ್ಗ ಜಿಲ್ಲೆಯಲ್ಲಿನ ಕೂಡಲಿ ಮತ್ತು ಬೆಂಗಳೂರಿಗೆ 31 ಕಿಮೀ ದೂರದಲ್ಲಿನ ಶಿವಗಂಗೆಗಳಲ್ಲಿ ಅದ್ವೈತವೇದಾಂತದ ಅನುಷ್ಠಾನಕ್ಕೆ ಮೀಸಲಾದ ಮಠಗಳು ಇವೆ. ಶೃಂಗೇರಿ ಮಠ ಸ್ಥಾಪಿತವಾದ ಅನೇಕ ವರ್ಷಗಳ ತರುವಾಯ ಈ ಎರಡು ಮಠಗಳು ಶೃಂಗೇರಿಮಠದ ಸ್ವಾಮಿಗಳಿಂದಲೇ ಸ್ಥಾಪಿತವಾದುವೆಂದು ಪ್ರತೀತಿ. ಇತ್ತೀಚೆಗೆ ಅದ್ವೈತವೇದಾಂತದಲ್ಲಿನ ಅಜ್ಞಾನ, ಮಾಯೆ ಇತ್ಯಾದಿ ವಿಷಯಗಳನ್ನು ಕುರಿತು ವಿಚಾರಾತ್ಮಕ ಗ್ರಂಥಗಳನ್ನು ರಚಿಸಿ ತಮ್ಮ ಜೀವನವನ್ನೇ ಅದ್ವೈತವೇದಾಂತದ ಪ್ರಚಾರಕ್ಕೆ ಮುಡುಪಾಗಿಟ್ಟವರು. ಹೊಳೇನರಸೀಪುರದ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳು ಹೊಳೇನರಸೀಪುರದಲ್ಲಿ ಆಶ್ರಮವೊಂದನ್ನು ಸ್ಥಾಪಿಸಿ, ವೇದಾಂತದ ಪ್ರಚಾರಕ್ಕೆ ಶ್ರಮಿಸಿದ ಇವರು ಇತ್ತೀಚೆಗೆ ತೀರಿಕೊಂಡರು. ಅದ್ವೈತ ವೇದಾಂತವನ್ನು ಭಾರತೀಯ ತತ್ತ್ವಶಾಸ್ತ್ರಕ್ಕೆ ಕಲಶಪ್ರಾಯವೆಂದು ಪರಿಗಣಿಸಿ, ಇಂಗ್ಲಿಷಿನಲ್ಲಿ ಅದನ್ನು ಕುರಿತು ಬರೆದು ವೇದಾಂತದ ಜ್ಞಾನ ವಿದೇಶಗಳಿಗೂ ತಲುಪುವಂತೆ ಮಾಡಿದ ಕೀರ್ತಿ ಎಂ.ಹಿರಿಯಣ್ಣನವರಿಗೆ ಸಲ್ಲುತ್ತದೆ.ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಇವರ ಗ್ರಂಥಗಳು ವಿಶ್ವದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಪುಸ್ತಕವಾಗಿ ಮನ್ನಣೆಗಳಿಸಿವೆ. **(ಜಿ.ಎಸ್.)**

**ವೈದೇಹಿ:** 1945– . ಪ್ರಸಿದ್ಧ ಕಥೆಗಾರ್ತಿ, ಕವಯಿತ್ರಿ. ಇವರು 1945 ಫೆಬ್ರವರಿ 12ರಂದು ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಜನಿಸಿದರು. ತಂದೆ ಎ.ವಿ.ಎನ್. ಹೆಬ್ಬಾರ್, ತಾಯಿ ಮಹಾಲಕ್ಷ್ಮಮ್ಮ. ವೈದೇಹಿಯವರ ಮೂಲ ಹೆಸರು ಜಾನಕಿ. ಕಾವ್ಯನಾಮ ವೈದೇಹಿ. ಇವರು ಕಥೆ, ಕಾದಂಬರಿ, ಕಾವ್ಯ, ಪ್ರಬಂಧ, ಶಿಶು ಸಾಹಿತ್ಯ, ಅನುವಾದ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಮಾಡಿದ್ದಾರೆ. ಇವರ ಮೊದಲ ಕಥಾಸಂಕಲನ ಅಂತರಂಗದ ಪುಟಗಳು (1984). ಗೋಲ (1986), ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು (1991), ಅಮ್ಮಚ್ಚಿ ಎಂಬ ನೆನಪು (2000) ಇವರ ಇತರ ಕಥಾ ಸಂಕಲನಗಳು. 'ಅಸ್ಪೃಶ್ಯರು' ಇವರು ಬರೆದ ಏಕೈಕ ಕಾದಂಬರಿ. ಇವರ ಸಾಹಿತ್ಯದಲ್ಲಿ ಸಾಂಪ್ರದಾಯಿಕ ವೈದಿಕ ಮನೆತನದ ವೈವಿಧ್ಯಮಯ ಸ್ತ್ರೀಲೋಕವೇ ಅನಾವರಣಗೊಳ್ಳುತ್ತದೆ. ಮೂರು ತಲೆಮಾರುಗಳ ಸ್ತ್ರೀಯರ ಕನಸು, ಅಪೇಕ್ಷೆ, ಬದುಕಿನ ಗುರಿ ಹಾಗೂ ಜೀವನ ಧೋರಣೆಗಳಲ್ಲಿ ಆದ ಮತ್ತು ಆಗುತ್ತಿರುವ

ಪಲ್ಲಟಗಳು ಎಳೆಎಳೆಯಾಗಿ ಇವರ ಕಥನ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿವೆ. ಹಳ್ಳಿಯ ಜನರ ಸಾಂಸ್ಕೃತಿಕ ಲೋಕದ ಅವಿಭಾಜ್ಯ ಅಂಗವಾಗಿರುವ ಜಾತ್ರೆ ನಮ್ಮ ಬದುಕಿನೊಂದಿಗೇ ಪಲ್ಲಟಗೊಳ್ಳುತ್ತಾ ಸರಕು ಸಂಸ್ಕೃತಿಯ ಸುಳಿಯೊಳಗೆ ಸಿಲುಕಿಕೊಂಡಿರುವ ಬಗೆಯನ್ನು ನಾಟಕೀಯವಾಗಿ ಮುಂದಿಡುವ ಕೃತಿ 'ಜಾತ್ರೆ'.

ಕಥನದಷ್ಟೇ ಸಲೀಸಾಗಿ ಕಾವ್ಯವೂ ಇವರಿಗೆ ಒಲಿದಿದೆ. ಬಿಂದು ಬಿಂದಿಗೆ (1990), ಪಾರಿಜಾತ (1999) ಇವರ ಕವನ ಸಂಕಲನಗಳು. ಇವರು ಎಂಟು ಮಕ್ಕಳ ನಾಟಕಗಳನ್ನೂ ಬರೆದಿದ್ದಾರೆ. ಅವು ಯಶಸ್ವೀ ಪ್ರಯೋಗಗಳನ್ನೂ ಕಂಡಿವೆ. ಧಾಂಧೂರಿ ಸುಂಟರಗಾಳಿ (1992), ಮೂಕನ ಮಕ್ಕಳು (1992), ಗೊಂಬೆ ಮ್ಯಾಕ್ಬೆತ್ (1992), ಢಾಣಾಡಂಗುರ (1992), ನಾಯಿಮರಿ ನಾಟಕ (1992), ಸೂರ್ಯ ಬಂದ (1997), ಝುಂಝುಂ ಆನೆ ಮತ್ತು ಪುಟ್ಟ (1997), ಕೋಟುಗುಮ್ಮ (1997)–ಇವು ಇವರ ಮಕ್ಕಳ ನಾಟಕಗಳು.

ಕೋ.ಲ. ಕಾರಂತ ಮತ್ತು ಸೇಡಿಯಾಪು ಕೃಷ್ಣಭಟ್ಟರ ಬದುಕಿನ ನೆನಪುಗಳನ್ನು ಇವರು ಹಿಡಿದಿಟ್ಟು ಕನ್ನಡದ ಓದುಗರಿಗೆ ಕೊಟ್ಟಿದ್ದಾರೆ. ಬಿ.ವಿ. ಕಾರಂತರ ಸ್ಮೃತಿಗಳನ್ನೂ ಸಂಗ್ರಹಿಸಿದ್ದಾರೆ. ಕೆಲವು ಅನುವಾದಗಳನ್ನು ಮಾಡಿದ್ದಾರೆ. ಕಮಲಾದೇವಿ ಚಟ್ಟೋಪಾಧ್ಯಾಯ, ಮೈತ್ರೇಯಿ ಮುಖ್ಯೋಪಾಧ್ಯಾಯ, ಸ್ವಪ್ನಾದತ್ತ ಮುಂತಾದವರ ಚಿಂತನೆಗಳನ್ನು ಕನ್ನಡಿಗರಿಗೆ ಅನುವಾದದ ಮೂಲಕ ಪರಿಚಯಿಸಿಕೊಟ್ಟಿದ್ದಾರೆ. ಪ್ರಬಂಧ ರಚನೆಯಲ್ಲಿಯೂ ಇವರದು ಸಿದ್ಧಹಸ್ತ. ಕೆಲವು ಉತ್ತಮ ಪ್ರಬಂಧಗಳನ್ನು ರಚಿಸಿದ್ದಾರೆ. ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ (1984), ಬೆಳ್ಳಿಯ ಸಂಕೋಲೆಗಳು (1985) ಸೂರ್ಯ ಕಿನ್ನರಿಯರು (1995), ಮಲ್ಲಿನಾಥನ ಧ್ಯಾನ (1996)– ಇವು ಇವರ ಪ್ರಬಂಧ ಸಂಕಲನಗಳು.

ಇವರಿಗೆ ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ (1994), ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1994, 1999), ಎರಡು ಬಾರಿ 'ಕಥಾ' ಪ್ರಶಸ್ತಿ, ವರ್ಧಮಾನ ಪ್ರಶಸ್ತಿ (1986), ಗೀತಾ ದೇಸಾಯಿ ದತ್ತಿನಿಧಿ ಪ್ರಶಸ್ತಿ (1984, 1990), ಎಂ.ಕೆ. ಇಂದಿರಾ ಪ್ರಶಸ್ತಿ (1994), ಕರ್ನಾಟಕ ಸರ್ಕಾರದ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ (1998) ದೊರೆತಿವೆ. **(ಎಸ್‌ಎ)**

**ವೈದ್ಯಕೀಯ ವ್ಯವಸ್ಥೆ:** ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ವ್ಯವಸ್ಥೆ ಬಹಳ ಸುಧಾರಿತ ಮಟ್ಟದಲ್ಲಿ ಇದೆ. ಸಮಾಜಕ್ಕೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ವಿಧಾನಗಳು ಮೂರು ರೀತಿಯದಾಗಿವೆ– ಔಷಧಿ ಉಪಚಾರ ಮತ್ತು ಶಸ್ತ್ರಚಿಕಿತ್ಸೆ, ಸಾರ್ವಜನಿಕ ಆರೋಗ್ಯ ಸಾಧನೆ, ವೈದ್ಯಕೀಯ ವೃತ್ತಿ ತರಬೇತಿ.

### ಔಷಧಿ ಉಪಚಾರ ಮತ್ತು ಶಸ್ತ್ರಚಿಕಿತ್ಸೆ

ಈ ಕಾರ್ಯದಲ್ಲಿ ಸರ್ಕಾರದವರು, ಖಾಸಗಿ ಸಂಸ್ಥೆಗಳು ಮತ್ತು ಖಾಸಗಿ ವೈದ್ಯರು ಭಾಗವಹಿಸುತ್ತಿದ್ದಾರೆ. ರಾಜ್ಯದಲ್ಲಿ ಅಲೋಪತಿ, ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ವೈದ್ಯಕೀಯ ಪದ್ಧತಿಗಳ ಚಿಕಿತ್ಸೆ ಪಡೆಯುವುದಕ್ಕೆ ಅವಕಾಶವುಂಟು.

ಮೈಸೂರು ಮೆಡಿಕಲ್ ಕಾಲೇಜು

**ಸಾಮಾನ್ಯ ಆಸ್ಪತ್ರೆಗಳು:** ಕರ್ನಾಟಕ ರಾಜ್ಯದಲ್ಲಿ ಆಧುನಿಕ ವೈದ್ಯ ಪದ್ಧತಿಯಂತೆ ಚಿಕಿತ್ಸೆ ಮಾಡುವ ವೈದ್ಯಕೀಯ ಕಾಲೇಜುಗಳಿಗೆ ಸೇರಿದ ಅತ್ಯಂತ ಆಧುನಿಕ ಯಂತ್ರೋಪಕರಣಗಳಿಂದ ಸುಸಜ್ಜಿತವಾದ ಆಸ್ಪತ್ರೆಗಳಿವೆ. ಜಿಲ್ಲಾಮಟ್ಟದಲ್ಲಿ 100–200 ಹಾಸಿಗೆಯುಳ್ಳ 12 ಆಸ್ಪತ್ರೆಗಳೂ ತಾಲ್ಲೂಕು ಮಟ್ಟದಲ್ಲಿ 447 ಆರೋಗ್ಯ ಕೇಂದ್ರಗಳೂ ರಾಜ್ಯದ ಮತ್ತು ನೆರೆಹೊರೆಯ ರಾಜ್ಯದ ರೋಗಿಗಳಿಗೆ ಚಿಕಿತ್ಸೆ ನೀಡುವ ಸೌಲಭ್ಯಗಳನ್ನು ಹೊಂದಿವೆ.

ಔಷಧಿ ಉಪಚಾರಕ್ಕೆ ಮತ್ತು ಶಸ್ತ್ರಚಿಕಿತ್ಸೆಗೆ ಬರುವ ರೋಗಿಗಳನ್ನು ಹೊರ ರೋಗಿಗಳು ಮತ್ತು ಒಳರೋಗಿಗಳು ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಹೊರರೋಗಿಗಳು ಸಾಮಾನ್ಯವಾಗಿ ಅವರ ರೋಗದ ಬಹಳ ಪ್ರಾರಂಭದೆಸೆಯಲ್ಲಿ ಇರುತ್ತಾರೆ. ಅವರಲ್ಲಿ ರೋಗದ ಭೀಕರವಾದ ಚಿಹ್ನೆಗಳು ಇರುವುದಿಲ್ಲ. ಒಟ್ಟು ರೋಗಿಗಳಲ್ಲಿ ಇವರೇ ಹೆಚ್ಚು. ಇಂಥವರು ಖಾಸಗಿ ವೈದ್ಯರಿಂದಲೂ ದೊಡ್ಡ ಆಸ್ಪತ್ರೆಗಳ ಹೊರರೋಗಿಗಳ ವಿಭಾಗಗಳಿಂದಲೂ ತಾಲ್ಲೂಕು ಮಟ್ಟ ಮತ್ತು ಆರೋಗ್ಯ ಕೇಂದ್ರಗಳ ಚಿಕಿತ್ಸಾ ವಿಭಾಗಗಳಿಂದಲೂ ಚಿಕಿತ್ಸೆ ಪಡೆಯುತ್ತಾರೆ. ರೋಗಗಳನ್ನು ಮೊಳಕೆಯಲ್ಲಿಯೇ ಕಂಡು ಹಿಡಿದು, ಅದಕ್ಕೆ ಸರಿಯಾದ ಚಿಕಿತ್ಸೆ ನಡೆಸುವುದರಿಂದ ರೋಗದಿಂದ ಆಗುವ ಅಪಾಯವನ್ನು ಕಷ್ಟನಷ್ಟಗಳನ್ನು ಆದಷ್ಟು ಕಡಿಮೆ ಮಾಡಲು ಸಾಧ್ಯ. ಅನೇಕ ರೋಗಗಳನ್ನು ಅತಿ ಸುಲಭವಾಗಿ ಮೊಳಕೆಯಲ್ಲಿಯೇ ಕಂಡು ಹಿಡಿಯುವುದು ಆಧುನಿಕ ಸಂಶೋಧನೆಗಳಿಂದ ಸಾಧ್ಯವಾಗಿದೆ. ಈಗ ಕ್ಯಾನ್ಸರ್, ಹೃದಯದ ರೋಗಗಳು, ಕ್ಷಯರೋಗ, ಸಿಹಿಮೂತ್ರ ರೋಗ, ಕುಷ್ಠರೋಗಗಳನ್ನು ಸುಲಭವಾಗಿ ಕಂಡುಹಿಡಿಯಬಹುದು. ಈ ರೋಗಗಳನ್ನು ಮೊಳಕೆಯಲ್ಲಿ ಕಂಡು ಹಿಡಿದರೆ, ಇವನ್ನು ಸುಲಭವಾಗಿ ವಾಸಿ ಮಾಡಬಹುದು ಮತ್ತು ಜನರಿಗೆ ಇದರಿಂದ ಆಗುವ ಕಷ್ಟಗಳನ್ನು ಆದಷ್ಟು ಕಡಿಮೆ ಮಾಡಬಹುದು. ಬಹಳ ವಿಕೋಪದಲ್ಲಿ ಇರುವ ರೋಗಿಗಳನ್ನು ಆಸ್ಪತ್ರೆಗೆ ಸೇರಿಸಿಕೊಂಡು ಅವರಿಗೆ ಬೇಕಾದ ಚಿಕಿತ್ಸೆಕೊಟ್ಟು ಗುಣಪಡಿಸಬಹುದು. ಇಂಥ ಒಳರೋಗಿಗಳು ಸಾಮಾನ್ಯ ಹಾಗೂ ವಿಶೇಷ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ.

ಸಾಮಾನ್ಯ ಆಸ್ಪತ್ರೆಗಳಲ್ಲಿ ಎಲ್ಲ ವಿಧವಾದ ಕಾಯಿಲೆಗಳನ್ನು ಕಂಡು ಹಿಡಿದು, ಚಿಕಿತ್ಸೆ ಕೊಡುವ ಸೌಲಭ್ಯಗಳಿವೆ. ವಿಶೇಷ ಆಸ್ಪತ್ರೆಗಳಲ್ಲಿ ಕೇವಲ ಒಂದು ವಿಧವಾದ ರೋಗಕ್ಕೆ ಮಾತ್ರ ಚಿಕಿತ್ಸೆ ಮಾಡುವ ಅನುಕೂಲಗಳು ಇರುತ್ತವೆ. ವೈದ್ಯಕೀಯ ಕಾಲೇಜುಗಳಿಗೆ ಸೇರಿದ ಆಸ್ಪತ್ರೆಗಳಲ್ಲಿ ಇ.ಎನ್.ಟಿ., ಕಣ್ಣು, ಮೂಳೆ, ಚರ್ಮ, ಮಕ್ಕಳ ಕಾಯಿಲೆ, ಲೈಂಗಿಕ ರೋಗ ಇವುಗಳ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡಿ ವಿಶೇಷ ತಜ್ಞರೆನಿಸಿರುವ ವೈದ್ಯರು ಇರುತ್ತಾರೆ. ಇಲ್ಲಿ ಎಲ್ಲ ವಿಧವಾದ ಪರೀಕ್ಷೆ ನಡೆಸಲು ಅನುಕೂಲವಿರುವ ಆಧುನಿಕ ಯಂತ್ರೋಪಕರಣಗಳನ್ನೊಳಗೊಂಡ ಪೆಥಾಲಜಿ ಮತ್ತು ಮೈಕ್ರೋಬಯಾಲಜಿ ಅಭ್ಯಾಸ ಕೋಣೆಗಳು, ಎಕ್ಸ್–ರೇ ವಿಭಾಗಗಳೂ ಇವೆ. ಹೃದಯ ರೋಗಗಳ ಚಿಕಿತ್ಸೆಗಾಗಿ ಅನೇಕ ಸೌಲಭ್ಯಗಳೂ ಈ ಆಸ್ಪತ್ರೆಗಳಲ್ಲಿ ಉಂಟು. ಈ ಆಸ್ಪತ್ರೆಗಳಲ್ಲಿ ಎಲ್ಲ ವಿಧವಾದ ಶಸ್ತ್ರಚಿಕಿತ್ಸೆಗಳನ್ನು ಮಾಡುವ ಕೋಣೆಗಳೂ ಸುಸಜ್ಜಿತವಾಗಿ ನಿರ್ಮಿತವಾಗಿವೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬಳ್ಳಾರಿ, ಬೆಳಗಾಂವಿ, ಗುಲ್ಬರ್ಗ ಮತ್ತು ದಾವಣಗೆರೆಯ ದೊಡ್ಡ ಆಸ್ಪತ್ರೆಗಳಲ್ಲಿ ಇಂಥ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ಆಸ್ಪತ್ರೆಗಳಲ್ಲಿ ಸುಮಾರು 500 ರಿಂದ 1000 ವರೆಗೆ ಹಾಸಿಗೆಗಳು ಇವೆ.

ಜಿಲ್ಲಾಮಟ್ಟದ ಆಸ್ಪತ್ರೆಗಳಲ್ಲಿ 100 ರಿಂದ 200 ವರೆಗೆ ಹಾಸಿಗೆಗಳು ಇವೆ. ಇಲ್ಲಿಯೂ ಎಲ್ಲ ತಜ್ಞರ ಸೌಲಭ್ಯಗಳೂ ಇವೆ. ಈಗೀಗ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗಳಲ್ಲೂ ವಿಶೇಷ ತಜ್ಞರನ್ನು ನೇಮಿಸ ಲಾಗುತ್ತಿದೆ. ಇಲ್ಲಿಯೂ ಪೆಥಾಲಜಿ ಅಭ್ಯಾಸ ಕೋಣೆ ಮತ್ತು ಎಕ್ಸ್–ರೇ ಉಪಕರಣಗಳ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ.

ತಾಲ್ಲೂಕು ಮಟ್ಟದ ಮತ್ತು ಆರೋಗ್ಯ ಕೇಂದ್ರಗಳ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಅಷ್ಟು ಸೌಲಭ್ಯ ಕಡಿಮೆ, ಕೆಲವು ಕಡೆ ಎಕ್ಸ್–ರೇ ಸೌಲಭ್ಯ ಮತ್ತು ಅಭ್ಯಾಸ ಕೋಣೆಗಳು ಇವೆ. ಜೊತೆಗೆ ಕೆಲವು ತಜ್ಞರೂ ಇರುತ್ತಾರೆ. ಇಲ್ಲಿ ಹೆಚ್ಚಾಗಿ ಎಂ.ಬಿ.ಬಿ.ಎಸ್. ಪದವೀಧರರೇ ಹೆಚ್ಚು. ಎಂ.ಬಿ.ಬಿ.ಎಸ್. ಆಗಿರುವ ವೈದ್ಯರು ಎಲ್ಲ ಕಾಯಿಲೆಗಳನ್ನು ನೋಡಿ, ಅವುಗಳನ್ನು ಕಂಡುಹಿಡಿಯುವಷ್ಟು ನಿಪುಣತೆಯನ್ನು ಹೊಂದಿದ್ದಾರೆ. ಆದರೆ ಇನ್ನೂ ಹೆಚ್ಚಿನ ತಪಾಸಣೆ, ಎಕ್ಸ್–ರೇ ಸೌಲಭ್ಯ ಮತ್ತು ಶಸ್ತ್ರಚಿಕಿತ್ಸೆ ಬೇಕಾಗಿದ್ದರೆ, ಅಂಥ ರೋಗಿಗಳನ್ನು ಜಿಲ್ಲಾಮಟ್ಟದ ಆಸ್ಪತ್ರೆಗಳಿಗೂ ಮತ್ತು ವಯದ್ಯಕೀಯ ಕಾಲೇಜುಗಳ ಆಸ್ಪತ್ರೆಗಳಿಗೂ ರವಾನಿಸುತ್ತಾರೆ. ಆರೋಗ್ಯ ಕೇಂದ್ರಗಳ ಆಸ್ಪತ್ರೆಗಳಲ್ಲಿಯೂ ತಾಲ್ಲೂಕು ಮಟ್ಟದ ಆಸ್ಪತ್ರೆಯ ಸೌಲಭ್ಯಗಳಿರುತ್ತವೆ. ಇಲ್ಲಿಯೂ ಎಂ.ಬಿ.ಬಿ.ಎಸ್. ಮಾಡಿದ ವೈದ್ಯರು ಇರುವರು. ಇಲ್ಲಿ ಹೆರಿಗೆ ಆಸ್ಪತ್ರೆಗಳೂ ಉಂಟು. ಇಲ್ಲಿ ಎಕ್ಸ್–ರೇ ಸೌಲಭ್ಯ ಇರುವುದಿಲ್ಲ. ಚಿಕ್ಕದಾದ ಅಭ್ಯಾಸಕೋಣೆ ಇರುತ್ತದೆ. ಸರ್ವೇಸಾಮಾನ್ಯವಾಗಿ ಎಲ್ಲ ಕಾಯಿಲೆಗಳನ್ನೂ ಗುರುತಿಸಿ ಚಿಕಿತ್ಸೆ ಮಾಡಲು ಸೌಲಭ್ಯಗಳಿವೆ.

ಈ ಮೇಲ್ಕಂಡ ಯಾವ ಆಸ್ಪತ್ರೆಗಳಲ್ಲೂ ರೋಗಿಗಳು ಚಿಕಿತ್ಸೆಗೆ ಹಣ ಕೊಡಬೇಕಾಗಿಲ್ಲ. ಆದರೆ ವಿಶೇಷ ವಾರ್ಡ್‌ಗಳಿಗೆ ಸೇರಿಕೊಂಡವರು ಮತ್ತು ಒಂದು ನಿರ್ದಿಷ್ಟಮೊತ್ತಕ್ಕೂ ಹೆಚ್ಚಿನ ಸಂಭಾವನೆ ಬರುವವರು ಗೊತ್ತು ಪಡಿಸಿದ ಹಣ ಕೊಡಬೇಕಾಗುತ್ತದೆ.

**ವಿಶೇಷ ಆಸ್ಪತ್ರೆಗಳು:** ಕೆಲವು ಕಾಯಿಲೆಗಳನ್ನು ಪತ್ತೆಹಚ್ಚಲು ಕೆಲವು ವಿಧವಾದ ಯಂತ್ರೋಪಕರಣಗಳು ಬೇಕಾಗುತ್ತವೆ. ಮತ್ತು ವೈದ್ಯರು ಆ ಕಾಯಿಲೆಯ ವಿಷಯದಲ್ಲಿ ನುರಿತಿರಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಇಂಥ ಆಸ್ಪತ್ರೆಗಳೂ ಹಲವಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ಕಣ್ಣಿನ ಆಸ್ಪತ್ರೆ, ಮಾನಸಿಕ ಆಸ್ಪತ್ರೆ, ಅರ್ಬುದ ರೋಗ ಕೇಂದ್ರ, ಹೃದಯರೋಗಗಳನ್ನು ನೋಡಿಕೊಳ್ಳುವ ವಿಶೇಷ ಸೌಲಭ್ಯಗಳನ್ನು ಹೊಂದಿರುವ ಆಸ್ಪತ್ರೆ, ಕಿವಿ ಮೂಗು ಮತ್ತು ಗಂಟಲು ಆಸ್ಪತ್ರೆ, ಹೆರಿಗೆ ಆಸ್ಪತ್ರೆಗಳು, ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಕುಷ್ಠರೋಗದ ಮತ್ತು ಕ್ಷಯರೋಗದ ಆಸ್ಪತ್ರೆ.

**ಕಣ್ಣಿನ ಆಸ್ಪತ್ರೆ :** ಬೆಂಗಳೂರಿನ ಮಿಂಟೋ ಕಣ್ಣಿನ ಆಸ್ಪತ್ರೆ ವಿಶೇಷ ತರಬೇತಿ ಹೊಂದಿದ ತಜ್ಞ ವೈದ್ಯರನ್ನು, ಆಧುನಿಕ ಯಂತ್ರೋಪಕರಣಗಳನ್ನುಳ್ಳ 265 ಹಾಸಿಗೆಗಳನ್ನು ಹೊಂದಿದೆ. ಇಲ್ಲಿ ಕಣ್ಣಿನ ಎಲ್ಲ ವಿಧವಾದ ವ್ಯಾಧಿಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ. ಕಣ್ಣಿನ ಎಲ್ಲ ವಿಧವಾದ ಶಸ್ತ್ರಚಿಕಿತ್ಸೆಗಳನ್ನೂ ಮಾಡುವ ಸೌಲಭ್ಯವೂ ಇದೆ. ಕಣ್ಣಿನ ದೃಷ್ಟಿಯನ್ನು ಪರೀಕ್ಷಿಸಿ ಅದಕ್ಕೆ ಸರಿಯಾದ ಕನ್ನಡಕಗಳನ್ನೂ ಕೊಡಲಾಗುವುದು (ಎಲ್ಲ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಸಹ ಈ ಸೌಕರ್ಯಗಳನ್ನು ಒದಗಿಸಲಾಗಿದೆ). ಈ ಆಸ್ಪತ್ರೆಯಲ್ಲಿ ಕಣ್ಣಿನ ಬ್ಯಾಂಕು, ಕಾರ್ನಿಯ ಗ್ರಾಫ್ಟ್ ವಿಭಾಗ ಮತ್ತು ಕಾಂಟಾಕ್ಟ್ ಲೆನ್ಸಿನ ಸೌಲಭ್ಯಗಳೂ ಇವೆ.

**ಮಾನಸಿಕ ಆಸ್ಪತ್ರೆ:** ಮನೋರೋಗಗಳನ್ನು ಗುರುತಿಸಿ ಸರಿಯಾದ ಚಿಕಿತ್ಸೆ ಕೊಡಲು ವಿಶೇಷ ತಜ್ಞರೂ ಈ ಕಾಯಿಲೆಗಳಿಗೆ ಬೇಕಾಗುವ ಚಿಕಿತ್ಸೆ ನೀಡುವ ಆಧುನಿಕ ಉಪಕರಣಗಳೂ ಇರುವ ಒಂದು ಆಸ್ಪತ್ರೆ ಬೆಂಗಳೂರಿನಲ್ಲಿ ಇದೆ. ಇಲ್ಲಿ 805 ಹಾಸಿಗೆಗಳಿವೆ. ನ್ಯೂರೋಸರ್ಜಿಕಲ್ ಮತ್ತು ಆಕ್ಯುಪೇಷನಲ್ ಥಿರಪಿ ಶಾಖೆಗಳು 80 ಹಾಸಿಗಳನ್ನು ಹೊಂದಿವೆ. ಇಲ್ಲಿ ಮೆದುಳಿನ ಶಸ್ತ್ರಚಿಕಿತ್ಸೆ, ತಲೆಗೆ ಏಟುಬಿದ್ದು ರಕ್ತಸ್ರಾವವಾದವರಿಗೆ ಶಸ್ತ್ರಚಿಕಿತ್ಸೆ ಮುಂತಾದವನ್ನೂ ಮಾಡಲಾಗುತ್ತದೆ. ಧಾರವಾಡದಲ್ಲಿ 375 ಹಾಸಿಗೆಗಳುಳ್ಳ ಒಂದು ಮಾನಸಿಕ ಆಸ್ಪತ್ರೆ ಇದೆ.

ಹೃದಯರೋಗ, ಕಿವಿ, ಮೂಗು ಮತ್ತು ಗಂಟಲು ಕೇಂದ್ರ: ಬೆಂಗಳೂರಿನ ವೈದ್ಯಕೀಯ ಕಾಲೇಜಿಗೆ ಸೇರಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದಯರೋಗಗಳಿಗೆ ಹೆಚ್ಚಿನ ಸುಧಾರಿತ ಚಿಕಿತ್ಸೆ ಕೊಡಲು ಒಂದು ವಿಶೇಷ ಇನ್‌ಸ್ಟಿಟ್ಯೂಟನ್ನು ನಿರ್ಮಿಸಲಾಗಿದೆ. ಹೃದಯಾಘಾತಕ್ಕೆ ಒಳಗಾದವರನ್ನು ನೋಡಿಕೊಳ್ಳಲು ಆಧುನಿಕ ಯಂತ್ರೋಪಕರಣಗಳನ್ನುಳ್ಳ ಒಂದು ವಿಭಾಗ (ಇನ್‌ಟೆನ್ಸಿವ್ ಕರೊನರಿ ಯೂನಿಟ್) ಸಹ ಇಲ್ಲಿ ಇದೆ. ಕಿವಿ, ಗಂಟಲು ಮತ್ತು ಮೂಗಿನ ರೋಗಗಳಿಗೆ, ಹೆಚ್ಚಿನ ರೀತಿಯ ಸೌಲಭ್ಯ ಕಲ್ಪಿಸಲು ವೆಂಕಟೇಶ್ವರ ಇನ್‌ಸ್ಟಿಟ್ಯೂಟನ್ನು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲೇ ನಿರ್ಮಿಸಲಾಗಿದೆ.

**ಸಾಂಕ್ರಾಮಿಕ ರೋಗಗಳ ಆಸ್ಪತ್ರೆ :** ಬೆಂಗಳೂರು, ಮೈಸೂರು ಮತ್ತು ಕೋಲಾರ ಚಿನ್ನದ ಗಣಿ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳಿಗಾಗಿ ಆಸ್ಪತ್ರೆಯ ಸೌಲಭ್ಯಗಳನ್ನು ಏರ್ಪಡಿಸಿದೆ. ಇವುಗಳಲ್ಲಿ 192 ಹಾಸಿಗೆಗಳು ಇವೆ. ಇಲ್ಲಿ ಸಿಡುಬು, ಕಾಲರ, ದಡಾರ ಮತ್ತು ಸೋಂಕಿನ ಭೇದಿ ಕಾಯಿಲೆಗಳಿಗೆ ಚಿಕಿತ್ಸೆ ಮಾಡುವ ಸೌಕರ್ಯಗಳಿವೆ.

**ಹೆರಿಗೆ ಆಸ್ಪತ್ರೆಗಳು:** ರಾಜ್ಯದಲ್ಲಿ ಹೆರಿಗೆಗಾಗಿ ಸೌಕರ್ಯಗಳನ್ನು ಒದಗಿಸಲು ಮತ್ತು ಸಂಬಂಧಪಟ್ಟ ರೋಗಗಳ ಚಿಕಿತ್ಸೆಗಾಗಿ 13 ದೊಡ್ಡ ಆಸ್ಪತ್ರೆಗಳಲ್ಲಿ ಒಟ್ಟು 2,015 ಹಾಸಿಗೆಗಳಿವೆ. ಇಲ್ಲಿ ಗರ್ಭಿಣಿ ಸ್ತ್ರೀಯರ ಕಾಯಿಲೆಗಳು ಮತ್ತು ಜನನ ಕಾಲದಲ್ಲಿ ಆಗುವ ಅಕಸ್ಮಾತ್ ತೊಂದರೆಗಳು, ಜನನದ ಅನಂತರ ಆಗುವ ಕಾಯಿಲೆಗಳು ಇವನ್ನು ನಿವಾರಣೆ ಮಾಡಿ, ತಾಯಿ ಮತ್ತು ಮಗುವಿನ ಆರೋಗ್ಯ ಕಾಪಾಡುವುದಕ್ಕೆ ಈ ಆಸ್ಪತ್ರೆಗಳು ಸಹಾಯಕವಾಗಿವೆ. ಇದಲ್ಲದೆ ಖಾಸಗೀ ಸಂಸ್ಥೆಗಳು ಈ ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು ರಾಜ್ಯದಲ್ಲಿ 2,282 ಹಾಸಿಗೆಗಳ ಸೌಲಭ್ಯಗಳಿವೆ.

**ಕ್ಷಯರೋಗ ಆಸ್ಪತ್ರೆ:** ರಾಜ್ಯದಲ್ಲಿ ಕ್ಷಯರೋಗ ಆಸ್ಪತ್ರೆಗಳಿದ್ದು 2,780 ಹಾಸಿಗಳ ಸೌಲಭ್ಯ ಹೊಂದಿವೆ. ಜಿಲ್ಲಾ ಆಸ್ಪತ್ರೆಗಳಲ್ಲೂ ಈ ವಿಶೇಷ ಸೌಲಭ್ಯಗಳುಂಟು. (ಇತ್ತೀಚಿನ ವೈದ್ಯಕೀಯ ಸಂಶೋಧನೆಯ ಪ್ರಕಾರ ಕ್ಷಯರೋಗದಿಂದ ನರಳುವವರನ್ನು ಬೇರೆ ಒಂದು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಕೊಡುವುದು ಏನೂ ಕಡ್ಡಾಯವಿಲ್ಲ. ಅಂಥವರನ್ನು ಮನೆಯಲ್ಲೇ ಇಟ್ಟು ಚಿಕಿತ್ಸೆ ಮಾಡಬಹುದು. ಇದನ್ನು ಡಾಮಿಸಿಲಿಯಂ ಲೈನ್ ಆಫ್ ಟ್ರೀಟ್‌ಮೆಂಟ್ ಎಂದು ಕರೆಯುತ್ತಾರೆ. ಸುಮಾರು 18 ತಿಂಗಳ ಕಾಲ ಕ್ಷಯರೋಗದ ಔಷಧಿಯನ್ನು ತೆಗೆದುಕೊಂಡರೆ, ಕಾಯಿಲೆಯಿಂದ ಗುಣ ಹೊಂದಬಹುದು).

**ಕುಷ್ಠರೋಗದ ಆಸ್ಪತ್ರೆ:** ರಾಜ್ಯದಲ್ಲಿ ಕುಷ್ಠರೋಗದವರ ಚಿಕಿತ್ಸೆಗಾಗಿ 260 ಹಾಸಿಗೆಗಳುಳ್ಳ ರಾಜ್ಯಮಟ್ಟದ ಆಸ್ಪತ್ರೆಯಿದೆ. ಇಲ್ಲಿ ಔಷಧಿ ಉಪಚಾರ ಮತ್ತು ಬೇಕಾಗುವ ಶಸ್ತ್ರಚಿಕಿತ್ಸೆ ಮಾಡುವ ವ್ಯವಸ್ಥೆಯೂ ಇದೆ.

### ಸಾರ್ವನಿಕ ಆರೋಗ್ಯ ಸಾಧನೆ

ರಾಜ್ಯದಲ್ಲಿ ಅನೇಕ ಆರೋಗ್ಯ ರಕ್ಷಣಾ ಕಾರ್ಯಕ್ರಮಗಳಿವೆ. ಎಲ್ಲ ಕಾರ್ಯಕ್ರಮಗಳಿಗೂ ರಾಜ್ಯ ಸರ್ಕಾರವೇ ಹೊಣೆ. ಕೆಲವು ಕಾರ್ಯಕ್ರಮಗಳಿಗೆ ಕೇಂದ್ರದ ಸಹಾಯವೂ ಉಂಟು. ಇನ್ನು ಕೆಲವು ಕಾರ್ಯಕ್ರಮಗಳಲ್ಲಿ ಖಾಸಗಿ ಸಂಸ್ಥೆಯವರು ಅಲ್ಪಸ್ವಲ್ಪ ಸಹಾಯ ಮಾಡುತ್ತಿದ್ದಾರೆ. ಹಳ್ಳಿಗಾಡುಗಳಲ್ಲಿ ನೇರವಾಗಿ ಸರ್ಕಾರದವರೇ ಏರ್ಪಾಡು ಮಾಡುತ್ತಿದ್ದಾರೆ. ಪಟ್ಟಣಗಳಲ್ಲಿ ಆಯಾ ಪುರಸಭೆಯವರು ಮತ್ತು ನಗರಸಭೆಯವರು ಆರೋಗ್ಯ ರಕ್ಷಣೆಯ ಭಾರವನ್ನು ಹೊತ್ತಿದ್ದಾರೆ.

**ಗ್ರಾಮಾಂತರ ಕಾರ್ಯಕ್ರಮಗಳು:** ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ 80,000 ಪ್ರಜಾಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ವೈದ್ಯಕೀಯ ಚಿಕಿತ್ಸೆ ಮತ್ತು ಆರೋಗ್ಯ ರಕ್ಷಣೆ ಈ ಕೇಂದ್ರಗಳ ಮುಖ್ಯ ಗುರಿ. ವೈದ್ಯಕೀಯ ಚಿಕಿತ್ಸೆ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು. ಪರಿಸರ ಶುಚಿಪಾಲನೆ (ಎನ್‌ವಿರಾನ್‌ಮೆಂಟಲ್ ಸ್ಯಾನಿಟೇಷನ್), ತಾಯಿ ಹಾಗೂ ಮಗುವಿನ ಆರೋಗ್ಯಪಾಲನೆ, ಕುಟುಂಬ ಕಲ್ಯಾಣ, ಪಾಠಶಾಲೆಯ ವಿದ್ಯಾರ್ಥಿಗಳ ಆರೋಗ್ಯ, ಜನನ ಮರಣ ಮತ್ತು ರೋಗಗಳ ಅಂಕಿಅಂಶಗಳ ಸಂಗ್ರಹ-ಇವು ಇಲ್ಲಿಯ ಮುಖ್ಯ ಕಾರ್ಯಕ್ರಮಗಳು. ಈ ಕೇಂದ್ರಗಳಲ್ಲಿ ಸಾಕಷ್ಟು ತರಬೇತಿ ಹೊಂದಿದ ಎಂ.ಬಿ.ಬಿ.ಎಸ್. ವೈದ್ಯರೂ ಮತ್ತು ಇತರ ನುರಿತ ಉದ್ಯೋಗಿಗಳೂ ಇರುತ್ತಾರೆ. ಪ್ರತಿ ಆಸ್ಪತ್ರೆಯಲ್ಲೂ ಒಬ್ಬ ಹೆಂಗಸು ಮತ್ತು ಒಬ್ಬ ಗಂಡಸು ವೈದ್ಯರಿರುತ್ತಾರೆ. ಅಲ್ಲದೆ ಈ ಕೇಂದ್ರಗಳಿಗೆ ಸೇರಿದಂತೆ ಹೆಲ್ತ್ ಇನ್‌ಸ್ಪೆಕ್ಟರ್, ಹೆಲ್ತ್ ವಿಸಿಟರ್, ದಾದಿಯರು, ಪ್ರಾಥಮಿಕ ಆರೋಗ್ಯ ಕಾರ್ಯಕರ್ತ, ಕುಟುಂಬ ಕಲ್ಯಾಣದ ಕಾರ್ಯಕರ್ತ, ಪ್ರಾದೇಶಿಕ ತಿಳಿವಳಿಕೆದಾರ, ಅಂಕಿ ಅಂಶ ಕ್ರೋಢೀಕರಣಕಾರ ಮತ್ತು ಕಾರಕೂನರು ಸಹ ಇರುತ್ತಾರೆ. ಇವರಲ್ಲಿ ಎ.ಎನ್.ಎಮ್. ದಾದಿಯರು ಪ್ರತಿಯೊಂದು 5,000 ಪ್ರಜಾಸಂಖ್ಯೆಗೆ ಇರುತ್ತಾರೆ. ಪ್ರತಿಯೊಬ್ಬರಿಗೂ ನಿರ್ದಿಷ್ಟವಾದ ಹಳ್ಳಿಯನ್ನು ನೇಮಿಸಲಾಗಿದ್ದು, ಅವರು ವಾರಕ್ಕೆ ಕನಿಷ್ಠ ಒಂದು ಸಲ ಹಳ್ಳಿಗೆ ಭೇಟಿ ಕೊಡುತ್ತಾರೆ. ಅಲ್ಲಿಯ ಗರ್ಭಿಣಿ ಸ್ತ್ರೀಯರನ್ನು ಗುರುತಿಸಿ ಅವರ ಮೂತ್ರ ಮತ್ತು ರಕ್ತ ಪರೀಕ್ಷೆ ಮಾಡುತ್ತಾರೆ. ಗರ್ಭಿಣಿಯರಿಗಾಗಿಯೇ ಕನಿಷ್ಠ ಮೂರು-ನಾಲ್ಕು ಸಲ ಭೇಟಿ ಕೊಟ್ಟು ಅವರ ಆರೋಗ್ಯವನ್ನು ನೋಡಿಕೊಳ್ಳುತ್ತಾರೆ. ಆಹಾರ, ಮಗುವಿನ ಬೆಳವಣಿಗೆಯ ಮೇಲೆ ಅವರಿಗೆ ಮಾಹಿತಿ ಮಾಡಿಕೊಡುವುದಲ್ಲದೆ, ಏನಾದರೂ ತೊಂದರೆ ಕಂಡುಬಂದರೆ, ಹೆಲ್ತ್ ವಿಸಿಟರು ಮತ್ತು ಅವರ ಮೂಲಕ ಕೇಂದ್ರದಲ್ಲಿರುವ ಸ್ತ್ರೀವೈದ್ಯರಿಗೆ ವಿಷಯವನ್ನು ತಿಳಿಸಿ, ಅವರ ಸಲಹೆಯ ಮೇರೆಗೆ ಚಿಕಿತ್ಸೆ ನಡೆಸುತ್ತಾರೆ. ಹೆರಿಗೆ ಕಷ್ಟವೆಂದು ಕಂಡುಬಂದರೆ, ಅಂಥವರನ್ನು ಆರೋಗ್ಯ ಕೇಂದ್ರಕ್ಕೆ ಸೇರಿಸುತ್ತಾರೆ. ಅಲ್ಲಿಯೂ ಇವರೇ ಇದ್ದು ತಾಯಿ ಹಾಗೂ ಮಗುವಿನ ಆರೋಗ್ಯಕ್ಕೂ ಶ್ರಮಿಸುತ್ತಾರೆ. ಇವಲ್ಲದೆ ಈ ದಾದಿಯರು, ಚಿಕ್ಕಮಕ್ಕಳಿಗೆ ಎ ಅನ್ನಾಂಗ ಮತ್ತು ಗರ್ಭಿಣಿ ಸ್ತ್ರೀಯರಿಗೆ ಬಿ ಅನ್ನಾಂಗ

ಮತ್ತು ಪೋಲಿಕ್ ಆಮ್ಲಯುಕ್ತ ಔಷಧಿಯನ್ನು ಹಂಚುತ್ತಾರೆ. ಇವರು ಮಕ್ಕಳಿಗೆ ಮೈಲಿಬೇನೆಯು ಬಾರದಂತೆ ಚುಚ್ಚುಮದ್ದು ಹಾಕುತ್ತಾರೆ. ಕುಟುಂಬ ಕಲ್ಯಾಣವೂ ಇವರ ಇನ್ನೊಂದು ಮುಖ್ಯ ಕರ್ತವ್ಯ.

ಪ್ರತಿ 4 ಜನ ದಾದಿಯರಿಗೆ ಒಬ್ಬರಂತೆ ಹೆಲ್ತ್ ವಿಸಿಟರ್ ಇರುತ್ತಾರೆ. ಇವರು, ದಾದಿಯರ ಕಾರ್ಯಗಳ ಮೇಲ್ವಿಚಾರಣೆ ಮಾಡುತ್ತಾರೆ. ಕಷ್ಟವಾದ ಸಂದರ್ಭಗಳಲ್ಲಿ ಇವರೇ ಸ್ವಂತ ಪರೀಕ್ಷೆ ನಡೆಸಿ, ಅವರಿಗೆ ಸರಿಯಾದ ಸಲಹೆಯನ್ನು ನೀಡುತ್ತಾರೆ. ಇದಲ್ಲದೆ ಅವರು ಗರ್ಭಿಣಿಯರಿಗೆ ವೈದ್ಯಕೀಯ ನೆರವನ್ನೂ ನೀಡುತ್ತಾರೆ. ಮಕ್ಕಳಿಗೆ ಡಿಫ್ತೀರಿಯಾ, ಧನುರ್ವಾಯು ಮತ್ತು ನಾಯಿಕೆಮ್ಮುಲು ಮತ್ತು ಪೋಲಿಯೋ ರೋಗಗಳು ಬಾರದ ಹಾಗೆ ಚುಚ್ಚುಮದ್ದು ಕೊಡುತ್ತಾರೆ. ಗರ್ಭಿಣಿ ಸ್ತ್ರೀಯರ ಮತ್ತು ಹಸುಗೂಸುಗಳ ಮರಣಗಳೇನಾದರೂ ಸಂಭವಿಸಿದರೆ, ಅವನ್ನು ಸರಿಯಾಗಿ ವಿಚಾರಿಸಿ, ಮರಣಗಳ ಕಾರಣಗಳನ್ನು ಕಂಡುಹಿಡಿಯುವುದಕ್ಕೂ ಇವರು ಜವಾಬುದಾರರು. ಕುಟುಂಬ ಕಲ್ಯಾಣವೂ ಇವರ ಇನ್ನೊಂದು ಮುಖ್ಯ ಕಾರ್ಯಕ್ರಮ. ಈ ಕಾರ್ಯಕ್ರಮದಿಂದ ರಾಜ್ಯದಲ್ಲಿ ಹಸುಗೂಸುಗಳ ಮರಣ ಸಂಖ್ಯೆ ಬಹಳ ಮಟ್ಟಿಗೆ ಕಡಿಮೆಯಾಗಿದೆ.

ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು 10 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಇರುತ್ತಾರೆ. ಇವರು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು, ಜನನ, ಮರಣ ಮತ್ತು ರೋಗಗಳ ಅಂಕಿಅಂಶ ಸಂಗ್ರಹ, ಜನರಿಗೆ ಆರೋಗ್ಯದ ಬಗ್ಗೆ ಸಾಕಷ್ಟು ಮಾಹಿತಿ ಒದಗಿಸುವುದು, ರೋಗಗಳು ಬಾರದ ಹಾಗೆ ಚುಚ್ಚುಮದ್ದು ಕೊಡುವುದು, ಮಲೇರಿಯಾ ರೋಗ ನಿವಾರಣೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ನಡೆಸುವುದು, ಹಳ್ಳಿಯಲ್ಲಿ ನೀರಿಗೆ ಬ್ಲೀಚಿಂಗ್ ಪೌಡರ್ ಹಾಕುವುದು–ಇವು ಇವರ ಮುಖ್ಯ ಕಾರ್ಯಕ್ರಮಗಳು. ಇವರು ಶಾಲೆಗಳಿಗೆ ಭೇಟಿಕೊಟ್ಟು ಶಾಲೆಯ ಹಾಗೂ ಹಳ್ಳಿಯ ನೈರ್ಮಲ್ಯದ ಬಗೆಗೆ ಹಳ್ಳಿಯ ಮುಖಂಡರಿಗೂ ಮತ್ತು ಗ್ರಾಮಪಂಚಾಯಿತಿಯ ಸದಸ್ಯರಿಗೂ ಅಧ್ಯಕ್ಷರಿಗೂ ಸಲಹೆ ಕೊಡುತ್ತಾರೆ.

ಪ್ರತಿ ನಾಲ್ಕು ಜನ ಪ್ರಾಥಮಿಕ ಆರೋಗ್ಯ ಕಾರ್ಯಕರ್ತರಿಗೆ ಒಬ್ಬ ಹೆಲ್ತ್ ಇನ್ಸ್‌ಪೆಕ್ಟರ್ ಇರುತ್ತಾರೆ. ಇವರು ಆರೋಗ್ಯ ಕಾರ್ಯಕರ್ತರ ಕಾರ್ಯಗಳನ್ನು ಆಗಾಗ್ಗೆ ಪರಿಶೀಲಿಸಿ ಅವರಿಗೆ ಸಲಹೆ ಕೊಡುತ್ತಾರೆ. ಇವರು ಗ್ರಾಮ ಪಂಚಾಯಿತಿಯ ಅಧ್ಯಕ್ಷರನ್ನೂ ಸದಸ್ಯರನ್ನೂ ಆಗಿಂದಾಗ್ಗೆ ಭೇಟಿ ಮಾಡಿ ಅವರಿಗೆ ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳನ್ನು ತಿಳಿಯಪಡಿಸಿ ಜನರ ಸಹಕಾರಕ್ಕಾಗಿ ಮನವಿ ಮಾಡಿಕೊಳ್ಳುತ್ತಾರೆ. ಆಗಿಂದಾಗ್ಗೆ ಹಳ್ಳಿಗಳಲ್ಲಿ ಆರೋಗ್ಯದ ಬಗ್ಗೆ ಚಲನಚಿತ್ರ ಪ್ರದರ್ಶನಗಳನ್ನು ಹಾಗೂ ಆರೋಗ್ಯ ಪ್ರದರ್ಶನವನ್ನು ಏರ್ಪಾಡು ಮಾಡುತ್ತಾರೆ. ಹಳ್ಳಿಯ ಮತ್ತು ಪಾಠಶಾಲೆಯ ನೈರ್ಮಲ್ಯದ ವಿಷಯದಲ್ಲಿ ಇವರು ಅತಿಮುಖ್ಯ ಪಾತ್ರವಹಿಸುತ್ತಾರೆ. ಮಲೇರಿಯಾ ರೋಗ ಕಂಡುಹಿಡಿಯುವುದು ಮತ್ತು ತುರ್ತು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು, ಸಾಂಕ್ರಾಮಿಕ ರೋಗಗಳೇನಾದರೂ ಉದ್ಭವಿಸಿದರೆ ಅವಕ್ಕೆ ತಕ್ಕ ಪ್ರತಿಬಂಧಕ ಕಾರ್ಯಗಳನ್ನು ತೆಗೆದುಕೊಳ್ಳುವುದು, ಜಾತ್ರೆ ಮತ್ತು ದೇವರ ಕಾರ್ಯಗಳ ಕಾಲದಲ್ಲಿ ಸಾಂಕ್ರಾಮಿಕ ರೋಗಗಳು ಬಾರದಂತೆ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವುದು ಇವರ ಮುಖ್ಯ ಕರ್ತವ್ಯ.

ಕುಟುಂಬ ಕಲ್ಯಾಣ ರಾಜ್ಯದ ಬೃಹತ್ ಕಾರ್ಯಕ್ರಮಗಳಲ್ಲಿ ಒಂದು. ಪ್ರತಿ 20,000 ಜನರಿಗೆ ಒಬ್ಬರಂತೆ ಕುಟುಂಬ ಕಲ್ಯಾಣ ಕಾರ್ಯಕರ್ತರಿದ್ದಾರೆ. ಇವರು ಪ್ರತಿಯೊಂದು ಹಳ್ಳಿಯ ಮಕ್ಕಳಾಗುವ ವಯಸ್ಸಿನ (15 ರಿಂದ 45 ವರ್ಷದ) ಮದುವೆ ಆಗಿರುವ ಸ್ತ್ರೀಯರ ಯಾದಿ ತಯಾರು ಮಾಡಿ, ಅದರಲ್ಲಿ ಎರಡು ಮೂರು ಮಕ್ಕಳಿರುವ ತಾಯಿಯರ ಇನ್ನೊಂದು ಪಟ್ಟಿ ಮಾಡಿರುತ್ತಾರೆ. ಇವರು ಇಂಥ ತಾಯಿಯರನ್ನು ಅವರ ಗಂಡಂದಿರನ್ನು ಮತ್ತು ಮನೆಯ ಮುಖ್ಯಸ್ಥರನ್ನು ಭೇಟಿ ಮಾಡಿ ಕುಟುಂಬ ನಿಯಂತ್ರಣದ ಬಗ್ಗೆ ತಿಳಿವಳಿಕೆ ಕೊಡುತ್ತಾರೆ. ಒಪ್ಪಿದವರಿಗೆ, ಅವರವರಿಗೆ ತಕ್ಕಂತಿರುವ ಕುಟುಂಬ ಕಲ್ಯಾಣದ ಕ್ರಮವನ್ನು ತಿಳಿಸಿ ಹೇಳುತ್ತಾರೆ. ನಿರೋಧ್ ರೀತಿಯ ಸಾಧನಗಳನ್ನು ಅಲ್ಲೇ ಕೊಡುತ್ತಾರೆ. ಅವರು ಕುಟುಂಬ ಕಲ್ಯಾಣದ ಚಿಕಿತ್ಸೆಗೆ ಒಪ್ಪಿದರೆ ಅವರನ್ನು ಕರೆದು ಕೊಂಡು ಬಂದು ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಮಾಡಿಸುತ್ತಾರೆ.

ಪ್ರಾದೇಶಿಕ ತಿಳಿವಳಿಕೆದಾರರು ಒಂದು ಆರೋಗ್ಯ ಕೇಂದ್ರಕ್ಕೆ ಒಬ್ಬರಂತೆ ಇರುತ್ತಾರೆ. ಇವರು ಆರೋಗ್ಯ ಕೇಂದ್ರದಲ್ಲಿ ಕುಟುಂಬ ಕಲ್ಯಾಣದ ಕಾರ್ಯಕರ್ತರ ಕೆಲಸದ ಮೇಲ್ವಿಚಾರಣೆ ನಡೆಸಿ ಅವರಿಗೆ ಸಲಹೆ ಕೊಡುತ್ತಾರೆ. ಜನರಿಗೆ ಸೂಕ್ತ ವಿಧಾನದಲ್ಲಿ ಕುಟುಂಬ ಕಲ್ಯಾಣದ ಬಗ್ಗೆ ಮಾಹಿತಿ ನೀಡುವುದು. ತಾಲ್ಲೂಕು ಮತ್ತು ಹಳ್ಳಿಯ ಮುಖಂಡರನ್ನು ಗುರುತಿಸಿ ಅವರನ್ನು ಭೇಟಿ ಮಾಡಿ ಅವರ ಸಹಾಯವನ್ನು ಪಡೆಯುವುದು, ಅಲ್ಲಲ್ಲಿ ಸಭೆ, ಚಿತ್ರಪ್ರದರ್ಶನ, ಚಲನಚಿತ್ರ ಪ್ರದರ್ಶನ ನಡೆಸಿ, ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗುವಂತೆ ಮಾಡುವುದು ಇವರ ಮುಖ್ಯ ಕರ್ತವ್ಯ.

ಇನ್ನು ಪಟ್ಟಣಗಳ ಪುರಸಭೆ ನಗರಸಭೆಗಳಲ್ಲಿಯೂ ಆಯಾ ಆರೋಗ್ಯ ಇಲಾಖೆಯವರು ಈ ಮೇಲೆ ತಿಳಿಸಿರುವ ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ.

**ರಾಜ್ಯಮಟ್ಟದ ಕಾರ್ಯಕ್ರಮಗಳು:** ರಾಜ್ಯ ಮಟ್ಟದಲ್ಲಿ ಸಹ ಸಾರ್ವಜನಿಕ ಆರೋಗ್ಯ ರಕ್ಷಣೆಗೆ ಹಲವು ಕಾರ್ಯಕ್ರಮಗಳು ಇವೆ. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಲ್ಲಿನ ಕಾರ್ಯಕ್ರಮಗಳು. ಮೈಲಿಬೇನೆಯ ನಿರ್ಮೂಲನ ಕಾರ್ಯಕ್ರಮ ; ಪ್ರತಿಯೊಂದು ಮಗುವಿಗೂ ದಾಯಿ ಹಾಕುವುದು ಮುಖ್ಯ ಕಾರ್ಯಕ್ರಮ. ಎಲ್ಲಾದರೂ ಮೈಲಿಬೇನೆ ಇರುವುದು ಕಂಡುಬಂದರೆ ಆ ಪ್ರದೇಶದಲ್ಲಿರುವ ಪ್ರತಿಯೊಬ್ಬರಿಗೂ ದಾಯಿ ಮಾಡುವುದು, ಆ ರೋಗಗಳು ಬೇರೆಯವರಿಗೆ ಹರಡುವುದನ್ನು ತಡೆಗಟ್ಟುವುದು ಈ ಕಾರ್ಯಕ್ರಮದಲ್ಲಿ ಸೇರಿದೆ. ಈ ಕಾರ್ಯಕ್ರಮ ಚೆನ್ನಾಗಿ ಫಲ ನೀಡಿದೆ. 1974ರಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ 11 ಜನರಿಗೆ ಈ ರೋಗ ತಗಲಿ 3 ಜನ ಸತ್ತರು. ಇದಾದ ಮೇಲೆ ಎಲ್ಲಿಯೂ ಈ ಕಾಯಿಲೆಯು ತಗಲಿರುವ ವಿಷಯ ತಿಳಿದುಬಂದಿಲ್ಲ. ಈಗ ವಿಶ್ವ ಆರೋಗ್ಯ ಸಂಸ್ಥೆಯ ಆದೇಶದ ಮೇರೆಗೆ ಮೈಲಿಬೇನೆಯನ್ನು ಹಳ್ಳಿಯಲ್ಲಿಯೂ ಪಟ್ಟಣಗಳಲ್ಲಿಯೂ ಹುಡುಕಲಾಗಿದೆ. ಪ್ರತಿಯೊಂದು ಮನೆಗೂ ತಿಂಗಳಿಗೆ ಒಂದು ಸಲ ಹೋಗಿ ಈ ರೋಗ ಆಕಸ್ಮಿಕವಾಗಿ ಕಾಣಿಸಿಕೊಂಡಿರುವ ಬಗ್ಗೆ ಮಾಹಿತಿ ಪಡೆಯಲಾಗಿದೆ. ಈಗ ರಾಜ್ಯದಲ್ಲಿ ಮೈಲಿಬೇನೆ ಇಲ್ಲವೆನ್ನಬಹುದು.

**ಕಾಲರ:** ಕಾಲರ ಬೇನೆ ರಾಜ್ಯದಲ್ಲಿ ಆಗಿಂದಾಗ್ಗೆ ಬರುತ್ತಲೇ ಇರುತ್ತದೆ. ಇದು ಬೇಸಗೆ ಕಾಲದಲ್ಲಿ ಹೆಚ್ಚು. ಶುಚಿತ್ವವಿಲ್ಲದ ಕಡೆ ಬೇಗ ಉಲ್ಬಣವಾಗುತ್ತದೆ. ಈ ರೋಗವನ್ನು ತಡೆಗಟ್ಟುವುದಕ್ಕೆ ಪ್ರಾಥಮಿಕ ಆರೋಗ್ಯದ ಸಿಬ್ಬಂದಿ ಯವರೂ ಮತ್ತು ಪುರಸಭೆಯ ಆರೋಗ್ಯ ಇಲಾಖೆಯವರೂ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುತ್ತಾರೆ.

**ಕುಷ್ಠರೋಗ:** ಈ ಕಾಯಿಲೆ ಎಲ್ಲ ಕಾಯಿಲೆಯಂತೆ ಒಂದು ಸಾಂಕ್ರಾಮಿಕ ರೋಗ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಈ ರೋಗಕ್ಕೆ ತುತ್ತಾದವರು ಕಂಡುಬರುತ್ತಾರೆ. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನರು ಈ ರೋಗದಿಂದ ನರಳುತ್ತಿದ್ದಾರೆ. ರೋಗದ ಪ್ರಾರಂಭದಲ್ಲೇ ಅದನ್ನು ಕಂಡುಹಿಡಿಯುವುದು ಮತ್ತು ಅವರಿಗೆ ತಕ್ಕ ಚಿಕಿತ್ಸೆಯನ್ನು ಕೊಡುವುದು

ಈ ರೋಗವನ್ನು ತಡೆಗಟ್ಟುವುದಕ್ಕೆ ಇರುವ ಉಪಾಯ. ಈ ರೋಗದವರು ಹೆಚ್ಚಾಗಿ ವೈದ್ಯರ ಹತ್ತಿರ ಬರುವುದಿಲ್ಲ. ಆದ್ದರಿಂದ ಅವರಿದ್ದ ಕಡೆಗೇ ನುರಿತ ವೈದ್ಯ ಸಹಾಯಕರನ್ನು ಕಳುಹಿಸಿ ಚಿಕಿತ್ಸೆಗೆ ಏರ್ಪಾಡು ಮಾಡುವ ಕಾರ್ಯಕ್ರಮವಿದೆ. ರಾಜ್ಯದಲ್ಲಿ 15 ಕುಷ್ಠರೋಗ ತಡೆಗಟ್ಟುವ ಕೇಂದ್ರಗಳೂ 65 ಎಸ್.ಇ.ಟಿ. ಕೇಂದ್ರಗಳೂ (ಸರ್ವೇಕ್ಷಣ, ತಿಳುವಳಿಕೆ, ಚಿಕಿತ್ಸೆ) ಇವೆ.

**ಮಲೇರಿಯ:** ಈ ರೋಗ ಇನ್ನೇನು ದೇಶದಿಂದ ನಿರ್ಮೂಲನವಾಯಿತು ಎನ್ನುವಷ್ಟರಲ್ಲಿ ಪುನಃ ಜಾಸ್ತಿಯಾಗಲು ಪರಿಣಮಿಸಿದೆ. ಈ ರೋಗವನ್ನು ನಿರ್ಮೂಲನ ಮಾಡಲು ಕೆಲವು ಹಂತಗಳಿವೆ (ಅಟ್ಯಾಕ್ ಫೇಸ್, ಕನ್ಸಾಲಿಡೇಷನ್ ಫೇಸ್, ಮೇಂಟೆನೆನ್ಸ್ ಫೇಸ್). ಈಗ ರಾಜ್ಯವನ್ನು 19.13 ಮಲೇರಿಯಾ ಯೂನಿಟ್ ಎಂದು ವಿಭಾಗಿಸಿದ್ದಾರೆ. ಅದರಲ್ಲಿ 15.56 ಯೂನಿಟ್ಟುಗಳು ಅಟ್ಯಾಕ್ ಫೇಸ್‌ನಲ್ಲೂ 3.4 ಯೂನಿಟ್‌ಗಳು ಕನ್ಸಾಲಿಡೇಷನ್ ಫೇಸ್‌ನಲ್ಲೂ ಮತ್ತು 0.12 ಯೂನಿಟ್‌ಗಳು ಮೇಂಟೆನೆನ್ಸ್ ಫೇಸ್‌ನಲ್ಲೂ ಇವೆ.

**ಕ್ಷಯರೋಗ:** ಈ ರೋಗ ರಾಜ್ಯದಲ್ಲಿ ಬಹಳವಾಗಿದೆ. ಮನೆಯಲ್ಲಿಯೇ ಇದ್ದು ರೋಗಿಯೇ ಸರಿಯಾಗಿ 18 ತಿಂಗಳು ಬಿಡದೆ ಕೆಲವು ಮಾತ್ರೆಗಳನ್ನು ಸೇವಿಸಿದರೆ ಈ ರೋಗವನ್ನು ತಡೆಗಟ್ಟಬಹುದು. ಇದನ್ನು ಕಂಡುಹಿಡಿಯುವುದೂ ಸುಲಭ. ಕೆಮ್ಮು ಜ್ವರ ಇರುವವರ ಶ್ಲೇಷ್ಮವನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆ ಮಾಡುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದು. ಇಂತಹ ಸೌಲಭ್ಯಗಳು ಪ್ರಾಥಮಿಕ ಕೇಂದ್ರದಲ್ಲೂ ಎಲ್ಲ ವಿಧವಾದ ಆಸ್ಪತ್ರೆಗಳಲ್ಲೂ ಇವೆ. ಈ ರೋಗವನ್ನು ತಡೆಗಟ್ಟಲು ಕ್ಷಯರೋಗದ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲ ಜಿಲ್ಲೆಗಳಲ್ಲೂ ಒಂದೊಂದು ಕೇಂದ್ರವಿದೆ. ಈ ರೋಗವನ್ನು ತಡೆಗಟ್ಟಲು ಬಿ.ಸಿ.ಜಿ. ಚುಚ್ಚುಮದ್ದು ಮತ್ತೊಂದು ಕ್ರಮ. ರಾಜ್ಯದಲ್ಲಿ 20 ಬಿ.ಸಿ.ಜಿ. ತಂಡಗಳಿವೆ. ಈ ತಂಡಗಳು ಹಳ್ಳಿಹಳ್ಳಿಗೆ ಭೇಟಿಕೊಟ್ಟು ಬಿ.ಸಿ.ಜಿ. ವ್ಯಾಕ್ಸಿನೇಷನ್ ಮಾಡುತ್ತವೆ.

**ಆನೆಕಾಲು:** ಈ ಅಂಟುಜಾಡ್ಯ ರಾಜ್ಯದ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆ, ಬಿಜಾಪುರ, ರಾಯಚೂರು, ಬಿದರೆ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿದೆ. ಸುಮಾರು 68 ಲಕ್ಷ ಜನರು ಈ ರೋಗ ತಗಲುವ ಅಪಾಯದಲ್ಲಿ ಇದ್ದಾರೆ. ರಾಜ್ಯದಲ್ಲಿ ಆನೆಕಾಲು ತಡೆಗಟ್ಟುವ ನಾಲ್ಕು ಘಟಕಗಳಿವೆ. ಇನ್ನು ಕೆಲವು ಕಡೆ ಪುರಸಭೆಗಳ ಆರೋಗ್ಯ ಶಾಖೆಗಳು ರಾಜ್ಯ ಸರ್ಕಾರದ ಹಣದ ಸಹಾಯದಿಂದ ಈ ರೋಗವನ್ನು ತಡೆಗಟ್ಟುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

(ii) ಕುಟುಂಬ ಕಲ್ಯಾಣ ಕಾರ್ಯಕ್ರಮ: ರಾಜ್ಯದಲ್ಲಿ 265 ಗ್ರಾಮಾಂತರ ಮತ್ತು 77 ನಗರದ ಕುಟುಂಬ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 272 ಹಾಸಿಗೆಗಳ ಸೌಲಭ್ಯವನ್ನು ಸ್ತ್ರೀಯರ ಶಸ್ತ್ರಚಿಕಿತ್ಸೆಗಾಗಿ ಪ್ರಾರಂಭ ಮಾಡಲಾಗಿದೆ.

ಕುಟುಂಬ ಕಲ್ಯಾಣ ಯಶಸ್ವಿಯಾಗಬೇಕಾದರೆ ಜನರು ತಮ್ಮ ಮಕ್ಕಳು ಆರೋಗ್ಯವಂತರಾಗಿ ಬೆಳೆಯುತ್ತಿದ್ದಾರೆಂದೂ ಅವರು ಬದುಕಿ ತಮ್ಮ ವಾರ್ಧಕ್ಯದಲ್ಲಿ ತಮಗೆ ಸಹಾಯಕರಾಗುತ್ತಾರೆಂಬ ಭರವಸೆ ಎಲ್ಲ ತಂದೆ ತಾಯಿಗಳಿಗೂ ಬರಬೇಕು. ಇದು ಬರಬೇಕಾದರೆ ಮಕ್ಕಳ ಮತ್ತು ತಾಯಿಯರ ಆರೋಗ್ಯವನ್ನು ಕಾಪಾಡುವುದು ಮುಖ್ಯ. ಇದರ ಒಂದು ಕಾರ್ಯಕ್ರಮವಾಗಿ ಮಕ್ಕಳಿಗೆ ಸಾಮಾನ್ಯವಾಗಿ ತಗಲುವ ಡಿಫ್ತೀರಿಯ, ನಾಯಿ ಕೆಮ್ಮು ಮತ್ತು ಧನುರ್ವಾಯು ಇತ್ಯಾದಿ ರೋಗಗಳಿಗೆ ಚುಚ್ಚುಮದ್ದು ಕೊಡುವುದು, ಮಕ್ಕಳಲ್ಲಿ ಅತಿ ಹೆಚ್ಚಾಗಿ ಕಾಣಬರುವ 'ಎ' ಅನ್ನಾಂಗ ಕೊರತೆಯನ್ನು ತಡೆಗಟ್ಟಲು ಈ ಅನ್ನಾಂಗವನ್ನು ಮಕ್ಕಳಿಗೆ ಕೊಡುವುದು, ಅನೇಕ ತಾಯಿಂದಿರ ರಕ್ತಹೀನತೆಯಿಂದ ಮಕ್ಕಳು ತಾಯಿಯ ಗರ್ಭದಲ್ಲಿ ಸರಿಯಾಗಿ ಬೆಳೆಯದೆ ಇರುವುದನ್ನು ತಪ್ಪಿಸುವುದಕ್ಕೆ ರಕ್ತಹೀನತೆ ಆಗದ ಹಾಗೆ ಮುಂಜಾಗ್ರತೆ ತೆಗೆದುಕೊಳ್ಳುವುದು ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕುಟುಂಬ ಕಲ್ಯಾಣದ ಯಶಸ್ಸಿಗಾಗಿ ಪೋಸ್ಟ್‌ಪಾರ್ಟಮ್ ಕಾರ್ಯಕ್ರಮ ಒಂದನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಇವು ಎಲ್ಲ ವೈದ್ಯಕೀಯ ಕಾಲೇಜುಗಳಿಗೆ ಸೇರಿದ ಆಸ್ಪತ್ರೆಗಳಲ್ಲಿವೆ. ಆಸ್ಪತ್ರೆಗೆ ಹೆರಿಗೆಗಾಗಿ ಬಂದ ಜನರಿಗೆ ಕುಟುಂಬ ಕಲ್ಯಾಣ ಸೌಲಭ್ಯವನ್ನು ಅವರಿಗೆ ತಿಳಿಸಿ ಅವರ ಮನಸ್ಸು ತಿರುಗಿಸುವುದಕ್ಕೆ ಒಳ್ಳೆಯ ಸಮಯ. ಇದರಂತೆ ಟ್ಯುಬಕ್ಟಮಿ ಶಸ್ತ್ರಚಿಕಿತ್ಸೆ ಮಾಡುವುದಲ್ಲದೆ ಬೇರೆ ವಿಧಾನಗಳನ್ನೂ ತಿಳಿಯಪಡಿಸಲಾಗುತ್ತಿದೆ.

ತಾಯಂದಿರು ತಾವು ಗರ್ಭಧರಿಸುವುದು ಇಷ್ಟವಿಲ್ಲದೆ ಇದ್ದು, ಅಕಸ್ಮಾತ್ ಗರ್ಭವತಿಯಾದರೆ, ಅವರ ಗಂಡ ಮತ್ತು ಹಿರಿಯರ ಒಪ್ಪಿಗೆಯಿಂದ ಗರ್ಭಪಾತ ಮಾಡಿಸಿಕೊಳ್ಳಲು ಅವಕಾಶವಿದೆ. ಇದರ ಉಪಯೋಗವನ್ನು ಬಹಳ ಜನ ಪಡೆಯುತ್ತಿದ್ದಾರೆ. ಇದರಿಂದ ಅನೇಕ ತಂದೆ ತಾಯಿಯರು ತಮಗೆ ಬೇಡವಾದ ಮಗು ಅಕಸ್ಮಾತ್ತಾಗಿ ಹುಟ್ಟುವುದನ್ನು ತಡೆಗಟ್ಟಲು ಸಹಾಯಕವಾಗಿದೆ. ಕುಟುಂಬ ಕಲ್ಯಾಣದ ವಿಷಯದಲ್ಲಿ ಜನಸಾಮಾನ್ಯರಿಗೆ ಮಾಹಿತಿ ಕೊಡಲು ಚಲನಚಿತ್ರ ಪ್ರದರ್ಶನ, ನಾಟಕ ಮತ್ತು ಕೀರ್ತನೆಗಳು, ವಸ್ತುಪ್ರದರ್ಶನ ಹಾಗೂ ಮೇಳಗಳು, ಚಿಕ್ಕಗುಂಪಿನ ಸಭೆ ಮತ್ತು ಆಕಾಶವಾಣಿಯ ಕಾರ್ಯಕ್ರಮಗಳು ಮೊದಲಾದ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

### ವೈದ್ಯಕೀಯ ವೃತ್ತಿ ತರಬೇತಿ

ವೈದ್ಯರನ್ನು ಮತ್ತು ಅವರ ಸಹಾಯಕರನ್ನು ತರಬೇತು ಮಾಡುವ ಹಲವು ವಿದ್ಯಾಸಂಸ್ಥೆಗಳು ಕರ್ನಾಟಕದಲ್ಲಿವೆ. ವೈದ್ಯಕೀಯ ಕಾಲೇಜುಗಳು: ರಾಜ್ಯದಲ್ಲಿ ವೈದ್ಯರನ್ನು ತರಬೇತು ಮಾಡುವ ಒಟ್ಟು 35 ವೈದ್ಯಕೀಯ ಕಾಲೇಜುಗಳು ಬೆಂಗಳೂರು, ಮೈಸೂರು, ಬೆಳಗಾಂವಿ, ಬಳ್ಳಾರಿ, ದಾವಣಗೆರೆ ಮತ್ತು ಗುಲ್ಬರ್ಗ ಮೊದಲಾದ ಪಟ್ಟಣಗಳಲ್ಲಿವೆ. ಇವುಗಳಲ್ಲಿ ಏಳು ಸರ್ಕಾರಕ್ಕೆ ಸೇರಿದ್ದು ಉಳಿದವು ಖಾಸಗಿ ಸಂಸ್ಥೆಗಳಿಂದ ನಡೆಯುತ್ತಿವೆ. ಒಟ್ಟು ವರ್ಷ ಒಂದಕ್ಕೆ 2000 ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಸೌಲಭ್ಯಗಳಿವೆ. ಈ ಕಾಲೇಜುಗಳಿಂದ ಎಂ.ಬಿ.ಬಿ.ಎಸ್. ಪದವೀಧರರು ಹೊರಬೀಳುತ್ತಾರೆ. ಇವರು ಪಿ.ಯು.ಸಿ. (ವಿಜ್ಞಾನ) ಓದಿದ ಮೇಲೆ $4^1/_2$ ವರ್ಷ ಕಾಲೇಜು ಅಭ್ಯಾಸವನ್ನೂ ಒಂದು ವರ್ಷ ಕ್ಷೇತ್ರಾನುಭವವನ್ನೂ ಪಡೆದ ನಂತರ ಪದವೀಧರರಾಗುತ್ತಾರೆ.

ಎಂ.ಬಿ.ಬಿ.ಎಸ್. ಆದ ಮೇಲೆ ಕೆಲವು ನಿರ್ದಿಷ್ಟ ವಿಷಯಗಳಲ್ಲಿ ವಿಶೇಷ ವಿದ್ಯಾಭ್ಯಾಸಕ್ಕೂ (ಸ್ನಾತಕೋತ್ತರ) ಈ ಎಲ್ಲ ಕಾಲೇಜುಗಳಲ್ಲಿ ಅವಕಾಶವಿದೆ. ಸ್ನಾತಕೋತ್ತರ ಪದವಿಗಳಿಗೆ 3 ವರ್ಷದ ಅವಧಿಯನ್ನೂ ಡಿಪ್ಲೊಮಾಗಳಿಗೆ 2 ವರ್ಷದ ಅವಧಿಯನ್ನೂ ನಿಗದಿ ಮಾಡಲಾಗಿದೆ. ಎಮ್.ಡಿ., ಎಮ್.ಎಸ್., ಡಿ.ಐ.ಎಚ್., ಡಿ.ಸಿ.ಎಚ್. ವಿ.ಎಫ್.ಎಮ್. ಮುಂತಾದ ಸ್ನಾತಕೋತ್ತರ ಪದವಿಗಳನ್ನು ಹಾಗೂ ಡಿಪ್ಲೋಮಗಳನ್ನು ಪಡೆಯುವ ಅವಕಾಶಗಳಿವೆ.

ದಂತ ವೈದ್ಯಕೀಯ ವ್ಯವಸ್ಥೆ : ರಾಜ್ಯದಲ್ಲಿ ದಂತರೋಗ ತಜ್ಞರನ್ನು ತರಬೇತಿ ಮಾಡುವ ಒಂದು ಸರ್ಕಾರಿ ಕಾಲೇಜು ಬೆಂಗಳೂರಿನಲ್ಲಿದೆ. ಕರ್ನಾಟಕದಲ್ಲಿ ಇತ್ತೀಚೆಗೆ 39 ದಂತವೈದ್ಯ ಕಾಲೇಜುಗಳು ಆರಂಭವಾಗಿವೆ. ಇಲ್ಲಿ ಬಿ.ಡಿ.ಎಸ್. ಎಂಬ ಡಿಗ್ರಿಯನ್ನು ಕೊಡಲಾಗುತ್ತೆ. ಇದಕ್ಕೆ ಪಿ.ಯು.ಸಿ. (ವಿಜ್ಞಾನ) ಅನಂತರ ವಿದ್ಯಾರ್ಥಿ $4^1/_2$ ವರ್ಷ ಕಾಲ ಅಭ್ಯಸಿಸಬೇಕು.

ದಾದಿಯರ ಕಾಲೇಜು: ಇಲ್ಲಿ ನರ್ಸಿಂಗ್‌ನಲ್ಲಿ ಪೋಸ್ಟ್‌ಬೇಸಿಕ್ ಪದವಿಯನ್ನೂ ಬಿಎಸ್. ಪದವಿಯನ್ನೂ ಕೊಡಲಾಗುತ್ತೆ. ಇದು 2 ವರ್ಷದ ಅವಧಿಯದು.

ಎ.ಎನ್.ಎಮ್. ತರಬೇತಿಯೊಡನೆ ದಾದಿಯರನ್ನು ತಯಾರು ಮಾಡುವ ಏರ್ಪಾಟು ಪ್ರತಿ ಜಿಲ್ಲೆಯಲ್ಲೂ ಇದೆ. ಲೇಡಿ ಹೆಲ್ತ್ ವಿಸಿಟರ್ ಟ್ರೇನಿಂಗ್, ಹೆಲ್ತ್ ಇನ್‌ಸ್ಪೆಕ್ಟರ್ ಟ್ರೇನಿಂಗ್ ಮತ್ತು ಮೂಲ ಆರೋಗ್ಯ ಕಾರ್ಯಕರ್ತರನ್ನು ತರಬೇತು ಮಾಡುವ ಶಾಲೆಗಳು ರಾಜ್ಯದ ನಾನಾ ಕಡೆ ಇವೆ. ಒಂದು ವರ್ಷದಲ್ಲಿ ಸಾವಿರಾರು ಜನ ದಾದಿಯರು, ಸ್ಟಾಫ್ ನರ್ಸ್‌ಗಳು, ಲೇಡಿ ಹೆಲ್ತ್ ವಿಸಿಟರ್‌ಗಳು, ಪ್ರಾಥಮಿಕ ಆರೋಗ್ಯ ಕಾರ್ಯಕರ್ತರುಗಳಿಗೆ ತರಬೇತು ಕೊಡುವ ವ್ಯವಸ್ಥೆ ರಾಜ್ಯದಲ್ಲಿ ಉಂಟು.

ಕರ್ನಾಟಕ ರಾಜ್ಯದಲ್ಲಿ 35 ವೈದ್ಯಕೀಯ, 52 ಆಯುರ್ವೇದ, 11 ಹೋಮಿಯೋಪತಿ, 4 ಯುನಾನಿ, 4 ನ್ಯಾಚುರೋಪಥಿ ಮತ್ತು ಯೋಗ ಕಾಲೇಜುಗಳು ಇದ್ದು ಇವುಗಳಿಗೇ ಹೊಂದಿಕೊಂಡಂತೆ ಆಸ್ಪತ್ರೆಗಳಿವೆ. ಆಧುನಿಕ ವೈದ್ಯಪದ್ಧತಿಯ ವೈದ್ಯಕೀಯ ವ್ಯವಸ್ಥೆಗೆ ಸರ್ಕಾರ ನೂರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದೆ. (ಕೆ.ಬಿ.ಎ.)

**ವೈದ್ಯನಾಥಪುರ:** ಮಂಡ್ಯಜಿಲ್ಲೆ ಮದ್ದೂರು ತಾಲ್ಲೂಕಿನ ಒಂದು ಗ್ರಾಮ. ಶಿಂಷಾ ನದೀತೀರದಲ್ಲಿರುವ ಪ್ರಾಚೀನ ವೈದ್ಯನಾಥೇಶ್ವರ ದೇವಾಲಯದಿಂದಾಗಿ ಗ್ರಾಮಕ್ಕೆ ಈ ಹೆಸರು ಬಂದಿದೆ. ದೇವಾಲಯದ ಗರ್ಭಗೃಹದಲ್ಲಿ ಒಂದೆಡೆ ಹುತ್ತವಿದ್ದು, ಅದರ ಮೃತ್ತಿಕಾ ಪ್ರಸಾದದಿಂದ ಚರ್ಮವ್ಯಾಧಿಗಳು ಗುಣವಾಗುತ್ತವೆಂಬ ನಂಬಿಕೆ ಇದೆ. ಈ ಊರಿನಲ್ಲಿ ಕೆಲವು ಶಾಸನಗಳಿದ್ದು, ಅತಿ ಪ್ರಾಚೀನ ಶಾಸನವು ಒಂದನೆಯ ರಾಜೇಂದ್ರ ಚೋಳನ ಪ್ರಶಸ್ತಿಯಾಗಿದೆ. ವಿಷ್ಣುವರ್ಧನನ ಕಾಲದ 1132ರ ಒಂದು ಶಾಸನದಲ್ಲಿ ಕೆಳಲೆನಾಡಿನ 'ಮದ್ದೂರಾದ ಶ್ರೀ ನಾರಸಿಂಹ ಚತುರ್ವೇದಿ ಮಂಗಲದ ಶಿವಪುರದ ಶ್ರೀ ಸ್ವಯಂಭು ವೈಜನಾಥದೇವರಿಂಗೆ' ಹಲಗೂರು ಗ್ರಾಮವನ್ನು ಬಿಟ್ಟ ವಿಷಯವನ್ನು ತಿಳಿಸಿದೆ. ಇದು ಚಿಕ್ಕಗಂಗವಾಡಿ ನಾಡಿಗೆ ಸೇರಿತ್ತೆಂದು ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ಹೊಯ್ಸಳ ದೊರೆಗಳು ಹಾಗೂ ಅಧಿಕಾರಿಗಳು ಇಲ್ಲಿನ ದೇವರಿಗೆ ದಾನವಿತ್ತ ಅನೇಕ ಶಾಸನಗಳಿವೆ. ವಿಜಯನಗರದ ಒಂದನೆಯ ಬುಕ್ಕರಾಯನ ಕಾಲದಲ್ಲಿ ಕೆಲವು ತೆರಿಗೆಗಳ ಆದಾಯವನ್ನು ನೀಡಲಾಯಿತು. ಇಲ್ಲಿಗೆ ಸಮೀಪದಲ್ಲೇ ಮಂಡ್ಯ ಜಿಲ್ಲೆಯ ಮಾಜಿ ಸಚಿವರೂ ಸಂಸತ್ ಸದಸ್ಯರೂ ಆದ ಡಿ. ಮಾದೇಗೌಡರ ನೇತೃತ್ವದಲ್ಲಿ ಒಂದು ಬೃಹತ್ ದೇವಾಲಯವನ್ನು ಮತ್ತು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ಈ ಊರಿಗೆ ಹೆಚ್ಚಿನ ಪ್ರಾಶಸ್ತ್ಯ ಬಂದಿದೆ. **(ಎಚ್.ಎಂ.ಎನ್.ಆರ್.)**

**ವೈದ್ಯನೃತ್ಯ:** ಒಂದು ಜನಪದ ನೃತ್ಯ. ಕರ್ನಾಟಕ ಜಿಲ್ಲೆಯ ಉತ್ತರ ಭಾಗದ ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ವೈದ್ಯರು ಎಂಬ ವರ್ಗದ ಬ್ರಾಹ್ಮಣರು ಪ್ರಧಾನವಾಗಿ ನಾಗರ, ಕೆಲವೊಮ್ಮೆ ಬೇರೆ ಶಕ್ತಿಗಳ ಆರಾಧನೆಯ ಕಾಲದಲ್ಲಿ ಡಕ್ಕೆ ಬಡಿಯುತ್ತ ಮಾಡುವ ನರ್ತನ. ನೃತ್ಯದ ಸಂದರ್ಭದಲ್ಲಿ ವೈದ್ಯರದು ವಿಶಿಷ್ಟ ವೇಷ. ತಲೆಗೆ ಮುಂಡಾಸು, ಅದಕ್ಕೊಂದು ತುರಾಯಿ, ಹಣೆಗೆ ಕುಂಕುಮದ ಬೊಟ್ಟು, ಕತ್ತಿಗೆ ಗುಂಡುಸರ, ಕೈಗೆ ಕಂಕಣ, ಕಾಲಿಗೆ ಗೆಜ್ಜೆ, ಎದೆಗೆ ರವಿಕೆ, ಮೇಲೊಂದು ಮಡಿಸಿದ ಶಾಲು, ಉಡಲು ಸೀರೆ, ಒಳಗೊಂದು ಚಲ್ಲಣ, ಸೊಂಟಕ್ಕೆ ಪಟ್ಟಿ–ಹೀಗೆ ಅರ್ಧನಾರೀಶ್ವರ ವೇಷದಲ್ಲಿ ಢಕ್ಕೆಬಲಿಯ ರಂಗಕ್ಕೆ ಕೈಯಲ್ಲೊಂದು ಢಕ್ಕೆಯನ್ನು (ಡಮರುಗದಂಥ ಚರ್ಮವಾದ್ಯ) ಹಿಡಿದು ಬಂದು ಸ್ತುತಿಪರವಾದ ಪದ್ಯಗಳನ್ನು ಹಾಡುತ್ತ, ಢಕ್ಕೆಯನ್ನು ಬಡಿಯುತ್ತ ವೃತ್ತಾಕಾರದಲ್ಲಿ ನರ್ತಿಸುತ್ತಾರೆ. ಸಾಮಾನ್ಯ ಢಕ್ಕೆಬಲಿಗಳ ಸಂದರ್ಭದಲ್ಲಿ ಒಬ್ಬನೇ ವೈದ್ಯ ವೇಷಧಾರಿಯಾಗಿ ಢಕ್ಕೆ ಬಡಿಯುತ್ತ ಕುಣಿಯುವನು.

ನಾಗಮಂಡಲ ವೈದ್ಯರ ನೃತ್ಯದ ವಿಶಿಷ್ಟ್ಯ ಆರಾಧನಾ ವಿಧಾನ. ಈ ಧಾರ್ಮಿಕ ಕ್ರಿಯೆ ನಡೆಸಲು ಬಹಳಷ್ಟು ಹಣದ ಬಲ ಮತ್ತು ಜನಶಕ್ತಿ ಬೇಕು. ಹಾಗೆಯೇ ಅತಿಯಾದ ನಿಯಮನಿಷ್ಠೆಗಳು ಬೇಕಾಗುತ್ತವೆ. ಆದ್ದರಿಂದ ಇದು ಬಹಳ ಅಪೂರ್ವವಾಗಿ ಕಾಣಸಿಗುತ್ತದೆ. ಇಲ್ಲಿ ಇಬ್ಬರು ವೈದ್ಯರು ವೇಷಧಾರಿಗಳಾಗಿ ಢಕ್ಕೆ ಹಿಡಿದು ನರ್ತಿಸುತ್ತ ಇದ್ದರೆ, ಇನ್ನಿಬ್ಬರು ವೇಷವಿಲ್ಲದೆ ಢಕ್ಕೆ ಬಡಿಯುತ್ತ ಹಾಡುತ್ತ ವೇಷಧಾರಿಗಳಿಗೆ ಹಿನ್ನೆಲೆಯಲ್ಲಿರುವುದುಂಟು.

ನಾಗಮಂಡಲಗಳು ಬಯಲಿನ ಮಧ್ಯೆ ಗದ್ದೆಗಳಲ್ಲಿ ನಡೆಯುವುದು ರೂಢಿ. ಮೊದಲಿಗೆ ಅಷ್ಟು ಜಾಗಕ್ಕೆ ಸುಂದರವಾಗಿ ಚಪ್ಪರ ಹಾಕಿ ಸಿಂಗರಿಸುತ್ತಾರೆ. ಅದರ ಕೆಳಗೆ ಬಡಿದು ಹಸನಾದ ನೆಲದ ಮೇಲೆ ಹಳದಿ, ಕೆಂಪು, ಪಚ್ಚೆ, ಬಿಳಿ, ಕಪ್ಪು ಈ ಬಣ್ಣದ ಹುಡಿಗಳಿಂದ ದೊಡ್ಡದಾದ ವೃತ್ತಾಕಾರದ ಸರ್ಪದ ಆಕೃತಿಯನ್ನು ಸುರುಳಿಸುರುಳಿಯಾಗಿ, ಗಂಟಿಕ್ಕಿರುವಂತೆ ಚಿತ್ರವಿಚಿತ್ರವಾಗಿ ಕಲಾತ್ಮಕವಾಗಿ ಬಿಡಿಸುವರು. ಈ ಚಿತ್ರಮಂಡಲದ ವ್ಯಾಸ ಸಾಧಾರಣವಾಗಿ ಹನ್ನೆರಡು ಅಡಿಗಳು. ಮಂಡಲದ ಮಧ್ಯೆ ಏಳು ಜಡೆಗಳ ಸರ್ಪ ಹೆಡೆ ಚಿತ್ರಿತವಾಗಿರುತ್ತದೆ. ಮಂಡಲದ ಹೊರ ಪರಿಧಿಯಲ್ಲಿ ಹಿಂಗಾರವನ್ನು (ಅಡಕೆಯ ಹೂ) ರಾಶಿರಾಶಿಯಾಗಿ ಕಲಾತ್ಮಕವಾಗಿ ಒಟ್ಟಯಿಸಿ ಸಾಧಾರಣ ಒಂದು ಅಡಿ ಎತ್ತರದ ದಂಡೆಯನ್ನು ರಚಿಸುವರು. ಮಂಡಲದ ಸುತ್ತ ಎಂಟು ಕಡೆಗಳಲ್ಲಿ ಎಂಟು ಕಾಲ್ದೀಪಗಳನ್ನಿಟ್ಟು ಉರಿಸುವರು. ಮಂಡಲ ಬರೆಯಲು ನಾಲ್ಕಾರು ವೈದ್ಯರಿಗೆ ಐದಾರು ಗಂಟೆಗಳ ಸಮಯ ಹಿಡಿಯುತ್ತದೆ. ಇಂಥ ರುದ್ರರಮ್ಯ ಚಿತ್ತಾರದ ಸುತ್ತ ವೈದ್ಯರ ಚಿತ್ತಾಪಹಾರಕ ನೃತ್ಯ ನಡೆಯುತ್ತದೆ.

ಕುಣಿತದ ಬಳುಕು ಬಾಗುಗಳಲ್ಲಿ ನಾಗನ ದೇಹದ ಚಲನವಲನ ವಿನ್ಯಾಸವಿರುತ್ತದೆ. ನೃತ್ಯಗತಿಯಲ್ಲಿ ತಲೆಯ ಒಲೆತ, ಕತ್ತಿನ ಚಲನೆ, ಕೈಯ ಬಳುಕು, ದೇಹದ ಮಣಿತಗಳಲ್ಲಿ ಜಿಗಿತ, ಗಿರಿತಗಳಲ್ಲಿ ತನ್ಮತನ ವಿದ್ದು ಅನ್ಯಜನಪದ ನೃತ್ಯಗಳಲ್ಲಿ ಕಾಣದ ತರಂಗಿತತೆ ಇದೆ; ಜೀವಂತಿಕೆ, ಉಲ್ಲಾಸ ಪುಟಿಯುತ್ತಿರುತ್ತದೆ.

ವೈದ್ಯರ ಈ ನೃತ್ಯದಲ್ಲಿ ಆರ್ಯತ್ವ ದ್ರಾವಿಡತ್ವ ಸಂಗಮದ ಗುರುತಿದೆ. ನೃತ್ಯ ಚಿತ್ರಗಳ ಬೆಸುಗೆಯಿದೆ. ರುದ್ರರಮ್ಯ ಹಾಸ್ಯ–ಲಾಸ್ಯಗಳ ಸಂಗಮವಿದೆ. ಅರ್ಧನಾರೀಶ್ವರ ವೇಷ ಎಲ್ಲ ಬಗೆಯಿಂದಲೂ ಸಾಂಕೇತಿಕವಾಗಿ ಅರ್ಥಪೂರ್ಣವಾಗಿ ಚೆಲುವುದುಂಬಿ ನಿಂತಿದೆ. ಒಟ್ಟಿನಲ್ಲಿ ಎಲ್ಲ ರಸಭಾವಗಳನ್ನೂ ಸಮರ್ಥವಾಗಿ ಅಭಿವ್ಯಕ್ತಿಸಬಲ್ಲ ಶಕ್ತಿಶಾಲಿ ಜನಪದ ನೃತ್ಯ ವಿಧಾನವೊಂದನ್ನು ಈ ಕುಣಿತದಲ್ಲಿ ಕಾಣಬಹುದಾಗಿದೆ. (ಎ.ಎಲ್.ಎ.)

**ವ್ಯಾಪಾರ:** ಸರಕುಗಳನ್ನು ಮಾರುವ ಕೊಳ್ಳುವ ವ್ಯವಹಾರವೇ ವ್ಯಾಪಾರ. ದೇಶದ ಆರ್ಥಿಕ ಸ್ಥಿತಿಗತಿಗಳು ಈ ವ್ಯಾಪಾರವನ್ನು ಅವಲಂಬಿಸಿದೆ. ಕರ್ನಾಟಕದಲ್ಲಿ ಈ ಚಟುವಟಿಕೆ ಬಹು ಹಿಂದಿನಿಂದ ಸಮೃದ್ಧವಾಗಿ ನಡೆದು ಬಂದಿದೆ.

ಪ್ರಾಚೀನ ಭಾರತದಲ್ಲಿ ವೃತ್ತಿ ಮತ್ತು ಜಾತಿ ಸಂಘಗಳು ರಾಜಕೀಯ ವಿಚಾರಗಳಲ್ಲಿ ಅವುಗಳ ಸಹಕಾರದ ಅಗತ್ಯವಿದ್ದುದರಿಂದ ಸಾಮಾಜಿಕ ಹಾಗೂ ಆರ್ಥಿಕ ಸಂಸ್ಥೆಗಳಾಗಿ ಬೆಳೆದು ಬಂದವು. ಗೌತಮನ ಪ್ರಕಾರ ಕೃಷಿಕರು, ವ್ಯಾಪಾರಿಗಳು, ಗೋಪಾಲಕರು, ಸಾಹುಕಾರರು, ಕಸಬುದಾರರು ತಮ್ಮ ತಮ್ಮ ವರ್ಗದವರ ಸಂಘಗಳನ್ನು ನಿರ್ಮಿಸಿಕೊಂಡು ತಮ್ಮವರಿಗಾಗಿ ವಿಧಿ, ನಿಯಮಗಳನ್ನು ರಚಿಸಿಕೊಳ್ಳುವ ಅಧಿಕಾರ ಪಡೆದಿದ್ದರು. ಶುಕ್ರನೀತಿಯಲ್ಲಿ, ಮನುಸ್ಮೃತಿಯಲ್ಲಿ ಸಹ ಇಂಥ ಸಂಘಗಳ ಪ್ರಸ್ತಾಪ ಬರುವುದಲ್ಲದೆ ರಾಜನಾದವನು ಧರ್ಮಶಾಸ್ತ್ರವನ್ನಷ್ಟೇ ಅಲ್ಲದೆ ಆಯಾಯಾ ಸಂಘಗಳ ನಿಯಮಗಳನ್ನರಿತು ನ್ಯಾಯ ನಿರ್ಣಯ ಮಾಡಬೇಕೆಂಬ ನಿರ್ದೇಶನವಿದೆ. ಹೀಗಾಗಿ ವೃತ್ತಿಸಂಘಗಳೂ ಅವನ್ನು ಭದ್ರವಾಗಿ ಇಡುವ ಕಟ್ಟುನಿಟ್ಟಾದ ನಿಯಮಗಳೂ ಹುಟ್ಟಿಕೊಂಡವು. ವ್ಯಾಪಾರಿಗಳು, ಕೃಷಿಕರೇ

ಅಲ್ಲದೆ, ಗಾಯಕರು, ನರ್ತಕರು, ಹಜಾಮರು, ಸಂನ್ಯಾಸಿಗಳು, ಕಳ್ಳರು ಸಹ ಇಂಥ ಸಂಘಗಳನ್ನು ಕಟ್ಟಿಕೊಂಡಿದ್ದ ನಿದರ್ಶನಗಳು ಸಿಗುತ್ತವೆ. ಅಪರಾಧ ಶೋಧದಂಥ ಕೆಲಸದಲ್ಲಿಯಂತೂ ಈ ಸಂಘ ಪ್ರಜ್ಞೆ ಎಷ್ಟು ಬಲವಾಗಿತ್ತೆಂದರೆ, ಒಂದು ಗುಂಪಿಗೆ ಸೇರಿದ ಅಪರಾಧಿಯನ್ನು ಅದೇ ಗುಂಪಿನ ಜನರ ಹೊರತು ಪತ್ತೆ ಹಚ್ಚುವುದೇ ಕಷ್ಟವಾಗಿತ್ತು. ಸಂಘಗಳಿಗೆ ದಾನ ದತ್ತಿ ಮುಂತಾದ್ದನ್ನು ಕೊಡುವ ಮತ್ತು ಪಡೆಯುವ ಹಾಗೂ ತಮ್ಮ ಗುಂಪಿನ ನಿಯಮೋಲ್ಲಂಘನೆಗೆ ಬಹಿಷ್ಕಾರ ಹಾಕುವ ಅಧಿಕಾರ ಸಹ ಇತ್ತು. ಇಂಥ ಅಧಿಕಾರ ರಾಜಮನ್ನಣೆಯನ್ನೂ ಸಹ ಪಡೆದಿತ್ತು.

ಕರ್ನಾಟಕದಲ್ಲಿ ಸಹ ಇದೇ ಪರಂಪರೆ ಪ್ರಾಚೀನ ಕಾಲದಿಂದಲೂ ನಡೆದು ಬಂದು ವ್ಯಾಪಾರಿ ಸಂಘಗಳು ರೂಪುಗೊಂಡಂತೆ ಕಂಡುಬರುತ್ತದೆ. ಈ ವಿಚಾರವಾಗಿ ಸಾತವಾಹನ ಮತ್ತು ಕದಂಬರ ಕಾಲದ ವಿವರಗಳು ಹೆಚ್ಚಿಗೆ ಸಿಗುವುದಿಲ್ಲವಾದರೂ ಶಿಲಪ್ಪದಿಕಾರಂ ಮತ್ತು ಮಣಿಮೇಖಲೈಗ ಳಂಥ ತಮಿಳು ಗ್ರಂಥ ಮೂಲಗಳಿಂದ ಕ್ರಿಸ್ತಶಕದ ಪ್ರಾರಂಭದ ಹೊತ್ತಿಗೆ ದಕ್ಷಿಣ ಭಾರತದ ವರ್ತಕರು ನೌಕೆಗಳ ಮೂಲಕ ಮಲಯಾ, ಘುನಾನ್, ಕೊಚಿನ್, ಚೀನಗಳನ್ನು ತಲಪಿ ವ್ಯಾಪಾರ ಮಾಡಿ ಶ್ರೀಮಂತರಾಗಿ ಉದಾರವಾಗಿ ದಾನ ದತ್ತಿಗಳನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಬಾದಾಮಿಯ ಚಳುಕ್ಯರ ಆಳ್ವಿಕೆಗೆ ಸಂಬಂಧಿಸಿದಂತೆ ದೊರೆತಿರುವ ಹಲಕೆಲವು ವಿವರಗಳ ಪ್ರಕಾರ ನಗರಗಳಲ್ಲಿ ಈ ಸಂಘಗಳ ಆಡಳಿತ ಪ್ರಬಲವಾಗಿದ್ದಂತೆ ಕಂಡುಬರುತ್ತದೆ. ನಖರ ಅಥವಾ ನಗರ ಇದರ ಆಡಳಿತಕ್ಕೆ ಸಂಬಂಧಿಸಿದ ಪ್ರಾತಿನಿಧಿಕ ಸಭೆಗೆ ನಗರ ಸಮೂಹವೆಂದೂ ಹೆಚ್ಚಾಗಿ ಇವು ವೈಶ್ಯ ವರ್ಗದವರಿಂದ ಕೂಡಿರುತ್ತಿತ್ತೆಂದೂ ತಿಳಿದುಬರುತ್ತದೆ. ಲೇವಾದೇವಿ ಅಥವಾ ವಾಣಿಜ್ಯ ವ್ಯವಹಾರದಿಂದ ಶ್ರೀಮಂತರಾದ ಈ ಜನ ಪದಾರ್ಥಗಳ ಬೆಲೆ ಕಟ್ಟುವಲ್ಲಿ ಮತ್ತು ದಾನಧರ್ಮ ಮಾಡುವುದ ರಲ್ಲಿ ಸಮರ್ಥರಾಗಿದ್ದರೆಂದು ಶಾಸನಗಳು ತಿಳಿಸುತ್ತವೆ. ಇವಲ್ಲದೆ ಮುಮ್ಮರಿದಂಡ (ಚಿನ್ನದ ಮೂರು ಬಳೆಗಳುಳ್ಳ ಕೋಲು) ಮತ್ತು ಉಭಯ ನಾನಾದೇಶಿ (ಸ್ಥಳೀಯ ಮತ್ತು ವಿದೇಶೀ ಮಾರುಕಟ್ಟೆಗಳಲ್ಲಿ ವ್ಯಾಪಾರ ಮಾಡುವವರು) ಎಂಬ ವಣಿಕ ಸಂಘಗಳೂ ಇದ್ದವು.

ಚಳುಕ್ಯರ ಕಾಲದ ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುವ ಅಯ್ಯಾವೊಳೆ ಐನೂರ್ವರ ವಾಣಿಜ್ಯ ಸಂಘ ಆಗಿನ ಕರ್ನಾಟಕದಲ್ಲಿ ಅತ್ಯಂತ ಪ್ರಬಲವಾದ ವ್ಯಾಪಾರಿ ಸಂಘವಾಗಿತ್ತು. ಈ ಸಂಘ ಪ್ರಾರಂಭತಃ ಅಯ್ಯಾ ವೊಳೆಯಲ್ಲಿ (ಈಗಿನ ಐಹೊಳೆ) ಬಾದಾಮಿ ಚಳುಕ್ಯರ ಆಡಳಿತ ಕಾಲದಲ್ಲಿ ಸ್ಥಾಪನೆಯಾಗಿರಬೇಕೆಂದು ಊಹಿಸಲಾಗಿದೆ. ಈ ಸಂಘವನ್ನು ನಾನಾದೇಶಿ ಎಂದು ಸಂಬೋಧಿಸಲಾಗಿದೆ. ಅಯ್ಯಾವೊಳೆ ಐನೂರ್ವರಲ್ಲಿ ಗಾವರೆಗರು, ಗಾತ್ರಿಕರು, ಅಂಕಕಾರರು, ಶೆಟ್ಟಿಯರು, ಬೀರವಣಿಗರು, ಗಂಡಿಗರು, ಗಾವುಂಡರು ಮುಂತಾದ ವ್ಯಾಪಾರಿ ಗುಂಪುಗಳೂ ಇದ್ದವು. ವ್ಯಾಪಾರಕ್ಕೆ ಪ್ರಸಿದ್ಧವಾದ ಭಾರತದ ಅನೇಕ ನಗರಗಳಿಗೆ ಈ ವರ್ತಕರ ಗುಂಪುಗಳು ಹೋಗುತ್ತಿದ್ದುವಲ್ಲದೆ ಪರ್ಷಿಯಾ ಮತ್ತು ಅರೇಬಿಯಾ ಹಾಗೂ ಪೂರ್ವದಲ್ಲಿ ಮಲಯಾ ದ್ವೀಪಗಳಿಗೂ ಹೋಗಿಬರುತ್ತಿದ್ದುವೆಂಬುದಕ್ಕೆ ಅನೇಕ ಆಧಾರಗಳು ಸಿಗುತ್ತವೆ (ಜಲಮಾರ್ಗದಿಂದ ಷಟ್‌ಖಂಡ ಮಂಡಲಮಂ ಪೊಕ್ಕು), ಸುಮಾತ್ರಾ ದ್ವೀಪದಲ್ಲಿ ಈ ವರ್ತಕರು ಕಟ್ಟಿಸಿದ ವಿಷ್ಣು ದೇವಾಲಯ ಹದಿಮೂರನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ತಿಳಿದುಬರುತ್ತದೆ. ಪಂಚಶತವೀರಶಾಸನಲಬ್ಧಾನೇಕ ಗುಣಗಣಾಲಂಕೃತ ಇತ್ಯಾದಿ ಶಾಸನ ಪ್ರಶಸ್ತಿಯಲ್ಲಿ ಬರುವುದನ್ನು ನೋಡಿದರೆ ರಾಜಶಾಸನದ ಮೂಲಕ ಈ ಸಂಘ ಪಡೆದ ವಿಶೇಷಾಧಿಕಾರಗಳ ಕಲ್ಪನೆ ಬರುತ್ತದೆ. ಈ ಸಭೆಯ ಸದಸ್ಯರಿಗೆ ಐವೊಳೆಪುರದ ಪರಮೇಶ್ವರಿಯ ಮಕ್ಕಳ್ ಎಂದೂ ಕರೆಯಲಾಗುತ್ತಿತ್ತು. ಈ ಸಂಘ ತಮಿಳು, ತೆಲುಗು ಮತ್ತು ಇತರ ಪ್ರಾಂತಗಳಲ್ಲಿ ಸಹ ಶಾಖೆಗಳನ್ನು ಹೊಂದಿ ದೇಶೀಯ ಮತ್ತು ವಿದೇಶೀಯ ವ್ಯಾಪಾರವನ್ನು ನಿಯಂತ್ರಿಸುವ ವ್ಯಾಪಾರಿ ಸಂಸ್ಥೆಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಈ ಸಭೆ ವಲಂಜಿಯರ್ ಮತ್ತು ಚಿತ್ರಮಿಲಿ ಮುಂತಾದ ತಮಿಳು ನಾಡಿನಲ್ಲಿಯ ಕಸಬುದಾರ ಸಂಘಗಳನ್ನೂ ನಿಯಂತ್ರಿಸುತ್ತಿತ್ತೆಂದು ವಿದ್ವಾಂಸರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಸ್ತಂಭವೊಂದರ ಮೇಲಿನ ಶಾಸನದಲ್ಲಿ ಒಂದು ಸಾವಿರ ಒಂಬೈನೂರ ಅರವತ್ತಾರು ಸ್ವಾಮಿಗಳ ಸಂಘದ ಪ್ರಸ್ತಾಪವಿದೆ. ಚೆನ್ನಸೋಮಯಾಜಿ ಐವೊಳೆಯ ಐನೂರು ಸ್ವಾಮಿಗಳ ಸಂಘಕ್ಕೆ ವಿವಿಧ ತೆರಿಗೆ ಸಂಗ್ರಹಿಸುವ ಅಧಿಕಾರ ಕೊಟ್ಟಂತೆ ಶಾಸನ ಹೇಳುತ್ತಿದೆ. ಹಿರೇಸಂಗಿ ಶಾಸನದಲ್ಲಿ ಮಹಾನಾಡು ಎಂಬ ವರ್ತಕ ಸಂಘದ ಪ್ರಸ್ತಾಪವನ್ನು ಅಯ್ಯಾವೊಳೆ ಐನೂರ್ವರ ಸಂಘದ ಇತರ ಶಾಖಾಸಂಘಗಳೊಂದಿಗೆ ಮಾಡಲಾಗಿದೆ. ಈ ವ್ಯಾಪಾರಿ ಸಂಘಗಳ ಸದಸ್ಯರನ್ನು ವೀರ ಬಣಜರೆಂದು ಶಾಸನಗಳಲ್ಲಿ ನಿರ್ದೇಶಿಸಲಾ ಗಿದೆ. ಇವರು ವೀರರೂ ಆಗಿರುತ್ತಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ಸಹ ವಾಣಿಜ್ಯ ಸಂಸ್ಥೆಗಳಿಗೆ ಸೌಲಭ್ಯ ದೊರೆಯಿತು. ಗೂರ್ಜರ ದೊರೆಗಳನ್ನು ಸೋಲಿಸಿದ ರಾಷ್ಟ್ರಕೂಟರು ಸಿಂಧ್‌ನ ಮುಸ್ಲಿಂ ವ್ಯಾಪಾರಿಗಳ ಮೂಲಕ ಅರಬ್ ವರ್ತಕರ ಮತ್ತು ಪ್ರವಾಸಿಗರ ಸಂಪರ್ಕವನ್ನು ಬೆಳೆಸಿಕೊಂಡರು.

ಹೊಯ್ಸಳರ ಕಾಲದಲ್ಲಿ ವ್ಯಾಪಾರ ವಾಣಿಜ್ಯ ವ್ಯವಸ್ಥೆ ಹಿಂದಿನ ಕಾಲಕ್ಕಿಂತ ಹೆಚ್ಚು ಸುಖಮಯವಾಗಿತ್ತು. ಆ ಕಾಲಕ್ಕೆ ರಾಜ್ಯದ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ವ್ಯಾಪಾರಿ ಕೇಂದ್ರಗಳು ಸಾಕಷ್ಟಿದ್ದುವೆನಿಸುತ್ತದೆ. ಪಶ್ಚಿಮ ಕರಾವಳಿಗುಂಟ ಅನೇಕ ಮುಖ್ಯ ವ್ಯಾಪಾರಿ ಮಾರ್ಗಗಳಿದ್ದು ಪ್ರಮುಖ ಬಂದರುಗಳಾದ ಹೊನ್ನಾವರ, ಭಟ್ಕಳದಂಥ ನಗರಗಳಿಗೆ ಸಂಪರ್ಕ ಕಲ್ಪಿಸಿದ್ದವು. ಬಯಲು ಪ್ರದೇಶದಲ್ಲಿ ಮುಖ್ಯ ವಾಣಿಜ್ಯ ವ್ಯವಹಾರ ಮಾರ್ಗ ಪೂರ್ವಪಶ್ಚಿಮವಾಗಿ ಕಂಚಿಯಿಂದ ಹೊರಟು ಕೋಲಾರದ ಹತ್ತಿರವಿರುವ ನಂಗಲಿಗೆ ತಲಪಿ ಮುಂದೆ ಪಶ್ಚಿಮದತ್ತ ತಿರುಗಿ ಚಿಕ್ಕನಾಯಕನಹಳ್ಳಿ, ಅರಸೀಕೆರೆ, ಬೇಲೂರು, ಅಂಗಡಿಗಳನ್ನು ಹಾಯ್ದು ಮಂಗಳೂರನ್ನು ಸೇರುತ್ತಿತ್ತು. ಇನ್ನೊಂದು ಪೂರ್ವಪಶ್ಚಿಮ ಹೋಗುವ ಮುಖ್ಯ ರಸ್ತೆ ಹೊನ್ನಾವರದಿಂದ ಹೊರಟು ಬನವಾಸಿ, ಬಳ್ಳಿಗಾಮೆ, ಬಂಕಾಪುರಗಳನ್ನು ದಾಟಿ ಉಚ್ಚಂಗಿಯನ್ನು ತಲಪುತ್ತಿತ್ತು. ಉತ್ತರ ದಕ್ಷಿಣವಾಗಿ ಒಂದು ಬಹುಮುಖ್ಯ ರಸ್ತೆ ದೇವಗಿರಿಯಿಂದ ಕಲ್ಯಾಣ (ಈಗಿನ ಬಸವಕಲ್ಯಾಣ) ತಲಪಿ, ಮುಂದುವರಿದು ದಕ್ಷಿಣದಲ್ಲಿ ದ್ವಾರಸಮುದ್ರ, ನಿಡುಗಲ್ಲು, ಚನ್ನರಾಯಪಟ್ಟಣ, ಶ್ರವಣಬೆಳಗೊಳ, ತೊಂಡನೂರು, ಶ್ರೀರಂಗಪಟ್ಟಣ, ತಲಕಾಡುಗಳವರೆಗೂ ಹೋಗುತ್ತಿತ್ತು. ದಕ್ಷಿಣದಲ್ಲಿ ಅರಸೀಕೆರೆ, ಬೇಲೂರು, ದ್ವಾರಸಮುದ್ರ, ಶ್ರವಣಬೆಳಗೊಳ ಈ ನಗರಗಳು ಈ ಮುಖ್ಯರಸ್ತೆಗಳ ನಡುವೆ ಆಯಕಟ್ಟಿನ ಸ್ಥಳಗಳಲ್ಲಿದ್ದವು. ತಮಿಳುನಾಡಿನ ಮೂಲಕ ಹೋಗುವ ವಿದೇಶೀ ವ್ಯಾಪಾರದ ಬಹುಭಾಗ ದ್ವಾರಸಮುದ್ರದ ಮೂಲಕ ಹಾಯ್ದುಹೋಗುವ ಸರಕುಗಳಿಂದಲೇ ನಡೆಯುತ್ತಿತ್ತು. ವ್ಯಾಪಾರಿಗಳಿಗೆ ಹೊಯ್ಸಳ ನಾಡಿನಲ್ಲಿ ಯೋಜನ ಯೋಜನಗಳಿಗೂ ನೆರಳು ನೀಡುವ ಮರಗಳ ತೋಪುಗಳೂ ವಿಶ್ರಾಂತಿ ಗೃಹಗಳೂ ಇದ್ದು ವ್ಯಾಪಾರಿಗಳಿಗೂ ಪ್ರವಾಸಿಗರಿಗೂ ಅನುಕೂಲವುಂಟಾಗಿ ಈ ನಾಡು ಮನೋಜನ ಬೀಡಾಗಿತ್ತು ಎಂದು ಶಾಸನಗಳು ತಿಳಿಸುತ್ತವೆ.

ಒಳನಾಡಿಗೆ ಸರಕನ್ನು ಸಾಗಿಸಲು ಎತ್ತಿನಬಂಡಿ, ಕತ್ತೆ, ಕುದುರೆ, ಎಮ್ಮೆ, ಆನೆಗಳನ್ನು ಬಳಸಲಾಗುತ್ತಿತ್ತು. ವ್ಯಾಪಾರಿ ಸರಕುಗಳು ವೈವಿಧ್ಯ ಪೂರ್ಣವಾಗಿರುತ್ತಿದ್ದವು. ಮುತ್ತು, ರತ್ನ, ಹವಳ, ವಜ್ರಗಳು ಮತ್ತು

ಚಿನ್ನದಂಥ ಬೆಲೆಬಾಳುವ ವಸ್ತುಗಳ ಪರೀಕ್ಷೆಯಲ್ಲಿ ತಜ್ಞರಾದ ಈ ವರ್ತಕರು ಇವುಗಳ ಖರೀದಿ ಮಾರಾಟಗಳನ್ನು ಮಾಡುತ್ತಿದ್ದರು. ವಿದೇಶಗಳಿಗೆ ನಿರ್ಯಾತ ಮಾಡುವ ವಸ್ತುಗಳಲ್ಲಿ ಆಗ ಪ್ರಮುಖವಾದುವು ಏಲಕ್ಕಿ, ಲವಂಗ, ಮೆಣಸು, ಗಂಧದ ಮರ, ಕಸ್ತೂರಿ, ಕುಂಕುಮ, ಕರ್ಪೂರ, ಸುಗಂಧ ದ್ರವ್ಯಗಳೂ ನಾಟಿ ಔಷಧಿಗಳೂ ಹೆಚ್ಚಾಗಿದ್ದವು. ಉತ್ತಮವಾದ ಆನೆಗಳನ್ನು ಕೊಂಡು ರಾಜಮಹಾರಾಜರಿಗೆ ಮಾರಾಟ ಮಾಡುವುದು ಸಹ ಇವರ ವ್ಯವಹಾರವಾಗಿತ್ತು.

ವಿಷ್ಣುವರ್ಧನ ಪ್ರಬಲನಾಗುವುದಕ್ಕೂ ಮುನ್ನ ಗಂಗವಾಡಿಯನ್ನು ಚೋಳರು ಗೆದ್ದುಕೊಂಡ ಪರಿಣಾಮವಾಗಿ ಕರ್ನಾಟಕದ ದಕ್ಷಿಣ ಭಾಗಗಳೊಂದಿಗೆ ತಮಿಳು ವರ್ತಕರ ನೇರ ಸಂಪರ್ಕ ಬೆಳೆಯಿತು. ಅದಕ್ಕೆಂದೇ ಇವರಿಗೆ ಉಭಯ ನಾನಾದೇಶಿಗಳೆಂದು ಕರೆಯಲಾಯಿತು. ಇಮ್ಮಡಿ ವೀರಬಲ್ಲಾಳನ ಕೃಪೆಗೆ ಪಾತ್ರನಾದ ಒಬ್ಬ ಕುಂಜುನಂಬಿಶೆಟ್ಟಿ ಇಂಥ ಉಭಯ ನಾನಾದೇಶಿಗಳ ಮುಖ್ಯನಾಗಿದ್ದ. ಕಳಿಂಗ, ಮಾಳವ, ಚೋಳ, ಪಾಂಡ್ಯ ಅರಸರ ಬೇಡಿಕೆಗಳನ್ನೆಲ್ಲ ಈ ಶೆಟ್ಟಿ ಪೂರೈಸುತ್ತಿದ್ದನೆಂದು ತಿಳಿದುಬರುತ್ತದೆ. ಇನ್ನೊಬ್ಬ ದಾಮೋದರ ಶೆಟ್ಟಿ. ಈತ ಪದಾರ್ಥ ಮತ್ತು ಪ್ರಾಣಿಗಳ ಪರೀಕ್ಷೆಯಲ್ಲಿ ಪಳಗಿದವ. ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಬಾಣಾವರದ ಚೆಟ್ಟಿಶೆಟ್ಟಿ ಮತ್ತು ದಾಸಶೆಟ್ಟಿ ಎಂಬ ಸೋದರರ ಪ್ರಸ್ತಾಪ ಬರುತ್ತದೆ. ಚೆಟ್ಟಿಶೆಟ್ಟಿ (ಬಹುಶಃ ಅರಬಸ್ತಾನದಿಂದ) ಉತ್ತಮ ತಳಿಯ ಕುದುರೆಗಳನ್ನು ತರಿಸಿ ರಾಜರಿಗೆ ಮಾರುತ್ತಿದ್ದನಂತೆ; ಆನೆಗಳನ್ನು ಕೊಂಡು ವಿದೇಶಗಳಿಗೆ ರವಾನಿಸುತ್ತಿದ್ದನಂತೆ. ಆನೆಗಳನ್ನು ಹೊತ್ತು ಸಮುದ್ರದಲ್ಲಿ ಹೋಗುವಂಥ ದೊಡ್ಡ ಹಡಗುಗಳನ್ನು ಈ ವರ್ತಕರ ಗುಂಪುಗಳು ಹೊಂದಿದ್ದವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ದಾಸ ಶೆಟ್ಟಿ ವಜ್ರಪರೀಕ್ಷೆಯಲ್ಲಿ ನಿಷ್ಣಾತನೆಂದು ಶಾಸನದಲ್ಲಿ ವರ್ಣಿಸಲ್ಪಟ್ಟಿದೆ.

ದ್ವಾರಸಮುದ್ರ, ಶ್ರವಣಬೆಳಗೊಳ, ತಲಕಾಡು, ಬನವಾಸಿ, ಬಳ್ಳಿಗಾಮೆ, ಹಾನುಗಲ್ಲು, ಉಚ್ಚಂಗಿ ಆಗ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ಇಲ್ಲೆಲ್ಲ ನಿತ್ಯಬಳಕೆಯ ಸಾಮಾನುಗಳನ್ನೂ ದವಸಧಾನ್ಯಗಳನ್ನೂ ಮಾರುವ ವರ್ತಕರ ಸಮೂಹವೇ ಇರುತ್ತಿತ್ತು. ಪದಾರ್ಥಗಳಿಗೆ ತಕ್ಕಂತೆ ಅಂಗಡಿಗಳ ಬೇರೆ ಬೇರೆ ಬೀದಿಗಳಿದ್ದವು. ಶ್ರವಣಬೆಳಗೊಳದಲ್ಲಿ ವಜ್ರವ್ಯಾಪಾರಿಗಳ ಬೀದಿಯೇ ಪ್ರತ್ಯೇಕವಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಈಗಿನಂತೆ ಆಗಲೂ ಬೀದಿಗಳಿಗೆ ಅಂಗಡಿಗಳಿಗೆ ಗಣ್ಯರ ಹೆಸರಿಡುವ ಪದ್ಧತಿಯಿತ್ತು (ಬಮ್ಮಲದೇವಿಯರಂಗಡಿ, ಕೇತಲದೇವಿಯರಂಗಡಿ, ಬೊಪ್ಪದೇವನ ಬಸದಿಯಂಗಡಿ ಮತ್ತು ಚಂದ್ರಮೌಳಿಯಣ್ಣನಂಗಡಿ ಇತ್ಯಾದಿ). ಅರಸೀಕೆರೆ ಆಗ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಇದನ್ನು ಶಾಸನಗಳಲ್ಲಿ ಅಭಿನವದ್ವಾರಸಮುದ್ರ, ದಕ್ಷಿಣದ ಐಹೊಳೆಯೆಂದು ಕರೆಯಲಾಗಿದ್ದು ಇಲ್ಲಿನ ನಾನಾದೇಶಿಗಳನ್ನು ಕುಬೇರನಷ್ಟು ಶ್ರೀಮಂತರೆಂದು ವರ್ಣಿಸಲಾಗಿದೆ.

ಇದಲ್ಲದೆ ಅನೇಕ ಚಿಕ್ಕಪುಟ್ಟ ನಗರಗಳಲ್ಲಿ ವಾಣಿಜ್ಯ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ಪಟ್ಟಣಸ್ವಾಮಿಗಳೂ ಮಂಡಲಸ್ವಾಮಿಗಳೂ ರಾಜ್ಯಾಧಿಕಾರಿಗಳೂ ನೆರವಿನಿಂದ ಸಂತೆಗಳ ಸಂಘಟನೆ ಮಾಡುತ್ತಿದ್ದರು. ವಾಣಿಜ್ಯಾಭಿವೃದ್ಧಿಗೆ ರಾಜಾಶ್ರಯ ಬೆಂಬಲ ಬಹುಮುಖ್ಯವಾಗಿತ್ತು. ರಾಜ್ಯಕ್ಕೂ ವಾಣಿಜ್ಯ ವ್ಯವಹಾರದಿಂದ ಸಾಕಷ್ಟು ಸಮೃದ್ಧ ವರಮಾನವಿದ್ದ ಕಾರಣ ಹೊಯ್ಸಳ ಅರಸರು ಈ ಬಗ್ಗೆ ಆಸಕ್ತಿ ವಹಿಸಿದರು. ಶ್ರೀಮಂತ ವರ್ತಕರನ್ನು ನಗರಾಧಿಪತಿಗಳನ್ನಾಗಿಯೂ ಪ್ರಾಂತಾಧಿಕಾರಿಗಳನ್ನಾಗಿಯೂ ಮಾಡಲಾಗುತ್ತಿತ್ತು. ಹೊಯ್ಸಳ ಶೆಟ್ಟಿ ಎಂಬ ವರ್ತಕ ದ್ವಾರಸಮುದ್ರದ ಪಟ್ಟಣಸ್ವಾಮಿಯಾಗಿಯೂ ಮೇಚಿಶೆಟ್ಟಿ ಎಂಬಾತ ಬಳ್ಳಿಗಾಮೆಯ ಪಟ್ಟಣಸ್ವಾಮಿಯಾಗಿಯೂ 1181ರಲ್ಲಿ ನಿಯುಕ್ತರಾಗಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಮ್ಮಡಿ ವೀರಬಲ್ಲಾಳನ ಆಳ್ವಿಕೆಯಲ್ಲಿ ಮಹಾ ವಡ್ಡ ವ್ಯವಹಾರಿ ಕಮ್ಮಟ ಮಲ್ಲಶೆಟ್ಟಿ ಒಂದು ಜಿಲ್ಲೆಯ ಅಧಿಪತಿಯಾಗಿ ನಿಯುಕ್ತನಾಗಿದ್ದ. ಕೇರಳದ ದಾಮೋದರ ಶೆಟ್ಟಿಗೂ ಹೊಯ್ಸಳರ ನಾಡಿನಲ್ಲಿ ಬಹಳ ಗೌರವವಿದ್ದಂತೆ 1234ರ ಶಾಸನವೊಂದರಿಂದ ತಿಳಿದುಬರುತ್ತದೆ. ಈ ಕಾಲದಲ್ಲಿ ವ್ಯಾಪಾರಿಗಳು ತೆರಿಗೆಗಳಿಂದ ತಪ್ಪಿಸಿಕೊಳ್ಳಲು ಮಾಡಿದ ಪ್ರಯತ್ನದ ಒಂದು ನಿದರ್ಶನವಾದರೂ ಸಿಗದಿರುವುದು ಗಮನಾರ್ಹವಾದ ವಿಚಾರ. ಅನೇಕ ಶಾಸನಗಳಲ್ಲಿ ಇಂಥ ವರ್ತಕರನ್ನು ವೀರಬಣಂಜು ಧರ್ಮಪ್ರತಿಪಾದಕರು ಎಂದು ವರ್ಣಿಸಲಾಗಿದೆ. ಈ ವರ್ತಕರು ಉದಾರಿಗಳೂ ದಾನಿಗಳೂ ಆಗಿದ್ದರೆಂಬುದಕ್ಕೆ ಅನೇಕ ನಿದರ್ಶನಗಳು ಶಾಸನಗಳಲ್ಲಿ ಸಿಗುತ್ತವೆ. 1178ರ ನಂಜನಗೂಡಿನ ಒಂದು ಶಾಸನದಲ್ಲಿ ಪಟ್ಟಣಸ್ವಾಮಿ ಸೋಮಿಶೆಟ್ಟಿ ಮೂರು ಕೆರೆಗಳನ್ನು ಕಟ್ಟಿಸಿದನೆಂದು ಹೇಳಿದೆ. ಮೊಸಳೆಯ ದಡ್ಡ ವ್ಯವಹಾರಿ ಬಸವಶೆಟ್ಟಿ ಚತುರ್ವಿಂಶತಿ ತೀರ್ಥಂಕರರ ಪ್ರತಿಮೆಗಳನ್ನು ಮಾಡಿಸಿದಾಗ (ಸು. 1185) ಮೊಸಳೆಯ ವರ್ತಕರೆಲ್ಲ ಸೇರಿ ಪ್ರಜಾದತ್ತಿಗಳನ್ನು ಕೊಟ್ಟರು. ಹೊಯ್ಸಳ ಸೋಮೇಶ್ವರನ ಮಂತ್ರಿ ಮಾಣಿಕ್ಯಭಂಡಾರಿ ರಾಮದೇವನಾಯಕ ಸ್ವತಃ ವರ್ತಕಮುಖಂಡನಿದ್ದು, ಗೊಮ್ಮಟಪುರದ ವರ್ತಕರನ್ನೆಲ್ಲ (ಗಾಣಿಕೆ ಸಂಘವೂ ಸೇರಿದಂತೆ) ಕುರಿತು ಹೊರಡಿಸಿದ ಶಾಸನದಲ್ಲಿ ಸುಂಕಗಳನ್ನು ಸ್ಥಳಿಕ ಜನರು ಕೊಡದಿದ್ದರೆ ಸ್ಥಾನಿಕ ಆಚಾರ್ಯನೇ ಕೊಟ್ಟುಬಿಡುವನೆಂದೂ ಸುಂಕ ತಪ್ಪಿಸುವವರು ಧರ್ಮಸ್ಥಳ ನಾಶಮಾಡಿದವರಾಗುವರೆಂದೂ ಹೇಳಿದೆ.

ವೀರಬಣಜಿಗರ ಪ್ರಭಾವ ವಿಜಯನಗರದ ಕಾಲದಲ್ಲಿಯೂ ಮುಂದುವರಿಯಿತು. ತಮ್ಮ ಪರಂಪರೆ, ಪದವಿಗಳಲ್ಲಿ ಹೆಮ್ಮೆತಾಳುತ್ತಿದ್ದ ಈ ಜನರು ಹೊಸ ರಾಜಾಸ್ಥಾನಗಳಲ್ಲಿಯೂ ಅವನ್ನು ಕಾಯ್ದುಕೊಳ್ಳುವ ಪ್ರಯತ್ನ ಮಾಡಿದರು. 1382ರ ಒಂದು ಶಾಸನ ಈ ಜನ ತಮ್ಮ ವಂಶದ ಘನತೆಯ ಬಗ್ಗೆ ಮತ್ತು ತಮ್ಮ ಚಟುವಟಿಕೆಗಳ ಬಗ್ಗೆ ಉಬ್ಬಿ ಹೇಳಿಕೊಳ್ಳುವ ರೀತಿಯನ್ನು ವಿವರಿಸುತ್ತದೆ. ಜೊತೆಗೆ 14ನೆಯ ಶತಮಾನದಲ್ಲಿ ವೀರಬಣಜಿಗರ ಕೇಂದ್ರಗಳ ವಿವರವನ್ನೆಲ್ಲ ಈ ಶಾಸನ ತಿಳಿಸುತ್ತದೆ. ವಿಜಯನಗರ, ದ್ವಾರಸಮುದ್ರ, ಗುತ್ತಿ, ಪೆನುಕೊಂಡ, ಆದವಾನಿ, ಉದಯಗಿರಿ, ಚಂದ್ರಗಿರಿ, ಮುಳುವಾಯಿ, ಕಾಂಚಿ, ಪದವೀಡು, ಚದುರಂಗ ಪಟ್ಟಣ, ಮಂಗಳೂರು ಹೊನ್ನವೂರು (ಹೊನ್ನಾವರ), ಚಂದವೂರು, ಆರಗ, ಚಂದ್ರಗುತ್ತಿ, ಅಣ್ಣಿಗೆರೆ, ಹುಲಿಗೆರೆ, ನಿಡುಗಲ್ಲು, ಬಂಕಾಪುರ, ಚಿಮಟನಕಲ್ಲು, ತರಿಯಕಲ್ಲು, ಆನೆವಿದ್ದಸರಿ, ಕಲ್ಲೆಯ, ತೆರಕಣಾಂಬಿ, ಶಿಂಗಪಟ್ಟಣ–ಇವುಗಳಿಗೆ ನಾಗರಖಂಡ, ಹೊಸನಾಡು, ಹಾನುಗಲ್ಲು, ಹೊನ್ನತ್ತಿನಾಡು, ಹಲಶಿಗೆ, ವಾಕಿಲಗೆರೆನಾಡು, ಹೆಡನಾಡು, ಬಳೆನಾಡು ಮುಂತಾದ ಅನೇಕ ಪ್ರದೇಶಗಳು ಸೇರುತ್ತವೆ.

1362ರಲ್ಲಿ ಕಂಪಣನ ಆಳ್ವಿಕೆಯಲ್ಲಿ ಕೈವಾರನಾಡಿನ ನಾನಾದೇಶಗಳ ಎರಡು ಪಂಗಡದವರೂ ಇತರ ರೈತರೊಂದಿಗೆ ಸೇರಿ ಕೈವಾರದಲ್ಲಿ ಸಂತೆ ಸೇರುವ ವ್ಯವಸ್ಥೆ ಮಾಡಿ ಮಾರಪ್ಪಶೆಟ್ಟಿಯ ತಮ್ಮನ್ನು ಸಂತೆಯ ಪಟ್ಟಣಸ್ವಾಮಿಯೆಂದು ನೇಮಿಸಿ ಎಲ್ಲ ತೆರಿಗೆಮುಕ್ತ ಭೂಮಿಯನ್ನು ಆತನಿಗೆ ದತ್ತಿ ಕೊಟ್ಟಂತೆ ಶಾಸನವೊಂದು ತಿಳಿಸುತ್ತದೆ. ವಾಣಿಜ್ಯ ಅಭಿವೃದ್ಧಿಗೆ ಸಾರ್ವಜನಿಕರು ಕೊಡುತ್ತಿದ್ದ ಉತ್ತೇಜನಕ್ಕೆ ಈ ಸಂಗತಿ ಸಾಕ್ಷಿಯಾಗಿದೆ.

ಪಟ್ಟಣಸ್ವಾಮಿ ಹುದ್ದೆ ಅನೇಕ ಕಡೆಗೆ ಸಂತೆಗೆ ಸಂಬಂಧಿಸಿದಂತೆ ಕಾಣುತ್ತದೆ. 1430ರಲ್ಲಿ ದೇವರಾಯನ ಕಾಲದಲ್ಲಿ 56 ದೇಶಗಳ ಸಾಲುಮೂಲೆಗಳೂ ಹಾಗೂ ಪಾಂಚಾಲರೂ ಕೃಷಿಕರೂ ಸೇರಿ ಸಂತೆಯನ್ನು ಸಂಘಟಿಸಿ

ಸಂತೆಯ ಪಟ್ಟಣಸ್ವಾಮಿ ಚಿಯಿಬಸ್ಸಿಸೆಟ್ಟಿಗೆ ಭೂಮಿಯನ್ನೂ ಮಾನ್ಯ ಹಾಕಿಕೊಟ್ಟಿತು. ಕೆಲವೊಮ್ಮೆ ಅಧಿಕಾರಿಗಳು ಪಟ್ಟಣಸ್ವಾಮಿ ಹುದ್ದೆಯನ್ನು ವರ್ತಕರಿಗೆ ವಹಿಸಿಕೊಡುತ್ತಿದ್ದರು. ಈಗಿನ ಮಾರ್ಕೆಟ್ ಕಮಿಟಿಗಳ ಅಧ್ಯಕ್ಷ ಸ್ಥಾನದಂತೆ ಈ ವ್ಯವಸ್ಥೆ ಇರಬೇಕು. ವಿಜಯನಗರವನ್ನು ಸಂದರ್ಶಿಸಿದ ಡೊಮಿಂಗೊ ಪೇಯಿಸ್‌ನ ಹೇಳಿಕೆಯ ಪ್ರಕಾರ ಕಸಬುದಾರ ಮತ್ತು ವರ್ತಕ ಸಂಘಗಳಿಂದ ಪೋಷಿತವಾದ ಸಮೃದ್ಧ ದೇವಾಲಯಗಳು ಓಣಿ ಓಣಿಗೂ ಇದ್ದವು. ಇನ್ನೊಬ್ಬ ಪ್ರವಾಸಿ ಅಬ್ದುಲ್ ರಜಾಕ್ ವಿಜಯನಗರ ವನ್ನು ಸಂದರ್ಶಿಸಿ ಪ್ರತಿಯೊಂದು ವ್ಯಾಪಾರೀ ಅಥವಾ ಕಸಬುದಾರ ಸಂಘಗಳ ಅಂಗಡಿಗಳು ಒಂದಕ್ಕೊಂದು ಹೊಂದಿಕೊಂಡಿವೆಯೆಂದು ಹೇಳಿದ್ದಾನೆ.

ಈ ಸಂಘಗಳ ಇನ್ನೊಬ್ಬ ಹಿರಿಯ ಅಧಿಕಾರಿಗೆ ಮಹಾಪ್ರಭು ಎಂದು ಹೆಸರಿತ್ತು. ಮಹಾವಡ್ಡ ವ್ಯವಹಾರಿ, ಉಭಯನಾನಾ ದೇಶಿಗಳ ಮಹಾಪ್ರಭು ಇರಿಗಿಸೆಟ್ಟಿ ಶಿವಾಲಯವನ್ನು ಕಟ್ಟಿಸಿದನೆಂದು ಒಂದು ಶಾಸನ (1404) ತಿಳಿಸುತ್ತದೆ. 1382ರಲ್ಲಿ ನಗರ ಪರಿವಾರ ಮತ್ತು ಮುಮ್ಮರಿದಂಡ ಮುಂತಾದವರು ಸೇರಿ ಸರ್ಕಾರಿ ಅಧಿಕಾರಿಯಾದ ಮುದ್ದ ಡಣಾಯಕನಿಗೆ 'ನಮ್ಮ ಛಪ್ಪನ್ನ ದೇಶದ ಆಚಾರ ವಿಚಾರಕ್ಕೆ ಕರ್ತರಾದರ್ ಆಗಿ' ಎಂದು ಪೃಥ್ವೀಶೆಟ್ಟಿಯ ಪದವಿಯನ್ನು ಪದಾನ ಮಾಡಿದರು. ಇದು ವರ್ತಕರು ಅಧಿಕಾರಿಗೆ ಪದವಿ ನೀಡಿದ ಸಂದರ್ಭ.

ಈ ಸಂಘಗಳ ನಿಯಂತ್ರಣ ಸದಸ್ಯ ಕುಲದ ಮೇಲೆ ಬಹಳ ಕಟ್ಟುನಿಟ್ಟಾಗಿತ್ತೆನ್ನುವುದಕ್ಕೆ ಅನೇಕ ಶಾಸನಗಳಲ್ಲಿ ನಿದರ್ಶನ ಸಿಗುತ್ತದೆ. ಪಾಂಚಾಲ ಎಂಬುದೊಂದು ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಬಲವಾದ ಕಸಬುದಾರರ ಸಂಘ, ಇದರ ಶಾಖೆಗಳು ರಾಜ್ಯದ ತುಂಬ ಇದ್ದವು. ಸಮಯ, ಸಮುದಾಯ ಜಾತಿ, ಪಾಂಚಾಲ, ಆಯಗಾರ, ಹಿಟ್ಟು, ಕೊತ್ತಲೆ, ಶ್ರೇಣಿ–ಇವೆಲ್ಲ ವಿವಿಧ ಕಸಬು ಸಂಘಗಳಿಗಿದ್ದ ಪರ್ಯಾಯ ಶಬ್ದಗಳು.

ಪಾಂಚಾಲರ ಸಂಘದವರು ಸಹ ವೀರಬಣಜಿಗರಂತೆ ವೀರ ಪಾಂಚಾಲರು ಬಹುಶಃ ಇಂದಿನ ಪಾಂಚಾಲರೆಲ್ಲ (ಕುಂಬಾರರು, ಅಕ್ಕಸಾಲಿಗರು, ಬಡಗಿಗಳು ಇತ್ಯಾದಿ) ಆ ಪರಂಪರೆಯವರು. ಶಸ್ತ್ರಾಸ್ತ್ರ ತಯಾರಿಕೆ, ಮುತ್ತುರತ್ನದ ಕೆಲಸ ಇವರ ಕಸಬಾದ ಕಾರಣ ಹೆಚ್ಚಿನ ಮಹತ್ತ್ವವೂ ಬಂದಿರಬೇಕು.

1355ರಲ್ಲಿ ಉಭಯ ನಾನಾ ದೇಶಿಗಳು ಹರಿಹರನ ಅರಮನೆಯ ವರ್ತಕರಾಗಿದ್ದರು. ಮಹಾವಡ್ಡ ವ್ಯವಹಾರಿ, ಉಭಯ ನಾನಾ ದೇಶಿಯರ ಮುಖ್ಯ ಅರ್ಜುಭಟ್ಟಯ್ಯನ ಮಗ ಮಹಾದೇವಣ್ಣನೆಂಬಾತ ಬುಕ್ಕಣ್ಣ ಒಡೆಯರಿಗೆ ಮನವಿ ಮಾಡಿ ಚೆಂಗನಾಡಿನ ಲಕ್ಷ್ಮೀಪುರವನ್ನು ಬಿಟ್ಟುಕೊಡು ಎಂದ. ಬುಕ್ಕಣ್ಣ ಕೂಡಲೆ ಆಜ್ಞೆ ಮಾಡಿ ಮುಖ್ಯಮಂತ್ರಿ ಸೋವಪ್ಪನ ಮೂಲಕ ಕಾರ್ಯರೂಪಕ್ಕೆ ಇಳಿಸಿದ. ಈ ಮಾತಿನಿಂದ ರಾಜರ ಮೇಲೆ ಈ ವರ್ತಕ ಸಂಘಗಳ ಪ್ರಭಾವ ಎಷ್ಟಿತ್ತೆಂಬುದು ತಿಳಿಯುತ್ತದೆ. ಈ ಸಂಘಗಳ ಮುಖ್ಯರು ತೆರಿಗೆ ವಿನಾಯಿತಿಗಳನ್ನು ಸಹ ಪಡೆಯಲು ಸಮರ್ಥರಿದ್ದರು. ಮಾಂಬಳ್ಳಿಯ ನಾನಾ ದೇಶಗಳಿಗೆ ಇಮ್ಮಡಿ ಹರಿಹರ ಕೆಲವು ತೆರಿಗೆಗಳ ವಿನಾಯಿತಿ ಕೊಟ್ಟ. ಸದಾಶಿವರಾಯನ ಕಾಲದಲ್ಲಿ ಹಜಾಮರ ಸಂಘಗಳ ಮುಖ್ಯನೂ ಇಂಥ ಕೆಲವು ತೆರಿಗೆ ವಿನಾಯಿತಿ ಪಡೆದ ಉಲ್ಲೇಖವಿದೆ.

1551ರಲ್ಲಿ ಸದಾಶಿವರಾಯನ ಕಾಲದಲ್ಲಿ ಉಪ್ಪು ತಯಾರಕರ ಸಂಘಕ್ಕೆ ತೆರಿಗೆ ಮುಕ್ತ ಭೂಮಿಯನ್ನು ದತ್ತಿ ಕೊಟ್ಟ ಉಲ್ಲೇಖವಿದೆ. ಇದರಂತೆ ಕುಂಬಾರ ಸ್ವಾಮಿಗಳು 1580ರಲ್ಲಿ ತಮ್ಮ ಸಂಘಕ್ಕೆ ರಾಜಮಾನ್ಯವನ್ನು ಪಡೆದರು.

ವಿಜಯನಗರದ ಅರಸರ ಕಾಲದಲ್ಲಿಯ ವಾಣಿಜ್ಯ ವ್ಯವಹಾರದ ವೈಖರಿಯನ್ನು ವಿದೇಶಿ ಪ್ರವಾಸಿಗರಾದ ಪೇಯಿಸ್, ನ್ಯೂನಿಜ್, ಬಾರ್ಬೋಸ ಮೊದಲಾದವರು ವರ್ಣಿಸಿದ್ದಾರೆ. ರಾಜಧಾನಿಯಲ್ಲಿ ಮುತ್ತುರತ್ನಗಳನ್ನು ಬಹಿರಂಗ ರಾಶಿ ಹಾಕಿಕೊಂಡು ಮಾರಾಟ ಮಾಡುತ್ತಿದ್ದರೆಂದು ಅವರಿಗೆ ಆಶ್ಚರ್ಯವಾಯಿತಂತೆ. ಕೃಷ್ಣದೇವರಾಯನ ಕಾಲದಲ್ಲಿಯಂತೂ ಉತ್ತಮ ಕುದುರೆಗಳ ಖರೀದಿ ಮತ್ತು ಮಾರಾಟಗಳ ವ್ಯವಹಾರಕ್ಕಾಗಿ ಪೋರ್ಚುಗೀಸ್ ವರ್ತಕರೊಂದಿಗೆ ಪ್ರಾರಂಭವಾದ ಸ್ನೇಹ ಮುಂದುವರಿದು ಬಂದೂಕು ಮುಂತಾದ ಅಸ್ತ್ರಗಳ ಖರೀದಿಯವರೆಗೂ ಹೆಚ್ಚಿತು; ವಿಜಯನಗರದ ರಾಯರು ಪೋರ್ಚುಗಲ್‌ನೊಂದಿಗೆ ಸ್ನೇಹಸಂಬಂಧ ಬೆಳೆಸಿದ್ದರು. ಪೋರ್ಚುಗೀಸ್ ವರ್ತಕರು ಹವಳ, ಕೇಸರಿ, ಮಕಮಲ್ ಬಟ್ಟೆ ಮತ್ತು ಚಾಕುಚೂರಿಗಳ ವ್ಯಾಪಾರವನ್ನೂ ಮಾಡುತ್ತಿದ್ದರು. ಬಾರ್ಬೋಸನ ದಿನಚರಿಯಲ್ಲಿ ವಿಜಯನಗರ ಸಾಮ್ರಾಜ್ಯದ ಬಂದರುಗಳಾದ ಹೊನ್ನಾವರ, ಭಟ್ಕಳಗಳ ಪ್ರಸ್ತಾಪ ಬರುತ್ತದೆ. ಆಗಲೇ ಕರಾವಳಿಯಲ್ಲಿ ನೆಲಸಿದ್ದ ಮೂರ್–ಅರಬ್ ವರ್ತಕರ ಹಡಗುಗಳು ಓರ್ಮುಜ್‌ನಿಂದ ಕುದುರೆಗಳನ್ನೂ ಮುತ್ತುಗಳನ್ನೂ ತಾಮ್ರವನ್ನೂ ತರುತ್ತಿದ್ದವು. ಇಲ್ಲಿ ಅವನ್ನು ಒಳನಾಡಿಗೆ ಸಾಗಿಸಿ ಅಕ್ಕಿ, ಬೂರಾ ಸಕ್ಕರೆ, ಕಬ್ಬಿಣ, ಮಸಾಲೆ ದಿನಸುಗಳನ್ನು ಹೇರಿಕೊಂಡು ಹೋಗುತ್ತಿದ್ದವು. ಕೇರಳದಿಂದ ಅನೇಕ ಮಲಬಾರೀ ಹಡಗುಗಳು ತೆಂಗಿನಕಾಯಿ, ತಾಳೆಬೆಲ್ಲ, ತೆಂಗಿನ ಎಣ್ಣೆ, ತಾಳೆ ಹೆಂಡವನ್ನು ವಿಜಯನಗರದ ಬಂದರುಗಳಿಗೆ ತರುತ್ತಿದ್ದವು. ಇಲ್ಲಿಂದ ಅಕ್ಕಿ, ಸಕ್ಕರೆ, ಸಂಬಾರ ಪದಾರ್ಥಗಳನ್ನು ಒಯ್ಯುತ್ತಿದ್ದವು. ಒಳನಾಡಿನ ವ್ಯಾಪಾರಿ ಕೇಂದ್ರವಾಗಿದ್ದ ಬಿದರೆ ನಗರದ ವರ್ಣನೆಯನ್ನೂ ಈ ದಿನಚರಿಗಳಲ್ಲಿ ನೋಡಬಹುದು. ವಾಣಿಜ್ಯ ವ್ಯವಸ್ಥೆ ಎಷ್ಟು ಸುಸಂಘಟಿತವಾಗಿತ್ತೆಂಬುದಕ್ಕೆ ಒಂದು ನಿದರ್ಶನವನ್ನು ನ್ಯೂನಿಜ್ ಕೊಡುತ್ತಾನೆ. ರಾಯಚೂರು ಯುದ್ಧಕ್ಕೆಂದು ವಿಜಯನಗರದ ಭಾರೀ ಸೈನ್ಯ ಹೊರಟಾಗ ದಂಡು ಬೀಡುಬಿಟ್ಟಿದ್ದ ಪಾಳೆಯವನ್ನು ಬೀದಿಗಳಾಗಿ ವಿಂಗಡಿಸಿ ಪ್ರತಿಯೊಂದು ದಳವಾಯಿಯ ತಂಡಕ್ಕೂ ಪ್ರತ್ಯೇಕ ಅಂಗಡಿಗಳ ವ್ಯವಸ್ಥೆ ಮಾಡಲಾಗಿತ್ತು. ಇಲ್ಲಿ ಕುರಿ, ಮೇಕೆ, ಹಂದಿ, ಕೋಳಿ ಮತ್ತು ಪಕ್ಷಿಗಳ ಮಾಂಸ ಹೇರಳವಾಗಿ ಮಾರಲಾಗುತ್ತಿತ್ತು. ಅಕ್ಕಿ ಮತ್ತು ಇತರ ಧಾನ್ಯಗಳು ಹೇರಳವಾಗಿ ಸಿಗುತ್ತಿದ್ದವು. ಚಿನ್ನದ ಒಡವೆ, ಮುತ್ತು ಮಾಣಿಕ್ಯಗಳನ್ನು ಮಾರುವ ಅಂಗಡಿಗಳೂ ಇದ್ದುವು. ಹುಲ್ಲು, ಸೊಪ್ಪುಸದೆಗಳ ಮೆದೆಗಳೂ ಹೇರಳವಾಗಿದ್ದುವು. ರಾಯಚೂರು ಬೆಂಗಾಡು ಪ್ರದೇಶ. ಆದರೆ ವಿಜಯನಗರದಲ್ಲಿದ್ದಂತೆಯೇ ಯಾರಿಗಾದರೂ ಭಾಸವಾಗುವ ಹಾಗಿತ್ತು. 550 ಆನೆಗಳಿಗೆ ಬೇಕಾಗುವ ಹುಲ್ಲು ಎಷ್ಟಾದೀತು? ಈ ಸೈನ್ಯವನ್ನು ಹಿಂಬಾಲಿಸಿದ ವೇಶ್ಯೆಯರ ಸಂಖ್ಯೆಯೇ 20 ಸಾವಿರವಿದ್ದರೆ ಸೈನಿಕರ ಸಂಖ್ಯೆ ಎಷ್ಟಿರಬೇಕು? ಅವರಿಗೆ ಆಹಾರ ಒದಗಿಸುವ ವ್ಯವಸ್ಥೆಯ ಅಂದಾಜು ಮಾಡಿಕೊಂಡರೆ ಆಗಿನ ವ್ಯಾಪಾರಿಗಳ ಸಂಘಟನಾ ಸಾಮರ್ಥ್ಯ ತಿಳಿಯುತ್ತದೆ.

ನೀರಾವರಿ ಸೌಕರ್ಯಗಳೂ ರಸ್ತೆ ಸಾರಿಗೆ ಸೌಲಭ್ಯಗಳೂ ಈ ಕಾಲದಲ್ಲಿ ಹೆಚ್ಚಿದವು. ಸ್ವಾಭಾವಿಕವಾಗಿ ಉತ್ಪಾದನೆ ಹೆಚ್ಚಿ ವ್ಯಾಪಾರಕ್ಕೆ ಉತ್ತೇಜನ ದೊರೆಯಿತು. ಬೇರೆ ದೇಶದ ವರ್ತಕ ಪ್ರಮುಖ ಪೃಥ್ವೀಶೆಟ್ಟಿ ಬಂದರೆ ಆತನಿಗೆ ಗೌರವದ ತಾಂಬೂಲ, ಉಡುಗೊರೆ, ಆತಿಥ್ಯದ ಭತ್ಯೆಗಳನ್ನು ಆಯಾ ಸ್ಥಳದ ನಾಗರಿಕರೂ ಅಧಿಕಾರಿಗಳೂ ಸೇರಿ ಕೊಟ್ಟು ಸನ್ಮಾನಿಸುವ ಸಂಪ್ರದಾಯವಿತ್ತು. ವಿಜಯನಗರಕ್ಕೆ ದೊರೆಯುವ ವಜ್ರಗಳೆಲ್ಲ ವಜ್ರಕರೂರಿನ ಮತ್ತು ದಕ್ಷಿಣದ ಇನ್ನೊಂದು ಗಣಿಯಿಂದ ಬರುತ್ತಿದ್ದವು. ವಜ್ರಕರೂರಿನಲ್ಲಿ ಹೊರಟ ಎಲ್ಲ ವಜ್ರಗಳೂ ಅರಸನ ಸ್ವಾಮ್ಯಕ್ಕೆ ಒಳಪಡುತ್ತಿದ್ದವು (ತೀರ ಚಿಕ್ಕವನ್ನು ಹೊರತು). ವಿಜಯನಗರದಲ್ಲಿ, ಕಬ್ಬಿಣದ ಅದಿರು, ಸಿದ್ಧ ಕಬ್ಬಿಣದ ಪಾದರಸ ಬೇಕಾದಷ್ಟು ಸಿಗುತ್ತಿತ್ತು. ಕಬ್ಬಿಣವನ್ನು ಭಟ್ಕಳ ಬಂದರಿನ ಮೂಲಕ ರಫ್ತು ಮಾಡಲಾಗುತ್ತಿತ್ತು. ರತ್ನಾಭರಣಗಳನ್ನು ಮಾಡುವುದು, ಶಸ್ತ್ರಗಳನ್ನು, ಪಾತ್ರೆ ಪಡಗಳನ್ನು ಮಾಡುವುದು ಬಹು ದೊಡ್ಡ ಉದ್ಯಮ

ವಾಗಿತ್ತು. ವಸ್ತ್ರ ಒಡವೆಗಳನ್ನು ಬೇಡುವ ಸೊಗಸುಗಾರರ ಸಂಖ್ಯೆ ಹೇರಳವಾಗಿತ್ತು. ದೇವಸ್ಥಾನಗಳಿಗೂ ಇವು ಬೇಕಾಗುತ್ತಿದ್ದ ಕಾರಣ ಇವುಗಳ ವ್ಯಾಪಾರ ಹೆಚ್ಚಾಗಿತ್ತು. ವೇಶ್ಯೆಯರು ಸಹ ಹೊರಲಾರದಷ್ಟು ಆಭರಣ ಧರಿಸುತ್ತಿದ್ದರೆಂದು ಪೇಯಿಸ್ ಹೇಳುತ್ತಾನೆ. ಆನೆಗಳನ್ನು ಸಿಂಹಳದಿಂದ ಆಮದು ಮಾಡಿಕೊಂಡರೆ, ಮುತ್ತುಗಳನ್ನು ಓರ್ಮುಜ್‌ನಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಕರಾವಳಿ ವ್ಯಾಪಾರವನ್ನೆಲ್ಲ ಮಲಬಾರಿ ಮುಸ್ಲಿಮರೂ ಶೆಟ್ಟಿಗಳೂ ನೋಡಿಕೊಳ್ಳುತ್ತಿದ್ದರು.

ರಸ್ತೆ ಸಾರಿಗೆಗೆ ಹೆಚ್ಚಾಗಿ ಭಾರ ಹೊರುವ ಎತ್ತು, ಕತ್ತೆಗಳನ್ನೂ ಕೆಲವು ಸಲ ಬಂಡಿಗಳನ್ನೂ ಬಳಸಲಾಗುತ್ತಿತ್ತು. ವಿಜಯನಗರ ಕೇಂದ್ರವಾಗಿದ್ದು ಒಂದು ಮುಖ್ಯ ರಸ್ತೆ ಅಲ್ಲಿಂದ ಬಂಕಾಪುರದ ಮೇಲಿಂದ ಗೋವಕ್ಕೂ ಮತ್ತೊಂದು ಬಂಕಾಪುರದಿಂದ ಹೊನ್ನಾವರದ ಮೂಲಕ ಭಟ್ಕಳಕ್ಕೂ ಇದ್ದವು. ವಿಜಯನಗರದಿಂದ ಪೆನುಕೊಂಡೆ, ಚಂದ್ರಗಿರಿ ತಿರುಪತಿ, ಪುಲಿಕಟ್ ಮೇಲಿಂದ ಮೈಲಾಪುರಕ್ಕೂ ಒಂದು ರಸ್ತೆ ಇದ್ದಿರಬಹುದು. ಕೃಷ್ಣರಾಯನ ದಾಳಿಗಳ ಜಾಡು ಹಿಡಿದು ನೋಡಿದರೆ ವಿಜಯನಗರ ಆದವಾನಿ, ರಾಯಚೂರಿಗೂ ಮತ್ತು ವಿಜಯನಗರ ಉದಯಗಿರಿ, ಕೊಂಡುವೀಡು, ಕೊಂಡಪಲ್ಲಿ, ಶ್ರೀಕೂರ್ಮಕ್ಕೂ ಹಾಗೂ ತಿರುಪತಿ, ಕಂಚಿ, ಚಿದಂಬರಂ, ಮಧುರೆ, ರಾಮೇಶ್ವರ, ಧನುಷ್ಕೋಟಿಗೂ ಅದರಂತೆಯೇ ವಿಜಯನಗರದಿಂದ ಶಿವಸಮುದ್ರ, ಶ್ರೀರಂಗಪಟ್ಟಣಕ್ಕೂ ಪ್ರಮುಖ ರಸ್ತೆಗಳಿದ್ದುವೆಂದು ತೋರುತ್ತದೆ.

ಈ ಕಾಲದಲ್ಲಿ ವಸ್ತುಗಳ ಬೆಲೆಗಳು ಬಹಳ ಕಡಿಮೆಯಾಗಿದ್ದುವೆಂಬುದಕ್ಕೆ ಬೇಕಾದಷ್ಟು ಸಾಕ್ಷ್ಯ ಸಿಗುತ್ತದೆ. ಚಿನ್ನದ ವರಹ, ಬೆಳ್ಳಿಯ ವರಹಗಳಿಗೂ ಇತರ ನಾಣ್ಯಗಳಿಗೂ ಯೋಗ್ಯ ಬೆಲೆ ಇತ್ತು. ಡೊಮಿಂಗೊ ಪೇಯಿಸನೇ ವಿಜಯನಗರದಲ್ಲಿ ಅತ್ಯಲ್ಪ ಬೆಲೆಯಲ್ಲಿ ಬೇಕಾದಷ್ಟು ಸಾಮಾನು ಸಿಗುತ್ತಿತೆಂದು ಹೇಳುತ್ತಾನೆ. ಆದರೆ ಜನರ ಮೇಲೆ ತೆರಿಗೆ ಭಾರ ಬಹಳ ಹೆಚ್ಚಾಗಿ ಜನಸಾಮಾನ್ಯರು, ಅದರಲ್ಲಿಯೂ ಬೇಸಾಯಗಾರರು ತೊಂದರೆಗೀಡಾಗಿ ಕೆಲವು ಸಲ ವಲಸೆ ಹೋದಂತೆ ಒಂದೆರಡು ಶಾಸನಗಳು ತಿಳಿಸುವುದನ್ನು ನೋಡಿದರೆ ಶ್ರೀಮಂತಿಕೆ ಸಾಮಾನ್ಯರ ಮಟ್ಟಕ್ಕೆ ಇಳಿದಿದ್ದಿಲ್ಲವೆಂದು ತೋರುತ್ತದೆ. ಇಂಥ ಸಂದರ್ಭಗಳಲ್ಲಿ ಕೃಷ್ಣದೇವರಾಯ ತೆರಿಗೆ ವಿನಾಯಿತಿಯನ್ನು ಕೊಟ್ಟು ಅಧಿಕಾರಿಗಳಿಂದ ತೊಂದರೆಯನ್ನು ನಿವಾರಿಸಿದ ದಾಖಲೆಗಳೂ ಇವೆ.

ರಕ್ಕಸತಂಗಡಿ ಕಾಳಗದ ಅನಂತರ ವಿಜಯನಗರ ಸಾಮ್ರಾಜ್ಯದ ಅವನತಿ ಪ್ರಾರಂಭವಾಗಿ ಕರ್ನಾಟಕ ಹರಿದು ತುಂಡಾಗತೊಡಗಿತು. ಮೊದಲು ಬಿಜಾಪುರದ ಆದಿಲ್ ಷಾಹಿಗಳೂ ಅನಂತರ ಮರಾಠರೂ ಈ ಮಧ್ಯೆ ಮುಗಲರೂ ಕರ್ನಾಟಕದ ವಿವಿಧ ಭಾಗಗಳನ್ನು ಆಕ್ರಮಿಸಿದರು. ಚಿಕ್ಕಪುಟ್ಟ ಅರಸರೂ ಪಾಳೆಯಗಾರರೂ ತಮ್ಮ ತಮ್ಮ ಸ್ವಾತಂತ್ರ್ಯಕ್ಕಾಗಿ ಒಳಭೇದಗಳನ್ನು ಮಾಡಿ ದೇಶದ ಶಾಂತಿಯನ್ನು ಮತ್ತಷ್ಟು ಕದಡುವಂಥ ಕದನಗಳಿಗೆ ಕಾರಣರಾದರು. ಇದೆಲ್ಲದರ ಲಾಭವನ್ನು ಈ ಹೊತ್ತಿಗೆ ಭಾರತದಲ್ಲಿ ತಳವೂರಿದ್ದ ಫ್ರೆಂಚರೂ ಇಂಗ್ಲಿಷರೂ ಪಡೆದುಕೊಂಡು ಒಂದೊಂದೇ ರಾಜ್ಯವನ್ನು ಕಬಳಿಸುತ್ತ ಬಂದರು. ಆಗ ವ್ಯಾಪಾರ ವಾಣಿಜ್ಯ ನೀತಿಗಳು ವರ್ತಕರಾಗಿ ಬಂದು ದಾಳಿಗಾರರಾದ ಇಂಗ್ಲಿಷರ ವಶಕ್ಕೆ ಹೋದವು. ಇಂಥ ಅಶಾಂತ ಪರಿಸ್ಥಿತಿಯಲ್ಲಿ ಕರ್ನಾಟಕದ ವರ್ತಕ ಸಂಘಗಳು ಸ್ವಾಭಾವಿಕವಾಗಿ ರಾಜಾಶ್ರಯವನ್ನೂ ತಮ್ಮ ಪ್ರಾಮುಖ್ಯವನ್ನೂ ಕಳೆದುಕೊಂಡವು.

ಕರ್ನಾಟಕದಲ್ಲಿ ಕೆಲವು ಪ್ರದೇಶಗಳು ಕೆಲವು ವಿಶಿಷ್ಟ ವಸ್ತುಗಳಿಗೆ ಪ್ರಖ್ಯಾತವಾಗಿದ್ದವು. ತಕ್ಕಳದಲ್ಲಿ ಉಪ್ಪು (ಮಣ್ಣುಪ್ಪು) ತಯಾರಾಗಿ ಮಾರಾಟಕ್ಕೆ ಹೋಗುತ್ತಿತ್ತು. ಮಳವಳ್ಳಿಯಲ್ಲಿ ಒರಟು ಕಂಬಳಿಗಳು, ಕಾಡುಗುಡಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಸುಣ್ಣವೂ ಮದ್ದೂರು ಕೆಂಗೇರಿಗಳಲ್ಲಿ ಬೆಲ್ಲವೂ ಶ್ರೀರಂಗಪಟ್ಟಣದ ಹತ್ತಿರ ಸೈನಿಕ ಸಾಮಗ್ರಿಗಳೂ ಬಟ್ಟೆ, ಗಡಿಯಾರ ಹಾಗೂ ಜೇಡಿಮಣ್ಣಿನ ಪಾತ್ರೆಗಳೂ, ಚನ್ನಪಟ್ಟಣದಲ್ಲಿ ಗಾಜಿನ ಸಾಮಾನುಗಳೂ ಉಕ್ಕಿನ ತಂತಿಗಳೂ ತಯಾರಾಗಿ ಕರ್ನಾಟಕದ ಮತ್ತು ಹೊರಪ್ರಾಂತ್ಯಗಳ ಮಾರುಕಟ್ಟೆಗಳಿಗೆ ಹೋಗುತ್ತಿದ್ದವು. ದೇಶದ ಅನೇಕ ಕಡೆ ಕಬ್ಬಿಣದ ಎರಕ ಹೊಯ್ಯುವ ಕುಲುಮೆಗಳಿದ್ದುವು. ಬೆಂಗಳೂರಿನಲ್ಲಿ ಭಾರತದ ಎಲ್ಲ ರೀತಿಯ ನಾಣ್ಯಗಳ ಚಲಾವಣೆ ಇದ್ದರೂ ಕಂಠೀರಾಯ ವರಹ, ಸುಲ್ತಾನ ಫಣಗಳು ಬಳಕೆಯಲ್ಲಿದ್ದವು. ಪಟ್ಟೆಗಾರ ಮತ್ತು ಖತ್ರಿ ಜನರು ಉತ್ತಮ ರೇಷ್ಮೆ ನೇಕಾರರಾಗಿದ್ದರು. ಕಚ್ಚಾ ರೇಷ್ಮೆಯನ್ನು ವಿದೇಶಗಳಿಂದ ಮಂಗಳೂರು ಮೂಲಕ ಆಮದು ಮಾಡಿಕೊಳ್ಳಲಾಗುತ್ತಿತ್ತು. ವ್ಯಾಪಾರಿಗಳು ರೇಷ್ಮೆ ಮತ್ತು ಅರಿವೆ ನೇಕಾರರಿಗೆ ಸಾಲ ಕೊಟ್ಟು ಉದ್ಯಮ ನಡೆಸುತ್ತಿದ್ದರು. ಹೊಲೆಯರು ಗುಡಾರಗಳನ್ನು ನೇಯುತ್ತಿದ್ದರು. ಬೆಂಗಳೂರಿನ ನೇಕಾರರ ಜಾಣ್ಮೆಯನ್ನು ಬುಕನನ್ ಬಹುವಾಗಿ ಹೊಗಳಿದ್ದಾನೆ. ಮಗ್ಗದ ಮೇಲೆ ತೆರಿಗೆ ಇತ್ತು. ಚಿಕ್ಕಬಳ್ಳಾಪುರದ ಕಲ್ಲುಸಕ್ಕರೆ ಚೀನೀ ಸಕ್ಕರೆಗೆ ಸಮಾನವಾದ ಖ್ಯಾತಿ ಪಡೆದಿತ್ತು. ಮಧುಗಿರಿ, ಸಾವರಾಯನದುರ್ಗ, ದೇವರಾಯನದುರ್ಗ, ಹಾಗಲವಾಡಿಯಲ್ಲಿಯೂ ಇದರಂತೆಯೇ ಬಳ್ಳಾರಿಯ ಸುತ್ತಲೂ ಕಬ್ಬಿಣದ ಅದಿರನ್ನು ಕರಗಿಸಿ ಕಬ್ಬಿಣ ತಯಾರಿಸುವ ಕೈಗಾರಿಕೆ ಬೆಳೆದಿತ್ತು. ಅಲ್ಲಲ್ಲಿ ಬಳೆ ತಯಾರಿಕೆಗೆ ಬೇಕಾಗುವ ಗಾಜು ತಯಾರಾಗುತ್ತಿತ್ತು. ಉತ್ತರ ಕರ್ನಾಟಕದ ಭಾಗಗಳಲ್ಲಿಯೂ ಕಂಬಳಿ, ಉಪ್ಪು, ಬೆಲ್ಲ, ಬಟ್ಟೆ ಮುಂತಾದ ವಸ್ತುಗಳ ತಯಾರಿಕೆ ಕೇಂದ್ರಗಳಿದ್ದವು, ಎಲ್ಲ ಪ್ರಮುಖ ಊರುಗಳಲ್ಲಿ ಸಂತೆಗಳು ಏರ್ಪಟ್ಟು ವ್ಯಾಪಾರ ನಡೆಯುತ್ತಿತ್ತು. ಬಳ್ಳಾರಿ, ಶಿರಾ, ಆದವಾನಿ, ಹುಬ್ಬಳ್ಳಿ, ನರಗುಂದಗಳ ವರ್ತಕರು, ನಿಜಾಮ ರಾಜ್ಯದ ಭಾಗಗಳೊಂದಿಗೆ ವ್ಯಾಪಾರ ಮಾಡುತ್ತಿದ್ದರು. ಪುಣೆಯಿಂದ ಗೋಸಾಯಿಗಳು ಶಾಲು, ಕೇಸರಿ, ಕಸ್ತೂರಿ ಮತ್ತು ಪರ್ಷಿಯನ್ ಮುತ್ತುಗಳನ್ನು ತಂದು ಮಾರುತ್ತಿದ್ದರು. ಪ್ರಧಾನವಾಗಿ, ಗಂಧಕ, ಸೀಸ, ತಾಮ್ರ, ವಿದೇಶೀ ಉಕ್ಕು, ಕರ್ಪೂರ, ರೇಷ್ಮೆ, ಅರಿವೆ, ಕಾಗದ, ಗಾಜಿನ ಮತ್ತು ಇತರ ಪಾತ್ರೆಗಳು, ಖರ್ಜೂರ, ಬಂಗಾಲ ಸಕ್ಕರೆ–ಇವನ್ನೆಲ್ಲ ಕರ್ನಾಟಕದಲ್ಲಿ ಹೊರಗಿನಿಂದ ತರಿಸಲಾಗುತ್ತಿತ್ತು. ಅಡಕೆ, ಮೆಣಸು, ಏಲಕ್ಕಿ, ಲವಂಗ, ಗಂಧದ ಮರ, ಗಂಧದ ಸಾಮಾನು, ಗಂಧದ ಎಣ್ಣೆ ಮುಂತಾದುವನ್ನು ಪಶ್ಚಿಮ ಕರಾವಳಿಯಿಂದ ಹೊರನಾಡುಗಳಿಗೆ ರಫ್ತು ಮಾಡಲಾಗುತ್ತಿತ್ತು. (ಜಿ.ಆರ್.ವಿ.)

**ಆಧುನಿಕ:** ಆಧುನಿಕ ವ್ಯಾಪಾರ ವ್ಯವಸ್ಥೆಯನ್ನು ಸ್ಥೂಲವಾಗಿ ಆಂತರಿಕ ವ್ಯಾಪಾರ ಹಾಗೂ ಅಂತಾರಾಷ್ಟ್ರೀಯ ವ್ಯಾಪಾರ ಎಂಬುದಾಗಿ ವಿಂಗಡಿಸಬಹುದಾಗಿದೆ.

ಕರ್ನಾಟಕ ರಾಜ್ಯದ ಒಳನಾಡಿನ ವ್ಯಾಪಾರ ವ್ಯವಸ್ಥೆಯನ್ನು ಅವಲೋಕಿಸಿದಾಗ ತಿಳಿದುಬರುವ ಪ್ರಮುಖ ಅಂಶಗಳು ಇವು : ರಾಜ್ಯದ ಒಳನಾಡಿನ ವ್ಯಾಪಾರದಲ್ಲಿ ತೊಡಗಿರುವವರು ಮುಖ್ಯವಾಗಿ ಎರಡು ಬಗೆಯವರು–ಠೋಕು (ಸಗಟು) ವ್ಯಾಪಾರಿಗಳು, ಕಿರುಕುಳ ವ್ಯಾಪಾರಿಗಳು. ಸರಕುಗಳನ್ನು ಒಟ್ಟಾಗಿ ಕೊಂಡು ಅವನ್ನು ಇತರ ವ್ಯಾಪಾರಿಗಳಲ್ಲಿ–ಚಿಲ್ಲರೆ ಅಥವಾ ಕಿರುಕುಳ ವ್ಯಾಪಾರಿಗಳಲ್ಲಿ–ಹಂಚುವುದು ಠೋಕು ವ್ಯಾಪಾರ. ಒಟ್ಟು ವ್ಯಾಪಾರಿಗಳು ಅಥವಾ ಠೋಕು ವ್ಯಾಪಾರಿಗಳು–ಗಿರಾಕಿಗಳಿಗೆ ಅಥವಾ ಗ್ರಾಹಕರಿಗೆ ನೇರವಾಗಿ ಸರಕುಗಳನ್ನು ಮಾರುವುದಿಲ್ಲ. ಅವರು ದೊಡ್ಡ ಪ್ರಮಾಣದಲ್ಲಿ ಉತ್ಪಾದಕರಿಂದ ಸರಕುಗಳನ್ನು ಕೊಳ್ಳುತ್ತಾರೆ ಮತ್ತು ಅದೇ ಸರಕುಗಳನ್ನು ಹೆಚ್ಚಿನ ಬೆಲೆಗೆ ಕಿರುಕುಳ ವ್ಯಾಪಾರಿಗಳಿಗೆ ಮಾರುತ್ತಾರೆ. ನಿಜವಾದ ಠೋಕು ವ್ಯಾಪಾರಿ ಸರಕುಗಳ ಉತ್ಪಾದಕನೂ ಅಲ್ಲ ಅಥವಾ

ಸರಕುಗಳನ್ನು ಮಾರುವ ಕಿರುಕುಳ ವ್ಯಾಪಾರಿಯೂ ಅಲ್ಲ. ಅವನು ಇವರೀರ್ವರ ಮಧ್ಯೆ ಇರುವ ಒಂದು ಕೊಂಡಿ. ಆದರೆ ಕಿರುಕುಳ ವ್ಯಾಪಾರಿಯು ಹೀಗಲ್ಲ. ಅವನು ಠೋಕು ವ್ಯಾಪಾರಿಯಿಂದ ಸಣ್ಣ ಪ್ರಮಾಣದಲ್ಲಿ ಸರಕುಗಳನ್ನು ಕೊಂಡು ಅವುಗಳನ್ನು ಗ್ರಾಹಕರಿಗೆ ನೇರವಾಗಿ ಮಾರುತ್ತಾನೆ. ಕಿರುಕುಳ ವ್ಯಾಪಾರ ಹತ್ತುಹಲವು ಬಗೆ. ಮಾರಾಟಗಾರನೇ ತಲೆಯ ಮೇಲೆ ಸರಕು ಹೊತ್ತು ಬೀದಿಬೀದಿ ತಿರುಗಿ ಮಾಡುವ ವ್ಯಾಪಾರ, ಬೀದಿಯ ಕೊನೆಯ ಚಿಲ್ಲರೆ ಅಂಗಡಿ, ಉತ್ಪಾದಕನೇ ತನ್ನ ಸರಕುಗಳನ್ನು ಮಾರಲು ಬೇರೆಬೇರೆಡೆಗಳಲ್ಲಿ ತೆರೆದಿರುವ ಬಹುಶಾಖಾ ಅಂಗಡಿ, ಗ್ರಾಹಕರಿಗೆ ಬೇಕಾಗುವ ಎಲ್ಲ ಸರಕುಗಳನ್ನು ಒಂದೇ ಎಡೆಯಲ್ಲಿ ಬೇರೆ ಬೇರೆ ವಿಭಾಗಗಳಲ್ಲಿಟ್ಟು ಮಾರುವ ಸಕಲ ಸರಕಿನ ಅಂಗಡಿ (ಜನತಾ ಭಂಡಾರ), ಅಂಚೆಯ ಮೂಲಕ ಆದೇಶ ಪಡೆದು ಅಂಚೆಯ ಮೂಲಕವೇ ಸರಕು ರವಾನಿಸುವ ವ್ಯವಹಾರ, ಗ್ರಾಹಕರೆಲ್ಲರೂ ಒಂದೆಡೆ ಸೇರಿ ತಮ್ಮ ಷೇರು ಬಂಡವಾಳವನ್ನು ಹಾಕಿ ತಮ್ಮದೇ ಆದ ಗ್ರಾಹಕರ ಸಹಕಾರಿ ಸಂಘವನ್ನು ರಚಿಸಿಕೊಂಡು ತನ್ಮೂಲಕ ಉತ್ಪಾದಕರಿಂದ ನೇರವಾಗಿ ಕಡಿಮೆ ಬೆಲೆಗೆ ತಮಗೆ ಬೇಕಾದ ಸರಕುಗಳನ್ನು ತರಿಸಿಕೊಂಡು ಅವುಗಳನ್ನು ತಮ್ಮಲ್ಲಿ ಹಂಚಿಕೊಳ್ಳುವುದು, ಕಂತಿನ ಮೇಲೆ ಸರಕುಗಳನ್ನು ಮಾರುವ ಅಂಗಡಿಗಳು–ಇವು ಕಿರುಕುಳ ವ್ಯಾಪಾರದಲ್ಲಿಯ ವಿವಿಧ ಬಗೆಗಳು. ಇತ್ತೀಚೆಗೆ ರಾಜ್ಯದಲ್ಲಿ ವಿಶೇಷವಾಗಿ ಪಟ್ಟಣ ನಗರ ಪ್ರದೇಶಗಳಲ್ಲಿ ಜನತಾ ಬಜಾರ್, ಬಹುಶಾಖಾ ಅಂಗಡಿ, ಅಂಚೆಯ ಮೂಲಕ ವ್ಯಾಪಾರ ನಡೆಸುವ ಮಳಿಗೆ ಇವೇ ಮುಂತಾದ ದೊಡ್ಡ ಪ್ರಮಾಣದ ಕಿರುಕುಳ ವ್ಯಾಪಾರೀ ಸಂಸ್ಥೆಗಳು ಬೆಳೆದಿವೆ. ಇವುಗಳಿಗೆ ಠೋಕು ವ್ಯಾಪಾರಿಗಳ ಅವಶ್ಯಕತೆ ಇಲ್ಲ. ಇವು ನೇರವಾಗಿ ಸರಕುಗಳನ್ನು ಗ್ರಾಹಕರಿಗೆ ಮಾರಾಟ ಮಾಡುತ್ತವೆ. ಸರಕುಗಳನ್ನು ಬಾಡಿಗೆ ರೂಪದಲ್ಲಿ ಮಾರಾಟ ಮಾಡುವ ಒಂದು ಹೊಸ ಪದ್ಧತಿಯ ಕಿರುಕುಳ ವ್ಯಾಪಾರವು ಇಂದು ರಾಜ್ಯದ ಹಲವೆಡೆಗಳಲ್ಲಿ ಬಳಕೆಯಲ್ಲಿದೆ. ಇದನ್ನು ಬಾಡಿಗೆ–ಕೊಳ್ಳಿಕೆ ಪದ್ಧತಿ ಎಂದು ಕರೆಯುತ್ತಾರೆ. ಬಾಡಿಗೆ–ಕೊಳ್ಳಿಕೆ ಪದ್ಧತಿಯಲ್ಲಿ ಎಲೆಕ್ಟ್ರಿಕ್ ಫ್ಯಾನು, ಸ್ಟೀಲ್ ಪಾತ್ರೆ, ಸೈಕಲ್, ರೇಡಿಯೋ, ಸೋಫಾ ಸೆಟ್ಟು, ಹೊಲಿಗೆ ಯಂತ್ರ, ಪಂಪುಸೆಟ್ಟು, ಟ್ರ್ಯಾಕ್ಟರ್ ಇವೇ ಮುಂತಾದ ಹೆಚ್ಚಿನ ಬೆಲೆಯ ಗ್ರಾಹಕ ಸರಕುಗಳನ್ನು ಮಾರಲಾಗುತ್ತದೆ. ಬಾಡಿಗೆ ಖರೀದಿ ಪದ್ಧತಿಯಲ್ಲಿ ಕಂತುಗಳ ಮೂಲಕ ಬೆಲೆಯನ್ನು ಕೊಡಬೇಕಾಗುವುದರಿಂದ ಮಧ್ಯಮ ವರ್ಗದವರೂ ಸಹ ಮೇಲ್ಕಾಣಿಸಿದಂಥ ಸರಕುಗಳನ್ನು ಕೊಳ್ಳಲು ಸಹಾಯಕವಾಗುತ್ತದೆ.

ಕೃಷಿ ಹುಟ್ಟುವಳಿ ವ್ಯಾಪಾರ ವ್ಯವಸ್ಥೆಯಲ್ಲಿ ಅನೇಕ ಹೊಸ ಏರ್ಪಾಟು ಗಳುಂಟಾಗಿರುವುದು ಕರ್ನಾಟಕದ ಕೃಷಿ ಅರ್ಥವ್ಯವಸ್ಥೆಯಲ್ಲಿಯ ಅರ್ಥಪೂರ್ಣ ಅಂಶ. ರಾಷ್ಟ್ರದ ಜೀವನಾಧಾರವಾದ ಕೃಷಿ ವ್ಯವಸ್ಥೆಯು ಕರ್ನಾಟಕ ರಾಜ್ಯದ ಅರ್ಥ ವ್ಯವಸ್ಥೆಯಲ್ಲೂ ಮುಖ್ಯ ಮೂಲಾಧಾರವಾಗಿದೆ. ರಾಜ್ಯದಲ್ಲಿ ಎಲ್ಲ ಆರ್ಥಿಕ ಚಟುವಟಿಕೆಗಳು ಕೃಷಿರಂಗಕ್ಕೆ ಕೇಂದ್ರೀಕೃತ ಗೊಂಡಿವೆ. ರಾಜ್ಯದ ಆದಾಯಕ್ಕೆ ಕೃಷಿಯೇ ಪ್ರಮುಖ ಮೂಲ. ಯೋಜಿತ ರೀತಿಯಲ್ಲಿ ಕೃಷಿ ಕ್ಷೇತ್ರವು ಪ್ರಗತಿ ಹೊಂದಬೇಕಾದರೆ ರೈತರು ಉತ್ಪಾದಿಸಿದ ಹುಟ್ಟುವಳಿಗೆ ಯೋಗ್ಯ ಬೆಲೆ ಸಿಗುವುದು ಅತ್ಯಾವಶ್ಯಕ ಎಂಬುದನ್ನು ಮರೆಯುವಂತಿಲ್ಲ. ಶ್ರಮಪಟ್ಟು ಉತ್ಪಾದಿಸಿದ ಹುಟ್ಟುವಳಿಗೆ ನ್ಯಾಯಬೆಲೆ ದೊರೆತಲ್ಲಿ ಮಾತ್ರ ರೈತ ತೃಪ್ತಿ ಹೊಂದುತ್ತಾನೆ; ಇಲ್ಲದಿದ್ದರೆ ವ್ಯಸನಪಡುತ್ತಾನೆ. ತತ್ಪರಿಣಾಮವಾಗಿ ಕೃಷಿ ಅಭಿವೃದ್ಧಿ ಕುಂಠಿತವಾಗುತ್ತದೆ.

ಉತ್ಪಾದಿಸಿದ ಹೆಚ್ಚುವರಿ ಕೃಷಿ ಉತ್ಪನ್ನಗಳನ್ನು ಸರಿಯಾದ ಮಾರುಕಟ್ಟೆ ಯಲ್ಲಿ ಯೋಗ್ಯ ವೇಳೆಯಲ್ಲಿ ಮಾರುವ ಸಾಮರ್ಥ್ಯವೂ ಅನುಕೂಲತೆಯೂ ರೈತರಿಗೆ ಇರುವುದಿಲ್ಲ. ಸಂಘಟನೆಯ ಅಭಾವ, ಒತ್ತಾಯದ ಮಾರಾಟ, ಹೆಚ್ಚಿನ ಸಂಖ್ಯೆಯ ಮಧ್ಯವರ್ತಿಗಳು, ಅಳತೆ ತೂಕಗಳಲ್ಲಿ ಮೋಸ, ಮಾದರಿಗೆಂದು ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ತೆಗೆದುಕೊಳ್ಳುವ ಪದ್ಧತಿ, ಅಧಿಕ ಪ್ರಮಾಣದ ಸೋಡಿ, ಧರ್ಮಾರ್ಥದ ಹೆಸರಿನಲ್ಲಿ ಮುರಿದುಕೊಳ್ಳುವ ಸೋಡಿ, ತೂಕದ ಚಾರ್ಜು, ಮಾರುಕಟ್ಟೆಗಳಲ್ಲಿರುವ ಇತರ ಅನವಶ್ಯಕ ಖರ್ಚು ಇವೆಲ್ಲವುಗಳಿಂದಾಗಿ ಬೆಳೆಯನ್ನು ಹೆಚ್ಚಿಸುವ ರೈತನ ಪ್ರಯತ್ನದ ಫಲ ಅವನಿಗೆ ದೊರೆಯುತ್ತಿಲ್ಲ. ಠೋಕು ವ್ಯಾಪಾರಸ್ತರು ದಳ್ಳಾಳಿಗಳು, ಕಮಿಷನ್ ಏಜಂಟರು ಮತ್ತು ಲೇವಾದೇವಿದಾರರು ಸುಗ್ಗಿಯ ಅನಂತರ ರೈತರ ದವಸಧಾನ್ಯಗಳನ್ನು ಅಗ್ಗದ ಬೆಲೆಗೆ ಕೊಂಡು ಅವುಗಳನ್ನು ದಾಸ್ತಾನುಮಾಡಿ ಬೆಲೆ ಏರಿದಾಗ ಮಾರಾಟಮಾಡಿಸಿ ಅಧಿಕ ಲಾಭ ಗಿಟ್ಟಿಸುತ್ತಾರೆ. ಇದರಿಂದ ರೈತನಿಗೂ ಅಂತಿಮ ಗ್ರಾಹಕನಿಗೂ ತುಂಬ ಅನ್ಯಾಯವಾಗುತ್ತದೆ. ರೈತರ ಹುಟ್ಟುವಳಿಗೆ ನ್ಯಾಯವಾದ ಬೆಲೆ ದೊರಕಿಸಿಕೊಡಲು ಸರ್ಕಾರವು ವ್ಯವಸ್ಥಿತ ಮಾರಾಟದ ಮುಖ್ಯ ನಿದರ್ಶನಗಳಾಗಿವೆ. ರೈತರು ಉತ್ಪಾದಿಸಿದ ದವಸಧಾನ್ಯಗಳಿಗೆ ನ್ಯಾಯಬೆಲೆ ಒದಗಿಸಲು ಹಾಗೂ ಮಂಡಿಗಳಲ್ಲಿ ನಡೆಯುತ್ತಿರುವ ಅಕ್ರಮವ್ಯವಹಾರ ಗಳನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯದಲ್ಲಿ 1966 ರಲ್ಲಿ ಕರ್ನಾಟಕ ಕೃಷಿ ಹುಟ್ಟುವಳಿ ಮಾರಾಟ (ನಿಯಂತ್ರಣ) ಶಾಸನದ ಅನ್ವಯ 104 ಪ್ರಮುಖ ಹಾಗೂ 116 ಉಪಮಾರುಕಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಪ್ರಸಕ್ತ ರಾಜ್ಯದಲ್ಲಿ 97 ಮುಖ್ಯ ಮಾರುಕಟ್ಟೆಗಳೂ ಮತ್ತು 110 ಉಪಮಾರು ಕಟ್ಟೆಗಳೂ ಕಾರ್ಯಾಚರಣೆಯಲ್ಲಿವೆ. 1973ರಲ್ಲಿ ಕರ್ನಾಟಕ ರಾಜ್ಯದ ಕೃಷಿ ಹುಟ್ಟುವಳಿಗಳ ಠೋಕು ಮಾರಾಟದ ಯೋಜನೆ ವಿಶ್ವಬ್ಯಾಂಕಿನ ನೆರವಿನಿಂದ ಪ್ರಾರಂಭಗೊಂಡು ರಾಜ್ಯದಲ್ಲಿ 59 ನಿಯಂತ್ರಿತ ಮಾರುಕಟ್ಟೆ ಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿತ್ತು.

ರಾಜ್ಯದ ಕೃಷಿ ಹುಟ್ಟುವಳಿ ಮಾರಾಟ ವ್ಯವಸ್ಥೆಯಲ್ಲಿ ಸಹಕಾರ ಮಾರಾಟ ಸಂಘಗಳೂ ಹಿರಿದಾದ ಪಾತ್ರವನ್ನು ನಿರ್ವಹಿಸುತ್ತಲಿವೆ. ಸಹಕಾರಿ ಸಂಘಗಳು ರೈತರು ತಮ್ಮ ಮಾರಾಟಾಸಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಸಹಕರಿಸುತ್ತವೆ. ಹೆಚ್ಚಿನ ಬೆಲೆ ಗುರುತಿಸಿ ರೈತರ ಆದಾಯವನ್ನು ಹೆಚ್ಚಿಸುವುದು, ಮಾರಾಟ ಮತ್ತು ಉತ್ಪನ್ನ ವೆಚ್ಚವನ್ನು ಕಡಿಮೆ ಮಾಡುವುದು ಮತ್ತು ಸಾಧ್ಯವಿದ್ದಷ್ಟು ಕಡಿಮೆ ವೆಚ್ಚ, ಹೆಚ್ಚು ಉತ್ಪನ್ನ ಪಡೆಯಲು ರೈತರನ್ನು ಅಣಿಗೊಳಿಸುವುದು–ಇವು ಸಹಕಾರಿ ಮಾರಾಟದ ಗುರಿ. ಇಂಥ ಸಹಕಾರ ಮಾರಾಟ ಸಂಘಗಳಲ್ಲಿ ರೈತ ಸದಸ್ಯರು ತಮ್ಮ ಹುಟ್ಟುವಳಿಗಳನ್ನು ಮಾರಾಟಮಾಡಿ ಮುಂಗಡ ಹಣ ಪಡೆದುಕೊಳ್ಳುತ್ತಾರೆ. ಸಂಘಗಳು ಹುಟ್ಟುವಳಿಗಳನ್ನು ಅದರ ಗುಣವಂತಿಕೆಗನುಗುಣವಾಗಿ ವರ್ಗೀಕರಿಸಿ, ಸಂಸ್ಕರಣಗೊಳಿಸಿ ಪಟ್ಟಣದಲ್ಲಿರುವ ವ್ಯಾಪಾರಸ್ಥರಿಗೆ ನೇರವಾಗಿ ಮಾರಾಟಮಾಡುತ್ತವೆ. ಇದರಿಂದ ಮಧ್ಯವರ್ತಿಗಳ ಅಕ್ರಮ ಚಟುವಟಿಕೆಗಳಿಗೆ ತಡೆಯುಂಟಾಗಿ ರೈತರಿಗೆ ನ್ಯಾಯವಾದ ಬೆಲೆ ದೊರಕು ವಂತಾಗುತ್ತದೆ. ರಾಜ್ಯದಲ್ಲಿರುವ ಸಹಕಾರಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ತಾಲ್ಲೂಕು ಮಟ್ಟದ ಸಹಕಾರ ಮಾರುಕಟ್ಟೆ ಸಂಘ ಹಾಗೂ ತಾಲ್ಲೂಕು ಮಟ್ಟಕ್ಕಿಂತ ಕೆಳಗಿನ ಪ್ರಾಥಮಿಕ ಮಾರುಕಟ್ಟೆ ಸಂಘಗಳೆಂದು ಎರಡು ವಿಧಗಳು. ಕರ್ನಾಟಕ ರಾಜ್ಯದ ಸಹಕಾರ ಮಾರುಕಟ್ಟೆ ಒಕ್ಕೂಟ ರಾಜ್ಯದ ಅಪೆಕ್ಸ್ ಸಂಘವಾಗಿದ್ದು, ಅದರ ಮೂಲಕ ಸಹಕಾರ ಮಾರಾಟ ಕಾರ್ಯಕ್ರಮಗಳನ್ನು ಬಲಪಡಿಸಲಾಗುತ್ತಿದೆ. ಕೆಲವೊಂದು ಸಹಕಾರ ಮಾರಾಟ ಸಂಘಗಳು ಭೂಸಾಗುವಳಿಗೆ ಅಗತ್ಯವಿರುವ ಸಾಧನ ಸಲಕರಣೆ ಗಳನ್ನು ಉತ್ಪಾದಿಸಿ ರೈತರ ಆವಶ್ಯಕತೆಗಳನ್ನು ಪೂರೈಸುತ್ತವೆ.

ಸಾಗರೋತ್ತರ ವ್ಯಾಪಾರದಲ್ಲಿ ಕರ್ನಾಟಕ ತನ್ನದೇ ಆದ ಪರಂಪರೆ ಯನ್ನು ಕಾಯ್ದುಕೊಂಡು ಬಂದಿದೆ. ಇಂದು ಕರ್ನಾಟಕದಿಂದ ನಿರ್ಯಾತವಾಗು

ಸರಕುಗಳಲ್ಲಿ ಶೇಕಡ 67.3 ರಷ್ಟು ಸಾಂಪ್ರದಾಯಿಕ ಸರಕುಗಳು, ಶೇಕಡ 27.4 ರಷ್ಟು ಸಾಂಪ್ರದಾಯಿಕವಲ್ಲದ ಸರಕುಗಳು ಹಾಗೂ ಶೇಕಡ 5.3 ರಷ್ಟು ಇನ್ನಿತರ ಸರಕುಗಳು. ಕಾಫಿ, ಗೇರುಬೀಜ, ಗೇರುಎಣ್ಣೆ, ಏಲಕ್ಕಿ, ಮೆಣಸು, ಸಂಬಾರಜಿನಸು, ಹತ್ತಿಬಟ್ಟೆ, ಹತ್ತಿ, ತಂಬಾಕು, ಚಹಾಪುಡಿ–ಇವು ಕರ್ನಾಟಕ ರಾಜ್ಯದಿಂದ ನಿರ್ಯಾತವಾಗುವ ಪ್ರಮುಖ ಸಾಂಪ್ರದಾಯಿಕ ಸರಕುಗಳು. ಎಂಜಿನಿಯರಿಂಗ್ ಸಾಮಗ್ರಿಗಳು, ಅಪ್ಪಟ ರೇಷ್ಮೆ ಬಟ್ಟೆ, ಮೀನು, ಶಟ್ಲ ಮುಂತಾದ ಸಮುದ್ರ ಹುಟ್ಟುವಳಿಗಳು, ಅದಿರು, ಚರ್ಮ, ಕರಕುಶಲ ವಸ್ತುಗಳು, ಸಿದ್ಧ ಉಡುಪುಗಳು, ಕತ್ತ ಮತ್ತು ಕತ್ತದಿಂದ ತಯಾರಿಸಿದ ಸರಕುಗಳು, ರಾಸಾಯನಿಕ ದ್ರವ್ಯಗಳು, ಸಬಕಾರ ಗಳು–ಇವು ಕರ್ನಾಟಕದಿಂದ ವಿದೇಶಗಳಿಗೆ ನಿರ್ಯಾತವಾಗುತ್ತಿರುವ ಸಾಂಪ್ರದಾಯಿಕವಲ್ಲದ ಸರಕುಗಳು. ಹಣ್ಣು, ಗಂಧದ ಎಣ್ಣೆ, ಉಣ್ಣೆ ಮರಲೆ (ಟಿಂಬರ್), ಅಗರಬತ್ತಿ–ಇವು ರಾಜ್ಯದಿಂದ ನಿರ್ಯಾತವಾಗುವ ಇನ್ನಿತರ ಸಾಮಗ್ರಿಗಳು. ದೇಶದಿಂದ ನಿರ್ಯಾತವಾಗುವ ಕಾಫಿಯ ಶೇಕಡ 66ರಷ್ಟು ಕರ್ನಾಟಕದಿಂದಲೇ ನಿರ್ಯಾತವಾಗುತ್ತದೆ. ಈ ವಸ್ತುವಿನ ನಿರ್ಯಾತದಲ್ಲಿ ಕರ್ನಾಟಕದ ಪಾಲು ಅಖಿಲಭಾರತ ಮಟ್ಟದಲ್ಲಿ ಗಮನಾರ್ಹವಾದುದು. ಕರ್ನಾಟಕದಲ್ಲಿ ತಯಾರಾಗುವ ಗಂಧದ ಎಣ್ಣೆ, ಗಂಧದ ಸಾಬೂನು, ಅಗರಬತ್ತಿ ಸರ್ವೋತ್ಕೃಷ್ಟವೆಂದು ಖ್ಯಾತವಾಗಿದ್ದು ಇಂಗ್ಲೆಂಡ್, ಅಮೆರಿಕ ಮುಂತಾದ ದೇಶಗಳಲ್ಲಿ ಇವುಗಳಿಗೆ ಅಧಿಕ ಬೇಡಿಕೆ ಇದೆ. ಹತ್ತಿಯ ಬಟ್ಟೆ, ಚಹ, ತಂಬಾಕು, ತೊಗಲು ಇವು ಭಾರತದ ನಿರ್ಯಾತ ವ್ಯವಹಾರದಲ್ಲಿ ಗಮನಾರ್ಹ ಸ್ಥಾನವನ್ನು ಹೊಂದಿದ್ದರೂ ಇವುಗಳ ಪಾಲು ಕರ್ನಾಟಕದ ನಿರ್ಯಾತ ವ್ಯವಹಾರದಲ್ಲಿ ತೀರ ಕಡಿಮೆ. 1973–74ರಲ್ಲಿ ಒಟ್ಟು 67 ಕೋಟಿ ರೂಪಾಯಿ ಮೌಲ್ಯದ ಸರಕುಗಳು ಕರ್ನಾಟಕದಿಂದ ನಿರ್ಯಾತವಾಗಿದ್ದವು. ದೇಶದ ಒಟ್ಟು ನಿರ್ಯಾತ ವ್ಯವಹಾರದಲ್ಲಿ ಕರ್ನಾಟಕ ರಾಜ್ಯದ ಪಾಲು ಸುಮಾರು ಶೇಕಡ 3ರಷ್ಟು. ಅಂತರ್ದೇಶೀಯ ವಾಣಿಜ್ಯ–ವ್ಯವಹಾರ ಮತ್ತು ವಿದೇಶೀಯ ವ್ಯಾಪರದಲ್ಲಿ ಬಂದರುಗಳು ನಿರ್ವಹಿಸುವ ಪಾತ್ರ ಪ್ರಮುಖವಾದುದು. ಬಂದರುಗಳು ರಾಷ್ಟ್ರೀಯ ಆಸ್ತಿ. ಸು. 820ಕಿಮೀ ಉದ್ದದ ಕಡಲತೀರವನ್ನು ಕರ್ನಾಟಕ ಹೊಂದಿದೆ. ರಾಜ್ಯದಲ್ಲಿರುವ 19 ಬಂದರುಗಳಲ್ಲಿ 14 ಉತ್ತರಕನ್ನಡ ಜಿಲ್ಲೆಯಲ್ಲಿಯೂ 5 ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಇವೆ. ಮಂಗಳೂರು ಬಂದರು ಭಾರತದ ಒಂಬತ್ತು ಬೃಹತ್ ಬಂದರುಗಳಲ್ಲಿ ಒಂದು. ಪಶ್ಚಿಮ ತೀರದ ಮಂಗಳೂರು ಹಾಗೂ ಹಾಸನ ಜಿಲ್ಲೆಯ ಮಲೆನಾಡಿನ ಪ್ರದೇಶಗಳಿಗೆ ಅನುಕೂಲವಾಗುವ ಹಾಸನ–ಮಂಗಳೂರು ರೈಲು ಮಾರ್ಗದ ನಿರ್ಮಾಣದಿಂದಾಗಿ ಮಂಗಳೂರು ಬಂದರಿಗೆ ಕಬ್ಬಿಣದ ಅದಿರನ್ನು ಸಾಗಿಸಲು ಈ ಮೀಟರ್‌ಗೇಜ್ ಮಾರ್ಗ ಬಹು ಸಹಕಾರಿಯಾಗಿದೆ. ಮಂಗಳೂರು ಬಂದರು ಮುಖ್ಯವಾಗಿ ರಾಜ್ಯದ ಒಳಭಾಗದ ಅದಿರನ್ನು ವಿದೇಶಗಳಿಗೆ ಕಳುಹಿಸಲು ನೆರವಾಗುತ್ತದೆ. ಅದಿರಿನ ರಫ್ತಿನಲ್ಲಿ ಇದುವರೆಗೆ ಉಂಟಾಗುತ್ತಿದ್ದ ಅನಾವಶ್ಯಕ ವಿಳಂಬವನ್ನು ನಿವಾರಿಸಲು ನೆರವಾಗುವುದಲ್ಲದೆ ಈ ಬಂದರು ಕರ್ನಾಟಕದ ಸಮೃದ್ಧಿಗೊಂದು ಸರ್ವಋತು ಬಂದರಾಗಿ ನೌಕಾಯಾನ ಚಟುವಟಿಕೆಗಳಲ್ಲಿ ಹೊಸ ಯುಗವನ್ನೇ ಪ್ರಾರಂಭಿಸಲಿದೆ. ಕಬ್ಬಿಣದ ಅದುರನ್ನು ನಿರ್ಯಾತ ಮಾಡುವಲ್ಲಿ ಕಾರವಾರ, ಬೇಲೇಕೇರಿ ಮತ್ತು ಹೊನ್ನಾವರ ಸಹ ನೆರವು ನೀಡುವ ಇನ್ನಿತರ ಪ್ರಮುಖ ಬಂದರುಗಳು. ಸಿದ್ಧ ರಾಸಾಯನಿಕ ಗೊಬ್ಬರಗಳು, ಸಮುದ್ರ ಹುಟ್ಟುವಳಿಗಳು, ಅರಣ್ಯೋತ್ಪನ್ನಗಳು, ಗೇರುಬೀಜ, ಕೊಬ್ಬರಿ, ಕತ್ತದ ಸರಕು, ಅಡಕೆ, ಕಾಫಿ, ಏಲಕ್ಕಿ–ಇವು ಮಂಗಳೂರು ಬಂದರಿನಿಂದ ನಿರ್ಯಾತವಾಗುವ ಪ್ರಮುಖ ಸರಕುಗಳು. ಲವಣ, ಕಲ್ಲಿದ್ದಲು, ಕಲ್ಲಿದ್ದಲಿನ ಕಿಟ್ಟ, ಆಹಾರ ಸಾಮಗ್ರಿ, ಸಂಸ್ಕರಿಸಿದ ಗೇರುಬೀಜ, ಭಾರಿ ಯಂತ್ರೋಪಕರಣಗಳು, ಸೆಣಬಿನ ಸರಕು, ರಾಸಾಯನಿಕ ದ್ರವ್ಯ. ಔಷಧ–ಇವು ಮುಖ್ಯವಾಗಿ ಮಂಗಳೂರು ಬಂದರ ಮುಖೇನ ಆಮದಾಗಿ ಬರುವ ಪ್ರಮುಖ ಸರಕುಗಳು. ಖನಿಜ ಸಂಪತ್ತು ಹಾಗೂ ಅರಣ್ಯಸಂಪನ್ಮೂಲಗಳು ರಾಜ್ಯದಲ್ಲಿ ಹೇರಳವಾಗಿರು ವುದರಿಂದ ಹಡಗುನಿರ್ಮಾಣ ಉದ್ದಿಮೆಯನ್ನು ಹಮ್ಮಿಕೊಳ್ಳಲು ಕರ್ನಾಟಕಕ್ಕೆ ವಿಪುಲಾವಕಾಶವಿದೆ. (ಟಿ.ಎಂ.ವಿ.)

**ವ್ಯಾಸರಾಯ:** 1447 –1539. ಮಾಧ್ವಯತಿಗಳು, ವಿದ್ವಾಂಸರು, ಪ್ರಸಿದ್ಧ ಹರಿದಾಸರು. ಶ್ರೀಪಾದರಾಯರ ಶಿಷ್ಯರು. ಚನ್ನಪಟ್ಟಣದ ಬಳಿಯ ಅಬ್ಬೂರು ಇವರ ಜನ್ಮಸ್ಥಳ. ತಂದೆ ರಾಮಾಚಾರ್ಯ, ವ್ಯಾಸರಾಯರು ತಮ್ಮ ಆರನೆಯ ವಯಸ್ಸಿನಲ್ಲಿಯೇ ಸಂನ್ಯಾಸಾಶ್ರಮ ಪಡೆದು ವ್ಯಾಸತೀರ್ಥರಾದರು.

ಇವರು ಶ್ರೀಪಾದರಾಯರಲ್ಲಿ ಪೌಢವಿದ್ಯಾಭ್ಯಾಸ ಮಾಡಿ ಪಂಡಿತ ವರೇಣ್ಯರಾಗಿ ವಾದಿಗಜಮಸ್ತಕಾಂಕುಶರೆನಿಸಿದರು. ಇವರ ಪಾಂಡಿತ್ಯ ತಪಸ್ಸು ಸಿದ್ಧಿಗಳನ್ನು ಕಂಡು ಬೆರಗಾದ ವಿಜಯನಗರದ ಅರಸರು ಇವರನ್ನು ಗುರುಗಳನ್ನಾಗಿ ಮಾಡಿಕೊಂಡರು. ವಿಜಯನಗರದ ಐವರು ಅರಸರಿಗೆ ಇವರು ರಾಜಗುರುಗಳಾಗಿ, ಕೃಷ್ಣದೇವರಾಯನನ್ನು ಕುಹೂಯೋಗ ಕಾಲದಲ್ಲಿ ದುಷ್ಫಲಗಳಿಂದ ನಿವಾರಿಸಲು ತಾವೇ ಸಿಂಹಾಸನವೇರಿ ವ್ಯಾಸರಾಜರು ಎನಿಸಿದರು.

ವಿಜಯನಗರದಲ್ಲಿ ವೇದಾಂತ ವಿದ್ಯಾಲಯದ ಕುಲಪತಿಯಾಗಿದ್ದು ವಿದ್ಯಾಪ್ರಸಾರವನ್ನು ವಿಸ್ತಾರವಾಗಿ ಕೈಗೊಂಡರು. ಈಗಲೂ ವ್ಯಾಸರಾಜ ಮಠದ ಪೀಠವನ್ನು ವಿದ್ಯಾಸಿಂಹಾಸನವೆನ್ನುವರು.

ವ್ಯಾಸರಾಯರು ತಮ್ಮ ಗುರು ಶ್ರೀಪಾದರಾಯರನ್ನು ಅನುಸರಿಸಿ ಕನ್ನಡ ಹರಿದಾಸ ಪಂಥವನ್ನು ಸಮೃದ್ಧವಾಗಿ ಬೆಳೆಸಿದರು. ಇವರ ಶಿಷ್ಯ ಸಂಪತ್ತು ಅಪಾರವಾಗಿತ್ತು. ವಿಜಯೇಂದ್ರ, ವಾದಿರಾಜ, ಗೋವಿಂದ ಒಡೆಯ, ಪುರಂದರದಾಸ, ಕನಕದಾಸ, ವೈಕುಂಠದಾಸ ಇವರ ಶಿಷ್ಯಶ್ರೇಷ್ಠರು.

ಸಾಳ್ವ ನರಸಿಂಹನ ಕ್ರೋಧದ ಪರಿಣಾಮವಾಗಿ ತಿರುಪತಿಯ ಅರ್ಚಕ ವೃಂದ ಕೊನೆಗೊಂಡಾಗ ತಿರುಮಲದೇವರ ಪೂಜೆ ನಿಲ್ಲದೆ ನಡೆದು ಕೊಂಡು ಬರುವಂತೆ ಮಾಡಿದವರು ವ್ಯಾಸರಾಜರು. ಹನ್ನೆರಡು ವರ್ಷಗಳ ಕಾಲ (1486–98) ಆ ದಿವ್ಯಮೂರ್ತಿಯನ್ನು ತಾವೇ ಪುನಗಾಭಿಷೇಕಾ ದಿಗಳಿಂದ ಪೂಜಿಸಿ, ಅನಂತರ ಅಳಿದುಳಿದ ಅರ್ಚಕ ವಂಶದ ಕುಡಿಯನ್ನು ಕರೆಸಿ ಪೂಜಾಧಿಕಾರವನ್ನು ಅವರಿಗೆ ಬಿಟ್ಟುಕೊಟ್ಟರು. ಶ್ರೀರಂಗಕ್ಷೇತ್ರದಲ್ಲಿ ವ್ಯವಸ್ಥೆಯನ್ನುಂಟುಮಾಡಿದವರೂ ಇವರೇ. 1500ರಲ್ಲಿ ಒಂದು ವರ್ಷದ ಅವಧಿಯಲ್ಲಿ ಏಳುನೂರು ಮೂವತ್ತೆರಡು ಮಾರುತಿಯ ಮೂರ್ತಿಗಳನ್ನು ವ್ಯಾಸರಾಯರು ದೇಶದ ನಾನಾ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿದರು. ಇವರು ಕಟ್ಟಿಸಿದ ಮದನಪಲ್ಲಿ ಬಳಿಯ ಕಂದಕೂರಿನ ವ್ಯಾಸನಕೆರೆ (ವ್ಯಾಸಸಮುದ್ರ) ಈಗಲೂ ಪ್ರಸಿದ್ಧವಾಗಿದೆ. ಇದು ಸೋಸಲೆ ವ್ಯಾಸರಾಜ ಮಠದ ಪ್ರಮುಖ ಆಸ್ತಿಯಾಗಿತ್ತು. ಆದಿಲ್ ಷಾ, ಬಾಬರ್ ಚಕ್ರವರ್ತಿಗಳಿಂದಲೂ ಸನ್ಮಾನಿತರಾದ ವ್ಯಾಸರಾಯರು ಉದಾತ್ತಚರಿತರೂ ಆದರ್ಶ ಗುರುವರೇಣ್ಯರೂ ಆಗಿದ್ದರು.

ಇವರು ಸಂಸ್ಕೃತದಲ್ಲಿ ರಚಿಸಿರುವ ತರ್ಕತಾಂಡವ, ನ್ಯಾಯಾಮೃತ ಮತ್ತು ತಾತ್ಪರ್ಯಚಂದ್ರಿಕಾ ಎಂಬ ಪ್ರೌಢ ತಾತ್ವಿಕ ಗ್ರಂಥಗಳು ವ್ಯಾಸತ್ರಯ ವೆಂದು ಈಗಲೂ ಪ್ರಸಿದ್ಧವಾಗಿವೆ. ಇವಲ್ಲದೆ ಕನ್ನಡದಲ್ಲೂ ಅನೇಕ ಬಿಡಿಕೃತಿಗಳನ್ನು ಇವರು ರಚಿಸಿದ್ದಾರೆ. ಶ್ರೀಕೃಷ್ಣ ಎಂಬುದು ಇವರ ಕೀರ್ತನೆಗಳ ಅಂಕಿತ. ಸಂಗವಾಗಲಿ ಸಾಧುಸಂಗವಾಗಲಿ, ಎನ ಬಿಂಬ ಮೂರುತಿಯ, ಅಂತರಂಗದಲ್ಲಿ ಹರಿಯ ಕಾಣದವ, ಬಿಗಿಯದಿರು

ಬಿಗಿಯದಿರು ಮಾನವ, ಏನ ಬೇಡಲಿ ನಿನ್ನ ದೇವಾದಿದೇವ ಮುಂತಾದ ಇವರ ಕೃತಿಗಳು ಸರಳವಾಗಿ ಅರ್ಥಗರ್ಭಿತವಾಗಿ ತತ್ವಬೋಧಕವಾಗಿವೆ. ಹದಿನೆಂಟು ಅಧ್ಯಾಯಗಳ ಭಗವದ್ಗೀತೆಯನ್ನು ಇವರು ವೃತ್ತನಾಮ ಧಾಟಿಯಲ್ಲಿ ನಿತ್ಯಪಠಣ ಗಾನಗಳಿಗೆ ಅನುಕೂಲವಾಗುವಂತೆ ಹದಿನೆಂಟು ಶ್ಲೋಕಗಳಲ್ಲಿ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. 'ಕೇಳಯ್ಯ ಏನ ಮಾತು ಪ್ರಾರ್ಥನೆ ಗೀತದರ್ಥವ' ಎಂಬ ಈ ಕೃತಿಯಲ್ಲಿ ಗೀತೆಯಲ್ಲಿ ಅಡಗಿರುವ ಅನೇಕ ಜಟಿಲ ತತ್ವಗಳು ತಿಳಿಯಾಗಿ ಹೃಯಂಗಮವಾಗಿ ನಿರೂಪಿತವಾಗಿವೆ. ಇವರ ಕೃತಿಗಳಲ್ಲಿನ ಪದಸೌಷ್ಠವ, ಭಾವಗಾಂಭೀರ್ಯ, ನಾದಮಾಧುರ್ಯ, ಭಕ್ತಿಭಾವಗಳು ಪ್ರಶಂಸಾರ್ಹವಾಗಿವೆ. ಜಾತಿಭೇದವೆಣಿಸದೆ ಕನಕದಾಸರನ್ನು ಗೌರವಿಸಿ ಅವರಿಗೆ ಪಂಡಿತವರೇಣ್ಯರಿಗೆ ಸಲ್ಲುವ ಸ್ಥಾನವನ್ನಿತ್ತು ಪುರಸ್ಕರಿಸಿದ ಉದಾತ್ತ ಔದಾರ್ಯ ಗುಣರತ್ನನಿಧಿ ಎಂದು ಪುರಂದರದಾಸರು ವ್ಯಾಸರಾಯರನ್ನು ಕೊಂಡಾಡಿದ್ದಾರೆ. ವ್ಯಾಸರಾಯರು ಪುರಂದರದಾಸರ ಕೃತಿಗಳನ್ನು ಪುರಂದರೋಪನಿಷತ್ ಎಂದು ಹೊಗಳಿದ್ದಾರೆ.

ಇವರು ಸ್ಥಾಪಿಸಿದರೆನ್ನಲಾದ ವ್ಯಾಸರಾಯ ಮಠ ತಿರುಮಕೂಡಲು ನರಸೀಪುರ ತಾಲ್ಲೂಕಿನ ಸೋಸಲೆಯಲ್ಲಿದೆ. ವ್ಯಾಸರಾಯರ ಸಮಕಾಲೀನ ನಾದ ಸೋಮನಾಥ (ಸು. 1535) ಇವರನ್ನು ಕುರಿತು ಸಂಸ್ಕೃತದಲ್ಲಿ ವ್ಯಾಸಯೋಗಿ ಚರಿತೆ ಎಂಬ ಗ್ರಂಥವನ್ನು ಬರೆದಿದ್ದಾನೆ. (ಕೆ.ಎಂ.ಕೆ.)

**ವ್ಯಾಸರಾಯ ಬಲ್ಲಾಳ:** 1923– . ಪ್ರಸಿದ್ಧ ಕಾದಂಬರಿಕಾರರು ಹಾಗೂ ಕತೆಗಾರರು. ಉಡುಪಿಯ ಅಂಬಲಪಾಡಿಯಲ್ಲಿ ಸಾಂಪ್ರದಾಯಿಕ ಕುಟುಂಬದಲ್ಲಿ 1923 ಡಿಸೆಂಬರ್ 1ರಂದು ಜನಿಸಿದರು. ತಂದೆ ನಿಡಂಬೂರು ರಾಮದಾಸ ಬಲ್ಲಾಳ, ಕನ್ನಡ–ಸಂಸ್ಕೃತ ಎರಡು ಭಾಷೆಗಳಲ್ಲೂ ವಿದ್ವಾಂಸರು. ತಾಯಿ ಕಲ್ಯಾಣಿ ಬಲ್ಲಾಳ, ಜನಪದ ಸಂಗೀತದಲ್ಲಿ ಒಲವಿದ್ದವರು. ಬಲ್ಲಾಳರು ಶಿಕ್ಷಣ ಪಡೆದದ್ದು ಮೆಟ್ರಿಕ್‌ವರೆಗೆ ಮಾತ್ರ. ಮುಂದೆ ಓದಲು ಉಡುಪಿಯಲ್ಲಿ ಕಾಲೇಜು ಇರಲಿಲ್ಲ. ಆರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನಲ್ಲಿ ಎರಡು ವರ್ಷ ಸಂಬಳವಿಲ್ಲದೆ ಸೇವೆ ಸಲ್ಲಿಸಿದರು. ಅದೇ ಕಾಲದಲ್ಲಿ ಪುರಸಭಾ ಗ್ರಂಥಾಲಯದಲ್ಲಿದ್ದ ಪುಸ್ತಕಗಳನ್ನೆಲ್ಲ ಓದಿ ಮುಗಿಸಿದರು. ಮುಂದೇ ಅದೇ ಜಿಲ್ಲಾ ಬೋರ್ಡಿನಲ್ಲಿ ಅಟೆಂಡರ್ ಆಗಿ ನೇಮಕಗೊಂಡರು. ಒಂದು ವರ್ಷದ ಬಳಿಕ ಗುಮಾಸ್ತರಾಗಿ ಬಡ್ತಿ ದೊರೆತು ಉಡುಪಿ, ಮಂಗಳೂರು, ಬ್ರಹ್ಮಾವರ, ಕುಂದಾಪುರ ಜಿಲ್ಲಾ ಬೋರ್ಡಿನಲ್ಲಿ ದುಡಿದರು (1942–44). ಮನೆಯ ಸಾಂಪ್ರದಾಯಿಕ ವಾತಾವರಣ ಹಿಡಿಸದಿದ್ದರಿಂದ ಪತ್ರಿಕೋದ್ಯಮದಲ್ಲಿ ಪದವಿ ಸಂಪಾದಿಸ ಬೇಕೆಂದು ಮುಂಬಯಿಗೆ ಹೋಗಿ ಪಿ.ಎಲ್. ಕೆಮಿಕಲ್ ಇಂಡಸ್ಟ್ರೀಸ್‌ನಲ್ಲಿ ಒಂದು ತಿಂಗಳು ಕೆಲಸ ಮಾಡಿ ವಿದೇಶೀ ತೈಲ ಸಂಸ್ಥೆ ಕಾಲ್ಟೆಕ್ಸ್‌ನಲ್ಲಿ ಶೀಘ್ರಲಿಪಿಕಾರ ಗುಮಾಸ್ತರಾಗಿ ಸೇವೆಗೆ ಸೇರಿದರು (1945). ಇವರು ಅನಂತರ ಅಸಿಸ್ಟಂಟ್ ರಿಪ್ರೆಸೆಂಟೇಟಿವ್ ಇನ್ ಇಂಡಿಯಾ ಎಂಬ ದೊಡ್ಡ ಹುದ್ದೆಯನ್ನು ಸೇರಿ ಅದರಲ್ಲೇ ನಿವೃತ್ತರಾದರು (1984). ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಬರೆದ ಹೀಗೂ ಉಂಟೇ? ಎಂಬ ಕಥಾ ಬರೆವಣಿಗೆಯ ಮೂಲಕ ಸಾಹಿತ್ಯರಚನೆ ಆರಂಭಿಸಿದರು. ಇದು ಮೊದಲು ವಿಕಟ ವಿನೋದಿನಿಯಲ್ಲಿ ಪ್ರಕಟವಾಯಿತು. ಅನಂತರ ಪ್ರಜಾಮತದಲ್ಲಿ ಎರಡು ಮೂರು ಕಥೆಗಳು ಪ್ರಕಟವಾದುವು. ಮುಂದೆ ಇವರ ಅನೇಕ ಕಥೆಗಳು ಛಾಯಾ, ಉಷಾ, ಕತೆಗಾರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದವು. ಇವರ ಮೊದಲ ಕಥಾಸಂಗ್ರಹ 'ಬದುಕಿನ ಆದರ್ಶ' 1950ರಲ್ಲಿ ಪ್ರಕಟವಾಯಿತು. ಇವರ ಬಹಳಷ್ಟು ಲೇಖನಗಳು ನುಡಿ ಪತ್ರಿಕೆಯಲ್ಲಿ ಪ್ರಕಟಗೊಂಡವು. ಮುಂದೆ ಅದೇ ಪತ್ರಿಕೆಯ ಸಂಪಾದಕರಾಗಿ 1950ರವರೆಗೆ ಮೂರು ವರ್ಷ ದುಡಿದರು. ಈ ಪತ್ರಿಕೆಯಲ್ಲಿ ನಿರಂತರ ಪ್ರಕಟವಾಗುತ್ತಿದ್ದ ಕಾರ್ಮಿಕ ಶ್ರಮಿಕ ವರ್ಗದವರ ಸಮಸ್ಯೆಗಳನ್ನು ಇವರು ಬರೆಯುತ್ತಿದ್ದರು. ಕಾರ್ಮಿಕ ರಂಗದಲ್ಲಿ ಮೊದಲಿನಿಂದಲೂ ಇವರು ಆಸಕ್ತರು. ನುಡಿಯ ಜನಪ್ರಿಯತೆಗಾಗಿ ಧಾರಾವಾಹಿ ಕಾದಂಬರಿ 'ಅನುರಕ್ತೆ' ಬರೆದರು. ಅದು ಅನಂತರ ಪುಸ್ತಕ ರೂಪದಲ್ಲಿ ಪ್ರಕಟವಾಯಿತು (1953). ಇದೇ ಇವರ ಮೊದಲ ಕಾದಂಬರಿ. ಅನಂತರ



ಅನೇಕ ಕಾದಂಬರಿಗಳನ್ನು ರಚಿಸಿದರು. ಹೇಮಂತಗಾನ (1954), ವಾತ್ಸಲ್ಯಪಥ (1957), ಉತ್ತರಾಯಣ (1969), ಬಂಡಾಯ (1985), ಹೆಜ್ಜೆ (2000), ಆಕಾಶಕ್ಕೊಂದು ಕಂದೀಲು (1995). ಬಂಡಾಯ ಕಾದಂಬರಿಯಲ್ಲಿ ಕಾರ್ಮಿಕ ಜೀವನದ ಏರು ಪೇರುಗಳಿವೆ. ಇದು ಇವರು ಕಾಲ್ಟೆಕ್ಸ್ ಕಂಪನಿಯಲ್ಲಿದ್ದಾಗ ಕಂಡುಂಡ ಅನುಭವಗಳ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿ.

ಬಲ್ಲಾಳರು ಬರೆದ ರಾಜಕೀಯ ಲೇಖನಗಳು ಇವರ ಚಿಂತನಶೀಲ ಪ್ರತಿಭೆಗೆ ಸಾಕ್ಷಿ. ಕಟ್ಟುವೆವು ನಾವು (1996), ಸ್ವಾತಂತ್ರ್ಯಕ್ಕೆ ಐವತ್ತು ವರ್ಷ (1998) ರಾಜಕೀಯ ದೃಷ್ಟಿಯನ್ನು ಬಿತ್ತರಿಸುತ್ತವೆ.

ಕಾಡುಮಲ್ಲಿಗೆ (1957), ಸಂಪಿಗೆಯ ಹೂವು (1958), ತ್ರಿಕಾಲ (1992), ಬದುಕಿನ ಆದರ್ಶ ಮೊದಲಾದ ಕಥಾಸಂಗ್ರಹಗಳಲ್ಲಿ ಬಲ್ಲಾಳರು ಮುಂಬಯಿ ಬದುಕಿನ ವಾಸ್ತವತೆ, ಸಂಘರ್ಷವನ್ನು ಚಿತ್ರಿಸಿದ್ದಾರೆ. ಮಂಜರಿ (1975) ಇವರ ಪ್ರಾತಿನಿಧಿಕ ಕಥೆಗಳ ಸಂಗ್ರಹ. 'ಖುರ್ಷೀದ ನಾರೀಮನ್' ಮಕ್ಕಳಿಗಾಗಿ ಬರೆದ ಜೀವನಚಿತ್ರ. 'ಸಂಗ್ರಹ ಭಾರತಾಯಣ' (1984) ರಾಜಕೀಯ ವಿಡಂಬನೆಯಿಂದ ಕೂಡಿದೆ. 'ನಾನೊಬ್ಬ ಭಾರತೀಯ ಪ್ರವಾಸಿ' ಇದು ಪ್ರವಾಸ ಕಥನ. ಇದರಲ್ಲಿ ವಿದೇಶದಲ್ಲಿರುವ ಭಾರತೀಯರ ಅಂತರಂಗದ ತುಡಿತ ಸತ್ವದ ಹುಡುಕಾಟದ ಬಗ್ಗೆ ವಿವರವಾಗಿ ವಿಶ್ಲೇಷಿಸಿದ್ದಾರೆ. ಬಲ್ಲಾಳರು ಗಟ್ಟಿಯಾದ ಕಥೆಯ ಹಂದರದ ಮೇಲೆ ವೈವಿಧ್ಯಮಯ ಪಾತ್ರಗಳ ಬಳ್ಳಿಯನ್ನು ಹಬ್ಬಿಸಬಲ್ಲರು ಎಂಬುದು ಅವರ ಎಲ್ಲ ಕತೆಗಳಿಂದ ತಿಳಿದುಬರುವ ವಿಚಾರ. ಮಹಾನಗರದ ಯಾಂತ್ರಿಕ ಜೀವನದ ಒಳ ಹೊರಗುಗಳನ್ನು ಚಿತ್ರಿಸುತ್ತದೆ. ಪ್ರಜ್ಞಾಪ್ರವಾಹ ತಂತ್ರದ ಯಶಸ್ವಿ ಬಳಕೆ ಇವರ ವೈಶಿಷ್ಟ್ಯ.

ಇಬ್ಸನ್‌ನ ಡಾಲ್ಸ್ ಹೌಸ್ ನಾಟಕದ ರೂಪಾಂತರ 'ಗಿಣಿಯು ಪಂಜರದೊಳಿಲ್ಲ' (1995). ಬರ್ನಾರ್ಡ್ ಷಾನ ಪಿಗ್ಮೆಲಿಯನ್ ನಾಟಕದ ರೂಪಾಂತರವನ್ನು ಮುಳ್ಳಿಲ್ಲದೆ ಮಂದಾರ (1995) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಕಲಾವಿದ ಹೆಬ್ಬಾರರ ರೇಖಾಲಾವಣ್ಯ (1999)ದಲ್ಲಿ ಸಾಹಿತಿಯ ದೃಷ್ಟಿಯಲ್ಲಿ ಕಲಾವಿದ ಕಾಣುವ ಬಗೆ ಅವರ ಚಿತ್ರಗಳ ವೈಶಿಷ್ಟ್ಯ, ಅವುಗಳ ಒಳನೋಟ ಇತ್ಯಾದಿಗಳನ್ನು ಹೃದ್ಯವಾಗಿ ಚಿತ್ರಿಸಿದ್ದಾರೆ.

ಇವರ ಕೆಲವು ಸಣ್ಣಕಥೆಗಳು ಹಿಂದಿ, ಮರಾಠಿ, ಗುಜರಾತಿ, ಮಲೆಯಾಳಂ, ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿವೆ. ಅನುರಕ್ತೆ, ಹೇಮಂತಗಾನ, ವಾತ್ಸಲ್ಯ ಪಥ, ಉತ್ತರಾಯಣ, ಅನೇಕ ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ತರಗತಿಗಳ

ಪಠ್ಯಪುಸ್ತಕಗಳಾಗಿವೆ. ವಾತ್ಸಲ್ಯ ಪಥ, ಅನುರಕ್ತೆ ಎಂಬ ಕಾದಂಬರಿಗಳು ಕನ್ನಡ ಚಲನಚಿತ್ರಗಳಾಗಿವೆ. ಬಂಡಾಯ ಹಾಗೂ ವಾತ್ಸಲಪಥ ಎಂಬ ಕಾದಂಬರಿಗಳು ಮರಾಠಿಗೂ ಬಂಡಾಯ ಪಂಜಾಬಿಗೂ ಅನುವಾದಗೊಂಡಿವೆ.

ಇವರ ಸಾಹಿತ್ಯ ಸೇವೆಗೆ ಸಂದಿರುವ ಪ್ರಶಸ್ತಿ ಗೌರವಗಳು ಅಪಾರ. ಅನುರಕ್ತೆ ಕಾದಂಬರಿಗೆ ರಾಜ್ಯ ಸರ್ಕಾರದ ಬಹುಮಾನ (1957), ಕಾಡುಮಲ್ಲಿಗೆ ಕಥಾಸಂಗ್ರಹಕ್ಕೆ ರಾಜ್ಯಸರ್ಕಾರದ ಬಹುಮಾನ (1958), ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ (1987), ಬಂಡಾಯ ಕಾದಂಬರಿಗೆ ಕರ್ನಾಟಕ ರಾಜ್ಯ ಸರ್ಕಾರದ ಉತ್ತಮ ಕಾದಂಬರಿ ಪ್ರಶಸ್ತಿ (1987) ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1986), ನಾನೊಬ್ಬ ಭಾರತೀಯ ಪ್ರವಾಸಿ ಕೃತಿಗೆ ಅತ್ಯುತ್ತಮ ಪ್ರವಾಸ ಗ್ರಂಥ ಪ್ರಶಸ್ತಿ (1988), ಬಿ.ಎಂ.ಶ್ರೀ. ಸ್ಮಾರಕ ಪ್ರಶಸ್ತಿ (1995), ಉಡುಪಿಯ ಪರ್ಯಾಯ ಮಹೋತ್ಸವದ ಗದ್ಯ ಭಾಸ್ಕರ ಪ್ರಶಸ್ತಿ, ಅ.ನ.ಕೃ. ಪ್ರತಿಷ್ಠಾನ ಪ್ರಶಸ್ತಿ (2000), ಪುತ್ತೂರಿನ ಶಿವರಾಮ ಕಾರಂತ ಅಧ್ಯಯನ ಕೇಂದ್ರದ ನಿರಂಜನ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವ ಸನ್ಮಾನ (1991), ಕರ್ನಾಟಕ ಸಂಘ, ಶಿವಮೊಗ್ಗ ಇದರಿಂದ ಸನ್ಮಾನ (1996) ಇವರಿಗೆ ಲಭಿಸಿವೆ. 1990ರಲ್ಲಿ ಇವರಿಗೆ ಮಹಾರಾಷ್ಟ್ರ ಸರಕಾರದ ಒಂದು ಲಕ್ಷ ರೂಪಾಯಿಗಳ ಗೌರವ ಪುರಸ್ಕಾರ ಸಂದಿದೆ.

ವ್ಯಾಸರಾಯ ಬಲ್ಲಾಳರ ಬದುಕು ಮತ್ತು ಸಾಹಿತ್ಯ ಇದು ಬಲ್ಲಾಳರ ಬದುಕು, ಸಾಹಿತ್ಯಗಳನ್ನು ಕುರಿತು ಡಿ. ವಿಜಯಲಕ್ಷ್ಮಿಯವರು ರಚಿಸಿರುವ ಪಿಎಚ್.ಡಿ. ಮಹಾಪ್ರಬಂಧ. ಇವರಿಗೆ ಬೆಂಗಳೂರಿನ ಅತಿಥೇಯ ಬಳಗ ಅಕ್ಕರೆ ಎಂಬ ಗೌರವ ಗ್ರಂಥವನ್ನು ಅರ್ಪಿಸಿದೆ (1999). **(ಎಸ್.ಎಂ.ಕೆ.)**

# ಶ

**ಶಂಕರ್, ಎಂ.ಪಿ.:** 1935– . ಕನ್ನಡ ಚಿತ್ರರಂಗದ ಹೆಸರಾಂತ ಖಳನಾಯಕ ಪಾತ್ರಧಾರಿ. ಪೋಷಕ ನಟ, ನಿರ್ಮಾಪಕ ಹಾಗೂ ನಿರ್ದೇಶಕರು. ಇವರು ಮೈಸೂರಿನಲ್ಲಿ 1935 ಆಗಸ್ಟ್ 20ರಂದು ಜನಿಸಿದರು. ಇವರ ಬದುಕಿಗೆ ಬಣ್ಣದ ಬದುಕಿನ ಹೊರಚಾಚು ಸಿಕ್ಕಿದ್ದೇ ಈ ಊರಲ್ಲಿ. ತಂದೆ ಪುಟ್ಟಲಿಂಗಪ್ಪ, ತಾಯಿ ಗಂಗಮ್ಮ. ದಳವಾಯಿ ಶಾಲೆ, ಡಿ.ಬನುಮಯ್ಯ ಶಾಲೆಯಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ ಪೂರೈಸಿದ ಶಂಕರ್ ಮೊದಲು ದಿನಗೂಲಿ ಮಾಡುತ್ತಿದ್ದರು. 1955ರ ಹೊತ್ತಿಗೆ ರೈಲ್ವೆ ಕಾರ್ಯಾಗಾರದಲ್ಲಿ ಕೆಲಸ ಸಿಕ್ಕಿತು. ಗರಡಿ ಸಾಮು ಮಾಡಿ ಪೈಲ್ವಾನ್ ದೇಹ–ಗಾಂಭೀರ್ಯ ಹೊಂದಿದ್ದ ಇವರು ಉದ್ಯೋಗದ ನಡುವೆ ಅಭಿನಯದ ಮೋಹಕ್ಕೆ ಪಕ್ಕಾದರು. ಹವ್ಯಾಸಿ ರಂಗ ಭೂಮಿ ಹೆಚ್ಚು ಕ್ರಿಯಾಶೀಲ ವಾಗುತ್ತಿದ್ದ ಕಾಲದಲ್ಲಿ ಇವರು ಚಿ.ಶಂಕರ್ ನೇತೃತ್ವದ ಶ್ರೀ ಕಲಾವಿದರು ಹವ್ಯಾಸಿ ರಂಗ ಭೂಮಿ ತಂಡದ ಸಂಪರ್ಕಕ್ಕೆ ಬಂದರು. ಅಭಿನಯದ ಜಗತ್ತಿಗೆ ಜಿಗಿದರು. ಇವರು ಮೊದಲು ಹಾಕಿದ್ದು ಕಾಡುಕುರುಬನ ವೇಷ ಎಂಬುದು ಗಮನಾರ್ಹ. ನಟನೆ ಮುಂದುವರಿದಂತೆ ಸ್ವಂತ ಹವ್ಯಾಸಿ ತಂಡ ಕಟ್ಟುವ ಹಂಬಲವೂ ಹುಟ್ಟಿ 1958ರ ಹೊತ್ತಿಗೆ 'ಭರಣಿ ಹವ್ಯಾಸಿ ಕಲಾವಿದರು' ಹುಟ್ಟಿಕೊಂಡಿತು. ರಾಜ್ಯಾದ್ಯಂತ ನಾಟಕ ಪ್ರದರ್ಶನಗಳು ನಡೆದವು. ಇತರೆ ಹವ್ಯಾಸಿ ತಂಡಗಳಿಗೆ ಪ್ರೇಕ್ಷಕರ ಕೊರತೆ ಬಿದ್ದಾಗ ಇವರನ್ನು ಕರೆಸಿ ಕಲೆಕ್ಷನ್ ಹೆಚ್ಚಿಸಿಕೊಳ್ಳುವ ಪ್ರಯತ್ನಗಳೂ ನಡೆಯುತ್ತಿದ್ದವು ಎಂಬುದು ಶಂಕರ್ ಪ್ರತಿಭೆಗೆ ಹಿಡಿದ ಕನ್ನಡಿ.

ಇವರು ಪುರಾಣ ಪಾತ್ರಗಳಾದ ಭೀಮ, ದುರ್ಯೋಧನ, ಐತಿಹಾಸಿಕ ಪಾತ್ರಗಳಾದ ಎಚ್ಚಮನಾಯಕ, ಯಲಹಂಕ ಭೂಪಾಲ, ಶಾಂತಿವೀರ ಕೆಂಪೇಗೌಡ ಮೊದಲಾದ ಪಾತ್ರಗಳಲ್ಲಿ ರಾರಾಜಿಸುತ್ತಿದ್ದ ಹೊತ್ತಿನಲ್ಲೆ ಹುಣಸೂರು ಕೃಷ್ಣಮೂರ್ತಿಯವರ ರತ್ನಮಂಜರಿ(1962) ಚಿತ್ರದಲ್ಲಿ ಖಳನಾಯಕನ ಪಾತ್ರಕ್ಕೆ ಆಯ್ಕೆಯಾದರು. ಇದು ಶಂಕರ್ ಅಭಿನಯದ ಮೊದಲ ಸಿನಿಮಾ; ನಟನವೃತ್ತಿ ಬದುಕಿಗೊಂದು ಅಪೂರ್ವ ತಿರುವು ನೀಡಿದ ಚಿತ್ರ. ಅನಂತರ 1965ರಲ್ಲಿ ಬಂದ 'ಸತ್ಯಹರಿಶ್ಚಂದ್ರ'ದ ವೀರಬಾಹುವಿನ ಪಾತ್ರ, ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ ಮತದಲ್ಲಿ ಮೇಲ್ಯಾವುದೋ ಎಂಬ ಹಾಡಿಗೆ ಹಾಕಿದ ಹೆಜ್ಜೆ, ಠೇಂಕಾರದ ಅಭಿನಯ ಕನ್ನಡ ಚಿತ್ರರಂಗದಲ್ಲಿ ಇವರ ಸ್ಥಾನವನ್ನು ಭದ್ರಗೊಳಿಸಿತು.

ಕಾಡಿನ ಮೋಹಕ್ಕೆ ಮನಸೋತಿದ್ದ ಶಂಕರ್ ಅವರು ಭರಣಿ ಚಿತ್ರಸಂಸ್ಥೆಯನ್ನು ಹುಟ್ಟುಹಾಕಿ, ಕಾಡನ್ನು ಕೇಂದ್ರದಲ್ಲಿಟ್ಟುಕೊಂಡು ಹಲವು ಚಿತ್ರಗಳನ್ನು ನಿರ್ಮಿಸಿದರು. 'ಕಾಡಿನ ರಹಸ್ಯ' ಮೊದಲ ಚಿತ್ರ. ಗಂಧದ ಗುಡಿ(1973) ದಾಖಲೆ ಸೃಷ್ಟಿಸಿದ ಚಿತ್ರ. ಈ ನಡುವೆ ಕಳ್ಳರ ಕಳ್ಳ ಎಂಬ ಚಿತ್ರವನ್ನು ನಿರ್ಮಿಸಿ ನಿರ್ದೇಶಿಸಿದ್ದು ವಿಶೇಷ. ಗಿಡ್ಡುದಾದ ಇವರ ನಿರ್ಮಾಣದ ಕೊನೆಯ ಚಿತ್ರ.

ಭೂತಯ್ಯನ ಮಗ ಅಯ್ಯು, ಸತ್ಯಹರಿಶ್ಚಂದ್ರ, ಬಂಗಾರದ ಮನುಷ್ಯ (1972), ದೂರದ ಬೆಟ್ಟ, ನಾಗರ ಹಾವು (1972) ಮೊದಲಾದ ಚಿತ್ರಗಳಲ್ಲಿ ಇವರ ಅತ್ಯುತ್ತಮ ಅಭಿನಯ ಸದಾ ನೆನಪಿನಲ್ಲಿ ಉಳಿಯುವಂಥದ್ದು. ನಟಶಾರ್ದೂಲ, ಕಲಾ ಶಾರ್ದೂಲ, ಮೈಸೂರು ಹುಲಿ, ಕಲಾ ಸೇವಾ ಧುರೀಣ, ಹಂಸರತ್ನ ಮೊದಲಾದುವು ಇವರಿಗೆ ಸಂದ ಅಭಿಮಾನದ ಬಿರುದುಗಳು. ಇವರಿಗೆ 2002ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2006ರಲ್ಲಿ ಡಾ.ರಾಜ್‌ಕುಮಾರ್ ಪ್ರಶಸ್ತಿ ದೊರೆತಿದೆ. 72ರ ಇಳಿವಯಸ್ಸಿನಲ್ಲಿಯೂ ಕನ್ನಡ ಚಿತ್ರರಂಗದಲ್ಲಿ ಇನ್ನೂ ದುಡಿಯಬೇಕೆಂಬುದು ಇವರ ಅಪೇಕ್ಷೆಯಾಗಿದೆ. **(ಕೆ.ಎನ್.)**

**ಶಂಕರ್, ಬಿ.ಎಲ್.:** 1952– . ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಅಧ್ಯಕ್ಷರೂ ಲೋಕಸಭಾ ಸದಸ್ಯರೂ ಕರ್ನಾಟಕ ಸರ್ಕಾರದಲ್ಲಿ ಸಚಿವರೂ ಆಗಿದ್ದವರು.

ಇವರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬೆಳಗೂಡು ಗ್ರಾಮದಲ್ಲಿ 1952 ಮೇ 29ರಂದು ಜನಿಸಿದರು. ಇವರದು ಪ್ರಗತಿಪರ ಕಾಫಿ ಬೆಳೆಗಾರರ ಮನೆತನ. ಇವರ ತಂದೆ ಲೋಕಪ್ಪಗೌಡ ಸ್ವಾತಂತ್ರ್ಯ

ಹೋರಾಟಗಾರರು. ಶಂಕರ್ ಅವರ ವಿದ್ಯಾಭ್ಯಾಸ ಹೆಚ್ಚಾಗಿ ಬೆಂಗಳೂರಿನಲ್ಲಿ ನಡೆಯಿತು. ಇವರು ವಿಜ್ಞಾನ ಪದವೀಧರರು. ಮುಂದೆ ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವಿಯನ್ನೂ ಕಾನೂನು ಪದವಿಯನ್ನೂ ಪಡೆದ ಅನಂತರ ಬೆಂಗಳೂರಿನಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ ಯಶಸ್ವಿಯಾದರು.

ಇಂದಿರಾಗಾಂಧಿಯವರ ಸರ್ಕಾರ ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದಾಗ ಇವರು ಅದರ ವಿರುದ್ಧ ಚಳವಳಿ ಸಂಘಟಿಸಿ ಸಾರ್ವಜನಿಕ ಕ್ಷೇತ್ರಕ್ಕೆ ಪರಿಚಿತರಾದರು. ಎಚ್.ಡಿ. ದೇವೇಗೌಡರ ಸಂಘಟನೆಗೆ ಹೆಚ್ಚು ನಿಕಟವಾಗಿದ್ದ ಇವರು ಪೂರ್ತಿಯಾಗಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದರು.



ಚಂದ್ರಶೇಖರ್ ಅವರು ಕೇಂದ್ರದ ಪ್ರಧಾನಮಂತ್ರಿಯಾಗಿದ್ದಾಗ ಕೈಗೊಂಡ ಭಾರತಯಾತ್ರೆಯ ಅಂಗವಾದ ಪಾದಯಾತ್ರೆಯಲ್ಲಿ ಶಂಕರ್ ಅವರೂ ಪಾಲ್ಗೊಂಡರು. ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಜನತಾ ಪಕ್ಷದ ಯುವ ವಿಭಾಗದ ಸಂಚಾಲಕರಾದರು.

1983ರಲ್ಲಿ ಕರ್ನಾಟಕದಲ್ಲಿ ಜನತಾರಂಗ ಅಧಿಕಾರಕ್ಕೆ ಬಂದಾಗ ಶಂಕರ್ ಆ ಪಕ್ಷದಲ್ಲಿ ಹೆಚ್ಚು ಕ್ರಿಯಾಶೀಲರಾದರು. 1985ರಲ್ಲಿ ಅದೇ ಪಕ್ಷದಿಂದ ವಿಧಾನಪರಿಷತ್ ಸದಸ್ಯರಾದರು. ಅನಂತರ ರಾಜ್ಯದಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರಾಗಿದ್ದರು (1987–88). 1995–96ರಲ್ಲಿ ಮುಖ್ಯಮಂತ್ರಿ ದೇವೇಗೌಡರ ರಾಜಕೀಯ ಕಾರ್ಯದರ್ಶಿಯಾಗಿದ್ದರು. ಆಗ ನಡೆದ ಲೋಕಸಭಾ ಚುನಾವಣೆಗೆ ಚಿಕ್ಕಮಗಳೂರು ಕ್ಷೇತ್ರದಿಂದ ಸ್ಪರ್ಧಿಸಿ ಜಯಶೀಲರಾದರು. ಆದರೆ ಲೋಕಸಭೆ ಬೇಗ ವಿಸರ್ಜನೆಗೊಂಡಿದ್ದರಿಂದ ಇವರ ಸದಸ್ಯತ್ವದ ಅವಧಿ ಮೊಟಕಾಯಿತು.

ಇವರು 1997–99ರ ಪ್ರಾರಂಭದವರೆಗೆ ಕರ್ನಾಟಕ ಪ್ರದೇಶ ಜನತಾದಳದ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು. 1998ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದರು. ಜೆ.ಎಚ್. ಪಟೇಲರ ಸಂಪುಟದಲ್ಲಿ ಸಚಿವರಾದರು. 1999ರಲ್ಲಿ ಕಾರ್ಮಿಕ ಸಚಿವರಾದರು. ಸ್ವಲ್ಪಕಾಲದಲ್ಲೇ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರಾದರು. ಅದೇ ವರ್ಷ ಆ ಸ್ಥಾನಕ್ಕೆ ರಾಜೀನಾಮೆ ನೀಡಿ ವಿಧಾನ ಪರಿಷತ್ ಸದಸ್ಯರಾಗಿ ಮುಂದುವರಿದರು.

ಶಂಕರ್ ಅವರ ರಾಜಕೀಯ ತಟಸ್ಥ ನೀತಿಗೆ ಎಸ್.ಎಂ. ಕೃಷ್ಣ ಅವರ ಸರ್ಕಾರದಲ್ಲಿ ಮಾನ್ಯತೆ ದೊರೆಯಿತು. 2001 ಆಗಸ್ಟ್ 6ರಂದು ಇವರು ಕರ್ನಾಟಕ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾದರು. ಸೌಮ್ಯ ಸ್ವಭಾವದ, ನಿಖರ ಅಭಿಪ್ರಾಯಗಳ ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದಲೇ ಸಾರ್ವಜನಿಕ ಜೀವನದಲ್ಲಿ ಹಲವು ಯಶಸ್ಸುಗಳನ್ನು ಕಂಡು ಉನ್ನತ ಸ್ಥಾನ ಪಡೆದರು. ಅತಿ ಕಿರಿಯ ವಯಸ್ಸಿನಲ್ಲಿ ದೊಡ್ಡ ಸ್ಥಾನಗಳನ್ನು ಪಡೆದು ಜವಾಬ್ದಾರಿ ನಿರ್ವಹಿಸಿದ ವಿರಳ ರಾಜಕಾರಣಿಗಳಲ್ಲಿ ಶಂಕರ್ ಒಬ್ಬರು. ಈಗ ಶಂಕರ್ ಅವರು ಕಾಂಗ್ರೆಸ್ ಪಕ್ಷ ಸೇರಿದ್ದಾರೆ. ಇವರ ಪತ್ನಿ ಮಲ್ಲಿಕಾ. ಇವರಿಗೆ ಇಬ್ಬರು ಪುತ್ರಿಯರು. (ಡಿ.ಎಸ್.ಜೆ.)

**ಶಂಕರಗೌಡ, ಕೆ.ವಿ.:** 1915–90. ಕರ್ನಾಟಕ ರಾಜ್ಯದ ಮಾಜಿ ಶಿಕ್ಷಣ ಸಚಿವ. ಸಹಕಾರ ಕ್ಷೇತ್ರ, ಶಿಕ್ಷಣ, ಸಾಹಿತ್ಯ, ನಾಟಕಕಲೆ, ಚಲನಚಿತ್ರ ಮತ್ತು ಪತ್ರಿಕಾ ರಂಗಗಳಲ್ಲಿ ಸೇವೆ ಸಲ್ಲಿಸಿದ, ವೈವಿಧ್ಯಮಯ ವ್ಯಕ್ತಿತ್ವದ ವಿಶಿಷ್ಟ ವ್ಯಕ್ತಿ.

ಮಂಡ್ಯ ನಗರಕ್ಕೆ 10 ಕಿಮೀ ದೂರದಲ್ಲಿರುವ ಕೀಲಾರ ಗ್ರಾಮದಲ್ಲಿ ರೈತವರ್ಗಕ್ಕೆ ಸೇರಿದ ವೀರೇಗೌಡ ಮತ್ತು ವೀರಮ್ಮ ಎಂಬ ದಂಪತಿಗಳ ಆರು ಮಕ್ಕಳಲ್ಲಿ ಎರಡನೆಯ ಮಗನಾಗಿ 1915 ಜುಲೈ 15 ರಂದು ಜನಿಸಿದರು. ಕೀಲಾರದಲ್ಲಿ ಪ್ರಾಥಮಿಕ, ಮಂಡ್ಯದಲ್ಲಿ ಮಾಧ್ಯಮಿಕ, ಚನ್ನಪಟ್ಟಣದಲ್ಲಿ ಪ್ರೌಢಶಾಲೆ, ಮೈಸೂರಿನಲ್ಲಿ ಇಂಟರ್ ಮೀಡಿಯೆಟ್, ಬೆಂಗಳೂರಿನಲ್ಲಿ ಬಿ.ಎಸ್ಸಿ, ಬೆಳಗಾಂವಿಯಲ್ಲಿ ನ್ಯಾಯಶಾಸ್ತ್ರವನ್ನು ಅಧ್ಯಯನ ಮಾಡಿ 1944ರಲ್ಲಿ ಕಾನೂನು ಪದವಿ ಪಡೆದರು. ಅನಂತರ ಮಂಡ್ಯ ನಗರದಲ್ಲಿ ವಕೀಲರಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಆದರೆ ಇವರ ಮನಸ್ಸು ವಕೀಲ ವೃತ್ತಿಗಿಂತಲೂ ಮಿಗಿಲಾಗಿ, ಸಮಾಜ ಸೇವೆಯ ಕಡೆಗೆ ಹೆಚ್ಚಾಗಿ ತುಡಿಯತೊಡಗಿತು. ವಿದ್ಯಾರ್ಥಿ ದೆಶೆಯಲ್ಲಿದ್ದಾಗಲೇ 1989ರಲ್ಲಿ ಮದ್ದೂರಿನ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. 1947ರ ಸೆಪ್ಟೆಂಬರ್ ತಿಂಗಳಿನಲ್ಲಿ ರಾಜಪ್ರಭುತ್ವದ ವಿರುದ್ಧ ನಡೆದ ‘ಅರಮನೆ ಚಲೋ’ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸೆರಮನೆವಾಸಕ್ಕೆ ಒಳಗಾಗಿ ಪ್ರಜಾಪ್ರಭುತ್ವದ ಅನುಷ್ಠಾನಕ್ಕಾಗಿ ಹೋರಾಡಿದರು.

1945ರಲ್ಲಿ ನಡೆದ ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಗೆದ್ದು ಸದಸ್ಯರಾಗುವ ಮೂಲಕ ಇವರ ರಾಜಕೀಯ ಜೀವನ ಪ್ರಾರಂಭಗೊಂಡಿತು. 1947ರಲ್ಲಿ ರಾಜ್ಯಾಂಗ ಸಭೆಯ ಸದಸ್ಯರಾಗಿ, 1952ರಲ್ಲಿ ವಿಧಾನಸಭಾ ಸದಸ್ಯರಾಗಿ ಮಂಡ್ಯ ಕ್ಷೇತ್ರದಿಂದ ಆಯ್ಕೆಗೊಂಡರು. ಕಾಂಗ್ರೆಸ್ ಪಕ್ಷದ ಆಂತರಿಕ ರಾಜಕಾರಣದ ಭಿನ್ನಾಭಿಪ್ರಾಯಗಳ ಘರ್ಷಣೆಯಲ್ಲಿ, ತಾವು ನಂಬಿದ ಮೌಲ್ಯಗಳಿಗೆ ಬದ್ಧರಾಗಿ, 1954ರಲ್ಲಿ ಶಾಸನ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಮತ್ತೆ 1966ರಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಂಡರು. ಈ ಅವಧಿಯಲ್ಲಿ (1967–71) ಮೊದಲು ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ, ಅನಂತರ ವೀರೇಂದ್ರಪಾಟೀಲರ ಮಂತ್ರಿಮಂಡಲದಲ್ಲಿ ಶಿಕ್ಷಣ ಸಚಿವರಾಗಿ ನಾಲ್ಕು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಅನಂತರ 1984–89ರ ಅವಧಿಯಲ್ಲಿ ಮಂಡ್ಯ ಲೋಕಸಭಾ ಸದಸ್ಯರಾಗಿ ರಾಷ್ಟ್ರಮಟ್ಟದ ರಾಜಕಾರಣದಲ್ಲೂ ಭಾಗಿಯಾಗಿದ್ದರು.

ಶಂಕರಗೌಡರ ಸಾಧನೆಗಳ ರಂಗದಲ್ಲಿ ಸಹಕಾರ ಮತ್ತು ಶಿಕ್ಷಣ ಕ್ಷೇತ್ರಗಳು ಪ್ರಮುಖವಾಗಿವೆ. 1947ರಲ್ಲಿ ಮಂಡ್ಯದಲ್ಲಿ ‘ರೈತರ ಸಹಕಾರ ಸಂಘ’ವನ್ನು ಸ್ಥಾಪಿಸಿ, ಜಿಲ್ಲೆಯ ರೈತರಿಗೆ ಸುಲಭ ಬಡ್ಡಿ ದರದಲ್ಲಿ ಸಾಲ ಸೌಲಭ್ಯ, ವ್ಯವಸಾಯದ ಉಪಕರಣಗಳ ಸರಬರಾಜು ಮತ್ತು ರಾಸಾಯನಿಕ ಗೊಬ್ಬರ ವಿತರಣೆಯ ಮೂಲಕ ರೈತರ ಆರ್ಥಿಕ ಪ್ರಗತಿಗೆ ನಾಂದಿ ಹಾಡಿದರು. ಇವರು ಸ್ಥಾಪಿಸಿ ಮುನ್ನಡೆಸಿದ ‘ರೈತರ ವಿವಿಧೋದ್ದೇಶ ಸಹಕಾರ ಸಂಘ’ದ ಯೋಜನೆಗಳು ರಾಷ್ಟ್ರೀಯ ಮಟ್ಟದ ನಾಯಕರ ಗಮನ ಸೆಳೆದವು.

ಶಾಲಾ–ಕಾಲೇಜುಗಳನ್ನು ಮತ್ತು ವಿದ್ಯಾರ್ಥಿನಿಲಯಗಳನ್ನು ಮಂಡ್ಯ ನಗರದಲ್ಲಿ ಸ್ಥಾಪಿಸುವುದರ ಮೂಲಕ ಜಿಲ್ಲಾ ಜನ ಸಮುದಾಯದ ಶೈಕ್ಷಣಿಕ ಪ್ರಗತಿಗೆ ಉತ್ತಮ ಅಡಿಪಾಯವನ್ನು ಹಾಕಿದರು. ವಿದ್ಯಾಸಂಸ್ಥೆಗಳ ಸ್ಥಾಪನೆಗಾಗಿ ಹಣ ಸಂಗ್ರಹಿಸಲು ಶಂಕರಗೌಡರು ತಮ್ಮಲ್ಲಿದ್ದ ಕಲಾಭಿರುಚಿಯನ್ನೇ ಒಂದು ಸಾಧನವನ್ನಾಗಿ ಮಾಡಿಕೊಂಡರು. ತಾವೇ ಪ್ರಮುಖ ನಟನಾಗಿ, ಬಣ್ಣ ಬಳಿದುಕೊಂಡು, ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಿದರು. 1952ರಲ್ಲಿ ಸಾರ್ವಜನಿಕ ಒಕ್ಕಲಿಗ ವಿದ್ಯಾರ್ಥಿನಿಲಯವನ್ನೂ 1962ರಲ್ಲಿ ಜನತಾ ಶಿಕ್ಷಣ ಸಂಸ್ಥೆಯ ವತಿಯಿಂದ ಎಂಜಿನಿಯರಿಂಗ್ ಕಾಲೇಜನ್ನೂ 1967ರಲ್ಲಿ

ವಿಜ್ಞಾನ ಮತ್ತು ಕಲಾ ಪ್ರಥಮ ದರ್ಜೆ ಕಾಲೇಜನ್ನೂ 1975ರಲ್ಲಿ ಶಿಕ್ಷಣ ತರಬೇತಿ ಕಾಲೇಜುನ್ನೂ ಸ್ಥಾಪಿಸಿ ಯಶಸ್ವಿಯಾಗಿ ಮುನ್ನಡೆಸಿದರು.

ಇವರು ರಾಜ್ಯದ ಶಿಕ್ಷಣ ಸಚಿವರಾಗಿದ್ದಾಗ ಕನ್ನಡ ಭಾಷೆ, ಸಾಹಿತ್ಯ ಮತ್ತು ಪದವಿಪೂರ್ವ ಹಂತದ ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಕಾರ್ಯಗಳು ಅತ್ಯಂತ ಮಹತ್ತ್ವಪೂರ್ಣವಾಗಿವೆ. ವಿಶ್ವವಿದ್ಯಾನಿಲಯಗಳಿಂದ ಇಂಟರ್ ಮೀಡಿಯೆಟ್ ತರಗತಿಗಳನ್ನು ಬೇರ್ಪಡಿಸಿ ಪದವಿ ಪೂರ್ವ ಶಿಕ್ಷಣ ಮಂಡಲಿಯನ್ನು ಸ್ಥಾಪಿಸಿದ್ದು, ಪ್ರೌಢಶಾಲಾ ಹಂತದವರೆಗಿನ ಖಾಸಗಿ ಶಾಲೆಗಳ ಸಿಬ್ಬಂದಿಗೆ ರಾಜ್ಯದಾದ್ಯಂತ ಧನಾದೇಶದ ಮೂಲಕ ವೇತನ ವಿತರಣೆಯನ್ನು ಜಾರಿಗೆ ತಂದಿದ್ದು, ಕನ್ನಡ ವಿಶ್ವಕೋಶವನ್ನು ಸಿದ್ಧಪಡಿಸಿ ಪ್ರಕಟಿಸುವ ಜವಾಬ್ದಾರಿಯನ್ನು ಸರ್ಕಾರದ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಿದ್ದು, ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡುತ್ತಿದ್ದ ವಾರ್ಷಿಕ ಅನುದಾನವನ್ನು ಹೆಚ್ಚಿಸಿದ್ದು, ಕರ್ನಾಟಕ ಸಹಕಾರಿ ಪ್ರಕಾಶನದ ವತಿಯಿಂದ 7 ಸಂಪುಟಗಳ ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯನ್ನು ಪ್ರಕಟಿಸಿದ್ದು, ಹತ್ತನೆಯ ತರಗತಿಯವರೆಗೆ ಶಿಕ್ಷಣದ ಮಾಧ್ಯಮವಾಗಿ ಕನ್ನಡ ಮತ್ತು ಜಿಲ್ಲಾ ಮಟ್ಟದವರೆಗೆ ಆಡಳಿತ ಭಾಷೆಯಾಗಿ ಕನ್ನಡವನ್ನು ಬಳಸುವುದಕ್ಕಾಗಿ ರಾಜ್ಯ ಸಚಿವ ಸಂಪುಟದ ಮೂಲಕ ತಂದ ಸುಧಾರಣೆಗಳು ಇವರ ಸಾಧನೆಗಳಾಗಿವೆ.



ಇವರು ಸಾಹಿತ್ಯ ಕ್ಷೇತ್ರದಲ್ಲಿಯೂ ಕೆಲಸ ಮಾಡಿದ್ದಾರೆ. ಪಾದುಕಾ ಕಿರೀಟ ಎಂಬ ಪೌರಾಣಿಕ ನಾಟಕವನ್ನೂ ಕೂಡಿ ಬಾಳೋಣ, ಶಿಷ್ಟಾಚಾರ, ಅಪರಂಜಿ ಎಂಬ ಮೂರು ಸಾಮಾಜಿಕ ನಾಟಕಗಳನ್ನೂ ರಚಿಸಿದ್ದಾರೆ. ಮುತ್ತು ಒಂದು ಮುತ್ತು, ಕೂಡಿ ಬಾಳೋಣ, ಮರೆಯದ ಹಾಡು ಎಂಬ ಮೂರು ಚಲನಚಿತ್ರಗಳನ್ನು ನಿರ್ಮಿಸಿದ್ದಾರೆ. ಜನಮನ ಎಂಬ ವಾರ ಪತ್ರಿಕೆಯ ಸಂಪಾದಕರಾಗಿ ಸ್ವಲ್ಪಕಾಲ ಪತ್ರಿಕೋದ್ಯಮದಲ್ಲೂ ದುಡಿದರು. ಪ್ಯಾರೇಲಾಲರ ಮಹಾತ್ಮ ಗಾಂಧಿ ದ ಲಾಸ್ಟ್ ಫೇಸ್ ಎಂಬ ಗ್ರಂಥವನ್ನು ಮಹಾತ್ಮ ಗಾಂಧಿ–ಅಂತಿಮ ಹಂತ ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಹುಟ್ಟಿದ ಊರಾದ ಕೀಲಾರದಲ್ಲಿ ಮತ್ತು ಮಂಡ್ಯ ನಗರದಲ್ಲಿ ರಂಗಮಂದಿರಗಳನ್ನು ಕಟ್ಟಿ, ನಿತ್ಯ ನಿರಂತರವಾಗಿ ಕಲಾ ಪ್ರದರ್ಶನಕ್ಕೆ ಅವಕಾಶವನ್ನು ಕಲ್ಪಿಸಿದರು.

ಆಧುನಿಕ ಮಂಡ್ಯದ ಶಿಲ್ಪಿಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ. ವಿಶ್ವೇಶ್ವರಯ್ಯನವರ ಅನಂತರದ ಪ್ರಮುಖ ಹೆಸರು ಶಂಕರಗೌಡರದು. ರಾಜಕಾರಣದ ಏಳುಬೀಳುಗಳ ನಡುವೆಯೂ ಸದಾಕಾಲ ಕ್ರಿಯಾಶೀಲರಾಗಿದ್ದುಕೊಂಡು ರಾಜ್ಯದ, ವಿಶೇಷವಾಗಿ ಮಂಡ್ಯ ಜಿಲ್ಲೆಯ ಸರ್ವತೋಮುಖ ಪ್ರಗತಿಗಾಗಿ ದುಡಿದ ಇವರನ್ನು ಮಹಾಕವಿ ಕುವೆಂಪು ಅವರು 'ನಿತ್ಯ ಸಚಿವ'ರೆಂದು ಕರೆದದ್ದು ಶಂಕರಗೌಡರಿಗೆ ಸಂದ ಅಪೂರ್ವ ಗೌರವವಾಗಿದೆ. ಇವರು 1990 ಮಾರ್ಚ್ 4ರಂದು ನಿಧನರಾದರು. ಇವರ ಪತ್ನಿ ಸುಶೀಲಮ್ಮ. ಈ ದಂಪತಿಗಳಿಗೆ ಮೂರು ಗಂಡು, ಮೂರು ಹೆಣ್ಣು ಮಕ್ಕಳು. ಇವರ ಮಗ ಸಚ್ಚಿದಾನಂದ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. **(ಸಿ.ಪಿ.ಎನ್.)**

**ಶಂಕರದಾಸಿಮಯ್ಯ:** ಪ್ರಸಿದ್ಧ ವಚನಕಾರ. ಬಿಜಾಪುರ ಜಿಲ್ಲೆಯ ಸ್ಕಂದಶಿಲೆ (ಈಗಿನ ಇಳಕಲ್ಲು) ಇವನ ಜನ್ಮಸ್ಥಳ. ಗೋವಿಂದಭಟ್ಟ ಮತ್ತು ದುಮ್ಮವ್ವೆಯವರಿಗೆ ಮಗನಾಗಿ ಹುಟ್ಟಿ ವೀರಶೈವತ್ವವನ್ನಂಗೀಕರಿಸಿ ಶಿವಶರಣನಾದ. ಕೃಷ್ಣಾತೀರದ ನವಿಲುತೀರ್ಥದಲ್ಲಿ ಜಡೆಶಂಕರನ ಪೂಜಕನಾದ ದಾಸಿಮಯ್ಯ ಸಿಂಪಿಗ ಕಾಯಕ ಕೈಕೊಂಡು ಶಿವನಿಗೆ ಉಡಲಿತ್ತು ಅವನಿಂದ ಭಾಳನೇತ್ರವನ್ನು ಪಡೆದನೆಂದು ಪಂಡಿತಮಲ್ಲಿಕಾರ್ಜುನನ ಶಂಕರದಾಸಿಮಯ್ಯ ಪುರಾಣದಲ್ಲಿ ಹೇಳಿದೆ. ಮುದನೂರಿನ ಜೇಡರ ದಾಸಿಮಯ್ಯನಿಗೆ ಶಿವನಿತ್ತ ತವನಿಧಿಯನ್ನು ಬಯಲುಮಾಡಿ ಅವನಿಗೆ ದಾಸೋಹಂ ಭಾವದ ನೆಲೆಗಾಣಿಸಿದನೆಂದು ಹರಿಹರಕವಿಯ ಶಂಕರದಾಸಿಮಯ್ಯನ ರಗಳೆಯಲ್ಲಿ ಹೇಳಿದೆ. ಇದರಿಂದ ಇವನ ಶ್ರೇಷ್ಠತೆ ವ್ಯಕ್ತವಾಗುತ್ತದೆ. ಕಲ್ಯಾಣದ ಜಯಸಿಂಹ ದೊರೆಯ ಆಸ್ಥಾನದಲ್ಲಿ ಈತ ಪರವಾದಿಗಳನ್ನು ಜಯಿಸಿ ವೀರಶೈವ ಮತವನ್ನು ಅನುಗೊಳಿಸಿದನೆಂದೂ ಉಜ್ಜಯಿನಿಯ ಮಹಾಕಾಳಿಯನ್ನು ಒಲಿಸಿಕೊಂಡು, ಕರಹಾಟ ದೇಶದ ಪಂಬೇರದಲ್ಲಿ ಮೈಲಾರನನ್ನು ನಿಗ್ರಹಿಸಿ ಅಲ್ಲಿನ ಕಾಪಾಲಿಕ ಮಾರ್ಗದ ಸಿದ್ಧಸಾಧಕರನ್ನು ತನ್ನ ಶಿವಭಕ್ತಿಮಹಿಮಾತಿಶಯದಿಂದ ವೀರಶೈವರನ್ನಾಗಿ ಮಾಡಿ ಮರಳಿ ಬಂದು ಆರಾಧ್ಯದೈವವಾದ ನವಿಲೆಯ (ನವಿಲುತೀರ್ಥ) ಜಡೆಶಂಕರನಲ್ಲಿ ಬಯಲಾದನೆಂದೂ ಪ್ರತೀತಿ. ಶಿವದಾಸಿ ಈತನ ಸತಿಯಾಗಿದ್ದಳೆಂದೂ ಇವನಿಗೆ ಸದ್ಯೋಜಾತನೆಂಬೊಬ್ಬ ಮಗನಿದ್ದುದಾಗಿಯೂ ತಿಳಿದುಬರುತ್ತದೆ. ಜೇಡರ ದಾಸಿಮಯ್ಯನನ್ನು ಕಾಣಲು ಮುದನೂರಿಗೆ ಹೋದನೆಂಬ ಸಂಗತಿಯ ಮೇಲಿಂದ ಈತ ಬಸವಪೂರ್ವಕಾಲೀನ ವಚನಕಾರನಾಗಿದ್ದನೆಂಬುದು ಸ್ಪಷ್ಟ. ಶ್ರೀಗಿರಿಗೆ ಹೋಗಿ ಅಗ್ನಿಗೆ ಆಹುತಿಯಾದ ವೀರಶಂಕರದೇವನೆಂಬವನಿಂದ ಶಂಕರದಾಸಿಮಯ್ಯ ಭಿನ್ನನೆಂದು ತಿಳಿದುಬರುತ್ತದೆ. ಭೈರವೇಶ್ವರಕಾವ್ಯದ ಕಥಾಸಾಗರ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ, ಶಿವತತ್ತ್ವ ಚಿಂತಾಮಣಿ, ಗುರುರಾಜಚಾರಿತ್ರ ಮತ್ತಿತರ ಕಾವ್ಯಗಳಲ್ಲಿ ಇವನ ವಿಷಯದ ಪ್ರಸ್ತಾಪ ಕಂಡುಬರುತ್ತದೆ. **(ವಿ.ಎಸ್.ಎಚ್.)**

**ಶಂಕರದೇವ:** ಸು. 1620. ವೀರಶೈವ ಕವಿ. ಶಂಕರದೇವರ ಕಂದ, ಶಂಕರಶತಕ, ಷಡಕ್ಷರ ರಗಳೆ, ಭಕ್ತಿಬಿನ್ನಹದ ರಗಳೆ, ಪುನರ್ದೀಕ್ಷೆ ರಗಳೆ, ವೀರಶೈವ ರಗಳೆ, ಮೈದುನರಾಮನ ರಗಳೆ, ಕಲಿಗಣನಾದ ರಗಳೆ, ಪ್ರಸಾದ ರಗಳೆ, ಮನೋವಿಕಾರನಿರಸನ ರಗಳೆ, ಪುಷ್ಪಾದಷ್ಟಕ, ಶಿವದರ್ಶನಾಷ್ಟಕ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಇವಲ್ಲದೆ ಈತ ಅನೇಕ ವಚನಗಳನ್ನೂ ಗೀತೆಗಳನ್ನೂ ಬರೆದಿದ್ದಾನೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಶಂಕರಲಿಂಗ ಎಂಬುದು ಇವನ ಅಂಕಿತ.

ಶಂಕರಶತಕ ವೃತ್ತರೂಪದಲ್ಲಿದ್ದು ವೀರಶೈವ ವೇದಾಂತವನ್ನು ಬೋಧಿಸುತ್ತದೆ. ಪ್ರತಿಪದ್ಯವೂ ಗುರುಶಂಕರೇಶ್ವರ ಎಂದು ಮುಗಿಯುತ್ತದೆ. ಇದಕ್ಕೆ ಗುರುಶಂಕರೇಶ್ವರ ಶತಕ ಎಂಬ ಹೆಸರೂ ಇದೆ. ಮರದ ಮೊದಲ್ಗೆ ನೀರೆರೆವರಲ್ಲದೆ ಶಾಖೆಗೆ ಬೇರೆ ಕಟ್ಟೆಯಂ ವಿರಚಿಸಿ ನೀರೆರೆವರೇ ಎಂಬ ಮಾತುಗಳು ಅನುಭವದ ಆಳದಿಂದ ಅಭಿವ್ಯಕ್ತಿ ಪಡೆದುಕೊಂಡಂಥವು. ಅನೇಕ ನುಡಿಗಟ್ಟುಗಳನ್ನೂ ಈತ ಸಮರ್ಥವಾಗಿ ಬಳಸಿಕೊಂಡಿದ್ದಾನೆ.

ಶಂಕರದೇವರ ಕಂದ ಹರಿಹರನ ಪುಷ್ಪರಗಳೆಯ ಧಾಟಿಯಲ್ಲಿಯೇ ಸಾಗುವ ಒಂದು ಭಕ್ತಿ ಕಾವ್ಯ. ಭಕ್ತಿಯ ಭಾವಾವೇಶವೂ ಹರಿಹರನ ಕಾವ್ಯಗಳಲ್ಲಿಯಂತೆಯೇ ಇದೆ. ಷಡಕ್ಷರ ರಗಳೆ, ಭಕ್ತಿಬಿನ್ನಹದ ರಗಳೆ, ವೀರಶೈವ ರಗಳೆ, ಮೈದುನರಾಮನ ರಗಳೆ–ಈ ಗ್ರಂಥಗಳ ಕೊನೆಯಲ್ಲಿ ಪ್ರಸನ್ನಶಂಕರಲಿಂಗ ಎಂದು ಮುಗಿಯುವ ಕಂದಗಳು ದೊರೆಯುತ್ತವೆ. ಷಡಕ್ಷರ ರಗಳೆಯಲ್ಲಿ 71 ನುಡಿಗಳಿದ್ದು ಪ್ರತಿ ನುಡಿಯೂ ಓಂನಮಃಶಿವಾಯ ಎಂದು ಮುಕ್ತಾಯವಾಗುತ್ತದೆ. ಭಕ್ತಿ ಬಿನ್ನಹದ ರಗಳೆಯಲ್ಲಿ 138 ನುಡಿಗಳಿವೆ. ವೀರಶೈವ ರಗಳೆಯಲ್ಲಿ 138 ನುಡಿಗಳಿವೆ. ಮೈದುನರಾಮನ

ರಗಳೆಯಲ್ಲಿ 151 ನುಡಿಗಳಿದ್ದು ಇದು ಮೈದುನರಾಮಯ್ಯನ ಚರಿತೆಯನ್ನು ಹೇಳುತ್ತದೆ. ಹೊಸ ಶೈಲಿಯ ಮೂಲಕ ಸಾಕಷ್ಟು ಜನಪ್ರಿಯತೆ ಗಳಿಸಿದ ಹರಿಹರನ ಅನಂತರ ರಗಳೆ ಸಂಪ್ರದಾಯವನ್ನು ಹಸುರಾಗಿಡಲು ಪ್ರಯತ್ನಿಸಿದವರಲ್ಲಿ ಈತ ಅಗ್ರಗಣ್ಯನಾಗಿದ್ದಾನೆ. (ಎಸ್.ಜಿ.ಎಸ್.)

**ಶಂಕರನಾಗ್:** 1954–90. ಕನ್ನಡದ ಪ್ರಸಿದ್ಧ ರಂಗಭೂಮಿ ನಟ, ಕನ್ನಡ ಚಿತ್ರಗಳ ನಾಯಕ ನಟ, ನಾಟಕ ಹಾಗೂ ಚಲನಚಿತ್ರ ನಿರ್ದೇಶಕ. ಇವರು 1954ರಲ್ಲಿ ಉಡುಪಿಯಲ್ಲಿ ಜನಿಸಿದರು. ಇವರ ತಂದೆ ಸದಾನಂದ ನಾಗರಕಟ್ಟೆ. ಪ್ರಸಿದ್ಧ ನಟ ಅನಂತನಾಗ್ ಇವರ ಅಣ್ಣ, ರಂಗಭೂಮಿಯ ಪ್ರಸಿದ್ಧನಟಿ ಗಾಯತ್ರಿ ಅತ್ತಿಗೆ. ಶಂಕರನಾಗ್ ಅವರ ಆರಂಭದ ವಿದ್ಯಾಭ್ಯಾಸ ಹೊನ್ನಾವರದ ನ್ಯೂ ಇಂಗ್ಲಿಷ್ ಸ್ಕೂಲ್‌ನಲ್ಲಿ ಆಯಿತು. ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರು ಒಮ್ಮೆ ಈ ಶಾಲೆಗೆ ಬಂದಿದ್ದಾಗ ಶಾಲೆಯ ಹುಡುಗರು ಆಡಿದ ನಾಟಕದಲ್ಲಿ ಇವರು ಡಾಕ್ಟರ್ ಪಾತ್ರ ವಹಿಸಿದ್ದರು. ವಿದ್ಯಾಭ್ಯಾಸದ ಕಾರಣ ಮುಂಬೈಗೆ ಹೋದರು. ಅಲ್ಲಿ ಅನೇಕ ರಂಗಭೂಮಿ ಹಾಗೂ ಚಿತ್ರ ರಂಗದ ದಿಗ್ಗಜರ ಪರಿಚಯ ಮತ್ತು ಕಲಿಕೆಯ ಅವಕಾಶಗಳು ದೊರೆತವು. ಓದುತ್ತಲೇ ಅನೇಕ ನಾಟಕಗಳಲ್ಲಿ ಭಾಗವಹಿಸಿದರು. ರಂಗಭೂಮಿಯ ನಟರಾಗಿ ಹಿಂದಿ, ಗುಜರಾತಿ, ಮರಾಠಿ, ಕನ್ನಡ, ಇಂಗ್ಲಿಷ್ ನಾಟಕಗಳ ಮೂಲಕ ಮುಂಬೈ ರಂಗಭೂಮಿಯಲ್ಲಿ ಚಿರಪರಿಚಿತರಾದರು. ಒಂದು ತಿಂಗಳಿಗೆ 15–20 ನಾಟಕಗಳನ್ನು ಮಾಡುತ್ತಿದ್ದರು. ಪ್ರಸಿದ್ಧ ನಿರ್ದೇಶಕಿ ಸಾಯಿ ಪರಾಂಜಪೆಯವರಲ್ಲಿ ಸಹಾಯಕರಾಗಿ ಸುಮಾರು ನಾಲ್ಕು ವರ್ಷ ದುಡಿದರು. ಬ್ಯಾಂಕಿನಲ್ಲಿ ಕೆಲಸ ಸಿಕ್ಕಿದರೂ ಅದನ್ನು ತ್ಯಜಿಸಿ ಅಭಿನಯ ಹಾಗೂ ನಟನೆಯ ಜೀವನವನ್ನೇ ಆಯ್ಕೆ ಮಾಡಿಕೊಂಡರು. ಮುಂಬೈ ರಂಗಭೂಮಿ ಇವರ ಅನುಭವವನ್ನು ಗಟ್ಟಿಯಾಗಿಸಿತು. ಇದೇ ಸಂದರ್ಭದಲ್ಲಿ ಅರುಂಧತಿ ಎಂಬ ಕಲಾವಿದೆಯನ್ನು ವಿವಾಹವಾದರು.

ಗಿರೀಶ್‌ಕಾರ್ನಾಡ್ ನಿರ್ದೇಶಿಸಿದ ಒಂದಾನೊಂದು ಕಾಲದಲ್ಲಿ (1979) ಇವರ ಅಭಿನಯದ ಮೊದಲ ಚಿತ್ರ. ಈ ಚಿತ್ರದ ಅಭಿನಯಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದರು. ಅನಂತರ ಇವರು ಸೀತಾರಾಮು (1979) ಎಂಬ ಚಿತ್ರದಲ್ಲಿ ನಾಯಕ ನಟನಾಗಿ ಅಭಿನಯಿಸಿದರು. ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಯಿತು; ಜೊತೆಗೆ ಇವರ ತಾರಾಮೌಲ್ಯವನ್ನು ಹೆಚ್ಚಿಸಿತು. ಇವರು ಅನೇಕ ಚಿತ್ರಗಳನ್ನು ನಿರ್ದೇಶಿದ್ದಾರೆ. ಮಿಂಚಿನ ಓಟ (1980), ಅನುಬಂಧ (1980), ಗೀತಾ (1981), ನೋಡಿ ಸ್ವಾಮಿ ನಾವಿರೋದು ಹೀಗೆ (1983), ಪರಮೇಶಿಯ ಪ್ರಣಯ ಪ್ರಸಂಗ, ಆಕ್ಸಿಡೆಂಟ್ (1984), ಒಂದು ಮುತ್ತಿನ ಕಥೆ (1987)– ಇವರ ಕೆಲವು ಮುಖ್ಯ ಚಿತ್ರಗಳು. ಇವರು ಅಭಿನಯಿಸಿದ ಚಲನಚಿತ್ರಗಳಿವು: ಒಂದಾನೊಂದು ಕಾಲದಲ್ಲಿ (1978), ಸೀತಾರಾಮು (1979), ಪ್ರೀತಿ ಮಾಡು ತಮಾಷೆ ನೋಡು (1979), ಮಿಂಚಿನ ಓಟ (1980), ಆಟೋರಾಜ (1980), ಮೂಗನ ಸೇಡು (1980), ಗೀತಾ (1981), ಮುನಿಯನ ಮಾದರಿ (1981), ಗಂಡಭೇರುಂಡ (1984), ರಸ್ತೆರಾಜ (1986), ತಾಯಿ (1987), ಸಾಂಗ್ಲಿಯಾನ (1988).

ಶಂಕರನಾಗ್ ಅವರಿಗೆ ಶ್ರೇಷ್ಠ ನಿರ್ದೇಶನ ಹಾಗೂ ಅಭಿನಯಕ್ಕಾಗಿ ಅನೇಕ ಪ್ರಶಸ್ತಿಗಳು ದೊರಕಿವೆ. ಒಂದಾನೊಂದು ಕಾಲದಲ್ಲಿ ಚಿತ್ರದಲ್ಲಿನ ಅಭಿನಯಕ್ಕೆ ಶ್ರೇಷ್ಠನಟ ಪ್ರಶಸ್ತಿ (1979), ಮಿಂಚಿನ ಓಟ ಚಿತ್ರಕ್ಕೆ ದ್ವಿತೀಯ ಅತ್ಯುತ್ತಮ ಚಿತ್ರವೆಂದು ರಾಜ್ಯ ಪ್ರಶಸ್ತಿ (1980), ಆಕ್ಸಿಡೆಂಟ್ ಚಿತ್ರಕ್ಕೆ (1985) ಮತ್ತು ಸ್ವಾಮಿ (ಹಿಂದಿ) ಟಿ.ವಿ. ಧಾರಾವಾಹಿಗೆ ಕೇಂದ್ರ ಸರ್ಕಾರದ ಪ್ರಶಸ್ತಿ (1987) ಇವುಗಳನ್ನು ಹೆಸರಿಸಬಹುದು. ಕಿರುತೆರೆಯಲ್ಲಿಯೂ ಇವರು ನಿರ್ದೇಶಿಸಿದ್ದರು. ಆರ್.ಕೆ.ನಾರಾಯಣ್ ಅವರ ಕಾದಂಬರಿ ಯಾಧಾರಿತ ಮಾಲ್ಗುಡಿ ಡೇಸ್ ಹಾಗೂ ಸ್ವಾಮಿ ಧಾರಾವಾಹಿಗಳು ರಾಷ್ಟ್ರೀಯ ಪ್ರಸಾರ ಪಡೆದು ಅತ್ಯಂತ ಜನಪ್ರಿಯವಾದುವು. ಇವರು ಸ್ಥಾಪಿಸಿದ ಸಂಕೇತ್ ಎಲೆಕ್ಟ್ರಾನಿಕ್ ಸಂಸ್ಥೆ ಸುಸಜ್ಜಿತ ರೆಕಾರ್ಡಿಂಗ್ ಸ್ಟುಡಿಯೋ ಆಗಿ ಕನ್ನಡ ಚಿತ್ರೋದ್ಯಮಕ್ಕೊಂದು ಕೊಡುಗೆಯಾಗಿದೆ.

ಇವರು ರಾಜಕೀಯ ರಂಗದಲ್ಲಿಯೂ ತಮ್ಮನ್ನು ಗುರುತಿಸಿಕೊಂಡು ಅನೇಕ ಜನಪರ ಕೆಲಸಗಳನ್ನು ಮಾಡುತ್ತಿದ್ದರು. ಕಾರು ಅಪಘಾತದಲ್ಲಿ 1990 ಸೆಪ್ಟೆಂಬರ್ 30ರಂದು ನಿಧನರಾದರು. ಇವರ ಗೌರವಾರ್ಥ ಬೆಂಗಳೂರಿನಲ್ಲಿ ಸಿಂಪೊನಿ ಚಿತ್ರಮಂದಿರಕ್ಕೆ ಶಂಕರನಾಗ್ ಅವರ ಹೆಸರನ್ನು ಇಡಲಾಗಿತ್ತು. ಇವರ ಪತ್ನಿ ಅರುಂಧತಿನಾಗ್ ಅವರು ಶಂಕರನಾಗರ ಕನಸಿನ ಕೂಸಾಗಿದ್ದ, ರಂಗಭೂಮಿ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಸಲುವಾಗಿ ರಂಗಶಂಕರ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ (2004). *

**ಶಂಕರನಾರಾಯಣ:** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಒಂದು ಗ್ರಾಮ. ಕುಂದಾಪುರದ ಪೂರ್ವಕ್ಕೆ 29 ಕಿಮೀ ದೂರದಲ್ಲಿ, ಹೊಸಂಗಡಿ ಘಾಟಿ ಮೂಲಕ ಶಿವಮೊಗ್ಗಕ್ಕೆ ಹೋಗುವ ಹೆದ್ದಾರಿಯಲ್ಲಿ ವಾರಾಹಿ ನದಿಯ ಪಕ್ಕದಲ್ಲಿದೆ. ಜನಸಂಖ್ಯೆ 4,098.

ಇದು ಒಂದು ಪವಿತ್ರ ಕ್ಷೇತ್ರವಾಗಿ, ಕರಾವಳಿ ಪ್ರದೇಶದ ಸಪ್ತಕ್ಷೇತ್ರಗಳಲ್ಲಿ ಒಂದೆಂದು ಖ್ಯಾತಿಪಡೆದಿದೆ. (ಉಳಿದ ಆರು ಕೊಲ್ಲೂರು, ಕೋಟೇಶ್ವರ, ಕುಂಭಾಸ್ತಿ, ಉಡುಪಿ, ಸುಬ್ರಹ್ಮಣ್ಯ, ಗೋಕರ್ಣ). ಈ ಗ್ರಾಮದ ಪ್ರಾಚೀನ ಹೆಸರು ಕ್ರೋಡ, ಕ್ರೋಡನಗರಿ ಅಥವಾ ಕ್ರೋಡಕ್ಷೇತ್ರ (ಕನ್ನಡದಲ್ಲಿ ಕೊಡಂಗಿ, ಕೋಡಗಿ). ಇಲ್ಲಿಯ ಸ್ಥಳಪುರಾಣದಂತೆ ಹಿಂದೆ ಖರ ಮತ್ತು ರಟ್ಟ ಎಂಬಿಬ್ಬರು ಅಸುರರು ಸಹ್ಯಾದ್ರಿಯ ತಪ್ಪಲಿನಲ್ಲಿ ತಮ್ಮ ರಾಜಧಾನಿಗಳನ್ನು ನಿರ್ಮಿಸಿಕೊಂಡು, ಹರಭಕ್ತರಾದರೂ ಜನಹಿಂಸಕರಾಗಿದ್ದರು. ಆ ಸಮಯದಲ್ಲಿ ಜನರು ಅಧರ್ಮಪರರಾಗಿ ಹರಿಹರಭೇಧ ಕಲ್ಪಿಸಿ ಕಚ್ಚಾಡುತ್ತಿದ್ದರು. ಆಗ ಕ್ರೋಡಮಹರ್ಷಿಗಳು ಜನರಿಗೆ ಸನ್ಮಾರ್ಗದರ್ಶನ, ದುಷ್ಟ ಖರ ರಟ್ಟಾಸುರರ ನಿಗ್ರಹದಿಂದ ಲೋಕಶಾಂತಿ ಮತ್ತು ಹರಿಹರ ಭೇದವಿಲ್ಲವೆಂಬ ತತ್ತ್ವನಿರೂಪಣೆಗಳಿಗಾಗಿ ಶಂಕರನಾರಾಯಣ ದೇವರನ್ನು ಕುರಿತು ಘೋರ ತಪಸ್ಸನ್ನು ಮಾಡಿದರು. ಹರಿಯೊಬ್ಬನಿಂದಾಗಲೀ ಹರನೊಬ್ಬನಿಂದಾಗಲೀ ಮರಣ ಸಂಭವಿಸದಂತೆ ವರ ಪಡೆದಿದ್ದ ಖರ ರಟ್ಟಾಸುರರ ನಿಗ್ರಹಕ್ಕಾಗಿ ಕ್ರೋಡ ಮಹರ್ಷಿಗಳು ಮಾಡುತ್ತಿದ್ದ ತಪಶ್ಚರ್ಯಕ್ಕೆ ಸಹಕಾರಿಯಾಗಿ ಜಮದಗ್ನಿ, ಲೋಮಶ, ಮಾಂಡವ್ಯ ಮತ್ತು ಅಗಸ್ತ್ಯ ಖುಷಿಗಳೂ ತಪವನ್ನಾಚರಿಸಿದರು. ಈ ಐವರು ಮುನಿಗಳ ಭಕ್ತಿಗೆ ಮೆಚ್ಚಿದ ಹರಿಹರರು ಏಕದೇಹಧಾರಿಗಳಾಗಿ ಅವರಿಗೆ ಪ್ರತ್ಯಕ್ಷರಾಗಿ, ಖರ ರಟ್ಟಾಸುರರನ್ನು ಸಂಹರಿಸಿದರು. ಒಂದೇ ಶರೀರದ ವಾಮಾರ್ಧ ಹರಿಯ ರೂಪವಾಗಿಯೂ ಬಲಭಾಗದ ಅರ್ಧ ಹರನ ರೂಪವಾಗಿಯೂ ಕಾಣುವ ಶಂಕರನಾರಾಯಣನು ಕ್ರೋಡ ಮಹರ್ಷಿಗೆ ದರ್ಶನವನ್ನು ಕೊಟ್ಟ ಕ್ರೋಡಗಿರಿಯಲ್ಲಿ ಗುಹಾದ್ವಾರದ ಸ್ಥಳವು ಆದಿಶಂಕರನಾರಾಯಣವೆನಿಸಿ ಈಗಲೂ ನಿತ್ಯಪೂಜಾದಿಗಳು ನೆರವೇರುತ್ತವೆ. ಲೋಕಕಲ್ಯಾಣವನ್ನುಂಟುಮಾಡಿ, ಹರಿಹರರೊಳಗೆ ಭೇದವಿಲ್ಲವೆಂದು ಸಾರಿ, ಕ್ರೋಡಗಿರಿಯಿಂದ ತಪ್ಪಲಿನ ತಗ್ಗಾದ ಪ್ರದೇಶಕ್ಕೆ

ದುಮುಕಿ ಜಲದಲ್ಲಿ ಲಿಂಗಾಕಾರವಾಗಿ ಉದ್ಭವಿಸಿದರು. ಮುಂದೆ ಗೋರಾಷ್ಟ್ರವನ್ನಾಳುತ್ತಿದ್ದ ಸುಲೋಚನ ಎಂಬ ರಾಜ ಇಲ್ಲಿ ಭವ್ಯವಾದ ದೇವಾಲಯವನ್ನು ಕಟ್ಟಿಸಿ, ಅದಕ್ಕೆ ಚಿನ್ನದ ಪಲ್ಲಕ್ಕಿಯನ್ನೂ ರತ್ನಖಚಿತವಾದ ಮಂಟಪವನ್ನೂ ಸಮರ್ಪಿಸಿದನಂತೆ.

ಶಂಕರನಾರಾಯಣ ದೇವಾಲಯ ಹೊಯ್ಸಳ ಶೈಲಿಯ ಗೋಪುರವುಳ್ಳ ಸುತ್ತಲೂ ಕಲ್ಲುಹಲಗೆಯ ಮಾಡಿನಿಂದ ಕೂಡಿರುವ ಪುರಾತನ ಗುಡಿ. ಇಲ್ಲಿನ ಉದ್ಭವಲಿಂಗ ಈಗ ದೇವಾಲಯದ ಗರ್ಭಗುಡಿಯ ಮಧ್ಯಭಾಗದಲ್ಲಿ ಸಿದ್ಧಾಮತವೆಂಬ ತೀರ್ಥದ ನಡುವೆ ನೆಲದ ಮಟ್ಟಕ್ಕಿಂತ ಕೆಳಭಾಗದಲ್ಲಿದೆ. ಈ ಲಿಂಗ ಏಕನಾಲದಿಂದ ಹೊರಟು ಮೇಲಕ್ಕೆ ಬಲಭಾಗದಲ್ಲಿ ಶ್ವೇತವರ್ಣದಿಂದ ಕಂಕಣಾಕಾರದಲ್ಲಿದ್ದೆ; ಇನ್ನೊಂದು ಕಡೆ (ಎಡ) ಮೇಘವರ್ಣವಿದ್ದು ಗೋಪಾದ ಚಿಹ್ನೆಗಳಿಂದ ಕೂಡಿದೆ. ಆಳೆತ್ತರದ ಬೆಳ್ಳಿಯ ಶಂಕರನಾರಾಯಣ ವಿಗ್ರಹವೊಂದು ಇಲ್ಲಿಯ ಅಪೂರ್ವ ಸಂಪತ್ತು. ಜಿಲ್ಲೆಯ ಬೇರಾವ ದೇವಸ್ಥಾನಗಳಲ್ಲಿ ಕಾಣಸಿಗದ ಪ್ರಾಚೀನ ಮರದ ಕೆತ್ತನೆಗಳಲ್ಲಿ ಮೂಡಿಸಲಾದ ಭಾರತ-ರಾಮಾಯಣ ಕಥಾನಕಗಳ ಚಿತ್ರಣ ಇಲ್ಲಿಯ ಇನ್ನೊಂದು ಕಲಾವೈಶಿಷ್ಟ್ಯ. ಇಕ್ಕೇರಿ ನಾಯಕರು ಈ ದೇವಾಲಯವನ್ನು 1563ರಲ್ಲಿ ಜೀರ್ಣೋದ್ಧಾರ ಮಾಡಿದರೆಂದು ತಿಳಿದುಬರುತ್ತದೆ. ಈ ದೇವಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಹಲವಾರು ದೇವತಾವಿಗ್ರಹಗಳೂ ತೀರ್ಥಗಳೂ ಇವೆ. ಕ್ರೋಡಋಷಿಗಳು ತಪಸ್ಸು ಮಾಡಿದ ಕ್ರೋಡಾಶ್ರಮ ನದೀತೀರದಲ್ಲಿರುವ ಕ್ರೋಡಗಿರಿ ಎಂಬ ಎತ್ತರವಾದ (ಸು. 200 ಮೀ) ಬೆಟ್ಟದ ಮೇಲಿದೆ.

ವಿಜಯನಗರದ ಅರಸರು, ಇಕ್ಕೇರಿಯ (ಕೆಳದಿಯ) ನಾಯಕರು ಶಂಕರನಾರಾಯಣ ದೇವರ ಭಕ್ತರಾಗಿದ್ದರು. ಇವರಲ್ಲಿ ಹಲವರು ದೇವಾಲಯಕ್ಕೆ ಚಿನ್ನಾಭರಣಗಳನ್ನು ಒಪ್ಪಿಸಿದ ದಾಖಲೆಗಳಿವೆ. ವಾದಿರಾಜರು ಈ ಕ್ಷೇತ್ರವನ್ನು ಸಂದರ್ಶಿಸಿದ್ದರು. ಶುಕಸಪ್ತತಿ ಕಥಾಕಾವ್ಯದ ಕರ್ತೃ ಕೆಳದಿಯ ಮಂತ್ರಿ (ನಿಯೋಗಿ) ಶರಜಾ ನಾಗಪ್ಪಯ್ಯ ತನ್ನ ಗ್ರಂಥದಲ್ಲಿ ಕೋಡಗಿಯ ಪುರದ ಶಂಕರನಾರಾಯಣನಿತ್ತಪನುಸಂಪದವ ಎಂದಿದ್ದಾನೆ. 1782ರಲ್ಲಿ ಟಿಪ್ಪು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಳಿಮಾಡಿದ ಸಂದರ್ಭದಲ್ಲಿ ಕರಾವಳಿಯ ಇಗರ್ಜಿಯೊಂದರಿಂದ ಕೊಳ್ಳೆ ಹೊಡೆದ ಆಳೆತ್ತರದ 60 ಮಣ ಭಾರದ ಘಂಟೆಯೊಂದನ್ನು ಶಂಕರನಾರಾಯಣ ದೇವಸ್ಥಾನಕ್ಕೊಪ್ಪಿಸಿದ. ಈ ಘಂಟೆಯ ನಿನಾದ ಸುತ್ತಲಿನ 8 ಕಿಮೀ ದೂರ ಕೇಳುವಂತಹದು. ಭೋಗಮಂಟಪದ ಕೆಳಸುತ್ತಿನಲ್ಲಿ ಮೈಸೂರರಸರ ಲಾಂಛನವಾದ ಗಂಡಭೇರುಂಡವನ್ನೂ ಅವನು ನಿರ್ಮಿಸಿಕೊಟ್ಟ. ಅಲ್ಲಿಯ ತಂತ್ರಿಗಳಿಗೆ ಒಂದು ಟೊಪ್ಪಿಯನ್ನು ನೀಡಿದ ಕಾರಣದಿಂದ ಅಲ್ಲಿ ಈಗಲೂ ತಂತ್ರಿಗಳು ಟೊಪ್ಪಿ ಹಾಕಿಕೊಂಡೇ ತಂತ್ರ ತೂಗುವ ಪದ್ಧತಿ ಇದೆ.

ಶಂಕರನಾರಾಯಣದಿಂದ ಪಶ್ಚಿಮಘಟ್ಟಕ್ಕೆ ಕೇವಲ 26 ಕಿಮೀ, ಮಂಗಳೂರಿಗೆ ಇಲ್ಲಿಂದ 114 ಕಿಮೀ, ಶಿವಮೊಗ್ಗಕ್ಕೆ 128 ಕಿಮೀ. ಹಲವು ಕಡೆಗಳಿಂದ ಇಲ್ಲಿಗೆ ಬರಲು ಮಾರ್ಗಾನುಕೂಲತೆಗಳಿರುವುದರಿಂದ ಸುತ್ತುಮುತ್ತಲಿನ ಹಳ್ಳಿಗಳಿಗೆ ಇದೊಂದು ವ್ಯಾಪಾರ ಕೇಂದ್ರವಾಗಿದೆ. ಜೇನುಸಾಕಣೆಗೆ ಹೆಸರಾದ ಈ ಸ್ಥಳದಲ್ಲಿ ಒಂದು ಪ್ರೌಢಶಾಲೆ, ಸಹಕಾರಿ ಸಂಘಸಂಸ್ಥೆಗಳು, ಬ್ಯಾಂಕ್‌ಶಾಖೆ ಮೊದಲಾದ ಆಧುನಿಕ ಸೌಕರ್ಯಗಳು ಇವೆ. **(ಎಂ.ವಿ)**

**ಶಂಕರ ಮೊಕಾಶಿ ಪುಣೇಕರ:** 1928-2004. ಹೊಸಗನ್ನಡ ಸಾಹಿತ್ಯದ ನವ್ಯಯುಗದ ಪ್ರಖ್ಯಾತ ವಿಮರ್ಶಕ, ಕಾದಂಬರಿಕಾರ, ಕವಿ ಹಾಗೂ ನಾಟಕಕಾರರು. ಇಂಗ್ಲಿಷ್‌ನಲ್ಲಿ ವಿಮರ್ಶೆಗಳನ್ನೂ ಕವನಗಳನ್ನೂ ಬರೆದು ಯಶಸ್ವಿಯಾದವರು. ಸಾಹಿತ್ಯ ಹಾಗೂ ವ್ಯಕ್ತಿತ್ವ ಎರಡರಲ್ಲೂ ಒಂದು ಬಗೆಯ ವಿಲಕ್ಷಣ ನಿಲುವು ಇವರದು. ಈ ವಿಲಕ್ಷಣತೆಯೇ ಇವರ ಸಾಹಿತ್ಯ, ವ್ಯಕ್ತಿತ್ವಗಳಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿರುವುದು ಗಮನೀಯ. ಇವರು 1928 ಮೇ 8 ರಂದು ಧಾರವಾಡದಲ್ಲಿ ಜನಿಸಿದರು. ಪುಣೇಕರು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ತಾತನ (ತಾಯಿಯ ತಂದೆ) ಮನೆಯಲ್ಲಿ ಬೆಳೆದು ವಿದ್ಯಾಭ್ಯಾಸ ಪಡೆದರು. ಆರಂಭದಲ್ಲಿ ಶಾಲಾ ಶಿಕ್ಷಕರಾಗಿ, ಅನಂತರ ಆರ್.ಪಿ.ಡಿ. ಕಾಲೇಜು, ಬೆಳಗಾಂವಿಯ ಲಿಂಗರಾಜ ಕಾಲೇಜು, ಮುಂಬಯಿಯ ಕೆ.ಸಿ.ಕಾಲೇಜುಗಳಲ್ಲಿ ಉಪನ್ಯಾಸಕರಾಗಿದ್ದರು. ಐ.ಐ.ಟಿ.ಯಲ್ಲಿ ಹತ್ತುವರ್ಷ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರವಾಚಕರಾಗಿ ಹತ್ತು ವರ್ಷ ಸೇವೆ ಸಲ್ಲಿಸಿದರು. ತಮ್ಮ ಸೇವಾವಧಿಯ ಕಡೆಯ ಕೆಲವು

ವರ್ಷಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕಳೆದು 1988ರಲ್ಲಿ ನಿವೃತ್ತರಾದರು. ನಿವೃತ್ತಿಯ ಅನಂತರ ಧಾರವಾಡದಲ್ಲಿ ನೆಲೆಸಿದ್ದರು.

ಶಾಲಾಕಾಲೇಜುಗಳಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಅಧ್ಯಾಪಕರಾಗಿದ್ದ ಎಸ್.ಜಿ.ನಾಡಗೀರ್, ಎನ್.ಕೆ.ಕುಲಕರ್ಣಿ, ಬಿ.ಎಂ.ಶ್ರೀ, ವಿ.ಕೃ.ಗೋಕಾಕ್, ಆರ್ಮಾಂಡೊ ಮೆನಜಿಸ್ ಮೊದಲಾದವರ ಪ್ರಭಾವ, ಸ್ಫೂರ್ತಿ ಇವರ ಮೇಲಾಯಿತು. ಇವರು ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ ಎಲ್ಲವೂ ಸೇರಿದಂತೆ ಕನ್ನಡದಲ್ಲಿ 13 ಕೃತಿಗಳನ್ನೂ ಇಂಗ್ಲಿಷ್‌ನಲ್ಲಿ 17 ಕೃತಿಗಳನ್ನೂ ರಚಿಸಿದ್ದಾರೆ. ದ ಲೇಟರ್ ಫೇಸ್ ಇನ್ ದ ಡೆವಲಪ್‌ಮೆಂಟ್ ಆಫ್ ಡಬ್ಲ್ಯು.ಬಿ. ಯೇಟ್ಸ್ ಎಂಬ ಇವರ ಸಂಶೋಧನ ಪ್ರಬಂಧಕ್ಕೆ 1965ರಲ್ಲಿ ಪಿಎಚ್.ಡಿ. ಪದವಿ ದೊರೆತಿದೆ.

ಮಾಯಿಯ ಮೂರು ಮುಖಗಳು ಎಂಬ ಇವರ ಕವನ ಸಂಕಲನ ನವ್ಯಕಾವ್ಯ ಹೆಚ್ಚು ಪ್ರಚಾರದಲ್ಲಿದ್ದಾಗ ವಿಭಿನ್ನ ರೀತಿಯಲ್ಲಿ ಬರೆದುದಾಗಿದೆ. ಭಾಷಿಕವಾಗಿ ಇಲ್ಲಿನ ಕವನಗಳು ನವೋದಯ ಕಾವ್ಯಕ್ಕೆ ಹತ್ತಿರವಾಗಿವೆ. ಸ್ವಂತದ್ದೆನಿಸುವ ಚಿಂತನಾ ಪ್ರಧಾನ ಧಾಟಿ ಈ ಕವನಗಳ ವೈಶಿಷ್ಟ್ಯ. ಮಾತೃತ್ವವನ್ನು ಕಾವ್ಯದಲ್ಲಿ ವಿಶಿಷ್ಟ ಬಗೆಯಲ್ಲಿ ಅರಸಿರುವ ರೀತಿ ವಿನೂತನವಾದದ್ದು.

ಗಂಗವ್ವ-ಗಂಗಾಮಾಯಿ ಇವರ ಪ್ರಸಿದ್ಧ ಕಾದಂಬರಿ. ಕಾವ್ಯದಲ್ಲಿ ಹೇಗೋ ಹಾಗೆ ನವ್ಯವನ್ನು ಧಿಕ್ಕರಿಸುವ ಮತ್ತು ಸಂಪ್ರದಾಯವನ್ನು ಬೇಕೆಂದೇ ಎತ್ತಿಹಿಡಿಯುವ ನಿಲುವು ಈ ಕಾದಂಬರಿಯಲ್ಲಿದೆ. ಈ ಕೃತಿಯನ್ನು ನ್ಯಾಷನಲ್ ಬುಕ್ ಟ್ರಸ್ಟ್ ಭಾರತದ ಬಹುತೇಕ ಎಲ್ಲ ಅಧಿಕೃತ ಭಾಷೆಗಳಿಗೆ ಅನುವಾದ ಮಾಡಿಸಿದೆ. ಅವಧೇಶ್ವರಿ ಇವರ ಮತ್ತೊಂದು ಕಾದಂಬರಿ. ವೇದಕಾಲೀನ ರಾಜಕೀಯ ಕಾದಂಬರಿ ಎಂದು ಇದನ್ನು ಲೇಖಕರು ಕರೆದಿದ್ದರೂ ಇಲ್ಲಿನ ರಾಜಕೀಯಕ್ಕೆ ಸಾರ್ವಕಾಲಿಕತೆ ಇದೆ. ಒಂದು ಇಡೀ ಸಂಸ್ಕೃತಿಯ ಜನಜೀವನವನ್ನು ಯಥಾವತ್ತಾಗಿ ಚಿತ್ರಿಸಲು ಲೇಖಕರು ಇಲ್ಲಿ ಪ್ರಯತ್ನಿಸಿದ್ದಾರೆ. ಈ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ (1988). ಇವರ ನಟನಾರಾಯಣಿ ಎಂಬ ಕಾದಂಬರಿ ಸುಧಾ ವಾರಪತ್ರಿಕೆಯ ಕಾದಂಬರಿ ಸ್ಪರ್ಧೆಗಾಗಿ ಬರೆದದ್ದು; ಸ್ಪರ್ಧೆಯಲ್ಲಿ ಬಹುಮಾನವನ್ನೂ ಗಳಿಸಿತ್ತು.

ಪಾಶ್ಚಾತ್ಯ ವಿಮರ್ಶೆಯ ಇತಿಹಾಸ, ಬೇಂದ್ರೆಯವರ ಕಾವ್ಯಮೀಮಾಂಸೆ, ಸಾಹಿತ್ಯ ಮತ್ತು ಅಭಿರುಚಿ ಇವು ವಿಮರ್ಶೆಯ ಕೃತಿಗಳು. ಸತ್ಯಸಾಯಿ ಭಾಷಣಗಳು, ಶ್ರೀ ರಾಮಾಯಣದರ್ಶನಂ (ಇಂಗ್ಲಿಷ್ ಅನುವಾದ)– ಇವು ಅನುವಾದಿತ ಕೃತಿಗಳು. ಪಾಶ್ಚಾತ್ಯ ವಿಮರ್ಶೆಯ ಇತಿಹಾಸ ಎಂಬ ಕೃತಿಯಲ್ಲಿ ಪಾಶ್ಚಾತ್ಯ ವಿಮರ್ಶೆಯ ವಿಚಾರಗಳನ್ನು ಮಂಡಿಸುವ ಜೊತೆಯಲ್ಲಿಯೇ ಭಾರತೀಯ ಮೀಮಾಂಸೆಯ ವಿಚಾರಗಳನ್ನೂ ತಾಳೆ ನೋಡುವ ಒಂದು ಬಗೆಯ ತೌಲನಿಕ ಕ್ರಮ ಇದರ ವೈಶಿಷ್ಟ್ಯವಾಗಿದೆ. ಹೆಚ್ಚು ಪ್ರಚಾರ ಪಡೆದಿದ್ದ ಇಂಗ್ಲಿಷ್ ರೊಮ್ಯಾಂಟಿಸಿಸಂನ ಮೇಲೆ ಹೇಗೆ ಫ್ರೆಂಚ್ ಚಿಂತಕ ರೂಸೋನ ಪ್ರಭಾವವಾಗಿದೆ ಎಂದು ಗುರುತಿಸಿರುವ ಇವರ ತೌಲನಿಕ ಅಧ್ಯಯನ ಹೆಚ್ಚು ಮಹತ್ತ್ವದ್ದಾಗಿದೆ. 'ಶ್ರೀ ಸಂಗೀತ ನಾಟ್ಯನಾಂದೀ ಪರಿಪೂರ್ಣ ಹಾಸ್ಯ ಪ್ರಧಾನ ಸಾಂಸಾರಿಕ ಕಂಪನಿ ಏಕಾಂಕ ನಾಟಕ' ಇದು ಇವರ ನಾಟಕ ಕೃತಿ. ಇಂಗ್ಲಿಷ್‌ನ ಕಾಮಿಡಿ ಆಫ್ ಎರರ್ಸ್ ಪ್ರಕಾರದ ನಾಟಕಗಳ ಮಾದರಿಯಲ್ಲಿ ರಚಿಸಹೊರಟ ನಾಟಕವಿದು. ಉತ್ತರ ಕರ್ನಾಟಕದ ಪರಿಸರದಲ್ಲಿ ವಿಪರ್ಯಾಸ ನಾಟಕಗಳ ಸಾಲಿಗೆ ನಾಂದಿಯಂತಿರುವುದೇ ಈ ನಾಟಕದ ಹೆಚ್ಚುಗಾರಿಕೆ ಎನ್ನಬಹುದು.

ದ ಕ್ಯಾಪ್ಟೀವ್, ದಿ ಪ್ರಿಟೆಂಡರ್, ಎಪಿಸಲ್ ಟು ಡೇವಿಡ್ ಮಕ್ ಕುಚಿಯೋನ್, ದ ಟೆಂಟ್ ಪೋಲ್ ಪ್ಯಾರಡಿಮ್ಸ್, ಹಮ್ಮಿಂಗ್ ಬರ್ಡ್, ಮೊಹೆಂಜೊದಾರೊ ಸೀಲ್ಸ್, ಇಂಡೋ ಆಂಗ್ಲಿಯನ್ ಕ್ರೀಡ್, ಅವಧೂತ ಗೀತಾ, ಥಿಯೆಟ್ರಿಕಲ್ ಅಂಡ್ ಪ್ರ್ಯಾಕ್ಟಿಕಲ್ ಸ್ಟಡೀಸ್ ಇನ್ ಇಂಡೋ–ಇಂಗ್ಲಿಷ್ ಲಿಟರೇಚರ್, ವಿ.ಕೆ.ಗೋಕಾಕ್, ಪರ್ಸ್‌ಪೆಕ್ಟೀವ್ಸ್ ಆನ್ ಇಂಡಿಯನ್ ಡ್ರಾಮಾ ಇನ್ ಇಂಗ್ಲಿಷ್ (ಎಮ್.ಕೆ.ನಾಯಕ್ ಅವರ ಜೊತೆಗೂಡಿ ಸಂಪಾದಿತ)–ಇವು ಇವರ ಕೆಲವು ಇಂಗ್ಲಿಷ್ ಕೃತಿಗಳು. ದ ಪ್ರಿಟೆಂಡರ್ ಎಂಬ ಕವನ ಸಂಕಲನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿಯೂ ಹೋಮಿಂಗ್ ಬರ್ಡ್ ಎಂಬ ಕೃತಿಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಪ್ರಶಸ್ತಿಯೂ ಲಭ್ಯವಾಗಿವೆ. ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕೃತಿಯನ್ನು ಇವರು ಇಂಗ್ಲಿಷಿಗೆ ಅನುವಾದಿಸಿದ್ದು ಅದು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗಿದೆ.

ಇವರ ಸಂಶೋಧನೆಯ ಕ್ಷೇತ್ರ ಸಾಹಿತ್ಯದಲ್ಲಷ್ಟೆ ಅಲ್ಲದೆ ಹಲವು ವಿಚಾರಗಳನ್ನೊಳಗೊಂಡಿದೆ. ಕಂಪಲ್ಸರಿ ಕ್ಯಾಪಿಟೇಷನ್ ಸ್ಕೀಮ್, ಮೊಹೆಂಜೊದಾರೊ ಮುದ್ರಿಕೆಗಳು, ಭಾರತೀಯ ಚಿಂತನಧಾರೆಗೆ ಹರಿಜನರ ಕೊಡುಗೆ–ಇಂಥ ಸಂಶೋಧನ ಕೃತಿಗಳನ್ನೂ ರಚಿಸಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಚೋಮ್‌ಸ್ಕಿ–ಸ್ಕಿನ್ನರ್ ಪದ್ಧತಿಯನ್ನು ಕಂಡುಹಿಡಿದರು. ಮುಂಬಯಿಯ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ಹಲವು ವರ್ಷಗಳಕಾಲ ಸಂಗೀತ ವಿಮರ್ಶೆಗಳನ್ನು ಬರೆದಿದ್ದಾರೆ.

1984ರಲ್ಲಿ ಯೂಗೋಸ್ಲಾವಿಯದಲ್ಲಿ ನಡೆದ ವಿಶ್ವಕಾವ್ಯ ಸಮ್ಮೇಳನದಲ್ಲಿ ಇವರು ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇಂಗ್ಲೆಂಡ್, ಬಲ್ಗೇರಿಯ, ಹಂಗರಿ ಮೊದಲಾದ ದೇಶಗಳಲ್ಲಿ ಪ್ರವಾಸ ಕೈಗೊಂಡು ಭಾರತದ ವೈದಿಕ ಮತ್ತು ಮಹಾಕಾವ್ಯ ಕಾಲದ ಸಂಸ್ಕೃತಿಗೂ ಪಾಶ್ಚಾತ್ಯ ದೇಶಗಳ ಸಂಸ್ಕೃತಿಗೂ ಇರುವ ಸಂಬಂಧಗಳ ಬಗೆಗೆ ಸಂಶೋಧನೆ ನಡೆಸಿದ್ದರು. ಇವರು ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರೂ (1983–87) ಜ್ಞಾನಪೀಠ ಪ್ರಶಸ್ತಿ ಕನ್ನಡ ಸಲಹಾ ಸಮಿತಿಯ ಸದಸ್ಯರೂ (1984) ರಾಜ್ಯಸಾಹಿತ್ಯ ಅಕಾಡೆಮಿ ಸದಸ್ಯರೂ (1988) ಆಗಿದ್ದರು. ಇವರು 2004ರಲ್ಲಿ ಧಾರವಾಡದಲ್ಲಿ ನಿಧನರಾದರು. **(ಜಿ.ಎಚ್.ಎಂ.)**

**ಶಂಕರಲಿಂಗೇಗೌಡ, ಎಂ.:** –1952. ಪ್ರಸಿದ್ಧ ಅರ್ಥಶಾಸ್ತ್ರಜ್ಞ, ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರರು. ಇವರು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಮೈಲಾರಪಟ್ಟಣ ಗ್ರಾಮದಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಜನಿಸಿದರು. ಇವರ ತಂದೆ ಲಿಂಗೇಗೌಡರು ಶೇಖ್‌ದಾರ್ ಆಗಿದ್ದರು. ಅವರ ಆರೋಗ್ಯ ಅಷ್ಟಾಗಿ ಚೆನ್ನಾಗಿಲ್ಲದಿದ್ದ ಕಾರಣ ತಾವು ಮಾಡಬೇಕಾಗಿದ್ದ ಕೆಲಸವನ್ನು ತಮ್ಮ ಮಗನಿಂದ ಮಾಡಿಸುತ್ತಿದ್ದರು. ಹೀಗಾಗಿ ಗೌಡರಿಗೆ ಕಂದಾಯ ಇಲಾಖೆಯ ಕೆಲಸ ಕಾರ್ಯಗಳನ್ನು ಬೇಗ ಕಲಿಯಲು ಸಾಧ್ಯವಾಯಿತು. ಬಿ.ಎ. ಪದವೀಧರರಾದ ಅನಂತರ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಂಡು ತೇರ್ಗಡೆಯಾದರೂ ಅನಿವಾರ್ಯ ಕಾರಣಗಳಿಂದ ವಿದೇಶ ವ್ಯಾಸಂಗ ಕೈತಪ್ಪಿತು. ರಾಜತ್ವಕ್ಕೆ ನಿಷ್ಠರಾಗಿದ್ದರೂ ಇವರು ಸ್ವತಂತ್ರ ಪ್ರವೃತ್ತಿಯವರಾಗಿದ್ದರು.

1925ರಲ್ಲಿ ಜೀವವಿಮಾ ಸಂಸ್ಥೆಗಾಗಿ ಯೋಜನೆಯೊಂದನ್ನು ರೂಪಿಸಿಕೊಟ್ಟರು. ಮೈಸೂರು ಸರ್ಕಾರ ಆರ್ಥಿಕ ಯೋಜನೆಯನ್ನು ತಯಾರಿಸಿ ಕೊಡಬೇಕೆಂದು ಕೋರಿದಾಗ ಉತ್ತಮ ವರದಿ ತಯಾರಿಸಿ ಸಲ್ಲಿಸಿದರು. ಬರಗಾಲದ ಸಂದರ್ಭದಲ್ಲಿ ಪರಿಹಾರ ಮಾರ್ಗೋಪಾಯಗಳ ಬಗೆಗೆ ವರದಿಯನ್ನು ತಯಾರಿಸಿಕೊಟ್ಟರು. ಗೌಡರ ಮೇಧಾಶಕ್ತಿ ಬಗ್ಗೆ ಕೇಳಿತಿಳಿದ ಕೊಲ್ಲಾಪುರ, ಬರೋಡ ಹಾಗೂ ನವನಗರ (ಸೌರಾಷ್ಟ್ರ) ಪ್ರಾಂತ್ಯಗಳ ಮಹಾರಾಜರು ತಮ್ಮ ತಮ್ಮ ಸಂಸ್ಥಾನಗಳ ಭೂಕಂದಾಯವನ್ನು ಹೊಸದಾಗಿ ನಿರ್ಧರಿಸುವ ಸಂದರ್ಭ ಒದಗಿ ಬಂದಾಗ ಆ ಹೊಣೆಗಾರಿಕೆಯನ್ನು ಇವರಿಗೆ ವಹಿಸಿದರು. ಇವರು ಆಯಾ ಪ್ರಾಂತ್ಯಗಳ ಹಳ್ಳಿ ಹಳ್ಳಿಗೂ ಭೇಟಿ ನೀಡಿ, ಖುದ್ದಾಗಿ ಪರಿಶೀಲಿಸಿ ಕಂದಾಯವನ್ನು ನಿಗದಿಪಡಿಸಿದುದೇ ಅಲ್ಲದೆ ರಾಜ್ಯದ ಆಯವ್ಯಯ ಅಂದಾಜು ಪಟ್ಟಿಯನ್ನು ರಚಿಸಿಕೊಟ್ಟರು. ಆ ಸಂದರ್ಭದಲ್ಲಿ ಇವರು ತಯಾರಿಸಿದ ನಕಾಶೆಗಳು ಇಂದಿಗೂ ಲಭ್ಯವಿದೆ.

ತಮಿಳುನಾಡಿನ ಜಮೀನ್ದಾರರು ದಿ ಸೌತ್ ಇಂಡಿಯನ್ ಎಸ್ಟೇಟ್ಸ್ ಅಂಡ್ ಲ್ಯಾಂಡ್ ಓನರ್ಸ್ ಅಸೋಸಿಯೇಷನ್ ಆಫ್ ಮದ್ರಾಸ್ ಪ್ರೆಸಿಡೆನ್ಸಿ ಎಂಬ ಸಂಘ ಸ್ಥಾಪನೆ ಮಾಡಿಕೊಂಡಿದ್ದರು. ರೈತವಾರಿ ಪದ್ಧತಿಯನ್ನು ಅಳವಡಿಸಿ ಜಮೀನ್ದಾರರ ಹಕ್ಕುಗಳನ್ನು ಕಸಿದುಕೊಳ್ಳಲು ಬ್ರಿಟಿಷ್ ಸರ್ಕಾರ ಹವಣಿಸುತ್ತಿದ್ದಾಗ ಅಲ್ಲಿನ ಜಮೀನ್ದಾರರು ಗೌಡರ ಮೊರೆ ಹೋದರು. ಆ ಸಮಸ್ಯೆಯನ್ನು ಇವರು ಸಮರ್ಥವಾಗಿ ಬಗೆಹರಿಸಿದರು. ಆಗ ಇವರಿಗೆ ತಮಿಳುನಾಡು ಸಂಸ್ಥೆ ದೇಶಬಂಧು ಎಂಬ ಬಿರುದು ನೀಡಿ ಗೌರವಿಸಿತು (1936).

ಆ ಕಾಲಕ್ಕೆ ಮೈಸೂರು ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಲು ಮದರಾಸು ಇಲ್ಲವೇ ಮುಂಬಯಿ ಬಂದರಿಗೆ ಕಳುಹಿಸಬೇಕಾಗಿತ್ತು. ಜೊತೆಗೆ ಆಯಾ ಸರ್ಕಾರಗಳಿಗೆ ಲಕ್ಷಾಂತರ ರೂಪಾಯಿ ತೆರಿಗೆ ನೀಡಬೇಕಾಗಿತ್ತು. ಈ ಅಂಶವನ್ನು ಮನಗಂಡ ಗೌಡರು ದಿ ಕರ್ನಾಟಕ ಷಿಪ್ ಬಿಲ್ಡಿಂಗ್ ಅಂಡ್ ಟ್ರಾನ್ಸ್‌ಪೋರ್ಟ್ ಕಂಪನಿ ಲಿಮಿಟೆಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಭಟ್ಕಳದ ಕರಾವಳಿಯಲ್ಲಿ ಬ್ರಿಟಿಷರಿಂದ ಜಮೀನನ್ನು ಗುತ್ತಿಗೆಗೆ ಹಿಡಿದರು (1944). ಸಂಸ್ಥೆಯ ಕಛೇರಿಯನ್ನು ಧಾರವಾಡದಲ್ಲಿ ಸ್ಥಾಪಿಸಿದರು. ಈ ಸಂಬಂಧವಾಗಿ ಅನೇಕ ಕೃತಿಗಳನ್ನು ರಚಿಸಿದರು. ಆದರೆ ಬ್ರಿಟಿಷರು ಈ ಯೋಜನೆಗೆ ಮಂಜೂರಾತಿ ನೀಡದ ಕಾರಣದಿಂದಾಗಿ ಯೋಜನೆ ಮೂಲೆಗುಂಪಾಯಿತು.

ಬೆಂಗಳೂರಿನ ರಾಜ್ಯ ಒಕ್ಕಲಿಗರ ಸಂಘಕ್ಕೆ ಇವರು ಕೆಲಕಾಲ ಆರ್ಥಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ಇವರು ಆಡಳಿತ ವ್ಯವಸ್ಥೆ ಹಾಗೂ ಆರ್ಥಿಕ ವ್ಯವಸ್ಥೆ ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಹೆಚ್ಚಿನ ಕೃತಿಗಳು ಇಂಗ್ಲಿಷ್‌ನಲ್ಲಿವೆ. ಕೆಲವು ಮುಖ್ಯ ಕೃತಿಗಳು:

(1)ಇಂಡಿಯನ್ ಎಕನಾಮಿಕ್ ಸೆನ್ಸಸ್, ವಾಲ್ಯೂಮ್ 1, 2 ಮತ್ತು 3, (2)ಭಟ್ಕಳ್ ಹಾರ್ಬರ್ ಸ್ಕೀಂ, (3)ಲೈಫ್ ಇನ್ಸೂರೆನ್ಸ್ ಎಕನಾಮಿಕ್ಸ್ (1927), (4)ಫೈನಾನ್ಸಿಯಲ್ ಪೊಸಿಷನ್ ಆಫ್ ಮೈಸೂರ್ (1791–

1932), (5)ದ ರೈಟ್ಸ್ ಆಫ್ ಮಹಾರಾಜಾಸ್ ಅಂಡ್ ವಿಲೇಜಸ್ ಆಫ್ ದೇರ್ ಸಬ್ಜೆಕ್ಟ್ಸ್, (6)ಎಕನಾಮಿಕ್ ರಿಪೋರ್ಟ್ ಆಫ್ ನಾಗಮಂಗಲ ತಾಲ್ಲೂಕ್, (7)ಅಗ್ರೇರಿಯನ್ ಪಾಲಿಸಿ ಇನ್ ದ ಮೈಸೂರ್ ಸ್ಟೇಟ್ ಅಂಡ್ ಭಟ್ಕಳ್ ಹಾರ್ಬರ್ ಸ್ಕೀಂ, (8)ಎಕನಾಮಿಕ್ ರಿಪೋರ್ಟ್ಸ್ ಆಫ್ ಎಚ್.ಎಚ್. ಛತ್ರಪತಿ ಡೊಮಿನಿಯನ್ (ಕೊಲ್ಹಾಪುರ ಡೆಕ್ಕನ್), (9) ಅಗ್ರಿಕಲ್ಚರಲ್ ಇಂಡಿಪೆಂಡೆನ್ಸ್ ಇನ್ ದ ಪ್ಲೇನ್ ಕಂಟ್ರಿ ಆಫ್ ಕೊಲ್ಹಾಪುರ್ ಸ್ಟೇಟ್, (10)ಇಂಡಿಕ್ವಿಬಲ್ ಡಿಸ್ಟ್ರಿಬ್ಯೂಷನ್ ಆಫ್ ಪಬ್ಲಿಕ್ ರೆವಿನ್ಯೂ ಇನ್ ಮೈಸೂರ್, (11) ರಿಪೋರ್ಟ್ಸ್ ಆನ್ ಎಕನಾಮಿಕ್ ಲ್ಯಾಂಡ್ ರೆಂಟ್ ಇನ್ ಎಚ್.ಎಚ್. ದ ಜಾಮ್ ಸಾಹೇಬ್ಸ್ ಡೊಮಿನಿಯನ್ಸ್–ವಾಲ್ಯೂಮ್ 1 (12) ಎಕನಾಮಿಕ್ ಅಂಡ್ ಪೊಲಿಟಿಕಲ್ ಲೈಫ್ ಇನ್ ಬರೋಡ ಅಟ್ ಭಾಗ್ಯನಗರ್. ಇವರ ಬಹುಪಾಲು ಬರೆಹಗಳು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಲ್ಲಿ ಲಭ್ಯವಿವೆ.

ಇವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿಯೂ (1942–47) ಸೇವೆ ಸಲ್ಲಿಸಿದರು. 1952ರಲ್ಲಿ ನಾಗಮಂಗಲ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ ವಿಧಾನಸಭೆಗೆ ಆಯ್ಕೆಯಾದರು. ಮಹಾತ್ಮ ಗಾಂಧಿ ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲರ ಬಗ್ಗೆ ಇವರು ಅಪಾರ ಗೌರವ ಹೊಂದಿದ್ದರು. ನೇರ ನಡೆನುಡಿಗೆ ಮತ್ತು ಸ್ಪಷ್ಟ ವಿಚಾರಗಳಿಗೆ ಹೆಸರಾಗಿದ್ದರು. ಇವರ ಅಭಿಪ್ರಾಯಗಳಿಗೆ ಸರ್ಕಾರ ಮತ್ತು ಸಾರ್ವಜನಿಕರಲ್ಲಿ ಹೆಚ್ಚು ಮಾನ್ಯತೆ ಇದ್ದಿತು. ಇವರು 1952 ಡಿಸೆಂಬರ್‌ನಲ್ಲಿ ನಿಧನರಾದರು. **(ಬಿ.ಪಿ.ಕೆ.)**

**ಶತಶೃಂಗಪರ್ವತ:** ಕೋಲಾರ ಜಿಲ್ಲೆಯಲ್ಲಿ ಕೋಲಾರ ನಗರದ ಈಶಾನ್ಯ ದಿಕ್ಕಿನಲ್ಲಿರುವ ಒಂದು ಬೆಟ್ಟ. ಎತ್ತಿನ ಕೋಡಿನಾಕಾರದ ನೂರು ಶಿಖರಗಳನ್ನೊಳಗೊಂಡ ಪರ್ವತ ಪಂಕ್ತಿಯಾದುದರಿಂದ ಇದು ಶತಶೃಂಗಪರ್ವತವೆಂದು ಪ್ರಸಿದ್ಧವಾಗಿದೆ. ಇದನ್ನು ಕೋಲಾರ ಬೆಟ್ಟವೆಂದೂ ಕರೆಯುತ್ತಾರೆ. ಇಲ್ಲಿನ ಒಂದು ಶಿಖರ ಸಮುದ್ರಮಟ್ಟದಿಂದ ಸು. 1,227 ಮೀ ಎತ್ತರವಿದೆ. ಈ ಶಿಖರ ಪಂಕ್ತಿ ಕೋಲಾರದ ಈಶಾನ್ಯದಿಂದ ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೆ ಹಬ್ಬಿದೆ. ಬೆಟ್ಟದ ಮೇಲಿನ ತೇರುಹಳ್ಳಿಯಲ್ಲಿ ಕೆಲವು ದೇವಾಲಯಗಳಿವೆ. ಬೆಟ್ಟದ ಮೇಲೆ ಅಲ್ಲಲ್ಲಿ ಫಲವತ್ತಾದ ಭೂಮಿಯಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ.

ಈ ಬೆಟ್ಟದ ಮೇಲಿರುವ ಕೊಳವನ್ನು ಅಂತರಗಂಗೆಯೆಂದು ಕರೆಯುತ್ತಾರೆ. ಬೆಟ್ಟದ ಕಲ್ಲುಬಂಡೆಗಳ ಮೂಲಕ ಹರಿದು ಬರುವ ನೀರನ್ನು ಮೊದಲು ಒಂದು ಸಣ್ಣ ತೊಟ್ಟಿಗೆ ಹಾಯಿಸಿ, ಅನಂತರ ಬಸವನ ಬಾಯಿಯ ಮೂಲಕ ಕೆಳಗಿನ ದೊಡ್ಡ ಕೊಳಕ್ಕೆ ಬೀಳುವಂತೆ ಮಾಡಲಾಗಿದೆ. ಈ ಕೊಳದ ಮಧ್ಯೆ ಒಂದು ಮಂಟಪವಿದೆ. ಈ ಬೆಟ್ಟದ ತಪ್ಪಲಲ್ಲಿ ಪಟ್ಟಣವೊಂದರ ಅವಶೇಷಗಳೂ ನೀಲಕಂಠೇಶ್ವರ ದೇವಾಲಯವೂ ಇವೆ.

ಬೆಟ್ಟದ ಮೇಲೆ ಮುಗಲರ ಕಾಲದಲ್ಲಿ ಒಂದು ಬೃಹತ್ ಕೋಟೆಯನ್ನು ನಿರ್ಮಿಸಲಾಗಿತ್ತು. ಆಗ ಕೋಲಾರವನ್ನಾಳುತ್ತಿದ್ದ ಮುಗಲರ ಸೇನಾನಾಯಕ ಖಾಸಿಂಖಾನನು ಬೆಟ್ಟದ ಮೇಲಿನ ಕೋಟೆಯಲ್ಲಿ ತನ್ನ ವಾಸಸ್ಥಾನವನ್ನು ನಿರ್ಮಿಸಿಕೊಂಡಿದ್ದ. ಈಗಲೂ ಬೆಟ್ಟದ ಮೇಲಿರುವ ಮಸೀದಿ ಎಂಬ ಹಳ್ಳಿಯೇ ಅವನ ವಾಸಸ್ಥಾನವಾಗಿದ್ದಿರಬೇಕೆಂಬ ಅಭಿಪ್ರಾಯವಿದೆ. ಇವನು ಕೆಲಕಾಲ ಶಿರಾದ ಸುಭೇದಾರನೂ ಆಗಿದ್ದ. ಈ ಕೋಟೆಯನ್ನು ಮರಾಠರು ನಾಶಮಾಡಿದರು.

ಜಮದಗ್ನಿ ಋಷಿ ಈ ಪರ್ವತದಲ್ಲಿ ನೆಲಸಿದ್ದನೆಂಬುದು ಸ್ಥಳಪುರಾಣ. ಕಾರ್ತವೀರ್ಯಾರ್ಜುನ ಈ ಋಷಿಯಲ್ಲಿದ್ದ ಸುರಭಿಯನ್ನು ಪಡೆಯಲು ಅವನನ್ನು ಕೊಂದ; ಈ ಹಂತಕನನ್ನು ಜಮದಗ್ನಿಯ ಮಗನಾದ ಪರಶುರಾಮ ಸಂಹರಿಸಿದ; ಈ ಹೋರಾಟದಿಂದ ಕೋಲಾಹಲವುಂಟಾಯಿತು; ಇದರಿಂದ ಕೋಲಾರಕ್ಕೆ ಕೋಲಾಹಲಪುರವೆಂದು ಹೆಸರಾಯಿತಂತೆ.

ಇಂದು ಬೆಟ್ಟದ ಮೇಲಿರುವ ಅಂತರಗಂಗೆ. ಗಂಗಾನದಿಯಷ್ಟೇ ಪವಿತ್ರವಾದುದು ಎಂಬ ಭಾವನೆಯಿದ್ದು ಇದೊಂದು ಯಾತ್ರಾಕ್ಷೇತ್ರವಾಗಿದೆ. ಇತ್ತೀಚೆಗೆ ಇದು ವಿಹಾರಧಾಮದ ಸ್ವರೂಪವನ್ನು ಪಡೆಯುತ್ತಿದೆ. ಇಲ್ಲಿಗೆ ಹೋಗಿಬರಲು ವಾಹನ ಸೌಕರ್ಯ ಕಲ್ಪಿಸಲಾಗಿದೆ. **(ಎಂ.ಎನ್.ವಿ.)**

**ಶನಿವಾರಸಂತೆ:** ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಒಂದು ಪಟ್ಟಣ. ಮಡಿಕೇರಿಯ ಉತ್ತರಕ್ಕೆ 64 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,003. ಪ್ರತಿ ಶನಿವಾರ ಇಲ್ಲಿ ಸಂತೆ ನಡೆಯುವುದರಿಂದ ಈ ಪಟ್ಟಣಕ್ಕೆ ಶನಿವಾರಸಂತೆ ಎಂದು ಹೆಸರು ಬಂತೆಂದು ಪ್ರತೀತಿ. ಹತ್ತೊಂಬತ್ತನೆಯ ಶತಮಾನದ ಪೂರ್ವದಲ್ಲಿ ಈ ಪಟ್ಟಣಕ್ಕೆ ಹೆಮ್ಮಿಗೆ ಎಂಬ ಹೆಸರಿತ್ತು. ಮಡಿಕೇರಿಯಿಂದ ಅರಕಲಗೂಡು, ಕೊಡ್ಲಿಪೇಟೆ, ಸಕಲೇಶಪುರಗಳಿಗೆ ಹೋಗುವ ರಸ್ತೆ ಈ ಪಟ್ಟಣದ ಮೂಲಕ ಹಾದು ಹೋಗುತ್ತದೆ. ಇಲ್ಲಿ ಸರ್ಕಾರಿ ಆಸ್ಪತ್ರೆ, ಮಕ್ಕಳ ಯೋಗಕ್ಷೇಮ ಕೇಂದ್ರ, ಪಶುವೈದ್ಯಶಾಲೆ, ಅಂಚೆ ಕಚೇರಿ, ಪ್ರೌಢಶಾಲೆ, ಪ್ರವಾಸಿಮಂದಿರ ಇವೆ. ಈ ಊರು ಅತ್ಯುತ್ತಮ ಕೈಮಗ್ಗದ ಬಟ್ಟೆಗಳಿಗಾಗಿ ಪ್ರಸಿದ್ಧ.

ಇಲ್ಲಿ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಗುಡುಗಲಾಲೆ ಜಾತ್ರೆಯೂ ಡಿಸೆಂಬರ್–ಜನವರಿ ತಿಂಗಳಲ್ಲಿ ಜಗದೇವಗುರುಗಳ ಜಾತ್ರೆಯೂ ನಡೆಯುತ್ತವೆ; ದನಗಳ ಪ್ರದರ್ಶನ ಗುಡುಗಲಾಲೆ ಜಾತ್ರೆಯ ವೈಶಿಷ್ಟ್ಯ. **(ವಿ.ಎನ್.ಎನ್.)**

**ಶರಾವತಿ:** ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆಗಳಲ್ಲಿ ಹರಿಯುವ ಒಂದು ನದಿ. ತೀರ್ಥಹಳ್ಳಿಗೆ ವಾಯವ್ಯದಲ್ಲಿ ಸು. 16 ಕಿಮೀ ದೂರದಲ್ಲಿ ಕವಲೇದುರ್ಗದ ಬಳಿ ಇರುವ ಅಂಬುತೀರ್ಥದಲ್ಲಿ ಇದರ ಉಗಮ. ಉಗಮಸ್ಥಾನದಿಂದ ಸ್ವಲ್ಪದೂರ ವಾಯವ್ಯ ದಿಕ್ಕಿನತ್ತ ಹರಿಯುವ ಈ ನದಿಯನ್ನು ಪಟ್ಟಗುಪ್ಪೆಯ ಬಳಿ ಬಲಗಡೆಯಲ್ಲಿ ಹರಿದ್ರಾವತಿ ನದಿಯೂ ಬಾರಂಗಿ ಮೇಲುಗಡೆ ಎಡಭಾಗದಲ್ಲಿ ಎಣ್ಣೆಹೊಳೆಯೂ ಕೂಡಿಕೊಳ್ಳುತ್ತವೆ. ಇವಲ್ಲದೆ ಹುರ್ಳಿಹೊಳೆ, ಬಿರ್ದನ ಹೊಳೆ, ಶರ್ಮಣಾವತಿ, ದೂಳಿಮಕ್ಕಿ ಹೊಳೆ ಮುಂತಾದ ಸಣ್ಣಪುಟ್ಟ ತೊರೆಗಳನ್ನೂ ಕೂಡಿಕೊಂಡು ಹರಿಯುವ ಈ ನದಿ ಶಿವಮೊಗ್ಗ ಜಿಲ್ಲೆಯಲ್ಲಿ ಸು. 32 ಕಿಮೀ ದೂರ ಹರಿದು, ಜಿಲ್ಲೆಯ ಗಡಿಯಲ್ಲಿ ಪಶ್ಚಿಮಕ್ಕೆ ತಿರುಗಿ ಪಶ್ಚಿಮಘಟ್ಟದಿಂದ ಕೆಳಗೆ ದುಮುಕಿ ಜೋಗ ಜಲಪಾತವನ್ನುಂಟುಮಾಡಿದೆ **(ನೋಡಿ: ಜೋಗಜಲಪಾತ)**. ಮುಂದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಹಿಸಿ ಹೊನ್ನಾವರದ ಬಳಿ ಅರಬ್ಬಿಸಮುದ್ರವನ್ನು ಸೇರುತ್ತದೆ. ಈ ನದಿಯ ಒಟ್ಟು ಹರಿವಿನ ಉದ್ದ 128 ಕಿಮೀ.

ಈ ನದಿ ಕರ್ನಾಟಕ ರಾಜ್ಯದ ಜಲವಿದ್ಯುತ್ ಪೂರೈಕೆಯಲ್ಲಿ ಮುಖ್ಯಸ್ಥಾನ ಪಡೆದಿದೆ. ಶರಾವತಿ ಜಲವಿದ್ಯುತ್ ಯೋಜನೆಯ ಪ್ರಕಾರ ಈ ನದಿಗೆ ಲಿಂಗನಮಕ್ಕಿ **(ನೋಡಿ)** ಎಂಬಲ್ಲಿ ಅಣೆಕಟ್ಟನ್ನು ಕಟ್ಟಿ ಜಲವಿದ್ಯುದುತ್ಪಾದನೆಗೆ ಬಳಸಿಕೊಳ್ಳಲಾಗುತ್ತಿದೆ. ಮಹಾತ್ಮಗಾಂಧಿ ಜಲವಿದ್ಯುತ್ ಉತ್ಪಾದನಾ ಕೇಂದ್ರದಿಂದ 5 ಕಿಮೀ ದೂರದಲ್ಲಿರುವ ಆನೆಬೈಲು ವಿದ್ಯುತ್ ಉತ್ಪಾದನಾ ಕೇಂದ್ರ ಆಗ್ನೇಯ ಏಷ್ಯದಲ್ಲೇ ದೊಡ್ಡದು. ಲಿಂಗನಮಕ್ಕಿ ಅಣೆಕಟ್ಟಿನ ಬಳಿಯೂ ವಿದ್ಯುತ್ ಉತ್ಪಾದನಾ ಕೇಂದ್ರವೊಂದನ್ನು ನಿರ್ಮಿಸಲು ಯೋಜಿಸಲಾಗಿದೆ. ಶಿವಮೊಗ್ಗ ಜಿಲ್ಲೆಯ ನೀರಾವರಿಗೂ ಈ ನದೀಜಲದ ಬಳಕೆಯುಂಟು.

ಈ ನದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಆರು ಫರ್ಲಾಂಗ್ ಉದ್ದದ ಸೇತುವೆ ಕಟ್ಟಿದ್ದು ಮಂಗಳೂರಿನಿಂದ ಮುಂಬಯಿ ವರೆಗಿನ ಕರಾವಳಿ ಮಾರ್ಗ ಈಗ ಹೆಚ್ಚು ಉಪಯುಕ್ತವಾದ ವ್ಯಾಪಾರದ ಅಭಿವೃದ್ಧಿಗೆ



ಪ್ರಪಂಚ ಖ್ಯಾತ ಜೋಗ ಜಲಪಾತ

ಕಾರಣವಾಗಿದೆ. ಹೊನ್ನಾವರದ ಬಳಿ ಈ ನದಿ ಸಮುದ್ರ ಸೇರುವ ತಾಣದಿಂದ ಸ್ವಲ್ಪ ದೂರದವರೆಗೆ ಜಲಸಂಚಾರಕ್ಕೆ ಅನುಕೂಲವಾಗಿದ್ದು ಸರಕುಗಳ ಸಾಗಣೆ ನಡೆಯುವುದು.

ಅರಣ್ಯವಾಸಕಾಲದಲ್ಲಿ ಶ್ರೀರಾಮಚಂದ್ರ ನೀರಿಗಾಗಿ ಅಂಬನ್ನು ನೆಲಕ್ಕೆ ಬಿಟ್ಟು ಜಲ ಉದ್ಭವಿಸುವಂತೆ ಮಾಡಿದನೆಂದೂ ಅದರಿಂದಲೇ ಅಂಬುತೀರ್ಥ ಎಂಬ ಹೆಸರೂ ಶರದಿಂದ ಜನಿಸಿದ್ದರಿಂದ ಈ ನದಿಗೆ ಶರಾವತಿಯೆಂಬ ಹೆಸರೂ ಬಂತೆಂದೂ ಪುರಾಣ ಕಥೆ. **(ಡಿ.ಎಸ್.ಕೆ.)**

**ಶಾಂತಕವಿ:** 1856–1920. ಕನ್ನಡದ ಮುಂಬೆಳಕಿನ ಕಾಲದ ನಾಟಕ ಕಾರರು, ಕವಿಗಳು ಮತ್ತು ಕೀರ್ತನಕಾರರು. ಇವರ ಪೂರ್ಣ ಹೆಸರು ಬಾಳಾಚಾರ್ಯ ಗೋಪಾಳಾಚಾರ್ಯ ಸಕ್ಕರಿ. ಶಾಂತಕವಿ ಎಂಬ ಹೆಸರಿನಿಂದ ಪ್ರಸಿದ್ಧರು. ಧಾರವಾಡ ಜಿಲ್ಲೆಯ ಸಾತೇನಹಳ್ಳಿಯಲ್ಲಿ 1856 ಜನವರಿ 15ರಂದು ಜನಿಸಿದರು. ಮನೆಯಲ್ಲಿ ಸಂಸ್ಕೃತ ವ್ಯಾಸಂಗ ಮತ್ತು ಶಾಲೆಯಲ್ಲಿ ಕನ್ನಡವನ್ನು ಓದಿದ ಇವರು ಉಪಾಧ್ಯಾಯ ಕೆಲಸಕ್ಕಾಗಿ ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ತರಬೇತನ್ನು ಪಡೆದು ಉಪಾಧ್ಯಾಯರಾದರು. ಧಾರವಾಡ ಜಿಲ್ಲೆಯ ಅನೇಕ ಊರುಗಳಲ್ಲಿ ಸು.40 ವರ್ಷಗಳ ಕಾಲ ಕೆಲಸ ಮಾಡಿ 1912ರಲ್ಲಿ ನಿವೃತ್ತರಾದರು. ಅಂದಿನ ದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿ ಮರಾಠಿ ಪ್ರಾಬಲ್ಯ ಹೆಚ್ಚಿತ್ತು; ಕನ್ನಡವನ್ನು ಕೇಳುವವರೇ ಇರಲಿಲ್ಲ. ಅಂಥ ದಿನಗಳಲ್ಲಿ ಒಳ್ಳೆಯ ಕೀರ್ತನಕಾರರೂ ಆಗಿದ್ದ ಇವರು ನಾಡುನುಡಿಗಳ ಮೇಲೆ ಮಮತೆಯನ್ನು ಹುಟ್ಟಿಸುವಂಥ ಅನೇಕ ಕೀರ್ತನೆಗಳನ್ನು ರಚಿಸಿ, ಸಭೆಗಳಲ್ಲಿ ಹಾಡಿ ಜನಜಾಗೃತಿಯನ್ನುಂಟುಮಾಡಿದರು. ನಾಟಕ ರಚನೆಯಲ್ಲೂ ಆಸಕ್ತಿ ವಹಿಸಿದ ಇವರು, ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲೇ ಉಷಾಹರಣ ಎಂಬ ನಾಟಕವನ್ನು ಬರೆದು ಆಡಿಸಿದರು. ಕನ್ನಡದ ಆ ನಾಟಕವನ್ನು ನೋಡಿ ಜನ ಮೆಚ್ಚಿಕೊಂಡರು. ಅದರಿಂದ ಉತ್ಸಾಹಗೊಂಡ ಇವರು ಶ್ರೀಯಾಳ ಸತ್ತ್ವಪರೀಕ್ಷೆ, ಕೀಚಕವಧೆ, ವತ್ಸಲಾಹರಣ, ಸುಧನ್ವವಧೆ ಮುಂತಾದ ಅನೇಕ ನಾಟಕಗಳನ್ನು ಬರೆದರಲ್ಲದೆ, 1873ರಲ್ಲಿ ಕರ್ನಾಟಕ ನಾಟಕ ಕಂಪನಿಯನ್ನು ಕಟ್ಟಿ ಈ ನಾಟಕಗಳನ್ನು

ಪ್ರದರ್ಶಿಸಿದರು. ಇದರಿಂದ ಕನ್ನಡ ನಾಟಕಗಳಿಗೂ ಪ್ರಚಾರ ದೊರೆತು, ಮರಾಠಿ ನಾಟಕಗಳ ಪ್ರಾಬಲ್ಯ ಸ್ವಲ್ಪಮಟ್ಟಿಗೆ ಕುಗ್ಗಿತು. ಇವರ ಕನ್ನಡ ನಾಟಕಗಳನ್ನು ಆಡಲು ಅನೇಕ ನಾಟಕ ಕಂಪನಿಗಳೂ ಮುಂದಾದವು.

ಶಾಂತಕವಿಗಳು ತಮ್ಮ ದೀರ್ಘ ಉಪಾಧ್ಯಾಯವೃತ್ತಿಯಲ್ಲಿ ದೊರೆತ ಅಲ್ಪ ವೇಳೆಯಲ್ಲಿಯೇ ಸುಮಾರು ಅರವತ್ತಕ್ಕೂ ಮಿಕ್ಕು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕೀಚಕವಧೆ, ಪಾರ್ವತೀಪರಿಣಯ (ಬಾಣಕವಿಯ ಸಂಸ್ಕೃತ ನಾಟಕದ ಭಾಷಾಂತರ), ಕಾಳಿದಾಸ ಕವಿಯ ಮೇಘದೂತ (ಅನುವಾದ), ಶಾಕುಂತಲ (ಅನುವಾದ), ಋತುಸಂಹಾರ (ಅನುವಾದ), ಮೃಚ್ಛಕಟಿಕ (ಅನುವಾದ), ಸೀತಾರಣ್ಯಪ್ರವೇಶ, ಹರಿಶ್ಚಂದ್ರಸತ್ತ್ವಪರೀಕ್ಷಾ ಮುಂತಾದ ಪೌರಾಣಿಕ ಕೃತಿಗಳೂ ಅಡ್ಡಕತೆಗಳ ಬುಕ್ಕು, ಕನ್ನಡ ದಾಸಯ್ಯನ ಪದ್ಯಗಳು, ಕ್ನಡಿಗರಿಗೆ ಸವಾಲುಗಳು, ವ್ಯಭಿಚಾರಾನರ್ಥ ಸಿಂಧು, ವಾಸಪ್ಪ ನಾಯಕನ ಫಾರ್ಸು, ಕಾಲಮಹಿಮೆ, ಕಾಳಾಸುರ ಮುಂತಾದ ಹಾಸ್ಯಪ್ರಬಂಧಗಳೂ ಶೃಂಗಾರಸಾಗರ, ವಿರಹತರಂಗ, ಶೃಂಗಾರಪದಸಂಗ್ರಹ, ರಸಿಕ ವಿಚಾರ ಮುಂತಾದ ಶೃಂಗಾರ ಪ್ರಧಾನ ರಚನೆಗಳೂ ಸೇರಿದೆ. ಇವರ ಈ ಸ್ಫೂರ್ತಿದಾಯಕ ಕೃತಿಗಳು ಸುಪ್ತಾವಸ್ಥೆಯಲ್ಲಿದ್ದ ಜನತೆಯನ್ನು ಎಚ್ಚರಿಸಿದವು. ಕನ್ನಡ ಸಂಸ್ಕೃತಿಯನ್ನು ಪುನರುಜ್ಜೀವನ ಗೊಳಿಸುವಲ್ಲಿ ಇವರ ನಾಟಕಗಳು ಪ್ರಧಾನಪಾತ್ರ ವಹಿಸಿದವು. ರಾಷ್ಟ್ರೀಯತ್ವವೇ ಯುಗಧರ್ಮ ಎಂದು ಸಾರಿದ್ದು, ಆ ದಿಶೆಯಲ್ಲಿ ದುಡಿದದ್ದು ಶಾಂತಕವಿಗಳ ಹಿರಿಮೆ. ಇವರ ಸೇವೆಯನ್ನು ಮನ್ನಿಸಿ ಧಾರವಾಡದಲ್ಲಿ 1880ರಲ್ಲಿ ಸಾರ್ವಜನಿಕ ಸಮಾರಂಭವೊಂದರಲ್ಲಿ ಇವರಿಗೆ ಉಡುಗೊರೆಯಿತ್ತು ಗೌರವಿಸಲಾಯಿತು. **(ಎಂ.ಜಿ.ಎನ್.)**

**ಶಾಂತರಾವ್:** 1925– . ಸುಪ್ರಸಿದ್ಧ ನೃತ್ಯ ಕಲಾವಿದೆ. ಇವರು ಮುಂಬೈನಲ್ಲಿ 1925ರಲ್ಲಿ ಜನಿಸಿದರು. ಇವರ ತಂದೆ ವ್ಯಾಪಾರ ವಹಿವಾಟಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಮುಂಬೈಗೆ ಹೋಗಿ ನೆಲೆಸಿದವರು. ಸ್ವಾತಂತ್ರ್ಯ ಚಳವಳಿಗಳಲ್ಲಿಯೂ ಭಾಗವಹಿಸಿದ್ದರು. ಇವರ ತಾಯಿ ಲಲಿತಕಲೆಗಳಲ್ಲಿ ಆಸಕ್ತಿ ಇದ್ದವರಾಗಿದ್ದರು. ಇವರ ಮನೆ ಸ್ವಾತಂತ್ರ್ಯ ಹೋರಾಟಗಾರರ ಕೇಂದ್ರವಾಗಿತ್ತು. ಸುಪ್ರಸಿದ್ಧ ಹೋರಾಟಗಾರರಾದ ಹರೀಂದ್ರನಾಥ ಚಟ್ಟೋಪಾಧ್ಯಾಯ, ಕಮಲಾಬಾಯಿ, ಸರೋಜಿನಿನಾಯ್ಡು ಮೊದಲಾದವರು ಇಲ್ಲಿಗೆ ಬರುತ್ತಿದ್ದರು. ಇಂಥ ಮುಕ್ತ ವಿಚಾರಗಳ ವಾತಾವರಣದಲ್ಲಿ ಶಾಂತಾರಾವ್ ಬೆಳೆದರು. ಹಾಗಾಗಿ ಚಿಕ್ಕಂದಿನಿಂದಲೇ ಇವರಿಗೆ ಕಲೆಯಲ್ಲಿ ಬಹುವಾಗಿ ಆಸಕ್ತಿ ಬೆಳೆಯಿತು. ಶಾಲಾ ವಿದ್ಯಾಭ್ಯಾಸ

ದಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಕಥಕಳಿ ನೃತ್ಯದ ಅಭ್ಯಾಸ ಮಾಡಲು ಕಲಾಮಂಡಲಂ ಎಂಬ ಕೇರಳದ ಸುಪ್ರಸಿದ್ಧ ನೃತ್ಯಶಾಲೆಯನ್ನು ಸೇರಿದರು (1940). ಕವಿ ವಲ್ಲತೋಳರ ಆತಿಥ್ಯದಲ್ಲಿ ಕಥಕಳಿ ಗುರು ರಾವುನ್ನಿ ಮೆನನ್ ಅವರಲ್ಲಿ ಅಭ್ಯಾಸ ಪ್ರಾರಂಭಿಸಿದರು. ಇಲ್ಲಿ ಇವರು ಅತ್ಯಂತ ಕಷ್ಟಕರವಾದ ತೋಡಯಂ, ಅಷ್ಟ ಕಲಾಂಶಗಳನ್ನು ಕರಗತ ಮಾಡಿಕೊಂಡರು. ದುಶ್ಯಾಸನ ವಧೆಯನ್ನು ವಿಶೇಷವಾಗಿ ಅಭ್ಯಾಸಮಾಡಿದರು. 1942ರಲ್ಲಿ ಇವರು ಮೋಹಿನಿ ಆಟ್ಟಂ ಕಲಿತು ರಂಗಪ್ರವೇಶ ಮಾಡಿದರು. ಕಲೆಯ ನಾನಾ ಪ್ರಾಕಾರಗಳಲ್ಲಿ ಆಸಕ್ತಿ ಹೊಂದಿದ್ದ ಇವರು ಸಿಂಹಳಕ್ಕೆ ಭೇಟಿ ನೀಡಿ ಕಾಂಡ್ಯನ್‌ನ ನೃತ್ಯವನ್ನು ಅಭ್ಯಾಸ ಮಾಡಿದರು. ಅದರ ವಿಶಿಷ್ಟ ಶೈಲಿಯಾದ ನಾಗವನ್ನಮ, ಇದಡಿ ಎಂಬ ಸಂಯೋಜನೆಯನ್ನು ಕಲಿತು ಕೊಲಂಬೋದಲ್ಲಿ ಪ್ರದರ್ಶನ ನೀಡಿ ಆಮ್ರಪಾಲಿಯ ಪುನರಾವತಾರ ಎಂಬ ಹೊಗಳಿಕೆಗೆ ಪಾತ್ರರಾದರು.

ಅನಂತರ ಪ್ರಖ್ಯಾತರಾದ ಪಂದನಲ್ಲೂರು ಮೀನಾಕ್ಷಿ ಸುಂದರಂ ಪಿಳ್ಳೈ ಅವರಲ್ಲಿ ಭರತನಾಟ್ಯ ಕಲಿಯಲು ನಿರ್ಧಾರ ಮಾಡಿ ಅವರಲ್ಲಿ ಶಿಷ್ಯವೃತ್ತಿ ಆರಂಭಿಸಿದರು. ಈ ನೃತ್ಯದಲ್ಲಿ ಪರಿಣತಿ ಪಡೆದರು. ಐದು ವರ್ಷ ಸತತವಾಗಿ ಅಭ್ಯಾಸ ಮಾಡಿ 1943ರಲ್ಲಿ ಚೆನ್ನೈನಲ್ಲಿ ಹೆಸರಾಂತ ಮ್ಯೂಸಿಯಂ ಥಿಯೇಟರಿನಲ್ಲಿ ಅರಂಗೇಟ್ರಂ ನೆರವೇರಿಸಿದರು. ಅನಂತರ ದೇಶ ವಿದೇಶಗಳಲ್ಲಿ ಇವರು ಅನೇಕ ನೃತ್ಯ ಪ್ರದರ್ಶನಗಳನ್ನು ನೀಡಿ ವಿಖ್ಯಾತರಾದರು.

ಇವರು ನೃತ್ಯ ಪ್ರದರ್ಶನಗಳಲ್ಲಿ ತೋರುತ್ತಿದ್ದ ಅಚ್ಚುಕಟ್ಟು ಮತ್ತು ಸುವ್ಯವಸ್ಥೆಯೂ ಪ್ರಖ್ಯಾತಿಗಳಿಸಿತ್ತು. ನಿರಾಡಂಬರತೆಯಿಂದ ಕೂಡಿದ ರಂಗಸಜ್ಜಿಕೆ, ಹಿನ್ನೆಲೆ, ವಸ್ತ್ರಾಲಂಕಾರ, ವರ್ಣವಿನ್ಯಾಸ, ಕಾರ್ಯಕ್ರಮ ವಿನ್ಯಾಸ ಮತ್ತು ಕಾರ್ಯಕ್ರಮ ಯಶಸ್ವಿಯಾಗಲು ಇವರು ತೆಗೆದುಕೊಳ್ಳುತ್ತಿದ್ದ ಮುನ್ನೆಚ್ಚರಿಕೆ, ಪೂರ್ವಸಿದ್ಧತೆ, ದೀಪ, ಧ್ವನಿ ವ್ಯವಸ್ಥೆ ಪ್ರತಿಯೊಂದೂ ವಿಶಿಷ್ಟವೂ ಪರಿಪೂರ್ಣವೂ ಆಗಿರುತ್ತಿದ್ದವು. ಭಾಮಾಸೂತ್ರದಲ್ಲಿ ಆಸಕ್ತಿ ವಹಿಸಿದ ಇವರು ಇದರ ಆಧಾರದ ಮೇಲೆ ಒಂದು ವಿಶಿಷ್ಟ ನೃತ್ಯ ಶೈಲಿಯನ್ನು ಆವಿಷ್ಕಾರ ಮಾಡಿದ್ದರು. ಸರಕಾರದ ನೆರವಿನಿಂದ ಇವರು ಶಾಂತಾರಾವ್ ಅಕಾಡೆಮಿ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದರು.

ಇವರ ಪ್ರತಿಭೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಹಲವು. ರಾಜ್ಯ ನೃತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ನೃತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಶಾಂತಲಾ ಪ್ರಶಸ್ತಿ, ಪದ್ಮಶ್ರೀ- ಇವು ಕೆಲವು ಮುಖ್ಯ ಪ್ರಶಸ್ತಿಗಳು. ವಸಂತ ಋತುವಿನ ಕುಸುಮ, ಮಾಳವಿಕಾ, ಆಮ್ರಪಾಲಿ ಮುಂತಾದವು ಇವರಿಗೆ ಸಂದ ಬಿರುದುಗಳು.

**(ಎಸ್.ಯು.ಎಂ.)**

**ಶಾಂತಲದೇವಿ:** ಪ್ರಸಿದ್ಧ ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟಮಹಿಷಿ. ಇವಳ ಹುಟ್ಟೂರು ಬಲಿಪುರ (ಬಳ್ಳಿಗಾವೆ). ತಂದೆ ಮಾರಸಿಂಗಯ್ಯ, ತಾಯಿ ಮಾಚಿಕಬ್ಬೆ, ಮಾವ ಪೆರ್ಗಡೆ ಸಿಂಗಯ್ಯ, ಗುರು ಪ್ರಭಾಚಂದ್ರದೇವ, ಇಷ್ಟದೈವ ಜಿನನಾಥ. ವಿಷ್ಣುವರ್ಧನ **(ನೋಡಿ)** ಪಟ್ಟಕ್ಕೆ ಬರುವುದಕ್ಕೆ ಹತ್ತುಹದಿನೈದು ವರ್ಷಗಳಿಗೆ ಹಿಂದೆಯೇ ಅವನು ಶಾಂತಲದೇವಿಯನ್ನು ವಿವಾಹವಾಗಿರಬೇಕು. 1108ರಲ್ಲಿ ಅವನು ರಾಜ್ಯಸೂತ್ರಗಳನ್ನು ವಹಿಸಿಕೊಂಡ ಮೇಲೆ ಎರಡು ದಶಕಗಳಿಗೂ ಹೆಚ್ಚಾಗಿ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಈಕೆಯ ಪ್ರಭಾವ ಪ್ರಬಲವಾಗಿತ್ತು.

ಹೊಯ್ಸಳ ರಾಜ್ಯ ಪ್ರಸಿದ್ಧಿಗೆ ಬರುತ್ತಿದ್ದ ಕಾಲದಲ್ಲಿ ಶಾಂತಲೆಗಿದ್ದ ಸ್ಥಾನಮಾನ, ಇವಳ ಗುಣ, ವ್ಯಕ್ತಿತ್ವಗಳನ್ನು ಅನೇಕ ಶಾಸನಗಳು ಹೊಗಳುತ್ತವೆ. ಪರಮಕಲ್ಯಾಣಾಭ್ಯುದಯ ಸತಸಹಸ್ರ ಫಳಭೋಗ ಭಾಗಿನೀ ದ್ವಿತೀಯಲಕ್ಷ್ಮೀ ಸಮಾನೆ, ಅಭಿನವ ರುಕ್ಮಿಣೀದೇವಿ, ಪತಿಹಿತ ಸತ್ಯಭಾಮೆ, ವಿವೇಕಯ್ಕಬೃಹಸ್ಪತಿ, ಪ್ರತ್ಯುತ್ಪನ್ನವಾಚಸ್ಪತಿ, ಮುನಿಜನ ವಿನೇಯಜನವಿನೀತೆ, ಪತಿಬ್ರತಾಪ್ರಭಾವ ಪ್ರಸಿದ್ಧಶೀಲೆ, ಸಕಳವಂದಿಜನ ಚಿಂತಾಮಣಿ, ಸಮ್ಯಕ್ತ್ವಚೂಡಾಮಣಿ, ಸವತಿಗಂಧವಾರಣೆ, ಚತುಸ್ಸಮಯ ಸಮುದ್ಧರಣಕಾರಣೆ, ನಿಜಕುಳಾಭ್ಯದಯದೀಪಿಕೆ, ಗೀತವಾದ್ಯನ್ರಿತ್ಯಸೂತ್ರ ಧಾರೆ, ಜಿನಸಮಯಸಮುದಿತಪ್ರಾಕಾರೆ, ಆಹಾರಾಭಯ ಭೈಷಜ್ಯಶಾಸ್ತ್ರ ದಾನವಿನೋದೆ, ವಿಷ್ಣುವರ್ಧನ ಹೊಯ್ಸಳದೇವರ ಪಿರಿಯರಸಿ, ಪಟ್ಟಮಹಾದೇವಿ- ಇವು ಇವಳ ಕೆಲವು ವಿಶೇಷಣಗಳು.

ಶಾಂತಲದೇವಿಗೆ ಕುಮಾರ ಬಲ್ಲಾಳನೆಂಬ ಮಗನೂ ಚಿಕ್ಕಹರಿಯಲೆ (ಹರಿಯಲಾದೇವಿ) ಎಂಬ ಮಗಳೂ ಇದ್ದರು. ಕುಮಾರ ಬಲ್ಲಾಳ ರಾಜ್ಯಭಾರದಲ್ಲಿ ತಂದೆಗೆ ನೆರವಾಗಿದ್ದು, ಶಾಂತಲೆಗೆ ಮುಂಚೆಯೇ ಮೃತನಾದ. ಹರಿಯಲೆ ಭರತೇಶ ದಂಡನಾಯಕನನ್ನು ಮದುವೆಯಾಗಿದ್ದಳು.

ಶಾಂತಲೆ ಧರ್ಮಶ್ರದ್ಧೆಯಿಂದ ಅನೇಕ ಪುಣ್ಯ ಕೆಲಸಗಳನ್ನು ಮಾಡಿದ್ದಾಳೆ. ಶ್ರವಣಬೆಳಗೊಳದ ಸವತಿಗಂಧವಾರಣ ಬಸದಿ ಇವಳ ಕೊಡುಗೆ. ಹಾಸನ ತಾಲ್ಲೂಕಿನಲ್ಲಿರುವ ಶಾಂತಿಗ್ರಾಮವನ್ನು ಸ್ಥಾಪಿಸಿ ಅಲ್ಲಿನ ದೇವಾಲಯಗಳನ್ನು ನಿರ್ಮಿಸಿದಳು. ಬೇಲೂರಿನಲ್ಲಿ ಚೆನ್ನಕೇಶವ ದೇವಾಲಯದ ಪಕ್ಕದಲ್ಲಿರುವ ಕಪ್ಪೆಚೆನ್ನಿಗರಾಯ ದೇವಾಲಯವನ್ನು ಈಕೆ ಕಟ್ಟಿಸಿದುದಾಗಿ ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಕೊನೆಯವರೆಗೂ ಜಿನಭಕ್ತೆಯಾಗಿಯೇ ಇದ್ದರೂ ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ನೀಡಿದಳು. ರಾಮಾನುಜರ ಅನುಗ್ರಹದಿಂದ ಬಿಟ್ಟಿದೇವ, ವಿಷ್ಣುವರ್ಧನನೆಂಬ ಹೆಸರನ್ನು ತಾಳಲು ಶಾಂತಲೆ ಕಾರಣಳೆಂಬ ಅಭಿಪ್ರಾಯವಿದ್ದರೂ ಇದಕ್ಕೆ ಆಧಾರವಿಲ್ಲವೆಂದು ತೋರುತ್ತದೆ.

ಬೇಲೂರಿನ ಚೆನ್ನಕೇಶವ ದೇವಾಲಯದ ಮುಂದೆ ಒಂದೇ ಕಲ್ಲಿನಲ್ಲಿ ಕಂಡರಿಸಿರುವ ಅಂಜಲಿಮುದ್ರೆಯಲ್ಲಿರುವ ಸರ್ವಾಲಂಕೃತ ಗಂಡು-ಹೆಣ್ಣಿನ ವಿಗ್ರಹಗಳನ್ನು ವಿಷ್ಣುವರ್ಧನ-ಶಾಂತಲೆಯರೆಂದು ಆರ್.ನರಸಿಂಹಾಚಾರ್ಯರು ಗುರುತಿಸಿದ್ದಾರೆ. ಶಾಂತಲೆ ಪತಿಯೊಡನೆ ಒಡ್ಡೋಲಗದಲ್ಲಿ ಕುಳಿತಿರುವ ಭವ್ಯದೃಶ್ಯದ ಕಲಾಕೃತಿ ಕೇಶವ ದೇವಾಲಯದ ಮುಂಭಾಗದ ಗೋಡೆಯ ಮೇಲಿನ ಚಿತ್ತಾರದ ಜಾಲಂಧ್ರವೊಂದರ ಮೇಲಿದೆ.

ಶಾಂತಲದೇವಿ 1131ರಲ್ಲಿ ಶಿವಗಂಗೆಯ ತೀರ್ಥದಲ್ಲಿ ಮುಡುಪಿ ಸ್ವರ್ಗಸ್ಥಳಾದಳು.

**(ವಿ.ಜಿ.ಕೆ.)**

**ಶಾಂತವೀರದೇಶಿಕ:** ಸು.1650. ವೀರಶೈವ ಕವಿ. ಈತ ಶಿವಲಿಂಗ ಚಾರಿತ್ರ, ಶಿವಗಣಚಾರಿತ್ರ, ಸೌಂದರೇಶ್ವರನ ಯಕ್ಷಗಾನ, ಶಿವಮಹತ್ತ್ವ ಸಾರಶಿಖಾಮಣಿ ಸಂಗ್ರಹ ಶತಕ, ಗಿರಿಜಾದೇವಿಯ ಸಂಕೀರ್ತನ ಎಂಬ ಕೃತಿಗಳನ್ನು ರಚಿಸಿದ್ದಾನೆ. ಕೆಣಿಯನೂರು ಇವನ ಜನ್ಮಸ್ಥಳ. ಕವಿಯ ಮುತ್ತಜ್ಜ ಶಿವಲಿಂಗಾರ್ಯ, ಅಜ್ಜ ವೀರೇಶಾರ್ಯ, ತಂದೆ ಚೆನ್ನವೀರೇಶ್ವರ. ಪೂರ್ವಕವಿಗಳಲ್ಲಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಗುಬ್ಬಿಯ ಮಲ್ಲಣಾರ್ಯ, ಸೋಮಾರ್ಯ ಮೊದಲಾದವರನ್ನು ಸ್ತುತಿಸಿದ್ದಾನೆ. ಈತ ಸ್ಮರಿಸುವ ಮಲ್ಲಣನೆಂಬ ಮತ್ತೊಬ್ಬ ಕವಿ ಗುಬ್ಬಿಯ ಮಲ್ಲಣನಿರಬಹು

ದೆಂದು ತೋರುತ್ತದೆ. ಕವಿ ತನ್ನನ್ನು ಆನಂದಾಗಮವೇದ ಶಂಕರಪುರಾಣಾರ್ಥ ಜ್ಞಸತ್ಕೋವಿದ, ನಾನಾ ಕಾವ್ಯ ವಿಚಾರಪೂರಕಕವಿತಾ ಕರ್ನಾಟಕ ಚಕ್ರೇಶ್ವರ ಎಂದು ವಿಶೇಷಿಸಿಕೊಂಡಿದ್ದಾನೆ.

ಶಿವಲಿಂಗ ಚಾರಿತ್ರ 3 ಆಶ್ವಾಸ ಮತ್ತು 124 ಪದ್ಯಗಳುಳ್ಳ ಚಂಪೂಕಾವ್ಯ. ಇದರಲ್ಲಿ ಪಂಡಿತಾರಾಧ್ಯ ವಂಶದ ಶಿವಲಿಂಗಾಚಾರ್ಯರ ಚರಿತ್ರೆ ಹೇಳಿದೆ. ಶಿವಗಣಚಾರಿತ್ರ 42ಸಂಧಿ ಹಾಗೂ 2,740 ಪದ್ಯಗಳನ್ನು ಹೊಂದಿರುವ ಸಾಂಗತ್ಯ ಕಾವ್ಯ. ಇದರಲ್ಲಿ ಶಿವಗಣಗಳ ಚರಿತ್ರೆ ವರ್ಣಿತವಾಗಿದೆ. ಸೌಂದರೇಶ್ವರನ ಯಕ್ಷಗಾನ ಹೆಸರೇ ಸೂಚಿಸುವಂತೆ ಯಕ್ಷಗಾನ ಕೃತಿ. ಇದಕ್ಕೆ ಜನವಶ್ಯತಿಲಕ ಎಂಬ ಇನ್ನೊಂದು ಹೆಸರೂ ಇದೆ. ಇದರಲ್ಲಿ 13 ಸಂಧಿಗಳೂ 1,610 ಪದ್ಯಗಳೂ ಇದ್ದು 63 ಶಿವಭಕ್ತರಲ್ಲಿ ಒಬ್ಬನಾದ ಸೌಂದರೇಶ್ವರನ ಅಥವಾ ನಂಬಿಯಣ್ಣನ ಕಥೆ ವರ್ಣಿತವಾಗಿದೆ. ಶಿವಮಹತ್ವ ಸಾರಶಿಖಾಮಣಿ ಸಂಗ್ರಹ ಶತಕದಲ್ಲಿ 100 ಶಾರ್ದೂಲ ವಿಕ್ರೀಡಿತವೃತ್ತಗಳಿದ್ದು ಒಂದೊಂದು ವೃತ್ತವೂ ಶ್ರೀಶಾಂತವೀರೇಶ್ವರ ಎಂದು ಮುಗಿಯುತ್ತದೆ. ಪ್ರತಿ ವೃತ್ತಕ್ಕೂ ವ್ಯಾಖ್ಯಾನರೂಪವಾಗಿ ಸಂಸ್ಕೃತ ಗ್ರಂಥಗಳಿಂದ ಶ್ಲೋಕಗಳನ್ನು ಅನುವಾದ ಮಾಡಿದೆ. ಶಿವಮಹತ್ತ್ವವನ್ನು ನಿರೂಪಿಸುವುದೇ ಈ ಕೃತಿಯ ಮುಖ್ಯ ಗುರಿಯಾಗಿರುವಂತೆ ಕಂಡುಬರುತ್ತದೆ. ಗಿರಿಜಾದೇವಿಯ ಸಂಕೀರ್ತನದಲ್ಲಿ ಪಾರ್ವತಿಯ ಸ್ತುತಿರೂಪವಾದ 131 ಪದ್ಯಗಳಿವೆ. ಶಿವಜ್ಞಾನಚಾರಿತ್ರವೆಂಬ ಮತ್ತೊಂದು ಕೃತಿಯನ್ನೂ ಇವನೇ ರಚಿಸಿರಬೇಕೆಂಬ ಅಭಿಪ್ರಾಯವಿದೆ. **(ಆರ್.ಆರ್.)**

**ಶಾಂತಾದೇವಿ ಮಾಳವಾಡ:** 1922–2005. ಉತ್ತರ ಕರ್ನಾಟಕದಲ್ಲಿ ಮಹಿಳಾ ಸಾಹಿತ್ಯ ಪರಂಪರೆಯ ಪ್ರವರ್ತಕರಲ್ಲೊಬ್ಬರು. ಸಾಹಿತಿ, ಸಮಾಜ ಸೇವಕಿ, ಸ್ತ್ರೀಯರ ಪ್ರಗತಿಗಾಗಿ ದುಡಿದವರು. ಬೆಳಗಾಂವಿಯಲ್ಲಿ 1922 ಡಿಸೆಂಬರ್ 10ರಂದು ಜನಿಸಿದರು. ತಂದೆ ಕರ್ಜಗಿ ಮುರುಗೆಪ್ಪಶೆಟ್ಟಿ ಮತ್ತು ತಾಯಿ ಜಯವಂತಿದೇವಿ. ತಂದೆ ತಾಯಿ ಇವರ ಹುಟ್ಟು ಹೆಸರು ದಾನಮ್ಮ. ಇವರಿಗೆ 15 ವರ್ಷ ಆಗಿದ್ದಾಗ ಸ.ಸ. ಮಾಳವಾಡರೊಂದಿಗೆ ಇವರ ವಿವಾಹವಾಯಿತು.

ವಿದ್ವಾಂಸರಾದ ಮಾಳವಾಡರ ಉತ್ತೇಜನದಿಂದ ಸಾಹಿತ್ಯ ರಚನೆಯಲ್ಲೂ ಸಮಾಜಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡರು. ಮನೆಯಲ್ಲಿಯೇ ಓದಿ ಜ್ಞಾನ ಸಂಪಾದಿಸಿಕೊಂಡರು. ಮಹಿಳಾ ಮಂಡಳಗಳ ಮೂಲಕ ಮಹಿಳೆಯರ ಉನ್ನತಿಗಾಗಿ ಶ್ರಮಿಸಿದ ಇವರು ಧಾರವಾಡದಲ್ಲಿ ಅಕ್ಕನ ಬಳಗ ಸ್ಥಾಪಿಸಿ ಮಹಿಳೆಯರನ್ನು ಸಂಘಟಿಸಿದರು. ಶಾಂತಾದೇವಿ ಎಂಬುದು ಮಾಳವಾಡರ ಇಚ್ಛೆಯ ಮೇರೆಗೆ ತಾಳಿದ ಹೆಸರು. ಅಭಿಮಾನಿಗಳು ಇವರನ್ನು ಪ್ರೀತಿಯಿಂದ ಶಾಂತಕ್ಕ ಎಂದು ಸಂಬೋಧಿಸುತ್ತಿದ್ದರು. ಶಾಂತಕ್ಕ ಅಧ್ಯಾತ್ಮ ಸಾಧನೆಯಿಂದ ದರ್ಶನ ಸಂಪನ್ನರಾದರು.

ಇವರ ಸಮಗ್ರ ಸಾಹಿತ್ಯಕ್ಕೆ ಸ್ತ್ರೀ ಕೇಂದ್ರಿತ ನೆಲೆಯೇ ವಸ್ತುವಾಗಿದೆ. ಕಥೆ, ಕಾದಂಬರಿ, ವೈಚಾರಿಕ ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ವ್ಯಕ್ತಿಚಿತ್ರ ಹಾಗೂ ಮಹಿಳೆಯರಿಗೆ ಉಪಯುಕ್ತ ಜನಪ್ರಿಯ ಕೃತಿಗಳನ್ನು ಇವರು ರಚಿಸಿದ್ದಾರೆ. ಮೊಗ್ಗೆಯ ಮಾಲೆ, ಕುಂಕುಮ ಬಲ–ಇವು ಆದರ್ಶ ಸ್ತ್ರೀಯರ ಜೀವನ ನಿರೂಪಿಸುವ ಕಥಾಸಂಕಲನಗಳು. ಭಾರತದ ಮಾನಸ ಪುತ್ರಿಯರು, ನೀಲಾಂಬಿಕೆ, ಬೆಳವಡಿ ಮಲ್ಲಮ್ಮ, ಗಂಗಾಂಬಿಕೆ, ಮಹಿಳಾ ಚೇತನ, ಕನ್ನಡ ತಾಯಿ ಮೊದಲಾದ ಜೀವನ ಚರಿತ್ರೆಗಳನ್ನು ಇವರು ಬರೆದಿದ್ದಾರೆ. ಬಸವಣ್ಣನವರನ್ನು ಕುರಿತ ಕಾದಂಬರಿ 'ಬಸವಪ್ರಕಾಶ'. ಕೆಳದಿಯ ಅರಸು ಮನೆತನವನ್ನು ಕುರಿತ ಬೃಹತ್ ಕಾದಂಬರಿ 'ಶೂರರಾಣಿ' ಕೆಳದಿಯ ಚೆನ್ನಮ್ಮಾಜಿ. ಇದರಲ್ಲಿ ಇವರು ಸ್ತ್ರೀ ಚೇತನದ ಉತ್ಕರ್ಷವನ್ನು ಕಂಡರಿಸಿದ್ದಾರೆ. ಮಹಿಳೆಯರ ಆತ್ಮಶ್ರೀ, ಹಚ್ಚೇವು ಕನ್ನಡದ ದೀಪ ಎಂಬ ಗ್ರಂಥಗಳಲ್ಲಿ ಕನ್ನಡ ನಾಡಿನ ವ್ಯಕ್ತಿಗಳ ಸಾಧನೆಯನ್ನು ವಿಷದಪಡಿಸಿದ್ದಾರೆ. ವ್ಯಕ್ತಿಚಿತ್ರ ಬರೆಯುವಲ್ಲಿಯೂ ಇವರು ಸಿದ್ಧಹಸ್ತರಾಗಿದ್ದರು. ಮಹಿಳೆಯರ ಅಲಂಕಾರ, ವಧುವಿಗೆ ಉಡುಗೊರೆ, ದಾಂಪತ್ಯಯೋಗ ಮೊದಲಾದವು ಗೃಹ ಸಾಹಿತ್ಯ ಕೃತಿಗಳು. ಸಾರ್ವಜನಿಕ ರಂಗದಲ್ಲಿ ಮಹಿಳೆ ಎಂಬ ಗ್ರಂಥದಲ್ಲಿ ಇವರ ಸ್ತ್ರೀವಾದಿ ವಿಚಾರಧಾರೆ ಹರಿದಿದೆ. ಇವರ ರೂಪಕಗಳು ಹಾಗೂ ಮುನ್ನುಡಿ ಸಂಪುಟಗಳೂ ಬೆಳಕು ಕಂಡಿವೆ. ಇವರ ಒಟ್ಟು ಕೃತಿಗಳ ಸಂಖ್ಯೆ ನಲವತ್ತೈದು. ಶಾಂತಾದೇವಿಯವರು ಬಾಗಲಕೋಟೆಯಲ್ಲಿ ಜರುಗಿದ 68ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿದ್ದರು (1999). ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ (1977), ರಾಜ್ಯೋತ್ಸವ ಪ್ರಶಸ್ತಿ (1982), ಕರ್ನಾಟಕ ಸರ್ಕಾರದ ಅತ್ತಿಮಬ್ಬೆ ಪ್ರಶಸ್ತಿ (1997) ಬಂದಿವೆ. ಪ್ರಶಾಂತ ಎಂಬುದು ಇವರಿಗೆ ಸಲ್ಲಿಸಿದ ಅಭಿನಂದನ ಗ್ರಂಥ. 1959–64ರ ಅವಧಿಯಲ್ಲಿ ಇವರು ಗೌರವ ಲೇಡಿ ಮ್ಯಾಜಿಸ್ಟ್ರೇಟ್‌ರಾಗಿ ಸೇವೆ ಸಲ್ಲಿಸಿದ್ದಾರೆ. ಹಲವು ಮಹಿಳಾ ಸಮ್ಮೇಳನಗಳಲ್ಲಿ ಭಾಗವಹಿಸಿದ್ದ ಇವರು ಶಿವಶರಣೆಯರ ಆದರ್ಶದಲ್ಲಿ ಬೆಳೆದು ಶರಣ ಸಂಸ್ಕೃತಿಯ ಪ್ರತಿಭೆಯಾಗಿ ಬೆಳಗಿದರು. ಸಮಾಜಸೇವೆ ಮತ್ತು ಮಹಿಳೆಯರ ಕಲ್ಯಾಣೋನ್ನತಿಗಾಗಿ ಶ್ರಮಿಸಿದ ಇವರು 2005 ಆಗಸ್ 7ರಂದು ನಿಧನರಾದರು. **(ಜಿ.ಎಂ.ಎಚ್.)**

**ಶಾಂತಾ ರಂಗಸ್ವಾಮಿ:** 1954– . ಪ್ರಸಿದ್ಧ ಮಹಿಳಾ ಕ್ರಿಕೆಟ್ ಕ್ರೀಡಾಪಟು, ಅರ್ಜುನ ಪ್ರಶಸ್ತಿ ಪುರಸ್ಕೃತರು. ಇವರು 1954 ಜನವರಿ 1ರಂದು ಮದರಾಸಿನಲ್ಲಿ ಜನಿಸಿದರು. ವಿದ್ಯಾಭ್ಯಾಸವನ್ನು ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿನಲ್ಲಿ ಪಡೆದರು. ಇವರು ಕ್ರಿಕೆಟ್ ಹಾಗೂ ಬ್ಯಾಡ್ಮಿಂಟನ್, ಸಾಫ್ಟ್‌ಬಾಲ್ ಕ್ರೀಡೆಗಳಲ್ಲಿ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ

ಕ್ರೀಡಾಕೂಟಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದರು. ಇವರು ಸು. 21 ವರ್ಷಗಳ ಕಾಲ ಕರ್ನಾಟಕ ಮಹಿಳಾ ಕ್ರಿಕೆಟ್ ತಂಡದಲ್ಲಿ ಅಮೋಘ ಸಾಧನೆ ಮಾಡಿದ್ದಾರೆ.

ಉತ್ತಮ ಆಲ್‌ರೌಂಡರ್ ಆಗಿದ್ದರು. ಭಾರತದ ಕ್ರಿಕೆಟ್ ಇತಿಹಾಸದಲ್ಲೇ ಮಹಿಳಾ ಕ್ರಿಕೆಟ್ ಟೆಸ್ಟ್‌ನಲ್ಲಿ ಪ್ರಥಮ ಶತಕ ಬಾರಿಸಿದ ದಾಖಲೆ ಇವರದು. 14 ಟೆಸ್ಟ್‌ಗಳಲ್ಲಿ ಆಡಿ 1000 ರನ್ ಗಳಿಸಿದ ಅಪ್ರತಿಮ ಸಾಧನೆ ಇವರದು. ಇವರು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿಯಾಗಿದ್ದರು (1976–85).

ಇವರ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಭಾರತ ಸರ್ಕಾರ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ (1976). ಏಕಲವ್ಯ ಪ್ರಶಸ್ತಿ (1993), ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1997) ಇವರಿಗೆ ಲಭ್ಯವಾಗಿದೆ. ಇವರಿಗೆ ಮಹಾರಾಣಿ ಪದ್ಮಶ್ರೀ ಎಂಬ ಬಿರುದೂ ದೊರೆತಿದೆ. ಈಗ ಇವರು ಬೆಂಗಳೂರಿನ ಕೆನರಾ ಬ್ಯಾಂಕಿನಲ್ಲಿ ಹಿರಿಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

(ಎಸ್.ಆರ್.ಯು.)

**ಶಾಂತಾರಾಮ್, ವಿ.:** 1901–90. ಪ್ರಸಿದ್ಧ ಚಲನಚಿತ್ರ ದಿಗ್ದರ್ಶಕ, ನಟ ಹಾಗೂ ನಿರ್ಮಾಪಕ. ಭಾರತೀಯ ಚಿತ್ರರಂಗಕ್ಕೆ ಇತ್ತ ಮಹತ್ತರ ಕೊಡುಗೆಗಾಗಿ 1985ರ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರು. ವಣಕುದುರೆ ಶಾಂತಾರಾಮ್ ಇವರ ಪೂರ್ಣಹೆಸರು. ಮೂಕಿಯಿಂದ ಟಾಕಿ ಚಿತ್ರಗಳವರೆಗೆ ಇವರ ದಾಖಲೆಗಳಿವೆ. ಇವರು ಮಾಡಿದ ಒಟ್ಟು ಚಿತ್ರಗಳು 95. ಬಿಜಾಪುರ ಜಿಲ್ಲೆಯ ವಣಕುದುರೆಯಲ್ಲಿ 1901 ನವಂಬರ್ 18ರಂದು ಜನಿಸಿದರು. ತಂದೆ ರಾಜ, ತಾಯಿ ಕಮಲ್. ಮುಂದೆ ಇವರು ತಮ್ಮ ಕಲಾಮಂದಿರಕ್ಕೆ ತಂದೆತಾಯಿಗಳ ಹೆಸರು ಸೇರಿಸಿ ರಾಜಕಮಲ್ ಸ್ಟುಡಿಯೋ ಎಂದು ಕರೆದರು. ಮೊದಲ ಹೆಂಡತಿ ವಿಮಲಾ ಬಾಯಿ, ಅಥಣಿಯ ಕನ್ನಡತಿ. ಎರಡನೆಯ ಹೆಂಡತಿ ಪ್ರಸಿದ್ಧ ನಟಿ ಜಯಶ್ರೀ, ಖ್ಯಾತತಾರೆ ಸಂಧ್ಯಾ ಮೂರನೆಯವರು.

ಇವರದು ಮೊದಲಿನಿಂದಲೂ ಹೋರಾಟದ ಬದುಕು. ಆರಂಭದಲ್ಲಿ ಹುಬ್ಬಳ್ಳಿಯ ರೈಲ್ವೆ ವರ್ಕ್ ಷಾಪ್‌ನಲ್ಲಿ ಫಿಟ್ಟರ್ ಆಗಿದ್ದರು. ಪುಣೆಯಲ್ಲಿ ಗಂಧರ್ವ ನಾಟಕ ಮಂಡಳಿಯ ಖ್ಯಾತ ನಾಟಕಕಾರ ರಾಮ್ ಗಣೇಶ್ ಗಡಕರಿ ಅವರ ನಿಕಟ ಸಂಬಂಧದಿಂದಾಗಿ ಸೌಭದ್ರ ನಾಟಕದಲ್ಲಿ ರುಕ್ಮಿಣಿಯ ದಾಸಿಯ ಪಾತ್ರದ ಮೂಲಕ ರಂಗಭೂಮಿ ಪ್ರವೇಶ ಪಡೆದರು. ಡೆಕ್ಕನ್ ಸಿನಿಮಾದಲ್ಲಿ ಡೋರ್‌ಕೀಪರ್ ಆಗಿದ್ದರು; ಫಾಲ್ಕೆಯವರ ಲಂಕಾದಹನ, ಭಸ್ಮಾಸುರ ಮೋಹಿನಿ, ಕೃಷ್ಣಜನ್ಮ–ಮುಂತಾದ ಮೂಕಿ ಚಿತ್ರಗಳನ್ನು ನೋಡಿ ಪ್ರಭಾವಿತರಾಗಿ ತಿಂಗಳಿಗೆ 9 ರೂಪಾಯಿ ಸಂಬಳದ ಮೇಲೆ ಸುರೇಖಾಹರಣದಲ್ಲಿ ಭಗವಾನ್ ವಿಷ್ಣುವಿನ ಪಾತ್ರದ ಮೂಲಕ ಸಿನಿಮಾ ಪ್ರಪಂಚಕ್ಕೆ ಪದಾರ್ಪಣ ಮಾಡಿದರು (1930 ಜೂನ್ 20). ಮಹಾರಾಷ್ಟ್ರ ಫಿಲ್ಮ್‌ಕಂಪನಿ ನಡೆಸುತ್ತಿದ್ದ ಕೊಲ್ಲಾಪುರದ ಬಾಬುರಾವ್ ಪೈಂಟರ್ ಕೃಪೆಗೆ ಪಾತ್ರರಾದರು. ಇವರಿಗೆ ಅವರೇ ಸಿನಿಮಾ ಗುರುವಾದರು. ಬಟ್ಟೆ ಒಗೆಯುವುದು, ಪಾತ್ರೆ ತಿಕ್ಕುವುದು– ಹೀಗೆ ಗುರುಸೇವೆ ಮಾಡಿ ಸಿನಿಮಾ ತಂತ್ರ ಕಲಿತರು. ಮೊದಲ ಚಿತ್ರಕ್ಕೇ ನೇತಾಜಿ ಫಾಲ್ಕರ್ ಪ್ರಶಸ್ತಿ ದೊರಕಿತು. ಮೊತ್ತಮೊದಲ ಪ್ರಯೋಗಾತ್ಮಕ ಚಿತ್ರ ಎನಿಸಿದ ಸಾವಕಾರೀಪಾಶ್‌ನಲ್ಲಿ ಪ್ರಮುಖ ಪಾತ್ರ ಪಡೆದರು. ದಾಮ್ಲೆ, ಫತ್ತೆಲಾಲ್, ಪೈ, ಸಾಯಬರ– ಇವರ ಜೊತೆಗೂಡಿ ಕೊಲ್ಲಾಪುರದಲ್ಲಿ ಪ್ರಭಾತ್ ಸ್ಟುಡಿಯೋ ಆರಂಭಿಸಿದರು. ಮುಂದೆ ಪುಣೆಗೆ ಸ್ಥಳಾಂತರ ಮಾಡಿ ಅದನ್ನು ಏಷ್ಯದಲ್ಲೇ ಅತಿದೊಡ್ಡ ಚಿತ್ರಕಲಾಮಂದಿರವಾಗಿ ಬೆಳೆಸಿದರು. ಮೊದಲಚಿತ್ರ ಗೋಪಾಲಕೃಷ್ಣ. ಗಾಂಧೀಜಿಯವರ ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆಯಲ್ಲಿ ಬಂದ ಆ ಚಿತ್ರದ ಕಂಸ ಬ್ರಿಟಿಷ್ ರಾಜಸತ್ತೆಯ ಪ್ರತೀಕವಾದರೆ, ಕೃಷ್ಣ ಪ್ರಜಾಪ್ರತಿನಿಧಿಯ ಪ್ರತೀಕವಾದ. ಪ್ರಭಾತದ ಪ್ರಗತಿಪರ ಚಿತ್ರಗಳಿಗೆ ಬದಲಾಗುತ್ತಿರುವ ಸಮಾಜದಲ್ಲಿ ಅಪಾರ ಮೆಚ್ಚುಗೆ ದೊರೆಯಿತು. ಸ್ತ್ರೀಸ್ವಾತಂತ್ರ್ಯದ ವಸ್ತುವುಳ್ಳ ಅಮರಜ್ಯೋತಿ, ವೆನಿಸ್‌ನಲ್ಲಿ ಪ್ರದರ್ಶಿತವಾದ ಮೊದಲ ಭಾರತೀಯ ಚಿತ್ರವಾಯಿತು; ಅನೇಕ ಸ್ವರ್ಣಪದಕಗಳನ್ನು ಗಿಟ್ಟಿಸಿತು. ದುನಿಯಾ ನ ಮಾನೆ–ಸಂಗೀತ, ನೃತ್ಯ, ಪ್ರೇಮಪ್ರಸಂಗ ಯಾವುದೂ ಇಲ್ಲದ ಭಾರತದ ಪ್ರಥಮ ಚಿತ್ರ. ಇಲ್ಲಿ ಅಭಿನಯಿಸಿದ ಎಲ್ಲ ನಟನಟಿಯರು ದೊಡ್ಡ ಕಲಾವಿದರಾಗಿ ಹೊರಬಂದರು.

ಒಂಬತ್ತು ವರ್ಷ ಗೆಳೆಯರೊಂದಿಗೆ ದುಡಿದ ಇವರು ಪ್ರಭಾತ್ ಸ್ಟುಡಿಯೋದಿಂದ ಹೊರಬಂದಾಗ ವೃತ್ತಿಯಲ್ಲಿ ದೊಡ್ಡ ಸವಾಲು ಎದುರಿಸಬೇಕಾಯಿತು. ಅನಂತರ ರಾಜಕಮಲ್ ಕಲಾಮಂದಿರ ಸ್ಥಾಪಿಸಿದರು. ಅವರ ಮೊದಲ ಚಿತ್ರ ಶಾಕುಂತಲಾ. ಇದು ಅಪಾರ ಯಶಸ್ಸು ಗಳಿಸಿತು. ಅನಂತರ ಡಾಕ್ಟರ್ ಕೋಟ್ನೀಸ್ ಕಿ ಅಮರ್ ಕಹಾನಿ, ದಹೇಜ್, ಅಪನಾದೇಶ್, ಅಮರ ಭೂಪಾಳಿ, ಪರಛಾಯೀ, ದೋ ಆಂಖೇ ಬಾರಾ ಹಾತ್, ಪಿಂಜರಾ, ಝುನಕ್ ಝುನಕ್ ಪಾಯಲ್ ಬಾಜೆ ಮೊದಲಾದ ಸಾರ್ಥಕವಾದ ಸಾರ್ವಕಾಲಿಕ ಚಿತ್ರಗಳನ್ನು ಮಾಡಿದರು; ತಮ್ಮ ಸಂದೇಶವನ್ನು ತಮ್ಮ ಚಿತ್ರಗಳ ಮೂಲಕವೇ ಹೇಳಿದರು. ಶಾಂತಾರಾಮ್ ಟಚ್ ಎಂಬುದು ಸಿನಿಮಾರಂಗದಲ್ಲಿ ಒಂದು ಆಡುಮಾತಾಯಿತು. ದಹೇಜ್ ಚಿತ್ರದ ಪ್ರಭಾವ ಆ ಕಾಲದಲ್ಲಿ ಎಷ್ಟಾಯಿತೆಂದರೆ ಬಿಹಾರದ ವಿಧಾನಸಭೆ ವರದಕ್ಷಿಣೆನಿಷೇಧ ಕಾನೂನನ್ನೇ ಮಾಡಿತು. ಅಮರ ಭೂಪಾಳಿಗೆ ಫ್ರಾನ್ಸಿನ ಕ್ಯಾನೆ ಚಿತ್ರೋತ್ಸವದಲ್ಲಿ ಬಂದ ಗ್ರಾಂಡ್ ಪ್ರೀ ಪಾರಿತೋಷಿಕವೂ ಸೇರಿದಂತೆ ಹಲವು ಪ್ರಶಸ್ತಿಗಳು ಬಂದವು. ಝುನಕ್ ಝುನಕ್ ಪಾಯಲ್ ಬಾಜೆ ಮೂಲಕ ಥಿಯೇಟರ್ ಮಾಲೀಕನಿಗೆ ಸೇ. 65 ಲಾಭಾಂಶ ಸಲ್ಲುತ್ತಿದ್ದ ಸಂಪ್ರದಾಯವನ್ನು ಮುರಿದು ಚಿತ್ರ ನಿರ್ಮಾಪಕನಿಗೂ ಸಮಪಾಲು ಬರುವಂತೆ ಮಾಡಿದರು. ಈ ಚಿತ್ರದ ಯಶಸ್ಸಿಗಾಗಿ ನಡೆದ ಮುಂಬಯಿ ನಾಗರಿಕರ ಅಭಿನಂದನಾ ಸಭೆಯಲ್ಲಿ ಆಚಾರ್ಯ ಅತ್ರೆಯವರು ಇವರನ್ನು ಚಿತ್ರಪತಿ ಎಂದದ್ದು ಒಂದು ಬಿರುದಾಗಿಯೇ ಉಳಿಯಿತು. ದೋ ಆಂಖೇ ಬಾರಾ ಹಾತ್‌ಗೆ ಬರ್ಲಿನ್ ಚಿತ್ರೋತ್ಸವದಲ್ಲಿ ಸಂದ ಗೋಲ್ಡನ್ ಬೇರ್ ಪ್ರಶಸ್ತಿ, ಅಮೆರಿಕದ ಅಂತಾರಾಷ್ಟ್ರೀಯ ವೃತ್ತ ಪತ್ರಿಕಾ ಸಂಸ್ಥೆಯ ಪಾರಿತೋಷಿಕ ಶಾಂತಾರಾಮ್‌ರ ಪ್ರತಿಭೆಯ ಹೆಗ್ಗುರುತುಗಳು. 'ಶಾಂತಾರಾಮಾ' ಇವರ ಆತ್ಮಕತೆ. ಇವರು ಹೇಳಿದ್ದನ್ನು 8–10 ವರ್ಷಗಳು ಸತತವಾಗಿ ಬರೆದಿಟ್ಟವರು ಇವರ ಮಗಳು ಮಧುರಾ ಜಸ್‌ರಾಜ್. ಇದೊಂದು ಅಲೌಕಿಕ ವಾಸ್ತವಿಕ ಸಂಗತಿಗಳ ಗ್ರಂಥ, ಭಾರತೀಯ ಚಿತ್ರರಂಗದ ಬೆಳವಣಿಗೆಯ ಇತಿಹಾಸ ಕೃತಿ ಎನ್ನಲಾಗಿದೆ. ಇವರು 1990 ಅಕ್ಟೋಬರ್ 30ರಂದು ಮುಂಬಯಿಯಲ್ಲಿ ನಿಧನರಾದರು.

*

**ಶಾಂತಿಕೀರ್ತಿ:** 18ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಜೈನಕವಿ. ಶಾಂತೀಶ್ವರ ಚರಿತೆ ಎಂಬ ಕಾವ್ಯದ ಕರ್ತೃ. ತಾನು ಮೂಲ ಸಂಘದ ದೇಶೀಯ ಗಣಾಂತರ್ಗತ ಕೊಂಡಕುಂದಾನ್ವಯಕ್ಕೆ ಸೇರಿದವನೆಂದೂ ತನಗೆ ಮುನಿವಂಶಾಬ್ಜಭಾನು, ಕಾಮವಿಜಯ ಎಂಬ ಬಿರುದುಗಳಿದ್ದುದಾಗಿಯೂ ತೌಳವದೇಶದ ವೇಣುಪುರದ (ಮೂಡಬಿದರೆ) ವೃಷಭ ಜಿನಾಲಯದಲ್ಲಿ ಶಾಂತೀಶ್ವರಚರಿತ್ರೆಯನ್ನು ಬರೆದು ಮುಗಿಸಿದುದಾಗಿಯೂ (1732) ಈತ ಹೇಳಿಕೊಂಡಿದ್ದಾನೆ. ಇದಲ್ಲದೆ ಚತುರ್ವಿಂಶತಿ ತೀರ್ಥಂಕರ ಪುರಾಣ ಎಂಬ ಮಹಾಪುರಾಣವನ್ನು ಬರೆದುದಾಗಿ (1725) ತಿಳಿದುಬರುತ್ತದೆ.

ಶಾಂತೀಶ್ವರ ಚರಿತೆ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 11 ಸಂಧಿಗಳೂ 1,262 ಪದ್ಯಗಳೂ ಇವೆ. ಹದಿನಾರನೆಯ ತೀರ್ಥಂಕರ

ಶಾಂತಿನಾಥನ ಕಥೆ ಈ ಕೃತಿಯ ವಸ್ತು. ಹೆಚ್ಚಿನ ವರ್ಣನೆಯಲ್ಲಿ ತೊಡಗದೇ ಕವಿ ಸರಳವಾದ ಶೈಲಿಯಲ್ಲಿ ಕಥೆ ಹೇಳಿಕೊಂಡು ಹೋಗಿದ್ದಾನೆ. ಭಕ್ತಿಪ್ರತಿಪಾದನೆಗಾಗಿಯೇ ರಚಿತವಾದ ಈ ಕೃತಿಯಲ್ಲಿ ಧರ್ಮತತ್ತ್ವಗಳ ವಿವೇಚನೆಯಾಗಲೀ ಮತಗಳ ವಾದವಿವಾದಗಳಾಗಲೀ ವಿಸ್ತೃತವಾಗಿಲ್ಲ. ಆತ್ಮಸಂತೋಷಕ್ಕಾಗಿ ಭಕ್ತಿಭಾವದಿಂದ ಹಾಡಿದ ಕಾವ್ಯವಾದುದರಿಂದ ಕಥೆಯ ಓಟಕ್ಕೆ ಕುಂದಾಗದಂತೆ ಹಾಡಿಸಿಕೊಳ್ಳುವ ಗುಣ ಇದಕ್ಕಿದೆ.

(ಎಂ.ಆರ್.ಯು.)

**ಶಾಂತಿಗ್ರಾಮ:** ಹಾಸನ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಹಾಸನ-ಬೆಂಗಳೂರು ರಸ್ತೆಯಲ್ಲಿ ಹಾಸನದ ಪೂರ್ವಕ್ಕೆ 13ಕಿಮೀ ದೂರದಲ್ಲಿದೆ. ಜನಸಂಖ್ಯೆ. 3,358. 1882-94 ರವರೆಗೆ ಇದು ಹಾಸನ ತಾಲ್ಲೂಕಿನಲ್ಲಿ ಒಂದು ಉಪತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು.

ಈ ಊರನ್ನು 12ನೆಯ ಶತಮಾನದಲ್ಲಿ ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲದೇವಿ ಸ್ಥಾಪಿಸಿದಳೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿ ಕೇಶವ, ನರಸಿಂಹ, ವೀರಭದ್ರ, ಮಹಿಷಮರ್ದಿನಿ (ಮಹಾಕಾಳಿ) ಎಂಬ ದೇವಾಲಯಗಳಿವೆ. ಇವುಗಳಲ್ಲಿ ಕೇಶವ ದೇವಾಲಯ ದೊಡ್ಡದು. ಆದರೆ ಇದರ ರಚನೆ ಮತ್ತು ಶಿಲ್ಪ ಸರಳವಾಗಿದೆ. ದೇವಾಲಯದ ಹಜಾರ ಮತ್ತು ಗೋಪುರವಿರುವ ವರಾಂಡಗಳು ಹೊಯ್ಸಳರ ತರುವಾಯದ ಸೇರ್ಪಡೆಗಳು. ಇಲ್ಲಿರುವ ಒಂದು ಬರೆಹದಿಂದ ಈ ದೇವಾಲಯದ ದಾನಿ ತಿಪ್ಪಯ್ಯ ಎಂದು ತಿಳಿದುಬರುತ್ತದೆ. ಈ ದೇವಾಲಯ ಮುಸ್ಲಿಮರ ದಾಳಿಗೆ ಒಳಗಾಗಿತ್ತು. ನವರಂಗದಲ್ಲಿದ್ದ ನಾಲ್ಕು ಮೂಲಕಂಬಗಳಲ್ಲಿ ಈಗ ಒಂದು ಮಾತ್ರ ಉಳಿದಿದೆ. ಉಳಿದ ಕಂಬಗಳನ್ನು ಈಚೆಗೆ ನಿರ್ಮಿಸಲಾಗಿದೆ. ದೇವಾಲಯದಲ್ಲಿರುವ ಉತ್ಸವಮೂರ್ತಿಯನ್ನು ತಿನ್ನೆವೆಲ್ಲಿಯಿಂದ ತಂದದ್ದೆಂದು ತಿಳಿದುಬರುತ್ತದೆ.

ನರಸಿಂಹ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪಗಳಿವೆ. ಇಲ್ಲಿಯ ಮೂಲವಿಗ್ರಹ ಯೋಗಾನರಸಿಂಹ. ದೇವಾಲಯ ಸೂಕ್ಷ್ಮ ಕುಸುರಿ ಕೆಲಸದಿಂದ ಕೂಡಿದೆ. ಗರ್ಭಗೃಹ ಮತ್ತು ಸುಕನಾಸಿಯ ಮೇಲ್ಛಾವಣಿಗಳಲ್ಲಿ ಒಂದೊಂದು ಭುವನೇಶ್ವರಿಗಳಿವೆ; ಹೊರಗೋಡೆಗಳಲ್ಲಿ ಕೆತ್ತನೆಯ ಕೆಲಸ ಕಂಡುಬರುತ್ತದೆ. ಮುಖಮಂಟಪದ ಮೇಲ್ಛಾವಣಿಯ ಮಧ್ಯದಲ್ಲಿ ಲಕ್ಷ್ಮೀನರಸಿಂಹ ವಿಗ್ರಹ, ಅದರ ಸುತ್ತಲೂ ಇತರೆ ಎಂಟು ನರಸಿಂಹಮೂರ್ತಿಗಳು ಇವೆ.

ಧರ್ಮೇಶ್ವರ ದೇವಾಲಯದಲ್ಲಿರುವ ಗರ್ಭಗೃಹ ಮತ್ತು ಸುಕನಾಸಿಗಳು ಹೊಯ್ಸಳರ ಕಾಲಕ್ಕೆ ಸೇರಿದವು. ಉಳಿದ ಭಾಗಗಳು ಇತ್ತೀಚಿನ ರಚನೆಯೆಂದು ತಿಳಿಯುತ್ತದೆ. ಪ್ರವೇಶದ್ವಾರದಲ್ಲಿ ಉತ್ತಮ ಕೆತ್ತನೆ ಕೆಲಸ ಕಂಡುಬರುತ್ತದೆ. ಸುಕನಾಸಿ ಮತ್ತು ನವರಂಗಗಳು ಭುವನೇಶ್ವರಿಗಳಿಂದ ತುಂಬಿವೆ. ಹೊರಗೋಡೆಗಳಲ್ಲಿ ಒಂಟಿ ಅಥವಾ ಜೋಡಿ ಕಂಬಗಳಿವೆ. ಇವುಗಳ ಮೇಲ್ಭಾಗದಲ್ಲಿ ಸಣ್ಣಗೋಪುರಗಳಿದ್ದು ಗೋಡೆ ಕಂಬಗಳ ನಡುವೆ ಅಲ್ಲಲ್ಲಿ ಮೋಹಿನಿ, ಭೈರವ, ಶಿವ ಮುಂತಾದ ಚಿತ್ರಗಳಿವೆ. ಶಾಸನ ಒಂದರ ಪ್ರಕಾರ ಈ ದೇವಾಲಯವನ್ನು ಶಾಂತಲದೇವಿಯ ತಂದೆ ಮಾರಸಿಂಗಯ್ಯ 1123ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ.

ವೀರಭದ್ರ ದೇವಾಲಯ ಎರಡು ಗುಡಿಗಳುಳ್ಳ ಅವಳಿ ದೇವಾಲಯ. ಪೂರ್ವಾಬಿಮುಖವಾಗಿರುವ ಮುಖ್ಯಗುಡಿಯಲ್ಲಿ ವೀರಭದ್ರ ವಿಗ್ರಹವಿದೆ. ಉತ್ತರಾಭಿಮುಖವಾಗಿರುವ ಗುಡಿಯಲ್ಲಿ ಮಹಾಕಾಳಿ ವಿಗ್ರಹವಿದೆ. ಮಹಿಷಮರ್ದಿನಿ (ಮಹಾಕಾಳಿ) ಒಂದು ಕಾಲಕ್ಕೆ ದಕ್ಷಿಣದ ಗುಡಿಯಲ್ಲಿತ್ತು. ಈಗ ಸುಕನಾಸಿಯಲ್ಲಿಡಲಾಗಿದೆ. ಈ ವಿಗ್ರಹಕ್ಕೆ ಅಷ್ಟಭುಜಗಳಿವೆ. ದೇವಾಲಯದ ಮಧ್ಯದಲ್ಲಿ ಒಂಬತ್ತು ಭುವನೇಶ್ವರಿಗಳಿವೆ. ನವರಂಗದ ಮಧ್ಯದಲ್ಲಿರುವ ಕಂಬ ಅನೇಕ ಪುರಾಣ ದೇವತೆಗಳುಳ್ಳ ಕೆತ್ತನೆಯಿಂದ ಕೂಡಿದ್ದು ಭವ್ಯವಾಗಿದೆ. ಮೊಗಸಾಲೆಯ ಗೋಡೆಗಳ ವಿವಿಧ ರಚನೆಗಳಿಂದ ಆ ಭಾಗಗಳು ವಿಜಯನಗರದ ಕಾಲದಲ್ಲಿ ಪುನರ್‌ರಚಿತವಾಗಿವೆ ಎಂದು ಹೇಳಬಹುದು. ಈಗಿರುವ ವೀರಭದ್ರ ವಿಗ್ರಹವೂ ವಿಜಯನಗರ ಕಾಲದ ಶಿಲ್ಪಕಲಾ ಮಾದರಿಯಲ್ಲಿದೆ.

ಇಲ್ಲಿ ಒಂದು ಜೈನ ಬಸದಿ ಇದೆ. ಇದನ್ನು ರಾಣಿ ಶಾಂತಲದೇವಿ ಶಾಂತಿನಾಥನಿಗೆ ಅರ್ಪಿಸಿದಳು. ಒಬ್ಬ ವ್ಯಾಪಾರಿ ಇದನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಬಸದಿಯಲ್ಲಿರುವ ಮೂಲವಿಗ್ರಹ 3ಅಡಿ ಎತ್ತರವಿದ್ದು ಅಂದವಾದ ಸಿಂಬಿಯಾಕಾರದ ಪ್ರಭಾವಳಿಯನ್ನು ಹೊಂದಿದೆ. ವಿಗ್ರಹ ಮತ್ತು ಬಾಗಿಲುವಾಡದ ಮೇಲಿನ ಹಾಸುಗಲ್ಲು ಬಿಟ್ಟು, ಬಸದಿಯ ಉಳಿದ ಭಾಗ ಈಚೆಗೆ ಕಣಶಿಲೆಯಿಂದ ರಚಿತವಾಗಿದೆ. ಸ್ಥಳೀಯ ಐತಿಹ್ಯದ ಪ್ರಕಾರ ಈ ಎಲ್ಲ ದೇವಾಲಯಗಳನ್ನೂ ಶಾಂತಲದೇವಿ ಜೀರ್ಣೋದ್ಧಾರ ಮಾಡಿಸಿದಳೆಂದು ತಿಳಿದುಬರುತ್ತದೆ. ಇಲ್ಲಿ ದೇವರಾಜ ಒಡೆಯರ ಕಾಲದ 1644ರ ಗ್ರಾಮದತ್ತಿ ಶಾಸನವಿದೆ. ಈ ಗ್ರಾಮ ಕೈಮಗ್ಗದ ಉದ್ಯಮಕ್ಕೆ ಪ್ರಸಿದ್ಧ.

(ಡಿ.ಎಸ್.ಜಿ.)

**ಶಾಂತಿನಾಥ:** ಸು. 1068. ಜೈನಕವಿ. ಸುಕುಮಾರ ಚರಿತೆ ಎಂಬ ಕಾವ್ಯದ ಕರ್ತೃ. ಈತ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ (1068-76) ಪಸಾಯಿತನಾದ ಲಕ್ಷ್ಮನೃಪನ ಕೈಕೆಳಗೆ ಮಂತ್ರಿಯಾಗಿ ಬನವಾಸಿ ನಾಡಿನಲ್ಲಿದ್ದ. ವರ್ಧಮಾನವ್ರತಿ ಈತನ ಗುರು. ತಂದೆ ಗೋವಿಂದರಾಜ, ಅಣ್ಣ ಕರ್ಣಪಾರ್ಯ, ತಮ್ಮ ವಾಗ್ಭೂಷಣನಾದ ರೇವಣ. ಶಿಕಾರಿಪುರದ 136ನೆಯ ಶಾಸನದಲ್ಲಿ ಶಾಂತಿನಾಥನನ್ನು ದಂಡನಾಥಪ್ರವರಂ, ಪರಮಜಿನಮತಾಂಭೋಜನೀರಾಜಹಂಸಂ. ಸಹಜಕವಿ, ಚತುರಕವಿ ಎಂದೂ ಸುಕರರಸಭಾವದಿಂ ವರ್ಣಕದಿಂ ತತ್ತ್ವಾರ್ಥ ನಿಚಯದಿಂ ಸೂಕ್ತಮೆನಲ್ ಸುಕುಮಾರಚರಿತಮಂ ಪೇಳ್ದಿಕವೀಂದ್ರಾಗ್ರಣಿ ಸರಸ್ವತೀಮುಖ ಮುಕುರಂ ಎಂದೂ ಈತನನ್ನು ವಿಶೇಷಿಸಲಾಗಿದೆ. ಇದರಿಂದ ಶಾಂತಿನಾಥ ಪ್ರೌಢಕವಿಯಾಗಿದ್ದಂತೆ ತಿಳಿಯುತ್ತದೆ.

ಸುಕುಮಾರ ಚರಿತೆ 12 ಆಶ್ವಾಸಗಳುಳ್ಳ ಚಂಪೂಗ್ರಂಥ. ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆ ಈ ಕಾವ್ಯಕ್ಕೆ ಆಕರ. ಸೂರದತ್ತರಾಜನಿಗೂ ಯಶೋಭದ್ರೆಗೂ ಹುಟ್ಟಿದ ಸುಕುಮಾರ ಯಶೋಭದ್ರಾಚಾರ್ಯರ ಉಪದೇಶದಿಂದ ಪೂರ್ವಸ್ಮರಣೆ ಪಡೆದು ವೈರಾಗ್ಯದಿಂದ ಅವರಲ್ಲಿ ದೀಕ್ಷೆ ಹೊಂದಿ ಮುಕ್ತಿ ಪಡೆದ ಎಂಬುದು ಕಾವ್ಯವಸ್ತು. ಕಥಾರೀತಿಯಲ್ಲಿ, ವಿಷಯದಲ್ಲಿ ಈ ಕಾವ್ಯ ಮೂಲಾನುಸಾರಿಯಾಗಿದೆ. ಚಂಪೂ ಶೈಲಿ ಪ್ರೌಢಿಮೆಯಿಂದ ಸರಳ ಸೌಂದರ್ಯಕ್ಕೆ ತಿರುಗುತ್ತಿದ್ದ ಮಾದರಿಯದಾಗಿದೆ. ಈ ಕಾವ್ಯದಲ್ಲಿ ಕೆಲವು ಸನ್ನಿವೇಶಗಳು ಸತ್ತ್ವಪೂರ್ಣವಾಗಿ ಚಿತ್ರಿತವಾಗಿವೆ. ಮತಪ್ರಕ್ರಿಯೆಗಳನ್ನುಳಿದು ನೋಡಿದರೆ ಸುಕುಮಾರಚರಿತೆ ರಸವತ್ತಾದ ಕಾವ್ಯವೆಂದು ಹೇಳಬಹುದು.

(ಜಿ.ಬಿ.)

**ಶಾಂತಿನಾಥ ದೇಸಾಯಿ:** 1929-98. ನವ್ಯಕಾದಂಬರಿಕಾರರು, ಕಥೆಗಾರರು ಹಾಗೂ ವಿಮರ್ಶಕರು. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಹೊಸದಿಗಂತವನ್ನು ತೋರಿದವರು. ಶಾಂತಿನಾಥ ಕುಬೇರಪ್ಪ ದೇಸಾಯಿ ಎಂಬುದು ಇವರ ಪೂರ್ಣಹೆಸರು. 1929 ಜುಲೈ 22ರಂದು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಜನಿಸಿದರು. ಹಳಿಯಾಳ, ಧಾರವಾಡಗಳಲ್ಲಿ ಪ್ರಾಥಮಿಕ ಹಾಗೂ ಮೆಟ್ರಿಕ್ ವಿದ್ಯಾಭ್ಯಾಸ ಮುಗಿಸಿ ಮುಂಬಯಿಯ ಪ್ರತಿಷ್ಠಿತ ವಿಲ್ಸನ್ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಪಡೆದರು. ಇಂಗ್ಲಿಷ್ ಇವರ ವಿಶೇಷ ಅಧ್ಯಯನ ವಿಷಯ. ಶಾಲೆಯ ದಿನಗಳಿಂದಲೇ ಇವರ

ಪ್ರತಿಭೆಯನ್ನು ಪತ್ತೆಹಚ್ಚಿ ತಮ್ಮ ಚಿಂತನಶೀಲತೆಯ ಪ್ರಭಾವ ಬೀರಿದವರು ಗಂಗಾಧರ ಚಿತ್ತಾಲ. ಕಾಲೇಜು ವ್ಯಾಸಂಗ ಮುಗಿಸಿದಾಗ ಇವರ ವಿಶೇಷ ಪ್ರತಿಭೆ, ಪ್ರೌಢಿಮೆಗಳನ್ನು ಗುರುತಿಸಿ ಬ್ರಿಟಿಷ್ ಕೌನ್ಸಿಲ್ 1958–59ರಲ್ಲಿ ಶಿಷ್ಯವೃತ್ತಿ ನೀಡಿತು. ಇದರ ಮೇರೆಗೆ ಎರಡು ವರ್ಷಗಳು ಇಂಗ್ಲೆಂಡಿಗೆ ತೆರಳಿ ಸಂಶೋಧನೆಯ ಕೆಲಸದಲ್ಲಿ ತೊಡಗಿಕೊಂಡರು. ಹೀಗೆ ಹಡಗಿನಲ್ಲಿ ವಿದೇಶಕ್ಕೆ ತೆರಳಿದಾಗ ಆದ ಪ್ರಯಾಣದ ಅನುಭವದ ವಿಶೇಷ ಸ್ಫೂರ್ತಿಯಿಂದ ಕ್ಷಿತಿಜ (1966) ಎಂಬ ಸಣ್ಣಕಥೆಯನ್ನು ಬರೆದರು. ಈ ಸಣ್ಣಕಥೆ ಇವರನ್ನು ಜನಪ್ರಿಯಗೊಳಿಸಿತು. ಹಡಗಿನಲ್ಲಿ ಇಂಗ್ಲೆಂಡಿಗೆ ಹೋಗುವ ಒಬ್ಬ ಮಹಿಳೆಯೇ ಈ ಕಥೆಯ ಕೇಂದ್ರ. ಸಂಶೋಧನೆ ಮುಗಿಸಿ ಸ್ವದೇಶಕ್ಕೆ ಮರಳಿ ಬಂದ ಇವರು ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲಿಷ್ ಉಪಪ್ರಾಧ್ಯಾಪಕರಾಗಿ ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1988ರಲ್ಲಿ ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಜ್ಞಾನಪೀಠ ಪ್ರಶಸ್ತಿ ಸಲಹಾ ಸಮಿತಿಗಳಲ್ಲಿ ಸಲಹೆಗಾರರಾಗಿಯೂ ಹಲವು ವರ್ಷಗಳು ಕಾರ್ಯ ನಿರ್ವಹಿಸಿದರು.



ಇವರು ಸುಮಾರು ಐವತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದಿದ್ದಾರೆ. ಮಂಜುಗಡ್ಡೆ (1959), ಕ್ಷಿತಿಜ (1966), ದಂಡೆ (1971), ರಾಕ್ಷಸ (1977), ಪರಿವರ್ತನೆ (1984), ಕೂರ್ಮಾವತಾರ (1988), ಕೆಲವು ಆಯ್ದ ಕತೆಗಳು (1977)–ಇವು ಇವರ ಹಲವು ಪ್ರಸಿದ್ಧ ಕಥಾ ಸಂಕಲನಗಳು. ಇವರ ಮಂಜುಗಡ್ಡೆ ಹಾಗೂ ಕ್ಷಿತಿಜಗಳು ಬಹಳ ಚರ್ಚೆಗೊಳಗಾದ ಕಥೆಗಳಾಗಿವೆ. ಸಾಮಾನ್ಯವಾಗಿ ಲಘುವಾದದ್ದು ಎಂದು ಎಲ್ಲರೂ ತಿಳಿಯುವ ವಿಷಯಗಳು, ವ್ಯಕ್ತಿಯ ಮನಸ್ಸಿನ ಅಂತರಾಳದ ಹಲವು ಪ್ರಕ್ರಿಯೆಗಳು, ಸಮಾಜದಲ್ಲಿ ಬದಿಗೊತ್ತಿದ ಹಲವು ವಿಷಯಗಳು ಇಂತಹವುಗಳಿಗೆ ತಮ್ಮ ಕಥಾಪ್ರಪಂಚದಲ್ಲಿ ವಸ್ತುವಾಗುವ ಯೋಗ್ಯತೆಯನ್ನು ಇವರು ಕಲ್ಪಿಸುತ್ತಾರೆ, ಅದರಲ್ಲೂ ವಿಮರ್ಶಿಸಬೇಕಾದ ವಿಚಾರಗಳತ್ತ ಓದುಗರನ್ನು ಸೆಳೆಯುತ್ತಾರೆ.

ಮುಕ್ತಿ (1961), ವಿಕ್ಷೇಪ (1971), ಸೃಷ್ಟಿ (1979), ಬೀಜ (1981), ಸಂಬಂಧ (1981), ಅಂತರಾಳ (1993), ಓಂಣಮೋ (1998)–ಇವು ಇವರ ಪ್ರಸಿದ್ಧ ಕಾದಂಬರಿಗಳು. ಇವರ ಮುಕ್ತಿ ಕಾದಂಬರಿ ಕನ್ನಡದಲ್ಲಿ ಹೊಸಕಾದಂಬರಿಯ ಮೊದಲ ಹೆಜ್ಜೆಯಾಗಿದೆ. ಕಥೆಯೇ ಪ್ರಧಾನವಾಗಿ ಕೌಟುಂಬಿಕ ಸನ್ನಿವೇಶಗಳನ್ನು ಚಿತ್ರಿಸುತ್ತಾ ಕಾದಂಬರಿ ಏಕತಾನತೆ ಹೊಂದಿದ್ದ ಕಾಲದಲ್ಲಿ ಆಧುನಿಕ ಯುವಕನನ್ನು ಕಾದಂಬರಿಯ ಕೇಂದ್ರವಾಗಿಸಿ ಹೊಸ ದೃಷ್ಟಿ ಕೊಟ್ಟ ಕೀರ್ತಿ ಇವರದಾಗಿದೆ. ಬದುಕಿನ ಮೂಲಭೂತ ಅರ್ಥ–ಉದ್ದೇಶಗಳನ್ನು ಶೋಧಿಸುತ್ತ, ವ್ಯಕ್ತಿಗತ ದೃಷ್ಟಿಯಿಂದ ಮೌಲ್ಯಗಳನ್ನು ವಿಶ್ಲೇಷಿಸುತ್ತ ಅವುಗಳ ಅನುಷ್ಠಾನದ ಅಗತ್ಯವನ್ನು ಪ್ರಶ್ನಿಸುತ್ತಾ ಹೊಸ ಮೌಲ್ಯಗಳಿಗಾಗಿ ಚಡಪಡಿಸುವ ಪ್ರಕ್ಷುಬ್ಧ ಮನಸ್ಸಿನ ಚಿತ್ರಣ ಈ ಕಾದಂಬರಿಯಲ್ಲಿದೆ. ಇಲ್ಲಿನ ಪ್ರಜ್ಞಾಪ್ರವಾಹತಂತ್ರದ ಬರೆವಣಿಗೆ ಶೈಲಿ ಜೀವನದ ಹಂಬಲ–ತೊಳಲಾಟಗಳನ್ನು ಅತ್ಯಂತ ಸಮರ್ಥವಾಗಿ ತೆರೆದುತೋರುತ್ತದೆ.

ಸಮಕಾಲೀನ ಸಮಾಜ ಸುತ್ತಲಿನ ಸಮಾಜದೊಂದಿಗೆ ಅರ್ಥವತ್ತಾದ ಸಂಬಂಧ ಕಂಡುಕೊಳ್ಳಲಾಗದ ದುರಂತವೇ 'ವಿಕ್ಷೇಪ' ಕಾದಂಬರಿಯ ವಸ್ತು. ವಿದ್ಯೆ, ಬುದ್ಧಿ, ಸಂಪತ್ತು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ, ಗೌರವ ಎಲ್ಲ ಇದ್ದೂ ಜೀವನದ ಅರ್ಥ, ಗೊತ್ತು–ಗುರಿಗಳನ್ನು ಕಂಡುಕೊಳ್ಳಲಾಗದೆ ಅತೃಪ್ತಿ, ಅಸಹನೆಗಳಿಂದ ತೊಳಲಾಡುವ ಕಥಾನಾಯಕನ ಚಿತ್ರಣದ ಮೂಲಕ ಮುಂದುವರಿದ ನಗರ ಸಮಾಜಗಳಲ್ಲಿ ಉನ್ನತ ಹಾಗೂ ಮಧ್ಯಮ ವರ್ಗದ ಯುವ ಪೀಳಿಗೆಯ ಮನಸ್ಥಿತಿಗಳನ್ನು ತೆರೆದು ತೋರುತ್ತಾರೆ. ಪಾತ್ರಗಳ ವ್ಯಕ್ತಿತ್ವಕ್ಕೆ ತಕ್ಕಂತಹ ಭಾಷಾ ಪ್ರಯೋಗ, ಸಂದರ್ಭಕ್ಕನುಗುಣವಾಗಿ ಬಳಸುವ ಭಾಷೆಯಲ್ಲಿ ಅಡಕಗೊಂಡಿರುವ ನಾಟಕೀಯ ವ್ಯಂಗ್ಯ ಹಾಗೂ ಚಿತ್ರಿಕಶಕ್ತಿಗಳು ಇವರದೇ ವಿಶಿಷ್ಟ ಛಾಪನ್ನು ಎತ್ತಿತೋರುತ್ತದೆ. ಇವರ ಕಾದಂಬರಿಗಳನ್ನು ಕುರಿತಂತೆ "ಕಾದಂಬರಿಗಳಲ್ಲಿ ತಂತ್ರವನ್ನು ಅರ್ಥವಾಗಿಸಬಲ್ಲರು, ಅರ್ಥವನ್ನು ತಂತ್ರವಾಗಿಸಬಲ್ಲರು. ಇವರ ಕಾದಂಬರಿಗಳು ಕನ್ನಡ ಸಂವೇದನೆಯ ಒಂದು ವಿಶಿಷ್ಟ ಭಾಗದ ನಾಟಕೀಯ ಇತಿಹಾಸ" ಎಂಬ ವಿಮರ್ಶಕರ ಮಾತುಗಳು ಅಕ್ಷರಶಃಸತ್ಯವಾಗಿವೆ.

ಇವರ ಓಂಣಮೋ ಕಾದಂಬರಿಗೆ 1999ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ. ಈ ಕಾದಂಬರಿಯಲ್ಲಿ ಜೈನ ಮತ್ತು ಕ್ರಿಶ್ಚಿಯನ್ ಧರ್ಮಗಳು, ಧರ್ಮ ಹಾಗೂ ಮಾರ್ಕ್ಸ್‌ವಾದಗಳ ವಿಚಾರ ಪ್ರಣಾಲಿಗಳು, ಓದುಗರೊಡನೆ ಸಂವಾದ ಸಾಧಿಸುವ ಡಯಲೆಕ್ಟಿಕಲ್ ತಂತ್ರದ ಮೂಲಕ ತೌಲನಿಕ ವಿಶ್ಲೇಷಣೆ, ವಿಮರ್ಶೆಗಳಿಗೆ ಒಳಗಾಗಿವೆ. ಇವರು ನಿಧನಹೊಂದುವ ಒಂದು ವಾರದ ಮುಂಚೆ ಬರೆದ ಕೃತಿ ಇದಾಗಿದೆ. ಸ್ವಾತಂತ್ರ್ಯಕ್ಕೆ, ಅದರಲ್ಲಿಯೂ ಅಭಿವ್ಯಕ್ತಿಸ್ವಾತಂತ್ರ್ಯಕ್ಕೆ ಇವರು ನೀಡುತ್ತಿದ್ದ ಮನ್ನಣೆ, ಮಾನವನ ವಿಕಾಸಕ್ಕೆ ಯಾವ ಸೀಮೆಯನ್ನೂ ಮನ್ನಿಸದ ಇವರ ಮನೋಧರ್ಮ– ಇವು ಇವರ ಕೃತಿಗಳಿಂದ ಹೆಚ್ಚು ಸ್ಪಷ್ಟಗೊಳ್ಳುತ್ತವೆ.

ಸಾಹಿತ್ಯ ಮತ್ತು ಭಾಷೆ (1980), ನವ್ಯ ಸಾಹಿತ್ಯದರ್ಶನ (1989), ಗಂಗಾಧರ ಚಿತ್ತಾಲರ ಕಾವ್ಯಸೃಷ್ಟಿ (ಸಂ: 1987), ಕನ್ನಡ ಕಾದಂಬರಿ ನಡೆದು ಬಂದ ರೀತಿ (1989), ಎಂ.ಎನ್.ರಾಯ್ (1994)–ಇವು ಇವರ ವಿಮರ್ಶನ ಕೃತಿಗಳು.

ಕನ್ನಡ ಕೃತಿಗಳಲ್ಲದೆ ಇಂಗ್ಲಿಷ್‌ನಲ್ಲಿಯೂ ಹಲವು ವಿಮರ್ಶನ ಕೃತಿಗಳನ್ನು ರಚಿಸಿದ್ದಾರೆ: ಕ್ರಿಟಿಕಲ್ ಎಸ್ಸೇಸ್ ಆನ್ ಇಂಡಿಯನ್ ರೈಟಿಂಗ್ಸ್ ಇನ್ ಇಂಗ್ಲಿಷ್ (ಸಂ: 1969), ಎಕ್ಸ್‌ಪೆರಿಮೆಂಟೇಷನ್ ವಿತ್ ಲ್ಯಾಂಗ್ವೇಜ್ ಇನ್ ಇಂಡಿಯನ್ ರೈಟಿಂಗ್ ಇನ್ ಇಂಗ್ಲಿಷ್ (1974), ದ ಇಮೇಜ್ ಆಫ್ ಇಂಡಿಯ ಇನ್ ವೆಸ್ಟ್ರನ್ ಕ್ರಿಯೇಟಿವ್ ರೈಟಿಂಗ್ (ಸಂ: 1970), ಇಂಡಿಯನ್ ಪೊಯಿಟ್ರಿ ಟುಡೆ (ಕನ್ನಡ, 1976). ಪಿ.ಲಂಕೇಶ್ ಅವರ ಕ್ರಾಂತಿ ಬಂತು ಕ್ರಾಂತಿ ನಾಟಕವನ್ನು ಹಿಯರ್ ಕಮ್ಸ್ ರೆವಲ್ಯೂಷನ್ ಎಂಬ ಶೀರ್ಷಿಕೆಯಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಯು.ಆರ್. ಅನಂತಮೂರ್ತಿಯವರ 'ಅವಸ್ಥೆ'ಯೂ ಇವರಿಂದ ಇಂಗ್ಲಿಷ್‌ಗೆ ಅನುವಾದಗೊಂಡಿದೆ. 1987ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರಿಗೆ ಗೌರವ ನೀಡಿ ಸನ್ಮಾನಿಸಿತು. ಇವರು 1998 ಮಾರ್ಚ್ 26ರಂದು ನಿಧನರಾದರು.*

**ಶಾಂತಿರಾಜಶಾಸ್ತ್ರಿ, ಎ.:** 1888–1952. ವಿದ್ವಾಂಸರು, ಪತ್ರಿಕೋದ್ಯಮಿಗಳು. ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಎರ್ತೂರಿನಲ್ಲಿ. ಮೂಡಬಿದರೆ, ಶ್ರವಣಬೆಳಗೊಳ, ಮೈಸೂರು, ಕಾಶಿ ಮತ್ತು ಕಲ್ಕತ್ತಗಳಲ್ಲಿ ವ್ಯಾಸಂಗವನ್ನು ಮಾಡಿ ಹಳಗನ್ನಡ, ಜೈನಧರ್ಮ ಮತ್ತು ಸಾಹಿತ್ಯದಲ್ಲಿ ಪರಿಶ್ರಮವನ್ನು ಪಡೆದುಕೊಂಡು, ಮೈಸೂರಿನ ಪ್ರಾಚ್ಯ ವಿದ್ಯಾಸಂಶೋಧ

ನಾಲಯದಲ್ಲಿ ಸಂಶೋಧಕರಾಗಿದ್ದರು. ಇವರು ಈ ಕೇಂದ್ರದ ಮೂಲಕವೂ ಮತ್ತು ಸ್ವತಂತ್ರವಾಗಿಯೂ ಸಂಪಾದಿಸಿ ಟೀಕೆ-ಟಿಪ್ಪಣಿಗಳೊಡನೆ ಪ್ರಕಟಿಸಿದ ಕೆಲವು ಮುಖ್ಯ ಕನ್ನಡ ಗ್ರಂಥಗಳಿವು: ತತ್ತ್ವರತ್ನಪ್ರದೀಪಿಕೆ (ಬಾಲಚಂದ್ರನ ವ್ಯಾಖ್ಯೆ), ತ್ರೈಲೋಕ್ಯ ಚೂಡಾಮಣಿಸ್ತೋತ್ರ (ಬ್ರಹ್ಮಶಿವ), ನಾಗಕುಮಾರಚರಿತಂ (ಬಾಹುಬಲಿ, ವರ್ಧಮಾನಕೃತ), ನೇಮಿಜಿನೇಶ ಸಂಗತಿ (ಮಂಗರಸ 111). ಶತಕತ್ರಯ (ರತ್ನಾಕರವರ್ಣಿ). ಹೀಗೆಯೆ ಹೇಮಚಂದ್ರನ ಅನ್ಯಯೋಗವ್ಯವಚ್ಛೇದಿಕಾ, ಪೂಜ್ಯಪಾದನ ಇಷ್ಟೋಪದೇಶ, ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯ ದ್ರವ್ಯ ಸಂಗ್ರಹ, ಜಿನಸೇನಾಚಾರ್ಯರ ಪೂರ್ವಪುರಾಣ, ಗುಣಭದ್ರಾಚಾರ್ಯರ ಉತ್ತರಪುರಾಣ, ಮಲ್ಲಿಷೇಣನ ಸಜ್ಜನಚಿತ್ತವಲ್ಲಭ- ಈ ಸಂಸ್ಕೃತ ಗ್ರಂಥಗಳಿಗೂ ಟೀಕೆ-ಟಿಪ್ಪಣಿ ಬರೆದು ಪ್ರಕಟಿಸಿದ್ದಾರೆ. ದ್ವಾದಶಾನುಪ್ರೇಕ್ಷೆ, ಪಾರ್ಶ್ವನಾಥ ತೀರ್ಥಂಕರಚರಿತ, ಮೃತ್ಯುಮಹೋತ್ಸವ-ಇವು ಇವರು ಸ್ವತಂತ್ರವಾಗಿ ಸಂಪಾದಿಸಿ ಪ್ರಕಟಿಸಿದ ಕೆಲವು ಕೃತಿಗಳು. ವಿಶ್ವಬಂಧು ಮತ್ತು ವಿವೇಕಾಭ್ಯುದಯ ಎಂಬ ಪತ್ರಿಕೆಗಳಿಗೆ ಇವರು ಸ್ವಲ್ಪಕಾಲ ಸಂಪಾದಕರಾಗಿದ್ದರು.

ಇವರು ಸಲ್ಲಿಸಿದ ಸಾಹಿತ್ಯ ಸೇವೆಯನ್ನು ಗಮನಿಸಿ ಆಗಿನ ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರು 1946 ರಲ್ಲಿ ಇವರಿಗೆ ಪಂಡಿತರತ್ನಂ ಎಂಬ ಬಿರುದನ್ನಿತ್ತು ಗೌರವಿಸಿದರು. ವೈನಾಡಿನ ಜೈನ ಸಮಾಜ 1951ರಲ್ಲಿ ಇವರಿಗೆ ನಿಧಿಯನ್ನು ಅರ್ಪಿಸಿ ಸನ್ಮಾನಿಸಿತು. ಇವರು 1952 ಮೇ 3ರಂದು ನಿಧನಹೊಂದಿದರು. (ಜಿ.ಬಿ.;ಎಸ್.ಎಸ್.ವಿ.)

**ಶಾಂತಿವರ್ಮ:** ಆದ್ಯ ಕದಂಬವಂಶದ ರಾಜ (ಸು.430-55). ಕಾಕುತ್ಸ್ಥವರ್ಮನ ಮಗ. ಕಾಕುತ್ಸ್ಥ ತನ್ನ ವೃದ್ಧಾಪ್ಯದಲ್ಲಿ ಸಿಂಹಾಸನ ತ್ಯಾಗಮಾಡಿ ಶಾಂತಿವರ್ಮನಿಗೆ ರಾಜ್ಯ ಬಿಟ್ಟುಕೊಟ್ಟನೆಂದು ಒಂದು ಊಹೆ. ಕಾಕುತ್ಸ್ಥವರ್ಮನ ಆಳ್ವಿಕೆಯ ಕಾಲಕ್ಕೆ ಸೇರಿದ ತಾಳಗುಂದ ಶಾಸನದಲ್ಲಿ, ಈ ಶಾಸನವನ್ನು ರಾಜ (ನೃಪತಿ) ಶಾಂತಿವರ್ಮನ ಪ್ರೇರಣೆ ಯಿಂದ ಕುಬ್ಜ ಬರೆದನೆಂದಿರುವುದರಿಂದ ಕಾಕುತ್ಸ್ಥವರ್ಮನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಶಾಂತಿವರ್ಮನ ಸಹ ಆಳ್ವಿಕೆಯನ್ನು ಸೂಚಿಸುವುದೆಂತಲೂ ನಂಬಲಾಗಿದೆ.

ಶಾಂತಿವರ್ಮನ ಕಾಲದಲ್ಲಿ ಕದಂಬ ರಾಜ್ಯದ ದಕ್ಷಿಣ ಭಾಗವನ್ನು ಆಳಲು ತನ್ನ ತಮ್ಮ ಕೃಷ್ಣವರ್ಮನನ್ನು ನೇಮಿಸಿದ. ಇದರಿಂದ ರಾಜ್ಯದ ವಿಭಾಗವಾಯಿತೆನ್ನಬಹುದು. ಸಾಮಂತ ರಾಜರು ಮಾಡಲಾಗದ ಅಶ್ವಮೇಧಯಾಗವನ್ನು ಕೃಷ್ಣವರ್ಮ ಮಾಡಿ ತನ್ನ ಸ್ವಾತಂತ್ರ್ಯವನ್ನು ಸಾರಿಕೊಂಡ. ಕದಂಬ ರಾಜ್ಯಕ್ಕೆ ಪಲ್ಲವರಿಂದಲೂ ವಿಪತ್ತು ಒದಗಿತು. ಇದನ್ನು ತಡೆಗಟ್ಟಲು ಶಾಂತಿವರ್ಮ ತನ್ನ ಹಿರಿಯ ಸಹೋದರ ಕುಮಾರವರ್ಮನನ್ನು ಉಚ್ಚಂಗಿಯಲ್ಲಿ ನೆಲೆಸಿದ. ಹೀಗೆ ಇವನ ಕಾಲದಲ್ಲಿ ಕದಂಬ ರಾಜ್ಯ ಮೂರು ಭಾಗವಾಗಿ ಬನವಾಸಿಯಲ್ಲಿ ಶಾಂತಿವರ್ಮ, ಉಚ್ಚಂಗಿಯಲ್ಲಿ ಕುಮಾರವರ್ಮ ಮತ್ತು ತ್ರಿಪರ್ವತದಲ್ಲಿ ಕೃಷ್ಣವರ್ಮ ಆಳಲಾರಂಭಿಸಿದರು. ಶಾಂತಿವರ್ಮನ ಮಗ ಮೃಗೇಶವರ್ಮ ಮೊದಲು ಒಂದು ಜಿಲ್ಲೆಯ ಅಧಿಪತಿಯಾಗಿದ್ದು ತಂದೆಯ ಮರಣಾನಂತರ ದೊರೆಯಾದ. (ಎ.ವಿ.ವಿ.)

**ಶಾಂತೇಶ:** ಸು. 1561. ವೀರಶೈವ ಕವಿ. ತೋಂಟದ ಸಿದ್ಧೇಶ್ವರ ಪುರಾಣ ಎಂಬ ಗ್ರಂಥದ ಕರ್ತೃ. ಇವನಿಗೆ ಶಾಂತ, ಶಾಂತದೇಶಿಕ, ಶಾಂತೀಶ್ವರ ಎಂಬ ಹೆಸರುಗಳೂ ಇದ್ದಂತೆ ತಿಳಿಯುತ್ತದೆ. ತುಮಕೂರು ಜಿಲ್ಲೆಯ ಗುಬ್ಬಿ ಈತನ ಹುಟ್ಟೂರು. ಕಾವ್ಯದ ಪ್ರಾರಂಭದಲ್ಲಿ ತನ್ನ ಹಾಗೂ ತನ್ನ ವಂಶದ ವಿಷಯವನ್ನು ವಿವರವಾಗಿ ಹೇಳಿಕೊಂಡಿದ್ದಾನೆ. ಇದರ ಪ್ರಕಾರ ಇವನು ಗುರು ಅಮರಗುಂಡದ (ಗುಬ್ಬಿ) ಮಲ್ಲಿಕಾರ್ಜುನಪಂಡಿತರ ಆಜ್ಞೆಯಂತೆ ಶೂಲವನ್ನಡರಿದ ಗುರುಭಕ್ತನ ವಂಶದಲ್ಲಿ ಜನಿಸಿದವನು. ಗಣಭಾಷ್ಯರತ್ನಮಾಲೆಯನ್ನೂ ವಾತೂಲತಂತ್ರಕ್ಕೆ ಟೀಕೆಯನ್ನೂ ಬರೆದ ಗುಬ್ಬಿಯ ಮಲ್ಲಣ್ಣ ಈತನ ಪ್ರಪಿತಾಮಹ. ಭಾವಚಿಂತಾರತ್ನ ಮತ್ತು ವೀರಶೈವಾಮೃತಮಹಾಪುರಾಣ ಎಂಬ ಗ್ರಂಥಗಳನ್ನು ರಚಿಸಿದ ಗುಬ್ಬಿಯ ಮಲ್ಲಣಾರ್ಯ ಈತನ ತಂದೆ. ತಾನು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪಟ್ಟಶಿಷ್ಯ. ಷಟ್ಸ್ಥಲದಾಟದೊಳುವರ್ತಿಸುವ ಸುರತರು ಚಂದ್ರಶೇಖರ ದೇವರು ಶಿವಯೋಗಿಗಳು ತನಗೆ ಬೋಧಿಸಿದ ತತ್ವವನ್ನೇ ಪೇಳುವೆ ನೆಂದಾಜ್ಞೆಯನ್ನು ಶಿರದೊಳಾಂತು ತಾನು ಈ ಕಾವ್ಯವನ್ನು ಹೇಳಿರುವೆ ನೆಂದು ಹೇಳಿಕೊಂಡಿದ್ದಾನೆ.

ತೋಂಟದ ಸಿದ್ಧೇಶ್ವರಪುರಾಣ ಭಾಮಿನೀ ಷಟ್ಪದಿಯಲ್ಲಿದೆ. ಇದರಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಚರಿತ್ರೆ ನಿರೂಪಿತವಾಗಿದೆ. ವಿರಕ್ತ ತೋಂಟದಾರ್ಯ ವಾರ್ಧಕ ಷಟ್ಪದಿಯಲ್ಲಿ ಬರೆದ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಚರಿತ್ರೆ ಈ ಗ್ರಂಥಕ್ಕೆ ಆಕರ. ಇದರಲ್ಲಿ 7 ಸಂಧಿಗಳೂ 1,000 ಪದ್ಯಗಳೂ ಇವೆ. ಕೃತಿಯಲ್ಲಿ ಪ್ರಧಾನವಾಗಿ ಭುವನಕೋಶ, ಧರ್ಮಾಧರ್ಮ ವಿಚಾರ, ಶಿವನ ಪಂಚವಿಂಶತಿ ಲೀಲೆಗಳು, ಷಟ್ಸ್ಥಲ ಕ್ರಮ ಮುಂತಾದವುಗಳನ್ನು ಕಾವ್ಯರೂಪದಲ್ಲಿ ಹೇಳಲಾಗಿದೆ. (ಬಿ.ಎನ್.ಸಿ.)

**ಶಾಮರಾಯ ಆಚಾರ್ಯ, ಕೆ.:** 1926- . ಪ್ರಸಿದ್ಧ ಶಿಲ್ಪಿ. ಶಿಲೆ, ಮರ, ಪಂಚಲೋಹ, ಚಿನ್ನ, ಬೆಳ್ಳಿ- ಹೀಗೆ ಅನೇಕ ಪ್ರಕಾರಗಳಲ್ಲಿ ಕೆಲಸ ಮಾಡಿದವರು. 1926 ಫೆಬ್ರವರಿ 15ರಂದು ಉಡುಪಿ ಜಿಲ್ಲೆ ಕಟಪಾಡಿಯಲ್ಲಿ ಜನಿಸಿದರು. ಇವರದು ಸುಸಂಸ್ಕೃತ ಶಿಲ್ಪಿಗಳ ಮನೆತನ. ಇವರ ತಂದೆ ಜೋಗಪ್ಪ ಆಚಾರ್ಯರು ಆ ಕಾಲದಲ್ಲೇ ಹೆಸರಾಂತ ವಾಸ್ತುಶಿಲ್ಪಿ ಮತ್ತು ದಾರು ಶಿಲ್ಪಿ. ತಂದೆಯ ಗರಡಿಯಲ್ಲಿ ಸಂಸ್ಕೃತ ಕಲಿಕೆಯನ್ನೂ ಮರದ ಶಿಲ್ಪಕಲೆಯನ್ನೂ ಕಲಿತರು. ಅನಂತರ ಶಿಲ್ಪಿ ರಂಜಾಳ ಗೋಪಾಲ ಶೆಣೈ ಅವರ ಶಿಷ್ಯರಾಗಿ (1947) ಅನೇಕ ವರ್ಷಗಳ ಕಾಲ ಶಿಲೆ, ಮರ, ಪಂಚಲೋಹ, ಚಿನ್ನ, ಬೆಳ್ಳಿ ಹೀಗೆ ಅನೇಕ ಪ್ರಕಾರಗಳಲ್ಲಿ ಪರಿಪೂರ್ಣತೆಯನ್ನು ಪಡೆದರು.

ಕಲಾಕ್ಷೇತ್ರದಲ್ಲಿ ಇವರ ನಾಲ್ಕು ದಶಕಗಳ ಸಾಧನೆ ಗಮನಾರ್ಹವಾದುದು. ಇವರು ರಚಿಸಿದ ಶಿಲ್ಪಕೃತಿಗಳು ಅನೇಕ ದೇವಾಲಯಗಳಲ್ಲೂ ನಾಡಿನ ಒಳಗೂ ಹೊರಗೂ ವಿದೇಶಗಳಲ್ಲಿಯೂ ಹರಡಿವೆ. ಕೆನಡ, ಜಪಾನ್, ಲಂಡನ್, ಟೊರೆಂಟೋ ಮೊದಲಾದ ದೇಶಗಳಲ್ಲಿ ಇವರ ಶಿಲ್ಪಾಕೃತಿಗಳು ಸ್ಥಾನ ಪಡೆದಿವೆ. ಮುಂಬಯಿ, ದೆಹಲಿ, ಜಬ್ಬಲಪುರ, ಗೋವ ಹೀಗೆ ದೇಶದ ಅನೇಕ ಕಡೆಗಳಲ್ಲಿ ಇವರು ರಚಿಸಿದ ಶಿಲ್ಪಗಳಿವೆ. ಇವರು ಇದುವರೆಗೂ ಐನೂರಕ್ಕೂ ಹೆಚ್ಚು ವಿಭಿನ್ನ ಶೈಲಿಯ ವಿಗ್ರಹಗಳನ್ನೂ ಶಿಲ್ಪಗಳನ್ನೂ ರಚಿಸಿದ್ದಾರೆ.

ಇವರದು ಸಂಕೋಚ ಮನೋಭಾವದ ವ್ಯಕ್ತಿತ್ವ. ಏಕಾಂತಪ್ರಿಯರು. ಇವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರಥಮ ಅಧ್ಯಕ್ಷರಾಗಿದ್ದರು. ಆಗ ಅಕಾಡೆಮಿಗೆ ಜೀವಕಳೆ ತುಂಬಿ, ಶಿಲ್ಪ ಕಲಾವಿದರಿಗೆ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಇವರ ಅವಧಿಯಲ್ಲಿ ಶಿಲ್ಪಿಗಳಿಗಾಗಿ ಪ್ರಕಟಿಸಿದ ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ ಎಂಬ ಗ್ರಂಥ ಒಂದು ಗಮನಾರ್ಹ ಸಾಧನೆ. ಶಿಲ್ಪಕಲೆಯ ಅಭಿವೃದ್ಧಿಗಾಗಿ ಶ್ರೀ ವಿಜಯ ಶಿಲ್ಪಕಲಾಶಾಲೆ ಎಂಬ ಕಲಾಶಾಲೆಯನ್ನು ಸ್ಥಾಪಿಸಿ ನಡೆಸುತ್ತಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿಗಳು ದೊರಕಿವೆ. ಇಂಗ್ಲೆಂಡಿನ ಕ್ವೀನ್‌ಲೆಂಡ್‌ನಲ್ಲಿ 1942ರಲ್ಲಿ ನಡೆದ ಭಾರತ ಉತ್ಸವದಲ್ಲಿ ಮುರಳೀಧರಕೃಷ್ಣ ಶಿಲ್ಪಕ್ಕೆ ಪ್ರಶಸ್ತಿ (1942), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1991), ಲಲಿತಕಲಾ ಪ್ರಶಸ್ತಿ, 1995ರಲ್ಲಿ ರಾಜ್ಯ ಕರಕುಶಲ ಮಂಡಳಿಯ ಪ್ರಶಸ್ತಿ (1995), ದೆಹಲಿಯ ಅಖಿಲ ಭಾರತ ಫೈನ್

ಆರ್ಟ್ಸ್ ಸೊಸೈಟಿಯ ಪ್ರಶಸ್ತಿ–ಇವು ಮುಖ್ಯವಾದುವು. ಕರ್ನಾಟಕ ಸರ್ಕಾರ 1999ರಲ್ಲಿ ಇವರಿಗೆ ಜಕಣಾಚಾರಿ ಪ್ರಶಸ್ತಿ ನೀಡಿ ಗೌರವಿಸಿದೆ. **(ಎಸ್.ಎಂ.)**

**ಶಾಮರಾಯ, ತ.ಸು.:** 1906–98. ಆಧುನಿಕ ಕನ್ನಡ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರು. 1906 ಜೂನ್ 12ರಂದು ಚಿತ್ರದುರ್ಗ ಜಿಲ್ಲೆಯ ತಳುಕು ಗ್ರಾಮದಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ತಳುಕಿನ ಸುಬ್ಬಣ್ಣ ಶಾಮರಾಯ. ತಂದೆ ಸುಬ್ಬಣ್ಣ, ತಾಯಿ ಲಕ್ಷ್ಮೀದೇವಮ್ಮ. ಕನ್ನಡ ನವೋದಯದ ಆಚಾರ್ಯರಲ್ಲೊಬ್ಬರಾದ ತಳುಕಿನ ಸುಬ್ಬಣ್ಣ ವೆಂಕಣ್ಣಯ್ಯನವರು ಶಾಮರಾಯರ ಅಣ್ಣ. ಶಾಮರಾಯರು ಪ್ರಾಥಮಿಕ ವಿದ್ಯಾಭ್ಯಾಸದ ಅನಂತರ ಬೆಂಗಳೂರು ನ್ಯಾಷನಲ್ ಹೈಸ್ಕೂಲಿನಿಂದ ಎಸ್.ಎಸ್.ಎಲ್.ಸಿ. ಮುಗಿಸಿ ಮಹಾರಾಜ ಕಾಲೇಜಿನಿಂದ ಬಿ.ಎ.ಆನರ್ಸ್ ಮತ್ತು ಎಂ.ಎ.ಪದವಿಗಳನ್ನು ಗಳಿಸಿದರು. ಇವರು ಕುವೆಂಪು ಅವರ ಆಪ್ತಶಿಷ್ಯರು. ಸಾಹಿತ್ಯಕವಾಗಿ ಇವರ ಮೇಲೆ ಗಾಢ ಪ್ರಭಾವ ಬೀರಿದವರು ಅಣ್ಣ ಟಿ.ಎಸ್.ವೆಂಕಣ್ಣಯ್ಯ.



ಶಾಲಾ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ ಇವರು ಎಂ.ಎ.ಶಿಕ್ಷಣದ ಬಳಿಕ ಮೈಸೂರು ಮಹಾರಾಜ, ಯುವರಾಜ ಕಾಲೇಜುಗಳಲ್ಲಿ ಶ್ರೇಷ್ಠ ಅಧ್ಯಾಪಕರಾಗಿ, ಉತ್ತಮ ವಾಗ್ಮಿಗಳಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿ (1957–60), ಗ್ರಂಥಾಲಯದ ಗ್ರಂಥಪಾಲಕರಾಗಿ (1960–61), ಯು.ಜಿ.ಸಿ. ಪ್ರಾಧ್ಯಾಪಕರಾಗಿ (1968–71) ಸೇವೆ ಸಲ್ಲಿಸಿದರು. ಪ್ರಸಾರಾಂಗದ ನಿರ್ದೇಶಕರಾಗಿದ್ದಾಗ ಕನ್ನಡ ಮಾಧ್ಯಮಕ್ಕೆ ಅಗತ್ಯವಾದ ಕಾಲೇಜು ಪಠ್ಯಪುಸ್ತಕಗಳನ್ನು ಬರೆಯಿಸಿ ಪ್ರಕಟಗೊಳಿಸಿದ ಹೆಚ್ಚುಗಾರಿಕೆ ಇವರದು. ಜಾತ್ಯಾತೀತವಾದ ಉದಾರ ಸಾತ್ವಿಕ ವ್ಯಕ್ತಿತ್ವದ ಇವರು ಶ್ರೀರಾಮಕೃಷ್ಣರ ಭಕ್ತರೂ ಹಾಗೂ ಅನುಯಾಯಿಗಳೂ ಆಗಿದ್ದರು. ಸ್ವಲ್ಪಕಾಲ ಗುಬ್ಬಿಯ ಚಿದಂಬರಾಶ್ರಮದ ಅಧ್ಯಕ್ಷರಾಗಿ ಅದರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದರು. ಮಲ್ಲಾಡಿ ಹಳ್ಳಿಯ ಅನಾಥ ಸೇವಾಶ್ರಮ ಹಾಗೂ ಅಗಡಿಯ ಆನಂದಾಶ್ರಮದೊಂದಿಗೂ ಸಂಪರ್ಕ ಹೊಂದಿದ್ದರು. ತ.ವೆಂ.ಸ್ಮಾರಕ ಗ್ರಂಥಮಾಲೆಯನ್ನು ಸ್ಥಾಪಿಸಿ ಸ್ತುತ್ಯಾರ್ಹವಾದ ಹಲವಾರು ಉತ್ತಮ ಗ್ರಂಥಗಳನ್ನು ಪ್ರಕಟಿಸಿ ಆ ಮೂಲಕ ಸಾಕಷ್ಟು ಪ್ರತಿಭಾನ್ವಿತ ಲೇಖಕರನ್ನು ಬೆಳಕಿಗೆ ತಂದ ಕೀರ್ತಿ ಇವರದು.

ಇವರ ಸಾಹಿತ್ಯ ರಚನೆ ಸಮೃದ್ಧ ಹಾಗೂ ವೈವಿಧ್ಯಪೂರ್ಣ. ಕೋಶ ವ್ಯಾಕರಣ, ಸಾಹಿತ್ಯ ಚರಿತ್ರೆ–ವಿಮರ್ಶೆ, ಸಂಶೋಧನೆ, ಸಂಪಾದನೆ, ಜೀವನಚರಿತ್ರೆ, ಕಾದಂಬರಿ, ಕಥೆ, ಮಕ್ಕಳ ಸಾಹಿತ್ಯ – ಹೀಗೆ ಇವರ ಕಾರ್ಯಕ್ಷೇತ್ರವೂ ವಿಸ್ತಾರವಾದದ್ದು. ವ್ಯಾಕರಣಸಾರ (ಇತರರೊಡನೆ, 1973), ಕರ್ನಾಟಕ ಶಬ್ದಾನುಶಾಸನ (ಇತರರೊಡನೆ, 1975), ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ (ಇತರರೊಡನೆ, 1975), ಕುಮಾರವ್ಯಾಸ ಭಾರತ ನಿಘಂಟು (1981), ಜೈನಪರಿಭಾಷಾ ರತ್ನಕೋಶ (ಇತರರೊಂದಿಗೆ, 1981) ಮೊದಲಾದವು ಇವರ ಕೋಶ, ವ್ಯಾಕರಣ ಕೃತಿಗಳು. ಮುದ್ದಣ (1943), ರತ್ನಾಕರವರ್ಣಿ (1950), ಕನ್ನಡ ನಾಟಕ (1962), ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ (1964), ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಮೀಕ್ಷೆ (1972), ಪಂಪ (1973) ಮೊದಲಾದವು ಇವರ ಸಾಹಿತ್ಯ ವಿಮರ್ಶೆಯ ಕೃತಿಗಳು. ಉದ್ಯೋಗಪರ್ವ ಸಂಗ್ರಹ (1946), ಸಭಾಪರ್ವ ಸಂಗ್ರಹ (1947), ಆದಿಪರ್ವ ಸಂಗ್ರಹ (1947), ವಿರಾಟಪರ್ವ ಸಂಗ್ರಹ (1951), ಜೈಮಿನಿಭಾರತ ಸಂಗ್ರಹ (1954), ಸುಕುಮಾರ ಚರಿತಂ (1954), ಅರಣ್ಯಪರ್ವ ಸಂಗ್ರಹ (1955), ಭರತೇಶ ವೈಭವ (1957), ಮಹಾಶ್ವೇತೆ (1959), ಭಜಗೋವಿಂದಂ (1968), ಆಚಣ್ಣ ಕವಿಯ ವರ್ಧಮಾನ ಪುರಾಣಂ (1975), ಹರಿಹರನ ಉಡುತಡಿಯ ಮಹಾದೇವಿಯಕ್ಕನ ರಗಳೆ ಮೊದಲಾದವು ಇವರ ಸಂಪಾದಿತ ಕೃತಿಗಳು. ಮಂಕನ ಮಡದಿ (1944) ಎಂಬ ಕಾದಂಬರಿಯನ್ನೂ ಕಥಾವಲ್ಲರಿ (1948), ಶಿವಶರಣರ ಕಥಾರತ್ನಕೋಶ (1967) ಎಂಬ ಕಥಾಸಂಕಲನಗಳನ್ನೂ ರಚಿಸಿದ್ದಾರೆ. ಭದ್ರಾಚಲ ರಾಮದಾಸ (1970), ತಪಸ್ವೀಜಿ ಮಹಾರಾಜ್ (1980) ಮೊದಲಾದವು ಇವರು ಬರೆದ ಜೀವನ ಚರಿತ್ರೆಗಳು. ವಚನ ರಾಮಾಯಣ (1962), ವಚನ ಭಾಗವತ (1969), ಶ್ರೀಕೃಷ್ಣನ ಕಡೆಯ ಸಂದೇಶ (1971) ಮೊದಲಾದವು ಇವರ ಬಾಲಸಾಹಿತ್ಯ ಕೃತಿಗಳು. ಆತ್ಮಕಥಾರೂಪದ 'ಮೂರು ತಲೆಮಾರು' (1990) ಇವರ ಎಲ್ಲ ಕೃತಿಗಳಿಗಿಂತ ವಿಶಿಷ್ಟವಾದುದು. ತಳುಕಿನ ಮೂರು ಪೀಳಿಗೆಗಳ ಕಥೆಯನ್ನೊಳಗೊಂಡು ಪುರಾಣ, ಭೂತ–ವರ್ತಮಾನಗಳ ಸಂಗತಿಗಳನ್ನೊಳಗೊಂಡ ಈ ಕೃತಿ ಅತ್ಯಂತ ಸ್ವಾರಸ್ಯಪೂರ್ಣವಾಗಿದೆ.

ಇವರ ಸಾಹಿತ್ಯ ಸೇವೆಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಚಾವುಂಡರಾಯ ಪ್ರಶಸ್ತಿ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿವೆ. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್ ನೀಡಿ ಗೌರವಿಸಿದೆ (1997). ಇವರು 1998 ಆಗಸ್ಟ್ 21ರಂದು ನಿಧನರಾದರು. **(ಸಿ.ಪಿ.ಕೆ.)**

**ಶಾಮಶಾಸ್ತ್ರೀ, ಆರ್.:** 1868–1944. ಪ್ರಸಿದ್ಧ ವಿದ್ವಾಂಸರು, ಸಂಶೋಧಕರು. ರುದ್ರಪಟ್ಟಣದಲ್ಲಿ 1868 ಜನವರಿ 12ರಂದು ಜನಿಸಿದರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಸ್ವಪ್ರಯತ್ನದಿಂದ ಅಭಿವೃದ್ಧಿಗೆ ಬಂದರು. ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಓದಿ 1891ರಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ವಿದ್ವತ್‌ಪರೀಕ್ಷೆ ಮಾಡಿದರು. ಆಗಿನ ದಿವಾನರಾಗಿದ್ದ ಕೆ.ಶೇಷಾದ್ರಿ ಅಯ್ಯರ್ ಅವರು ಇವರ ಪಾಂಡಿತ್ಯವನ್ನು ಮೆಚ್ಚಿ, ಸಂಸ್ಕೃತ ಗ್ರಂಥಗಳನ್ನು ಓದಿಸಿ ಕೇಳುವುದಕ್ಕೆಂದು ಇವರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡರು; ಇವರ ಇಂಗ್ಲಿಷ್ ವ್ಯಾಸಂಗಕ್ಕೂ ಅನುಕೂಲ ಮಾಡಿಕೊಟ್ಟರು. ಇವರ ಮನೆಯಲ್ಲಿದ್ದ ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಶಾಮಶಾಸ್ತ್ರೀಗಳು ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳ ಅಧ್ಯಯನದ ಜೊತೆಗೆ ಭೌತಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಯನ ಮಾಡಿ 1899ರಲ್ಲಿ ಮದರಾಸು ವಿಶ್ವವಿದ್ಯಾನಿಲಯದ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಶೇಷಾದ್ರಿ ಅಯ್ಯರ್ ಅವರ ನೆರವಿನಿಂದಲೇ 1900 ರಲ್ಲಿ ಮೈಸೂರಿನ ಪ್ರಾಚೀನ ಪುಸ್ತಕ ಭಂಡಾರದಲ್ಲಿ ಉದ್ಯೋಗಸ್ಥರಾದರು. ಆ ಪುಸ್ತಕ ಭಂಡಾರದ ಹಸ್ತಪ್ರತಿಗಳ ಗ್ರಂಥಸೂಚಿಯನ್ನು ತಯಾರಿಸುತ್ತಿದ್ದಾಗ, ಅಂದಿನವರೆಗೆ ನಾಮಮಾತ್ರ ಪ್ರಸಿದ್ಧವಾಗಿದ್ದು ಗ್ರಂಥಲಿಪಿಯಲ್ಲಿದ್ದ ಕೌಟಿಲ್ಯನ ಅರ್ಥಶಾಸ್ತ್ರದ ಹಸ್ತಪ್ರತಿ ದೊರೆಯಿತು. ಈ ಗ್ರಂಥದ ಮಹತ್ತ್ವವನ್ನರಿತ ಇವರು ಅದನ್ನು ಪರಿಷ್ಕರಿಸಿ 1909ರಲ್ಲಿ ಪ್ರಕಟಿಸಿದರು. 1912ರ ವೇಳೆಗೆ ಈ ಗ್ರಂಥದ ಇಂಗ್ಲಿಷ್ ಭಾಷಾಂತರವನ್ನೂ ಪ್ರಕಟಿಸಿ ಪ್ರಸಿದ್ಧರಾದರು. 1912–18ರ ವರೆಗೆ

ಶಾಮಶಾಸ್ತ್ರೀಗಳು ಬೆಂಗಳೂರಿನಲ್ಲಿರುವ ಚಾಮರಾಜ ಸಂಸ್ಕೃತ ಮಹಾಪಾಠಶಾಲೆಯ ಅಧ್ಯಕ್ಷರಾಗಿದ್ದು ಅನಂತರ ಮೈಸೂರು ಸರ್ಕಾರದ ಪ್ರಾಚೀನ ಪುಸ್ತಕ ಭಂಡಾರದ ಕ್ಯೂರೇಟರ್ ಆದರು (1918). 1922ರಲ್ಲಿ ಇವರು ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ನಿರ್ದೇಶಕರಾಗಿ ನೇಮಕ ಗೊಂಡರು. ಕೆಲ ಕಾಲ ಇವರು ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿ, 1928ರಲ್ಲಿ ನಿವೃತ್ತರಾದರು.

ಇವರು ಮೈಸೂರಿನ ಮಹಾರಾಜ ಸಂಸ್ಕೃತ ಮಹಾಪಾಠ ಶಾಲೆಯ ಕಾರ್ಯಕಾರಿ ಸಮಿತಿ ಮತ್ತು ಸಂಸ್ಕೃತ ವಿದ್ವತ್ಪರೀಕ್ಷಾ ಮಹಾಸಭೆಯ ಸದಸ್ಯರಾಗಿಯೂ ಇದ್ದು ಸಂಸ್ಕೃತ ಭಾಷಾವ್ಯಾಸಂಗದ ಪುರೋಭಿವೃದ್ಧಿಗಾಗಿ ದುಡಿದರಲ್ಲದೆ, ಸಂಸ್ಕೃತ ಭಾಷೆಯ ಪ್ರಚಾರಕ್ಕಾಗಿ ಆರ್ಯಧರ್ಮೋಜ್ಜೀವಿನೀ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು.

ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಜೊತೆಗೆ ಜ್ಯೋತಿಷ್ಯಶಾಸ್ತ್ರದಲ್ಲೂ ಅಪಾರ ಪರಿಶ್ರಮವನ್ನು ಹೊಂದಿದ್ದ ಇವರು ಮಾಡಿರುವ ಸಾಹಿತ್ಯ ಸೇವೆ ಮೇಲ್ಮಟ್ಟದ್ದು; ಸಾರವತ್ತಾದದ್ದು. 1908ರಲ್ಲಿ ಗವಾಂ ಅಯನ ದಿ ವೇದಿಕ್ ಈರ ಎಂಬ ವೇದಗಳಲ್ಲಿ ಯುಗಗಳ ವಿಚಾರವನ್ನು ಕುರಿತ ಗ್ರಂಥವನ್ನೂ 1922–28ರ ವರೆಗೆ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ವರದಿಗಳಲ್ಲಿ ಅನೇಕ ಅಮೂಲ್ಯವಾದ ಲೇಖನಗಳನ್ನೂ 1926–28 ರವರೆಗೆ ಮಹಾವೀರನ ಸೂರ್ಯಪ್ರಜ್ಞಪ್ತಿಯ ಇಂಗ್ಲಿಷ್ ಅನುವಾದವನ್ನೂ 1936ರಲ್ಲಿ ವೇದಾಂಗ ಜ್ಯೋತಿಷ ಎಂಬ ಗ್ರಂಥದ ಇಂಗ್ಲಿಷ್ ಅನುವಾದ ಮತ್ತು ಸಂಸ್ಕೃತ ವ್ಯಾಖ್ಯೆಯನ್ನೂ 1938ರಲ್ಲಿ ದ್ರಪ್ಸ, ದಿ ವೇದಿಕ್ ಸೈಕಲ್ ಆಫ್ ಇಕ್ಲಿಪ್ಸಸ್ ಎಂಬ ಗ್ರಂಥವನ್ನೂ 1940ರಲ್ಲಿ ದಿ ಇಕ್ಲಿಪ್ಸ್ ಇನ್ ದಿ ವೇದಾಸ್, ದಿ ಬೈಬಲ್ ಮತ್ತು ಕುರಾನ್ ಎಂಬ ಗ್ರಂಥಗಳನ್ನೂ ರಚಿಸಿದರು. 1939–41ರಲ್ಲಿ ಇವರು ಪ್ರಕಟಿಸಿದ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಎಂಬ ಕನ್ನಡ ಶಾಸನಗಳ ಸಂಕಲನ ಮೈಸೂರು ಸರ್ಕಾರದ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಗೆ ಇವರ ಅಮೂಲ್ಯ ಕೊಡುಗೆಯಾಗಿದೆ. ಇವೆಲ್ಲವುಗಳ ಜೊತೆಗೆ ಇವರು ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ವಿಮರ್ಶಾತ್ಮಕವಾದ ಅನೇಕ ಪ್ರೌಢಲೇಖನಗಳನ್ನು ಪ್ರಸಿದ್ಧ ಪಂಡಿತ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಶಾಮಶಾಸ್ತ್ರೀಗಳು ಪ್ರಾಚೀನ ಪುಸ್ತಕಭಂಡಾರದ ಕ್ಯೂರೇಟರ್ ಆಗಿದ್ದಾಗ ಅವರ ನೇತೃತ್ವದಲ್ಲಿ ಸಂಶೋಧನೆಯಾಗಿ ಪ್ರಕಟವಾಗಿರುವ ಸಂಸ್ಕೃತ ಗ್ರಂಥಗಳಿವು: ಬ್ರಹ್ಮಸೂತ್ರಭಾಷ್ಯ (ಆನಂದತೀರ್ಥೀಯ) ತಾತ್ಪರ್ಯ ಚಂದ್ರಿಕೆಯೊಡನೆ – ಭಾಗ 3, ಕೌಟಿಲ್ಯನ ಅರ್ಥಶಾಸ್ತ್ರ (ಎರಡನೆಯ ಮುದ್ರಣ), ಬೋಧಾಯನಗೃಹ್ಯಸೂತ್ರ (ಪರಿಶಿಷ್ಟದೊಡನೆ) ಸ್ಮೃತಿಚಂದ್ರಿಕಾ, ಆಶೌಚಖಂಡ, ತೈತ್ತಿರೀಯಬ್ರಾಹ್ಮಣ ( ಅಷ್ಟಕ) – ಭಾಗ 2, ಭಟ್ಟಭಾಸ್ಕರ ಮತ್ತು ಸಾಯಣಭಾಷ್ಯಗಳೊಡನೆ, ಅಲಂಕಾರ ಭಾಗ ಮಣಿಹಾರ – ಭಾಗ 2, ಬ್ರಹ್ಮಸೂತ್ರಭಾಷ್ಯ (ಆನಂದ ತೀರ್ಥೀಯ) ತಾತ್ಪರ್ಯ ಚಂದ್ರಿಕೆಯೊಡನೆ – ಭಾಗ 4, ಕಾವ್ಯಪ್ರಕಾಶ, ಸಂಕೇತ, ವ್ಯಾಖ್ಯಾನದೊಡನೆ, ಆಯುರ್ವೇದಸೂತ್ರ, ಯೋಗಾನಂದನಾಥ ಭಾಷ್ಯದೊಡನೆ, ಅಲಂಕಾರ ಮಣಿಹಾರ – ಭಾಗ 3, ವಿದ್ಯಾಮಾಧವೀಯ–ವಿಷ್ಣುಶರ್ಮನ ಮುಹೂರ್ತ ದೀಪಿಕಾ ವ್ಯಾಖ್ಯಾನದೊಡನೆ – ಭಾಗ 1, ಕೌಟಿಲ್ಯನ ಅರ್ಥಶಾಸ್ತ್ರ (ಮೂರನೆಯ ಮುದ್ರಣ), ಅರ್ಥಶಾಸ್ತ್ರಪದಸೂಚಿ – ಭಾಗ 1, ಅರ್ಥಶಾಸ್ತ್ರಪದಸೂಚಿ, ಭಾಗ 2, ವಿದ್ಯಾಮಾಧವೀಯ (ವಿಷ್ಣುಶರ್ಮನ ಮುಹೂರ್ತದೀಪಿಕೆಯೊಡನೆ–ಭಾಗ 2) ಅರ್ಥಶಾಸ್ತ್ರಪದಸೂಚಿ, ಭಾಗ 3– ಅಭಿಲಷಿತಾರ್ಥಚಿಂತಾಮಣಿ, ಭಾಗ 1, ವಿದ್ಯಾಮಾಧವೀಯ–ಭಾಗ 3, ಸರಸ್ವತೀವಿಲಾಸ (ವ್ಯವಹಾರಖಂಡ). ಇವುಗಳೇ ಅಲ್ಲದೆ ಕನ್ನಡದಲ್ಲೂ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ: ಕುಮಾರವ್ಯಾಸನ ಮಹಾಭಾರತ (ವಿರಾಟಪರ್ವ), ಲಿಂಗಣ್ಣನ ಕೆಳದಿನೃಪ ವಿಜಯ, ಸೋಮರಾಜನ ಉದ್ಭಟಕಾವ್ಯ, ರುದ್ರಭಟ್ಟನ ಜಗನ್ನಾಥವಿಜಯ, ಕುಮಾರವ್ಯಾಸನ ಮಹಾಭಾರತ (ಉದ್ಯೋಗಪರ್ವ), ಸೋಮನಾಥನ ಅಕ್ರೂರಚರಿತೆ, ನಯಸೇನನ ಧರ್ಮಾಮೃತ– ಭಾಗ 1, ಕಂಠೀರವ ನರಸರಾಜವಿಜಯ, ನಯಸೇನನ ಧರ್ಮಾಮೃತ– ಭಾಗ2.

ಇವರು ವಿಖ್ಯಾತ ಭಾರತೀಯ ವಿದ್ವನ್ಮಣಿಗಳಾದ ಬಿ.ಎನ್.ಸೀಲ್, ರಾಧಾಕುಮುದ ಮುಖರ್ಜಿ, ಮಹಾಮಹೋಪಾಧ್ಯಾಯ ಹರಪ್ರಸಾದಶಾಸ್ತ್ರಿ ಮತ್ತು ಎಫ್.ಡಬ್ಲ್ಯು.ಥಾಮಸ್, ವಿನ್‌ಸೆಂಟ್ ಎ. ಸ್ಮಿತ್, ಎ.ಎ. ಮ್ಯಾಕ್‌ಡೊನೆಲ್, ಆರ್. ಟೆಂಪಲ್, ಎಲ್.ಡಿ. ಬಾರ್‌ನೆಟ್, ಎ.ಟಿ. ರುಡೋಲ್ಫ್ ಖಾರ್ನಿಲೇ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ಮನ್ನಣೆಗೆ ಪಾತ್ರರಾಗಿದ್ದರು. ಇವರಿಗೆ ಸಂದ ಗೌರವಗಳ ಪಟ್ಟಿಯೂ ದೊಡ್ಡದೆ. ಅಮೆರಿಕದ ವಾಷಿಂಗ್‌ಟನ್ ವಿಶ್ವವಿದ್ಯಾಲಯಕ್ಕೆ ಸೇರಿದ ಓರಿಯಂಟಲ್ ಯೂನಿವರ್ಸಿಟಿ ಫಿಲಸಾಫಿಕಲ್ ಸ್ಕೂಲ್ ಎಂಬ ಸಂಸ್ಥೆ 1919 ರಲ್ಲಿ ಇವರಿಗೆ ಪಿಎಚ್.ಡಿ. ಪದವಿಯನ್ನು ಕೊಟ್ಟು ಗೌರವಿಸಿತು. 1921ರಲ್ಲಿ ಮುಂಬಯಿ ಶಾಖೆಯ ರಾಯಲ್ ಏಷಿಯಾಟಿಕ್ ಸೊಸೈಟಿಯು ಕಾಂಪ್‌ಬೆಲ್ ಸ್ಮಾರಕ ಚಿನ್ನದ ಪದಕವನ್ನು ಕೊಟ್ಟು ಗೌರವಿಸಿತು. ಕಲ್ಕತ್ತ ವಿಶ್ವವಿದ್ಯಾಲಯ 1921ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ನೀಡಿತು. ಮೈಸೂರಿನ ಮಹಾರಾಜರವರು 1925 ರಲ್ಲಿ ಇವರಿಗೆ ಅರ್ಥಶಾಸ್ತ್ರವಿಶಾರದ ಎಂಬ ಪ್ರಶಸ್ತಿಯನ್ನೂ 1930ರಲ್ಲಿ ಆಗಿನ ಬ್ರಿಟಿಷ್ ಸರ್ಕಾರ ಮಹಾಮಹೋಪಾಧ್ಯಾಯ ಎಂಬ ಪ್ರಶಸ್ತಿಯನ್ನೂ ಕಾಶಿಯಲ್ಲಿರುವ ಭಾರತಧರ್ಮ ಮಹಾಮಂಡಲಿಯು ವಿದ್ಯಾಲಂಕಾರ ಎಂಬ ಪ್ರಶಸ್ತಿಯನ್ನೂ 1935ರಲ್ಲಿ ಆ ಮಂಡಲಿಯೇ ಪಂಡಿತರಾಜ ಎಂಬ ಪ್ರಶಸ್ತಿಯನ್ನೂ ಕೊಟ್ಟು ಗೌರವಿಸಲಾಗಿದೆ.

ಇವರು 1944 ಜನವರಿ 23ರಂದು ನಿಧನರಾದರು. **(ಕೆ.ವಿ.ಎಸ್.ಎಂ.)**

**ಶಾರದಾ, ಎಲ್.ವಿ.:** ಕನ್ನಡ ಚಿತ್ರಕಲಾವಿದೆ. ವಂಶವೃಕ್ಷ ಚಿತ್ರದಲ್ಲಿನ ಅಭಿನಯಕ್ಕಾಗಿ ಇವರಿಗೆ 1971ರಲ್ಲಿ ರಾಷ್ಟ್ರಪ್ರಶಸ್ತಿ ಲಭಿಸಿತು. ಕಾತ್ಯಾಯಿನಿಯ

ಪಾತ್ರದಲ್ಲಿ ಈ ಚಿತ್ರದಲ್ಲಿ ಇವರು ನೀಡಿದ ಅಭಿನಯ ಕನ್ನಡ ರಸಿಕರ ಮನಸೂರೆಗೊಂಡಿತು. ಬೂತಯ್ಯನ ಮಗ ಅಯ್ಯು (1973), ಒಂದು ಪ್ರೇಮದ ಕಥೆ–ಇವರು ಅಭಿನಯಿಸಿರುವ ಚಿತ್ರಗಳು. ಬೂತಯ್ಯನ ಮಗ ಅಯ್ಯು ರಾಜ್ಯಪ್ರಶಸ್ತಿ ಪಡೆಯಿತು. ಈ ಚಿತ್ರದಲ್ಲಿ ಅಯ್ಯುವಿನ ಮಡದಿಯಾಗಿ ಇವರ ಅಭಿನಯ ಪ್ರಶಂಸೆಗೆ ಪಾತ್ರವಾಯಿತು. ವ್ಯಾಪಾರಿ ಚಿತ್ರಗಳಿಗಿಂತ

ಪ್ರಾಯೋಗಿಕ ಚಿತ್ರಗಳತ್ತ ಇವರಿಗೆ ಅಪಾರ ಒಲವು. ಅಭಿನಯದಲ್ಲಿ ತಲ್ಲೀನತೆಯನ್ನು ಸಾಧಿಸಿಕೊಂಡಿರುವ ಇವರಿಗೆ ಸೂಕ್ತ ಮಾರ್ಗದರ್ಶನ ದೊರೆತದ್ದು ಗಿರೀಶ ಕಾರ್ನಾಡ ಹಾಗೂ ಬಿ.ವಿ.ಕಾರಂತ ಅವರಿಂದ, ಶಾರದಾ ಅವರ ಅಭಿನಯವನ್ನು ಕನ್ನಡಿಗರೇ ಅಲ್ಲದೆ ಹೊರಗಿನವರೂ ಅದರಲ್ಲಿಯೂ ಭಾರತೀಯ ಚಿತ್ರರಂಗದ ಪ್ರತಿಭಾನ್ವಿತ ವ್ಯಕ್ತಿಗಳಾದ ಸತ್ಯಜಿತ್‌ರೇ, ಮೃಣಾಲ್ ಸೇನ್, ಹೃಷಿಕೇಶ್ ಮುಖರ್ಜಿ, ವಿ. ಶಾಂತಾರಾಮ್ ಮೊದಲಾದವರು ಶ್ಲಾಘಿಸಿದ್ದಾರೆ. (ಬಿ.ಎಸ್.ಎಸ್.ಆರ್.)

**ಶಾರದಾ ಪ್ರಸಾದ್, ಎಚ್.ವೈ.:** 1924– . ಭಾರತದ ಮೂವರು ಪ್ರಧಾನ ಮಂತ್ರಿಗಳಾದ ಇಂದಿರಾಗಾಂಧಿ, ಮೊರಾರ್ಜಿ ದೇಸಾಯಿ ಮತ್ತು ರಾಜೀವಗಾಂಧಿ ಇವರ ಪತ್ರಿಕಾ ಸಲಹೆಗಾರರಾಗಿದ್ದವರು. ಇವರ ಪೂರ್ಣ ಹೆಸರು ಹೊಳೆನರಸೀಪುರ ಯೋಗಾನರಸಿಂಹ ಶಾರದಾ ಪ್ರಸಾದ್. 1924 ಏಪ್ರಿಲ್ 15ರಂದು ಬೆಂಗಳೂರಿನಲ್ಲಿ ಜನಿಸಿದರು. ವಿದ್ಯಾರ್ಥಿಯಾಗಿದ್ದಾಗಲೇ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು. ಮುಂಬೈನ ಇಂಡಿಯನ್ ಎಕ್ಸ್‌ಪ್ರೆಸ್‌ನ ಅತಿ ಕಿರಿಯ ವಯಸ್ಸಿನ ಸುದ್ದಿ ಸಂಪಾದಕರೆನಿಸಿದ ಇವರು 1955–56ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ 'ನೀಮನ್' ಫೆಲೋ ಗೌರವ ಪಡೆದರು. ಕೆಲಕಾಲ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯೂನಿಕೇಷನ್ ಸಂಸ್ಥೆಯ ನಿರ್ದೇಶಕರಾಗಿ, ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್‌ನ ಉಪಾಧ್ಯಕ್ಷರಾಗಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.



ಕನ್ನಡದ ಒಬ್ಬ ಹೆಸರಾಂತ ಬರಹಗಾರನಾಗಬೇಕೆಂದು ಬಯಸಿದ್ದ ಇವರು ಸುಮಾರು ಆರು ದಶಕಗಳ ಕಾಲ ಕನ್ನಡ ನಾಡಿನ ಹೊರಗೆ ಬದುಕು ನಡೆಸಬೇಕಾಯಿತು. ಆದರೂ ದಿ ಏಷ್ಯನ್ ಏಜ್ ಎಂಬ ಪತ್ರಿಕೆಯ ಅಂಕಣಕಾರರಾಗಿ ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದಂತೆ ಕನ್ನಡದಲ್ಲೂ ಬರೆಯಬೇಕೆಂಬಾಸೆ ಇವರಲ್ಲಿ ತೀವ್ರವಾಗ ತೊಡಗಿತು. ಇವರ ಬರೆಹದ ಮೋಡಿ ಎಂಥದೆಂಬುದು ದಿ ಬುಕ್ ಐ ವೋಂಟ್ ಬಿ ರೈಟಿಂಗ್ ಅಂಡ್ ಅದರ್ ಎಸ್ಸೇಸ್ ಎಂಬ ಕೃತಿಯನ್ನು ಓದಿದವರು ಇವರ ಭಾಷಾ ಪ್ರೌಢಿಮೆ ಅನುಭವ ಪಕ್ವ ಮನಸ್ಸನ್ನು ಅರಿಯ ಬಹುದಾಗಿದೆ. ಈ ಕೃತಿಯನ್ನು ಎಲ್ಲ ಬಲ್ಲವರಿಲ್ಲ ಎಂಬ ಹೆಸರಿನಲ್ಲಿ ಮತ್ತು ಬಲ್ಲವರು ಬಹಳಿಲ್ಲ ಎಂಬ ಹೆಸರುಗಳಲ್ಲಿ ಇತರರಿಂದ ಅನುವಾದ ಮಾಡಿಸಿದ್ದಾರೆ. ರಾಷ್ಟ್ರಪತಿ ಭವನ್: ದಿ ಸ್ಟೋರಿ ಆಫ್ ದಿ ಪ್ರೆಸಿಡೆಂಟ್ಸ್ ಹೌಸ್, ಎಕ್ಸ್‌ಪ್ಲೋರಿಂಗ್ ಕರ್ನಾಟಕ, ಜವಾಹರಲಾಲ್ ನೆಹರೂ ಅವರ ಆಯ್ದ ಬರೆಹಗಳು, ಮೊಮ್ಮಕ್ಕಳು ಹೇಳಿದ ಅಜ್ಜಿಕಥೆ (ಸಂ), ಸಂಗೀತದ ಸಿರಿ (ಸಂ) – ಇವು ಇವರ ಇತರ ಕೃತಿಗಳು.

ಇತಿಹಾಸದ ಪುಟಗಳಲ್ಲಿ ದಾಖಲಾಗುವ ರಾಜಕಾರಣಿಗಳೇಕೆ ತಮ್ಮ ಆತ್ಮಚರಿತ್ರೆಯನ್ನು ಪ್ರಾಮಾಣಿಕವಾಗಿ ಬರೆಯಬಾರದು ಎಂಬ ಪ್ರಶ್ನೆ ಅನೇಕ ವೇಳೆ ಉದ್ಭವಿಸಿದಾಗ ಅದಕ್ಕೆ ಶಾರದಾ ಪ್ರಸಾದರು ಜನರಲ್ ಡಿಗಾಲೆಯಂಥವರನ್ನು ಹೊರತುಪಡಿಸಿದರೆ ಬಹುಪಾಲು ರಾಜಕಾರಣಿಗಳ ಆತ್ಮಚರಿತ್ರೆ ಚರಿತ್ರೆಯ ನ್ಯಾಯಾಲಯದ ಮುಂದೆ ನಿಂತ ಆಪಾದಿತನೊಬ್ಬನ ಅತೃಪ್ತಿಕರ ಆತ್ಮಸಮರ್ಥನೆಗಳಂತೆ ತೋರುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ಶಾರದಾ ಪ್ರಸಾದರು ರಾಜಕಾರಣಿಗಳನ್ನು ಅತ್ಯಂತ ಹತ್ತಿರದಿಂದ ಬಲ್ಲವರು. ಗಾಂಧಿ ಮತ್ತು ಗಫಾರ್‌ಖಾನ್‌ರನ್ನು ಕುರಿತು ಬರೆದ ಡಿ.ಜಿ.ತೆಂಡೂಲ್ಕರ್, ನ್ಯೂಯಾರ್ಕ್‌ನಲ್ಲಿ ವಾಸವಿದ್ದ ಭಾರತದ ಛಾಯಾಚಿತ್ರಕಾರ ರಘುಬೀರ್ ಸಿಂಗ್, ಜಯಪ್ರಕಾಶ್ ನಾರಾಯಣ್, ಮೊರಾರ್ಜಿ ದೇಸಾಯಿ, ಎಸ್.ನಿಜಲಿಂಗಪ್ಪ, ಇಂದಿರಾಗಾಂಧಿಯವರ ಮುಖ್ಯ ಕಾರ್ಯದರ್ಶಿಯಾಗಿದ್ದ ಪಿ.ಎನ್. ಹಕ್ಸರ್, ಕಲಾವಿದ ಕೆ.ಕೆ.ಹೆಬ್ಬಾರ್, ಆರ್.ಕೆ.ನಾರಾಯಣ್, ಎ.ಕೆ.ರಾಮಾನುಜನ್, ಭಾರತದ ಅಸಾಧಾರಣ ಚಿತ್ರಕಲಾವಿದೆ ಸಂತೋಖ್ ಬಾ–ಇವರನ್ನು ಕುರಿತು ಶಾರದಾ ಪ್ರಸಾದರು ಬರೆದಿರುವ ಲೇಖನಗಳು ಒಂದು ಅತ್ಯುತ್ತಮ ನುಡಿಚಿತ್ರ ಹೇಗಿರಬಹುದೆಂಬುದಕ್ಕೆ ಉದಾಹರಣೆಯಂತಿವೆ.

ಇವರಿಗೆ ಅನೇಕ ಪ್ರಶಸ್ತಿ, ಗೌರವಗಳು ದೊರೆತಿವೆ. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್, ಭಾರತ ಸರ್ಕಾರದ ಪದ್ಮಭೂಷಣ ಮತ್ತು ಇಂದಿರಾಗಾಂಧಿ ರಾಷ್ಟ್ರೀಯ ಭಾವೈಕ್ಯತಾ ಪುರಸ್ಕಾರ್ ಮೊದಲಾದ ಹಲವಾರು ಪ್ರತಿಷ್ಠಿತ ಪದವಿ ಗೌರವಗಳಿಗೆ ಭಾಜನರಾಗಿದ್ದಾರೆ. 2001ನೆಯ ಸಾಲಿನ ಇಂದಿರಾಗಾಂಧಿ ಭಾವೈಕ್ಯತಾ ಪ್ರಶಸ್ತಿ ಪ್ರದಾನ ಮಾಡುವ ಸಂದರ್ಭದಲ್ಲಿ ಇವರನ್ನು ಕುರಿತು ಮಾತನಾಡುತ್ತಾ ಸೋನಿಯಾ ಗಾಂಧಿಯವರು 'ಶಾರದಾ ಪ್ರಸಾದರು ಶ್ರೇಷ್ಠ ಮಾನವತಾ ಗುಣಗಳನ್ನೂ ಸಾಮಾಜಿಕ ಗೌರವವನ್ನೂ ಭಾವೈಕ್ಯತೆಯನ್ನೂ ಬದುಕಿನಲ್ಲಿ ರೂಢಿಸಿಕೊಂಡವರು' ಎಂದು ಹೇಳಿದ್ದಾರೆ. ಎಂಥ ದೊಡ್ಡ ಸ್ಥಾನದಲ್ಲಿದ್ದರೂ ಪ್ರಾಮಾಣಿಕತೆ, ಸಾಂಸ್ಕೃತಿಕ ಕಾಳಜಿ, ಮನೆತನದ ಹೆಸರನ್ನು ಬಿಟ್ಟುಕೊಡದವರು ಎಂಬುದು ಇವರ ವ್ಯಕ್ತಿತ್ವ ಕುರಿತು ಲಂಕೇಶರ ಅಭಿಪ್ರಾಯ. ಈಗ ಶಾರದಾ ಪ್ರಸಾದರು ದೆಹಲಿಯಲ್ಲಿ ವಾಸವಾಗಿದ್ದಾರೆ. (ಜಿ.ಎನ್.)

**ಶಾರ್ಙ್ಗದೇವ:** ಸು.1230. ಸಂಗೀತರತ್ನಾಕರ ಎಂಬ ಶಾಸ್ತ್ರಗ್ರಂಥದ ಕರ್ತೃ. ವೈದಿಕ ವಿದ್ಯಾಸಂಪನ್ನನೂ ಧರ್ಮನಿಷ್ಠನೂ ಆಗಿದ್ದ ಭಾಸ್ಕರದೇವ ಇವನ ಪಿತಾಮಹ. ಈತ ಸ್ವದೇಶವಾದ ಕಾಶ್ಮೀರವನ್ನು ಬಿಟ್ಟು ದಕ್ಷಿಣಕ್ಕೆ ವಲಸೆ ಬಂದು ದೇವಗಿರಿಯ ಸೇವುಣರಲ್ಲಿ ಆಶ್ರಯ ಪಡೆದಿದ್ದ. ಇವನ ಮಗ ಸೋಢಲದೇವ. ತಂದೆಯಂತೆಯೇ ಮಹಾ ವಿದ್ವಾಂಸನಾಗಿದ್ದು 5ನೆಯ ಭಿಲ್ಲಮನಲ್ಲಿ (1173–92), ಅನಂತರ ಅವನ ಮಗ ಒಂದನೆಯ ಜೈತುಗಿಯಲ್ಲಿ (1192–99) ಕಂದಾಯ ಮಂತ್ರಿಯಾಗಿದ್ದನೆಂದು ತಿಳಿದು ಬರುತ್ತದೆ. ಇವನೇ ಶಾರ್ಙ್ಗದೇವನ ತಂದೆ. ಶಾರ್ಙ್ಗದೇವ ಸೇವುಣರಲ್ಲಿ ಅತ್ಯಂತ ಪ್ರಮುಖನಾಗಿದ್ದ ಸಿಂಘಣನಲ್ಲಿ (1199–1247) ಕಂದಾಯ ಮಂತ್ರಿಯಾಗಿದ್ದ. ಈತ ತನ್ನನ್ನು ಶ್ರೀಶರಣಾಗ್ರಣಿ, ಶ್ರೀಶರಣಾಧಿಪ ಎಂದು ಮುಂತಾಗಿ ಕರೆದುಕೊಂಡಿದ್ದಾನೆ. ಸಂಗೀತರತ್ನಾಕರದಲ್ಲಿ ತನ್ನನ್ನು ಹರಪ್ರಿಯ, ಶಂಕರಪ್ರಿಯ ಎಂದಷ್ಟೇ ಅಲ್ಲದೆ ಮಹಾಮಾಹೇಶ್ವರ ಎಂದು ವಿಶೇಷಿಸಿ ಕೊಂಡಿದ್ದಾನೆ. ಇದರಿಂದ ಇವನು ಶೈವತಂತ್ರದಲ್ಲಿ ದೀಕ್ಷಿತನೂ ಸಿದ್ಧನೂ ಆಗಿದ್ದನೆಂದು ಊಹಿಸಬಹುದು.

ಶಾರ್ಙ್ಗದೇವ ಸಂಗೀತಶಾಸ್ತ್ರವೇ ಅಲ್ಲದೆ ನೃತ್ಯ, ಅಲಂಕಾರ, ಛಂದಸ್ಸು, ವ್ಯಾಕರಣ, ಆಯುರ್ವೇದ, ಯೋಗದರ್ಶನ, ವೇದ ಮುಂತಾದ ಜ್ಞಾನಕ್ಷೇತ್ರಗಳಲ್ಲಿ ಪ್ರತಿಭಾವಂತನಾದ ನೇತಾರನಾಗಿದ್ದ. ಆಯುರ್ವೇದದಲ್ಲಿ ಧನ್ವಂತರಿ, ಆತ್ರೇಯ, ಚರಕ, ಸುಶ್ರುತ ವಾಗ್ಭಟಾದಿ ಆಚಾರ್ಯರಿಗೆ ಸಾಟಿಯೆನಿಸುವ ಪಾಂಡಿತ್ಯಾನುಭವಗಳನ್ನು ತೋರಿದ್ದಾನೆ. ಇವನು ತನ್ನನ್ನು ಅನವದ್ಯವಿದ್ಯಾ ವಿನೋದ, ನಿಃಶಂಕ ಎಂಬ ಬಿರುದುಗಳಿಂದಲೂ ಕರೆದುಕೊಂಡಿದ್ದಾನೆ.

ಈತ ಅಧ್ಯಾತ್ಮ ವಿವೇಕವೆಂಬ ಯೋಗಶಾಸ್ತ್ರ ಗ್ರಂಥವೊಂದನ್ನೂ ರಚಿಸಿದ್ದನೆಂದು ತಿಳಿದುಬರುತ್ತದೆ. ಇದನ್ನು ಬಂಗಾಲದ ಹಠಯೋಗಶಾಸ್ತ್ರ

ಪ್ರವರ್ತಕರಲ್ಲಿ, ತಾಂತ್ರಿಕ ಸಾಧಕರಲ್ಲಿ ಮುಖ್ಯತಮನಾಗಿದ್ದ ಪೂರ್ಣಾನಂದನೂ ರಾಮೇಂದ್ರಸರಸ್ವತಿಯ ಶಿಷ್ಯನೂ ರತ್ನಾಕರನ ಪುತ್ರನೂ ಆದ ನಾರಾಯಣನು ಹಂಸೋಪನಿಷತ್ತಿಗೆ ಬರೆದ 'ದೀಪಿಕೆ' ಎಂಬ ತನ್ನ ಭಾಷ್ಯದಲ್ಲಿ ಸ್ಮರಿಸಿ ಉದ್ಧರಿಸಿದ್ದಾನೆ. ಈ ಗ್ರಂಥ ಹಠಯೋಗ ಮತ್ತು ತಂತ್ರಶಾಸ್ತ್ರಗಳಲ್ಲಿ ಶಾರ್ಙ್ಗದೇವನ ಸ್ವಾನುಭವ ಪಾಂಡಿತ್ಯಗಳಿಗೆ ಪ್ರತೀಕವಾಗಿದ್ದಿತೆಂದು ಊಹಿಸಬಹುದಾಗಿದೆ. ಛಂದೋವಿಚಿತಿಯೆಂಬ ಒಂದು ಗ್ರಂಥವೂ ಇವನದೇ ಎಂದು ಸಂಗೀತರತ್ನಾಕರದ ವ್ಯಾಖ್ಯಾನಕಾರನಾದ ಸಿಂಹಭೂಪಾಲ ಹೇಳುತ್ತಾನೆ. ಈ ಗ್ರಂಥ ಉಪಲಬ್ಧವಿಲ್ಲ.

ಸಂಗೀತರತ್ನಾಕರ ಸ್ವರಗತ, ರಾಗವಿವೇಕ, ಪ್ರಕೀರ್ಣಕ, ಪ್ರಬಂಧ, ತಾಲ, ವಾದ್ಯ ಮತ್ತು ನರ್ತನ ಎಂಬ ಏಳು ಅಧ್ಯಾಯಗಳನ್ನೂ ಸುಮಾರು 5,000 ಶ್ಲೋಕಗಳನ್ನೂ ಒಳಗೊಂಡಿದೆ. ಭರತಮುನಿ ಸುಮಾರು ಒಂದು ಸಹಸ್ರ ಶ್ಲೋಕಗಳಲ್ಲಿ ವಿವರಿಸಿದ ಗೀತವಾದಿತ್ರನರ್ತನಗಳನ್ನೇ ಇಲ್ಲಿ ಸುಮಾರು ಐದು ಸಾವಿರ ಶ್ಲೋಕಗಳಲ್ಲಿ ವಿಸ್ತರಿಸಿ ಹೇಳಲಾಗಿದೆ. ಶಾಸ್ತ್ರಕಾರನು ಗ್ರಂಥರಚನೆಯಲ್ಲಿ ಸಂಕ್ಷಿಪ್ತತೆಗೆ ಪ್ರಾಧಾನ್ಯವನ್ನು ತೋರಿ ಸೂತ್ರಸದೃಶವಾದ ಮಾತುಗಳಲ್ಲಿ, ನಿಪಾತಗಳಲ್ಲಿ ಪೂರ್ವಾಪರ ಸನ್ನಿವೇಶ ಸಂಗತಿ, ನೈಕಟ್ಯ ಮೊದಲಾದ ವೈಧಾನಿಕ ತಂತ್ರಗಳಲ್ಲಿ ಅರ್ಥವನ್ನು ನಿಬಿಡವೂ ಗಾಢವೂ ಸಾರವೂ ಆಗಿರುವಂತೆ ಮಾಡಿದ್ದಾನೆ. ಅತ್ಯಂತ ಪ್ರಾಚೀನತಮವೂ ಪರಂಪರಾಪ್ರಾಪ್ತ ಕಂಠ ಮಾಧ್ಯಮಿಕವೂ ಆದ ಮಾರ್ಗ ಮತ್ತು ಗಾಂಧರ್ವಸಂಗೀತ, ಸಮಸಾಮಯಿಕವಾಗಿ ದೇಶದ ವಿವಿಧ ಭಾಗಗಳಲ್ಲಿ ಪ್ರಚಲಿತವಾಗಿದ್ದ ಸಂಗೀತ, ತತ್ಸಾಮಯಿಕ ಲಕ್ಷ್ಯಕ್ಕೂ ಪೂರ್ವಾಚಾರ್ಯ ಪ್ರಣೀತವಾದ ಶಾಸ್ತ್ರೋಕ್ತಿಗೂ ಇರುವ ವಿರೋಧದ ಸಮನ್ವಯ, ಜನಪದ ಹಾಗೂ ಶಾಸ್ತ್ರೀಯ ಸಂಗೀತಗಳಲ್ಲಿ ರಾಗ, ತಾಳ, ವಾದ್ಯ ಪ್ರಬಂಧ, ನೃತ್ಯಾದಿ ಪ್ರಕಾರಗಳನ್ನು ಏಕರೂಪವಾಗಿ ಶಾಸ್ತ್ರಪ್ರಮೇಯಗಳ, ವೈಧಾನಿಕ ತಂತ್ರಗಳ ಹಂದರದಲ್ಲಿ ವರ್ಣಿಸುವುದು, ತತ್ತ್ವಶಾಸ್ತ್ರ, ಮನೋವಿಜ್ಞಾನ, ನಾದವಿಜ್ಞಾನ, ಸೌಂದರ್ಯಮೀಮಾಂಸೆ, ಶರೀರವಿಜ್ಞಾನ ಮುಂತಾದ ನೆರೆಹೊರೆಯ ಹತ್ತು ಹಲವು ಜ್ಞಾನಕ್ಷೇತ್ರಗಳ ಫಲಗಳನ್ನು ಸಂಗೀತನೃತ್ಯಶಾಸ್ತ್ರಗಳಿಗೆ ಅನ್ವಯಿಸಿ ಬೆಳೆಸುವುದು, ಇಡೀ ಗ್ರಂಥದಲ್ಲಿ ಏಕಸೂತ್ರತೆಯನ್ನು ಸಾಧಿಸುವುದು ಇತ್ಯಾದಿಗಳನ್ನು ಗಮನಿಸಿದರೆ ಇವನ ಸಾಮರ್ಥ್ಯ ಮೆಚ್ಚುವಂಥದ್ದು. ಈ ಗ್ರಂಥದಲ್ಲಿ ಸದಾಶಿವ, ಪಾರ್ವತಿ, ಬ್ರಹ್ಮ, ಭರತ, ಕಶ್ಯಪ, ಮತಂಗ, ಯಾಷ್ಟಿಕ, ದುರ್ಗಾಶಕ್ತಿ, ಶಾರ್ದೂಲ, ಕೋಹಲ, ವಿಶಾಖಿಲ, ದತ್ತಿಲ, ಕಂಬಲ, ಅಶ್ವತರ, ವಾಯು, ವಿಶ್ವಾವಸು, ರಂಭಾ, ಅರ್ಜುನ, ನಾರದ, ತುಂಬುರು, ಆಂಜನೇಯ, ಮಾತೃಗುಪ್ತ, ರಾವಣ, ನಂದಿಕೇಶ್ವರ, ಸ್ವಾತಿ, ಗಣ, ಬಿಂದುರಾಜ, ಕ್ಷೇತ್ರರಾಜ, ರಾಹಲ, ರುದ್ರಟ, ನಾನ್ಯಭೂಪಾಲ, ಭೋಜ, ಪರಮರ್ದಿರಾಜ, ಸೋಮೇಶ್ವರ ಜಗದೇಕಮಲ್ಲ, ಭಾರತೀಯ ನಾಟ್ಯಶಾಸ್ತ್ರದ ವ್ಯಾಖ್ಯಾನಕಾರರಾದ ಲೊಲ್ಲಟ, ಉದ್ಭಟ, ಶಂಕುಕ, ಅಭಿನವಗುಪ್ತ, ಕೀರ್ತಿಧರ ಮುಂತಾದ ಸಂಗೀತಶಾಸ್ತ್ರ ವಿಶಾರದರ ಗ್ರಂಥಗಳ ಉತ್ತಮಾಂಶವನ್ನೂ ಅವುಗಳ ಸಾರವನ್ನೂ ಕಾಣಬಹುದಾಗಿದೆ. ಈ ದೃಷ್ಟಿಯಿಂದ ಇಷ್ಟು ವಿಸ್ತಾರವೂ ವಿವರಪೂರ್ಣವೂ ವೈಜ್ಞಾನಿಕವೂ ಪ್ರಾಮಾಣಿಕವೂ ಆಗಿರುವ ಗ್ರಂಥ ಇಡೀ ಭಾರತೀಯ ಸಂಗೀತಶಾಸ್ತ್ರಗ್ರಂಥರಾಶಿಯಲ್ಲಿ ಬೇರೊಂದಿಲ್ಲ. ಹಾಗಾಗಿ ಸಂಸ್ಕೃತ ವಾಙ್ಮಯದಲ್ಲಿ ಪಾಣಿನಿಯ ಅಷ್ಟಾಧ್ಯಾಯಿಗೆ ಇರುವ ಸ್ಥಾನವೇ ಸಂಗೀತರತ್ನಾಕರಕ್ಕೂ ಲಭ್ಯವಾಗಿದೆ. (ಆರ್.ಎಸ್.)

**ಶಾಸನಗಳು:** ಕರ್ನಾಟಕದಲ್ಲಿ ಶಾಸನಗಳು ಸಮೃದ್ಧವಾಗಿವೆ. ಭಾರತದಲ್ಲಿ ಬಹುಶಃ ತಮಿಳುನಾಡನ್ನು ಬಿಟ್ಟರೆ ಕರ್ನಾಟಕವೇ ಅತಿ ಹೆಚ್ಚಿಸಿ ಶಾಸನ ಸಂಪತ್ತನ್ನು ಹೊಂದಿರುವ ರಾಜ್ಯ. ಇಲ್ಲಿ ಇದುವರೆಗೆ 25,000ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಇವುಗಳಲ್ಲಿ 15,000ಕ್ಕೂ ಹೆಚ್ಚು ಶಾಸನಗಳು ಈಗಾಗಲೇ ಪ್ರಕಟವಾಗಿವೆ. ಅಲ್ಲದೆ, ಇನ್ನೂ ಹೊಸ ಹೊಸ ಶಾಸನಗಳು ದೊರೆಯುತ್ತಲೇ ಇವೆ.

**ಶಾಸನಗಳ ಸಂಗ್ರಹ:** ಶಾಸನಗಳನ್ನು ಸಂಗ್ರಹಿಸುವ ಕಾರ್ಯ ಕರ್ನಾಟಕದಲ್ಲಿ ಬಹು ಹಿಂದೆಯೇ ಆರಂಭವಾಯಿತು. ಮೈಸೂರಿನ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅನೇಕ ಶಾಸನಗಳನ್ನು ಪ್ರತಿಮಾಡಿಸಿ ಇಟ್ಟಿದ್ದರೆಂಬ ಪ್ರತೀತಿ ಇದೆ. ಆದರೆ ಅವರು ಆಗ ಸಂಗ್ರಹಿಸಿದ ಉದ್ದೇಶ ದಾನದತ್ತಿಗಳ ಬಗೆಗೆ ಖಚಿತವಾದ ದಾಖಲೆಗಳನ್ನು ಹೊಂದಿರುವುದು. ಅರಮನೆಯ ಇತರ ದಾಖಲೆಗಳೊಂದಿಗೆ ಇವು ಮುಂದೆ ನಾಶವಾದುವು. ಶಾಸನಗಳನ್ನು ಅಭ್ಯಾಸಮಾಡಿ ಅವುಗಳಲ್ಲಿನ ವಿಷಯಗಳನ್ನು ಸಂಗ್ರಹಿಸಲೆಂದೇ ಕ್ರಮಬದ್ಧವಾಗಿ ಅವುಗಳ ಅನ್ವೇಷಣೆಯ ಕೆಲಸವನ್ನು ಆರಂಭಿಸಿದವರು ಪಾಶ್ಚಾತ್ಯ ವಿದ್ವಾಂಸರು. ಕರ್ನಲ್ ಮೆಕೆಂಜಿ 1783–1821ರ ಅವಧಿಯಲ್ಲಿ ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದಲ್ಲಿನ ನಾನಾ ಭಾಗಗಳಲ್ಲಿ ಪ್ರಾಚೀನ ಹಸ್ತಪ್ರತಿಗಳು, ದಾಖಲೆಗಳ ಜೊತೆಗೆ ಶಾಸನಗಳ ಪ್ರತಿಗಳನ್ನೂ ಸಂಗ್ರಹಿಸಿದ. ಏಷಿಯಾಟಿಕ್ ರಿಸರ್ಚಸ್ ಪತ್ರಿಕೆಯ ಒಂಬತ್ತನೆಯ ಸಂಪುಟದಲ್ಲಿ ತಾನು ಸಂಗ್ರಹಿಸಿದ ಕೆಲವು ಶಾಸನಗಳ ಬಗೆಗೆ ಬರೆದಿದ್ದಾನೆ. ಕವೆಲ್ಲಿ ಬೋರಯ್ಯನು ಶ್ರವಣಬೆಳಗೊಳದ ಬುಕ್ಕರಾಯನ ಶಾಸನವನ್ನು ಭಾಷಾಂತರಿಸಿದ ಸಂಗತಿ ಅದೇ ಪತ್ರಿಕೆಯಿಂದ ತಿಳಿದುಬರುತ್ತದೆ. 1821ರಲ್ಲಿ ಸ್ಟೂವರ್ಟ್ ಎಲ್ಫಿನ್‌ಸ್ಟನ್ ಎಂಬುವನು ಜಿಲ್ಲಾಧಿಕಾರಿಗಳ ಮೂಲಕ ಹಲವಾರು ಶಾಸನಗಳ ಪಡಿಯಚ್ಚುಗಳನ್ನು ತರಿಸಿದ; ಕರ್ನಾಟಕದಿಂದಲೂ ಹದಿನಾಲ್ಕು ಇಂಥ ಪ್ರತಿಗಳು ಅವನಿಗೆ ತಲುಪಿದ್ದವು. ಅವುಗಳಲ್ಲಿ ಕೆಲವನ್ನು ಹೆನ್ರಿ ವಥೆನ್ ಓದಿ ಸಾರಾಂಶವನ್ನು 1835ರಲ್ಲಿ ಪ್ರಕಟಿಸಿದ. ಕರ್ನಾಟಕದ ಶಾಸನಗಳ ಬಗೆಗೆ ಸುವ್ಯವಸ್ಥಿತವಾದ ಅಧ್ಯಯನ ಆರಂಭವಾದುದು ವಾಲ್ಟರ್ ಎಲಿಯಟ್‌ನಿಂದ. ಅನೇಕ ಶಾಸನಗಳ ಪ್ರತಿಗಳನ್ನು ಸಂಗ್ರಹಿಸಿ ಈತ 1837ರಲ್ಲಿ ಲಂಡನ್ನಿನ ರಾಯಲ್ ಏಷಿಯಾಟಿಕ್ ರಿಸರ್ಚಸ್ ಎಂಬ ಪತ್ರಿಕೆಯಲ್ಲಿ ಹಿಂದೂ ಇನ್‌ಸ್ಕ್ರಿಪ್‌ಷನ್ಸ್ ಎಂಬ ಲೇಖನವನ್ನು ಪ್ರಕಟಿಸಿದ. ಕರ್ನಾಟಕ ದೇಶ ಇನ್‌ಸ್ಕ್ರಿಪ್‌ಷನ್ ಎಂಬ, ಈತ ಸಂಗ್ರಹಿಸಿದ ಶಾಸನಗಳ ಕೈಬರಹದ ಪ್ರತಿಗಳನ್ನೊಳಗೊಂಡ, ಎರಡು ಸಂಪುಟಗಳು ಎಡಿನ್‌ಬರೊ ವಿಶ್ವವಿದ್ಯಾಲಯ ಮತ್ತು ಲಂಡನ್ನಿನ ರಾಯಲ್ ಏಷಿಯಾಟಿಕ್ ಸೊಸೈಟಿಗಳಲ್ಲಿವೆ. ಮೇಜರ್ ಡಿಕ್ಸನ್ ಮೊದಲಾದವರು ನೂರಾರು ಶಾಸನಗಳ ಛಾಯಾಚಿತ್ರ ತೆಗೆದು ಅವುಗಳ ಒಂದು ಸಂಗ್ರಹ ಮಾಡಿದರು. ಈ ಛಾಯಾಚಿತ್ರಗಳ ಸಹಾಯದಿಂದ ಬಿ.ಎಲ್. ರೈಸ್ ಶಾಸನಗಳನ್ನೋದಿ ಮೈಸೂರ್ ಇನ್‌ಸ್ಕ್ರಿಪ್‌ಷನ್ಸ್ ಎಂಬ ಸಂಪುಟವನ್ನು 1879ರಲ್ಲಿ ಪ್ರಕಟಿಸಿದರು. ಮುಂದೆ ಥಿಯೊಡರ್ ಹೋಪ್ ಎಂಬಾತ ಛಾಯಾಚಿತ್ರ ಪ್ರತಿಗಳಿಂದ ಇದೇ ರೀತಿ ಅರವತ್ತುನಾಲ್ಕು ಶಾಸನಗಳನ್ನು ಇನ್‌ಸ್ಕ್ರಿಪ್‌ಷನ್ಸ್ ಇನ್ ಧಾರವಾರ್ ಅಂಡ್ ಮೈಸೂರ್ ಎಂಬ ಸಂಪುಟಗಳಲ್ಲಿ ಪ್ರಕಟಿಸಿದರು. ಇದೇ ವಿದ್ವಾಂಸರ ಆರ್ಕಿಟೆಕ್ಚರ್ ಇನ್ ಧಾರವಾರ್ ಅಂಡ್ ಮೈಸೂರ್ ಎಂಬ ಗ್ರಂಥದಲ್ಲಿಯೂ ಇನ್ನಷ್ಟು ಶಾಸನಗಳು ಸೇರಿದವು. 1870ರ ಹೊತ್ತಿಗೆ ಜೆ.ಎಫ್. ಫ್ಲೀಟ್ ಕರ್ನಾಟಕದ ಶಾಸನಗಳನ್ನು ಪ್ರಕಟಿಸುವ ಕೆಲಸ ಆರಂಭಿಸಿದರು. ಶಾಸನಗಳನ್ನು ಅತ್ಯಂತ ಸಮರ್ಪಕವಾಗಿ ಓದಿ ಅವುಗಳನ್ನು ವಿವರವಾದ ಟಿಪ್ಪಣಿಗಳೊಡನೆ ಪ್ರಕಟಿಸಿದವರಲ್ಲಿ ಫ್ಲೀಟ್ ಮೊದಲಿಗರು. 1872ರಲ್ಲಿ ಇಂಡಿಯನ್ ಆಂಟಿಕ್ವರಿ ಎಂಬ ಪತ್ರಿಕೆಯನ್ನು ಬರ್ಗೆಸ್ ಆರಂಭಿಸಿದ ಮೇಲೆ ಫ್ಲೀಟ್ ಕ್ರಮವಾಗಿ ಶಾಸನಗಳನ್ನು ಅದರಲ್ಲಿ ಪ್ರಕಟಿಸಲು ಆರಂಭಿಸಿದರು. 1878ರಲ್ಲಿ ಇವರು ಸಂಪಾದಿಸಿದ ಪಾಳಿ, ಸ್ಯಾನ್‌ಸ್ಕ್ರಿಟ್ ಅಂಡ್ ಓಲ್ಡ್ ಕೆನರೀಸ್ ಇನ್‌ಸ್ಕ್ರಿಪ್‌ಷನ್ಸ್ ಫ್ರಂ ದಿ ಬಾಂಬೆ ಪ್ರೆಸಿಡೆನ್ಸಿ ಅಂಡ್ ಪಾರ್ಟ್ಸ್ ಆಫ್ ದಿ ಮದ್ರಾಸ್ ಪ್ರೆಸಿಡೆನ್ಸಿ ಅಂಡ್ ಮೈಸೂರ್ ಎಂಬ ಸಂಪುಟವನ್ನು ಇಂಡಿಯಾ ಆಫೀಸ್ ಪ್ರಕಟಿಸಿತು. ಫ್ಲೀಟರನ್ನು ಬಿಟ್ಟರೆ ಕರ್ನಾಟಕದಲ್ಲಿ

ಶಾಸನಗಳ ಸಂಗ್ರಹಣೆ ಮತ್ತು ಪ್ರಕಟಣೆಯ ಕಾರ್ಯವನ್ನು ಅದ್ಭುತವಾಗಿ ನಡೆಸಿದವರು ಬೆಂಜಮಿನ್ ಲೂಯಿ ರೈಸ್. ಹಳೆಯ ಮೈಸೂರು ಸಂಸ್ಥಾನದಲ್ಲಿ ಮತ್ತು ಕೊಡಗಿನಲ್ಲಿ ಕ್ರಮಬದ್ಧವಾಗಿ ಶಾಸನಗಳನ್ನು ಸಂಗ್ರಹಿಸಿ 1886 ರಿಂದ 1906ರ ನಡುವೆ ಹನ್ನೆರಡು ಸಂಪುಟಗಳಷ್ಟು ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಿಕ ಮಾಲೆಯಲ್ಲಿ ಇವರು ಪ್ರಕಟಿಸಿದರು. ಭಾರತ ಸರ್ಕಾರದ ಶಾಸನ ಇಲಾಖೆಯು ಮುಖ್ಯವಾಗಿ ಬಾಂಬೆ ಕರ್ನಾಟಕ ಮತ್ತು ಮದರಾಸಿಗೆ ಸೇರಿದ್ದ ಕರ್ನಾಟಕದ ಭಾಗಗಳಲ್ಲಿ ದೊರೆತ ಹಲವು ಶಾಸನಗಳನ್ನು ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳಲ್ಲಿ ಪ್ರಕಟಿಸಿತು. ಭಾರತೀಯ ವಿದ್ವಾಂಸರಲ್ಲಿ ಶಾಸನ ಸಂಗ್ರಹಣೆಯ ಬಗೆಗೆ ಹೆಚ್ಚಿನ ಕೆಲಸಮಾಡಿರುವವರೆಂದರೆ ಆರ್. ನರಸಿಂಹಾಚಾರ್ಯರು. ಇವರು ಶ್ರವಣಬೆಳಗೊಳ ಸಂಪುಟವನ್ನು ಪರಿಷ್ಕರಿಸಿದ್ದೇ ಅಲ್ಲದೆ ಸು.5,000 ಶಾಸನಗಳನ್ನು ಸಂಗ್ರಹಿಸಿದರು. ಶಾಸನ ಸಂಗ್ರಹಣೆಯ ಕಾರ್ಯದಲ್ಲಿ ಮಗ್ನರಾದ ಇತರ ವಿದ್ವಾಂಸರೆಂದರೆ



ಮಹಾಗಣಪತಿ ದೇವಾಲಯದಲ್ಲಿರುವ ಒಂದು ಶಾಸನ, ಹಂಪೆ

ಎನ್.ಲಕ್ಷ್ಮೀನಾರಾಯಣರಾವ್, ಆರ್.ರಾಮರಾವ್, ಪಿ.ಬಿ.ದೇಸಾಯಿ ಮೊದಲಾದವರು ಅನೇಕ ಶಾಸನಗಳನ್ನು ನಿಯತಕಾಲಿಕಗಳಲ್ಲಿ ಪ್ರಕಟಿಸಿದ್ದಾರೆ. ಮೈಸೂರಿನಲ್ಲಿರುವ ಪ್ರಾಚ್ಯ ವಿದ್ಯಾಸಂಶೋಧನಾಲಯ 1923ರಿಂದೀಚೆಗೆ ಸಂಗ್ರಹಿಸಿದ ಶಾಸನಗಳನ್ನು ತನ್ನ ವಾರ್ಷಿಕ ವರದಿಗಳಲ್ಲಿ ಸೇರಿಸಿದೆ. ಈಚೆಗೆ ವಿಶ್ವವಿದ್ಯಾನಿಲಯಗಳು ಶಾಸನ ಸಂಗ್ರಹಣಾ ಕಾರ್ಯವನ್ನು ಆರಂಭಿಸಿವೆ. ಮೊದಲು ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಆರ್.ಎಸ್. ಪಂಚಮುಖಿಯವರ ನೇತೃತ್ವದಲ್ಲಿ ಶಾಸನ ಸಂಗ್ರಹಣ ಕಾರ್ಯವನ್ನು ಆರಂಭಿಸಿ ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಎಂಬ ಹೆಸರಿನಲ್ಲಿ ಸಂಪುಟಗಳನ್ನು ಹೊರತರುವ ಕಾರ್ಯ ಕೈಗೊಂಡಿತು. ಮುಂದೆ ಇದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಮೇಲೆ ಇದುವರೆಗೆ ಆರು ಸಂಪುಟಗಳನ್ನು ಹೊರತಂದಿದೆ. ಹೈದರಾಬಾದಿನ ಪ್ರಾಚ್ಯ ವಸ್ತುಸಂಶೋಧನಾ ಇಲಾಖೆ ಹೈದರಾಬಾದು ಕರ್ನಾಟಕದ ಭಾಗದಲ್ಲಿ ಸಂಗ್ರಹಿಸಿದ್ದ ಕೆಲವು ಶಾಸನಗಳನ್ನು ಪ್ರಕಟಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಪರಿಷ್ಕರಣ ಹಾಗೂ ಪುನರ್ ಮುದ್ರಣ ಯೋಜನೆಯನ್ನು ಕೈಗೊಂಡಿದ್ದು, ಈಗಾಗಲೇ ಹದಿಮೂರು ಸಂಪುಟಗಳನ್ನು ಹೊರತಂದಿದೆ (2006). ಪ್ರತಿ ಸಂಪುಟದಲ್ಲಿಯೂ ಹೊಸ ಹೊಸ ಶಾಸನಗಳು ಸೇರುತ್ತಿವೆ. ಹಂಪೆಯ ಕನ್ನಡ ವಿಶ್ವವಿದ್ಯಾಲಯವು ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಒಂಬತ್ತು ಸಂಪುಟಗಳನ್ನು ಹೊರತಂದಿದೆ. ಇನ್ನೂ ಕೆಲವು ಸಂಪುಟಗಳು ಸಿದ್ಧವಾಗುತ್ತಿವೆ. ಇತ್ತೀಚೆಗೆ ಸನ್ನತಿಯ ಬೌದ್ಧ ಶಾಸನಗಳು, ಬಳ್ಳಾರಿ ಜಿಲ್ಲೆಯಲ್ಲಿನ ನಾಲ್ಕು ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿನ ಎರಡು ಅಶೋಕನ ಶಾಸನಗಳು, ಬನವಾಸಿಯ ಸಾತವಾಹನ ಕಾಲದ ನಾಲ್ಕು ಅಶೋಕನ ಶಾಸನಗಳು, ಬನವಾಸಿಯ ಸಾತವಾಹನ ಕಾಲದ ಶಾಸನ ಮತ್ತು ಗುಡ್ನಾಪುರದ ಕದಂಬರ ಸ್ತಂಭಶಾಸನಗಳು ಹೊಸದಾಗಿ ದೊರಕಿವೆ.

**ಶಾಸನಗಳ ಉಗಮ, ಬೆಳವಣಿಗೆ, ಸ್ವರೂಪ, ಪ್ರಕಾರಗಳು:** ಬೃಹತ್ ಶಿಲಾ ಸಮಾಧಿಯುಗಕ್ಕೆ ಸೇರಿದ ಕೆಲವು ಮಡಕೆಗಳ ಮೇಲೆ ಹಲವಾರು ರೀತಿಯ ಲೇಖನಗಳಿವೆ. ಇವು ಲಿಪಿ ಇರಬಹುದೆಂದು, ಬಹುಶಃ ಹರಪ್ಪ ಮುದ್ರೆಗಳಲ್ಲಿ ಕಂಡುಬಂದಿರುವ ಲಿಪಿಯ ಮುಂದಣ ಹಂತಗಳಿರಬಹುದೆಂದೂ ಒಂದು ಅಭಿಪ್ರಾಯವಿದೆ. ಆದರೆ ಅದನ್ನು ಸಿದ್ಧಪಡಿಸಲು ತಕ್ಕಷ್ಟು ಆಧಾರಗಳು ಇನ್ನೂ ದೊರೆತಿಲ್ಲವಾದ್ದರಿಂದ ಅದನ್ನು ಲಿಪಿ ಎಂದು ಒಪ್ಪಲಾಗಿಲ್ಲ. ಇವುಗಳನ್ನು ಬಿಟ್ಟರೆ ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಕಂಡುಬರುವ ಶಾಸನಗಳೆಂದರೆ ಮೌರ್ಯ ಚಕ್ರವರ್ತಿ ಅಶೋಕನ ಧರ್ಮಲಿಪಿಗಳು. ಇತ್ತೀಚೆಗೆ ಬಳ್ಳಾರಿ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ದೊರೆತ ಎಂಟು ಶಾಸನಗಳೂ ಸೇರಿದಂತೆ ಈತನ ಒಟ್ಟು ಹದಿನಾಲ್ಕು ಶಾಸನಗಳು ಕರ್ನಾಟಕದಲ್ಲಿ ದೊರೆತಿದ್ದು ಇವುಗಳಲ್ಲಿ ಎರಡರಲ್ಲಿ ಅಶೋಕ ಎಂಬ ಹೆಸರಿರುವುದು ಒಂದು ವಿಶೇಷ. ಧರ್ಮಪ್ರಚಾರ ಇವುಗಳ ಮುಖ್ಯ ವಿಷಯ. ಕ್ರಿ.ಪೂ.3ನೆಯ ಶತಮಾನಕ್ಕೆ ಸೇರಿದ ಈ ಶಾಸನಗಳ ಅನಂತರ ಕ್ರಿ.ಶ.ಸು.7ನೆಯ ಶತಮಾನದ ಆರಂಭದವರೆಗೂ ತೀರ ವಿರಳವಾಗಿ ಶಾಸನಗಳು ದೊರೆತಿವೆ. ಬನವಾಸಿ, ಮಳವಳ್ಳಿಗಳಲ್ಲಿ ದೊರೆತ ಸಾತವಾಹನರ ಮತ್ತು ಅವರ ಸಾಮಂತರಾದ ಚುಟುವಂಶದ ಅರಸರ ಶಾಸನಗಳು, ಚಂದ್ರವಳ್ಳಿ, ಮಳವಳ್ಳಿ, ತಾಳಗುಂದ, ಗುಡ್ನಾಪುರ, ಅಣಜಿ, ಹಲ್ಮಿಡಿ ಮೊದಲಾದ ಕಡೆ ದೊರೆತ ಕದಂಬರ ಶಾಸನಗಳು; ಒಂದನೆಯ ಪುಲಕೇಶಿಯ ಬಾದಾಮಿಯ ಶಾಸನ, ಶ್ರವಣ ಬೆಳಗೊಳದ ಭದ್ರಬಾಹು ಶಾಸನ ಇತ್ಯಾದಿ ಶಿಲಾಶಾಸನಗಳಲ್ಲದೆ, ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ತಾಮ್ರಶಾಸನ ಮತ್ತು ಕದಂಬರ, ಗಂಗರ ಈ ಕಾಲದ ಹಲವಾರು ತಾಮ್ರಶಾಸನಗಳು, ಇವುಗಳೊಂದಿಗೆ ಸನ್ನತಿಯಲ್ಲಿ ಈಚೆಗೆ ದೊರೆತ ಕ್ರಿ.ಶ. ಸುಮಾರು ಒಂದನೆಯ ಶತಮಾನದಿಂದ ಮೂರನೆಯ ಶತಮಾನದವರೆಗಿನ ಮೂವತ್ತಕ್ಕೂ ಹೆಚ್ಚು ಕಿರುಶಾಸನಗಳು ಇಲ್ಲಿ ಉಲ್ಲೇಖಾರ್ಹ. ಸಾಮಾನ್ಯವಾಗಿ ಇವು ಸಣ್ಣ ಶಾಸನಗಳಾದರೂ ಕರ್ನಾಟಕದ ಪ್ರಾಚೀನ ಇತಿಹಾಸದ ಬಗೆಗೆ ಅತ್ಯಮೂಲ್ಯವಾದ ಬೆಳಕು ಚೆಲ್ಲುತ್ತವೆ. ಮುಂದೆ ಹತ್ತನೆಯ ಶತಮಾನದ ಆರಂಭದವರೆಗೆ ಶಾಸನಗಳ ಸಂಖ್ಯೆ ಬೆಳೆಯುತ್ತ ಹೋಯಿತು. ಬಾದಾಮಿ ಚಾಳುಕ್ಯರ, ಕಲ್ಯಾಣದ ಚಾಳುಕ್ಯರ, ಕದಂಬರ, ಗಂಗರ, ರಾಷ್ಟ್ರಕೂಟರ ನೂರಾರು ಶಾಸನಗಳು ಈ ಶತಮಾನಗಳಿಗೆ ಸೇರುತ್ತವೆ. ಇದೇ ರೀತಿ ಶ್ರವಣಬೆಳಗೊಳದಲ್ಲಿ ದೊರೆತಿರುವ ಈ ಕಾಲದ ಅನೇಕ ಶಾಸನಗಳನ್ನೂ ಗಮನಿಸಬಹುದು. ತಾಮ್ರ ಶಾಸನಗಳ ಸಂಖ್ಯೆಯೂ ಹೆಚ್ಚಾಗಿಯೇ ಇದೆ. ತಾಮ್ರ ಶಾಸನಗಳಲ್ಲಿ ರಾಜವಂಶಗಳ ವಿವರಗಳಿದ್ದು ಒಂದು ಗೊತ್ತಾದ ಅನುಕ್ರಮ ಕಂಡುಬಂದರೆ, ಶಿಲಾಶಾಸನಗಳಲ್ಲಿ ಅಂಥ ಒಂದು ಪದ್ಧತಿಯೇನೂ ಇಲ್ಲ. ಮಹಾಕೂಟದ ಮಂಗಲೀಶನ ಶಾಸನ, ರವಿಕೀರ್ತಿಯ ಮೇಗುಟಿ ಶಾಸನ ಮೊದಲಾದ ಸಂಸ್ಕೃತ ಶಾಸನಗಳು ಸ್ವಲ್ಪಮಟ್ಟಿಗೆ ದೊಡ್ಡವಾಗಿದ್ದು ಪದ್ಯಾತ್ಮಕವಾಗಿ ಪ್ರೌಢವಾಗಿರುವುದುಂಟು. ಕನ್ನಡ ಶಾಸನಗಳಲ್ಲಿ ಕಿರುಶಾಸನಗಳೇ ಹೆಚ್ಚು. ಆಳುವ ರಾಜರ ಹೆಸರು ಹೇಳಿರಬಹುದು, ಹೇಳದೇ ಇರಬಹುದು. ಗದ್ಯದಲ್ಲಿ ನೇರವಾಗಿ ಸರಳವಾಗಿ ಶಾಸನ ಹಾಕಲು ಕಾರಣವಾದ ವಿಷಯ ತಿಳಿಸುವುದೇ ಹೆಚ್ಚು. ಇದ್ದರೆ ಒಂದೆರಡು ಪದ್ಯಗಳಿರಬಹುದು. ಇವಲ್ಲದೆ ಪದ್ಯಗಳಲ್ಲಿ ಚರಮಗೀತೆಗಳನ್ನು ಹಾಡಿರುವ ಹಲವು ಶಾಸನಗಳುಂಟು.

ಹತ್ತನೆಯ ಶತಮಾನ ಶಾಸನಗಳನ್ನು ರಚಿಸುವಲ್ಲಿ ಹಲವು ಬಗೆಯ ಪ್ರಯೋಗಗಳು ನಡೆದ ಕಾಲ. ಶಾಸನಗಳ ಗಾತ್ರ, ಸಂಖ್ಯೆ ಹೆಚ್ಚುಹೆಚ್ಚಾಗಿ ಬೆಳೆದ ಕಾಲ. ಸಂಸ್ಕೃತಭಾಷೆಗೆ ಮಾತ್ರ ಸೀಮಿತವಾಗಿದ್ದ ತಾಮ್ರಶಾಸನಗಳ ಒಕ್ಕಣೆಯ ರೀತಿಯನ್ನು ಈ ಶತಮಾನದಲ್ಲಿ ಕನ್ನಡದಲ್ಲಿ ರಚಿಸಿದ ಶಿಲಾಶಾಸನಗಳಲ್ಲಿಯೂ ಅನುಸರಿಸಲಾರಂಭವಾಯಿತು. ಜೈನ, ಶೈವ ಮುಂತಾದ ಮತಗಳ ಆಚಾರ್ಯರಿಗೂ ವಿದ್ಯಾಕೇಂದ್ರಗಳಿಗೂ ದೇವಾಲಯಗಳಿಗೂ ದಾನದತ್ತಿಗಳನ್ನು ಬಿಟ್ಟಾಗ ಅದನ್ನು ತಿಳಿಸುವ ಶಾಸನಗಳಲ್ಲಿ ದೀರ್ಘವಾದ ಒಕ್ಕಣೆಗಳು ಕಾಣಿಸಿಕೊಳ್ಳಲಾರಂಭಿಸಿದುದು ಈಗಲೇ. ಯಾವುದೇ ಒಂದು ಕಟ್ಟುಪಾಡಿಗೆ ಒಳಗಾಗದೆ ತನ್ನದೇ ಆದ ರೀತಿಯಲ್ಲಿ ರಚಿತವಾಗಿರುವ ಆತಕೂರು ಶಾಸನ,ಶ್ರವಣಬೆಳಗೊಳದ ಮಾರಸಿಂಹನ ಪ್ರಶಸ್ತಿ ಶಾಸನ, ರಾಷ್ಟ್ರಕೂಟ ಇಂದ್ರನ ಮರಣವನ್ನು ತಿಳಿಸುವ ಶಾಸನ ಮೊದಲಾದವು ಒಂದೊಂದೂ ಸತ್ವಯುತವಾಗಿ ಸ್ವತಂತ್ರವಾಗಿ ಪ್ರಯೋಗಶೀಲವಾಗಿ ಕಂಡುಬರುತ್ತವೆ. ಮುಂದೆ ಶಾಸನಗಳು ರಚನೆಯಲ್ಲಿ ಒಂದು ಕಟ್ಟುಪಾಡಿಗೆ ಒಳಗಾಗಲು ಈ ಶತಮಾನದ ಇಂಥ ಕೆಲವು ಶಾಸನಗಳು ಮೇಲ್ಪಂಕ್ತಿಯಾಗಿವೆ. ಕವಿರಾಜ ರಾಜಕೃತವಾದ ಕಾಡಿಯಾರಗ್ರಹಾರದ ಶಾಸನಗಳನ್ನು ದೀರ್ಘವಾದ ಶಾಸನಗಳಿಗೆ ಮೊತ್ತಮೊದಲ ಮಾದರಿಯನ್ನಾಗಿ ಪರಿಗಣಿಸಬಹುದು. ಪದ್ಯಗಳೇ ಹೆಚ್ಚಾಗಿದ್ದು ಮಧ್ಯೆ ಕ್ವಚಿತ್ತಾಗಿ ಗದ್ಯವಿದ್ದು ಕನ್ನಡದಲ್ಲಿ ಚಂಪೂಶೈಲಿಯ ಸೂಚನೆಯನ್ನು ಇದು ಕೊಡುತ್ತದೆ.

ಮುಂದೆ ಮೂರು ಶತಮಾನಗಳ ಕಾಲ ಈ ಶಾಸನಗಳು ಸಂಖ್ಯೆಯಲ್ಲಿ ಮಾತ್ರವಲ್ಲ ಗಾತ್ರದಲ್ಲಿಯೂ ವಿಷಯವೈವಿಧ್ಯದಲ್ಲಿಯೂ ವಿಶಿಷ್ಟವಾದ ರೀತಿಯಲ್ಲಿ ಬೆಳೆದವು. ಈ ಹೊತ್ತಿಗಾಗಲೇ ಶಾಸನಗಳನ್ನು ರಚಿಸುವಲ್ಲಿ ಒಂದು ಗೊತ್ತಾದ ರೀತಿಗೆ ಭದ್ರವಾದ ಬುನಾದಿ ಬಿದ್ದಿತ್ತು. ಕಲ್ಯಾಣ ಚಾಳುಕ್ಯರ, ಅದರಲ್ಲಿಯೂ ವಿಕ್ರಮಾದಿತ್ಯನ ಕಾಲದಲ್ಲಿ ಮತ್ತು ಅವನನ್ನನುಸರಿಸಿ ನಿಡುಗಲ್ಲು ಚೋಳರು, ಉಚ್ಚಂಗಿ ಪಾಂಡ್ಯರು, ಸಾಂತರರು, ಸಿಂದರು, ಹಾನಗಲ್ಲು ಕದಂಬರು ಮುಂತಾದ ಅನೇಕ ಸಾಮಂತರು, ಅಧಿಕಾರಿಗಳು, ದಂಡನಾಯಕರು ಈ ಪದ್ಧತಿಯನ್ನು ಮುಂದೆ ವಿಸ್ತಾರವಾಗಿ ಬೆಳೆಸಿದರು. ಹೊಯ್ಸಳರಲ್ಲಿ ವಿಷ್ಣುವರ್ಧನನಿಂದ ಮುಂದೆ ಶಾಸನಗಳ ಸಂಖ್ಯೆ ಹಲವು ಪಟ್ಟು ಹೆಚ್ಚಾಯಿತು. ಶಾಸನಗಳ ರಚನೆ ಕಲಾತ್ಮಕವಾಗಿ ಕಾವ್ಯಾತ್ಮಕವಾಗಿ ಬೆಳೆಯಿತು. ಶಾಸನಗಳು ವಸ್ತುವನ್ನು ಹಿಗ್ಗಿಸಿಕೊಂಡು ವಿಸ್ತಾರವಾದುವು. ವರ್ಣನೆ ಬಗೆಬಗೆಯಾಯಿತು. ಈಗ ಶಾಸನಗಳು ತಮ್ಮ ಮೂಲ ಉದ್ದೇಶವಾದ ಬರಿಯ ವಿಷಯನಿರೂಪಣೆಯ ವಸ್ತುನಿಷ್ಠ ಮಾಧ್ಯಮವಾಗಿ ಉಳಿಯಲಿಲ್ಲ. ಚಂಪೂಶೈಲಿಯ ಈ ದೀರ್ಘ ಶಾಸನಗಳಲ್ಲಿ ಒಕ್ಕಣೆ ಸಾಮಾನ್ಯವಾಗಿ ಹೀಗಿರುತ್ತದೆ: ಮೊದಲು ದಾತೃವಿನ ಇಷ್ಟದೈವದ ಸ್ತುತಿ, ಅನಂತರ ಅವನಿಗೆ ಶುಭಕಾಮನೆ, ಮುಂದೆ ಅಧಿರಾಜನ ವಂಶಾವಳಿಯನ್ನು ತಿಳಿಸಲು ಪೀಠಿಕೆಯಾಗಿ ಸಪ್ತಲೋಕಗಳು, ಅವುಗಳಲ್ಲಿ ಮಧ್ಯಲೋಕ, ಅದನ್ನು ಬಳಸಿದ ಸಮುದ್ರ, ನಡುವಿನ ಮೇರು, ಮೇರುವಿನ ದಕ್ಷಿಣಕ್ಕೆ ಭರತಖಂಡ, ಭರತಖಂಡದಲ್ಲಿ ಕುಂತಳ, ಆ ಕುಂತಳವನ್ನಾಳುತ್ತಿದ್ದ ರಾಜವಂಶಾವಳಿ, ಅದರ ಪೌರಾಣಿಕ ಹಿನ್ನೆಲೆ, ಅನಂತರ ಒಬ್ಬೊಬ್ಬರಾಗಿ ಆಳಿದ ರಾಜರ ಗುಣಗಾನ, ಶಾಸನದ ಕಾಲದಲ್ಲಿ ಆಳುತ್ತಿದ್ದ ಚಕ್ರವರ್ತಿಯ ದೀರ್ಘಪ್ರಶಸ್ತಿ, ಗದ್ಯದಲ್ಲಿ ಅವನ ಬಿರುದಾವಳಿಗಳು, ಮತ್ತೆ ಅವನ ಪಾದಪದ್ಮೋಪಜೀವಿಯಾಗಿದ್ದ ಸಾಮಂತ ರಾಜ, ಅವನ ವಂಶಾವಳಿ, ಅವನ ಪರಾಕ್ರಮ, ಗುಣಾವಳಿ, ಅವನು ನಡೆಸಿದ ಧರ್ಮಕಾರ್ಯ, ಕಟ್ಟಿಸಿದ ದೇವಾಲಯ, ಕೊಟ್ಟ ದಾನ, ಆ ದಾನ ಪಡೆದವರ ವಂಶಾವಳಿ ಅವರ ವಿದ್ವತ್ತು ಮಹಿಮೆಗಳ ವರ್ಣನೆ, ಗ್ರಾಮಗಳನ್ನು ದಾನಬಿಟ್ಟಿದ್ದಲ್ಲಿ ಆ ಗ್ರಾಮಗಳ ವರ್ಣನೆ, ಇವೆಲ್ಲ ಮುಗಿದ ಮೇಲೆ ಅಂಥ ದಾನವನ್ನು ಕಾಪಾಡಿಕೊಂಡು ಬರುವುದರಿಂದಾಗುವ ಪುಣ್ಯಫಲ, ಅವನ್ನು ಕೆಡಿಸುವುದರಿಂದಾಗುವ ಪಾಪಫಲ–ಈ ಒಂದೊಂದನ್ನೂ ಹಂತಹಂತವಾಗಿ ಚಿತ್ರಿಸುತ್ತ ಹೋಗುವಲ್ಲಿ ಅವೇ ಒಂದೊಂದು ಪುಟ್ಟ ಕಾವ್ಯವಾಗಿ ಪರಿಣಮಿಸಿದುವು. ಐತಿಹಾಸಿಕ ಸತ್ಯನಿರೂಪಣೆಯ ಮೂಲೋದ್ದೇಶವನ್ನು ಹಿಂದಿಟ್ಟು ಇವುಗಳನ್ನು ರಚಿಸಿದ ಕವಿಗಳು ತಮ್ಮ ಪ್ರೌಢಿಮೆಯನ್ನು ತೋರಿದರು. ಶಾಸನಗಳು ಚೌಕ ಕಂಬಗಳ ಮೇಲೋ ದೊಡ್ಡ ಕಲ್ಲಿನ ಹಲಗೆಗಳ ಮೇಲೋ ನೂರಾರು ಪಂಕ್ತಿಗಳಷ್ಟು ಬೆಳೆದವು. ನಾಗಾವಿ, ಐಹೊಳೆ, ಇಟ್ಟಗಿ, ಕಲ್ಕುಂಡಿ, ಸೇಡಂ, ಲಕ್ಷ್ಮೇಶ್ವರ, ಬಳ್ಳಿಗಾವೆ, ಹರಿಹರ, ಶ್ರವಣಬೆಳಗೊಳ ಮೊದಲಾದ ಅನೇಕ ಕಡೆ ದೇವಾಲಯಗಳು, ಬಸದಿಗಳು ಅವುಗಳಿಗೆ ಹೊಂದಿಕೊಂಡಂತೆ ಮಠಗಳು, ವಿದ್ಯಾಕೇಂದ್ರಗಳು ಇದ್ದು ಅಲ್ಲಿಗೆ ದಾನದತ್ತಿಗಳನ್ನು ಕೊಟ್ಟ ವಿಷಯವನ್ನು ತಿಳಿಸುವಲ್ಲಿ ಈ ಶಾಸನಗಳಲ್ಲಿನ ಪ್ರೌಢಿಮೆ ಇನ್ನೂ ಹಿರಿದಾಗಿ ಹೊಮ್ಮಿದೆ.



ಸಿರಸಂಗಿನಾಯಕನ ಕಾಲದ ಶಾಸನ, ಕಾಲ: 1186

ಹದಿನಾಲ್ಕನೆಯ ಶತಮಾನದ ಮಧ್ಯಭಾಗದವರೆಗೆ ಹೀಗೆ ಹೇರಳವಾಗಿ ದೀರ್ಘವಾಗಿ ಸುಂದರವಾಗಿ ಬೆಳೆದ ಶಾಸನಗಳು ಮುಂದೆ ವಿಜಯನಗರ ಕಾಲಕ್ಕೆ ಕಡಿಮೆಯಾದವು. ಶಾಸನಗಳ ಸಂಖ್ಯೆಯೇನೂ ಹೇರಳವಾಗಿದ್ದರೂ ಅವುಗಳು ಮತ್ತೆ ವಸ್ತುನಿಷ್ಠ ಶಾಸನಗಳಾದವು. ಅಪೂರ್ವವಾಗಿ ಅಲ್ಲೊಂದು ಇಲ್ಲೊಂದು ದೀರ್ಘಶಾಸನಗಳನ್ನು ಕಾಣುವಂತಾಯಿತು. ಆದರೂ ಮಲೆನಾಡಿನಲ್ಲಿ, ಘಟ್ಟದ ಕೆಳಗೆ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಗದ್ಯಪದ್ಯಾತ್ಮಕವಾದ ದೀರ್ಘಶಾಸನಗಳು ಸಾಮಾನ್ಯವಾಗಿ ಜೈನಬಸದಿಗಳಲ್ಲಿ ಕಂಡುಬರುತ್ತವೆ. ಕರ್ನಾಟಕದ ಉತ್ತರಭಾಗದಲ್ಲಿ ಮುಸ್ಲಿಮರ ಆಳ್ವಿಕೆ ಆರಂಭವಾದುದರಿಂದ ಆ ಭಾಗದಲ್ಲಿ ಮುಸ್ಲಿಂ ಶಾಸನಗಳನ್ನು ಮಾತ್ರ ಕಾಣಬಹುದು. ಮುಂದೆ ಶಾಸನಗಳ ಪ್ರಾಮುಖ್ಯವೂ ಕಡಿಮೆಯಾಯಿತು. ಹತ್ತೊಂಬತ್ತನೆಯ ಶತಮಾನದವರೆಗೂ ಅಲ್ಲಲ್ಲಿ ಶಾಸನಗಳು ದೊರೆತರೂ ಅವುಗಳಲ್ಲಿ ವಿಷಯವೈವಿಧ್ಯವಿಲ್ಲ.

ಶಾಸನಗಳನ್ನು ಸ್ಥೂಲವಾಗಿ ಅವುಗಳನ್ನು ಕಂಡರಿಸಿರುವ ಮೂಲ ವಸ್ತುಗಳ ದೃಷ್ಟಿಯಿಂದ ಶಿಲಾಶಾಸನಗಳು ಮತ್ತು ತಾಮ್ರಶಾಸನಗಳೆಂದು ಎರಡು ವಿಧವಾಗಿ ವಿಂಗಡಿಸಿರುವುದುಂಟು. ಆದರೆ ಅವುಗಳಲ್ಲಿ ತಿಳಿಸುವ ವಿಷಯಗಳ ದೃಷ್ಟಿಯಿಂದ ಮುಖ್ಯವಾಗಿ ದಾನಶಾಸನಗಳು, ವೀರಶಾಸನಗಳು ಮತ್ತು ಇತರ ಶಾಸನಗಳು ಎಂದು ವಿಂಗಡಿಸಬಹುದು. ಇವುಗಳಲ್ಲಿ ಬಹುಪಾಲಿನ ಶಾಸನಗಳು ದಾನಶಾಸನಗಳೇ. ಅನೇಕ ಕಾರಣಗಳಿಗಾಗಿ ಚಕ್ರವರ್ತಿಗಳಿಂದಾರಂಭಿಸಿ ಸಾಮಾನ್ಯ ಪ್ರಜೆಗಳವರೆಗೆ ಎಲ್ಲರೂ ಒಂದಿಲ್ಲೊಂದು ಉದ್ದೇಶಕ್ಕಾಗಿ ದಾನಧರ್ಮಗಳನ್ನು ಮಾಡುತ್ತಿದ್ದ ಪದ್ಧತಿ ಕನ್ನಡ ನಾಡಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ವಿದ್ಯೆಗೆ ಪ್ರೋತ್ಸಾಹ ಕೊಡುವುದಕ್ಕಾಗಿ, ವಿದ್ಯಾಪೀಠಗಳಿಗೆ ಮಠಗಳಿಗೆ

ಪಂಡಿತರಿಗೆ ರಾಜರು ಅಧಿಕಾರಿಗಳು ಹೇರಳವಾಗಿ ದತ್ತಿಬಿಟ್ಟಿದ್ದಾರೆ; ಕಲೆಯ ಪ್ರೋತ್ಸಾಹಕ್ಕಾಗಿ, ಧರ್ಮಕಾರ್ಯಗಳನ್ನು ನಡೆಸುವುದಕ್ಕಾಗಿ ದೇವಾಲಯ ಬಸದಿಗಳನ್ನು ಕಟ್ಟಿಸಿದ್ದಾರೆ. ಸಾಮಾಜಿಕ ಮುನ್ನಡೆಗಾಗಿ, ಉದ್ಧಾರಕ್ಕಾಗಿ ಕೆರೆಕಾಲುವೆಗಳನ್ನು ಊರುಕೇರಿಗಳನ್ನು ನಿರ್ಮಿಸಿದ್ದಾರೆ. ಹೀಗೆ ತಾವು ಮಾಡಿದ ಕೆಲಸ ಶಾಶ್ವತವಾಗಿ ಉಳಿಯಲೆಂದು ಕೊಟ್ಟ ದಾನ ನಿರಂತರವಾಗಿ ಮುಂದುವರಿಯಲೆಂದು ತಮ್ಮ ಹೆಸರು ಚಿರವಾಗಿ



ಬೇಲೂರು ದೇವಾಲಯದಲ್ಲಿರುವ ಹೊಯ್ಸಳರ ಒಂದು ತಾಮ್ರಶಾಸನ

ಉಳಿಯಲೆಂದು ತಾಮ್ರಶಾಸನಗಳನ್ನು ಶಿಲಾಶಾಸನಗಳನ್ನು ಹಾಕಿಸಿದ್ದಾರೆ. ತಾಮ್ರ ಶಾಸನಗಳು ಸಾಮಾನ್ಯವಾಗಿ ವಿದ್ವಾಂಸರಾದ ಬ್ರಾಹ್ಮಣರಿಗೆ ತಮ್ಮ ವೇದಾಧ್ಯಯನ ಮೊದಲಾದ ಕರ್ಮಗಳನ್ನು ನಿರಾತಂಕವಾಗಿ ನಡೆಸಿಕೊಂಡು ಹೋಗಲು ರಾಜರು ಅಗ್ರಹಾರಗಳನ್ನು ಇತರ ದತ್ತಿಗಳನ್ನು ಬಿಟ್ಟ ವಿಷಯಗಳನ್ನು ನಿರೂಪಿಸುತ್ತವೆ. ಸಾಮಾನ್ಯವಾಗಿ ಈ ತಾಮ್ರಶಾಸನಗಳು ರಾಜಾಸ್ಥಾನದಲ್ಲಿ ರಚಿತವಾಗುತ್ತಿದ್ದವು. ಇವು ಸಂಸ್ಕೃತದಲ್ಲಿ ಪ್ರೌಢವಾದ ಶೈಲಿಯಲ್ಲಿ ದತ್ತಿಬಿಟ್ಟ ರಾಜರ ವಂಶಾವಳಿಗಳನ್ನು ತಿಳಿಸುತ್ತವೆ. ಕರ್ನಾಟಕ ದಲ್ಲಿ ದೊರೆತಿರುವ ಮೊದಲ ತಾಮ್ರಶಾಸನವೆಂದರೆ ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ಶಾಸನ. ಮೊದಲಿನ ತಾಮ್ರಶಾಸನಗಳಲ್ಲಿ ಒಕ್ಕಣೆ ಹೆಚ್ಚಿರುವುದಿಲ್ಲ. ಕಾಲಕ್ರಮದಲ್ಲಿ ರಾಜರ ಪೀಳಿಗೆ ಬೆಳೆದಂತೆ ಒಬ್ಬೊಬ್ಬ ರಾಜನನ್ನೂ ವರ್ಣಿಸುವ, ಅವರ ಪ್ರಶಸ್ತಿಗಳನ್ನು ತಿಳಿಸುವ ವಿವರಗಳು ಬೆಳೆಯುತ್ತ ಹೋದುವು. ತಾಮ್ರದ ಹಲಗೆಗಳನ್ನು ಶಾಸನವನ್ನು ಕಂಡರಿಸುವುದಕ್ಕಾಗಿಯೇ ಸಿದ್ಧಪಡಿಸಲಾಗಿರುತ್ತದೆ. ಮೊದಲು ಇವುಗಳ ಪ್ರಮಾಣ ತೀರ ಕಿರಿದಾಗಿದ್ದು ಓಲೆಗರಿಯನ್ನು ಅನುಕರಿಸುವಂತಿತ್ತು. ಕೆಲವು ವೇಳೆ ಅವುಗಳ ಮೂಲೆಗಳನ್ನೂ ಗುಂಡಾಗಿ ಮಾಡಿರುವುದುಂಟು. ಹಲಗೆಗಳು ಹೆಚ್ಚು ದಪ್ಪವಾಗಿರುವುದಿಲ್ಲ. ಸಾಮಾನ್ಯವಾಗಿ ಮೂರು ಹಲಗೆಗಳಿದ್ದು ಅವುಗಳನ್ನು ಎಡಭಾಗದ ರಂಧ್ರಗಳ ಮೂಲಕ ಹಾದು ಹೋಗಿರುವ ಬಳೆಗಳಿಂದ ಬಂಧಿಸಿ ಬಳೆಯ ತುದಿಗಳನ್ನು ಜೋಡಿಸಿರುವ ಮುದ್ರೆಯಲ್ಲಿ ರಾಜನ ಚಿಹ್ನೆಯನ್ನು ಅಂಕಿಸಲಾಗಿರುತ್ತದೆ. ಕದಂಬರ ಶಾಸನಗಳಲ್ಲಿ ಸಿಂಹಲಾಂಛನ, ಗಂಗರ ಶಾಸನಗಳಲ್ಲಿ ಆನೆ, ಚಾಳುಕ್ಯರ ಶಾಸನಗಳಲ್ಲಿ ವರಾಹ, ರಾಷ್ಟ್ರಕೂಟರ ಶಾಸನಗಳಲ್ಲಿ ಗರುಡ, ಹೊಯ್ಸಳರ ಶಾಸನಗಳಲ್ಲಿ ಹುಲಿ, ವಿಜಯನಗರ ಮತ್ತು ಮೈಸೂರು ಒಡೆಯರ ಶಾಸನಗಳಲ್ಲಿ ವರಾಹ ಲಾಂಛನಗಳನ್ನು ನೋಡಬಹುದು. ಅಪರೂಪವಾಗಿ ಈ ಲಾಂಛನಗಳ ಜೊತೆಗೆ ಗಂಗಮಾರಸಿಂಹನ ಶಾಸನದ ಮುದ್ರೆಯ ಮೇಲಿರುವ ಶ್ರೀ ಮಾರಸಿಂಹ ದೇವ ಎಂದಿರುವಂತೆ ರಾಜನ ಹೆಸರಿನ ಅಂಕನ ಇರಬಹುದು. ತಾಮ್ರದ ಹಲಗೆಗಳ ಸಂಖ್ಯೆಯ ವಿಷಯ ಹೆಚ್ಚಾಗುತ್ತ ಹೋದಂತೆ ಮೂರರಿಂದ ಏಳರವರೆಗೂ ಇರುವುದಲ್ಲದೆ ಅವುಗಳ ಗಾತ್ರವೂ ದೊಡ್ಡದಾಗುತ್ತ ಹೋಗುತ್ತದೆ. ಗಂಗರ ತಾಮ್ರಶಾಸನ ಗಳಲ್ಲಿಯೇ ಈ ಬೆಳವಣಿಗೆಯನ್ನು ನೋಡಬಹುದು. ಅವಿನೀತ, ದುರ್ವಿನೀತರ ತಾಮ್ರ ಶಾಸನಗಳು ಕೇವಲ ಎರಡೂವರೆ ಅಥವಾ ಮೂರು ಅಂಗುಲ ಅಗಲ, ಆರು ಅಥವಾ ಎಂಟು ಅಂಗುಲ ಉದ್ದ ಇದ್ದರೆ, ಮಾರಸಿಂಹನ ಕಾಲದ ತಾಮ್ರಶಾಸನಗಳು ಸುಮಾರು ಏಳು ಅಂಗುಲ ಅಗಲ, ಹನ್ನೆರಡು ಅಂಗುಲ ಉದ್ದವಾಗಿವೆ; ಜೊತೆಗೆ ಏಳು ಹಲಗೆಗಳ ನ್ನೊಳಗೊಂಡಿವೆ. ಇದರೊಂದಿಗೆ ಮೊದಲಿನ ತಾಮ್ರಶಾಸನಗಳಲ್ಲಿ ಪ್ರತಿ ಹಲಗೆಯ ಮೇಲೂ ಮೂರರಿಂದ ಐದು ಸಾಲು ಬರವಣಿಗೆ ಇದ್ದುದು. ಮಾರಸಿಂಹನ ಶಾಸನಗಳಲ್ಲಿ ಹದಿನಾರರಿಂದ ಹತ್ತೊಂಬತ್ತು ಸಾಲುಗಳಿವೆ. ಹೊಯ್ಸಳರ ಕಾಲದವರೆಗೂ ಹಲಗೆಗಳ ಮೇಲೆ ಶಾಸನಗಳನ್ನು ಅಡ್ಡಡ್ಡವಾಗಿ ಕಂಡರಿಸಲಾಗುತ್ತಿತ್ತು. ಎಡಪಕ್ಕದಲ್ಲಿ ರಂಧ್ರವಿದ್ದು ಆ ರಂಧ್ರದ ಮೂಲಕ ಬಳೆಯಿಂದ ಹಲಗೆಗಳನ್ನು ಬಂಧಿಸಲಾಗುತ್ತಿತ್ತು. ಆದರೆ ಹೊಯ್ಸಳರು ಚೋಳರನ್ನು ಅನುಕರಿಸಿ ದಪ್ಪನಾದ ಮತ್ತು ಹೆಚ್ಚು ಉದ್ದ ಅಗಲಗಳುಳ್ಳ ಹಲಗೆಗಳನ್ನು ಬಳಸಿದರು. ಅವುಗಳ ಮೇಲ್ಭಾಗದಲ್ಲಿ ಬಳೆ ತೂರಿಸಲು ರಂಧ್ರವಿರುತ್ತದೆ. ರಂಧ್ರದಿಂದ ಕೆಳಗೆ ಶಾಸನದ ಕಂಡರಣೆ. ಇವು ಮೂರರಿಂದ ಏಳು ಹಲಗೆಗಳವರೆಗೆ ಇರುವುದುಂಟು. ಕರ್ನಾಟಕದ ತಾಮ್ರಶಾಸನಗಳಲ್ಲಿ ಹೊಯ್ಸಳರವೇ ಹೆಚ್ಚು ದೊಡ್ಡವೂ ತೂಕ ಉಳ್ಳವೂ ಆಗಿವೆ. ವಿಜಯನಗರ ಕಾಲದ ವಿಪುಲ ತಾಮ್ರಶಾಸನಗಳು ಮೂರು ಹಲಗೆಗಳಿಂದ ಕೂಡಿರುತ್ತವೆ. ಹಲಗೆಗಳ ಮೇಲ್ಭಾಗ ಕಮಾನಿನಾಕೃತಿಯಲ್ಲಿ ಮಾಡಿದ್ದು ಅದರ ನಡುವೆ ರಂಧ್ರವಿರುತ್ತದೆ. ಅವುಗಳ ದಪ್ಪ ಗಾತ್ರ ಕಿರಿದು. ಮೈಸೂರರಸರ ತಾಮ್ರಶಾಸನಗಳು ಗಾತ್ರದಲ್ಲಿ ದೊಡ್ಡದಾಗಿದ್ದರೂ ಅವು ಹೆಚ್ಚು ತೆಳುವಾಗಿರುತ್ತವೆ. 16 ಹಲಗೆಗಳುಳ್ಳ ತಿರುಮಕೂಡಲು ನರಸೀಪುರದ ಶಾಸನವೇ ಮೈಸೂರರಸರ ತಾಮ್ರ ಶಾಸನಗಳಲ್ಲೆಲ್ಲ ಅತಿ ದೀರ್ಘವಾದುದು. ಕೆಳದಿ ನಾಯಕರ ಮತ್ತೆ ಕೆಲವು ಪಾಳೆಯಗಾರರ ಶಾಸನಗಳು ಒಂದೇ ಹಲಗೆಯವು. ಆಕಾರ ಗಾತ್ರಗಳಲ್ಲಿ ವಿಜಯನಗರದ ತಾಮ್ರ ಶಾಸನಗಳಷ್ಟೇ ಅಥವಾ ಅದಕ್ಕಿಂತ ದೊಡ್ಡವು. ಇವುಗಳಿಗೆ ರಂಧ್ರವಾಗಲಿ ಬಳೆ ಅಥವಾ ಮುದ್ರೆಗಳಾಗಲಿ ಇರುವುದಿಲ್ಲ. ಅಪರೂಪವಾಗಿ ಮುದ್ರೆಯನ್ನು ಹಲಗೆಗೆ

ಕೆತ್ತಿಸಿರುವುದುಂಟು. ಹೆಚ್ಚು ಹಲಗೆಗಳಿರುವ ತಾಮ್ರಶಾಸನಗಳಲ್ಲಿ ಮೊದಲ ಮತ್ತು ಕಡೆಯ ಹಲಗೆಗಳ ಹೊರಮುಖಗಳಲ್ಲಿ ಬರೆವಣಿಗೆ ಇರುವುದಿಲ್ಲ. ಮೊದಮೊದಲ ತಾಮ್ರಶಾಸನಗಳನ್ನು ಬಿಟ್ಟರೆ ಸಾಮಾನ್ಯವಾಗಿ ಹಲಗೆಗಳ ಏಣುಗಳು ಉಬ್ಬಿದ್ದು ಹಲಗೆಗಳು ಒಂದಕ್ಕೊಂದು ಉಜ್ಜಿ ಲಿಪಿ ಸವೆದು ಹೋಗದಂತೆ ರಕ್ಷಣೆ ಒದಗಿಸುತ್ತವೆ.

ಶಿಲಾಶಾಸನಗಳಿಗಿಂತ ತಾಮ್ರಶಾಸನಗಳಲ್ಲಿ ಕೂಟಶಾಸನಗಳು ಹೆಚ್ಚು. ಶಿಲಾಶಾಸನಗಳು ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿತವಾಗಿರುವುದರಿಂದ ಕೂಟಶಾಸನ ರಚಿಸಿ ನಿಲ್ಲಿಸುವುದು ಅಷ್ಟು ಸುಲಭವಲ್ಲ. ಅಲ್ಲದೆ ಸಾಮಾನ್ಯವಾಗಿ ಶಿಲಾಶಾಸನಗಳು ಸಾರ್ವಜನಿಕ ಪ್ರಯೋಜನಕ್ಕೆ ಸಂಬಂಧಿಸಿದಂತೆ ಇದ್ದುದರಿಂದ ಕೂಟಶಾಸನಗಳ ರಚನೆ ಅಲ್ಲಿ ಕಡಿಮೆಯೇ. ತಾಮ್ರಶಾಸನಗಳಾದರೆ ಸಾಮಾನ್ಯವಾಗಿ ವ್ಯಕ್ತಿಗಳಿಗೆ ಕೊಟ್ಟ ದಾನಕ್ಕೆ ಸಂಬಂಧಪಟ್ಟವು. ರಾಜಮನೆತನಗಳು ಬದಲಾದಾಗ ಹಿಂದಿನ ದಾನದತ್ತಿಗಳನ್ನು ಅವರು ಮುಂದುವರಿಸುವ ಪದ್ಧತಿ ಇತ್ತು. ಹಾಗೆ ಮುಂದುವರಿಸುವಾಗ ಹಿಂದೆ ಇದ್ದ ಶಾಸನಗಳನ್ನು ಅವರು ಪರಿಶೀಲಿಸುತ್ತಿದ್ದರು. ಹೊಯ್ಸಳ ವಿಷ್ಣುವರ್ಧನನು ಹಿಂದಿನ ತಾಮ್ರಶಾಸನಗಳನ್ನು ನೋಡಿ ದತ್ತಿಯನ್ನು ಮುಂದುವರಿಸಿದ ವಿಷಯ ಕೆಲವು ಶಾಸನಗಳಲ್ಲಿ ಇದೆ. ಅಂಥ ಸಂದರ್ಭಗಳಲ್ಲಿ ತಾವು ಬಹು ಹಿಂದಿನಿಂದ ದಾನದತ್ತಿಗಳನ್ನು ಅನುಭವಿಸುತ್ತಿದ್ದುದಾಗಿ ತೋರಿಸಲು ಮತ್ತು ತನಗಿಂತ ಬಹು ಹಿಂದಿನ ಕಾಲದಲ್ಲಿಯೇ ಹಾಕಿಸಿದ್ದ ತಾಮ್ರಶಾಸನಗಳು ತಮ್ಮ ಬಳಿ ಇವೆ ಎಂದು ಸಾಧಿಸಲು ಇಂಥ ಕೂಟಶಾಸನಗಳನ್ನು ರಚಿಸುತ್ತಿದ್ದರು. ಜನಮೇಜಯನು ಸರ್ಪಯಾಗ ಮಾಡಿದಾಗ ದತ್ತಿ ಬಿಟ್ಟಿದ್ದನೆಂದು ತಿಳಿಸುವ ಗೌಜ ಅಗ್ರಹಾರದ ತಾಮ್ರಶಾಸನವಾಗಲಿ, ಮಡಕೇರಿ, ತಗಡೂರು, ಕೂಡಲೂರುಗಳ ಗಂಗ ಶಾಸನಗಳಾಗಲಿ ಇಂಥ ಕೂಟಶಾಸನಗಳ ಗುಂಪಿಗೆ ಸೇರಬಹುದಾದವು. ಭಾಷೆ, ಲಿಪಿ, ಕಾಲಗಣನೆ ಮತ್ತು ಅವುಗಳಲ್ಲಿ ಬರುವ ಕೆಲವು ವಿವರಗಳಿಂದ ಅವು ನೈಜವಲ್ಲವೆಂಬುದು ತಿಳಿಯುತ್ತದೆ.

ತಾಮ್ರಶಾಸನಗಳನ್ನು ಬಿಟ್ಟರೆ ಲೋಹದ ಮೇಲಿನ ಶಾಸನಗಳಿರುವುದು ಲೋಹಮೂರ್ತಿಗಳ ಪೀಠಗಳ ಮೇಲೆ. ಇವುಗಳಲ್ಲಿ ಪ್ರಾಚೀನವಾದುವೆಂದರೆ ಗಂಗಮಾರಸಿಂಹನ ಅಕ್ಕ ಕುಂದಣಸೋಮಿದೇವಿ ಮಾಡಿಸಿದ ಜಿನಬಿಂಬದ ಶಾಸನ, ಮಂಗಳೂರಿನ ಕದ್ರಿಯಲ್ಲಿರುವ ಅವಲೋಕಿತೇಶ್ವರನ ಪೀಠಶಾಸನ ಮುಂತಾದವು. ಮೈಸೂರರಸರ ಕಾಲದ, ಅದರಲ್ಲಿಯೂ ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ದಳವಾಯಿಗಳ ಕಾಲದ ನೂರಾರು ಮೂರ್ತಿಗಳ ಪೀಠಗಳ ಮೇಲೆ ಅವುಗಳನ್ನು ಮಾಡಿಸಿದವರ ಹೆಸರು ಅಥವಾ ಆ ಮೂರ್ತಿಗಳ ಹೆಸರನ್ನು ತಿಳಿಸುವ ಇತರ ಲೋಹವಸ್ತುಗಳಲ್ಲಿ ಗಂಗರ ಕಾಲದ ಕಂಚಿನ ಮುಕ್ಕಾಲಿನ ಮೇಲಿರುವ ನಾಗಮಾರ ಎಂಬುದು ಅತಿ ಪುರಾತನವಾದುದಾದರೆ, ಬೇಲೂರಿನಲ್ಲಿರುವ ಕುವರಲಕ್ಷ್ಮನು ಶಾಸನ ಹಾಕಿಸಿ ದೇವರಿಗೆ ಮಾಡಿಸಿಕೊಟ್ಟಿದ್ದ ಮುಕ್ಕಾಲುಪೀಠ ಅತಿ ಸುಂದರವಾದುದು. ಇವಲ್ಲದೆ ನೂರಾರು ಗಂಟೆಗಳೂ ಜಾಗಟೆಗಳೂ ಹಿತ್ತಾಳೆ ಬಾಗಿಲುವಾಡಗಳೂ ಪಾತ್ರೆಗಳೂ ಇವುಗಳ ಮೇಲೆಲ್ಲ ಕಿರುಶಾಸನಗಳುಂಟು. ಬೆಲೆಬಾಳುವ ಬೆಳ್ಳಿಬಂಗಾರಗಳ ಮೇಲೂ ಹಲವು ಶಾಸನಗಳುಂಟು. ಕೊಡಗಿನ ಅರಸರು ಇಗ್ಗುತಪ್ಪ ದೇವಾಲಯಕ್ಕೆ ಮಾಡಿಸಿಕೊಟ್ಟ ಬೆಳ್ಳಿಯ ಆನೆಯ ಮೈಮೇಲೆ ಕಂಡರಿಸಿರುವ ಶಾಸನ ಉಲ್ಲೇಖನೀಯ. ಹಾಗೆಯೇ ಪರಕಾಲಮಠದ ಬೆಳ್ಳಿಯ ತೊಟ್ಟಿಲು, ಬೆಳ್ಳಿಬಂಗಾರದ ಬಟ್ಟಲುಗಳೂ ಶೃಂಗೇರಿ ಮಠದ ಪೂಜಾ ಪಾತ್ರೆಗಳೂ ಮೇಲುಕೋಟೆಯ ರತ್ನಖಚಿತವಾದ ವೈರಮುಡಿ, ನಂಜನಗೂಡಿನ ಶ್ರೀಕಂಠಮುಡಿ, ಮೈಸೂರು ಸಿಂಹಾಸನದ ಛತ್ರಿಯ ಮೇಲಿರುವ ಶಾಸನಗಳು ಈ ಗುಂಪಿಗೆ ಸೇರುತ್ತವೆ.

ಶಿಲಾಶಾಸನಗಳು ಸಂಖ್ಯೆಯಲ್ಲಿ ವಿಪುಲವಾಗಿರುವುದಲ್ಲದೆ ವಿಷಯ ವೈವಿಧ್ಯದಿಂದ ಕೂಡಿವೆ. ಕಲ್ಲು ಧಾರಾಳವಾಗಿ ಸಿಗುವುದರಿಂದಲೂ ಶಾಶ್ವತವಾಗಿ ಉಳಿದುಬರುವುದರಿಂದಲೂ ಶಾಸನಗಳ ಕಂಡರಣೆಗೆ ಇದನ್ನು ಮಾಧ್ಯಮವಾಗಿ ಬಳಸಲಾಯಿತು. ಇಂಥ ಶಾಸನಗಳನ್ನು ಬಂಡೆಯ ಮೇಲೆ ಕಂಡರಿಸಿರಬಹುದು. ಕರ್ನಾಟಕದಲ್ಲಿ ದೊರಕಿರುವ ಅಶೋಕನ ಶಾಸನಗಳೆಲ್ಲ ಹೀಗೆ ಬಂಡೆಯ ಮೇಲೆಯೇ ಇವೆ. ಇದರೊಂದಿಗೆ ಶ್ರವಣಬೆಳಗೊಳದ ಚಿಕ್ಕಬೆಟ್ಟದ ಬಂಡೆಯ ಮೇಲಿನ ನೂರಾರು ಶಾಸನಗಳನ್ನು ಇಲ್ಲಿ

ಗೊಮ್ಮಟೇಶ್ವರ ವಿಗ್ರಹದ ಪಾದದ ಬಳಿ ಇರುವ ಒಂದು ಶಾಸನ

ಗಮನಿಸಬಹುದು. ಶಾಸನಗಳನ್ನು ಕಂಡರಿಸುವುದಕ್ಕಾಗಿಯೇ ಕಲ್ಲಿನ ಕಂಬಗಳನ್ನು ತಯಾರಿಸಿರುವುದುಂಟು. ಮಳವಳ್ಳಿಯ ಹಾರೀತಿಪುತ್ರ ವಿಣ್ಹುಕಡ ಚುಟುಕುಲಾನಂದ ಸಾತಕಣ್ಣಿಯ ಮತ್ತು ಕದಂಬ ಅರಸನೊಬ್ಬನ ಶಾಸನಗಳುಳ್ಳ ಸ್ತಂಭ, ತಾಳಗುಂದದ ಕದಂಬ ಶಾಂತಿವರ್ಮನ ಶಾಸನ ಸ್ತಂಭ, ಗುಡ್ನಾಪುರದ ಕದಂಬರ ರವಿವರ್ಮನ ಶಾಸನವುಳ್ಳ ಕಂಬ, ಕೂಗೆ ಬ್ರಹ್ಮದೇವರ ಕಂಬ, ತ್ಯಾಗದ ಬ್ರಹ್ಮದೇವರ ಕಂಬ, ಮಂಗಲೀಶನ ಮಹಾಕೂಟ ಸ್ತಂಭಶಾಸನ ಮೊದಲಾದುವು ಈ ಗುಂಪಿಗೆ ಸೇರುತ್ತವೆ. ಇದೇ ರೀತಿ ಹೊಯ್ಸಳರ ಕಾಲದಲ್ಲಿ ಗರುಡರ ಆತ್ಮಾರ್ಪಣೆಯನ್ನು ತಿಳಿಸುವ ಹಳೇಬೀಡಿನ ಪ್ರೌಢದೇವರಾಯ ಕಂಬ, ಕುವರಲಕ್ಷ್ಮನ ಸ್ತಂಭ, ಅಗ್ರಹಾರ ಬೆಳಗುಲಿಯಲ್ಲಿರುವ ಗರುಡಸ್ತಂಭಗಳು ಈ ಗುಂಪಿಗೆ ಸೇರುತ್ತವೆ. ಶಾಸನವನ್ನು ಇಂಥ ಕಂಬಗಳ ಅಷ್ಟಮುಖದ ಕಾಂಡಗಳ ಮೇಲೆ ಉದ್ದುದ್ದವಾಗಿ ಕಂಡರಿಸಿರಬಹುದು ಅಥವಾ ಚೌಕಬುಡದ ಮುಖಗಳ ಮೇಲೆ ಸಾಲುಗಳು ನಾಲ್ಕೂ ಮುಖಗಳ ಮೇಲೂ ಸುತ್ತಿ ಬರುವಂತೆ ಅಥವಾ ಒಂದೊಂದು ಮುಖದ ಮೇಲೆ ಪ್ರತ್ಯೇಕವಾಗಿ ಕಂಡರಿಸಿರಬಹುದು. ಶಾಸನಗಳಿಗಾಗಿಯೇ ಪ್ರತ್ಯೇಕವಾದ ಕಂಬಗಳು ಇಲ್ಲದಿದ್ದರೂ ದೇವಾಲಯಗಳ, ಬಸದಿಗಳ ಕಂಬಗಳ ಮೇಲೂ ಕೆಲವು ವೇಳೆ ಶಾಸನಗಳನ್ನು ಕಂಡರಿಸಲಾಗಿದೆ. ದೇವಾಲಯ, ಬಸದಿ ಮೊದಲಾದುವುಗಳ ತಳಪಾದಿ ಕಲ್ಲುಗಳ ಗೋಡೆಗಳ ಒಳಗಿನ ಅಡ್ಡತೊಲೆಗಳ ಬಾಗಿಲುವಾಡಗಳ ಮೂರ್ತಿಗಳ ಪೀಠಗಳ ಮುಂತಾದ ಕಡೆಗಳಲ್ಲಿ ಶಾಸನಗಳನ್ನು ಕಂಡರಿಸಿರುವುದುಂಟು. ಸಾಮಾನ್ಯವಾಗಿ ತಮಿಳು ಶಾಸನಗಳು ಕೋಲಾರದ ಕೋಲಾರಮ್ಮನ ದೇವಾಲಯದಲ್ಲಿರುವಂತೆ ಗೋಡೆಗಳ ಮೇಲಿರುವುದೇ ಹೆಚ್ಚು. ಇವಲ್ಲದೆ ಶಾಸನಗಳನ್ನು ಕಂಡರಿಸುವುದಕ್ಕಾಗಿ ಕಲ್ಲಿನ ಹಲಗೆಗಳನ್ನು ಉಪಯೋಗಿಸುವ ಪದ್ಧತಿಯು ವ್ಯಾಪಕವಾಗಿ ಬಳಕೆಗೆ ಬಂತು. ಗಂಗರ ಕಾಲದ ಕೆಲವು ಶಾಸನಗಳನ್ನು ಯಾವ ರೀತಿಯಲ್ಲಿಯೂ ಸಿದ್ಧಪಡಿಸದ ಕಲ್ಲಿನ ಹಲಗೆಗಳ ಮೇಲೆ ಕಂಡರಿಸಿದ್ದರೆ, ರಾಷ್ಟ್ರಕೂಟರ ಕಾಲದಿಂದೀಚೆಗೆ ಚಾಳುಕ್ಯ, ಹೊಯ್ಸಳರ

ಕಾಲಗಳಲ್ಲಿ ಕಲ್ಲಿನ ಹಲಗೆಗಳನ್ನು ನಾಜೂಕಾಗಿ ಅತ್ಯಂತ ನುಣುಪಾಗಿ ಮಟ್ಟಸವಾಗಿ ಸಿದ್ಧಪಡಿಸಿ ಶಾಸನಗಳನ್ನು ಹಾಕಿಸುವುದು ಸಾಮಾನ್ಯ ಪದ್ಧತಿಯಾಯಿತು. ಆದರೆ ವಿಜಯನಗರ ಕಾಲಕ್ಕೆ ಬರುವ ಹೊತ್ತಿಗೆ ಮತ್ತೆ ಒರಟು ಕಲ್ಲಿನ ಶಾಸನಗಳೇ ಹೆಚ್ಚು. ಆರಂಭದಲ್ಲಿ ಕದಂಬರೂ ಗಂಗರೂ ಚೋಳರೂ ಗ್ರಾನೈಟ್ ಶಿಲೆಯನ್ನು ಶಾಸನಗಳಿಗಾಗಿ ಹೆಚ್ಚು ಬಳಸಿದ್ದರೆ ಬಾದಾಮಿ ಚಳುಕ್ಯರು ಕೆಂಪು ಮರಳುಶಿಲೆಯನ್ನೂ ಕಲ್ಯಾಣ



ನಾಗರೀ ಲಿಪಿಯಲ್ಲಿರುವ ವಿಜಯನಗರ ಕಾಲದ ಒಂದು ತಾಮ್ರಶಾಸನ

ಚಾಳುಕ್ಯರು ಅವರ ಸಾಮಂತರೂ ಹೊಯ್ಸಳರೂ ಧಾರವಾಡ ಶಿಲಾಪದರದ ಶಿಸ್ಟ್ ಅಥವಾ ಬಳಪದ ಕಲ್ಲನ್ನು ಉಪಯೋಗಿಸಿದರು. ಇದು ಮೃದುವಾಗಿದ್ದು ಅಂದವಾದ ಶಾಸನಗಳನ್ನು ಕೆತ್ತಿಸಲು ಅನುಕೂಲವಾಯಿತು. ಆದರೆ ವಿಜಯನಗರದ ಅರಸರು ಮತ್ತೆ ಗ್ರಾನೈಟ್ ಶಿಲೆಯನ್ನೇ ಉಪಯೋಗಿಸಿದರು.

ಶಿಲಾಶಾಸನಗಳಲ್ಲಿ ನೂರಕ್ಕೆ ಎಂಬತ್ತರಷ್ಟು ದಾನಶಾಸನಗಳೇ. ಈ ಶಾಸನಗಳು ಎರಡು ಪದಗಳ ಒಂದು ವಾಕ್ಯದಷ್ಟು ಕಿರಿದಾಗಿರಬಹುದು ಅಥವಾ ನೂರಾರು ಸಾಲುಗಳಷ್ಟು ದೀರ್ಘವಾಗಿದ್ದು ಶಾಸನದಲ್ಲಿ ಬರಬಹುದಾದ ಎಲ್ಲ ವರ್ಣನೆ ವಿವರಗಳನ್ನೂ ಒಳಗೊಂಡಿರಬಹುದು. ದಾನ ಶಾಸನಗಳನ್ನು ಬಿಟ್ಟರೆ ರಾಜರು, ಅವರ ದಂಡನಾಯಕರು ಯುದ್ಧದಲ್ಲಿ ಗೆದ್ದಾಗ ಗೆಲುವಿನ ಕುರುಹಾಗಿ ಜಯಸ್ತಂಭಗಳನ್ನು ನಿಲ್ಲಿಸಿ ತಮ್ಮ ಪ್ರತಾಪದ ವೀರವರ್ಣನೆಯನ್ನು ಕೆತ್ತಿಸುತ್ತಿದ್ದ ಪದ್ಧತಿ ವ್ಯಾಪಕವಾಗಿತ್ತು. ಇಂಥ ಜಯಸ್ತಂಭಗಳನ್ನು ನಿಲ್ಲಿಸಿದುದನ್ನು ಅನೇಕ ರಾಜರು, ಹೇಳಿಕೊಂಡಿದ್ದರೂ ಅವು ಹೆಚ್ಚು ಉಳಿದುಬಂದಿಲ್ಲ. ಬೇರೆ ರಾಜರು ಅವುಗಳನ್ನು ಬಹುಶಃ ಒಡೆಸಿಹಾಕುತ್ತಿದ್ದುದೇ ಇದಕ್ಕೆ ಕಾರಣವಿರಬಹುದು. ಈ ಜಯಸ್ತಂಭಗಳಿಗೆ ಕಲಿಯೂರಿನ ಅಪ್ರಮೇಯ ತನ್ನ ಜಯದ ನೆನಪಿಗಾಗಿ ನಿಲ್ಲಿಸಿದ್ದ ಶಾಸನ ಒಂದು ಉತ್ತಮ ಉದಾಹರಣೆ. ಇಂಥ ಶಾಸನಗಳು ಗೆದ್ದ ರಾಜರ, ವೀರರ ವೀರಾಲಾಪಗಳಿಗೆ ಸೀಮಿತವಾಗಿರುತ್ತಿದ್ದವು. ರಾಜರು ತೀರಿಕೊಂಡಾಗ, ಅವರ ನೆನಪಿಗಾಗಿ ಹಾಕಿಸಿದ್ದ ಶಾಸನಗಳಲ್ಲಿ ಅವರ ಹೆಗ್ಗಳಿಕೆ ಹೊಗಳಿಕೆಯಷ್ಟೇ ಇರುತ್ತದೆ. ಇಮ್ಮಡಿ ಮಾರಸಿಂಹನ ಕೂಗೆಬ್ರಹ್ಮದೇವರ ಕಂಬ, ರಾಷ್ಟ್ರಕೂಟ ನಾಲ್ವಡಿ ಇಂದ್ರನ ಪ್ರಶಸ್ತಿ ಶಾಸನಗಳು ಈ ಗುಂಪಿಗೆ ಸೇರುತ್ತವೆ.

ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಇತರ ಆತ್ಮಾರ್ಪಣೆಯ ಕಲ್ಲುಗಳು ಕರ್ನಾಟಕದಲ್ಲಿ ಹೇರಳವಾಗಿ ದೊರೆತಿವೆ. ಇವುಗಳಲ್ಲಿನ ಶಾಸನಗಳೇ ಬೇರೆ ರೀತಿಯವು. ಕೆಚ್ಚು, ಧೈರ್ಯ, ಸಾಹಸ, ನಿಷ್ಠೆ ನಂಬಿಕೆಗಳ ಕುರುಹಾಗಿ ಆತ್ಮಾರ್ಪಣೆ ಮಾಡುತ್ತಿದ್ದ ಪದ್ಧತಿ ಕರ್ನಾಟಕದಲ್ಲಿ ಪ್ರಚಲಿತವಿತ್ತು. ಆತ್ಮಹತ್ಯೆ ಪಾಪವಾದರೂ ಕೆಲವು ಉದ್ದೇಶಗಳಿಗಾಗಿ ಪ್ರಾಣಾರ್ಪಣೆ ಮಾಡುವುದು ಕರ್ತವ್ಯ ಮತ್ತು ಸದ್ಗತಿಪ್ರದವೆಂದು ಪರಿಗಣಿಸಲಾಗಿತ್ತು. ಸೂರ್ಯಗ್ರಹಣ, ಸಂಕ್ರಾಂತಿಯಂಥ ದಿನಗಳಲ್ಲಿ ಅಗ್ನಿಪ್ರವೇಶ ಮಾಡುವುದು ಒಂದು ಬಗೆಯಾದರೆ, ಜೈನಸಂನ್ಯಾಸಿಗಳು, ಶ್ರಾವಕರು ತೀರ್ಥಕ್ಷೇತ್ರಗಳಲ್ಲಿ ಸಲ್ಲೇಖನವನ್ನು ಕೈಕೊಂಡು ಮುಡಿಪುವುದು ಇನ್ನೊಂದು ಬಗೆ. ಹೀಗೆ ಸಲ್ಲೇಖನದಿಂದ ಪ್ರಾಣ ತೆತ್ತವರ ನೆನಪಿಗೆ ಹಾಕಿರುವ ಶಾಸನಗಳಿಗೆ ನಿಸಿದಿಕಲ್ಲುಗಳೆಂದು ಹೆಸರು. ಶ್ರವಣಬೆಳಗೊಳದ ಬಂಡೆಗಳ ಮೇಲಿರುವ ಅನೇಕ ಶಾಸನಗಳು ಇಂಥ ನಿಷಿಧಿ ಶಾಸನಗಳೇ. ಯುದ್ಧದಲ್ಲಿ ಹೋರಾಡುತ್ತ ವೀರಮರಣ ಹೊಂದಿದರೆ ವೀರಸ್ವರ್ಗ ಸಿಗುವುದೆಂಬ ನಂಬಿಕೆಯಿದ್ದುದರಿಂದ ಸೋಲು ಸಿದ್ಧವೆಂದು ತಿಳಿದಾಗಲೂ ಹಿಮ್ಮೆಟ್ಟದೆ ಸತ್ತ ವೀರರು ಕರ್ನಾಟಕದಲ್ಲಿ ಸಾವಿರಾರು ಜನ ಆಗಿಹೋಗಿದ್ದಾರೆ. ಕ್ಷಣದಲ್ಲಿ ನಾಶವಾಗುವ ಈ ದೇಹಕ್ಕೆ ರಣರಂಗದಲ್ಲಿ ಸಾಯಲು ಚಿಂತೆಯೇಕೆ? ಸೂರ್ಯಮಂಡಲವನ್ನೂ ಭೇದಿಸಿ ಮೇಲೇರಬಲ್ಲ ಶಕ್ತಿ ವಿರಾಟ್‌ಯೋಗಿಯೊಬ್ಬನಿಗೆ, ರಣಮುಖದಲ್ಲಿ ಸತ್ತ ವೀರನೊಬ್ಬನಿಗೆ ಮಾತ್ರ ಸಾಧ್ಯ; ಪ್ರಾಣ ಅನಿತ್ಯ; ಮಾನ ಶಾಶ್ವತ. ಆದ್ದರಿಂದ ಪ್ರಾಣ ಬಿಟ್ಟಾದರೂ ಮಾನವನ್ನು ಕಾಪಾಡಬೇಕು-ಇಂಥ ಧ್ಯೇಯಗಳನ್ನು ಹೊಂದಿದ್ದ ವೀರರು ಪ್ರಾಣವನ್ನು ತೃಣವಾಗೆಣಿಸಿ ಹೋರಾಡಿ ಸತ್ತ ವೀರವರ್ಣನೆಗಳನ್ನು ನೂರಾರು ವೀರಗಲ್ಲುಗಳು ಸಾರುತ್ತವೆ. ಪುಂಡರು ಊರಿಗೆ ನುಗ್ಗಿ ಹಸುಗಳನ್ನು ಕದ್ದು ಹೊಡೆದುಕೊಂಡು ಹೋಗುತ್ತಿದ್ದಾಗ, ಪೆಂಡಿರುಡೆಯುರ್ಚೆ ಮಾನ ಕಳೆಯುತ್ತಿದ್ದಾಗ, ಏಕಾಕಿಯಾಗಿಯೇ ಅಡ್ಡನುಗ್ಗಿ ಕಾಪಾಡಿ ಶತ್ರುಗಳನ್ನು ಹಿಮ್ಮೆಟ್ಟಿಸಿಯೊ ಕಳ್ಳರು ಮೇಲೆ ಬಿದ್ದಾಗಲೋ ಹುಲಿಹಂದಿಗಳನ್ನೆದುರಿಸಿಯೋ ವೀರಾವೇಶದಿಂದ ಹೊಡೆದಾಡಿ ಸತ್ತ ವೀರರಿಗಾಗಿ ಹಳ್ಳಿಹಳ್ಳಿಗಳಲ್ಲಿಯೂ ವೀರಗಲ್ಲುಗಳನ್ನು ನಿಲ್ಲಿಸಿರುವುದು ಕಂಡುಬರುತ್ತದೆ. ಇದರೊಂದಿಗೆ ಒಡೆಯನಿಗಾಗಿ ತನ್ನ ಪ್ರಾಣವನ್ನು ಮುಡುಪಾಗಿಟ್ಟು ಅವನೊಂದಿಗೆ ಸತ್ತ ಲೆಂಕರು, ವೇಳೆವಾಳಿಗಳು, ಗರುಡರದು ಮತ್ತೊಂದು ರೀತಿ. ಹೀಗೆಯೇ ತನ್ನ ಗಂಡನ ಸಾವಿನೊಂದಿಗೆ ತಾನೂ ಚಿತೆಯೇರಿ ಮಹಾಸತಿಯಾಗಿ ಸತ್ತ ವೀರಮಹಿಳೆಯರಿಗಾಗಿ ನಿಲ್ಲಿಸಿದ ಮಾಸ್ತಿಕಲ್ಲುಗಳೂ ಅನೇಕವುಂಟು. ವೀರಗಲ್ಲುಗಳಲ್ಲಿ ಒಕ್ಕಣೆ ಸ್ವಲ್ಪವೇ ಇರುತ್ತದೆ. ಅವುಗಳಲ್ಲಿ ಶಿಲ್ಪಕ್ಕೇ ಪ್ರಾಧಾನ್ಯ. ಗಂಗರ ಕಾಲದಲ್ಲಿ ಆರಂಭವಾದ ಈ ವೀರಗಲ್ಲುಗಳಲ್ಲಿಯೂ ಕೆಲವು ಪ್ರಕಾರಗಳುಂಟು. ಗಂಗ ನೊಳಂಬರ ವೀರಗಲ್ಲುಗಳಲ್ಲಿ ವೀರನು ಶತ್ರುಗಳೊಂದಿಗೆ ಹೋರಾಡುತ್ತಿರುವ ದೊಡ್ಡ ಪ್ರಮಾಣದ ಶಿಲ್ಪವಿದ್ದು ಅದರ ಮೇಲೋ ಪಕ್ಕದಲ್ಲೋ ಆ ವೀರನ ಬಗೆಗೆ ವಿವರಗಳಿರಬಹುದು. ತಮಟಕಲ್ಲಿನ ಶಾಸನ ವೀರನೊಬ್ಬನ ಪ್ರಶಂಸೆಯಾಗಿದ್ದು ಅದೂ ವೀರಗಲ್ಲಾಗಿರಬಹುದು. ಆದರೆ ಅದರಲ್ಲಿ

ಯಾವ ಶಿಲ್ಪವೂ ಇಲ್ಲದಿರುವುದು ಗಮನಾರ್ಹ. ಬೇಗೂರಿನ ವೀರಗಲ್ಲು ತನ್ನ ವಿಸ್ತಾರವಾದ ಯುದ್ಧದ ವಿವರಗಳನ್ನು ತೋರಿಸುವ ಶಿಲ್ಪಕ್ಕೆ ಪ್ರಸಿದ್ಧವಾಗಿದೆ. ಮುಂದೆ ಮೂರು ಹಂತಗಳಲ್ಲಿ ಶಿಲ್ಪವಿದ್ದು ಕ್ರಮವಾಗಿ ಯುದ್ಧ, ವೀರನ ಸ್ವರ್ಗಾರೋಹಣ ಮತ್ತು ದೇವಲೋಕದಲ್ಲಿ ವೀರನಿರುವಂತೆ ಕಂಡರಿಸಿರುತ್ತಾರೆ. ಕೆಲವು ವೇಳೆ ಆರೇಳು ಹಂತಗಳಿರುವುದೂ ಉಂಟು. ಹೊಯ್ಸಳ ಕಾಲದ ವೀರಗಲ್ಲುಗಳು ಸುಂದರವಾಗಿರುತ್ತವೆ. ಶಿಲ್ಪಗಳ ನಡುವಣ ಪಟ್ಟಿಯಲ್ಲಿ ಶಾಸನವಿರುತ್ತದೆ. ಮಾಸ್ತಿಕಲ್ಲಿನ ಶಾಸನಗಳಲ್ಲಿ ಪ್ರಸಿದ್ಧವಾದುದು ದೇಕಬ್ಬೆಯ ಶಾಸನ. ಇದರಲ್ಲಿ ಯಾವ ಶಿಲ್ಪವೂ ಇಲ್ಲ. ಸಾಮಾನ್ಯವಾಗಿ ಮಾಸ್ತಿಕಲ್ಲುಗಳಲ್ಲಿ ವೀರನೊಡನೆ ಬಲಗೈಯನ್ನು ಎತ್ತಿ ಹಿಡಿದು ನಿಂತ ಹೆಣ್ಣಿನ ಶಿಲ್ಪ ಇರುತ್ತದೆ. ಮುಂದೆ ಕೇವಲ ಒಂದು ಕಂಬವನ್ನು ತೋರಿಸಿ ಅದರಿಂದ ಮೇಲೆತ್ತಿಕೊಂಡಂತಿರುವ ತೋಳು ಮಾತ್ರ ಇರುವ ಶಿಲ್ಪ ಹೆಚ್ಚಾಗಿ ಕಂಡುಬರುತ್ತದೆ. ಶಾಸನವೇ ಇಲ್ಲದೆ ಕೇವಲ ಶಿಲ್ಪವುಳ್ಳ ವೀರಗಲ್ಲುಗಳೂ. ಮಾಸ್ತಿಕಲ್ಲುಗಳೂ ಹೇರಳವಾಗಿವೆ.

ಶಿಲ್ಪಗಳ ಪೀಠಗಳ ಮೇಲೆ ಶಿಲ್ಪದ ಹೆಸರನ್ನೋ ರೂವಾರಿಗಳ ಹೆಸರನ್ನೋ ತಿಳಿಸುವ ಶಾಸನಗಳುಂಟು. ಹಾಗೆಯೇ ಪುಣ್ಯಕ್ಷೇತ್ರಗಳಿಗೆ ಬಂದ ಯಾತ್ರಿಕರು ತಮ್ಮ ಹೆಸರನ್ನು ಅಲ್ಲಿ ಕಲ್ಲಿನ ಮೇಲೆ ಹಾಕಿಸಿರಬಹುದು. ಪಾತ್ರೆಪಡಗಗಳ ಮೇಲೆ ಅವುಗಳ ಒಡೆಯರ ಹೆಸರಿರಬಹುದು. ಇವು ಬಹುಮಟ್ಟಿಗೆ ಒಂದೇ ಪದವುಳ್ಳ ಶಾಸನಗಳು. ಶ್ರೀಚಮ್ಮ, ಮಾಬ, ಮಲ್ಲಿತಂಮ ಇತ್ಯಾದಿ ರೂವಾರಿಗಳ ಹೆಸರುಗಳೂ ಶ್ರೀಲಕುಮಿದೇವಿ ದುಸ್ಸಸ್ನ ವಧೆ ಇತ್ಯಾದಿ ಶಿಲ್ಪಗಳ ಹೆಸರುಗಳೂ ಶ್ರೀಕವಿರತ್ನ ಮುಂತಾದ ಯಾತ್ರಿಕರ ಹೆಸರುಗಳೂ ಈ ಗುಂಪಿಗೆ ಸೇರುತ್ತವೆ.

**ಶಾಸನಗಳ ಭಾಷೆ, ಸಾಹಿತ್ಯ:** ಅಶೋಕನ ಶಾಸನಗಳಿಂದಾರಂಭಿಸಿ ಸುಮಾರು 4ನೆಯ ಶತಮಾನದ ಮಧ್ಯಭಾಗದವರೆಗೂ ಕರ್ನಾಟಕದಲ್ಲಿ ದೊರೆತಿರುವ ಸಾತವಾಹನ, ಚುಟು, ಕದಂಬ ವಂಶಗಳ ಶಾಸನಗಳು, ಸನ್ನತಿಯ ಶಾಸನಗಳು, ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ತಾಮ್ರಶಾಸನ ಮೊದಲಾದುವು ಪ್ರಾಕೃತ ಭಾಷೆಯಲ್ಲಿವೆ. ಆದರೆ ಚಂದ್ರವಳ್ಳಿಯ ಮಯೂರವರ್ಮನ ಶಾಸನ ಮತ್ತು ತಾಮ್ರಶಾಸನಗಳಲ್ಲಿ ಕಂಡುಬರುವುದು ಗ್ರಂಥಸ್ಥ ಪ್ರಾಕೃತ. ಅಲ್ಲದೆ ಪಲ್ಲವ ತಾಮ್ರಶಾಸನದ ಮುದ್ರೆಯ ಮೇಲಿರುವ ಅಂಕನ ಮತ್ತು ಶಾಸನದ ಕೊನೆಯ ಮಂಗಳವಾಕ್ಯ ಸಂಸ್ಕೃತದಲ್ಲಿರುವುದನ್ನು ಗಮನಿಸಬೇಕು. ಶಾಸನಗಳ ಭಾಷೆಯಲ್ಲಿ ಈ ಹೊತ್ತಿಗೆ ಸಂಸ್ಕೃತದ ಪ್ರಭಾವವಿದ್ದು ಸಂಸ್ಕೃತವೂ ಶಾಸನಗಳಲ್ಲಿ ಕಾಣಲಾರಂಭಿಸಿದುದು ಸ್ಪಷ್ಟ. ಅಲ್ಲಿಂದ ಮುಂದೆ ಶಾಸನಗಳಲ್ಲಿ ಪ್ರಾಕೃತದ ಬದಲು ಸಂಸ್ಕೃತದ ಬಳಕೆ ವ್ಯಾಪಕವಾಗಿ ಪಸರಿಸಿತು. ರಾಜಾಸ್ಥಾನಗಳಲ್ಲಿ ಭದ್ರವಾಗಿ ಬೇರೂರಿದ ಸಂಸ್ಕೃತ ಮುಂದೆ ಬಂದ ಕದಂಬರ, ಗಂಗ, ಬಾದಾಮಿ ಚಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರದ ತಾಮ್ರಶಾಸನಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. 5ನೆಯ ಶತಮಾನದಲ್ಲಿ ಹಲ್ಮಿಡಿಯ ಶಾಸನದ ಮೂಲಕ ಶಾಸನಗಳಲ್ಲಿ ಕನ್ನಡ ಭಾಷೆಯನ್ನು ಬಳಸುವುದು ಆರಂಭವಾದರೂ ಮೊದಲಿಗೆ ಮುಖ್ಯವಾದ ದೊಡ್ಡ ಶಾಸನಗಳು ಸಂಸ್ಕೃತದಲ್ಲಿಯೇ ಮುಂದುವರಿದವು. ತಾಳಗುಂದ, ಗುಡ್ನಾಪುರ, ಬನವಾಸಿಯ ಸ್ತಂಭ ಶಾಸನಗಳು ಪ್ರೌಢಶೈಲಿಯ ಸಂಸ್ಕೃತದಲ್ಲಿರುವುದನ್ನು ನೋಡಬಹುದು. ಇಮ್ಮಡಿ ಪುಲಕೇಶಿಯ ಕಾಲದ ರವಿಕೀರ್ತಿಯ ಶಾಸನ ತನ್ನ ಶೈಲಿಗೆ ಪ್ರಸಿದ್ಧವಾಗಿದೆ. 6ನೆಯ ಶತಮಾನದ ಅನಂತರ ಕನ್ನಡ ಶಾಸನಗಳ ಸಂಖ್ಯೆ ಬೆಳೆಯುತ್ತ ಹೋದರೂ ಜೊತೆಜೊತೆಯಲ್ಲಿಯೇ ಸಂಸ್ಕೃತ ಶಾಸನಗಳೂ ಸಮವಾಗಿ ಕೆಲವು ಕಾಲ ಮುಂದುವರಿಯುತ್ತ ಬಂದವು. ಮುಂದೆ ಕನ್ನಡ ಶಾಸನಗಳ ಸಂಖ್ಯೆ ಹೇರಳವಾಗಿ ಬೆಳೆದರೂ ಅವುಗಳಲ್ಲಿ ಆರಂಭದ ಮಂಗಳ ಶ್ಲೋಕಗಳು, ಕಡೆಯಲ್ಲಿ ಬರುವ ಆಶಂಸನ ಪದ್ಯಗಳು ಸಂಸ್ಕೃತದಲ್ಲಿಯೇ ಇರುತ್ತವೆ, ಮತ್ತು ಹಲವು ಶಾಸನಗಳಲ್ಲಿ ರಾಜರ ವಂಶಾವಳಿಯು ಸಂಸ್ಕೃತದಲ್ಲಿದ್ದು ಉಳಿದಂತೆ ಕನ್ನಡದಲ್ಲಿರುವುದೂ ಉಂಟು. ಕಲ್ಯಾಣ ಚಾಳುಕ್ಯ, ಹೊಯ್ಸಳರ ಕಾಲಗಳಲ್ಲಿ ಸಾವಿರಾರು ದೀರ್ಘ ಶಾಸನಗಳಾಗಲಿ, ಕಿರುಶಾಸನಗಳಾಗಲಿ ಕನ್ನಡದಲ್ಲಿ ಇರುವುದೇ ಸಾಮಾನ್ಯ ನಿಯಮವಾಗಿತ್ತು. ತಾಮ್ರಶಾಸನಗಳಲ್ಲಿ ಮಾತ್ರ ಸಂಸ್ಕೃತವೇ ಪ್ರಧಾನವಾಗಿದ್ದು, ಅಪೂರ್ವವಾಗಿ ರಾಷ್ಟ್ರಕೂಟ ನಾಲ್ವಡಿ ಗೋವಿಂದನ (ಬ್ರಿಟಿಷ್ ಮ್ಯೂಸಿಯಂನಲ್ಲಿರುವ) ತಾಮ್ರ ಶಾಸನದಂತೆ ಒಂದೊಂದು ಕನ್ನಡದಲ್ಲಿರುವುದುಂಟು. ಗಂಗ ದುರ್ವಿನೀತನ ತಾಮ್ರ ಶಾಸನವೊಂದರಲ್ಲಿ ಅದನ್ನು ಕಂಡರಿಸಿದ ತ್ವಷ್ಟಕಾರನಿಗೆ ಕೊಟ್ಟ ದತ್ತಿಯನ್ನು ತಿಳಿಸುವ ಭಾಗ ಮಾತ್ರ ಕನ್ನಡದಲ್ಲಿದೆ. ಮತ್ತೆ ಕೆಲವು ಗಂಗರ ಶಾಸನಗಳು (ಮಡಿಕೇರಿಯ ತಾಮ್ರಶಾಸನದಂಥವು) ಕನ್ನಡ ಬೆರೆತ ಸಂಸ್ಕೃತದಲ್ಲಿರುವುದುಂಟು. ಆದರೆ ಅಂಥವುಗಳನ್ನು ನೈಜಶಾಸನಗಳೆಂದು ಒಪ್ಪುವುದು ಕಷ್ಟ. ಅನೇಕ ತಾಮ್ರಶಾಸನಗಳಲ್ಲಿ ವಿಷಯವರ್ಣನೆ ಪೂರ್ತಿಯಾಗಿ ಸಂಸ್ಕೃತದಲ್ಲಿಯೇ ಇದ್ದು ದತ್ತಿಬಿಟ್ಟ ಗ್ರಾಮ ಅಥವಾ ಭೂಮಿಯ ಎಲ್ಲೆಯ ವಿವರಗಳು ಕನ್ನಡದಲ್ಲಿರುತ್ತವೆ. ಹೊಯ್ಸಳರ ತಾಮ್ರ ಶಾಸನಗಳಲ್ಲಿ ವಿಷಯನಿರೂಪಣೆಯಲ್ಲಿ ಸಂಸ್ಕೃತ–ಕನ್ನಡಗಳೆರಡರಲ್ಲಿಯೂ ವಿವರಿಸಿರುವುದುಂಟು; ಇಲ್ಲವೆ ಮೊದಲು ಸಂಸ್ಕೃತದಲ್ಲಿ ಶಾಸನದ ವಸ್ತುವನ್ನು ವಿವರಿಸಿ ಅಯಮೇವಾರ್ಥಃ ಕರ್ಣ್ಣಾಟ ಭಾಷಯಾ ಸಪ್ರಪಂಚಃ ಪ್ರಕಟೀಕ್ರಿಯತೇ ಎಂದು ತಿಳಿಸಿ ಮತ್ತೆ ಅದೇ ವಿಷಯವನ್ನೆ ಕನ್ನಡದಲ್ಲಿ ಕೊಟ್ಟಿರುವುದುಂಟು. ವಿಜಯನಗರದ ತಾಮ್ರ ಶಾಸನಗಳು ಸಂಸ್ಕೃತದಲ್ಲಿರುವುದೇ ಹೆಚ್ಚು. ಒಂದೊಂದು ಸಲ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಇರುವುದುಂಟು; ತೀರ ವಿರಳವಾಗಿ ಕೇವಲ ಕನ್ನಡದಲ್ಲಿ ಇರುತ್ತವೆ. ಮೈಸೂರರಸರ ತಾಮ್ರಶಾಸನಗಳಲ್ಲಿ ಸಂಸ್ಕೃತವೇ ಮುಖ್ಯವಾಗಿ ಕಂಡುಬಂದರೂ ಕನ್ನಡವನ್ನೂ ಧಾರಾಳವಾಗಿ ಬಳಸಿದೆ. ಕೆಳದಿ ನಾಯಕರು ಮತ್ತು ಇತರ ಪಾಳೆಯಗಾರರ ತಾಮ್ರಶಾಸನಗಳು ಕನ್ನಡದಲ್ಲಿವೆ. ಇವು ಗದ್ಯಶಾಸನಗಳು, ಹೊಯ್ಸಳರ ಕಾಲದಲ್ಲಿ ಶಾಸನ ಭಾಷೆ ಕನ್ನಡವೇ ಪ್ರಬಲವಾಗಿದ್ದು ವಿಜಯನಗರದ ಕಾಲದಲ್ಲಿ ಮತ್ತೆ ಸಂಸ್ಕೃತ ತನ್ನ ಪ್ರಾಬಲ್ಯವನ್ನು ಗಳಿಸಿಕೊಂಡಿತು. ತಾಮ್ರಶಾಸನಗಳಲ್ಲಂತೂ ಅಂತೆಯೇ ಶಿಲಾಶಾಸನಗಳಲ್ಲಿಯೂ ರಾಜವಂಶಾವಳಿ ಮೊದಲಾದುವನ್ನು ಸಂಸ್ಕೃತ ಪದ್ಯಗಳಲ್ಲಿಯೇ ಕೊಡುವ ಪರಿಪಾಠ ಬೆಳೆದು ಬಂತು. ಸಂಖ್ಯೆಯಲ್ಲೇನೋ ಕನ್ನಡ ಶಾಸನಗಳೇ ಹೆಚ್ಚು. ಆದರೆ ಅವು ಸಾಮಾನ್ಯವಾಗಿ ವಸ್ತುನಿಷ್ಠ ಕಿರುಗದ್ಯ ಶಾಸನಗಳು. ದೊಡ್ಡ ಶಾಸನಗಳಲ್ಲಿ ಪ್ರಶಸ್ತಿ ವರ್ಣನೆ ಸಂಸ್ಕೃತದಲ್ಲಿ, ವಿಷಯನಿರೂಪಣೆ ಕನ್ನಡ ಗದ್ಯದಲ್ಲಿ. 14ನೆಯ ಶತಮಾನದಲ್ಲಿ ಅಲ್ಲಲ್ಲಿ ತಲೆಹಾಕಿದ ಈ ಪದ್ಧತಿ 15, 16ನೆಯ ಶತಮಾನಗಳಲ್ಲಿ ಸಾಮಾನ್ಯ ನಿಯಮವಾಯಿತು. ಈ ಕಾಲಕ್ಕೆ ಸೇರಿದ ಶ್ರವಣಬೆಳಗೊಳದ ಸಿದ್ಧರ ಬಸದಿಯಲ್ಲಿನ ಸ್ತಂಭಶಾಸನಗಳೂ ಹರಿಹರದಲ್ಲಿರುವ ಕೆಲವು ಶಾಸನಗಳೂ ಹೀಗೆ ಸಂಸ್ಕೃತದಲ್ಲಿ ಪ್ರೌಢವಾಗಿ ಕಾವ್ಯಮಯವಾಗಿರುವುದನ್ನು ನೋಡಬಹುದು. ಅದೇ ರೀತಿ ಹುಂಚದಲ್ಲಿ ಪದ್ಮಾವತೀ ಬಸದಿಯ ಪ್ರಾಕಾರದಲ್ಲಿರುವ ವಾದಿವಿದ್ಯಾನಂದನ ಗುರುಪರಂಪರೆಯ ವಿಸ್ತಾರವಾದ ವಿವರಗಳುಳ್ಳ ಶಾಸನವೂ ಸಂಸ್ಕೃತದಲ್ಲಿಯೇ ಇದ್ದರೂ ಆರಂಭದಲ್ಲಿ ವಿದ್ಯಾನಂದನನ್ನು ವರ್ಣಿಸಿರುವ ಭಾಗ ಮಾತ್ರ ಕನ್ನಡದಲ್ಲಿದೆ. ಹೀಗೆ ನಾಲ್ಕನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಆರಂಭವಾದ ಸಂಸ್ಕೃತ ಶಾಸನಗಳು ಕಾಲಕ್ರಮದಲ್ಲಿ ಕನ್ನಡ ಶಾಸನಗಳಿಗೆ ಎಡೆಮಾಡಿಕೊಟ್ಟರೂ ಮತ್ತೆ ಕೆಲಮಟ್ಟಿಗೆ ಪ್ರಬಲವಾಗಿ 18ನೆಯ ಶತಮಾನದವರೆಗೂ ಹೆಚ್ಚುಕಡಿಮೆ ಉಳಿದುಕೊಂಡೇ ಬಂದವು.

ಕರ್ನಾಟಕದಲ್ಲಿರುವ ಶಾಸನಗಳಲ್ಲಿ ಬಹು ಹೆಚ್ಚಿನ ಸಂಖ್ಯೆಯ ಶಾಸನಗಳು ಕನ್ನಡದಲ್ಲಿವೆ. ಇವುಗಳಲ್ಲಿ ಹಲ್ಮಿಡಿಯ ಶಾಸನವೇ ಮೊದಲನೆಯ

ದೆಂದು ಪರಿಗಣಿತವಾಗಿದೆ. ಅದಕ್ಕಿಂತ ಮೊದಲು ಕನ್ನಡ ಭಾಷೆಯನ್ನು ಶಾಸನದಲ್ಲಿ ಬಳಸಿರುವುದು ಕಂಡುಬರದಿದ್ದರೂ ಹಿಂದಿನ ಶಾಸನಗಳಲ್ಲಿ ಕಂಡುಬರುವ ಹಲವು ಸ್ಥಳನಾಮಗಳು ವ್ಯಕ್ತಿನಾಮಗಳು ಕನ್ನಡದವೆಂದು ಹೇಳಬಹುದು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಬರುವ ಇಸಿಲ ಎಂಬ ಊರ ಹೆಸರನ್ನು ಕನ್ನಡ ಹೆಸರೆಂದು ಭಾವಿಸಲಾಗಿದೆ. ಮಳವಳ್ಳಿಯ ಕದಂಬರ ಶಾಸನದಲ್ಲಿ ಬರುವ ಮಳ್ಪಪಳ್ಳಿ, ಸೋಮಪಳ್ಳಿ, ವೆಳ್ಳಕ್ಕಿ, ವೇಗೂರುಗಳು ಕನ್ನಡವೆಂಬುದು ಸ್ಪಷ್ಟ. 6ನೆಯ ಶತಮಾನದವರೆಗೆ ಅಷ್ಟಾಗಿ ಕನ್ನಡ ಶಾಸನಗಳಿಲ್ಲ. ಅಲ್ಲಿಂದ ಮುಂದೆ ಚಾಳುಕ್ಯರ ಶಾಸನಗಳಲ್ಲಿ ಕನ್ನಡ ಬಳಕೆಯಾಗತೊಡಗಿತು. ತಮಟಕಲ್ಲಿನ ಶಾಸನವನ್ನು ರೈಸ್ ಅವರು ಸು. 500ಕ್ಕೆ ಸೇರಿದ್ದೆಂದು ಹೇಳಿದ್ದರೂ ಅದನ್ನು ಲಿಪಿಯ ಆಧಾರದಿಂದ 7ನೆಯ ಶತಮಾನದ್ದೆಂದು ಹೇಳಬಹುದು. 10ನೆಯ ಶತಮಾನದವರೆಗೂ ಅಲ್ಲಲ್ಲಿ ಕನ್ನಡ ಶಾಸನಗಳು ಹುಟ್ಟಿಕೊಂಡುವು. ಗಂಗರು, ಬಾದಾಮಿ ಚಳುಕ್ಯರು, ರಾಷ್ಟ್ರಕೂಟರು ಈ ಕಾಲದಲ್ಲಿ ಶಿಲಾಶಾಸನಗಳಲ್ಲಿ ಕನ್ನಡವನ್ನೇ ಹೆಚ್ಚಾಗಿ ಬಳಸಿದರು. ಇವು ಕಿರುಶಾಸನಗಳು. ವಸ್ತುನಿಷ್ಠವಾದ ಈ ಶಾಸನಗಳು ಹೆಚ್ಚು ವಿಷಯಗಳನ್ನೊಳಗೊಂಡಿರುವುದಿಲ್ಲ. 9ನೆಯ ಶತಮಾನದಲ್ಲಿ ರಚಿತವಾದ ಕವಿರಾಜಮಾರ್ಗವನ್ನು ಬಿಟ್ಟರೆ ಅದಕ್ಕೆ ಮುಂಚಿನ ಕನ್ನಡದ ಗ್ರಂಥಗಳು ದೊರೆತಿಲ್ಲವಾದ್ದರಿಂದ ಅದಕ್ಕೂ ಹಿಂದಿನ ಕನ್ನಡ ಭಾಷೆಯ ಸ್ವರೂಪ, ಸಾಹಿತ್ಯದ ರೀತಿಯನ್ನರಿಯಲು ಈ ಶಾಸನಗಳೇ ಆಧಾರ. 10ನೆಯ ಶತಮಾನದಿಂದೀಚಿನ ಹಳಗನ್ನಡಕ್ಕಿಂತ ಕೆಲಮಟ್ಟಿಗೆ ಭಿನ್ನವಾಗಿರುವ ಭಾಷೆಯನ್ನು ಈ ಶಾಸನಗಳಲ್ಲಿ ಕಾಣುತ್ತೇವೆ. ಕಿತ್ತೂರಾ ವೆಳ್ಮಾಡದಾ ಧರ್ಮ್ಮಸೇನಗುರುವಡಿಗಳಾ ಶಿಷ್ಯರ್ ಬಾಲದೇವಗುರುವಡಿಗಳ್ ಸನ್ಯಾಸನಂನೋನ್ತು ಮುಡಿಪ್ಪಿದಾರ್, ಪೆರ್ಗ್ಗೊರವಂ ಸಮಾಧಿ ನೆರೆದೊನ್ ನೋನ್ತೆಯ್ದಿದೋರ್ ಸಿದ್ಧಿಯಾನ್, ಕಟ್ಟಿಪ್ಪ ಬೆಟ್ಟಮ್ಮೇಲ್ಕಾಲಂ ಕೆಯ್ದಾರ್, ಬಿಣಮಣಿ ಅಸ್ತು ಭೋಗಿ ಬಿಣದುಳ್ಮಣಿವಿಲ್ಮನದೋನ್ ಇತ್ಯಾದಿ. ಇದನ್ನು ಪೂರ್ವದ ಹಳಗನ್ನಡ ಎಂದು ಕರೆಯಲಾಗಿದೆ. ಕಪ್ಪೆ ಅರಭಟ್ಟನ ಬಾದಾಮಿಯ ಶಾಸನ, ತಮಟಕಲ್ಲಿನ ಗುಣಮಧುರನ ಶಾಸನ, ಶ್ರವಣಬೆಳಗೊಳದಲ್ಲಿರುವ ಹಲವಾರು ಈ ಕಾಲದ ನಿಸಿದಿ ಶಾಸನಗಳು ಪದ್ಯಗಳಿಂದ ಕೂಡಿದ್ದು ಸಾಹಿತ್ಯಕ ಲಕ್ಷಣಗಳನ್ನು ಹೊಂದಿವೆ. ಹತ್ತನೆಯ ಶತಮಾನದಿಂದೀಚೆಗೆ ಕನ್ನಡ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತ ಹೋದರೂ ಆಡುವ ಭಾಷೆಗೆ ಹತ್ತಿರವಾಗಿದ್ದ ಶಾಸನಗಳು ಭಾಷೆಯ ಸ್ವರೂಪವನ್ನು ಖಚಿತವಾಗಿ ತಿಳಿಯಲು ಸಹಾಯ ಮಾಡುತ್ತವೆ. ಈ ಶತಮಾನದ ಅನಂತರ ಕನ್ನಡ ಶಾಸನಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹುಟ್ಟಿಕೊಂಡುವು. ದೀರ್ಘಶಾಸನಗಳೂ ಬರಲಾರಂಭಿಸಿದುವು. ಆಗ ಸಾಹಿತ್ಯದಲ್ಲಿ ಪ್ರಚಲಿತವಿದ್ದ ಚಂಪೂಶೈಲಿಯನ್ನೇ ಶಾಸನಕರ್ತೃಗಳೂ ಸಮರ್ಥವಾಗಿ ಬಳಸಿಕೊಂಡರು. ಶಾಸನಗಳನ್ನು ರಚಿಸಿದವರಲ್ಲಿ ಓದು ಬರೆಹ ಬಲ್ಲ ಸಾಮಾನ್ಯರಿಂದ ಹಿಡಿದು ಪೂರ್ಣಪಾಂಡಿತ್ಯವನ್ನು ಹೊಂದಿದ್ದು ರಾಜಾಸ್ಥಾನಗಳಲ್ಲಿ ಪ್ರತಿಷ್ಠಿತರಾಗಿದ್ದ ಕವಿಗಳವರೆಗೂ ಉಂಟು. ಗ್ರಾಮಗಳಲ್ಲಿ ಜನಸಾಮಾನ್ಯರು ಕಟ್ಟಿಸಿದ ಕೆರೆಕಾಲುವೆಗಳ ವಿಷಯವನ್ನು ತಿಳಿಸುವಲ್ಲಿ, ಊರಿಗೆ ಬಂದ ಕುತ್ತನ್ನು ಪರಿಹರಿಸಲು ಏಕಾಕಿಯಾಗಿ ಹೋರಾಡಿದ ಊರಿನ ವೀರರ ವೀರಮರಣವನ್ನು ತಿಳಿಸುವಲ್ಲಿ, ದೇವಾಲಯಗಳಿಗೆ ಬಸದಿಗಳಿಗೆ ಭಕ್ತರು ಪೂಜಾದಿ ಕೈಂಕರ್ಯಗಳಿಗಾಗಿ ಕೊಟ್ಟ ದಾನಾದಿಗಳನ್ನು ಸೂಚಿಸುವಲ್ಲಿ ಆ ಹೊತ್ತಿಗೆ ಒದಗಿದವರೇ ಶಾಸನಗಳನ್ನು ರಚಿಸಿರುತ್ತಾರೆ. ರಾಜರೋ ಅವರ ಸಾಮಂತರೋ ಅಧಿಕಾರಿಗಳೋ ದೇವಾಲಯಗಳನ್ನು ಕಟ್ಟಿಸಿ ದಾನದತ್ತಿಗಳನ್ನು ಬಿಟ್ಟಾಗ ಅಥವಾ ಇತರ ಉದ್ದೇಶಗಳಿಗಾಗಿ ಶಾಸನಗಳನ್ನು ಹಾಕಿಸಿದಾಗ ಉದ್ದೇಶಪೂರ್ವಕವಾದ ವಿದ್ವತ್ಪೂರ್ಣವಾದ ಶಾಸನಗಳ ರಚನೆಯನ್ನು ನೋಡುತ್ತೇವೆ. ಹೆಸರು ಹೇಳಿಕೊಂಡಿರುವ ಕವಿಗಳಲ್ಲಿ ಪ್ರಸಿದ್ಧವಾದ ಕಾವ್ಯಗಳನ್ನು ರಚಿಸಿದವರೂ ಇದ್ದಾರೆ. ಕೇವಲ ಶಾಸನಗಳ ಮೂಲಕ ಪರಿಚಿತರಾದವರೂ ಇದ್ದಾರೆ. ಇವರು ತಮ್ಮ ಕವಿತಾಸಾಮರ್ಥ್ಯವನ್ನು ಹೊಗಳಿಕೊಂಡಿರುವುದುಂಟು. ಕಾಡಿಯೂರು ಮತ್ತು ಅಲ್ಲಿನ ವಿಪ್ರೋತ್ತಮರನ್ನು ನವೀನ ವರ್ಣನೆಯಿಂದ ಅಭಿವರ್ಣಿಸಿರುವ ಕವಿರಾಜ ರಾಜ, ದಂಡಾಪುರ ಶಾಸನದ ಕಬ್ಬಗಳನ್ನೊರೆದ ಪರಿಣತ ರವಿನಾಗಭಟ್ಟ, ಮಾಧುರ್ಯಸುಕರ ಚಾತುರ್ಯ ಗುಣಗಳಿಂದ ಚೆಲ್ವಾಗುವಂತೆ ನಾಗಾವಿಯ ಶಾಸನವನ್ನು ರಚಿಸಿದ ಸಾವಿಯಣ್ಣ, ಸೊಗಲದಲ್ಲಿ ದೊಡ್ಡ ಶಾಸನವನ್ನು ರಚಿಸಿದ ಕಮಳಾದಿತ್ಯ, ಕವಿರತ್ನಭೂಷಣನೆಂದೂ ಕರ್ಣಾಟಸಂಸ್ಕೃತಾಂಧ್ರಕವಿಯೆಂದೂ ಹೊಗಳಿಸಿಕೊಂಡಿರುವ ವಿಷ್ಣುಭಟ್ಟ, ದೇಕಬ್ಬೆ ಮಹಾಸತಿಯಾದುದನ್ನು ಮನಮುಟ್ಟುವಂತೆ ವರ್ಣಿಸಿರುವ ಕವಿರಾಜಬಾಂಧವಮಲ್ಲ, ಉದ್ದಂಡಕವಿಭಾಳನೇತ್ರ, ಸುಕವಿಜನಮಿತ್ರನಾದ ಜನ್ನಯ್ಯ, ಚಿದಾನಂದಬುಧ, ಸಜ್ಜನತಿಳಕ ವಾಮನಯ್ಯ ಮೊದಲಾದ ಅನೇಕ ಕವಿಗಳ ಶಾಸನರಚನೆ ರಸಾರ್ದ್ರವೂ ಪಾಂಡಿತ್ಯಪೂರ್ಣವೂ ಆಗಿದೆ. ಅವರು ತಮ್ಮ ಪ್ರತಿಭೆಪಾಂಡಿತ್ಯಗಳಿಂದ ಶಾಸನಗಳ ಕಾವ್ಯಮೌಲ್ಯವನ್ನು ಉಚ್ಚಮಟ್ಟಕ್ಕೇರಿಸಿದ್ದಾರೆ. ದಾತೃವಿನ, ರಾಜನ, ವೀರನ ಪರಾಕ್ರಮವನ್ನು ವರ್ಣಿಸುವಲ್ಲಿ, ಅವರ ಗುಣಗಳನ್ನು ನಿರೂಪಿಸುವಲ್ಲಿ ದೇಶ, ಊರು, ಅಲ್ಲಿನ ಜನ, ವಿದ್ಯಾಪೀಠಗಳು ದೇವಾಲಯಗಳನ್ನು ಚಿತ್ರಿಸುವಲ್ಲಿ ಕವಿಕಲ್ಪನೆ ಗರಿಗೆದರುತ್ತದೆ; ಸುಂದರವಾದ, ಸೊಗಸಾದ ಕಾವ್ಯ ಹೊಮ್ಮುತ್ತದೆ. ಇವುಗಳಲ್ಲಿ ಕೆಲವಂತೂ ಭಾವಗೀತೆಗಳಾಗಿ ಪರಿಣಮಿಸಿವೆ. ಕೇವಲ ಗೊಮ್ಮಟಸ್ತುತಿಯನ್ನೇ ವಸ್ತುವಾಗುಳ್ಳ ಶ್ರವಣಬೆಳಗೊಳದಲ್ಲಿರುವ ಬೊಪ್ಪಣಪಂಡಿತನ ಶಾಸನ ಸುಂದರವಾದ ಒಂದು ಪುಟ್ಟಕಾವ್ಯ.

ದೀರ್ಘಶಾಸನಗಳಲ್ಲಿ ರಾಜರೇ ಶಾಸನಗಳನ್ನು ಕೆತ್ತಿಸಿದಾಗ ಮಾತ್ರವಲ್ಲದೆ ಯಾರೇ ಶಾಸನ ಕೆತ್ತಿಸಿದಾಗಲೂ ರಾಜವಂಶಾವಳಿಯನ್ನು ವರ್ಣಿಸುವ ರೂಢಿಯಿದ್ದುದರಿಂದ ನೂರಾರು ಶಾಸನಗಳು ಒಂದೇ ಬಗೆಯ ವಂಶಾವಳಿಯನ್ನು ಕೊಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಪ್ರತಿಯೊಬ್ಬ ಶಾಸನಕವಿಯೂ ಆ ವಂಶಾವಳಿಯನ್ನು ಹೊಸದಾಗಿ ವರ್ಣಿಸುವುದರ ಬದಲು ಆಗಲೇ ರಚಿತವಾಗಿದ್ದ ಶಾಸನಗಳಲ್ಲಿ ಪ್ರಸಿದ್ಧವಾದ ಪದ್ಯಗಳನ್ನಾಯ್ದುಕೊಂಡು ತಮ್ಮ ಶಾಸನಗಳಲ್ಲಿ ಜೋಡಿಸುವುದು 12, 13ನೆಯ ಶತಮಾನಗಳಲ್ಲಿ ಸಾಮಾನ್ಯ ರೂಢಿಯಾಗಿತ್ತು. ಇವುಗಳೊಂದಿಗೆ ಶಕ್ತನಾದ ಕವಿ ಹತ್ತಾರು ಪದ್ಯಗಳನ್ನು ಹೊಸದಾಗಿ ರಚಿಸಿ ಸೇರಿಸಿರುವುದುಂಟು. ನವೀನ ಕಲ್ಪನೆಗಳು, ನವಿರಾದ ಭಾವನೆಗಳು, ಚಮತ್ಕಾರೋಕ್ತಿ, ಅಲಂಕಾರ, ಪದಾಡಂಬರಗಳಿಗೆ ಇಂಥ ಶಾಸನಗಳು ಹೆಸರಾಗಿವೆ. ಸಾಹಿತ್ಯದೃಷ್ಟಿಯಿಂದ ಶಾಸನಗಳ ರಚನೆ ಆರಂಭವಾಗಿದ್ದರೂ ಕಾವ್ಯಮಯವಾಗಿ ಬೆಳೆಯುತ್ತಹೋಗಿ ಇವುಗಳಲ್ಲಿ ವರ್ಣನೆಗಳು ಕವಿಕಲ್ಪನೆಗಳು ತುಂಬಿದ್ದು ತಮ್ಮ ಪ್ರೌಢವಾದ, ಸರಳವಾದ ಶೈಲಿಗಳಿಂದ, ವಿಶಿಷ್ಟವಾದ ಗದ್ಯಶೈಲಿಯಿಂದ, ವರ್ಣನಾವೈಖರಿಯಿಂದ, ಶಬ್ದಾಲಂಕಾರಗಳು, ಅರ್ಥಾಲಂಕಾರಗಳಿಂದ ವೀರರಸಪ್ರತಿಪಾದನೆಯಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ನೆರವಾಗಿವೆ.

14ನೆಯ ಶತಮಾನದಿಂದ ಮುಂದೆ ಕನ್ನಡ ಸಾಹಿತ್ಯದಲ್ಲಿ ಚಂಪೂ ಶೈಲಿ ಕಡಿಮೆಯಾಗಿ ಷಟ್ಪದಿ, ಸಾಂಗತ್ಯ, ತ್ರಿಪದಿಗಳ ಕಡೆ ಹೊರಳಿದಾಗಲೂ ಅಲ್ಲಲ್ಲಿ ಕೆಲಮಟ್ಟಿಗೆ ಕಂಡುಬರುವ ದೀರ್ಘವಾದ ಕನ್ನಡ ಶಾಸನಗಳು ಚಂಪೂ ಶೈಲಿಯನ್ನೇ ಮುಂದುವರಿಸಿವೆ. ಆದರೆ ಹಿಂದಿನ ಚಂಪೂ ಶಾಸನಗಳಲ್ಲಿ ಕಂಡುಬರುವ ಪ್ರೌಢರಚನೆ ಇವುಗಳಲ್ಲಿಲ್ಲ. ಇವು ಹೆಚ್ಚಾಗಿ ದೇಶಿಶೈಲಿಯನ್ನನುಸರಿಸಿವೆ. ಈ ಕಾಲದಲ್ಲಿ ಕಂಡುಬರುವ ಶಾಸನಗಳು ಕೇವಲ ಗದ್ಯದಲ್ಲಿದ್ದು ವಸ್ತುನಿಷ್ಠವಾಗಿರುವುದರಿಂದ ಸಾಹಿತ್ಯಾಂಶ ಕಡಿಮೆ. ವೀರಗಲ್ಲು, ಮಾಸ್ತಿಕಲ್ಲು, ನಿಸಿದಿಕಲ್ಲುಗಳ ಶಾಸನಗಳಲ್ಲಿ ಅಲ್ಲಲ್ಲಿ ಕಾವ್ಯದ ಮಿಂಚು ಹೊಳೆದಿದೆ.

**ಇತರ ಭಾಷೆಯ ಶಾಸನಗಳು:** ಕರ್ನಾಟಕದಲ್ಲಿ ತಮಿಳು, ತೆಲುಗು, ಪರ್ಷಿಯನ್, ಅರ್ಯಾಬಿಕ್, ಮಲೆಯಾಳಂ, ಮರಾಠಿ, ತುಳು ಈ ಮುಂತಾದ ಭಾಷೆಯ ಶಾಸನಗಳು ದೊರೆತಿವೆ. 11ನೆಯ ಶತಮಾನದ ಆರಂಭದಲ್ಲಿ ಚೋಳರು ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಮೇಲೆ ಕರ್ನಾಟಕದ ಈ ಭಾಗಗಳಲ್ಲಿ ತಮಿಳು ಶಾಸನಗಳನ್ನು ಹಾಕಿಸಲಾರಂಭವಾಯಿತು. ಚೋಳರು ತಾವು ಆಕ್ರಮಿಸಿದ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಆರಂಭದಲ್ಲಿ ಅಲ್ಲಿನ ಆಡುನುಡಿಯಾದ ಕನ್ನಡದಲ್ಲೇ ಶಾಸನಗಳನ್ನು ಹಾಕಿಸಿದ್ದುಂಟು. ರಾಜರಾಜನ ಬನ್ನೂರು ಶಾಸನ, ಅಪ್ರಮೇಯನ ಕಲಿಯೂರು ಶಾಸನ, ರಾಜೇಂದ್ರ ಚೋಳನ ಬಲಮುರಿ ಶಾಸನ ಮೊದಲಾದುವು ಕನ್ನಡದಲ್ಲಿಯೇ ಇವೆ. ಆದರೆ ಬಹುಬೇಗನೆ ಅವರು ಈ ಪ್ರಾಂತ್ಯದಲ್ಲಿ ತಮ್ಮ ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿ ತಮಿಳನ್ನು ಆಡಳಿತ ಭಾಷೆಯನ್ನಾಗಿ ಮಾಡಿ ಶಾಸನಗಳನ್ನು ತಮಿಳಿನಲ್ಲಿಯೇ ಹಾಕಿಸಲಾರಂಭಿಸಿದರು. ಕೋಲಾರ, ತಡಿಮಾಲಿಂಗಿ, ಅಗರ, ಕುಣಿಗಲು ಮೊದಲಾದ ಊರುಗಳಲ್ಲಿ ಚೋಳರ ಹಲವಾರು ತಮಿಳು ಶಾಸನಗಳು ದೊರೆತಿವೆ. ಈ ಭಾಗದ ಜನಕ್ಕೆ ತಮಿಳು ಸಂಪರ್ಕಭಾಷೆಯಾಗಿ ಮುಂದುವರಿಯಿತು. ಚೋಳರು ಆಳಿದ ನೂರು ವರ್ಷಗಳಲ್ಲಿ ಹೀಗೆ ಜನ ಆಡುವ ಭಾಷೆಗಿಂತ ಆಡಳಿತ ಭಾಷೆಯಾದ ತಮಿಳೇ ಹೆಚ್ಚು ಸ್ಥಿರವಾಗಿ ಬೇರೂರಿತು. ಇದರ ಫಲವಾಗಿ ಮುಂದೆ ಹೊಯ್ಸಳರು ಚೋಳರನ್ನೋಡಿಸಿ ಈ ಪ್ರಾಂತ್ಯವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡಮೇಲೂ ಈ ಭಾಗದಲ್ಲಿ ಅವರು ತಮಿಳಿನಲ್ಲಿಯೇ ಶಾಸನ ಹಾಕಿಸಬೇಕಾಯಿತು. ಹೊಯ್ಸಳರ ಕಾಲದ ನೂರಾರು ತಮಿಳು ಶಾಸನಗಳು ಇಲ್ಲೆಲ್ಲ ಹರಡಿವೆ. ಆದರೂ ಕರ್ನಾಟಕದಲ್ಲಿ ದೊರೆತ ಅತಿಪ್ರಾಚೀನ ತಮಿಳು ಶಾಸನ ಬಹುಶಃ ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿಯ ಪಾದದ ಬಳಿ ಇರುವ ಶ್ರೀಚಾವುಣ್ಡರಾಜನ್ ಶೈವಿತ್ತಾನ್ ಎಂಬುದು. ಇಲ್ಲಿಗೆ ತಮಿಳುನಾಡಿನಿಂದ ಆಗಲೂ ಯಾತ್ರಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದುದನ್ನು ಅದು ಸೂಚಿಸುತ್ತದೆ. ಕುಂಭಕೋಣ, ತಂಜಾವೂರು, ಮನ್ನಾರ್‌ಕೋಯಿಲ್, ಸೆಣ್ಣೆಯಂಬಾಕ್ಕಂ ಮೊದಲಾದ ಕಡೆಗಳಿಂದ ಬಂದ ಯಾತ್ರಿಕರು ಶ್ರವಣಬೆಳಗೊಳದಲ್ಲಿ ಕೆಲವು ಮೂರ್ತಿಗಳನ್ನು ಮಾಡಿಸಿಕೊಟ್ಟುದನ್ನು ತಿಳಿಸುವ ಶಾಸನಗಳು ತಮಿಳಿನಲ್ಲಿವೆ. ಕೊಡಗಿನ ಪಾಲೂರು ಮತ್ತು ಭಾಗಮಂಡಲಗಳಲ್ಲಿನ ಎರಡು ಶಾಸನಗಳು ಭಾಷೆ ಮತ್ತು ಲಿಪಿಯ ದೃಷ್ಟಿಯಿಂದ ವಿಶಿಷ್ಟವಾಗಿವೆ. ಅವುಗಳಲ್ಲಿ ತಮಿಳು, ಮಲೆಯಾಳಂ ಮತ್ತು ತುಳು ಭಾಷೆಗಳು ಬೆರೆತಂತೆ ತೋರುತ್ತದೆ. ಚೋಳರು ಕರ್ನಾಟಕದಲ್ಲಿ ಹಾಕಿಸಿರುವ ಶಾಸನಗಳಲ್ಲಿ ಶಕವರ್ಷವನ್ನು ತಿಳಿಸಿರುವುದರಿಂದ ಚೋಳಚಕ್ರವರ್ತಿಗಳ ಕಾಲನಿರ್ಧಾರಕ್ಕೆ ಹೆಚ್ಚಿನ ಅನುಕೂಲವಾಗಿದೆ.

14ನೆಯ ಶತಮಾನದಲ್ಲಿ ಕರ್ನಾಟಕದ ಉತ್ತರ ಭಾಗ ಬಹಮನೀ ಸುಲ್ತಾನರ ಆಳ್ವಿಕೆಗೆ ಒಳಪಟ್ಟುದರಿಂದ ಆ ಭಾಗಗಳಲ್ಲಿ ಪರ್ಷಿಯನ್ ಮತ್ತು ಅರ್ಯಾಬಿಕ್ ಶಾಸನಗಳು ಅಲ್ಲಿಂದ ಮುಂದೆ ಹೇರಳವಾಗಿ ಕಂಡುಬರುತ್ತವೆ. ಮಸೀದಿಗಳ ಗೋಡೆಗಳ ಮೇಲೆ, ಬಾಗಿಲುವಾಡಗಳ ಮೇಲೆ, ಗುಮ್ಮಟಗಳಲ್ಲಿ, ಗೋರಿಗಳ ಮೇಲೆಲ್ಲ ಈ ಶಾಸನಗಳುಂಟು. ಗುಲ್ಬರ್ಗ, ಬೀದರ್, ಬಿಜಾಪುರ, ಗೋಲ್ಕೊಂಡ, ಬಸವಕಲ್ಯಾಣ ಮೊದಲಾದ ಊರುಗಳಲ್ಲಿ ಈ ಶಾಸನಗಳು ಹೆಚ್ಚು. ಮುಗಲರ ಆಳಿಕೆಯಲ್ಲಿ ಕರ್ನಾಟಕದ ದಕ್ಷಿಣ ಭಾಗದ ಶಿರಾದಲ್ಲಿಯೂ ಮುಂದೆ ಹೈದರ್ ಅಲಿ, ಟಿಪ್ಪುಸುಲ್ತಾನರ ಆಳಿಕೆಯಲ್ಲಿ ಶ್ರೀರಂಗಪಟ್ಟಣದಲ್ಲಿಯೂ ಇಂಥ ಶಾಸನಗಳು ಹೆಚ್ಚು. ಕೊಡಗಿನ ಅರಸರು ತಮ್ಮ ಕೆಲವು ಶಾಸನಗಳಲ್ಲಿ ಮತ್ತು ಮುದ್ರೆಗಳಲ್ಲಿ ಕನ್ನಡದ ಜೊತೆಗೆ ಪರ್ಷಿಯನ್ ಭಾಷೆಯನ್ನೂ ಬಳಸಿದ್ದಾರೆ. ಮಸೀದಿಗಳ ಮೇಲಿನ ಅನೇಕ ಶಾಸನಗಳು ಕೊರಾನಿನಿಂದ ಉದ್ಧೃತಗೊಂಡ ಭಾಗಗಳು. ಪರ್ಷಿಯನ್ ಭಾಷೆಯ ಶಾಸನಗಳು ಸಾಮಾನ್ಯವಾಗಿ ಕಿರಿಯವು. ಚರಿತ್ರೆಯ ದೃಷ್ಟಿಯಿಂದ ಇವು ಅಷ್ಟೇನೂ ಪ್ರಮುಖವಾದುವಲ್ಲದಿದ್ದರೂ ವಾಸ್ತುಶಿಲ್ಪಗಳ ಹುಟ್ಟು, ಬೆಳವಣಿಗೆಯನ್ನರಿಯಲು ಇವು ತುಂಬ ಸಹಾಯಕವಾಗಿವೆ. ಟಿಪ್ಪುಸುಲ್ತಾನನು ಆನಂದೂರಿನಲ್ಲಿ ಕೆತ್ತಿಸಿದ್ದ ಶಾಸನ ಕಾವೇರಿಗೆ ಅಣೆಕಟ್ಟೆ ಕಟ್ಟಲು ಹಾಕಿದ ಅಸ್ತಿಭಾರ ಶಿಲೆ. ಅದರಲ್ಲಿ 'ಮಾನವ ಆರಂಭಿಸುತ್ತಾನೆ, ದೇವರು ಮುಗಿಸುತ್ತಾನೆ' ಎಂಬರ್ಥ ಕೊಡುವ ಒಂದು ವಾಕ್ಯವಿದೆ. ಬಿಜಾಪುರದ ಮಲ್ಲಿಕ್–ಎ–ಮೈದಾನ್, ಲಾಮ್‌ಚಡಿ ಮೊದಲಾದ ಹೆಸರುಗಳುಳ್ಳ ಅನೇಕ ಬೃಹತ್ ಫಿರಂಗಿಗಳು, ಕತ್ತಿಗಳು ಇತರ ಆಯುಧಗಳ ಮೇಲೆ ಪರ್ಷಿಯನ್ ಶಾಸನಗಳು ಇವೆ.

ಕೆಲವು ಶಾಸನ ಕವಿಗಳು ತಾವು ಕರ್ನಾಟಕ ಸಂಸ್ಕೃತ ಆಂಧ್ರ ಕವಿಗಳೆಂದೂ ಚತುರ್ಭಾಷಾ ಕವಿಚಕ್ರವರ್ತಿಗಳೆಂದೂ ಹೇಳಿಕೊಂಡಿರುವುದುಂಟು. ಅಪರೂಪವಾಗಿ ತಮ್ಮ ಶಾಸನಗಳಲ್ಲಿ ಒಂದೊಂದು ತೆಲುಗು ಪದ್ಯವನ್ನೂ ತೂರಿಸಿರುವುದು ಕಂಡುಬರುತ್ತದೆ. ಮಾಗಡಿ, ಯಲಹಂಕ ಪ್ರಭುಗಳು ಕೆಲವು ತೆಲುಗು ಶಾಸನಗಳನ್ನು ಹಾಕಿಸಿದ್ದಾರೆ. ಮುಖ್ಯವಾಗಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇಂಥ ತೆಲುಗು ಶಾಸನಗಳಿವೆ. ಶ್ರವಣಬೆಳಗೊಳದ ಗೊಮ್ಮಟಮೂರ್ತಿಯ ಪಾದದ ಬಳಿ ಇರುವ ಎರಡು ಶಾಸನಗಳು ಮರಾಠಿಯಲ್ಲಿದ್ದು ಅವುಗಳಲ್ಲಿ ಚಾವುಣ್ಡರಾಯೇ ಕರವಿಯಲೇ ಎಂಬ ಶಾಸನವೇ ಮರಾಠಿಯಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನವೆಂಬ ಅಭಿಪ್ರಾಯವಿದೆ. ಮರಾಠಿಯನ್ನು ಸನ್ನದು, ನಿರೂಪಗಳಲ್ಲಿ ಹೆಚ್ಚಾಗಿ ಬಳಸಿದ್ದರೂ ಶಾಸನಗಳಲ್ಲಿ ಬಳಸಿರುವುದು ಕಡಿಮೆ. ಶ್ರವಣಬೆಳಗೊಳದಲ್ಲಿ ಬೇರೆ ಬೇರೆ ಭಾಗಗಳಿಂದ ಬಂದ ಯಾತ್ರಿಕರು ಹಾಕಿಸಿರುವ ಶಾಸನಗಳಲ್ಲಿ 50ಕ್ಕೂ ಹೆಚ್ಚು ಮರಾಠಿ ಮತ್ತು ಹಿಂದಿ ಮಿಶ್ರಿತಭಾಷೆಯಲ್ಲಿವೆ. ಮಲೆಯಾಳಂ ಭಾಷೆಯ ಕೆಲವು ಶಾಸನಗಳು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಪರೂಪವಾಗಿ ಕಂಡು ಬಂದರೆ, ತುಳು ಶಾಸನಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು.

**ಶಾಸನಗಳ ಲಿಪಿ:** ಕರ್ನಾಟಕದಲ್ಲಿ ದೊರೆತ ಅಶೋಕನ ಶಾಸನಗಳು ಬ್ರಾಹ್ಮೀಲಿಪಿಯಲ್ಲಿವೆ. ಈ ಶಾಸನಗಳಲ್ಲಿ ಕೆಲಮಟ್ಟಿಗೆ ದಕ್ಷಿಣದ ಪ್ರಭೇದವನ್ನು ಗುರುತಿಸಬಹುದೆಂಬುದು ವಿದ್ವಾಂಸರ ಮತ. ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗ ರಾಮೇಶ್ವರಗಳಲ್ಲಿರುವ ಅಶೋಕನ ಶಾಸನಗಳ ಕೊನೆಯಲ್ಲಿ ಬರುವ ಲಿಪಿಕರೇಣ ಎಂಬ ಪದ ಖರೋಷ್ಠಿ ಲಿಪಿಯಲ್ಲಿರುವುದೊಂದು ವಿಶೇಷ. ಈ ಬ್ರಾಹ್ಮೀಲಿಪಿ ಕಾಲಕ್ರಮದಲ್ಲಿ ಬದಲಾವಣೆ ಹೊಂದುತ್ತ ಭಾರತದಲ್ಲಿ ಬಳಕೆಯಲ್ಲಿರುವ ಎಲ್ಲ ಲಿಪಿಗಳಿಗೂ ಮೂಲವಾಯಿತು. ಬ್ರಾಹ್ಮೀ ಲಿಪಿಯನ್ನು ಸಾತವಾಹನರು ಮುಖ್ಯಗವಿಗಳಲ್ಲಿ ತಾವು ಕೊರೆಸಿದ ಶಾಸನಗಳಲ್ಲಿ ಕೆಲವು ಬದಲಾವಣೆಗಳೊಡನೆ ಬಳಸಿದ್ದರಿಂದ ಇವರ ಕಾಲದ ಲಿಪಿಯನ್ನು ಗುಹಾಲಿಪಿ ಎಂದು ಕರೆಯಲಾಗಿದೆ. ಈ ಲಿಪಿ ಕರ್ನಾಟಕದಲ್ಲಿ ನಾಲ್ಕನೆಯ ಶತಮಾನದವರೆಗಿನ ಶಾಸನಗಳಲ್ಲಿ ಬಳಕೆಯಾಗಿದೆ. ಇವುಗಳಿಗೆ ತಲೆಕಟ್ಟುಗಳು ಸ್ಪಷ್ಟವಾಗಿರುವುದಿಲ್ಲ. ಮಳವಳ್ಳಿ ಸ್ತಂಭಶಾಸನ, ಚಂದ್ರವಳ್ಳಿಯ ಮಯೂರವರ್ಮನ ಶಾಸನ, ಹಿರೇಹಡಗಲಿಯ ಪಲ್ಲವ ಶಿವಸ್ಕಂದವರ್ಮನ ತಾಮ್ರಶಾಸನ ಮೊದಲಾದುವುಗಳಲ್ಲಿ ಇಂಥ ಲಿಪಿಯನ್ನು ನೋಡಬಹುದು. ಮುಂದಿನ ಕದಂಬರ ಕೆಲವು ಶಾಸನಗಳಲ್ಲಿ ದಪ್ಪನಾದ ಚೌಕನಾದ ತಲೆಕಟ್ಟುಗಳನ್ನುಳ್ಳ ಲಿಪಿಯನ್ನು ಬಳಸಿದ್ದು ಅದಕ್ಕೆ ಪೆಟ್ಟಿಗೆಶಿರಲಿಪಿ ಎಂಬ ಹೆಸರಿದೆ. ತಾಳಗುಂದ, ಬನವಾಸಿ, ಗುಡ್ನಾಪುರ ಸ್ತಂಭಶಾಸನಗಳು ಮತ್ತು ಕದಂಬರ ಕೆಲವು ತಾಮ್ರಶಾಸನಗಳಲ್ಲಿರುವುದು ಇದೇ ಲಿಪಿ. ಅಲ್ಲಿಂದ ಮುಂದೆ

ಬೆಳೆದದ್ದು ಕನ್ನಡಲಿಪಿ. ಕಾಲಕ್ರಮದಲ್ಲಿ ರೂಪ ಬದಲಾಯಿಸುತ್ತ ಗುಂಡುರೂಪ ತಳೆದ ಈ ಲಿಪಿಯನ್ನೇ ಸಂಸ್ಕೃತ ಶಾಸನಗಳಲ್ಲೂ ಕನ್ನಡ ಶಾಸನಗಳಲ್ಲೂ ಬಳಸಿರುವುದು. 14–15ನೆಯ ಶತಮಾನಗಳವರೆಗೂ ಕನ್ನಡ ಮತ್ತು ತೆಲುಗು ಶಾಸನಗಳೆರಡರಲ್ಲಿಯೂ ಈ ಲಿಪಿ ಬಳಕೆಯಲ್ಲಿದ್ದುದರಿಂದ ಇದನ್ನು ತೆಲುಗು ಕನ್ನಡ ಲಿಪಿ ಎಂದೂ ಕರೆಯುವುದುಂಟು. ರಾಷ್ಟ್ರಕೂಟರ ಕಾಲದವರೆಗೂ ಕದಂಬರು, ಗಂಗರು, ಬಾದಾಮಿ ಚಳುಕ್ಯರು ತಮ್ಮ ಶಿಲಾಶಾಸನಗಳಲ್ಲಿ ಬಳಸಿರುವ ಈ ಲಿಪಿ ದೊಡ್ಡದಾಗಿಯೂ ಸ್ಫುಟವಾಗಿಯೂ ಇರುತ್ತದೆ. ಮುಂದೆ ಕಲ್ಯಾಣ ಚಾಳುಕ್ಯರು, ಹೊಯ್ಸಳರು ಈ ಲಿಪಿಯನ್ನು ಅತಿಗುಂಡಾಗಿ ಮುದ್ದಾಗಿ ಸಣ್ಣದಾಗಿ ತಮ್ಮ ಶಾಸನಗಳಲ್ಲಿ ಉಪಯೋಗಿಸಿದ್ದಾರೆ. ಇವರ ಕಾಲದಲ್ಲಿ ಕಲ್ಲಿನ ಹಲಗೆಯ ಮೇಲೆ ಶಾಸನಗಳನ್ನು ಗುಂಡಾಗಿ ಬರೆಯಲೆಂದೇ ಕೆಲವರು ಲಿಪಿಕಾರರು ನಿಯೋಜಿತರಾಗಿದ್ದರು. ಬರೆವರಾಚಾರ್ಯ ಸೂರ್ಯನ ಮೊದಲಾದವರು ತಮ್ಮ ಈ ವಿದ್ಯೆಯ ಬಗೆಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಒಂದೇ ಅಳತೆಯ ಗುಂಡಾದ ಅಕ್ಷರಗಳನ್ನು ಒಂದಕ್ಕೊಂದು ಅಂತರ ಬಿಡದಂತೆ ಕಣ್ಣಿಗೆ ಹಬ್ಬವಾಗುವಂತೆ ಬರೆದಿರುವುದಲ್ಲದೆ ಮೊದಲ, ಕಡೆಯ ಸಾಲುಗಳ ಅಕ್ಷರಗಳ ತಲೆಕಟ್ಟನ್ನೋ ಒತ್ತನ್ನೋ ಬೆಳೆಸಿ ಹಂಸದಂತೆ, ಆನೆಯಂತೆ, ಸಿಂಹದಂತೆ, ಬಳ್ಳಿಸುರುಳಿಯಂತೆ ವಿಧವಿಧವಾದ ಅಲಂಕಾರಗಳನ್ನು ಮಾಡಿರುವುದುಂಟು. ಹೊಯ್ಸಳರ ಕೆಲವು ಶಾಸನಗಳ ಅಕ್ಷರಗಳು ಅವರ ತಾಮ್ರಶಾಸನಗಳಲ್ಲಿಯೂ ಭಾಷೆ ಸಂಸ್ಕೃತವಾಗಿದ್ದರೂ ಲಿಪಿ ಕನ್ನಡವೇ ಇರುತ್ತದೆ. ಆದರೆ ಇಮ್ಮಡಿ ನರಸಿಂಹನ ಕಾಲದಿಂದೀಚಿನ ತಾಮ್ರಶಾಸನಗಳಲ್ಲಿ ನಾಗರೀ ಲಿಪಿಯನ್ನು ಉಪಯೋಗಿಸಲಾರಂಭಿಸಿರುವುದು ಕಂಡುಬರುತ್ತದೆ. ವರಾಹನಾಥ ಕಲ್ಲಹಳ್ಳಿಯಲ್ಲಿರುವಂತೆ ಇವರ ಕೆಲವು ಶಿಲಾಶಾಸನಗಳೂ ನಾಗರೀ ಲಿಪಿಯಲ್ಲಿರುವುದೂ ಉಂಟು. ವಿಜಯನಗರದ ತಾಮ್ರಶಾಸನಗಳೆಲ್ಲ ಸಂಸ್ಕೃತದಲ್ಲಿರುವುವು. ಕನ್ನಡದಲ್ಲಿರುವುವು ಇದೇ ರೀತಿ ನಾಗರೀ ಲಿಪಿಯಲ್ಲಿಯೇ ಇವೆ. ಇವುಗಳಲ್ಲಿ ಹೆಚ್ಚಾಗಿ ಉಪಯೋಗಿಸಿರುವುದು ನಂದಿನಾಗರೀಲಿಪಿ. ಅಪರೂಪವಾಗಿ ದೇವನಾಗರಿ ಲಿಪಿಯೂ ಉಂಟು. ಈ ತಾಮ್ರಶಾಸನಗಳ ಕಡೆಯಲ್ಲಿ ಬರುವ ರಾಜನ ಅಂಕಿತ ಮಾತ್ರ ಕನ್ನಡ ಅಕ್ಷರದಲ್ಲಿರುತ್ತದೆ. ಮೈಸೂರು ಒಡೆಯರ ಕಾಲಕ್ಕೆ ತಾಮ್ರಶಾಸನಗಳಲ್ಲಿ ಮತ್ತೆ ಕನ್ನಡ ಲಿಪಿಯ ಬಳಕೆ ಆರಂಭವಾಯಿತು. ಕೆಳದಿ ನಾಯಕರ ಶಾಸನಗಳೆಲ್ಲ ಕನ್ನಡ ಲಿಪಿಯಲ್ಲಿಯೇ ಇವೆ. ತಮಿಳು ಶಾಸನಗಳು ಬಹುಮಟ್ಟಿಗೆ ತಮಿಳು ಗ್ರಂಥಾಕ್ಷರಗಳಲ್ಲಿವೆ. ಬಾದಾಮಿಯಲ್ಲಿರುವ ಪಲ್ಲವ ನರಸಿಂಹವರ್ಮನ ಶಿಲಾಶಾಸನ ಸಂಸ್ಕೃತ ಭಾಷೆಯಲ್ಲಿದ್ದು ಪಲ್ಲವ ಗ್ರಂಥಲಿಪಿಯಲ್ಲಿದೆ. ಇದು ಕರ್ನಾಟಕದಲ್ಲಿ ದೊರೆತಿರುವ ಮೊಟ್ಟಮೊದಲ ಗ್ರಂಥಲಿಪಿ ಶಾಸನ. ಅಪರೂಪವಾಗಿ ಕೆಲವು ಕನ್ನಡ ಶಾಸನಗಳು ತಮಿಳು ಗ್ರಂಥಲಿಪಿಯಲ್ಲಿಯೂ ಕೆಲವು ತಮಿಳು ಶಾಸನಗಳು ಕನ್ನಡ ಲಿಪಿಯಲ್ಲಿಯೂ ಇರುವುದುಂಟು. ಕೊಡಗು ಜಿಲ್ಲೆಯಲ್ಲಿರುವ ಬೋಧರೂಪ ಭಗವನ ಎರಡು ಶಾಸನಗಳಲ್ಲಿ ತಮಿಳು ಗ್ರಂಥಲಿಪಿಗಳ ಜೊತೆಗೆ ವಟ್ಟೆಳುತ್ತು ಲಿಪಿಯೂ ಸೇರಿದೆ. ಶ್ರವಣಬೆಳಗೊಳದಲ್ಲಿ ಉತ್ತರ ಭಾರತದಿಂದ ಬಂದಿದ್ದ ಯಾತ್ರಿಕರು ಹಾಕಿಸಿರುವ ಮಾರ್ವಾಡಿ ಮತ್ತು ಹಿಂದಿ ಮಿಶ್ರಭಾಷೆಯ ಶಾಸನಗಳು ಕೆಲವು ನಾಗರಿ ಲಿಪಿಯಲ್ಲಿಯೂ ಮತ್ತೆ ಕೆಲವು ಮಹಾಜನಿ ಲಿಪಿಯಲ್ಲಿಯೂ ಇವೆ. ಇವುಗಳಲ್ಲಿ ಪಂಜಾಬಿನ ಗುಡ್ಡಗಾಡು ಪ್ರದೇಶದಲ್ಲಿ ಪ್ರಚಲಿತವಿರುವ ಟಾಕರಿಲಿಪಿಯೂ ಉಂಟು. ಪರ್ಷಿಯನ್ ಶಾಸನಗಳಲ್ಲಿ ಹೆಚ್ಚಾಗಿ ನಾಸ್ತಾಲಿಖ್ ಲಿಪಿಯನ್ನು ಬಳಸಿದೆ. ಅದರಲ್ಲಿಯೂ ಕೊರಾನಿನ ಭಾಗಗಳನ್ನುದ್ಧರಿಸುವಲ್ಲಿ ಅಲಂಕಾರ ಲಿಪಿಯನ್ನು ಉಪಯೋಗಿಸಿರುವುದು ಹೆಚ್ಚು.

ಒಂದನೆಯ ಅಮೋಘವರ್ಷನ ಮೇವುಂಡಿ ಶಾಸನ

**ಶಾಸನಗಳ ಕಾಲಗಣನೆ:** ಶಾಸನಗಳ ಐತಿಹಾಸಿಕ ಪ್ರಾಮುಖ್ಯ ಹೆಚ್ಚಿರುವುದು ಅವುಗಳಲ್ಲಿ ಕೊಟ್ಟಿರುವ ಕಾಲದಿಂದ. ಕರ್ನಾಟಕದ ಶಾಸನಗಳಲ್ಲಿ ಹಲವು ಬಗೆಯ ಕಾಲಗಣನೆಯಿದೆ. ಅನೇಕ ಶಾಸನಗಳಲ್ಲಿ ಮುಖ್ಯವಾಗಿ 6ನೆಯ ಶತಮಾನಕ್ಕಿಂತ ಹಿಂದಿನ ಶಾಸನಗಳಲ್ಲಿ ಕೇವಲ ರಾಜನ ಆಳಿಕೆಯ ವರ್ಷಗಳನ್ನು ಮಾತ್ರ ಕೊಟ್ಟಿರುತ್ತದೆ. ಕೆಲವು ವೇಳೆ ಋತು, ಪಕ್ಷ, ತಿಥಿಗಳನ್ನು ತಿಳಿಸಿರುವುದುಂಟು. ಬನವಾಸಿಯ ಸಾತಕರ್ಣಿಯ ಶಾಸನದಲ್ಲಿ ರಾಜನ 12ನೆಯ ಆಳಿಕೆಯ ವರ್ಷದಲ್ಲಿ ಹೇಮಂತಋತು, ಏಳನೆಯ ಪಕ್ಷ, ಪ್ರಥಮ ದಿವಸದ ಉಲ್ಲೇಖವಿದೆ. ಮುಂದೆ ಇದರ ಬದಲು ಚೈತ್ರಾದಿ ಮಾಸಗಳನ್ನು ಶುಕ್ಲ–ಕೃಷ್ಣಪಕ್ಷಗಳನ್ನು ತಿಳಿಸುವುದೇ ಸಾಮಾನ್ಯ. ಪ್ರಾಚೀನ ಶಾಸನಗಳು ರಾಜರ ಆಳಿಕೆ ವರ್ಷವನ್ನು ಮಾತ್ರ ತಿಳಿಸುವುದರಿಂದ ಬೇರೆ ಆಧಾರಗಳಿಲ್ಲದೆ ಅವರ ಕಾಲವನ್ನು ನಿಗದಿಪಡಿಸುವುದು ಅಸಾಧ್ಯ. ಹಾಗೆಯೇ ಶಾಸನಗಳಲ್ಲಿ ಎಷ್ಟೋ ವೇಳೆ ಯಾವ ಶಕೆಯನ್ನೂ ತಿಳಿಸದೆ ಕೇವಲ ಚಾಂದ್ರಮಾನದ 60 ವರ್ಷಗಳ ಆವರ್ತ ಸಂವತ್ಸರದ ಹೆಸರು ಮಾತ್ರ ಕೊಟ್ಟಿದ್ದಾಗಲೂ ಕಾಲ ನಿರ್ಧಾರಕ್ಕೆ ಬೇರೆ ಆಧಾರಗಳು ಬೇಕು. ಕರ್ನಾಟಕದ ಶಾಸನಗಳಲ್ಲಿ ಬಾದಾಮಿ ಚಳುಕ್ಯರ ಕಾಲದಿಂದೀಚೆಗೆ ಸಾಮಾನ್ಯವಾಗಿ ಕಂಡುಬರುವುದು ಶಕಕಾಲ, ಎಂದರೆ ಈಚಿನ ಶಾಸನಗಳಲ್ಲಿ ತಿಳಿಸಿರುವ ಶಾಲಿವಾಹನ ಶಕವರ್ಷಗಳು. ಈ ಶಕಕಾಲ ಆರಂಭವಾಗುವುದು ಕ್ರಿ.ಶ. 78ರಲ್ಲಿ. ಇದನ್ನು ಆರಂಭಿಸಿದವನು ಕುಷಾಣ ಅರಸು ಕನಿಷ್ಕನೆಂದು ಭಾವಿಸಲಾಗಿದೆ. ಆದರೆ 6ನೆಯ ಶತಮಾನದವರೆಗೂ ಇದರ ಉಲ್ಲೇಖ ಕಂಡುಬರುವುದಿಲ್ಲ. ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಬಾದಾಮಿ ಚಳುಕ್ಯವಂಶದ ಒಂದನೆಯ ಪುಲಕೇಶಿ ಬಾದಾಮಿಯಲ್ಲಿ ಕೋಟೆಯನ್ನು ಕಟ್ಟಿಸಿದುದನ್ನು ತಿಳಿಸುವ ಶಾಸನಗಳಲ್ಲಿ ಶಕವರ್ಷೇಷು ಚತುಶ್ಶತೇಷು ಪಂಚಷಷ್ಟಿಯುತೇಷು ಎಂದು ಶಕಸಂವತ್ಸರವನ್ನು ತಿಳಿಸಿದೆ. ಇದು 543ಕ್ಕೆ ಸರಿಹೋಗುತ್ತದೆ. ಈ ಶಕಕಾಲದ ಜೊತೆಗೆ ಬೇರೆ ಶಕೆಗಳನ್ನು ತಿಳಿಸುವ ರೂಢಿಯೂ ಕೆಲವು ಶಾಸನಗಳಲ್ಲುಂಟು. ರವಿಕೀರ್ತಿಯು ರಚಿಸಿರುವ ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದಲ್ಲಿ ಶಕವರ್ಷದ ಜೊತೆಯಲ್ಲಿ ಮಹಾಭಾರತ ಯುದ್ಧಾನಂತರ 3,235ನೆಯ ವರ್ಷ ಎಂಬ ಅಪೂರ್ವ ಉಲ್ಲೇಖ ಇರುವುದೊಂದು ವಿಶೇಷ. ಈ ಶಕವರ್ಷದ ಜೊತೆಗೆ ಕಲಿಯುಗ ಸಂವತ್ಸರ ಆರಂಭವಾದುದು ಕ್ರಿ.ಪೂ. 3102ರಲ್ಲಿ. ಗೋವೆಯ ಕದಂಬರ ಶಾಸನಗಳಲ್ಲಿ ಇದರ ಬಳಕೆ ಹೆಚ್ಚು. ಕೊಡಗಿನ ರಾಜರ ಕೆಲವು ಶಾಸನಗಳಲ್ಲಿ ಕಲಿವರ್ಷದ ಬದಲು ಕಲಿದಿನಗಳನ್ನು ಕೊಡುವ

ಅಪೂರ್ವ ದಾಖಲೆ ಉಂಟು. ಅಪರೂಪವಾಗಿಯಾದರೂ ಕರ್ನಾಟಕದ ಕೆಲವು ಶಾಸನಗಳಲ್ಲಿ ಉತ್ತರ ಭಾರತದಲ್ಲಿ ಪ್ರಚಲಿತವಿರುವ ವಿಕ್ರಮ ಶಕೆಯ ಕಾಲ ಕೊಟ್ಟಿದೆ. ಈ ವಿಕ್ರಮ ಸಂವತ್ ಕಲಿಕಾಲ 3044ರ ಅನಂತರ ಆರಂಭವಾಯಿತೆಂದು ಹೇಳಲಾಗಿದೆ. ಕ್ರಿ.ಪೂ. 57 ಅಥವಾ 56ರಿಂದ ಈ ಕಾಲಗಣನೆಯನ್ನಾರಂಭಿಸಲಾಗುತ್ತದೆ. ಈ ವಿಕ್ರಮವರ್ಷ ಕರ್ನಾಟಕದಲ್ಲಿ ಆರಂಭವಾಗುವುದು ಕಾರ್ತಿಕ ಶುದ್ಧ 1ರಂದು. ಕಲ್ಯಾಣ ಚಾಳುಕ್ಯರ ಕಾಲದಲ್ಲಿ 6ನೆಯ ವಿಕ್ರಮಾದಿತ್ಯ ತಾನು ಪಟ್ಟಕ್ಕೆ ಬಂದ ವರ್ಷದಿಂದ ಎಂದರೆ 1076ರಿಂದ ಶಕೆಯೊಂದನ್ನಾರಂಭಿಸಿದ. ಚಾಳುಕ್ಯ ವಿಕ್ರಮಶಕೆ ಎಂದು ಕರೆಯಲಾದ ಈ ಕಾಲಗಣನೆಯು ಅಲ್ಲಿಂದ ಮುಂದೆ ಕಲ್ಯಾಣ ಚಾಳುಕ್ಯರ ಬಹುತೇಕ ಶಾಸನಗಳಲ್ಲಿಯೂ ಅವರ ಸಾಮಂತರ ಹಲವು ಶಾಸನಗಳಲ್ಲಿಯೂ ಕಂಡುಬರುತ್ತದೆ. ಇದನ್ನನುಕರಿಸಿ ಹೊಯ್ಸಳ ಇಮ್ಮಡಿ ಬಲ್ಲಾಳನೂ ಸ್ವತಂತ್ರವಾಗಿ ಆಳಲಾರಂಭಿಸಿದ. 1191–92ರಿಂದ ವೀರಬಲ್ಲಾಳ ಶಕೆಯನ್ನಾರಂಭಿಸಿದರೂ ಅದು ಹೆಚ್ಚುಕಾಲ ಬಳಕೆಯಲ್ಲುಳಿಯಲಿಲ್ಲ. ಶ್ರವಣಬೆಳಗೊಳದ ಕೆಲವು ಇತ್ತೀಚಿನ ತಮಿಳು ಶಾಸನಗಳಲ್ಲಿ ಶಾಲಿವಾಹನ ಶಕೆಯೊಂದಿಗೆ ಮಹಾವೀರ ಶಕೆಯನ್ನೂ ತಿಳಿಸಿದೆ. ಶಾಲಿವಾಹನ ಶಕೆ 1778ಕ್ಕೆ ಸಮನಾದ ಮಹಾವೀರ ಶಕೆ 2519 ಎಂದು ಹೇಳಿದೆ. ಮೊದಲಿನ ಶಾಸನಗಳಲ್ಲಿ ತೇದಿಯ ವಿವರಗಳು ಹೆಚ್ಚಾಗಿಲ್ಲದಿದ್ದರೂ ಅನಂತರದ ಶಾಸನಗಳಲ್ಲಿ ಶಕವರ್ಷ, ಆವರ್ತ ಸಂವತ್ಸರ, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ವ್ಯತೀಪಾತ, ಗ್ರಹಣ ಮುಂತಾದ ಎಲ್ಲ ವಿವರಗಳನ್ನೂ ಕೊಟ್ಟಿರುವುದುಂಟು. ಪರ್ಷಿಯನ್ ಶಾಸನಗಳಲ್ಲಿ ಸಾಮಾನ್ಯವಾಗಿ ಹಿಜಿರೆಯನ್ನು ಕೊಟ್ಟಿರುತ್ತದೆ. ಆದರೆ ಟಿಪ್ಪುಸುಲ್ತಾನನು 1786ರಿಂದ ಮೌಲೂದಿ ಶಕೆಯೊಂದನ್ನಾರಂಭಿಸಿದ. ಇದರಲ್ಲಿ 60 ವರ್ಷಗಳ ಆವರ್ತ ಸಂವತ್ಸರಗಳನ್ನು ಉಪಯೋಗಿಸಿದರೂ ಆ ಸಂವತ್ಸರಗಳಿಗೆ ತನ್ನದೇ ಆದ ಜಕಿ, ಅಜಲ್, ಜಲವ್, ದಲವ್ ಮೊದಲಾದ ತಾನೇ ಸೃಷ್ಟಿಸಿದ ಹೆಸರುಗಳನ್ನು ಕೊಟ್ಟ. ಈ ಶಕೆ ಮಹಮ್ಮದ್ ಪೈಗಂಬರ್ ಹುಟ್ಟಿದ ಕ್ರಿ.ಶ. 572ರಿಂದ ಎಣಿಸಲಾಗುವ ಸೌರ–ಚಾಂದ್ರಮಾನ.

**ಇತಿಹಾಸ ಅಧ್ಯಯನಕ್ಕೆ ಶಾಸನಗಳ ಕೊಡುಗೆ:** ಸತ್ಯಾಂಶಕ್ಕೆ ಸಾಧ್ಯವಾದಷ್ಟು ಧಕ್ಕೆಬಾರದಂತೆ ಭದ್ರ ಬುನಾದಿಯ ಮೇಲೆ ಇತಿಹಾಸವನ್ನು, ರಚಿಸುವ ವೈಚಾರಿಕ ಬರೆವಣಿಗೆ ಅಥವಾ ಇತಿಹಾಸಪ್ರಜ್ಞೆ ಭಾರತದ ಇತರೆಡೆಗಳಂತೆ ಕರ್ನಾಟಕದಲ್ಲಿಯೂ ಇತ್ತೀಚಿನವರೆಗೂ ಇರಲಿಲ್ಲವೆಂದೇ ಹೇಳಬೇಕು. ಬಿಲ್ಹಣನ ವಿಕ್ರಮಾಂಕದೇವಚರಿತ, ಗಂಗಾಂಬಿಕೆಯ ಅಚ್ಯುತ ರಾಯಾಭ್ಯುದಯ, ತಿರುಮಲಾರ್ಯನ ಅಪ್ರತಿಮವೀರಚರಿತೆಗಳಂಥ ತಮ್ಮ ರಾಜರ ಬಗೆಗೆ ಮೆಚ್ಚಿಕೊಂಡು ಬರೆದ ಕೆಲವು ಗ್ರಂಥಗಳುಂಟು. ತಮ್ಮ ಆಶ್ರಯದಾತರ ಬಗೆಗೆ ಕೆಲವು ವಿವರಗಳನ್ನು ಕವಿಗಳು ತಮ್ಮ ಕಾವ್ಯಗಳ ಆರಂಭದಲ್ಲಿ ತಿಳಿಸಿರುವುದುಂಟು. ಪಂಪ, ರನ್ನರಂಥವರು ತಮ್ಮ ರಾಜರ ವಿಷಯವನ್ನು ಮೂಲ ಕಥೆಯಲ್ಲಿಯೇ ಹಾಸುಹೊಕ್ಕಾಗಿ ತೂರಿಸಿರುವುದುಂಟು. ಆದರೆ ಅವುಗಳಲ್ಲೆಲ್ಲ ಅಗ್ಗಳಿಕೆಯ ಮಾತುಗಳು ಯಾವುವು, ಇತಿಹಾಸದ ವಿವರಗಳು ಯಾವುವು ಎಂದು ವಿಂಗಡಿಸಲು ಬೇರೆ ಆಧಾರಗಳೇ ಬೇಕು. ಇಂಥ ಬರೆವಣಿಗೆಯೂ ಕೂಡ ಈಗ ಉಳಿದು ಬಂದಿರುವುದು ಅತ್ಯಲ್ಪ. ಮುಸ್ಲಿಂ ಆಳಿಕೆಯಲ್ಲಿ ಚಾರಿತ್ರಿಕ ವಿವರಗಳನ್ನು ಬರೆದಿಡುವ ಪದ್ಧತಿ ತಕ್ಕಮಟ್ಟಿಗೆ ಪ್ರಚಾರಕ್ಕೆ ಬಂತು. ಅದರಿಂದಲೇ ಮೊದಮೊದಲು ಪಾಶ್ಚಾತ್ಯ ವಿದ್ವಾಂಸರು ಈ ದೇಶದಲ್ಲಿ ಐದಾರು ಶತಮಾನಗಳಿಗಿಂತ ಹಿಂದೆ ಹೋದರೆ ಚರಿತ್ರೆಗೆ ಬೇಕಾದ ವಿವರಗಳು ದೊರೆಯದೆಂಬ ಭಾವನೆ ತಳೆದಿದ್ದರು. ಈ ದೃಷ್ಟಿಯಿಂದ ನೋಡಿದಾಗ ನಾಡಿನ ಎಲ್ಲ ಭಾಗಗಳಲ್ಲಿಯೂ ಹರಡಿರುವ ಸಹಸ್ರಾರು ಶಾಸನಗಳು ಇತಿಹಾಸದ ಅಧ್ಯಯನಕ್ಕೆ ಎಷ್ಟು ಅಮೂಲ್ಯವೆಂಬುದನ್ನು ಮನಗಾಣಬಹುದು.

ಶಾಸನಗಳಲ್ಲಿರುವ ವಿಷಯವೈವಿಧ್ಯ ವಿಪುಲವಾದುದು. ಸಾಮಾನ್ಯವಾಗಿ ರಾಜರೋ ಅವರ ಅಧಿಕಾರಿಗಳೋ ಶಾಸನಗಳನ್ನು ಹಾಕಿಸುತ್ತಿದ್ದುದರಿಂದ ಅವುಗಳಲ್ಲಿ ಆಯಾ ರಾಜರ ಬಗೆಗೆ ಅವರ ಪೀಳಿಗೆಯ ಬಗೆಗೆ ವಿವರಗಳಿರುತ್ತವೆ. ಇತರರು ಶಾಸನಗಳನ್ನು ಹಾಕಿಸಿದಾಗಲೂ ಆಗ ಆಳುತ್ತಿದ್ದ ತಮ್ಮ ರಾಜರ ಹೆಸರು ಇತರ ವಿವರಗಳಿರುವುದುಂಟು.



ಕೀರ್ತಿವರ್ಮನ ವಕ್ಕಲೇರಿ ತಾಮ್ರಶಾಸನದ ಮೊದಲ ಹಲಗೆ

ಆದ್ದರಿಂದ ರಾಜಮನೆತನಗಳ ರಾಜರ, ಅವರ ಸಾಮಂತರ, ಅಧಿಕಾರಿಗಳ ಇತಿಹಾಸವನ್ನರಿಯಲು ಈ ಶಾಸನಗಳು ಮೂಲಾಧಾರವಾಗುತ್ತವೆ. ಹಾಗೆಯೇ ಆಡಳಿತಪದ್ಧತಿ ಆಡಳಿತ ಸೂತ್ರಗಳನ್ನು ಹಿಡಿದ ಅಧಿಕಾರಿಗಳ, ಅಧಿಕಾರಸ್ಥಾನಗಳ ಹೆಸರುಗಳು, ಅವರ ಅಧಿಕಾರವ್ಯಾಪ್ತಿ, ಒಬ್ಬೊಬ್ಬ ಅಧಿಕಾರಿಗೂ ಗೊತ್ತುಪಡಿಸಿದ್ದ ಕೆಲಸ, ಇದರಂತೆಯೇ ವ್ಯಾಪಾರ, ವ್ಯವಹಾರ, ವ್ಯಾಪಾರಿ ಸಂಘಗಳು ಅವುಗಳ ಪ್ರಾಬಲ್ಯ, ಸುಂಕಸಾರಿಗೆಗಳು, ಭೂಸ್ವಾಮ್ಯ, ವೃತ್ತಿಪದ್ಧತಿಗಳು, ಆರ್ಥಿಕ ಸ್ಥಿತಿಗತಿ, ಮತ, ಬೇರೆ ಬೇರೆ ಮತಗಳ ನಡುವೆ ಇದ್ದ ಸೌಹಾರ್ದ ವೈಷಮ್ಯಗಳು, ದೇವಾಲಯ, ಬಸದಿ, ಮಠಗಳು ಅವುಗಳಿಗೆ ನಡೆಯುತ್ತಿದ್ದ ದಾನಧರ್ಮದತ್ತಿಗಳು, ಅವುಗಳ ಜೀರ್ಣೋದ್ಧಾರ, ಪೂಜೆಪುನಸ್ಕಾರಗಳು, ಮೇಲ್ವಿಚಾರಣೆ, ಸತ್ರಗಳು, ವಿದ್ಯಾಕೇಂದ್ರಗಳು, ಸಾಮಾಜಿಕ ರೀತಿನೀತಿ, ನಾಡಿನ ಜನಜೀವನ, ಊರುಗ್ರಾಮಗಳ ವಿವರ, ಕುಲಕಸಬು, ಧಾರ್ಮಿಕ ವಿಧಿಗಳು, ಸಂಸ್ಕೃತಿ–ಹೀಗೆ ನಾಡಿನ ಯಾವ ಬಗೆಯ ಇತಿಹಾಸವೇ ಆಗಲಿ ಅವಕ್ಕೆ ಶಾಸನಗಳಲ್ಲಿ ವಿವರಗಳು ದೊರೆಯುತ್ತವೆ.

ಕೇವಲ ಇತಿಹಾಸವನ್ನೇ ತಿಳಿಸಹೊರಟಿರುವ ಶಾಸನಗಳು ಬಹುಕಡಿಮೆ. ಕರ್ನಾಟಕದಲ್ಲಂತೂ ಇಲ್ಲವೆಂದೇ ಹೇಳಬಹುದು. ಆದರೆ ಯಾವುದೇ ಉದ್ದೇಶದಿಂದ ಶಾಸನಗಳನ್ನು ಹಾಕಿಸಿದ್ದರೂ ಅವುಗಳಲ್ಲಿ ಒಂದಲ್ಲ ಒಂದು ರೀತಿಯ ಐತಿಹಾಸಿಕ ವಿಷಯಗಳು ಸೇರಿಕೊಂಡಿರುತ್ತವೆ. ಆ ಶಾಸನಗಳ ಮೂಲ ಉದ್ದೇಶಕ್ಕಿಂತ ಅವುಗಳಲ್ಲಿ ಪ್ರಾಸಂಗಿಕವಾಗಿ ಬರುವ ವಿವರಗಳು ಇತಿಹಾಸದ ಬಗೆಗೆ ನಮಗೆ ಅಮೂಲ್ಯವಾದ ವಿವರಗಳನ್ನೊದಗಿಸುತ್ತವೆ. ಇಮ್ಮಡಿ ಪುಲಕೇಶಿಯ ಐಹೊಳೆಯ ಶಾಸನದ ಉದ್ದೇಶ ರವಿಕೀರ್ತಿಯು ಐಹೊಳೆಯಲ್ಲಿ ಜಿನಾಲಯವೊಂದನ್ನು ಕಟ್ಟಿಸುವುದಾದರೂ ಅದರ ಆರಂಭದಲ್ಲಿ ಪುಲಕೇಶಿಯು ನಡೆಸಿದ ದಿಗ್ವಿಜಯಗಳನ್ನು ಕ್ರಮವಾಗಿ ವಿವರವಾಗಿ ಕೊಟ್ಟಿದೆ. ಪ್ರಾಸಂಗಿಕವಾಗಿ ಈ ಶಾಸನದ ಕವಿ ರವಿಕೀರ್ತಿ ತನ್ನನ್ನು ಕಾಳಿದಾಸ ಭಾರವಿಗಳೊಂದಿಗೆ ಹೋಲಿಸಿಕೊಂಡಿರುವುದರಿಂದ ಕಾಳಿದಾಸನ ಇತ್ತೀಚಿನ ಕಾಲಮಿತಿ ನಿರ್ಧಾರವಾದಂತಾಗುತ್ತದೆ.

ಶಾಸನಗಳ ಸಂಗ್ರಹಣೆಗೆ ಮೊದಲು ಸುಮಾರು 14ನೆಯ ಶತಮಾನದಿಂದೀಚಿನ ಚರಿತ್ರೆ ಮಾತ್ರ ತಕ್ಕಮಟ್ಟಿಗೆ ಗೊತ್ತಿದ್ದು ರೈಸ್ ತಿಳಿಸಿರುವಂತೆ

ಶಾಸನಗಳನ್ನು ಸಂಗ್ರಹಿಸಿ ಅಭ್ಯಾಸ ನಡೆಸಿದುದರಿಂದ ಕರ್ನಾಟಕದ ಇತಿಹಾಸ ಕ್ರಿ.ಪೂ. 3ನೆಯ ಶತಮಾನಕ್ಕಿಂತಲೂ ಹಿಂದಿನಿಂದಲೇ ಗುರುತಿಸಲು ಸಾಧ್ಯವಾಯಿತು. ಇಲ್ಲಿ ದೊರೆತ ಅಶೋಕನ ಶಾಸನಗಳಿಂದ ಕರ್ನಾಟಕದ ಅರ್ಧ ಭಾಗಕ್ಕೂ ಹೆಚ್ಚು ಮೌರ್ಯ ಚಕ್ರಾಧಿಪತ್ಯಕ್ಕೆ ಸೇರಿದ್ದುದು ನಿಶ್ಚಿತವಾಯಿತು. ಅನಂತರ ಇಲ್ಲಿ ಆಳಿದ ಸಾತವಾಹನರು ಅವರ ಸಾಮಂತರಾದ ಚುಟು ಅರಸರು, ಕದಂಬರ ಹುಟ್ಟು ಬೆಳೆವಣಿಗೆ, ಗಂಗರ ದೀರ್ಘಕಾಲದ ಆಳಿಕೆ, ಬಾದಾಮಿ ಚಳುಕ್ಯರ, ರಾಷ್ಟ್ರಕೂಟರ ವೈವಿಧ್ಯಮಯ ಆಡಳಿತ, ಕಲ್ಯಾಣದ ಚಾಳುಕ್ಯ, ಸೇವುಣ, ಹೊಯ್ಸಳ ವಂಶಗಳ ಅರಸರಿಗೆ ಸಂಬಂಧಿಸಿದಂತೆ, ಇತರ ಸಣ್ಣಪುಟ್ಟ ರಾಜವಂಶಗಳನ್ನು ಕುರಿತಂತೆ ಅನೇಕ ವಿವರಗಳು ಶಾಸನಗಳ ಅಧ್ಯಯನದಿಂದ ಬೆಳಕಿಗೆ ಬಂದುವು. ಹೀಗೆ ಬೇರೆ ರೀತಿಯಲ್ಲಿ ದೊರೆಯದ ಚಾರಿತ್ರಿಕ ವಿವರಗಳನ್ನು ತುಂಡುತುಂಡಾಗಿ ಸ್ವಲ್ಪಸ್ವಲ್ಪವಾಗಿ ಬೇರೆ ಬೇರೆ ಶಾಸನಗಳಿಂದ ಆಯ್ದು ಕೊಂಡು ಕ್ರಮವರಿತು ಜೋಡಿಸಿ ಇತಿಹಾಸ ರಚನೆ ಮಾಡಬೇಕಾಗುತ್ತದೆ. ಆದರೆ ಇಲ್ಲಿಯೂ ಎಚ್ಚರಿಕೆ ಅಗತ್ಯ. ಆಯಾ ಕಾಲದಲ್ಲಿಯೇ, ಆಗತಾನೇ ನಡೆದ ಘಟನೆಗಳನ್ನೇ ಯಥಾವತ್ತಾಗಿ ಬರೆದಿಟ್ಟಿರಬಹುದೆಂಬ ವಿಶ್ವಾಸಕ್ಕೆ ಪಾತ್ರವಾಗಿರುವ ಈ ಶಾಸನಗಳಲ್ಲಿಯೂ ಕುಂದುಗಳಿಲ್ಲದೆ ಇಲ್ಲ. ಸಾಮಾನ್ಯವಾಗಿ ಯಾವ ಶಾಸನವೂ ಒಬ್ಬ ವ್ಯಕ್ತಿಯ ವಿಚಾರದಲ್ಲಾಗಲಿ ಒಂದು ಘಟನೆಯ ವಿಚಾರದಲ್ಲಾಗಲಿ ಪೂರ್ಣವಾದ ಮತ್ತು ಖಚಿತವಾದ ವಿವರಗಳನ್ನು ಕೊಡುವುದಿಲ್ಲ. ಅನೇಕ ವೇಳೆ ಶಾಸನಗಳು ಕಿರಿದಾಗಿರುವುದ ರಿಂದ ಅವುಗಳಲ್ಲಿ ವಿವರಗಳಿರುವುದಿಲ್ಲ. ದೀರ್ಘಶಾಸನಗಳಲ್ಲಾದರೂ ಗ್ರಂಥಗಳಲ್ಲಿ ದೊರೆಯಬಹುದಾದಷ್ಟು ವಿವರಗಳನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಅವುಗಳಲ್ಲಿಯೂ ಇತಿಹಾಸಕ್ಕೆ ಸಂಬಂಧಿಸಿದ ವಿವರಗಳು ಕಡಿಮೆಯೇ ಇರುವುದುಂಟು. ಕಾವ್ಯಮಯವಾದ ಅನೇಕ ದೀರ್ಘ ಶಾಸನಗಳಲ್ಲಿ ಕವಿ ತನ್ನ ರಾಜನ ಗುಣಾತಿಶಯಗಳನ್ನು ಆಲಂಕಾರಿಕವಾಗಿಯೋ ಉತ್ಪ್ರೇಕ್ಷಿತವಾಗಿಯೋ ವರ್ಣಿಸಿರುವುದೇ ಹೆಚ್ಚು. ಇಂಥ ಸಂದರ್ಭಗಳಲ್ಲಿ ಆ ಶಾಸನಗಳಲ್ಲಿ ರಾಜರ, ಸಾಮಂತರ, ದಾನಿಗಳ ವಂಶಾವಳಿಯನ್ನು ಕೊಟ್ಟಿದ್ದರೂ ಹಿಂದಿನ ಪೀಳಿಗೆಯ ಬಗೆಗೆ ಕೇವಲ ಹೆಸರುಗಳನ್ನು ಬಿಟ್ಟರೆ ಇತರ ವಿವರಗಳು ಅತ್ಯಲ್ಪ. ಈ ವಂಶಾವಳಿಗಳು ದೀರ್ಘವಾಗಿರುವ ಸಂದರ್ಭದಲ್ಲಿ ಶಾಸನ ರಚಿಸಿದವನಿಗೆ ಪಟ್ಟಾವಳಿಗಳೋ ರಾಜಾವಳಿಗಳೋ ದೊರಕುತ್ತಿದ್ದಿರಬೇಕು. ಶಿವಮೊಗ್ಗ ಜಿಲ್ಲೆಯ 11ನೆಯ ಶತಮಾನದ ಕೆಲವು ಶಾಸನಗಳು ಗಂಗವಂಶದ ದೀರ್ಘ ಇತಿಹಾಸವನ್ನು ಗುರುತಿಸಿವೆ. ಆರಂಭದ ಕೆಲವು ವಿವರಗಳನ್ನು ಬಿಟ್ಟರೆ ಅವು ಗಂಗರ ಬೇರೆ ಬೇರೆ ತಾಮ್ರಶಾಸನಗಳಲ್ಲಿ ಬರುವ ಪೀಳಿಗೆಯನ್ನು ಬಹುಮಟ್ಟಿಗೆ ಹೋಲುತ್ತವೆ. ತಮಗೆ ದೊರೆತ ರಾಜಾವಳಿಗಳನ್ನು ನೋಡಿಯೇ ಶಾಸನ ಕರ್ತೃಗಳು ಇಂಥ ವಿವರಗಳನ್ನು ರಚಿಸಿರಬೇಕು. ಇದೇ ರೀತಿ ಶ್ರವಣ ಬೆಳಗೊಳದಲ್ಲಿ, ಹುಂಚದಲ್ಲಿ ಕೆಲವು ಶಾಸನಗಳು ಕೊಡುವ ದೀರ್ಘವಾದ ಗುರುಪರಂಪರೆಗಳನ್ನೂ ನೋಡಬಹುದು. ಹತ್ತು ಹನ್ನೊಂದನೆಯ ಶತಮಾನಗಳ ಹೊತ್ತಿಗೆ ಎಲ್ಲ ರಾಜಮನೆತನಗಳೂ ತಮ್ಮ ವಂಶಗಳನ್ನು ಪೌರಾಣಿಕ ರಾಜವಂಶಗಳೊಡನೆ ಸೇರಿಸಿಕೊಳ್ಳುವ ಹವ್ಯಾಸ ಬೆಳೆಸಿ ಕೊಂಡರು. ಅಂಥವರ ಶಾಸನಗಳಲ್ಲಿ ವಂಶಾವಳಿ ಬ್ರಹ್ಮನಿಂದಲೋ ಚಂದ್ರನಿಂದಲೋ ಬುಧನಿಂದಲೋ ಬೆಳೆದು ಬಂದಿರುತ್ತದೆ. ವಂಶದ ಹೆಸರಿನ ಬಗೆಗೆ ಅನುಕೂಲವಾದ ದಂತಕಥೆಗಳನ್ನು ಸೃಷ್ಟಿಸುವುದೂ ಉಂಟು. ಹೊಯ್ಸಳ ಎಂಬುದಕ್ಕೆ ಮುನಿಯೊಬ್ಬನು ಹುಲಿಯು ಮೇಲೆಗರಿದಾಗ ಸಳನನ್ನು ಕುರಿತು ಹೊಯ್ಸಳ ಎಂದು ಹೇಳಿದ್ದರಿಂದ ಅದೇ ವಂಶದ ಹೆಸರಾಯಿತು ಎಂದು ವಿಷ್ಣುವರ್ಧನನ ಅನಂತರದ ಶಾಸನಗಳು ವಿವರಣೆ ಕೊಡುವುದನ್ನು ನೋಡಬಹುದು. ರಾಜರುಗಳ ಆಸ್ಥಾನದಲ್ಲಿದ್ದ ಕವಿಗಳು ಶಾಸನಗಳನ್ನು ರಚಿಸುತ್ತಿದ್ದುದರಿಂದ ತಮ್ಮ ರಾಜರ ಬಗೆಗೆ ಅವರು ನಡೆಸದೇ ಇದ್ದ ಸಾಹಸಕಾರ್ಯಗಳನ್ನು ವರ್ಣಿಸುವುದೂ ಉಂಟು. ಮಹಾಕೂಟದ ಸ್ತಂಭಶಾಸನದಲ್ಲಿ ಒಂದನೆಯ ಕೀರ್ತಿವರ್ಮನ ವಂಗ, ಅಂಗ, ಕಳಿಂಗ, ವಟ್ಟೂರ, ಮಗಧ, ಮದ್ರಕ, ಕೇರಳ, ಗಂಗ, ಮೂಷಕ, ಪಾಂಡ್ಯ, ದ್ರಮಿಳ, ಚೋಳಿಯ, ಆಲುಕ, ವೈಜಯಂತಿಗಳನ್ನು ಗೆದ್ದಂತೆ ತಿಳಿಸಿರುವುದು ಕೇವಲ ಉತ್ಪ್ರೇಕ್ಷೆ ಎನ್ನುವುದು ಸ್ಪಷ್ಟ. ಚಿಕ್ಕಪುಟ್ಟ ತುಂಡರಸರೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗಿನ ಭೂಭಾಗಕ್ಕೆ ಒಡೆಯರಾಗಿದ್ದಂತೆ ವರ್ಣಿಸಿರುವ ಶಾಸನಗಳೂ ಅಪರೂಪವೇನಲ್ಲ. ಪ್ರಾಚೀನ ಶಾಸನಗಳಲ್ಲಿ ಕಾಲವನ್ನೇ ಕೊಡುವುದಿಲ್ಲ. ಕೊಟ್ಟರೂ ರಾಜರ ಆಳಿಕೆಯ ವರ್ಷವನ್ನು ಮಾತ್ರ ತಿಳಿಸುವುದರಿಂದ ಬೇರೆ ಆಧಾರಗಳಿಲ್ಲದೆ ಅವರ ಕಾಲವನ್ನು ಖಚಿತವಾಗಿ ನಿರ್ಧರಿಸಲಾಗುವುದಿಲ್ಲ. ಗಂಗರಲ್ಲಿ ಒಂದನೆಯ ಶಿವಮಾರನಿಗಿಂತ ಹಿಂದಿನ ತಾಮ್ರಶಾಸನಗಳಲ್ಲಿ ಯಾವ ಒಂದು ಶಕೆಯನ್ನೂ ತಿಳಿಸದೆ ಕೇವಲ ಆಳ್ವಿಕೆಯ ವರ್ಷ ಮಾತ್ರ ಇರುತ್ತದೆ. ಇವರ ಕೆಲವು ತಾಮ್ರಶಾಸನಗಳಲ್ಲಿ ಶಕಕಾಲವನ್ನು ಕೊಟ್ಟಿದ್ದರೂ ಅವು ಕೂಟಶಾಸನಗಳೆಂದು ಸ್ಪಷ್ಟಪಟ್ಟಿದೆ. ಮುಂದೆ ಶಾಸನಗಳಲ್ಲಿ ಗೊತ್ತಾದ ಶಕೆಯನ್ನು ತಿಳಿಸುವ ಪದ್ಧತಿ ಬಂದ ಮೇಲೂ ಎಷ್ಟೋ ವೇಳೆ ಅವುಗಳನ್ನು ತಾಳೆನೋಡಲು ಆಗುವುದಿಲ್ಲ. ಹೀಗೆ ಶಾಸನಾಧಾರಗಳಿಂದ ರಾಜಕೀಯ ಇತಿಹಾಸವನ್ನು ಅಧ್ಯಯನ ಮಾಡುವಲ್ಲಿ ಕೆಲವು ತೊಡಕುಗಳು ಬರಬಹುದಾದರೂ ಅವುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಗಟ್ಟಿಯಾದ ವಿಷಯುಗಳನ್ನಾಯ್ದು ಒಂದಕ್ಕೊಂದು ತಾಳೆ ನೋಡಿ ಹೊಂದಿಕೆಯಾಗುವಂತೆ ಜೋಡಿಸುತ್ತ ಹೋದಲ್ಲಿ ಸುಸಂಬದ್ಧವಾದ ಇತಿಹಾಸ ರಚನೆ ಸಾಧ್ಯವಾಗುವಷ್ಟು ವಿಪುಲವಾದ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. (ಎಂ.ಎಚ್.)

**ಶಾಸ್ತ್ರಿ, ಎಸ್.ಜಿ.:** ಸು. 1890–1955. ಹೊಸಗನ್ನಡ ಅರುಣೋದಯ ಕಾಲದ ಕತೆಗಾರರು, ನಾಟಕಕಾರರು. ಸೋಸಲೆ ಗರಳಪುರಿ ಶಾಸ್ತ್ರಿ ಇವರ ಪೂರ್ಣ ಹೆಸರು. ಹೆಸರಾಂತ ವಿದ್ವಾಂಸರಾದ ಕವಿತಿಲಕ ಸೋಸಲೆ ಅಯ್ಯಶಾಸ್ತ್ರಿಗಳ ಮಕ್ಕಳಾದ ಇವರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದು, ಉನ್ನತ ವ್ಯಾಸಂಗಕ್ಕೆಂದು 1913ರಲ್ಲಿ ಇಂಗ್ಲೆಂಡಿಗೆ ಹೋದರು. ಅಲ್ಲಿಯ ನಾಟಿಂಗ್‌ಹ್ಯಾಂನಲ್ಲಿ ರಸಾಯನಶಾಸ್ತ್ರ ದಲ್ಲಿ ಹೆಚ್ಚಿನ ವ್ಯಾಸಂಗಮಾಡಿ ಎಂ.ಎಸ್‌ಸಿ. ಪದವಿಯನ್ನು ಬಂಗಾರದ ಪದಕದೊಂದಿಗೆ ಗಳಿಸಿಕೊಂಡರು. 1918ರಲ್ಲಿ ತಾಯಿನಾಡಿಗೆ ಹಿಂದಿರುಗಿದ ಇವರು ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆಯ ಮುಖ್ಯಾಧಿಕಾರಿಗ ಳಾಗಿ ನೇಮಕಗೊಂಡು ಕಾರ್ಖಾನೆಯ ಅಭಿವೃದ್ಧಿಗಾಗಿ ಶ್ರಮಿಸಿದರು. ಅನಂತರ ಸರ್ಕಾರದ ವಾಣಿಜ್ಯೋದ್ಯಮ ಇಲಾಖೆಯ ನಿರ್ದೇಶಕರಾಗಿ ಕೆಲಸಮಾಡಿ 1944ರಲ್ಲಿ ನಿವೃತ್ತರಾದರು. ಲಂಡನ್‌ನಲ್ಲಿ 1924ರಲ್ಲಿ ನಡೆದ ಬ್ರಿಟಿಷ್ ಸಾಮ್ರಾಜ್ಯ ವಸ್ತುಪ್ರದರ್ಶನದಲ್ಲಿ ಇವರು ಭಾರತವನ್ನು ಪ್ರತಿನಿಧಿಸಿ ದ್ದರು. ಮೈಸೂರು ಕಾಗದದ ಕಾರ್ಖಾನೆ, ಅರಗುಬಣ್ಣಗಳ ಕಾರ್ಖಾನೆ ಈ ಮುಂತಾದ ಕಾರ್ಖಾನೆಗಳು ಆರಂಭಗೊಳ್ಳಲೂ ಇವರು ಶ್ರಮಿಸಿದ್ದಾರೆ.

ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪರಿಶ್ರಮವನ್ನು ಸಂಪಾದಿಸಿ ಕೊಂಡಿದ್ದ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರಿನ ಅಮೆಚೂರ್ ಡ್ರಮ್ಯಾಟಿಕ್ ಅಸೋಸಿಯೇಷನ್ ಸಂಘದ ಕಾರ್ಯಕಲಾಪಗ ಳಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದರಲ್ಲದೆ ಸಾಹಿತ್ಯಸೃಷ್ಟಿಯನ್ನೂ ಮಾಡಿದ್ದಾರೆ. ಇದ್ದರೂ ಇರಬಹುದು (1946), ಪರಪುರುಷ (1954) ಇವು ಇವರು ಪ್ರಕಟಿಸಿರುವ ಎರಡು ಕಥಾಸಂಗ್ರಹಗಳು. ಕಣ್ಣುಬಿಚ್ಚಾಲೆ (1954) ಮೂರು ಏಕಾಂಕ ನಾಟಕಗಳ ಸಂಗ್ರಹ. ಇವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿ

ರುವ ಈ ನಾಟಕಗಳು ತುಂಬ ಜನಪ್ರಿಯವಾಗಿವೆ: ಸಾಕ್ರೆಟೀಸನ ಮರಣ (ಲಾರೆನ್ಸ್‌ಹೌಸ್‌ಮನ್‌ನ ದಿ ಡೆತ್ ಆಫ್ ಸಾಕ್ರಟೀಸ್, 1932), ಆರ್ಯಕ (ಹೆನ್ರಿಕ್ ಇಬ್ಸನ್‌ನ ಡಾಲ್ಸ್ ಹೌಸ್ 1936), ಮೊನ್ನವನ್ನ (ಮಾರಿಸ್ ಮ್ಯಾಟರ್‌ಲಿಂಕ್‌ನ ನಾಟಕ, 1952), ಲಿಯೊನಾರ್ಡಾ (ಬಯೋರ್ನ್‌ಸನ್‌ನ ನಾಟಕ, 1955). **(ಎಚ್.ಕೆ.ಆರ್.)**

**ಶಾಸ್ತ್ರಿ, ಬಿ.ವಿ.ಕೆ.:** 1916– . ಪ್ರಸಿದ್ಧ ಕಲಾ ವಿಮರ್ಶಕ, ಸಾಹಿತಿ. ಸಾಹಿತ್ಯ ಕ್ಷೇತ್ರದಲ್ಲಿ ಇವರ ಕಾವ್ಯನಾಮ ಮುರಳಿ. ಇವರು ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ 1916ರಲ್ಲಿ ಜನಿಸಿದರು. ತಂದೆ ವೆಂಕಟ ಸುಬ್ಬಯ್ಯ, ತಾಯಿ ಸುಬ್ಬಮ್ಮ. ಮನೆಯಲ್ಲಿದ್ದ ಸಂಗೀತದ ವಾತಾವರಣ ಹಾಗೂ ಊರಿನ ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಪ್ರತಿಧ್ವನಿಸುತ್ತಿದ್ದ ಜನಪದ ಗೀತೆಗಳ ಸೊಗಡಿಗೆ ಮನಸೋತು ಬಾಲ್ಯದಿಂದಲೇ ಶಾಸ್ತ್ರೀಯ ಹಾಗೂ ಜನಪದ ಸಂಗೀತದಲ್ಲಿ ಆಸಕ್ತಿ ಬೆಳೆಸಿಕೊಂಡರು. ಮಾಧ್ಯಮಿಕ ಶಾಲೆಯಲ್ಲಿರುವಾಗಲೇ ಉಪಾಧ್ಯಾಯರಾಗಿದ್ದ ಎನ್. ಸುಬ್ಬರಾಮಯ್ಯನವರ ಪ್ರಭಾವದಿಂದ ಇವರಿಗೆ ಸಂಗೀತದ ಬಗ್ಗೆ ವಿಶೇಷ ಒಲವು ಮೂಡಿತು. ಎಸ್.ಎಸ್.ಎಲ್.ಸಿ. ಅನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದರು (1932). ಇವರಿಗೆ ಕಲೆಯಲ್ಲೂ ವಿಶೇಷವಾದ ಆಸಕ್ತಿಯಿದ್ದ ಕಾರಣ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಸೇರಿದರು. ಚಿತ್ರಕಲಾಶಾಲೆಯ ಹಿರಿಯ ಕಲಾ ಶಿಕ್ಷಕರಾಗಿದ್ದ ಪಾವಂಜೆ, ಕೇಶವಯ್ಯ, ಟಂಕಸಾಲೆ, ಎಂ. ವೀರಪ್ಪ ಮತ್ತು ಸುಬ್ರಹ್ಮಣ್ಯರಾಜು ಅವರಿಂದ ಚಿತ್ರಕಲೆಯನ್ನು ಕಲಿತು ಜಲವರ್ಣ ಚಿತ್ರಕಲೆಯಲ್ಲಿ ಪ್ರಸಿದ್ಧರಾಗಿದ್ದ ಸುಬ್ಬುಕೃಷ್ಣರ ಹಾದಿಯಲ್ಲಿ ಸಾಗಲು ಬಯಸಿದರು. 1938ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಗಳಿಸಿದರು. ಇದೇ ಅವಧಿಯಲ್ಲಿ ಮೈಸೂರಿನ ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರಲ್ಲಿ ಶಿಷ್ಯರಾಗಿ ಐದುವರ್ಷ ಕರ್ನಾಟಕ ಸಂಗೀತ ಕಲಿತರು. ವಿದ್ಯಾಭ್ಯಾಸದ ಅನಂತರ ಕೆಲಕಾಲ ಚಿತ್ರಕಲೆಯ ಪ್ರದರ್ಶನಗಳಲ್ಲಿಯೂ ಭಾಗವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ 'ಸ್ಕೌಟ್ ಅಸೋಸಿಯೇಷನ್'ನಲ್ಲಿ ಕೆಲಕಾಲ ಉದ್ಯೋಗಿಯಾಗಿ ಕಾರ್ಯನಿರ್ವಹಿಸಿದರು. ಇವರು ಖಜಾನೆ ಇಲಾಖೆಯಲ್ಲಿ ಉದ್ಯೋಗಿಯಾಗಿಯೂ ಸೇವೆ ಸಲ್ಲಿಸಿದ (1943–71) ಸಂದರ್ಭದಲ್ಲಿ ಇವರಿಗೆ ಉತ್ತಮ ಗ್ರಂಥಗಳನ್ನು ಓದುವ, ಅನೇಕ ಹೆಸರಾಂತ ಹಿರಿಯ ಸಾಹಿತಿಗಳ ಸಂಪರ್ಕ ಒದಗಿತು. ಇವರು ಬರೆದ ಮೊತ್ತಮೊದಲ ಲೇಖನ ಮೈಸೂರಿನ 'ಸಾಧ್ವಿ' ಪತ್ರಿಕೆಯಲ್ಲಿ ಪ್ರಕಟವಾಯಿತು. ಒಮ್ಮೆ ಎ.ಆರ್. ಕೃಷ್ಣಶಾಸ್ತ್ರಿಯವರು ಪ್ರಾಚೀನ ಕಲೆಯನ್ನು ಕುರಿತು ಲೇಖನ ಬರೆದುಕೊಡುವಂತೆ ಒತ್ತಾಯಿಸಿದ್ದರ ಫಲವಾಗಿ ಇವರು ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಸ್ಫೂರ್ತಿಯಾಯಿತು. ಅನಂತರದಲ್ಲಿ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಜನಪ್ರಗತಿ, ಡೆಕ್ಕನ್ ಹೆರಾಲ್ಡ್ ಮೊದಲಾದ ಅನೇಕ ಹೆಸರಾಂತ ಪತ್ರಿಕೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕಲೆ, ಸಂಗೀತ ಕುರಿತು ವಿಮರ್ಶಾ ಲೇಖನಗಳನ್ನು ಪ್ರಕಟಿಸಿದರು. ಎನ್.ಸಿ.ಪಿ.ಎ. ಜರ್ನಲ್, ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಜರ್ನಲ್ ಮುಂತಾದ ನಿಯತ ಕಾಲಿಕೆಗಳಲ್ಲೂ ಲೇಖನಗಳನ್ನು ಬರೆದಿದ್ದಾರೆ. ಕರ್ನಾಟಕದ ಸಂಗೀತಗಾರರು ಎಂಬ ಶಿರೋನಾಮೆಯಲ್ಲಿ ಇಲಸ್ಟ್ರೇಟೆಡ್ ವೀಕ್ಲಿ ಪತ್ರಿಕೆಯಲ್ಲಿ ಲೇಖನಮಾಲೆ ಪ್ರಕಟಿಸಿದ್ದಾರೆ (1950).



ಟ್ರೆಡಿಷನಲ್ ಪೇಂಟಿಂಗ್ಸ್ ಆಫ್ ಕರ್ನಾಟಕ, ಮ್ಯೂರಲ್ಸ್ ಆಫ್ ಕರ್ನಾಟಕ, ಟ್ವೆಂಟಿಫೈವ್ ಓಲ್ಡ್ ಮಾಸ್ಟರ್ಸ್, ಕ್ರಿಯೇಟಿವ್ ಆರ್ಟಿಸ್ಟ್ಸ ಡ್ರಾಯಿಂಗ್ಸ್– ಇವು ಇವರ ಕೆಲವು ಇಂಗ್ಲಿಷ್ ಕೃತಿಗಳು. ಮೈಸೂರು ಟಿ. ಚೌಡಯ್ಯ, ಬಡೇಗುಲಾಂ ಅಲೀಖಾನ್, ಬೆಂಗಳೂರು ನಾಗರತ್ನಮ್ಮ ಇವು ಇವರ ಕನ್ನಡ ಕೃತಿಗಳು. ಮೈಸೂರಿನ ಆಕಾಶವಾಣಿಯಲ್ಲಿಯೂ ಕಲೆ, ಸಂಗೀತ ಕುರಿತ ಇವರ ಭಾಷಣ, ವಿಮರ್ಶೆಗಳು ಪ್ರಸಾರವಾಗಿವೆ. ಕೇಂದ್ರ ನಾಟಕ ಅಕಾಡೆಮಿ, ಕೇಂದ್ರ ಲಲಿತಕಲಾ ಅಕಾಡೆಮಿ, ಬರೋಡದ ಭಾರತೀಯ ಸಂಗೀತ ಸಂಘ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಆಕಾಶವಾಣಿ, ಮಧ್ಯಪ್ರದೇಶದ 'ಕಾಳಿದಾಸ್ ಸಮ್ಮಾನ್' ತೀರ್ಪುಗಾರರ ಮಂಡಳಿ, ರಾಷ್ಟ್ರೀಯ ಪ್ರದರ್ಶನ ತೀರ್ಪುಗಾರರ ಮಂಡಲಿ ಮುಂತಾದ ಸಂಗೀತ, ಲಲಿತಕಲೆಗಳಿಗೆ ಸಂಬಂಧಿಸಿದ ಅನೇಕ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಇಷ್ಟೇ ಅಲ್ಲದೆ ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಬೆಂಗಳೂರು ಗಾಯನ ಸಮಾಜದ 14ನೆಯ ಸಮ್ಮೇಳನವೊಂದರ ಅಧ್ಯಕ್ಷತೆ ವಹಿಸಿ ಬಿರುದಾಂಕಿತರಾದ ಕನ್ನಡಿಗರಲ್ಲಿ ಶಾಸ್ತ್ರಿಯವರೇ ಮೊದಲಿಗರು.

ಇವರ ಪ್ರತಿಭೆಗೆ ಅನೇಕ ಗೌರವಗಳು ಲಭ್ಯವಾಗಿವೆ. ಆಕಾಶವಾಣಿ ವಾರ್ಷಿಕ ಪ್ರಶಸ್ತಿ (1976), ಮದರಾಸು ಕಾಂಗ್ರೆಸ್ ವಸ್ತುಪ್ರದರ್ಶನ ಕಲಾವಿಭಾಗದಿಂದ ದೊರೆತ ಪ್ರಶಂಸಾ ಪತ್ರ (1986), ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1986), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985), ಮದ್ರಾಸ್ ಸಂಗೀತ ಅಕಾಡೆಮಿಯ ಟಿ.ಟಿ.ಕೆ. ಪ್ರಶಸ್ತಿ (1987), ಕರ್ನಾಟಕ ಸಂಗೀತ ಅಕಾಡೆಮಿ ಪ್ರಶಸ್ತಿ (1988), ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ವಿಮರ್ಶಕ ಪ್ರಶಸ್ತಿ (1992), ಭಾರತ ಸರ್ಕಾರದ ಹಿರಿಯ ಫೆಲೋಷಿಪ್ (1982)– ಇವುಗಳನ್ನು ಉಲ್ಲೇಖಿಸಬಹುದು. **(ಎಸ್‌ಯು.ಎಂ.)**

**ಶಾಹಪುರ:** ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಜೇವರಗಿ ಮತ್ತು ಚಿತ್ತಾಪುರ ತಾಲ್ಲೂಕುಗಳೂ ಪೂರ್ವದಲ್ಲಿ ಯಾದಗಿರಿ, ದಕ್ಷಿಣದಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ, ಪಶ್ಚಿಮದಲ್ಲಿ ಸುರಪುರ ತಾಲ್ಲೂಕುಗಳೂ ಆಗ್ನೇಯದಲ್ಲಿ ರಾಯಚೂರು ತಾಲ್ಲೂಕು ಮತ್ತು ಆಂಧ್ರಪ್ರದೇಶ ಸುತ್ತುವರಿದಿವೆ. ಯಾದಗಿರಿ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನಲ್ಲಿ ಗೋಗಿ, ಶಾಹಪುರ, ದೋರನಹಳ್ಳಿ, ಹಿರಿಹಯ್ಯಾಳ ಮತ್ತು ವಡಗೆರ ಹೋಬಳಿಗಳಿದ್ದು ಒಟ್ಟು 159 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,678 ಚ.ಕಿಮೀ. ತಾಲ್ಲೂಕಿನಲ್ಲಿ 1,43,556 ಮಂದಿ ಗಂಡಸರು 1,40,474 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 3,36,755. ಇದರಲ್ಲಿ 2,93,133 ಮಂದಿ ಗ್ರಾಮೀಣರು, 43,622 ಮಂದಿ ಪಟ್ಟಣಿಗರು.

ಈ ತಾಲ್ಲೂಕಿನಲ್ಲಿ ಶಾಹಪುರ ಪಟ್ಟಣದ ಬಳಿ ಮಹಮ್ಮದಪುರಬೆಟ್ಟ ಹಬ್ಬಿದೆ. ತಾಲ್ಲೂಕಿನ ಬಹುಭಾಗ ಸಮತಟ್ಟು ಪ್ರದೇಶಕ್ಕೆ ಸೇರಿದೆ. ಸಿಮೆಂಟ್ ತಯಾರಿಕೆಗೆ ಬೇಕಾದ ಸುಣ್ಣಕಲ್ಲು ಈ ತಾಲ್ಲೂಕಿನಲ್ಲಿ ದೊರೆಯುವುದು. ತಾಲ್ಲೂಕಿನ ಹೆಚ್ಚು ಭಾಗ ಕಪ್ಪುಮಣ್ಣಿನ ಪ್ರದೇಶವಾದರೂ ಮರಳುಮಿಶ್ರಿತ ಸಾಮಾನ್ಯ ಕೆಂಪುಮಣ್ಣಿನ ಭೂಮಿಯನ್ನು ಕಾಣಬಹುದು. ಈ ತಾಲ್ಲೂಕಿನಲ್ಲಿ ಅರಣ್ಯಪ್ರದೇಶ ಅಷ್ಟಾಗಿಲ್ಲ. ಅಲ್ಲಲ್ಲಿ ಸ್ವಲ್ಪ ಕುರುಚಲು ಕಾಡುಪ್ರದೇಶವಿದೆ. ಬೇಸಗೆಯಲ್ಲಿ ಸೆಕೆ ಹೆಚ್ಚಾಗಿರುವ ಈ ತಾಲ್ಲೂಕಿನ ವಾರ್ಷಿಕ ಮಳೆ 730.20 ಮಿಮೀ.

ಕೃಷ್ಣಾ ಮತ್ತು ಭೀಮಾ ಈ ತಾಲ್ಲೂಕಿನ ಮುಖ್ಯ ನದಿಗಳು. ತಾಲ್ಲೂಕಿನ ದಕ್ಷಿಣದಲ್ಲಿ ತಾಲ್ಲೂಕಿನ ಗಡಿಯಾಗಿ ಹರಿಯುವ ಕೃಷ್ಣಾನದಿ ರಾಯಚೂರು ಜಿಲ್ಲೆಯ ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳನ್ನು ಬೇರ್ಪಡಿಸಿದೆ. ಈ ನದಿಯ ಎಡದಂಡೆಯ ಫಲವತ್ತಾದ ಭಾಗ ಈ ತಾಲ್ಲೂಕಿಗೆ ಸೇರಿದೆ. ಭೀಮಾನದಿ ಈ ತಾಲ್ಲೂಕಿನ ಉತ್ತರದಿಂದ ಪೂರ್ವಕ್ಕೆ ಹರಿದು ಅನಂತರ ತಾಲ್ಲೂಕಿನ ಆಗ್ನೇಯದಲ್ಲಿ ಸಂಗಮದ ಬಳಿ ಕೃಷ್ಣಾನದಿಯನ್ನು ಸೇರಿಕೊಳ್ಳುವುದು. ಈ ನದಿ ಚಿತ್ತಾಪುರ, ಯಾದಗಿರಿ ಮತ್ತು ಆಂಧ್ರಪ್ರದೇಶವನ್ನು ಈ ತಾಲ್ಲೂಕಿನಿಂದ ಬೇರ್ಪಡಿಸಿದೆ. ತಾಲ್ಲೂಕಿನಲ್ಲಿ ಜೋಳ, ಸಜ್ಜೆ, ಗೋದಿ, ಬತ್ತ, ತೊಗರಿ, ಕಡಲೆ, ಮೆಣಸಿನಕಾಯಿ, ಹತ್ತಿ, ಸೇಂಗಾ ಮುಂತಾದವನ್ನು ಬೆಳೆಯುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಉಂಟು. ಕೃಷ್ಣಾ ಮತ್ತು ಭೀಮಾನದಿ ಪ್ರದೇಶಗಳಲ್ಲಿ ಮತ್ಸ್ಯೋದ್ಯಮವಿದೆ.

ಈ ತಾಲ್ಲೂಕಿನಲ್ಲಿ ಚರ್ಮೋದ್ಯೋಗವಿದ್ದು ಪಾದರಕ್ಷೆಗಳ ತಯಾರಿಕೆಯುಂಟು. ಕೈಮಗ್ಗದ ಸೀರೆಗಳಿಗೆ ತಾಲ್ಲೂಕು ಪ್ರಸಿದ್ಧವಾದುದು. ಇಲ್ಲಿ ಸಿಕ್ಕುವ ಸುಣ್ಣಕಲ್ಲನ್ನು ತೆಗೆದು ಸಿಮೆಂಟ್ ಕಾರ್ಖಾನೆಗೆ ಸಾಗಿಸುವರು. ತಾಲ್ಲೂಕಿನಲ್ಲಿ ಸುರಪುರ-ಗುಲ್ಬರ್ಗ ರಾಜ್ಯಹೆದ್ದಾರಿಯಿದ್ದು ತಾಲ್ಲೂಕಿನ ಎಲ್ಲ ಕಡೆಗೂ ರಸ್ತೆಸಂಪರ್ಕವಿದೆ. ಶಾಹಪುರದ ಈಶಾನ್ಯಕ್ಕೆ 34 ಕಿಮೀ ದೂರದಲ್ಲಿ ಯಾದಗಿರಿ ರೈಲ್ವೆ ನಿಲ್ದಾಣವಿದ್ದು ಈ ತಾಲ್ಲೂಕಿಗೆ ಅದೇ ರೈಲ್ವೆ ಸಂಪರ್ಕ ಕೇಂದ್ರವಾಗಿದೆ.

ಶಾಹಪುರದ ವಾಯವ್ಯಕ್ಕೆ 11 ಕಿಮೀ ದೂರದಲ್ಲಿರುವ ಗೋಗಿಯಲ್ಲಿ ಆದಿಲ್‌ಶಾಹೀ ಕಾಲದ ದೊಡ್ಡ ಮಸೀದಿ ಮತ್ತು ಗೋರಿಗಳಿವೆ. ಪ್ರತಿವರ್ಷ ಇಲ್ಲಿ ಜಾತ್ರೆ ಸೇರುವುದು. ಶಾಹಪುರದ ಆಗ್ನೇಯಕ್ಕೆ 19 ಕಿಮೀ ದೂರದಲ್ಲಿರುವ ಹಿರಿಹಯ್ಯಾಳ ಕೃಷ್ಣಾನದಿಯ ಎಡದಂಡೆಯ ಮೇಲಿದೆ. ಹಯ್ಯಾಳಪ್ಪನ ದೇವಾಲಯವೆಂದು ಕರೆಯುವ ಇಲ್ಲಿನ ಲಿಂಗೇಶ್ವರ ದೇವಾಲಯ ಪ್ರಸಿದ್ಧವಾದದ್ದು. ಪ್ರತಿ ಜನವರಿಯಲ್ಲಿ ಜಾತ್ರೆ ನಡೆಯುತ್ತದೆ. ಶಾಹಪುರದ ನೈಋತ್ಯಕ್ಕೆ 11 ಕಿಮೀ ದೂರದಲ್ಲಿರುವ ಸಗರದಲ್ಲಿ ಶೇಕ್ ಸೂಫಿ ಸರಮಸ್ತ ಸಾಹೇಬರ ಗೋರಿಯಿದೆ. ಇಲ್ಲಿ ಪ್ರತಿವರ್ಷ ನಡೆಯುವ ಜಾತ್ರೆ ಪ್ರಸಿದ್ಧವಾದದ್ದು. ಶಿವಶರಣ ಸಗರದ ಬ್ರಹ್ಮಯ್ಯ (ಬೊಮ್ಮಯ್ಯ) ಈ ಊರಿನವನು.

ಶಾಹಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಸುರಪುರ-ಗುಲ್ಬರ್ಗ ಹೆದ್ದಾರಿಯಲ್ಲಿ ಗುಲ್ಬರ್ಗದ ದಕ್ಷಿಣಕ್ಕೆ 77 ಕಿಮೀ ದೂರದಲ್ಲಿದೆ. ಶಾಹಪುರ ಪಟ್ಟಣದಲ್ಲಿ ಭೀಮರಾಯನಗುಡಿ ವಿಸ್ತರಣೆ ಒಳಗೊಂಡಂತೆ 17,810 ಮಂದಿ ಗಂಡಸರು, 16,537 ಮಂದಿ ಹೆಂಗಸರು ಸೇರಿ ಒಟ್ಟು ಜನಸಂಖ್ಯೆ 34,347.

ಈ ಪಟ್ಟಣ ಸುತ್ತಲ ಗ್ರಾಮಗಳಿಗೆ ಪ್ರಸಿದ್ಧ ವ್ಯಾಪಾರ ಕೇಂದ್ರ. ಸುತ್ತಲ ಗ್ರಾಮ ಮತ್ತು ಪಟ್ಟಣಗಳಿಗೆ ಇಲ್ಲಿಂದ ಮಾರ್ಗಸಂಪರ್ಕವಿದ್ದು ವ್ಯಾಪಾರ ವಾಣಿಜ್ಯದ ಅಭಿವೃದ್ಧಿಗೆ ನೆರವಾಗಿದೆ. ಇಲ್ಲಿ ನಿಯಂತ್ರಿತ ಮಾರುಕಟ್ಟೆ ಇದೆ. ಸೇಂಗಾ, ಹತ್ತಿ, ಕುಸುಬೆ ಮತ್ತು ಕೈಮಗ್ಗದ ಸೀರೆಗಳು, ಪಾದರಕ್ಷೆಗಳು ಇಲ್ಲಿಂದ ಹೆಚ್ಚಾಗಿ ರಫ್ತಾಗುವುವು. ಪಟ್ಟಣದ ಈಶಾನ್ಯಕ್ಕೆ 34 ಕಿಮೀ ದೂರದಲ್ಲಿ ಯಾದಗಿರಿ ರೈಲ್ವೆ ನಿಲ್ದಾಣವಿದೆ. ಈ ಪಟ್ಟಣದಲ್ಲಿ ಆಸ್ಪತ್ರೆ, ಪ್ರೌಢಶಾಲೆ, ಅಂಚೆ-ತಂತಿ, ವಿದ್ಯುತ್ ಮುಂತಾದವುಗಳ ಸೌಲಭ್ಯವಿದೆ. **(ಬಿ.)**

**ಶಾಹಬಾದ:** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಗುಂತಕಲ್ಲು-ಮುಂಬಯಿ ಬ್ರಾಡ್‌ಗೇಜ್ ರೈಲುಮಾರ್ಗದಲ್ಲಿ ಗುಲ್ಬರ್ಗದ ದಕ್ಷಿಣಕ್ಕೆ 40 ಕಿಮೀ ದೂರದಲ್ಲೂ ಚಿತ್ತಾಪುರದ ಪಶ್ಚಿಮಕ್ಕೆ 16 ಕಿಮೀ ದೂರದಲ್ಲೂ ಇದೆ. ಬಂಕೂರು ವಿಸ್ತರಣೆ ಮತ್ತು ಶಾಹಬಾದ ಕೈಗಾರಿಕಾ ಪ್ರದೇಶದಲ್ಲಿ 7,960 ಮಂದಿ ಗಂಡಸರು, 7,493 ಮಂದಿ ಮಹಿಳೆಯರು ಸೇರಿ ಒಟ್ಟು ಜನಸಂಖ್ಯೆ 15,998. ಇದನ್ನು ಬಿಟ್ಟು ಶಾಹಬಾದ ಪಟ್ಟಣ ಪ್ರದೇಶ ಒಂದರಲ್ಲೇ 25,981 ಮಂದಿ ಗಂಡಸರು, 24,606 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 50,587.

ಶಾಹಬಾದಿನ ಹತ್ತಿರವಿರುವ ಪದರಕಲ್ಲಿನ ಗಣಿ

ಈ ಪಟ್ಟಣಕ್ಕೆ ಸುಮಾರು 2 ಕಿಮೀ ದೂರದಲ್ಲಿ ಕಾಗಿಣಾ ನದಿ ಹರಿಯುವುದು. ಇದರ ನೀರನ್ನೇ ಪಟ್ಟಣಕ್ಕೂ ಹತ್ತಿರದ ಸಿಮೆಂಟ್ ಕಾರ್ಖಾನೆಗೂ ಉಪಯೋಗಿಸಿಕೊಳ್ಳಲಾಗುತ್ತಿದೆ. ಇದೊಂದು ವ್ಯಾಪಾರ ಕೇಂದ್ರ.

ಈ ಪಟ್ಟಣದ ಸುತ್ತಮುತ್ತ ಉತ್ತಮ ಸುಣ್ಣಕಲ್ಲುಗಳ ನಿಕ್ಷೇಪವಿದ್ದು ಶಾಹಬಾದಿನ ಉತ್ತರಕ್ಕೆ ಎರಡು ಕಿಮೀ ದೂರದಲ್ಲಿ ಪ್ರಸಿದ್ಧ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆ ಇದೆ. ಪಟ್ಟಣದ ಮಧ್ಯದಲ್ಲಿ ಶಿಲಾರಚನೆಯ ಆವರಣವೊಂದಿದೆ. ಅದು ಹಳೆಯ ಕಾಲದ ಅರಮನೆಯ ಗೋಡೆಯೆಂದು ಹೇಳುತ್ತಾರೆ. ಈ ಆವರಣದಲ್ಲಿ ಒಂದು ದೊಡ್ಡ ಮಸೀದಿ ಹಾಗೂ ಒಂದು ಬಾವಿ ಇವೆ. ಕಟ್ಟಡ ನಿರ್ಮಾಣಕ್ಕೆ ಶಾಹಬಾದ್ ಕಲ್ಲು ಅತ್ಯಂತ ಪ್ರಸಿದ್ಧ. **(ವಿ.ಜಿ.ಕೆ.)**

**ಶಿಂಷಾ:** ಕಾವೇರಿ ನದಿಯ ಒಂದು ಉಪನದಿ. ಇದಕ್ಕೆ ಶಿಂಶುಪಾ, ಕದಂಬ, ಕಡಬಕೊಳ್ಳ ಎಂಬ ಹೆಸರುಗಳೂ ಇವೆ. ಈ ನದಿ ತುಮಕೂರು ಜಿಲ್ಲೆಯಲ್ಲಿ ದೇವರಾಯನದುರ್ಗದ ದಕ್ಷಿಣ ಭಾಗದಲ್ಲಿ ಹುಟ್ಟಿ, ನೈಋತ್ಯ ದತ್ತ ಸಾಗಿ ತುರುವೇಕೆರೆ ತಾಲ್ಲೂಕನ್ನು ಪ್ರವೇಶಿಸಿ, ಅಲ್ಲಿಂದ ಆಗ್ನೇಯಾಭಿಮುಖವಾಗಿ ಕುಣಿಗಲು ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಹರಿದು, ತರುವಾಯ ದಕ್ಷಿಣಾಭಿಮುಖವಾಗಿ ಪ್ರವಹಿಸಿ ಮದ್ದೂರು ತಾಲ್ಲೂಕಿನ ಕಿರಂಗೂರಿನ ಬಳಿ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದು ಮದ್ದೂರಿನ ಪಕ್ಕದಲ್ಲಿ ಹರಿಯುವುದರಿಂದ ಇದನ್ನು ಮದ್ದೂರು ಹೊಳೆ ಎಂದು ಕರೆಯುತ್ತಾರೆ. ಮದ್ದೂರು ತಾಲ್ಲೂಕನ್ನು ದಾಟಿ ಆಗ್ನೇಯ ದಿಕ್ಕಿನಲ್ಲಿ ಹರಿಯತೊಡಗಿ ಮಳವಳ್ಳಿ ತಾಲ್ಲೂಕನ್ನು ಪ್ರವೇಶಿಸಿ, ಶಿವಸಮುದ್ರ ಜಲಪಾತ ಕ್ಕಿಂತ ಸ್ವಲ್ಪ ಹಿಂದೆ ಇದು ಕಾವೇರಿ ನದಿಯನ್ನು ಸೇರುತ್ತದೆ. ಶಿಂಷಾ ನದಿಯ ಹರಿವಿನ ಒಟ್ಟು ಉದ್ದ ಸು. 130 ಕಿಮೀ. ತುಮಕೂರು ಜಿಲ್ಲೆಯಲ್ಲಿ ಹರಿಯುವಾಗ ಇದಕ್ಕೆ ಸೇರುವ ನಾಗ ಮತ್ತು ನಾಗಿನಿ ಎಂಬ ತೊರೆಗಳು ಇದರ ಮುಖ್ಯ ಉಪನದಿಗಳು.

ಶಿಂಷಾ ಚಿಕ್ಕ ನದಿ. ಮಳೆಗಾಲದಲ್ಲಿ ಮಾತ್ರ ಹೆಚ್ಚು ನೀರು ಹರಿಯುತ್ತದೆ. ಈ ನದಿಗೆ ಅಡ್ಡಲಾಗಿ ಕಡಬ ಮತ್ತು ತುರುವೇಕೆರೆಗಳಲ್ಲಿ ದೊಡ್ಡ ಕೆರೆಗಳನ್ನು ನಿರ್ಮಿಸಲಾಗಿದೆ. ಮಾರ್ಕೋನಹಳ್ಳಿಯ ಬಳಿ ದೊಡ್ಡ

ಕಟ್ಟೆಯೊಂದನ್ನು ಕಟ್ಟಲಾಗಿದೆ. ಕಾವೇರಿ ನದಿಯೊಡನೆ ಸಂಗಮಿಸುವುದಕ್ಕೆ ಮುಂಚೆ ಇದು ಹರಿಯುವ ಕಣಿವೆಯಲ್ಲಿ ಅಣೆಯೊಂದನ್ನು ಕಟ್ಟಿ ಸಮೀಪದಲ್ಲಿ ಸಣ್ಣ ಪ್ರಮಾಣದ ವಿದ್ಯುತ್ ಉತ್ಪಾದನಾ ಕೇಂದ್ರವೊಂದನ್ನು (ಶಿಂಷಾ ವಿದ್ಯುತ್ ಉತ್ಪಾದನ ಕೇಂದ್ರ) ನಿರ್ಮಿಸಲಾಗಿದೆ. **(ಪಿ.ಜಿ.;ಡಿ.ಸಿ.ಜಿ.)**

**ಶಿಂಷಾಪುರ:** ಮಂಡ್ಯಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿರುವ ಒಂದು ಜಲವಿದ್ಯುತ್ ಉತ್ಪಾದನಾಕೇಂದ್ರ. ಬ್ಲಫ್‌ನಿಂದ 14 ಕಿಮೀ ದೂರದಲ್ಲೂ ಮದ್ದೂರಿನಿಂದ ಸು. 38 ಕಿಮೀ ದೂರದಲ್ಲೂ ಇದೆ. ಕಾವೇರಿ ನದಿ ಜಲಪಾತದ ಮೇಲುಗಡೆಯ ಅಣೆಕಟ್ಟೆಯಿಂದ ವಿದ್ಯುತ್ ಕೇಂದ್ರಕ್ಕೆ ತಿರುಗಿಸಿಕೊಳ್ಳುವ ನೀರನ್ನು ಶಿವಸಮುದ್ರದ ಬಳಿ ಇಳಿಸುವ ಬದಲು ಇನ್ನೂ ಸುಮಾರು 5 ಕಿಮೀ ಮುಂದೆ ಹೋಗಿ ಶಿಂಷಾ ಉಪನದಿಯು ಕಾವೇರಿಯನ್ನು ಸೇರುವ ಕಣಿವೆಯ ನಿವೇಶನದಲ್ಲಿ ಇಳಿಸಿದ್ದೇ ಆದರೆ ನೀರುಬೀಳಿನ ಎತ್ತರ ಒಂದೂವರೆಯಷ್ಟಾಗಿ, ಲಭ್ಯವಿರುವ ಅಷ್ಟೇ ಪ್ರಮಾಣದ ನೀರಿನಿಂದ ಒಂದೂವರೆಯಷ್ಟು ಹೆಚ್ಚಿನ ವಿದ್ಯುತ್ ಪಡೆಯಬಹುದಾಗಿದ್ದಿತು. ಈ ಪರಿಗಣನೆಯ ಪ್ರಕಾರ ಶಿವಸಮುದ್ರ ಕೇಂದ್ರವನ್ನು ಇನ್ನೂ ಬಡಾಯಿಸುವದನ್ನು ಕೈಬಿಟ್ಟು, ಶಿಂಷಾಪುರದ ಬಳಿ 1940ರಲ್ಲಿ 17,200 ಕಿವಾ ಸಾಮರ್ಥ್ಯದ ಕೇಂದ್ರವನ್ನು ಸ್ಥಾಪಿಸಲಾಯಿತಲ್ಲದೆ ಶಿವಸಮುದ್ರದ ಯಾವುದೇ ವಿದ್ಯುತ್ ಘಟಕ ಹಳೆಯದಾಗಿ ಅಥವಾ ಕೆಟ್ಟು ಪುನಃ ಸ್ಥಾಪಿಸಬೇಕಾಗಿ ಬಂದರೆ, ಅದನ್ನು ಶಿವಸಮುದ್ರದ ಬದಲು ಶಿಂಷಾ ಕೇಂದ್ರದಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸಲಾಗಿತ್ತು. ಆದರೆ ರಾಜ್ಯದಲ್ಲಿ ಆದ ಹಲವಾರು ಬದಲಾವಣೆಗಳಿಂದ ಈಗ ಶರಾವತಿ, ಕಾಳಿ ಮುಂತಾದ ನದಿಗಳ ಕಡೆಗೆ ಗಮನವೀಯಲಾಗಿದೆ. ಶಿಂಷಾಪುರದಲ್ಲಿ ಶಿಂಷಾನದಿಯ ಅಂಕಿತವಿದ್ದರೂ ಈ ಯೋಜನೆಗೆ ಶಿಂಷಾ ನದಿಯ ನೀರಿನ ಬಳಕೆಯಾಗಿಲ್ಲ. ಕಣಿವೆಯ ಮೇಲುಗಡೆ ಸಿಬ್ಬಂದಿಯ ವಸತಿಗಳಲ್ಲದೆ, ಒಂದು ಪ್ರವಾಸಿ ಮಂದಿರವನ್ನು ಕಟ್ಟಿದೆ. ಅಲ್ಲಿ ನಿಂತು ಕಾವೇರಿಗೆ ಸೇರುವ ಮುನ್ನ ಶಿಂಷಾ ನದಿ ಕೆಳಕ್ಕೆ ಬೀಳುವ ಜಲಪಾತದ ಸುಂದರ ದೃಶ್ಯವನ್ನು ಕಾಣಬಹುದು. ಶಿವಸಮುದ್ರದ ಜಲಪಾತದ ಮೇಲುಗಡೆ ಇರುವ ಅಣೆಕಟ್ಟೆಯಿಂದ ಶಿಂಷಾ ವಿದ್ಯುತ್ಕೇಂದ್ರವಾಗಿ ಕಾವೇರಿ ನೀರನ್ನು ತಿರುಗಿಸಿ ಅಲ್ಲಿ ತಾತ್ಕಾಲಿಕ ಸಂಗ್ರಹವಿಡುವ ನೆಟ್ಕಲ್ ಸಮತೋಲ ಜಲಾಶಯದಿಂದಲೇ ಬೆಂಗಳೂರು ನಗರಕ್ಕೆ ಕಾವೇರಿ ನೀರಿನ ಪೂರೈಕೆಯೂ ಆಗುತ್ತಿದೆ.

**(ಕೆ.ವಿ.ಎಸ್‌ಯು.)**

**ಶಿಕಾರಿಪುರ:** ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವ ಮತ್ತು ಆಗ್ನೇಯಕ್ಕೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು, ಉತ್ತರ ಈಶಾನ್ಯಕ್ಕೆ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ಪಶ್ಚಿಮ ಮತ್ತು ವಾಯವ್ಯಕ್ಕೆ ಸೊರಬ ತಾಲ್ಲೂಕು, ನೈಋತ್ಯ ಮತ್ತು ಪಶ್ಚಿಮಕ್ಕೆ ಸಾಗರ ತಾಲ್ಲೂಕು, ದಕ್ಷಿಣಕ್ಕೆ ಶಿವಮೊಗ್ಗ ತಾಲ್ಲೂಕು ಸುತ್ತುವರಿದಿವೆ. ಅಂಜನಪುರ, ಶಿಕಾರಿಪುರ, ಹೊಸೂರು, ಉಡುತಡಿ ಮತ್ತು ತಾಳಗುಂದ ಹೋಬಳಿಗಳಿದ್ದು 2 ಪಟ್ಟಣಗಳೂ 175 ಗ್ರಾಮಗಳೂ ಇವೆ. ಸಾಗರ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕಿನ ವಿಸ್ತೀರ್ಣ 896.4 ಚ.ಕಿಮೀ. ಜನಸಂಖ್ಯೆ 2,13,590.

ಈ ತಾಲ್ಲೂಕು ಮಲೆನಾಡು ಮತ್ತು ಮೈದಾನಗಳ ಮಧ್ಯ ಪ್ರದೇಶದಲ್ಲಿರುವುದರಿಂದ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ದಟ್ಟ ಕಾಡುಗಳೂ ಪೂರ್ವದ ಕಡೆ ತೆಳುವಾದ ಕುರುಚಲೂ ಕಂಡುಬರುತ್ತವೆ. ಇಲ್ಲಿನ ಕಾಡುಗಳಲ್ಲಿ ಮತ್ತಿ, ಹೊನ್ನೆ, ನಂದಿ, ಬಿಲ್ವಾರ, ತಾರೆ, ಕಣಿಗಲು, ಶ್ರೀಗಂಧ, ಬೇವು, ದಿಂಡಿಗ, ಅಳಲೆ, ಹೊಂಗೆ, ಜಾಲಿ, ಕಾರೆ ಇತ್ಯಾದಿ ಮರಗಿಡಗಳಿವೆ. ತಾಲ್ಲೂಕಿನ ಅರಣ್ಯ ಪ್ರದೇಶ 17,417 ಹೆಕ್ಟೇರ್‌ಗಳು. ಈ ತಾಲ್ಲೂಕಿನಲ್ಲಿ ವಾರ್ಷಿಕ ಮಳೆ 1,117.51 ಮಿಮೀ. ಜೂನ್‌ನಿಂದ ಅಕ್ಟೋಬರ್ ಹೆಚ್ಚು ಮಳೆ ಬೀಳುವ ಕಾಲ.

ಕುಮುದ್ವತಿ ಈ ತಾಲ್ಲೂಕಿನ ಮುಖ್ಯ ನದಿ. ಹುಮಚದ ಹತ್ತಿರ ಅಗಸ್ತ್ಯ ಪರ್ವತದಲ್ಲಿ (ಬಿಲೇಶ್ವರಬೆಟ್ಟ) ಹುಟ್ಟಿ ಉತ್ತರಾಭಿಮುಖವಾಗಿ ಹೊಸನಗರ ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಹರಿದು, ಮುಂದೆ ಶಿವಮೊಗ್ಗ ತಾಲ್ಲೂಕಿನ ಕುಂಸಿ ಮೂಲಕ ಶಿಕಾರಿಪುರ ತಾಲ್ಲೂಕನ್ನು ದಕ್ಷಿಣದಲ್ಲಿ ಪ್ರವೇಶಿಸಿ, ಅಂಜನಪುರ ಜಲಾಶಯಕ್ಕೆ ನೀರೊದಗಿಸಿ, ಮುಂದೆ ಶಿಕಾರಿಪುರವನ್ನು ಬಳಸಿಕೊಂಡು ತಾಲ್ಲೂಕು ಮತ್ತು ಜಿಲ್ಲೆಯ ಎಲ್ಲೆಯಲ್ಲಿರುವ ಮದಗದಕೆರೆಗೆ ಜಲಾಶ್ರಯ ನೀಡಿ ಮುಂದುವರಿದು ತುಂಗಭದ್ರಾ ನದಿಯನ್ನು ಸೇರುತ್ತದೆ. ಈ ನದಿಗೆ ಚೊರಾಡಿ ನದಿ ಎಂದೂ ಕರೆಯುತ್ತಾರೆ. ತಾಲ್ಲೂಕಿನಲ್ಲಿ ಇದರ ಒಟ್ಟು ಹರಿವಿನ ಉದ್ದ 17.7 ಕಿಮೀ.

ತಾಲ್ಲೂಕಿನಲ್ಲಿ ಅಂಜನಪುರ ಜಲಾಶಯದಿಂದ ಕುಮುದ್ವತಿ ನದಿಯ ಉಪನದಿ ಸಾಲೂರು ಹಳ್ಳಕ್ಕೆ ಅಡ್ಡಲಾಗಿ ಕಟ್ಟಿರುವ ಅಂಬ್ಲಿಗೋಳ ಜಲಾಶಯದಿಂದಲೂ ತಾಲ್ಲೂಕಿನ ಅಂಚಿನಲ್ಲಿರುವ ಮದಗದಕೆರೆಯಿಂದಲೂ ತಾಲ್ಲೂಕಿನ ನೀರಾವರಿಗೆ ನೀರೊದಗುವುದು.

ಈ ತಾಲ್ಲೂಕಿನಲ್ಲಿ ಬತ್ತ, ರಾಗಿ, ಕಬ್ಬು, ಹತ್ತಿ, ನೆಲಗಡಲೆ ಬೆಳೆಯುವರು. ಅಡಕೆ ಮತ್ತು ತೆಂಗು ತೋಟದ ಬೆಳೆಗಳು. ಇತ್ತೀಚೆಗೆ ವೆನಿಲಾ ಬೆಳೆಸುತ್ತಿದ್ದಾರೆ. ಗೇರುಬೀಜ, ಮೆಣಸಿನಕಾಯಿ, ವಿವಿಧ ಬಗೆಯ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ಜೊತೆಗೆ ಅವರೆ, ಹೆಸರು, ತೊಗರಿ ಮುಂತಾದ ದ್ವಿದಳಧಾನ್ಯಗಳನ್ನೂ ಬೆಳೆಯುವುದುಂಟು.

ಸಸ್ಯಸಮೃದ್ಧಿಯೊಂದಿಗೆ ಈ ತಾಲ್ಲೂಕಿನಲ್ಲಿ ಪಶುಸಂಪತ್ತೂ ಸಾಕಷ್ಟು ಇದೆ. ಸ್ವಲ್ಪಮಟ್ಟಿಗೆ ಮತ್ಸ್ಯೋದ್ಯಮವಿದೆ. ಮರಕೊಯ್ಯುವುದು, ಹೆಂಚಿನ ತಯಾರಿಕೆ, ಎಣ್ಣೆ ತೆಗೆಯುವುದು ಇವು ಈ ತಾಲ್ಲೂಕಿನ ಮುಖ್ಯ ಉದ್ಯಮಗಳು. ಬಿದಿರು, ಚರ್ಮ, ಕಬ್ಬಿಣ ಕೈಗಾರಿಕೆಗಳೂ ಉಂಟು.

ಈ ತಾಲ್ಲೂಕಿನ ಅಂಜನಪುರದ ಬಳಿ ಕಟ್ಟಿರುವ ಜಲಾಶಯ ಶಿಕಾರಿಪುರದ ದಕ್ಷಿಣಕ್ಕೆ 18 ಕಿಮೀ ದೂರದಲ್ಲೂ ಶಿವಮೊಗ್ಗಕ್ಕೆ ವಾಯವ್ಯದಲ್ಲಿ 44 ಕಿಮೀ ದೂರದಲ್ಲೂ ಇದೆ. ಇಲ್ಲಿ ಮಾರಮ್ಮ ಮತ್ತು ಆಂಜನೇಯ ದೇವಾಲಯಗಳಿವೆ. ಪ್ರಕೃತಿಸೌಂದರ್ಯಕ್ಕೆ ಈ ಸ್ಥಳ ಪ್ರಸಿದ್ಧ. ಶಿಕಾರಿಪುರದ ಉತ್ತರಕ್ಕೆ 35 ಕಿಮೀ ದೂರದಲ್ಲಿರುವ ಬಂದಳಿಕೆಯು ಕದಂಬ ರಾಜರ ಆಳ್ವಿಕೆಯಲ್ಲಿ ಒಂದು ಮುಖ್ಯಪಟ್ಟಣವಾಗಿತ್ತು. ಇಲ್ಲಿ ರಾಷ್ಟ್ರಕೂಟ, ಚಳುಕ್ಯ, ಕಳಚುರಿ, ಹೊಯ್ಸಳ, ಸೇವುಣ ಮತ್ತು ವಿಜಯನಗರ ರಾಜರ 30ಕ್ಕೂ ಮಿಕ್ಕು ಶಾಸನಗಳಿವೆ. ಶಾಂತಿನಾಥ ಬಸದಿ, ವೀರಭದ್ರ, ಸೋಮೇಶ್ವರ, ತ್ರಿಮೂರ್ತಿ ಮತ್ತು ಬನಶಂಕರಿ ಮುಂತಾದ ದೇವಾಲಯಗಳಿವೆ. ಶಿಕಾರಿಪುರಕ್ಕೆ ವಾಯವ್ಯದಲ್ಲಿ 21 ಕಿಮೀ ದೂರದಲ್ಲಿರುವ ಬೆಳಗಾವಿಯನ್ನು ಹಿಂದೆ ಬಳ್ಳಿಗಾವೆ, ಬಳ್ಳಿಗಾಮೆ, ಬಳ್ಳಿಗ್ರಾಮ, ಬಳ್ಳಿಪುರ ಎಂಬುದಾಗಿ ಕರೆಯುತ್ತಿದ್ದರೆಂದು ತಿಳಿದುಬಂದಿದೆ. ಬೆಳಗಾವಿ ಹಿಂದೆ ಧರ್ಮ ಮತ್ತು ವಿದ್ಯಾಕೇಂದ್ರವಾಗಿದ್ದು ದಕ್ಷಿಣದ ಕೇದಾರ ಎಂದು ಪ್ರಸಿದ್ಧವಾಗಿತ್ತು. ವೀರಶೈವ ಧರ್ಮದ ಕೇಂದ್ರವಾಗಿದ್ದ ಇಲ್ಲಿ ಅನೇಕ ದೇವಾಲಯಗಳಿವೆ. ಶಿಕಾರಿಪುರಕ್ಕೆ ವಾಯವ್ಯದಲ್ಲಿ ಸು. 26 ಕಿಮೀ ದೂರದಲ್ಲಿರುವ ಹಿರೇಜಂಬೂರು ಅನೇಕ ಶಿವಶರಣರ ಸ್ಥಳವೆಂದು ಪ್ರಸಿದ್ಧ. ಶಿಕಾರಿಪುರದ ದಕ್ಷಿಣಕ್ಕೆ 10 ಕಿಮೀ ದೂರದಲ್ಲಿರುವ ಈಸೂರು **(ನೋಡಿ)** ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇತಿಹಾಸ ಸೃಷ್ಟಿಸಿದ ಊರು ಶಿಕಾರಿಪುರಕ್ಕೆ ವಾಯವ್ಯದಲ್ಲಿ 37 ಕಿಮೀ ದೂರದಲ್ಲಿರುವ ಮಳವಳ್ಳಿಯಲ್ಲಿ ಎರಡು ಪ್ರಾಕೃತ ಶಾಸನಗಳಿವೆ. ಇಲ್ಲಿನ ರಾಮೇಶ್ವರ ದೇವಾಲಯದ ಮುಂಭಾಗದಲ್ಲಿ ಕೆಲವು ಚಾಳುಕ್ಯ ಶಾಸನಗಳಿವೆ. ಶಿಕಾರಿಪುರದ ವಾಯವ್ಯಕ್ಕೆ ಸು. 26 ಕಿಮೀ ದೂರದಲ್ಲಿರುವ ಮುತ್ತಿಗೆ ಗ್ರಾಮದಲ್ಲಿ ಅಜಗಣ್ಣ ಮತ್ತು

ಮುಕ್ತಾಯಕ್ಕ ಈ ಶಿವಶರಣ-ಶರಣೆಯರ ಸಮಾಧಿಗಳೂ ಸಿದ್ಧರಾಮೇಶ್ವರ ದೇವಾಲಯವೂ ಅನೇಕ ವೀರಗಲ್ಲುಗಳೂ ಇವೆ. ಶಿಕಾರಿಪುರದ ವಾಯವ್ಯದಲ್ಲಿ 19 ಕಿಮೀ ದೂರದಲ್ಲಿರುವ ಶಿರಾಳಕೊಪ್ಪ ಒಂದು ಪಟ್ಟಣ. ಸಾಗರ, ಸೊರಬ ಮತ್ತು ಸುತ್ತಲ ಬಳ್ಳಾರಿ, ಧಾರವಾಡ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪ್ರದೇಶಗಳಿಗೆ ಇದೊಂದು ಮುಖ್ಯ ಸಂಪರ್ಕ ಮಾರ್ಗ ಮತ್ತು ವ್ಯಾಪಾರಕೇಂದ್ರ. ಶಿಕಾರಿಪುರದ ವಾಯವ್ಯದಲ್ಲಿ ಸು. 22 ಕಿಮೀ ದೂರದಲ್ಲಿರುವ ಶಿವಪುರದಲ್ಲಿ ಸಂತಬಂಕಯ್ಯನ ಸಮಾಧಿಯಿದೆ. ಶಿಕಾರಿಪುರದ ವಾಯವ್ಯಕ್ಕೆ ಸು.19 ಕಿಮೀ ದೂರದಲ್ಲಿರುವ ತಡಗಣಿಯಲ್ಲಿ ಕೇದಾರೇಶ್ವರ ದೇವಾಲಯವಿದೆ. ತಡಗಣಿ ಮತ್ತು ಉಡುತಣಿ ಗ್ರಾಮಗಳ ಮಧ್ಯೆ ಮಲ್ಲಿಕಾರ್ಜುನ ದೇವಾಲಯವಿದೆ. ಶಿಕಾರಿಪುರಕ್ಕೆ ವಾಯವ್ಯದಲ್ಲಿ 24 ಕಿಮೀ ದೂರದಲ್ಲಿರುವ ತಾಳಗುಂದದಲ್ಲಿ ಗಂಗಾಧರೇಶ್ವರ ದೇವಾಲಯ ಮತ್ತು ಪ್ರಭುದೇವರ ಗದ್ದುಗೆ ಇದೆ. ಶಿಕಾರಿಪುರಕ್ಕೆ ವಾಯವ್ಯದಲ್ಲಿ ಸುಮಾರು 29 ಕಿಮೀ ದೂರದಲ್ಲಿರುವ ತೊಗರ್ಸಿಯಲ್ಲಿ ಪ್ರಸಿದ್ಧ ಮಲ್ಲಿಕಾರ್ಜುನ ದೇವಾಲಯವಿದೆ. ಈ ದೇವಾಲಯ ಕೆಳದಿ ನಾಯಕರ ಕಾಲಕ್ಕೆ ಸೇರಿದ್ದೆಂದು ಹೇಳುವರು. ಶಿಕಾರಿಪುರದ ವಾಯವ್ಯದಲ್ಲಿ 14 ಕಿಮೀ ದೂರದಲ್ಲಿ ಉಡುತಡಿ ಗ್ರಾಮವಿದೆ. ಇದು ಅಕ್ಕಮಹಾದೇವಿಯ ಜನ್ಮಸ್ಥಳವೆಂದು ಪ್ರಸಿದ್ಧ. ಇಲ್ಲಿ ಗುರುಲಿಂಗ ಚನ್ನಮಲ್ಲಿಕಾರ್ಜುನ ಮಠ, ಚನ್ನಮಲ್ಲಿಕಾರ್ಜುನ ದೇವಾಲಯ, 1973ರಲ್ಲಿ ಕಟ್ಟಿರುವ ಅಕ್ಕಮಹಾದೇವಿ ದೇವಾಲಯ ಇವೆ. ಮದಗದಕೆರೆ ಮತ್ತು ಅಂಜನಪುರ ಜಲಾಶಯ ಪ್ರದೇಶಗಳು ರಮಣೀಯ ದೃಶ್ಯಗಳಿಂದ ಕೂಡಿವೆ.

ಶಿಕಾರಿಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಶಿವಮೊಗ್ಗದ ವಾಯವ್ಯಕ್ಕೆ 52 ಕಿಮೀ ದೂರದಲ್ಲಿ ಕುಮುದ್ವತಿ ನದಿಯ ಬಲದಂಡೆಯ ಮೇಲಿದೆ. ಜನಸಂಖ್ಯೆ 46,017.

ಈ ಪಟ್ಟಣವನ್ನು ಮಳೆಯ ಎಂಬುವನು ಸ್ಥಾಪಿಸಿದುದರಿಂದ ಇದನ್ನು ಮಳಿಯನ್‌ಹಳ್ಳಿ ಅಥವಾ ಮಳೇನಹಳ್ಳಿ ಎಂದು ಕರೆಯಲಾಗುತ್ತಿತ್ತು. ಅನಂತರ ಕೆಳದಿ ಅರಸರ ಕಾಲದಲ್ಲಿ ಈ ಊರಿಗೆ ಮಹಾದಾನಪುರವೆಂಬ ಹೆಸರು ಬಂತೆಂದೂ ಕಾಡುಪ್ರಾಣಿಗಳ ಶಿಕಾರಿಗೆ ಉತ್ತಮ ಸ್ಥಳವಾಗಿದ್ದುದರಿಂದ ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಇದಕ್ಕೆ ಶಿಕಾರಿಪುರವೆಂಬ ಹೆಸರು ಬಂದಿತೆಂದೂ ಪ್ರತೀತಿ.

ಇಲ್ಲಿ ಒಂದು ಹಳೆಯ ಕೋಟೆ ಮತ್ತು ವೀರಾಂಜನೇಯನ ಭವ್ಯಮೂರ್ತಿ ಇರುವ ಹುಚ್ಚರಾಯಸ್ವಾಮಿ ದೇವಾಲಯವಿದೆ. ಈ ದೇವಾಲಯದ ಕಂಬಗಳು ದ್ರಾವಿಡ ಮತ್ತು ಹೊಯ್ಸಳ ಶೈಲಿಯಲ್ಲಿವೆ. ಕೈಸಾಲೆಯಲ್ಲಿರುವ ದೇವಾಲಯದ ಹಳೆಯ ವಿಗ್ರಹಕ್ಕೆ ಬೆಳ್ಳಿ ಕಿರೀಟವಿದ್ದು ಅದರಲ್ಲಿ ಕಂಠೀರವ ನರಸರಾಜ ಒಡೆಯರ್ (1638-59) ಎಂಬ ನಾಮಾಂಕಿತವಿದೆ. ಬ್ರಿಟಿಷರ ವಿರುದ್ಧ ಹೋರಾಡಿದ ಧೋಂಡಿಯ ವಾಘನದೆಂದು ಹೇಳುವ ಇಬ್ಬಾಯ ಕತ್ತಿ ಈ ದೇವಾಲಯದಲ್ಲಿದೆ. ಇಲ್ಲಿ ಅನೇಕ ಶಾಸನಗಳು, ವೀರಗಲ್ಲುಗಳೂ ಇವೆ. ಪುರುಷರಂತೆ ಸ್ತ್ರೀಯರೂ ಶತ್ರುಗಳೊಡನೆ ಹೋರಾಡಿದ ವಿಷಯವನ್ನು ಕುರಿತಂತೆ ಹರಿಯಕ್ಕ ಎಂಬುವಳಿಗೆ ಸಂಬಂಧಿಸಿದ ಶಾಸನವೊಂದು ಇಲ್ಲಿದೆ. ವ್ಯಾಪಾರ ಕೇಂದ್ರವಾಗಿರುವ ಈ ಪಟ್ಟಣ ಪುರಸಭಾ ಆಡಳಿತಕ್ಕೆ ಸೇರಿದೆ.

(ಕೆ.ಆರ್.ಆರ್.)

**ಶಿಕ್ಷಣ:** ಭಾರತದ ಇತರೆಡೆಗಳಂತೆ ಕರ್ನಾಟಕದಲ್ಲಿ ಇಂದು ಅಸ್ತಿತ್ವದಲ್ಲಿರುವ ಶಿಕ್ಷಣ ಪದ್ಧತಿ ಕಳೆದ ಶತಮಾನದ ಆದಿಯಲ್ಲಿ ಇಂಗ್ಲೆಂಡಿನಿಂದ ತಂದು ಇಲ್ಲಿ ನಾಟಿ ಹಾಕಿದ್ದಾದರೂ ಎರಡೂವರೆ ಸಹಸ್ರ ವರ್ಷಗಳ ಹಿಂದಿನಿಂದಲೂ ಬೆಳೆದು ಪ್ರೌಢಸ್ಥಿತಿಯನ್ನು ಮುಟ್ಟಿದ್ದ ದೇಶೀಯ ಶಿಕ್ಷಣ ಪದ್ಧತಿಯೊಂದು ಇಲ್ಲಿ ಅಸ್ತಿತ್ವದಲ್ಲಿತ್ತೆಂಬ ಅಂಶ ಇತಿಹಾಸದಿಂದ ಸ್ಪಷ್ಟಪಟ್ಟಿದೆ. ಆ ದೇಶೀಯ ಶಿಕ್ಷಣ ಪದ್ಧತಿಯ ಸ್ವರೂಪವನ್ನೂ ಅದು ಬೆಳೆದು ಬಂದ ಮಾರ್ಗವನ್ನೂ ಕಡೆಗೆ ಅದು ಅನ್ಯಶಿಕ್ಷಣ ಪದ್ಧತಿಯ ಮುಂದೆ ನಿಲ್ಲಲಾರದೆಹೋದ ಅಂಶವನ್ನೂ ಈ ಲೇಖನದಲ್ಲಿ ಪರಿಶೀಲಿಸಿದೆ.

ಕರ್ನಾಟಕದ ರಾಜಕೀಯ ಇತಿಹಾಸ ಕ್ರಿ.ಪೂ. ಮೂರನೆಯ ಶತಮಾನದಿಂದ, ಎಂದರೆ ಶಾತವಾಹನ ಅರಸರ ಕಾಲದಿಂದ ಆರಂಭವಾದರೂ ಅದರ ಶೈಕ್ಷಣಿಕ ಇತಿಹಾಸ ಇನ್ನೂ ಹಿಂದಕ್ಕೆ ಹೋಗುತ್ತದೆ. ಕ್ರಿ.ಪೂ. ನಾಲ್ಕನೆಯ ಶತಮಾನಕ್ಕೆ ಹಿಂದೆ ಜ್ಞಾನಕ್ಕಾಗಿಯೇ ಜೀವನವನ್ನು ಮೀಸಲಾಗಿಟ್ಟಿದ್ದ ವಿದ್ವಜ್ಜನರೂ ಸಾಧುಸಂತರೂ ತಮ್ಮ ಮನೆಗಳಲ್ಲೋ ವನಾಂತರಪ್ರದೇಶದ ತಮ್ಮ ಆಶ್ರಮಗಳಲ್ಲೋ ಕಲಿಯಲು ಬಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣವೀಯುತ್ತಿದ್ದರು. ಆಗ ಶಿಕ್ಷಣದ ಉದ್ದೇಶ, ಪಠ್ಯಕ್ರಮ, ಪರೀಕ್ಷೆ ಮುಂತಾದ ಅಂಶಗಳನ್ನು ನಿರ್ಧರಿಸತಕ್ಕ ಯಾವ ಸಂಸ್ಥೆಯೂ ಇರಲಿಲ್ಲ. ಎಲ್ಲವೂ ಗುರುಗಳ ವೈಯಕ್ತಿಕ ಒಡೆತಕ್ಕೆ ಸೇರಿತ್ತು. ಆಗ ಅಲ್ಲಲ್ಲಿ ಮಂಡಲ ಅಥವಾ ಕೂಟಗಳು (ಗಿಲ್ಡ್) ಇದ್ದರೂ ಅವು ಸಮಾಜದ ಕಟ್ಟುಕಟ್ಟಳೆಗಳನ್ನೂ ಆಚಾರವ್ಯವಹಾರಗಳನ್ನೂ ಎಲ್ಲರೂ ಪಾಲಿಸುವಂತೆ ನೋಡಿಕೊಳ್ಳುತ್ತಿದ್ದ ಹಿರಿಯುರ ಸಂಸ್ಥೆಗಳಾಗಿದ್ದುವು. ಕ್ರಮೇಣ ಅವು ಪರಿಷತ್ತುಗಳ ರೂಪವನ್ನು ತಳೆದರೂ ಖಾಸಗಿ ವ್ಯಾಸಂಗ ಮಾಡಿಕೊಂಡು ಬಂದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡುತ್ತಿದ್ದುವು. ಎಂದರೆ ಆಗ ಸಾರ್ವತ್ರಿಕ ಶಿಕ್ಷಣಕ್ಕೆ ಯಾವ ವ್ಯವಸ್ಥೆಯೂ ಇದ್ದಂತೆ ಕಾಣುವುದಿಲ್ಲ.

ಪ್ರಚಲಿತ ಶಕಪೂರ್ವ ನಾಲ್ಕನೆಯ ಶತಮಾನದ ಕೊನೆಗೆ ಕರ್ನಾಟಕಕ್ಕೆ ಆಗಮಿಸಿದ ಮೌರ್ಯ ಚಕ್ರವರ್ತಿ ಚಂದ್ರಗುಪ್ತ ಮೌರ್ಯನ ಹಾಗೂ ಅವನ ಗುರು ಭದ್ರಬಾಹುವಿನ ಸಂಗಡ ಇಲ್ಲಿಗೆ ಜೈನಧರ್ಮವೂ ಆಗಲೇ ಉತ್ತರ ಭಾರತದಲ್ಲಿ ಆರಂಭಿಸಿದ್ದ ಸಂಸ್ಥೆಗಳೂ ಆಗಮಿಸಿದುವು. ಅವು ಮೋಕ್ಷಸಾಧನೆಗೆ ಭಕ್ತಿಪೂಜೆ ಸದಾಚಾರಗಳಂತೆ ಸುಜ್ಞಾನವೂ ಅಗತ್ಯವೆಂಬ ಅಂಶವನ್ನು ಎತ್ತಿಹಿಡಿದು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದುವು. ಅದಕ್ಕಾಗಿ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಜೈನಬಸದಿಗಳು ಆರಂಭವಾದುವು. ಚಂದ್ರಗುಪ್ತನ ಮೊಮ್ಮಗನಾದ ಅಶೋಕ ಬೌದ್ಧ ಧರ್ಮವನ್ನು ಅನುಸರಿಸಿ ಅದರ ಪ್ರಚಾರಕ್ಕಾಗಿ ಕರ್ನಾಟಕದಲ್ಲಿ ಮಾಡಿದ ವ್ಯವಸ್ಥೆಯಿಂದ ಇಲ್ಲಿ ಬೌದ್ಧರು ಉತ್ತರದಲ್ಲಿ ಆಗಲೇ ಆರಂಭಿಸಿದ್ದ ಸಂಘಾರಾಮಗಳೂ ವಿಹಾರಗಳೂ ಆರಂಭವಾದವು. ಅವು ಆತನಕ ಕೇವಲ ಕೆಲವು ವರ್ಣದವರಿಗೆ ಮಾತ್ರ ಮೀಸಲಾಗಿದ್ದ ಶಿಕ್ಷಣವನ್ನು ಸಾರ್ವತ್ರೀಕರಿಸಿ ಜಾತಿ, ಮತ, ಲಿಂಗ ಈ ಯಾವ ಭೇದವೂ ಇಲ್ಲದೆ ಎಲ್ಲರಿಗೂ ಶಿಕ್ಷಣವೀಯಹತ್ತಿದುವು. ಜೈನಧರ್ಮದ ಆಗಮನ ಶಿಕ್ಷಣಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಟ್ಟಂತೆ ಬೌದ್ಧಧರ್ಮದ ಆಗಮನದಿಂದ ಇಲ್ಲಿನ ಶಿಕ್ಷಣಕ್ಕೆ ವ್ಯವಸ್ಥಿತ ರೀತಿಯ ಸಂಘಸಂಸ್ಥೆಗಳು ರೂಪುಗೊಂಡುವು. ಆ ಮೂಲಕ ಕರ್ನಾಟಕದ ಸಾರ್ವತ್ರಿಕ ಶಿಕ್ಷಣಕ್ಕೆ ಆ ಸಂಸ್ಥೆಗಳು ತಳಹದಿ ಹಾಕಿದವು. ಅಂದಿಗೆ ಆಗಲೇ ಅಸ್ತಿತ್ವದಲ್ಲಿದ್ದ ವೈದಿಕ ಶಿಕ್ಷಣದ ಆಶ್ರಮ, ಗುರುಕುಲಗಳಂತೆ ಜೈನಬಸದಿಗಳೂ ಬೌದ್ಧ ಸಂಘಾರಾಮಗಳೂ ಶಿಕ್ಷಣ ಪ್ರಸಾರವನ್ನು ನೆರವೇರಿಸುತ್ತ ಬಂದುವು.

**ಶಿಕ್ಷಣದ ಉದ್ದೇಶ:** ಪ್ರಾಚೀನ ಭಾರತದ ಎಲ್ಲ ಜೀವನಕ್ಷೇತ್ರಗಳಿಗೂ ಆಧ್ಯಾತ್ಮವೇ ಹಿನ್ನೆಲೆಯಾಗಿದ್ದಂತೆ ಶಿಕ್ಷಣಕ್ಕೂ ಹಿನ್ನೆಲೆಯಾಗಿತ್ತು. ಪವಿತ್ರ ಧಾರ್ಮಿಕ ಗ್ರಂಥಗಳ ಕಂಠಪಾಠ ಮಾಡಿ ಅದನ್ನು ಅದರ ಶುದ್ಧ ಸ್ವರೂಪದಲ್ಲಿ ಮುಂದಿನ ಪೀಳಿಗೆಗೆ ಹಸ್ತಾಂತರ ಮಾಡುವುದು ಶಿಕ್ಷಣದ ಪ್ರಥಮ ಉದ್ದೇಶವಾಗಿತ್ತು. ಬರವಣಿಗೆ ಇನ್ನೂ ಅಸ್ತಿತ್ವದಲ್ಲಿಲ್ಲದಿದ್ದಾಗ ಇದು ಅಗತ್ಯವೇ ಆಗಿತ್ತು. ಬರವಣಿಗೆ ಪ್ರಚಾರಕ್ಕೆ ಬಂದಮೇಲೆ ಈ

ಉದ್ದೇಶ ಹಿಂಬದಿಗೆ ಬೀಳುತ್ತಬಂತು. ವಿದ್ಯಾರ್ಥಿಗಳ ವ್ಯಕ್ತಿತ್ವದ ನಿರೂಪಣೆಯ ಉದ್ದೇಶ ಪ್ರಧಾನವಾಗುತ್ತ ಬಂತು. ಆತ್ಮಗೌರವ, ಆತ್ಮಸಂಯಮ, ಸ್ವಾವಲಂಬನೆ ಮುಂತಾದ ಗುಣಗಳ ಬೆಳೆವಣಿಗೆಗೆ ಗಮನ ಕೊಡಲಾಗುತ್ತಿತ್ತು. ಕೇವಲ ಧರ್ಮಗ್ರಂಥಗಳ ಕಂಠಪಾಠದ ಜೊತೆಗೆ ಪುರಾಣಗಳು, ಜಾತಕದ ಕಥೆಗಳು, ತೀರ್ಥಂಕರ ಚರಿತ್ರೆಗಳು ಪಠ್ಯಕ್ರಮದಲ್ಲಿ ಸೇರಿಕೊಂಡವು. ಜೊತೆಗೆ ಜೀವನೋಪಾಯಕ್ಕೆ ನೆರವಾಗತಕ್ಕ ವಾಣಿಜ್ಯ, ಕೈಗಾರಿಕೆ ಮುಂತಾದವುಗಳೂ ಪ್ರಚಾರಕ್ಕೆ ಬಂದುವು. ಜಾತಿಪದ್ಧತಿ ಪ್ರಚಾರಕ್ಕೆ ಬಂದಂತೆ ಪ್ರತಿ ಜಾತಿಯವರೂ ತಮ್ಮ ಜಾತಿಗೆ ಬಂದ ಕಸುಬನ್ನು ಮನೆಯಲ್ಲೆಲ್ಲ ಗುರುಗಳ ಮುಖದಿಂದಲೇ ಕಲಿತು ಆ ಮೂಲಕ ಸಮಾಜ ಜೀವನಕ್ಕೆ ನೆರವಾಗುವ ಅವಕಾಶವೂ ಹೆಚ್ಚುತ್ತಬಂತು.

ಪ್ರಾಚೀನ ಕಾಲದಲ್ಲಿ ಪ್ರಾಥಮಿಕ ಶಿಕ್ಷಣ ಬಹುಮಟ್ಟಿಗೆ ಮನೆಯಲ್ಲಿ ತಂದೆಯ ನೇತೃತ್ವದಲ್ಲಿ ನಡೆಯುತ್ತಿತ್ತು. ವಿದ್ಯಾರಂಭ ಸಂಸ್ಕಾರದ ಅನಂತರ ಮಕ್ಕಳು ಅಕ್ಷರಾಭ್ಯಾಸ ಆರಂಭಿಸುತ್ತಿದ್ದರು. 12–13ನೆಯ ವಯಸ್ಸಿನಲ್ಲಿ ಏರ್ಪಡುತ್ತಿದ್ದ ಉಪನಯನಾನಂತರ ವಿದ್ಯಾರ್ಥಿಗಳು ಗುರುಗಳ ಮನೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತ ಬ್ರಹ್ಮಚರ್ಯದ ನಿಷ್ಠಾಜೀವನ ನಡೆಸುತ್ತಿದ್ದರು. ಇದು ಹಿಂದೂ (ವೈದಿಕ ಶಿಕ್ಷಣ) ಪದ್ಧತಿಯಲ್ಲಿ ಆಚರಣೆಯಲ್ಲಿದ್ದರೆ ಬೌದ್ಧಶಿಕ್ಷಣಕ್ಕೆ ವಿದ್ಯಾರ್ಥಿಗಳು ಮಠ ಅಥವಾ ಸಂಘಾರಾಮಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ವಿಹಾರಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದರು. ಆಗ ಪ್ರಾಥಮಿಕ ಶಿಕ್ಷಣಕ್ಕೂ ಉನ್ನತ ಶಿಕ್ಷಣಕ್ಕೂ ಮಧ್ಯೆ ಪ್ರೌಢಶಿಕ್ಷಣ ಒಂದು ನಿರ್ದಿಷ್ಟ ಅಂತಸ್ತಾಗಿರಲಿಲ್ಲ. ಅದು ಉನ್ನತ ಶಿಕ್ಷಣದಲ್ಲೇ ಸೇರಿಹೋಗಿತ್ತು. ಸುಮಾರು 9–10ನೆಯ ಶತಮಾನದ ವೇಳೆಗೆ ದೇವಾಲಯಗಳು ತಮ್ಮ ಆಶ್ರಯದಲ್ಲಿ ವಿದ್ಯಾಲಯಗಳನ್ನು ಆರಂಭಿಸಿ, ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದವು. ಅವು ಧಾರ್ಮಿಕ ಶಿಕ್ಷಣದ ಜೊತೆಗೆ ಲೌಕಿಕ ಹಾಗೂ ವೃತ್ತಿಶಿಕ್ಷಣಕ್ಕೆ ಅವಕಾಶ ಕಲ್ಪಿಸಿದುವು.

**ಶಿಕ್ಷಣ ಮಾಧ್ಯಮ:** ಜೈನ ಮತ್ತು ಬೌದ್ಧ ಶಿಕ್ಷಣಪದ್ಧತಿಗಳು ಪ್ರಾಕೃತವನ್ನು ಶಿಕ್ಷಣ ಮಾಧ್ಯಮವಾಗಿ ಬಳಸಿದಂತೆ ಕ್ರಿಸ್ತಪೂರ್ವದಲ್ಲಿ ಪ್ರಚಾರದಲ್ಲಿದ್ದ ಸಂಸ್ಕೃತ ಮಾಧ್ಯಮ ಕ್ರಮಕ್ರಮವಾಗಿ ಹಿಂಬದಿಗೆ ಬೀಳುತ್ತ ಬಂತು; ಆದರೆ ಎರಡನೆಯ ಶತಮಾನದ ವೇಳೆಗೆ ಅದು ಮತ್ತೆ ಪ್ರಾಬಲ್ಯಕ್ಕೆ ಬಂತು. ಪ್ರಾದೇಶಿಕ ಭಾಷೆಯನ್ನು ಬಳಸುತ್ತಿದ್ದ ಜೈನ ಬೌದ್ಧ ಶಿಕ್ಷಣ ಸಂಸ್ಥೆಗಳಲ್ಲೂ ಸಂಸ್ಕೃತ ಮಾಧ್ಯಮ ಪ್ರಚಾರಕ್ಕೆ ಬರಹತ್ತಿತು. ಕ್ರಿ.ಶ. ನಾಲ್ಕನೆಯ ಶತಮಾನದ ಅನಂತರದ ಯಾವ ಶಾಸನದಲ್ಲೂ ಪ್ರಾಕೃತ ಭಾಷೆ ಕಂಡುಬರುವುದಿಲ್ಲ. ಆ ಸುಮಾರಿನಲ್ಲಿ ಶಾತವಾಹನ ಅರಸರು ಪ್ರಾಕೃತಕ್ಕೆ ಪ್ರಾಶಸ್ತ್ಯವಿತ್ತು ಮತ್ತೆ ಅದನ್ನು ಆಡಳಿತಭಾಷೆಯಾಗಿಯೂ ಶಿಕ್ಷಣಮಾಧ್ಯಮವನ್ನಾಗಿಯೂ ಪ್ರಚಾರಕ್ಕೆ ತಂದರು. ಆದರೆ ಅನಂತರದ ಅರಸರು ಮತ್ತೆ ಸಂಸ್ಕೃತಕ್ಕೆ ಮೊರೆಹೋದರು. ಪ್ರಾಥಮಿಕ ಮಟ್ಟದಲ್ಲೂ ಸಂಸ್ಕೃತ ಬೋಧನ ಮಾಧ್ಯಮವಾಗುತ್ತ ಬಂತು. ಅಲ್ಲಿ ಸಂಸ್ಕೃತ ವ್ಯಾಕರಣ ಕಲಿಯಬೇಕಾಗಿತ್ತು. ಹತ್ತನೆಯ ಶತಮಾನದವರೆಗೂ ಇದು ಪ್ರಚಾರದಲ್ಲಿದ್ದು ಅನಂತರ ಕನ್ನಡದಲ್ಲಿ ಕಾವ್ಯಗಳು ಪ್ರಚಾರಕ್ಕೆ ಬಂದಂತೆ ಕನ್ನಡ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ವಿಷಯವಾದಂತೆ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಅಕ್ಷರಾಭ್ಯಾಸ, ಕನ್ನಡ ಓದುಗಾರಿಕೆ ಮತ್ತು ಕಂಠಪಾಠಗಳು ಆರಂಭವಾದುವು. ಜೈನ ಮತ್ತು ವೀರಶೈವ ಧರ್ಮಗಳು ಕನ್ನಡವನ್ನು ಧಾರ್ಮಿಕ ಕ್ಷೇತ್ರದಲ್ಲಿ ಪ್ರಚಾರಕ್ಕೆ ತಂದಮೇಲೆ ಶಿಕ್ಷಣದ ಎಲ್ಲ ಹಂತಗಳಲ್ಲೂ ಕನ್ನಡ ಮಾಧ್ಯಮಕ್ಕೆ ಅವಕಾಶ ಕಲ್ಪನೆಯಾಯಿತು.

**ಮಹಿಳಾ ಶಿಕ್ಷಣ:** ಸುಸಂಸ್ಕೃತ ಕುಟುಂಬಗಳಲ್ಲೂ ಶ್ರೀಮಂತರ ಮತ್ತು ರಾಜಮಹಾರಾಜರ ಕುಟುಂಬಗಳಲ್ಲೂ ಅಷ್ಟಿಷ್ಟು ಶಿಕ್ಷಣಕ್ಕೆ ಅವಕಾಶವಿದ್ದರೂ ಸಾಮಾನ್ಯ ಮಹಿಳೆಯರಿಗೆ ಯಾವ ವ್ಯವಸ್ಥಿತ ಶಿಕ್ಷಣಸೌಲಭ್ಯವೂ ಇರಲಿಲ್ಲ. ಬೌದ್ಧವಿಹಾರಗಳು, ಕಲ್ಯಾಣದ ಅನುಭವಮಂಟಪ, ಕೂಡಲ ಸಂಗಮದ ವಿದ್ಯಾಪೀಠ ಮುಂತಾದ ಕೆಲವು ವಿದ್ಯಾಪೀಠಗಳನ್ನು ಬಿಟ್ಟರೆ ಮಹಿಳಾ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದ್ದ ಸಂಸ್ಥೆಗಳು ಪ್ರಾಚೀನ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಆದರೂ ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯರು ಆಡಳಿತ, ಸಾಹಿತ್ಯ, ಕಲೆ, ಕದನಕೌಶಲ ಮುಂತಾದ ಕ್ಷೇತ್ರಗಳಲ್ಲಿ ಖ್ಯಾತಿಗಳಿಸಿದ್ದರು. ಅವರೆಲ್ಲ ತಮ್ಮ ಮನೆಯಲ್ಲಿ ಶಿಕ್ಷಣಪಡೆದು ಪಾಂಡಿತ್ಯ ಸಾಧಿಸಿದವರು.

**ವೃತ್ತಿಶಿಕ್ಷಣ:** ಪ್ರಾಚೀನ ಕರ್ನಾಟಕದಲ್ಲಿ ವೃತ್ತಿಶಿಕ್ಷಣ ಬಹುಮಟ್ಟಿಗೆ ಉಮೇದುವಾರಿಯದಾಗಿರುತ್ತಿತ್ತು. ಒಂದೊಂದು ವರ್ಣದವರು ತಮ್ಮ ತಮ್ಮ ವೃತ್ತಿಯನ್ನೇ ಅನುಸರಿಸುತ್ತಿದ್ದುದರಿಂದ ಅವರು ತಮ್ಮ ಮನೆಯಲ್ಲೊ ನೆಂಟರ ಮನೆಯಲ್ಲೊ ಹಿರಿಯರ ನೇತೃತ್ವದಲ್ಲಿ ಶಿಕ್ಷಣ ಪಡೆಯುತ್ತಿದ್ದರು. ವಾಣಿಜ್ಯ, ಬಿಲ್ಲುಗಾರಿಕೆ, ಸಂಗೀತ, ನೃತ್ಯ, ವೈದ್ಯ, ವಾಸ್ತು, ಶಿಲ್ಪ, ಪೌರೋಹಿತ್ಯ ಮುಂತಾದ ಕಸಬುಗಳಿಗೆ ಆ ರೀತಿಯಲ್ಲಿ ಶಿಕ್ಷಣ ದೊರಕುತ್ತಿತ್ತು. ದೇವಾಲಯದ ವಿದ್ಯಾಲಯಗಳು ಪ್ರಚಾರಕ್ಕೆ ಬಂದಂತೆ ಅಲ್ಲಿ ಕೆಲವು ವೃತ್ತಿಗಳಿಗೆ ಶಿಕ್ಷಣವೀಯುವ ಅವಕಾಶ ಕಲ್ಪನೆಯಾಗಿತ್ತು. ಕ್ರಿಸ್ತಪೂರ್ವದ ಆರಂಭದಿಂದಲೂ ಬೌದ್ಧವಿಹಾರಗಳಲ್ಲಿ ವೈದ್ಯವೇ ಮುಂತಾದ ಕೆಲವು ಲೌಕಿಕವಿದ್ಯೆಗಳಿಗೆ ಅವಕಾಶ ಕಲ್ಪಿಸಲಾಗಿತ್ತು.

**ವಿದ್ಯಾಸಂಸ್ಥೆಗಳಲ್ಲಿ ಶಿಸ್ತು:** ಆಚಾರ್ಯ ದೇವೋಭವ ಎಂಬುದು ಪ್ರಾಥಮಿಕ ಶಾಲೆಯಲ್ಲಿ ಕಲಿಯಬೇಕಾಗಿದ್ದ ಮೊದಲ ಮಂತ್ರ. ದೇವರ ಬಗ್ಗೆ ನಡೆದುಕೊಳ್ಳುವಂತೆ ಗುರುಗಳ ಬಗ್ಗೆಯೂ ನಡೆದುಕೊಳ್ಳಬೇಕಾಗಿತ್ತು. ತಂದೆತಾಯಿಗಳೂ ಈ ಭಾವನೆಗೆ ಪ್ರೋತ್ಸಾಹ ನೀಡುತ್ತಿದ್ದರು. ವಿದ್ಯಾರಂಭಸಂಸ್ಕಾರ ಸಮಾರಂಭದಲ್ಲಿ ಮನೆಗೆ ಗುರುಗಳನ್ನು ಬರಮಾಡಿಕೊಂಡು ಗೌರವಿಸುತ್ತಿದ್ದರು.

ಉನ್ನತ ಶಿಕ್ಷಣಕ್ಕಾಗಿ ಗುರುಗಳ ಮನೆಯಲ್ಲೇ (ಗುರುಕುಲ) ಇದ್ದುಕೊಂಡು ಅವರ ಮಗನಂತೆ ನಡೆದುಕೊಳ್ಳುವಾಗಲೂ ಈ ಪೂಜ್ಯಭಾವನೆಯೇ ಮುಂದುವರಿಯುತ್ತಿತ್ತು. ಗುರುಗಳ ಆದರ್ಶದಲ್ಲಿ ಬ್ರಹ್ಮಚರ್ಯೆಯ ನಿಷ್ಠಾಜೀವನ ನಡೆಸುವುದರ ಜೊತೆಗೆ ಸಾಮಾಜಿಕ ಸದ್ಗುಣಗಳನ್ನು ಬೆಳೆಸಿಕೊಳ್ಳುತ್ತಿದ್ದರು. ವ್ಯವಸ್ಥಿತ ಶಿಕ್ಷಣ ಆರಂಭವಾದ ಮೇಲೂ ಈ ಗುರುಭಕ್ತಿ ಮುಂದುವರಿಯುತ್ತಿತ್ತು. ಆದರೂ ಕೆಲವು ವೇಳೆ ವಿದ್ಯಾರ್ಥಿಗಳಲ್ಲಿ ತುಂಟತನ ಕಂಡುಬರುತ್ತಿತ್ತು. ಅಂಥವರಿಗೆ ಉಗ್ರದಂಡನೆ ಕಾದಿರುತ್ತಿತ್ತು. ಅಂದಿನ ಶಿಕ್ಷಣವೇತ್ತರು ದಂಡಂ ದಶಗುಣಂ ಭವೇತ್ ಎಂಬ ಉಕ್ತಿಯಲ್ಲಿ ನಂಬಿಕೆಯಿಟ್ಟಿದ್ದರು.

**ಜನತೆಯಲ್ಲಿ ವಿದ್ಯಾಭಿಮಾನ:** ನ ಹಿ ಜ್ಞಾನೇನ ಸದೃಶಂ, ವಿದ್ಯಾವಿಹೀನಃ ಪಶುಃ ಮುಂತಾದ ಉಕ್ತಿಗಳು ವಿದ್ಯೆಯ ಬಗ್ಗೆ ಜನರಿಗಿದ್ದ ಅಭಿಮಾನವನ್ನು ಸೂಚಿಸುತ್ತವೆ. ಧಾರ್ಮಿಕ ಶಿಕ್ಷಣಕ್ಕೆ, ಜ್ಞಾನಾರ್ಜನೆಗೆ ವಿದ್ಯೆಯೇ ಮೂಲವೆನಿಸಿದ್ದರಿಂದ ಅದಕ್ಕೆ ಆಧ್ಯಾತ್ಮಿಕ ಗೌರವವೂ ಬಂದಿತ್ತು. ವಿದ್ಯಾದಾನಂ ಮಹಾಪುಣ್ಯಂ ಎಂಬ ಉಕ್ತಿಯೂ ಪ್ರಚಾರಕ್ಕೆ ಬಂದಿದ್ದು ಧನಿಕರು ವಿದ್ಯಾಸೌಲಭ್ಯವೊದಗಿಸಲು ಮುಂದೆ ಬರುತ್ತಿದ್ದರು. ರಾಜರೂ ಮಾಂಡಲೀಕರೂ ತಮ್ಮ ಆಡಳಿತ ಕ್ಷೇತ್ರದಲ್ಲಿ ವಿದ್ವಜ್ಜನರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಬ್ರಹ್ಮಪುರಿ, ಅಗ್ರಹಾರ, ಘಟಿಕಾಲಯ, ದೇವಾಲಯದ ವಿದ್ಯಾಪೀಠ, ಬಸದಿ, ವಿಹಾರ, ಮಠ ಮುಂತಾದ ವಿದ್ಯಾಸಂಸ್ಥೆಗೆ ಉದಾರವಾಗಿ ಧನಧಾನ್ಯಗಳನ್ನು ನೀಡುತ್ತಿದ್ದುದಲ್ಲದೆ ಭೂಮಿಯನ್ನು

ಕೊಡುಗೆಯಾಗಿ ಬಿಡುತ್ತಿದ್ದರು. ಧನಿಕರನೇಕರು ತಮ್ಮ ಮನೆಯಲ್ಲೇ ಪಂಡಿತರನ್ನು ನೇಮಿಸಿಕೊಂಡು ಅಕ್ಕಪಕ್ಕದ ಮನೆಯ ಮಕ್ಕಳಿಗೂ ಶಿಕ್ಷಣವೀಯುವ ಅವಕಾಶ ಕಲ್ಪಿಸುತ್ತಿದ್ದರು. ಪುಸ್ತಕಗಳು ದೊರೆಯುವುದು ದುರ್ಲಭವಾಗಿದ್ದ ಆ ಕಾಲದಲ್ಲಿ ಧನಿಕರು ಕೈ ಬರೆಹದ ಪ್ರತಿಗಳನ್ನು ಮಾಡಿಸಿ ವಿದ್ಯಾಸಂಸ್ಥೆಗಳಿಗೆ ದಾನವಾಗಿ ಕೊಡುತ್ತಿದ್ದರು.

**ದೇಶೀಯ ಶಿಕ್ಷಣ ಪದ್ಧತಿಯ ಅವನತಿ:** ಒಂದೂವರೆ ಸಹಸ್ರ ವರ್ಷಗಳಿಂದ ಏಕಪ್ರಕಾರವಾಗಿ ಬೆಳೆದುಬಂದ ಕರ್ನಾಟಕದ ಶಿಕ್ಷಣಪದ್ಧತಿ ಹನ್ನೆರಡು ಹದಿಮೂರನೆಯ ಶತಮಾನಗಳ ವೇಳೆಗೆ ಪ್ರಬುದ್ಧ ಸ್ಥಿತಿ ಮುಟ್ಟಿತ್ತು. ಹೊಯ್ಸಳರ ಕಾಲದ ಶಾಂತಿಸಮೃದ್ಧಿಗಳೂ ಆಗ ನಿರ್ಮಿತವಾದ ಸಾಹಿತ್ಯಕೃತಿಗಳೂ ಶಿಲ್ಪಗಳೂ ಇದಕ್ಕೆ ಸಾಕ್ಷಿ. ಆದರೆ ಆ ಅರಸುಮನೆತನದ ಉತ್ತರಾರ್ಧದಲ್ಲಿ ಸಂಭವಿಸಿದ ಮುಸಲ್ಮಾನರ ದಾಳಿಯಿಂದ ಆ ಶಿಕ್ಷಣಪರಂಪರೆಯ ಪ್ರವಾಹಕ್ಕೆ ಅಡ್ಡಿಯೊದಗಿತು. ಮತಾಂಧತೆಯ ಹುಮ್ಮಸ್ಸಿನಿಂದ ದೇವಾಲಯಗಳೂ ಮಠಮಾನ್ಯಗಳೂ ಪಾಳ್ಗೆಡೆದು ಹೋಗಿ ಅವು ನಡೆಸುತ್ತಿದ್ದ ಶಿಕ್ಷಣಸಂಸ್ಥೆಗಳು ಮುಚ್ಚಿಹೋದುವು. ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಅಸ್ತಿತ್ವದಲ್ಲಿದ್ದ ಪ್ರಾಥಮಿಕ ಶಾಲೆಗಳು ಮುಸಲ್ಮಾನರ ದಾಳಿ ದಕ್ಷಿಣಕ್ಕೆ ಸಾಗಿಬಂದಂತೆ ಕ್ರಮಕ್ರಮವಾಗಿ ಮುಚ್ಚುತ್ತ ಹೋದುವು. ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಅಸ್ತಿತ್ವದಲ್ಲಿದ್ದ ಪ್ರಾಥಮಿಕ ಶಾಲೆಗಳು ಮುಸಲ್ಮಾನರ ದಾಳಿ ದಕ್ಷಿಣಕ್ಕೆ ಸಾಗಿಬಂದಂತೆ ಕ್ರಮಕ್ರಮವಾಗಿ ಮುಚ್ಚುತ್ತ ಹೋದುವು. ಅನಂತರ ಹದಿನಾಲ್ಕನೆಯ ಶತಮಾನದ ಕೊನೆಯ ಪಾದದಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರದ ಕಾಲದಲ್ಲಿ ಆ ಶಿಕ್ಷಣ ಸಂಸ್ಥೆಗಳು ಮತ್ತೆ ಆರಂಭವಾದರೂ ಆ ಸಾಮ್ರಾಜ್ಯದ ಪತನಾನಂತರ ಮತ್ತೆ ಮುಚ್ಚಲಾರಂಭಿಸಿದುವು. ನಿತ್ಯಯುದ್ಧಗಳಿಗೆ ಸಿಕ್ಕಿದ ನಾಡು ಕ್ಷೋಭೆಗೀಡಾಗಿ ಶಿಕ್ಷಣವ್ಯವಸ್ಥೆ ಕುಸಿದು ಬಿತ್ತು.

**ಮುಸ್ಲಿಂ ಶಿಕ್ಷಣ:** ಹದಿನಾಲ್ಕನೆಯ ಶತಮಾನದ ಮೊದಲ ದಶಕದಲ್ಲಿ ಉತ್ತರ ಕರ್ನಾಟಕದಲ್ಲಿ ಮಕ್ತಾಬ್ ಎಂಬ ಪ್ರಾಥಮಿಕ ಶಾಲೆಗಳೂ ಮದರಸಾಗಳೆಂಬ ಉನ್ನತ ಶಿಕ್ಷಣ ಸಂಸ್ಥೆಗಳೂ ಆರಂಭವಾದುವು. ಬಹಮನೀ ರಾಜ್ಯದ ಅರಸರು ಅವನ್ನು ಸ್ಥಾಪಿಸಿ ಪ್ರೋತ್ಸಾಹಿಸಿದರು. ಮಸೀದಿಗಳ ಆಶ್ರಯದಲ್ಲಿ ನಡೆಯುತ್ತಿದ್ದ ಆ ಸಂಸ್ಥೆಗಳು ಹಿಂದುಗಳಿಗೆ ಆಕರ್ಷಕವಾಗಿ ತೋರಲಿಲ್ಲ. ಹದಿನೈದನೆಯ ಶತಮಾನದ ಕೊನೆಯಲ್ಲಿ ರಾಜ್ಯದ ಮಂತ್ರಿಯಾಗಿದ್ದ ಮಹ್ಮೂದ್ ಗವಾನ್ ಎಂಬುವನು ಬಿದರೆಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಪರ್ಷಿಯನ್ ಶಿಕ್ಷಣ ಪದ್ಧತಿಯ ಮಾದರಿಯಲ್ಲಿ ಶಿಕ್ಷಣ ವ್ಯವಸ್ಥೆ ಮಾಡಿದ್ದ, ಮುಸ್ಲಿಂ ಶಿಕ್ಷಣ ಕರ್ನಾಟಕದ ದೇಶೀಯ ಶಿಕ್ಷಣ ಪದ್ಧತಿಯ ಮೇಲೆ ಸ್ವಲ್ಪಮಟ್ಟಿನ ಪ್ರಭಾವ ಬೀರಿತೆನ್ನಬಹುದು. ಇತಿಹಾಸ ಮುಂತಾದ ವಿಷಯಗಳು ವ್ಯಾಸಂಗಕ್ರಮದಲ್ಲಿ ಸೇರಿಕೊಂಡುವು. ಅನಂತರ ಮೈಸೂರಿನ ಹೈದರ್ ಅಲಿ, ಟಿಪ್ಪುಸುಲ್ತಾನರ ಕಾಲದಲ್ಲಿ ಆ ಭಾಗದಲ್ಲಿ ಸ್ವಲ್ಪಮಟ್ಟಿಗೆ ಮುಸ್ಲಿಂ ಶಿಕ್ಷಣದ ಪ್ರಚಾರ ಆರಂಭವಾದರೂ ನಿತ್ಯಯುದ್ಧಗಳಿಗೆ ಎಡೆಗೊಟ್ಟದ್ದರಿಂದ ಅವರು ಶಿಕ್ಷಣಕ್ಷೇತ್ರದ ಕಡೆ ಅಷ್ಟಾಗಿ ಗಮನ ಕೊಡಲಾಗಲಿಲ್ಲ.

ಕರ್ನಾಟಕದ ಹಲವೆಡೆಗಳಲ್ಲಿ ಮುಸ್ಲಿಂ ಶಿಕ್ಷಣ ಆಚರಣೆಗೆ ಬಂದಿದ್ದರೂ ಅದು ಜನಜೀವನವನ್ನು ಅಷ್ಟಾಗಿ ಪ್ರಚೋದಿಸಲಿಲ್ಲ. ಕ್ರಿಸ್ತಪೂರ್ವದಲ್ಲಿ ಜೈನ, ಬೌದ್ಧ ಶಿಕ್ಷಣಪದ್ಧತಿಗಳು ಅಸ್ತಿತ್ವಕ್ಕೆ ಬಂದಿದ್ದರೂ ಅವು ಹಿಂದು ಶಿಕ್ಷಣ ಪದ್ಧತಿಗೆ ಪರಕೀಯವಾಗಿ ಉಳಿಯದೆ ಇಲ್ಲಿನ ಜನಜೀವನಕ್ಕೆ ಹೊಂದಿಕೊಂಡೇ ಮುಂದುವರಿದುವು. ಆ ಪ್ರಭಾವ ಮುಸ್ಲಿಂ ಶಿಕ್ಷಣದಿಂದ ಆಗಲಿಲ್ಲ. ಜೀವನದಲ್ಲಿ ಹೊಸ ಮೌಲ್ಯವನ್ನು ಕಂಡುಕೊಳ್ಳುವಂಥ ಯಾವ ಪರಿಣಾಮವೂ ಅದರಿಂದ ಆಗಲಿಲ್ಲ. ಜೊತೆಗೆ ಮತದ್ವೇಷದ ಹುರುಪಿನಿಂದ ಅನೇಕ ಹಿಂದೂ ಶಿಕ್ಷಣ ಸಂಸ್ಥೆಗಳು ನಿರ್ನಾಮವಾದವು.

**ಆಧುನಿಕ ಶಿಕ್ಷಣ ಪದ್ಧತಿ:** ಹತ್ತೊಂಬತ್ತನೆಯ ಶತಮಾನದ ಆರಂಭದ ಹೊತ್ತಿಗೆ ಭಾರತ ಬಹುಮಟ್ಟಿಗೆ ಬ್ರಿಟಿಷರ ಆಳ್ವಿಕೆಗೆ ಬಂದಿತ್ತು. ಕರ್ನಾಟಕದಲ್ಲಿ ಟಿಪ್ಪುಸುಲ್ತಾನನ ಮರಣಾನಂತರ ಮೈಸೂರು ಪ್ರಾಂತ ಒಡೆಯರ ಅರಸು ಮನೆತನಕ್ಕೆ ಬಂದರೂ ಅದಕ್ಕೆ ಸೇರಿದ್ದ ಇತರ ಭಾಗಗಳು ಹೈದರಾಬಾದ್, ಮದರಾಸು, ಮಹಾರಾಷ್ಟ್ರ (ಮುಂಬಯಿ) ರಾಜ್ಯಗಳಿಗೆ ಸೇರಿಹೋದವು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹಿಂದೂ ಅರಸರು ಆಳುತ್ತಿದ್ದರೂ ಅವರೆಲ್ಲ ಸ್ವಲ್ಪ ಸ್ವಲ್ಪ ಕಾಲ ಅಧಿಕಾರದಲ್ಲಿದ್ದುದರ ಫಲವಾಗಿ ದೇಶೀಯ ಶಿಕ್ಷಣಪದ್ಧತಿಗೆ ಪ್ರೋತ್ಸಾಹವಿಲ್ಲವಾಗಿ ಮೂಲೆಗುಂಪಾಯಿತು. ಇಲ್ಲಿನ ದೇಶೀಯ ಶಿಕ್ಷಣ ಪದ್ಧತಿಯನ್ನು ಪಾಳ್ಗೆಡೆದ ಮುಸ್ಲಿಂ ಶಿಕ್ಷಣ ಪದ್ಧತಿಗೂ ಅದೇ ಗತಿ ಒದಗಿತು. ಜೊತೆಗೆ ಆಗತಾನೆ ಆಡಳಿತ ಯಂತ್ರವನ್ನು ರೂಪಿಸುತ್ತಿದ್ದ ಕಂಪನಿ ಸರ್ಕಾರಕ್ಕೆ ಇಂಗ್ಲಿಷು ಬಲ್ಲ ಸೇವಕರ ಅಗತ್ಯವಿತ್ತು. ಆರ್ಥಿಕ ಆಶೋತ್ತರವನ್ನು ತೋರಿದ ಇಂಗ್ಲಿಷ್ ಶಿಕ್ಷಣ ಪದ್ದತಿ ಜನತೆಗೆ ಆಕರ್ಷಕವಾಗಿ ಕಂಡಿತು. ಇಲ್ಲಿಗೆ ಯೂರೋಪಿನಿಂದ ಆಗಮಿಸಿದ ಪಾದ್ರಿಗಳು 17-18ನೆಯ ಶತಮಾನಗಳಲ್ಲಿ ಮತಪ್ರಚಾರದ ಮೂಲ ಉದ್ದೇಶದಿಂದ ಇಂಗ್ಲಿಷ್ ಶಾಲೆಗಳನ್ನು ಆರಂಭಿಸಿದ್ದರೂ ಆ ಶಿಕ್ಷಣ ಪದ್ಧತಿ ವಿಧಿವತ್ತಾಗಿ ಆಚರಣೆಗೆ ಬಂದುದು 1835ರಲ್ಲಿ. ಅಂದಿನ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಭಾರತದ ಜನತೆಗೆ ಇಂಗ್ಲಿಷ್ ಮಾಧ್ಯಮದ ಮೂಲಕ ಐರೋಪ್ಯ ಜ್ಞಾನ, ವಿಜ್ಞಾನ, ಸಾಹಿತ್ಯಾದಿಗಳನ್ನು ಬೋಧಿಸುವುದೇ ಬ್ರಿಟಿಷ್ ಸರ್ಕಾರದ ಉದ್ದೇಶವೆಂದು ಘೋಷಿಸಿದ ಮೇಲೆ ಭಾರತಾದ್ಯಂತ ಇಂಗ್ಲಿಷ್ ಶಿಕ್ಷಣಪದ್ಧತಿ ಹರಡುತ್ತ ಬಂತು. ಅದರ ಜೊತೆಯಲ್ಲೇ ದೇಶೀಯ ಶಿಕ್ಷಣ ಪದ್ಧತಿಗಳು ಮಾಯವಾಗುತ್ತ ಬಂದುವು. ಕರ್ನಾಟಕದಲ್ಲೂ ಇದೇ ಪರಿಣಾಮವಾಯಿತು. ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯದವರೆಗಿನ ಎಲ್ಲ ಹಂತಗಳಲ್ಲೂ ಶಿಕ್ಷಣ ಇಂಗ್ಲಿಷ್ ಶಿಕ್ಷಣವ್ಯವಸ್ಥೆಯನ್ನೇ ಅನುಸರಿಸಿ ರೂಪುಗೊಳ್ಳುತ್ತ ಬಂತು. 1947ರ ವೇಳೆಗೆ ಆ ಪದ್ಧತಿ ಹೆಮ್ಮರವಾಗಿ ಬೆಳೆದು ನಿಂತಿತು. ಗಾಂಧೀಜಿಯವರು ರೂಪಿಸಿದ ಮೂಲಶಿಕ್ಷಣವನ್ನು ಪ್ರಚಾರಕ್ಕೆ ತರಲು ಪ್ರಯತ್ನ ನಡೆದರೂ ಅದು ಅಷ್ಟು ಯಶಸ್ಸನ್ನು ಕಾಣಲಿಲ್ಲ.

**ಉಪಸಂಹಾರ:** ಆಶ್ರಮ, ಗುರುಕುಲಗಳಲ್ಲಿ ಆರಂಭವಾದ ಇತಿಹಾಸ ಪೂರ್ವದ ಕರ್ನಾಟಕದ ಶಿಕ್ಷಣಪರಂಪರೆಯ ಪ್ರವಾಹ ಕ್ರಿ.ಪೂ. ನಾಲ್ಕನೆಯ ಶತಮಾನದಿಂದ ಜೈನ ಬಸದಿಗಳಿಂದಲೂ ಬೌದ್ಧ ಪರಂಪರೆಯ ಸಂಘಾರಾಮ, ಚೈತ್ಯಾಲಯ, ಮಠ, ವಿಹಾರಾದಿಗಳಿಂದಲೂ ಪರಿಪುಷ್ಟಿಗೊಂಡು ಅಭಿವರ್ಧಿಸಿ ಹತ್ತನೆಯ ಶತಮಾನದ ಸುಮಾರಿನಲ್ಲಿ ದೇವಾಲಯದ ವಿದ್ಯಾಪೀಠದ ಉಗಮವನ್ನು ಕಂಡು ಹದಿಮೂರನೆಯ ಶತಮಾನದ ಕೊನೆಕೊನೆಗೆ ಸಂಭವಿಸಿದ ಮುಸ್ಲಿಮರ ದಾಳಿಯ ಬೇನೆಗೆ ಸಿಕ್ಕಿ ಕುಂದುತ್ತ ಬಂತು. ಐದಾರು ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದು ಮುಸ್ಲಿಂ ಶಿಕ್ಷಣವೂ ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಅದೇ ಗತಿಯನ್ನನುಭವಿಸಬೇಕಾಯಿತು. ಇಂಗ್ಲಿಷ್ ಶಿಕ್ಷಣಪದ್ಧತಿಯ ಆಕರ್ಷಣೆಗೆ ಸಿಕ್ಕಿದ ಇಲ್ಲಿನ ಎಲ್ಲ ಶಿಕ್ಷಣಪದ್ಧತಿಗಳೂ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡುವು. ನೂತನವಾಗಿ ಆರಂಭವಾದ ಇಂಗ್ಲಿಷ್ ಶಿಕ್ಷಣಪದ್ಧತಿ ಹಾಗೂಹೀಗೂ ಇಲ್ಲಿನವರ ಆಶೋತ್ತರಗಳನ್ನು ಈಡೇರಿಸಿಕೊಂಡು ಬಂದು ಈಗ ನಮ್ಮ ಜೀವನಕ್ಕೊಪ್ಪುವಂತೆ ರೂಪುಗೊಂಡು ಮುಂದುವರಿಯುತ್ತಿದೆ. **(ಎನ್.ಎಸ್.ವಿ.)**

**ಶಿಕ್ಷಣದ ಆಡಳಿತ:** ಕರ್ನಾಟಕ ರಾಜ್ಯವನ್ನು ಸಾಮಾನ್ಯ ಆಡಳಿತ ದೃಷ್ಟಿಯಿಂದ 27 ರೆವಿನ್ಯೂ ಜಿಲ್ಲೆಗಳಾಗಿಯೂ ಶಿಕ್ಷಣ ಆಡಳಿತ ದೃಷ್ಟಿಯಿಂದ 20 ಜಿಲ್ಲೆಗಳಾಗಿಯೂ ವಿಂಗಡಿಸಿದೆ. ಒಟ್ಟು ನಾಲ್ಕು ಶಿಕ್ಷಣ ವಿಭಾಗಗಳಿವೆ. ಬೆಂಗಳೂರು, ಮೈಸೂರು, ಧಾರವಾಡ ಮತ್ತು ಗುಲ್ಬರ್ಗ-

ಈ ಒಂದೊಂದು ವಿಭಾಗಕ್ಕೂ ಒಬ್ಬೊಬ್ಬ ಸಹನಿರ್ದೇಶಕರಿದ್ದಾರೆ. ಪ್ರತಿಯೊಬ್ಬ ಸಹನಿರ್ದೇಶಕರಿಗೂ ಸಹಾಯಕರಾಗಿ ಒಬ್ಬರು ಎಜುಕೇಷನಲ್ ಆಫೀಸರ್ ಮತ್ತು ಒಬ್ಬರು ಗೆಜೆಟೆಡ್ ಅಸಿಸ್ಟೆಂಟ್ ನೇಮಕಗೊಂಡಿದ್ದಾರೆ.

ರಾಜ್ಯದ 20 ಶೈಕ್ಷಣಿಕ ಜಿಲ್ಲೆಗಳಿಗೆ (ಬೆಂಗಳೂರು ಪಟ್ಟಣ ಒಂದು ಶೈಕ್ಷಣಿಕ ಜಿಲ್ಲೆಯೆಂದು ಪರಿಗಣಿಸಲ್ಪಟ್ಟಿದೆ) ಜಿಲ್ಲೆಗೊಬ್ಬರಂತೆ ಡೆಪ್ಯುಟಿ ಡೈರೆಕ್ಟರ್‌ಗಳು ನೇಮಕಗೊಂಡಿದ್ದಾರೆ. ಈ ಡೆಪ್ಯುಟಿ ಡೈರೆಕ್ಟರ್‌ರವರ ಅಧೀನದಲ್ಲಿ ಪ್ರತಿ ಐವತ್ತು ಪ್ರೌಢಶಾಲೆಗಳಿಗೆ ಒಬ್ಬ ಎಜುಕೇಷನಲ್ ಆಫೀಸರ್ ಇದ್ದಾರೆ. ಕೆಲವು ಜಿಲ್ಲೆಗಳಲ್ಲಿ ಒಬ್ಬರು ಕೆಲವು ಜಿಲ್ಲೆಗಳಲ್ಲಿ ಮೂವರು ಎಜುಕೇಷನಲ್ ಆಫೀಸರುಗಳು ಇದ್ದಾರೆ. ಪ್ರತಿ ಜಿಲ್ಲೆಗೆ ಎರಡನೆಯ ತರಗತಿಯ ಐವರು ಸಬ್ಜೆಕ್ಟ್ ಇನ್ಸ್‌ಪೆಕ್ಟರು ಪ್ರೌಢಶಾಲೆಗಳಿಗೆ ತಮಗೆ ಸಂಬಂಧಪಟ್ಟ ಪಠ್ಯವಿಷಯ ಬೋಧನೆಯಲ್ಲಿ ಉಪಾಧ್ಯಾಯರಿಗೆ ಮಾರ್ಗದರ್ಶನ ನೀಡುತ್ತಾರೆ.

ತಾಲ್ಲೂಕು ಮಟ್ಟದಲ್ಲಿ ಶೈಕ್ಷಣಿಕ ಜವಾಬ್ದಾರಿ ಅಸಿಸ್ಟೆಂಟ್ ಎಜುಕೇಷನಲ್ ಆಫೀಸರರಿಗೆ ವಹಿಸಲ್ಪಟ್ಟಿದೆ. ಪ್ರತಿ ಅಸಿಸ್ಟೆಂಟ್ ಎಜುಕೇಷನಲ್ ಆಫೀಸರಿಗೂ ಸಹಾಯಕರಾಗಿ ಪ್ರತಿ ಎಪ್ಪತ್ತೈದು ಶಾಲೆಗಳಿಗೊಬ್ಬರಂತೆ ಇನ್ಸ್‌ಪೆಕ್ಟರುಗಳು ನೇಮಕಗೊಂಡಿದ್ದಾರೆ. ಇತ್ತೀಚೆಗೆ ಮಾಡಿದ ಈ ಏರ್ಪಾಡುಗಳಿಂದ ತಾಲ್ಲೂಕು ಮಟ್ಟದಲ್ಲಿ ಶಾಲಾ ತನಿಖೆಯು ಶಿಕ್ಷಣದ ದೃಷ್ಟಿಯಿಂದ ಮೊದಲಗಿಂತ ಉತ್ತಮವಾಗಿ ನಡೆಯುವಂತಾಗಿದೆ ಎಂದು ಹೇಳಬಹುದು.

ಪ್ರಾಥಮಿಕ ಶಾಲೆಗಳಲ್ಲಿ ಪ್ರೌಢಶಿಕ್ಷಣ ಮುಗಿಸಿದ ಮತ್ತು ವೃತ್ತಿ ತರಬೇತಿ ಪಡೆದ ಅಧ್ಯಾಪಕರೂ ಪ್ರೌಢಶಾಲೆಗಳಲ್ಲಿ ತರಬೇತಿ ಪಡೆದ ಪದವೀಧರ ಉಪಾಧ್ಯಾಯರೂ ನೇಮಕಗೊಂಡಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಕೆಲವೆಡೆ ತರಬೇತಿ ಪಡೆದ ಪದವೀಧರರು ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಹಿಂದೆ ಸೇಕಡ 72.4ರಷ್ಟು ತರಬೇತಿ ಪಡೆದ ಅಧ್ಯಾಪಕರಿದ್ದು ಈಗ ಇವರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಸೆಕೆಂಡರಿ ಹಂತಗಳಲ್ಲಿ ಉಪಾಧ್ಯಾಯರನ್ನು ತರಬೇತಿಗಾಗಿ ಸರ್ಕಾರದ ವೆಚ್ಚದಲ್ಲಿ ಕಳಿಸುತ್ತಿದ್ದ ಪದ್ಧತಿಯನ್ನು ನಿಲ್ಲಿಸಿ, ಅಂಚೆ ಮತ್ತು ತೆರಪಿನ ಶಿಕ್ಷಣಕ್ಕೆ ಪ್ರೋತ್ಸಾಹಿಸಲಾಗುತ್ತಿದೆ.

ಸೆಕೆಂಡರಿ ಹಂತದಲ್ಲಿ ಕೆಲಸಮಾಡುವ ಉಪಾಧ್ಯಾಯರ ತರಬೇತಿಗಾಗಿ ರಾಜ್ಯದಲ್ಲಿ ಎಪ್ಪತ್ತೈದಕ್ಕೂ ಹೆಚ್ಚು ಬಿ.ಎಡ್ ಕಾಲೇಜುಗಳಿವೆ. ಅಲ್ಲದೆ ಎನ್.ಸಿ.ಇ.ಆರ್.ಟಿ.ಯು. ಶಾಲಾಶಿಕ್ಷಕರ ತರಬೇತಿಗಾಗಿ ದೇಶದಲ್ಲಿ ನಡೆಸುತ್ತಿರುವ ನಾಲ್ಕು ಪ್ರಾದೇಶಿಕ ಕಾಲೇಜುಗಳಲ್ಲಿ ಒಂದು (ರೀಜನಲ್ ಕಾಲೇಜ್ ಆಫ್ ಎಜುಕೇಷನ್) ಮೈಸೂರಿನಲ್ಲಿದೆ.

ಶಾಲಾಹಂತದಲ್ಲಿ ಶಿಕ್ಷಣ ಮಟ್ಟವನ್ನು ಉತ್ತಮಗೊಳಿಸುವ ಉದ್ದೇಶದಿಂದ ರಾಜ್ಯಸರ್ಕಾರ ಇತ್ತೀಚೆಗೆ ರಾಜ್ಯ ಶಿಕ್ಷಣ ಮತ್ತು ಸಂಶೋಧನ ಇಲಾಖೆಯನ್ನು ಒಬ್ಬ ಅಪರ ನಿರ್ದೇಶಕರ ನೇತೃತ್ವದಲ್ಲಿ ಪ್ರಾರಂಭಿಸಿದೆ. ರಾಜ್ಯ ಶಿಕ್ಷಣ ಸಂಸ್ಥೆ, ರಾಜ್ಯ ವಿಜ್ಞಾನ ಸಂಸ್ಥೆ, ಶಿಕ್ಷಣ ತರಬೇತಿ ವಿಭಾಗ ಮೊದಲಾದುವು ಈ ನಿರ್ದೇಶಕರ ಅಧಿಕಾರಕ್ಕೆ ಒಳಪಟ್ಟಿವೆ.

ಪಠ್ಯಪುಸ್ತಕಗಳ ಇಲಾಖೆ 1969ರಲ್ಲಿ ಸ್ಥಾಪನೆಯಾಗಿ ಆರು ವರ್ಷಗಳಲ್ಲಿ ಪ್ರಾಥಮಿಕ, ಸೆಕೆಂಡರಿ ಮತ್ತು ಇತರ ತರಗತಿಗಳಿಗೆ 404 ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಿಸಿ ಪ್ರಕಟಿಸಿದೆ. ಈ ಇಲಾಖೆಯ ಮುಖ್ಯಸ್ಥರಾಗಿ ಒಬ್ಬ ಅಪರ ನಿರ್ದೇಶಕರಿದ್ದಾರೆ. ಅದು ಪಠ್ಯಪುಸ್ತಕಗಳಲ್ಲದೆ ಉಪಾಧ್ಯಾಯರ ಉಪಯೋಗಕ್ಕಾಗಿ ಕೈಪಿಡಿಗಳನ್ನು ಸಹ ಹೊರತಂದಿದೆ.

ಅಗಾಧ ಸಂಖ್ಯೆಯಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸಲು ಅನುಕೂಲವಾಗಲು ಮೈಸೂರಿನಲ್ಲಿರುವ ಪಠ್ಯಪುಸ್ತಕ ಮುದ್ರಣಾಲಯವನ್ನು ವಿಸ್ತರಿಸಲಾಗಿದೆ. ಈ ಮುದ್ರಣಾಲಯ ಈಗ ಪಠ್ಯಪುಸ್ತಕಗಳ ಇಲಾಖೆಯ ಸೇಕಡ 90ರಷ್ಟು ಕೆಲಸವನ್ನು ಪೂರೈಸುವ ಸ್ಥಿತಿಯಲ್ಲಿದೆ.

ಉನ್ನತ ಶಿಕ್ಷಣಕ್ಕಾಗಿ ಹದಿನಾರು ವಿಶ್ವವಿದ್ಯಾನಿಲಯಗಳಿವೆ–ಕೃಷಿ ವೈದ್ಯಕೀಯ, ಪಶು ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಅಲ್ಲದೆ ವಿಶ್ವವಿದ್ಯಾಲಯ ಧನ ಆಯೋಗದಿಂದ ಅಂಗೀಕಾರ ಪಡೆದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಬೆಂಗಳೂರು) ಸಹ ಇದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ ಪ್ರಕಾರ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಆಡಳಿತ ಒಂದೇ ಕಾಯಿದೆಗೆ ಒಳಪಟ್ಟಿದೆ. ಈ ವಿಶ್ವವಿದ್ಯಾನಿಲಯಗಳಿಗೆ ಕರ್ನಾಟಕ ರಾಜ್ಯದ ರಾಜ್ಯಪಾಲರೇ ಕುಲಾಧಿಪತಿಗಳು. ಇವರ ಅಧೀನಕ್ಕೆ ಒಳಪಟ್ಟು ಕುಲಪತಿಗಳು ತಮಗೆ ಸೇರಿದ ವಿಶ್ವವಿದ್ಯಾನಿಲಯದ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಇವರಿಗೆ ಆಡಳಿತ ನಡೆಸಲು ಸಹಾಯಕರಾಗಿ ಕುಲಸಚಿವರು, ಪರೀಕ್ಷಾಧಿಕಾರಿ ಮತ್ತು ದ್ರವ್ಯಾಧಿಕಾರಿಗಳು ಇದ್ದಾರೆ. ಅಲ್ಲದೆ ವಿಶ್ವವಿದ್ಯಾಲಯಗಳ ಆಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಸೆನೆಟ್, ಸಿಂಡಿಕೇಟ್, ಅಕೆಡಮಿಕ್ ಕೌನ್ಸಿಲ್, ಫೈನಾನ್ಸ್ ಕಮಿಟಿ, ಬೋರ್ಡ್ ಆಫ್ ಸ್ಟಡೀಸ್, ಫ್ಯಾಕಲ್ಟೀಸ್ ಮತ್ತು ಇತರ ಸಮಿತಿಗಳೂ ಇವೆ. ವಿಶ್ವವಿದ್ಯಾಲಯಗಳ ಸೆನೆಟ್ಟನ್ನು ವಿಸರ್ಜಿಸಲಾಗಿದೆ.

ಕಾಲೇಜು ಶಿಕ್ಷಣ 1960ರಲ್ಲಿ ಪ್ರಾರಂಭಿಸಲ್ಪಟ್ಟಿತು. ಈ ಇಲಾಖೆಯ ಅಧೀನದಲ್ಲಿ ಸರ್ಕಾರಿ ಕಾಲೇಜುಗಳೂ ಸರ್ಕಾರದ ಸಹಾಯ ಪಡೆದ ಖಾಸಗಿ ಕಾಲೇಜುಗಳೂ ಬರುವುವು. ಖಾಸಗಿ ಕಾಲೇಜುಗಳ ಸೇಕಡಾ 80ರಷ್ಟು ಖೋತಾ ಹಣವನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ಅಲ್ಲದೆ ನಿಯಮಾನುಸಾರವಾಗಿ ಕಟ್ಟಡಗಳ ನಿರ್ಮಾಣಕ್ಕೂ ಸಲಕರಣೆಗಳನ್ನು ಕೊಳ್ಳುವುದಕ್ಕೂ ಹಣ ಕೊಡಲ್ಪಡುತ್ತದೆ.

ಪ್ರಿ ಯೂನಿವರ್ಸಿಟಿ ಶಿಕ್ಷಣ ಇಲಾಖೆ (ಪದವಿಪೂರ್ವ ಶಿಕ್ಷಣ ಇಲಾಖೆ) 1971ರ ಜನವರಿಯಿಂದ ಕೆಲಸಮಾಡಲು ಪ್ರಾರಂಭಿಸಿತು. ಕಾಂಪೊಸಿಟ್ ಕಾಲೇಜುಗಳೂ ಅಪ್‌ಗ್ರೇಡೆಡ್ ಜೂನಿಯರ್ ಕಾಲೇಜುಗಳೂ (ಹೈಯರ್ ಸೆಕೆಂಡರಿ ಶಾಲೆಗಳನ್ನು ಜೂನಿಯರ್ ಕಾಲೇಜುಗಳಾಗಿ ಪರಿವರ್ತಿಸಿದ್ದು) ಪ್ರತ್ಯೇಕ ಜೂನಿಯರ್ ಕಾಲೇಜುಗಳೂ ಇದರ ಆಡಳಿತಕ್ಕೆ ಸೇರಿವೆ. ಪ್ರತ್ಯೇಕ ಜೂನಿಯರ್ ಕಾಲೇಜುಗಳು ಮಾತ್ರ ಪ್ರಿ ಯೂನಿವರ್ಸಿಟಿ ಶಿಕ್ಷಣ ಇಲಾಖೆಯ ಆಡಳಿತಕ್ಕೆ ಒಳಪಟ್ಟಿವೆ. ಇವುಗಳ ಮೇಲ್ವಿಚಾರಕರಾಗಿ ಪ್ರತ್ಯೇಕ ನಿರ್ದೇಶಕರು ಇದ್ದಾರೆ.

ತಾಂತ್ರಿಕ ಶಿಕ್ಷಣ ಇಲಾಖೆಯ ಆಡಳಿತಕ್ಕೆ ತಾಂತ್ರಿಕ ಪದವಿ, ಡಿಪ್ಲೊಮಾ, ಪದವಿಯೋತ್ತರ ಶಿಕ್ಷಣಗಳು ಸೇರಿವೆ. ಆದರೆ ಡಿಪ್ಲೊಮಾಗಳಿಗೆ ಅನ್ವಯಿಸುವ ಹಾಗೆ ಶೈಕ್ಷಣಿಕ ಜವಾಬ್ದಾರಿಯು ತಾಂತ್ರಿಕ ಇಲಾಖೆಗೂ ಪದವಿ ಮತ್ತು ಪದವಿಯೋತ್ತರ ಶಿಕ್ಷಣದ ಜವಾಬ್ದಾರಿಯು ಆಯಾ ವಿಶ್ವವಿದ್ಯಾನಿಲಯಗಳಿಗೂ ಸೇರಿದೆ. 1975–76ರಲ್ಲಿ ತಾಂತ್ರಿಕ ಶಿಕ್ಷಣದ ಆಡಳಿತಕ್ಕೆ ಒಳಪಟ್ಟು ಆರು ಜೂನಿಯರ್ ಟೆಕ್ನಿಕಲ್ ಸ್ಕೂಲುಗಳೂ 36 ಡಿಪ್ಲೊಮಾ ನೀಡುವ ಸಂಸ್ಥೆಗಳೂ ಪದವಿ ಮಟ್ಟದ 21 ಶಿಕ್ಷಣ ಸಂಸ್ಥೆಗಳೂ ಇದ್ದುವು. ಸೂರತ್ಕಲ್ಲಿನಲ್ಲಿ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು ಇದೆ.

ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ರೆಸಿಡೆನ್ಷಿಯಲ್ ಶಾಲೆಯು ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನಗಳನ್ನು ನೀಡುತ್ತದೆ, ಸಮವಸ್ತ್ರಗಳನ್ನೂ ಉಚಿತವಾಗಿ ಒದಗಿಸುತ್ತದೆ. ಈ ಶಾಲೆಯ ವೆಚ್ಚಕ್ಕೆ ಪೂರ್ಣವಾಗಿ ಸರ್ಕಾರ ಧನ ಸಹಾಯ ಮಾಡುತ್ತದೆ.

ಕರ್ನಾಟಕ ಸರ್ಕಾರ 1963ರಿಂದ ಖಾಸಗಿ ಕಾಲೇಜುಗಳ ಉಪಾಧ್ಯಾಯರಿಗೆ ತ್ರಿವಿಧ ಸೌಲಭ್ಯಗಳನ್ನು ಒದಗಿಸಿದೆ. ಈಚೆಗೆ ಈ ಸೌಲಭ್ಯಗಳನ್ನು ಖಾಸಗಿ ಸಂಸ್ಕೃತ ಕಾಲೇಜುಗಳಿಗೂ ಬಿ.ಎಡ್. ಕಾಲೇಜುಗಳಿಗೂ ವಿಸ್ತರಿಸಲಾಗಿದೆ.

**(ಟಿ.ಎನ್.ಎಸ್.ಎಸ್.)**

**ಶಿಕ್ಷಣದಲ್ಲಿ ಖಾಸಗಿ ಯತ್ನ:** 18–19ನೆಯ ಶತಮಾನಗಳಲ್ಲಿ ಕ್ರೈಸ್ತ ಪಾದ್ರಿಗಳು ಕರ್ನಾಟಕದ ಹಲವು ಕಡೆ ಶಾಲೆಗಳನ್ನು ತೆರೆಯಲು ಮುಂದೆ ಬಂದರು. ಬೆಳಗಾಂವಿ, ಮೈಸೂರು, ತುಮಕೂರು ಮತ್ತು ಬೆಂಗಳೂರುಗಳಲ್ಲಿ ಅನೇಕ ಶಾಲೆಗಳು ತೆರೆಯಲ್ಪಟ್ಟವು. ಕೆಲವು ಕಡೆ ಹೆಣ್ಣುಮಕ್ಕಳ ಶಾಲೆಗಳೂ ಆರಂಭಿಸಲ್ಪಟ್ಟವು. ಈ ಶಾಲೆಗಳು ಖಾಸಗಿ ಶಾಲೆಗಳಾದರೂ ಆಡಳಿತವನ್ನು ಸರ್ಕಾರವೇ ನೋಡಿಕೊಳ್ಳುತ್ತಿತ್ತು. ಶಿಕ್ಷಣದ ಆವಶ್ಯಕತೆಯನ್ನು ಜನತೆಯು ಮನಗಂಡಂತೆಲ್ಲ ನಗರಗಳಲ್ಲಿ ಹೆಚ್ಚು ಹೆಚ್ಚು ಶಾಲೆಗಳು ತೆರೆಯಲ್ಪಟ್ಟವು. ಹಾಗೆಯೇ ಗ್ರಾಮಾಂತರ ಪ್ರದೇಶಗಳಲ್ಲಿಯೂ ಶಾಲೆಗಳು ತೆರೆಯಲ್ಪಟ್ಟವು. ಈ ಶಾಲೆಗಳ ವೆಚ್ಚವನ್ನು ಭೂಕಂದಾಯದ ಜೊತೆಯಲ್ಲಿ ತೆರಿಗೆಯ ಮೂಲಕ ಭರಿಸಲಾಗುತ್ತಿತ್ತು. ಶಾಲೆಗಳ ತನಿಖೆಗಾಗಿ ಅನೇಕ ಸಮಿತಿಗಳು ರಚಿಸಲ್ಪಟ್ಟಿದ್ದವು.

ಪ್ರಾಥಮಿಕಪೂರ್ವಶಿಕ್ಷಣ: ಮೈಸೂರಿನ ಮಹಾರಾಜ ಕಾಲೇಜಿನ ಮನಶ್ಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಎಂ.ವಿ. ಗೋಪಾಲಸ್ವಾಮಿಯವರು ಶಿಶು ವಿಹಾರವೊಂದನ್ನು ತೆರೆದುದಲ್ಲದೆ, ಅವರು ಆ ಕ್ಷೇತ್ರದಲ್ಲಿ ಬಹುವಾಗಿ ಶ್ರಮಿಸಿದರು. ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಅನೇಕ ಪ್ರಾಥಮಿಕ ಪೂರ್ವ ಶಾಲೆಗಳು ತೆರೆಯಲ್ಪಟ್ಟವು. ಅವುಗಳಿಗೆ ಸರ್ಕಾರ ಧನಸಹಾಯವನ್ನಿತ್ತು ಪ್ರೋತ್ಸಾಹಿಸಿತು. ಪುಟ್ಟ ಮಕ್ಕಳನ್ನು ಶಾಲಾ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡಲು ಎಲ್.ಕೆಜಿ ಮತ್ತು ಯು.ಕೆಜಿ ತರಗತಿಗಳನ್ನು ಈ ಹಂತಕ್ಕೆ ಸೇರಿಸಲಾಗಿದೆ. ಈ ಹಂತದ ಶಿಕ್ಷಣಕ್ಕಾಗಿ ರಾಜ್ಯದಲ್ಲಿ ಒಟ್ಟು 4,597 ಸಂಸ್ಥೆಗಳಿದ್ದು 1,91,879 ವಿದ್ಯಾರ್ಥಿಗಳು ದಾಖಲಾತಿಯಾಗಿದ್ದರೆಂದು 2000–2001ರಲ್ಲಿ ನಡೆಸಿರುವ ಸಮೀಕ್ಷೆ ತಿಳಿಸಿದೆ.

**ಪ್ರಾಥಮಿಕ ಶಿಕ್ಷಣ:** 1913ರಲ್ಲಿ ಚಂದ್ರಶೇಖರ ಅಯ್ಯರ್ ಅವರ ಪತ್ನಿ ಪಾರ್ವತಮ್ಮನವರು ಒಂದು ಮಹಿಳಾ ಸಮಾಜವನ್ನು ಸ್ಥಾಪಿಸಿ ಅನೇಕ ಪ್ರಾಥಮಿಕ ಶಾಲೆಗಳನ್ನು ತೆರೆದರು. ಕ್ರೈಸ್ತ ಮಿಷನರಿಗಳು ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಕೆಲವು ಇಂಗ್ಲಿಷ್ ಪ್ರಾಥಮಿಕ ಶಾಲೆಗಳನ್ನು ತೆರೆದರು. ಸರ್ಕಾರ ಅವುಗಳಿಗೆ ಧನಸಹಾಯ ನೀಡುತ್ತಿತ್ತು. ಅಲ್ಲಿಂದ ಮುಂದೆ ಅನೇಕ ಖಾಸಗಿ ಪ್ರಾಥಮಿಕ ಶಾಲೆಗಳೂ ತೆರೆಯಲ್ಪಟ್ಟವು. ಕ್ರೈಸ್ತಮಿಷನರಿಗಳೂ ಪ್ರಾಥಮಿಕ ಶಾಲೆಗಳನ್ನು ತೆರೆದವು. ಗ್ರಾಮಾಂತರ ಜನಗಳೂ ಸ್ಥಳೀಯ ಸಂಸ್ಥೆಗಳೂ ಕೆಲವು ಶಾಲೆಗಳನ್ನು ತೆರೆದವು. 2000–2001ರ ಸಮೀಕ್ಷೆಯಲ್ಲಿ ತಿಳಿಸಿರುವಂತೆ ರಾಜ್ಯದಲ್ಲಿ 23,690 ಪ್ರಾಥಮಿಕ ಶಾಲೆಗಳೂ ಮತ್ತು 24,142 ಮೂಲ ಶಾಲೆಗಳೂ (ಎಲಿಮೆಂಟರಿ) ಇದ್ದು ಅವುಗಳಲ್ಲಿ ಅನುಕ್ರಮವಾಗಿ 60,540 ಮತ್ತು 1,42,580 ಅಧ್ಯಾಪಕರಿದ್ದು 65,01,200 ಮತ್ತು 24,17,210 ವಿದ್ಯಾರ್ಥಿಗಳು ದಾಖಲಾತಿಯಾಗಿದ್ದರು.

**ಪ್ರೌಢಶಿಕ್ಷಣ:** ಕರ್ನಾಟಕದ ಅನೇಕ ಭಾಗಗಳಲ್ಲಿ ಕ್ರೈಸ್ತಮಿಷನರಿಗಳು ಪ್ರೌಢಶಾಲೆಗಳನ್ನು ತೆರೆದವು. 1851ರಲ್ಲಿ ಮೈಸೂರಿನಲ್ಲಿ ಒಂದು ಪ್ರೌಢಶಾಲೆ ತೆರೆಯಲ್ಪಟ್ಟಿತ್ತು. 1852ರಲ್ಲಿ ತುಮಕೂರಿನಲ್ಲಿಯೂ 1854ರಲ್ಲಿ ಶಿವಮೊಗ್ಗ ದಲ್ಲಿಯೂ ಪ್ರೌಢಶಾಲೆಗಳು ತೆರೆಯಲ್ಪಟ್ಟವು. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಹೆಣ್ಣುಮಕ್ಕಳ ಶಾಲೆಗಳು ತೆರೆಯಲ್ಪಟ್ಟವು. ಬೆಂಗಳೂರಿ ನಲ್ಲಿ ಎಸ್.ಎಲ್.ಎನ್. ಮತ್ತು ನ್ಯಾಷನಲ್ ಹೈಸ್ಕೂಲುಗಳು ಆರಂಭವಾದವು. ಮೈಸೂರಿನಲ್ಲಿ ಮಹಿಳಾ ಸಮಾಜಗಳು ಮತ್ತು ಬೆಂಗಳೂರಿನಲ್ಲಿ ಮಹಿಳಾ ಕ್ಲಬ್‌ಗಳು ತೆರೆಯಲ್ಪಟ್ಟವು. ಹೆಣ್ಣು ಮಕ್ಕಳ ಪ್ರೌಢಶಾಲೆಗಳೂ ತೆರೆಯ ಲ್ಪಟ್ಟವು. ಶ್ರೀಮತಿ ಪಾರ್ವತಮ್ಮನವರು ಬೆಂಗಳೂರಿನಲ್ಲಿ ಪ್ರೌಢಶಾಲೆ ಯನ್ನು ತೆರೆದರು. ಹಾಸನ, ತುಮಕೂರು ಮತ್ತು ಶಿವಮೊಗ್ಗಗಳಲ್ಲಿ ಕ್ರೈಸ್ತಮಿಷನರಿಗಳು ಕೆಲವು ಶಾಲೆಗಳನ್ನು ತೆರೆದವು. ಮೈಸೂರಿನಲ್ಲಿ ಮಹಾರಾಜ ಪ್ರೌಢಶಾಲೆಯ ಆರಂಭವಾಯಿತು.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಪುರಸಭೆಗಳೂ ಜಿಲ್ಲಾಮಂಡಲಿಗಳೂ ಮತ್ತು ತಾಲ್ಲೂಕು ಮಂಡಲಿಗಳೂ ತಮ್ಮ ಸಾಮಾಜಿಕ ಅಭಿವೃದ್ಧಿ ಕಾರ್ಯಗಳ ಜೊತೆಗೆ ಶಿಕ್ಷಣಕ್ಕೂ ಹೆಚ್ಚು ಆದ್ಯತೆ ನೀಡಿದುವು. 1928ರಲ್ಲಿ ಪುರಸಭೆಗಳೂ ಪ್ರೌಢಶಾಲೆಗಳನ್ನು ತೆರೆಯುವಂತೆ ಏರ್ಪಾಡಾಯಿತು. 1948–49ರಲ್ಲಿ ಜಿಲ್ಲಾ ಮಂಡಲಿಗಳೂ ತಾಲ್ಲೂಕು ಮಂಡಲಿಗಳೂ ಪ್ರೌಢಶಾಲೆಗಳನ್ನು ತೆರೆದವು.

1833ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಒಂದು ಶಾಲೆಯನ್ನು ತೆರೆದರು. ಅನಂತರ ಮರಿಮಲ್ಲಪ್ಪನವರು ಶಾಲೆಯನ್ನು ಸ್ಥಾಪಿಸಿದರು. 1908–09ರ ಹೊತ್ತಿಗೆ ಕರ್ನಾಟಕದಲ್ಲಿ ಕೇವಲ 11 ಪ್ರೌಢಶಾಲೆಗಳಿದ್ದುವು. 1917–18ರಲ್ಲಿ ನ್ಯಾಷನಲ್ ಪ್ರೌಢಶಾಲೆಯೂ 1919–20ರಲ್ಲಿ ಸಾಹುಕಾರ್ ಬನುಮಯ್ಯನವರ ಶಾಲೆಯೂ 1921–22ರಲ್ಲಿ ಶಾರದಾವಿಲಾಸ ಪ್ರೌಢಶಾಲೆಯೂ ತೆರೆಯಲ್ಪಟ್ಟವು. 1953–54ರ ಹೊತ್ತಿಗೆ ಗಂಡುಮಕ್ಕಳ ಪ್ರೌಢಶಾಲೆಗಳ ಸಂಖ್ಯೆ 252ಕ್ಕೆ ಏರಿತು. ಕೆಲವು ಶಾಲೆಗಳಿಗೆ ಮೈಸೂರು ಒಡೆಯರು ಮತ್ತು ಸರ್ಕಾರ ಧನಸಹಾಯ ನೀಡಿ ಪ್ರೋತ್ಸಾಹಿಸಿದರು. ಕರ್ನಾಟಕ ರಾಜ್ಯದಲ್ಲಿನ 9,713 ಪ್ರೌಢಶಾಲೆಗಳಲ್ಲಿ 61,725 ಅಧ್ಯಾಪಕರಿದ್ದು 14,49,860 ವಿದ್ಯಾರ್ಥಿಗಳು ದಾಖಲಾಗಿದ್ದರೆಂಬ ವಿಚಾರ 2000–2001ರ ಸಮೀಕ್ಷೆ ತಿಳಿಸಿದೆ.

**ಉನ್ನತ ಶಿಕ್ಷಣ :** ಉನ್ನತ ಶಿಕ್ಷಣಕ್ಕಾಗಿ ಕ್ರೈಸ್ತಮಿಷನರಿಗಳು ಮೈಸೂರು ಮತ್ತು ಬೆಂಗಳೂರುಗಳಲ್ಲಿ ಕೆಲವು ಕಾಲೇಜುಗಳನ್ನು ಸ್ಥಾಪಿಸಿದವು. ಇವುಗಳು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟು ಸರ್ಕಾರದಿಂದ ಧನಸಹಾಯ ಪಡೆಯುತ್ತಿದ್ದವು. ಕೆಲವು ಖಾಸಗಿ ಸಂಸ್ಥೆಗಳೂ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸಿ ಉನ್ನತ ಶಿಕ್ಷಣಕ್ಕೆ ಶ್ರಮಿಸಿ ಹೆಸರುಗಳಿಸಿವೆ.

ಇತ್ತೀಚೆಗೆ ಪುರಸಭೆ, ತಾಲ್ಲೂಕು ಮಂಡಲಿ ಮತ್ತು ಜಿಲ್ಲಾ ಮಂಡಲಿ ಗಳು ಸ್ಥಾಪಿಸಿದ್ದ ಪ್ರೌಢಶಾಲೆಗಳಲ್ಲಿಯೇ ಜೂನಿಯರ್ ಕಾಲೇಜುಗಳೂ ನಡೆಯುತ್ತಿವೆ.

**ಅಧ್ಯಾಪಕರ ಶಿಕ್ಷಣ:** ಶಿಕ್ಷಕರ ತರಬೇತಿ ಶಾಲೆಗಳಲ್ಲಿ ಬಹು ಹಳೆಯ ಶಾಲೆ 1860ರಲ್ಲಿ ಸ್ಥಾಪನೆಯಾದ ಸರ್ಕಾರಿ ಟ್ರೇನಿಂಗ್ ಕಾಲೇಜ್ (ಫಾರ್ ಮೆನ್). ಇದು ಪ್ರಾರಂಭದಲ್ಲಿ ಪದವೀಧರ ಶಿಕ್ಷಕರಿಗೆ ತರಬೇತಿ ನೀಡುತ್ತಿದ್ದು, 1925ರಲ್ಲಿ ಕೇವಲ ಪ್ರಾಥಮಿಕ ಶಿಕ್ಷಕರಿಗೆ ಮಾತ್ರ ತರಬೇತಿ ನೀಡುವ ಶಾಲೆಯಾಯಿತು. ಸೇಕ್ರೆಡ್ ಹಾರ್ಟ್ ವಿಮೆನ್ಸ್ ಟ್ರೇನಿಂಗ್ ಸ್ಕೂಲ್ ಖಾಸಗಿ ಸಂಸ್ಥೆಯಾಗಿದ್ದು 1914–45ರಲ್ಲಿ ಸರ್ಕಾರ ವಹಿಸಿಕೊಂಡಿತು.

ಕರ್ನಾಟಕದಲ್ಲಿ ಈಗ ಪದವೀಧರ ಶಿಕ್ಷಕರ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ಖಾಸಗಿ ತರಬೇತಿ ಕಾಲೇಜುಗಳೇ ಹೆಚ್ಚಾಗಿ ಉಪಾಧ್ಯಾಯರ ಶಿಕ್ಷಣಕ್ಕಾಗಿ ಶ್ರಮಿಸುತ್ತಿವೆ. ಕೆಲವು ಪುರಸಭೆಗಳು ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ತರಬೇತಿ ಕಾಲೇಜುಗಳನ್ನು ನಡೆಸುತ್ತಿವೆ. ಈ ಶಾಲೆಗಳ ಹೊರ ವ್ಯವಹಾರಗಳನ್ನು ಆಡಳಿತ ವರ್ಗವೂ ನೋಡಿಕೊಳ್ಳುತ್ತಿದೆ.

1921ರಲ್ಲಿ ಪುರಸಭೆಯು ಬೆಂಗಳೂರಿನಲ್ಲಿ ಒಂದು ಕಿವುಡ ಮೂಗರ ಶಾಲೆಯನ್ನು ತೆರೆಯಿತು. ಖಾಸಗಿಯವರು ಮೈಸೂರಿನಲ್ಲಿ 1901ರಲ್ಲಿ ಕಿವುಡ ಮತ್ತು ಮೂಗರ ಶಾಲೆಯನ್ನು ತೆರೆದರು. ಇದನ್ನು ಆ ವರ್ಷವೇ ಸರ್ಕಾರ ವಹಿಸಿಕೊಂಡಿತು. 135 ಶಿಕ್ಷಣ ಸಂಸ್ಥೆಗಳಲ್ಲಿ 14,348 ಶಿಕ್ಷಕರಿಗೂ ಮತ್ತು 70ಕ್ಕೂ ಹೆಚ್ಚಿನ ಸಂಖ್ಯೆಯ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಸಮಾರು 7,000 ಶಿಕ್ಷಕರಿಗೂ ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗಾಗಿ ಯುಕ್ತ ತರಬೇತಿ ನೀಡಲಾಗುತ್ತಿದೆ ಎಂದು 2000–2001ರ ಸಮೀಕ್ಷೆ ವರದಿ ಮಾಡಿದೆ.

**ಸಂಸ್ಕೃತ ಶಿಕ್ಷಣ:** ಕರ್ನಾಟಕದಲ್ಲಿ ಬಹಳ ಕಾಲದಿಂದಲೂ ಸಂಸ್ಕೃತ ಅಧ್ಯಯನಕ್ಕೆ ಪ್ರಾಧಾನ್ಯವಿರುವುದು ಕಂಡುಬರುತ್ತದೆ. ಶಂಕರಾಚಾರ್ಯರು

ಸ್ಥಾಪಿಸಿದ್ದ ಶೃಂಗೇರಿ ಮಠವು ಸಂಸ್ಕೃತ ಅಧ್ಯಯನ ಕೇಂದ್ರವೂ ಆಗಿತ್ತು. ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜು 1876ರಲ್ಲಿ ಸ್ಥಾಪಿಸಲ್ಪಟ್ಟಿತು. ಬೆಂಗಳೂರಿನಲ್ಲಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜು 1889ರಲ್ಲಿ ಸ್ಥಾಪಿಸಲ್ಪಟ್ಟಿತು. ಮೇಲುಕೋಟೆಯಲ್ಲೂ ಸಿದ್ಧಗಂಗಾ ಮಠದಲ್ಲೂ ಒಂದೊಂದು ಸಂಸ್ಕೃತ ಶಾಲೆಗಳು ಆರಂಭವಾದುವು. ಅದೇ ಕಾಲದಲ್ಲಿ ಕರ್ನಾಟಕದ ಅನೇಕ ಭಾಗಗಳಲ್ಲಿ ಸಂಸ್ಕೃತ ಪಾಠಶಾಲೆಗಳು ತೆರೆಯಲ್ಪಟ್ಟವು. ಇವುಗಳಿಗೆಲ್ಲ ಸರ್ಕಾರವೇ ಧನಸಹಾಯ ನೀಡುತ್ತಿದೆ.

**ವಯಸ್ಕರ ಶಿಕ್ಷಣ:** ಸಮಾಜದಲ್ಲಿ ವಯಸ್ಕರ ಶಿಕ್ಷಣದ ಆವಶ್ಯಕತೆಯನ್ನು ಮನಗಂಡು 1941ರಲ್ಲಿ ಅನೇಕ ಖಾಸಗಿ ವ್ಯಕ್ತಿಗಳು ರಾತ್ರಿ ಶಾಲೆಗಳನ್ನು ತೆರೆದರು. ಮೈಸೂರು ಮಹಾರಾಜ ಕಾಲೇಜಿನ ಶಿಕ್ಷಕರೂ ಮತ್ತು ವಿದ್ಯಾರ್ಥಿಗಳೂ 1942ರಲ್ಲಿ ವಯಸ್ಕರ ಸಾಕ್ಷರತೆಗಾಗಿ ರಾತ್ರಿ ಶಾಲೆಯೊಂದನ್ನು ತೆರೆದರು. ಮೈಸೂರಿನ ವಯಸ್ಕರ ಶಿಕ್ಷಣ ಸಂಸ್ಥೆಯು ವಯಸ್ಕರ ಶಿಕ್ಷಣಕ್ಕಾಗಿ ಶ್ರಮಿಸತೊಡಗಿತು. 1945ರಲ್ಲಿ ಅದೇ ಸಂಸ್ಥೆಯು ಮೈಸೂರು ವಯಸ್ಕರ ಶಿಕ್ಷಣ ಸಮಿತಿಯಾಗಿ ವಯಸ್ಕರ ಸರ್ವತೋಮುಖ ಶಿಕ್ಷಣದ ಚಟುವಟಿಕೆಗಳನ್ನು ಪ್ರಾರಂಭಿಸಿತು. ನಂಜನಗೂಡಿನಲ್ಲಿ 1947ರಲ್ಲಿ ಒಂದು ವಿದ್ಯಾಪೀಠವನ್ನೂ ಸ್ಥಾಪಿಸಿತು. ಮುಂದೆ ಶಿವಾರಗುಡ್ಡ, ಹಾಸನ, ತುಮಕೂರು ಮುಂತಾದೆಡೆಗಳಲ್ಲೂ ವಿದ್ಯಾಪೀಠಗಳು ಸ್ಥಾಪನೆಯಾದವು. ಈ ವಿದ್ಯಾಪೀಠಗಳು ವಯಸ್ಕ ಯುವಜನರ ಬಹುಮುಖ ಶಿಕ್ಷಣಕ್ಕೆ ಶ್ರಮಿಸುತ್ತಿವೆ.

ಕರ್ನಾಟಕದಲ್ಲಿ ಪ್ರಾಥಮಿಕ ಪೂರ್ವ ಹಂತದಿಂದ ಉನ್ನತ ಶಿಕ್ಷಣದವರೆಗೂ ಖಾಸಗಿಯಾಗಿ ಅನೇಕ ಶಾಲಾ ಕಾಲೇಜುಗಳು ನಡೆಸಲ್ಪಡುತ್ತಿವೆ. ಸರ್ಕಾರದಿಂದ ನಡೆಸಲ್ಪಡುವ ಸಂಸ್ಥೆಗಳಿಗಿಂತಲೂ ಖಾಸಗಿ ಸಂಸ್ಥೆಗಳ ಪ್ರಾಥಮಿಕ ಪೂರ್ವದ ಪ್ರೌಢ ಮತ್ತು ಉನ್ನತ ಶಿಕ್ಷಣ ರಂಗಗಳಲ್ಲಿ ಗಣನೀಯ ಪ್ರಮಾಣದಲ್ಲಿ ಸೇವೆ ಸಲ್ಲಿಸುತ್ತಿವೆ. ಸರ್ಕಾರ ಇತ್ತೀಚೆಗೆ ಹೆಚ್ಚು ಪ್ರಮಾಣದಲ್ಲಿ ಅವಕ್ಕೆ ಧನಸಹಾಯವನ್ನೂ ನೀಡುವುದರ ಜೊತೆಗೆ ಕೆಲವು ನಿರ್ಬಂಧಗಳನ್ನಿಟ್ಟು ಸಮರ್ಪಕವಾಗಿ ಕೆಲಸ ಮಾಡುವಂತೆ ಪ್ರೋತ್ಸಾಹ ನೀಡುತ್ತಿದೆ. ಕೆಲವು ಪ್ರೌಢಶಾಲೆಗಳೂ ತರಬೇತಿ ಶಾಲೆಗಳೂ ಜೂನಿಯರ್ ಕಾಲೇಜುಗಳೂ ನಿರ್ದಿಷ್ಟವಾದ ಠೇವಣಿ ಹಣವನ್ನೂ ಇಟ್ಟು ನಡೆಸುವಂತೆ ಸರ್ಕಾರ ನಿರ್ಬಂಧಿಸಿದೆ. ಸಮಾಜ ಶಿಕ್ಷಣದ ಆವಶ್ಯಕತೆಯನ್ನು ಮನಗಂಡಂತೆಲ್ಲ ಪ್ರತಿವರ್ಷ ಶಾಲಾ ಕಾಲಾಜುಗಳೂ ಖಾಸಗಿಯಾಗಿ ತೆರೆಯಲ್ಪಡುತ್ತಿವೆ.

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಶಿಕ್ಷಣ ಖಾಸಗಿ ಯತ್ನವಾಗಿಯೇ ನಡೆಯುತ್ತಿತ್ತು. ಸರ್ಕಾರ ಅದಕ್ಕೆ ವಿವಿಧ ರೂಪದಲ್ಲಿ ಪ್ರೋತ್ಸಾಹ ನೀಡುತ್ತಿದ್ದರೂ ಅದನ್ನು ನಿಯಂತ್ರಿಸಲು ಯತ್ನಿಸುತ್ತಿರಲಿಲ್ಲ. ಪೌರಾಣಿಕ ಯುಗದಲ್ಲಿ ಆಶ್ರಮಗಳೂ ಪರಿಷತ್ತುಗಳೂ ಆ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಗುರುಕುಲಗಳೂ ಪ್ರತಿಯೊಬ್ಬ ಬ್ರಾಹ್ಮಣ ಪಂಡಿತನ ಕರ್ತವ್ಯವಾಗಿ ನಡೆದುಕೊಂಡು ಬರುತ್ತಿದ್ದವು. ಜೈನ ಬೌದ್ಧರ ಕಾಲದಲ್ಲಿ ಶಿಕ್ಷಣ ಖಾಸಗಿ ಸಂಸ್ಥೆಗಳ ಆಡಳಿತಕ್ಕೆ ಬಂತು. ಚೈತ್ಯಾಲಯ, ಬಸದಿ, ವಿಹಾರ, ಸಂಘಾರಾಮ ಮುಂತಾದ ಧಾರ್ಮಿಕ ಸಂಸ್ಥೆಗಳು ಆ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಅಗ್ರಹಾರಗಳೂ ಬ್ರಹ್ಮಪುರಿಗಳೂ ವೈದಿಕ ಶಿಕ್ಷಣ ಪದ್ಧತಿಯ ಕೇಂದ್ರಗಳಾಗಿದ್ದವು. 9–10ನೆಯ ಶತಮಾನಗಳಲ್ಲಿ ಅನೇಕ ದೇವಾಲಯಗಳೂ ಮಠಗಳೂ ವಿವಿಧ ಮಟ್ಟದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಮಾಡಿ ಅವುಗಳ ಆಡಳಿತವನ್ನು ನಿರ್ವಹಿಸುತ್ತಿದ್ದುವು. 13ನೆಯ ಶತಮಾನದ ಅನಂತರ ಮುಸಲ್ಮಾನರ ದಾಳಿಯಿಂದ ಅನೇಕ ಶಿಕ್ಷಣಸಂಸ್ಥೆಗಳು ನಾಮಾವಶೇಷವಾದವು. ಮುಸಲ್ಮಾನರು ಮಸೀದಿಗಳಲ್ಲಿ ಶಿಕ್ಷಣಕ್ಕೆ ಏರ್ಪಾಟುಮಾಡಿದ್ದರು. ಪ್ರಾಥಮಿಕ ಶಿಕ್ಷಣಕ್ಕಾಗಿ ಏರ್ಪಟ್ಟಿದ್ದ ಮುಕ್ತಾಬುಗಳು, ಉನ್ನತ ಶಿಕ್ಷಣಕ್ಕಾಗಿ ಏರ್ಪಟ್ಟಿದ್ದ ಮದರಸಾಗಳೂ ಖಾಸಗಿ ಸಂಸ್ಥೆಗಳಾಗಿಯೇ ನಡೆಯುತ್ತಿದ್ದವು. ವೈದಿಕ ಕಾಲದಲ್ಲಿ ಆರಂಭವಾದ ಶಿಕ್ಷಣದಲ್ಲಿನ ಈ ಖಾಸಗಿ ಆಸಕ್ತಿ ಮತ್ತು ಪ್ರಯತ್ನ ಈಗಲೂ ಮುಂದುವರಿಯುತ್ತಿದೆ. *

**ಶಿಕ್ಷಣದ ಸರ್ವೇಕ್ಷಣ:** ದೇಶದಲ್ಲಿರುವ ಮಕ್ಕಳಿಗೆ ವಿದ್ಯೆ ಕಲಿಸಲು ಶಿಕ್ಷಣದ ವಿವಿಧ ಹಂತಗಳಲ್ಲಿ ಈಗ ಒದಗಿಸಿರುವ ಶಾಲಾ ಸೌಕರ್ಯಗಳಾವುವು, ಎಲ್ಲೆಲ್ಲಿ ಎಷ್ಟೆಷ್ಟು, ಅತ್ಯವಶ್ಯಕವಾಗಿ ಮುಂದೆ ಒದಗಿಸಲೇಬೇಕಾದ ಸೌಕರ್ಯಗಳಾವುವು ಎಂಬ ಅಂಶಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ, ಶಿಕ್ಷಣಾಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳಿಗೆ ಆಧಾರರೂಪವಾದ ಅಂಕಿ ಅಂಶಗಳನ್ನು ಒದಗಿಸಿ, ಮಾರ್ಗದರ್ಶನ ಮಾಡಿ, ಅವುಗಳಿಗೆ ಪೂರ್ವಸಿದ್ಧತೆ ಮಾಡುವುದೇ ಶಿಕ್ಷಣದ ಸರ್ವೇಕ್ಷಣ.

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆಯ ಶಿಕ್ಷಣ ಸರ್ವೇಕ್ಷಣ 1957–58ರಲ್ಲಿ ನಡೆಯಿತು. ಇದು ಅಖಿಲ ಭಾರತ ಸರ್ವೇಕ್ಷಣ. ಭಾರತದ ರಾಜ್ಯಾಂಗದ 45ನೆಯ ವಿಧಿಯಂತೆ ದೇಶದಲ್ಲಿರುವ ಎಲ್ಲ ಮಕ್ಕಳಿಗೂ ಹದಿನಾಲ್ಕನೆಯ ವಯಸ್ಸು ಪ್ರಾಪ್ತವಾಗುವವರೆಗೆ ಉಚಿತ ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕಾದುದು ಭಾರತ ಒಕ್ಕೂಟ ರಾಜ್ಯಗಳ ಸರ್ಕಾರಗಳ ಹೊಣೆಯಾಯಿತು. ಈ ಮಹತ್ಕಾರ್ಯವನ್ನು ಶಾಸ್ತ್ರೀಯವಾಗಿ ಸಾಧಿಸಲು ಪೂರ್ವಸಿದ್ಧತೆಯಾಗಿ ದೇಶದಲ್ಲಿ ಈ ಮೊದಲನೆಯ ಶಿಕ್ಷಣದ ಸರ್ವೇಕ್ಷಣವನ್ನು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ರೂಪಿಸಿ, ಯೋಜಿಸಿ, ರಾಜ್ಯ ಸರ್ಕಾರಗಳಿಗೆ ಧನಸಹಾಯ ನೀಡಿ, ಆ ಸರ್ಕಾರಗಳ ಮೂಲಕ ನಡೆಸಿತು. ಈ ಪ್ರಥಮ ಶಿಕ್ಷಣ ಸರ್ವೇಕ್ಷಣದ ಪರಿಚಯವನ್ನು ಪಡೆಯುವ ಮೊದಲು ಹಿಂದಿನ ಮೈಸೂರು ಸಂಸ್ಥಾನದಲ್ಲಿ ನಡೆದಿದ್ದ ಎರಡು ಶಿಕ್ಷಣದ ಸಮೀಕ್ಷೆಗಳನ್ನೂ ಅವುಗಳ ಹಿನ್ನೆಲೆಯನ್ನೂ ತಿಳಿದುಕೊಳ್ಳುವುದು ಸೂಕ್ತ.

**ಸ್ವಾತಂತ್ರ್ಯಪೂರ್ವ ಸರ್ವೇಕ್ಷಣಗಳು:** ಮಕ್ಕಳ ಶಿಕ್ಷಣಕ್ಕಾಗಿ ಶಾಲೆಗಳನ್ನು ಸ್ಥಾಪಿಸುವುದು ಸರ್ಕಾರದ ಕರ್ತವ್ಯವೆಂಬುದನ್ನು ಭಾರತದಲ್ಲಿ ಬ್ರಿಟಿಷ್ ಸರ್ಕಾರ 19ನೆಯ ಶತಮಾನದ ಮಧ್ಯಭಾಗದಲ್ಲಿ ಮನಗಂಡುದರ ಫಲವಾಗಿ, ದೇಶದ ಅನೇಕ ಪ್ರಾಂತ್ಯಗಳಲ್ಲಿ ಸರ್ಕಾರದ ಶಿಕ್ಷಣ ಇಲಾಖೆಗಳು ಸ್ಥಾಪಿತವಾದವು. ಆಗ ಮೈಸೂರು ಸಂಸ್ಥಾನ ಕಾರಣಾಂತರಗಳಿಂದ ಬ್ರಿಟಿಷ್ ಕಮೀಷನರ ಆಡಳಿತಕ್ಕೆ ಒಳಪಟ್ಟಿದ್ದುದರಿಂದ, ಮೈಸೂರು ಸಂಸ್ಥಾನದಲ್ಲಿಯೂ ವಿದ್ಯಾ ಇಲಾಖೆ ಸ್ಥಾಪಿತವಾಯಿತು. ಕೇಂದ್ರ ಸರ್ಕಾರದ ನಿರ್ದೇಶನದ ಅನುಸಾರವಾಗಿ ಕೈಗೊಂಡ ದೇವರೊ ಯೋಜನೆಯ ಪ್ರಕಾರ ರಾಜ್ಯದಲ್ಲಿ ಅನೇಕ ಶಾಲೆಗಳು ಸ್ಥಾಪಿತವಾದವು. 1885ರಲ್ಲಿ ಮೈಸೂರು ಸಂಸ್ಥಾನದ ಆಡಳಿತವನ್ನು ಹಿಂದಿರುಗಿ ಮಹಾರಾಜರಿಗೆ ವಹಿಸಿಕೊಟ್ಟ ಮೇಲೆ, ಪ್ರತಿವರ್ಷ ಹೊಸಹೊಸ ಶಾಲೆಗಳು ಸ್ಥಾಪಿತವಾಗತೊಡಗಿದವು. ಅನೇಕ ಸಹಾಯ ದ್ರವ್ಯ ಶಾಲೆಗಳು ಗ್ರಾಮಾಂತರ ಪ್ರದೇಶಗಳಲ್ಲಿಯೂ ಹುಟ್ಟಿಕೊಂಡವು. 1921ರಲ್ಲಿ, ಅದುವರೆಗಿನ ಶಿಕ್ಷಣದ ಪ್ರಗತಿಯನ್ನು ಪರಿಶೀಲಿಸಿ, ಮುಂದಿನ ಪ್ರಗತಿಗಾಗಿ, ಅಂದಿನ ಶಿಕ್ಷಣದ ಇಲಾಖೆಯ ಮಾರ್ಗದರ್ಶಕರಾಗಿದ್ದ ಸಿ.ಆರ್. ರೆಡ್ಡಿಯವರು ಸರ್ಕಾರಕ್ಕೆ ಸಲ್ಲಿಸಿದ ಮನವಿಗೆ ಸರ್ಕಾರ ಅಂಗೀಕಾರವನ್ನಿತ್ತು, ಸಹಾಯದ್ರವ್ಯ ಶಾಲೆಗಳನ್ನು ಪೂರ್ಣ ಸರ್ಕಾರಿ ಶಾಲೆಗಳನ್ನಾಗಿ ಪರಿವರ್ತಿಸಲು ಮತ್ತು ಹೆಚ್ಚು ಜನಸಂಖ್ಯೆಯನ್ನುಳ್ಳ ಗ್ರಾಮಗಳಲ್ಲಿ ಶಾಲೆಗಳನ್ನು ಹೊಸದಾಗಿ ತೆರೆಯಲು ನಿರ್ಧರಿಸಿತು. ಈ ಕೆಲಸವನ್ನು ತೃಪ್ತಿಕರವಾಗಿ ನೆರವೇರಿಸುವುದಕ್ಕಾಗಿ 1922ರಲ್ಲಿ ಶಿಕ್ಷಣದ ಸಮೀಕ್ಷೆಯೊಂದನ್ನು ನಡೆಸಲಾಯಿತು. ಇದು ಅಂದಿನ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳಿಗೆ ಮಾತ್ರ ಅನ್ವಯವಾಗಿತ್ತು. ಇದರಲ್ಲಿ ಆ ಕಾಲದಲ್ಲಿದ್ದ ಸಹಾಯದ್ರವ್ಯ ಶಾಲೆಗಳ ಪೂರ್ಣ ಮಾಹಿತಿಯನ್ನೊಳಗೊಂಡ, ಪೂರ್ಣಪಟ್ಟಿಯನ್ನು ತಯಾರಿಸಲಾಯಿತು. ಪೂರ್ಣ

ಸರ್ಕಾರಿ ಶಾಲೆಗಳಾಗಲು ಅರ್ಹವಾದ ಶಾಲೆಗಳ ಪಟ್ಟಿಯನ್ನೂ ಪ್ರಜಾಸಂಖ್ಯೆ 500ಕ್ಕೆ ಮೀರಿದ, ಶಾಲೆಗಳಿಲ್ಲದ ಗ್ರಾಮಗಳ ಪಟ್ಟಿಯನ್ನೂ ತಯಾರಿಸಲಾಯಿತು. ಇದಾದ ಮೇಲೆ 1927–28ರಲ್ಲಿ ಮತ್ತೊಂದು ಶಿಕ್ಷಣದ ಸಮೀಕ್ಷೆ ನಡೆಯಿತು. ಇದೂ ಒಂದು ಸೀಮಿತ ಸಮೀಕ್ಷೆ. ಅದುವರೆಗಿನ ಶಿಕ್ಷಣದ ಪ್ರಗತಿಯನ್ನು ಅಳೆಯಲು ಮತ್ತು ಮುಂದಿನ ಪ್ರಗತಿಗಾಗಿ ಅನುಸರಿಸಬೇಕಾದ ಶಿಕ್ಷಣದ ನೀತಿಯನ್ನು ನಿರ್ಧರಿಸಲು ಮೂರು ಜಿಲ್ಲೆಗಳನ್ನು ಮಾತ್ರ ಆರಿಸಿಕೊಳ್ಳಲಾಯಿತು. ಬಯಲುನಾಡನ್ನು ಪ್ರತಿನಿಧಿಸಲು ಬೆಂಗಳೂರು ಜಿಲ್ಲೆಯನ್ನೂ ಮಲೆನಾಡು ಪ್ರದೇಶವನ್ನು ಪ್ರತಿನಿಧಿಸಲು ಅಂದಿನ ಕಡೂರು(ಇಂದಿನ ಚಿಕ್ಕಮಗಳೂರು) ಜಿಲ್ಲೆಯನ್ನೂ ನಗರಪ್ರದೇಶವನ್ನು ಪ್ರತಿನಿಧಿಸಲು ಬೆಂಗಳೂರು ನಗರವನ್ನೂ ಆರಿಸಿಕೊಳ್ಳಲಾಯಿತು. ಅಲ್ಲದೆ, ಒಂದು ಗ್ರಾಮವನ್ನು ಆರಿಸಿಕೊಂಡು, ಪ್ರಾಥಮಿಕ ಶಿಕ್ಷಣ ಪಡೆದವರಲ್ಲಿ ಎಷ್ಟು ಮಂದಿ ಮುಂದೆಯೂ ಅಕ್ಷರಸ್ಥರಾಗಿ ಉಳಿದುಕೊಂಡು ಬರುತ್ತಾರೆ ಎಂಬ ಅಂಶವನ್ನು ಅಧ್ಯಯನ ಮಾಡಲಾಯಿತು. ರಾಜ್ಯದಲ್ಲಿ ಶಿಕ್ಷಣದ ದೃಷ್ಟಿಯಿಂದ ಮುಂದುವರಿದ ಪ್ರದೇಶಗಳಾವುವು, ಹಿಂದುಳಿದ ಪ್ರದೇಶಗಳಾವುವು. ಮುಂದುವರಿದ ವರ್ಗಗಳಾವುವು, ಹಿಂದುಳಿದ ವರ್ಗಗಳಾವುವು ಇವೇ ಮೊದಲಾದ ವಿಷಯಗಳನ್ನು ಅಧ್ಯಯನ ಮಾಡಲಾಯಿತು. ಈ ಸಮೀಕ್ಷೆಯಲ್ಲಿ ಕಂಡುಬಂದ ಸತ್ಯಾಂಶಗಳ ಬೆಳಕಿನಲ್ಲಿ, ಮೈಸೂರು ರಾಜ್ಯದ ಮುಂದಿನ ಶಿಕ್ಷಣದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಲಾಯಿತು.

**ಅಖಿಲ ಭಾರತ ಪ್ರಥಮ ಶಿಕ್ಷಣ ಸರ್ವೇಕ್ಷಣ:** ಭಾರತಕ್ಕೆ ಸ್ವಾತಂತ್ರ್ಯ ಬಂದು, ಭಾರತದ ರಾಜ್ಯಾಂಗ ರೂಪಿತಗೊಂಡು ರಾಜ್ಯಗಳ ಪುನರ್‌ವಿಂಗಡಣೆ ಯಾದ ಮೇಲೆ ಇಡೀ ಭಾರತದಲ್ಲಿ ರಾಷ್ಟ್ರಾಭಿವೃದ್ಧಿಯ ಬೃಹತ್ ಯೋಜನೆಗಳು ರೂಪಿತವಾಗಿ ಅವು ತೀವ್ರಗತಿಯಲ್ಲಿ ಕಾರ್ಯಗತವಾಗ ಬೇಕಾಯಿತು. ಅಲ್ಲದೆ ಹಳೆಯ ಶಿಕ್ಷಣ ಪದ್ಧತಿಯು ಹೊಸ ರೂಪ ತಾಳಿ ಸರ್ವಜನ ವ್ಯಾಪಿಯಾಗಿ ಬೆಳೆಯಬೇಕಾಯಿತು. ಇದಕ್ಕಾಗಿ ಈ ಶಿಕ್ಷಣದ ಸರ್ವೇಕ್ಷಣವನ್ನು ಕೈಗೊಳ್ಳಲಾಯಿತು.

ಈ ಶಿಕ್ಷಣ ಸರ್ವೇಕ್ಷಣದಲ್ಲಿ ಹಿಂದೆಂದೂ ನಡೆಸದಿದ್ದಂಥ ಹಾಗೂ ಶಿಕ್ಷಣದ ಯೋಜನೆಗಳಿಗೆ ಆವಶ್ಯಕವಾಗುವಂಥ ಕಾರ್ಯವೊಂದನ್ನು ಮಾಡಲಾಯಿತು. ರಾಜ್ಯದಲ್ಲಿರುವ ಜನವಸತಿಗಳನ್ನು ಗುರುತಿಸಿ, ಎಣಿಕೆ ಮಾಡಿ, ಅವುಗಳ ಸಂಪೂರ್ಣ ಪಟ್ಟಿಯನ್ನು ತಯಾರಿಸಲಾಯಿತು. ಜನಗಣತಿಯ ವರದಿಗಳಲ್ಲಿ ಮತ್ತು ಸರ್ಕಾರಿ ಲೆಕ್ಕಪತ್ರಗಳಲ್ಲಿ ರೆವಿನ್ಯೂ ಗ್ರಾಮಗಳ ಪ್ರಕಾರ ಲೆಕ್ಕವಿದೆಯೇ ಹೊರತು ಜನವಸತಿಗಳ ಪ್ರಕಾರ ಲೆಕ್ಕವಿಲ್ಲ. ಒಂದು ರೆವಿನ್ಯೂ ಗ್ರಾಮ ಒಂದು ಬಿಡಿಯಾದ ಜನವಸತಿಯಾಗಿ ರದೆ, ವ್ಯವಸಾಯದ ಜಮೀನುಗಳುಳ್ಳ ಒಂದು ವಿಸ್ತಾರ ಪ್ರದೇಶ. ಅಂಥ ಒಂದು ರೆವಿನ್ಯೂ ಗ್ರಾಮಪ್ರದೇಶದಲ್ಲಿ ಬಿಡಿಯಾದ ಒಂದೇ ಜನವಸತಿಯಿರ ಬಹುದು, ಎರಡು, ಮೂರು, ನಾಲ್ಕು ಹೀಗೆ ಬಿಡಿಬಿಡಿಯಾದ ಅನೇಕ ಜನವಸತಿಗಳಿರಬಹುದು. ರೆವಿನ್ಯೂ ಗ್ರಾಮಪ್ರದೇಶದಲ್ಲಿರುವ ಆ ಗ್ರಾಮದ ಹೆಸರನ್ನು ಪಡೆದಿರುವ ಸಾಮಾನ್ಯವಾಗಿ ದೊಡ್ಡದಾದ ಜನವಸತಿಯನ್ನು ಅಸಲಿ ಗ್ರಾಮವೆಂತಲೂ ಉಳಿದ ಜನವಸತಿಗಳನ್ನು (ಇದ್ದರೆ) ದಾಖಲು ಮಜರೆ ಅಥವಾ ವಾಡಿ ಎಂತಲೂ ಕರೆಯುವ ರೂಢಿಯಿದೆ. ಜನಗಣತಿಯ ವರದಿಗಳಲ್ಲಿ ಈ ಬಿಡಿ ಬಿಡಿಯಾದ ವಸತಿಗಳ ಪಟ್ಟಿಯಾಗಲೀ ಅವುಗಳ ಪ್ರತಿಯೊಂದರ ಪ್ರತ್ಯೇಕ ಪ್ರಜಾಸಂಖ್ಯೆಯ ಲೆಕ್ಕವಾಗಲೀ ದೊರೆಯುವುದಿಲ್ಲ. ಆ ರೆವಿನ್ಯೂ ಗ್ರಾಮದಲ್ಲಿ ಎಷ್ಟೇ ಜನವಸತಿಗಳಿರಲಿ, ಅವುಗಳ ಒಟ್ಟು ಪ್ರಜಾಸಂಖ್ಯೆಯ ಲೆಕ್ಕವನ್ನು ಮಾತ್ರ ಜನಗಣತಿಯ ವರದಿಯಲ್ಲಿ ಕೊಡಲಾಗುವುದು. ಶಿಕ್ಷಣದ ಸೌಕರ್ಯಗಳನ್ನು ಒದಗಿಸಲು ಮತ್ತು ಶಿಕ್ಷಣದ ಯೋಜನೆಗಳನ್ನು ರೂಪಿಸಲು ಬಿಡಿಬಿಡಿಯಾದ ಜನವಸತಿಗಳ ಸಂಖ್ಯೆ, ಪ್ರತಿಯೊಂದರ ಪ್ರಜಾಸಂಖ್ಯೆ, ಒಂದರಿಂದ ಇನ್ನೊಂದಕ್ಕಿರುವ ದೂರ ಇವೇ ಮೊದಲಾದ ಅಂಕಿ ಅಂಶಗಳೂ ವಿವರಗಳೂ ತೀರ ಅವಶ್ಯಕ. ಆದುದರಿಂದ ಈ ಸರ್ವೇಕ್ಷಣದಲ್ಲಿ ಈ ಕಾರ್ಯಕ್ಕೆ ಆದ್ಯತೆ ಕೊಡಲಾಯಿತು.

ಕರ್ನಾಟಕ ರಾಜ್ಯದಲ್ಲಿ ಜನವಸತಿಗಳ ಸ್ವರೂಪ ಮುಖ್ಯವಾಗಿ ಎರಡು ಬಗೆಯದಾಗಿ ಕಂಡುಬಂದಿತು. ವಾಸದ ಮನೆಗಳು ಒಟ್ಟೊಟ್ಟಿಗೆ ಒಂದು ಗುಂಪಾಗಿ ಸಂಪೂರ್ಣ ಬಿಡಿಯಾಗಿ ಕಾಣುವ ಜನವಸತಿ ಒಂದು ಮಾದರಿಯಾದರೆ, ವಿಶಾಲ ಪ್ರದೇಶದಲ್ಲಿ ಒಂದೊಂದು ಜಮೀನಿನಲ್ಲಿ ಒಂದೊಂದು ಮನೆಯಂತೆ, ಅಥವಾ ಹೆದ್ದಾರಿಗುಂಟ ಸಾಲಾಗಿ ಹರಡಿರುವ ಮನೆಗಳು ಚದರಿದಂತಿರುವ ಜನವಸತಿಗಳು, ಇನ್ನೊಂದು ಮಾದರಿ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಯಲ್ಲಿ 2ನೆಯ ಮಾದರಿಯ ಚದರಿದ ಜನವಸತಿಗಳೂ ಉಳಿದೆಲ್ಲ ಕಡೆ ಗುಂಪು ಜನವಸತಿಗಳೂ ಕಂಡುಬಂದವು. ಶಿವಮೊಗ್ಗ ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳಲ್ಲಿ ಇವೆರಡರ ಸಮ್ಮಿಶ್ರ ಮಾದರಿ ಕಂಡುಬಂತು.

ಈ ಶಿಕ್ಷಣದ ಸರ್ವೇಕ್ಷಣದಲ್ಲಿ 1957 ಮಾರ್ಚ್ 31ರಲ್ಲಿದ್ದಂತೆ ಗ್ರಾಮಾಂತರ ಪ್ರದೇಶಗಳ ಜನವಸತಿಗಳ ದಾಖಲೆ ಪುಸ್ತಕವನ್ನು ಅವುಗಳ ಸರಿಯಾದ ದೂರ ಮತ್ತು ದಿಕ್ಕುಗಳನ್ನು ತೋರಿಸುವ ಶಿಕ್ಷಣದ ನಕ್ಷೆಯನ್ನು ತಯಾರಿಸಲಾಯಿತು. ಶಿಕ್ಷಣ ಸೌಕರ್ಯವಿರುವ ಜನವಸತಿಯ ಚಿಹ್ನೆಯ ಬಳಿ ಯಾವ ಹಂತದ ಶಿಕ್ಷಣ ಸೌಕರ್ಯವಿದೆ, ಪ್ರಾಥಮಿಕ (ತರಗತಿ 1–4), ಮಾಧ್ಯಮಿಕ (ತರಗತಿ 5–7) ಮತ್ತು ಪ್ರೌಢ (ತರಗತಿ 8–10) ಇವುಗಳಲ್ಲಿ ಯಾವುವು ಇವೆ ಎಂಬುದನ್ನು ನಿರ್ದಿಷ್ಟವಾದ ಬೇರೆ ಬೇರೆ ಚಿಹ್ನೆಗಳಿಂದ ಶಿಕ್ಷಣದ ನಕ್ಷೆಗಳಲ್ಲಿ ತೋರಿಸಲಾಯಿತು. ಈ ಶಾಲೆಗಳು ಸುತ್ತಮುತ್ತಲಿನ ಇತರ ಯಾವ ಯಾವ ಜನವಸತಿಗಳಿಗೆ ಆಯಾ ಹಂತದ ಶಿಕ್ಷಣವನ್ನು ಒದಗಿಸುತ್ತಿವೆ, ಒದಗಿಸಬಲ್ಲವು ಎಂಬುದನ್ನು ಮುಂದೆ ಹೇಳಿರುವ ನಿಯಮಗಳಿಗನುಸಾರವಾಗಿ ನಿರ್ಧರಿಸಿ, ನಕ್ಷೆಗಳಲ್ಲಿ ಆಯಾ ಹಂತದ ಶಾಲಾ ಪ್ರದೇಶಗಳನ್ನು ಪರಿಮಿತಿಗೊಳಿಸಿ ಗುರುತು ಮಾಡಲಾಯಿತು.

1. ಪ್ರಾಥಮಿಕ ಶಾಲೆಯಿರುವ ಜನವಸತಿಯಿಂದ ಸುತ್ತ ಒಂದು ಮೈಲು ಫಾಸಲೆಯೊಳಗಿರುವ ಇತರ ಜನವಸತಿಗಳನ್ನು ಆ ಪ್ರಾಥಮಿಕ ಶಾಲಾ ಪ್ರದೇಶಕ್ಕೆ ಸೇರಿಸಿಕೊಂಡು, ಅವುಗಳಿಗೆ ಪ್ರಾಥಮಿಕ ಶಿಕ್ಷಣದ ಸೌಕರ್ಯವಿದೆ ಯೆಂದು ಭಾವಿಸಿ ಪ್ರಾಥಮಿಕ ಶಾಲಾ ಪ್ರದೇಶವನ್ನು ಪರಿಮಿತಿಗೊಳಿಸಲಾ ಯಿತು. ಶಾಲೆ ಇರುವ ಜನವಸತಿಯ ಚಿಹ್ನೆಯ ಕಡೆಗೆ ಇತರ ಜನವಸತಿ ಗಳಿಂದ ಒಂದೊಂದು ಬಾಣದ ಗುರುತು ಹಾಕಿ, ಪ್ರತಿ ಪ್ರಾಥಮಿಕ ಶಾಲಾ ಪ್ರದೇಶ ಎದ್ದು ಕಾಣುವಂತೆ ತೋರಿಸಲಾಯಿತು.

2. ಮಾಧ್ಯಮಿಕ ಶಿಕ್ಷಣದ ಸೌಕರ್ಯವಿರುವ ಜನವಸತಿಯಿಂದ ಸುತ್ತ ಮೂರು ಮೈಲು ಫಾಸಲೆಯೊಳಗಿರುವ ಇತರ ಜನವಸತಿಗಳನ್ನು ಆ ಮಾಧ್ಯಮಿಕ ಶಾಲಾ ಪ್ರದೇಶಕ್ಕೆ ಸೇರಿಸಿ, ಅವುಗಳ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣದ ಸೌಕರ್ಯವಿದೆಯೆಂದು ಪರಿಗಣಿಸಲಾಯಿತು. ಮಾಧ್ಯಮಿಕ ಶಾಲಾ ಪ್ರದೇಶದ ಸುತ್ತ ಅಡ್ಡಗೀಟುಗಳುಳ್ಳ ಎಲ್ಲೆಯನ್ನು ಹಾಕಲಾಯಿತು.

3. ಪ್ರೌಢಶಾಲೆಯಿರುವ ಜನವಸತಿಯಿಂದ ಸುತ್ತ 5 ರಿಂದ 8 ಮೈಲು ಫಾಸಲೆಯೊಳಗಿರುವ ಜನವಸತಿಗಳನ್ನು ಆ ಪ್ರೌಢಶಾಲಾ ಪ್ರದೇಶಕ್ಕೆ ಸೇರಿಸಿಕೊಂಡು ಅವುಗಳ ಮಕ್ಕಳಿಗೆ ಪ್ರೌಢ ಶಿಕ್ಷಣದ ಸೌಕರ್ಯವಿದೆ ಯೆಂದು ಭಾವಿಸಲಾಯಿತು. ಪ್ರೌಢಶಾಲಾ ಪ್ರದೇಶದ ಸುತ್ತ ಬಿಂದುಗಳಿಂದ ಮಾಡಿದ ಎಲ್ಲೆಯನ್ನು ಹಾಕಲಾಯಿತು.

ಈ ರೀತಿಯಲ್ಲಿ ಶಾಲಾ ಪ್ರದೇಶಗಳನ್ನು ವಿಂಗಡಿಸುವಲ್ಲಿ, ಜನವಸತಿ ಯಿಂದ ಜನವಸತಿಗೆ ಇರುವ ನಡಿಗೆಯ ದೂರವನ್ನು ನಿರ್ಧರಿಸಬೇಕಾಯಿತು.

ಅದಕ್ಕಾಗಿ ಜನವಸತಿಗಳ ನಡುವೆ ಇರುವ ಪ್ರಾಕೃತಿಕ ಸನ್ನಿವೇಶಗಳನ್ನು ಗಣನೆಗೆ ತಂದುಕೊಳ್ಳಲಾಯಿತು. ಸಾಧ್ಯವಾದ ಮಟ್ಟಿಗೂ ಮಕ್ಕಳಿಗೆ ತೊಂದರೆಯಾಗದಂತೆ ಶಾಲಾ ಪ್ರದೇಶಗಳನ್ನು ರಚಿಸಲಾಯಿತು. ಈ ಪ್ರಾಕೃತಿಕ ಸನ್ನಿವೇಶಗಳನ್ನು ಸರಿಯಾಗಿ ಅರಿತುಕೊಳ್ಳುವುದಕ್ಕೂ ಪ್ರತಿ ಜನವಸತಿಯ ಸರಿಯಾದ ಭೌಗೋಳಿಕ ಸ್ಥಾನವನ್ನು ನಕ್ಷೆಯಲ್ಲಿ ಗುರುತು ಮಾಡುವುದಕ್ಕೂ ಸರ್ವೆ ಆಫ್ ಇಂಡಿಯ ತಯಾರಿಸಿ ಪ್ರಕಟಿಸಿರುವ ಅಧಿಕೃತ ಟೋಪೋ ನಕ್ಷೆಗಳನ್ನು ಸಂಗ್ರಹಿಸುವ ಸಲುವಾಗಿ, ಪ್ರತಿ ಹೋಬಳಿಯಲ್ಲಿಯೂ ಅಲ್ಲಿಯ ಎಲ್ಲ ರೆವಿನ್ಯೂ ಗ್ರಾಮಗಳ ಪಟೇಲರ, ಶ್ಯಾನುಭೋಗರ, ರೆವಿನ್ಯೂ ಇನ್ಸ್‌ಪೆಕ್ಟರ್, ಶಾಲಾ ಶಿಕ್ಷಕರುಗಳ ಮತ್ತು ಶಾಲಾ ಇನ್ಸ್‌ಪೆಕ್ಟರುಗಳ ಸಭೆಗಳನ್ನು ಸೇರಿಸಿ, ಅವರಿಂದಲೇ ಪ್ರತಿ ಗ್ರಾಮಕ್ಕೂ ಒಂದು ನಮೂನೆಯನ್ನು ತುಂಬಿಸಿಕೊಳ್ಳಲಾಯಿತು.

ಹೀಗೆ 1957 ಮಾರ್ಚ್ 31ರಲ್ಲಿದ್ದ ಶಾಲಾ ಪ್ರದೇಶಗಳೊಳಗೆ ಬರಲಾಗದೆ ಉಳಿದುಕೊಂಡ ಜನವಸತಿಗಳಿಗೆ ಹೊಸ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳನ್ನು ಯೋಜಿಸಲಾಯಿತು. ಈ ಹೊಸ ಶಾಲಾ ಪ್ರದೇಶಗಳನ್ನೂ ಮೇಲೆ ಹೇಳಿದ ನಿಯಮಗಳಿಗೆ ಅನುಸಾರವಾಗಿಯೇ ಪರಿಮಿತಿಗೊಳಿಸಿ ಮೇಲೆ ಹೇಳಿದ ಚಿಹ್ನೆಗಳಿಂದಲೇ ಗುರುತು ಮಾಡಲಾಯಿತು. ಆದರೆ ಆಗಲೇ ಇದ್ದ ಶಾಲೆಗಳನ್ನೂ ಶಾಲಾ ಪ್ರದೇಶಗಳನ್ನೂ ಹಸಿರು ಬಣ್ಣದಿಂದಲೂ ಹೊಸದಾಗಿ ಯೋಜಿಸಿದ ಶಾಲೆಗಳನ್ನೂ ಶಾಲಾಪ್ರದೇಶಗಳನ್ನೂ ಕೆಂಪು ಬಣ್ಣದಿಂದಲೂ ತೋರಿಸಲಾಯಿತು. ಇದರಿಂದ ನಕ್ಷೆಯನ್ನು ನೋಡಿದ ಕೂಡಲೇ, ಶಿಕ್ಷಣ ಸೌಕರ್ಯಗಳಿರುವ ಪ್ರದೇಶಗಳಾವುವು. ಸೌಕರ್ಯವಿಲ್ಲದಿರುವ ಪ್ರದೇಶಗಳಾವುವು ಮತ್ತು ಆ ಹೊಸ ಪ್ರದೇಶಗಳಿಗೆ ಸೌಕರ್ಯಗಳನ್ನೊದಗಿಸಲು ಹೇಗೆ ಯೋಜಿಸಲಾಗಿದೆ ಎಂಬುದು ಎದ್ದುಕಾಣುವುದು.

ಶಾಲಾ ಪ್ರದೇಶಗಳನ್ನು ರಚಿಸುವಾಗ ಅನುಸರಿಸಿದ ನಿಯಮಗಳ ಮುಖ್ಯ ಅರ್ಥವೇನೆಂದರೆ ರಾಜ್ಯದ ಯಾವ ಮಗುವೂ ಪ್ರಾಥಮಿಕ ಶಿಕ್ಷಣ ಪಡೆಯಲು ತನ್ನ ವಸತಿಯಿಂದ ಒಂದು ಮೈಲಿಗಿಂತ ಹೆಚ್ಚು ದೂರ ನಡೆಯುವಂತಿರಬಾರದು; ಮಾಧ್ಯಮಿಕ ಶಿಕ್ಷಣ ಪಡೆಯಲು ಮೂರು ಮೈಲಿಗಿಂತ ಹೆಚ್ಚು ದೂರ ನಡೆಯುವಂತಿರಬಾರದು; ಪ್ರೌಢಶಿಕ್ಷಣ ಪಡೆಯಲು 5–8 ಮೈಲಿಗಿಂತ ಹೆಚ್ಚು ದೂರ ಹೋಗುವ ಆವಶ್ಯಕತೆಯಿರಬಾರದು.

ಹೊಸ ಶಾಲೆಗಳ ಸ್ಥಾಪನೆಗೆ ಒಂದು ಪ್ರಜಾಸಂಖ್ಯಾಮಿತಿಯನ್ನು ಅನುಸರಿಸಲಾಯಿತು. ಒಂದು ಹೊಸ ಪ್ರಾಥಮಿಕ ಶಾಲೆಗೆ ಒಂದೇ ಜನವಸತಿಯಲ್ಲಾಗಲಿ ಅಥವಾ ಒಂದು ಮೈಲಿ ಫಾಸಲೆಯೊಳಗಿರುವ ಜನವಸತಿಗಳಲ್ಲಾಗಲಿ ಒಟ್ಟು ಪ್ರಜಾಸಂಖ್ಯೆ 300 ಮತ್ತು ಮೇಲ್ಪಟ್ಟು ಇರಬೇಕು. ಹೀಗೆಯೇ ಒಂದು ಹೊಸ ಮಾಧ್ಯಮಿಕ ಶಾಲಾಪ್ರದೇಶಕ್ಕೆ 5,000 ಪ್ರಜಾಸಂಖ್ಯೆಯ ಮಿತಿಯನ್ನೂ ಸಾಮಾನ್ಯವಾಗಿ ಅನುಸರಿಸಲಾಯಿತು.

ಶಾಲೆಗಳನ್ನು ಯೋಜಿಸುವಾಗ ಆ ಪ್ರದೇಶದ ಪ್ರಾಪ್ತ ವಯಸ್ಸಿನ ಎಲ್ಲ ಮಕ್ಕಳಿಗೂ ಸಾಕಷ್ಟು ಶಿಕ್ಷಣ ಸೌಕರ್ಯವನ್ನು ಒದಗಿಸುವ ಯೋಜನೆಯನ್ನು ಈ ಸರ್ವೇಕ್ಷಣದಲ್ಲಿ ಮಾಡಲಿಲ್ಲ. ಶಾಲೆಯೇ ಇಲ್ಲದ ಪ್ರದೇಶಕ್ಕೆ ಒಂದು ಪ್ರಾಥಮಿಕ ಶಾಲೆಯನ್ನು ಒದಗಿಸಿ, ಶಿಕ್ಷಣ ಸೌಕರ್ಯವನ್ನು ಅಲ್ಲಿಯ ಪ್ರಜೆಯ ಮಕ್ಕಳಿಗೆ ಒದಗಿಸುವುದು ಮಾತ್ರ ಈ ಸರ್ವೇಕ್ಷಣದ ಗುರಿಯಾಗಿತ್ತು. ಇದರಂತೆ ಹೊಸ ಶಾಲೆಗಳನ್ನು ತೆರೆದ ಮೇಲೆ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣದ ಕಾನೂನನ್ನು ಜಾರಿಗೆ ತರಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಡಲಾಯಿತು.

ಈ ಸರ್ವೇಕ್ಷಣದಲ್ಲಿ ಪ್ರತಿ ತಾಲ್ಲೂಕಿಗೆ ಒಂದರಂತೆ ತಯಾರಿಸಿದ ಶಿಕ್ಷಣ ನಕ್ಷೆಗಳ ಜೊತೆಗೆ ಅವುಗಳಿಗನುಸಾರವಾಗಿ ತಯಾರಿಸಿದ ಬಹು ಮುಖ್ಯವಾದ ದಾಖಲೆ ಪುಸ್ತಕಗಳು ಯಾವುವೆಂದರೆ ಜನವಸತಿಗಳ ದಾಖಲೆ ಪುಸ್ತಕಗಳು, ಶಾಲಾಪ್ರದೇಶಗಳ ಪುಸ್ತಕಗಳು ಮತ್ತು ಶಾಲೆಗಳ ವಿವರಗಳನ್ನು ತೋರಿಸುವ ಪುಸ್ತಕಗಳು. ಅಂಕಿ, ಅಂಶಗಳನ್ನು ತೋರಿಸುವ ನಮೂನೆಗಳಲ್ಲಿ ಬಹು ಮುಖ್ಯವಾದವು ಜನ ವಸತಿಗಳ ಜನಸಂಖ್ಯಾನುಗುಣವಾದ ಪಂಗಡಗಳು, ಅವುಗಳನ್ನನುಸರಿಸಿ ಶಾಲೆ ಇರುವ ಮತ್ತು ಇಲ್ಲದಿರುವ ಮತ್ತು ಯೋಜಿಸಿದ ಜನವಸತಿಗಳ ಅಂಕಿ ಅಂಶಗಳು. ಇದಕ್ಕಾಗಿ ಜನವಸತಿಗಳನ್ನು ಪ್ರಜಾ ಸಂಖ್ಯಾನುಗುಣವಾಗಿ ಈ ಮುಂದೆ ತಿಳಿಸಿರುವ 9 ಪಂಗಡಗಳಾಗಿ ವಿಂಗಡಿಸಲಾಯಿತು. ಪ್ರಜಾಸಂಖ್ಯೆ 5,000 ಮೀರಿದ ಜನವಸತಿಗಳ ಮತ್ತು 5,000–2,000–1000–500–400–300–200–100 ಈ ಸಂಖ್ಯೆಗಳ ನಡುವಿನ ಪ್ರಜಾಸಂಖ್ಯೆಗಳುಳ್ಳ ಜನವಸತಿಗಳು. ಕರ್ನಾಟಕ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಜಾಸಂಖ್ಯೆ 300 ರಿಂದ 2000 ದವರೆಗಿನ ಜನವಸತಿಗಳೇ ಹೆಚ್ಚು ಎಂಬ ಅಂಶ ಈ ಸರ್ವೇಕ್ಷಣದಲ್ಲಿ ಕಂಡುಬಂದಿತು.

**ದ್ವಿತೀಯ ಸರ್ವೇಕ್ಷಣ:** ಪ್ರಥಮ ಸರ್ವೇಕ್ಷಣ ಮುಗಿದ ಮೇಲೆ, ಕರ್ನಾಟಕದಲ್ಲಿ ಶಿಕ್ಷಣದ ಪ್ರಗತಿಯು ತ್ವರಿತಗತಿಯಿಂದ ಸಾಗಿತು. ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕಾಗಿ ಹೆಚ್ಚುವರಿ ಹಣವನ್ನು ಒದಗಿಸಿದುದರಿಂದ ಅನೇಕಾನೇಕ ಹೊಸ ಪ್ರಾಥಮಿಕ ಶಾಲೆಗಳೂ ಮಾಧ್ಯಮಿಕ ತರಗತಿಗಳೂ ತೆರೆಯಲ್ಪಟ್ಟವು. ಕಡ್ಡಾಯ ಶಿಕ್ಷಣ ಪ್ರಾಥಮಿಕ ಶಿಕ್ಷಣದ ಕಾನೂನಿನ ಪ್ರಕಾರ 5 ವರ್ಷ 10 ತಿಂಗಳು ತುಂಬಿದ, ಆದರೆ ಹತ್ತು ವರ್ಷ ತುಂಬದ ಮಕ್ಕಳನ್ನು ಕಡ್ಡಾಯವಾಗಿ ಪ್ರಾಥಮಿಕ ಶಾಲೆಗಳಿಗೆ ಸೇರಿಸಬೇಕಾಯಿತು. ಇದರಿಂದ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಏರಿತು. ಅಲ್ಲದೆ ಅನೇಕ ಪ್ರೌಢಶಾಲೆಗಳೂ ತೆರೆಯಲ್ಪಟ್ಟವು. ಶಿಕ್ಷಕರ ಸಂಖ್ಯೆಗಳೂ ಬಹುವಾಗಿ ಏರಿದುವು. ಹೀಗೆ ಸಾಧಿಸಿದ ಪ್ರಗತಿಯ ಸಂಖ್ಯಾಬಲವನ್ನೂ ಗುಣಮಟ್ಟವನ್ನೂ ಅಳೆಯುವುದಕ್ಕಾಗಿ ಮತ್ತು ಮುಂದೆ ಕೈಗೊಳ್ಳಬೇಕಾದ ಅಭಿವೃದ್ಧಿ ಯೋಜನೆಗಳ ಸ್ವರೂಪವನ್ನು ನಿರ್ಧರಿಸುವುದಕ್ಕಾಗಿ 1966–67ರಲ್ಲಿ ಮತ್ತೊಂದು ಸರ್ವೇಕ್ಷಣವನ್ನು ಭಾರತ ದೇಶಾದ್ಯಂತ ಕೈಗೊಳ್ಳಲಾಯಿತು. ಇದನ್ನು ಯೋಜಿಸಿ ನಡೆಸುವ ಕಾರ್ಯವನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನ ಸಂಸ್ಥೆಗೆ ಭಾರತ ಸರ್ಕಾರ ವಹಿಸಿಕೊಟ್ಟಿತು. ಕರ್ನಾಟಕ ರಾಜ್ಯದಲ್ಲಿ ಈ ಸರ್ವೇಕ್ಷಣವನ್ನು ಶಿಕ್ಷಣ ಇಲಾಖೆ ನಡೆಸಿತು.

ಈ ಸರ್ವೇಕ್ಷಣದಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲ ಅಂಕಿ ಅಂಶಗಳನ್ನು 1965 ಡಿಸೆಂಬರ್ 31ರಲ್ಲಿದ್ದಂತೆ ಸಂಗ್ರಹಿಸಲಾಯಿತು. ಸಂಗ್ರಹಣೆಯ ಕಾರ್ಯ ಪ್ರಥಮ ಸರ್ವೇಕ್ಷಣದ ಧಾಟಿಯಲ್ಲಿಯೇ ನಡೆಯಿತು. ಆದರೆ ಸಂಗ್ರಹಿಸಿದ ಅಂಕಿ ಅಂಶಗಳ ಹಿಂದೆ ಸಂಗ್ರಹಿಸಿದ ದರಕ್ಕಿಂತ ಬಹು ಹೆಚ್ಚು ವಿವರಗಳಿಂದ ಕೂಡಿವೆ. ಪುನರ್ ರಚಿತವಾದ ಶಿಕ್ಷಣ ಕ್ರಮದಲ್ಲಿ 1–7ನೆಯ ತರಗತಿಗಳು ಪ್ರಾಥಮಿಕ ಶಿಕ್ಷಣವೆಂದೂ 8–10ನೆಯ ತರಗತಿಗಳು ಸೆಕೆಂಡರಿ ಶಿಕ್ಷಣವೆಂದೂ ರೂಪುಗೊಂಡವು. ಆದ್ದರಿಂದ ಪ್ರತ್ಯೇಕ ಮಾಧ್ಯಮಿಕ ಶಾಲೆಗಳನ್ನು ತೆರೆಯುವುದು ನಿಂತು ಪ್ರಾಥಮಿಕ ಶಾಲೆಗಳಲ್ಲಿಯೇ ಮಾಧ್ಯಮಿಕ ತರಗತಿಗಳನ್ನು ಸೇರಿಸುತ್ತ ಬರಲಾಯಿತು. ಈ ಅಂಶವು ಈ ಸರ್ವೇಕ್ಷಣದ ಅಂಕಿ ಅಂಶಗಳಲ್ಲಿ ಪ್ರತಿಬಿಂಬಿತವಾಗಿದೆ.

ಅಂಕಿಅಂಶಗಳನ್ನು ಸಂಗ್ರಹಿಸುವಾಗ ಶಾಲೆಗಳ ಆಡಳಿತದ ದೃಷ್ಟಿಯಿಂದ ಸರಕಾರಿ, ಖಾಸಗಿ, ನಗರಸಭೆ, ತಾಲ್ಲೂಕು ಮಂಡಲಿ ಶಾಲೆಗಳೆಂದೂ ಹೆಣ್ಣುಮಕ್ಕಳ ಶಾಲೆಗಳು, ಗಂಡುಮಕ್ಕಳ ಶಾಲೆಗಳು, ಹೆಣ್ಣು–ಗಂಡು ಮಕ್ಕಳ ಶಾಲೆಗಳು ಎಂದೂ ಶಾಲೆಗಳನ್ನು ವಿಂಗಡಿಸಿಕೊಳ್ಳಲಾಯಿತು. ಗ್ರಾಮಾಂತರ ಪ್ರದೇಶಗಳಿಗೇ ಬೇರೆ ನಗರ ಪ್ರದೇಶಗಳಿಗೇ ಬೇರೆ ಅಂಕಿ ಅಂಶಗಳನ್ನು ಸಂಗ್ರಹಿಸಲಾಯಿತು.

ಹಿಂದಿನ ಸರ್ವೇಕ್ಷಣದಲ್ಲಿ ತಯಾರಿಸಿದ ಜನವಸತಿಗಳ ದಾಖಲೆ ಪುಸ್ತಕಗಳನ್ನೇ ಆಧಾರವಾಗಿಟ್ಟುಕೊಂಡು ಈಚೆಗೆ ಆದ ಪ್ರಜಾಸಂಖ್ಯೆಯ ಬದಲಾವಣೆಗಳನ್ನೂ ಇತರ ಬದಲಾವಣೆಗಳನ್ನೂ ಗಮನಿಸಿ ಹೊಸ ದಾಖಲೆ ಪುಸ್ತಕಗಳನ್ನು ರಚಿಸಲಾಯಿತು. ಇಷ್ಟರಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕ್ಷೇತ್ರಗಳು (ಎನ್.ಇ.ಎಸ್. ಬ್ಲಾಕ್ಸ್) ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ಮೂಲ ಘಟಕಗಳಾಗಿ (ಯೂನಿಟ್) ರೂಢಿಗೆ ಬಂದುದರಿಂದ ಹಿಂದಿನ ಸರ್ವೇಕ್ಷಣದಲ್ಲಿ ತಾಲ್ಲೂಕಿಗೆ ಒಂದರಂತೆ ರಚಿಸಿದ್ದ ದಾಖಲೆ ಪುಸ್ತಕಗಳನ್ನೂ ಶೈಕ್ಷಣಿಕ ನಕ್ಷೆಗಳನ್ನೂ ಬದಲಾಯಿಸಿಕೊಂಡು ಈಗ ಪ್ರತಿ ಕ್ಷೇತ್ರಕ್ಕೆ ಒಂದರಂತೆ ರಚಿಸಲಾಯಿತು. ಈ ನಕ್ಷೆಗಳಲ್ಲಿ 1965 ಡಿಸೆಂಬರ್ 31ರಲ್ಲಿದ್ದಂತೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣ ಶಾಲಾ ಪ್ರದೇಶಗಳನ್ನು ಪರಿಮಿತಗೊಳಿಸಿಕೊಂಡು, ಆಯಾ ಹಂತದ ಶಿಕ್ಷಣ ಸೌಕರ್ಯಗಳಿಲ್ಲದ ಜನವಸತಿಗಳಿಗೆ ಆಯಾ ಹಂತದ ಶಿಕ್ಷಣ ಸೌಕರ್ಯಗಳನ್ನೊದಗಿಸಲು ಹೊಸ ಶಾಲಾ ಪ್ರದೇಶಗಳನ್ನು ಯೋಜಿಸ ಲಾಯಿತು. ಈ ಯೋಜನೆಯನ್ನು ಜಿಲ್ಲಾಮಟ್ಟದಲ್ಲಿ ಮಾಡಲಾಯಿತು.

ಅಂಕಿಅಂಶಗಳನ್ನು ಸಂಗ್ರಹಿಸಿದ ಮೇಲೆ ಅವುಗಳನ್ನು ಕ್ರೋಡೀಕರಿಸು ವಾಗ ಪ್ರತಿ ಜಿಲ್ಲೆಯನ್ನೂ ಒಂದು ಘಟಕವನ್ನಾಗಿ ಪರಿಗಣಿಸಿ ರಾಜ್ಯದ ಒಟ್ಟು ಅಂಕಿ ಅಂಶಗಳ ಪಟ್ಟಿಗಳನ್ನು ತಯಾರಿಸಲಾಯಿತು. ಈ ಸರ್ವೇಕ್ಷಣ ದಲ್ಲಿ ಜನವಸತಿಗಳ ಪ್ರಜಾಸಂಖ್ಯಾನುಗುಣವಾದ ಪಂಗಡಗಳು; ಅವುಗಳಲ್ಲಿ ಶಾಲೆ ಹೊಂದಿರುವಂತಹವುಗಳ ಸಂಖ್ಯೆ; ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣ ಹಂತಗಳಲ್ಲಿ ಆ ಶಾಲೆಗಳಿಗೆ ಇತರ ಜನವಸತಿಗಳಿಂದ ಮಕ್ಕಳು ಬರುತ್ತಿದ್ದರೆ ಅಂಥ ಜನವಸತಿಗಳ ವಿವರಗಳು, ಮಕ್ಕಳು ನಡೆಯಬೇಕಾದ ದೂರ, ಶಾಲಾ ಪ್ರದೇಶಗಳೊಳಗೆ ಬರಲಾಗದ ಜನವಸತಿಗಳ ವಿವರಗಳು, ಅವುಗಳಿಗೆ ಎಷ್ಟೆಷ್ಟು ದೂರದಲ್ಲಿ ಶಿಕ್ಷಣದ ಸೌಕರ್ಯಗಳಿವೆ; ಶಾಲೆಗಳಲ್ಲಿರುವ ತರಗತಿಗಳು, ಪ್ರತಿ ತರಗತಿಯಲ್ಲಿರುವ ವಿಭಾಗಗಳ ಸಂಖ್ಯೆ (ಸೆಕ್ಷನ್), ಶಿಕ್ಷಣದ ಭಾಷಾ ಮಾಧ್ಯಮಗಳು; ಶಿಕ್ಷಕರ ಮತ್ತು ಶಿಕ್ಷಕಿಯರ ಸಂಖ್ಯೆಗಳು, ಅವರ ವಿದ್ಯಾರ್ಹತೆಗಳು; ವೃತ್ತಿಶಿಕ್ಷಣ ಪಡೆದವರ ಸಂಖ್ಯೆ; ಆ ಶಿಕ್ಷಣಗಳ ವಿವರಗಳು, ವೃತ್ತಿ ಶಿಕ್ಷಣ ಪಡೆಯದಿರುವವರ ಸಂಖ್ಯೆ; ಅವರ ಅನುಭವ; ಷಿಫ್ಟ್ ಏರ್ಪಾಡಿನಲ್ಲಿ ನಡೆಯುತ್ತಿರುವ ಶಾಲೆಗಳು, ಶಾಲೆಗಿರುವ ಕಟ್ಟಡ ಸೌಕರ್ಯದ ವಿವರಗಳು; ಆಟದ ಮೈದಾನ; ಪೀಠೋಪಕರಣ; ವಿದ್ಯಾರ್ಥಿ ವಸತಿ ನಿಲಯದ ಸೌಕರ್ಯಗಳು ಇತ್ಯಾದಿ ಅಂಶಗಳನ್ನೆಲ್ಲ ಸಂಗ್ರಹಿಸಲಾಗಿದೆ.

ಇಂದಿನ ವಿಜ್ಞಾನ ಯುಗದಲ್ಲಿ ಸೆಕೆಂಡರಿ ಶಾಲೆಗಳಲ್ಲಿ ವಿಜ್ಞಾನದ ಪಾಠ ಬೋಧನೆಗೆ ಪ್ರಾಮುಖ್ಯ ಕೊಡಬೇಕಾಗಿರುವುದರಿಂದ, ಅದಕ್ಕೆ ಸಂಬಂಧಪಟ್ಟ ವಿವರಗಳನ್ನೂ ಸಂಗ್ರಹಿಸಲಾಗಿದೆ. ವಿಜ್ಞಾನಪಾಠದ ತರಗತಿಗಳ ಸಂಖ್ಯೆ ವಿಜ್ಞಾನ ಬೋಧಿಸುವ ಶಿಕ್ಷಕರ ಸಂಖ್ಯೆ, ಕಾಲಾವಧಿಗಳ ಸಂಖ್ಯೆ (ಪೀರಿಯಡ್ಸ್) ಪ್ರಯೋಗಾಲಯದ ಸಾಧನ ಸಲಕರಣೆಗಳ ಅಂಕಿಅಂಶಗಳು ಮೊದಲಾದ ವಿವರಗಳನ್ನೂ ಸಂಗ್ರಹಿಸಲಾಯಿತು.

ಈ ಸರ್ವೇಕ್ಷಣದಲ್ಲಿ ಸಂಗ್ರಹಿಸಲಾದ ವಿವರವಾದ ಅಂಕಿಅಂಶ ಮತ್ತು ಮಾಹಿತಿಗಳಿಂದ ಮೂರು ಹಂತಗಳ ಶಿಕ್ಷಣದ ಸೌಕರ್ಯಗಳು ರಾಜ್ಯದ ಪ್ರಜಾಸಂಖ್ಯೆಯ ಎಷ್ಟು ಭಾಗಕ್ಕೆ ದೊರೆಯುತ್ತಿವೆ, ಇನ್ನೆಷ್ಟು ಭಾಗಕ್ಕೆ ಇಲ್ಲ, ಆಯಾ ಹಂತದ ಶಿಕ್ಷಣಕ್ಕೆ ಅರ್ಹರಾದ ಪ್ರಾಪ್ತವಯಸ್ಸಿನ ಮಕ್ಕಳು ಸೇಕಡಾ ಎಷ್ಟೆಷ್ಟು ಮಂದಿ ಶಾಲೆಗಳಿಗೆ ಬರುತ್ತಿರುವರು, ಇನ್ನೆಷ್ಟೆಷ್ಟು ಮಂದಿಯನ್ನು ಶಾಲೆಗೆ ಸೇರಿಸಬೇಕಾಗಿದೆ, ಶಿಕ್ಷಕರ ಸಂಖ್ಯೆಯೂ ಅವರ ವಿದ್ಯಾರ್ಹತೆಯೂ ಸಾಕಷ್ಟು ತೃಪ್ತಿಕರವಾಗಿವೆಯೆ, ಕಟ್ಟಡ, ಆಟದ ಮೈದಾನ, ವಿಜ್ಞಾನದ ಉಪಕರಣಗಳು, ಇವುಗಳ ಕೊರತೆ ಎಷ್ಟೆಷ್ಟು ಇವೆ ಮೊದಲಾದ ವಿಷಯಗಳ ಸ್ವರೂಪವನ್ನು ಕಂಡು ಕೊಳ್ಳಬಹುದು. ಇದರಿಂದ ಇಂದಿನ ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸಿ ಮುಂದೆ ಒದಗಿಸಬೇಕಾಗುವ ಶಿಕ್ಷಣ ಸೌಕರ್ಯಗಳ ಗಾತ್ರ ಮತ್ತು ಗುಣಸ್ವರೂಪದ ವಿವರಗಳನ್ನು ನಿರ್ಧರಿಸಬಹುದು.

ಈ ಸರ್ವೇಕ್ಷಣದ ಅಂಕಿಅಂಶಗಳ ಸಹಾಯದಿಂದ ಪ್ರತಿ ಜಿಲ್ಲೆಗೂ ಒಂದು ಪ್ರತ್ಯೇಕವಾದ ಶೈಕ್ಷಣಿಕ ಅಭಿವೃದ್ಧಿ ಯೋಜನೆಯನ್ನು ರಚಿಸಿಕೊಂಡು, ಜಿಲ್ಲೆಯ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿ ಅದಕ್ಕನು ಸಾರವಾದ ಪ್ರಗತಿಯ ಪ್ರಚೋದನೆಯನ್ನು ಒದಗಿಸುವ ಉದ್ದೇಶವಿದೆ.

(ಎಂ.ಆರ್.ಆರ್.ಎ)

**ಶಿಕ್ಷಣ ವ್ಯವಸ್ಥೆ:** ಕರ್ನಾಟಕದ ಶಿಕ್ಷಣ ಐದು ಅಂತಸ್ತುಗಳಲ್ಲಿ ವ್ಯವಸ್ಥೆಗೊಂಡಿದೆ; ಪ್ರಾಥಮಿಕ ಪೂರ್ವ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ, ವಿಶ್ವವಿದ್ಯಾನಿಲಯದ ಪೂರ್ವದ (ಪಿಯುಸಿ) ಶಿಕ್ಷಣ ಮತ್ತು ಉನ್ನತ ಶಿಕ್ಷಣ, ಇದನ್ನು ಸಾಂಕೇತಿಕವಾಗಿ 3 + 7 + 3 + 2 + 3 ಎಂದು ನಿರೂಪಿಸಬಹುದು. ಇದರಲ್ಲಿ ಪ್ರಾಥಮಿಕ ಪೂರ್ವದ ಶಿಕ್ಷಣ ರಾಜ್ಯ ಸರ್ಕಾರದ ಹೊಣೆಗಾರಿಕೆಯ ಪರಿಮಿತಿಗೆ ಬಂದಿಲ್ಲವಾದ್ದ ರಿಂದ ಸಾಮಾನ್ಯವಾಗಿ 7 + 3 + 2 + 3 ಎಂಬ ಸೂತ್ರದಿಂದ ಅದನ್ನು ಸಂಕೇತಿಸುವುದು ಹೆಚ್ಚು ವಾಡಿಕೆಯಲ್ಲಿದೆ. ಎಂದರೆ ಪ್ರಥಮ ಪದವಿಗೆ ಮುನ್ನ ವಿದ್ಯಾರ್ಥಿ ಹದಿನೈದು ವರ್ಷಗಳ ಕಾಲ ಶಿಕ್ಷಣ ಪಡೆಯಬೇಕಾಗುತ್ತದೆ.

ಏಳು ವರ್ಷಗಳ ಪ್ರಾಥಮಿಕ ಶಿಕ್ಷಣ ಎರಡು ಅಂತಸ್ತುಗಳಲ್ಲಿ ಏರ್ಪಟ್ಟಿದೆ. 5 + ವಯೋಮಾನದ ಮಕ್ಕಳು ಸೇರಿ ನಾಲ್ಕು ವರ್ಷಗಳ ಶಿಕ್ಷಣ ಪಡೆಯುವ ಕಿರಿಯ ಪ್ರಾಥಮಿಕ ಶಾಲೆ ಮತ್ತು ಅನಂತರ ಮೂರು ವರ್ಷಗಳ ಶಿಕ್ಷಣ ಪಡೆಯುವ ಹಿರಿಯ ಪ್ರಾಥಮಿಕ ಶಾಲೆ. ಏಳು ವರ್ಷಗಳ ಪ್ರಾಥಮಿಕ ಶಿಕ್ಷಣದ ಅನಂತರ ನಡೆಯುವ ಜಿಲ್ಲಾ ಮಟ್ಟದ ಸಾರ್ವತ್ರಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಪ್ರೌಢಶಾಲೆಗೆ ಪ್ರವೇಶಾರ್ಹತೆ ಪಡೆಯುತ್ತಾರೆ. ಪ್ರೌಢಶಾಲೆ ಮೂರು ವರ್ಷದ ಶಿಕ್ಷಣವೊದಗಿಸುತ್ತದೆ. ಆ ಶಿಕ್ಷಣದ ಅಂತ್ಯದಲ್ಲಿ ನಡೆಯುವ ಸಾರ್ವತ್ರಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಪ್ರಿಯೂನಿವರ್ಸಿಟಿ ತರಗತಿಗೆ ಪ್ರವೇಶಾರ್ಹತೆ ಪಡೆಯುತ್ತಾರೆ. ಪ್ರೌಢಶಾಲೆ ಶಿಕ್ಷಣ ಮುಗಿಸಿ ಅಧ್ಯಾಪಕ ವೃತ್ತಿಶಿಕ್ಷಣ ಪಡೆಯಲೆಳಸುವವರು ಎರಡು ವರ್ಷಗಳ ಸರ್ಟಿಫಿಕೇಟ್ ಹೈಯರ್ ತರಗತಿಯನ್ನು ನಡೆಸುವ ಟ್ರೇನಿಂಗ್ ಕಾಲೇಜುಗಳಿಗೆ ಸೇರಬಹುದು. ಉನ್ನತ ಶಿಕ್ಷಣಕ್ಕೆ ಹೋಗತಕ್ಕವರು ಜೂನಿಯರ್ ಕಾಲೇಜಿನಲ್ಲಿ ಅಥವಾ ಕಾಂಪೊಸಿಟ್ ಪ್ರೌಢಶಾಲೆ ಅಥವಾ ಕಾಲೇಜುಗಳಲ್ಲಿ ಏರ್ಪಟ್ಟಿರುವ ಎರಡು ವರ್ಷದ ಪ್ರಿಯೂನಿವರ್ಸಿಟಿ ತರಗತಿಗೆ ಸೇರುತ್ತಾರೆ. ಪಿಯುಸಿ ತರಗತಿಯಲ್ಲಿ ಉತ್ತೀರ್ಣರಾದವರು ಪ್ರಥಮ ದರ್ಜೆ ಕಾಲೇಜಿನ ಬಿ.ಎ.; ಬಿ.ಎಸ್‌ಸಿ; ಬಿ.ಕಾಂ. ಮುಂತಾದ ಉನ್ನತ ಸಾಂಸ್ಕೃತಿಕ ಶಿಕ್ಷಣಕ್ಕೆ, 5 ವರ್ಷಗಳ ವೈದ್ಯಕೀಯ ಅಥವಾ ಎಂಜಿನಿಯರಿಂಗ್ ಅಥವಾ ತಾಂತ್ರಿಕ ಡಿಪ್ಲೊಮಾ ತರಗತಿಗಳನ್ನು ನಡೆಸುವ ಪಾಲಿಟೆಕ್ನಿಕ್‌ಗೆ ಸೇರಬಯಸುವವರು ಪ್ರೌಢಶಾಲೆಯ ಶಿಕ್ಷಣ ಮುಗಿಸಿಕೊಂಡು ನೇರವಾಗಿ ಅಲ್ಲಿಗೆ ಪ್ರವೇಶ ಪಡೆಯಬಹುದು.

ಸಾಂಸ್ಕೃತಿಕ ಉನ್ನತ ಶಿಕ್ಷಣ ಎರಡು ಹಂತಗಳಲ್ಲಿ ಏರ್ಪಟ್ಟಿದೆ. ಮೂರು ವರ್ಷದ ವಿಜ್ಞಾನ ಅಥವಾ ಕಲಾಶಾಸ್ತ್ರಗಳ ಪ್ರಥಮ ಪದವಿ ಮತ್ತು ಎರಡು ವರ್ಷಗಳ ಮಾಸ್ಟರ್ ಪದವಿ. ಅನಂತರ ಸಂಶೋಧನೆಯ ಮೂಲಕ ಪಿಎಚ್.ಡಿ. ಪದವಿಗೂ ಕೂಡಬಹುದು. ಮಾಸ್ಟರ್ ಪದವಿ ಮುಗಿಸಿ ಪಿಎಚ್.ಡಿ ಪದವಿ ಸೇರತಕ್ಕವರಿಗೆ ಸಂಶೋಧನೆಯಲ್ಲಿ ಅಗತ್ಯವಾದ ಹಿನ್ನೆಲೆಯ ಅನುಭವ ದೊರಕಿಸಲು ಈಚೆಗೆ ಅವೆರಡಕ್ಕೂ ಮಧ್ಯದಲ್ಲಿ ಎಮ್.ಫಿಲ್ ಕೋರ್ಸನ್ನು ಆರಂಭಿಸಲಾಗಿತ್ತು. ಬಳಿಕ

ಸಂಶೋಧನ ವಿದ್ಯಾರ್ಥಿಯ ನೋಂದಣಿ ಸ್ಥಿರವಾಗಬೇಕಾದರೆ ಪೂರ್ವಭಾವಿ ಪಿಎಚ್.ಡಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ನಿಯಮ ಜಾರಿಗೆ ಬಂತು. ಪ್ರಸ್ತುತ ಈ ಎರಡು ಕೋರ್ಸುಗಳೂ ಅಸ್ತಿತ್ವದಲ್ಲಿಲ್ಲ. ಡಾಕ್ಟೊರಲ್ ಸಮಿತಿಯ ಮುಂದೆ ಸಂಶೋಧನ ವಿದ್ಯಾರ್ಥಿ ತನ್ನ ಸಂಶೋಧನೆಯ ಬಗ್ಗೆ ವಿಷಯವನ್ನು ಮಂಡಿಸಿ ಆ ಸಮಿತಿ ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರೆ ಮಾತ್ರ ಆತ ಸಂಶೋಧನೆ ಮುಂದುವರಿಸಬಹುದು. ಮಹಾಪ್ರಬಂಧವನ್ನು (ಥೀಸಿಸ್) ಆತ ವಿಶ್ವವಿದ್ಯಾಲಯಕ್ಕೆ ಒಪ್ಪಿಸುವ ಮೊದಲು ಈ ಸಮಿತಿಯ ಒಪ್ಪಿಗೆ ಮತ್ತು ಬೆಂಬಲಗಳು ಅನಿವಾರ್ಯ.

ಯಾವುದಾದರೂ ಪ್ರಥಮ ಪದವಿ ಪಡೆದವರು ಒಂದು ವರ್ಷದ ಅಧ್ಯಾಪಕರ ಶಿಕ್ಷಣಕ್ಕೆ ಸೇರಿ ಬಿ.ಇಡಿ ಪದವಿ ಪಡೆಯಬಹುದು. ಅನಂತರ ಒಂದು ವರ್ಷದ ಎಂ.ಇಡಿ ಪದವಿಗೆ ಸೇರಬಹುದು. ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನಲ್ಲಿ ಶಿಕ್ಷಣ ಶಾಸ್ತ್ರವನ್ನು ಒಂದು ಅಧ್ಯಯನ ವಿಷಯವನ್ನಾಗಿ ಅಳವಡಿಸಿಕೊಂಡು ನಾಲ್ಕು ವರ್ಷದ ಸಂಯೋಜಿತ ಪದವಿಯನ್ನು (ಬಿ.ಎಸ್‍ಸಿ. ಇಡಿ.; ಬಿ.ಎ. ಇಡಿ ಇತ್ಯಾದಿ) ನೀಡುವ ವಿಶೇಷ ತರಗತಿಗಳೂ ಉಂಟು. ಕಲೆ, ವಿಜ್ಞಾನ, ವಾಣಿಜ್ಯ ಮುಂತಾದ ವಿಷಯಗಳಲ್ಲಿ ಪ್ರಥಮ ಪದವಿ ಪಡೆದವರು ಶಿಕ್ಷಣ ಶಾಸ್ತ್ರದ ಎರಡು ವರ್ಷದ ಎಂ.ಎ. ತರಗತಿಗೂ ಸೇರಬಹುದು.

ಕೆಲವು ನಿಬಂಧನೆಗೊಳಪಟ್ಟಂತೆ ಪ್ರೌಢಶಾಲೆಗೆ ಸೇರದವರೂ ಖಾಸಗಿ ಅಧ್ಯಯನ ಮಾಡಿಕೊಂಡು ಪ್ರೌಢಶಾಲೆಯ ಅಂತಿಮ ಪರೀಕ್ಷೆಗೆ ಕೂಡಬಹುದು. ಎಂಜಿನಿಯರಿಂಗ್ ಅಥವಾ ತಾಂತ್ರಿಕ ಡಿಪ್ಲೊಮಾ ಮುಗಿಸಿರುವವರಿಗೆ ಪದವೀಧರರಾಗಲು ಎರಡು ಅವಕಾಶಗಳನ್ನು ಕಲ್ಪಿಸಿದೆ. ಅವರು ನೇರವಾಗಿ ಎಂಜಿನಿಯರಿಂಗ್ ಕಾಲೇಜಿಗೆ ಸೇರಿ ಬಿ.ಇ. ಪದವಿ ಪಡೆಯಬಹುದು. ಈ ಸೌಲಭ್ಯ ಪಿಯುಸಿ ಮುಗಿಸಿ ವೃತ್ತಿನಿರತರಾಗಿರತಕ್ಕವರಿಗೆ ಅನ್ವಯಿಸುತ್ತದೆ.

ವೈದ್ಯವೃತ್ತಿ, ಎಂಜಿನಿಯರಿಂಗ್ ಅಥವಾ ತಾಂತ್ರಿಕ ಪ್ರಥಮ ಪದವಿ 4 ಅಥವಾ 5 ವರ್ಷದ್ದು. ಅನಂತರ ಮಾಸ್ಟರ್ ಪದವಿ ಒಂದು ವರ್ಷದ್ದು. ವ್ಯವಸಾಯ ಅಥವಾ ಕೃಷಿ ವಿದ್ಯೆಗೆ ಸಂಬಂಧಿಸಿದ ಉನ್ನತ ಶಿಕ್ಷಣವೂ ಎರಡು ಹಂತಗಳಲ್ಲಿ ವಿಸ್ತರಿಸಿದೆ. ನಾಲ್ಕು ವರ್ಷಗಳ ಪ್ರಥಮ ಪದವಿ ಮತ್ತು ಎರಡು ವರ್ಷಗಳ ಮಾಸ್ಟರ್ ಪದವಿ.

ಕೇವಲ ಎಸ್.ಎಸ್.ಎಲ್.ಸಿ. ಮುಗಿಸಿ ವೃತ್ತಿನಿರತರಾದವರಿಗೂ ಇತರರಿಗೂ ಸಂಜೆಯ ಕಾಲೇಜಿಗೆ ಸೇರಿ ಪಿಯುಸಿ ಮತ್ತು ಪ್ರಥಮ ಪದವಿಗೆ ಕೂಡುವ ಸೌಲಭ್ಯವನ್ನು ಕಲ್ಪಿಸಿದೆ. ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗಳೂ ಆ ಸೌಲಭ್ಯವನ್ನು ಒದಗಿಸುತ್ತಿವೆ. ಈಚೆಗೆ ಆ ಸೌಲಭ್ಯ ಆರಿಸಿದ ಕೆಲವು ವಿಷಯ ಸಂಯೋಜನೆಗಳಲ್ಲಿ ಮಾಸ್ಟರ್ ಪದವಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ. **(ಕೆ.ಎನ್.ಬಿ.;ಎನ್.ಎಸ್.ವಿ.)**

**ಶಿಖಾ ಟಂಡನ್:** 1985– . ಅಂತಾರಾಷ್ಟ್ರೀಯ ಖ್ಯಾತಿಯ, ಕರ್ನಾಟಕದ ಈಜುಗಾರ್ತಿ. ಇವರು 1985 ಜನವರಿ 20 ರಂದು ಮುಂಬೈನಲ್ಲಿ ಜನಿಸಿದರು. ಇವರ ತಂದೆ ರಾಹುಲ್ ಟಂಡನ್, ತಾಯಿ ವಂದನಾ ಟಂಡನ್. ಶಿಖಾ ಟಂಡನ್ ಅವರ ತಮ್ಮ ಶೋಭಿತ್ ಟಂಡನ್‍ಗೆ ಬಾಲ್ಯದಲ್ಲೇ ಆಸ್ತಮಾ ವ್ಯಾಧಿ ಹಿಡಿಯಿತು. ಚಿಕಿತ್ಸೆ ನೀಡಿದ ವೈದ್ಯರು ಆತನಿಗೆ ಈಜು ಕಲಿಸಲು ಸಲಹೆ ನೀಡಿದರು. ತಮ್ಮನಿಗಾಗಿ ಈಜುಕೊಳಕ್ಕೆ ಹೋಗತೊಡಗಿದ ಶಿಖಾ ಆಕಸ್ಮಿಕವೆಂಬಂತೆ ಸ್ವತಃ ಈಜುಗಾರ್ತಿಯಾಗಿ ಈ ಕ್ಷೇತ್ರಕ್ಕೆ ಇಳಿದರು. 1987ರಲ್ಲಿ ತಂದೆಯೊಂದಿಗೆ ಬೆಂಗಳೂರಿಗೆ ಬಂದು ನೆಲೆಸಿದ ಇವರು ಈಗ ಕನ್ನಡದವರೇ ಆಗಿದ್ದಾರೆ. ಇವರು ಜೈವಿಕ ತಂತ್ರಜ್ಞಾನದಲ್ಲಿ ಪದವೀಧರರು.

ಬೆಂಗಳೂರಿನ ಕೆ.ಸಿ. ರೆಡ್ಡಿ ಸ್ವಿಮ್ ಸೆಂಟರ್‌ನ ನಿಹಾರ್ ಅಮೀನ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದ ಇವರು ಅಮೆರಿಕದ ಪ್ರಸಿದ್ಧ ಈಜು ತರಬೇತುದಾರ ಪ್ಯಾಟ್ರಿಕ್ ಎ. ಹೋಗನ್‍ರಿಂದ ಶಿಸ್ತುಬದ್ಧ ತರಬೇತಿ ಪಡೆದರು (1999–2000). ಕ್ಯಾಲಿಫೋರ್ನಿಯದಲ್ಲಿ ಮತ್ತೆ ತರಬೇತಿ ಪಡೆದ (2003–04) ಇವರಿಗೆ ಭಾರತ ಸರ್ಕಾರ ವಿದ್ಯಾರ್ಥಿವೇತನ ನೀಡಿತ್ತು.

1986 ರಿಂದ ಏಷ್ಯನ್ ಕ್ರೀಡಾಕೂಟಗಳಲ್ಲಿ ನಿರಂತರವಾಗಿ ಅಂತಿಮ ಸುತ್ತು ತಲುಪಿದ ಏಕೈಕ ಭಾರತೀಯರು ಎಂಬ ಹೆಮ್ಮೆಗೆ ಇವರು ಪಾತ್ರರು. 2004ರ ಅಥೆನ್ಸ್ ಒಲಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಏಕೈಕ ಈಜು ಗಾರ್ತಿ ಇವರು. ಫ್ರೀಸ್ಟೈಲ್ ಮತ್ತು ಬ್ಯಾಕ್‍ಸ್ಟ್ರೋಕ್ ಇವರ ಮೆಚ್ಚಿನ ವಿಭಾಗಗಳು. ಅಥೆನ್ಸ್ ಒಲಂಪಿಕ್ಸ್‌ನಲ್ಲಿ ಇವೆರಡೂ ವಿಭಾಗಗಳಲ್ಲಿ ಅರ್ಹತೆ ಪಡೆದ ಏಕೈಕ ಭಾರತೀಯ ಈಜುಗಾರ್ತಿ ಇವರು. ಇವೆರಡು ವಿಭಾಗಗಳಲ್ಲಿ ವೈಯಕ್ತಿಕವಾಗಿ ಏಳು ರಾಷ್ಟ್ರೀಯ ದಾಖಲೆಗಳನ್ನು ನಿರ್ಮಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ 2 ಚಿನ್ನ, 15 ಬೆಳ್ಳಿ, 10 ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ಇವರಿಗೆ ಅನೇಕ ಪ್ರಶಸ್ತಿಗಳು ಸಂದಿವೆ. ಬೆಸ್ಟ್ ವಿಮೆನ್ ಸ್ವಿಮ್ಮರ್ (2003), ಭಾರತ ರಾಷ್ಟ್ರೀಯ ಮುಕ್ತ ಈಜು ಚಾಂಪಿಯನ್‍ಶಿಪ್ (2004 ಮತ್ತು 2005), ಕರ್ನಾಟಕ ಸರ್ಕಾರದ ಏಕಲವ್ಯ ಪ್ರಶಸ್ತಿ, ಕರ್ನಾಟಕ ಒಲಂಪಿಕ್ಸ್ ಸಂಸ್ಥೆಯ ಪ್ರಶಸ್ತಿ, ಬೆಸ್ಟ್ ಫೀಮೇಲ್ ಸ್ಪೋರ್ಟ್ಸ್‌ಪರ್ಸನ್ (2005), ಭಾರತ ಸರ್ಕಾರದ ಅರ್ಜುನ ಪ್ರಶಸ್ತಿ (2006) ಇವುಗಳಲ್ಲಿ ಮುಖ್ಯವಾದವು. **(ಎಸ್.ಬಿಎಚ್.ಎ.)**

**ಶಿಗ್ಗಾಂವಿ:** ಹಾವೇರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕಿನ ಉತ್ತರದಲ್ಲಿ ಕುಂದಗೋಳ, ದಕ್ಷಿಣದಲ್ಲಿ ಹಾನಗಲ್ಲು, ಪೂರ್ವದಲ್ಲಿ ಸವಣೂರು ಮತ್ತು ವಾಯವ್ಯದಲ್ಲಿ ಕಲಘಟಗಿ ತಾಲ್ಲೂಕುಗಳು ಹಾಗೂ ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕು ಸುತ್ತುವರಿದಿವೆ. ತಾಲ್ಲೂಕಿನ ವಿಸ್ತೀರ್ಣ 585.3 ಚ.ಕಿಮೀ. ತಾಲ್ಲೂಕಿನಲ್ಲಿ 86,189 ಮಂದಿ ಪುರುಷರು, 80,404 ಮಂದಿ ಮಹಿಳೆಯರು ಸೇರಿ ಒಟ್ಟು ಜನಸಂಖ್ಯೆ 1,66,742. ಇದರಲ್ಲಿ 1,22,091 ಮಂದಿ ಗ್ರಾಮವಾಸಿಗಳು, 44,651 ಮಂದಿ ಪಟ್ಟಣವಾಸಿಗಳಿದ್ದಾರೆ.

ಜಿಲ್ಲೆಯ ವಾಯವ್ಯ ಗಡಿಯಲ್ಲಿರುವ ಈ ತಾಲ್ಲೂಕು ಪಶ್ಚಿಮಘಟ್ಟ ಪ್ರದೇಶದ ಸೆರಗಿನಲ್ಲಿದೆ. ತಾಲ್ಲೂಕಿನ ಪೂರ್ವದ ಕಡೆ ಇಳಿಜಾರಾಗಿದ್ದು ಅಲ್ಲಲ್ಲಿ ಸಣ್ಣ ಗುಡ್ಡಗಳು ಮತ್ತು ಕಿರಿದಾದ ಕಣಿವೆಗಳಿವೆ. ತಾಲ್ಲೂಕಿನ ಪೂರ್ವಭಾಗಕ್ಕೆ ಬಂದಂತೆಲ್ಲ ಬಯಲುಗಳು ಹೆಚ್ಚು ವಿಸ್ತಾರವಾಗುತ್ತವೆ. ಈ ತಾಲ್ಲೂಕಿನ ದುಂಡಸಿ ಗ್ರಾಮದ ಬಳಿ ಜಿಲ್ಲೆಯ ಮುಖ್ಯ ಉಪನದಿ ಬೆಣ್ಣೆಹಳ್ಳ ಉಗಮಿಸಿ ಉತ್ತರಾಭಿಮುಖವಾಗಿ ಹರಿದು ಮೆಣಸಿಗಿ ಬಳಿ ಮಲಪ್ರಭಾ ನದಿಯನ್ನು ಸೇರುತ್ತದೆ. ಈ ತಾಲ್ಲೂಕಿನ ಬಹುಭಾಗ ಈ ಹೊಳೆಯ ಜಲಾನಯನ ಪ್ರದೇಶಕ್ಕೆ ಸೇರುತ್ತದೆ. ತಾಲ್ಲೂಕಿನ ದಕ್ಷಿಣ ಭಾಗದ ತೊರೆಗಳು ವರದಾ ನದಿಯನ್ನು ಸೇರುತ್ತವೆ. ವಾರ್ಷಿಕ ಸರಾಸರಿ ಮಳೆ 811.02 ಮಿಮೀ. **(ಬಿ.)**

ಈ ತಾಲ್ಲೂಕಿನ ಬಹುಭಾಗ ಮಲೆನಾಡು ವಲಯಕ್ಕೆ ಸೇರಿರುವುದರಿಂದ ಇಲ್ಲಿನ ಕಾಡು ಸಾಂದ್ರವಾಗಿದ್ದು ತೇಗ, ಗಂಧ, ಅಳಲೆ, ಹಲಸು,

ಮಾವು, ಆಲ, ಅತ್ತಿ, ಬಿಳಿನಂದಿ, ಬೀಟೆ ಇತ್ಯಾದಿ ಮರಗಳಿಂದ ಕೂಡಿದೆ. ಪೂರ್ವದ ಕಡೆ ಹೋದಂತೆಲ್ಲ ಕಾಡು ತೆಳುವಾಗುತ್ತ ಬರುತ್ತದೆ. ತೊರೆಗಳ ತೀರದಲ್ಲಿ ಬಿದಿರ ಮೆಳೆಗಳಿವೆ, ಇಲ್ಲಿನ ಕಾಡು ಪ್ರದೇಶದಲ್ಲಿ ಹುಲಿ, ಚಿರತೆ, ಕರಡಿ, ಕಾಡುಹಂದಿ, ತೋಳ ಮೊದಲಾದ ಪ್ರಾಣಿಗಳಿವೆ.

ತಾಲ್ಲೂಕಿನ ಮುಖ್ಯ ಕಸಬು ವ್ಯವಸಾಯ. ಬತ್ತ, ರಾಗಿ, ಜೋಳ ಇಲ್ಲಿನ ಪ್ರಧಾನ ಆಹಾರ ಬೆಳೆಗಳು. ಇವುಗಳ ಜೊತೆಗೆ ಸಾವೆ, ಹೆಸರು, ಕಡಲೆ, ತೊಗರಿ, ಕಬ್ಬು, ಹೊಗೆಸೊಪ್ಪು ಬೆಳೆಯುತ್ತಾರೆ. ಗೋಡಂಬಿ, ಮಾವು, ಬಾಳೆ ತೋಟದ ಬೆಳೆಗಳು.

ತಾಲ್ಲೂಕಿನಲ್ಲಿ ಅಕ್ಕಿ ಗಿರಣಿಗಳು, ಮರದ ವಸ್ತುಗಳ ತಯಾರಿಕೆ, ಅವಲಕ್ಕಿ ಚುರಮುರಿ ತಯಾರಿಕೆ, ಬಿದಿರು ಕೆಲಸದ ಪಾತ್ರೆ ಮಾಡುವ ಮತ್ತು ಗಾಡಿ ತಯಾರಿಸುವ ಉದ್ಯಮಗಳನ್ನು ಬಿಟ್ಟರೆ ಇತರ ದೊಡ್ಡ ಕೈಗಾರಿಕೆಗಳಿಲ್ಲ.

ಶಿಗ್ಗಾಂವಿಗೆ ಉತ್ತರದಲ್ಲಿ 2 ಕಿಮೀ ದೂರದಲ್ಲಿರುವ ಗಂಜಿಗಟ್ಟಿಯಲ್ಲಿ ಸುಮಾರು 8 ಚ.ಅಡಿಯ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಇದೊಂದು ಅಮೂಲ್ಯ ಕೃತಿಯೆಂದು ಪ್ರಸಿದ್ಧವಾಗಿದೆ. ಶಿಗ್ಗಾಂವಿಗೆ ಉತ್ತರದಲ್ಲಿ 16 ಕಿಮೀ ದೂರದಲ್ಲಿರುವ ಹಿರೇಬೆಂಡಿಗೇರಿಯಲ್ಲಿ ಕಾಳಪ್ಪನ ದೇವಾಲಯವೂ ಎರಡು ಮಠಗಳೂ ಇವೆ. ಇಲ್ಲಿ ಆರನೆಯ ಚಾಳುಕ್ಯ ವಿಕ್ರಮಾದಿತ್ಯ, ಎರಡನೆಯ ಜಗದೇಕಮಲ್ಲ ಮತ್ತು ಎರಡನೆಯ ಕಳಚುರಿ ಬಿಜ್ಜಳ ಇವರ ಕಾಲದ ಅನೇಕ ಶಾಸನಗಳಿವೆ. ಶಿಗ್ಗಾಂವಿಯ ಈಶಾನ್ಯಕ್ಕೆ 12 ಕಿಮೀ ದೂರದಲ್ಲಿರುವ ಹುಲಗೂರಿನಲ್ಲಿ ಸಂತ ಹಜರತ್ ಷಾ ಅವರ ಸಮಾಧಿ ಇದ್ದು ಮುಸ್ಲಿಮರ ಯಾತ್ರಾಸ್ಥಳವಾಗಿದೆ. ಇಲ್ಲಿ ಸಿದ್ಧಲಿಂಗ ದೇವಾಲಯವಿದೆ. ಸು. 970ರ ಕಾಲಕ್ಕೆ ಸೇರಿದ ಖೊಟ್ಟಿಗನ ಶಾಸನವೂ ಸೇರಿದಂತೆ ಇಲ್ಲಿ 15 ಶಾಸನಗಳು ದೊರಕಿವೆ. ಶಿಗ್ಗಾಂವಿಗೆ ದಕ್ಷಿಣದಲ್ಲೂ ಯಲವಗಿ ರೈಲ್ವೆ ನಿಲ್ದಾಣಕ್ಕೆ ಸು. 19 ಕಿಮೀ ದೂರದಲ್ಲೂ ಇರುವ ಬಂಕಾಪುರ ಇತಿಹಾಸ ಪ್ರಸಿದ್ಧ ಸ್ಥಳ. ಜನಸಂಖ್ಯೆ 20,264.

ಶಿಗ್ಗಾಂವಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಧಾರವಾಡದ ದಕ್ಷಿಣಕ್ಕೆ 65ಕಿಮೀ ದೂರದಲ್ಲಿ, ಯಲವಗಿ ರೈಲುನಿಲ್ದಾಣಕ್ಕೆ 14 ಕಿಮೀ ದೂರದಲ್ಲಿ ಬೆಂಗಳೂರು-ಬೆಳಗಾಂವಿ ಹೆದ್ದಾರಿಯಲ್ಲಿದೆ. ಪಟ್ಟಣದಲ್ಲಿ 12,505 ಮಂದಿ ಪುರುಷರು, 11,813 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 24,318. ಇಲ್ಲಿ ರಾಷ್ಟ್ರಕೂಟರ ಕಾಲದಿಂದ ಹಿಡಿದು ಸವಣೂರಿನ ನವಾಬರ ಕಾಲದವರೆಗಿನ ಸುಮಾರು ಹದಿನಾರು ಶಾಸನಗಳಿವೆ. ಇಲ್ಲಿನ ಅತ್ಯಂತ ಪ್ರಾಚೀನ ಶಾಸನ ರಾಷ್ಟ್ರಕೂಟರ ಒಂದನೆಯ ಅಮೋಘ ವರ್ಷನಿಗೆ ಸೇರಿದ್ದು, ಇದರಲ್ಲಿ ಸೂರ್ಯ ದೇವಾಲಯಕ್ಕೆ ಬಿಟ್ಟ ಕೊಡುಗೆಯ ಬಗ್ಗೆ ಉಲ್ಲೇಖವಿದೆ. ಇಲ್ಲಿ ಕಲಮೇಶ್ವರ ಮತ್ತು ಬಸವೇಶ್ವರ ದೇವಸ್ಥಾನಗಳಿವೆ. ಸುತ್ತಲ ಗ್ರಾಮಗಳಿಗೆ ವ್ಯಾಪಾರ ಕೇಂದ್ರವಾಗಿರುವ ಈ ಪಟ್ಟಣ ಪುರಸಭಾ ಆಡಳಿತಕ್ಕೆ ಸೇರಿದೆ. *

**ಶಿಡ್ಲಘಟ್ಟ:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕಿನ ಉತ್ತರಕ್ಕೆ ಬಾಗೇಪಲ್ಲಿ, ಪಶ್ಚಿಮಕ್ಕೆ ಗುಡಿಬಂಡೆ, ನೈಋತ್ಯ ಮತ್ತು ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳೂ ಆಗ್ನೇಯದಲ್ಲಿ ಕೋಲಾರ ತಾಲ್ಲೂಕೂ ಸುತ್ತುವರಿದಿವೆ. ಜಂಗಮಕೋಟೆ, ಶಿಡ್ಲಘಟ್ಟ, ಬಸೆಟ್ಟಿಹಳ್ಳಿ ಮತ್ತು ಸಾದಳ್ಳಿ ಹೋಬಳಿಗಳು. 289 ಗ್ರಾಮಗಳಿವೆ. ವಿಸ್ತೀರ್ಣ 656.6 ಚ.ಕಿಮೀ. ತಾಲ್ಲೂಕಿನಲ್ಲಿ 98,533 ಮಂದಿ ಗಂಡಸರು 95,292 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 1,93,965. ಇದರಲ್ಲಿ 1,52,867 ಮಂದಿ ಗ್ರಾಮೀಣರೂ 41,098 ಮಂದಿ ಪಟ್ಟಣಿಗರೂ ಇದ್ದಾರೆ.

ಈ ತಾಲ್ಲೂಕು ಉತ್ತರ-ದಕ್ಷಿಣವಾಗಿ ಹಬ್ಬಿರುವ ನಂದಿದುರ್ಗ ಬೆಟ್ಟಶ್ರೇಣಿ ಮತ್ತು ದೊಡ್ಡಲಕೊಂಡ ಬೆಟ್ಟಶ್ರೇಣಿಗಳ ನಡುವೆ ಇದೆ. ತಾಲ್ಲೂಕಿನಾದ್ಯಂತ ಅನೇಕ ಬೆಟ್ಟಗುಡ್ಡಗಳು ಹರಡಿವೆ. ಇಲ್ಲಿಯ ಬೆಟ್ಟಗಳಲ್ಲಿ ಭಾರಿ ಗಾತ್ರದ ಗ್ರ್ಯಾನೈಟ್ ಶಿಲೆಗಳಿವೆ. ಜಿಲ್ಲೆಯ ಇತರೆಡೆಗಳಂತೆಯೇ ಈ ತಾಲ್ಲೂಕು ಕಡಿಮೆ ಮಳೆ ಬೀಳುವ ಪ್ರದೇಶ. ವಾರ್ಷಿಕ ಸರಾಸರಿ ಮಳೆ 785 ಮಿಮೀ. ಈ ತಾಲ್ಲೂಕಿನಲ್ಲಿ ಜಲಸಂಪನ್ಮೂಲ ಹೆಚ್ಚಾಗಿಲ್ಲ. ನಂದಿಬೆಟ್ಟದ ಸುತ್ತಲ ಪ್ರದೇಶದಿಂದ ಹುಟ್ಟಿ ಹರಿಯುವ ಪಾಪಾಗ್ನಿ ನದಿ ಈ ತಾಲ್ಲೂಕಿನ ಉತ್ತರ ಭಾಗದಲ್ಲಿ ಹರಿದರೆ, ದಕ್ಷಿಣಪಿನಾಕಿನಿ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಹರಿಯುತ್ತದೆ. ಈ ಉಪನದಿಗಳು ಮತ್ತು ಸಣ್ಣತೊರೆಗಳೂ ಇಲ್ಲಿನ ಕೆಲವು ಕೆರೆಕಟ್ಟೆಗಳನ್ನು ತುಂಬಿ ನೀರಾವರಿಗೆ ನೆರವಾಗಿವೆ.

ಈ ತಾಲ್ಲೂಕಿನ ಹೆಚ್ಚು ಪ್ರದೇಶ ಬರಡಾಗಿದ್ದು ಕಲ್ಲುನೆಲದಿಂದ ಕೂಡಿದೆ. ಅಲ್ಲಲ್ಲಿ ಕುರುಚಲು ಕಾಡು ಕಂಡುಬರುತ್ತದೆ. ಇಂಥ ಕಾಡುಗಳಲ್ಲಿ ಬೇವು, ಹುಣಿಸೆ, ಗಂಧ, ಜಾಲಿ, ದಿಂಡಿಗ, ಬಿಲವಾರ ಮುಂತಾದ ಮರಗಳನ್ನು ಕಾಣಬಹುದು.

ತಾಲ್ಲೂಕಿನ ಉತ್ತರ ಭಾಗ ವ್ಯವಸಾಯಕ್ಕೆ ಅನುಕೂಲಕರವಾಗಿಲ್ಲ. ನೀರಾವರಿ ಪ್ರದೇಶ ಮಾತ್ರ ಫಲವತ್ತಾಗಿದೆ. ನದಿಗಳ ದಡದಲ್ಲಿ ಕಪ್ಪುಮಣ್ಣು, ಉಳಿದೆಡೆ ಕೆಂಪುಮಣ್ಣು ಹೆಚ್ಚಾಗಿ ಕಂಡುಬರುವುದು. ತಾಲ್ಲೂಕಿನಲ್ಲಿ ಬಹಳವಾಗಿರುವ ಹೊಂಗೆಮರಗಳ ಸೊಪ್ಪನ್ನು ಗದ್ದೆಗೆ ಗೊಬ್ಬರವಾಗಿ ಬಳಸುತ್ತಾರೆ. ವಿದ್ಯುತ್ ಪಂಪು ಬಾವಿಗಳ ಬಳಕೆ ಅಧಿಕವಾಗಿದ್ದು ರಾಗಿ, ಮುಸುಕಿನ ಜೋಳ, ಹಿಪ್ಪನೇರಳೆ, ಕಬ್ಬು, ಬತ್ತ, ಜೋಳ, ನೆಲಗಡಲೆ, ಆಲೂಗೆಡ್ಡೆ ಮೊದಲಾದವುಗಳ ಜೊತೆಗೆ ಗೋಧಿ, ಸಜ್ಜೆ, ಕಾಳುಗಳು, ಈರುಳ್ಳಿ, ಮೆಣಸಿನಕಾಯಿ, ದ್ರಾಕ್ಷಿ, ಸೀಬೆಹಣ್ಣು, ಹೊಗೆಸೊಪ್ಪು, ಬಾಳೆಹಣ್ಣು ಮತ್ತು ವಿವಿಧ ತರಕಾರಿಗಳನ್ನೂ ಬೆಳೆಯುತ್ತಾರೆ.

ಈ ತಾಲ್ಲೂಕಿನ ಮೇಲೂರಿನಲ್ಲಿ ರೇಷ್ಮೆಗೂಡುಗಳಿಂದ ರೇಷ್ಮೆ ತೆಗೆಯುವ ಕಾರ್ಖಾನೆಯಿದೆ. ಪಲಚಾರ್ಲು ಮತ್ತು ಬೈಗುನಹಳ್ಳಿಗಳಲ್ಲಿ ಪಿಂಗಾಣಿ ಮಣ್ಣು ತೆಗೆಯುವ ಗಣಿಗಳಿವೆ. ಕೈಮಗ್ಗ ಇಲ್ಲಿನ ಇನ್ನೊಂದು ಪ್ರಮುಖ ಗೃಹಕೈಗಾರಿಕೆ. ಕಂಬಳಿ, ಸೀರೆ, ಹತ್ತಿಬಟ್ಟೆ, ಗಾಜಿನ ಬಳೆ, ಊದುಬತ್ತಿ, ಬಿದಿರಿನ ಸಾಮಾನು, ಬೆಲ್ಲ, ರೇಷ್ಮೆನೂಲು, ಮಣ್ಣಿನ ಸಾಮಾನು-ಇವುಗಳ ತಯಾರಿಕೆ ಮತ್ತು ಜೇನುಸಾಕಣೆ ಇಲ್ಲಿ ನಡೆಯುತ್ತದೆ. ಈ ತಾಲ್ಲೂಕಿ ನಲ್ಲಿ ಒಂದು ಜೂನಿಯರ್ ಕಾಲೇಜು, ಶಿಕ್ಷಣ ತರಬೇತಿ ಕೇಂದ್ರ, 5 ಪ್ರೌಢಶಾಲೆ, 38 ಹಿರಿಯ ಪ್ರಾಥಮಿಕ ಶಾಲೆ ಮುಂತಾದವುಗಳಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಔಷಧಾಲಯಗಳು, ಆರೋಗ್ಯ ಕೇಂದ್ರ ಮತ್ತು ಸರ್ಕಾರಿ ಆಸ್ಪತ್ರೆಗಳಿವೆ. ವಿದ್ಯುತ್, ಅಂಚೆ, ತಂತಿ ಮತ್ತು ದೂರವಾಣಿ ಸೌಲಭ್ಯಗಳಿವೆ. ಈ ತಾಲ್ಲೂಕಿನಿಂದ ಆಲೂಗೆಡ್ಡೆ, ಮೆಣಸಿನಕಾಯಿ, ತರಕಾರಿಗಳು ನಿರ್ಯಾತವಾಗುತ್ತವೆ. ಇಲ್ಲಿಯ ವ್ಯಾಪಾರ ವಾಣಿಜ್ಯಕ್ಕೆ ಸಹಕಾರಿಯಾಗಿ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ಇವೆ.

ಈ ತಾಲ್ಲೂಕಿನಲ್ಲಿ ಮಾರ್ಗಸಂಪರ್ಕ ಉತ್ತಮವಾಗಿದ್ದು ಬೆಂಗಳೂರು-ಕಡಪ ರಾಜ್ಯ ಹೆದ್ದಾರಿ ಈ ತಾಲ್ಲೂಕಿನ ಜಂಗಮಕೋಟೆಯ ಮೂಲಕ ಹಾದುಹೋಗುತ್ತದೆ. ಮುಖ್ಯ ಜಿಲ್ಲಾ ಮಾರ್ಗವಾದ ಮುಳಬಾಗಲು-ಗೌರಿಬಿದನೂರು ರಸ್ತೆ ಶಿಡ್ಲಘಟ್ಟದ ಮೂಲಕ ಹಾದುಹೋಗುತ್ತದೆ. ಶಿಡ್ಲಘಟ್ಟದಿಂದ ಚಿಂತಾಮಣಿ, ಚಿಕ್ಕಬಳ್ಳಾಪುರ, ಸಾದಲಿ, ಜಂಗಮಕೋಟೆ ಮತ್ತು ಸುತ್ತಲ ಮುಖ್ಯ ಊರುಗಳಿಗೆ ಒಳ್ಳೆಯ ರಸ್ತೆ ಸಂಪರ್ಕವಿದೆ. ತಾಲ್ಲೂಕಿನ ಮಧ್ಯದಲ್ಲಿ ಬೆಂಗಳೂರು-ಚಿಂತಾಮಣಿ ನ್ಯಾರೋಗೇಜ್ ರೈಲುಮಾರ್ಗವಿದ್ದು ಶಿಡ್ಲಘಟ್ಟ ಒಂದು ಮುಖ್ಯ ನಿಲ್ದಾಣ.

ಈ ತಾಲ್ಲೂಕಿನ ಮೇಲೂರಿನಲ್ಲಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ನಡೆಯುವ ಗಂಗಾದೇವಿ ರಥೋತ್ಸವ ಪ್ರಸಿದ್ಧ. ನಲ್ಲಾರಳ್ಳಹಳ್ಳಿಯ ರಾಮಲಿಂಗೇಶ್ವರ ಸ್ವಾಮಿ ಜಾತ್ರೆ, ತಲಕಾಯಲಬೆಟ್ಟದ ವೆಂಕಟರಮಣಸ್ವಾಮಿ ವಾರ್ಷಿಕ ಜಾತ್ರೆಗಳೂ ಪ್ರಸಿದ್ಧವಾದವು. ಶಿಡ್ಲಘಟ್ಟದ ಉತ್ತರಕ್ಕೆ 29ಕಿಮೀ ದೂರದಲ್ಲಿರುವ ಸಾದಳ್ಳಿ, ಅಲ್ಲಿಂದ ಉತ್ತರಕ್ಕೆ 21 ಕಿಮೀ ದೂರದಲ್ಲಿರುವ ಬಾಗೇಪಲ್ಲಿ ಪ್ರಸಿದ್ಧ ಸ್ಥಳಗಳು. ಸಾದಳ್ಳಿ ಸಹದೇವನಿಂದ ಸ್ಥಾಪಿತವಾದದ್ದೆಂದು ಪ್ರತೀತಿ.

ಶಿಡ್ಲಘಟ್ಟ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಚಿಕ್ಕಬಳ್ಳಾಪುರ-ಚಿಂತಾಮಣಿ ಇವುಗಳ ಮಧ್ಯದಲ್ಲಿರುವ ಒಂದು ರೈಲು ನಿಲ್ದಾಣ. ಕೋಲಾರದ ವಾಯವ್ಯಕ್ಕೆ 48 ಕಿಮೀ ದೂರದಲ್ಲಿದೆ. ಶಿಡ್ಲಘಟ್ಟ ಪಟ್ಟಣದಲ್ಲಿ 21,185 ಮಂದಿ ಪುರುಷರು, 19,920 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 41,105. ಇಲ್ಲಿ ರೇಷ್ಮೆಗೂಡಿನ ನಿಯಂತ್ರಿತ ಮಾರುಕಟ್ಟೆಯಿದೆ. ಪಟ್ಟಣ ಪುರಸಭಾ ಆಡಳಿತಕ್ಕೆ ಸೇರಿದೆ.

ಸ್ಥಳಚರಿತ್ರೆಯ ಪ್ರಕಾರ ಉಜನಿ ಪಟ್ಟಣದಿಂದ ಕೆಂಪೇಗೌಡ ತನ್ನ ಗರ್ಭಿಣಿ ಹೆಂಡತಿ ಹಲಸೂರಮ್ಮನೊಡನೆ ಶಿಡ್ಲಘಟ್ಟದ ಉತ್ತರಕ್ಕಿರುವ ಅಬ್ಲೋಡು ಎಂಬಲ್ಲಿಗೆ ಬಂದು ನೆಲಸಿದ. ವೆಲ್ಲೂರಿನ ದಂಡಯಾತ್ರೆಯಲ್ಲಿ ಆತ ನಿಧನನಾಗಲು, ಆತನ ಹೆಂಡತಿ ಗುಪ್ತನಿಧಿಯ ಸಹಾಯದಿಂದ ಅಬ್ಲೋಡಿನಲ್ಲಿ ಕೋಟೆ ಕಟ್ಟಿಸಿ ಅಕ್ಕಪಕ್ಕದ ಪ್ರದೇಶಗಳನ್ನು ವಶಪಡಿಸಿಕೊಂಡು ಆಳತೊಡಗಿದಳು. ಅನಂತರ ಆಕೆ ತನ್ನ ಮಾವ ಶಿಡ್ಲಗೌಡನ ಹೆಸರಿನಲ್ಲಿ ಶಿಡ್ಲಘಟ್ಟವನ್ನು 1526ರಲ್ಲಿ ಸ್ಥಾಪಿಸಿದಳು. ಶಿವನೇಗೌಡ ಎಂಬುವವನು 1529ರಲ್ಲಿ ಪಟ್ಟಕ್ಕೆ ಬಂದು 47 ವರ್ಷ ಕಾಲ ಈ ಊರನ್ನು ಆಳಿದ. ಈ ಊರಿನ ನೈಋತ್ಯಕ್ಕಿರುವ ಅಮ್ಮನಕೆರೆಯನ್ನು ಹಲಸೂರಮ್ಮನೂ ಆಗ್ನೇಯಕ್ಕಿರುವ ಗೌಡನ ಕೆರೆಯನ್ನು ಶಿವನೇಗೌಡನೂ ಕಟ್ಟಿಸಿದರೆಂದು ಪ್ರತೀತಿ. ಅಮ್ಮನಕೆರೆಯ ಸಮೀಪದಲ್ಲಿಯೇ ಶಿವನೇಗೌಡ ಮತ್ತು ಆತನ ಹೆಂಡತಿಯ ಸಮಾಧಿಗಳಿವೆ. ಶಿವನೇಗೌಡನ ಅನಂತರ, ಅದು ಮರಾಠರ ಮತ್ತು ಮುಗಲರ ವಶವಾಯಿತು. 1762ರಲ್ಲಿ ಹೈದರ್ ಅಲಿ ಆಕ್ರಮಿಸಿಕೊಂಡು, ಇಲ್ಲಿಯ ಕೋಟೆಯನ್ನು ನಾಶಮಾಡಿದ.

ಈ ಪಟ್ಟಣದಲ್ಲಿರುವ ಆಂಜನೇಯ, ವೇಣುಗೋಪಾಲಸ್ವಾಮಿ, ನಗರೇಶ್ವರ, ವೆಂಕಟರಮಣ ಮತ್ತು ಶ್ರೀಕಂಠೇಶ್ವರ ದೇವಾಲಯಗಳು ಪ್ರಮುಖವಾದವು. ಆಂಜನೇಯ ದೇವಾಲಯದ ಮುಂಭಾಗದ ಮೇಲ್ಛಾವಣಿಯ ಮೇಲೆ ದಕ್ಷಯಜ್ಞದ ಕಥೆಯನ್ನು ನಿರೂಪಿಸುವ ಚಿತ್ರಗಳಿವೆ. ವೇಣುಗೋಪಾಲ ದೇವಾಲಯದಲ್ಲಿ ಸುಮಾರು 3 ಅಡಿ ಎತ್ತರದ ವೇಣುಗೋಪಾಲಸ್ವಾಮಿಯ ವಿಗ್ರಹಗಳಿವೆ. ಗರ್ಭಗುಡಿಯ ಮುಂಭಾಗದ ಬಲಭಾಗದಲ್ಲಿ ಮೂವರು ಆಳ್ವಾರರ ವಿಗ್ರಹಗಳಿವೆ. ನಗರೇಶ್ವರ ದೇವಾಲಯದ ಶಿವಲಿಂಗದ ಬಲಭಾಗದಲ್ಲಿ ವಿಘ್ನೇಶ್ವರ, ಎಡಭಾಗದಲ್ಲಿ ಪಾರ್ವತಿ ದೇವಿಯರ ಗರ್ಭಗುಡಿಗಳಿವೆ. ವೆಂಕಟರಮಣ ದೇವಾಲಯದಲ್ಲಿ ಸುಮಾರು 4 ಅಡಿ ಎತ್ತರವಿರುವ ಮೂಲ ವಿಗ್ರಹವಿದೆ. ಇದರ ಅಕ್ಕಪಕ್ಕದಲ್ಲಿ ಶ್ರೀದೇವಿ ಮತ್ತು ಭೂದೇವಿಯರ ವಿಗ್ರಹಗಳಿವೆ. **(ಎ.ಬಿ.ಬಿ.)**

**ಶಿರಸಿ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಕಾರವಾರಕ್ಕೆ ಆಗ್ನೇಯದಲ್ಲಿರುವ ಈ ತಾಲ್ಲೂಕಿನ ಉತ್ತರದಲ್ಲಿ ಯಲ್ಲಾಪುರ ಮತ್ತು ಮುಂಡಗೋಡ, ಪಶ್ಚಿಮದಲ್ಲಿ ಅಂಕೋಲ, ನೈಋತ್ಯ ಮತ್ತು ದಕ್ಷಿಣದಲ್ಲಿ ಕುಮಟ ಮತ್ತು ಸಿದ್ದಾಪುರ ತಾಲ್ಲೂಕುಗಳೂ ಪೂರ್ವದಲ್ಲಿ ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕೂ ಮತ್ತು ಆಗ್ನೇಯದಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕೂ ಸುತ್ತುವರಿದಿವೆ. ಸಂಪಖಂಡ, ಹಲೇಕಲ್ಲು, ಶಿರಸಿ ಮತ್ತು ಬನವಾಸಿ ಈ ತಾಲ್ಲೂಕಿನ ಹೋಬಳಿಗಳು. ಒಟ್ಟು 226 ಗ್ರಾಮಗಳು ಇವೆ. ವಿಸ್ತೀರ್ಣ 2,017 ಚ.ಕಿಮೀ. ಶಿರಸಿ ತಾಲ್ಲೂಕಿನಲ್ಲಿ 89,291 ಮಂದಿ ಪುರುಷರು, 86,255 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 1,75,550. ಇದರಲ್ಲಿ 1,10,215 ಮಂದಿ ಗ್ರಾಮವಾಸಿಗಳು, 65,335 ಮಂದಿ ಪಟ್ಟಣಿಗರೂ ಇದ್ದಾರೆ.

ತಾಲ್ಲೂಕಿನ ಪೂರ್ವಭಾಗ ಹೆಚ್ಚು ಸಮತಟ್ಟಾಗಿದ್ದು ಅಪರೂಪವಾಗಿ ಕೆಲವು ಗುಡ್ಡಗಳಿವೆ. ಮಧ್ಯಭಾಗ ಬೆಟ್ಟಗುಡ್ಡಗಳಿಂದ ಕೂಡಿದ್ದು ವಿವಿಧ ವೃಕ್ಷಗಳಿಂದ ಕೂಡಿದೆ. ಸಹ್ಯಾದ್ರಿ ಪರ್ವತಶ್ರೇಣಿಯ ಹತ್ತಿರ ಫಲವತ್ತಾದ ಭೂಮಿ ಇದ್ದು ತೋಟಗಳಿಂದ ಮತ್ತು ಸದಾ ಹಸುರಾಗಿರುವ ಕಾಡಿನಿಂದ ಕೂಡಿದೆ. ಬೇಸಗೆ ಮತ್ತು ಮಳೆಗಾಲದಲ್ಲಿ ಹವೆ ಉತ್ತಮವಾಗಿದ್ದು ಚಳಿಗಾಲ ಸಹ್ಯವೆನಿಸುವುದು. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ ಮಳೆ 2,129 ಮಿಮೀ.

ಮಾರಿಕಾಂಬಾ ದೇವಸ್ಥಾನ, ಶಿರಸಿ

ತಾಲ್ಲೂಕಿನ ಆಗ್ನೇಯದ ಎಲ್ಲೆಯಲ್ಲಿ ವರದಾನದಿ ಹರಿಯುತ್ತದೆ. ಶಿರಸಿಯ ಹತ್ತಿರ ಅಘನಾಶಿನಿ ನದಿ ಹುಟ್ಟಿ ಸ್ವಲ್ಪದೂರ ದಕ್ಷಿಣಾಭಿಮುಖವಾಗಿ ಹರಿದು ಸಿದ್ದಾಪುರ ತಾಲ್ಲೂಕನ್ನು ಪ್ರವೇಶಿಸಿ, ಪಶ್ಚಿಮಾಭಿಮುಖವಾಗಿ ಕುಮಟ ತಾಲ್ಲೂಕು ಮುಖಾಂತರ ಅರಬ್ಬೀ ಸಮುದ್ರ ಸೇರುವುದು. ಶಾಲ್ಮಲಿ ನದಿ ಹಾಗೂ ಇತರ ಅನೇಕ ತೊರೆಗಳೂ ಸಾಕಷ್ಟು ಬಾವಿಗಳೂ ಇದ್ದು ತಾಲ್ಲೂಕು ಜಲಸಮೃದ್ಧಿಯಾಗಿದೆ. ಕಾಡುಗಳಲ್ಲಿ ಬೆಲೆಬಾಳುವ ಮರಗಳುಂಟು.

ತಾಲ್ಲೂಕಿನ ಮಧ್ಯಭಾಗದಲ್ಲಿ ಕೆಂಪುಮಣ್ಣಿನ ಭೂಪ್ರದೇಶವಿದೆ. ಪೂರ್ವಕ್ಕೆ ಬಂದಂತೆ ಜಿಗುಟು ಕಪ್ಪು ಮಣ್ಣು ಇದೆ. ಕಣಿವೆಗಳಲ್ಲಿ ಫಲವತ್ತಾದ ಜಂಬು ಮಣ್ಣಿನ ಭೂಮಿ ಇದೆ. ಬತ್ತ, ಕಬ್ಬು, ಕೆಲವು ದ್ವಿದಳ ಧಾನ್ಯಗಳು, ಹರಳು ಇಲ್ಲಿನ ಬೆಳೆಗಳು. ಈ ತಾಲ್ಲೂಕಿನಲ್ಲಿ ತೋಟದ ವ್ಯವಸಾಯ ಹೆಚ್ಚು. ಅಡಕೆ, ಮೆಣಸು, ಏಲಕ್ಕಿ ಮತ್ತು ತೆಂಗು ತೋಟದ ಬೆಳೆಗಳು.

ಈ ತಾಲ್ಲೂಕು ಅಡಕೆ, ಮೆಣಸು, ಏಲಕ್ಕಿ, ತೆಂಗು ವ್ಯಾಪಾರಕ್ಕೆ ಪ್ರಸಿದ್ಧ. ಸುತ್ತಲ ತಾಲ್ಲೂಕುಗಳ ವ್ಯವಸಾಯೋತ್ಪನ್ನಗಳ ಮಾರಾಟ ಮತ್ತು ಪರ ಊರಿಗೆ ಸಾಗಾಣಿಕೆ ಈ ತಾಲ್ಲೂಕಿನ ಮುಖಾಂತರ ನಡೆಯುತ್ತದೆ. ಹತ್ತಿರದ ವ್ಯಾಪಾರ ಕೇಂದ್ರಗಳಾದ ಹುಬ್ಬಳ್ಳಿ-ಧಾರವಾಡ. ಕಾರವಾರ, ಅಂಕೋಲ, ಕುಮಟ, ಸಿದ್ದಾಪುರ ಇವುಗಳೊಂದಿಗೆ ಉತ್ತಮ ಸಂಪರ್ಕ ಪಡೆದಿದೆ. ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ, ಅಂಚೆ, ತಂತಿ, ದೂರವಾಣಿ ಸೌಲಭ್ಯಗಳ ಜೊತೆಗೆ ಶಾಲಾ ಕಾಲೇಜುಗಳೂ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ವ್ಯಾಪಾರಿ ಸಂಘ ಸಂಸ್ಥೆಗಳೂ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ, ಗ್ರಾಮಮಟ್ಟದ ಆರೋಗ್ಯ ಕೇಂದ್ರಗಳು, ಪಶು ವೈದ್ಯಾಲಯ, ಮಣ್ಣು ಪರೀಕ್ಷಣಾ ಕೇಂದ್ರಗಳು ಇವೆ.

ಈ ತಾಲ್ಲೂಕಿನ ಬನವಾಸಿ **(ನೋಡಿ)** ಪ್ರಸಿದ್ಧ ಐತಿಹಾಸಿಕ ಸ್ಥಳ. ಇದು ಶಿರಸಿಗೆ ಆಗ್ನೇಯದಲ್ಲಿ 22 ಕಿಮೀ ದೂರದಲ್ಲಿದೆ. ಶಿರಸಿಯಿಂದ ಉತ್ತರದಲ್ಲಿ 19 ಕಿಮೀ ದೂರದಲ್ಲಿರುವ ಸೋಂದಾ **(ನೋಡಿ)** ಹಿಂದೆ ಸೋದೆ ಅರಸರ ರಾಜಧಾನಿಯಾಗಿತ್ತು. ಈ ತಾಲ್ಲೂಕಿನ ಸಹ್ಯಾದ್ರಿ ಶ್ರೇಣಿಯಲ್ಲಿ ಕಲ್ಯಾಣಿ ಶ್ರೇಣಿಭಾಗ ದೇವನಹಳ್ಳಿ ಮತ್ತು ಮಂಜುಗುಣಿ ಮಧ್ಯೆ ಇದ್ದು ಪೂರ್ವಕ್ಕೆ ಶಿರಸಿಯವರೆಗೂ ಹಬ್ಬಿದೆ. ಇದರ ಎತ್ತರ ಶಿಖರ ಭಾಗವೇ ಭೆಡಸಗಾಂವ ಗುಡ್ಡ. ಶಿರಸಿಯ ನೈಋತ್ಯಕ್ಕೆ ಸುಮಾರು 34 ಕಿಮೀ ದೂರದಲ್ಲಿ ದೇವಿಮನೆ ಘಾಟ್ ಇದ್ದು ಕುಮಟದೊಂದಿಗೆ ಸಂಪರ್ಕ ಕಲ್ಪಿಸಿದೆ. ಶಿರಸಿಯ ಪಶ್ಚಿಮಕ್ಕೆ ಸುಮಾರು 30 ಕಿಮೀ ದೂರದಲ್ಲಿ ವಡ್ಡಿಘಾಟ್ ಇದೆ. ಕುಮಟದೊಂದಿಗೆ ಸಂಪರ್ಕ ಕಲ್ಪಿಸುವ ಈ ಮಾರ್ಗದಲ್ಲಿ ದೇವನಹಳ್ಳಿ ವಡ್ಡಿ ಶಿವಗಂಗೆ ಮುಂತಾದ ಗ್ರಾಮಗಳಿವೆ.

ಶಿರಸಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಕಾರವಾರ, ಅಂಕೋಲಗಳಿಗೆ ಆಗ್ನೇಯದಲ್ಲಿದೆ. ಶಿರಸಿ ಪಟ್ಟಣ ತನ್ನ ಸುತ್ತಲಿನ ಮನಜವಳ್ಳಿ, ಕಲ್ಕುಣೆ, ಬಚಗಾಂವ, ಲಡಕಾನಹಳ್ಳಿ, ಚಿಪ್ಗಿ, ಪುಟ್ಟನಮನೆ ಮತ್ತು ಹತ್ಗಾರ್ ಮೊದಲಾದ ಬಡಾವಣೆಗಳನ್ನು ಒಳಗೊಂಡಂತೆ 33,144 ಮಂದಿ ಪುರುಷರನ್ನೂ 32,208 ಮಂದಿ ಮಹಿಳೆಯರನ್ನೂ ಒಳಗೊಂಡು ಒಟ್ಟು ಜನಸಂಖ್ಯೆ 65,352. ಇಲ್ಲಿ ಬತ್ತ, ಮೆಣಸು, ಅಡಕೆ ಹಾಗೂ ಮಣ್ಣಿನ ಪರೀಕ್ಷೆಯ ಸಂಶೋಧನ ಕೇಂದ್ರಗಳಿವೆ. ಸರಕಾರಿ ಆಸ್ಪತ್ರೆ, ಅಂಚೆ, ತಂತಿ, ದೂರವಾಣಿ, ವಿದ್ಯುಚ್ಛಕ್ತಿಯ ಸೌಲಭ್ಯಗಳೂ ಉಂಟು. ಮಾರಾಟದ ಸಂಘಸಂಸ್ಥೆಗಳು ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕುಗಳು, ಅನಾನಸು ಹಣ್ಣು ಸಂಸ್ಕರಣಾ ಕೇಂದ್ರ ಇವೆ. ಶಿರಸಿಗೆ 87 ಕಿಮೀ ದೂರದಲ್ಲಿ ಹಾವೇರಿ, 103 ಕಿಮೀ ದೂರದಲ್ಲಿ ಹುಬ್ಬಳ್ಳಿ ರೈಲ್ವೆ ನಿಲ್ದಾಣಗಳಿವೆ. ಶಿರಸಿ ನಗರಸಭಾ ಆಡಳಿತಕ್ಕೆ ಸೇರಿದೆ. ಇಲ್ಲಿಯ ಮಹಾಗಣಪತಿ ಹಾಗೂ ಮಾರಿಕಾಂಬಾ ದೇವಾಲಯ ಸುಪ್ರಸಿದ್ಧ. ಮೂರು ವರ್ಷಕ್ಕೊಮ್ಮೆ ಮಾರಿಕಾಂಬೆಯ ಜಾತ್ರೆ ವೈಭವದಿಂದ ಜರುಗುತ್ತದೆ. ಶಿರಸಿ ಹಿಂದೆ ಸೋದೆ ಸಂಸ್ಥಾನದ ಆಡಳಿತಕ್ಕೆ ಸೇರಿತ್ತು (ಶಿರಸಿ ಪ್ರದೇಶಕ್ಕೆ ಸುಧಾಪುರ ಸೀಮೆ ಎಂಬ ಹೆಸರಿತ್ತೆಂದೂ ಹೇಳುವರು.) ಸೋದೆಯ ಎರಡನೆಯ ದೊರೆ ರಾಮಚಂದ್ರನಾಯಕ (1598-1615) ತನ್ನ ಆಳಿಕೆಯ ಕಾಲದಲ್ಲಿ ಪ್ರಮುಖ ವ್ಯಾಪಾರ ಕೇಂದ್ರವಾದ ಈ ಊರಿನ ಸುತ್ತಲೂ ಮಣ್ಣಿನ ಕೋಟೆಯ ಗೋಡೆಗಳನ್ನು ಕಟ್ಟಿಸಿ ಈ ಊರಿಗೆ ಚನ್ನಪಟ್ಟ ಎಂಬ ಹೆಸರಿಟ್ಟಿದ್ದ. **(ಆರ್.ಜಿ.ಆರ್.)**

**ಶಿರಹಟ್ಟಿ:** ಗದಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಉತ್ತರದಲ್ಲಿ ಗದಗ, ವಾಯವ್ಯಕ್ಕೆ ಹುಬ್ಬಳ್ಳಿ, ಪಶ್ಚಿಮಕ್ಕೆ ಕುಂದಗೋಳ, ಈಶಾನ್ಯ ಮತ್ತು ಪೂರ್ವಕ್ಕೆ ಮುಂಡರಗಿ, ದಕ್ಷಿಣದಲ್ಲಿ ಹಾವೇರಿ ಜಿಲ್ಲೆಯ ಸವಣೂರು ಆಗ್ನೇಯದಲ್ಲಿ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕು ಸುತ್ತುವರಿದಿವೆ. ಎರಡು ಪಟ್ಟಣಗಳೂ 79 ಗ್ರಾಮಗಳೂ ಇರುವ ತಾಲ್ಲೂಕಿನ ವಿಸ್ತೀರ್ಣ 949.2 ಚ.ಕಿಮೀ. ಶಿರಹಟ್ಟಿ ತಾಲ್ಲೂಕಿನ ಒಟ್ಟು ಜನಸಂಖ್ಯೆ 1,83,191.

ತುಂಗಭದ್ರಾ ನದಿ ಈ ತಾಲ್ಲೂಕಿನ ಆಗ್ನೇಯದ ಅಂಚಿನಲ್ಲಿ ಸ್ವಲ್ಪ ದೂರ ಹರಿದು ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕನ್ನು ಬೇರ್ಪಡಿಸಿದೆ. ತಾಲ್ಲೂಕಿನಲ್ಲಿ ವಾಯವ್ಯದಿಂದ ಆಗ್ನೇಯಕ್ಕೆ ಹರಿಯುವ ಶಿರಹಟ್ಟಿಹಳ್ಳ ತಾಲ್ಲೂಕು ಅಂಚಿನ ಬಸಾಪುರ ಮತ್ತು ಸಾಸರವಾಡ ಗ್ರಾಮಗಳ ಮಧ್ಯೆ ಹರಿದು ತುಂಗಭದ್ರೆಯನ್ನು ಸೇರುವುದು. ಉತ್ತಮ ಹವಾಗುಣವಿದ್ದು ವಾರ್ಷಿಕ ಮಳೆ 735.82 ಮಿಮೀ.

ತಾಲ್ಲೂಕಿನ ಪಶ್ಚಿಮ ಭಾಗ ಕಪ್ಪುಮಣ್ಣಿನಿಂದಲೂ ಉಳಿದ ಭಾಗ ಮರಳು ಮಿಶ್ರಿತ ಭೂಮಿಯಿಂದ ಕೂಡಿದೆ. ಜೋಳ, ನೆಲಗಡಲೆ, ದ್ವಿದಳ ಧಾನ್ಯಗಳು, ಕಬ್ಬು, ಹತ್ತಿ ಮುಂತಾದವನ್ನು ಬೆಳೆಯುತ್ತಾರೆ. ಕೈಮಗ್ಗದ ಬಟ್ಟೆ ತಯಾರಿಕೆ, ನೆಲಗಡಲೆ ಎಣ್ಣೆ ಉತ್ಪಾದನೆಯುಂಟು.

ಶಿರಹಟ್ಟಿಯ ಆಗ್ನೇಯಕ್ಕೆ 19 ಕಿಮೀ ದೂರದಲ್ಲಿರುವ ಬೆಳ್ಳಟ್ಟಿ ಗ್ರಾಮದಲ್ಲಿರುವ ರಾಮಲಿಂಗದೇವಾಲಯ ಪ್ರಸಿದ್ಧವಾದದ್ದು. ಶಿರಹಟ್ಟಿಯ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿರುವ ದೇವಿಹಾಳದಲ್ಲಿ ದುರ್ಗಾದೇವಿ ಯಂತಿರುವ ಅಷ್ಟಭುಜವನ್ನುಳ್ಳ ಹೊಳಲಮ್ಮ ದೇವಾಲಯವಿದೆ. ಶಿರಹಟ್ಟಿಯ ದಕ್ಷಿಣಕ್ಕೆ 14 ಕಿಮೀ ದೂರದಲ್ಲಿರುವ ಶ್ರೀಮಂತಗಡ ಎಂಬ ನಿರ್ಜನ ಪ್ರದೇಶದಲ್ಲಿ ಒಂದು ಕೋಟೆಯಿದ್ದು ಅದರಲ್ಲಿ ವಳ್ಳಮ್ಮ ದೇವಾಲಯ ಮತ್ತು ಏಳು ಬಾವಿಗಳೂ ಇವೆ. ಶಿರಹಟ್ಟಿಯ ವಾಯವ್ಯಕ್ಕೆ 11 ಕಿಮೀ ದೂರದಲ್ಲಿರುವ ಯಳವತ್ತಿಯಲ್ಲಿ ಶಿರಹಟ್ಟಿಯ ಕಾಂಗವಾಡ ದೇಸಾಯಿ ಕಟ್ಟಿಸಿದ ಹಳೆಯ ಕೋಟೆ ಇದೆ. ಸಾಂಗ್ಲಿಯ ಚಿಂತಾಮಣರಾವ್ ಕೊಲ್ಹಾಪುರದ ದಂಗೆಯನ್ನು (1844) ಅಡಗಿಸಲು ಸಹಾಯ ಮಾಡಿದ್ದಕ್ಕೆ 1846ರಲ್ಲಿ ಕೋಟೆ ಮತ್ತು ಹಳ್ಳಾಪುರ ಗ್ರಾಮವನ್ನು ಅಂದಿನ ಈಸ್ಟ್ ಇಂಡಿಯಾ ಕಂಪನಿ ಸರ್ಕಾರ ಇನಾಂ ಆಗಿ ಈತನಿಗೆ ಕೊಟ್ಟಿತು. ಇಲ್ಲಿನ ಗುಂಡೇಶ್ವರ ದೇವಾಲಯ ಪ್ರಸಿದ್ಧವಾದದ್ದು. ಶಾಸನಗಳಲ್ಲಿ ಯಳವತ್ತಿಯನ್ನು ಮಹಾಗ್ರಾಮ ಮತ್ತು 120 ಮಹಾಜನರಾಡಳಿತದ ಅಗ್ರಹಾರವೆಂಬುದಾಗಿ ಉಲ್ಲೇಖಿಸಲಾಗಿದೆ. ಈ ಗ್ರಾಮವನ್ನು ಶ್ರೀರಾಮ ಸ್ಥಾಪಿಸಿದನೆಂದು ಹೇಳುವರು. ಶಿರಹಟ್ಟಿಯ ನೈಋತ್ಯಕ್ಕೆ ಲಕ್ಷ್ಮೇಶ್ವರದ ಪಶ್ಚಿಮಕ್ಕೆ 3ಕಿಮೀ ದೂರದಲ್ಲಿರುವ ಅಡರಕಟ್ಟಿಯಲ್ಲಿ ಬಸವೇಶ್ವರ ದೇವಾಲಯವಿದೆ. ಲಕ್ಷ್ಮೇಶ್ವರದ ಆಗ್ನೇಯಕ್ಕೆ 8ಕಿಮೀ ದೂರದಲ್ಲಿರುವ ದೊಡ್ಡೂರಿನಲ್ಲಿರುವ ಮಾರುತಿ ದೇವಾಲಯ ಬಹುಪ್ರಸಿದ್ಧ. ಲಕ್ಷ್ಮೇಶ್ವರದ ನೈಋತ್ಯಕ್ಕೆ 6ಕಿಮೀ ದೂರದಲ್ಲಿರುವ ಗುಲಗಂಜಿಕೊಪ್ಪದ ದಂಡಿಬಸವೇಶ್ವರ ದೇವಾಲಯ ಹೆಸರಾದದ್ದು. ಲಕ್ಷ್ಮೇಶ್ವರದಿಂದ 63 ಕಿಮೀ ದೂರದಲ್ಲಿರುವ ಗುಲಗಂಜಿ ಕೊಪ್ಪದ ದಂಡಿಬಸವೇಶ್ವರ ದೇವಾಲಯ ಹಾಗೂ ಲಕ್ಷ್ಮೇಶ್ವರದಿಂದ 6ಕಿಮೀ ದೂರದಲ್ಲಿರುವ ಶಿಗ್ಗಲಿಯಲ್ಲಿರುವ ಗುರುಬಸವಣ್ಣಮಠ ಪ್ರಖ್ಯಾತವಾದವು. ಇವಲ್ಲದೆ ಈ ತಾಲ್ಲೂಕಿನ ಲಕ್ಷ್ಮೇಶ್ವರ ದೊಡ್ಡ ವ್ಯಾಪಾರಕೇಂದ್ರ.

ಶಿರಹಟ್ಟಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಧಾರವಾಡಕ್ಕೆ ಆಗ್ನೇಯದಲ್ಲಿ 89 ಕಿಮೀ ದೂರದಲ್ಲೂ ಗದಗಿಗೆ ದಕ್ಷಿಣದಲ್ಲಿ 34 ಕಿಮೀ ದೂರದಲ್ಲೂ ಇದೆ. ಪಟ್ಟಣದಲ್ಲಿ 8,277 ಮಂದಿ ಗಂಡಸರು, 7,931 ಮಂದಿ ಹೆಂಗಸರು ಸೇರಿ ಒಟ್ಟು ಜನಸಂಖ್ಯೆ 16,208. ಸುತ್ತಲ ಗ್ರಾಮಗಳಿಗೆ ವ್ಯಾಪಾರಕೇಂದ್ರವಾಗಿರುವ ಈ ಪಟ್ಟಣಕ್ಕೆ ವಿದ್ಯುತ್, ಅಂಚೆ, ತಂತಿ, ದೂರವಾಣಿ, ಶಾಲೆ, ಆಸ್ಪತ್ರೆ ಮುಂತಾದವುಗಳ ಸೌಲಭ್ಯವಿದೆ. ಇಲ್ಲಿ ಜೋಳ ಮತ್ತು ಸೇಂಗಾ ವ್ಯಾಪಾರ ಹೆಚ್ಚು. ಪಟ್ಟಣ ಪೌರಸಭಾಡಳಿತಕ್ಕೆ ಸೇರಿದೆ.

ಈ ಪಟ್ಟಣದಲ್ಲಿ ಖಾನ್ ಗಾವುಂಡ ದೇಸಾಯಿ ಕಟ್ಟಿಸಿದುದೆಂದು ಹೇಳುವ, ಸುತ್ತಲೂ ಕಂದಕವಿರುವ ಕೋಟೆಯಿದೆ. ಕೋಟೆಯ ಪೂರ್ವಕ್ಕೆ ಇರುವ ಅವ್ವಲಿಂಗವ್ವನವರ ಮಠ ಸುಂದರವಾದ ಕಲ್ಲುಕಟ್ಟಡ. ಲಕ್ಷ್ಮೇಶ್ವರ ದೇಸಗತಿಯ ಸ್ಥಾಪಕಳಾದ ಅವ್ವಲಿಂಗವ್ವ 260 ವರ್ಷಗಳ ಹಿಂದೆ ಕಟ್ಟಿಸಿದ ಈ ಮಠದ ಮುಖಮಂಟಪ ಸುಂದರವಾದ ಕೆತ್ತನೆಕೆಲಸದಿಂದ ಕೂಡಿದೆ. ಮುಖಮಂಟಪದ ಎದುರು ನಾಲ್ಕು ಕಲ್ಲಿನ ಆನೆಗಳೂ ಮಂಟಪದಲ್ಲಿ ನಾಲ್ಕು ಸಾಲುಗಳಲ್ಲಿ ಸಾಕಷ್ಟು ಎತ್ತರದ 20 ವಿಗ್ರಹಗಳೂ ನಾನಾ ಭಂಗಿಗಳಲ್ಲಿವೆ. ಮಂಟಪದ ಚಾವಣಿಯಲ್ಲಿ ಕಮಲಪುಷ್ಪಗಳು ಮತ್ತು ಜೋಡಿ ಸರ್ಪಗಳಿವೆ. ಇದೊಂದು ಅಪೂರ್ವ ಕಟ್ಟಡ. ಈ ಮಠದ ವಾಯವ್ಯದಲ್ಲಿ ಫಕೀರಸ್ವಾಮಿಗಳ ಮಠವಿದೆ. ಹಿಂದು-ಮುಸಲ್ಮಾನರಿಬ್ಬರೂ ಈ ಮಠಕ್ಕೆ ನಡೆದುಕೊಳ್ಳುತ್ತಾರೆ. ಈ ಮಠದ ಜಾತ್ರೆ ಬಹು ಪ್ರಸಿದ್ಧ.

**(ಎನ್.ಸಿ.ವಿ.)**

**ಶಿರಾ:** ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದೇ ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕಿನ ಪೂರ್ವಕ್ಕೆ ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳು, ಈಶಾನ್ಯ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶವೂ ಆಗ್ನೇಯದಲ್ಲಿ ತುಮಕೂರು ತಾಲ್ಲೂಕೂ ದಕ್ಷಿಣಕ್ಕೆ ಗುಬ್ಬಿ, ನೈಋತ್ಯಕ್ಕೆ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳೂ ಪಶ್ಚಿಮ ಮತ್ತು ವಾಯವ್ಯಕ್ಕೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕೂ ಇವೆ. ಕಳ್ಳಂಬೆಳ್ಳ, ಬುಕ್ಕಾಪಟ್ಣ, ಹುಲಿಕುಂಟೆ, ಶಿರಾ ಮತ್ತು ಗೌಡನಗೆರೆ ಹೋಬಳಿಗಳು. ಒಟ್ಟು ಹಳ್ಳಿಗಳ ಸಂಖ್ಯೆ 249. ತಾಲ್ಲೂಕಿನ ವಿಸ್ತೀರ್ಣ 1,549ಚ.ಕಿಮೀ. ಶಿರಾ ತಾಲ್ಲೂಕಿನ ಒಟ್ಟು ಜನಸಂಖ್ಯೆ 3,01,470.



ಜಾಮಾ ಮಸೀದಿ, ಶಿರಾ

ಸುವರ್ಣಮುಖಿ ಈ ತಾಲ್ಲೂಕಿನ ಮುಖ್ಯ ನದಿ. ಈ ತಾಲ್ಲೂಕಿನ ವ್ಯವಸಾಯಕ್ಕೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಿದೆ. ಈ ತಾಲ್ಲೂಕಿನ ಕಳ್ಳಂಬೆಳ್ಳ, ಎಲಿಯೂರು, ಲಕ್ಷ್ಮೀಸಾಗರ, ಚಿಕ್ಕಸಂದ್ರ, ಬ್ರಹ್ಮಸಂದ್ರ, ಬೋರಸಂದ್ರ, ಮಾಗೋಡು, ದೊಡ್ಡ ಅಗ್ರಹಾರ, ಭೂಪಸಂದ್ರ, ಚಂಗಾವರ, ಶಿರಾ, ರಾಮಲಿಂಗಪುರ, ಬುಕ್ಕಾಪಟ್ಣ ಮತ್ತು ಚಿರತಹಳ್ಳಿ ಮುಂತಾದೆಡೆ ದೊಡ್ಡಕೆರೆಗಳಿವೆ.

ತಾಲ್ಲೂಕಿನ ಅರಣ್ಯಪ್ರದೇಶದಲ್ಲಿ ಜಾಲರಿ, ದಿಂಡಿಗ, ಹೊನ್ನೆ, ಕರಿಮತ್ತಿ, ಅಳಲೆ ಮತ್ತು ಗಂಧದ ಮರಗಳನ್ನು, ಬುಕ್ಕಾಪಟ್ಟಣದ ಹತ್ತಿರ ಮತ್ತು ಇತರ ಪ್ರದೇಶಗಳಲ್ಲಿ ಕುರುಚಲು ಗಿಡಗಳನ್ನು ಕಾಣಬಹುದು.

ಈ ತಾಲ್ಲೂಕಿನಲ್ಲಿ ಸುಣ್ಣದ ಅಂಶ ಕಡಿಮೆಯುಳ್ಳ ಕೆಂಪುಮಣ್ಣಿನ ಭೂಮಿ, ಸಣ್ಣ ಜೆಲ್ಲಿಮಿಶ್ರಿತ ಕೆಂಪುಮಣ್ಣು, ಮರಳುಮಿಶ್ರಿತ ಜೇಡಿಮಣ್ಣು ಹಾಗೂ ಕಪ್ಪುಮಣ್ಣಿನ ಭೂಮಿ ಇದ್ದು ತಾಲ್ಲೂಕಿನ ಬಹುಭಾಗ ವ್ಯವಸಾಯಕ್ಕೆ ಯೋಗ್ಯವಾಗಿದೆ. ವ್ಯವಸಾಯ ಹೆಚ್ಚಾಗಿ ಮಳೆಯನ್ನು ಆಶ್ರಯಿಸಿದೆ. ವಾರ್ಷಿಕ ಸರಾಸರಿ ಮಳೆ 504.74 ಮಿಮೀ.

ಕೆಂಪುಮಣ್ಣಿನ ಭೂಮಿಯಿರುವಲ್ಲಿ ಹೆಚ್ಚಾಗಿ ನೆಲಗಡಲೆಯನ್ನೂ ಕಪ್ಪು ಮಣ್ಣುಳ್ಳ ಪ್ರದೇಶಗಳಲ್ಲಿ ಹೊಗೆಸೊಪ್ಪು ಮತ್ತು ಹತ್ತಿಯನ್ನೂ ಬೆಳೆಯುತ್ತಾರೆ. ಜೋಳ, ರಾಗಿ, ಬತ್ತ, ಅವರೆ, ಹುರುಳಿ ಇವು ತಾಲ್ಲೂಕಿನ ಇತರ ಬೆಳೆಗಳು. ತೆಂಗು ಈ ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆ. ಬೀಡಿ ಕಟ್ಟುವುದು, ಕಂಬಳಿ ನೇಯುವುದು ತಾಲ್ಲೂಕಿನ ಪ್ರಮುಖ ಗೃಹಕೈಗಾರಿಕೆಗಳು. ಹೈನುಗಾರಿಕೆ, ಕುರಿ ಸಾಕುವುದು ಇತರ ಸಹಾಯಕ ಉದ್ಯಮಗಳು.

ಸೀಬಿ ಈ ತಾಲ್ಲೂಕಿನ ಒಂದು ಪ್ರೇಕ್ಷಣೀಯ ಸ್ಥಳ. ಇದು ಶಿರಾ ಪಟ್ಟಣಕ್ಕೆ ದಕ್ಷಿಣದಲ್ಲಿ 26 ಕಿಮೀ ದೂರದಲ್ಲಿ ಚಿತ್ರದುರ್ಗ–ತುಮಕೂರು ರಸ್ತೆಯಲ್ಲಿದೆ. ಇಲ್ಲಿ ಪ್ರಸಿದ್ಧ ನರಸಿಂಹ ದೇವಾಲಯವಿದೆ. ಪ್ರತಿ ಮಾಘಮಾಸದಲ್ಲಿ ಜಾತ್ರೆ ನಡೆಯುವುದು. ಶಿರಾಕ್ಕೆ ಆಗ್ನೇಯದಲ್ಲಿ 6 ಕಿಮೀ ದೂರದಲ್ಲಿರುವ ಹಲ್ಕೂರು ಗ್ರಾಮದ ಒಂದು ಕಪ್ಪುಶಿಲೆಯ ದೊಡ್ಡ ಕಂಬದ ಮೇಲೆ ಗಂಗರಾಜ ಶ್ರೀಪುರುಷನ ಶಾಸನವಿದೆ. ತುಮಕೂರು–ಪುಣೆ ಹೆದ್ದಾರಿಯಲ್ಲಿ ಶಿರಾದ ವಾಯವ್ಯಕ್ಕೆ 11 ಕಿಮೀ ದೂರದಲ್ಲಿರುವ ತಾವರೆಕೆರೆಯ ಬಂಡಿ ರಂಗನಾಥಸ್ವಾಮಿ ಜಾತ್ರೆಯೂ ಪಟ್ಟನಾಯಕನಹಳ್ಳಿಯ ಗಂಗಬ್ರಹ್ಮೇಶ್ವರ ಜಾತ್ರೆಯೂ ಪ್ರತಿವರ್ಷ ಜನವರಿ ತಿಂಗಳಲ್ಲಿ ನಡೆಯುತ್ತವೆ. (ಎಸ್.ಎನ್.ಜಿ.)

ಶಿರಾ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ತುಮಕೂರು–ಚಿತ್ರದುರ್ಗ ರಸ್ತೆಯಲ್ಲಿ ತುಮಕೂರಿನ ಆಗ್ನೇಯಕ್ಕೆ 51 ಕಿಮೀ ದೂರದಲ್ಲಿದೆ. ಪಟ್ಟಣದಲ್ಲಿ 25,857 ಮಂದಿ ಪುರುಷರು 24,199 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 50056.

ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದೆ. ಜಾಮಾ ಮಸೀದಿ ಮತ್ತು ಮಲ್ಲಿಕ್ ರಿಹಾನನ ದರ್ಗ–ಇವು ಇಲ್ಲಿನ ಸುಂದರ ಕಟ್ಟಡಗಳು. ಗೋಪಾಲಕೃಷ್ಣ, ನಾರಾಯಣ ಮತ್ತು ದುರ್ಗ ದೇವಸ್ಥಾನಗಳು ಈ ಊರಿನಲ್ಲಿವೆ.

ಶಿರಾ ಇತಿಹಾಸಪ್ರಸಿದ್ಧ ಸ್ಥಳ. ಇಲ್ಲಿನ ಕೋಟೆಯನ್ನು ಪಾಳೆಯಗಾರ ರತ್ನಗಿರಿ ರಂಗಪ್ಪನಾಯಕ ಕಟ್ಟಿಸಿದನೆಂದೂ ಅದು ಪೂರ್ಣಗೊಳ್ಳುವಷ್ಟರಲ್ಲಿ ಬಿಜಾಪುರದ ದಂಡನಾಯಕ ರಣದುಲ್ಲಾಖಾನನು ಶಿರಾವನ್ನು ಆಕ್ರಮಿಸಿದನೆಂದೂ ತಿಳಿಯುತ್ತದೆ. ಅನಂತರ ಸುಬೇದಾರ ಮಲ್ಲಿಕ್ ಹುಸೇನನು ಕೋಟೆಯನ್ನು ಪೂರ್ಣಗೊಳಿಸಿದ. ಈ ಕೋಟೆಯ ವಾಯವ್ಯಕ್ಕೆ ದೊಡ್ಡ ಕೆರೆ ಇದೆ. ಮುಗಲರ ಆಳಿಕೆಯಲ್ಲಿ ಖಾಸಿಂಖಾನ್ ಎಂಬುವನು ಈ ಊರಿನ ಫೌಜುದಾರನಾದ. ಅನಂತರ ಬಂದ ದಿಲಾವರ್‌ಖಾನನ ಆಡಳಿತದಲ್ಲಿ ಈ ಊರು ಹೆಚ್ಚು ಅಭಿವೃದ್ಧಿಯನ್ನು ಹೊಂದಿತು. ಈತ ನಿರ್ಮಿಸಿದ ಖಾನ್‌ಬಾಗ್ ಎಂಬ ತೋಟ ಹೈದರನ ಕಾಲದಲ್ಲಿ ಅಭಿವೃದ್ಧಿ ಹೊಂದಿತು. ಅಲ್ಲದೆ ಬೆಂಗಳೂರು ಲಾಲ್‌ಬಾಗ್ ತೋಟದ ನಿರ್ಮಾಣಕ್ಕೆ ಇದೇ ಪ್ರೇರಕವಾಯಿತೆಂದು ಪ್ರತೀತಿ. 1757ರಲ್ಲಿ ಈ ಊರು ಮರಾಠರ ಆಳಿಕೆಗೆ ಸೇರಿತು. ಮುಂದೆ 1761ರಲ್ಲಿ ಹೈದರನ ಆಡಳಿತಕ್ಕೆ ಸೇರಿತು. (ಎ.ಕೆ.)

**ಶಿರಾ ನವಾಬರು:** 17–18ನೆಯ ಶತಮಾನಗಳಲ್ಲಿ ಶಿರಾ ಪ್ರಾಂತ್ಯದಿಂದ ಆಳಿದ ಒಂದು ಅರಸುಮನೆತನ. 1638ರಲ್ಲಿ ರಣದುಲ್ಲಾಖಾನ್ ಶಿರಾವನ್ನು, ಗೆಲ್ಲುವುದಕ್ಕೆ ಮುನ್ನ ಅದು ಕರ್ನಾಟಕ–ಬಿಜಾಪುರ–ಬಾಲಾಘಾಟ್ ಪ್ರದೇಶದ ಕೇಂದ್ರವಾಗಿದ್ದಿತು. ದೊಡ್ಡಬಳ್ಳಾಪುರ, ಬೆಂಗಳೂರು, ಹೊಸಕೋಟೆ ಮತ್ತು ಕೋಲಾರ ಜಿಲ್ಲೆಯ ಪ್ರದೇಶಗಳು ಶಿರಾದ ಆಧಿಪತ್ಯಕ್ಕೆ ಒಳಪಟ್ಟಿದ್ದುವು. ರಣದುಲ್ಲಾಖಾನ್ (1638) ಶಿರಾವನ್ನು ವಶಪಡಿಸಿಕೊಂಡು ಅಲ್ಲಿ ಮಲ್ಲಿಕ್ ರಿಹಾನ್ ಎಂಬುವವನನ್ನು ಶಿರಾದ ಫೌಜುದಾರನನ್ನಾಗಿ ನೇಮಿಸಿದ. ಇವನು 1651ರವರೆಗೂ ಅಧಿಕಾರಿಯಾಗಿ ಮುಂದುವರಿದ. ರಣದುಲ್ಲಾಖಾನ್ ಹಿಂದಿರುಗಿದ ಮೇಲೆ ಶಿರಾ ಶಿವಾಜಿಯ ತಂದೆ ಶಹಾಜಿಯ ಜಹಗೀರಾಯಿತು.

ಬಿಜಾಪುರದ ಸುಲ್ತಾನರ ತರುವಾಯ ಕರ್ನಾಟಕದ ಕೆಲವು ಪ್ರದೇಶಗಳು ಮುಗಲರ ಕೈವಶವಾದವು. 1686ರಲ್ಲಿ ಬಿಜಾಪುರವನ್ನು ಔರಂಗಜೇಬ್ ಆಕ್ರಮಿಸಿಕೊಂಡ. ಮುಗಲರ ಆಡಳಿತದಲ್ಲಿ ಶಿರಾ ಪ್ರಾಂತ್ಯವನ್ನು ರಚಿಸಲಾಯಿತು. ಈ ಪ್ರಾಂತ್ಯದಲ್ಲಿ ಬಸವಾಪಟ್ಟಣ, ಬೂದಿಹಾಳು, ಶಿರಾ, ಪೆನುಕೊಂಡೆ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು

ಕೋಲಾರ-ಈ ಪರಗಣೆಗಳಿದ್ದವು. ಖಾಸಿಂಖಾನ್ (1687-1698) ಅಲ್ಲಿನ ಫೌಜುದಾರನಾದ. ಖಾಸಿಂಖಾನ್ ದಕ್ಷನಾದ ಅಧಿಕಾರಿಯಾಗಿದ್ದ. ಶಿರಾ ಸುಬಾದ ಅಭಿವೃದ್ಧಿಗೋಸ್ಕರ ದುಡಿದ ಈತ ಅದನ್ನು ಮುಗಲರ ಒಂದು ಪ್ರಮುಖ ಮಿಲಿಟರಿ ನೆಲೆಯನ್ನಾಗಿ ಮಾಡಿದ. ಶಿರಾದಲ್ಲಿ ಕೋಟೆಯೊಂದನ್ನು ನಿರ್ಮಿಸಿದ. ಜಾಮಾ ಮಸೀದಿ ನಿರ್ಮಾಣವಾದದ್ದು ಇವನ ಕಾಲದಲ್ಲೇ. ಚಿತ್ರದುರ್ಗ ಜಿಲ್ಲೆಯ ದೊಡ್ಡೇರಿ ಎಂಬ ಸ್ಥಳದಲ್ಲಿ ಮರಾಠರ ಮೇಲೆ ಯುದ್ಧಮಾಡುತ್ತಿದ್ದ ಸಂದರ್ಭದಲ್ಲಿ 1698ರಲ್ಲಿ ಈತ ಮರಣ ಹೊಂದಿದ.

ಖಾಸಿಂಖಾನನ ಮರಣಾನಂತರ ಜುಲ್ಫಿಕರ್ ಖಾನ್ ಎಂಬುವವನು ಅಧಿಕಾರಕ್ಕೆ ಬಂದ. ಈತ ಮುಗಲರಿಗೆ ಸೇರಿದ್ದ ದಕ್ಷಿಣದ ಪ್ರದೇಶಗಳ ಮೇಲೆಲ್ಲ ಅಧಿಕಾರ ಸ್ಥಾಪಿಸಿದ. ಆರ್ಕಾಟ್ ಈತನ ರಾಜಧಾನಿಯಾಯಿತು. ಅಮೀನ್ ಖಾನ್ ಎಂಬುವವನನ್ನು ಈತ ಶಿರಾದ ಗವರ್ನರ್ ಆಗಿ ನೇಮಿಸಿದ. ಕರ್ನಾಟಕ-ಬಿಜಾಪುರ-ಬಾಲಾಘಾಟ್ ಪ್ರದೇಶದಲ್ಲಿ ಮುಗಲರ ಪ್ರಾಬಲ್ಯ ವನ್ನು ಎತ್ತಿಹಿಡಿಯುವುದು ಜುಲ್ಫಿಕರ್ ಖಾನನ ಕೆಲಸವಾಗಿತ್ತು. ಇದರ ಜೊತೆಗೆ ಮುಗಲರ ಸ್ನೇಹ ಬಯಸಿ, ಕಪ್ಪಕಾಣಿಕೆಗಳನ್ನು ಕೊಡಲು ಒಪ್ಪಂದಕ್ಕೆ ಬಂದಿದ್ದ ಪಾಳೆಯಗಾರರಿಂದ ಕಪ್ಪವನ್ನು ವಸೂಲಿ ಮಾಡುವ ಗುರುತರವಾದ ಜವಾಬ್ದಾರಿಯೂ ಇವನ ಮೇಲಿತ್ತು. ವ್ಯಾಪಾರಕ್ಕಾಗಿ ಸೌಲಭ್ಯಗಳನ್ನು ಯಾಚಿಸಲು ಬಂದಿದ್ದ ಐರೋಪ್ಯರಿಂದಲೂ ಈತ ಮುಗಲ್ ಸರ್ಕಾರಕ್ಕೆ ಹಣವನ್ನು ವಸೂಲಿ ಮಾಡುತ್ತಿದ್ದ.

ಔರಂಗಜೇಬ್‌ನ ಮರಣಾನಂತರ ಮುಗಲ್ ಸಾಮ್ರಾಜ್ಯದಲ್ಲಿ ಅಲ್ಲೋಲ ಕಲ್ಲೋಲ ಉಂಟಾಯಿತು (1707-13). ಕರ್ನಾಟಕದಲ್ಲೂ ಮುಗಲರ ಸ್ಥಾನಮಾನಗಳು ಕುಗ್ಗಿದವು. ಕೆಲವು ಕಾಲ ಅವರು ಅಸಮರ್ಥರಾದರು. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಮೈಸೂರಿನ ರಾಜ ಶಿರಾದ ಮೇಲೆ ದಂಡೆತ್ತಿ ಹೋದ. ಮುಗಲ್ ಸರ್ಕಾರಕ್ಕೆ ತಲುಪಿಸಬೇಕೆಂದು ಇಟ್ಟುಕೊಂಡಿದ್ದ ಕಪ್ಪಕಾಣಿಕೆಯ ಹಣ ಈ ದೊರೆಯ ಕೈವಶವಾಗುವುದರ ಜೊತೆಗೆ ಮೈಸೂರು ರಾಜ್ಯದ ಎಲ್ಲೆಯೂ ವಿಸ್ತಾರಗೊಂಡಿತು. 1700ರಲ್ಲಿ ಜುಲ್ಫಿಕರ್ ಖಾನನ ಸ್ಥಾನದಲ್ಲಿ ದಾವೂದ್ ಖಾನ್ ಎಂಬುವವನನ್ನು ನೇಮಿಸಲಾಯಿತು. ಈತ ಸ್ವತಂತ್ರ ರಾಜನಂತೆ ಮೆರೆದ.

1713ರಲ್ಲಿ ಒಂದನೆಯ ಆಸಫ್ ಜಾಹೀ ನಿಜಾಮನಾಗಿ ಮುಗಲರ ಪ್ರದೇಶಗಳ ಮೇಲೆ ಅಧಿಕಾರ ಸ್ಥಾಪಿಸಿದ. ಮುಗಲರ ಆಡಳಿತ ಪ್ರದೇಶಗಳ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿವೇಚಿಸಿ ಈತ ಎಲ್ಲವನ್ನೂ ತಹಬಂದಿಗೆ ತಂದ. ಆಡಳಿತ ಯಂತ್ರವನ್ನು ಸುಧಾರಿಸಿದ. ದಕ್ಷತೆಯನ್ನು ಹೆಚ್ಚಿಸಿದ. ಸದತುಲ್ಲಾಖಾನನ ದರ್ಪವನ್ನು ಅಡಗಿಸಿ, ಆತ ಆರ್ಕಾಟ್‌ನ ಪ್ರದೇಶಗಳ ಮೇಲೆ ಮಾತ್ರ ಅಧಿಕಾರ ಹೊಂದಿರುವಂತೆ ನಿಗದಿಪಡಿಸಿದ. 1717ರಲ್ಲಿ ಶಿರಾವನ್ನು ಆರ್ಕಾಟಿನ ಸರ್ಕಾರದಿಂದ ಬೇರ್ಪಡಿಸಿದ. ಸವಣೂರು, ಕಡಪ ಮತ್ತು ಕರ್ನೂಲ್‌ಗಳಿಗೆ ನವಾಬರನ್ನು ನೇಮಿಸಿದ. 1717ರಲ್ಲಿ ಅಮೀನ್ ಖಾನ್ ಶಿರಾದ ನವಾಬನಾಗಿ ನೇಮಿಸಲ್ಪಟ್ಟ. ಆತ ನಿಜಾಮನ ನೇರ ನಿಯಂತ್ರಣಕ್ಕೆ ಒಳಪಟ್ಟಿದ್ದ. ಈ ಏರ್ಪಾಡನ್ನು ಒಪ್ಪದ ಸದತುಲ್ಲಾಖಾನ್ ಎಂಬುವವನು ಸವಣೂರು, ಕಡಪ ಮತ್ತು ಕರ್ನೂಲ್‌ಗಳ ನವಾಬರೊಡನೆ ರಹಸ್ಯ ಒಪ್ಪಂದವನ್ನು ಮಾಡಿಕೊಂಡು, ಶಿರಾದ ಅಮೀನ್‌ಖಾನನ ಮೇಲೆಬೀಳಲು ಸಮಯ ಕಾದ. ಮೈಸೂರಿನ ರಾಜ ಶಿರಾದೊಡನೆ ಸೇರಿಕೊಳ್ಳುವಂತೆ ಚಿತಾವಣೆ ಮಾಡಿದ್ದ. ಇದರಿಂದ ನಿಜಾಮ ತನ್ನತ್ತ ಒಲಿಯುವಂತೆ ಮಾಡಿದ. 1724ರಲ್ಲಿ ನಡೆದ ಯುದ್ಧದಲ್ಲಿ ಅಮೀನ್‌ಖಾನ್ ಸೋತುಹೋದ. ಮೈಸೂರಿನ ಸೈನ್ಯ ಹಿಮ್ಮೆಟ್ಟಿತು. ಅಬ್ದುಲ್ ನಾಬಿ ತಾಹಿರ್‌ಖಾನ್ ಎಂಬುವನು ಶಿರಾದ ನವಾಬನಾಗಿ ನೇಮಕಗೊಂಡ.

ತಾಹಿರ್‌ಖಾನ್ (1724-42) ಆರ್ಕಾಟ್ ನವಾಬನಾಗಿದ್ದ ಸದತುಲ್ಲಾಖಾನನ ಹಿತೈಷಿಯಾಗಿದ್ದ. ಇದರಿಂದಾಗಿ ಮೈಸೂರಿನತ್ತ ನುಗ್ಗಲು ಒಳ್ಳೆಯ ಅವಕಾಶ ದೊರೆಯಿತು. 1725ರಲ್ಲಿ ಸವಣೂರು, ಕಡಪ, ಕರ್ನೂಲುಗಳ ನವಾಬರು ಮೈಸೂರಿನ ವಿರುದ್ಧ ಒಕ್ಕೂಟವನ್ನು ರಚಿಸಿದರು. ಇಕ್ಕೇರಿ, ಸುತ್ತಿ ಮತ್ತು ಶಿರಾದ ಪಾಳೆಯಗಾರರು ಈ ಒಕ್ಕೂಟಕ್ಕೆ ಬೆಂಬಲ ನೀಡಿದರು. ನಿಜಾಮನ ಆಶೀರ್ವಾದವೂ ಈ ಒಕ್ಕೂಟಕ್ಕೆ ದೊರೆಯಿತು. ತಾಹಿರ್‌ಖಾನ್ ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿದ. ರಾಜನ ಅಧಿಕಾರಿಗಳು ಒಪ್ಪಂದಕ್ಕೆ ಬಂದು, ಕಪ್ಪಕಾಣಿಕೆ ಕೊಡಲು ತೀರ್ಮಾನಿಸಿದರು. ಸದತುಲ್ಲಾಖಾನ್ ಬದುಕಿರುವವರೆಗೂ ತಾಹಿರ್‌ಖಾನ್ ಅವನಿಗೆ ನಿಷ್ಠೆಯಿಂದ ನಡೆದುಕೊಂಡ.

1742ರಲ್ಲಿ ದಿಲಾವರ್ ಖಾನ್ (1742-56) ಶಿರಾದ ನವಾಬನಾದ. ಈತ ಶಿರಾದ ನವಾಬರಲ್ಲೇ ಅತ್ಯಂತ ಸಮರ್ಥನೆಂದು ಪ್ರಖ್ಯಾತನಾಗಿದ್ದಾನೆ. ಈತನ ಕಾಲದಲ್ಲಿ ರಾಜಕೀಯ ಶಾಂತಿ, ಆರ್ಥಿಕ ಪ್ರಗತಿ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳುಂಟಾದವು. ಶಿರಾದ ಖ್ಯಾತಿಗೆ ತನ್ನೆಲ್ಲ ಶಕ್ತಿ ಮತ್ತು ಐಶ್ವರ್ಯಗಳನ್ನು ಈತ ಧಾರೆಯೆರೆದ. ಟಿಪ್ಪುಸುಲ್ತಾನ್ ಶಿರಾದಿಂದ 12,000 ಕುಟುಂಬಗಳನ್ನು ಷಾಹಿರ್-ಗಂಜಾಂಗೆ ಕರೆಸಿ ಅವರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟನೆಂದರೆ ಶಿರಾ ನಗರವು ಅಂದಿನ ಸಾಮಾಜಿಕ-ಆರ್ಥಿಕ ಕ್ಷೇತ್ರದಲ್ಲಿ ಎಷ್ಟು ಮುಂದುವರಿದಿತ್ತೆಂಬುದು ಗೊತ್ತಾಗುತ್ತದೆ.

ಹೈದರ್ ಮತ್ತು ಟಿಪ್ಪುಸುಲ್ತಾನರು ಬೆಂಗಳೂರು ಮತ್ತು ಶ್ರೀರಂಗಪಟ್ಟಣ ಗಳಲ್ಲಿ ಕಟ್ಟಿದ್ದ ಅರಮನೆಗಳು ದಿಲಾವರ್‌ಖಾನನು ಶಿರಾದಲ್ಲಿ ಕಟ್ಟಿಸಿದ ಅರಮನೆಯ ಮಾದರಿಯಲ್ಲಿದ್ದವು. ಶಿರಾದ ಕೋಟೆ ಬೆಂಗಳೂರಿನ ಕೋಟೆಗೆ ಮಾದರಿಯಾಯಿತು. 1696ರಲ್ಲಿ ರುಸ್ತುಂಜಂಗ್ ಎಂಬುವನು ಇದನ್ನು ನಿರ್ಮಿಸಿದ. ಷೇಕ್ ಫರೀದ್ ಎಂಬುವನು ಅದೇ ವರ್ಷ ಬೃಹತ್ ಮಸೀದಿಯನ್ನು ಕಟ್ಟಿಸಿದ. ಇವೆಲ್ಲ ಶಿರಾದ ಗತಕಾಲದ ವೈಭವವನ್ನು ನೆನಪಿಗೆ ತಂದುಕೊಡುವ ಸ್ಮಾರಕಗಳಾಗಿವೆ.

1756ರವರೆಗೆ ದಿಲಾವರ್‌ಖಾನನು ಶಿರಾದ ನವಾಬನಾಗಿ ಆಳಿಕೆ ನಡೆಸಿದ. 1757ರಲ್ಲಿ ಮರಾಠರು ಶಿರಾವನ್ನು ಆಕ್ರಮಿಸಿಕೊಂಡರು. 1761ರಲ್ಲಿ ಹೈದರ್ ಶಿರಾವನ್ನು ಗೆದ್ದ ಅನಂತರ ಶಿರಾ ಮೈಸೂರು ರಾಜ್ಯಕ್ಕೆ ಸೇರಿಹೋಯಿತು. ಬಸಲತ್ ಜಂಗನು ಹೈದರನಿಗೆ ಶಿರಾದ ನವಾಬನೆಂದು ಬಿರುದನ್ನು ನೀಡಿದ

ಈ ಕೆಳಕಂಡ ಸುಬೇದಾರರು ಮುಗಲರ ಕೈಕೆಳಗೆ ಶಿರಾದ ನವಾಬರಾಗಿ ಆಳಿಕೆ ಮಾಡಿದರೆಂಬ ವಿಷಯ ಮೆಕೆಂಜಿ ಸಂಗ್ರಹದಿಂದ ತಿಳಿದು ಬರುತ್ತದೆ:

ಖಾಸಿಂಖಾನ್ (1686), ಅತಿಷ್‌ಖಾನ್ (1694), ಖುರದ್ ಮಾನೂರ್ ಖಾನ್ (1697), ದಖ್ತಾ ಮಾನೂರ್‌ಖಾನ್ (1704), ಪುದದುಲ್ಲಾಖಾನ್ (1706), ದಾವೂದ್ ಖಾನ್ (1707), ಸದತುಲ್ಲಾಖಾನ್(1709), ಅಮೀರ್ ಖಾನ್ (1711), ಘಾಲಿಬ್‌ಖಾನ್ (1713), ದರ್ಗಾಖುಲಿಖಾನ್ (1715), ಆಬಿದ್‌ಖಾನ್ (1715), ಮುಲಾಹವರ್‌ಖಾನ್ (1716), ದರ್ಗಾಖುಲಿ ಖಾನ್ (1720), ಅಬ್ದುಲ್ ರಸೂಲ್‌ಖಾನ್ (1721), ತಾಯಿರ್ ಮಹಮದ್ ಖಾನ್ (1722), ದಿಲಾವರ್‌ಖಾನ್(1742-56). (ಬಿ.ಎಸ್.ಐ.)

**ಶಿರಾಲಿ:** ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕಿನಲ್ಲಿರುವ ಪ್ರಾಚೀನ ಐತಿಹಾಸಿಕ ಸ್ಥಳ. ಭಟ್ಕಳ-ಹೊನ್ನಾವರ ರಸ್ತೆಯಲ್ಲಿ ಭಟ್ಕಳದಿಂದ 6 ಕಿಮೀ ದೂರದಲ್ಲಿದೆ. ಈ ಊರಿಗೆ ಹೊಂದಿಕೊಂಡಂತೆ ವೆಂಕಟಾಪುರ ನದಿ ಹರಿಯುತ್ತದೆ. ಈ ಊರನ್ನು ಶ್ರೀಲಿ (1278), ಶಿರಿಯಾಲಿ (1402) ಎಂದು ಕರೆಯುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿ ಸಾರಸ್ವತರಿಗೆ ಸೇರಿದ ಚಿತ್ರಾಪುರ ಮಠ ಇದೆ. ನಾಗರಕಟ್ಟೆ ಕುಟುಂಬದವರು 1757ರಲ್ಲಿ ಮಠದ ಜಾಗವನ್ನು ದಾನವಾಗಿ ನೀಡಿದರೆಂದು ತಿಳಿದುಬರುತ್ತದೆ.

ಮಠ ಒಂದು ಕಟ್ಟಡವನ್ನು ಹೊಂದಿದ್ದು ಇಲ್ಲಿ ಹಿಂದೆ ಆಗಿಹೋದ ಸ್ವಾಮಿಗಳ ಸಮಾಧಿಗಳಿವೆ. ಮಠದ ಸುತ್ತ ಗೋಪಾಲಕೃಷ್ಣ, ದತ್ತಾತ್ರೇಯ, ಶಾಂತದುರ್ಗ ಹಾಗೂ ಕೇಶವ ನಾರಾಯಣ ಎಂಬ ದೇವಾಲಯಗಳಿವೆ. ಈ ಊರಿನಲ್ಲಿ ನಾಲ್ಕು ಶಾಸನಗಳು ದೊರೆತಿವೆ. 1278ರ ಶಾಸನದಲ್ಲಿ ಹೊಯ್ಸಳರಾಜ ಮೂರನೆಯ ಬಲ್ಲಾಳ ಈ ಪ್ರದೇಶವನ್ನು ಆಳುತ್ತಿದ್ದ ವಿಚಾರ ತಿಳಿದುಬರುತ್ತದೆ. 1336ರ ಶಾಸನದಲ್ಲಿ ಮೂರನೆಯ ಬಲ್ಲಾಳನ ರಾಣಿ ಭೂಮಿಯನ್ನು ವೈದ್ಯರ ಕುಟುಂಬಕ್ಕೆ ದಾನವಾಗಿ ನೀಡಿದ ವಿಚಾರವನ್ನು ತಿಳಿಸುತ್ತದೆ. ಬಾರಕೂರಿನ ಆಳುಪ ಕುಲಶೇಖರನು ಉಭಯ ಭಾಷಾಪಂಡಿತರಾಗಿದ್ದ ಬ್ರಾಹ್ಮಣರ ಛತ್ರವೊಂದಕ್ಕೆ ದಾನಮಾಡಿದ ಸಂಗತಿಯನ್ನು ಇನ್ನೊಂದು ಶಾಸನ ದಾಖಲಿಸಿದೆ.

ಮಠದ ಬಳಿ ಪಂಚವಟಿ ಎಂಬ ಒಂದು ಸಣ್ಣ ಗುಡ್ಡವಿದೆ. ಅಲ್ಲಿರುವ ಶಂಭುಲಿಂಗ ಗುಡಿಗೆ ಶಂಕರಾಚಾರ್ಯರು ಭೇಟಿ ನೀಡಿದ್ದರೆಂದು ಪ್ರತೀತಿ. ಮಠದಲ್ಲಿ ಒಂದು ವಸ್ತುಸಂಗ್ರಹಾಲಯವಿದೆ. ಅಲ್ಲಿ ಶಾಸನಗಳು, ಕೆಲವು ನಾಣ್ಯಗಳು ಮೊದಲಾದ ವಸ್ತುಗಳನ್ನು ಸಂಗ್ರಹಿಸಲಾಗಿದೆ. ಪ್ರತಿವರ್ಷ ಮಠದ ವತಿಯಿಂದ ಒಂದು ವಾರ ಕಾಲ ರಥೋತ್ಸವ ನಡೆಯುತ್ತದೆ. ಅದು ಚೈತ್ರ ಪೂರ್ಣಿಮಿಯಂದು ಮುಕ್ತಾಯವಾಗುತ್ತದೆ. ಇಲ್ಲಿರುವ ಮಹಾಗಣಪತಿ ಮಹಾಮಾಯಾ ದೇವಸ್ಥಾನವೂ ಪ್ರಸಿದ್ಧವಾಗಿದ್ದು ಇದು ಗೌಡ ಸಾರಸ್ವತ ಸಮುದಾಯದವರ ಕುಲದೇವತೆ. ಇದಕ್ಕೆ ಪೇಟೆವಿನಾಯಕ ಎಂಬ ಹೆಸರೂ ಇದೆ. ಸು.500 ವರ್ಷಗಳಷ್ಟು ಹಳೆಯದಾದ ಈ ಮಂದಿರ ವನ್ನು 1904ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು. ಮಹಾಗಣಪತಿಯ ವಿಗ್ರಹ ಕಲ್ಲಿನದು. ಮಹಾಮಾಯಾ ವಿಗ್ರಹ ಪಂಚಲೋಹದ್ದು. ದೇವಸ್ಥಾನದ ಸುತ್ತ ಕಾವಿಕಲೆಯಲ್ಲಿ ದಶಾವತಾರದ ಚಿತ್ರಗಳನ್ನು ಬಿಡಿಸಲಾಗಿದೆ. ಇಲ್ಲಿಯ ಮಾರುತಿ ಮಂದಿರವೂ ಗಮನಾರ್ಹವಾದುದು. ಇಲ್ಲಿ ದೊರೆತ ಶಾಸನವೊಂದ ರಲ್ಲಿ (16ನೆಯ ಶತಮಾನ) ಹಾಡುವಳ್ಳಿ ಮತ್ತು ಗೇರುಸೊಪ್ಪೆ ರಾಜ್ಯಗಳ ನಡುವೆ ನಡೆದ ಕದನವನ್ನು ಉಲ್ಲೇಖಿಸಲಾಗಿದೆ. ಶಾಸನದಲ್ಲಿ ಶಿರಾಲಿ ಕೋಟೆಯ ಉಲ್ಲೇಖವಿದೆ.

ವೆಂಕಟಾಪುರ ನದಿ ದಂಡೆಯ ಮೇಲೆ ಮಹಾಸತಿ ದೇವಾಲಯವಿದೆ. ಅದನ್ನು ಈಚೆಗೆ ಜೀರ್ಣೋದ್ಧಾರಗೊಳಿಸಲಾಗಿದೆ. ಈ ದೇವತೆಗೆ ಬೆದ್ರೂಳೆ ಮಾಸ್ತಿ ಎಂಬ ಹೆಸರಿದೆ. ಕಡವಿನಕಟ್ಟೆಯಲ್ಲಿರುವ ದುರ್ಗಾ ಪರಮೇಶ್ವರಿ ದೇವಾಲಯ ಪ್ರಾಚೀನದ್ದಾಗಿದ್ದು ಅದನ್ನು ಶಂಕರಾಚಾರ್ಯರು ಸ್ಥಾಪಿಸಿದರೆಂದು ಹೇಳಲಾಗಿದೆ. (ಎಸ್.ಎಚ್.ಇ.)

**ಶಿರಾಳ ಕೊಪ್ಪ:** ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಶಿಕಾರಿಪುರದ ವಾಯವ್ಯಕ್ಕೆ 19 ಕಿಮೀ ದೂರದಲ್ಲಿರುವ ಒಂದು ಪಟ್ಟಣ. ಜನಸಂಖ್ಯೆ 14,501. ಇದನ್ನು ಶಿರಿಯಾಳಕೊಪ್ಪವೆಂದೂ ಕರೆಯುತ್ತಾರೆ. 1076ರ ಚಾಳುಕ್ಯ ಶಾಸನವೊಂದರಲ್ಲಿ ಇದನ್ನು ಸಿರಿವೊಳಲು ಎಂದು ಕರೆಯಲಾಗಿದೆ. ಇಲ್ಲಿ ಮರ ಕೊಯ್ಯುವ ಹಾಗೂ ಹೆಂಚು ತಯಾರಿಸುವ ಕಾರ್ಖಾನೆಗಳು ಇವೆ. ಮರಿ ಮತ್ತು ಬೆಲ್ಲ ತಯಾರಿಕೆ ಪ್ರಮುಖ ಉದ್ಯಮ ಗಳು. ಈ ಊರಿನಲ್ಲಿ ಪ್ರೌಢಶಾಲೆಗಳು, ಕಾಲೇಜುಗಳಿವೆ. ಈ ಊರು ಸುತ್ತಲ ಪ್ರದೇಶಕ್ಕೆ ಮುಖ್ಯ ವ್ಯಾಪಾರಸ್ಥಳ. ಇಲ್ಲಿಂದ ಸಾಗರ, ಶಿಕಾರಿಪುರ, ಶಿರಸಿಗಳಿಗೆ ಉತ್ತಮ ರಸ್ತೆಗಳಿವೆ. ಪ್ರತಿ ಭಾನುವಾರ ಈ ಊರಿನಲ್ಲಿ ಸಂತೆ ಜರುಗುತ್ತದೆ.

ಬಸವೇಶ್ವರ, ಚಂದ್ರಮೌಳೀಶ್ವರ, ನಗರೇಶ್ವರ–ಇವು ಇಲ್ಲಿಯ ಪುರಾತನ ದೇವಾಲಯಗಳು. ಇಲ್ಲಿ ಕವಲೆದುರ್ಗದ ಮಠದ ಒಂದು ಶಾಖೆ ಇದೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಈ ಊರು ಮರಿಸ್ವಾಮಿ ಹಿರೇಮಠ, ಎಚ್. ಸಿದ್ದಯ್ಯ, ಗಿರಿಮಾಜಿ ಮುಂತಾದ ವ್ಯಕ್ತಿಗಳ ಕಾರ್ಯಕ್ಷೇತ್ರವಾಗಿತ್ತು. ಅಕ್ಕಮಹಾದೇವಿಯ ಜನ್ಮಸ್ಥಳವಾದ ಉಡುತಡಿ, ಕರ್ನಾಟಕದ ಅತ್ಯಂತ ಪ್ರಾಚೀನ ರಾಜಧಾನಿಗಳಲ್ಲೊಂದಾಗಿದ್ದ ಬಳ್ಳಿಗಾವೆ, ಅಶೋಕನ ಶಾಸನವನ್ನು ಬಿಟ್ಟರೆ ಕರ್ನಾಟಕದಲ್ಲಿ ಅತ್ಯಂತ ಹಳೆಯ ಶಾಸನಗಳಲ್ಲೊಂದಾದ ಎರಡನೆಯ ಶತಮಾನದ ಸಾತಕರ್ಣಿಯ ಪ್ರಾಕೃತ ಭಾಷೆಯ ಶಾಸನವಿರುವ ಮಳವಳ್ಳಿ, ತಾಳಗುಂದ, ಬಂದಳಿಕೆ ಮುಂತಾದ ಇತಿಹಾಸ ಪ್ರಸಿದ್ಧ ಸ್ಥಳಗಳು ಈ ಊರಿನ ಆಸುಪಾಸಿನಲ್ಲಿವೆ. (ಕೆ.ಎಂ.ಎಸ್.)

**ಶಿಲಾವರ್ಗಗಳು:** ಕರ್ನಾಟಕ ರಾಜ್ಯದ ಬಹುಭಾಗ ಅತ್ಯಂತ ಪ್ರಾಚೀನ ವಾದ ಶಿಲೆಗಳಿಂದ ಆವೃತವಾಗಿದೆ. ಇವುಗಳನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಿದ್ದಾರೆ. 1 ಬೆಳ್ಳಿ, ಬಂಗಾರ, ತಾಮ್ರ, ಕಬ್ಬಿಣದ ಸಂಬಂಧದ ಲೋಹಗಳನ್ನೊಳಗೊಂಡಿರುವ ಧಾರವಾಡ ಶಿಲಾಸ್ತೋಮ 2 ಗ್ರ್ಯಾನೈಟ್ ಸಂಬಂಧದ ನೈಸ್ ಶಿಲಾಸ್ತೋಮ.

ದಕ್ಷಿಣ ಕರ್ನಾಟಕದಲ್ಲಿನ ಶಿಲೆಗಳು ಭೂಮಿಯ ಹುಟ್ಟಿನ ಆದಿಕಾಲ ದಲ್ಲಿ ರೂಪುಗೊಂಡ ಅತಿ ಪ್ರಾಚೀನ ವರ್ಗಕ್ಕೆ ಸೇರಿದುವೆಂದು ಪ್ರಸಿದ್ಧಿಯಾಗಿವೆ. ಇವುಗಳು ರೂಪುಗೊಂಡ ಕಾಲ ಮೂರು ಸಾವಿರ ಮಿಲಿಯ (ಮುನ್ನೂರು ಕೋಟಿ) ವರ್ಷಗಳಿಗೂ ಹಳೆಯದು. ಈ ಬಗೆಯ ಶಿಲೆಗಳನ್ನು ಸರಗೂರು, ಕೋಲಾರ, ನುಗ್ಗೇಹಳ್ಳಿ, ಹಟ್ಟಿ ಬಳಿ ಗುರುತಿಸಿದ್ದಾರೆ.

ಈ ಪುರಾತನ ಕಾಲದ ಅಗ್ನಿ ಮತ್ತು ರೂಪಾಂತರ ಶಿಲೆಗಳನ್ನು ಭೇದಿಸಿ ತುಂಡರಿಸಿ, ಅವುಗಳನ್ನು ಬಹುಶಃ ಜೀರ್ಣಿಸಿಕೊಂಡು ಬಹುವ್ಯಾಪಿ ಯಾಗಿರುವ ನೈಸ್ ಶಿಲೆಗಳು ರಾಜ್ಯದ ಬಹುಭಾಗವನ್ನು ಆವರಿಸಿವೆ. ಈ ವರ್ಗದ ಕಲ್ಲುಗಳನ್ನು ಬೆಂಗಳೂರಿನ ಸುತ್ತ ಹೆಚ್ಚಾಗಿ ನೋಡಬಹುದು. ನೈಸ್‌ಗಳಿಂದ ಆವೃತವಾದ ಬಯಲು ಸೀಮೆಯಲ್ಲಿ ಅಲ್ಲಲ್ಲಿ ಬೋರಲಿಟ್ಟ ಬಟ್ಟಲುಗಳಂತೆ ಕಲ್ಲುಗುಂಡುಗಳಿಂದ ನಿಬಿಡವಾಗಿ ಎದ್ದುನಿಂತ ಗುಡ್ಡಸಾಲು ಗಳನ್ನು ನೋಡಬಹುದು. ಶಿವಗಂಗೆ, ಸಾವನದುರ್ಗ, ದೇವರಾಯನ ದುರ್ಗ, ಮಧುಗಿರಿ ಮತ್ತು ಕೊರಟಗೆರೆ ಸುತ್ತಲಿನ ಬೆಟ್ಟಗಳು, ಹಂಪೆಯ ಸುತ್ತಲಿನ ಬೆಟ್ಟಸಾಲುಗಳು ಈ ಬಗೆಯ ಗ್ರ್ಯಾನೈಟ್‌ಗಳಿಂದ ನಿರ್ಮಿತವಾದವು. ಕರ್ನಾಟಕದಲ್ಲಿ ಎಲ್ಲಿ ಹೋದರಲ್ಲಿ ಎದ್ದು ನಿಂತ ಬಗೆಬಗೆಯ ಆಕಾರವನ್ನು ತೋರುವ ಗುಡ್ಡಸಾಲುಗಳು ತಮ್ಮದೇ ಆದ ಒಂದು ನಿಸರ್ಗ ರಮಣೀಯತೆಯನ್ನು ಪಡೆದುಕೊಂಡಿವೆ.

ಈ ನೈಸುಗಳ ಮೇಲೆ ಒರಗಿದಂತೆ ಸಾವಿರಾರು ಅಡಿ ಮಂದದ ಪದರು ಶಿಲೆಗಳು ದಕ್ಷಿಣದಲ್ಲಿ ಶ್ರೀರಂಗಪಟ್ಟಣದಿಂದ ಹಿಡಿದು ಉತ್ತರದಲ್ಲಿ ಬೆಳಗಾಂವಿಯವರೆಗೂ ಹಬ್ಬಿವೆ. ಧಾರವಾಡದ ಬಳಿ ವಿಸ್ತಾರವಾಗಿ ಹರಡಿರುವುದರಿಂದ ಈ ಶಿಲಾವರ್ಗವನ್ನು ಧಾರವಾಡ ಶಿಲಾವರ್ಗ ಎಂದು ಗುರುತಿಸಿದ್ದಾರೆ. ರಾಜ್ಯದಲ್ಲಿ ದೊರೆಯುವ ಖನಿಜ ಸಂಪತ್ತಿಗೆಲ್ಲ ಈ ಧಾರವಾಡ ಪದರುಶಿಲಾ ಸಮುದಾಯವೇ ಆಕರವಾಗಿದೆ. ಪಶ್ಚಿಮ ಘಟ್ಟದ ಸಹ್ಯಾದ್ರಿ ಪರ್ವತ, ಬಾಬಾಬುಡನ್ ಪರ್ವತ ಶ್ರೇಣಿ, ಕೊಡಚಾದ್ರಿ, ಚಿಕ್ಕನಾಯಕನಹಳ್ಳಿ, ಚಿತ್ರದುರ್ಗ, ಗದಗ, ರಾಯಚೂರು, ಹಟ್ಟಿ ಈ ಸುತ್ತಲಿನ ಶಿಲೆಗಳೆಲ್ಲವೂ ಧಾರವಾಡ ಶಿಲಾವರ್ಗಕ್ಕೆ ಸೇರಿದುವು. ಈ ವರ್ಗದ ಶಿಲೆಗಳಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರುಗಳು ತಾಮ್ರ, ಸೀಸ, ಚಿನ್ನ, ಬೆಳ್ಳಿ ಮುಂತಾದ ಇತರ ಲೋಹಗಳ ಅದಿರುಗಳು ದೊರೆಯುತ್ತವೆ.

ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ನೀಲಗಿರಿ ಬೆಟ್ಟ ಸಾಲುಗಳಲ್ಲಿ ಬೂದು ಬಣ್ಣದ ಒಂದು ವಿಶೇಷ ತರದ ಗ್ರ್ಯಾನೈಟ್ ಶಿಲೆಗಳು ದೊರೆಯುತ್ತವೆ. ಇವುಗಳನ್ನು ಚಾರ್ನೊಕೈಟ್ ಶಿಲೆ ಎಂದು ಗುರುತಿಸಿದ್ದಾರೆ.

ದಕ್ಷಿಣದಲ್ಲಿ ಶಿವಸಮುದ್ರದಿಂದ ಹಿಡಿದು ಉತ್ತರದಲ್ಲಿ ತುಂಗಭದ್ರೆಯ ದಕ್ಷಿಣ ದಂಡೆಯವರೆಗೆ ಒಂದೇ ಸಮನೆ ಹಬ್ಬಿರುವ ಕಲ್ಲುಗುಂಡುಗಳಿಂದ ನಿಬಿಡವಾದ ಗುಡ್ಡ ಸಾಲು ಕಾಣಿಸುತ್ತದೆ. ಸಾವನದುರ್ಗ, ಕಬ್ಬಾಳದುರ್ಗ, ಶಿವಗಂಗೆ, ಮಧುಗಿರಿ, ಕೊರಟಗೆರೆ ಬೆಟ್ಟಗಳು ಮಿಡಿಗೇಶಿ, ಪಾವಗಡ, ಮೊಳಕಾಲ್ಮೂರು ಬೆಟ್ಟಗಳು, ಹಂಪೆ ಈ ಸುತ್ತಲಿನ ಬೆಟ್ಟಗಳೆಲ್ಲವೂ ಒರಟುಒರಟಾದ, ಅಗಲ ಹರಳುಗಳುಳ್ಳ ಕೆಂಪು ಬಣ್ಣದ ಗ್ರಾನೈಟ್‌ಗಳಿಂದ ರೂಪಿತವಾದುವು. ಇವುಗಳನ್ನು ಕ್ಲೋಸ್‌ಪೇಟೆ ಗ್ರಾನೈಟ್ ಎಂಬ ಹೆಸರಿನಿಂದ ಕರೆಯುತ್ತಾರೆ. ಕ್ಲೋಸ್‌ಪೇಟೆ (ಈಗಿನ ರಾಮನಗರ) ಸುತ್ತಲಿನ ಬೃಹದಾಕಾರದ ಬಂಡೆಗಳಿಂದ ಕೂಡಿರುವ ಬೆಟ್ಟಗಳೆಲ್ಲವೂ ಈ ಗ್ರಾನೈಟ್‌ನಿಂದ ರೂಪಿತವಾದುವು.

ಷಡ್ಭಾಕೃತಿಯಲ್ಲಿ ಆರಿರುವ ಬೆಸಾಲ್ಟ್ ಶಿಲೆ, ಸೇಂಟ್ ಮೇರಿ ದ್ವೀಪಗಳು, ದ.ಕ.

ಮೇಲೆ ವಿವರಿಸಿದ ಶಿಲೆಗಳೆಲ್ಲವೂ ಅತಿ ಪ್ರಾಚೀನವಾದುವು. ಅವು ತಮ್ಮ ಮೊದಲ ರೂಪವನ್ನು ಬದಲಾಯಿಸಿ ರೂಪಾಂತರ ಹೊಂದಿರುತ್ತವೆ. ಇಂಥ ಶಿಲೆಗಳ ಮೇಲೆ ಹಾಸಿದಂತೆ ಈಚಿನ ಇನ್ನೊಂದು ಶಿಲಾವರ್ಗ ಬೆಳಗಾಂವಿಯ ಪೂರ್ವಭಾಗದಿಂದ ಹಿಡಿದು ಬಾಗಲಕೋಟೆಯವರೆಗೆ ಹರಡಿರುವುದು ಕಾಣುತ್ತದೆ. ಈ ವರ್ಗದ ಕಲ್ಲುಗಳಲ್ಲಿ ಸುಣ್ಣಕಲ್ಲಿನ ಶಿಲೆಗಳೇ ಪ್ರಮುಖವಾದುವು. ಕಲಾದಗಿಯ ಬಳಿ ಇವು ಬಹುವಾಗಿ ಹರಡಿರುವುದರಿಂದ ಈ ವರ್ಗದ ಶಿಲೆಗಳಿಗೆ ಕಲಾದಗಿ ಶಿಲಾವರ್ಗ ಎಂದು ಹೆಸರಿತ್ತಿದ್ದಾರೆ. ಘಟಪ್ರಭಾ ಮತ್ತು ಕೃಷ್ಣಾ ನದಿಗಳು ಬೆಳಗಾಂವಿ, ಬಿಜಾಪುರ ಜಿಲ್ಲೆಗಳಲ್ಲಿ ಈ ಶಿಲೆಗಳನ್ನು ಹಾದುಹೋಗಿರುತ್ತವೆ. ಬಾದಾಮಿ, ಪಟ್ಟದಕಲ್ಲಿನ ದೇವಸ್ಥಾನಗಳು ಈ ಕಲಾದಗಿ ಶಿಲೆಗಳಿಂದ ಕಡೆಯಲ್ಪಟ್ಟಿವೆ.

ಇವಕ್ಕೂ ಸ್ವಲ್ಪ ಈಚಿನ ಶಿಲೆಗಳು ಮುಖ್ಯವಾಗಿ ಗುಲ್ಬರ್ಗ ಜಿಲ್ಲೆಯ ಭೀಮಾನದಿಯ ಇಕ್ಕೆಲದಲ್ಲಿ ಕಾಣುತ್ತವೆ. ಇವೂ ಬಹುವಾಗಿ ಸುಣ್ಣಕಲ್ಲಿನಿಂದ ಕೂಡಿದವು. ಇವುಗಳಿಗೆ ಭೀಮಾ ಶಿಲಾಸ್ತೋಮ ಎಂದು ಹೆಸರು. ಇವು ಮುಖ್ಯವಾಗಿ ಮುದ್ದೇಬಿಹಾಳ, ತಾಳಿಕೋಟೆ, ಶಾಹಬಾದ, ವಾಡಿ, ಚಿತ್ತಾಪುರ, ಸೇಡಂ, ಚಿಂಚೋಳಿ ಈ ಸ್ಥಳಗಳಲ್ಲಿ ಕಾಣುತ್ತವೆ. ಇಲ್ಲಿನ ಸುಣ್ಣಕಲ್ಲನ್ನು ಉಪಯೋಗಿಸಿ ಮೂರು ದೊಡ್ಡಪ್ರಮಾಣದ ಸಿಮೆಂಟ್ ತಯಾರಿಕಾ ಕಾರ್ಖಾನೆಗಳು ಗುಲ್ಬರ್ಗ ಜಿಲ್ಲೆಯಲ್ಲಿದ್ದು ಹೇರಳವಾಗಿ ಸಿಮೆಂಟನ್ನು ತಯಾರಿಸುತ್ತವೆ.

ಮೇಲೆ ವಿವರಿಸಿದ ಎಲ್ಲ ಶಿಲೆಗಳೂ ಅತಿ ಪ್ರಾಚೀನ ಕಾಲಕ್ಕೆ ಸೇರಿದ, ಜೀವ ಚಿಹ್ನೆ ಅಷ್ಟಾಗಿ ಕಾಣದ ಶಿಲಾವರ್ಗಗಳಿಗೆ ಸೇರಿದುವು. ಈ ಎಲ್ಲ ವರ್ಗದ ಶಿಲೆಗಳ ಮೇಲೂ ಸುಮಾರು 5 ಕೋಟಿ ವರ್ಷಗಳ ಹಿಂದೆ ಅಗಾಧ ಪ್ರಮಾಣದಲ್ಲಿ ಶಿಲಾಲಾವ ಪ್ರವಾಹ ರೂಪದಲ್ಲಿ ಹರಿದು ಮಂದವಾದ ಹೊದಿಕೆಯಂತೆ ಕುಳಿತಿದೆ. ಬೆಳಗಾಂವಿ ಜಿಲ್ಲೆಯ ಉತ್ತರ ಭಾಗ, ಬಿಜಾಪುರ, ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳು ದಖನ್‌ಲಾವಾ ಪ್ರವಾಹದಿಂದ ಮುಚ್ಚಿಹೋಗಿವೆ. ಇವು ಮಟ್ಟವಾಗಿದ್ದು ಬಹುದೂರ ಹರಡಿರುತ್ತದೆ. ಇಲ್ಲಿನ ಬೆಟ್ಟಗಳು ಮೇಜಿನಾಕಾರ ಹೊಂದಿರುತ್ತವೆ. ಅವುಗಳಲ್ಲಿ ಶಿಖರಗಳಿರುವುದಿಲ್ಲ. ಈ ಬಗೆಯ ಶಿಲೆಗಳನ್ನು ದಖನ್‌ಲಾವಾಗಳೆಂದು ಗುರುತಿಸುತ್ತಾರೆ. ಇವು ಬೀಳುಬಿದ್ದಾಗ ಅದರಿಂದುಂಟಾದ ಮಣ್ಣು ಕಪ್ಪುಛಾಯೆಯನ್ನು ಹೊಂದಿರುತ್ತದೆ. ಈ ಎರೆಮಣ್ಣಿನ ಪ್ರದೇಶ ಫಲವತ್ತಾದುದು. ನೂರಾರು ಮೈಲಿಗಳು, ಎತ್ತ ನೋಡಿದರೂ ಅತ್ತ, ಯಾವ ಒಂದು ಏರು ತಗ್ಗೂ ಇಲ್ಲದೆ ಕಪ್ಪುಮಣ್ಣಿನಿಂದ ಆವೃತವಾದ ಅಗಾಧ ಬಯಲು ಕಾಣುತ್ತದೆ. ದಖನ್‌ಲಾವಾಗಳಿಂದ ಆವೃತವಾದ ಪ್ರದೇಶ ಈ ಬಗೆಯ ಬಯಲು ಭೂಮಿಗೆ ಉತ್ತಮ ನಿದರ್ಶನ.

ಬೆಳಗಾಂವಿ ಜಿಲ್ಲೆಯ ಪಶ್ಚಿಮಕ್ಕೆ ಮತ್ತು ಬೀದರ್ ಜಿಲ್ಲೆಯ ಬೀದರ್, ಹುಮನಾಬಾದ ಮತ್ತು ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಬಹು ವ್ಯಾಪಿಯಾಗಿ ರಂಧ್ರಮಯವಾಗಿರುವ ಕೆಮ್ಮಣ್ಣು ಬಣ್ಣದ, ಮಣ್ಣುರೂಪಿನ ಆದರೂ ಬಹು ಗಡುಸಾದ ಒಂದು ಬಗೆಯ ಶಿಲೆ ದೊರೆಯುತ್ತದೆ. ಇದೇ ಮಾದರಿಯ ಶಿಲೆ ಪಶ್ಚಿಮ ಕರಾವಳಿಯ ಉದ್ದಕ್ಕೂ ಕಾಣುವುದುಂಟು. ಇದನ್ನು ಲ್ಯಾಟರೈಟ್ ಎಂದು ಕರೆಯುತ್ತಾರೆ. ಇದನ್ನು ಜಂಬಿಟ್ಟಿಗೆ, ಇಟ್ಟಿಗೆ ಎಂದೂ ಕರೆಯುತ್ತಾರೆ. ಕರಾವಳಿಯಲ್ಲಿನ ಕಟ್ಟಡಗಳೆಲ್ಲವೂ ಈ ಕಲ್ಲಿನಿಂದ ಕಟ್ಟಿದುವು. ಬೀದರ್, ಬೆಳಗಾಂವಿ ಸುತ್ತಲೂ ಈ ಕಲ್ಲಿನಿಂದ ಕಟ್ಟಿದ ಮನೆಗಳನ್ನು ಗುರುತಿಸಬಹುದು. ಈ ಬಗೆಯ ಶಿಲೆಗಳಲ್ಲಿರುವ ಅಲ್ಯುಮಿನಿಯಂ ಅಂಶ ಹೆಚ್ಚಾದಾಗ ಅವು ಬಾಕ್ಸೈಟ್ ಅದಿರಾಗಿ ಮಾರ್ಪಡುತ್ತವೆ. ಅವುಗಳಿಂದ ಅಲ್ಯೂಮಿನಿಯಂ ಲೋಹವನ್ನು ಪಡೆಯಬಹುದು. ದಖನ್‌ಲಾವಾಗಳನ್ನು ಮತ್ತು ಅದರ ಮೇಲೆ ರೂಪು ಹೊಂದಿದ ಜಂಬಿಟ್ಟಿಗೆಯನ್ನು ಬಿಟ್ಟರೆ ಇನ್ನುಳಿದಿರುವುದು ಕಡಲ ಅಂಚಿನಲ್ಲಿ ಶೇಖರವಾಗಿರುವ ಈಚಿನ ಮರಳು ಶಿಲೆಗಳು, ಮೆಕ್ಕಲು ಮಣ್ಣು. **(ಬಿ.ಪಿ.ಆರ್.)**

**ಶಿಲಾಹಾರರು:** ಕರ್ನಾಟಕದ ಅರಸರ ಮಾಂಡಲಿಕರಾಗಿ ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಕೆಲವು ಶತಮಾನಗಳ ಕಾಲ ರಾಜ್ಯವಾಳಿದ ಈ ಮನೆತನಕ್ಕೆ ಸೇರಿದ ಹಲವರು ಅಲ್ಲಲ್ಲಿ ಆಳಿದರು. ಈ ಮನೆತನದ ಹಲವಾರು ಶಾಖೆಗಳು ಕಾಣಸಿಕೊಂಡಿವೆ. ದಕ್ಷಿಣ ಕೊಂಕಣದಲ್ಲಿ ಆಳಿದ ಶಾಖೆ ಸು. 770ರಿಂದ 1020ರವರೆಗೆ ಅಧಿಕಾರದಲ್ಲಿತ್ತು. ಉತ್ತರ ಕೊಂಕಣದ ಶಾಖೆಗೆ ಸೇರಿದ ಮಾಂಡಲಿಕರು ಸು. 800ರಲ್ಲಿ ತಲೆಎತ್ತಿ ಸು. 1240 ವರೆಗೆ ಪ್ರಬಲರಾಗಿದ್ದರು. ಈಗಿನ ಮಹಾರಾಷ್ಟ್ರದ ಸತಾರ, ಕೊಲ್ಲಾಪುರ ಜಿಲ್ಲೆಗಳು ಹಾಗೂ ಬೆಳಗಾಂವಿ ಜಿಲ್ಲೆಯ ಪ್ರದೇಶಗಳಲ್ಲಿ ಇವರ ಇನ್ನೊಂದು ಶಾಖೆ ಆಳುತ್ತಿತ್ತು. ಅಲ್ಲದೆ, ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆಯಲ್ಲಿ ಈ ಮನೆತನದ ನಾಲ್ಕನೆಯ ಶಾಖೆಯೊಂದಿತ್ತು. ಜೊತೆಗೆ ನಿರ್ದಿಷ್ಟವಾಗಿ ಈ ಯಾವುದೇ ಶಾಖೆಗಳಿಗೂ ಸೇರದ ಆದರೆ ಶಿಲಾಹಾರ ಮನೆತನದವರಾದ ಇನ್ನು ಹಲವು ಮಾಂಡಲಿಕರ ಹೆಸರುಗಳೂ ಶಾಸನಗಳಿಂದ ಲಭಿಸಿವೆ. ಈ ಬೇರೆ ಬೇರೆ ಶಾಖೆಗಳ ನಡುವಣ ಸಂಬಂಧಗಳು ಸ್ಪಷ್ಟವಾಗಿ ತಿಳಿಯದು. ಆದರೆ ಇವರೆಲ್ಲ ಜೀಮೂತವಾಹನ ಕುಲಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಜೀಮೂತವಾಹನ ಒಬ್ಬ ಪ್ರಮುಖ ವಿದ್ಯಾಧರ. ಶಂಖಚೂಡನೆಂಬ ಉರಗಾಧಿಪತಿಯನ್ನು ಗರುಡನಿಂದ ರಕ್ಷಿಸಲೆಂದು ಈತ ತನ್ನ ದೇಹವನ್ನೇ ಗರುಡನಿಗೆ ನೀಡಲು ಮುಂದಾದನೆಂಬುದು ಈತನಿಗೆ ಸಂಬಂಧಿಸಿದ ಕಥೆ. ಇದನ್ನು ದೃಢಪಡಿಸುವಂತೆ ಈ ಮನೆತನದವರು ಶಿಲಾಹಾರ (ಶಿಲೆಯ ಮೇಲಿನ ಆಹಾರ) ಎಂಬ ಹೆಸರನ್ನು

ಧರಿಸಿದ್ದಾರೆ. ಈ ಮನೆತನದ ಎರಡು ಶಾಖೆಗಳವರು ತಾವು ತಗರಪುರಾಧೀಶ್ವರರೆಂದೂ ಗರುಡ ತಮ್ಮ ಲಾಂಛನವೆಂದೂ ಹೇಳಿಕೊಂಡಿದ್ದಾರೆ. ತಗರ ಎಂಬುದು ಈಗಿನ ಮಹಾರಾಷ್ಟ್ರದಲ್ಲಿರುವ ತೇರ್. ಶಿಲಾಹಾರ ಎಂಬ ಹೆಸರು ಶಾಸನಗಳಲ್ಲಿ ಶಿಲಾರ, ಶೀಳಾರ, ಶಿಯಳಾರ, ಸಿಲಾರ ಎಂಬೆಲ್ಲ ರೂಪುಗಳಲ್ಲಿ ಕಾಣಿಸಿಕೊಂಡಿದೆ.

**ದಕ್ಷಿಣ ಕೊಂಕಣದ ಶಿಲಾಹಾರರು:** 1008ನೆಯ ವರ್ಷದ ಖಾರೆಪಟ್ಟಣ ತಾಮ್ರಶಾಸನದಲ್ಲಿ ಈ ಶಾಖೆಯ ರಟ್ಟರಾಜನೆಂಬುವ ದಾನಿಯಾಗಿ ಕಾಣಿಸಿಕೊಂಡಿದ್ದಾನೆ. ಅವ್ವೇಶ್ವರ ದೇವರಿಗೆ ಮಾಡಿದ ದಾನದ ಉಲ್ಲೇಖವಿರುವ ಈ ಶಾಸನದಲ್ಲಿ ಈತನ ವಂಶಾವಳಿಯನ್ನು ಕೊಟ್ಟಿದೆ. ತಲೆಮಾರಿಗೆ 25 ವರ್ಷಗಳ ಲೆಕ್ಕದಂತೆ ಈ ಶಾಖೆಯ ಮೊದಲ ಮಾಂಡಲಿಕನಾದ ಸಣಫುಲ್ಲನು ಸು. 770ರ ವೇಳೆಗೆ ಅಧಿಕಾರಕ್ಕೆ ಬಂದಿರಬೇಕು. ಈತ ಕೃಷ್ಣನೆಂಬ ಅರಸನ ಆಶ್ರಯ ಪಡೆದವನೆಂದು ಹೇಳಿರುವುದರಿಂದ ಆ ಕೃಷ್ಣ ರಾಷ್ಟ್ರಕೂಟ ಮನೆತನದ ಒಂದನೆಯ ಕೃಷ್ಣ (756–74) ಆಗಿರಬೇಕು. ಸಣಫುಲ್ಲನ ಉತ್ತರಾಧಿಕಾರಿ ಧಮ್ಮಿಯರ. ಈತ ವಲಿ (ಬಲಿ) ಪಟ್ಟಣದಲ್ಲಿ ಪ್ರಬಲವಾದ ಕೋಟೆಯೊಂದನ್ನು ಕಟ್ಟಿಸಿದನೆಂದು ಹೇಳಿದೆ. ಇದು ಪಶ್ಚಿಮದ ಸಮುದ್ರತೀರದ ಒಂದು ನಗರವಾಗಿರಬಹುದೆಂದು ಊಹಿಸಲಾಗಿದೆ. ಈತನ ಮಗ ಅಯ್ಯಪ್ಪರಾಜ ಒಬ್ಬ ವಿಜಿಗೀಷು. ಈತ ಚಂದ್ರಪುರದಲ್ಲಿನ (ಈಗಿನ ಗೋವೆಯಲ್ಲಿನ ಚಂದೋರ್) ಒಂದು ಕದನದಲ್ಲಿ ಜಯಶಾಲಿಯಾದ. ಈತನ ಮಗ ಒಂದನೆಯ ಅವಸರ ಧರ್ಮಶಾಸ್ತ್ರ ಪಾರಂಗತ. ಇವನ ಅನಂತರ ಬಂದ ಆದಿತ್ಯವರ್ಮ ಚೇಮೂಲ್ಯ ಮತ್ತು ಚಂದ್ರಪುರದ ಅರಸರಿಗೆ ನೆರವಾದ. ಚೇಮೂಲ್ಯ ಈಗಿನ ಮುಂಬಯಿ ನಗರಕ್ಕೆ ಸು. 48 ಕಿಮೀ ದಕ್ಷಿಣಕ್ಕಿರುವ ಚೌಲ್. ಈ ವೇಳೆಗೆ ಈ ಶಿಲಾಹಾರರ ಪ್ರಭಾವ ಮುಂಬಯಿಯಿಂದ ಗೋವೆಯವರೆಗೂ ವಿಸ್ತರಿಸಿತೆನ್ನಬಹುದು. ಆದಿತ್ಯವರ್ಮನ ಮೊಮ್ಮಗನಾದ ಇಮ್ಮಡಿ ಅವಸರನ ಮಗ ಇಂದ್ರರಾಜನನ್ನು ತ್ಯಾಗಭೋಗಾತಿಸುಂದರನೆಂದು ವರ್ಣಿಸಲಾಗಿದೆ. ಅನಂತರ ಆಳಿದ ಭೀಮ ತನ್ನ ಪೂರ್ವಜರ ನೀತಿಗೆ ವಿರುದ್ಧವಾಗಿ ಚಂದ್ರಪುರದ ಅರಸನನ್ನು ಹತ್ತಿಕ್ಕಿದನೆಂದು ತಿಳಿಯುತ್ತದೆ. ಈ ಸಮಯದಲ್ಲಿ ಅಲ್ಲಿ ಕದಂಬಕುಲದ ಷಷ್ಠದೇವನೋ ಆತನ ಮಗ ಚತುರ್ಭುಜನೋ ಆಳುತ್ತಿದ್ದನೆಂದು ತೋರುತ್ತದೆ. ಭೀಮನ ಮಗ ಮುಮ್ಮಡಿ ಅವಸರ.

ಇತ್ತೀಚೆಗೆ ದೊರೆತ ಇಮ್ಮಡಿ ಅವಸರನ 988ನೆಯ ವರ್ಷದ ಪಟ್ಟಣಕುಡಿ ತಾಮ್ರಶಾಸನದಲ್ಲಿ ಈವರೆಗಿನ ವಂಶಾವಳಿಯಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸಗಳು ಕಂಡಿವೆ. ಅದರಲ್ಲಿ ಧಮ್ಮಿಯರನ ಮಗ ಅಮ್ಮಲ್ಲನೆಂದೂ ಆತನ ಮಗ ಅಯ್ಯಪ್ಪನೆಂದೂ ಹೇಳಿದೆ. ಅಯ್ಯಪ್ಪನ ಮಗ ಆದಿತ್ಯವರ್ಮನೆಂದಿದೆ. ಅದರಂತೆ ಈ ಶಾಸನದ ಇಮ್ಮಡಿ ಅವಸರ ಖಾರೇಪಟ್ಟಣ ತಾಮ್ರಶಾಸನದ ಮುಮ್ಮಡಿ ಅವಸರನಾಗುತ್ತಾನೆ. ಪಟ್ಟಣಕುಡಿ ಶಾಸನದಲ್ಲಿ ಈತ ಬಲಿನಗರದಿಂದ ಆಳುತ್ತಿದ್ದನೆಂದು ಹೇಳಿದೆ. ಶಾಸನಕರ್ತೃ ನಾಗರಸಂಧಿವಿಗ್ರಹಿ ಎನಿಸಿದ ದೇವಪಾಲ ಈತನನ್ನು ವಾಮನನ ಮಗನೆಂದೂ ಕವಿ ಎಂದೂ ವರ್ಣಿಸಿದ್ದಾನೆ. ಈ ದೇವಪಾಲನ ಮಗ ಲೋಕಪಾರ್ಯನು ಖಾರೇಪಟ್ಟಣ ತಾಮ್ರಶಾಸನದ ಕರ್ತೃ. ಈ ಮಾಂಡಲಿಕನ ಆಳಿಕೆಯ ಕಾಲದಲ್ಲಿ (ಸು. 970–95) ರಾಷ್ಟ್ರಕೂಟರು ಅಳಿದು ಚಾಳುಕ್ಯರು ಮತ್ತೊಮ್ಮೆ ಕರ್ನಾಟಕದ ಅರಸರಾದರು. ಇದುವರೆಗೂ ರಾಷ್ಟ್ರಕೂಟರ ಸಾಮಂತರಾಗಿದ್ದ ಈ ಶಾಖೆಯವರು ಈಗ ಬಲವಂತವಾಗಿಯಾದರೂ ಚಾಳುಕ್ಯರ ಮಾಂಡಲಿಕತ್ವವನ್ನು ಒಪ್ಪಬೇಕಾಯಿತು. ಅವಸರನ ಮಗ ರಟ್ಟರಾಜನು ಚಾಳುಕ್ಯ ಇಱಿವಬೆಡಂಗ ಸತ್ಯಾಶ್ರಯನ ಮಾಂಡಲೀಕನಾಗಿದ್ದ. ಈತನ ಖಾರೇಪಟ್ಟಣ ಶಾಸನದ ಕಾಲ 1008. ಆದರೆ ಅನಂತರದ ಎರಡು ದಶಕಗಳೊಂದಿಗೆ ಈ ಶಿಲಾಹಾರರು ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದರು. ಜಗದೇಕಮಲ್ಲ ಜಯಸಿಂಹನು ರಟ್ಟರಾಜನನ್ನೋ ಆತನ ಉತ್ತರಾಧಿಕಾರಿಯನ್ನೋ ಸೋಲಿಸಿದಂತೆ ತೋರುತ್ತದೆ. ಈ ಮಾಂಡಲಿಕರು ಗೋವೆ, ಸಾವಂತವಾಡಿ, ರತ್ನಗಿರಿ ಪ್ರದೇಶಗಳ ಒಡೆಯರಾಗಿದ್ದರು.

**ದಕ್ಷಿಣ ಕೊಂಕಣದ ಶಿಲಾಹಾರರ ವಂಶಾವಳಿ :**

ಸಣಫುಲ್ಲ (770–95)
|
ಧಮ್ಮಿಯರ (795–820)
|
ಅಯ್ಯಪ್ಪರಾಜ (820–45)
|
ಅವಸರ I (845–70)
|
ಆದಿತ್ಯವರ್ಮ (870–95)
|
ಅವಸರ II (895–920)
|
ಇಂದ್ರರಾಜ (920–45)
|
ಭೀಮ (945–70)
|
ಅವಸರ III (970–95)
|
ರಟ್ಟರಾಜ (995–1020)

**ಉತ್ತರ ಕೊಂಕಣದ ಶಿಲಾಹಾರರು:** ಇವರು ಸು. 800–1240ರವರೆಗೆ, ನಾಲ್ಕುವರೆ ಶತಮಾನಗಳ ಕಾಲ ಅಧಿಕಾರದಲ್ಲಿದ್ದರು. ಸುವರ್ಣ ಗರುಡ ಇವರ ಲಾಂಛನ. ತಗರಪುರಪರಮೇಶ್ವರ ಎಂಬುದು ಬಿರುದು. ಪುರಿ ಇವರ ರಾಜಧಾನಿ. ಇದನ್ನು ಗುರುತಿಸಲಾಗಿಲ್ಲ. ಈ ಶಾಖೆಗೆ ಸೇರಿದ ಮಾಂಡಲಿಕರ 5 ತಾಮ್ರ ಶಾಸನಗಳೂ 6 ಶಿಲಾಶಾಸನಗಳೂ ಲಭಿಸಿವೆ. ತನ್ಮೂಲಕ ಇವರನ್ನು ಕುರಿತು ಹೆಚ್ಚಿನ ವಿವರಗಳು ಈಗ ತಿಳಿದಿವೆ.

ಕಪರ್ದಿ ಈ ಶಾಖೆಯ ಮೊದಲ ಮಾಂಡಲಿಕ. ಸಾಹಸಾಂಕನಂತೆ ಸಾಹಸಿ ಎಂದು ಈತನನ್ನು ಶಾಸನಗಳಲ್ಲಿ ವರ್ಣಿಸಲಾಗಿದೆ. ಈತ ರಾಷ್ಟ್ರಕೂಟರ ಮುಮ್ಮಡಿ ಗೋವಿಂದನ ಕದನಗಳಲ್ಲಿ ಆತನಿಗೆ ನೆರವಾಗಿ ಆತನಿಂದ ಉತ್ತರಕೊಂಕಣದ ಆಡಳಿತಾಧಿಕಾರವನ್ನು ಪಡೆದಿರಬಹುದೆಂದು ಊಹಿಸಲಾಗಿದೆ. ಆದರೆ ಇಂತಹುದೇ ಮಾತನ್ನು ಫುಲ್ಲಶಕ್ತಿಯ ಬಗೆಗೆ ಕನ್ಹೇರಿ ಶಾಸನದಲ್ಲಿ(843) ಹೇಳಿದೆ. ಮಲ್ಲಶಕ್ತಿ ಆ ಅಧಿಕಾರವನ್ನು ಅಮೋಘವರ್ಷನಿಂದ ಪಡೆದನೆಂದಿದೆ. ಫುಲ್ಲಶಕ್ತಿ ಕಪರ್ದಿಯ ಮಗ ಕನ್ಹೇರಿಯಲ್ಲಿನ ಬೌದ್ಧ ಭಿಕ್ಷುಗಳಿಗೆ ದತ್ತಿಯೊಂದನ್ನು ನೀಡಿದ. ಈತನ ಮಗ ಲಘುಕಪರ್ದಿ ಎಂದು ಕರೆಯಲಾದ ಇಮ್ಮಡಿ ಕಪರ್ದಿ. ಈತ ಅಪ್ರಾಪ್ತ ವಯಸ್ಕನಾಗಿದ್ದಾಗಲೇ ಪಟ್ಟಕ್ಕೆ ಬಂದಂತೆ ತೋರುತ್ತದೆ. ಈತನೂ ಅಮೋಘವರ್ಷನ ಮಾಂಡಲಿಕನಾಗಿದ್ದ. ಬೌದ್ಧ ಭಿಕ್ಷುಗಳಿಗೆ ದತ್ತಿನೀಡಿದ. ಈತನ ಮಗ ವಪ್ಪುವಣ. ಮೊಮ್ಮಗ ಝುಂಝು. ಅಲ್‌ಮಸೂದಿ ಎಂಬ ಬರೆಹಗಾರ ಚೌಲ್‌ನಲ್ಲಿ (ಸಮರ್) ಝುಂಝುನೆಂಬ ಅರಸ ಆಳುತ್ತಿದ್ದನೆಂದು (ಸು. 916) ಹೇಳಿದ್ದಾನೆ. ಈ ಝುಂಝು

ಶಿಲಾಹಾರ ಝುಂಝುನಾಗಿರಬೇಕು. ಝುಂಝುನ ಅನಂತರ ಆತನ ಸೋದರ ಗೊಗ್ಗಿರಾಜ ಆಳಿದ. ಈತನನ್ನು ಮತ್ತು ಈತನ ಮಗ ವಜ್ಜಡನನ್ನು ಕುರಿತು ಹೆಚ್ಚಿನ ವಿವರಗಳು ತಿಳಿಯವು. ತಲಕಾಡಿನ ಗಂಗರ ಮಾರಸಿಂಹ ಎದುರಿಸಿದ ವಜ್ಜಳ ಈತನೇ ಇರಬಹುದೆಂಬುದೊಂದು ಊಹೆ.

**ಉತ್ತರ ಕೊಂಕಣದ ಶಿಲಾಹಾರರ ವಂಶಾವಳಿ :**

ಕಪರ್ದಿ I (800–25)
ಘುಲ್ಲಶಕ್ತಿ (825–50)
ಕಪರ್ದಿ II (850–80)
ವಪ್ಪುವಣ (880–910)

ಝುಂಝು (910–30) | ಗೊಗ್ಗಿ (930–45)
ವಜ್ಜಡ I (945–75)
ಅಪರಾಜಿತ (975–1010)

ವಜ್ಜಡ II (1010–15) | ಅರಿಕೇಸರಿ (ಕೇಶಿದೇವ) (1015–25)

ಛಿತ್ತರಾಜ (1025–40) | ನಾಗರಾಜ | ಮುಮ್ಮಣ್ಣಿ (1040–70)

ಅನಂತದೇವ (1070–1110)
ಅಪರಾದಿತ್ಯ I (1110–40)
ಹರಪಾಲದೇವ (1140–55)
ಮಲ್ಲಿಕಾರ್ಜುನದೇವ (1155–70)
ಅಪರಾದಿತ್ಯ II (1170–95)
ಕೇಶಿರಾಜ (1195–1240)
ಸೋಮೇಶ್ವರ (1240–65)

ವಜ್ಜಡನ ಮಗ ಮೃಗಾಂಕನೆನಿಸಿದ ಅಪರಾಜಿತ. ಈತನ ಭದಾನಾ ತಾಮ್ರ ಶಾಸನದಿಂದ ಇವನನ್ನು ಕುರಿತು ಹಲವಾರು ವಿವರಗಳು ತಿಳಿದಿವೆ. ಈತ ಅಧಿಕಾರಕ್ಕೆ ಬಂದಾಗ ರಾಷ್ಟ್ರಕೂಟರು ಅವನತಿ ಹೊಂದಿ ಕಲ್ಯಾಣದ ಚಾಳುಕ್ಯರು ಸಾಮ್ರಾಟರಾಗಿ ಆಳತೊಡಗಿದರು. ಅವರಲ್ಲಿ ಇಮ್ಮಡಿ ತೈಲಪನನ್ನು ಈತ ಎದುರಿಸಿದ. ಆದರೆ ಇಱೆವಬೆಡಂಗ ಸತ್ಯಾಶ್ರಯ ಈತನನ್ನು ಸೋಲಿಸಿದ. ಈತ ಸಾಮಂತಾಧಿಪತಿ ಎನಿಸಿಕೊಂಡ. ರನ್ನನ ಗದಾಯುದ್ಧದಲ್ಲಿಯೂ ಈತನ ಪ್ರಸ್ತಾಪ ಇದೆ. ಸು. 1005ರಲ್ಲಿ ಸೋಲನ್ನನುಭವಿಸಿದ ಈತ ಅನಂತರ ಬಹಳ ಕಾಲ ಬದುಕಲಿಲ್ಲ. 1010ರಲ್ಲಿ ಸಾವನ್ನಪ್ಪಿದ. ಈತನಿಗೆ ವಜ್ಜಡ (II) ಮತ್ತು ಅರಿಕೇಸರಿ ಎಂಬಿಬ್ಬರು ಮಕ್ಕಳು, ಇವರಿಬ್ಬರಲ್ಲಿ ಯಾರು ಹಿರಿಯರು ಎಂಬ ಜಿಜ್ಞಾಸೆ ಇದೆ. ಇಮ್ಮಡಿ ವಜ್ಜಡ ಕೇವಲ 5 ವರ್ಷಗಳು ಆಳಿದ ಅನಂತರ ಅರಿಕೇಸರಿ ಅಧಿಕಾರಕ್ಕೆ ಬಂದ. ಚಾಳುಕ್ಯ ಸಾರ್ವಭೌಮತ್ವವನ್ನು ಅವರು ಒಪ್ಪಿದ್ದರಿಂದ ಅವರ ಶತ್ರುಗಳಾದ ಮಾಳವದ ಪರಮಾರರನ್ನು ಎದುರಿಸಬೇಕಾಯಿತು. ಪರಮಾರ ಸಿಂಧುರಾಜ ಉತ್ತರ ಕೊಂಕಣವನ್ನು ಮುತ್ತಿದ. ಆದರೆ ಕೊನೆಗೊಮ್ಮೆ ಚಾಳುಕ್ಯ ಇಮ್ಮಡಿ ಜಯಸಿಂಹ ಸಿಂಧುರಾಜನನ್ನು ಹಿಂದಕ್ಕೆ ದೂಡಿದ. ಇಮ್ಮಡಿ ವಜ್ಜಡನ ಮಗ ಛಿತ್ತರಾಜ. ಈತ ಅರಿಕೇಸರಿಯ ಉತ್ತರಾಧಿಕಾರಿ. ಈತ ಕೊಲ್ಲಾಪುರದ ಶಿಲಾಹಾರ ಗೊಂಕನ ಹಾಗೂ ಗೋವೆಯ ಕದಂಬ ಷಷ್ಠದೇವನ ದಾಳಿಗಳನ್ನು ಎದುರಿಸಬೇಕಾಯಿತು. ಇಂಥ ಪರಿಸ್ಥಿತಿಯಲ್ಲೂ ಈತ ಮುಂಬಯಿ ಸಮೀಪ ಕಲ್ಯಾಣದಲ್ಲಿ ಶಿವನಿಗಾಗಿ ಅಂಬರನಾಥ ದೇವಾಲಯವನ್ನು ಕಟ್ಟಿಸಿದ. ಛಿತ್ತರಾಜನ ಸೋದರನಾದ ಮುಮ್ಮಣ್ಣಿಯು ಕದಂಬರ ತೊಂದರೆ ನಿವಾರಿಸಲು ತನ್ನ ಮಗಳನ್ನು ಷಷ್ಠದೇವನಿಗೆ ಮದುವೆ ಮಾಡಿಕೊಟ್ಟ. ಈ ಇಬ್ಬರಿಗೂ ಮಕ್ಕಳಿರದ ಕಾರಣ ಇವರ ಇನ್ನೊಬ್ಬ ಸೋದರ ನಾಗರಾಜನ ಮಗ ಅನಂತದೇವ ಪಟ್ಟವೇರಿದ (1070). ಈತ ಕದಂಬರ ಗೂಹಲ್ಲ (III) ಮತ್ತು ವಿಜಯಾದಿತ್ಯರನ್ನು ಸೋಲಿಸಿ ಪಶ್ಚಿಮ ಸಮುದ್ರಾಧಿಪತಿ ಎನಿಸಿಕೊಂಡ. ಅನಂತದೇವನ ಮಗ ಅಪರಾರ್ಕ ಅಥವಾ ಅಪರಾದಿತ್ಯ. ಈತನ ಶಾಸನಗಳು ಲಭಿಸಿವೆ. ಈತನ ತಾಯಿ ಲೀಲಾವತಿ ಎಂದು ಅವುಗಳಲ್ಲೊಂದರಿಂದ ತಿಳಿದುಬರುತ್ತದೆ. ಗೋವೆಯ ಕದಂಬರ ಇಮ್ಮಡಿ ಜಯಕೇಶಿ ಇವನ ವಿರುದ್ಧ ದಂಡೆತ್ತಿ ಬಂದು ಶಿಲಾಹಾರರ ಕೆಲವು ಪ್ರಾಂತ್ಯಗಳನ್ನಾಕ್ರಮಿಸಿದ. ಆದರೆ ಬಹಳ ಕಷ್ಟದಿಂದ ಅಪರಾರ್ಕ ಶತ್ರುವನ್ನು ಹಿಮ್ಮೆಟ್ಟಿಸಿದ. ಅನಂತರ ಈತ ತನ್ನ ರಾಯಭಾರಿಗಳನ್ನು ಇತರ ರಾಜ್ಯಗಳಿಗೆ ಕಳುಹಿಸಿದ. ಹಾಗೆ ಕಳುಹಿಸಲ್ಪಟ್ಟವರಲ್ಲಿ ಕಾಶ್ಮೀರಕ್ಕೆ ಹೋದ ತೇಜಃಕಂಠ ಒಬ್ಬ. ಬಹುಶಃ ಈ ಅಪರಾರ್ಕನೇ ಯಾಜ್ಞವಲ್ಕ್ಯ ಸ್ಮೃತಿಗೆ ಅಪರಾರ್ಕ ಟೀಕಾವನ್ನು ಬರೆದು ಅದನ್ನು ಈತನ ರಾಯಭಾರಿ ಕಾಶ್ಮೀರದಲ್ಲಿ ಪ್ರಚುರಗೊಳಿಸಿದ.

ಅಪರಾದಿತ್ಯನ ಉತ್ತರಾಧಿಕಾರಿ ಹರಪಾಲದೇವ. ಅನಂತರ ಬಂದಾತ ಮಲ್ಲಿಕಾರ್ಜುನದೇವ. ಇವರ ನಡುವಣ ಸಂಬಂಧಗಳು ಸ್ಪಷ್ಟವಾಗಿಲ್ಲ. ಮಲ್ಲಿಕಾರ್ಜುನನ ತಂದೆ ಮಹಾನಂದನೆಂದೂ ಆತನ ರಾಜಧಾನಿ ಸಮುದ್ರದಿಂದಾವೃತವಾಗಿದ್ದ ಶತಾನಂದಪುರವೆಂದೂ ಕುಮಾರಪಾಲಚರಿತದಲ್ಲಿ ಹೇಳಿದೆ. ಈ ಶತಾನಂದಪುರ ಅವರ ರಾಜಧಾನಿಯಾದ ಪುರಿ ಆಗಿರಬೇಕು. ಇದೇ ಗ್ರಂಥದಲ್ಲಿ ಚಾಳುಕ್ಯ ಕುಮಾರಪಾಲ ಈ ಶಿಲಾಹಾರನ ವಿರುದ್ಧ ದಂಡೆತ್ತಿ ಕೊಂಕಣವನ್ನು ಆಕ್ರಮಿಸಿದನೆಂದು ಹೇಳಿದೆ. ಬಹುಶಃ ಚಾಳುಕ್ಯರ ಸಾರ್ವಭೌಮತ್ವವನ್ನು ಮಲ್ಲಿಕಾರ್ಜುನ ಒಪ್ಪಬೇಕಾಯಿತು. ಅನಂತರ ಆಳಿದಾತ ಇಮ್ಮಡಿ ಅಪರಾದಿತ್ಯ. ಈತನ ಮತ್ತು ಮಲ್ಲಿಕಾರ್ಜುನನ ನಡುವಣ ಸಂಬಂಧ ತಿಳಿಯದು. ಇಮ್ಮಡಿ ಅಪರಾದಿತ್ಯ ಚಾಳುಕ್ಯರನ್ನು ಹೊರದೂಡಿದಂತೆ ತೋರುತ್ತದೆ. ಮಹಾರಾಜಾಧಿರಾಜ, ಕೊಂಕಣ ಚಕ್ರವರ್ತಿ ಎಂಬ ಬಿರುದುಗಳನ್ನು ಈತ ಧರಿಸಿದ್ದ. ಕೇಶಿರಾಜ ಅಪರಾದಿತ್ಯನ ಮಗ, ಈ ವೇಳೆಗೆ ಇವರ ಪ್ರಾಬಲ್ಯ ಕುಗ್ಗಿತ್ತು. ಈ ಶಿಲಾಹಾರರ ಕೊನೆಯ ಅರಸ ಸೋಮೇಶ್ವರ. ಈತ ಕೇಶಿರಾಜನ ಸಂಬಂಧಿಯೇ ಎಂಬುದು ತಿಳಿಯದು. ದೇವಗಿರಿಯ ಸೇವುಣರು ಇವನನ್ನು ಸೋಲಿಸಿ ರಾಜ್ಯವನ್ನು ತಮ್ಮ ವಶಮಾಡಿಕೊಂಡರು. ಇದರೊಂದಿಗೆ ಉತ್ತರ ಕೊಂಕಣದಲ್ಲಿ ಶಿಲಾಹಾರರ ಆಳಿಕೆ ಮುಗಿಯಿತು. ಇವರ ರಾಜ್ಯ ಮಹಾರಾಷ್ಟ್ರದ ಠಾಣ, ಅಲಿಬಾಗ್, ರತ್ನಗಿರಿ ಜಿಲ್ಲೆಗಳನ್ನೂ ಸೂರತ್ ಜಿಲ್ಲೆಯ ದಕ್ಷಿಣ ಭಾಗವನ್ನೂ ಒಳಗೊಂಡಿತ್ತು. ಇವರನ್ನು ಠಾಣೆಯ ಶಿಲಾಹಾರರೆಂದೂ ಸಹ ಕರೆಯಲಾಗಿದೆ.

**ಕೊಲ್ಲಾಪುರದ (ಕರಹಾಡ) ಶಿಲಾಹಾರರು:** ಮಹಾರಾಷ್ಟ್ರದ ಸತಾರಾ ಮತ್ತು ಕೊಲ್ಲಾಪುರದ ಜಿಲ್ಲೆಗಳು ಹಾಗೂ ಕರ್ನಾಟಕದ ಬೆಳಗಾಂವಿ ಜಿಲ್ಲೆಯನ್ನೊಳಗೊಂಡ ಪ್ರದೇಶದಲ್ಲಿ ಇವರು ಮಾಂಡಲಿಕರಾಗಿ ಆಳುತ್ತಿದ್ದರು; ಕೊಲ್ಲಾಪುರ ಸಮೀಪದ ಪನ್ಹಾಳ ಮತ್ತು ವಳವಡೆ ಇವರ ರಾಜಧಾನಿಗಳು. ವಳವಡೆಯನ್ನು ಖಚಿತವಾಗಿ ಗುರುತಿಸಲಾಗಿಲ್ಲ. ಇವರ ಲಾಂಛನಗಳೂ ಸುವರ್ಣಗರುಡ, ತಗರಪುರವರಾಧೀಶ್ವರ ಎಂಬುದು ಬಿರುದು. ಆದರೆ ಮನೆದೇವತೆ ಕೊಲ್ಲಾಪುರದ ಮಹಾಲಕ್ಷ್ಮಿ. ಚಾಳುಕ್ಯ ನಾಲ್ಕನೆಯ ವಿಕ್ರಮಾದಿತ್ಯ ಕರಹಾಟಾಧಿಪತಿಯಾದ ವಿದ್ಯಾಧರಕುಮಾರನ

ಮಗಳಾದ ಚಂದ್ರಲೇಖೆಯನ್ನು (ಚಂದಲದೇವಿ) ಸ್ವಯಂವರದಲ್ಲಿ ಲಗ್ನ ಮಾಡಿಕೊಂಡನೆಂದು ಬಿಲ್ಹಣ ಹೇಳಿರುವುದನ್ನು ಗಮನಿಸಿದರೆ ಕರಹಾಡಿ ನಾಲ್ಸಾಸಿರ ಎಂದು ಆಗ ಪ್ರಸಿದ್ಧವಾಗಿದ್ದ, ಸತಾರಾ ಜಿಲ್ಲೆಯ ಕರಹಾಡದ ಸುತ್ತಲಿನ ಪ್ರದೇಶದ ಅಧಿಪತಿಗಳಿವರು ಎಂಬುದು ಸ್ಪಷ್ಟ. ಕರಹಾಡ ಇವರ ಪ್ರಾಂತೀಯ ರಾಜಧಾನಿ. ಈ ಮನೆತನದ ಮೂಲಪುರುಷ ಜಟಿಗ. ಗಂಡರಾದಿತ್ಯನ ತಳಲೆ ತಾಮ್ರಶಾಸನದಲ್ಲಿ ಈತನ ಅನಂತರದ ನಯಿವರ್ಮ ಮತ್ತು ಚಂದ್ರರ ಪ್ರಸ್ತಾಪವಿದೆ. ಈ ಮೂವರು ಸು. 940ರಿಂದ 1000 ದವರೆಗೆ ಆಳಿರಬೇಕು. ಚಂದ್ರನ ಮಗ ಇಮ್ಮಡಿ ಜಟಿಗ. ತಗರನಗರ ಭೂಪಾಲಕ, ಪನ್ನಾಲ ದುರ್ಗಾದ್ರ ಸಿಂಹ ಎಂಬ ಬಿರುದುಗಳನ್ನು ಧರಿಸಿದ್ದ ಈತನಿಗೆ ನಾಲ್ವರು ಮಕ್ಕಳು. ಹಿರಿಯವನೂ ಉತ್ತರಾಧಿಕಾರಿಯೂ ಆದ ಗೊಂಕ ಹಾಗೂ ಗೂವಲ I, ಕೀರ್ತಿರಾಜ ಮತ್ತು ಚಂದ್ರಾದಿತ್ಯ. ಗೊಂಕನ ಮಗ ಮಾರಸಿಂಹ. ಕಿಲಗಿಲದುರ್ಗ (ಬಹುಶಃ ಪನ್ಹಾಲ) ಇವನ ರಾಜಧಾನಿಯಾಗಿತ್ತು. ಈತನಿಗೆ ಗೂವಲII, ಗಂಗದೇವ, ಬಲ್ಲಾಳ, ಭೋಜ ಮತ್ತು ಗಂಡರಾದಿತ್ಯರೆಂಬ ಐವರು ಮಕ್ಕಳು. ಈ ಶಿಲಾಹಾರರ ಶಾಸನಗಳಲ್ಲಿ ಇವರೆಲ್ಲರನ್ನೂ ಅರಸರೆಂದು ಕರೆಯಲಾಗಿದೆ. ಆದರೆ ಎರಡನೆಯ ಗೂವಲನ ಅನಂತರ ಗಂಡರಾದಿತ್ಯ 1110ರಿಂದ 1140ರವರೆಗೆ ಆಳಿದನೆಂಬುದು ಆತನ ಶಾಸನಗಳಿಂದ ತಿಳಿದಿದೆ. ಆದರೆ ಗಂಡರಾದಿತ್ಯನಿಗೆ ಮೊದಲು ಬಲ್ಲಾಳ ಮತ್ತು ಭೋಜರು ಆಳಿದರು. ಎರಂಬರಗೆಯ (ಯಲಬುರ್ಗಿ) ಸಿಂದರ ಎರಡನೆಯ ಆಚುಗಿ ಸೋಲಿಸಿದನೆಂದು ಹೇಳಲಾದ ಭೋಜ ಈ ಶಿಲಾಹಾರ ಭೋಜನಾಗಿರ ಬಹುದು. ಈತನ ಆಳ್ವಿಕೆಯ ಕಾಲದಲ್ಲಿ ಸೋದರನಾದ ಗಂಡರಾದಿತ್ಯ ವಳವಡೆಯಲ್ಲಿ ಪ್ರಾಂತಾಧಿಕಾರಿಯಾಗಿದ್ದನೆಂದು ತೋರುತ್ತದೆ.

ಭೋಜನ ಅನಂತರ ಕಿರಿಯ ಸೋದರ ಗಂಡರಾದಿತ್ಯ ಸು. 30 ವರ್ಷಗಳ ಕಾಲ ಸ್ವತಂತ್ರವಾಗಿ ಆಳಿದ. ಉತ್ತರ ಕೊಂಕಣದ ಒಂದನೆಯ ಅಪರಾರ್ಕನನ್ನು (ಅಪರಾದಿತ್ಯ) ಕದಂಬ ಎರಡನೆಯ ಜಯಕೇಶಿ ಹೊರದೂಡಿದ ಸಂದರ್ಭದಲ್ಲಿ ಆತನ ನೆರವಿಗೆ ಗಂಡರಾದಿತ್ಯ ಧಾವಿಸಿದ ನೆಂದು ತೋರುತ್ತದೆ. ಬಹುಶಃ ಈ ಘಟನೆಯಲ್ಲಿ ಗಂಡರಾದಿತ್ಯನ ಮಗ ವಿಜಯಾದಿತ್ಯ ವಿಶಿಷ್ಟವಾದ ಪಾತ್ರ ವಹಿಸಿರಬೇಕು. ವಿಜಯಾದಿತ್ಯ ಉತ್ತರ ಕೊಂಕಣದ ಕೆಲವು ಭಾಗಗಳನ್ನು ಹಿಂದಕ್ಕೆ ಕೊಡಿಸುವಲ್ಲಿ ಯಶಸ್ವಿಯಾದ. ಆದರೆ ಉಳಿದ ಭಾಗಗಳು ಕದಂಬರ ಅಧೀನದಲ್ಲಿಯೇ ಉಳಿದಿದ್ದುವು. ಗಂಡರಾದಿತ್ಯ ಮೀರಜ್ ಸಮೀಪದ ಇರುಕುಡಿಯಲ್ಲಿ ಗಂಡಸಮುದ್ರವೆಂಬ ಕೆರೆಯನ್ನು ತೋಡಿಸಿ ಅದರ ದಡದಲ್ಲಿ ಬುದ್ಧ, ಜಿನ ಹಾಗೂ ಶಂಕರರಿಗೆ ಆಲಯಗಳನ್ನು ಕಟ್ಟಿಸಿದ. ಈತ 1140ರಿಂದ ಸ್ವತಂತ್ರವಾಗಿ ಆಳಿದ. ಚಾಳುಕ್ಯ ಮುಮ್ಮಡಿ ತೈಲನ ಕಾಲದಲ್ಲಿ ಉಂಟಾದ ಅರಾಜಕತೆಯ ಉಪಯೋಗ ಪಡೆದ. ಕಳಚುರಿ ಬಿಜ್ಜಳನಿಗೆ ನೆರವು ನೀಡಿ. ಒಂದೆರಡು ವರ್ಷಗಳ ಬಳಿಕ ತಾನೂ ಮಾಂಡಲಿಕತ್ವವನ್ನು ಒಪ್ಪಿದ. ಈತನ ಮಗ ಇಮ್ಮಡಿ ಭೋಜ. ಈತ ಈ ಶಿಲಾಹಾರದಲ್ಲಿ ಪ್ರಮುಖನಾದ ಕೊನೆಯ ದೊರೆ. ಶಬ್ದಾರ್ಣವಚಂದ್ರಿಕಾ ಗ್ರಂಥದ ಕರ್ತೃ ಸೋಮದೇವ ಈತನನ್ನು ರಾಜಾಧಿರಾಜ, ಪರಮೇಶ್ವರ ಪರಮಭಟ್ಟಾರಕ, ಪಶ್ಚಿಮ ಚಕ್ರವರ್ತಿ ಎಂದು ವರ್ಣಿಸಿದ್ದಾನೆ. ಕಳಚುರಿಗಳು ಇವನ ಪ್ರಾಬಲ್ಯವನ್ನು ಮುರಿಯಲು ಯತ್ನಿಸಿದರಾದರೂ ಯಶಸ್ವಿಯಾಗಲಿಲ್ಲ. ಆದರೆ ಸೇವುಣರ ಇಮ್ಮಡಿ ಸಿಂಘಣ ಇವನನ್ನು ಸೋಲಿಸಿ ಹೊರದೂಡಿದ. ಭೋಜನ ಮಗ ಗಂಡರಾದಿತ್ಯನೆಂಬುವನ ಹೆಸರಿನಲ್ಲಿ ಒಂದು ಶಾಸನವಿದೆ. ಆದರೆ ಬಹುಶಃ ಗಂಡರಾದಿತ್ಯನನ್ನು ಸಿಂಘಣ ಕಡೆಗಣಿಸಿ ಶಿಲಾಹಾರ ರಾಜ್ಯವನ್ನು ವಶಪಡಿಸಿಕೊಂಡಂತೆ ತೋರುತ್ತದೆ. ಇದರೊಂದಿಗೆ ಈ ಶಿಲಾಹಾರರ ಆಳ್ವಿಕೆಯೂ ಅಂತ್ಯಗೊಂಡಿತು.

**ಕೊಲ್ಲಾಪುರದ ಶಿಲಾಹಾರರ ವಂಶಾವಳಿ :**

ಜಟಿಗ I
|
ನಯಿವರ್ಮ
|
ಚಂದ್ರ
|
ಜಟಿಗ II (1000–20)
- ಗೊಂಕ (1020–55)
  - ಮಾರಸಿಂಹ (1055–75)
    - ಗೂವಲ II (1075–86)
    - ಗಂಗದೇವ
    - ಬಲ್ಲಾಳ (1086–95)
    - ಭೋಜ (1095–1110)
    - ಗಂಡರಾದಿತ್ಯ (1110–40)
      - ವಿಜಯಾದಿತ್ಯ (1140–75)
        - ಭೋಜ II (1175–1215)
- ಗೂವಲ I
- ಕೀರ್ತಿರಾಜ
- ಚಂದ್ರಾದಿತ್ಯ

**ಅಕ್ಕಲಕೋಟೆಯ ಶಿಲಾಹಾರರು:** ಈ ಮೇಲೆ ಪರಿಶೀಲಿಸಲಾದ ಶಿಲಾಹಾರರು ಕರ್ನಾಟಕದ ಅರಸರ ಮಾಂಡಲಿಕರಾಗಿ ಈಗಿನ ಮಹಾರಾಷ್ಟ್ರ ದಲ್ಲಿ ಅಧಿಕಾರದಲ್ಲಿದ್ದರೆ, ಕರ್ನಾಟಕದಲ್ಲಿಯೇ ಈ ಮನೆತನದ ಒಂದು ಶಾಖೆ ಮಾಂಡಲಿಕ ಪದವಿಯಲ್ಲಿತ್ತು. ಇವರ ಶಾಸನಗಳು ಈಗಿನ ಶೋಲಾಪುರ ಜಿಲ್ಲೆಯ ಅಕ್ಕಲಕೋಟೆಯಲ್ಲಿ ವಿಶೇಷವಾಗಿ ದೊರೆತಿವೆ. ಇತರರಂತೆ ಇವರೂ ತಗರಪುರವರಾಧೀಶ್ವರರೆನಿಸಿಕೊಂಡರೂ ಇವರ ಮನೆದೇವತೆ ಚಾಮುಂಡಿ. ಎಂತಲೇ ಇವರು ಚಾಮುಂಡಿಕಾದೇವೀಲಬ್ಧವರ ಪ್ರಸಾದರೆಂದು ಕರೆದುಕೊಂಡಿದ್ದಾರೆ. ಮೂಲತಃ ತಗರಪುರಕ್ಕೆ ಸೇರಿದ ಇವರು ಅನಂತರ ವಲಸೆ ಹೋಗಿ ವಿಜಯಪುರವನ್ನು (ಈಗಿನ ಬಿಜಾಪುರ) ರಾಜಧಾನಿಯಾಗುಳ್ಳ ಅಂಕುಲಗೆ ನಾಡಿನಲ್ಲಿ ನೆಲಸಿದ್ದರು. ಈ ಅಂಕುಲಗೆ ಅಣಂದೂರು 300ರ ಒಂದು ಭಾಗವಾಗಿತ್ತು. ಈ ಶಾಖೆಯ ಮೂಲ ಪುರುಷನಾದ ಪಿಟ್ಟಮನ ರಾಜ್ಯ ಅಸಿತಾದ್ರಿಯಿಂದ ಕಾಲಾಂಜರದವರೆಗೂ ಹಬ್ಬಿತ್ತೆಂದು ಹೇಳಿದೆ. ಇದೇ ಅಸಿತಾದ್ರಿಯನ್ನೇ ಇನ್ನೊಂದು ಶಾಸನದಲ್ಲಿ ಕೃಷ್ಣಾದ್ರಿ ಎಂದೂ ಕರೆದಿದೆ. ಇನ್ನೊಂದು ಶಾಖೆಯವರು ರಾಜ್ಯ ಕರಹಾಡದವರೆಗೂ ವಿಸ್ತರಿಸಿದ್ದು ಅದಕ್ಕೆ ಹೊಂದಿಕೊಂಡಂತೆ ಇವರ ರಾಜ್ಯವಿತ್ತೆನ್ನಬಹುದು. ಕಾಲಾಂಜರ ಕುಂತಲವಿಷಯದ ಒಂದು ಪ್ರಖ್ಯಾತ ಗ್ರಾಮವೆನ್ನಲಾಗಿದ್ದರೂ ಇದನ್ನು ಗುರುತಿಸಲಾಗಿಲ್ಲ.

ಈ ಶಾಖೆಗೆ ಸೇರಿದ ಇಂದರಸನ ಕಾಲ ಸು. 1114. ಈತನಿಗೆ ಹಿಂದೆ 15 ತಲೆಮಾರುಗಳಾಗಿದ್ದು, ಮೂಲಪುರುಷ ಪಿಟ್ಟಮನೆಂದು ವಂಶಾವಳಿ ಯಲ್ಲಿ ಹೇಳಿದೆ. ತಲೆಮಾರಿಗೆ ಸಾಧಾರಣವಾಗಿ 25 ವರ್ಷಗಳಂತೆ ಲೆಕ್ಕ ಹಿಡಿದರೆ ಪಿಟ್ಟಮನ ಕಾಲ ಸು. 725–40 ಎಂದಾಗುತ್ತದೆ. ಆದ್ದರಿಂದ ಇವರು ಇತರ ಶಿಲಾಹಾರರಿಗಿಂತ ಪ್ರಾಚೀನರೆಂದು ಹೇಳಬಹುದು.

**ಅಕ್ಕಲಕೋಟೆ ಶಿಲಾಹಾರರ ವಂಶಾವಳಿ :**




**ಇತರ ಶಿಲಾಹಾರರು:** ಮೇಲೆ ಹೇಳಿದವರಲ್ಲದೆ ಶಿಲಾಹಾರ ಮನೆತನಕ್ಕೆ ಸೇರಿದ ಇತರ ಕೆಲವು ಸಾಮಂತರು ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾರೆ. ಇವರು ಯಾವ ಶಾಖೆಗೆ ಸೇರಿದರೆಂಬುದು ಸ್ಪಷ್ಟವಿಲ್ಲ. ಅಥಣಿ, ಜತ್ ತಾಲ್ಲೂಕುಗಳಲ್ಲಿನ ಶಾಸನಗಳಲ್ಲಿ ಮಹಾಮಂಡಲೇಶ್ವರರೆನಿಸಿಕೊಂಡ ಪೆರ್ಮ್ಮಾಡಿಯರಸನೊಬ್ಬನಿದ್ದಾನೆ. ಈತ ಚಾಳುಕ್ಯ ನಾಲ್ಕನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದ. ಕೊಪಣ ಪುರವರಾಧೀಶ್ವರ, ಸ್ವಯಂಭೂರಾಮೇಶ್ವರ ದೇವಪಾದಾಬ್ಜಭೃಂಗ ಎಂಬಿವು ಈತನ ಬಿರುದುಗಳು. ಈತನ ಪತ್ನಿ ಚಂದಲದೇವಿ; ಮಕ್ಕಳು ದೋಲರಸ ಮತ್ತು ವನಸಿಂಹದೇವ.

ಕಾತ್ಯಾಯನೀದೇವೀಲಬ್ಧವರಪ್ರಸಾದನೆನಿಸಿದ ಇನ್ನೊಬ್ಬ ಪೆರ್ಮಾಡಿಯರಸ ಸಾಂಗ್ಲಿ ತಾಲ್ಲೂಕಿನ ಶಾಸನವೊಂದರಲ್ಲಿ ಕಾಣಿಸಿಕೊಂಡಿದ್ದಾನೆ. ಬಿಜಾಪುರ ಜಿಲ್ಲೆಯ ಸಿಂದಗಿ ಇಂಡಿ ತಾಲ್ಲೂಕುಗಳಲ್ಲಿ ಕೆಲವರು ಶಿಲಾಹಾರರಿದ್ದರು. ಕೈಲಾಸರಸ ಮತ್ತು ಆತನ ಮಗ ಧನಸಂಗ್ರಹ ಅವರಲ್ಲಿಬ್ಬರು. ಇವರಲ್ಲಿ ಧನಸಂಗ್ರಹ ಸು. 1019ರಲ್ಲಿ ಚಾಳುಕ್ಯ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಸಾಮಂತನಾಗಿದ್ದ. ಇತರರು ಸಿಂದರಸ, ಉದಯಾದಿತ್ಯರಸ, ಕುಮಾರ ಸೋವರಸ, ಆನೆಮರಸ ಗೋಣರಸ, ಬಂದರಸ, ಬಮ್ಮಿದೇವ ಇತ್ಯಾದಿ. ಇವರು ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದರು. ಇವರ ಪರಸ್ಪರ ಸಂಬಂಧಗಳಾಗಲೀ ಇವರು ಯಾವ ಶಾಖೆಗೆ ಸೇರಿದವರೆಂಬುದಾಗಲೀ ತಿಳಿಯದು. **(ಬಿ.ಆರ್.ಜಿ.)**

**ಶಿಲ್ಪಕಲೆ:** ಕರ್ನಾಟಕದಲ್ಲಿ ವಾಸ್ತುಕಲೆ ವೈವಿಧ್ಯಮಯವಾಗಿರುವಂತೆ ಶಿಲ್ಪಕಲೆಯೂ ತನ್ನ ವಿಸ್ತಾರವಾದ ಹಲವು ರೀತಿಯ ಬೆಳೆವಣಿಗೆಯನ್ನು ಕಂಡಿದೆ. ಜೊತೆಗೆ ನವಶಿಲಾಯುಗದ ಕಾಲದಿಂದಾರಂಭಿಸಿ ಆಧುನಿಕ ಯುಗದವರೆಗೂ ಅವಿಚ್ಛಿನ್ನವಾಗಿ ಬೆಳೆದುಬಂದ ಪರಂಪರೆ ಇದಕ್ಕಿದೆ.

ಶಿಲ್ಪವನ್ನು ರೂಪಿಸುವಲ್ಲಿ ಜೇಡಿ, ಗಚ್ಚು, ಮರ, ಲೋಹ, ಶಿಲೆ ಮೊದಲಾದವುಗಳನ್ನು ಉಪಯೋಗಿಸಲಾಗಿದ್ದು ಅಪರೂಪವಾಗಿ ದಂತವನ್ನೂ ಬಳಸಿರುವುದು ಕಂಡುಬರುತ್ತದೆ. ಅವುಗಳಲ್ಲೆಲ್ಲ ಹೇರಳವಾಗಿರುವುದು ಕಲ್ಲಿನಲ್ಲಿ ಕಂಡರಿಸಿರುವ ಶಿಲ್ಪ. ಆದರೆ ಅತಿ ಪ್ರಾಚೀನವಾದುದು ಜೇಡಿ ಅಥವಾ ಮಣ್ಣಿನದು. ಚರಿತ್ರ ಪೂರ್ವಕಾಲದ ನವಶಿಲಾಯುಗದಲ್ಲಿಯೇ ಮೃಣ್ಮೂರ್ತಿಗಳನ್ನು ತಯಾರಿಸಿರುವುದು ಹಲವು ಪುರಾತನ ನಿವೇಶನಗಳಿಂದ ವ್ಯಕ್ತವಾಗಿದೆ. ಕುಪ್ಪಗಲ್ಲು, ಬ್ರಹ್ಮಗಿರಿ, ಪಿಕ್ಲಿಹಾಳು, ಸಂಗನಕಲ್ಲು, ತೆಕ್ಕಲಕೋಟೆ, ಹರವಗೇರಿ, ಬೋರ್ಗಿ ಮೊದಲಾದ ಕಡೆ ನಡೆಸಿದ ಪರಿವೀಕ್ಷಣೆ ಹಾಗೂ ಉತ್ಖನನಗಳಲ್ಲಿ ಇಂಥ ಮಣ್ಣಿನಲ್ಲಿ ಮಾಡಿದ ಕಿರುಮೂರ್ತಿಗಳ ಅವಶೇಷಗಳು ದೊರೆತಿವೆ. ಇವು ಪೂರ್ಣರೂಪದಲ್ಲಿ ದೊರೆತಿರುವುದು ಅಪರೂಪ. ಪ್ರಾಣಿ, ಪಕ್ಷಿ ಅಥವಾ ಮಾನವನ ರೂಪಿನ ಈ ಮೃಣ್ಮೂರ್ತಿಗಳು ಕೈಯಿಂದಲೇ ತಯಾರಿಸಿದ ಮೂರ್ತಿಗಳಾಗಿದ್ದು ಕಣ್ಣು ಕಿವಿ ಮೂತಿಗಳು ಸ್ಪಷ್ಟವಾಗಿರುವುದಿಲ್ಲ. ಇವು ಕಣ್ಣಿಗೆ ಒಂದು ಗುಂಡುಗೆರೆ, ಬೆಟ್ಟುಗಳಿಂದ ಚಿವುಟಿ ಮಾಡಿದ ಕಿವಿಮೂಗುಗಳು, ಗುಂಡಾಗಿ ನೇರವಾಗಿ ಮೇಲೆ ದಪ್ಪನಾಗಿದ್ದು ಇಳಿಯುತ್ತ ಸಣ್ಣಗಾಗುವ ಕಾಲುಗಳನ್ನು ಹೊಂದಿರುತ್ತವೆ. ಪ್ರಾಣಿಗಳಲ್ಲಿ ಹೆಚ್ಚಾಗಿ ಕಂಡುಬರುವುದು ಹಸು ಅಥವಾ ಗೂಳಿ. ಪಿಕ್ಲಿಹಾಳಿನಲ್ಲಿ ದೊರೆತಿರುವ ಒಂದೆರಡು ಗೂಳಿಗಳು ದಷ್ಟಪುಷ್ಟವಾಗಿದ್ದು ತಮ್ಮ ಆಕಾರದಲ್ಲಿ ಮೊಹೆಂಜೊದಾರೋ ಗೂಳಿಗಳನ್ನು ಹೋಲುತ್ತವೆ. ಉನ್ನತವಾದ ಹಿಣಿಲು, ಹರವಾಗಿ ಇಳಿಬಿದ್ದಿರುವ ಬಾಲ, ತೆಳುನಡು ಮೊದಲಾದ ಭಾಗಗಳ ಆಕಾರ ಕೊಟ್ಟಿರುವಲ್ಲಿ ಕಲೆಗಾರಿಕೆ ಎದ್ದುಕಾಣುತ್ತದೆ. ಉತ್ತರ ಭಾರತದೊಡನೆ ಹೋಲಿಸಿದರೆ ಇಲ್ಲಿನ ಮೃಣ್ಮೂರ್ತಿಗಳು ಸಂಖ್ಯೆಯಲ್ಲಿ ತೀರ ಕಡಿಮೆ. ಹಸಿಮಣ್ಣಿನಲ್ಲಿ ತಯಾರಿಸಿ ಅನಂತರ ಆವುಗೆಯಲ್ಲಿ ಸುಟ್ಟಿರುವ ಈ ಮೂರ್ತಿಗಳು ಗಟ್ಟಿಯಾಗಿವೆ.

ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಕಾಲದಲ್ಲಿ ಬಂಡೆಗಳ ಮೇಲೆ ಪ್ರಾಣಿಗಳ ಮಾನವರ ರೂಪರೇಖೆಗಳನ್ನು ಸುತ್ತಿಗೆಯಿಂದ ಕುಟ್ಟಿ, ತೆಳುವಾಗಿ ಗೀರು ಕೊರೆದಂತೆ ಬಿಡಿಸಿರುವುದು ಕುಪ್ಪಗಲ್ಲು, ತೆಕ್ಕಲಕೋಟೆ, ತವರಗೆರೆ, ಕಲ್ಲೋಳಿ, ಪಿಕ್ಲಿಹಾಳು, ಮಸ್ಕಿ, ಚಿತ್ರದುರ್ಗ ಮೊದಲಾದೆಡೆ ಕಂಡುಬಂದಿವೆ. ಇವು ಸಾಮಾನ್ಯವಾಗಿ ಪ್ರಾಣಿಗಳ, ಮುಖ್ಯವಾಗಿ ಗೂಳಿಗಳ ಆಕೃತಿಗಳು. ಆಗಿನ ಕಾಲದಲ್ಲಿ ರಚಿತವಾದ ಬಂಡೆಗಳ ಮೇಲಿನ ವರ್ಣಚಿತ್ರವನ್ನೆ ಅನುಕರಿಸಿರುವ ಇವು ಕಲ್ಲಿನ ಶಿಲ್ಪದ ಆರಂಭದೆಸೆ ಎನ್ನಬಹುದು. ಹೀಗೆ ಬಿಡಿಸಿರುವ ಗೂಳಿಗಳಿಗೆ ನೀಳವಾದ ಕೊಂಬುಗಳು, ಉಬ್ಬಿದ ಹಿಣಿಲು ಇದ್ದು ಕೆಲವು ವೇಳೆ

ಇಳಿಬಿದ್ದ ಗಂಗೆದೊಗಲೂ ಇರುವುದುಂಟು. ಮಸ್ಕಿಯಲ್ಲಿ ಬಂಡೆಯೊಂದರ ಮೇಲಿರುವ ಒಂದು ಗುಂಪುಗೂಳಿಗಳಿಗೆ ಕಡ್ಡಿ ಕಾಲುಗಳು, ನೀಳ ತೆಳುದೇಹ, ಸ್ವಲ್ಪಮಟ್ಟಿಗೆ ಎತ್ತಿದಂತಿರುವ ನೇರ ಬಾಲ, ಮುಂಚಾಚಿರುವ ನೀಳ ಕೊಂಬುಗಳಿದ್ದು ಒಂದೇ ದಿಕ್ಕಿನಲ್ಲಿ ಚಲಿಸುತ್ತಿರುವ ಇವು ಜಡವಲ್ಲ ಎನ್ನುವುದನ್ನು ಸೂಚಿಸುತ್ತದೆ. ಚಂದ್ರವಳ್ಳಿ, ಬಳಿ ಬಂಡೆಯ ಮೇಲಿರುವ ಹುಲಿಯ ದೇಹದ ಮೇಲೆ ಪಟ್ಟೆಯನ್ನು ಅಡ್ಡಾದಿಡ್ಡಿ ಗೀರುಗಳ ಮೂಲಕ ತೋರಿಸುವ ಪ್ರಯತ್ನ ಇದೆ. ಚಿತ್ರದುರ್ಗ ಬೆಟ್ಟದ ಮೇಲಿನ ಜಿಂಕೆ, ಕಾಡುಕೋಣಗಳಲ್ಲಿ ಅವುಗಳ ಸ್ವಭಾವವನ್ನು ಸೆರೆಹಿಡಿದಿರುವುದನ್ನು ನೋಡಬಹುದು.

ಕುಸರಿಕೆಲಸದ ಕೊನೆಯ ಹಂತ

ಇತಿಹಾಸದ ಆರಂಭಕಾಲಕ್ಕೆ ಎಂದರೆ, ಕ್ರಿ.ಪೂ. ಸುಮಾರು 1ನೆಯ ಶತಮಾನದಿಂದ 3–4 ನೆಯ ಶತಮಾನಗಳ ಕಾಲಕ್ಕೆ ಸೇರಿದ ಸನ್ನತಿಯ ನಿವೇಶನದಲ್ಲಿ, ಬನವಾಸಿಯಲ್ಲಿ ಕಿರುಪ್ರಮಾಣದ ಮೃಣ್ಮೂರ್ತಿಗಳು ದೊರೆತಿವೆ. ಇವು ಅಚ್ಚಿನಲ್ಲಿ ಮಾಡಿದವು ಮತ್ತು ಕೆಲವು ಟೊಳ್ಳಾಗಿವೆ. ಯಕ್ಷಯಕ್ಷಿಯರು, ಹುಲಿ, ಕುದುರೆ, ಆನೆ, ಹೋರಿ ಮೊದಲಾದ ಈ ಕಿರುಮೂರ್ತಿಗಳಲ್ಲಿ ಅಂಗಾಂಗಗಳನ್ನು ಸೂಕ್ಷ್ಮವಾಗಿ ಬಿಡಿಸಿದ್ದು ಇವು ಉತ್ತಮ ಮಟ್ಟದ ಮೂರ್ತಿಗಳಾಗಿವೆ. ಸಾಮಾನ್ಯವಾಗಿ ಇವು ಆಟಿಕೆಗಳಾಗಿದ್ದು ಕೆಲವು ತಂತ್ರಕ್ಕೆ ಸಂಬಂಧಿಸಿದುವೆಂದು ಹೇಳಬಹುದು. ಕಲ್ಲಿನಲ್ಲಿ ಕಂಡರಿಸಿದ ಬೌದ್ಧ ಶಿಲ್ಪಗಳು ದೊರೆತಿರುವುದೂ ಇಲ್ಲಿಯೇ. ಇವು ಕರ್ನಾಟಕದಲ್ಲಿ ಅತಿ ಪ್ರಾಚೀನವಾದ ರೂಪು ಬಿಡಿಸಿದ ಶಿಲ್ಪಗಳೂ ಹೌದು. ಶಿಲ್ಪಕ್ಕೆ ಅಷ್ಟೇನೂ ಅನುಕೂಲವಲ್ಲದ ಹಸುರು ಬೆರೆತ ಬಿಳಿಯ ಸುಣ್ಣಕಲ್ಲಿನ ಹಲಗೆಗಳ ಮೇಲೆ ಬಿಡಿಸಿರುವ ಬುದ್ಧನ ಜೀವನ ಕಥೆಗಳೂ ಹಲವು ಬಗೆಯ ಸಾಂಸಾರಿಕ ಚಿತ್ರಣಗಳೂ ಪ್ರಾಣಿಗಳೂ ತೆಳುವಾಗಿ ಬಿಡಿಸಲಾಗಿದ್ದ ಅತ್ಯಂತ ಆಕರ್ಷಕವಾಗಿವೆ. ನಂದಿವಿಶಾಲ ಜಾತಕ, ಬುದ್ಧನ ಜನನ ಸಂದರ್ಭಗಳು ಅತ್ಯಂತ ಸ್ವಾಭಾವಿಕ ಕಂಡರಣೆಗೊಂಡ ಕೋಣ, ಕುದುರೆಗಳು, ಆಯಕಸ್ತಂಭವೊಂದರ ಮೇಲಿರುವ ಸುಖಸಂತೃಪ್ತಿಯಿಂದ ಮಂದಸ್ಮಿತವದನರಾಗಿ ನವಿರಾದ ಭಾವನೆಯನ್ನು ವ್ಯಕ್ತಪಡಿಸುವ ದಂಪತಿಗಳ ಛಾಯಾಶಿಲ್ಪ ಮೊದಲಾದುವು ಅಮರಾವತಿ ಶಿಲ್ಪವನ್ನು ನೆನಪಿಗೆ ತರುವ ಸಾತವಾಹನ ಶಿಲ್ಪಗಳ ಶ್ರೇಷ್ಠ ಮಾದರಿಗಳು. ಇವು ಆಗಲೇ ಪ್ರಚಲಿತವಿದ್ದ ಒಂದು ಶಿಲ್ಪಶೈಲಿಯ ಪರಂಪರೆಗೆ ಸೇರಿದುವು.

ಗ್ರಾಮದೇವತೆಗಳು, ಸಪ್ತಮಾತೃಕೆಯರು ಮೊದಲಾದ ಶಕ್ತಿದೇವತೆಗಳ ಪೂಜೆಯ ಅಂಗವಾಗಿ ಆ ದೇವತೆಗಳ ಬೃಹದಾಕಾರದ ಮೂರ್ತಿಗಳನ್ನು ಮಣ್ಣಿನಲ್ಲಿಯೇ ನಿರ್ಮಿಸಿ ಬಣ್ಣ ಹಾಕುವ ಪದ್ಧತಿ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಈಗಲೂ ಉಳಿದು ಬಂದಿದ್ದು ಇದರೊಂದಿಗೆ ಭೂತಪೂಜೆಯ ಅಂಗವಾಗಿ ಹಲವು ಬಗೆಯ ಪ್ರಾಣಿಗಳ ಮತ್ತು ಮಾನವರ ಮೂರ್ತಿಗಳನ್ನು ಮರದಿಂದ ನಿರ್ಮಿಸಿ ಬಣ್ಣ ಹಾಕಿಟ್ಟು ಪೂಜಿಸುವ ಪದ್ಧತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿದೆ. ಉದ್ಯಾವರ, ಪೊಳಲಿ, ಮೂಡಬಿದರೆ, ಬಾರಕೂರು, ಅನಂತಪುರ ಮುಂತಾದ ಕಡೆಗಳಲ್ಲಿ ಇರುವ ಬೃಹದಾಕಾರದ ಮೃಣ್ಮೂರ್ತಿಗಳೂ ಮೆಕ್ಕೆಕಟ್ಟೆ ಮತ್ತು ಇತರೆಡೆಗಳಲ್ಲಿ ಚಿತ್ರವಿಚಿತ್ರವಾದ ದಾರುಮೂರ್ತಿಗಳೂ ಈಗ ಇರುವ ಸ್ಥಿತಿಯಲ್ಲಿ ಎಷ್ಟು ಹಿಂದಿನವೆಂದು ಹೇಳಲಾಗದಿದ್ದರೂ ಬಹು ಪ್ರಾಚೀನ ಕಾಲದಿಂದ ಇಂಥ ಮೂರ್ತಿಗಳನ್ನು ರಚಿಸುವ ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದಿರಬೇಕು. ಇವು ಮುಖ್ಯವಾಗಿ ತಂತ್ರಕ್ಕೆ ಸಂಬಂಧಿಸಿದ ಮೂರ್ತಿಗಳಾಗಿದ್ದು ಈ ಶಕ್ತಿದೇವತೆಗಳಲ್ಲಿ ಕೆಲವು ಅಂಗಗಳನ್ನು ಪ್ರಾಮುಖ್ಯವಾಗಿ ತೋರಿಸಿರುವುದುಂಟು–ಮುಖದಲ್ಲಿ ಗಂಭೀರತೆ, ದೊಡ್ಡ ಕಣ್ಣುಗಳು, ಬಿಗಿದ ತುಟಿ ಅಥವಾ ಚಾಚಿದ ನಾಲಗೆ, ಕೋರೆಹಲ್ಲುಗಳು, ಮಾತೃದೇವತೆಗಳ ಸೂಚಕವಾಗಿ ಬೃಹದ್ವಕ್ಷಗಳಾದ ಬಗೆಬಗೆಯ ಮಾನವ, ಪ್ರಾಣಿಗಳಂತೆ ಸೆಟೆದಂತೆ ಇರುವ ಭಂಗಿ, ಒಂದು ಬಗೆಯ ಜಡಭಾವನೆ ಎದ್ದುಕಾಣುತ್ತವೆ. ಮುಖ್ಯವಾಗಿ ಇಲ್ಲಿನ ಗೂಳಿಗಳು ಕಡ್ಡಿಕಾಲುಗಳು, ಕೊಳಗದಂತಹ ದೇಹ, ನೇರವಾಗಿ ಮುಂಚಾಚಿದ ಮೂರ್ತಿಗಳನ್ನು ಹೊಂದಿದ್ದು ಇವುಗಳಲ್ಲಿ ನವಶಿಲಾಯುಗದ ರೇಖಾಶಿಲ್ಪದ ಗೂಳಿಗಳ ಮಾದರಿಗಳನ್ನು ಕಾಣಬಹುದು.

ಬಾದಾಮಿ ಚಳುಕ್ಯರ ಕಾಲದಲ್ಲಿ ಮೊದಲ ಬಾರಿಗೆ ಬೃಹತ್ ಪ್ರಮಾಣ ದಲ್ಲಿ ವಾಸ್ತು ಶೈಲಿಗಳ ಪ್ರಯೋಗ ನಡೆದಂತೆ ಶಿಲ್ಪಗಳ ಬೆಳವಣಿಗೆಯೂ ಕಂಡುಬರುತ್ತದೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು ಮೊದಲಾದ ಕಡೆ ಇವರು ಕೊರೆಸಿದ ಗುಹೆಗಳು, ಕಟ್ಟಿಸಿದ ದೇವಾಲಯಗಳಿಗೆ ಪೂರಕವಾಗಿ ಅಲಂಕಾರಿಕವಾಗಿ ಮೂರ್ತಿಶಿಲ್ಪಗಳನ್ನು ಬಳಸಿದ್ದಾರೆ. ಗುಪ್ತರ ಕಾಲದಲ್ಲಿ ಉತ್ತರ ಭಾರತದಲ್ಲಿ ಅದ್ಭುತವಾಗಿ ನಡೆದ ಶಿಲ್ಪ ಪ್ರಯೋಗ ಇವರಿಗೆ ಸ್ಫೂರ್ತಿ ನೀಡಿರಬೇಕು. ಇವರ ಶಿಲ್ಪಗಳಲ್ಲಿ ಸ್ಥಳೀಯವಾಗಿ ಪೂರ್ವಮಾದರಿ ಜೊತೆಜೊತೆಯಾಗಿ ಗುಪ್ತಶೈಲಿಯ ಸೊಗಸನ್ನೂ ಸೂಕ್ಷ್ಮವಾಗಿ ಗಮನಿಸಬಹುದು. ಲಾಡಖಾನ್ ಗುಡಿ, ಕೊಂತಿಗುಡಿ, ಹುಚ್ಚಮಲ್ಲಿಗುಡಿ ಮೊದಲಾದ ಇವರ ಆರಂಭಕಾಲದ ಕಟ್ಟಡಗಳಲ್ಲಿ ಕಂಡುಬರುವ ಕೇವಲ ಕೆಲವೇ ಶಿಲ್ಪಗಳು ಈ ಕಾಲದ ಮೊದಲ ಪ್ರಯತ್ನಗಳೆಂಬುದು ಸ್ಪಷ್ಟ. ಇಲ್ಲಿನ ದೇವತಾಮೂರ್ತಿಗಳೂ ಪರಿವಾರದೇವತೆಗಳೂ ತೀರ ಸರಳವಾಗಿದ್ದರೂ ವೀರ್ಯವತ್ತಾಗಿ ಭಾವಯುಕ್ತವಾಗಿವೆ. ಇವುಗಳನ್ನು ಕಂಡರಿಸುವಲ್ಲಿ ಅವಕ್ಕೆ ಜೀವ ತುಂಬುವಲ್ಲಿ ರೂವಾರಿ ಪೂರ್ಣ ಸ್ವಾತಂತ್ರ್ಯವಹಿಸಿದ್ದಾನೆ. ಗುಹಾವಾಸ್ತುವಿನಲ್ಲಿ ಶಿಲ್ಪದ ಅತ್ಯಂತ ಸಮರ್ಥವಾದ ಬಳಕೆ ಕಂಡುಬರುತ್ತದೆ. ಗುಹೆಯ ಮುಂದಣ ಕೈಸಾಲೆಗಳ ಇಕ್ಕೆಲಗಳಲ್ಲಿ ಬಹುಮಟ್ಟಿಗೆ ಗೋಡೆಗಳ ಪೂರ್ಣಭಾಗವನ್ನು ಆಕ್ರಮಿಸುವಂತೆ ಹೆಚ್ಚು ಉಬ್ಬಿದ ಶಿಲ್ಪದಲ್ಲಿ ಕಂಡರಿಸಿರುವ ದೇವಮೂರ್ತಿ ಗಳು ದೃಢತೆ, ಶಕ್ತಿ, ವ್ಯಾಪಕತೆಗಳ ಸಂಕೇತವಾಗಿವೆ. ಹದಿನೆಂಟು ಕೈಗಳುಳ್ಳ ನಟರಾಜನ ಬಿರುಸಿನ ಚಲನೆಯನ್ನು ಆ ಕೈಗಳ ವಿನ್ಯಾಸ ತೋರಿಸಿದರೆ, ಮುಖದಲ್ಲಿ ಅದ್ಭುತವಾದ ಶಾಂತಚಿತ್ತತೆ, ಒಳಮುಖ ದೃಷ್ಟಿಯ ಮಂದಹಾಸ, ತನ್ನ ಸಾಧನೆಯಲ್ಲಿ ಅಲಕ್ಷ್ಯಭಾವ ಮಿನುಗುತ್ತದೆ. ಇದೇ ರೀತಿ ಮಹಿಷಮರ್ದಿನಿ, ಅರ್ಧನಾರೀಶ್ವರ, ತ್ರಿವಿಕ್ರಮ, ನರಸಿಂಹ, ಹರಿಹರ ಮೂರ್ತಿಗಳು ದೈವೀಶಕ್ತಿಯ ವ್ಯಾಪಕತೆಯನ್ನು ಪ್ರದರ್ಶಿಸುವಂತೆ ಅವುಗಳ ಸುತ್ತಲೂ ಇರುವ ಕಿರುಪ್ರಮಾಣದ ಪರಿವಾರದೇವತೆಗಳು. ಈ ಮೂರ್ತಿಗಳಲ್ಲಿ ಅಂತಃಸತ್ವ ಪೂರ್ಣವಾಗಿ ಹೊಮ್ಮಿದೆ. ಈ ಕಾಲದ ಶಿಲ್ಪದಲ್ಲಿ ಬೃಹದ್ಗಾತ್ರದ ಜೊತೆಗೆ ಸ್ಥೂಲದ ಭಾವನೆ ಬರುತ್ತದೆ. ಆಕಾರ ಹೆಚ್ಚು ಗುಂಡು; ಗೋಡೆಗೆ ಅಂಟಿಕೊಂಡಿದ್ದರೂ ಗೋಡೆಯನ್ನು

ಬಿಟ್ಟು ಹೊರಹೊಮ್ಮಿರುವಂತೆ ಉಬ್ಬಿಸಿ ಕಂಡರಿಸಿರುವುದೇ ಹೆಚ್ಚು. ಮೂರನೆಯ ಗುಹೆಯ ಸ್ತಂಭಗಳ ಮೇಲಿರುವ ಮನೋಹರವಾದ ಸಾಲಭಂಜಿಕೆಗಳು ಮತ್ತು ದಂಪತಿ ವಿಗ್ರಹಗಳು ಕರ್ನಾಟಕದಲ್ಲಿ ಅತಿ ಸಮರ್ಥವಾಗಿ ಕಂಡರಿಸಿರುವ ಮೂರ್ತಿಶಿಲ್ಪದಲ್ಲಿ ಕೆಲವು. ಲೌಕಿಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಶಿಲ್ಪಿಸಿರುವ ಈ ಮೂರ್ತಿಗಳಲ್ಲಿ ನವಿರಾದ ಸಂವೇದನಾಶೀಲತೆಯನ್ನು ಹೊಮ್ಮಿಸಿರುವ ಸೌಂದರ್ಯ ಬೆರಗುಗೊಳಿಸುವಂಥದು. ಪ್ರತಿಯೊಂದು ಚಲನೆಯ ಪ್ರತಿಯೊಂದು ಭಂಗಿಯ ಪೂರ್ಣ ಅರ್ಥವನ್ನು, ನವಿರಾದ ಭಾವನೆಗಳನ್ನು ಒಂದು ಕೊಂಕಿನಲ್ಲಿ, ಒಂದು ಬಳುಕಿನಲ್ಲಿ ಸೆರೆಹಿಡಿದು ರಸಭಾವಗಳನ್ನು ತುಂಬಿರುವ ರೂವಾರಿಗಳ ಜಾಣ್ಮೆ ಆಶ್ಚರ್ಯಕರವಾದುದು. ಇಲ್ಲಿನ ದಂಪತಿ ವಿಗ್ರಹಗಳಲ್ಲಿ ಗಂಡಿನ ಹಿಡಿತದಲ್ಲಿ ಹೆಣ್ಣು ನಾಚಿ ನೀರಾಗಿರುವುದು, ಮುಖಭಾವದಲ್ಲಿ ಸುಖಸಂವೇದನೆ ಚಿಮ್ಮುತ್ತಿರುವುದು, ಅಂಗಸೌಷ್ಠವ, ಬೆಡಗುಬಿನ್ನಾಣಗಳು, ಅದಕ್ಕೆ ಪೂರಕವಾಗಿರುವ ಕೆಲವೇ ಆಭರಣಗಳು ಇರುವಂತೆ ಆಸಕ್ತಿಯಿಂದ ಹೊಮ್ಮಿಸುವಲ್ಲಿ ರೂವಾರಿ ಭಾವುಕನಾಗಿದ್ದಾನೆ, ಕವಿಯಾಗಿದ್ದಾನೆ. ಇಲ್ಲಿನ ಹಾಸ್ಯ ಬೆರೆತ ಕುಬ್ಜರ ಸಾಲುಗಳು, ಚಾವಣಿಯಲ್ಲಿ ತೇಲಿಹೋಗುವಂತೆ ಕಂಡರಿಸಿರುವ ಯಕ್ಷಯಕ್ಷಿಣಿಯರು, ನಾಗನಾಗಿಣಿಯರು, ಗಂಧರ್ವ ದಂಪತಿಗಳು, ಅಷ್ಟದಿಕ್ಪಾಲಕರು ಆಕರ್ಷಣೀಯವಾದುವು. ಈ ಮೂರ್ತಿಗಳಿಗೆ ಗುಂಡುಮುಖ, ತುಂಬುಗಲ್ಲ, ಮೋಹಕ ಕಣ್ಣುಗಳು, ಹಸನ್ಮುದ್ರೆ, ದಪ್ಪ ತುಟಿ, ವಿಶಾಲವಾದ ಎದೆ, ದೃಢಕಾಯ ಮತ್ತು ಹಿತಮಿತ ಅಲಂಕರಣಗಳಿವೆ. ವಿಕ್ರಮಾದಿತ್ಯನ ಕಾಲಕ್ಕೆ ಇಲ್ಲಿ ದ್ರಾವಿಡ ಶಿಲ್ಪದ ಪ್ರಭಾವವೂ ಕಂಡುಬರುತ್ತದೆ. ದೇವಾಲಯಗಳಲ್ಲಿ ರಾಮಾಯಣ, ಪಂಚತಂತ್ರ, ಮೊದಲಾದ ಕಥನ ಶಿಲ್ಪಗಳೂ ಆರಂಭವಾಗುತ್ತವೆ.

ರಾಷ್ಟ್ರಕೂಟರು ಬಾದಾಮಿ ಚಳುಕ್ಯರ ಶೈಲಿಯನ್ನು ಮುಂದುವರಿಸಿದರು; ಪ್ರೌಢವಾಗಿ ಬೆಳೆಸಿದರು. ಕರ್ನಾಟಕದಲ್ಲಿ ಇವರ ಶಿಲ್ಪ ಹೆಚ್ಚಾಗಿಲ್ಲದಿದ್ದರೂ ಎಲ್ಲೋರ, ಎಲಿಫೆಂಟಾಗಳಲ್ಲಿ ಇವರ ಶಿಲ್ಪದ ಪರಾಕಾಷ್ಠೆಯನ್ನು ಕಾಣಬಹುದು. ಎಲ್ಲೋರದ ಗುಹೆಗಳಲ್ಲಿ ಅರೆಗಂಬಗಳ ನಡುವೆ ಇರುವ ಬೃಹದ್ಗಾತ್ರದ ವೈಷ್ಣವ, ಶೈವ ಕಥೆಗಳನ್ನು ಬಿಂಬಿಸುವ ನರಸಿಂಹ, ತ್ರಿವಿಕ್ರಮ, ವರಾಹ, ಅಂಧಕಾಸುರ ಮರ್ದನ, ಗಜಾರಿ, ಗಿರಿಜಾಕಲ್ಯಾಣ ಮೊದಲಾದವೂ ಕೈಲಾಸ ದೇವಾಲಯದಲ್ಲಿನ ಭವ್ಯವಾದ ಶಿಲ್ಪವೂ ದ್ರಾವಿಡ ಶಿಲ್ಪದ ಛಾಯೆಯನ್ನು ಸ್ಪಷ್ಟವಾಗಿ ಹೊಂದಿವೆ. ಆದರೆ ಈ ಕಾಲದ ಮೂರ್ತಿಶಿಲ್ಪದ ಪರಾಕಾಷ್ಠೆ ಎಂದರೆ ಎಲಿಫೆಂಟಾದ ದೊಡ್ಡ ಗುಹೆಯ ಅತ್ಯುಚ್ಚ ಮಟ್ಟದ ಬೃಹತ್ ಶಿಲ್ಪಗಳು. ಅದರಲ್ಲಿಯೂ ಗುಹೆಯ ಹಿಂದಿನ ಗೋಡೆಯ ಮೇಲೆ ಕಂಡರಿಸಿರುವ 21 ಅಡಿ ಅಗಲ 18 ಅಡಿ ಎತ್ತರ ಇರುವ ಎದೆಯಿಂದ ಮೇಲಕ್ಕೆ ಮಾತ್ರ ಬಿಡಿಸಿರುವ ಮಹೇಶ ಮೂರ್ತಿ. ನಡುವೆ ಧೀರಗಂಭೀರ ಮುಖಮುದ್ರೆಯುಳ್ಳ ತತ್ಪುರುಷ, ಬಲಗಡೆ ರುದ್ರಭಯಂಕರನಾದ ಅಘೋರಮೂರ್ತಿ ಮತ್ತು ಎಡಗಡೆ ಸುಕುಮಾರನಾಗಿ ಕಾಣುವ ವಾಮದೇವ – ಹೀಗೆ ವಿವಿಧ ರಸಭಾವಗಳ ಶಿವರೂಪಗಳನ್ನು ಒಂದೇ ಕಲ್ಲಿನಲ್ಲಿ ಕಡೆದಿರುವ ಜಾಣ್ಮೆಯಿಂದ, ಅದರಲ್ಲಿನ ಪ್ರಮಾಣಬದ್ಧತೆಯಿಂದ, ಅಲಂಕರಣದ ಸೊಬಗಿನಿಂದ ಈ ಶಿಲ್ಪ ಲೋಕಪ್ರಸಿದ್ಧವಾಗಿದೆ.

ಇದೇ ಕಾಲಗಳಲ್ಲಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಗಂಗವಾಡಿಯಲ್ಲಿ ಬೆಳೆದ ಶಿಲ್ಪಶೈಲಿಯಲ್ಲಿ ಎರಡು ವಿಶಿಷ್ಟ ರೀತಿಗಳನ್ನು ಗುರುತಿಸಬಹುದು. ಪೂರ್ತಿಯಾಗಿ ಸ್ಥಳೀಯವಾಗಿಯೇ ಬೆಳೆದು ಬಂದ ಶೈಲಿಯೊಂದಾದರೆ, ಮತ್ತೊಂದು ಪಲ್ಲವ ಶೈಲಿಯ ಮತ್ತು ಚಾಳುಕ್ಯ ಶೈಲಿಯ ಪ್ರಭಾವದಿಂದ ರೂಪಗೊಂಡ ಶೈಲಿ. ಸ್ಥಳೀಯವಾದ ಶೈಲಿಯಲ್ಲಿ ಸಮತಟ್ಟಾದ ಕಲ್ಲಿನ ಮೇಲೆ ತೆಳುವಾಗಿ ಇಳಿಕೊರೆತದಲ್ಲಾಗಲಿ, ತೆಳುವುಬ್ಬಿನಲ್ಲಾಗಲಿ ಬಿಡಿಸಿದ ಶಿಲ್ಪ ಹೆಚ್ಚು. ಇವುಗಳಲ್ಲಿ ಕೆಲಮಟ್ಟಿನ ರೂಕ್ಷತೆಯನ್ನು ಕಂಡರೂ ಅವು ನೈಜವಾಗಿರುತ್ತವೆ. ಗರ್ಜಿಯ ಈಶ್ವರ ದೇವಾಲಯದ ಕಂಬಗಳ ಬುಡದಲ್ಲಿರುವ ತೀರ ತೆಳುವಾದ ಶಿಲ್ಪಗಳಾಗಲಿ, ವರುಣದ ಮಹಲಿಂಗೇಶ್ವರ ದೇವಾಲಯದ ಹೊರಗೋಡೆಯ ಮೇಲಿನ ರಾಮಾಯಣದ ಶಿಲ್ಪವಾಗಲಿ ತೀರ ಸರಳವಾದ ರೂಕ್ಷವಾದ ಶಿಲ್ಪಗಳೇ ಆದರೂ ಅವುಗಳಲ್ಲಿ ಕ್ರಿಯೆಯಿದೆ.

ವಿಷ್ಣು ಮತ್ತು ಲಕ್ಷ್ಮೀ (13ನೆಯ ಶತಮಾನ), ಹಳೆಬೀಡು

ಸಾಮಾನ್ಯವಾಗಿ ಇವರ ಕಾಲದ ವೀರಗಲ್ಲುಗಳು ಈ ಗುಂಪಿಗೆ ಸೇರಿದವು. ಇವುಗಳಲ್ಲಿ ಬಿಡಿಸಿರುವ ತೆಳುಶಿಲ್ಪಗಳಲ್ಲಿ ಕಂಡುಬರುವುದು ಕ್ಷೇತ್ರ ಪರಿಮಾಣ ಮಾತ್ರ. ಆಳಕ್ಕೆ ಘನಪರಿಮಾಣಕ್ಕೆ ಇಲ್ಲಿ ಅವಕಾಶವಿಲ್ಲ. ಹಿರೇಗುಂಡಗಲಿನ ವೀರಗಲ್ಲುಗಳಲ್ಲಿ ಕೆಚ್ಚಿನಿಂದ ಒಬ್ಬರನ್ನೊಬ್ಬರು ಎದುರಿಸುತ್ತಿರುವ ವೀರರನ್ನು ತೋರಿಸಿದ್ದಾರೆ. ಬೇಗೂರಿನ ವೀರಗಲ್ಲಿನಲ್ಲಿ ಒಂದು ವಿಸ್ತಾರವಾದ ಯುದ್ಧ ಸನ್ನಿವೇಶದ ಚಿತ್ರಣವನ್ನೇ ಕಣ್ಣುಮುಂದೆ ನಿಲ್ಲಿಸಿದೆ. ನರಸಮಂಗಲದ ಈಶ್ವರ ದೇವಾಲಯದ ಗೋಪುರದ ಮೇಲಿನ ಗಚ್ಚಿನ ಮೂರ್ತಿಗಳಾಗಲಿ ಪಲ್ಲವ ಶೈಲಿಯಲ್ಲಿರುವ ಅತ್ಯಂತ ಆಕರ್ಷಕ ಶಿಲ್ಪಗಳು. ವಿಶಾಲ ವಕ್ಷಸ್ಥಳ, ತೆಳುನಡು, ನೀಳ ಕೈಕಾಲುಗಳು, ಕೆಲವೇ ಆಭರಣಗಳು, ಸ್ಮಿತಗಂಭೀರ ಮುಖಮುದ್ರೆಗಳಿಂದ ಇಲ್ಲಿರುವ ಗಚ್ಚಿನ

ಮೂರ್ತಿಗಳು, ಶಿಲಾಮೂರ್ತಿಗಳು ಸತ್ವಯುಕ್ತವಾಗಿವೆ. ದೇವತಾ ಮೂರ್ತಿಗಳನ್ನು ತೀರ್ಥಂಕರರ ಮೂರ್ತಿಗಳನ್ನು ಕಂಡರಿಸುವಲ್ಲಿ ರೂವಾರಿಗಳಿಗೆ ಹೆಚ್ಚು ಸ್ವಾತಂತ್ರ್ಯವಿರುವುದಿಲ್ಲ. ಆಗಮಶಾಸ್ತ್ರಗಳಲ್ಲಿ ಶಿಲ್ಪಶಾಸ್ತ್ರಗಳಲ್ಲಿ ಅವುಗಳ ಮೂರ್ತಿಲಕ್ಷಣಗಳನ್ನು ನಿರ್ಧರಿಸಲಾಗಿರುತ್ತದೆ. ಆದ್ದರಿಂದಲೇ ಬೇರೆ ರೀತಿಯ ಶಿಲ್ಪಗಳಲ್ಲಿ ರೂವಾರಿಯ ಸಾಮರ್ಥ್ಯಕ್ಕನುಗುಣವಾಗಿ ಬೆಳವಣಿಗೆ, ವೈವಿಧ್ಯ ಕಂಡರೂ ಈ ಮೂರ್ತಿಗಳಲ್ಲಿ ಒಂದೇ ಬಗೆಯನ್ನು ಕಾಣುತ್ತೇವೆ. ತೀರ್ಥಂಕರರ ಮೂರ್ತಿಗಳಲ್ಲಿ ಅತಿನಿಷ್ಠೆಯ ನೇರ ನಿಶ್ಚಲ ನಿಲವು; ನೇರವಾಗಿ ಇಳಿಬಿದ್ದ ಕೈಗಳು, ಬಿಗಿಯಾದ ನೇರ ಕಾಲುಗಳು,

ಎಲ್ಲೋರ ಗುಹೆಯಲ್ಲಿರುವ ನಟರಾಜ, 7ನೆಯ ಶತಮಾನ

ಮುಂಚಾಚಿದ ಹೊರವಾದ ಎದೆ, ವಿಶಾಲ ಭುಜಗಳು, ಶಾಂತ ಮುಖಮುದ್ರೆ ಇದ್ದು ಯಾವ ತೀರ್ಥಂಕರನ ಮೂರ್ತಿಯಾದರೂ ಒಂದಕ್ಕೊಂದಕ್ಕೆ ವ್ಯತ್ಯಾಸ ಕಾಣಿಸದು. ಚಾಳುಕ್ಯ, ರಾಷ್ಟ್ರಕೂಟರ ಕಾಲದ್ದಾಗಲಿ, ಗಂಗರ ಕಾಲದ್ದಾಗಲಿ ಅಥವಾ ಮುಂದೆ ಬಂದ ಕಲ್ಯಾಣದ ಚಾಳುಕ್ಯ, ಹೊಯ್ಸಳರ ಕಾಲದ್ದಾಗಲಿ ಈ ಮೂರ್ತಿಗಳ ಮುಖಭಾವದಲ್ಲಿ ಮಾಡದಲ್ಲಿ ಅದೇ ಬಗೆಯನ್ನು ಕಾಣುತ್ತೇವೆ. ವ್ಯತ್ಯಾಸವಿದ್ದರೆ ಪ್ರಮಾಣದಲ್ಲಿ ಕಂಡರಣೆಗೆ ಉಪಯೋಗಿಸಿದ ಶಿಲೆಯಲ್ಲಿ, ಇಂಥದರಲ್ಲಿಯೂ ಶ್ರವಣಬೆಳಗೊಳದ ಗೊಮ್ಮಟೇಶ್ವರನ ಮೂರ್ತಿಯಲ್ಲಿ ಕಂಡುಬರುವ ಅಪೂರ್ವವಾದ ಭಾವನೆ, ಬೃಹತ್ತು ಮತ್ತು ಮಹತ್ತಿನ ಅನುಭವ ಜಗತ್ತಿನಲ್ಲಿಯೇ ಅದನ್ನೊಂದು ಅದ್ಭುತ ಶಿಲ್ಪವನ್ನಾಗಿಸಿದೆ. ಇದರೊಂದಿಗೆ ಚಾವುಂಡರಾಯ ಬಸದಿಯ ಕೈಪಿಡಿಯ ಮೇಲೆ ಕಂಡರಿಸಿರುವ ಮೂರ್ತಿಗಳನ್ನೂ ಗಮನಿಸಬೇಕು. ಕೈಯಲ್ಲೊಂದು ಹೂವನ್ನು ಹಿಡಿದು ಅಪರೂಪ ಭಂಗಿಯಲ್ಲಿ ಕುಳಿತ ಸ್ತ್ರೀಮೂರ್ತಿಯೊಂದರ ಅಂಗಾಂಗಗಳ ರಚನೆ ಪ್ರಮಾಣಬದ್ಧವಿಲ್ಲದಿರಬಹುದು. ಆದರೆ ಅತ್ಯಂತ ಮಧುರವಾದ ಮನೋಭಾವವನ್ನು ಹೊಮ್ಮಿಸಿರುವ ಈ ಶಿಲ್ಪದ ರೀತಿ ಅನುಪಮವಾದುದು.

ಚೋಳರ ಕಾಲದ ಇಲ್ಲಿನ ಶಿಲ್ಪಗಳು ಪಲ್ಲವ ಶೈಲಿಯ ಮುಂದಿನ ಬೆಳವಣಿಗೆಗಳೇ ಆದರೂ ಚೋಳರ ಮುಖ್ಯ ಭಾಗದಲ್ಲಿ ಬೆಳೆದು ಬಂದ ಅದ್ಭುತ ಬೆಳವಣಿಗೆ ಇಲ್ಲಿ ಅಷ್ಟಾಗಿ ಕಾಣಿಸದು. ಆದರೆ ಕೆಲವು ಲೋಹಶಿಲ್ಪಗಳ ಮಾದರಿಗಳು ಮೆಚ್ಚುವಂಥವು. ನಟರಾಜ, ಸೋಮಸ್ಕಂದ, ಶಿವಪಾರ್ವತಿಯರು ಮೊದಲಾದ ಇಂಥ ಲೋಹಮೂರ್ತಿಗಳಲ್ಲಿ ಅತ್ಯಂತ ಸುಂದರವಾದುದು ನರಸಾಪುರದಲ್ಲಿರುವ ನಾಲ್ಕಡಿಗೂ ಹೆಚ್ಚು ಎತ್ತರದ ಭವ್ಯವಾದ ನಟರಾಜ.

ಹನ್ನೊಂದನೆಯ ಶತಮಾನದಿಂದೀಚೆಗೆ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ದೇವಾಲಯಗಳಲ್ಲಿ ಮೂರ್ತಿಶಿಲ್ಪ ಸಂಖ್ಯೆಯ ದೃಷ್ಟಿಯಿಂದ ಹೆಚ್ಚಾಯಿತು. ಇವರು ಮೃದುವಾದ ಬಳಪದ ಕಲ್ಲನ್ನು ಉಪಯೋಗಿಸಿದ್ದು ಶಿಲ್ಪದಲ್ಲಿ ಒಂದು ವಿಲಕ್ಷಣ ಶೈಲಿ ಆರಂಭವಾಗಲು ಕಾರಣವಾಯಿತು. ಕಂಡರಣೆಯಲ್ಲಿ ಸರಳತೆಯನ್ನು ಬದಿಗೊತ್ತಿ ಹೆಚ್ಚಿನ ಅಲಂಕರಣದ ಕಡೆ ಗಮನ ಹರಿಯಿತು. ದೇವಾಲಯದ ಹೊರಗೋಡೆಗಳ ಮೇಲೆ ಅರೆಗಂಬಗಳ ನಡುವೆ ಒಂದೊಂದು ಅರೆಯುಬ್ಬಿನ ಅಥವಾ ಅತಿಯುಬ್ಬಿನ ಶಿಲ್ಪಗಳನ್ನು ಬೇರೆ ಬೇರೆ ಭಂಗಿಗಳಲ್ಲಿ ನಿಲ್ಲಿಸಿರುವುದು ಹೆಚ್ಚು. ಹಲವು ಸ್ತ್ರೀಮೂರ್ತಿಗಳ ಅಪರೂಪ ನಾಟ್ಯಭಂಗಿಗಳು ಗಮನಾರ್ಹವಾದುವು. ಗುಂಡುಗುಂಡಾದ ಈ ಮೂರ್ತಿಗಳಲ್ಲಿ ಲವಲವಿಕೆ ಇದೆ. ಅಲಂಕಾರಗಳು ತಕ್ಕಷ್ಟು ತುಂಬಿವೆ. ಕಲ್ಯಾಣದ ಸುತ್ತಮುತ್ತ ಹರಡಿರುವ ಮೂರ್ತಿಗಳು ಜಲಸಂಗ್ವಿಯಲ್ಲಿ, ಹರಸೂರಿನಲ್ಲಿ, ಮೇಡಕ್‌ನಲ್ಲಿ, ಕುರುವೃತ್ತಿ, ಡಂಬಳ ಮೊದಲಾದ ಕಡೆಗಳಲ್ಲೆಲ್ಲ ಇರುವ ಈ ಮೂರ್ತಿಗಳು ಮನೋಹರವಾಗಿವೆ. ಆದರೂ ಈ ಹೊತ್ತಿಗೆ ಶಿಲ್ಪಶಾಸ್ತ್ರಗಳ ಹಿಡಿತ ಬಲವಾಗಿತ್ತು; ಇವು ಶಿಲ್ಪಿಗಳಿಗೆ ದಿಕ್ಸೂಚಿಯಾಗಿದ್ದುವು. ಅಷ್ಟೇ ಅಲ್ಲ, ಅದನ್ನು ಮೀರದಂತೆ ಅವರಿಗೆ ತಡೆಯೂ ಆಗಿದ್ದುವು. ಆದ್ದರಿಂದ ಶಿಲ್ಪಿ ತನ್ನ ಸಾಮರ್ಥ್ಯದ ಅರಕೆಯನ್ನು ತುಂಬಿಕೊಳ್ಳಲು ಮೂರ್ತಿಗಳನ್ನು ಕಟ್ಟಡಗಳನ್ನು ಶೃಂಗರಿಸುವಲ್ಲಿ ತೊಡಗಿದ್ದಾನೆ. ಕಲ್ಯಾಣದ ಚಾಳುಕ್ಯರ ದೇವಾಲಯಗಳ ಬಾಗಿಲುವಾಡಗಳ ಅತಿ ವಿಸ್ತೃತ ಅಲಂಕರಣಗಳಲ್ಲಿ ಇದನ್ನು ಕಾಣಬಹುದು. ಈ ಮುಂಚೆ ಸರಳವಾದ ಕೆಲವೇ ಅಲಂಕರಣಗಳನ್ನು ಹೊಂದಿದ ಬಾಗಿಲುವಾಡಗಳಲ್ಲಿ ಈಗ ಹತ್ತಾರು ಪಟ್ಟಿಕೆಗಳು, ಬಳ್ಳಿಸುರುಳಿ, ಎಲೆಯ ಸಾಲು, ಹೂಗಳ ಪಟ್ಟಿಕೆ, ನಾಟ್ಯಭಂಗಿಗಳ ಸಾಲು, ಸಿಂಹ ಸಾಲು ಇತ್ಯಾದಿಯಾಗಿ ಬಾಗಿಲನ್ನು ಸುತ್ತಿಕೊಂಡಿರುತ್ತವೆ. ಆದರೂ ಹೊರಗೋಡೆಗಳಾಗಲಿ, ಒಳ ಅಂಕಣಗಳಾಗಲಿ ಕೆಲವೇ ಮೂರ್ತಿಗಳಿಂದ ಇತರ ಅಲಂಕರಣಗಳಿಂದ ಕೂಡಿದ್ದು ಇವುಗಳಲ್ಲಿ ವಾಸ್ತು ಮತ್ತು ಶಿಲ್ಪಗಳೆರಡೂ ಹಿತಮಿತವಾಗಿ ಬೆರೆತಿರುವುದನ್ನು ಕಾಣಬಹುದು.

ಕಲ್ಯಾಣದ ಚಾಳುಕ್ಯರ ಕಾಲದ ದೇವಾಲಯಗಳಲ್ಲಿ ವಾಸ್ತುವಿನಷ್ಟೆ ಪ್ರಾಧಾನ್ಯ ಶಿಲ್ಪಕ್ಕೂ ದೊರೆತಿದ್ದರೆ ಹೊಯ್ಸಳರ ಕಾಲದಲ್ಲಿ ವಾಸ್ತುಶಿಲ್ಪವಾಗಿ ಮಾರ್ಪಟ್ಟಿದೆ. ಹೊಯ್ಸಳ ದೇವಾಲಯಗಳಲ್ಲಿ ಬೇರೆ ಬೇರೆ ವಿನ್ಯಾಸಗಳನ್ನು ಕಾಣಬಹುದಾಗಿದ್ದರೂ ಆ ಬದಲಾವಣೆಗಳೆಲ್ಲ ಶಿಲ್ಪವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಾಡಿದಂಥವು. ಹೊರಗೋಡೆಗಳನ್ನು ಹಲವು ಭಾಗಗಳನ್ನಾಗಿ ಮಾಡಿ, ಒಳತಳ್ಳಿ ಮುಂದಕ್ಕೆ ಚಾಚಿ ಕಚ್ಚುಕಚ್ಚುಗೊಳಿಸಿದ ಚೌಕವಿನ್ಯಾಸದಲ್ಲಾಗಲಿ, ನಕ್ಷತ್ರಾಕಾರದಲ್ಲಾಗಲಿ ರಚಿಸಿದ್ದರೆ ಅದಕ್ಕೆ ಕಾರಣ ಗೋಡೆಯ ವಿಸ್ತಾರವನ್ನು ಹೆಚ್ಚುಮಾಡಿ ಅವುಗಳನ್ನು ಹೆಚ್ಚು ಶಿಲ್ಪಗಳಿಂದ ತುಂಬಬಹುದೆಂಬುದೇ. ಇದರೊಂದಿಗೆ ಆ ಶಿಲ್ಪಗಳ ಮೇಲೆ ನೆಳಲು–ಬೆಳಕಿನ ಪ್ರಭಾವ ಉಂಟಾಗುವುದೂ ಶಿಲ್ಪಸಾಲು ತೀರ ಒತ್ತಾಗಿ ಬಂದಿದೆ ಎಂಬ ಭಾವನೆ ಬರದಂತೆ, ನೋಡುವವರ ದೃಷ್ಟಿ ಒಂದೊಂದೇ ಶಿಲ್ಪದ ಮೇಲೆ ಬೀಳುವಂತೆ ಮಾಡುವುದೂ ಇಂಥ ವಿನ್ಯಾಸಗಳ ಉದ್ದೇಶವಿರಬಹುದು. ಹೇಗೂ ಈ ದೇವಾಲಯಗಳಲ್ಲಿ ಗೋಡೆಗಳ

ಬುಡದಿಂದ ಹಿಡಿದು ಶಿಖರದ ತುದಿಯವರೆವಿಗೂ ಸಾಲುಸಾಲು ಶಿಲ್ಪಗಳು ತುಂಬಿದ್ದು ಅವುಗಳಲ್ಲಿ ಆನೆಸಾಲು, ಕುದುರೆಸಾಲು, ಸಾಲುಹಂಸಗಳು, ಬಳ್ಳಿಸುರುಳಿ, ರಾಮಾಯಣ, ಭಾರತ, ಭಾಗವತಾದಿ ಕಥನ ಶಿಲ್ಪ ಸಾಲು, ದೇವಾನುದೇವತೆಗಳ ಚಾಮರಧಾರಿಣಿಯರ ಇತರ ಸ್ತ್ರೀಪುರುಷ ಮೂರ್ತಿಗಳ ಹಲವು ಭಂಗಿಗಳ ಸಾಲು, ಬಳ್ಳಿ ವಿತಾನಗಳು, ಕೀರ್ತಿಮುಖಗಳು, ಅರೆಗೋಪುರಗಳು ಮುಂತಾದುವನ್ನು ಕಾಣಬಹುದು. ಹೀಗೆ ಗಿಡಿದಂತೆ ತುಂಬಿರುವ ಶಿಲ್ಪಸಾಲುಗಳಿಂದ ಹೊಯ್ಸಳ ದೇವಾಲಯಗಳು ಶಿಲ್ಪದ ಪ್ರದರ್ಶನಶಾಲೆಯಾಗಿ ಮಾರ್ಪಟ್ಟಿವೆ. ಹೊರಭಾಗದಲ್ಲಿ ಮಾತ್ರವಲ್ಲ ಎಷ್ಟೋ ವೇಳೆ ಬಾಗಿಲುವಾಡಗಳ ಸುತ್ತಲೂ ಒಳಗಿನ ತೊಲೆಗಳ ಮೇಲೆ ಭುವನೇಶ್ವರಿ ಶಿಲ್ಪಗಳು ತುಂಬಿರುವುದಲ್ಲದೆ ಕಂಬಗಳ ಮೇಲ್ಭಾಗದಲ್ಲಿ ಮದನಿಕೆಗಳು ಹಲವು ಭಂಗಿಯಲ್ಲಿ ನಿಂತಿರುವುದುಂಟು. ಇವು ಕಟ್ಟಡಗಳ ಭದ್ರತೆಭವ್ಯತೆ ಗಾಂಭೀರ್ಯಗಳ ಕಡೆ ದೃಷ್ಟಿಹರಿಯದಂತೆ ಮಾಡುತ್ತವೆ.

ಹೆಚ್ಚಿನ ಆಸ್ಥೆಯಿಂದ ಪ್ರತಿಯೊಂದು ವಿವರವನ್ನೂ ಗಮನವಿಟ್ಟು ಬಿಡಿಸಿರುವ ಹೊಯ್ಸಳ ಶಿಲ್ಪದಲ್ಲಿ ಮೂರ್ತಿಗಳ ಅಂತಃಸ್ಫುರಣೆಗಿಂತ ಹೊರಗಿನ ಅಲಂಕರಣಗಳು ಬಹುಪಾಲು ಎದ್ದುಕಾಣುತ್ತವೆ. ಮೂರ್ತಿ ಶಿಲ್ಪಗಳಲ್ಲಿ ಅವು ಗಂಡಾಗಲಿ ಹೆಣ್ಣಾಗಲಿ, ಅವುಗಳ ಮುಖಭಾವ, ನಿಲುವು, ನೋಟಗಳಲ್ಲಿ ಒಂದು ರೀತಿಯ ಏಕತಾನ ಕಂಡುಬರುತ್ತದೆ. ಅವುಗಳ ಮಾಟದಲ್ಲಿ ಪ್ರಸನ್ನತೆ ಗಾಂಭೀರ್ಯಗಳನ್ನು ಗುರುತಿಸಬಹುದಾದರೂ ಚಾಳುಕ್ಯ ಶಿಲ್ಪಗಳಲ್ಲಿ ಕಂಡುಬರುವ ಸ್ವಾಭಾವಿಕತೆ, ಚಲನೆ, ಜೀವಂತಿಕೆ ಅಷ್ಟಾಗಿ ಕಾಣಿಸದು. ಬಹುಶಃ ಹೊಯ್ಸಳ ರೂವಾರಿಗಳು ಮೂರ್ತಿಗಳ ಪ್ರಮಾಣವನ್ನು ಕುಗ್ಗಿಸಿ ಗುಂಡುಮುಖ, ತುಂಬುಕೆನ್ನೆ, ಗುಂಡು ಕೈಕಾಲುಗಳಿಂದ ಕೂಡಿದ ಒಂದು ಆದರ್ಶ ಆಕಾರವನ್ನು ಕೊಡಲು ಯತ್ನಿಸಿದುದು ಅವುಗಳ ಸ್ಥೂಲತೆ ಮತ್ತು ಸ್ತಬ್ಧತೆಗಳು ಎದ್ದುಕಾಣುವಂತೆ ಮಾಡಿದೆ. ಹಲವು ನಾಟ್ಯಭಂಗಿಗಳನ್ನು ಶಿಲ್ಪಿಗಳು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿ, ಗ್ರಹಿಸಿ ಅವಕ್ಕೆ ರೂಪು ಕೊಡುವಲ್ಲಿ ಯಶಸ್ವಿಯಾಗದಿದ್ದರೂ ಶಿಲ್ಪಕ್ಕಾಗಿಯೇ ನಿಂತ ಒಂದು ಸ್ತಬ್ಧಭಂಗಿಯನ್ನು ಸೂಚಿಸುತ್ತವೆಯೇ ಹೊರತು ಅವುಗಳಲ್ಲಿ ಚಲನೆಯನ್ನೆಣಿಸುವಂತಿಲ್ಲ. ಇದರ ಜೊತೆಗೆ ಅವುಗಳ ಮೇಲಿನ ನಿಲುವಾಭರಣಗಳು, ಅತಿಸೂಕ್ಷ್ಮ ಕಂಡರಣೆಗಳು ಅವುಗಳ ಚಾಲನೆಗೆ ಅಡ್ಡಿಯಾಗಿವೆ. ಆದರೂ ಕಂಡರಣೆಯ ಸೂಕ್ಷ್ಮ ವಿವರಗಳು ಯಾರನ್ನೂ ಹರಗುಗೊಳಿಸುತ್ತವೆ. ಮದನಿಕೆಯ ಕೈಬಳೆ ಆಡುವಂತೆ ಬಿಡಿಸಿರುವುದು, ಮಣಿಹಾರ ಬೇರೆಯಾಗಿ ನೇತಾಡುವುದು, ಮಕರ ತೋರಣದಲ್ಲಿನ ಮಕರಗಳ ಹಿಂದಿನ ಬಾಲದ ಸುರುಳಿಗಳನ್ನು ಪದರಪದರವಾಗಿ ಬಿಡಿಸಿರುವುದು, ಲತಾವಿತಾನಗಳ ಬಳ್ಳಿ ಎಳೆಗಳನ್ನೂ ಎಲೆಗಳನ್ನೂ ಬಿಡಿಬಿಡಿಯಾಗಿ ತೋರಿಸಿರುವುದು, ಹಣ್ಣೊಂದರ ಮೇಲೆ ಕುಳಿತ ನೊಣವನ್ನು ಹಿಡಿಯಲು ದೇಹ ಕೊಂಕಿಸಿ ಬಾಲ ಮುದುರಿ ಚಿಮ್ಮಲು ಸಿದ್ಧವಿರುವ ಹಲ್ಲಿ-ಇಂಥ ವಿವರಗಳು ಸಾವಿರಾರು. ಬೇಲೂರಿನ ಮದನಿಕೆಗಳು, ಹಳೇಬೀಡಿನ ಗೋಡೆಯ ಮೇಲಿನ ಮೂರ್ತಿಶಿಲ್ಪಗಳು ಸುಂದರವೆನಿಸಬಹುದಾದರೂ ಸೂಕ್ಷ್ಮಾಲಂಕಾರ ವಿವರಗಳಿಂದಲೇ ಹೊಯ್ಸಳ ಶಿಲ್ಪಗಳಿಗೆ ಸೊಗಸು, ಶ್ರೀಮಂತಿಕೆ ಪ್ರಾಪ್ತವಾಗಿದೆ.

ಹೊಯ್ಸಳರ ಕಾಲದಲ್ಲಿ ಶಿಲ್ಪಿಗಳ ಗಮನ ಹೆಚ್ಚಾಗಿ ಕಥನಶಿಲ್ಪದ ಕಡೆ ಹರಿಯಿತು. ಬೃಹನ್ಮೂರ್ತಿಗಳಿಗಿಂತ ಕಿರುಪ್ರಮಾಣದಲ್ಲಿ ಓಡುವ ದೃಶ್ಯಾವಳಿಗಳನ್ನು ಬಿಡಿಸಿಕೊಂಡು ಹೋಗುವಲ್ಲಿ ಚಾಳುಕ್ಯ ಶಿಲ್ಪಿಗಳಿಗಿಂತ ಇವರು ಮುಂದುವರಿದಿದ್ದಾರೆ. ಆನೆ ಸಾಲು, ಕುದುರೆ ಸಾಲು, ಹಂಸ ಮೊದಲಾದುವುಗಳ ಸಾಲಿನಲ್ಲಿ ಒಂದೊಂದೇ ಪ್ರಾಣಿ ಪಕ್ಷಿಗಳನ್ನು ಪ್ರತ್ಯೇಕವಾಗಿ ನೋಡುವುದಕ್ಕಿಂತ ಒಟ್ಟು ಸಾಲಿನಲ್ಲಿ ಅವುಗಳ ನಡಿಗೆ, ನೋಟ, ಗುಣ, ಸ್ವಭಾವಗಳನ್ನು ಸ್ಥೂಲವಾಗಿ ಗಮನಿಸಬೇಕು. ರಾಮಾಯಣ, ಭಾರತ, ಭಾಗವತಗಳಂತೂ ಈ ಶಿಲ್ಪಿಗಳ ಪ್ರಿಯವಾದ ವಸ್ತುಗಳು. ಇವಲ್ಲದೆ ಸಮುದ್ರಮಥನ, ಪ್ರಹ್ಲಾದನ ಕಥೆ, ಶಿವಲೀಲೆಗಳು ಇವುಗಳೊಂದಿಗೆ ಸಾಮಾಜಿಕ ದೃಶ್ಯಾವಳಿಗಳು ಅಲ್ಲಲ್ಲಿ ತಲೆಹಾಕಿರುವುದುಂಟು. ಒಂದೊಂದು ಸಲ ಒಂದೇ ಶಿಲ್ಪದಲ್ಲಿ ಒಂದು ದೃಶ್ಯದ ಪೂರ್ಣ ಚಲನೆಯನ್ನು ತೋರಿಸುವ ಸಾಹಸ ಮಾಡಿದ್ದಾರೆ. ಭೀಮನು ಭಗದತ್ತನ ಆನೆಯನ್ನೆದುರಿಸಿದಾಗ ಅದು ಅವನನ್ನು ಸೊಂಡಿಲಿನೆಂದೆತ್ತಿ ಎಸೆಯುವುದೂ ಅವನು ಆಕಾಶದಲ್ಲಿ ಚಿಮ್ಮಿ ಹೋಗಿರುವುದು ಎರಡನ್ನೂ ಬೇಲೂರಿನ ಶಿಲ್ಪವೊಂದರಲ್ಲಿ ನೋಡಬಹುದು.

ಸ್ತ್ರೀ ವಿಗ್ರಹ, ಹಳೇಬೀಡು

ಚಾಳುಕ್ಯರಂತೆ ಹೊಯ್ಸಳರು ಮೃದುವಾದ ಬಳಪದ ಕಲ್ಲನ್ನು ಶಿಲ್ಪಕ್ಕೆ ಉಪಯೋಗಿಸಿದುದು ಬೃಹನ್ಮೂರ್ತಿಗಳನ್ನು ಕಂಡರಿಸಲು ಅವರಿಗೆ ಸಾಧ್ಯವಾಗದಿದ್ದರೂ ಶಿಲ್ಪ ಬಾಹುಳ್ಯಕ್ಕೂ ಕುಸುರಿಕೆಲಸದ ಸೂಕ್ಷ್ಮಾಲಂಕರಣಗಳಿಗೂ ಕಾರಣವಾಯಿತು. ಆದರೆ ಬಾದಾಮಿ ಚಳುಕ್ಯರ, ರಾಷ್ಟ್ರಕೂಟರ ಕಾಲದ ಶಿಲ್ಪಗಳಲ್ಲಿರುವ ಕೆಚ್ಚು, ಕಸುವು, ಲವಲವಿಕೆ ಇವುಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ.

ವಿಜಯನಗರದ ಅರಸರ ಕಾಲದಲ್ಲಿ ಶಿಲ್ಪ ಹೊಸ ಜಾಡು ತುಳಿಯಿತು. ದ್ರಾವಿಡ ಶೈಲಿಯನ್ನು ಅನುಸರಿಸಿ ಗಟ್ಟಿ ಕಲ್ಲಿನ ದೇವಾಲಯಗಳನ್ನು ಈ ಕಾಲದಲ್ಲಿ ನಿರ್ಮಿಸಿದರೂ ಚಾಳುಕ್ಯ, ಹೊಯ್ಸಳ ದೇವಾಲಯಗಳಂತೆ ಮೂರ್ತಿ ಶಿಲ್ಪಗಳಿಂದ ಅಲಂಕರಿಸಿದರು. ಈ ಮೂರ್ತಿಗಳಲ್ಲಿ ಹೆಚ್ಚು ನಯನಾಜೂಕುಗಳಿಲ್ಲದಿದ್ದರೂ ಕೆಚ್ಚುಕಸುವುಗಳೂ ಲವಲವಿಕೆಯೂ ಕಂಡುಬರುತ್ತದೆ. ಸಾಲುಗಂಬಗಳಲ್ಲಿ ಬಿಡಿಸಿರುವ ಪ್ರಾಣಿಪಕ್ಷಿಗಳು, ಬಳ್ಳಿ ಸುರುಳಿಗಳು, ದೇವಾನುದೇವತೆಗಳ ತೆಳು-ಉಬ್ಬು ಮೂರ್ತಿಗಳು, ಕಂಬಗಳಿಗೆ ಹೊಂದಿಕೊಂಡಂತೆ ಹಿಂಗಾಲುಗಳ ಮೇಲೆ ಚಿಮ್ಮಿನಿಂತಿರುವ ಯಾಳಿ, ಕುದುರೆಗಳ ಸಾಲು, ಕಂಬಗಳ ಘನಾಕೃತಿಮುಖಗಳ ಮೇಲೆ ಉಬ್ಬಿಸಿ ಬಿಡಿಸಿರುವ ದಶಾವತಾರ ಮೂರ್ತಿಗಳು, ನೃತ್ಯಭಂಗಿಗಳು, ನೇರವಾದ ಸರಳವಾದ ಗೋಡೆಗಳ ಮೇಲೆ ರಾಮಾಯಣ ಭಾಗವತಾದಿಗಳ ಕಥನ ಶಿಲ್ಪಸಾಲುಗಳು ಮುಂತಾದುವುಗಳಿಂದ ಇವರ ದೇವಾಲಯಗಳು ಶ್ರೀಮಂತವಾಗಿದ್ದರೂ ಈ ಶಿಲ್ಪಗಳು ವಾಸ್ತುವಿನ ಭವ್ಯತೆಯನ್ನು ಮರೆಮಾಡಿಲ್ಲ. ಮಾನವಮಿ ದಿಬ್ಬದ ಮುಖಗಳ ಮೇಲೆ ಉಬ್ಬುಶಿಲ್ಪದಲ್ಲಿ ಕಂಡಿರಿಸಿರುವ ಬಗೆಬಗೆಯ

ನೃತ್ಯಭಂಗಿಗಳು, ಬೇಟೆಯ ದೃಶ್ಯಗಳು, ಆನೆ ಕುದುರೆಗಳ ಮೆರವಣಿಗೆಗಳು, ಹಲವು ಬಗೆಯ ಪ್ರಾಣಿಪಕ್ಷಿಗಳು ತುಂಬಿರುವ ಇದರಲ್ಲಿನ ಕೋಲಾಟ, ವಾದ್ಯಮೇಳ, ರಿಂಗುಣಗುಣಿತಗಳಲ್ಲಿ ಚಲನೆಯಿದೆ, ಸತ್ವವಿದೆ. ಇದ ರೊಂದಿಗೆ ಶೃಂಗೇರಿಯ ವಿದ್ಯಾಶಂಕರ ದೇವಾಲಯದ ಹೊರಗೋಡೆಗಳ ಮೇಲಿನ ಸ್ವಾರಸ್ಯಕರವಾದ ಮೂರ್ತಿ ಶಿಲ್ಪಗಳ ಅಲಂಕರಣವನ್ನೂ ಗಮನಿಸಬೇಕು. ಈ ಎಲ್ಲ ಶಿಲ್ಪಗಳೂ ಕಿರುಪ್ರಮಾಣದವು; ಹೊರಗಿನ ಅಂಗಾಂಗಗಳ ರಚನೆಗೆ, ಪ್ರಮಾಣಬದ್ಧತೆಗೆ ಹೆಚ್ಚಿನ ಗಮನವಿಲ್ಲ; ಹೊಯ್ಸಳರ ಕುಸುರಿ ಕೆಲಸಕ್ಕೆ ಇಲ್ಲಿ ಅವಕಾಶವಿಲ್ಲ. ಆದರೆ ಇವುಗಳಲ್ಲಿ ಹೊಸತನವಿದೆ; ಇವು ಜೀವಂತ ಶಿಲ್ಪಗಳಾಗಿವೆ. ವಿಜಯನಗರದ ಕಾಲದ ಶಿಲ್ಪಗಳಲ್ಲಿನ ಮತ್ತೊಂದು ವೈಶಿಷ್ಟ್ಯವೆಂದರೆ ಪೂರ್ಣರೂಪದ ಬೃಹತ್‌ಪ್ರಮಾಣದ ಕೆಲವು ಶಿಲ್ಪಗಳು. ಲಕ್ಷ್ಮೀ ನರಸಿಂಹ, ಸಾಸಿವೆಕಾಳು ಗಣಪತಿ, ಕಡಲೆಕಾಳು ಗಣಪತಿ, ವೀರಭದ್ರ ಮೊದಲಾದ ಬೃಹದ್ಗಾತ್ರದ ಶಿಲ್ಪಗಳಲ್ಲಿ ಭವ್ಯತೆ ಇದೆ. ವಿಜಯನಗರ ಕಾಲದ ಹಲವು ಲೋಹಮೂರ್ತಿ ಗಳಿದ್ದು ಅವು ದೇವರುಗಳ ಉತ್ಸವಮೂರ್ತಿಗಳಾಗಿವೆ. ಅವುಗಳಲ್ಲಿ ಸಾಂಪ್ರದಾಯಿಕತೆ ಇದ್ದು ಒಂದು ರೀತಿಯ ನಿಶ್ಚಲತೆ ಎದ್ದು ಕಾಣುತ್ತದೆ.

ಮೈಸೂರು ಒಡೆಯರ ಕಾಲದಲ್ಲಿ ಶಿಲ್ಪಕಲೆಗೆ ಹೆಚ್ಚಿನ ಪ್ರೋತ್ಸಾಹವೇನೂ ದೊರಕಿತು. ಸಣ್ಣ ಪ್ರಮಾಣದ್ದಾದರು ಪೂರ್ಣರೂಪದ ಮೂರ್ತಿಗಳನ್ನು ಕಲ್ಲಿನಲ್ಲಿ, ಗಚ್ಚಿನಲ್ಲಿ, ಲೋಹದಲ್ಲಿ ಹೇರಳವಾಗಿ ರಚಿಸಲಾಗಿದೆ. ಇವೆಲ್ಲ ಹೆಚ್ಚಾಗಿ ದೇವತೆಗಳ, ಭಕ್ತರುಗಳ ಮೂರ್ತಿಗಳೇ. ಬಗೆಬಗೆಯ ಪ್ರತಿಮಾಶಿಲ್ಪ ಗಳನ್ನು ಈ ಕಾಲದಲ್ಲಿ ಕಂಡರಿಸಿರುವುದರಿಂದ ಪ್ರತಿಮಾಲಕ್ಷಣಗಳ ಅಧ್ಯಯನಕ್ಕೆ ಇವು ಸಹಕಾರಿಯಾಗಿವೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಹಾಗೂ ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಕೈಪಿಡಿಗೋಡೆಗಳಲ್ಲಿ ಗಚ್ಚಿನಲ್ಲಿ ನಿರ್ಮಿಸಿರುವ ಬೇರೆ ಬೇರೆ ಗಣಪತಿಯ ಮೂರ್ತಿಗಳು, ಶಿವಲೀಲೆಗಳೂ ಪ್ರಾಕಾರದಲ್ಲಿರುವ ಕಲ್ಲಿನ ಮತ್ತು ಲೋಹದ ಶಿವಲೀಲಾಮೂರ್ತಿಗಳು, ಪುರಾತನರು, ಮೈಸೂರು ಕೋಟೆಯಲ್ಲಿರುವ ಕೃಷ್ಣಸ್ವಾಮಿ ದೇವಾಲಯದಲ್ಲಿರುವ ಆಳ್ವಾರು ಮೂರ್ತಿಗಳು, ಉತ್ಸವಮೂರ್ತಿಗಳು ಗಮನ ಸೆಳೆಯುತ್ತವೆ. ಆದರೆ ಈ ಮೂರ್ತಿಗಳನ್ನು ಕಲ್ಲಿನಲ್ಲಿ ಕಂಡರಿಸುವಲ್ಲಿ, ಗಾರೆಗಚ್ಚುಗಳಿಂದ ನಿರ್ಮಿಸುವಲ್ಲಿ, ಲೋಹದಿಂದ ಎರಕಹೊಯ್ಯುವಲ್ಲಿ ಆಗಮಗಳಲ್ಲಿ ಶಿಲ್ಪಶಾಸ್ತ್ರಗಳಲ್ಲಿ ನಿಶ್ಚಿತಗೊಳಿಸಲ್ಪಟ್ಟದ್ದ ಲಕ್ಷಣಗಳಿಗನುಸಾರವಾಗಿ ರಚಿಸಿರುವುದು ವ್ಯಕ್ತವಾಗುತ್ತದೆ. ಈ ಮೂರ್ತಿಗಳಲ್ಲಿ ಕಂಡುಬರುವ ವಿಶಾಲವಾದ ಕಣ್ಣುಗಳು, ಚೂಪುಮೂಗು, ತುಟಿ ಕೊಂಕಿಸಿ ಮೂಡಿಸಿರುವ ಕೃತಕ ನಗೆ, ತುಂಬುಗಲ್ಲ, ಕಿರುಗದ್ದ, ಗುಂಡುಮುಖ, ಗಿಡ್ಡ ಬೆರಳುಗಳು, ಸೆಟೆದುಕೊಂಡಂತಿರುವ ನಿಶ್ಚಲ ದೇಹರಚನೆ; ದೇವ ದೇವಿಯರನ್ನು ತೋರಿಸುವಲ್ಲಿ ಪ್ರಮಾಣದಲ್ಲಿ ಸ್ವಾಭಾವಿಕ ಗುಣಲಕ್ಷಣಗಳಿಗಿಂತ, ನಿರಾಳಭಾವನೆಯನ್ನು ಹೊಮ್ಮಿಸುವುದಕ್ಕಿಂತ, ಕೃತಕತೆಯ ಹಾದಿಯನ್ನು ತುಳಿದಿರುವುದು ಕಂಡುಬರುತ್ತದೆ. ಈ ಶಿಲ್ಪಗಳಲ್ಲಿ ವಿಜಯನಗರ ಶಿಲ್ಪದ ಅನುಕರಣೆ ಇದ್ದರೂ ಅಲ್ಲಿನ ಚಲನೆ, ನಿರಾಳತೆ ಇಲ್ಲಿ ಕಂಡುಬರುವುದಿಲ್ಲ. ಶಿಲ್ಪದ ಶೈಲಿಯಲ್ಲಿ ಅವನತಿಯ ಕುರುಹು ಇಲ್ಲಿ ಸ್ಪಷ್ಟವಾಗಿದೆ. ಈ ಕಾಲದಲಿ ಕೇವಲ ದೇವತಾಮೂರ್ತಿಗಳನ್ನು ಅಥವಾ ಭಕ್ತವಿಗ್ರಹಗಳನ್ನು ಮಾತ್ರ ತಯಾರಿಸಲು ಗಮನ ಕೊಟ್ಟಿದ್ದು ವಿಜಯನಗರ ಕಾಲದಲ್ಲಿದ್ದಂತೆ ಕಥನಶೈಲಿಯ ಶಿಲ್ಪ, ಕೋಲಾಟ, ಸೈನ್ಯಬಲ, ಪ್ರಾಣಿಪಕ್ಷಿಗಳ ಸಾಲು ಮೊದಲಾದ ಐಹಿಕ ವಿಷಯಗಳಿಗೆ ಸಂಬಂಧಿಸಿದ ಶಿಲ್ಪಗಳ ಕಂಡರಣೆ ನಿಂತುಹೋದುದು, ಅದರಿಂದ ಶಿಲ್ಪಿಗಳಿಗೆ ಹೆಚ್ಚಿನ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದುದು ಇದಕ್ಕೆ ಕಾರಣವಿರಬಹುದು. ಕೆಳದಿಯ ನಾಯಕರು, ಚಿತ್ರದುರ್ಗದ ಪಾಳೆಯಗಾರರು, ಇತರ ತುಂಡರಸರ ಕಾಲದ ಶಿಲ್ಪವೂ ಇದಕ್ಕೆ ಭಿನ್ನವಿಲ್ಲ. ಆದರೆ ಅಲ್ಲಿ ಕೆಲವು ವೇಳೆ ಜಂಬಿಟ್ಟಿಗೆಯಲ್ಲಿರುವಂತೆ, ನೀರ್ತಡಿಯ ರಂಗನಾಥನ ದೇವಾಲಯದ ಗೋಡೆಗಳ ಮೇಲಿರುವಂತೆ, ಗೋಡೆಗಳು, ಕಂಬಗಳು, ಶಿಲ್ಪಗಳಿಂದ ತುಂಬಿಹೋಗಿದ್ದು ಅವು ವಿಜಯನಗರದ ಶೈಲಿಯ ಅನುಕರಣೆಯಾಗಿರುತ್ತವೆ. ಆದರೆ ಶಿಲ್ಪಗಳ ಕಂಡರಣೆಯಲ್ಲಿ ಅಲ್ಲಿನ ಸತ್ವ ಇವುಗಳಲ್ಲಿಲ್ಲ. ಈ ಕಾಲಗಳಲ್ಲಿ ಕರ್ನಾಟಕದ ನಾನಾ ಭಾಗಗಳಲ್ಲಿ ನಿರ್ಮಿಸಲಾದ ತೇರುಗಳಲ್ಲಿನ ಮರದ ಕೆತ್ತನೆಯ ಹಲವು ಮೂರ್ತಿಗಳು ಗಮನಾರ್ಹವಾದುವು. ದೇವಾನು ದೇವತೆಗಳ ಮೂರ್ತಿಗಳು ಮತ್ತು ರಾಮಾಯಣ, ಭಾರತ, ಭಾಗವತಗಳ ಸನ್ನಿವೇಶಗಳ ಜೊತೆಗೆ ಇವುಗಳಲ್ಲಿ ಕಾಮಶಾಸ್ತ್ರ ನಿರೂಪಿಸುವ ಸಂಭೋಗನಿರತ ಮೈಥುನಶಿಲ್ಪಗಳನ್ನೂ ಜೋಡಿಸಿರುವುದು ಹೆಚ್ಚು.

ಉತ್ತರ ಕರ್ನಾಟಕದ ಭಾಗಗಳಲ್ಲಿ ಬಹಮನೀ ಸುಲ್ತಾನರು, ಆದಿಲ್ ಶಾಹೀ ಅರಸರ ಆಡಳಿತದಲ್ಲಿ ಮೂರ್ತಿಶಿಲ್ಪ ಪೂರ್ತಿಯಾಗಿ ನಿಂತುಹೋದರೂ ಮಸೀದಿ, ಗುಮ್ಮಟಗಳಲ್ಲಿ ಶಿಲೆಯ ಅಥವಾ ಗಾರೆಗಚ್ಚಿನ ಅಲಂಕರಣ ಶಿಲ್ಪಕ್ಕೆ ಪ್ರಾಶಸ್ತ್ಯ ದೊರೆಯಿತು. ಇಬ್ರಾಹೀಂ ರೋಜಾ ಮುಂತಾದ ಕೆಲವು ಕಟ್ಟಡಗಳು ತಮ್ಮ ನವುರಾದ ಅಲಂಕರಣ ಶಿಲ್ಪಕ್ಕೆ ಹೆಸರಾಗಿವೆ. ಬಳ್ಳಿಸುರುಳಿ, ಎಲೆ, ಹೂಗಳು, ಮೊಗ್ಗುಗಳ ಜೊತೆಗೆ ಅಲಂಕಾರ ಲಿಪಿಯನ್ನು ಸುಂದರವಾಗಿ ಬಿಡಿಸುವಲ್ಲಿ ಈ ಶಿಲ್ಪಿಗಳು ನಿಷ್ಣಾತರಾಗಿದ್ದರು.

ಶಿಲ್ಪಕ್ಕೆ ರಾಜರುಗಳ ಪ್ರೋತ್ಸಾಹ ತಪ್ಪಿದದಮೇಲೂ ಶಿಲ್ಪಕಲೆ ಉಳಿದುಬಂದಿರುವುದು ಕಂಡುಬರುತ್ತದೆ. ಮಲೆನಾಡಿನ ಭಾಗಗಳಲ್ಲಿ ಉಳಿದುಬಂದಿರುವ ಗಂಧದ ಗುಡಿಗಾರರ ಕಲೆ, ಶಿವಾರಪಟ್ಟಣ ಮತ್ತು ಮೈಸೂರುಗಳಲ್ಲಿನ ಶಿಲ್ಪಗಳ ಕಲ್ಲಿನ ಕಂಡರಣೆ, ನಾಗಮಂಗಲದ ಲೋಹದ ಎರಕದ ಶಿಲ್ಪಗಳನ್ನು ಇಲ್ಲಿ ಹೆಸರಿಸಬಹುದು. ಶಿವಾರಪಟ್ಟಣದ ಶಿಲ್ಪಗಳಲ್ಲಿ ವಿಜಯನಗರ ಶಿಲ್ಪದ ಅನುಕರಣೆ ಇದ್ದರೆ, ಮೈಸೂರುಗಳಲ್ಲಿನ ಶಿಲ್ಪಗಳಲ್ಲಿ ಹೊಯ್ಸಳ ಶಿಲ್ಪದ ಪ್ರತಿಬಿಂಬ ಕಾಣಿಸುತ್ತದೆ. ಇವುಗಳೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಿಸಿರುವ (ರಂಜಾಳ ಗೋಪಾಲ ಶೆಣೈ) ಬೃಹದ್ಗಾತ್ರದ ಗೊಮ್ಮಟೇಶ್ವರನ ಮೂರ್ತಿಯನ್ನೂ ಗಮನಿಸಬೇಕು. ಕರ್ನಾಟಕದ ಹಲವು ಚರ್ಚುಗಳಲ್ಲಿ ಕಂಡುಬರುವ ಮೂರ್ತಿಗಳಲ್ಲಿ ಐರೋಪ್ಯ ಶೈಲಿಯ ಅನುಕರಣೆ ಇದೆ. ಹಾಗೆಯೇ ಇತ್ತೀಚೆಗೆ ಐರೋಪ್ಯ ದೇಶಗಳ ಮತ್ತು ಅಮೆರಿಕದಲ್ಲಿ ಪ್ರಚಲಿತವಿರುವ ನವ್ಯಶೈಲಿಯ ಶಿಲ್ಪಗಳ ಮಾದರಿಯಲ್ಲಿ ಕರ್ನಾಟಕದಲ್ಲೂ ಹಲವು ಶಿಲ್ಪಗಳನ್ನು ಕಂಡರಿಸಿದ್ದು ಅವುಗಳಲ್ಲಿ ಹೊರ ಆಕಾರವನ್ನು ಗೌಣವಾಗೆಣಿಸಿ ಭಾವಾಭಿವ್ಯಕ್ತಿಯ ಪ್ರತಿಪಾದನೆಗೇ ಒತ್ತು ಕೊಟ್ಟಿರುವುದು ಕಂಡುಬರುತ್ತದೆ. (ಎಂ.ಎಚ್.)

**ಶಿವಗಂಗಾ ಜಲಪಾತ:** ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಗಣೇಶಪಾಲ ನದಿಯ (ಸೋಂದಾನದಿ) ಒಂದು ಜಲಪಾತ. ಶಿರಸಿಯ ವಾಯವ್ಯಕ್ಕೆ 23 ಕಿಮೀ ದೂರದಲ್ಲಿದೆ. ಶಿರಸಿಯ ವಾಯವ್ಯಕ್ಕಿರುವ ಹುಲೇಕಲ್ಲಿನಿಂದ 10 ಕಿಮೀ ದೂರದಲ್ಲಿರುವ ಈ ಜಲಪಾತಕ್ಕೆ ಶಿರಸಿಯಿಂದ ಹುಲೇಕಲ್ಲಿನವರೆಗೆ ಹೋಗಬೇಕು. ಅಲ್ಲಿಂದ ಮುಂದೆ ಮಣ್ಣುರಸ್ತೆಯಲ್ಲಿ ಸಂಪಗದ್ದೆಹಳ್ಳಿ ಮೂಲಕ ಮೆಣಶಿ ಸೀಮೆಯನ್ನು ತಲುಪಬೇಕು. ಇಲ್ಲಿ ಗಣೇಶಪಾಲ ಹೊಳೆ ಗುಡ್ಡದ ಕಡಿದಾದ ಓರೆಯಲ್ಲಿ ಎರಡು ಹಂತದಲ್ಲಿ ದುಮುಕುತ್ತದೆ. ನದಿ ಎರಡು ಕವಲುಗಳಾಗಿ, ಮೊದಲು ಸು. 107ಮೀ ದುಮುಕಿ ಮತ್ತೆ ಕವಲಾಗಿ ಸು. 61ಮೀ ದುಮುಕುವುದು. ನೀರು ಬೀಳುವ ಸ್ಥಳದಲ್ಲಿ ಎರಡು ಬದಿಗಳಲ್ಲೂ ಕರಿಕಲ್ಲಿನ ಗುಡ್ಡಗಳು ಗೋಡೆಗಳಂತಿವೆ. ತಡಸಲಿನ ಎದುರುಗಡೆಯ ದೊಡ್ಡಬಂಡೆಯ ಮೇಲೆ ಶಿವನ ಮೂರ್ತಿ, ಜೋಗಿ, ಪಕ್ಷಿ, ಕುದುರೆ ಮುಂತಾದವುಗಳ ಚಿತ್ರಗಳನ್ನೂ ಶಿಲಾಲೇಖ ಗಳನ್ನೂ ಕೆತ್ತಲಾಗಿದೆ. ಜಲಪಾತದ ಕೆಳಗಿನ ಮಡುವಿನಲ್ಲಿ ಶಿವ ಹಾಗೂ

ಗಂಗೆಯರ ಶಿಲಾಮೂರ್ತಿಗಳು ಇರುವುದರಿಂದ ಇದಕ್ಕೆ ಶಿವಗಂಗಾ ಜಲಪಾತ ಎಂದು ಹೆಸರು ಬಂದಿದೆ.

ಹೊಳೆಯ ಮೇಲ್ಗಡೆಗೆ ಇರುವ ಇನ್ನೊಂದು ಚಿಕ್ಕ ಜಲಪಾತವೂ ನಯನಮನೋಹರವಾಗಿದೆ. ಪ್ರಪಾತದ ಮೇಲ್ಗಡೆ ಒಂದೂವರೆ ಕಿಮೀ ದೂರದಲ್ಲಿ ಈ ಹೊಳೆಯ ಮಧ್ಯೆ ಗಣೇಶಪಾಲ ಎಂಬ ಚಿಕ್ಕ ನಡುಗಡ್ಡೆ ಇದೆ. ಇಲ್ಲಿ ಶಿಲೆಯ ಗಣೇಶನ ಮೂರ್ತಿ ಇದೆ. ಈ ಸ್ಥಳವನ್ನು ಪ್ರಸಿದ್ಧ ಕ್ಷೇತ್ರವಾಗಿ ಜಾಗೃತಸ್ಥಳವೆಂದು ಗಣಿಸಲಾಗಿದೆ. ವಾರ್ಷಿಕ ಮತ್ತು ಕಾಲಿಕ ಉತ್ಸವಗಳನ್ನು ಈ ಮೂರ್ತಿಗೆ ನಡೆಸಲಾಗುತ್ತದೆ. ಈ ಗಣೇಶ ಮೂರ್ತಿಯ ಬಳಿ ಹೊಳೆ ಇಬ್ಭಾಗವಾಗಿ ಹರಿಯುವುದರಿಂದ ಗಣೇಶಪಾಲ ಎಂಬ ಹೆಸರೂ ರೂಢಿಯಲ್ಲಿ ಬಂದಿದೆ.

ಈ ಪ್ರದೇಶದಲ್ಲಿ ಜಲವಿದ್ಯುತ್ ತನಿಖಾ ಸರ್ವೆ ನಡೆದಿದೆ. ತೇರುಬೀದಿ ಸಮೀಪ ಸೋಂದಾನದಿಗೆ ಮತ್ತು ಮೊಗದ್ದೆ ಎಂಬಲ್ಲಿ ಪಟ್ಟಣದ ಹಳ್ಳಕ್ಕೆ ಅಣೆಕಟ್ಟು ಕಟ್ಟಿ ಎರಡೂ ಜಲಾಶಯಗಳನ್ನು ಸುರಂಗಮಾರ್ಗ ದಿಂದ ಕೂಡಿಸಿ ಸುರಂಗಮಾರ್ಗದಿಂದ ಬೇಡ್ತಿ ಜಲವಿದ್ಯುತ್ ಕೇಂದ್ರದ ಎದುರಿಗೆ ಬೇಡ್ತಿನದಿಯ ದಂಡೆಯ ಮೇಲೆ ಜಲವಿದ್ಯುತ್ ಕೇಂದ್ರ ಸ್ಥಾಪಿಸುವ ಯೋಜನೆ ಇದೆ. ಇದರಿಂದ ಸು. 2,00,000 ಕಿವಾ ವಿದ್ಯುತ್ ಪಡೆಯುವ ಸಂಭವವಿದೆ. **(ಆರ್.ಜಿ.ಆರ್.)**

**ಶಿವಗಂಗೆ:** ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕಿನ ಒಂದು ಊರು ಮತ್ತು ಪವಿತ್ರ ಗಿರಿಕ್ಷೇತ್ರ. ನೆಲಮಂಗಲ-ಕುಣಿಗಲು ಮಾರ್ಗದಲ್ಲಿ ನೆಲಮಂಗಲದ ವಾಯವ್ಯಕ್ಕೆ 31 ಕಿಮೀ ದೂರದಲ್ಲಿದೆ. ಇದು ಸುತ್ತಲ ಹಳ್ಳಿಗಳ ವ್ಯಾಪಾರ ಕೇಂದ್ರ. ಜನಸಂಖ್ಯೆ 1,389.

ಈ ಊರಿಗೆ ಹೊಂದಿಕೊಂಡಂತಿರುವ ಶಿವಗಂಗೆ ಬೆಟ್ಟ 1,389.58 ಮೀ ಎತ್ತರವಿದೆ. ಇದನ್ನು ಕಕೋದ್ಗಿರಿಯೆಂದೂ ಕರೆಯುವುದುಂಟು. ಈ ಬೆಟ್ಟದ ಪೂರ್ವಕ್ಕೆ ಮಹಿಮೆರಂಗನ ಗುಡ್ಡ, ಪಶ್ಚಿಮಕ್ಕೆ ರಾಗಿಬೆಟ್ಟ (ರಾಮದೇವರ ಬೆಟ್ಟ), ಉತ್ತರಕ್ಕೆ ನರಸಿಂಹನ ಬೆಟ್ಟ, ದಕ್ಷಿಣಕ್ಕೆ ಕಾಚುಕಲ್ಲಪ್ಪನ ಬೆಟ್ಟ ಇವೆ. ಈ ಬೆಟ್ಟವನ್ನು ದಕ್ಷಿಣ ದಿಕ್ಕಿನಿಂದ ನೋಡಿದರೆ ವೃಷಭಾಕಾರ ವಾಗಿಯೂ ಪಶ್ಚಿಮ ದಿಕ್ಕಿನಿಂದ ನೋಡಿದಾಗ ಗಣೇಶಾಕಾರವಾಗಿಯೂ ಮತ್ತು ಉತ್ತರ ದಿಕ್ಕಿನಿಂದ ನೋಡಿದರೆ ಸರ್ಪಾಕಾರವಾಗಿಯೂ ಕಾಣುತ್ತದೆನ್ನಲಾಗಿದೆ. ಈ ಕ್ಷೇತ್ರವನ್ನು ದಕ್ಷಿಣ ಕಾಶಿಯೆಂದೂ ಕರೆಯಲಾಗುತ್ತದೆ. ಈ ಸ್ಥಳವನ್ನು 12ನೆಯ ಶತಮಾನದಲ್ಲಿ ಶಿವಗಂಗೆ ಎಂಬ ಹೆಸರಿನಿಂದ ಕರೆಯಲಾಗಿದೆ. ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲದೇವಿ 1131ರಲ್ಲಿ ಶಿವಗಂಗೆ ತೀರ್ಥದಲ್ಲಿ ಮುಡುಪಿ ಸ್ವರ್ಗಸ್ಥಳಾದಳೆಂದು ತಿಳಿದುಬರುತ್ತದೆ. ಈ ಕ್ಷೇತ್ರದ ಕಟ್ಟಡಗಳ ನಿರ್ಮಾತೃ ಮಾಗಡಿ ಕೆಂಪೇಗೌಡ.

ಬೆಟ್ಟಕ್ಕೆ ಹೋಗುವ ಮಹಾದ್ವಾರದ ಬಳಿ ಕಮಲತೀರ್ಥವಿದೆ. ಈ ತೀರ್ಥದ ನಾಲ್ಕು ಕಡೆಗೂ ಪ್ರವೇಶದ್ವಾರಗಳು ಇದ್ದು ಇಲ್ಲಿನ ಸೋಪಾನದ ಸುತ್ತಲೂ ರಾಮಾಯಣ, ಮಹಾಭಾರತ, ಭಾಗವತದ ಚಿತ್ರಗಳು ಕೆತ್ತಲ್ಪಟ್ಟಿವೆ. ಇಲ್ಲಿನ ಅಗಸ್ತ್ಯತೀರ್ಥದಲ್ಲಿ ಅಗಸ್ತ್ಯರು ತಪಸ್ಸು ಮಾಡಿದರೆಂದು ಪ್ರತೀತಿ. ಇಲ್ಲಿ ಅಗಸ್ತ್ಯೇಶ್ವರ ಲಿಂಗವಿದ್ದು ಈ ತೀರ್ಥದ ಸುತ್ತಲೂ 108 ಲಿಂಗಗಳಿವೆ.

ಮಹಾದ್ವಾರದ ಎಡಭಾಗದಲ್ಲಿ ವಿಘ್ನೇಶ್ವರನ ವಿಗ್ರಹವಿದೆ. ಇದರ ಪಶ್ಚಿಮಕ್ಕೆ ವೀರಭದ್ರ ದೇವಾಲಯ, ಸ್ವಲ್ಪ ಮುಂದೆ ಬಲಭಾಗದಲ್ಲಿ ಷಣ್ಮುಖಸ್ವಾಮಿ ದೇವಾಲಯವಿದೆ. ಎರಡನೆಯ ಮಹಾದ್ವಾರದ ಪ್ರವೇಶದ ಹತ್ತಿರಕ್ಕಾದಂತೆ ಪಾತಾಳಗಂಗೆಗೆ ಮೆಟ್ಟಿಲುಗಳು ಇವೆ. ಇದರ ಪಕ್ಕದಲ್ಲೇ ವೀರಭದ್ರನಮೂರ್ತಿ ಇದೆ. ಇದೇ ಪ್ರಾಕಾರದ ಆಗ್ನೇಯ ದಿಕ್ಕಿನಿಂದ ಮುಂದುವರಿದರೆ ಪುರಾತನ ಹೊನ್ನಮ್ಮಗವಿ ಮಠವಿದೆ. ಇದರ ನೈಋತ್ಯಕ್ಕೆ ಶಂಕರಾಚಾರ್ಯರ ತೀರ್ಥವಿದೆ. ಇದನ್ನು ಶಂಬುತೀರ್ಥವೆಂದೂ ಕರೆಯುತ್ತಾರೆ. ಇದರ ಸನಿಹಕ್ಕಿರುವ ಗುಹೆಯೊಂದನ್ನು ಶಂಕರರ ಗುಹೆಯೆನ್ನುತ್ತಾರೆ.

ಮೂರನೆಯ ಮಹಾದ್ವಾರದ ಬಳಿ ಹೊನ್ನಾದೇವಿ (ಸ್ವರ್ಣಾಂಬೆ) ಗುಹಾಂತರ ದೇವಾಲಯವಿದೆ. ಈ ದೇವಾಲಯ 40 ಅಡಿ ಚಚ್ಚೌಕವಾಗಿದೆ. ಇಲ್ಲಿನ ಹೊನ್ನಾದೇವಿಯ ಮೂರ್ತಿ 5 ಅಡಿ ಎತ್ತರವಾಗಿದ್ದು, ರಕ್ತಬೀಜಾಸುರನನ್ನು ಮರ್ದಿಸುವ ಭಂಗಿಯಲ್ಲಿದ್ದು, ಅಷ್ಟಬಾಹುಗಳನ್ನು



ಶಿವಗಂಗೆ ಬೆಟ್ಟ

ಹೊಂದಿದೆ. ಈ ಗುಹೆಗೆ ಪೂರ್ವಾಭಿಮುಖವಾಗಿ ಮತ್ತೊಂದು ಶಿಲಾಭೈರವಿ ವಿಗ್ರಹವಿದೆ. ಇದು ಹೊಯ್ಸಳರ ಕಾಲದ್ದು. ಹೊನ್ನಾದೇವಿಯ ದೇವಾಲಯವನ್ನು ಬಿಟ್ಟು ಕಡಿದಾದ ಮೆಟ್ಟಿಲುಗಳನ್ನು ಹತ್ತಿ ಮುಂದೆ ಹೋದರೆ ಸಿಕ್ಕುವುದು ಪ್ರಸನ್ನಗಂಗಾಧರೇಶ್ವರ ಗುಹಾಂತರದೇವಾಲಯ. ಈ ದೇವಾಲಯ ದೊಡ್ಡ ಪ್ರಾಕಾರವನ್ನು ಹೊಂದಿದ್ದು ನಂದಿಮಂಟಪ, ನಾಲ್ಕು ಸುಂದರವಾದ ಘಂಟೆಯಾಕಾರದ ಹೊಯ್ಸಳ ಸ್ತಂಭಗಳನ್ನೊಳ ಗೊಂಡಿದೆ. ಇಲ್ಲಿನ ಶಾಸನಗಳು ಶಿವಗಂಗನಾಥ ದೇವರಿಗೆ 1196ರಲ್ಲಿ ದತ್ತಿಬಿಟ್ಟ ವಿಷಯವನ್ನು ತಿಳಿಸುತ್ತವೆ. ಇಲ್ಲಿನ ಬೃಹದಾಕಾರದ ಕಂಚಿನ ಘಂಟೆಯನ್ನು ಓಂಕಾರ ಘಂಟೆಯೆಂದು ಕರೆಯುತ್ತಾರೆ. ಶಾಸನದ ಪ್ರಕಾರ ಇದು ಒಂದನೆಯ ಕೆಂಪೇಗೌಡನ ಕಾಣಿಕೆಯೆಂದು ತಿಳಿದುಬರುತ್ತದೆ. ದಕ್ಷಿಣಾಭಿಮುಖವಾಗಿರುವ ನವರಂಗದ ದ್ವಾರ ದ್ವಾರಪಾಲಕರನ್ನು ಒಳಗೊಂಡಿದೆ. ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ವಿಗ್ರಹವಿದೆ. ಗುಹೆಯಲ್ಲಿರುವ ಕೆಲವು ವಿಗ್ರಹಗಳನ್ನು ಒಂದನೆಯ ಕೆಂಪೇಗೌಡ ಮತ್ತು ಆತನ ಕುಟುಂಬದವರು ಎನ್ನಲಾಗುತ್ತದೆ. ಕಲ್ಲಿನ ಮತ್ತು ಪಂಚಲೋಹದ ಕೆಲವು ವಿಗ್ರಹಗಳೂ ಇಲ್ಲಿವೆ. ಗರ್ಭಗುಡಿ ಸಣ್ಣ ಸುಕನಾಸಿಯನ್ನು ಹೊಂದಿದೆ. ಒಳಗೆ ಮೂರು ಅಡಿ ಎತ್ತರದ ಲಿಂಗವಿದೆ. ಬಹುಶಃ ಇದು ಹೊಯ್ಸಳರ ಕಾಲದ್ದಿರಬಹುದು. ಪೂರ್ವಾಭಿಮುಖವಾಗಿರುವ ಇಲ್ಲಿನ ಕೊಠಡಿಯೊಂದನ್ನು ಕೆಂಪೇಗೌಡನ ಖಜಾನೆಯೆಂದು ಹೇಳುವರು.

ಒನಕೆಗಂಡಿಯ ಅನಂತರ ಕಡಿದಾದ ಮೆಟ್ಟಿಲುಗಳನ್ನು ಏರಿ ಮುಂದಕ್ಕೆ ಹೋದರೆ ಕೋಡುಗಲ್ಲು ಬಸವನ ವಿಗ್ರಹವಿದೆ. ಇಲ್ಲಿನ ಶಾಸನದ ಪ್ರಕಾರ 1388ರಲ್ಲಿ ಈ ವಿಗ್ರಹವನ್ನು ರಚಿಸಿದಂತೆ ತಿಳಿದುಬರುತ್ತದೆ. ಇದನ್ನು ದಾಟಿ ಮುಂದೆ ಸಾಗಿದರೆ ವೀರಭದ್ರ ಗುಡಿ ಇದೆ. ಇದಕ್ಕೆ ಉತ್ತರಾಭಿಮುಖವಾಗಿ ಗಿರಿಯ ತುದಿಯಲ್ಲಿರುವ ತೀರ್ಥಕಂಬದಲ್ಲಿ ಮಕರ ಸಂಕ್ರಾಂತಿಯ ಕಾಲದಲ್ಲಿ ಗಂಗಾಧರೇಶ್ವರನ ಕಲ್ಯಾಣಕ್ಕೆ ಗಂಗೋದಕ ಬರುವುದೆಂದು ಸ್ಥಳಪ್ರತೀತಿ. ಉರಿಗಂಬದ ಮಾರ್ಗಶಿರ ಮಾಸದ ಪೂರ್ಣಿಮೆಯ ದಿನ ಕೈಲಾಸ ದೀವಟಿಗೆಯನ್ನು ಹಚ್ಚುತ್ತಾರೆ. ತೀರ್ಥಕಂಬ

ಅಷ್ಟಾಕೃತಿಯಲ್ಲಿದೆ. ಕಂಬದ ತಳಭಾಗದ ಶಾಸನಗಳ ಪ್ರಕಾರ ಹೊಯ್ಸಳ ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಇದನ್ನು ಕೂಸ ಬಸವಣ್ಣ ಎಂಬುವನು ನಿಲ್ಲಿಸಿದನೆಂದು ತಿಳಿದುಬರುತ್ತದೆ. ಶಾಂತಲದೇವಿಯ ಜ್ಞಾಪಕಾರ್ಥವಾಗಿ ಕಟ್ಟಿಸಿದ ಶಾಂತೇಶ್ವರ ದೇವಾಲಯ ಮಹಾದ್ವಾರದ ಹತ್ತಿರ ಇದೆ. ಶಾರದಾ ದೇವಾಲಯದಲ್ಲಿರುವ ಶಾರದಾಮೂರ್ತಿ ಅಮೃತಶಿಲೆಯಲ್ಲಿ ಕಡೆಯಲ್ಪಟ್ಟಿದೆ. ಇದರ ಪ್ರತಿಷ್ಠಾಪನೆ 1910ರಲ್ಲಿ ಆಯಿತೆಂದು ಹೇಳುವರು. ಈ ಕ್ಷೇತ್ರದ ಕಣ್ವತೀರ್ಥವನ್ನು 1652ರಲ್ಲಿ ಶಿವಾಜಿಯ ತಂದೆ ಶಹಾಜಿಯ ಆಳ್ವಿಕೆಯಲ್ಲಿ ಕಟ್ಟಿಸಿದುದೆಂದು ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಈ ಕ್ಷೇತ್ರವನ್ನು ಕುರಿತು ಕಳಲೆಯ ನಂಜರಾಜ 18ನೆಯ ಶತಮಾನದಲ್ಲಿ ಕಕೋದ್ಗಿರಿ ಮಹಾತ್ಮೆ ಎಂಬ ಗ್ರಂಥವನ್ನು ರಚಿಸಿದ್ದಾನೆ.

ಈ ಕ್ಷೇತ್ರದಲ್ಲಿ ವರ್ಷಂಪ್ರತಿ ಎರಡು ಜಾತ್ರೆಗಳು ನಡೆಯುತ್ತವೆ. ಗಂಗಾಧರೇಶ್ವರನ ಜಾತ್ರೆ ಪ್ರತಿ ಜನವರಿಯಲ್ಲೂ ಹೊನ್ನಾದೇವಿಯ ಜಾತ್ರೆ ಪ್ರತಿ ಚೈತ್ರಬಹುಳದಲ್ಲೂ ನಡೆಯುತ್ತದೆ. ಈ ಊರಿನಲ್ಲಿ ಶ್ರೀಮಠ ಎಂಬ ಒಂದು ಮಠವಿದೆ. (ಎಂ.ಎಲ್.ಎಸ್.)

**ಶಿವಗಣಪ್ರಸಾದಿ ಮಹದೇವಯ್ಯ:** 14ನೆಯ ಶತಮಾನದ ಕೊನೆ ಹಾಗೂ 15ನೆಯ ಶತಮಾನದ ಪ್ರಾರಂಭದಲ್ಲಿದ್ದು, ವಚನಸಾಹಿತ್ಯದ ಪುನರುತ್ಥಾನದಲ್ಲಿ ಪ್ರಮುಖ ಪಾತ್ರವಹಿಸಿದ ಸಂಕಲನಕಾರ. ಶೂನ್ಯಸಂಪಾದನೆ ಎಂಬ ವಚನ ಸಂಕಲನ ಗ್ರಂಥದ ಕರ್ತೃ.

ಇವನಿಗಿಂತ ಹಿಂದೆ ವಚನಗಳನ್ನು ಸಂಕಲಿಸುವ ಸಣ್ಣ ಪ್ರಯತ್ನಗಳು ನಡೆದಿದ್ದುವು. ಆದರೆ ಅದಕ್ಕೊಂದು ವ್ಯವಸ್ಥಿತವಾದ ರೂಪು ಕೊಟ್ಟು ಅನೇಕ ಸನ್ನಿವೇಶಗಳನ್ನೊಳಗೊಂಡ ಬೃಹತ್ ಕೃತಿಯನ್ನು ರಚಿಸಬಹುದೆಂಬುದನ್ನು ಕಂಡುಕೊಂಡು ಅದನ್ನು ಯಶಸ್ವಿಯಾಗಿ ನಿರ್ವಹಿಸಿದ ಇಂಥ ಪ್ರತಿಭಾವಂತನ ವಿಚಾರದಲ್ಲಿ ನಿರ್ದಿಷ್ಟವಾದ ಚಾರಿತ್ರಿಕ ಅಂಶಗಳೇನೂ ತಿಳಿಯದಿರುವುದು ವಿಷಾದಕರ. ಸಿದ್ಧನಂಜೇಶನ ರಾಘವಾಂಕ ಚಾರಿತ್ರದಲ್ಲಿ ಇವನ ಹೆಸರಿನ ಉಲ್ಲೇಖವಿದೆ. ಇದನ್ನು ಬಿಟ್ಟರೆ ಉಳಿದ ಇನ್ನಾವ ಕವಿಯೂ ಇವನನ್ನು ಹೆಸರಿಸಿಲ್ಲ. ಉಳಿದ ಶೂನ್ಯಸಂಪಾದನಕಾರರು ಇವನನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಇವನು ಗೂಳೂರು ಗುಮ್ಮಳಾಪುರ ಭಾಗಕ್ಕೆ ಸೇರಿದವನಾಗಿದ್ದಿರಬಹುದೆಂದೂ ಕಲ್ಯಾಣದವನಿರಬಹುದೆಂದೂ ಊಹೆ ಇದೆ. ಇವನ ಶೂನ್ಯಸಂಪಾದನೆಯನ್ನು ಅನಂತರ ಬಂದ ಹಲಗೆಯದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧ ವೀರಣ್ಣೊಡೆಯ-ಇವರು ಹೊಸ ಹೊಸ ಸನ್ನಿವೇಶಗಳನ್ನು ಸೇರಿಸಿ ಅದನ್ನು ಬೆಳೆಸಿ ಪರಿಷ್ಕರಿಸಿದರು. ಆದರೆ ಈ ಕಾರ್ಯ ಈತ ಹಾಕಿಕೊಟ್ಟ ತಳಹದಿಯ ಮೇಲೆ ಮತ್ತು ಆ ಚೌಕಟ್ಟಿನಲ್ಲಿಯೇ ನಡೆಯಿತು. ಯಾವ ಒಂದು ಮಹಾ ಉದ್ದೇಶವನ್ನಿಟ್ಟುಕೊಂಡು ಮಹಾದೇವಯ್ಯ ಶೂನ್ಯಸಂಪಾದನೆಯನ್ನು ಮೊಟ್ಟ ಮೊದಲು ಸಂಗ್ರಹಿಸಿದನೋ ಅದು ಉಳಿದ ಶೂನ್ಯಸಂಪಾದನಕಾರರ ಕೈಯಲ್ಲಿ ಕ್ರಮೇಣ ವಿಕಾಸಗೊಂಡು ಸಿದ್ಧವೀರಣ್ಣೊಡೆಯರಲ್ಲಿ ಪೂರ್ಣತೆಯನ್ನು ಪಡೆಯಿತು ಎನ್ನಬಹುದು. ಶೂನ್ಯಸಂಪಾದನೆಯಲ್ಲಿ 1,012 ವಚನಗಳು ಸಂಕಲನಗೊಂಡಿವೆ. ಈ ಗ್ರಂಥ ಕನ್ನಡದ ಆಧ್ಯಾತ್ಮಿಕ ಸಾಧನೆಗೆ ಒಂದು ಮಹತ್ತ್ವದ ಕೊಡುಗೆಯಾಗಿದೆ. (ಎಚ್.ಟಿ.ಎಸ್.)

**ಶಿವಪ್ಪ, ಎಸ್.:** 1913-95. ಸಮಾಜವಾದಿ ಧುರೀಣ. ವಿಧಾನ ಪರಿಷತ್ತಿನ ಸಭಾಪತಿ; ಇವರು ಹಾಸನ ಜಿಲ್ಲೆ ಚನ್ನರಾಯನಪಟ್ಟಣ ತಾಲ್ಲೂಕು ಕಾಂತರಾಜಪುರದಲ್ಲಿ ಎಸ್. ನಂಜಪ್ಪ ಮತ್ತು ಕೆಂಪಮ್ಮ ಅವರ ಮೂರನೆಯ ಪುತ್ರರಾಗಿ 1913 ಅಕ್ಟೋಬರ್ 22ರಂದು ಜನಿಸಿದರು. ಇವರ ತಂದೆ ಸಮಾಜ ಸುಧಾರಕರು ಮತ್ತು ದಾನಿಗಳಾಗಿದ್ದು ಕಾಂತರಾಜಪುರದಲ್ಲಿ ಶಿಕ್ಷಣಸಂಸ್ಥೆಗಳು ಸ್ಥಾಪಿತವಾಗಲು ಮಹತ್ವದ ಪಾತ್ರವಹಿಸಿದ್ದರು. ಶಿವಪ್ಪನವರ ವಿದ್ಯಾಭ್ಯಾಸ ಪ್ರೌಢಶಾಲೆಯವರೆಗೂ ಸ್ವಗ್ರಾಮದಲ್ಲಿಯೇ ನಡೆಯಿತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎಸ್ಸಿ. ಪದವಿ ಗಳಿಸಿದರು. ಸ್ವಾತಂತ್ರ್ಯಪೂರ್ವ ಯುಗದ ಪರಿಸರ ಮತ್ತು ತಂದೆಯ ಆದರ್ಶಗಳಿಂದ ಪ್ರಭಾವಿತರಾದ ಇವರು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಇವರು 1943ರಲ್ಲಿ ಸ್ವತಂತ್ರ ಪಕ್ಷ ಸೇರಿ ಅದರ ಕಾರ್ಯಕರ್ತರಾದರು. ತಮ್ಮ ವಾಕ್‌ಪಟುತ್ವ ಮತ್ತು ವಿಚಾರಧಾರೆಗಳ ಮೂಲಕ ಜನಮನಸೆಳೆದರು. 1945ರಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಆಯ್ಕೆಯಾದರು. ತರುವಾಯ ಲೋಹಿಯಾರ ಚಿಂತನೆಗಳಿಂದ ಪ್ರಭಾವಿತರಾಗಿ ಸಮಾಜವಾದಿ ಪಕ್ಷಸೇರಿದರು(1947). 1952ರಲ್ಲಿ ಅದೇ ಪಕ್ಷದ ವತಿಯಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಚುನಾಯಿತರಾದರು. ನೇರ ನುಡಿ, ನಿಷ್ಠುರ, ಪ್ರಾಮಾಣಿಕ ಸಾಮಾಜಿಕ ಕಳಕಳಿಗೆ ಹೆಸರಾಗಿದ್ದ ಇವರು ಉತ್ತಮ ಸಂಸದೀಯ ಪಟುವಾಗಿ ಕರ್ನಾಟಕದ ರಾಜಕೀಯದಲ್ಲಿ ಭರವಸೆ ಮೂಡಿಸುವ ಯುವ ರಾಜಕಾರಣಿ ಎನಿಸಿದರು.



1953ರಲ್ಲಿ ಕರ್ನಾಟಕದ ರಾಜ್ಯದ ಸಮಾಜವಾದಿ ಪಕ್ಷದ ಅಧ್ಯಕ್ಷರಾದರು. ಈ ಹುದ್ದೆಯಲ್ಲಿ 1958ರವರೆಗೂ ಮುಂದುವರಿದರು. ಸಮಾಜವಾದಿ ಪಕ್ಷ ಇಬ್ಭಾಗವಾಗಿ ಪ್ರಜಾ ಸಮಾಜವಾದಿ ಪಕ್ಷ ಅಸ್ತಿತ್ವಕ್ಕೆ ಬಂದಾಗ 1959ರಲ್ಲಿ ಆ ಪಕ್ಷದ ರಾಜ್ಯಾಧ್ಯಕ್ಷರಾಗಿ ಚುನಾಯಿತರಾಗಿ 1971ರವರೆಗೂ ಈ ಹುದ್ದೆಯಲ್ಲಿ ಮುಂದುವರಿದದ್ದು ಇವರ ನಾಯಕತ್ವ ಗುಣಕ್ಕೆ ಸಾಕ್ಷಿ. 1962ರಲ್ಲಿ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ಚುನಾಯಿತರಾದರು. ಅದೇ ವರ್ಷ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದರು. ಮುಂದೆ 1971ರವರೆಗೂ ಅವಿರತವಾಗಿ ಒಂಬತ್ತು ವರ್ಷಗಳ ಕಾಲ ಈ ಹುದ್ದೆಯಲ್ಲಿ ಮುಂದುವರಿದದ್ದು ಇವರ ಇನ್ನೊಂದು ಹೆಗ್ಗಳಿಕೆ. ಇವರ ಕಾಲದಲ್ಲಿ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು 'ಎಸ್. ಶಿವಪ್ಪನವರಂತಹ ವಿರೋಧ ಪಕ್ಷದ ನಾಯಕರನ್ನು ವಿದೇಶದಲ್ಲಿ ಮಾತ್ರ ಕಾಣಬಹುದು. ಆದರೆ ಅಂತಹ ನಾಯಕ ನಮ್ಮಲ್ಲಿರುವುದು ಹೆಮ್ಮೆಯ ವಿಷಯ' ಎಂದು ಅಭಿಪ್ರಾಯಪಟ್ಟಿದ್ದರು. ರಾಜ್ಯದಲ್ಲಿ ಸಮಾಜವಾದಕ್ಕೆ ಭದ್ರಬುನಾದಿ ಹಾಕಿಕೊಟ್ಟ ಮಹಾಶಯರೆಂಬ ಪ್ರಶಂಸೆಗೂ ಇವರು ಪಾತ್ರರಾಗಿದ್ದರು.

ಶಿಸ್ತು, ಸಂಯಮ, ಸಭ್ಯತೆ ಮತ್ತು ಅಚ್ಚುಕಟ್ಟಾದ ಉಡುಗೆತೊಡುಗೆಗಳಿಗೆ ಹೆಸರಾಗಿದ್ದ ಇವರು 1962 ರಿಂದ 1971ರವರೆಗೂ ವಿಧಾನಸಭಾ ಸದಸ್ಯರಾಗಿದ್ದು ವಿರೋಧ ಪಕ್ಷದ ನಾಯಕರಾಗಿದ್ದು ಕರ್ನಾಟಕದ ರಾಜಕೀಯಕ್ಕೆ ವಿಶೇಷ ಮೆರುಗು ತಂದಿತ್ತರು. 1959 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರ ಕ್ಷೇತ್ರದಿಂದ ಸೆನೆಟ್‌ಗೆ ಆಯ್ಕೆಯಾದರು. ಮುಂದೆ ಸಿಂಡಿಕೇಟ್ ಸದಸ್ಯರೂ ಆದರು. 1971ರವರೆಗೂ ವಿಶ್ವವಿದ್ಯಾನಿಲಯದೊಂದಿಗೆ ಇವರ ಸಂಪರ್ಕ ಮುಂದುವರಿದಿತ್ತು. 1968ರಲ್ಲಿ ಬಹಾಮಸ್

ನಲ್ಲಿ ನಡೆದ ಕಾಮನ್‍ವೆಲ್ತ್‍ನ ಸಂಸದೀಯ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

1971ರ ತರುವಾಯ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ನಡೆದ ಬದಲಾವಣೆಗಳಿಂದಾಗಿ ಇವರು ರಾಜಕೀಯದ ಮುಂಚೂಣಿಯಿಂದ ಹಿಂದೆ ಸರಿಯಬೇಕಾಯಿತು. ಆದರೆ ಆದರ್ಶಯುತ ವ್ಯಕ್ತಿತ್ವ ಬೆಳೆಸಿಕೊಂಡಿದ್ದ ಶಿವಪ್ಪನವರನ್ನು ರಾಜಕೀಯ ಪಕ್ಷಗಳು ಅಲಕ್ಷ ಮಾಡಲಿಲ್ಲ. ಮುಂದೆ ಕಾಂಗ್ರೆಸ್ ಪಕ್ಷ ಸೇರಿ 1974ರಲ್ಲಿ ವಿಧಾನಪರಿಷತ್ ಸದಸ್ಯರಾದರು. 1978 ರಿಂದ 1980 ರವರೆಗೂ ವಿಧಾನ ಪರಿಷತ್‍ನ ಸಭಾಪತಿಗಳಾಗಿದ್ದರು. ತಮ್ಮ ವ್ಯಕ್ತಿತ್ವ ಮತ್ತು ಅನುಭವಗಳಿಂದ ಈ ಹುದ್ದೆಗೆ ಗೌರವ ತಂದರು. ಅನಂತರ ಜನತಾದಳ ಪಕ್ಷ ಸೇರಿದ ಇವರು ಅದರ ರಾಜ್ಯ ಉಪಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದರು (1989-90). ಇವರು 1995 ಮಾರ್ಚ್ 27ರಂದು ನಿಧನರಾದರು. ಇವರ ಪತ್ನಿ ಜಯಲಕ್ಷ್ಮಮ್ಮ. **(ಡಿ.ಎಸ್.ಜೆ.)**

**ಶಿವಪ್ಪನಾಯಕ:** ಕೆಳದಿ ರಾಜಮನೆತನದ ಪ್ರಸಿದ್ಧ ದೊರೆ (ಸು. 1645-60). ವೀರಭದ್ರನಾಯಕನ ತರುವಾಯ ಅವನಿಗೆ ಮಕ್ಕಳಿರಲಿಲ್ಲವಾಗಿ ಚಿಕ್ಕ ಸಂಕಣ್ಣನಾಯಕನ ಮೊಮ್ಮಗ, ಸಿದ್ಧಪ್ಪನಾಯಕನ ಹಿರಿಯ ಮಗನಾದ ಈತ ಪಟ್ಟಕ್ಕೆ ಬಂದ. ಈತ ವೀರಭದ್ರನಾಯಕನ ಆಳಿಕೆಯಲ್ಲಿ ಆತನ ಬಲಗೈಯಂತಿದ್ದು, ಆಡಳಿತದಲ್ಲಿ ಅಪಾರ ಅನುಭವ ಪಡೆದಿದ್ದ. ಇವನ ಆಳಿಕೆಯಲ್ಲಿ ಕೆಳದಿ ಅರಸು ಮನೆತನದ ಪ್ರಭಾವ ಬೆಳೆಯಿತು.

ಬಿಜಾಪುರದ ಸೈನ್ಯದ ಮುತ್ತಿಗೆಯಿಂದ ವೆಲ್ಲೂರಿನಲ್ಲಿ ನೆಲಸಿದ್ದ ವಿಜಯನಗರ ವಂಶದ ಶ್ರೀರಂಗರಾಯ ಅಲ್ಲಿಂದ ಓಡಿಹೋಗಬೇಕಾಯಿತು. ಈ ಸಂದರ್ಭದಲ್ಲಿ ಶಿವಪ್ಪನಾಯಕ ವೆಲ್ಲೂರಿನಿಂದ ಬಿಜಾಪುರದ ಸೈನ್ಯವನ್ನು ಓಡಿಸಿ ಶ್ರೀರಂಗರಾಯ ಪುನಃ ಅಲ್ಲಿ ನೆಲಸುವಂತೆ ಮಾಡಿ, ಅವನಿಂದ ಪರವಾರಣವಾರಣ, ರಾಮಬಾಣ ಇತ್ಯಾದಿ ಬಿರುದುಗಳನ್ನೂ ಖಿಲ್ಲತ್ತುಗಳನ್ನೂ ಪಡೆದ. ಮತ್ತೆ ಶ್ರೀರಂಗರಾಯ ತನ್ನ ರಾಜ್ಯವನ್ನು ಕಳೆದುಕೊಂಡಾಗ, ಶಿವಪ್ಪನಾಯಕ ಆತನಿಗೆ ಸಕ್ಕರೆಪಟ್ಟಣದ ಅಧಿಪತ್ಯ ವನ್ನು ಕೊಟ್ಟ. ವಿಜಯನಗರ ಸಾಮ್ರಾಜ್ಯವನ್ನು ಪುನರುಜ್ಜೀವಿಸ ಬೇಕೆಂಬ ಉದಾತ್ತ ಹಂಬಲ ಇವನದಾಗಿತ್ತು. ಸೋದೆ, ಬೀಳಗಿ, ತರೀಕೆರೆ ಮುಂತಾದ ಪಾಳೆಯಗಾರರ ಸೈನ್ಯ ಸಹಾಯದಿಂದ ಬೇಲೂರನ್ನು ಗೆದ್ದುಕೊಂಡು ಶ್ರೀರಂಗರಾಯನಿಗೆ ಕೊಟ್ಟು ರಾಯನ ಸಂಸ್ಥಾನವನ್ನು ಶಿವಪ್ಪ ನೆಲೆಗೊಳಿಸಿದ ಎಂದು ಕೆಳದಿನೃಪವಿಜಯದಲ್ಲಿ ಹೇಳಿದೆ. ಅದೇ ಗ್ರಂಥದಲ್ಲಿ ಹೇಳಿದಂತೆ ಶಿವಪ್ಪನಾಯಕ ಪಶ್ಚಿಮತೀರ ಪ್ರದೇಶದಲ್ಲಿ ಮಂಗಳೂರು, ಮಳವೆ, ಕಟ್ಟೆಕೀಳೂರು, ಬೇಕಲು, ಚಿತ್ತಾರಿ ಕೋಟೆಗಳನ್ನೂ ಗೆದ್ದ. ಚಂದ್ರಗಿರಿ ಕೋಟೆಯನ್ನು ಬಲಪಡಿಸಿದ. ಪೋರ್ಚುಗೀಸರ ಮೇಲೆ ಯುದ್ಧಸಾರಿ ಅವರನ್ನು ಮಂಗಳೂರಿನಲ್ಲಿ ಸೋಲಿಸಿದ. ಹೊನ್ನಾವರದಿಂದ ಅವರನ್ನು ಓಡಿಸಿದ. ಕಾಂಬೋಲಿಮ್ ಬಳಿ ಶಿವಪ್ಪನಾಯಕನಿಗೂ ಪೋರ್ಚುಗೀಸರಿಗೂ ಘೋರವಾದ ಕದನವಾಗಿ ನಾಯಕ ಗೆದ್ದ. ಪೋರ್ಚುಗೀಸರ ಬಲ ಕುಗ್ಗಿ ಪಶ್ಚಿಮತೀರದಲ್ಲಿ ಮಿರ್ಜಿಯಿಂದ ಕಾಸರಗೋಡಿನವರೆಗಿನ ತೀರಪ್ರದೇಶ ಶಿವಪ್ಪನಾಯಕನ ಹತೋಟಿಗೆ ಬಂತು. ಈತ ಮಲೆಯಾಳದೇಶಕ್ಕೂ ನುಗ್ಗಿ ಯಾರಿಗೂ ಬಗ್ಗದ ನಾಯಕರನ್ನು ಜಯಿಸಿ, ನೀಲೇಶ್ವರದ ಜಯಸ್ತಂಭವನ್ನು ನಿಲ್ಲಿಸಿದ.

ಬಿಜಾಪುರದ ಮಹಮ್ಮದ್ ಆದಿಲ್ ಷಾನ ಮರಣದ ಅನಂತರ ಇಕ್ಕೇರಿ, ಸೊರಬ, ಉಡುಗಣಿ, ಮಹದೇವಪುರದ ಕೋಟೆಗಳನ್ನೂ ಶಿರಸಿ, ಬನವಾಸಿ, ಹೇರೂರು, ಬೋಳೂರು, ಸೋದೆ ಮುಂತಾದ ಸ್ಥಳಗಳನ್ನೂ ಗೆದ್ದುಕೊಂಡ. ಸೋದೆಯ ದೊರೆ ಮಧುಲಿಂಗನಾಯಕನ ಬಿನ್ನಹವನ್ನು ಮನ್ನಿಸಿ ಅವನ ರಾಜ್ಯವನ್ನು ಹಿಂತಿರುಗಿಕೊಟ್ಟ. ಆರಗ, ಗುತ್ತಿ, ಮಂಗಳೂರು ಮತ್ತು ಪಶ್ಚಿಮ ಕರಾವಳಿ ಪ್ರದೇಶವನ್ನು ಶಿವಪ್ಪನಾಯಕ ಆಳುತ್ತಿದ್ದನೆಂಬ ಸಂಗತಿ ಒಂದು ಶಾಸನದಿಂದ ವ್ಯಕ್ತವಾಗುತ್ತದೆ.

ಶ್ರೀರಂಗರಾಯನ ಕೈತಪ್ಪಿಹೋಗಿದ್ದ ಶ್ರೀರಂಗಪಟ್ಟಣವನ್ನು ಮರಳಿ ದೊರಕಿಸಿಕೊಡುವ ಉದ್ದೇಶದಿಂದ ಈತ ದೊಡ್ಡ ಸೈನ್ಯದೊಂದಿಗೆ ಶ್ರೀರಂಗಪಟ್ಟಣದ ಮೇಲೆ ಏರಿಹೋದ (1659). ಹಾಸನದ ಹತ್ತಿರ ಗ್ರಾಮವೆಂಬಲ್ಲಿ ಬೀಡು ಬಿಟ್ಟಾಗ ಮೈಸೂರಿನ ದೇವರಾಜ ಒಡೆಯ ದಳವಾಯಿ ಹಂಪರಾಜಯ್ಯನೊಡನೆ ಭಾರಿ ಸೈನ್ಯವನ್ನು ಕಳಿಸಿದ. ಆಗ ಜರುಗಿದ ಯುದ್ಧದಲ್ಲಿ ಶಿವಪ್ಪನಾಯಕನಿಗೆ ಸಂಪೂರ್ಣ ಜಯವಾಯಿತು. ಅನಂತರ ಶ್ರೀರಂಗಪಟ್ಟಣದ ಕೋಟೆಗೆ ಮುತ್ತಿಗೆ ಹಾಕಿದ. ಆ ಕೋಟೆಯ ಅಧಿಕಾರಿಗಳು ಕೆಳದಿಯವರ ಮುತ್ತಿಗೆಯನ್ನು ಎದುರಿಸಲಾಗದೆ. ಬಿಜಾಪುರದ ಸೈನ್ಯದ ನೆರವನ್ನು ಪಡೆಯಲು ಹವಣಿಸಿದರು. ಬಹಲೂ ಖಾನನ ನೇತೃತ್ವದಲ್ಲಿ ಬಿಜಾಪುರದ ಸೈನ್ಯ ಮೈಸೂರಿನವರ ಸಹಾಯಕ್ಕೆ ಬಂತು. ಶಿವಪ್ಪನಾಯಕ ಉಪಾಯದಿಂದ ಅವರನ್ನು ಹಿಂತಿರುಗುವ ಹಾಗೆ ಮಾಡಿದ. ಆದರೆ ಶಿವಪ್ಪನಾಯಕನಿಗೆ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳಲಾಗಲಿಲ್ಲ.

ಶಿವಪ್ಪನಾಯಕ ಸರ್ಕಾರಕ್ಕೂ ಪ್ರಜೆಗಳಿಗೂ ಅನುಕೂಲವಾಗುವಂಥ ಕಂದಾಯದ ಶಿಸ್ತನ್ನು ರೂಪಿಸಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದ. ಶಿವಪ್ಪನಾಯಕನ ಶಿಸ್ತೆಂದು ಇವತ್ತಿಗೂ ಅದರ ಪ್ರಸಿದ್ಧಿಯನ್ನು ಜನರು ಮರೆತಿಲ್ಲ. ರೈತರಿಗೆ ಬೇಕಾದಷ್ಟು ಸಹಾಯ ಮಾಡಿ ಒಂದು ಗೋಪಾದ ದಷ್ಟು ಭೂಮಿ ಸಹ ಪಡುಬೀಳದ ಹಾಗೆ ನೋಡಿಕೊಂಡನೆಂದೂ ಬಿದನೂರು ನಗರವನ್ನು ಒಂದು ಯೋಜನೆಗನುಸಾರವಾಗಿ ವಿಸ್ತರಿಸಿದ ನೆಂದೂ ಕೆಳದಿನೃಪವಿಜಯ ತಿಳಿಸುತ್ತದೆ. ಇವನ ಶಿಸ್ತಿನಷ್ಟೇ ನ್ಯಾಯ ದೃಷ್ಟಿಯೂ ಪ್ರಖ್ಯಾತವಾಗಿದೆ.

ಶಿವಪ್ಪನಾಯಕ ತುಂಗಭದ್ರಾ ನದಿಯ ತೀರದ ಮೇಲೆ ಶಿವರಾಜಪುರ ವೆಂಬ ಅಗ್ರಹಾರವನ್ನು ಸ್ಥಾಪಿಸಿದ. ಕಾಶಿಕ್ಷೇತ್ರದಲ್ಲಿ ಅನೇಕ ದಾನಧರ್ಮ ಪೂಜೆಗಳು ನಡೆಯುವಂತೆ ನಿಯಮಿಸಿದ. (ಕಾಶಿಯಲ್ಲಿರುವ ಜಂಗಮವಾಡಿ ಯಲ್ಲಿ ಇವನ ಭಾವಚಿತ್ರವಿದೆ) ರಾಮೇಶ್ವರದಿಂದ ಕಾಶಿಯವರೆಗಿನ ಪ್ರದೇಶದಲ್ಲಿದ್ದ ಮುಖ್ಯವಾದ ಶೈವ-ವೈಷ್ಣವ ದೇವಾಲಯಗಳಲ್ಲಿ ಪೂಜೆ ನಡೆಯುವ ಹಾಗೆ ಮಾಡಿದ. ಜಂಗಮರಿಗೆ ಊಟದ ವ್ಯವಸ್ಥೆಯನ್ನು ಮಾಡಿದ. ಶೃಂಗೇರಿ ಮತ್ತು ಇತರ ಮಠಗಳಿಗೆ ಪರಂಪರಾಗತ ರಾಜಾಶ್ರಯ ವನ್ನು ಮುಂದುವರಿಸಿದ.

ಶಿವಪ್ಪನಾಯಕ ಕ್ರೈಸ್ತರಿಗೆ ತನ್ನ ರಾಜ್ಯದಲ್ಲಿ ಉಪದೇಶ ನೀಡುವ ಮತ್ತು ಮತಾಂತರಗೊಳಿಸುವ ಅವಕಾಶ ನೀಡಿದ್ದ. ಆದರೆ ಚರ್ಚಿನ ಅಧಿಕಾರಿಗಳು ಮಾತ್ರ ಭಾರತೀಯರೇ ಆಗಿರಬೇಕೆಂಬ ಇವನ ಕಟ್ಟಳೆ ಇವನ ದೇಶಾಭಿಮಾನಕ್ಕೆ ಒಳ್ಳೆಯ ನಿದರ್ಶನ.

ಶಿವಪ್ಪನಾಯಕ ಸು. 1660ರಲ್ಲಿ ನಿಧನನಾದ. ಇವನಿಗೆ ಲಿಂಗಮ್ಮಾಜಿ ಮತ್ತು ಶಾಂತಮ್ಮಾಜಿ ಎಂಬ ಇಬ್ಬರು ರಾಣಿಯರು, ಭದ್ರಪ್ಪ ಮತ್ತು ಸೋಮಶೇಖರ ಎಂಬ ಇಬ್ಬರು ಗಂಡುಮಕ್ಕಳು ಇದ್ದರು.

ಕೆಳದಿ ಅರಸರಲ್ಲಿ ಶಿವಪ್ಪನಾಯಕ ಶಿಖರವ್ಯಕ್ತಿ. ಇವನು ಪರಾಕ್ರಮ, ಸ್ವಾಮಿನಿಷ್ಠೆ, ಮುತ್ಸದ್ದಿತನ, ಆಡಳಿತ ಕೌಶಲ್ಯ, ನ್ಯಾಯದೃಷ್ಟಿ, ಪರಧರ್ಮ ಸಹಿಷ್ಣುತೆಗಳಿಂದ ಉತ್ತಮವಾಗಿ ರಾಜ್ಯವಾಳಿ, ವೀರಭದ್ರನಾಯಕನ ಕಾಲದಲ್ಲಿ ಶಿಥಿಲವಾಗಿದ್ದ ಕೆಳದಿ ರಾಜ್ಯದ ದೇಶಕೋಶಗಳನ್ನೂ ಕೀರ್ತಿಯನ್ನೂ ವರ್ಧಿಸಿದ. **(ಜಿ.ಎಸ್.ಡಿ.)**

**ಶಿವಮಾರ I:** ತಲಕಾಡು ಗಂಗವಂಶದ ರಾಜ (ಸು. 679-725). ಮುಷ್ಕರನ ಪುತ್ರ ಹಾಗೂ ಭೂವಿಕ್ರಮನ ತಮ್ಮ. ನವಕಾಮನೆಂದೂ ಹೆಸರಿದ್ದ ಈತನಿಗೆ ಶಿಷ್ಟಪ್ರಿಯ, ಅವನಿಮಹೇಂದ್ರ, ಸ್ಥಿರವಿನೀತ ಇತ್ಯಾದಿ ಬಿರುದುಗಳಿದ್ದುವು. ಭೂವಿಕ್ರಮನಿಗೆ ಪ್ರಾಯಃ ಮಕ್ಕಳಿಲ್ಲದಿರಲು ಈತ ಪಟ್ಟಕ್ಕೆ ಬಂದನೆಂದು ತೋರುತ್ತದೆ.

ಕೊಂಗಲನಾಡು, ತೊಱೆನಾಡು ಮತ್ತು ಮಲೆನಾಡುಗಳನ್ನು ಆಳುತ್ತಿದ್ದ ಎಱೆಗಂಗ, ಅಲ್ಲದೆ ಪಲ್ಲವೇಲರಸ, ತುಪ್ಪೂರಾಲರಸ, ಜಯ ಮತ್ತು ವೃದ್ಧ ಎಂಬುವರು ಇವನ ಅಧೀನದಲ್ಲಿದ್ದರು. ಕೊನೆಯ ಇಬ್ಬರು ಪಲ್ಲವ ಯುವರಾಜನೊಬ್ಬನ ಮಕ್ಕಳು. ಇವನ ಸಮಕಾಲೀನನಾದ ಚಳುಕ್ಯ ವಿಜಯಾದಿತ್ಯನ ಶಾಸನಗಳಲ್ಲಿ ಗಂಗರು ಇವನ ಅಧೀನರೆಂದು ಹೇಳಿಕೊಂಡಿದ್ದರೂ ಗಂಗಶಾಸನಗಳಲ್ಲಿ ಈ ಅಂಶದ ಪ್ರಸ್ತಾಪವಿಲ್ಲ. ಪ್ರಾಯಶಃ ಈ ಕಾಲದಲ್ಲಿ ಗಂಗ ಮತ್ತು ಚಳುಕ್ಯ ರಾಜರಲ್ಲಿ ಸ್ನೇಹ ಸಂಬಂಧವಿದ್ದಂತೆ ತೋರುತ್ತದೆ.

ಶಿವಮಾರನ ಮರಣಾನಂತರ ಇವನ ಮೊಮ್ಮಗ ಶ್ರೀಪುರುಷ ರಾಜ್ಯವಾಳಲಾರಂಭಿಸಿದ. ಶಿವಮಾರನಿಗೆ ಒಬ್ಬ ಮಗನಿದ್ದು ಅವನು ತಂದೆಗಿಂತ ಮೊದಲೇ ಗತಿಸಿರಬೇಕೆಂದು ಊಹಿಸಲಾಗಿದೆ. (ಎಸ್.ಜಿ.)

**ಶಿವಮಾರ II:** ತಲಕಾಡು ಗಂಗವಂಶದ ದೊರೆ (ಸು. 788–812). ಸೈಗೊಟ್ಟ ಶಿವಮಾರನೆಂದೂ ಪ್ರಸಿದ್ಧನಾದ ಇವನು ಶ್ರೀಪುರುಷನ ಮಗ. ತನ್ನ ತಂದೆಯ ಕಾಲದಲ್ಲಿ ಈತ ಕದಂಬೂರು, ಕುಣಿಗಲ್ನಾಡು ಇತ್ಯಾದಿಗಳನ್ನು ಆಳುತ್ತಿದ್ದ. ಇವನ ಆಳ್ವಿಕೆಯ ಕಾಲ ಸು. 36 ವರ್ಷಗಳೆಂದು ತಿಳಿದರೂ ಇವನು ಸಿಂಹಾಸನವನ್ನು ಅನುಭವಿಸಿದ್ದು ಎಲ್ಲೋ ಕೆಲವು ವರ್ಷಗಳು ಮಾತ್ರ. ಪಟ್ಟಕ್ಕೆ ಬಂದ (ಸು. 788) ತರುಣದಲ್ಲಿಯೇ ರಾಷ್ಟ್ರಕೂಟ ಧ್ರುವ ದಂಡೆತ್ತಿ ಬಂದು ಮುದುಗುಂದೂರು ಎಂಬಲ್ಲಿ ನಡೆದ ಉಗ್ರಕದನದಲ್ಲಿ ಇವನನ್ನು ಸೋಲಿಸಿ ಸೆರೆಹಿಡಿದು ತನ್ನ ಮಗ ಸ್ತಂಭನಿಗೆ ಗಂಗರಾಜ್ಯದ ಅಧಿಕಾರವನ್ನು ವಹಿಸಿದ. ಮುಮ್ಮಡಿ ಗೋವಿಂದ ರಾಷ್ಟ್ರಕೂಟ ಸಿಂಹಾಸನವನ್ನೇರಿದಾಗ ಅವನ ಅಣ್ಣ ಸ್ತಂಭ ಮತ್ತು ಇತರರಿಂದ ಒದಗಿಬಂದ ಪ್ರತಿಭಟನೆಯ ನಿವಾರಣೆಗೆ ಶಿವಮಾರನನ್ನು ಸೆರೆಯಿಂದ ಬಿಟ್ಟು ಗಂಗರಾಜ್ಯವನ್ನು ಅವನಿಗೆ ಮತ್ತೆ ವಹಿಸಿ ಸ್ತಂಭನ ವಿರುದ್ಧ ಎತ್ತಿಕಟ್ಟಿದ. ಕೆಲವು ಕಾಲ ಗೋವಿಂದನ ಪರವಾಗಿ ಪೂರ್ವ ಚಾಳುಕ್ಯರ ವಿರುದ್ಧ ಹೋರಾಡಿದರೂ ಕೊನೆಗೆ ಶಿವಮಾರ ಗೋವಿಂದನಿಗೇ ವಿರೋಧಿಯಾದ. ಗೋವಿಂದ ಮತ್ತೆ ಗಂಗರಾಜ್ಯದ ಮೇಲೆ ದಾಳಿಮಾಡಿ ಅನಂತರ ರಾಜಿಯಾದ್ದರಿಂದ, ಗಂಗರಾಜ್ಯದ ಪ್ರಾಂತ್ಯಾಧಿಪತ್ಯ ಸ್ತಂಭನಿಗೇ ಉಳಿಯಿತು. ಶಿವಮಾರ ಪ್ರಾಯಶಃ ಸೆರೆಯಲ್ಲೇ ತನ್ನ ಕೊನೆಗಾಲವನ್ನು ಕಳೆದ. ಈತ ಕಾಗೆಮೊಗೆಯೂರಿನ ರಣರಂಗದಲ್ಲಿ ಮಡಿದ ಎಂಬ ಹೇಳಿಕೆಯೂ ಇದೆ. ಸು.799ರ ಹೊತ್ತಿಗೆ ಇವನ ಮಗ ಮಾರಸಿಂಹ, ಪ್ರಾಯಶಃ ರಾಷ್ಟ್ರಕೂಟರ ನೆರವಿನಿಂದ ಗಂಗರಾಜ್ಯದ ಪಟ್ಟವನ್ನು ಅನುಭವಿಸುತ್ತಿದ್ದ.

ಶಿವಮಾರ ಗಜಾಷ್ಟಕ ಹಾಗೂ ಸೇತುಬಂಧ ಎಂಬ ಕೃತಿಗಳನ್ನು ಬರೆದಿದ್ದಾನೆ. ಇವೆರಡೂ ಅನುಪಲಬ್ಧ. ಆದರೆ ಗಜಾಷ್ಟಕ ಒನಕೆವಾಡಾಗುವಷ್ಟು ಜನಪ್ರಿಯ ಕೃತಿಯಾಗಿತ್ತೆಂದು ಶಾಸನಗಳಿಂದ ತಿಳಿಯುತ್ತದೆ. ಈತ ಕುಮ್ಮಡವಾಡ (ಬೆಳಗಾಂವಿ ಜಿಲ್ಲೆಯ ಕಲ್ಭಾವಿ) ಮತ್ತು ಶ್ರವಣಬೆಳಗೊಳದಲ್ಲಿ ಜೈನಬಸದಿಗಳನ್ನು ನಿರ್ಮಿಸಿದ. (ಎಸ್.ಜಿ.)

**ಶಿವಮೂರ್ತಿಶಾಸ್ತ್ರೀ, ಬಿ.:** 1903–76. ವಿದ್ವಾಂಸರು, ಕೀರ್ತನಕಾರರು ಮತ್ತು ಪತ್ರಿಕೋದ್ಯಮಿಗಳು. ಇವರು ತುಮಕೂರಿನಲ್ಲಿ 1903 ಫೆಬ್ರವರಿ 23ರಂದು ಹುಲಿಕುಂಟೆ ಮಠದ ಬಸವಯ್ಯಸ್ವಾಮಿ ಹಾಗೂ ನೀಲಮ್ಮನವರ ಪುತ್ರರಾಗಿ ಹುಟ್ಟಿದರು. ಇವರ ಬಾಲ್ಯದ ವಿದ್ಯಾಭ್ಯಾಸ ತುಮಕೂರಿನಲ್ಲಿ ನಡೆಯಿತು. 1917ರಲ್ಲಿ ಕನ್ನಡ ಮುಲ್ಕಿ ಪರೀಕ್ಷೆಯಲ್ಲೂ 1923ರಲ್ಲಿ ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲೂ ಉತ್ತೀರ್ಣರಾದರು. ಈ ನಡುವೆ 1918ರಲ್ಲಿ ಇವರ ತಂದೆಯವರು ತೀರಿಕೊಂಡಿದ್ದರಿಂದ ಸಂಸಾರದ ಹೊರೆ ಶಾಸ್ತ್ರಿಗಳ ಮೇಲೆ ಬಿತ್ತು. ಹೀಗಾಗಿ ಇವರು ತಮ್ಮ ವ್ಯಾಸಂಗವನ್ನು ಮುಂದುವರಿಸಲಾಗದೆ, ಗುಬ್ಬಿಯ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಸ್ವಲ್ಪಕಾಲ ಅಧ್ಯಾಪಕರಾದರು (1924–25). ಆಗ್ಗೆ ತುಮಕೂರಿನಲ್ಲಿ ನೆಲೆಸಿ ವಿಶ್ರಾಂತಿ ಜೀವನ ನಡೆಸುತ್ತಿದ್ದ ಪಿ.ಆರ್. ಕರಿಬಸವಶಾಸ್ತ್ರಿಗಳ ಬಳಿ ಇವರು ಸುಮಾರು ಆರು ವರ್ಷಗಳ ಕಾಲ ಶಿಷ್ಯರಾಗಿದ್ದುಕೊಂಡು ಕನ್ನಡ ಮತ್ತು ಸಂಸ್ಕೃತಗಳ ಪ್ರೌಢದರ್ಜೆಯ ಸಾಹಿತ್ಯ ಹಾಗೂ ಧರ್ಮಗ್ರಂಥಗಳ ಪರಿಚಯ ಮಾಡಿಕೊಂಡರು. ಮಾಗಡಿ ವೀರಪ್ಪಶಾಸ್ತ್ರಿ ಮತ್ತು ಮೈಸೂರು ಶಿವಪ್ಪಶಾಸ್ತ್ರಿ ಮೊದಲಾದವರ ಪ್ರೋತ್ಸಾಹದಿಂದ ಕೀರ್ತನಕಲೆಯಲ್ಲಿ ಅಭಿರುಚಿಯನ್ನು

ಬೆಳೆಸಿಕೊಂಡ ಇವರು ಕರ್ನಾಟಕವನ್ನೆಲ್ಲ ಸಂಚರಿಸಿ ಕರ್ನಾಟಕ ಏಕೀಕರಣ ವನ್ನು ಕುರಿತ ಅನೇಕ ಕೀರ್ತನೆಗಳನ್ನು ಮಾಡಿ ಒಳ್ಳೆಯ ಕೀರ್ತನಕಾರರೆಂದು ಹೆಸರಾದರು, 1927ರಲ್ಲಿ ತುಮಕೂರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬಂದಿದ್ದಾಗ ಸ್ವಾಗತ ಸಮಿತಿಯ ಪರವಾಗಿ ಇವರು ನಾಲ್ವಡಿ ಕೃಷ್ಣರಾಜ ವಿಳಾಸವೆಂಬ ಚಂಪೂಕಾವ್ಯವನ್ನು ರಚಿಸಿ, ಸಭೆಯಲ್ಲಿ ಓದಿ ಕೃಷ್ಣರಾಜ ಒಡೆಯರ ಮೆಚ್ಚುಗೆಗೆ ಪಾತ್ರರಾದರು. ಅದೇ ವರ್ಷ ಗಾಂಧೀಜಿಯವರು ತುಮಕೂರಿಗೆ ಬಂದಾಗ ಶಾಸ್ತ್ರಿಗಳು ಗಾಂಧೀಗೀತೆಗಳು ಎಂಬ ಕವನ ಸಂಕಲನವನ್ನು ರಚಿಸಿ ಅವರಿಗೆ ಅರ್ಪಿಸಿದರು. ಆಗ್ಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದವರ ಅಪೇಕ್ಷೆಯಂತೆ ತುಮಕೂರನ್ನು ಬಿಟ್ಟು ಬೆಂಗಳೂರಿಗೆ ಬಂದು ನೆಲಸಿದ ಇವರು ಬೆಂಗಳೂರಿನಲ್ಲಿ ತಮ್ಮ ಕೀರ್ತನ ಕಲೆಯ ಜೊತೆಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿದರು.

ಇವರು ಕನ್ನಡ ಸಾಹಿತ್ಯ, ವೀರಶೈವಧರ್ಮ ಮೊದಲಾದ ವಿಷಯಗಳನ್ನು ಕುರಿತು ಜಯಕರ್ನಾಟಕ, ಶಿವಾನುಭವ, ವಿಶ್ವಕರ್ನಾಟಕ, ಲೋಕಮತ, ನವಕರ್ನಾಟಕ ತಾಯಿನಾಡು ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನೂ ಪ್ರಕಟಿಸಿದರು. ಶರಣ ಸಾಹಿತ್ಯ ಗ್ರಂಥಮಾಲೆಯನ್ನು ಆರಂಭಿಸಿ ಮೂವತ್ತೈದಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಇವರೇ ಸಂಪಾದಿಸಿ ಪ್ರಕಟಿಸಿದ ಕೆಲವು ಕೃತಿಗಳಿವು: ನಿಜಗುಣರ ಪುರಾತನರ ತ್ರಿವಿಧಿ, ರಾಘವಾಂಕನ ವೀರೇಶಚರಿತೆ, ಕೊಂಡಗುಳಿ ಕೇಶಿರಾಜನ ಷಡಕ್ಷರಮಂತ್ರಮಹಿಮೆ, ಗುರುಸಿದ್ಧನ ಮಾದೇಶ್ವರ ಸಾಂಗತ್ಯ. ಈ ಮಾಲೆಯಲ್ಲಿ ಪ್ರಕಟವಾಗಿರುವ ಇವರ ಕೆಲವು ಸ್ವತಂತ್ರ ಕೃತಿಗಳಿವು: ವೀರಶೈವ ಸಾಹಿತ್ಯ ಮತ್ತು ಇತಿಹಾಸ (ಭಾಗ 1,2,3), ವೀರಶೈವ ಮಹಾಪುರುಷರು (ಸಂಪುಟ 1), ಕರ್ನಾಟಕ ಸಂದರ್ಶನ.

ಇವರ ಪತ್ರಿಕಾ ವ್ಯವಸಾಯವೂ ಗಣ್ಯವಾದುದು. 1938ರಲ್ಲಿ ಶರಣಸಾಹಿತ್ಯ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಅದನ್ನು 1972ರವರೆಗೆ ನಡೆಸಿಕೊಂಡು ಬಂದರು. ಈ ಪತ್ರಿಕೆಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ನೂರಾರು ಲೇಖನಗಳು ಬೆಳಕು ಕಂಡಿವೆ. ಕರ್ನಾಟಕ ಏಕೀಕರಣದಲ್ಲೂ ಭಾಗವಹಿಸಿದ್ದ ಇವರು ಸ್ವತಂತ್ರ ಕರ್ನಾಟಕ ಎಂಬ ವಾರಪತ್ರಿಕೆಯನ್ನು 1939ರಲ್ಲಿ ಆರಂಭಿಸಿ, ಸುಮಾರು 5 ವರ್ಷಗಳ ಕಾಲ ನಡೆಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನುಡಿ (1946) ಮತ್ತು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳ ಸಂಪಾದಕರಾಗಿಯೂ (1957–62) ಇವರು ಸೇವೆಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಇವರು ಸುಮಾರು ಎಂಟು ವರ್ಷಗಳ ಕಾಲ (1956–64) ಸೇವೆಸಲ್ಲಿಸಿದರು. ಇವರ ಕಾಲದಲ್ಲಿ ಪರಿಷತ್ತಿನ ಕನ್ನಡ–ಕನ್ನಡ ನಿಘಂಟುವಿನ ಕಾರ್ಯಕ್ಕೆ ಸರ್ಕಾರದ ಆರ್ಥಿಕ ಸಹಾಯ ದೊರಕಿತಲ್ಲದೆ, ಪರಿಷತ್ತಿನ ಆರ್ಥಿಕ ಸ್ಥಿತಿಯೂ ಸುಧಾರಿಸಿತು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ಸಂಪಾದಕ ಮಂಡಳಿಯ ಸದಸ್ಯರಾಗಿಯೂ (1968–76) ಇವರು ಸೇವೆಸಲ್ಲಿಸಿದ್ದಾರೆ.

ಇವರು ನಾಡುನುಡಿಗಳಿಗೆ ಸಲ್ಲಿಸಿದ ಸೇವೆಯನ್ನು ಗಮನಿಸಿ ಕನ್ನಡನಾಡಿನ ಅರಮನೆ ಗುರುಮನೆಗಳೂ ಹೊರನಾಡಿನ ಕನ್ನಡ ಸಂಘಸಂಸ್ಥೆಗಳೂ ಇವರಿಗೆ ಹಲವು ಬಗೆಯ ಗೌರವಗಳನ್ನು ಸಲ್ಲಿಸಿವೆ. 1936ರಲ್ಲಿ ಮೈಸೂರು ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು. 1948ರಲ್ಲಿ ಇವರಿಗೆ ಅರಮನೆಯಿಂದ ಪಂಡಿತರತ್ನಂ ಪ್ರಶಸ್ತಿ ಲಭಿಸಿತು. ಭಾರತ ಸರ್ಕಾರ 1966ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನಿತ್ತು ಗೌರವಿಸಿತು. ಇವರ ಸ್ನೇಹಿತರು ಮತ್ತು ಹಿತೈಷಿಗಳು 1968ರಲ್ಲಿ ಇವರಿಗೆ ದೇವಗಂಗೆ ಎಂಬ ಅಭಿನಂದನ ಗ್ರಂಥವನ್ನು ಒಪ್ಪಿಸಿದರು. ಕರ್ನಾಟಕ ವಿಶ್ವವಿದ್ಯಾಲಯ 1975ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ.

ಇವರು 1976 ಜನವರಿ 15ರಂದು ಬೆಂಗಳೂರಿನಲ್ಲಿ ನಿಧನರಾದರು.

(ಎಸ್.ಎಸ್.ವಿ.)

**ಶಿವಮೊಗ್ಗ:** ಭಾರತದ ಕರ್ನಾಟಕ ರಾಜ್ಯದ ಬೆಂಗಳೂರು ವಿಭಾಗಕ್ಕೆ ಸೇರಿದ ಒಂದು ಜಿಲ್ಲೆ; ತಾಲ್ಲೂಕು ಮತ್ತು ಮುಖ್ಯ ಪಟ್ಟಣ.

**ಜಿಲ್ಲೆ** : ಪೂರ್ವದಲ್ಲಿ ದಾವಣಗೆರೆ, ಆಗ್ನೇಯ ಮತ್ತು ದಕ್ಷಿಣದಲ್ಲಿ ಚಿಕ್ಕಮಗಳೂರು, ನೈಋತ್ಯ, ಪಶ್ಚಿಮ ಮತ್ತು ವಾಯವ್ಯದಲ್ಲಿ ಉಡುಪಿ ಮತ್ತು ಉತ್ತರ ಕನ್ನಡ, ಉತ್ತರದಲ್ಲಿ ಹಾವೇರಿ ಜಿಲ್ಲೆಗಳು ಈ ಜಿಲ್ಲೆಯನ್ನು ಸುತ್ತುವರಿದಿವೆ. ತೀರ್ಥಹಳ್ಳಿ, ಭದ್ರಾವತಿ, ಶಿವಮೊಗ್ಗ, ಶಿಕಾರಿಪುರ, ಸಾಗರ, ಸೊರಬ, ಹೊಸನಗರ ಇವು ತಾಲ್ಲೂಕುಗಳು. ಜನಸಾಂದ್ರತೆ ಚ.ಕಿಮೀಗೆ 193. ಜಿಲ್ಲೆಯಲ್ಲಿ 7 ತಾಲ್ಲೂಕುಗಳೂ 40 ಹೋಬಳಿಗಳೂ 1430 ಗ್ರಾಮಗಳೂ 12 ಪಟ್ಟಣಗಳೂ ಇವೆ. ಜಿಲ್ಲೆಯ ವಿಸ್ತೀರ್ಣ 8,465 ಚ. ಕಿಮೀ. ಜನಸಂಖ್ಯೆ 16,39,595.

ಜಿಲ್ಲೆಯನ್ನು ಮಲೆನಾಡು, ಅರೆಮಲೆನಾಡು ಮತ್ತು ಮೈದಾನ ಪ್ರದೇಶವೆಂದು ವಿಂಗಡಿಸಬಹುದು. ಜಿಲ್ಲೆಯ ಪಶ್ಚಿಮಕ್ಕಿರುವ ತೀರ್ಥಹಳ್ಳಿ, ಹೊಸ ನಗರ, ಸಾಗರ ಮತ್ತು ಸೊರಬ ತಾಲ್ಲೂಕುಗಳು ಮಲೆನಾಡು ಪ್ರದೇಶದಲ್ಲಿದ್ದು ಜಿಲ್ಲೆಯ ಮುಖ್ಯಭಾಗವನ್ನಾವರಿಸಿವೆ. ಶಿವಮೊಗ್ಗ, ಭದ್ರಾವತಿ ಮತ್ತು ಶಿಕಾರಿಪುರ ತಾಲ್ಲೂಕುಗಳು ಅರೆಮಲೆನಾಡು ಪ್ರದೇಶದಲ್ಲಿವೆ. ಸಹ್ಯಾದ್ರಿ ಶ್ರೇಣಿ ಎಂದು ಕರೆಯುವ ಪಶ್ಚಿಮ ಘಟ್ಟಸಾಲು ಈ ಜಿಲ್ಲೆಯ ಪಶ್ಚಿಮ ಸೆರಗಿನಲ್ಲಿ ಹಾದುಹೋಗಿದೆ. ಇದರಿಂದಾಗಿ ಕಡಲಿಗೆ ಏರಿ ಕಟ್ಟಿದಂತೆ ಉತ್ತರದ ಸೊರಬ ತಾಲ್ಲೂಕಿನಿಂದ ದಕ್ಷಿಣದ ತೀರ್ಥಹಳ್ಳಿ ತಾಲ್ಲೂಕಿನವರೆಗೂ ಎತ್ತರವಾದ ಮತ್ತು ಕಡಿದಾದ ಘಟ್ಟಶ್ರೇಣಿ ಇದೆ. ಈ ಶ್ರೇಣಿ ಪ್ರದೇಶ ದಟ್ಟವಾದ ಕಾಡು, ಕಣಿವೆ ಮತ್ತು ಜಲಪಾತಗಳಿಂದ ಕೂಡಿದ್ದು ವಿಶಿಷ್ಟ ಭೌಗೋಳಿಕ ಲಕ್ಷಣ ಪಡೆದಿದೆ. ಈ ವಲಯ ಇನ್ನೂ ಎತ್ತರದ ಗಿರಿಪರ್ವತಗಳು ರೂಪಿತವಾಗಿರುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಂದುವರಿದಿದೆ. ಆಗುಂಬೆಯಿಂದ ಜೋಗ ಜಲಪಾತದವರೆಗೆ ಒತ್ತಾದ ಕಾಡುಗಳು ಗಿರಿಶಿಖರಗಳು ನಿತ್ಯಹಸಿರು ಸಸ್ಯರಾಶಿ ಮನೋಹರ ದೃಶ್ಯಗಳು ಕಂಡುಬರುತ್ತವೆ. ಹೊಸನಗರ ತಾಲ್ಲೂಕಿನಲ್ಲಿರುವ ಕೊಡಚಾದ್ರಿ ಶಿಖರ 1,343 ಮೀ ಎತ್ತರವಾಗಿದೆ. ಇಲ್ಲಿಂದ ಮುಂದೆ ಸಾಗರ ತಾಲ್ಲೂಕಿನಲ್ಲಿರುವ ಗೋವರ್ಧನಗಿರಿಯವರೆಗೂ ಜಿಲ್ಲೆಯ ಘಟ್ಟಪ್ರದೇಶ ಪಶ್ಚಿಮದತ್ತ ಚಾಚಿದೆ. ಇದರಿಂದಾಗಿ ಸಾಗರ ತಾಲ್ಲೂಕಿನ ಒಂದೆಡೆ ಸಮುದ್ರ ಕೇವಲ 13 ಕಿಮೀ ಸಮೀಪದಲ್ಲಿದೆ. ಇದೇ ತಾಲ್ಲೂಕಿನ ನಾಗವಳ್ಳಿ ಕಣಿವೆ ಸಮುದ್ರಮಟ್ಟದಿಂದ ಕೇವಲ 66.14 ಮೀ ಎತ್ತರದಲ್ಲಿದೆ. ಈ ಶ್ರೇಣಿ ಉಡುಪಿ ಜಿಲ್ಲೆಯ ತೀರಪ್ರದೇಶದ ಕಡೆ ಕಡಿದಾಗಿಯೂ ಒಳನಾಡಿನ ಕಡೆ ಬಳಿದಾಗಿಯೂ ಇದೆ. ಈ ಏಣಿನಂತಿರುವ ದುರ್ಗಮ ಪರ್ವತಪಂಕ್ತಿಯ ಕಣಿವೆ ಕಂದರಗಳಿಂದಾಗಿ ಉಡುಪಿಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯೊಂದಿಗೆ ಸಂಪರ್ಕಿಸುವ ಅನೇಕ ಘಾಟಿ ಮಾರ್ಗಗಳನ್ನು ನಿರ್ಮಿಸಲು ಸಾಧ್ಯವಾಗಿದೆ. ಪಶ್ಚಿಮಘಟ್ಟ ದಿಂದ ಜಿಲ್ಲೆಯ ಒಳಭಾಗಕ್ಕೆ ಪೂರ್ವ ಮತ್ತು ಆಗ್ನೇಯ ಹಾಗೂ ಈಶಾನ್ಯಾಭಿಮುಖವಾಗಿ ಅನೇಕ ಬೆಟ್ಟಸಾಲುಗಳು ಹರಡಿವೆ. ಇಲ್ಲಿ ದಟ್ಟವಾದ ಕಾಡುಗಳು, ಕಣಿವೆಗಳು, ಹೊಳೆಗಳು, ಝರಿಗಳು ಮತ್ತು ಏರುತಗ್ಗು ಭೂಮಿಯ ನಡುವೆ ಅಲ್ಲಲ್ಲಿ ಕಾಣಿಸುವ ಬಯಲುಗಳು ಕೂಡಿ ಮಲೆನಾಡು ಪ್ರದೇಶವಾಗಿದೆ. ಎತ್ತರದ ಗಿರಿಶಿಖರಗಳ ತುದಿಯಲ್ಲಿ ಹುಲ್ಲು ಮಾತ್ರ ಬೆಳೆದಿದ್ದು ವಿರಳವಾಗಿರುವ ಕುರುಚಲು ಮರಗಳಿಂದ ಕೂಡಿದ ಬೋಳುಭಾಗವಿರುತ್ತದೆ. ಈ ಗಿರಿಶ್ರೇಣಿಗಳ ಮಧ್ಯಭಾಗದಲ್ಲಿ ಕುರುಚಲು ಕಾಡು ಮತ್ತು ಬಂಡೆಗಳು ಕಂಡು ಬಂದರೆ, ಕೆಳತಪ್ಪಲಲ್ಲಿ ದಟ್ಟ ಹಸುರುಕಾಡುಗಳು ಮತ್ತು ಕಣಿವೆಗಳಲ್ಲಿ, ತೊರೆಗಳು, ಪ್ರಪಾತಗಳು ಕಂಡುಬರುತ್ತವೆ. ತುಂಗಾನದಿಯ ದಡದ ಮಂಡಗದ್ದೆಯಿಂದ ಉತ್ತರದ ಕಡೆ ಆನಂದಪುರ ಮತ್ತು ಕುಂಸಿ ನಡುವೆ ಬೆಟ್ಟಸಾಲುಗಳು ಹಬ್ಬಿವೆ. ಇಕ್ಕೇರಿಯನ್ನು ಹಾಯ್ದು ತಾಳಗುಪ್ಪದತ್ತ ಇನ್ನೊಂದು ಶ್ರೇಣಿ ಹಬ್ಬಿದೆ. ಒಳನಾಡಿನ ಹೊಸನಗರ ತಾಲ್ಲೂಕಿನ ಹುಮಚದ ಬಳಿ ಭಿಲ್ಲೇಶ್ವರ ಬೆಟ್ಟ ಅಥವಾ ಅಗಸ್ತ್ಯಪರ್ವತ (864 ಮೀ), ಸಾಗರ ತಾಲ್ಲೂಕಿನ ಪಶ್ಚಿಮ ಸರಹದ್ದಿನಲ್ಲಿರುವ ಗೋವರ್ಧನಗಿರಿ ಮತ್ತು ಸೊರಬ ತಾಲ್ಲೂಕಿನಲ್ಲಿರುವ ಚಂದ್ರಗುತ್ತಿ (848 ಮೀ), ತೀರ್ಥಹಳ್ಳಿ ತಾಲ್ಲೂಕಿನ ಕವಲೇದುರ್ಗ (ಭುವನಗಿರಿ, 969 ಮೀ) – ಇವು ಮುಖ್ಯ ಶಿಖರಗಳಾಗಿವೆಯೆನ್ನಬಹುದು. ಸಹ್ಯಾದ್ರಿ ವಲಯದ ಈ ಭಾಗ ಅರಣ್ಯ ಮತ್ತು ಪ್ರಾಣಿಸಂಪತ್ತಿನಿಂದ ಕೂಡಿದ್ದು ಮನೋಹರ ಪ್ರಕೃತಿ ದೃಶ್ಯಗಳ ತವರೆನಿಸಿದೆ.

ಮಲೆನಾಡ ಪ್ರದೇಶದಲ್ಲಿ ಹೆಚ್ಚು ಎತ್ತರವಲ್ಲದ ಬೆಟ್ಟಗಳನ್ನೂ ಬತ್ತ ಬೆಳೆಯುವ ತಗ್ಗು ಬಯಲುಗಳನ್ನೂ ಬಿದಿರು ಕಾಡು ಮತ್ತು ಜೌಗು ಪ್ರದೇಶಗಳನ್ನೂ ಕಾಣಬಹುದು. ಜಿಲ್ಲೆಯ ಪೂರ್ವದ ಕಡೆಗೆ ಬಂದಂತೆಲ್ಲ ಮಲೆನಾಡು ಭಾಗ ಕರಗುತ್ತ ಬಂದು ವಿಶಾಲವಾದ ಬಯಲುಗಳೂ ಕುರುಚಲು ಕಾಡುಗಳೂ ಗೋಚರಿಸುತ್ತವೆ. ಅರೆಮಲೆನಾಡು ಭಾಗದಲ್ಲಿರುವ ಶಿವಮೊಗ್ಗ, ಶಿಕಾರಿಪುರ ತಾಲ್ಲೂಕುಗಳಲ್ಲಿ ಪಶ್ಚಿಮದ ಕಡೆ ಒತ್ತಾದ ಕಾಡುಗಳಿದ್ದರೆ, ಪೂರ್ವದ ಕಡೆ ಬಯಲು ಪ್ರದೇಶವಿದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಹೆಚ್ಚಾಗಿ ಎತ್ತರವಲ್ಲದ ಬೆಟ್ಟಗಳು ತುಂಬಿದ್ದು ಮಲೆನಾಡು ಮತ್ತು ಮೈದಾನ ಪ್ರದೇಶದ ಸಂಗಮಕ್ಷೇತ್ರವಾಗಿದೆ. ಶಿವಮೊಗ್ಗ ತಾಲ್ಲೂಕಿನ ಸುತ್ತಲೂ ಬೆಟ್ಟಗುಡ್ಡಗಳು ಆವರಿಸಿದ್ದು ಮಧ್ಯದಲ್ಲಿ ಬಯಲು ಪ್ರದೇಶವಿದೆ. ಭದ್ರಾವತಿ ತಾಲ್ಲೂಕು ಬಹುಮಟ್ಟಿಗೆ ಇದೇ ಲಕ್ಷಣ ಪಡೆದಿದೆ.

ಈ ಜಿಲ್ಲೆಯ ಬಹುಭಾಗ ಮಲೆನಾಡು ಪ್ರಾಂತದ ಒಂದು ಭಾಗ. ಆದ್ದರಿಂದ ಸಹಜವಾಗಿಯೇ ಇಲ್ಲಿ ಮಳೆ ಅಧಿಕ ಮತ್ತು ನದಿ ತೊರೆಗಳೂ ಹೆಚ್ಚು. ಜೊತೆಗೆ ನೆರೆಯ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಹೆಚ್ಚು ಭಾಗದ ನೀರಿನ ಹರಿವು ಉತ್ತರಕ್ಕಿದ್ದು ಅಲ್ಲಿಯ ಕೆಲವು ನದಿಗಳು ಈ ಜಿಲ್ಲೆಯ ಮೂಲಕ ಹರಿಯುತ್ತವೆ. ತುಂಗಾ, ಭದ್ರಾ, ತುಂಗಭದ್ರಾ, ಶರಾವತಿ, ಕುಮುದ್ವತಿ ಮತ್ತು ವರದಾ ಇಲ್ಲಿಯ ಮುಖ್ಯ ನದಿಗಳು.

ತುಂಗಾ ನದಿ ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟಸಾಲಿನ ಗಂಗಾಮೂಲದ ವರಹಾ ಪರ್ವತದಲ್ಲಿ ಹುಟ್ಟುತ್ತದೆ. ಇದು ಈಶಾನ್ಯದ ಕಡೆ ಶೃಂಗೇರಿ ಮೂಲಕ ಹರಿದು ಒಗ್ಗುಂಜಿ ಬಳಿ ವಾಯವ್ಯದ ಕಡೆ ತಿರುಗಿ ತೀರ್ಥಹಳ್ಳಿಯವರೆಗೂ ಮುಂದುವರಿಯುತ್ತದೆ. ತೀರ್ಥಹಳ್ಳಿ ಬಳಿ ಶೃಂಗೇರಿಯಿಂದ ಹರಿಯುವ ಬೆಗರಹಳ್ಳವನ್ನು ಸೇರಿಕೊಳ್ಳುತ್ತದೆ. ಆಗುಂಬೆ ಕಡೆಯಿಂದ ಮಾಲತಿ ಹೊಳೆ ಬಂದು ಕೂಡುತ್ತದೆ. ತೀರ್ಥಹಳ್ಳಿಯಿಂದ ಸ್ವಲ್ಪ ದೂರ ಪೂರ್ವಕ್ಕೆ ಹರಿದು ಮತ್ತೆ ಈಶಾನ್ಯಕ್ಕೆ ತಿರುಗಿ ಶಿವಮೊಗ್ಗ ದಾಟಿ ಕೂಡಲಿ ಬಳಿ ಭದ್ರಾ ನದಿಯೊಂದಿಗೆ ಸೇರಿ ತುಂಗಭದ್ರಾ ಎಂಬ ಹೆಸರಿನಿಂದ ಮುಂದೆ ಹರಿಯುತ್ತದೆ. ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಬಳಿ ಇದು ಏಳು ಕವಲಾಗಿ ಸ್ವಲ್ಪದೂರ ಹರಿಯುತ್ತದೆ. ಇದನ್ನು ಏಳುಕಲ್ಲು ಸೀಳು ಎಂದು ಕರೆಯುತ್ತಾರೆ. ತುಂಗಾ ಈ ಜಿಲ್ಲೆಯಲ್ಲಿ 64.4 ಕಿಮೀ ದೂರ ಹರಿಯುತ್ತದೆ. ಭದ್ರಾ ಇನ್ನೊಂದು ಮುಖ್ಯ ನದಿ. ಚಿಕ್ಕಮಗಳೂರು ಜಿಲ್ಲೆಯ ಗಂಗಾಮೂಲದ ವರಹಾ ಪರ್ವತದಲ್ಲಿ ಹುಟ್ಟುತ್ತದೆ. ಇದು ಬಾಳೆಹೊನ್ನೂರು ಮೂಲಕ ಈಶಾನ್ಯ ದಿಕ್ಕಿನಲ್ಲಿ ಹರಿದು ಲಕ್ಕವಳ್ಳಿ ದಾಟಿ ಉತ್ತರಕ್ಕೆ ತಿರುಗಿ ಭದ್ರಾವತಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮುಂದೆ ಭದ್ರಾವತಿ ಮತ್ತು

ಹೊಳೆಹೊನ್ನೂರುಗಳನ್ನು ದಾಟಿ ಕೂಡಲಿಯಲ್ಲಿ ತುಂಗಾನದಿಯೊಡನೆ ಕೂಡುತ್ತದೆ. ಈ ನದಿ ಜಿಲ್ಲೆಯಲ್ಲಿ 51.5 ಕಿಮೀ ದೂರ ಹರಿಯುತ್ತದೆ. ಶಿವಮೊಗ್ಗ ನಗರದ ಈಶಾನ್ಯದಲ್ಲಿ 14 ಕಿಮೀ ದೂರದ ಕೂಡಲಿಯಲ್ಲಿ ತುಂಗಾ ಮತ್ತು ಭದ್ರಾ ನದಿಗಳು ಕೂಡಿ ಮುಂದೆ ತುಂಗಭದ್ರಾ ನದಿಯಾಗಿ ಹರಿಯುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರಾ 48.3 ಕಿಮೀ ದೂರ ಹರಿಯುತ್ತದೆ. ತುಂಗಾ ಮತ್ತು ಭದ್ರಾ ನದಿಗಳಿಗೆ



ಲಕ್ಕವಳ್ಳಿಯ ಬಳಿ ನಿರ್ಮಿಸಲಾದ ಭದ್ರಾಜಲಾಶಯ

ಸಂಬಂಧಿಸಿದಂತೆ ಪೌರಾಣಿಕ ಕಥೆಗಳಿವೆ **(ನೋಡಿ– ತುಂಗಭದ್ರಾ)**. ತುಂಗಭದ್ರಾನದಿ ಕಲ್ಲಿನಿಂದ ಕೂಡಿದ ಪಾತ್ರದಲ್ಲಿ ರಭಸದಿಂದ ಹರಿಯುತ್ತದೆ. ಕೆಲವು ನಿರ್ದಿಷ್ಟ ಸ್ಥಳಗಳನ್ನು ಬಿಟ್ಟರೆ ಉಳಿದೆಡೆ ದೋಣಿ ಸಂಚಾರಕ್ಕೆ ಈ ನದಿ ಯೋಗ್ಯವಾಗಿಲ್ಲ. ಶರಾವತಿ **(ನೋಡಿ– ಶರಾವತಿ)** ನದಿ ತೀರ್ಥಹಳ್ಳಿ ತಾಲ್ಲೂಕಿನ ಕವಲೆದುರ್ಗದ ಬಳಿ ಹುಟ್ಟುತ್ತದೆ. ಇದು ವಾಯವ್ಯ ದಿಕ್ಕಿನಲ್ಲಿ ಹೊಸನಗರ ಮತ್ತು ಸಾಗರ ತಾಲ್ಲೂಕುಗಳ ಮೂಲಕ ಹರಿಯುತ್ತದೆ. ಇದಕ್ಕೆ ಹರಿದ್ರಾವತಿ ಮತ್ತು ಎಣ್ಣೆಹೊಳೆ ಎರಡು ಮುಖ್ಯ ಉಪನದಿಗಳು. ಪಶ್ಚಿಮ ಘಟ್ಟಸಾಲಿನಲ್ಲಿ ಹುಟ್ಟುವ ಹತ್ತಾರು ತೊರೆಗಳು ಈ ನದಿಯನ್ನು ಕೂಡುತ್ತವೆ. ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಹರಿಯುವ ಈ ನದಿ ಕಾರ್ಗಲ್ ಸಮೀಪದಲ್ಲಿ ಪಶ್ಚಿಮ ಘಟ್ಟದ ಬಳಿ ಪಶ್ಚಿಮಕ್ಕೆ ತಿರುಗಿ ಘಟ್ಟದ ಕೆಳಗೆ ದುಮುಕಿ ಜೋಗ ಜಲಪಾತವೆಂದು ಹೆಸರಾಗಿದೆ. ಇಲ್ಲಿ ನದಿ ನಾಲ್ಕು ಸೀಳುಗಳಾಗಿ ಕವಲೊಡೆದು ದುಮುಕುವ ದೃಶ್ಯ ರುದ್ರರಮ್ಯವಾಗಿದೆ. ವಿದ್ಯುತ್ ಉತ್ಪಾದನೆಗಾಗಿ ಈ ನದಿಗೆ ಕಟ್ಟೆಯನ್ನು ಕಟ್ಟಿ ಲಿಂಗನಮಕ್ಕಿ **(ನೋಡಿ– ಲಿಂಗನಮಕ್ಕಿ)** ಜಲಾಶಯವನ್ನು ನಿರ್ಮಿಸಲಾಗಿದೆ. ನದಿ ಮುಂದೆ ಉತ್ತರ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿ ಹೊನ್ನಾವರದ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಈ ನದಿ ಜಿಲ್ಲೆಯಲ್ಲಿ 32.2 ಕಿಮೀ ದೂರ ಹರಿಯುತ್ತದೆ. ಶ್ರೀರಾಮಚಂದ್ರನ ಬಾಣದಿಂದ ಈ ನದಿ ಉದ್ಭವಿಸಿತೆಂದು ಪೌರಾಣಿಕ ಕಥೆ. ಕುಮುದ್ವತಿ ತುಂಗಭದ್ರಾ ನದಿಯ ಉಪನದಿ. ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಹುಮಚದ ಬಳಿಯ ಭಿಲ್ಲೇಶ್ವರ ಬೆಟ್ಟದಲ್ಲಿ ಹುಟ್ಟುತ್ತದೆ. ಇದು ಶಿಕಾರಿಪುರ ತಾಲ್ಲೂಕಿನಲ್ಲಿ ಜಿಲ್ಲೆಯ ಸರಹದ್ದಿನ ಬಳಿ ಮದಗದಕೆರೆಯನ್ನು ಹಾದು ಮುಂದೆ ಈಶಾನ್ಯಕ್ಕೆ ಹರಿದು ತುಂಗಭದ್ರಾ ನದಿಯನ್ನು ಸೇರುತ್ತದೆ. ವರದಾ ತುಂಗಭದ್ರಾ ನದಿಯ ಇನ್ನೊಂದು ಮುಖ್ಯ ಉಪನದಿ. ಇದು ಸಾಗರ ತಾಲ್ಲೂಕಿನಲ್ಲಿ ಇಕ್ಕೇರಿಯ ಬಳಿ ವರದಾಮೂಲದಲ್ಲಿ ಹುಟ್ಟುತ್ತದೆ. ಸೊರಬ ತಾಲ್ಲೂಕಿನಲ್ಲಿ ಹರಿದು ಉತ್ತರ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿ ಮತ್ತೆ ಈಶಾನ್ಯದ ಕಡೆ ತಿರುಗಿ ಧಾರವಾಡ ಜಿಲ್ಲೆಯ ಮೂಲಕ ಪೂರ್ವಕ್ಕೆ ಹರಿದು ಗಳಗನಾಥದ ಬಳಿ ತುಂಗಭದ್ರಾ ನದಿಯನ್ನು ಸೇರುತ್ತದೆ. ಜಿಲ್ಲೆಯಲ್ಲಿ ದಕ್ಷಿಣದ ಚಿರಾಪುಂಜಿ ಎನಿಸಿರುವ, ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲೊಂದಾದ ಆಗುಂಬೆ **(ನೋಡಿ–ಆಗುಂಬೆ)** ಇದೆ. ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ನೂರಾರು ಸಣ್ಣಪುಟ್ಟ ತೊರೆಗಳು, ಝರಿಗಳು ಹರಿಯುತ್ತವೆ. ಅವುಗಳಲ್ಲಿ ಹರಿದ್ರಾವತಿ, ಶಮ್ಮಗಾವತಿ, ಕುಶಾವತಿ, ಗರ್ಗಿತ, ವರಾಹಿ, ಗುಡ್ಡಿಹಳ್ಳ, ದಂಡವತಿ, ನಾಗರಹಳ್ಳ, ಕುಪ್ಪೆಹಳ್ಳ, ಮೊದಲಾದವನ್ನು ಹೆಸರಿಸಬಹುದು. ವರಾಹಿ ಹೊಳೆ ಹೊಸನಗರ ತಾಲ್ಲೂಕಿನಲ್ಲಿ ಪಶ್ಚಿಮ ಘಟ್ಟದಲ್ಲಿ ದುಮುಕುವುದರಿಂದ ಕುಂಚನಕಲ್ಲು ಅಬ್ಬೆ ಜಲಪಾತ ಉಂಟಾಗಿದೆ. ಜಿಲ್ಲೆಯ ಕೆಲವು ಹೊಳೆಗಳು ಉಡುಪಿ ಜಿಲ್ಲೆಯತ್ತ ಹರಿದರೆ ಇನ್ನು ಕೆಲವು ಒಳನಾಡಿನ ಮುಖ್ಯ ನದಿಗಳನ್ನು ಸೇರುತ್ತವೆ.

ಈ ಜಿಲ್ಲೆಯ ಸಸ್ಯಸಂಪತ್ತು ಸಮೃದ್ಧವೂ ವೈವಿಧ್ಯಮಯವೂ ಆಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಧಿಕ ಮಳೆ ಬಿದ್ದರೆ ಪೂರ್ವಕ್ಕೆ ಹೋದಂತೆಲ್ಲ ಮಳೆ ಕಡಿಮೆಯಾಗುತ್ತ ಹೋಗುತ್ತದೆ. ಇದರಿಂದ ಪಶ್ಚಿಮದಲ್ಲಿ ದಟ್ಟಕಾಡುಗಳೂ ಮಧ್ಯ ಪ್ರದೇಶದಲ್ಲಿ ಸಾಧಾರಣ ಕಾಡುಗಳೂ ಪೂರ್ವಭಾಗದಲ್ಲಿ ಕುರುಚಲು ಕಾಡುಗಳೂ ಬೆಳೆದಿವೆ. ಈ ಜಿಲ್ಲೆಯ ಕಾಡುಗಳನ್ನು ದಕ್ಷಿಣ ಉಷ್ಣವಲಯದ ನಿತ್ಯ ಹಸುರು ಕಾಡುಗಳು, ದಕ್ಷಿಣ ಉಷ್ಣವಲಯದ ಸಮ್ಮಿಶ್ರ ನಿತ್ಯ ಹಸುರು ಕಾಡುಗಳು, ತೇವಭರಿತ ಎಲೆ ಉದುರುವ ಕಾಡುಗಳು ಮತ್ತು ದಕ್ಷಿಣ ಉಷ್ಣವಲಯದ ಮುಳ್ಳಿನ ಕಾಡುಗಳು ಎಂದು ವಿಂಗಡಿಸಲಾಗಿದೆ. ಜಿಲ್ಲೆಯ ಪಶ್ಚಿಮ ಘಟ್ಟ ಪ್ರದೇಶದಲ್ಲಿ ನಿತ್ಯ ಹಸುರು ಕಾಡು 88.73 ಚ.ಕಿಮೀ ವಿಸ್ತರಿಸಿದೆ. ತೇವಭರಿತ ಎಲೆ ಉದುರುವ ಕಾಡು ಉತ್ತರದ ಸೊರಬ ತಾಲ್ಲೂಕಿನಿಂದ ದಕ್ಷಿಣದ ತೀರ್ಥಹಳ್ಳಿ ತಾಲ್ಲೂಕಿನವರೆಗೂ ವ್ಯಾಪಿಸಿದೆ. ಈ ಎರಡೂ ವರ್ಗದ ಕಾಡುಗಳಲ್ಲಿ ಬೆಲೆಬಾಳುವ ಮರಗಳು ಅಧಿಕವಾಗಿವೆ. ಹಲಸು, ಸಂಪಿಗೆ, ಮಾವು, ಹೈಗ, ಕರಿಮರ, ಮತ್ತಿ, ನಂದಿ, ಹೊನ್ನೆ, ಹೊಳೆಮತ್ತಿ, ಕೀರಲುಭೋಗಿ, ನಾಗಸಂಪಿಗೆ, ಸಾಗುವಾನಿ, ಬೀಟೆ, ಸುರಹೊನ್ನೆ, ಬಿಲ್ವಾರ, ಗಂಧಗರಿಗೆ, ಕಡವಲ, ಬಿಳಿಬೂರುಗ, ತಾರೆ, ಕಣಗಲು, ಶ್ರೀಗಂಧ, ಹೆಬ್ಬಲಸು, ನೇರಲು, ಕಕ್ಕೆ, ವಳಿಗೆ, ಬಸರಿ, ಶಿವನಿ, ಗುಳಮಾವು, ಗೇರು, ಗುಗ್ಗಳ, ಬಕ್ಕಲು ಮುಂತಾದ ಮರಗಳಿವೆ. ಜಿಲ್ಲೆಯ ಪೂರ್ವಭಾಗದಲ್ಲಿ ದಿಂಡಿಗ, ಹಿಪ್ಪೆ, ಬೇವು, ನೆಲ್ಲಿ, ಶ್ರೀಗಂಧ, ಹೊಂಗೆ, ಅಂಟುವಾಳ, ಕರಿಗೇರು, ಹುಣಿಸೆ, ಕಾರೆ, ಸುರಿಮುಳ್ಳು, ಬಿಳಿಜಾಲಿ, ಕರಿಜಾಲಿ ಇತ್ಯಾದಿ ಮುಖ್ಯ ಸಸ್ಯವರ್ಗವಿದೆ. ಮಲೆನಾಡು ಭಾಗದಲ್ಲಿ ಕಾಗದ ತಯಾರಿಕೆಗೆ ಉಪಯುಕ್ತವಾದ ಬಿದಿರು ವಿಶೇಷವಾಗಿದೆ. ಹೆಣಿಗೆ ವಸ್ತು ಸಾಮಗ್ರಿಗಳಿಗೆ ಬೇಕಾದ ಬೆತ್ತವಾಟೆಗಳಿವೆ. ಜಿಲ್ಲೆಯಲ್ಲಿ ಒಟ್ಟು 76,855 ಹೆಕ್ಟೇರ್ ಅರಣ್ಯ ಪ್ರದೇಶವಿದೆ (1998–99).

ದಟ್ಟ ಹಸುರು ಕಾಡುಗಳುಳ್ಳ ಈ ಜಿಲ್ಲೆಯಲ್ಲಿ ಪ್ರಾಣಿಸಂಪತ್ತು ವಿಪುಲವೂ ವೈವಿಧ್ಯಮಯವೂ ಆಗಿದೆ. ಇಲ್ಲಿಯ ಕಾಡುಗಳಲ್ಲಿ ಆನೆ, ಕಾಡುಕೋಣಗಳು, ಜಿಂಕೆ, ಸಂಬಾರ, ಹುಲಿ, ಚಿರತೆ, ಸಾರಗ, ಕಡವೆ, ಹಂದಿ, ಕರಡಿ, ತೋಳ, ಕಾಡುಕುರಿ, ಬರ್ಕ, ಕಬ್ಬೆಕ್ಕು, ಪುನುಗು, ಬೆಕ್ಕು, ಮುಸಿಯ, ಕೆಂಜಳಿಲು, ಮುಳ್ಳುಹಂದಿ, ಕೋತಿ, ಉಡ, ಮೊಲ, ನರಿ ಮುಂತಾದ ಪ್ರಾಣಿಗಳಿವೆ. ಶರಾವತಿ ಮತ್ತು ಶೆಟ್ಟಿಹಳ್ಳಿ ಮೃಗಧಾಮಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಕಾಡುಕೋಳಿ ಬಾವಲಿ, ರಣಹದ್ದು, ಗಿಡುಗ, ಗರುಡ, ನವಿಲು, ಕೋಗಿಲೆ, ಗವುಜುಗ, ಕಾಜಾಣ, ಕೆಂಬೂತ,

ಬೆಳ್ಳಕ್ಕಿ, ಕಾಗೆ, ಗಿಳಿ, ಹುಂಡುಕೋಳಿ, ಮೀಂಚುಳ್ಳಿ, ಪಾರಿವಾಳ, ಮರಕುಟಿಗ, ಮೈನ ಇತ್ಯಾದಿ ಪಕ್ಷಿಸಂಕುಲವಿದೆ. ಬಾತು ಜಾತಿಯ ಚರ್ಲೆ ಕುಂಡಿಮುಳುಗ ಮೊದಲಾದ ನೀರು ಹಕ್ಕಿಗಳಿವೆ. ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಬಳಿ ಪಕ್ಷಿಧಾಮವಿದೆ. ವಿವಿಧ ಹಕ್ಕಿಗಳು ಇಲ್ಲಿಗೆ ಹೊರಗಿನಿಂದ ಜುಲೈ ತಿಂಗಳಲ್ಲಿ ಬಂದು ಅಕ್ಟೋಬರ್ ತಿಂಗಳವರೆಗೂ ಇರುತ್ತವೆ. ಹೆಬ್ಬಾವು, ಮಂಡಲ, ನಾಗರ, ಕಾಳಿಂಗಸರ್ಪ, ಕೇರೆ, ಹಸಿರುಹಾವು, ಕಟುಗ ಮೊದಲಾದ ಹಾವುಗಳಿವೆ. ಇಲ್ಲಿನ ನದಿ ಮತ್ತು ಕೆರೆಗಳಲ್ಲಿ ಮೊಸಳೆ ಆಮೆ ನೀರುನಾಯಿಗಳಂತಹ ಜಲಜೀವಿಗಳೂ ಬಾಳೆ, ಅವಲು, ಕುಚ್ಚು, ಗೆಂಡೆ, ಮುರಗೊಡವ, ಕಾಟ್ಲ, ಬಿಳಿಮೀನು, ಚೆಮ್ಮೀನು, ಕುರಗಿ, ಕುರಡಿ, ಹೂಮೀನು, ಹಾವುಮೀನು, ಅರ್ಜ, ಮಳಲಿ ಮುಂತಾದ ಮೀನುಗಳು ಇವೆ. ಮಲೆನಾಡಿನ ದನಗಳು ಗಾತ್ರದಲ್ಲಿ ಚಿಕ್ಕವಾಗಿದ್ದು ಹೆಚ್ಚಾಗಿ ಕಪ್ಪು ಮತ್ತು ಕಂದು ಬಣ್ಣದವಾಗಿ ರುತ್ತವೆ. ಬಿಳಿಯ ದೊಡ್ಡ ರಾಸುಗಳು ಬಯಲುಸೀಮೆ ಪ್ರದೇಶಗಳಲ್ಲಿ ಹೆಚ್ಚಾಗಿವೆ. ಮಿಶ್ರಜಾತಿಯ ತಳಿಗಳ ಸಾಕಣೆ ಈಗ ಹೆಚ್ಚುತ್ತಿದೆ. ಕೋಣಗಳನ್ನು ಮಲೆನಾಡಿನಲ್ಲಿ ಹೆಚ್ಚಾಗಿ ಉಳುಮೆಗೆ ಬಳಸುತ್ತಾರೆ.

ಜಿಲ್ಲೆಯ ವಾಯುಗುಣ ಕರ್ನಾಟಕದ ಇತರ ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶಗಳಂತೆಯೇ ಇದೆಯೆನ್ನಬಹುದು. ಋತುಮಾನ ವನ್ನು ಜೂನ್-ಸೆಪ್ಟೆಂಬರ್‌ವರೆಗೆ ಮಳೆಗಾಲ, ಅಕ್ಟೋಬರ್-ನವೆಂಬರ್ ವರೆಗೆ ಹಿಂಗಾರು ಕಾಲ, ಡಿಸೆಂಬರ್-ಫೆಬ್ರವರಿವರೆಗೆ ಚಳಿಗಾಲ, ಮಾರ್ಚ್-ಮೇವರೆಗೆ ಬೇಸಗೆಕಾಲ ಎಂದು ವಿಂಗಡಿಸಬಹುದು. ಮಲೆನಾಡು ಭಾಗದಲ್ಲಿ ವರ್ಷದ ಅರ್ಧಕ್ಕೂ ಹೆಚ್ಚು ಕಾಲ ಆಕಾಶದಲ್ಲಿ ಮೋಡ ತುಂಬಿದ ವಾತಾವರಣವಿರುತ್ತದೆ. ಮುಂಗಾರು ಕಾಲದಲ್ಲಿ ಅಂದರೆ ಏಪ್ರಿಲ್-ಮೇ ತಿಂಗಳುಗಳಲ್ಲಿ ಗುಡುಗು ಮಿಂಚುಗಳಿಂದ ಕೂಡಿದ ಬಿರುಮಳೆ ಬರುವುದುಂಟು. ಆಗುಂಬೆಯಲ್ಲಿ ವಾರ್ಷಿಕವಾಗಿ 7,600 ಮಿಮೀಗೂ ಹೆಚ್ಚು ಮಳೆಯಾಗುತ್ತದೆ. ಹೊಸನಗರ, ಸಾಗರ ಮತ್ತು ಸೊರಬ ತಾಲ್ಲೂಕುಗಳ ವಿವಿಧ ಭಾಗಗಳಲ್ಲಿ ಸು. 2,000-5,000 ಮಿಮೀಗಳಿಗೂ ಹೆಚ್ಚು ಮಳೆಯಾಗುತ್ತದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಹೋಲಿಕೆಯ ದೃಷ್ಟಿಯಿಂದ ಕಡಿಮೆ ಪ್ರಮಾಣದ ಮಳೆ ಬೀಳುತ್ತದೆ. ಜಿಲ್ಲೆಯಲ್ಲಿ ಪೂರ್ವದ ಕಡೆ ಬಂದಂತೆಲ್ಲ ಮಳೆ ಕಡಿಮೆಯಾಗುತ್ತ ಬರುತ್ತದೆ. ಆಗುಂಬೆ ಬಿಟ್ಟು ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 1,526.5 ಮಿಮೀ. 2000ದಲ್ಲಿ 1957 ಮಿಮೀ. ಮಳೆ ಬಿದ್ದಿದೆ. ಕೆಲವೊಮ್ಮೆ ಒಂದು ದಿನದಲ್ಲಿ ಆಗುಂಬೆ ಮತ್ತು ಇತರ ಕಡೆಗಳಲ್ಲಿ 500 ಮಿಮೀಗಳಿಗೂ ಹೆಚ್ಚು ಮಳೆ ಬಿದ್ದಿರುವುದುಂಟು. ಸಾಮಾನ್ಯವಾಗಿ ಬೇಸಗೆಯಲ್ಲಿ ಅಧಿಕ ಉಷ್ಣಾಂಶವಿರುತ್ತದೆ. ಜಿಲ್ಲೆಯ ಶಿಲಾವರ್ಗ ಮುಖ್ಯವಾಗಿ ಧಾರವಾಡ ಭಿನ್ನಸ್ತರ ಶಿಲೆ ಮತ್ತು ಬೆಣಚುಕಲ್ಲಿನಿಂದ ಕೂಡಿದ್ದು ಜಿಲ್ಲೆಯ ಮೂರನೆಯ ಎರಡು ಭಾಗ ಧಾರವಾಡ ಭಿನ್ನಸ್ತರ ಶಿಲೆಯಿಂದ ಕೂಡಿದೆ. ಪಶ್ಚಿಮದಿಂದ ಪೂರ್ವಕ್ಕೆ ಹರಡಿರುವ ಶಿವಮೊಗ್ಗ ಶಿಲಾವಲಯ ಮುಖ್ಯ ವರ್ಗವಾಗಿದ್ದು ಅದು ಹೆಚ್ಚು ಭಾಗವನ್ನು ವ್ಯಾಪಿಸಿದೆ. ಇದರಲ್ಲಿ ವಿವಿಧ ಭಿನ್ನಸ್ತರ ಶಿಲೆಗಳಿದ್ದು ಜ್ವಾಲಾಮುಖಿ ಶಿಲೆಗಳೊಡನೆ ಕೂಡಿರುವ ಕ್ಲೋರಿಟಿಕ್ ಮತ್ತು ಹಾರ್ನ್‌ಬ್ಲೆಂಡ್ ಭಿನ್ನಸ್ತರ ಶಿಲೆಗಳು ಕೆಲವು ಕಡೆ ಕಂಡುಬರುವುವು. ಅವುಗಳಲ್ಲಿ ಕ್ವಾರ್ಟ್ಸ್, ಉಂಡೆ ಶಿಲೆಗಳು, ಸುಣ್ಣದ ಕಲ್ಲು, ಷೇಲ್ಸ್ ಮತ್ತು ಕಬ್ಬಿಣಾಂಶದ ಕಲ್ಲುಗಳಿವೆ. ಬಂಗಾರದ ಅದಿರು ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ. ಕುದುರೆಕೊಂಡ, ಪಲವನಹಳ್ಳಿ, ಹೊನ್ನೆಹಟ್ಟಿ ಪ್ರದೇಶಗಳಲ್ಲಿ ಹಾಗೂ ತುಂಗಭದ್ರಾ ನದಿ ಮತ್ತು ಅದರ ಉಪನದಿಗಳ ಮೆಕ್ಕಲು ಮಣ್ಣಿನಲ್ಲಿ ಬಂಗಾರದ ಅಂಶ ತೆಳುವಾಗಿ ಹರಡಿ ಕೊಂಡಿದೆ. ಕಬ್ಬಿಣದ ಅದಿರು ಇಲ್ಲಿನ ಮುಖ್ಯ ಖನಿಜಗಳ ಲ್ಲೊಂದು. ಇದು ಧಾರವಾಡ ಭಿನ್ನಸ್ತರ ಶಿಲೆಗಳಲ್ಲಿ ಕಂಡುಬರುತ್ತದೆ. ಶಂಕರಗುಡ್ಡ ಮತ್ತು ಕುಂಸಿ ಬಳಿಯ ಚಟ್ಟನಹಳ್ಳಿ ಹಾಗೂ ಆಗುಂಬೆ ಬಳಿಯ ಬೆಟ್ಟಶ್ರೇಣಿಗಳಲ್ಲಿ ಮಧ್ಯಮ ದರ್ಜೆಯ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ. ಮತ್ತಿಮನೆ, ಕೊಡಚಾದ್ರಿ, ಕೋಟೆಖಾರಿ ಮತ್ತು ಅಂಬರಗುಡ್ಡ ಪ್ರದೇಶ ಗಳಲ್ಲೂ ಕಬ್ಬಿಣದ ಅದಿರು ಸಿಕ್ಕುವುದುಂಟು. ಮ್ಯಾಂಗನೀಸ್ ಅದಿರು ದೊಡ್ಡ ಪ್ರಮಾಣದಲ್ಲಿ ಸಿಕ್ಕುವುದು. ಇದು ನಾಲ್ಕು ವಲಯಗಳಾಗಿ ವಿಂಗಡವಾಗಿ ಜಿಲ್ಲೆಯ ಉತ್ತರ ದಕ್ಷಿಣ ಮತ್ತು ಪೂರ್ವಭಾಗಗಳಲ್ಲಿ ವಿಶೇಷವಾಗಿ ಹರಡಿದೆ. ಧಾರವಾಡ ಭಿನ್ನಸ್ತರ ಶಿಲೆಯಲ್ಲಿ ಬಹುದೂರದ ವರೆಗೂ ಪಟ್ಟೆಗಳಂತೆ ವ್ಯಾಪಿಸಿರುವ ಸುಣ್ಣಕಲ್ಲು ಅಪಾರವಾಗಿದೆ. ಕಬ್ಬಿಣದ ಅದಿರಿನ ಜೊತೆ ಸೇರಿಕೊಂಡಿರುವ ಕ್ರೋಮೈಟ್ ಹರೇನಹಳ್ಳಿ, ಝುಂಡಿಮಟ್ಟಿ, ಅಂತರಗಂಗೆ ಬಳಿ ಕಂಡುಬಂದಿದೆ. ಜಿಲ್ಲೆಯಲ್ಲಿ ಕಂಡುಬರುವ ಇತರ ಮುಖ್ಯ ಖನಿಜಗಳೆಂದರೆ ಸೀಸದ ಅದಿರು, ಗಾರ್ನೆಟ್, ಕಲ್ನಾರು, ಕಾವಿಮಣ್ಣು, ಟೈಟ್ಯಾನಿಯುಮ್, ಕಯೊಲಿನ್, ಕ್ವಾರ್ಟ್ಸ್ ಇತ್ಯಾದಿ. ಬೆಣಚುಕಲ್ಲು, ಲ್ಯಾಟರೈಟ್ ಮತ್ತು ಮರಳನ್ನು ಕಟ್ಟಡ ನಿರ್ಮಾಣಕ್ಕೆ ಹಾಗೂ ರಸ್ತೆ ಕೆಲಸಗಳಿಗೆ ಬಳಸುತ್ತಾರೆ. ಜೇಡಿಮಣ್ಣೂ ಹೆಚ್ಚು ಸಿಗುತ್ತದೆ.

ಜಿಲ್ಲೆಯಲ್ಲಿ ವಿವಿಧ ಮಣ್ಣಿನ ಬಗೆಗಳು ಕಂಡುಬರುತ್ತವೆ. ಮಲೆನಾಡು ಭಾಗದಲ್ಲಿ ಹೆಚ್ಚಾಗಿ ಜಂಬುಮಣ್ಣು ಅಥವಾ ಕೆಂಪು ಜೇಡಿ ಮಿಶ್ರಿತ ಮಣ್ಣೂ ಕಣಿವೆ ಮತ್ತು ಜೌಗು ಸ್ವರೂಪದ ತಗ್ಗುಪ್ರದೇಶಗಳಲ್ಲಿ ಮರಳು ಮಿಶ್ರಿತ ಮೃದು ಮಣ್ಣೂ ಕೆಲವೆಡೆ ಮರಳು ಮತ್ತು ಜೇಡಿ ಮಿಶ್ರಿತ ಫಲವತ್ತಾದ ಮಣ್ಣೂ ಇದ್ದು ಕಲ್ಲುಗಳಿಂದ ಕೂಡಿದ ಫಲವತ್ತ ಲ್ಲದ ಮಣ್ಣಿನ ಪ್ರದೇಶವೂ ಇದೆ. ಇಲ್ಲಿನ ಮಣ್ಣಿನಲ್ಲಿ ಸಾಮಾನ್ಯವಾಗಿ ಸಸಾರಜನಕದ ಅಂಶ ಹೆಚ್ಚಾಗಿಯೂ ರಂಜಕ ಮತ್ತು ಪೊಟಾಷ್ ಅಂಶ ಕಡಿಮೆಯಾಗಿಯೂ ಸುಣ್ಣದ ಅಂಶದ ಕೊರತೆಯೂ ಇರುವುದು ಕಂಡುಬಂದಿದೆ.

ಜಿಲ್ಲೆಯ ಭೌಗೋಳಿಕ ಲಕ್ಷಣದಲ್ಲಿ ಸ್ವಾಭಾವಿಕ ಭಿನ್ನತೆ ಇರುವುದರಿಂದ ವ್ಯವಸಾಯ ಆಯಾ ಮಣ್ಣು ಮತ್ತು ವಾಯುಗುಣಕ್ಕನುಗುಣವಾಗಿ ವೈವಿಧ್ಯವಾಗಿದೆ. ಒಟ್ಟನಲ್ಲಿ ಜಿಲ್ಲೆಯ ಮಣ್ಣು ವ್ಯವಸಾಯಕ್ಕೆ ಅನುಕೂಲಕ ರವಾಗಿದೆ.

ಶಿವಮೊಗ್ಗ ಜಿಲ್ಲೆ ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಹೆಚ್ಚು ನೀರಾವರಿ ಪ್ರದೇಶ ಹೊಂದಿದೆ ಅನ್ನಬಹುದು. ಜಿಲ್ಲೆಯ ಮಲೆನಾಡು ಭಾಗದಲ್ಲಿ ಕ್ರಮಬದ್ಧವಾದ ನೀರಾವರಿಯಲ್ಲದೆ ಮಳೆನೀರು ಮತ್ತು ನೂರಾರು ತೊರೆಗಳು ಮತ್ತು ಜಿನುಗು ನೀರಿನಿಂದ ವ್ಯವಸಾಯಕ್ಕೆ ನೀರೊದಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಲಕ್ಕವಳ್ಳಿ ಬಳಿ ಭದ್ರಾನದಿಗೆ ಅಡ್ಡಲಾಗಿ ನಿರ್ಮಿಸಿರುವ ಭದ್ರಾ ಜಲಾಶಯ ಈ ಜಿಲ್ಲೆಗೆ ವರಪ್ರದವಾಗಿದೆ. ಈ ಯೋಜನೆಯಿಂದ ಶಿವಮೊಗ್ಗ ಜಿಲ್ಲೆಯ 40,446 ಹೆಕ್ಟೇರ್‌ಗಳಿಗೂ ಹೆಚ್ಚು ನೀರೊದಗಿದೆ. ಶಿವಮೊಗ್ಗ ತಾಲ್ಲೂಕಿನ ಗಾಜನೂರು ಬಳಿ ತುಂಗಾನದಿಗೆ ನಿರ್ಮಿಸಿರುವ ಅಣೆಕಟ್ಟು ಇನ್ನೊಂದು ಮುಖ್ಯ ನೀರಾವರಿ ಯೋಜನೆ. ಇದರಿಂದ 8,707.5ಹೆಕ್ಟೇರ್‌ಗಳಿಗೆ ನೀರೊದಗುತ್ತಿದೆ. ಶಿಕಾರಿಪುರ ತಾಲ್ಲೂಕಿನ ಕುಮುದ್ವತಿ ನದಿಯ ಅಂಜನಾಪುರ ಜಲಾಶಯದಿಂದ 7,169 ಹೆಕ್ಟೇರ್‌ಗಳ ನೀರಾವರಿಯಾಗಿದೆ. ಅಂಬ್ಲಿಗೊಳ ಜಲಾಶಯ ಮತ್ತು ಗೊಂಡಿ ಅಣೆಕಟ್ಟುಗಳಿಂದಲೂ ನೀರಾವರಿ ಅನುಕೂಲತೆ ದೊರೆತಿದೆ. ಕಾಲುವೆ ನೀರಾವರಿಯಲ್ಲಿ ಇದು ರಾಜ್ಯದಲ್ಲಿ ಮೂರನೆಯ ಸ್ಥಾನ ಪಡೆದಿದೆ.

ಜಿಲ್ಲೆಯಲ್ಲಿ ಕಾಲುವೆಯಿಂದ 45,240ಹೆಕ್ಟೇರ್, ಕೊಳವೆಬಾವಿಗಳಿಂದ 6,293ಹೆಕ್ಟೇರ್, ಕೆರೆಗಳಿಂದ 64,995ಹೆಕ್ಟೇರ್, ಬಾವಿಗಳಿಂದ 2,036 ಹೆಕ್ಟೇರ್, ನೀರಾವರಿಯಿಂದ 1,601ಹೆಕ್ಟೇರ್ ಮತ್ತು ಇತರೇ ವಿಧಾನಗಳಿಂದ 8,568ಹೆಕ್ಟೇರ್‌ಗಳಿಗೆ ನೀರೊದಗಿಸಲಾಗಿತ್ತು. (1998-99).

ಶಿವಮೊಗ್ಗ ಜಿಲ್ಲೆ ಅಚ್ಚ ಬೇಸಾಯದ ಕೃಷಿಕರ ಪ್ರದೇಶವಾಗಿದ್ದು ಜೊತೆಗೆ ಮಲೆನಾಡ ಸೆರಗಿನಲ್ಲಿ ನದಿಗಳ ಹರಿವಿನಲ್ಲಿ ಕರ್ನಾಟಕದ ವಿವಿಧ ಬೆಳೆಗಳ ತವರಿನಂತಿದೆ ಎಂಬುದಕ್ಕೆ ಈ ಕೆಳಗಿನ ಕೆಲವು ಅಂಕಿ ಅಂಶಗಳನ್ನು ಉದಾಹರಿಸಬಹುದು. 1998-99ರಲ್ಲಿ 6,480 ಟನ್ನುಗಳ ನೆಲಗಡಲೆ, 12,48,548 ಟನ್ನುಗಳ ಕಬ್ಬು, 42,405 ಬೇಲುಗಳ ಹತ್ತಿ, 186 ಟನ್ನುಗಳ ಕಡಲೆ, 236 ಟನ್ ತೊಗರಿ 239 ಟನ್ನುಗಳ ಇತರೆ ದ್ವಿದಳ ಧಾನ್ಯಗಳು ಒಟ್ಟು ದ್ವಿದಳ ಧಾನ್ಯಗಳು 5425 ಟನ್ನುಗಳಾಗಿದ್ದವು.



ಶಿಕಾರಿಪುರ ತಾಲ್ಲೂಕು ಮಳವಳ್ಳಿಯಲ್ಲಿರುವ ಪ್ರಾಚೀನ ಶಿಲಾಸ್ತಂಭ

ಕರ್ನಾಟಕ ರಾಜ್ಯದ ಬತ್ತದ ಕಣಜವೆಂಬ ಹೆಸರಿಗೆ ಪಾತ್ರವಾಗಿರುವ ಶಿವಮೊಗ್ಗ ವ್ಯವಸಾಯಪ್ರಧಾನ ಜಿಲ್ಲೆ. ಬತ್ತ ಈ ಜಿಲ್ಲೆಯ ಮುಖ್ಯ ಬೆಳೆ. ಜಿಲ್ಲೆಯ ಒಟ್ಟು ಬೆಳೆ ಪ್ರದೇಶದಲ್ಲಿ ಬತ್ತದ ಬೆಳೆ ಸೇ. 54.02 ರಷ್ಟು ಪ್ರದೇಶದಲ್ಲಿ ವ್ಯಾಪಿಸಿದ್ದು, 1998-99ರಲ್ಲಿ ಒಟ್ಟು 2,48,134 ಹೆಕ್ಟೇರುಗಳಲ್ಲಿ ಬಿತ್ತನೆ ಮಾಡಲಾಗಿತ್ತು. 1,58,633 ಹೆಕ್ಟೇರುಗಳಲ್ಲಿ ಬತ್ತವನ್ನೂ 8,702 ಹೆಕ್ಟೇರುಗಳಲ್ಲಿ ರಾಗಿಯನ್ನೂ 2,215 ಹೆಕ್ಟೇರುಗಳಲ್ಲಿ ಜೋಳವನ್ನೂ 1,77,988 ಹೆಕ್ಟೇರುಗಳಲ್ಲಿ ವಿವಿಧ ಧಾನ್ಯಗಳನ್ನೂ 8,295 ಹೆಕ್ಟೇರುಗಳಲ್ಲಿ ಮುಸುಕಿನ ಜೋಳವನ್ನೂ 11,061 ಹೆಕ್ಟೇರುಗಳಲ್ಲಿ ದ್ವಿದಳಧಾನ್ಯಗಳನ್ನೂ 11,233 ಹೆಕ್ಟೇರುಗಳಲ್ಲಿ ಕಬ್ಬನ್ನೂ 5,399 ಹೆಕ್ಟೇರುಗಳಲ್ಲಿ ನೆಲಗಡಲೆಯನ್ನೂ 18,011 ಹೆಕ್ಟೇರುಗಳಲ್ಲಿ ಹತ್ತಿಯನ್ನೂ ಬೆಳೆಯಲಾಗಿತ್ತು.

ಇವುಗಳ ಜೊತೆಗೆ ಹರಳುಬೀಜ, ನಾರಗಸೆಬೀಜ, ಸೂರ್ಯಕಾಂತಿ, ಎಳ್ಳು, ಕುಸುಬೆ ಮೊದಲಾದವನ್ನು ಎಣ್ಣೆ ತೆಗೆಯಲು ಬೆಳೆಯುತ್ತಾರೆ. ಅಡಕೆ ಮಲೆನಾಡು ಪ್ರದೇಶದ ಮುಖ್ಯ ವಾಣಿಜ್ಯ ಬೆಳೆ. ಜೊತೆಗೆ ತೆಂಗನ್ನೂ ಬೆಳೆಯಲಾಗುತ್ತದೆ.

ಮಾವು, ನಿಂಬೆ, ಸೀತಾಫಲ, ಸೀಬೆ, ಸಪೋಟ, ಪರಂಗಿ, ಬಾಳೆ, ಹಲಸು, ಪಪ್ಪಾಯಿ ಮತ್ತಿತರ ಹಣ್ಣಿನ ಬೆಳೆಗಳಿವೆ. ಜಿಲ್ಲೆಯಲ್ಲಿ ವ್ಯವಸಾಯ ಸಂಬಂಧವಾದ ಅನೇಕ ಸಂಸ್ಥೆಗಳಿವೆ. ಅವುಗಳಲ್ಲಿ ಅಡಕೆ ಬೆಳೆ ಸಂಶೋಧನಾ ಕೇಂದ್ರ, ತೋಟಗಾರಿಕೆ ತರಬೇತಿ ಕೇಂದ್ರ, ರೈತರ ತರಬೇತಿ ಮತ್ತು ಶಿಕ್ಷಣ ಕೇಂದ್ರ ಮೊದಲಾದವು ಮುಖ್ಯವಾದವು.

ಶಿವಮೊಗ್ಗ ಜಿಲ್ಲೆ ಬೃಹತ್ ಮತ್ತು ಸಣ್ಣ ವಿದ್ಯುತ್ ಯೋಜನೆಗಳ ನೆಲೆ. ಶರಾವತಿ ನದಿಯ ಜೋಗ ಜಲಪಾತದಲ್ಲಿ 1948ರಲ್ಲಿ ಜಲವಿದ್ಯುತ್ ಉತ್ಪಾದನೆ ಪ್ರಾರಂಭಿಸಲಾಯಿತು. ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆಯೆಂದು ನಾಮಾಂಕಿತವಾದ ಈ ಕೇಂದ್ರ ತ್ವರಿತ ಅಭಿವೃದ್ಧಿ ಸಾಧಿಸಿದೆ**(ನೋಡಿ- ಗೇರುಸೊಪ್ಪೆ ಜಲಪಾತ)**. ಈ ಕೇಂದ್ರದ ಒಟ್ಟು ಉತ್ಪಾದನಾಸಾಮರ್ಥ್ಯ 1,20,000 ಕಿವಾ. ಭದ್ರಾನದಿಗೆ ಅಡ್ಡಲಾಗಿ ಲಕ್ಕವಳ್ಳಿ ಬಳಿ ನಿರ್ಮಿಸಿರುವ ಭದ್ರಾ ಜಲಾಶಯ ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆಗಳೆರಡಕ್ಕೂ ಉದ್ದೇಶಿತವಾಗಿದೆ. ಅದರ ಗರಿಷ್ಠ ಉತ್ಪಾದನಾಸಾಮರ್ಥ್ಯ 33,220 ಕಿವಾ. ಶರಾವತಿ ನೀರನ್ನು ಸಮಗ್ರವಾಗಿ ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳುವ ಉದ್ದೇಶದಿಂದ ಶರಾವತಿ ಜಲವಿದ್ಯುತ್ ಯೋಜನೆಯನ್ನು 1956ರಲ್ಲಿ ಕೈಗೊಳ್ಳಲಾಯಿತು. ಈ ಉದ್ದೇಶಕ್ಕಾಗಿ ಶರಾವತಿ ನದಿಗೆ ಜೋಗ ಜಲಪಾತಕ್ಕೆ ಹತ್ತು ಕಿಮೀ ಮೇಲುಗಡೆ ಸಾಗರ ತಾಲ್ಲೂಕಿನಲ್ಲಿ ಲಿಂಗನಮಕ್ಕಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದು ವಿದ್ಯುತ್ ಉತ್ಪಾದನೆಯ ಜೊತೆಗೆ ಜಲಪಾತಕ್ಕೆ ನೀರೊದಗಿಸಲೂ ಅನುಕೂಲಕರವಾಗಿದೆ. ಶರಾವತಿ ಕಣಿವೆ ಜಲವಿದ್ಯುತ್ ಯೋಜನೆ 891,000 ಕಿವಾ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಪಡೆದಿದೆ. ಮಹಾತ್ಮಗಾಂಧಿ ಜಲವಿದ್ಯುತ್ ಯೋಜನೆಗೆ ಐದು ಕಿಮೀ ದೂರದಲ್ಲಿರುವ ಆನೆಬೈಲು ವಿದ್ಯುತ್ ಯೋಜನೆ ಇಡೀ ಆಗ್ನೇಯ ಏಷ್ಯದಲ್ಲೇ ಅತಿದೊಡ್ಡ ವಿದ್ಯುತ್ ಸ್ಥಾವರವಾಗಿದೆ. ಜಿಲ್ಲೆಯ ಎಲ್ಲ ಕೇಂದ್ರಗಳಿಂದ ಒಟ್ಟು ವಿದ್ಯುತ್ ಉತ್ಪಾದನಾಸಾಮರ್ಥ್ಯ ಸು. 8,66,000 ಕಿವಾ.

ಶಿವಮೊಗ್ಗ ಜಿಲ್ಲೆ ಕೈಗಾರಿಕೆಯಲ್ಲಿ ಗಣನೀಯ ಪ್ರಗತಿ ಸಾಧಿಸಿರುವುದನ್ನು ಕಾಣಬಹುದಾದರೂ ಸಣ್ಣಪ್ರಮಾಣದಲ್ಲಿ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುತ್ತಿರುವುದು ಇತ್ತೀಚಿನ ವರ್ಷಗಳಲ್ಲಿ. ಕಳೆದ ಶತಮಾನದ ಕೊನೆಯ ಭಾಗದಲ್ಲಿ ಕೆಲವೆಡೆ ಖನಿಜ ಉದ್ಯಮಗಳು ಪ್ರಾರಂಭವಾದರೂ ಅವು ದೃಢಗೊಂಡಿರಲಿಲ್ಲ. ಮೈಸೂರು ಸಂಸ್ಥಾನದ ಸರ್ಕಾರ 1918ರಲ್ಲಿ ಭದ್ರಾವತಿಯಲ್ಲಿ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಿ ಕೈಗಾರಿಕಾ ಶಕೆಗೆ ಬುನಾದಿ ಹಾಕಿತೆನ್ನಬಹುದು. ತರುವಾಯ ಅಲ್ಲಲ್ಲಿ ಮರದ ಕಾರ್ಖಾನೆಗಳು, ಹೆಂಚಿನ ಕಾರ್ಖಾನೆಗಳು, ಅಕ್ಕಿಗಿರಣಿಗಳು, ಮುದ್ರಣಾಲಯ ಮುಂತಾದವು ಪ್ರಾರಂಭವಾದವು. ಭದ್ರಾವತಿಯಲ್ಲಿ 1936ರಲ್ಲಿ ಕಾಗದದ ಕಾರ್ಖಾನೆ, 1938ರಲ್ಲಿ ಸಿಮೆಂಟ್ ಕಾರ್ಖಾನೆ ಪ್ರಾರಂಭವಾದವು. 1927ರಲ್ಲಿ ಶಿವಮೊಗ್ಗದಲ್ಲಿ ಸ್ಥಾಪನೆಗೊಂಡ ಬೆಂಕಿಕಡ್ಡಿ ತಯಾರಿಕಾ ಉದ್ಯಮವನ್ನು 1940ರಲ್ಲಿ ಸರ್ಕಾರ ವಹಿಸಿಕೊಂಡಿತು. ಬೀರೂರು, ಶಿವಮೊಗ್ಗ ರೈಲುಮಾರ್ಗ 1940ರ ಹೊತ್ತಿಗೆ ಸಾಗರ-ತಾಳಗುಪ್ಪವರೆಗೂ ವಿಸ್ತರಿಸಿತು. 1944ರಲ್ಲಿ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ ಶಿವಮೊಗ್ಗದಲ್ಲಿ ಸ್ಥಾಪನೆಯಾಯಿತು. 1948ರಲ್ಲಿ ಜೋಗದ ಮಹಾತ್ಮ ಗಾಂಧಿ ಜಲವಿದ್ಯುತ್ ಕೇಂದ್ರದ ಮೊದಲ ಘಟಕ ಕಾರ್ಯಾರಂಭಮಾಡಿತು. ಭದ್ರಾವತಿಯಲ್ಲಿ ಸ್ಥಾಪಿತವಾದ ಕಾಗದ ಕಾರ್ಖಾನೆ 1939ರಲ್ಲಿ ಉತ್ಪಾದನೆ ಆರಂಭಿಸಿತು.

ಈ ಎಲ್ಲ ಉದ್ಯಮಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ತೀವ್ರಗತಿಯಲ್ಲಿ ಪ್ರಗತಿ ಸಾಧಿಸಿದವು. 1954-55ರಲ್ಲಿ ಕಾರ್ಯಗತಗೊಂಡ ಗ್ರಾಮೀಣ ಕೈಗಾರಿಕಾ ಯೋಜನೆ ಜಿಲ್ಲೆಯಲ್ಲಿ ಗಣನೀಯವಾಗಿ ಸಣ್ಣಪ್ರಮಾಣದ ಮತ್ತು ಗೃಹಕೈಗಾರಿಕೆಗಳ ಸ್ಥಾಪನೆಗೆ ಇಂಬುಗೊಟ್ಟಿತ್ತು. ಭದ್ರಾವತಿ-ಶಿವಮೊಗ್ಗ ಮಾರ್ಗದಲ್ಲಿ ಶಿವಮೊಗ್ಗಕ್ಕೆ 6.4 ಕಿಮೀ ದೂರದಲ್ಲಿ ತುಂಗಭದ್ರಾ ಸಕ್ಕರೆ ಕಾರ್ಖಾನೆ 1954ರಲ್ಲಿ ಸ್ಥಾಪನೆಯಾಯಿತು. ಜಿಲ್ಲೆಯಲ್ಲಿ ವಿದ್ಯುತ್ ಮತ್ತು ಗಣಿಗಾರಿಕೆ ಉದ್ಯಮಗಳೂ ಅನೇಕ ಕಡೆ ಇವೆ. ಇವಲ್ಲದೆ

ಅನೇಕ ಮಧ್ಯಮ ಪ್ರಮಾಣದ ಉದ್ಯಮಗಳು ಸ್ಥಾಪಿತವಾಗಿವೆ. ಅವುಗಳಲ್ಲಿ ಶಿಕಾರಿಪುರದ ಬಳಿ ಸ್ಥಾಪಿತವಾಗಿರುವ ಜಯಪದ್ಮ ದ್ರಾವಕ ಸಂಸ್ಕರಣ ಕಾರ್ಖಾನೆಯಲ್ಲಿ (1972) ಸಾಬೂನು ಮತ್ತು ಬಣ್ಣ ತಯಾರಿಸಲು ಬಳಸುವ ಎಣ್ಣೆಯನ್ನು ಉತ್ಪಾದಿಸುತ್ತಾರೆ. ಶಿವಮೊಗ್ಗ-ಭದ್ರಾವತಿ ಮಾರ್ಗಮಧ್ಯದಲ್ಲಿ ಒಂದು ಸರ್ಕಾರಿ ಹಾಲಿನ ಡೈರಿ(1963) ಇದೆ. ಉಣ್ಣೆ ಮತ್ತು ರೇಷ್ಮೆ ಬಟ್ಟೆಗಳಲ್ಲಿ ಬಳಸುವ ಬಣ್ಣದ ತಯಾರಿಕಾ ಘಟಕ ಒಂದು (1969)

ಗಂಧದಲ್ಲಿ ಕೆತ್ತಿದ ಒಂದು ಶಿಲ್ಪ

ಹೊಸನಗರ ತಾಲ್ಲೂಕಿನ ರಿಪ್ಪನ್‌ಪೇಟೆಯಲ್ಲಿದೆ. ನ್ಯಾಷನಲ್ ಎಜುಕೇಷನ್ ಸೊಸೈಟಿಯವರು ವಿವಿಧ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದರ ಜೊತೆಗೆ ಅನೇಕ ಸಣ್ಣಪ್ರಮಾಣದ ಉದ್ಯಮಗಳನ್ನು ನಡೆಸುತ್ತಾರೆ. ಅವುಗಳಲ್ಲಿ ಎಣ್ಣೆ, ಸಾಬೂನು ತಯಾರಿಕೆ, ಬೆಂಕಿಕಡ್ಡಿ ಕಾರ್ಖಾನೆ, ಕೈಕಾಗದ ತಯಾರಿಕಾ ಉದ್ಯಮ, ನಾರಿನ ಉದ್ಯಮ ಮತ್ತು ದ್ರಾವಕ ಸಂಸ್ಕರಣ ಉದ್ಯಮ ಮುಖ್ಯವಾದವು. ಇವುಗಳಲ್ಲದೆ ಸಾಮಾನ್ಯ ಎಂಜಿನಿಯರಿಂಗ್ ಉದ್ಯಮಗಳು, ಲಘು ಕಾಂಕ್ರೀಟ್ ಉಪಕರಣ ತಯಾರಿಕಾ ಉದ್ಯಮಗಳಿವೆ. ಜಿಲ್ಲೆಯಲ್ಲಿ ಅಕ್ಕಿ ಮತ್ತು ಹಿಟ್ಟಿನ ಗಿರಣಿಗಳಿವೆ, ಎಣ್ಣೆ ಉದ್ಯಮಗಳೂ ಮರದ ಕಾರ್ಖಾನೆಗಳೂ ಇವೆ. ಹತ್ತಿ ಕೈಮಗ್ಗದ ಘಟಕಗಳೂ ಮಂಗಳೂರು ಹೆಂಚು ತಯಾರಿಸುವ ಘಟಕಗಳೂ ಇವೆ. ಜೇನುಸಾಕಣೆ, ಕುಂಬಾರಿಕೆ, ಚರ್ಮದ ಕೆಲಸ, ಮರಗೆಲಸ, ಕಬ್ಬಿಣದ ಕೆಲಸ, ಗಾಣ, ಹೆಣಿಗೆ, ನೇಯ್ಗೆ, ಗಂಧದ ವಸ್ತುಗಳ ತಯಾರಿಕೆ, ಲೋಹದ ಪಾತ್ರೆಗಳ ತಯಾರಿಕೆ ಮೊದಲಾದವು ಗಳಿಗೆ ಸಂಬಂಧಿಸಿದ ನೂರಾರು ಸಣ್ಣ ಉದ್ಯಮಗಳು ಜಿಲ್ಲೆಯಾದ್ಯಂತ ವ್ಯಾಪಿಸಿವೆ. ತಾಲ್ಲೂಕು ಕೈಗಾರಿಕಾ ಸಹಕಾರ ಸಂಘಗಳು ಸ್ಥಾಪನೆಯಾಗಿವೆ. ಸಾಗರದಲ್ಲಿ ಗ್ರಾಮೀಣ ಕೈಕೆಲಸದ ತರಬೇತಿ ಕೇಂದ್ರ, ಭದ್ರಾವತಿಯಲ್ಲಿ ಕೈಗಾರಿಕಾ ತರಬೇತಿ ಕೇಂದ್ರಗಳಿವೆ. ಶಿವಮೊಗ್ಗ, ಭದ್ರಾವತಿ, ಸಾಗರ ತಾಲ್ಲೂಕಿನ ತಾಳಗುಪ್ಪ ಮುಖ್ಯ ಕೈಗಾರಿಕಾ ಕೇಂದ್ರಗಳೆನಿಸಿವೆ.

ಜಿಲ್ಲೆಯ ಮುಖ್ಯ ವಾಣಿಜ್ಯ ವ್ಯವಹಾರ ವಸ್ತುಗಳೆಂದರೆ ಅಡಕೆ, ಮೆಣಸು, ಹತ್ತಿ, ಬತ್ತ, ಜೋಳ, ರಾಗಿ, ದ್ವಿದಳಧಾನ್ಯಗಳು, ಮೆಣಸಿನ ಕಾಯಿ, ನೆಲಗಡಲೆ, ಸೀಗೆ, ಹೊಗೆಸೊಪ್ಪು, ತೆಂಗಿನಕಾಯಿ, ಗೇರುಬೀಜ ಮೊದಲಾದವು. ನಿಯಂತ್ರಿತ ಮಾರುಕಟ್ಟೆಗಳು ಮತ್ತು ವ್ಯವಸಾಯೋತ್ಪನ್ನ ಮಾರುಕಟ್ಟೆಗಳು ಇಲ್ಲಿನ ಮಾರಾಟ ವ್ಯವಸ್ಥೆಯಲ್ಲಿ ಪಾತ್ರವಹಿಸುತ್ತವೆ. ಜಿಲ್ಲೆಯಲ್ಲಿ ವಾರಸಂತೆಗಳೂ ನಡೆಯುತ್ತವೆ. ಜೊತೆಗೆ ವರ್ಷಂಪ್ರತಿ ನಡೆಯುವ ಅನೇಕ ಧಾರ್ಮಿಕ ಉತ್ಸವಗಳು, ದನಗಳ ಜಾತ್ರೆಗಳು, ರಥೋತ್ಸವಗಳು, ವ್ಯಾಪಾರ ಚಟುವಟಿಕೆಗೆ ಸಹಕಾರಿಯಾಗಿವೆ. ವಿವಿಧ ಕೈಗಾರಿಕಾ ವಸ್ತುಗಳು, ಬಟ್ಟೆ, ಎಣ್ಣೆ, ಗೃಹಬಳಕೆ ವಸ್ತುಗಳು ಮೊದಲಾದವು ಜಿಲ್ಲೆಯ ಹೊರಗಿನಿಂದ ಬರುತ್ತವೆ.

ಈ ಜಿಲ್ಲೆಯ ಕೆಲವು ಘಟ್ಟ ಮಾರ್ಗಗಳು ಕೆಳದಿ ಅರಸರು ಮತ್ತು ಹೈದರ್-ಟಿಪ್ಪು ಕಾಲದಿಂದಲೂ ಬಳಕೆಯಲ್ಲಿದ್ದವು. ಆದರೆ ಅವುಗಳಿಗೆ ಆಧುನಿಕ ಸ್ವರೂಪ ನೀಡುವ ಕಾರ್ಯ ಇತ್ತೀಚೆಗೆ ಮುಖ್ಯವೆನಿಸಿತು. ಶಿವಮೊಗ್ಗ ಜಿಲ್ಲೆಯನ್ನು ಉಡುಪಿ ಜಿಲ್ಲೆಯೊಂದಿಗೆ ಸಂಪರ್ಕಿಸುವ ಹುಲಿಕಲ್ಲು, ಹೈದರ್ ಘಾಟ್ ಮತ್ತು ಆಗುಂಬೆ ಘಾಟ್-ಈ ಮೂರು ಮುಖ್ಯ ರಸ್ತೆಗಳಿವೆ. ಇವುಗಳಲ್ಲಿ ಆಗುಂಬೆ ಘಾಟ್ ರಸ್ತೆ ತುಂಬಾ ಕಡಿದಾದ ಮಾರ್ಗ. ಉತ್ತರ ಕನ್ನಡ ಜಿಲ್ಲೆಯೊಂದಿಗೆ ಸಂಪರ್ಕಿಸಲು ಜೋಗ-ಭಟ್ಕಳ ಮಾರ್ಗವಿದೆ. ಇದಲ್ಲದೆ ಜಿಲ್ಲೆಯ ಉತ್ತರ ಭಾಗದಿಂದ ಕೆಲವು ರಸ್ತೆಗಳು ಉತ್ತರ ಕನ್ನಡ ಜಿಲ್ಲೆಯೊಂದಿಗೆ ಸಂಪರ್ಕ ಸಾಧಿಸಿವೆ. ಜಿಲ್ಲಾ ಕೇಂದ್ರ ಶಿವಮೊಗ್ಗದೊಂದಿಗೆ ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾಂವಿ ಮೊದಲಾದ ನಗರಗಳೊಂದಿಗೆ ರಾಜ್ಯ ಹೆದ್ದಾರಿಗಳ ಮೂಲಕ ರಸ್ತೆ ಸಂಪರ್ಕವಿದ್ದು ಇತರ ಜಿಲ್ಲಾ ಕೇಂದ್ರಗಳೊಂದಿಗೂ ಸಂಪರ್ಕ ಮಾರ್ಗಗಳಿವೆ. ಬೆಂಗಳೂರು-ಹೊನ್ನಾವರ ಮಾರ್ಗ ಭದ್ರಾವತಿ, ಶಿವಮೊಗ್ಗ, ಕುಂಸಿ, ಸಾಗರ, ತಾಳಗುಪ್ಪ ಮತ್ತು ಜೋಗ ಮೂಲಕ ಹೋಗುವ ರಾಜ್ಯದ ಮುಖ್ಯ ಹೆದ್ದಾರಿ ಜಿಲ್ಲೆಯಲ್ಲಿ 115ಕಿಮೀ ದೂರವಿದೆ. ಚಿಕ್ಕಮಗಳೂರು ಜಿಲ್ಲೆಯ ಬೀರೂರಿನಿಂದ ಮುಂದುವರಿದ ಈ ಜಿಲ್ಲೆಯ ರೈಲುಮಾರ್ಗ ಹಂತಹಂತವಾಗಿ 1940ರ ಹೊತ್ತಿಗೆ ಶಿವಮೊಗ್ಗ-ಸಾಗರ-ತಾಳಗುಪ್ಪ ದವರೆಗೂ ವಿಸ್ತರಿಸಿತು. ಬೀರೂರು-ತಾಳಗುಪ್ಪ ಮಾರ್ಗದ ಒಟ್ಟು ಉದ್ದ 161 ಕಿಮೀ. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಿಂದ ಕೆಲವು ಗಣಿಪ್ರದೇಶಗಳಿಗೆ 96 ಕಿಮೀ ಟ್ರಾಮ್ ಮಾರ್ಗಗಳ ಸೌಲಭ್ಯವಿದೆ. ಭದ್ರಾವತಿಯ ಆಕಾಶವಾಣಿ ಕೇಂದ್ರ 1965ರಲ್ಲಿ ಪ್ರಸಾರವನ್ನು ಆರಂಭಿಸಿತು.

ಜಿಲ್ಲೆಯಲ್ಲಿ ಸ್ವಾತಂತ್ರ್ಯೋತ್ತರಕಾಲದಲ್ಲಿ ಕೈಗೊಂಡ ಆರೋಗ್ಯ ರಕ್ಷಣಾ ಕಾರ್ಯಾಚರಣೆಗಳಿಂದಾಗಿ ವಿವಿಧ ಸೋಂಕು ಹಾಗೂ ಹಾನಿಕರ ರೋಗಗಳನ್ನು ತಡೆಗಟ್ಟಲಾಗಿದೆ. ಶಿವಮೊಗ್ಗದಲ್ಲಿನ ಮೆಗ್ಗಾನ್ ಆಸ್ಪತ್ರೆ 1880ರಲ್ಲಿ ಸ್ಥಾಪಿತವಾಯಿತು. ತರುವಾಯ ಸಾಗರ, ತೀರ್ಥಹಳ್ಳಿ, ಭದ್ರಾವತಿ ಮೊದಲಾದೆಡೆಗಳಲ್ಲಿ ಆಸ್ಪತ್ರೆಗಳು ಪ್ರಾರಂಭವಾದವು. 1999-2000ದಲ್ಲಿ ಜಿಲ್ಲೆಯಲ್ಲಿ ಒಟ್ಟು 6 ಆಸ್ಪತ್ರೆಗಳಿದ್ದು ಇವುಗಳ ಜೊತೆಗೆ 3 ಭಾರತೀಯ ವೈದ್ಯಪದ್ಧತಿಯ ಆಸ್ಪತ್ರೆಗಳೂ 55 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 38 ಪ್ರಾಥಮಿಕ ಆರೋಗ್ಯ ಘಟಕಗಳೂ ಇದ್ದವು.

ಖಾಸಗಿ ಸಂಸ್ಥೆಯೊಂದು ಶಿವಮೊಗ್ಗ ಪಟ್ಟಣದಲ್ಲಿ ಪ್ರೌಢಶಾಲಾ ತರಗತಿಗಳನ್ನು 1854ರಲ್ಲಿ ಪ್ರಾರಂಭಿಸಿತು. 1923ರಲ್ಲಿ ತೀರ್ಥಹಳ್ಳಿಯಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ, 1928ರಲ್ಲಿ ಸಾಗರ ಪೌರಸಭೆಯ ಒಂದು ಪ್ರೌಢಶಾಲೆ ಪ್ರಾರಂಭವಾಯಿತು. 1933-34ರಲ್ಲಿ ಶಿವಮೊಗ್ಗದಲ್ಲಿ ವಿದ್ಯಾರ್ಥಿನಿಯರ ಪ್ರಥಮ ಪ್ರೌಢಶಾಲೆ ಪ್ರಾರಂಭವಾಯಿತು. ಶಿವಮೊಗ್ಗದಲ್ಲಿ 1940ರಲ್ಲಿ

ಕುವೆಂಪು ವಿಶ್ವವಿದ್ಯಾಲಯ

ಸರ್ಕಾರಿ ಇಂಟರ್‌ಮೀಡಿಯೆಟ್ ಕಾಲೇಜು ಅಸ್ತಿತ್ವಕ್ಕೆ ಬಂತು. ಇದನ್ನೇ ಮುಂದೆ 1959-60ರಲ್ಲಿ ಸಹ್ಯಾದ್ರಿ ಕಾಲೇಜು ಎಂದು ಕರೆಯಲಾಯಿತು. ಇಂದು ಜಿಲ್ಲೆಯಲ್ಲಿ ಹಲವಾರು ಶೈಕ್ಷಣಿಕ ಸಂಸ್ಥೆಗಳು ಸ್ಥಾಪಿತವಾಗಿವೆ. ಶಿವಮೊಗ್ಗದಲ್ಲಿ ಮಹಿಳಾ ನ್ಯಾಷನಲ್ ಕಾಲೇಜು, ದೇಶೀಯ ವಿದ್ಯಾಶಾಲಾ ಕಾಲೇಜು, ನ್ಯಾಷನಲ್ ವಾಣಿಜ್ಯ ಸಂಜೆ ಕಾಲೇಜು, ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸಿ, ನ್ಯಾಷನಲ್ ಶಿಕ್ಷಣ ಕಾಲೇಜು, ಪ್ರಥಮ ದರ್ಜೆ ಕಾಲೇಜು (ತೀರ್ಥಹಳ್ಳಿ), ಲಾಲ್ ಬಹದ್ದೂರ್ ಕಾಲೇಜು ಮತ್ತು ವಾಣಿಜ್ಯ ಕಾಲೇಜು (ಸಾಗರ), ಭದ್ರಾ ಕಾಲೇಜು (ಭದ್ರಾವತಿ), ಒಂದು ಕಾನೂನು ಕಾಲೇಜು, 5 ಉಪಾಧ್ಯಾಯರ ತರಬೇತಿ ಸಂಸ್ಥೆಗಳು, ಒಂದು ಪಾಲಿಟೆಕ್ನಿಕ್, ಒಂದು ಜೂನಿಯರ್ ತಾಂತ್ರಿಕ ಶಾಲೆ, ಒಂದು ಕೈಗಾರಿಕಾ ತರಬೇತಿ ಸಂಸ್ಥೆ, ಒಂದು ದೈಹಿಕ ಶಿಕ್ಷಣ ಕಾಲೇಜು ಮುಂತಾದ ಶಿಕ್ಷಣ ಸಂಸ್ಥೆಗಳಿವೆ.

ಜಿಲ್ಲೆಯ ಕೆಲವು ಮಠ ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ಸಂಸ್ಕೃತ ಪಾಠಶಾಲೆಗಳಿವೆ. ಜಿಲ್ಲೆಯಲ್ಲಿ 2000-2001ರಲ್ಲಿ 2,174 ಪ್ರಾಥಮಿಕ, 302 ಪ್ರೌಢಶಾಲೆಗಳು, 66 ಪದವಿಪೂರ್ವ ಕಾಲೇಜು, 8 ಪಾಲಿಟೆಕ್ನಿಕ್, 1 ಎಂಜಿನಿಯರಿಂಗ್, 2 ಭಾರತೀಯ ವೈದ್ಯಪದ್ಧತಿಯ ಕಾಲೇಜುಗಳೂ 1 ದಂತ ವೈದ್ಯಕಾಲೇಜೂ ಇದ್ದವು. ಮೈಸೂರು ವಿಶ್ವವಿದ್ಯಾನಿಲಯ ಶಿವಮೊಗ್ಗ ನಗರದಿಂದ 20 ಕಿಮೀ ದೂರದಲ್ಲಿ ಭದ್ರಾ ಯೋಜನಾ ಪ್ರದೇಶದ ಬಳಿ ಸ್ನಾತಕೋತ್ತರ ಕೇಂದ್ರವನ್ನು 1973ರಲ್ಲಿ ಸ್ಥಾಪಿಸಿತ್ತು. ಅದನ್ನೇ 1987 ಜೂನ್ 29ರಿಂದ ಕುವೆಂಪು ವಿಶ್ವವಿದ್ಯಾಲಯವಾಗಿ ಪರಿವರ್ತಿಸಲಾಯಿತು.

ಈ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ ಮತ್ತು ಸರ್ಕಾರಿ ವಸ್ತುಸಂಗ್ರಹಾಲಯವಿದೆ. ಈ ವಸ್ತುಸಂಗ್ರಹಾಲಯವನ್ನು ಇಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಅವಧಿಯಲ್ಲಿ ಎಚ್.ಎಲ್.ನಾಗೇಗೌಡರು ಸ್ಥಾಪಿಸಿದರು. ಈಗ ಇದು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ವಶದಲ್ಲಿದೆ. ಕೆಳದಿಯಲ್ಲಿ ಕೆಳದಿ ಗುಂಡಾ ಜೋಯಿಸರು 1960ರಲ್ಲಿ ಸ್ಥಾಪಿಸಿದ ಕೆಳದಿ ವಸ್ತುಸಂಗ್ರಹಾಲಯವಿದೆ. ಜಿಲ್ಲೆಯಲ್ಲಿ ಯಕ್ಷಗಾನ, ಭಾಗವತರ ಆಟ, ಡೊಳ್ಳು ಕುಣಿತ, ತೊಗಲುಬೊಂಬೆಮೇಳ, ವೀರಗಾಸೆ ಕುಣಿತ, ಅಂಟಿಕೆ ಪಂಟಿಕೆ ಮೊದಲಾದ ಜನಪದ ಕಲೆಗಳು ಬೆಳೆದುಬಂದಿವೆ.

ಶಿವಮೊಗ್ಗ, ಭದ್ರಾವತಿ, ಸಾಗರ, ಶಿಕಾರಿಪುರ, ತೀರ್ಥಹಳ್ಳಿ, ಸೊರಬ, ಹೊಸನಗರ ಇವು ಜಿಲ್ಲೆಯ ಪಟ್ಟಣಗಳು. ಭದ್ರಾವತಿ ನಗರವಲಯಕ್ಕೆ ಸೇರಿದ ಭದ್ರಾವತಿ ನ್ಯೂಟೌನ್, ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪ ಮತ್ತು ಶಿವಮೊಗ್ಗ ತಾಲ್ಲೂಕಿನ ಕುಂಸಿ ಇವು ಇತರ ಪಟ್ಟಣಗಳು. ಸೊರಬ ತಾಲ್ಲೂಕಿನ ಕುಬಟೂರು, ಚಂದ್ರಗುತ್ತಿ, ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ, ಭೀಮನಕಟ್ಟೆ, ಶಿಕಾರಿಪುರ ತಾಲ್ಲೂಕಿನ ತಾಳಗುಂದ, ಆರಗ, ಹೊಸನಗರ ತಾಲ್ಲೂಕಿನ ಹುಮಚ, ಸಾಗರ ತಾಲ್ಲೂಕಿನ ಕೆಳದಿ, ಇಕ್ಕೇರಿ ಮುಂತಾದ ಹಲವಾರು ಪುರಾತತ್ತ್ವ ಐತಿಹಾಸಿಕ ಮತ್ತು ಪೌರಾಣಿಕ ಮಹತ್ತ್ವದ ಸ್ಥಳಗಳಿವೆ.

ಶಿವಮೊಗ್ಗ ಜಿಲ್ಲೆ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಗಳನ್ನು ಅವಿರತವಾಗಿ ಬಳಸಿಕೊಂಡು ಬಂದಿರುವಂತೆ ರಾಜಕೀಯ ಚಟುವಟಿಕೆಗೂ ಪ್ರಸಿದ್ಧ. ಸ್ವಾತಂತ್ರ್ಯ ಹೋರಾಟಕ್ಕೆ ಈ ಜಿಲ್ಲೆಯ ಕೊಡುಗೆ ಗಣನೀಯ. ಶಿಕಾರಿಪುರ ತಾಲ್ಲೂಕಿನ ಈಸೂರು ಕ್ರಾಂತಿ ನಡೆದ ಸ್ಥಳ. ಇಲ್ಲಿ ಸ್ಮಾರಕ ಭವನ ನಿರ್ಮಿಸಲಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಈ ಜಿಲ್ಲೆಯ ಕೊಡುಗೆ ಅಪಾರ. ಇಲ್ಲಿನ ಕೆಲವು ಕನ್ನಡ ಶಾಸನಗಳಲ್ಲಿ ಬಳ್ಳಿಗಾವೆಯ ಒನಕೆಹೊಂಡದ ಶಿವದೇವಾಲಯದ ಮುಂದಿರುವ ಬಾದಾಮಿ ಚಳುಕ್ಯ ವಿನಯಾದಿತ್ಯನ ನಾಗರಖಂಡ ಮಾಂಡಲಿಕ ಅರಸನ ಪೊಗಿಲ್ಲಿ ಸೇಂದ್ರಕನ ರಾಜನ ಶಾಸನ (685) ಬಹು ಪ್ರಾಚೀನವಾದದ್ದು. 10-11ನೆಯ ಶತಮಾನದಲ್ಲಿ ವಾದಿಭಸಿಂಹಸೂರಿ ಎಂದು ಕರೆಯಿಸಿಕೊಂಡ ಪುಷ್ಪಮುನಿಯ ಶಿಷ್ಯ ಅಜಿತಸೇನ ದೊಡ್ಡ ಪಂಡಿತರಾಗಿದ್ದರು. ಇವರ ಕ್ಷಾತ್ರ ಚೂಡಾಮಣಿ ಕಾವ್ಯ ಮತ್ತು ಗದ್ಯಚಿಂತಾಮಣಿ ಮುಖ್ಯವಾದ ರಚನೆಗಳು. ಕಲ್ಯಾಣ ಚಾಳುಕ್ಯರ ಕಾಲದ ಶಾಸನಗಳಂತೂ ಬಹಳಷ್ಟು ಕನ್ನಡ ಭಾಷೆ ಮತ್ತು ಲಿಪಿಯಲ್ಲಿವೆ. ಬಳ್ಳಿಗಾವೆಯ ಸೋಮೇಶ್ವರ ದೇವಾಲಯದ ಹತ್ತಿರ ಹೆಸರಾಂತ ಜೈನಕವಿ ಶಾಂತಿನಾಥನ ಶಾಸನವೊಂದಿದೆ. ಇವನು ಚಾಳುಕ್ಯ ಭುವನೈಕಮಲ್ಲನ ಮಾಂಡಲಿಕ ಲಕ್ಷ್ಮನೃಪನ ಆಶ್ರಯದಲ್ಲಿದ್ದ ಈತ ಸುಕುಮಾರಚರಿತೆ ಎಂಬ ಕಾವ್ಯವನ್ನು ಬರೆದಿದ್ದಾನೆ. ಇಲ್ಲಿನ ಶಿವಶರಣ-ಶಿವಶರಣೆಯರಾದ ಅಲ್ಲಮಪ್ರಭು, ಅಕ್ಕಮಹಾದೇವಿ ಇವರ ವಚನಗಳು ಕನ್ನಡ ವಚನಸಾಹಿತ್ಯದಲ್ಲಿ ವಿಶಿಷ್ಟಸ್ಥಾನ ಪಡೆದಿವೆ. ಜಕ್ಕೇಶ್ವರನ ಅಂಕಿತದಲ್ಲಿ ಶರಣೆ ಸತ್ಯಕ್ಕನ 20 ವಚನಗಳು ಸಿಕ್ಕಿವೆ. ಕೆಳದಿ ಅರಸರ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಸರ್ವತೋಮುಖವಾಗಿ ಬೆಳೆಯಿತು. ಒಂದನೆಯ ವೆಂಕಟಪ್ಪನ ಕಾಲದ ತಿರುಮಲಭಟ್ಟನ, ಶಿವಷಟ್ಪದಿ ಕರ್ನಾಟಕ ಶಿವಗೀತೆ ಮತ್ತು ಆಸ್ಥಾನ ಕವಿಯಾಗಿದ್ದ ಅಶ್ವಪಂಡಿತನ ಕುದುರೆಯನ್ನು ಕುರಿತ ಮಾನಸಪ್ರಿಯ, ಭಟ್ಟೋಜಿದೀಕ್ಷಿತನ ತತ್ತ್ವಕೌಸ್ತುಭ, ಜೀನಸೇನ ದೇಶಾವರ್ತಿಯ ಸಾಂಗತ್ಯದಲ್ಲಿಯ ಒಂದು ಜೈನಪುರಾಣ, ಒಂದನೆಯ ಬಸಪ್ಪನಾಯಕನ ಕಾಲದ ಶಿವತತ್ತ್ವರತ್ನಾಕರ, ಸುಭಾಷಿತಸ್ಫುರದ್ರುಮ, ಸರ್ಜಾ ನಾಗಪ್ಪ ಮಂತ್ರಿಯ ಭಾಮಿನಿಷಟ್ಪದಿಯಲ್ಲಿ ಬರೆದ ಶುಕಸಪ್ತತಿ ಮುಖ್ಯವಾದವುಗಳು. ಗಂಗಾದೇವಿಯ ಕೆಳದಿ ರಾಜಾಭ್ಯುದಯಂ ಆಗಿನ ಕಾಲದಲ್ಲಿ ಸ್ತ್ರೀಯರ ಸಾಹಿತ್ಯ ಪ್ರತಿಭೆಗೆ ಒಂದು ಉತ್ತಮ ಉದಾಹರಣೆ. ಷಡಕ್ಷರನ ವೀರಶೈವಶಿರೋಮಣಿ, ನಿರ್ವಾಣನ ಕ್ರಿಯಾಸಾರವ್ಯಾಖ್ಯಾನ ಈ ಕಾಲದ ಸಾಹಿತ್ಯದಲ್ಲಿ ಉತ್ತಮ ಸ್ಥಾನವನ್ನು ಪಡೆದಿವೆ. ಲಿಂಗಣ್ಣ ಕವಿಯ ಕೆಳದಿನೃಪ ವಿಜಯಂ ಐತಿಹಾಸಿಕ ಮಹತ್ತ್ವವುಳ್ಳ ಕೃತಿ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ರಾಷ್ಟ್ರಕವಿ ಕೆ.ವಿ.ಪುಟ್ಟಪ್ಪನವರು

**(ನೋಡಿ– ಪುಟ್ಟಪ್ಪ ಕೆ.ವಿ.)** ಈ ಜಿಲ್ಲೆಯವರು. ಇವರ ಶ್ರೀರಾಮಾಯಣದರ್ಶನಂ ಕೃತಿ ಜ್ಞಾನಪೀಠಪ್ರಶಸ್ತಿ ಪಡೆದಿದೆ. ಕಾನೂರ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಇವರ ಮಹತ್ತ್ವದ ಕಾದಂಬರಿಗಳು. ಬೆರಳ್‌ಗೆ ಕೊರಳ್ ಮುಂತಾದ ನಾಟಕಗಳು, ಮಹಾನ್ ವ್ಯಕ್ತಿಗಳ ಜೀವನಚರಿತೆಗಳು ಮತ್ತು

ಕುವೆಂಪು ಅವರ ಮನೆ, ಕುಪ್ಪಳಿ

ಇವರ ಭಾವಗೀತೆಗಳು ಕನ್ನಡ ನಾಡಿನಲ್ಲಿ ಸುಪ್ರಸಿದ್ಧವಾಗಿವೆ. ಎಸ್. ವಿ. ಪರಮೇಶ್ವರಭಟ್ಟ, ಹಾ. ಮಾ. ನಾಯಕ, ಪಿ. ಲಂಕೇಶ್, ಯು. ಆರ್. ಅನಂತಮೂರ್ತಿ, ಕೆ. ವಿ. ಸುಬ್ಬಣ್ಣ, ಪೂರ್ಣಚಂದ್ರ ತೇಜಸ್ವಿ, ಎಂ. ಕೆ. ಇಂದಿರಾ, ನಾ. ಡಿಸೋಜ ಮುಂತಾದ ಪ್ರಸಿದ್ಧ ಸಾಹಿತಿಗಳೂ ಈ ಜಿಲ್ಲೆಯವರೇ. ಚಲನಚಿತ್ರ ಕ್ಷೇತ್ರದಲ್ಲಿ ಈ ಜಿಲ್ಲೆಗೆ ಖ್ಯಾತಿ ತಂದವರು ಗಿರೀಶ ಕಾಸರವಳ್ಳಿ, ಶಿವಮೊಗ್ಗ ಸುಬ್ಬಣ್ಣ. ಅನೇಕ ಪ್ರತಿಭಾವಂತ ಸಾಹಿತಿಗಳನ್ನು ಕಲಾವಿದರನ್ನು ಪಡೆದ ಖ್ಯಾತಿ ಈ ಜಿಲ್ಲೆಗಿದೆ.

ಈ ಜಿಲ್ಲೆ ಪ್ರಕೃತಿಸೌಂದರ್ಯಕ್ಕೆ, ಪ್ರೇಕ್ಷಣೀಯ ಸ್ಥಳಗಳಿಗೆ ಪ್ರಸಿದ್ಧ. ಪ್ರಪಂಚವಿಖ್ಯಾತ ಜೋಗ ಜಲಪಾತ ಮನೋಹರ ದೃಶ್ಯವುಳ್ಳ ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿದೆ. ತಾಳಗುಪ್ಪದ ಉತ್ತಮ ಭೂದೃಶ್ಯಗಳೂ ಹೊಸನಗರ ತಾಲ್ಲೂಕಿನ ಪಶ್ಚಿಮಘಟ್ಟದಲ್ಲಿರುವ ಕೊಡಚಾದ್ರಿ ಶಿಖರದ ಬಳಿಯಿಂದ ಅರಬ್ಬಿ ಸಮುದ್ರದವರೆಗೂ ಕಾಣುವ ಮನೋಹರ ದೃಶ್ಯ ಮತ್ತು ಆಗುಂಬೆಯ ಸೂರ್ಯಾಸ್ತದೃಶ್ಯ ಮುಂತಾದವು ಚೇತೋಹಾರಿಯಾದವು. ಶಿಕಾರಿಪುರ ತಾಲ್ಲೂಕಿನ ಮದಗಕೆರೆ ನೀರಾವರಿಗೆ ಮೂಲಗಳಾಗಿರುವುದರ ಜೊತೆಗೆ ಪ್ರೇಕ್ಷಣೀಯ ಸ್ಥಳವೂ ಆಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಬಳಿ ಸ್ವಾಭಾವಿಕ ಪಕ್ಷಿಧಾಮವಿದೆ. ಹೊಸನಗರ ತಾಲ್ಲೂಕಿನ ಕುಂಚಿಕಲ್ಲು ಅಬ್ಬೆಯಲ್ಲಿ ವರಾಹಿ ನದಿ ಒಂಬತ್ತು ಹಂತಗಳಲ್ಲಿ ದುಮುಕುತ್ತದೆ. ಶರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಲಿಂಗನಮಕ್ಕಿ ಜಲಾಶಯ, ಭದ್ರಯೋಜನಾ ಪ್ರದೇಶ, ತುಂಗಾ ಅಣೆಕಟ್ಟು ಮೊದಲಾದವು ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಶಿವಮೊಗ್ಗ ಜಿಲ್ಲೆ ದಕ್ಷಿಣಭಾರತದ ಪುರಾತನ ಮಾನವನ ವಾಸಸ್ಥಳಗಳಲ್ಲೊಂದು. ತೀರ್ಥಹಳ್ಳಿ ಬಳಿ ಎಡಗುಡ್ಡೆ ಮತ್ತು ಭದ್ರಾವತಿ ತಾಲ್ಲೂಕಿನ ಅನವೇರಿ ಮತ್ತು ನಾಗಸಮುದ್ರಗಳಲ್ಲಿ ನವಶಿಲಾಯುಗದ ಅವಶೇಷಗಳು ದೊರೆತಿವೆ. ಶಿವಮೊಗ್ಗ ತಾಲ್ಲೂಕಿನ ಗುಡ್ಡೇಮರಡಿ ಬೆಟ್ಟದ ಬುಡದಲ್ಲಿ ನವಶಿಲಾಯುಗದ ನಿವೇಶನ ಕಂಡುಬಂದಿದೆ. ಹೊಸನಗರ ತಾಲ್ಲೂಕಿನ ನಿಲಸಕಲ್ಲಿನಲ್ಲಿ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಬಳಿ ಕುಂದ ಎಂಬಲ್ಲಿ ಮೆಗಾಲಿಥಿಕ್ ನಿವೇಶನಗಳಿವೆ. ಈ ಜಿಲ್ಲೆಯ ಅನೇಕ ಸ್ಥಳಗಳನ್ನು ಕುರಿತು ರಾಮಾಯಣ ಮತ್ತು ಮಹಾಭಾರತಗಳಿಗೆ ಸಂಬಂಧಿಸಿದ ಅನೇಕ ಐತಿಹ್ಯಗಳಿವೆ. ರಾಮಾಯಣದಲ್ಲಿ ತುಂಗಭದ್ರಾ ನದಿಯನ್ನು 'ಪಂಪಾ' ಎಂದು ಉಲ್ಲೇಖಿಸಲಾಗಿದೆ. ಮಹಾಭಾರತದಲ್ಲಿ ವನವಾಸಕ, ಅಂದರೆ, ಆಧುನಿಕ ಬನವಾಸಿಯ ಮತ್ತು ಕುಂತಲದ ಪ್ರಸ್ತಾಪವಿದೆ. ಸೊರಬ ತಾಲ್ಲೂಕಿನ ಕುಬಟೂರು ಪ್ರಾಚೀನ ಕುಂತಲದ ನಗರವಾಗಿತ್ತೆಂದೂ ಶಿಕಾರಿಪುರ ತಾಲ್ಲೂಕಿನಲ್ಲಿರುವ ಬಿಸ್ಲಹಳ್ಳಿ ಮಹಾಭಾರತದ ಕಾಲದ ಏಕಚಕ್ರನಗರವೆಂದೂ ಹೇಳಲಾಗಿದೆ. ಅಗಸ್ತ್ಯ, ಜಮದಗ್ನಿ, ದೂರ್ವಾಸ, ಹರದತ್ತ, ಚಂದ್ರಹಾಸ, ಪರಶುರಾಮ ಮೊದಲಾದ ಪೌರಾಣಿಕ ವ್ಯಕ್ತಿಗಳಿಗೆ ಸಂಬಂಧಿಸಿದ ಅನೇಕ ಸ್ಥಳ ಪುರಾಣಗಳಿವೆ.

ಇತಿಹಾಸ ಕಾಲಕ್ಕೆ ಬಂದರೆ ಮೌರ್ಯರ ಕಾಲದ ಆಳಿಕೆಯ ಕುರುಹುಗಳು ದೊರೆಯುತ್ತವೆ. ಕುಬಟೂರಿನ ಶಾಸನವೊಂದರಲ್ಲಿ ಚಂದ್ರಗುಪ್ತ ಎಂಬವನ ಪ್ರಸ್ತಾಪವಿದೆ. ಬಂದಳಿಕೆಯಲ್ಲಿರುವ ಹೊಯ್ಸಳ ಶಾಸನದಲ್ಲಿ ನಂದರು ಮತ್ತು ಮೌರ್ಯರು ಕುಂತಲವನ್ನು ಆಳಿದ ಪ್ರಸ್ತಾಪವಿದೆ. ಬನವಾಸಿ ಹಿಂದೆ ಬೌದ್ಧರ ಮುಖ್ಯ ಕೇಂದ್ರಗಳಲ್ಲೊಂದಾಗಿತ್ತು. ದಖನ್‌ನಲ್ಲಿ ಪ್ರಥಮ ಬಾರಿಗೆ ಸಾಮ್ರಾಜ್ಯ ಕಟ್ಟಿದ ಸಾತವಾಹನರ ಆಳಿಕೆಗೆ ಈ ಜಿಲ್ಲೆ ಸೇರಿತ್ತು.



ವೀರಭದ್ರ ದೇವಾಲಯ, ಕೆಳದಿ

ಕರ್ನಾಟಕದ ಪ್ರಥಮ ರಾಜಮನೆತನವೆಂದು ಹೆಸರಾದ ಕದಂಬರ ಮೂಲ ಪುರುಷರು ಈ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಸ್ಥಾನಕುಂದೂರು ಅಥವಾ ತಾಳಗುಂದದಲ್ಲಿ ಅಗ್ರಹಾರ ಸ್ಥಾಪಿಸಿದರೆಂದು ತಿಳಿದುಬರುತ್ತದೆ. ಕದಂಬರ ಮೂಲಸ್ಥಾನವಾದ ಬನವಾಸಿ ಪ್ರಾಂತಕ್ಕೆ ಸೇರಿದ ಈ ಜಿಲ್ಲೆಯ ಬಹುಭಾಗ ಅವರ ಚಟುವಟಿಕೆಯ ಕೇಂದ್ರ ಪ್ರದೇಶವಾಗಿತ್ತು. ಅವರು ನಾಲ್ಕನೆಯ ಶತಮಾನದವರೆಗೂ ಆಳಿದರು. ನಾಲ್ಕನೆಯ ಶತಮಾನದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಪ್ರಬಲರಾದ ತಲಕಾಡಿನ ಗಂಗರ ಆರಂಭಕಾಲದ ಶಾಸನ ಈ ಜಿಲ್ಲೆಯಲ್ಲಿ ದೊರೆತಿದೆ. ಗಂಗವಂಶ ಹನ್ನೊಂದನೆಯ ಶತಮಾನದ ಆದಿಭಾಗದವರೆಗೂ ಅಸ್ತಿತ್ವದಲ್ಲಿತ್ತು. ಅವರು ಸ್ವತಂತ್ರರಾಗಿ ಮತ್ತು ಕೆಲವೊಮ್ಮೆ ಬಾದಾಮಿ ಚಳುಕ್ಯರ ಮತ್ತು ರಾಷ್ಟ್ರಕೂಟರ ಸಾಮಂತರಾಗಿ ಈ ಜಿಲ್ಲೆಯ ಭಾಗಗಳನ್ನು ಆಳಿದ್ದಾರೆ.

ಬಾದಾಮಿ ಚಳುಕ್ಯರ, ರಾಷ್ಟ್ರಕೂಟರ ಮತ್ತು ಕಲ್ಯಾಣಿ ಚಾಳುಕ್ಯರ ಸಾಮ್ರಾಜ್ಯಗಳಲ್ಲಿ ಈ ಜಿಲ್ಲೆ ಸೇರಿತ್ತು. ಕಳಚುರಿ ಬಿಜ್ಜಳ ಬಳ್ಳಿಗಾಮೆ ಮೊದಲಾದ ಸ್ಥಳಗಳಲ್ಲಿ ದೇವಾಲಯಗಳಿಗೆ ದತ್ತಿ ಬಿಟ್ಟಿದ್ದಾನೆ. ಹನ್ನೆರಡನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ದ್ವಾರಸಮುದ್ರದ ಹೊಯ್ಸಳರ ಕಾಲದಲ್ಲಿ ಈ ಜಿಲ್ಲೆ ಸಮೃದ್ಧಿ ಪಡೆದಿತ್ತು. ಹೊಯ್ಸಳರ ಸಮಕಾಲೀನರಾದ ದೇವಗಿರಿ ಯಾದವರು ಅಥವಾ ಸೇವುಣರಿಗೂ

ಹೊಯ್ಸಳರಿಗೂ ಈ ಜಿಲ್ಲೆಯ ಮತ್ತು ಸುತ್ತಲ ಪ್ರದೇಶಗಳಲ್ಲಿ ಅನೇಕ ಯುದ್ಧಗಳು ನಡೆದವು.

ಪ್ರಾಚೀನ ಕಾಲದಿಂದಲೂ ಈ ಜಿಲ್ಲೆಯಲ್ಲಿ ಅನೇಕ ರಾಜಮನೆತನಗಳು, ಪಾಳೆಯಪಟ್ಟುಗಳು ಹುಟ್ಟಿ ಬಾಳಿದುದು ಕಂಡುಬರುತ್ತದೆ. ಪ್ರಾರಂಭದಲ್ಲಿ ಇಲ್ಲಿ ಸೇಂದ್ರಕರು ಆಳುತ್ತಿದ್ದರೆಂದು ಹೇಳಲಾಗಿದೆ. 7ನೆಯ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಸಾಂತರರು ಹೊಸನಗರ ತಾಲ್ಲೂಕಿನ ಹುಮಚದಲ್ಲಿ ತಮ್ಮ ರಾಜಧಾನಿ ಸ್ಥಾಪಿಸಿದರು. ಅವರ ವಂಶದವರು ಬೇರೆ ಬೇರೆ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಳಸ ಮತ್ತು ಉಡುಪಿ ಜಿಲ್ಲೆಯ ಕಾರ್ಕಳಗಳನ್ನು ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡು ಆಳಿದರು. ಹದಿನೇಳನೆಯ ಶತಮಾನದವರೆಗೂ ಕಾರ್ಕಳದಲ್ಲಿ ಅವರ ವಂಶ ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ. ತಲಕಾಡಿನ ಗಂಗರು, ಕಲ್ಯಾಣಿ ಚಾಳುಕ್ಯರು ಮತ್ತು ಹೊಯ್ಸಳರಿಗೆ ಸಾಮಂತರಾಗಿದ್ದ ಹುಮಚದ ಸಾಂತರರು ಮಲೆನಾಡು ಭಾಗದ ಸಾಂಸ್ಕೃತಿಕ ಪರಂಪರೆಗೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ **(ನೋಡಿ– ಸಾಂತರರು)**. ಸೇನವಾರರು, ಸಿಂಧರು, ನೊಳಂಬರು, ಪಾಂಡ್ಯರು, ವಾಣಿಯವರು ಮೊದಲಾದ ಪಾಳೆಯಗಾರರು, ಸಾಮಂತರು ಈ ಜಿಲ್ಲೆಯ ವಿವಿಧ ಭಾಗಗಳನ್ನು ಆಳಿದ್ದಾರೆ. ಹದಿಮೂರನೆಯ ಶತಮಾನದಲ್ಲಿ ಸಾಗರ ತಾಲ್ಲೂಕಿನಲ್ಲಿ ಸೇತುನಾಡು ಎಂಬ ಪಾಳೆಯಪಟ್ಟು ಇತ್ತು.

ಈ ಜಿಲ್ಲೆ ವಿಜಯನಗರ ಸಾಮ್ರಾಜ್ಯದ ಪ್ರಮುಖ ಭಾಗಗಳಲ್ಲೊಂದಾಗಿತ್ತು. ಆರಗ ಮತ್ತು ಚಂದ್ರಗುತ್ತಿಗಳು ಪ್ರಾಂತೀಯ ಮುಖ್ಯ ಸ್ಥಳಗಳಾಗಿದ್ದವು. ಬಿಜಾಪುರದ ಆದಿಲ್‌ಶಾಹೀಗಳೂ ಈ ಜಿಲ್ಲೆಯ ಕೆಲವು ಭಾಗಗಳನ್ನು ಸ್ವಲ್ಪ ಕಾಲ ಆಳಿದರು.

ವಿಜಯನಗರದ ಪತನಾನಂತರ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ ಕೆಳದಿ ನಾಯಕರು ಈ ಜಿಲ್ಲೆಯ ಮಣ್ಣಿನ ಮಕ್ಕಳು. ವೀರಶೈವ ರೈತ ಮನೆತನದ ಚೌಡಪ್ಪ ಅವನ ಸಹೋದರ ಭದ್ರಪ್ಪ ಎಂಬವರು ಸ್ವಸಾಮರ್ಥ್ಯದಿಂದ ಕೆಳದಿಯ ಸುತ್ತಮುತ್ತಲ ಹಳ್ಳಿಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ವಿಜಯನಗರ ಸಾಮ್ರಾಟರು ಮೊದಲಿಗೆ ಅವರನ್ನು ನಿಗ್ರಹಿಸಲು ಪ್ರಯತ್ನಿಸಿದರು. ಆ ಸಹೋದರರ ಧೈರ್ಯಸಾಹಸಗಳಿಗೆ ಮೆಚ್ಚಿ ಅವರನ್ನು ತಮ್ಮ ಸಾಮಂತರಾಗಿ ಸ್ವೀಕರಿಸಿದರು. ಅವರಿಗೆ ವಿಜಯನಗರದ ಮಾನ್ಯತೆ ದೊರೆತದ್ದು 1499ರಲ್ಲಿ ಎಂದು ತಿಳಿದುಬರುತ್ತದೆ. ವಿಸ್ತಾರವಾಗಿದ್ದ ಸಂಸ್ಥಾನವನ್ನು ಆಡಳಿತದ ಸೌಲಭ್ಯಕ್ಕಾಗಿ ಹಲವು ಭಾಗಗಳಾಗಿ ವಿಂಗಡಿಸಲಾಗಿತ್ತು. ಮಂಡಲ, ರಾಜ್ಯ, ಕಂಪಣ, ವೇಂಠೆಯ, ಹೆಸರುಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಆದರೆ ರಾಜ್ಯವನ್ನು ಭಾಗ ಆಥವಾ ಉಪಭಾಗಗಳಾಗಿ ವಿಂಗಡಿಸುವಲ್ಲಿ ಯಾವ ಒಂದು ನಿರ್ದಿಷ್ಟವಾದ ನಿಯಮವನ್ನೂ ಪಾಲಿಸುತ್ತಿದ್ದಂತೆ ತೋರದು. ಗ್ರಾಮವೇ ಚಿಕ್ಕ ಆಡಳಿತ ಭಾಗವಾಗಿದ್ದು ಅದರ ಆಡಳಿತ ಭಾಗವನ್ನು ನೋಡಿಕೊಳ್ಳಲು ಪಾರುಪತ್ಯಗಾರರಿರುತ್ತಿದ್ದರು. ಸುಂಕಸಾರಿಗೆಗಳನ್ನು ಎತ್ತುವುದು, ದುರ್ಗಗಳ ರಕ್ಷಣೆ, ಗ್ರಾಮಾಡಳಿತದ ಹೊಣೆ ಈ ಪಾರುಪತ್ಯಗಾರರಿಗೆ ಸೇರಿದ್ದು ರಾಜ್ಯ ನಿರೂಪ ಇವರಿಗೆ ಕಳುಹಿಸಲಾಗುತ್ತಿತ್ತು. ನಾಡಧಿಕಾರಿಗಳು ನಾಡಿನ ಆಡಳಿತಕ್ಕೆ ಹೊಣೆಗಾರರಾಗಿದ್ದರು. ದಾನದತ್ತಿಗಳನ್ನು ಕೊಡುವಾಗ ಈ ಅಧಿಕಾರಿಗಳು, ನಾಡಿನವರು, ಗಣಪಣಗಳು ಮತ್ತು ಗ್ರಾಮಾಧಿಕಾರಿಗಳ ಒಪ್ಪಿತವನ್ನು ಪಡೆಯುತ್ತಿದ್ದರು. ಸೇನಬೋವ ಗ್ರಾಮಗಳಲ್ಲಿ ನಡೆಯುವ ಎಲ್ಲ ಆಡಳಿತ ವ್ಯವಹಾರಗಳನ್ನೂ ಬರೆದಿಡುವ ಅಧಿಕಾರಿ. ದಾನ, ಕ್ರಯ, ವರ್ಗಾವಣೆ ಮುಂತಾದ ಯಾವ ವ್ಯವಹಾರವಾದರೂ ಅದನ್ನು ಸೇನಬೋವನ ಕಡತದಲ್ಲಿ ನಮೂದಿಸಬೇಕಾಗಿತ್ತು.

ಆಗ ಸಾಳ್ವ ಎರಡನೆಯ ನರಸಿಂಹ ವಿಜಯನಗರದಲ್ಲಿ ಆಳುತ್ತಿದ್ದ. ಕೆಳದಿ ಚೌಡಪ್ಪ ಮತ್ತು ಅವನ ವಂಶಸ್ಥರ ಮುಖ್ಯ ಸ್ಥಳವಾದ್ದರಿಂದ ಅವರನ್ನು ಕೆಳದಿ ನಾಯಕರೆಂಬ ಹೆಸರಿನಿಂದ ಕರೆಯಲಾಗಿದೆ. ಕೆಳದಿ ನಾಯಕರು ಸಾಮ್ರಾಜ್ಯಕ್ಕೆ ನಿಷ್ಠೆಯಿಂದ ಸೇವೆ ಸಲ್ಲಿಸುತ್ತ ಬಂದರು. ಅಳಿಯ ರಾಮರಾಯನ ಕಾಲದಲ್ಲಿ ಮುಸ್ಲಿಮ್ ಸುಲ್ತಾನರನ್ನು ಸೋಲಿಸುವುದರಲ್ಲಿ ಮತ್ತು ಸಾಮಂತರ ದಂಗೆಗಳನ್ನು ಅಡಗಿಸುವುದರಲ್ಲಿ ಅದ್ಭುತ ಯಶಸ್ಸು ಗಳಿಸಿದರು. ಈ ಸಾಧನೆಗಾಗಿ ಕೆಳದಿ ಅರಸರಿಗೆ ನಾಯಕ, ಕೋಟೆಕೋಲಾಹಲ, ಪಡುವಣ ಸಮುದ್ರಾಧಿಪತಿ ಮೊದಲಾದ ಬಿರುದುಗಳಿದ್ದುವು. 1565ರಲ್ಲಿ ವಿಜಯನಗರ ಪತನವಾದ ಅನಂತರ ಕೆಳದಿ ನಾಯಕರ ಪಾಲಿಗೆ ಹೆಚ್ಚಿನ ಹೊಣೆ ಬಿತ್ತು. ಅವರು ಪೆನುಕೊಂಡೆ ಮತ್ತಿತರ ಕಡೆಗಳಿಂದ ಆಳಿದ ವಿಜಯನಗರದ ಆರವೀಡು ವಂಶಸ್ಥರಿಗೆ ನಿಷ್ಠೆಯಿಂದಿದ್ದು ಕರ್ನಾಟಕದ ಪಶ್ಚಿಮ ಮತ್ತು ಕರಾವಳಿ ಭಾಗಗಳಲ್ಲಿ ತಮ್ಮ ರಾಜ್ಯವನ್ನು ಸ್ಥಿರಪಡಿಸಿದರು. ಕಾಸರಗೋಡಿನಿಂದ ಕಾರವಾರದವರೆಗೂ ಪೋರ್ಚುಗೀಸರು ದೃಢವಾಗಿ ಬೇರೂರದಂತೆ ತಡೆದರು. ಒಂದನೆಯ ವೆಂಕಟಪ್ಪನಾಯಕ, ಶಿವಪ್ಪನಾಯಕ, ಚೆನ್ನಮ್ಮಾಜಿ, ಒಂದನೆಯ ಬಸವಪ್ಪನಾಯಕ ಮೊದಲಾದವರ ಕಾಲದಲ್ಲಿ ಈ ರಾಜವಂಶ ಕರ್ನಾಟಕ ರಾಜಕೀಯದಲ್ಲಿ ಅಮೋಘ ಪಾತ್ರವಹಿಸಿತು. ಔರಂಗಜೇಬನ ವಿರುದ್ಧ ಸಹಾಯ ಅರಸಿಬಂದ ಶಿವಾಜಿಯ ಮಗ ರಾಜಾರಾಮನಿಗೆ



ಕೈಟಭೇಶ್ವರ ದೇವಸ್ಥಾನದ ನವರಂಗ, ಕುಬತೂರು

ಆಶ್ರಯ ನೀಡಿ ರಾಣಿ ಚೆನ್ನಮ್ಮಾಜಿ ಇತಿಹಾಸ ಪ್ರಸಿದ್ಧಳಾದಳು. ಇದೇ ಜಿಲ್ಲೆಯ ಇಕ್ಕೇರಿಯಿಂದಲೂ ತರುವಾಯ ಬಿದನೂರಿನಿಂದಲೂ 1763ರ ವರೆಗೆ ಆಳಿದ ಈ ವಂಶ ಹೈದರ್ ಅಲಿಯ ದಾಳಿಗೆ ತುತ್ತಾಗಿ ಕೊನೆಗೊಂಡಿತು **(ನೋಡಿ–ಕೆಳದಿ ರಾಜವಂಶ)**.

ಹೈದರ್ ಅಲಿ ಕಾಲದಲ್ಲಿ ಈ ಜಿಲ್ಲೆ ಮೈಸೂರು ರಾಜ್ಯದ ಭಾಗವಾಯಿತು. 1799ರ ಅನಂತರ ಹಳೇ ಮೈಸೂರು ಸಂಸ್ಥಾನಕ್ಕೆ ಸೇರಿತು. ಇಲ್ಲಿ ಬೆಳಗುತ್ತಿ ನಾಯಕರು, ಬಸವಾಪಟ್ಟಣದ ಪಾಳೆಯಗಾರರು, ಹೊನ್ನಾಳಿ ಮುಗಲ ನವಾಬರು ಮೊದಲಾದವರು ಹದಿನೇಳು, ಹದಿನೆಂಟನೆಯ ಶತಮಾನಗಳಲ್ಲಿ ಪಾಳೆಯಪಟ್ಟು ಸ್ಥಾಪಿಸಿದ್ದರು. ಬ್ರಿಟಿಷರ ವಿರುದ್ಧ ಧೋಂಡಿಯ ವಾಘನು ನಡೆಸಿದ ಹೋರಾಟ ಅವಿಸ್ಮರಣೀಯವಾ ಗಿದೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ ಈ ಜಿಲ್ಲೆ ಮುಖ್ಯ ಪಾತ್ರವಹಿಸಿ 1942ರಲ್ಲಿ ನಡೆದ ಈಸೂರು **(ನೋಡಿ)** ಕ್ರಾಂತಿ ಆಧುನಿಕ ಭಾರತದ ಇತಿಹಾಸದಲ್ಲಿ ಈ ಜಿಲ್ಲೆಯ ಹೆಸರನ್ನು ಚಿರಸ್ಥಾಯಿಗೊಳಿಸಿದೆ.

**ತಾಲ್ಲೂಕು :** ಶಿವಮೊಗ್ಗ ಜಿಲ್ಲೆಯ ಅದೇ ಹೆಸರಿನ ತಾಲ್ಲೂಕು ಮತ್ತು ಆಡಳಿತ ಕೇಂದ್ರಪಟ್ಟಣ. ತಾಲ್ಲೂಕನ್ನು ಪಶ್ಚಿಮದಲ್ಲಿ ತೀರ್ಥಹಳ್ಳಿ, ಹೊಸನಗರ, ವಾಯವ್ಯದಲ್ಲಿ ಸಾಗರ, ಉತ್ತರಕ್ಕೆ ಶಿಕಾರಿಪುರ, ದಾವಣಗೆರೆ ಜಿಲ್ಲೆಯ ಹೊನ್ನಾಳಿ, ಪೂರ್ವಕ್ಕೆ ಭದ್ರಾವತಿ ತಾಲ್ಲೂಕುಗಳು, ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕೂ ಸುತ್ತುವರಿದಿವೆ. ಹೊಳಲೂರು, ನಿಡಿಗೆ, ಶಿವಮೊಗ್ಗ, ಕುಂಸಿ, ಹರನಹಳ್ಳಿ ಹೋಬಳಿಗಳು, ಹೊಳಲೂರು, ನಿಡಿಗೆ, ಶಿವಮೊಗ್ಗ ಹೋಬಳಿಗಳನ್ನು ಪ್ರಥಮ ದ್ವಿತೀಯ ಭಾಗಗಳಾಗಿ ವಿಂಗಡಿಸಿದೆ. ಎರಡು ಪಟ್ಟಣ ಮತ್ತು 229 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,104.7 ಚ.ಕಿಮೀ. ಜನಸಂಖ್ಯೆ 4,45,006.

ಶಿವಪ್ಪನಾಯಕನ ಅರಮನೆ, ಕೆಳದಿ

ತಾಲ್ಲೂಕು ಜಿಲ್ಲೆಯ ಮಧ್ಯಭಾಗದಲ್ಲಿ ಅರೆಮಲೆನಾಡು ಪ್ರದೇಶ ದಲ್ಲಿದೆ. ತಾಲ್ಲೂಕಿನ ಸುತ್ತಲೂ ಗುಡ್ಡಸಾಲುಗಳು ಆವರಿಸಿದ್ದು ಒಳಭಾಗದಲ್ಲಿ ಮೈದಾನ ಪ್ರದೇಶವಿದೆ. ಪಶ್ಚಿಮದ ಕಡೆ ಸಾಧಾರಣ ಕಾಡುಗಳುಳ್ಳ ಬೆಟ್ಟಗುಡ್ಡಗಳಿವೆ. ಪೂರ್ವಕ್ಕೆ ಹೋದಂತೆ ಭೂಮಿ ಹೆಚ್ಚಾಗಿ ಮಟ್ಟಸವಾಗಿದ್ದು ವಿಶಾಲ ಬಯಲುಗಳಿಂದ ಕೂಡಿದೆ. ತುಂಗಾ ನದಿ ತಾಲ್ಲೂಕನ್ನು ನೈಋತ್ಯದಿಂದ ಪ್ರವೇಶಿಸಿ ಈಶಾನ್ಯಕ್ಕೆ ಹರಿಯುತ್ತದೆ. ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯಿಂದ ಭದ್ರಾವತಿ ತಾಲ್ಲೂಕನ್ನು ಪ್ರವೇಶಿಸುವ ಭದ್ರಾನದಿ ಈ ತಾಲ್ಲೂಕಿನ ಪೂರ್ವಭಾಗದ ಸರಹದ್ದಿನಲ್ಲಿ ಸ್ವಲ್ಪ ದೂರ ಉತ್ತರಕ್ಕೆ ಹರಿದು ಕೂಡಲಿಯಲ್ಲಿ ತುಂಗಾನದಿಯನ್ನು ಕೂಡುವುದು. ಮುಂದೆ ತುಂಗಭದ್ರಾ ನದಿ ಉತ್ತರಕ್ಕೆ ಮುಂದುವರಿದು ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ತೀರ್ಥಹಳ್ಳಿ ತಾಲ್ಲೂಕಿನ ಭಿಲ್ಲೇಶ್ವರ ಬೆಟ್ಟದ ಬಳಿ ಹುಟ್ಟುವ ಕುಮುದ್ವತಿ ಕುಂಸಿಯ ಮೂಲಕ ಈ ತಾಲ್ಲೂಕನ್ನು ಹಾದುಹೋಗುತ್ತದೆ. ಇವಲ್ಲದೆ ತಾಲ್ಲೂಕಿನಲ್ಲಿ ಅನೇಕ ಸಣ್ಣ ತೊರೆಗಳು ಹರಿಯುತ್ತವೆ.

ತಾಲ್ಲೂಕಿನಲ್ಲಿ ವಿಶೇಷವಾಗಿ ಕುಂಸಿ ವಲಯದಲ್ಲಿ ಕಬ್ಬಿಣದ ಅದುರು, ಮ್ಯಾಂಗನೀಸ್ ಅದುರು ಮತ್ತು ಸುಣ್ಣದ ಕಲ್ಲುಗಳ ನಿಕ್ಷೇಪಗಳಿವೆ. ಅಲ್ಲಲ್ಲಿ ಕಾವಿಮಣ್ಣು, ಸುಣ್ಣದಕಲ್ಲು, ಕಟ್ಟಡ ನಿರ್ಮಾಣ ಕಲ್ಲುಗಳು ದೊರೆಯುತ್ತವೆ. ಜಂಬುಮಣ್ಣು, ಕೆಂಪು ಜೇಡಿ ಮತ್ತು ಮರಳುಮಿಶ್ರಿತ ಮಣ್ಣನ್ನು ಈ ತಾಲ್ಲೂಕು ಒಳಗೊಂಡಿದೆ.

ಅರೆಮಲೆನಾಡು ಪ್ರದೇಶಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ ಎಲೆ ಉದುರುವ ಸಾಮಾನ್ಯ ಸಸ್ಯವರ್ಗವಿದೆ. ಪೂರ್ವದ ಕಡೆ ಸಾಧಾರಣ ಪ್ರಮಾಣದ ಕಾಡುಗಳಿದ್ದರೆ ಪಶ್ಚಿಮದ ಕಡೆ ತೆಳು ಮತ್ತು ಕುರುಚಲು ಕಾಡುಗಳಿವೆ. ನದಿಗಳ ದಂಡೆಗಳಲ್ಲಿ ನಿತ್ಯಹಸುರು ಸಸ್ಯವರ್ಗವಿದ್ದು ತಾಲ್ಲೂಕಿನಲ್ಲಿ ಒಟ್ಟು 15,425 ಹೆಕ್ಟೇರು ಕಾಡು ಪ್ರದೇಶವಿದೆ. ಇಲ್ಲಿನ ಪಶ್ಚಿಮದ ಕಾಡುಗಳಲ್ಲಿ ವನ್ಯಮೃಗಗಳಿವೆ. ಶೆಟ್ಟಿಹಳ್ಳಿ ವನ್ಯಮೃಗ ಸಂರಕ್ಷಣಾಪ್ರದೇಶ ಈ ತಾಲ್ಲೂಕಿನ ಕೆಲವು ಭಾಗಗಳನ್ನು ಒಳಗೊಂಡಿದೆ. ತಾಲ್ಲೂಕಿನ ವಾಯುಗುಣ ಹಿತಕರ.

ತಾಲ್ಲೂಕಿನಲ್ಲಿ ಫಲವತ್ತಾದ ಮಣ್ಣು ಪ್ರದೇಶ, ಸಾಕಷ್ಟು ನೀರಾವರಿ ಸೌಲಭ್ಯಗಳಿದ್ದು ವ್ಯವಸಾಯಕ್ಕೆ ಅನುಕೂಲಕರವಾಗಿದೆ. ತಾಲ್ಲೂಕಿನ ಗಾಜನೂರು ಬಳಿ ತುಂಗಾ ನದಿಗೆ ಅಣೆಕಟ್ಟು ಕಟ್ಟಲಾಗಿದೆ. ಭದ್ರಾ ಜಲಾಶಯದಿಂದಲೂ ತಾಲ್ಲೂಕಿನ ಕೆಳಭಾಗಗಳಿಗೆ ನೀರಾವರಿ ಒದಗಿದೆ. ಬತ್ತ, ರಾಗಿ, ಜೋಳ ಇವು ಆಹಾರಬೆಳೆಗಳು. ಹೊಗೆಸೊಪ್ಪು, ಕಬ್ಬು, ಮೆಣಸಿನಕಾಯಿ, ಹತ್ತಿ, ನೆಲಗಡಲೆ, ವಾಣಿಜ್ಯ ಬೆಳೆಗಳು. ಜೊತೆಗೆ ದ್ವಿದಳ ಧಾನ್ಯಗಳನ್ನೂ ಬೆಳೆಯುವರು. ಜಿಲ್ಲೆಯ ಕಬ್ಬು ಬೆಳೆಯುವ ತಾಲ್ಲೂಕುಗಳಲ್ಲಿ ಇದು ಎರಡನೆಯ ಸ್ಥಾನ ಪಡೆದಿದೆ. ತೆಂಗು ಬೆಳೆಯಲ್ಲಿ ಈ ತಾಲ್ಲೂಕು ಜಿಲ್ಲೆಯಲ್ಲೇ ಪ್ರಥಮಸ್ಥಾನ ಪಡೆದಿದೆ. ತಾಲ್ಲೂಕಿನ ಒಟ್ಟು ಬಿತ್ತನೆ ಪ್ರದೇಶ 25,782 ಹೆಕ್ಟೇರ್‌ಗಳು. ತಾಲ್ಲೂಕಿನಲ್ಲಿ ಹೈನುಗಾರಿಕೆ ಅಭಿವೃದ್ಧಿಯಲ್ಲಿದೆ. ತಾಲ್ಲೂಕಿನಲ್ಲಿ ನದಿ ತೊರೆಗಳಿರುವುದರಿಂದ ಸಾಕಷ್ಟು ಮತ್ಸ್ಯೋದ್ಯಮವಿದೆ. ಗಾಜನೂರಿನ ಬಳಿ ಒಂದು ಮೀನುಸಾಕಣೆ ಕೇಂದ್ರವಿದೆ.

ಜಿಲ್ಲೆಯ ಕೈಗಾರಿಕೆಯಲ್ಲಿ ಅಭಿವೃದ್ಧಿಹೊಂದಿದ ತಾಲ್ಲೂಕುಗಳಲ್ಲಿ ಇದು ಎರಡನೆಯದು. ತಾಲ್ಲೂಕಿನಾದ್ಯಂತ ಅಲ್ಲಲ್ಲಿ ಚರ್ಮದ ಉದ್ಯಮಗಳು, ಕಬ್ಬಿಣ ಕೆಲಸದ ಕೇಂದ್ರಗಳು, ನಾಟಾಕ್ಕೆ ಸಂಬಂಧಿಸಿದ ಕಾರ್ಯಾಗಾರಗಳು, ಗಾಡಿಕಟ್ಟುವುದು, ಬಿದಿರುವಸ್ತುಗಳ ತಯಾರಿಕೆ, ಲೋಹಪಾತ್ರೆಗಳ ತಯಾರಿಕೆ, ಜೇನುಸಾಕಣೆ, ಗುಡಿಗಾರಿಕೆ ಮೊದಲಾದವು ಗಳಿವೆ. ಶಿವಮೊಗ್ಗ ನಗರದ ಹೊರವಲಯದಲ್ಲಿ ಸ್ಥಾಪಿತವಾಗಿರುವ ತುಂಗಭದ್ರಾ ಸಕ್ಕರೆ ಕಾರ್ಖಾನೆ ಮತ್ತು ಸರ್ಕಾರಿ ಹಾಲಿನ ಡೈರಿಗಳು ಈ ತಾಲ್ಲೂಕಿನ ಗ್ರಾಮೀಣ ಆರ್ಥಿಕತೆಯೊಂದಿಗೆ ಹೆಚ್ಚಿನ ಸಂಬಂಧ ಹೊಂದಿವೆ. ತಾಳಗುಪ್ಪ-ಭದ್ರಾವತಿ ರೈಲುಮಾರ್ಗ ತಾಲ್ಲೂಕಿನಲ್ಲಿ ಹಾದುಹೋಗಿದೆ. ತಾಲ್ಲೂಕಿನ ಒಳಗೆ ಮತ್ತು ಹೊರಗೆ ಸಂಪರ್ಕ ಕಲ್ಪಿಸುವ ಅನೇಕ ರಸ್ತೆಮಾರ್ಗಗಳಿದ್ದು ಉತ್ತಮ ಸಂಪರ್ಕಸಾಧನಗಳಿವೆ.

ಈ ತಾಲ್ಲೂಕಿನ ಕುಂಸಿ **(ನೋಡಿ)** ಶಿವಮೊಗ್ಗದ ವಾಯವ್ಯಕ್ಕೆ 27 ಕಿಮೀ ದೂರದಲ್ಲಿದೆ. ಶಿವಮೊಗ್ಗದ ಈಶಾನ್ಯಕ್ಕೆ 16 ಕಿಮೀ ದೂರದಲ್ಲಿ ತುಂಗಾ ಮತ್ತು ಭದ್ರಾ ನದಿಗಳ ಸಂಗಮಸ್ಥಳವಾದ ಕೂಡಲಿ **(ನೋಡಿ)**ಇದೆ. ಅಲ್ಲಿ ಶೃಂಗೇರಿ ಜಗದ್ಗುರುಗಳು ಸ್ಥಾಪಿಸಿದ ಮಠವಿದೆ. ಶಿವಮೊಗ್ಗ-ತೀರ್ಥಹಳ್ಳಿ ಮಾರ್ಗದಲ್ಲಿ ಶಿವಮೊಗ್ಗಕ್ಕೆ 10 ಕಿಮೀ ದೂರದಲ್ಲಿ ಗಾಜನೂರು ಇದೆ. ಇಲ್ಲಿಗೆ ಒಂದು ಕಿಮೀ ದೂರದಲ್ಲಿ ತುಂಗಾನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಅಣೆ ಇದೆ. ಪ್ರವಾಸಿ ಮಂದಿರ, ತುಂಗಾ ವಿದ್ಯಾಪೀಠ ಮತ್ತು ಪಂಚಾಯಿತಿ ರಾಜ್ಯ ತರಬೇತಿ ಸಂಸ್ಥೆ ಇಲ್ಲಿವೆ.

**ಪಟ್ಟಣ :** ಶಿವಮೊಗ್ಗ ಈ ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿಗಳ ಮುಖ್ಯ ಸ್ಥಳ ಮತ್ತು ಆಡಳಿತ ಕೇಂದ್ರಪಟ್ಟಣ. ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಬೆಂಗಳೂರಿನ ವಾಯವ್ಯಕ್ಕೆ 274 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,74,105.

ಪಟ್ಟಣದಲ್ಲಿ ಕೋಟೆ ಸೀತಾರಾಮಾಂಜನೇಯ ದೇವಾಲಯವಿದೆ. ಈ ದೇವಾಲಯದ ಗರ್ಭಗೃಹ, ನವರಂಗ ದ್ವಾರಗಳು ಮತ್ತು ನವರಂಗದ ಸ್ತಂಭಗಳು ಹೊಯ್ಸಳ ಶೈಲಿಯಲ್ಲಿವೆ. ಇದಲ್ಲದೆ ಭೀಮೇಶ್ವರ, ಲಕ್ಷ್ಮೀನಾ

ರಾಯಣ ಮತ್ತು ಗುಡ್ಡೇಕಲ್ಲು ಸಿದ್ದೇಶ್ವರ ಮೊದಲಾದ ಹಳೆಯ ದೇವಾಲಯಗಳಿವೆ. ಇಲ್ಲಿನ ಆಂಜನೇಯ ಗುಡಿಯ ಬಳಿ ಇರುವ ಕಟ್ಟಡವನ್ನು ಶಿವಪ್ಪನಾಯಕನ ಅರಮನೆ ಎಂದು ಹೇಳಲಾಗುತ್ತದೆ. ಇದು ಮರದ ಕಂಬಗಳಿಂದ ಕೂಡಿದ್ದು ಇದರ ಒಂದು ಭಾಗ ಕೆಳದಿ ನಾಯಕರ ಕಾಲದಲ್ಲಿ ನಿರ್ಮಿತವಾದಂತೆ ತಿಳಿದುಬರುತ್ತದೆ. ರಾಘವೇಂದ್ರ ಸ್ವಾಮಿಯ ಎರಡು ಮೃತ್ತಿಕ ಬೃಂದಾವನಗಳಿವೆ. ಇಲ್ಲಿನ ಚರ್ಚ್ ರೋಮನ್ ಮತ್ತು ಗಾತಿಕ್ ಶೈಲಿಗಳಿಂದ ಕೂಡಿ ಆಕರ್ಷಕವಾಗಿದೆ.

ಶಿವಮೊಗ್ಗ ಮಲೆನಾಡಿನ ಪ್ರಮುಖ ಕೈಗಾರಿಕಾ ನಗರವಾಗಿ ಬೆಳೆಯುತ್ತಿದ್ದು ವಾಣಿಜ್ಯ ಮತ್ತು ಶಿಕ್ಷಣ ಕೇಂದ್ರವಾಗಿದೆ. ಇಲ್ಲಿ 1927ರಷ್ಟು ಹಿಂದೆಯೇ ಬೆಂಕಿಕಡ್ಡಿ ತಯಾರಿಕಾ ಉದ್ಯಮ ಪ್ರಾರಂಭವಾಯಿತು. ಸರ್ಕಾರ ಇದನ್ನು 1940ರಲ್ಲಿ ವಹಿಸಿಕೊಂಡಿತ್ತು. 1944ರಲ್ಲಿ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ ಸ್ಥಾಪಿತವಾಯಿತು. ಸರ್ಕಾರ ಇಲ್ಲಿ ಕೈಗಾರಿಕಾ ಎಸ್ಟೇಟ್ ಸ್ಥಾಪಿಸಿದೆ. ಮರಗೆಲಸ ಮತ್ತು ಕಬ್ಬಿಣದ ಕೆಲಸಗಳ ಕೇಂದ್ರಗಳಿವೆ. ಮೋಟಾರು ವಾಹನಗಳ ಚಕ್ರಗಳನ್ನು ದುರಸ್ತುಮಾಡುವ ಐದು ಉದ್ಯಮಗಳಿವೆ. ಹೆಂಚಿನ ಕಾರ್ಖಾನೆಗಳಿವೆ. ಇಲ್ಲಿ ಬತ್ತ, ಅಡಕೆ, ಮೆಣಸು, ಸೀಗೆಕಾಯಿ, ಸೇಂಗಾ, ಮೆಣಸಿನಕಾಯಿ, ಜೋಳ ಮತ್ತಿತರ ವಸ್ತುಗಳ ಸಗಟುವ್ಯಾಪಾರ ನಡೆಯುತ್ತದೆ. ನಿಯಂತ್ರಿತ ಮಾರುಕಟ್ಟೆ ಇದೆ. ಒಂದು ಪ್ರಮುಖ ರೈಲು ನಿಲ್ದಾಣವಾಗಿದ್ದು ಇಲ್ಲಿನ ವ್ಯಾಪಾರ ವಾಣಿಜ್ಯ ಕೈಗಾರಿಕಾಭಿವೃದ್ಧಿಗೆ ಸಹಾಯಕವಾಗಿದೆ. ಪಟ್ಟಣದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳಿದ್ದು ಕಲಾ, ವಿಜ್ಞಾನ, ವಾಣಿಜ್ಯ, ಕಾನೂನು, ಔಷಧಶಾಸ್ತ್ರ ಮುಂತಾದ ಕಾಲೇಜುಗಳೂ ಶಾಲೆಗಳೂ ಇದ್ದು ಶಿಕ್ಷಣಕ್ಕೆ ಅನುಕೂಲವಿದೆ. ಸರ್ಕಾರಿ ಪ್ರಾಚ್ಯವಸ್ತುಸಂಗ್ರಹಾಲಯ, ಜಿಲ್ಲಾ ಕೇಂದ್ರ ಗ್ರಂಥಾಲಯ ಮುಂತಾದವುಗಳಿವೆ.

ಈ ಪಟ್ಟಣಕ್ಕೆ ಪೌರಾಣಿಕ ಹಿನ್ನೆಲೆಯಿದ್ದು ಹಿಂದೆ ಋಷಿಗಳು ತಪಸ್ಸುಮಾಡುತ್ತಿದ್ದಾಗ ಈ ಸ್ಥಳದಲ್ಲಿ ಅವರಿಗೆ ಶಿವನ ಮುಖದರ್ಶನವಾಯಿತೆಂದೂ ಆ ಕಾರಣದಿಂದ ಈ ಸ್ಥಳಕ್ಕೆ ಶಿವಮೊಗ್ಗ ಎಂಬ ಹೆಸರು ಬಂತೆಂದು ಪ್ರತೀತಿ. ಇನ್ನೊಂದು ವ್ಯಾಖ್ಯಾನದ ಪ್ರಕಾರ ಋಷಿಗಳು ಶಿವನಿಗೆ ಹೂವಿನ ಮೊಗ್ಗೆಯನ್ನು ಅರ್ಪಿಸಿದರೆಂದೂ ಮತ್ತು ಇಲ್ಲಿ ಋಷಿಗಳು ಸೇವಿಸುತ್ತಿದ್ದ ಸಿಹಿಪಾನೀಯವನ್ನು ಮೊಗೆಯಲ್ಲಿ ಇಡುತ್ತಿದ್ದರೆಂದೂ ಆದ್ದರಿಂದ ಈ ಸ್ಥಳಕ್ಕೆ ಸಿಹಿಮೊಗೆ ಅಥವಾ ಶಿವಮೊಗ್ಗೆ ಎಂಬ ಹೆಸರು ಬಂತೆಂದೂ ಪ್ರತೀತಿ.

ಶಿವಮೊಗ್ಗ ನಗರ ಇತಿಹಾಸ ಪ್ರಸಿದ್ಧವಾದುದು. ಈ ಸುತ್ತಲ ಪ್ರದೇಶದ ಶಾಸನಗಳನ್ನು ಗಮನಿಸಿದಾಗ ಕದಂಬರು ಮತ್ತು ಗಂಗರ ಕಾಲದಿಂದಲೂ ಈ ಸ್ಥಳ ಪ್ರಾಮುಖ್ಯಪಡೆದಿದ್ದುದು ಕಂಡುಬರುತ್ತದೆ. ವಿಜಯನಗರ ಮತ್ತು ಕೆಳದಿ ನಾಯಕರ ಕಾಲದಲ್ಲಿ ಈ ಊರು ಹೆಚ್ಚು ಮಹತ್ತ್ವ ಪಡೆದಿತ್ತು. ಕೆಳದಿ ನಾಯಕರು ಇಲ್ಲಿ ಕೋಟೆ ಸ್ಥಾಪಿಸಿ ಇದನ್ನು ತಮ್ಮ ನೆಲೆಗಳಲ್ಲೊಂದಾಗಿ ಮಾಡಿಕೊಂಡಿದ್ದರು. ಈ ಸ್ಥಳ ಹೈದರನ ವಶವಾದ ಅನಂತರ ಮರಾಠರು ಮತ್ತು ಹೈದರ್-ಟಿಪ್ಪು ಇವರ ನಡುವೆ ಈ ಊರಿನ ಸುತ್ತಮುತ್ತಲ ಪ್ರದೇಶಕ್ಕಾಗಿ ಆಗಾಗ್ಗೆ ಹೋರಾಟಗಳು ನಡೆಯುತ್ತಿದ್ದುವು. *

**ಶಿವಮೊಗ್ಗ ಕರ್ನಾಟಕ ಸಂಘ:** ಕನ್ನಡದ ಕೈಂಕರ್ಯಕ್ಕಾಗಿ 1930ರಲ್ಲಿ ಅಸ್ತಿತ್ವಕ್ಕೆ ಬಂದ ಸಂಘ. ಕನ್ನಡದ ಪ್ರಸಿದ್ಧ ಕವಿ ಕುವೆಂಪು ಅವರಿಂದ ಉದ್ಘಾಟಿತವಾಗಿ ಹೊಸೂಡಿ ವೆಂಕಟಶಾಸ್ತ್ರಿಗಳ ಔದಾರ್ಯದಿಂದ ಭವ್ಯವಾದ ಭವನವನ್ನು ಹೊಂದಿತು. ಈ ಭವನವನ್ನು ಜಯಚಾಮರಾಜ ಒಡೆಯರ್ ಅವರು ಉದ್ಘಾಟಿಸಿದರು (1943). ಈ ಸಂಘ ಶಿವಮೊಗ್ಗದ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳ ಕೇಂದ್ರವಾಗಿದೆ.

ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ ಅವರು ಈ ಸಂಘದ ಸ್ಥಾಪಕ ಅಧ್ಯಕ್ಷರಾಗಿ, ಕೂಡಲಿ ಚಿದಂಬರಂ ಅವರು ಕಾರ್ಯದರ್ಶಿಯಾಗಿ ಈ ಸಂಘಕ್ಕೆ ಭದ್ರ ತಳಹದಿ ಹಾಕಿದರು. ಕತೆಗಾರರಾದ ಆನಂದ, ಎಸ್.ವಿ. ಕೃಷ್ಣಮೂರ್ತಿರಾಯ, ವಿಷ್ಣುಭಟ್ಟ, ಭೂಪಾಳಂ ಚಂದ್ರಶೇಖರಯ್ಯ, ಹೊಸೂಡಿ ದತ್ತಾತ್ರೇಯ ಶಾಸ್ತ್ರಿ ಮೊದಲಾದವರು ಇದರ ಶ್ರೇಯೋಭಿವೃದ್ಧಿಗಾಗಿ ಬಹಳವಾಗಿ ಶ್ರಮಿಸಿದ ಮಹನೀಯರು. ಟಿ. ವೆಂಕಟರಮಣಶಾಸ್ತ್ರಿ, ಮಹಿಷಿ ನರಸಿಂಹಮೂರ್ತಿ, ದೇವಂಗಿ ರತ್ನಾಕರ- ಇವರೆಲ್ಲರ ಪರಿಶ್ರಮದ ಕಾರಣ ಇಂದು ಈ ಸಂಘ ಪ್ರೌಢವಾಗಿ ಬೆಳೆದಿದೆ.

ಕರ್ನಾಟಕ ಸಂಘದ ಕಟ್ಟಡ

ಈ ಸಂಘ ಹಲವಾರು ಕನ್ನಡ, ಕನ್ನಡೇತರ ಕವಿಗಳು, ವಿದ್ವಾಂಸರು, ಕಲೆಗಾರರು, ವಿಜ್ಞಾನಿಗಳು, ವಿಚಾರವಂತರನ್ನು ಗುರುತಿಸಿ ಸನ್ಮಾನಿಸಿ ಪುರಸ್ಕರಿಸಿರುವುದಲ್ಲದೆ ಹಲವಾರು ಉದಯೋನ್ಮುಖ ಕವಿಗಳನ್ನೂ ಬರೆಹಗಾರರನ್ನು ಪ್ರೋತ್ಸಾಹಿಸಿ ಬೆಳಕಿಗೆ ತಂದಿದೆ. ಹಲವಾರು ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿದೆ. ಮೂರು ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದೆ (1943, 1976, 2005). ಈ ಸಂಘ ಹೊಸೂಡಿ ದತ್ತಾತ್ರೇಯಶಾಸ್ತ್ರಿ ಅವರ ಹೆಸರಿನಲ್ಲಿ ಒಂದು ಗ್ರಂಥಭಂಡಾರವನ್ನೂ ಒಂದು ಪುಸ್ತಕ ಮಾರಾಟ ಮಳಿಗೆಯನ್ನು ಹೊಂದಿದೆ. ಇದರ ವಜ್ರಮಹೋತ್ಸವ 1991-92ರಲ್ಲಿ ನಡೆಯಿತು. ಇದರ ಸವಿನೆನಪಿಗಾಗಿ ಶಿವಮೊಗ್ಗ ಜಿಲ್ಲೆಯ ಹೆಸರಾಂತ ಕನ್ನಡ ಲೇಖಕರಿಗೆ ಸಂಘದ ಗೌರವ ಸದಸ್ಯತ್ವವನ್ನು ನೀಡಿ ಪುರಸ್ಕರಿಸುವ ಯೋಜನೆಯನ್ನು ಹಮ್ಮಿಕೊಂಡು ಈ ಯೋಜನೆಯಡಿಯಲ್ಲಿ ನಾಡಿನ ಹಿರಿಯ ಸಾಹಿತಿಗಳಾದ ಕುವೆಂಪು, ಎಸ್.ವಿ. ಪರಮೇಶ್ವರಭಟ್ಟ, ಎಂ.ಕೆ. ಇಂದಿರಾ, ಯು.ಆರ್. ಅನಂತಮೂರ್ತಿ, ಜಿ.ಎಸ್. ಶಿವರುದ್ರಪ್ಪ, ಹಾ.ಮಾ. ನಾಯಕ, ಪಿ. ಲಂಕೇಶ್, ಕೆ.ವಿ. ಸುಬ್ಬಣ್ಣ ಮೊದಲಾದವರನ್ನು ಸನ್ಮಾನಿಸಿದೆ.

ಗೌರವ ಸದಸ್ಯರ ಹೆಸರಿನಲ್ಲಿ ಪ್ರತಿವರ್ಷ ಅತ್ಯುತ್ತಮ ಕತೆ, ಕವನ, ನಾಟಕ, ಕಾದಂಬರಿ ಇತ್ಯಾದಿಗಳಿಗೆ ಪುರಸ್ಕಾರವನ್ನು ನೀಡುತ್ತಿದೆ. ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ತರಗತಿಗಳಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಕುವೆಂಪು, ಎಸ್.ವಿ.ಪಿ. ಪ್ರಶಸ್ತಿಗಳನ್ನೂ ಬಹುಮಾನಗಳನ್ನೂ ನೀಡುತ್ತಿದೆ.

ಕಾವ್ಯಕಮ್ಮಟ, ಕಥಾಕಮ್ಮಟ, ವಿಚಾರ ಸಂಕಿರಣ, ಸಂವಾದ, ಅಧ್ಯಯನ ಶಿಬಿರ ಇತ್ಯಾದಿ ಸಾಹಿತ್ಯಕ ಚಟುವಟಿಕೆಗಳನ್ನು ಈ ಸಂಘ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. *

**ಶಿವಮೊಗ್ಗ ಸುಬ್ಬಣ್ಣ:** 1938– . ಸುಗಮಸಂಗೀತ ಹಾಗೂ ಚಲನಚಿತ್ರ ಸಂಗೀತದ ಪ್ರಸಿದ್ಧ ಹಾಡುಗಾರರು. ಇವರ ಮೂಲ ಹೆಸರು ಜಿ. ಸುಬ್ರಹ್ಮಣ್ಯ. 1938 ಡಿಸೆಂಬರ್ 14ರಂದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಜನಿಸಿದರು. ತಂದೆ ಗಣೇಶ್‌ರಾವ್, ತಾಯಿ ರಂಗನಾಯಕಮ್ಮ. ಇವರಿಗೆ ಬಾಲ್ಯದಿಂದಲೂ ಸಂಗೀತಕ್ಕೆ ಪ್ರೋತ್ಸಾಹ ನೀಡಿದವರು ಇವರ ತಂದೆ ತಾಯಿ. ತಾತ ಸಂಗೀತ ಶಾಮಣ್ಣ ಹಾಗೂ ಸಿನಿಮಾ ತಾರೆ ಪಂಡರೀಬಾಯಿ ಅವರ ಅಣ್ಣ ಪ್ರಭಾಕರರಿಂದ ಸಂಗೀತ ಶಿಕ್ಷಣ ಪಡೆದರು. ಮೈಸೂರು ಅನಂತಸ್ವಾಮಿ, ಗುಣಸಿಂಗ್, ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ ಮೊದಲಾದವರ ಸ್ನೇಹ, ಸಹಕಾರಗಳು ಇವರ ಸಂಗೀತ ಸಾಧನೆಗೆ ಹೊಸ ಆಯಾಮ ನೀಡಿದವು. ಕಾಲೇಜು ದಿನಗಳಿಂದಲೇ ಊರೂರುಗಳಲ್ಲಿ ಸುಗಮ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಾ ಸಂಗೀತಸುಬ್ಬಣ್ಣ ಎಂದು ಜನಮೆಚ್ಚುಗೆಗೆ ಪಾತ್ರರಾದರು.



1977ರಲ್ಲಿ ಚಂದ್ರಶೇಖರ ಕಂಬಾರರು ನಿರ್ದೇಶಿಸಿದ ಕರಿಮಾಯಿ ಚಿತ್ರದಲ್ಲಿ ಸಾವಿರದ ಶರಣವ್ವ ಕರಿಮಾಯಿ ತಾಯೇ ಎಂಬ ಹಾಡನ್ನೂ ಕಾಡುಕುದುರೆ ಚಿತ್ರದ ಕಾಡುಕುದುರೆ ಓಡಿ ಬಂದಿತ್ತಾ ಎಂಬ ಹಾಡನ್ನೂ ಹಾಡಿ ಕಂಬಾರರಿಂದಲೇ ಶಿವಮೊಗ್ಗ ಸುಬ್ಬಣ್ಣ ಎಂಬ ಅಭಿಧಾನ ಪಡೆದರು. ಶಿಶುನಾಳ ಶರೀಫ಼ರ ರಚನೆಗಳನ್ನು ಹಾಡುವುದರಲ್ಲಿ ಇವರು ಅದ್ವಿತೀಯರೆನಿಸಿಕೊಂಡರು. ಮೈಸೂರು ಅನಂತಸ್ವಾಮಿ ನಿರ್ದೇಶಿಸಿದ ಕೆ.ಎಸ್. ನಿಸಾರ್ ಅಹಮ್ಮದ್‌ರ ನಿತ್ಯೋತ್ಸವ (ಕ್ಯಾಸೆಟ್)ಗೆ ಹಾಡುವುದರ ಮೂಲಕ ಕರ್ನಾಟಕದ ಮನೆಮಾತಾದರು. ಕುವೆಂಪು ಅವರ ಗೀತೆಗಳನ್ನೊಳಗೊಂಡಂತೆ ಹತ್ತು ಭಾವಗೀತೆಗಳು (1980), ಕವಿಶೈಲ (1990), ಅಗ್ನಿಹಂಸ (1995), ಇತರ ಕ್ರಾಂತಿಗೀತೆಗಳು ಎಂಬ ಕ್ಯಾಸೆಟ್‌ಗಳನ್ನು ಇವರು ಹೊರತಂದಿದ್ದಾರೆ. ಈ ಕ್ಯಾಸೆಟ್‌ಗಳಲ್ಲಿನ ಹಾಡುಗಳಲ್ಲಿ ಹಲವಕ್ಕೆ ಇವರೇ ಸಂಗೀತ ಸಂಯೋಜಿಸಿದ್ದಾರೆ. ಸಂಗೀತಗಂಗಾ ಎಂಬುದು ಇತ್ತೀಚೆಗೆ ಬಿಡುಗಡೆಗೊಂಡ ಇವರ ಕ್ಯಾಸೆಟ್.

ಇವರು ಆಕಾಶವಾಣಿ, ದೂರದರ್ಶನಗಳ 'ಎ' ದರ್ಜೆಯ ಕಲಾವಿದರಾಗಿ ಬೇಂದ್ರೆ, ಕುವೆಂಪು, ಶಿಶುನಾಳ ಶರೀಫ಼ರ ಗೀತೆಗಳನ್ನು ಹಾಡುವ ಮೂಲಕ ಕವಿಗಳ ಜನಪ್ರಿಯತೆಗೂ ಕಾರಣರಾಗಿದ್ದಾರೆ. ಆಕಾಶವಾಣಿಯಲ್ಲಿ ಕನ್ನಡ ಸುಗಮ ಸಂಗೀತವನ್ನು ರಾಷ್ಟ್ರಮಟ್ಟದಲ್ಲಿ ಪ್ರಸ್ತುತಪಡಿಸುವ ಅವಕಾಶ ಇವರಿಗೆ ಲಭ್ಯವಾಯಿತು. ಇವರ ಈ ಬಗೆಯ ಹಲವು ಸಾಧನೆಗಳಿಗೆ ಹಲವಾರು ಪ್ರಶಸ್ತಿ, ಪ್ರಶಂಸೆಗಳು ದೊರೆತಿವೆ. ರಾಷ್ಟ್ರಪ್ರಶಸ್ತಿ (1979), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ (1988), ಸಂತಶಿಶುನಾಳ ಶರೀಫ್ ಪ್ರಶಸ್ತಿ (1999), ಭಾರ್ಗವ ಪ್ರಶಸ್ತಿ (2000) ಮೊದಲಾದವು ಮುಖ್ಯವಾದವು.

ಬಿ.ಎ., ಬಿ.ಕಾಂ., ಎಲ್‌ಎಲ್.ಬಿ ಪದವೀಧರರಾದ ಇವರು ರಾಜ್ಯ ಉಚ್ಚನ್ಯಾಯಾಲಯದಲ್ಲಿ ಸರ್ಕಾರಿ ಪ್ಲೀಡರ್ ಆಗಿ ಅನಂತರ ನೋಟರಿಯಾದರು. *

**ಶಿವಯೋಗ ಮಂದಿರ:** ಬಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿರುವ ಒಂದು ಆಶ್ರಮ. ಬಾದಾಮಿಯ ಪೂರ್ವಕ್ಕೆ 9 ಕಿಮೀ ದೂರದಲ್ಲಿ ಮಲಪ್ರಭಾ ನದಿಯ ದಂಡೆಯಲ್ಲಿದೆ. ಮಹಾಕೂಟ, ನಂದಿಕೇಶ್ವರ, ಬನಶಂಕರಿ ಹಾಗೂ ಪಟ್ಟದಕಲ್ಲು ಸ್ಥಳಗಳು ಹತ್ತಿರದಲ್ಲಿದ್ದು ಇವು ಆಶ್ರಮಕ್ಕೆ ಸುಂದರವಾದ, ಆದರ್ಶಮಯವಾದ, ಆಕರ್ಷಕವಾದ ಪರಿಸರವನ್ನೂ ನೈಸರ್ಗಿಕ ರಮಣೀಯತೆಯನ್ನೂ ಒದಗಿಸಿವೆ. ಹಾನಗಲ್ಲು ಕುಮಾರಸ್ವಾಮೀಜಿ ಮತ್ತು ಇಳಕಲ್ಲಿನ ಮಹಾಂತಸ್ವಾಮೀಜಿ ಇಬ್ಬರೂ ಸೇರಿ ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲೇ ಈ ಆಶ್ರಮವನ್ನು ಆರಂಭಿಸಿದರು. ಇದನ್ನು ಪ್ರಾಚೀನ ಗುರುಕುಲದ ಮಾದರಿಯಲ್ಲಿ ನಡೆಸಲು ನಿಶ್ಚಯಿಸಿದ್ದರು. ಇಲ್ಲಿ ಸಂಸ್ಕೃತ, ಯೋಗ, ತತ್ವಶಾಸ್ತ್ರ ಹಾಗೂ ಧರ್ಮಾಧ್ಯಯನಗಳನ್ನೂ ಸಮಾಜಸೇವೆಯನ್ನೂ ದೃಷ್ಟಿಯಲ್ಲಿಟ್ಟುಕೊಂಡು ಶಿಕ್ಷಣವನ್ನು ನೀಡಲಾಗುತ್ತಿದೆ. ಇಲ್ಲಿ ತರಬೇತಿ ಹೊಂದಿದ ಶಿಕ್ಷಣಾರ್ಥಿಗಳು ತಮ್ಮ ಜೀವನವನ್ನು ಸಾರ್ವಜನಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಮುಡಿಪಾಗಿಡುವ ಪರಿಪಾಠವಿದೆ.

ಇಲ್ಲಿ ಯೋಗಸಾಧನೆಗೆ ಗವಿಗಳಿವೆ; ಧ್ಯಾನಕ್ಕೆ ಮಂಟಪಗಳಿವೆ; ಸುವ್ಯವಸ್ಥಿತ ಸರಸ್ವತೀಭಂಡಾರವಿದೆ; ಆದರ್ಶಮಯ ಶಿಕ್ಷಣ ನೀಡುವ ವಿವಿಧ ಶಿಕ್ಷಣ ಸಂಸ್ಥೆಗಳಿವೆ; ಉಚಿತ ವಿದ್ಯಾರ್ಥಿನಿಲಯ ಸೌಲಭ್ಯದ ವ್ಯವಸ್ಥೆಯಿದೆ. ಶಿವಯೋಗಮಂದಿರದ ಮುಖವಾಣಿಯಾಗಿ ಪತ್ರಿಕೆಯೊಂದನ್ನು ಪ್ರಕಟಿಸಲಾಗುತ್ತಿದೆ. **(ಎಸ್.ಜಿಎ.)**

**ಶಿವರಾಂ, ಎಂ.:** 1905–84. ಕನ್ನಡದ ಸುಪ್ರಸಿದ್ಧ ಹಾಸ್ಯ ಲೇಖಕರು. ವೃತ್ತಿಯಲ್ಲಿ ವೈದ್ಯರಾದ ಇವರು ರಾಶಿ ಎಂಬ ಹೆಸರಿನಲ್ಲಿ ಅನೇಕ ಹಾಸ್ಯ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. ತಮ್ಮ ವೃತ್ತಿಗೆ ಸಂಬಂಧಿಸಿದಂತೆಯೂ ಇವರು ಗ್ರಂಥಗಳನ್ನು ರಚಿಸಿದ್ದಾರೆ. ನಗೆಬರೆಹಗಳಿಗೇ ಮೀಸಲಾದ ಕೊರವಂಜಿ **(ನೋಡಿ)** ಎಂಬ ಮಾಸಪತ್ರಿಕೆಯನ್ನು ಸ್ಥಾಪಿಸಿ ಇಪ್ಪತ್ತೈದು ವರ್ಷಗಳ ಕಾಲ ನಡೆಸಿ ಶುದ್ಧ ಹಾಸ್ಯ ಸಾಹಿತ್ಯ ಸೃಷ್ಟಿಗೆ ಕಾರಣರಾದರಲ್ಲದೆ ಅನೇಕ ಹೊಸ ಬರೆಹಗಾರರ ಹಾಗೂ ವ್ಯಂಗ್ಯ ಚಿತ್ರಕಾರರ ಪ್ರತಿಭೆಯನ್ನು ಗುರುತಿಸಿ ತಂದು ಬೆಳೆಸಿದರು.

ಇವರು 1905 ನವೆಂಬರ್ 10ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಆಗಿನ ಮೈಸೂರು ಸಂಸ್ಥಾನದ ಸರ್ಕಾರದಲ್ಲಿ ಅಧಿಕಾರಿಯಾಗಿದ್ದರು. ದೊಡ್ಡ ಸಂಸಾರದಲ್ಲಿ ಹುಟ್ಟಿದ ಶಿವರಾಂ ಅವರು ಕಷ್ಟಪಟ್ಟು ವಿದ್ಯೆ ಗಳಿಸಿ ಬೆಂಗಳೂರಿನ ವೈದ್ಯವಿದ್ಯಾಲಯದಲ್ಲಿ ವೈದ್ಯಶಿಕ್ಷಣ ಪಡೆದು ಸ್ವತಂತ್ರವಾಗಿ ವೃತ್ತಿಯನ್ನಾರಂಭಿಸಿದರು. ದಕ್ಷ ವೈದ್ಯರೆಂದು ಖ್ಯಾತಿಗಳಿಸಿದರು.

ತಮ್ಮ ವಿಶಾಲವಾದ ಲೋಕಾನುಭವದ ತಳಹದಿಯ ಮೇಲೆ ಪ್ರತಿಭೆಯನ್ನು ರೂಪಿಸಿಕೊಂಡ ಶಿವರಾಂ ಅವರು ಕನ್ನಡದಲ್ಲಿ ವಿರಳವಾಗಿದ್ದ ಹಾಸ್ಯ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದರು. 1942ರಲ್ಲಿ ಇವರು ಆರಂಭಿಸಿದ ಕೊರವಂಜಿ ಪತ್ರಿಕೆ ಇಂಗ್ಲಿಷ್‌ನ 'ಪಂಚ್' ಮಾದರಿಯಲ್ಲಿ ಕನ್ನಡ ಓದುಗರ ಮೇಲೆ ತನ್ನದೇ ಛಾಪು ಒತ್ತಿತು. ಆದರೆ ಬದಲಾದ ಪರಿಸರದಲ್ಲಿ ಅದನ್ನು ನಡೆಸುವುದು ಹೆಚ್ಚು ಹೆಚ್ಚು ಕಷ್ಟವಾಗತೊಡಗಿದಾಗ ಆ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಬೇಕಾಯಿತು (1967). ಆದರೆ ಆ ಪತ್ರಿಕೆಯಲ್ಲಿ ಇವರು ಆರಂಭಿಸಿದ ಉರಿಗಾಳು ಮುಂತಾದ ಹಾಸ್ಯದ ಟೀಕೆಗಳ ಅಂಕಣಗಳು ತುಂಬ ಪ್ರಸಿದ್ಧವಾದುವು. ಕೊರವಂಜಿ ನಿಂತಮೇಲೂ ಇವರು ಇತರ ಪತ್ರಿಕೆಗಳಲ್ಲಿ ಈ ರೀತಿಯ ಬರೆಹವನ್ನು ಮುಂದುವರಿಸಿದರು. ಕೊರವ, ಅರವಾಮೊದ್ದು, ಜಗ್ಗೋಜಿ, ಅಡುಗೂಲಜ್ಜಿ ಮುಂತಾದ ಪಾತ್ರಗಳೂ ಹೆಬ್ಬಿಗುಬ್ಬಾಲೆ ಮುಂತಾದ ಸ್ಥಳಗಳೂ ಕನ್ನಡ ಹಾಸ್ಯ ಸಾಹಿತ್ಯದಲ್ಲಿ ಚಿರಂತನವಾಗಿವೆ. ತುಟಿ ಮೀರಿದುದು ಎಂಬುದು ಇವರ

ಪ್ರಸಿದ್ಧ ಹಾಸ್ಯ ಬರೆಹಗಳ ಸಂಕಲಗಳಲ್ಲೊಂದು. ಒಂದಾನೊಂದು ಕಾಲದಲ್ಲಿ ಎಂಬುದರಲ್ಲಿ ಪ್ರಾಣಿ ಕಥೆಗಳ ಮಾದರಿಯಲ್ಲಿ ಬರೆಯಲಾದ ವಿಡಂಬನ ಲೇಖನಗಳಿವೆ. ಕಾರ್ತೀಕ ಸೋಮವಾರ ಇವರ ಒಂದು ಕಾದಂಬರಿ. ಬುದ್ಧೋಜಿಯ ಕಥೆಗಳು (1979) ಇವರ ಇನ್ನೊಂದು ಕೃತಿ.

ಶಿವರಾಂ ಅವರು ಬರೆದಿರುವ ಮನೋನಂದನ ಎಂಬುದು ಅವರೇ ಹೇಳಿರುವಂತೆ 'ಮನೋದೈಹಿಕ ಬೇನೆಗಳನ್ನು ಕುರಿತು ರೋಗಿಗಳಿಂದ ಕಲಿತ ಪಾಠಗಳು'. ಇದು ರೋಗಿಗಳ ಅಂತರಂಗದ ಹುಣ್ಣಿಗೆ ಕನ್ನಡಿ ಹಿಡಿದಿದೆ. ದೈಹಿಕ ಬೇನೆಗಳಿಗೂ ಮಾನಸಿಕ ವಿಕಾರಗಳಿಗೂ ಇರುವ ಸಂಬಂಧವನ್ನು ತಿಳಿಸುವ ಈ ಪುಸ್ತಕದಲ್ಲಿ ಶಿವರಾಂ ಅವರ ವೃತ್ತಿ ಜೀವನದ ಆಳವಾದ ಹಾಗೂ ವಿಶಾಲವಾದ ಅನುಭವವನ್ನು ಕಾಣಬಹುದು. ಇಲ್ಲಿಯದು ಅತ್ಯಂತ ಸುಲಭವಾದ ಶೈಲಿ, ಮನಮಂಥನ ಎಂಬುದು ಇಂಥದೇ ಇನ್ನೊಂದು ಗ್ರಂಥ. ಇಂದು ಸಾಮಾನ್ಯವಾಗಿರುವ ಮಾನಸಿಕ ಬೇನೆಗಳ ಲಕ್ಷಣಗಳನ್ನು ಇಲ್ಲಿ ಕಥೆಯಂತೆ ವಿವರಿಸಲಾಗಿದೆ. ಈ ಬೇನೆಗಳಿಗೆ ಪಾಶ್ಚಾತ್ಯ ಚಿಕಿತ್ಸಾ ವಿಧಾನಗಳಿಂದ ಹಿಡಿದು ಪತಂಜಲಿಯ ಯೋಗಸೂತ್ರ, ಭಗವದ್ಗೀತೆ ಮುಂತಾದವುಗಳಲ್ಲಿ ಸೂಚಿತವಾಗಿರುವ ಮಾರ್ಗಗಳ ವರೆಗೆ ಪರಿಹಾರಗಳನ್ನು ಸೂಚಿಸಿದೆ. ಅತ್ಯಂತ ಹೃದ್ಯವಾದ ಈ ಶಾಸ್ತ್ರಸಾಹಿತ್ಯ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ (1976). ಶಿವರಾಂ ಅವರು ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಪ್ರಶಸ್ತಿ (1970), ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (1971, 1976), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಂದ (1976) ಪುರಸ್ಕೃತರಾಗಿದ್ದಾರೆ. ಇವರು 1984 ಜನವರಿ 13ರಂದು ನಿಧನರಾದರು.

**(ಎಚ್.ಎಸ್.ಕೆ.)**

**ಶಿವರಾಮ ಕಾರಂತ, ಕೆ.:** 1902–98. ಕನ್ನಡದ ಪ್ರಸಿದ್ಧ ಲೇಖಕರು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಇವರ ಬರೆವಣಿಗೆ ಧಾರಾಳವಾಗಿ ಕಾಣಿಸುತ್ತದೆ. ಮಕ್ಕಳ ಪಠ್ಯಪುಸ್ತಕದಿಂದ ತೊಡಗಿ ಪ್ರೌಢ ವಿಚಾರ ಸಾಹಿತ್ಯದ ತನಕ, ಸಾಮಾನ್ಯ ಲೇಖನಗಳಿಂದ ತೊಡಗಿ ವಿಜ್ಞಾನ ವಿಶ್ವಕೋಶದ ತನಕ ಇವರ ಬರೆಹಗಳಿವೆ. ಕಥೆ ಕಾದಂಬರಿಗಳಲ್ಲದೆ ವ್ಯಕ್ತಿಚಿತ್ರಣ, ವ್ಯಂಗ್ಯಚಿತ್ರ, ನಾಟಕ, ಗೀತನಾಟಕ, ಪ್ರಬಂಧ, ಕಲಾಸಾಹಿತ್ಯ, ಯಕ್ಷಗಾನ, ರಾಜಕೀಯ ಮೊದಲಾದ ಹಲವಾರು ಮುಖಗಳಲ್ಲಿ ಇವರ ಬರೆವಣಿಗೆ ವಿಪುಲವಾಗಿದೆ, ವೈವಿಧ್ಯವಾಗಿದೆ.

ಶಿವರಾಮ ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಕೋಟ ಎಂಬ ಹಳ್ಳಿಯಲ್ಲಿ 1902 ಅಕ್ಟೋಬರ್ 10ರಂದು ಜನಿಸಿದರು. ಆರಂಭದ ವಿದ್ಯಾಭ್ಯಾಸವನ್ನು ಕೋಟದ ಎಲಿಮೆಂಟರಿ ಶಾಲೆಯಲ್ಲೂ ಕುಂದಾಪುರದಲ್ಲಿ ಪ್ರೌಢಶಾಲಾ ವ್ಯಾಸಂಗವನ್ನೂ ನಡೆಸಿದ ಇವರು, ಕಾಲೇಜು ಶಿಕ್ಷಣಕ್ಕಾಗಿ ಮಂಗಳೂರಿನ ಸರ್ಕಾರಿ ಕಾಲೇಜನ್ನು ಸೇರಿದರಾದರೂ (1922), ಕಟ್ಟುನಿಟ್ಟಿನ ಗಾಂಧೀವಾದಿಗಳಾಗಿ ದೇಶಸೇವೆಗೆ ಇಳಿದರು. ಕೈನೂಲು ತೆಗೆದು, ಖಾದೀಧಾರಿಗಳಾಗಿ, ಹರಿಜನೋದ್ಧಾರ, ಮದ್ಯಪಾನ ನಿರೋಧ, ನೆರೆಪರಿಹಾರ ಮೊದಲಾದ ಸೇವಾಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ದಕ್ಷಿಣ ಕನ್ನಡದ ಹಳ್ಳಿಹಳ್ಳಿಗಳನ್ನು ಸಂಚರಿಸಿದರು. ಗಡ್ಡ ಬೆಳೆಯಿಸಿ, ಬ್ರಹ್ಮಚರ್ಯದೀಕ್ಷೆಯನ್ನು ಕೈಗೊಂಡು ದೇಶದ ನಾನಾ ಭಾಗಗಳನ್ನು ಸುತ್ತಿದರೂ ತಮಗೆ ಸರಿಕಂಡುದನ್ನು ಯಾರ ದಯೆ ದಾಕ್ಷಿಣ್ಯಗಳಿಗೂ ಒಳಗಾಗದೆ ಮಾಡುವ ಪ್ರವೃತ್ತಿಯ ಕಾರಂತರು ಗಾಂಧೀ ಮಾರ್ಗ ತಮಗೆ ಸರಿಹೊಂದದಾಗ ಅದನ್ನು ತೊರೆದರು. ಸಮಾಜ ಜೀವನದಲ್ಲಿ ಬ್ರಹ್ಮಚರ್ಯದ ಕಟ್ಟು ಅವಶ್ಯವೂ ಅನುಕೂಲವೂ ಅಲ್ಲವೆಂದು ಕಂಡಾಗ ನಿಸ್ಸಂಕೋಚವಾಗಿ ವಿವಾಹವಾದರು (1936). ಪುತ್ತೂರಲ್ಲಿ ನೆಲಸಿ (1930) ತಮ್ಮ ವಿವಿಧ ಪ್ರಯೋಗಳಿಗೆ ಅಲ್ಲಿನ ಸುತ್ತುಮುತ್ತಲ ಹಳ್ಳಿಗಳನ್ನು ಕಾರ್ಯಕ್ಷೇತ್ರಗಳನ್ನಾಗಿ ಆರಿಸಿಕೊಂಡರು. ಇವರು ಪುತ್ತೂರಿನಲ್ಲಿ ಬಾಲವನ ವನ್ನು ಕಟ್ಟಿ ನಡೆಸಿದ ಚಟುವಟಿಕೆಗಳಲ್ಲಿ ಮಕ್ಕಳ ಕೂಟ, ಶಾಂತಿಶಿಬಿರ, ನಾಡಹಬ್ಬ, ಶಿಕ್ಷಕರ ಸಮ್ಮೇಳನಗಳು ಮುಖ್ಯವಾದವುಗಳು. ಇವರು ಮಕ್ಕಳಿಗಾಗಿ ಬರೆದ ನಾಟಕ, ಗೀತನಾಟಕ, ನವೀನ ನಾಟಕಗಳು ಈ ಅವಧಿಯಲ್ಲೇ ರಚಿತವಾದವು.

ಕಾರಂತರಿಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅನಾಧ ಪ್ರಭುತ್ವವಿತ್ತು. 1924 ರಿಂದಲೇ ತಮ್ಮ ಬರೆವಣಿಗೆಯನ್ನು ಆರಂಭಿಸಿದ ಇವರು ಪ್ರಕಟಿಸಿದ ಮೊದಲ ಪುಸ್ತಕ ರಾಷ್ಟ್ರಗೀತ ಸುಧಾಕರ ಎಂಬ ಒಂದು ಕವನಸಂಕಲನ. ಸೀಳ್ಗವನಗಳು (1992) ಇವರ ಕೊನೆಯ ಕವನ ಸಂಕಲನ. ವಿಚಿತ್ರಕೂಟ ಇವರು ಬರೆದ ಮೊದಲ ಕಾದಂಬರಿ. ಅನಂತರ ಇವರು ಪ್ರಕಟಿಸಿದ ನಿರ್ಭಾಗ್ಯ ಜನ್ಮ, ಸೂಳೆಯ ಸಂಸಾರ– ಈ ಕಾದಂಬರಿಗಳಲ್ಲಿ ಸಮಾಜದ ಬಡತನ, ಗೋಳು, ದಾರುಣ ಜೀವನದ ಚಿತ್ರಣವಿದೆ. ಚೋಮನದುಡಿ ಕಾದಂಬರಿಯಲ್ಲಿ ದಕ್ಷಿಣ ಕನ್ನಡದ ಅಸ್ಪೃಶ್ಯ ವರ್ಗದ ಮಾರಿ ಹೊಲೆಯರ ಜೀವನ ಚಿತ್ರಣವಿದೆ. ಮುಗಿದಯುದ್ಧ, ಬೆಟ್ಟದಜೀವ, ಕುಡಿಯರ ಕೂಸು ಕಾದಂಬರಿಗಳು ನಾಡಿನ ವಿವಿಧ ವರ್ಗಗಳ ಜನಜೀವನದ ಜೀವಂತ ಚಿತ್ರಣ ನೀಡುತ್ತವೆ. ಸ್ವಪ್ನದ ಹೊಳೆ, ಮೊಗ ಪಡೆದ ಮನ, ಇಳೆಯೆಂಬ ಕಾದಂಬರಿಗಳಲ್ಲಿ ಕಲಾವಿದ ಮನೋಧರ್ಮ, ಕಲಾಪ್ರವೃತ್ತಿಯ ಬೆಳೆವಣಿಗೆ ಭಾವಾಂದೋಲನಗಳು ರೂಪುಗೊಂಡಿವೆ. ಒಂಟಿದನಿ, ಅಳಿದಮೇಲೆ ಎಂಬವು ವ್ಯಕ್ತಿಚಿತ್ರಣ ಕಾದಂಬರಿಗಳು. ಔದಾರ್ಯದ ಉರುಳಲ್ಲಿ, ಗೊಂಡಾರಣ್ಯ, ಮೂಜನ್ಮ– ಈ ಕಾದಂಬರಿಗಳು ರಾಜಕೀಯ ರಂಗದ ವಿವಿಧ ಮುಖಗಳನ್ನು ಚಿತ್ರಿಸುತ್ತವೆ. ಸಮಾಜದಲ್ಲಿನ ಧಾರ್ಮಿಕ ಪ್ರವೃತ್ತಿಯ ತೆರೆಯ ಹಿಂದೆ ನಡೆಯುತ್ತಿರುವ ವಸ್ತುಸ್ಥಿತಿಗೆ ಸನ್ಯಾಸಿಯ ಬದುಕು, ಕೇವಲ ಮನುಷ್ಯರು ಕಾದಂಬರಿಗಳು ಕನ್ನಡಿ ಹಿಡಿಯುತ್ತವೆ. ಸರಸಮ್ಮನ ಸಮಾಧಿ, ಮೈಮನಗಳ ಸುಳಿಯಲ್ಲಿ ಕಾದಂಬರಿಗಳು ಲೈಂಗಿಕ ಸಮಸ್ಯೆಯ ಹಲವಾರು ಮುಖಗಳನ್ನು ವೈಜ್ಞಾನಿಕವಾಗಿ ವಿವೇಚಿಸುತ್ತವೆ. ಮೂರು ತಲೆಮಾರುಗಳ ಗ್ರಾಮೀಣ ಚಿತ್ರಣವಿರುವ ಇವರ ಮರಳಿಮಣ್ಣಿಗೆ ಕನ್ನಡದ ಪ್ರಸಿದ್ಧ ಕಾದಂಬರಿಗಳ ಲ್ಲೊಂದು. ಈ ಕಾದಂಬರಿ ಇಂಗ್ಲಿಷ್, ಹಿಂದಿ, ತಮಿಳು ಭಾಷೆಗಳಿಗೆ ಅನುವಾದವಾಗಿದೆ. ನಮ್ಮ ನಾಡಿನ ಧಾರ್ಮಿಕ ಕಲ್ಪನೆಗಳ ನಾಲ್ಕೈದು ಸಾವಿರ ವರ್ಷಗಳ ಇತಿಹಾಸ ಹೇಳಲು ಹೊಸ ತಂತ್ರ ಒಂದನ್ನು ಬಳಸಿ ಬರೆದ ಕಾದಂಬರಿ ಮೂಕಜ್ಜಿಯ ಕನಸುಗಳು. 1979ರಲ್ಲಿ ಇದರ ಸಂಕ್ಷಿಪ್ತ ಇಂಗ್ಲಿಷ್ ಆವೃತ್ತಿಯೂ ಪ್ರಕಟವಾಗಿದೆ. ಅಂಟಿದ ಅಪರಂಜಿ (1986) ಇವರ ಕೊನೆಯ ಕಾದಂಬರಿ.

ನಾಟಕ ಕ್ಷೇತ್ರದಲ್ಲೂ ಕಾರಂತರು ಸಾಕಷ್ಟು ಪ್ರಯೋಗ ನಡೆಸಿದ್ದಾರೆ. ವೃತ್ತಿ ನಾಟಕ ಕಂಪನಿಗಳಲ್ಲಿ ನಾಟಕಕಾರರಾಗಿ, ತಾಲೀಮು ಮಾಸ್ತರರಾಗಿಯೂ ಅನುಭವಗಳಿಸಿ ಇವರು ಬರೆದಿರುವ ಗರ್ಭಗುಡಿ, ಬಿತ್ತಿದ ಬೆಳೆ,

ಮಂಗಳಾರತಿ ಮೊದಲಾದುವುಗಳು ಸಾಮಾಜಿಕ ನಾಟಕಗಳು. ಗೀತನಾಟಕಗಳ ಮೊದಲ ಪ್ರಯೋಗ ನಡೆದುದೂ ಕಾರಂತರಿಂದ. ಪೌರಾಣಿಕ, ಚಾರಿತ್ರಿಕ ಮತ್ತು ಜನಪದ ಕಥೆಗಳನ್ನು ಕಾರಂತರು ಗೀತನಾಟಕಗಳ ವಸ್ತುವಾಗಿ ಆರಿಸಿಕೊಂಡಿದ್ದಾರೆ. ಈ ಬಗೆಯ ನಾಟಕಗಳ ಹಿನ್ನೆಲೆಯಲ್ಲಿ ಗೀತವನ್ನಿರಿಸಿ ಮೂಕನಾಟಕವನ್ನಾಗಿಯೂ ಛಾಯಾನಾಟಕವನ್ನಾಗಿಯೂ ಪ್ರಯೋಗಿಸಿದ್ದಾರೆ. ಮುಕ್ತದ್ವಾರ, ಲವಕುಶ, ಸತ್ಯವಾನ ಸಾವಿತ್ರಿ, ಕಿಸಾಗೋತಮಿ, ಬುದ್ಧೋದಯ, ಯಾರೋ ಅಂದರು. ಸೋಮಿಯ ಸೌಭಾಗ್ಯ ಇವು ಇವರ ಪ್ರಸಿದ್ಧ ಗೀತನಾಟಕಗಳು. ನಿಮ್ಮ ಓಟು ಯಾರಿಗೆ, ಗೆದ್ದವರ ಸತ್ಯ, ಬದುಕಬಹುದು ಮೊದಲಾದವು ಸರಳ ರಗಳೆಯಲ್ಲಿ ಇವರು ಬರೆದಿರುವ ವ್ಯಂಗ್ಯ ನಾಟಕಗಳು.



ಕಾರಂತರು ಚಲನಚಿತ್ರ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. 1932ರಲ್ಲಿ ಡೊಮಿಂಗೋ ಮತ್ತು ಭೂತರಾಜ್ಯ ಎಂಬ ಎರಡು ಮೂಕಚಿತ್ರಗಳನ್ನು ಬರೆದು ನಿರ್ದೇಶಿಸಿ ತಾವೇ ಛಾಯಾಚಿತ್ರಗಾರರೂ ನಿರ್ಮಾಪಕರೂ ಆದರು. ಅನಂತರ 1977ರಲ್ಲಿ ಪುನ: ಚಲನಚಿತ್ರ ರಂಗವನ್ನು ಪ್ರವೇಶಿಸಿ ಮಲೆಯ ಮಕ್ಕಳು ಎಂಬ ಚಲನಚಿತ್ರಕ್ಕೆ ಕಥೆ, ಸಂಭಾಷಣೆಗಳನ್ನು ಬರೆದು ನಿರ್ದೇಶಿಸಿದರು.

ಕಾರಂತರಿಗೆ ಪ್ರಿಯವಾದ ಇನ್ನೊಂದು ಕ್ಷೇತ್ರ ಯಕ್ಷಗಾನ. ಚಿಕ್ಕಂದಿನಿಂದಲೂ ಇದರಲ್ಲಿ ಆಸಕ್ತಿ ತಾಳಿದ್ದ ಇವರು, ಯಕ್ಷಗಾನ ಸಾಹಿತ್ಯ, ಸಂಗೀತ, ನಾಟ್ಯ, ವೇಷಭೂಷಣಗಳು, ನಟನೆಗಳ ಬಗ್ಗೆ ಆಳವಾಗಿ ಅಭ್ಯಸಿಸಿ ಯಕ್ಷಗಾನ ಬಯಲಾಟ ಎಂಬ ಪುಸ್ತಕವನ್ನು 1957ರಲ್ಲಿ ಬರೆದರು. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಸ್ವೀಡಿಶ್ ಅಕಾಡೆಮಿಯ ಪಾರಿತೋಷಕವೂ ಈ ಗ್ರಂಥಕ್ಕೆ ಲಭಿಸಿದೆ; ಈ ಗ್ರಂಥ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಭಾಷಾಂತರಗೊಂಡಿದೆ. ಕರ್ನಾಟಕದ ಅಮೂಲ್ಯ ನಾಟ್ಯಸಂಪತ್ತಾದ ಯಕ್ಷಗಾನವನ್ನು ಭಾರತದ ಅನ್ಯಭಾಷಾ ಪ್ರಾಂತಗಳು ಕಂಡು ಆಸಕ್ತಿ ಹೊಂದಬೇಕಾದರೆ ಈ ಕಲಾಮಾಧ್ಯಮದಲ್ಲಿನ, ಇತರ ಭಾಷಾ ಜನಗಳಿಗೆ ಅರ್ಥವಾಗದ ಮಾತುಗಾರಿಕೆಯನ್ನು ತೆಗೆದುಹಾಕಬೇಕು ಎಂದು ನಿರ್ಧರಿಸಿದ ಕಾರಂತರು, ಸಂಗೀತ, ನಾಟ್ಯಗಳಿಗೆ ಪ್ರಾಮುಖ್ಯತೆ ನೀಡಿ ಮಾತನ್ನು ತೆಗೆದು ಹಾಕಿದರು. ಪ್ರದರ್ಶನದ ಕಾಲವನ್ನು ಇಡೀ ರಾತ್ರಿಗೆ ಬದಲು ಮೂರು ಗಂಟೆಗೆ ಇಳಿಸಿದರು. ಅಂದವಾದ ನಾಟ್ಯ ಲೇಖನದ ಮೂಲಕ ನಾಲ್ಕಾರು ಕಥಾಪ್ರಸಂಗಗಳನ್ನು ಸುಂದರ ನಾಟ್ಯರೂಪಕಗಳನ್ನಾಗಿ ಮಾರ್ಪಡಿಸಿದರು. 1960 ರಿಂದ ಕಾರಂತರು ಯಕ್ಷಗಾನದಲ್ಲಿ ನಡೆಯಿಸಿದ ಬಹುವಿಧ ಪ್ರಯೋಗಗಳಿಗೆ 1971ರಲ್ಲಿ ಸರ್ಕಾರದ ಅಂಗೀಕಾರ ದೊರೆಯಿತು. ಉಡುಪಿಯಲ್ಲಿ ಆರಂಭಗೊಂಡ ಯಕ್ಷಗಾನ ಕೇಂದ್ರದ ನಿರ್ದೇಶಕರಾಗಿ ಕಾರಂತರಿಂದ ಸಿದ್ಧಪಡಿಸಲಾದ ಯಕ್ಷಗಾನ ರೂಪಕಗಳು ಅಖಿಲಭಾರತ ಮನ್ನಣೆಯನ್ನು ಪಡೆದವು. 1973ರಲ್ಲಿ ಕಾರಂತರು ದೆಹಲಿಯಲ್ಲಿ ಯಕ್ಷಗಾನದ ಹಿಂದಿ ಆವೃತ್ತಿಯೊಂದನ್ನು ನಿರ್ದೇಶಿಸಿ ಪ್ರದರ್ಶಿಸಿದರು. ಯಕ್ಷಗಾನದ ಸ್ತ್ರೀ ವೇಷಭೂಷಣಗಳಲ್ಲಿ ಇವರು ಮಾಡಿದ ಮಾರ್ಪಾಡುಗಳು ಕ್ರಾಂತಿ ಕಾರಿಯಾದುವಲ್ಲದೆ, ಅನಂತರ ಮೇಳಗಳೂ ಇದೇ ಮಾದರಿಯನ್ನನುಸರಿಸಿದವು.

ಕಾರಂತರು ವಿಶ್ವವಿದ್ಯಾಲಯಗಳಿಂದ ಪದವಿಗಳನ್ನು ಗಳಿಸಿ ವಿಜ್ಞಾನಿಗಳ ಪಂಕ್ತಿಗೆ ಸೇರಿದವರಲ್ಲ. ಆದರೆ ನಾಡಿನ ಜನಸಾಮಾನ್ಯರಿಗೆ, ವಿದ್ಯಾರ್ಥಿಗಳಿಗೆ, ವಿಜ್ಞಾನ ವಿಷಯಗಳನ್ನು ತಿಳಿಸುವ ಬಯಕೆಯಿಂದ ಜನಪ್ರಿಯ ವಿಜ್ಞಾನ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದ ಮೊದಲಿಗರು. ಇವರ ವಿಜ್ಞಾನ ಸಂಬಂಧವಾದ ಕೃತಿಗಳು ವೈವಿಧ್ಯಮಯವಾಗಿವೆ. ವಿಚಿತ್ರ ಖಗೋಳ (1965), ನಮ್ಮ ಭೂಖಂಡಗಳು (1967), ನವಸಾಕ್ಷರರಿಗಾಗಿ ಬರೆದ ಗೃಹವಿಜ್ಞಾನ (1929) ಇವುಗಳನ್ನು ಹೆಸರಿಸಬಹುದು. ಕೋಳಿ ಸಾಕಣೆ (1949) ಅನುವಾದಿತ ಕೃತಿಗಳಿವು: ಪರಮಾಣು: ಇಂದುನಾಳೆ (1952), ನಮ್ಮ ಸುತ್ತಲಿನ ಕಡಲು (1956), ಭಾರತದ ಪರಿಸರ ಪರಿಸ್ಥಿತಿ (1984), ಹಿರಿಯಕಿರಿಯ ಹಕ್ಕಿಗಳು (1971), ಸ್ವಂತ ಅಧ್ಯಯನದಿಂದ ರಚಿಸಿದ ಉಷ್ಣವಲಯದ ಆಗ್ನೇಸ್ಸ (1982), ವಿಶಾಲ ಸಾಗರ (1984), ಪ್ರಾಣಿ ಪ್ರಪಂಚದ ವಿಸ್ಮಯಗಳು (1984), ಪ್ರಾಣಿಪ್ರಪಂಚ (1990). ಕಾರಂತರು ಏಕಾಂಗ ವೀರರಾಗಿ ಬಾಲಪ್ರಪಂಚ (ಮೂರು ಸಂಪುಟಗ) ಮತ್ತು ವಿಜ್ಞಾನ ಪ್ರಪಂಚ (ನಾಲ್ಕು ಸಂಪುಟಗಳು) ಎಂಬ ಎರಡು ವಿಶ್ವಕೋಶಗಳನ್ನು ರಚಿಸಿದ್ದಾರೆ. ಬಾಲಪ್ರಪಂಚ ಕಿರಿಯರಿಗಾಗಿ ಬರೆದ, ವಿವಿಧ ವಿಷಯಗಳ ಸಚಿತ್ರ ವಿಶ್ವಕೋಶ. ಮಾಧ್ಯಮಿಕ ಹಂತದವರೆಗಿನ ವಿದ್ಯಾಭ್ಯಾಸದ ಅವಕಾಶದಲ್ಲಿ ವಿದ್ಯಾರ್ಥಿಗಳಿಗೆ, ಉಪಾಧ್ಯಾಯರಿಗೆ, ವಿಷಯ ಸಂಗ್ರಹಕ್ಕಾಗಿ ಪರಿಶೀಲಿಸಬಹುದಾದ ಅತ್ಯುತ್ತಮ ಪುಸ್ತಕವಿದು. ಎಳೆಯರಿಗೆ ಶಿಕ್ಷಣಾವಕಾಶದಲ್ಲಿ ವಿಜ್ಞಾನ ಕಲಿಸುವುದಕ್ಕಿಂತಲೂ ಹೆಚ್ಚಾಗಿ ಈ ವಿಷಯದಲ್ಲಿ ಅವರಿಗೆ ಹಸಿವು ಉಂಟಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಕಾರಂತರು ವಿಜ್ಞಾನ ಪ್ರಪಂಚವನ್ನು ನಾಲ್ಕು ಸಂಪುಟಗಳಲ್ಲಿ ರಚಿಸಿದರು. ಮೊದಲನೆಯ ಸಂಪುಟ ಈ ಜಗತ್ತು – ಇದು ವಿಶ್ವ ರಚನೆ, ಸೌರವ್ಯೂಹ, ಭೂಮಿಯ ಹುಟ್ಟು, ಸಾಗರ, ವಾಯುಮಂಡಲ ಮೊದಲಾದ ವಿಷಯಗಳನ್ನು ವಿವರಿಸುತ್ತದೆ. ಎರಡನೆಯ ಸಂಪುಟ ಜೀವ, ಜೀವನ – ಇದರಲ್ಲಿ ಸಸ್ಯ ಮತ್ತು ಪ್ರಾಣಿ ಜೀವನದ ಶರೀರ ವಿನ್ಯಾಸ, ಆರೋಗ್ಯಶಾಸ್ತ್ರ, ಮಾನಸಿಕ ಶಾಸ್ತ್ರಗಳ ವಿವರಣೆಯಿದೆ. ಮೂರನೆಯ ಸಂಪುಟವಾದ ವಸ್ತು, ಚೈತನ್ಯದಲ್ಲಿ–ವಿಜ್ಞಾನ ಇತಿಹಾಸ, ಅಜೀವಕ ರಸಾಯನ ವಿಜ್ಞಾನ, ಜೀವ ರಸಾಯನ ವಿಜ್ಞಾನ ಮತ್ತು ಭೌತವಿಜ್ಞಾನ ಕುರಿತ ಪ್ರಬಂಧಗಳಿವೆ. ಕೊನೆಯ ಸಂಪುಟ ವಿಜ್ಞಾನ, ಸಾಧನ–ಅನ್ವಯಾತ್ಮಕ ಶಾಖೆಗಳಾದ ಎಂಜಿನಿಯರಿಂಗ್ ಮತ್ತು ವೈದ್ಯವಿಜ್ಞಾನದ ವಿವರಣೆಗಳು ಈ ಸಂಪುಟದಲ್ಲಿವೆ. ವಿಜ್ಞಾನ

ವಿಷಯಗಳನ್ನು ಕರಗತ ಮಾಡಿಕೊಂಡು ಅಗಾಧಪ್ರಮಾಣದ ಸಾಹಿತ್ಯ ರಚನೆಯ ಸಾಹಸ ಅದರಲ್ಲಿರಬಹುದಾದ ಕೆಲವೊಂದು ಲೋಪದೋಷಗಳನ್ನೂ ಗಣನೆಗೆ ಬಾರದಂತೆ ಮಾಡಿದೆ.

ಪತ್ರಿಕೋದ್ಯಮದಲ್ಲೂ ಕಾರಂತರು ಸಾಕಷ್ಟು ದುಡಿದಿದ್ದಾರೆ. 1924ರಲ್ಲಿ ವಸಂತ ಎಂಬ ಮಾಸಪತ್ರಿಕೆಯನ್ನು ಆರಂಭಿಸಿ ಸುಮಾರು ನಾಲ್ಕು ವರ್ಷಗಳ ಕಾಲ ನಡೆಸಿದರು. ಅನಂತರ 1950ರಲ್ಲಿ ವಿಚಾರವಾಣಿ ಎಂಬ ವಾರಪತ್ರಿಕೆಯನ್ನು ಆರಂಭಿಸಿ ಸ್ವಲ್ಪಕಾಲ ನಡೆಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಎಳೆಯ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಹಲವು ಪ್ರಯೋಗಗಳನ್ನು ಕಾರಂತರು ನಡೆಸಿದ್ದಾರೆ. ಪ್ರಾಥಮಿಕ ತರಗತಿಗಳಿಗೆ ಕನ್ನಡ ಭಾಷಾಪಾಠದ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಭಾಷಾ ಶಿಕ್ಷಣಕ್ಕಾಗಿ ವಿಶಿಷ್ಟ ಯೋಜನೆಯೊಂದನ್ನು ಸಿದ್ಧಪಡಿಸಿ ಅದನ್ನು ಪ್ರಾಯೋಗಿಕವಾಗಿ ಪರಿಷ್ಕರಿಸಿ ಜಾಗತಿಕ ಮಕ್ಕಳ ಶಿಕ್ಷಣ ಯೋಜನೆಯವರಿಗೆ ನೀಡಿದ್ದಾರೆ. ಇವರು ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರೂ ಆಗಿದ್ದರು. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಿರಿಗನ್ನಡ ಅರ್ಥಕೋಶ (1941) ಎಂಬ ನಿಘಂಟು ರಚಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಹಾಗೂ ಕನ್ನಡ ವಿಶ್ವಕೋಶದ ಸಂಪಾದಕ ಮಂಡಲಿಯ ಸದಸ್ಯರಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಕಾರಂತರಿಗೆ ಕಲೆಯಲ್ಲಿ ವಿಶೇಷವಾದ ಆಸಕ್ತಿ. ದೇಶವಿದೇಶಗಳ ಚಿತ್ರ, ಶಿಲ್ಪ, ವಾಸ್ತುಗಳ ಬಗ್ಗೆ ಆಳವಾದ ಅಭ್ಯಾಸ ಮಾಡಿದ್ದಾರೆ. ಉತ್ತಮ ಛಾಯಾಚಿತ್ರಗ್ರಾಹಕರಾಗಿ ಅವರು ದೇಶದ ಉದ್ದಗಲವನ್ನೆಲ್ಲ ಸಂಚರಿಸಿ ಹಲವಾರು ಚಿತ್ರಗಳನ್ನು ತೆಗೆದು ಈ ವಿಷಯಗಳ ಮೇಲೆ ಸಾಕಷ್ಟು ಲೇಖನಗಳನ್ನು ಬರೆದಿದ್ದಾರೆ. ಚಿತ್ರಮಯ ದಕ್ಷಿಣ ಕನ್ನಡ, ಕರ್ನಾಟಕದಲ್ಲಿ ಚಿತ್ರಕಲೆ, ಭಾರತೀಯ ಶಿಲ್ಪ ಎಂಬವು ಈ ವಿಷಯಗಳ ಮೇಲೆ ಇವರು ಬರೆದ ಪುಸ್ತಕಗಳು. ಜಾಗತಿಕ ಶಿಲ್ಪ, ಚಿತ್ರ, ವಾಸ್ತುಗಳ ವಿವರಣೆ ಮತ್ತು ವಿಮರ್ಶೆಗಳೊಂದಿಗೆ ಸಚಿತ್ರವಾಗಿ ಪ್ರಕಟವಾಗಿರುವ ಕಲಾಪ್ರಪಂಚ ಇವರ ಇನ್ನೊಂದು ಬೃಹದ್ಗ್ರಂಥ.

ರಾಜಕೀಯವೂ ಕಾರಂತರು ಮುಟ್ಟದ ಕ್ಷೇತ್ರವಲ್ಲ. ಶುದ್ಧವಾದ ಶುಚಿಯಾದ ಆಡಳಿತ ಬಯಸುವ ಅವರು ರಾಜಕೀಯ ರಂಗದ ಕೆಲವೊಂದು ಸ್ವಲಾಭ, ಸ್ವಾರ್ಥ ಪ್ರವೃತ್ತಿಯನ್ನು ಕೆಚ್ಚೆದೆಯಿಂದ ನಿಷ್ಠುರವಾಗಿ ಬರೆದಿದ್ದಾರೆ. ತಮಗೆ ತಪ್ಪಾಗಿ ಕಂಡುದನ್ನು ಸ್ಪಷ್ಟ ಶಬ್ದಗಳಲ್ಲಿ ಟೀಕಿಸಲು ಅವರೆಂದೂ ಅಳುಕಿದವರಲ್ಲ. ಚುನಾವಣೆಗಳಲ್ಲೂ ಸ್ಪರ್ಧಿಸಿದರು. ಸರ್ಕಾರ ನೀಡಿದ ಪದ್ಮಭೂಷಣ ಪ್ರಶಸ್ತಿಯನ್ನು ದೇಶದಲ್ಲಿ ತುರ್ತುಪರಿಸ್ಥಿತಿಯ ಘೋಷಣೆಯಾದಾಗ, ಸರ್ಕಾರದ ಮನೋವೃತ್ತಿಯನ್ನು ಪ್ರತಿಭಟಿಸುವ ಸಲುವಾಗಿ ಹಿಂದಿರುಗಿಸಿದರು. ಮೂಲಭೂತ ಹಕ್ಕುಗಳ ಪ್ರತಿಪಾದಕರಾಗಿ 1977ರ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಆಳುವ ಸರ್ಕಾರದ ನೀತಿಗಳನ್ನು ವಿರೋಧಿಸಿದರು.

ಪ್ರವಾಸಪ್ರಿಯರಾದ ಕಾರಂತರು ಭಾರತವನ್ನು ಹಲವಾರು ಸಲ ಸುತ್ತಿದ್ದಾರೆ. 1952ರಲ್ಲಿ ಯುರೋಪನ್ನೂ 1976ರಲ್ಲಿ ಅಮೆರಿಕವನ್ನೂ ಸಂದರ್ಶಿಸಿದರು. ಅಬೂವಿನಿಂದ ಬರಾಮಕ್ಕೆ, ಅಪೂರ್ವಪಶ್ಚಿಮ ಮತ್ತು ಪಾತಾಳಕ್ಕೆ ಪ್ರಯಾಣ- ಇವು ಇವರು ಬರೆದಿರುವ ಪ್ರವಾಸಕಥನಗಳು. ತಮ್ಮ ಆತ್ಮಕಥೆಯನ್ನು ಹುಚ್ಚು ಮನಸ್ಸಿನ ಹತ್ತು ಮುಖಗಳು ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ತಮ್ಮ ವಿಚಾರಗಳನ್ನು ವಿವಿಧ ಭಾಗಗಳಾಗಿ ವಿಂಗಡಿಸಿ ಸ್ಮೃತಿಪಟಲದಿಂದ ಎಂಬ ಶೀರ್ಷಿಕೆಯಲ್ಲಿ ಮೂರು ಭಾಗಗಳಾಗಿ ಪ್ರಕಟಿಸಿದ್ದಾರೆ.

ಶಿವರಾಮ ಕಾರಂತರಿಗೆ ಹಲವು ಬಗೆಯ ಗೌರವ, ಪ್ರಶಸ್ತಿಗಳು ಲಭಿಸಿವೆ. ಇವರ ಯಕ್ಷಗಾನ ಬಯಲಾಟ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂತು (1958). ಈ ಕೃತಿಗೆ ಸ್ವೀಡಿಷ್ ಅಕಾಡೆಮಿಯ ಪಾರಿತೋಷಿಕವೂ ಲಭಿಸಿದೆ. ಇವರಿಗೆ ಕಾರಂತ ಪ್ರಪಂಚ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು (1969). ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಇವರನ್ನು ಕುರಿತು ಇಂಗ್ಲಿಷ್‌ನಲ್ಲಿ ಜೀವನಚರಿತ್ರೆಯೊಂದನ್ನು ಪ್ರಕಟಿಸಿದೆ (1973). ಇವರ ಮೂಕಜ್ಜಿಯ ಕನಸುಗಳು ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ (1978). ಮಧ್ಯಪ್ರದೇಶ ಸರ್ಕಾರದ ತುಲಸೀ ಸಂಮಾನ್ (1990), ಇಂದಿರಾಗಾಂಧಿ ಪರ್ಯಾವರಣ ಪುರಸ್ಕಾರ (1992), ಜಪಾನೀಸ್ ಡಾನ್ಸ್ ಕ್ರಿಟಿಕ್ಸ್ ಸೊಸೈಟಿ ಅವಾರ್ಡ್ (1981), ಮೈಸೂರು, ಕರ್ನಾಟಕ, ಮೀರತ್, ಮಂಗಳೂರು, ಜಬ್ಬಲ್‌ಪುರ, ವರ್ಲ್ಡ್ ಅಕಾಡೆಮಿ ಆಫ್ ಆರ್ಟ್ ಅಂಡ್ ಕಲ್ಚರ್ ವಿಶ್ವವಿದ್ಯಾಲಯಗಳ ಗೌರವ ಡಾಕ್ಟೊರೇಟ್, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1984), ಪಂಪ ಪ್ರಶಸ್ತಿ (1992), ನಾಡೋಜ ಪ್ರಶಸ್ತಿ (1997), ವಿಶ್ವಭಾರತಿ ವಿಶ್ವವಿದ್ಯಾಲಯದ ದೇಶಿಕೋತ್ತಮ (1997) ಮುಂತಾದ ಪ್ರಶಸ್ತಿಗಳು ಲಭಿಸಿವೆ. ಇವರು 1997 ಡಿಸೆಂಬರ್ 9 ರಂದು ನಿಧನರಾದರು. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರಂತ ಅಧ್ಯಯನ ಪೀಠವಿದ್ದು, ಇವರ ಅಪ್ರಕಟಿತ ಹಸ್ತಪ್ರತಿ, ವಸ್ತು ವಿಷಯ, ಪುಸ್ತಕಗಳ ಸಂಗ್ರಹ, ಪ್ರದರ್ಶನ, ಪ್ರಕಟಣೆಗಳನ್ನು ಕೈಗೊಂಡಿದೆ. ಸು. 930 ಬಿಡಿಬರೆಹಗಳು 'ಶಿವರಾಮ ಕಾರಂತರ ಲೇಖನಗಳು' ಮಾಲೆಯಲ್ಲಿ 8 ಸಂಪುಟಗಳಲ್ಲಿ ಪ್ರಕಟವಾಗಿವೆ. ಪತ್ರವ್ಯವಹಾರ ಮತ್ತು ನಾನು (1998) ಇವರ ಕೊನೆಯ ಸಾಹಿತ್ಯ ಸಂಕಲನ. ಇವರ ಹೆಸರಿನಲ್ಲಿ ಪರಿಸರ ಪ್ರಶಸ್ತಿ ಹಾಗೂ ಸಾಹಿತ್ಯ ಪ್ರಶಸ್ತಿಗಳನ್ನು ಸ್ಥಾಪಿಸಲಾಗಿದೆ.

(ಎಸ್.ಯು.ಪಿ.)

**ಶಿವರಾಮಯ್ಯ, ಐರೋಡಿ:** 1876-1941. ಕನ್ನಡದ ಅಭಿವೃದ್ಧಿಗಾಗಿ ಶ್ರಮಿಸಿದ ಹಿರಿಯರಲ್ಲೊಬ್ಬರು. ಇವರು 1876 ಜೂನ್ 6ರಂದು ಐರೋಡಿಯಲ್ಲಿ ಜನಿಸಿದರು. ತಂದೆ ಸುಬ್ರಹ್ಮಣ್ಯ ಉಡುಪ. ತಾಯಿ ಕಾವೇರಿ. ಬಾಲ್ಯದಿಂದಲೂ ಇವರಿಗೆ ಓದಿನಲ್ಲಿ ತುಂಬ ಆಸಕ್ತಿ. ಆದರೆ ಬಡತನದಿಂದಾಗಿ ಐಗಳ ಮಠದ ಐದನೆಯ ತರಗತಿಗೆ ಓದು ನಿಲ್ಲಿಸಬೇಕಾಯಿತಾದರೂ ಬಾಳೆಕುದುರು ಮಠದ ಶಂಕರಾಶ್ರಮ ಸ್ವಾಮಿಗಳ ಬಳಿ ಎರಡು ವರ್ಷಗಳ ಕಾಲ ಸಂಸ್ಕೃತ ಅಭ್ಯಾಸ ಮಾಡಿದರು. ಮುಂದೆ ಮಂಗಳೂರಿನಲ್ಲಿ ಶಿಕ್ಷಕ ತರಬೇತಿಯನ್ನು ಪೂರೈಸಿ ಅಣ್ಣ ಸೀತಾರಾಮ ಉಡುಪ ಕಾರ್ಕಡದಲ್ಲಿ ನಡೆಸುತ್ತಿದ್ದ ಶಾಲೆಯಲ್ಲಿ ಅಧ್ಯಾಪಕರಾದರು. ಮುಂದೆ ಆ ಶಾಲೆಯ ಆಡಳಿತವನ್ನು ಲೋಕಲ್ ಫಂಡಿನವರು ವಹಿಸಿಕೊಂಡ ಮೇಲೆ ಇವರು ಆ ಶಾಲೆಯ ಮುಖ್ಯೋಪಾಧ್ಯಾಯರಾದರು. ಅನಂತರ ಕುಂದಾಪುರದ ಬೋರ್ಡ್ ಹೈಸ್ಕೂಲಿನ ಕನ್ನಡ ಪಂಡಿತರಾಗಿ ಕೆಲಸ ಮಾಡಿ ಅಲ್ಲಿಯೇ ನಿವೃತ್ತರಾದರು (1933).

ಮಕ್ಕಳ ಜ್ಞಾನದ ಹಸಿವನ್ನು ಹಿಂಗಿಸಹೊರಟ ಶಿವರಾಮಯ್ಯನವರಿಗೆ ತಿಳಿವಿನ ಹಂಬಲ ತೀವ್ರವಾಗಿತ್ತು. ಅದರ ಒತ್ತಡದಿಂದಲೇ ಇವರು ಎಲ್ಲಿ ಏನು ಸಿಕ್ಕಿದರೂ-ಅದು ಕನ್ನಡವಿರಲಿ ಸಂಸ್ಕೃತವಿರಲಿ-ಓದತೊಡಗಿದರು. ಕೋಟ ಯಜ್ಞನಾರಾಯಣ ಸೋಮಯಾಜಿಗಳ ಬಳಿ ಸಂಸ್ಕೃತ ಕಾವ್ಯಾಭ್ಯಾಸ ಮಾಡಿದರು. ಬಿರ್ತಿ ಪುರುಷೋತ್ತಮ ಶಾಸ್ತ್ರಿಗಳಿಂದ ವ್ಯಾಕರಣ ವಿಚಾರಗಳನ್ನು ತಿಳಿದರು. ಕನ್ನಡ ಸಾಹಿತ್ಯದ ಬಗ್ಗೆ ಬವುಳಾಡಿ ವೆಂಕಟರಮಣ ಹೆಬ್ಬಾರರಿಂದ ಕಲಿತರು. ಸ್ವಂತ ಅಧ್ಯಯನವನ್ನು ಬಿಡದೆ ದೃಢನಿಷ್ಠೆಯಿಂದ ಮುನ್ನಡೆದು ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡ ಶಿವರಾಮಯ್ಯನವರು, ತಮ್ಮ ಉಪಾಧ್ಯಾಯ ಕೆಲಸದ ಜೊತೆಯಲ್ಲಿಯೇ ಬರೆವಣಿಗೆಯ ಕೆಲಸವನ್ನೂ ಮಾಡಿದರು. ಶ್ರೀಕೃಷ್ಣಸೂಕ್ತಿ, ವಸಂತ, ಜಯಕರ್ನಾಟಕ, ಸುಬೋಧ, ಕನ್ನಡ ಸಹಕಾರಿ, ಸುವಾಸಿನಿ,

ಸ್ವದೇಶಾಭಿಮಾನಿ, ಕರ್ನಾಟಕ ಕೇಸರಿ, ಸ್ವಧರ್ಮ, ಉದಯಭಾರತ, ಕಂಠೀರವ ಮೊದಲಾದ ಪತ್ರಿಕೆಗಳಲ್ಲಿ ಇತಿಹಾಸ, ಪುರಾಣ, ಧರ್ಮ, ಸಾಹಿತ್ಯ, ವಿಜ್ಞಾನ, ವಿಮರ್ಶೆಗಳಿಗೆ ಸಂಬಂಧಿಸಿದ ಇವರ ಅನೇಕ ಲೇಖನಗಳು ಪ್ರಕಟವಾದುವು. ಸಂಸ್ಕೃತದ ಬಗ್ಗೆ ಅಪಾರ ಶ್ರದ್ಧೆಯನ್ನು ತಾಳಿದ್ದ ಇವರು ಭಾರವಿಯ ಕಿರಾತಾರ್ಜುನೀಯ. ಕಾಳಿದಾಸನ ರಘುವಂಶ, ಮಾಘನ ಶಿಶುಪಾಲವಧೆ, ಶ್ರೀಹರ್ಷನ ನೈಷಧೀಯಚರಿತೆ, ವಿಶಾಖದತ್ತನ ಮುದ್ರಾರಾಕ್ಷಸ, ಬಾಣನ ಹರ್ಷಚರಿತೆ ಮುಂತಾದ ಹಲವು ಕೃತಿಗಳನ್ನು ಕನ್ನಡಕ್ಕೆ ತಂದರು. ಸಂಸ್ಕೃತದ ವಾಲ್ಮೀಕಿ ರಾಮಾಯಣವನ್ನು ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ ಎಂಬ ಹೆಸರಿನಿಂದಲೂ ಬಾಣಭಟ್ಟನ ಕಾದಂಬರಿಯನ್ನು ಕಾದಂಬರಿ ಕಥಾಸಾರ ಎಂಬ ಹೆಸರಿನಿಂದಲೂ ಕನ್ನಡಿಸಿದ್ದಾರೆ. ನಾನಕನ ಚರಿತೆ ಎಂಬುದು ಇವರು ಪ್ರಕಟಿಸಿರುವ ಒಂದು ಜೀವನ ಚರಿತ್ರೆ. ಮಕ್ಕಳಿಗಾಗಿ ಮಕ್ಕಳ ಕಥೆಗಳು (ಎರಡು ಭಾಗಗಳಲ್ಲಿ), ಭಗೀರಥ ಪ್ರಯತ್ನ, ಪಿತೃಭಕ್ತಿ ಮುಂತಾದ ಕಥೆಗಳನ್ನು ಬರೆದಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ ತರಗತಿಗಳಿಗಾಗಿ ಸದಾನಂದ ಪಾಠಮಾಲೆ, ಚರಿತ್ರೆಯ ಕಥೆಗಳು, ಸಂಕ್ಷಿಪ್ತ ಭೂಗೋಳಶಾಸ್ತ್ರ ಮುಂತಾದ ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶದ ರಚನೆಯಲ್ಲೂ ಸಹಕರಿಸಿದ್ದ ಇವರು ತಮ್ಮ ಬಾಳಿನ ಕೊನೆಗಾಲದಲ್ಲಿ ಬ್ರಹತ್ ನಿಘಂಟೊಂದನ್ನು ನಿರ್ಮಿಸಿದರು (ಅಪ್ರಕಟಿತ).

ಶಿವರಾಮಯ್ಯನವರ ಪತ್ನಿ ಭವಾನಿ. ಇವರಿಗೆ ಐದು ಗಂಡು ಮತ್ತು ಮೂರು ಹೆಣ್ಣುಮಕ್ಕಳು. ಇವರು ತಮ್ಮ ವಿಶ್ರಾಂತಿ ದಿನಗಳನ್ನು ಕಾರ್ಕಡದ ತಮ್ಮ ಮನೆಯಲ್ಲಿ ಕಳೆದು 1941 ಜೂನ್ 15ರಂದು ನಿಧನರಾದರು. ಇವರ ನೆನಪಿಗಾಗಿ ಇವರ ಅಭಿಮಾನಿಗಳು ಸಾಲಿಗ್ರಾಮದಲ್ಲಿ ಇವರ ಹೆಸರಿನಲ್ಲಿ ವಾಚನಾಲಯ ಮತ್ತು ಪುಸ್ತಕಭಂಡಾರವೊಂದನ್ನು ಸ್ಥಾಪಿಸಿದ್ದಾರೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರದವರು 1977ರಲ್ಲಿ ಇವರ ಬದುಕು-ಬರೆಹಗಳನ್ನು ಕುರಿತ ಐರೋಡಿ ಶಿವರಾಮಯ್ಯ; ಬದುಕು ಬರೆಹ (ಸಂ: ಕೆ.ಶಿವರಾಮ ಕಾರಂತ) ಎಂಬ ಸಂಪುಟವನ್ನು ಪ್ರಕಟಿಸಿದ್ದಾರೆ.

(ಎ.ಎಂ.ಯು.)

**ಶಿವರುದ್ರಪ್ಪ, ಜಿ.ಎಸ್:** 1926-. ಕನ್ನಡದ ರಾಷ್ಟ್ರಕವಿ, ವಿದ್ವಾಂಸ, ವಿಮರ್ಶಕ. ಕಾವ್ಯ, ನಾಟಕ, ಗ್ರಂಥಸಂಪಾದನೆ, ಪ್ರವಾಸಕಥನ-ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಉತ್ತಮ ಕೃಷಿಮಾಡಿದ್ದಾರೆ. ಇವರು 1926 ಫೆಬ್ರವರಿ 7 ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು.

ಶಾಲಾ ಉಪಾಧ್ಯಾಯರ ಮಗನಾದ ಇವರು ಬಡತನದಲ್ಲಿ ಬೆಳೆದರು. ಬಾಲ್ಯದಲ್ಲೇ ಓದುವ ಅಭಿರುಚಿ ಇದ್ದ ಇವರ ಮೇಲೆ ಶಿವರಾಮ ಕಾರಂತ, ಕುವೆಂಪು, ಡಿ.ವಿ.ಜಿ, ವರ್ಡ್ಸ್‌ವರ್ಥ್, ಎಲಿಯಟ್‌ರ ಪ್ರಭಾವ ಸಾಕಷ್ಟಾಯಿತು. ಹಳ್ಳಿಗಾಡಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು 1945ರಲ್ಲಿ ಇಂಟರ್‌ಮಿಡಿಯಟ್ ತೇರ್ಗಡೆ ಹೊಂದಿ, ಮುಂದೆ ಓದುವ ಆಸೆ ಇದ್ದರೂ ಬಡತನದಿಂದಾಗಿ ಗುಬ್ಬಿ ತಾಲ್ಲೂಕು ಕಚೇರಿಯಲ್ಲಿ ಗುಮಾಸ್ತರಾಗಿ ಸೇರಿದರು. ಸ್ವಂತ ದುಡಿಮೆಯ ಬಲದಿಂದಲೇ 1949ರಲ್ಲಿ ಮೊದಲ ವರ್ಗ, ಮೊದಲಸ್ಥಾನದಲ್ಲಿ ಸುವರ್ಣ ಪದಕದೊಂದಿಗೆ ಪದವಿ ಪಡೆದರು. 1953ರಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನದಲ್ಲಿ ಸ್ವರ್ಣಪದಕದೊಂದಿಗೆ ಕನ್ನಡ ಎಂ.ಎ. ಪದವಿ ಪಡೆದರು. ಕುವೆಂಪು ಅವರ ಮಾರ್ಗದರ್ಶನದಲ್ಲಿ ಸೌಂದರ್ಯ ಸಮೀಕ್ಷೆ ಎಂಬ ಶೀರ್ಷಿಕೆಯಲ್ಲಿ ಸಂಶೋಧನೆ ಕೈಗೊಂಡು ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟೊರೇಟ್ ಪದವಿ ಪಡೆದರು (1960). ಮೈಸೂರು ವಿಶ್ವವಿದ್ಯಾನಿಲಯದ ದಾವಣಗೆರೆ, ಶಿವಮೊಗ್ಗ, ಅನಂತರ ಮೈಸೂರಿನ ಯುವರಾಜಕಾಲೇಜು, ಮಹಾರಾಜ ಕಾಲೇಜು, ಮಾನಸ ಗಂಗೋತ್ರಿಗಳಲ್ಲಿ ಅಧ್ಯಾಪಕರಾಗಿ ದುಡಿದರು (1949-63). ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಕನ್ನಡ ವಿಭಾಗದ ಮತ್ತು ಮುಖ್ಯಸ್ಥರಾಗಿ (1963-66), ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ (1966-86) ಸೇವೆಸಲ್ಲಿಸಿದ್ದಾರೆ.

ಇವರು ಕವನ ರಚನೆ ಪ್ರಾರಂಭಿಸಿದ್ದು ಇಂಟರ್ ಮೀಡಿಯೆಟ್‌ನಲ್ಲಿದ್ದಾಗ ಸು. 14-15 ವರ್ಷ. ಜಿ.ಪಿ.ರಾಜರತ್ನಂರಿಂದ ಕವನರಚನೆಗೆ ಸಲಹೆ, ಮಾರ್ಗದರ್ಶನ, ಮೈಸೂರಿನಲ್ಲಿದ್ದಾಗ ಕುವೆಂಪು, ತ.ಸು.ಶಾಮರಾಯರ ಪ್ರೋತ್ಸಾಹ ದೊರಕಿತು. ಶ್ರೇಷ್ಠತರುಣ ಕವಿಗಳಿಗೆ ದೊರಕುತ್ತಿದ್ದ ಬಿ.ಎಂ.ಶ್ರೀ ಪದುವಟ್ಟಿನ ಚಿನ್ನದ ಪದಕ ಇವರ 'ಬೀಳ್ಕೊಡಿಗೆ' ನೀಳ್ಗವನಕ್ಕೆ ಲಭಿಸಿತು. ಮಾಸ್ತಿಯವರ 'ಜೀವನ'ದಲ್ಲಿ ಪ್ರಥಮ ಕವನ ಪ್ರಕಟವಾಯಿತು. ಗುಬ್ಬಿಯ ಆಹಾರ ಇಲಾಖೆಯಲ್ಲಿದ್ದಾಗ ಬರೆದ, ಭ್ರಷ್ಟಾಚಾರಗಳ ಚಕ್ರವ್ಯೂಹಕ್ಕೆ ಸಿಕ್ಕು ಒದ್ದಾಡುವ ಪ್ರಾಮಾಣಿಕ ಗುಮಾಸ್ತೆಯೊಬ್ಬನ ಕತೆ 'ಚಕ್ರವ್ಯೂಹ' ಪ್ರಕಟಗೊಳ್ಳಲಿಲ್ಲ. ಕೊನೆಗೂ ಇವರ ಮನೋಧರ್ಮಕ್ಕೆ ತಕ್ಕ ಅಧ್ಯಾಪಕ ವೃತ್ತಿಗೆ ಸೇರಿಕೊಂಡರು. ನಿರಂತರ ಅಧ್ಯಯನ, ಪಕ್ವ ಪಾಂಡಿತ್ಯ, ಲೇಖನ, ಶಿಸ್ತುಗಳನ್ನು ಅಳವಡಿಸಿಕೊಂಡರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವನ್ನು ರೂಪಿಸಿದವರು ಇವರೇ. ಇವರ ಶ್ರಮ ಮತ್ತು ಮುಂದಾಲೋಚನೆಯ ಫಲವಾಗಿ 'ಕನ್ನಡ ಅಧ್ಯಯನ ಕೇಂದ್ರ'ದಲ್ಲಿ ನಡೆದ ವಿಚಾರ ಸಂಕಿರಣಗಳು, ಅದರಲ್ಲಿ ತೋರಿದ ಕ್ರಿಯಾಶೀಲತೆ, ಸಮಭಾವ; ಪ್ರಕಟಣ ಕಾರ್ಯದಲ್ಲಿ ತೋರಿದ ಕತೃತ್ವ ಶಕ್ತಿ ಉಲ್ಲೇಖನೀಯ.

ಇವರು ಬರೆಯತೊಡಗಿದ್ದು ಸ್ವಾತಂತ್ರ್ಯದ ಉದಯ ತಂದ ಹೊಂಗನಸುಗಳು ಮಾಯವಾಗಿ ನಿರಾಸೆ ಮುಸುಕಿದ್ದ, ಇತಿಹಾಸದ ಮಹತ್ತ್ವದ ಕಾಲದಲ್ಲಿ. ಅದು ನವೋದಯ ಮಾರ್ಗದೊಡನೆ ಸ್ಪರ್ಧಿಸಿದ ಪ್ರಗತಿಶೀಲ ಮಾರ್ಗ ಕೊನೆಗೊಂಡು ನವ್ಯಕಾವ್ಯ ಪ್ರಭಾವಶಾಲಿಯಾದ ಕಾಲ. ರಾಮಕೃಷ್ಣ, ಅರವಿಂದ, ರವೀಂದ್ರನಾಥಠಾಕೂರ್, ವಿವೇಕಾನಂದರ ಪ್ರಭಾವ; ಸಂಸ್ಕೃತಿಯ ಬಾಹ್ಯ ರೂಪವಾಗಿದ್ದ ಎಲ್ಲ ವೈದಿಕ ಆಚರಣೆಗಳನ್ನು ಅಲ್ಲಗಳೆಯುವ, ಆದರೆ ವೇದ ಉಪನಿಷತ್ತುಗಳನ್ನು ಒಪ್ಪಿಕೊಳ್ಳುವ ಧೋರಣೆ; ಇದರಿಂದ ಫಲಿಸಿದ-ಹಿರಿಯದಕ್ಕೆ ನಮಿಸುವ, ಅನ್ಯಾಯವಾದದ್ದನ್ನು ವಿರೋಧಿಸುವ ಗುಣ; ಕಾವ್ಯವು ಕೇವಲ ಉದಾತ್ತ ಭಾವನೆಗಳ ಅಭಿವ್ಯಕ್ತಿಗೆ ಮಾತ್ರ, ಕ್ಷುಲ್ಲಕ ಅಶಿವ ಭಾವನೆಗಳಿಗೆ ಅಲ್ಲಿ ಅವಕಾಶವಿಲ್ಲವೆಂಬ ಸಮಕಾಲೀನ ಕಾವ್ಯಕಲ್ಪನೆ; ಜೊತೆಗೆ ಗ್ರಾಮೀಣ ರೈತ ಪರಿಸರದಲ್ಲಿ 'ಅನ್ಯ'ನಾಗಿ ಬೆಳೆದದ್ದರಿಂದ ಉಂಟಾದ ಆತ್ಮಾಭಿಮಾನ, ಆದರ್ಶಪ್ರಿಯತೆ; ದೈವಭಕ್ತಿ ನೆಲೆಗೊಂಡಮನ- ಇವು ಅವರ ಕಾವ್ಯವನ್ನು ನಿಯಂತ್ರಿಸಿದುವು. ನವ್ಯದ ಸತ್ವ ಇವರಲ್ಲಿ ಬಳಕೆಯಾದದ್ದು ಇವರ ಸಾಂಪ್ರದಾಯಿಕತೆಗೆ ಪೂರಕವಾಗಿ ಮಾತ್ರ. ಆದರೆ ಪ್ರಭಾವದ ದೃಷ್ಟಿಯಿಂದ ಇವರಿಗಿದ್ದ ರಾಜಕೀಯ, ಸಾಂಪ್ರದಾಯಿಕ ಹಿನ್ನೆಲೆಗಿಂತ ಇವರ ವೈಯಕ್ತಿಕ ಜೀವನದ ದಿಕ್ಕುದೆಸೆಗಳೇ ಇವರ ಕಾವ್ಯದ ಅಭ್ಯಾಸದ ದೃಷ್ಟಿಯಿಂದ ಹೆಚ್ಚು ಮಹತ್ತ್ವವಾದುವು- ಎಂಬುದು ಕೆಲವು ವಿಮರ್ಶಕರ ಅಭಿಮತ.

ನವೋದಯ-ನವ್ಯಗಳ ಅನೇಕ ಮಿತಿಗಳನ್ನು ದಾಟುವ ಸೂಚನೆಗಳು 'ದುಃಸ್ವಪ್ನ'ದಂಥ ಕವನಗಳಲ್ಲಿ ಕಂಡಿದೆ. ಕಾಲ ಮತ್ತು ಮಾನವ- ಈ ಎರಡರ ಸಂಬಂಧ ಹಾಗೂ ಸಂಘರ್ಷ, ನಾಗರಿಕ ಬದುಕಿನಲ್ಲಿ ಮನುಷ್ಯ ದಿನದಿಂದ ದಿನಕ್ಕೆ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಿರುವ ದುರಂತ, ವ್ಯಕ್ತಿ-ವ್ಯಕ್ತಿಗಳ ನಡುವಣ ಸಂಪರ್ಕರಾಹಿತ್ಯದಿಂದ ಉಂಟಾಗಿರುವ ಏಕಾಕಿತನದ ವಿಷಾದ- ಇವು ಸ್ಥೂಲವಾಗಿ ಇವರ ಕಾವ್ಯವಸ್ತು.

ಈವರೆಗೆ ಇವರ ಅನೇಕ ಕವನ ಸಂಕಲನಗಳು ಪ್ರಕಟವಾಗಿವೆ; ಬಹುತೇಕ ಮರುಮುದ್ರಣ ಕಂಡಿವೆ. ಚೆಲುವು-ಒಲವು ಸಂಕಲನ ಐದು ಮುದ್ರಣ ಕಂಡಿರುವುದು ಇವರ ಜನಪ್ರಿಯತೆಯ ದ್ಯೋತಕ. ತ.ಸು. ಶಾಮರಾಯರು ಆರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಲ್ಲಿ ಪ್ರಕಟಗೊಂಡದ್ದು ಇವರ ಮೊದಲ ಕವನ ಸಂಕಲನ ಸಾಮಗಾನ (1951). ಬಹುಪಾಲು ಪ್ರಕೃತಿ ಕವನಗಳು, ಪ್ರಕೃತಿ ಗೀತೆಗಳು ಮತ್ತು ಸಾಂಸಾರಿಕ ಗೀತೆಗಳ ಸಂಕಲನ 'ಚೆಲುವು-ಒಲವು' (1953). ಈ ಕವನಗಳ ಮೂಲದಲ್ಲಿ ರಸಸ್ಥಿತಿಯನ್ನು ರಚಿಸುವ ಸತತ ಪ್ರೇರಣೆ ಇದೆ. ಕವಿ ಇಲ್ಲಿ ಆಶಾವಾದಿ; ನವೋದಯ ಕಾವ್ಯದ ಹಾದಿಯಲ್ಲಿ ನಡೆಯುತ್ತಾ ನವ್ಯಕ್ಕೆ ಇಣುಕುಹಾಕುವ ಕವಿಯನ್ನು 'ದೇವಶಿಲ್ಪ'ದಲ್ಲಿ (1956) ಕಾಣಬಹುದು. ಗಂಭೀರವಾಗಿರುತ್ತಿದ್ದ ಕವನ ಇಲ್ಲಿ ಹಾಸ್ಯ, ವ್ಯಂಗ್ಯ ಸೇರಿ ಲವಲವಿಕೆ ಬಂದಿದೆ. ಅನುಭವ, ಅಭಿವ್ಯಕ್ತಿ ಮತ್ತು ಜೀವನದ ತತ್ತ್ವಗಳೆಲ್ಲದರ ದೃಷ್ಟಿಯಿಂದ ಹಾಗೂ ಇವರ ಕಾವ್ಯಶಕ್ತಿಯ ಸಾಧ್ಯತೆಗಳ ದೃಷ್ಟಿಯಿಂದ 'ದೀಪದ ಹೆಜ್ಜೆ' (1959) ಗಮನಾರ್ಹ ಕೃತಿ. ಕವಿಜೀವ-ವಿಶ್ವಾತ್ಮ-ನಿಸರ್ಗಗಳ ತ್ರಿಕೋಣದಲ್ಲಿ ಸಂಚರಿಸುತ್ತ ಏಕಾಕಿತನದ ಅನುಭವದಲ್ಲೇ ಇರುತ್ತಿದ್ದ ಕವನಗಳಲ್ಲಿ ಮಾನವ ಪ್ರಪಂಚದ ಸಂಕೀರ್ಣತೆ ಪ್ರತ್ಯಕ್ಷವಾಗುವುದು ಈ ಸಂಕಲನದಲ್ಲಿ. ಆತ್ಮಶೋಧ, ವಸ್ತುನಿಷ್ಠತೆ, ಮಾನವ-ಅಂತರಂಗ, ಮಾನವ-ಕಾಲ-ಇವುಗಳ ವಿವೇಚನೆ ಇಲ್ಲಿದೆ. ನವ್ಯ, ನವೋದಯ ಕವಿತೆಗಳು ಸಮಸಮವಾಗಿರುವ 'ಕಾರ್ತೀಕ' (1961) ಜೀವನದ ನಲಿವನ್ನು ಸ್ವಾಗತಿಸುವಂಥದು. ತೀರ್ಥವಾಣಿ (1960) ಬೇರೆಬೇರೆ ಕವಿಗಳು ರಚಿಸಿದ ಪರಮಹಂಸರ ಅನುಭಾವ ಪೂರ್ಣ ಕಂಠದಿಂದ ಹರಿದುಬಂದ ಗೀತೆಗಳ ಕನ್ನಡ ರೂಪ. ಅನಾವರಣ (1963) ತಾನು ನಿಂತ 'ನಿಜದ ನೆಲೆ' ಯತ್ತ ದೃಷ್ಟಿಹರಿಸಿದೆ; ಮನುಷ್ಯನ ಅವನತಿಗಾಗಿ ಕೊರಗು, ಚಿಕಿತ್ಸಕ ದೃಷ್ಟಿ ಇಲ್ಲಿದೆ. ಅನೇಕ ಉತ್ತಮ ಭಾವಗೀತೆಗಳ ಸಂಕಲನವಿದು. ತೆರೆದದಾರಿ (1966)ಯಲ್ಲಿ ಓದುಗನನ್ನು ಚಿಂತನೆಗೆ ದೂಡುವ ಕವನಗಳಿವೆ. ಮನುಷ್ಯ ಮನುಷ್ಯನ ನಡುವೆ ಎದ್ದಿರುವ ಗೋಡೆಯ ಬಗೆಗೆ ಹರಿದ ದುಃಖ ದುಮ್ಮಾನ 'ಗೋಡೆ' (1972). 9 ಸಂಕಲನಗಳ 117 ಉತ್ತಮ ರಚನೆಗಳನ್ನು ಆರಿಸಿದ ಸಂಕಲನ 'ನನ್ನ ನಿನ್ನ ನಡುವೆ' (1973). ಕಾಡಿನ ಕತ್ತಲಲ್ಲಿ (1981), ಪ್ರೀತಿ ಇಲ್ಲದ ಮೇಲೆ, ಚಕ್ರಗತಿ (1992), ವ್ಯಕ್ತಮಧ್ಯ (1999) ಇವರ ಈಚಿನ ಕವನ ಸಂಕಲನಗಳು. 1987ರಲ್ಲಿ ಸಮಗ್ರಕಾವ್ಯ ಪ್ರಕಟವಾಗಿದೆಯಲ್ಲದೆ 1997ರಲ್ಲಿ ಇದರ ವಿಸ್ತೃತ ಪ್ರಕಟಣೆ ಹೊರಬಂದಿದೆ.



ಗೋಪಾಲಕೃಷ್ಣ ಅಡಿಗರ ಅನಂತರದ ತಲೆಮಾರಿನಲ್ಲಿ ತಮ್ಮ ವಿಶಿಷ್ಟಧ್ವನಿ, ಅತಿರೇಕವಲ್ಲದ ವೈವಿಧ್ಯಮಯ ಕಾಳಜಿಗಳಿಂದ ಕನ್ನಡದ ಮಹತ್ತ್ವದ ಕವಿಗಳಲ್ಲಿ ಇವರು ಒಬ್ಬರಾಗಿದ್ದಾರೆ. ಇವರದು ರೂಪ-ಸತ್ವ ಸಂಪನ್ನವಾದ ಸುಸಂಸ್ಕೃತ, ಸೌಂದರ್ಯನಿಷ್ಠ, ನಿರ್ದುಷ್ಟ, ಸ್ಪಷ್ಟ, ಅರ್ಥಪೂರ್ಣ, ರಮಣೀಯ ಅಭಿವ್ಯಕ್ತಿ. ಇವರು ಪರಂಪರೆ, ಪರಿಸರದ ಸಮನ್ವಯ ಸಾರುವ ಪ್ರಯೋಗ ಶೀಲ, ಮುಕ್ತಪ್ರಜ್ಞೆಯ ಕವಿ. ಇವರದು ಯಾವುದೇ ಸಿದ್ಧಾಂತಕ್ಕೆ ಕಟ್ಟುಬೀಳದ 'ಸೇತುವೆ ಕಾವ್ಯ'. ಶಿವ, ಸತ್ಯ, ಸುಂದರವಾದದ್ದನ್ನು ಆರಾಧಿಸುವ ಊರ್ಧ್ವಗಮನಾಭಿಲಾಷೆ, ಆದರ್ಶೋನ್ಮುಖವಾದ ಅಭೀಪ್ಸೆ, ಭಾವಗೀತೆಗಳ ಯಶಸ್ಸಿಗೆ ಕಾರಣವಾಗುವ ಮಾರ್ದವತೆ. ವೈಚಾರಿಕ ವಸ್ತು ಮತ್ತು ಹೊಸ ಪ್ರಜ್ಞೆಗಳು ಇವರ ಕೆಲವು ಕವನಗಳ ಸೋಲಿಗೂ ಕಾರಣವಾಗುತ್ತವೆ. ಇವರ ಕಲೆಯ ಲೇಪ ಕೃತಿಯ ಅಂತರಂಗದ ವಸ್ತುವನ್ನು ಕಟ್ಟುವುದಕ್ಕಿಂತ ಹೆಚ್ಚಾಗಿ ಬಾಹ್ಯ ಅಲಂಕಾರಗಳಲ್ಲಿ ಮಾತ್ರ ಪರ್ಯವಸಾನವಾಗುತ್ತದೆ ಎಂಬ ಟೀಕೆ ಕೂಡ ಇದೆ.

ತಮ್ಮ ಆವೇಶಗಳನ್ನು ಹದಗೊಳಿಸಿದ ಅನಂತರವೇ ಅವುಗಳಿಗೆ ಭಾಷೆಯ ರೂಪವನ್ನು ಸಾಧಿಸುವ ಇವರ ಸಾಧನೆ ಭಾವಗೀತೆಗಳಲ್ಲಿ ಅದ್ವಿತೀಯವಾಗಿ ಕಾಣುತ್ತದೆ. ಪ್ರಕೃತಿಯ ಬಗೆಗೆ ತಮ್ಮದೇ ಆದ ನಿಲುವು, ಭಾವನೆಗಳನ್ನು ತಳೆದ ಇವರು ಉಳಿದ ಕವಿಗಳಿಂದ ಪ್ರಕೃತಿ ವರ್ಣನೆಯಲ್ಲಿ ಭಿನ್ನವಾಗಿದ್ದಾರೆ. ಪ್ರಮುಖವಾಗಿ ಇವರು ಚಿತ್ರಿಸಿರುವುದು ನಗರ ಸಮಾಜ. ಆಡುಭಾಷೆಯನ್ನು ಪಳಗಿಸಿ ತಮ್ಮ ಆಶಯವನ್ನು ಹೆಚ್ಚು ಸಮರ್ಥವಾಗಿ ಅಭಿವ್ಯಕ್ತಗೊಳಿಸಿದ್ದು ಕೆಲವು ಸಂಕಲನಗಳಲ್ಲಿ ಕಾಣುತ್ತದೆ. ಮೊದಲ ಸಂಕಲನಗಳಲ್ಲಿ ವಿಡಂಬನೆಯ ಸುಳಿವೇ ಇಲ್ಲದಿದ್ದರೂ ಬರುಬರುತ್ತ ಇದೇ ಒಂದು ವಿಶಿಷ್ಟ ದೃಷ್ಟಿಕೋನವಾಗುತ್ತದೆ. ರಾಷ್ಟ್ರ ಜೀವನದ ಗೊಂದಲ, ರಾಜಕೀಯ ಗೋಸುಂಬೆತನ, ಸುತ್ತಲಿನ ವ್ಯಕ್ತಿಗಳ ಪೊಳ್ಳುತನ, ಉಸಿರು ಗಟ್ಟುವ ನಗರ ಜೀವನಗಳಿಗೆ ಸಂಬಂಧಿಸಿದ ವಿಡಂಬನೆ ಇವರ ಕವನಗಳಲ್ಲಿ ಪೂರ್ಣ ತಾತ್ತ್ವಿಕ ನೆಲೆಯಾಗಿ ಪ್ರಕಟವಾಗುತ್ತದೆ ಎಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ.

ಇವರು ಸಾಹಿತ್ಯದ ಇತರ ಪ್ರಕಾರಗಳಲ್ಲೂ ದುಡಿದಿದ್ದಾರೆ. ಕೆ.ಬಿ.ಪ್ರಭುಪ್ರಸಾದರ ಜೊತೆಗೂಡಿ ಇವರು ಬರೆದ ರೇಡಿಯೊ ನಾಟಕಗಳು 1954-61ರ ನಡುವೆ ಆಕಾಶವಾಣಿಯಿಂದ ಬಿತ್ತರಗೊಂಡವಲ್ಲದೆ, ಪ್ರಬುದ್ಧ ಕರ್ಣಾಟಕದಲ್ಲೂ ಕಾಣಿಸಿಕೊಂಡುವು. 'ರಾಣಿ ದುರ್ಗಾವತಿ' ಸು. 400 ವರ್ಷಗಳಷ್ಟು ಹಿಂದಿನ ಅಕ್ಬರನ ಕಾಲದ ಚರಿತ್ರೆಯ ಸಣ್ಣದೊಂದು ಘಟನೆಯನ್ನಾಧರಿಸಿದ್ದು. ಬಸವಣ್ಣ ಕಪ್ಪಡಿಯಲ್ಲಿ ಐಕ್ಯವಾಗುವುದನ್ನು ನಿರೂಪಿಸುವುದು 'ಮಹಾಸಂಗಮ'. ಇಲ್ಲಿನ ಸಂಭಾಷಣೆ ಗೀತಾತ್ಮಕವಾಗಿದೆ. ಪ್ರಭುಲಿಂಗ ಲೀಲೆಯ ಮಾಯಾಪ್ರಸಂಗ ಮತ್ತು ಅಕ್ಕಮಹಾದೇವಿಯ ಪ್ರಸಂಗಗಳನ್ನು ಒಂದೆಡೆ ಭಟ್ಟಿಯಿಳಿಸಿದ ರಸಘಟ್ಟ 'ನಾದಸೇತು'. ಈ ಎರಡೂ ನಾಟಕಗಳ ವಸ್ತುವಿನಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ. ರಾಹುಲ ಸಾಂಕೃತ್ಯಾಯನರ ಪ್ರಭಾ ಎಂಬ ಸಣ್ಣಕಥೆಯನಾಧರಿಸಿದ ಇದೇ ಹೆಸರಿನದು ಇನ್ನೊಂದು ಪ್ರಸಾರ ನಾಟಕ. ಈ ನಾಟಕಗಳಲ್ಲಿ ಪ್ರಬುದ್ಧ ನಾಟಕಕಾರನ ಲಕ್ಷಣಗಳನ್ನು ಕಾಣಬಹುದು.

ಪ್ರಕಟಿತ ಮೊದಲ ಗದ್ಯಕೃತಿ 'ಕರ್ಮಯೋಗಿ'-ರಾಘವಾಂಕ ಕವಿಯ ಸಿದ್ಧರಾಮ ಚಾರಿತ್ರದ ಆಧಾರದಿಂದ ರಚಿತವಾದ ಕಾದಂಬರಿ (1956). ಜೀವನಚರಿತ್ರೆಯ ಯಥಾರ್ಥಗ್ರಹಣದೃಷ್ಟಿ, ಕಾದಂಬರಿಯ ನಿರೂಪಣಾ ಕೌಶಲ, ಕಾವ್ಯದ ರಸಪರತೆಗಳು ಇಲ್ಲಿ ಸಂಗಮಿಸಿವೆ. ನೇರವಾಗಿ ಓಟವನ್ನು ತಪ್ಪಿಸಿ ಕಥಾನಕಗಳನ್ನು ಬಳಸಿಕೊಂಡು ಸಿದ್ಧರಾಮನ ವ್ಯಕ್ತಿತ್ವವನ್ನೇ ಕೇಂದ್ರವಾಗಿರಿಸಿಕೊಂಡ ಈ ಕೃತಿ ವಿಶಿಷ್ಟವಾಗಿದೆ. ಸಿದ್ಧರಾಮನ ಅನವಶ್ಯಕ ಪೌರಾಣಿಕ ತೊಡರುಗಳನ್ನು ನಿವಾರಿಸಿ ಕರ್ಮಯೋಗಿಯಾಗಿಸಿರುವುದು ನೂತನ.

ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾದ 'ನಮ್ಮದಿಬ್ಬ' ದಾವಣಗೆರೆಯ ಸ್ನೇಹಿತರೊಂದಿಗೆ ವಿಹಾರಕ್ಕೆ ಹೋಗುತ್ತಿದ್ದ ದಿಬ್ಬವೊಂದರ ಆತ್ಮೀಯ ಚಿತ್ರಣ. ಭಾರತ ಮತ್ತು ರಷ್ಯಗಳನ್ನು ತುಲನಾತ್ಮಕ ಕಣ್ಣುಗಳಿಂದ ನೋಡಿದ ತೆರೆದ ಮನದ ವರ್ಣನೆ 'ಮಾಸ್ಕೋದಲ್ಲಿ 22 ದಿನ' (1973). ಅಲ್ಪಕಾಲದ ಪ್ರವಾಸ ಮತ್ತು ಭಾಷೆಯ ತೊಡಕಿನ ಮಿತಿಗಳ ಅರಿವು ಲೇಖಕರಿಗಿದೆ. ಸಂಸ್ಕೃತಿಯನ್ನು ಅದರ ಬೇರೆಬೇರೆ ಮುಖಗಳಲ್ಲಿ ಅರ್ಥಮಾಡಿಕೊಳ್ಳ ಬಯಸುವ ಮಹತ್ವಾಕಾಂಕ್ಷೆಯ ಕಥನ 'ಗಂಗೆಯ ಶಿಖರಗಳಲ್ಲಿ' (1985). ಹಾಗಾಗಿ ತಾವು ಕಂಡದ್ದನ್ನೆಲ್ಲ ಸೂಕ್ಷ್ಮವಾಗಿ ಕಲಾತ್ಮಕವಾಗಿ ದಾಖಲಿಸುವುದು ಇವರಿಗೆ ಸಾಧ್ಯವಾಗಿದೆ. ಗಂಗೆಯ ಶಿಖರಗಳಲ್ಲಿ, ಅಮೆರಿಕದಲ್ಲಿ ಕನ್ನಡಿಗ, ಇಂಗ್ಲೆಂಡಿನಲ್ಲಿ ಚತುರ್ಮಾಸ ಇವರ ಇತರ ಪ್ರವಾಸಕಥನಗಳು. ಚತುರಂಗ (1986) ಇವರ ಒಂದು ಅಸಮಗ್ರ ಆತ್ಮಕತೆ.

ಇವರೊಬ್ಬ ಸಹೃದಯ ವಿಮರ್ಶಕ. ಕುಹಕ ಕುಚೋದ್ಯ ಇಲ್ಲದ ನೇರಮಂಡನೆಯ ತೀ.ನಂ.ಶ್ರೀ, ಕುವೆಂಪು ಪರಂಪರೆಯಲ್ಲಿ ಮುಂದುವರಿದ ಇವರ ವಿಮರ್ಶೆ 'ಪ್ರಾಯೋಗಿಕ ವಿಮರ್ಶೆ'ಯ ಮಾರ್ಗವನ್ನು ಸ್ಥಾಪಿಸಿದೆ, 'ದರ್ಶನ ವಿಮರ್ಶೆ'ಯ ದಾರಿಯನ್ನು ವಿಶಾಲಗೊಳಿಸಿದೆ. ಪಾಶ್ಚಾತ್ಯ ವಿಮರ್ಶೆಯ ಜೊತೆಗೆ ಭಾರತೀಯ ಕಾವ್ಯಮಿಮಾಂಸೆಯನ್ನು ಆಳವಾಗಿ ಅಭ್ಯಾಸ ಮಾಡಿದ್ದರಿಂದ ಇವರ ವಿಮರ್ಶೆಗೆ ತನ್ನದೇ ಆದ ಗಾಂಭೀರ್ಯವಿದೆ. ನಮ್ಮಲ್ಲಿ ವಿಮರ್ಶೆಯ ಪರಂಪರೆ ಒಂದಿದೆ ಎಂಬುದರ ಅರಿವು ನಮ್ಮ ವಿಮರ್ಶಕರಿಗಿರಬೇಕು ಎಂಬುದು ಇವರ ಕಳಕಳಿ. ವಿಮರ್ಶೆಯ ಪೂರ್ವ ಪಶ್ಚಿಮ (1961), ಸೌಂದರ್ಯ ಸಮೀಕ್ಷೆ (1965), ಪರಿಶೀಲನ (1967), ಗತಿಬಿಂಬ (1969), ಕನ್ನಡ ಸಾಹಿತ್ಯ ಸಮೀಕ್ಷೆ (1975), ನವೋದಯ (1976), ಮಹಾಕಾವ್ಯ ಸ್ವರೂಪ (1976), ಅನುರಣನ (1978), ಪ್ರತಿಕ್ರಿಯೆ (1982), ಕಾವ್ಯಾರ್ಥಚಿಂತನ (1983), ಕನ್ನಡ ಕವಿಗಳ ಕಾವ್ಯ ಕಲ್ಪನೆ (1989), ಹೊಸಗನ್ನಡ ಕವಿತೆಗಳಲ್ಲಿ ಕಾವ್ಯಚಿಂತನೆ: ಕೆಲವು ಪ್ರತಿಕ್ರಿಯೆಗಳು (1991)-ಇವು ವಿಮರ್ಶನ ಕೃತಿಗಳು. ಸಹೃದಯತೆ, ಸಂಶೋಧನ ದೃಷ್ಟಿ, ಚಾರಿತ್ರಿಕ ಪ್ರಜ್ಞೆಗಳಿಂದ ಕೂಡಿದ ಈ ಲೇಖನಗಳಲ್ಲಿ ಇವರ ಒಳನೋಟ, ವ್ಯಾಖ್ಯಾನ, ವಿಶ್ಲೇಷಣೆ, ತರ್ಕಬದ್ಧ ವಿವೇಚನೆ ಹೊಸತನವನ್ನು ಮೂಡಿಸುತ್ತವೆ. ಒಂದು ಚಾರಿತ್ರಿಕ ಸಂದರ್ಭ ಮತ್ತು ಸಾಹಿತ್ಯಕೃತಿ-ಇವುಗಳ ನಡುವಿನ ಸಂಬಂಧದಲ್ಲಿನ ನಿಲುವುಗಳ ಅಭ್ಯಾಸಕ್ಕೆ 'ವಿಮರ್ಶೆಯ ಪೂರ್ವ ಪಶ್ಚಿಮ' ಒಂದು ಸಾರ್ಥಕ ನಿದರ್ಶನ. ವಿಮರ್ಶೆಯಲ್ಲಿ ಪೂರ್ವ, ಪಶ್ಚಿಮ ದೃಷ್ಟಿಗಳು, ಒಂದು ಸಾಂಸ್ಕೃತಿಕ ಸಂದರ್ಭಕ್ಕೆ ಒಗ್ಗಿಬರುವ ಮಾನದಂಡ ಹಾಗೂ ಎರಡು ಭಿನ್ನ ಸಾಂಸ್ಕೃತಿಕ ಸಂದರ್ಭದಲ್ಲಿ ಏರ್ಪಟ್ಟಿರುವ ಮಾನದಂಡಗಳನ್ನು ಯಾವ ಮಟ್ಟದ ಔಚಿತ್ಯದಲ್ಲಿ ಗ್ರಹಿಸಬೇಕು ಮುಂತಾದ ಸಾಹಿತ್ಯಾಭ್ಯಾಸಿಯ ಪ್ರಶ್ನೆಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಕೃತಿಯ ವಿನ್ಯಾಸ ರೂಪುಗೊಂಡಿದೆ. ಕಾವ್ಯಮೀಮಾಂಸೆಗೆ ಸಂದ ದೊಡ್ಡಕೊಡುಗೆ 'ಸೌಂದರ್ಯ ಸಮೀಕ್ಷೆ'. ಇದು ರಸದೃಷ್ಟಿಯ ಸಂಶೋಧನೆ. ಸಕಲ ಕಾವ್ಯಕಲೆಗೂ ಮೂಲವಾದ, ಅಮೂರ್ತ ಸೌಂದರ್ಯವನ್ನು ವಿವೇಚಿಸುವ ಅತಿ ತೊಡಕಿನ ಸಾಹಸ. ಕನ್ನಡದಲ್ಲಿ ಮೊದಲ ಬಾರಿಗೆ ಕವಿಯ ದೃಷ್ಟಿಕೋನದಿಂದ ಕವಿಯ ಅಂತರನುಭವದ ಮೀಮಾಂಸೆ ಇಲ್ಲಿ ನಡೆದಿದೆ. ಸೌಂದರ್ಯದ ಪ್ರಕಾರಗಳನ್ನೂ ಸಂಸ್ಕಾರಗಳನ್ನೂ ಇಷ್ಟು ಸಮಗ್ರವಾಗಿ ವಿಶ್ಲೇಷಿಸುವ ಗ್ರಂಥ ಕನ್ನಡದಲ್ಲಿ ಇದೊಂದೇ. ಒಂದು ಕಾವ್ಯದ ಆಕರ್ಷಣೆಯ ಕಾರಣವನ್ನು ಇಡೀ ಕಾವ್ಯಾನುಭವದ ವ್ಯಾಪ್ತಿಯಲ್ಲಿ ವಿವರಣೆಗೆ ತಂದದ್ದು ಇಲ್ಲಿನ ಸಾಧನೆ. ನವೋದಯ ಸಾಹಿತ್ಯ ಮೀಮಾಂಸೆಯ ಲಕ್ಷಣಗಳನ್ನು ಪ್ರತಿನಿಧಿಸುವಾಗಲೇ ಅದರ ಮಿತಿಗಳನ್ನು ಇದು ಸೂಚಿಸುತ್ತದೆ. ಸಹಜವಾಗಿಯೇ ಇಂಥ ಸಾಹಸದ ವಿವರಗಳಲ್ಲಿ ಭಿನ್ನಾಭಿಪ್ರಾಯಗಳಿಗೆ ವಿಪುಲ ಅವಕಾಶವಿರುತ್ತದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಇವರು ಸಂಪಾದಿಸಿದ ಕೆ.ಎಸ್.ನರಸಿಂಹಸ್ವಾಮಿಯವರ ಅಭಿನಂದನ ಗ್ರಂಥ 'ಚಂದನ' ಇತರ ಸಂಭಾವನಾ ಗ್ರಂಥಗಳಿಗಿಂತ ವಿಶಿಷ್ಟವಾದುದು. ಇತರೊಂದಿಗೆ ಸಂಪಾದಿಸಿದ ದರ್ಶನ ವಿಮರ್ಶೆ, ಪ್ರಾಯೋಗಿಕ ವಿಮರ್ಶೆ ಇವರ ಸಮುಚಿತ ವಿವೇಚನೆಯ ದ್ಯೋತಕಗಳು. 1971ರಲ್ಲಿ ಪ್ರಾರಂಭಿಸಿದ 'ಸಾಹಿತ್ಯವಾರ್ಷಿಕ' ಆಯಾವರ್ಷ ಹೊರಬಂದ ಕನ್ನಡ ಕೃತಿಗಳ ಒಂದು ಸಮಗ್ರಪಟ್ಟಿಯನ್ನೂ ಅವುಗಳ ವಿಮರ್ಶೆಯನ್ನೂ ಒಳಗೊಂಡಿದೆ. ಬಿ.ಎನ್. ಶಾಸ್ತ್ರಿಗಳೊಂದಿಗೆ 'ಶಬರ ಶಂಕರ ವಿಳಾಸ ಸಂಗ್ರಹ'ವನ್ನು ಸಂಗ್ರಹಿಸಿದ್ದಾರೆ. ಅವರ ಪ್ರಧಾನ ಸಂಪಾದಕತ್ವದ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಇತರ ಸಂಪಾದಿತ ಕೃತಿಗಳಿಗೆಲ್ಲ ಕಿರೀಟ ಪ್ರಾಯವಾದದ್ದು. 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆಯ' 10 ಸಂಪುಟಗಳು ಕನ್ನಡದ ನಿಜವಾದ ಪ್ರಜ್ಞೆಯನ್ನು ಸರಳವಾಗಿ ಎಲ್ಲರಿಗೂ ಮುಟ್ಟಿಸುವಂಥವು.

ಇವರಿಗೆ ಹಲವಾರು ಪುರಸ್ಕಾರಗಳು ಲಭ್ಯವಾಗಿವೆ. ಮಾಸ್ಕೋದಲ್ಲಿ 22 ದಿನ ಎಂಬ ಪ್ರವಾಸ ಸಾಹಿತ್ಯಕೃತಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ (1974) ದೊರಕಿದೆ. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ (1982), 'ಕಾವ್ಯಾರ್ಥ ಚಿಂತನ'ಕ್ಕೆ ವರ್ಷದ ಅತ್ಯುತ್ತಮ ಕೃತಿ ಬಹುಮಾನ (1983), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1984), ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (1984), ಮದರಾಸು ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆ (1986), ದಾವಣಗೆರೆಯಲ್ಲಿ ನಡೆದ 61ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ (1991), ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪದವಿ (1987), ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಪೀಠದ ಸಂದರ್ಶಕ ಪ್ರಾಧ್ಯಾಪಕ (1994-95), ಪಂಪ ಪ್ರಶಸ್ತಿ (1998), ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ (2003), ಕುವೆಂಪು ವಿಶ್ವವಿದ್ಯಾಲಯದ (2006) ಗೌರವ ಡಾಕ್ಟೊರೇಟ್ ಇವುಗಳಲ್ಲಿ ಮುಖ್ಯವಾದುವು. ಇವರಿಗೆ ಸ್ನೇಹ ಕಾರ್ತೀಕ, ಗೌರವ, ಹಣತೆ (2001) ಎಂಬ ಅಭಿನಂದನ ಗ್ರಂಥಗಳನ್ನು ಇವರ ಶಿಷ್ಯರು ಮತ್ತು ಅಭಿಮಾನಿಗಳು ಪ್ರೀತಿಯಿಂದ ಸಮರ್ಪಿಸಿದ್ದಾರೆ. ಸಮನ್ವಯ ಕವಿ ಎಂಬ ಅಭಿಧಾನವೂ ಇವರಿಗಿದೆ. ಇವರಿಗೆ 2006ರಲ್ಲಿ ರಾಜ್ಯ ಸರ್ಕಾರ ರಾಷ್ಟ್ರಕವಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು ಕನ್ನಡದ ಮೂರನೆಯ ರಾಷ್ಟ್ರಕವಿ (ಉಳಿದಿಬ್ಬರು ಎಂ. ಗೋವಿಂದಪೈ, ಕುವೆಂಪು).

*

**ಶಿವಲಿಂಗಯ್ಯ ದೇಶಮುಖ:** 1820-21ರಲ್ಲಿ ಹಳೆಯ ಬಿದರೆ ಜಿಲ್ಲೆಯ, ಈಗ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯಲ್ಲಿರುವ ಉದ್ಗೀರ್ ಮತ್ತು ಸುತ್ತಲ ಪ್ರದೇಶದಲ್ಲಿ ನಡೆದ ಬಂಡಾಯದ ನಾಯಕ. ಶಿವಲಿಂಗಪ್ಪ ಎಂದೂ ಪ್ರಸಿದ್ಧನಾಗಿದ್ದ ಈತ ಸುಳಿಯಳ್ಳಿ ಎಂಬ ಹಳ್ಳಿಯವನು. ಬ್ರಿಟಿಷರ ವಶವರ್ತಿಯಾಗಿದ್ದ ನಿಜಾಮನ ತಾಲ್ಲೂಕುದಾರನೆಂಬ ಅಧಿಕಾರಿಯ ದುರಾಡಳಿತ ಹಾಗೂ ಸುಲಿಗೆಗಳನ್ನು ತಡೆಯಲಾರದೆ ಈಗ ಗೌಜಿಗಾಂವ್‌ನ ಪ್ರಮುಖನಾದ ಮೇಘಶ್ಯಾಮ್, ಕೃಷ್ಣಾಪುರದ ದೇಶಮುಖ ತಿರುಮಲರಾಯ ಹಾಗೂ ಭವಾನಿಪೇಟೆಯ ದೇಸಾಯಿ ಲಚ್ಮಣರೆಡ್ಡಿ ಇವರುಗಳ ನೆರವಿನಿಂದ

ಬಂಡೆದ್ದ. 1820ರ ಡಿಸೆಂಬರ್‌ನಲ್ಲಿ ಉದ್ಗೀರ್‌ನಲ್ಲಿರುವ ತಾಲ್ಲೂಕುದಾರನ ಕೋಟೆಯನ್ನು ವಶಪಡಿಸಿಕೊಂಡು ಬಂಡಾಯ ಹೂಡಿದ. ಬ್ರಿಟಿಷ್ ದಾಖಲೆಗಳು ಹೇಳುವಂತೆ ಶಾಸನಬಾಹಿರವಾದ ಚಟುವಟಿಕೆಗಳನ್ನು ಆರಂಭಿಸಿದ. ಡಿಸೆಂಬರ್ 24ರಂದು ಲೆಫ್ಟಿನೆಂಟ್ ಸುದರ್‌ಲೆಂಡ್ ಸುಳಿಯಳ್ಳಿಯ ಮೇಲೆ ತನ್ನ ಸೇನಾತುಕಡಿಯ ಸಹಿತ ದಾಳಿ ಮಾಡಿದ. ಆಗ ಮಲ್ಜಿ ಎಂಬ ಶಿವಲಿಂಗಯ್ಯನ ಅನುಯಾಯಿ ಹಾಗೂ ಇವನ ಇತರ ಅನೇಕ ಬೆಂಬಲಿಗರು ತೀರಿಕೊಂಡರು. ಶಿವಲಿಂಗಯ್ಯನ ಗೌಜಿಗಾಂವ್ ಎಂಬ ನೆರೆಯ ಊರ ಕೋಟೆಯಲ್ಲಿ ಆಶ್ರಯಪಡೆದು ಅಲ್ಲಿನ ದೇಶಮುಖನ ನೆರವಿನಿಂದ ಪ್ರತಿಭಟನೆಯನ್ನು ಮುಂದುವರೆಸಿದ. ಅದನ್ನು ವಶಪಡಿಸಿಕೊಳ್ಳಲು ಆಂಗ್ಲ ಸೇನೆಗೆ ಸಾಧ್ಯವಾಗಲಿಲ್ಲ. ಶಿವಲಿಂಗಯ್ಯ ಅಲ್ಲಿಂದ ತಪ್ಪಿಸಿಕೊಂಡ. ಆಗ ಸುದರ್‌ಲೆಂಡ್ ಸುತ್ತಲ ಕೆಲವು ಕೋಟೆಗಳನ್ನು ವಶಪಡಿಸಿಕೊಂಡು ಮುಂದೆ 1821ರ ಜನವರಿ 10ರಂದು ಕೃಷ್ಣಾಪುರದ ವಿರುದ್ಧ ಸಾಗಿದ. ಅಲ್ಲಿನ ದೇಶಮುಖ ತಿರುಮಲರಾಯ ಮೂರು ವರ್ಷದಿಂದ ಕಂದಾಯ ಕೊಟ್ಟಿರಲಿಲ್ಲ. ಆತನನ್ನು ಒಲಿಸಿಕೊಳ್ಳಲು ಸುದರ್‌ಲೆಂಡ್ ನಡೆಸಿದ ಯತ್ನ ವ್ಯರ್ಥವಾಯಿತು. ಆತನೂ ಅಲ್ಲಿಂದ ತಪ್ಪಿಸಿಕೊಂಡ. ಅಲ್ಲಿಂದ ಸುದರ್‌ಲೆಂಡ್ ಭವಾನಿಪೇಟೆಗೆ ಹೋದಾಗ ಲಚ್ಮಣರೆಡ್ಡಿ ದೇಸಾಯಿ ಶರಣಾಗತನಾದ. ಶಿವಲಿಂಗಯ್ಯನನ್ನು ಬಂಧಿಸಲಾಯಿತೇ ಎಂಬ ವಿವರಗಳಾಗಲೀ ಅವನ ಜೀವನದ ಬಗ್ಗೆ ಅನ್ಯ ವಿವರಗಳಾಗಲೀ ತಿಳಿದಿಲ್ಲ. ಕೆಲವು ಬ್ರಿಟಿಷ್ ದಾಖಲೆಗಳ ನೆರವಿನಿಂದಷ್ಟೇ ದೇಶಮುಖ ಬಂಡಾಯ ಎಂದು ಕರೆಯಲಾದ ಈ ಉತ್ಥಾನದ ವಿವರಗಳು ನಮಗೆ ತಿಳಿಯುತ್ತವೆ. (ಎಸ್.ಕೆ.)

**ಶಿವಲೆಂಕ ಮಂಚಣ್ಣ:** ಸು. 1160. ಶಿವಶರಣ, ವಚನಕಾರ ಹಾಗೂ ಉತ್ತಮ ಪಂಡಿತ. ಇವನ ಅಜ್ಜ ಸೋಮಶಂಭುದೇಶಿಕ, ತಂದೆ ಪ್ರಸಿದ್ಧ ವಿದ್ವಾಂಸ ಶಂಭುಭಟ್ಟ (ದಾಮೋದರ). ಈತ ಹಿರಿಯ ವಚನಕಾರರಲ್ಲೊಬ್ಬನಾದ ಉರಿಲಿಂಗದೇವನ ಗುರುವಾಗಿದ್ದ. ಇಂಥ ಹಿರಿಯ ಪಂಡಿತ ವಂಶದಲ್ಲಿ ಜನಿಸಿದ ಮಂಚಣ್ಣ ತನ್ನ ಪಾಂಡಿತ್ಯದಿಂದ ಪರವಾದಿಗಳನ್ನು ಸೋಲಿಸಿ ಬಸವಣ್ಣನವರ ಮಹಿಮೆಯನ್ನು ಕೇಳಿ ಕಲ್ಯಾಣಕ್ಕೆ ಬಂದು, ಕಡೆಯವರೆಗೂ ಅಲ್ಲಿಯೇ ಇದ್ದು ಸಮಾಧಿಸ್ಥನಾದ. ಪಂಡಿತಾರಾಧ್ಯ ಚರಿತೆಯಲ್ಲಿ ಕಂಡುಬರುವಂತೆ ಈತ ಭಕ್ತಿ ಕ್ರಿಯಾಸ್ಥಿತಿಗೆ ಕರ್ತನಾಗಿದ್ದ. ಮೂವರು ಪ್ರಸಿದ್ಧ ಪಂಡಿತರಲ್ಲಿ ಒಬ್ಬನಾಗಿದ್ದ. ಈತ ವಿಷ್ಣುವು ವಿಶ್ವನಾಥನಿಗೆ ಶರಣಾಗುವಂತೆ ಮಾಡಿದನೆಂದೂ ತನ್ನ ಕುರುಳು ಬೆರಳು ರವನನುದಿನ ಕತ್ತರಿಸಿ ವಿಶ್ವೇಶ್ವರನಿಗರ್ಪಿಸಿ ಮರಳಿ ಪಡೆವ ಸಾಮರ್ಥ್ಯವನ್ನು ಹೊಂದಿದ್ದನೆಂದೂ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾ ಪುರಾಣ, ಕಿಕ್ಕೇರಿಯಾರಾಧ್ಯ ನಂಜುಂಡನ ಭೈರವೇಶ್ವರ ಕಾವ್ಯ ಮೊದಲಾದ ಗ್ರಂಥಗಳಿಂದ ತಿಳಿದುಬರುತ್ತದೆ. ಶ್ರೀಪತಿ ಪಂಡಿತನ ಶ್ರೀಕರಭಾಷ್ಯದ 'ಅತ ಏವ ಗುಹಾಧಿಕರಣೇ ಮಂಚನ ಪಂಡಿತೀಯೇ' ಎಂಬ ವಾಕ್ಯದಿಂದ ಮಂಚಣ್ಣ ಗುಹಾಧಿಕರಣ ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿರುವಂತೆ ತಿಳಿದುಬರುತ್ತದೆ. ಇವನು ಶಿವನಲ್ಲಿಟ್ಟಿದ್ದ ಅನನ್ಯ ಭಕ್ತಿಯಿಂದ ಅನುಪಮ ಪ್ರೇಮದಿಂದ ಇವನಿಗೆ ಶಿವಲೆಂಕನೆಂಬ ಅನ್ವರ್ಥನಾಮ ಬಂದಿರುವಂತೆ ತೋರುತ್ತದೆ.

ಈಗ ದೊರೆತಿರುವಂತೆ ಈತನ ವಚನಗಳು 133. ಈಶಾನ್ಯಮೂರ್ತಿ ಮಲ್ಲಿಕಾರ್ಜುನಶಿಂಗ ಎಂಬುದು ಇವನ ವಚನಗಳ ಅಂಕಿತ. ಈ ವಚನಗಳಲ್ಲಿ ಬೆಡಗಿನ ವಚನಗಳೂ ಸೇರಿವೆ. ಈತ ತನ್ನ ವಚನಗಳಲ್ಲಿ ಶರಣನ ವಿವಿಧ ರೂಪ ನಿರೂಪಗಳನ್ನು ವಿವರಿಸಿದ್ದಾನೆ. ಭಕ್ತನು ಬಾಹ್ಯವ್ರತ, ಭ್ರಮೆವ್ರತ ಮೊದಲಾದ ಅರವತ್ತುನಾಲ್ಕು ಶೀಲಗಳನ್ನು ಅರಿತು ನಡೆಯಬೇಕೆಂದಿದ್ದಾನೆ. (ಬಿ.ಎಸ್.ಎಸ್.)

**ಶಿವಸಮುದ್ರ:** ಮಂಡ್ಯಜಿಲ್ಲೆ ಮಳವಳ್ಳಿ ತಾಲ್ಲೂಕಿನ ಮಲ್ಲಿಕ್ಯಾತನಹಳ್ಳಿ ಬಳಿ ಇರುವ ಜಲವಿದ್ಯುತ್ ಉತ್ಪಾದನಾ ಕೇಂದ್ರ. ಮಳವಳ್ಳಿ-ಕೊಳ್ಳೇಗಾಲ ತಾಲ್ಲೂಕುಗಳ ಸರಹದ್ದಿನಲ್ಲಿದ್ದು ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಮದ್ದೂರು-ಮಳವಳ್ಳಿ ಮಾರ್ಗದಲ್ಲಿ ಸು. 48 ಕಿಮೀ ದೂರದಲ್ಲೂ



ಗಗನಚುಕ್ಕಿ ಜಲಪಾತ

ಮೈಸೂರಿಗೆ 80 ಕಿಮೀ ದೂರದಲ್ಲೂ ಇದೆ. ಇಲ್ಲಿರುವ ಕೆ.ಶೇಷಾದ್ರಿ ಅಯ್ಯರ್ ಜಲವಿದ್ಯುತ್ ಸ್ಥಾವರದಲ್ಲಿ 10 ವಿದ್ಯುಜ್ಜನಕಗಳಿದ್ದು 42 ಮೆವಾ ಸಾಮರ್ಥ್ಯದ ವಿದ್ಯುತ್ ಉತ್ಪಾದನಾಗಾರವೂ ಪ್ರಾಚೀನ ದೇವಾಲಯಗಳೂ ಇದ್ದು ಕರ್ನಾಟಕ ರಾಜ್ಯದ ಮುಖ್ಯ ಪ್ರವಾಸಿ ಕೇಂದ್ರಗಳಲ್ಲೊಂದಾಗಿದೆ.

ಕಾವೇರಿ ನದಿ ಇಲ್ಲಿ ಎರಡು ಕವಲುಗಳಾಗಿ ಸು.100 ಮೀ ಕೆಳಕ್ಕೆ ದುಮುಕುತ್ತದೆ. ಈ ಕವಲುಗಳ ನಡುವಿನ ಪ್ರದೇಶ ಕಾವೇರಿ ನದಿಯ ಎರಡನೆಯ ಬೃಹತ್ ದ್ವೀಪ. ಈ ದ್ವೀಪವನ್ನು ಹೆಗ್ಗುರು ಎಂದು ಕರೆಯಲಾಗುತ್ತಿತ್ತು. ಇಲ್ಲಿ ದುಮುಕುವ ಕಾವೇರಿ ನದಿಯ ಪಶ್ಚಿಮ ಕವಲಿಗೆ ಗಗನಚುಕ್ಕಿ ಎಂದೂ ಅಲ್ಲಿಗೆ ಸುಮಾರು ಒಂದೂವರೆ ಕಿಮೀ ದೂರದಲ್ಲಿ ದುಮುಕುವ ಪೂರ್ವದ ಕವಲಿಗೆ ಭರಚುಕ್ಕಿ ಎಂದೂ ಹೆಸರು. ಮುಂದೆ ಕಾವೇರಿಯ ಈ ಎರಡು ಕವಲುಗಳೂ ಶಿವಸಮುದ್ರದ ಈಶಾನ್ಯ ದಿಕ್ಕಿನಲ್ಲಿ ಒಂದುಗೂಡಿ ಪೂರ್ವಾಭಿಮುಖವಾಗಿ ಹರಿಯುತ್ತದೆ.

ಇಲ್ಲಿನ ವಿದ್ಯುತ್ ಉತ್ಪಾದನಾ ಕೇಂದ್ರ ಭಾರತದ ಹಾಗೂ ಏಷ್ಯದ ಅತ್ಯಂತ ಹಳೆಯ ದೊಡ್ಡ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲೊಂದು. ಇದು 1902ರಲ್ಲಿ 4,300 ಕಿ ವಾ ಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯದೊಂದಿಗೆ ಇಲ್ಲಿ ಸ್ಥಾಪಿತವಾಯಿತು. ಜಲಪಾತದ ಇಳಿಜಾರನ್ನು ಉಪಯೋಗಿಸಿಕೊಂಡು ಮೇಲಿನಿಂದ ಕಾಲುವೆಯ ಮೂಲಕ ನೀರು ತಂದು ಬೃಹತ್ ಕೊಳವೆಗಳ ಮೂಲಕ ವಿದ್ಯುತ್ ಆಗಾರಕ್ಕೆ ಹಾಯಿಸುವ ವ್ಯವಸ್ಥೆ ಇದೆ. ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಅಗತ್ಯವಿದ್ದ ವಿದ್ಯುತ್ತನ್ನು ಒದಗಿಸುವುದು ಈ ಕೇಂದ್ರ ಸ್ಥಾಪನೆಯ ಮುಖ್ಯ ಉದ್ದೇಶಗಳಲ್ಲೊಂದಾಗಿತ್ತು. ಪ್ರಾರಂಭದಲ್ಲಿ ಈ ಕೇಂದ್ರದ ಉತ್ಪಾದನಾ ಸಾಮರ್ಥ್ಯ 4.5 ಮೆವಾಗಳಷ್ಟಿತ್ತು. 1925ರ ಹೊತ್ತಿಗೆ ಇಲ್ಲಿ ಏಳನೆಯ ಯಂತ್ರವನ್ನು ಸ್ಥಾಪಿಸಲಾಯಿತು. ಇಲ್ಲಿಗೆ ಕೃಷ್ಣರಾಜಸಾಗರ ಅಣೆಕಟ್ಟೆಯಿಂದ ವರ್ಷವೆಲ್ಲ ನೀರೊದಗಿಸುವ ವ್ಯವಸ್ಥೆ ಇದ್ದು ಕ್ರಮೇಣ ಇದರ ಉತ್ಪಾದನಾ ಸಾಮರ್ಥ್ಯ 42 ಮೆವಾಗಳಿಗೆ ಹೆಚ್ಚಿದೆ. ಈ ವಿದ್ಯುತ್ ಉತ್ಪಾದನಾ ಕೇಂದ್ರವಿರುವ ಪ್ರದೇಶ ಬ್ಲಫ್ ಎಂದೂ ಪ್ರಸಿದ್ಧ. ಇಲ್ಲಿ ಉತ್ಪಾದನಾ ಕೇಂದ್ರದ ಉದ್ಯೋಗಿಗಳ ಕಾಲೋನಿ ಬೆಳೆದಿದ್ದು ಪ್ರವಾಸಿ ಮಂದಿರ, ಆಸ್ಪತ್ರೆ, ಪ್ರೌಢಶಾಲೆ ಮೊದಲಾದ ಸಾರ್ವಜನಿಕ ಸಂಸ್ಥೆಗಳಿವೆ. ಪ್ರವಾಸಿಗಳು ವಿದ್ಯುತ್ ಸ್ಥಾವರವನ್ನು ನೋಡಲು ಕೆಳಗೆ ಇಳಿಯಲು ವಿದ್ಯತ್ ಚಾಲಿತ ಕಂಬಿ ಗಾಡಿಗಳ ಸೌಲಭ್ಯವಿದೆ.

ಇಲ್ಲಿ ರಂಗನಾಥಸ್ವಾಮಿ, ಸೋಮೇಶ್ವರ, ವೀರಭದ್ರ ದೇವಾಲಯಗಳಿವೆ. ಇವುಗಳಲ್ಲಿ ರಂಗನಾಥಸ್ವಾಮಿ ದೇವಾಲಯ ಮುಖ್ಯವಾದುದು. ಕಾವೇರಿ ನದಿ ದಡದ ಮೇಲಿರುವ ಶ್ರೀರಂಗಪಟ್ಟಣ, ಶಿವಸಮುದ್ರ ಮತ್ತು ಶ್ರೀರಂಗ ಈ ಮೂರು ಕಡೆಗಳಲ್ಲೂ ರಂಗನಾಥಸ್ವಾಮಿ ದೇವಾಲಯಗಳಿದ್ದು ಶಿವಸಮುದ್ರದ ರಂಗನಾಥ ದೇವಾಲಯ ಮಧ್ಯರಂಗವೆಂದು ಪ್ರಸಿದ್ಧವಾಗಿದೆ. ಈ ದೇವಾಲಯ ಹೊಯ್ಸಳರ ಕಾಲದಲ್ಲಿ ನಿರ್ಮಿತವಾದದ್ದು. ಇಲ್ಲಿಯ ಶಯನಭಂಗಿಯಲ್ಲಿರುವ ಸುಮಾರು ಎರಡೂವರೆ ಮೀಟರ್ ಉದ್ದದ ರಂಗನಾಥ ದೇವರಿಗೆ ಜಗನ್ಮೋಹನ ರಂಗನಾಥನೆಂದು ಕರೆಯುತ್ತಾರೆ. ಈ ವಿಗ್ರಹದ ಪಾದದ ಬಳಿ ಕಾವೇರಿಯ ಚಿಕ್ಕ ವಿಗ್ರಹವಿದೆ. ಇದಲ್ಲದೆ ಈ ಗುಡಿಯಲ್ಲಿ ತಕ್ಷಕ, ಆದಿಶೇಷ, ರಾಮಪರಿವಾರ, ಆಳ್ವಾರರು ಮತ್ತು ರಾಮಾನುಜಾಚಾರ್ಯರು ಮೊದಲಾದ ವಿಗ್ರಹಗಳಿವೆ.

ಸೋಮೇಶ್ವರ ಗುಡಿ ಇಲ್ಲಿಯ ಇನ್ನೊಂದು ದೊಡ್ಡ ದೇವಾಲಯ. ಇದೂ ಹೊಯ್ಸಳರ ಕಾಲದ ರಚನೆ. ಈ ದೇವಾಲಯದ ನೆಲಕಟ್ಟು ಅಷ್ಟಕೋನಾಕಾರದಲ್ಲಿದೆ. ಇಲ್ಲಿ ಸೋಮೇಶ್ವರ, ಗಣೇಶ ಮತ್ತು ಬಾಲಸುಬ್ರಹ್ಮಣ್ಯರ ವಿಗ್ರಹಗಳಿವೆ. ಸೂರ್ಯಚಂದ್ರ ಮೂರ್ತಿಗಳಿವೆ. ದೇವಾಲಯದ ಕಂಬಗಳಲ್ಲಿ ಅಲಂಕಾರಿಕ ಕೆತ್ತನೆ ಕೆಲಸ ಮಾಡಲಾಗಿದೆ. 19ನೆಯ ಶತಮಾನದಲ್ಲಿ ನಿರ್ಮಿತವಾದ ಬಸವನ ವಿಗ್ರಹ ದೇವಾಲಯದ ತುದಿಯಲ್ಲಿದೆ. ಇಲ್ಲಿನ ನವರಂಗ ಮತ್ತು ಮುಖಮಂಟಪಗಳಲ್ಲಿ ದ್ರಾವಿಡ ಶೈಲಿಯ ಕಂಬಗಳಿವೆ. ಮುಖಮಂಟಪದ ಸೋಪಾನದ ಮುಂಭಾಗ ಸಿಂಹಶಿರಗಳಿಂದ ಆಧಾರಿತವಾಗಿದೆ. ದೇವಾಲಯದ ನೆಲಕಟ್ಟಿನ ಮೇಲೆ ಎರಡನೆಯ ಬಲ್ಲಾಳನ ಕಾಲದ ತಮಿಳು ಶಾಸನವಿದೆ. ಈ ದೇವಾಲಯದ ಸಮೀಪದಲ್ಲಿಯೇ ಚೋಳ ಮಾದರಿಯ ಮೀನಾಕ್ಷಿ ಗುಡಿ ಇದೆ. ಸೋಮೇಶ್ವರ ಉಮ್ಮತ್ತೂರು ಪಾಳೆಯಗಾರರ ಮನೆದೇವರಾಗಿತ್ತು.

ವೀರಭದ್ರ ಗುಡಿ ಒಂದು ಸಾಮಾನ್ಯ ಕಟ್ಟಡ. ಇಲ್ಲಿರುವ 1604ರ ಒಂದು ಶಾಸನ ಹದಿನಾಡ ನಾಯಕನೊಬ್ಬ ದೇವಾಲಯಕ್ಕೆ ದತ್ತಿಬಿಟ್ಟನೆಂದು ತಿಳಿಸುತ್ತದೆ. ದ್ವೀಪದ ಪಶ್ಚಿಮದಲ್ಲಿರುವ ಬೆಟ್ಟದ ಮೇಲೆ ಶ್ರೀರಾಮ ತನ್ನ ತಂದೆ ದಶರಥನಿಗೆ ಪಿಂಡವನ್ನು ಅರ್ಪಿಸಿದನೆಂದೂ ಆ ಕಾರಣವಾಗಿ ಅದಕ್ಕೆ ಪ್ರೇತಬೆಟ್ಟವೆಂದು ಹೆಸರು ಬಂತೆಂದೂ ಪ್ರತೀತಿ. ಹೊಯ್ಸಳರ ಕಾಲದಲ್ಲಿ ಈ ಊರು ಉಚ್ಛ್ರಾಯಸ್ಥಿತಿಯಲ್ಲಿತ್ತು. ಹದಿನಾರನೆಯ ಶತಮಾನದಲ್ಲಿ ಗಂಗರಾಜ ಎಂಬುವನು ಈ ಊರನ್ನು ವಿಸ್ತರಿಸಿ ವೈಭವದಿಂದ ಆಳಿದ. ಅವನ ಮಗ ನಂದಿರಾಜ ಯಾವುದೋ ಅಪರಾಧಕ್ಕಾಗಿ ಪತ್ನೀಸಮೇತ ಕುದುರೆಯ ಮೇಲೆ ಕುಳಿತು ಗಗನಚುಕ್ಕಿ ಜಲಪಾತಕ್ಕೆ ಹಾರಿ ಪ್ರಾಣಬಿಟ್ಟ. ಅವನ ಮಗ ಎರಡನೆಯ ಗಂಗರಾಜ ಆಳುತ್ತಿದ್ದಾಗ ತನ್ನ ನೆರೆಯ ಪಾಳೆಯಗಾರರಾಗಿದ್ದ ಅವನ ಇಬ್ಬರು ಅಳಿಯಂದಿರು, ತಮ್ಮ ಪತ್ನಿಯರ ಅಹಂಭಾವವನ್ನು ಮುರಿಯಲು ಮಾವನ ಮೇಲೆ ಯುದ್ಧ ಸಾರಿದರು. ಆಗ ಎರಡನೆಯ ಗಂಗರಾಜ ಹನ್ನೆರಡು ವರ್ಷಗಳ ಕಾಲ ಯುದ್ಧ ಮಾಡಿ ಕೊನೆಗೆ ಯುದ್ಧ ರಂಗದಲ್ಲಿ ವೀರಾವೇಶದಿಂದ ಕಾದಾಡಿ ಮಡಿದ. ಇದನ್ನು ಕಂಡು ಪಶ್ಚಾತ್ತಾಪ ಪಟ್ಟ ಇಬ್ಬರು ಅಳಿಯಂದಿರೂ ತಮ್ಮ ಪತ್ನಿಯರೊಂದಿಗೆ ಗಗನಚುಕ್ಕಿಯಲ್ಲಿ ಬಿದ್ದು ಪ್ರಾಣಬಿಟ್ಟರೆಂದು ತಿಳಿದುಬರುತ್ತದೆ. ಅನಂತರ ಚನ್ನಪಟ್ಟಣದ ಜಗದೇವರಾಯ ಮತ್ತು ತಲಕಾಡಿನ ಶ್ರೀರಂಗರಾಜ ಇಲ್ಲಿಯ ಐಶ್ವರ್ಯವನ್ನೆಲ್ಲ ಕೊಳ್ಳೆ ಹೊಡೆದರು.*

**ಶಿವಳ್ಳಿ:** ಉಡುಪಿ ತಾಲ್ಲೂಕಿನ ಒಂದು ಗ್ರಾಮ. ಉಡುಪಿಯಿಂದ ದಕ್ಷಿಣಕ್ಕೆ 3 ಕಿಮೀ ದೂರದಲ್ಲಿದೆ.

ಈ ಊರು ಪ್ರಾಚೀನಕಾಲದಿಂದ ಶಿವೋಪಾಸಕ ಕ್ಷೇತ್ರವಾಗಿತ್ತೆನ್ನಲಾಗಿದೆ. ಶಾಸನ ಮತ್ತು ಪ್ರಾಚೀನ ಗ್ರಂಥಗಳಲ್ಲಿ ಶಿವರೂಪ್ಯ, ಶಿವಬೆಳ್ಳಿ, ರೂಪ್ಯಪೀಠ, ರಜತಪೀಠ, ಶ್ರೀವಳ್ಳಿ ಇತ್ಯಾದಿ ರೂಪಗಳು ದೊರೆಯುತ್ತವೆ. ಶಿವನಹಳ್ಳಿ ಎಂಬುದು ಮೂಲ ರೂಪವೆಂಬುದು ಸ್ಪಷ್ಟ. ಮಯೂರಶರ್ಮನ ಕಾಲದಲ್ಲಿ ಅಹಿಚ್ಛತ್ರಪುರದಿಂದ ಬಂದವರೆನ್ನಲಾದ ಬ್ರಾಹ್ಮಣರ ಒಂದು ಪಂಗಡ ಉಡುಪಿಯಲ್ಲಿರುವ ಶ್ರೀಮದನಂತೇಶ್ವರ ದೇವಸ್ಥಾನದ ಪರಿಸರದಲ್ಲಿ ನೆಲಸಿತು. ಈ ದೇವರಿಗೆ ರೂಪ್ಯ (ಬೆಳ್ಳಿ) ಪೀಠದ ಶಿವನೆಂಬ ಹೆಸರಿದ್ದು ಅಲ್ಲಿನ ಪೂಜೆಯೇ ಮೊದಲಾದ ಕಾರ್ಯಕಲಾಪಗಳಲ್ಲಿ ಭಾಗಿಯಾದ ಬ್ರಾಹ್ಮಣ ವರ್ಗಕ್ಕೆ ಶಿವಬೆಳ್ಳಿಯ ಬ್ರಾಹ್ಮಣರು ಎಂಬ ಹೆಸರಿದ್ದು ಕ್ರಮೇಣ ಶಿವಳ್ಳಿ ಬ್ರಾಹ್ಮಣರೆಂಬ ಹೆಸರಾಯಿತೆಂದು ಪ್ರತೀತಿ. ಉದ್ಯಾವರದಲ್ಲಿ ದೊರೆತ ಶಾಸನವೊಂದು ಶಿವಳ್ಳಿಯ ಪ್ರಾಚೀನತೆಯನ್ನು 8ನೆಯ ಶತಮಾನದಷ್ಟು ಹಿಂದಕ್ಕೆ ಒಯ್ಯುತ್ತದೆ. ಇಲ್ಲಿ ಭೂತಾರಾಧನೆಯ ಸಂಪ್ರದಾಯ ಹೆಚ್ಚಾಗಿ ಪ್ರಚಲಿತವಿದೆ. ಈ ಗ್ರಾಮ ಈಗ ಉಡುಪಿ ನಗರೀಕರಣದ ವ್ಯಾಪ್ತಿಗೆ ಬಂದಿದೆ. (ಎಸ್.ಪಿ.ಕೆ.)

**ಶಿಶಿಲ:** ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಒಂದು ಗ್ರಾಮ. ಐತಿಹಾಸಿಕ ಮತ್ತು ಧಾರ್ಮಿಕ ಸ್ಥಳ. ಬೆಳ್ತಂಗಡಿಯಿಂದ ಪೂರ್ವಕ್ಕೆ 68 ಕಿಮೀ ದೂರದಲ್ಲಿ ಪಶ್ಚಿಮಘಟ್ಟದ ತಪ್ಪಲಿನಲ್ಲಿದೆ. ಜನಸಂಖ್ಯೆ 2,070. ಈ ಸ್ಥಳ ಸಮೃದ್ಧ ಪ್ರಕೃತಿ ರಮ್ಯತೆಯ ಮಡಿಲಿನಲ್ಲಿದೆ. ಪೂರ್ವಕ್ಕೆ ಎತ್ತರದ ಘಟ್ಟಶ್ರೇಣಿ ಹಬ್ಬಿದ್ದು ಶಿಶಿಲಗುಡ್ಡ, ಉಳಿಯಮಲೆ, ಎತ್ತಿನಭುಜ, ಬೋಳ್ಕಲ್‌ಗುಡ್ಡ ಮೊದಲಾದ ಪರ್ವತಾವಳಿಗಳಿಂದ ಇದು ಆವೃತವಾಗಿದೆ. ಕದಂಬ ಮನೆತನದ ಸ್ಥಾಪಕನಾದ ಮಯೂರಶರ್ಮ ಮೊದಲಿಗೆ ರಾಜ್ಯ ಕಟ್ಟಿದ ತ್ರಿಪರ್ವತ ಅಥವಾ ಶ್ರೀಪರ್ವತ ಇದೇ ಸ್ಥಳವೆಂದು ಪ್ರತೀತಿ. ದಕ್ಷಿಣ ಕನ್ನಡ ಜಿಲ್ಲೆಯ ಮೂಲದ ರಾಜಮನೆತನವಾದ ಆಳುಪ ವಂಶದವರು ಈ ಪ್ರದೇಶದ ಮೇಲೆ ದೀರ್ಘಕಾಲ ನಿಯಂತ್ರಣ ಹೊಂದಿದ್ದರು.

ಹದಿನಾಲ್ಕನೆಯ ಶತಮಾನದಲ್ಲಿ ಪಟ್ಟಿ ಪೊಂಬುಚದ ಸಾಂತಾರ ಅರಸರಲ್ಲಿ ಲೋಕನಾಥ ದೇವನೆಂಬವನು ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡದ್ದು ಹಿರಿಯಂಗಡಿ ಶಾಸನದಿಂದ ತಿಳಿದುಬರುತ್ತದೆ. ಮೂಲರಸರು ಇಲ್ಲಿ ಕೆಲಕಾಲ ಆಳಿದರು. 1538ರ ಶಾಸನದಲ್ಲಿ ಶಿಶಿಲದರಸರು ಎಂಬ ಉಲ್ಲೇಖವಿರುವುದು ಶಿಶಿಲ ರಾಜಕೀಯ ಮಹತ್ವ ಪಡೆದುದ್ದಕ್ಕೆ ಸಾಕ್ಷಿಯಾಗಿದೆ. ಕೆಳದಿ ಅರಸರು ಇಲ್ಲಿನ ಕೋಟೆಕೊತ್ತಲಗಳನ್ನು ದುರಸ್ತಿ

ಮಾಡಿಸಿ ಇದನ್ನು ತಮ್ಮ ದುರ್ಗಗಳಲ್ಲೊಂದಾಗಿ ಮಾಡಿಕೊಂಡಿದ್ದರು. ಕಳಸ–ಕಾರ್ಕಳದ ಭೈರರಸರು ಇಲ್ಲಿನ ಆಯಕಟ್ಟಿನ ಮಹತ್ವವನ್ನು ತಿಳಿದು ಇದನ್ನು ತಮ್ಮ ನೆಲೆಗಳಲ್ಲೊಂದಾಗಿ ಭದ್ರಪಡಿಸಿಕೊಂಡಿದ್ದರು.

ಘಟ್ಟಶ್ರೇಣಿಯ ಒಂದು ಮೂಲೆಯಲ್ಲಿರುವ ಈ ಸ್ಥಳಕ್ಕೆ ಮಹತ್ವ ಬಂದದ್ದು ಇದು ಘಟ್ಟದ ಮೇಲಿನಿಂದ ಕೆಳಗೆ ಕರಾವಳಿಗೆ ಹೋಗುವ ಘಾಟಿ ಮಾರ್ಗದಲ್ಲಿದ್ದದ್ದು. ಬೇಲೂರು, ಹೊಯ್ಸಳರ ಮೂಲ ಸ್ಥಳ ಅಂಗಡಿ ಮತ್ತು ಬೈರಾಪುರಗಳ ಮೂಲಕ ಹೋಗುತ್ತಿದ್ದ ಈ ಘಾಟಿ ಕಾಲುದಾರಿ ಶಿಶಿಲವನ್ನು ತಲುಪುತ್ತಿತ್ತು. ಅಲ್ಲಿಂದ ಮುಂದೆ ಅಂದಿನ ಮುಖ್ಯ ಮಾರುಕಟ್ಟೆಗಳಾಗಿದ್ದ ಉಪ್ಪಿನಂಗಡಿಗೆ ಇಲ್ಲವೇ ಬಂಟವಾಳಕ್ಕೆ ಸಂಪರ್ಕವಿತ್ತು. ಈಗಲೂ ಈ ಘಾಟಿಯ ಮೂಲಕ ಹೆದ್ದಾರಿಯನ್ನು ಸುಲಭವಾಗಿ ನಿರ್ಮಿಸಬಹುದೆಂಬ ಅಭಿಪ್ರಾಯವಿದೆ. ವಾಣಿಜ್ಯ ಮಹತ್ವ ಹೊಂದಿದ್ದ ಕಾರಣಕ್ಕಾಗಿ ಇದು ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಮೃದ್ಧವಾಯಿತು.

ಇಲ್ಲಿ ಶಿಶಿಲೇಶ್ವರಸ್ವಾಮಿ ದೇವಸ್ಥಾನವಿದೆ. ಘಟ್ಟದಲ್ಲಿ ಹುಟ್ಟಿ ಹರಿದುಬರುವ ಕಪಿಲಾ ನದಿ ಇಲ್ಲಿನ ಧಾರ್ಮಿಕ ಕಾಂತಿಯನ್ನು ಹೆಚ್ಚಿಸಿದೆ. ಶಿಶಿಲೇಶ್ವರನಿಗೆ ವಾರ್ಷಿಕವಾಗಿ ರಥೋತ್ಸವ ಮತ್ತು ತೆಪ್ಪೋತ್ಸವಗಳು ನಡೆಯುತ್ತವೆ. ಶಿಶಿಲೇಶ್ವರನ ಮೂಲಸ್ಥಾನವೆಂದು ಹೇಳಲಾದ ಕುಮಾರಗುಡ್ಡ ಈ ಸ್ಥಳಕ್ಕೆ ಸಮೀಪದಲ್ಲಿದೆ. ಇಲ್ಲಿನ ಭೂತ, ಪಂಜರವಳ್ಳಿ ಮೊದಲಾದ ಗ್ರಾಮದೇವತೆಗಳಿಗೆ ಜನರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ದಕ್ಷಿಣ ಕನ್ನಡದ ಗ್ರಾಮೀಣ ಸಂಸ್ಕೃತಿ ಅಧ್ಯಯನ ಮಾಡುವವರಿಗೆ ಇದು ಹಸನಾದ ಕ್ಷೇತ್ರ. (ಡಿ.ಎಸ್.ಜೆ.)

**ಶಿಶುನಾಳ ಶರೀಫ್:** 1819–89. ಹೊಸಗನ್ನಡ ಸಾಹಿತ್ಯದ ಅರುಣೋದಯ ಕಾಲದಲ್ಲಿ ತಮ್ಮ ಅನುಭಾವ ಕಾವ್ಯದ ಹೊಂಗಿರಣ ವೊಂದನ್ನು ಹಾಯಿಸಿದ ಪ್ರಸಿದ್ಧ ಅನುಭಾವಿ, ಕವಿ. ಇವರ ಮೊದಲಿನ ಹೆಸರು ಮಹಮ್ಮದ ಶರೀಫ. ಶಿಗ್ಗಾವಿ ತಾಲ್ಲೂಕಿನ ಶಿಶುನಾಳದಲ್ಲಿ ಇವರು 1819 ಮಾರ್ಚ್ 7ರಂದು ಜನಿಸಿದರು. ಕನ್ನಡ ಮುಲ್ಕೀ ಪರೀಕ್ಷೆ ಯವರೆಗೆ ಓದಿದ ಇವರು, ಆರಂಭದಲ್ಲಿ ಕೆಲಕಾಲ ಹಳ್ಳಿಯ ಶಾಲೆಯೊಂದ ರಲ್ಲಿ ಶಿಕ್ಷಕರಾಗಿದ್ದರಾದರೂ ಬೇಗನೇ ಅದರ ಹಂಗು ಹರಿದುಕೊಂಡು ಆಧ್ಯಾತ್ಮ ಸಾಧನೆ ಸಿದ್ಧಿಗಳಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡರು.

ಅಭಿಜಾತ ಕಲಾವಿದರಾಗಿದ್ದ ಶಿಶುನಾಳರು ಚಿಕ್ಕಂದಿನಲ್ಲಿಯೇ ಹಳ್ಳಿಯ ಜಾತ್ರೆ ಉತ್ಸವಗಳಲ್ಲಿ ಶರಣರ ವಚನಗಳನ್ನೂ ಅನುಭಾವ ಪದಗಳನ್ನೂ ಹಾಡುತ್ತ, ಬಹುರೂಪಿಗಳ ಹಾಗೆ ವಿವಿಧ ವೇಷ ಹಾಕುತ್ತ, ಬಗೆಬಗೆಯ ಬಯಲಾಟಗಳಲ್ಲಿ ಪಾತ್ರ ವಹಿಸುತ್ತ ತಮ್ಮ ಕಲೆಗಾರಿಕೆಯನ್ನು ಜನಮನದ ವಿಲಾಸ–ವಿಕಾಸಗಳಿಗೆ ಮುಡಿಪಿಡಲು ಮೊದಲುಮಾಡಿದರು. ಮೊಹರಂ ಪರ್ವ ಸಮಯದಲ್ಲಿ ತಲೆ ಎತ್ತುವ ಕರ್ಬಲಾ ಮೇಳಗಳಿಗಾಗಿ ರಿವಾಯತ ಪದ ರಚಿಸಿಕೊಟ್ಟರು, ಲಾವಣಿಗಳನ್ನೂ ಬರೆದರು. ಹೀಗೆ ನಿಧಾನವಾಗಿ ಸಾಹಿತ್ಯಪಥದಲ್ಲಿ ತಮ್ಮ ಹೆಜ್ಜೆ ಮೂಡಿಸಿ, ಮುಂದಿನ ಸೃಷ್ಟಿಗೆ ಅಗತ್ಯವಾದ ಪೂರ್ವಸಿದ್ಧತೆ ಮಾಡಿಕೊಂಡರು. ಕಳಸದ ಗುರು ಗೋವಿಂದಭಟ್ಟರು, ಅಂಕಲಗಿಯ ಅಡವಿ ಸ್ವಾಮಿಗಳು, ಗರಗದ ಮಡಿವಾಳಪ್ಪನವರು, ನವಿಲಗುಂದದ ನಾಗಲಿಂಗಪ್ಪನವರು, ಹುಬ್ಬಳ್ಳಿಯ ಸಿದ್ಧಾರೂಢಸ್ವಾಮಿಗಳು ಮುಂತಾದ ಸಮಕಾಲೀನ ಸಾಧುಸತ್ಪುರುಷರ ಸಾನ್ನಿಧ್ಯ ಸಂಸರ್ಗಗಳಿಂದ ಅನುಭಾವಿಯಾಗಿ ಮಾಗಿದರು.

ಕನ್ನಡ ಸಂಸ್ಕೃತಿಯ ಸರ್ವಧರ್ಮಸಹಿಷ್ಣುಭಾವ ಮತ್ತು ಆಧ್ಯಾತ್ಮಿಕ ಪರಂಪರೆಯ ಸರ್ವಸಮನ್ವಯ ಅನುಭಾವಸಂಪತ್ತನ್ನು ಅರಗಿಸಿಕೊಂಡು ಇವರು ರಚಿಸಿದ ಅನುಭವ ಪದಗಳು ಆಪ್ತವಾದ ಕಳಕಳಿಗೆ ನೆಲೆಯಾಗಿವೆ. ಹಳ್ಳಿಯ ಬಾಳಿನ ದಿನದಿನದ ಬದುಕಿನಲ್ಲಿ ತಮ್ಮ ಕಣ್ಮನಗ ಳನ್ನು ಸೆಳೆದ ಒಂದೊಂದು ಸನ್ನಿವೇಶ–ಸಂಗತಿ, ವಸ್ತು–ವ್ಯಕ್ತಿ, ಪಶು–ಪಕ್ಷಿ ಮೊದಲಾದವುಗಳನ್ನೇ ಒಂದು ರೂಪಕವನ್ನಾಗಿಯೋ ದೃಷ್ಟಾಂತ ವನ್ನಾಗಿಯೋ ಪ್ರತಿಮೆಯನ್ನಾಗಿಯೋ ಮಾಡಿಕೊಂಡು ಅವುಗಳಲ್ಲಿ ತಮ್ಮ ಅನುಭವದ ಬೆಳಕು ಮತ್ತು ಅನುಭಾವದ ಬೆಳಗನ್ನು ವರ್ಣಮಯವಾಗಿ ಹೇಳಿದ್ದಾರೆ. ತಮ್ಮ ಜೀವಮಾನದುದ್ದಕ್ಕೂ ಇವರು ಬರೆದ ಹಾಡು, ಒರೆದ ಪಾಡು ಒಂದೇ ಆಗಿದೆ. ಬೋಧ ಒಂದೇ, ಬ್ರಹ್ಮನಾದ ಒಂದೇ ಎಂಬುದು ಅದರ ಬೀಜಮಂತ್ರವಾಗಿದ್ದು ನಡಿಯೊ ದೇವರ ಚಾಕರಿಗೆ, ಮುಕ್ತಿ ಗೊಡೆಯ ಖಾದರ ಲಿಂಗ ನೆಲಸಿರ್ಪ ಗಿರಿಗೆ ಎಂಬುದು ಇವರು ತಮ್ಮ ಮನಕ್ಕೂ ಜನಕ್ಕೂ ಕೊಟ್ಟ ಜೀವಾಳದ ಕರೆಯಾಗಿದೆ. ಇವರ ದೃಷ್ಟಿಯಲ್ಲಿ ಸನಾತನ ವೈದಿಕ ಮತ ಎತ್ತಿಹಿಡಿಯುವ ಬ್ರಹ್ಮತತ್ತ್ವ; ತಮ್ಮ ಪರಿಸರದಲ್ಲಿ ಪ್ರಭಾವಕಾರಿಯಾಗಿದ್ದ ವೀರಶೈವ ಮತದ ಲಿಂಗತತ್ತ್ವ ಹಾಗೂ ತಮ್ಮ ಮನೆತನಕ್ಕೆ ಪೂಜ್ಯವಾಗಿದ್ದ ಹುಲಗೂರ ಖಾದರಶಾ ಸಾಧುವಿನ ಸಮಾಧಿತತ್ತ್ವ– ಇವೆಲ್ಲವೂ ಮೂಲತಃ ಒಂದೆಯಾಗಿದ್ದವು. ಇದರಿಂದಾಗಿ ಇವರು ಸರ್ವಧರ್ಮಸಮನ್ವಯದ ಉಜ್ಜ್ವಲಮೂರ್ತಿಯಾಗಿ ಹಿಂದು–ಮುಸ್ಲಿಂ ಬಾಂಧವ್ಯದ ಧವಲಕೀರ್ತಿಯಾಗಿ ಉತ್ತರ ಭಾರತದ ಮಹಾತ್ಮ ಕಬೀರರಂತೆ ಜನಮನದ ಗದ್ದುಗೆ ಏರಿದರು. ಇದಲ್ಲದೆ ತಮ್ಮ ಅಭಿವ್ಯಕ್ತಿಯಲ್ಲಿ ಅಳವಡಿಸಿಕೊಂಡ ಜನಪದ ಭಾಷೆಯ ಗತಿ–ಗತ್ತು, ಗ್ರಾಮೀಣ ಸಂಗೀತದ ಲಯ–ಲಾಸ್ಯಗಳಿಂದಾಗಿಯೂ ಇವರು ಜನಮನವನ್ನು ಸೂರೆಗೊಂಡರು. ಹೀಗೆ ಆಧ್ಯಾತ್ಮಿಕ ಸಾಧನೆಯ ಸಿದ್ಧಿಯನ್ನು ಮುಟ್ಟಿದ ಮೇಲೆ ತಮ್ಮಲ್ಲಿ ಬಂದವರಿಗೆ ಧರ್ಮನೀತಿ ಬೋಧೆಮಾಡಲೆಂದು ಇವರು ತಮ್ಮ ಮನೆ ಹತ್ತಿರದಲ್ಲಿ ಕುಳಿತುಕೊಳ್ಳುತ್ತಿದ್ದ ಕಟ್ಟೆಯೊಂದು ಇಂದಿಗೂ ಇದ್ದು ಬೋಧಪೀಠ ಎಂಬುದಾಗಿ ಪೂಜಿಸಲ್ಪಡುತ್ತದೆ. ಎಪ್ಪತ್ತು ವರ್ಷಗಳ ತುಂಬುಬಾಳನ್ನು ಬದುಕಿದ ಶರೀಫ್‌ಸಾಹೇಬರು 1889 ಮಾರ್ಚ್ 7ರಂದು ನಿಧನರಾದರು. (ಎಂ.ಎ.ಎ.)

**ಶಿಶುಮಾಯಣ:** ಜೈನಕವಿ. ತ್ರಿಪುರದಹನಸಾಂಗತ್ಯ, ಅಂಜನಾಚರಿತ್ರೆ ಎಂಬ ಎರಡು ಸಾಂಗತ್ಯಕೃತಿಗಳನ್ನು ಬರೆದಿದ್ದಾನೆ. ಕವಿಯ ಸ್ವವಿಚಾರವಾಗಿ ಈತನ ಕಾವ್ಯಗಳಿಂದ ತಿಳಿದುಬರುವ ವಿಷಯಗಳು ಇವು: ಚಪ್ಪನ್ನ ದೇಶಕ್ಕೆ ಮಣಿದರ್ಪಣದಂತಿದ್ದ ಹೊಯ್ಸಳ ನಾಡು. ಆ ನಾಡಿನ ಕಾವೇರಿ ನದಿಯ ಪಕ್ಕದಲ್ಲಿ ನಯನಾಪುರ ರಾಜಿಸುತ್ತಿತ್ತು. ಆ ಊರಿನಲ್ಲಿ ನೇಮಿಚಂದ್ರ ಜಿನೇಂದ್ರನ ದೇವಾಲಯ ಭವ್ಯರ ಹೃದಯಕ್ಕೆ ಮುದವನ್ನೀಯುತ್ತ ಶೋಭಾಯಮಾನವಾಗಿತ್ತು. ಇಂಥ ನಯನಾಪುರದಲ್ಲಿ ಜಿನಪದಭಕ್ತನಾದ ಮಾಯಣಸೆಟ್ಟಿ ಎಂಬ ಪರದನಿದ್ದ. ಈತನ ತಂದೆ ಬೊಮ್ಮಿಸೆಟ್ಟಿ; ತಾಯಿ ನೇಮಾಂಬಿಕೆ. ಈ ಮಾಯಣಸೆಟ್ಟಿ ವಸುಧೆಯೊಳುಳ್ಳ ಭವ್ಯರುಗಳಿಗೆಲ್ಲಕೆ ಶಿಶು ತಾನಾದುದರಿಂದ ಉಸುರುವ ಪದಪದ್ಯದೊಳು ತನ್ನ ಹೆಸರನು ಶಿಶುಮಾಯಣ ಎಂದಿಟ್ಟುಕೊಂಡನಂತೆ. ಈತನಿಗೆ ಹಸುಳೆಮಾಯಣ, ತರಳಮಾಯಣ ಎಂಬ ಹೆಸರುಗಳೂ ರೂಢಿಯಲ್ಲಿದ್ದಂತೆ ಕಂಡುಬರುತ್ತದೆ. ಈತನ ಗುರು ಕಾಣೂರ್ಗಣದ ಭಾನುಮುನಿಪ. ಪೂರ್ವಕವಿಗಳಲ್ಲಿ ಪಂಪ, ರನ್ನ, ಜನ್ನ ಮೊದಲಾದವರನ್ನು ಸ್ಮರಿಸಿದ್ದಾನೆ.

ಶಿಶುಮಾಯಣನ ಕಾಲದ ವಿಚಾರದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯ ಗಳಿವೆ. ಇದಕ್ಕೆ ಮೂಲಕಾರಣ ತ್ರಿಪುರದಹನ ಸಾಂಗತ್ಯದಲ್ಲಿನ 'ಶಕವರ್ಷದ ಸಾವಿರದ ನೂಱಱೊಳುತ್ಸಕಲವಾದಾ ವತ್ಸರದ, ಪ್ರಕಟಿತ ಪುತ್ರವರ್ಷದ ಮಾಘಶುದ್ಧ ದಿನಱುಳಂಕ ಪಾಡ್ಯದೊಳಾಯ್ತು' ಎಂಬ ಈ ಕಾಲಸೂಚಿಪದ್ಯ ದಿಂದಲೂ ಈತನ ಕಾವ್ಯಗಳಲ್ಲಿನ ಕೆಲವು ಆಂತರಿಕ ವಿಷಯಗಳಿಂದಲೂ ಈತ ಸ್ತುತಿಸಿರುವ ಗುರು ಪರಂಪರೆಯಿಂದಲೂ ಈತನ ಕಾಲ 1472

ಎಂದು ಕೆಲವು ವಿದ್ವಾಂಸರು ಸಮರ್ಥಿಸಿದ್ದಾರೆ. ಇದಕ್ಕೂ ಮುಂಚೆ ಕವಿಚರಿತೆಕಾರರು ಈತನ ಕಾಲವನ್ನು 1232 ಎಂದೂ ಈತನೇ ಪ್ರಥಮ ಸಾಂಗತ್ಯಕಾರನೆಂದೂ ಅಭಿಪ್ರಾಯಪಟ್ಟಿದ್ದರು. ಆದರೆ ಈಗ ಸೊಬಗಿನ ಸೋನೆಯ ದೇಪರಾಜ (ಸು.1410) ಈ ಸ್ಥಾನವನ್ನಾಕ್ರಮಿಸಿದ್ದಾನೆ.

ಶ್ರೀಪುರದಹನ ಸಾಂಗತ್ಯದಲ್ಲಿ 281 ಪದ್ಯಗಳಿವೆ. ಜನನ ಜರಾ ಮರಣಗಳೆಂಬ ಹೆಸರಿಂದ ಘನತರವಹ ಮೂಱುಪುರವನು ಜ್ಯೋತಿರೂಪವ ತಳೆದೀಶ್ವರ ಸುಟ್ಟ ಕೌತುಕವನು ಪೇಳುವೆನು ಎಂದು ಹೇಳಿಕೊಂಡು, ಪುರಾಣಪ್ರಸಿದ್ಧವಾದ ಶೈವ ಸಂಪ್ರದಾಯದ ತ್ರಿಪುರದಹನದ ಕಥೆಯನ್ನು ಜೈನತತ್ತ್ವಕ್ಕನುಸಾರವಾಗಿ ಮಾರ್ಪಡಿಸಿಕೊಂಡಿದ್ದಾನೆ.

ಅಂಜನಾಚರಿತ್ರೆಯಲ್ಲಿ 15 ಸಂಧಿಗಳೂ 6,000 ಪದ್ಯಗಳೂ ಇವೆ. ರವಿಷೇಣ ಸಂಸ್ಕೃತದಲ್ಲಿ ಬರೆದಿರುವ ಪದ್ಮಚರಿತ್ರವನ್ನು ಆಧರಿಸಿ ಕನ್ನಡದಲ್ಲಿ ಅಂಜನಾ ಚರಿತ್ರೆಯನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಎರಡೂ ಗ್ರಂಥಗಳ ಶೈಲಿ ಸರಳವಾಗಿದೆ. ಸಾಂಗತ್ಯಕವಿಗಳಲ್ಲಿ ಈತನಿಗೆ ಒಂದು ವಿಶಿಷ್ಟಸ್ಥಾನವಿದೆ. (ಎಸ್.ಬಿ.)

**ಶೀಲಭಟ್ಟಾರಿಕಾ:** ರಾಷ್ಟ್ರಕೂಟ ಧ್ರುವನ (780–93) ಪಟ್ಟದ ರಾಣಿ. ಶೀಲಮಹಾದೇವಿ ಎಂದೂ ಹೆಸರುಳ್ಳ ಇವಳು ವೆಂಗಿಯ ವಿಷ್ಣುವರ್ಧನನ ಮಗಳು.

ಧ್ರುವ ತನ್ನ ಅಣ್ಣ ಗೋವಿಂದನನ್ನು ಸೋಲಿಸಿದ ಮೇಲೆ ಈ ಕಲಹದಲ್ಲಿ ಗೋವಿಂದನ ಪಕ್ಷವಹಿಸಿದ್ದ ವೆಂಗಿಯ ವಿಷ್ಣುವರ್ಧನನ ಮೇಲೆ ಅರಿಕೇಸರಿ ಮುಂತಾದವರಿಂದ ಕೂಡಿದ ವಿಶೇಷ ಬಲದೊಂದಿಗೆ ದಂಡೆತ್ತಿಹೋದ. ಈ ಜೈತ್ರಯಾತ್ರೆಯಲ್ಲಿ ಅರಿಕೇಸರಿ ಗೆದ್ದ. ಆತನ ಅಧಿಪತಿ ಧ್ರುವನಿಗೆ, ಸೋತ ವಿಷ್ಣುವರ್ಧನ ತನ್ನ ಮಗಳಾದ ಶೀಲಮಹಾ ದೇವಿಯನ್ನು ಕೊಟ್ಟು ಮದುವೆ ಮಾಡಿದ. ಆಕೆ ಧ್ರುವನ ಮುಖ್ಯ ರಾಣಿಯಾದಳು. ಈ ಮದುವೆಯ ಕಾರಣದಿಂದ ಎರಡೂ ರಾಜ್ಯಗಳಲ್ಲಿ, ವಿಷ್ಣುವರ್ಧನನ ಮರಣಪರ್ಯಂತ (806) ಶಾಂತಿ ನೆಲಸಿತು. (ಎಸ್.ಜಿ.ಎ.)

**ಶುಂಠಿಕೊಪ್ಪ:** ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಒಂದು ಪಟ್ಟಣ. ಮೈಸೂರು–ಮಡಿಕೇರಿ, ಮಡಿಕೇರಿ–ಸೋಮವಾರಪೇಟೆ–ಹಾಸನ ರಾಜ್ಯ ಹೆದ್ದಾರಿಯಲ್ಲಿ ಮಡಿಕೇರಿಯ ಈಶಾನ್ಯಕ್ಕೆ 16ಕಿಮೀ ದೂರದಲ್ಲೂ ಸೋಮವಾರಪೇಟೆಯ ದಕ್ಷಿಣಕ್ಕೆ 28 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ. 1,499.

ಈ ಪಟ್ಟಣದ ಸುತ್ತಲ ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶ ತೋಟದ ಬೆಳೆಗೆ ಪ್ರಸಿದ್ಧ. ಹಾರಂಗಿ ನದಿಯ ಉಪನದಿಯೊಂದು ಈ ಪಟ್ಟಣದ ಬಳಿ ಹರಿಯುತ್ತದೆ. ಪಟ್ಟಣದ ಸಮೀಪದಲ್ಲೇ ರೋಶನರಾಜ ಜಲಾಶಯ ವಿದ್ದು ಸುತ್ತಲ ನೀರಾವರಿಗೆ ಅನುಕೂಲವಿದೆ. ಈ ಪಟ್ಟಣ ಸೋಮವಾರ ಪೇಟೆ ತಾಲ್ಲೂಕಿನ ಒಂದು ಮುಖ್ಯ ವ್ಯಾಪಾರಕೇಂದ್ರ. ಇಲ್ಲಿಂದ ಅಕ್ಕಿ, ಕಾಫಿ ಮತ್ತು ಕಿತ್ತಲೆಹಣ್ಣನ್ನು ಹೆಚ್ಚಾಗಿ ರಫ್ತು ಮಾಡಲಾಗುತ್ತದೆ. ಪ್ರತಿ ಭಾನುವಾರ ಸಂತೆ ಸೇರುವುದು. ಇಲ್ಲಿ ಸರ್ಕಾರಿ ಆಸ್ಪತ್ರೆ, ಪಶುವೈದ್ಯಶಾಲೆ, ಮಕ್ಕಳ ಕಲ್ಯಾಣ ಕೇಂದ್ರ, ಪ್ರಾಥಮಿಕ, ಮಾಧ್ಯಮಿಕ ಶಾಲೆ ಮುಂತಾದವುಗ ಳಿದ್ದು ಅಂಚೆ, ತಂತಿ, ವಿದ್ಯುತ್ ಸೌಲಭ್ಯಗಳಿವೆ. ಕರ್ನಾಟಕ ಪ್ಲಾಂಟೇಷನ್ ಕಾರ್ಮಿಕರ ಸಂಘವೊಂದು ಈ ಪಟ್ಟಣದಲ್ಲಿದೆ. (ವಿ.ಎಸ್.ಎಸ್.)

**ಶೃಂಗಾರಮ್ಮ:** ಸು. 1685. ಶ್ರೀವೈಷ್ಣವ ಕವಯಿತ್ರಿ. ಪದ್ಮಿನೀ ಕಲ್ಯಾಣ ಎಂಬ ಗ್ರಂಥದ ಕರ್ತೃ. ಈಕೆಯ ತಂದೆ ಚಿಂತಾಮಣಿ ದೇಶಿಕೇಂದ್ರ, ಗುರು ಶ್ರೀನಿವಾಸಾಚಾರ್ಯ. ಕಂತುಗಿಮ್ಮಡಿರೂಪ ಚಿಕದೇವಭೂಪಾಲ ಸಂತವಿಸಿದ ಸಣ್ಣ ಮಗಳು ಎಂಬ ಇವಳ ಮಾತಿನಿಂದ ಇವಳು ಚಿಕ್ಕದೇವ ರಾಜನ (1673–1704) ಪೋಷ್ಯವರ್ಗಕ್ಕೆ ಸೇರಿದವಳೆಂದು ತಿಳಿಯುತ್ತದೆ. ಪದ್ಮಿನೀಕಲ್ಯಾಣ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 189 ಪದ್ಯಗಳಿವೆ. ತಿರುಪತಿಯ ಶ್ರೀನಿವಾಸನಿಗೂ ಪದ್ಮಾವತಿಗೂ ನಡೆದ ವಿವಾಹದ ವರ್ಣನೆ ಇದರ ವಸ್ತು. ಸಂಚಿಯ ಹೊನ್ನಮ್ಮನಲ್ಲಿ ಕಂಡುಬರುವ ಕಾವ್ಯಗುಣ ಇವುಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. (ಟಿ.ಎನ್.ಎನ್.)

**ಶೃಂಗೇರಿ:** ಚಿಕ್ಕಮಗಳೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ಕೊಪ್ಪ, ಉತ್ತರದಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮತ್ತು ಕೊಪ್ಪ, ಪಶ್ಚಿಮ ದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ, ದಕ್ಷಿಣದಲ್ಲಿ ಮೂಡಿಗೆರೆ ತಾಲ್ಲೂಕುಗಳು ಸುತ್ತುವರಿದಿವೆ. 49 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 433.7 ಚ.ಕಿಮೀ. 18,529 ಪುರುಷರು, 18,403 ಸ್ತ್ರೀಯರು ಸೇರಿ ಒಟ್ಟು ಜನಸಂಖ್ಯೆ 36,930.

ಜಿಲ್ಲೆಯ ಪಶ್ಚಿಮಕ್ಕಿರುವ ಈ ತಾಲ್ಲೂಕು ಮಲೆನಾಡ ಪ್ರದೇಶಕ್ಕೆ ಸೇರಿದ್ದು ಪಶ್ಚಿಮಘಟ್ಟಗಳ ನೆರಳಿನಲ್ಲಿದೆ ಎನ್ನಬಹುದು. ಸು. 17,818 ಹೆಕ್ಟೇರುಗಳಷ್ಟು ಅರಣ್ಯ ಪ್ರದೇಶವಿದ್ದು ಬೆಲೆಬಾಳುವ ಮರಗಿಡಗಳಿಂದ ಕೂಡಿದೆ. ತಂಪಾದ ಹಿತಕರ ವಾಯುಗುಣವಿರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 4009.04 ಮಿಮೀ. ಇಲ್ಲಿನ ಭೂಮಿ ಗಟ್ಟಿಮಣ್ಣು ಮತ್ತು ಕೆಮ್ಮಣ್ಣಿನಿಂದ ಕೂಡಿದೆ. ನದಿ ಬಯಲು ಫಲವತ್ತಾಗಿದೆ.

ಶಾರದಾದೇವಿ ದೇವಾಲಯ

ಈ ತಾಲ್ಲೂಕಿನ ಮುಖ್ಯ ನದಿ ತುಂಗಾ. ತಾಲ್ಲೂಕಿನ ಅಂಚಿನಲ್ಲಿ ಶೃಂಗೇರಿಗೆ ಸು. 25 ಕಿಮೀ ನೈಋತ್ಯ ದಿಕ್ಕಿನಲ್ಲಿ ಪಶ್ಚಿಮಘಟ್ಟಶ್ರೇಣಿಯ ವರಾಹ ಪರ್ವತದ ಗಂಗಾಮೂಲ ಎಂಬಲ್ಲಿ ಹುಟ್ಟುವ ಈ ನದಿ ತಾಲ್ಲೂಕಿನ ಮಧ್ಯದಲ್ಲಿ ನೈಋತ್ಯದಿಂದ ಈಶಾನ್ಯಕ್ಕೆ ಹರಿಯುತ್ತದೆ. ಇದರ ಆಶ್ರಯದಿಂದ ಬತ್ತ, ಕಬ್ಬು ಮತ್ತು ಅಡಕೆಯನ್ನು ವಿಶೇಷವಾಗಿ ಬೆಳೆಯುತ್ತಾರೆ.

ತಾಲ್ಲೂಕಿನಲ್ಲಿ ಅರಣ್ಯೋತ್ಪನ್ನದ ಮತ್ತು ಅರಣ್ಯಾವಲಂಬಿ ಗೃಹ ಕೈಗಾರಿಕೆಗಳಿವೆ. ಶೃಂಗೇರಿಯಲ್ಲಿ ಕಲಾವಿಜ್ಞಾನ ಮತ್ತು ವಾಣಿಜ್ಯ ಕಾಲೇಜೂ ಇದ್ದು ವಿದ್ಯಾಭ್ಯಾಸಕ್ಕೆ ಅನುಕೂಲಗಳಿವೆ. ತಾಲ್ಲೂಕಿನಿಂದ ಶಿವಮೊಗ್ಗ, ಕೊಪ್ಪ, ಚಿಕ್ಕಮಗಳೂರು ಮುಂತಾದ ಕಡೆಗಳಿಗೆ ಉತ್ತಮ ಮಾರ್ಗಗಳಿದ್ದು ತಾಲ್ಲೂಕಿನ ಸುತ್ತಲ ಗ್ರಾಮಗಳಿಗೆಲ್ಲ ಉತ್ತಮ ಸಂಪರ್ಕವುಂಟು.

ಶೃಂಗೇರಿಗೆ ದಕ್ಷಿಣದಲ್ಲಿ 5 ಕಿಮೀ ದೂರದಲ್ಲಿರುವ ಬೆಟ್ಟಗೆರೆ ಗ್ರಾಮಕ್ಕೆ ಸೇರಿರುವ ತನಿಕೋಡು ಎಂಬಲ್ಲಿ ಶಂಕರನಾರಾಯಣ ದೇವಾಲಯವಿದೆ. ತಪ್ಪನಕೊಪ್ಪ ಎಂಬಲ್ಲಿ ಮೂರು ಅಂಕಣದ ವಿಚಿತ್ರವಾದ ಮಾಸ್ತಿಕಲ್ಲೊಂದಿದೆ. ಶೃಂಗೇರಿಯ ದಕ್ಷಿಣಕ್ಕೆ 2 ಕಿಮೀ ದೂರದಲ್ಲಿ ತುಂಗಾ ನದಿಯ ಎಡದಂಡೆಯ ಮೇಲಿರುವ ವಿದ್ಯಾರಣ್ಯಪುರವನ್ನು 1366ರಲ್ಲಿ ವಿದ್ಯಾರಣ್ಯರು ನಿಧನರಾದಾಗ

ಅವರ ನೆನಪಿಗಾಗಿ ವಿಜಯನಗರದ ದೊರೆ ಎರಡನೆಯ ಹರಿಹರ ದತ್ತಿಕೊಟ್ಟ ಕಾರಣ ಗ್ರಾಮಕ್ಕೆ ವಿದ್ಯಾರಣ್ಯಪುರವೆಂಬ ಹೆಸರು ಬಂತೆಂದು ತಿಳಿದುಬರುತ್ತದೆ. ಇದು ವಿದ್ಯಾತೀರ್ಥರು ತಪಸ್ಸು ಮಾಡಿದ ಸ್ಥಳವೆಂದೂ ಪ್ರತೀತಿ. ಈ ಗ್ರಾಮದ ಒಂದು ಭಾಗವನ್ನು ವಸಿಷ್ಠಾಶ್ರಮವೆಂದೂ ಗುರುತಿಸುತ್ತಾರೆ. ಈ ಗ್ರಾಮದ ಬಳಿ ಮಾತ್ರ ತುಂಗಾನದಿ ಪಶ್ಚಿಮಾಭಿಮುಖವಾಗಿ ಸ್ವಲ್ಪ ದೂರ ಹರಿಯುತ್ತದೆ. ಇಲ್ಲಿ ಗಣಪತಿ, ವಿದ್ಯಾಶಂಕರ ದೇವಾಲಯಗಳೂ ಇಕ್ಕೇರಿಯ ಶಿವಪ್ಪನಾಯಕ ಕಟ್ಟಿಸಿದುದೆಂದು ಹೇಳುವ ಕಲ್ಲಿನ ಕಟ್ಟಡದ ಸದಾಶಿವ ದೇವಾಲಯವೂ ಇವೆ. ಶೃಂಗೇರಿಗೆ ಪಶ್ಚಿಮದಲ್ಲಿ 10 ಕಿಮೀ ದೂರದಲ್ಲಿರುವ ಗಂಧಗಟ್ಟ ಗ್ರಾಮಕ್ಕೆ ಸೇರಿದ ಅರ್ಧಿನಿಯಲ್ಲಿ ಸು. 7 ಅಡಿ ಎತ್ತರವಿದ್ದು 6 ಹಂತಗಳುಳ್ಳ ಎರಡು ದೊಡ್ಡ ಮಾಸ್ತಿಕಲ್ಲುಗಳಿವೆ. ಶೃಂಗೇರಿಯ ಪಶ್ಚಿಮಕ್ಕೆ 10 ಕಿಮೀ ದೂರದಲ್ಲಿರುವ ಋಷ್ಯಶೃಂಗಪುರದಲ್ಲಿ **(ನೋಡಿ)** ದ್ರಾವಿಡ ಶೈಲಿಯಲ್ಲಿರುವ ಪ್ರಸಿದ್ಧ ಋಷ್ಯಶೃಂಗೇಶ್ವರ ದೇವಾಲಯವಿದೆ. ಈ ದೇವಾಲಯದ ನವರಂಗದಲ್ಲಿ ಪ್ರಾಣಿ ಮತ್ತು ಮನುಷ್ಯ ಮಿಶ್ರಿತವಾದ ವಿಚಿತ್ರ ಚಿತ್ರಗಳನ್ನು ಕೆತ್ತಲಾಗಿದೆ. ಸುಕನಾಸಿಯಲ್ಲಿ ಎರಡೇ ಕೈಗಳಿದ್ದು ಸೊಂಡಿಲು ಬಲಕ್ಕೆ ತಿರುಗಿರುವ ಗಣಪತಿ ವಿಗ್ರಹ ಒಂದು ಅಪೂರ್ವ ಕೃತಿಯಾಗಿದೆ.

ವಿದ್ಯಾಶಂಕರ ದೇವಾಲಯ

ಶೃಂಗೇರಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಚಿಕ್ಕಮಗಳೂರಿಗೆ ವಾಯವ್ಯದಲ್ಲಿ 90 ಕಿಮೀ ದೂರದಲ್ಲಿ ತುಂಗಾನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 4,249.

ಇದೊಂದು ಮುಖ್ಯ ವ್ಯಾಪಾರ ಸ್ಥಳ. ಅಡಕೆ, ಬಾಳೆಹಣ್ಣು, ಅಕ್ಕಿ ಇಲ್ಲಿಂದ ಸುತ್ತಮುತ್ತಲ ಪ್ರದೇಶಗಳಿಗೆ ನಿರ್ಯಾತವಾಗುತ್ತವೆ. ಶಾಲೆ, ಕಾಲೇಜು, ಆಸ್ಪತ್ರೆ, ಅಂಚೆ, ಬ್ಯಾಂಕು ಮತ್ತು ವಿದ್ಯುತ್ ಮುಂತಾದ ಸೌಲಭ್ಯಗಳಿವೆ.

ಇದು ಪ್ರಸಿದ್ಧ ಧಾರ್ಮಿಕ ಕ್ಷೇತ್ರ, ಯಾತ್ರಾಸ್ಥಳ. ವಿಭಾಂಡಕ ಮಹರ್ಷಿಯ ಮಗನಾದ ಋಷ್ಯಶೃಂಗನ ಜನ್ಮಸ್ಥಳವಾದುದರಿಂದ ಇದಕ್ಕೆ ಶೃಂಗಗಿರಿ ಎಂಬ ಹೆಸರು ಬಂತೆಂದೂ ಕ್ರಮೇಣ ಶೃಂಗೇರಿಯಾಯಿತೆಂದೂ ಪ್ರತೀತಿ. ಶಾಸನಗಳಲ್ಲಿ ಇದನ್ನು ಶೃಂಗಿಪುರ ಎಂದು ಉಲ್ಲೇಖಿಸಲಾಗಿದೆ. 8ನೆಯ ಶತಮಾನದಲ್ಲಿ ಶಂಕರಾಚಾರ್ಯರು ಹಿಂದುಧರ್ಮದ ಪುನರುತ್ಥಾನಕ್ಕಾಗಿ ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳಲ್ಲಿ ಶೃಂಗೇರಿ ಒಂದು. ಮಠದ ಜೊತೆಗೆ ಶಂಕರಾಚಾರ್ಯರು ಕಾಶ್ಮೀರದಿಂದ ತಂದ ಶಾರದೆಯ ವಿಗ್ರಹವನ್ನು ಇಲ್ಲಿ ಸ್ಥಾಪಿಸಿ ದೇವಾಲಯವನ್ನು ಕಟ್ಟಿಸಿದರು. ದೇವಸ್ಥಾನ ಮಠದ ಆವರಣದಲ್ಲೇ ಇದೆ.

ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ಕಾರಣರಾದ ವಿದ್ಯಾರಣ್ಯರು ಶೃಂಗೇರಿ ಪೀಠಾಧಿಪತಿಗಳಾಗಿದ್ದರು. ವಿಜಯನಗರ ಕಾಲದ ನೂರಾರು ಶಾಸನಗಳನ್ನು ಈ ಸುತ್ತಲಿನ ಪ್ರದೇಶಗಳಲ್ಲಿ ಕಾಣಬಹುದು. ಶೃಂಗೇರಿ ಪೀಠಾಧಿಪತಿಗಳನ್ನು ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಎಂಬುದಾಗಿ ಕರೆಯಲಾಗುತ್ತಿತ್ತು. ಒಂದನೆಯ ಹರಿಹರ, ಬುಕ್ಕ, ಎರಡನೆಯ ಹರಿಹರ, ವಿರೂಪಾಕ್ಷ ಮುಂತಾದ ವಿಜಯನಗರದ ದೊರೆಗಳು ಶೃಂಗೇರಿಗೆ ಭೇಟಿ ಕೊಟ್ಟು, ಅನೇಕ ದತ್ತಿಗಳನ್ನೂ ಉಂಬಳಿಗಳನ್ನೂ ನೀಡಿ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಇಲ್ಲಿಯ ಪೀಠಾಧಿಪತಿಗಳ ಹೆಸರಿನಲ್ಲಿ ಹಾಗೂ ತಮ್ಮ ಹೆಸರಿನಲ್ಲಿ ಅನೇಕ ಅಗ್ರಹಾರಗಳನ್ನು ಕಟ್ಟಿಸಿ, ಪೀಠಾಧಿಪತಿಗಳನ್ನು ತಮ್ಮ ರಾಜಧಾನಿಗೆ ಬರಮಾಡಿಕೊಂಡು ಅವರ ಆಶೀರ್ವಾದ, ಅನುಗ್ರಹಗಳನ್ನು ಪಡೆದರೆಂದು ತಿಳಿದುಬರುತ್ತದೆ. 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನಾನಂತರ ಕೆಳದಿಯ ನಾಯಕರು ಶೃಂಗೇರಿಗೆ ರಕ್ಷಣೆ ನೀಡಿದರು. ಸದಾಶಿವನಾಯಕನ ಕಾಲದಲ್ಲಿ ಕೆಳದಿ ರಾಜ್ಯಕ್ಕೂ ಶೃಂಗೇರಿ ಸಂಸ್ಥಾನಕ್ಕೂ ಸಂಪರ್ಕ ಆರಂಭವಾಯಿತು. ಶೃಂಗೇರಿಯ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಬಹಳ ಶ್ರಮಿಸಿದ ಮೊದಲನೆಯ ವೆಂಕಟಪ್ಪನಾಯಕ ಶ್ರೀಗಳಿಂದ ವೈದಿಕ-ಅದ್ವೈತ-ಸಿದ್ಧಾಂತಪ್ರತಿಷ್ಠಾಪಕ ಎಂಬ ಬಿರುದನ್ನು ಪಡೆದ.

ಮೈಸೂರಿನ ಕಂಠೀರವ ನರಸರಾಜ ಒಡೆಯರ್ ಮುಂತಾದವರು ಶೃಂಗೇರಿ ಮಠದ ಬಗ್ಗೆ ಪೂಜ್ಯಭಾವನೆ ಹೊಂದಿದ್ದರು. ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರು ಶ್ರೀಗಳಿಗೆ ಅನೇಕ ಅಮೂಲ್ಯ ಕಾಣಿಕೆಗಳನ್ನು ಕಳುಹಿಸಿ, ಶೃಂಗಪುರ ರತ್ನಸಿಂಹಾಸನದ ಮೇಲೆ ಕುಳಿತಿರುವ ಯೋಗ ಸಾಮ್ರಾಜ್ಯಾಧಿಪತಿಯೆಂಬುದಾಗಿ ಶ್ರೀಗಳನ್ನು ವರ್ಣಿಸಿದ್ದರು. ಶೃಂಗೇರಿ ಸಂಸ್ಥಾನಕ್ಕೂ ಮತ್ತು ಮರಾಠರಿಗೂ ಉತ್ತಮ ಸಂಬಂಧವಿದ್ದಿತೆಂದು ತಿಳಿದುಬರುತ್ತದೆ. ದೇವಾಲಯದ ಜೀರ್ಣೋದ್ಧಾರ ಮತ್ತು ಶಾರದಾ ವಿಗ್ರಹದ ಪ್ರತಿಷ್ಠಾಪನೆಗಾಗಿ ಅನೇಕ ಕಾಣಿಕೆಗಳನ್ನು ಟಿಪ್ಪುಸುಲ್ತಾನ್ ಕಳುಹಿಸಿದನೆಂದು ತಿಳಿದುಬರುತ್ತದೆ. 1791-98ರ ನಡುವೆ ಟಿಪ್ಪು ಬರೆಸಿದ ಇಪ್ಪತ್ತೊಂಬತ್ತು ಪತ್ರಗಳು ಶ್ರೀಮಠದ ಬಗ್ಗೆ ಅವನಿಗಿದ್ದ ನಿಷ್ಠೆ, ಶ್ರದ್ಧೆ ಮತ್ತು ಪೂಜ್ಯಭಾವನೆಗಳ ಪ್ರತೀಕವಾಗಿವೆ. ಹೈದರಾಬಾದಿನ ನಿಜಾಮ್ ಉಲ್ ಮುಲ್ಕ್ ಎಂಬವನು ಶ್ರೀಗಳಿಗೆ ಅನೇಕ ಫರ್ಮಾನ, ಸನ್ನದುಗಳನ್ನು ಮತ್ತು ಕೆಲವು ವಿಶೇಷ ಸೌಲಭ್ಯಗಳನ್ನು ನೀಡಿದನೆಂದೂ ಅವನ ಈ ಕೊಡುಗೆಗಳನ್ನು ನಿಜಾಮ್ ಅಲಿಖಾನ್ ಊರ್ಜಿತಗೊಳಿಸಿದನೆಂದೂ ತಿಳಿದುಬರುತ್ತದೆ. ಮೈಸೂರಿನ ಚಾಮರಾಜ ಒಡೆಯರೂ ಶೃಂಗೇರಿ ಸಂಸ್ಥಾನಕ್ಕೆ ಅನೇಕ ಅಮೂಲ್ಯ ಕಾಣಿಕೆಗಳನ್ನು ಕಳುಹಿಸಿಕೊಟ್ಟಿದ್ದರು. ಮಾರ್ಕ್ ಕಬ್ಬನನ ಘೋಷಣೆಯಿಂದ ಶೃಂಗೇರಿಪೀಠಕ್ಕೆ ಹಿಂದಿನ ವಿಶೇಷ ಸೌಲಭ್ಯಗಳೆಲ್ಲವೂ ಇದ್ದಿತೆಂದು ಗೊತ್ತಾಗುತ್ತದೆ. ಮೈಸೂರು ಸಂಸ್ಥಾನದ ಅವಧಿಯಲ್ಲಿ ಇದೊಂದು ಜಹಗೀರಿ ಸ್ಥಾನ ಪಡೆಯಿತು.

ಎಂಟನೆಯ ಶತಮಾನದಲ್ಲಿ ಶಂಕರಾಚಾರ್ಯರು ಇಲ್ಲಿ ಮಠವನ್ನು ಸ್ಥಾಪಿಸುವುದಕ್ಕೆ ಮೊದಲು ಜೈನಮತ ಪ್ರಾಬಲ್ಯವಿತ್ತೆಂಬುದಕ್ಕೆ ಈಗ ಪಾಳು ಬಿದ್ದಿರುವ ನೂರಾರು ಬಸದಿಗಳು ಸಾಕ್ಷಿಗಳಾಗಿ ನಿಂತಿವೆ. ಇಲ್ಲಿರುವ ಶಂಕರಾಚಾರ್ಯರ ಗುಡಿಯನ್ನು ಚಾಳುಕ್ಯ ಶೈಲಿಯಲ್ಲಿ ಕಟ್ಟಲಾಗಿದೆ. ಇದರ ಕೆತ್ತನೆ ಕಲಾಪೂರ್ಣವಾದದ್ದು. ಇದನ್ನು ವಿದ್ಯಾಶಂಕರ ದೇವಾಲಯವೆಂದೂ ಕರೆಯುತ್ತಾರೆ. ಈ ದೇವಾಲಯದ ಪ್ರವೇಶದ್ವಾರದ ಬಲಗಡೆಯಲ್ಲಿ ವ್ಯಾಸರ ಪ್ರತಿಮೆ ಇದೆ. ಇದರ ಎದುರು ಇರುವ ಶಂಕರಾಚಾರ್ಯರ ವಿಗ್ರಹದ ಎಡಗೈಯಲ್ಲಿ ಓಲೆಗರಿ ಗ್ರಂಥವಿದೆ. ಈ ದೇವಸ್ಥಾನದ ಎರಡು ಕೊನೆಗಳೂ ಬೌದ್ಧರ ಚೈತ್ಯಾಲಯಗಳ ಆಕೃತಿ ಹೊಂದಿರುವುದು ಒಂದು ವಿಶೇಷ. ನವರಂಗ 12 ಕೆತ್ತನೆಯ ಕೇಂದ್ರಗಳಿಂದ ಕೂಡಿದೆ. ಕಂಬಗಳಲ್ಲಿ

ಕೆತ್ತಿರುವ ಸಿಂಹಗಳ ಬಾಯಲ್ಲಿರುವ ಗುಂಡುಗಳನ್ನು ತಿರುಗಿಸಬಹುದು. ಆಯಾ ಮಾಸಗಳಲ್ಲಿ ಸೂರ್ಯಕಿರಣ ಕಂಬಗಳ ಮೇಲೆ ಬೀಳುವಂತೆ ಸೌರಮಾಸಗಳ ಅನುಕ್ರಮದಂತೆ ಕಂಬಗಳ ನಿರ್ಮಾಣವಾಗಿದೆ.

ಶೃಂಗೇರಿಗೆ ಸುಮಾರು ಒಂದೂವರೆ ಕಿಮೀ ದೂರದಲ್ಲಿ ತುಂಗಾ ನದಿ ದಂಡೆಯ ಮೇಲಿರುವ ಶಂಕರಾಚಾರ್ಯರ ಗುಡಿಯ ಬಳಿಯೇ ಶಂಕರರು ವೈಕುಂಠವಾಸಿಗಳಾದರೆಂದು ಪ್ರತೀತಿ. (ಎಚ್.ಎಂ.ಎನ್.ಆರ್.)

**ಶೆಟ್ಟಿಕೆರೆ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಚಿಕ್ಕನಾಯಕನ ಹಳ್ಳಿಗೆ 8 ಕಿಮೀ ದೂರದಲ್ಲಿದೆ. ಜನಸಂಖ್ಯೆ. 3,405. ಮೊದಲಿಗೆ ಇದೊಂದು ಅಗ್ರಹಾರವಾಗಿತ್ತು. ಇಲ್ಲಿರುವ ಯೋಗಮಾಧವ ದೇವಾಲಯ ಪ್ರಸಿದ್ಧವಾದದ್ದು. ಈ ದೇವಾಲಯವನ್ನು 1261ರಲ್ಲಿ ಹೊಯ್ಸಳ ದೊರೆ ಮೂರನೆಯ ವೀರನರಸಿಂಹನ ದಂಡನಾಯಕ ಗೋಪಾಲ ಡಣಾಯಕ ಕಟ್ಟಿಸಿದನೆಂದು ಅಲ್ಲಿಯ ಶಾಸನದಿಂದ ತಿಳಿದು ಬರುತ್ತದೆ. ದೇವಾಲಯದ ಜಗತಿ ನಕ್ಷತ್ರಾಕಾರವಾಗಿದ್ದು ಮೂರಡಿ ಎತ್ತರವಿದೆ. ಈ ದೇವಾಲಯ ಎರಡು ನವರಂಗ, ಮೂರು ಗರ್ಭಗುಡಿಗಳನ್ನು ಒಳಗೊಂಡಿದೆ. ದಕ್ಷಿಣ ಗರ್ಭಗುಡಿಯಲ್ಲಿ ಸುಂದರವಾದ ವೇಣುಗೋಪಾಲನ ವಿಗ್ರಹವಿದೆ. ಉತ್ತರಗರ್ಭಗುಡಿಯಲ್ಲಿ ಲಕ್ಷ್ಮೀನಾರಾಯಣ ವಿಗ್ರಹವಿದೆ. ಪಶ್ಚಿಮಗರ್ಭಗುಡಿಯ ಗರುಡಪೀಠದ ಮೇಲೆ ಒಂಬತ್ತಡಿ ಎತ್ತರದ ಯೋಗಮಾಧವ ವಿಗ್ರಹವಿದೆ. ದೇವಾಲಯದ ಮಹಾದ್ವಾರ, ಬಳಪದಕಲ್ಲಿನ ಒರಟಾದ ಅಷ್ಟಕೋಣ ಕಂಬಗಳನ್ನು ಹೊಂದಿದೆ. ಇದರ ಎದುರಿನಲ್ಲಿ ಮೂವತ್ತೈದಡಿ ಎತ್ತರದ ಕಣಶಿಲೆಯ ಗರುಡಸ್ತಂಭವಿದೆ.

ಇಲ್ಲಿರುವ ರಂಗನಾಥ, ಹನುಮಂತ ದೇವಾಲಯಗಳು ಪಾಳೆಯಗಾರರ ಕಾಲದವು. (ಟಿ.ಡಿ.ಪಿ.)

**ಶೆಣೈ, ಜಿ.ಎಸ್.:** 1938–94. ಪ್ರಖ್ಯಾತ ಚಿತ್ರಕಲಾಕಾರರು. ತಮ್ಮ ಅಮೋಘ ಕಲಾಕೃತಿಗಳಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಿದವರು. ಗೋಕುಲದಾಸ್ ಸದಾನಂದ ಶೆಣೈ ಇವರ ಪೂರ್ಣ ಹೆಸರು. ಇವರು ಉಡುಪಿಯಲ್ಲಿ 1938ರಲ್ಲಿ ಜನಿಸಿದರು. ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಚಿತ್ರಕಲೆ ಕಲಿತರು. ಮುಂದೆ ಮುಂಬಯಿಯ ಜೆ.ಜೆ. ಕಲಾಶಾಲೆಗೆ ಸೇರಿ ಡಿಪ್ಲೊಮಾ ಪದವಿ ಪಡೆದರು (1963). ಇವರಿಗೆ ನೂತನ ಕಲಾಮಂದಿರದಲ್ಲಿ ಜಿ.ಎಸ್. ದಂಡಾವತಿಮಠ ಅವರ ಮಾರ್ಗದರ್ಶನ ದೊರೆಯಿತು. ಭಾವಚಿತ್ರ, ವರ್ಣಚಿತ್ರ, ಮೆಟಲ್, ಗ್ರಾಫಿಕ್, ಮ್ಯುರಾಲ್ಸ್, ಛಾಯಾಚಿತ್ರ–ಹೀಗೆ ಕಲೆಯ ನಾನಾ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಉಡುಪಿಯಲ್ಲಿ ಶೃಂಗಾರ ಆರ್ಟ್ ಗ್ಯಾಲರಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಕಲಾ ಚಟುವಟಿಕೆಗಳಿಗೆ, ಸೌತ್ ಕೆನರಾ ಆರ್ಟ್ ಕೌನ್ಸಿಲ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಈ ಭಾಗದ ಕಲಾವಿದರ ಸಂಘಟನೆಗೆ ಮುಖ್ಯ ಕಾರಣಕರ್ತರಾದರು. 1985ರ ಸುಮಾರಿಗೆ ಬೆಂಗಳೂರಿಗೆ ಬಂದು ನೆಲೆಸಿದರು.

1964ರಿಂದ ಏಕವ್ಯಕ್ತಿ ಪ್ರದರ್ಶನ ಕೊಡಲು ಆರಂಭಿಸಿದ ಇವರು 1992ರವರೆಗೆ 35 ಏಕವ್ಯಕ್ತಿ ಪ್ರದರ್ಶನಗಳನ್ನು ಸಿಂಗಪುರ್, ದೆಹಲಿ ಸೇರಿ ವಿವಿದೆಡೆಗಳಲ್ಲಿ ನೀಡಿದ್ದಾರೆ. 45ಕ್ಕೂ ಹೆಚ್ಚು ಸಾಮೂಹಿಕ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ದೆಹಲಿಯಲ್ಲಿ ನಡೆದ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ ಇವರ ಕೃತಿಗಳು ಪ್ರದರ್ಶನಗೊಂಡಿವೆ. ಇವರು ಸಿಂಗಪುರ್, ಟರ್ಕಿ, ಮ್ಯಾಂಚೆಸ್ಟರ್, ಚೆಕೊಸ್ಲೋವಾಕೀಯದಲ್ಲಿ ನಡೆದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದರು. ಯುವ ಕಲಾವಿದರಿಗೆ ಹಲವು ರೀತಿಯಲ್ಲಿ ಪ್ರೋತ್ಸಾಹ ನೀಡಿದರು. ಅಂತಾರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ (1991) ತಮ್ಮ ಕಲಾಕೃತಿಗಳಿಗೆ ಬಹುಮಾನ ಪಡೆದರು. ಇವರ ಕಲೆ ಸಮಕಾಲೀನ ಶೈಲಿ–ತಂತ್ರ ಮಾಧ್ಯಮಗಳ ವಿಶಿಷ್ಟ ನಿರ್ವಹಣಾ ವಿಧಾನದ ಅದ್ಭುತ ಅಭಿವ್ಯಕ್ತಿಯಾಗಿದೆ.

ಭಿತ್ತಿಚಿತ್ರಗಳ ರಚನೆ ಇವರ ಮತ್ತೊಂದು ಸಾಧನೆ. ಬೆಂಗಳೂರಿನ ವಿಜಯಬ್ಯಾಂಕ್, ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಕಾರ್ಖಾನೆ, ಬೆಂಗಳೂರಿನ ಧರ್ಮಸ್ಥಳ ಮಂಜುನಾಥೇಶ್ವರ ಕಲ್ಯಾಣ ಮಂಟಪ, ಮೈಸೂರಿನ ಕರ್ನಾಟಕ ಬಾಲ್‌ಬೇರಿಂಗ್ಸ್ ಕಾರ್ಖಾನೆ, ಮುಂಬಯಿ, ಮಣಿಪಾಲಗಳಲ್ಲಿ ಭಿತ್ತಿಚಿತ್ರಗಳನ್ನೂ ಉಬ್ಬುಶಿಲ್ಪಗಳನ್ನೂ ನಿರ್ಮಿಸಿದ್ದಾರೆ. ಮುಂಬಯಿಯ ಆರ್ಟ್ ಸೊಸೈಟಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ (1965). ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಆರು ಬಾರಿ ಬಹುಮಾನ ಗಳಿಸಿದ್ದಾರೆ (1962–80). ಕರ್ನಾಟಕ ಲಲಿತಕಲಾ ಅಕಾಡೆಮಿಯ ರಾಜ್ಯಪ್ರಶಸ್ತಿ ಇವರಿಗೆ ದೊರೆತಿದೆ. ಹಲವಾರು ಸಂಘ ಸಂಸ್ಥೆಗಳು ಇವರನ್ನು ಶ್ರೇಷ್ಠ ಕಲಾವಿದರೆಂದು ಪ್ರಶಸ್ತಿ ನೀಡಿ ಗೌರವಿಸಿವೆ. ಬೆಂಗಳೂರಿನಲ್ಲಿ ಕಲಾ ಪ್ರದರ್ಶನಕ್ಕೆ ಸೂಕ್ತವಾದ ಕಟ್ಟಡದ ಸ್ಥಳ ಇಲ್ಲದಿದ್ದಾಗ ಇವರು ಪ್ರಪ್ರಥಮವಾಗಿ ಪ್ರತಿಭಟನಾತ್ಮಕವಾಗಿ ರಸ್ತೆ ಬದಿಯಲ್ಲೆ ಚಿತ್ರಗಳನ್ನು ಪ್ರದರ್ಶಿಸಿ ಸರ್ಕಾರದ ಗಮನ ಸೆಳೆದಿದ್ದರು (1970). ಅನಂತರದಲ್ಲಿ ರಾಜ್ಯದ ವಿವಿದೆಡೆ ಅನೇಕ ಕಲಾಗ್ಯಾಲರಿಗಳು ಸ್ಥಾಪಿತವಾಗಲು ಇವರ ಒತ್ತಾಸೆಯೇ ಕಾರಣವಾಯಿತು.

ಇವರು ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯ ಡೀನ್ ಆಗಿದ್ದರು (1993). ಈ ಸಂಸ್ಥೆಯನ್ನು ರಾಷ್ಟ್ರಮಟ್ಟದ ಕಲಾಶಾಲೆಯನ್ನಾಗಿ ಮಾಡುವ ಕನಸು ಇವರದಾಗಿತ್ತು. ಇದಕ್ಕಾಗಿ ದುಡಿಯುತ್ತಿದ್ದ ಇವರು 1994 ನವೆಂಬರ್ 17ರಂದು ನಿಧನರಾದರು. ಇವರ ಮಗ ಗುರುದಾಸ ಶೆಣೈ ಯುವ ಕಲಾವಿದರಾಗಿ ಕಲಾಜಗತ್ತಿನ ಗಮನ ಸೆಳೆದಿದ್ದಾರೆ. (ಆರ್.ಜಿ.ಆರ್.)

**ಶೇಡಬಾಳ:** ಬೆಳಗಾಂವಿ ಜಿಲ್ಲೆ ಅಥಣಿ ತಾಲ್ಲೂಕಿನ ಒಂದು ಗ್ರಾಮ. ಅಥಣಿಯಿಂದ ಪಶ್ಚಿಮಕ್ಕೆ 32 ಕಿಮೀ ದೂರದಲ್ಲಿದೆ. ಜನಸಂಖ್ಯೆ. 10,044. ಇಲ್ಲಿ ಪುರಾತನ ಕಾಲದ ಒಂದು ಬಸವಣ್ಣನ ಗುಡಿ ಹಾಗೂ 1156ರ ಶಿಲಾಹಾರರ ಒಂದು ಶಾಸನ ಇದೆ. ಗುಡಿಯಲ್ಲಿ ಒಂದೇ ಸಾಲಿನಲ್ಲಿ ಮೂರು ಮೂರ್ತಿಗಳು ಹಾಗೂ ಲಿಂಗವನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಇಲ್ಲಿ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಬಸವಣ್ಣನವರ ಸ್ಮಾರಕವಾಗಿ ಜಾತ್ರೆ ನಡೆಯುತ್ತದೆ. ಪ್ರತಿ ಮಂಗಳವಾರ ಈ ಗ್ರಾಮದಲ್ಲಿ ಸಂತೆ ನಡೆಯುತ್ತದೆ. ಇಲ್ಲಿ ಅಂಚೆಕಚೇರಿ, ಪ್ರವಾಸಿ ಮಂದಿರ, ರೈಲ್ವೆ ನಿಲ್ದಾಣ ಹಾಗೂ ಪ್ರಾಥಮಿಕ–ಮಾಧ್ಯಮಿಕ ಶಾಲೆಗಳ ಸೌಕರ್ಯಗಳಿವೆ. ಹೆಸರಾಂತ ಸಾಹಿತಿ ಮಿರ್ಜಿ ಅಣ್ಣಾರಾಯರು ಈ ಗ್ರಾಮದವರು. (ಎಸ್ಎ.ಎನ್.)

**ಶೇಷಗಿರಿರಾವ್, ಎಲ್.ಎಸ್.:** 1925– . ಕನ್ನಡದಲ್ಲೂ ಇಂಗ್ಲಿಷ್‌ನಲ್ಲೂ ಕೃತಿರಚನೆ ಮಾಡಿದ ಪ್ರಸಿದ್ಧ ಲೇಖಕರು, ವಿಮರ್ಶಕರು. ಲಕ್ಷ್ಮೀಶ್ವರ ಸ್ವಾಮಿರಾಯ ಶೇಷಗಿರಿರಾವ್ ಇವರ ಪೂರ್ಣಹೆಸರು. ಇವರು 1925 ಫೆಬ್ರವರಿ 16ರಂದು ಬೆಂಗಳೂರಿನಲ್ಲಿ ಜನಿಸಿದರು. ಬೆಂಗಳೂರು, ಮೈಸೂರುಗಳಲ್ಲಿ ಅಧ್ಯಯನ ಮಾಡಿದರು. ಇಂಗ್ಲಿಷ್ ಸಾಹಿತ್ಯದ ಬಿ.ಎ. ಆನರ್ಸ್‌ನಲ್ಲಿ ಚಿನ್ನದ ಪದಕ ಪಡೆದರು. ನಾಗಪುರ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಮುಗಿಸಿ ಕೋಲಾರ, ಮಡಿಕೇರಿ, ಬೆಂಗಳೂರುಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ, ಕೊನೆಯ ಕೆಲವು ವರ್ಷ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು.

ಇಂಗ್ಲಿಷ್ ಸಾಹಿತ್ಯವನ್ನು ಕನ್ನಡಿಗರಿಗೂ ಕನ್ನಡ ಸಾಹಿತ್ಯವನ್ನು ಇಂಗ್ಲಿಷ್ ಬಲ್ಲವರಿಗೂ ಪರಿಚಯ ಮಾಡಿಕೊಡುವ ಕಾರ್ಯವನ್ನು ಕಳೆದ 45 ವರ್ಷಗಳಿಂದಲೂ ಮಾಡುತ್ತ ಬಂದಿದ್ದಾರೆ. ಹಿಸ್ಟರಿ ಆಫ್ ಕನ್ನಡ ಲಿಟರೇಚರ್, ಎನ್ ಇಂಟ್ರಡಕ್ಷನ್ ಟು ಮಾಡರ್ನ್ ಕನ್ನಡ ಲಿಟರೇಚರ್,

ಮಾಸ್ತಿ ವೆಂಕಟೇಶ ಅಯ್ಯಂಗಾರ್, ಟಿ.ಪಿ. ಕೈಲಾಸಂ ಎಂಬ ಕೃತಿಗಳನ್ನು ರಚಿಸಿದ್ದಾರೆ. ಸಿಕ್ಸ್ಟೀ ಇಯರ್ಸ್ ಆಫ್ ಕನ್ನಡ ಪೊಯೆಟ್ರಿ, ಸಿಕ್ಸ್ಟೀ ಇಯರ್ಸ್ ಆಫ್ ಕನ್ನಡ ಪ್ರೋಸ್, ಸಿಕ್ಸ್ಟೀ ಇಯರ್ಸ್ ಆಫ್ ಕನ್ನಡ ಸ್ಟೋರಿ ಎಂಬ ಮೂರು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಥಿಯೇಟರ್ ಮೂವ್‌ಮೆಂಟ್ ಇನ್ ಕರ್ನಾಟಕ, ದಿ ಪ್ರೆಸಿಡೆಂಟ್ಸ್ ಇವರ ಇತರ ಇಂಗ್ಲಿಷ್ ಕೃತಿಗಳು.

ಇವರು ಕನ್ನಡದಲ್ಲಿ ವಿಪುಲವಾಗಿ ಬರೆದಿದ್ದಾರೆ. ಇದು ಜೀವನ (1948), ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ಹೊಸಗನ್ನಡ ಸಾಹಿತ್ಯ, ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ, ಜಗದ ಜಾತ್ರೆಯಲ್ಲಿ ಗ್ರೀಕ್ ರಂಗಭೂಮಿ ಮತ್ತು ನಾಟಕ, ಆಚಾರ್ಯ ಬಿ.ಎಂ.ಶ್ರೀ, ಟಿ.ಪಿ.ಕೈಲಾಸಂ, ವಿಲಿಯಂ ಷೇಕ್ಸ್‌ಪಿಯರ್, ಪಾಶ್ಚಾತ್ಯ ಮತ್ತು ಭಾರತೀಯ ಮಹಾಕಾವ್ಯಗಳ ಮನೋಧರ್ಮ, ಫ್ರಾನ್ಜ್ ಕಾಫ್ಕ, ಪಾಶ್ಚಾತ್ಯ ಸಾಹಿತ್ಯ ವಿಹಾರ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪ್ರಿಯ ಕನ್ನಡ ಬಂಧು, ಕನ್ನಡ ಅಳಿವು ಉಳಿವು, ಭಾರತೀಯ ಸಾಹಿತ್ಯ ಸಮೀಕ್ಷೆ, ಸಾಹಿತ್ಯ ಬದುಕು, ಸಾಹಿತ್ಯ ವಿಶ್ಲೇಷಣೆ, ಸಿರಿಸಂಪದ, ಆಕಾಂಕ್ಷೆ ಮತ್ತು ಆಸ್ತಿ (ಎರಡು ನಾಟಕಗಳು), ನಾಲ್ಕು ಕಥಾಸಂಕಲನಗಳು, ಬೆಳಕಿನ ದೂತರು, ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್, ಇಲಿಯಡ್, ಎರಡು ನಗರಗಳ ಕಥೆ, ಕನ್ನಡ ಸಣ್ಣಕಥೆಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇದಲ್ಲದೆ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಎಳೆಯರಿಗೆ ಪರಿಚಯ ಮಾಡಿಕೊಡುವ 510 ಹಿರಿಯ ಚೇತನಗಳ ಪರಿಚಯ ಮಾಡಿಕೊಡುವ ಭಾರತ-ಭಾರತಿ ಪುಸ್ತಕ ಸಂಪದದ ಪ್ರಧಾನ ಸಂಪಾದಕರಾಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿದ ಸಾಹಿತ್ಯ ಚರಿತ್ರೆಯ ಸಂಪುಟಗಳಿಗೆ ಇವರು ಸಂಪಾದಕರಾಗಿದ್ದರು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ (1975-76) ಗೋಪಾಲಕೃಷ್ಣ ಅಡಿಗರಿಂದ ಆರಂಭಿಸಿ 35 ಮಂದಿ ಕನ್ನಡದ ಹಿರಿಯ ಲೇಖಕರ ಪರಿಚಯವನ್ನು ಇಂಗ್ಲಿಷ್ ಓದುಗರಿಗೆ ಮಾಡಿಕೊಟ್ಟಿದ್ದಾರೆ. ಅಲ್ಲದೆ ದಿ ಹಿಂದೂ, ಡೆಕ್ಕನ್ ಹೆರಾಲ್ಡ್, ದಿ ಟೈಮ್ಸ್ ಆಫ್ ಇಂಡಿಯ, ಆನಂದ ಬಜಾರ ಪತ್ರಿಕೆ, ದಿ ವೀಕ್ ಮೊದಲಾದ ಇಂಗ್ಲಿಷ್ ಪತ್ರಿಕೆಗಳ ಮುಖಾಂತರ ಕನ್ನಡ ಸಾಹಿತ್ಯ-ಸಾಹಿತಿಗಳ ಕುರಿತು ಪರಿಚಯ ಮಾಡಿಕೊಟ್ಟಿದ್ದಾರೆ.

ಕೇರಳ ಸಾಹಿತ್ಯ ಅಕಾಡೆಮಿ ತನ್ನ ರಜತೋತ್ಸವದ ಸಂದರ್ಭದಲ್ಲಿ 'ಕಂಪ್ಯಾರಿಟಿವ್ ಇಂಡಿಯನ್ ಲಿಟರೇಚರ್' ಯೋಜನೆ ಕೈಗೆತ್ತಿಕೊಂಡಾಗ ಎರಡು ಬೃಹತ್ ಸಂಪುಟಗಳ ಕನ್ನಡ ಅನುವಾದದ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಕೇರಳದ ಇಂಡಿಯನ್ ರೈಟರ್ಸ್ ಯೂನಿಯನ್‌ನ ದಿ ಇಂಡಿಯನ್ ರೈಟರ್ಸ್ ಕಾಂಟ್ರಿಬ್ಯೂಶನ್ ಟು ದಿ ಫ್ರೀಡಂ ಸ್ಟ್ರಗಲ್ ಎಂಬ ಪ್ರಕಟಣೆ ಯೋಜನೆಯಲ್ಲಿ ಇವರು ಸಂಪಾದಕ ಮಂಡಲಿಯ ಸದಸ್ಯರಾಗಿದ್ದರು.

ಇವರ ಇಂಗ್ಲಿಷ್ ಸಾಹಿತ್ಯ ಚರಿತ್ರೆ (1996) ಸಮಗ್ರ ಇಂಗ್ಲಿಷ್ ಸಾಹಿತ್ಯ ಪರಿಚಯವನ್ನು ಕನ್ನಡದಲ್ಲಿ ಮಾಡಿಕೊಡುತ್ತದೆ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ (2001). ಇವರ ಇಲಿಯಡ್ ಕೃತಿಗೆ ದೇವರಾಜ ಬಹದ್ದೂರ್ ಪ್ರಶಸ್ತಿಯೂ ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ (1984) ಲಭಿಸಿವೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ, ವರ್ಧಮಾನ ಸಾಹಿತ್ಯ ಪ್ರಶಸ್ತಿ (1992), ಕೆಂಪೇಗೌಡ ಪ್ರಶಸ್ತಿ, ವಿ.ಎಂ.ಇನಾಂದಾರ ವಿಮರ್ಶಾ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ಬಿ.ಎಂ.ಶ್ರೀ ಪ್ರಶಸ್ತಿ, ಅ.ನ.ಕೃಷ್ಣರಾಯ ಪ್ರಶಸ್ತಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರಶಸ್ತಿ (2002) ಲಭಿಸಿವೆ.

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಮೇಲೆ ಸಮಾನ ಪಾಂಡಿತ್ಯವಿರುವ ಇವರ ವಿಮರ್ಶೆಯಲ್ಲಿ ವಸ್ತುನಿಷ್ಠ ಗುಣವಿದೆ. ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ, ಗ್ರೀಕ್ ರಂಗಭೂಮಿ ಮತ್ತು ನಾಟಕ- ಇವು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಆಚಾರ್ಯ ಕೃತಿಗಳೆನಿಸಿವೆ. ಇವರ 'ಹೊಸಗನ್ನಡ ಸಾಹಿತ್ಯ' 20ನೆಯ ಶತಮಾನದ ಸಾಹಿತ್ಯವನ್ನು ಸಮಗ್ರವಾಗಿ ಪರಿಚಯ ಮಾಡಿಕೊಡುವ ಏಕೈಕ ಗ್ರಂಥ.

ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ (1947-50), ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ, ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಥಮ ಅಧ್ಯಕ್ಷ ಮೊದಲಾದ ಸ್ಥಾನಮಾನಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಮೊದಲಾದ ಸಮಿತಿಗಳಲ್ಲಿ ಇವರು ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಹಾಲಿ ಅನುವಾದ ಅಕಾಡೆಮಿ ಕೈಗೊಂಡಿರುವ ವಿಲ್‌ಡುರೆಂಟನ ಹಿಸ್ಟರಿ ಆಫ್ ವರ್ಲ್ಡ್ ಸಿವಿಲೈಸೇಷನ್ ಕೃತಿಯ ಭಾಷಾಂತರದ ಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ.

ಇವರು ಹಲವು ದಶಕಗಳಿಂದ ಕನ್ನಡದ ಚಳವಳಿಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತ ಬಂದಿದ್ದಾರೆ. ಇವರ ಮುಯ್ಯಿ ಕಥೆ ಚಲನಚಿತ್ರವಾಗಿದೆ.

*

**ಶೇಷಗಿರಿರಾವ್ ಚುರಮರಿ:** 1827-82. ವೃತ್ತಿಯಲ್ಲಿ ಎಂಜಿನಿಯರಿಂಗ್ ಇಲಾಖೆಯಲ್ಲಿ ಕೆಲಸ ಮಾಡಿದರೂ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದವರು. ಸಂಸ್ಕೃತದಿಂದ ಕನ್ನಡಕ್ಕೆ ಕೆಲವು ಗ್ರಂಥಗಳನ್ನು ಅನುವಾದಿಸಿದ್ದಾರೆ. ನಾಲ್ಕೈದು ತಲೆಮಾರುಗಳ ಹಿಂದೆಯೇ ಇವರ ಮನೆತನದವರು ಧಾರವಾಡಕ್ಕೆ ಬಂದು ನೆಲಸಿದವರು. ಮೊದಲು ಇವರ ಮನೆತನ ರಾಮದುರ್ಗದಲ್ಲಿ ಇದ್ದಿತು. ಈ ಮನೆತನಕ್ಕೆ ಮುದಕವಿ ಎಂಬ ಅಡ್ಡಹೆಸರು ಇದ್ದಿತಂತೆ. ಧಾರವಾಡಕ್ಕೆ ಬಂದ ಮೇಲೆ ಈ ಮನೆತನದ ಹಿರಿಯರು ಚುರಮರಿ(ಪುರಿ)ಯ ಅಂಗಡಿಯಲ್ಲಿ ಕೆಲಸ ಕ್ಕಿದ್ದರಂತೆ. ಆದುದರಿಂದ ಮೊದಲಿನ ಅಡ್ಡಹೆಸರು ಹೋಗಿ ಚುರಮರಿ ಎಂದಾಯಿತಂತೆ.

ಇವರ ತಂದೆಯವರಾದ ರಾಮಚಂದ್ರರಾಯರು ಆಗಿನ ಕಲಾದಗಿ (ಬಿಜಾಪುರ) ಜಿಲ್ಲೆಯಲ್ಲಿ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ ಆಗಿದ್ದರು. ಸಂಪ್ರದಾಯವಂತರಾಗಿದ್ದ ಅವರು ಸಂಸ್ಕೃತ ಭಾಷೆಯಲ್ಲಿ ಪರಿಣತರಾಗಿದ್ದರು. ಮಗನಿಗೆ ಬಾಲ್ಯದಲ್ಲಿಯೆ ಸಂಸ್ಕೃತವನ್ನು ಕಲಿಸಿದರು. ಇದ್ದೂರಲ್ಲಿಯೆ ಶಾಲೆಯ ಶಿಕ್ಷಣವನ್ನು ಮುಗಿಸಿದ ಚುರಮರಿಯವರು ಅನಂತರ ಪುಣೆಗೆ ಹೋಗಿ ಎಂಜಿನಿಯರಿಂಗ್ ಕಾಲೇಜು ಸೇರಿದರು. ಅಲ್ಲಿಯ ಶಿಕ್ಷಣ ಮುಗಿದೊಡನೆಯೆ ಮುಂಬಯಿ ಪ್ರಾಂತ್ಯದ ಲೋಕೋಪಯೋಗಿ ಶಾಖೆಯಲ್ಲಿ ಕೆಲಸಕ್ಕೆ ಸೇರಿದರು.

ಮೊದಲಿನಿಂದಲೂ ಸಂಸ್ಕೃತ ಭಾಷೆಯ ಬಗ್ಗೆ ಇವರಿಗೆ ಬಹಳ ಅಭಿಮಾನವಿತ್ತು. ಆ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿ

ಬಳಕೆಯಲ್ಲಿದ್ದ ಕರ್ನಾಟಕ ಸಂಗೀತವನ್ನು ಇವರು ಚೆನ್ನಾಗಿ ಅರಿತಿದ್ದರು. ಕನ್ನಡ ಭಾಷೆಯ ಅಂದಿನ ಹೀನಸ್ಥಿತಿಗಾಗಿ ಇವರು ತುಂಬ ಮರುಗುತ್ತಿದ್ದರು. ಡೆಪ್ಯೂಟಿ ಚೆನ್ನಬಸಪ್ಪನವರಿಂದ ಕನ್ನಡ ದೀಕ್ಷೆಯನ್ನು ಪಡೆದು ಕನ್ನಡ ಅಭಿವೃದ್ಧಿಗೆ ಶ್ರಮಿಸಿದರು. ಮುಂಬಯಿಯಲ್ಲಿ ಇದ್ದಾಗಲೇ ಇವರು ಸಂಸ್ಕೃತದ ಶಾಕುಂತಲ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. ಇದರ ಮೊದಲನೆಯ ಆವೃತ್ತಿ ಮುಂಬಯಿಯ ಎಜುಕೇಷನ್ ಸೊಸೈಟಿ ಮುದ್ರಣಾಲಯದಲ್ಲಿ ಅಚ್ಚಾಗಿ ಪ್ರಕಟವಾಯಿತು (1870). ಅನಂತರ ಇದು ಹಲವು ಸಾರಿ ಮರು ಮುದ್ರಣಗೊಂಡು ಜನಪ್ರಿಯವಾಯಿತು. ಸಂಸ್ಕೃತದ ಮೃಚ್ಛಕಟಿಕ ನಾಟಕ ವನ್ನೂ ಇವರು ಕನ್ನಡಕ್ಕೆ ಅನುವಾದಿಸಿದ್ದರೆನ್ನಲಾಗಿದೆ. ಸುಂದರಾ ಎಂಬ ಸಾಮಾಜಿಕ ಏಕಾಂಕವೊಂದನ್ನು ಇವರು ರಚಿಸಿರುವಂತೆ ಗೊತ್ತಾಗುತ್ತದೆ.

ಇವರು ಸಾಂಪ್ರದಾಯಿಕ ಆಚಾರ-ವಿಚಾರಗಳಲ್ಲಿ ತುಂಬ ಶ್ರದ್ಧೆಯುಳ್ಳವರಾಗಿದ್ದರು. ಸಿಂಧ ಪ್ರಾಂತ್ಯದಲ್ಲಿ ಕೆಲಸ ಮಾಡುತ್ತಿದ್ದಾಗ, ತಮಗೊದಗಿದ ಭೀಕರವಾದ ಕಾಯಿಲೆಯ ಮೂಲಕ, ಸಾಂಪ್ರದಾಯಿಕ ಆಚಾರಗಳನ್ನು ಅನಿವಾರ್ಯವಾಗಿ ಮೀರಿ ನಡೆಯಬೇಕಾಯಿತಂತೆ, ಮುಂದೆ ಇವರು ವರ್ಗವಾಗಿ ಧಾರವಾಡಕ್ಕೆ ಬಂದಮೇಲೆ ತಾವಾಗಿಯೆ ಬಹಿಷ್ಕೃತ ರಂತೆ ಇರತೊಡಗಿದರಂತೆ. ಇವರಿಗೆ ರಸಾಯನಶಾಸ್ತ್ರದಲ್ಲಿ ತುಂಬ ಆಸಕ್ತಿ ಇತ್ತು. ಒಂದು ರಾಸಾಯನಿಕ ಪ್ರಯೋಗದಲ್ಲಿ ತೊಡಗಿದ್ದಾಗ ಆದ ಆಕಸ್ಮಿಕದಿಂದ ಇವರು 1882ರಲ್ಲಿ ನಿಧನರಾದರು. **(ಬಿ.ಕೆ.;ಕೆ.ಕೆ.)**

**ಶೇಷಗಿರಿ ಹಾನಗಲ್:** 1922 –. ಪ್ರಸಿದ್ಧ ತಬಲಾ ವಾದಕರು. ಇವರು 1922 ಅಕ್ಟೋಬರ್ 10ರಂದು ಧಾರವಾಡದಲ್ಲಿ ಜನಿಸಿದರು. ತಂದೆ ಕೃಷ್ಣರಾವ್ ಹಾನಗಲ್, ತಾಯಿ ರಾಧಾಬಾಯಿ. ತಬಲಾ ವಾದನ ಇವರಿಗೆ ಮನೆತನದ ಕಲಾ ಬಳುವಳಿಯಾಗಿತ್ತು. ಇವರ ತಂದೆಯವರು ಕರ್ನಾಟಕ ಶೈಲಿಯ ತಬಲಾ ಕಲಾವಿದರು. ಚಿಕ್ಕಪ್ಪ ರಾಮರಾಯರು ಸಂಗೀತ ತಜ್ಞರೂ ತಬಲಾ ವಾದಕರೂ ಆಗಿದ್ದರು. ಸೋದರತ್ತೆ ಅಂಬಾಬಾಯಿ ಕರ್ನಾಟಕ ಸಂಗೀತದ ಸುಪ್ರಸಿದ್ಧ ಗಾಯಕಿಯಾಗಿದ್ದರು. ಅವರ ಮಗಳೇ ಗಂಗೂಬಾಯಿ ಹಾನಗಲ್ **(ನೋಡಿ)**. ಈ ರೀತಿಯ ಕೌಟುಂಬಿಕ ಹಿನ್ನೆಲೆಯಿಂದ ಬಂದ ಇವರಿಗೆ ಸಹಜವಾಗಿ ಸಂಗೀತದಲ್ಲಿ ಆಸಕ್ತಿ ಮೂಡಿತು. ಚಿಕ್ಕಂದಿನಲ್ಲಿ ಪೋಲಿಯೋ ಪೀಡಿತರಾಗಿ ಅಂಗವಿಕಲರಾದರೂ ಛಲ ಮತ್ತು ಶ್ರದ್ಧೆ, ಶ್ರಮಗಳಿಂದ ಸಂಗೀತವನ್ನು ರೂಢಿಸಿಕೊಂಡರು. ಇವರು ಓದಿದ್ದು ಐದನೆಯ ತರಗತಿಯವರೆಗೆ. ಮನೆಯಲ್ಲೇ ತಬಲಾ ವಾದನದಲ್ಲಿ ರಾಮರಾವ್ ಹಾನಗಲ್ ಅವರಲ್ಲಿ ಅಭ್ಯಾಸಮಾಡಿ ವಿಶೇಷ ಪರಿಣತಿ ಗಳಿಸಿಕೊಂಡರು. ಪ್ರಸಿದ್ಧ ವಾದಕರಾಗಿದ್ದ ಲಾಲಜಿ ಗೋಖಲೆಯವರಲ್ಲಿಯೂ ಕೆಲಕಾಲ ತರಬೇತಿ ಪಡೆದರು. ಅನಂತರ ನಾರಾಯಣರಾವ್ ಇಂದೋರಕರ ಅವರಲ್ಲಿ ತರಬೇತಿ ಪಡೆದರು. ಇವರ ಮೊದಲ ಆಕಾಶವಾಣಿ ಕಾರ್ಯಕ್ರಮ 1946 ಡಿಸೆಂಬರ್‌ನಲ್ಲಿ ಮುಂಬೈ ಆಕಾಶವಾಣಿಯಲ್ಲಿ ಪ್ರಸಾರವಾಯಿತು.

ಧಾರವಾಡ ಆಕಾಶವಾಣಿಯ ನಿಲಯ ಕಲಾವಿದರಾಗಿ ಸೇರ್ಪಡೆಯಾದ (1951) ಅನಂತರ ಇವರಿಗೆ ಇಲ್ಲಿ ಬೇರೆ ಬೇರೆ ರಾಜ್ಯಗಳಿಂದ ಬರುವ ಕಲಾವಿದರಿಗೆ ಸಾಥ್ ಮಾಡುವ ಅವಕಾಶ ದೊರೆಯಿತು. ಇವರು ಗಂಗೂಬಾಯಿ ಹಾನಗಲ್ ಹಾಗೂ ಅವರ ಮಗಳು ಕೃಷ್ಣ ಹಾನಗಲ್ ಅವರಿಗೆ ನಿರಂತರ ತಬಲಾ ಸಾಥಿಯಾದರು. ಭಾರತದ ಅಗ್ರಶ್ರೇಣಿಯ ಬಹುಪಾಲು ಹಿಂದುಸ್ಥಾನಿ ಗಾಯಕರಿಗೆ ಇವರು ತಬಲಾ ಸಾಥಿ ನೀಡಿ ಯಶಸ್ವಿಯಾಗಿದ್ದಾರೆ. ಸವಾಯಿ ಗಂಧರ್ವ, ಉಸ್ತಾದ ಶಿಹಮತ್‌ಖಾನ್, ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ, ಪಂಡಿತ್ ಜಸರಾಜ್, ವಿ.ಜಿ. ಜೋಗ, ಬಸವರಾಜ ರಾಜಗುರು, ಬೇಗಂ ಅಖ್ತರ್, ಹೀರಾಬಾಯಿ ಬಡೋದೇಕರ, ರಾಜೀವ ತಾರಾನಾಥ ಮೊದಲಾದವರಿಗೆ ಇವರು ಸಾಥ್ ನೀಡಿದ್ದಾರೆ.

ಇವರು ಅನೇಕ ರಾಷ್ಟ್ರೀಯ ಕಾರ್ಯಕ್ರಮಗಳು ಹಾಗೂ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿ ಕೀರ್ತಿಗಳಿಸಿದ್ದಾರೆ. ನೇಪಾಲ(1959), ಪಾಕಿಸ್ತಾನ(1961), ಅಮೆರಿಕ, ಕೆನಡ, ಫ್ರಾನ್ಸ್, ಜರ್ಮನಿ, ಹಾಲೆಂಡ್ ಮೊದಲಾದ ದೇಶಗಳ ಸಂಗೀತ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿ ಯಾಗಿ ಭಾಗವಹಿಸಿದ್ದಾರೆ. ಟೈಡಲ್ ಬೋರ್ ಎಂಬ ಚಿತ್ರಕ್ಕೆ ಹಾಗೂ ಗಂಗೂಬಾಯಿ ಹಾನಗಲ್ ಅವರ ಅನೇಕ ಧ್ವನಿಮುದ್ರಿಕೆಗಳಿಗೆ ತಬಲಾ ಸಾಥಿ ನೀಡಿದ್ದಾರೆ. ಇವರು ತಬಲಾ ವಾದನ ಮಾತ್ರವಲ್ಲದೆ ಸ್ವರ ಶ್ರುತಿಯಲ್ಲಿಯೂ ಪರಿಣತಿ ಹೊಂದಿದ್ದರು. ತಂಬೂರಿ, ತಬಲಾ ಮತ್ತು ಢಕ್ಕೆಗಳನ್ನು ಶ್ರುತಿಗೊಳಿಸುವುದರಲ್ಲೂ ಪರಿಣತಿ ಹೊಂದಿದ್ದಾರೆ. ತಬಲಾ ವಾದನದಲ್ಲಿ ಸ್ವತಃ ಅನೇಕ ತಾಳಗಳನ್ನು ಆವಿಷ್ಕರಿಸಿದ್ದಾರೆ. ಇವರು ಒಬ್ಬ ಉತ್ತಮ ಗುರುವೂ ಆಗಿದ್ದು, ಅಪಾರ ಶಿಷ್ಯ ಸಂಪತ್ತನ್ನು ಹೊಂದಿದ್ದಾರೆ. 1944ರಿಂದ ಇವರ ಹೆಸರಿನಲ್ಲಿ ಬೆಂಗಳೂರಿನ ವಿಜಯ ಸಂಗೀತ ಸಂಸ್ಥೆ ಪ್ರತಿಭಾನ್ವಿತ ತಬಲಾ ಕಲಾವಿದರಿಗೆ ಪ್ರೋತ್ಸಾಹ ನೀಡಿ ಬೆಳಕಿಗೆ ತರುವ ಉದ್ದೇಶದಿಂದ ಶಿಷ್ಯವೇತನ ನೀಡುತ್ತಿದೆ.

ಇವರಿಗೆ ಅನೇಕ ಪ್ರಶಸ್ತಿ, ಗೌರವಗಳು ದೊರೆತಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ(1981–82), ಕರ್ನಾಟಕ ರಾಜ್ಯಪ್ರಶಸ್ತಿ(1991), ಬೆಂಗಳೂರಿನ ಸಂಗೀತ ಕೃಪಾಕುಟೀರ ಸಂಸ್ಥೆಯ ಪ್ರಶಸ್ತಿ (1992), ಬೆಂಗಳೂರಿನ ಹಿಂದುಸ್ಥಾನೀ ಕಲಾಕಾರರ ಸಂಸ್ಥೆ ನೀಡಿದ ನಾದಶ್ರೀ ಪ್ರಶಸ್ತಿ(1992), ಕರ್ನಾಟಕ ಸರ್ಕಾರ ನೀಡಿರುವ ಕನಕ ಪುರಂದರ ಪ್ರಶಸ್ತಿ(1999) ಇವು ಉಲ್ಲೇಖನಾರ್ಹವಾದವು. **(ಎಸ್‌ಯು.ಎಂ.)**

**ಶೇಣಿ ಗೋಪಾಲಕೃಷ್ಣಭಟ್ಟ:** ಶೇಣಿ ಎಂಬ ಹೆಸರಿನಿಂದ ಚಿರಪರಿಚಿತ ರಾಗಿರುವ ಯಕ್ಷಗಾನ ಕಲಾವಿದರು. ತಮ್ಮ ವಾಗ್‌ವಿಲಾಸ, ಪಾಂಡಿತ್ಯ, ಪಾತ್ರಪರಿಪೋಷಣಾ ಕೌಶಲದಿಂದ ಯಕ್ಷಗಾನದ ಸೀಮಾಪುರುಷರೆಂದೇ ಖ್ಯಾತರು. ಕಾಸರಗೋಡು ತಾಲೂಕಿನ ಎಡನಾಡಿನಲ್ಲಿ 1918 ಏಪ್ರಿಲ್ 7ರಂದು ಜನಿಸಿದರು. ತಂದೆ ನಾರಾಯಣಭಟ್ಟ, ತಾಯಿ ಲಕ್ಷ್ಮೀಅಮ್ಮ. ತಮ್ಮ ಮೂರನೆಯ ವರ್ಷದಲ್ಲೇ ತಂದೆಯನ್ನು ಕಳಕೊಂಡರು. ಪ್ರಾಥಮಿಕ ವಿದ್ಯಾಭ್ಯಾಸದ ಸಂದರ್ಭದಲ್ಲಿ ಇವರಿಗೆ ಯಕ್ಷಗಾನ ಪರಿಚಯವಾಗಲು ಇವರ ಅನೇಕ ಗುರುಗಳೇ ಕಾರಣ. ಹಾಗೆಯೇ ತಾಯಿ ಓದುಬರಹ ಬಲ್ಲವರಾಗಿದ್ದು, ಕುಮಾರವ್ಯಾಸ ಭಾರತ, ತೊರವೆ ರಾಮಾಯಣ, ಭಾಗವತಗಳನ್ನು, ಸುಶ್ರಾವ್ಯವಾಗಿ ಹಾಡುತ್ತಿದ್ದರು. ಜೊತೆಗೆ ಚಿಕ್ಕಮ್ಮನ ಮನೆಗೆ ಹೋದಾಗಲೆಲ್ಲ ಇಚ್ಲಂಪಾಡಿ ಮೇಳದ ಆಟವನ್ನು ನೋಡುವ ಸದವಕಾಶ ಸಿಗುತ್ತಿತ್ತು. ನಾಟಕದ ಬಗ್ಗೆ ಆಸಕ್ತಿ ಕುದುರಿತು. ಶ್ರೀ ಸುಬ್ರಹ್ಮಣ್ಯ ಕೃಪಾ ಪೋಷಿತ ನಾಟಕ ಮಂಡಳಿಯ ಭಕ್ತಿ ಸಾಮ್ರಾಜ್ಯ ಸದಾರಮೆ, ಹರಿಶ್ಚಂದ್ರ, ಮೃಚ್ಛಕಟಿಕ, ಗಿರಿಜಾ ಕಲ್ಯಾಣ, ಪ್ರಹ್ಲಾದ ಚರಿತ್ರೆ ಮೊದಲಾದ ನಾಟಕಗಳಲ್ಲಿ ನಟಿಸಿದರು.

ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಕೆಲವು ವರ್ಷ ವಿದ್ಯಾರ್ಥಿಯಾಗಿದ್ದ ಇವರು ಕವಿಭೂಷಣ ಕೆ.ವಿ.ವೆಂಕಟಪ್ಪಶೆಟ್ಟಿ, ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ ಅವರ ಅರ್ಥಗಾರಿಕೆಗೆ ಮಾರುಹೋಗಿ ಯಕ್ಷಗಾನ ದತ್ತ ತಮ್ಮ ಮನಸ್ಸನ್ನು ಹರಿಸಿದರು. ಅಸಾಧಾರಣ ಸ್ಮರಣ ಶಕ್ತಿ ಇವರ ಈ ಕೆಲಸಕ್ಕೆ ಪ್ರಯೋಜನವಾಯಿತು. ನಿರಂತರ ಅಧ್ಯಯನ, ಚಿಂತನ-ಮಂಥನದ ಫಲವಾಗಿ ಕೀರಿಕ್ಕಾಡು ಮಾಸ್ತರರ ಜೊತೆಯಲ್ಲಿ ಅರ್ಥ ಹೇಳುವಂತಾಯಿತು. ಹರಿಕಥೆ ಮಾಡಬೇಕಾದ ಪ್ರಸಿದ್ಧ ಹರಿದಾಸರೊಬ್ಬರು ಅನಾರೋಗ್ಯದ ನಿಮಿತ್ತ ಬಾರದೇ ಇದ್ದಾಗ ಊರವರ ಪ್ರೋತ್ಸಾಹಕ್ಕೆ ಕಟ್ಟು ಬಿದ್ದು ಶೇಣಿಯವರು ಆ ಜವಾಬ್ದಾರಿಯನ್ನು ಹೊತ್ತು ಎಲ್ಲರ ಪ್ರಶಂಸೆಗೆ ಪಾತ್ರರಾದರು. ಹರಿದಾಸರಾಗಿ ಜನಾನುರಾಗಿಯಾಗಿದ್ದ ಕಾಲದಲ್ಲಿ

ಇವರಿಗೆ ಚಲನಚಿತ್ರದಲ್ಲಿ ನಟಿಸಬೇಕೆನ್ನುವ ಹಂಬಲ ಹುಟ್ಟಿತು. ಒಂದೆರಡು ಚಿತ್ರಗಳಲ್ಲಿ ಇವರಿಗೆ ನಟಿಸಲು ಅವಕಾಶ ದೊರೆತರೂ ಚಿತ್ರಪೂರ್ಣಗೊಳ್ಳದೆ ನಿರಾಶರಾಗಿ ಹಿಂತಿರುಗಿದರು. ಇವರಿಗೆ ಮೈಸೂರು ಮಹಾರಾಜರು ರಾಜ ಪರಿವಾರದ ಮುಂದೆ ಹರಿಕೀರ್ತನೆ ಮಾಡುವ ಸುಸಂದರ್ಭ ಒದಗಿಬಂತು. ಮಹಾರಾಜರಿಂದ ಸೈ ಅನ್ನಿಸಿಕೊಂಡರು.

'ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಭಾ'ದ ಯಾಜಮಾನ್ಯದ ಜೊತೆ ಮುಖ್ಯ ಪಾತ್ರವನ್ನು ವಹಿಸುವ ಸಂದರ್ಭ ಇವರಿಗೆ ಒದಗಿ ಬಂತು. ಮೂರು ವರ್ಷಗಳ ಕಾಲ ನಾಡಿನ ಉದ್ದಗಲಕ್ಕೆ ತಿರುಗಿದರು. ಸದವಕಾಶ, ಮುಂದೆ ಸುರತ್ಕಲ್ ಮೇಳ, ಕುಂಡಾವು ಮೇಳ, ಕೂಡ್ಲು, ಧರ್ಮಸ್ಥಳ ಮೇಳಗಳಲ್ಲಿ ಪ್ರಧಾನ ಭೂಮಿಕೆ ಇವರದೇ. ರಾವಣ, ಮಾಗಧ, ವಾಲಿ, ದಾರಿಗಾಸುರ, ಭೀಷ್ಮ, ರಾಜಾಯಂಗರಾತಿ, ಕೌರವ, ಕರ್ಣ, ಅತಿಕಾಯ, ಚಂದ ಗೋಪ ಪಾತ್ರಗಳಲ್ಲಿ ಮಿಂಚಿದರು. 'ಬಪ್ಪನಾಡು ಕ್ಷೇತ್ರ ಮಹಾತ್ಮೆ'ಯಲ್ಲಿ 'ಬಪ್ಪಬ್ಯಾರಿ'ಯಾಗಿ ವಿಜೃಂಭಿಸಿದರು. ಸ್ವತಃ ಮುಸಲ್ಮಾನ ಬಂಧುಗಳು. ಆ ಪಾತ್ರವನ್ನು ಮೆಚ್ಚಿ ಕೊಂಡಾಡಿದರು. ಶೇಣಿಯವರ ಬಪ್ಪ, ವಿಟ್ಲ ಜೋಷಿಯವರ ಉಸ್ಮಾನ್ ಅಭೂತಪೂರ್ವ ಜೋಡಿ ಯಕ್ಷಗಾನ ಚರಿತ್ರೆಯಲ್ಲಿ ದಾಖಲಾಗಿದೆ. ಇವರ ಪಾತ್ರ ನಿರ್ವಹಣೆ ವೈಶಿಷ್ಟ್ಯವೆಂದರೆ ಪಾತ್ರಗಳ ಒಳತೋಟಿ, ಸಂಘರ್ಷಗಳನ್ನು ತೆರೆದಿಡುವ ಶೈಲಿ, ಪಾತ್ರಗಳ ಅಂತರಂಗವನ್ನು ಬಗೆದು ನೋಡುವ ಕ್ರಮ. ಉತ್ತಮ ಕಂಠಸಿರಿ, ತಿಳಿಯಾದ ಭಾಷೆ, ಪ್ರಬುದ್ಧವಾದ ಚಿಂತನ–ಮಂಥನದೊಂದಿಗೆ ಅರ್ಥಧಾರಿ ವೇಷಧಾರಿ ಶೇಣಿಯವರಿಗೆ ಕಲಾ ಪ್ರೇಮಿಗಳು ಮಾತ್ರವಲ್ಲ ಇವರ ಎದುರಾಳಿಗಳೂ ಮನಸೋಲುತ್ತಾರೆ.



ಶೇಣಿಯವರು ಯಕ್ಷಗಾನದ ಕುಣಿತ ಬಲ್ಲವರಾಗಿರಲಿಲ್ಲ; ಮಾತುಗಾರಿಕೆಯಲ್ಲಿ ಅಪ್ರತಿಮರಾಗಿದ್ದರು. ಕುಣಿಯಲಾಗದ ದೋಷವನ್ನು ಮಾತಿನ ಮೋಡಿಯಲ್ಲಿ ಮರೆಸಿಬಿಡುತ್ತಿದ್ದರು. ಇವರಿಗೆ ಪುರಾಣಗಳ ಬಗ್ಗೆ ಇರುವಷ್ಟೇ ಜ್ಞಾನ ಆಧುನಿಕ ವಿಚಾರಗಳ ಬಗೆಗೂ ಇದೆ ಎಂಬುದೇ ಇವರ ವೈಶಿಷ್ಟ್ಯ. ಭಾಗವತಿಕೆಯ ಹಿಮ್ಮೇಳವನ್ನೂ ಬಲ್ಲರು. ಕೆಲವು ಪ್ರಸಂಗಗಳನ್ನೂ ರಚಿಸಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. *

**ಶೇಷಯ್ಯಂಗಾರ್,ಎಚ್.:** 1888–1968. ಹೆಸರಾಂತ ವಿದ್ವಾಂಸರು. ಮೈಸೂರಿನ ಖ್ಯಾತ ಪಂಡಿತರೆನಿಸಿದ್ದ ತಿಮ್ಮಪ್ಪಯ್ಯನವರ ಶಿಷ್ಯರಾಗಿ ಸಂಸ್ಕೃತ ಮತ್ತು ಹಳಗನ್ನಡದಲ್ಲಿ ಒಳ್ಳೆಯ ಪಾಂಡಿತ್ಯವನ್ನು ಗಳಿಸಿಕೊಂಡರು. ಶಾಸನ ಇಲಾಖೆಯಲ್ಲಿ ರಾ.ನರಸಿಂಹಾಚಾರ್ಯರ ಮಾರ್ಗದರ್ಶನದಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದ ಇವರು ಶಾಸನಶಾಸ್ತ್ರವನ್ನೂ ಪರಿಚಯ ಮಾಡಿಕೊಂಡರು. ಅನಂತರ ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಸ್ವಲ್ಪಕಾಲವಿದ್ದು, 1927ರಲ್ಲಿ ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ಸೇರಿದರು. ಅಲ್ಲಿ ಎ.ವೆಂಕಟರಾಯರೊಂದಿಗೆ ಇವರು ಸಂಪಾದಿಸಿದ ಕವಿರಾಜಮಾರ್ಗ ಆ ವಿಶ್ವವಿದ್ಯಾಲಯದ ಕನ್ನಡ ಮಾಲೆಯಲ್ಲಿ ಮೊದಲ ಪ್ರಕಟಣೆಯಾಗಿ ಪ್ರಕಟವಾಯಿತು. ಇವರು ಸಂಪಾದಿಸಿ ಮುನ್ನುಡಿ ಪೀಠಿಕೆಗಳೊಂದಿಗೆ ಪ್ರಕಟಿಸಿದ ಕೆಲವು ಮುಖ್ಯ ಪ್ರಾಚೀನ ಗ್ರಂಥಗಳಿವು: ಪುಷ್ಪ ದಂತಪುರಾಣ, ನೇಮಿನಾಥ ಪುರಾಣ, ಲಿಂಗಣಾರಾಧ್ಯನ ವೃತ್ತಿಯನ್ನೊಳಗೊಂಡ ಶಬ್ದಮಣಿದರ್ಪಣ, ನಾಗವರ್ಮನ ವಸ್ತುಕೋಶ, ಅಭಿಧಾನರತ್ನಮಾಲಾ, ಔಷಧಿಕೋಶ.

ಉದ್ಯೋಗದಿಂದ ನಿವೃತ್ತ ರಾದ ಮೇಲೆ (1943)ಮೈಸೂರಿನಲ್ಲಿ ನೆಲಸಿದ್ದ ಇವರು 1968ರಲ್ಲಿ ನಿಧನರಾದರು. (ಎಂ.ಎಂ.ಬಿ.)

**ಶೇಷಾದ್ರಿ ಅಯ್ಯರ್, ಕೆ.:** 1845–1901. ಮೈಸೂರು ಸಂಸ್ಥಾನದ ದಿವಾನರು (1883–1900). ಕೇರಳದ ಪಾಲ್‌ಘಾಟ್ ಜಿಲ್ಲೆಯಲ್ಲಿ ಜನಿಸಿದ ಇವರು ಅಲ್ಲಿಯೇ ವಿದ್ಯಾಭ್ಯಾಸ ಮಾಡಿ ಬಿ.ಎ. ಪದವೀಧರರಾಗಿ (1865) ಅನಂತರ ಕಲ್ಲಿಕೋಟೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭಾಷಾಂತರಕಾರರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಆಗ ಅಲ್ಲಿ ಅಧಿಕಾರಿಯಾಗಿದ್ದ ರಂಗಾಚಾರ್ಲು ಅವರು ಮೈಸೂರು ಸಂಸ್ಥಾನದಲ್ಲಿ ಅಧಿಕಾರ ವಹಿಸಿಕೊಂಡಾಗ, ಇವರನ್ನೂ ಮೈಸೂರಿಗೆ ಕರೆಸಿಕೊಂಡರು. ಇವರು 1868ರಲ್ಲಿ ಮೈಸೂರು ಸಂಸ್ಥಾನದ ಅಷ್ಟಗ್ರಾಮ ವಿಭಾಗದ ಸೂಪರಿಂಟೆಂಡೆಂಟರ ಕಛೇರಿಯಲ್ಲಿ ನ್ಯಾಯಾಂಗ ಶಿರಸ್ತೇದಾರರಾದರು. ಅನಂತರ ರಾಜ್ಯದ ಆಡಳಿತದಲ್ಲಿನ ನಾನಾ ಹಂತಗಳಲ್ಲಿ ಸೇವೆಸಲ್ಲಿಸಿ 1879ರಲ್ಲಿ ತುಮಕೂರಿನಲ್ಲಿ ಜಿಲ್ಲಾಧಿಕಾರಿಗಳಾದರು. ರಂಗಾಚಾರ್ಲು ಅವರು ದಿವಾನರಾಗಿ ನೇಮಿತರಾದ ಮೇಲೆ ಆ ಹೊತ್ತಿಗೆ ಬಿ.ಎಲ್. ಪದವಿಯನ್ನೂ ಪಡೆದಿದ್ದ ಅಯ್ಯರ್ ಅವರನ್ನು ತಮ್ಮ ಸ್ವಂತ ಕಛೇರಿಗೆ ಸೇರಿಸಿಕೊಂಡರು. ದಿವಾನ್ ರಂಗಾಚಾರ್ಲು ಅವರು ಪ್ರವಾಸ ಇತ್ಯಾದಿಗಳಿಗೆ ಬೆಂಗಳೂರಿನಿಂದ ಹೊರಗಿದ್ದಾಗ ಅಯ್ಯರ್‌ರವರೇ ಅವರ ಕಾರ್ಯಕ್ರಮವನ್ನು ನಡೆಸುತ್ತಿದ್ದು ಆಡಳಿತದಲ್ಲಿ ಅಪಾರ ಅನುಭವ ಗಳಿಸಿದರು. ರಂಗಾಚಾರ್ಲು ನಿಧನರಾದಾಗ (1883) ದಿವಾನ ಪದವಿ ಇವರಿಗೆ ಲಭಿಸಿತು.

ಆಧುನಿಕ ಮೈಸೂರಿನ ಇತಿಹಾಸದಲ್ಲಿ ದೀರ್ಘಕಾಲವೆನಿಸಿದ ಅವಧಿಯಲ್ಲಿ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರ ಸಾಧನೆಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು. ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹಲವಾರು ಕ್ರಮಗಳನ್ನು ಕೈಗೊಂಡರು. ರಾಜ್ಯದ ಆದಾಯವನ್ನು ಹೆಚ್ಚಿಸಲು ಹಲವಾರು ಹೆದ್ದಾರಿಗಳ ನಿರ್ಮಾಣ ಕಾರ್ಯ, ಬೆಂಗಳೂರಿನಿಂದ ಹರಿಹರದವರೆಗೆ (1889) ಮತ್ತು ಹಿಂದೂಪುರದವರೆಗೆ (1893) ರೈಲ್ವೆ ಮಾರ್ಗದ ವಿಸ್ತರಣೆ. ಮುಖ್ಯವೆನಿಸಿದ ನೀರಾವರಿ ಕಾರ್ಯಗಳ ಪೂರೈಕೆ ಮತ್ತು ಕೈಗಾರಿಕೆಗಳ ಸ್ಥಾಪನೆಯನ್ನು ತ್ವರಿತಗೊಳಿಸಿದರು. ಭೂಕಂದಾಯದ ವಸೂಲಿಯಲ್ಲಿ ವಿಚಕ್ಷಣೆ ತೋರಿಸಿ ಆದಾಯವನ್ನು ಹೆಚ್ಚಿಸಿದರು. ರಾಜ್ಯದ ಪ್ರಮುಖ ಕೈಗಾರಿಕೆಯಾದ ಚಿನ್ನದ ಗಣಿಯ ಉದ್ಯಮಕ್ಕೆ ಉತ್ತೇಜನ ಕೊಟ್ಟು, ಅದರಿಂದ ಸಂಸ್ಥಾನದ ಖಜಾನೆಗೆ ಸು. 7 1/2 ಲಕ್ಷ ರೂಪಾಯಿ ಆದಾಯ ಬರುವಂತೆ ಮಾಡಿದರು. ರಾಜ್ಯದ ಭೂವಿಜ್ಞಾನ ಸಮೀಕ್ಷೆಯನ್ನು ನಡೆಸುವ ಏರ್ಪಾಡಾಯಿತು. ಇವರ ಒತ್ತಾಯದ ಪರಿಣಾಮವಾಗಿ ರಾಜ್ಯ

ಭಾರತ ಸರ್ಕಾರಕ್ಕೆ ಕೊಡಬೇಕಾಗಿದ್ದ ಪೊಗದಿಯ ಹೆಚ್ಚಳವನ್ನು ತಡೆಹಿಡಿಯಲಾಯಿತು. ಅರಣ್ಯ ಆದಾಯವನ್ನು ಹೆಚ್ಚಿಸಲು ಕಾಫಿ ಮತ್ತು ಇತರ ಪ್ಲಾಂಟೇಷನ್‌ಗಳನ್ನು ವಿಸ್ತರಿಸಲಾಯಿತು. ಸ್ಥಳೀಯ ಸಂಸ್ಥೆಗಳ ಚಟುವಟಿಕೆಗಳಲ್ಲಿ ಪ್ರಜೆಗಳು ಪಾಲುಗೊಳ್ಳುವಂತೆ ಏರ್ಪಾಡು ಮಾಡಿ, ರಾಜ್ಯದಲ್ಲಿ ಮೊದಲ ಬಾರಿಗೆ ತಾಲ್ಲೂಕು ಬೋರ್ಡುಗಳನ್ನು 1884ರಲ್ಲಿ ಸ್ಥಾಪಿಸಲಾಯಿತು. ಸರ್ಕಾರಿ ನೌಕರರ ಹಿತರಕ್ಷಣೆಗಾಗಿ ಜೀವವಿಮಾ ಯೋಜನೆಯನ್ನು ರೂಪಿಸಿ ಅದನ್ನು ಸಾರ್ವಜನಿಕರ ಸೇವೆಗಾಗಿ ವಿಸ್ತರಿಸಿದರು. ರಾಜ್ಯದ ಪ್ರಾಚೀನ ಶಾಸನಗಳನ್ನು ಪರಿಶೀಲಿಸಿ, ಪ್ರಕಟಿಸುವ ಸಲುವಾಗಿ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯನ್ನು ಸುಧಾರಿಸಿ, ವಿದ್ವಾಂಸರಾದ ರೈಸ್ ಅವರ ನೇತೃತ್ವದಲ್ಲಿ ಆ ಕೆಲಸ ನಡೆಯುವಂತೆ ಏರ್ಪಾಡು ಮಾಡಿದರು. 1890ರಲ್ಲಿ ಓರಿಯೆಂಟಲ್ ಲೈಬ್ರರಿಯನ್ನು ಮೈಸೂರಿನಲ್ಲಿ ಸ್ಥಾಪಿಸಿ, ರಾಜ್ಯದ ಅಮೂಲ್ಯವಾದ ಹಸ್ತಪ್ರತಿಗಳನ್ನು ಅಲ್ಲಿ ಶೇಖರಿಸಿ ಪ್ರಕಟಿಸುವ ಕಾರ್ಯವನ್ನು ಅದಕ್ಕೆ ವಹಿಸಿದರು. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡುವ ಸಲುವಾಗಿ ಮಹಾರಾಣಿಯವರ ಹೆಸರಿನಲ್ಲಿ ಶಾಲೆಯೊಂದನ್ನು ಸ್ಥಾಪಿಸಿದರು.

ಪ್ರತಿಭಾವಂತ ಯುವಕರಿಗೆ ಆಡಳಿತದಲ್ಲಿ ಸೇವೆ ಸಲ್ಲಿಸಲು ಅವಕಾಶವನ್ನು ಏರ್ಪಡಿಸುವ ಸಲುವಾಗಿ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನೂ ಜಾರಿಗೆ ತಂದರು. ಧಾರ್ಮಿಕ ದತ್ತಿಗಳ ಆಡಳಿತದಲ್ಲಿ ಸುಧಾರಣೆಗಳನ್ನು ಜಾರಿಗೆ ತಂದು ಹಣ ಪೋಲಾಗದಂತೆ ನೋಡಿಕೊಂಡರು. ನ್ಯಾಯಾಂಗದಲ್ಲಿ ಬದಲಾವಣೆಗಳನ್ನು ಮಾಡಿ ರಾಜ್ಯದಲ್ಲಿ ನ್ಯಾಯಕ್ಕೆ ಚ್ಯುತಿ ಬರದಂತೆ ಏರ್ಪಾಡು ಮಾಡಿದರು.

ಸಂಸ್ಥಾನದಲ್ಲಿ ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲು ಇವರು ನಾನಾ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದರು. ಮುಖ್ಯವಾಗಿ ಶಿವಸಮುದ್ರದಲ್ಲಿ ವಿದ್ಯುತ್ ಆಗರವನ್ನು ಸ್ಥಾಪಿಸಿದರು. ನೀರನ್ನು ಬಳಸಿ ವಿದ್ಯುಚ್ಛಕ್ತಿ ಪಡೆಯಲು ಈ ಯಂತ್ರಾಗಾರ ಭಾರತದಲ್ಲೇ ಮೊಟ್ಟ ಮೊದಲನೆಯದಾಗಿದ್ದು ಅದನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇದರ ಸ್ಥಾಪನೆಯಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆಗೆ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಅನುಕೂಲವಾಯಿತು. ರಾಜ್ಯದ ಮಾರಿಕಣಿವೆಯ ಜಲಾಶಯವನ್ನು ಕಟ್ಟಿಸಿ, ಆ ಪ್ರದೇಶದ ರೈತರಿಗೆ ಅನುಕೂಲ ಮಾಡಿದರು.

ಇವರ ಸೇವೆಯನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಇವರಿಗೆ ಕೆ.ಸಿ.ಎಸ್.ಐ. ಪದವಿಯನ್ನೂ (1893) ಮೈಸೂರು ಮಹಾರಾಜರು ರಾಜ್ಯದುರಂಧರ ಎಂಬ ಬಿರುದನ್ನೂ ಇತ್ತು ಗೌರವಿಸಿದರು. ಇವರು 1900ರ ಆಗಸ್ಟ್‌ನಲ್ಲಿ ವಿಶ್ರಾಂತಿಪೂರ್ವ ರಜೆಯನ್ನು ಪಡೆದು, 1901 ಸೆಪ್ಟೆಂಬರ್‌ನಲ್ಲಿ ನಿಧನರಾದರು. ಮೈಸೂರು ರಾಜ್ಯಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಿದ ಇವರ ಆಡಳಿತ ವಿಚಕ್ಷಣೆ ಮತ್ತು ದೂರದರ್ಶಿತ್ವವನ್ನು ಅರಿತಿದ್ದ ಭಾರತದ ವೈಸರಾಯ್ ಆಗಿದ್ದ ಲಾರ್ಡ್ ಹಾರ್ಡಿಂಜರೇ ಸ್ವತಃ ಬೆಂಗಳೂರಿಗೆ ಬಂದು ಶೇಷಾದ್ರಿ ಅಯ್ಯರ್ ಅವರ ನೆನಪಿಗಾಗಿ ಕಟ್ಟಿದ್ದ ಒಂದು ಭವನವನ್ನೂ ಈಗಿನ ಕಬ್ಬನ್ ಪಾರ್ಕ್‌ನಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯ ಕಟ್ಟಡ ಇವರ ಪ್ರತಿಮೆಯನ್ನೂ ಅನಾವರಣ ಮಾಡಿದರು. (ಕೆ.ಟಿ.ಆರ್.)

**ಶೋಭಾನಾರಾಯಣ:** 1975– . ಪ್ರಸಿದ್ಧ ಖೋಖೋ ಆಟಗಾರ್ತಿ. ಈ ಕ್ರೀಡೆಗಾಗಿ ಅರ್ಜುನ ಪ್ರಶಸ್ತಿ ಪುರಸ್ಕೃತರಾದ ಕರ್ನಾಟಕದ ಮೊದಲ ಮಹಿಳೆ. ಇವರು 1975 ಫೆಬ್ರವರಿ 15ರಂದು ಬೆಂಗಳೂರಿನ ಕೊಡಿಗೇಹಳ್ಳಿಯಲ್ಲಿ ಜನಿಸಿದರು. ಸರ್ಕಾರಿ ಬಾಲಕಿಯರ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಸಿ ಅನಂತರ ಮಹಾರಾಣಿ ಮಹಿಳಾ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ಇವರಿಗೆ ಅಥ್ಲೆಟಿಕ್ಸ್ ಹಾಗೂ ಥ್ರೋಬಾಲ್‌ನಲ್ಲಿ ಹೆಚ್ಚಿನ ಆಸಕ್ತಿ ಇದ್ದರೂ ಖೋಖೋ ಆಟಕ್ಕೆ ಆದ್ಯತೆ ನೀಡಿದರು. ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ಪ್ರತಿನಿಧಿಸಿ ಸು. 12 ವರ್ಷಗಳ ಕಾಲ ಖೋಖೋ ಪಂದ್ಯಗಳನ್ನು ಆಡಿದರು.

ರಾಷ್ಟ್ರೀಯ ಹಾಗೂ ಇನ್ನಿತರೆ ಪಂದ್ಯಾವಳಿಗಳಿಗೆ ಇವರು ಕರ್ನಾಟಕ ಖೋಖೋ ತಂಡದ ಖಾಯಂ ಸದಸ್ಯರಾಗಿದ್ದರು. ಇವರು ಕೆಲವು ವೈಯಕ್ತಿಕ ಪ್ರಶಸ್ತಿಗಳನ್ನೂ ಪಡೆದುಕೊಂಡಿದ್ದಾರೆ. ಸೀನಿಯರ್ ದಕ್ಷಿಣ ವಲಯ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಆಲ್‌ರೌಂಡರ್ ಪ್ರಶಸ್ತಿ, ಅಜಯ್‌ಮೋರ್ ಸ್ಮರಣಾರ್ಥ ಪಾರಿತೋಷಿಕ– ಇವುಗಳನ್ನು ಹೆಸರಿಸಬಹುದು. ಇವರಿಗೆ ಏಕಲವ್ಯ, ರಾಣಿಲಕ್ಷ್ಮೀಬಾಯಿ, ಒನಕೆ ಓಬವ್ವ ಪ್ರಶಸ್ತಿಗಳು ಲಭಿಸಿವೆ. ಇವರ ಸಾಧನೆಗೆ ಭಾರತ ಸರ್ಕಾರ ಅರ್ಜುನ ಪ್ರಶಸ್ತಿಯನ್ನಿತ್ತು ಗೌರವಿಸಿದೆ (1998). 1995ರ ಸಾಫ್‌ಗೇಮ್ಸ್‌ನಲ್ಲಿ ಇವರು ಖೋಖೋ ಪ್ರದರ್ಶನ ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. (ಎಸ್.ಆರ್.ಯು.)

**ಶೌಕತ್ ಅಲಿ, ಮೀರ್:** 1920–76. ಹುದುಗು ಚಿತ್ರ (ಇನ್‌ಲೇ) ಮತ್ತು ಚಿತ್ರಕಲೆಯ ಪ್ರಸಿದ್ಧ ಕಲಾವಿದರು. 1920 ಆಗಸ್ಟ್ 12ರಂದು ಜನಿಸಿದರು. ಮೈಸೂರಿನ ಅನ್ವರ್ ಹುಸೇನ್ ಇವರ ತಂದೆ. ಮಗ ಓದಿ ಪದವೀಧರನಾಗಿ ಸರ್ಕಾರಿ ನೌಕರಿ ಮಾಡಬೇಕೆಂಬುದು ತಂದೆಯ ಆಸೆಯಾಗಿತ್ತು. ಶೌಕತ್ ಅಲಿ ಅವರು ಓದಿಗಿಂತ ಚಿತ್ರಕಲೆಯಲ್ಲಿ ಆಸಕ್ತಿ ತೋರಿದ್ದರಿಂದ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿಸಿದರು. ಇದೇ ಸಂದರ್ಭದಲ್ಲಿ ಇವರಿಗೆ ಕಸೂತಿಕಲೆಯಲ್ಲಿ ನಿಪುಣೆಯಾಗಿದ್ದ ತಾಯಿಯ ಪ್ರೋತ್ಸಾಹ ದೊರಕಿತು. ಶೌಕತ್ ಅಲಿ ಅವರು ಶಾಲೆಯೊಳಗಿನ ಅಭ್ಯಾಸದ ಜೊತೆಗೆ ಪ್ರಕೃತಿಯ ಬೆಡಗನ್ನೂ ಪ್ರಾಣಿಪಕ್ಷಿಗಳನ್ನೂ ಸೂಕ್ಷ್ಮವಾಗಿ ಗಮನಿಸಿ ಅಭ್ಯಸಿಸಿ, ಅವುಗಳ ನಿಜಸ್ವರೂಪ, ವೈವಿಧ್ಯಮಯ ಬಣ್ಣಗಳನ್ನು ಮನನ ಮಾಡಿಕೊಂಡರು. ಹಾಗೇ ವರ್ಣಕಟ್ಟು ಮತ್ತು ಪ್ರಧಾನರೇಖೆಗಳ ಸಂಬಂಧಗಳನ್ನು ಗಮನಿಸಿದರು. ಮುಂದೆ ಸರ್ಕಾರಿ ವಿದ್ಯಾರ್ಥಿ ವೇತನ ಪಡೆದು ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿ ಅಭ್ಯಾಸ ಮಾಡಿ ಮೈಸೂರಿಗೆ ಹಿಂದಿರುಗಿ ಸ್ವತಂತ್ರ ಜೀವನ ನಡೆಸಲು ಪ್ರಾರಂಭಿಸಿದರು.

ಇವರು ರೇಖಾಚಿತ್ರದಲ್ಲಿ ಪ್ರಾವೀಣ್ಯತೆ ಗಳಿಸಿದ್ದಂತೆ ಹುದುಗುಚಿತ್ರ ನಿರ್ಮಾಣದಲ್ಲೂ ಸಾಕಷ್ಟು ಅಭ್ಯಾಸ ಮಾಡಿದ್ದರು. ತಮ್ಮ ಅನುಭವ ಮತ್ತು ಕಲ್ಪನೆಗಳನ್ನು ಮರದ ವಿವಿಧ ಬಣ್ಣಗಳ ತುಣುಕುಗಳನ್ನು ಕಲಾಪೂರ್ಣವಾಗಿ ಅಳವಡಿಸಿ ಜೀವ ತುಂಬುತ್ತಿದ್ದರು. ಹುದುಗುಚಿತ್ರಕಲಾವಿದರಾಗಿ ಮೈಸೂರಿನಲ್ಲಿ ಇವರು ಅಸೋಸಿಯೇಟೆಡ್ ಆರ್ಟ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅನೇಕರಿಗೆ ಮಾರ್ಗದರ್ಶಿಗಳಾದರು. ಇವರು ಕೆನರಾ ಬ್ಯಾಂಕಿನ ಡೈರೆಕ್ಟರುಗಳಲ್ಲಿ ಒಬ್ಬರಾಗಿದ್ದು ಕರಕುಶಲಕರ್ಮಿಗಳಿಗೆ ಆರ್ಥಿಕ ನೆರವು ದೊರೆಯುವಂತೆ ನೋಡಿಕೊಳ್ಳುತ್ತಿದ್ದರು.

ಅಪೂರ್ವವಾದ ಹುದುಗುಚಿತ್ರ ಕಲೆಯಲ್ಲಿ ವರ್ಣಚಿತ್ರದ ವೈಖರಿಯನ್ನು ತೋರಿಸಬಲ್ಲ ಕೀರ್ತಿ ಇವರದಾಗಿತ್ತು. ಇವರ ಕೃತಿಗಳಲ್ಲಿ ನಾವು ಕಾಣುವುದು

ಸಹಜತೆಯನ್ನು. ಇವರ ನೂರಾರು ಹಳ್ಳಿಯ ದೃಶ್ಯಗಳಲ್ಲಿ ಅಲ್ಲಿನ ಸಹಜಸೌಂದರ್ಯ ಸುಂದರವಾಗಿ ಮೂಡಿಬಂದಿದೆ. ನೆಳಲು–ಬೆಳಕುಗಳ ವೈವಿಧ್ಯವನ್ನೂ ಆಕರ್ಷಕವಾಗಿ ಮೂಡಿಸುತ್ತಿದ್ದರು. ಇವರ ಉತ್ತಮ ಕೃತಿಗಳಲ್ಲಿ ಬಹು ಹೆಸರಾದವು: ಹಳ್ಳಿ ಮದುವೆ, ಉಮರನ ಒಸಗೆ, ಹಾವಾಡಿಗ, ಮೀನುಗಾರ, ಹಳ್ಳಿಯ ಗಾಯಕ, ಕುರಿಯವನು, ಕುಕ್ಕೆ ಹೆಣೆಯುವವರ ಬಿಡಾರ, ನೀರು ತರುವ ವನಿತೆ, ಸ್ತ್ರೀರೂಪದ ಚಿತ್ರ, ನದಿಯ ದೃಶ್ಯವೊಂದರಲ್ಲಿ ಬಾತುಗಳನ್ನು ನೀರಿಗೆ ಬಿಡುತ್ತಿರುವ ವ್ಯಕ್ತಿಚಿತ್ರ ಹಾಗೂ ಅಲ್ಲಿನ ಪ್ರಕೃತಿ ಜೋಡಣೆ ಅಪೂರ್ವವಾದುವು. ಇವರ ಕೊನೆಯ ದಿನಗಳಲ್ಲಿ ಬಿಡಿಸಿದ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ರೂಪಚಿತ್ರಗಳು ಅಪರೂಪದ ಹುದುಗುಚಿತ್ರ ಕಲಾಕೃತಿಗಳು. ಇಲ್ಲಿ ಇವರು ಸ್ವಾಭಾವಿಕ ವರ್ಣಗಳ ಮರದ ತುಣುಕುಗಳಿಂದಲೇ ಆಕೃತಿಗಳನ್ನು ರಚಿಸಿ ತಮ್ಮ ಜಾಣ್ಮೆಯನ್ನು ತೋರಿದ್ದಾರೆ. ಕತ್ತರಿಸಿದ ಮರದಲ್ಲೇ ಆಕೃತಿಗಳನ್ನು ಕಂಡುಹಿಡಿಯುವ ಸೂಕ್ಷ್ಮತೆ, ಅಸ್ಪಷ್ಟವಾಗಿ ತೋರುವ ರೂಪಗಳಿಗೆ ತಮ್ಮ ಕಲ್ಪನೆಯ ರೇಖೆಗಳಿಂದ ಸಹಜಸೌಂದರ್ಯವನ್ನು ತುಂಬುವ ಜಾಣ್ಮೆ ಇವರದಾಗಿತ್ತು. ವಿದೇಶೀಯ ಕಲಾಭಿಮಾನಿಗಳೂ ಇವರ ಕಲೆಗೆ ಮಾರುಹೋಗಿದ್ದರು. ಸೋದರ ಕಲಾವಿದರ ಬಗ್ಗೆ, ಅವರ ಕೃತಿಗಳ ಬಗ್ಗೆ ಹೃದಯ ತುಂಬಿ ಸದಭಿಪ್ರಾಯ ವ್ಯಕ್ತಪಡಿಸುವ ದೊಡ್ಡ ಗುಣ ಇವರದಾಗಿತ್ತು.

ಇವರಿಗೆ ಕೇಂದ್ರ ಸರ್ಕಾರದ ಮಾಸ್ಟರ್ ಕ್ರಾಫ್ಟ್ಸ್‌ಮನ್ ಪ್ರಶಸ್ತಿಯೂ (1966) ರಾಜ್ಯ ಸರ್ಕಾರದ ಪ್ರಶಸ್ತಿಯೂ (1969) ಲಭ್ಯವಾಗಿದ್ದವು. ಇವರು 1976 ಅಕ್ಟೋಬರ್ 5ರಂದು ಮೈಸೂರಿನಲ್ಲಿ ನಿಧನರಾದರು. (ಪಿ.ಆರ್.ಟಿ.)

**ಶ್ಯಾಮಲ ಜಾಗೀರ್‌ದಾರ್:** 1941– . ಸುಗಮ ಸಂಗೀತ ಕ್ಷೇತ್ರದ ಹೆಸರಾಂತ ಕಲಾವಿದೆ. 1941 ಏಪ್ರಿಲ್ 5ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಜಿ.ಜಾಗೀರ್‌ದಾರ್, ತಾಯಿ ಕೃಷ್ಣಮ್ಮ. ವೃತ್ತಿಯಿಂದ ಇವರ ತಂದೆ ಹೈದರಾಬಾದ್ ನಿಜಾಮನಿಗೆ ಕಾನೂನು ಸಲಹೆಗಾರರಾಗಿದ್ದರು. ಸದಾ ದೇವರನಾಮಗಳನ್ನು, ಸಂಸ್ಕೃತದ ಶ್ಲೋಕಗಳನ್ನು ಹಾಡುತ್ತಿದ್ದ ತಂದೆ ತಾಯಿಯರಿಂದ ಇವರಿಗೆ ಬಾಲ್ಯದಲ್ಲಿಯೇ ಸಂಗೀತದ ಪರಿಸರ ಒದಗಿತು. ಇವರ ಮೊದಲ ಸಂಗೀತದ ಗುರು ಚಿಕ್ಕಪ್ಪನವರಾದ ರಂಗರಾವ್. ಅನಂತರ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತವನ್ನು ಗುರುಗಳಾದ ಅವಧೂತ್ ಬುವಾ ಹಾಗೂ ರಾಮಚಂದ್ರಜೋಶಿಯವರಲ್ಲಿ ಅಭ್ಯಾಸ ಮಾಡಿದರು. ಜೊತೆಗೆ ಸುಗಮ ಸಂಗೀತದಲ್ಲಿ ಸಾಕಷ್ಟು ಅಭಿರುಚಿ ಇದ್ದುದರಿಂದ ಆ ಕ್ಷೇತ್ರದಲ್ಲೂ ತಮ್ಮನ್ನು ಹೆಚ್ಚು ಹೆಚ್ಚು ತೊಡಗಿಸಿಕೊಂಡರು. ಸುಗಮಸಂಗೀತ ಕ್ಷೇತ್ರದಲ್ಲಿ ಮೂರು ದಶಕಗಳಿಂದ ಸಿರಿಕಂಠದ ಗಾಯಕಿಯಾಗಿ ಜನಮನವನ್ನು ಸೂರೆಗೊಂಡರು. ಇವರು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಪ್ರಥಮ ಕಾರ್ಯಕ್ರಮವನ್ನು ನೀಡಿದುದು ಇವರ ಹೆಚ್ಚುಗಾರಿಕೆಯಾಗಿದೆ.

ಆಕಾಶವಾಣಿ ಸಂಗೀತಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ ಇವರು ಆಕಾಶವಾಣಿಯ ಕಲಾವಿದೆಯಾಗಿ ಧ್ವನಿ ತಟ್ಟೆಗಳಿಗೆ ಹಾಡಿದ್ದಾರೆ. ಉಪೇಂದ್ರಕುಮಾರ್ ಅವರ ಸಂಗೀತ ನಿರ್ದೇಶನದಲ್ಲಿ ವಚನಗಳನ್ನೂ ಎಂ.ವೆಂಕಟರಾಜುರವರ ನಿರ್ದೇಶನದಲ್ಲಿ ರಾಘವೇಂದ್ರಸ್ವಾಮಿಗಳ ಹಾಡುಗಳನ್ನೂ ಧ್ವನಿ ಮುದ್ರಿಸಿದ್ದಾರೆ. ಇದಲ್ಲದೆ ಇವರು ಪಾಲಿಗೆ ಬಂದ ಪಂಚಾಮೃತ, ವಜ್ರಮುಂಗುರ, ಸಂಪೂರ್ಣ ರಾಮಾಯಣ ಚಲನಚಿತ್ರಗಳಿಗೆ ಹಿನ್ನೆಲೆಗಾಯಕಿಯಾಗಿದ್ದರು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಂಗೀತ ಕಛೇರಿಗಳನ್ನು ನೀಡಿದ್ದಾರೆ. ರಷ್ಯ ದೇಶದ ಅಧ್ಯಕ್ಷರು, ಪ್ರಧಾನಿ ಜವಾಹರಲಾಲ್ ನೆಹರು, ಲಾಲ್ ಬಹಾದ್ದೂರ್‌ಶಾಸ್ತ್ರಿ, ರಾಧಾಕೃಷ್ಣನ್, ಇಂದಿರಾಗಾಂಧಿ ಮೊದಲಾದವರ ಸಮ್ಮುಖದಲ್ಲಷ್ಟೇ ಅಲ್ಲದೆ ಇಂಗ್ಲೆಂಡಿನ ರಾಜ ರಾಣಿ, ನೇಪಾಲದ ರಾಜ ರಾಣಿ, ಸೌದೀ ಅರೇಬಿಯ, ಇಥಿಯೋಪಿಯ, ಬರ್ಮಾದೇಶದ ರಾಜರುಗಳ ಸಮ್ಮುಖದಲ್ಲೂ ಹಾಡಿದ್ದಾರೆ. ಅನೇಕ ಭಾರತೀಯರಿಗೆ ವಿದೇಶೀಯರಿಗೆ ಸಂಗೀತವನ್ನು ಕಲಿಸುವುದರ ಮೂಲಕ ಪರಂಪರೆಯ ಬೆಳೆವಣಿಗೆಗೆ ಕಾರಣರಾಗಿದ್ದಾರೆ.

ಇವರ ಸಂಗೀತ ಸೇವೆಗಾಗಿ ಅನೇಕ ಪ್ರಶಸ್ತಿಗಳು ಹಾಗೂ ಬಿರುದುಗಳು ಇವರನ್ನು ಅರಸಿಕೊಂಡು ಬಂದಿವೆ. ಅವುಗಳಲ್ಲಿ ಮಿಸ್ ಮೆಲೊಡಿ ಆಫ್ ಕರ್ನಾಟಕ, ಸ್ವೀಟ್ ವಾಯ್ಸ್ ಆಫ್ ಮೈಸೂರ್, ದಕ್ಷಿಣದ ಕೋಗಿಲೆ, ರಾಗರಂಜಿನಿ–ಇವು ಪ್ರಮುಖವಾದವುಗಳು. ಇವರು ಗಾಯನಕ್ಕಾಗಿ ಸುವರ್ಣ ಪದಕ, ರಜತ ಪದಕಗಳನ್ನು ಪಡೆದಿದ್ದಾರೆ. ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ (1987), ರಾಜ್ಯೋತ್ಸವ ಪ್ರಶಸ್ತಿ (1994), ಶಿಶುನಾಳ ಶರೀಫ್ ಪ್ರಶಸ್ತಿ (2003) ಲಭಿಸಿವೆ.

ಇವರು ಬೆಂಗಳೂರು ರಾಜಾಜಿನಗರದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ, ಅದೇ ಸಂಘದ ಲಲಿತಕಲಾ ಅಕಾಡೆಮಿಯ ನಿರ್ದೇಶಕರಾಗಿ, ಬೆಂಗಳೂರಿನ ಅಕ್ಷಯ ಕಲಾಕೇಂದ್ರದ ನಿರ್ದೇಶಕರಾಗಿ ಸೇವೆಸಲ್ಲಿಸಿದ್ದಾರೆ. ಭಾರತದ ರೆಡ್‌ಕ್ರಾಸ್ ಸಂಸ್ಥೆಗಾಗಿ ಪ್ರಾರ್ಥನಾಗೀತೆಗಳನ್ನು ಹಾಡುವುದು, ವೃದ್ಧಾಶ್ರಮಗಳಿಗೆ ಹೋಗಿ ಅವರಿಗಾಗಿ ಹಾಡುವುದು ಮೊದಲಾದ ಚಟುವಟಿಕೆಗಳ ಮೂಲಕ ಸಮಾಜಸೇವೆಯಲ್ಲಿ ತೊಡಗಿದ್ದಾರೆ. (ಎಚ್.ಆರ್.ಎಲ್.)

**ಶ್ಯಾಮಲ ಜಿ.ಭಾವೆ:** 1941– . ಪ್ರಸಿದ್ಧ ಸಂಗೀತ ವಿದುಷಿ. ಕರ್ನಾಟಕ ಹಾಗೂ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ ಪದ್ಧತಿಗಳೆರಡರಲ್ಲೂ ಅಪಾರ ವಿದ್ವತ್ತು ಗಳಿಸಿದ ಇವರು ಉಭಯಗಾನವಿಶಾರದೆ ಎಂಬ ಬಿರುದಿನಿಂದ ಪ್ರಖ್ಯಾತರು. 1941 ಮಾರ್ಚ್ 14 ರಂದು ಜನಿಸಿದರು. ಇವರದು ಕಲಾಪ್ರತಿಭಾನ್ವಿತರ ಮನೆತನ. ಮುತ್ತಾತ ವಿಷ್ಣುದಾಸ್ ಭಾವೆ ಮರಾಠಿ ರಂಗಭೂಮಿಯ ಆದ್ಯ ನಾಟಕಕಾರರೆನಿಸಿದವರು. ತಂದೆ ಗೋವಿಂದ ಭಾವೆ, ತಾಯಿ ಲಕ್ಷ್ಮೀ ಜಿ ಭಾವೆ. ಈ ಇಬ್ಬರೂ ಪ್ರಸಿದ್ಧ ಹಿಂದುಸ್ಥಾನಿ ಗಾಯಕರು. ಇವರ ತಂದೆ ಹಾಡುವುದರೊಂದಿಗೆ 14 ವಾದ್ಯಗಳನ್ನು ನುಡಿಸುವುದರಲ್ಲಿ ಪರಿಣತರಾಗಿದ್ದರು. ಅವರು ಬೆಂಗಳೂರಿನ ಸರಸ್ವತಿ ಸಂಗೀತ ವಿದ್ಯಾಲಯದ ಸಂಸ್ಥಾಪಕರು (1931). ಈಗ ಈ ವಿದ್ಯಾಲಯ ಸ್ಥಾಪನೆಗೊಂಡು 75 ವರ್ಷಗಳಾಗಿವೆ. ಎಳೆತನದಿಂದ ಸಂಗೀತ ಪರಿಸರದಲ್ಲಿ ಬೆಳೆದ ಶ್ಯಾಮಲ ಅವರು ತಮ್ಮ 6ನೆಯ ವಯಸ್ಸಿನಲ್ಲಿಯೇ ಸಾರ್ವಜನಿಕ ಕಾರ್ಯಕ್ರಮ ನೀಡಲು ಪ್ರಾರಂಭಿಸಿದರು. ತಂದೆಯೇ ಇವರ ಮೊದಲ ಗುರು. ಅನಂತರ ಎ.ಸುಬ್ಬರಾವ್, ಬಿ.ದೊರೆಸ್ವಾಮಿ,

ಎಂ.ಬಾಲಮುರಳಿ ಕೃಷ್ಣ ಅವರಿಂದ ಕರ್ನಾಟಕ ಸಂಗೀತದಲ್ಲೂ ಪಂಡಿತ ಜಸ್‌ರಾಜ್ ಅವರಿಂದ ಹಿಂದುಸ್ಥಾನಿ ಸಂಗೀತದಲ್ಲೂ ವಿಶೇಷ ತರಬೇತಿ ಪಡೆದರು. ಇವರು ಸಂಗೀತದಲ್ಲಿ ಸ್ನಾತಕೋತ್ತರ ಪದವೀಧರೆ.

ಸಂಗೀತ ಕ್ಷೇತ್ರದಲ್ಲಿ ಐದು ದಶಕಗಳಿಗೂ ಹೆಚ್ಚು ಕಾಲ ಕಲಾ ಸೇವೆಯಲ್ಲಿ ನಿರತರಾಗಿದ್ದಾರೆ. ಸುಗಮಸಂಗೀತ, ಲಘುಶಾಸ್ತ್ರೀಯ ಸಂಗೀತಗಳಲ್ಲಿಯೂ ಸಾಧನೆಗೈದಿದ್ದಾರೆ. ಗಾಯನಕ್ಕೆ ಪೂರಕವಾದ ವಾದ್ಯ ಸಂಗೀತಗಳಾದ ಸಿತಾರ್, ಜಲತರಂಗ್, ಹಾರ್ಮೋನಿಯಂ, ದಿಲ್ ರುಬಾ ಮತ್ತು ಪಿಯಾನೋ ವಾದನಗಳಲ್ಲೂ ಪರಿಣತಿ ಹೊಂದಿದ್ದಾರೆ. ಶಾಸ್ತ್ರೀಯ ಸಂಗೀತದ ಎರಡೂ ಪ್ರಕಾರಗಳಲ್ಲಿ ಪರಿಣತಿ ಪಡೆದು ಹಾಡುವಾಗ ಮೂಲ ಸಂಗೀತದ ಸೊಗಡಿಗೆ ಚ್ಯುತಿಬಾರದಂತೆ ಹಾಡುವುದು ಮತ್ತು ಸುಗಮ ಸಂಗೀತ ಹಾಗೂ ಲಘುಶಾಸ್ತ್ರೀಯ ಪ್ರಕಾರಗಳಲ್ಲಿ ಹಾಡುವಾಗ ಸಮ್ಮಿಶ್ರ ರಾಗಗಳನ್ನು ಹಾಡುವುದು ಇವರ ವೈಶಿಷ್ಟ್ಯ. ನವನವೀನವಾಗಿ ಪ್ರಯೋಗಾತ್ಮಕವಾಗಿ ಸಂಯೋಜಿಸಿರುವ ಇವರ ಅನೇಕ ಕಾರ್ಯಕ್ರಮಗಳಲ್ಲಿ ಚಿತ್ರ–ರಾಗ್, ಗಾನಭಾರತಿ, ಹರಿದಾಸ ಪರಂಪರೆ, ಜುಗಲ್‌ಬಂದಿ ದಕ್ಷಿಣೋತ್ತರಂ, ವಾದ್ಯನಾದ ವೈಭವ, ಉತ್ಸವದರ್ಶನ, ಸ್ವರಸೌರಭ ಮೊದಲಾದವು ಅತ್ಯಂತ ವಿಶೇಷವಾದವು. ಸಂಗೀತವನ್ನು ಇಡೀ ಜನಸಮುದಾಯದ ಬಳಿಗೆ ಕೊಂಡೊಯ್ಯುವ ಪ್ರಯತ್ನಶೀಲತೆ ಇಂತಹ ಕಾರ್ಯಕ್ರಮಗಳ ಉದ್ದೇಶವಾಗಿದೆ. ಜೊತೆಗೆ ಸಂಗೀತ ಮತ್ತು ಚಿತ್ರಕಲೆಯನ್ನು ಸಮರಸಗೊಳಿಸುವುದು ಈ ಕಾರ್ಯಕ್ರಮಗಳ ಪ್ರಯತ್ನವಾಗಿದೆ.

ಸರಸ್ವತಿ ಸಂಗೀತ ವಿದ್ಯಾಲಯದ ಪ್ರಾಂಶುಪಾಲೆ ಹಾಗೂ ನಿರ್ದೇಶಕಿಯಾಗಿ ಸಂಗೀತ ಕ್ಷೇತ್ರದ ಎರಡು ಪ್ರಕಾರಗಳಲ್ಲಿ ಮಾತ್ರವಲ್ಲದೆ ವಾದ್ಯಸಂಗೀತ ಹಾಗೂ ಲಘುಶಾಸ್ತ್ರೀಯ ಸಂಗೀತವೂ ಸೇರಿದಂತೆ ವಿವಿಧ ಭಾಷೆಗಳಲ್ಲಿ, ಶೈಲಿಯಲ್ಲಿ (ಕನ್ನಡ, ಹಿಂದಿ, ಮರಾಠಿ ಮುಂತಾದವು) ಸಾವಿರಾರು ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿದ್ದಾರೆ. ಇದೇ ಸಂಸ್ಥೆಯ ಹೆಸರಿನಲ್ಲಿ ಅನೇಕ ಭಾಷೆ, ಸಂಗೀತಶೈಲಿ ಹಾಗೂ ರಾಗಗಳನ್ನೊಳಗೊಂಡ ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ಜೊತೆಗೆ ಇವರು ಸಂಗೀತವನ್ನೇ ಆಧರಿಸಿದ ಹಾಗೂ ಗುರು ಪರಂಪರೆಯನ್ನು ಪ್ರತಿಬಿಂಬಿಸುವ ಕೆಲವು ಚಲನಚಿತ್ರಗಳಿಗೂ ಸಂಗೀತ ನಿರ್ದೇಶನ ಮಾಡುವುದರ ಮೂಲಕ ಕನ್ನಡ ಚಲನಚಿತ್ರದ ಪ್ರಥಮ ಮಹಿಳಾ ಸಂಗೀತ ನಿರ್ದೇಶಕಿ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಇವರು ಆಕಾಶವಾಣಿ ಕಲಾವಿದೆಯಾಗಿ ಮೂರು ದಶಕಗಳಿಗೂ ಹೆಚ್ಚುಕಾಲ ಸೇವೆ ಸಲ್ಲಿಸಿದ್ದಾರೆ. ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಅಮೆರಿಕ, ಇಂಗ್ಲೆಂಡ್, ಕೆನಡ, ಜರ್ಮನಿ, ಇಟಲಿ, ಹಾಲೆಂಡ್, ಫ್ರಾನ್ಸ್, ಆಫ್ಘಾನಿಸ್ತಾನ, ಶ್ರೀಲಂಕಾ ಹಾಗೂ ಮಧ್ಯಪೂರ್ವ ರಾಷ್ಟ್ರಗಳಲ್ಲಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ; ಸಂಗೀತ ಕಾರ್ಯಾಗಾರಗಳು ಹಾಗೂ ಸಂಗೀತ ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.

ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರದ ಅನೇಕ ಸಾಂಸ್ಕೃತಿಕ ಸಮಿತಿಯ ಸದಸ್ಯೆಯಾಗಿರುವ ಇವರು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆಯೂ ಆಗಿದ್ದರು (1997). ಇವರ ಅಭಿಮಾನಿಗಳೂ ವಿದ್ಯಾರ್ಥಿಗಳೂ ಇವರ ಗೌರವಾರ್ಥ ಸ್ವರಸಾಧನಾ ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಿದ್ದಾರೆ. ಇವರ ಸಾಧನೆಯನ್ನು ಮೆಚ್ಚಿ ಅನೇಕ ಸಂಘ ಸಂಸ್ಥೆಗಳು ಇವರಿಗೆ ಪ್ರಶಸ್ತಿ, ಬಿರುದು, ಸನ್ಮಾನಗಳನ್ನು ನೀಡಿ ಪುರಸ್ಕರಿಸಿವೆ. ಉಭಯಗಾನ ವಿಶಾರದೆ, ಗಾನಕೋಕಿಲ, ಗಾನಮಾಧುರಿ ಮೊದಲಾದವು ಇವರಿಗೆ ಸಂದ ಪ್ರಮುಖ ಬಿರುದುಗಳು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1989), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ ಪ್ರಶಸ್ತಿ (1994) ಇವರಿಗೆ ಲಭಿಸಿವೆ. ಅಮೆರಿಕದ ಹೂಸ್ಟನ್ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪದವಿ ನೀಡಿ ಗೌರವಿಸಿದೆ. ಇವರು ತಮ್ಮ ಸುಸಂಸ್ಕೃತಿ, ಸ್ನೇಹಪರತೆ, ಸವಿನಯ, ಸರಳತೆಗಳಿಂದ ಆದರ್ಶ ನಿಷ್ಠಾವಂತ ಗುರುವಾಗಿ ಅನೇಕ ಕಲಾವಿದರಿಗೆ ಮಾದರಿಯಾಗಿದ್ದಾರೆ. (ಎಸ್‌ಯು.ಎಂ.)

**ಶ್ರವಣಬೆಳಗೊಳ:** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಒಂದು ಪಟ್ಟಣ. ಜೈನರ ಪವಿತ್ರ ಯಾತ್ರಾಸ್ಥಳ. ಹಾಸನಕ್ಕೆ 51ಕಿಮೀ ದೂರದಲ್ಲೂ ಚನ್ನರಾಯಪಟ್ಟಣಕ್ಕೆ 11 ಕಿಮೀ ದೂರದಲ್ಲೂ ಇದೆ. ಇಲ್ಲಿನ ದೊಡ್ಡಬೆಟ್ಟದ ಮೇಲಿರುವ ಗೊಮ್ಮಟ ವಿಗ್ರಹ ಪ್ರಪಂಚ ಪ್ರಸಿದ್ಧವಾದುದು. ಜನಸಂಖ್ಯೆ 6,394.

ಈ ಗ್ರಾಮಕ್ಕೆ ಅತಿಪ್ರಾಚೀನವಾದ ಇತಿಹಾಸವಿದೆ. ಶಾಸನಗಳಲ್ಲಿ ಈ ಸ್ಥಳವನ್ನು ಕಟವಪ್ರ, ಕಟಪ್ರ, ಕಟಪ್ಪು, ಕಟ್ವಪ್ಪು, ಕಟ್ಬಿಪ್ಪ, ಕಟ್ಬಿಪ್ಪು, ವೆಳ್ಗೊಳ, ಬೆಳ್ಗೊಳ, ಧವಳಸರತೀರ್ಥ, ಶ್ವೇತ ಸರೋವರ ಮುಂತಾಗಿ ಕರೆಯಲಾಗಿದೆ. ಅತಿ ಪ್ರಾಚೀನವಾದ ಸು. 6–7ನೆಯ ಶತಮಾನದ ಸಂಸ್ಕೃತ ಶಾಸನದಲ್ಲಿ ಕಟವಪ್ರ ಎಂಬ ರೂಪವಿದೆ. ಕಟವಪ್ರ ಶೈಲ, ಕಟ್ವಪ್ರಗಿರಿ ಎಂಬ ರೂಪಗಳು ಅದೇ ಕಾಲದ ಕನ್ನಡ ಶಾಸನಗಳಲ್ಲಿ ಕಂಡುಬಂದಿವೆ.

ಕಟ್ಬಿಪ್ಪುವಿನ ಪ್ರಾಚೀನ ರೂಪ ಕಪ್‌ಬೆಳ್ಪು ಎಂದಿದ್ದು ಈ ಮಾತಿಗೆ ಬೆಳ್ಪಿನ ನೀರು ಎಂಬುದೊಂದು ಅಭಿಪ್ರಾಯವಿದೆ. ಆದರೆ ಈ ಹೆಸರು ಅಲ್ಲಿನ ಭೌಗೋಳಿಕ ಪರಿಸ್ಥಿತಿಯನ್ನು ವಿವರಿಸುತ್ತದೆ. ಕಟ್ಬಿಪ್ಪು ಎಂಬುದು ಕಪ್ಪಾದ ಗುಡ್ಡ, ಕರಿಗುಡ್ಡ ಎಂಬ ಅಲ್ಲಿನ ಪ್ರಾಕೃತಿಕ ಸನ್ನಿವೇಶವನ್ನು ವಿವರಿಸುವಂತಹ ಹೆಸರಾಗಿರಬೇಕು. ಸಂಸ್ಕೃತದಲ್ಲಿ ವಪ್ರ ಎಂದರೆ ಗಿರಿ ಎಂದರ್ಥವಾಗುತ್ತದೆ. ಕಟ ಎಂದರೆ ಸಮಾಧಿ ಗುಹೆ, ಸಮಾಧಿ ಮಾಡತಕ್ಕ ಪ್ರದೇಶ. ಇಲ್ಲಿನ 7ನೆಯ ಶತಮಾನದ 54 ಶಾಸನಗಳಲ್ಲಿ 41 ಸಲ್ಲೇಖನ, ಸನ್ಯಸನ ವಿಧಿಗಳಿಂದ ದೇಹ ಮುಡಿಪಿದ ಸಂಗತಿಯನ್ನು ನಿರೂಪಿಸುವ ಜೈನಶಾಸನಗಳು. ಇದನ್ನು ಗಮನಿಸಿ ಕಟವಪ್ರ ಎಂದರೆ ಸಮಾಧಿ ಮರಣ ಹೊಂದಲು ಯೋಗ್ಯವಾದ ಗುಡ್ಡ ಎಂದು ಅರ್ಥೈಸಬಹುದು. ಕಟವಪ್ರ ಎಂಬ ಪದದ (ಸಮಾಧಿಗುಡ್ಡ) ಕನ್ನಡ ರೂಪಾಂತರ ಕಟ್ಬಿಪ್ಪು ಆಗಿರಬೇಕು.

7ನೆಯ ಶತಮಾನದ ಶಾಸನಗಳೆರಡರಲ್ಲಿ ಈ ಊರಿನ ಹೆಸರು ವೆಳ್ಗೊಳ, ಬೆಳ್ಗೊಳ ಎಂದು ಕರೆದಿದೆ. ಊರಿನ ಮಧ್ಯೆ ಇರುವ ಕೊಳದಿಂದ ಈ ಹೆಸರು (ಬೆಳಕೊಳ–ಬೆಳ್ಗೊಳ) ಬಂದಿರಬೇಕೆಂಬ ಊಹೆಗೆ ಇದು ಪುಷ್ಟಿ ನೀಡುತ್ತದೆ. ಇವುಗಳನ್ನು ಗಮನಿಸಿದಾಗ ಕಟ್ಬಿಪ್ಪು ಎಂಬುದು ಚಿಕ್ಕಬೆಟ್ಟಕ್ಕೂ ಬೆಳ್ಗೊಳ ಎಂಬುದು ಕೆಳಗಿನ ಊರಿಗೂ ಇದ್ದ ಹೆಸರುಗಳೆನ್ನಬಹುದು. ಶ್ರವಣ ಎಂದರೆ ಜೈನ ಋಷಿ. ಇಲ್ಲಿ ಹಲವಾರು ಜೈನಯತಿಗಳು ನೆಲಸಿದ್ದರು. ಸನ್ಯಸನ ಇತ್ಯಾದಿ ವ್ರತಗಳಿಂದ ಮರಣ ಹೊಂದಿದರು. ಎಂತಲೇ ಇದು ಕಾಲಾನಂತರ ಶ್ರವಣಬೆಳ್ಗೊಳ ಎಂಬ ಹೆಸರನ್ನು ಪಡೆಯಿತು. ಇಲ್ಲಿ ಗೊಮ್ಮಟನಮೂರ್ತಿ ಇರುವುದರಿಂದ ಇದು ಗೊಮ್ಮಟಪುರವೆಂದೂ ಕರೆಯಲ್ಪಟ್ಟಿತು.

ಪ್ರಚಲಿತ ಐತಿಹ್ಯದಂತೆ ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಮೌರ್ಯ ಅರಸನಾದ ಚಂದ್ರಗುಪ್ತನು ತನ್ನ ಗುರುವಾದ ಭದ್ರಬಾಹುವಿನೊಂದಿಗೆ

ಬಂದು ಇಲ್ಲಿ ನೆಲೆ ನಿಂತನು. ಇಲ್ಲಿನ ಅತಿ ಪ್ರಾಚೀನವಾದ 7ನೆಯ ಶತಮಾನದ ಶಾಸನದಲ್ಲಿ ಮಹಾವೀರನ ನಿರ್ವಾಣಾನಂತರ ಗೌತಮ ಗಣಧರ ಮುಂತಾದವರು ಜೈನಗುರುಗಳಾಗಿದ್ದು ಅವರಲ್ಲೊಬ್ಬನಾದ ಭದ್ರಬಾಹುಸ್ವಾಮಿಯು ಉಜ್ಜಯಿನಿಯಲ್ಲಿದ್ದಾಗ ಹನ್ನೆರಡು ವರ್ಷಗಳ ಬರಗಾಲ ದೇಶವನ್ನು ಕ್ಷೋಭೆಗೆ ಒಳಪಡಿಸುತ್ತದೆ ಎಂಬ ಭವಿಷ್ಯವಾಣಿಯನ್ನು ನುಡಿದುದರ ಫಲವಾಗಿ ಸಂಪೂರ್ಣ ಸಂಘವು ಉತ್ತರಾಪಥದಿಂದ ದಕ್ಷಿಣಾ ಪಥಕ್ಕೆ ವಲಸೆ ಬಂದಿತೆಂದೂ ಇಲ್ಲಿ ಪ್ರಭಾಚಂದ್ರನೆಂಬ ಆಚಾರ್ಯನು ತನ್ನ ಅವಸಾನ ಕಾಲವನ್ನರಿತು ಸಮಾಧಿ ಹೊಂದಬಯಸಿ, ಒಬ್ಬ ಶಿಷ್ಯನೊಡನೆ ಕಟವಪ್ರಗಿರಿಗೆ ಬಂದು ಇಲ್ಲಿ ಜೀವ ತೊರೆದ ನೆಂದೂ ಹೇಳಿದೆ. ಇಲ್ಲಿ ಹೆಸರಿಸಲಾದ ಭದ್ರಬಾಹು, ಪ್ರಭಾಚಂದ್ರ ಹಾಗೂ ಅವನ ಶಿಷ್ಯರನ್ನು ಗುರುತಿಸುವುದರಲ್ಲಿ ಭಿನ್ನಾಭಿಪ್ರಾಯಗಳಿವೆ. ಭದ್ರಬಾಹು ಜೈನರ ಶ್ರುತ ಕೇವಲಿಗಳಲ್ಲೊಬ್ಬನೆಂದೂ ಪ್ರಭಾಚಂದ್ರನು ಮೌರ್ಯ ಚಂದ್ರಗುಪ್ತನೆಂದೂ ರೈಸ್ ಅವರು ಊಹಿಸಿದರೆ, ಭದ್ರಬಾಹು ಪ್ರ.ಶ.ಪೂ. 30–31ರಲ್ಲಿ ಬಂದ ಇಮ್ಮಡಿ ಭದ್ರಬಾಹುವೆಂದೂ ಚಂದ್ರಗುಪ್ತನು ಆತನ ಶಿಷ್ಯನಾದ ಗುಪ್ತಿಗುಪ್ತ ನೆಂದೂ ಫ್ಲೀಟ್ ಭಾವಿಸಿದ್ದಾರೆ. ಭದ್ರಬಾಹು ಮತ್ತು ಚಂದ್ರಗುಪ್ತರು ಶ್ರವಣಬೆಳಗೊಳದ ಚಿಕ್ಕಬೆಟ್ಟದ ಗುಹೆಯಲ್ಲಿ ವಾಸಿಸಿ, ಅಲ್ಲಿಯೇ ತಮ್ಮ ದೇಹ ತೊರೆದರೆಂಬ ನಂಬಿಕೆ 7ನೆಯ ಶತಮಾನದ ವೇಳೆಗಾಗಲೇ ದೃಢವಾಗಿ ಬೇರೂರಿತ್ತು. ವಾದವಿವಾದಗಳೇನಿದ್ದರೂ ಇತರ ಶಾಸನಾಧಾರಗಳನ್ನವಲಂಬಿಸಿ ಭದ್ರಬಾಹು ಶ್ರುತಕೇವಲಿ ಭದ್ರಬಾಹುವೆಂದೂ ಚಂದ್ರಗುಪ್ತನು ಮೌರ್ಯಚಂದ್ರಗುಪ್ತನೆಂದೂ ಮಾಡಿರುವ ಊಹೆ ಹೆಚ್ಚು ಮನನೀಯವಾಗಿ ಕಂಡುಬರುತ್ತದೆ.



ಗೊಮ್ಮಟೇಶ್ವರ

ಶ್ರವಣಬೆಳಗೊಳದ ಶಾಸನಗಳಿಂದ ನಮಗೆ ಹಲವಾರು ಜೈನಯತಿಗಳ ಪರಿಚಯವಾಗುತ್ತದೆ. ಅವರು ಒಂದಿಲ್ಲೊಂದು ರೀತಿಯಿಂದ ಶ್ರವಣ ಬೆಳಗೊಳದೊಡನೆ ಸಂಬಂಧ ಹೊಂದಿದ್ದವರೇ. ಅವರಲ್ಲಿ ಪದ್ಮನಂದಿ, ಗೃಧ್ರಪಿಚ್ಛ, ಏಕಾಚಾರ್ಯ, ವಕ್ರಗ್ರೀವ ಎಂದೆಲ್ಲ ಕರೆಯಲಾದ ಕೊಂಡ ಕುಂದಾಚಾರ್ಯ ಪ್ರಮುಖನಾದವನು. ಈತ ಪ್ರವಚನಸಾರವೆಂಬ ಕೃತಿಯ ಕರ್ತೃ. ಅರಿಷ್ಟನೇಮಿದೇವ, ನಾಗಮತಿಗಂತಿ, ಅಕ್ಷಯಕೀರ್ತಿ ಮೊದಲಾದವರು ಕಳಂತೂರು, ನೆಡುಬೋರೆ, ಕಿತ್ತೂರು, ಅಗಳಿಇನಜ್ಞೂರು, ತಟಿಕಾಡು ಮುಂತಾದ ಸ್ಥಳಗಳಿಂದ ಹಲವಾರು ಜೈನಯತಿಗಳು ಇಲ್ಲಿಗೆ ಬಂದರು. ಇವರಲ್ಲದೆ ಸಾಮಾನ್ಯ ಪ್ರಜೆಗಳನ್ನೂ ನಾಡಿನ ಅರಸರನ್ನೂ ಈ ಸ್ಥಳ ಆಕರ್ಷಿಸಿತು. ಮೌರ್ಯ ಚಂದ್ರಗುಪ್ತನಿಂದ ಮೈಸೂರಿನ ಒಡೆಯರವರೆಗೂ ಕರ್ನಾಟಕ ಅರಸರೂ ಈ ಪುಣ್ಯಕ್ಷೇತ್ರದಿಂದ ಪ್ರಭಾವಿತರಾಗಿ ಇಲ್ಲಿ ಹಲವಾರು ದಾನಗಳನ್ನು ಮಾಡಿದರು; ದತ್ತಿಗಳನ್ನು ಬಿಟ್ಟರು. ಇಲ್ಲಿನ ಪುಣ್ಯಕಾರ್ಯಗಳಲ್ಲಿ ಪಾಲ್ಗೊಂಡರು. ಗಂಗವಂಶದ ಅರಸರ, ಪ್ರಮುಖವಾಗಿ ಇಮ್ಮಡಿ ಮಾರಸಿಂಹನ ಶಾಸನಗಳು ಇಲ್ಲಿವೆ. ಇಮ್ಮಡಿ ಮಾರಸಿಂಹನ ಪ್ರಶಸ್ತಿ ಇಲ್ಲಿನ ಶಾಸನವೊಂದರಲ್ಲಿದ್ದು ಆತನ ರಾಜಕೀಯ ಸಾಧನೆಗಳು ಅದರಿಂದ ತಿಳಿಯುತ್ತವೆ. ಆತನ ಹಾಗೂ ಆತನ ಅನಂತರ ಬಂದ ಇಮ್ಮಡಿ ರಾಚಮಲ್ಲನ ಮಂತ್ರಿ ಚಾವುಂಡರಾಯನ ವಿಷಯವಾಗಿಯೂ ಸಾಕಷ್ಟು ಸಂಗತಿ ತಿಳಿದುಬರುತ್ತದೆ. ಬ್ರಹ್ಮ ಕ್ಷತ್ರಕುಲೋತ್ಪನ್ನನಾದ ಈತ ಇಲ್ಲಿ ಬಾಹುಬಲಿ ಮೂರ್ತಿಯನ್ನು ಸ್ಥಾಪಿಸಿದ **(ನೋಡಿ: ಚಾವುಂಡರಾಯ I)**. ಇವನ ಹೆಸರಿನ ಬಸದಿಯೊಂದು ಚಿಕ್ಕಬೆಟ್ಟದಲ್ಲಿದ್ದರೂ ಅದನ್ನು ಚಾವುಂಡರಾಯನೇ ಕಟ್ಟಿಸಿದನೆನ್ನಲು ಸಾಕಷ್ಟು ಆಧಾರಗಳಿಲ್ಲ.

ಶ್ರವಣಬೆಳಗೊಳದ ಖ್ಯಾತಿಗೆ ಕಾರಣರಾದವರಲ್ಲಿ ಹೊಯ್ಸಳ ರಾಣಿ ಶಾಂತಲೆಯೂ ಒಬ್ಬಳು. ಈಕೆ ಇಲ್ಲಿನ ಸವತಿಗಂಧವಾರಣ ಬಸದಿಯನ್ನು ಕಟ್ಟಿಸಿದಳು. ಜೊತೆಗೆ ಹೊಯ್ಸಳರ ಅಧೀನಾಧಿಕಾರಿಗಳಾಗಿದ್ದ ಗಂಗರಾಜ, ದಂಡನಾಯಕ ಹುಳ್ಳರಸ, ಏಚರಾಜ, ಚಂದ್ರಮೌಳಿ ಮೊದಲಾದವರು ಇಲ್ಲಿ ಬಸದಿಗಳನ್ನು ಕಟ್ಟಿಸಿದರು. ವಿಶೇಷ ದಾನ–ಧರ್ಮಾದಿಗಳನ್ನು ಮಾಡಿದರು. ಏಚನ ಪತ್ನಿ ಪೋಚಿಕಬ್ಬೆ ಮತ್ತು ಸೊಸೆ ಲಕ್ಕಿ–ಇವರು ಬಹುಶಃ ಶಾಸನ ಬಸದಿಯನ್ನೂ ಶಿವಭಕ್ತನಾದ ಚಂದ್ರಮೌಳಿಯ ಪತ್ನಿಯೂ ಜಿನಭಕ್ತೆಯೂ ಆದ ಅಚಲದೇವಿಯು ಅಕ್ಕನ ಬಸದಿಯನ್ನೂ ಕಟ್ಟಿಸಿದರು. ಅಭಿನವಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯೆ ಬೆಳಗೊಳದ ಮಂಗಾಯಿ ತ್ರಿಭುವನಚೂಡಾಮಣಿ ಚೈತ್ಯಾಲಯವೆಂಬ ಮಂಗಾಯಿ ಬಸದಿ ಜಿನಾಲಯವನ್ನು ಕಟ್ಟಿಸಿದಳು. ಗೊಮ್ಮಟೇಶ್ವರನ ಸುತ್ತಾಲಯದ ಇಪ್ಪತ್ನಾಲ್ಕು ತೀರ್ಥಂಕರರನ್ನು ಮಾಡಿಸಿದಾತ ವಡ್ಡ ವ್ಯವಹಾರಿಯಾಗಿದ್ದ ಮೊಸಳೆಯ ಬಸವಿಸೆಟ್ಟಿ.

ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿ ಹಲವಾರು ಬಸದಿಗಳೂ ಇತರ ಧಾರ್ಮಿಕ ಕಟ್ಟಡಗಳೂ ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪರಿಶೀಲಿಸಬಹುದು. ಚಂದ್ರಗಿರಿ ಎನಿಸಿಕೊಂಡ ಈ ಬೆಟ್ಟ ಸಮುದ್ರಮಟ್ಟಕ್ಕೆ 3,052 ಅಡಿ ಎತ್ತರದಲ್ಲಿದೆ. ಇದೇ ಕಟವಪ್ರ ಅಥವಾ ಕಳ್ವಪ್ಪು. ತೀರ್ಥಗಿರಿ ಅಥವಾ ಋಷಿಗಿರಿ ಎಂದೂ ಇದನ್ನು ಕರೆಯಲಾಗುತ್ತದೆ. ಇಲ್ಲಿನ ಬಸದಿಗಳೆಲ್ಲ ಒಂದು ಗೋಡೆಯ ಆವರಣದೊಳಗಿವೆ. ದ್ರಾವಿಡಶೈಲಿಯಲ್ಲಿ ಕಟ್ಟಲಾದ ಈ ಬಸದಿಗಳಲ್ಲಿ ಒಂದು ಗರ್ಭಗೃಹ, ಸುಕನಾಸಿ, ನವರಂಗಗಳು ಸಾಮಾನ್ಯ ವಾಗಿ ಕಂಡುಬಂದಿವೆ. ಶಾಂತಿನಾಥ ಮತ್ತು ಸುಪಾರ್ಶ್ವನಾಥ ಬಸದಿಗಳು ಸಣ್ಣ ಕಟ್ಟಡಗಳು. ಪಾರ್ಶ್ವನಾಥ ಬಸದಿ 59X29 ಅಡಿ ವಿಸ್ತಾರವಾಗಿದೆ. ಇದರ ಮುಂದೆ ಎತ್ತರವಾದ ಮಾನಸ್ತಂಭವಿದೆ. ಕತ್ತಲೆ ಬಸದಿ ಇಲ್ಲಿನ ಬಸದಿಗಳಲ್ಲಿ ಹಿರಿದು. ಗರ್ಭಗೃಹ, ಪ್ರದಕ್ಷಿಣಪಥ, ತೆರೆದ ಸುಕನಾಸಿಗೆ ಹೊಂದಿಕೊಂಡ ನವರಂಗ, ಮುಂದೆ ಮುಖಮಂಟಪ ಹಾಗೂ ಅದರ ಮುಂದೆ ಒಂದು ಕೈಸಾಲೆಗಳನ್ನೊಳಗೊಂಡ ಈ



ಪಾರ್ಶ್ವನಾಥ ಬಸದಿ, ಚಂದ್ರಗಿರಿ

ಬಸದಿಯನ್ನು, ಕೈಸಾಲೆಯಲ್ಲಿ ಪದ್ಮಾವತಿ ವಿಗ್ರಹವಿರುವುದರಿಂದ ಪದ್ಮಾವತಿ ಬಸದಿ ಎಂದೂ ಕರೆಯಲಾಗಿದೆ. ಆದರೆ ಬಸದಿಯ ಒಳಗಿನ ವಿಗ್ರಹ ಆದಿನಾಥನದು. ಈ ತೀರ್ಥಂಕರನ 6 ಅಡಿ ಎತ್ತರದ ಕುಳಿತ ಭಂಗಿಯಲ್ಲಿರುವ ಪ್ರತಿಮೆಯನ್ನು ಈಗಲೂ ಕಾಣಬಹುದು. ಮುಂದಿನ ಮಂಟಪದಲ್ಲಿರುವ ಬಾಗಿಲಿನ ಮೂಲಕ ಮಾತ್ರ ಬೆಳಕು ಬರಬೇಕಾಗಿದ್ದರಿಂದ, ಇದು ಕತ್ತಲೆ ಬಸದಿ ಎಂಬ ಅನ್ವರ್ಥನಾಮವನ್ನೂ ಪಡೆದಿದೆ. ಇದನ್ನು ಹೊಯ್ಸಳ ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜ ತನ್ನ ತಾಯಿ ಪೋಚವ್ವೆಗಾಗಿ ಕಟ್ಟಿಸಿದ.

ಇಂದ್ರಗಿರಿಯ ವಿಹಂಗಮ ನೋಟ

ಇಲ್ಲಿನ ಬಸದಿಗಳಲ್ಲೆಲ್ಲ ಕಿರಿದಾದುದು ಚಂದ್ರಗುಪ್ತ ಬಸದಿ. ಒಂದರ ಪಕ್ಕದಲ್ಲೊಂದರಂತೆ ಮೂರು ಗುಡಿಗಳು, ಅದರ ಮುಂದೆ ಇಕ್ಕಟ್ಟಾದ ಕೈಸಾಲೆ, ಮಧ್ಯದ ಗುಡಿಯಲ್ಲಿ ಪಾರ್ಶ್ವನಾಥನ ಹಾಗೂ ಇತರ ಎರಡು ಗುಡಿಗಳಲ್ಲಿ ಪದ್ಮಾವತಿ ಮತ್ತು ಕೂಷ್ಮಾಂಡಿನಿಯರ ವಿಗ್ರಹಗಳಿವೆ. ಕಾಲಾನಂತರ ಬಹುಶಃ 12ನೆಯ ಶತಮಾನದಲ್ಲಿ, ಇದರ ಮುಂದೆ ಒಂದು ದ್ವಾರವನ್ನು ಸೇರಿಸಲಾಯಿತು. ಇದು ಕಲಾಕೌಶಲ್ಯದಿಂದ ತುಂಬಿದೆ. ದಾಸೋಜ ಇದರ ರೂವಾರಿ. ಈ ಬಸದಿಯನ್ನು ಮೌರ್ಯರ ಚಂದ್ರಗುಪ್ತ ಕಟ್ಟಿಸಿದನೆಂಬ ಪ್ರತೀತಿಯಿಂದ ಇದಕ್ಕೆ ಆ ಹೆಸರು ಬಂದಿರುವಂತೆ ಕಾಣುತ್ತದೆ.

ಇನ್ನೊಂದು ಗಮನಾರ್ಹ ಬಸದಿ ಚಾವುಂಡರಾಯನ ಬಸದಿ. ವಾಸ್ತುಶೈಲಿ ಹಾಗೂ ಕಲಾಕೌಶಲ್ಯದ ದೃಷ್ಟಿಯಿಂದ ಇದೊಂದು ಸುಂದರವಾದ ಬಸದಿ. ಇದರ ಮೇಲೆ ಉಪ್ಪರಿಗೆ ಹಾಗೂ ವಿಮಾನಗಳಿವೆ. ಗರ್ಭಗುಡಿಯಲ್ಲಿ ಈಗಿರುವುದು ನೇಮಿನಾಥನ ವಿಗ್ರಹ. ಇದನ್ನು ಚಾವುಂಡರಾಯ ಕಟ್ಟಿಸಿದನೆಂದು ಹೇಳಿದೆಯಾದರೂ ಈ ಊಹೆ ಇನ್ನೂ ಸಂದೇಹಾಸ್ಪದ. ಬಹುಶಃ ಚಾವುಂಡರಾಯನ ಮಗ ಜಿನದೇವಣ ಇದರ ಗರ್ಭಗುಡಿಯನ್ನು ಕಟ್ಟಿಸಿರಬೇಕು. ಬಸದಿಯೊಳಗಡೆ ಈಗ ಇರುವ ನೇಮೀಶ್ವರನ ವಿಗ್ರಹಪೀಠದಲ್ಲಿ ಗಂಗರಾಜನ ಮಗನಾದ ಏಚಣನು ಬೊಪ್ಪಣ ಚೈತ್ಯಾಲಯವೆಂಬ ಜಿನಾಲಯವನ್ನು ಕಟ್ಟಿಸಿದನೆಂದು ಹೇಳಿದೆ.

ಬಾಗಿಲ ಬಳಿಯೇ ನಿಲ್ಲಿಸಿರುವ ಶಾಸನಕಲ್ಲಿನಿಂದ ಶಾಸನಬಸದಿ ಎಂಬ ಹೆಸರು ಪಡೆದ ಬಸದಿಯಲ್ಲಿ ಗರ್ಭಗೃಹ, ತೆರೆದ ಸುಕನಾಸಿ, ನವರಂಗಗಳಿವೆ. ಒಳಗಡೆ 5 ಅಡಿ ಎತ್ತರದ ಆದಿನಾಥನ ವಿಗ್ರಹವಿದೆ. ಸುಕನಾಸಿಯಲ್ಲಿ ಗೋಮುಖ ಮತ್ತು ಚಕ್ರೇಶ್ವರಿ ಎಂಬ ಯಕ್ಷಯಕ್ಷಿಯರ ವಿಗ್ರಹಗಳಿವೆ.

ಚಂದ್ರಪ್ರಭ ಬಸದಿ, ಮಜ್ಜಿಗಣ್ಣ ಬಸದಿ, ಎರಡು ಕಟ್ಟೆ ಬಸದಿ ಮತ್ತು ಸವತಿಗಂಧವಾರಣ ಬಸದಿಗಳು ಇಲ್ಲಿನ ಇತರ ಬಸದಿಗಳು. ಕತ್ತಲೆ ಬಸದಿಯ ದಕ್ಷಿಣಕ್ಕೆ ಪೂರ್ವಾಭಿಮುಖವಾಗಿ ನಾಲ್ಕು ಕಂಬಗಳ ಎರಡು ಮಂಟಪಗಳಿದ್ದು ಇದನ್ನು ಮಹಾನವಮಿ ಮಂಟಪ ಎಂದು ಕರೆಯಲಾಗಿದೆ. ಇದರಲ್ಲಿನ ಒಂದು ಕಂಬದ ಮೇಲಿರುವ ಶಾಸನದಲ್ಲಿ 1173ರಲ್ಲಿ ಮರಣಹೊಂದಿದ ನಯಕೀರ್ತಿ ಎಂಬ ಗುರುವಿನ ಸ್ಮರಣಾರ್ಥವಾಗಿ ಆತನ ಶಿಷ್ಯನಾದ ನಾಗದೇವ ಮಂತ್ರಿ ಅದನ್ನು ಕಟ್ಟಿಸಿದನೆಂದಿದೆ. ಇಂತಹ ಇತರ ಮಂಟಪಗಳನ್ನು ಚಾವುಂಡರಾಯನ ಬಸದಿ, ಎರಡು ಕಟ್ಟೆ ಬಸದಿ ಮತ್ತು ತೇರಿನ ಬಸದಿಗಳ ಸಮೀಪದಲ್ಲೂ ಕಾಣಬಹುದು. ಬೆಟ್ಟವನ್ನೇರಿ ಗೋಡೆಯನ್ನು ದಾಟಿ ಬಂದಾಗ ಕಾಣುವುದು ಕೂಗೆ ಬ್ರಹ್ಮದೇವರ ಕಂಬ. ಈ ಕಂಬದ ಮೇಲಿನ ಚೌಕಾಕಾರದ ಮಾಡಿನಲ್ಲಿ ಪೂರ್ವಾಭಿಮುಖವಾಗಿ ಕುಳಿತ ಬ್ರಹ್ಮದೇವರ ವಿಗ್ರಹವಿದೆ. ಕಂಬದ ಮೇಲಿನ ಶಾಸನದಲ್ಲಿ ಗಂಗರ ಇಮ್ಮಡಿ ಮಾರಸಿಂಹನ ಮರಣದ ಪ್ರಸ್ತಾಪವಿದೆ. ಬಹುಶಃ ಇದು ಸುಮಾರು ಅದೇ ಕಾಲಕ್ಕೆ ಸ್ಥಾಪಿಸಿದ್ದಾಗಿರಬೇಕು.

ಮಹಾನವಮಿ ಮಂಟಪದ ಪಶ್ಚಿಮಕ್ಕೆ ಬಂಡೆಯೊಂದರಲ್ಲಿ ಮೊಣಕಾಲಿನಿಂದ ಮೇಲ್ಭಾಗಕ್ಕೆ ಕೊರೆಯಲಾದ 9 ಅಡಿಗಳ ಎತ್ತರದ ಭರತನದೆಂದು ಹೇಳಲಾಗುವ ವಿಗ್ರಹವಿದೆ. ಇದು ಅಸಂಪೂರ್ಣವಾಗಿದೆ. ಗೋಡೆಯ ಹೊರಗಡೆ ಇರುವ ಬ್ರಹ್ಮದೇವನ ಆಲಯವಿದೆ. ಇದೊಂದು ಸಣ್ಣಗುಡಿ. ಒಳಗೆ ಬ್ರಹ್ಮ ದೇವನ ವಿಗ್ರಹವಿದೆ. ಗುಡಿಯ ಮುಂದಿನ ಬಂಡೆಯ ಮೇಲೆ ಜಿನರನ್ನೂ ಆನೆಗಳನ್ನೂ ಸಾಲಂಕೃತ ಕಂಬಗಳನ್ನೂ ಬಿಡಿಸಲಾಗಿದೆ. ಭದ್ರಬಾಹು ವಾಸಿಸಿದ್ದನೆನ್ನಲಾದ ಗುಹೆ ಭದ್ರಬಾಹುಗುಹೆ. ಇಲ್ಲಿ ಆ ಆಚಾರ್ಯನ ಪಾದಗಳೆಂದು ಎರಡು ಪಾದಗಳನ್ನು ಕೊರೆದಿದ್ದು ಅವನ್ನು ಈಗಲೂ ಯಾತ್ರಿಕರು ಪೂಜಿಸುತ್ತಾರೆ. **(ಬಿ.ಆರ್.ಜಿ.)**

ಬ್ರಹ್ಮದೇವರ ಮಂಟಪದಲ್ಲಿ ಮಾನಸ್ತಂಭಕ್ಕೆ ಆನಿಸಿಕೊಂಡು ನಿಂತಿರುವ ಸ್ತ್ರೀ ವಿಗ್ರಹವೊಂದನ್ನು ಗುಳ್ಳಕಾಯಜ್ಜಿ ಎಂದು ಹೇಳಲಾಗುತ್ತದೆ. ಈ ವಿಗ್ರಹವನ್ನು ಕರಿಯ ಕಲ್ಲಿನಲ್ಲಿ ಕೆತ್ತಲಾಗಿದೆ. ಇದರ ಎತ್ತರ ಸು.5". ಕರಿಯ ಬಳಪದ ಕಲ್ಲಿನ ಈ ವಿಗ್ರಹ, ಕೈಯಲ್ಲಿ ಒಂದು ಗುಳ್ಳವನ್ನು ಹಿಡಿದುಕೊಂಡಿದೆ. ಇದನ್ನು ಪ್ರತಿಷ್ಠಾಪಿಸಿದ ಬಗೆಗೆ ಈ ಪ್ರತಿಮೆಯ ಪೀಠದಲ್ಲಾಗಲಿ, ಇತರತ್ರವಾಗಲೀ ಆಧಾರಗಳಿಲ್ಲ. ಈ ವಿಗ್ರಹದ ಹಿಂಬದಿಯಲ್ಲಿರುವ ಮಾನಸ್ತಂಭ ಮತ್ತು ಅದರ ಮೇಲಿರುವ ಯಕ್ಷನನ್ನು 12ನೆಯ ಶತಮಾನದಲ್ಲಿದ್ದ ಸಚಿವ ಬಲದೇವ ಮಾಡಿಸಿದುದಕ್ಕೆ ಈ ಸ್ತಂಭದ ಮೇಲೆ ಶಾಸನವಿದೆ. ಸಂಪ್ರದಾಯದಂತೆ ಗುಳ್ಳಕಾಯಜ್ಜಿಯ ವಿಗ್ರವನ್ನೂ ಈ ಬ್ರಹ್ಮದೇವರ ಕಂಬವನ್ನೂ ಅದರ ಮೇಲಿನ ಮೂರ್ತಿಯನ್ನೂ ಚಾವುಂಡರಾಯ ಮಾಡಿಸಿದುದಾಗಿ ತಿಳಿದುಬರುತ್ತದೆ. ಚಾವುಂಡರಾಯ ಮಾಡಿಸಿದ ಬ್ರಹ್ಮದೇವರ ಕಂಬವೂ ಬೇರೊಂದು ಇದ್ದು ಅದರ ಮೇಲೆ ಆತನ ಶಾಸನವೂ ಇದೆ. ಗುಳ್ಳಕಾಯಜ್ಜಿಯ ವಿಗ್ರಹವನ್ನು ಚಾವುಂಡರಾಯ ಮಾಡಿಸಿದನೆ ಎಂಬ ವಿಷಯ ಸಂದಿಗ್ಧ.

ಚಾವುಂಡರಾಯನಿಗೂ ಗುಳ್ಳಕಾಯಜ್ಜಿಗೂ ಸಂಬಂಧಪಟ್ಟಂಥ ಒಂದು ಕಥೆ ಸು.16ನೆಯ ಶತಮಾನದ ಈಚಿನ ಕೃತಿಗಳಲ್ಲಿ ದೊರೆಯುತ್ತದೆ. ಚಾವುಂಡರಾಯ ಬಾಹುಬಲಿಯ ಬೃಹತ್‌ಶಿಲಾ ಪ್ರತಿಮೆಯನ್ನು ಮಾಡಿಸಿ ಅದಕ್ಕೆ ಮಸ್ತಕಾಭಿಷೇಕ ಮಾಡಲು ಸಕಲ ಸನ್ನಾಹಗೈದು ಕ್ಷೀರಾಭಿಷೇಕವನ್ನು ಪ್ರಾರಂಭಿಸಿದಾಗ ಮೂರ್ತಿಯ ಮಸ್ತಕದ ಮೇಲೆ ಕೊಡಗಟ್ಟಲೆ ಸುರಿದ ಹಾಲು ತೊಡೆಯ ಕೆಳಗೆ ಇಳಿಯಲಿಲ್ಲವಂತೆ. ಆಗ ಖಿನ್ನಮನಸ್ಕನಾದ ಚಾವುಂಡರಾಯ ಇದಕ್ಕೆ ಕಾರಣವೇನೆಂದು ತನ್ನ ಗುರುವನ್ನು ಕೇಳಲು ಆ ಗುರುವಿನ ಆದೇಶದ ಮೇರೆಗೆ ಮುದುಕಿಯೊಬ್ಬಳು ಗುಳ್ಳದಲ್ಲಿ ತಂದ ಹಾಲನ್ನು ಅಭಿಷೇಕ ಮಾಡಿಸಿದಾಗ ಆ ಅಲ್ಪ ಪ್ರಮಾಣದ ಗುಳ್ಳದ ಹಾಲು ಮಸ್ತಕದಿಂದ ಧಾರಾಕಾರವಾಗಿ ಹರಿದು ಮೂರ್ತಿಯ ಪೂರ್ಣ ಮೈ ತೋಯಿಸಿ ಬೆಟ್ಟದಲ್ಲಿ ದಟ್ಟವಾದ ಹಾಲಿನ ತೊರೆಯಾಗಿ ಹರಿಯಿತಂತೆ. ಆ ಕಾರಣದಿಂದ ಆ ಮುದುಕಿ ಗುಳ್ಳಕಾಯಜ್ಜಿ ಎಂದು ಅಂದಿನಿಂದ ಹೆಸರು ಪಡೆದಳಂತೆ. ಅದೇ ಕಾರಣದಿಂದ ಈ ಸ್ಥಳಕ್ಕೆ ಬಿಳಿಯ ಗುಳ್ಳಕಾಯಿಯ ಸ್ಮರಣಾರ್ಥವಾಗಿ ಬೆಳ್ಗೊಳ ಎಂಬ ಹೆಸರುಂಟಾಯಿತಂತೆ. **(ಎಸ್.ಜಿಎ.)**

ದೊಡ್ಡಬೆಟ್ಟಕ್ಕೆ ಇಂದ್ರಗಿರಿ, ವಿಂಧ್ಯಗಿರಿ ಎಂಬ ಹೆಸರುಗಳಿವೆ. ಇದು ಸಮುದ್ರಮಟ್ಟದಿಂದ 3,347 ಅಡಿ ಎತ್ತರವಿದೆ. ಬೆಟ್ಟ ಹತ್ತಲು ಸು.500 ಮೆಟ್ಟಲುಗಳಿವೆ. ಬೆಟ್ಟದ ಮೇಲೆ ಉತ್ತರಾಭಿಮುಖವಾಗಿ ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವ 58' ಎತ್ತರವುಳ್ಳ ಗೊಮ್ಮಟ ವಿಗ್ರಹ ಪ್ರಪಂಚದಲ್ಲಿಯೇ ಅತ್ಯಂತ ಎತ್ತರದ ಏಕಶಿಲೆಯ ಕಲಾತ್ಮಕವಾದ ಕೃತಿ. ಗಂಭೀರವಾದ ಪ್ರಶಾಂತವಾದ ಮುಖಮುದ್ರೆ, ತಲೆಯಲ್ಲೆಲ್ಲ ಉಂಗುರಗಳಂತೆ ವ್ಯಾಪಿಸಿ ಕೊಂಡಿರುವ ಗುಂಗುರು ಕೂದಲು, ಪೌರುಷದ ಪ್ರತೀಕವೆಂಬಂತಿರುವ ಭುಜ, ವಿಶಾಲವಾದ ಎದೆ, ನವಿರಾದ ಹೆಬ್ಬೆರಳು, ಹೊರಮುಖವಾಗಿರುವಂತೆ



ಕಂಬಗಳ ಮಂಟಪ, ಇಂದ್ರಗಿರಿ

ಎರಡು ಹಸ್ತಗಳು, ಸಣ್ಣ ನಡು, ಮೊಣಕಾಲು, ಪಾದ– ಇವುಗಳಿಂದ ಇದು ಗಂಭೀರವಾದ ಶಿಲ್ಪಕೃತಿ ಎನಿಸಿದೆ. ತೊಡೆಗಳ ಕೆಳಭಾಗ ಹುತ್ತದಿಂದ ಆವೃತವಾಗಿದೆ. ಹುತ್ತದಿಂದ ಸರ್ಪಗಳು ಹೊರಬಂದಿವೆ. ಎರಡು ಕಾಲುಗಳನ್ನೂ ತೋಳುಗಳನ್ನೂ ಮಾಧವೀಲತೆ ಸುತ್ತಿಕೊಂಡಿದೆ **(ನೋಡಿ: ಗೊಮ್ಮಟೇಶ್ವರ)**.

ಬೊಪ್ಪಣಕವಿಯ ಶಾಸನಸ್ಥವಾಗಿರುವ ಗೊಮ್ಮಟಸ್ತುತಿಯಲ್ಲಿ ಗೊಮ್ಮಟನ ಕಥೆ ಹೇಳಿದೆ. ಪುರುದೇವನ ಇಬ್ಬರು ಮಕ್ಕಳು ಭರತ ಮತ್ತು ಬಾಹುಬಲಿ. ರಾಜ್ಯಕ್ಕಾಗಿ ಇವರ ನಡುವೆ ಉಂಟಾದ ಕದನದಲ್ಲಿ ಬಾಹುಬಲಿ ಜಯಗಳಿಸಿದರೂ ಔದಾರ್ಯದಿಂದ ರಾಜ್ಯವನ್ನು ಅಣ್ಣನಿಗೆ ಒಪ್ಪಿಸಿ ಲೌಕಿಕ ಬಾಳನ್ನು ತ್ಯಜಿಸಿದ, ಕೇವಲಿ ಎನಿಸಿಕೊಂಡ. ಭರತ ಈತನ ಸ್ಮರಣಾರ್ಥವಾಗಿ ಪೌದನಪುರದಲ್ಲಿ ವಿಗ್ರಹವೊಂದನ್ನು ಸ್ಥಾಪಿಸಿದ. ಆದರೆ ಕಾಲಾನುಕ್ರಮದಲ್ಲಿ ಆ ಪ್ರದೇಶ ಕುಕ್ಕುಟ ಸರ್ಪಗಳಿಂದ ಆವೃತವಾಗಿ ಅಲ್ಲಿ ಹೋಗಲು ಅಸಾಧ್ಯವಾಯಿತು. ಬಹುಕಾಲಾ ನಂತರ ಚಾವುಂಡರಾಯ ಅಲ್ಲಿಗೆ ಹೋಗಲಾರದೆ ಈ ಗೊಮ್ಮಟ ವಿಗ್ರಹವನ್ನು ಸ್ಥಾಪಿಸಿದನೆಂದು ಈ ಕೃತಿಯಲ್ಲಿ ಹೇಳಿದೆ. ಇದೇ ಕಥೆ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ದೊಡ್ಡಯ್ಯನ ಭುಜಬಲಿಶತಕ (ಸು.1550), ಪಂಚಬಾಣನ ಭುಜಬಲಿ ಚರಿತೆ (ಸು.1614), ಅನಂತಕವಿಯ ಗೊಮ್ಮಟೇಶ್ವರ ಚರಿತೆ (ಸು.1780), ದೇವಚಂದ್ರನ ರಾಜಾವಳೀ ಕಥೆ (ಸು.1838)– ಈ ಮೊದಲಾದ ಕಾವ್ಯಗಳಲ್ಲಿ ಹೇಳಲ್ಪಟ್ಟಿದೆ. ಈ ವಿಗ್ರಹ ಚಾವುಂಡರಾಯನಿಂದ ಸು. 983ರಲ್ಲಿ ಸ್ಥಾಪಿಸಲ್ಪಟ್ಟಿತು.

ಗೊಮ್ಮಟವಿಗ್ರಹದ ಮುಂದೆ ಒಳ್ಳೆಯ ಕೆತ್ತನೆಯನ್ನೊಳಗೊಂಡ ಮಂಟಪವಿದೆ. ಇದನ್ನು ಸು.12ನೆಯ ಶತಮಾನದ ಆದಿಭಾಗದಲ್ಲಿ ಮಂತ್ರಿ ಬಲದೇವ ಕಟ್ಟಿಸಿದನೆಂದು ತೋರುತ್ತದೆ. ಬಸವಿಸೆಟ್ಟಿ 24 ತೀರ್ಥಂಕರರನ್ನು ಪ್ರತಿಷ್ಠಿಸಿ ಸುತ್ತಾಲಯದ ಗೋಡೆ ಕಟ್ಟಿಸಿದ (ಸು.1200), ಸುತ್ತಾಲಯವನ್ನು ಗಂಗರಾಜ ಕಟ್ಟಿಸಿದ.

ದೊಡ್ಡಬೆಟ್ಟದ ಇತರ ಕಟ್ಟಡಗಳಲ್ಲಿ ಸಿದ್ಧರ ಬಸದಿ ಒಂದು. ಈ ಸಣ್ಣ ಆಲಯದಲ್ಲಿ 3 ಅಡಿ ಎತ್ತರದ ಸಿದ್ಧನ ವಿಗ್ರಹವಿದೆ. ವಿಗ್ರಹದ ಎರಡೂ ಕಡೆ ಎರಡು ಚಿತ್ರಮಯ ಕಂಬಗಳಿದ್ದು ಒಂದೊಂದರಲ್ಲೂ ಕ್ರಮವಾಗಿ ಅರ್ಹದ್ದಾಸ (ಸು.1398) ಮತ್ತು ಮಂಗರಾಜ (ಸು.1432) ಎಂಬ ಸಂಸ್ಕೃತ ಕವಿಗಳ ಶಾಸನಗಳನ್ನು ಕೆತ್ತಿದೆ. ಗೊಮ್ಮಟಾಲಯಕ್ಕೆ ಹೋಗುವ ದ್ವಾರ ಏಕಶಿಲೆಯಲ್ಲಿ ಕೆತ್ತಿದ ಅಖಂಡ ಬಾಗಿಲು. ಇದರ ಮೇಲಿನ ಹಾಸುಗಲ್ಲಿನಲ್ಲಿ ಆಸೀನಳಾದ ಲಕ್ಷ್ಮಿಯ ವಿಗ್ರಹದ ಸುಂದರವಾದ ಕೆತ್ತನೆ ಇದೆ. ಈ ಬಾಗಿಲನ್ನು ಚಾವುಂಡರಾಯ ಮಾಡಿಸಿದನೆಂಬುದು ಸಾಂಪ್ರದಾಯಿಕವಾದ ಹೇಳಿಕೆ. ಇನ್ನೊಂದು ಬಾಗಿಲನ್ನು ಗುಳ್ಳಕಾಯಜ್ಜಿ ಬಾಗಿಲು ಎಂದು ಕರೆಯುತ್ತಾರೆ. ಇದರ ಬಲಗಡೆ ಇರುವ ಒಂದು ಅಡಿ ಎತ್ತರದ ವಿಗ್ರಹ ಮಲ್ಲಿಸೆಟ್ಟಿಯ ಮಗಳ ಸ್ಮರಣಾರ್ಥವಾಗಿ ಸ್ಥಾಪಿಸಿದ ರೆಂದು ಅಲ್ಲಿ ಸು. 1300ನೆಯ ವರ್ಷದ ಶಾಸನ ತಿಳಿಸಿದೆ. ಇನ್ನೊಂದು ಸೂಕ್ಷ್ಮ ಕೆತ್ತನೆಯನ್ನೊಳಗೊಂಡದ್ದು ತ್ಯಾಗದ ಬ್ರಹ್ಮದೇವರ ಕಂಬ. ಇದನ್ನು ಸ್ಥಾಪಿಸಿದಾತನೂ ಚಾವುಂಡರಾಯನೇ. ಈ ಕಂಬದ ಪಶ್ಚಿಮಕ್ಕೆ ಚನ್ನಣ್ಣನ ಬಸದಿ ಇದೆ. 1673 ರಲ್ಲಿ ಚನ್ನಣ್ಣನೆಂಬಾತ ಈ ಬಸದಿಯನ್ನು ಕಟ್ಟಿಸಿದ. ಬಹುಶಃ ಮುಂದಿನ ಮಾನಸ್ತಂಭವನ್ನೂ ಈತನೇ ಸ್ಥಾಪಿಸಿರಬೇಕು. ಇದು ಚಂದ್ರನಾಥನ ಬಸದಿ. ಒದೆಗಲ್ ಬಸದಿಯನ್ನು ತ್ರಿಕೂಟ ಬಸದಿ ಎಂದೂ ಕರೆಯಲಾಗಿದೆ. ಮೂರು ಮುಖಗಳಿಗೆ ಮೂರು ಗುಡಿಗಳಿರುವ ಈ ಬಸದಿ ಎತ್ತರದ ದಿಬ್ಬದ ಮೇಲೆ ಕಟ್ಟಲಾಗಿದ್ದು ಮೇಲಕ್ಕೆ ಏರಲು ಮೆಟ್ಟಲುಗಳಿವೆ. ಮಧ್ಯದ ಗುಡಿಯಲ್ಲಿ ಆದಿನಾಥನ ಹಾಗೂ ಎಡ, ಬಲ, ಮುಂಬದಿಗಳಲ್ಲಿ ಕ್ರಮವಾಗಿ ನೇಮಿನಾಥ ಮತ್ತು ಶಾಂತಿನಾಥರ ವಿಗ್ರಹಗಳಿವೆ. ಗರ್ಭಗೃಹ, ಸುಕನಾಸಿ ಮತ್ತು ಮುಂದೆ ಮಂಟಪವನ್ನೊಳ ಗೊಂಡ ಚೌವೀಸ ತೀರ್ಥಂಕರ ಬಸದಿಯಲ್ಲಿ ಶಿಲೆಯೊಂದರ ಮೇಲೆ 24 ತೀರ್ಥಂಕರರನ್ನು ಕೆತ್ತಿದೆ. ಇದನ್ನು 1648ರಲ್ಲಿ ಚಾರುಕೀರ್ತಿಪಂಡಿತ, ಧರ್ಮಚಂದ್ರ ಮತ್ತಿತರರು ಪ್ರತಿಷ್ಠಾಪಿಸಿದರು.

ಶ್ರವಣಬೆಳಗೊಳ ಪಟ್ಟಣ ಈ ಎರಡೂ ಬೆಟ್ಟಗಳ ನಡುವೆ ಇದೆ. ಇಲ್ಲಿ ಈ ಪಟ್ಟಣದ ಹೆಸರಿಗೆ ಕಾರಣವಾದ ಕೊಳ (ಕಲ್ಯಾಣಿ) ಇದೆ. ಇದು ಪ್ರಾಚೀನವಾದ ಕೊಳ. ಮೈಸೂರಿನ ಚಿಕ್ಕದೇವರಾಜ ಒಡೆಯರು (1673–1704) ಇದನ್ನು ಜೀರ್ಣೋದ್ಧಾರ ಮಾಡಿಸಿದರು. ಇದರ ಸುತ್ತಲೂ ಕಲ್ಲಿನ ಗೋಡೆ, ನಾಲ್ಕು ದಿಕ್ಕುಗಳಲ್ಲೂ ಕಲ್ಲಿನ ದ್ವಾರಗಳು, ಅವುಗಳ ಮೇಲೆ ಗೋಪುರಗಳು ಇವೆ. ಬಹುಶಃ ಇವುಗಳೂ ಮೈಸೂರಿನ ಅರಸರ ಕೊಡುಗೆಗಳು.

ಶ್ರವಣಬೆಳಗೊಳದಲ್ಲಿಯೇ ಹಿರಿದಾದ ಭಂಡಾರಿ ಬಸದಿಯ ವಿಸ್ತೀರ್ಣ 266 X 78 ಅಡಿಗಳು. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪಗಳಿದ್ದು ಸುತ್ತಲೂ ಪ್ರಾಕಾರವಿದೆ. ಗರ್ಭಗೃಹದಲ್ಲಿ ಒಂದೊಂದೂ 3 ಅಡಿ ಎತ್ತರದ ತೀರ್ಥಂಕರ ವಿಗ್ರಹಗಳಿರುವ ಕಾರಣ ಇದನ್ನು ಚತುರ್ವಿಂಶತಿ ತೀರ್ಥಂಕರ ಬಸದಿ ಎಂದೂ ಕರೆಯಲಾಗಿದೆ. ಗರ್ಭಗುಡಿಗೆ ಮೂರು ದ್ವಾರಗಳಿವೆ. ಸುಕನಾಸಿಯ ಎಡಭಾಗದಲ್ಲಿ ಪದ್ಮಾವತಿ ಮತ್ತು ಬ್ರಹ್ಮರ ವಿಗ್ರಹಗಳಿವೆ. ನವರಂಗದ ಮಧ್ಯದ ಅಂಕಣದಲ್ಲಿ 10 ಅಡಿ ಚದರದ ಏಕಶಿಲೆ ಕೆಳಗೆ ಹಾಸಿದ್ದು ನಾಲ್ಕೂ ಕಡೆ ಒಂದೊಂದು ಕಂಬವಿದೆ. ಬಸದಿಯ ಮುಂದೆಯೂ ಅಖಂಡ ಶಿಲೆಯ ಒಂದು ಮಾನಸ್ತಂಭವಿದೆ. ಈ ಬಸದಿಯನ್ನು ಕಟ್ಟಿಸಿದಾತ ಹೊಯ್ಸಳ ಒಂದನೆಯ ನರಸಿಂಹನ ಭಂಡಾರಿಯಾಗಿದ್ದ ಹುಳ್ಳರಸ. ಎಂತಲೇ ಇದಕ್ಕೆ ಭಂಡಾರಿ ಬಸದಿ ಎಂದು ಹೆಸರು. ಅಕ್ಕನ ಬಸದಿ ಹೊಯ್ಸಳ ಶೈಲಿಯ ಕಟ್ಟಡ. ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮಂಟಪಗಳನ್ನೊಳಗೊಂಡ ಈ ಬಸದಿಯಲ್ಲಿ ಪಾರ್ಶ್ವನಾಥನ ವಿಗ್ರಹ

ಪ್ರತಿಷ್ಠೆಯಾಗಿದೆ. ಸುಕನಾಸಿಯ ಎರಡು ಕಡೆಯೂ ಜಾಲಂಧ್ರಗಳು, ಧರಣೇಂದ್ರ ಮತ್ತು ಪದ್ಮಾವತಿಯ ವಿಗ್ರಹಗಳು ಇವೆ. ನವರಂಗದಲ್ಲಿ ಮಧ್ಯೆ ನಾಲ್ಕು ಕಪ್ಪುಶಿಲೆಯ ಕಂಬಗಳಿವೆ. ಇದನ್ನು 1181ರಲ್ಲಿ ಚಂದ್ರಮೌಳಿಯ ಪತ್ನಿ ಆಚಿಯಕ್ಕ ಕಟ್ಟಿಸಿದಳು. ಈ ಬಸದಿಯ ಪ್ರಾಕಾರದೊಳಗೆ ಪಶ್ಚಿಮಕ್ಕಿರುವುದು ಸಿದ್ಧಾಂತ ಬಸದಿ. ಇದರಲ್ಲಿನ ಕತ್ತಲೆ ಕೋಣೆಯೊಂದರಲ್ಲಿ ಹಿಂದೆ ಜೈನಸಿದ್ಧಾಂತಕ್ಕೆ ಸಂಬಂಧಿಸಿದ ಗ್ರಂಥಗಳನ್ನಿಟ್ಟಿದ್ದರೆಂಬ ಕಾರಣದಿಂದ ಇದಕ್ಕೆ ಈ ಹೆಸರು ಬಂದಿದೆ. ಅಕ್ಕನ ಬಸದಿಯ ಮಹಾದ್ವಾರದ ಸಮೀಪದಲ್ಲಿ ದಾನಶಾಲೆ ಬಸದಿ ಇದೆ. ಇದರಲ್ಲಿ ಪಂಚಪರಮೇಷ್ಠಿಗಳ ವಿಗ್ರಹವಿದೆ.

ನಗರ ಜಿನಾಲಯ ಸಾಮಾನ್ಯವಾದ ಕಟ್ಟಡ. ಇದರ ಒಳಗೆ ಅರಿನಾಥನ ವಿಗ್ರಹವಿದೆ. ಇದನ್ನು 1195ರಲ್ಲಿ ಇಮ್ಮಡಿ ಬಲ್ಲಾಳನ ಪಟ್ಟಣಸ್ವಾಮಿಯಾದ ನಾಗದೇವಮಂತ್ರಿ ಕಟ್ಟಿಸಿದ. ನಗರಗಳು (ವರ್ತಕರು) ಇದಕ್ಕೆ ನೀಡಿದ ಬೆಂಬಲದಿಂದ ಇದನ್ನು ನಗರ ಜಿನಾಲಯವೆಂದು ಕರೆಯಲಾಗಿದೆ. ಮಂಗಾಯಿ ಬಸದಿಯೂ ಸಾಮಾನ್ಯವಾದ ಕಟ್ಟಡವೇ. ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳನ್ನೊಳಗೊಂಡ ಈ ಬಸದಿಯ ನವರಂಗದಲ್ಲಿ ವರ್ಧಮಾನನ ವಿಗ್ರಹವಿದೆ.

ಇಲ್ಲಿರುವ ಏಕೈಕ ಹಿಂದು ದೇವಾಲಯ ಕಾಳಮ್ಮನ ಗುಡಿ. ಇದರ ಗರ್ಭಗೃಹ ಮಾತ್ರ ಕಲ್ಲಿನ ಕಟ್ಟಡ. ಇದರ ಮೇಲೆ ಗಾರೆಯ ಗೋಪುರವಿದೆ. ಗುಡಿಯಲ್ಲಿ $2^{1}/_{2}$ ಅಡಿ ಎತ್ತರದ ಕಾಳಿಯ ವಿಗ್ರಹವಿದೆ.

ಗ್ರಾಮದ ಮಧ್ಯೆ ಜೈನಮಠವಿದೆ. ಚಾವುಂಡರಾಯ ಗೊಮ್ಮಟಮೂರ್ತಿ ಸ್ಥಾಪಿಸಿದಾಗ ಈ ಮಠವನ್ನು ನೆಲೆಗೊಳಿಸಿ ತನ್ನ ಗುರು ನೇಮಿಚಂದ್ರರನ್ನು ಮಠಾಧಿಪತಿಯಾಗಿ ನಿಯಮಿಸಿದನೆಂದು ಹೇಳಲಾಗಿದೆ. ಈ ಮಠದ ಆಚಾರ್ಯರಲ್ಲೊಬ್ಬರಾದ ಚಾರುಕೀರ್ತಿಪಂಡಿತಾಚಾರ್ಯರು ಹೊಯ್ಸಳ ಒಂದನೆಯ ಬಲ್ಲಾಳನ ರೋಗವೊಂದನ್ನು ಗುಣಪಡಿಸಿ ಬಲ್ಲಾಳರಾಯ ಜೀವರಕ್ಷಾಪಾಲ ಎಂಬ ಬಿರುದನ್ನು ಪಡೆದರೆಂದು ಹೇಳಿದೆ. ಮಠದ ಕಟ್ಟಡದಲ್ಲಿ ಮಧ್ಯೆ ತೆರೆದ ಅಂಗಳವಿದೆ. ಹಲವು ದಶಕಗಳ ಹಿಂದೆ ಇದಕ್ಕೆ ಒಂದು ಉಪ್ಪರಿಗೆಯನ್ನೂ ಸೇರಿಸಲಾಗಿದೆ. ಮಠದಲ್ಲಿ ಒಂದೇ ಸಾಲಿನಲ್ಲಿ ಮೂರು ಗರ್ಭಗುಡಿಗಳಿದ್ದು ಅದರಲ್ಲಿನ ವಿಗ್ರಹಗಳು ನಿತ್ಯಪೂಜೆಗೆ ಒಳಪಟ್ಟಿವೆ. ಈ ವಿಗ್ರಹಗಳನ್ನು ಅನೇಕ ಭಕ್ತರು ದಾನ ಮಾಡಿರುವ ವಿಷಯ ಅವುಗಳಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಮಠದ ಗೋಡೆಗಳನ್ನು ಸುಂದರವಾದ ವರ್ಣಚಿತ್ರಗಳು ಅಲಂಕರಿಸಿವೆ. ಒಂದರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ದರ್ಬಾರಿನ ಚಿತ್ರಣವಿದೆ. ಪಂಚಪರಮೇಷ್ಠಿಗಳ, ನೇಮಿನಾಥನ, ಮಠದ ಆಚಾರ್ಯರ, ಪಾರ್ಶ್ವನಾಥನ ಸಮವಸರಣದ ಹಾಗೂ ಇತರ ಧಾರ್ಮಿಕ ವಿಷಯಗಳನ್ನೊಳಗೊಂಡ ಚಿತ್ರಗಳನ್ನು ಕಾಣಬಹುದು.

12 ವರ್ಷಕ್ಕೊಮ್ಮೆ ಶ್ರವಣಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕ ಪ್ರಸಿದ್ಧವಾದುದು. ಆ ಸಂದರ್ಭದಲ್ಲಿ ದೇಶದ ನಾನಾ ಕಡೆಗಳಿಂದ ಜಿನಭಕ್ತರು ಆಗಮಿಸುತ್ತಾರೆ. 1398ರಷ್ಟು ಹಿಂದೆಯೇ ಗೊಮ್ಮಟನಿಗೆ ಮಹಾಮಸ್ತಕಾಭಿಷೇಕ ನಡೆದ ವಿಷಯ ಶಾಸನದಿಂದ ತಿಳಿದು ಬರುತ್ತದೆ. ಅಂದಿನಿಂದ ಇಂದಿನವರೆಗೆ ಇಂಥ ಅನೇಕ ಅಭಿಷೇಕಗಳು ಕಾಲಕಾಲಕ್ಕೆ ನಡೆದಿವೆ. 2006ರಲ್ಲಿ ವಿಜೃಂಭಣೆಯಿಂದ ಸಹಸ್ರಮಾನದ ಮಹಾಮಸ್ತಕಾಭಿಷೇಕ ನಡೆಯಿತು. ಯಾತ್ರಾರ್ಥಿಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಚನ್ನರಾಯಪಟ್ಟಣ-ಶ್ರವಣಬೆಳಗೊಳಕ್ಕೆ ಬ್ರಾಡ್‌ಗೇಜ್ ರೈಲುಮಾರ್ಗವನ್ನು ಹೊಸದಾಗಿ ನಿರ್ಮಿಸಲಾಯಿತು.

**ಶ್ರೀಕಂಠನ್,ಆರ್.ಕೆ.:** 1920- . ಸುಪ್ರಸಿದ್ಧ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು. ಇವರ ಪೂರ್ಣ ಹೆಸರು ರುದ್ರಪಟ್ಣಂ ಕೃಷ್ಣಶಾಸ್ತ್ರೀ ಶ್ರೀಕಂಠನ್. ಇವರು 1920 ಜನವರಿ 14ರಂದು ಮೈಸೂರು ಜಿಲ್ಲೆಯ ರುದ್ರಪಟ್ಣಂನಲ್ಲಿ ಜನಿಸಿದರು. ತಂದೆ ರುದ್ರಪಟ್ಣಂ ಕೃಷ್ಣಶಾಸ್ತ್ರೀ, ತಾಯಿ ಸಣ್ಣಕ್ಕ. ತಾಯಿ ಸೊಗಸುಕಂಠದ ಗಾಯಕಿಯಾದರೆ, ತಂದೆ ಪ್ರಬುದ್ಧ ಕಲಾವಿದರು, ಹರಿಕಥೆ ವಿದ್ವಾಂಸರು, ದ್ವಿಭಾಷಾ ಪಂಡಿತರು (ಕನ್ನಡ ಮತ್ತು ಸಂಸ್ಕೃತ). ಇವರ ಅಜ್ಜ ಬೆಟ್ಟದಪುರದ ನಾರಾಯಣಸ್ವಾಮಿಯವರು ಪ್ರಸಿದ್ಧ ವೈಣಿಕರು ಹಾಗೂ ಗಾಯಕರು. ಇಂತಹ ಪರಂಪರೆಯಲ್ಲಿ ಬೆಳೆದ ಶ್ರೀಕಂಠನ್ ಅವರು ಭಜನೆಗಾಗಿ ಮನೆಗೆ ಬರುತ್ತಿದ್ದ ಅನೇಕ ಸಂಗೀತ ವಿದ್ವಾಂಸರ ಪ್ರಭಾವಕ್ಕೂ ಒಳಗಾದರು. ತಮ್ಮ ಎಳನೆಯ ವಯಸ್ಸಿನಲ್ಲಿ ತಂದೆಯವರ ಬಳಿ ಸಂಗೀತ ಕಲಿಕೆ ಆರಂಭಿಸಿದ ಇವರು ಹಿರಿಯ ಸಹೋದರ ಪಿಟೀಲು ವಿದ್ವಾನ್ ಕೆ.ವೆಂಕಟರಾಮಾಶಾಸ್ತ್ರೀಯವರಿಂದಲೂ ಪ್ರಾರಂಭಿಕ ಪಾಠಗಳನ್ನು ಕಲಿತರು.

ಮೈಸೂರಿನ ಸದ್ವಿದ್ಯಾ, ಬನುಮಯ್ಯ ಶಾಲೆಗಳಲ್ಲಿ ಶಾಲಾಭ್ಯಾಸಂಗವನ್ನು ಪೂರೈಸಿದ ಇವರು ಮೈಸೂರು ಮಹಾರಾಜ ಕಾಲೇಜಿನಿಂದ ಬಿ.ಎ.ಪದವಿ

ಗಳಿಸಿದರು. ಸಂಗೀತದಲ್ಲಿ ಅಪಾರ ಒಲವಿದ್ದ ಕಾರಣ ಪ್ರಖ್ಯಾತ ವಿದ್ವಾಂಸರ ಸಂಪರ್ಕ, ಸಹಯೋಗಗಳಿಂದ ಅಮೂಲ್ಯ ಸಂಗೀತ ಕೃತಿಗಳ ಪಾಠಾಂತರದ ಸಂಗ್ರಹ ಮಾಡಿದರು, ಸ್ವತಂತ್ರ ಗಾಯನಶೈಲಿಯನ್ನು ನಿರ್ಮಿಸಿಕೊಂಡರು. ತಮ್ಮ 13ನೆಯ ವಯಸ್ಸಿಗೇ ಸಣ್ಣ ಪುಟ್ಟ ಸಂಗೀತ ಕಚೇರಿಗಳನ್ನು ಆರಂಭಿಸಿದ ಇವರ ಮೇಲೆ ಪ್ರಭಾವಬೀರಿದ ಸಂಗೀತ ದಿಗ್ಗಜರೆಂದರೆ ಟೈಗರ್ ವರದಾಚಾರ್, ಗಮಕಿ ರಾಮಕೃಷ್ಣಶಾಸ್ತ್ರೀ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ವಾಸುದೇವಾಚಾರ್ಯ ಮೊದಲಾದವರು.

ಅಣ್ಣ ವೆಂಕಟರಾಮಾಶಾಸ್ತ್ರಿಯವರು ಹೆಚ್ಚಿನ ಅಧ್ಯಯನಕ್ಕಾಗಿ ಪಿಟೀಲು ಚೌಡಯ್ಯನವರ ಸಹಾಯದಿಂದ ಮದರಾಸಿಗೆ ಹೋಗಿ ನೆಲೆಸುವಂತಾದಾಗ ಮದರಾಸಿಗೆ ಇವರನ್ನೂ ಕರೆಯಿಸಿಕೊಂಡರು. ಮದರಾಸಿನಲ್ಲಿ ರೇಡಿಯೋ ಕಾರ್ಪೊರೇಷನ್‌ನಲ್ಲಿ ಮೊದಲ ಗುತ್ತಿಗೆ ಪಡೆದರು. ಕಾಲಾಂತರದಲ್ಲಿ ಮೈಸೂರು ಹಾಗೂ ಬೆಂಗಳೂರು ಆಕಾಶವಾಣಿ ನಿಲಯಗಳಲ್ಲಿ ಸೇವೆ ಸಲ್ಲಿಸಿದರು. ಆಕಾಶವಾಣಿಯಲ್ಲಿ ಇವರು ಹಾಡಿದ, ನಿರ್ದೇಶಿಸಿದ, ನಿರ್ಮಿಸಿದ ಸಂಗೀತ ಕಾರ್ಯಕ್ರಮಗಳು ಅಸಂಖ್ಯಾತ. ಅನೇಕ ಪರಿಚಿತ, ಅಪರಿಚಿತ ಕೃತಿ ರಾಗ, ತಾಳಗಳನ್ನು ಕುರಿತು ರೂಪಕಗಳನ್ನಷ್ಟೇ ಅಲ್ಲದೆ ಇವರದೇ ರಾಗ ಸಂಯೋಜನೆಯ ಅನೇಕ ಗೀತೆಗಳೂ ಬಿತ್ತರಗೊಂಡಿವೆ. ಇಂಗ್ಲಿಷ್ ಮತ್ತು ಕನ್ನಡ ಭಾಷಾಪಾಂಡಿತ್ಯವನ್ನೂ ಭಾರತೀಯ ಸಂಗೀತದ ಆಳವಾದ ಜ್ಞಾನವನ್ನೂ ಹೊಂದಿದ್ದ ಇವರು ಭಾರತೀಯ ಸಂಗೀತಕ್ಕೆ ಸಂಬಂಧಿಸಿದಂತೆ ಹಲವಾರು ಶಿಕ್ಷಣ ಶಿಬಿರಗಳನ್ನು, ಪ್ರಾತ್ಯಕ್ಷಿಕೆಗಳನ್ನು, ಉಪನ್ಯಾಸಗಳನ್ನು ದೇಶವಿದೇಶಗಳಲ್ಲಿ ನೀಡಿದ್ದಾರೆ. ಶಿವಶರಣರ ವಚನಗಳು, ಹರಿದಾಸರ ಪದಗಳು, ನಾರಾಯಣತೀರ್ಥರ ಕೃಷ್ಣಲೀಲಾ ತರಂಗಿಣಿಯ ರುಕ್ಮಿಣೀ ಕಲ್ಯಾಣದ ತರಂಗಗಳು, ಮಾಸ್ತಿ, ಗುಂಡಪ್ಪ, ಬೇಂದ್ರೆ, ಪು.ತಿ.ನ. ಮೊದಲಾದ ಕನ್ನಡದ ಹಿರಿಯ ಕವಿಗಳ ಕವಿತೆಗಳಿಗೂ ರಾಗಸಂಯೋಜನೆ ಮಾಡಿ ಯಶಸ್ವಿ ಗಾಯಕರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸುಮಾರು ಏಳು ದಶಕಗಳಿಗೂ ಹೆಚ್ಚು ಕಾಲ ಕಲೋಪಾಸನೆಯಲ್ಲಿ ತೊಡಗಿರುವ ಇವರು ಕೇವಲ ಭಾರತದಲ್ಲಷ್ಟೇ ಅಲ್ಲ ಅಮೆರಿಕ, ಕೆನಡ

ಮೊದಲಾದ ದೇಶಗಳಲ್ಲಿಯೂ ಸಂಗೀತ ಕಚೇರಿಗಳನ್ನು ನೀಡಿ ಭಾರತೀಯ ಕಲೆ–ಸಂಸ್ಕೃತಿಗಳ ಹಿರಿಮೆಯನ್ನು ದೇಶ ವಿದೇಶಗಳಲ್ಲಿ ಸಾರಿ ದೇಶದ ಕೀರ್ತಿಯನ್ನು ಬೆಳಗಿದ್ದಾರೆ. ಇವರ ಅಭಿಮಾನಿಗಳೂ ಅಪಾರ. ಕೆನಡದ ಟೊರೆಂಟೊದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಇವರು ಆರು ತಿಂಗಳ ಅವಧಿಗೆ ಸಂದರ್ಶಕ ಶಿಕ್ಷಕರಾಗಿ ಕೂಡ ಸೇವೆ ಸಲ್ಲಿಸಿದ್ದಾರೆ.

ಇವರು ಉತ್ತಮ ಸಂಗೀತ ಶಿಕ್ಷಕರು. ಶಿಸ್ತು, ಸಂಯಮ, ಸಮಯಪಾಲನೆ, ನಿಷ್ಠುರ ವಿಮರ್ಶೆ, ಅಪರಿಮಿತ ಶಿಷ್ಯಪ್ರೇಮ–ಇವು ಇವರ ಶಿಕ್ಷಕ ವ್ಯಕ್ತಿತ್ವವನ್ನು ಉಜ್ವಲವಾಗಿ ರೂಪಿಸಿರುವ ಅಂಶಗಳು. ರಾಗ–ಕೃತಿಗಳ ಪಾಠಾಂತರ ಶುದ್ಧವಾಗಿರಬೇಕು, ನಿರೂಪಣೆ ಬಲವಾಗಿರಬೇಕು, ಆತ್ಮವಿಶ್ವಾಸವಿರಬೇಕು, ಉಚ್ಚಾರಣೆ ಸ್ಪಷ್ಟವಾಗಿರಬೇಕು, ಕಾಲಪ್ರಮಾಣ ಸಮನಾಗಿರಬೇಕು, ಭಾವಪೂರಿತವಾಗಿರಬೇಕು ಎನ್ನುವಂತಹ ಪರಿಕಲ್ಪನೆಗಳನ್ನು ತತ್ತ್ವ ಹಾಗೂ ಪ್ರಯೋಗಗಳೆರಡರಲ್ಲಿಯೂ ಅಳವಡಿಸಿಕೊಂಡು ಸಾಧಿಸಿದರು. ಆಕಾಶವಾಣಿಯಲ್ಲಿ ಬಿತ್ತರವಾಗುತ್ತಿದ್ದ ಗಾನವಿಹಾರ ಸಂಗೀತ ಪಾಠಕಾರ್ಯಕ್ರಮ ಇವರು ಹೆಚ್ಚು ಜನಪ್ರಿಯತೆ ಗಳಿಸುವಲ್ಲಿ ಪ್ರಧಾನಪಾತ್ರ ವಹಿಸಿದೆ. ಈ ಕಾರ್ಯಕ್ರಮದಿಂದ ಇವರ ಅಪರೋಕ್ಷ ಶಿಷ್ಯವೃಂದ ಹೆಚ್ಚಾಯಿತು. ಇವರ ಪ್ರಮುಖ ಶಿಷ್ಯರಿವರು: ರಮಾಕಾಂತ(ಪುತ್ರ), ರತ್ನಮಾಲಾ ಪ್ರಕಾಶ್ (ಪುತ್ರಿ), ಎಂ.ಎಸ್. ಶೀಲಾ, ಸುಮಾಸುಧೀಂದ್ರ, ಎಚ್.ಕೆ.ನಾರಾಯಣ, ವಿದ್ಯಾಭೂಷಣ, ಟಿ.ಎಸ್.ಸತ್ಯವತಿ.

ಸಂಗೀತ ಕೇವಲ ಗಾಯನವಷ್ಟೇ ಅಲ್ಲ ಅದೊಂದು ನಾದೋಪಾಸನೆ. ಸಂಸ್ಕಾರ, ವಾಕ್‌ಶುದ್ಧಿ, ಚಾರಿತ್ರ್ಯಶುದ್ಧಿಗಳಿದ್ದವರಿಗೆ ಅತ್ಯಂತ ಉನ್ನತಮಟ್ಟದಲ್ಲಿ ಈ ಕಲೆ ಒಲಿಯುತ್ತದೆ ಎಂಬ ನಂಬಿಕೆ, ಮನೋಭಾವಗಳನ್ನು ಹೊಂದಿ ಆ ಮಾರ್ಗದಲ್ಲೇ ಅಕ್ಷರಶಃ ನಡೆಯುತ್ತ ಬಂದ ಇವರಿಗೆ ಸಂದ ಪ್ರಶಸ್ತಿ, ಬಿರುದು, ಗೌರವ, ಸನ್ಮಾನಗಳು ಅಪಾರ. ಅವುಗಳಲ್ಲಿ ಪ್ರಮುಖವಾದವು: ಟಿ.ಟಿ.ಕೆ.ಸ್ಮಾರಕ ಪ್ರಶಸ್ತಿ (1983), ಮೈಸೂರಿನ ಚಾಮರಾಜ ಒಡೆಯರ್ ಸ್ಮಾರಕ ಪ್ರಶಸ್ತಿ (1985), ಬೆಂಗಳೂರು ತಾಳವಾದ್ಯ ಕೇಂದ್ರದಿಂದ ಪಾಲ್ಘಾಟ್ ಸುಬ್ರಹ್ಮಣ್ಯ ಪಿಳ್ಳೆ ಪ್ರಶಸ್ತಿ (1992), ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (1992) ಹಾಗೂ ಸಂಗೀತ ಕ್ಷೇತ್ರದ ಕನಕ–ಪುರಂದರ ಪ್ರಶಸ್ತಿ, ಅಕಾಡೆಮಿ ಆಫ್ ಮ್ಯೂಸಿಕ್, ಬೆಂಗಳೂರು-ಇವರಿಂದ ಚೌಡಯ್ಯ ಸ್ಮಾರಕ ರಾಷ್ಟ್ರಮಟ್ಟದ ಪ್ರಶಸ್ತಿ (1994), ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಸಂಗೀತ ಕಲಾನಿಧಿ ಪ್ರಶಸ್ತಿ (1996), ತನ್ನ ಬೆಳ್ಳಿ ಹಬ್ಬದಾಚರಣೆಯ ಸಂದರ್ಭದಲ್ಲಿ ಬೆಂಗಳೂರಿನ ಪರ್ಕಸೀವ್ ಆರ್ಟ್ ಸೆಂಟರ್ ಇವರ ಜೀವಮಾನದ ಸಂಗೀತ ಸಾಧನೆಗಾಗಿ ನೀಡಿದ ಪ್ರಶಸ್ತಿ (2006).

ಇವರಿಗೆ ಸಂದಿರುವ ಪ್ರಮುಖ ಬಿರುದುಗಳಿವು: ಅನ್ನವಸತಿ ಸಂಘದ ಗಾನಭಾಸ್ಕರ (1947), ಗುರುಸೇವಾಮಂಡಳಿಯ ಗಾನಕಲಾಪ್ರವೀಣ (1976), ಶ್ರೀಪಾರ್ಥಸಾರಥಿ ಸಭಾ ಹಾಗೂ ಸರಸ್ವತಿ ಗಾನಸಭಾದ ಕರ್ನಾಟಕ ಸಂಗೀತ ರತ್ನ (1978), ಬೆಂಗಳೂರಿನ ಗಾಯನ ಸಮಾಜದ 13ನೆಯ ಸಂಗೀತ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಸಂದರ್ಭದಲ್ಲಿ ಇವರಿಗೆ ನೀಡಿದ ಸಂಗೀತ ಕಲಾರತ್ನ (1981), ತಿರುವನಂತಪುರದ ತುಳಸೀವನ ಸಂಗೀತ ಪರಿಷತ್ ನೀಡಿದ ಗಾಯಕ ಚೂಡಾಮಣಿ.

ಇಳಿಹರೆಯದಲ್ಲೂ ಇಂದಿಗೂ ಉತ್ಸಾಹ ಕುಂದದೆ ನಿರಂತರ ನಾದೋಪಾಸನೆಯಲ್ಲಿ ತೊಡಗಿರುವ ಇವರು ಅನೇಕ ಮಂದಿ ಶಿಷ್ಯರಿಗೆ ಅತ್ಯುತ್ಕೃಷ್ಟ ಬೋಧಕರಾಗಿದ್ದಾರೆ. (ಎಸ್‌ಯು.ಎಂ.)

**ಶ್ರೀಕಂಠಯ್ಯ, ಕರ್ಲಮಂಗಲಂ:** 1902–65. ದೇಶೀಯ ಅಧ್ಯಯನ ದೃಷ್ಟಿ ತಳೆದು ಸಂಶೋಧನೆಯಲ್ಲಿ ನಿರತರಾಗಿದ್ದ ಹೆಸರಾಂತ ವಿದ್ವಾಂಸರು. ಇವರು ಬೆಂಗಳೂರಿನಿಂದ ಪಶ್ಚಿಮಕ್ಕೆ 58 ಕಿಮೀ ದೂರದಲ್ಲಿರುವ ಸಾವನದುರ್ಗ ಸಮೀಪದ ಕರ್ಲಮಂಗಲಂ ಎಂಬ ಹಳ್ಳಿಯಲ್ಲಿ 1902 ಸೆಪ್ಟೆಂಬರ್ 14ರಂದು ಜನಿಸಿದರು. ತಾಯಿ ಭ್ರಮರಾಂಬ, ತಂದೆ ಸುಬ್ಬಯ್ಯ. ತಂದೆಯೂ ವಿದ್ವಾಂಸರು, ಹರಿಕಥಾ ಕಾಲಕ್ಷೇಪದಲ್ಲಿ ಪರಿಣತರು, ಕೃಷಿಕರು. ಶ್ರೀಕಂಠಯ್ಯನವರು ಬಹುಭಾಷಾ ಪಂಡಿತ, ಕೃಷಿಕ, ಅಪ್ಪಟ ಗಾಂಧೀವಾದಿ, ದೇಶಾಭಿಮಾನಿ, ಜೀವನಪರ್ಯಂತ ಬ್ರಹ್ಮಚಾರಿಯಾಗಿದ್ದವರು. ಸಾಹಸ, ಸವಾಲುಗಳನ್ನು ಸಹಜವಾಗಿ ಸ್ವೀಕರಿಸುವ ಧೀಮಂತರೆಂದು ಹೆಸರು ಗಳಿಸಿದರು. ತಲಸ್ಪರ್ಶ ಅಧ್ಯಯನದ ಮೂಲಕವೇ ಸತ್ಯವನ್ನು ಶೋಧಿಸಬೇಕೆಂಬುದು ಇವರ ಛಲವಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ಇವರು ಸಂಶೋಧನೆಗೆ ಆಯ್ದುಕೊಂಡ ವಿಷಯ, ಮಾಡಿದ ಸಾಧನೆ ಇತರರಿಗಿಂತ ಭಿನ್ನ. ಅಪಾರ ತಾಳ್ಮೆ, ಪರಿಶ್ರಮವನ್ನು ಬಯಸುವ ಕ್ಷೇತ್ರದಲ್ಲಿ ಇವರ ಅಧ್ಯಯನ ನಡೆಯಿತು.

ಶ್ರೀಕಂಠಯ್ಯನವರಿಗೆ ಬಾಲ್ಯದಲ್ಲಿ ದನಗಳನ್ನು ಮೇಯಿಸುವ ಕಾಯಕ. ಇವರು ಕಲಿತದ್ದು ಪ್ರಾಥಮಿಕ ಎರಡನೆಯ ತರಗತಿ. ಮತ್ತೆಲ್ಲವೂ ಸ್ವಂತ ಅಧ್ಯಯನದಿಂದ ಗಳಿಸಿದ್ದು. ವೇದ, ಉಪನಿಷತ್ತು, ತತ್ತ್ವಶಾಸ್ತ್ರ, ಶಾಸನಗಳ ತೌಲನಿಕ ಅಧ್ಯಯನ, ಸಂಸ್ಕೃತ, ಪ್ರಾಕೃತ, ತೆಲುಗು, ತಮಿಳು, ಮರಾಠಿ, ಹಿಂದಿ, ಉರ್ದು ಭಾಷೆಗಳಲ್ಲಿ ಮಾತನಾಡುವ ಸಾಮರ್ಥ್ಯ; ವೈದಿಕ, ಜೈನ, ಬೌದ್ಧ ದರ್ಶನಗಳ ಅಧ್ಯಯನ; ಬೈಬಲ್ ಮತ್ತು ಖುರಾನುಗಳ ಪರಿಚಯ– ಹೀಗೆ ವಿಸ್ತಾರವಾದ ಜೀವನದರ್ಶನ ಇವರದು. 1928ರ ಹೊತ್ತಿಗೆ ಇವರು ಮಹಾತ್ಮಾ ಗಾಂಧೀಜಿಯವರಿಂದ ಪ್ರಭಾವಿತರಾದರು; ಖಾದೀಧಾರಿಯಾದರು. 1939ರ ಶಿವಪುರ ಧ್ವಜ ಸತ್ಯಾಗ್ರಹ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರ ಪರಿಣಾಮವಾಗಿ ಸೆರೆಮನೆ ವಾಸ ಅನುಭವಿಸಿದರು. ಶ್ರೀಕಂಠಯ್ಯನವರು ಪಶುವೈದ್ಯರೂ ಆಗಿದ್ದರು. ಹುಚ್ಚುನಾಯಿ ಮತ್ತು ನಾಗರಹಾವಿನ ಕಡಿತಕ್ಕೆ ಚಿಕಿತ್ಸೆ ನೀಡುತ್ತಿದ್ದರು. ಅತ್ಯುತ್ತಮ ಪಶುಸಂಗೋಪನೆಗಾಗಿ ಇವರು ಸಾಕಿದ ಲಕ್ಷ್ಮಿ ಎಂಬ ಹಸುವಿಗೆ 1942ರಲ್ಲಿ ಅಖಿಲ ಭಾರತ ದನಗಳ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಮತ್ತು 1947ರಲ್ಲಿ ನಡೆದ ಹಸುಗಳ ಪ್ರದರ್ಶನದಲ್ಲಿ ದ್ವಿತೀಯ ಬಹುಮಾನ ಪಡೆದರು. ಕೃಷಿಯಲ್ಲಿಯೂ ದಾಖಲೆಯ ಬೆಳೆ ಬೆಳೆದು ಕೇಂದ್ರ ಸರ್ಕಾರದ ಮಾನ್ಯತೆಗೆ ಪಾತ್ರವಾದ ಮಾದರಿ ರೈತ ಕುಟುಂಬ ಇವರದು.

ಶ್ರೀಕಂಠಯ್ಯನವರು ಅಹಿಂಸೆ ಎಂಬ ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದರು (1931–32). ಬ್ರಾಹ್ಮಣ ಪತ್ರಿಕೆಗೂ ಸಂಪಾದಕರಾಗಿದ್ದರು (1935–36). ವೇದ ಉಪನಿಷತ್ತುಗಳನ್ನು ಪರಿಚಯಿಸುವುದು ಈ ಪತ್ರಿಕೆಗಳ ಮುಖ್ಯ ಗುರಿಯಾಗಿತ್ತು. ಆದರೆ ಆರ್ಥಿಕ ತೊಂದರೆಯಿಂದಾಗಿ ಈ ಪತ್ರಿಕೆ ಅಲ್ಪಕಾಲದಲ್ಲಿಯೇ ನಿಂತುಹೋಯಿತು.

ಶ್ರೀಕಂಠಯ್ಯನವರು ಬರೆದದ್ದು ಕಡಿಮೆಯಾದರೂ ಮೌಲ್ಯದಲ್ಲಿ ಉತ್ಕೃಷ್ಟವಾದುದು. ಇವರು ಆರಿಸಿಕೊಂಡಿದ್ದು ಜನಪ್ರಿಯ ಮಾಧ್ಯಮವನ್ನಲ್ಲ. ಸಂಶೋಧನೆ ಇವರ ಮೆಚ್ಚಿನ ಕ್ಷೇತ್ರ. ಪಾಂಡಿತ್ಯದ ಸ್ಪರ್ಶ ಇವರ ಬರೆಹದಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಗುಂಪಿನಗುಟ್ಟು (1930), ವೀರಶೈವ ಮಠಾಚಾರ್ಯರ ಕಾಲನಿರ್ಣಯ, ಬಡಗನಾಡು ಬ್ರಾಹ್ಮಣರ ಇತಿಹಾಸ, ಕೆಂಪೇಗೌಡನ ಜಯಪ್ರಶಸ್ತಿ (1961)– ಇವು ಇವರ ಕೃತಿಗಳು. 1993ರಲ್ಲಿ ಪ್ರಕಟವಾದ 'ಕರ್ಲಮಂಗಲಂ ಶ್ರೀಕಂಠಯ್ಯನವರ ಲೇಖನಗಳು' ಇವರ ಸಂಶೋಧನ ಲೇಖನಗಳ ಸಂಗ್ರಹ. ಅಪ್ರಕಟಿತ ಲೇಖನಗಳೂ ಹಲವಿವೆ. ಕನ್ನಡ ಶಬ್ದಗಳನ್ನು ವಿಶೇಷವಾಗಿ ಬಳಸಿ ಬರೆದ ಕೃತಿ 'ಗುಂಪಿನಗುಟ್ಟು'. ಸಮಾಜದ ವಿವಿಧ ಸಮುದಾಯಗಳ ಮೂಲವನ್ನು ಶೋಧಿಸುವ ಪ್ರಯತ್ನ ಇಲ್ಲಿ ನಡೆದಿದೆ. ಕೆಂಪೇಗೌಡ ಜಯಪ್ರಶಸ್ತಿ ಎಂಬುದು ಮಾಗಡಿ ಕೆಂಪೇಗೌಡನ ಕಾಲ, ಜೀವನ ಮತ್ತು ಸಾಧನೆಗಳನ್ನು ಗುರುತಿಸುವ ಕೃತಿ.

ಶ್ರೀಕಂಠಯ್ಯನವರ ಹೆಸರಿನೊಂದಿಗೆ ಬೆಸೆದುಕೊಂಡಿರುವ ಇನ್ನೊಂದು ಕೃತಿ 'ಸಿರಿಭೂವಲಯ'. ಪಂಡಿತ ಎಲ್ಲಪ್ಪಶಾಸ್ತ್ರಿಗಳ ಸಹಯೋಗದಲ್ಲಿ ಇವರು ಮಾಡಿದ ಈ ಕೆಲಸ ಅಪೂರ್ವವಾದುದು. ಇದರ ಭಾಗಶಃ ಸಂಪಾದನೆ, ಪ್ರಕಟಣೆ ಈ ಕೃತಿಯ ವ್ಯಾಖ್ಯಾನವನ್ನು ಮಾಡುವಲ್ಲಿ ಇವರು ತೋರಿದ ವಿದ್ವತ್ತು, ಪ್ರತಿಭೆ, ಆಸಕ್ತಿ ಅಪೂರ್ವವೆನಿಸಿವೆ. ಈ ಕೃತಿಗೆ ಅಖಿಲ ಭಾರತ ಮಟ್ಟದ ಮಹತ್ತ್ವವನ್ನು ಇವರು ದೊರಕಿಸಿಕೊಟ್ಟರು. ಈ ಗ್ರಂಥ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪಂಡಿತರ ಗಮನವನ್ನು ಸೆಳೆಯಿತು. ಇದರ ಬಗೆಗೆ ವಿವಿಧ ನೆಲೆಗಳಲ್ಲಿ ವಾಗ್ವಾದ ನಡೆದಿತ್ತು. ಈ ಕೃತಿಯ ಮೊದಲ ಭಾಗ 1930ರಲ್ಲೂ ಎರಡನೆಯ ಭಾಗ 1955ರಲ್ಲೂ ಪ್ರಕಟವಾದುವು. ಆದರೆ ಸಂಪಾದನೆಯ ಕಾರ್ಯ ಅಪೂರ್ಣವಾಗಿಯೇ ಉಳಿಯಿತು. ಪ್ರಕಟವಾದ ಭಾಗವೂ ಸಾಮಾನ್ಯ ಜನರಿಗೆ ಅರ್ಥವಾಗಲಿಲ್ಲ. ಹೀಗಾಗಿ ಕೃತಿಯನ್ನು ಪರಿಚಯಿಸುವ ಸಲುವಾಗಿ ಉಪನ್ಯಾಸ, ಲೇಖನಗಳನ್ನು ಇವರು ನಿರಂತರವಾಗಿ ನೀಡಿದರು. ಮೈಸೂರಿನ ಯುವರಾಜ ಕಾಲೇಜಿನಲ್ಲಿ 1956 ಆಗಸ್ಟ್ 29ರಂದು ಸಿರಿಭೂವಲಯದಲ್ಲಿ ರಸಸಿದ್ಧಿ ಅಣುವಿಜ್ಞಾನ ಎಂಬ ವಿಷಯದ ಬಗೆಗೆ ಇವರು ನೀಡಿದ ಉಪನ್ಯಾಸ ಹಲವರ ಮೆಚ್ಚುಗೆಗೆ ಪಾತ್ರವಾಗಿತ್ತು. ಸಿರಿಭೂವಲಯದ ಬಗ್ಗೆ ಚರ್ಚಿಸಲು ಜೈನಗುರು ದೇಶಭೂಷಣ ಮುನಿಗಳು, ಕಲ್ಕತ್ತದ ಶಾಂತಿಪ್ರಸಾದ್ ಜೈನರು, ಗೋಕರ್ಣದ ಬ್ರಹ್ಮರ್ಷಿ ದೈವರಾತರು ಇವರನ್ನು ಭೇಟಿಯಾಗಿದ್ದರು. 1957ರಲ್ಲಿ ರಾಷ್ಟ್ರಪತಿಗಳ ಆದೇಶದಂತೆ ಭಾರತ ಸರ್ಕಾರ ಸಿರಿಭೂವಲಯ ಕೃತಿಯನ್ನು ಮೈಕ್ರೋಫಿಲಂ ಮಾಡಿಸಿ ಪ್ರಾಚ್ಯಪತ್ರಾಗಾರದಲ್ಲಿ ರಕ್ಷಿಸಿಡಲು ಕ್ರಮ ತೆಗೆದುಕೊಂಡಿತು.

ಸಿರಿಭೂವಲಯ ಜಗತ್ತಿನ ಸಕಲ ಭಾಷೆ, ಜ್ಞಾನ ವಿಜ್ಞಾನಗಳನ್ನು ಕನ್ನಡದಲ್ಲಿ ಅಡಗಿಸಿ, ಕನ್ನಡದ ಮೂಲವನ್ನು ನವಮಾಂಕ ಗಣಿತ ಅಂಕಾಕ್ಷರದ ಕ್ರಮದಲ್ಲಿ ರೂಪಿಸಿದ ಅಸದೃಶ ವಿಶ್ವಕಾವ್ಯ ಎಂಬುದು ಶ್ರೀಕಂಠಯ್ಯನವರ ಅಭಿಪ್ರಾಯ. ಇದನ್ನು ರಚಿಸಿದ ಕವಿ ಕುಮುದೇಂದು 8ನೆಯ ಶತಮಾನದವನು ಎಂದು ಹೇಳಲಾಗಿದೆ. ಸಿರಿಭೂವಲಯ ಕೃತಿ ಸಾಂಗತ್ಯದ ಬಂಧದಲ್ಲಿದೆ. ಈ ಗ್ರಂಥ ಯಾವುದೇ ಭಾಷೆ ಅಥವಾ ಲಿಪಿಯಲ್ಲಿಲ್ಲದೆ ಕೇವಲ ಅಂಕ ಮಾಧ್ಯಮದ ಚಕ್ರರೂಪದಲ್ಲಿ ರಚಿತವಾಗಿದೆ. ಒಂದೊಂದು ಚಕ್ರದ 27 X 27 ಚೌಕಾಕಾರದ 729 ಮನೆಗಳಿಂದ ಕೂಡಿ ಒಂದು ಚಕ್ರವಾಗಿದೆ. ಇಂತಹ 1270 ಚಕ್ರಗಳು ಈ ಕೃತಿಯಲ್ಲಿವೆ. ಪ್ರತಿಯೊಂದು ಚಕ್ರದಲ್ಲಿಯೂ 1ರಿಂದ 64ರವರೆಗಿನ ಅಂಕಿಗಳನ್ನು 729 ಮನೆಗಳಲ್ಲಿ ತುಂಬಲಾಗಿದೆ. ಅಂಕಗಳ ಸಂಕೇತಗಳನ್ನು ಉಚ್ಚಾರಣೆಯ ಧ್ವನಿಗಳಾಗಿ ಪರಿವರ್ತಿಸಿದಾಗ ಮೂಡಿಬಂದ ಕೃತಿ ಇದು. ಪ್ರಪಂಚದ 718 ಭಾಷೆಗಳಿಗೆ ಈ ಧ್ವನಿಗಳನ್ನು ಪರಿವರ್ತನೆ ಮಾಡಲು ಸಾಧ್ಯ ಎನ್ನಲಾಗಿದೆ. ಆದ್ದರಿಂದ ಈ ಕೃತಿಯನ್ನು ಸರ್ವಭಾಷಾಮಯೀ ಎಂದು ಕರೆಯಲಾಗಿದೆ. ಈ ಕೃತಿಯಲ್ಲಿ ರಸಮಣಿ, ದಾಂಪತ್ಯವಿಜ್ಞಾನ, ಲೋಹ ವಿಜ್ಞಾನ, ಅಣುವಿಜ್ಞಾನ, ಆಕಾಶವಿಜ್ಞಾನ, ಜಲವಿಜ್ಞಾನ ಮೊದಲಾದ ಹಲವು ವಿಷಯಗಳನ್ನು ನಿರೂಪಿಸಲಾಗಿದೆ.

ಓದುವ ಗತಿಯನ್ನು ಬದಲಾಯಿಸುತ್ತಾ ಬಂದ ಹಾಗೆ ಪ್ರಾಕೃತ, ಪಾಳಿ, ತೆಲುಗು, ತಮಿಳು, ಬಂಗಾಲಿ, ಒರಿಯ, ಹಿಬ್ರೂ, ಗ್ರೀಕ್ ಇತ್ಯಾದಿ ವಿವಿಧ ಭಾಷೆಗಳಲ್ಲಿ ಇದನ್ನು ಓದಬಹುದು. ಆದರೆ ಇದರ ಲಿಪಿ ಕನ್ನಡ. ಸರ್ಪಗತಿ, ಅಶ್ವಗತಿ, ಊರ್ಧ್ವಗತಿ, ಅನುಲೋಮ, ಪ್ರತಿಲೋಮ ಇತ್ಯಾದಿ ಗತಿಗಳಲ್ಲಿ ಓದಬಹುದೆನ್ನುವುದು ಇವರ ಅಭಿಪ್ರಾಯ. 'ಸಿರಿಭೂವಲಯ ಸುಮ್ಮನೆ ಓದಿ ನೋಡಿ ಅರಿತುಕೊಳ್ಳುವ ಪುಸ್ತಕವಲ್ಲ. ದುಡ್ಡು ಹುಟ್ಟಿಸುವ ಪುಸ್ತಕಗಳ ಪ್ರಕಾಶಕರು ಇದನ್ನು ಪ್ರಕಟಿಸುವುದಿಲ್ಲ. ಅವರಿಗೆ ಬೇಕಾದಂತೆ ಮಾಡುವ ಪ್ರವೃತ್ತಿಯೂ ಶಕ್ತಿಯೂ ನನ್ನಲ್ಲಿಲ್ಲ' ಎಂದು ಶ್ರೀಕಂಠಯ್ಯನವರು ಒಮ್ಮೆ ಹೇಳಿಕೊಂಡಿದ್ದರಂತೆ. ಸಿರಿಭೂವಲಯವನ್ನು ವ್ಯಾಖ್ಯಾನಿಸುವಲ್ಲಿ ಇವರು ಮಾಡಿದ ಪ್ರಯತ್ನ ಗಮನಾರ್ಹವಾದುದು. ಈಗ ಸಿರಿಭೂವಲಯ ಪ್ರಕಟವಾಗಿದೆ.

ಶ್ರೀಕಂಠಯ್ಯನವರ ಲೇಖನಗಳ ಸಂಕಲನವನ್ನು ಪುತ್ತೂರು ವಿವೇಕಾನಂದ ಕಾಲೇಜು ಕನ್ನಡ ಸಂಘದವರು ಪ್ರಕಟಿಸಿದ್ದಾರೆ. ಇದರಲ್ಲಿ ಹನ್ನೊಂದು ಲೇಖನಗಳಿವೆ. ಇವು ಭಾರತೀಯ ಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸಕ್ಕೆ ಸಂಬಂಧಿಸಿವೆ. ಇವಲ್ಲದೆ ಬಾಲೀ ಭಗವದ್ಗೀತೆ, ಅಕ್ಕಾಡಿ ಸಾಹಿತ್ಯ, ಮೊಹೆಂಜೊದಾರೋ ಹರಪ್ಪ ಅಕ್ಕಾಡ್ ಸುಮೇರ್ ಸಭ್ಯತೆ ಮೊದಲಾದ ಅನೇಕ ಲೇಖನಗಳನ್ನು ಇವರು ಬರೆದಿದ್ದಾರೆ; ಇವು ಪ್ರಕಟವಾಗಿಲ್ಲ. ಮುದುಕಣ್ಣಗೌಡನ ವೈದ್ಯಸಾರ ಸಂಗ್ರಹ, ಕನ್ನಡಕಬ್ಬ– ಇವು ಇವರ ಅಪ್ರಕಟಿತ ಕೃತಿಗಳು.

ಕರ್ನಾಟಕದ ಸಾಕ್ರಟೀಸ್ ಎಂದೇ ಖ್ಯಾತರಾಗಿದ್ದ ಶ್ರೀಕಂಠಯ್ಯನವರು 1965 ಮಾರ್ಚ್ 11ರಂದು ನಿಧನರಾದರು. ಆಲೂರ ವೆಂಕಟರಾಯ, ಮಂಜೇಶ್ವರ ಗೋವಿಂದ ಪೈ, ಸುನೀತಿ ಕುಮಾರ ಚಟರ್ಜಿ, ಬಾಬು ರಾಜೇಂದ್ರ ಪ್ರಸಾದ್, ಎಸ್. ಶ್ರೀಕಂಠಶಾಸ್ತ್ರಿ ಮೊದಲಾದ ವಿದ್ವಾಂಸರು ಇವರ ಸಂಶೋಧನೆ ಮತ್ತು ಆಳವಾದ ಪಾಂಡಿತ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇಷ್ಟಾಗಿಯೂ ಇವರಿಗೆ ಸಕಾಲದಲ್ಲಿ ಕನ್ನಡ ನಾಡಿನಲ್ಲಿ ಸೂಕ್ತ ಗೌರವ, ಮಾನ್ಯತೆ ದೊರೆಯಲಿಲ್ಲವೆನ್ನುವುದು ಅನೇಕರ ಅಭಿಪ್ರಾಯ. (ಎಸ್.ಎಚ್.ಜಿ.)

**ಶ್ರೀಕಂಠಯ್ಯ, ತೀ. ನಂ.:** 1906–66. ಪ್ರಸಿದ್ಧ ಕನ್ನಡ ವಿದ್ವಾಂಸರು, ಭಾಷಾವಿಜ್ಞಾನಿಗಳು. ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥಪುರದಲ್ಲಿ 1906 ನವೆಂಬರ್ 26ರಂದು ಜನಿಸಿದರು. ತಂದೆ ಶಾನುಭೋಗ ನಂಜುಂಡಯ್ಯನವರು. ತೀರ್ಥಪುರ, ಚಿಕ್ಕನಾಯಕನಹಳ್ಳಿ ಮತ್ತು ತುಮಕೂರುಗಳಲ್ಲಿ ಆರಂಭದ ಶಿಕ್ಷಣ ಮುಗಿಸಿದ ಇವರು ಮೈಸೂರು ಮಹಾರಾಜ ಕಾಲೇಜು ಸೇರಿ ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳ ಜತೆಗೆ ಸಂಸ್ಕೃತ–ಕನ್ನಡಗಳನ್ನು ವಿಶೇಷವಾಗಿ ವ್ಯಾಸಂಗಮಾಡಿ ಬಿ.ಎ. ಪದವಿಯನ್ನು ಆರು ಬಂಗಾರ ಪದಕಗಳೊಡನೆ ಪಡೆದರು. ಅನಂತರ ಎಂ.ಎ. ತರಗತಿಗೆ ಸೇರಿದ ಇವರು ಎಂ.ಸಿ.ಎಸ್. ಪರೀಕ್ಷೆಗೂ ಸಿದ್ಧರಾಗಿ ಎಂ.ಎ. ಪರೀಕ್ಷೆಯನ್ನು ಮಧ್ಯೆ ಬಿಟ್ಟು ಎಂ.ಸಿ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾದರು (1928). ಅನಂತರ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಎಂ.ಎ. ಪದವಿಗಳನ್ನು ಪಡೆದರು. ಶ್ರೀರಂಗಪಟ್ಟಣದಲ್ಲಿ ಸ್ವಲ್ಪಕಾಲ ಅಮಲ್ದಾರರಾಗಿ ಕೆಲಸ ಮಾಡಿದರಾದರೂ ಅದನ್ನು ಬಿಟ್ಟು ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು (1928–52). 1952ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋದರು. 1957ರ ವರೆಗೂ ಅಲ್ಲಿ ಪ್ರಾಧ್ಯಾಪಕರಾಗಿ ಕೆಲಸಮಾಡಿದ ಇವರು, ಮತ್ತೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿ ಅಲ್ಲಿ 1962 ರವರೆಗೂ ಪ್ರಾಧ್ಯಾಪಕರಾಗಿ ಕೆಲಸಮಾಡಿ ನಿವೃತ್ತರಾದರು. ಕನ್ನಡ ಸಾಹಿತ್ಯ ಪರಿಷತ್ ಸಿದ್ಧಪಡಿಸುತ್ತಿದ್ದ ಕನ್ನಡ–ಕನ್ನಡ ನಿಘಂಟು ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ ಇವರು ಭಾಷಾವಿಜ್ಞಾನ ದೃಷ್ಟಿಯಿಂದ ನಿಘಂಟನ್ನು ನಿರ್ಮಿಸುವ ಪದ್ಧತಿಗೆ ಭದ್ರವಾದ ತಳಪಾಯ ಹಾಕಿದರು.

ಇವರು ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿದ್ದರು. ವಿಮರ್ಶೆ, ಛಂದಸ್ಸು, ಭಾಷಾವಿಜ್ಞಾನ, ಕಾವ್ಯಮೀಮಾಂಸೆ ಇವರಿಗೆ ಪ್ರಿಯವಾದ ವಿಷಯಗಳಾಗಿದ್ದವು. ಇವುಗಳಲ್ಲಿ ಎಲ್ಲದರಲ್ಲೂ ಸಮಾನವಾದ ತಲಸ್ಪರ್ಶಿ ನೈಪುಣ್ಯಗಳಿಸಿದ್ದರು; ಜೊತೆಗೆ ಸಹಜ ಕವಿತ್ವ ಸಿದ್ಧಿಸಿತ್ತು. ಒಲುಮೆ (1932) ಹಾಗೂ ಬಿಡಿಮುತ್ತು (1970) ಎಂಬ ಸಂಕಲನಗಳು ಈ ಹೇಳಿಕೆಗೆ ಸಾಕ್ಷಿ. ಕಾವ್ಯಸಮೀಕ್ಷೆ (1947), ರಾಕ್ಷಸನ

ಮುದ್ರಿಕೆ (1942), ನಂಟರು (1963), ಸಮಾಲೋಕನ (1958), ಪಂಪ, ನಂಬಿಯಣ್ಣನ ರಗಳೆ (1946), ಗದಾಯುದ್ಧ ಸಂಗ್ರಹ (1949), ಭಾರತೀಯ ಕಾವ್ಯಮೀಮಾಂಸೆ (1953), ಕಾವ್ಯಾನುಭವ (1970) ಮುಂತಾದ ಕೃತಿಗಳು ಇವರ ಅಗಾಧ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ. ಭಾರತೀಯ ಕಾವ್ಯಮೀಮಾಂಸೆ ಈ ಕ್ಷೇತ್ರದ ಆಚಾರ್ಯಕೃತಿ ಎಂದು ಪರಿಗಣಿತವಾಗಿದೆ.

ಭಾಷಾಶಾಸ್ತ್ರದಲ್ಲಿ ಇವರಿಗೆ ವಿಶೇಷವಾದ ಆಸಕ್ತಿ. ಧಾರವಾಡದಲ್ಲಿ ಪ್ರಾಧ್ಯಾಪಕರಾಗಿದ್ದಾಗ ಈ ಆಸಕ್ತಿ ಇಮ್ಮಡಿಯಾಯಿತು. ಅಲ್ಲಿಂದಲೇ ಪುಣೆಯ ಭಾಷಾವಿಜ್ಞಾನ ಮಹಾಸಂಸ್ಥೆಯಾದ ಡೆಕ್ಕನ್ ಕಾಲೇಜಿನ ವಿಚಾರಗೋಷ್ಠಿ (1953) ಹಾಗೂ ಬೇಸಗೆ ಶಾಲೆಗಳಿಗೆ ಹೋಗಿಬರುತ್ತಿದ್ದರು. ಇವರ ವಿದ್ವತ್ತನ್ನು ಮನಗಂಡ ಅಲ್ಲಿನ ವಿದ್ವಾಂಸ ಮಂಡಲಿ ಅಮೆರಿಕದ ರಾಕ್‌ಫೆಲರ್ ಪ್ರತಿಷ್ಠಾನದ ವಿಶೇಷ ಗೌರವವೇತನ ದೊರಕಿಸಿಕೊಟ್ಟಿತು. ಇವರು 1955ರಲ್ಲಿ ಅಮೆರಿಕಕ್ಕೆ ಹೋದರು. ಅಲ್ಲಿ ಮತ್ತು ಯುರೋಪಿನ ನಾಲ್ಕೈದು ದೇಶಗಳಲ್ಲಿ ಪ್ರವಾಸ ಮಾಡಿದರು. ಒಟ್ಟು ಎಂಟು ತಿಂಗಳು ಕಾಲದ ಈ ವಿದೇಶ ಪ್ರವಾಸ ಕಾಲದಲ್ಲಿ ಅಮೆರಿಕದ ಮಿಶಿಗನ್, ಪೆನ್ಸಿಲ್ವೇನಿಯ, ಬರ್ಕಲಿ, ಹಾರ್ವರ್ಡ್, ಏಲ್ ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿದರು. ಅಲ್ಲಿಂದ ಇಂಗ್ಲೆಂಡಿಗೆ ತೆರಳಿ ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಜ್, ಎಡಿನ್‌ಬರೊ ವಿಶ್ವವಿದ್ಯಾಲಯಗಳಿಗೆ ಭೇಟಿಯಿತ್ತರು. ಅಲ್ಲಿಂದ ಹಾಲೆಂಡ್, ಫ್ರಾನ್ಸ್, ಇಟಲಿ ದೇಶಗಳನ್ನು ಸುತ್ತಿ 1956ರಲ್ಲಿ ತಾಯ್ನಾಡಿಗೆ ಮರಳಿದರು. ಅದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ವಿಶೇಷ ಉಪನ್ಯಾಸಮಾಲೆಯಲ್ಲಿ ಆಧುನಿಕ ಭಾಷಾಶಾಸ್ತ್ರದ ಕೆಲವು ವಿಚಾರಗಳು ಎಂಬ ಉಪನ್ಯಾಸವಿತ್ತರು. ಭಾಷಾವಿಜ್ಞಾನದ ಸಂಶೋಧನೆ ಬೋಧನೆಗಳು ವಿದೇಶದಲ್ಲಿ ಹೇಗೆ ನಡೆಯುತ್ತಿವೆ ಎಂಬುದನ್ನು ಮನಗಂಡ ಇವರು ಕನ್ನಡದಲ್ಲಿ ಭಾಷಾವಿಜ್ಞಾನದ ಅಧ್ಯಯನಕ್ಕೆ ಮತ್ತು ಬೆಳವಣಿಗೆಗೆ ಒಳ್ಳೆಯ ತಳಹದಿಯನ್ನು ಹಾಕಿದರು.

ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ಒಂದು ವ್ಯಾಕರಣಮಾಲೆಯನ್ನು ಪ್ರಕಟಿಸಬೇಕೆಂದು ವಿದ್ಯಾ ಇಲಾಖೆ ಯೋಜಿಸಿತ್ತು. ಅದರಂತೆ ಎ.ಎನ್. ನರಸಿಂಹಯ್ಯ, ತೀನಂಶ್ರೀ, ಟಿ.ಎಸ್.ವೆಂಕಣ್ಣಯ್ಯ ಅವರುಗಳಿಗೆ ಆ ಕೆಲಸವನ್ನು ವಹಿಸಲಾಯಿತು. ಈ ವಿದ್ವನ್ಮಂಡಳಿ ಸಿದ್ಧಪಡಿಸಿಕೊಟ್ಟ ಕನ್ನಡ ಮಾಧ್ಯಮ ವ್ಯಾಕರಣವನ್ನು ವಿದ್ಯಾ ಇಲಾಖೆಯವರು ಪ್ರಕಟಿಸಿದರು (1939). ಭಾಷಾಶಾಸ್ತ್ರ ದೃಷ್ಟಿಯಿಂದ ಬರೆದ ಆ ಪುಸ್ತಕ ಈ ಹೊತ್ತಿಗೂ ಒಂದು ಉತ್ತಮ ವ್ಯಾಕರಣ. ಮಾಧ್ಯಮಿಕ ತರಗತಿ ವಿದ್ಯಾರ್ಥಿಗಳಿಗಾಗಿ ಅದನ್ನು ಬರೆದಿದ್ದರೂ ಅದರ ಹರವು ದೊಡ್ಡದು. ಕನ್ನಡ ಭಾಷೆಯ ರಚನಾತ್ಮಕ ಅಧ್ಯಯನದ ಜೊತೆಗೆ ಚಾರಿತ್ರಿಕ ಬೆಳವಣಿಗೆಯನ್ನು ಅದರಲ್ಲಿ ವಿವೇಚಿಸಲಾಗಿದೆ; ಪಂಚಮೀ ವಿಭಕ್ತಿಯನ್ನು ಅಲ್ಲಿ ಕೈಬಿಡಲಾಗಿದೆ.

ಭಾಷಾವಿಜ್ಞಾನ ವಿಷಯದಲ್ಲಿ ಶ್ರೀಕಂಠಯ್ಯನವರು ಇಂಗ್ಲಿಷಿನಲ್ಲೂ ಕೆಲವು ಲೇಖನಗಳನ್ನು ಪ್ರಕಟಿಸಿದ್ದಾರೆ.

ಶ್ರೀಕಂಠಯ್ಯನವರು ಹಲವು ಬಗೆಯ ಗೋಷ್ಠಿ-ಸಮ್ಮೇಳನಗಳಿಗೆ ಅಧ್ಯಕ್ಷರಾಗಿದ್ದರು. ದೆಹಲಿಯಲ್ಲಿ 1957ರಲ್ಲಿ ನಡೆದ ಪ್ರಾಚ್ಯ ವಿದ್ವತ್ ಸಮ್ಮೇಳನದ ದ್ರಾವಿಡ ಸಂಸ್ಕೃತಿ ವಿಭಾಗಕ್ಕೆ ಅಧ್ಯಕ್ಷರಾಗಿದ್ದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ 1958ರಲ್ಲಿ ನಡೆದ ಭಾಷಾವಿಜ್ಞಾನ ಬೇಸಗೆ ಶಾಲೆಯ ವ್ಯವಸ್ಥೆ-ಯಶಸ್ಸು ಪೂರ್ಣ ಇವರದು. ಅಖಿಲ ಭಾರತ ಭಾಷಾವಿಜ್ಞಾನಿಗಳ ಸಂಘಕ್ಕೆ 1960ರಲ್ಲಿ ಅಧ್ಯಕ್ಷರಾಗಿದ್ದರು. ಇವರು 1961ರಲ್ಲಿ ಗದಗಿನಲ್ಲಿ ನಡೆದ 43ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಾಬಾಂಧವ್ಯ ಗೋಷ್ಠಿಗೆ ಅಧ್ಯಕ್ಷರಾಗಿದ್ದರು.

ಇವರು 1966 ಸೆಪ್ಟೆಂಬರ್ 7ರಂದು ನಿಧನರಾದರು. ಇವರ ಸ್ಮರಣೆಗಾಗಿ ಶ್ರೀಕಂಠತೀರ್ಥ ಎಂಬ ಸ್ಮರಣಗ್ರಂಥವನ್ನು ಪ್ರಕಟಿಸಲಾಯಿತು (1976). ಇವರಿಗೆ ಮರಣೋತ್ತರ ಪಂಪಪ್ರಶಸ್ತಿ (ಭಾರತೀಯ ಕಾವ್ಯಮೀಮಾಂಸೆ) ನೀಡಲಾಗಿದೆ (1988).

**(ಎಚ್.ಪಿ.ಎನ್.)**

**ಶ್ರೀಕಂಠಯ್ಯ, ಬಿ. ಎಂ.:** 1884-1946. ಕನ್ನಡ ನವೋದಯ ಸಾಹಿತ್ಯದ ಆಚಾರ್ಯಪುರುಷರು. ಶ್ರೀ ಎಂಬ ಕಾವ್ಯನಾಮದಿಂದ ಪ್ರಸಿದ್ಧರು. ಪ್ರತಿಭಾವಂತ ವಿದ್ಯಾರ್ಥಿಯಾಗಿ, ಪ್ರಾಧ್ಯಾಪಕರಾಗಿ, ವಿವಿಧ ಶಿಕ್ಷಣ ಮತ್ತು ಸಾರ್ವಜನಿಕ ಸಂಘಸಂಸ್ಥೆಗಳಲ್ಲಿ ಉನ್ನತಾಧಿಕಾರಿಗಳಾಗಿ ಕವಿಗಳೂ ವಿದ್ವಾಂಸರೂ ವಾಗ್ಮಿಗಳೂ ಆಗಿ ನಾಡಿನ ಒಕ್ಕೂಟ, ನುಡಿಯ ಏಳಿಗೆಯ ಪ್ರಚಾರಕರಾಗಿ, ದಾನಿಗಳಾಗಿ, ಹಿರಿಯ ಮನ್ನಣೆ ಮರ್ಯಾದೆಗಳಿಗೆ ಪಾತ್ರರಾಗಿ ತುಂಬುಜೀವನ ನಡೆಸಿದ ಇವರ ಹೆಸರು ಕನ್ನಡ ನಾಡಿನ ಚರಿತ್ರೆಯಲ್ಲಿ ಚಿರಸ್ಮರಣೀಯವಾಗಿದೆ.

ಇವರು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಸಂಪಿಗೆಯಲ್ಲಿ 1884 ಮಾರ್ಚ್ 1 ರಂದು ಜನಿಸಿದರು. ತಾಯಿ ಭಾಗೀರಥಮ್ಮ, ತಂದೆ ಬೆಳ್ಳೂರು ಮೈಲಾರಯ್ಯನವರು ಶ್ರೀರಂಗಪಟ್ಟಣದಲ್ಲಿ ವಕೀಲರು. ತಾಯಿಯ ತವರಿನಲ್ಲೇ ಅಕ್ಷರಾಭ್ಯಾಸ ಮಾಡಿದರು. ತಂದೆಯಿಂದ ಇಂಗ್ಲಿಷ್ ಕಲಿತರು. ಅನಂತರ ಮೈಸೂರಿನ ಮಹಾರಾಜ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಿ ಓದಿದರು. ಬಿ.ಎ. ಮಾಡಿ (1906) ಮದರಾಸಿನಿಂದ ಬಿ.ಎಲ್. (1907) ಮತ್ತು ಎಂ.ಎ. (1909) ಪದವಿ ಪಡೆದು ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇರಿ (1909) ಇಂಗ್ಲಿಷ್ ವಿಭಾಗದ ಪ್ರಾಚಾರ್ಯ ಪದವಿಗೆ ಏರಿದರು (1930). ಈ ನಡುವೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ನಾಲ್ಕು ವರ್ಷ ಕೆಲಸ ಮಾಡಿದರು (1926-30). ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದದ್ದು 1938ರಲ್ಲಿ. ಶ್ರೀ ಅವರು ಪ್ರಾಧ್ಯಾಪಕ ಹುದ್ದೆಯಿಂದಲೂ ಪರಿಷತ್ತಿನ ಉಪಾಧ್ಯಕ್ಷ ಸ್ಥಾನದಿಂದಲೂ 1942ರಲ್ಲಿ ನಿವೃತ್ತರಾದರು. ಅನಂತರ 1944ರಲ್ಲಿ ಧಾರವಾಡದ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ಹೋದವರು ಅಲ್ಲಿಯೆ 1946 ಜನವರಿ 5 ರಂದು ನಿಧನರಾದರು.

ಜೀವನದ ಮಧ್ಯೆ ಇವರಿಗೆ ಪ್ರಾಪ್ತಿಸಿದ ನೋವುಗಳು ದೊಡ್ಡ ಮಟ್ಟದವು; ಹೆಂಡತಿಯ ಅಕಾಲಮರಣ. ಒಬ್ಬನೇ ಮಗನಿಗೆ ಅಪಚಾರದಿಂದ ಅಡಸಿದ ಕುರುಡುತನ, ಹಿರಿಯ ಅಳಿಯನ ಸಾವು ಇಂಥ ಪ್ರಹಾರಗಳನ್ನೆಲ್ಲ ತಾಳಿಕೊಂಡು ದೇಶ ಹಾಗೂ ನುಡಿಸೇವೆ ಮಾಡಿದ ಶ್ರೀ ಅವರದು ಧೀರ ಚೈತನ್ಯ. ಶ್ರೀಯವರ ತುಂಬುಜೀವನದಲ್ಲಿ ಎದ್ದು ಕಾಣುವ ಅಂಶಗಳೆಂದರೆ ಅವರ ಆಳವಾದ ಆಂಗ್ಲ ಸಾಹಿತ್ಯಾಭ್ಯಾಸ, ಅದಕ್ಕೂ ಆಳವಾದ ಕನ್ನಡ ಪ್ರೇಮ, ಕನ್ನಡದ ಉದ್ಧಾರದ ಬಗ್ಗೆ ಇವರು ತೋರಿದ ಕಳಕಳಿ, ಅವರ ಭಾಷಣಗಳ ಮೋಡಿ, ರಸಪೂರ್ಣ ಕೃತಿರಚನೆ ಈ ಮುಂತಾದವು.

ಇವರ ಕೃತಿಗಳು ಗಾತ್ರದಲ್ಲಿ ಸಣ್ಣವಾದರೂ ಗುಣದಲ್ಲಿ ಬಹಳ ದೊಡ್ಡವು. ವಿದ್ಯಾರ್ಥಿಗಳಿಗಾಗಿ ಇವರು ಇಂಗ್ಲಿಷಿನಲ್ಲಿ ಬರೆದ ಎ ಹ್ಯಾಂಡ್‌ಬುಕ್

ಆಫ್ ರ್‍ಹೆಟೋರಿಕ್ (ಅಲಂಕಾರಶಾಸ್ತ್ರ ಟಿಪ್ಪಣಿ) ಕಣ್ಮರೆಯಾಗಿ ಎಷ್ಟೋ ಕಾಲ ಸವೆಯಿತು (ಪ್ರಕಟಣೆ ಸು.1912), ಹಾಗೆಯೇ ಅವರ ಟ್ರಾಜಿಕ್ ರಾವಣ ಮುಂತಾದ ಕೆಲವೇ ಕೆಲವು ಇಂಗ್ಲಿಷ್ ಲೇಖನಗಳಿಗೆ ಸಾಕಷ್ಟು ಖ್ಯಾತಿ ದೊರೆತಿಲ್ಲ. ಆದರೆ 1911ರಲ್ಲಿ ಇವರು ಧಾರವಾಡದಲ್ಲಿ ಕೊಟ್ಟ ಎರಡು ಉಪನ್ಯಾಸಗಳು-ಕನ್ನಡ ಮಾತು ತಲೆಯೆತ್ತುವ ಬಗೆ, ಕನ್ನಡಕ್ಕೆ ಒಂದು ಕಟ್ಟು-ಇವು ಈಗಲೂ ಗಂಭೀರ ಸ್ವರೂಪದ ಬರೆಹಗಳಾಗಿವೆ. ಗದಾಯುದ್ಧ ನಾಟಕಂ ಎಂಬ ರನ್ನನ ಕಾವ್ಯದ ರೂಪಾಂತರವೂ ಇವರ ಸ್ವಂತ ರಚನೆಯೇ ಆದ ಇಂಗ್ಲಿಷ್ ಗೀತಗಳು ಎಂಬ ಅನುವಾದ ಸಂಕಲನವೂ ಹೊರಬಂದುವು (1926). ನಾಟಕದಲ್ಲಿ ದುರ್ಯೋಧನನನ್ನು ನಾಯಕಪಟ್ಟಕ್ಕೆ ಏರಿಸುವ ಪ್ರಯತ್ನ ನಡೆದಿದೆ. ಇಂಗ್ಲಿಷ್ ಗೀತಗಳಾದರೊ ಕನ್ನಡದ ಹೊಸ ಛಂದಸ್ಸಿಗೆ ಹಾದಿ ತೋರಿಸಿಕೊಟ್ಟ ಮುನ್ನಡೆ ಕವನಗಳು.



ಹಿಂದಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಬೆಳ್ಳಿಹಬ್ಬದ ಸಂದರ್ಭದಲ್ಲಿ (1927) ರಚಿಸಿದ ರಜತ ಮಹೋತ್ಸವ ಪ್ರಗಾಥ ಶ್ರೀಯವರ ಇನ್ನೊಂದು ಉತ್ತಮ ಕೃತಿ. ಪ್ರಾಚೀನ ಗ್ರೀಕರ ಪ್ರಗಾಥದ ಮಾದರಿ ಶ್ರೀಯವರ ಮುಂದಿದ್ದುದೇನೊ ನಿಜ; ಆದರೂ ತಮ್ಮ ವಿಚಾರಸರಣಿಯಲ್ಲೂ ಭಾವೋದ್ರೇಕದಲ್ಲೂ ಕಾವ್ಯಭಾಷೆಯಲ್ಲೂ ಇವರು ನಿಸ್ಸಂದಿಗ್ಧ ಸ್ವಂತಿಕೆಯನ್ನು ವ್ಯಕ್ತಗೊಳಿಸಿದ್ದಾರೆ. 1929ರಲ್ಲಿ ಸಾಫೋಕ್ಲಿಸನ ಏಜಾಕ್ಸ್ ರೂಪಕದ ಆಧಾರದಿಂದ ಅಶ್ವತ್ಥಾಮನ್ ಎಂಬ ರುದ್ರನಾಟಕವನ್ನು ಕಟ್ಟಿದರು. ಅದು ವಾದವಿವಾದಕ್ಕೆ ಎಡೆಕೊಟ್ಟಿತು. ಅದರ ಪ್ರತಿಯೊಂದು ಪದವೂ ಪ್ರತಿಯೊಂದು ಸಾಲೂ ಅತ್ಯುತ್ತಮ ಕವಿತೆ; ಅಲ್ಲಿನ ಸಂವಾದಗಳಿಗೂ ನೃತ್ಯಮೇಳದ ಕೀರ್ತನೆಗಳಿಗೂ ಪ್ರಶಂಸಾತೀತವಾದ ಲಾವಣ್ಯವಿದೆ. ಆದರೆ ಪಾತ್ರಶಿಲ್ಪ ಅಭಾಸರಹಿತವೆಂದು ಹೇಳುವಂತಿಲ್ಲ. 1935ರಲ್ಲಿ ಹೊರಬಂದ ಪಾರಸಿಕರು ಈಸ್ಕಿಲಸ್ಸನ ಅದೇ ಹೆಸರಿನ ರೂಪಕದ ತರ್ಜುಮೆ. ಭಾಷಾಂತರದಲ್ಲಿ ಶ್ರೀಯವರ ನುರಿತ ಕೈವಾಡವಿದ್ದರೂ ಗೋಳಿನಿಂದ ತುಂಬಿರುವ ಕೃತಿಯಿಂದ ಕಾವ್ಯಾನಂದ ಕಡಿಮೆ ಎನ್ನಲೇಬೇಕು. 1938ರಲ್ಲಿ ಕನ್ನಡ ಬಾವುಟ ಎಂಬ ಪದ್ಯ ಸಂಕಲನಕ್ಕೆ ಇವರು ಸಂಪಾದಕರಾದರು. ಇವರ ಹಲವು ಕವನಗಳು 1943ರಲ್ಲಿ ಹೊಂಗನಸುಗಳು ಎಂಬ ಅಭಿದಾನದಿಂದ ಪ್ರಕಟಗೊಂಡುವು. ಕನ್ನಡ ಕೈಪಿಡಿಯಲ್ಲಿ ಇವರ ವಿದ್ವತ್ಪೂರ್ಣ ಲೇಖನಗಳು ಅಚ್ಚಾಗಿವೆ. 1948ರಲ್ಲಿ ಇವರ ಭಾಷಣಗಳನ್ನೂ ಲೇಖನಗಳನ್ನೂ ಮುನ್ನುಡಿಗಳನ್ನೂ ಒಟ್ಟುಕೂಡಿಸಿ ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ಎಂಬ ಶಿರೋನಾಮೆಯಿಂದ ಪ್ರಕಟಿಸಲಾಗಿದೆ. ಇವರ ಕನ್ನಡ ಸಾಹಿತ್ಯ ಚರಿತ್ರೆ (1947) ಅಂಥ ಕೆಲಸ ಮಾಡುವವರಿಗೆ ಮಾದರಿಯಾಗಿದೆ. ಇಸ್ಲಾಂ ಸಂಸ್ಕೃತಿ (1948) ಎಂಬುದು ಇವರು ಇಂಗ್ಲಿಷಿನಿಂದ ಮಾಡಿರುವ ಅನುವಾದ ಗ್ರಂಥ.

ಕನ್ನಡ ನಾಡು ನುಡಿಗಳ ಪುನರುಜ್ಜೀವನಕ್ಕೆ, ಅಭ್ಯುದಯಕ್ಕೆ ಆಚಾರ್ಯ ಬಿ.ಎಂ.ಶ್ರೀ. ಅವರು ಸಲ್ಲಿಸಿರುವ ಕಾಣಿಕೆ ಒಂದೆರಡಲ್ಲ, ಹಲವು. ಕನ್ನಡಕ್ಕೆ ಆತ್ಮಗೌರವವನ್ನು ಸಂಪಾದಿಸಿಕೊಟ್ಟ ಹೊಸಗನ್ನಡ ಕವಿತೆ ಕಣ್ಣು ತೆರೆಯುವಂತೆ ಮಾಡಿದ ಮಹಾನುಭಾವರು ಇವರು. ಇವರನ್ನು ಮೆಚ್ಚಿಕೊಂಡ ಮಹನೀಯರು ಇವರನ್ನು ಕನ್ನಡದ ಕಣ್ವ, ಆಧುನಿಕ ಕರ್ನಾಟಕಕಾವ್ಯ ಕುಲಪತಿ. ನವಯುಗ ಪ್ರವರ್ತಕ, ಆಧುನಿಕ ಕರ್ನಾಟ ಕವಿಚೂತವನ ಚೈತ್ರ ಎಂದು ಮುಂತಾಗಿ ತುಂಬು ಮನಸ್ಸಿನಿಂದ ಕರೆದಿದ್ದಾರೆ. ಈ ಕೊಂಡಾಟ ಅತಿಭಕ್ತಿಯ ಅತ್ಯುಕ್ತಿಯಲ್ಲ, ಅರ್ಹತೆಗೆ ಸಂದ ಕಾಣಿಕೆ. ಹುಟ್ಟು ಉಪಾಧ್ಯಾಯರೆಂಬ ಮೆಚ್ಚಿಕೆಗೆ ಪಾತ್ರರಾಗಿ, ಇಂಗ್ಲಿಷ್-ಕನ್ನಡ ಎರಡು ಭಾಷೆಗಳಲ್ಲಿಯೂ ತಾವು ಬೋಧಿಸಿದ ವಿಷಯಗಳನ್ನು ಬಹು ಸ್ವಾರಸ್ಯವಾಗಿಯೂ ಫಲಪ್ರದವಾಗಿಯೂ ಬೋಧಿಸಿದರೆಂದು ಸಂಭಾವನೆಯ ಕೆಲವು ಲೇಖನಗಳು ಹೇಳುತ್ತವೆ. ಕನ್ನಡ ಪ್ರಾಧ್ಯಾಪಕರಾಗಿ ಕನ್ನಡ ಬೋಧನೆಯಲ್ಲಿ ಒಂದು ಹೊಸ ಸಂಪ್ರದಾಯವನ್ನು ಭಿತ್ತಿದರು ಎಂದು ಟಿ.ಎಸ್. ವೆಂಕಣ್ಣಯ್ಯನವರು ಹೇಳುತ್ತಿದ್ದರಂತೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಆರಂಭವಾದ್ದು ಇವರ ಭಾಷಾಪ್ರೇಮ ಹಾಗೂ ಪ್ರಾಮಾಣಿಕವಾದ ಶ್ರದ್ಧೆ ಉತ್ಸಾಹಗಳ ಫಲ. ಅಂದು ಇವರು ಒಳ್ಳೆಯ ಮನಸ್ಸಿನಲ್ಲಿ ಹುಟ್ಟು ಹಾಕಿದ ಕನ್ನಡದ ಪ್ರೌಢ ವ್ಯಾಸಂಗದ ವ್ಯವಸ್ಥೆ, ಇಂದು ಮಹಾವೃಕ್ಷವಾಗಿ ಶಾಖೆ ಉಪಶಾಖೆಗಳನ್ನು ಹೊರವಾಗಿ ಹಬ್ಬಿಸಿ ಭಾಷೆಗೂ ಜನಕ್ಕೂ ತಂಪು ನೆರಳನ್ನು ಕೊಡುತ್ತಿದೆ. ಇದಕ್ಕಾಗಿ ಇವರು ಮೀಸಲಿಟ್ಟ ದತ್ತಿಗಳು, ಇವರ ಔದಾರ್ಯವನ್ನು ಉಗ್ಘಡಿಸುತ್ತಿವೆ. ಇವರ ವಿಶಾಲವೂ ವಿವಿಧವೂ ಆದ ಅಧ್ಯಯನ, ಬಹುಭಾಷಾಪಾಂಡಿತ್ಯ, ಸುಸಂಸ್ಕೃತ ಮನೋಧರ್ಮ, ವೃತ್ತಿಯಲ್ಲಿ ಶ್ರದ್ಧೆ ಉತ್ಸಾಹಗಳು, ವಿದ್ಯಾರ್ಥಿವೃಂದದಲ್ಲಿ ವಾತ್ಸಲ್ಯಪರತೆ, ಅಸಾಧಾರಣ ಬುದ್ಧಿಮತ್ತೆ, ವಾಗ್ಮಿತೆ, ಸಹೃದಯತೆ- ಈ ಹಲವಾರು ಗುಣಗಳು ಇವರನ್ನು ತಮ್ಮ ವೃತ್ತಿಗೆ ಅತ್ಯಂತ ಅರ್ಹರನ್ನಾಗಿ ಮಾತ್ರವಲ್ಲ, ಭೂಷಣವನ್ನಾಗಿ ಮಾಡಿದ್ದುವು.

ಶ್ರೀಯವರು ಕನ್ನಡ ಪ್ರಚಾರಕ್ಕೆ ಕೈಕೊಂಡ ಯೋಜನೆಗಳು ಹಲವಾರು. ಕರ್ನಾಟಕದ ಹಳ್ಳಿಹಳ್ಳಿಗಳನ್ನು ಸಂಚಾರಮಾಡಿ ಕನ್ನಡದ ಬಗ್ಗೆ ಜನ ಆಸಕ್ತಿಯನ್ನೂ ಉತ್ಸಾಹವನ್ನೂ ತಾಳುವಂತೆ ಮಾಡಿದರು. ಇದಕ್ಕಾಗಿ ಇವರು ಹಲವು ಸಂಘಸಂಸ್ಥೆಗಳ ಅಧಿಕಾರ ಪದವನ್ನೂ ಸಮ್ಮೇಳನಗಳ ವೇದಿಕೆಯನ್ನೂ ಧಾರಾಳವಾಗಿ ಬಳಸಿಕೊಂಡರು. ಇದು ನೀಡಿದ ಫಲ ಕಡಮೆಯದಲ್ಲ. ಪರಿಷತ್ತಿನ ಕಾರ್ಯ ನಿರ್ವಹಣೆಯಲ್ಲಿ ಪಾಲುಗೊಂಡ ಮೇಲಂತೂ ಉಪನ್ಯಾಸಗಳು, ಗ್ರಂಥಪ್ರಕಟನೆ, ಸಾಹಿತ್ಯ ಪರೀಕ್ಷೆಗಳ ವ್ಯವಸ್ಥೆ, ಸಮಾರಂಭಗಳು, ಪತ್ರಿಕೆಯ ಪ್ರಾರಂಭ, ಅಚ್ಚುಕೂಟದ ಸ್ಥಾಪನೆ, ದತ್ತಿಗಳ ಏರ್ಪಾಡು-ಈ ಮೊದಲಾದುವುಗಳ ಮೂಲಕ ಪರಿಷತ್ತು ಬೆಳೆದು ಬಲಗೊಳ್ಳುವ ಹಾಗೆ ಶ್ರಮಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸೇವಾಕ್ಷೇತ್ರದಲ್ಲಿ ನಿಂತಾಗ, ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ಯೋಜನೆಯನ್ನು ರೂಪಿಸಿ ಸಮಿತಿಯ ಅಧ್ಯಕ್ಷರೂ ಪ್ರಧಾನ ಸಂಪಾದಕರೂ ಆಗಿ, ಹೊಸಕಾಲದ ಆವಶ್ಯಕತೆಗೆ ತಕ್ಕಂತೆ ಲಲಿತವಾದ ಹೊಸಗನ್ನಡ ಶೈಲಿಯಲ್ಲಿ ವಿವಾದಾಸ್ಪದವಲ್ಲದ ನಿಷ್ಪಕ್ಷಪಾತವಾದ ರೀತಿಯಲ್ಲಿ ಜನಸಾಮಾನ್ಯರಿಗೆಂದು ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವ ಮೊದಲಾದ ಭಾಗಗಳ ಮೇಲೆ ಕನ್ನಡ ಗ್ರಂಥಗಳನ್ನು ತಜ್ಞರಿಂದ ಬರೆಸುವ ರೂಢಿಯನ್ನು ತಂದರು. ಹಳಗನ್ನಡ ನಡುಗನ್ನಡ ಸಾಹಿತ್ಯದ ಗಣ್ಯ ಗ್ರಂಥಗಳನ್ನು ವಿದ್ಯಾರ್ಥಿಗಳ ಮತ್ತು ಜನಸಾಮಾನ್ಯರ ಓದಿಗೆ ಅನುಕೂಲಿಸುವಂತೆ ಸಂಗ್ರಹಿಸಿಕೊಡುವ, ಪೀಠಿಕೆ ಶಬ್ದಕೋಶ ಟಿಪ್ಪಣಿಗಳ ಸಹಾಯಕ ಸಾಮಗ್ರಿಯನ್ನು ಕೂಡಿಸಿ ಸುಲಭ ಮಾಡುವ ಹಂಚಿಕೆಯನ್ನು ಹೂಡಿದರು. ಐದು ಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ಕನ್ನಡ ಕೈಪಿಡಿಯನ್ನು ರಚಿಸುವ ಯೋಜನೆಗೆ ಖಚಿತರೂಪವನ್ನು ಕೊಟ್ಟು ಆ ಸಮಿತಿಯ ಸಭಾಧ್ಯಕ್ಷರಾದರು. ಮೂರು ಭಾಗಗಳಿಗೆ ತಾವೇ ಸಹಲೇಖಕರೂ ಆದರು. ಈ ಪುಸ್ತಕ ಬಹುಕಾಲದಿಂದ ಕನ್ನಡದ ಪ್ರೌಢವಿದ್ಯಾರ್ಥಿಗಳಿಗೆ ಒಂದು ವರವಾಗಿ ಪರಿಣಮಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ

ಇಂಗ್ಲಿಷ್-ಕನ್ನಡ ನಿಘಂಟುವಿನ ಸಂಪಾದಕ ಮಂಡಲಿಯಲ್ಲಿ ಒಬ್ಬ ಸದಸ್ಯರಾಗಿ ಶ್ರಮಿಸಿದರು. ಪರಿಷತ್ತಿನ ಪಂಪಭಾರತದ ಕೊನೆಯ ಕರಡಚ್ಚುಗಳನ್ನು ತಿದ್ದಿ, ಅಮೂಲ್ಯ ಸಲಹೆಗಳನ್ನು ಕೊಟ್ಟು ನೆರವು ನೀಡಿದರು.

ಕನ್ನಡ ಭಾಷೆಗೆ ಹೇಗೋ ಹಾಗೆಯೇ ಕನ್ನಡ ವಿದ್ವತ್ತಿಗೆ ಕೂಡ ಆಚಾರ್ಯರ ಕಾಣಿಕೆ ಗಣ್ಯವಾದ್ದು; (i) ಕನ್ನಡದಲ್ಲಿ ಪೌರಾಣಿಕ ಹಾಗೂ ಅನುವಾದಿತ ರುದ್ರನಾಟಕಗಳ ರಚನೆಗೆ ಹೆದ್ದಾರಿಯನ್ನು ಹಾಕಿದರು. ಅಲ್ಲದೆ ಡೈಯೊನಿಸಸ್‌ಗೆ ಹಲವು ರೀತಿಯಲ್ಲಿ ಸಾದೃಶ್ಯವುಳ್ಳ, ರುದ್ರಭೂಮಿಗೆ ಅಧಿನಾಯಕನಾದ, ಆದರೂ ಮಂಗಳದಾಯಕನಾಗಿ ಭವರೋಗಕ್ಕೆ ಭಿಷಜನಾದ, ನಾಟ್ಯ ನಾಟಕ ಪ್ರದರ್ಶಕನಾದ ರುದ್ರನ ಹೆಸರಿಂದ ತಮ್ಮ ನಾಟಕಗಳಿಗೆ ರುದ್ರನಾಟಕವೆಂದು ಹೆಸರು ಕೊಟ್ಟವರೂ ಇವರೇ. (ii) ಕನ್ನಡ ಛಂದಸ್ಸಿನ ತಳಹದಿಯಾದ ಅಂಶಗಣಗಳ ಸ್ವರೂಪವನ್ನು ಛಂದೋಂಬುಧಿಯ ಸಾಕ್ಷ್ಯ ಮತ್ತು ತಮಿಳು ಛಂದಸ್ಸಿನ ತುಲನೆಯಿಂದ ಮೊದಲು ವಿಶದೀಕರಿಸಿದವರು ಮತ್ತು ಅನುಗುಣವಾಗಿ ಕನ್ನಡ ಮಟ್ಟುಗಳ ಲಕ್ಷಣವನ್ನು ಪರಿಶೀಲಿಸಿದವರು ಶ್ರೀಯವರು. ಜಾತಿಛಂದಸ್ಸಿನ ಮೂಲಮಾಪಕವಾದ ಅಕ್ಷರವನ್ನು ಅಂಶವೆಂದೂ ಅದರಿಂದಾದ ಗಣವನ್ನು ಅಂಶಗಣವೆಂದೂ ತಮಿಳು ಜಾತಿ ಛಂದಸ್ಸಿನ ಪ್ರೇರಣೆಯಿಂದ (ಆಶೈ ಅಂಶ; ಶೀರ್ ಗಣ) ಕರೆದವರು ಕೂಡ ಇವರೇ. (iii) ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗಕ್ರಮಗಳಲ್ಲಿ ಹೊಸದಾದ ಕೆಲವನ್ನು ಸೂಚಿಸಿ ಆರಂಭಕಾಲ, ಮತಪ್ರಾಬಲ್ಯಕಾಲ, ನವೀನ ಕಾಲ ಎಂಬ ಕ್ರಮದಂತೆ ತಾವೇ ಚರಿತ್ರೆಯನ್ನು ನಿರೂಪಿಸುವ ಯತ್ನ ಮಾಡಿದರು. (iv) ಚಾವುಂಡರಾಯ ಪುರಾಣ, ಅಜಿತಪುರಾಣಗಳಲ್ಲಿ ಸಾದೃಶ್ಯ ತೋರುವುದನ್ನು ಗಮನಿಸಿ, ಚಾವುಂಡರಾಯ ಪುರಾಣದಲ್ಲಿ ರನ್ನನ ಕೈವಾಡವೂ ಸೇರಿದೆಯೋ ಎಂಬ ಅನುಮಾನವನ್ನು ಮೊದಲು ವ್ಯಕ್ತಪಡಿಸಿದರು; ಮುಂದೆ ಇದು ಗಾಢ ಪರಿಶೀಲನೆಯ ವಿಷಯವಾಯಿತು. (v) ಕನ್ನಡ ಮೊದಲೋ ತಮಿಳು ಮೊದಲೋ ಎಂಬ ಮಹತ್ತ್ವದ ಪ್ರಶ್ನೆಯನ್ನೆತ್ತಿಕೊಂಡು ಕನ್ನಡ ನುಡಿಗಳೂ ವ್ಯಾಕರಣದ ನಿರಿಗಳೂ ಭಾಷಾಶಾಸ್ತ್ರದ ದೃಷ್ಟಿಯಿಂದ ಕನ್ನಡದಲ್ಲೇ ಪೂರ್ವರೂಪಗಳಾಗಿಯೂ ತಮಿಳಿನವು ಅನಂತರದ ರೂಪಗಳಾಗಿಯೂ ಇವೆಯೆಂದು ವಿದ್ವತ್ತಿನ ಸಭೆಯಲ್ಲಿ ಸಯುಕ್ತಿಕವಾಗಿ ತೋರಿಸಲು ಯತ್ನಿಸಿದರು. (vi) ಕವಿರಾಜಮಾರ್ಗ, ಕಾವ್ಯಾವಲೋಕನಗಳ ಪಾಠವಿಮರ್ಶೆಯ ಮೂಲಕ ಗ್ರಂಥಸಂಪಾದನ ಶಾಸ್ತ್ರಕ್ಕೆ ಅಂಕುರಾರ್ಪಣೆ ಮಾಡಿದರು. (vii) ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ನಾಡಿನ ಚರಿತ್ರೆ, ಕನ್ನಡ ಕೈಪಿಡಿ, ಕಾವ್ಯಸಂಗ್ರಹಗಳು ಈ ಬಗೆಯ ಗ್ರಂಥಗಳನ್ನು ಮಾಡಿಸುವುದರ ಮೂಲಕ ಕನ್ನಡ ವಿದ್ವತ್ತಿಗೆ ಭದ್ರವಾದ ತಳಹದಿಯನ್ನು ಹಾಕಿದರು.

ಆಚಾರ್ಯ ಶ್ರೀ ಅವರು ನಾಡು ನುಡಿಗಳ ಮುನ್ನಡೆಗೆ ಸಲ್ಲಿಸಿದ ಸೇವೆಗೆ ಮನ್ನಣೆ ಎಂಬಂತೆ ಕನ್ನಡ ಜನತೆ ಇವರನ್ನು ಹಲವು ಬಗೆಯಲ್ಲಿ ಗೌರವಿಸಿ ತನ್ನ ಕೃತಜ್ಞತೆಯನ್ನು ಸಲ್ಲಿಸಿದೆ. 1928ರಲ್ಲಿ ಗುಲ್ಬರ್ಗದಲ್ಲಿ ನಡೆದ 14ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. 1938ರಲ್ಲಿ ಆಗಿನ ಮೈಸೂರು ಮಹಾರಾಜರು ಇವರಿಗೆ ರಾಜಸೇವಾಸಕ್ತ ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. 1941ರಲ್ಲಿ ಇವರ ಶಿಷ್ಯರು, ಮಿತ್ರರು ಸಂಭಾವನೆ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದರು; ಇದೇ ಕನ್ನಡದಲ್ಲಿ ಪ್ರಕಟವಾದ ಮೊಟ್ಟಮೊದಲ ಅಭಿನಂದನ ಗ್ರಂಥ. ಇವರ ಸಮಗ್ರ ಬರೆಹಗಳನ್ನೊಳಗೊಂಡ ಶ್ರೀ ಸಾಹಿತ್ಯ ಎಂಬ ಗ್ರಂಥವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿದೆ (1983). **(ಎಸ್.ವಿ.ಆರ್.)**

**ಶ್ರೀಕಂಠಶಾಸ್ತ್ರೀ, ಎಸ್.:** 1904-74. ಸುಪ್ರಸಿದ್ಧ ಇತಿಹಾಸ ವಿದ್ವಾಂಸರು. ಸೊಂಡೆಕೊಪ್ಪದಲ್ಲಿ 1904 ನವೆಂಬರ್ 5ರಂದು ಜನಿಸಿದರು. ತಂದೆ ರಾಮಸ್ವಾಮಿಶಾಸ್ತ್ರಿಗಳು ಸರ್ಕಾರಿ ನೌಕರರಾಗಿದ್ದರಿಂದ ಇವರ ಶಿಕ್ಷಣ ಬೇರೆ ಬೇರೆ ಸ್ಥಳಗಳಲ್ಲಿ ನಡೆಯಿತು. ನಂಜನಗೂಡು, ಚಿಕ್ಕಬಳ್ಳಾಪುರ ಮತ್ತು ಕೋಲಾರಗಳಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದ ಇವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರೌಢ ವ್ಯಾಸಂಗವನ್ನು ನಡೆಸಿ ಎಂ.ಎ.ಪದವಿ ಪಡೆದರು. ಆ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಎನ್.ಎಸ್. ಸುಬ್ಬರಾವ್, ಬಿ.ಎಂ.ಶ್ರೀಕಂಠಯ್ಯ, ಎಂ.ಎಚ್.ಕೃಷ್ಣ, ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮೇಧಾವಿಗಳ ಮಾರ್ಗದರ್ಶನದಲ್ಲಿ ತಮ್ಮ ಬದುಕು



ಬರೆಹಗಳನ್ನು ಕುದುರಿಸಿಕೊಂಡರು. ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದಲ್ಲಿ ಟ್ಯೂಟರ್ ಆಗಿ (1930) ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು ಮುಂದೆ ಅಧ್ಯಾಪಕರಾಗಿ (1935), ಪ್ರಾಧ್ಯಾಪಕರಾಗಿ (1954), ಇಲಾಖೆಯ ಮುಖ್ಯಸ್ಥರಾಗಿ ಕೆಲಸ ಮಾಡಿ ನಿವೃತ್ತರಾದರು. ತಮ್ಮ ಜೀವನದ ಕೊನೆಯವರೆಗೂ ಸಂಶೋಧನೆ ಮತ್ತು ಬರೆವಣಿಗೆಯಲ್ಲಿ ತೊಡಗಿದ್ದ ಇವರು ಬೆಂಗಳೂರಿನಲ್ಲಿ 1974 ಮೇ 7ರಂದು ನಿಧನರಾದರು.

ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಪಾಲಿ, ಅರ್ಧಮಾಗಧಿ ಮುಂತಾದ ಭಾರತೀಯ ಭಾಷೆಗಳಲ್ಲದೆ, ಚೀನಿ, ಜಪಾನ್, ಜರ್ಮನ್, ಫ್ರೆಂಚ್ ಮುಂತಾದ ವಿದೇಶಿ ಭಾಷೆಗಳಲ್ಲೂ ಪರಿಶ್ರಮವನ್ನು ಸಂಪಾದಿಸಿಕೊಂಡಿದ್ದ ಇವರು ಭಾರತೀಯ ಇತಿಹಾಸ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ 400ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ; ಹತ್ತಾರು ಗ್ರಂಥಗಳನ್ನು ರಚಿಸಿದ್ದಾರೆ. ವಿದ್ಯಾರ್ಥಿದೆಸೆಯಲ್ಲಿಯೇ ತಮ್ಮ ಬರೆವಣಿಗೆಯನ್ನು ಆರಂಭಿಸಿದ (1924) ಇವರು ಬರೆದ ಸಂಶೋಧನ ಲೇಖನವೊಂದು ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮಹಾರಾಜ ಕಾಲೇಜಿನ ಹಿಸ್ಟರಿ ಅಸೋಸಿಯೇಷನ್‌ನ ಆಶ್ರಯದಲ್ಲಿ ಶಿವಗಂಗೆಯ ಇತಿಹಾಸವನ್ನು ಕುರಿತು ಇವರು ಮಂಡಿಸಿದ ಸಂಶೋಧನ ಪ್ರಬಂಧ ಬಹುಜನರ ಗಮನ ಸೆಳೆಯಿತು. ಅನಂತರ ಇವರು ಬರೆದ ಗ್ರೀಕ್ ದಾಖಲೆಗಳಲ್ಲಿವೆಯೆನ್ನಲಾದ ಕನ್ನಡ ಮಾತುಗಳ ಸಂಭಾವ್ಯತೆ, ಬಸವಣ್ಣನವರ ಕಾಲ ಹಾಗೂ ಅವರು ಮಾಡಿದರೆಂದು ಪ್ರತೀತಿಯಿರುವ ಪವಾಡಗಳ ಸತ್ಯಾಂಶ, ರಾಮಾನುಜರು ಎಲ್ಲೆಡೆ ಸಂಚರಿಸಿ ಬಿಟ್ಟಿದೇವ ಮತ್ತಿತರ ರಾಜರ ಮತಪರಿವರ್ತನೆ ಮಾಡಿದರೆಂಬ ವಾದದ ಸಂಭವನೀಯತೆ, ಚಾವುಂಡರಾಯನು ಶ್ರಣಬೆಳಗೊಳದ ಗೊಮ್ಮಟ ವಿಗ್ರಹದ ಕರ್ತೃವೆಂಬ ವಾದಕ್ಕೆ ಕೆಲವು ಬಾಧಕ ಅಂಶಗಳು, ಗಂಗವಂಶದ ರಾಜರ ವಂಶಾವಳಿ ಹಾಗೂ ಸಾಧನೆ, ಪ್ರಾಗ್ಭಾರತೀಯ ಸಂಸ್ಕೃತಿ, ಹರಪ್ಪ, ಮೊಹೆಂಜೋದಾರೊ ನಾಗರಿಕತೆ, ಸಿಂಧೂಲಿಪಿಯ ರೂಪರೇಷೆ-ಈ ಮುಂತಾದ ಪ್ರಬಂಧಗಳಲ್ಲಿ ಆಯಾ ವಿಷಯಗಳ ಬಗ್ಗೆ ಮೌಲಿಕ ಸಂಶೋಧನೆ ನಡೆಸಿ ಹೊಸ ವಿಚಾರಗಳನ್ನು, ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಆರ್ಯಜನಾಂಗದ ಮೂಲವನ್ನು ಕುರಿತ ವಿಸ್ತಾರವಾದ ಸಂಶೋಧನೆಯಲ್ಲಿ ಶಾಸ್ತ್ರಿಗಳ ಸ್ವತಂತ್ರ ವಿಚಾರಸರಣಿಯನ್ನು ಗುರುತಿಸಬಹುದು. ಆರ್ಯರು ಮಧ್ಯ ಯುರೋಪಿನಿಂದಲೋ ಮಧ್ಯ ಏಷ್ಯದಿಂದಲೋ ಉತ್ತರ ಧ್ರುವದಿಂದಲೋ ಭಾರತಕ್ಕೆ ವಲಸೆ ಬಂದವರೆಂಬ ಹಳೆಯ ವಾದವನ್ನು ನಿರಾಕರಿಸಿ, ಆರ್ಯರು ಮೂಲತಃ ಭಾರತೀಯರೇ ಎಂದೂ ಗಂಗಾ-ಯಮುನಾ ನದಿಗಳ ನಡುವಣ ಪ್ರದೇಶದವರೆಂದೂ ಭಾರತದಿಂದ

ಸ್ವೀಯ ಸಂಸ್ಕೃತಿಯ ಪ್ರಸರಣಕ್ಕಾಗಿ ಪಾಶ್ಚಾತ್ಯ ದೇಶಗಳತ್ತ ವಲಸೆ ಹೋದರೆಂದೂ ವಿಪುಲ ಸಾಕ್ಷ್ಯಗಳ ಆಧಾರದಿಂದ ವಾದಿಸಿದ್ದಾರೆ. ಸ್ವತಂತ್ರ ಚಿಂತನೆ, ನಿಷ್ಪಾಕ್ಷಿಕ ಮತ್ತು ನಿರ್ಭೀತ ಬುದ್ಧಿವೃತ್ತಿ, ತೀಕ್ಷ್ಣ ವಿಶ್ಲೇಷಣ ಕೌಶಲ, ಸತ್ಯಪ್ರಿಯತೆ–ಇವು ಶ್ರೀಕಂಠಶಾಸ್ತ್ರಿಗಳ ಸಂಶೋಧನ ಕಾರ್ಯದ ಪ್ರಮುಖ ಲಕ್ಷಣಗಳೆನ್ನಬಹುದು.

ರೋಮನ್ ಚಕ್ರಾಧಿಪತ್ಯದ ಚರಿತ್ರೆ (1949), ಭಾರತೀಯ ಸಂಸ್ಕೃತಿ (1954), ಪ್ರಪಂಚ ಚರಿತ್ರೆಯ ರೂಪರೇಷೆಗಳು (1957), ಪುರಾತತ್ತ್ವ ಶೋಧನೆ (1960), ಹೊಯ್ಸಳ ವಾಸ್ತುಶಿಲ್ಪ (1965)– ಇವು ಇವರು ಕನ್ನಡದಲ್ಲಿ ಬರೆದಿರುವ ಗಣ್ಯ ಗ್ರಂಥಗಳು. ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ (1940), ಅರ್ಲಿ ಗಂಗಾಸ್ ಆಫ್ ತಲಕಾಡ್ (1952) ಈ ಮುಂತಾದ ಇವರ ಪ್ರೌಢ ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿವೆ.

ಶ್ರೀಕಂಠಶಾಸ್ತ್ರಿಗಳು ಹಲವು ವಿದ್ವತ್ ಗೋಷ್ಠಿಗಳಲ್ಲೂ ಭಾಗವಹಿಸಿದ್ದರು. ಮೈಸೂರಿನಲ್ಲಿ 1935ರಲ್ಲಿ ನಡೆದ ಪ್ರಾಚ್ಯ ಸಮ್ಮೇಳನದಲ್ಲಿ ಶಂಕರಭಗವತ್ಪಾದರ ಕಾಲನಿರ್ಣಯದ ಬಗ್ಗೆ ಪ್ರಬಂಧ ಮಂಡಿಸಿದರು. ಇವರು ಬಳ್ಳಾರಿಯಲ್ಲಿ 1958ರಲ್ಲಿ ನಡೆದ ನಲವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಲಾಗೋಷ್ಠಿಗೆ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ 1970ರಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತು. 1973ರಲ್ಲಿ ಮೈಸೂರಿನಲ್ಲಿ ನಡೆದ ಅಭಿನಂದನ ಸಮಾರಂಭದಲ್ಲಿ ಇವರಿಗೆ ಶ್ರೀಕಂಠಿಕಾ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು.

ವಿವಿಧ ವಿಷಯಗಳ ಬಗ್ಗೆ ಇವರು ಕನ್ನಡದಲ್ಲಿ ಬರೆದು ಪ್ರಕಟಿಸಿದ್ದ 112 ಸಂಶೋಧನ ಲೇಖನಗಳನ್ನು ಸಂಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಶೋಧನಾ ಲೇಖನಗಳು (1975) ಎಂಬ ಒಂದು ಸಂಪುಟವನ್ನು ಪ್ರಕಟಿಸಿದೆ. **(ಎಸ್.ಆರ್.ಆರ್.)**

**ಶ್ರೀಕಂಠೇಶಗೌಡ, ಎಂ.ಎಲ್.:** 1852–1926. ಹೊಸಗನ್ನಡ ಆರಂಭಕಾಲದ ಹೆಸರಾಂತ ಲೇಖಕರು. ಹುಟ್ಟಿದ್ದು ಮದ್ದೂರು ತಾಲ್ಲೂಕು ದೇಶಹಳ್ಳಿಯಲ್ಲಿ. ಇವರ ಪೂರ್ವಿಕರು ಮೂಲತಃ ನಾಗಮಂಗಲದವರು. ಇವರ ತಾತ ಮತ್ತು ತಂದೆಯವರು ಸುಬೇದಾರರಾಗಿದ್ದವರು; ಜೊತೆಗೆ ಸಾಹಿತ್ಯಾಸಕ್ತರು. ಹೀಗಾಗಿ ಚಿಕ್ಕಂದಿನಲ್ಲಿಯೇ ಇವರಿಗೆ ಸಾಹಿತ್ಯದಲ್ಲಿ ಅಭಿರುಚಿ ಮೂಡಿತು. ಕುಣಿಗಲಿನಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದ ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು. ಅನಂತರ ಮದರಾಸು ವಿಶ್ವವಿದ್ಯಾಲಯದಿಂದ ಬಿ.ಎಲ್. ಪದವಿಯನ್ನು ಪಡೆದ ಇವರು ಬೆಂಗಳೂರಿನಲ್ಲಿ ಪ್ರಸಿದ್ಧ ವಕೀಲರಲ್ಲೊಬ್ಬರಲ್ಲಿ ಸ್ವಲ್ಪಕಾಲ ಕೆಲಸ ಮಾಡಿ, ಮೈಸೂರಿನಲ್ಲಿ ಸ್ವತಂತ್ರವಾಗಿ ತಮ್ಮ ವಕೀಲವೃತ್ತಿಯನ್ನು ಆರಂಭಿಸಿದರು (ಸು.1885). ವಕೀಲರಾಗಿ ಒಳ್ಳೆಯ ಹೆಸರುಗಳಿಸಿದ ಇವರನ್ನು ಸರ್ಕಾರ ನ್ಯಾಯಾಧೀಶರನ್ನಾಗಿ ನೇಮಿಸಿತು. ಹಾಸನ, ಶಿವಮೊಗ್ಗ, ಕೋಲಾರ, ಮಧುಗಿರಿ ಮತ್ತು ನಂಜನಗೂಡುಗಳಲ್ಲಿ ನ್ಯಾಯಾಧೀಶರಾಗಿ ಕೆಲಸ ಮಾಡಿದ ಇವರು 1910ರಲ್ಲಿ ನಿವೃತ್ತರಾದರು.

ಕನ್ನಡ ಪ್ರೇಮಿಗಳಾಗಿದ್ದ ಶ್ರೀಕಂಠೇಶಗೌಡರಿಗೆ ಇಂಗ್ಲಿಷ್ ಭಾಷೆಯಲ್ಲೂ ಒಳ್ಳೆಯ ಪರಿಶ್ರಮ ಇತ್ತು. ಚಿಕ್ಕಂದಿನಲ್ಲಿಯೇ ಇವರಿಗೆ ಭಾರತ–ರಾಮಾಯಣಗಳ ಪರಿಚಯವಾಗಿತ್ತು. ನಾಟಕದಲ್ಲೂ ಇವರಿಗೆ ಆಸಕ್ತಿ ಇತ್ತು. ಇವರು ನಡೆಸಿದ ಸಾಹಿತ್ಯ ಚಟುವಟಿಕೆ ವ್ಯಾಪಕವಾದುದು. ವೈವಿಧ್ಯಮಯವಾದುದು. ಮೈಸೂರಿನಲ್ಲಿ ವಕೀಲರಾಗಿದ್ದಾಗ ತಮ್ಮ ಹಲವು ಗೆಳೆಯರೊಂದಿಗೆ ಕೂಡಿಕೊಂಡು ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಎಂಬ ಸಂಸ್ಥೆಯನ್ನು ಆರಂಭಿಸಿ, ಸುಮಾರು ಒಂದುನೂರು ಪುಸ್ತಕಗಳನ್ನು ಆ ಸಂಸ್ಥೆಯ ವತಿಯಿಂದ ಪ್ರಕಟಿಸಿ, ಅನೇಕ ಹೊಸ ಲೇಖಕರನ್ನು ಬೆಳಕಿಗೆ ತಂದರು. ಸಂಸ್ಥೆಯ ಆಶ್ರಯದಲ್ಲಿ ವಿದ್ಯಾದಾಯಿನಿ ಎಂಬ ಪತ್ರಿಕೆಯನ್ನು ಆರಂಭಿಸಿ ಸ್ವಲ್ಪ ಕಾಲ ನಡೆಸಿದರು. ಅನಂತರ ಸುರಭಿ ಎಂಬ ಪತ್ರಿಕೆಯನ್ನು, ಶ್ರೀಕಂಠೇಶ್ವರ ನಾಟಕ ಸಭಾ ಎಂಬ ಒಂದು ನಾಟಕ ಕಂಪನಿಯನ್ನು ಆರಂಭಿಸಿ ಕೆಲಕಾಲ ನಡೆಸಿದರು.

ಇವರು ನಾಟಕ, ಕಾದಂಬರಿ, ಕಾವ್ಯ, ಜೀವನಚರಿತ್ರೆ ಮುಂತಾದ ನಾನಾ ಪ್ರಕಾರಗಳಲ್ಲಿ ಕೃತಿಗಳನ್ನು ಪ್ರಕಟಿಸಿದ್ದಾರೆ. ಭಾಷಾಂತರ ಕ್ಷೇತ್ರದಲ್ಲಿ ಇವರು ಮಾಡಿರುವ ಕೆಲಸ ದೊಡ್ಡ ಮಟ್ಟದ್ದು. ಕನ್ನಡದಲ್ಲಿ ಆಸಕ್ತಿ ಅಭಿರುಚಿಗಳು ಇನ್ನೂ ಕುದುರದಿದ್ದಂಥ ದಿನಗಳಲ್ಲಿ ಇವರು ಷೇಕ್ಸ್‌ಪಿಯರ್‌ನ



ಒಥೆಲೋ, ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ಸ್, ರೋಮಿಯೋ ಜೂಲಿಯಟ್ ಎಂಬ ನಾಟಕಗಳನ್ನು ಕ್ರಮವಾಗಿ ಪ್ರತಾಪರುದ್ರದೇವ, ಪ್ರಮೀಳಾರ್ಜುನೀಯಂ, ರಾಮವರ್ಮ–ಲೀಲಾವತಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ರೂಪಾಂತರಿಸಿ ಪ್ರಕಟಿಸಿದ್ದಾರೆ. ಈ ಎಲ್ಲ ನಾಟಕಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ರೂಪಾಂತರಿಸಿರುವುದು ಒಂದು ಮುಖ್ಯ ವಿಷಯ. ಇವರ ಕೆಲವು ನಾಟಕಗಳು ವರದಾಚಾರ್ಯರ ರತ್ನಾವಳಿ ನಾಟಕ ಕಂಪನಿಯಲ್ಲಿ ಅಭಿನಯಗೊಂಡು ಜನಪ್ರಿಯವಾದುವು. ಸೀತಾದೇವಿಯ ಸ್ವಯಂವರ ಸಂದರ್ಭವನ್ನು ಕುರಿತು ಸೀತಾಸ್ವಯಂವರ ಮತ್ತು ಪಾಂಡವರ ವನವಾಸ ಸಂದರ್ಭ ಕುರಿತು ಘೋಷಯಾತ್ರೆ ಎಂಬ ಎರಡು ಸವತಂತ್ರ ನಾಟಕಗಳನ್ನು ಇವರು ಬರೆದಿದ್ದಾರೆ. ಕನ್ನಡದಲ್ಲಿ ಸ್ವತಂತ್ರ ನಾಟಕಗಳಿಗೆ ಅಭಾವವಿದ್ದ ಕಾಲದಲ್ಲಿ ಇವರ ಈ ಪ್ರಯತ್ನ ಐತಿಹಾಸಿಕ ಮಹತ್ತ್ವದ್ದಾಗಿದೆ. ಭವಾನಿ ಬಾಳು ಎಂಬ ಒಂದು ಚಾರಿತ್ರಿಕ ಕಾದಂಬರಿಯನ್ನೂ ಚಾಮನೃಪ ಚಂದ್ರಪ್ರಭೆ ಎಂಬ ಒಂದು ಕಾವ್ಯವನ್ನೂ ಇವರು ರಚಿಸಿದ್ದಾರೆ. ತಾವು ಪ್ರಕಟಿಸುತ್ತಿದ್ದ ವಿದ್ಯಾದಾಯಿನಿ ಮತ್ತು ಸುರಭಿ ಪತ್ರಿಕೆಗಳಲ್ಲಿ ಅನೇಕ ವಿಡಂಬನ ಕವನಗಳನ್ನು, ಜನಪದ ಗೀತೆ ಕಥೆಗಳನ್ನು, ಜೀವನಚಿತ್ರಗಳನ್ನು ಬರೆದು ಸಂಪಾದಿಸಿ ಪ್ರಕಟಿಸಿದ್ದಾರೆ.

ಕನ್ನಡನಾಡಿನಲ್ಲಿ ಕನ್ನಡಕ್ಕೆ ಮೊದಲ ಮಣೆ ಎಂದು ನಂಬಿದ್ದ ಶ್ರೀಕಂಠೇಶಗೌಡರು ತಾವು ವಕೀಲರಾಗಿದ್ದಾಗ ಮತ್ತು ನ್ಯಾಯಾಧೀಶರಾಗಿದ್ದಾಗ ಅನೇಕ ಸಂದರ್ಭಗಳಲ್ಲಿ ಕನ್ನಡದಲ್ಲಿ ಮೊಕದ್ದಮೆಗಳನ್ನು ನಡೆಸಿದರು. ತೀರ್ಪುಗಳನ್ನು ಹೇಳಿದರು. ಶಾಲಾ ಮಕ್ಕಳಿಗಾಗಿ ಶಾರದಾ ಭೂಗೋಳ, ದಕ್ಷಿಣ ಭಾರತದ ವ್ಯವಸಾಯ ಪದ್ಧತಿ ಎಂಬ ಎರಡು ಪಠ್ಯಪುಸ್ತಕಗಳನ್ನು ಕನ್ನಡದಲ್ಲಿ ಬರೆದರು.

ಇವರು 1926 ನವೆಂಬರ್ 26ರಂದು ನಿಧನ ಹೊಂದಿದರು. ಇವರ ಕೃತಿಗಳನ್ನು ಸಂಗ್ರಹಿಸಿ ಶ್ರೀಕಂಠೇಶಗೌಡರ ಕೃತಿಗಳು ಎಂಬ ಸಂಪುಟವನ್ನು 1973ರಲ್ಲಿ ಪ್ರಕಟಿಸಲಾಯಿತು. **(ಎಂ.ಆರ್.)**

**ಶ್ರೀಕೃಷ್ಣ ಆಲನಹಳ್ಳಿ:** 1947–89. ಪ್ರತಿಭಾವಂತ ಸಣ್ಣಕಥೆಗಾರ, ಕಾದಂಬರಿಕಾರ ಹಾಗೂ ಕವಿ. ಮೈಸೂರು ಜಿಲ್ಲೆಯ ಆಲನಹಳ್ಳಿಯಲ್ಲಿ ಮಧ್ಯಮವರ್ಗದ ಒಕ್ಕಲು ಕುಟುಂಬವೊಂದರಲ್ಲಿ 1947 ಏಪ್ರಿಲ್ 3ರಂದು ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹಳ್ಳಿಯಲ್ಲೇ ಪಡೆದರು. ಕ್ಯಾತನಹಳ್ಳಿಯಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ ಮುಂದಿನ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದರು. ಮಹಾರಾಜ ಕಾಲೇಜಿನಲ್ಲಿ ಬಿ.ಎ., ಮಾನಸಗಂಗೋತ್ರಿಯಲ್ಲಿ ಕನ್ನಡ ಎಂ.ಎ. ಪದವಿ ಪಡೆದರು. ಬಿ.ಎ. ಪರೀಕ್ಷೆಯಲ್ಲಿ ತತ್ವಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆದು ಚಿನ್ನದ ಪದಕ ಗಳಿಸಿದ್ದರು. ಎಂ.ಎ. ಪದವಿ ಪಡೆದೊಡನೆಯೇ ಇವರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನ

ಆರಂಭಿಸಿದರು (1969). ಅಲ್ಲಿ ಐದು ವರ್ಷಗಳ ಕಾಲ ಕೆಲಸ ಮಾಡಿದ ಬಳಿಕ ಮತ್ತೆ ಐದು ವರ್ಷಗಳ ಕಾಲ (1975–79) ಭಾರತೀಯ ಭಾಷಾ ಸಂಸ್ಥೆಯಲ್ಲಿ ಅಧ್ಯಾಪಕರಾಗಿದ್ದರು. ಅನಂತರ ಇವರು ಸಾರ್ವಜನಿಕ ಜೀವನಕ್ಕೆ ಇಳಿದರು. ಪ್ರತಿಭಾವಂತರ ಗುಣಗಳೆಲ್ಲವೂ ಶ್ರೀಕೃಷ್ಣ ಅವರಲ್ಲಿ ಮೇಳೈಸಿದ್ದವು. ವ್ಯವಸಾಯವನ್ನು ವೃತ್ತಿಯನ್ನಾಗಿ ಹಿಡಿದರು. ಶೈಕ್ಷಣಿಕ ಕ್ಷೇತ್ರದಿಂದ ಹೊರಗೆ ಉಳಿದಿದ್ದರೂ ಅದಕ್ಕೆ ಹತ್ತಿರದವರಾಗಿಯೇ ಇದ್ದರು.



ಆಲನಹಳ್ಳಿಯವರ ಪ್ರತಿಭೆ ಬೆಳಕಿಗೆ ಬಂದದ್ದು ಇವರ ವಿದ್ಯಾರ್ಥಿ ದೆಸೆಯಲ್ಲಿಯೇ. ಮಹಾರಾಜ ಕಾಲೇಜಿನಲ್ಲಿ ಇವರು ಬಿ.ಎ. ಓದುವ ಕಾಲಕ್ಕೇ ಮಣ್ಣಿನ ಹಾಡು (1966) ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ಇದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿದೆ. ಇದರಲ್ಲಿ ಇಪ್ಪತ್ತೈದು ಕವಿತೆಗಳಿವೆ. ಆ ಕವನ ಸಂಕಲನಕ್ಕೆ ಮುನ್ನುಡಿ ಬರೆದ ಕವಿ ಗೋಪಾಲಕೃಷ್ಣ ಅಡಿಗರು ಇವರ ಪ್ರತಿಭೆ ಹಾಗೂ ಕಾವ್ಯಸತ್ವವನ್ನು ಹೀಗೆ ಪ್ರಕಟಿಸಿದ್ದಾರೆ: "ಕನ್ನಡ ಜೀವನದಲ್ಲಿ ಕಾವ್ಯದ ಇಂಥ ನಿಜವಾದ ಹೆಸರು ಹೆಗ್ಗಡದೇವನಕೋಟೆಯಂಥ ಕ್ಷೇತ್ರಗಳಲ್ಲೂ ಪುಟಿಯುತ್ತಿರುವುದು ತುಂಬ ಭರವಸೆ ಹುಟ್ಟಿಸುವಂಥ ಸಂಗತಿ. ಕನ್ನಡದ ನೆಲಕ್ಕೆ ಅತ್ಯಂತ ಸಮೀಪವಾದ ಒಕ್ಕಲು ಬದುಕಿನ ಅಲಾಬಿ ರಂಗುಗಳ ಮೂಲಕವೇ ಮೈತಳೆಯುವ ಸೂಕ್ಷ್ಮವೂ ಸುಸಂಸ್ಕೃತವೂ ಪ್ರಾಮಾಣಿಕವೂ ಆದ ಅನುಭವ, ಮೌಲ್ಯ ತಾರತಮ್ಯ ಜ್ಞಾನದ ಮೂಸೆಯಲ್ಲಿ ಸುಟ್ಟು ಬರುವ ಭಾವ, ಗಟ್ಟಿಯಾದ ಕಲ್ಲು ನೆಲವನ್ನೊಡೆದು ಹೊರಬೀಳುವ ಮೊಳಕೆಯ ಈ ಹಸುರು ಕೋಲಾಹಲ ಕನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಹೊಸ ಶಕೆಯ ಆರಂಭವನ್ನು ಸೂಚಿಸುತ್ತದೆ..... ಮನಸ್ಸಿನ ಕಲ್ಪನೆಯ ಮಟ್ಟದಲ್ಲೇ ಸಾರ್ಥಕ್ಯ ಪಡೆಯುತ್ತ ವಾಸ್ತವವನ್ನು ಕಡೆಗಣಿಸುತ್ತ ಬಂದಿರುವ ನಮ್ಮ ಕಾವ್ಯ ಹೀಗೆ ಮಣ್ಣಿನ ಹಾಡಾಗ ಬಯಸುತ್ತಿರುವುದು ನಮ್ಮ ದೇಶದಲ್ಲಿ ಕನವರಿಕೆಯ ಯುಗ ಮುಗಿದು ನಿಜವಾದ ಕಸಬುಗಾರಿಕೆಯ ಯುಗ ಆರಂಭವಾಗುತ್ತಿರುವುದರ ಸೂಚನೆಯೂ ಹೌದು ಎನ್ನಬಹುದು. ಈ ಕವನಗಳಲ್ಲಿ ಮಿಡಿಯುತ್ತಿರುವುದು ನಿಜವಾದ ಸತ್ವಶಾಲಿಯಾದ ಕವಿಯೊಬ್ಬನ ಜ್ವಲಂತ ಅಂತರಂಗ; ಇಲ್ಲಿನ ಭಾಷೆಯಲ್ಲಿ ಕಾಣಿಸುತ್ತಿರುವುದು ಕವಿ ಸಮಯಗಳಿಂದ ಮುಕ್ತವಾದ ಬದುಕಿಗೆ ಹತ್ತಿರವಾದ–ಗಡಸಾದ ತ್ರಾಣವುಳ್ಳ ಭಾಷೆ; ಜೀವಂತ ಭಾಷೆಯಲ್ಲಿ ಅನುಭವವನ್ನು ಕೆತ್ತುವ ಕಡೆಯುವ ನಿಜವಾದ ಕಸಬುಗಾರಿಕೆ.

ಇಂಥ ಹೊಗಳಿಕೆಗೆ ಪಾತ್ರರಾದ ಸಹಜ ಪ್ರತಿಭಾವಂತರಾಗಿದ್ದ ಆಲನಹಳ್ಳಿಯವರು ಅಡಿಗರು ಹೇಳಿದ್ದ ಭವಿಷ್ಯಗಳನ್ನೆಲ್ಲ ನಿಜ ಮಾಡಿದರು. ಕನ್ನಡ ಕಾವ್ಯ ಪ್ರಪಂಚದಲ್ಲಿ ಮಾತ್ರವಲ್ಲ, ಸಾಹಿತ್ಯ ಕ್ಷೇತ್ರದಲ್ಲೇ ಒಂದು ಹೊಸ ಶಕೆಯನ್ನು ಆರಂಭಿಸಿದರು; ಆ ಶಕೆಯ ಒಂದು ಪ್ರಧಾನ ಆಕರ್ಷಣೆಯಾಗಿಯೂ ಬೆಳೆದರು; ನಿಜವಾದ ಒಬ್ಬ ಕಸಬುಗಾರ ಲೇಖಕರೆನ್ನಿಸಿಕೊಂಡರು. ಗದ್ಯ ಪದ್ಯಗಳೆರಡರಲ್ಲಿಯೂ ಸಾಧನೆ ಮಾಡಿದರು; ಸಮಾನ ಯಶಸ್ಸು ಗಳಿಸಿದರು.

ಇವರು ಬರೆದ ಕಾದಂಬರಿಗಳು ಮೂರು: ಕಾಡು (1971), ಪರಸಂಗದ ಗೆಂಡೆತಿಮ್ಮ (1974) ಮತ್ತು ಭುಜಂಗಯ್ಯನ ದಶಾವತಾರಗಳು (1982). ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದ ಇವರ ಕಾದಂಬರಿ 'ಒಂದು ಅರಮನೆಯ ಕತೆ' ನಡುವೆಯೇ ನಿಂತುಹೋಯಿತು. ಕಾಡು ಮತ್ತು ಪರಸಂಗದ ಗೆಂಡೆತಿಮ್ಮ ಇವರಿಗೆ ಪ್ರಸಿದ್ಧಿಯನ್ನೂ ಜನಪ್ರಿಯತೆಯನ್ನೂ ತಂದುಕೊಟ್ಟ ಕೃತಿಗಳು. ಅವು ಬೆಳ್ಳಿಯ ತೆರೆಯ ಮೇಲೆ ಚಲನಚಿತ್ರಗಳಾಗಿಯೂ ಕಾಣಿಸಿಕೊಂಡು ಜನಪ್ರಿಯವಾದವು. ಕಾಡು ಚಲನಚಿತ್ರ ಗಿರೀಶ್ ಕಾರ್ನಾಡ್ ಅವರ ನಿರ್ದೇಶನದಲ್ಲಿ ತಯಾರಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆಯಿತು. ಹಲವಾರು ಮುದ್ರಣಗಳನ್ನು ಕಂಡಿರುವ ಕಾಡು ಕಾದಂಬರಿ ಅನೇಕ ಭಾರತೀಯ ಭಾಷೆಗಳಿಗೂ ಐರೋಪ್ಯ ಭಾಷೆಗಳಿಗೂ ಅನುವಾದಗೊಂಡಿದೆ. ಇವರ ಮಿಕ್ಕ ಕಥೆ ಕಾದಂಬರಿಗಳೂ ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾಗಿವೆ. ಭುಜಂಗಯ್ಯನ ದಶಾವತಾರಗಳು ಮಲಯಾಳಂಗೆ ಅನುವಾದಗೊಂಡಿದೆ. ಆಲನಹಳ್ಳಿಯವರು ಮಲಯಾಳಂ ಭಾಷೆಯಲ್ಲಿ ಜನಪ್ರಿಯರಾಗಿದ್ದ ಕೆಲವೇ ಕೆಲವು ಕನ್ನಡ ಲೇಖಕರಲ್ಲಿ ಒಬ್ಬರಾಗಿದ್ದರು.

ತಪ್ತ (1970) ಇವರ ಒಂದು ಕಥಾಸಂಕಲನ. ಇವರ ಸಣ್ಣಕಥೆಗಳಲ್ಲಿ ಕೆಲವು ಚಲನಚಿತ್ರಗಳಾಗಿ ಖ್ಯಾತಿ ಗಳಿಸಿವೆ (ಫೀನಿಕ್ಸ್, ಗೀಜಗನ ಗೂಡು, ಕುರುಬರ ಲಕ್ಕನೂ ಎಲಿಜಬೆತ್ ರಾಣಿಯೂ). ಕರಣಸಿಂಗ್ ಎಂಬುವವರು ಸಂಗ್ರಹಿಸಿ ಇಂಗ್ಲಿಷ್‌ಗೆ ರೂಪಾಂತರಿಸಿದ ಕೆಲವು ಜನಪದ ಪ್ರೇಮಗೀತೆಗಳನ್ನು ಆಲನಹಳ್ಳಿಯವರು ಕನ್ನಡದಲ್ಲಿ ಡೋಗ್ರಾ-ಪಹಾರಿ ಪ್ರೇಮಗೀತೆಗಳು (1973) ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಅವಲೋಕನ, ಅಂತಃಕರಣ ಮತ್ತು ಗ್ರಾಮಾಯಣ ಸಮೀಕ್ಷೆ ಇವು ಇವರ ಸಂಪಾದಿತ ಕೃತಿಗಳು. ಇವರ ಸಮಗ್ರ ಕವಿತೆ ಹಾಗೂ ಸಣ್ಣಕಥೆಗಳು ಆಲನಹಳ್ಳಿ ಕವಿತೆಗಳು (1985), ಆಲನಹಳ್ಳಿ ಸಣ್ಣಕತೆಗಳು ಎಂಬ ಹೆಸರಿನಲ್ಲಿ ಪ್ರಕಟವಾಗಿವೆ.

ಸಹಜವಾದ, ಪ್ರಖರವಾದ ಪ್ರತಿಭೆ, ಗ್ರಾಮಜೀವನದ ನಿಕಟವಾದ ಪರಿಚಯ, ಬಾಲ್ಯದ ನೆನಪುಗಳ ಗಾಢ ಪರಿಣಾಮ – ಇವುಗಳಿಂದಾಗಿ ಆಲನಹಳ್ಳಿಯವರ ಸೃಜನಶೀಲತೆ ಮೊದಲ ದರ್ಜೆಯದಾಗಿತ್ತು. ಕಾಡು ಕಾದಂಬರಿ ಪ್ರಸಿದ್ಧ ವಿಮರ್ಶಕ ಜಿ.ಎಸ್.ಆಮೂರ ಅವರ ದೃಷ್ಟಿಯಲ್ಲಿ ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ ಒಂದು. ಅನಂತಮೂರ್ತಿ, ಭೈರಪ್ಪ, ರಾವ್‌ಬಹದ್ದೂರ್ ಸೇರಿರದ ಪಟ್ಟಿ ಇದೆಂಬುದನ್ನು ಗಮನಿಸಿದಾಗ ಈ ಆಯ್ಕೆಯ ಮಹತ್ವ ಗೊತ್ತಾಗುತ್ತದೆ. ನೂರಕ್ಕೂ ಕಡಮೆ ಪುಟಗಳ ಕಾಡು ಕೊಡುವ ಅನುಭವ ದಟ್ಟವಾದದ್ದು. ಇಲ್ಲಿ ಸೃಷ್ಟಿಸಲ್ಪಟ್ಟಿರುವ ಮುಗ್ಧ ಬಾಲಕನ ಪಾತ್ರ ಅದ್ವಿತೀಯವಾದದ್ದು. ಆಲನಹಳ್ಳಿಯ ಸೃಜನಶೀಲತೆಯ ಮೂಸೆಯಲ್ಲಿ ರೂಪುಗೊಂಡಿರುವ ಕಥೆ ಕಾದಂಬರಿಗಳು, ಅವರ ಕಾವ್ಯದಂತೆಯೇ ಜ್ವಲಂತ ಅಂತರಂಗವನ್ನು ಪರಿಣಾಮಕಾರಿಯಾಗಿ ತೆರೆದಿಡುತ್ತವೆ. ಇವರ ಸಾಹಿತ್ಯ ಸೃಷ್ಟಿಯಲ್ಲಿ ಉತ್ಕಟತೆ ಉಕ್ಕುತ್ತದೆ. ಉಲ್ಲಾಸದಾಯಕವಾದ ಇವರ ಬರವಣಿಗೆಗೆ ಗೆಂಡೆತಿಮ್ಮ ಮತ್ತು ಭುಜಂಗಯ್ಯ ಸಾಕ್ಷಿಯಾಗಿದ್ದಾರೆ.

ಇವರು ಕೆಲವು ಕಾಲ ಸಮೀಕ್ಷಕ ಎಂಬ ನಿಯತಕಾಲಿಕವನ್ನೂ ಪ್ರಕಟಿಸುತ್ತಿದ್ದರು. ಸೃಜನಶೀಲ ಬರೆಹಗಳಿಗೆ, ವಿಮರ್ಶೆಗೆ ಈ ಪಟ್ಟಿಯಲ್ಲಿ ಸಮಾನ ಸ್ಥಾನ ಲಭಿಸಿತ್ತು. ಜಿ.ಎಚ್.ನಾಯಕ, ಎಚ್.ಎಂ.ಚನ್ನಯ್ಯ ಅವರಂಥವರ ಸಾಹಿತ್ಯಕ ಮಾರ್ಗದರ್ಶನ ಆಲನಹಳ್ಳಿಯವರ ಬೆಳವಣಿಗೆಗೆ ಆಸರೆಯಾಗಿದ್ದವು. ಆದರೆ ಇವರ ವ್ಯಕ್ತಿತ್ವ ಅನೇಕ ವಿಕ್ಷಿಪ್ತತೆಗಳಿಂದ ತುಂಬಿತ್ತು. ಲೋಕಸಭೆಗೆ, ಶಾಸನ ಸಭೆಗೆ ಸ್ಪರ್ಧಿಸಲು ಇವರು ಪ್ರಯತ್ನಿಸಿದ್ದುಂಟು; ಆದರೆ ಯಶಸ್ವಿಯಾಗಲಿಲ್ಲ. ಇಂಥ ಹಲವಾರು ಕಾರಣಗಳು ಇವರಲ್ಲಿ ಒಂದು ಬಗೆಯ ಹತಾಶೆಯನ್ನುಂಟುಮಾಡಿದ್ದವು. ಕಡೆಗೆ ಇವರು ತಮ್ಮ ಆರೋಗ್ಯದ ವಿಷಯದಲ್ಲೂ ಎಚ್ಚರವಹಿಸಲಿಲ್ಲ. ಹೀಗಾಗಿ ಇವರು ಅಕಾಲದಲ್ಲಿ ತಮ್ಮ 42ನೆಯ ವಯಸ್ಸಿನಲ್ಲಿ 1989 ಜನವರಿ 4ರಂದು ನಿಧನರಾದರು.

(ಎಚ್.ಎಮ್.ಎಸ್‌ಎ.)

**ಶ್ರೀಕೃಷ್ಣಪಾರಿಜಾತ:** ಯಕ್ಷಗಾನ ಬಯಲಾಟ ಹಾಗೂ ದೊಡ್ಡಾಟಗಳ ಪರಂಪರೆಯಲ್ಲಿ ಹೆಚ್ಚಿನ ಜನಮನ್ನಣೆಗಳಿಸಿರುವ ಒಂದು ನಾಟಕ. ಪಾರಿಜಾತ ಹರಣವೆಂಬ ಈ ಕಥಾಭಾಗ ಭಾಗವತ ಮತ್ತು ಹರಿವಂಶ ಪುರಾಣಗಳಲ್ಲಿ ಕಂಡುಬರುತ್ತದೆ. ಈ ಎರಡೂ ಕಥೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ ಮೂಲ ಕಥೆ ಒಂದೇ ಆಗಿದೆ.

ಸ್ವರ್ಗದಿಂದ ನಾರದರು ತಂದ ಪಾರಿಜಾತ ಪುಷ್ಪವನ್ನು ಕೃಷ್ಣನು ರುಕ್ಮಿಣಿಗೆ ಕೊಡಲು, ಅದರಿಂದ ಕೋಪಗೊಂಡ ಸತ್ಯಭಾಮೆ ಸವತಿ ಮತ್ಸರವನ್ನು ವ್ಯಕ್ತಪಡಿಸಿ, ಕೃಷ್ಣನನ್ನು ಪೂರ್ಣವಾಗಿ ತನ್ನತ್ತ ಒಲಿಸಿಕೊಳ್ಳಲು ಯತ್ನಿಸುತ್ತಾಳೆ. ಕೃಷ್ಣ ಸತ್ಯಭಾಮೆಯ ಮುನಿಸನ್ನು ಪರಿಹರಿಸಲು ಆಕೆಯ ಮನೆಯಲ್ಲಿಯೇ ಪಾರಿಜಾತವೃಕ್ಷವನ್ನು ಸ್ಥಾಪಿಸುವುದಾಗಿ ಮಾತುಕೊಟ್ಟು, ಆ ವೃಕ್ಷಕ್ಕಾಗಿ ದೇವೇಂದ್ರನಿಗೆ ಹೇಳಿಕಳುಹಿಸಿದಾಗ ಆತ ಅಹಂಕಾರದಿಂದ ನಿರಾಕರಿಸುತ್ತಾನೆ. ಆಗ ಕೃಷ್ಣ ಗರುಡನ ಮೇಲೇರಿ ಸ್ವರ್ಗಕ್ಕೆ ಧಾವಿಸಿ, ದೇವೇಂದ್ರನೊಡನೆ ಯುದ್ಧಮಾಡಿ, ಆತನನ್ನು ಸೋಲಿಸಿ, ವೃಕ್ಷಸಮೇತನಾಗಿ ಹಿಂದಿರುಗಿ ಬಂದು ಅದನ್ನು ಸತ್ಯಭಾಮೆಯ ಮನೆಯಲ್ಲಿ ಪ್ರತಿಷ್ಠಾಪಿಸಿ ಆಕೆಯ ಮುನಿಸನ್ನು ಕಳೆದು ಪ್ರೇಮವನ್ನು ಸೂರೆಗೊಳ್ಳುತ್ತಾನೆ.

ಆ ಕಥೆಯನ್ನು ಆಧರಿಸಿ ಪ್ರಸನ್ನವೆಂಕಟದಾಸರು (1680–1752) ಸತ್ಯಭಾಮಾವಿಲಾಸ ಅಥವಾ ಶ್ರೀಕೃಷ್ಣಪಾರಿಜಾತ ಎಂಬ ಗೀತನಾಟಕವನ್ನೂ ಅಪರಾಳ ತಮ್ಮಣ್ಣ (ಸು.1800) ಶ್ರೀಕೃಷ್ಣಪಾರಿಜಾತ ಎಂಬ ಗೀತನಾಟಕವನ್ನೂ ಕುಲಗೋಡ ತಮ್ಮಣ್ಣ (ಸು.1860) ಶ್ರೀಕೃಷ್ಣಪಾರಿಜಾತ ಎಂಬ ಬಯಲಾಟವನ್ನೂ ಹರಪನಹಳ್ಳಿ ಭೀಮವ್ವೆ (1822–1905) ಭೀಮೇಶಕೃಷ್ಣ ಎಂಬ ಅಂಕಿತದಲ್ಲಿ ಪಾರಿಜಾತ ಎಂಬ ಸಂಗೀತನಾಟಕವನ್ನೂ ಭೀಮರಾವ ಗುಮಾಸ್ತೆ ಎಂಬುವರು (1835–1915) ಐಹೊಳೆ ವೆಂಕಟೇಶ ಎಂಬ ಅಂಕಿತದಲ್ಲಿ ಶ್ರೀಕೃಷ್ಣಪಾರಿಜಾತ ಲಘುಗೀತ ನಾಟಕವನ್ನೂ ಬೆಳ್ಳಾವೆ ನರಹರಿಶಾಸ್ತ್ರೀ ಅವರು ಶ್ರೀಕೃಷ್ಣಪಾರಿಜಾತ (1928) ಎಂಬ ಸಂಗೀತ ನಾಟಕವನ್ನೂ ರಚಿಸಿದ್ದಾರೆ. ಇದಲ್ಲದೆ ಶ್ರೀಕೃಷ್ಣಪಾರಿಜಾತದಿಂದ ಸ್ಫೂರ್ತಿ ಹೊಂದಿ ಪ್ರಸನ್ನವೆಂಕಟದಾಸರು ನಾರದಕೊರವಂಜಿ, ಶ್ರೀರಾಮಪಾರಿಜಾತ ಎಂಬ ಗೀತನಾಟಕಗಳನ್ನೂ ಗೋಕಾಕದ ಅನಂತಾಚಾರ್ಯರು (18ನೆಯ ಶತಮಾನ) ಶ್ರೀವೆಂಕಟೇಶಪಾರಿಜಾತ, ಶಿವಪಾರಿಜಾತ ಎಂಬ ಗೀತನಾಟಕಗಳನ್ನೂ ರಚಿಸಿದ್ದಾರೆ. ಇವುಗಳಂತೆಯೇ ವೀರಭದ್ರಪಾರಿಜಾತ, ಬಿಳಿಗಿರಿರಂಗನ ಪಾರಿಜಾತ ಎಂಬ ನಾಟಕಗಳೂ ಪ್ರಚಾರದಲ್ಲಿವೆ.

ಹೀಗೆ ಪಾರಿಜಾತ ನಾಟಕಗಳ ಪರಂಪರೆಯೇ ಬೆಳೆದುಬಂದಿದ್ದರೂ ಅಪರಾಳ ತಮ್ಮಣ್ಣ ಹಾಗೂ ಕುಲಗೋಡ ತಮ್ಮಣ್ಣ ಕೃತ ಶ್ರೀಕೃಷ್ಣಪಾರಿಜಾತಗಳಿಗೆ ದೊರೆತ ಜನಪ್ರಿಯತೆ ಉಳಿದ ಯಾವುದಕ್ಕೂ ದೊರೆತಿಲ್ಲ. ಅದರಲ್ಲೂ ಕುಲಗೋಡ ತಮ್ಮಣ್ಣನ ಶ್ರೀಕೃಷ್ಣಪಾರಿಜಾತ ಶುದ್ಧಬಯಲಾಟ ಎಂಬ ಹೊಗಳಿಕೆಗೆ ಪಾತ್ರವಾಗಿದೆ. ಈ ಎರಡೂ ನಾಟಕಗಳು ಒಂದು ಶತಮಾನಕ್ಕೂ ಮೀರಿ ಜನಪದ ರಂಗಭೂಮಿಯ ಮೇಲೆ ಮೆರೆದು ಜನಮನವನ್ನು ಸೂರೆಗೊಂಡಿವೆ.

ಬಯಲಾಟ ಪ್ರಸಂಗದ ಕಥಾಸಾರಾಂಶ ಹೀಗಿದೆ: ನಾರದ ಒಂದು ದಿನ ಕೃಷ್ಣನಲ್ಲಿಗೆ ಬಂದು ಸುರಪನ ಉದ್ಯಾನದ ಪಾರಿಜಾತ ಪುಷ್ಪವನ್ನು ಇತ್ತು, ಅದನ್ನು ರುಕ್ಮಿಣಿಗೆ ಕೊಡುವಂತೆ ಸೂಚಿಸಿದ. ಕೃಷ್ಣ ಅಂತೆಯೇ ಮಾಡಿದಾಗ, ನಾರದನು ಸತ್ಯಭಾಮೆಯ ಮನೆಗೆ ನಡೆದು, ಕೃಷ್ಣನು ರುಕ್ಮಿಣಿಯ ಮೇಲೆ ಹೆಚ್ಚಿನ ಅನುರಾಗ ಇಟ್ಟಿರುವ ವಿಚಾರವನ್ನು ತಿಳಿಸಿ, ಅವಳ ಸ್ವಪ್ರೇಮ ಸ್ವಾರ್ಥಗಳನ್ನು ಕೆರಳಿಸಿ ಮರೆಯಾಗುತ್ತಾನೆ. ಆತ್ಮಾಭಿಮಾನದ ಪ್ರತೀಕಳಾದ ಸತ್ಯಭಾಮೆ ಇದರಿಂದ ಕೋಪಗೊಂಡವಳಾಗಿ, ದೂತಿಯನ್ನು ಕಳುಹಿಸಿ, ರುಕ್ಮಿಣಿಯ ಮನೆಯಲ್ಲಿದ್ದ ಕೃಷ್ಣನನ್ನು ಬರಮಾಡಿಕೊಳ್ಳಲು ಯತ್ನಿಸುತ್ತಾಳೆ. ದೂತಿಯು ರುಕ್ಮಿಣಿಯನ್ನು ಜರಿದು, ಅವಳಿಂದ ತಿರಸ್ಕೃತಳಾಗಿ ಹಿಂದಿರುಗುತ್ತಾಳೆ. ಆಕೆ ತನಗಾದ ಅವಮಾನವನ್ನು ಸತ್ಯಭಾಮೆಗೆ ಬಣ್ಣಕಟ್ಟಿ ಹೇಳಿದಾಗ ಅದನ್ನು ಕೇಳಿ ತಾಳಲಾಗದೇ ಸತ್ಯಭಾಮೆಯೇ ರುಕ್ಮಿಣಿಯ ಮನೆಗೆ ಬರುತ್ತಾಳೆ. ಅಲ್ಲಿ ರುಕ್ಮಿಣಿಯೊಡನೆ ಸರಸ ವಿನೋದದಲ್ಲಿ ಮಗ್ನನಾಗಿರುವ ಪ್ರಿಯಕರನನ್ನು ಕಂಡು, ಆತ ತನ್ನತ್ತ ಗಮನ ಕೊಡುವುದು ನಿಧಾನವಾದಾಗ, ಅವಳ ಆತ್ಮಾಭಿಮಾನದ ಸರ್ಪ ಹೆಡೆಬಿಚ್ಚುತ್ತದೆ. ಹೇಗಾದರೂ ಮಾಡಿ ಕೃಷ್ಣನನ್ನು ಸಂಪೂರ್ಣವಾಗಿ ತನ್ನ ವಶಮಾಡಿಕೊಳ್ಳದೆ ಬಿಡೆ ಎಂದು ನಿರ್ಧರಿಸಿ, ಅರಮನೆಗೆ ಹಿಂದಿರುಗಿ



ಶ್ರೀಕೃಷ್ಣಪಾರಿಜಾತ ನಾಟಕದ ಒಂದು ದೃಶ್ಯ

ಶಿವನ ರಾಣಿಯನ್ನು ಏಕಾಗ್ರತೆಯಿಂದ ಭಜಿಸಿ, ಆಕೆಯಿಂದ ಪತಿಪ್ರೇಮದ ವರವನ್ನು ಪಡೆಯುತ್ತಾಳೆ. ಅಷ್ಟುಹೊತ್ತಿಗೆ ಭಾಮೆಯನ್ನು ಸಮಾಧಾನ ಮಾಡಲು ಕೃಷ್ಣನು ಕೊರವಂಜಿ ವೇಷ ಧರಿಸಿ, ಅವಳ ಅರಮನೆಗೆ ಬಂದು ಕಣಿಹೇಳಿ ಅವಳ ಮನಸ್ಸನ್ನು ಸೂರೆಗೊಳ್ಳುತ್ತಾನೆ. ಅನಂತರ ಸತ್ಯಭಾಮೆಯ ಜೊತೆ ಕ್ರೀಡಾವಿನೋದದಲ್ಲಿ ಇರುವಾಗ ದೇವೇಂದ್ರನು ನರಕನಿಂದ ತನಗೆ ಆಗಿರುವ ತೊಂದರೆಯನ್ನು ತಿಳಿಸಿ, ತನ್ನನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತಾನೆ. ಶ್ರೀಕೃಷ್ಣ ತಕ್ಷಣ ಸತ್ಯಭಾಮೆಯೊಡನೆ ಗರುಡನ ಬೆನ್ನೇರಿ, ನರಕನನ್ನು ಕೊಂದು ಅವನ ಅಂತಃಪುರದಲ್ಲಿ ಸೆರೆಯಾಗಿದ್ದ 16 ಸಾವಿರ ರಾಜಕುಮಾರಿಯರನ್ನು ಬಂಧಮುಕ್ತರನ್ನಾಗಿಸಿ, ಅವರನ್ನು ದ್ವಾರಕೆಗೆ ಕಳುಹಿಸಿ, ದೇವೇಂದ್ರನ ಆಹ್ವಾನದ ಮೇರೆಗೆ ಸ್ವರ್ಗಕ್ಕೆ ಹೋಗಿ, ಅಲ್ಲಿ ಅದಿತಿದೇವಿಯಿಂದ ಆಶೀರ್ವಾದ ಪಡೆಯುತ್ತಾನೆ. ಆಗ ಇಂದ್ರಾಣಿ ಸತ್ಯಭಾಮೆಯನ್ನು ಕೀಳಾಗಿ ಕಾಣುತ್ತಾಳೆ. ಅನಂತರ ಭೂಲೋಕಕ್ಕೆ ಹೊರಡುವ ಮಾರ್ಗದಲ್ಲಿ ನಂದನದಲ್ಲಿ ಪಾರಿಜಾತವೃಕ್ಷವನ್ನು ಕಂಡ ಸತ್ಯಭಾಮೆ ಹಿಂದೆ ಕೃಷ್ಣ ತನಗೆ ಇತ್ತಿದ್ದ ವಚನವನ್ನು ಜ್ಞಾಪಿಸುತ್ತಾಳೆ. ಗರುಡ ಆ ವೃಕ್ಷವನ್ನು ಕೃಷ್ಣನ ಅಪ್ಪಣೆಯಂತೆ ಕಿತ್ತು ಬೆನ್ನ ಮೇಲೆ ಹೊತ್ತು ಪ್ರಯಾಣಕ್ಕೆ ಸನ್ನದ್ಧನಾಗುತ್ತಾನೆ. ಈ ವರ್ತಮಾನ ತಿಳಿದ ಇಂದ್ರ ಸಕಲ ಸೈನ್ಯದೊಡನೆ ಕೃಷ್ಣನನ್ನು ತಡೆಯಲು ಯತ್ನಿಸಿದಾಗ ಸತ್ಯಭಾಮೆಯೇ ಯುದ್ಧ ಮಾಡುತ್ತಾಳೆ. ಆಕೆಯ ಶರಾಘಾತಕ್ಕೆ ಎದುರು ನಿಲ್ಲಲಾಗದೆ ಇಂದ್ರ ಶರಣಾಗತನಾಗುತ್ತಾನೆ. ಪಾರಿಜಾತವೃಕ್ಷವನ್ನು ಕೃಷ್ಣ ಸತ್ಯಭಾಮೆಯ ಮನೆಯ ಮುಂದೆ ನೆಡುತ್ತಾನೆ. ಆದರೆ ಗಾಳಿಯ ದೆಸೆಯಿಂದಾಗಿ ಪುಷ್ಪವೆಲ್ಲ ರುಕ್ಮಿಣಿಯ ಮನೆ ಸೇರುತ್ತದೆ. ಸತ್ಯಭಾಮೆ ಕೃಷ್ಣನಲ್ಲಿ ದೂರಿತ್ತಾಗ ಕೃಷ್ಣ ಭಾಮೆಯೊಡನೆ ರುಕ್ಮಿಣಿಯ ಮನೆಗೆ ಬರುತ್ತಾನೆ. ಬಾಗಿಲಲ್ಲೇ ರುಕ್ಮಿಣಿ ಅತ್ಯಂತ ಪ್ರೀತಿಯಿಂದ ಭಾಮೆಯನ್ನು

ಸತ್ಕರಿಸುತ್ತಾಳೆ. ಆಗ ಸತ್ಯಭಾಮೆಯ ಮನಸ್ಸಿನ ದುಮ್ಮಾನ ಮಾಯವಾಗಿ ರುಕ್ಮಿಣಿಯ ಬಗ್ಗೆ ಪ್ರೀತಿ ಹೆಚ್ಚುತ್ತದೆ. ಇಬ್ಬರು ಪತ್ನಿಯರ ಸಮ್ಮುಖದಲ್ಲಿ ಶ್ರೀಕೃಷ್ಣ 16 ಸಾವಿರ ರಮಣಿಯರ ಪಾಣಿಗ್ರಹಣ ಮಾಡುತ್ತಾನೆ. ಇಲ್ಲಿಗೆ ಪಾರಿಜಾತದ ಕಥಾಪ್ರಸಂಗ ರಮಣೀಯ ಸುಂದರವಾಗಿ ಮುಗಿಯುತ್ತದೆ.

ನಾಟಕದ ಮೂಲರಸ ಶೃಂಗಾರ ಹಾಗೂ ಭಕ್ತಿ. ಕಥಾ ಸನ್ನಿವೇಶಗಳು ಗ್ರಾಮೀಣ ಜನರ ಹೃದಯವನ್ನು ಸೂರೆಗೊಳ್ಳುವಂತಿವೆ. ಈ ನಾಟಕದ ಶ್ರೇಷ್ಠತೆಗೆ ಕಾರಣವಾದ ಇನ್ನೊಂದು ಅಂಶವೆಂದರೆ ಅದರ ಸಂಗೀತ. ಇಲ್ಲಿ ಬಳಕೆಯಾಗಿರುವ ಕರ್ನಾಟಕ ಹಾಗೂ ಜನಪದ ಸಂಗೀತದ ಮಟ್ಟುಗಳು ಸಂಗೀತಪ್ರಿಯರಲ್ಲದವರೂ ಮೆಚ್ಚುವಂತಿವೆ. ಕೃಷ್ಣ, ನಾರದ, ಕೊರವಂಜಿ, ಸತ್ಯಭಾಮೆ, ರುಕ್ಮಿಣಿಯರ ಪಾತ್ರಗಳು ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತವೆ. ನಾಟಕದ ಭಾಷೆ ಆಡುಭಾಷೆಯಾಗಿದ್ದು ಸೊಗಸಿನಿಂದ ಕೂಡಿದೆ. (ಡಿ.ಬಿ.ಆರ್.)

**ಶ್ರೀದವಿಠಲದಾಸ (ಕರ್ಜಿಗಿ ದಾಸಪ್ಪ):** ಹದಿನೆಂಟನೆಯ ಶತಮಾನದ ಹರಿದಾಸರಲ್ಲೊಬ್ಬರು. ಅಪರೋಕ್ಷಜ್ಞಾನಿಗಳೆಂದು ಪ್ರಖ್ಯಾತರಾಗಿದ್ದ ಜಗನ್ನಾಥದಾಸರ ಶಿಷ್ಯರು. ಪೂರ್ವಾಶ್ರಮದ ಹೆಸರು ದಾಸಪ್ಪ. ವರದಾ ನದಿಯ ತೀರದಲ್ಲಿರುವ ಕರ್ಜಿಗಿ ಇವರ ಸ್ಥಳ. ಹೆಂಡತಿ ಗುಂಡಮ್ಮ. ಜಗನ್ನಾಥದಾಸರು ಮೈಸೂರು ದೇಶದಲ್ಲಿ ಸಂಚರಿಸುತ್ತಿದ್ದಾಗ ಊರಿನ ಜನರ ಆಹ್ವಾನದ ಮೇರೆಗೆ ಕರ್ಜಿಗಿಗೆ ಬಂದಿದ್ದಾಗ ದಾಸಪ್ಪನ ಮನೆಯಲ್ಲಿ ಉಳಿದಿದ್ದರು. ದಾಸಪ್ಪ ಶಾಸ್ತ್ರಗಳನ್ನು ಬಲ್ಲವರಾಗಿದ್ದರೂ ವಿಷಯಲೋಲು ಪರಾಗಿ ವೇಶ್ಯಾಸಹವಾಸದಲ್ಲಿ ಕಾಲ ಕಳೆಯುತ್ತಿದ್ದರು. ಜಗನ್ನಾಥದಾಸರು ತಮ್ಮ ಮನೆಯಲ್ಲಿಯೇ ಇದ್ದರೂ ಅವರನ್ನು ಸ್ವಲ್ಪವೂ ಲಕ್ಷಿಸುತ್ತಿರಲಿಲ್ಲ. ಒಂದು ದಿನ ರಾತ್ರಿ ದಾಸರ ಪೂಜೆ, ಭಜನೆಗಳ ಸಿದ್ಧತೆ ನೆಯುತ್ತಿದ್ದಾಗ ಇದ್ದಕ್ಕಿದ್ದಂತೆಯೇ ದಾಸಪ್ಪ ಮನೆಗೆ ಬಂದರು. ಹೆಂಡತಿ ಗುಂಡಮ್ಮನ ಒತ್ತಾಯದಿಂದ ಮಡಿಯುಟ್ಟು ತಾವೂ ದಾಸರ ಭಜನೆಯಲ್ಲಿ ಭಾಗವಹಿಸಿದರು. ಇವರನ್ನು ಕಂಡ ಜಗನ್ನಾಥದಾಸರ ಶಿಷ್ಯ ಪ್ರಾಣೇಶದಾಸರು ಆದದ್ದಾಯ್ತಿನ್ನಾದರೂ ಒಳ್ಳೇ ಹಾದಿ ಹಿಡಿಯೋ ಪ್ರಾಣಿ ಎಂದು ಅವರನ್ನೇ ಕುರಿತು ಹಾಡಿದರಂತೆ. ಅಂದಿನಿಂದ ಇವರು ಜಗನ್ನಾಥದಾಸರ ಶಿಷ್ಯರಾದರು. ಅವರಿಂದ ಶ್ರೀದವಿಠಲ ಎಂಬ ಅಂಕಿತವನ್ನು ಪಡೆದರು; ಕರ್ಜಿಗಿದಾಸರೆಂದು ಪ್ರಖ್ಯಾತರಾದರು. ಇವರು ಜಗನ್ನಾಥದಾಸರ ಹರಿಕಥಾಮೃತಸಾರಕ್ಕೆ ಇಪ್ಪತ್ನಾಲ್ಕು ಷಟ್ಪದಿಗಳಲ್ಲಿ ಫಲಸ್ತುತಿಯನ್ನು ಬರೆದಿದ್ದಾರೆ. ಸಾರವೆಂದರೆ ಹರಿಕಥಾಮೃತಸಾರ ಎಂದು ಮೆಚ್ಚಿ ನುಡಿದಿದ್ದಾರೆ. ತಮ್ಮ ಗುರು ಜಗನ್ನಾಥದಾಸರನ್ನು ಕುರಿತು ಸಂಗಸುಖವ ಬಯಸಿ ಬದುಕಿರೋ ರಂಗನೊಲಿದ ಭಾಗವತರು, ತೆರಳಿದರು ಶ್ರೀಜಗನ್ನಾಥದಾಸಾರ್ಯರು ಶಿರಿಪತಿಯು ಸ್ಮರಿಸಿ ಹರಿಪುರಕೆ ಹರುಷದಲಿ ಎಂಬ ಎರಡು ಕೀರ್ತನೆಗಳನ್ನು ರಚಿಸಿದ್ದಾರೆ. (ಟಿ.ಎನ್.ಎನ್.)

**ಶ್ರೀಧರ್, ಬಿ.ಎಚ್.:** 1918–90. ಕವಿ, ವಿಮರ್ಶಕ. ಇಂದಿನ ಉಡುಪಿಜಿಲ್ಲೆ ಕುಂದಾಪುರ ತಾಲ್ಲೂಕಿನ ಬಿಜೂರ ಗ್ರಾಮದ ಹೊಸಕೋಟೆಯಲ್ಲಿ ಬವಳಾಡಿಯಲ್ಲಿ 1918 ಮಾರ್ಚ್ 3ರಂದು ಜನಿಸಿದರು. ತಂದೆ ಸೀತಾರಾಮ ಹೆಬ್ಬಾರ, ತಾಯಿ ನಾಗಮ್ಮ. ಶ್ರೀಧರರ ದೊಡ್ಡಪ್ಪ ವಿದ್ವಾಂಸ ವೆಂಟರಮಣ ಕವಿಯಾಗಿದ್ದರು. ಶ್ರೀಧರ್ ಅವರು ಬಿಜೂರಿನ ಪ್ರಾಥಮಿಕ ಶಾಲೆಯಲ್ಲಿ ಓದಿದರು. ಅದೇ ಕಾಲಕ್ಕೆ ತಂದೆ ಸೀತಾರಾಮ ಹೆಬ್ಬಾರರು ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಅಂಡಿಗೆಗೆ ಬಂದು ದೇವಾಲಯದ ಅರ್ಚಕರಾದರು. ಇದರಿಂದ ಶ್ರೀಧರರ ಮಾಧ್ಯಮಿಕ ಶಾಲಾ ಶಿಕ್ಷಣ ಸೊರಬ ಮತ್ತು ಸಾಗರಗಳಲ್ಲಾಯಿತು. ಮುಂದೆ ಸಾಗರದ ಮುನಸಿಪಲ್ ಪ್ರೌಢಶಾಲೆಯಲ್ಲಿ ಮೂರು ವರ್ಷ ಓದಿ ಶಿವಮೊಗ್ಗ ಕೇಂದ್ರದಿಂದ ಎಸ್.ಎಸ್.ಸಿ. ಪಾಸಾದರು. ಮುಂದಿನ ಓದಿಗೆ ಹಣಕಾಸಿನ ಭದ್ರತೆಯಿಲ್ಲದಿದ್ದರೂ ಮೈಸೂರಿಗೆ ಹೋಗಿ ವಾರಾನ್ನ ಮತ್ತು ವಿದ್ಯಾರ್ಥಿವೇತನಗಳ ಮೇಲೆ ಯುವರಾಜ ಕಾಲೇಜಿನಲ್ಲಿ ಎರಡು ವರ್ಷ ಇಂಟರಮಿಡಿಯೇಟ್ ಮುಗಿಸಿ, ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಮುಗಿಸಿದರು. ಆನರ್ಸನಲ್ಲಿದ್ದಾಗ ಸಂಸ್ಕೃತದಲ್ಲಿ ಪ್ರಥಮ ಸ್ಥಾನ ಪಡೆದು ಪೂರ್ಣ ಕೃಷ್ಣರಾವ್ ಬಂಗಾರದ ಪದಕ ಪಡೆದರು. ಕನ್ನಡದಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಸ್ಥಾನ ಪಡೆದರು. ಆಗ ಇವರಿಗೆ ನವಿನಂ



ರಾಮಾನುಜಾಚಾರ್ಯ ಬಂಗಾರದ ಪದಕ ಲಭಿಸಿತು. ಇವರು ಬರೆದ ಕವಿಯೂ ವಿಜ್ಞಾನಿಯೂ ಎಂಬ ಪ್ರಬಂಧಕ್ಕೆ ಹೊನ್ನಸೆಟ್ಟಿ ಬಹುಮಾನವೂ ಬಂತು. ಮಹಾರಾಜ ಕಾಲೇಜಿನಲ್ಲಿ ಓದಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದರು (1941).

ತಮ್ಮ ಹತ್ತೊಂಬತ್ತನೆಯ ವಯಸ್ಸಿನಿಂದ ಕವನಗಳನ್ನು, ಪ್ರಬಂಧಗಳನ್ನು ಬರೆಯುತ್ತ ಬಂದ ಶ್ರೀಧರರು ವಿಜ್ಞಾನ, ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯ, ಪಾಶ್ಚಾತ್ಯ ಮತ್ತು ಪೌರಸ್ತ್ಯ ತತ್ವಜ್ಞಾನ, ಕಲೆ, ವಿಮರ್ಶೆ, ಮನೋವಿಜ್ಞಾನ, ಇತಿಹಾಸ, ತರ್ಕಶಾಸ್ತ್ರಗಳ ಆಳವಾದ ಅಧ್ಯಯನ ಮಾಡಿ ಪ್ರಭುತ್ವ ಸಂಪಾದಿಸಿದರು. ಅದು ಇವರ ಭಾಷಣ ಬರೆಹಗಳಲ್ಲಿ ಅಭಿವ್ಯಕ್ತಗೊಂಡಿವೆ.

ಇವರು ಪುಣೆಯ ಫೀಲ್ಡ್‌ಕಂಟ್ರೋಲರ್ ಆಫ್ ಮಿಲಿಟರಿಯಲ್ಲಿ ಒಂದು ವರ್ಷ ಗುಮಾಸ್ತರಾಗಿ ಕೆಲಸ ಮಾಡಿದರು (1942–43). ಅನಂತರ ಉತ್ತರ ಕನ್ನಡ ಜಿಲ್ಲೆ ಭಟ್ಕಳದ ಇಸ್ಲಾಮಿಯಾ ಆಂಗ್ಲೋ ಉರ್ದು ಹೈಸ್ಕೂಲಿನಲ್ಲಿ ನಾಲ್ಕು ವರ್ಷ ಸಹಶಿಕ್ಷಕರಾಗಿ ಒಂದು ವರ್ಷ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಕರ್ಮವೀರ ವಾರಪತ್ರಿಕೆಯಲ್ಲಿ ಹುಬ್ಬಳ್ಳಿ ಕಾರ್ಯಾಲಯದಲ್ಲಿ ನಾಲ್ಕು ವರ್ಷ ಉಪಸಂಪಾದಕರಾಗಿ ದುಡಿದರು (1947–51). ಮುಂದೆ ಕುಮಟ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಹನ್ನೊಂದು ವರ್ಷ (1951–62) ಸೇವೆ ಸಲ್ಲಿಸಿದರು. ಶಿರಸಿಯ ಮಾಡರ್ನ್ ಎಜುಕೇಷನ್ ಸೊಸೈಟಿಯ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಉಪಪ್ರಾಂಶುಪಾಲರಾಗಿ ಏಳುವರ್ಷ (1962–69), ಸಂಸ್ಕೃತ ಮತ್ತು ಕನ್ನಡ ಪ್ರಾಧ್ಯಾಪಕರಾಗಿ ಒಂದು ವರ್ಷ, ಅನಂತರ ಸಿದ್ದಾಪುರದ ಮಹಾತ್ಮ ಗಾಂಧಿ ಶತಾಬ್ದಿ ಕಾಲೇಜಿನ ಪ್ರಿನ್ಸಿಪಾಲರಾಗಿ (1969–76) ಸೇವೆ ಸಲ್ಲಿಸಿದರು. ಶಿರಸಿಯ ಮಾಡರ್ನ್ ಎಜುಕೇಶನ್ ಸೊಸೈಟಿಯ ಗೌರವ ಮ್ಯಾನೇಜರ್‌ರಾಗಿಯೂ ಕೆಲಸ ನಿರ್ವಹಿಸಿದರು (1976–1983).

ಇಂಟರ್ ಮಿಡಿಯೇಟ್ ಓದುತ್ತಿದ್ದಾಗ ಸುಬೋಧರಾಮರಾಯರ ಕರೆಯ ಮೇರೆಗೆ ಬರೆದ ಚಂಪಕಮಾಲಾ ವೃತ್ತದಲ್ಲಿದ್ದ ಕವನ ಮೊದಲು ಪ್ರಕಟವಾದ ಇವರ ಸಾಹಿತ್ಯ. ಕೈಗಾ ಅಣುಸ್ಥಾವರ ಕುರಿತು 'ನಾಗರಿಕ' ಪತ್ರಿಕೆಯಲ್ಲಿ ಬರೆದದ್ದೇ ಇವರ ಕೊನೆಯ ಲೇಖನ (1990). ಕನ್ನಡದಲ್ಲಿ ಐವತ್ತು ಗ್ರಂಥಗಳನ್ನೂ ನೂರಾರು ಲೇಖನಗಳನ್ನೂ ಇವರು ಪ್ರಕಟಿಸಿದ್ದಾರೆ.

ಮೇಘನಾದ, ಕಿನ್ನರಗೀತ, ಅಮೃತಬಿಂದು, ಮಂಜುಗೀತ, ರಸಯಜ್ಞ, ಮುತ್ತುರತ್ನ, ಕದಂಬ ವೈಭವ, ಕಂಟಕಾರಿ ಮಹಾಕಾವ್ಯಂ, ಜಾತವೇದ ಮೊದಲಾದುವು ಇವರ ಕವನ ಸಂಗ್ರಹಗಳು. ರಾಷ್ಟ್ರಭಕ್ತಿ, ಆದರ್ಶ,

ಮಾನವೀಯ ಮೌಲ್ಯಗಳ ಆರಾಧನೆ, ಕೆಲವೆಡೆ ತತ್ವಶಾಸ್ತ್ರದ ತಿರುಳು ಇವರ ಕಾವ್ಯದ ಜೀವಾಳ. ಕಂಟಕಾರಿ ಮಹಾಕಾವ್ಯಂ, ಭಾಷಣ ಭೈರವನ ಒಡ್ಡೋಲಗ, ವಿಚಾರ ವಿಜಯ, ಪಂಚಮುಖಿ– ಇವು ಇವರ ವಿಡಂಬನ ಪ್ರಜ್ಞೆಗೆ ಸಾಕ್ಷಿಯಾಗಿವೆ. ಬೇಂದ್ರೆ ಹೊಸಗನ್ನಡ ಸಾಹಿತ್ಯ ಶೈಲಿ, ಕವೀಂದ್ರ ರವೀಂದ್ರ, ಕಾವ್ಯಸೂತ್ರ, ಪ್ರತಿಭೆ, ಸಂಸ್ಕೃತ ಕನ್ನಡಗಳ ಬಾಂಧವ್ಯ, ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ ಮೊದಲಾದವು ವಿಮರ್ಶಾ ಗ್ರಂಥಗಳಾಗಿವೆ. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ, ವಿದೇಶದ ತಿಳಿವಳಿಕೆಗಳು, ಜ್ಞಾನಸೂತ್ರ, ಮಾನಸದರ್ಪಣ– ಇವು ವೈಚಾರಿಕ ಪುಸ್ತಕಗಳು. ಎಲ್.ಟಿ.ಶರ್ಮ ಅವರೊಂದಿಗೆ ಸೇರಿ ಬನವಾಸಿಯ ಕದಂಬರು ಎಂಬ ಸಂಶೋಧನಾತ್ಮಕ ಗ್ರಂಥವನ್ನು ರಚಿಸಿದ್ದರು. ಇಂಗ್ಲಿಷಿನಿಂದ ಇವರು ಭಾರತೀಯ ರಾಜಧರ್ಮದ ಸತ್ವ ಮತ್ತು ಸ್ವರೂಪ, ಭಾರತೀಯ ವಾಙ್ಮಯ, ಟಿ.ಎಸ್. ಈಲಿಯಟ್, ಮಾತೃಶ್ರೀ, ವೇದರಹಸ್ಯ, ನೆಹರೂ ಉವಾಚ, ರಮಣಮಾರ್ಗ, ಸಂಸ್ಕೃತ ಭಾಷೆಯಿಂದ ಕಾಳಿದಾಸ ಕಾವ್ಯ ಸೌರಭ, ಕುಂದಮಾಲೆ (ನಾಟಕ), ಸಂಸ್ಕೃತ ಸುಭಾಷಿತ ಸಂಗ್ರಹ, ರಾಜಧರ್ಮ ಮೊದಲಾದ ಗ್ರಂಥಗಳನ್ನು ಅನುವಾದಿಸಿದ್ದಾರೆ. ಇವರು ಮಾಡಿದ ಅನುವಾದಗಳಲ್ಲಿ ಅರವಿಂದ ಮಹರ್ಷಿ, ರಮಣ ಮಹರ್ಷಿ– ಇವರ ಸಾಹಿತ್ಯಕ್ಕೆ ಒತ್ತುಕೊಟ್ಟಿದ್ದು ಕಾಣುತ್ತದೆ. ಶ್ರೀಧರರು ಹೆಸರಾಂತ ಕವಿಯಾಗಿದ್ದಂತೆ ವಿಮರ್ಶಕರಾಗಿ, ವಿಚಾರವಾದಿಗಳಾಗಿಯೂ ಅಷ್ಟೇ ಪ್ರಸಿದ್ಧರಾಗಿದ್ದರು. ಇವರು ಮಕ್ಕಳಿಗಾಗಿ ಮಯೂರಶರ್ಮ, ಕೌಶಿಕ ರಾಮಾಯಣ, ಬನವಾಸಿಯ ಕೈಪಿಡಿ ಬರೆದರು. ತಮ್ಮ ಜೀವನದ ಅನುಭವಗಳ ಗರುಡನೋಟ 'ಜೀವಯಾನ'ದಲ್ಲಿ ದಾಖಲಿಸಿದ್ದಾರೆ.

ಇವರ ಕಾವ್ಯಸೂತ್ರಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ, ತೀ.ನಂ.ಶ್ರೀ. ಸ್ಮಾರಕ ಬಹುಮಾನ, ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಬಹುಮಾನ ಲಭ್ಯವಾಗಿವೆ. ಇವರ ರಾಷ್ಟ್ರಸೂತ್ರಕ್ಕೆ ರಾಜ್ಯ ಸರಕಾರದ ಅನುದಾನ, ಮೂರು ಸಾವಿರ ಮಠದ ಬಹುಮಾನ ಲಭಿಸಿದೆ. ಜ್ಞಾನಸೂತ್ರಕ್ಕೆ ಲೋಕಶಿಕ್ಷಣ ಟ್ರಸ್ಟ್ ಬಹುಮಾನ, ಮಾನಸದರ್ಪಣಕ್ಕೆ ಮದರಾಸು ಕ್ರಿಶ್ಚಿಯನ್ ಪಠ್ಯಪುಸ್ತಕ ಸಮಿತಿಯ ಬಹುಮಾನ, ನೌಕಾಗೀತಕ್ಕೆ ಕೇಂದ್ರ ಸರಕಾರದ ರಕ್ಷಣಾಶಾಖೆಯ ಬಹುಮಾನ, ರಸಯಜ್ಞಕ್ಕೆ ದೇವರಾಜ ಬಹದ್ದೂರ್ ಬಹುಮಾನ ಬಂದಿವೆ.

ಇವರು ಉತ್ತರ ಕನ್ನಡ ಜಿಲ್ಲೆಯ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (1974). ಐವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿದ್ದರು (1982). ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ.

ಇವರು 1990 ಏಪ್ರಿಲ್ 24ರಂದು ನಿಧನರಾದರು. (ಎಸ್.ಎಂ.ಕೆ.)

**ಶ್ರೀಧರಾಚಾರ್ಯ:** ಸು.1049. ಜೈನಕವಿ. ಜಾತಕತಿಲಕ ಎಂಬ ಗ್ರಂಥದ ಕರ್ತೃ. ಬೆಳುವಲ ನಾಡಿನ ನರಗುಂದ ಈತನ ಜನ್ಮಸ್ಥಳ. ಜಾತಕತಿಲಕ ಗ್ರಂಥದ ಕೊನೆಯಲ್ಲಿ ಧಾತ್ರಿಯನಾಹವಮಲ್ಲ ಭೂಮಿಪಾಲನೊಸೆದಾಳೆ ಎಂದು ತಿಳಿಸಿರುವುದರಿಂದಲೂ ಅದರಲ್ಲೇ ಹೇಳಿರುವ ಗ್ರಂಥರಚನೆ ಮುಗಿದ ದಿನವು 1049ರ ನವೆಂಬರ್ 16ನೆಯ ತಾರೀಕಿಗೆ ಸರಿಹೊಂದುವುದರಿಂದಲೂ ಇವನು ಚಾಳುಕ್ಯ ಒಂದನೆಯ ಸೋಮೇಶ್ವರನ (1044–68) ಆಸ್ಥಾನ ಕವಿಯಾಗಿದ್ದಿರಬಹುದೆಂದು ತೋರುತ್ತದೆ. ಈತ ತನ್ನನ್ನು ಪ್ರಜ್ಞಾಧರ, ಶಾಸ್ತ್ರಕವಿತಾಚತುರ, ಕರಣರತ್ನ, ಬುಧತಿಲಕ, ಬುಧಮಿತ್ರ, ಸಮ್ಯಕ್ತ್ವ ರತ್ನಾಕರ, ಕವಿರಾಜಬಾಂಧವ, ಪದ್ಯವಿದ್ಯಾಧರ, ಸುಜನೈಕಬಾಂಧವ, ಗದ್ಯಪದ್ಯವಿದ್ಯಾಧರ ಮುಂತಾಗಿ ವಿಶೇಷಿಸಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಪಂಪ, ಚಂದ್ರಭಟ್ಟ, ಮನಸಿಜ, ಗಜಾಂಕುಶ, ಗುಣವರ್ಮ–ಇವರನ್ನು ಸ್ಮರಿಸಿದ್ದಾನೆ.

ಜಾತಕತಿಲಕ ಮೊಟ್ಟಮೊದಲನೆಯ ಕನ್ನಡ ಜ್ಯೋತಿಷಗ್ರಂಥ. ಇದರಲ್ಲಿ 345 ಕಂದಪದ್ಯಗಳೂ 177 ಮತ್ತೇಭವಿಕ್ರೀಡಿತ ವೃತ್ತಗಳೂ 39 ಚಂಪಕ ಮಾಲಾ ವೃತ್ತಗಳೂ 21 ಮಹಾಸ್ರಗ್ಧರಾವೃತ್ತಗಳೂ 9ಅಕ್ಕರವೃತ್ತಗಳೂ 4ಶಾರ್ದೂಲವಿಕ್ರೀಡಿತ ವೃತ್ತಗಳೂ 3ಪೃಥ್ವೀವೃತ್ತಗಳೂ 2ಉತ್ಪಲಮಾಲಾ ವೃತ್ತಗಳೂ ಇವೆ. ಸಂಜ್ಞಾಪ್ರಕರಣ, ಬಲಾಬಲಪ್ರಕರಣ, ಗರ್ಭಾದಾನ ಪ್ರಕರಣ, ಜನ್ಮಪ್ರಕರಣ, ವಿಯೋನಿಜನ್ಮಪ್ರಕರಣ, ಅರಿಷ್ಟಯೋಗಪ್ರಕರಣ, ಆಯುರ್ದಾಯಪ್ರಕರಣ, ದಶಾಂತರ್ದಶಾಪ್ರಕರಣ, ಅಷ್ಟಕವರ್ಗಪ್ರಕರಣ, ಕರ್ಮಜೀವನ ಪ್ರಕರಣ, ದ್ವಿತ್ರಿಗ್ರಹಯೋಗ ಪ್ರಕರಣ, ಪ್ರವ್ರಜ್ಯಾಯೋಗ ಪ್ರಕರಣ, ರಾಶಿಶೀಲಪ್ರಕರಣ, ಲಗ್ನಾದಿಭಾವಪ್ರಕರಣ, ದ್ರೇಕ್ಕಾಣಪ್ರಕರಣ, ದೃಷ್ಟಿಪ್ರಕರಣ, ಅನಿಷ್ಟಯೋಗ ಪ್ರಕರಣ, ಸ್ತ್ರೀಜಾತಕಫಲಪ್ರಕರಣ, ನಿರ್ಯಾಣಪ್ರಕರಣ, ನಷ್ಟಜಾತಕಪ್ರಕರಣ ಎಂಬ 24 ಪ್ರಕರಣಗಳಿವೆ. ಒಂದೊಂದು ಪ್ರಕರಣ ವಿಷಯವೂ ಒಂದೊಂದು ಅಧಿಕಾರದಲ್ಲಿ ವರ್ಣಿತವಾಗಿದೆ. ಕವಿ ಸಂಸ್ಕೃತ ಭಾಷೆಯಲ್ಲಿರುವ ವರಾಹಮಿಹಿ ರಾಚಾರ್ಯನ ಬೃಹಜ್ಜಾತಕ ಮತ್ತು ಲಘುಜಾತಕ, ಕಲ್ಯಾಣವರ್ಮನ ಸಾರಾವಳಿ ಈ ಗ್ರಂಥಗಳಿಂದ ಶ್ಲೋಕಗಳನ್ನು ಸಂಗ್ರಹಿಸಿ ಅವನ್ನು ಕನ್ನಡಕ್ಕೆ ಪದ್ಯರೂಪದಲ್ಲಿ ಭಾಷಾಂತರಿಸಿ ಈ ಕೃತಿಯನ್ನು ರಚಿಸಿದ್ದಾನೆ. ಆದರೂ ಈತ ತಾನು ಗ್ರಂಥಗಳಿಂದ ಸಂಗ್ರಹಿಸಿ ಭಾಷಾಂತರ ಮಾಡಿರುವ ಅಂಶವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಶಾಸ್ತ್ರಗ್ರಂಥವಾದರೂ ಕೆಲವು ಕಡೆ ಕಾವ್ಯತ್ವಕ್ಕೆ ನಿದರ್ಶನಗಳು ಸಾಕಷ್ಟು ದೊರೆಯುತ್ತವೆ. ಚಂದ್ರಪ್ರಭಚರಿತೆ ಈತನ ಇನ್ನೊಂದು ಕೃತಿ. ಇದು ಉಪಲಬ್ಧವಿಲ್ಲ. (ಎಸ್.ಎನ್.ಕೆ.)

**ಶ್ರೀನಿವಾಸನ್, ಎಂ.ಆರ್.:** 1930– . ಅಂತಾರಾಷ್ಟ್ರೀಯ ಖ್ಯಾತಿಯ ಅಣುವಿಜ್ಞಾನಿ. 1930 ಜನವರಿ 5ರಂದು ಸಂಪ್ರದಾಯಸ್ಥ ಅಯ್ಯಂಗಾರ್ ಕುಟುಂಬದಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಎಂ.ಎಸ್.ರಾಮಸ್ವಾಮಿ, ತಾಯಿ ಸೀತಮ್ಮ. ಇವರ ತಂದೆಯವರು ಹಳೇ ಮೈಸೂರು ವಿಭಾಗದಲ್ಲಿ ಗಣಿತದ ಅಧ್ಯಾಪಕರಾಗಿದ್ದರು. ಶ್ರೀನಿವಾಸನ್ ಅವರು ತಮ್ಮ ಶಿಕ್ಷಣವನ್ನು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಪ್ರೈಮರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲೇ ಪ್ರಾರಂಭಿಸಿದರು. ಮುಂದೆ ಮಧುಗಿರಿ, ಮಂಡ್ಯ, ಮೈಸೂರುಗಳಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಂದುವರಿಸಿ ಬೆಂಗಳೂರಿನ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ವ್ಯಾಸಂಗ ಮಾಡಿ (ಈಗಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು) ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದರು (1950). ಕೊಲೊಂಬೋ ಪ್ಲಾನ್‌ನ ಶಿಷ್ಯವೇತನ ಪಡೆದು ಕೆನಡದ ಮಾಂಟ್ರಿಯಲ್ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು (1952). ಮುಂದೆ ಕಂಬಶ್ಚನ್ ಪ್ರಾಬ್ಲಮ್ಸ್ ಆಫ್ ಗ್ಯಾಸ್ ಟರ್ಬೈನ್ ಎಂಬ ವಿಷಯ ಕುರಿತು ಅಧ್ಯಯನ ಮಾಡಿ ಪಿಎಚ್.ಡಿ. ಪದವಿ ಗಳಿಸಿದರು (1954). ಇವರಿಗೆ ಇಂಗ್ಲೆಂಡ್‌ನಲ್ಲಿ ಒಂದು ವರ್ಷ ಕಾಲ ಕೈಗಾರಿಕಾ ಗ್ಯಾಸ್ ಟರ್ಬೈನ್‌ಗಳನ್ನು ವಿನ್ಯಾಸ ಮಾಡುವ ಅವಕಾಶ ದೊರೆಯಿತು.

ಅನಂತರ ಸ್ವದೇಶಕ್ಕೆ ಮರಳಿದರು. ಭಾರತದಲ್ಲಿ ಡಾ.ಹೋಮಿ ಜೆ. ಭಾಭಾ ಅವರ ನೇತೃತ್ವದಲ್ಲಿ ಪ್ರಾರಂಭವಾಗಿದ್ದ ಅಣುಶಕ್ತಿ ವಿಭಾಗಕ್ಕೆ ಇವರು ಸೇರ್ಪಡೆಗೊಂಡರು. ಇವರ ಬುದ್ಧಿವಂತಿಕೆ, ಕಾರ್ಯಸಾಧನೆಗಳು ಭಾಭಾ ಅವರ ಗಮನ ಸೆಳೆದವು. 1956ರಲ್ಲಿ ಟ್ರಾಂಬೇ ಅಣುಸ್ಥಾವರವನ್ನು ಪ್ರಾರಂಭಿಸಲು ಇವರನ್ನು ಆಯೋಜಿಸಲಾಯಿತು. ಅಂದಿನಿಂದ ಇವರು ಭಾರತದ ಎಲ್ಲ ಅಣುಸ್ಥಾವರಗಳ ನಿರ್ಮಾಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಭಾರತದ ಮೊಟ್ಟಮೊದಲ ಸಂಶೋಧನ ಸ್ಥಾವರ 'ಅಪ್ಸರ'ದ ನಿರ್ಮಾಣದಿಂದ ಹಿಡಿದು ಇತ್ತೀಚಿನ ಕರ್ನಾಟಕದ ಕೈಗಾ

ಅಣುಸ್ಥಾವರ ನಿರ್ಮಾಣದ ವಿನ್ಯಾಸ, ಪ್ರಯೋಗಶಾಲೆಗಳ ಸ್ಥಾಪನೆಗಳವರೆಗೆ ಇವರದು ಅಣುಸ್ಥಾವರ ನಿರ್ಮಾಣ ಕ್ರಿಯೆಯಲ್ಲಿ ನಿಲ್ಲದ ಪಯಣ.

ಇವರು ಭಾರತದ ಮೊದಲ ಅಣುಸ್ಥಾವರ ತಾರಾಪುರ ಅಣುಶಕ್ತಿ ಘಟಕದ ಮುಖ್ಯ ಯೋಜನಾ ಎಂಜಿನಿಯರ್ ಆಗಿ ಅದ್ಭುತ ಸಾಧನೆಗಳನ್ನು ಮಾಡಿದರು (1959). ಭಾರತದಂತಹ ರಾಷ್ಟ್ರದಲ್ಲಿ ಅಣುಶಕ್ತಿಯ ಬಳಕೆಗೆ ಭದ್ರಬುನಾದಿ ಹಾಕಿದರು. 1966ರಲ್ಲಿ ರಾಷ್ಟ್ರದಲ್ಲಿ ಮೊದಲಬಾರಿಗೆ ಸಂಪೂರ್ಣವಾಗಿ ದೇಸೀ ಪ್ರತಿಭೆಗಳಿಂದಲೇ ನಿರ್ಮಾಣಗೊಂಡ ತಮಿಳುನಾಡಿನ ಕಲ್ಪಾಕಂ ಅಣುಸ್ಥಾವರ ಘಟಕದ ನಿರ್ಮಾಣ ಕಾರ್ಯದಲ್ಲಿ ಇವರು ಮುಖ್ಯಎಂಜಿನಿಯರ್ ಆಗಿ ಕೆಲಸ ಮಾಡಿದರು (1966). ಅನಂತರ ಮುಂಬೈಗೆ ಹಿಂತಿರುಗಿದ ಇವರು 1974ರಲ್ಲಿ ಪವರ್ ಪ್ರಾಜೆಕ್ಟ್‌ನ ಎಂಜಿನಿಯರಿಂಗ್ ವಿಭಾಗದ ನಿರ್ದೇಶಕರಾದರು. ಮುಂದೆ ಇದೇ 'ನ್ಯೂಕ್ಲಿಯರ್ ಪವರ್‌ಬೋರ್ಡ್' ಆಗಿ ಪರಿವರ್ತನೆಯಾಯಿತು. 1984ರಲ್ಲಿ ಇವರು ಇದರ ಮೊದಲ ಮುಖ್ಯಸ್ಥರಾಗಿ ನೇಮಕಗೊಂಡರು. ಈ ಹುದ್ದೆಯಲ್ಲಿ ಇವರು ಎಲ್ಲ ಅಣುಶಕ್ತಿ ಘಟಕಗಳ ವಿನ್ಯಾಸ ಹಾಗೂ ಕಾರ್ಯ ನಿರ್ವಹಣೆಯಲ್ಲಿ ಮುಖ್ಯಪಾತ್ರ ವಹಿಸಿದ್ದರು. ಅಣುಶಕ್ತಿ ಕಮಿಷನ್ ಹಾಗೂ ಅಣುಶಕ್ತಿ ವಿಭಾಗದ ಕಾರ್ಯದರ್ಶಿಯಾಗಿ (1987), ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಸಂಸ್ಥೆಯ ಸ್ಥಾಪಕ ಮುಖ್ಯಸ್ಥರಾಗಿ, ಯೋಜನಾ ಆಯೋಗದ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. 1990ರಲ್ಲಿ ಸೇವೆಯಿಂದ ನಿವೃತ್ತರಾದ ಇವರು ಊಟಿಯಲ್ಲಿ ನೆಲೆಸಿದರು. ಇವರ ಪತ್ನಿ ಗೀತಾ ಶ್ರೀನಿವಾಸನ್. ಅವರ 'ಕ್ಲೀನ್ ಊಟಿ ಫ್ರಂ ಪ್ಲಾಸ್ಟಿಕ್ಸ್' ಯೋಜನೆ ಅತ್ಯಂತ ಜನಪ್ರಿಯತೆ ಗಳಿಸಿದೆ. ಫ್ರಂ ಫಿಷನ್ ಟು ಫ್ಯೂಷನ್ ಎಂಬುದು ಶ್ರೀನಿವಾಸನ್ ಅವರ ಆತ್ಮಕಥೆ. ಇದರಲ್ಲಿ ಭಾರತೀಯ ಅಣುಶಕ್ತಿಯ ವಿಕಾಸದ ಚರಿತ್ರೆಯೂ ಅಡಕವಾಗಿದೆ. ಇವರು ಪರಿಸರವಾದಿಯೂ ಹೌದು. ಈಗ ನ್ಯಾಷನಲ್ ಸೆಕ್ಯೂರಿಟಿ ಕೌನ್ಸಿಲ್‌ನ ಸದಸ್ಯರಾಗಿ ಸೇವೆಸಲ್ಲಿಸುತ್ತಿರುವ ಇವರು ಅಣುಶಕ್ತಿಯನ್ನು ಪರ್ಯಾಯ ಶಕ್ತಿಯ ಮೂಲವಾಗಿ ಬಳಸಿಕೊಳ್ಳುವ ಅನಿವಾರ್ಯತೆಯ ಬಗೆಗೆ ಹೆಚ್ಚು ಚಿಂತನೆಯಲ್ಲಿ ತೊಡಗಿಕೊಂಡಿದ್ದಾರೆ.

ಇವರು ಸಲ್ಲಿಸಿದ ಸೇವೆಗಾಗಿ ಲಭ್ಯವಾಗಿರುವ ಪ್ರಶಸ್ತಿಗಳಿವು: ಪದ್ಮಶ್ರೀ (1984), ಸೆಂಟ್ರಲ್ ಬೋರ್ಡ್ ಆಫ್ ಪವರ್‌ನ ವಜ್ರಮಹೋತ್ಸವ ಪ್ರಶಸ್ತಿ (1987), ಇಂಡಿಯಾ ದೇಶದ ಅತ್ಯುತ್ತಮ ವಿನ್ಯಾಸಕಾರ ಪ್ರಶಸ್ತಿ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಹೋಮಿ ಭಾಭಾ ಸ್ವರ್ಣಪದಕ, ವಿಜ್ಞಾನ ಮತ್ತು ತಾಂತ್ರಿಕತೆಗಾಗಿ ಓಂಪ್ರಕಾಶ್ ಭಸಿನ್ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ (1990). **(ಡಿ.ಎಂ.ಪಿ.)**

**ಶ್ರೀನಿವಾಸಯ್ಯಂಗಾರ್, ಎಂ.ಜೆ.:** 1924– . ಪ್ರಸಿದ್ಧ ವೈಣಿಕ ವಿದ್ವಾಂಸರು. 1924 ಮೇ 20ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಜನಾರ್ಧನ ಅಯ್ಯಂಗಾರ್, ತಾಯಿ ಜಾನಕಿ ಅಮ್ಮಾಳ್. ಇವರ ತಂದೆಯವರು ದೊಡ್ಡ ವೈಣಿಕ ವಿದ್ವಾಂಸರು. ತಂದೆಯವರೇ ಇವರ ಮೊದಲ ಗುರು. ಇವರು 14 ವರ್ಷದವರಾಗಿದ್ದಾಗ ಸಂಗೀತದ ಪ್ರೌಢಶಿಕ್ಷಣಕ್ಕಾಗಿ ಮೈಸೂರಿಗೆ ಬಂದು ಹೆಸರಾಂತ ವೈಣಿಕರಾಗಿದ್ದ ವೀಣೆ ಶೇಷಣ್ಣನವರ ಶಿಷ್ಯ ವೀಣೆ ವೆಂಕಟಗಿರಿಯಪ್ಪನವರ ಬಳಿ ಶಿಷ್ಯರಾಗಿ ಸೇರಿದರು. ಇವರ ಪ್ರತಿಭೆಯನ್ನು ಗುರುತಿಸಿದ ವೆಂಕಟಗಿರಿಯಪ್ಪನವರು ಅರಮನೆಯ ಪ್ರತಿಯೊಂದು ಸಾಂಸ್ಕೃತಿಕ ಉತ್ಸವಗಳಿಗೂ ತಮ್ಮೊಂದಿಗೆ ಇವರನ್ನೂ ವೀಣೆ ನುಡಿಸುವಂತೆ ಹೇಳುತ್ತಿದ್ದರು.

ಸುಮಾರು ಐದು ದಶಕಗಳಿಗಿಂತಲೂ ಹೆಚ್ಚುಕಾಲ ಸಂಗೀತ ಕ್ಷೇತ್ರದಲ್ಲಿ ಇವರು ಸೇವೆ ಸಲ್ಲಿಸಿದ್ದಾರೆ. ಭಾರತದ ಉದ್ದಗಲಕ್ಕೂ ಇವರ ಖ್ಯಾತಿ ಪಸರಿಸಿದೆ. ಮೈಸೂರು ಅರಮನೆಯ ದರ್ಬಾರ್ ಸಭೆ ಸೇರಿದಂತೆ ಕರ್ನಾಟಕದ ಎಲ್ಲ ಪ್ರತಿಷ್ಠಿತ ಸಂಘಸಂಸ್ಥೆಗಳಲ್ಲೂ ಇವರ ಅಮೋಘ ಸಂಗೀತ ಕಛೇರಿಗಳು ಪ್ರಸಿದ್ಧಿ ಪಡೆದಿವೆ. ಶಿಷ್ಯರೊಂದಿಗೆ ಇವರು ನೀಡುತ್ತಿದ್ದ ಪಂಚವೀಣಾ ಕಾರ್ಯಕ್ರಮಗಳು ಹೆಚ್ಚು ಪ್ರಶಂಸೆ ಗಳಿಸಿವೆ.



ಮೈಸೂರಿನ ಸಂಗೀತರತ್ನ ಪಿಟೀಲು ಚೌಡಯ್ಯನವರು ಸಂಸ್ಥಾಪಕ ಸದಸ್ಯರಾಗಿದ್ದ ಅಯ್ಯನಾರ್ ಕಲಾಶಾಲೆ ಹಾಗೂ ತಿರುಮಕೂಡಲು ನರಸೀಪುರದ ಕಲಾಶಾಲೆಗಳಲ್ಲಿ ಭಗಿನಿ ಸೇವಾ ಸಮಾಜದಲ್ಲಿ ಸಂಗೀತ ಶಿಕ್ಷಕರಾಗಿ ಸು. 30 ವರ್ಷಗಳಿಗೂ ಹೆಚ್ಚುಕಾಲ ಸೇವೆ ಸಲ್ಲಿಸಿದ್ದಾರೆ. ಆಕಾಶವಾಣಿಯ 'ಎ' ದರ್ಜೆ ಕಲಾವಿದರಾಗಿ ಹಲವಾರು ರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಕಾಶವಾಣಿಯ ಶ್ರವ್ಯ ಗಾಯನ ಪರೀಕ್ಷಾ ಮಂಡಳಿಯ (ಆಡಿಷನ್‌ಬೋರ್ಡ್) ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯುದ ಲಲಿತ ಕಲೆಗಳ ಕಾಲೇಜಿನ ಪರೀಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಅಪಾರ ವಿದ್ವತ್ತನ್ನು ಗುರುತಿಸಿದ ಹಲವಾರು ಸಂಘ ಸಂಸ್ಥೆಗಳು ಇವರಿಗೆ ಪ್ರಶಸ್ತಿ, ಬಿರುದುಗಳನ್ನು ನೀಡಿ ಗೌರವಿಸಿವೆ. ಗಾನಕಲಾಪರಿಷತ್ತು 22ನೆಯ ಸಂಗೀತ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಗಾನಕಲಾ ಭೂಷಣ ಬಿರುದಿನಿಂದ ಇವರನ್ನು ಸನ್ಮಾನಿಸಿದೆ (1992). ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾತಿಲಕ (1993), ಬೆಂಗಳೂರಿನ ನಾದಜ್ಯೋತಿ ತ್ಯಾಗರಾಜಸ್ವಾಮಿ ಭಜನ ಸಭೆ ನೀಡಿದ ಕಲಾಜ್ಯೋತಿ (1999) ಬಿರುದುಗಳು ಇವರಿಗೆ ಸಂದಿವೆ. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (1994), ಕನಕ ಪುರಂದರ ಪ್ರಶಸ್ತಿ (2002–03)– ಇವು ಇವರಿಗೆ ಸಂದ ಪ್ರಮುಖ ಪ್ರಶಸ್ತಿಗಳು. **(ಎಚ್.ಆರ್.ಎಲ್.)**

**ಶ್ರೀನಿವಾಸ ಅಯ್ಯಂಗಾರ್, ಚಿಕ್ಕಮಗಳೂರು ನಾರಾಯಣ ಅಯ್ಯಂಗಾರ್:** 1901–72. ಹೆಸರಾಂತ ಗಣಿತ ಸಂಶೋಧಕ, ಬೋಧಕ ಮತ್ತು ಲೇಖಕರು. ಸಂಸ್ಕೃತ ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಪದಶಃ ಸರಳ ಅನುವಾದ ಮಾಡಿದ ಮಾರ್ಗ ಪ್ರವರ್ತಕ ಮತ್ತು ಆಧುನಿಕ ಕನ್ನಡ ವಿಜ್ಞಾನ ವಾಙ್ಮಯದ ಅಭಿವರ್ಧನೆಗೆ ಅಪಾರ ಸೇವೆ ಸಲ್ಲಿಸಿದ ಹಿರಿಚೇತನ. ಸಿಎನ್ಎಸ್ ಎಂದೇ ಖ್ಯಾತನಾಮರು. ಚಿಕ್ಕಮಗಳೂರು ಜಿಲ್ಲೆಯ ಕನ್ನೇಹಳ್ಳಿಯಲ್ಲಿ 1901 ಫೆಬ್ರವರಿ 21ರಂದು ಜನಿಸಿದರು. ಮನೆಯಲ್ಲಿ ಶಾಸ್ತ್ರೋಕ್ತ ವ್ರತಾದಿಗಳ ಆಚರಣೆ, ಶಾಲೆಯಲ್ಲಿ ಸಾಂಪ್ರದಾಯಿಕ ಶಿಕ್ಷಣ, ಜೊತೆಗೆ ಅಂದಿನ ವಿದ್ಯಾಭ್ಯಾಸ ಪದ್ಧತಿ ಅನುಸಾರ ಲೋವರ್ ಸೆಕೆಂಡರಿ ತರಗತಿಗೆಂದು ಐಚ್ಛಿಕ ವಿಷಯವಾಗಿ ಸಂಸ್ಕೃತ ಪಾಠ – ಹೀಗೆ ಇವರ ವಿದ್ಯಾಭ್ಯಾಸ ನಡೆಯಿತು. ಸಂಸ್ಕೃತ ಪಠ್ಯವಾಗಿ ಯೋಜಿತವಾಗಿದ್ದ ರಾಮಾಯಣದ ಸುಂದರಕಾಂಡದಲ್ಲಿಯ ನಾಲ್ಕು ಸರ್ಗಗಳ ಅಭ್ಯಾಸ ಇವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು.

ಇವರ ಒಲವು ಗಣಿತದ ಕಡೆಗೆ. 1916ರಲ್ಲಿ ಮೈಸೂರು ಸಂಸ್ಥಾನದ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಇಡೀ ಸಂಸ್ಥಾನಕ್ಕೆ ಮೂರನೆಯ ಸ್ಥಾನ ಗಳಿಸಿದರು. ಬೆಂಗಳೂರು ಸರ್ಕಾರಿ ಕೊಲಿಜಿಯಟ್ ಪ್ರೌಢಶಾಲೆಯಲ್ಲಿ

ಪ್ರವೇಶ ತರಗತಿ ಮತ್ತು 1917ರಲ್ಲಿ ಪ್ರವೇಶ ಪರೀಕ್ಷೆ ಮುಗಿಸಿ ಸ್ನಾತಕ ವ್ಯಾಸಂಗಕ್ಕಾಗಿ ಸೆಂಟ್ರಲ್ ಕಾಲೇಜನ್ನು ಸೇರಿದರು. ಉನ್ನತವ್ಯಾಸಂಗಕ್ಕೆ ಗಣಿತವನ್ನು ಆರಿಸಿಕೊಂಡರು. ಅಂದಿನ ಮೈಸೂರು ಸಂಸ್ಥಾನದಲ್ಲಿ ಗಣಿತ ಸ್ನಾತಕೋತ್ತರ ಅವಕಾಶವಿಲ್ಲದುದರಿಂದಲೂ ಮದರಾಸು ವಿಶ್ವವಿದ್ಯಾಲಯ ದಲ್ಲಿ ಮೈಸೂರು ವಿದ್ಯಾರ್ಥಿಗಳಿಗೆ ಸುಲಭಸ್ಥಾನ ಗಳಿಕೆಯಿಲ್ಲದ್ದರಿಂದಲೂ ದೂರದ ಕೋಲ್ಕತ ನಗರಕ್ಕೆ ಗಣಿತದ ಎಮ್.ಎಸ್ಸಿ ಪದವಿಗಾಗಿ ತೆರಳಬೇಕಾಯಿತು. ಪ್ರತಿಭಾಶಾಲಿ ವಿದ್ಯಾರ್ಥಿಯಾಗಿದ್ದ ಕಾರಣ ಮೈಸೂರು ಸಂಸ್ಥಾನ ಇವರಿಗೆ ರೂ 50 ಮಾಸಿಕ ವೇತನ ಕೊಡಮಾಡಿತು. ಆಗ ಕೋಲ್ಕತ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಆಶು ತೋಷ ಮುಖರ್ಜಿ ಎಂಬ ಮೇಧಾವಿಯ ನೇತೃತ್ವದಲ್ಲಿ ಅದೊಂದು ಉನ್ನತ ಬೌದ್ಧಿಕ ಕೇಂದ್ರವಾಗಿತ್ತು. ಆ ಸಮಯ ದಲ್ಲಿ ಅನಾರೋಗ್ಯ ಪೀಡಿತ ರಾದಾಗಲೂ ಎದೆಗುಂದದೆ ಇವರು ಕೋಲ್ಕತ ವಿಶ್ವವಿದ್ಯಾ ಲಯ ಆ ತನಕ ತನ್ನ ಇತಿ ಹಾಸದಲ್ಲೇ ಕಂಡಿರದಂಥ ಗರಿಷ್ಠ ಅಂಕ ಸಾಧನೆ ಯೊಂದಿಗೆ ಪ್ರಥಮ ದರ್ಜೆ ಗಳಿಸಿದ್ದರು.

ತರುವಾಯ ಇವರು ಅಧ್ಯಾಪಕರಾಗಿ ಮೈಸೂರಿಗೆ ಬಂದರು (1923). ಇವರು ಎಷ್ಟು ಗಣಿತ ವಿಷಯ ಕೇಂದ್ರೀಕೃತರಾಗಿದ್ದರೆಂದರೆ, ಇವರ ಸ್ಪಷ್ಟ ಮಾತುಗಾರಿಕೆ ಹಾಗೂ ವಿಷಯವನ್ನು ಮುಟ್ಟಿಸುವ ರೀತಿಯೆಲ್ಲ ಗಣಿತ ಪ್ರಮೇಯಗಳಂತೆ ಸಿದ್ಧವಾಕ್ಯಗಳೇ ಆಗಿದ್ದುವು. ನಿಷ್ಠಾವಂತ ಬೋಧನೆಯೂ ವಿದ್ಯಾರ್ಥಿಗಳ ವಿಚಾರದಲ್ಲಿದ್ದ ಪರಮಸಹಿಷ್ಣುತೆಯೂ ಇವರನ್ನೊಬ್ಬ ಆದರ್ಶ ಶಿಕ್ಷಕನನ್ನಾಗಿ ರೂಪಿಸಿದ್ದುವು. ಇದಾದ ಮರುವರ್ಷವೇ ಇವರಿಗೆ ಅಸಿಸ್ಟೆಂಟ್ ಪ್ರೊಫೆಸರಾಗಿ ಬಡ್ತಿ ದೊರಕಿತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗವೂ ಆಯಿತು. 1923ರಲ್ಲಿ ಮದುವೆಯಾಯಿತು. ಅದೇ ವರ್ಷ ಇಂಡಿಯನ್ ಆಡಿಟ್ಸ್ ಅಂಡ್ ಅಕೌಂಟ್ಸ್ ಪರೀಕ್ಷೆಯ ನಾಗರಿಕ ವಿಭಾಗದ ಪರೀಕ್ಷೆಯಲ್ಲಿ ಎರಡನೆಯ ಸ್ಥಾನ ಗಳಿಸಿದರೂ ಹುದ್ದೆ ಖಾಲಿಯಿರಲಿಲ್ಲವಾಗಿ, ಕಾಲೇಜು ಅಧ್ಯಾಪನವೇ ಗಟ್ಟಿಯಾಯಿತು. 1928ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಗಣಿತ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಿದಾಗ ಅಲ್ಲಿಯ ತರಗತಿಗಳು ಇವರ ಗಣಿತಜ್ಞಾನ ಹರಿತಗೊಳ್ಳಲು ಅದಮ್ಯ ಉತ್ಸಾಹವೂ ಕೂಡಿಬಂತು.

ಅನಂತರ ಇವರ ಸಂಶೋಧನ ಪ್ರಬಂಧ ಸಿದ್ಧವಾಯಿತು. ಪರಾಮರ್ಶೆ ಗಾಗಿ ಕೋಲ್ಕತ ವಿಶ್ವವಿದ್ಯಾಲಯಕ್ಕೆ ಅರ್ಪಿತವೂ ಆಯಿತು. ಅದನ್ನು ಮೌಲ್ಯಮಾಪನಕ್ಕೊಳಪಡಿಸಿದವರು ಎ.ಆರ್.ಫರ್ಸೈತ್, ಡಿ.ಇ.ಲಿಟ್ಲ್‌ವುಡ್ ಮತ್ತು ಇ.ಟಿ.ವ್ಹಿಟೇಕರ್ ಎಂಬ ಅಂತಾರಾಷ್ಟ್ರೀಯ ಖ್ಯಾತಿಯ ಗಣಿತ ವಿದ್ವಾಂಸರು. ಅದೊಂದು ಅತ್ಯಂತ ಮೌಲಿಕವಾದ ಸಂಶೋಧನಕಾರ್ಯ ಎಂದು ಘೋಷಿಸಿದ ತ್ರಿಸದಸ್ಯರ ಮೌಲ್ಯಮಾಪನ ಸಮಿತಿ ಅದಕ್ಕೆ ಪಿಎಚ್.ಡಿ. ಬದಲು ಡಿ.ಎಸ್ಸಿ. (ಡಾಕ್ಟರ್ ಆಫ್ ಸೈನ್ಸ್) ಎಂಬ ಪದವಿ ಪ್ರದಾನಿಸಲು ಶಿಫಾರಸು ಮಾಡಿತು. ಅಲ್ಲಿಂದ ಮುಂದಕ್ಕೆ ಇವರು ಗಣಿತಪ್ರಿಯ ವಿದ್ಯಾರ್ಥಿಗಳ, ಮೇಧಾವಿಗಳ ಒಂದು ಗುಂಪನ್ನೇ ಹುಟ್ಟುಹಾಕಿ ಸದಾ ಚರ್ಚೆ, ನಿಬಂಧ ಮಂಡನೆ, ಬರೆವಣಿಗೆ, ಸಂಶೋಧನೆ ಎಂದು ತೊಡಗಿದರು. ಇವರು ಪ್ರಧಾನವಾಗಿ ಮಾಡಿದ ಗುರುತರ ಕೆಲಸವೆಂದರೆ ಅಲ್ಲಿ ಇಲ್ಲಿ ಹರಿದು ಹಂಚಿಹೋಗಿದ್ದ ಹಲವಾರು ಗಣಿತ ವಿಷಯ ಸಾಮಗ್ರಿಗಳನ್ನು ಶೋಧಿಸಿದ್ದು ಹಾಗೂ ನಶಿಸಿಹೋಗಿದ್ದ ಹಲವಾರು ಗಣಿತ ವೈಶಿಷ್ಟ್ಯಗಳನ್ನು ಹೆಕ್ಕಿ ಒಂದು ಶಾಸ್ತ್ರೀಯ ಚೌಕಟ್ಟಿನಲ್ಲಿ ಬಂಧಿಸಲು ಪ್ರಯತ್ನಿಸಿದ್ದು. ಇದರ ಫಲವಾಗಿ ಮೂಡಿಬಂದದ್ದೇ ಹಸ್ತಪ್ರತಿಯಲ್ಲಿ 'ಗಣಿತಶಾಸ್ತ್ರದ ಚರಿತ್ರೆ' (1945). ಇದನ್ನು 1955ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿತು. ಈ ಗ್ರಂಥದ ಪೂರ್ವಾರ್ಧ ಗಣಿತದ ಸಮಗ್ರ ಇತಿಹಾಸದ ಸಂಕ್ಷಿಪ್ತವರದಿಯನ್ನೂ ಉತ್ತರಾರ್ಧ ಭಾರತಕ್ಕೆ ಸಂಬಂಧಿಸಿದಂತೆ ಇದೇ ಇತಿಹಾಸದ ವರದಿಯನ್ನೂ ಒಳಗೊಂಡಿದೆ. ಇದನ್ನೆ ಇಂಗ್ಲಿಷ್‌ನಲ್ಲಿ ಏನ್ಶಿಯೆಂಟ್ ಇಂಡಿಯನ್ ಮ್ಯಾಥೆಮೆಟಿಕ್ಸ್ (1967) ಎಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ಇದರ ತರುವಾಯ ಇವರು ಖಗೋಳಶಾಸ್ತ್ರವನ್ನು ಕುರಿತು ಉಪನ್ಯಾಸಗಳನ್ನು ನೀಡಿ ಅದನ್ನು ಮುಂದೆ ಪುಸ್ತಕರೂಪದಲ್ಲಿ ಹೊರತಂದರು. ಮೈಸೂರು ವಿಶ್ವವಿದ್ಯಾನಿಲಯ ಹೊರತಂದ ಪ್ರಚಾರೋಪನ್ಯಾಸ ಮಾಲೆಯ ಮೊದಲ ಪುಸ್ತಕ 'ಖಗೋಳಶಾಸ್ತ್ರ ಪ್ರವೇಶ'. ಆಧುನಿಕ ವಿಜ್ಞಾನದ ಪರಿಕಲ್ಪನೆಗಳನ್ನಾಗಲೀ ಶಾಸ್ತ್ರಜ್ಞಾನವನ್ನಾಗಲೀ ಗಣಿತದಂಥ ಶಾಸ್ತ್ರೀಯ ವಿಷಯಗಳನ್ನಾಗಲೀ ಕನ್ನಡದಲ್ಲಿ ಮಂಡಿಸುವುದು ಸಾಧ್ಯವೇ ಇಲ್ಲ ಎಂದು ವಿದ್ವಾಂಸರು ತಿಳಿಯುತ್ತಿದ್ದ ಕಾಲಕ್ಕೆ ಇವರ ಸಾಧನೆ ಮಹತ್ತ್ವದ್ದಾಗಿತ್ತು.

ಭಾರತೀಯ ಗಣಿತಕ್ಕೆ ವಿಶೇಷವಾಗಿ ಖಗೋಳವಿಜ್ಞಾನಕ್ಕೆ ಇವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ದ್ವಾರಕಾ ಶಂಕರಾಚಾರ್ಯರು ಸ್ಥಾಪಿಸಿದ ಅಖಿಲ ಕರ್ನಾಟಕ ಜ್ಯೋತಿಷಿಕ ಸಂಘದ ತೃತೀಯ ಸಮ್ಮೇಳನದ ಅಧ್ಯಕ್ಷಸ್ಥಾನ ಲಭಿಸಿತು (1947); ಇದೇ ಸಂದರ್ಭದಲ್ಲಿ ದ್ವಾರಕ ಶಂಕರಾಚಾರ್ಯರು ಇವರಿಗೆ 'ಗಣಿತ ಕಳಾನಿಧಿ' ಬಿರುದನ್ನೂ ಪ್ರದಾನ ಮಾಡಿದರು. ಭಾರತದ ಗಣಿತ ವಿದ್ವಾಂಸರಿಗೆ ಪರಮ ಪ್ರತಿಷ್ಠಿತ ಎಂದು ಕಂಡಿರುವ ಭಾರತೀಯ ಗಣಿತಸಂಘದ ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಆಂಧ್ರದ ವಾಲ್ಟೇರಿನಲ್ಲಿ ನೀಡಲಾಯಿತು (1962). ಕನ್ನಡ ಸಾಹಿತ್ಯ ಪರಿಷತ್ತಿನ ಚಿನ್ನದ ಹಬ್ಬದ ಸಂದರ್ಭದಲ್ಲಿ (1970) ಇವರ ವಿಜ್ಞಾನವಾಙ್ಮಯದ ಕೊಡುಗೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಕನ್ನಡ ವಾಲ್ಮೀಕಿ ರಾಮಾಯಣದ ಕರ್ತೃವಾದ ಇವರನ್ನು ಕನ್ನಡದ ಜನತೆ ಕನ್ನಡ ವಾಲ್ಮೀಕಿ ಎಂದೇ ಗುರುತಿಸಿದೆ. ಮೂಲ ವಾಲ್ಮೀಕಿ ರಾಮಾಯಣದ ಪದಶಃ ಕನ್ನಡ ಅನುವಾದವಿದು. ಸು. 32 ವರ್ಷ ಕಾಲ ಇವರು ಅಧ್ಯಾಪನ ವೃತ್ತಿಯಲ್ಲಿ ಕ್ರಿಯಾಶೀಲವಾಗಿ ಸೇವೆಸಲ್ಲಿಸಿದ್ದಾರೆ. 1938ರಲ್ಲಿ ಗಣಿತ ಪ್ರಾಧ್ಯಾಪಕರಾಗಿ, 1955ರಲ್ಲಿ ಸೆಂಟ್ರಲ್ ಕಾಲೇಜಿನ ಪ್ರಾಚಾರ್ಯರಾಗಿ, 1955ರಿಂದ 58ರ ತನಕ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ, 1963ರ ತನಕ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಗಣಿತ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾದರು. 1963–65ರ ಎರಡು ವರ್ಷ ಅಲ್ಲಿಯೇ ಯುಜಿಸಿ ಪ್ರಾಧ್ಯಾಪಕರಾಗಿದ್ದರು. ಮತ್ತೆ 1966–67ರ ಎರಡು ವರ್ಷಗಳ ಕಾಲ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪಠ್ಯಪುಸ್ತಕ ಸಮಿತಿಯ ಗಣಿತ ವಿಭಾಗದ ಸದಸ್ಯರಾಗಿದ್ದರು (1967–72). ಆಧುನಿಕ ಬೀಜಗಣಿತದ ಮೇಲೆ ಒಂದು ಮೌಲಿಕ ಆಕರಗ್ರಂಥ ರಚಿಸಿಕೊಟ್ಟರು.

ಆಧುನಿಕ ಕನ್ನಡ ವಿಜ್ಞಾನ ವಾಙ್ಮಯ ನಿರ್ಮಾಪಕರ ಸಾಲಿನಲ್ಲಿ ಇವರದು ಹಿರಿಹೆಸರು. ವಿಷಯ ಯಾವುದೇ ಇರಲಿ, ಪರಿಕಲ್ಪನೆ ಎಷ್ಟೇ ಸಂಕೀರ್ಣವಾಗಿರಲಿ, ಬಲ್ಲವ ಅದನ್ನು ಇತರರಿಗೆ ತಿಳಿಯ ಹೇಳುವಾಗ

ಭಾಷಾಪ್ರತಿಬಂಧನ ಖಂಡಿತವಾಗಿಯೂ ಎದುರಾಗುವುದಿಲ್ಲ, ಎದುರಾಗಬಾರದು ಎಂಬುದು ಇವರ ದೃಢನಂಬಿಕೆ. ಇದರ ಪ್ರಾಯೋಗಿಕ ನಿದರ್ಶನ ಇವರು ಕನ್ನಡದಲ್ಲಿ ಬರೆದಿರುವ ಹಲವಾರು ಉತ್ತಮ ಗ್ರಂಥಗಳು. 1970ರಲ್ಲಿ ಇವರು ಬರೆದು ಓದಿದ ಕನ್ನಡ ಪಾರಿಭಾಷಿಕ ಶಬ್ದಗಳ ಸಮಸ್ಯೆ ಎಂಬ ಪ್ರಬಂಧದಲ್ಲಿ "ನಾವು ಗಮನಿಸಬೇಕಾದುದು ಪಾರಿಭಾಷಿಕ ಶಬ್ದಗಳ ಸಮಸ್ಯೆಯನ್ನಲ್ಲ, ಭಾಷೆಯನ್ನು ಸರ್ವತೋಮುಖವಾಗಿ ಬೆಳೆಸುವ ಸಮಸ್ಯೆ ಎಂದು ನನ್ನ ಅಭಿಪ್ರಾಯ" ಎಂದು ಹೇಳಿದ್ದಾರೆ. ಭಾಷೆ ಬೆಳೆದರೆ ಈ ಕಾಲ್ಪನಿಕ ಸಮಸ್ಯೆ (ಪಾರಿಭಾಷಿಕ ಶಬ್ದಗಳ ಅಭಾವ) ತಾನಾಗಿಯೇ ಪರಿಹಾರವಾಗುವುದೆಂಬುದೂ ಇವರ ಪ್ರತ್ಯಕ್ಷಾನುಭವ.

ಕನ್ನಡ ವಿಶ್ವಕೋಶ ಗಣಿತ ಉಪಸಮಿತಿಯ ಅಧ್ಯಕ್ಷರಾಗಿದ್ದ ಇವರು ಆಲೇಖ್ಯವನ್ನು ಸಿದ್ಧಪಡಿಸುವಲ್ಲಿ ಮತ್ತು ಅದನ್ನು ಕಾರ್ಯಗತಗೊಳಿಸುವಲ್ಲಿ ಅಮೂಲ್ಯ ದಿಗ್ದರ್ಶನ ನೀಡಿದ್ದಾರೆ. ಇವರು ವಿಶ್ವಕೋಶಕ್ಕಾಗಿ ಸ್ವತಃ ಬರೆದಿರುವ ಹಾಗೂ ಅನುವಾದಿಸಿರುವ ಲೇಖನಗಳೂ ಸಂಪಾದಿಸಿ ಪರಿಷ್ಕರಿಸಿರುವ ಇತರರ ಲೇಖನಗಳೂ ವಿಶೇಷ ಕೊಡುಗೆಗಳು. *

**ಶ್ರೀನಿವಾಸಪುರ:** ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಪೂರ್ವ ಮತ್ತು ಉತ್ತರದಲ್ಲಿ ಆಂಧ್ರಪ್ರದೇಶ, ಪಶ್ಚಿಮಕ್ಕೆ ಚಿಂತಾಮಣಿ, ನೈಋತ್ಯ ಮತ್ತು ದಕ್ಷಿಣಕ್ಕೆ ಕೋಲಾರ, ಆಗ್ನೇಯಕ್ಕೆ ಮುಳಬಾಗಲು ತಾಲ್ಲೂಕುಗಳು ಈ ತಾಲ್ಲೂಕನ್ನು ಸುತ್ತುವರಿದಿವೆ. ಯಲದೂರು, ನೆಲವಂಕಿ, ರೋಣೂರು, ರಾಯಲಪಾಡು ಮತ್ತು ಶ್ರೀನಿವಾಸಪುರ ಐದು ಹೋಬಳಿಗಳಿದ್ದು 347 ಗ್ರಾಮಗಳಿವೆ. ವಿಸ್ತೀರ್ಣ 855.6 ಚ.ಕಿಮೀ. ಜನಸಂಖ್ಯೆ 1,84,721.

ತಾಲ್ಲೂಕಿನ ಬಹುಭಾಗ ಬಯಲು ಪ್ರದೇಶವಾಗಿದ್ದು ಕೆಲವೆಡೆ ಚಪ್ಪಟೆ ಆಕಾರದ ಲ್ಯಾಟರೈಟ್ ಶಿಲೆಗಳಿಂದ ಕೂಡಿದ ಬೆಟ್ಟಗಳು ಕಂಡುಬರುತ್ತವೆ. ಸಣ್ಣಕಲ್ಲು ಮಿಶ್ರಿತ ಮಣ್ಣು ಮತ್ತು ಕೆಂಪು ಹಾಗೂ ಜಂಬುಮಣ್ಣು ಪ್ರದೇಶದಿಂದ ಕೂಡಿದ ಈ ತಾಲ್ಲೂಕಿನ ಮುಖ್ಯ ಕಸಬು ವ್ಯವಸಾಯ. ಸಣ್ಣಕಲ್ಲು ಮಿಶ್ರಿತ ಕೆಂಪುಮಣ್ಣುಳ್ಳ ಪ್ರದೇಶಗಳಲ್ಲಿ ನೆಲಗಡಲೆ ಹೆಚ್ಚಾಗಿ ಬೆಳೆಯುತ್ತಾರೆ. ಮಾವು, ಹುಣಿಸೆ ಪ್ರಮುಖ ಆರ್ಥಿಕ ಬೆಳೆಗಳು. ಸಜ್ಜೆ, ರಾಗಿ, ಬತ್ತ, ದ್ವಿದಳಧಾನ್ಯಗಳು, ಮೆಕ್ಕೆಜೋಳ– ಇವು ಈ ತಾಲ್ಲೂಕಿನಲ್ಲಿ ಕಂಡುಬರುವ ಇತರ ಬೆಳೆಗಳು. ನದಿ, ತೊರೆ, ನಾಲೆ ಯಾವುದೂ ಇಲ್ಲದ ಈ ತಾಲ್ಲೂಕಿನ ವ್ಯವಸಾಯ ಹೆಚ್ಚಾಗಿ ಬಾವಿ, ಕೆರೆಗಳ ಮತ್ತು ಮಳೆಯ ಆಶ್ರಯದಿಂದ ನಡೆಯುತ್ತದೆ. ತಾಲ್ಲೂಕಿನ ವಾರ್ಷಿಕ ಮಳೆ 660.13 ಮಿಮೀ.

ಶ್ರೀನಿವಾಸಪುರ ಮಾರ್ಗ ಹಾದು ಹೋಗುವ ಮುಳಬಾಗಲು–ಗೌರಿಬಿದನೂರು ರಸ್ತೆ, ಶ್ರೀನಿವಾಸಪುರ–ಪುಂಗನೂರು, ಕೋಲಾರ–ಶ್ರೀನಿವಾಸಪುರ, ಚಿಂತಾಮಣಿ–ಶ್ರೀನಿವಾಸಪುರ–ಇವು ತಾಲ್ಲೂಕಿನ ಪ್ರಮುಖ ಸಾರಿಗೆ ರಸ್ತೆಗಳು. ಬೆಂಗಳೂರು–ಕಡಪ ಪ್ರಾಂತೀಯ ಹೆದ್ದಾರಿ ಈ ತಾಲ್ಲೂಕಿನ ಮೂಲಕ ಹಾದುಹೋಗುತ್ತದೆ. ಶ್ರೀನಿವಾಸಪುರದಲ್ಲಿ ರೈಲು ನಿಲ್ದಾಣವಿದ್ದು ಕೋಲಾರ–ಚಿಕ್ಕಬಳ್ಳಾಪುರ ರೈಲು ಮಾರ್ಗ ಶ್ರೀನಿವಾಸಪುರ ಮುಖಾಂತರ ಹಾದುಹೋಗುವುದು.

ಈ ತಾಲ್ಲೂಕಿನಲ್ಲಿ 148 ಪ್ರಾಥಮಿಕ ಶಾಲೆಗಳು, 35 ಮಾಧ್ಯಮಿಕ ಶಾಲೆಗಳು ಹಾಗೂ 7 ಪ್ರೌಢಶಾಲೆಗಳೂ 3 ಆರೋಗ್ಯ ಕೇಂದ್ರಗಳೂ 5 ಸ್ಥಳೀಯ ಔಷಧಾಲಯಗಳೂ ಒಂದು ಹೆರಿಗೆ ಮತ್ತು ಶಿಶು ಕಲ್ಯಾಣ ಕೇಂದ್ರ ಇದ್ದುವು. ಅಂಚೆ, ದೂರವಾಣಿ, ವಿದ್ಯುತ್ ಮುಂತಾದ ಸೌಲಭ್ಯಗಳಿವೆ.

ಈ ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಶ್ರೀನಿವಾಸಪುರದ ದಕ್ಷಿಣಕ್ಕೆ 5 ಕಿಮೀ ದೂರದಲ್ಲಿರುವ ಹೆಬ್ಬೆಟ್ಟ ಒಂದು. ಇಲ್ಲಿ ನೊಳಂಬ ರಾಜರ ಮತ್ತು ಗಂಗರ ಕಾಲದ ಶಿಲಾಶಾಸನಗಳು ಇವೆ. ಸರ್ವತೋಭದ್ರ ಶ್ಲೋಕ ಕೆತ್ತಿರುವ ಒಂದು ಯಂತ್ರಶಿಲೆ ಇಲ್ಲಿದ್ದು ಇದನ್ನು ತೊಳೆದ ನೀರು ಪಶುಗಳಿಗೆ ಔಷಧವಾಗಿ ರೋಗಗಳನ್ನು ಗುಣಪಡಿಸುತ್ತದೆಂಬ ನಂಬಿಕೆಯಿದೆ. ಶ್ರೀನಿವಾಸಪುರದ ಈಶಾನ್ಯಕ್ಕೆ 22 ಕಿಮೀ ದೂರದಲ್ಲಿರುವ ಕೂಲಗುರ್ಕಿಯಲ್ಲಿ ನಡೆಯುವ ಗಂಗಮ್ಮ ದೇವರ ವಾರ್ಷಿಕ ರಥೋತ್ಸವ ಪ್ರಸಿದ್ಧವಾದದ್ದು. ಎಲದೂರು ಮತ್ತು ರೋಣೂರುಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಹೆಚ್ಚು ಜನರು ಸೇರುತ್ತಾರೆ. (ಎಸ್.ಎನ್.ಜಿ.)

ಶ್ರೀನಿವಾಸಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಕೋಲಾರದ ಈಶಾನ್ಯಕ್ಕೆ 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 22,959. ಪಾಪನಪಲ್ಲಿ ಈ ಊರಿಗಿದ್ದ ಹಿಂದಿನ ಹೆಸರು. ದಿವಾನ್ ಪೂರ್ಣಯ್ಯ ತಿರುಪತಿಯಿಂದ ಹಿಂದಿರುಗುತ್ತ ಈ ಊರಿಗೆ ಬಂದು, ತನ್ನ ಮಗ ಶ್ರೀನಿವಾಸಮೂರ್ತಿಯ ಹೆಸರಿನಲ್ಲಿ ಇದಕ್ಕೆ ಶ್ರೀನಿವಾಸಪುರವೆಂದು ನಾಮಕರಣ ಮಾಡಿದ. ಈ ಊರಿನ ಪೂರ್ವಕ್ಕೆ ಸು. 3 ಕಿಮೀ ದೂರದಲ್ಲಿ ಹರಳುಕೋಟೆ ಎಂಬ ಪುರಾತನ ಪಟ್ಟಣವಿತ್ತೆಂದು ಪ್ರತೀತಿ. ಬಾಣರಸ, ವಿಕ್ರಮಾದಿತ್ಯ ಮತ್ತು ಪಲ್ಲವ – ಇವರಿಗೆ ಸಂಬಂಧಿಸಿದ ಶಾಸನಗಳು ಈ ಊರಿನಲ್ಲಿ ದೊರೆತಿವೆ. (ಎಂ.ಎನ್.ಕೆ.)

**ಶ್ರೀನಿವಾಸಮೂರ್ತಿ, ಎಂ.ಆರ್.:** 1892–1953. ಆಧುನಿಕ ಕನ್ನಡ ವನ್ನು ಕಟ್ಟಿ ಬೆಳೆಸಿದ ಹಿರಿಯ ವಿದ್ವಾಂಸರು. ಮೈಸೂರಿನಲ್ಲಿ 1892 ಆಗಸ್ಟ್ 28ರಂದು ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿಜ್ಞಾನವನ್ನು ಓದಿ 1915ರಲ್ಲಿ ಬಿ.ಎ. ಪದವಿಯನ್ನು, ಅನಂತರ ಬಿ.ಟಿ.ಪದವಿಯನ್ನು ಗಳಿಸಿಕೊಂಡು ಶಿಕ್ಷಣ ಇಲಾಖೆಯನ್ನು ಪ್ರವೇಶಿಸಿದ ಇವರು ಹಲವು ಬಗೆಯ ಜವಾಬ್ದಾರಿ ಹುದ್ದೆಗಳನ್ನು ನಿರ್ವಹಿಸಿದರು. ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾಗಿ, ಮುಖ್ಯೋಪಾಧ್ಯಾಯರಾಗಿ, ರೇಂಜ್ ಇನ್ಸ್‌ಪೆಕ್ಟರಾಗಿ ಸೇವೆ ಸಲ್ಲಿಸಿದ ಇವರು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟುವಿನ ಸಹಸಂಪಾದಕರಾಗಿ ಮತ್ತು ಪ್ರಧಾನ ಸಂಪಾದಕರಾಗಿ (1943–46) ಕೆಲಸ ಮಾಡಿದರು. ಜಿಲ್ಲಾ ವಿದ್ಯಾಧಿಕಾರಿಗಳಾಗಿಯೂ ಕಾರ್ಯ ನಿರ್ವಹಿಸಿದ ಇವರು 1947ರಲ್ಲಿ ಸರ್ಕಾರಿ ಹುದ್ದೆಯಿಂದ ನಿವೃತ್ತರಾದರು. ಉತ್ತಮ ಅಧ್ಯಾಪಕ, ಸಮರ್ಥ ಅಧಿಕಾರಿ ಎಂದು ಹೆಸರು ಗಳಿಸಿದ್ದ ಇವರು ಒಳ್ಳೆಯ ವಾಗ್ಮಿಯೆಂಬ ಕೀರ್ತಿಗೂ ಭಾಜನರಾಗಿದ್ದರು.

ಇವರ ಮನಸ್ಸನ್ನು ಸೆಳೆದು ಹೃದಯವನ್ನು ತುಂಬಿದ್ದು ವಿಜ್ಞಾನಕ್ಕಿಂತಲೂ ಹೆಚ್ಚಾಗಿ ಸಾಹಿತ್ಯ. ಸಾಹಿತ್ಯವನ್ನು ಕುರಿತು ಇವರಿಗೆ ಆನುವಂಶಿಕವಾಗಿ ಇಳಿದುಬಂದ ಆಜನ್ಮಸಿದ್ಧ ಅಭಿರುಚಿ ಇದ್ದಿತೆಂದೇ ಹೇಳಬೇಕು. ಹಳಗನ್ನಡ–ಹೊಸಗನ್ನಡ ಕಾವ್ಯಗಳ ಅಧ್ಯಯನವನ್ನು ತಮ್ಮ ಒಂದು ಉತ್ಸಾಹದ ಹವ್ಯಾಸವನ್ನಾಗಿ ಇವರು ಬಗೆದಿದ್ದರು; ಬಳಸಿಕೊಳ್ಳುತ್ತಿದ್ದರು. ಅದರಲ್ಲೂ ವೀರಶೈವ ವಾಙ್ಮಯದ ಮೇಲೆ ಇವರಿಗೆ ವಿಶೇಷ ಮಮತೆ. ಹರಿಹರನ ಗಿರಿಜಾಕಲ್ಯಾಣ, ಷಡಕ್ಷರಿಯ ರಾಜಶೇಖರ ವಿಲಾಸಗಳಿಂದ ಹಲವಾರು ಪದ್ಯಗಳನ್ನು ಕುಳಿತಲ್ಲಿ ನಿಂತಲ್ಲಿ ತಪ್ಪಿಲ್ಲದೆ ಉದ್ಧರಿಸಬಲ್ಲ ಅದ್ಭುತ ನೆನಪು ಇವರಿಗಿತ್ತು.

ಸಂಸ್ಕೃತದ ಜೊತೆಗೆ ಹಳಗನ್ನಡ ಮತ್ತು ಹೊಸಗನ್ನಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದ್ದ ಇವರು ಸೃಷ್ಟಿಸಿರುವ ಸಾಹಿತ್ಯ ವೈವಿಧ್ಯಮಯವಾದದ್ದು. ಸ್ಕೌಟು ಬಾಲಕರ ಅಭಿನಯಕ್ಕೆಂದು ಇವರು ರಚಿಸಿದ ಕಂಠೀರವ ವಿಜಯ ಎಂಬುದು ಒಂದು ಕಿರುನಾಟಕ. ಕಂಠೀರವ ನರಸರಾಜರು ತಿರುಚ್ಚಿರಾಪಳ್ಳಿಯ ಜಟ್ಟಿಯೊಬ್ಬನನ್ನು ಸೋಲಿಸಿದ್ದು ಈ ನಾಟಕದ ವಸ್ತು. ಈ ನಾಟಕ ನಾಲ್ವಡಿ ಕೃಷ್ಣರಾಜ ಒಡೆಯರ ಮೆಚ್ಚಿಗೆಗೂ

ಪಾತ್ರವಾಯಿತು. ಧರ್ಮದುರಂತ, ನಾಗರಿಕ ಇವು ಇವರ ಇತರ ನಾಟಕಗಳು. ಸಾವಿತ್ರಿ, ಮಹಾತ್ಯಾಗ (ಇದು ಚಲನಚಿತ್ರವೂ ಆಗಿದೆ)– ಇವು ಎರಡು ಕಾದಂಬರಿಗಳು. ರಂಗಣ್ಣನ ಕನಸಿನ ದಿನಗಳು–ಇವರ ವಿಶಿಷ್ಟ ಬರೆವಣಿಗೆಯ ಒಂದು ಕೃತಿ. ಆತ್ಮಕಥೆ, ಪ್ರಬಂಧ, ಕಾದಂಬರಿಯ ಕಲ್ಪನೆ– ಎಲ್ಲವೂ ಮಿಳಿತಗೊಂಡಿರುವ ಪರಿಪಕ್ವ ರಚನೆ. ರಂಗಣ್ಣನ ಕನಸಿನ ದಿನಗಳು ಪುಸ್ತಕ ಆಧುನಿಕ ಕನ್ನಡ ಸಾಹಿತ್ಯದ ಜೀವಂತ ಗ್ರಂಥಗಳಲ್ಲಿ ಒಂದು ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಅಯಸ್ಕಾಂತತೆ ಮತ್ತು ವಿದ್ಯುಚ್ಛಕ್ತಿ, ಉಪಾಧ್ಯಾಯರ ಆರೋಗ್ಯ ಶಾಸ್ತ್ರ, ಸ್ಕೌಟುಗಳ ಕನ್ನಡ ಕೈಪಿಡಿ– ಈ ಕೃತಿಗಳು ವಿವಿಧ ಕ್ಷೇತ್ರಗಳಲ್ಲಿ ಇವರಿಗಿದ್ದ ಪರಿಶ್ರಮಕ್ಕೆ ಸಾಕ್ಷಿಯಾಗಿವೆ. ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಪ್ರಭುಲಿಂಗ ಲೀಲೆಯ ಸಂಗ್ರಹವನ್ನು ಸಂಪಾದಿಸಿಕೊಟ್ಟಿದ್ದಾರೆ. ವಚನಧರ್ಮಸಾರ ಎಂಬ ಪುಸ್ತಕವನ್ನು ಬರೆದಿದ್ದಾರೆ. ಭಕ್ತಿಭಂಡಾರಿ ಬಸವಣ್ಣನವರು ಎಂಬುದು ಇವರು ರಚಿಸಿರುವ ಒಂದು ಸಂಶೋಧನ ಗ್ರಂಥ; ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟವಾಗಿವೆ. ಬಸವಣ್ಣನವರನ್ನು ಕುರಿತ ಒಂದು ಪುಸ್ತಕ ವಿಮರ್ಶೆಗೆಂದು ಇವರಿಗೆ ಬಂದಾಗ, ತಮ್ಮ ಶ್ರದ್ಧಾಸಕ್ತಿಗೆ ಅದೊಂದು ಸವಾಲೆಂದು ಭಾವಿಸಿದ ಇವರು ಸೊಲ್ಲಾಪುರದವರೆಗೂ ಹೋಗಿ, ವಚನಗಳ ಮತ್ತು ವಚನಕಾರರ ಬಗ್ಗೆ ಹೆಚ್ಚಿನ ಸಂಶೋಧನೆಯನ್ನು ನಡೆಸಿ, ವಿಪುಲ ಸಾಮಗ್ರಿಯನ್ನು ಸಂಗ್ರಹಿಸಿದರು. ಆ ಸಾಮಗ್ರಿಯನ್ನು ಬಳಸಿಕೊಂಡು ಇವರು ಬರೆದ ಭಕ್ತಿಭಂಡಾರಿ ಬಸವಣ್ಣನವರು ಕನ್ನಡದಲ್ಲಿ ಒಂದು ಉತ್ಕೃಷ್ಟ ಗ್ರಂಥವಾಗಿದೆ. ವೀರಶೈವಧರ್ಮ ಮತ್ತು ಸಾಹಿತ್ಯದಲ್ಲಿ ತಮಗಿದ್ದ ಆಳವಾದ ಪರಿಚಯವನ್ನು ಈ ಪುಸ್ತಕದಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಕ್ಲಿಷ್ಟವಾದ ವಿಷಯಗಳನ್ನು ಸರಳವಾಗಿ ಆಕರ್ಷಕವಾಗಿ ಹೇಗೆ ಹೇಳಬಹುದು ಎಂಬುದಕ್ಕೂ ಈ ಪುಸ್ತಕ ಉದಾಹರಣೆಯಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದ ಹಿರಿಯರಲ್ಲಿ ಒಬ್ಬರಾದ ಇವರು ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಅಧ್ಯಕ್ಷರಾಗಿ (1950–53) ಸೇವೆ ಸಲ್ಲಿಸಿದರಲ್ಲದೆ, ಕನ್ನಡ ನುಡಿ ಮತ್ತು ಪರಿಷತ್ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದರು.

ಇವರು ಸಲ್ಲಿಸಿದ ವಿವಿಧ ಬಗೆಯ ನಾಡುನುಡಿಗಳ ಸೇವೆಗೆ ಮನ್ನಣೆ ಎಂಬಂತೆ 1940ರಲ್ಲಿ ಬಾದಾಮಿಯ ಶಿವಯೋಗಮಂದಿರ ಇವರಿಗೆ ವಚನವಾಙ್ಮಯವಿಶಾರದ ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಿತು. 1950ರಲ್ಲಿ ಸೊಲ್ಲಾಪುರದಲ್ಲಿ ನಡೆದ 33ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಕನ್ನಡ ಜನತೆ ಗೌರವಿಸಿತು. ಇವರು 1953 ಸೆಪ್ಟೆಂಬರ್ 16ರಂದು ನಿಧನರಾದರು.

ಶ್ರೀನಿವಾಸಮೂರ್ತಿಯವರು ವಿವಿಧ ಪತ್ರಿಕೆಗಳಿಗಾಗಿ ಬರೆದಿದ್ದ ಇಪ್ಪತ್ತುನಾಲ್ಕು ಸಂಶೋಧನ ಲೇಖನಗಳನ್ನು, ವಿಮರ್ಶೆ, ಮುನ್ನುಡಿ ಬರೆಹಗಳನ್ನು ಮತ್ತು ಕೆಲವು ಅಪ್ರಕಟಿತ ಲೇಖನಗಳನ್ನು ಸಂಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಾಹಿತ್ಯಾಲೋಕ ಎಂಬ ಸಂಪುಟವನ್ನು ಪ್ರಕಟಿಸಿದೆ (1978). (ಎಸ್.ವಿ.ಆರ್.)

**ಶ್ರೀನಿವಾಸಮೂರ್ತಿ, ಎಚ್.ಜಿ.:** 1918– . ಅಂತಾರಾಷ್ಟ್ರೀಯ ಖ್ಯಾತಿಗಳಿಸಿರುವ ಭಾರತದ ಆಕಾಶವಿಜ್ಞಾನಿ. ಎಚ್.ಜಿ.ಎಸ್.ಮೂರ್ತಿ ಎಂದು ಪ್ರಖ್ಯಾತರು. ಹೊಳೆನರಸೀಪುರ ಗೋವಿಂದ ಶ್ರೀನಿವಾಸಮೂರ್ತಿ ಇವರ ಪೂರ್ಣ ಹೆಸರು. ಬೆಂಗಳೂರಿನಲ್ಲಿ 1918 ಅಕ್ಟೋಬರ್ 23ರಂದು ಜನಿಸಿದ ಮೂರ್ತಿಯವರು ಇಂಟರ್‌ಮೀಡಿಯೆಟ್ ತನಕ ಮೈಸೂರಿನಲ್ಲಿ ಓದಿ, ಬಳಿಕ ಈಗ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್ ಎಂಬ ಹೆಸರಿರುವ ಕಾಲೇಜನ್ನು ಸೇರಿ ಬಿ.ಇ. (ಮೆಕ್ಯಾನಿಕಲ್ ಎಂಜಿನಿಯರಿಂಗ್) ಪದವೀಧರರಾದರು (1940). ಮುಂಬಯಿಯ ಭಾಭಾ ಪರಮಾಣು ಕೇಂದ್ರದಲ್ಲಿ ಆಕಾಶ ಯೋಜನೆಯ ವಿಭಾಗದಲ್ಲಿ ತಪಾಸಣೆ ನಿರ್ದೇಶಕರಾಗಿ (ಟೆಸ್ಟ್ ಡೈರೆಕ್ಟರ್) ವಿಕ್ರಮ್ ಸಾರಾಭಾಯಿಯವರ ತಂಡವನ್ನು ಸೇರುವ (1963) ಮೊದಲು ಹಿಂದುಸ್ಥಾನ್ ಏರೋನಾಟಿಕ್ಸ್ ಮತ್ತು ಆರ್ಡ್ನೆನ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಿದ್ದರು. ಅದೇ ವೇಳೆ ಇವರು ಯುದ್ಧಾಸ್ತ್ರಗಳು ಹಾಗೂ ರಾಕೆಟ್‌ಗಳು ಇವನ್ನು ಕುರಿತ ಪ್ರೌಢ ತರಬೇತಿಯನ್ನು ಸ್ವಿಟ್ಜರ್ಲೆಂಡಿನಲ್ಲಿ ಪಡೆದರು (1950).

ಇವರು 1963ರಿಂದ 72ರ ವರೆಗೆ ಕೇರಳದಲ್ಲಿರುವ ತುಂಬಾ ಸಮಭಾಜಕೀಯ ರಾಕೆಟ್ ಉಡಾವಣಾ ಕೇಂದ್ರದ (ತುಂಬಾ ಈಕ್ವೆಟೋರಿಯಲ್ ರಾಕೆಟ್ ಲಾಂಚಿಂಗ್ ಸೆಂಟರ್) ನಿರ್ದೇಶಕರಾಗಿದ್ದರು. ಅದೇ ಅವಧಿಯಲ್ಲಿ ತುಂಬಾದಲ್ಲಿನ ಆಕಾಶವಿಜ್ಞಾನ ಮತ್ತು ತಂತ್ರ ವಿದ್ಯಾಕೇಂದ್ರದ (ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿ ಸೆಂಟರ್) ಸಹ ನಿರ್ದೇಶಕರಾಗಿಯೂ ಇದ್ದರು. ವಿಶ್ವಸಂಸ್ಥೆ ಪ್ರವರ್ತಿಸಿದ ಪ್ರಥಮ ಅಂತಾರಾಷ್ಟ್ರೀಯ ರಾಕೆಟ್ ಉಡಾವಣಾ ಸೌಕರ್ಯವನ್ನು (ರಾಕೆಟ್ ಲಾಂಚಿಂಗ್ ಫೆಸಿಲಿಟಿ) ತುಂಬಾದಲ್ಲಿ ಸ್ಥಾಪಿಸಿದ ಹಿರಿಮೆ ಇವರದು. ಅಮೆರಿಕ ಸಂಯುಕ್ತ ಸಂಸ್ಥಾನ, ಸೋವಿಯತ್ ಒಕ್ಕೂಟ, ಫ್ರಾನ್ಸ್, ಬ್ರಿಟನ್, ಜಪಾನ್ ಹಾಗೂ ಪಶ್ಚಿಮ ಜರ್ಮನಿ ಈ ರಾಷ್ಟ್ರಗಳೊಡನೆ ವೈಜ್ಞಾನಿಕ ಪ್ರಯೋಗ ಕಾರ್ಯಕ್ರಮಗಳನ್ನು ಏರ್ಪಡಿಸುವ ಹೊಣೆ ಇವರದಾಗಿತ್ತು. ತುಂಬಾದಲ್ಲಿ ರಾಕೆಟ್ ತಯಾರಿಕಾ ಘಟಕವನ್ನೂ ಆಂಧ್ರ ಪ್ರದೇಶದ ಶ್ರೀಹರಿಕೋಟಾದಲ್ಲಿ ಉಪಗ್ರಹ ಉಡಾವಣಾ ಸೌಕರ್ಯವನ್ನೂ (ಸ್ಯಾಟಲೈಟ್ ಲಾಂಚಿಂಗ್ ಫೆಸಿಲಿಟಿ) ಸ್ಥಾಪಿಸುವುದರಲ್ಲಿ ಭಾಗಿಯಾಗಿದ್ದರು. ಶ್ರೀಹರಿಕೋಟಾ ಠಾಣ್ಯದ ನಿರ್ದೇಶಕರಾಗಿ ಹಾಗೂ ಭಾರತೀಯ ರಾಕೆಟ್ ಸಂಘದ ಸ್ಥಾಪಕ ಸದಸ್ಯ ಮತ್ತು ನಿರ್ವಾಹಕ ಕಾರ್ಯದರ್ಶಿಯಾಗಿ ಕೂಡ ಕೆಲಸ ಮಾಡಿದ್ದಾರೆ. 1972ರಲ್ಲಿ ಮೂರ್ತಿಯವರ ಸೇವೆಯನ್ನು ವಿಶ್ವಸಂಸ್ಥೆಗೆ ಎರವು ನೀಡಲಾಯಿತು. ಅಲ್ಲಿಂದೀಚೆಗೆ ವಿಶ್ವಸಂಸ್ಥೆಯ ಪ್ರಧಾನ ಕಛೇರಿಯ (ನ್ಯೂಯಾರ್ಕ್) ಬಾಹ್ಯಾಕಾಶ ವಿಷಯಗಳ ವಿಭಾಗದಲ್ಲಿ ಆಕಾಶಾನ್ವಯಗಳನ್ನು ಕುರಿತ ಪರಿಣತರಾಗಿ ಕೆಲಸ ಮಾಡಿದರು. ಆಕಾಶಾನ್ವೇಷಣೆಯ ಗಳಿಕೆಗಳು ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳಿಗೆ, ತತ್ರಾಪಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ, ಒದಗುವಂತೆಯೂ ಬಾಹ್ಯಾಕಾಶದ ಶಾಂತಿಯುತ ಉಪಯೋಗಗಳಲ್ಲಿ ಅಂತಾರಾಷ್ಟ್ರೀಯ ಸಹಕಾರ ಏರ್ಪಡುವಂತೆಯೂ ಆಕಾಶಾನ್ವಯಗಳ ಕಾರ್ಯಕ್ರಮವನ್ನು ಯೋಜಿಸಿ ನಿರ್ದೇಶಿಸುವುದು ಮೂರ್ತಿಯವರ ಹೊಣೆಗಾರಿಕೆಯಾಗಿತ್ತು.

ಭಾರತ ಸರ್ಕಾರ ಇವರಿಗೆ 1969ರಲ್ಲಿ ಪದ್ಮಶ್ರೀ ಬಿರುದನ್ನು ನೀಡಿ ಗೌರವಿಸಿದೆ. ಇವರು ಇಂಟರ್‌ನ್ಯಾಶನಲ್ ಆಸ್ಟ್ರೊನಾಟಿಕಲ್ ಫೆಡರೇಶನ್ನಿನ ಉಪಾಧ್ಯಕ್ಷರಾಗಿದ್ದರು (1971–72). **(ಜಿ.ಟಿ.ಎನ್.)**

**ಶ್ರೀನಿವಾಸಾಚಾರ್ಯ, ಲಕ್ಷ್ಮೀಪುರಂ:** ಮೈಸೂರಿನ ಸಂಸ್ಕೃತ ಮಹಾಪಂಡಿತರಲ್ಲಿ ಅಗ್ರಗಣ್ಯರು. ಪೂರ್ವೋತ್ತರ ಮೀಮಾಂಸೆಗಳು, ನ್ಯಾಯವೈಶೇಷಿಕಾದಿ ದರ್ಶನಗಳು ಎಲ್ಲದರಲ್ಲಿಯೂ ಪ್ರಕಾಂಡಪಾಂಡಿತ್ಯಕ್ಕೆ ಹೆಸರಾಗಿದ್ದ ಇವರು ಮಹಾರಾಜ ಕಾಲೇಜಿನಲ್ಲಿ ಕೆಲವು ಕಾಲ ಸಂಸ್ಕೃತ ಪಂಡಿತರಾಗಿದ್ದರು. ಇವರು ಸಂಸ್ಕೃತದಲ್ಲಿ ಮಾನಮೇಯ ರಹಸ್ಯ ಶ್ಲೋಕವಾರ್ತಿಕ ಮುಂತಾದ ಉದ್ಗ್ರಂಥಗಳನ್ನು ರಚಿಸಿ ತಮ್ಮ ಸೂಕ್ಷ್ಮ ಶಾಸ್ತ್ರಜ್ಞಾನವನ್ನು ಪ್ರದರ್ಶಿಸಿದರು. ಇವರು ಸಂಸ್ಕೃತದಲ್ಲಿಯೇ ಬರೆದ ಇನ್ನೊಂದು ಕೃತಿ ದರ್ಶನೋದಯ. ಇದರಲ್ಲಿ ಆರು ಭಾರತೀಯ ದರ್ಶನಗಳ ಸಾರಸರ್ವಸ್ವವನ್ನು ಅತ್ಯಂತ ಸಮರ್ಥವಾಗಿ ಚರ್ಚಿಸಲಾಗಿದೆ. ಇವರ ಇನ್ನೊಂದು ಕೃತಿ ಮೀಮಾಂಸಾ ಭಾಷ್ಯಭೂಷಣ. ಕನ್ನಡದಲ್ಲಿ ಸಂಸ್ಕೃತದ ಶಾಸ್ತ್ರ ಚರ್ಚೆಗಳನ್ನು ತಿಳಿಸಿ ಹೇಳುವುದು ಶಕ್ಯವೆಂಬುದನ್ನು ಮನಗಾಣಿಸುವಂತೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಹಿಂದು ದರ್ಶನಸಾರವೆಂಬ ಪ್ರಥಮ ಕನ್ನಡ ಷಡ್ದರ್ಶನಚಿಂತನಾ ಗ್ರಂಥವನ್ನು ಪ್ರಕಟಿಸಿದ ಕೀರ್ತಿ ಇವರದು. ಪ್ರಾಚ್ಯವಿದ್ಯಾಸಂಶೋಧನಾಲಯದ ಸಂಸ್ಕೃತ ಗ್ರಂಥಮಾಲೆಯಲ್ಲಿ ಶ್ರೀಕಂಠಶಿವಾಚಾರ್ಯ ಭಾಷ್ಯಸಮೇತ ವೇದಾಂತಸೂತ್ರಗಳು, ಬೋಧಾಯನ ಧರ್ಮಸೂತ್ರ, ಗೌತಮ ಧರ್ಮಸೂತ್ರ, ದೇವಣ್ಣಭಟ್ಟನ ಸ್ಮೃತಿಚಂದ್ರಿಕಾ (6 ಸಂಪುಟ), ಕೃಷ್ಣಯಜುರ್ವೇದೀಯ ಏಕಾಗ್ನಿಕಾಂಡ, ಹರಿದತ್ತ ಭಾಷ್ಯಸಮೇತ, ಅಲಂಕಾರಮಣಿಹಾರ (4 ಸಂಪುಟ) ಈ ಗ್ರಂಥಗಳನ್ನು ಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದರು.

ಇವರ ವಿದ್ವತ್ಸೇವೆಯನ್ನು ಮನ್ನಿಸಿ ಆಗಿನ ಮೈಸೂರು ಮಹಾರಾಜರು ಇವರಿಗೆ ಪಂಡಿತರತ್ನಂ ಎಂಬ ಪ್ರಶಸ್ತಿ ನೀಡಿ ಗೌರವಿಸಿದರು. ಇವರಿಗೆ ಭಾರತ ಸರ್ಕಾರದಿಂದ ಮಹಾಮಹೋಪಾಧ್ಯಾಯ ಎಂಬ ಬಿರುದು ಪ್ರಾಪ್ತವಾಗಿತ್ತು. **(ಕೆ.ಕೆ.)**

**ಶ್ರೀಪತಿ ಪಂಡಿತ:** ಸು. 12–13ನೆಯ ಶತಮಾನದಲ್ಲಿದ್ದ ವೀರಶೈವ ವಿದ್ವಾಂಸ. ಸಂಸ್ಕೃತದಲ್ಲಿ ಬ್ರಹ್ಮಸೂತ್ರಕ್ಕೆ ಶ್ರೀಕರಭಾಷ್ಯ ಎಂಬ ಗ್ರಂಥವನ್ನು ರಚಿಸಿದ್ದಾನೆ. ವಿಜಯವಾಡ ಇವನ ಜನ್ಮಸ್ಥಳ. ಈತ ಚಾಳುಕ್ಯ 6ನೆಯ ವಿಕ್ರಮಾದಿತ್ಯನ ದಂಡನಾಯಕನಿಗೆ ಗುರುವಾಗಿದ್ದನೆಂದು ತೆಲುಗು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವನು ತನ್ನ ಗ್ರಂಥದಲ್ಲಿ ಮರುಳಸಿದ್ಧ ಮತ್ತು ಏಕಾಂತದ ರಾಮಯ್ಯ ಇವರನ್ನು ಸ್ಮರಿಸಿದ್ದಾನೆ. ಬಸವಣ್ಣನವರ ಉಲ್ಲೇಖ ಕಂಡುಬರುವುದಿಲ್ಲ. ಶ್ರೀಪತಿಪಂಡಿತನನ್ನು ಪಂಡಿತಾರಾಧ್ಯ ಸ್ಮರಿಸಿದ್ದಾನೆ. ಶ್ರೀಕರಭಾಷ್ಯ ವೀರಶೈವಮತೀಯರಿಗೆ ವೇದಾಂತದ ಕೈಗನ್ನಡಿಯಾಗಿದೆ. ಈತ ಕನ್ನಡದಲ್ಲಿ ಗ್ರಂಥ ರಚಿಸಿದಂತೆ ತಿಳಿದುಬಂದಿಲ್ಲ. **(ಕೆ.ವಿ.)**

**ಶ್ರೀಪಾದರಾಜ:** ಸು. 1450. ಪ್ರಸಿದ್ಧ ಹರಿದಾಸರು. ಇವರ ತಂದೆ ಶೇಷಗಿರಿ ಆಚಾರ್ಯ; ತಾಯಿ ಗಿರಿಯಮ್ಮ. ಶ್ರೀಪಾದರಾಜರ ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ. ಇವರ ಬಾಲ್ಯ, ವಿದ್ಯಾಭ್ಯಾಸ ಇತ್ಯಾದಿ ವಿಷಯಗಳ ಬಗ್ಗೆ ನಿಖರವಾಗಿ ತಿಳಿಯದು. ಪರಂಪರಾಗತವಾಗಿ ಪ್ರಚುರವಾಗಿರುವ ಕೆಲವು ಅಭಿಪ್ರಾಯಗಳನ್ನು ಈ ಮುಂದಿನಂತೆ ಕ್ರೋಢೀಕರಿಸಬಹುದು.

ಇವರು ಚನ್ನಪಟ್ಟಣದ ಬಳಿಯಿರುವ ಅಬ್ಬೂರಿನವರು. ಒಮ್ಮೆ ಶ್ರೀರಂಗದ ಸ್ವರ್ಣವರ್ಣತೀರ್ಥರೆಂಬ ಮಠಾಧಿಪತಿಗಳು ಅಬ್ಬೂರಿನ ಮಠಾಧಿಪತಿಗಳಾಗಿದ್ದ ಪುರುಷೋತ್ತಮತೀರ್ಥರ ಸಂದರ್ಶನಕ್ಕಾಗಿ ಬಂದಾಗ, ಬಾಲಕ ಲಕ್ಷ್ಮೀನಾರಾಯಣನನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ಅವನನ್ನೂ ಅವನ ತಂದೆತಾಯಿಗಳನ್ನೂ ಶ್ರೀರಂಗಕ್ಕೆ ಕರೆತಂದರು. ಮುಂದೆ ಶ್ರೀರಂಗದಲ್ಲೇ ಲಕ್ಷ್ಮೀನಾರಾಯಣನ ವಿದ್ಯಾಭ್ಯಾಸ ಮುಗಿದು, ವಿದ್ಯಾಗುರುಗಳಾದ ಸ್ವರ್ಣವರ್ಣತೀರ್ಥರೇ ಅವನಿಗೆ ಸನ್ಯಾಸದೀಕ್ಷೆಯನ್ನು ಕೊಟ್ಟು ತಮ್ಮ ಸಂಸ್ಥಾನದ ಉತ್ತರಾಧಿಕಾರಿಯನ್ನಾಗಿ ನಿರ್ಧರಿಸಿದರು. ರಾಯರ ಮಠದ ಪರಂಪರೆಗೆ ಸೇರಿದ ವಿಭುದೇಂದ್ರತೀರ್ಥರಲ್ಲಿ ಬಾಲಕನ ವೇದಾಂತ ವ್ಯಾಸಂಗ ನಡೆಯಿತು. ಆ ಬಾಲಕನ ವಿದ್ವತ್ತನ್ನು ಪರೀಕ್ಷಿಸುವ ಅವಕಾಶ ದೊರೆತ ಅಂದಿನ ಉತ್ತರಾದಿಮಠದ ರಘುನಾಥತೀರ್ಥರು ಲಕ್ಷ್ಮೀನಾರಾಯಣನ ಪಾಂಡಿತ್ಯಕ್ಕೆ ಮೆಚ್ಚಿ ಬಾಲಕನನ್ನು ಶ್ರೀಪಾದರಾಜ ಎಂದು ಕರೆದು ಆಶೀರ್ವದಿಸಿದರು. ವಿದ್ಯಾಭ್ಯಾಸ ಮುಗಿಸಿಕೊಂಡು ಪುನಃ ಶ್ರೀರಂಗಕ್ಕೆ ಬಂದ ಶ್ರೀಪಾದರಾಜರು, ಸ್ವರ್ಣವರ್ಣರು ವೃಂದಾವನಸ್ಥರಾದ ಬಳಿಕ ತಾವೇ ಮಠಾಧಿಪತಿಗಳಾದರು. ಅನಂತರ ಸಂಚಾರವನ್ನು ಕೈಗೊಂಡ ಇವರು ಮುಳಬಾಗಲಿಗೆ ಬಂದು, ಅಲ್ಲಿ ತಮ್ಮ ಮಠವನ್ನು ಸ್ಥಾಪಿಸಿ, ಮುಳಬಾಗಲನ್ನು ದ್ವೈತಸಿದ್ಧಾಂತದ ಪ್ರಮುಖ ಕೇಂದ್ರವನ್ನಾಗಿ ಮಾಡಿದರು. ಶ್ರೀಪಾದರಾಜರ ಸೋದರ ಬ್ರಹ್ಮಣ್ಯತೀರ್ಥರ ಶಿಷ್ಯರಾಗಿದ್ದ ವ್ಯಾಸರಾಯರು ಮುಳಬಾಗಲಿಗೆ ಬಂದು ಶ್ರೀಪಾದರಾಜರ ಶಿಷ್ಯರಾಗಿ ನಿಂತರು.

ಶ್ರೀಪಾದರಾಜರು ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದು ರಂಗವಿಠಲ ಎಂಬ ಅಂಕಿತದಲ್ಲಿ ಕನ್ನಡದಲ್ಲಿ ಉಗಾಭೋಗ, ಕೀರ್ತನೆ, ಸುಳಾದಿಗಳನ್ನು ರಚಿಸಿದ್ದಾರೆ. ಇದುವರೆಗೆ ಇವರ 82ಕೀರ್ತನೆಗಳು, 3ಸುಳಾದಿಗಳು, 15ಉಗಾಭೋಗಗಳು ಮತ್ತು ಒಂದು ದಂಡಕ ಉಪಲಬ್ಧವಿವೆ. ಇವುಗಳನ್ನು ಸ್ಥೂಲವಾಗಿ ಆತ್ಮಶೋಧನೆಯನ್ನೊಳಗೊಂಡ ಕೃತಿಗಳು, ದ್ವೈತತತ್ತ್ವಪ್ರತಿಪಾದಕ ಕೃತಿಗಳು, ದೈವಭಕ್ತಿನಿರೂಪಣಾತ್ಮಕ ಕೃತಿಗಳು, ನೀತಿಬೋಧೆಯನ್ನೊಳಗೊಂಡ ಕೃತಿಗಳು ಎಂದು ವಿಂಗಡಿಸಬಹುದು. ಭಕ್ತ ಚೇತನವೊಂದು ಭಗವಂತನ ಅನುಗ್ರಹಕ್ಕಾಗಿ ನಾನಾ ರೀತಿಯಲ್ಲಿ ಹಂಬಲಿಸುವುದೆಂಬುದನ್ನು ಇವರ ಆತ್ಮಶೋಧಕ ಕೃತಿಗಳಲ್ಲಿ ಕಾಣಬಹುದಾಗಿದೆ.

ಶ್ರೀಹರಿಯನ್ನು ಕುರಿತ ಇವರ ಭಕ್ತಿ ಪಂಚವಿಧ ಭಾವಗಳಲ್ಲಿ (ಮಧುರ, ಸಖ್ಯ, ವಾತ್ಸಲ್ಯ, ದಾಸ್ಯ, ಶಾಂತ) ವ್ಯಕ್ತವಾಗಿದೆ. ಅವುಗಳಲ್ಲಿ ವಾತ್ಸಲ್ಯ ಹಾಗೂ ಮಧುರ ಭಾವಗಳು ವಿಶೇಷವಾಗಿವೆ. ಕೃಷ್ಣನನ್ನು ಮಗು ಎಂದು ಭಾವಿಸಿ ಪೋಪು ಹೋಗೋಣ ಬಾರೋ ರಂಗ ಎಂದು ಕರೆಯುವಲ್ಲಿ, ಎಲ್ಯಾಡಿ ಬಂದ್ಯೋ ಎನ್ನ ರಂಗಯ್ಯಾ ನೀ, ಎಲ್ಯಾಡಿ ಬಂದ್ಯೋ ಎನ್ನ ಕಣ್ಣ ಮುಂದಾಡದೆ ಎಂದು ಕೇಳುವಲ್ಲಿ ಮಗುವನ್ನು ಕುರಿತ ತಾಯಿಯ ಅಂತರಂಗದ ತಳಮಳ ವ್ಯಕ್ತವಾಗಿದೆ. ತುರುಗಾಯ ಬಂದ ಗೋಪಿಯ ಕಂದ ಆನಂದದಿಂದ ಎಂದು ಪ್ರಾರಂಭವಾಗುವ ಮಧುರಭಾವದ ಕೀರ್ತನೆಯಲ್ಲಿ ಕೃಷ್ಣನ ವೇಣುಗಾನಕ್ಕೆ ಮೋಹಿತರಾಗಿ, ತಬ್ಬಿಬ್ಬುಗೊಂಡು ಕೊಳಲಿನ ಕರೆಯತ್ತ ಧಾವಿಸಿದ ಗೋಪಿಕಾಸ್ತ್ರೀಯರ ಚಿತ್ರಣ ಸುಂದರವಾಗಿ ಮೂಡಿಬಂದಿದೆ.

ಶ್ರೀಪಾದರಾಜರ ದ್ವೈತತತ್ತ್ವಪ್ರತಿಪಾದಕ ಕೃತಿಗಳಲ್ಲಿ ಹರಿಸರ್ವೋತ್ತಮತ್ವ, ಪಂಚಭೇದ, ತಾರತಮ್ಯ, ಮಾಯಾವಾದಖಂಡನ, ಗುರುವಿನ ಪ್ರಾಮುಖ್ಯ ಇತ್ಯಾದಿ ತತ್ತ್ವಗಳ ಪ್ರತಿಪಾದನೆಯಿದೆ. ಬಿಡಿ ಬಿಡಿ ಸಂದೇಹ ಪೊಡವಿ ಮನುಜರೆಲ್ಲ ಒಡೆಯನೊಬ್ಬನೆ ಜಗಕೆ ರಂಗವಿಠಲ, ಹರಿಹರರು ಸರಿಯೆಂಬ ಮರುಳು ಜನರು ಹರಿಹರರ ಚರಿತೆಯನು ತಿಳಿದು ಭಜಿಸುವುದು, ಮಾಯಾಮತವೊಳಿತಲ್ಲ ನಿನಗೆ ನಾಯಿಜನ್ಮವು ಬಾರದೆ ಬಿಡದಲ್ಲ ಎಂಬ ಕೀರ್ತನೆಗಳಲ್ಲಿ ಮೇಲೆ ಹೇಳಿದ ಅಂಶಗಳನ್ನು ಗಮನಿಸಬಹುದು. ಅಂದಿನ ಸಮಾಜದಲ್ಲಿ ಭಕ್ತಿಯ ಹೆಸರಿನಲ್ಲಿ ನಡೆಯುತ್ತಿದ್ದ ಬಾಹ್ಯ ಡಂಭಾಚಾರದ ವರ್ಣನೆಯನ್ನು ಸುಮ್ಮನೆ ವೈಷ್ಣವನೆಂಬಿರಿ ಎಂಬ ಕೀರ್ತನೆಯಲ್ಲಿ ನೋಡಬಹುದು. 'ಅಕಟಕಟ ಸಂಸಾರವನು ನೆಚ್ಚಿ ಕೆಡಬ್ಯಾಡ; ಕಾಡಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು' ಈ ಮುಂತಾದ

ಕೀರ್ತನೆಗಳಲ್ಲಿ ಲೋಕನೀತಿ ನಿರೂಪಿತವಾಗಿದೆ. ಅಚ್ಚ ವೈಷ್ಣವಪಂಥಿಗಳಾದ ಶ್ರೀಪಾದರಾಜರು ಈಶ್ವರನನ್ನು ಕುರಿತು ವೃಷಭನೇರಿದ ವಿಷಧರ ನ್ಯಾರೆ ಪೇಳಮ್ಮಯ್ಯ ಎಂದು ಹಾಡಿರುವುದು ಒಂದು ವಿಶೇಷ. ಶಿವನ ಸ್ತುತಿಯ ಮೂಲಕ ವಿಷ್ಣು ಅಪಾರಮಹಿಮನೆಂದು ಸಾರಿದ್ದಾರೆ. ಇವರ ಉಪಮಾ ಕೌಶಲಕ್ಕೆ ಉದಾಹರಣೆಯಾಗಿ ಶ್ರೀರಂಗವಿಠಲನ ಶ್ರೀಮಕುಟಕೆ ಶರಣು ಎಂಬ ಕೀರ್ತನೆಯನ್ನು ನೋಡಬಹುದು. ಸಂವಾದದ ಸಂವಿಧಾನವನ್ನು ಕಂಜನೇತ್ರೆ ಶುಭ ಮಂಜುಳಗಾತ್ರೆ ಎಂಬ ಕೀರ್ತನೆಯಲ್ಲಿ ಕಾಣಬಹುದು. ರುಕ್ಮಿಣಿ-ಸತ್ಯಭಾಮೆಯರಿಗೆ ಶ್ರೀಕೃಷ್ಣನ ವಿಷಯವಾಗಿ ನಡೆದ ವಾಗ್ವಾದದಲ್ಲಿ, ಕೃಷ್ಣನಿಗೆ ಇಬ್ಬರಲ್ಲಿ ಆಪ್ತರು ಯಾರು ಎಂಬುದೇ ಕೀರ್ತನೆಯ ವಸ್ತು. ಸವತಿಯರ ನಿಂದೆ, ಹೀಯಾಳಿಕೆಗಳು ಸಂಭಾಷಣೆಯ ರೂಪದಲ್ಲಿ ಮೈವೆತ್ತಿದೆ. ಭಾಗವತದ ಕಥೆಗಳ ಮೂಲಕ ಸಂಭಾಷಣೆ ನಡೆದಿದೆ. 'ಮಂದರಧರನು ಪ್ರೀತಿಯಿಂದ ನಿನ್ನ ಪಡೆದನೇನೆ ಒಂದು ಮಣಿಯ ಕಾರಣದಿ ಬಂದೆ ಭಾಮಿನಿ'-ಇದು ಸತ್ಯಭಾಮೆಯನ್ನು ಕುರಿತ ರುಕ್ಮಿಣಿಯ ಅಣಕನುಡಿ.

ಸಂಸಾರದ ಕರೆಕರೆ, ಗೋಪಿಯರ ವಿರಹಭಾವನೆಗಳು ಇವರ ಸುಳಾದಿಯ ವಸ್ತುಗಳಾದರೆ, ಭಕ್ತಿ ಹಾಗೂ ಭಕ್ತರ ಶ್ರೇಷ್ಠತೆಯನ್ನು ಇವರ ಉಗಾಭೋಗಗಳು ಬಿಂಬಿಸುತ್ತವೆ. ಇವುಗಳೊಂದಿಗೆ ವೃತ್ತನಾಮ (ಒಂದು ಪದ, ಒಂದು ಶ್ಲೋಕ-ಹೀಗೆ ಮುಂದುವರಿಯುವ ರಚನೆ) ಮತ್ತು ದಂಡಕಗಳನ್ನೂ ಹೆಸರಿಸಬಹುದು. ಮಾನನಿಧಿ ಶ್ರೀಕೃಷ್ಣ ಮಧುರೆಗೈದವನಂತೆ ಏನು ಪಥವಮ್ಮ ನಮಗೆ ಎಂದು ಪ್ರಾರಂಭವಾಗಿ ಬಿಲ್ಲಹಬ್ಬಕ್ಕಾಗಿ ಕೃಷ್ಣನು ಮಧುರೆಗೆ ಹೋಗುವ ಸುದ್ದಿಯನ್ನು ಕೇಳಿದ ಗೋಪಿಯರ ಕಳವಳ, ಆತಂಕಗಳನ್ನು ಇವರು ತಮ್ಮ ವೃತ್ತನಾಮದಲ್ಲಿ ಚಿತ್ರಿಸಿದ್ದಾರೆ. ಈ ವೃತ್ತನಾಮ ಪಲ್ಲವಿ, ಅನುಪಲ್ಲವಿ, ಮೂರು ನುಡಿಗಳು, ಅನಂತರ ಒಂದು ಶ್ಲೋಕ, ಒಂದು ನುಡಿ- ಹೀಗೆ ಒಟ್ಟು ಹನ್ನೆರಡು ನುಡಿಗಳ ವಿಸ್ತಾರದಲ್ಲಿದೆ.

ದಂಡಕದ ರಚನೆ ದಾಸಸಾಹಿತ್ಯಕ್ಕೆ ಶ್ರೀಪಾದರಾಜರ ಕೊಡುಗೆ. ಇವರು ಸಂಸ್ಕೃತದ ಈ ಛಂದೋಮಟ್ಟನ್ನು ಕನ್ನಡಕ್ಕೆ ಸಶಕ್ತವಾಗಿ ತಂದಿದ್ದಾರೆ.

ಇವರ ಕೃತಿಗಳನ್ನು ಒಟ್ಟಾರೆ ಪರಿಶೀಲಿಸಿದಲ್ಲಿ ಎಲ್ಲ ಕೃತಿಗಳೂ (ದಂಡಕವೊಂದನ್ನು ಬಿಟ್ಟು) ಸಂಗೀತದ ತಳಹದಿಯ ಮೇಲೆ ರಚಿತವಾಗಿವೆ. ಸುಳಾದಿಗಳು ತಾಳಪ್ರಧಾನವಾದ ಕೃತಿಗಳು. ಉಗಾಭೋಗಗಳು ರಾಗಪ್ರಧಾನವಾದವು. ಕೀರ್ತನೆಗಳು ರಾಗ-ತಾಳಸಹಿತವಾದುವು. ಸರಳ ಭಾಷೆಯ ಬಳಕೆ ಶ್ರೀಪಾದರಾಜರ ಕೃತಿಗಳಿಗೆ ಲಾಲಿತ್ಯವನ್ನು ಒದಗಿಸಿದೆ. ಈ ವನದೆಡೆಗಳು ಈ ಲತೆವನಗಳು, ಈ ನದಿ ಪುಳಿನಗಳೀಶಶಿಲೆಗಳು, ಈ ಸುರತರು ನೆಳಲು ಶುಕಪಿಕರವ ಯಾಕೆ ಮಾಧವನ ಮರೆಯಲೀಯದಿವೆ ಕೆಳದಿ ಎಂಬ ಸುಳಾದಿ ಭಾವಗೀತೆಯ ಅಂಶವನ್ನು ಒಳಗೊಂಡಿದೆ. ಆಡುಭಾಷೆಯನ್ನು ಕೂಡ ಇವರು ತಮ್ಮ ಕೃತಿಗಳಲ್ಲಿ ಔಚಿತ್ಯಪೂರ್ಣವಾಗಿ ಅಳವಡಿಸಿದ್ದಾರೆ. (ಟಿ.ಎನ್.ಎನ್.)

ಇವರ ಭ್ರಮರಗೀತ ರಗಳೆಯ ಬಂಧದಲ್ಲಿ ರಚಿತವಾಗಿದ್ದು ಪಲ್ಲವಿ, ಅನುಪಲ್ಲವಿ ಮತ್ತು 9 ಚರಣಗಳಿಂದ ಕೂಡಿದೆ. ಇದರಲ್ಲಿ ಪರಮಾತ್ಮನ ವಿರಹದಿಂದ ಸಂತಪ್ತರಾದ ಗೋಪಿಯರ ಮನಃಸ್ಥಿತಿಯ ವರ್ಣನೆಯಿದ್ದು ಉತ್ತಮ ವಿರಹಗೀತೆಯಾಗಿದೆ. ಈ ಗೀತದಲ್ಲಿ ಹಳಗನ್ನಡದ ಶಬ್ದಗಳು ಮುದ್ದಾಗಿ ಹೊಂದಿಕೊಂಡಿವೆ. ಭಾಷೆಗೆ ತಕ್ಕಂತೆ ರಾಗ ಮತ್ತು ವಿರಹಭಕ್ತಿ ಇವುಗಳೆಲ್ಲದರ ಸಾಮರಸ್ಯವನ್ನು ಈ ಗೀತೆಯ ಸಂಗೀತರೂಪದಲ್ಲಿ ಕಾಣಬಹುದು. ಶ್ರೀಪಾದರಾಜರು ಈ ಗೀತೆಗಳನ್ನು (ಜೊತೆಗೆ ವೇಣುಗೀತ ಮತ್ತು ಗೋಪಿಗೀತಗಳನ್ನು) ಪೂಜಾಕಾಲದಲ್ಲಿ ಹಾಡಿಸುತ್ತಿದ್ದರಂತೆ. ಈ ಗೀತೆಗಳಲ್ಲಿ ನಾಸ್ತಿಕನನ್ನೂ ಪ್ರೇಮರಸದಲ್ಲಿ ಮುಳುಗಿಸಿ ಆಸ್ತಿಕನನ್ನಾಗಿ ಪರಿವರ್ತನೆಗೊಳಿಸುವಂಥ ಮೋಡಿಯಿದೆ.

ಸಾಹಿತ್ಯ ದೃಷ್ಟಿಯಿಂದ ಹರಿದಾಸರಲ್ಲಿ ಮುಖ್ಯರಾದ ಶ್ರೀಪಾದರಾಜರ ಕೃತಿ ರಚನೆಯಲ್ಲಿನ ವೈವಿಧ್ಯ ಮುಂದಿನ ದಾಸಪೀಳಿಗೆಯವರಿಗೆ ಆದರ್ಶವಾಯಿತು. ಕೀರ್ತನೆ, ಸುಳಾದಿ, ಉಗಾಭೋಗಗಳ ರಚನೆ ಅವುಗಳಲ್ಲಿನ ಪಂಚವಿಧ ಭಾವಗಳು, ದಶಾವತಾರದ ವರ್ಣನೆ, ಲೋಕನೀತಿ, ಆತ್ಮವಿಮರ್ಶೆ ಇತ್ಯಾದಿಗಳ ಚಿತ್ರಣ ಹರಿದಾಸಸಾಹಿತ್ಯದಲ್ಲಿ ಒಂದು ಪರಂಪರೆಯಾಗಿ ಉಳಿದುಬಂತು. (ಎಂ.ಸಿ.ಆರ್.)

**ಶ್ರೀಪುರುಷ:** ತಲಕಾಡು ಗಂಗವಂಶದ ದೊರೆ (ಸು.725-88) ಒಂದನೆಯ ಶಿವಮಾರನ ಮೊಮ್ಮಗ; ತನ್ನ ತಾತನ ತರುವಾಯ ಪಟ್ಟಕ್ಕೆ ಬಂದ.

ಪಟ್ಟಕ್ಕೆ ಏರುವುದಕ್ಕೆ ಮುಂಚೆಯೇ ಈತ ಮುತ್ತರಸನೆಂಬ ಹೆಸರಿನಿಂದ ಕೋಲಾರ ಪ್ರಾಂತದ ಪೊಂಕುಂದ 12, ಕೆರೆಕುಂದ 300, ಎಳೆನಾಗರನಾಡು 70 ಮುಂತಾದುವುಗಳನ್ನು (ಪ್ರಾಯಶಃ ಪ್ರಾಂತ್ಯಾಧಿಕಾರಿಯಾಗಿ) ಆಳುತ್ತಿದ್ದ. ಬಾದಾಮಿಯ ಚಳುಕ್ಯರೊಡನೆ ಸ್ನೇಹದಿಂದಿದ್ದ ಈತ ಇಮ್ಮಡಿ ವಿಕ್ರಮಾದಿತ್ಯ ಕಂಚಿಯ ಮೇಲೆ ದಾಳಿಮಾಡಿದಾಗ ಅವನಿಗೆ ನೆರವಾಗಿದ್ದ. ಇದರಿಂದ ಕುಪಿತನಾದ ಪಲ್ಲವ ನಂದಿವರ್ಮ ಸು.754ಕ್ಕೆ ಸ್ವಲ್ಪ ಮುಂಚೆ ಗಂಗರಾಜ್ಯದ ಮೇಲೆ ದಂಡೆತ್ತಿ ಬಂದ. ಆದರೆ ಶ್ರೀಪುರುಷ ಇದರಿಂದ ನಷ್ಟವೇನನ್ನೂ ಅನುಭವಿಸಲಿಲ್ಲವೆಂದು ತೋರುತ್ತದೆ. ಆದರೆ ಚಾಳುಕ್ಯರ ಆಳ್ವಿಕೆ ಕೊನೆಗೊಂಡು ಉತ್ತರದಲ್ಲಿ ರಾಷ್ಟ್ರಕೂಟರು ಪ್ರಬಲಿಸಿದ ಮೇಲೆ ಶ್ರೀಪುರುಷ ಕಷ್ಟಪರಂಪರೆಗಳನ್ನು ಎದುರಿಸಬೇಕಾಯಿತು. ರಾಷ್ಟ್ರಕೂಟ 1ನೆಯ ಕೃಷ್ಣ ಗಂಗರಾಜ್ಯದ ಮೇಲೆ ನಡೆದು ಮಾನ್ಯಪುರದಲ್ಲಿ (ನೆಲಮಂಗಲ ತಾಲ್ಲೂಕಿನ ಮಣ್ಣೆ) ಸು.768ರಲ್ಲಿ ತಳ ಊರಿದ್ದ. ಈ ಸಂದರ್ಭದಲ್ಲಿ ಶ್ರೀಪುರುಷ ಬಾಗೆಯೂರು, ಪಿಂಚನೂರು ಮೊದಲಾದೆಡೆಗಳಲ್ಲಿ ರಾಷ್ಟ್ರಕೂಟರೊಡನೆ ಸೆಣಸಿ ರಾಜ್ಯವನ್ನು ಉಳಿಸಿಕೊಂಡನಾದರೂ ರಾಜ್ಯದ ಉತ್ತರದ ಕೆಲವು ಭಾಗಗಳು ಕೈಬಿಟ್ಟಂತೆ ತೋರುತ್ತದೆ. ಗಂಗಾಧೀನರಾಗಿದ್ದ ನೊಳಂಬರು ಒಂದನೆಯ ಕೃಷ್ಣ ಮತ್ತು ಇಮ್ಮಡಿ ಗೋವಿಂದರ ಕಾಲದಲ್ಲಿ ಪಕ್ಷ ಬದಲಾಯಿಸಿ ರಾಷ್ಟ್ರಕೂಟರೊಡನೆ ಸೇರಿದರು.

ಈತ ಗಜಶಾಸ್ತ್ರ ಎಂಬ ಗ್ರಂಥವನ್ನು ರಚಿಸಿದ್ದಾನೆ. ಪೃಥ್ವೀಪತಿ, ಶ್ರೀವಲ್ಲಭ, ರಣಭಾಜ ಮುಂತಾದ ಬಿರುದುಗಳನ್ನು ಹೊಂದಿದ್ದ ಇವನು ಕೊಂಗಣಿ ರಾಜಾಧಿರಾಜಪರಮೇಶ್ವರ ಶ್ರೀಪುರುಷ ಎಂದು ಕೆಲವು ಶಾಸನಗಳಲ್ಲಿ ಕರೆದುಕೊಂಡಿದ್ದಾನೆ.

ಶ್ರೀ ಪುರುಷನಿಗೆ ಮೂವರು ಪತ್ನಿಯರು; ಚಳುಕ್ಯವಂಶದ ವಿಜಯ ಮಹಾದೇವಿ, ನೊಳಂಬ ವಂಶದ ಮಹಾದೇವಿ ಮತ್ತು ಇನ್ನೊಬ್ಬಳು. ದುಗ್ಗಮಾರ ಎಱೆಯಪ್ಪ ಬಿನ್ ಶಿವಮಾರ (II) ಮತ್ತು ವಿಜಯಾದಿತ್ಯ ಈತನ ಮಕ್ಕಳು. (ಟಿ.ಎಸ್.ಎಸ್.ಎನ್.)

**ಶ್ರೀರಂಗಪಟ್ಟಣ:** ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಉತ್ತರ-ದಕ್ಷಿಣ ಅಗಲವಾಗಿದ್ದು ಪೂರ್ವ-ಪಶ್ಚಿಮ ಕಿರಿದಾಗುತ್ತ ಹೋಗುವ ಈ ತಾಲ್ಲೂಕಿನ ಪೂರ್ವ ಮತ್ತು ಆಗ್ನೇಯದಲ್ಲಿ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕೂ ಪಶ್ಚಿಮ, ನೈಋತ್ಯ ಮತ್ತು ದಕ್ಷಿಣದಲ್ಲಿ ಮೈಸೂರು ತಾಲ್ಲೂಕು, ಉತ್ತರದಲ್ಲಿ ಪಾಂಡವಪುರ ಮತ್ತು ಮಂಡ್ಯ ತಾಲ್ಲೂಕುಗಳು ಇವೆ. ಅರಕೆರೆ, ಬೆಳಗೊಳ, ಶ್ರೀರಂಗಪಟ್ಟಣ ಮತ್ತು ಕೆ.ಶೆಟ್ಟಿಹಳ್ಳಿ ಇದರ ಹೋಬಳಿಗಳು. 97 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 346.7 ಚ.ಕಿಮೀ. ಜನಸಂಖ್ಯೆ 1,62,984.

ತಾಲ್ಲೂಕಿನಲ್ಲಿ ಹುಲಿಕೆರೆ-ಕರಿಘಟ್ಟ ಶ್ರೇಣಿಗೆ ಸೇರಿದ ಕರಿಘಟ್ಟಬೆಟ್ಟ ಶ್ರೀರಂಗಪಟ್ಟಣದ ಹತ್ತಿರವಿದೆ. ಈ ಬೆಟ್ಟದ ಬುಡದಲ್ಲೇ ಲೋಕಪಾವನಿ ಬಾಬುರಾಯನಕೊಪ್ಪಲು ಬಳಿ ಕಾವೇರಿ ನದಿಯನ್ನು ಸೇರಿಕೊಳ್ಳುವುದು. ತಾಲ್ಲೂಕಿನ ಮುಖ್ಯ ನದಿ ಕಾವೇರಿ. ಕೃಷ್ಣರಾಜಸಾಗರದ ಮೇಲುಗಡೆ

ಹೇಮಾವತಿಯನ್ನು ಕೂಡಿಕೊಂಡು ಈ ನದಿ ಶ್ರೀರಂಗಪಟ್ಟಣ ತಾಲ್ಲೂಕನ್ನು ಪ್ರವೇಶಿಸುತ್ತದೆ. ತಾಲ್ಲೂಕಿನ ಉತ್ತರದಲ್ಲಿ ಸ್ವಲ್ಪದೂರ ಪಾಂಡವಪುರ ತಾಲ್ಲೂಕನ್ನು ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಬೇರ್ಪಡಿಸಿ ಪೂರ್ವಾಭಿಮುಖವಾಗಿ ಹರಿಯುವುದು. ಮುಂದೆ ಮಹದೇವಪುರದ ಬಳಿ ಆಗ್ನೇಯಾಭಿಮುಖವಾಗಿ ಹರಿದು ತಿರುಮಕೂಡಲು ನರಸೀಪುರ ತಾಲ್ಲೂಕನ್ನು ಪ್ರವೇಶಿಸುವುದು. ಉತ್ತಮ ಹವಾಮಾನವಿರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 547.40 ಮಿಮೀ.

ಶ್ರೀರಂಗನಾಥ ದೇವಾಲಯ

ಕಾವೇರಿ, ಲೋಕಪಾವನಿ ಈ ನದಿಗಳ ನೀರನ್ನು ತಾಲ್ಲೂಕಿನಲ್ಲಿ ಬಳಸಿಕೊಳ್ಳುತ್ತಿರುವುದಲ್ಲದೆ ವ್ಯವಸಾಯಕ್ಕೆ ಸಾಕಷ್ಟು ಜಲ ಪೂರೈಕೆ ಮಾಡುವ ವಿರಜಾ ನದಿ ಕಾಲುವೆ, ದೇವರಾಯ ಕಾಲುವೆ, ರಾಮಸ್ವಾಮಿ ಮತ್ತು ಚಿಕ್ಕದೇವರಾಯಸಾಗರ ಕಾಲುವೆಗಳು ತಾಲ್ಲೂಕಿನಲ್ಲಿ ಹರಡಿವೆ. ಇತ್ತೀಚೆಗೆ ಯೋಜಿಸಲಾಗಿರುವ ಕರಿಘಟ್ಟ ನೀರೆತ್ತುವ ಯೋಜನೆಯಿಂದಲೂ ಶ್ರೀರಂಗಪಟ್ಟಣ ತಾಲ್ಲೂಕಿನ ಸಾವಿರಾರು ಎಕರೆಗಳಿಗೆ ಜಲ ಪೂರೈಕೆಯಾಗುವುದುಂಟು. ಒಟ್ಟಿನಲ್ಲಿ ಜಲಸಮೃದ್ಧಿಯನ್ನು ಹೊಂದಿರುವ ಈ ತಾಲ್ಲೂಕು ಫಲವತ್ತಾದ ಕೆಂಪು ಜೇಡಿಮಿಶ್ರಿತ ಮಣ್ಣಿನಿಂದ ಕೂಡಿದೆ. ಈ ತಾಲ್ಲೂಕಿನ ಮುಖ್ಯ ಬೆಳೆ ಬತ್ತ, ಕಬ್ಬು, ರಾಗಿ, ಜೊತೆಗೆ ಜೋಳ, ನೆಲಗಡಲೆ, ವಿವಿಧ ದ್ವಿದಳ ಧಾನ್ಯಗಳು, ಹರಳು ಬೆಳೆಯುತ್ತಾರೆ. ತೋಟಗಳಲ್ಲಿ ತೆಂಗು ಮತ್ತು ವಿವಿಧ ಫಲಗಳನ್ನು ಬೆಳೆಯುವುದುಂಟು. ವ್ಯವಸಾಯದ ಜೊತೆಗೆ ಪಶುಪಾಲನೆ ಇದ್ದು ಅವುಗಳ ರಕ್ಷಣೆಗೆ ಸಹಕಾರವಾಗಿ ಪಶುವೈದ್ಯಾಲಯವಿದೆ. ಮತ್ಸ್ಯೋದ್ಯಮವೂ ಅಭಿವೃದ್ಧಿಯಾಗುತ್ತದೆ.

ಈ ತಾಲ್ಲೂಕಿನ ಬೆಳಗೊಳದಲ್ಲಿ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ (1962), ಮೈಸೂರ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ (1937), ಮೈಸೂರು ಕೆಮಿಕಲ್ ಮ್ಯಾನುಫ್ಯಾಕ್ಚರರ್ಸ್ (1941), ಅಲೈಡ್ ರೆಸಿನ್ಸ್ ಅಂಡ್ ಕೆಮಿಕಲ್ಸ್ (1965) ಕಾರ್ಖಾನೆಗಳಿದ್ದುವು. ಕಾಗದ ಮತ್ತು ರಸಾಯನಿಕ ಗೊಬ್ಬರಗಳ ತಯಾರಿಕೆಯುಂಟು. ಶ್ರೀರಂಗಪಟ್ಟಣದಲ್ಲಿ ರೇಷ್ಮೆ ನೂಲು ಸಂಸ್ಕರಣ ಕೇಂದ್ರ ಸಿದ್ಧವಾಗುತ್ತಿದೆ. ಅರಕೆರೆ ಬಳಿ ಕಚ್ಚಾ ಕಾಗದದ ಕಾರ್ಖಾನೆಯೊಂದು ರೂಪುಗೊಳ್ಳುತ್ತಿದೆ. ಇವಲ್ಲದೆ ಈ ತಾಲ್ಲೂಕಿನಲ್ಲಿ ಮೊದಲಿಂದಲೂ ಬೆಲ್ಲದ ತಯಾರಿಕೆ ಇದೆ. ಈ ತಾಲ್ಲೂಕಿನ ಕೊಡಿಯಾಲ ಕೈಮಗ್ಗದ ಬಟ್ಟೆಗಳಿಗೆ ಪ್ರಸಿದ್ಧ. ಶ್ರೀರಂಗಪಟ್ಟಣದಲ್ಲಿ ಜೇನುಸಾಕಣೆ ಕೇಂದ್ರವಿದೆ. ವ್ಯವಸಾಯೋಪಕರಣಗಳ ತಯಾರಿಕೆಯುಂಟು. ತಾಲ್ಲೂಕಿನ ಕೈಗಾರಿಕೆಗಳ ಅಭಿವೃದ್ಧಿಗೆ ಆರ್ಥಿಕ ಸಹಕಾರ ನೀಡಲು ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ.

ಆಸ್ಪತ್ರೆ, ಔಷಧಾಲಯ, ಪ್ರೌಢಶಾಲೆ, ಕಾಲೇಜುಗಳು ಮುಂತಾದವುಗಳ ಸೌಲಭ್ಯವಿದೆ. ಮೈಸೂರು–ಬೆಂಗಳೂರು, ಮೈಸೂರು–ಹಾಸನ ರೈಲುಮಾರ್ಗಗಳು ಈ ತಾಲ್ಲೂಕು ಮುಖಾಂತರ ಹಾದುಹೋಗಿರುವುದಲ್ಲದೆ ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳ ಜೊತೆಗೆ ತಾಲ್ಲೂಕಿನ ಎಲ್ಲ ಕಡೆಗೂ ಉತ್ತಮ ಮಾರ್ಗ ಸಂಪರ್ಕವಿದೆ.

ಶ್ರೀರಂಗಪಟ್ಟಣದ ನೈಋತ್ಯಕ್ಕೆ ಇರುವ ಪಶ್ಚಿಮವಾಹಿನಿ ಒಂದು ಪುಣ್ಯಕ್ಷೇತ್ರ ಮತ್ತು ರೈಲ್ವೆನಿಲ್ದಾಣ. ಇಲ್ಲಿ ಕಾವೇರಿ ನದಿಯ ಒಂದು ಕವಲು ಪಶ್ಚಿಮಾಭಿಮುಖವಾಗಿ ಹರಿಯುವುದರಿಮದ ಪಶ್ಚಿಮವಾಹಿನಿ ಎಂಬ ಹೆಸರು ಬಂದಿದೆ. ಇಲ್ಲಿ ಬಂಗಾರದೊಡ್ಡಿ ಅಣೆಕಟ್ಟು ಮತ್ತು ಅನೇಕ ಛತ್ರಗಳು ಇದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿರುತ್ತವೆ. ಶ್ರೀರಂಗಪಟ್ಟಣದ ನೈಋತ್ಯಕ್ಕೆ 5 ಕಿಮೀ ದೂರದಲ್ಲಿರುವ ಪಾಲಹಳ್ಳಿ ಕಾವೇರಿ ನದಿಯ ಬಲದಂಡೆಯ ಮೇಲಿದೆ. 1871ರವರೆಗೂ ಮೈಸೂರು ಅಷ್ಟಗ್ರಾಮ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಆಗಿನ ಪ್ರಸಿದ್ಧ 'ಅಷ್ಟಗ್ರಾಮ ಶುಗರ್ ವರ್ಕ್ಸ್' ಸಕ್ಕರೆ ಕಾರ್ಖಾನೆ ಪಾಲಹಳ್ಳಿಯಲ್ಲಿ 1847–94ರ ವರೆಗೆ ನಡೆದಿತ್ತು. ಇದರ ಹತ್ತಿರವೇ ಪ್ರಸಿದ್ಧ ರಂಗನತಿಟ್ಟು **(ನೋಡಿ)** ಪಕ್ಷಿಧಾಮವಿದೆ.

ಶ್ರೀರಂಗಪಟ್ಟಣ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಮೈಸೂರು–ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಕಾವೇರಿ ನದಿಯಿಂದ ಸುತ್ತುವರಿದಿರುವ ದ್ವೀಪ ಮತ್ತು ಐತಿಹಾಸಿಕ ಪ್ರಸಿದ್ಧವಾದ ಒಂದು ಪುಣ್ಯಕ್ಷೇತ್ರ. ಮಂಡ್ಯಕ್ಕೆ ನೈಋತ್ಯದಲ್ಲಿ 29ಕಿಮೀ ದೂರದಲ್ಲೂ ಮೈಸೂರಿನ ಉತ್ತರಕ್ಕೆ 13 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 23,729.

ಇದು ಸುತ್ತಲ ಗ್ರಾಮಗಳಿಗೆ ಮುಖ್ಯ ವ್ಯಾಪಾರಕೇಂದ್ರ. ಬತ್ತ, ಬೆಲ್ಲ ಇಲ್ಲಿಂದ ಹೆಚ್ಚಾಗಿ ರಫ್ತಾಗುತ್ತವೆ. ಗೊಬ್ಬರ, ಸಿಮೆಂಟ್, ಬಟ್ಟೆ ಇವನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳುವರು. ಪಟ್ಟಣದಲ್ಲಿ ಪೌರಸಭಾ ಆಡಳಿತವಿದೆ. ರಾಜ್ಯ ಹೆದ್ದಾರಿ ಮತ್ತು ಮೈಸೂರು–ಬೆಂಗಳೂರು ರೈಲುಮಾರ್ಗ ಹಾದುಹೋಗಿದ್ದು ಇದೊಂದು ಮುಖ್ಯ ರೈಲ್ವೆ ನಿಲ್ದಾಣವಾಗಿದೆ. ಇಲ್ಲಿನ ವ್ಯಾಪಾರಾಭಿವೃದ್ಧಿಗೆ ಸಹಾಯಕವಾಗಿ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ಪ್ರವಾಸೋದ್ಯಮಕ್ಕೆ ಅನುಕೂಲಕರವಾದ ಪ್ರವಾಸಿಗರ ಆಕರ್ಷಣೆಯ ಐತಿಹಾಸಿಕ ಮತ್ತು ನೈಸರ್ಗಿಕ ತಾಣಗಳು ಇಲ್ಲಿವೆ. ಈ ಊರು ಶೀಘ್ರವಾಗಿ ಮೈಸೂರು ನಗರದ ವಿಸ್ತರಣೆಯಂತೆ ಬೆಳೆಯಲಾರಂಭಿಸಿದೆ.

ಸ್ಥಳಪುರಾಣದ ಪ್ರಕಾರ ಪೂರ್ವದಲ್ಲಿ ಗೌತಮಋಷಿ ಇಲ್ಲಿಯ ಆದಿರಂಗನನ್ನು ಪೂಜಿಸಿ ಇಲ್ಲಿ ವಾಸವಾಗಿದ್ದುದರಿಂದ ಇದಕ್ಕೆ ಗೌತಮ ಕ್ಷೇತ್ರವೆಂದು ಹೆಸರಿತ್ತೆಂದು ತಿಳಿದುಬರುವುದು. 894ರಲ್ಲಿ ಗಂಗರ ಸಾಮಂತನಾದ ತಿರುಮಲಯ್ಯ ಇಲ್ಲಿಯ ರಂಗನಾಥಸ್ವಾಮಿ ದೇವಾಲಯವನ್ನು ಕಟ್ಟಿಸಿ ಇದಕ್ಕೆ ಶ್ರೀರಂಗಪುರವೆಂದು ಹೆಸರಿಟ್ಟನೆಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. 1117ರಲ್ಲಿ ವೈಷ್ಣವಧರ್ಮವನ್ನು ಅವಲಂಬಿಸಿದ ಅನಂತರ ಹೊಯ್ಸಳ ವಿಷ್ಣುವರ್ಧನನು ರಾಮಾನುಜಾಚಾರ್ಯರಿಗೆ ಕಾವೇರಿ ತೀರದಲ್ಲಿ ಅಷ್ಟಗ್ರಾಮಗಳನ್ನು ಬಿಟ್ಟುಕೊಟ್ಟು ಈ ಗ್ರಾಮಗಳ ಮೇಲ್ವಿಚಾರಣೆಗೆ ಹೆಬ್ಬಾರರು ಅಥವಾ ಪ್ರಭುಗಳೆಂಬ ಅಧಿಕಾರಿಗಳನ್ನು ನಿಯಮಿಸಿದ. 1120ರಲ್ಲಿ ವಿಷ್ಣುವರ್ಧನನ ತಮ್ಮ ಉದಯಾದಿತ್ಯನು ಕಾಡಿನಿಂದ ಆವೃತ

ವಾಗಿದ್ದ ಈ ಸ್ಥಳದಲ್ಲಿ ಊರನ್ನು ನಿರ್ಮಿಸಿದ. 15 ಮತ್ತು 16ನೆಯ ಶತಮಾನಗಳಲ್ಲಿ ವಿಜಯನಗರದ ಚಕ್ರವರ್ತಿಗಳು ಶ್ರೀರಂಗಪಟ್ಟಣವನ್ನು ಒಂದು ಪ್ರಾಂತ್ಯವನ್ನಾಗಿ ಮಾಡಿ ಪ್ರಾಂತ್ಯಾಧೀಶನನ್ನು ನಿಯಮಿಸಿದ್ದರು. ವಿಜಯನಗರದ ಪತನಾನಂತರ ಮೈಸೂರಿನ ರಾಜಒಡೆಯರು 1610ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರು.

ಮುಂದೆ 1761ರ ವೇಳೆಗೆ ಹೈದರನು ಪ್ರಾಬಲ್ಯಕ್ಕೆ ಬಂದು ಮೈಸೂರು ರಾಜರನ್ನು ಮೂಲೆಗೊತ್ತಿ ತಾನೇ ಆಡಳಿತ ನಡೆಸತೊಡಗಿದ. ಅನಂತರ ಇವನ ಮಗ ಟಿಪ್ಪು ಅಧಿಕಾರಕ್ಕೆ ಬಂದ. ಇವನ ಕಾಲದಲ್ಲಿ ಈ ಸ್ಥಳ ಸಾಕಷ್ಟು ಅಭಿವೃದ್ಧಿ ಹೊಂದಿತು. 1799ರಲ್ಲಿ ಟಿಪ್ಪುವಿನ ಮರಣಾಂತರ ಬ್ರಿಟಿಷರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರು.

ಇಲ್ಲಿರುವ ಶ್ರೀರಂಗನಾಥಸ್ವಾಮಿ ದೇವಾಲಯ ದ್ರಾವಿಡ ಶೈಲಿಯಲ್ಲಿದೆ. ದೇವಾಲಯದ ಹೆಚ್ಚು ಒಳಭಾಗ ಹೊಯ್ಸಳರ ಕಾಲದ್ದು. ಗರ್ಭಗೃಹ ಮತ್ತು ಸುಕನಾಸಿಗಳ ಛಾವಣಿಗಳ ಮಧ್ಯದಲ್ಲಿ ಪದ್ಮಗಳನ್ನು ಬಿಡಿಸಿದೆ. ವಿಜಯನಗರ ಕಾಲದ ಗಂಟೆ ಮಾದರಿಯ ಕಂಬಗಳು ನವರಂಗದಲ್ಲಿವೆ. ನವರಂಗ ದ್ವಾರದ ಬಳಿ ಎರಡು ದೊಡ್ಡ ದ್ವಾರಪಾಲಕ ವಿಗ್ರಹಗಳಿವೆ. ಮಹಾದ್ವಾರದ ಗೋಪುರ, ಮುಖಮಂಟಪ ಮತ್ತು ಗರ್ಭಗೃಹದ ಗೋಪುರ ವಿಜಯನಗರ ಶಿಲ್ಪ ಲಕ್ಷಣವುಳ್ಳವು. ದೇವಾಲಯದಲ್ಲಿ ಹೊಯ್ಸಳ ಮತ್ತು ವಿಜಯನಗರ ಕಾಲಕ್ಕೆ ಸೇರಿದ ಕೆಲವು ದೇವತೆಗಳ, ಋಷಿಗಳ ವಿಗ್ರಹಗಳು ಆಕರ್ಷಕವಾಗಿವೆ.

ಶ್ರೀರಂಗನಾಥನ ಮುಖ್ಯ ವಿಗ್ರಹ ಬಹು ಆಕರ್ಷಕವಾದದ್ದು. ಶ್ರೀರಂಗನಾಥ ಏಳು ತಲೆಗಳುಳ್ಳ ಆದಿಶೇಷನ ಮೇಲೆ ಪವಡಿಸಿದ್ದಾನೆ. ಶ್ರೀರಂಗನಾಥನ ಪಾದದ ಬಳಿ ಲಕ್ಷ್ಮಿ ವಿಗ್ರಹವಿದೆ. ಹಾಗೆ ಗೌತಮ ಮುನಿಯ ವಿಗ್ರಹವೂ ಇದೆ. ಇಲ್ಲಿನ ಕೆಲವು ಬೆಳ್ಳಿ ಪದಾರ್ಥಗಳು ಟಿಪ್ಪುಸುಲ್ತಾನ್ ದೇವಾಲಯಕ್ಕೆ ದಾನ ಕೊಟ್ಟದ್ದೆಂದು ತಿಳಿದುಬರುತ್ತದೆ.

ಇಲ್ಲಿರುವ ಇತರ ದೇವಾಲಯಗಳಲ್ಲಿ ನರಸಿಂಹ ಮತ್ತು ಗಂಗಾಧರೇಶ್ವರ ದೇವಾಲಯಗಳು ಮುಖ್ಯವಾದವು. ನರಸಿಂಹ ದೇವಾಲಯವನ್ನು ಕಂಠೀರವ ನರಸರಾಜ ಒಡೆಯರ್ (1638–59) ಕಟ್ಟಿಸಿದರೆಂದು ತಿಳಿದುಬರುತ್ತದೆ. ದೊಡ್ಡದಾದ ಗರ್ಭಗೃಹ, ವಿಶಾಲವಾದ ಸುಕನಾಸಿ ಮತ್ತು ಅನೇಕ ಕಂಬಗಳುಳ್ಳ ನವರಂಗವಿದೆ. ಹೊಯ್ಸಳರ ಕಾಲದ ಲಕ್ಷ್ಮೀನರಸಿಂಹ ವಿಗ್ರಹ ಬಹು ಅಚ್ಚುಕಟ್ಟಾಗಿ ಕೆತ್ತಿದೆ. ಈ ದೇವಾಲಯದೊಳಗಿರುವ ಅಂಬೆಗಾಲು ಕೃಷ್ಣ ಆಕರ್ಷಣೀಯ. ಇಲ್ಲಿ ಮೂರೂವರೆ ಅಡಿ ಎತ್ತರವಿರುವ 17ನೆಯ ಶತಮಾನದ ಕಂಠೀರವ ನರಸರಾಜ ಒಡೆಯರ ವಿಗ್ರಹವಿದೆ. ಸು.16ನೆಯ ಶತಮಾನದ ಗಂಗಾಧರೇಶ್ವರ ದೇವಾಲಯವನ್ನು ಹೊಯ್ಸಳರ ಕಾಲದಲ್ಲಿ ಕಟ್ಟಿದ್ದು. ಈ ದೇವಾಲಯದ ನವರಂಗದಲ್ಲಿ 6 ಮುಖಗಳೂ 12 ಕೈಗಳೂ ಇರುವ ಸುಬ್ರಹ್ಮಣ್ಯ ವಿಗ್ರಹವಿದೆ. ಮಂಟಪದಲ್ಲಿ 18ನೆಯ ಶತಮಾನದ, ಅಂದವಾಗಿ ಬಿಡಿಸಿರುವ 15 ಮಂದಿ ಶಿವಶರಣರ ಮೂರ್ತಿಗಳಿವೆ. ದಳವಾಯಿ ನಂಜರಾಜ (18ನೆಯ ಶತಮಾನ) ಕೊಟ್ಟದ್ದೆನ್ನುವ ಒಂದು ತಾಮ್ರದ ಸುಂದರ ದಕ್ಷಿಣಾಮೂರ್ತಿಯ ಚಿತ್ರವಿರುವ ಶಾಸನವಿದೆ. ರಂಗನಾಥಸ್ವಾಮಿ ದೇವಾಲಯದ ಮುಂಭಾಗದ ಬಳಿ ಮೂರನೆಯ ಕೃಷ್ಣರಾಜ ಒಡೆಯರ ಜನ್ಮಸ್ಥಳವನ್ನು ಸರ್ಕಾರ ರಕ್ಷಿಸಿದ್ದು ಅಲ್ಲೊಂದು ಮಂಟಪವನ್ನು ಕಟ್ಟಿಸಲಾಗಿದೆ.

ಶ್ರೀರಂಗಪಟ್ಟಣವನ್ನು ಸುತ್ತುವರಿದಿರುವ ಗಟ್ಟಿ ಕೋಟೆಯ ಅವಶೇಷಗಳನ್ನು ಈಗಲೂ ಕಾಣಬಹುದು. ಟಿಪ್ಪುವಿನ ಅರಮನೆ ಎಂದು ಹೇಳುವ ಲಾಲ್‍ಮಹಲ್ ಸಂಪೂರ್ಣ ನಾಶವಾಗಿದೆ. ಖೈದಿಗಳನ್ನು ಕೂಡಿಡುತ್ತಿದ್ದ ಎರಡು ನೆಲಮಾಳಿಗೆ ಬಂದೀಖಾನೆಗಳಿವೆ. ಕೋಟೆಯ ಸುತ್ತ ಕಂದಕವಿದ್ದು ಅದರಲ್ಲಿ ಕಾವೇರಿ ನದಿಯ ನೀರು ತುಂಬುವಂತೆ ಮಾಡಲಾಗುತ್ತಿತ್ತು. ಕೋಟೆ ಒಳಗಡೆಯೇ ಇರುವ ಜುಮ್ಮಾ ಮಸೀದಿಯನ್ನು 1787ರಲ್ಲಿ ಟಿಪ್ಪು ಕಟ್ಟಿಸಿದ. ಎರಡು ದೊಡ್ಡ ಮಿನಾರುಗಳಿದ್ದು ಅವುಗಳ ಒಳಗಿನಿಂದ ಮೇಲಕ್ಕೆ ಹತ್ತಿ ಹೋಗಲು ಮೆಟ್ಟಿಲುಗಳಿವೆ.

ಇಲ್ಲಿರುವ ಗುಮ್ಮಟವನ್ನು (ಗುಂಬಜ್) ಹೈದರ್ ಅಲಿಯ ಅಪೇಕ್ಷೆಯಂತೆ ಟಿಪ್ಪು ಕಟ್ಟಿಸಿದನೆಂದು ಪ್ರತೀತಿ. ಇಲ್ಲಿ ಹೈದರ್, ಅವನ ಪತ್ನಿ ಫಕ್ರುನ್ನೀಸಾ ಬೇಗಮ್ ಹಾಗೂ ಟಿಪ್ಪುಸುಲ್ತಾನರ ಸಮಾಧಿಗಳಿವೆ. ಹೊರಗಡೆ ಟಿಪ್ಪುವಿನ ಪಟ್ಟದ ರಾಣಿಯ ಮತ್ತು ಇತರ ವೀರರ ಸಮಾಧಿಗಳಿವೆ. ಇಲ್ಲಿನ ಬೃಹದಾಕಾರದ ಗುಮ್ಮಟ ಅಲಂಕಾರರಹಿತವಾದದ್ದು. ಕೈಸಾಲೆಯಲ್ಲಿರುವ ಕರಿಯ ಕಂಬಗಳು ಅತಿನುಣುಪಾಗಿ ಬಹು ಆಕರ್ಷಣೀಯವಾಗಿದ್ದು ಬಾಗಿಲುಗಳು ದಂತದ ಕುಶಲ ಕೆತ್ತನೆ ಕೆಲಸಗಳಿಂದ ಕೂಡಿವೆ. (ಎ.ಎಸ್.ಎನ್.)



ಗುಂಬಜ್, ಶ್ರೀರಂಗಪಟ್ಟಣ

ಶ್ರೀರಂಗಪಟ್ಟಣದ ಕೋಟೆ ಹೊರಗಡೆ ಕಾವೇರಿಯ ಉತ್ತರ ದಿಕ್ಕಿನ ಶಾಖೆಗೆ ಹೊಂದಿಕೊಂಡಂತೆ ಒಂದು ವಿಶಾಲ ತೋಟದ ಮಧ್ಯೆ ಇರುವ ಟಿಪ್ಪುಸುಲ್ತಾನ್ ಕಟ್ಟಿಸಿದ (1784) ದರಿಯಾದೌಲತ್ (ಬೇಸಗೆ ಅರಮನೆ) ಸುಂದರವಾದುದು. ಈ ಅರಮನೆ ಚಿತ್ರಕಲೆಯ ಆಗರ. ದರಿಯಾದೌಲತ್ ಎಂದರೆ ಸಮುದ್ರಸಂಪತ್ತು ಎಂದರ್ಥ. ಟಿಪ್ಪು ಸಮುದ್ರದವರೆಗೆ ರಾಜ್ಯ ವಿಸ್ತರಿಸಿದ ನೆನಪಿಗೆ ಇದನ್ನು ನಿರ್ಮಿಸಿದಂತೆ ತೋರುತ್ತದೆ. ಇಲ್ಲಿ ಟಿಪ್ಪು ರಾಯಭಾರಿಗಳನ್ನೂ ಮುಖ್ಯ ಅತಿಥಿಗಳನ್ನೂ ಸಂದರ್ಶಿಸುತ್ತಿದ್ದ. ದರಿಯಾದೌಲತ್ ಕಟ್ಟಡ ಎತ್ತರವಾದ ಚೌಕನೆ ಜಗತಿಯ ಮೇಲೆ ನಿರ್ಮಿತವಾಗಿದೆ. ದಪ್ಪನಾದ ಕಮಲದಾಕಾರದ ಮರದ ಕಂಬಗಳೂ ಅರೆಗೋಲಾಕೃತಿಯ ಕಮಾನುಗಳಿಂದಲೂ ಕೂಡಿದೆ. ಇಲ್ಲಿನ ಗೋಡೆಗಳ ಹೊರಗಡೆ ಆಗಿನ ಕಾಲದ ಪ್ರಮುಖ ಘಟನೆಗಳನ್ನು, ಯುದ್ಧಗಳನ್ನು ಸಮಕಾಲೀನ ರಾಜರನ್ನು ಸೂಚಿಸುವ ವರ್ಣಚಿತ್ರಗಳನ್ನು ಬರೆಸಲಾಗಿದೆ. ಒಳಗಿನ ಗೋಡೆಗಳ, ಕಂಬಗಳ ಮತ್ತು ಛಾವಣಿಗಳಲ್ಲಿ ವಿವಿಧ ವರ್ಣದಿಂದಲೂ ಚಿನ್ನದ ಮುಲಾಮಿನಿಂದಲೂ ರಚಿತವಾದ ಎಲೆ, ಬಳ್ಳಿ, ಹೂ, ಮೃಗಪಕ್ಷಿಗಳು ನಿಸರ್ಗಸಹಜವಾಗಿವೆ. ಗಾಳಿ ಬಿಸಿಲಿನ ತಾಪಕ್ಕೆ ಅಳಿಸಿಹೋದ ಇವುಗಳ ಕೆಲವು ಭಾಗಗಳನ್ನೂ 1920ರಲ್ಲಿ ಮತ್ತೆ ಸರಿಪಡಿಸುವ ಕೆಲಸ ಆರಂಭವಾಯಿತು. ಈ ಭಿತ್ತಿಚಿತ್ರಗಳನ್ನು 1791ರ ಸುಮಾರಿನಲ್ಲಿ ಬಿಡಿಸಿರಬಹುದೆಂದು ತಿಳಿದುಬರುತ್ತದೆ.

ಇಲ್ಲಿನ ಚಿತ್ರಗಳಲ್ಲಿನ ವರ್ಣಗಳು ಈಗಲೂ ತಮ್ಮ ಹೊಳಪನ್ನು ಕಳೆದುಕೊಂಡಿಲ್ಲ. ಸಂಶೋಧಕರಾದ ಬೆಂಜಮಿನ್ ಹ್ಯಾರಿ ಅವರು ಪರೀಕ್ಷೆ ನಡೆಸಿ, ಈ ವರ್ಣಗಳನ್ನು ಹೇಗೆ ತಯಾರಿಸಲಾಯಿತು ಎಂಬುದರ ಬಗ್ಗೆ ಅನೇಕ ವಿವರಗಳನ್ನು ಕೊಟ್ಟಿದ್ದಾರೆ.

ಇಲ್ಲಿನ ಭಿತ್ತಿಚಿತ್ರಗಳನ್ನು ಕರ್ನಾಟಕದ ಚಿತ್ರಕಾರರು ರಚಿಸಿದ್ದಾರೆ. ಇವರ ಮೇಲೆ ಪಾಶ್ಚಾತ್ಯ ಚಿತ್ರಕಲೆಯ ಪ್ರಭಾವ ಬಿದ್ದಂತೆ ಭಾಸವಾಗುತ್ತದೆ.

ಇಲ್ಲಿನ ಪಶ್ಚಿಮ ದಿಕ್ಕಿನ ಚಿತ್ರಗಳಲ್ಲಿ ಅಂದಿನ ಯುದ್ಧಗಳ ಸನ್ನಿವೇಶಗಳನ್ನು ಕಾಣಬಹುದು. ಯುದ್ಧಕಾಲದಲ್ಲಿ ಮಿತ್ರನಾದ ನಿಜಾಮನು ಮತ್ತೆ ಬ್ರಿಟಿಷರ ಕಡೆ ಹೋದ್ದರಿಂದ ಟಿಪ್ಪುವಿಗೆ ಅಸಮಾಧಾನವೂ ಕೋಪವೂ ಬಂದಿತು. ಅದರ ಸಂಕೇತವಾಗಿ ಒಂದು ಚಿತ್ರವನ್ನು ಬರೆಸಿದ. ನಿಜಾಮನ ಸೈನ್ಯದ ದಂಡನಾಯಕನು ಕುದುರೆಯ ಮೇಲೆ ಕುಳಿತಿರುವಂತೆ ಚಿತ್ರಿಸಿ, ಅವನ ಕೆಳಗೆ ಹಸು ಮತ್ತು ಹಂದಿಗಳನ್ನು ಚಿತ್ರಿಸಲಾಗಿದೆ. ನಿಜಾಮನ ಸೈನ್ಯ ಹಸುವಿನಂತೆ ಬಂದು, ಹಂದಿಯಂತೆ ಬ್ರಿಟಿಷರ ಕಡೆ ಸೇರಿಕೊಂಡಿತು ಎಂಬುದರ ಸಂಕೇತವಾಗಿ ಟಿಪ್ಪು ಹೀಗೆ ಚಿತ್ರ ಬರೆಯಿಸಿದ ನಂತೆ. ಮತ್ತೊಂದು ಯುದ್ಧ ಚಿತ್ರದಲ್ಲಿ ಹೈದರ್ ಅಲಿ ಆನೆಯ ಮೇಲೆ ಅಂಬಾರಿ ಯಲ್ಲಿ ಕುಳಿತು ಸವಾರಿ ಮಾಡುವಂತೆ ಚಿತ್ರಿಸಲಾಗಿದೆ. ಆ ಚಿತ್ರದ ಪಕ್ಕದಲ್ಲಿ ನಿಜಾಮನು ಕುದುರೆಯ ಮೇಲಿರುವಂತೆಯೂ ಅವನ ಹಿಂದೆ ಮುಂದೆ ಸೈನ್ಯ ಇರುವಂತೆಯೂ ಚಿತ್ರಿಸಲಾಗಿದೆ. ಇದು ಎರಡನೆಯ ಮೈಸೂರು ಯುದ್ಧವನ್ನು ಸೂಚಿಸುವ ಚಿತ್ರ. ಇಲ್ಲಿ ಟಿಪ್ಪು ಕುದುರೆಯ ಮೇಲೆ ಕುಳಿತಿದ್ದಾನೆ. ಅವನ ಜೊತೆ ವಿಶ್ವಾಸಘಾತಕನಾದ ಕಾರ್ಯದರ್ಶಿ ಮೀರ್ ಸಾದಕ್ ಇದ್ದಾನೆ. ಧ್ವಜ ಹಿಡಿದ ಫ್ರೆಂಚ್ ಕುದುರೆ ಸೈನ್ಯ ಲಾಲಿಯ ನಿರ್ದೇಶನದಲ್ಲಿ ಮುನ್ನಡೆದಂತೆ ಕಾಣಿಸಲಾಗಿದೆ. ಇಲ್ಲಿಯ ಮತ್ತೊಂದು ಅಪೂರ್ವ ಚಿತ್ರ ಕಾಂಜೀವರಂ ಬಳಿಯಲ್ಲಿ ನಡೆದ ಯುದ್ಧದಲ್ಲಿ ಮೈಸೂರಿಗೆ ಜಯವಾದ ಸನ್ನಿವೇಶದ್ದು. ಗಜಾರೋಹಿಗಳಾದ ಹೈದರ್ ಮತ್ತು ಟಿಪ್ಪು ಇಬ್ಬರೂ ತಮ್ಮ ಪಡೆಗಳನ್ನು ನಿರ್ದೇಶಿಸುತ್ತಿರುವಂತೆ ಬಿಡಿಸಲಾಗಿದೆ. ಮೈಸೂರು ಸೈನ್ಯ ಬ್ರಿಟಿಷ್ ಸೈನ್ಯವನ್ನು ಹಿಂದೆ ಮುಂದೆ ಮುತ್ತಿದೆ. ಫ್ರೆಂಚ್ ಫಿರಂಗಿ ದಳ, ಮೈಸೂರು ದಂಡು ಕಾದಾಡಲು ನಿಂತಿವೆ. ಕರ್ನಲ್ ಬೇಲಿಯನ್ನು ರಕ್ಷಿಸಲು ವ್ಯೂಹ ರಚಿಸಿದ್ದಾರೆ, ಇಂಗ್ಲಿಷ್ ಸೈನಿಕರು. ಬೇಲಿ ಚಿಂತಾಗ್ರಸ್ತನಾಗಿರುವಂತೆ ಇರುವ ದೃಶ್ಯ ಮನೋಜ್ಞವಾಗಿದೆ. ದರಿಯಾದೌಲತ್ ಅರಮನೆಯ ಪೂರ್ವದಿಕ್ಕಿನ ಭಿತ್ತಿಯಲ್ಲಿ ಅನೇಕ ರಾಜರನ್ನೂ ನವಾಬರನ್ನೂ ಮತ್ತು ಪಾಳೆಯಗಾರರನ್ನೂ ಚಿತ್ರಿಸಲಾಗಿದೆ. ಇಲ್ಲಿ ಚಿತ್ರದುರ್ಗದ ಮದಕರಿನಾಯಕನಿಂದ ಕಿತ್ತೂರು ರಾಣಿ ಚೆನ್ನಮ್ಮನ ವರೆಗೆ ನೂರಾರು ಪಾಳೆಯಗಾರರಲ್ಲದೆ ಚಿತ್ತೂರು, ತಂಜಾವೂರು, ಕೊಡಗು, ಔಧ್, ಆರ್ಕಾಟ್, ಕಡಪ ಮೊದಲಾದ ಆಳರಸರ ಚಿತ್ರಗಳು ಇವೆ. ಶ್ರೀರಂಗಪಟ್ಟಣ ಬ್ರಿಟಿಷರ ವಶವಾದ ಮೇಲೆ ವೆಲ್ಲೆಸ್ಲಿ ಇಲ್ಲಿ ವಾಸಿಸುತ್ತಿದ್ದ. ಡಾಲ್‌ಹೌಸಿಯು ಇದನ್ನು ಸಂದರ್ಶಿಸಿದಾಗ ಮಾಸಿಹೋಗಿದ್ದ ಚಿತ್ರಗಳನ್ನು ಮತ್ತೆ ಹೊಸದಾಗಿ ಚಿತ್ರಿಸಿದಂತೆ ತಿಳಿದುಬರುವುದು. ಪೂರ್ವದ ಗೋಡೆ ಮೇಲಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರ ಈ ಕಾಲಕ್ಕೆ ಸೇರಿದ್ದಿರಬಹುದು. 1959ರಲ್ಲಿ ದರಿಯಾ ದೌಲತ್ ಅರಮನೆಯನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಲಾಯಿತು. ಇಲ್ಲಿ ಹೈದರ್ ಹಾಗೂ ಟಿಪ್ಪುವಿಗೆ ಸೇರಿದ ವರ್ಣಚಿತ್ರಗಳೂ ಲಿಥೋ ಚಿತ್ರಗಳೂ ನಿಸರ್ಗಚಿತ್ರಗಳೂ ತೈಲವರ್ಣದ ಭಾವಚಿತ್ರಗಳೂ ಇವೆ. ಟಿಪ್ಪುವಿನ ಕೈಕೆಳಗೆ ಸೇವೆ ಸಲ್ಲಿಸಿದ ಅಧಿಕಾರಿಗಳ ಹಾಗೂ ಆತನ ಏಳು ಜನ ಗಂಡುಮಕ್ಕಳ ಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. (ಎಂ.ಎಚ್.;ಪಿ.ಆರ್.ಟಿ.)

ಜುಮ್ಮಾಮಸೀದಿ

**ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ:** 19ನೆಯ ಶತಮಾನದಲ್ಲಿದ್ದ ಪ್ರಸಿದ್ಧ ಕನ್ನಡ ವಿದ್ವಾಂಸ. ದ್ರಾವಿಡ ಭಾಷಾ ವಿಜ್ಞಾನದ ಜನಕನೆಂದು ಪ್ರಸಿದ್ಧನಾಗಿರುವ ಫ್ರಾನ್ಸಿಸ್ ವೈಟ್ ಎಲ್ಲಿಸ್‌ನನ್ನು ಬಿಟ್ಟರೆ ಆ ಸಾಲಿನಲ್ಲಿ ಇವನ ಹೆಸರು ಪ್ರಮುಖವಾದುದು. ಈತ 'ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು' ಎನ್ನುವ ವ್ಯಾಕರಣ ಗ್ರಂಥವನ್ನು ರಚಿಸಿದ್ದಾನೆ. ಶ್ರೀರಂಗಪಟ್ಟಣ ಈತನ ಹುಟ್ಟೂರು. ತಮಿಳು ಈತನ ಮಾತೃ ಭಾಷೆಯಾಗಿರಬೇಕೆಂದು ತೋರುತ್ತದೆ. ಈತ ಪ್ಲೀಡರ್ ಆಗಿ ಮದರಾಸಿನಲ್ಲಿ ಬಹಳ ಕಾಲವಿದ್ದುದರಿಂದ ತಮಿಳಿನಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಗಳಿಸಿಕೊಂಡಿರಬೇಕು. ಅದಕ್ಕೆ ಈತನ ಪುಸ್ತಕವೇ ಸಾಕ್ಷಿಯಾಗಿದೆ. ಜೊತೆಗೆ ಈತನ ಹೇಳಿಕೆಗಳನ್ನು ನೋಡಿದರೆ ಇವನಿಗೆ ಮಲೆಯಾಳಂ, ತುಳು, ಸಂಸ್ಕೃತ ಮುಂತಾದ ಭಾಷೆಗಳ ಜ್ಞಾನವೂ ಇದ್ದಂತೆ ತೋರುತ್ತದೆ. ಶಬ್ದೋತ್ಪತ್ತಿ ಕ್ರಮವು ಶಬ್ದಮಂಜರಿ, ಧಾತುಮಂಜರಿಯೆಂಬ ಗ್ರಂಥಗಳಲ್ಲಿ ಹೇಳಲ್ಪಡುವುದು ಎಂದು ತನ್ನ ಗ್ರಂಥದ ಪೀಠಿಕೆಯಲ್ಲಿ ಹೇಳಿಕೊಂಡಿರುವುದರಿಂದ ಈತ ಇನ್ನೆರಡು ಗ್ರಂಥಗಳನ್ನು ಬರೆದಿರಬಹುದೆಂದು ಊಹಿಸಲಾಗಿದೆ. ಈತ ಹಳಗನ್ನಡ ನುಡಿಗನ್ನಡಿ, ಹೊಸಗನ್ನಡ ನುಡಿಗನ್ನಡಿ, ಶಬ್ದಮಂಜರಿ, ಧಾತುಮಂಜರಿ ಎಂಬ ಗ್ರಂಥಗಳನ್ನು ಬರೆದಿದ್ದಾನೆ ಎಂದು ಕವಿಚರಿತೆಕಾರರು ಅಭಿಪ್ರಾಯ ಪಟ್ಟದ್ದಾರೆ. ಈಗ ದೊರೆತಿರುವ ಗ್ರಂಥವೊಂದನ್ನು ಬಿಟ್ಟರೆ ಉಳಿದವು ಉಪಲಬ್ಧವಿಲ್ಲ.

ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು– ಹೊಸಗನ್ನಡ ಭಾಷಾವೈವಿಧ್ಯವನ್ನು ಕುರಿತು ಬರೆದ ವ್ಯಾಕರಣಗ್ರಂಥ. ಹೊಸಗನ್ನಡ ವ್ಯಾಕರಣವನ್ನು ಕುರಿತು ಈ ಗ್ರಂಥ ಪ್ರಕಟವಾಗುವುದಕ್ಕೆ ಮೊದಲು ಇಂಗ್ಲಿಷಿನಲ್ಲಿ ವಿಲಿಯಂ ಕೇರಿ ಎಂಬಾತನ ಒಂದು ವ್ಯಾಕರಣ ಗ್ರಂಥ (1817), ಜಾನ್ ಮೆಕ್ಕರೆಲ್ ಎಂಬುವನ ಒಂದು ವ್ಯಾಕರಣ ಗ್ರಂಥ(1820) ಪ್ರಕಟವಾಗಿದ್ದವು. ಈ ಸಾಲಿನಲ್ಲಿ ಕೃಷ್ಣಮಾಚಾರ್ಯನ ಗ್ರಂಥ ಮೂರನೆಯದು; ಆದರೆ ಕನ್ನಡದಲ್ಲಿ ಮೊದಲನೆಯದು. ಜೊತೆಗೆ ಈ ಗ್ರಂಥ ಕಾಲ್ಡ್‌ವೆಲ್ಲನ ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ (1856) ಎಂಬ ಗ್ರಂಥ ಬರುವುದಕ್ಕೆ 18 ವರ್ಷಗಳ ಮೊದಲು ದೇಶಭಾಷೆಯಲ್ಲಿ ಪ್ರಕಟವಾಗಿತ್ತು ಎಂಬುದು ಬಹುಮುಖ್ಯ ಸಂಗತಿ.

ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು 1838ರಲ್ಲಿ ಪ್ರಕಟವಾಯಿತು (ಇದನ್ನು ಪ್ರಕಟಿಸಿದವನು ಜಾನ್ ವಾಕರ್). ಮೈಸೂರಿನ ಸುತ್ತಮುತ್ತಲ ಪ್ರದೇಶವನ್ನು ಅಚ್ಚಗನ್ನಡ ನಾಡೆಂದು ಕರೆದು ಅಲ್ಲಿನ ಹಿರಿಯರು ಮಾತನಾಡುವ ಕನ್ನಡವನ್ನು ಆಧಾರವಾಗಿಟ್ಟುಕೊಂಡು ಈ ಗ್ರಂಥವನ್ನು ಪ್ರಶ್ನೋತ್ತರ ರೂಪದಲ್ಲಿ ಬರೆದಿರುವುದಾಗಿ ಗ್ರಂಥಕರ್ತೃ ಹೇಳಿಕೊಂಡಿದ್ದಾನೆ. ತಾನು ಫೋರ್ಟ್ ಸೇಂಟ್ ಜಾರ್ಜ್ ಕಾಲೇಜಿನಲ್ಲಿ ಪಂಡಿತ ವಿದ್ಯಾರ್ಥಿಯ ಉದ್ಯೋಗದಲ್ಲಿದ್ದಾಗ, ಆ ಕಾಲೇಜು ಬೋರ್ಡಿನ ಕಾರ್ಯದರ್ಶಿಯಾಗಿದ್ದ ಕ್ಯಾಪ್ಟನ್ ಹಾರ್ಕಿನ್ ಎಂಬುವನು ಇಂಗ್ಲಿಷ್ ಹಾಗೂ ಕನ್ನಡ ತಿಳಿಯದ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವ ಹಾಗೆ ಕನ್ನಡದಲ್ಲಿ ಪ್ರಶ್ನೋತ್ತರ ರೂಪವಾಗಿ ಒಂದು ವ್ಯಾಕರಣವನ್ನು ಬರೆಯುವಂತೆ ಸೂಚಿಸಿದ್ದರಿಂದ ಈ ಗ್ರಂಥವನ್ನು ಬರೆದುದಾಗಿಯೂ ಹೇಳಿಕೊಂಡಿದ್ದಾನೆ. ಈ ಗ್ರಂಥದಲ್ಲಿ ಸಂಜ್ಞಾಪ್ರಕರಣ, ಸಂಧಿಪ್ರಕರಣ, ಶಬ್ದಪ್ರಕರಣ, ಆಖ್ಯಾತಪ್ರಕರಣ, ಕೃತ್‌ಪ್ರಕರಣ, ತದ್ಧಿತ ಪ್ರಕರಣ,

ತತ್ಸಮಪ್ರಕರಣ, ತದ್ಭವಪ್ರಕರಣ, ಸಮಾಸಪ್ರಕರಣ, ಪ್ರಯೋಗ ಪ್ರಕರಣ ಎಂಬ 10 ಅಧ್ಯಾಯಗಳಿವೆ. ಹಿಂದಿನ ವೈಯಾಕರಣಿಗಳಂತೆ ಶಬ್ದಗಳನ್ನೂ ತತ್ಸಮ, ತದ್ಭವ, ದೇಶ್ಯಗಳೆನ್ನದೆ ಅನ್ಯದೇಶ್ಯ, ಗ್ರಾಮ್ಯ ಶಬ್ದಗಳೆಂದು ಪಟ್ಟಿ ಹಾಕಲಾಗಿದೆ. ತತ್ಸಮ, ತದ್ಭವಗಳನ್ನು ಕುರಿತು ಹೇಳುವಾಗ ಕೇಶಿರಾಜ, ಭಟ್ಟಾಕಳಂಕರಂತೆ ಈ ಶಬ್ದಗಳು ಕೇವಲ ಸಂಸ್ಕೃತದಿಂದ ಮಾತ್ರ ಕನ್ನಡಕ್ಕೆ ಬಂದುವು ಎಂದಷ್ಟೇ ಹೇಳದೆ, ದ್ರಾವಿಡ ಭಾಷೆಯಿಂದಲೂ ಬಂದವು ಎಂದು ಹೇಳಲಾಗಿದೆ. ಗ್ರಂಥದಲ್ಲಿ ಗ್ರಾಮ್ಯ ಪದಗಳನ್ನು ಧಾರಾಳವಾಗಿ ಬಳಸಲಾಗಿದೆ. ಉದಾ: ತಿನ್ತಾನೆ, ಬಂತು ಇತ್ಯಾದಿ. ಸಂಧಿಪದಗಳಲ್ಲಿ–ಓಡೋದ್ನು, ಕೆಟ್ಟೋಯಿತು ಇತ್ಯಾದಿ. ಕೆಲವೆಡೆ ಹಳೆಯ ರೂಪಗಳೂ ಸಿಗುತ್ತವೆ. ಉದಾ: ಹನ್ನಿಬ್ಬರ (12 ಎಂಬಲ್ಲಿ), ಅಗಚಿತ್ತೆ, ಕಾಲುರಿಚ ಇತ್ಯಾದಿ, ಶಿನೀರು, ಅನುಸರಿಶಿ ಮುಂತಾದ ಪ್ರಯೋಗಗಳೂ ಕೆಲವೆಡೆ ಬಂದಿವೆ.

ಈ ಗ್ರಂಥ ಬರೆಯುವಲ್ಲಿ ಕೇಶಿರಾಜ, ಭಟ್ಟಾಕಳಂಕ, ಜಾನ್ ಮೆಕ್ಕರೆಲ್ ಇವರನ್ನು ಹೆಸರಿಸಿರುವ ಈತ ನಾಗವರ್ಮ ಹಾಗೂ ವಿಲಿಯಂ ಕೇರಿ ಇವರನ್ನು ಹೆಸರಿಸಿಲ್ಲ. ಈ ಗ್ರಂಥ 1882ರಲ್ಲಿ ಎರಡನೆಯ ಮುದ್ರಣ ಕಂಡಿದೆ.

ಸುಮಾರು ಒಂದೂವರೆ ಶತಮಾನಗಳಷ್ಟು ಹಿಂದೆಯೇ ಆಡುನುಡಿಯನ್ನು ಆಧರಿಸಿ ಹೊಸಗನ್ನಡ ಭಾಷೆಗೆ ವ್ಯಾಕರಣ ರಚಿಸಿ, ಕನ್ನಡ ಭಾಷಾ ವಿಜ್ಞಾನಕ್ಕೆ ಸಮರ್ಥ ತಳಹದಿ ಹಾಕಿದ ಕೃಷ್ಣಮಾಚಾರ್ಯನ ಹೆಸರು ಕನ್ನಡ ಭಾಷಾ ವಿಜ್ಞಾನ ಇತಿಹಾಸದಲ್ಲಿ ಪ್ರಮುಖವಾಗಿ ನಿಲ್ಲುತ್ತದೆ. *

**ಶ್ರೀರಂಗರಾಯ I:** ವಿಜಯನಗರದ ಆರವೀಡು ವಂಶದ ರಾಜ (1578–86). ತಿರುಮಲನ ಹಿರಿಯ ಮಗ. ತಿರುಮಲ ತನ್ನ ರಾಜ್ಯವನ್ನು ಮೂರು ಪ್ರಾಂತ್ಯಗಳನ್ನಾಗಿ ವಿಂಗಡಿಸಿ ತನ್ನ ಪುತ್ರರನ್ನು ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದ್ದ. ಸು.1571ರಿಂದ ಶ್ರೀರಂಗರಾಯ ಯುವರಾಜನಾಗಿ ತೆಲುಗು ಭಾಗದ ಪ್ರಾಂತ್ಯಾಧಿಕಾರಿಯಾಗಿ 1578ರಲ್ಲಿ ತಿರುಮಲರಾಯನ ಮರಣಾನಂತರ ವಿಜಯನಗರ ರಾಜ್ಯದ ಸಾಮ್ರಾಟನಾಗಿ ಪೆನುಗೊಂಡೆಯಿಂದ ಆಳಲಾರಂಭಿಸಿದ.

ಈತನ ಆಳ್ವಿಕೆಯ ಪ್ರಾರಂಭದಲ್ಲಿ ಬಿಜಾಪುರದ ಸುಲ್ತಾನ ಅಲಿ ಆದಿಲ್ ಷಾ, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ ಕೋಟೆಯನ್ನು ಪುನಃ ಕಟ್ಟಿದ. ಆ ಪ್ರದೇಶದಲ್ಲಿ ಶಂಕರನಾಯಕನೆಂಬುವನು ವಿಜಯನಗರದ ವಿರುದ್ಧ ದಂಗೆ ಎದ್ದು ಬಿಜಾಪುರದ ಸುಲ್ತಾನನನ್ನು ಆಹ್ವಾನಿಸಿದ್ದ. ಬಿಜಾಪುರದ ಸುಲ್ತಾನ ಶಿವಮೊಗ್ಗ ಮತ್ತು ಕಡೂರು ಜಿಲ್ಲೆಗಳ ನಾಯಕರನ್ನು ಅಡಗಿಸಲು, ಅವರು ಪೊಗದಿ ಕೊಡಲು ಒಪ್ಪಿದರು. ಅನಂತರ ಬಿಜಾಪುರದ ಸುಲ್ತಾನ ಪೆನುಗೊಂಡೆಗೆ ಮುತ್ತಿಗೆ ಹಾಕಿದ. ಆಗ ಶ್ರೀರಂಗರಾಯ ಗೋಲ್ಕೊಂಡ ಸುಲ್ತಾನ ಇಬ್ರಾಹಿಂ ಕುತ್ಬ್ ಷಾ ನೊಡನೆ ಸ್ನೇಹ ಬೆಳಸಿ, ಬಿಜಾಪುರದ ಸುಲ್ತಾನನನ್ನು ಹಿಮ್ಮೆಟ್ಟಿಸಿದ. ಇದಾದ ಅನಂತರ ಪುನಃ ಬಿಜಾಪುರದ ಸುಲ್ತಾನ ದಂಡೆತ್ತಿ ಬಂದು, ಶ್ರೀರಂಗನನ್ನು ಸೋಲಿಸಿ ಸೆರೆಹಿಡಿದನಲ್ಲದೆ ಪೆನುಗೊಂಡೆಯ ಉತ್ತರ ಭಾಗದ ವಿಜಯನಗರ ರಾಜ್ಯವನ್ನೂ ಆಕ್ರಮಿಸಿಕೊಂಡ. ಶ್ರೀರಂಗ ವಿಶೇಷವಾದ ದಂಡ ಕೊಟ್ಟು ಬಿಡುಗಡೆಹೊಂದಿದ. ಪುನಃ ಬಿಜಾಪುರದ ಸುಲ್ತಾನ ದಂಡೆತ್ತಿ ಬರಲು ಶ್ರೀರಂಗನ ಬಂಧುವಾದ ಬಾರಾಮಹಲ್‌ನ ನಾಯಕ ಜಗದೇವರಾಯ ಅವನನ್ನು ಸೋಲಿಸಿದ.

ಶ್ರೀರಂಗರಾಯನ ದುರ್ಬಲ ಆಳ್ವಿಕೆಯ ಕಾಲದಲ್ಲಿ, ಕರ್ನಾಟಕದ ಭಾಗದಲ್ಲಿ ಹಲವಾರು ಪಾಳೆಯಗಾರರು ತಲೆಯೆತ್ತಲಾರಂಭಿಸಿದರು. ಕೆಲವು ಸಂದರ್ಭಗಳಲ್ಲಿ ಈ ಪಾಳೆಯಗಾರರು ವಿಜಯನಗರದ ಸಾಮ್ರಾಟನ ಹೆಸರನ್ನು ತಮ್ಮ ಶಾಸನಗಳಲ್ಲಿ ಉಲ್ಲೇಖಿಸಿದರೂ ಅವರ ಆಳ್ವಿಕೆ ಹೆಚ್ಚು ಕಡಿಮೆ ಸ್ವತಂತ್ರವಾಗಿಯೆ ಇದ್ದಿತು. ಇವನ ಸಾಮ್ರಾಟತ್ವ ನಾಮಮಾತ್ರದ್ದಾಗಿತ್ತು. ಶ್ರೀರಂಗಪಟ್ಟಣದಲ್ಲಿ ಮಾತ್ರ ಇವನ ತಮ್ಮ 3ನೆಯ ರಾಮರಾಯ ವಿಜಯನಗರದ ಪ್ರತಿನಿಧಿಯಾಗಿ ಮುಂದುವರೆದಿದ್ದ. ಆದರೆ ಈತನೂ ಅಣ್ಣನ ನಾಮಮಾತ್ರ ಪ್ರತಿನಿಧಿಯಾಗಿದ್ದ.

ಪೆಮ್ಮಸಾನಿ ಪೆದ್ದತಿಮ್ಮರಾಜ ಶ್ರೀರಂಗರಾಯನ ಮಂತ್ರಿಯಾಗಿದ್ದ. ಮೊದಲು ಓಬಲ ಅನಂತರ ವೆಂಕಟಪ್ಪನಾಯ್ಡು ದಳವಾಯಿ ಅಥವಾ ಸೇನಾಪತಿಯಾಗಿದ್ದರು.

ಶ್ರೀರಂಗರಾಯ 1586ರಲ್ಲಿ ನಿಧನಹೊಂದಿದ. (ಎ.ವಿ.ವಿ.)

**ಶ್ರೀರಂಗರಾಯ II:** ವಿಜಯನಗರದ ಆರವೀಡು ವಂಶದ ರಾಜ. ಒಂದನೆಯ ವೆಂಕಟಪತಿಯ ಸೋದರನಾದ್ದ ರಾಮನ ಮಗ; ವೆಂಕಟಪತಿ ಸಾಯುವಾಗ ಈತನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ. ಆದರೆ ವೆಂಕಟಪತಿಯ ಮಗನೆಂದು ಘೋಷಿಸಲಾಗಿದ್ದ ಒಬ್ಬ ಹುಡುಗನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ್ದು, ಈಗ ಆ ಅಳಿಯನನ್ನು ಸಿಂಹಾಸನದಲ್ಲಿ ಸ್ಥಾಪಿಸಲು ಜಗರಾಯ ಯತ್ನಿಸಿದ. ಶ್ರೀರಂಗ ಮತ್ತು ಆತನ ಸಂಸಾರದವರೆಲ್ಲರು ಸೆರೆಮನೆಯ ಬಂದಿಯಾದರು. ಆದರೆ ಸಾಮಂತನಾಗಿದ್ದ ಎಚ್ಚಮನಾಯಕನ ಪ್ರಯತ್ನದಿಂದ ಶ್ರೀರಂಗನ ಮಗ ರಾಮದೇವ ಸೆರೆಮನೆಯಿಂದ ಪಾರಾಗಿ, ಇತರ ನಿಷ್ಠಾವಂತ ನಾಯಕರ ನೆರವಿನಿಂದ ತೋಪೂರಿನ ಕದನದಲ್ಲಿ ಜಗರಾಯನನ್ನು ಸೋಲಿಸಿ, ಸಿಂಹಾಸನವನ್ನೇರಿದ. ಹೀಗಾಗಿ ಶ್ರೀರಂಗ ಹೆಸರಿಗೆ ಅರಸನಾದರೂ ದುರಂತಕ್ಕೀಡಾದ ವ್ಯಕ್ತಿಯಾಗಿ ಕಣ್ಮರೆಯಾದ. (ಬಿ.ಆರ್.ಜಿ.)

**ಶ್ರೀರಂಗರಾಯ III:** ವಿಜಯನಗರ ಸಾಮ್ರಾಜ್ಯದ ಕೊನೆಯ ಸಾಮ್ರಾಟ (1642–69). ಇವನ ಕಾಲಕ್ಕೆ ವಿಜಯನಗರ ಸಾಮ್ರಾಜ್ಯ ಕೇವಲ ನಾಮಮಾತ್ರವಾಗಿ ಉಳಿದಿತ್ತು. ಸಾಮ್ರಾಟನಾದರೂ ಸಾರ್ವಭೌಮತ್ವ ಸಂಶಯಾಸ್ಪದವಾಗಿಯೇ ಉಳಿಯಿತು. ಸಾಕಷ್ಟು ಸೈನ್ಯ ಮತ್ತು ಸಂಪನ್ಮೂಲಗಳ ಬಲವಿಲ್ಲದೆ ತನ್ನ ಸ್ಥಾನವನ್ನು ದೃಢಪಡಿಸಿಕೊಳ್ಳಲು ಹೋರಾಡಬೇಕಾದ ಪರಿಸ್ಥಿತಿ ಇವನಿಗಿದ್ದಿತು. ಉತ್ತರದಲ್ಲಿ ಗೋಲ್ಕೊಂಡದ ಸುಲ್ತಾನ ಅರಾಜಕತೆಗೆ ಬಲಿಯಾಗಿದ್ದ ಹಿಂದು ಸಾಮ್ರಾಜ್ಯದಲ್ಲಿ ಸಿಕ್ಕಿದಷ್ಟು ಪಾಲು ಪಡೆಯಲು ಯತ್ನಿಸುತ್ತಿದ್ದ. ದಕ್ಷಿಣದಲ್ಲಿ ಮಧುರೆ, ಜಿಂಜಿ ಮತ್ತಿತರ ಕೆಲವು ಸಾಮಂತ ಪಾಳೆಯಪಟ್ಟುಗಳು ಸಾಮ್ರಾಜ್ಯದ ನೊಗ ಕಳಚಿದ್ದವು. ಇನ್ನೊಂದು ಕಡೆ ಮೈಸೂರು ಒಡೆಯರು ಮತ್ತು ಕೆಳದಿಯ ನಾಯಕರು ಸಾಮ್ರಾಜ್ಯಕ್ಕೆ ನಿಷ್ಠೆಯಿಂದ ಇದ್ದರೂ ತಮ್ಮ ಏಳಿಗೆಯನ್ನು ಸಾಧಿಸುವಲ್ಲಿ ಆಸಕ್ತರಾಗಿದ್ದರು. ಶ್ರೀರಂಗ ಬಿಜಾಪುರದ ಸಹಾಯದಿಂದ 1644ರಲ್ಲಿ ಗೋಲ್ಕೊಂಡ ನಡೆಸಿದ ದಾಳಿಯನ್ನು ತಡೆಯುವಲ್ಲಿ ಯಶಸ್ವಿಯಾದ. ಆದರೆ ಅದೇ ವೇಳೆಗೆ ಇವನು ಈಗಿನ ತಮಿಳುನಾಡಿನಲ್ಲಿದ್ದ ಸಾಮಂತರನ್ನು ತಹಬಂದಿಗೆ ತರಬೇಕಾಯಿತು. ತಂಜಾವೂರು, ಮಧುರೆ ಮತ್ತು ಜಿಂಜಿನಾಯಕರು ಶ್ರೀರಂಗನ ಪರಮಾಧಿಕಾರವನ್ನು ಧಿಕ್ಕರಿಸತೊಡಗಿದರು. ಶ್ರೀರಂಗ ಇವರನ್ನು ಹತ್ತಿಕ್ಕುವ ಪ್ರಯತ್ನಪಟ್ಟಿದ್ದಾಗಲೇ ಗೋಲ್ಕೊಂಡ ವಿಜಯನಗರದ ಮೇಲೆ ಪುನಃ 1645ರಲ್ಲಿ ಆಕ್ರಮಣ ಎಸಗಿತು. ಅದೇ ವರ್ಷ ಮಧುರೆ ಮತ್ತು ಜಿಂಜಿಯ ನಾಯಕರು ಈತನಿಗೆ ಭಾರಿ ಆಘಾತ ಉಂಟುಮಾಡಿದರು. ಶ್ರೀರಂಗ ಮೈಸೂರು, ಕೆಳದಿ, ತಂಜಾವೂರು ಮೊದಲಾದ ಸಾಮಂತರ ಸಹಾಯದಿಂದ ಹೋರಾಡಿದ. ಆದರೆ 1646ರಲ್ಲಿ ಬಿಜಾಪುರ ಮತ್ತು ಗೋಲ್ಕೊಂಡದ ಸಂಯುಕ್ತ ಸೇನೆ ರಾಜಧಾನಿ ವೆಲ್ಲೂರನ್ನು ವಶಪಡಿಸಿಕೊಂಡಿತು. ಕೆಳದಿಯ ಶಿವಪ್ಪನಾಯಕ ನಿರಾಶ್ರಿತನಾದ ಶ್ರೀರಂಗನಿಗೆ ತನ್ನ ರಾಜಧಾನಿಯನ್ನು ಮರಳಿ ಪಡೆಯಲು ಸಹಾಯಮಾಡಿದ. ಇದರಿಂದ

ಶ್ರೀರಂಗ ಪುನಃ ಪೆನುಗೊಂಡೆ ಮತ್ತು ವೆಲ್ಲೂರುಗಳನ್ನು ಸ್ವಾಧೀನಪಡಿಸಿಕೊಂಡು ಕೆಲವು ವರ್ಷಗಳ ಕಾಲ ಆಳಿರಬಹುದೆಂದು 1646–49 ರವರೆಗಿನ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಪುನಃ ಗೋಲ್ಕೊಂಡದ ದಾಳಿಯಿಂದ ಇವನು 1649ರಲ್ಲಿ ಎರಡನೆಯ ಬಾರಿ ರಾಜಧಾನಿಯನ್ನು ತೆರೆಯಬೇಕಾಯಿತು. ಇದೇ ದಂಡಯಾತ್ರೆಯನ್ನು ಮುಂದುವರಿಸಿ ಗೋಲ್ಕೊಂಡದ ಸೈನ್ಯ ತಂಜಾವೂರು ಮತ್ತು ಜಿಂಜಿಗಳನ್ನು ನಾಶಮಾಡಿತು.

ಈತ ಅನಂತರ ಬೇಲೂರು ಮತ್ತು ಸಕ್ಕರೆಪಟ್ಟಣಗಳ ಪಾಳೆಯಪಟ್ಟುಗಳಲ್ಲಿ ಆಳ್ವಿಕೆ ನಡೆಸಿದ (ಕೆಳದಿ ನಾಯಕರು ಶ್ರೀರಂಗನಿಗೆ ಈ ಪ್ರದೇಶಗಳನ್ನೂ ಕೊಟ್ಟರೆ ಅಥವಾ ಮೈಸೂರು ಒಡೆಯರು ಕೊಟ್ಟರೆ ಎಂಬುವಲ್ಲಿ ಇತಿಹಾಸಕಾರರು ಭಿನ್ನಾಭಿಪ್ರಾಯ ತಳೆದಿದ್ದಾರೆ). ಶ್ರೀರಂಗ 1665ರಲ್ಲಿ ಬೇಲೂರಿನಿಂದ ಚಂದ್ರಗಿರಿಗೂ ತರುವಾಯ ಪೆನುಗೊಂಡೆಗೂ ಹೋಗಿ 1669 ರವರೆಗೂ ಆಳಿದನೆಂದು ಶಾಸನಗಳು ತಿಳಿಸುತ್ತವೆ.

ಶ್ರೀರಂಗ ಸು.1681ರಲ್ಲಿ ನಿಧನನಾದ. ಇವನಿಗೆ ಮಕ್ಕಳೂ ಇರಲಿಲ್ಲವೆಂದು ತೋರುತ್ತದೆ. ಇವನ ಮರಣದಿಂದ ವಿಜಯನಗರ ಸಾಮ್ರಾಜ್ಯ ಅಸ್ತಂಗತವಾಯಿತು. **(ಡಿ.ಎಸ್.ಜಿ.)**

**ಶ್ರೀವಿಕ್ರಮ:** ತಲಕಾಡಿನ ಗಂಗವಂಶದ ದೊರೆ (ಸು.629–54). ಮುಷ್ಕರನಿಗೆ ಸಿಂಧೂ ರಾಜಕುಮಾರಿಯಲ್ಲಿ ಜನಿಸಿದ ಇವನು, ಪ್ರಾಯಶಃ ತನ್ನ ಚಿಕ್ಕಪ್ಪ ಫಲವೀರನ ಅನಂತರ ಪಟ್ಟಕ್ಕೆ ಬಂದ. ಪೊನವಿನೀತ ಇವನ ಬಿರುದು. ಈತ ಹದಿನಾಲ್ಕು ವಿದ್ಯೆಗಳಲ್ಲೂ ರಾಜನೀತಿಯಲ್ಲೂ ವಿಶೇಷವಾದ ಜ್ಞಾನವನ್ನು ಹೊಂದಿದ್ದು ಸಮಗ್ರ ನೀತಿಶಾಸ್ತ್ರದ ಪ್ರವಚನ ಪ್ರಯೋಗದಲ್ಲಿ ನೈಪುಣ್ಯ ಪಡೆದಿದ್ದುದಾಗಿ ಶಾಸನಗಳು ತಿಳಿಸುತ್ತವೆ. ಇವನು ತನ್ನ ಪರಾಕ್ರಮದಿಂದ ಅನೇಕ ಜನಪದಗಳನ್ನು ಸ್ವಾಧೀನಪಡಿಸಿಕೊಂಡನೆಂದೂ ತನ್ನ ಪ್ರತಾಪದಿಂದ ಸಕಲ ಸಾಮಂತರನ್ನು ಬಗ್ಗಿಸಿದನೆಂದೂ ಒಂದು ಶಾಸನ ತಿಳಿಸುತ್ತದೆ. ಆದರೆ ವಿವರಗಳು ದೊರೆಯುವುದಿಲ್ಲ.

ಕಾವೇರಿ ನದಿಗೆ ಕಟ್ಟೆ ಕಟ್ಟಿಸಿದ ಪ್ರಸಿದ್ಧ ಕರಿಕಾಲನ ವಂಶಜನಾದ ಚೋಳ ದೊರೆಯೊಬ್ಬನ ಮಗಳನ್ನು ಶ್ರೀವಿಕ್ರಮ ವರಿಸಿದ್ದ. ಇವರಿಗೆ ಭೂವಿಕ್ರಮನೆಂಬ ಮಗ ಜನಿಸಿದ. **(ಟಿ.ಎಸ್.ಎಸ್.ಎನ್.)**

**ಶ್ರೀವಿಜಯ:** ಸು. 850. ಪಂಪಪೂರ್ವಯುಗದ ಕವಿ. ಕವಿರಾಜಮಾರ್ಗ ಎಂಬ ಗ್ರಂಥದ ಕರ್ತೃ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಹಲವು ಕಡೆ ಈ ಕವಿಯ ಹೆಸರು ಕಾಣಿಸಿಕೊಂಡಿದೆ. ಮೊತ್ತಮೊದಲನೆಯದಾಗಿ, ಕವಿರಾಜಮಾರ್ಗದಲ್ಲಿ ಪೂರ್ವಪದ್ಯಕವಿಗಳನ್ನು ಸ್ಮರಿಸುವ ಸಂದರ್ಭದಲ್ಲಿ, ಆದ್ಯಕಾವ್ಯಕ್ಕೆ ಲಕ್ಷ್ಯಕಾರರೆನಿಸಿದ ಕವಿಗಳ ಸಾಲಿನಲ್ಲಿ ಪರಮಶ್ರೀವಿಜಯನ ಹೆಸರು ಮೊದಲಲ್ಲೇ ಬಂದಿದೆ. ಅಲ್ಲದೆ, ಪ್ರತಿ ಪರಿಚ್ಛೇದಾಂತ ಪದ್ಯದಲ್ಲಿಯೂ ಗ್ರಂಥ ಶ್ರೀವಿಜಯಕೃತ ಎಂದು ಅರ್ಥಬರುವಂತೆ ಪ್ರಯೋಗವಿದೆ (ಉದಾ: ಕವಿಪ್ರಕರಂ ಶ್ರೀವಿಜಯಪ್ರಭೂತಮನಿದಂ ಕೈಕೊಳ್ವುದೀ ಮಾಟ್ಕೆಯಿಂ). ದುರ್ಗಸಿಂಹ (ಸು.1031) ತನ್ನ ಪಂಚತಂತ್ರದಲ್ಲಿ 'ಶ್ರೀವಿಜಯರ ಕವಿಮಾರ್ಗಂ ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೈದೀವಿಗೆಯುಮಾದುದದಱಿಂ ಶ್ರೀ ವಿಜಯರ್‌ದೇವರವರನೇವಣ್ಣಿಪುದೋ' ಎಂದು ಗೌರವಪೂರ್ವಕವಾಗಿ ಹೊಗಳಿದ್ದಾನೆ. ಕೇಶಿರಾಜ (ಸು.1260) ಶಬ್ದಮಣಿದರ್ಪಣದಲ್ಲಿ ಗಜಗ ಮುಂತಾದ ಕವಿಗಳೊಂದಿಗೆ ಶ್ರೀವಿಜಯನನ್ನೂ ಸ್ಮರಿಸಿರುವುದಲ್ಲದೆ, ಕವಿರಾಜಮಾರ್ಗದಿಂದ ಉದಾಹರಣ ಪದ್ಯಗಳನ್ನೂ ತೆಗೆದುಕೊಂಡಿದ್ದಾನೆ. ಈ ಪ್ರಮಾಣಗಳ ಆಧಾರದ ಮೇಲೆ ಕವಿರಾಜಮಾರ್ಗವನ್ನು ಬರೆದವನು ಶ್ರೀವಿಜಯ ಎಂದು ಅನೇಕ ವಿದ್ವಾಂಸರು ತರ್ಕಿಸಿದ್ದಾರೆ.

ನೃಪತುಂಗಸಭಾಸದನಾದ ಶ್ರೀವಿಜಯನ ವ್ಯಕ್ತಿತ್ವದ ಚಿತ್ರಣ ಕವಿರಾಜಮಾರ್ಗದಲ್ಲಿ ತಕ್ಕಮಟ್ಟಿಗೆ ವಿವರಪೂರ್ಣವಾಗಿ ಬಂದಿದೆ (3ನೆಯ ಪರಿಚ್ಛೇದ, ಪದ್ಯ 218–230). ಇವನು ವ್ಯಾಕರಣ ಕಾವ್ಯ ನಾಟಕ ಲೋಕಕಲೆಗಳಲ್ಲಿ ನಿಷ್ಣಾತ; ಕವಿವೃಷಭರ ಪ್ರಯೋಗಗಳಲ್ಲಿ ಕೃತಪರಿಚಯಬಲನಾಗಿದ್ದ; ಲಕ್ಷ್ಯ ಲಕ್ಷಣಗಳಲ್ಲಿ ಅಭಿಜ್ಞ; ಅನೇಕಗುಣಸಮನ್ವಿತನಾದ ಇವನು ಪುರುಷವ್ರತ ನಿಶ್ಚಿತ (ಎಂದರೆ ಆಜೀವಪರ್ಯಂತ ಬ್ರಹ್ಮಚಾರಿ; ಜೈನಧರ್ಮಾನುಯಾಯಿಗೆ ಮಾತ್ರ ಬಳಸಲಾಗುತ್ತಿದ್ದ ವಿಶಿಷ್ಟ ಪಾರಿಭಾಷಿಕ ಪದ ಇದು). ಕವಿರಾಜಮಾರ್ಗದ ರಚನೆಯ ಕಾಲದಲ್ಲಿ (ಸು.815–877) ವೈದಿಕ ಮತಾನುಯಾಯಿಯಾಗಿದ್ದ ನೃಪತುಂಗನೇ ಗ್ರಂಥಕರ್ತನಾಗಿದ್ದರೆ, ಜೈನನಾದ ಸಭಾಸದನೊಬ್ಬನ ವರ್ಣನೆ ಕೃತಿಯಲ್ಲಿ ಬರುವುದು ಅಸಂಭವ ಹಾಗೂ ಅಪ್ರಸಕ್ತ. ಶ್ರೀವಿಜಯನೇ ಕವಿರಾಜಮಾರ್ಗದ ಕರ್ತೃ ಎಂದು ಕೆಲವು ವಿದ್ವಾಂಸರು ಬಹು ಹಿಂದಿನಿಂದಲೂ ಮಾಡಿಕೊಂಡು ಬರುತ್ತಿರುವ ವಾದಕ್ಕೆ ಈ ಆಂತರಿಕ ಪ್ರಮಾಣ ತೀರ್ಮಾನದ ಸ್ವರೂಪವನ್ನು ಕೊಡಬಲ್ಲದ್ದಾಗಿದೆ.

3ನೆಯ ಮಂಗರಸ (ಸು.1508) ತನ್ನ ನೇಮಿಜಿನೇಶ ಸಂಗತಿಯಲ್ಲಿಯೂ ದೊಡ್ಡಯ್ಯ (ಸು.1550) ತನ್ನ ಚಂದ್ರಪ್ರಭ ಚರಿತೆಯಲ್ಲಿಯೂ ಚಂದ್ರಪ್ರಭ ಪುರಾಣವನ್ನು ಬರೆದ ಒಬ್ಬ ಶ್ರೀವಿಜಯನನ್ನು ಹೊಗಳಿದ್ದಾರೆ. ಈ ಕಾವ್ಯ ದೊರೆತಿಲ್ಲ. ಕವಿರಾಜಮಾರ್ಗದಲ್ಲಿ ಹೆಸರಿಸಿರುವ ಪರಮಶ್ರೀವಿಜಯ ಕವೀಶ್ವರನೇ ಪುರಾಣಕರ್ತನೆಂದೂ ಈ ಪುರಾಣಕರ್ತನೂ ಕವಿರಾಜಮಾರ್ಗಕಾರನೂ ಒಬ್ಬನೇ ವ್ಯಕ್ತಿಯೆಂದೂ ಊಹಿಸಲಾಗಿದೆ. ಆದರೆ ಹೀಗೆಂದು ಖಂಡಿತವಾಗಿ ಹೇಳಲು ಇನ್ನೂ ಹೆಚ್ಚಿನ ಆಧಾರಗಳು ಬೇಕು.

ಜೀವಂಧರಚರಿತೆಯ ಭಾಸ್ಕರ ಕವಿ (ಸು.1424) ವಿಜಯನ ಭಾವವನ್ನು ಸ್ಮರಿಸಿದ್ದಾನೆ. ದೇವಪ್ಪ ಕವಿ (ಸು.1540) ಜೈನಪುರಾಣಕರ್ತರ ಸಾಲಿನಲ್ಲಿ ವಿಜಯನನ್ನು ಹೆಸರಿಸಿದ್ದಾನೆ. ಈ ವಿಜಯನು ಚಂದ್ರಪ್ರಭಪುರಾಣದ ಕರ್ತ ಶ್ರೀವಿಜಯನಾಗಿರಬಹುದು.

ಶ್ರವಣಬೆಳಗೊಳದ ಶಾಸನವೊಂದರಲ್ಲಿ (ಸು.977) ಜೈನ ಆಚಾರ್ಯ ಮಲ್ಲಿಷೇಣನ ಪ್ರಶಸ್ತಿಯನ್ನು ಕುರಿತಿದ್ದು ಇದರಲ್ಲಿ ಒಬ್ಬ ಶ್ರೀವಿಜಯನ ಉಲ್ಲೇಖವಿದೆ. ಈತ ಯಾರೋ ತಿಳಿಯದು.

ರಾಷ್ಟ್ರಕೂಟ 3ನೆಯ ಇಂದ್ರನ (914–29) ದಂಡನಾಯಕ ಶ್ರೀವಿಜಯನ ಪ್ರಶಸ್ತಿಯುಳ್ಳ ಶಾಸನವೊಂದು ಕಡಪ ಜಿಲ್ಲೆಯ ದಾನವುಲಪಾಡು ಎಂಬ ಸ್ಥಳದಲ್ಲಿ ದೊರೆತಿದೆ. ಶಾಸನದಲ್ಲಿ ಈತನಿಗೆ ಅನುಪಮ ಕವಿ, ಅಜಿವಿಂಗೋಜ ಎಂಬ ವಿಶೇಷಣಗಳಿವೆ; ಈತ ಸಂನ್ಯಾಸವನ್ನು ಕೈಗೊಂಡು ಮೋಕ್ಷಪದವಿಯನ್ನು ಹೊಂದಿದನೆಂದು ಹೇಳಿದೆ. ಇಲ್ಲಿನ ವಿಶೇಷಣಗಳು ನೃಪತುಂಗ ಸಭಾಸದನ ವರ್ಣನೆಯನ್ನು ನೆನಪಿಗೆ ತರುತ್ತವೆ. ನೃಪತುಂಗಸಭಾಸದ ಕವಿರಾಜಮಾರ್ಗಕಾರ ಶ್ರೀವಿಜಯನೂ ಈ ಶಾಸನದ ಶ್ರೀವಿಜಯನೂ ಒಬ್ಬನೇ ಇರಬಹುದು ಎಂಬ ಸಂದೇಹಕ್ಕೂ ಅವಕಾಶವಿದೆ. ನೃಪತುಂಗ ಸಭಾಸದ ಪೂರ್ವವಯಸ್ಸಿನವನಾಗಿದ್ದು ಇಂದ್ರನ ಕಾಲಕ್ಕೆ ವೃದ್ಧನಾಗಿ, ಸಂನ್ಯಾಸಿಯಾಗಿ ಸಮಾಧಿಮರಣವನ್ನು ಹೊಂದಿರಬಹುದು **(ನೋಡಿ: ಕವಿರಾಜಮಾರ್ಗ)**. **(ಎಂ.ವಿ.ಎಸ್.)**

# ಷ

**ಷಡಕ್ಷರದೇವ:** ಸು.1655. ಪ್ರಸಿದ್ಧ ವೀರಶೈವ ಕವಿ. ರಾಜಶೇಖರ ವಿಳಾಸ, ಶಬರಶಂಕರವಿಳಾಸ, ಬಸವರಾಜವಿಜಯ ಎಂಬ ಮೂರು ಚಂಪೂ ಕೃತಿಗಳನ್ನು ಕನ್ನಡದಲ್ಲೂ ಕವಿಕರ್ಣರಸಾಯನ ಎಂಬ ಗ್ರಂಥವನ್ನು ಸಂಸ್ಕೃತದಲ್ಲೂ ರಚಿಸಿದ್ದಾನೆ. ಈ ಪ್ರಸಿದ್ಧ ಗ್ರಂಥಗಳಲ್ಲದೆ ಸುಮಾರು 18 ಕೃತಿಗಳನ್ನು ಈತ ಕನ್ನಡ ಮತ್ತು ಸಂಸ್ಕೃತದಲ್ಲಿ ರಚಿಸಿದ್ದಾನೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ದನುಗೂರು ಇವನ ಜನ್ಮಸ್ಥಳ. ಚಿಕ್ಕವೀರದೇಶಕ ಈತನ ಗುರು. ಕವಿಯ ವಿದ್ಯಾಭ್ಯಾಸ ಹಾಗೂ ಕಾವ್ಯರಚನಾ ಕ್ಷೇತ್ರ ಯಳಂದೂರು. ಈತ ಚಿಕ್ಕದೇವರಾಜನ ತಾಯಿ ಅಮೃತಾಂಬೆಯ ತವರು ಮನೆಗೆ ಕುಲಗುರುವಾಗಿದ್ದ. ಚಿಕ್ಕದೇವರಾಜ, ತಿರುಮಲಾರ್ಯ, ವಿಶಾಲಾಕ್ಷಪಂಡಿತ ಇವರು ಈತನ ಸಮಕಾಲೀನರೂ ಸಹಪಾಠಿಗಳೂ ಆಗಿದ್ದರು. ಪೂರ್ವಕವಿ ಗಳಲ್ಲಿ ಹರಿಹರ, ರಾಘವಾಂಕ, ಭೀಮಕವಿ, ಕೆರೆಯಪದ್ಮರಸ, ಕೇಶಿರಾಜ, ಪಾಲ್ಕುರಿಕೆ ಸೋಮನಾಥ ಮೊದಲಾದವರನ್ನು ಸ್ಮರಿಸಿದ್ದಾನೆ. ಇವನಿಗೆ ಉಭಯಕವಿತಾವಿಶಾರದ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಈತ ದನುಗೂರು ಮಠದ ಸ್ವಾಮಿಯೂ ಆಗಿದ್ದ. ಈತನ ಸಮಾಧಿ ಯಳಂದೂರಿನಲ್ಲಿದೆ.

ರಾಜಶೇಖರವಿಳಾಸ ಷಡಕ್ಷರದೇವನ ಚೊಚ್ಚಲು ಕೃತಿ. ಇದರಲ್ಲಿ 14 ಆಶ್ವಾಸಗಳೂ 10,861 ಪದ್ಯಗಳೂ ಇವೆ. ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ ಈ ಕಾವ್ಯಕ್ಕೆ ಆಕರ. ಸತ್ಯೇಂದ್ರಚೋಳನ ಮಗ ರಾಜಶೇಖರ ತನ್ನ ಸ್ನೇಹಿತ ಮಿತವಚನನೊಂದಿಗೆ ರಾಜಬೀದಿಯಲ್ಲಿ ಅಶ್ವವಿಹಾರಿಯಾಗಿ ಬರುತ್ತಿರಲು, ಶಿವಭಕ್ತೆ ತಿರುಕೊಳವಿನಾಚಿಯ ಒಬ್ಬನೆ ಮಗ ಶಂಕರನು ಮಿತವಚನನ ಕುದುರೆಯ ಗೊರಸಿಗೆ ಸಿಕ್ಕು ಸಾಯುತ್ತಾನೆ. ತಿರುಕೊಳ ವಿನಾಚಿ ತನ್ನ ಅಳಲನ್ನು ಸತ್ಯೇಂದ್ರ ಚೋಳನಲ್ಲಿ ತೋಡಿಕೊಂಡಾಗ ರಾಜನು ನಿನಗಾದಪರಾಧಮೆನ್ನದು ಎಂದು, ರಾಜಶೇಖರ ಮಗ ಮಿತವಚನನಿಗೆ ವಚನ ಕೊಟ್ಟ ಪ್ರಕಾರ ರಾಜನು ಸ್ವತಃ ಮಗನಿಗೇ ಮರಣದಂಡನೆ ಯನ್ನೀಯುತ್ತಾನೆ. ರಾಜಶೇಖರನ ಶಿರಚ್ಛೇದನವಾಗುತ್ತದೆ. ಕೂಡಲೆ ಅದು ಪಂಚಾಕ್ಷರಿಮಂತ್ರವನ್ನು ಜಪಿಸತೊಡಗುತ್ತದೆ. ಆಗ ಪರಿಮೋಹಿ, ಸಂದಾಯಿ, ತಿರುಕೊಳವಿನಾಚಿ, ಸತ್ಯೇಂದ್ರ ಮೊದಲಾದವರು ತಮ್ಮ ತಮ್ಮ ಶಿರಗಳನ್ನು ಕತ್ತರಿಸಿಕೊಳ್ಳುತ್ತಾರೆ. ಕೊನೆಯಲ್ಲಿ ಶಿವ ಪ್ರತ್ಯಕ್ಷನಾಗಿ ಅವರೆಲ್ಲರಿಗೂ ಪ್ರಾಣದಾನ ನೀಡುತ್ತಾನೆ. ಇದು ಕಥಾಸಾರ. ಪಂಚಾಕ್ಷರೀ ಮಂತ್ರದ ಮಹಿಮೆಯನ್ನು ನಿರೂಪಿಸುವುದು ಕಾವ್ಯದ ಮುಖ್ಯ ಉದ್ದೇಶ. ಕಥೆ ತೀರ ಚಿಕ್ಕದಾದರೂ ಕವಿ ಅದನ್ನು ಅಷ್ಟಾದಶ ವರ್ಣನೆಗಳಿಂದ ಹಿಗ್ಗಿಸಿದ್ದಾನೆ. ಕೆಲವೊಮ್ಮೆ ವರ್ಣನೆಗಳು ಕಥೆಯ ಓಟಕ್ಕೆ ಭಂಗತರುವಷ್ಟರ ಮಟ್ಟಿಗೆ ವಿಲಂಬಿತವಾಗಿವೆ. ಕಾವ್ಯಶೈಲಿ ಸಂಸ್ಕೃತ ಭಾಹಿಷ್ಠವಾಗಿದೆ.

ಆದರೆ ಅಲ್ಲಲ್ಲಿ ಕೆಲವು ವರ್ಣನೆಗಳು ಸಹಜವಾಗಿದ್ದು ಆಕರ್ಷಕವಾಗಿವೆ. ಕಾವ್ಯಶೈಲಿ ವರ್ಣನಾತ್ಮಕವಾಗಿದ್ದು ಓಜಸ್ಸಿನಿಂದ ಕೂಡಿದೆ. ಶೃಂಗಾರ, ಕರುಣ ಹಾಗೂ ಭಕ್ತಿ ಇಲ್ಲಿಯ ಮುಖ್ಯರಸಗಳು. ಕಾವ್ಯದ 11 ಮತ್ತು 12ನೆಯ ಆಶ್ವಾಸಗಳು ಶೃಂಗಾರರಸದಿಂದ ತುಂಬಿಹೋಗಿವೆ. ತಿರುಕೊಳ ವಿನಾಚಿಯ ಪ್ರಲಾಪ ಪ್ರಸಂಗಗಳಲ್ಲಿ ಕರುಣರಸ ಮಡುಗಟ್ಟಿದೆ. ಇಡೀ ಕಾವ್ಯದಲ್ಲಿ ಈ ಪ್ರಸಂಗ ಒಂದು ಮಹತ್ವದ ಘಟ್ಟ. ಇಲ್ಲಿಂದ ಮುಂದೆ ಕಥೆಗೆ ಮುಖ್ಯ ತಿರುವು ದೊರಕುತ್ತದೆ. ಕೊನೆಯಲ್ಲಿ ಬರುವ ಷಡಕ್ಷರಮಂತ್ರ ಮಹಿಮೆಯ ಸನ್ನಿವೇಶ ಭವ್ಯವಾಗಿದೆ. ಪಾತ್ರಚಿತ್ರಣದಲ್ಲಿ ಮಾನವೀಯ ಹೃದಯಗಳ ಮಿಡಿತವಿದೆ, ಅನುಕಂಪೆಯಿದೆ. ಸತ್ಯೇಂದ್ರಚೋಳ, ಪತಿಮೋಹಿ, ರಾಜಶೇಖರ, ಮಿತವಚನ, ಸಂದಾಯಿ, ಅಮೃತಮತಿ, ಸರ್ವಮಂಗಳೆ, ತಿರುಕೊಳವಿನಾಚಿ ಮೊದಲಾದ ಪಾತ್ರಗಳು ಶಿವಭಕ್ತಿ, ಸ್ವಾಮಿಭಕ್ತಿ, ಗುರುಭಕ್ತಿ, ಕರ್ತವ್ಯನಿಷ್ಠೆ, ಮಿತ್ರತ್ವ, ಲಜ್ಜೆ, ವಿನಯ, ಸಮತೆ, ಮಾತೃಪ್ರೇಮ ಮುಂತಾದ ಆದರ್ಶಗುಣಗಳಿಂದ ಜೀವಂತವಾಗಿವೆ. ರಾಜಶೇಖರವಿಳಾಸಕ್ಕೆ ಭಾವಚಿಂತಾರತ್ನವೇ ಮೂಲವಾದರೂ ಕವಿ ಹಲವಾರು ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಪಾತ್ರಗಳ ಸರ್ವಾಂಗಸುಂದರ ಬೆಳವಣಿಗೆಯಲ್ಲಂತೂ ಷಡಕ್ಷರಿಯದೇ ಮೇಲುಗೈ. ವಸ್ತುವಿನ ಉದಾತ್ತತೆ, ಪಾಂಡಿತ್ಯ, ಪ್ರತಿಭೆ, ಶೈಲಿಯ ಔನ್ನತ್ಯ, ಮಾನವೀಯ ಜೀವನದ ಮೌಲ್ಯಗಳ ದರ್ಶನ ಸೌಂದರ್ಯ– ಈ ಗುಣಗಳಿಂದ ಕೂಡಿದೆ. ಮಹಾಕಾವ್ಯದ ಹರಹನ್ನುಳ್ಳ ಈ ಕಾವ್ಯ ಷಡಕ್ಷರದೇವನ ಪ್ರತಿಭೆಗೂ ಪಾಂಡಿತ್ಯಕ್ಕೂ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಬಸವರಾಜವಿಜಯದಲ್ಲಿ 42 ಆಶ್ವಾಸಗಳೂ ಸು. 3,500ಕ್ಕೂ ಮೇಲ್ಪಟ್ಟು ಪದ್ಯಗಳೂ ಇವೆ. ಇದಕ್ಕೆ ವೃಷಭೇಂದ್ರವಿಜಯ ಎಂಬ ಹೆಸರೂ ಇದೆ. ಈ ಕಾವ್ಯದಲ್ಲಿ ಬಸವಣ್ಣನ ಜೀವನಚರಿತೆ ನಿರೂಪಿತವಾಗಿದೆ. ಜೊತೆಗೆ, ಸುಮಾರು 80 ಜನ ಶಿವಶರಣರ ಕಥೆಗಳೂ ಬಂದಿವೆ. ಈ ದೃಷ್ಟಿಯಿಂದ ಇದನ್ನು ಶರಣರ ಬೃಹತ್ಕಥಾಕಾವ್ಯಮಂಜರಿ ಎಂದು ಕರೆಯಬಹುದು.

ಶಬರಶಂಕರವಿಳಾಸ 5 ಆಶ್ವಾಸ ಹಾಗೂ 467 ಪದ್ಯಗಳನ್ನುಳ್ಳ ಖಂಡಕಾವ್ಯ. ಇದರಲ್ಲಿ ಶಿವನ 15ನೆಯ ಲೀಲೆಯಾದ ಕಿರಾತಲೀಲೆಯನ್ನು ವರ್ಣಿಸಿದೆ.

ಕವಿಕರ್ಣರಸಾಯನ ಸಂಸ್ಕೃತಕೃತಿಗಳಲ್ಲಿ ಪ್ರಮುಖವಾದದ್ದು. ಇದರಲ್ಲಿ 14 ಸರ್ಗಗಳಿವೆ (ನಾಲ್ಕು ಸರ್ಗಗಳು ಮಾತ್ರ ಅಚ್ಚಾಗಿವೆ). ತಮಿಳುನಾಡಿನ ಸೌಂದರಚೋಳನ ಕಥೆ ಇಲ್ಲಿನ ಕಥಾವಸ್ತು. ಕವಿ ತಾನು ಇದನ್ನು ಹರಿಹರನುದಿತಮಾರ್ಗದಿಂದ ರಚಿಸಿದುದಾಗಿ ಹೇಳಿಕೊಂಡಿದ್ದಾನೆ. ಈ ಕಾವ್ಯ ಶ್ರೀಹರ್ಷನ ನೈಷಧೀಯಚರಿತೆಗೆ ಸರಿದೊರೆಯಾಗಿ ನಿಲ್ಲುವ ಕಾವ್ಯಗುಣದಿಮದ ಕೂಡಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಶಿವಸ್ತೋತ್ರಮಂಜರಿ, ಶಿವಸ್ತವಮಂಜರಿ (101 ವೃತ್ತ) ನಮಃಶಿವಾಯಷ್ಟಕ, ಶ್ರೀಮದನಾದಿಸಿದ್ಧಲಿಂಗಸ್ತವನ, ವೀರಭದ್ರೋದಾಹರಣಗದ್ಯ, ವೀರಭದ್ರ ದಂಡಕ, ಇಂದುಧರಸ್ತೋತ್ರ, ಇಷ್ಟಲಿಂಗಸ್ತವನ–ಇವು ಇವನ ಇತರ ಸಂಸ್ಕೃತ ಗ್ರಂಥಗಳು. ಷಡಕ್ಷರಮಂತ್ರಸೋತ್ರ, ಬಸವಾಷ್ಟಕ, ನೀಲಾಂಬಿಕಾ ಸ್ತೋತ್ರ, ತತ್ತ್ವತ್ರಯಮಂಜರಿ, ಶಿವಾಧಿಕ್ಯರತ್ನಾವಳಿ, ಭಕ್ತಾಧಿಕ್ಯರತ್ನಾವಳಿ, ಮಂಗಲಾಷ್ಟಕ, ಲಿಂಗಾಷ್ಟಕ, ಮಾತಿನ ಮಾಲಿಕೆ, ತೋಂಟದಾರ್ಯಸ್ತವನ– ಇವು ಇವನ ಇತರ ಕನ್ನಡ ಗ್ರಂಥಗಳು.

ರಸಪುಷ್ಟಿಯುಳ್ಳ ಈತನ ಕಾವ್ಯಗಳನ್ನು ಮೆಚ್ಚಿಕೊಂಡ ಸಮಕಾಲೀನ ಪಂಡಿತರು ಈತನ ಕವಿತಾರಚನೆಯನ್ನು ಸಾಕಷ್ಟು ಹೊಗಳಿದ್ದಾರೆ. ಪಂಪನಿಂದ ಆರಂಭವಾದ ಚಂಪೂಯುಗ ಮತ್ತೆ ಕುಡಿಯೊಡೆದು ಚಿಗುರುವಂತಾದದ್ದು ಷಡಕ್ಷರಿಯ ಕಾಲದಲ್ಲಿ. ಅಷ್ಟೇ ಅಲ್ಲ, ಈತ ತನ್ನ ಕಾಲದ ಚಂಪೂಕವಿಗಳಿಗೆ ಮಾರ್ಗದರ್ಶಕನೂ ಆದ. ಇವನಿಂದ ಮುಂದೆ, ಇವನ ಪ್ರಭಾವಕ್ಕೊಳಗಾಗಿ ಅನೇಕ ಕವಿಗಳು ಚಂಪೂಕಾವ್ಯಗಳನ್ನು ರಚಿಸಿದರು. ಈ ದೃಷ್ಟಿಯಿಂದ ಕನ್ನಡ ಚಂಪೂಮಾರ್ಗವೇತ್ತರಲ್ಲಿ ಪಂಪ ಮೊದಲನೆಯವನಾದರೆ ಷಡಕ್ಷರದೇವ ಕೊನೆಯವನೆನ್ನಬಹುದು.

(ವಿ.ಎಸ್.ಎಚ್.)

**ಷಣ್ಮುಖಸ್ವಾಮಿ:** ಸು. 1700. ವೀರಶೈವ ವಚನಕಾರ. ಅಖಂಡೇಶ್ವರ ವಚನಗಳ ಕರ್ತೃ. ಗುಲ್ಬರ್ಗ ಜಿಲ್ಲೆಯ ಜೇವರಗಿಯ ಮಠಾಧ್ಯಕ್ಷನಾಗಿದ್ದ ಈತ ಕವಿಯೂ ಪಂಡಿತನೂ ತತ್ತ್ವವೇತ್ತನೂ ಆಗಿದ್ದ. ಅಖಂಡೇಶ್ವರ ಎಂಬುದು ಇವನ ವಚನಗಳ ಅಂಕಿತ.

ಇವನ ವಚನಗಳಲ್ಲಿ ಪಿಂಡಸ್ಥಲದಿಂದ ಐಕ್ಯಸ್ಥಲದವರೆಗಿನ ನಿರೂಪಣೆ 14 ವಿಭಾಗಗಳಲ್ಲಿ ಬಂದಿದೆ. ಷಟ್ಸ್ಥಲಸಿದ್ಧಾಂತವನ್ನು ಸ್ಥಲಕಟ್ಟುಗಳಿಗೆ ಅನುಗುಣವಾಗಿ ಪ್ರಮಾಣಪೂರ್ಣವಾಗಿ, ಸುಲಭವಾಗಿ ನಿರೂಪಿಸಲಾಗಿದೆ. ವಚನಗಳಲ್ಲಿ ನೀತಿ, ಭಕ್ತಿ, ವೈರಾಗ್ಯ, ಅಷ್ಟಾವರಣ, ಶಿವಯೋಗಗಳ ಪ್ರತಿಪಾದನೆಯಿದ್ದು ಶಾಸ್ತ್ರಪ್ರಮಾಣ, ಸುಂದರ ಭಾಷೆ, ಲೋಕಾನುಭವಗಳು ಕಂಡುಬರುತ್ತವೆ. ಮಾನವೀಯ ವ್ಯವಹಾರದ ಲೋಪದೋಷಗಳ ಕಟುವಾದ ಖಂಡನೆಯಿದೆ. ಹಿಂದಿನ ವಚನಕಾರರ ಭಾವ, ಪದಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ವಿಷಯ ನಿರೂಪಣೆ ಸರಳವಾಗಿದ್ದರೆ, ಭಾಷೆ ತಿಳಿಯಾಗಿದೆ. ಬಸವಣ್ಣನವರ ಬಗ್ಗೆ ಈ ಕವಿ ವಿಶೇಷ ಗೌರವವನ್ನು ವ್ಯಕ್ತಪಡಿಸಿದ್ದಾನೆ. ಬಸವಣ್ಣ ಹಾಗೂ ಅಕ್ಕಮಹಾದೇವಿಯರ ವಚನಗಳ ಛಾಯೆ ಇವನ ವಚನಗಳಲ್ಲಿ ಕಂಡುಬರುತ್ತದೆ. ಪರಿಣಾಮಕಾರಿಯಾದ ಈ ವಚನಗಳನ್ನು ಸಾರ್ವಜನಿಕವಾಗಿ ಪಠಿಸುವ ಸಂಪ್ರದಾಯ ಈಗಲೂ ಉಳಿದುಬಂದಿದ್ದು, ಇದು ಕವಿಯ ವ್ಯಕ್ತಿತ್ವದ ಹಿರಿಮೆಯ ದ್ಯೋತಕವಾಗಿದೆ.

17ನೆಯ ಶತಮಾನದಲ್ಲಿ ವಚನಸಾಹಿತ್ಯವನ್ನು ಮತ್ತೊಮ್ಮೆ ಪ್ರಚುರಗೊಳಿಸಿದ ಶ್ರೇಯಸ್ಸು ಈತನಿಗೆ ಸಲ್ಲುತ್ತದೆ. **(ಎಸ್.ಎಸ್.ಎಂ.ಎ.)**

# ಸ

**ಸಂಕೇಶ್ವರ:** ಬೆಳಗಾಂವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಒಂದು ಪಟ್ಟಣ ಮತ್ತು ಪ್ರಮುಖ ವ್ಯಾಪಾರ ಹಾಗೂ ಕೈಗಾರಿಕಾ ಕೇಂದ್ರ. ಹುಕ್ಕೇರಿಯ ವಾಯವ್ಯಕ್ಕೆ ಹುಕ್ಕೇರಿ–ನಿಪ್ಪಾಣಿ ಮಾರ್ಗ ಮಧ್ಯದಲ್ಲಿ ಹುಕ್ಕೇರಿಗೆ 13 ಕಿಮೀ ದೂರದಲ್ಲೂ ಬೆಳಗಾಂವಿಯ ಉತ್ತರಕ್ಕೆ 48 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 32,511.

ಈ ಪಟ್ಟಣದಲ್ಲಿ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಿದೆ. ಸೀರೆ, ಪಾದರಕ್ಷೆ, ತಂಬಾಕಿನ ಜರದ ತಯಾರಾಗುತ್ತವೆ. ಇಲ್ಲಿಂದ ರಫ್ತಾಗುವ ಸರಕುಗಳಲ್ಲಿ ಸಕ್ಕರೆ, ಬೆಲ್ಲ, ಕಡಲೆಕಾಯಿ ಎಣ್ಣೆ, ಹತ್ತಿ, ಸಂಬಾರ ಪದಾರ್ಥಗಳು ಮುಖ್ಯವಾದವು. ಪ್ರತಿ ಶುಕ್ರವಾರ ಸಂತೆ ಸೇರುವುದು. ಪಟ್ಟಣದಲ್ಲಿ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ಆಸ್ಪತ್ರೆ, ಔಷಧಾಲಯ ಮುಂತಾದ ಸೌಲಭ್ಯಗಳುಂಟು. ಪ್ರೌಢಶಾಲೆ, ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳು ಇದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಪಟ್ಟಣ ಪಂಚಾಯಿತಿ ಆಡಳಿತಕ್ಕೆ ಸಂಕೇಶ್ವರ ಸೇರಿದೆ.

ಇಲ್ಲಿ ಜಕಣಾಚಾರಿ ಕಟ್ಟಿದನೆಂದು ಹೇಳಲಾದ ಶಂಕರಲಿಂಗೇಶ್ವರ ದೇವಾಲಯವಿದೆ. ಶಿವರಾತ್ರಿ ಸಮಯದಲ್ಲಿ ನಡೆಯುವ ಇಲ್ಲಿನ ಜಾತ್ರೆ ಮತ್ತು ರಥೋತ್ಸವ ಪ್ರಸಿದ್ಧ. ಇಲ್ಲಿ 12 ಮತ್ತು 13ನೆಯ ಶತಮಾನಗಳ ಮೂರು ಶಿಲಾಶಾಸನಗಳಿವೆ. ಅವುಗಳಲ್ಲಿ ನಾರಾಯಣಸ್ವಾಮಿ ಗುಡಿ ಬಳಿಯ ಶಾಸನ ರಟ್ಟದೊರೆ ನಾಲ್ವಡಿ ಕಾರ್ತವೀರ್ಯನಿಗೆ (1190–1221) ಸಂಬಂಧಪಟ್ಟದ್ದು. ಈ ಶಾಸನದಲ್ಲಿ ಅವನನ್ನು ಮಹಾಮಂಡಲೇಶ್ವರನೆಂದು ವರ್ಣಿಸಿ ಅವನು ವೇಣುಗ್ರಾಮದಲ್ಲಿ(ಬೆಳಗಾಂವಿ) ಆಳುತ್ತಿದ್ದನೆಂದು ಸೂಚಿಸಲಾಗಿದೆ. ಇಲ್ಲಿ ಒಂದು ಪ್ರಾಚೀನ ಸ್ಮಾರ್ತ ಮಠವಿದೆ. ಸಂಕೇಶ್ವರ ಚಾರಿತ್ರಿಕವಾಗಿ ನಮ್ಮ ಗಮನಕ್ಕೆ ಬರುವುದು 1488ರಲ್ಲಿ. ಆ ವರ್ಷ ಬಹಮನೀ ರಾಜ್ಯದ ಕೊಂಕಣ ಪ್ರಾಂತ್ಯಾಧಿಕಾರಿ ಬಹದ್ದೂರ್ ಗಿಲಾನಿ ದಂಗೆಯೆದ್ದು, ಬೆಳಗಾಂವಿ ಮತ್ತು ಗೋವ ಪ್ರದೇಶಗಳನ್ನು ಆಕ್ರಮಿಸಿ, ಸಂಕೇಶ್ವರದಲ್ಲಿ ತನ್ನ ಬೀಡನ್ನು ಸ್ಥಾಪಿಸಿ ಅಲ್ಲಿ ಕೋಟೆಯನ್ನು ಕಟ್ಟಲಾರಂಭಿಸಿದ. ಕೋಟೆಯ ರಚನೆ ಮುಗಿಯುವುದರ ಒಳಗೆ ಬಹಮನೀ ಅರಸ (1482–1518) ದಂಡೆತ್ತಿ ಬಂದು ಸಂಕೇಶ್ವರಕ್ಕೆ ಮುತ್ತಿಗೆ ಹಾಕಿದ. ಗಿಲಾನಿ ಸೋತು ಅವನಿಗೆ ಶರಣಾಗತನಾದ. 1659ರಲ್ಲಿ ಸಂಕೇಶ್ವರ ಶಿವಾಜಿಯ ಅಧೀನವಾಯಿತು. ನಾಲ್ಕನೆಯ ಮೈಸೂರು ಯುದ್ಧದ (1799) ತರುವಾಯ ಬ್ರಿಟಿಷ್ ಸರ್ಕಾರ ಕರ್ನಾಟಕವನ್ನು ವಿಭಜಿಸಿ ಪ್ರಾಂತ್ಯಗಳನ್ನು ರಚಿಸಿದಾಗ ಸಂಕೇಶ್ವರ ಮುಂಬಯಿ ಆಧಿಪತ್ಯದ ಬೆಳಗಾಂವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿಗೆ ಸೇರಿತು. ಭಾರತ ಸ್ವಾತಂತ್ರ್ಯ ಗಳಿಸಿ ರಾಜ್ಯಗಳ ಪುನರ್ವಿಂಗಡಣೆಯಾದಾಗ 1956ರಲ್ಲಿ ಸಂಕೇಶ್ವರ ಕರ್ನಾಟಕ ರಾಜ್ಯದ ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿಗೆ ಸೇರಿತು. **(ವಿ.ಜಿ.ಕೆ.)**

**ಸಂಗನಕಲ್ಲು:** ಕರ್ನಾಟಕದ ಪ್ರಮುಖ ಪ್ರಾಗೈತಿಹಾಸಿಕ ನೆಲೆಗಳಲ್ಲೊಂದು. ಬಳ್ಳಾರಿ ತಾಲ್ಲೂಕಿನಲ್ಲಿ ಬಳ್ಳಾರಿಗೆ 3ಕಿಮೀ ದೂರದಲ್ಲಿದೆ ಜನಸಂಖ್ಯೆ 6,802. ಕರ್ನಾಟಕದ ನವಶಿಲಾ–ತಾಮ್ರಶಿಲಾ ಯುಗದ ಸಂಸ್ಕೃತಿಯನ್ನು ಚಿತ್ರಿಸುವಲ್ಲಿ ಈ ನೆಲೆಯ ಪಾತ್ರ ಗಣನೀಯವಾದುದು. ರಾಬರ್ಟ್ ಬ್ರೂಸ್‌ಫುಟ್ ಅವರು ಈ ನಿವೇಶನದ ಮಹತ್ವವನ್ನು ಸೂಚಿಸಿದ್ದರು. 1948ರಲ್ಲಿ ಬಿ.ಸುಬ್ಬರಾವ್ ಅವರು ಇಲ್ಲಿ ಸಣ್ಣಪ್ರಮಾಣದ ಉತ್ಖನನ ನಡೆಸಿದ್ದರು. ಅನಂತರ 1964–65ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನವರು (ಜಡ್.ಡಿ.ಅನ್ಸಾರಿ ಮತ್ತು ಎಂ.ಎಸ್. ನಾಗರಾಜರಾವ್) ಇಲ್ಲಿ ಇನ್ನೂ ವಿವರಪೂರ್ಣವಾಗಿ ಉತ್ಖನನ ಮಾಡಿದರು. ಇವುಗಳಿಂದಾಗಿ ಪೂರ್ವ ಮೆಸೋಲಿಥಿಕ್, ಮೆಸೋಲಿಥಿಕ್, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ–ಎಂಬ ನಾಲ್ಕು ಮುಖ್ಯ ಪ್ರಾಗೈತಿಹಾಸಿಕ ಸಾಂಸ್ಕೃತಿಕ ಹಂತಗಳನ್ನು ಇಲ್ಲಿ ಗುರುತಿಸಲಾಗಿದೆ. ಇಲ್ಲಿಯೂ ಪ್ರಾದೇಶಿಕ ಅಧ್ಯಯನ, ಭೂಗೋಳ, ನೆಲ, ಹವಾಮಾನ ಇತ್ಯಾದಿಗಳನ್ನು ಪ್ರಾಕ್ತನಶಾಸ್ತ್ರಜ್ಞರು ಅಭ್ಯಸಿಸಿದ್ದಾರೆ. ಅದರ ಹಿನ್ನೆಲೆಯಲ್ಲಿ ಕೈಗೊಂಡ ಭೂ ಅಗೆತದಿಂದ ಅನೇಕ ವಸ್ತುವಿಶೇಷಗಳನ್ನೂ ಹೊರತೆಗೆಸಿದ್ದಾರೆ. ಹಗರಿನದಿ ಹರಿಯುವ ಪ್ರದೇಶದಲ್ಲಿರುವ ಸಂಗನಕಲ್ಲಿನಲ್ಲಿ ದೊರೆತ ಕಲ್ಲಿನ ಆಯುಧೋಪಕರಣಗಳನ್ನು ಬೆಸಾಲ್ಟ್, ಡಯೊರೈಟ್ ಮುಂತಾದ ಟ್ರಾಪ್‌ಶಿಲೆಗಳಿಂದ ಮಾಡಲಾಗಿದೆ. ಹರಿತವಾದ ಅಂಚುಳ್ಳ ಆಯುಧ, ಮೊನೆಯುಳ್ಳ ಉಪಕರಣ, ಕುಟ್ಟುವ, ಅರೆಯುವ ಸಾಧನಗಳು, ಸುತ್ತಿಗೆ ಕಲ್ಲುಗಳು ಮುಂತಾದವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದು. ನಯಗೊಳಿಸಿದ ಕಲ್ಲಿನ ಕೊಡಲಿಗಳ ಜೊತೆ ಜೊತೆಗೆ ಕೂರಲಗಿನ ಫಲಕಗಳು (ಸೂಕ್ಷ್ಮ ಶಿಲಾಯುಧಗಳು) ದೊರಕಿವೆ. ಇವುಗಳಿಂದಾಗಿ ಸೂಕ್ಷ್ಮಶಿಲಾಯುಗೀನ ಸಂಸ್ಕೃತಿಯೊಟ್ಟಿಗೆ ನವಶಿಲಾಯುಗೀನ ಸಂಸ್ಕೃತಿ ಹೇಗೆ ವಿಲೀನವಾಗಿರಬಹುದೆಂದು ಊಹಿಸಲು ಸಾಧ್ಯ. ಇಲ್ಲಿ ದೊರೆತ ಆಯುಧೋಪಕರಣಗಳ

ವೈವಿಧ್ಯ ಮತ್ತು ಪ್ರಮಾಣಗಳನ್ನು ಆಧರಿಸಿ ಇದನ್ನು ಒಂದು ಫ್ಯಾಕ್ಟರಿ ಸೈಟ್ ಎಂದೇ ಬಣ್ಣಿಸಲಾಗಿದೆ. ಇಲ್ಲಿ ದೊರೆತ ಮಡಕೆ–ಕುಡಿಕೆಗಳನ್ನು ಜೇಡಿಮಣ್ಣಿನಿಂದ ಕೈಯಿಂದಲೇ (ರೂಪಿಸಿ) ಮಾಡಲಾಗಿದೆ. ಅವನ್ನು ಸುಡುವುದಕ್ಕಿಂತ ಮೊದಲು ನುಣುಪಾದ ಕಲ್ಲಿನಿಂದ ನಯಗೊಳಿಸಲಾಗಿದೆ. ಮಾಸಿದ ಬೂದುಬಣ್ಣದ ಮಡಕೆ, ಕಪ್ಪು–ಕೆಂಪು ಮಡಕೆಗಳ ಮೇಲೆ ಬಿಳಿಬಣ್ಣದಿಂದ ಅಲಂಕರಿಸಿರುವುದು ಇಲ್ಲಿ ಗಮನಾರ್ಹ. ಮೂಳೆಗಳಿಂದ ಮಾಡಿದ ಮೊನಚಾದ ದಬ್ಬಳಗಳೂ ಇಲ್ಲಿ ಸಿಕ್ಕಿವೆ. ಸುಣ್ಣಕಲ್ಲಿನ ಹಾಗೂ ಕಾರ್ನಿಲಿಯನ್ ಮಣಿಗಳಲ್ಲದೆ, ಕುದುರೆಯದೆಂದು ಹೇಳಲಾದ ಮೂಳೆಗಳು ದೊರೆತಿವೆ. ವೃಷಭ, ಪಕ್ಷಿ ಮುಂತಾದವುಗಳ ಮಣ್ಣಿನ ಗೊಂಬೆಗಳೂ ಸಿಕ್ಕಿವೆ. ಇವಲ್ಲದೆ ಆ ಕಾಲದ ಜನ ಮನೆಗಳನ್ನು ಹೇಗೆ ವೃತ್ತಾಕಾರದಲ್ಲಿ ನಿರ್ಮಿಸುತ್ತಿದ್ದರೆಂದು ತಿಳಿಯಲು ಸಹಾಯಕವಾದ ಅವಶೇಷಗಳೂ ದೊರೆತಿವೆ. ಅಲ್ಲಿದ್ದ ಜನರ ಶವಸಂಸ್ಕಾರ ಪದ್ಧತಿಯನ್ನು ತಿಳಿಸಲು ಸಹಾಯಕವಾದ ಮಡಕೆ, ಎಲುಬು ಮುಂತಾದವೂ ದೊರೆತಿವೆ. ಅಲ್ಲದೆ ನವಶಿಲಾಯುಗದ ಅನಂತರ ಬಂದ ಬೃಹತ್ ಶಿಲಾಯುಗದ ಆರಂಭಕಾಲದ ಸಂಸ್ಕೃತಿಯ ಚಿತ್ರಣ ಕೂಡ ಇಲ್ಲಿ ನಡೆಸಿದ ಉತ್ಖನನಗಳಿಂದ ಸಾಧ್ಯವಾಗಿದೆ. ಮೇಲ್ಪದರಿನಲ್ಲಿ ದೊರೆತ ಬೃಹತ್‌ಶಿಲಾಯುಗೀನ ಅವಶೇಷಗಳಲ್ಲಿ ಕೆಂಪುಕಪ್ಪು ಹಾಗೂ ಕಪ್ಪುಬಣ್ಣದ ಮಡಕೆ ಕುಡಿಕೆಗಳು, ಕಬ್ಬಿಣದ ಆಯುಧೋಪಕರಣಗಳೂ ಮುಖ್ಯವಾಗಿವೆ. ಈ ಉತ್ಖನನಗಳಿಂದ ಆ ಪ್ರದೇಶದಲ್ಲಿ ಪೂರ್ವ ಮೆಸೋಲಿಥಿಕ್‌ನಿಂದ ಬೃಹತ್‌ಶಿಲಾಯುಗದ ಸಂಸ್ಕೃತಿಯವರೆಗೆ ಜನಜೀವನ ಹೇಗೆ ಸಾಗಿತೆಂಬುದರ ವಿವರಪೂರ್ಣ ಚಿತ್ರಣ ಸಾಧ್ಯವಾಗಿದೆ **(ನೋಡಿ: ಪ್ರಾಗಿತಿಹಾಸ)**. **(ಎಚ್.ಆರ್.ಆರ್.ಬಿ.)**

**ಸಂಗಮ:** ಗುಲ್ಬರ್ಗ ಜಿಲ್ಲೆ ಶಹಾಪುರ ತಾಲ್ಲೂಕಿನ ದಕ್ಷಿಣದಂಚಿನಲ್ಲಿ ಗುಂಡಲೂರು ಗ್ರಾಮದ ಬಳಿ ಭೀಮಾನದಿ ಕೃಷ್ಣಾನದಿಯನ್ನು ಸೇರುವ ಸ್ಥಳ. ಮಹಾರಾಷ್ಟ್ರ ರಾಜ್ಯದ ಭೀಮಾ ಶಂಕರವೆಂಬಲ್ಲಿ ಹುಟ್ಟುವ ಭೀಮಾನದಿ ಸು. 856 ಕಿಮೀ ದೂರ ಹರಿದು ಕೃಷ್ಣಾನದಿಯನ್ನು ಕೂಡಿಕೊಳ್ಳುತ್ತದೆ. ಶಹಾಪುರ ತಾಲ್ಲೂಕು ಭೀಮಾನದಿಯ ಬಲದಂಡೆಯಲ್ಲೂ ಕೃಷ್ಣಾನದಿಯ ಎಡದಂಡೆಯಲ್ಲೂ ಇದ್ದು ಈ ಎರಡೂ ನದಿಗಳು ಸೇರುವ ಸ್ಥಳವನ್ನು ಪವಿತ್ರ ಕ್ಷೇತ್ರವೆಂದು ಪರಿಗಣಿಸಲಾಗಿದೆ. ಇಲ್ಲಿನ ಒಂದು ಶಾಸನದಲ್ಲಿ ಇದನ್ನು ಮಹಾನದಿ ದಕ್ಷಿಣ ಪ್ರಯಾಗೆ ಶ್ರೀಕೃಷ್ಣಾವೇಣ್ಣಾ ಭೀಮರಥ್ಯಾದೇವೀ ಸಂಗಮ ಅಂದರೆ ದಕ್ಷಿಣದ ಗಂಗಾಯಮುನಾ ನದಿಗಳ ಸಂಗಮ ಎಂದು ಭಾವಿಸಲಾಗಿದೆ.

ಇಲ್ಲಿ 1067, 1084 ಮತ್ತು 1143ರ ಮೂರು ಶಾಸನಗಳು ದೊರಕಿದ್ದು ಇಲ್ಲಿನ ಸಂಗಮೇಶ್ವರ ದೇವಾಲಯ 1067ಕ್ಕೂ ಮೊದಲೇ ನಿರ್ಮಿಸಿದ್ದೆಂದು ತಿಳಿದುಬರುತ್ತದೆ. ಇದೊಂದು ಅಗ್ರಹಾರ ಮತ್ತು ಘಟಿಕಾಸ್ಥಾನವಾಗಿದ್ದು ಇಲ್ಲಿನ ಸಂಗಮೇಶ್ವರ ದೇವಾಲಯದಲ್ಲಿ ಲಾಕುಳಾಗಮ ಸರೋಜನೀ ರಾಜಹಂಸ ಎಂಬ ಬಿರುದಾಂಕಿತ ಪಂಡಿತರಿದ್ದು ವಿದ್ಯಾರ್ಥಿಗಳಿಗೆ ಆಗಮ, ತರ್ಕ, ವ್ಯಾಕರಣ, ತೈತ್ತರೀಯ ಖಂಡಿಕೆ ಮತ್ತು ಶಾಸ್ತ್ರ ವ್ಯಾಖ್ಯಾನಗಳನ್ನು ಬೋಧಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ರೇವಣಭಟ್ಟ 1084ರಲ್ಲಿ ಇಲ್ಲಿ ವಿಷ್ಣುಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂದೂ 1143ರಲ್ಲಿ ಚಿದ್ದದಂಡೇಶ 'ಕಡಿತ ವೆರ್ಗ್ಗಡೆ ಕನ್ನಡ ಸಂಧಿವಿಗ್ರಹಿ ಹಿರಿಯ ದಂಡನಾಯಕಾದಿ' ಪದವೀ ವಿರಾಜ ಮಾನನಾದ ವ್ಯಕ್ತಿ ದೇವಸ್ಥಾನಕ್ಕೆ ಮೂರು ಊರುಗಳನ್ನು ದತ್ತಿಬಿಟ್ಟ ವಿಚಾರ ತಿಳಿದುಬಂದಿದೆ. ಇಲ್ಲಿ ಚಾಳುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕಮಲ್ಲನ (1139–49) ಮಹಾಪ್ರಧಾನನಾಗಿದ್ದ ಸಗರದ ಬೊಮ್ಮಣ್ಣನ 91 ವಚನಗಳು ದೊರೆತಿದ್ದು ಅವು ಪ್ರಕಟಗೊಂಡಿವೆ. ಈ ವಚನಗಳು ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ಎಂಬ ಅಂಕಿತದಿಂದ ಕೊನೆಗೊಂಡಿವೆ. ಈ ಸಂಗಮದ ಸಮೀಪ ಪ್ರಸಿದ್ಧವಾದ ಗಾಣಗಾಪುರ **(ನೋಡಿ)** ಕ್ಷೇತ್ರವಿದೆ **(ನೋಡಿ: ಕೂಡಲಸಂಗಮ)**. **(ಎಸ್.ಜಿ.)**

**ಸಂಗಮೇಶ್ವರ ಗುರುವ:** 1931– . ಹಿಂದುಸ್ಥಾನೀ ಸಂಗೀತದ ಕಿರಾಣ ಘರಾಣದಲ್ಲಿ ಪ್ರಖ್ಯಾತರಾದ ಗಾಯಕ. 1931ರ ಡಿಸೆಂಬರ್ 7ರಂದು ಗಣಪತಿರಾವ್ ಗುರುವ ಹಾಗೂ ನಂದಿನಿ ಬಾಯಿಯವರ ಮಗನಾಗಿ ಜಮಖಂಡಿಯಲ್ಲಿ ಜನಿಸಿದರು. ಇವರದು ಸಂಗೀತಗಾರರ ಮನೆತನ. ಇವರ ತಂದೆ ಪ್ರಖ್ಯಾತ ಹಿಂದುಸ್ಥಾನೀ ಗಾಯಕರಾದ ಭಾಸ್ಕರ ಬುವಾ ಮತ್ತು ಅಬ್ದುಲ್ ಕರೀಂಖಾನ್‌ರವರ ಶಿಷ್ಯರಾಗಿ ಕಿರಾಣ ಘರಾಣದಲ್ಲಿ ಗಾಯನವನ್ನು ಅಭ್ಯಾಸ ಮಾಡಿ ಜಮಖಂಡಿ ಸಂಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು. ತಾತ ಸಂಗಪ್ಪನವರು ಜಮಖಂಡಿ ಆಸ್ಥಾನದಲ್ಲಿ ನೃತ್ಯ ಹಾಗೂ ತಬಲಾ



ವಾದನದ ಶಿಕ್ಷಕರಾಗಿದ್ದರು. ಚಿಕ್ಕಂದಿನಿಂದಲೇ ಶಾಲಾ ವಿದ್ಯಾಭ್ಯಾಸದಲ್ಲಲ್ಲದೆ ಸಂಗೀತದಲ್ಲೂ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡಿದ್ದರು. ತಂದೆಯವರೇ ಸಂಗೀತ ಶಿಕ್ಷಕರಾದರೂ ಇವರಿಗೆ ಸಂಗೀತ ಕಲಿಯಲು ಯಾವ ಪ್ರೋತ್ಸಾಹವೂ ಸಿಗಲಿಲ್ಲ. ತನ್ನಂತೆ ಮಗನೂ ಸಂಗೀತ ವಿದ್ಯೆಯನ್ನು ಮಾತ್ರ ಕಲಿತು ಬವಣೆ ಪಡುವಂತಾಗಬಾರದೆಂದು ಇವರ ತಂದೆಯವರು ಇವರ ಶಾಲಾ ವಿದ್ಯಾಭ್ಯಾಸಕ್ಕೆ ಮನ್ನಣೆ ಕೊಟ್ಟರು. ಆದರೆ ಸಂಗಪ್ಪನವರಿಗೆ ಗಾಯನದ ಸೆಳೆತ ಅಧಿಕವಾಗಿತ್ತು.

ಇವರ ಸಂಗೀತ ಕಲಿಯುವ ಹಂಬಲವನ್ನು ಗುರುತಿಸಿದ ಇವರ ತಾಯಿಯ ತಂದೆ ಹಾಗೂ ಅವರ ಸಹೋದರ ಪ್ರಖ್ಯಾತ ಸಾರಂಗೀ ವಾದಕ ಬಾಳಪ್ಪನವರು ಸಾರಂಗಿ ಕಲಿಸಿದರು. ಆದರೂ ಗಾಯನದ ಬಗ್ಗೆ ವಿಶೇಷ ಒಲವನ್ನು ಬೆಳೆಸಿಕೊಂಡ ಇವರು ತಂದೆ ಸಂಗೀತ ಪಾಠ ಮಾಡುವಾಗಲೆಲ್ಲಾ ಮರೆಯಲ್ಲಿ ನಿಂತು ಆಲಿಸಿ ಅನುಕರಿಸಿ ಕದ್ದು ಸಂಗೀತಾಭ್ಯಾಸ ಮಾಡಲು ಪ್ರಾರಂಭಿಸಿದರು. ಮಗನ ಸಾರಂಗೀ ವಾದನವನ್ನು ಗಮನಿಸಿದ್ದ ತಂದೆಯವರು ಒಂದು ದಿನ ಮಗನಿಗೆ ಸಾರಂಗಿ ನುಡಿಸುವಂತೆ ಅಪ್ಪಣೆ ಕೊಟ್ಟರು. ಮಗನ ಸಾರಂಗಿ ವಾದನ ತಂದೆಗೆ ಮೆಚ್ಚಿಗೆಯಾಯಿತು. ಹತ್ತು ಹದಿನೈದು ದಿನಗಳ ಕಾಲ ತಾವೇ ಸಾರಂಗಿ ವಾದನವನ್ನು ಹೇಳಿಕೊಟ್ಟರು. ಆದರೆ ಗಾಯಕನಾಗಬಯಸಿದ್ದ ಸಂಗಮೇಶ್ವರರು ತಂದೆಯ ಸಂಗೀತ ಪಾಠವನ್ನು ಬಾಗಿಲ ಮರೆಯಲ್ಲಿ ಕೇಳುವುದನ್ನೂ ಹಾಗೂ ಅಬ್ದುಲ್ ಕರೀಂಖಾನರ ಧ್ವನಿ ಮುದ್ರಿಕೆಗಳನ್ನು ಅನುಕರಿಸುವುದನ್ನೂ ಮುಂದುವರೆಸಿದರು. ಇವರು ಶಾಲೆಯನ್ನು ಬಿಟ್ಟು ಶಹಾಪುರದ ಗಂಜೀಫ್ರಾಕ್ ಕಾರ್ಖಾನೆಯಲ್ಲಿ ವಾರಕ್ಕೆ ಮೂರು ರೂಪಾಯಿ ಸಂಬಳದ ಮೇಲೆ ದುಡಿಯಲಾರಂಭಿಸಿದರು.

ಮರೆಯಲ್ಲಿ ನಿಂತು ಪಾಠ ಕೇಳುತ್ತಿದ್ದ ಮಗನನ್ನು ಗಮನಿಸಿದ ತಂದೆ ತಮ್ಮ ಮಗನ ಧ್ವನಿ ಹೇಗಿದೆಯೆಂದು ಪರೀಕ್ಷಿಸಲು ಹಾಡಲು ಹೇಳಿದರು. ತಾನು ಕದ್ದು ಕೇಳಿ ಕಲಿತಿದ್ದ ತೋಡಿ ರಾಗವನ್ನು ಹಾಡುತ್ತಿದ್ದಂತೆ ತಂದೆಗೆ ತಮ್ಮ ತಪ್ಪಿನ ಅರಿವಾಯಿತು. ಮಧುರ ಕಂಠದ ಮಗನಿಗೆ ಸಂಗೀತ ಕಲಿಸದಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟು ಅಂದಿನಿಂದಲೇ ಸಂಗೀತ

ಪಾಠ ಪ್ರಾರಂಭಿಸಿದರು. ತಂದೆ ಮಕ್ಕಳಿಬ್ಬರ ಸಂಗೀತ ಪಾಠದ ಭರಾಟೆ ಎಷ್ಟಿತ್ತೆಂದರೆ ಹಗಲು ತೋಡಿ, ಮಧ್ಯಾಹ್ನ ಭೀಮಪಲಾಸ, ಸಂಜೆ ಬೇಹಾಗ್ ರಾಗಗಳ ಪಾಠ–ಹೀಗೆ ಸಾಗಿತ್ತು ಅವರ ಕಲಿಕೆ. ಸಂಜೆ ಮಗ ಕಾರ್ಖಾನೆಯಿಂದ ಬರುವುದನ್ನೇ ಕಾಯುತ್ತಿದ್ದ ತಂದೆಯವರು ಮನೆ, ಬೀದಿ, ಮಾರುಕಟ್ಟೆ ಎಲ್ಲೆಂದರಲ್ಲಿ ಸಂಗೀತ ರಾಗ, ತಾಳಗಳ ಸೂಕ್ಷ್ಮಗಳನ್ನು ವಿವರಿಸುತ್ತಿದ್ದರು. ಮಧ್ಯರಾತ್ರಿಯವರೆಗೂ ನಡೆಯುತ್ತಿದ್ದ ಇವರ ಗಾಯನ ಪಾಠದಿಂದ ಅಕ್ಕಪಕ್ಕದವರು ದೂರು ಸಲ್ಲಿಸಲು ಪ್ರಾರಂಭಿಸಿದಾಗ ಅಭ್ಯಾಸಕ್ಕಾಗೇ ಪ್ರತ್ಯೇಕ ಕೋಣೆಯೊಂದನ್ನು ಬಾಡಿಗೆಗೆ ಗೊತ್ತುಮಾಡಿದರು.

ಗಣೇಶೋತ್ಸವ ಮತ್ತು ದಸರ ಹಬ್ಬದ ಸಂದರ್ಭಗಳಲ್ಲಿ ಸಣ್ಣಸಣ್ಣ ಸ್ಥಳೀಯ ಕಚೇರಿಗಳಿಂದ ಇವರ ಗಾಯನ ಕಾರ್ಯಕ್ರಮಗಳು ಪ್ರಾರಂಭವಾದವು. ಮೂರರಿಂದ ನಾಲ್ಕು ತಾಸಿನ ಕಾರ್ಯಕ್ರಮಗಳಿಗೆ ಸಿಗುತ್ತಿದ್ದ ಸಂಭಾವನೆ ಐದು ಅಥವಾ ಹತ್ತು ರೂಪಾಯಿಗಳು. 1950ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರ ಆರಂಭವಾದಾಗ ಇವರು ನಿಲಯದ ಗಾಯಕರಾಗಿ ಆಯ್ಕೆಯಾದರು. 1952ರಲ್ಲಿ ಮುಂಬೈ ಆಕಾಶವಾಣಿಗೆ ವರ್ಗವಾದರು. 1972ರಲ್ಲಿ ಪಂಡಿತ ಭೀಮಸೇನ ಜೋಶಿಯವರಿಗೆ ಪದ್ಮಶ್ರೀ ಪ್ರಶಸ್ತಿ ಬಂದ ಶುಭ ಸಂದರ್ಭದಲ್ಲಿ ಅಭಿನಂದನಾರ್ಥವಾಗಿ ಪುಣೆಯಲ್ಲಿ ಸಂಗಮೇಶ್ವರರ ಕಚೇರಿ ಏರ್ಪಾಡಾಗಿತ್ತು. ಆ ಕಚೇರಿಯಲ್ಲಿ ಇವರ ಗಾಯನವನ್ನು ಆಲಿಸಿದ ಭೀಮಸೇನ್ ಜೋಶಿಯವರು ಕಿರಾಣಾ ಘರಾಣದ ಪತಾಕೆಯನ್ನು ಸಂಗಮೇಶ್ವರರಿಗೆ ಒಪ್ಪಿಸಿದ್ದೇವೆ ಅದನ್ನವರು ಉನ್ನತ ಮಟ್ಟದಲ್ಲಿ ಹಾರುವಂತೆ ಮಾಡುತ್ತಾರೆಂಬುದು ತಮ್ಮ ನಂಬಿಕೆ ಎಂದು ಘೋಷಿಸಿದರು. 1979ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಗೀತ ವಿಭಾಗದ ನಿರ್ದೇಶಕರಾಗಿದ್ದ ಮಲ್ಲಿಕಾರ್ಜುನ ಮನ್ಸೂರರು ಇವರನ್ನು ಕರೆದು ಅಧ್ಯಾಪಕ ವೃತ್ತಿಯನ್ನು ನೀಡಿದರು.

ಮಧುರ ಕಂಠವನ್ನು ಹೊಂದಿರುವ ಇವರು ಸುರಲೀ ಗಾಯಕರೆಂದೇ ಹೆಸರಾಗಿದ್ದಾರೆ. ಇವರ ಗಾಯನದಲ್ಲಿ ರಾಗಗಳ ಚಕಮಕಿ ಇಲ್ಲದೆ, ಸ್ವರಶುದ್ಧತೆ, ಶಾಸ್ತ್ರಶುದ್ಧತೆ ಮತ್ತು ಗಾಂಭೀರ್ಯ ಇವೆ. ಇವರು ರಾಗ ಮತ್ತು ಸ್ವರಗಳನ್ನು ಶಿಸ್ತಿನಿಂದ ಒಂದೊಂದಾಗಿ ಬೆಳೆಸುತ್ತಾರೆ. ರಾಗಭಾವದೊಂದಿಗೆ ತಾದಾತ್ಮ್ಯ ಬೆಸೆಯುವಂಥ ಭಾವನಾತ್ಮಕ ಗಾಯಕರು ಇವರು. ಇವರ ಗಾಯನದಲ್ಲಿ ಭಕ್ತಿರಸ ಪ್ರಧಾನವಾದದ್ದು. ವಚನ. ಭಜನೆ, ದಾಸರ ಪದಗಳು ಯಾವುದೇ ಆದರೂ ಭಕ್ತಿರಸಪೂರವಾಗಿರುತ್ತದೆ. ಇವರು ಗಾಯಕರು ಮಾತ್ರವಲ್ಲದೇ ತಮ್ಮದೇ ಆದ ವಿಶಿಷ್ಟ ಶೈಲಿಯ ಸಂಗಮ, ರುದ್ರ, ಗೌರಿಧರ, ಗರಗಜ ರಾಗಗಳಲ್ಲಿ ಕೃತಿ ರಚಿಸಿದ್ದಾರೆ. ಇವರ ಗಾಯನ ಶ್ರೋತೃಗಳನ್ನು ಭಾವಸಾಗರದಲ್ಲಿ ಮುಳುಗಿಸುತ್ತದೆ. ರಾಗದೊಂದಿಗೆ ಭಾವ ಬೆಸೆಯಬೇಕು, ತಾನಗಳು ತಾವೇ ತಾವಾಗಿ ಹೊಮ್ಮಬೇಕು ಮತ್ತು ರಾಗ ಪ್ರತಿ ಬಾರಿ ನವೀನವೆನ್ನಿಸಬೇಕೆಂಬುದು ಇವರ ದೃಢವಾದ ನಂಬಿಕೆ. ಇದರಿಂದ ಇವರ ಕಚೇರಿಗಳು ಅತ್ಯಂತ ಪ್ರಭಾವ ಬೀರುವಂಥವಾಗಿವೆ. ಶುದ್ಧ ಕಿರಾಣಾ ಶೈಲಿಯಲ್ಲಿ ಹಾಡುವ ಕೇವಲ ಕೆಲವೇ ಗಾಯಕರಲ್ಲಿ ಇವರೂ ಒಬ್ಬರು.

ಸದಾ ಹಸನ್ಮುಖಿಯಾದ, ಸರಳ ಸುಂದರವಾದ ಇವರು ತಮ್ಮ ವಿಶಿಷ್ಟ ಶೈಲಿ ಹಾಗೂ ಅತಿ ಮಧುರ ಕಂಠದಿಂದ ಕಿರಾಣಾ ಪರಂಪರೆಯಲ್ಲಿ ತಮ್ಮ ಛಾಪನ್ನು ಆಳವಾಗಿ ಒತ್ತಿದ್ದಾರೆ. ಇವರ ಅದ್ಭುತ ಪ್ರತಿಭೆಯನ್ನು ಮೆಚ್ಚಿ ಇವರಿಗೆ ಅನೇಕ ಬಿರುದು ಸನ್ಮಾನಗಳು ಸಂದಿವೆ. ಅವುಗಳಲ್ಲಿ ಪುಣೆಯ ಪಂಥನಾಥ ಸ್ವಾಮಿಗಳು ನೀಡಿದ ಸೂರಸೇನ ಬಿರುದು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿ (1982), ಕರ್ನಾಟಕ ರಾಜ್ಯ ಸಂಗೀತ ವಿದ್ವಾನ್ ಪದವಿ (1997), ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ (2001) ಪ್ರಮುಖವಾದದು.

ಕಿರಾಣಾ ಪರಂಪರೆಯನ್ನು ಮುಂದುವರಿಸಲು ಇವರು ತಮ್ಮ ಮಕ್ಕಳನ್ನು ಸನ್ನದ್ಧರಾಗಿಸಿದ್ದಾರೆ. ಕಿರಿಯ ಮಗ ಕೈವಲ್ಯ ಅಖಿಲ ಭಾರತ ಮಟ್ಟದಲ್ಲಿ ಹೆಸರು ಮಾಡಿರುವವರು. ಹಿರಿಯ ಮಗ ನಂದಿಕೇಶ್ವರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತಬಲಾ ಅಧ್ಯಾಪಕರು. ಹಿಂದುಸ್ಥಾನೀ ಗಾಯನದ ವಿಶಿಷ್ಟ ಪ್ರಕಾರವಾಗಿರುವ ಕಿರಾಣ ಘರಾಣದ ಗಾಯಕರಾಗಿ ಇವರು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹೆಸರು ಗಳಿಸಿದ್ದಾರೆ. (ಎಸ್‌ಯು.ಎಮ್.)

**ಸಂಗಮೇಶ್ವರ ಪೇಟೆ:** ಚಿಕ್ಕಮಗಳೂರು ಜಿಲ್ಲೆ ಅದೇ ತಾಲ್ಲೂಕಿನ ಖಾಂಡ್ಯ ಹೋಬಳಿಯ ಒಂದು ಸ್ಥಳ. ಚಿಕ್ಕಮಗಳೂರಿನ ವಾಯುವ್ಯದಲ್ಲಿ 42 ಕಿಮೀ ದೂರದಲ್ಲಿದ್ದು ದೇವದಾನ ಗ್ರಾಮ ಪಂಚಾಯತಿಗೆ ಸೇರಿದೆ. ಗತವೈಭವದ ಕುರುಹಾಗಿರುವ ಖಾಂಡ್ಯದಿಂದ ಸಂಗಮೇಶ್ವರ ಪೇಟೆಗೆ ಹೋಬಳಿ ಕೇಂದ್ರವನ್ನು ವರ್ಗಾಯಿಸಿದ್ದರೂ ಖಾಂಡ್ಯ ಹೋಬಳಿ ಎಂದೇ ಇಂದಿಗೂ ಕರೆಯಲಾಗುತ್ತಿದೆ. ಆವತಿ, ಹಂಗರವಳ್ಳಿ ಮೂಲಕ ಹರಿದು ಬರುವ ಆನೆಬಿದ್ದ ಹಳ್ಳ ಭದ್ರಾ ನದಿಯೊಂದಿಗೆ ಈ ಗ್ರಾಮದ ಸಮೀಪದಲ್ಲಿ ಸೇರುತ್ತದೆ. ಸಂಗಯ್ಯನ ದೇವಾಲಯ ಇಲ್ಲಿದೆ. ಸುತ್ತಲಿನ ವ್ಯಾಪಾರ, ವಹಿವಾಟು ಇಲ್ಲಿ ನಡೆಯುವ ಕಾರಣದಿಂದಾಗಿ ಸಂಗಮೇಶ್ವರ ಪೇಟೆ ಎಂದು ಹೆಸರು ಬಂದಿದೆ. ಸಂಗಮೇಶ್ವರ ಪೇಟೆಗೆ ಉತ್ತರದಲ್ಲಿ 3 ಕಿಮೀ ದೂರದಲ್ಲಿ ಭದ್ರಾನದಿಯ ದಡದಲ್ಲಿರುವ ಖಾಂಡ್ಯದ ಮಾರ್ಕಂಡೇಯ ದೇವಾಲಯದಲ್ಲಿ ಒಂದು ಶಾಸನವಿದ್ದು ಅದರ ಪ್ರಕಾರ ಈ ಗ್ರಾಮ ಹೊಯ್ಸಳ, ವಿಜಯನಗರ, ಕೆಳದಿ ಅರಸರ ಆಳ್ವಿಕೆಗೊಳಪಟ್ಟಿತ್ತೆಂದು ತಿಳಿದುಬರುತ್ತದೆ.

ಕೆಂಪು ಮತ್ತು ಕಪ್ಪುಮಣ್ಣಿನಿಂದ ಕೂಡಿದ ಈ ಭೂಪ್ರದೇಶದಲ್ಲಿ ಬತ್ತ, ಅಡಕೆ, ಮೆಣಸು ಮತ್ತು ಬಾಳೆ ಬೆಳೆಯುತ್ತಾರೆ. ವಾರ್ಷಿಕ ಮಳೆ 2,286–2,540ಮೀಮೀ. ಈ ಗ್ರಾಮದಲ್ಲಿ ಸು. 141.75 ಹೆ. ಅರಣ್ಯ ಪ್ರದೇಶವಿದ್ದು, 150 ಎಕರೆಗಳಷ್ಟು ಭೂಮಿ ವ್ಯವಸಾಯಕ್ಕೆ ಬಳಕೆಯಾಗುತ್ತಿದೆ. ವ್ಯವಸಾಯಕ್ಕೆ ಈಗ ಹಳ್ಳ–ನದಿ ನೀರನ್ನೂ ಬಳಸಿಕೊಳ್ಳಲಾಗುತ್ತಿದೆ. ಸರ್ಕಾರ ಇತ್ತೀಚೆಗೆ ಕೊಳವೆ ಬಾವಿಗಳಿಂದ ನೀರಿನ ಸೌಕರ್ಯವನ್ನು ಕಲ್ಪಿಸಿದೆ. ಗ್ರಾಮದಲ್ಲಿ ಅಂಗನವಾಡಿ, ಪೂರ್ವ ಪ್ರಾಥಮಿಕ ಶಾಲೆ, ಉರ್ದು ಪ್ರಾಥಮಿಕ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಉಡುಪಿಯ ಆದಮಾರು ಮಠ ಪೂರ್ಣಪ್ರಜ್ಞ ಪ್ರೌಢಶಾಲೆಯನ್ನು ನಡೆಸುತ್ತಿದೆ. ನಾಗರಿಕ ಸೌಲಭ್ಯಗಳಾದ ಅಂಚೆ ಮತ್ತು ತಂತಿ ಕಛೇರಿ, ಸಹಾಯಕ ಕೃಷಿ ಕಛೇರಿ, ಕಂದಾಯ ಇಲಾಖೆ, ಪಂಚಾಯಿತಿ ಮತ್ತು ಇತರ ಕಛೇರಿಗಳಲ್ಲದೆ ವಿಜಯ ಬ್ಯಾಂಕ್ ಕೂಡ ಇಲ್ಲಿದೆ. ಉತ್ತಮ ಸಾರಿಗೆ ಸೌಲಭ್ಯವಿದ್ದು ಚಿಕ್ಕಮಗಳೂರು–ಕೊಪ್ಪ ಮುಖ್ಯರಸ್ತೆ ಈ ಗ್ರಾಮದ ಮೂಲಕವೇ ಹಾದು ಹೋಗುತ್ತದೆ. ಇಲ್ಲಿ ವಿವಿಧ ಸಂಘಸಂಸ್ಥೆಗಳಿವೆ. ಪ್ರತಿವರ್ಷ ಕಾರ್ತೀಕ ಮಾಸದಲ್ಲಿ ಬಿಲ್ವ ಗಣಪತಿ ಮತ್ತು ಸಂಗಮೇಶ್ವರ ದೇವಾಲಯಗಳ ದೀಪೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. (ಕೆ.ಟಿ.)

**ಸಂಗೊಳ್ಳಿ ರಾಯಣ್ಣ:** 1829ರಲ್ಲಿ ಬ್ರಿಟಿಷರ ವಿರುದ್ಧ ಕಿತ್ತೂರಿನಲ್ಲಿ ನಡೆದ ದಂಗೆಯ ನೇತಾರ.

ರಾಯಣ್ಣ ಕಿತ್ತೂರ ಸಂಸ್ಥಾನದ ಸಾಮಾನ್ಯ ಪ್ರಜೆ. ಸಂಗೊಳ್ಳಿ ಗ್ರಾಮದ ತಳವಾರಿ. ಹಲವಾರು ದೇಶಬಾಂಧವರೊಡನೆ ಅಹೋರಾತ್ರಿ ಹೋರಾಡಿ ಇತರರಂತೆ ಕಾರಾಗೃಹವಾಸವನ್ನು ಅನುಭವಿಸಿ ಬಿಡುಗಡೆಯಾಗಿದ್ದ. ಬ್ರಿಟಿಷರ ವಿರುದ್ಧ ಯುದ್ಧ ಮಾಡಿದ್ದರಿಂದ ಇವನ ವತನಭೂಮಿಯನ್ನೂ ಸರ್ಕಾರ ವಶಪಡಿಸಿಕೊಂಡಿತ್ತು. ಬ್ರಿಟಿಷರ ಈ ಕೃತ್ಯದಿಂದ ರಾಯಣ್ಣ ಕ್ರೋಧಗೊಂಡ. ಜೊತೆಗೆ ಕಿತ್ತೂರಿನ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸುವ ಉದಾತ್ತಧ್ಯೇಯ ಇವನ ದೇಶಾಭಿಮಾನವನ್ನು ಮತ್ತೊಮ್ಮೆ ಬಡಿದೆಬ್ಬಿಸಿತು.

ಬ್ರಿಟಿಷರ ವಿರುದ್ಧ ಹೋರಾಡಲು ಶೂರಸಾಹಸಿಗಳ ಗುಂಪು ಕಟ್ಟಿಕೊಂಡು ಬಂಡಾಯವೆಬ್ಬಿಸಿ, ಚೆನ್ನಮ್ಮನ ದತ್ತುಪುತ್ರನಾದ ಶಿವಲಿಂಗಪ್ಪನನ್ನು ಕಿತ್ತೂರಿನ ಗದ್ದುಗೆಗೆ ಏರಿಸುವ ಸಾಹಸಕೃತ್ಯಕ್ಕೆ ಕೈಯಿಕ್ಕಿದ. ಕಿತ್ತೂರಿನಲ್ಲಿ ಬ್ರಿಟಿಷ್ ಸರ್ಕಾರದ ಇರವನ್ನು ಧಿಕ್ಕರಿಸುವ ಪ್ರಯತ್ನ ಮಾಡಿದ. ಸೈನ್ಯ ಸಹಾಯವಿಲ್ಲದ ಕಾರಣ ಕೂಟ ಯುದ್ಧಕ್ಕಿಳಿದ.

ಮೊದಲು ಖಾನಾಪುರದಲ್ಲಿ ನೆಲೆಸಿದ್ದ ಮೇಜರ್ ಪಿಕ್ಕರಿಂಗ್‌ನ ಸೈನ್ಯದ ಮೇಲೆ ದಾಳಿ ಮಾಡಿದ; ಅಲ್ಲಿಯ ಸರ್ಕಾರಿ ಕಚೇರಿಯನ್ನು ಸುಟ್ಟ. ಹಗಲು ಹೊತ್ತನ್ನು ಕಾಡಿನಲ್ಲಿ ಕಳೆದು, ರಾತ್ರಿ ವೇಳೆ ತನ್ನ ಅನೇಕ ಯೋಧರೊಡನೆ ಬ್ರಿಟಿಷರ ಠಾಣ್ಯಗಳ ಮೇಲೆ ಎರಗುತ್ತಿದ್ದ. ದಿನೇ ದಿನೇ ಇವನ ಸಹಚರರು ವರ್ಧಿಸುತ್ತಿದ್ದರು. ಸುಮಾರು ಇಡೀ ಕಿತ್ತೂರು ಸಂಸ್ಥಾನದ ಪ್ರಜೆಗಳೆಲ್ಲ ಇವನ ಬೆಂಬಲಿಗರಾಗಿದ್ದರು. ಮೋಸದಿಂದ ಬ್ರಿಟಿಷರ ಪಕ್ಷ ವಹಿಸುವವರನ್ನು ನಿರ್ದಾಕ್ಷಿಣ್ಯವಾಗಿ ಕೊನೆಗಾಣಿಸುತ್ತಿದ್ದ. ಇವನ ಕಾರ್ಯದಿಂದ ಬೆಚ್ಚಿದ ಬ್ರಿಟಿಷ್ ಅಧಿಕಾರಿಗಳು ರಕ್ಷಣೆಗಾಗಿ ಸೈನ್ಯ ಸಹಾಯ ಪಡೆಯಬೇಕಾಯಿತು. ಸರ್ಕಾರಿ ಅಧಿಕಾರಿಗಳು ಇವನನ್ನು ಹಿಡಿಯಲು ಬೆನ್ನುಹತ್ತಿದರೂ ಇವನು ನುಣುಚಿಕೊಳ್ಳುತ್ತಿದ್ದ. ಇವನು ಖಾನಾಪುರದಿಂದ ನಡೆದು ಅನಂತರ ಸಂಪಗಾಂವದ ಮೇಲೆ ದಾಳಿ ಮಾಡಿದ. ಅಲ್ಲಿನ ಖಜಾನೆಯನ್ನು ಸೂರೆಮಾಡಿ ಹಲವು ಹಳ್ಳಿಗಳ ಮೇಲೂ ಎರಗಿ ಧನಸಂಗ್ರಹ ಮಾಡಿ, ಬ್ರಿಟಿಷರ ನಿಗ್ರಹಕ್ಕೆ ಹಗಲಿರುಳೂ ಪ್ರಯತ್ನಿಸಿದ. ಈ ರೀತಿಯಾಗಿ ರಾಯಣ್ಣ ತನ್ನ ಕಾರ್ಯಗಳನ್ನು ನಾಲ್ಕು ತಿಂಗಳ ಕಾಲ ಅವ್ಯಾಹತವಾಗಿ ನಡೆಸಿದಾಗ, ಯುದ್ಧ ಮಾಡಿ ಇವನನ್ನು ಸೆರೆಹಿಡಿಯುವುದು ಅಸಾಧ್ಯವೆಂದು ಮನಗಂಡ ಬ್ರಿಟಿಷ್ ಸರ್ಕಾರ, ಕಪಟ ಜಾಲವೊಡ್ಡಿ, ದೇಶದ್ರೋಹಿಗಳ ಸಹಾಯದಿಂದ ರಾಯಣ್ಣನನ್ನು ಸೆರೆಹಿಡಿದು, ವಿಚಾರಣೆಗೊಳಪಡಿಸಿತು. ವಿಶೇಷ ನ್ಯಾಯಾಲಯ ಇವನನ್ನು ತಪ್ಪಿತಸ್ಥನೆಂದು ಘೋಷಿಸಿತು. ಇವನ ಕಾರ್ಯಕ್ಷೇತ್ರಗಳಲ್ಲಿ ಮುಖ್ಯವಾಗಿದ್ದ ನಂದಗಡದಲ್ಲಿ ಇವನನ್ನು 1829ರಲ್ಲಿ ಗಲ್ಲಿಗೇರಿಸಲಾಯಿತು.

ಸಂಗೊಳ್ಳಿ ರಾಯಣ್ಣ ತನ್ನ ಕಾರ್ಯದಲ್ಲಿ ಸಫಲನಾಗದಿದ್ದರೂ ಬ್ರಿಟಿಷರ ಗುಲಾಮನಾಗಿ ಬಾಳುವುದಕ್ಕಿಂತ ಅವರೊಡನೆ ಹೋರಾಡಿ ವೀರಸ್ವರ್ಗವನ್ನು ಹೊಂದುವುದೇ ಮೇಲೆಂದು ಭಾವಿಸಿದ್ದವನು. ಕಿತ್ತೂರಿನ ರಾಣಿ ಚೆನ್ನಮ್ಮನ ವೀರಕಥೆಯಂತೆ ಸಂಗೊಳ್ಳಿ ರಾಯಣ್ಣನ ದೇಶಾಭಿಮಾನವೂ ಹಲವು ಜನಪದ ಗೀತೆಗಳಿಗೆ ವಸ್ತುವಾಗಿದೆ. (ಜಿ.ಎಸ್.ಎಚ್.)

**ಸಂಚಿಯ ಹೊನ್ನಮ್ಮ:** ಸು.1680. ಪ್ರಸಿದ್ಧ ಕವಯಿತ್ರಿ. ಹದಿಬದೆಯ ಧರ್ಮ ಎಂಬ ಗ್ರಂಥದ ಕರ್ತೃ. ಈಕೆ ಚಿಕ್ಕದೇವರಾಜ ಒಡೆಯರ್ (1673–1704) ಅವರಲ್ಲಿ ಸಂಚಿಯ ಊಳಿಗದಲ್ಲಿದ್ದವಳೆಂದು ತಿಳಿಯುತ್ತದೆ. ಈಗಿನ ಚಾಮರಾಜನಗರ ಜಿಲ್ಲೆಯ ಯಳಂದೂರು ಇವಳ ಜನ್ಮಸ್ಥಳ. ಇದೇ ಗ್ರಾಮದವಳಾದ, ಚಿಕ್ಕದೇವರಾಜನ ಪಟ್ಟದರಸಿ ದೇವಾಜಮ್ಮಣ್ಣಿಯ ಬಾಲ್ಯ ಸ್ನೇಹಿತೆಯೂ ಆಗಿದ್ದಳು. ಸುಶೀಲೆಯೂ ಪ್ರತಿಭಾನ್ವಿತೆಯೂ ಆದ ಈಕೆ ದೊರೆಯ ಕೃಪಾಕಟಾಕ್ಷಕ್ಕೆ ಪಾತ್ರಳಾಗಿ, ಆಸ್ಥಾನದ ಹಿರಿಯ ವಿದ್ವಾಂಸರಾದ ಅಳಸಿಂಗರಾರ್ಯರಲ್ಲಿ (ಸಿಂಗರಾರ್ಯ–ತಿರುಮಲಾರ್ಯ) ಕಾವ್ಯಪುರಾಣಗಳನ್ನೂ ಧರ್ಮಶಾಸ್ತ್ರಗಳನ್ನೂ ಅಧ್ಯಯನ ಮಾಡಿದಳು. ಈಕೆಯ ಕಾವ್ಯಶಕ್ತಿಯನ್ನು ಕಂಡ ಅಳಸಿಂಗರಾರ್ಯರು, 'ಈ ಹೊನ್ನಿ ಸರಸಸಾಹಿತ್ಯದ ವರದೇವತೆ, ಕಾವ್ಯಾಲಂಕಾರ ನಾಟಕಗಳ ಪವಣಿಗೆಯ ಬಲ್ಲವಳು' ಎಂದು ಹೊಗಳಿದರು. ಈ ಮಾತನ್ನು ಚಿಕ್ಕದೇವರಾಜ ಒಡೆಯರು ತನ್ನ ಪಟ್ಟಮಹಿಷಿಗೆ ತಿಳಿಸಿ ಒಂದು ಸರಸವಾದ ಗ್ರಂಥವನ್ನು ಹೊನ್ನಮ್ಮನಿಂದ ಮಾಡಿಸೆಂದು ಹೇಳಲು–ರಾಜರಾಣಿಯರ ಸೂಚನೆಯಂತೆ ಹೊನ್ನಮ್ಮ ಕಾವ್ಯರಚನೆ ಕೈಗೊಂಡಂತೆ ತಿಳಿಯುತ್ತದೆ.

ಹದಿಬದೆಯ ಧರ್ಮ ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ 9 ಸಂಧಿಗಳೂ 479 ಪದ್ಯಗಳೂ ಇವೆ. ಈ ಕಾವ್ಯದಲ್ಲಿ ಪತಿವ್ರತಾ ಸ್ತ್ರೀಯ ಧರ್ಮವು ವಿಶದವಾಗಿ ನಿರೂಪಿತವಾಗಿದೆ. ಮಹಾಭಾರತ, ರಾಮಾಯಣ, ಮನ್ವಾದಿ ಧರ್ಮಶಾಸ್ತ್ರಗಳು ಮೊದಲಾದ ಗ್ರಂಥಗಳಲ್ಲಿ ಹಿರಿಯರು ಹೇಳಿದುದನ್ನೆ ತಾನು ಸಂಗ್ರಹಿಸಿ ಕಾವ್ಯ ಬರೆದುದಾಗಿ ಈಕೆ ಹೇಳಿಕೊಂಡಿದ್ದಾಳೆ. ತನ್ನ ಕಾವ್ಯೋದ್ದೇಶವನ್ನು ಪದಿನೆಂಟು ಬಣ್ಣನೆಯೆಂದು ಬವಣೆಗೊಂಡು ಪದಗೆಟ್ಟು ಬಯಲ ಬಣ್ಣಿಸದೆ ಮುದದೊಡನಿಹಪರದೇಳ್ಗೆವಡೆಯೆ ಹದಿಬದೆಯ ಧರ್ಮವ ಬಣ್ಣಿಪೆನು ಎಂಬ ಪದ್ಯದಲ್ಲಿ ತಿಳಿಸಿದ್ದಾಳೆ. ಪತಿವ್ರತಾಧರ್ಮದ ನಿಯಮಗಳು, ಭಾರತೀಯ ಸ್ತ್ರೀಯರ ಸ್ಥಾನಮಾನಗಳು, ಪತಿಯೊಂದಿಗೆ, ಅತ್ತೆಮಾವಂದಿರೊಂದಿಗೆ ಗುರುಹಿರಿಯರೊಂದಿಗೆ, ಬಂಧುಬಳಗದವರೊಂದಿಗೆ ಹೆಣ್ಣು ಹೇಗೆ ನಡೆದುಕೊಳ್ಳಬೇಕು–ಈ ಮುಂತಾದ ವಿಷಯಗಳನ್ನು ಹೊನ್ನಮ್ಮ ಸುಂದರವಾಗಿ ನಿರೂಪಿಸಿದ್ದಾಳೆ. ಹೆಣ್ಣನ್ನು ಕಂಡು ಅಸಡ್ಡೆ ಮಾಡುವವರನ್ನು ಕುರಿತು 'ಪೆಣ್ಣುಪೆಣ್ಣೆಂದೇಕೆ ಬೀಳುಗಳೆವರು ಕಣ್ಣುಕಾಣದ ಗಾವಿಲರು' ಎಂದು ನುಡಿದಿದ್ದು ಹೆಣ್ಣಿನ ಸರ್ವಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದಾಳೆ. ನೀತಿನಿರೂಪಣೆಯೇ ಈ ಕೃತಿಯ ಪರಮೋದ್ದೇಶವಾದರೂ ಕೆಲವು ಸಂದರ್ಭಗಳಲ್ಲಿ ಕಾವ್ಯಾಂಶವನ್ನೂ ಕಾಣಬಹುದು.

ಗಂಡನಾದವನು ಹೆಂಡತಿಗೆ ಹೇಗೆ ತಿಳಿಹೇಳಬೇಕು ಎಂಬುದನ್ನು ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳಿಸದೆ ಪಗೆಸಾಧಿಸಿ ಬಲ್ಮೆದೋರೆ ಉಗುರೊಳು ಬಾಜಿಪ ಬೀಣೆಗೊನಕೆಗೊಂಬ ಬಗೆಯೆನಿಪುದು ಭಾವಿಪೊಡೆ ಎಂದು ಹೇಳುವಲ್ಲಿ ಕಾವ್ಯ ಮಧುರತೆಯನ್ನು ಗುರುತಿಸಬಹುದು. ಇಲ್ಲಿನ ವರ್ಣನೆಗಳಲ್ಲಿ ಸಹಜತೆಯಿದೆ; ಸಾಂಗತ್ಯ ಶೈಲಿ ಸರಳವಾಗಿದೆ; ಕೋಮಲವಾಗಿದೆ; ಹೇಳುವ ವಿಷಯವನ್ನು ಸಂದಿಗ್ಧತೆಗೆ ಎಡೆಕೊಡದೆ ಅರ್ಥವತ್ತಾಗಿ ಹೇಳುವಲ್ಲಿ ಹೊನ್ನಮ್ಮನ ಕಾವ್ಯಶಕ್ತಿ ಅಡಗಿದೆ ಎನ್ನಬಹುದು. ಹದಿಬದೆಯ ಧರ್ಮ ಸಂಸಾರಧರ್ಮದ ಕೈಪಿಡಿಯೂ ಪತಿವ್ರತಾಧರ್ಮದ ಸೂಕ್ತಿಮುಕ್ತಾವಳಿಯೂ ಸುಖಮಯ ದಾಂಪತ್ಯದ ಸಿರಿಗನ್ನಡಿಯೂ ಆಗಿದೆ. ಆಸ್ಥಾನದ ವಿದ್ವತ್ ಕವಿಗಳ ಮೆಚ್ಚುಗೆಯನ್ನೂ ಜನ ಸಾಮಾನ್ಯರ ಪ್ರೀತಿ ವಿಶ್ವಾಸಗಳನ್ನೂ ಏಕಕಾಲದಲ್ಲಿ ಗಳಿಸಿದ ಹೊನ್ನಮ್ಮನಿಗೆ ಕನ್ನಡದ ಕವಯಿತ್ರಿಯರಲ್ಲಿ ಗಣನೀಯ ಸ್ಥಾನ ಸಲ್ಲುತ್ತದೆ. (ಕೆ.ಎಸ್.ಎನ್‌ಎ.)

**ಸಂಡೂರು:** ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಉತ್ತರದಲ್ಲಿ ಹೊಸಪೇಟೆ ತಾಲ್ಲೂಕು, ಪೂರ್ವದಲ್ಲಿ ಬಳ್ಳಾರಿ ತಾಲ್ಲೂಕು ಮತ್ತು ಆಂಧ್ರಪ್ರದೇಶ, ಆಗ್ನೇಯದಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ನೈಋತ್ಯ ಮತ್ತು ದಕ್ಷಿಣದಲ್ಲಿ ಕೂಡ್ಲಿಗಿ, ಪಶ್ಚಿಮದಲ್ಲಿ ಹೊಸಪೇಟೆ ತಾಲ್ಲೂಕು ಸುತ್ತುವರಿದಿವೆ. ತೋರಣಗಲ್ಲು, ಸಂಡೂರು, ಚೋರನೂರು–ಇವು ಹೋಬಳಿಗಳು. ತಾಲ್ಲೂಕಿನಲ್ಲಿ 89

ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 943.6 ಚ.ಕಿಮೀ. ತಾಲ್ಲೂಕಿನ ಒಟ್ಟು ಜನಸಂಖ್ಯೆ.

ಈ ತಾಲ್ಲೂಕಿನ ಸಂಡೂರು ಬೆಟ್ಟಗಳು ಅವುಗಳ ಸುತ್ತಲಿನ ವನಸಿರಿಯಿಂದ ಕೂಡಿದ ಚೇತೋಹಾರಿ ನಿಸರ್ಗಸೌಂದರ್ಯದಿಂದ ಹಾಗೂ ಅಲ್ಲಿನ ಖನಿಜಸಂಪತ್ತಿನಿಂದ ಪ್ರಸಿದ್ಧವಾಗಿವೆ. ಸಂಡೂರು ಬೆಟ್ಟಸಾಲು ಮಲ್ಲಾಪುರಂ ಬಳಿ ತುಂಗಭದ್ರಾ ನದಿ ದಂಡೆಯಿಂದ ಆಗ್ನೇಯದ ಕಡೆಗೆ ಸು. 48 ಕಿಮೀ ದೂರ ಹಬ್ಬಿದೆ. ಈ ಬೆಟ್ಟಸಾಲಿನ ನಡುವೆ ನಾರಿಹಳ್ಳದ

ಉಬ್ಬಳಗುಂಡಿ ಗಾರ್ಜ್, ಸಂಡೂರು

ಎರಡು ಕಮರಿಗಳಿವೆ. ಈ ಶ್ರೇಣಿಯ ದಕ್ಷಿಣ ಭಾಗದಲ್ಲಿರುವ ಕುಮಾರಸ್ವಾಮಿ ಬೆಟ್ಟದ ಎತ್ತರ 1,036 ಮೀ. ಮಧ್ಯದಲ್ಲಿರುವ ರಾಮನಮಲೈ 992 ಮೀ ಇದ್ದು ಉತ್ತರದಲ್ಲಿರುವ ಜಂಬುನಾಥ ಶಿಖರ 908 ಮೀ ಎತ್ತರವಿದೆ. ಸಂಡೂರು ಬೆಟ್ಟಸಾಲಿನ ಪೂರ್ವಕ್ಕೆ ಹಬ್ಬಿರುವ ಸುಗ್ಗಮಹದೇವಿ ಬೆಟ್ಟ ಅಥವಾ ತಾಮ್ರಪರ್ವತ ಶ್ರೇಣಿ ದರೋಜಿ ಕೆರೆಯವರೆಗೂ ಸು. 42 ಕಿಮೀ ಉದ್ದಕ್ಕೆ ವ್ಯಾಪಿಸಿದೆ. ಈ ತಾಲ್ಲೂಕಿನ ಚೋರನೂರಿನ ಬಳಿ ಗುಡಿಕೋಟೆ ಶ್ರೇಣಿ ಪ್ರಾರಂಭವಾಗಿ ಮುಂದೆ ಕೂಡ್ಲಿಗಿ ತಾಲ್ಲೂಕಿನ ಗುಡೇಕೋಟೆ ದುರ್ಗದ ಉತ್ತರಕ್ಕೆ ಸಾಗುವುದು.

ಈ ತಾಲ್ಲೂಕಿನಲ್ಲಿ ಹರಿಯುವ ತೊರೆಗಳಲ್ಲಿ ನಾರಿಹಳ್ಳ ಮುಖ್ಯವಾದದ್ದು. ಇದು ತಾಲ್ಲೂಕಿನ ಓಬಳಗಂಡಿ ಮತ್ತು ಭೀಮಗಂಡಿ ಕಮರಿಗಳಲ್ಲಿ ಸಂಡೂರು ಮುಖಾಂತರ ಹರಿಯುವುದು. ಈ ಕಮರಿಗಳ ಪ್ರಕೃತಿ ದೃಶ್ಯ ಸುಂದರವಾದದ್ದು. 1541ರ ಒಂದು ಶಾಸನದಲ್ಲಿ ಈ ತೊರೆಯನ್ನು ನಾರಾಯಣ್ ಎಂದು ಕರೆದಿದೆ. ತೋರಣಗಲ್ಲು ಹೋಬಳಿಯಲ್ಲಿ ಈ ತೊರೆಗೆ ಅಡ್ಡಕಟ್ಟೆ ಕಟ್ಟಿ ದರೋಜಿ ಕೆರೆ ನಿರ್ಮಿಸಲಾಗಿದೆ. ಇಡೀ ಜಿಲ್ಲೆ ಮತ್ತು ತಾಲ್ಲೂಕಿಗೇ ಇದು ದೊಡ್ಡಕೆರೆ. ಅನಂತರ ಈ ತೊರೆ ಉತ್ತರಾಭಿಮುಖವಾಗಿ ತುಂಗಭದ್ರಾ ನದಿಯೆಡೆಗೆ ಹರಿಯುವುದು. ಇದನ್ನು ಬಿಟ್ಟರೆ ಸಂಡೂರು ಬೆಟ್ಟಗಳ ಪಶ್ಚಿಮದ ಕಡೆ ಬೆಟ್ಟಗಳ ಮಗ್ಗುಲಲ್ಲಿ ಹರಿಯುವ ಗೌರಿಪುರ ತೊರೆಯನ್ನು ಹೆಸರಿಸಬಹುದು. ತಾಲ್ಲೂಕಿನಲ್ಲಿ ವ್ಯವಸಾಯ ಯೋಗ್ಯ 15 ಕಿರಿಯ 2 ಹಿರಿಯ ಕೆರೆಗಳೂ ಸಾವಿರಕ್ಕೂ ಹೆಚು ಬಾವಿಗಳೂ ಇವೆ. ತುಂಗಭದ್ರಾ ನಾಲೆಯ ನೀರು ತಾಲ್ಲೂಕಿನ ಉತ್ತರದಲ್ಲಿ ಬಳಕೆಯಾಗುತ್ತದೆ. ಜಿಲ್ಲೆಯಲ್ಲೆ ಹೆಚ್ಚು ಅರಣ್ಯ ಪ್ರದೇಶವಿರುವ ಈ ತಾಲ್ಲೂಕಿನಲ್ಲಿ ಹುಣಿಸೆ, ಬೇವು, ಮಾವು, ಕಕ್ಕೆ, ತಂಗಡಿ, ಹೊನ್ನೆ, ಸೀತಾಫಲ, ಕಮಾರ, ದಿಂಡಿಗ, ಹರಗಲು ಮುಂತಾದ ಮರಗಳುಳ್ಳ ಎಲೆ ಉದುರುವ ಕಾಡುಗಳನ್ನೂ ಜೊತೆಗೆ ಶ್ರೀಗಂಧ ಮತ್ತು ಬೀಟೆಯಂಥ ಬೆಲೆಬಾಳುವ ಮರಗಳುಳ್ಳ ಕಾಡುಗಳನ್ನೂ ಕಾಣಬಹುದು.

ಸಂಡೂರಿನ ದಟ್ಟ ಅರಣ್ಯಪ್ರದೇಶಗಳಲ್ಲಿ ಹಿಂದೆ ಹುಲಿಗಳಿದ್ದವು. ಈಗ ಸಾಮಾನ್ಯವಾದ ಇತರ ಕಾಡುಪ್ರಾಣಿಗಳನ್ನು ಇಲ್ಲಿ ಕಾಣಬಹುದು. ಹಸುರು ತುಂಬಿದ ಬೆಟ್ಟ, ಕಮರಿ ಕಾಡುಗಳ ಈ ತಾಲ್ಲೂಕಿನ ವಾಯುಗುಣ ಸಾಮಾನ್ಯವಾಗಿ ತಂಪಾಗಿದ್ದರೂ ವರ್ಷದಲ್ಲಿ ಹೆಚ್ಚುಕಾಲ ಒಣ ಹವೆ ಇರುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 829.2 ಮಿಮೀ.

ಈ ತಾಲ್ಲೂಕಿನಲ್ಲಿ ಮರಳು ಮಿಶ್ರಿತ ಕೆಂಪುಜೇಡಿ ಮತ್ತು ಫಲವತ್ತಾದ ಜೇಡಿಮಣ್ಣಿರುವ ಪ್ರದೇಶವಿದ್ದು ಜೋಳ, ಬತ್ತ, ಸೇಂಗಾ, ದ್ವಿದಳ ಧಾನ್ಯಗಳು, ಕಬ್ಬು, ಹತ್ತಿ, ಕೆಲಬಗೆಯ ಹಣ್ಣುಗಳನ್ನು ಬೆಳೆಯುತ್ತಾರೆ. ಪಶುಪಾಲನೆ ಹಾಗೂ ಮತ್ಸ್ಯೋದ್ಯಮವಿದ್ದು ಅವುಗಳ ಬೆಳೆವಣಿಗೆ ಮತ್ತು ವಿಸ್ತರಣೆಗೆ ಗಮನ ನೀಡಲಾಗುತ್ತಿದೆ. *

ಸಂಡೂರು ತಾಲ್ಲೂಕಿನಲ್ಲಿ, ಹಿಮಟೈಟ್ ಶಿಲೆಗಳ ಬದಲಾವಣೆಯಿಂದ ದೊರೆತ ಉತ್ತಮ ದರ್ಜೆಯ ಹಿಮಟೈಟ್ ಇಲ್ಲಿನ ಬೆಟ್ಟಗಳ ಮೇಲುಭಾಗ ದಲ್ಲಿ ಹರಡಿದೆ. ಮ್ಯಾಂಗನೀಸ್‌ನಿಂದ ಒಡಗೂಡಿರುವ ಇವು ಕೆಲವೆಡೆ 100-120 ಅಡಿಗಳಷ್ಟು ದಪ್ಪವಾಗಿವೆ. ಈ ಪ್ರದೇಶದ ಪ್ರಮುಖ ಮ್ಯಾಂಗನೀಸ್ ನಿಕ್ಷೇಪ ಪ್ರದೇಶಗಳೆಂದರೆ ದೇವಗಿರಿ (ಕಾಮಧೇನು), ಕುಮಾರಸ್ವಾಮಿ, ಯಶವಂತನಗರ (ಕಣಿವೇಹಳ್ಳಿ) ಮತ್ತು ರಾಮಘಡ (ರಾಮನದುರ್ಗ). ಇವೆಲ್ಲವೂ ಜಂಬಿಟ್ಟಿಗೆ ಶಿಲಾಪ್ರದೇಶದ ಶೇಷ ನಿಕ್ಷೇಪಗಳು. ಮುಖ್ಯವಾದ ಅದಿರು ಸೈಲಾಮೆಲಿಸ್ ಮತ್ತು ವ್ಯಾಡ್. ಇವುಗಳಲ್ಲಿ ಉತ್ತಮ ದರ್ಜೆಯ, ಸೇಕಡ 48ರಷ್ಟು ಮ್ಯಾಂಗನೀಸ್ ಲೋಹಾಂಶವಿರುವುದು ಕಂಡುಬಂದಿದೆ.

ಈ ತಾಲ್ಲೂಕಿನಲ್ಲಿ ಗಣಿ ಉದ್ಯಮ ಮುಖ್ಯವಾದದ್ದು. ಸಂಡೂರಿನ ಪೂರ್ವ ಮತ್ತು ಪಶ್ಚಿಮದಲ್ಲಿ ಸಮಾನಾಂತರವಾಗಿ ಹಬ್ಬಿರುವ ಇಲ್ಲಿನ ಬೆಟ್ಟಶ್ರೇಣಿಗಳು ಖನಿಜಗಳ ಆಕರವಾಗಿವೆ. ಇವುಗಳಲ್ಲಿ ದೋಣಿಮಲೈ, ರಾಮನದುರ್ಗ, ಕುಮಾರಸ್ವಾಮಿ ಬೆಟ್ಟ ಮುಂತಾದವನ್ನು ಹೆಸರಿಸಬಹುದು. ರಾಮನದುರ್ಗ ಮತ್ತು ದೋಣಿಮಲೈ ಶ್ರೇಣಿಯಲ್ಲಿ ಹೆಚ್ಚು ಪ್ರಮಾಣದ ಕಬ್ಬಿಣದ ಅದಿರು ನಿಕ್ಷೇಪಗಳಿವೆ. ಇಲ್ಲಿ ಮ್ಯಾಂಗನೀಸ್ ಅದಿರನ್ನು ಹೊರತೆಗೆ ಯಲಾಗುತ್ತಿದೆ. ತೋರಣಗಲ್ಲಿನಲ್ಲಿ ಕೇಂದ್ರ ಸರ್ಕಾರ ಸ್ಥಾಪಿಸಲಾಗಿರುವ ವಿಜಯನಗರ ಉಕ್ಕಿನ ಕಾರ್ಖಾನೆ ಒಂದು ಭಾರಿ ಉದ್ಯಮ. **(ಎಂ.ಎಸ್.ಎಂ.)**

ತಾಲ್ಲೂಕಿನ ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳಿಗೆ ಆರ್ಥಿಕ ಸಹಕಾರ ನೀಡುವ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳೂ ಸಂಘಗಳೂ ಇವೆ. ಪ್ರೌಢಶಾಲೆ, ಆಸ್ಪತ್ರೆ, ಔಷಧಾಲಯ, ಅಂಚೆ ತಂತಿ, ದೂರವಾಣಿ ಮತ್ತು ವಿದ್ಯುತ್ತು ಮುಂತಾದವುಗಳ ಸೌಲಭ್ಯವಿದೆ. ಕೂಡ್ಲಿಗಿ-ಸಂಡೂರು-ಬಳ್ಳಾರಿ ಜಿಲ್ಲಾ ಹೆದ್ದಾರಿ, ಹೊಸಪೇಟೆ-ಬಳ್ಳಾರಿ ರಾಜ್ಯ ಹೆದ್ದಾರಿ, ಹೊಸಪೇಟೆ-ಸಂಡೂರು ರಸ್ತೆ, ಕೂಡ್ಲಿಗಿ-ಸಂಡೂರು-ಕುರುಗೋಡು ರಸ್ತೆಗಳಿದ್ದು, ಬಳ್ಳಾರಿ-ಹೊಸಪೇಟೆ ಬ್ರಾಡ್‌ಗೇಜ್ ರೈಲುಮಾರ್ಗ ಈ ತಾಲ್ಲೂಕಿನ ಉತ್ತರದಲ್ಲಿ ಸ್ವಲ್ಪದೂರ ಹಾದುಹೋಗಿದೆ. ಇದರ ಜೊತೆಗೆ ಮೀಟರ್ ಗೇಜ್ ರೈಲುಮಾರ್ಗವೂ ಈ ತಾಲ್ಲೂಕಿನಲ್ಲಿದೆ.

ಸಂಡೂರಿನ ದಕ್ಷಿಣಕ್ಕೆ ಸು. 48 ಕಿಮೀ ದೂರದಲ್ಲಿರುವ ಬೊಮ್ಮಗಟ್ಟ ಒಂದು ಸಾಮಾನ್ಯ ಗ್ರಾಮವಾದರೂ ಇಲ್ಲಿರುವ ಹಳೆಯ ಹುಲಿಕುಂಟಿರಾಯ (ಆಂಜನೇಯಸ್ವಾಮಿ) ದೇವಾಲಯ ಪ್ರಸಿದ್ಧವಾದದ್ದು. ಸಂಡೂರಿನ ಈಶಾನ್ಯಕ್ಕೆ ಸು. 48 ಕಿಮೀ ದೂರದಲ್ಲೂ ತೋರಣಗಲ್ಲಿನ ಉತ್ತರಕ್ಕೆ ಸು.28ಕಿಮೀ ದೂರದಲ್ಲೂ ಇರುವ ದರೋಜಿ ಗ್ರಾಮ ಅದರ ಬಳಿ ಕಟ್ಟಿರುವ ದರೋಜಿ ಕೆರೆಯಿಂದ ಪ್ರಸಿದ್ಧ. ಈ ಕೆರೆ ಟಿಪ್ಪು ಕಟ್ಟಿಸಿದ್ದೆಂದು ಪ್ರತೀತಿ. ಇಲ್ಲಿ ನಾರಿಹಳ್ಳಕ್ಕೆ ಸು. 4 ಕಿಮೀ ಉದ್ದದ ಅಣೆಕಟ್ಟೆ ಕಟ್ಟಲಾಗಿದೆ. 1851ನೆಯ ಮೇ ತಿಂಗಳಲ್ಲಿ ಕೆರೆ ಏರಿಯಲ್ಲಿ ಬಿರುಕುಂಟಾಗಿ ನೀರು ನುಗ್ಗಿ ಹಳೆಯ ದರೋಜಿ ಗ್ರಾಮ ನಾಶವಾಯಿತು. ಅನಂತರ ಈಗಿನ ಹೊಸ ದರೋಜಿ

ಗ್ರಾಮದ ನಿರ್ಮಾಣವಾಯಿತು. ಈ ಕೆರೆಯ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಾರೆ. ಕೆರೆಯಲ್ಲಿ ಮೀನು ಸಾಕಣೆ ಇದೆ. ಸಂಡೂರಿನ ಆಗ್ನೇಯಕ್ಕೆ ಸು. 28 ಕಿಮೀ ದೂರದಲ್ಲಿರುವ ದೇವಗಿರಿ ಗ್ರಾಮ, ದೇವಗಿರಿ ಬೆಟ್ಟದ ಮೇಲಿದೆ. ಈ ಪ್ರದೇಶದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಹೇರಳವಾಗಿ ದೊರಕುವುದರಿಂದ ಇಲ್ಲಿ ಮ್ಯಾಂಗನೀಸ್ ಅದಿರನ್ನು ಹೊರತೆಗೆಯಲಾಗುತ್ತಿದೆ. ಸಂಡೂರಿನ ವಾಯುವ್ಯಕ್ಕೆ ಸು. 16 ಕಿಮೀ ದೂರದಲ್ಲಿರುವ ರಾಮನದುರ್ಗ ಒಂದು ಗಿರಿಧಾಮ. ಇಲ್ಲೊಂದು ಹಳೆಯ ಕೋಟೆಯ ಅವಶೇಷವಿದೆ. ಇದನ್ನು ಕಂಪಿಲಿಯ ಕುಮಾರರಾಮ ಕಟ್ಟಿಸಿದ ನೆಂದು ಪ್ರತೀತಿ. ಇಲ್ಲೊಂದು ರಾಮ ದೇವಾಲಯವಿದೆ. ಸಿಕ್ಕಿರುವ ಶಾಸನದ ಪ್ರಕಾರ ಈ ದೇವಾಲಯವನ್ನು ಕುಮಾರರಾಮನ ನೆನಪಿಗಾಗಿ ಕಟ್ಟಿಸಿದು ದೆಂದು ತಿಳಿದುಬರುವುದು. ಬೆಟ್ಟದ ಮೇಲೊಂದು ಭೂಮಾಪನ ಕೇಂದ್ರವಿದೆ. ಬೆಟ್ಟದ ಮೇಲಿನಿಂದ ಸಂಡೂರು ಕಣಿವೆಯ ಸುಂದರ ದೃಶ್ಯವನ್ನು ಕಾಣಬಹುದು. ಇಲ್ಲಿ ಮಾವಿನ ತೋಪುಗಳು ಜನರ ಮನಸ್ಸನ್ನು ಆಕರ್ಷಿಸುತ್ತವೆ. ಸಂಡೂರಿನ ಈಶಾನ್ಯದಲ್ಲಿ ಬಳ್ಳಾರಿ-ಹೊಸಪೇಟೆ ರಾಜ್ಯ ಹೆದ್ದಾರಿಯ ಮಧ್ಯದಲ್ಲಿರುವ ತೋರಣಗಲ್ಲು ಬಳ್ಳಾರಿಯ ವಾಯುವ್ಯಕ್ಕೆ ಸು. 28 ಕಿಮೀ ದೂರದಲ್ಲಿದೆ. ರೈಲುಮಾರ್ಗಕ್ಕೆ ಹತ್ತಿರವಿರುವ ಈ ಊರಿನ ಬಳಿ ಇರುವ ವಿಜಯನಗರ ಉಕ್ಕಿನ ಕಾರ್ಖಾನೆಯಿಂದಾಗಿ ಈ ಊರು ಒಂದು ಕೈಗಾರಿಕಾ ನಗರವಾಗಿ ಬೆಳೆದು ಅಭಿವೃದ್ಧಿಯಾಗಿದೆ. *

ಸಂಡೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯ ಪಟ್ಟಣ. ಇದರ ಪಶ್ಚಿಮಕ್ಕೆ ಸು. 48 ಕಿಮೀ ದೂರದಲ್ಲಿ ಬಳ್ಳಾರಿ-ಹೊಸಪೇಟೆ, ಬಳ್ಳಾರಿ-ಕೂಡ್ಲಿಗಿ ಮಾರ್ಗ ಮಧ್ಯದಲ್ಲಿದೆ. ದೋಣಿಮಲೈ ವಿಸ್ತರಣೆ ಸೇರಿಸಿ ಪಟ್ಟಣದ ಒಟ್ಟು ಜನಸಂಖ್ಯೆ 34,156. ಹಿಂದೆ ಇದು ಸಂಡೂರು ಸಂಸ್ಥಾನದ ರಾಜಧಾನಿಯಾಗಿತ್ತು. ರಾಮದುರ್ಗ ಮತ್ತು ಈಶಾನ್ಯ ಬೆಟ್ಟಸಾಲುಗಳು ಒಂದು ಕಡೆ, ದೋಣಿಮಲೈ ಬೆಟ್ಟಸಾಲುಗಳು ಮತ್ತೊಂದೆಡೆ. ಈ ಎರಡೂ ಬೆಟ್ಟಸಾಲುಗಳ ನಡುವೆ ಸಂಡೂರು ಇದೆ. ಕಣಿವೆಯ ಮಧ್ಯದಲ್ಲಿರುವ ಸಂಡೂರು ಸುಂದರ ಪ್ರಾಕೃತಿಕ ಹಿನ್ನೆಲೆಯಿಂದ ಕೂಡಿದೆ. ಊರಿನ ಪೂರ್ವ ಹಾಗೂ ಪಶ್ಚಿಮ ಎರಡು ಕಡೆಗಳಲ್ಲೂ ಗಗನಚುಂಬಿ ಗಿರಿಶಿಖರ ಗಳಿವೆ. ಕುಮಾರಸ್ವಾಮಿ ಬೆಟ್ಟದ ಮೇಲೆ ಕಾರ್ತಿಕೇಯನೆಂದು ಪ್ರಸಿದ್ಧನಾದ ಕುಮಾರಸ್ವಾಮಿಯ ಭವ್ಯ ದೇವಾಲಯವಿದೆ. ಈ ನಗರದ ಸುತ್ತಮುತ್ತಲಿನ ಬೆಟ್ಟಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದ ಕಾಡುಗಳಿವೆ. ಧಾರವಾಡ ವಿನ್ಯಾಸಕ್ಕೆ ಸೇರಿದ ಅಗ್ನಿಶಿಲೆಗಳು ನಗರದ ಸುತ್ತಮುತ್ತ ಹರಡಿವೆ. ದೋಣಿಮಲೈ ಬೆಟ್ಟಸಾಲುಗಳಲ್ಲಿ ಹೆಚ್ಚಿನ ಕಬ್ಬಿಣಾಂಶವುಳ್ಳ ಕಬ್ಬಿಣದ ಅದಿರು ದೊರೆಯುವುದು. ಸಂಡೂರಿನ ಸುತ್ತಮುತ್ತ ಸು. 13 ಕೋಟಿ ಟನ್ನುಗಳಷ್ಟು ಕಬ್ಬಿಣದ ಅದಿರು ಇದೆಯೆಂದು ಅಂದಾಜು ಮಾಡಲಾಗಿದೆ. ಇಲ್ಲಿ ಫೆರ್ರೋ-ಮ್ಯಾಂಗನೀಸ್ ಕಾರ್ಖಾನೆ ಇದೆ. ಈ ಸ್ಥಳವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಬೆಳೆಸಲು ಪ್ರಯತ್ನಗಳಾಗುತ್ತಿವೆ. ವಿದ್ಯುತ್ತು, ಅಂಚೆ, ತಂತಿ, ದೂರವಾಣಿ, ಆಸ್ಪತ್ರೆ, ಪ್ರೌಢಶಾಲೆ ಮುಂತಾದ ಸೌಲಭ್ಯಗಳಿವೆ. ನಗರ ಪಂಚಾಯಿತಿಯ ಆಡಳಿತಕ್ಕೆ ಈ ಪಟ್ಟಣ ಸೇರಿದೆ. (ಕೆ.ಆರ್.ಆರ್.)

ಸಂಡೂರು ಪಟ್ಟಣಕ್ಕೆ ತಾರಾನಗರದ ಬಳಿಯ ಭೀಮನಗಂಡಿ, ಯಶವಂತ ನಗರದ ಕಡೆ ಇರುವ ಓಬಳಗಂಡಿ ಮತ್ತು ವೆಂಕಟಗಿರಿ ಕಣಿವೆಗಳ ಮುಖಾಂತರ ಪ್ರವೇಶವುಂಟು. ಸಂದು ಊರು ಸಂಡೂರು ಆಯಿತೆಂದು ಪ್ರತೀತಿ. ಹಿಂದೆ ಈ ಪಟ್ಟಣವನ್ನು ಸ್ಕಂದಪುರಿ ಎಂದು ಕರೆಯುತ್ತಿದ್ದರಂತೆ. ಇಲ್ಲಿ ಹೈದರ್ಅಲಿ ಕಟ್ಟಿಸಿದ ಕೋಟೆಯ ಅವಶೇಷವಿದ್ದು, ಅದನ್ನು ಕೃಷ್ಣಾನಗರ ಕೋಟೆ ಎಂದು ಕರೆಯುವರು. ಇದರ ಆಚೆ ಭೀಮತೀರ್ಥ ಮತ್ತು ತಾರಾನಗರಕ್ಕೆ ಸ್ವಲ್ಪ ದೂರದಲ್ಲಿರುವ ಗ್ರಾಮದ ಬಳಿ ಭೈರವತೀರ್ಥ ವಿದೆ. ಈ ಎರಡೂ ತೀರ್ಥಗಳಿಗೆ ಬೆಟ್ಟಗಳಿಂದ ಹರಿದು ಬರುವ ಝರಿ ಆಧಾರ. ಎರಡೂ ತೀರ್ಥಗಳ ಬಳಿ ದೇವಾಲಯವಿದೆ. ಓಬಳಗಂಡಿಯ ಕಣಿವೆಯ ಬಳಿ ನರಸಿಂಹಸ್ವಾಮಿ ದೇವಾಲಯವಿದೆ. ಸಂಡೂರಿನಲ್ಲಿರುವ ವಿಠೋಬ ದೇವಾಲಯ ಮತ್ತು ಅರಮನೆ ಸುಂದರವಾದವು. ಕುಮಾರಸ್ವಾಮಿ ದೇವಾಲಯದಲ್ಲಿ ಸತಿ ಕಲ್ಲುಗಳೂ ಶಾಸನಗಳೂ ಇವೆ. ಇಲ್ಲಿರುವ ಪುರಾತನ ಪಾರ್ವತಿ ದೇವಾಲಯ ಮತ್ತು ಕುಮಾರಸ್ವಾಮಿ ದೇವಾಲಯಗಳೆರಡೂ ವಾಸ್ತುಶಿಲ್ಪ ದೃಷ್ಟಿಯಿಂದಲೂ ಮುಖ್ಯವಾದವು. ಇಲ್ಲಿ ನಾಲ್ಕು ಕಡೆಯೂ ಮೆಟ್ಟಿಲುಗಳಿರುವ ಅಗಸ್ತ್ಯತೀರ್ಥವಿದೆ. ಇಲ್ಲೇ ಹತ್ತಿರದಲ್ಲಿ ಹರಿಶಂಕರ ದೇವಾಲಯವಿದೆ. ಇಲ್ಲಿ ಬೆಟ್ಟದಿಂದ ಹರಿದು ಬರುವ ಜಲ, ಕೆತ್ತಿರುವ ಒಂದು ಹಸುವಿನ ಬಾಯಿ ಮುಖಾಂತರ ಇಲ್ಲಿನ ಕೊಳಕ್ಕೆ ಬೀಳುವುದು. ಈ ದೇವಾಲಯದ ಹಿಂದೆ ಒಂದು ಗುಹೆಯಿದೆ. ಶಿವನ ಮಗನಾದ ಕುಮಾರಸ್ವಾಮಿ ಅಗಸ್ತ್ಯ ಮಹಾಮುನಿಗಳ ಜೊತೆ ದಕ್ಷಿಣದ ಕಡೆ ಹೋಗುವ ಮಾರ್ಗಮಧ್ಯದಲ್ಲಿ ವಿಶ್ರಾಂತಿಗಾಗಿ ತಂಗಿದ್ದನೆಂದೂ ಸಂಡೂರು ಬೆಟ್ಟದ ಮೇಲಿದ್ದ ತಾರಕಾಸುರನೆಂಬ ರಾಕ್ಷಸನನ್ನು ಕೊಂದನೆಂದೂ ಪ್ರತೀತಿ. *

**ಸಂಡೂರು ಅರಸರು:** ಈ ಅರಸು ಮನೆತನದವರು ಘೋರ್ಪಡೆ ವಂಶೀಕರು. ಘೋರ್ಪಡೆ ಎಂದರೆ ಮರಾಠಿ ಭಾಷೆಯಲ್ಲಿ ಉಡ ಎಂದರ್ಥ. ಈ ಉಡದ ನೆರವಿನಿಂದ 1469ರಲ್ಲಿ ಗಿರಿದುರ್ಗದ ಕೋಟೆ ಏರಿದ ಸಾಹಸಿಯೇ ಮೊದಲನೆಯ ಘೋರ್ಪಡೆ. ಅನ್ವರ್ಥವಾಗಿ ಬಂದ ಈ ಹೆಸರು ಕಡೆಗೆ ಅಂಕಿತವಾಗಿ ಪರಿವರ್ತಿತವಾಯಿತು. ಶಿವಾಜಿಗೆ ಈ ಘೋರ್ಪಡೆಗಳು ಬಲಗೈನಂತೆ ಇದ್ದರು. ಜರಮಲೆ ಪಾಳೆಯಗಾರರಿಂದ ಸಂಡೂರು ಮೊದಲಾದ ಭಾಗಗಳನ್ನು ಗೆದ್ದುಕೊಂಡು ನಾರಿ ನದಿಯ ಕಣಿವೆಗೆ ಸೇರಿಸಿಕೊಂಡ ಸಿದ್ದೋಜಿರಾವ್ ಘೋರ್ಪಡೆಯೇ ಈ ಅರಸು ಮನೆತನದ ಮೊದಲಿಗ. ಅನಂತರ ಅವನ ಮಗ ಮುರಾರಿರಾವ್ ಪಟ್ಟಕ್ಕೆ ಬಂದ. ಈತ ಈಗ ಆಂಧ್ರದಲ್ಲಿರುವ ಗುತ್ತಿ ಪ್ರಾಂತ್ಯದ ಆಡಳಿತಾಧಿಕಾರಿಯಾ ಗಿಯೂ ಖ್ಯಾತಿ ಗಳಿಸಿದ ಪೇಶ್ವೆಗಳು ಮುರಾರಿರಾಯನಿಗೆ ಸೇನಾಪತಿ ಎಂಬ ಬಿರುದಿತ್ತು. ಅದನ್ನು ವಂಶಪಾರಂಪರ್ಯವಾಗಿ ಉಪಯೋಗಿಸ ಬಹುದೆಂದು ಒಪ್ಪಿಗೆಯಿತ್ತಿದ್ದರು. ಇದಲ್ಲದೆ ಮಾಮ್ಲುಕತ್ಮದಾರ್ ಎಂಬ ಇನ್ನೊಂದು ಬಿರುದೂ ಈ ಅರಸು ಮನೆತನಕ್ಕಿದೆ. 1775-76ರಲ್ಲಿ ಹೈದರ್ಅಲಿ ಸಂಡೂರು ರಾಜ್ಯವನ್ನು ಗೆದ್ದು ಮುರಾರಿರಾಯನನ್ನು ಕೊಪ್ಪಲುದುರ್ಗದಲ್ಲಿ ಬಂಧನದಲ್ಲಿಟ್ಟಾಗ ಮುರಾರಿರಾಯ ಸತ್ತ. ಹೈದರ್ಅಲಿ ತನ್ನ ಸೈನ್ಯ ಇಡಲು ಕೃಷ್ಣನಗರವನ್ನು ಸ್ಥಾಪಿಸಿದ್ದು ಟಿಪ್ಪು ಸುಲ್ತಾನ್ ಅದನ್ನು ಬಳಸಿಕೊಂಡ. ಮುರಾರಿರಾಯನ ಇಬ್ಬರು ಗಂಡುಮಕ್ಕಳೂ ಕಿರಿವಯಸ್ಸಿನಲ್ಲಿಯೇ ತೀರಿಕೊಂಡಿದ್ದರಿಂದ ತನ್ನ ಸೋದರ ಸಂಬಂಧಿ ಯಶವಂತರಾಯನ ಮಗ ಶಿವರಾಯನನ್ನು ದತ್ತು ಮಾಡಿಕೊಂಡಿದ್ದ. ಟಿಪ್ಪುವನ್ನು ಓಡಿಸಲು ಶಿವರಾಯ ದಾಳಿಮಾಡಿ ಆ ಹೋರಾಟದಲ್ಲಿ ಅಸು ನೀಗಿದ. ಅವನ ಮಗ ಸಿದ್ದೋಜಿಗೆ ಆಗ ಕೇವಲ ಎರಡು ವರ್ಷ. ಆತ ವೆಂಕಟರಾವ್‌ನ ಪೋಷಣೆಯಲ್ಲಿದ್ದ. ವೆಂಕಟರಾವ್ 1790ರಲ್ಲಿ ಟಿಪ್ಪುವನ್ನು ಸೋಲಿಸಿ ಸಂಡೂರನ್ನು ಗೆದ್ದುಕೊಂಡ. 1792ರಲ್ಲಿ ಟಿಪ್ಪುವಿಗೂ ಈಸ್ಟ್ ಇಂಡಿಯಾ ಕಂಪನಿಗೂ ಒಪ್ಪಂದವಾದಾಗ ಸಂಡೂರು ಸಂಪೂರ್ಣವಾಗಿ ಘೋರ್ಪಡೆಗೆ ಸೇರಿತು. ಸಿದ್ದೋಜಿ 1796ರಲ್ಲಿ ತನ್ನ 13ನೆಯ ವರ್ಷದಲ್ಲಿ ನಿಧನನಾದ. ವೆಂಕಟರಾಯನ ಸಲಹೆಯಂತೆ ಖಂಡೇರಾಯನ ಹಿರಿಯ ಮಗ ಶಿವರಾಯ ನನ್ನು ದತ್ತು ತೆಗೆದುಕೊಳ್ಳಲಾಯಿತು. ಶಿವರಾಯನ ಮೇಲೆ ಅಸಮಾಧಾನ ಗೊಂಡ ಬಾಜೀರಾವ್ ಪೇಶ್ವೆಯ ಚಿತಾವಣೆಯಿಂದಾಗಿ ಮನ್ರೋ 1817ರಲ್ಲಿ ಶಿವರಾಯನ ಮೇಲೆ ದಾಳಿಮಾಡಿ ಕಡೆಯಲ್ಲಿ ಶಿವರಾಯನಿಗೆ ಹಿರೇಹಾಳು ಮತ್ತು ಇತರ ಎಂಟು ಗ್ರಾಮಗಳನ್ನು ಮಾತ್ರ ಬಿಟ್ಟುಕೊಟ್ಟ. ಆದರೆ ಮಾರನೆಯ ವರ್ಷವೇ ಆಂಗ್ಲರಿಗೂ ಮರಾಠರಿಗೂ ವಿರಸವಾಗಿ ಸಂಡೂರು

ಪೂರ್ತಿ ಶಿವರಾಯನ ವಶಕ್ಕೆ ಬಂತು. ಆದರೂ ಶಿವರಾಯನಿಗೆ ಆಂಗ್ಲರಿಂದ ಸನ್ನದು ದೊರೆತುದು 1826ರಲ್ಲಿ, ಆಂಗ್ಲರ ಮೇಲ್ವಿಚಾರಣೆಗೊಳಪಟ್ಟೇ ಆ ಸನ್ನದು ದೊರಕಿತ್ತು. ಮುಂದೆ 1840ರಲ್ಲಿ ಸಂತಾನವಿಲ್ಲದೆ ಶಿವರಾಯ ಮರಣಹೊಂದಿದ. ಅನಂತರ ಅವನ ದತ್ತುಪುತ್ರ ವೆಂಕಟರಾಯ ಅಧಿಕಾರಕ್ಕೆ ಬಂದ. ಈ ವೆಂಕಟರಾಯ ಶಿವರಾಯನ ತಮ್ಮ, ಭುಜಂಗರಾಯನ ಮಗ. 1847ರಲ್ಲಿ ವೆಂಕಟರಾಯನಿಗೆ ಆಂಗ್ಲರು ಸನ್ನದು ಕೊಟ್ಟರು. ವೆಂಕಟರಾಯ ತನ್ನ ರಾಜ್ಯದಲ್ಲಿ ಒಂದು ಸ್ಯಾನಿಟೋರಿಯಂ ಕಟ್ಟಿಸಿದ. ಅವನು 1861ರಲ್ಲಿ ನಿಧನನಾದ. ಹದಿನಾಲ್ಕು ವರ್ಷದ ಅವನ ಮಗ ಶಿವಷಣ್ಮುಖರಾವ್ ಪಟ್ಟಕ್ಕೆ ಬಂದನಾದರೂ ಅವನಿಗೆ ಸನ್ನದು ದೊರೆತುದು 1863ರಲ್ಲಿ ಮೆಕಾರ್ಟನಿ ಇಂಗ್ಲೆಂಡಿಗೆ ಹಿಂತಿರುಗಿದ್ದರಿಂದ, ಫರ್ರ್ ಮೇಲ್ವಿಚಾರಕನಾಗಿದ್ದ. ಈ ಮಧ್ಯದಲ್ಲಿ 1878ರಲ್ಲಿ ಶಿವಷಣ್ಮುಖರಾವ್ ಸಂತಾನವಿಲ್ಲದೆ ಮರಣ ಹೊಂದಲು ಅವನ ತಮ್ಮ ವಿಠ್ಠಲರಾವ್ ಅಧಿಕಾರಕ್ಕೆ ಬಂದ. ಅವನು 1892ರಲ್ಲಿ ನಿಧನನಾದಾಗ ಅವನ ಮಗ ವೆಂಕಟರಾವ್ ಕೆಲವು ತಿಂಗಳ ಹಸುಗೂಸು. ಆಂಗ್ಲರು ಆ ಮಗುವನ್ನು ದೊರೆಯೆಂದು ಅಂಗೀಕರಿಸಿದರು. ಈ ವೆಂಕಟರಾವ್‌ನ ಚಿಕ್ಕಪ್ಪ ಮಾಲೋಜಿರಾವ್ ಬಾಳಾಸಾಹೇಬ್, ವೆಂಕಟರಾವ್‌ನ ಪರವಾಗಿ ಆಡಳಿತ ನಿರ್ವಹಿಸಿದ. 1908ರಲ್ಲಿ ಜನಿಸಿದ ಯಶವಂತರಾವ್ ಹಿಂದೂರಾವ್ ಘೋರ್ಪಡೆ, ತಂದೆ ವೆಂಕಟರಾವ್ ಮರಣಾನಂತರ 1928ರಲ್ಲಿ ಪಟ್ಟಕ್ಕೆ ಬಂದರು. ಯಶವಂತರಾವ್ ಅವರು ಗ್ವಾಲಿಯರ್ ಸಂಸ್ಥಾನದ ಶ್ರೀಮಂತ ರಾಜರಾಜೇಂದ್ರ ಶಿರೋಲೆ ಅವರ ಕುಮಾರ್ತೆ ಸುಶೀಲಾದೇವಿಯನ್ನು ಲಗ್ನವಾದರು. ಆಡಳಿತದ ಪೂರ್ಣಾಧಿಕಾರ ಯಶವಂತರಾಯರಿಗೆ 1930ರಲ್ಲಿ ಬಂತು. 1931ರಲ್ಲಿ ಯಶವಂತರಾಯರಿಗೆ ಪುತ್ರೋತ್ಸವವಾಗಿ ಮಗನಿಗೆ ಮುರಾರಿರಾವ್ ಎಂಬ ನಾಮಕರಣವಾಯಿತು. ಯಶವಂತರಾವ್ ಅವರ ಆಳ್ವಿಕೆಯಲ್ಲಿ ಅನೇಕ ಸುಧಾರಣೆಗಳು ಜಾರಿಗೆ ಬಂದವು. ಅವುಗಳಲ್ಲಿ ಮುಖ್ಯವಾದುದು ವಿಧಾನಪರಿಷತ್ತಿನಂತೆ ಕೆಲಸ ಮಾಡುತ್ತಿದ್ದ ಪ್ರಜಾಮಂಡಲ ಮತ್ತು ದರ್ಬಾರ್. 1932ರಲ್ಲಿ ಹರಿಜನರಿಗೆ ದೇವಾಲಯ ಪ್ರವೇಶ ಘೋಷಿಸಲಾಯಿತು. ಈ ಪ್ರಗತಿ ಕಂಡು ಮಹಾತ್ಮ ಗಾಂಧಿಯವರು ಸಂಡೂರಿಗೆ ಭೇಟಿಕೊಟ್ಟರು ಮತ್ತು ಹರಿಜನ ಪತ್ರಿಕೆಯಲ್ಲಿ ಬರೆದರು. ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆಗೊಂಡು ಶ್ರೇಷ್ಠ ನ್ಯಾಯಾಲಯ ಸಹ ರೂಪಿತವಾಯಿತು. ಭಾರತದ ಸ್ವಾತಂತ್ರ್ಯಾನಂತರ ಸಂಸ್ಥಾನಗಳ ವಿಲೀನ ಸಮಯದಲ್ಲಿ (1949) ಇದು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕಾಯಿತು. ಮಹಾರಾಜರಿಗೆ ವರ್ಷಕ್ಕೆ ರೂ. 90,000 ರಾಜಧನ ಮಂಜೂರಾಗಿತ್ತು. ಕೇಂದ್ರ ಸರ್ಕಾರ ರಾಜರಿಗೆ ನೀಡುತ್ತಿದ್ದ ರಾಜಧನ, ವಿಶೇಷ ಸೌಲಭ್ಯಗಳು ರದ್ದಾದಾಗ ಈ ಅರಸರಿಗೂ ಅದು ಅನ್ವಯವಾಯಿತು. ಹೀಗಾಗಿ ಯಶವಂತರಾಯರು ಸಂಡೂರಿನ ಕಡೆಯ ಅರಸರಾದರು. ಅವರ ಮಗ ಮುರಾರಿರಾವ್ ಕರ್ನಾಟಕ ರಾಜ್ಯದ ಅರ್ಥ ಸಚಿವರಾಗಿದ್ದರು.

(ಸಿ.ಕೆ.ಎನ್.)

**ಸಂತೆಬಾಚಳ್ಳಿ:** ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ. ಕಸಬೆಯಿಂದ ಈಶಾನ್ಯಕ್ಕೆ 22 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,772.

ಇಲ್ಲಿ ಮಹಾಲಿಂಗೇಶ್ವರ, ನಾರಾಯಣ, ವೀರಭದ್ರ, ಆಂಜನೇಯ, ಮಾಸ್ತಮ್ಮ ಎಂಬ ದೇವಾಲಯಗಳಿವೆ. ಇವುಗಳಲ್ಲಿ ಮಹಾಲಿಂಗೇಶ್ವರ ದೇವಾಲಯ ಪ್ರಾಚೀನವಾದುದು. ಹೊಯ್ಸಳರ ಕಾಲದ ಈ ದೇವಾಲಯ ಬಹುಮಟ್ಟಿಗೆ ನಾಶವಾಗಿದ್ದು ಅಲ್ಪಸ್ವಲ್ಪ ಉಳಿದಿದೆ. ಇದರಲ್ಲಿ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ಕರಿಯ ಕಲ್ಲಿನಿಂದ ನಿರ್ಮಿತವಾದ ಶಿಖರದಲ್ಲಿ ಮೂರು ಹಂತಗಳಿವೆ. ಇವುಗಳಲ್ಲಿ ಸುಂದರವಾದ ಕೀರ್ತಿಮುಖಗಳು ಮತ್ತು ಶಿಲ್ಪಗಳು ಇವೆ. ಉಗ್ರನರಸಿಂಹ, ವೇಣುಗೋಪಾಲ, ಭೀಮ, ತ್ರಿಪುರದಹನ, ತಾಂಡವೇಶ್ವರ, ಉಮಾಮಹೇಶ್ವರ, ಹುಲಿಯನ್ನು ಕೊಲ್ಲುತ್ತಿರುವ ಸಳ, ಭೈರವ ಮುಂತಾದ ವಿಗ್ರಹಗಳಿವೆ. ನವರಂಗದ ಹೊರಗೋಡೆಗಳು ಬಿದ್ದುಹೋಗಿವೆ. 20'x 20' ಹಜಾರದಲ್ಲಿ ಸುಂದರವಾದ ಹಾಗೂ ನುಣುಪಾದ ಕಂಬಗಳಿವೆ. ನವರಂಗದಲ್ಲಿರುವ ಒಂಬತ್ತು ಭುವನೇಶ್ವರಿಗಳಲ್ಲಿ ಕೆಲವು ನಾಶವಾಗಿವೆ. ವೃತ್ತಾಕಾರದ ಇಲ್ಲವೆ ಚತುರಸ್ರಾಕಾರದ, ಇಲ್ಲವೆ ಅಷ್ಟಭುಜಾಕೃತಿಯ ಸುಂದರ ಭುವನೇಶ್ವರಿಗಳು ಗಮನಾರ್ಹವಾದವು. ನವರಂಗದಲ್ಲಿರುವ ಗೂಡುಗಳಲ್ಲಿ ಸು. 2 $^{1}/_{2}$' ಎತ್ತರದ ಕೆಲವು ವಿಗ್ರಹಗಳಿವೆ. ಇವುಗಳಲ್ಲಿ ಚತುರ್ಮುಖ ಬ್ರಹ್ಮ, ನಿಂತಿರುವ ವಿಷ್ಣು ಮುಖ್ಯವಾದವು. ಸುಕನಾಸಿಯ ದ್ವಾರದಲ್ಲಿ ದ್ವಾರಪಾಲಕರು, ನರ್ತಕಿಯರು ಮತ್ತು ಜಾಲಂಧ್ರಗಳಿವೆ. ಸುಕನಾಸಿಯ ಚಾವಣಿಯಲ್ಲಿ ಅಷ್ಟದಿಕ್ಪಾಲಕರು, ಶಿವ, ಗಣೇಶ, ಕುಮಾರ ಮುಂತಾದ ಶಿಲ್ಪಗಳಿವೆ. ಗರ್ಭಗೃಹದ ದ್ವಾರದ ಮೇಲೆ ಗಜಲಕ್ಷ್ಮಿಯ ವಿಗ್ರಹವಿದೆ. ಈ ದೇವಾಲಯಕ್ಕೆ ಸಮೀಪದಲ್ಲಿರುವ ನಾರಾಯಣ ದೇವಾಲಯ ಉತ್ತರ ಹೊಯ್ಸಳ ಕಾಲದ್ದು. ಇದರಲ್ಲಿರುವ ನಾರಾಯಣ ವಿಗ್ರಹ ಏಳು ಅಡಿ ಎತ್ತರವಿದ್ದು, ಇದನ್ನು ಕರಿಯ ಕಲ್ಲಿನಲ್ಲಿ ಸುಂದರವಾಗಿ ಕೆತ್ತಲಾಗಿದೆ. ಇದರ ಪ್ರಭಾವಳಿಯಲ್ಲಿ ದಶಾವತಾರದ ಚಿತ್ರಗಳಿವೆ. ಊರಿನ ಮಧ್ಯದಲ್ಲಿರುವ ವೀರಭದ್ರ ದೇವಾಲಯ ವಿಜಯನಗರ ಕಾಲಕ್ಕೆ ಸೇರಿದ್ದು. ವಾಸ್ತು ದೃಷ್ಟಿಯಿಂದ ಸಾಮಾನ್ಯ ಎನ್ನಬಹುದಾದ ಈ ದೇವಾಲಯದಲ್ಲಿ ವೀರಭದ್ರ, ನಂದಿ, ಗಣೇಶ ಮುಂತಾದ ಶಿಲ್ಪಗಳಿವೆ. ಆಂಜನೇಯ ಮತ್ತು ಮಾಸ್ತಮ್ಮ ದೇವಾಲಯಗಳು ಇತ್ತೀಚಿನ ಕಾಲದವು. ಈ ಗ್ರಾಮದಲ್ಲಿ ಅನೇಕ ವೀರಗಲ್ಲುಗಳೂ ಮಾಸ್ತಿಕಲ್ಲುಗಳೂ ಸಿಕ್ಕಿವೆ. ಆದರೆ ಅವುಗಳಲ್ಲಿ ಬರೆಹವಿಲ್ಲ.

(ಎ.ವಿ.ಎನ್.)

**ಸಂತೆಬೆನ್ನೂರು:** ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಒಂದು ಗ್ರಾಮ; ಹೋಬಳಿ ಕೇಂದ್ರ. ಚನ್ನಗಿರಿಯ ಈಶಾನ್ಯಕ್ಕೆ 17 ಕಿಮೀ ದೂರದಲ್ಲಿದೆ. ಜನಸಂಖ್ಯೆ 9,618.

ಹಿಂದೆ ಇದೊಂದು ಪ್ರಸಿದ್ಧ ವ್ಯಾಪಾರ ಸ್ಥಳವಾಗಿತ್ತು. ಸು.14ನೆಯ ಶತಮಾನದ ಶಾಸನವೊಂದರಲ್ಲಿ ಈ ಸ್ಥಳವನ್ನು ಬೆಂನುರು ಎಂದು ಕರೆದಿದೆ. ಬಸವಾಪಟ್ಟಣದ ಪಾಳೆಯಗಾರರ ವಂಶಕ್ಕೆ ಸೇರಿದ ಕೆಂಗಪ್ಪನಾಯಕ 16ನೆಯ ಶತಮಾನದಲ್ಲಿ ರಂಗಪುರವೆಂದು ಹೆಸರಿದ್ದ ಈ ಊರಿಗೆ ಸಂತೆಬೆನ್ನೂರು ಎಂದು ಹೆಸರಿಟ್ಟನೆಂದು ತಿಳಿದುಬರುತ್ತದೆ. ಕೆಂಗಪ್ಪ ನಾಯಕನ ಮಗ ಹಿರಿಯ ಹನುಮಪ್ಪನಾಯಕ ಕಟ್ಟಿಸಿದ ಅರಮನೆ ಮತ್ತು ಕೊಳ ಇಲ್ಲಿವೆ. ಕೊಳ ಸು. 100 ಗಜ ಉದ್ದ, ಅಗಲವಾಗಿದ್ದು ಸುಂದರವಾಗಿದೆ. ಕೊಳದ ನಾಲ್ಕು ಕಡೆಗಳಲ್ಲೂ ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ ಮೆಟ್ಟಿಲುಗಳಿವೆ. ಅಲ್ಲದೆ ಕೊಳದ ಸುತ್ತ, ಮೊದಲಿಗೆ ಎಂಟು ದಿಕ್ಕಿನಲ್ಲಿ ಎಂಟು ಸುಂದರ ಮಂಟಪಗಳಿದ್ದುವು. ಈಗ ಆರು ಮಾತ್ರ ಉಳಿದಿವೆ. ವಸಂತಮಂಟಪವೆಂದು ಕರೆಯಲಾಗುವ ಕೊಳದ ಮಧ್ಯದಲ್ಲಿರುವ ಮಂಟಪ ಒಂದು ಸುಂದರ ಕಲಾಕೃತಿ. ಈ ಮಂಟಪ ಎರಡು ಅಂತಸ್ತನ್ನು ಹೊಂದಿದ್ದು ಮೊದಲನೆಯ ಮತ್ತು ಎರಡನೆಯ ಅಂತಸ್ತುಗಳೆರಡೂ ಕಲ್ಲಿನಲ್ಲಿ ನಿರ್ಮಿತವಾಗಿದ್ದು ಮಂಟಪದ ಗೋಪುರ ಮಣ್ಣು ಮತ್ತು ಇಟ್ಟಿಗೆಯಿಂದ ನಿರ್ಮಾಣಗೊಂಡಿದೆ. ಹಿರೇಕೋಗಿಲು, ಕಲ್ಲೇಶ್ವರ, ಮಲ್ಲೇಶ್ವರ–ಇವು ಇಲ್ಲಿನ ಕೆಲವು ಪಾಳುಗುಡಿಗಳು. ಇಲ್ಲಿರುವ ಮುಸಾಫಿರ್ ಖಾನಾ ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣಗೊಂಡ ವಿಶಾಲ ಕಟ್ಟಡ. ಇದರಲ್ಲಿ ಅನೇಕ ಹಿಂದು ಶಿಲ್ಪಗಳಿವೆ. ಇದನ್ನು ಮಸೀದಿಯಾಗಿ ಬಳಸುತ್ತಿಲ್ಲ. ಮುಸಾಫಿರ್‌ಖಾನದ ಸಮೀಪದಲ್ಲೇ ಪಶ್ಚಿಮಕ್ಕೆ ಕಲ್ಲಿನಿಂದ ಕಟ್ಟಿದ ಹೊಸ ರಾಮಚಂದ್ರ ದೇವಾಲಯವಿದೆ.

1639ರಲ್ಲಿ ರಣದುಲ್ಲಾಖಾನ್ ಈ ಊರನ್ನು ವಶಪಡಿಸಿಕೊಂಡು ಇಲ್ಲೊಂದು ಠಾಣ್ಯವನ್ನು ಸ್ಥಾಪಿಸಿದ್ದ. ಬಿದನೂರು ಅರಸರು ಇಲ್ಲಿನ ಕೋಟೆಕೊತ್ತಲಗಳನ್ನು ದುರಸ್ತುಪಡಿಸಿದ್ದರು.

ಈಗ ಇದೊಂದು ಉತ್ತಮ ವ್ಯಾಪಾರಸ್ಥಳ ಹಾಗೂ ಕೈಗಾರಿಕಾ ಕೇಂದ್ರ. ಪ್ರತಿ ಭಾನುವಾರ ಇಲ್ಲಿ ದೊಡ್ಡ ಸಂತೆ ನಡೆಯುತ್ತದೆ. ಈ ಗ್ರಾಮದಲ್ಲಿ ಒಂದು ಆರೋಗ್ಯಕೇಂದ್ರ, ಜೂನಿಯರ್ ಕಾಲೇಜು, ಪ್ರೌಢಶಾಲೆ, ಅಂಚೆ ಮತ್ತು ತಂತಿ ಕಚೇರಿಗಳಿವೆ. (ಕೆ.ಎಂ.ಎಸ್.)

**ಸಂತೆಬೆನ್ನೂರು ಅರಸರು:** 16ನೆಯ ಶತಮಾನದಲ್ಲಿ ಸಂತೆಬೆನ್ನೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆ ಸುತ್ತಿನ ಪ್ರದೇಶವನ್ನು ಆಳುತ್ತಿದ್ದ ಒಂದು ಅರಸುಮನೆತನ. ಈ ಮನೆತನದ ಪೂರ್ಣ ವಂಶಾವಳಿಯನ್ನು ನಿಖರವಾಗಿ ಮತ್ತು ಅನುಕ್ರಮವಾಗಿ ತಿಳಿಯಲು ಸಾಧ್ಯವಿಲ್ಲವಾದರೂ ಕೆಲವು ನಾಯಕರ ಕಾಲವನ್ನು ಸೂಚಿಸುವ ಶಾಸನಗಳು ದೊರೆತಿವೆ. ಬಸವಾಪಟ್ಟಣದ ಪ್ರಭು ಧೂಮರಾಜನೆಂಬುವನು ಈ ವಂಶದ ಮೂಲಪುರುಷನೆಂಬ ಅಭಿಪ್ರಾಯವಿದೆ. ಬಸವಾಪಟ್ಟಣದ ಕೋಟೆಯನ್ನು ಕಟ್ಟಿದ ಕೆಂಗಪ್ಪನಾಯಕ ಧೂಮರಾಜನ ಮಗ. ಇವನ ಮಗ ಹಿರಿಯ ಹನುಮಪ್ಪ ನಾಯಕ ಸಂತೆಬೆನ್ನೂರಿನಲ್ಲಿ ಅರಮನೆ ಹಾಗೂ ಒಂದು ಕೊಳವನ್ನು ಕಟ್ಟಿಸಿದ. ರಾಜಪ್ಪನಾಯಕನ ಮಗ ಹನುಮಪ್ಪ ನಾಯಕ 1570ರಲ್ಲಿ ಆಳುತ್ತಿದ್ದ. ಇಮ್ಮಡಿ ಹನುಮಪ್ಪನಾಯಕ 1576ರಲ್ಲಿ ಆಳುತ್ತಿದ್ದ. ಹನುಮಪ್ಪನಾಯಕನ ಮಗ ದಳನಾಯಕ 1605ರಲ್ಲಿ ಆಳುತ್ತಿದ್ದ. ಈ ಹೆಸರುಗಳಲ್ಲದೆ ಹಿರಿಯ ರಂಗಪ್ಪನಾಯಕ, ಬೊಳ್ಳಪ್ಪನಾಯಕ, ಬಸವಪ್ಪ ನಾಯಕ, ಮುಮ್ಮಡಿ ಹನುಮಪ್ಪನಾಯಕ, ನಿಚ್ಚಮದವಣಿಗ ಹನುಮಪ್ಪ ನಾಯಕ, ಸರ್ಜಾಹನುಮಪ್ಪನಾಯಕ, ಸೀತಾರಾಮಪ್ಪ ನಾಯಕ ಮೊದಲಾದ ಹೆಸರುಗಳು ಈ ವಂಶದವರಲ್ಲಿ ದೊರಕುತ್ತವೆ. ತಾವು ಪುವ್ವಾಳಿ ಪಂಗಡಕ್ಕೆ ಸೇರಿದವರೆಂದು ಇವರು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಸು. 1636ರಲ್ಲಿ ಬಿಜಾಪುರದ ಸುಲ್ತಾನನ ದಳಪತಿ ರಣದುಲ್ಲಾಖಾನ್ ಹನುಮಪ್ಪ ನಾಯಕನನ್ನು ಸೋಲಿಸಿ ಸಂತೆಬೆನ್ನೂರಿನಿಂದ ಓಡಿಸಿದ. ಹನುಮಪ್ಪನಾಯಕ ಕಳದುರ್ಗದಲ್ಲಿ ಅನಂತರ ತರೀಕೆರೆಯಲ್ಲಿ ಆಶ್ರಯ ಪಡೆದ. ಸಂತೆಬೆನ್ನೂರು ತನ್ನ ಕೈವಶವಾದ ಮೇಲೆ ರಣದುಲ್ಲಾಖಾನ್ ಅಲ್ಲಿನ ರಂಗನಾಥ ದೇವಸ್ಥಾನವನ್ನು ನಾಶಮಾಡಿ ಅದರ ಸ್ಥಾನದಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದನಂತೆ. ಇದರಿಂದ ನೊಂದ ಹನುಮಪ್ಪನಾಯಕ ಸಮಯ ಸಾಧಿಸಿ ದಾಳಿ ಮಾಡಿ ಸಂತೆಬೆನ್ನೂರಿನಲ್ಲಿದ್ದ ರಣದುಲ್ಲಾಖಾನನ ಪ್ರತಿನಿಧಿಯನ್ನು ಕೊಂದು, ಊರನ್ನು ವಶಪಡಿಸಿಕೊಂಡು, ಮಸೀದಿಯನ್ನು ಹಾಳುಗೆಡವಿ ತನ್ನ ಸೇಡು ತೀರಿಸಿಕೊಂಡ. ವಿಜಯನಗರದ ಅರಸು ವೆಂಕಟಪ್ಪನಾಯಕನ ಕಾಲದ 1636ರ ಶಾಸನ ಒಂದರಲ್ಲಿ ಈ ಹನುಮಪ್ಪನಾಯಕನ ಹೆಸರು ಉಲ್ಲೇಖವಾಗಿದೆ. ಹನುಮಪ್ಪನಾಯಕನ ಅನಂತರ ಸಂತೇಬೆನ್ನೂರು ತರೀಕೆರೆ ಮತ್ತು ಚಿತ್ರದುರ್ಗದ ಪಾಳೆಯಗಾರರೊಳಗೆ ಕೈಬದಲಾಗುತ್ತ ಹೋಯಿತು. (ಸಿ.ಕೆ.ಎನ್.)

**ಸಂಪಗಾಂವ:** ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಒಂದು ಗ್ರಾಮ. ಬೈಲಹೊಂಗಲದಿಂದ ಪಶ್ಚಿಮಕ್ಕೆ 11 ಕಿಮೀ ದೂರದಲ್ಲಿ ಬೆಳಗಾಂವಿ ಮಾರ್ಗದಲ್ಲಿದೆ. ಜನಸಂಖ್ಯೆ 2,494.

ಮೊದಲು ಇದೇ ತಾಲ್ಲೂಕಿನ ಕೇಂದ್ರವಾಗಿತ್ತು. ಈಗಲೂ ಬೈಲಹೊಂಗಲ ತಾಲ್ಲೂಕನ್ನು ಸಂಪಗಾಂವ ತಾಲ್ಲೂಕೆಂದು ಗುರುತಿಸುವುದುಂಟು. ಇಲ್ಲಿ ಪ್ರತಿ ಭಾನುವಾರ ಸಂತೆ ಸೇರುವುದು. ಗ್ರಾಮಕ್ಕೆ ಆರೋಗ್ಯ ಕೇಂದ್ರ, ಶಾಲೆಗಳು ಇವೆ. ಈ ಗ್ರಾಮದಲ್ಲಿ ಪ್ರತಿ ಹತ್ತು ಹನ್ನೆರಡು ವರ್ಷಗಳಿಗೊಮ್ಮೆ ಬಸವ ಮತ್ತು ದ್ಯಾವಮ್ಮ ದೇವರುಗಳ ಜಾತ್ರೆ ನಡೆಯುತ್ತದೆ. ಈ ಗ್ರಾಮದ ಅತಿ ಪ್ರಾಚೀನ ಚಾರಿತ್ರಿಕ ಉಲ್ಲೇಖ 1683ರದು. ಆ ವರ್ಷ ಔರಂಗಜೇಬನ ಮಗ ಮಹಮ್ಮದ್ ಮುಜಾಂ ಇಲ್ಲಿರುವ ಕೋಟೆಯನ್ನು ವಶಪಡಿಸಿಕೊಂಡ. 17ನೆಯ ಶತಮಾನದ ಕೊನೆಯಲ್ಲಿ ಕಿತ್ತೂರ ದೇಸಾಯಿ ಬಿಜಾಪುರದ ಸೈನ್ಯದೊಡನೆ ಇಲ್ಲಿಗೆ ಬಂದು ನೆಲೆಸಿದ. 1824ರ ವರೆಗೆ ಈ ಊರು ಕಿತ್ತೂರ ದೇಸಾಯಿಯ ಆಡಳಿತಕ್ಕೆ ಸೇರಿತ್ತು. ಅನಂತರ ಬ್ರಿಟಿಷರ ವಶವಾಯಿತು. 1829ರ ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣ ಇಲ್ಲಿನ ಮಾಮಲೆದಾರನ ಕಚೇರಿಗೆ ಬೆಂಕಿ ಇಟ್ಟು ಕಾಗದ ಪತ್ರಗಳನ್ನು ನಾಶಮಾಡಿದ. (ಬಿ.)

**ಸಂಪರ್ಕ ವ್ಯವಸ್ಥೆ:** ಒಂದು ರಾಷ್ಟ್ರದ ಅಥವಾ ರಾಜ್ಯದ ಸರ್ವತೋಮುಖ ಅಭಿವೃದ್ಧಿ ಹಿಂದಿಗಿಂತ ಇಂದು ಅದರ ವಿವಿಧ ಬಗೆಯ ಸಂಪರ್ಕ ಸಾಧನಗಳ ಮೇಲೆ ಅವಲಂಬಿಸಿದೆ. ಇಂದು ಸಂಪರ್ಕಗಳು ನಾನಾ ಮುಖವಾಗಿ ಅಭಿವೃದ್ಧಿ ಪಡೆದು ಅವುಗಳದೇ ಆದ ವಿಸ್ತರಣಾ ಮುನ್ನಡೆ ತೀವ್ರಗತಿಯಲ್ಲಿ ಸಾಗುತ್ತಿದೆ. ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಇವು ಮೂರು ಮುಖ್ಯ ಸಂಪರ್ಕ ಸಾಧನಗಳಾಗಿವೆ. ಒಂದು ರಾಷ್ಟ್ರ ಇತರೇ ರಾಷ್ಟ್ರಗಳ ಜೊತೆ ತನ್ನ ವ್ಯವಹಾರವನ್ನು ಸುಗಮವಾಗಿ ಸಾಗಿಸಲು, ಸ್ನೇಹ ಸಂಬಂಧದಲ್ಲಿ ಒಳ್ಳೆಯ ವಿಶ್ವಾಸವಿರುವಂತೆ ನೋಡಿಕೊಳ್ಳಲು ಮೇಲಿನ ಮೂರು ಮುಖ್ಯ ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿಗಾಗಿ ಆಯಾ ರಾಷ್ಟ್ರದ ಪರಿಣಿತರು ಶ್ರಮಿಸುತ್ತಲೇ ಇರುತ್ತಾರೆ.

ಲ್ಯಾಟರೈಟ್ ಪ್ಲಾಟೂವನ್ನು ಕತ್ತರಿಸಿ ಮಂಗಳೂರು–ಮುಂಬಯಿ ಹೆದ್ದಾರಿ ನಿರ್ಮಿಸಿರುವ ದೃಶ್ಯ

ಹಾಗೆಯೆ ಒಂದು ರಾಷ್ಟ್ರದೊಳಗಿನ ರಾಜ್ಯಗಳು ತಮ್ಮ ತಮ್ಮ ಅಭಿವೃದ್ಧಿಗಾಗಿ ಸುತ್ತಮುತ್ತಲ ರಾಜ್ಯಗಳೊಂದಿಗೆ ಉತ್ತಮ ಸಂಬಂಧಗಳನ್ನೂ ಸಂಪರ್ಕಸಾಧನಗಳನ್ನೂ ಹೊಂದಿರಬೇಕಾಗುತ್ತದೆ. ಪ್ರಸ್ತುತ ಸ್ಥೂಲವಾಗಿ ಕರ್ನಾಟಕ ರಾಜ್ಯದಲ್ಲಿರುವ ಸಂಪರ್ಕವ್ಯವಸ್ಥೆಯನ್ನು ಇಲ್ಲಿ ಪರಿಗಣಿಸಲಾಗಿದೆ. ವಿಮಾನ, ಹಡಗು, ರೈಲುಬಂಡಿ, ಮೋಟಾರು ಬಸ್ಸುಗಳು ಮತ್ತು ಇತರೇ ವಾಹನಗಳು ವಾಯು, ಜಲ ಮತ್ತು ನೆಲ ಸಂಪರ್ಕ ಸಾಧನಗಳಾದರೆ, ಆಕಾಶವಾಣಿ, ಕಂಪ್ಯೂಟರ್ ಸಾಧನಗಳು, ಮೊಬೈಲ್, ದೂರವಾಣಿ, ಅಂಚೆ ಮತ್ತು ತಂತಿ ಇವೆಲ್ಲವೂ ತಾಂತ್ರಿಕ ವಿಜ್ಞಾನದ ಮುನ್ನಡೆಯ ವಿವಿಧ ರೂಪಗಳ ಸಂಪರ್ಕ ಸಾಧನಗಳಾಗಿವೆ. ದೂರದರ್ಶನ ಮತ್ತು ವಿವಿಧ ವಾರ್ತಾಪತ್ರಿಕೆಗಳು ಸಹ ಸಂಪರ್ಕ ಸಾಧನಗಳಲ್ಲಿ ಇಂದು ಸೇರಿಹೋಗಿವೆ. ಕೃತಕ ಉಪಗ್ರಹಗಳೂ ಇಂದು ಸಂಪರ್ಕ ಸಾಧನಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ರಾಜ್ಯದ ಹಾಸನದಲ್ಲಿರುವ ಉಪಗ್ರಹ ಕೇಂದ್ರ ಇವುಗಳಲ್ಲಿ ಸೇರಿದೆ.

ಕರ್ನಾಟಕ ರಾಜ್ಯದಲ್ಲಿ 2000–2001ರ ಅಂಕಿಅಂಶದ ಪ್ರಕಾರ ಸಂಪರ್ಕ ವ್ಯವಸ್ಥೆಯಲ್ಲಿನ ವಿವಿಧ ಸಾಧನಗಳು ಇಂತಿವೆ: ರಾಜ್ಯದಲ್ಲಿ 26,50,855 ಮೋಟಾರು ಸೈಕಲ್ಲುಗಳು, 3,50,761 ಕಾರುಗಳು, 19,242 ಬಾಡಿಗೆ ಕಾರುಗಳು, 1,52,809 ರಿಕ್ಷಾಗಳು, 34,365 ಆಮ್ನಿಬಸ್‌ಗಳು, 1,30,222 ಸರಕು ಸಾಗಿಸುವ ಲಾರಿ ಮುಂತಾದವು 3,35,251 ಇತರೇ ಸಂಚಾರಿ ವಾಹನಗಳಿದ್ದು ಈಗ ಇವುಗಳ ಸಂಖ್ಯೆ ದುಪ್ಪಟ್ಟಿಗಿಂತ ಹೆಚ್ಚಾಗಿರುವುದು.

2,667 ಕಿಮೀ ಬ್ರಾಡ್‌ಗೇಜ್, 374 ಕಿಮೀ ಮೀಟರ್‌ಗೇಜ್ ರೈಲುಮಾರ್ಗವಿದ್ದು 357 ರೈಲುನಿಲ್ದಾಣಗಳು ಕಾರ್ಯನಿರ್ವಹಿಸುತ್ತಿದ್ದವು. ಹಾಗೆಯೆ ರಾಜ್ಯದಲ್ಲಿ 3,536 ಕಿಮೀ ರಾಷ್ಟ್ರೀಯ ಹೆದ್ದಾರಿ, 10,021 ಕಿಮೀ ರಾಜ್ಯಹೆದ್ದಾರಿ, 28,247 ಕಿಮೀ ಜಿಲ್ಲಾ ಮುಖ್ಯರಸ್ತೆಗಳು, 48,148 ಕಿಮೀ ಗ್ರಾಮೀಣ ರಸ್ತೆಗಳಿದ್ದು ಇವು ಮಾನವರ ಓಡಾಟದ ಕೊಂಡಿಗಳಾಗಿವೆ. ಈಗ ಮತ್ತಷ್ಟು ಹೊಸ ಮಾರ್ಗಗಳು ಸೇರಿಕೊಂಡಿವೆ.

ಹಿಂದಿನಿಂದಲೂ ಭಾರತದಲ್ಲಿ ಹಾಗೂ ರಾಜ್ಯಗಳಲ್ಲಿ ಅಂಚೆ ಮತ್ತು ತಂತಿ ವಿಭಾಗ ಜನಸಮೂಹದ ನಂಬಿಕಾರ್ಹ ಸಂಪರ್ಕ ವ್ಯವಸ್ಥೆಯಾಗಿದೆ. ತಾಂತ್ರಿಕ ಸುಧಾರಣೆಯಾದಂತೆ ಅಂಚೆ ವಿಭಾಗದಲ್ಲೂ ಹೊಸ ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಂಡು ಮುಂದುವರೆಯುತ್ತಿದೆ. 1960 ಏಪ್ರಿಲ್ 1ರಂದು ಕರ್ನಾಟಕ ಅಂಚೆ ಮತ್ತು ತಂತಿ ವಲಯ ಅಸ್ತಿತ್ವಕ್ಕೆ ಬಂತು. 1960ರಲ್ಲಿ ರಾಜ್ಯದಲ್ಲಿ 3,969 ಅಂಚೆ ಕಚೇರಿಗಳಿದ್ದವು. ಆಗ ಪ್ರತಿ ಅಂಚೆ ಕಚೇರಿ ಸರಾಸರಿ 29.24 ಚ.ಕಿಮೀ ಪ್ರದೇಶಕ್ಕೆ ಮತ್ತು 5,934 ಜನರಿಗೆ ಸೇವೆ ಸಲ್ಲಿಸುತ್ತಿತ್ತು. 1979ರಲ್ಲಿ ಅಂಚೆ ಕಚೇರಿಗಳ ಸಂಖ್ಯೆ 8,803 ಏರಿತು. ಈಗ ಪ್ರತಿ ಅಂಚೆ ಕಚೇರಿ ಸರಾಸರಿ 21.06 ಚ.ಕಿಮೀ ಪ್ರದೇಶಕ್ಕೆ ಹಾಗೂ 3,382 ಜನರಿಗೆ ಸೇವೆ ಸಲ್ಲಿಸುತ್ತದೆ. ರಾಜ್ಯದಲ್ಲಿ ಅತಿ ಹೆಚ್ಚು ಅಂಚೆ ಕಚೇರಿಗಳನ್ನುಳ್ಳ ಜಿಲ್ಲೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆ. ಅಲ್ಲಿದ್ದ ಅಂಚೆ ಕಚೇರಿಗಳ ಸಂಖ್ಯೆ 707(1977). ಅತಿ ಕಡಿಮೆ ಅಂಚೆ ಕಚೇರಿಗಳನ್ನುಳ್ಳ ಜಿಲ್ಲೆ ಎಂದರೆ ಕೊಡಗು. ಅಂಚೆ ಕಚೇರಿಗಳ ಸಂಖ್ಯೆ 161 ಇದ್ದಿತು. ಕರ್ನಾಟಕದಲ್ಲಿ 2001ರಲ್ಲಿ 9,895 ಅಂಚೆಕಚೇರಿಗಳು, 2,498 ದೂರವಾಣಿ ವಿನಿಮಯ ಕೇಂದ್ರಗಳು ಮತ್ತು 22,56,555 ದೂರವಾಣಿಗಳಿದ್ದವು. ಈಗ ಇವೆಲ್ಲವೂ ದ್ವಿಗುಣಗೊಂಡಿವೆಯೆಂದು ಹೇಳಬಹುದು. ಶೀಘ್ರ ಅಂಚೆಪತ್ರ ರವಾನೆ ಮತ್ತು ವಿತರಣೆಯ ಸೇವೆಯೂ ಸೇರಿದಂತೆ ಅಂಚೆ ಕಚೇರಿಯ ಸೇವೆ ಸಾರ್ವಜನಿಕ ವಲಯದಲ್ಲಿ ಅಗತ್ಯವೂ ಉಪಯುಕ್ತವೂ ಆಗಿದೆ.

**ಆಕಾಶವಾಣಿ ಕೇಂದ್ರಗಳು:** ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಮೈಸೂರು ನಗರದಲ್ಲಿ ಆಕಾಶವಾಣಿ ತನ್ನ ಕಾರ್ಯವನ್ನು ಆರಂಭಿಸಿತಾದರೂ (1935) ಆ ಕೇಂದ್ರವನ್ನು ಅನಂತರ ರಾಜ್ಯದ ರಾಜಧಾನಿ ಬೆಂಗಳೂರು ನಗರಕ್ಕೆ ವರ್ಗಾಯಿಸಲಾಯಿತು. ಈಗ ರಾಜ್ಯದಲ್ಲಿ 14 ಆಕಾಶವಾಣಿ ಕೇಂದ್ರಗಳಿವೆ. ಅವುಗಳೆಂದರೆ ಬೆಂಗಳೂರು, ಧಾರವಾಡ, ಭದ್ರಾವತಿ, ಗುಲ್ಬರ್ಗ, ಮೈಸೂರು, ಹಾಸನ, ಮಡಿಕೇರಿ ಹಾಗೂ ಮಂಗಳೂರು ಮೊದಲಾದವು ಅನೇಕ ಜನೋಪಯೋಗಿ ಕಾರ್ಯಕ್ರಮಗಳನ್ನು ನಿರಂತರವಾಗಿ ಬಿತ್ತರಿಸುತ್ತಿವೆ. ಈ ಕೇಂದ್ರಗಳು ಶಕ್ತಿಯುತ ಪ್ರಸಾರ ಮಾಧ್ಯಮವುಳ್ಳವಾಗಿವೆ. ಈ ಕೇಂದ್ರಗಳಲ್ಲಿ ವಿವಿಧಭಾರತಿ ವಾಣಿಜ್ಯ ವಿಭಾಗ ಸೇರಿದೆ.

ದೂರದರ್ಶನ ಕೇಂದ್ರಗಳು: ಕರ್ನಾಟಕದಲ್ಲಿ ಟೆಲಿವಿಜನ್ ಪ್ರಸಾರವನ್ನು ಕೆಲವು ವರ್ಷಗಳ ಹಿಂದೆ ಉಪಗ್ರಹ ಮೂಲಕ ವೀಕ್ಷಿಸುವ ಅವಕಾಶ ದೊರೆತಿತ್ತು. ಗ್ರಾಮಸ್ಥರಿಗೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಬಿತ್ತರಿಸಲಾಗುತ್ತಿದೆ. ಉಪಗ್ರಹ ಪ್ರಸಾರ ನಿಂತ ಅನಂತರ 1977ರಲ್ಲಿ ಕೇಂದ್ರ ಸರ್ಕಾರ (ಜನತಾ) ಗುಲ್ಬರ್ಗ ನಗರದಲ್ಲಿ ಒಂದು ದೂರದರ್ಶನ ಕೇಂದ್ರವನ್ನು ಸ್ಥಾಪಿಸಿತು. ಹೈದರಾಬಾದು–ಕರ್ನಾಟಕ ಪ್ರದೇಶ ಜಿಲ್ಲೆಗಳಲ್ಲಿರುವ ರೈತ ಕಾರ್ಮಿಕರು ಈ ಪ್ರಸಾರದಿಂದ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ದೂರದರ್ಶನ ಕೇಂದ್ರವಿದೆ. ಕರ್ನಾಟಕದಲ್ಲಿ ಸಂಪರ್ಕ ವ್ಯವಸ್ಥೆ ಸಾಧನಗಳು ಈಗ ದೊಡ್ಡ ಉದ್ಯೋಗ ಮೂಲಗಳಾಗಿ ದಿನೆದಿನೇ ವಿಸ್ತರಿಸುತ್ತಿವೆ. ಕರ್ನಾಟಕ ಈಗ ಕಂಪ್ಯೂಟರ್ ಉದ್ಯಮ ಜಾಲದಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. (ಜಿ.ಡಿ.)

**ಸಂಪಾಜೆ:** ಮಡಿಕೇರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸರಹದ್ದಿನಲ್ಲಿ, ಮಡಕೇರಿಯ ವಾಯವ್ಯಕ್ಕೆ 29 ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 5,304. ಮಡಿಕೇರಿ–ಮಂಗಳೂರು ಹೆದ್ದಾರಿಯಲ್ಲಿರುವ ಈ ಗ್ರಾಮದ ಬಹು ಭಾಗ ಸುಳ್ಯ ತಾಲ್ಲೂಕಿಗೂ ಇನ್ನುಳಿದ ಭಾಗ ಮಡಿಕೇರಿ ತಾಲ್ಲೂಕಿಗೂ ಸೇರಿದ್ದು ಸಂಪಾಜೆಯ ಕೊಡಗಿನ ಭಾಗದಲ್ಲಿ ಅರಣ್ಯ ಇಲಾಖೆಗೆ ಸೇರಿದ ಒಂದು ವಸತಿಗೃಹವಿದೆ. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಸಂಪಾಜೆಯ ಎರಡೂ ಭಾಗಗಳಲ್ಲಿ ಒಂದೊಂದು ಪ್ರಾಥಮಿಕ ಶಾಲೆಯೂ ಕೊಡಗಿನ ಭಾಗದಲ್ಲಿ ಒಂದು ಪ್ರೌಢಶಾಲೆಯೂ ಇವೆ. ಇಲ್ಲಿ ಅಂಚೆ ಮತ್ತು ತಂತಿ ಕಛೇರಿಗಳು, ಆಸ್ಪತ್ರೆ ಇವೆ. (ಡಿ.ಎನ್.ಕೆ.)

**ಸಂಪಾದನೆಯ ಗುರುಲಿಂಗದೇವ:** ಸು.1760. ವೀರಶೈವ ಕವಿ. ಸಂಪಾದನೆಯ ಬೋಳಬಸವದೇವ ಈತನ ಗುರು. ಈತ ಶೀಲವಂತಯ್ಯನ ತ್ರಿವಿಧಿಗೆ ವ್ಯಾಖ್ಯಾನ ಬರೆದಿದ್ದಾನೆ. ಲಿಂಗಾಂಗ ಪ್ರಣವ ಸಂಯೋಗ ಎನ್ನುವ ಶಾಸ್ತ್ರವನ್ನು ಒಳಗೊಂಡ ಮಂತ್ರಗಳ ನಿಲವನ್ನು ಉದಾತ್ತ ಅನುಭಾವವನ್ನು ಕುರಿತ ಟೀಕೆ ಇವನ ಇನ್ನೊಂದು ಗ್ರಂಥ. ಈತನ ಕೃತಿಗಳು ಅರ್ಥವೈಭವದಿಂದ ತುಂಬಿ, ಪರವಸ್ತುವಿನ ದಿವ್ಯಸ್ವರೂಪವನ್ನು, ಆಧ್ಯಾತ್ಮದ ಸೂಕ್ಷ್ಮ ನಿಲವನ್ನು ಅಭಿವ್ಯಕ್ತಗೊಳಿಸುವುದರ ಜೊತೆಗೆ ಅನುಭವದ ಆಳವನ್ನೂ ಸ್ಪರ್ಶಿಸುತ್ತವೆ. (ಡಿ.ಎಸ್.ಎಚ್.)

**ಸಂಪಾದನೆಯ ಚೆನ್ನಂಜೆದೇವ:** ಸು.1530. ವೀರಶೈವ ಕವಿ. ತೋಂಟದ ಸಿದ್ಧಲಿಂಗರ ಪರಂಪರೆಗೆ ಸೇರಿದ ಬೋಳಬಸವೇಶ್ವರರ ಶಿಷ್ಯ. ಈತನನ್ನು ಸಂಪಾದನೆಯ ಷಟ್‌ಸ್ಥಲಚಕ್ರವರ್ತಿ ಚೆನ್ನಂಜೆದೇವ, ಆಚಾರ್ಯವರದ ಹರತಾಳದ ನಂಜೇಶ, ಚೆನ್ನಾಚಾರ್ಯ, ಚೆನ್ನನಂಜಾರ್ಯ ಎಂದು ಮುಂತಾಗಿ ಕರೆಯುತ್ತಿದ್ದಂತೆ ತಿಳಿಯುತ್ತದೆ. ಈತ ದಿವ್ಯಶಿವಾನುಭವಿಯೂ ಸದಾಚಾರಿಯೂ ಪರಮವಿರಕ್ತನೂ ಉದಾತ್ತ ತತ್ತ್ವಜ್ಞಾನಿಯೂ ಆಗಿದ್ದ. ಈತನ ಕೃತಿಗಳಲ್ಲಿ ಹರತಾಳದ ಚೆನ್ನಂಜೆದೇವರು ನಿರೂಪಿಸಿದ ವಚನ ಎಂದಿರುವುದರಿಂದ ಹರತಾಳ ಇವನ ಜನ್ಮಸ್ಥಳವಾಗಿರಬೇಕು.

ಆಚರಣೆಯ ವಚನ, ಸಂಬಂಧದ ವಚನ, ಮಿಶ್ರಸ್ತೋತ್ರದ ವಚನ, ಬಸವಸ್ತೋತ್ರದ ವಚನ ಇವುಗಳನ್ನು ಇವನು ಸಂಪಾದಿಸಿದ್ದಾನೆ. ಆಚರಣೆಯ ಹಿರಿಮೆಯನ್ನು ತನ್ನ ಆಚರಣೆಯ ವಚನದಲ್ಲಿ ಸಮರ್ಥವಾಗಿ ಸೂತ್ರಿಸಿದ್ದಾನೆ. ಇಲ್ಲಿ ಈತ ಅನುಸರಿಸಿರುವ ಸ್ಥಲಕಟ್ಟಿನ ವಿಧಾನ ಇವನ ವಿಶಿಷ್ಟವಾದ ಅನುಭಾವದ ಸಂಕೇತವಾಗಿದೆ. ಆತ್ಮ ಸಾಕ್ಷಾತ್ಕಾರದ ಬೋಧೆ ನೇರವಾಗಿ ಹೃದಯಸ್ಪರ್ಶಿಯಾಗಬೇಕು ಎನ್ನುವುದು ಇವನ ಸಂಪಾದನಾಕ್ರಮದ ಸ್ಥಲಕಟ್ಟಿನ ರಚನೆಯ ರಹಸ್ಯವಾಗಿರಬಹುದೆಂದು ತೋರುತ್ತದೆ. ಆಚರಣೆಯ ವಚನದಲ್ಲಿ 140, ಸಂಬಂಧದ ವಚನದಲ್ಲಿ 121, ಬಸವಸ್ತೋತ್ರದ ವಚನದಲ್ಲಿ 123, ಮಿಶ್ರಸ್ತೋತ್ರದ ವಚನದಲ್ಲಿ 108–ಹೀಗೆ ಒಟ್ಟು 492 ವಚನಗಳು ಸಂಗ್ರಹಿತವಾಗಿವೆ. (ಡಿ.ಎಸ್.ಎಚ್.)

**ಸಂಪಾದನೆಯ ಪರ್ವತೇಶ್ವರ:** ಸು. 1698. ವೀರಶೈವ ಕವಿ. ಚತುರಾಚಾರ್ಯಪುರಾಣ ಎಂಬ ಗ್ರಂಥದ ಕರ್ತೃ. ಈತ ತೋಂಟದ ಸಿದ್ಧಲಿಂಗಯತಿಯ ಪರಂಪರೆಗೆ ಸೇರಿದ ಚೆನ್ನಮಲ್ಲಿಕಾರ್ಜುನದೇವನ ಶಿಷ್ಯ. ಪೂರ್ವ ಕವಿಗಳಲ್ಲಿ ಪದ್ಮರಾಜ, ಪಾಲ್ಕುರಿಕೆ ಸೋಮನಾಥ, ಕೇಶಿರಾಜ, ರಾಘವಾಂಕ, ಹಲಾಯುಧ, ಚಾಮರಸ ಮೊದಲಾದವರನ್ನು ಸ್ಮರಿಸಿದ್ದಾನೆ.

ಚತುರಾಚಾರ್ಯಪುರಾಣ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 6 ಕಾಂಡ, 54 ಸಂಧಿ, 3,187 ಪದ್ಯ ಇವೆ. ಗುರು ಚೆನ್ನಮಲ್ಲಿಕಾರ್ಜುನ ತನಗೆ ಬೋಧಿಸಿದ ರೇಣುಕ, ಏಕೋರಾಮ, ಮರುಳಸಿದ್ಧ ಮತ್ತು ಪಂಡಿತಾರಾಧ್ಯ ಈ ಆಚಾರ್ಯರ ಚರಿತ್ರೆ, ಅದರ ಮಹತ್ತಾದ ಪ್ರಭಾವ ತನ್ನ ಪುರಾಣ ರಚನೆಗೆ ಪ್ರೇರಣೆಯಾಯಿತು ಎಂದು ಹೇಳಿಕೊಂಡಿದ್ದಾನೆ. ಕಾವ್ಯದ ಹಿರಿಮೆಯನ್ನು ಕುರಿತು ಇದು ಪರಶಿವನ ಬೀಡು, ಮುಕ್ತಿಯ ನಾಡು, ಲಿಂಗಾಂಗಸದನ, ಭಕ್ತಿಯ ವದನ, ಗುರುಶಿಷ್ಯರ ಅಮಲಮುಕುರ, ಶರಣಜನದ ಆನಂದಸಂಧಾನ, ನವರಸದ ಹಕ್ಕೆ, ಭಾವದ ತೆಕ್ಕೆ ಎಂದು ಮುಂತಾಗಿ ಹೊಗಳಿಕೊಂಡಿದ್ದಾನೆ. ಇಲ್ಲಿ ನಿರೂಪಿತವಾಗಿರುವ ಅನೇಕ

ವಿಷಯಗಳನ್ನು ವೇದ, ಉಪನಿಷತ್ತು, ಕಾಮಿಕಾಗಮ, ವೀರಾಗಮ, ವಾತುಲ ಪಾರಮೇಶ್ವರ ತಂತ್ರಗಳು; ಪಾದ್ಮೋತ್ತರ, ಸ್ಕಾಂದ, ಷಟ್‌ಸ್ಥಲ ಜ್ಞಾನದೀಪಿಕೆ, ಗುರುಬಸವನ ಷಟ್ಕಾವ್ಯ, ಸಿದ್ಧಾಂತಶಿಖಾಮಣಿ, ನಿಜಗುಣರ ವಿವೇಕಚಿಂತಾಮಣಿ ಮೊದಲಾದ ಗ್ರಂಥಗಳಿಂದ ಸಂಗ್ರಹಿಸಲಾಗಿದೆ.

(ಡಿ.ಎಸ್.ಎಚ್.)

**ಸಂಪಾದನೆಯ ಸಿದ್ಧವೀರಣಾರ್ಯ:** ಸು.1600. ವೀರಶೈವ ಕವಿ. ಎಳಮಲೆಯ ಗುರುಶಾಂತದೇವನ (ಸು. 1565) ಶಿಷ್ಯ. ಸಂಪಾದನೆಯ ಪರ್ವತೇಶ್ವರನ (ಸು.1698) ಚತುರಾಚಾರ್ಯ ಪುರಾಣದಲ್ಲಿ ಜಟಿದು ಶೈವವ ವೀರಶೈವವಂ ಸ್ಥಾಪಿಸಿದಂ ಎಂದು ಈತನನ್ನು ಹೊಗಳಿದೆ. ಕವಿ ತನ್ನನ್ನು ವೀರ ಮಾಹೇಶ್ವರಾಚಾರ್ಯವರ್ಯಾ, ವೀರಶೈವ ಷಟ್‌ಸ್ಥಲ ಮಾರ್ಗಸಂಸ್ಥಾಪನಾಗ್ರಗಣ್ಯ ಶಿವಯೋಗೀಂದ್ರ ಎಂದು ವಿಶೇಷಿಸಿಕೊಂಡಿದ್ದಾನೆ.

ಇವನು ಅನಾದಿ ವೀರಶೈವ ಸಾರಸಂಗ್ರಹ ಎಂಬ ಗ್ರಂಥವನ್ನೂ ಆಚರಣೆಯ ಸಂಬಂಧ ವಚನ (ಬೇರೆ ಬೇರೆ ವಚನಕಾರರ 275 ವಚನಗಳು), ಲಿಂಗಸ್ತೋತ್ರ ವಚನ (108 ವಚನಗಳು), ಮಿಶ್ರಸ್ತೋತ್ರ ವಚನ (111 ಸಾಂಗತ್ಯ ಪದ್ಯಗಳು), ಸರ್ವಜ್ಞಮೂರ್ತಿ ತ್ರಿವಿಧಿ (ಸರ್ವಜ್ಞನ ವಚನಗಳ ಸಂಕಲನ), ಪಾದಸ್ತೋತ್ರ ಎಂಬ ಸಂಕಲನಗಳನ್ನು ರಚಿಸಿದ್ದಾನೆ. ಪಾದಸ್ತೋತ್ರ ಉಪಲಬ್ಧವಿಲ್ಲ.

ಅನಾದಿ ವೀರಶೈವ ಸಾರಸಂಗ್ರಹ ಸಂಸ್ಕೃತದಲ್ಲಿದೆ. ಇದರಲ್ಲಿ 27 ಪ್ರಕರಣಗಳೂ 3,219 ಶ್ಲೋಕಗಳೂ ಇದ್ದು ಇವು ಸಕಲ ವೇದಾಗಮ ಶಾಸ್ತ್ರಪುರಾಣ ಶಿವರಹಸ್ಯಾದಿಗಳ ಸಾರವನ್ನು ಸಂಗ್ರಹವಾಗಿ ಒಳಗೊಂಡಿವೆ. ಮೊದಲ ಪ್ರಕರಣದಲ್ಲಿ ವೀರಶೈವ ಪ್ರಶಂಸೆ, ಶೈವ–ವೀರಶೈವ ಭೇದ ನಿರೂಪಣ, ಗ್ರಂಥಕರ್ತೃವಿಚಾರಗಳು ಉಕ್ತವಾಗಿವೆ. ಮುಂದೆ ಕ್ರಮವಾಗಿ ಅನಾದಿ ಭಕ್ತಸ್ಥಲ, ಜಂಗಮ, ಶೂನ್ಯಲಿಂಗ, ನಿಷ್ಕಲಲಿಂಗ, ಮಹಾಲಿಂಗ, ಪ್ರಾಣಲಿಂಗ, ವಿಶ್ವೋತ್ಪತ್ತಿ, ಪಿಂಡಸ್ಥಲ, ಪಿಂಡಜ್ಞಾನ, ಸಂಸಾರಹೇಯ, ಗುರುಕಾರುಣ್ಯ, ಲಿಂಗಧಾರಣ, ಗುರುಲಿಂಗಜಂಗಮ, ಪ್ರಸಾದ, ಪಾದೋದಕ, ವಿಭೂತಿ ರುದ್ರಾಕ್ಷ ಮಹಾಮಂತ್ರ ಮಹಾತ್ಮ್ಯಗಳೂ ಷಟ್‌ಸ್ಥಲಗಳೂ ವರ್ಣಿತವಾಗಿವೆ.

(ಎಂ.ಜಿ.ಎನ್.)

**ಸಂಯುಕ್ತ ಕರ್ನಾಟಕ:** ಹುಬ್ಬಳ್ಳಿ, ಮಂಗಳೂರು, ಗುಲಬರ್ಗ ಮತ್ತು ಬೆಂಗಳೂರು, ದಾವಣಗೆರೆ ನಗರಗಳಿಂದ ಏಕಕಾಲದಲ್ಲಿ ಪ್ರಕಟವಾಗುವ ದಿನಪತ್ರಿಕೆ. 1929ರಲ್ಲಿ ಬೆಳಗಾಂವಿಯಲ್ಲಿ ಮೊದಲು ಸಾಪ್ತಾಹಿಕವೆಂದು ಆರಂಭವಾಗಿ 1933ರಲ್ಲಿ ದಿನಪತ್ರಿಕೆಯಾಗಿ ರೂಪಾಂತರ ಹೊಂದಿತು. ಇದು 1935 ಆಗಸ್ಟ್ 1ರಂದು ಹುಬ್ಬಳ್ಳಿಯಲ್ಲಿ ಸ್ಥಾಪಿತವಾದ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿಗೆ (ಮುಂದೆ ಲೋಕ ಶಿಕ್ಷಣ ಟ್ರಸ್ಟ್) ಸೇರಿತು. ಅನಂತರ 1937ರಲ್ಲಿ ಹುಬ್ಬಳ್ಳಿಗೆ ಸ್ಥಳಾಂತರ ಹೊಂದಿತು. ನಾಡಿನಲ್ಲಿ ಪ್ರಥಮ ವರ್ಗದ ರಾಷ್ಟ್ರೀಯ ಪತ್ರಿಕೆಯೆಂದು ಹೆಸರು ಪಡೆಯಿತು. ಬೆಂಗಳೂರು ಮುದ್ರಣ 1959 ಜನವರಿಯಿಂದ ಪ್ರಕಟವಾಗುತ್ತಿದೆ.

1924ರಲ್ಲಿ ಬೆಳಗಾಂವಿಯಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಮತ್ತು ಅದೇ ವರ್ಷ ಅದೇ ನಗರದಲ್ಲಿ ಜರುಗಿದ ಪ್ರಥಮ ಏಕೀಕರಣ ಪರಿಷತ್ತು ಯಶಸ್ವಿಯಾಗಿ ಪೂರೈಸಿದ ಪರಿಣಾಮವಾಗಿ ಕನ್ನಡಿಗರಲ್ಲಿ ರಾಜಕೀಯ, ಸಾಂಸ್ಕೃತಿಕ ಹಾಗೂ ಭಾಷಾಜಾಗೃತಿ ಪ್ರಬಲವಾಯಿತು. ಅದರಿಂದ ಉತ್ಸಾಹಿತರಾದ ದಾತಾರ ಬಲವಂತರಾಯರು ತಮ್ಮ ಸ್ನೇಹಿತರ ನೆರವಿನಿಂದ 1929ರಲ್ಲಿ ಬೆಳಗಾಂವಿಯಲ್ಲಿ ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಪ್ರಕಟಿಸಲಾರಂಭಿಸಿದರು. ಅದೇ ವರ್ಷ ಬೆಳಗಾಂವಿಯಲ್ಲಿ ಕರ್ನಾಟಕ ಪತ್ರಿಕೋದ್ಯಮಿಗಳ ಎರಡನೆಯ ಪರಿಷತ್ತು ಮುಂಬಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕ ಸೈಯದ್ ಅಬ್ದುಲ್ಲಾ ಬ್ರೆಳವಿ ಅವರ ಅಧ್ಯಕ್ಷತೆಯಲ್ಲಿ ಸೇರಿತು. ಆಗ ಕನ್ನಡ ಧುರೀಣರಿಗೆ ಕನ್ನಡ ದೈನಿಕದ ಅಗತ್ಯ ಕಂಡುಬಂತು. 1932–33ರಲ್ಲಿ ದಾತಾರ ಬಲವಂತರಾವ್, ಕೇಶವರಾವ್ ಗೋಖಲೆ ಮತ್ತು ನಾರಾಯಣರಾವ್ ಜೋಶಿ ಇವರು ನಾಸಿಕ ಜೈಲಿನಲ್ಲಿ ಕೈದಿಗಳಾಗಿದ್ದಾಗ ಸಂಯುಕ್ತ ಕರ್ನಾಟಕವನ್ನು ದೈನಿಕವಾಗಿ ಪರಿವರ್ತಿಸುವ ವಿಚಾರ

ರೂಪುಗೊಂಡಿತು. ಅವರ ಪ್ರಯತ್ನದ ಫಲವಾಗಿ 1933ರ ಏಪ್ರಿಲ್ 27ರಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಾಗಿ ರೂಪಾಂತರಗೊಂಡಿತು. ಶೇಷಾಚಾರ್ಯ ಕಟ್ಟಿ ಈ ಪತ್ರಿಕೆಯ ಪ್ರಥಮ ಸಂಪಾದಕರಾಗಿ ದುಡಿದರು. ಅನಂತರ ಎಚ್.ಆರ್.ತೆರಗುಂಡಿಯವರು ಕೆಲಕಾಲ ಸಂಪಾದಕರಾಗಿದ್ದರು. ಮೊಹರೆ ಹಣಮಂತರಾಯರು 1934ರಲ್ಲಿ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡು 1958ರ ವರೆಗೂ ನಡೆಸಿಕೊಂಡು ಬಂದರು. ಮೊಹರೆ ಅವರ ನಿವೃತ್ತಿಯ ಅನಂತರ ರಂ. ರಾ.ದಿವಾಕರ ಅವರು ಸಂಪಾದಕರಾದರು. ಮೊಹರೆ ಹಾಗೂ ದಿವಾಕರ ಅವರ ನೇತೃತ್ವದಲ್ಲಿ ಪತ್ರಿಕೆ ಬಹಳಷ್ಟು ಅಭಿವೃದ್ಧಿ ಹೊಂದಿತು. ಖಾದ್ರಿ ಶಾಮಣ್ಣನವರು ಕೆಲಕಾಲ ಈ ಪತ್ರಿಕೆಯ ಸಂಪಾದಕರಾಗಿದ್ದರು. ಅನಂತರ 1976ರಲ್ಲಿ ಈ ಪತ್ರಿಕೆ ಕರ್ನಾಟಕ ಪತ್ರಿಕಾ ಪ್ರೈವೇಟ್ ಲಿಮಿಟೆಡ್ ಅವರ ಒಡೆತನಕ್ಕೆ ಸೇರಿತು. ಮುಂದೆ ಜಯಕರ್ನಾಟಕ ನ್ಯೂಸ್ ಪ್ರಿಂಟರ್ಸ್ ಲಿಮಿಟೆಡ್ ಅವರ ಒಡೆತನಕ್ಕೆ ಸೇರಿದಾಗ ಎಚ್.ಆರ್.ಬಸವರಾಜ್ (1979) ಈ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿದ್ದರು. ಈಗ (2007) ಲೋಕಶಿಕ್ಷಣ ಟ್ರಸ್ಟ್ ಒಡೆತನಕ್ಕೆ ಸೇರಿದ್ದು ಈಶ್ವರ ದೈತೋಟ ಸಂಪಾದಕರು.

(ಆರ್.ಕೆ.ಜಿ.)

**ಸಂಶೋಧನ ಸಂಸ್ಥೆಗಳು:** ಕರ್ನಾಟಕದಲ್ಲಿ ಮುಖ್ಯವಾಗಿ ಮೂರು ವರ್ಗದ ಸಂಶೋಧನ ಸಂಸ್ಥೆಗಳನ್ನು ಗುರುತಿಸಬಹುದು. ರಾಜ್ಯ ಸರ್ಕಾರ ವಿಶ್ವವಿದ್ಯಾಲಯಗಳು ಮತ್ತು ಇತರ ಸಂಸ್ಥೆಗಳು, ಕೇಂದ್ರ ಸರ್ಕಾರದ ಸಂಶೋಧನ ಸಂಸ್ಥೆಗಳು, ಪರಿಗಣಿತ ವಿಶ್ವವಿದ್ಯಾಲಯಗಳು ಮತ್ತು ಇತರ ಖಾಸಗಿ ಸಂಸ್ಥೆಗಳು.

ರಾಜ್ಯ ಸರ್ಕಾರದ ಸಂಶೋಧನ ಸಂಸ್ಥೆಗಳು: ರಾಜ್ಯದ ಎಂಟು ಸಾಮಾನ್ಯ ವಿಶ್ವವಿದ್ಯಾಲಯಗಳೂ ಬೆಂಗಳೂರಿನ ಹೆಬ್ಬಾಳ ಹಾಗೂ ಧಾರವಾಡದ ಕೃಷಿ ವಿಶ್ವವಿದ್ಯಾಲಯಗಳೂ ಅವು ಸ್ಥಾಪಿಸಿರುವ ಅಥವಾ ಅಂಗೀಕರಿಸಿರುವ ಸ್ನಾತಕೋತ್ತರ ಶಿಕ್ಷಣ ಕೇಂದ್ರಗಳೂ ಸಂಶೋಧನ ಕೇಂದ್ರಗಳೂ ಮುಖ್ಯವಾದವು. ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯಗಳ ವಿವಿಧ ವ್ಯಾಸಂಗ ವಿಷಯಗಳಿಗೆ ಸಂಬಂಧಿಸಿದ ಸಂಶೋಧನೆಗಳು ಆಯಾ ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಯುತ್ತಿವೆ. ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಕುರಿತ ಸಂಶೋಧನೆ ನಡೆಸಲು ವಿಶೇಷ ಕೇಂದ್ರಗಳೇರ್ಪಟ್ಟಿವೆ. ಈ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ

ಸಂಶೋಧನೆಗಳು ರಾಜ್ಯದಲ್ಲಿ ಹಸುರು ಕ್ರಾಂತಿಯನ್ನುಂಟು ಮಾಡಲು ನೆರವಾಗಿರುವ ಆನ್ವಯಿಕ ಸಂಶೋಧನೆಗಳು.

ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಶುದ್ಧವಿಜ್ಞಾನ ಮತ್ತು ಮಾನವಿಕ ಹಾಗೂ ಸಮಾಜವಿಜ್ಞಾನ ವಿಷಯಗಳಲ್ಲಿ ನಡೆಯುವ ಸಂಶೋಧನೆಗಳ ಜೊತೆಗೆ ಯುನೆಸ್ಕೊ ಮತ್ತು ಇತರ ಸಂಶೋಧನ ಸಂಸ್ಥೆಗಳು ನೀಡುವ ನಿಧಿಯಿಂದಲೂ ಕೇಂದ್ರ ಸರ್ಕಾರ ಸೂಚಿಸುವ ಆನ್ವಯಿಕ ಅಂಶಗಳ ಮೇಲೂ ಸಂಶೋಧನೆಗಳು ನಡೆಯುತ್ತಿವೆ.

ವಿಶ್ವವಿದ್ಯಾಲಯಗಳಂತೆ ರಾಜ್ಯಸರ್ಕಾರದ ನೇರ ಒಡೆತನದಲ್ಲಿ ಅಥವಾ ಆಡಳಿತದಲ್ಲಿ ನಡೆಯುತ್ತಿರುವ ವಿವಿಧ ಔದ್ಯೋಗಿಕ ಸಂಸ್ಥೆಗಳೂ ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುತ್ತವೆ. ರಾಜ್ಯ ಸರ್ಕಾರದ ಮೀನುಗಾರಿಕೆ, ಹೈನುಗಾರಿಕೆ, ತೋಟಗಾರಿಕೆ, ಭೂಗರ್ಭ ಇಲಾಖೆ, ಪ್ರಾಚ್ಯವಸ್ತು ಇಲಾಖೆ, ಅರಣ್ಯ ಇಲಾಖೆ ಮುಂತಾದ ಇಲಾಖೆಗಳೂ ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುತ್ತಿವೆ.

**ಕೇಂದ್ರ ಸರ್ಕಾರದ ಹಾಗೂ ಅದು ನೇಮಿಸಿರುವ ಸ್ವಯಮಾಡಳಿತ ಸಂಸ್ಥೆಗಳಿಗೆ ಸೇರಿದ ಸಂಶೋಧನ ಸಂಸ್ಥೆಗಳು:** ಭಾರತ ಸರ್ಕಾರದ ವಿವಿಧ ಸೇವಾಶಾಖೆಗಳಿಗೆ ಸೇರಿದ ಘಟಕಗಳು ರಾಜ್ಯದಲ್ಲಿ ಸಂಶೋಧನೆ ನಡೆಸುತ್ತಿವೆ. ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯ, ಆಂತ್ರೊಪಾಲಜಿಕಲ್ ಸರ್ವೆ ಆಫ್ ಇಂಡಿಯ ಮುಂತಾದ ಇಲಾಖೆಗಳಿಗೆ ಸೇರಿದ ಘಟಕಗಳು ಸಂಶೋಧನೆ ನಡೆಸುತ್ತಿವೆ. ವೈಜ್ಞಾನಿಕ ಮತ್ತು ಔದ್ಯೋಗಿಕ ಮಂಡಲಿ ನಡೆಸುತ್ತಿರುವ ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನ ಸಂಸ್ಥೆ, ಬೆಂಗಳೂರಿನ ನ್ಯಾಷನಲ್ ಏರೋನಾಟಿಕಲ್ ಸಂಸ್ಥೆ, ವಿಶ್ವೇಶ್ವರಯ್ಯ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ–ಇವು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿ ದಂತೆ ಸಂಶೋಧನೆ ನಡೆಸುತ್ತಿವೆ. ಕೇಂದ್ರಶಾಸನ ಇಲಾಖೆ, ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ ಇವೂ ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿವೆ. ಬೆಂಗಳೂರಿನ ಆಡುಗೋಡಿ ಕ್ಷೀರೋದ್ಯಮ ಸಂಶೋಧನ ಕೇಂದ್ರ, ಕೇಂದ್ರ ಫಲಪುಷ್ಪ ಸಂಶೋಧನ ಸಂಸ್ಥೆ, ಕ್ಷಯರೋಗ ಸಂಶೋಧನ ಕೇಂದ್ರ, ಗೌರಿಬಿದನೂರಿನ ಭೂಕಂಪನ ಮಾಪನ ಕೇಂದ್ರ, ಪೀಣ್ಯದ ಆಕಾಶ ಸಂಶೋಧನ ಕೇಂದ್ರ (ಐಎಸ್‌ಆರ್‌ಒ) ಮುಂತಾದವೂ ಸಂಶೋಧನೆಗಾಗಿ ಮೀಸಲಾಗಿವೆ. ರೈಲ್ವೆ, ದೂರವಾಣಿ, ರೇಡಿಯೊ ಮುಂತಾದ ರಾಷ್ಟ್ರೀಯ ಸೇವಾಶಾಖೆಗಳು, ಕೇಂದ್ರೀಯ ಉದ್ಯಮಗಳು ತಮ್ಮ ಕಾರ್ಯ ನಿರ್ವಹಣೆಯ ಉಪಯೋಗಕ್ಕಾಗಿ ವಿವಿಧ ರೀತಿಯ ಸಂಶೋಧನೆಗಳನ್ನು (ಆ್ಯಕ್ಷನ್ ರಿಸರ್ಚ್) ನಡೆಸುತ್ತಿವೆ.

**ಖಾಸಗಿ ಮತ್ತು ಇತರ:** ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಹಿಂದೆ ತಾತಾ ವಿಜ್ಞಾನ ಮಂದಿರವೆಂಬ ಹೆಸರಿನಿಂದ ಕರೆಯಲಾಗುತ್ತಿತ್ತು) ಇಂದು ಪ್ರಪಂಚದ ಪ್ರಧಾನ ಸಂಶೋಧನ ಕೇಂದ್ರಗ ಳಲ್ಲಿ ಒಂದೆಂದು ಹೆಸರು ಪಡೆದಿದೆ. ಇಲ್ಲಿ ಮುಖ್ಯವಾಗಿ ಆನ್ವಯಿಕ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ರಾಷ್ಟ್ರದ ಉದ್ಯೋಗ, ವಾಣಿಜ್ಯ, ಎಂಜಿನಿಯರಿಂಗ್, ರಕ್ಷಣೆ ಮುಂತಾದ ಕ್ಷೇತ್ರಗಳ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸಿ ನೂತನ ವಿಧಾನಗಳನ್ನು ದೊರಕಿಸಿಕೊಡುತ್ತಿದೆ.

ಬೆಂಗಳೂರಿನಲ್ಲಿ ಸರ್ ಸಿ.ವಿ.ರಾಮನ್ ಸ್ಥಾಪಿಸಿದ ಸಂಶೋಧನ ಸಂಸ್ಥೆಯೂ ಭೌತವಿಜ್ಞಾನ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸುತ್ತಿವೆ.

**ಪ್ರಾಚ್ಯ ಸಂಶೋಧನೆಗಳು:** ಕರ್ನಾಟಕ ರಾಜ್ಯದಲ್ಲಿ ಪ್ರಾಚ್ಯ ಸಂಶೋಧನೆಗಳನ್ನು ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಶಾಖೆಗಳಂತೆ ಖಾಸಗಿ ಸಂಸ್ಥೆಗಳೂ ನಡೆಸುತ್ತಿವೆ. ಮೈಸೂರು ವಿಶ್ವವಿದ್ಯಾ ನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ ಪ್ರಾಚೀನಕಾಲದ ಕೈಬರೆಹದ ಕೃತಿಗಳನ್ನು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸುತ್ತಿದೆ. ಅಂಥ ನೂರಾರು ಕೃತಿಗಳು ಈಗಾಗಲೇ ಪ್ರಕಟವಾಗಿವೆ. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಪ್ರಾಚೀನ ವಸ್ತುಶಾಸ್ತ್ರ ಶಾಖೆಗಳು ಪ್ರಾಚೀನ ಇತಿಹಾಸ, ಕಲೆ ಮತ್ತು ವಾಸ್ತುಶಾಸ್ತ್ರಗಳನ್ನು ಕುರಿತ ಸಂಶೋಧನೆ ನಡೆಸುತ್ತಿವೆ. ಬೆಂಗಳೂರಿನ ಮಿಥಿಕ್ ಸೊಸೈಟಿಯೂ ಈ ಕಾರ್ಯದಲ್ಲಿ ಆಸಕ್ತಿ ವಹಿಸಿ ಕೆಲಸಮಾಡುತ್ತಿದೆ. ಈಚೆಗೆ ಈ ಸಂಸ್ಥೆ ಸರ್ಕಾರದ ಮೇಲ್ವಿಚಾರಣೆಗೊಳ ಪಟ್ಟಿದೆ. ಹಲವು ಇತರ ಖಾಸಗಿ ಸಂಸ್ಥೆಗಳೂ ವ್ಯಕ್ತಿಗಳೂ ಪ್ರಾಚ್ಯ ಸಂಶೋಧನೆಗಳಲ್ಲಿ ನಿರತರಾಗಿರುವುದುಂಟು.

**(ನೋಡಿ: ಆಡುಗೋಡಿ ಕ್ಷೀರೋದ್ಯಮ ಕೇಂದ್ರ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾ ನಿಲಯ, ಕುವೆಂಪು ವಿಶ್ವವಿದ್ಯಾಲಯ, ಗುಲಬರ್ಗ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ).**

(ಎನ್.ಎಸ್.ವಿ.)

**ಸಂಸ:** 1898–1939. ಪ್ರತಿಭಾವಂತ ನಾಟಕಕಾರ. ಸಂಸ ಇವರ ಕಾವ್ಯನಾಮ. ಎ.ಎಸ್.ಸ್ವಾಮಿ ವೆಂಕಟಾದ್ರಿ ಅಯ್ಯರ್ ಇವರ ಹೆಸರು. ಇಂದಿನ ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಅಗರದ ಸುಸಂಸ್ಕೃತ ಕುಟುಂಬದಲ್ಲಿ ಹುಟ್ಟಿದ ಇವರು ಮೈಸೂರಿನಲ್ಲಿ ಇಂಗ್ಲಿಷ್, ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಶಿಕ್ಷಣ ಪಡೆದು ಹತ್ತಾರು ವರ್ಷ ಕಾಲ ಮೈಸೂರು, ಮಂಗಳೂರು ಮುಂತಾದ ಸ್ಥಳಗಳಲ್ಲಿ ಉಪಾಧ್ಯಾಯ ರಾಗಿ ಕೆಲಸ ಮಾಡಿದರು. ಹಲವು ಕಾಲ ಭಾರತದ ನಾನಾ ಪ್ರದೇಶಗಳಲ್ಲಿ



ಸಂಚಾರ ಮಾಡಿದ ಇವರು 1936ರ ವೇಳೆಗೆ ಮೈಸೂರಿಗೆ ಹಿಂದಿರುಗಿದರು. ಕಾರಣಾಂತ ರಗಳಿಂದ ವ್ಯಗ್ರ ಮಾನಸಿಕ ವ್ಯಾಧಿಗೆ ತುತ್ತಾಗಿದ್ದ ಇವರು 1939 ಫೆಬ್ರವರಿ 14ರಂದು ಆತ್ಮಹತ್ಯೆ ಮಾಡಿಕೊಂಡು ನಿಧನರಾದರು.

ಪ್ರತಿಭಾವಂತರಾಗಿದ್ದ ಇವರು ದೊಡ್ಡ ಪ್ರಮಾಣದಲ್ಲಿ ಸಾಹಿತ್ಯ ಸೃಷ್ಟಿ ಮಾಡಿದರು. ಆದರೆ ಇವರ ಹೆಸರಿನಲ್ಲಿ ಈಗ ಉಳಿದಿರುವುದು ಕೆಲವು ಕಥೆ, ಕವನಗಳು ಮತ್ತು ಆರು ನಾಟಕಗಳು ಮಾತ್ರ. ಕೌಶಲ (1914) ಎಂಬ ಕಥೆ ಎ.ಎಸ್.ಸ್ವಾಮಿ ಎಂಬ ಹೆಸರಿನಲ್ಲೂ ಶ್ರೀಮಂತೋದ್ಯಾನ ವರ್ಣನಂ (1918) ಎಂಬ ಕಾವ್ಯ ವೆಂಕಟಾದ್ರಿ ಪಂಡಿತ ಎಂಬ ಹೆಸರಿನಲ್ಲೂ ಸರ್ ಎಂ.ವಿಶ್ವೇಶ್ವರಯ್ಯನವರನ್ನು ಕುರಿತ ಪದ್ಯಮಾಲಿಕೆ (1921) ಸ್ವಾಮಿ ಎಂಬ ಹೆಸರಿನಲ್ಲೂ ಪ್ರಕಟವಾಗಿವೆ. ಕನ್ನಡದಲ್ಲಿ ಐತಿಹಾಸಿಕ ನಾಟಕವೆಂದು ಸ್ಥೂಲವಾಗಿ ಗುರುತಿಸಬಹುದಾದ ಕೃತಿಗಳನ್ನು ಬರೆದವರಲ್ಲಿ ಸಂಸರೇ ಮೊದಲಿಗರು. ಇವರು ಮೈಸೂರು ಒಡೆಯರ ಇತಿಹಾಸದ ಆಧಾರದ ಮೇಲೆ ರಚಿಸಿದ್ದರೆನ್ನಲಾದ 23 ನಾಟಕಗಳಲ್ಲಿ ಈಗ ಸುಗುಣ ಗಂಭೀರ, ವಿಗಡ ವಿಕ್ರಮರಾಯ, ಬೆಟ್ಟದ ಅರಸು, ಬಿರುದೆಂತೆಂಬರ ಗಂಡ, ಮಂತ್ರಶಕ್ತಿ ಮತ್ತು ವಿಜಯನಾರಸಿಂಹ ಎಂಬ 6 ನಾಟಕಗಳು ಮಾತ್ರ ಉಳಿದುಕೊಂಡಿವೆ. ಬಿರುದೆಂತೆಂಬರ ಗಂಡ ಅಚ್ಚುಕಟ್ಟಾಗಿ ರಚಿಸಿದ

ಸ್ವಾರಸ್ಯವಾದ ಏಕಾಂಕ ನಾಟಕ. ಮೈಸೂರಿನ ಸಾಮಾನ್ಯ ವ್ಯಾಪಾರಿಯೊಬ್ಬ ಇಮ್ಮಡಿ ತಿಮ್ಮರಾಜ ಒಡೆಯರಿಗೆ ಬಿರುದೆಂತೆಂಬರಗಂಡ ಎಂಬ ಬಿರುದನ್ನು ಸಾಧಿಸಿಕೊಟ್ಟು ತನ್ನ ಉಜ್ಜ್ವಲ ರಾಜಭಕ್ತಿ ಪ್ರದರ್ಶಿಸಿದ ಹಳೆಯ ಕಥೆ ಅದರಲ್ಲಿ ನವಿರಾಗಿ ಅರಳಿದೆ. ಸುಗುಣಗಂಭೀರ ನಾಲ್ವಡಿ ಚೋಳ ಚಾಮರಾಜ ಒಡೆಯರ ಕಾಲದ ಕಥೆ. ತೊರೆಮಾವಿನ ಹಳ್ಳಿಯ ದೇಮಟಿ ವೆಂಕಟಾದ್ರಿ ನಾಯಕನ ಸೈನ್ಯವನ್ನು ಮೈಸೂರು ಅರಸರು ಸೋಲಿಸಿ ಸುಗುಣಗಂಭೀರನೆಂಬ ಬಿರುದನ್ನು ಸಂಪಾದಿಸಿದ ಘಟನೆ ಇದರಲ್ಲಿ ಬರುತ್ತದೆ. ಮುಖ್ಯ ಕಥೆಯೊಂದಿಗೆ ದುರಂತ ಪ್ರೇಮದ ಕಥೆಯೂ ಸೇರಿ ನಾಟಕ ಸಂಕೀರ್ಣ ಸ್ವರೂಪ ಪಡೆದಿದೆ. ಸಂಸರ ಉಳಿದ ನಾಟಕಗಳಲ್ಲಿ ಅವರು ತಮ್ಮ ಆರಾಧ್ಯಮೂರ್ತಿ ರಣಧೀರ ಕಂಠೀರವ ನರಸರಾಜರ ಜೀವನ ಚರಿತ್ರೆಯ ಅಂಶಗಳನ್ನೇ ಆಧಾರವಾಗಿಟ್ಟುಕೊಂಡಿದ್ದಾರೆ. ಬೆಟ್ಟದ ಅರಸುವಿನಲ್ಲಿ ಧೂರ್ತ ವಿಕ್ರಮರಾಯನು ದಳವಾಯಿ ಬೆಟ್ಟದ ಅರಸುವನ್ನು ಅಧಿಕಾರದಿಂದ ಕೆಳಕ್ಕಿಳಿಸಿ ತಾನು ಪ್ರಬಲ ದೈತ್ಯನಾಗಿ ಬೆಳೆಯುವ ಸನ್ನಿವೇಶಗಳು ಚಿತ್ರಿತವಾಗಿವೆ. ವಿಗಡವಿಕ್ರಮರಾಯ ಮುಂದಿನ ಕಥೆಯನ್ನು ಬೆಳೆಸಿ ತೋರಿಸುತ್ತದೆ. ಸಜ್ಜನನಾದ ಬೆಟ್ಟದ ಅರಸುವನ್ನು ದುರಂತಕ್ಕೆ ಸಿಕ್ಕಿಸಿದ ದಳವಾಯಿ ವಿಕ್ರಮರಾಯ ಅವಮಾನಕರ ರೀತಿಯಲ್ಲಿ ಕೊಲೆಯಾಗಿ ರಣಧೀರನು ಉದಯವಾಗುವುದು ಇಲ್ಲಿನ ಕಥಾವಸ್ತು. ಮಂತ್ರಶಕ್ತಿಯಲ್ಲಿ ರಣಧೀರನು ದೇಶದ್ರೋಹಿಗಳಾದ ಹಳೆಯ ಪೈಕದವರನ್ನೂ ಶತ್ರುಗಳಾದ ತಿರುಚ್ಚಿರಾಪಳ್ಳಿಯವರನ್ನೂ ಬಗ್ಗುಬಡಿದ ಕಥೆ ಇದು. ವಿಜಯನಾರಸಿಂಹ ರಣಧೀರನ ಭೂಮೀಶೋತ್ಸಾಹ ಶಕ್ತಿಯ ಪ್ರಕರಣವನ್ನು ರೇಕುರೇಕಾಗಿ ಬಿಡಿಸಿ ತೋರಿಸುತ್ತದೆ. ರಾಜನ ಶತ್ರುಗಳಾದ ತಿರುಚ್ಚಿರಾಪಳ್ಳಿಯ ಅರಸ, ಶೈಂದಲೈಮಲ್ಲನೆಂಬ ಧೂರ್ತ, ಬಿಜಾಪುರದ ರಣದುಲ್ಲಾಖಾನ್, ಸತ್ತ ವಿಕ್ರಮರಾಯನ ಆಪ್ತೋಪಜೀವಿ ತುಂಗರಾಯ ಮುಂತಾದವರನ್ನು ರಣಧೀರನು ತನ್ನ ಸಾಹಸ ಚಮತ್ಕಾರಗಳಿಂದ ಸೋಲಿಸಿದ ಸಂದರ್ಭಗಳು ಈ ನಾಟಕಕ್ಕೆ ಗ್ರಾಸ ಒದಗಿಸಿವೆ.

ಸಂಸರ ಈ ನಾಟಕಗಳಲ್ಲಿ ಅರಮನೆಯ ಕೋಲಾಹಲಗಳು, ಕುಟಿಲ ತಂತ್ರಗಳ ಸಂಚು ಹೊಂಚುಗಳು, ನೀಚ ಕಾರಸ್ಥಾನಗಳು ವಸ್ತುವಾಗಿ ಬಂದಿರುವುದರಿಂದ ಕ್ರಿಯೆಯಲ್ಲೆಲ್ಲ ಸಹಜವಾಗಿಯೇ ವೈವಿಧ್ಯ ಸ್ವಾರಸ್ಯಗಳಿವೆ. ನಾಟಕದ ಕ್ರಿಯೆ ಒಂದು ಘಟನೆಯಿಂದ ಇನ್ನೊಂದಕ್ಕೆ ಮಿಂಚಿನಂತೆ ಚಲಿಸುವುದರಿಂದ ಅಲ್ಲಿನ ವಾತಾವರಣ ಜೀವಂತವಾಗಿದೆ. ಇವರು ಹಳೆಯ ಸಂಪ್ರದಾಯಕ್ಕೆ ಸೇರಿದ ಪಂಡಿತರು. ಆದ್ದರಿಂದ ಇವರು ತಮ್ಮ ನಾಟಕಗಳಲ್ಲಿ ವೃತ್ತ ರೂಪದ ನಾಂದಿ, ಭರತವಾಕ್ಯಗಳನ್ನೂ ಅಲ್ಲಲ್ಲಿ ಕಂದಪದ್ಯಗಳನ್ನೂ ಸೇರಿಸಿದ್ದಾರೆ. ಹಳೆಯ ಕಾಲದ ಗಂಭೀರ ವಾತಾವರಣ ಸೃಷ್ಟಿಸಲು ಪೆಡಸಾದ ಪ್ರೌಢ ನಡುಗನ್ನಡ ಶೈಲಿಯನ್ನು ನಾಟಕ ಮಾಧ್ಯಮವಾಗಿ ಬಳಸಿಕೊಂಡಿದ್ದಾರೆ. ಭವ್ಯ ಐತಿಹಾಸಿಕ ಸನ್ನಿವೇಶಗಳನ್ನು ಚಿತ್ರಿಸುವಲ್ಲಿ, ಉಜ್ಜ್ವಲ ದೃಶ್ಯಾವಳಿಗಳನ್ನು ಜೋಡಿಸುವುದರಲ್ಲಿ ಇವರ ಗಡಸು ಶೈಲಿ ಹೆಚ್ಚಿನ ಪರಿಣಾಮ ಸಾಧಿಸುತ್ತದೆ. ರಂಗಭೂಮಿಯ ದೃಷ್ಟಿಯಿಂದಲೂ ಇವರ ನಾಟಕಗಳು ಯಶಸ್ವಿಯಾಗಿವೆ. **(ಎಚ್.ಕೆ.ಆರ್.ಎಂ.)**

**ಸಂಸ್ಕೃತ ಪಾಠಶಾಲೆಗಳು:** ಕನ್ನಡ ನಾಡಿನಲ್ಲಿ ಬಹುಕಾಲದಿಂದ ಸಂಸ್ಕೃತ ವಿದ್ಯಾಪರಂಪರೆ ಸಾಗುತ್ತ ಬಂದಿದೆ. ಕದಂಬರು, ಗಂಗರು, ರಾಷ್ಟ್ರಕೂಟರು, ಚಳುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಇಕ್ಕೇರಿ ರಾಜರು ಮತ್ತು ಮೈಸೂರು ಒಡೆಯರು ಸಂಸ್ಕೃತ ವಿದ್ಯೆಗೆ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಶೃಂಗೇರಿ, ಮೇಲುಕೋಟೆ, ಉಡುಪಿ, ಶ್ರವಣಬೆಳಗೊಳ, ಸಿದ್ಧಗಂಗೆ, ಸುತ್ತೂರು, ಸಿರಿಗೆರೆ, ಹುಬ್ಬಳ್ಳಿ, ರಂಭಾಪುರಿ, ಚಿತ್ರದುರ್ಗ ಮತ್ತು ಉಜ್ಜಯಿನಿ ಮುಂತಾದ ಸುಪ್ರಸಿದ್ಧ ಮಠಾಧೀಶ್ವರರು ತಮ್ಮ ಮಠಗಳಲ್ಲಿ ಸಂಸ್ಕೃತ ಕಾಲೇಜುಗಳನ್ನೂ ಪಾಠಶಾಲೆಗಳನ್ನೂ ಸ್ಥಾಪಿಸಿ ಸಂಸ್ಕೃತ ವಿದ್ಯಾಪರಂಪರೆಯನ್ನು ಕಾಯ್ದುಕೊಂಡು ಬರುತ್ತಿದ್ದಾರೆ.

ಕೇಂದ್ರ ಸರ್ಕಾರವೂ ಸಂಸ್ಕೃತ ವಿದ್ಯಾಭಿವೃದ್ಧಿಗಾಗಿ ಸಹಾಯ ನೀಡುತ್ತಿದೆ. ಮಾತ್ರವಲ್ಲದೆ ರಾಜ್ಯ ಸರ್ಕಾರದ ಆಶ್ರಯದಲ್ಲಿ ಕರ್ನಾಟಕದಲ್ಲಿ ಆರು ಸಂಸ್ಕೃತ ಮಹಾಪಾಠಶಾಲೆಗಳೂ ನೂರ ಐವತ್ತಾರು ಸಂಸ್ಕೃತ ಪ್ರಾಥಮಿಕ ಪಾಠಶಾಲೆಗಳೂ ನಡೆಯುತ್ತಿವೆ.

1868ರಲ್ಲಿ ಮೈಸೂರಿನಲ್ಲಿ ಆರಂಭವಾದ ಅರಮನೆಯ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆ ಅಂದಿನಿಂದ ಅನೇಕ ವಿದ್ವನ್ಮಣಿಗಳಿಗೆ ಶಿಕ್ಷಣವಿತ್ತು ಸಂಸ್ಕೃತ ವಿದ್ಯಾಭ್ಯಾಸದ ಪ್ರಧಾನ ಕೇಂದ್ರವಾಗಿ ಖ್ಯಾತಿ ಪಡೆದಿದೆ. ಮೊದಲು ಸರಸ್ವತೀ ಭಂಡಾರದಲ್ಲಿ ಆರಂಭವಾದ ಈ ಪಾಠಶಾಲೆಯಲ್ಲಿ ತರ್ಕ, ವ್ಯಾಕರಣ ಶಾಸ್ತ್ರಗಳು ಮಾತ್ರ ಬೋಧಿಸಲ್ಪಡುತ್ತಿದ್ದವು. ತರುವಾಯ ಋಗ್ವೇದ ಯಜುರ್ವೇದಗಳ ಬೋಧನೆಯೂ ಆರಂಭವಾಗಿ 1883ರಲ್ಲಿ ಈ ಶಾಲೆಯು ಈಗಿರುವ ಕಟ್ಟಡಕ್ಕೆ ಸ್ಥಳಾಂತರವಾಯಿತು. ಇಲ್ಲಿ ಸಾಮವೇದ, ವೇದಭಾಷ್ಯ, ಧರ್ಮಶಾಸ್ತ್ರ, ಜ್ಯೋತಿಷ, ಪ್ರಾಚೀನ ನ್ಯಾಯ, ಸಂಗೀತ, ಸಾಹಿತ್ಯ, ಆಗಮ ಮತ್ತು ಆಯುರ್ವೇದಗಳೂ ಆ ತರುವಾಯ ಮೀಮಾಂಸಾ, ಸಾಂಖ್ಯವಿಭಾಗಗಳೂ ವ್ಯಾಸಂಗ ವಿಷಯಗಳಾದುವು. ಸಂಗೀತ ಮತ್ತು ಆಯುರ್ವೇದಗಳು ಇಲ್ಲಿಂದ ಪ್ರತ್ಯೇಕಿಸಲ್ಪಟ್ಟವು. 1890ರಲ್ಲಿ ಇಲ್ಲಿಯ ಪಾಠಪ್ರವಚನಗಳು ವಿಸ್ತೃತಗೊಂಡು ವೇದಾಂತದಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಶಾಖೆಗಳು ತೆರೆಯಲ್ಪಟ್ಟವು. 1917ರವರೆಗೆ ಮಹಾಪಾಠಶಾಲೆಯ ಆಡಳಿತವು ಅರಮನೆಯ ಇಲಾಖೆಗೆ ಸೇರಿದ್ದು ಆ ತರುವಾಯ ಅದರ ಮೇಲ್ವಿಚಾರಣೆಗಾಗಿ ಸರ್ಕಾರದಿಂದ ಒಂದು ಸಮಿತಿ ನಿಯಮಿಸಲ್ಪಟ್ಟಿತು. ಇದರ ಫಲವಾಗಿ ಇಲ್ಲಿ ಪ್ರಾಚೀನ ಪಾಠ ಕ್ರಮದ ಜೊತೆಗೆ ಇಂಗ್ಲಿಷ್ ಮತ್ತು ಸಾಹಿತ್ಯ ವಿಭಾಗಗಳೂ ಸೇರ್ಪಡೆಯಾದವು. 1926ರಲ್ಲಿ ಈ ಮಹಾಪಾಠಶಾಲೆಯ ರಜತಮಹೋತ್ಸವ ನಾಲ್ವಡಿ ಕೃಷ್ಣರಾಜ ಒಡೆಯರವರ ನೇತೃತ್ವದಲ್ಲಿ ನೆರವೇರಿತು.

1950ರ ವರೆಗೆ ಈ ಮಹಾಪಾಠಶಾಲೆ ಕೇವಲ ವೈದಿಕರಿಗೆ ಮಾತ್ರ ಮೀಸಲಾಗಿದ್ದುದು, ಆ ತರುವಾಯ ಸಂಪೂರ್ಣ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಸಾರ್ವಜನಿಕವಾಯಿತು. ಅನಂತರ ಇಲ್ಲಿ ಮೂರು ವೇದಾಂತಗಳ ಜೊತೆಗೆ, ಶಕ್ತಿವಿಶಿಷ್ಟಾದ್ವೈತ ಶಾಖೆಯೂ ಆಗಮ ವಿಭಾಗದಲ್ಲಿ ವೀರಶೈವಾಗಮ ಮತ್ತು ತಂತ್ರಸಾರಾಗಮ ಎಂಬ ಎರಡು ಶಾಖೆಗಳೂ ಸೇರಿದುವು. ಸುಮಾರು ನಲವತ್ತು ಮಂದಿ ವಿದ್ಯಾರ್ಥಿಗಳು ಮತ್ತು ಇಬ್ಬರು ವಿದ್ವಾಂಸರಿಂದ ಆರಂಭವಾದ ಈ ಪಾಠಶಾಲೆ ಒಂದು ನೂರು ವರ್ಷಗಳ ಅವಧಿಯಲ್ಲಿ ಸಾವಿರಾರು ಪಂಡಿತರನ್ನು ಸಿದ್ಧಗೊಳಿಸಿದೆ. ಪ್ರಕೃತ ಇಲ್ಲಿ 500 ಮಂದಿ ವಿದ್ಯಾರ್ಥಿಗಳೂ 50 ವಿದ್ವಾಂಸರೂ ಇದ್ದಾರೆ. 1868ರಲ್ಲಿ ಚಾಮರಾಜೇಂದ್ರ ಒಡೆಯರವರ ನೆನಪಿಗಾಗಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜೂ ಅನೇಕ ವಿದ್ವನ್ಮಣಿಗಳಿಗೆ ಶಿಕ್ಷಣವಿತ್ತ ಕೀರ್ತಿ ಪಡೆದಿದೆ. ಬೆಂಗಳೂರು ಕೋಟೆಯ ಮದ್ದಿನ ಮನೆಯಲ್ಲಿ ಆರಂಭವಾದ ಈ ಶಾಲೆಯಲ್ಲಿ ವೇದ, ಆಗಮ, ವೇದಾಂತ ವಿಭಾಗಗಳೂ ತರ್ಕ, ವ್ಯಾಕರಣ ಮತ್ತು ಸಾಹಿತ್ಯಶಾಸ್ತ್ರ ವಿಭಾಗಗಳೂ ಇದ್ದವು. ಅನಂತರ ಈ ಶಾಲೆಯನ್ನು ಟಿಪ್ಪುಸುಲ್ತಾನ್ ಅರಮನೆಗೆ ವರ್ಗಾಯಿಸಲಾಯಿತು. 1940ರಲ್ಲಿ ಚಾಮರಾಜಪೇಟೆಯಲ್ಲಿನ ಇಂದಿನ ಕಟ್ಟಡಕ್ಕೆ ವರ್ಗಾಯಿಸಲಾಯಿತು. ಸರ್ಕಾರದ ಆಡಳಿತದಲ್ಲಿ ಆರಂಭವಾದ ಈ ಪಾಠಶಾಲೆಯೂ ಮೊದಲು ಒಂದು ಕೋಮಿನವರಿಗೆ ಮೀಸಲಾಗಿದ್ದುದು 1928ರ ತರುವಾಯ ಸಾರ್ವಜನಿಕವಾಯಿತು. ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠದಲ್ಲಿ ಸ್ಥಾಪಿತವಾಗಿರುವ ಶ್ರೀ ಸಿದ್ಧಲಿಂಗೇಶ್ವರ ವೇದ ಮತ್ತು ಸಂಸ್ಕೃತ ಮಹಾಪಾಠ

ಶಾಲೆಯೂ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಖ್ಯಾತಿ ಪಡೆದಿದೆ. ಈ ಶಾಲೆ 1917ರ ತರುವಾಯ ಇಲ್ಲಿಯ ಕ್ಷೇತ್ರಾಧಿಪತಿಗಳಾಗಿದ್ದ ಉದ್ದಾನ ಶಿವಯೋಗಿಗಳ ಕಾಲದಲ್ಲಿ ಸಾರ್ವಜನಿಕ ವಿದ್ಯಾಸಂಸ್ಥೆಯಾಗಿ ಮಾರ್ಪಟ್ಟಿತು. ವೇದ, ಸಂಸ್ಕೃತ ಹಾಗೂ ಜ್ಯೋತಿಷ್ಯ ವಿಭಾಗಗಳಲ್ಲಿ ಶಿಕ್ಷಣವನ್ನು ನೀಡತೊಡಗಿದ ಈ ಸಂಸ್ಥೆಯಲ್ಲಿ ಎಲ್ಲ ಮತಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೂ ಉಚಿತ ವಿದ್ಯೆ, ಊಟ ಮತ್ತು ವಸತಿಗಳನ್ನು ಕಲ್ಪಿಸಲಾಗಿದೆ.

1930ರಲ್ಲಿ ಶ್ರೀಕ್ಷೇತ್ರದ ಅಧಿಕಾರವನ್ನು ವಹಿಸಿಕೊಂಡ ಶಿವಕುಮಾರ ಸ್ವಾಮಿಗಳ ಅವಿಶ್ರಾಂತ ಪರಿಶ್ರಮದ ಫಲವಾಗಿ ಸಂಸ್ಕೃತ ಮತ್ತು ವೇದ ಪಾಠಶಾಲೆ ಸು. 500 ಮಂದಿ ವಿದ್ಯಾರ್ಥಿಗಳಿಗೆ ಹಾಗೂ 25 ಮಂದಿ ಪಂಡಿತರಿಗೆ ಆಶ್ರಯ ನೀಡಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಮತ್ತು ಮಹಾಜನರ ಔದಾರ್ಯದ ಫಲವಾಗಿ ಈ ಮಹಾಪಾಠಶಾಲೆ ಭವ್ಯವಾದ ಕಟ್ಟಡವನ್ನು ಹೊಂದಿರುವುದಲ್ಲದೆ ಇಲ್ಲಿ ತರ್ಕ, ವ್ಯಾಕರಣ, ಅಲಂಕಾರ, ವೇದವೇದಾಂತ ಮತ್ತು ಜ್ಯೋತಿಷ್ಯ ವಿಭಾಗಗಳಲ್ಲಿ ಶಿಕ್ಷಣವನ್ನು ನೀಡುತ್ತಿದೆ. 1972 ಮೇ 28ರಂದು ಈ ಸಂಸ್ಥೆ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತು. ಇವುಗಳ ಜೊತೆಗೆ ಮೇಲುಕೋಟೆ, ಉಡುಪಿ, ಹುಬ್ಬಳ್ಳಿ, ಶೃಂಗೇರಿ, ಚುಂಚನಕಟ್ಟೆ ಮುಂತಾದ ಮಠಗಳ ಆಶ್ರಯದಲ್ಲಿ ಏರ್ಪಟ್ಟಿರುವ ಸಂಸ್ಕೃತ ಮಹಾಪಾಠಶಾಲೆಗಳು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಹಿಂದಿನಿಂದಲೂ ಅವಕಾಶ ಕಲ್ಪಿಸಿಕೊಂಡು ಬರುತ್ತಿವೆ. ಹುಬ್ಬಳ್ಳಿಯ ಸಂಸ್ಕೃತ ಮಹಾಪಾಠಶಾಲೆ ಕರ್ನಾಟಕದ ಏಕೀಕರಣದ ತರುವಾಯ ಮೈಸೂರಿನ ವಿದ್ಯಾ ಇಲಾಖೆಯ ಸಂಸ್ಕೃತ ವಿದ್ಯಾಭ್ಯಾಸ ಸಭೆಯ ಮನ್ನಣೆ ಪಡೆದು ಸಂಸ್ಕೃತ ಮಹಾಪಾಠಶಾಲೆ ಎಂದು ಅಂಗೀಕೃತವಾಗಿದೆ.

(ಎಂ.ಜಿ.ಎನ್.)

**ಸಕಲೇಶಪುರ:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. 19ನೆಯ ಶತಮಾನದ ಪ್ರಾರಂಭದಲ್ಲಿ ಹಾಸನ ಜಿಲ್ಲೆಗೆ ಸೇರಿದ ಹಾಗೆ ಸಕಲೇಶಪುರ ಭಾಗ ಮಂಜರಾಬಾದು ಫೌಜುದಾರಿ ಆಡಳಿತದ ವಿಭಾಗವಾಗಿತ್ತು. 1832ರಲ್ಲಿ ಇದನ್ನು ಅಷ್ಟಗ್ರಾಮ ಸಬ್‌ಡಿವಿಜನ್ನಿಗೆ ಸೇರಿಸಲಾಯಿತು. 1882ರಲ್ಲಿ ಹಾಸನದ ಬಹುಭಾಗ ಕಡೂರು ಜಿಲ್ಲೆಗೆ ಸೇರಿಹೋಗಿ ಅರಸೀಕೆರೆ, ಬೇಲೂರು, ಸಬ್ ತಾಲ್ಲೂಕು ಸೇರಿ ಹಾಸನ ಮತ್ತು ಮಂಜರಾಬಾದ್ ತಾಲ್ಲೂಕುಗಳು ಮಾತ್ರ ಹಾಸನ ಜಿಲ್ಲೆಯ ತಾಲ್ಲೂಕುಗಳಾದವು. ಸಕಲೇಶಪುರ ಆಡಳಿತ ಕೇಂದ್ರವಾಗಿದ್ದ ತಾಲ್ಲೂಕಿಗೆ ಇತ್ತೀಚಿನವರೆಗೆ ಮಂಜರಾಬಾದ್ ತಾಲ್ಲೂಕು ಎಂಬ ಹೆಸರಿತ್ತು. ಜಿಲ್ಲೆಯ ಪಶ್ಚಿಮಕ್ಕಿರುವ ಈ ತಾಲ್ಲೂಕನ್ನು ದಕ್ಷಿಣ ಮತ್ತು ಆಗ್ನೇಯದಲ್ಲಿ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು, ಪೂರ್ವಕ್ಕೆ ಆಲೂರು ತಾಲ್ಲೂಕು, ಉತ್ತರ ಮತ್ತು ಈಶಾನ್ಯಕ್ಕೆ ಬೇಲೂರು ತಾಲ್ಲೂಕು ವಾಯವ್ಯ ಮತ್ತು ಉತ್ತರಕ್ಕೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಪುತ್ತೂರು ತಾಲ್ಲೂಕುಗಳು, ನೈಋತ್ಯದ ಸ್ವಲ್ಪಭಾಗಕ್ಕೆ ತಾಗಿದಂತೆ ಸುಳ್ಯ ತಾಲ್ಲೂಕು ಸುತ್ತುವರಿದಿವೆ. ಹಾನಬಾಳು, ಹೆತ್ತೂರು, ಯಸಳೂರು ಮತ್ತು ಸಕಲೇಶಪುರ ಹೋಬಳಿಗಳು. ಒಂದು ಪಟ್ಟಣ, 227 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,029.2 ಚ.ಕಿಮೀ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 1,34,345.

ಈ ತಾಲ್ಲೂಕು ಜಿಲ್ಲೆಯ ದಕ್ಷಿಣ ಮಲೆನಾಡು ಪ್ರದೇಶದಲ್ಲಿದೆ. ಈ ಭಾಗದಲ್ಲಿ ಮಳೆ ಹೆಚ್ಚು. ವಾರ್ಷಿಕ ಸರಾಸರಿ ಮಳೆ 2,348 ಮಿಮೀ. ಈ ತಾಲ್ಲೂಕು ಪಶ್ಚಿಮಘಟ್ಟ ಶ್ರೇಣಿಯ ಅಂಚಿನಲ್ಲಿದ್ದು ಅರಣ್ಯಗಳಿಂದ ಕೂಡಿದೆ. ತಾಲ್ಲೂಕಿನ ಪಶ್ಚಿಮಕ್ಕೆ ಬಿಸಲೆ ಘಾಟ್ ಶ್ರೇಣಿ ಇದ್ದು ಈ ಪ್ರದೇಶ ಸಮುದ್ರ ಮಟ್ಟದಿಂದ 914 ಮೀ ಎತ್ತರದಲ್ಲಿದೆ. ಈ ತಾಲ್ಲೂಕಿನ ಪಶ್ಚಿಮ, ವಾಯವ್ಯ ಮತ್ತು ದಕ್ಷಿಣ ಭಾಗಗಳಲ್ಲಿ ಬೆಟ್ಟಗಳು ಹಬ್ಬಿವೆ. ಕೆಂಚನಕುಮಾರಿ, ಕಬ್ಬಿನಲೆ, ಕೆಂಪುಹೊಳೆ, ಕಾಗಿನೆರಿ ಮತ್ತು ಬಿಸಲೆಘಾಟ್ ತಾಲ್ಲೂಕಿನ ಮುಖ್ಯ ಅರಣ್ಯಗಳು. ಇವುಗಳಲ್ಲಿ ಹೊನ್ನೆ, ನಂದಿ, ಸಂಪಿಗೆ, ಕರಿಮರ, ತೇಗ, ಗಂಧದ ಮರಗಳು ಹೆಚ್ಚು ಬೆಳೆಯುತ್ತವೆ. ಅರಣ್ಯಗಳಲ್ಲಿ ಹುಲಿ, ಚಿರತೆ, ಕರಡಿ, ಸಾರಗ, ಕಾಡುಕೋಣ, ನರಿ, ಕಾಡುನಾಯಿ ಮುಂತಾದ ಪ್ರಾಣಿಗಳೂ ಕೋಗಿಲೆ, ಗಿಣಿ, ನವಿಲು, ಕಾಡುಕೋಳಿ ಜೀವಂಜೀವ ಮೊದಲಾದ ಪಕ್ಷಿಗಳೂ ಅನೇಕ ಜಾತಿಯ ಉರಗಗಳೂ ಇವೆ.

ಮಂಜರಾಬಾದು ಕೋಟೆ

ಈ ತಾಲ್ಲೂಕಿನ ಮುಖ್ಯನದಿ ಹೇಮಾವತಿ. ಇದು ಅಚ್ಚನಹಳ್ಳಿ ಬಳಿ ಈ ತಾಲ್ಲೂಕನ್ನು ಪ್ರವೇಶಿಸಿ ಸ್ವಲ್ಪ ದೂರ ಬೇಲೂರು ಮತ್ತು ಆಲೂರು ತಾಲ್ಲೂಕುಗಳ ಗಡಿಯಾಗಿ ತಾಲ್ಲೂಕಿನ ಪೂರ್ವದಲ್ಲಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಈ ತಾಲ್ಲೂಕಿನ ಮದನಪುರ, ಮಾವಿನಹಳ್ಳಿ, ಸಕಲೇಶಪುರ, ಇಬ್ಬದಿ, ವಡ್ಡೂರು, ಕಾಮನಹಳ್ಳಿ, ಬೆಳ್ಳೂರು ಮುಖಾಂತರ ಹರಿಯುವ ಈ ನದಿಗೆ ಐಗೂರ ಬಳಿ ಐಗೂರ ಹೊಳೆ ಕೂಡಿಕೊಳ್ಳುತ್ತದೆ. ಮುಂದೆ ಆಲೂರು ತಾಲ್ಲೂಕಿನ ದಕ್ಷಿಣದಲ್ಲಿ ಕೊಡಗು ಜಿಲ್ಲೆಯ ಗಡಿಯಾಗಿ ಸ್ವಲ್ಪದೂರ ಹರಿದು ಅರಕಲಗೂಡು ತಾಲ್ಲೂಕನ್ನು ಪ್ರವೇಶಿಸುವುದು. ಈ ತಾಲ್ಲೂಕಿನಲ್ಲಿ ವ್ಯವಸಾಯೋಪಯೋಗಿಯಾದ ದೊಡ್ಡ ಚಿಕ್ಕ ಕೆರೆಗಳೂ ಬಾವಿಗಳೂ ಇವೆ. ಈ ತಾಲ್ಲೂಕಿನ ಹೆಚ್ಚು ಭಾಗದಲ್ಲಿ ಮೇಲೆ ಕೆಂಪು ಒಳಗೆ ಕೆಂಪುಮಿಶ್ರಿತ ಹಳದಿ ಬಣ್ಣದ ಮಣ್ಣಿನ ಭೂಮಿ ಇದ್ದು ನೆಡುತೋಪಿಗೆ ಬಹು ಪ್ರಶಸ್ತ ಪ್ರದೇಶವಾಗಿದೆ. ಬತ್ತ, ಏಲಕ್ಕಿ, ಕಾಫಿ–ಇವು ತಾಲ್ಲೂಕಿನ ಮುಖ್ಯ ಬೆಳೆಗಳು. ಇವುಗಳ ಜೊತೆಗೆ ಸ್ವಲ್ಪ ಟೀ, ಅಡಕೆ ಮತ್ತು ಗೋಡಂಬಿ ಬೆಳೆಯುತ್ತಾರೆ; ಬಾಳೆಹಣ್ಣು, ಕಿತ್ತಲೆ ಹಣ್ಣುಗಳ ಬೆಳೆಯೂ ಇದೆ. ತಾಲ್ಲೂಕಿನಲ್ಲಿ ಪಶುಪಾಲನೆ ಇದ್ದು ಪಶುವೈದ್ಯಾಲಯವಿದೆ. ಜೇನುಸಾಕಣೆಗೆ ಈ ತಾಲ್ಲೂಕು ಪ್ರಸಿದ್ಧ.

ಹೇಮಾವತಿ ನದಿಗೆ ಅಡ್ಡಲಾಗಿ ಸಕಲೇಶಪುರದ ಬಳಿ ದೊಡ್ಡ ಸೇತುವೆ ಕಟ್ಟಲಾಗಿದೆ. ಬಿಸಲೆಘಾಟ್ ಮೂಲಕ ಕುಕ್ಕೇ ಸುಬ್ರಹ್ಮಣ್ಯಕ್ಕೆ ಈ ತಾಲ್ಲೂಕಿನ ಮುಖಾಂತರ ಹೋಗಬೇಕಾಗಿದ್ದು ಸಕಲೇಶಪುರ ಅದರ ಪ್ರವೇಶ ದ್ವಾರದಂತಿದೆ. ಈಗ ನಿರ್ಮಾಣವಾಗಿರುವ (1979) ಹಾಸನ–ಮಂಗಳೂರು ರೈಲು ಮಾರ್ಗ ಈ ತಾಲ್ಲೂಕು ಮುಖಾಂತರವೇ ಹಾದು ಹೋಗುತ್ತದೆ.

ಈ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಮಂಜರಾಬಾದು ಒಂದು. ಇಲ್ಲಿ ಒಂದು ಕೋಟೆ ಇದೆ. ಬಿಸಲೆಘಾಟ್ ಸಕಲೇಶಪುರ–ಸುಬ್ರಹ್ಮಣ್ಯ

ರಸ್ತೆಯ ನಡುವಣ ಕಣಿವೆ ಪ್ರದೇಶ, ಹಾಸನಕ್ಕೆ 105 ಕಿಮೀ ದೂರದಲ್ಲಿದೆ. ಸಕಲೇಶಪುರಕ್ಕೆ 6 ಕಿಮೀ ದೂರದಲ್ಲಿರುವ ಹಳೆಬೇಲೂರಿನಲ್ಲಿ ಹೊಯ್ಸಳರ ಕಾಲದ ಚೆನ್ನಕೇಶವ ದೇವಾಲಯವಿದ್ದು, ಅದು ಶಿಥಿಲಾವಸ್ಥೆಯಲ್ಲಿದೆ. ಕದಂಬರ ಕಾಲದ ವಾಮದೇವ ವಿಗ್ರಹವೊಂದು ಸಹ ಇಲ್ಲಿದೆ. ಸಕಲೇಶಪುರಕ್ಕೆ ಸು. 38 ಕಿಮೀ ದೂರದಲ್ಲಿರುವ ಯಡಕಮರಿ ಗ್ರಾಮಕ್ಕೆ ಸಮೀಪದ ಬೆಟ್ಟಗಳಲ್ಲಿ ಹಾಸನ–ಮಂಗಳೂರು ರೈಲುಮಾರ್ಗ ರಚನೆಯ ಸಂಬಂಧದಲ್ಲಿ ಮೂರು ದೊಡ್ಡ ಸುರಂಗಗಳನ್ನು ಕೊರೆಯಲಾಗಿದೆ. ತಾಲ್ಲೂಕಿನ ಪ್ರಮುಖ ರಸ್ತೆಗಳು ಸಕಲೇಶಪುರದಿಂದ ಹಾಸನ, ಮೂಡಿಗೆರೆ, ಆಲೂರು, ಅರಕಲಗೂಡು, ಮಂಗಳೂರು ಮೊದಲಾದ ಸ್ಥಳಗಳಿಗೆ ಸಂಪರ್ಕ ಕಲ್ಪಿಸುತ್ತವೆ.

ಸಕಲೇಶಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಹಾಸನಕ್ಕೆ ಪಶ್ಚಿಮದಲ್ಲಿ 40 ಕಿಮೀ ದೂರದಲ್ಲಿ ಹೇಮಾವತಿ ನದಿಯ ಬಲದಂಡೆಯ ಮೇಲಿದೆ. ಪಟ್ಟಣದ ಒಟ್ಟು ಜನಸಂಖ್ಯೆ 23,201. ಸಮುದ್ರಮಟ್ಟದಿಂದ 899 ಮೀ ಎತ್ತರದಲ್ಲಿರುವ ಈ ಪಟ್ಟಣ ತಂಪಾದ ಹವಾಗುಣ ಹೊಂದಿದೆ. ಏಲಕ್ಕಿ ಮತ್ತು ಕಾಫಿ ಬೆಳೆಗಳಿಗೆ ಇದೊಂದು ಪ್ರಸಿದ್ಧ ವ್ಯಾಪಾರ ಕೇಂದ್ರ. ಬೆಂಗಳೂರಿಗೆ 222 ಕಿಮೀ ದೂರದಲ್ಲೂ ಮಂಗಳೂರು ನಗರಕ್ಕೆ 136 ಕಿಮೀ ದೂರದಲ್ಲೂ ಇರುವ ಈ ಪಟ್ಟಣ ಈಗ ನಿರ್ಮಾಣವಾಗಿರುವ ಹಾಸನ–ಮಂಗಳೂರು ರೈಲು ಮಾರ್ಗದ ಒಂದು ಪ್ರಮುಖ ನಿಲ್ದಾಣ. ಈ ಪಟ್ಟಣದಲ್ಲಿ ಅಂಚೆ, ತಂತಿ, ದೂರವಾಣಿ, ವಿದ್ಯುತ್ತು, ರಕ್ಷಿತ ಕುಡಿಯುವ ನೀರಿನ ಸರಬರಾಜು, ಆಸ್ಪತ್ರೆ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಸೌಲಭ್ಯವಿದೆ. ಒಂದು ಜೂನಿಯರ್ ಕಾಲೇಜು ಇದೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ಜೇನುಸಾಕಣೆಗಾರರ ಸಹಕಾರ ಸಂಘವೂ (1940) ಇತರ ಸಂಘಗಳೂ ಇವೆ. ಪ್ರಥಮ ದರ್ಜೆ ಪ್ರವಾಸಿ ಮಂದಿರವಿದೆ. ನದಿ ದಡದಲ್ಲಿರುವ ಸಕಲೇಶ್ವರ ದೇವಾಲಯದಿಂದ ಈ ಪಟ್ಟಣಕ್ಕೆ ಸಕಲೇಶಪುರವೆಂಬ ಹೆಸರು ಬಂದಿತೆಂದು ಪ್ರತೀತಿ. ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆ ನಡೆಯುವುದು. ಪಟ್ಟಣ ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ. (ಪಿ.ಬಿ.;ಡಿ.ಎಸ್.ಜೆ.;ವಿ.ಜಿ.ಕೆ.)

**ಸಕಲೇಶ ಮಾದರಸ:** ಸು. 1150. ಶಿವಶರಣ ಹಾಗೂ ವಚನಕಾರ. ಈತನ ವಿಷಯ ಹಲವು ವೀರಶೈವ ಕಾವ್ಯಗಳಲ್ಲಿ ವರ್ಣಿತವಾಗಿದೆ. ಅವುಗಳಲ್ಲಿ ಪದ್ಮಣಾಂಕನ ಪದ್ಮರಾಜಪುರಾಣ ಮತ್ತು ಭೀಮಕವಿಯ ಬಸವಪುರಾಣಗಳಲ್ಲಿ ಹೆಚ್ಚು ವಿಸ್ತಾರವಾದ ನಿರೂಪಣೆಯಿದೆ.

ಪದ್ಮರಾಜಪುರಾಣದಲ್ಲಿರುವಂತೆ ಈತನ ತಂದೆ ಮಲ್ಲರಸ ಕಲ್ಲುಕುರಿಕೆ ಎಂಬಲ್ಲಿ ರಾಜ್ಯವಾಳುತ್ತಿದ್ದು, ವಿರಕ್ತನಾಗಿ ಶ್ರೀಶೈಲಕ್ಕೆ ಹೋದ. ಅವನ ಅನಂತರ ಮಾದರಸ ಕೆಲಕಾಲ ರಾಜ್ಯವಾಳುತ್ತಿದ್ದು ವಿರಕ್ತಿ ಹುಟ್ಟಿ ಶ್ರೀಶೈಲಕ್ಕೆ ನಡೆದು ತಂದೆಯನ್ನು ಸಂಧಿಸಿದ. ಆಗ ಇವನ ತಂದೆ 'ಕಲ್ಯಾಣಕ್ಕೆ ಹೋಗಿ, ಧರ್ಮ ಸಂಸ್ಥಾಪನೆಗಾಗಿ ಹುಟ್ಟುವ ಬಸವಣ್ಣನೊಡನೆ ಕೆಲಸ ಮಾಡು' ಎಂದು ಹರಸಿ ಕಳುಹಿಸಿದ. ಅದರಂತೆ ಸಕಲೇಶ ಮಾದರಸ ಕಲ್ಯಾಣಕ್ಕೆ ಬಂದು ಬಸವಣ್ಣನೊಡನೆ ಧರ್ಮಕಾರ್ಯದಲ್ಲಿ ನಿರತನಾದ. ಬಸವಣ್ಣ, ಚೆನ್ನಬಸವಣ್ಣ ಮೊದಲಾದ ಪ್ರಮಥರೆಲ್ಲರೂ ಉಳಿವೆಯ ಮಹಾಮನೆಯಲ್ಲಿ ನಿರ್ವಯಲಾಗಲು ಈತ ಕಪ್ಪಡಿಯಿಂದ ಶ್ರೀಶೈಲಕ್ಕೆ ಹೋಗಿ ಸಕಲೇಶ್ವರನೆಂಬ ಇಷ್ಟಲಿಂಗದಲ್ಲಿ ಐಕ್ಯನಾದ. ಕಪ್ಪಡಿಯಿಂದ ಶ್ರೀಶೈಲಕ್ಕೆ ಬರುವಾಗ ಗೊಪೆ ಎಂಬ ಊರಲ್ಲಿ ಕಠಿಣವ್ರತವನ್ನು ಆಚರಿಸುತ್ತಿದ್ದ ಶಿವದೇವನೆಂಬುವನಿಗೆ ಶಿವಾನುಭವದ ಸುಲಭ ಮಾರ್ಗವನ್ನು ಬೋಧಿಸಿದನೆಂದೂ ದಾರಿಯಲ್ಲಿ ಸಂಧಿಸಿದ ರಾಮಯ್ಯನೆಂಬ ಭಕ್ತನಿಗೆ ಲಿಂಗಾಗಸಾಮರಸ್ಯವನ್ನು ಬೋಧಿಸಿದನೆಂದೂ ಐತಿಹ್ಯಗಳಿವೆ. ವಿದ್ವಾಂಸರು ಹೇಳುವಂತೆ ಆಂಧ್ರ ಸಾಹಿತ್ಯದಲ್ಲಿ ಸಕಲೇಶಮಾದರಸನಿಗೆ ಇರುವ ಪ್ರಾಮುಖ್ಯವನ್ನು ನೋಡಿದರೆ ಈತ ಆಂಧ್ರದಲ್ಲಿ ಸುತ್ತಾಡಿ ವೀರಶೈವ ಪ್ರಭಾವವನ್ನು ಬೀರಿರಬೇಕೆಂದು ತೋರುತ್ತದೆ. ಇವನ ಮಗ ಮಗ್ಗೆಯ ಮಾಯಿದೇವ, ಮೊಮ್ಮಗ ಕೆರೆಯ ಪದ್ಮರಸ.

ಈಗ ಪ್ರಕಟವಾಗಿರುವ ವಚನಗಳಲ್ಲಿ ಸಕಳೇಶ್ವರ, ಸಕಳೇಶ್ವರ ದೇವಾ, ಸಕಳೇಶ್ವರಯ್ಯ ಎಂಬೀ ರೂಪಗಳು ಈತನ ವಚನಾಂಕಿತವಾಗಿ ದೊರೆಯುತ್ತವೆ. ಈಶಾನ್ಯ ಸಕಳೇಶ್ವರ ಮತ್ತು ಮಹಾಂತ ಸಕಳೇಶ್ವರ ಎಂಬುವೂ ಈತನ ವಚನಾಂಕಿತಗಳೆಂಬ ಒಂದು ಅಭಿಪ್ರಾಯವಿದೆ. ಈತ ರಚಿಸಿರುವ ವಚನಗಳು 113 ಎಂದು ಕವಿಚರಿತಕಾರರೂ 88 ಮಾತ್ರ ಎಂದು ಫ.ಗು. ಹಳಕಟ್ಟಿಯವರೂ ಅಭಿಪ್ರಾಯಪಡುತ್ತಾರೆ. ಇವನ ವಚನಗಳಲ್ಲಿ ಬಸವ, ಸಿದ್ಧರಾಮ, ಪ್ರಭುದೇವ, ಅಜಗಣ್ಣ, ಬಿಬ್ಬಿಬಾಚಯ್ಯ–ಇವರ ಹೆಸರುಗಳು ಕಂಡುಬರುತ್ತವೆ.

ಅದು ಬೇಕು ಇದು ಬೇಕು ಎಂದೆಂಬ ಎದೆಗುದಿತನ ಬೇಡ, ಹದುಳಿಗನಾಗಿದ್ದರೆ ಸಾಕು, ಪಡಿ ಪದಾರ್ಥ ತನ್ನಿದ್ದೆಡೆಗೆ ಬಹುದು, ನಿಧಿನಿಕ್ಷೇಪ ತನ್ನಿದ್ದೆಡೆಗೆ ಬಹುದು, ಹೃದಯಶುದ್ಧನಾಗಿ ಸಕಲೇಶ್ವರದೇವ ಶರಣೆಂದರೆ ನಿಜಪದವನೀವನು. ಅಯ್ಯಾ ನಿಮ್ಮಲ್ಲಿ ಆಯುವ ಬೇಡುವೆನೆ? ಸಂಸಾರಕ್ಕಾನಂಜುವೆ; ಅಯ್ಯಾ ನಿಮ್ಮಲ್ಲಿ ಮುಕ್ತಿಯ ಬೇಡುವೆನೆ? ಅದು ನಿಮ್ಮ ಪದವಿ; ಸಕಳೇಶ್ವರದೇವಾ ನಾನೇನುವನೂ ಒಲ್ಲೆ, ನಿಮ್ಮ ಶ್ರೀಪಾದಸೇವೆಯೇ ಸಾಕು ಎಂಬಂತ ಅಂತಃಕರಣಶುದ್ಧಿಯ ಶ್ರೇಷ್ಠ ವಚನಗಳನ್ನೂ ತನುವಿನ ಮೇಲೆ ಬ್ರಹ್ಮಚರ‍್ಯವಳವಟ್ಟಡೇನು, ಮನದ ಮೇಲೆ ಬ್ರಹ್ಮಚರ್ಯತ್ವವಳವಡದನ್ನಕ್ಕ? ಶಿವಯೋಗಿ ಭಿಕ್ಷವ ಕೊಂಬಲ್ಲಿ ಜಾತಿ ಸೂತಕವಿಲ್ಲದಿರಬೇಕು ಎಂಬಂತ ಹಿರಿಯ ನುಡಿಗಟ್ಟುಗಳನ್ನೂ ಇವನಲ್ಲಿ ಕಾಣುತ್ತೇವೆ. (ಬಿ.ಎಸ್.ಎಸ್.)

**ಸಕ್ಕರೆ ಉದ್ಯಮ:** ಕರ್ನಾಟಕದ ಬೃಹತ್ ಉದ್ಯಮಗಳಲ್ಲಿ ಸಕ್ಕರೆ ಉದ್ಯಮ ಎರಡನೆಯದು. ಕೃಷಿ ಆಧಾರಿತ ಉದ್ಯಮಗಳಲ್ಲಿ ಹತ್ತಿಬಟ್ಟೆ ಉದ್ಯಮವನ್ನು ಬಿಟ್ಟರೆ ಮೊದಲನೆಯದು.

ಕರ್ನಾಟಕದಲ್ಲಿ ಸಕ್ಕರೆ ಉದ್ಯಮದ ಬೆಳವಣಿಗೆಗೆ ಅನುಕೂಲಕರ ಪರಿಸ್ಥಿತಿ ಉಂಟು, ಕಬ್ಬು ಬೆಳೆಯುವ ಭೂಪ್ರದೇಶ, ಹವಾಗುಣ, ವಿದ್ಯುತ್ತು, ಜನಬಲ ಎಲ್ಲವೂ ಇಲ್ಲಿ ಧಾರಾಳ. ರಾಜ್ಯದಲ್ಲಿ 1800ರಷ್ಟು ಪೂರ್ವದಲ್ಲಿಯೇ ಸಕ್ಕರೆ ಉತ್ಪಾದನೆಯಾಗುತ್ತಿದ್ದುದಕ್ಕೆ ದಾಖಲೆಗಳಿವೆ. 1902ರಲ್ಲಿ ಶಿವಸಮುದ್ರದಿಂದ ವಿದ್ಯುತ್ ಹರಿಯಲಾರಂಭಿಸಿದಾಗ ರಾಜ್ಯದ ಔದ್ಯಮಿಕ ಇತಿಹಾಸದಲ್ಲಿ ಹೊಸಯುಗ ಆರಂಭವಾಯಿತು. ಔದ್ಯಮೀಕರಣ ಇಲ್ಲವೆ ವಿನಾಶ ಎಂಬ ಅಭಿವೃದ್ಧಿ ಮಂತ್ರವನ್ನು ದೇಶಕ್ಕೆ ಮನವರಿಕೆ ಮಾಡಿಕೊಟ್ಟ ಎಂ.ವಿಶ್ವೇಶ್ವರಯ್ಯನವರು ಔದ್ಯಮೀಕರಣದ ಆವಶ್ಯಕತೆಯನ್ನು ಮನಗಂಡವರಲ್ಲಿ ಮೊದಲಿಗರು. ಬಿ.ಎಂ.ಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಸಕ್ಕರೆ ಕಂಪನಿ 1933ರಲ್ಲಿ ಸ್ಥಾಪಿತವಾಯಿತು. 25 ಲಕ್ಷ ರೂಪಾಯಿಗಳ ಅಧಿಕೃತ ಬಂಡವಾಳ ಮತ್ತು 21.79 ಲಕ್ಷ ರೂಪಾಯಿಗಳು ಸಂದಾಯವಾದ ಬಂಡವಾಳವನ್ನು ಹೊಂದಿದ್ದ ಈ ಕಂಪನಿ ಆಶ್ರಯದಲ್ಲಿ 1934ರಲ್ಲಿ ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಸ್ಥಾಪನೆಗೊಂಡಿತು. ಇದೇ ಮೈಸೂರು ರಾಜ್ಯದ ಮೊಟ್ಟ ಮೊದಲನೆಯ ಸಕ್ಕರೆ ಕಾರ್ಖಾನೆ.

ಭಾರತದ ಸಕ್ಕರೆ ಉತ್ಪಾದಿಸುತ್ತಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ 6ನೆಯದು. ಇಲ್ಲಿನ ಕಬ್ಬಿನ ಬೆಳೆಯ ವಿಸ್ತೀರ್ಣ 1976–77ರಲ್ಲಿ 1,23,000 ಹೆ.ಗಳಿದ್ದು 1998–99ರಲ್ಲಿ 3,38,761 ಹೆ.ಗಳಿಗೆ ವಿಸ್ತರಿಸಿತ್ತು.

ರಾಜ್ಯದ ಕಬ್ಬಿನ ಬೆಳೆಯ ವಿಸ್ತೀರ್ಣದಲ್ಲಿ ಸೇಕಡ 73 ಭಾಗ ಬೆಳಗಾಂವಿ, ಮಂಡ್ಯ, ಬಳ್ಳಾರಿ, ಶಿವಮೊಗ್ಗ, ಕೋಲಾರ ಮತ್ತು ರಾಯಚೂರು ಜಿಲ್ಲೆಗಳಿಗೆ ಸೇರಿದ್ದು, ಮಿಕ್ಕ ಸೇಕಡ 27 ಭಾಗ ಉಳಿದ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ. ಕಬ್ಬಿನ ಉತ್ಪತ್ತಿ ಈ ಕೆಳಕಂಡಂತಿದೆ.

ರಾಜ್ಯದಲ್ಲಿ 1976–77ರಲ್ಲಿ 8,802 ಮೆ.ಟನ್ನುಗಳಿದ್ದು 1998–1999ರ ಸಾಲಿನಲ್ಲಿ ಕಬ್ಬಿನ ಉತ್ಪತ್ತಿ 3,47,70,919 ಟನ್ನುಗಳಿಗೇರಿತ್ತು.

ಕರ್ನಾಟಕದಲ್ಲಿ ಬೆಳಗಾಂವಿ, ಮಂಡ್ಯ, ಬಳ್ಳಾರಿ, ಶಿವಮೊಗ್ಗ, ಕೋಲಾರ, ರಾಯಚೂರು, ಬೀದರ್, ಹಾಸನ, ತುಮಕೂರು, ಮೈಸೂರು, ಚಿತ್ರದುರ್ಗ, ಧಾರವಾಡ ಮತ್ತು ಬಿಜಾಪುರ–ಈ ಹದಿಮೂರು ಜಿಲ್ಲೆಗಳಲ್ಲಿ ಕಬ್ಬಿನ ಬೇಸಾಯ ಕೇಂದ್ರೀಕೃತವಾಗಿದೆ. ರಾಜ್ಯದ ಕಬ್ಬಿನ ಬೆಳೆಯ ವಿಸ್ತೀರ್ಣ ಮತ್ತು ಉತ್ಪತ್ತಿಗಳ ಜಿಲ್ಲಾವಾರು ವ್ಯತ್ಯಾಸಗಳನ್ನು ಗಮನಿಸಿದಾಗ 1,24,020 ಹೆ.ಗಳಲ್ಲಿ ವರ್ಷಕ್ಕೆ 1,23,70,995 ಮೆಟ್ರಿಕ್ ಟನ್ನುಗಳಷ್ಟು ಕಬ್ಬನ್ನು ಬೆಳೆಯುವ ಬೆಳಗಾಂವಿ ಜಿಲ್ಲೆಗೆ ಪ್ರಥಮ ಸ್ಥಾನ ಸಲ್ಲುತ್ತದೆ. ಬಾಗಲಕೋಟೆ ದ್ವಿತೀಯ ಸ್ಥಾನ ಪಡೆದರೆ ಮಂಡ್ಯ ಜಿಲ್ಲೆ ಮೂರನೆಯ ಸ್ಥಾನ ಪಡೆಯುತ್ತದೆ.

**ರಾಜ್ಯದ ಜಿಲ್ಲಾವಾರು ಅಂಕಿಅಂಶ (1998–99) ಇಂತಿದೆ.**

| ಜಿಲ್ಲೆ | ಕಬ್ಬು ಬೆಳೆ (ಹೆಕ್ಟೇರುಗಳಲ್ಲಿ) | ಬೆಳೆಉತ್ಪನ್ನ (ಟನ್ನುಗಳಲ್ಲಿ) | ನುರಿಸಲ್ಪಟ್ಟಕಬ್ಬು ಮೆ.ಟನ್ನುಗಳಲ್ಲಿ (2000) | ವಿಸ್ತೀರ್ಣ2000ದಲ್ಲಿ ಉತ್ಪಾದಿಸಿದಸಕ್ಕರೆ ಮೆ.ಟನ್ನುಗಳಲ್ಲಿ |
|---|---|---|---|---|
| 1. ಬೆಂಗಳೂರು | 67 | 6,874 | – | – |
| 2. ಬೆಂಗಳೂರು ಗ್ರಾಮಾಂತರ | 1,018 | 1,04,447 | – | – |
| 3. ಚಿತ್ರದುರ್ಗ | 772 | 54,272 | 179 | 17 |
| 4. ದಾವಣಗೆರೆ | 12,519 | 8,80,086 | 1,110 | 113 |
| 5. ಕೋಲಾರ | 3,803 | 2,67,351 | 132 | 13 |
| 6. ಶಿವಮೊಗ್ಗ | 11,233 | 12,48,548 | 449 | 46 |
| 7. ತುಮಕೂರು | 1,017 | 1,33,329 | – | – |
| 8. ಬೆಳಗಾಂವಿ | 1,24,020 | 1,23,70,995 | 4,313 | 560 |
| 9. ಬಿಜಾಪುರ | 13,456 | 15,72,334 | 565 | 68 |
| 10. ಬಾಗಲಕೋಟೆ | 49,449 | 57,78,116 | 1,432 | 174 |
| 11. ಧಾರವಾಡ | 3,628 | 3,10,194 | – | – |
| 12. ಗದಗ | 77 | 7,900 | – | – |
| 13. ಹಾವೇರಿ | 6,078 | 5,19,669 | 276 | 29 |
| 14. ಉತ್ತರಕನ್ನಡ | 1,775 | 1,97,291 | – | – |
| 15. ಬಳ್ಳಾರಿ | 7,834 | 6,54,922 | 290 | 29 |
| 16. ಬೀದರ್ | 24,518 | 17,70,200 | 638 | 62 |
| 17. ಗುಲ್ಬರ್ಗ | 8,658 | 8,22,510 | 123 | 9 |
| 18. ರಾಯಚೂರು | 134 | 13,748 | – | – |
| 19. ಕೊಪ್ಪಳ | 1,956 | 2,00,686 | 106 | 11 |
| 20. ಚಿಕ್ಕಮಗಳೂರು | 1,560 | 1,24,488 | – | – |
| 21. ದಕ್ಷಿಣಕನ್ನಡ | 565 | 45,087 | – | – |
| 22. ಉಡುಪಿ | 1,729 | 1,37,974 | 77 | 7 |
| 23. ಹಾಸನ | 5,327 | 4,70,640 | 187 | 18 |
| 24. ಕೊಡಗು | 7 | 718 | – | – |
| 25. ಮಂಡ್ಯ | 30,630 | 40,15,593 | 1,765 | 168 |
| 26. ಮೈಸೂರು | 9,441 | 7,53,392 | 730 | 71 |
| 27. ಚಾಮರಾಜನಗರ | 17,490 | 23,09,555 | 270 | 24 |

ಪ್ರಥಮ ಪಂಚವಾರ್ಷಿಕ ಯೋಜನೆಯ ಆರಂಭದಿಂದ ಇಲ್ಲಿಯವರೆಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳ ಸಂಖ್ಯೆ, ಅರೆದ ಕಬ್ಬಿನ ಪ್ರಮಾಣ ಮತ್ತು ಉತ್ಪಾದನೆಯಲ್ಲಿ ಕಂಡು ಬಂದಿರುವ ಹೆಚ್ಚಳವನ್ನು ಗಮನಿಸಿದರೆ ಸಕ್ಕರೆ ಉದ್ಯಮ ಸಾಧಿಸಿರುವ ಪ್ರಗತಿ ಸ್ಪಷ್ಟವಾಗುತ್ತದೆ.

ರಾಜ್ಯದಲ್ಲಿ ಇಂದು 35 (2000) ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಇದರಲ್ಲಿ ಸರ್ಕಾರಿ, ಖಾಸಗಿ ಮತ್ತು ಸಹಕಾರಿ ಕ್ಷೇತ್ರದ ಕಾರ್ಖಾನೆಗಳು ಸೇರಿವೆ.

| ಕಾರ್ಖಾನೆಗಳ ಹೆಸರು | ಇರುವ ಸ್ಥಳ ಮತ್ತು ಜಿಲ್ಲೆ |
|---|---|
| **ಸರ್ಕಾರದ ಸ್ವಾಧೀನದಲ್ಲಿರುವ ಕಾರ್ಖಾನೆ** | |
| 1. ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ | |
| **ಸಹಕಾರಿ ಕ್ಷೇತ್ರದಲ್ಲಿರುವ ಕಾರ್ಖಾನೆಗಳು** | |
| 2. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ | ಪಾಂಡವಪುರ, ಮಂಡ್ಯ |
| 3. ಶ್ರೀ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ | ಕೊಳ್ಳೇಗಾಲ, ಚಾಮರಾಜನಗರ |
| 4. ವಾಣಿವಿಲಾಸ ಸಹಕಾರ ಸಕ್ಕರೆ ಕಾರ್ಖಾನೆ | ಹಿರಿಯೂರು, ಚಿತ್ರದುರ್ಗ |
| 5. ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ | ಗೌರಿಬಿದನೂರು, ಕೋಲಾರ |
| 6. ಹಿರಣ್ಯಕೇಶಿ ಸಹಕಾರ ಸಕ್ಕರೆ ಕಾರ್ಖಾನೆ | ಸಂಕೇಶ್ವರ, ಬೆಳಗಾಂವಿ |
| 7. ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ | ಮಗುಟಖಾನ–ಹುಬ್ಬಳ್ಳಿ,ಬೆಳಗಾಂವಿ |
| 8. ದೂದಗಂಗಾ ಸಹಕಾರ ಸಕ್ಕರೆ ಕಾರ್ಖಾನೆ | ಚಿಕ್ಕೋಡಿ, ಬೆಳಗಾಂವಿ |
| 9. ಬಳ್ಳಾರಿ ಕೇಂದ್ರ ಸಹಕಾರ ಸಕ್ಕರೆ ಕಾರ್ಖಾನೆ | ಕಂಪಿಲಿ, ಬಳ್ಳಾರಿ |
| 10. ಬಿದರೆ ಸಹಕಾರ ಸಕ್ಕರೆ ಕಾರ್ಖಾನೆ | ಹಳ್ಳಿಖೇಡ, ಬೀದರ್ |
| **ಖಾಸಗಿ ಕ್ಷೇತ್ರದಲ್ಲಿರುವ ಕಾರ್ಖಾನೆಗಳು** | |
| 1. ಶ್ರೀ ಚಾಮುಂಡೇಶ್ವರಿ ಷುಗರ್ ಲಿಮಿಟೆಡ್ | ಕಾಳಮುದ್ದನದೊಡ್ಡಿ, ಮಂಡ್ಯ |
| 2. ತುಂಗಭದ್ರಾ ಷುಗರ್ ವರ್ಕ್ಸ್ ಲಿಮಿಟೆಡ್ | ಶಿವಮೊಗ್ಗ |
| 3. ದಾವಣಗೆರೆ ಷುಗರ್ ಲಿಮಿಟೆಡ್ | ದಾವಣಗೆರೆ |

| | | |
|---|---|---|
| 4. | ಉಗಾರ್ ಷುಗರ್ ವರ್ಕ್ಸ್ ಲಿಮಿಟೆಡ್ | ಉಗಾರ್‌ಖುರ್ದ್, ಬೆಳಗಾಂವಿ |
| 5. | ಇಂಡಿಯನ್ ಷುಗರ್ ಅಂಡ್ ರಿಫೈನರೀಸ್ | ಹೊಸಪೇಟೆ, ಬಳ್ಳಾರಿ |
| 6. | ಕೊಠಾರಿ ಷುಗರ್ಸ್ ಲಿಮಿಟೆಡ್ | ಸಿರಗುಪ್ಪ, ಬಳ್ಳಾರಿ |
| 7. | ಸೋಮಾಯಿಯ ಷುಗರ್ ವರ್ಕ್ಸ್ | ಮುಧೋಳ, ಬಿಜಾಪುರ |
| 8. | ಸಾಲಾರಜಂಗ್ ಷುಗರ್ ವರ್ಕ್ಸ್ | ಮುನಿರಾಬಾದ, ರಾಯಚೂರು |
| 9. | ಗಂಗಾವತಿ ಷುಗರ್ಸ್ ಲಿಮಿಟೆಡ್ | ಶ್ರೀರಾಂನಗರ, ರಾಯಚೂರು |

ಸಕ್ಕರೆ ಉದ್ಯಮದಲ್ಲಿ, ಈವರೆಗೆ ಪ್ರಸ್ತಾಪಿಸಿದ ಬಿಳಿ ಸಕ್ಕರೆ ತಯಾರಿಕೆಯು ಒಂದು ಭಾಗವಾದರೆ, ಖಂಡಸಾರಿ ಸಕ್ಕರೆ ತಯಾರಿಕೆ ಇನ್ನೊಂದು ಭಾಗ. ರಾಜ್ಯದಲ್ಲಿ ಬೆಳೆಯುವ ಕಬ್ಬಿನ ಪ್ರಮಾಣದಲ್ಲಿ ಸಕ್ಕರೆ ಕಾರ್ಖಾನೆಗಳು ಉಪಯೋಗಿಸಿಕೊಳ್ಳುವ ಪ್ರಮಾಣ ಬಹಳವೆಂದರೆ



ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ

ಸೇಕಡ 60ರಷ್ಟು. ಮಿಕ್ಕ ಸೇಕಡ 40 ರಷ್ಟು ಘರ್ ಮತ್ತು ಖಂಡಸಾರಿ ಸಕ್ಕರೆ ತಯಾರಿಕೆಗೆ ಉಪಯೋಗಿಸಲಾಗುತ್ತದೆ. ಹೀಗೆ ಕರ್ನಾಟಕ ರಾಜ್ಯದಲ್ಲಿ ಖಂಡಸಾರಿ ಸಕ್ಕರೆ ತಯಾರಿಕೆಗೂ ಉತ್ತಮ ಅವಕಾಶಗಳಿವೆ. ಖಂಡಸಾರಿ ಸಕ್ಕರೆ ಕಾರ್ಖಾನೆಗಳನ್ನು ಹೆಚ್ಚಾಗಿ ಬೀದರ್, ಬೆಳಗಾಂವಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕಾಣಬಹುದು. ಬೀದರ್ ಜಿಲ್ಲೆಯ ಭಾರತ ಖಂಡಸಾರಿ ಸಕ್ಕರೆ ಕಾರ್ಖಾನೆ, ಕರ್ನಾಟಕ ಖಂಡಸಾರಿ ಸಕ್ಕರೆ ಕಾರ್ಖಾನೆ, ಚಿಟಗುಪ್ಪ ಖಂಡಸಾರಿ ಸಕ್ಕರೆ ಕಾರ್ಖಾನೆ, ಮೈಸೂರು ಖಂಡಸಾರಿ ಸಕ್ಕರೆ ಕಾರ್ಖಾನೆ, ನ್ಯೂ ಕರ್ನಾಟಕ ಖಂಡಸಾರಿ ಸಕ್ಕರೆ ಕಾರ್ಖಾನೆ, ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ಖಂಡಸಾರಿ ಸಕ್ಕರೆ ಕಾರ್ಖಾನೆ, ಪ್ರಮೋದ್ ಖಂಡಸಾರಿ ವರ್ಕ್ಸ್ ಮತ್ತು ರಾಯಚೂರು ಜಿಲ್ಲೆಯ ತುಂಗಭದ್ರಾ ಖಂಡಸಾರಿ ಸಕ್ಕರೆ ಕಾರ್ಖಾನೆಗಳನ್ನು ಇಲ್ಲಿ ಹೆಸರಿಸಬಹುದಾಗಿದೆ.

ಸಕ್ಕರೆ ತಯಾರಿಕೆಯಲ್ಲಿ ಉತ್ಪತ್ತಿಯಾಗುವ ಉಪಪದಾರ್ಥಗಳು ಅನೇಕ ಪದಾರ್ಥಗಳ ತಯಾರಿಕೆಗೆ ತಳಹದಿಯಾಗಿವೆ. ಹೀಗೆ ಉತ್ಪತ್ತಿಯಾಗುವ ಎರಡು ಮುಖ್ಯವಾದ ಉಪಪದಾರ್ಥಗಳೆಂದರೆ ಕಬ್ಬಿನ ಸಿಪ್ಪೆ ಮತ್ತು ಕಾಕಂಬಿ. ಪ್ರತಿ ಟನ್ ಕಬ್ಬಿನಿಂದ ಸು. 100 ಪೌಂಡುಗಳಷ್ಟು ಸಿಪ್ಪೆ ದೊರಕುತ್ತದೆ. ಹಿಂದೆ ಇದನ್ನು ಇಂಧನವಾಗಿ ಉಪಯೋಗಿಸುತ್ತಿದ್ದರು. ಈಗ ಕಾಗದ ತಯಾರಿಕೆಗೆ ಉತ್ತಮ ಕಚ್ಚಾ ಪದಾರ್ಥವಾಗಿ ಉಪಯೋಗವಾಗುತ್ತಿದೆ. ಕಾಕಂಬಿಯು ಮದ್ಯಸಾರ, ಮದ್ಯಪಾನೀಯಗಳ ತಯಾರಿಕೆಯಲ್ಲಿ ಉಪಯೋಗವಾಗುತ್ತಿದೆ. ಕರ್ನಾಟಕದ ಬಹುದೊಡ್ಡ ಸಕ್ಕರೆ ಕಾರ್ಖಾನೆಯಾಗಿರುವ ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಮತ್ತು ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿರುವ ಖಾಸಗಿ ಸಕ್ಕರೆ ಕಾರ್ಖಾನೆಗಳು ತಲಾ ಒಂದೊಂದು ಪರಿಶೋಧನ ವಿಭಾಗವನ್ನು ಹೊಂದಿವೆ. ಮದ್ಯಸಾರದ ಜೊತೆಯಲ್ಲಿ ಉತ್ಪತ್ತಿಯಾಗುವ ಇಂಗಾಲಾಮ್ಲವನ್ನು ದ್ರವರೂಪಕ್ಕಿಳಿಸಿ ಸೋಡಾ ಮತ್ತು ಇತರ ತಂಪುಪಾನೀಯಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. ಅಲ್ಲದೆ ಹೆಚ್ಚು ಸಸಾರಜನಕವನ್ನು ಹೊಂದಿರುವುದರಿಂದ ಕಾಕಂಬಿಯನ್ನು ಪಶು ಆಹಾರವಾಗಿಯೂ ಉಪಯೋಗಿಸುವುದುಂಟು.

ಮೇಲ್ಕಂಡ ಎರಡು ಪದಾರ್ಥಗಳಲ್ಲದೆ, ಕಬ್ಬಿನ ರಸದಲ್ಲಿ ಅನೇಕ ರಾಸಾಯನಿಕ ಪದಾರ್ಥಗಳು ಉತ್ಪತ್ತಿಯಾಗುತ್ತವೆ. ಅವುಗಳ ಪೈಕಿ ಅಕೋನಿಟಿಕ್ ಆಮ್ಲದ ಉಪಯೋಗ ಬಹಳ. ಆ ಆಮ್ಲದಿಂದ ಗಾಜಿನಂಥ ಒಳ್ಳೆಯ ಪ್ಲಾಸ್ಟಿಕ್ ತಯಾರಿಸಬಹುದು. ಇದು ಸುಲಭವಾಗಿ ಚೂರಾಗುವುದಿಲ್ಲವಾದ್ದರಿಂದ ಗಾಜಿಗೆ ಪರ್ಯಾಯವಾಗಿ ಉಪಯೋಗಿಸಲು ಯೋಗ್ಯವಾಗಿದೆ.

ಸಕ್ಕರೆ ಉದ್ಯಮ ನಿಯಂತ್ರಿತ ಉದ್ಯಮ. ಮಿಗಿಲಾಗಿ ಕೃಷಿ ಆಧಾರಿತ. ಇಂಥ ಉದ್ಯಮಗಳು ಎದುರಿಸಬೇಕಾದ ಸಮಸ್ಯೆಗಳು ಹಲವಾರು. ನಿಯಂತ್ರಿತ ಉದ್ಯಮವಾಗಿದ್ದು ಎದುರಿಸುವ ಸಮಸ್ಯೆಗಳು ಒಂದು ಬಗೆಯವಾದರೆ ಕೃಷಿ ಆಧಾರಿತವಾಗಿದ್ದು ಎದುರಿಸುವ ಸಮಸ್ಯೆಗಳು ಇನ್ನೊಂದು ಬಗೆಯವು. ಕಬ್ಬಿನ ಬೆಲೆ, ಸಕ್ಕರೆಯ ಬೆಲೆ ಮತ್ತು ವಿತರಣೆಯನ್ನು ಸರ್ಕಾರ ನಿರ್ಧರಿಸುತ್ತದೆ. ಇದಕ್ಕೆ ಸಂಬಂಧಪಟ್ಟ ನೀತಿನಿಯಮಗಳು ಆಗಿಂದಾಗ್ಗೆ ಬದಲಾಗುತ್ತಿರುತ್ತವೆ. ಆದುದರಿಂದ ಒಂದು ಸದೃಢ ಸಕ್ಕರೆ ನೀತಿಯ ಅಗತ್ಯ ಬಹಳವಾಗಿದೆ. ಸಕ್ಕರೆ ಉದ್ಯಮದ ಪ್ರಗತಿ-ವಿಗತಿಗಳಲ್ಲಿ ಮಳೆ ಮತ್ತು ಹವಾಮಾನ ಸ್ಥಿತಿಗತಿಗಳದ್ದೇ ಮೇಲುಗೈ. ಹೀಗಾಗಿ ಕಬ್ಬಿನ ಹೆಕ್ಟೇರ್‌ವಾರು ಇಳುವರಿಯಿಂದ ಮೊದಲುಗೊಂಡು ಕಾರ್ಖಾನೆಯ ಉತ್ಪಾದನೆಯವರೆಗೆ ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸುವುದರ ಮೂಲಕ ಕಬ್ಬಿನ ಬೆಳೆಯ ವಿಸ್ತೀರ್ಣ, ಹೆಕ್ಟೇರ್‌ವಾರು ಇಳುವರಿ ಮತ್ತು ಕಬ್ಬಿನ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕಾರ್ಖಾನೆಗಳ ಆಧುನೀಕರಣ, ಕಬ್ಬಿನ ಬೇಸಾಯ ಸುಧಾರಣೆ ಮತ್ತು ಸಂಶೋಧನೆ ಹಾಗೂ ಉದ್ಯಮದ ಸರ್ವಾಂಗೀಣ ಅಭಿವೃದ್ಧಿಗೆ ಅನೇಕ ಸಮಿತಿಗಳನ್ನು ರಚಿಸಲಾಗಿದೆ. ಇತ್ತೀಚೆಗೆ ರಾಜ್ಯ ಸರ್ಕಾರದ ಆದೇಶದಂತೆ ರಚಿತವಾಗಿರುವ ಸಕ್ಕರೆ ಉದ್ಯಮದ ಕಾರ್ಯ ನಿರ್ವಾಹಕ ಮಂಡಳಿಯು ಉದ್ಯಮದ ದೀರ್ಘಾವಧಿ ಅಗತ್ಯಗಳ ಪೂರೈಕೆಗೆ ಕ್ರಮ ಕೈಗೊಳ್ಳುತ್ತಿದೆ **(ನೋಡಿ- ಕಬ್ಬುಕೃಷಿ).** **(ಕೆಜಿ.)**

**ಸಕ್ಕರೆಪಟ್ಟಣ:** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಒಂದು ಗ್ರಾಮ; ಹೋಬಳಿ ಕೇಂದ್ರ. ಕಡೂರಿನ ನೈಋತ್ಯಕ್ಕೆ ಚಿಕ್ಕಮಗಳೂರು ರಸ್ತೆಯಲ್ಲಿ 18 ಕಿಮೀ ದೂರದಲ್ಲಿದೆ. ಜನಸಂಖ್ಯೆ 5,550. ಈ ಗ್ರಾಮದಲ್ಲಿ ಪ್ರೌಢಶಾಲೆ, ಪಶುವೈದ್ಯ ಶಾಲೆ, ಸಹಕಾರ ಸಂಘ ಮೊದಲಾದವುಗಳಿವೆ. ಪ್ರತಿ ಮಂಗಳವಾರ ಸಂತೆ ನಡೆಯುತ್ತದೆ. ಇಲ್ಲೊಂದು ಜೇನುಸಾಕಣೆ ಕೇಂದ್ರವಿದೆ.

ಈ ಊರು ಹಿಂದೆ ರುಕ್ಮಾಂಗದನ ರಾಜಧಾನಿಯಾಗಿತ್ತೆಂದು ಪುರಾಣ ಕಥೆ. ಅವನು ತನ್ನ ಹಿರಿಯ ಮಗಳನ್ನು ಹಿರೇಮಗಳೂರಿಗೂ ಕಿರಿಯ ಮಗಳನ್ನು ಚಿಕ್ಕಮಗಳೂರಿಗೂ ಕೊಟ್ಟನೆಂದೂ ಆ ಕಾರಣದಿಂದಲೆ ಆ ಊರುಗಳಿಗೆ ಆಯಾ ಹೆಸರು ಬಂದಿತೆಂದೂ ಪ್ರತೀತಿ. ಈ ಗ್ರಾಮದಲ್ಲಿ 3.64ಮೀ ಉದ್ದ ಮತ್ತು 3.64ಮೀ ಅಗಲವಿರುವ ಒಂದು ದೊಡ್ಡ

ಹಾಸುಕಲ್ಲಿದ್ದು ಆ ಸ್ಥಳಕ್ಕೆ ಹೊಯ್ಸಳ ವೀರ ಬಲ್ಲಾಳನ ಚೌಕ ಎಂದು ಸ್ಥಳೀಯರು ಕರೆಯುತ್ತಾರೆ. ಇದು ಆ ರಾಜ ನ್ಯಾಯ ತೀರ್ಮಾನ ಮಾಡುತ್ತಿದ್ದ ಸ್ಥಳವಂತೆ. ಮುಂದೆ ವಿಜಯನಗರದ ಅರಸರ ಕಾಲದಲ್ಲಿ ಈ ಊರು ಏಗೂರು ಪಾಳೆಯಗಾರರ ಅಧೀನದಲ್ಲಿತ್ತು. ವಿಜಯನಗರದ ಅರವೀಡು ವಂಶದ ಶ್ರೀರಂಗರಾಯ ಕೆಳದಿಯ ಶಿವಪ್ಪನಾಯಕನ ಆಶ್ರಯ ದಲ್ಲಿದ್ದಾಗ ಈ ಊರಿನಲ್ಲಿ ನೆಲೆಸಿದ್ದ. 1690ರಲ್ಲಿ ಇದು ಮೈಸೂರು ಒಡೆಯರ ವಶವಾಗಿ, ಅನಂತರ 1694ರ ಒಪ್ಪಂದದಿಂದ ಅವರ ರಾಜ್ಯಕ್ಕೇ ಸೇರಿಹೋಯಿತು.

ಇಲ್ಲಿಯ ರಂಗನಾಥಸ್ವಾಮಿ ದೇವಾಲಯ ಪ್ರಸಿದ್ಧವಾದುದು. ಪ್ರತಿ ವೈಶಾಖದಲ್ಲಿ ಇಲ್ಲಿ ರಂಗನಾಥನ ರಥೋತ್ಸವ ನಡೆಯುತ್ತದೆ. ಇಲ್ಲಿರುವ ಹಳೆಯ ಫಿರಂಗಿ ಒಂದು ಪ್ರೇಕ್ಷಣೀಯ ವಸ್ತು. ಈ ಊರಿನಿಂದ ಸು.6ಕಿಮೀ ದೂರದಲ್ಲಿರುವ ಅಯ್ಯನಕೆರೆ ಒಂದು ಪ್ರೇಕ್ಷಣೀಯ ಸ್ಥಳ. ಅಯ್ಯನಕೆರೆಗೆ ಬಲಿಯಾದ ನೀರಗಂಟಿ ಹೊನ್ನಬಿಲ್ಲನ ಸ್ಮಾರಕ ಆ ಊರಿನಲ್ಲಿದೆ. ಹಾಗೆಯೇ ಇಲ್ಲಿಗೆ ಸಮೀಪದಲ್ಲಿರುವ ಕಲ್ಲುಮರಡಿ ಮಠ ಒಂದು ಪುಣ್ಯಕ್ಷೇತ್ರವೆಂದು ಹೆಸರಾಗಿದೆ. (ಡಿ.ಎಸ್.ಜೆ.)

**ಸಗರದ ಬೊಮ್ಮಣ್ಣ:** ಸು. 1160. ವಚನಕಾರ. ಗುಲ್ಬರ್ಗ ಜಿಲ್ಲೆ ಶಾಹಪುರ ತಾಲ್ಲೂಕಿನ ಸಗರ ಇವನ ಜನ್ಮಸ್ಥಳ. ಇವನ ಮಡದಿ ಶಿವದೇವಿ. ಶಿವಾಚಾರ ನಿರತನಾಗಿದ್ದ ಈತ ಪಂಚಾಕ್ಷರೀ ಮಂತ್ರವೇ ಸರ್ವಾಧಾರವೆಂದು ನಂಬಿದ್ದವ. ಒಮ್ಮೆ ತಲೆನೋವು ಬರಲು, ಚಿಮ್ಮಟಿಗೆಯಲ್ಲಿ ಕೆಂಡವಿಡಿದು ಕಾಸಿಕೊಳ್ಳುತ್ತಿರಲು, ನಿನ್ನ ವ್ರತವೇನಾಯ್ತು ಬಿರುದೇನಾಯ್ತು ಎಂದು ಇವನ ಸತಿ ಹಂಗಿಸಲು ನಾಚಿಕೆಯಾಗಿ ತನ್ನ ಮಂತ್ರಜಪದಲ್ಲಿ ಎಲ್ಲಿಯೋ ತಪ್ಪಿರಬೇಕೆಂದು ಧಾವಿಸಿ, ಹರಣನುಳಿವೆನೆಂದಾಗ ಇವನಿಗೆ ಹರಕೃಪೆಯಾಯಿತಂತೆ. ಸಗರದಲ್ಲಿದ್ದ ಜೈನರು ಶಿವನನ್ನು ಧಿಕ್ಕರಿಸುತ್ತಿರಲು, ಉಕ್ಕಿನ ಗಟ್ಟಿಯನ್ನು ಕೆಂಪಗೆ ಕಾಸಿ, ಕಾದೆಣ್ಣೆಯಲ್ಲಿ ಅದ್ದಿ ಕೈಯಲ್ಲಿ ಹಿಡಿದು ತನ್ನ ಹಾಗೆ ಮಾಡುವಂತೆ ಅವರನ್ನು ಸ್ಪರ್ಧೆಗೆ ಕರೆಯಲು ಅವರು ಹೆದರಿ ಹಿಂಜರಿದರಂತೆ–ಇದು ಈತ ಮೆರೆದನೆನ್ನಲಾದ ಪವಾಡ.

ಈತನ 85 ವಚನಗಳು ದೊರೆಯುತ್ತವೆ. ಸಗರದ ಬೊಮ್ಮನೊಡೆಯ ತನುಮನಸಂಗಮೇಶ್ವರ ಎಂಬುದು ಇವನ ವಚನಗಳ ಅಂಕಿತ. ಈ ವಚನಗಳಲ್ಲಿ ಸಾಕಷ್ಟು ಬೆಡಗಿನ ವಚನಗಳೂ ಇವೆ. ಪರಮಾತ್ಮನ ಅನಾದಿ ಅನಂತ ಸ್ಥಿತಿ, ಅವನ ಶಕ್ತಿ, ಅವನನರಿಯಲು ಆತ್ಮದ ಅರಿವಿನ ಆವಶ್ಯಕತೆ, ಆಸೆ ಅತೃಪ್ತಿಗಳೇ ಅಸಿ, ಅಂದ ಗುಣದಳಿವೆ ಲಿಂಗ, ಕರಣಂಗಳ ಹತಿಯೆ ಅರಿವು, ಫಲಾಪೇಕ್ಷೆಯ ಪೂಜೆ ವ್ಯರ್ಥ, ತನುವಿದ್ದರೆ ಉಸಿರು, ಮನವಿದ್ದರೆ ಅರಿವು, ದ್ವಂದ್ವವಳಿದು ದ್ವಂದ್ವದ ಕಾಣಿಕೆ ಹಿಂಗಲು ನಿಜದರ್ಶನ–ಹೀಗೆ ಲೌಕಿಕ, ಅಲೌಕಿಕ, ಪಾರಲೌಕಿಕ ಅನುಭವಗಳ ವಿವಿಧ ಪ್ರಕಾರಗಳನ್ನು ಇವನ ವಚನಗಳಲ್ಲಿ ಕಾಣಬಹುದು. (ಇ.ಎಸ್.)

**ಸತ್ಯಕ್ಕ:** ಸು. 1160. ಶಿವಶರಣೆ ಹಾಗೂ ವಚನಕಾರ್ತಿ. ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಹಿರೇಜಂಬೂರಿನವಳು. ಈ ಊರಿನಲ್ಲಿ ಈಕೆಯದು ಎನ್ನಲಾದ ಒಂದು ದೇವಾಲಯವಿದೆ. ಶಿವಭಕ್ತರ ಮನೆಯ ಕಸಗುಡಿಸುವುದು ಈಕೆಯ ಕಾಯಕವಾಗಿತ್ತು. (ಬಿ.ಎಸ್.)

ಈಕೆಯದು ಏಕದೇವತಾನಿಷ್ಠೆ. ಇದನ್ನು ಕುರಿತು ವೀರಶೈವ ಕವಿಗಳೆಲ್ಲರೂ ಹೇಳಿದ್ದಾರೆ. ಒಮ್ಮೆ ಶಿವ ಈಕೆಯನ್ನು ಪರೀಕ್ಷಿಸಲು ಭಿಕ್ಷುಕ ವೇಷದಿಂದ ಬಂದ. ಈಕೆ ಭಿಕ್ಷೆ ನೀಡುವಾಗ ಕಾಳು ಕೆಳಗೆ ಬಿತ್ತು. ಆಗ ಭಿಕ್ಷುಕ ಹರಿಯಿಂದ ಹರಿದ ಕಾಳು ನೆಲಕ್ಕೆ ಬಿತ್ತು ಎಂದ. ಹರಿ ಎಂಬ ಶಬ್ದ ಕೇಳಿದೊಡನೆಯೇ ಅನ್ಯದೇವತಾ ಸ್ಮರಣೆಯನ್ನು ಸಹಿಸದೆ ಅಲ್ಲಿದ್ದ ಹುಟ್ಟಿನಿಂದಲೇ ಅವನಿಗೆ ಹೊಡೆದಳಂತೆ. ಆಗ ಶಿವ ಇವಳ ನಿಷ್ಠೆಗೆ ಮೆಚ್ಚಿ ವರಕೊಡಲು ಹೋದಾಗ ಈಕೆ ಅದನ್ನು ನಿರಾಕರಿಸಿ ಅವನಲ್ಲೇ ಐಕ್ಯಳಾದಳಂತೆ. ಈ ವಿವರಗಳನ್ನು ಶಿವತತ್ತ್ವ ಚಿಂತಾಮಣಿ, ಸೋಮನಾಥ ಪುರಾಣ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ, ಚೆನ್ನಬಸವಪುರಾಣ ಮುಂತಾದ ಗ್ರಂಥಗಳಲ್ಲಿ ಕಾಣಬಹುದು. (ಎ.ಎಮ್.)

ಈಕೆಯ 29 ವಚನಗಳು ದೊರಕಿವೆ. ಶಂಭುಜಕ್ಕೇಶ್ವರ ಎಂಬುದು ಇವಳ ವಚನಗಳ ಅಂಕಿತ. ಈಕೆಯ ವಚನಗಳು ಸರಳ ಹಾಗೂ ನೇರ ನುಡಿಗಳಲ್ಲಿ ಮೂಡಿಬಂದಿವೆ. ಅಂತರಂಗದಲ್ಲೊಂದು ಬಹಿರಂಗದ ಲ್ಲೊಂದು ರೀತಿಯಲ್ಲಿ ನಡೆಯುವವರನ್ನು ಈಕೆ ಕಟುವಾಗಿ ಟೀಕಿಸಿದ್ದಾಳೆ. ಬಾಹ್ಯಾಡಂಬರವನ್ನು ಕುರಿತ ಈಕೆಯ ಒಂದು ವಚನ ಹೀಗಿದೆ :

ಅರ್ಚನೆ ಪೂಜನೆ ನೇಮವಲ್ಲ
ಮಂತ್ರತಂತ್ರ ನೇಮವಲ್ಲ
ಧೂಪದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಂಗಳಿಗೆಱಗದಿಪ್ಪುದೆ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ *

**ಸತ್ಯಕಾಮ:** 1920–98. ಪ್ರಸಿದ್ಧ ಕಾದಂಬರಿಕಾರರು. ಸತ್ಯಕಾಮ ಎಂಬುದು ಇವರ ಕಾವ್ಯನಾಮ. ಪೂರ್ಣ ಹೆಸರು ಅನಂತಾಚಾರ್ಯ ಕೃಷ್ಣಾಚಾರ್ಯ ಶಹಾಪೂರ್. ಇವರು ಬಿಜಾಪುರ ಜಿಲ್ಲೆಯ ಜಮಖಂಡಿಯ ಹತ್ತಿರದ ಮೈಗೂರಿನಲ್ಲಿ 1920 ಏಪ್ರಿಲ್ 20ರಂದು ಜನಿಸಿದರು. ಬಾಲ್ಯದಿಂದಲೇ ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರ ಆಸಕ್ತಿ ಮೂಡಿಸಿಕೊಂಡಿದ್ದ ಇವರು



ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ತಂತ್ರವಿದ್ಯೆಯಿಂದ ಆಕರ್ಷಿತರಾದ ಇವರು ಬ್ರಹ್ಮಚಾರಿಯಾಗಿಯೇ ಉಳಿದು ಅದರ ಸಾಧನೆಗಾಗಿ 12 ವರ್ಷಗಳು ನಿರಂತರ ಶ್ರಮಿಸಿದರು. ಇವರನ್ನು ಕೃಷಿ ಪಂಡಿತರೆಂದೂ ಕರೆಯುವುದುಂಟು. ಕಾರಣ ತಾವು ನೆಲೆನಿಂತಿದ್ದ ಗಲಗಲಿಯ ಬಂಡೆನೆಲದಲ್ಲಿ ದಶಕಗಳ ನಿರಂತರ ಸಾಹಸದಿಂದ ಉತ್ತಮ ಬೇಸಾಯ ಮಾಡಿದವರು ಇವರು. ಸಂಯುಕ್ತ ಕರ್ನಾಟಕ, ಕಲ್ಕಿ, ಕಲ್ಯಾಣ ಮೊದಲಾದ ಪತ್ರಿಕೆಗಳಲ್ಲಿ ಕೆಲವು ಕಾಲ ಕೆಲಸಮಾಡಿ ಮೊಹರೆ ಹಣಮಂತರಾಯ, ದೊಡ್ಡಮೇಟಿ ಅಂದಾನಪ್ಪ ಅವರಂತಹವರ ಸಾಹಚರ್ಯದಿಂದ ಸೃಜನಶೀಲ ಬರೆವಣಿಗೆಗೆ ಚೈತನ್ಯ ಪಡೆದರು.

ಇವರು ಶಾಂತ ಎಂಬ ಕಾವ್ಯನಾಮದಲ್ಲಿಯೂ ಕವಿತೆ, ಕತೆ, ಕಾದಂಬರಿ ಮೊದಲಾದವುಗಳನ್ನು ಬರೆದಿದ್ದಾರೆ. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಕಾವ್ಯರಚನೆಯನ್ನು ಆರಂಭಿಸಿದರು. ಸ್ವೋಪಜ್ಞತೆ, ದೇಶಾಭಿಮಾನ, ವೈಚಾರಿಕತೆ, ಪ್ರಯೋಗಶೀಲತೆ, ಸಾಹಸ ಪ್ರವೃತ್ತಿ ಮೊದಲಾದವು ಇವರ ವ್ಯಕ್ತಿತ್ವ ಮತ್ತು ಬರೆಹಗಳ ಹಿನ್ನೆಲೆಯ ಸತ್ವಗಳು. ಸತ್ಯಶೋಧನೆ, ಸಂಸ್ಕೃತಿ ಪ್ರೀತಿ ಇವರ ಬದುಕಿನ ಅತಿಮುಖ್ಯ ಮೌಲ್ಯಗಳು.

ವೇದೋಪನಿಷತ್ತು, ರಾಮಾಯಣ, ಮಹಾಭಾರತ, ಪುರಾಣಗಳು–ಇವುಗಳ ಅನುಸಂಧಾನದಿಂದ ಪಡೆದ ಅನುಭವ, ಚಿಕಿತ್ಸಕ ದೃಷ್ಟಿ

ಧೋರಣೆಗಳು ಹಾಗೂ ಪ್ರಕೃತಿ ಪ್ರೇಮ, ಜೀವಪರ ಕಾಳಜಿಗಳು ಇವರ ಸಾಹಿತ್ಯದ ಮೂಲ ಸೆಲೆಗಳಾಗಿವೆ. ವ್ಯವಸ್ಥೆಯ ತರತಮಗಳು, ಶೋಷಣೆಯ ವಿಕೃತಿ ಮತ್ತು ಮನುಷ್ಯ ಸ್ವಭಾವದ ಕ್ಷುದ್ರತೆಗಳು ಇವರ ಮನಸ್ಸನ್ನು ಕಾಡಿರುವ ಸಂಗತಿಗಳಾಗಿವೆ.

ಯಾಜ್ಞವಲ್ಕ್ಯ–ಗಾರ್ಗಿ, ದುಷ್ಯಂತ–ಶಕುಂತಲೆ, ಪುರೂರವ, ಅಶ್ವಘೋಷ, ವಿಶ್ವಾಮಿತ್ರ, ರಾಮ–ಕೃಷ್ಣ, ಸೂರ್ಯ–ಸಂಜ್ಞಾ ಇತ್ಯಾದಿ ಪುರಾಣೇತಿಹಾಸದ ವ್ಯಕ್ತಿ ಸಂಗತಿಗಳನ್ನಾಧರಿಸಿರುವ ಇವರ ಪೌರಾಣಿಕ ಕಾದಂಬರಿಗಳು ಪುರಾಣ ಪ್ರಪಂಚದ ಮೌಲ್ಯ, ಆದರ್ಶಗಳನ್ನು, ವಿಚಿತ್ರ ವಿಸ್ಮಯ ಜಗತ್ತನ್ನು ಅನಾವರಣಗೊಳಿಸುತ್ತವೆ. ಇವರ ಆರಂಭದ ಕಾದಂಬರಿ ಅನಂತ ಜೀವನ (1949). ರಾಜಕ್ರೀಡೆ, ಆಹುತಿ, ವಿಚಿತ್ರವೀರ್ಯ, ವಿಪ್ರಯೋಗ, ಕಾಮನ ವಿದ್ಯೆ, ವಿಜ್ಞಾನ ಭೈರವ, ಕಪಿಲವಸ್ತು, ಋಷಿ ಪಂಚಮಿ ಮೊದಲಾದವು ಇವರ ಇತರ ಪ್ರಸಿದ್ಧ ಪೌರಾಣಿಕ ಕಾದಂಬರಿಗಳು.

ತಂತ್ರ ಜಗತ್ತಿನ ನಿಗೂಢತೆಗಳನ್ನು ಪ್ರತ್ಯಕ್ಷಾನುಭವದ ನೆಲೆಯಲ್ಲಿ ನಿರೂಪಿಸುವ ಇವರ ವಿಶಿಷ್ಟ ಕಾದಂಬರಿಗಳು ಪಂಚಮಗಳ ನಡುವೆ, ಅರ್ಧದಾರಿ, ತಂತ್ರಯೋನಿ ಮೊದಲಾದವು. ತಂತ್ರವಿದ್ಯೆ ಎಂಬುದು ಕೇವಲ ವಾಮಾಚಾರವಾಗಿರದೆ ಅಲೌಕಿಕ, ಅತೀಂದ್ರಿಯ ಶಕ್ತಿ ಸಂಪಾದನೆಯ ಸಾಧನ ಮಾರ್ಗವೂ ಹೌದು ಎಂಬುದನ್ನು ಈ ಕಾದಂಬರಿಗಳಲ್ಲಿ ಸ್ವಅನುಭವದ ಅಂತರ್ ನಿರೀಕ್ಷಣೆಯಲ್ಲಿ ಚಿತ್ರಿಸಿದ್ದಾರೆ.

ಸಮಾಜ ಶುದ್ಧೀಕರಣ, ಬಡತನ, ನಿರುದ್ಯೋಗ, ಸ್ತ್ರೀ ಶೋಷಣೆ, ಪತನಗೊಳ್ಳುತ್ತಿರುವ ನೈತಿಕ–ಮಾನವೀಯ ಮೌಲ್ಯಗಳ ಬಗೆಗಿನ ಚಿಂತನೆ ಮೊದಲಾದ ಹಲವು ಪ್ರಮುಖ ಸಾಮಾಜಿಕ ಕಾಳಜಿಗಳನ್ನು ಹೊಂದಿರುವ ಇವರ ಪ್ರಮುಖ ಸಾಮಾಜಿಕ ಕಾದಂಬರಿಗಳೆಂದರೆ ಚಂಡಪ್ರಚಂಡ, ಪುರುಷಸೂಕ್ತ, ಕೃಷ್ಣಾರ್ಪಣ ಮೊದಲಾದವು.

ಕಾದಂಬರಿಗಳಷ್ಟೇ ಇವರ ಸಣ್ಣಕತೆಗಳೂ ಪ್ರಸಿದ್ಧವಾಗಿವೆ. ಲಾವಣ್ಯ, ಶೃಂಗಾರತೀರ್ಥ, ಮನ್ವಂತರ ಮತ್ತು ನಾಯಿಮೂಗು–ಇವು ಇವರ ಕೆಲವು ಸಣ್ಣಕತೆಗಳು. ಇವರ ಕತೆಗಳಲ್ಲೂ ಪೌರಾಣಿಕ ಹಾಗೂ ಸಾಮಾಜಿಕ ಹಿನ್ನೆಲೆ ಗಾಢವಾಗಿ ಆವರಿಸಿರುವುದನ್ನು ಕಾಣಬಹುದಾಗಿದೆ.

ವೀಣೆ, ಮಾತೃಮಂದಿರ, ಗಂಗಾಲಹರಿ, ಮಾತೃಲಹರಿ ಮೊದಲಾದವು ಶಾಂತ ಎಂಬ ಕಾವ್ಯನಾಮದಿಂದ ಬರೆದಿರುವ ಇವರ ಕೆಲವು ಕವನ ಸಂಕಲನಗಳು.

ಬಯಲುನಾಡಿನ ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವ ಆಡುನುಡಿ ಪಡೆನುಡಿಗಳ ಬಳಕೆ, ಸರಸ ಸಂಭಾಷಣೆ, ವಸ್ತು–ಪಾತ್ರ–ರಸ–ಭಾವಗಳಿಗೆ ತಕ್ಕಂತೆ ಚಲನಶೀಲತೆಯುಳ್ಳ ಭಾಷೆ– ಇವು ಇವರ ಸಾಹಿತ್ಯದ ವಿಶಿಷ್ಟ ಸತ್ವವಾಗಿದೆ. ಸ್ವಗತ–ಸಂಭಾಷಣೆ, ಸ್ಮರಣೆ–ಕನಸು, ಕಥನ ನಿರೂಪಣೆ, ವಿಡಂಬನೆಯ ವಿವಿಧ ವಿನ್ಯಾಸಗಳಲ್ಲಿ ಪುರಾಣ–ಇತಿಹಾಸ–ವರ್ತಮಾನದ ವಿವಿಧ ನೋಟಗಳನ್ನು ಜೀವಂತಗೊಳಿಸಿದ ಇವರ ವಿಶಿಷ್ಟ ಅನುಭವಜನ್ಯ ಸೃಜನಶೀಲತೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಛಾಪನ್ನು ಒತ್ತಿದೆ. ಇವರು 1998 ಅಕ್ಟೋಬರ್ 20ರಂದು ನಿಧನರಾದರು. **(ಎಸ್‌ಎಚ್.ಎ.ಐ.)**

**ಸತ್ಯನ್ ಪ್ರಕಾಶ್:** 1956– . ಪ್ರಸಿದ್ಧ ಖೋಖೋ ಕ್ರೀಡಾಪಟು; ಕಬಡಿ ಆಟಗಾರ. ಇವರು 1956 ಜೂನ್ 7ರಂದು ಬೆಂಗಳೂರಿನ ಜಾಲಹಳ್ಳಿಯಲ್ಲಿ ಜನಿಸಿದರು. ಇವರು ಪ್ರಾರಂಭ ಹಂತದಲ್ಲಿ ವಾಲಿಬಾಲ್, ಖೋಖೋ ಮತ್ತು ಅಥ್ಲೆಟಿಕ್ಸ್‌ನಲ್ಲಿ ಪಾಲ್ಗೊಂಡು ಎಚ್.ಎಂ.ಟಿ. ಪ್ರೌಢಶಾಲೆಯನ್ನು ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಪ್ರತಿನಿಧಿಸಿದರು. 1976ರಲ್ಲಿ ರಾಷ್ಟ್ರಮಟ್ಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದರು. ದಕ್ಷಿಣ ವಲಯ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿಯೂ ಪ್ರತಿನಿಧಿಸಿದರು.

ಖೋಖೋ ಆಟವನ್ನು ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗೊಳಿಸುವ ಸಂದರ್ಭದಲ್ಲಿ ಇವರು ಈ ಆಟದ ಉನ್ನತಿಗಾಗಿ ಪ್ರಮುಖ ಪಾತ್ರ ವಹಿಸಿದರು. ಬಹಳ ಬೇಗ ರಾಷ್ಟ್ರಮಟ್ಟದಲ್ಲಿ ಖೋಖೋ ಆಟಗಾರರಾಗಿ ಪ್ರಸಿದ್ಧರಾದರು. ಕಲ್ಕತ್ತದಲ್ಲಿ ನಡೆದ ಎಸ್.ಎ.ಎಫ್. ಕ್ರೀಡೆಗಳಲ್ಲಿ ಪ್ರದರ್ಶನ ಪಂದ್ಯದಲ್ಲಿ ಭಾರತದ ಇತರೆ ತಂಡದ ಆಟಗಾರರಾಗಿ ಪ್ರತಿನಿಧಿಸಿದ್ದರು. ಖೋಖೋ ತಾರೆಯಾಗಿ ಇವರು ಎರಡು ಬಾರಿ ಕರ್ನಾಟಕ ತಂಡಕ್ಕೆ, ಒಮ್ಮೆ ರಾಷ್ಟ್ರೀಯ ತಂಡಕ್ಕೆ ನಾಯಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರಿಗೆ ದಕ್ಷಿಣ ಭಾರತದ ಮದಕರಿನಾಯಕ ಪ್ರಶಸ್ತಿಯನ್ನು ನೀಡಲಾಯಿತು (1980). ಇವರು 1984ರಲ್ಲಿ ಏಕಲವ್ಯ ಪ್ರಶಸ್ತಿಯನ್ನೂ ಅದೇ ವರ್ಷ ಅರ್ಜುನ ಪ್ರಶಸ್ತಿಯನ್ನೂ ಪಡೆದರು. ಈಗ ಇವರು ಖೋಖೋ ಹಾಗೂ ಕಬಡ್ಡಿ ತರಬೇತುದಾರರಾಗಿ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. **(ಎಸ್.ಆರ್.ಯು.)**

**ಸತ್ಯನ್, ಟಿ.ಎಸ್.:** 1923– . ಅಂತಾರಾಷ್ಟ್ರೀಯ ಖ್ಯಾತಿಯ ಛಾಯಾ ಗ್ರಾಹಕರು, ಪತ್ರಿಕಾಕರ್ತರು. 1923 ಡಿಸೆಂಬರ್ 18ರಂದು ಮೈಸೂರಿನಲ್ಲಿ ಜನಿಸಿದರು. ಮೈಸೂರಿನ ಬನುಮಯ್ಯ ಪ್ರೌಢಶಾಲೆ ಹಾಗೂ ಮಹಾರಾಜ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ 1944ರಲ್ಲಿ ಬಿ.ಎ. ಪದವಿ ಗಳಿಸಿದರು. ಅನಂತರ ಛಾಯಾ ಚಿತ್ರಕಲೆಯಲ್ಲಿ ಆಸಕ್ತಿ ತಾಳಿದ ಇವರು ಕಳೆದ 57



ವರ್ಷಗಳಿಂದ ಅತ್ಯಂತ ಯಶಸ್ವೀ ಛಾಯಾ ಗ್ರಾಹಕ–ಪತ್ರಿಕಾಕರ್ತರಾಗಿದ್ದಾರೆ. ಪ್ರಪಂಚದಾದ್ಯಂತ ಹಲವಾರು ವರ್ತಮಾನ ಪತ್ರಿಕೆಗಳಿಗೆ, ನಿಯತಕಾಲಿಕಗಳಿಗೆ ಛಾಯಾ ಚಿತ್ರಗಳನ್ನೂ ಲೇಖನಗಳನ್ನೂ ನೀಡಿದ್ದಾರೆ. ಸಮಕಾಲೀನ ಭಾರತದ ಚಿತ್ರವನ್ನು ಸಾಗರಾಂತರ ಜನತೆಗೆ ನೀಡುವಲ್ಲಿ ಶ್ಲಾಘ್ಯ ಕೆಲಸ ಮಾಡಿದ್ದಾರೆ. ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪತ್ರಿಕಾ ಬಳಗ 1948ರಲ್ಲಿ ಆರಂಭವಾದಾಗ ಅದರ ಆರಂಭ ಸಿಬ್ಬಂದಿ ವರ್ಗದವರಲ್ಲಿ ಇವರೂ ಒಬ್ಬರು. ಈಗಲೂ ಈ ಪತ್ರಿಕಾ ಸಂಸ್ಥೆಯ ನವದೆಹಲಿ ವಿಭಾಗದ ಮೂಲಕ ತಮ್ಮ ಸಂಬಂಧವನ್ನು ಉಳಿಸಿಕೊಂಡಿದ್ದಾರೆ. 1948ರಿಂದಲೂ ನ್ಯೂಯಾರ್ಕಿನ ಬ್ಲಾಕ್‌ಸ್ಟಾರ್ ಇಂಟರ್ ನ್ಯಾಷನಲ್ ಫೋಟೊ ಏಜೆನ್ಸಿಯ ಪ್ರತಿನಿಧಿಗಳಾಗಿದ್ದಾರೆ. 1950ರಲ್ಲಿ ಮುಂಬಯಿಯ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ ಪತ್ರಿಕೆಯಲ್ಲಿ ಲೇಖನ ಕರ್ತೃವಾಗಿ ಕೆಲಸ ಮಾಡಿದರು. ನ್ಯೂಯಾರ್ಕಿನಿಂದ ಹೊರಡುತ್ತಿದ್ದ ಪ್ರತಿಷ್ಠಿತ ಲೈಫ್ ಪತ್ರಿಕೆಗಾಗಿ 1955–65ರ ವರೆಗೆ ಹತ್ತು ವರ್ಷಗಳ ಕಾಲ ಕೆಲಸ ಮಾಡಿದರು. ಈ ಪತ್ರಿಕೆಯಲ್ಲಿ ಅತ್ಯಂತ ಹೆಚ್ಚು ಛಾಯಾಚಿತ್ರಗಳನ್ನು ಪ್ರಕಟಿಸಿದ ಭಾರತೀಯರೆಂದರೆ ಇವರೇ. ಲೈಫ್ ಸಂಸ್ಥೆ ಹಾಗೂ ಅಮೆರಿಕದ ಜಿಯೋಗ್ರಾಫಿಕ್ ಮ್ಯಾಗಜಿನ್ ಸಂಸ್ಥೆಗಳು ಪ್ರಕಟಿಸಿದ ಅನೇಕ ಕೃತಿಗಳಲ್ಲಿ ಇವರ ಛಾಯಾಚಿತ್ರಗಳಿವೆ.

ಇವರ ಏಕಕರ್ತೃ–ಛಾಯಾಚಿತ್ರ ಪ್ರದರ್ಶನಗಳು ನವದೆಹಲಿ, ಮುಂಬಯಿ, ಕಾನ್‌ಪುರ, ಬೆಂಗಳೂರು, ಮೈಸೂರು, ಸಿಂಗಪುರ್ ಮತ್ತು

ಕೌಲಾಲಂಪುರ್‌ಗಳಲ್ಲಿ ನಡೆದಿವೆ. ಇವರ ಕೃತಿಗಳನ್ನು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ದೂರದರ್ಶನಗಳಲ್ಲಿ ಪ್ರದರ್ಶಿಸಲಾಗಿದೆ. ತಮ್ಮ ಪ್ರಿಯ ವಿಷಯವಾದ ಛಾಯಾ-ಪತ್ರಿಕೋದ್ಯಮವನ್ನು ಕುರಿತು ದೇಶವಿದೇಶಗಳಲ್ಲಿ ಉಪನ್ಯಾಸ ಮಾಡಿದ್ದಾರೆ; ಅನೇಕ ರೇಡಿಯೊ ಕಾರ್ಯಕ್ರಮಗಳನ್ನು ನೀಡಿದ್ದಾರೆ. ನವದೆಹಲಿಯಲ್ಲಿನ ಪ್ರೆಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್‌ನಲ್ಲಿ ಗೌರವ ಅಧ್ಯಾಪಕರೂ ಕೇಂದ್ರ ಲೋಕಸೇವಾ ಆಯೋಗಕ್ಕೆ ಛಾಯಾಗ್ರಹಣ ಮತ್ತು ಛಾಯಾಪತ್ರಿಕೋದ್ಯಮ ವಿಷಯದ ಸಲಹಾಕಾರರೂ ಆಗಿದ್ದಾರೆ.

ಭಾರತದಲ್ಲಿ ಛಾಯಾ-ಪತ್ರಿಕೋದ್ಯಮದ ಆದ್ಯಪ್ರವರ್ತಕರಲ್ಲಿ ಒಬ್ಬರಾದ ಸತ್ಯನ್ ಅವರ ಕಾರ್ಯಕುಶಲತೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪತ್ರಿಕಾ ವಲಯಗಳಲ್ಲಿ ಮೆಚ್ಚುಗೆ ಗಳಿಸಿದೆ. ವಿಶ್ವಸಂಸ್ಥೆ ಹಾಗೂ ಅದಕ್ಕೆ ಸಂಬಂಧಿಸಿದ ಸಂಸ್ಥೆಗಳೂ ಇವರ ಕೆಲಸಕ್ಕೆ ಪುರಸ್ಕಾರ ನೀಡಿವೆ. ವಿಶ್ವಸಂಸ್ಥೆಯ ಮಕ್ಕಳ ನಿಧಿಗೆ ಇವರು ಛಾಯಾ-ಪತ್ರಿಕೋದ್ಯಮ ಸಲಹೆಗಾರರಾಗಿದ್ದಾರೆ.

ಛಾಯಾಗ್ರಹಣ ಕ್ಷೇತ್ರದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾವಗಹಿಸುವ ಇವರು ಬೆಂಗಳೂರಿನ ಮೈಸೂರು ಫೋಟೊಗ್ರಫಿ ಸೊಸೈಟಿಯ ಸ್ಥಾಪಕ ಸದಸ್ಯರು. 1950ರಲ್ಲಿ ಅದರ ಕಾರ್ಯದರ್ಶಿಯೂ ಆಗಿದ್ದರು. ಜೊತೆಗೆ ನವದೆಹಲಿಯ ಕ್ಯಾಮರ ಸೊಸೈಟಿ ಆಫ್ ಇಂಡಿಯಾ ಹಾಗೂ ನ್ಯೂಸ್ ಕ್ಯಾಮೆರಾಮೆನ್ಸ್ ಅಸೋಸಿಯೇಷನ್‌ನ ಸದಸ್ಯರಾಗಿ ಪ್ರಪಂಚದಾದ್ಯಂತ ವಿಪುಲ ಪ್ರವಾಸ ಮಾಡಿರುವ ಇವರು ಅಮೆರಿಕ, ಬ್ರಿಟನ್, ಫ್ರಾನ್ಸ್, ಜಪಾನ್, ಪಶ್ಚಿಮ ಜರ್ಮನಿ, ಮಲೇಷಿಯ, ಸಿಂಗಪುರ್, ಶ್ರೀಲಂಕಾ, ಆಫ್ಘಾನಿಸ್ಥಾನ, ನೇಪಾಲ ಹಾಗೂ ಭೂತಾನಗಳಿಗೆ ವಿಶೇಷ ಆಹ್ವಾನಿತರಾಗಿ ಹೋಗಿ ಬಂದಿದ್ದಾರೆ.

ಇವರಿಗೆ ಅನೇಕ ಗೌರವಗಳು ಲಭ್ಯವಾಗಿವೆ. ಜಪಾನಿನ ಪ್ರಪಂಚಖ್ಯಾತ ಅಸಾದಿ ಶಿಯಿನ್ ಪತ್ರಿಕಾ ಸಂಸ್ಥೆ 1965ರಲ್ಲಿ ಏಷ್ಯನ್ ಛಾಯಾಚಿತ್ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಛಾಯಾಗ್ರಹಣ ಕ್ಷೇತ್ರದ ಇವರ ವಿಶಿಷ್ಟ ಸಾಧನೆಗಾಗಿ 1977ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರದರ್ಶನಗಳಲ್ಲಿ ಇವರ ಕೃತಿಗಳು ಅನೇಕ ಪ್ರಶಸ್ತಿ ಪದಕಗಳನ್ನು ಗಳಿಸಿವೆ. 1980ರಲ್ಲಿ ಕರ್ನಾಟಕ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿದೆ. 1995ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ ಹಾಗೂ ರೋಟರಿ ಅಂತಾರಾಷ್ಟ್ರೀಯ ಪಾಲ್ ಹ್ಯಾರಿಸ್ ಫೆಲೋಷಿಪ್ ಮುಂತಾದ ಗೌರವಗಳು ಇವರಿಗೆ ಸಂದಿವೆ. ಸದ್ಯ ಇವರು ಮೈಸೂರಿನಲ್ಲಿ ವಾಸವಾಗಿದ್ದಾರೆ. ಇವರು ತಮ್ಮ ನೆನಪುಗಳನ್ನು ಮತ್ತು ಅಪರೂಪದ ಛಾಯಾಚಿತ್ರಗಳನ್ನು ಕಾಲಕ್ಕೆ ಕನ್ನಡಿ (2003) ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. *

**ಸತ್ಯವಾಕ್ಯ:** ತಲಕಾಡು ಗಂಗ ಅರಸರ ಒಂದು ಬಿರುದು. ಇದನ್ನೂ ನೀತಿಮಾರ್ಗ ಎಂಬುದನ್ನೂ ಇಮ್ಮಡಿ ಶಿವಮಾರನ ಅನಂತರದ ಗಂಗ ಅರಸರು ಏಕಾಂತರ ವರಸೆಯಾಗಿ ಉಪಯೋಗಿಸುತ್ತಿದ್ದರೆಂದು ಹೇಳಲಾಗಿದೆ. ಅಂದರೆ, ಒಬ್ಬ ರಾಜ ಸತ್ಯವಾಕ್ಯನಾದರೆ ಮುಂದಿನವನು ನೀತಿಮಾರ್ಗ, ಅವನ ಮುಂದಿನವನು ಪುನಃ ಸತ್ಯವಾಕ್ಯ- ಈ ರೀತಿ. ಇದು ಸಾಮಾನ್ಯವಾಗಿ ಸರಿಯಿದ್ದರೂ ಪೂರ್ಣ ಖಚಿತವಾಗಿಲ್ಲ. ಗಂಗ ರಾಜರುಗಳಲ್ಲಿ ರಾಚಮಲ್ಲI (816-843), ರಾಚಮಲ್ಲII (870-919), ನರಸಿಂಹ (920-933), ಬೂತುಗ II (936-61), ಮಾರಸಿಂಹ II (963-74), ರಾಚಮಲ್ಲ IV (974-99) ಇವರೆಲ್ಲರೂ ಸತ್ಯವಾಕ್ಯ ಎಂಬ ಬಿರುದನ್ನು ಧರಿಸಿದ್ದರು. ಇವರಲ್ಲಿ ಕೆಲವರ ಬಗ್ಗೆ ಅವರ ಸ್ವಂತ ಹೆಸರಿನ ಶೀರ್ಷಿಕೆಯಡಿಯಲ್ಲಿ ಲೇಖನಗಳನ್ನು ಕೊಡಲಾಗಿದೆ. *

**ಸತ್ಯಾಶ್ರಯ (ಇಱಿವಬೆಡಂಗ):** ಕಲ್ಯಾಣದ ಚಾಳುಕ್ಯ ವಂಶದ ರಾಜ (ಸು.997-1008). ಸಟ್ಟಿಗ, ಸತ್ತಿಯ ಎಂದೂ ಇವನನ್ನು ಕರೆಯಲಾಗಿದೆ. ಆಹವಮಲ್ಲ, ಅಕಾಲವರ್ಷ, ಸಾಹಸಭೀಮ, ಇಱಿವಬೆಡಂಗ ಮೊದಲಾದ ಬಿರುದುಗಳನ್ನು ಧರಿಸಿದ್ದ ಈತ 973ರಲ್ಲಿ ಜನಿಸಿದ. ಇಮ್ಮಡಿ ತೈಲಪ ಇವನ ತಂದೆ; ರಾಷ್ಟ್ರಕೂಟ ವಂಶದ ಜಾಕಬ್ಬೆ ಇವನ ತಾಯಿ.

ಸತ್ಯಾಶ್ರಯ ತಂದೆಯ ಮರಣಾನಂತರ ಸು. 997ರಲ್ಲಿ ಪಟ್ಟಕ್ಕೆ ಬಂದ. ಇದಕ್ಕೆ ಮುಂಚೆ ತಂದೆಯ ಪರವಾಗಿ ಅನೇಕ ಯುದ್ಧಗಳಲ್ಲಿ ಭಾಗಿಯಾಗಿದ್ದ. ಇವನು ಪಟ್ಟಕ್ಕೆ ಬಂದ ತರುವಾಯ ವೆಂಗಿಯ ಮೇಲೆ ದಂಡೆತ್ತಿ ಹೋದ (ಸು.1005). ಆದರೆ ಆ ವೇಳೆಗೆ ಚೋಳ ದೊರೆ ರಾಜರಾಜ ಚಾಳುಕ್ಯ ರಾಜ್ಯದೊಳಕ್ಕೆ ನುಗ್ಗಿ ಬಿಜಾಪುರ ಜಿಲ್ಲೆಯ ದೋಣೂರಿ ನವರೆಗೂ ಮುನ್ನಡೆದಿದ್ದರಿಂದ ಸತ್ಯಾಶ್ರಯ ವೆಂಗಿಯಿಂದ ಹಿಂದಿರುಗಿ ಚೋಳರನ್ನು ಹಿಮ್ಮೆಟ್ಟಿಸಿದ. ಅನಂತರ ತನ್ನ ಸೇನಾನಿ ಬಾಯಲ್ ನಂಬಿಯನ್ನು ವೆಂಗಿಗೆ ಕಳುಹಿಸಿದ. ಈತ ಧರಣಿ ಕೋಟ ಮುಂತಾದ ದುರ್ಗಗಳನ್ನು ವಶಪಡಿಸಿಕೊಂಡು ಚೆಬ್ರೋಲಿನವರೆಗೂ (ಗುಂಟೂರು ಜಿಲ್ಲೆ) ತಲುಪಿದ. ಚೋಳ ರಾಜರಾಜನ ಹಲವು ಶಾಸನಗಳಲ್ಲಿ ಆತ ಸತ್ಯಾಶ್ರಯನನ್ನು ಸೋಲಿಸಿದನೆಂಬ ಪ್ರಸ್ತಾಪವಿದ್ದರೂ ಅದರ ಸತ್ಯಾಂಶ ಅಸ್ಪಷ್ಟ. ಆದರೆ ಈ ಯುದ್ಧದಲ್ಲಿ ಸತ್ಯಾಶ್ರಯನ ತಮ್ಮ ದಶವರ್ಮ ಸತ್ತಿರಬೇಕೆಂಬುದಕ್ಕೆ ಕೆಲವು ಆಧಾರಗಳಿವೆ. ಸತ್ಯಾಶ್ರಯ ಪಶ್ಚಿಮ ಮತ್ತು ಉತ್ತರದಲ್ಲಿ ಶಿಲಾಹಾರ ಮತ್ತು ಪರಮಾರರನ್ನು ಎದುರಿಸಿದ. ಪರಮಾರ ಮುಂಜನನ್ನು ಸೋಲಿಸಿದ್ದು ಈತನ ಸಾಧನೆ. ರನ್ನನ ಗದಾಯುದ್ಧದಲ್ಲಿ ಸತ್ಯಾಶ್ರಯ ಅಪರಾದಿತ್ಯನನ್ನು ಸೋಲಿಸಿ ಕೊಂಕಣದ ಅಂಕುನಗರವನ್ನು ಸುಟ್ಟನೆಂದು ಹೇಳಿದೆ. ಈ ಅಪರಾದಿತ್ಯ ಉತ್ತರ ಕೊಂಕಣವನ್ನು ಆಳುತ್ತಿದ್ದ ಶಿಲಾಹಾರ ಅಪರಾಜಿತ. ಇಮ್ಮಡಿ ತೈಲಪನ ಕಾಲದಲ್ಲಿ ಸ್ವತಂತ್ರನಾಗಿದ್ದ ಇವನನ್ನು ಸೋಲಿಸಿ ಸಾಮಂತನನ್ನಾಗಿ ಮಾಡಿಕೊಂಡಿದ್ದು ಇವನ ಇನ್ನೊಂದು ಮುಖ್ಯ ಸಾಧನೆ. ಸತ್ಯಾಶ್ರಯ ನೊಳಂಬವಾಡಿಯನ್ನು ಒಮ್ಮೆ ಸೋತು ಪುನಃ ಅದನ್ನು ಗೆದ್ದುಕೊಂಡ. ಆದರೆ ಗಂಗವಾಡಿ ಮಾತ್ರ ಸಂಪೂರ್ಣವಾಗಿ ಚೋಳರ ಪಾಲಾಯಿತು. ಇವನು ಸು. 1008ರಲ್ಲಿ ಮರಣಹೊಂದಿದ. ಇವನ ಅನಂತರ ಇವನ ಸೋದರ ದಶವರ್ಮನ ಮಗ 5ನೆಯ ವಿಕ್ರಮಾದಿತ್ಯ ಸಿಂಹಾಸನವೇರಿದ.

ಅಂಬಿಕಾದೇವಿ ಇವನ ಪತ್ನಿ. ಇವನ ಮಗಳು ಪಂಪಾದೇವಿ ನೊಳಂಬ ವಂಶದ ಇಱಿವ ನೊಳಂಬಾಧಿರಾಜನನ್ನು ಲಗ್ನವಾಗಿದ್ದಳು. ವಿಮಲಚಂದ್ರ ಎಂಬ ಜೈನಮುನಿ ಇವನ ಗುರು. ಬನವಾಸಿ ಮತ್ತು ಸಾಂತಲಿಗೆ ಪ್ರಾಂತಗಳ ರಾಜಪ್ರತಿನಿಧಿಯಾಗಿ ಆಳುತ್ತಿದ್ದ ಕುಂದಮರಸ ಸತ್ಯಾಶ್ರಯನ ಮಗನೆಂದು ಕೆಲವು ಶಾಸನಗಳ ಹೇಳಿಕೆ. ಆದರೆ ಈತ ಕೇವಲ ಒಬ್ಬ ನೆಚ್ಚಿನ ಅಧಿಕಾರಿಯಾಗಿರಬೇಕೆಂದು ಊಹಿಸಲಾಗಿದೆ.

ಪ್ರಸಿದ್ಧ ಕನ್ನಡ ಕವಿ ರನ್ನ **(ನೋಡಿ)** ಸತ್ಯಾಶ್ರಯನ ಆಶ್ರಯದಲ್ಲಿದ್ದ. ಆತ ತನ್ನ ಆಶ್ರಯದಾತನ ಶೌರ್ಯಸಾಹಸಾದಿ ಗುಣಗಳನ್ನು ಮೆಚ್ಚಿಕೊಂಡು, ಅವನನ್ನು ಮಹಾಭಾರತದ ಭೀಮನೊಡನೆ ಹೋಲಿಸಿ ಸಾಹಸಭೀಮ ವಿಜಯ (ಗದಾಯುದ್ಧ) ಎಂಬ ಕಾವ್ಯವನ್ನು ಬರೆದಿದ್ದಾನೆ. **(ಸಿ.ಕೆ.ಎನ್.)**

**ಸತೀಶ್ ರೈ:** 1971- . ಭಾರ ಎತ್ತುವ ಕ್ರೀಡೆಯಲ್ಲಿ ಪ್ರಸಿದ್ಧರು. ಅರ್ಜುನ ಪ್ರಶಸ್ತಿ ಪುರಸ್ಕೃತರು. ಇವರು 1971 ಆಗಸ್ಟ್ 27ರಂದು ಪುತ್ತೂರಿನ ಹಿರಿಯಡ್ಕ ಗ್ರಾಮದಲ್ಲಿ ಜನಿಸಿದರು. ಅಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ವ್ಯಾಸಂಗ ನಡೆಸಿದರು. ಭಾರ ಎತ್ತುವ ಕ್ರೀಡೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡ ಇವರು 1989ರಲ್ಲಿ ಅಂತರ ವಿಶ್ವವಿದ್ಯಾಲಯ ಭಾರ ಎತ್ತುವ ಸ್ಪರ್ಧೆಯಲ್ಲಿ ಭಾಗವಹಿಸಿ ಚಾಂಪಿಯನ್ ಆದರು. ರಾಷ್ಟ್ರೀಯ ದರ್ಜೆಯಲ್ಲಿ

ಜೂನಿಯರ್ ಹಂತದಲ್ಲಿ ಕೇವಲ ಒಂದು ವರ್ಷದಲ್ಲಿ ಸ್ಥಾನ ಗಳಿಸಿದರು. 1990ರಲ್ಲಿ ರಾಜಾಸ್ಥಾನದ ಉದಯಪುರದಲ್ಲಿ ನಡೆದ 67 ಕೆ.ಜಿ. ವಿಭಾಗದ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿ ಪ್ರಶಸ್ತಿ ಗೆದ್ದುಕೊಂಡರು. 1991ರಲ್ಲಿ ಲಖನೌನಲ್ಲಿ ನಡೆದ ಭಾರ ಎತ್ತುವ ಸ್ಪರ್ಧೆಯಲ್ಲಿ ಇದೇ ಚಾಂಪಿಯನ್ ಷಿಪ್ ಉಳಿಸಿಕೊಂಡರು. ಅದೇ ವರ್ಷದಲ್ಲಿ ಅಂಬಾಲದಲ್ಲಿ ನಡೆದ ಸೀನಿಯರ್ ಹಂತ ಪ್ರವೇಶಿಸುವುದರ ಮೂಲಕ ಕಂಚಿನ ಪದಕ ಗೆದ್ದುಕೊಂಡರು. 1993ರಲ್ಲಿ ಎಲ್ಲೂರಿನಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿ ರಾಷ್ಟ್ರೀಯ ಚಾಂಪಿಯನ್ ಆದರು. ಇವರು ವಿಶ್ವವಿದ್ಯಾನಿಲಯ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಸಾಧನೆ ಮಾಡುವ ಸಂದರ್ಭದಲ್ಲಿ ತಮ್ಮ ದೇಹದ ತೂಕವನ್ನು ಒಂದೇ ಸಮನಾಗಿ ಕಾಪಾಡಿಕೊಂಡಿದ್ದರು. ರಾಷ್ಟ್ರೀಯ ಹಂತವನ್ನು ಪ್ರವೇಶಿಸಿದ ಕೇವಲ ಒಂದೇ ವರ್ಷದ ಅವಧಿಯಲ್ಲಿ ಅಂತಾರಾಷ್ಟ್ರೀಯ ಮಟ್ಟವನ್ನು ಪ್ರವೇಶಿಸಿದರು. 1994ರ ಆಗಸ್ಟ್‌ನಲ್ಲಿ ವಿಕ್ಟೋರಿಯ ಹಾಗೂ ಕೆನಡದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಬೆಳ್ಳಿಪದಕ ಗೆಲ್ಲುವುದರ ಮೂಲಕ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿಕೊಂಡರು. ಅದೇ ವರ್ಷ ಹಿರೋಷಿಮದಲ್ಲಿ ನಡೆದ ಏಷ್ಯನ್ ಕ್ರೀಡೆಗಳಲ್ಲಿ ಭಾರತವನ್ನು ಪ್ರತಿನಿಧಿಸಿದರು. ಬೂಸಾನ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದರು.

ಹೀಗೆ ಹಂತಹಂತವಾಗಿ ಈ ಕ್ರೀಡೆಯಲ್ಲಿ ಪ್ರಗತಿ ಸಾಧಿಸಿದ ಇವರು ಅನೇಕ ರಾಷ್ಟ್ರೀಯ ದಾಖಲೆಗಳನ್ನು ಮುರಿದಿದ್ದಾರೆ. 1998–99ರಲ್ಲಿ ಕಡೆಯ ಬಾರಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡು ಉತ್ತಮ ಲಿಫ್ಟರ್ ಬಿರುದು ಪಡೆದರು; ಜೊತೆಗೆ 3 ರಾಷ್ಟ್ರೀಯ ದಾಖಲೆಗಳನ್ನು ಮುರಿದರು. 1998ರಲ್ಲಿ 'ನೌರು'ನಲ್ಲಿ ನಡೆದ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆಲ್ಲುವುದರ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದರು.

ಇವರ ಕ್ರೀಡಾ ಸಾಧನೆಗಾಗಿ ಭಾರತ ಸರ್ಕಾರ 1998ರಲ್ಲಿ ಅರ್ಜುನ ಪ್ರಶಸ್ತಿಕೊಟ್ಟು ಗೌರವಿಸಿತು. ಇವರಿಗೆ ಕರ್ನಾಟಕ ಸರ್ಕಾರ 1992ರಲ್ಲಿ ಏಕಲವ್ಯ ಮತ್ತು ದಸರ ಪ್ರಶಸ್ತಿಗಳನ್ನು ನೀಡಿದೆ. (ಎಸ್.ಆರ್.ಯು.)

**ಸತ್ಯು, ಎಂ.ಎಸ್.:** 1930–. ಹಿಂದಿ, ಕನ್ನಡ, ಉರ್ದು ಚಲನಚಿತ್ರಗಳ ಹಾಗೂ ರಂಗಭೂಮಿಯ ಪ್ರಸಿದ್ಧ ನಿರ್ದೇಶಕರು. ಮೈಸೂರಿನಲ್ಲಿ 1930ರಲ್ಲಿ ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವೀಧರರಾದ ಬಳಿಕ 1952ರಲ್ಲಿ ಮುಂಬಯಿಗೆ ಹೋಗಿ ನೆಲೆಸಿದರು. ಮುಂಬಯಿ ಮತ್ತು ದೆಹಲಿಗಳಲ್ಲಿ ಹಲವಾರು ನಾಟಕಗಳನ್ನು ನಿರ್ದೇಶಿಸಿ ಪ್ರದರ್ಶಿಸಿದರು. ಪ್ರಸಿದ್ಧ ನಾಟಕ ತರಬೇತಿ ಸಂಸ್ಥೆಯಾದ ಐಪಿಟಿಎ (ಇಪ್ಟಾ) ಹಾಗೂ ಅದರ ಹಲವು ಅಂಗಸಂಸ್ಥೆಗಳಲ್ಲಿ ಸಹಯೋಜಕರಾಗಿ ಹಲವಾರು ವರ್ಷ ಸೇವೆ ಸಲ್ಲಿಸಿದರು. ಪ್ರಸಿದ್ಧ ರಂಗನಿರ್ದೇಶಕರಾದ ಹಬೀಬ್ ತನ್ವೀರ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಸಿನಿಮಾ ಪತ್ರಿಕೆಯಲ್ಲಿಯೂ ಹಲವು ವರ್ಷ ಕಾರ್ಯನಿರ್ವಹಿಸಿದರು. ಬಾಲ್‌ರಾಜ್ ಸಾಹ್ನಿ ಅವರ ಜುಹು ಆರ್ಟ್ ಥಿಯೇಟರ್‌ನಲ್ಲಿಯೂ ಸೇವೆಸಲ್ಲಿಸಿದರು. 1969ರಲ್ಲಿ ಇವರು ಕವಿ ಮಿರ್ಜಾಗಾಲಿಬ್‌ನ ಜೀವನ ಚರಿತ್ರೆಯನ್ನೊಳಗೊಂಡ ಆಕ್ರಿಶಾಮ್ ಎಂಬ ನಾಟಕವನ್ನು ನಿರ್ದೇಶಿಸಿದರು. ಈ ನಾಟಕದ ಕರ್ತೃ ಕೈಫಿ ಅಜ್ಮಿ. ಅವರೂ ಸಾಹ್ನಿಯವರೂ ಈ ನಾಟಕದಲ್ಲಿ ಮುಖ್ಯ ಪಾತ್ರಧಾರಿಗಳಾಗಿದ್ದರು. ಸರ್ವೇಶ್ವರ್ ದಯಾಳ್ ಸಕ್ಸೇನರ ಬಕ್ರಿ, ಬ್ರೆಕ್ಟನ ಕಕೇಷಿಯನ್ ಚಾಕ್ ಸರ್ಕಲ್ ನಾಟಕವನ್ನಾಧರಿಸಿದ ಸಫೇದ್ ಕುಂಡಲಿ, ಪ್ರೇಮ್‌ಚಂದರ ಕಥೆಯ ರೂಪಾಂತರ ಮೋಟೇರಾಮ್ ಕಾ ಸತ್ಯಾಗ್ರಹ್ ಮೊದಲಾದ ಅತ್ಯಂತ ಪ್ರಮುಖ ನಾಟಕಗಳನ್ನು ಇವರು ನಿರ್ದೇಶಿಸಿದರು. ಜುಹು ಆರ್ಟ್ ಥಿಯೇಟರ್‌ಗಾಗಿ ಸಾಹ್ನಿಯವರು ರಚಿಸಿದ ಸೂಕ್ಷ್ಮರೂಪ್ ನಾಟಕವನ್ನೂ ಅದ್ಭುತವಾಗಿ ನಿರ್ದೇಶಿಸಿದರು. ಚಿತ್ರ ನಿರ್ದೇಶಕ ಚೇತನ್ ಆನಂದ್ ಅವರ ಹಕೀಕತ್ (1964) ಹಾಗೂ ಸಾಕ್ಷ್ಯಚಿತ್ರಕಾರರಾದ ಹೋಮಿಸೇತ್ನಾ ಮತ್ತು ಜುಲ್ ವೆಲಾನಿ ಮೊದಲಾದವರ ಚಿತ್ರ ನಿರ್ದೇಶನಗಳಲ್ಲಿ ಸಹನಿರ್ದೇಶಕರಾಗಿಯೂ ಕೆಲಸ ಮಾಡಿದರು. ಕೆ.ಎ.ಅಬ್ಬಾಸ್ ಅವರ ಕಥೆಯನ್ನಾಧರಿಸಿದ ಅಲೆಗ್ಸಾಂಡರ್ ಜ಼ುರಿಡಿ ಅವರ ಇಂಡೋ–ಸೋವಿಯತ್ ಸಹನಿರ್ಮಾಣದ ಚಾರ್ ನಯಾ ಗೋಡಾ(1971) ಎಂಬ ಮಕ್ಕಳ ಚಿತ್ರವನ್ನು ಇವರು ನಿರ್ದೇಶಿಸಿದ್ದಾರೆ. 20 ಚಲನ ಚಿತ್ರಗಳನ್ನೂ 12 ಸಾಕ್ಷ್ಯಚಿತ್ರಗಳನ್ನೂ ನಿರ್ದೇಶಿಸಿರುವ ಇವರು ಸದ್ಯದಲ್ಲಿ ದೂರದರ್ಶನದ ಧಾರಾವಾಹಿಗಳ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅವರ ಸಣ್ಣ ಕಥೆಗಳನ್ನು ರೂಪಾಂತರಿಸಿ ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ಪ್ರತಿಧ್ವನಿ ಎಂಬ ಶೀರ್ಷಿಕೆಯಲ್ಲಿ ಧಾರಾವಾಹಿಯನ್ನು ನಿರ್ದೇಶಿಸಿದ್ದಾರೆ.



ಏಕ್ ಥಾ ಚೋಟು ಏಕ್ ಥಾ ಮೋಟು (1967), ಗಾಲಿಬ್ (ಸಾಕ್ಷ್ಯಚಿತ್ರ, 1969) ಇರ್ಷದ್ ಪಂಜತನ್ (ಸಾಕ್ಷ್ಯಚಿತ್ರ, 1969), ಕಾಲಾ ಪರ್ವತ್ (1970), ಚಾರ್ ನಯಾ ಗೋಡಾ (1971), ಗರಮ್ ಹವಾ (1973), ಕನ್ನೇಶ್ವರರಾಮ (1977), ಚಿತೆಗೂ ಚಿಂತೆ (1978), ಬರ(1980), ಯುವರ್ ಎನಮಿ (ಟಿ.ಬಿ. ಕುರಿತ ಸಾಕ್ಷ್ಯಚಿತ್ರ, 1981), ಕಹಾಂ ಕಹಾಂಸೆ ಗುಜರ್‌ಗಯೆ (1986), ಚೋಲಿದಾಮನ್ (1988), ಕಯರ್ (1991) ಮೊದಲಾದವು ಇವರು ನಿರ್ದೇಶಿಸಿರುವ ಕೆಲವು ಪ್ರಮುಖ ಚಿತ್ರಗಳು ಹಾಗೂ ಸಾಕ್ಷ್ಯಚಿತ್ರಗಳು. ಇವರಿಗೆ ದಕ್ಷಿಣ ಏಷ್ಯ ಸಿನಿಮಾ ಪ್ರತಿಷ್ಠಾನದ 2004ರ ಪ್ರಶಸ್ತಿ ಲಭ್ಯವಾಗಿದ್ದು ಇವರು ಈ ಪ್ರಶಸ್ತಿ ಗಳಿಸಿದ ಮೊದಲಿಗರಾಗಿದ್ದಾರೆ. ಶಮಾಜೈದಿ ಇವರ ಪತ್ನಿ. ಇವರೂ ಪತಿಯೊಡನೆ ರಂಗಭೂಮಿಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಶಾಮ್ ಬೆನಗಲ್ ಅವರ ಚಿತ್ರಗಳಿಗೆ ಚಿತ್ರಕಥೆ ಬರೆಯುತ್ತಾರೆ. ಇಪ್ಟಾ ಸಂಘಟನೆಯ (ಇಂಡಿಯನ್ ಪೀಪಲ್ ಥಿಯೇಟರ್ ಅಸೋಸಿಯೇಶನ್) ರಂಗಭೂಮಿ ಚಟುವಟಿಕೆಯಲ್ಲಿ ಇವರ ಸಹಯೋಗವಿತ್ತು. *

**ಸದಲಗಾ:** ಬೆಳಗಾಂವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಒಂದು ಪಟ್ಟಣ ಮತ್ತು ಹೋಬಳಿ ಕೇಂದ್ರ. ಚಿಕ್ಕೋಡಿಯಿಂದ ಉತ್ತರಕ್ಕೆ 28 ಕಿಮೀ ದೂರದಲ್ಲಿ ವೇದಗಂಗಾ ನದಿಯ ಬಲದಂಡೆಯ ಮೇಲಿದೆ. ಜನಸಂಖ್ಯೆ

12,508. ಈ ಪಟ್ಟಣ ಪುರಸಭಾಡಳಿತಕ್ಕೆ ಒಳಪಟ್ಟಿದ್ದು ಇಲ್ಲಿ ಪ್ರೌಢಶಾಲೆ, ಆರೋಗ್ಯ ಕೇಂದ್ರ, ವಿದ್ಯುತ್ತು, ಅಂಚೆ, ತಂತಿ ಮುಂತಾದ ಸೌಲಭ್ಯಗಳಿವೆ. ಹೊಗೆಸೊಪ್ಪಿನ ಸಂಸ್ಕರಣ ಮತ್ತು ರಫ್ತು ಈ ಊರಿನ ಪ್ರಮುಖ ಉದ್ಯಮಗಳಲ್ಲೊಂದು. (ಎಸ್‌ಎ.ಎನ್.)

**ಸದಾಶಿವ, ಕೆ.:** 1933–77. ಪ್ರಸಿದ್ಧ ಸಣ್ಣಕಥೆಗಾರರು. ಪ್ರಗತಿಶೀಲ ಕಥಾಮಾರ್ಗ ಕ್ಷೀಣಿಸುತ್ತಿದ್ದ ಸಂದರ್ಭದಲ್ಲಿ ಅದಕ್ಕೆ ಹೊಸ ದನಿಯನ್ನು ಮತ್ತು ಹೊಸ ಆಯಾಮವನ್ನು ತಂದುಕೊಟ್ಟವರು. ನವ್ಯ ಪರಂಪರೆಯ ಆರಂಭಿಕ ಕಥೆಗಾರರಲ್ಲಿಯೂ ಇವರು ಪ್ರಮುಖ ಸ್ಥಾನವನ್ನು ಪಡೆದು ಕೊಂಡಿದ್ದಾರೆ.

ಇವರು 1933ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಜನಿಸಿದರು. ಅಗೆದರೆ ಸಿಕ್ಕುವುದು ಮಣ್ಣಲ್ಲ (1952) ಇವರ ಮೊದಲ ಕಥೆ. ನಲ್ಲಿಯಲ್ಲಿ ನೀರು ಬಂದಿತು (1958) ಇವರಿಗೆ ಹೆಸರು ತಂದುಕೊಟ್ಟ ಮೊದಲ ಕಥಾಸಂಕಲನ. ಅಪರಿಚಿತರು (1971) ಇವರ ಇನ್ನೊಂದು ಕಥಾಸಂಕಲನ. ಇದಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭ್ಯವಾಗಿದೆ. 'ನಲ್ಲಿಯಲ್ಲಿ ನೀರು ಬಂದಿತು' ಕಥೆ ಇಂಗ್ಲಿಷ್, ಹಿಂದಿ, ಮಲೆಯಾಳಂ ಭಾಷೆಗಳಿಗೆ ಅನುವಾದಗೊಂಡಿದೆ. 'ರಾಮನ ಸವಾರಿ ಸಂತೆಗೆ ಹೋದದ್ದು' ಇವರ ಮತ್ತೊಂದು ಶ್ರೇಷ್ಠ ಕಥೆ. ಇದು ಟೆಲಿಚಿತ್ರವಾಗಿದೆ. ಬಿ.ಸಿ.ರಾಮಚಂದ್ರ ಶರ್ಮರು ಸಂಪಾದಿಸಿದ ಪ್ರತಿಷ್ಠಿತ ಪೆಂಗ್ವಿನ್ ಸಂಸ್ಥೆ ಪ್ರಕಟಿಸಿದ 'ಫ್ರಂ ಕಾವೇರಿ ಟು ಗೋದಾವರಿ' ಸಂಕಲನದಲ್ಲಿ ಈ ಕಥೆಯೂ ಸೇರಿದೆ.



ಇವರು ಬರೆದದ್ದು ಒಟ್ಟು ಇಪ್ಪತ್ತೂರು ಕಥೆಗಳನ್ನು ಮಾತ್ರ. ವ್ಯಕ್ತಿ ಕೇಂದ್ರಿತ ನೆಲೆಯಿಂದ ಸಮಾಜವನ್ನು ಶೋಧಿಸುವುದು ಇವರ ಕಥೆಗಳ ಮುಖ್ಯ ಧ್ಯೇಯ. ಗಂಡು–ಹೆಣ್ಣಿನ ಸಂಬಂಧ ಶೋಧನೆ ಮತ್ತೊಂದು ಹುಡುಕಾಟ. ಇಂಥ ಶೋಧನೆಗೆ ತಾಯಿ–ಮಕ್ಕಳು, ಗಂಡ–ಹೆಂಡತಿ, ಗೆಳೆಯ–ಗೆಳತಿಯರ ಸಂಬಂಧ ಸ್ವರೂಪವನ್ನು ಕಥೆಗಳಲ್ಲಿ ಅಳವಡಿಸಿ ಕೊಂಡಿದ್ದಾರೆ. ಆಶಯ ಹಾಗೂ ಕಲ್ಪನೆಗಳ ಜೊತೆಗೆ ಸಮಾಜದ ಕಟುವಾಸ್ತವಗಳು ಘರ್ಷಣೆಗೊಳಗಾಗುತ್ತವೆ. ಆ ಮೂಲಕ ಕಟುವಾಸ್ತವದ ವ್ಯಂಗ್ಯ ತೆರೆದುಕೊಳ್ಳುತ್ತದೆ. ಸದಾಶಿವರ ಕಥಾನೆಲೆ ಇರುವುದೇ ಇಲ್ಲಿ.

ವಿಮರ್ಶಕರಾದ ಜಿ.ಎಸ್. ಆಮೂರ್ ಅವರು ಪ್ರಿಸಂ ಪುಸ್ತಕಗಳ ಕಥಾಮಾಲಿಕೆಯಲ್ಲಿ ಇವರ ಸಮಗ್ರ ಕಥೆಗಳನ್ನು ಪ್ರಕಟಿಸಿದ್ದಾರೆ (1998). ಮೈಸೂರು ನಗರದ ಜೆ.ಎಸ್.ಎಸ್. ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಮುಖ್ಯಸ್ಥರಾಗಿ ಇವರು ಅನೇಕ ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಇವರು ಸೇವೆಯಲ್ಲಿದ್ದಾಗಲೆ ತಮ್ಮ ನಲವತ್ತನಾಲ್ಕನೆಯ ವಯಸ್ಸಿನಲ್ಲಿ ನಿಧನರಾದರು (1977). (ಎಸ್.ಬಿಎಚ್‌ಎ.)

**ಸದಾಶಿವ ಒಡೆಯರು:** 1924–96. ಶಿಕ್ಷಣ ತಜ್ಞ, ದಕ್ಷ ಆಡಳಿತಗಾರ, ಕರ್ನಾಟಕ ವಿಶ್ವವಿದ್ಯಾಲಯದ ರೂವಾರಿಗಳಲ್ಲೊಬ್ಬರು. ಇವರು ಇಂದಿನ ಹಾವೇರಿ ಜಿಲ್ಲೆಯ ಚೌಡದಾನಪುರದಲ್ಲಿ 1924 ಆಗಸ್ಟ್ 7ರಂದು ಜನಿಸಿದರು. ಹಾವೇರಿ, ಧಾರವಾಡ, ಬೆಳಗಾಂವಿಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕಾಲು ಶತಮಾನ ಕಾಲ ಸೇವೆ ಸಲ್ಲಿಸಿದರು. ಅದೇ ವಿಶ್ವವಿದ್ಯಾಲಯದ ಕುಲಪತಿಯಾಗಿಯೂ ಸೇವೆ ಸಲ್ಲಿಸಿದರು (1978–83). ಕರ್ನಾಟಕ ವಿಶ್ವವಿದ್ಯಾಲಯದ ಬೆಳವಣಿಗೆಗೆ ಇವರದು ಬಹುಮುಖ ಸೇವೆ. ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಕೃತಿ ರಚಿಸಿರುವ ಇವರು ಜೀವನ ಚರಿತ್ರೆ, ಪ್ರಬಂಧ, ನಾಟಕಗಳನ್ನು ಬರೆದಿದ್ದಾರೆ. ಇವರು ಕನ್ನಡದಲ್ಲಿ ಬರೆದ ರಾಣಿ ಚೆನ್ನಮ್ಮ ಎಂಬ ಕೃತಿ ಇತರ ಭಾರತೀಯ ಭಾಷೆಗಳಿಗೆ ಭಾಷಾಂತರಗೊಂಡಿದೆ. ಉತ್ತಂಗಿ ಚೆನ್ನಪ್ಪ, ಡಾ.ಆರ್.ಬಿ. ಪಾಟೀಲ, ಪ್ರೊ. ಅರ್ಮಂಡೊ ಮೇನೇಜಿಸ್ ಇವು ಇವರು ರಚಿಸಿದ ಇತರ ಜೀವನ ಚರಿತ್ರೆಗಳು. ಜೀವನಕಲೆ, ಅಮೃತ ಜೀವನ, ರವೀಂದ್ರ ದರ್ಶನ ಕೃತಿಗಳಲ್ಲಿ ಸುಂದರ ಲಲಿತ ಪ್ರಬಂಧಗಳಿವೆ. ಇವರು ಇಂಗ್ಲಿಷಿನಲ್ಲಿ ರಚಿಸಿದ ದ ರೈಟ್ ಆಫ್ ಅದರ್ ಡೇಸ್, ಟ್ರೇಲಿಂಗ್ ಕ್ಲೌಡ್ಸ್, ಸ್ವೈಕ್ಸ್ ಆಫ್ ವೈಟ್ಸ್, ರಿಪಲ್ಸ್ ಇನ್ ದಿ ಲೇಕ್ ಕೃತಿಗಳು ಗಮನಾರ್ಹವಾಗಿವೆ. ಜೋನ್ ಆಫ್ ಆರ್ಕ್ ಮತ್ತು ಇತರ ನಾಟಕಗಳು ಇವರು ರಚಿಸಿದ ನಾಟಕಗಳ ಸಂಕಲನ ಗ್ರಂಥ. ಇವರು ಬಸವೇಶ್ವರ ಅಷ್ಟ ಶತಮಾನೋತ್ಸವ ಸಂಪುಟವನ್ನು ಸಂಪಾದಿಸಿದ್ದಾರೆ. ಇವರಿಗೆ ಸವಿಸಂಚಯ ಎಂಬ ಅಭಿನಂದನ ಗ್ರಂಥವನ್ನು ಅಭಿಮಾನಿಗಳು ಹಾಗೂ ಗೆಳೆಯರು ಅರ್ಪಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನೀಲಿನಕ್ಷೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ ಹಿರಿಮೆಯೂ ಇವರದಾಗಿದೆ. ಇವರು 1996ರ ಸೆಪ್ಟೆಂಬರ್‌ನಲ್ಲಿ ನಿಧನರಾದರು. (ಜಿ.ಎಂ.ಎಚ್.)

**ಸದಾಶಿವಗಡ:** ಉತ್ತರಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಸಮುದ್ರ ತೀರದ ಒಂದು ಪಟ್ಟಣ ಮತ್ತು ಬಂದರು. ಕಾರವಾರದ ಉತ್ತರಕ್ಕೆ 5 ಕಿಮೀ ದೂರದಲ್ಲಿ ಕಾಳಿನದಿಯ ಬಲಭಾಗದಲ್ಲಿದೆ. ಕಾರವಾರ ಮತ್ತು ಸದಾಶಿವಗಡದ ಮಧ್ಯೆ ಕಾಳಿ ನದಿ ಹರಿದು ಅರಬ್ಬಿ ಸಮುದ್ರವನ್ನು ಸೇರುವುದು. ಕಾರವಾರದಿಂದ ಸದಾಶಿವಗಡಕ್ಕೆ ಹೋಗಲು ಕಾಳಿನದಿ ಮುಖವನ್ನು ದೋಣಿಗಳ ಸಹಾಯದಿಂದ ದಾಟಬಹುದು. ಈಗ ಈ ನದಿಗೆ ಸೇತುವೆ ನಿರ್ಮಿಸಲಾಗಿದೆ. ಇಲ್ಲಿರುವ ಗುಡ್ಡದ ಮೇಲಿನ ಕೋಟೆಯನ್ನು 17ನೆಯ ಶತಮಾನದಲ್ಲಿ ಸೋದೆಯ ಒಂದನೆಯ ಸದಾಶಿವನಾಯಕ ಕಟ್ಟಿಸಿದನೆಂದು ತಿಳಿದುಬರುತ್ತದೆ. ಸುಂಕೇರಿಯಲ್ಲಿದ್ದ ಇಂಗ್ಲಿಷರಿಂದ ರಕ್ಷಣೆಯನ್ನು ಪಡೆಯಲು ಸದಾಶಿವನಾಯಕ ಇಲ್ಲಿ ಮೂರು ಸುತ್ತಿನ ಕೋಟೆಯನ್ನು ಕಟ್ಟಿಸಿದ; ಹಾಗಾಗಿ ಈ ಕೋಟೆ ಮತ್ತು ಸ್ಥಳಕ್ಕೆ ಸದಾಶಿವಗಡ ಎಂಬ ಹೆಸರು ಬಂತೆಂದು ಪ್ರತೀತಿ. ಇಲ್ಲಿ ಅನೇಕ ಹಳೆಯ ಕಾಲದ ತೋಪುಗಳು, ಬಾವಿ, ಪಾಣಿಕಿಲ್ಲಾ ಬಾಳೆಕಿಲ್ಲಾ ಕೊತ್ತಲುಗಳು ಮತ್ತು ಕಿಂಡಿಗಳನ್ನು ಈಗಲೂ ಕಾಣಬಹುದು. ಹಿಂದೆ ಸದಾಶಿವಗಡಕ್ಕೆ ಬಾಳೆಕಿಲ್ಲೆ ಎಂಬ ಹೆಸರಿತ್ತೆಂದೂ 9ನೆಯ ಶತಮಾನದಲ್ಲಿ ಅರಬರ

ಹಡಗುಗಳು ವ್ಯಾಪಾರಕ್ಕಾಗಿ ಇಲ್ಲಿಗೆ ಬರುತ್ತಿದ್ದವೆಂದೂ ತಿಳಿದುಬರುತ್ತದೆ. ಇಂಗ್ಲಿಷರ ಹಳೆಯ ದಾಖಲೆಗಳಲ್ಲಿ ಈ ಊರಿನ ಹೆಸರು ಚಿಟ್ಕುಳಿ ಎಂದಿದೆ. 1514ರ ಸುಮಾರಿಗೆ ಬಂದ ಪೋರ್ಚುಗೀಸಿನ ಬಾರ್ಬೋಸ ಎಂಬ ಪ್ರವಾಸಿ ಇದನ್ನು ಸಿಂತಾಕಾರಾ ಎಂದು ಕರೆದಿದ್ದಾನೆ. 1673ರಿಂದ 1675ರ ಸಮಯದಲ್ಲಿ ಅಂಕೋಲ ಮತ್ತಿತರ ಪ್ರದೇಶವನ್ನು ಬಿಜಾಪುರದ ಕೊನೆಯ ರಾಜನಿಂದ ಶಿವಾಜಿ ಕಸಿದುಕೊಂಡು ಸದಾಶಿವಗಡ ಕೋಟೆಯನ್ನು ಕಟ್ಟಿಸಿದನೆನ್ನುವರು. ವಿದೇಶಿ ಪ್ರವಾಸಿ ಫ್ರಾಯರ್ ಎಂಬಾತ 1675–1676ರ ಸುಮಾರಿಗೆ ಈ ಪ್ರದೇಶಗಳಿಗೆ ಭೇಟಿ ನೀಡಿದ್ದ. ಶಿವಾಜಿ ಈ ಪ್ರದೇಶಕ್ಕೆ ಬಂದ ಅನಂತರ ಭವಾನಿ ದೇವತೆಯ ಉಪಾಸನಾಪದ್ಧತಿ ಬಳಕೆಯಲ್ಲಿ ಬಂದು ದುರ್ಗಾದೇವಿ ದೇವಾಲಯವನ್ನು ಇಲ್ಲಿ ಕಟ್ಟಿಸಲಾಯಿತು. ಕಲ್ಯಾಣದಿಂದ ವಲಸೆ ಬಂದ ಕೊಂಕಣ ಮರಾಠರು, ಕಾರವಾರದಲ್ಲಿ ಮುಸಲ್ಮಾರೊಡನೆ ಜಗಳವಾಡಿ ಅದನ್ನು ಬಿಟ್ಟು ಸದಾಶಿವಗಡದಲ್ಲಿ ಬಂದು ನೆಲೆಸಿದರೆನ್ನುವರು. ಇಲ್ಲಿಯ ಮುಸಲ್ಮಾನರು ಗೋವೆಯಿಂದ ಬಂದವರೆನ್ನಲಾಗಿದೆ. 9ನೆಯ ಶತಮಾನದ ಸುಮಾರಿಗೆ ಶಹಾ ಕರಿಮುದ್ದಿನ್ ಎಂಬುವವನು ಸದಾಶಿವಗಡದಲ್ಲೆ ನೆಲೆಸಿ, ಇಸ್ಲಾಮ್ ಧರ್ಮವನ್ನು ಉಪದೇಶಿಸಿದ. ಅವನ ಸಮಾಧಿ ಇಲ್ಲಿನ ಒಂದು ಗುಡ್ಡದ ಮೇಲೆ ಈಗಲೂ ಇದೆ. ಇಲ್ಲಿ ಹಿಂದುಗಳೂ ಭಾಗವಹಿಸುವ ಉರುಸ್ ಪ್ರತಿ ವರ್ಷ ನಡೆಯುತ್ತದೆ. ಇಲ್ಲಿನ ಮನೊತ್ರಿ ದಿಬ್ಬದಲ್ಲಿ ದಸರ ಉತ್ಸವವನ್ನು ಎಲ್ಲರೂ ಕೂಡಿ ಆಚರಿಸುತ್ತಾರೆ.

ಸದಾಶಿವಗಡದಲ್ಲಿ ಮೀನುಗಾರಿಕೆ ಮುಖ್ಯ ಉದ್ಯಮ. ಇಲ್ಲಿಂದ ಮೀನು, ಗೇರುಬೀಜ, ಕಟ್ಟಿಗೆ ಹೊರಕ್ಕೆ ರಫ್ತಾಗುತ್ತವೆ. ಇಲ್ಲಿಂದ ಗೋವೆಗೆ ವಾಹನ ಸೌಕರ್ಯವಿದೆ. (ಆರ್.ಜಿ.ಆರ್.)

**ಸದಾಶಿವನಾಯಕ:** ಕೆಳದಿ ವಂಶದ ಎರಡನೆಯ ಅರಸು (ಸು.1530–67). ಚೌಡಪ್ಪ ಮತ್ತು ಅವನ ಹೆಂಡತಿ ತಿರುಮಮ್ಮ ಇವರ ಮಗ. ವಿಜಯನಗರದ ರಾಮರಾಯನ ಆದೇಶದಂತೆ ಈತ ಬಿಜಾಪುರದ ಆದಿಲ್ ಷಾನ ವಿರುದ್ಧ ಸೆಣಸಿದ. ಅವನನ್ನು ಯುದ್ಧದಲ್ಲಿ ಸೋಲಿಸಿದ್ದಲ್ಲದೆ ಮುಂದೆ ಕಲ್ಯಾಣದ ಕೋಟೆಯನ್ನೂ ಗೆದ್ದ (ಸು.1549). ಈ ಯಶಸ್ಸಿನಿಂದ ಸಂತೃಪ್ತನಾದ ರಾಮರಾಯ ಸದಾಶಿವನಾಯಕನಿಗೆ ರಾಮನಾಯಕ ಮತ್ತು ಕೋಟೆಕೋಲಾಹಲ ಎನ್ನುವ ಬಿರುದುಗಳನ್ನು ಕೊಟ್ಟು ಇವನನ್ನು ಚಂದ್ರಗುತ್ತಿ, ಬಾರಕೂರು ಮತ್ತು ಮಂಗಳೂರುಗಳಿಗೆ ಸುಬೇದಾರನನ್ನಾಗಿ ನೇಮಿಸಿದ.

ರಾಮರಾಯ ಮತ್ತೊಮ್ಮೆ ಸದಾಶಿವನಾಯಕನನ್ನು ಬಿದರೆಯ ಸುಲ್ತಾನನ ವಿರುದ್ಧ ಯುದ್ಧಕ್ಕೆ ಕಳಿಸಿದ. ಈ ಯುದ್ಧದಲ್ಲಿ ಜಯ ಗಳಿಸಿದ್ದಕ್ಕೆ ಸದಾಶಿವನಿಗೆ ಅರಸನಿಂದ ಶತ್ರುಸಪ್ತಾಂಗಹರಣನೆನ್ನುವ ಬಿರುದು ಮತ್ತು ಅರುಣಧ್ವಜ, ವಾದ್ಯಪಂಚಕವೆನ್ನುವ ಬಹುಮಾನಗಳು ದೊರೆತವು ಎಂದು ಶಿವತತ್ತ್ವ ರತ್ನಾಕರ ಎಂಬ ಗ್ರಂಥ ತಿಳಿಸುತ್ತದೆ. ತರುವಾಯ ರಾಮರಾಯ ಇವನನ್ನು ತುಳುನಾಡು ಮತ್ತು ಕೇರಳಗಳಲ್ಲಿಯ ದಂಗೆಕೋರರನ್ನು ಸದೆಬಡಿಯಲು ಕಳಿಸಿದ. ಸದಾಶಿವನಾಯಕ ಬಂಕಾಪುರದ ಮಾದರಸನನ್ನು ಸೆರೆಹಿಡಿದು ಕೆಳದಿ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ. ಇವನ ಕಾಲದಲ್ಲಿ ರಾಜ್ಯ ವಿಸ್ತಾರವಾಯಿತು. 1563ರ ಒಂದು ಶಾಸನದಿಂದ ಇವನ ರಾಜ್ಯ ಆರಗ, ಬಾರಕೂರು, ಮಂಗಳೂರು ಸೀಮೆಗಳನ್ನು ಒಳಗೊಂಡಿತ್ತೆಂದು ಗೊತ್ತಾಗುತ್ತದೆ. ಈತ ಕೆಳದಿ, ಇಕ್ಕೇರಿ, ಕವಲೆದುರ್ಗ ಮುಂತಾದ ಕಡೆಗಳಲ್ಲಿ ಕೋಟೆಗಳನ್ನು ಕಟ್ಟಿಸಿದ. ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ವರ್ಗಾಯಿಸಿದ.

ಸದಾಶಿವನಾಯಕ ಮಹಾಯೋಧನಷ್ಟೇ ಅಲ್ಲದೆ ಧಾರ್ಮಿಕ ಸಂಸ್ಥೆಗಳ ರಕ್ಷಕನೂ ಪ್ರಜಾಹಿತತತ್ಪರನೂ ಆಗಿದ್ದ. ಶಿವಭಕ್ತನಾಗಿದ್ದ ಈತ ಜಂಗಮರಿಗೆ ಅನೇಕ ದಾನಗಳನ್ನು ಮಾಡಿದ. ಕುಶಾವತಿ ನದೀತೀರದ ಮೇಲೆ ಸದಾಶಿವಪುರ ಅಗ್ರಹಾರವನ್ನು ನಿರ್ಮಿಸಿ, ಅದರಲ್ಲಿ ಶ್ರೋತ್ರಿಯ ಬ್ರಾಹ್ಮಣರಿಗೆ ವೃತ್ತಿಸ್ವಾಸ್ಥ್ಯಗಳನ್ನು ಕೊಟ್ಟ. ಇಕ್ಕೇರಿಯಲ್ಲಿ ಈಶ್ವರ ದೇವಾಲಯವನ್ನು ಕಟ್ಟಿಸಿದ. ಕೆಳದಿಯ ರಾಮೇಶ್ವರ ದೇವಸ್ಥಾನದಲ್ಲಿ ನಂದಿಮಂಟಪವನ್ನು ಕಟ್ಟಿಸಿ ಪಾರ್ವತಿದೇವಿಯ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿಸಿದ.

ಕೆಳದಿಯಲ್ಲಿ ಜಂಗಮಮಠವನ್ನು ಕಟ್ಟಿಸಿದ. ಕುಕ್ಕೆಯ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಒಂದು ಗ್ರಾಮವನ್ನು ದಾನ ಮಾಡಿದ. 1557ರ ಶಾಸನದಿಂದ ಈತ ಜೈನರಿಗೂ ಭೂದಾನ ಮಾಡಿದ ಸಂಗತಿ ತಿಳಿಯುತ್ತದೆ. ಒಟ್ಟಿನಲ್ಲಿ ಈತ ಕೆಳದಿ ರಾಜ್ಯಕ್ಕೆ ಭದ್ರ ಬುನಾದಿ ಹಾಕಿದನಲ್ಲದೆ, ವಿಜಯನಗರ ಸಾಮ್ರಾಜ್ಯದ ಸಂರಕ್ಷಣೆಯ ಕಾರ್ಯದಲ್ಲಿ ವಿಶೇಷ ಸೇವೆ ಸಲ್ಲಿಸಿದ. (ಜಿ.ಎಸ್.ಡಿ.)

**ಸದಾಶಿವರಾಯ:** ವಿಜಯನಗರದ ತುಳುವ ವಂಶದ ರಾಜ (1543–70). ಅಚ್ಯುತರಾಯನ ತಮ್ಮ ರಂಗನ ಮಗ. ಅಚ್ಯುತರಾಯನ ಮರಣಾನಂತರ (1542) ಆತನ ಮಗ ವೆಂಕಟಾದ್ರಿಗೆ ಪಟ್ಟವಾಯಿತು. ಇದನ್ನು ಪ್ರತಿಭಟಿಸಿ ಸಿಂಹಾಸನಕ್ಕಾಗಿ ಉಗ್ರ ಕದನ ನಡೆಯಿತು. ಇದರಲ್ಲಿ ಒಂದು ಪಕ್ಷ ಕೃಷ್ಣದೇವರಾಯನ ಅಳಿಯನಾದ ರಾಮರಾಯನದು ಬಹು ಪ್ರಭಾವಶಾಲಿಯಾಗಿದ್ದ ಆತ ಸದಾಶಿವರಾಯನಿಗೆ ಪಟ್ಟಕಟ್ಟಿದ (1543). ಆಗ ಸದಾಶಿವರಾಯ ಇನ್ನೂ ಯುವಕನೂ ರಾಜಕೀಯದಲ್ಲಿ ಅನುಭವವಿಲ್ಲದವನೂ ಆಗಿದ್ದರಿಂದ, ರಾಜಕೀಯದಲ್ಲಿ ಪಳಗಿದವನೂ ಸಮರ್ಥನೂ ಮಹತ್ತ್ವಾಕಾಂಕ್ಷಿಯೂ ಆಗಿದ್ದ ರಾಮರಾಯ ಈ ಸದವಕಾಶವನ್ನು ತನ್ನ ಸ್ವಾರ್ಥಸಾಧನೆಗೆ ಸಂಪೂರ್ಣವಾಗಿ ಉಪಯೋಗಿಸಿಕೊಂಡ. ಸದಾಶಿವರಾಯ ವಿಜಯನಗರ ಸಾಮ್ರಾಜ್ಯದ ನಾಮಮಾತ್ರ ಅಧಿಪತಿಯಾದ. ಅದರ ಆಡಳಿತ, ಅಧಿಕಾರದ ಸೂತ್ರಗಳೆಲ್ಲ ರಾಮರಾಯನ ವಶಕ್ಕೆ ಹೋದವು. ಆತ ಸುಮಾರು ಏಳು ವರ್ಷ (1543–50) ತಾನು ರಾಜಕುಮಾರನ ಪಾಲಕ, ಪ್ರತಿನಿಧಿಯೆಂದು ರಾಜ್ಯಭಾರ ಮಾಡಿದ. ಅಷ್ಟರಲ್ಲಿ ವಯಸ್ಸಿಗೆ ಬಂದ ಸದಾಶಿವರಾಯ ತನ್ನ ಬಾಧ್ಯತೆಯ ಅಧಿಕಾರವನ್ನು ಕಾರ್ಯಗತಗೊಳಿಸಲು ಪ್ರಯತ್ನಿಸಿದ. ಇದನ್ನು ಸೈರಿಸಲಾರದೆ ರಾಮರಾಯ ಸದಾಶಿವರಾಯನನ್ನು ರಾಜ್ಯಾಧಿಕಾರದಿಂದ ಅಗಲಿಸಿ ಬಂಧನದಲ್ಲಿಟ್ಟು ಸ್ವಯಂ ಸಾಮ್ರಾಟನಂತೆ ವೈಭವದಿಂದ ಸರ್ವಾಧಿಕಾರಿ ಪ್ರಭುತ್ವವನ್ನು ನಿರ್ವಹಿಸಿದ. ಮುಂದೆ ಸುಮಾರು ಹದಿನೈದು ವರ್ಷಗಳ ಕಾಲ ವಿಜಯನಗರ ಸಾಮ್ರಾಜ್ಯದ ಸಮಸ್ತ ರಾಜಕೀಯ ಕಾರ್ಯಕಲಾಪಗಳನ್ನು ಉತ್ತರೋತ್ತರ ಪ್ರಭಾವಶಾಲಿಯಾಗಿ ಊರ್ಜಿತಗೊಳಿಸಿದ ರಾಮರಾಯ ರಕ್ಕಸತಂಗಡಿಯ ಮಹಾಯುದ್ಧದಲ್ಲಿ (1565) ಪರಾಜಯ ಹೊಂದಿ ಹತನಾದ. ಇದರ ಪರಿಣಾಮದಿಂದ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿ ಕುಗ್ಗಿತು. ರಾಮರಾಯ ಸತ್ತರೂ ಸದಾಶಿವರಾಯನ ಕಷ್ಟಕಾಲ ಕೊನೆಗೊಳ್ಳಲಿಲ್ಲ. ರಾಮರಾಯನ ತರುವಾಯ ವಿಜಯನಗರದ ಶಾಸನಾಧಿಕಾರ ಆತನ ತಮ್ಮನೂ ಪ್ರಧಾನಮಂತ್ರಿಯೂ ಆಗಿದ್ದ ತಿರುಮಲನ ವಶಕ್ಕೆ ಹೋಯಿತು. ಸದಾಶಿವರಾಯ ಹಿಂದಿನಂತೆ ರಾಜಬಂದಿಯಾಗಿಯೇ ಉಳಿದ. ಈತ ಜೀವಿಸಿರುವ ತನಕ ವಿಜಯನಗರದ ಸಿಂಹಾಸನವನ್ನು ಪಡೆಯಬೇಕೆಂಬ ತಿರುಮಲನ ಹೆಬ್ಬಯಕೆ ಈಡೇರುವಂತಿರಲಿಲ್ಲವಾದ್ದರಿಂದ ಸದಾಶಿವ ಪ್ರಾಣಕಳೆದುಕೊಳ್ಳಬೇಕಾಯಿತು (1570). ಅನಂತರ ಆರವೀಡು ವಂಶದ ತಿರುಮಲ ಯಾವ ಅಡಚಣೆಯೂ ಇಲ್ಲದೆ ವಿಜಯನಗರದ ಸಿಂಹಾಸನವನ್ನೇರಿದ. (ಪಿ.ಬಿ.ಡಿ.)

**ಸದ್ಬೋಧಚಂದ್ರಿಕೆ:** ಸನಾತನ ಧರ್ಮಪ್ರಚಾರದ ಉದ್ದೇಶದಿಂದ 1908ರಲ್ಲಿ ಪ್ರಾರಂಭವಾದ ಮಾಸಪತ್ರಿಕೆ. ಹಾವೇರಿ ತಾಲ್ಲೂಕಿನ ಅಗಡಿಯ ಬಳಿಯ ಆನಂದವನ ಎಂಬ ಆಶ್ರಮ ಕ್ಷೇತ್ರದ ಸ್ಥಾಪಕ ಶೇಷಾಚಲ ಸಾಧುಗಳು ಇದರ ಮೂಲ ಪ್ರಚೋದಕರು. ವೆಂಕಟೇಶ ತಿರಕೊ ಕುಲಕರ್ಣಿ (ಗಳಗನಾಥ) ಈ ಪತ್ರಿಕೆಯ ಮೊದಲ ಸಂಪಾದಕರು.

ಗಳಗನಾಥರ ಆರಂಭದ ಹತ್ತಕ್ಕೂ ಹೆಚ್ಚು ಕಾದಂಬರಿಗಳು ಈ ಪತ್ರಿಕೆಯ ಮೂಲಕ ಪ್ರಕಟವಾದವು. ಕನ್ನಡ ಜನತೆಯಲ್ಲಿ ವಾಚನಾಭಿರುಚಿಯನ್ನು ಬೆಳೆಸುವುದರ ಜೊತೆಗೆ ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯ ದಿಶೆಯಲ್ಲಿಯೂ ಈ ಪತ್ರಿಕೆ ದುಡಿದಿದೆ. 1916ರಲ್ಲಿ ಗಳಗನಾಥರು ನಿವೃತ್ತರಾದ ಮೇಲೆ ವೈ.ಜಿ.ಕುಲಕರ್ಣಿಯವರೂ ಅನಂತರ ಭಿ.ಪ.ಕಾಳೆ ಅವರೂ ಇದರ ಸಂಪಾದಕರಾಗಿದ್ದರು. ಅನಂತರದ ಸಂಪಾದಕರು ಚಿದಂಬರ ಮೂರ್ತಿ ಚಕ್ರವರ್ತಿ. ಡೆಮಿ ಅಷ್ಟದಳಾಕಾರದ ಸಂಚಿಕೆಯ ಪುಟಗಳು ಸುಮಾರು ನಲವತ್ತು. **(ಬಿ.ಕೆ.)**

**ಸನ್ನತಿ:** ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಒಂದು ಗ್ರಾಮ. ಕರ್ನಾಟಕದಲ್ಲಿಯೇ ಅತ್ಯಂತ ಕುತೂಹಲಕರವಾದ, ವಿಸ್ತಾರವಾದ ಬೌದ್ಧ ನಿವೇಶನವುಳ್ಳ ಸ್ಥಳ. ಮದರಾಸು–ಮುಂಬಯಿ ರೈಲುಹಾದಿಯಲ್ಲಿರುವ ನಲ್ವಾರ್ ರೈಲುನಿಲ್ದಾಣದಿಂದ 18 ಕಿಮೀ ದೂರದಲ್ಲಿ ಭೀಮಾನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 1,595. ಇಲ್ಲಿರುವ ಚಂದ್ರಲಾಂಬಾ ದೇವಾಲಯದಿಂದಾಗಿ ಈಗಲೂ ಈ ಗ್ರಾಮ ಪ್ರಸಿದ್ಧ ಯಾತ್ರಾಸ್ಥಳವಾಗಿದ್ದು ಹೆಚ್ಚಿನ ಯಾತ್ರಿಕರನ್ನಾಕರ್ಷಿಸುತ್ತಿದೆ. ವರ್ಷಕ್ಕೆ ಒಮ್ಮೆ ಇಲ್ಲಿ ಜಾತ್ರೆ ನಡೆಯುತ್ತದೆ.

ಭೀಮಾನದಿ ಈ ಸ್ಥಳದಲ್ಲಿ ಕೊಂಡಿಯಂತೆ ಸುತ್ತು ಹಾಕಿ ಮುಂದೆ ಹರಿಯುವುದಷ್ಟೇ ಅಲ್ಲದೆ ತಕ್ಕಷ್ಟು ಆಳವಾಗಿಯೂ ಇದ್ದು ಜಲದುರ್ಗದಂತೆ ಸ್ವಾಭಾವಿಕ ರಕ್ಷಣೆಯನ್ನು ನೀಡಿರುವುದರಿಂದ ಇಲ್ಲಿ ಇತಿಹಾಸದ ಆರಂಭದ ಕಾಲದಿಂದಲೂ ಜನವಸತಿ ಇದ್ದು ಸಾತವಾಹನರ ಕಾಲದಲ್ಲಿ ತಕ್ಕಷ್ಟು ದೊಡ್ಡದಾದ ಬೌದ್ಧ ಜನವಸತಿ ಇದ್ದು ಸಾತವಾಹನರ ಕಾಲದಲ್ಲಿ ತಕ್ಕಷ್ಟು ದೊಡ್ಡದಾದ ಬೌದ್ಧ ಕ್ಷೇತ್ರ ಬೆಳೆದು ಬಂದಿರುವುದು ವ್ಯಕ್ತವಾಗಿದೆ. ನದಿಯ ಹಿಮ್ಮುರಿ ತಿರುವಿನ ಒಂದು ಮೂಲೆಗೆ ಹೊಂದಿಕೊಂಡಂತೆ ಸಾತವಾಹನರ ಕಾಲದ ದಪ್ಪ ಇಟ್ಟಿಗೆಯಿಂದ ನೇರವಾಗಿ ಕಟ್ಟಿರುವ ಕೋಟೆಯ ಗೋಡೆಯೊಂದಿದ್ದು ಆರಂಭದಲ್ಲಿ ಅಲ್ಲಿ ಊರು ಬೆಳೆದಿರಬೇಕು. ಕಾಲಕ್ರಮದಲ್ಲಿ ಈ ಊರು ಬೆಳೆದು ಅಲ್ಲಿಂದ ಅರ್ಧ ಕಿಮೀಗೂ ಹೆಚ್ಚು ದೂರದಲ್ಲಿ ಮತ್ತೊಂದು ಜನವಸತಿಯಿದ್ದ ವಿಸ್ತಾರವಾದ ನಿವೇಶನವಿದೆ. ಈ ನಿವೇಶನದ ಮೇಲೆಯೇ ಈಗಿನ ಊರು ಬೆಳೆದಿದೆ. ಊರಿನ ಹೊರಭಾಗದಲ್ಲಿ ಬೌದ್ಧಸ್ತೂಪಗಳಿದ್ದ ಕುರುಹುಗಳಿವೆ. ಈ ಸ್ತೂಪಗಳ ನಿವೇಶನದ ಹತ್ತಿರವೇ ಚಂದ್ರಲಾಂಬಾ ದೇವಾಲಯವಿರುವುದು.

5–6 ಚ.ಕಿಮೀ ವಿಸ್ತಾರವಾದ ಈ ನಿವೇಶನಗಳಲ್ಲಿ ಸಾತವಾಹನರ ಕಾಲದ ಇಟ್ಟಿಗೆಗಳು, ಕೆಂಪು–ಕಪ್ಪು ಹೊಳಪಿನ ಮಡಕೆ ಚೂರುಗಳು, ಮೃಣ್ಮೂರ್ತಿಗಳು, ಆಟಿಕೆಗಳು, ಮಣಿಗಳು, ಇತರ ಅವಶೇಷಗಳು ಹೇರಳವಾಗಿ ಚೆಲ್ಲಾಡಿವೆ. ಅಚ್ಚಿನಲ್ಲಿ ತಯಾರಿಸಿದ ಟೊಳ್ಳಾದ ಮೃಣ್ಮೂರ್ತಿಗಳು ಆಕರ್ಷಕವಾಗಿವೆ. ಕಿರು ಪ್ರಮಾಣದ ಈ ಮೂರ್ತಿಗಳಲ್ಲಿ ಯಕ್ಷಯಕ್ಷಿಯರು, ಸ್ತ್ರೀಪುರುಷ ಮೂರ್ತಿಗಳು, ತಮಟೆ ಬಾರಿಸುವವ, ಆನೆ, ಕುದುರೆ, ಸಿಂಹ, ಗೂಳಿ ಮೊದಲಾದ ಪ್ರಾಣಿಗಳು ಇದ್ದು ರಚನೆ, ಮಾಟ, ಅಂಗಸೌಷ್ಠವಗಳಿಂದ ಅಲಂಕರಣ ಆಭರಣಗಳು ಶಿರೋಭೂಷಣಗಳು ಸೂಕ್ಷ್ಮವಾಗಿ ಬಿಡಿಸಲ್ಪಟ್ಟಿವೆ.

ಸ್ತೂಪಗಳಿದ್ದ ನಿವೇಶನದಲ್ಲಿ ಅದರ ಸುತ್ತಮುತ್ತಲೂ ನಾಶವಾಗಿರುವ ಬೌದ್ಧಸ್ತೂಪದ ನೂರಾರು ಅವಶೇಷಗಳು, ಶಿಲ್ಪಗಳು ಹರಡಿವೆ. ಹೊಲಗಳಲ್ಲಿ, ಮನೆಗಳ ಗೋಡೆಗಳಲ್ಲಿ, ದೇವಾಲಯದಲ್ಲಿ, ನದಿಗೆ ಹಾಕಿಸಿರುವ ಸೋಪಾನಪಂಕ್ತಿಗಳಲ್ಲಿ, ಎಲ್ಲೆಂದರಲ್ಲಿ ಬೌದ್ಧಶಿಲ್ಪದ ತುಣುಕುಗಳು, ಅವಕ್ಕೆ ಸೇರಿದ ಶಾಸನಗಳು, ಕಟ್ಟಡದ ಕಲ್ಲುಗಳು ಕಂಡುಬರುತ್ತವೆ. ಇವುಗಳೊಂದಿಗೆ ಸ್ತೂಪವೊಂದಿದ್ದ ಸ್ಥಳದಲ್ಲಿಯೇ ಈಚೆಗೆ ಕಟ್ಟಿರುವ ಒಂದು ಚಿಕ್ಕದಾದ ದುರ್ಗಿಯ ಗುಡಿಗೆ ಉಪಯೋಗಿಸಿರುವುದು ಪೂರ್ತಿಯಾಗಿ ಸ್ತೂಪಕ್ಕೆ ಸೇರಿದ್ದ ಶಿಲ್ಪಗಳು ಮತ್ತು ಇತರ ಕಲ್ಲುಗಳನ್ನೇ. ಇಲ್ಲಿದ್ದ ಸ್ತೂಪ ಸಂಪೂರ್ಣವಾಗಿ ನಾಶವಾಗಿದ್ದು ಅದರ ವೃತ್ತಾಕಾರದ ವಿನ್ಯಾಸದ ತಳಹದಿ ಮಾತ್ರ ಉಳಿದಿದೆ ಮತ್ತು ಗುಂಡಾಗಿ ಮೇಲೆದ್ದಿರಬಹುದಾದ ಸ್ತೂಪದ ಅಂಡಭಾಗದ ಹೊರಮೈಗೆ ಸೇರಿಸಿದ್ದ ಕೆಲವು ಶಿಲ್ಪಗಳು ಮಾತ್ರ ಅವುಗಳು ಮೂಲದಲ್ಲಿದ್ದ ಸ್ಥಳದಲ್ಲಿಯೇ ಉಳಿದಿವೆ. ಅವುಗಳಲ್ಲಿ ಒಂದು ಫಲಕದ ಮೇಲೆ ಸಂತೋಷದಿಂದ ಚಿಮ್ಮಿ ನೆಗೆಯುತ್ತಿರುವ ಕೊಬ್ಬಿದ ಕೋಣ, ಅದನ್ನು ಹಿಂಬಾಲಿಸುತ್ತಿರುವ ರೆಕ್ಕೆಯುಳ್ಳ ಕುದುರೆಗಳಿದ್ದು ಪ್ರಾಣಿಗಳನ್ನು ಅತ್ಯಂತ ಸ್ವಾಭಾವಿಕವಾಗಿ ಶಿಲ್ಪಿಸಿರುವುದು ಕಂಡುಬರುತ್ತದೆ. ಈಗಿನ ಸ್ಥಿತಿಯಲ್ಲಿ ಆ ಸ್ತೂಪದ ರೂಪರೇಖೆಗಳನ್ನು ಗುರುತಿಸುವುದು ಅಸಾಧ್ಯವಾದರೂ ಅದು ಗುಂಡಾಗಿ ಮೇಲೆದ್ದಿದ್ದು ಕಲ್ಲುಗಳಿಂದಲೇ ನಿರ್ಮಿತವಾಗಿ ಹೊರಮುಖಕ್ಕೆ ನಯಗೊಳಿಸಿದ ಶಿಲ್ಪಿಸಿದ ಚಪ್ಪಡಿಗಳನ್ನು ಜೋಡಿಸಲಾಗಿತ್ತೆಂದು ತಿಳಿಯಲವಕಾಶವಿದೆ. ಅಮರಾವತಿ, ನಾಗಾರ್ಜುನ ಕೊಂಡಗಳಲ್ಲಿ ಇದ್ದಂತೆ ಈ ಸ್ತೂಪಕ್ಕೂ ಆಯಕಸ್ತಂಭಗಳನ್ನು ನಿಲ್ಲಿಸಿದ್ದರೆಂಬುದು ಅಲ್ಲಿ ದೊರೆತ

ಧರ್ಮ ಚಕ್ರ ಮತ್ತು ಮುಚಲಿಂದ ನಾಗ, 1–2ನೆಯ ಶತಮಾನ

ಕೆಲವು ಆಯಕಸ್ತಂಭಗಳಿಂದ ಊಹಿಸಬಹುದು. ಆದರೆ ಕಟಾಂಜನಗಳಿದ್ದುವೇ ಎಂಬುದನ್ನು ಹೇಳಲಾಗದು. ಸ್ತೂಪದಲ್ಲಿ ಧಾತುಗರ್ಭವಿದ್ದ ಶಿಲಾಸಂಪುಟವೂ ಒಡೆದು ಬಿದ್ದಿದೆ. ಗುಂಡಾದ ಈ ಶಿಲಾಸಂಪುಟದ ಮೂರು ಕಡೆ ಬಹುಶಃ ಅದನ್ನು ಮಾಡಿಸಿದ ಭಕ್ತರ ಮೂರ್ತಿಗಳನ್ನು ಬಿಡಿಸಿದೆ. ಹೊಲವೊಂದರಲ್ಲಿ ಬಿದ್ದಿದ್ದ ಆಯಕಸ್ತಂಭವೊಂದರ ಮೇಲೆ ಸುಖಾಸೀನರಾಗಿ ಕುಳಿತ ದಂಪತಿಗಳಿದ್ದು ಅವರ ಉಪಚಾರಕ್ಕಾಗಿ ಕಾದಿರುವ ಇಬ್ಬರು ಸೇವಕ–ಸೇವಕಿಯರ ಮೂರ್ತಿಗಳನ್ನು ಅದರ ಕೆಳಗೆ ಬಿಡಿಸಿದೆ. ತೆಳುವುಬ್ಬು ಶಿಲ್ಪದಲ್ಲಿ ಬಿಡಿಸಿದ್ದು ಮುಖದಲ್ಲಿ ಮಿನುಗುವ ಮಂದಹಾಸ, ಪಾನಪಾತ್ರೆ ಹಿಡಿದ ಗಂಡು ಕುಳಿತಿರುವ ವಿಲಾಸಭಂಗಿ, ಸುಖಲೋಲುಪತೆಗಳನ್ನು ಹೊಮ್ಮಿಸುವ ಅಂಗಸೌಷ್ಠವಗಳಿಂದ ಕೂಡಿದ್ದು ಸಂವೇದನಾಶೀಲತೆಯುಳ್ಳ ಜೀವಂತಶಿಲ್ಪವನ್ನಿಲ್ಲಿ ಕಾಣಬಹುದು. ಸುತ್ತಮುತ್ತಲೂ ಹರಡಿರುವ ಶಿಲ್ಪಫಲಕಗಳಲ್ಲಿ ಬೋಧಿವೃಕ್ಷ ಸಿಂಹಾಸನ ಮತ್ತು ಬುದ್ಧಪಾದಗಳನ್ನುಳ್ಳ ಶಿಲ್ಪ; ಬುದ್ಧನ ಜನನ; ನಂದಿವಿಶಾಲಜಾತಕವೇ ಮೊದಲಾದ ಜಾತಕಕಥೆಗಳಿವೆ; ದತ್ತಿ ಬಿಟ್ಟವರ ಮೂರ್ತಿಗಳಿವೆ; ಛಾಯಾಶಿಲ್ಪಗಳಿವೆ; ಬನವಾಸಿಯ ನಾಗಶಿಲ್ಪದಂತಿರುವ, ಆದರೆ ಶಾಸನವಿಲ್ಲದ ನಾಗರಕಲ್ಲುಗಳೂ ಇವೆ. ಗುಂಡುಪದ್ಮಗಳೂ ಅರೆಪದ್ಮಗಳೂ ಇವೆ. ಶಿಲ್ಪಕ್ಕೆ ಅಷ್ಟೇನೂ ಅನುಕೂಲವಲ್ಲದ ಮತ್ತು ಉತ್ತಮ ದರ್ಜೆಯದೂ ಅಲ್ಲದ ಹಸುರು ಬೆರೆತ ಬಿಳಿಯ ಸುಣ್ಣಕಲ್ಲನ್ನು ಈ ಶಿಲ್ಪಗಳಿಗೆ ಬಳಸಿಕೊಂಡಿದ್ದರೂ ಅಮರಾವತಿಯ ಶಿಲ್ಪಗಳ ಸೊಗಸನ್ನು ಇವುಗಳಲ್ಲಿ ಕಾಣಬಹುದು. ತೆಳುವುಬ್ಬಿನಲ್ಲಿಯೇ ಆದರೂ ಸಾಂಸಾರಿಕ ಚಿತ್ರಣಗಳಿರುವ

ಕೆಲವು ಫಲಕಗಳಲ್ಲಿ ಶ್ರೀಮಂತ ವರ್ಗದ ಗಂಡುಹೆಣ್ಣುಗಳ ವಿಲಾಸ ರಸಿಕತೆಗಳನ್ನು, ಮಧುರ ಭಾವನೆಗಳನ್ನು ಮೂರ್ತಿಗಳ ಬಾಗು ಬಳಕುಗಳಲ್ಲಿ ತಂದಿರುವ ರೂವಾರಿಗಳ ಜಾಣ್ಮೆ ಮೆಚ್ಚುವಂಥದು.

ಇಲ್ಲಿ ಸು.50 ಚಿಕ್ಕ ಶಾಸನಗಳು ದೊರೆತಿವೆ. ಇವುಗಳಲ್ಲಿ ಅನೇಕವು ಕೇವಲ ತುಂಡು ಶಾಸನಗಳು. ಲಿಪಿಯ ಆಧಾರದಿಂದ ಇವು ಪ್ರ.ಶ.ಪೂ. ಸು. 1ನೆಯ ಶತಮಾನದಿಂದ ಕ್ರಿ.ಶ. 3ನೆಯ ಶತಮಾನದವರೆಗಿನ ಕಾಲಕ್ಕೆ ಸೇರುತ್ತವೆ. ಎರಡು–ಮೂರು ಶಾಸನಗಳನ್ನು ಬಿಟ್ಟರೆ ಉಳಿದುವು ಬ್ರಾಹ್ಮೀಲಿಪಿಯಲ್ಲಿದ್ದು ಪ್ರಾಕೃತ ಭಾಷೆಯಲ್ಲಿವೆ. ಇವುಗಳೊಂದಿಗೆ ಬಾದಾಮಿ ಚಳುಕ್ಯರ ಕಾಲಕ್ಕೆ ಸೇರಿದ ಎರಡು ಶಾಸನಗಳೂ ಉಂಟು. ಬ್ರಾಹ್ಮೀಶಾಸನಗಳಲ್ಲಿ ಗಿರಿಜತಣಕ, ಸಿವತಣಕ, ಸೋಮಪೋಸನಿಕ, ಭಟಿಬಾಲಿಕಾ, ಪುರಿಸದತ, ಗಗನಕ ಆತನ ಭಾರ್ಯೆ ರಾಮಸಿರಿಯ, ಗಹಪತಿ ಸುಲಸ, ವಣಿಯ ಸೇನಣ್ಣ ಮೊದಲಾದ ಅನೇಕರ ಹೆಸರುಗಳಿವೆ. ಇವರು ಬಹುಶಃ ಅಲ್ಲಿನ ಸ್ತೂಪಗಳಿಗೆ ದತ್ತಿ ಬಿಟ್ಟವರಾಗಿರಬಹುದು. ಇವರ ಜೊತೆಯಲ್ಲಿ ಒಂದು ತುಂಡು ಶಾಸನದಲ್ಲಿ ವಾಸೀಠಿಪುತಸಿರಿಸ .......... ಎಂದಿದ್ದು ಅದು ಸಾತವಾಹನ ವಂಶಕ್ಕೆ ಸೇರಿದ ವಾಸಿಷ್ಠೀಪುತ್ರ ಶ್ರೀಸಾತಕರ್ಣಿಯನ್ನು ಕುರಿತದ್ದಾಗಿದೆ.

ವಜ್ರಾಸನ ಮತ್ತು ಬುದ್ಧ ಪಾದ, 1–2ನೆಯ ಶತಮಾನ

ಈ ಸ್ಥಳದಲ್ಲಿ ಎತ್ತರವಾದ ಕೆಲವು ದಿಬ್ಬಗಳಿವೆ. ಬಹುಶಃ ಸ್ತೂಪಗಳ ಅವಶೇಷಗಳನ್ನು ಒಳಗೊಂಡಿರಬಹುದಾದ ಇವುಗಳ ಉತ್ಖನನದಿಂದ ಕರ್ನಾಟಕದಲ್ಲಿದ್ದ ಬೌದ್ಧ ವಾಸ್ತುಶಿಲ್ಪದ ಬಗೆಗೆ ಹೆಚ್ಚಿನ ಬೆಳಕು ಚೆಲ್ಲಬಹುದು.

ಬಹುಶಃ ಬೌದ್ಧಧರ್ಮ ಇಲ್ಲಿ ಕ್ಷೀಣಿಸಿದ ಮೇಲೆ ರಾಷ್ಟ್ರಕೂಟರ ಕಾಲದಲ್ಲಿ ಶಕ್ತಿದೇವತೆಯ ದೇವಾಲಯವೊಂದು ಸ್ತೂಪಕ್ಕೆ ಸ್ವಲ್ಪ ದೂರದಲ್ಲಿಯೇ ನಿರ್ಮಿತವಾಯಿತು. ಈ ದೇವಾಲಯವೂ ಮುಂದೆ ಪುನರ್ನಿರ್ಮಾಣಗೊಂಡು ಬೇರೆ ಬೇರೆ ಭಾಗಗಳನ್ನೊಳಗೊಂಡು ವಿಸ್ತರಿಸಲ್ಪಟ್ಟು ಚಂದ್ರಲಾಂಬಾ ದೇವಾಲಯವೆಂದು ಪ್ರಸಿದ್ಧವಾಗಿದೆ. ಈಗ ಆ ದೇವಾಲಯದಲ್ಲಿರುವ ಗರ್ಭಗೃಹದ ಬಾಗಿಲುವಾಡ, ಗರ್ಭಗೃಹದ ಪಕ್ಕದಲ್ಲಿ ಮತ್ತೊಂದು ಕೋಣೆಯಲ್ಲಿ ಈಗ ಪೂಜೆಯಿಲ್ಲದೆ ಇರುವ ಬೃಹತ್ ಪ್ರಮಾಣದ ಭವ್ಯವಾದ ದೇವಿಯ ಮೂರ್ತಿ, ಕೆಲವು ಕಂಬಗಳು ರಾಷ್ಟ್ರಕೂಟ ಶಿಲ್ಪದ ಸುಂದರ ಮಾದರಿಗಳು. ಬಾಗಿಲುವಾಡದ ಎರಡು ಕಡೆಯ ದಾರವಂದಗಳು ಕೆಳಗೆ ಇರುವ ಗಣಪತಿ, ಮಹಿಷಾಸುರ ಮರ್ದಿನಿ ಮೂರ್ತಿಗಳನ್ನು ಗಮನಿಸಬೇಕು; ಹಾಗೆಯೇ ಊರಿನೊಳಗೆ ಬಿದ್ದಿರುವ ತ್ರುಟಿತವಾದ ಸೂರ್ಯನ ಮೂರ್ತಿಯೂ ಇದೇ ಗುಂಪಿಗೆ ಸೇರಿದುದು. ಈಚೆಗೆ ನಿರ್ಮಿತವಾದ ಸೂಗಪ್ಪನ ಸಮಾಧಿ ಎಂಬ ಸಂತನೊಬ್ಬನ ಸಮಾಧಿಕಟ್ಟಡ ಊರಿನೊಳಗಿರುವ ಮುಸ್ಲಿಂ ಶೈಲಿಯಲ್ಲಿರುವ ತಗ್ಗಾದ ಗುಮ್ಮಟವನ್ನು ಹೊಂದಿದ ಚೌಕವಿನ್ಯಾಸದಲ್ಲಿರುವ ಚಿಕ್ಕದಾದ ಕಟ್ಟಡ. **(ಎಂ.ಎಚ್.)**

**ಸಮಂತಭದ್ರ:** ಸು. 450. ದಕ್ಷಿಣ ದೇಶದ ಪ್ರಸಿದ್ಧ ಜೈನ ಆಚಾರ್ಯರು. ಕವಿ, ಗಮಕಿ, ವಾದಿ ಮತ್ತು ವಾಗ್ಮಿ ಎಂದು ಪ್ರಖ್ಯಾತರಾದವರು. ಚಾವುಂಡರಾಯ ತನ್ನ ಚಾವುಂಡರಾಯ ಪುರಾಣದಲ್ಲಿ ಇವರನ್ನು

ಅಭಿಮತಮಾಗಿರೆ ತತ್ತ್ವಾ<br>
ರ್ಥಭಾಷ್ಯಮಂ ತರ್ಕಶಾಸ್ತ್ರಮಂ ಬರೆದು ವಚೋ<br>
ವಿಭವದಿನಿಳೆಗೆಸೆದ ಸಮಂ<br>
ತಭದ್ರ ದೇವರ ಸಮಾನರೆಂಬರುಮೊಳರೇ

ಎಂದು ಸ್ತುತಿಸಿದ್ದಾನೆ. ಶ್ರವಣಬೆಳಗೊಳದ ಒಂದು ಶಾಸನದಲ್ಲಿ ಸಮಂತಭದ್ರರನ್ನು ಇವರು ಭಸ್ಮಕ ರೋಗವನ್ನು ನಾಶ ಮಾಡಿಕೊಂಡು ಪದ್ಮಾವತೀದೇವಿಯಿಂದ ಉದಾತ್ತವಾದ ಪದವನ್ನು ಹೊಂದಿ ಮಂತ್ರಶಕ್ತಿಯಿಂದ ಚಂದ್ರಪ್ರಭಜಿನನನ್ನು ಆಹ್ವಾನ ಮಾಡಿ ಕಲಿಯುಗದಲ್ಲಿ ಜಿನಧರ್ಮಕ್ಕೆ ಪ್ರಾಶಸ್ತ್ಯವನ್ನುಂಟುಮಾಡಿದರು. ವಾದಕ್ಕೋಸ್ಕರ ಪಾಟಲೀಪುತ್ರನಗರ, ಮಾಳವದೇಶ, ಸಿಂಧುದೇಶ, ಠಕ್ಕದೇಶ, ಕಾಂಚೀಪುರ, ವಿದಿಶೆ, ಕರಹಾಟಕ ದೇಶ ಇವುಗಳಲ್ಲಿ ಸಂಚಾರ ಮಾಡಿದರು. ಇವರು ವಾದಕ್ಕೆ ನಿಂತರೆ ಈಶ್ವರನಿಗೂ ನಾಲಗೆ ಬರುತ್ತಿರಲಿಲ್ಲ ಎಂದು ಹೇಳಿದೆ. ಇವರು ಮಣಕವಳ್ಳಿಯಲ್ಲಿ ತಪಸ್ಸು ಮಾಡಿದರೆಂದು ದೇವಚಂದ್ರನ ರಾಜಾವಳೀ ಕಥೆಯಲ್ಲಿ ಹೇಳಿದೆ. ಶ್ವೇತಾಂಬರ ವೀರ ವಂಶಾವಳಿಯಲ್ಲಿ ಇವರು ಮಹಾವೀರನ ನಿರ್ವಾಣವಾದ 889ನೆಯ ವರ್ಷದಲ್ಲಿ ಅಂದರೆ, 419ರಲ್ಲಿ ಇದ್ದರೆಂದು ಹೇಳಿದೆ. ಇವರು ಉರಗಪುರದ ರಾಜಮನೆತನದವರೆಂದೂ ನಿರ್ಗ್ರಂಥ ಮುನಿಗಳಾಗಿ ದೇಶದ ಹಲವು ಭಾಗಗಳಲ್ಲಿ ವಿಹಾರ ಮಾಡಿದರೆಂದೂ ಹೇಳಿಕೆಯುಂಟು. ಹಲವು ಸಂಸ್ಕೃತ ಮತ್ತು ಕನ್ನಡ ಕವಿಗಳು ಇವರನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ವಾದಿಮುಖ್ಯರಾಗಿ ಪರವಾದಿಗಳನ್ನು ಜಯಿಸಿ ಸ್ಯಾದ್ವಾದ ಜಿನಶಾಸನವನ್ನು ಹರಡಿಸಿದ ಹಿರಿಮೆ ಇವರದು. ತಪಸ್ಸಾಮರ್ಥ್ಯದಿಂದ ತೀವ್ರಗಮನಶಕ್ತಿಯು ಇವರಲ್ಲಿತ್ತೆಂದು ಹೇಳಿಕೆಯುಂಟು. ಇವರು ತಮ್ಮ ಮುನಿಜೀವನದಲ್ಲಿ ಎಷ್ಟೋ ಕಷ್ಟನಷ್ಟಗಳನ್ನು ಸಹಿಸಿದರೆಂದು ಹೇಳುವ ಕಥೆಗಳು ದೊರೆಯುತ್ತವೆ. ಮುಂದೆ ಇವರು ತೀರ್ಥಂಕರರಾಗಿ ಹುಟ್ಟುವರೆಂಬ ಪರಂಪರೆಯು ಇವರ ಘನತೆಯನ್ನು ತೋರಿಸುತ್ತದೆ.

ಇವರು ಆಪ್ತಮೀಮಾಂಸೆ, ಯುಕ್ತ್ಯನುಶಾಸನ, ಸ್ವಯಂಭೂಸ್ತೋತ್ರ, ಜಿನಸ್ತುತಿ, ರತ್ನಕರಂಡಕ ಶ್ರಾವಕಾಚಾರ ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವು ಸಂಸ್ಕೃತದಲ್ಲಿದ್ದು (ಪದ್ಯ) ತಾರ್ಕಿಕ ಶೈಲಿಯಲ್ಲಿ ರಚಿತವಾಗಿವೆ. ಇವಲ್ಲದೆ ಜೀವಸಿದ್ಧಿ, ತತ್ತ್ವಾನುಶಾಸನ, ಪ್ರಮಾಣಪದಾರ್ಥ, ಕರ್ಮಪ್ರಾಭೃತ ಟೀಕೆ, ಗಂಧಹಸ್ತಿ, ಮಹಾಭಾಷ್ಯ ಮೊದಲಾದ ಗ್ರಂಥಗಳನ್ನು ಬರೆದ ಆಖ್ಯಾಯಿಕೆಗಳೂ ಸಂದರ್ಭಗಳೂ ದೊರೆಯುತ್ತವೆ. ಆದರೆ ಇವು ದೊರೆತಿಲ್ಲ.

ಆಪ್ತಮೀಮಾಂಸೆಯಲ್ಲಿ ಆಪ್ತನ ವಿಷಯದ ಚರ್ಚೆಯಿದೆ. ದೇವಾಗಮ ಎಂಬ ಶಬ್ದಗಳಿಂದ ಆರಂಭವಾಗುವುದರಿಂದ ಇದನ್ನು ದೇವಾಗಮಸ್ತೋತ್ರ ವೆಂದೂ ಕರೆಯುತ್ತಾರೆ. ಇದಕ್ಕೆ ಅಕಲಂಕನ ಅಷ್ಟಶತೀ, ವಿದ್ಯಾನಂದನ ಅಷ್ಟಸಹಸ್ರೀ, ಯಶೋವಿಜಯನ ಅಷ್ಟಾದಶಸಹಸ್ರೀ ಎಂಬ ಟೀಕೆಗಳು ರಚಿತವಾಗಿವೆ. ಯುಕ್ತ್ಯನುಶಾಸನದಲ್ಲಿ 64 ಪದ್ಯಗಳಿವೆ. ಇದರಲ್ಲಿ ಅನ್ಯಮತ ಖಂಡನವನ್ನು ಮಾರ್ಮಿಕವಾಗಿ ಮಾಡಲಾಗಿದೆ. ಈ ಗ್ರಂಥವನ್ನು ಕುರಿತು ವಿದ್ಯಾನಂದ ಒಂದು ಟೀಕೆಯನ್ನು ಬರೆದಿದ್ದಾನೆ. ಸ್ವಯಂಭೂಸ್ತೋತ್ರದಲ್ಲಿ ಇಪ್ಪತ್ನಾಲ್ಕು ತೀರ್ಥಂಕರರ ಸ್ತುತಿಯಿದೆ. ಅಲ್ಲದೆ, ಅನೇಕ ಪೌರಾಣಿಕ ಮತ್ತು ನ್ಯಾಯದ ಸಂದರ್ಭಗಳೂ ಇದರಲ್ಲಿವೆ. ಈ ಕೃತಿಯ ಶೈಲಿ ಪ್ರೌಢವಾಗಿದೆ. ಜಿನಸ್ತುತಿ ಅಲಂಕಾರಯುಕ್ತ ಸ್ತುತಿ ಗ್ರಂಥ. ರತ್ನಕರಂಡಕ ಶ್ರಾವಕಾಚಾರ 150 ಸಂಸ್ಕೃತ ಆರ್ಯಾ ಪದ್ಯಗಳಲ್ಲಿ ಶ್ರಾವಕರ ಆಚಾರವನ್ನು ಸುಗಮವಾಗಿ ನಿರೂಪಿಸುವ ಒಂದು ಚಿಕ್ಕ ಕೃತಿ. **(ಎ.ಎನ್.ಯು.)**

**ಸರಗೂರು:** ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಒಂದು ಪಟ್ಟಣ. ಕಸಬೆಯ ಆಗ್ನೇಯಕ್ಕೆ 14 ಕಿಮೀ ದೂರದಲ್ಲಿ ಕಪಿಲಾ ನದಿಯ ಬಲದಂಡೆಯ ಮೇಲಿದೆ. ಜನಸಂಖ್ಯೆ 9,931. ಇದು 1864–86ರ ವರೆಗೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಕೇಂದ್ರವಾಗಿತ್ತು. ಇದೊಂದು ಪ್ರಮುಖ ವ್ಯಾಪಾರ ಕೇಂದ್ರ. ಇಲ್ಲಿ ಕೈಮಗ್ಗದ ಬಟ್ಟೆಗಳು ಮತ್ತು ಚಾಪೆಗಳನ್ನು ತಯಾರಿಸುತ್ತಾರೆ. ಈ ಪಟ್ಟಣದಲ್ಲಿ ಪುರಸಭೆಯೂ ಇದ್ದು ಒಂದು ಆರೋಗ್ಯ ಕೇಂದ್ರ ಮತ್ತು ಪ್ರೌಢಶಾಲೆಗಳು ಇವೆ. **(ಎಚ್.ಪಿ.ಕೆ.)**

**ಸರಸ್ವತಿ:** ಕನ್ನಡದ ಮೊಟ್ಟಮೊದಲ ಮಹಿಳಾ ಪತ್ರಿಕೆ. 1917ರಲ್ಲಿ ಆರಂಭವಾಯಿತು ಆರ್. ಕಲ್ಯಾಣಮ್ಮ **(ನೋಡಿ)** ಈ ಪತ್ರಿಕೆಯ ಸ್ಥಾಪಕ ಸಂಪಾದಕರು. ಇವರೊಂದಿಗೆ ಈ ಪತ್ರಿಕೆಯ ಕೆಲಸವನ್ನು ಮಾಡುತ್ತಿದ್ದವರು ಜಿ.ಆರ್. ಲಲಿತಾ. ಕಿರೀಟ ಅಷ್ಟ ಪತ್ರಾಕಾರದ 36ರಿಂದ 48 ಪುಟಗಳ ಈ ಪತ್ರಿಕೆ ಭಾರತದ ಮಹಿಳೆಯರ ಇಹಪರ ವಿಜಯಾಭ್ಯುದಯ ಗಳನ್ನು ಬೋಧಿಸುವ ಲೇಖಗಳಿಂದೊಡಗೂಡಿದ ಮೊಟ್ಟಮೊದಲ ಸಚಿತ್ರ ಪತ್ರಿಕೆಯಾಗಿ ಮೂಡಿ ಬಂದದ್ದು ಇದರ ವಿಶೇಷ. ಆರಂಭದಲ್ಲಿ ಇದು ಪಕ್ಷ ಪತ್ರಿಕೆಯಾಗಿ, 1920ರ ವೇಳೆಗೆ ಮಾಸಪತ್ರಿಕೆಯಾಗಿ ಸುಮಾರು 43 ವರ್ಷಗಳ ಕಾಲ ನಿರಂತರವಾಗಿ ಪ್ರಕಟವಾಯಿತು. ಈ ಪತ್ರಿಕೆಯ ಮುಖಪುಟದಲ್ಲಿ 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂಬ ಅರ್ಥಪೂರ್ಣ ವಾಕ್ಯವನ್ನು ಸ್ಥಿರವಾಗಿ ಮುದ್ರಿಸಲಾಗುತ್ತಿತ್ತು.

ಮಹಿಳೆಯರು ಮನೆಯಿಂದ ಹೊರನಡೆಯುವುದೇ ಕಷ್ಟವೆನಿಸಿದ್ದ, ಮಹಿಳೆಗೆ ಹಲವಾರು ದಿಗ್ಬಂಧನಗಳನ್ನು ಹೇರಿದ್ದ ಸಾಮಾಜಿಕ ಪರಿಸ್ಥಿತಿಯ ಕಾಲದಲ್ಲಿ ಕಲ್ಯಾಣಮ್ಮನವರು ಈ ಪತ್ರಿಕೆಯನ್ನು ಹೊರಡಿಸಿದ್ದು ಹಾಗೂ ಆ ಪತ್ರಿಕೆಯ ಧ್ಯೇಯ, ಅದರ ರೂಪುರೇಷೆಗಳು ಯಾರಿಗೇ ಆದರೂ ಬೆರಗು ಹುಟ್ಟಿಸುತ್ತವೆ. ಸ್ತ್ರೀ ಸಮಸ್ಯೆಗಳನ್ನು ಕುರಿತ ಚರ್ಚೆಗಳನ್ನೊಳ ಗೊಂಡ ಗಂಭೀರ ಲೇಖನಗಳು, ಸ್ತ್ರೀ ಜಾಗೃತಿಗೆ ಉಪಯುಕ್ತವಾಗುವ ತಿಳಿವಳಿಕೆ, ಮಾಹಿತಿ, ಸಾಮಾನ್ಯ ಜ್ಞಾನವನ್ನು ಕುರಿತ ಅಂಕಣಗಳು, ಸುತ್ತಮುತ್ತಲಿನ ಸಾಂಸ್ಕೃತಿಕ ಚಟುವಟಿಕೆಗಳನ್ನು ಕುರಿತ ವರದಿಗಳು, ಸಂಪಾದಕೀಯ ಟಿಪ್ಪಣಿಗಳು, ಹೊಸ ಅಡುಗೆಗಳ ವಿಚಾರ, ಆಹಾರ ಪಥ್ಯ, ಕೌಟುಂಬಿಕ ಸಲಹೆ, ತಿಳಿಹಾಸ್ಯದ ಚುಟುಕಗಳು, ದೇಶ ವಿದೇಶಗಳ ಸ್ತ್ರೀಯರ ಸ್ಥಿತಿಗತಿಗಳು, ಮಹಿಳಾ ಪ್ರಗತಿಯನ್ನು ಬಿಂಬಿಸುವ ಹಲವು ಅನುವಾದಿತ ಲೇಖನಗಳು, ಸ್ವಾರಸ್ಯಕರವಾದ ಮಕ್ಕಳ ವಿಭಾಗದ ಲೇಖನಗ ಳಿಂದ ಒಡಗೂಡಿದ ಈ ಪತ್ರಿಕೆ ಉತ್ಕೃಷ್ಟ ಗುಣಮಟ್ಟದ್ದಾಗಿತ್ತು.

ಕಲ್ಯಾಣಮ್ಮನವರೇ ಸ್ಥಾಪಿಸಿದ್ದ ಶಾರದಾ ಸ್ತ್ರೀ ಸಮಾಜದ ನಾಲ್ಕನೆಯ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿದ್ದ ಎ.ಆರ್. ಬ್ಯಾನರ್ಜಿ ಅವರ ಪತ್ನಿ ನಳಿನೀದೇವಿಯವರ ಸಹಾಯಹಸ್ತದಿಂದ ಈ ಪತ್ರಿಕೆ ಆರಂಭಗೊಂಡಿತು. ರಜಪೂತ ಸ್ತ್ರೀಯರ ಅಂತಶ್ಚೇತನವನ್ನು ಭಾರತೀಯ ಮಹಿಳೆಯರಲ್ಲಿ ಪುನರುಜ್ಜೀವಿಸುವ ದೃಷ್ಟಿಕೋನದ ತೀವ್ರ ರಾಷ್ಟ್ರೀಯತಾ ಭಾವನೆಯನ್ನು ಮುಖ್ಯಕಾಳಜಿಯಾಗಿ ಹೊಂದಿದ್ದ ಬಂಗಾಲಿ ಪತ್ರಿಕೆ 'ಭಾರತಿ' ಈ ಪತ್ರಿಕೆಗೆ ಮಾದರಿಯಾಗಿತ್ತು. ಪತ್ರಿಕೆಯ ಹೆಸರಾದ 'ಸರಸ್ವತಿ' ಎಂಬುದು ಕೂಡ 'ಭಾರತಿ' ಎಂಬುದರ ಪರ್ಯಾಯ ನಾಮವಾಗಿದೆ.




ಬೆಂಗಳೂರಿನ ಚಾಮರಾಜ ಪೇಟೆಯಲ್ಲಿ ಕಲ್ಯಾಣಮ್ಮನವರ ಮನೆಯ ಪುಟ್ಟ ವರಾಂಡವೇ ಈ ಪತ್ರಿಕೆಯ ಕಾರ್ಯಾಲಯವಾಗಿತ್ತು. ಆರ್ಥಿಕ ಸಂಕಷ್ಟದ ಕಾಲದಲ್ಲಿಯೂ ಪತ್ರಿಕೆಯನ್ನು ನಿಲ್ಲಿಸದೆ ಹೇಮಾಂಕ, ಜನ್ಮದಿನೋತ್ಸವ, ದಸರ ಸಂಚಿಕೆ, ವಾರ್ಷಿಕ ಸರಸ್ವತಿಯ ಪೂಜೆಯ ಸಂಚಿಕೆ– ಹೀಗೆ ಹಲವು ವಿಶೇಷ ಸಂಚಿಕೆಗಳನ್ನು ಹೊರತರಲಾಗುತ್ತಿತ್ತು. ಮುತ್ತಿನ ಸರ, ಸುಮನ ಸಂಚಯ, ನಮ್ಮ ನುಡಿಗನ್ನಡಿ– ಇವು ಸ್ಥಿರ ಶೀರ್ಷಿಕೆಗಳಾಗಿದ್ದವು. ಮಕ್ಕಳ ಪುಟ, ಕಂದನ ವನ, ಮಕ್ಕಳ ಬಾವುಟ ಮೊದಲಾದ ಶೀರ್ಷಿಕೆಗಳಿಂದ ಮಕ್ಕಳಿಗಾಗಿಯೇ ವಿಶೇಷ ಪುಟಗಳನ್ನು ಮೀಸಲಿರಿಸಲಾಗಿತ್ತು. ಕ್ರಮೇಣ ಮಕ್ಕಳ ಬಾವುಟ ವಿಭಾಗವೇ ಪ್ರತ್ಯೇಕ ಮಕ್ಕಳ ಪತ್ರಿಕೆಯಾಗಿ ಪ್ರಕಟಗೊಂಡಿತು (1957–62). ಕೆ.ಟಿ. ಬನಶಂಕರಮ್ಮ ಅದರ ಸಂಪಾದಕರಾಗಿ ಸೇವೆ ಸಲ್ಲಿಸಿದರು.

ಸರಸ್ವತಿ ಪತ್ರಿಕೆಯ ಜೀವಾಳವೇ ಕಲ್ಯಾಣಮ್ಮನವರಾಗಿದ್ದರು. ಪತ್ರಿಕೆಗೆ ಬರೆಯುವುದು, ಬರೆಸುವುದು, ಲೇಖನಗಳ ಪರಿಷ್ಕರಣೆ, ಕರಡು ತಿದ್ದುವುದು, ಚಂದಾದಾರರಿಗೆ ಸಕಾಲದಲ್ಲಿ ಕಳುಹಿಸುವುದು ಈ ಬಗೆಯ ಎಲ್ಲ ಕೆಲಸಗಳನ್ನೂ ಮುತುವರ್ಜಿಯಿಂದ ಇವರೇ ಮಾಡುತ್ತಿದ್ದರು.

ಕಲ್ಯಾಣಮ್ಮನವರ ಅನಂತರ ಈ ಪತ್ರಿಕೆ ನಡೆಸುವ ಹೊಣೆಗಾರಿಕೆ ಜಿ.ಆರ್. ಸ್ವಾಮಿಯವರದಾಯಿತು. ಜಿ.ಆರ್. ಲಲಿತ ಅವರು ಪ್ರಕಾಶಕಿಯಾಗಿ, ಕಲ್ಯಾಣಮ್ಮನವರೇ ಸಂಪಾದಕಿಯಾಗಿ ಸ್ವಲ್ಪಕಾಲ ಮುಂದುವರೆದ ಈ ಪತ್ರಿಕೆ 1963ರಲ್ಲಿ ಲಲಿತಾ ಅವರ ನಿಧನದಿಂದ 4 ದಶಕಗಳ ತನ್ನ ಸೇವೆಯನ್ನು ಸಲ್ಲಿಸಿ ನಿಂತುಹೋಯಿತು. **(ಎನ್‌ಐ.ವಿ.)**

**ಸರೋಜಾದೇವಿ, ಬಿ.:** ಕನ್ನಡ ಚಿತ್ರನಟಿ. ಚತುರ್ಭಾಷಾ ತಾರೆ. ಚನ್ನಪಟ್ಟಣ ತಾಲ್ಲೂಕಿನ ದಶಾವರ ಗ್ರಾಮದ ಬಡತನದ ಕುಟುಂಬದಲ್ಲಿ ಜನಿಸಿದರು. ಇವರಿಗೆ ಬಾಲ್ಯದಿಂದಲೇ ಲಲಿತಕಲೆಯಲ್ಲಿ ಆಸಕ್ತಿಯಿತ್ತು. ಹೊನ್ನಪ್ಪ ಭಾಗವತರ್ ಅವರ ಮಹಾಕವಿ ಕಾಳಿದಾಸ (1955) ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಅನಂತರ ದಕ್ಷಿಣ ಭಾರತ ಚಿತ್ರರಂಗದಲ್ಲಿ ಸುಭದ್ರಸ್ಥಾನ ಉಳಿಸಿಕೊಂಡರು. ಹೆಚ್ಚಾಗಿ ನಾಯಕಿಯ ಪಾತ್ರದಲ್ಲಿಯೇ ಕಾಣಿಸಿಕೊಳ್ಳುತ್ತಿದ್ದ ಇವರು ಅನಂತರ ಬೆಡಗಿನ ಪಾತ್ರಗಳ ಬದಲು ಪ್ರೌಢ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ.

ರಾಜಕುಮಾರ್, ಕಲ್ಯಾಣಕುಮಾರ್, ಉದಯಕುಮಾರ್, ಎ. ನಾಗೇಶ್ವರ ರಾವ್, ಎನ್.ಟಿ. ರಾಮರಾವ್, ಶಿವಾಜಿ ಗಣೇಶನ್, ಎಂ.ಜಿ.ರಾಮಚಂದ್ರನ್, ಜೆಮಿನಿ ಗಣೇಶನ್, ದಿಲೀಪ್ ಕುಮಾರ್, ರಾಜೇಂದ್ರ ಕುಮಾರ್, ಶಮ್ಮೀ ಕಪೂರ್, ಸುನಿಲ್ ದತ್– ಹೀಗೆ ಕನ್ನಡ, ತಮಿಳು, ತೆಲುಗು, ಹಿಂದಿ ಚಿತ್ರರಂಗದ ಪ್ರಮುಖ ನಾಯಕ ನಟರೊಡನೆ ನಾಯಕಿಯಾಗಿ ಅಭಿನಯಿಸಿರುವ ಸರೋಜಾ ದೇವಿಯುವರು ಇದುವರೆಗೆ ಸುಮಾರು 150ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರಗಳ ಸಂಖ್ಯೆಯಲ್ಲಿ ಸಿಂಹ ಪಾಲು ತಮಿಳು ಚಿತ್ರಗಳದು. ಎಂ.ಜಿ.ರಾಮಚಂದ್ರನ್ ನಿರ್ದೇಶಿಸಿದ ಪ್ರಥಮ ಚಿತ್ರ ನಾಡೋಡಿ ಮನ್ನನ್ (1958) ಮೂಲಕ ತಮಿಳು ಚಿತ್ರರಂಗ ವನ್ನು ಪ್ರವೇಶಿಸಿದ ಇವರು ಎಂ.ಜಿ.ಆರ್. ಅವರ ಸತತ ಪ್ರೋತ್ಸಾಹದಿಂದ ತಮಿಳು ಚಿತ್ರರಂಗದ ಅತ್ಯಂತ ಪ್ರಮುಖ ತಾರೆಯಾದರು. ಎಂ.ಜಿ.ಆರ್. ಮತ್ತು ಬಿ.ಸರೋಜಾದೇವಿ ಜೋಡಿ ತಮಿಳಿನ ಅತ್ಯಂತ ಜನಪ್ರಿಯ ತಾರಾಜೋಡಿಯಾಯಿತು. ಭೀಮಸಿಂಗ್ ಅವರ ಪಾಲುಂ ಪಳಮುಂ ಹಾಗೂ ಶ್ರೀಧರ್ ಅವರ ಕಲ್ಯಾಣಪರಿಸು ತಮಿಳು ಚಿತ್ರಗಳಲ್ಲಿನ ಇವರ ಅಭಿನಯ ಸ್ಮರಣೀಯವಾದದ್ದು. ಎನ್.ಟಿ.ರಾಮರಾವ್ ನಿರ್ಮಿಸಿದ ಪಾಂಡುರಂಗ ಮಹಾತ್ಮೆಯ ಮೂಲಕ ತೆಲುಗು ಚಿತ್ರರಂಗವನ್ನು ಪ್ರವೇಶಿಸಿದ ಇವರು ಅಲ್ಲಿಯೂ ಹೆಸರು ಮಾಡಿದರು. ಜೆಮಿನಿಯ ಎಸ್. ವಾಸನ್ ಅವರ ಮೂಲಕ ಹಿಂದಿ ಚಿತ್ರರಂಗಕ್ಕೆ ಕಾಲಿಟ್ಟರು. ಆದರೆ ಅಲ್ಲಿ ಅಷ್ಟು ಯಶ ಸಿಗಲಿಲ್ಲ.

ಸರೋಜಾದೇವಿಯವರು ಇದುವರೆಗೆ ಸುಮಾರು ಮೂವತ್ತೈದು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಮೊದಲ ಚಿತ್ರ ಮಹಾಕವಿ ಕಾಳಿದಾಸದ ಅನಂತರ ಆಷಾಢಭೂತಿ (1955), ಶ್ರೀರಾಮಪೂಜಾ (1955), ಕಚ ದೇವಯಾನಿ (1956), ಕೋಕಿಲವಾಣಿ (1956), ಪಂಚರತ್ನ (1956), ಚಿಂತಾಮಣಿ (1957), ರತ್ನಗಿರಿ ರಹಸ್ಯ (1957), ಸ್ಕೂಲ್ ಮಾಸ್ಟರ್ (1958) ಇತ್ಯಾದಿ ಚಿತ್ರಗಳಲ್ಲಿ ಕಾಣಿಸಿಕೊಂಡರು. ರಾಜಕುಮಾರ್ ಅವರೊಂದಿಗೆ ಆ ಕಾಲದಲ್ಲಿ ಇವರು ನಟಿಸಿದ ಭೂಕೈಲಾಸ (1958), ಅಣ್ಣ ತಂಗಿ (1958), ಜಗಜ್ಯೋತಿ ಬಸವೇಶ್ವರ (1958), ಕಿತ್ತೂರು ಚೆನ್ನಮ್ಮ (1961) ಚಿತ್ರಗಳು ಅಪಾರ ಯಶ ಗಳಿಸಿದವು. ಕಿತ್ತೂರು ಚೆನ್ನಮ್ಮ ಚಿತ್ರದಲ್ಲಿನ ಇವರ ಅಭಿನಯ ಉತ್ತಮ ಮಟ್ಟದ್ದು. ಕನ್ನಡದ ಪ್ರಥಮ ವರ್ಣಚಿತ್ರ ಅಮರಶಿಲ್ಪಿ ಜಕಣಾಚಾರಿಯಲ್ಲಿ (1964) ನಾಯಕಿಯಾದ ಇವರು ಈ ಚಿತ್ರದ ತೆಲುಗು ಅವತರಣಿಕೆಯಲ್ಲಿಯೂ ಪಾತ್ರ ವಹಿಸಿದ್ದಾರೆ. ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ ಕಥಾಸಂಗಮದ (ಕಿರುಚಿತ್ರಗಳ ಸಂಕಲನ, 1975) 'ಅತಿಥಿ' ಚಿತ್ರದಲ್ಲಿ ಅವಿವಾಹಿತ ಮಧ್ಯವಯಸ್ಕ ಮಹಿಳೆಯ ಪಾತ್ರದಲ್ಲಿನ ಇವರ ಅಭಿನಯ ಮೆಚ್ಚುವಂಥದ್ದು. ಬಬ್ರುವಾಹನ ಹಾಗೂ ಭಾಗ್ಯವಂತರು (1977) ಈ ಅದ್ದೂರಿಯ ವರ್ಣಚಿತ್ರಗಳಲ್ಲಿ ರಾಜಕುಮಾರ್ ಅವರಿಗೆ ಸರಿಸಾಟಿಯಾಗಿ ಅಭಿನಯಿಸಿದ್ದಾರೆ. ಇವರ ಇತರ ಕನ್ನಡ ಚಿತ್ರಗಳಿವು: ವಿಜಯನಗರದ ವೀರಪುತ್ರ (1961), ದೇವಸುಂದರಿ (1962), ಬೆರೆತ ಜೀವ (1965), ಮಲ್ಲಮ್ಮನ ಪವಾಡ (1969), ಲಕ್ಷ್ಮೀ ಸರಸ್ವತಿ (1970), ಪೂರ್ಣಿಮಾ (1971), ಪಾಪಪುಣ್ಯ (1971), ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ (1971), ಸಹಧರ್ಮಿಣಿ(1973), ಚಾಮುಂಡೇಶ್ವರಿ ಮಹಿಮೆ (1974), ಗೃಹಿಣಿ (1974), ಶ್ರೀನಿವಾಸ ಕಲ್ಯಾಣ (1974), ಚಿರಂಜೀವಿ (1976), ಶನಿಪ್ರಭಾವ (1977).

ಸರೋಜಾದೇವಿಯವರು ಬೆಂಗಳೂರಿನಲ್ಲಿ ನೆಲಸಿ ಖ್ಯಾತ ಎಂಜಿನಿಯರ್ ಶ್ರೀ ಹರ್ಷ ಅವರನ್ನು ವಿವಾಹವಾದರು (1967).

ಇವರು ರಷ್ಯ ಸರ್ಕಾರದ ಆಮಂತ್ರಣದ ಮೇರೆಗೆ 1969ರಲ್ಲಿ ರಷ್ಯದಲ್ಲಿ ನಡೆದ ನಾಲ್ಕನೆಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾಗವಹಿಸಿದ್ದರು. ಸಾಮಾಜಿಕ ಕಳಕಳಿ ಹೊಂದಿರುವ ಇವರು ತಮ್ಮ ಹುಟ್ಟಿದೂರಿನಲ್ಲಿ (ದಶಾವರ ಗ್ರಾಮ) ಶಾಲೆಯೊಂದನ್ನು ಕಟ್ಟಿಸಿದ್ದಾರೆ. ಇವರ ಕಲಾಸೇವೆಯನ್ನು ಗಮನಿಸಿ ಕೇಂದ್ರ ಸರ್ಕಾರ 1969ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿ ಇತ್ತು ಗೌರವಿಸಿತು. ಇವರು ಮುಂದೆಯೂ ಚಲನಚಿತ್ರರಂಗದಲ್ಲಿ ಆಗಾಗ ವಿವಿಧ ಚಿತ್ರಗಳಲ್ಲಿ ನಟಿಸಿದರು. ಅನೇಕ ಪ್ರಶಸ್ತಿ ಆಯ್ಕೆ ಸಮಿತಿಗಳಲ್ಲಿ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. **(ಎಸ್.ಎಸ್.ಎಂಯು.)**

**ಸರ್ಜಾಪುರ:** ಬೆಂಗಳೂರು ನಗರ ಜಿಲ್ಲೆ ಆನೇಕಲ್ಲು ತಾಲ್ಲೂಕಿನ ಒಂದು ಪಟ್ಟಣ; ಹೋಬಳಿ ಕೇಂದ್ರ. ಆನೇಕಲ್ಲು–ಹೊಸಕೋಟೆ ಮಾರ್ಗದಲ್ಲಿ ಆನೇಕಲ್ಲಿನ ಉತ್ತರಕ್ಕೆ 21 ಕಿಮೀ ದೂರದಲ್ಲೂ ಬೆಂಗಳೂರಿನ ಆಗ್ನೇಯಕ್ಕೆ 29 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 8,620.

ಇಲ್ಲಿನ ಚೆನ್ನಕೇಶವ ದೇವಾಲಯ ಪ್ರಸಿದ್ಧವಾದುದು. ಇದನ್ನು 1526ರಲ್ಲಿ ಸುಗಟೂರಿನ ಪಾಳೆಯಗಾರ ತಮ್ಮೇಗೌಡ ಕಟ್ಟಿಸಿದನೆಂದು ದೇವಾಲಯದಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ಈಗ ಪಾಳುಬಿದ್ದಿರುವ ಈ ದೇವಾಲಯದ ಹೊರಗೋಡೆಯ ಮೇಲೆ ದಶಾವತಾರದ ಚಿತ್ರಣವಿದೆ. ಮಹಾಬಲೇಶ್ವರ, ಕೋದಂಡರಾಮ, ಶಿವ, ಪಾತಾಳಮ್ಮನ ಗುಡಿ ಇವು ಇಲ್ಲಿನ ಇತರ ದೇವಸ್ಥಾನಗಳು. ಈ ಊರಿನಲ್ಲಿ ಪಂಚಮರ ಸಾಂಬಪ್ಪ ಎಂಬ ಶರಣ ಸ್ಥಾಪಿಸಿದ ಮಠವೊಂದಿದೆ. ಈ ಮಠದಲ್ಲಿ ಸಾಂಬಪ್ಪನ ಗದ್ದುಗೆ ಇದೆ. ಸಾಂಬಪ್ಪ ಹಲವಾರು ಪವಾಡಗಳನ್ನು ಮೆರೆದನೆಂದು ಪ್ರತೀತಿ.

ಈ ಪಟ್ಟಣ ಹಿಂದೆ ಮಸ್ಲಿನ್ ಬಟ್ಟೆ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಈಗ ಇದೊಂದು ಪ್ರಮುಖ ವ್ಯಾಪಾರ ಕೇಂದ್ರ. ಹತ್ತಿ ಬಟ್ಟೆ ನೇಯ್ಗೆ, ಜಮಖಾನಗಳ ತಯಾರಿಕೆ, ಪಾತ್ರೆ ತಯಾರಿಕೆ, ಬೀಡಿ ತಯಾರಿಕೆ, ಬೆಲ್ಲ ತಯಾರಿಕೆ ಇಲ್ಲಿರುವ ಉದ್ಯಮಗಳು. ಪ್ರತಿ ಭಾನುವಾರ ಈ ಪಟ್ಟಣದಲ್ಲಿ ಸಂತೆ ನಡೆಯುತ್ತದೆ. **(ಎಂ.ಆರ್.ಪಿ.)**

**ಸರ್ಟನ್ ರಾಮರಾವ್:** ರಂಗಭೂಮಿ ನಟರು, ಚಾಮರಾಜೇಂದ್ರ ಒಡೆಯರು ಆರಂಭಿಸಿದ ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾದ ಮುಖಾಂತರ ಬೆಳಕಿಗೆ ಬಂದರು. ವೀಣೆ ಸದಾಶಿವರಾಯರು ಇವರ ತಂದೆ. ರಾಮರಾಯರು ಹೆಚ್ಚಾಗಿ ಮಹಾರಾಜರ ನಾಟಕ ಮಂಡಲಿಯಲ್ಲಿಯೇ ಪಳಗಿ, ನಾಯಕ ಹಾಗೂ ಖಳನಾಯಕನ ಪಾತ್ರಗಳನ್ನು ಯಶಸ್ವಿಯಾಗಿ ಅಭಿನಯಿಸುತ್ತಿದ್ದರು. ಆಗಿನ ಆಳರಸರಾಗಿದ್ದ ಕೆಲವು ಪ್ರತಿಷ್ಠಿತ ಆಂಗ್ಲ ಅಧಿಕಾರಿಗಳ ಮನರಂಜನ ಕಾರ್ಯಕ್ರಮವಾಗಿ ಒಂದು ಬಾರಿ ಮಹಾರಾಜರು ಅರಮನೆಯ ಚಂದ್ರಶಾಲೆಯಲ್ಲಿ ಶೂರಸೇನ ನಾಟಕವನ್ನೇರ್ಪಡಿಸಿದ್ದರು. ರಾಮರಾಯರು ಆ ನಾಟಕದಲ್ಲಿ ಅಭಿನಯಿಸಿದ ಶೂರಸೇನ ಪಾತ್ರ ಆಂಗ್ಲ ಅಧಿಕಾರಿಗಳಿಗೆ ಮೆಚ್ಚುಗೆಯಾಗಿ ಸರ್ಟನ್ ಎಂದು ಅವರನ್ನು ಶ್ಲಾಘಿಸಿದರು. ಅಂದಿನಿಂದ ಮಹಾರಾಜರು ಇವರನ್ನು ಸರ್ಟನ್ ರಾಮರಾಯರು ಎಂದೇ ಕರೆದರು; ಅಂದಿನಿಂದ ಅದೇ ಹೆಸರಿನಿಂದ ಪ್ರಸಿದ್ಧರಾದರು. ರಾಮರಾಯರು ಪ್ರತಾಪಸಿಂಹಚರಿತ್ರೆಯಲ್ಲಿ ಮಹಾವೀರ, ಶೂರಸೇನದಲ್ಲಿ (ಒಥೆಲೋ) ಶೂರಸೇನ, ಚಂದ್ರಹಾಸದಲ್ಲಿ ದುಷ್ಟಬುದ್ಧಿ, ಹರಿಶ್ಚಂದ್ರದಲ್ಲಿ ಕಾಪಾಲಿ, ಮಹಾಭಾರತದಲ್ಲಿ ದುರ್ಯೋಧನ ಮುಂತಾದ ಪಾತ್ರಗಳನ್ನು ಪ್ರೇಕ್ಷಕರ ಮನಮುಟ್ಟುವಂತೆ ಅಭಿನಯಿಸುತ್ತಿದ್ದರು. ಇವರ ಅಭಿನಯಕೌಶಲ್ಯವನ್ನು ನೋಡಿದ ಇತರ ಪ್ರಾಂತ್ಯಗಳ ನಾಟಕ ಮಂಡಲಿಗಳು ಇವರನ್ನು ತಮ್ಮ ಕಂಪನಿಗೆ ಸೇರಲು ಆಹ್ವಾನಿಸಿದರೂ ಇವರು ತಮ್ಮ ಕನ್ನಡ ಪ್ರೇಮದಿಂದ ಅಂಥ ಆಹ್ವಾನವನ್ನು ಒಪ್ಪಿಕೊಳ್ಳದೆ ಕೊನೆಯವರೆಗೂ ಕನ್ನಡ ರಂಗಭೂಮಿಯ ಉತ್ಕರ್ಷಕ್ಕಾಗಿ ಶ್ರಮಿಸಿದರು. ಇವರು ತಮ್ಮ ಗಂಭೀರ ಮುಖಮುದ್ರೆ, ಹಿತಮಿತವಾದ ಮಾತುಗಾರಿಕೆ, ಸೌಜನ್ಯಯುತ ನಡೆವಳಿಕೆಗಳಿಂದ ರಂಗಭೂಮಿಯಲ್ಲೂ ಹೊರಗೂ ಜನಮನ್ನಣೆ ಗಳಿಸಿದ್ದರು.

ಅರಮನೆ ನಾಟಕ ಕಂಪನಿಯನ್ನು ಕಾರಣಾಂತರಗಳಿಂದ ಬಿಟ್ಟ ರಾಮರಾಯರು ಶ್ರೀಕಂಠೇಶಗೌಡ, ಜಯರಾವ್ ಮತ್ತು ಪಿ.ರಾಘವೇಂದ್ರ ರಾವ್ ಮೊದಲಾದವರ ನೆರವಿನಿಂದ ತಮ್ಮದೇ ಆದ ಒಂದು ನಾಟಕ ಮಂಡಲಿಯನ್ನು ಪ್ರಾರಂಭಿಸಿ ಸ್ವಲ್ಪಕಾಲ ನಡೆಸಿದರು. (ಎಂ.ಎಚ್.ಆರ್.)

**ಸರ್ವಜ್ಞ:** 16–17ನೆಯ ಶತಮಾನದ ವಚನಕಾರ. ಈತನ ಜೀವನದ ಬಗ್ಗೆ ಖಚಿತವಾಗಿ ಯಾವ ಸಂಗತಿಗಳೂ ತಿಳಿದುಬಂದಿಲ್ಲ. ಕೆಲವು ಅಂಶಗಳು ಇವನ ವಚನಗಳಲ್ಲಿ ಉಕ್ತವಾಗಿದ್ದರೂ ಅಂಥ ರಚನೆಗಳು ಪ್ರಕ್ಷಿಪ್ತಗಳಾಗಿರುವ ಸಾಧ್ಯತೆಯೂ ಉಂಟು. ಪುಷ್ಪದತ್ತನೆಂಬ ಗಣನಾಥನ ಅವತಾರವೆಂದು ಹೇಳಲಾದ ಸರ್ವಜ್ಞ ಹುಟ್ಟಿದ್ದು ಧಾರವಾಡ ಜಿಲ್ಲೆಯ ಅಂಬಲೂರಿನಲ್ಲಿ. ಇದೇ ಜಿಲ್ಲೆಯ ಮಾಸೂರಿನ ಬಸವರಸನೆಂಬ ಆರಾಧ್ಯ ಬ್ರಾಹ್ಮಣ ಇವನ ತಂದೆ. ಮಾಳಿಯೆಂಬ ಕುಂಬಾರರ ಹೆಣ್ಣು ಇವನ ತಾಯಿ. ಇವರ ವಿವಾಹಬಾಹಿರ ಸಂಬಂಧದಿಂದ ಇವನ ಜನನ. ಈ ಸಂಗತಿಗಳಲ್ಲಿ ಎಷ್ಟು ಸತ್ಯವಿದೆಯೋ ಹೇಳುವಂತಿಲ್ಲ.

ಸರ್ವಜ್ಞ ಎಂಬುದು ಕವಿಯ ಹೆಸರಾಗಿ ತೋರುವುದಿಲ್ಲ. ಇದು ಇವನ ಅಂಕಿತ ಇಲ್ಲವೆ ಬಿರುದಾಗಿರಬಹುದು. ಸರ್ವಜ್ಞ ಎಂಬುದು ಕವಿಯ ಹೆಸರೆಂದೂ ಪರಮಾರ್ಥ ಎಂಬುದು ಇವನ ಅಂಕಿತವೆಂದೂ ಈಚಿನ ಒಂದು ಅಭಿಪ್ರಾಯ. ಸರ್ವಜ್ಞನ ರಚನೆಗಳನ್ನು ವಚನಗಳೆಂದು ಕರೆಯುವುದು ರೂಢಿಯಾಗಿದ್ದರೂ ಅವು ವಾಸ್ತವವಾಗಿ ತ್ರಿಪದಿಗಳು. ಶಿವಶರಣರ ವಚನಗಳಿಗೂ ಸರ್ವಜ್ಞನ ತ್ರಿಪದಿಗಳಿಗೂ ತಿರುಳಿನಲ್ಲಿ ಸಾಮ್ಯವಿರುವುದನ್ನು ಗಮನಿಸಿ ಅವನ್ನೂ ವಚನಗಳೆಂದು ಕರೆದಿರಬಹುದು. ಸರ್ವಜ್ಞನ ಹೆಸರಿನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಸಂಖ್ಯೆಯ ತ್ರಿಪದಿಗಳಿವೆ. ಅವುಗಳಲ್ಲಿ ಸುಮಾರು ಒಂದು ಸಾವಿರ ತ್ರಿಪದಿಗಳು ಮಾತ್ರ ಸರ್ವಜ್ಞನ ವೆಂದೂ ಉಳಿದವು ಪ್ರಕ್ಷಿಪ್ತವೆಂದೂ ಹೇಳಲಾಗಿದೆ.

ಸರ್ವಜ್ಞ ವೀರಶೈವ ಧರ್ಮಕ್ಕೆ ಸೇರಿದವನಂತೆ ತೋರಿದರೂ ಇವನದು ಮತಾತೀತವಾದ ವಿಶಾಲ ದೃಷ್ಟಿ, ಸತ್ಯನಿಷ್ಠುರ ವ್ಯಕ್ತಿತ್ವ. ಇವನೊಬ್ಬ ನಿರ್ಭೀತ ವಿರಕ್ತ. ಸಮಾಜದ ರೋಗರುಜಿನಗಳನ್ನು ಬಯಲಿಗೆಳೆದು ಅವಕ್ಕೆ ಚಿಕಿತ್ಸೆ ಮಾಡುತ್ತ, ತಿಳಿವನ್ನು ಹರಡುತ್ತ, ನಾಡಿನಲ್ಲೆಲ್ಲ ಸಂಚರಿಸಿದ ಪರಿವ್ರಾಜಕ. ಮೂಲತಃ ಇವನದು ಆಶುಕವಿತೆಯಿರಬೇಕು.

ಸರ್ವಜ್ಞನ ಒಂದೊಂದು ವಚನವೂ ಸ್ವಯಂಪೂರ್ಣವಾದ ಮುಕ್ತಕ ಅಥವಾ ಸುಭಾಷಿತ. ಇವನ ವಚನಗಳಲ್ಲಿ ಪ್ರಸ್ತಾಪವಾಗದಿರುವ ವಿಷಯವೇ ಇಲ್ಲ. ಅವುಗಳಲ್ಲಿ ನೀತಿಯಿದೆ, ತತ್ತ್ವವಿದೆ, ವಿವೇಕವಿದೆ, ವಿಡಂಬನವಿದೆ, ಅನುಭವ ರಸಾಯನವಿದೆ, ಎಲ್ಲವೂ ಸರಸವಾಗಿ ನಿರೂಪಿತವಾಗಿದೆ. ಮಿತ್ರಸಮ್ಮಿತ ಕಾಂತಾ ಸಮ್ಮಿತಗಳನ್ನು ಸರ್ವಜ್ಞನ ವಚನಗಳಲ್ಲಿ ಕಾಣುತ್ತೇವೆ. ಇವನ ರಚನೆಗಳೆಲ್ಲ ಕಾವ್ಯವಾಗದಿದ್ದರೂ ಬಹಳ ಕಡೆ ಒಳ್ಳೆಯ ಕಾವ್ಯಗುಣ ಗಳನ್ನು ಮೆರೆಯುತ್ತವೆ. ಹೇಳಬೇಕಾದ್ದನ್ನು ಇವನು ಸರಳ ಸುಲಭವಾದ ಶೈಲಿಯಲ್ಲಿ, ಉಪಮಾನ ದೃಷ್ಟಾಂತಗಳ ಮೂಲಕ, ಜನಸಾಮಾನ್ಯರ ಮನಸ್ಸಿಗೆ ನಾಟುವಂತೆ ಹೇಳುತ್ತಾನೆ. ಆದ್ದರಿಂದಲೇ ಇವನ ತ್ರಿಪದಿಗಳು ಗಾದೆಗಳಂತೆ ನಾಡಿನಲ್ಲಿ ಮನೆಮಾತಾಗಿವೆ. ಇವನು ತಮಿಳಿನ ತಿರುವಳ್ಳುವರ್, ತೆಲುಗಿನ ವೇಮನರಂತೆ ಜನತೆಯ ಕವಿಯಾಗಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನಗಳಿಸಿದ್ದಾನೆ. (ಸಿ.ಪಿ.ಕೆ.)

**ಸರ್ವೋದಯ ಗ್ರಾಮ:** ಗಾಂಧೀಜಿಯವರ ಆದರ್ಶ ಗ್ರಾಮದ ಕಲ್ಪನೆಗೆ ಅನುಗುಣವಾಗಿ ಕೂಡ್ಲಿಗಿ ತಾಲ್ಲೂಕಿನಲ್ಲಿ ಸ್ಥಾಪಿತವಾಗಿರುವ ಒಂದು ಗ್ರಾಮ. ಗುಡಿಕೋಟೆಯ ಪೂರ್ವಕ್ಕೆ ಸುಮಾರು 3 ಕಿಮೀ ದೂರದಲ್ಲಿದೆ.

ಭೂದಾನ ಚಳವಳಿಯಲ್ಲಿ ಈ ಗ್ರಾಮಸ್ಥಾಪನೆಗೆ 1961ರಲ್ಲಿ ಅಲ್ಲಂ ಕರಿಬಸಪ್ಪನವರು ಸಾಕಷ್ಟು ಭೂಮಿಯನ್ನು ದಾನವಾಗಿ ಕೊಟ್ಟರು. ಸರ್ವೋದಯ ಮುಖಂಡ ಎಂ.ವಾಸುದೇವಾಚಾರ್ಯರ ನೇತೃತ್ವದಲ್ಲಿ ಗ್ರಾಮ ನಿರ್ಮಾಣ ಕಾರ್ಯ ನಡೆದು ಜನ ಇಲ್ಲಿ ನೆಲಸಿದರು. ಇಲ್ಲಿ ರೈತರ ಸಹಕಾರ ಸಂಘ ವ್ಯವಸಾಯಕ್ಕೆ ಅಗತ್ಯವಾದ ಸಲಕರಣೆಗಳನ್ನೂ ಬಿತ್ತನೆ ಧಾನ್ಯ ಹಾಗೂ ಇತರ ವಸ್ತುಗಳನ್ನೂ ಒದಗಿಸುತ್ತದೆ. ಖುಷೀರಾಂ ಸೇಟ್ ಎಂಬುವರು ದಾನ ಕೊಟ್ಟ 10,000 ರೂಪಾಯಿಗಳಿಂದ ಮೂರು ಕೃಷಿ ಯೋಗ್ಯ ಬಾವಿಗಳನ್ನು ತೆಗೆಸಲಾಗಿದೆ. ಗ್ರಾಮಾಭಿವೃದ್ಧಿ ನಿಧಿಯಿಂದ ಹಾಗೂ ಇತರ ಯೋಜನೆಗಳ ನೆರವಿನಿಂದ ಎಲ್ಲ ಬಗೆಯ ಗ್ರಾಮಾಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇಲ್ಲಿ ಆಧುನಿಕ ಬೇಸಾಯ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಗ್ರಾಮಾಂತರ ಗೃಹನಿರ್ಮಾಣ ಯೋಜನೆಯ ಪ್ರಕಾರ ಸರ್ಕಾರ ಇಲ್ಲಿ ಜನರಿಗೆ ಮನೆಗಳನ್ನು ಕಟ್ಟಿಸಿದೆ. ಇಲ್ಲಿ ಗೋವುಗಳ ರಕ್ಷಣೆಗಾಗಿ ಗೋಶಾಲೆಯೊಂದಿದೆ. ಗ್ರಾಮದ ಸಮೀಪದಲ್ಲಿ 1969ರಲ್ಲಿ ಮೈಸೂರು ಸರ್ಕಾರ 2,40,000 ರೂಪಾಯಿ ವೆಚ್ಚದಲ್ಲಿ ಕೆರೆಯನ್ನು ಕಟ್ಟಿಸಲಾಗಿದೆ. ಇದರಿಂದ 200 ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರಕಿದೆ. ಈ ಗ್ರಾಮ ನಿವಾಸಿಗಳಿಗಾಗಿ ಮನರಂಜನೆಯ ಕೇಂದ್ರವಿದೆ. ಗ್ರಾಮದಲ್ಲಿ ಧಾನ್ಯಗಳ ಮಳಿಗೆ, ಕೋಳಿಸಾಕಣೆ ಕೇಂದ್ರ, ಪ್ರಾಥಮಿಕ ಶಾಲೆ, ಆಸ್ಪತ್ರೆ, ಹೈನುಗಾರಿಕೆ ಕೇಂದ್ರ ಇವೆ. (ವಿ.ಜಿ.ಕೆ.)

**ಸಲಕ:** ವಿಜಯನಗರದ ತುಳುವ ವಂಶದ ಅರಸ ಅಚ್ಯುತರಾಯನ ಪ್ರಭಾವೀ ಸಾಮಂತ. ವರದಾಂಬಿಕಾ ಪರಿಣಯ ಎಂಬ ಗ್ರಂಥದ ಪ್ರಕಾರ ಅಚ್ಯುತರಾಯನ ರಾಣಿ ವರದಾಂಬಿಕೆಗೆ ಪೆದ್ದ ಸಲಕ ತಿರುಮಲರಾಯ ಮಹಾ ಅರಸು ಮತ್ತು ಪಿನ (ಚಿನ್ನ) ಸಲಕ ತಿರುಮಲರಾಯ ಮಹಾರಸು ಎಂಬ ಇಬ್ಬರು ಸಹೋದರರಿದ್ದರು. ರಾಜನ ಭಾವಮೈದುನರಾದುದರಿಂದ ಇವರ ಪ್ರಭಾವ ಹೆಚ್ಚಾಗಿದ್ದಿತು. ಅದರಲ್ಲೂ ಸಲಕ ಹೆಚ್ಚು ಪ್ರಾಮುಖ್ಯ

ಹೊಂದಿದ್ದ. ಈತ ಸಾಳುವ ದಣ್ಣಾಯಕನ ಸ್ಥಾನದಲ್ಲಿ ಮಂತ್ರಿಯಾದ. ತಿರುವಡಿ ದಂಡಯಾತ್ರೆಯ ಮುಖಂಡತ್ವ ವಹಿಸಿದ್ದ ಸಲಕ ಅಥವಾ ಸಲಗ ಇವನೇ ಇರಬೇಕು. ಒಂದು ಶಾಸನ ಈತನನ್ನು 'ಮಹಾಮಂಡಲೇಶ್ವರ ಕುಮಾರರ್ ಜಲಕಯ–ತಿರುಮಲೈಯ ದೇವ ಮಹಾರಾಜ' ಎಂದು ಹೆಸರಿಸುತ್ತದೆ. ತನ್ನ ಭಾವಮೈದುನನಾದುದರಿಂದ ರಾಜನು ಈತನನ್ನು ಮಗನ ಹಾಗೆಯೇ ಕಂಡು ಸಾಮ್ರಾಜ್ಯದಲ್ಲಿ ಪ್ರಮುಖ ಸ್ಥಾನವನ್ನು ಕೊಟ್ಟಿದ್ದುದರಿಂದ ಇವನನ್ನು ಕುಮಾರ ಎಂದು ಸಂಬೋಧಿಸಲಾಗುತ್ತಿದ್ದಿತೆಂದು ಕಾಣುತ್ತದೆ. ಸಲಕ ಚೆಂಗಲಪಟ್ಟು ಪ್ರದೇಶದ ಪ್ರಾಂತ್ಯಾಧಿಕಾರಿಯಾಗಿದ್ದ. ಈತ ಹಂಪೆಯಲ್ಲಿ ತಿರುವೇಂಗಲನಾಥ ದೇವಾಲಯವನ್ನು ಕಟ್ಟಿಸಿ, ಅಮೂಲ್ಯ ಕಾಣಿಕೆಗಳನ್ನೂ ತಿರುವಾಂಕೂರಿನ ಒಂದು ಗ್ರಾಮವನ್ನೂ ಅದಕ್ಕೆ ಕೊಟ್ಟ. 1535ರ ಒಂದು ಶಾಸನದಲ್ಲಿ ಪೆದ್ದ ಸಲಕನನ್ನು ಪ್ರಧಾನ ತಿರುಮಲರಾಜನೆಂದು ಕರೆಯಲಾಗಿದೆ.

ಸಲಕನ ಸಹೋದರ ಪಿನ ಸಲಕ ಉದಯಗಿರಿ ಪ್ರಾಂತದ ಅಧಿಕಾರಿಯಾಗಿದ್ದ. **(ಎ.ವಿ.ವಿ.)**

**ಸವಣೂರು:** ಹಾವೇರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕು ಮತ್ತು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು, ಪಶ್ಚಿಮ ಮತ್ತು ವಾಯವ್ಯದಲ್ಲಿ ಶಿಗ್ಗಾಂವಿ ತಾಲ್ಲೂಕು, ನೈಋತ್ಯದಲ್ಲಿ ಹಾನಗಲ್ಲು ದಕ್ಷಿಣ ಮತ್ತು ಪೂರ್ವಕ್ಕೆ ಹಾವೇರಿ ತಾಲ್ಲೂಕೂ ವ್ಯಾಪಿಸಿವೆ. ಈ ತಾಲ್ಲೂಕನ್ನು 1969 ಮೇ 26ರಂದು ಹಾವೇರಿ ತಾಲ್ಲೂಕಿನಿಂದ 26 ಗ್ರಾಮಗಳನ್ನೂ ಶಿಗ್ಗಾಂವಿ ತಾಲ್ಲೂಕಿನಿಂದ 36 ಗ್ರಾಮ ಮತ್ತು ಸವಣೂರು ಪೇಟೆಯನ್ನೂ ಬೇರ್ಪಡಿಸಿ ರಚಿಸಲಾಯಿತು. ಈಗ 62 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 547.2 ಚ.ಕಿಮೀ. ಸವಣೂರ ತಾಲ್ಲೂಕಿನ ಒಟ್ಟು ಜನಸಂಖ್ಯೆ 1,43,885. ಇದರಲ್ಲಿ 1,08,322 ಮಂದಿ ಗ್ರಾಮಸ್ಥರೂ, 35,563 ಮಂದಿ ಪಟ್ಟಣಿಗರೂ ಇದ್ದಾರೆ.

ತಾಲ್ಲೂಕಿನ ದಕ್ಷಿಣದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ವರದಾ ನದಿ ಈ ತಾಲ್ಲೂಕನ್ನು ಹಾವೇರಿ ತಾಲ್ಲೂಕಿನಿಂದ ಬೇರ್ಪಡಿಸಿದೆ. ಈ ನದಿ ತಾಲ್ಲೂಕನ್ನು ಹಲಸೂರಿನ ನೈಋತ್ಯದಲ್ಲಿ ಪ್ರವೇಶಿಸಿ ಮುಂದೆ ಚಿಕ್ಕಮರಲಿಹಳ್ಳಿಯ ಪೂರ್ವದಲ್ಲಿ ಹಾವೇರಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಅಲ್ಲಿಯವರೆಗಿನ ನದಿಯ ಎಡದಂಡೆ ಪ್ರದೇಶ ಈ ತಾಲ್ಲೂಕಿಗೆ ಸೇರಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ವಾರ್ಷಿಕ ಸರಾಸರಿ ಮಳೆ 750 ಮಿಮೀ.

ಕಪ್ಪು ಜೇಡಿಮಣ್ಣಿನ ಮತ್ತು ಮರಳು ಮಿಶ್ರಿತ ಕಪ್ಪುಮಣ್ಣಿನ ಪ್ರದೇಶವಿರುವ ಈ ತಾಲ್ಲೂಕಿನ ಮುಖ್ಯ ಬೆಳೆಗಳು ಜೋಳ, ಸೇಂಗಾ ಮತ್ತು ಹತ್ತಿ. ಇದರ ಜೊತೆಗೆ ನೀರಾವರಿಯಿಂದ ದ್ವಿದಳ ಧಾನ್ಯಗಳನ್ನೂ ಇತರ ತೋಟದ ಬೆಳೆಗಳನ್ನೂ ಬೆಳೆಯುತ್ತಾರೆ.

ತಾಲ್ಲೂಕಿನಲ್ಲಿ ಅಂಚೆ, ತಂತಿ, ದೂರವಾಣಿ, ವಿದ್ಯುತ್ತು, ಆಸ್ಪತ್ರೆ ಮತ್ತು ಪ್ರೌಢಶಾಲೆ ಮುಂತಾದವುಗಳ ಸೌಲಭ್ಯವಿದೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ತಾಲ್ಲೂಕು ಮತ್ತು ಜಿಲ್ಲಾ ಹೆದ್ದಾರಿಗಳಿದ್ದು ಉತ್ತಮ ಮಾರ್ಗ ಸಂಪರ್ಕಗಳಿವೆ. ಬೆಂಗಳೂರು–ಧಾರವಾಡ ರೈಲ್ವೆ ಮಾರ್ಗ ತಾಲ್ಲೂಕಿನ ಮಧ್ಯದಲ್ಲಿ ಹಾದು ಹೋಗಿದ್ದು ತಾಲ್ಲೂಕಿನ ವ್ಯಾಪಾರಾಭಿವೃದ್ಧಿಗೆ ಸಹಕಾರಿಯಾಗಿದೆ.

ಈ ತಾಲ್ಲೂಕಿನ ಕೆಲವು ಪ್ರಸಿದ್ಧ ಸ್ಥಳಗಳಲ್ಲಿ ಸವಣೂರಿಗೆ ವಾಯವ್ಯದಲ್ಲಿ 6 ಕಿಮೀ ದೂರದ ಮಂತ್ರೋಡಿಯಲ್ಲಿರುವ ಸಿದ್ದೇಶ್ವರ ಮಠ ಪ್ರಸಿದ್ಧವಾದದ್ದು. ಸವಣೂರಿಗೆ ವಾಯವ್ಯದಲ್ಲಿ 8 ಕಿಮೀ ದೂರದಲ್ಲಿರುವ ಕರಡಗಿಯಲ್ಲಿರುವ ವೀರಭದ್ರ ದೇವಾಲಯ ಬಹು ಹೆಸರಾದದ್ದು.

ಸವಣೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಧಾರವಾಡ–ಹುಬ್ಬಳ್ಳಿಗೆ ಆಗ್ನೇಯದಲ್ಲಿ 64 ಕಿಮೀ ದೂರದಲ್ಲಿದೆ. ಲಕ್ಷ್ಮೇಶ್ವರ–ಹಾನಗಲ್ಲುಗಳ ನಡುವೆ ಜಿಲ್ಲಾ ಹೆದ್ದಾರಿಯಲ್ಲಿರುವ ಸವಣೂರು ಪಟ್ಟಣ ಪ್ರದೇಶದಲ್ಲಿ 18,344 ಮಂದಿ ಗಂಡಸರು, 17,217 ಮಂದಿ ಹೆಂಗಸರಿದ್ದು ಒಟ್ಟು ಜನಸಂಖ್ಯೆ 35,563. ಈ ಊರು ಸ್ಥಾಪಿತವಾದದ್ದು ಔರಂಗಜೇಬನ ಕಾಲದಲ್ಲಿ. ರವೂಫ್‍ಖಾನ್ ಎಂಬವನಿಗೆ ತೋರಗಲ್ಲು ಬಂಕಾಪುರ ಮುಂತಾದ ಇಪ್ಪತ್ತೆರಡು ಮಹಲುಗಳನ್ನೊಳಗೊಂಡ ಪ್ರದೇಶವನ್ನು ಔರಂಗಜೇಬ್ ಬಹುಮಾನವಾಗಿ ಕೊಟ್ಟ. ಆ ಪ್ರದೇಶಕ್ಕೆ ಮುಖ್ಯ ಪಟ್ಟಣ ಬಂಕಾಪುರ. ರವೂಫ್‍ಖಾನ್ ಜನಮಾರನಹಳ್ಳಿ ಎಂಬ ಗ್ರಾಮಕ್ಕೆ ರಾಜಧಾನಿಯನ್ನು ಬದಲಾಯಿಸಬೇಕೆಂದು ನಿಶ್ಚಯಿಸಿದ. ಆಗ ಶ್ರಾವಣಮಾಸ. ಆದ್ದರಿಂದ ರಾಜಧಾನಿಗೆ ಶ್ರಾವಣೂರು ಎಂಬ ಹೆಸರಿಟ್ಟರು. ಅದೇ ಮುಂದೆ ಸವಣೂರು ಎಂದಾಯಿತು.

ಸವಣೂರಿನ ಸುತ್ತಲ ತೋಟಗಳಲ್ಲಿ ಬೆಳೆಯುವ ವೀಳ್ಯದೆಲೆ ಹೆಸರಾದದ್ದು, ಸುತ್ತಲ ಗ್ರಾಮಗಳಿಗೆ ವ್ಯಾಪಾರ ಕೇಂದ್ರವಾಗಿರುವ ಈ ಪಟ್ಟಣದಿಂದ ಹೆಚ್ಚಾಗಿ ಸೇಂಗಾ, ವೀಳ್ಯದೆಲೆ, ಹತ್ತಿ ರಫ್ತಾಗುತ್ತವೆ. ಮರಕೊಯ್ಯುವ ಮತ್ತು ಹತ್ತಿ ಬಿಡಿಸುವ ಕಾರ್ಖಾನೆಗಳಿವೆ.

ಹಿಂದೆ ಹೆಸರಾದ ಅಗ್ರಹಾರವಾಗಿದ್ದ ಈ ಪಟ್ಟಣದಲ್ಲಿ ಈಗಲೂ ಲಕ್ಷ್ಮೇಶ್ವರ ಅಗಸಿ, ಬಂಕಾಪುರ ಅಗಸಿ ಮತ್ತು ಬೆಲ್ಲದ ಅಗಸಿ ಎಂಬ ಮೂರು ಮಹಾದ್ವಾರಗಳ ಅವಶೇಷಗಳನ್ನು ಕಾಣಬಹುದು. ಹಾಗೇ ಕೆಲವು ಮಸೀದಿಗಳೂ ದೇವಸ್ಥಾನಗಳೂ ನವಾಬರ ಅರಮನೆ, ಸತ್ಯಬೋಧ ಸ್ವಾಮಿಗಳ ಮಠ, ಕೆಲವು ಶಿಲಾಶಾಸನಗಳೂ ಮತ್ತು ಕೋಟೆಯ ಅವಶೇಷಗಳೂ ಇಲ್ಲಿವೆ. ಔರಂಗಜೇಬನ ಕಾಲದಿಂದ ಬ್ರಿಟಿಷರ ಕೈಸೇರುವವರೆಗೆ ಸವಣೂರನ್ನು ಆಳಿದ ಮಾಂಡಲಿಕ ಮನೆತನವನ್ನು ಸವಣೂರು ನವಾಬರು ಎಂದು ಕರೆಯಲಾಯಿತು. **(ಎಸ್.ವಿ.ಪಿ.)**

**ಸವಣೂರು ನವಾಬರು:** ಔರಂಗಜೇಬನ ಕಾಲದಲ್ಲಿ ಸವಣೂರನ್ನು ಆಳಿದ ಮಾಂಡಲಿಕ ಮನೆತನ. ಔರಂಗಜೇಬ್ 1707ರಲ್ಲಿ ಕಾಲವಾದ ಮೇಲೆ ಮುಗಲ ಸಾಮ್ರಾಜ್ಯ ಶಿಥಿಲವಾದ್ದರಿಂದ ಕೆಲಕಾಲ ಇವರು ಹೈದರಾಬಾದಿನ ನಿಜಾಮನಿಗೆ ಅಧೀನರಾಗಿರಬೇಕಾಯಿತು. ಆಗ ದಕ್ಷಿಣದಲ್ಲಿ ಮರಾಠರ ಪ್ರಾಬಲ್ಯ ಬೆಳೆಯುತ್ತಿತ್ತು. 1746ರಲ್ಲಿ ಕೃಷ್ಣಾ ತುಂಗಭದ್ರಾ ನದಿಗಳ ಮಧ್ಯದ ಪ್ರದೇಶದಲ್ಲಿ ಚೌತ್ ಅನ್ನು ವಸೂಲು ಮಾಡಲು ಬಂದ ಮರಾಠ ಅಧಿಕಾರಿಯನ್ನು ಪ್ರತಿಭಟಿಸಿದ್ದರಿಂದ ಮರಾಠ ಸೈನ್ಯವೊಂದು ಸವಣೂರಿನ ಮೇಲೆ ದಾಳಿ ನಡೆಸಿತು. ಇದನ್ನು ಎದುರಿಸಲಾರದೆ ಸವಣೂರ ನವಾಬ ಗದಗ, ನವಲಗುಂದ, ಧಾರವಾಡ ಮುಂತಾದ ಕೆಲವು ಪ್ರದೇಶಗಳನ್ನು ಮರಾಠರಿಗೆ ಒಪ್ಪಿಸಿ 1747ರಲ್ಲಿ ಸಂಧಿ ಮಾಡಿಕೊಳ್ಳಬೇಕಾಯಿತು. 1764–65ರಲ್ಲಿ ಮರಾಠರಿಗೂ ಹೈದರ್ ಅಲಿಗೂ ಯುದ್ಧವಾಯಿತು. ಇದರಲ್ಲಿ ಪರಾಭವ ಹೊಂದಿದ ಹೈದರ್ ಸವಣೂರನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದಿದ್ದ ತನ್ನ ಆಸೆಯನ್ನು ಕೈಬಿಟ್ಟ. ಕೃಷ್ಣಾನದಿಯ ದಕ್ಷಿಣಕ್ಕಿದ್ದ ಪ್ರಾಂತ್ಯವನ್ನು ಹೈದರ್ ತನ್ನ ಕೈವಶಮಾಡಿಕೊಂಡು ಸವಣೂರು ನವಾಬನ ಸ್ನೇಹ ಸಂಪಾದಿಸಲು ಅವನ ಮಗಳನ್ನು ತನ್ನ ಎರಡನೆಯ ಮಗ ಮದುವೆಯಾಗುವಂತೆಯೂ ತನ್ನ ಮಗಳು ನವಾಬನ ಜ್ಯೇಷ್ಠಪುತ್ರನನ್ನು ಮದುವೆಯಾಗುವಂತೆಯೂ ಏರ್ಪಾಡು ಮಾಡಿದ. ಈ ವಿವಾಹ ಸಂಬಂಧದ ಫಲವಾಗಿ ಹೈದರನ ನೆರವಿನಿಂದ 1756ರಲ್ಲಿ ಮರಾಠರು ತನ್ನಿಂದ ಪಡೆದಿದ್ದ ಕೆಲವು ಪ್ರಾಂತ್ಯಗಳನ್ನು ಪುನಃ ಪಡೆಯಲು ಸವಣೂರು ನವಾಬ ಹಕೀಂಖಾನನಿಗೆ ಸಾಧ್ಯವಾಯಿತು. ಮುಂದೆ 1802ರಲ್ಲಿ ಪೇಶ್ವೆ ಬಾಜಿರಾಯನಿಗೂ ಬ್ರಿಟಿಷರಿಗೂ ಆದ ಒಪ್ಪಂದದಲ್ಲಿ ಸವಣೂರು ಬ್ರಿಟಿಷರ ಕೈಸೇರಿತು. **(ಎ.ಎಂ.)**

**ಸವದತ್ತಿ:** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಉತ್ತರದಲ್ಲಿ ಗೋಕಾಕ ಮತ್ತು ರಾಮದುರ್ಗ ತಾಲ್ಲೂಕುಗಳೂ ಪೂರ್ವಕ್ಕೆ ಧಾರವಾಡ ಜಿಲ್ಲೆಯ ನರಗುಂದ, ದಕ್ಷಿಣದಲ್ಲಿ ಧಾರವಾಡ ಮತ್ತು ನವಲುಗುಂದ ತಾಲ್ಲೂಕುಗಳೂ ಪಶ್ಚಿಮದಲ್ಲಿ ಬೈಲಹೊಂಗಲ (ಸಂಪಗಾಂವ) ತಾಲ್ಲೂಕೂ ಸುತ್ತುವರೆದಿವೆ. ಒಟ್ಟು 116 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,581 ಚ.ಕಿಮೀ. ಸವದತ್ತಿಯನ್ನು ಪರಸಗಡ ತಾಲ್ಲೂಕೆಂದೂ ಕರೆಯುತ್ತಾರೆ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 3,11,745. ಇದರಲ್ಲಿ 2,73,590 ಮಂದಿ ಗ್ರಾಮೀಣರೂ 38,155 ಮಂದಿ ಪಟ್ಟಣಿಗರೂ ಇದ್ದಾರೆ.

ಎಲ್ಲಮ್ಮ ದೇವಾಲಯ, ಸವದತ್ತಿ

ಈ ತಾಲ್ಲೂಕಿನ ವಾಯವ್ಯ ಮತ್ತು ಆಗ್ನೇಯದ ಮರಳುಗಲ್ಲಿನ ಗುಡ್ಡಶ್ರೇಣಿ ತಾಲ್ಲೂಕನ್ನು ಇಬ್ಭಾಗವಾಗಿಸಿದೆಯೆನ್ನಬಹುದು. ಈ ತಾಲ್ಲೂಕಿನ ಪಶ್ಚಿಮದಲ್ಲಿ ಇಂಗಳಗಿ ಗ್ರಾಮದ ದಕ್ಷಿಣದಲ್ಲಿ ತಾಲ್ಲೂಕನ್ನು ಪ್ರವೇಶಿಸುವ ಮಲಪ್ರಭಾ ಈ ತಾಲ್ಲೂಕಿನ ಮುಖ್ಯ ನದಿ. ಮಲ್ಲೂರಿನ ಬಳಿ ಪೂರ್ವಕ್ಕೆ ಗಮಿಸಿ ಯಕ್ಕುಂಡಿ ಬಳಿ ದಕ್ಷಿಣಕ್ಕೆ ತಿರುಗಿ ಮುಗಳಿಯ ಬಳಿ ಉತ್ತರಕ್ಕೆ ತಿರುಗಿ ಮತ್ತೆ ಸ್ವಲ್ಪ ದೂರದಲ್ಲಿ ಪೂರ್ವಾಭಿಮುಖವಾಗಿ ಹರಿದು ಹಡಗಲಿಯಿಂದ ಸ್ವಲ್ಪ ಮುಂದೆ ಮತ್ತೆ ಉತ್ತರಕ್ಕೆ ತಿರುಗಿ ನವಿಲುತೀರ್ಥದ ಮೂಲಕ ಸ್ವಲ್ಪ ದೂರ ಪ್ರವಹಿಸಿ ಅನಂತರ ಈಶಾನ್ಯಾಭಿಮುಖವಾಗಿ ಹರಿದು ಭಂಡಾರಹಳ್ಳಿಯ ಪೂರ್ವದಲ್ಲಿ ರಾಮದುರ್ಗ ತಾಲ್ಲೂಕನ್ನು ಪ್ರವೇಶಿಸುತ್ತದೆ. ಸವದತ್ತಿಯ ವಾಯವ್ಯಕ್ಕೆ ಸು. 6 ಕಿಮೀ ದೂರದಲ್ಲಿ ನವಿಲುತೀರ್ಥದ ಬಳಿ ಈ ನದಿಗೆ ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ಸು. 1,20,000 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗಿದೆ.

ತಾಲ್ಲೂಕಿನ ಮಧ್ಯದಲ್ಲಿರುವ ಮರಳುಗಲ್ಲಿನ ಗುಡ್ಡದ ದೆಸೆಯಿಂದಾಗಿ ಈ ತಾಲ್ಲೂಕಿನ ಉತ್ತರ ಭಾಗದ ಭೂಮಿ ಮರಳುಗಲ್ಲಿನ ಗರಸು ಮತ್ತು ಮಸಾರಿ ಮಣ್ಣಿನಿಂದ ಕೂಡಿದೆ. ಆಗ್ನೇಯ ದಿಕ್ಕಿನ ಗುಡ್ಡದ ಇಳಿಜಾರಿನ ಕೆಳಗಡೆಯಲ್ಲಿ ಕಪ್ಪುಮಿಶ್ರಿತ ಮಣ್ಣಿನ ಫಲವತ್ತಾದ ಪ್ರದೇಶವಿದೆ. ತಾಲ್ಲೂಕಿನ ಉತ್ತರ ಭಾಗದಲ್ಲಿ ಮಳೆ ಕಡಿಮೆ. ಪಶ್ಚಿಮದ ಕಡೆಗೆ ಸಹ್ಯಾದ್ರಿ ಗಿರಿಶ್ರೇಣಿಗಳಿಗೆ ಸಮೀಪವಾಗುವ ಪ್ರದೇಶಕ್ಕೆ ಸಾಕಷ್ಟು ಮಳೆಯಾಗುವುದು. ವಾರ್ಷಿಕ ಸರಾಸರಿ ಮಳೆ 661.45 ಮಿಮೀ. ಬೇಸಗೆಯಲ್ಲಿ ಈ ತಾಲ್ಲೂಕಿನ ಹವೆ ಅಧಿಕ ತಾಪಮಾನದಿಂದ ಕೂಡಿರುತ್ತದೆ. ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿರುವ ಈ ತಾಲ್ಲೂಕಿನ ಮುಖ್ಯ ಬೆಳೆಗಳೆಂದರೆ ಹತ್ತಿ, ಗೋಧಿ, ಜೋಳ, ಸೇಂಗಾ ಮತ್ತು ಸಜ್ಜೆ. ಈ ತಾಲ್ಲೂಕಿನಲ್ಲಿ ಹತ್ತಿ ನೂಲುವುದು, ಗಾಣದ ಎಣ್ಣೆ ತೆಗೆಯುವುದು ಮುಂತಾದ ಗೃಹಕೈಗಾರಿಕೆಗಳಿವೆ.

ಸವದತ್ತಿಯ ಉತ್ತರಕ್ಕೆ 11 ಕಿಮೀ ದೂರದಲ್ಲಿರುವ ಮನೋಳಿ ಮಲಪ್ರಭಾ ನದಿಯ ಎಡದಂಡೆಯ ಮೇಲಿದೆ. ಇದಕ್ಕೆ ಹಿಂದೆ ಮುನಿಪುರ ಅಥವಾ ಮುನಿವಳ್ಳಿ ಎಂಬ ಹೆಸರಿತ್ತು. ಇಲ್ಲಿನ ನದೀ ತೀರದಲ್ಲೇ ಏಳೆಂಟು ಸಣ್ಣದೊಡ್ಡ ಸುಂದರವಾದ ಪಂಚಲಿಂಗದೇವರ ಮಂದಿರಗಳಿವೆ. ಇಲ್ಲಿ 7ನೆಯ ಯಾದವ ಕೃಷ್ಣನ (1246–60) ಕಾಲದ ಶಿಲಾಶಾಸನಗಳಿವೆ. ಊರ ಬದಿಯಲ್ಲಿ ಭದ್ರವಾದ ಹಳೆಯ ಕೋಟೆಯಿದ್ದು, ಅಲ್ಲಿ ಹಿಂದೆ ಸಾಮಂತರು ಪೂಜಿಸುತ್ತಿದ್ದ ಹನುಮಂತ ಹಾಗೂ ಉಡಚವ್ವನ ಮಂದಿರಗಳಿವೆ. 1786ರಲ್ಲಿ ಪರಶುರಾಮ ಭಾವು ತೊರಗಲ್ ಮುಖ್ಯಸ್ಥರಿಂದ ಈ ಕೋಟೆಯನ್ನು ತೆಗೆದುಕೊಂಡಿದ್ದ. 1800 ರಲ್ಲಿ ಅದು ಬ್ರಿಟಿಷರ ವಶವಾಯಿತು. ಹಿಂದೆ ಈ ಗ್ರಾಮ ಬಟ್ಟೆಗಳಿಗೆ ಬಣ್ಣ ಹಾಕುವ ಉದ್ಯಮಕ್ಕೆ ಹೆಸರಾಗಿತ್ತು. ನವಿಲುತೀರ್ಥ ಅಣೆಕಟ್ಟು ಇಲ್ಲಿಗೆ ಸು. 4 ಕಿಮೀ ದೂರದಲ್ಲಿದೆ. ಗುರ್ಲಹೊಸೂರು ನೀರಿನಲ್ಲಿ ಮುಳುಗಿಹೋದ್ದರಿಂದ ಅಲ್ಲಿನ ಚಿದಂಬರೇಶ್ವರ ದೇವಸ್ಥಾನವನ್ನು ಇಲ್ಲಿ ಕಟ್ಟಲಾಗುತ್ತಿದೆ. ಮುರಗೋಡ ಸವದತ್ತಿಯ ವಾಯವ್ಯಕ್ಕೆ ಸು. 24 ಕಿಮೀ ದೂರದಲ್ಲಿದೆ. ಇದಕ್ಕೆ ಹಿಂದೆ ತ್ರಿಶಂಗಪುರವೆಂದು ಕರೆಯುತ್ತಿದ್ದರಂತೆ. ಇಲ್ಲಿ ಪ್ರಸಿದ್ಧವಾದ ಮಲ್ಲಿಕಾರ್ಜುನ ದೇವಾಲಯವಿದೆ. ಒಂದು ಹಳೆಯ ಕೋಟೆಯಿದ್ದು 1565ರಲ್ಲಿ ನವಲಗುಂದ ವಿಠ್ಠಲಗೌಡ ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದ. 1680ರಲ್ಲಿ ಶಿವಾಜಿ ಮರಣ ಹೊಂದುವ ಕಾಲಕ್ಕೆ ಇದು ಅವನ ಅಂಕಿತದಲ್ಲಿತ್ತು. ಮುರಗೋಡ ಕೀಲಿಗಳೆಂದು ಹೆಸರಾದ ಕೀಲಿಗಳು ಇಲ್ಲಿ ತಯಾರಾಗುತ್ತಿದ್ದವು. ಇಲ್ಲಿ ಶ್ರೀ ಚಿದಂಬರೇಶ್ವರರ ದೊಡ್ಡ ಮಠವಿದೆ. ಇದು ಚಿದಂಬರ ದೀಕ್ಷಿತರ ಜನ್ಮಸ್ಥಾನ. ಸವದತ್ತಿಯ ಈಶಾನ್ಯಕ್ಕೆ 9 ಕಿಮೀ ದೂರದಲ್ಲಿರುವ ಹೂಲಿಯನ್ನು ಮೊದಲು ಪೂವಲ್ಲಿ ಎಂದೂ ಕರೆಯುತ್ತಿದ್ದರು. ಶಿಲಾಶಾಸನಗಳಿಂದೊಡಗೂಡಿದ ಪಂಚಲಿಂಗದೇವರ (11ನೆಯ ಶತಮಾನದ) ಸುಂದರವಾದ ಮಂದಿರವಿದೆ. ಇದು ಮೂಲದಲ್ಲಿ ಜೈನಬಸದಿಯಾಗಿತ್ತು. ಸುಮಾರು ಅದೇ ಕಾಲದಲ್ಲಿಯೇ ರಚಿಸಿರಬಹುದಾದ ಅಂಧಕೇಶ್ವರ, ತಾರಕೇಶ್ವರ ಮುಂತಾದ ಹಲವಾರು ಮಂದಿರಗಳ ಸಮೂಹವೇ ಈ ಊರ ಗುಡ್ಡದ ಬದಿಯಲ್ಲಿವೆ. ಇಲ್ಲಿ 5ನೆಯ ವಿಕ್ರಮಾದಿತ್ಯ (1018–42) ಮತ್ತು 2ನೆಯ ಸೋಮೇಶ್ವರರಿಗೆ (1068–75) ಸಂಬಂಧಿಸಿದ ಶಿಲಾಶಾಸನಗಳಿವೆ.

ಗ್ರಾಮಕ್ಕೆ ಸನಿಹದಲ್ಲಿಯೇ 200' ಎತ್ತರದ ಗುಡ್ಡದ ತುದಿಯಲ್ಲಿ ಒಂದು ಹಳೆಯ ಕೋಟೆಯಿದೆ. ತಾಳೀಕೋಟೆ ಕದನದ ಅನಂತರ ಇದು ಶಿರಸಂಗಿ ದೇಸಾಯರ ವಶಕ್ಕೆ ಬಂದಿತ್ತು. 1674ರಲ್ಲಿ ತನ್ನ ವಶದಲ್ಲಿದ್ದ ಈ ಕೋಟೆಯನ್ನು ಶಿವಾಜಿ ಜೀರ್ಣೋದ್ಧಾರಗೊಳಿಸಿದ್ದನಂತೆ. ಹೂಲಿ ಅಜ್ಜನವರ ಪ್ರಸಿದ್ಧವಾದ ಮಠವಿದೆ. ಬಹು ಹಿಂದೆ ದಕ್ಷಿಣದ ಕಾಶಿ ಎಂದು ಹೆಸರಾದ ಪುಣ್ಯಸ್ಥಳವಿದು. ಸವದತ್ತಿಯ ಈಶಾನ್ಯಕ್ಕೆ ಸುಮಾರು 19 ಕಿಮೀ ದೂರದಲ್ಲೂ ಸವದತ್ತಿ–ರಾಮದುರ್ಗ ಜಿಲ್ಲಾ ಹೆದ್ದಾರಿಯಲ್ಲೂ ಇರುವ ಶಿರಸಂಗಿ ಉತ್ತರ ಕರ್ನಾಟಕದಲ್ಲಿ ನೂರೆಂಟು ಶಿಕ್ಷಣ ಸಂಸ್ಥೆಗಳಿಗೆ ಕಾರಣೀಭೂತರಾದಂಥ ತ್ಯಾಗವೀರ ಶಿವಸಂಗಿ ದೇಸಾಯರ ಊರು. ಇಲ್ಲಿ ಭದ್ರವಾದ ಕೋಟೆಯಿದೆ. ಊರ ಉತ್ತರದಲ್ಲಿ ಕಾಳಮ್ಮನ ಪ್ರಸಿದ್ಧ ದೇವಸ್ಥಾನವಿದೆ. ಈ ಊರನ್ನು ಮೊದಲು ಶಿರಶೃಂಗವೆಂದು ಕರೆಯುತ್ತಿದ್ದರಂತೆ. ಈ ತಾಲ್ಲೂಕಿನ ಎಲ್ಲಮ್ಮನ ಗುಡ್ಡ ಒಂದು ಯಾತ್ರಾಸ್ಥಳ. ಸವದತ್ತಿಯ ಆಗ್ನೇಯದಲ್ಲಿ ಸು.8 ಕಿಮೀ ದೂರದಲ್ಲೂ ಹಾಗೂ ಉಗರಕೊಳ್ಳದಿಂದ ಪಶ್ಚಿಮಕ್ಕೆ ಸುಮಾರು 2–3 ಕಿಮೀ ದೂರದಲ್ಲಿರುವ ಸಿದ್ಧನಕೊಳ್ಳ, ಸುಗನಕೊಳ್ಳಗಳಾಗಿ ಐದು ಕೊಳ್ಳಗಳಿಂದೊಡಗೂಡಿದ ಎತ್ತರವಾದ ಗುಡ್ಡದಲ್ಲಿ ಹರಿದು ಬರುವ ಸರಸ್ವತೀ ತಟಾಕದ ತಡಿಯಲ್ಲಿ ಇಲ್ಲಿನ ರೇಣುಕಾಂಬೆಯ ದೇವಸ್ಥಾನವಿದೆ. ಇದು ಪರಶುರಾಮ, ಜಮದಗ್ನಿ–ರೇಣುಕೆಯರ ತಪೋಭೂಮಿಯೆಂದು ನಂಬಿಕೆ. ಈ ಗುಡ್ಡದ ಓರೆಯಲ್ಲಿ

ಹಲವಾರು ವಸತಿಗೃಹಗಳು, ಎಣ್ಣೆಹೊಂಡ, ಅರಿಷಿಣ ಹೊಂಡ, ವಿಶಾಲವಾದ ಪೌಳಿ ಮತ್ತು ಮಾರುಕಟ್ಟೆಗಳಿವೆ. ಪ್ರತಿ ಹುಣ್ಣಿಮೆಯಲ್ಲೂ ಜಾತ್ರೆ ನಡೆಯುತ್ತದೆ. ವಿಶೇಷವಾಗಿ ಬನದ ಹುಣ್ಣಿಮೆ ಭಾರತ ಹುಣ್ಣಿಮೆಗಳಲ್ಲಿ ಲಕ್ಷಾವಧಿ ಜನರು ಇಲ್ಲಿಗೆ ಆಗಮಿಸುತ್ತಾರೆ. ಈ ದೇವಸ್ಥಾನದಲ್ಲಿ 1514ರ ಶಾಸನವೊಂದು ಮಂದಿರದ ಮಂಟಪದ ರಚನೆಯನ್ನು ತಿಳಿಸುವುದು. ಇಲ್ಲಿನ ಮಂದಿರ ಎರಡು ಸಾವಿರ ವರ್ಷದಷ್ಟು ಹಿಂದಿನದೆಂದು ಪ್ರತೀತಿ. ರಚನೆಯ ದೃಷ್ಟಿಯಿಂದ ಇದು 7 ಅಥವಾ 8ನೆಯ ಶತಮಾನಕ್ಕೆ ಸೇರಬಹುದೆಂದು ನಂಬುಗೆ, ಸವದತ್ತಿಯ ವಾಯವ್ಯಕ್ಕೆ ಸು. 24 ಕಿಮೀ ದೂರದಲ್ಲಿ, ಬೆಟ್ಟದಡಿಯಲ್ಲಿರುವ ಸೋಗಲ ಪುಟ್ಟಗ್ರಾಮ ಮತ್ತು ಪುಣ್ಯಕ್ಷೇತ್ರ. ಇದರ ಆಗ್ನೇಯಕ್ಕೆ ಸುಮಾರು 14 ಕಿಮೀ ದೂರದಲ್ಲಿರುವ ನವಿಲುತೀರ್ಥವಿದೆ. ಸೋಗಲದ ಬಳಿ 50[1] ಆಳಕ್ಕೆ ದುಮುಕುವ ಜಲಪಾತವಿದೆ. ಇದರ ಮೇಲುಗಡೆ ಸುಂದರ ಪ್ರದೇಶದಲ್ಲಿ ಎರಡು ಸಣ್ಣ ಜಲಪಾತಗಳಿವೆ. ಇಲ್ಲೊಂದು ಸೋಮೇಶ್ವರ ದೇವಸ್ಥಾನವಿದೆ.

ಸವದತ್ತಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬೆಳಗಾಂವಿಯ ಆಗ್ನೇಯಕ್ಕೆ 78 ಕಿಮೀ ದೂರದಲ್ಲಿದೆ. ಜನಸಂಖ್ಯೆ 16,011.

ಇದು ತಾಲ್ಲೂಕಿನ ಮತ್ತು ಸುತ್ತಲ ಗ್ರಾಮಗಳ ಮುಖ್ಯ ವ್ಯಾಪಾರ ಕೇಂದ್ರ. ಸೇಂಗಾ, ಹತ್ತಿ, ಕುಸುಬೆ ಇಲ್ಲಿನ ಮುಖ್ಯ ವ್ಯಾಪಾರ ವಸ್ತುಗಳು. ಅಂಚೆ, ತಂತಿ, ದೂರವಾಣಿ, ಆಸ್ಪತ್ರೆ, ಔಷಧಾಲಯಗಳು, ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳು ಮತ್ತು ವಿದ್ಯುತ್ತಿನ ಸೌಲಭ್ಯಗಳಿವೆ. ತಾಲ್ಲೂಕಿನ ಎಲ್ಲೆಡೆಗೂ ಇಲ್ಲಿಂದ ಮಾರ್ಗಸಂಪರ್ಕವಿದೆ.

ಹಿಂದೆ ಇದನ್ನು ಸುಗಂಧವರ್ತಿ, ಸಂವಧವರ್ತಿ, ಸವಧವರ್ತಿ ಎಂದು ಕರೆಯುತ್ತಿದ್ದರೆಂದು ತಿಳಿದುಬರುವುದು. ಇಲ್ಲಿನ ಗುಡ್ಡದ ಮೇಲೆ ಈಗಲೂ ರಟ್ಟರ ಕಾಲದ ಕೋಟೆಯ ಅವಶೇಷವಿದೆ. ಈ ಪಟ್ಟಣ 10ರಿಂದ 13ನೆಯ ಶತಮಾನದವರೆಗೆ ಸವದತ್ತಿಯ ರಟ್ಟರ ರಾಜಧಾನಿಯಾಗಿತ್ತು. ಇಲ್ಲಿ ಅಂಕುರೇಶ್ವರ, ಪುರಂದರೇಶ್ವರ, ಶಂಕರಲಿಂಗದೇವ ಮುಂತಾದ ಹಳೆಯ ದೇವಾಲಯಗಳಿವೆ. ಒಂದು ಜೈನ ಬಸದಿಯೂ ಇದೆ. ಕೇಶಿರಾಜನೆಂಬುವನು ಸು. 1230ರಲ್ಲಿ ನಾಗರಕೆರೆಯ ದಂಡೆಯ ಮೇಲೆ ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯವಿದೆ. 1800ರಲ್ಲಿ ಈ ಊರು ಬ್ರಿಟಿಷರ ವಶವಾಯಿತು.

*

**ಸವಾಯಿ ಗಂಧರ್ವ (ರಾಮರಾವ್ ಕುಂದಗೋಳ):** 1886–1952. ಗಾಯಕರು ಹಾಗೂ ರಂಗಭೂಮಿ ನಟ. ಧಾರವಾಡ ಜಿಲ್ಲೆಯ ಕುಂದಗೋಳದವರು. ರಾಮಭಾವು ಕುಂದಗೋಳಕರ ಎಂಬುದು ಇವರ ಹೆಸರಾಗಿತ್ತು. ಚಿಕ್ಕಂದಿನಿಂದಲೇ ಸಂಗೀತದ ಅಭಿರುಚಿ ಇದ್ದ ಇವರಿಗೆ ಇವರ ತಂದೆ ಗಣಪತರಾವ್ ಸಂಶಿ ಉತ್ತೇಜನ ನೀಡುತ್ತಿದ್ದರು. ಬಳವಂತರಾವ ಕೊಲ್ಹಟಕರ ಇವರ ಸಂಗೀತ ಗುರುಗಳು. ಒಂದೂವರೆ ವರ್ಷದಲ್ಲಿ 75 ದ್ರುಪದ್, 25 ತರಾಣೆ, 100 ಚೀಜ್ ಮತ್ತು ತಾಳಗಳನ್ನು ಕಲಿತು ಬಾಲಗವಾಯಿ ಎಂದು ಪ್ರಸಿದ್ಧರಾದರು. ಅನಂತರ ಕಿರಾಣ ಘರಾಣದ ಪ್ರವರ್ತಕರಾದ ಅಬ್ದುಲ್ ಕರೀಮ್‌ಖಾನರ ಶಿಷ್ಯರಾಗಿದ್ದರು (1900–07). ಗ್ವಾಲಿಯರ್ ಘರಾಣದ ನಿಸ್ಸಾರ್ ಹುಸೇನ್ ಖಾನರ ಸಂಪರ್ಕದಿಂದ ಇವರ ಸಂಗೀತಕ್ಕೆ ವಿಶೇಷ ಮೆರುಗು ಬಂತು. ಇವರ ಗಾಯನ ಎಂದರೆ ಆಲಾಪ, ಮೀಂಡ್, ಬಢತ್, ಘಸೀಟ್ ತಾನ್, ಪಲಟಾ, ಬೋಲ್‌ತಾನ್, ಮೂರ್ಛನಾ, ಖಟಕಾ, ಮುರಕಿಗಳ ನಳಪಾಕ. ಸ್ವಂತದ್ದೂ ಸೇರಿದಂತೆ ಹಲವಾರು ನಾಟಕ ಕಂಪನಿಗಳಲ್ಲಿ ಗಾಯಕನಟರಾಗಿದ್ದ ಇವರು ಸ್ತ್ರೀ ಪಾತ್ರಗಳ ನಟನೆಯಲ್ಲಿ ಸಿದ್ಧಹಸ್ತರಾಗಿ ದ್ದರು. 1919ರಲ್ಲಿ ಉಮರಾವತಿಯಲ್ಲಿ ಕಲಾಭಿಮಾನಿಗಳಿಂದ ಸವಾಯಿ ಗಂಧರ್ವ ಎಂಬ ಬಿರುದಿಗೆ ಪಾತ್ರರಾದರು. ಅಂದಿನಿಂದ ಅದೇ ಶಾಶ್ವತ ಹೆಸರಾಗಿ ಉಳಿಯಿತು. ಗಂಗೂಬಾಯಿ ಹಾನಗಲ್, ಭೀಮಸೇನ ಜೋಶಿ, ಫಿರೋಜ್ ದಸ್ತೂರ, ಬಸವರಾಜ ರಾಜಗುರು ಮುಂತಾದ ಶ್ರೇಷ್ಠ ಗಾಯಕರೆಲ್ಲರಿಗೂ ಇವರು ಗುರುಗಳಾಗಿದ್ದರು. (ಎಸ್.ವಿ.ಕೆ.)

**ಸಸ್ಯ ಸಂಪತ್ತು:** ಕರ್ನಾಟಕದ ಅರಣ್ಯಗಳು ಹಾಗೂ ಅರಣ್ಯ ವೃಕ್ಷಗಳಿಗೆ ಉಜ್ಜ್ವಲ ಇತಿಹಾಸವಿದೆ. ಪ್ರಾಚೀನ ಕಾವ್ಯಗಳಲ್ಲೆಲ್ಲ ಇವುಗಳ ಸುಂದರ ವರ್ಣನೆಗಳು ಹೇರಳವಾಗಿವೆ. ಕರ್ನಾಟಕ ಪ್ರಸ್ಥಭೂಮಿಯ ಉತ್ಕೃಷ್ಟ ಹವಾಗುಣ, ಸಮೃದ್ಧವಾದ ಮಳೆಯಿಂದಾಗಿ ಇಲ್ಲಿನ ಕಾಡುಗಳು ಬಹು ಪ್ರಯೋಜನಕಾರಿಯಾದ ಅನೇಕ ಬಗೆಯ ತರುಲತೆಗಳಿಂದ, ಪ್ರಾಣಿಗಳಿಂದ ಕೂಡಿವೆ.

ಇತಿಹಾಸದ ಪ್ರಾರಂಭದಿಂದಲೂ ಕರ್ನಾಟಕದ ಅರಣ್ಯಗಳು ಮತ್ತು ಅವುಗಳ ಸಸ್ಯಗಳ ಬಗ್ಗೆ ಮಾಹಿತಿ ಇದೆ. ಕರಾವಳಿಯ ಬಂದರುಗಳಿಂದ ಮೆಣಸು, ಏಲಕ್ಕಿ, ಲವಂಗ ಮುಂತಾದ ಪದಾರ್ಥಗಳನ್ನು, ಶ್ರೀಗಂಧ ಮುಂತಾದ ಮರಗಳನ್ನು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಪ್ರಸಿದ್ಧ ವೆನಿಷಿಯನ್ ಯಾತ್ರಿಕ ಮಾರ್ಕೋಪೋಲೊ 1290ರಲ್ಲಿ ಕರ್ನಾಟಕ ಹಾಗೂ ಮಲಬಾರ್‌ಗಳ ಸಸ್ಯ ಸಂಪತ್ತನ್ನು ಪ್ರಶಂಸಿಸಿದ್ದಾನೆ. 1444ರಲ್ಲಿ ವಿಜಯನಗರವನ್ನು ಸಂದರ್ಶಿಸಿದ ಅಬ್ದುಲ್ ರಜಾಕ್ ಕರ್ನಾಟಕದ ಸಸ್ಯಸಂಪತ್ತು, ಅದರ ವ್ಯಾಪಾರ ಸಂಬಂಧ ಇವುಗಳ ಬಗ್ಗೆ ಪ್ರಸ್ತಾಪಿಸಿದ್ದಾನೆ. ವಿಜಯನಗರ ಸಾಮ್ರಾಜ್ಯ ಇರುವವರೆಗೂ ದಕ್ಷ ರೀತಿಯಿಂದ ನಡೆದು ಬರುತ್ತಿದ್ದ ಅರಣ್ಯಗಳ ಆಡಳಿತ ಆ ಸಾಮ್ರಾಜ್ಯದ ಅಳಿವಿನೊಡನೆ ಕುಸಿಯಿತು. ಅರಾಜಕತೆ ತುಂಬಿ ತುಳುಕುತ್ತಿದ್ದ ಆ ಕಾಲದಲ್ಲಿ ಅರಣ್ಯಗಳ ಲೂಟಿ ಹೇರಳವಾಗಿತ್ತು, ಜಮೀನಿಲ್ಲದವರೆಲ್ಲ ಅರಣ್ಯಗಳನ್ನು ಕಡಿದು ಸಾಗುವಳಿ ಮಾಡಲು ಪ್ರಾರಂಭಿಸಿದರು. ಬೆಲೆ ಬಾಳುವ ಶ್ರೀಗಂಧದ ಮರಗಳನ್ನು ಕಡಿದು ಅಕ್ರಮವಾಗಿ ಮಾರಲಾಗುತ್ತಿತ್ತು. ಮೈಸೂರು ಸಂಸ್ಥಾನದ ಆಡಳಿತ ಹೈದರ್ ಅಲಿ ಹಾಗೂ ಟಿಪ್ಪುಸುಲ್ತಾನರ ಕೈಗೆ ಬಂದಾಗ ಕಾಡುಗಳ ಪ್ರಾಮುಖ್ಯದ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ತಿಳಿವಳಿಕೆ ಬಂದಿತ್ತು. ತೇಗ ಮುಂತಾದ ಮರಗಳನ್ನು ಹಡಗು ಕಟ್ಟಲೂ ಶ್ರೀಗಂಧದ ತುಂಡುಗಳನ್ನು ಹೊರದೇಶಗಳಿಗೆ ಕಳಿಸಲೂ ತಕ್ಕ ಏರ್ಪಾಡುಗಳನ್ನು ಮಾಡಲಾಗಿತ್ತು.

ಟಿಪ್ಪುಸುಲ್ತಾನ್ ತೇಗ ಮತ್ತು ಶ್ರೀಗಂಧದ ಮರಗಳನ್ನು ರಾಜವೃಕ್ಷಗಳೆಂದು ಘೋಷಿಸಿದ್ದ. 1799ರಲ್ಲಿ ಮೈಸೂರಿನ ಆಡಳಿತ ಬ್ರಿಟಿಷರ ಕೈವಶವಾದ ಹೊಸತರಲ್ಲಿ ಅವರ ಆಸಕ್ತಿಯೆಲ್ಲ ತೇಗ, ಶ್ರೀಗಂಧ ಮತ್ತು ಸಂಬಾರಪದಾರ್ಥಗಳಿಗೆ ಮಾತ್ರ ಸೀಮಿತವಾಗಿತ್ತು. ಹಡಗು, ರಕ್ಷಣಾ ಸಾಮಗ್ರಿಗಳು ಹಾಗೂ ಗಂಧದ ಎಣ್ಣೆಗಳಲ್ಲೇ ಅವರು ತೃಪ್ತರಾಗಿದ್ದರು. ಆದರೆ ಲಾರ್ಡ್ ಡಾಲ್‌ಹೌಸಿ ಮತ್ತು ಅವನ ಅನಂತರದ ಬ್ರಿಟಿಷ್ ಅಧಿಕಾರಿಗಳು ಸಂಸ್ಥಾನದ ಸಸ್ಯ ಸಂಪತ್ತನ್ನು ರಕ್ಷಿಸುವ ಬಗ್ಗೆ ಹೆಚ್ಚು ಗಮನಕೊಟ್ಟರು.

ಮೈಸೂರು ಸಂಸ್ಥಾನದಲ್ಲಿ ಅರಣ್ಯ ಇಲಾಖೆ ಸ್ಥಾಪಿತವಾದದ್ದು 1864ರಲ್ಲಿ. ಸಂಸ್ಥಾನದ ಅಂದಿನ ವಿಸ್ತೀರ್ಣ ಕೇವಲ 29,500 ಚ.ಮೈಲಿಗಳು. ಅರಣ್ಯ

ಪ್ರದೇಶ ಸಂಸ್ಥಾನದ ವಿಸ್ತೀರ್ಣದ 1/7 ಭಾಗಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. 1956ರಲ್ಲಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಾಗ ಕೆಲವು ಹೊಸ ಅರಣ್ಯ ಪ್ರದೇಶಗಳು, ಹಳೆಯವುಗಳೊಂದಿಗೆ ಕೂಡಿಕೊಂಡವು. ಮದರಾಸು ಪ್ರಾಂತ್ಯಕ್ಕೆ ಸೇರಿದ್ದ ಬಳ್ಳಾರಿ, ಕೊಡಗು, ಕೊಳ್ಳೇಗಾಲ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕಾಡುಗಳು, ಮುಂಬಯಿ ಪ್ರಾಂತ್ಯಕ್ಕೆ ಸೇರಿದ್ದ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶಗಳು ಹಳೆಯ ಮೈಸೂರಿನ ಅರಣ್ಯ ಪ್ರದೇಶಗಳಿಗೆ ಕೂಡಿಕೊಂಡವು.

ಕರ್ನಾಟಕದ ಇಂದಿನ ಒಟ್ಟು ಭೂವಿಸ್ತೀರ್ಣ 1,91,791 ಚ.ಕಿಮೀ. ಇದರಲ್ಲಿ ಕಾಡುಗಳ ವಿಸ್ತೀರ್ಣ 30,62,769 ಹೆಕ್ಟೇರು. ಅಂದರೆ ಒಟ್ಟು ಭೂ ವಿಸ್ತೀರ್ಣದ ಸೇಕಡ 15.20 ಭಾಗದಲ್ಲಿ ಕಾಡುಗಳಿವೆ ಎಂದಾಯಿತು. ಭಾರತದ ಸೇಕಡ ಅರಣ್ಯ ಪ್ರದೇಶ ಮತ್ತು ಇತರ ದೇಶಗಳ ಅರಣ್ಯ ಪ್ರದೇಶಗಳಿಗೆ ಹೋಲಿಸಿದರೆ ಕರ್ನಾಟಕದ ಅರಣ್ಯ ಪ್ರದೇಶ ಬಹಳ ಕಡಿಮೆ. ಭಾರತದ ನೈಋತ್ಯ ಭಾಗದ ಉಷ್ಣವಲಯ ಪ್ರದೇಶದಲ್ಲಿ ಕರ್ನಾಟಕದ ಉತ್ತರ ಅಕ್ಷಾಂಶ $11^0$ $30^1$–18 $45^0$ ಪೂರ್ವರೇಖಾಂಶ $74^0$ $12^1$–$78^0$ $30^1$ ಗಳ ಮಧ್ಯದಲ್ಲಿರುವುದರಿಂದ ಇಲ್ಲಿನ ಬಹಳಷ್ಟು ಪ್ರದೇಶಗಳಲ್ಲಿ ಕಾಡುಗಳು ಬೆಳೆಯಲು ಬೇಕಾದ ಹಿತಕರ ಹವಾಗುಣವಿದೆ. ಮುಂಗಾರು–ಹಿಂಗಾರುಗಳೆರಡರಿಂದಲೂ ಹೇರಳ ಮಳೆ ಬೀಳುತ್ತದೆ (ಸು. 500–7,600 ಮಿಮೀ). ವಾಸ್ತವಿಕವಾಗಿ 2000 ದ ಸಾಲಿನಲ್ಲಿ 1,216 ಮಿಮೀ ಮಳೆಯಾಗಿತ್ತು.

ಇಲ್ಲಿನ ಉಷ್ಣತೆ ಮಳೆಗಾಲದಲ್ಲಿ ಸುಮಾರು $15^0$–$18^0$ ಸೆಂ. ಇದ್ದು ಚಳಿಗಾಲದಲ್ಲಿ $12^0$–$17.5^0$ ಸೆಂ. ನಷ್ಟಿರುತ್ತದೆ. ಬೇಸಗೆಯಲ್ಲಿ ಮಾತ್ರ $18^0$–$20^0$ ಸೆಂ.ನಷ್ಟಿರುತ್ತದೆ. ಭೌಗೋಳಿಕವಾಗಿಯೂ ರಾಜ್ಯದಲ್ಲಿ ವೈವಿಧ್ಯ ಮಯ ಪ್ರದೇಶಗಳು–ಉದಾಹರಣೆಗೆ ಕರಾವಳಿ, ಮಲೆನಾಡು ಹಾಗೂ ಮೈದಾನ ಪ್ರದೇಶಗಳುಂಟು. ಇಂಥ ವೈವಿಧ್ಯ ಪೂರ್ಣ ಸನ್ನಿವೇಶ ಗಳಿರುವುದರಿಂದಲೇ ಇಲ್ಲಿನ ಅರಣ್ಯಗಳಲ್ಲೂ ವೈವಿಧ್ಯ ಎದ್ದು ಕಾಣುತ್ತದೆ. ಇಲ್ಲಿನ ಅರಣ್ಯಗಳು ಮುಖ್ಯವಾಗಿ ದಕ್ಷಿಣದ ಉಷ್ಣವಲಯಕ್ಕೆ ಸೇರಿದವುಗಳು. ಇಲ್ಲಿನ ಹವಾಮಾನ, ವಾರ್ಷಿಕ ಮಳೆ, ಭೂಮಿಯ ರೀತಿ ಮತ್ತು ಪ್ರದೇಶ ಗಳಲ್ಲಿ ಬೆಳೆಯುತ್ತಿರುವ ಪ್ರಧಾನ ವೃಕ್ಷಗಳು ಮುಂತಾದುವನ್ನೆಲ್ಲ ಗಮನಕ್ಕೆ ತೆಗೆದುಕೊಂಡು ಇಲ್ಲಿನ ಅರಣ್ಯಗಳನ್ನು 5 ವಿಧವಾಗಿ ವಿಂಗಡಿಸಲಾಗಿದೆ:

1. ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣದ ಕಾಡು
2. ಉಷ್ಣವಲಯದ ಭಾಗಶಃ ನಿತ್ಯ ಹರಿದ್ವರ್ಣದ ಕಾಡು
3. ಬೇಸಗೆಯಲ್ಲಿ ಎಲೆಯುದುರುವ ಮಲೆನಾಡಿನ ಕಾಡು
4. ಬೇಸಗೆಯಲ್ಲಿ ಎಲೆಯುದುರುವ ಮೈದಾನ ಸೀಮೆಯ ಒಣಕಾಡು
5. ಕಳ್ಳಿ ಕುರುಚಲು ಗಿಡಮರಗಳನ್ನೊಳಗೊಂಡ ಒಣಕಾಡು (ಕುರುಚಲು ಕಾಡು)

1. ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣದ ಕಾಡು : ಪಶ್ಚಿಮ ಘಟ್ಟಗಳ ಎರಡು ಕಡೆಗಳಲ್ಲೂ ಸಮುದ್ರಮಟ್ಟಕ್ಕೆ 9,144ಮೀ ನಿಂದ 18,288ಮೀ ಎತ್ತರದವರೆಗೆ ಈ ಅರಣ್ಯಗಳು ಹಬ್ಬಿಕೊಂಡಿವೆ. ಸು. 400 ಕಿಮೀ ಉದ್ದ ಸು. 24–48 ಕಿಮೀ ಅಗಲವಿರುವ ಈ ಅರಣ್ಯ ಪ್ರದೇಶವನ್ನು ಉತ್ತರ ಕನ್ನಡ ಜಿಲ್ಲೆ, ಆಗುಂಬೆ (ಶಿವಮೊಗ್ಗ ಜಿಲ್ಲೆ), ಬಿಸಲೆಘಾಟ್ (ಹಾಸನ ಜಿಲ್ಲೆ), ಮಾಕುಟ್ಟ (ಕೊಡಗು ಜಿಲ್ಲೆ) ಗಳಲ್ಲಿ ಕಾಣದೊರೆಯುವುದು.

ಈ ಪ್ರದೇಶದಲ್ಲಿ ವರ್ಷಕ್ಕೆ ಸು. 3,800–7,600 ಮಿಮೀ ಗಳವರೆಗೂ ಮಳೆ ಬೀಳುತ್ತಿದ್ದು ಕಾಡು ಬಹಳ ದಟ್ಟವಾಗಿದೆ. ಇಲ್ಲಿನ ತೇವ, ಬೆಳಕು, ಹಿತಕರ ಗಾಳಿ ಇವೆಲ್ಲವೂ ವರ್ಷಪೂರ್ತಿ ಮರಗಳು ಬೆಳೆಯಲು ಅನುಕೂಲ ಗಳನ್ನು ಕಲ್ಪಿಸಿಕೊಟ್ಟಿವೆ. ತುಂಬಿದ ಮೇಲ್ಛಾವಣಿ ಹೊಂದಿರುವ ನಿತ್ಯಹರಿದ್ವರ್ಣ ಕಾಡುಗಳು ಸಾಮಾನ್ಯವಾಗಿ ಮೂರು ವಿವಿಧ ಪದರಗಳ ಸಸ್ಯವರ್ಗಗಳನ್ನು ಒಳಗೊಂಡಿವೆ (ಮೇಲ್ಪದರ, ಮಧ್ಯದ ಪದರ ಮತ್ತು ಕೆಳಗಿನ ಪದರ).

ಮೇಲ್ಪದರದ ವೃಕ್ಷಗಳು: ಇವು ಒಮ್ಮೊಮ್ಮೆ 37ಮೀ ಗಳಷ್ಟು ಎತ್ತರವಿರುವುದುಂಟು. ಮೇಲ್ಪದರದಲ್ಲಿ ಕಾಣಬರುವ ವೃಕ್ಷಗಳೆಂದರೆ ನಾಗಸಂಪಿಗೆ, ಕೀರಲ್ ಭೋಗಿ, ಧೂಪ, ಬೂರುಗ, ಹೈಗ, ಗಂಧಗರಿಗೆ, ಮೆಂಧಧೂಪ, ಕೂವೆ, ಬೊಬ್ಬೆ, ಪಗಡೆ, ಕರಾಚಿ, ಅಜ್ಜನಪಟ್ಟೆ, ಹಲಸು ಇತ್ಯಾದಿ.

ಮಧ್ಯದ ಪದರ: ಸರಾಸರಿ 5ಮೀಗಳಿಗಿಂತ ಸ್ವಲ್ಪ ಹೆಚ್ಚು ಎತ್ತರದ ಮರಗಳನ್ನು ಒಳಗೊಂಡಿದೆ. ಇದರಲ್ಲಿನ ಮುಖ್ಯವಾದ ಮರಗಳೆಂದರೆ ಬಿಳಿಸಂಪಿಗೆ, ಒಂಟೆಮರ, ದೇವಗರಿಗೆ, ಸಂಪಿಗೆ, ಕಾಡುಹಿಪ್ಪೆ, ಜಂತಲ, ನೇರಳೆ ಮುಂತಾದವು.

ಕೆಳಗಿನ ಪದರ: ಇದರಲ್ಲಿನ ಮರಗಳ ಸರಾಸರಿ ಎತ್ತರ 8.22ಮೀ. ಮುಖ್ಯ ಮರಗಳೆಂದರೆ ಬಸವನಪಾದ, ಅಶೋಕ, ಲವಂಗ, ಮಟ್ಟನೇರಳೆ, ಕಾಡುನೇರಳೆ, ಲೋಕುಂದಿ, ಕರಿಬೇವು, ಗುರಿಗೆ ಇತ್ಯಾದಿ.

ಇವಲ್ಲದೆ ಕೆಳಗಿನ ಸಸ್ಯವರ್ಗದಲ್ಲಿ ಇವುಗಳ ಅಕ್ಕಪಕ್ಕಗಳಲ್ಲಿ ಹಾಗೂ ಕೆಳಭಾಗಗಳಲ್ಲಿ ಸಣ್ಣ ಬೆತ್ತ ಮತ್ತು ಇತರ ಬೆತ್ತದ ಪ್ರಭೇದಗಳು, ಬಗನಿ, ಕಿರು ಈಚಲು, ಎಡಮುರಿ, ಮಂಗರೆ ಮುಂತಾದವು ಉಂಟು.

ಈ ಕಾಡುಗಳಲ್ಲಿ ಅಡರು ಸಸ್ಯಗಳಿಗೇನೂ ಕೊರತೆ ಇಲ್ಲ. ಮೆಣಸು, ನೀಟಮ್, ಅಡಕೆ ಬೀಳು, ತಲೆಜಾದರಿ ಮುಖ್ಯವಾದವು. ಇವಲ್ಲದೆ ಬಗೆಬಗೆಯ ಕೊಳೆತಿನಿ ಸಸ್ಯಗಳು, ಜರೀಗಿಡಗಳು, ಕಲ್ಲುಹೂಗಳು, ಹಾವಸೆಗಳು ಮತ್ತು ಆರ್ಕಿಡ್ ಸಸ್ಯಗಳಿಗೆ ಈ ಕಾಡುಗಳು ಆಗರವಾಗಿವೆ. 1218–1827 ಮೀ ಎತ್ತರದ ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳು, ಕಣಿವೆಗಳು ಮತ್ತು ಗಾಳಿಯ ಹೊಡೆತದಿಂದ ರಕ್ಷಿತವಾಗಿರುವ ಕಿಬ್ಬಿಗಳು–ಇಂಥ ಪ್ರದೇಶಗಳಲ್ಲಿ ಕಂಡುಬರುವ ನಿತ್ಯಹರಿದ್ವರ್ಣ ಕಾಡುಗಳನ್ನು ಷೋಲ ಕಾಡುಗಳು ಎನ್ನುತ್ತಾರೆ. ಈ ಬಗೆಯ ಕಾಡುಗಳನ್ನು ಪಶ್ಚಿಮಘಟ್ಟ ಗಳಲ್ಲಿ ಕಾಣಬಹುದು.

2. ಉಷ್ಣವಲಯದ ಭಾಗಶಃ ನಿತ್ಯಹರಿದ್ವರ್ಣದ ಕಾಡು: ಈ ಅರಣ್ಯ ಪ್ರದೇಶಗಳಲ್ಲಿ ಸಾಮಾನ್ಯವಾಗಿ ವರ್ಷಕ್ಕೆ ಸು. 2,000–3,000 ಮಿಮೀಗಳ ವರೆಗೆ ಮಳೆ ಬೀಳುತ್ತದೆ. ಪಶ್ಚಿಮಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಸಮುದ್ರಮಟ್ಟಕ್ಕೆ 61–152 ಮೀಗಳಷ್ಟು ಎತ್ತರದಲ್ಲಿ ಇಂಥ ಕಾಡನ್ನು ನೋಡಬಹುದು. ಕೊಡಗು, ಶಿವಮೊಗ್ಗ ಜಿಲ್ಲೆಯ ಜೋಗ, ಉತ್ತರ ಕನ್ನಡ ಜಿಲ್ಲೆ, ಬೆಳಗಾಂವಿ ಮುಂತಾದ ಕಡೆಗಳಲ್ಲಿ ಈ ಬಗೆಯ ಕಾಡು ಉಂಟು. ಈ ಕಾಡುಗಳ ವಿಶೇಷವೆಂದರೆ ನಿತ್ಯಹರಿದ್ವರ್ಣ ವೃಕ್ಷಗಳು ಬೇಸಗೆಯಲ್ಲಿ ಎಲೆಗಳುದುರುವ ಮರಗಳೊಂದಿಗೆ ಸಮೃದ್ಧವಾಗಿ ಬೆಳೆಯುತ್ತಿರುವುದು. ಕಾಡುಗಳ ಮೇಲ್ಪದರದಲ್ಲಿನ ಮರಗಳೆಂದರೆ ಬೂರುಗ, ಧೂಪ, ಮಾವು, ಕೂವೆ, ಪಾದ್ರಿ, ಹಲಸು, ಸಾಲಾದಿ, ನಂದಿ, ಹತ್ತೇಗ, ಬಿಲ್ವಾರ, ಜಂಬೆ, ತಾರೆ, ಅಳಲೆ ಮುಂತಾದವು.

ಕೆಳಪದರದಲ್ಲಿ ಲವಂಗಪಟ್ಟೆ, ನಂಜಿನಕೊರಡು, ರುದ್ರಾಕ್ಷಿ, ಕಾವಲ್, ಗೊದ್ದ ಮುಂತಾದ ಮರಗಳಿವೆ.

ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೈಗ, ಜಂಬ, ಲಂಟಾನ ಮುಂತಾದವು ಗುಂಪಾಗಿ ಬೆಳೆಯುತ್ತವೆ. ಕಿರುಬಿದಿರು, ಹೆಬ್ಬಿದಿರುಗಳು ಅಲ್ಲಲ್ಲಿ ಉಂಟು. ಇಲ್ಲಿ ಬೆಳೆಯುವ ಬೀಟೆ, ಮತ್ತಿ, ತೇಗ, ತಾರೆ, ಅಳಲೆ,

ಹೆತ್ತೇಗ, ನಾಗಸಂಪಿಗೆ ಮುಂತಾದ ಮರಗಳು ಆರ್ಥಿಕ ದೃಷ್ಟಿಯಿಂದ ಮುಖ್ಯ. ಮರಗಳ ಕೆಳಗೆ ಏಲಕ್ಕಿ, ಮೆಣಸು ಮುಂತಾದ ಹಣದ ಬೆಳೆಗಳನ್ನು ಬೆಳೆಸುವುದಿದೆ. ಜರೀ ಗಿಡಗಳು, ಅಪ್ಪುಸಸ್ಯಗಳು, ಆರ್ಕಿಡ್ ಸಸ್ಯಗಳು, ಅಡರುಬಳ್ಳಿಗಳು ಈ ಕಾಡುಗಳಲ್ಲಿ ಹೇರಳವಾಗಿ ಕಾಣದೊರೆಯುವುವು.

3. ಬೇಸಗೆಯಲ್ಲಿ ಎಲೆಯುದುರುವ ಮಲೆನಾಡಿನ ಕಾಡು: ಈ ಬಗೆಯ ಕಾಡು ಮೈಸೂರು, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳ ಬೆಟ್ಟಗುಡ್ಡ ಪ್ರದೇಶಗಳಲ್ಲಿವೆ. ಈ ಪ್ರದೇಶಗಳಲ್ಲಿ ಸು.1,500–2,000 ಮಿಮೀ. ಗಳಷ್ಟು ಮಳೆಯಾಗುತ್ತದೆ. ಇಲ್ಲಿನ ಮರಗಳಿಗೆ ವರ್ಷದ 5–6 ತಿಂಗಳುಗಳ ಒಣಹವೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಉಂಟು. ಈ ಕಾಡುಗಳ ಕೆಳಪದರದಲ್ಲಿ ಬಿದಿರು ಹೇರಳವಾಗಿ ಬೆಳೆಯುವುದು. ತೇಗ, ಮತ್ತಿ, ನಂದಿಮರ ಹೊನ್ನೆ, ಹೆತ್ತೇಗ, ಬಿಳಿಮತ್ತಿ, ಬೀಟೆ, ಕಲ್ತೇಗ ಮುಂತಾದ ಮರಗಳು ಇಲ್ಲಿನ ಮುಖ್ಯ ಜಾತಿಗಳು.

4. ಬೇಸಗೆಯಲ್ಲಿ ಎಲೆಯುದುರುವ ಮೈದಾನ ಸೀಮೆಯ ಒಣಕಾಡು; ಇವು ದಟ್ಟವಾದ ಅಡವಿಗಳಲ್ಲ. ಮಳೆ ಸುಮಾರು 750–1,500 ಮಿಮೀ. ಸಾಮಾನ್ಯವಾಗಿ ಮೈದಾನಗಳು ಹಾಗೂ ಸಣ್ಣಪುಟ್ಟ ಬೆಟ್ಟಗುಡ್ಡಗಳಲ್ಲಿ ಬೆಳೆಯುತ್ತಿರುವ ಈ ಕಾಡುಗಳ ಪಶ್ಚಿಮಕ್ಕೆ ಬೇಸಗೆಯಲ್ಲಿ ಎಲೆಯುದುರುವ ಮಲೆನಾಡಿನ ಕಾಡುಗಳಿವೆ. ಮೇಲಿನ ಹಂತದಲ್ಲಿ ತೇಗ, ದಿಂಡಗ, ಬಾಗೆ, ಬಿಲ್ವಾರ, ಹೆತ್ತೇಗ, ಹೊನ್ನೆ, ನಂದಿ, ಮತ್ತಿ, ಬೂರುಗ, ಹಿಪ್ಪೆ, ನೇರಳೆ ಮರಗಳಿದ್ದು ಕೆಳಹಂತದಲ್ಲಿ ಮುತ್ತುಗ, ನೆಲ್ಲಿ, ಕಕ್ಕೆ, ಅಂಟುವಾಳ, ಶ್ರೀಗಂಧ, ಎಲಚಿ ಮುಂತಾದ ಮರಗಳುಂಟು. ಮರಗಳ ಕೆಳಭಾಗದಲ್ಲಿ ಲಂಟಾನ, ಕಿರುಬಿದಿರು, ಎಡಮುರಿ, ಅನೇಕ ಬಗೆಯ ಹುಲ್ಲುಗಳು ಹಾಗೂ ಅಡರುಬಳ್ಳಿಗಳು ಬೆಳೆದುಕೊಂಡಿರುತ್ತವೆ.

5. ಕಳ್ಳಿಕುರುಚಲು ಗಿಡಮರಗಳನ್ನೊಳಗೊಂಡ ಒಣಕಾಡು: ಈ ಕಾಡು ಮೇಲೆ ತಿಳಿಸಿರುವ ಇತರ ಅರಣ್ಯಗಳನ್ನು ಬಿಟ್ಟು ಮಿಕ್ಕ ಅರಣ್ಯ ಪ್ರದೇಶವನ್ನೆಲ್ಲ ಆಕ್ರಮಿಸಿಕೊಂಡಿದೆ. ಇಲ್ಲಿ ಮಳೆ ಬೀಳುವಿಕೆ ಕಡಿಮೆ ಇದ್ದು (500–750 ಮಿಮೀ ಮಾತ್ರ) ವರ್ಷಕ್ಕೆ ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ಒಣಹವೆ ಇರುತ್ತದೆ. ಚಿತ್ರದುರ್ಗ, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಮೈಸೂರು, ಹಾಸನ ಜಿಲ್ಲೆಗಳ ಒಣಹವೆ ಇರುವ ಭಾಗಗಳಲ್ಲಿ ಈ ಬಗೆಯ ಕಾಡುಗಳನ್ನು ಕಾಣಬಹುದು. ಇಲ್ಲಿ ಬೆಳೆಯುವ ಮರಗಳು ಸಣ್ಣ ಗಾತ್ರದವು. ಇವು 5 ರಿಂದ 11ಮೀ ಎತ್ತರಕ್ಕೆ ಬೆಳೆದರೆ ಅದೇ ಹೆಚ್ಚು. ಇಲ್ಲಿನ ಮುಖ್ಯವಾದ ಮರಗಳು: ದಿಂಡಿಗ, ಗೊಬ್ಬಳಿ, ಕಾಚಿನ ಮರ, ಚುಜ್ಜಲು, ಬಾಗೆ, ಮತ್ತಿ, ತಾರೆ, ಬಿಲ್ವಾರ, ಆಲ, ಅತ್ತಿ, ಕರಿಬಸರಿ, ಬೇಲ, ಹಿಪ್ಪೆ, ಹುಣಿಸೆ, ಬಿಳಿಮತ್ತಿ, ಬೇವು, ಸಾಂಬ್ರಾಣಿ, ಕರಿಗೇರು, ಕಕ್ಕೆ, ಬಸವನಪಾದ, ನಂಜಿನಕೊರಡು, ಸೌಲಾದಿ, ತೂಪ್ರ, ಕಮ್ಮಾರ್, ನೆಲ್ಲಿ ಮತ್ತು ಚೊಳ್ಳೆ, ಕೆಳಹಂತದಲ್ಲಿ ಗೊರವಿ, ಯಲಚಿ, ಸೀತಾಫಲ, ರಾಮಫಲ, ಹಾಲೆ, ಈಚಲು ಮುಂತಾದವು. ಪೊದೆಗಳಿಗೆ ಹೆಸರಾದ ಈ ಕಾಡುಗಳಲ್ಲಿ ಕಾರೆ, ಬಿಕ್ಕೆ, ಗೋರಂಟೆ, ಲಕ್ಕಿ, ಪಾಪಾಸುಕಳ್ಳಿ, ಕಾಡು ಮೆಣಸು, ಲಂಟಾನ, ಬಗೆಬಗೆಯ ಕಳ್ಳಿಗಿಡಗಳು, ಹಂಬುಗಳು (ಉದಾ: ಸೀಗೆ, ಮಂಗರವಳ್ಳಿ, ಶತಾವರಿ, ಗುಲಗಂಜಿ) ಹೇರಳವಾಗಿವೆ.

ಅರಬ್ಬೀ ಸಮುದ್ರಕ್ಕೆ ಎದುರಾಗಿರುವ ಕರಾವಳಿ ಪ್ರದೇಶದಲ್ಲಿ ಮ್ಯಾಂಗ್ರೋವ್ ಕಾಡುಗಳು ಉಂಟು. ಇವುಗಳಲ್ಲಿ ಅವಿಸೀನಿಯ, ರೈಸೊಫೊರ, ಸೊನ್ನರೇಷಿಯ ಮರಗಳು ಬೆಳೆಯುತ್ತವೆ.

ಅರಣ್ಯಗಳ ಸಸ್ಯಸಂಪತ್ತನ್ನು ಅವಲಂಬಿಸಿರುವ ಹಲವಾರು ಕೈಗಾರಿಕೆಗಳು ಕರ್ನಾಟಕದಲ್ಲಿವೆ. ಮೈಸೂರಿನ ಗಂಧದ ಮರ ಪ್ರಪಂಚದ ಎಲ್ಲ ಕಡೆಗಳಲ್ಲೂ ಪ್ರಸಿದ್ಧಿ ಪಡೆದಿದೆ. ಯುರೋಪ್, ಅಮೆರಿಕ ಮತ್ತು ಅರಬ್ ದೇಶಗಳಿಗೆ ಗಂಧದ ಎಣ್ಣೆಯನ್ನು ರಫ್ತು ಮಾಡಲಾಗುತ್ತಿದೆ. ಗಂಧದ ಮರದ ಪುಡಿಯನ್ನು ಅಗರಬತ್ತಿ ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. ಈ ಕೈಗಾರಿಕೆ ಲಕ್ಷಾಂತರ ಜನಗಳಿಗೆ ಕೆಲಸ ಒದಗಿಸಿದೆ. ಗಂಧದ ಮರವನ್ನು ಗುಡಿಗಾರಿಕೆಗೂ ಉಪಯೋಗಿಸುತ್ತಾರೆ. ಗಂಧದ ಸಾಬೂನಿನ ಕಾರ್ಖಾನೆಯಿಂದ ರಾಜ್ಯಕ್ಕೆ ಸಾಕಷ್ಟು ಆದಾಯವಿದೆ.

ಹಡಗು, ದೋಣಿಗಳ ನಿರ್ಮಾಣ, ಮನೆಯ ಮರಮುಟ್ಟುಗಳು ಮುಂತಾದವುಗಳ ತಯಾರಿಕೆಗಾಗಿ ತೇಗ, ಹೊನ್ನೆ ಹಾಗೂ ನಂದಿಮರಗಳು ಬೇಕಾಗುತ್ತವೆ. ಇವುಗಳ ಪೂರೈಕೆ ಸಂಪೂರ್ಣವಾಗಿ ಕರ್ನಾಟಕದ ಅರಣ್ಯಗಳಿಂದಲೇ ಆಗುತ್ತಿದೆ.

ರಾಜ್ಯದಲ್ಲಿರುವ ಪ್ಲೈವುಡ್ ಕಾರ್ಖಾನೆಗಳಿಗೆ ಹಾಗೂ ಬೆಂಕಿಕಡ್ಡಿ ಕೈಗಾರಿಕೆಗಳಿಗೆ ಬೇಕಾದ ಸಟ್ಟುಗ, ಕಾರೆ ಗುಳುಮಾವು, ಬಿಳಿದೇವಹಾರಿ ಧೂಪ, ಸುರಹೊನ್ನೆ, ಬೀಟೆ, ಬೂರುಗ ಹಾಗೂ ತೇಗ ಇವೆಲ್ಲವೂ ನಮ್ಮ ಕಾಡುಗಳಿಂದಲೇ ಪೂರೈಕೆಯಾಗುತ್ತಿದೆ. ಕರ್ನಾಟಕದ ಪ್ಲೈವುಡ್‌ಗೆ ಇರಾನ್, ಅಮೆರಿಕ, ಜಪಾನ್, ಜರ್ಮನಿಗಳಿಂದ ಅಧಿಕ ಬೇಡಿಕೆ ಇದೆ. ಕರ್ನಾಟಕಕ್ಕೆ ಹೆಚ್ಚು ವಿದೇಶೀ ವಿನಿಮಯ ಗಳಿಸಿಕೊಡುವ ಮತ್ತೊಂದು ಅರಣ್ಯ ವೃಕ್ಷವೆಂದರೆ ಬೀಟೆ.

1960ರಿಂದ ಈಚೆಗೆ ನಮ್ಮಲ್ಲಿ 6,000 ಹೆಕ್ಟೇರ್‌ಗಳಲ್ಲಿ ರಬ್ಬರ್ ತೋಟ ಬೆಳೆಸಲಾಗುತ್ತಿದೆ. ಅಂತೆಯೇ ಸಾವಿರಾರು ಹೆಕ್ಟೇರುಗಳಲ್ಲಿ ನೀಲಗಿರಿ (ಯೂಕಲಿಪ್ಟಸ್) ಮರಗಳನ್ನು ಬೆಳೆಸಲಾಗುತ್ತಿದೆ. ಇವುಗಳ ನಾಟಗಳನ್ನು ಕಚ್ಚಾವಸ್ತುವಾಗಿ ಹರಿಹರದ ಪಾಲಿಫೈಬರ್ ಕಾರ್ಖಾನೆ ಉಪಯೋಗಿಸುತ್ತಿದೆ.

ಬಿದಿರು ಹಾಗೂ ಬೆತ್ತ ಕರ್ನಾಟಕದ ಅರಣ್ಯಗಳಲ್ಲಿ ಹೇರಳವಾಗಿ ಬೆಳೆಯುತ್ತಿದ್ದುದರಿಂದ ಇಲ್ಲಿಯವರೆಗೂ ಭದ್ರಾವತಿ ಹಾಗೂ ದಾಂಡೇಲಿಗಳ ಕಾಗದದ ಕಾರ್ಖಾನೆಗಳಿಗೆ ಇವು ಪೂರೈಕೆಯಾಗುತ್ತಿದ್ದವು. ಈಗ ಈ ಕಚ್ಚಾವಸ್ತುವಿನ ಕೊರತೆ ಹೆಚ್ಚಾಗಿ ಕಂಡುಬಂದಿದೆ. ಈ ಕಾರ್ಖಾನೆಗಳಿಗೆ ವರ್ಷಕ್ಕೆ ಸು. 2ಲಕ್ಷ ಟನ್‌ಗಳಿಗೂ ಅಧಿಕವಾಗಿ ಬಿದಿರು ಬೇಕಾಗುತ್ತದೆ.

ಇವಲ್ಲದೆ ಸೌದೆ ಹಾಗೂ ಇದ್ದಿಲಿಗೆ, ರೈಲ್ವೆ ಹಾಗೂ ವಿದ್ಯುತ್ ಇಲಾಖೆಗಳಿಗೆ ಬೇಕಾದ ಮರ ಕಾಡುಗಳಿಂದಲೇ ಪೂರೈಕೆಯಾಗುತ್ತಿವೆ. ಕರ್ನಾಟಕದ ಕಾಡುಗಳ ಮರಗಳ ಸೇ. 60ಕ್ಕೂ ಹೆಚ್ಚು ಭಾಗ ಸೌದೆ–ಇದ್ದಿಲುಗಳಿಗಾಗಿಯೇ ಉಪಯೋಗವಾಗುತ್ತಿದೆ.

ರಾಜ್ಯದಲ್ಲಿ ಬೃಹತ್ ಜಲವಿದ್ಯುತ್ ಯೋಜನೆಗಳು, ಪುನರ್ವಸತಿ, ಕೃಷಿಗಾಗಿ ಜಮೀನಿನ ಬಿಡುಗಡೆ, ಗಣಿ ಉದ್ಯಮ, ಮತ್ತಿತರ ಕಾರ್ಯಕ್ರಮಗಳಿಗಾಗಿ ಸು. $2^1/_2$ ಲಕ್ಷ ಹೆಕ್ಟೇರುಗಳಷ್ಟು ಅರಣ್ಯ ಪ್ರದೇಶ (ಅಂದರೆ 1956–75ರ ವರೆಗೆ) ವಿನಿಯೋಗವಾಗಿತ್ತು. ಇದರಿಂದಾಗಿ ವನ್ಯಪ್ರಾಣಿಗಳಿಗೆ ನೈಸರ್ಗಿಕ ರಕ್ಷಣೆ ಕಡಿಮೆಯಾಗಿದೆ. ದೇಶ ಹಾಗೂ ವಿದೇಶಗಳಲ್ಲಿ ಪ್ರಸಿದ್ಧವಾಗಿರುವ ಬಗೆಬಗೆಯ ಪ್ರಾಣಿಗಳನ್ನು ಪಡೆದಿರುವ ಅಭಯಾರಣ್ಯಗಳ ದೃಷ್ಟಿಯಿಂದ, ರಾಜ್ಯದಲ್ಲಿ ಇರುವ ಒಳ್ಳೆಯ ಹವಾಮಾನದ ರಕ್ಷಣೆ ಹಾಗೂ ಭೂಸವೆತನಿಯಂತ್ರಣ ಈ ದೃಷ್ಟಿಯಿಂದ ಕಾಡುಗಳನ್ನು ರಕ್ಷಿಸಿ ಬೆಳೆಸುವ ಅಗತ್ಯ ಇಂದು ಹೆಚ್ಚಾಗಿವೆ. ರಕ್ಷಿತ ಅರಣ್ಯ ಪ್ರದೇಶ ವಿವಿಧ ಸಾಗುವಳಿ ಮತ್ತು ನೆಲಸಿಕೆಗಳಿಂದ ಕಡಿಮೆಯಾಗುತ್ತಿದ್ದು ಇದು ಸಸ್ಯ ಸಂಪತ್ತಿನ ಸಮೃದ್ಧತೆಗೆ ಸವಾಲಾಗಿದೆ. **(ಎಸ್.ಎನ್.ಆರ್.)**

**ಸಹಕಾರ ಚಳವಳಿ:** ಕರ್ನಾಟಕದಲ್ಲಿ ಸಹಕಾರ ಚಳವಳಿ ಲೇವಾದೇವಿ ವ್ಯವಸ್ಥೆಯಿಂದಲೇ ಪ್ರಾರಂಭವಾಯಿತೆನ್ನಬಹುದು. 1905ರಲ್ಲಿ ಜಾರಿಗೆ ಬಂದ ಹಿಂದಿನ ಮೈಸೂರು ಸಂಸ್ಥಾನದ ಮೈಸೂರು ಸಹಕಾರೀ ನಿಯಂತ್ರಣ ಕಾನೂನು 1904ರ ಭಾರತದ ಸಹಕಾರ ಸಂಘಗಳ ಮಸೂದೆಗಿಂತಲೂ

ಸುಧಾರಿತವಾದದ್ದಾಗಿತ್ತು. ಅಂದರೆ, ಭಾರತ ಸರ್ಕಾರದ ಕಾನೂನು ಗ್ರಾಮೀಣ ಲೇವಾದೇವಿ ಸಂಘಗಳ ಸ್ಥಾಪನೆಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದರೆ, ಮೈಸೂರಿನ ಕಾನೂನು ಗ್ರಾಮೀಣ ಹಾಗೂ ನಗರಗಳ ವಿವಿಧ ರೀತಿಯ ಸಹಕಾರ ಸಂಘಗಳ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿತು. ಹೀಗೆ ಕರ್ನಾಟಕ ದಲ್ಲಿ ಸಹಕಾರ ಚಳವಳಿ ಸರ್ಕಾರದ ಮುಂದಾಳತ್ವದಲ್ಲಿ ಪ್ರಾರಂಭವಾಗಿ ಕ್ರಮೇಣ ಜನತೆಯ ಬೆಂಬಲವನ್ನು ಪಡೆದು ಬೆಳೆಯಿತು.

ಹಿಂದೆ ವಿವಿಧ ರಾಜ್ಯಗಳಲ್ಲಿ ಹಂಚಿಹೋಗಿದ್ದ ಕರ್ನಾಟಕದ ಭಾಗಗಳಲ್ಲಿ ಜಾರಿಯಲ್ಲಿದ್ದ ಆಯಾ ರಾಜ್ಯದ ಪ್ರತ್ಯೇಕ ಸಹಕಾರ ಕಾನೂನಿನಂತೆ ಸಹಕಾರದ ಬೆಳವಣಿಗೆಯಾಯಿತು. ಮುಂಬಯಿ–ಕರ್ನಾಟಕ, ಕೊಡಗು ಮತ್ತು ಮದರಾಸು ಕರ್ನಾಟಕ ಭಾಗಗಳಲ್ಲಿ ಅಲ್ಪಾವಧಿ–ಮಧ್ಯಮಾವಧಿ ಲೇವಾದೇವಿ ಸಂಘಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಬೆಳೆದು ಬಂದಿದ್ದರೆ, ಹಿಂದಿನ ಮೈಸೂರು ಸಂಸ್ಥಾನದಲ್ಲಿ ದೀರ್ಘಾವಧಿ ವ್ಯವಸಾಯ ಸಾಲಸಂಘಗಳು ಮತ್ತು ವಿವಿಧೋದ್ದೇಶ ಸಹಕಾರ ಸಂಘಗಳು, ಹೈದರಾಬಾದು–ಕರ್ನಾಟಕದಲ್ಲಿ ಧಾನ್ಯದ ಬ್ಯಾಂಕುಗಳು ಬೆಳೆದು ಬಂದಿದ್ದವು. ಧಾರವಾಡ ಜಿಲ್ಲೆಯ ಕಣಗಿನಹಾಳು, ಗದಗ–ಬೆಟಗೇರಿಯಲ್ಲಿ ಮತ್ತು ಬೆಂಗಳೂರಿನಲ್ಲಿ ಸ್ಥಾಪನೆಯಾದ ಸಹಕಾರ ಸಂಘಗಳು ಕರ್ನಾಟಕ ರಾಜ್ಯದ ಸಹಕಾರ ಚಳವಳಿಗೆ ನಾಂದಿಯಾದವೆಂದು ತಿಳಿದು ಬರುತ್ತದೆ. ಪ್ರಥಮವಾಗಿ 1908ರಲ್ಲಿ ಬೆಂಗಳೂರು ಕೇಂದ್ರೀಯ ಸಹಕಾರ ಬ್ಯಾಂಕಿನ ಸ್ಥಾಪನೆ, 1914ರಲ್ಲಿ ಮೈಸೂರು ರಾಜ್ಯ ಸಹಕಾರ ಬ್ಯಾಂಕಿನ ಸ್ಥಾಪನೆ. 1920ರ ದಶಕದಲ್ಲಿ ಕೆಲವು ಗೃಹ ನಿರ್ಮಾಣ ಸಂಘಗಳ ಹಾಗೂ ಇತರ ಕೆಲವು ನಗರ ಸಹಕಾರ ಸಂಘಗಳ ಸ್ಥಾಪನೆ, 1930ರ ದಶಕದಲ್ಲಿ ಕೇಂದ್ರೀಯ ಹಾಗೂ ಪ್ರಾಥಮಿಕ ಭೂ ಅಡಮಾನ (ಈಗ ಭೂ ಅಭಿವೃದ್ಧಿ) ಬ್ಯಾಂಕುಗಳ ಸ್ಥಾಪನೆ, 1949–51ರಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳ ಸ್ಥಾಪನೆ ಇವು ಯೋಜನಾ ಕಾಲ ಪೂರ್ವದ ಅಂದರೆ 1951ಕ್ಕೆ ಮುಂಚಿನ ಸಹಕಾರ ಇತಿಹಾಸದ ಮುಖ್ಯ ಘಟನೆಗಳಾಗಿವೆ. ರಾಜ್ಯದ ಸಹಕಾರ ಪ್ರಗತಿಯ ಆವಶ್ಯಕತೆಗಳನ್ನು ಕುರಿತು 1920ರಲ್ಲಿ ಸಮಲ್‌ದಾಸ್ ಅಧ್ಯಕ್ಷತೆಯ ಸಹಕಾರ ಸಮಿತಿ ಮತ್ತು 1935ರಲ್ಲಿ ಚಂದ್ರಶೇಖರ ಅಯ್ಯರ್ ಅವರ ಅಧ್ಯಕ್ಷತೆಯ ಸಹಕಾರಿ ಸಮಿತಿಗಳು ವಿಶೇಷ ಅಧ್ಯಯನ ನಡೆಸಿದುವು. ಆದರೆ, ಸಹಕಾರ ರಂಗ ಬಹುಮುಖವಾಗಿ ಬೆಳೆದುದು 1951ರ ಅನಂತರದ ಆರ್ಥಿಕ ಯೋಜನೆಗಳ ಕಾಲದಲ್ಲಿ.

ರಾಜ್ಯಾಂಗದ ಪ್ರಕಾರ ಸಹಕಾರ ರಾಜ್ಯಸರ್ಕಾರಕ್ಕೆ ಸೇರಿದ ವಿಷಯವಾದರೂ ಅನೇಕ ವಿಧದಲ್ಲಿ ಕೇಂದ್ರ ಸರ್ಕಾರದ ನಿರ್ದೇಶನ, ಪ್ರಭಾವ ಹಾಗೂ ಸಹಾಯಕ್ಕೆ ಒಳಪಟ್ಟು ರಾಜ್ಯ ಸರ್ಕಾರಗಳ ಸಹಕಾರ ಕಾರ್ಯಕ್ರಮಗಳು ಮುಂದುವರಿಯಬೇಕಾಗುತ್ತದೆ. ಆರ್ಥಿಕ ಯೋಜನೆಯ ಅಂಗವಾಗಿ ಸಹಕಾರ ಚಳವಳಿಯನ್ನು ಬಲಗೊಳಿಸಬೇಕೆಂಬ ಭಾರತ ಸರ್ಕಾರದ ಧೋರಣೆಯನ್ನು ಕರ್ನಾಟಕ ಸಹ ಒಪ್ಪಿತು. ರಾಜ್ಯದ ಇತರ ವಿಭಾಗಗಳಂತೆಯೇ ಸಹಕಾರ ರಂಗವೂ ಯೋಜನಾಬದ್ಧವಾಗಿ ಬೆಳೆಯಲಾರಂಭಿಸಿತು. ರಾಜ್ಯದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಧೋರಣೆ ಘೋಷಿತವಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ಸಹಕಾರ ರಂಗ ಗಮನಾರ್ಹ ಪ್ರಮಾಣದಲ್ಲಿ ಬೆಳೆಯಲಾರಂಭಿಸಿತು. 1956ಲ್ಲಿ ಪ್ರಾರಂಭವಾದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾದ ಸಹಕಾರ ಅಭಿವೃದ್ಧಿ ಕಾರ್ಯಕ್ರಮಗಳು ಗೋರ್ವಾಲಾ ಸಮಿತಿಯ (1954) ಸಲಹೆಗಳನ್ನು ಅವಲಂಬಿಸಿದ್ದವು. ಗ್ರಾಮೀಣ ಸಹಕಾರದ ಪುನರ್‌ವ್ಯವಸ್ಥೆ ಹಾಗೂ ಅಭಿವೃದ್ಧಿಗೆ ಅನೇಕ ಸಲಹೆಗಳನ್ನು ಈ ಸಮಿತಿ ಶಿಫಾರಸು ಮಾಡಿತು. ಈ ಯೋಜನೆ ಒಂದನ್ನೊಂದು ಅವಲಂಬಿಸಿರುವ ಸಹಕಾರ ಲೇವಾದೇವಿ, ಕೃಷಿ ಸರಕು ರೂಪಾಂತರ ಮತ್ತು ಕೃಷಿ ಸರಕು ಮಾರಾಟಕ್ಕೆ ಸಂಬಂಧಿಸಿದ ಇತರ ಸಹಕಾರ ಚಟುವಟಿಕೆಗಳು ಮತ್ತು ಸಹಕಾರಿ ಸಿಬ್ಬಂದಿ ಇವುಗಳನ್ನು ಒಳಗೊಂಡಿದೆ. ಸರ್ಕಾರ ಮತ್ತು ಸಹಕಾರಕ್ಕೆ ಸಹಾಯಕವಾಗಬಲ್ಲ ಸಂಸ್ಥೆಗಳು ಸಹಕಾರದ ಉದ್ದೇಶ ಸಫಲವಾಗುವಂತೆ ಸಂಘಟನೆ ಏರ್ಪಡಿಸುವುದೇ ಈ ಮಹತ್ತ್ವಪೂರ್ಣ ಯೋಜನೆಯ ಮುಖ್ಯ ಉದ್ದೇಶ. ಷೇರು ಬಂಡವಾಳಕ್ಕೆ ಹಣ ಹಾಕುವುದು ಮತ್ತು ಇತರ ಆವಶ್ಯಕರೂಪಗಳಲ್ಲಿ ಸಹಕಾರ ಸಂಸ್ಥೆಗಳಿಗೆ ನೆರವು ನೀಡುವುದನ್ನೊಳ ಗೊಂಡ ಸರ್ಕಾರಿ ಸಹಭಾಗಿತ್ವ ಸಂಘಟಿತ ಯೋಜನೆಯ ಮುಖ್ಯ ಅಂಶ. ಈ ಹೊಸ ಜವಾಬ್ದಾರಿ ನಿರ್ವಹಣೆಗಾಗಿ ರಾಜ್ಯ ಸರ್ಕಾರಗಳು ರಾಜ್ಯ ಕೃಷಿ ಸಾಲ ಪರಿಹಾರ ಹಾಗೂ ಭರವಸೆ ನಿಧಿ ಮತ್ತು ಸಹಕಾರ ಅಭಿವೃದ್ಧಿ ನಿಧಿಗಳನ್ನು ನಿರ್ಮಿಸತಕ್ಕದ್ದು. ಸರ್ಕಾರಿ ಸಹಭಾಗಿತ್ವವನ್ನು ಒಳಗೊಂಡ ತನ್ನ ವಿಸ್ತೃತ ಪಾತ್ರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಭಾರತದ ರಿಸರ್ವ್ ಬ್ಯಾಂಕು, ಭಾರತದ ಸ್ಟೇಟ್ ಬ್ಯಾಂಕು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಹಾಗೂ ಉಗ್ರಾಣ ಮಂಡಳಿ ಮತ್ತು ಸಹಕಾರ ಶಿಕ್ಷಣ ಕೇಂದ್ರ ಸಮಿತಿ ಇತ್ಯಾದಿಗಳ ಕ್ರಿಯಾತ್ಮಕ ಬೆಂಬಲವಿರತಕ್ಕದ್ದು. ಹಣ ಒದಗಣೆ, ತಾಂತ್ರಿಕ ಹಾಗೂ ಆಡಳಿತ ನೆರವು, ಶಿಕ್ಷಿತ ಸಿಬ್ಬಂದಿ ತಯಾರಿಸಿ ಸಂಘಟಕಗಳಿಗೆ ಒದಗಿಸುವುದು ಇತ್ಯಾದಿ ಕಾರ್ಯಗಳಲ್ಲಿ ಸರ್ಕಾರ ಮತ್ತು ಈ ವಿವಿಧ ಸಂಸ್ಥೆಗಳು ತಮ್ಮ ತಮ್ಮ ಕಾರ್ಯಾಚರಣೆಗಳೊಳಗೆ ಪರಸ್ಪರ ಸಂಘಟನೆ ಏರ್ಪಡಿಸಿಕೊಂಡು ಸಹಕಾರದ ಅಭಿವೃದ್ಧಿ ಸಹಾಯ ನೀಡಬೇಕೆಂಬುದು ಯೋಜಿತ ವಿಧಾನ. ಇದಕ್ಕಾಗಿ ಅಪೆಕ್ಸ್ ಬ್ಯಾಂಕುಗಳ ಹಣಬಲ, ಆಡಳಿತ ಹಾಗೂ ತಾಂತ್ರಿಕ ಸಾಮರ್ಥ್ಯ ಹೆಚ್ಚಿಸುವುದು ಮತ್ತು ಜಿಲ್ಲೆಗಳಲ್ಲಿ ಇವುಗಳ ಶಾಖೆಗಳನ್ನು ಸ್ಥಾಪಿಸುವುದೂ ಹೊಸ ಕೇಂದ್ರೀಯ ಹಾಗೂ ಭೂ ಅಭಿವೃದ್ಧಿ ಬ್ಯಾಂಕು ಗಳನ್ನು ಆರಂಭಿಸುವುದೂ ಅಪೆಕ್ಸ್ ಮತ್ತು ಕೇಂದ್ರೀಯ ಬ್ಯಾಂಕುಗಳು ಕೃಷಿ ಸಾಲ ಸ್ತಿಮಿತತಾ ನಿಧಿಗಳನ್ನು ಏರ್ಪಡಿಸಿಕೊಳ್ಳುವುದೂ ಪ್ರಾಥಮಿಕ ಲೇವಾದೇವಿ ಸಂಘಗಳು ಬಲಯುತ ಘಟಕಗಳಾಗುವಂತೆ ಅವುಗಳನ್ನು ದೊಡ್ಡ ಪ್ರಮಾಣದ ಸಂಘಗಳಾಗಿ ಪರಿವರ್ತಿಸುವುದೂ ಲೇವಾದೇವಿ ಸಂಘಗಳು ಬೆಳೆಸಾಲ ಪದ್ಧತಿಯನ್ನು ಆಚರಣೆಗೆ ತರುವುದೂ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲ ವಿಧದ ಗ್ರಾಮೀಣ ಆರ್ಥಿಕ ಚಟುವಟಿಕೆಗಳನ್ನೂ ನೀರಾವರಿ, ಕ್ಷೀರೋದ್ಯಮ, ಹೈನುಗಾರಿಕೆ, ಗೃಹಕೈಗಾರಿಕೆ, ಸಾರಿಗೆ ಇತ್ಯಾದಿ ಸರ್ಕಾರದ ವಿಶೇಷ ಬೆಂಬಲದಿಂದ ಸಹಕಾರ ಮಾರ್ಗದಲ್ಲಿ ವ್ಯವಸ್ಥೆಗೊಳಿಸುವುದೂ ವಿವಿಧ ಸಹಕಾರ ಸಂಘಗಳ ಕಾರ್ಯಾಚರಣೆಗಳಲ್ಲಿ ಅತಿಮುಖ್ಯವಾಗಿ ಕೃಷಿ ಲೇವಾದೇವಿ ಹಾಗೂ ಕೃಷಿ ಮಾರಾಟ ಸಂಘಗಳೊಳಗೆ ಹೊಂದಾಣಿಕೆ ಇರುವಂತೆ ಸಂಘಟನೆ ಏರ್ಪಡಿಸುವುದು–ಈ ವಿವಿಧ ಕಾರ್ಯಗಳನ್ನು ಜಾರಿಗೆ ತರುವ ಯೋಜನೆಯನ್ನು ಎರಡನೆಯ ಪಂಚವಾರ್ಷಿಕ ಯೋಜನೆ ಯಲ್ಲಿ ಅಳವಡಿಸತಕ್ಕದ್ದೆಂದು ರಾಜ್ಯಗಳ ಸಹಕಾರ ಸಚಿವರುಗಳ ಸಮ್ಮೇಳನ ನಿರ್ಣಯಿಸಿತು (1955). ಅಂದಿನಿಂದ ರಾಜ್ಯದಲ್ಲಿ ಸರ್ಕಾರಿ ಸಹಭಾಗಿತ್ವದ ಸಹಕಾರರಂಗ ಪ್ರಬಲವಾಯಿತು. ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದಲೂ ರಿಸರ್ವ್ ಬ್ಯಾಂಕು ಸ್ಥಾಪಿಸಿದ ರಾಷ್ಟ್ರೀಯ ಕೃಷಿ ಸಾಲ ದೀರ್ಘಾವಧಿ ಕಾರ್ಯಾಚರಣೆಗಳ ನಿಧಿ ಮತ್ತು ರಾಷ್ಟ್ರೀಯ ಕೃಷಿ ಸಾಲ ಸ್ತಿಮಿತತಾ ನಿಧಿಗಳಿಂದಲೂ ಸಹಕಾರಾಭಿವೃದ್ಧಿಗೆ ಸಹಾಯ ದೊರೆಯುತ್ತಿದೆ. ಕೃಷಿ ಉತ್ಪಾದನಾ ನಿಗಮ ಮಸೂದೆಯ (1956) ಅನುಸಾರವಾಗಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಹಾಗೂ ಉಗ್ರಾಣ ಮಂಡಳಿ ಕೇಂದ್ರ ಹಾಗೂ ರಾಜ್ಯಗಳ ಉಗ್ರಾಣ ನಿಗಮಗಳು ರಚಿತವಾದವು.

ರಾಜ್ಯದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಸಾಧಿಸಲಾದ ಗುರಿಗಳೆಂದರೆ–ಭಾರಿ ಪ್ರಮಾಣದ ಸಹಕಾರ ಸಂಘಗಳಾಗಿ 400 ಲೇವಾದೇವಿ ಸಂಘಗಳನ್ನೂ 81 ಮಾರಾಟ ಸಹಕಾರ

ಸಂಘಗಳನ್ನೂ ಪುನರ್‌ವ್ಯವಸ್ಥೆ, 300 ಕೃಷಿ ಸರಕು ಉಗ್ರಾಣಗಳನ್ನು ನಿರ್ಮಿಸುವುದು ಮತ್ತು ಭಾರಿ ಪ್ರಮಾಣದ ಸಹಕಾರ ಸಂಘಗಳ ಷೇರುಧನಕ್ಕೆ ರೂ. 40ಲಕ್ಷ, ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕುಗಳ ಷೇರುಧನಕ್ಕೆ ರೂ. 30 ಲಕ್ಷ, ಅಪೆಕ್ಸ್ ಬ್ಯಾಂಕಿನ ಷೇರುಧನಕ್ಕೆ ರೂ. 20ಲಕ್ಷ, ಭೂ ಅಡಮಾನ ಬ್ಯಾಂಕುಗಳ ಷೇರು ಧನಕ್ಕೆ ರೂ. 5ಲಕ್ಷ, ಪ್ರಾಂತೀಯ ಮಾರಾಟ ಸಹಕಾರ ಸಂಘಗಳ ಷೇರುಧನಕ್ಕೆ ರೂ 5ಲಕ್ಷ, ಪ್ರಾಥಮಿಕ ಮಾರಾಟ ಸಹಕಾರ ಸಂಘಗಳ ಷೇರುಧನಕ್ಕೆ ರೂ. 20ಲಕ್ಷ, ಉಗ್ರಾಣಗಳ ನಿರ್ಮಾಣಕ್ಕೆ ಧನಸಹಾಯ ರೂ. 30 ಲಕ್ಷ, ಉಗ್ರಾಣಗಳಿಗೆ ಆವಶ್ಯಕ ಸಿಬ್ಬಂದಿ ವೆಚ್ಚಕ್ಕಾಗಿ ರೂ. 4.15 ಲಕ್ಷ ಧನ ಬೆಂಬಲ ನೀಡುವುದೂ ಮತ್ತು ಕೃಷಿಕರಿಗೆ ಒಟ್ಟು ರೂ.830 ಲಕ್ಷ ಅಲ್ಪಾವಧಿ ಸಾಲವನ್ನೂ ಒಟ್ಟು ರೂ.75 ಲಕ್ಷ ಮಧ್ಯಮ ಕಾಲಾವಧಿ ಸಾಲವನ್ನೂ ಒಟ್ಟು ರೂ. 400 ಲಕ್ಷ ದೀರ್ಘಾವಧಿ ಸಾಲವನ್ನೂ ಒಟ್ಟು ರೂ.830 ಲಕ್ಷ ಫಸಲು ಸಾಲ ನೀಡಿಕೆಯನ್ನೂ ಮತ್ತು ಎರಡು ಸಕ್ಕರೆ ಕಾರ್ಖಾನೆಗಳು, 5 ಹತ್ತಿ ಹಿಂಜುವ ಗಿರಣಿಗಳು, 8 ಎಣ್ಣೆಗಿರಣಿಗಳು, 5 ಹೊಗೆಸೊಪ್ಪು ಶುದ್ಧೀಕರಿಸುವ ಕೇಂದ್ರಗಳು ಇಷ್ಟನ್ನು ಸಹಕಾರ ಮಾದರಿಯಲ್ಲಿ ಸ್ಥಾಪಿಸುವುದೂ ರಾಜ್ಯ ಉಗ್ರಾಣ ನಿಗಮವನ್ನು ಸ್ಥಾಪಿಸುವುದೂ ಸಹಕಾರ ಪ್ರಚಾರಕ್ಕಾಗಿ ರೂ.3 ಲಕ್ಷ ವೆಚ್ಚ ಮಾಡುವುದೂ ಸಹಕಾರಿ ಆಡಳಿತ ಸಿಬ್ಬಂದಿ ತರಪೇತಿಗೆ ಏರ್ಪಾಡು, ರಾಜ್ಯ ಸಹಕಾರ ಅಭಿವೃದ್ಧಿ ನಿಧಿ ಮತ್ತು ರಾಜ್ಯ ಪರಿಹಾರ ಹಾಗೂ ಭರವಸೆ ನಿಧಿಗಳನ್ನು ಸ್ಥಾಪಿಸುವುದೂ ಆಗಿದ್ದು ರಾಜ್ಯದ ಯೋಜನೆಯಲ್ಲಿ ಸಹಕಾರಕ್ಕೆ ಒದಗಿಸಲಾದ ಹಣ ರೂ. 133.30 ಲಕ್ಷವಾಗಿತ್ತು. ಮೇಲೆ ಕಾಣಿಸಿರುವಂತೆ ವಿವಿಧ ಬಾಬುಗಳ ಬಗ್ಗೆ ಗುರಿಗಳನ್ನು ಸೂಚಿಸಿದುದೇ ಅಲ್ಲದೆ ಉದ್ಯೋಗ ಹಾಗೂ ವರಮಾನ ಇವುಗಳ ಬೆಳವಣಿಗೆಯ ಮೇಲೆ ಈ ಅಭಿವೃದ್ಧಿ ಬಾಬುಗಳ ಪರಿಣಾಮವನ್ನೂ ಯೋಜನೆಯಲ್ಲಿ ಸೂಚಿಸಲಾಗಿತ್ತು.

ರಾಜ್ಯ ಪುನರ್ವಿಂಗಡಣೆಯ ಅನಂತರ ನಡೆದ ರಾಜ್ಯಗಳ ಸಹಕಾರ ಸಚಿವರ ಸಮ್ಮೇಳನದಲ್ಲಿ ಸಹಕಾರ ಅಭಿವೃದ್ಧಿಗಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯ ಅಂದಾಜು ವೆಚ್ಚವನ್ನು ಹೆಚ್ಚಿಸಿ ಎಲ್ಲ ಹಂತದ ಸಹಕಾರ ಸಾಲ ಸಂಸ್ಥೆಗಳನ್ನು ಆರ್ಥಿಕ, ಆಡಳಿತ ಹಾಗೂ ತಾಂತ್ರಿಕತೆಯಲ್ಲಿ ಬಲಪಡಿಸುವುದು, ಸರಕಾರದ ನೆರವಿನೊಂದಿಗೆ ಗ್ರಾಮಾಂತರ ಆರ್ಥಿಕ ಚಟುವಟಿಕೆಗಳಿಗೆ ಸಾಧ್ಯವಾದಷ್ಟು ವಿಶಾಲವಾದ ಆಧಾರವನ್ನೊದಗಿಸುವುದು, ಸರ್ಕಾರದ ನೆರವಿನೊಂದಿಗೆ ಸಹಕಾರ ಆಧಾರದ ಮೇಲೆ ಮಾರುಕಟ್ಟೆ ಹಾಗೂ ಸಂಸ್ಕರಣ ವ್ಯವಸ್ಥೆಯಲ್ಲಿ ಪ್ರಗತಿರ ಪುನರ್ವ್ಯವಸ್ಥೆ ಮತ್ತು ಸಹಕಾರ ಸಿಬ್ಬಂದಿಗೆ ಸರಿಯಾದ ತರಬೇತಿ ವ್ಯವಸ್ಥೆ ಈ ಅಂಶಗಳ ಆಧಾರದ ಮೇಲೆ ಕಾರ್ಯಕ್ರಮಗಳನ್ನು ರೂಪಿಸಲಾಯಿತು. 1958ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಹೊಸ ಸಹಕಾರ ನೀತಿಯನ್ನು ಅಂಗೀಕರಿಸಿದ್ದರಿಂದ ಸೇವಾ ಸಹಕಾರ ಸಂಘಗಳ ಹೊಸ ಯುಗ ಪ್ರಾರಂಭವಾಯಿತು. ಒಂದು ಸಾವಿರ ಜನಸಂಖ್ಯೆಯ ಒಂದು ಹಳ್ಳಿಗೆ ಒಂದು ಸಂಘದ ಸ್ಥಾಪನೆ ಮತ್ತು ಆ ಸಂಘದ ಸ್ಥಾಪನೆ ಮತ್ತು ಆ ಸಂಘದ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಅವರ ಕೃಷಿ ಉತ್ಪಾದನಾ ಯೋಜನೆಗಳಿಗನುಗುಣವಾಗಿ ಪೂರ್ಣ ಹಣಕಾಸಿನ ನೆರವು ಹೊಸ ನೀತಿಯ ಮುಖ್ಯ ಅಂಶಗಳಾಗಿದ್ದವು. ಈ ನೀತಿಯಿಂದಾಗಿ ದೊಡ್ಡ ಪ್ರಮಾಣದ ಸಹಕಾರ ಸಂಘಗಳ ಸಂಘಟನೆಯನ್ನು 1959-60 ರಿಂದ ಕೈಬಿಡಲಾಯಿತು. ಎರಡನೆಯ ಪಂಚವಾರ್ಷಿಕ ಯೋಜನೆಯ ಸಹಕಾರ ಚಟುವಟಿಕೆಗಾಗಿ ಯೋಜನೆಯಲ್ಲಿ ನಿಗಧಿಯಾಗಿದ್ದ 276 ಲಕ್ಷ ರೂ.ಗಳಲ್ಲಿ 261 ಲಕ್ಷ ರೂ.ಗಳು ವೆಚ್ಚವಾಯಿತೆಂದು ತಿಳಿದುಬರುತ್ತದೆ.

ಅನಂತರದ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಇದೇ ವಿಧಾನವನ್ನು ಕಾಣಬಹುದು. ಮೂರನೆಯ ಪಂಚವಾರ್ಷಿಕ ಯೋಜನೆಯಿಂದ ಲೇವಾದೇವಿ ಸಹಕಾರದ ಜೊತೆಗೆ ಮಾರಾಟ ಹಾಗೂ ರೂಪಾಂತರ, ಸಹಕಾರಿ ಬೇಸಾಯ, ಅನುಭೋಗಿ ಸಹಕಾರ ಇತ್ಯಾದಿ ಇತರ ಸಹಕಾರ ಕ್ಷೇತ್ರಗಳ ಬೆಳವಣಿಗೆಗೂ ಸರ್ಕಾರ ವಿಶೇಷ ಪ್ರೋತ್ಸಾಹ ಕ್ರಮಗಳನ್ನು ಕೈಗೊಂಡಿತು. ಸಹಕಾರ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾಡಲಾದ ವೆಚ್ಚ ಮೂರನೆಯ ಯೋಜನೆಯಲ್ಲಿ ರೂ.395 ಲಕ್ಷ, ವಾರ್ಷಿಕ ಯೋಜನೆಗಳ (1966-69) ಅವಧಿಯಲ್ಲಿ ರೂ. 285 ಲಕ್ಷ, ನಾಲ್ಕನೆಯ ಯೋಜನೆಯಲ್ಲಿ ರೂ.1,647 ಲಕ್ಷ, ಐದನೆಯ ಯೋಜನೆಯಲ್ಲಿ ಒದಗಿಸಲಾಗಿರುವ ಹಣದ ಅಂದಾಜು ರೂ.5,007 ಲಕ್ಷ, ಒಟ್ಟನಲ್ಲಿ ರಾಜ್ಯದ ಯೋಜಿತ ಆರ್ಥಿಕಾಭಿವೃದ್ಧಿಯ ಅಂಗವಾಗಿ ಸಹಕಾರ ರಂಗ ಇತ್ತೀಚಿನ ವರ್ಷಗಳಲ್ಲಿ ವೇಗವಾಗಿ ವಿಸ್ತರಿಸಿ ಬೆಳೆದಿದೆ.

ರಾಜ್ಯದ ಸಹಕಾರ ಚಳವಳಿ ವಿವಿಧ ಕ್ಷೇತ್ರಗಳಲ್ಲಿ ಹೇಗೆ ಸಾಗಿದೆ ಎಂಬುದನ್ನು ಮುಂದಿನ ಪುಟದ ಸಂಕ್ಷಿಪ್ತ ಸಮೀಕ್ಷೆಯಲ್ಲಿ ಗಮನಿಸ ಬಹುದು. ಲೇವಾದೇವಿ-ಗ್ರಾಮೀಣ ಹಾಗೂ ಕೃಷಿ ಲೇವಾದೇವಿ ರಾಜ್ಯ ಸಹಕಾರಿ ವಲಯದ ಅತ್ಯಂತ ಮುಖ್ಯ ವಿಭಾಗ, ಕೃಷಿ ಉದ್ಯಮಕ್ಕೆ ದೀರ್ಘಾವಧಿ ಸಾಲ ನೀಡಲು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲ ನೀಡಲು ರಾಜ್ಯ, ಜಿಲ್ಲೆ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಲೇವಾದೇವಿ ಸಂಘಗಳೂ ವ್ಯವಸ್ಥಿತವಾಗಿವೆ. ಪುರಾತನ ಕೃಷಿ ವಿಧಾನಗಳಿಗೆ ಬದಲಾಗಿ ಆಧುನಿಕ ಕೃಷಿ ವಿಧಾನಗಳನ್ನು ಅನುಸರಿಸುವುದಕ್ಕಾಗಿ ಕರ್ನಾಟಕ ರಾಜ್ಯ ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಸಹಾಯ ನೀಡುತ್ತಿದೆ. ಇದು ಪ್ರಪಂಚ ಬ್ಯಾಂಕು ಮತ್ತು ಕೃಷಿ ಮರು ಹಣಕಾಸು ಸಂಸ್ಥೆಗಳಿಂದ ವಿಶೇಷ ಧನಸಹಾಯ ಪಡೆದು ಕೃಷಿಕರಿಗೆ ದೀರ್ಘ ಕಾಲಾವಧಿ ಅಭಿವೃದ್ಧಿ ಬಂಡವಾಳವನ್ನು ಒದಗಿಸುತ್ತಿದೆ. ನೀರಾವರಿ ಪಂಪ್‌ಸೆಟ್, ಟ್ರ್ಯಾಕ್ಟರ್ ಮತ್ತು ಅನೇಕ ಆಧುನಿಕ ಕೃಷಿ ಉಪಕರಣಗಳು ಇತ್ಯಾದಿ ಕೃಷಿ ಅಭಿವೃದ್ಧಿ ಆವಶ್ಯಕತೆಗಳ ಪೂರೈಕೆಗೆ ಈ ಬಂಡವಾಳ ಹಣ ಸಹಾಯಕವಾಗಿದೆ. ರಾಜ್ಯದಲ್ಲಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ನೀಡಿದ ಸಾಲ 1969ರಲ್ಲಿ ಸು. 7 ಕೋಟಿ ರೂಪಾಯಿಗಳಿದ್ದುದು 1972ರಲ್ಲಿ ಸು. 12 ಕೋಟಿಗೆ ಏರಿತು. ಇತ್ತೀಚಿನ ವರ್ಷಗಳಲ್ಲಿ ಅದು ಇನ್ನೂ ಹೆಚ್ಚಿದೆ.

ಕರ್ನಾಟಕ ಕೃಷಿಕರ ಅಲ್ಪಾವಧಿ ಮಧ್ಯಮಾವಧಿ ಸಾಲ ಹಣದ ಆವಶ್ಯಕತೆ ಪೂರೈಕೆಗಾಗಿ ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಬ್ಯಾಂಕು, ಜಿಲ್ಲಾ ಮಟ್ಟದಲ್ಲಿ ಕೇಂದ್ರೀಯ ಸಹಕಾರ ಬ್ಯಾಂಕುಗಳು ಮತ್ತು ಸ್ಥಳೀಯ ಮಟ್ಟದಲ್ಲಿ ಪ್ರಾಥಮಿಕ ಲೇವಾದೇವಿ ಸಂಘಗಳು ಏರ್ಪಾಡಾಗಿವೆ. ರೈತ ವರ್ಗದವರನ್ನು ಗ್ರಾಮೀಣ ಸಾಹುಕಾರರ ಹಿಡಿತದಿಂದ ವಿಮುಕ್ತಗೊಳಿಸಿ, ಅವರ ಉದ್ಯಮಕ್ಕೆ ಸಾಕಷ್ಟು ಸಾಲ ಒದಗಿಸುವುದೇ ಕೃಷಿ ಲೇವಾದೇವಿ ಸಹಕಾರದ ಗುರಿಯಾಗಿದೆ.

1914ರಲ್ಲಿ ಸ್ಥಾಪಿತವಾದ ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್ 19 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಪ್ರಾಥಮಿಕ ಲೇವಾದೇವಿ ಸಹಕಾರ ಬ್ಯಾಂಕುಗಳಿಗೂ ಅವುಗಳ ಮೂಲಕ ಕೃಷಿಕರಿಗೂ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲಸೌಲಭ್ಯಗಳನ್ನು ಒದಗಿಸುತ್ತಿದೆ.

1972 ಜೂನ್ ಅಂತ್ಯದ ವೇಳೆಗೆ ಸು. 19 ಲಕ್ಷ ಸದಸ್ಯರನ್ನುಳ್ಳ 8,474 ಪ್ರಾಥಮಿಕ ಕೃಷಿ ಲೇವಾದೇವಿ ಸಂಘಗಳು ರಾಜ್ಯದಲ್ಲಿದ್ದವು. ಇವು ರೈತರಿಗೆ ಕೊಟ್ಟ ಸಾಲ 1969-72ರ ಅವಧಿಯಲ್ಲಿ ಸು. 32ಕೋಟಿ ರೂ. ಗಳಿಂದ ಸು. 46 ಕೋಟಿ ರೂ.ಗಳಿಗೆ ಹೆಚ್ಚಿತು. ಸಾಗುವಳಿಗೆ ಬೇಕಾದ ಸಾಲ ಸೌಲಭ್ಯ ನೀಡುವುದರಲ್ಲಿ ರಾಜ್ಯ, ಜಿಲ್ಲೆ ಮತ್ತು ಪ್ರಾಥಮಿಕ ಮಟ್ಟದ ಲೇವಾದೇವಿ ಸಂಘಗಳು ಪ್ರಮುಖ ಪಾತ್ರವಹಿಸುತ್ತಿವೆ.

ಪರಿಶೀಲನಾ ಸಮಿತಿ (1954) ಶಿಫಾರಸು ಮಾಡಿದ ಸಾಲ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಇದರ ಪ್ರಕಾರ ಸುಗ್ಗಿ ಕಾಲದಲ್ಲಿ ವಿವಿಧ ಖರ್ಚುಗಳಿಗಾಗಿ ನಗದು ರೂಪದಲ್ಲಿಯೂ ಬೇಸಾಯ ಕಾಲದಲ್ಲಿ ಬೇಕಾಗುವ ಬೀಜ, ಗೊಬ್ಬರ, ಕ್ರಿಮಿನಾಶಕ, ಉಪಕರಣಗಳು ಇತ್ಯಾದಿ ರೂಪಗಳಲ್ಲಿಯೂ ಸಾಲವನ್ನು ವಿತರಣೆ ಮಾಡಲಾಗುತ್ತದೆ. ಇದರಿಂದ ಸಹಕಾರ ಸಾಲ ಸೌಲಭ್ಯದ ಅತ್ಯುತ್ತಮ ಪ್ರಯೋಜನ ಕೃಷಿ ಉದ್ಯಮಕ್ಕೆ ಲಭಿಸಿದಂತಾಗಿದೆ.

ಭಾರತ ಸರ್ಕಾರದಿಂದ ನೇಮಿತವಾದ ಸಮೀಕ್ಷಾ ಸಮಿತಿ (1969) ಸಣ್ಣ ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು ಜಿಲ್ಲೆಗೊಂದರಂತೆ ಸ್ಥಾಪಿಸ ಬೇಕೆಂದು ಸಲಹೆ ಮಾಡಿತು. ಪ್ರಾಯೋಗಿಕವಾಗಿ ದೇಶದಲ್ಲಿ ಮೊದಲು ಸ್ಥಾಪಿಸಲಾದ ಇಂಥ 46 ಸಂಸ್ಥೆಗಳಲ್ಲಿ 4 ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದವು. ಬೀದರ್ ಜಿಲ್ಲೆಯ ಸಂಸ್ಥೆ 1970 ನವೆಂಬರ್‌ನಿಂದಲೂ ಉತ್ತರ ಕನ್ನಡ ಜಿಲ್ಲೆಯ ಸಂಸ್ಥೆ 1971 ಜನವರಿಯಿಂದಲೂ ಬೆಂಗಳೂರು ಜಿಲ್ಲೆಯ ಸಂಸ್ಥೆ 1971 ಫೆಬ್ರವರಿಯಿಂದಲೂ ಮತ್ತು ಮೈಸೂರು ಜಿಲ್ಲೆಯ ಸಂಸ್ಥೆ 1971 ಆಗಸ್ಟ್ ನಿಂದಲೂ ಕಾರ್ಯಾರಂಭ ಮಾಡಿದವು. ಇವು ತಮ್ಮ ಜಿಲ್ಲೆಯ ಸಣ್ಣ ಕೃಷಿಕರನ್ನು ಗುರುತಿಸಿ ಅವರ ಬಗ್ಗೆ ವಿವರವಾದ ದಾಖಲೆ ಸಿದ್ಧಪಡಿಸಿಕೊಂಡು, ಸುಧಾರಿತ ಕೃಷಿ ಅನುಸರಿಸಲು ಸಹಾಯಕವಾಗುವಂತೆ ಅವರಿಗೆ ಹಿಡುವಳಿ ಯೋಜನೆಗಳನ್ನು ತಯಾರಿಸಿ ಕೊಟ್ಟು, ಬೇಸಾಯಕ್ಕೆ ಸಹಕಾರ ಸಂಘಗಳ ಮೂಲಕ ದೊರಕಬಹುದಾದ ಸಹಾಯಗಳೆಲ್ಲವನ್ನೂ ದೊರಕಿಸಿಕೊಡುತ್ತಿವೆ. 1971–72 ರಿಂದ 1975–76 ರವರೆಗೆ 4 ವರ್ಷಗಳ ಅವಧಿಯ ಪ್ರಾಯೋಗಿಕ ಯೋಜನೆಯ ಪ್ರಕಾರ ಮೇಲೆ ಹೇಳಿರುವ ನಾಲ್ಕು ಜಿಲ್ಲೆಗಳಲ್ಲಿ ಗುರುತಿಸಲಾಗಿರುವ ಒಟ್ಟು 1,50,823 ಸಣ್ಣ ಕೃಷಿಕರಿಗೆ ಈ ಸಂಸ್ಥೆಗಳು ಒಟ್ಟು 22,96 ಕೋಟಿ ರೂ.ಗಳನ್ನು ಸಾಲವಾಗಿ ಒದಗಿಸುವುದೇ ಅಲ್ಲದೆ ಸಹಕಾರ ಸಂಸ್ಥೆಗಳಿಗೆ ನೇರವಾಗಿ 5.46 ಕೋಟಿ ರೂ.ಗಳ ಸಹಾಯ ಧನವನ್ನು ನೀಡುವುದು ಗುರಿ. ಕ್ರಮೇಣ ರಾಜ್ಯದ ಇತರ ಜಿಲ್ಲೆಗಳಿಗೂ ಈ ಯೋಜನೆ ಹರಡಿದಂತೆ ದುರ್ಬಲ ಕೃಷಿಕ ವರ್ಗದವರೆಲ್ಲರೂ ಸಹಕಾರ ಚಳವಳಿಯ ಪ್ರಯೋಜನ ಪಡೆಯುವ ಅವಕಾಶವಾಗುವುದು. ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ಕೃಷಿ ಸಾಲ ನೀಡಿಕೆಯಲ್ಲಿ ಹೆಚ್ಚು ಪಾತ್ರ ವಹಿಸಲಾರಂಭಿಸಿದುದು ಒಂದು ವಿಧದಲ್ಲಿ ಸಹಕಾರ ಲೇವಾದೇವಿ ಸಂಘಗಳಿಗೂ ಸಹಾಯಕವಾಗಿದೆ. ರಾಜ್ಯದ ಕೆಲವು ವಾಣಿಜ್ಯ ಬ್ಯಾಂಕುಗಳು ಸಹಕಾರ ಸಂಘಗಳ ಹಣಬಲ ಹೆಚ್ಚಿಸುವುದರ ಮೂಲಕ ಕೃಷಿ ಉದ್ಯಮಕ್ಕೆ ಹೆಚ್ಚು ಬಂಡವಾಳ ತಲುಪುವಂತೆ ಸಹಾಯ ಮಾಡುತ್ತಿವೆ. ಒಟ್ಟಿನಲ್ಲಿ ಕರ್ನಾಟಕ ರಾಜ್ಯದ ಕೃಷಿ ಲೇವಾದೇವಿ ಸಹಕಾರ ಕ್ಷೇತ್ರ ತನ್ನ ಕಾರ್ಯಕಲಾಪಗಳನ್ನು ಇತ್ತೀಚಿನ ವರ್ಷಗಳಲ್ಲಿ ಗಮನಾರ್ಹವಾಗಿ ಹೆಚ್ಚಿಸಿಕೊಂಡಿದೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕ್ಷೇತ್ರದ ಅಭಿವೃದ್ಧಿಗಾಗಿ 513.50 ಲಕ್ಷ ರೂ. ಗಳನ್ನು ಒದಗಿಸಲಾಗಿತ್ತು. ಆದರೆ, ಲೇವಾದೇವಿ ಸಂಘಗಳ ಸಾಲ ಬಾಕಿ ಹೆಚ್ಚಿರುವುದು, ಅನೇಕ ಸಂಘಗಳು ಸಾಕಷ್ಟು ಧನಬಲ ಮತ್ತು ಆಡಳಿತ ಸಾಮರ್ಥ್ಯವನ್ನು ಹೊಂದಿಲ್ಲದಿರುವುದು ದೊಡ್ಡ ಕೊರತೆಯೆನ್ನಬಹುದು.

ವ್ಯವಸಾಯೇತರ ಸಾಲ ಕ್ಷೇತ್ರದಲ್ಲಿ ನಗರ ಸಹಕಾರ ಬ್ಯಾಂಕುಗಳು ಇತ್ತೀಚೆಗೆ ಭಾರತದ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಟ್ಟಿವೆ. ನೌಕರ ವರ್ಗದವರು, ಸಣ್ಣಪುಟ್ಟ ವರ್ತಕರು, ಕುಶಲಕರ್ಮಿಗಳು ಮತ್ತು ಇತರ ಮಧ್ಯಮ ವರ್ಗದವರಿಗೆ ಸಾಲಸೌಲಭ್ಯ ನೀಡುವ ಪಟ್ಟಣ ಲೇವಾದೇವಿ ಸಹಕಾರ ಸಂಘಗಳು 1969–72ರ ಅವಧಿಯಲ್ಲಿ 1,323 ರಿಂದ 1,419ಕ್ಕೆ ಹೆಚ್ಚಿದವು. ಇದೇ ಅವಧಿಯಲ್ಲಿ ಇವುಗಳ ಸದಸ್ಯರ ಸಂಖ್ಯೆ 4.81 ಲಕ್ಷದಿಂದ 5.75 ಲಕ್ಷಕ್ಕೂ ಷೇರುಧನ 5.14 ಕೋಟಿ ರೂ.ಗಳಿಂದ 6.71 ಕೋಟಿ ರೂ. ಗಳಿಗೂ ಠೇವಣಿ ಮೊಬಲಗು 15.70 ಕೋಟಿ ರೂ.ಗಳಿಂದ 22.11 ಕೋಟಿ ರೂ.ಗಳಿಗೂ ಸದಸ್ಯರಿಗೆ ನೀಡಿದ ಸಾಲದ ಮೊತ್ತ 29.22 ಕೋಟಿ ರೂ.ಗಳಿಂದ 31.12 ಕೋಟಿ ರೂ.ಗಳಿಗೂ ಏರಿತು.

ಸಹಕಾರ ಮಾರಾಟ ಮತ್ತು ರೂಪಾಂತರ: ರಾಜ್ಯದ ಕೃಷಿಕರ ಅಭ್ಯುದಯ ಉತ್ತಮ ಫಸಲನ್ನು ಅವಲಂಬಿಸಿರುವಂತೆಯೇ, ಈ ಫಸಲಿನ ಶೋಷಣಾ ರಹಿತ ಹಾಗೂ ಲಾಭದಾಯಕ ಮಾರಾಟ ವಿಧಾನವನ್ನೂ ಅವಲಂಬಿಸಿದೆ. ಈ ನಿಟ್ಟಿನಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದ ತೀವ್ರವಾಗಿ ಬೆಳೆಯುತ್ತಿರುವ ರೂಪಾಂತರ ಸಹಕಾರ ಸಂಘಗಳೂ ಮಾರಾಟ ಸಹಕಾರ ಸಂಘಗಳೂ ಮುಖ್ಯ ಪಾತ್ರ ವಹಿಸುತ್ತಿವೆ. ಸಹಕಾರ ರೂಪಾಂತರ ಕ್ಷೇತ್ರದಲ್ಲಿ ಅಕ್ಕಿ ಗಿರಣಿಗಳು, ಎಣ್ಣೆ ಗಿರಣಿಗಳು, ಹತ್ತಿ ಹಿಂಜುವ ಗಿರಣಿಗಳು, ಹಣ್ಣು ಸಂಸ್ಕರಣ ಘಟಕಗಳು, ಕಾಫಿ ಶುದ್ಧೀಕರಣ ಘಟಕಗಳು ಮುಖ್ಯವಾದ ಸಹಕಾರ ಉದ್ಯಮಗಳಾಗಿವೆ. ಇವುಗಳ ಜೊತೆಗೆ ಸಹಕಾರ ಸಕ್ಕರೆ ಕಾರ್ಖಾನೆಗಳಿವೆ. 1972ರಲ್ಲಿ 51,135 ಸದಸ್ಯರು 6.29 ಕೋಟಿ ರೂ. ಗಳ ಷೇರುಧನ, 23.41 ಕೋಟಿ ರೂ.ಗಳ ಕ್ರಿಯಾ ಬಂಡವಾಳ ಹೊಂದಿದ್ದ 12 ಸಹಕಾರ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿ ನೋಂದಾಯಿಸಲ್ಪಟ್ಟಿದ್ದವು. ಕೃಷಿಕರು ಬೆಳೆದ ಸರಕುಗಳ ಜಮಾವಣೆ, ರಖಂವಾರಿ ವಿಂಗಡಣೆ, ಮೂಟೆಗಳಲ್ಲಿ ಅಥವಾ ಇತರ ಸಾಧನಗಳಲ್ಲಿ ಸರಕುಗಳನ್ನು ಕಟ್ಟುವಿಕೆ, ಉಗ್ರಾಣಗಳಲ್ಲಿ ದಾಸ್ತಾನು ಮಾಡುವಿಕೆ, ಸ್ಥಳದಿಂದ ಸ್ಥಳಕ್ಕೆ ಸಾಗಾಣೆ ಸಗಟು ಹಾಗೂ ಚಿಲ್ಲರೆ ವ್ಯಾಪಾರ ಇತ್ಯಾದಿ ಸೇವೆಗಳನ್ನೇ ಅಲ್ಲದೆ ರಾಜ್ಯದ ಮಾರಾಟ ಸಂಘಗಳು ಕೃಷಿ ಸರಕು ರೂಪಾಂತರ ಕಾರ್ಯ, ಲೇವಾದೇವಿ ಘಟಕಗಳ ಪರವಾಗಿ ಕೃಷಿಕರಿಂದ ಸಾಲ ವಸೂಲಿ, ಸರ್ಕಾರದ ಪರವಾಗಿ ಬೆಳೆಯುವವರಿಂದ ಧಾನ್ಯ ಸಂಗ್ರಹಣೆ, ಕೃಷಿಕರಿಗೆ ಗೊಬ್ಬರ, ಬೀಜ ಇತ್ಯಾದಿ ಸಾಗುವಳಿ ಸಾಧನಗಳ ವಿತರಣೆ, ಕೃಷಿಕರಿಗೆ ಸರಕುಗಳ ವಿತರಣೆ ಇಂತಹ ಅನೇಕ ಉಪಯುಕ್ತ ಕಾರ್ಯಗಳನ್ನು ನಡೆಸುತ್ತಿವೆ.

ರಾಜ್ಯದ ಸಹಕಾರ ಮಾರಾಟ ರಚನೆಯಲ್ಲಿ, 1972ರಲ್ಲಿ 1 ರಾಜ್ಯ ಕೃಷಿ ಮಾರಾಟ ಫೆಡರೇಷನ್ನು ಮತ್ತು 204 ಪ್ರಾಥಮಿಕ ಮಾರಾಟ ಸಂಘಗಳು ಇದ್ದವು. ಅಡಕೆ, ಹತ್ತಿ, ತೆಂಗು, ಹಣ್ಣು, ತರಕಾರಿ ಇತ್ಯಾದಿ ವಿಶಿಷ್ಟ ವಸ್ತುಗಳ ಬಗ್ಗೆ ಪ್ರತ್ಯೇಕ ಮಾರಾಟ ಸಂಘಗಳೂ ಉಳಿದವು ಸಾಮಾನ್ಯ ಉದ್ದೇಶದ ಮಾರಾಟ ಸಂಘಗಳೂ ಆಗಿದೆ. ಮಾರಾಟ ಸಂಘಗಳ ಷೇರು ಬಂಡವಾಳದಲ್ಲಿ ಸರ್ಕಾರದ ಪಾಲು ಅಧಿಕವಾಗಿರುವುದು. 1972 ಜೂನ್ ಕೊನೆಯಲ್ಲಿ ರಾಜ್ಯ ಮಾರಾಟ ಫೆಡರೇಷನ್ನಿನ ಒಟ್ಟು 169.20 ಲಕ್ಷ ರೂ.ಗಳ ಷೇರು ಬಂಡವಾಳದಲ್ಲಿ 165.53 ಲಕ್ಷ ರೂ. ಸರ್ಕಾರದ್ದು. ಇದೇ ದಿನದಂದು ಪ್ರಾಥಮಿಕ ಮಾರಾಟ ಸಂಘಗಳ ಒಟ್ಟು 540.10 ಲಕ್ಷ ರೂ.ಗಳ ಷೇರು ಬಂಡವಾಳದಲ್ಲಿ ಸರ್ಕಾರದ ಪಾಲು 459.44 ಲಕ್ಷ ರೂ. ಗಳಾಗಿದ್ದಿತು.

1964ರಲ್ಲಿ ದಾಂತವಾಲ ಸಮಿತಿ ದೇಶದಲ್ಲಿನ ಮಾರಾಟ ಸಹಕಾರ ಸಂಸ್ಥೆಗಳ ಲೋಪದೋಷಗಳನ್ನು ತೋರಿಸಿಕೊಟ್ಟಿತಲ್ಲದೆ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿತು. ಈ ವರದಿ ಕರ್ನಾಟಕ ರಾಜ್ಯದ ಸಹಕಾರ ಮಾರಾಟ ಮುನ್ನಡೆಗೂ ಮಾರ್ಗದರ್ಶಿಯಾಯಿತು. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾರಾಟ ಹಾಗೂ ರೂಪಾಂತರ ಸಹಕಾರ ಅಭಿವೃದ್ಧಿಗಾಗಿ 2,048.72 ಲಕ್ಷ ರೂ.ಗಳನ್ನು ಒದಗಿಸಲಾಯಿತು.

ಅನುಭೋಗಿ ಸಹಕಾರ: 1961ರ ನಟೇಶನ್ ಸಮಿತಿಯ ಸಲಹೆಗಳು ಮತ್ತು 1962ರ ಭಾರತ ಸರ್ಕಾರದ ಅನುಭೋಗಿ ಸಹಕಾರದ ದಿಟ್ಟ ಹೊಸ ಯೋಜನೆಗಳನ್ನು ಅನುಸರಿಸಿ ಕರ್ನಾಟಕ ರಾಜ್ಯದ ಅನುಭೋಗಿ

ಸಹಕಾರ ಚಳವಳಿ ಶೀಘ್ರವಾಗಿ ಬೆಳೆಯಲಾರಂಭಿಸಿತು. 1973 ಜೂನ್ ಕೊನೆಯಲ್ಲಿ 1 ರಾಜ್ಯ ಸಹಕಾರ ಅನುಭೋಗಿ ಫೆಡರೇಷನ್ನು, 24 ಅನುಭೋಗಿ ಸಗಟು ಸಂಘಗಳು ಮತ್ತು 1,325 ಪ್ರಾಥಮಿಕ ಅನುಭೋಗಿ ಮಳಿಗೆಗಳು ರಾಜ್ಯದ ಅನುಭೋಗಿ ಸಹಕಾರ ರಚನೆಯಲ್ಲಿ ಸೇರಿದ್ದವು. ರಾಜ್ಯ ಫೆಡರೇಷನ್ನಿನ 24.84 ಲಕ್ಷ ರೂ.ಗಳ ಷೇರು ಬಂಡವಾಳದಲ್ಲಿ 20.87 ಲಕ್ಷ ರೂ.ಗಳಷ್ಟು ಪ್ರಾಥಮಿಕ ಮಳಿಗೆಗಳ, ಒಟ್ಟು 150.20 ಲಕ್ಷ ರೂ.ಗಳ ಷೇರು ಬಂಡವಾಳದಲ್ಲಿ 77.74 ಲಕ್ಷ ರೂ.ಗಳಷ್ಟು ಸರ್ಕಾರ ಹಾಕಿದ್ದ ಷೇರುಧನವಾಗಿದ್ದುದು ಅನುಭೋಗಿ ಸಹಕಾರಕ್ಕೆ ಸರ್ಕಾರ ನೀಡಿರುವ ಬೆಂಬಲವನ್ನು ಸೂಚಿಸುತ್ತದೆ. ಹೀಗೆ ಷೇರು ಬೆಂಬಲವಷ್ಟೇ ಅಲ್ಲದೆ ಇತರ ರೂಪಗಳಲ್ಲಿ ಸರ್ಕಾರ ನೀಡುತ್ತಿರುವ ಉತ್ತೇಜನವೇ ರಾಜ್ಯದ ಅನುಭೋಗಿ ಸಹಕಾರಕ್ಕೆ ಮುಖ್ಯ ಆಧಾರವಾಗಿದೆ ಎಂದು ಹೇಳಬಹುದು. ಅನುಭೋಗಿ ಸಹಕಾರ ಸಂಘಗಳ ಅಂಗಸಂಸ್ಥೆಗಳಾಗಿ 1973ರ ವೇಳೆಗೆ 23 ಜನತಾ ಬಜಾರುಗಳು ಸ್ಥಾಪನೆಯಾಗಿದ್ದುವು. ಒಟ್ಟು ಸು. 4 ಲಕ್ಷ ಜನ ಸದಸ್ಯರನ್ನುಳ್ಳ ಪ್ರಾಥಮಿಕ ಅನುಭೋಗಿ ಸಹಕಾರ ಮಳಿಗೆಗಳು 1972ರಲ್ಲಿ ಸು. 62 ಕೋಟಿ ರೂ.ಗಳಷ್ಟು ಬೆಲೆಯ ಸರಕುಗಳ ಮಾರಾಟ ಮಾಡಿದವು. ದೇಶದ ಹಣಬಾಹುಳ್ಯ ಪರಿಸ್ಥಿತಿಯನ್ನು ಎದುರಿಸುವುದರಲ್ಲಿಯೂ ವಿರಳ ಸರಕುಗಳನ್ನು ಉಪಯುಕ್ತ ರೀತಿಯಲ್ಲಿ ವಿತರಣೆ ಮಾಡುವುದರಲ್ಲಿಯೂ ರಾಜ್ಯದ ಅನುಭೋಗಿ ಸಹಕಾರ ಸಂಸ್ಥೆಗಳು ಮುಖ್ಯ ಪಾತ್ರವಹಿಸಿವೆ.

ಕೈಗಾರಿಕಾ ಸಹಕಾರ: ಸಣ್ಣಪುಟ್ಟ ಕೈಗಾರಿಕೆಗಳ ನಿರ್ವಹಣೆಗೆ ಸಹಕಾರ ಸುಲಭವಾಗಿ ಹೊಂದಿಕೊಳ್ಳಬಲ್ಲ ಅತ್ಯುತ್ತಮ ವ್ಯವಸ್ಥಾ ವಿಧಾನ. ಶಿಥಿಲವಾಗುತ್ತಿದ್ದ ಗೃಹ ಹಾಗೂ ಗ್ರಾಮೀಣ ಕೈಗಾರಿಕೆಗಳ ಪುನರುತ್ಥಾನಕ್ಕಾಗಿ ಎಂ.ವಿಶ್ವೇಶ್ವರಯ್ಯ ನವರು ಹಿಂದೆಯೇ ಹಾಕಿಕೊಟ್ಟಿದ್ದ ಗ್ರಾಮಾಂತರ ಔದ್ಯೋಗೀಕರಣ ಯೋಜನೆಯನ್ನು ಕರ್ನಾಟಕ ರಾಜ್ಯ ಅನುಷ್ಠಾನಕ್ಕೆ ತಂದಿದೆ. 1950ರಲ್ಲಿ ಪ್ರಾಯೋಗಿಕವಾಗಿ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರಾರಂಭಿಸಲಾದ ಗ್ರಾಮೀಣ ಔದ್ಯೋಗೀಕರಣ ಯೋಜನೆ ಕ್ರಮೇಣ ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಿಗೂ ಹರಡಿದೆ. ಈ ಔದ್ಯೋಗೀಕರಣದಲ್ಲಿ ಸಹಕಾರ ವಿಶಿಷ್ಟ ಪಾತ್ರ ವಹಿಸಿದೆ.

1952ರಲ್ಲಿ ಕರ್ನಾಟಕ ಕೇಂದ್ರ ಸಹಕಾರ ಗ್ರಾಮ ಕೈಗಾರಿಕಾ ಬ್ಯಾಂಕ್‌ನ ಉದಯವಾಯಿತು. ಜಿಲ್ಲಾ ಕೈಗಾರಿಕಾ ಸಹಕಾರ ಬ್ಯಾಂಕುಗಳ ಮೂಲಕ ಕೈಗಾರಿಕೆಗಳಿಗೆ ಹಣ ಒದಗಿಸುವ ಸಲುವಾಗಿ ಈ ಬ್ಯಾಂಕನ್ನು ಪುನರ್ ವ್ಯವಸ್ಥೆಗೊಳಿಸಿ ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕು ಎಂದು ನಾಮಕರಣ ಮಾಡಲಾಯಿತು. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಇದರ ಶಾಖೆಗಳನ್ನು ಸ್ಥಾಪಿಸಲಾಯಿತು. ಸ್ಥಳೀಯ ಮಟ್ಟದಲ್ಲಿ ತಾಲ್ಲೂಕು ಗ್ರಾಮಾಂತರ ಕೈಗಾರಿಕಾ ಸಹಕಾರ ಸಂಘಗಳು ಸ್ಥಾಪಿತವಾಗಿವೆ. ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕಿನ ಧನ ಸಹಾಯ ಪಡೆದು ಕೈಗಾರಿಕಾ ಸಂಘಗಳು ತಮ್ಮ ಕ್ಷೇತ್ರವ್ಯಾಪ್ತಿಗೆ ಸೇರುವ ಗೃಹ ಹಾಗೂ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗೆ ಶ್ರಮಿಸುತ್ತಿವೆ. 1972 ರಲ್ಲಿ 1.08 ಕೋಟಿ ರೂ. ಷೇರುಧನ, 3.52 ಕೋಟಿ ರೂ. ಕ್ರಿಯಾ ಬಂಡವಾಳ ಹೊಂದಿದ್ದ ರಾಜ್ಯ ಕೈಗಾರಿಕಾ ಬ್ಯಾಂಕು 1.75 ಕೋಟಿ ರೂ.ಗಳ ಸಾಲ ನೀಡಿತ್ತು. 1.22 ಲಕ್ಷ ಜನ ಸದಸ್ಯರನ್ನುಳ್ಳ 808 ಪ್ರಾಥಮಿಕ ಕೈಮಗ್ಗ ಹಾಗೂ ಪವರ್‌ಲೂಮ್ ಸಂಘಗಳು 2.25 ಕೋಟಿ ರೂ. ಬೆಲೆಯ ಬಟ್ಟೆಯನ್ನು ಉತ್ಪಾದಿಸಿದ್ದುವು. 2.98 ಲಕ್ಷ ಜನ ಸದಸ್ಯರನ್ನೊಳಗೊಂಡ 1.03 ಕೋಟಿ ರೂ.ಗಳ ಷೇರು ಹಣ ಹೊಂದಿದ್ದ 381 ಖಾದಿ ಗ್ರಾಮೋದ್ಯೋಗ ಹಾಗೂ ಕುಶಲ ಕೈಗಾರಿಕಾ ಸಂಘಗಳು 2.24 ಕೋಟಿ ರೂ. ಬೆಲೆಯ ವಸ್ತುಗಳನ್ನು ಉತ್ಪಾದಿಸಿದ್ದುವು.

ಗೃಹನಿರ್ಮಾಣ ಸಹಕಾರಿ ಸಂಘಗಳು: ರಾಜ್ಯದ ಗೃಹನಿರ್ಮಾಣ ಸಹಕಾರಿ ಸಂಘಗಳು ಈ ಶತಮಾನದ ಎರಡನೆಯ ದಶಕದಲ್ಲಿಯೇ ಸ್ಥಾಪನೆಯಾದುವಾದರೂ ಇವುಗಳ ಬೆಳವಣಿಗೆ ಇತ್ತೀಚಿನ ದಶಕಕ್ಕೆ ಸೇರಿದೆ. ಈ ಸಂಘಗಳು ಕಡಿಮೆ ಆದಾಯ ವರ್ಗದ ಗೃಹನಿರ್ಮಾಣ, ಕೇಂದ್ರ ಸರ್ಕಾರದ ಕೈಗಾರಿಕಾ ಗೃಹ ನಿರ್ಮಾಣ, ನಗರ ಗೃಹನಿರ್ಮಾಣ ಮತ್ತು ರಾಜ್ಯ ಸರ್ಕಾರದ ಗ್ರಾಮಾಂತರ ಗೃಹ ನಿರ್ಮಾಣ ಯೋಜನೆಗಳಂತೆ ಕಾರ್ಯ ನಿರ್ವಹಿಸುವುವು. 1972ರಲ್ಲಿ ರಾಜ್ಯ ಮಟ್ಟದ ಸಹಕಾರ ಗೃಹನಿರ್ಮಾಣ ಸಂಸ್ಥೆ ತನ್ನ ಸದಸ್ಯ ಸಂಸ್ಥೆಗಳಾದ 967 ಪ್ರಾಥಮಿಕ ಗೃಹನಿರ್ಮಾಣ ಸಂಘಗಳ ಮೂಲಕ ಸದಸ್ಯರಿಗೆ ವಸತಿಸೌಕರ್ಯ ಕಲ್ಪಿಸಿಕೊಳ್ಳಲು ಸಹಾಯ ಮಾಡುತ್ತಿದೆ. ಈ ಪ್ರಾಥಮಿಕ ಸಂಘಗಳು, 1972ರಲ್ಲಿ 2.44 ಲಕ್ಷ ಜನ ಸದಸ್ಯರನ್ನು, 11.54 ಕೋಟಿ ರೂ.ಗಳ ಕ್ರಿಯಾ ಬಂಡವಾಳವನ್ನು ಹೊಂದಿದ್ದವು. ಇವಲ್ಲದೆ, ರಾಜ್ಯ ಮಟ್ಟದ ಹರಿಜನ-ಗಿರಿಜನ ಗೃಹ ನಿರ್ಮಾಣ ಸಂಸ್ಥೆಯ ಮೂಲಕ ಪ್ರಾಥಮಿಕ ಹರಿಜನ-ಗಿರಿಜನ ಗೃಹನಿರ್ಮಾಣ ಸಂಘಗಳು ಈ ದುರ್ಬಲ ವರ್ಗದವರಿಗೆ ವಸತಿಸೌಕರ್ಯ ಕಲ್ಪಿಸಲು ಸಹಾಯಕವಾಗಿವೆ.

ಸಹಕಾರ ಬೇಸಾಯ: ಸಣ್ಣಪುಟ್ಟ ಹಾಗೂ ತುಂಡು ಹಿಡುವಳಿಗಳ ಸಮಸ್ಯೆ ಇರುವ ರಾಜ್ಯದ ಕೃಷಿ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಬೇಸಾಯ ಮಹತ್ತ್ವಪೂರ್ಣ ಪಾತ್ರ ಹೊಂದಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದ ಸಹಕಾರ ಬೇಸಾಯ ಗಮನಾರ್ಹವಾಗಿ ಮುಂದುವರಿದಿದೆ. ಈ ಯೋಜನೆಯ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲಿಯೂ ಪಂಚಾಯತಿ ರಾಜ್ಯ ಹಾಗೂ ಸಹಕಾರ ಕ್ಷೇತ್ರದಲ್ಲಿ ಮುಂದುವರಿದಿದ್ದ ಒಂದು ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರವನ್ನು ಚುನಾಯಿಸಿ ಈ ಒಂದೊಂದು ಕ್ಷೇತ್ರದಲ್ಲಿಯೂ ಹತ್ತು ಸಹಕಾರ ಬೇಸಾಯ ಸಂಘಗಳನ್ನು ಸ್ಥಾಪಿಸಲಾಯಿತು. ಸಹಕಾರ ಬೇಸಾಯ ಕ್ರಮದ ಪ್ರಯೋಜನಗಳನ್ನು ಕೃಷಿಕರಿಗೆ ಪ್ರದರ್ಶಿಸುವುದೇ ಈ ಮಾದರಿ ಪ್ರಾಯೋಗಿಕ ಯೋಜನೆಯ ಉದ್ದೇಶವಾಗಿದ್ದಿತು. ಅಲ್ಲಿಂದೀಚೆಗೆ ಅನೇಕ ಸಹಕಾರ ಬೇಸಾಯ ಸಂಘಗಳು ಏರ್ಪಾಡಾಗಿ, 1972ರಲ್ಲಿ 16,778 ಜನ ಸದಸ್ಯರು, 1.39 ಕೋಟಿ ಕ್ರಿಯಾ ಬಂಡವಾಳ, 68,914 ಹೆಕ್ಟೇರ್ ಜಮೀನನ್ನು ಒಳಗೊಂಡ 602 ಸಂಯುಕ್ತ ಹಾಗೂ ಸಾಮೂಹಿಕ ಬೇಸಾಯ ಸಂಘಗಳಿದ್ದುವು.

ಇತರ ಸಹಕಾರ ಸಂಘಗಳು: ಮೇಲೆ ಹೇಳಿರುವ ಕ್ಷೇತ್ರಗಳೇ ಅಲ್ಲದೆ ಸಹಕಾರ ರಂಗ ರಾಜ್ಯದ ಜನಜೀವನದ ಇತರ ಅನೇಕ ಕ್ಷೇತ್ರಗಳನ್ನು ಪ್ರವೇಶಿಸಿದೆ. 1972ರಲ್ಲಿ 650 ಹಾಲು ಸರಬರಾಜು ಸಂಘಗಳು, 848 ಧಾನ್ಯ ಬ್ಯಾಂಕುಗಳು, 59 ಏತ ನೀರಾವರಿ ಸಂಘಗಳು, 125 ಮೀನುಗಾರರ ಸಂಘಗಳು, 144 ಕಾರ್ಮಿಕ ಕಂಟ್ರಾಕ್ಟ್ ಸಂಘಗಳು, 38 ಅರಣ್ಯ ಕಾರ್ಮಿಕ ಕಂಟ್ರಾಕ್ಟ್ ಸಂಘಗಳು, 29 ಸಾರಿಗೆ ಸಂಘಗಳು, ಕೆಲವು ಮುದ್ರಣಾಲಯಗಳು ಮತ್ತು ಕೆಲವು ಮಹಿಳೆಯರ ಸಂಘಗಳು ರಾಜ್ಯದ ಸಹಕಾರ ವಲಯದಲ್ಲಿ ಇದ್ದವು.

ಸಹಕಾರ ಶಿಕ್ಷಣ: ಸಹಕಾರ ಚಳವಳಿಯ ಯಶಸ್ಸು ನುರಿತ ಸಹಕಾರ ಸಿಬ್ಬಂದಿಯನ್ನೂ ಸಹಕಾರ ಪ್ರಜ್ಞೆ ಹೊಂದಿರುವ ಸದಸ್ಯ ವೃಂದವನ್ನೂ ಬಹುಮಟ್ಟಿಗೆ ಅವಲಂಬಿಸಿದೆ. ಇದನ್ನರಿತು ಕರ್ನಾಟಕ ಸರ್ಕಾರ ಸಹಕಾರ ಶಿಕ್ಷಣ ಹಾಗೂ ತರಬೇತಿಗೆ ಸೂಕ್ತ ಏರ್ಪಾಡುಗಳನ್ನು ಮಾಡಿದೆ. ಆರ್ಥಿಕಾಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯ ಸಾಧನೆಗೆ ಸಹಕಾರವನ್ನು ದಕ್ಷವಾದ ಸಾಧನವಾಗುವಂತೆ ಮಾಡಲು ಸಹಕಾರ ತರಬೇತಿ, ಶಿಕ್ಷಣ ಹಾಗೂ ಪ್ರಚಾರ ಕಾರ್ಯಗಳನ್ನು ತೀವ್ರಗೊಳಿಸುವುದು ರಾಜ್ಯದ ಐದನೆಯ ಪಂಚವಾರ್ಷಿಕ ಯೋಜನೆಯ ಘೋಷಿತ ಉದ್ದೇಶ. ಈ ಕಾರ್ಯಗಳ ನಿರ್ವಹಣೆ ಬಹುಮಟ್ಟಿಗೆ ಕರ್ನಾಟಕ ರಾಜ್ಯ ಸಹಕಾರ ಒಕ್ಕೂಟಕ್ಕೆ ಸೇರಿದೆ.

ಈ ಒಕ್ಕೂಟದ ಆಶ್ರಯದಲ್ಲಿ ಸ್ಥಾಪಿತವಾಗಿರುವ ಸಹಕಾರ ತರಬೇತಿ ಕಾಲೇಜು ಮತ್ತು ಸಹಕಾರ ತರಬೇತಿ ಕೇಂದ್ರಗಳಲ್ಲಿ ಸಹಕಾರ ಸಂಘಗಳ ಕಾರ್ಯಸಮಿತಿ ಸದಸ್ಯರಿಗೆ, ಸದಸ್ಯರಿಗೆ, ಕಾರ್ಯದರ್ಶಿಗಳಿಗೆ, ಔದ್ಯೋಗಿಕ ಸಂಘಗಳ ಸದಸ್ಯರಿಗೆ, ಆಸಕ್ತ ಮಹಿಳೆಯರಿಗೆ ಮತ್ತು ಯುವಕರಿಗೆ ಸಹಕಾರ ಶಿಕ್ಷಣ ನೀಡುತ್ತಿದ್ದಾರೆ. ಶಿಕ್ಷಣ ಶಿಬಿರಗಳ ಏರ್ಪಾಡು, ಅಧ್ಯಯನ ಮಂಡಳಿಗಳ ವ್ಯವಸ್ಥೆ, ಸಹಕಾರ ಚಲನಚಿತ್ರ ಪ್ರದರ್ಶನ, ಸಹಕಾರ ಕುರಿತ ಪುಸ್ತಕಗಳ ಪ್ರಕಟಣೆ, ಮೈಸೂರು ಸಹಕಾರ ಪತ್ರಿಕೆ ಮತ್ತು ಸಹಕಾರ ಎಂಬ ನಿಯತಕಾಲಿಗಳ ಪ್ರಕಟಣೆ ಮುಂತಾದವು ಕರ್ನಾಟಕ ರಾಜ್ಯ ಸಹಕಾರ ಒಕ್ಕೂಟ ಮಾಡುತ್ತಿರುವ ಕಾರ್ಯಗಳಾಗಿವೆ.

1976ರ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಒಟ್ಟು 8,292 ಕೃಷಿ ಸಾಲ ನೀಡಿಕೆ ಸಂಘಗಳು, 13,804 ಇತರ ಸಂಘಗಳೂ 52,91,000 ಎಲ್ಲಾ ಸಹಕಾರ ಸಂಘಗಳ ಒಟ್ಟು ಸದಸ್ಯರೂ ಇದ್ದು 5,817.45 ಲಕ್ಷ ರೂ.ಗಳನ್ನು ಅಲ್ಪಾವಧಿ ಸಾಲವಾಗಿಯೂ 476.69 ಲಕ್ಷ ರೂ.ಗಳನ್ನು ಮಧ್ಯಮಾವಧಿ ಸಾಲವಾಗಿಯೂ 1,685.20 ಲಕ್ಷ ರೂ.ಗಳನ್ನು ದೀರ್ಘಾವಧಿ ಸಾಲವಾಗಿಯೂ ಕೊಡಲಾಗಿತ್ತು. ಒಟ್ಟು 236 ನಿಯಂತ್ರಿತ ಮಾರುಕಟ್ಟೆಗಳೂ ಇದ್ದು ಸಹಕಾರ ಕ್ಷೇತ್ರದಲ್ಲಿ ಮುಂದುವರೆಯುತ್ತಿವೆ. ಇವುಗಳ ಜೊತೆಗೆ 259 ವಾಣಿಜ್ಯ ಬ್ಯಾಂಕುಗಳೂ 713 ಸಹಕಾರ ಬ್ಯಾಂಕುಗಳೂ 176 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೂ ಇದ್ದು ರಾಜ್ಯದ ಸಹಕಾರ ಕ್ಷೇತ್ರಾಭಿವೃದ್ಧಿಗೆ ಸಹಕಾರ ನೀಡುತ್ತಿವೆ.

ಭಾರತ ಇಂದು ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಂತೆ ಕಾರ್ಯನಿರತವಾಗಿದೆ. ಕರ್ನಾಟಕ ರಾಜ್ಯವೂ ತನ್ನ ಹೆಜ್ಜೆಯನ್ನು ಇದರೊಂದಿಗೆ ಇಟ್ಟಿದ್ದು ಗುರಿಸಾಧನೆಯತ್ತ ನಡೆದಿದೆ. ಅದರಂತೆ 1998ರಲ್ಲಿ ಒಟ್ಟು ನಗರಪ್ರದೇಶದ ಸಹಕಾರ ಬ್ಯಾಂಕುಗಳು 277 ಇದ್ದು 523 ಶಾಖೆಗಳನ್ನು ಹೊಂದಿದ್ದವು. ಒಟ್ಟು 2,29,052 ಲಕ್ಷ ರೂಪಾಯಿಗಳ ಠೇವಣಿಹೊಂದಿದ್ದು 2,55,195 ರೂ.ಗಳ ಸಾಲ ನೀಡಿತ್ತು. 2,295 ಇತರೆ ಸಹಕಾರಿ ಬ್ಯಾಂಕುಗಳಿದ್ದುವು. 117 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿದ್ದು ಒಟ್ಟು 25,148 ಲಕ್ಷ ರೂಪಾಯಿಗಳ ಸಾಲ ನೀಡಿದ್ದವು. 4,392 ವ್ಯವಸಾಯ, 2,572 ವ್ಯವಸಾಯೇತರ ಕ್ರೆಡಿಟ್ ಸಹಕಾರ ಸಂಘಗಳಿದ್ದುವು. ಹಾಗೆಯೇ 637 ಮಾರುಕಟ್ಟೆ, 1,433 ಗೃಹನಿರ್ಮಾಣ, ಹಾಲು ಉತ್ಪಾದಕ 7,741 ಮತ್ತು 5,751 ಇತರೇ ಸಹಕಾರ ಸಂಘಗಳಿದ್ದವು. 9,301 ಮಂದಿ ಕ್ರೆಡಿಟ್ ಸಹಕಾರ ಸಂಘಗಳ ಸದಸ್ಯರಿದ್ದರೆ 5,751 ಮಂದಿ ನಾನ್‌ಕ್ರೆಡಿಟ್ ಸಹಕಾರ ಸಂಘಗಳ ಸದಸ್ಯರಿದ್ದರು. ಕೃಷಿ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ 96,720 ಲಕ್ಷ ರೂ.ಗಳ ಅಲ್ಪಾವಧಿ ಮತ್ತು 8,334 ಲಕ್ಷ ರೂ.ಗಳ ಮಧ್ಯಮಾವಧಿ ಸಾಲನೀಡಿದ್ದವು. **(ಎ.ಪಿ.ಎಸ್.)**

**ಸಹಸ್ರಲಿಂಗ:** ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಹುಳಗೋಳ ಗ್ರಾಮದ ಒಂದು ಸ್ಥಳ. ಇದನ್ನು ಸಹಸ್ರಹಳ್ಳಿ ಎಂಬುದಾಗಿಯೂ ಕರೆಯಲಾಗುತ್ತದೆ. ಇಲ್ಲಿ ಸುಂದರ ಶಾಲ್ಮಲಾ ನದಿ ಹರಿಯುತ್ತದೆ. ಶಿರಸಿ–ಯಲ್ಲಾಪುರ ಮಧ್ಯದಲ್ಲಿ ಹುಳಗೋಳದ ಹತ್ತಿರ 2.5ಕಿಮೀ ಕ್ರಮಿಸಿ ಅಲ್ಲಿಂದ ಸು. $1^1/_2$ ಕಿಮೀ ದೂರ ಒಳನಾಡಿನಲ್ಲಿ ಸಾಗಿದರೆ ಈ ಸ್ಥಳ ಸಿಗುತ್ತದೆ. ಜ್ಞಾನದೀಪಕಾ ಎಂಬ ಸಂಸ್ಕೃತ ಕೃತಿಯಲ್ಲಿ ಹಿಂದೆ ಇಲ್ಲಿ ಸ್ವರ್ಣವಳ್ಳಿ ಮಠ ಇತ್ತೆಂದು ಹೇಳಿದೆ. ಇಲ್ಲಿ ಅನೇಕ ಬಾರಿ ದರೋಡೆಕಾರರ ಆಕ್ರಮಣವಾದ ಬಳಿಕ ಮಠವನ್ನು ಇಲ್ಲಿಂದ ಸ್ಥಳಾಂತರಿಸಲಾಯಿತು. ಇಲ್ಲಿರುವ ಒಂದು ಶಿಲಾಶಾಸನ ಕಲ್ಯಾಣದ ತ್ರಿಭುವನಮಲ್ಲನದು. ಅದರಲ್ಲಿ ಕೇಶವ ದೇವರನ್ನು ಪ್ರಕಾಶ ಭಾರತಿಯ ಶಿಷ್ಯರಾದ ರಾಜೇಂದ್ರ ಭಾರತಿ ಸ್ಥಾಪಿಸಿದರೆಂದು ಉಲ್ಲೇಖಿಸಿದೆ. ಇನ್ನೊಂದು ಶಾಸನ ರಾಯಮುರಾರಿ ಸೋಯಿದೇವನ (ಕಳಚುರಿ)ದಾಗಿದ್ದು, ಅದರಲ್ಲಿ ಸಹಸ್ರಹಳ್ಳಿಯನ್ನು ಹಾನಗಲ್‌ನ ಕದಂಬ ಕೀರ್ತಿದೇವ ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿಸಿದೆ. ಸೋವಿದೇವ ಇಲ್ಲೊಂದು ಶಿವಲಿಂಗವನ್ನು ಸ್ಥಾಪಿಸಿದ್ದ. ಮುಂದೆ ಇಲ್ಲಿ ಶಾಲ್ಮಲಾ ನದಿ ಉದ್ದಕ್ಕೂ ಮತ್ತು ಇಲ್ಲಿನ ಸುತ್ತಲ ಪ್ರದೇಶದಲ್ಲಿ ಹಲವಾರು



ಶಾಲ್ಮಲಾ ನದಿಯ ಉದ್ದಕ್ಕೂ ಶಿಲ್ಪಿಸಿರುವ ಲಿಂಗಗಳು

ಲಿಂಗಗಳನ್ನು ಸ್ಥಾಪಿಸಿರುವುದನ್ನು ಕಾಣಬಹುದು. ಇಲ್ಲಿನ ಪ್ರತಿಯೊಂದು ಬಂಡೆಯ ಮೇಲೂ ಲಿಂಗವನ್ನು ಕೆತ್ತಿದ್ದು ಅದರ ಮುಂಭಾಗದಲ್ಲಿ ನಂದಿಯ ಕೆತ್ತನೆ ಇದೆ. ಒಂದು ಮುಖ್ಯ ಬಂಡೆಯ ಮೇಲೆ ಲಿಂಗಗಳನ್ನು ವೃತ್ತಾಕಾರದಲ್ಲಿ ಕೆತ್ತಿದ್ದು ಅದರ ಕೇಂದ್ರದ ಸುತ್ತ ಒಂಬತ್ತು ಚಿಕ್ಕ ಗುಣಿಗಳನ್ನು ನಿರ್ಮಿಸಲಾಗಿದೆ. ಅದರ ಹೊರ ವೃತ್ತದಲ್ಲಿ ನವಗ್ರಹಗಳ ಕೆತ್ತನೆಯೂ ಶಾಸನವೂ ಇದೆ. ಈ ಲಿಂಗಗಳ ಇರವನ್ನು ಗಮನಿಸಿದರೆ ಇವನ್ನು ಅನೇಕ ತಲೆಮಾರುಗಳಲ್ಲಿ ಭಕ್ತಾದಿಗಳು ಕೆತ್ತಿಸಿದ್ದಿರಬಹುದೆಂದು ಊಹಿಸಬಹುದು. ಶಿವರಾತ್ರಿಯಲ್ಲಿ ಸಹಸ್ರಲಿಂಗದ ಹೆಸರಿನಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. **(ಎಸ್.ಎಚ್.ಇ.)**

**ಸಹ್ಯಾದ್ರಿ:** ಕರ್ನಾಟಕ ರಾಜ್ಯದ ಪಶ್ಚಿಮದಲ್ಲಿ ಹಬ್ಬಿರುವ ಪಶ್ಚಿಮಘಟ್ಟ ಶ್ರೇಣಿಯನ್ನು ಸಹ್ಯಾದ್ರಿ ಎಂದು ಕರೆಯಲಾಗುತ್ತದೆ. ಸಪ್ತಕುಲಪರ್ವತಗಳಲ್ಲಿ ಸಹ್ಯಾದ್ರಿ ಒಂದೆಂದು ಪ್ರತೀತಿ. ಅರಬ್ಬಿಸಮುದ್ರ ಪೀಠಕ್ಕೆ ಸಮಾಂತರವಾಗಿ ದಖ್ಖನ್ ಪ್ರಸ್ಥಭೂಮಿಗೆ ಪಶ್ಚಿಮಗೋಡೆಯಂತೆ ಇರುವ ಈ ಪರ್ವತಶ್ರೇಣಿ ದಕ್ಷಿಣೋತ್ತರವಾಗಿ ಬೆಳಗಾಂವಿ ಜಿಲ್ಲೆಯಿಂದ ಮೈಸೂರು ಜಿಲ್ಲೆಯವರೆಗೆ ಸು.966 ಕಿಮೀ ಉದ್ದವಾಗಿಯೂ ಒತ್ತೊತ್ತಾಗಿಯೂ ಹಬ್ಬಿದೆ. ಈ ಪರ್ವತಶ್ರೇಣಿಯ ಎತ್ತರ ಸು. 1,500 ಮೀ. ಸಹ್ಯಾದ್ರಿ ಶ್ರೇಣಿಗೂ ಅರಬ್ಬಿಸಮುದ್ರಕ್ಕೂ ಇರುವ ಅಂತರ ಕೆಲವು ಕಡೆ 80–161 ಕಿಮೀ ಆದರೆ ಇನ್ನು ಕೆಲವು ಕಡೆ ಕೇವಲ 8–16 ಕಿಮೀ. ಉತ್ತರ ಗಡಿಯಿಂದ ಗೋವರ್ಧನ ಗಿರಿಯವರೆಗೆ (ಜೋಗ ಜಲಪಾತದ ಸಮೀಪ) ಈ ಘಟ್ಟಶ್ರೇಣಿ ಹೆಚ್ಚು ಎತ್ತರಕ್ಕಿಲ್ಲ. ಈ ತೆರವಿನ ಪಶ್ಚಿಮಘಟ್ಟದ ಪೂರ್ವಭಾಗದಲ್ಲಿ ಹುಟ್ಟುವ ನದಿಗಳು ಪಶ್ಚಿಮಕ್ಕೆ ಹರಿಯುತ್ತವೆ. ಕೆಲವು ಘಟ್ಟಗಳನ್ನು ಸೀಳಿ ದುಮುಕುವುದರಿಂದ ಜಲಪಾತಗಳುಂಟಾಗಿವೆ. ಇವುಗಳಲ್ಲಿ ಜೋಗ, ಉಂಚಳ್ಳಿ, ಮಾಗೋಡು ಮತ್ತು ಲಾಲಗುಳಿ ಜಲಪಾತಗಳು ಮುಖ್ಯವಾದುವು. ಶಿವಗಂಗಾ ಮುಂತಾದ ವನಮಧ್ಯಗತ ಸುಂದರ ಜಲಪಾತಗಳೂ ಉಂಟು. ಅನಂತರ ಈ ಘಟ್ಟಗಳು ದಕ್ಷಿಣಕ್ಕೆ ಉನ್ನತ ಸಾಲುಗಳಾಗಿ ವಿಸ್ತರಿಸಿ ದಕ್ಷಿಣದ ತುದಿಯಲ್ಲಿ ನೀಲಗಿರಿ ಪರ್ವತಗಳಲ್ಲಿ ಲೀನವಾಗುತ್ತವೆ. ಉತ್ತರದಲ್ಲಿ ಧಾರವಾಡ ಶಿಲಾನಿಕ್ಷೇಪಗಳ ರಚನೆಗಳನ್ನೂ ದಕ್ಷಿಣದಲ್ಲಿ ಗ್ರಾನೈಟ್ ಶಿಲಾರಚನೆಗಳನ್ನೂ ತಳಹದಿಯಾಗಿ ಹೊಂದಿವೆ. ಟ್ರಾಪ್ ಮತ್ತು ಜಂಬು ಕಲ್ಲಿನಿಂದ ಕೂಡಿದ ಈ ಪರ್ವತಶ್ರೇಣಿಯಲ್ಲಿ ಹೆಚ್ಚು ಕಠಿಣವಾಗಿರುವ ಶಿಲೆಗಳು ಶಿಖರಗಳಂತೆ ಉಳಿದು ಮೃದು ಶಿಲಾಭಾಗಗಳು ಹಳ್ಳಗಳ

ಕೊರೆತದಿಂದ ಸವೆದುಹೋಗಿವೆ. ಶಿಲೆಗಳ ಸೀಳುಗಳು ಮತ್ತು ಬಿರುಕುಗಳಿಂದ ಏರುತಗ್ಗುಗಳ ವ್ಯತ್ಯಾಸ ಹೆಚ್ಚಾಗಿದೆ. ಪೂರ್ವಭಾಗದಲ್ಲಿ ಸಾಧಾರಣ ಏರುತಗ್ಗುಗಳಿಂದ ಕೂಡಿದ್ದರೆ ಪಶ್ಚಿಮಭಾಗದಲ್ಲಿ ಅತಿ ಕಡಿದಾದ ಶಿಲಾಮುಖಗಳಿದ್ದು ಕಿರಿದಾದ ಅನೇಕ ಕೊಳ್ಳಗಳುಂಟಾಗಿವೆ. ಸಹ್ಯಾದ್ರಿ ಶ್ರೇಣಿಯ ಎರಡು ಬದಿಗಳ ಇಳಿಜಾರುಗಳಲ್ಲೂ ಸ್ವಲ್ಪ ದೂರದವರೆಗೆ ಸಣ್ಣ ಗುಡ್ಡಗಳಿಂದ ಮತ್ತು ಕಾಡುಗಳಿಂದ ಕೂಡಿದ ಪ್ರದೇಶವಿದೆ. ಈ ಪ್ರದೇಶವನ್ನು ಮಲೆನಾಡು ಎಂದು ಕರೆಯಲಾಗುತ್ತದೆ. ಈ ಮಲೆನಾಡಿನ ಭಾಗಗಳು ಮುಖ್ಯವಾಗಿ ಮೈಸೂರು, ಕೊಡಗು, ಉಡುಪಿ, ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿವೆ.

ಸಹ್ಯಾದ್ರಿ ಶ್ರೇಣಿ ಕೆಲವು ಪ್ರಮುಖ ಶಿಖರಗಳಿಂದ ಕೂಡಿದೆ. ಆ ಶಿಖರಗಳಲ್ಲಿ ಕೊಡಚಾದ್ರಿ, ಕುದುರೆಮುಖ, ಬಾಬಾಬುಡನ್‌ಗಿರಿ ಮತ್ತು ಬ್ರಹ್ಮಗಿರಿ ಮುಖ್ಯವಾದುವು. ಕುದುರೆಮುಖ ಸಹ್ಯಾದ್ರಿ ಶ್ರೇಣಿಯಲ್ಲೇ ಅತ್ಯಂತ ಎತ್ತರವಾದ ಪರ್ವತಶಿಖರಗಳಲ್ಲೊಂದು. ಸಹ್ಯಾದ್ರಿ ಶ್ರೇಣಿ ಖನಿಜಪ್ರದೇಶವೂ ಆಗಿದ್ದು ಉತ್ಕೃಷ್ಟವಾದ ಕಬ್ಬಿಣದ ಅದಿರು ಅಧಿಕಪ್ರಮಾಣದಲ್ಲಿ ದೊರೆಯುತ್ತದೆ. ಚಿಕ್ಕಮಗಳೂರು ನಗರದ ಉತ್ತರದಲ್ಲಿರುವ ಬಾಬಾಬುಡನ್‌ಗಿರಿಯ ಇಳಿಜಾರು ಪ್ರದೇಶದಲ್ಲೆಲ್ಲ ಕಾಫಿ ತೋಟಗಳಿದ್ದು ಈ ಬೆಟ್ಟ ದಕ್ಷಿಣ ಭಾರತದ ಕಾಫಿ ವ್ಯವಸಾಯಕ್ಕೆ ಮೂಲಸ್ಥಾನವಾಗಿದೆ. ಈ ಪರ್ವತಶ್ರೇಣಿಗೆ ಸೇರಿದ ಕೆಮ್ಮಣ್ಣುಗುಂಡಿಯಲ್ಲಿ ಹೇರಳವಾಗಿ ಕಬ್ಬಿಣದ ಅದಿರು ಸಿಕ್ಕುತ್ತದೆ. ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಎತ್ತರದ (1,925ಮೀ) ಶಿಖರವಾದ ಮುಳ್ಳಯ್ಯನಗಿರಿ **(ನೋಡಿ)** ಬಾಬಾಬುಡನ್‌ಗಿರಿ ಬೆಟ್ಟದ ಸಾಲಿನಲ್ಲಿದೆ. ಕಲ್ಹತ್ತಗಿರಿ ಎಂಬ ಇಲ್ಲಿಯ ಇನ್ನೊಂದು ಶಿಖರದ ಹತ್ತಿರದಲ್ಲಿ ವೇದ ಮತ್ತು ಆವತಿ ನದಿಗಳು ಹುಟ್ಟುತ್ತವೆ. ಕೊಡಗು ಜಿಲ್ಲೆಯಲ್ಲಿ ಇರುವ ಬ್ರಹ್ಮಗಿರಿ ಸಹ್ಯಾದ್ರಿಯ ಇನ್ನೊಂದು ಎತ್ತರವಾದ ಶಿಖರ. ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿ ಮಳೆ ಅಧಿಕ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಳಗಾಂವಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುತ್ತದೆ. ಸಹ್ಯಾದ್ರಿ ಜಲ ಹಾಗೂ ಅರಣ್ಯಸಂಪತ್ತಿನ ತವರು. ದಟ್ಟವಾದ ಕಾಡುಗಳಲ್ಲಿ ಬಿದಿರು, ತೇಗ, ಹೊನ್ನೆ, ಬೀಟೆ, ಮತ್ತಿ, ಶ್ರೀಗಂಧ, ಹಲಸು, ನಂದಿ, ಜಂಬೆ, ಬಗನಿ ಮೊದಲಾದ ಮರಗಳು ಹೇರಳವಾಗಿ ಬೆಳೆಯುತ್ತವೆ. ಸಹ್ಯಾದ್ರಿಯ ಉತ್ತರದಿಂದ ದಕ್ಷಿಣದ ಕಡೆ ಹೋದಂತೆ ಅರಣ್ಯಸಂಪತ್ತು ಬಹು ಸಮೃದ್ಧವಾಗಿರುವುದು ಕಂಡುಬರುತ್ತವೆ. ಪಶ್ಚಿಮದ ಕಡೆ ಇರುವ ಅತಿ ಕಡಿದಾದ ಇಳಿಜಾರುಗಳು ಬೋಳಾಗಿರುವುವು. ಕಡಿಮೆ ಮಳೆ ಬೀಳುವ ಪೂರ್ವದ ಕಡೆಗೆ ಹೋದಂತೆ ಈ ಅರಣ್ಯದಟ್ಟಣೆ ಕಡಿಮೆಯಾಗಿ ಕುರುಚಲು ಕಾಡು ಕಾಣಬರುತ್ತದೆ. ಸಹ್ಯಾದ್ರಿ ಶ್ರೇಣಿಯ ಅನೇಕ ಕಣಿವೆ ಪ್ರದೇಶಗಳಲ್ಲಿ ಏಲಕ್ಕಿ ಬೆಳೆಯುತ್ತಾರೆ. ಇತ್ತೀಚೆಗೆ ಈ ಶ್ರೇಣಿಯಲ್ಲಿ ಬೆಳೆಯುವ ಬಿದಿರು ಆರ್ಥಿಕವಾಗಿ ಹೆಚ್ಚಿನ ಪ್ರಾಮುಖ್ಯ ಪಡೆದಿದೆ. ಈ ಶ್ರೇಣಿಯಲ್ಲಿ ಸಿಕ್ಕುವ ಮ್ಯಾಂಗನೀಸ್ ಅದಿರು ಮುಖ್ಯ ಖನಿಜವಾಗಿದ್ದು ಕಬ್ಬಿಣದ ಅದಿರು ಎರಡನೆಯ ಸ್ಥಾನ ಪಡೆದಿದೆ. ಜೋಗ ಜಲಪಾತ ವಿದ್ಯುತ್‌ಉತ್ಪಾದನಾ ಕೇಂದ್ರ, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಕಾಗದದ ಕಾರ್ಖಾನೆ–ಇವೆಲ್ಲ ಕರ್ನಾಟಕಕ್ಕೆ ಸಹ್ಯಾದ್ರಿಯ ಕೊಡುಗೆಯಾಗಿವೆ. ಈ ಪರ್ವತಶ್ರೇಣಿಗಳಲ್ಲಿ ಹುಟ್ಟುವ ಅನೇಕ ನದಿಗಳಲ್ಲಿ ಕೆಲವು ಪೂರ್ವಕ್ಕೂ ಕೆಲವು ಪಶ್ಚಿಮಕ್ಕೂ ಹರಿಯುತ್ತವೆ. ಇವುಗಳಲ್ಲಿ ಪಶ್ಚಿಮಕ್ಕೆ ಹರಿಯುವ ಉತ್ತರ ಕನ್ನಡ ಜಿಲ್ಲೆಯ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಂಗೊಳ್ಳಿ, ಸ್ವರ್ಣಾ, ಸೀತಾ ಮತ್ತು ನೇತ್ರಾವತಿ ನದಿಗಳು ಮುಖ್ಯವಾದುವು. ಪೂರ್ವಕ್ಕೆ ಹರಿಯುವ ನದಿಗಳೆಂದರೆ ಕಾವೇರಿ, ಕೃಷ್ಣಾ ಮತ್ತು ಅವುಗಳ ಉಪನದಿಗಳು. ಕೃಷ್ಣಾನದಿ ಸಹ್ಯಾದ್ರಿ ಪರ್ವತಶ್ರೇಣಿಯ ಮಹಾಬಲೇಶ್ವರದ ಸಮೀಪದಲ್ಲಿ ಹುಟ್ಟುತ್ತದೆ. ಇದೇ ಪರ್ವತಶ್ರೇಣಿಯ ವರಾಹಪರ್ವತದ ಗಂಗಾಮೂಲ ಶಿಖರದಿಂದ ತುಂಗಾ, ಭದ್ರಾ ಹಾಗೂ ನೇತ್ರಾವತಿ ನದಿಗಳು ಹುಟ್ಟುತ್ತವೆ.

ಸಹ್ಯಾದ್ರಿಯ ದಟ್ಟ ಅರಣ್ಯಪ್ರದೇಶಗಳಲ್ಲಿ ಕಾಡುಹಂದಿ, ಕಾಡುಕೋಣ, ಹುಲಿ, ಚಿರತೆ, ಆನೆ, ಜಿಂಕೆ, ನಾನಾರೀತಿಯ ಪಕ್ಷಿಗಳು ಮೊದಲಾದ ಕಾಡುಪ್ರಾಣಿಗಳನ್ನು ಕಾಣಬಹುದು.

ಶಿವಮೊಗ್ಗ ಜಿಲ್ಲೆಯಿಂದ ಪಶ್ಚಿಮ ಘಟ್ಟಗಳನ್ನು ಇಳಿದು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಲು ಮೂರು ಮಾರ್ಗಗಳಿವೆ. ಇವುಗಳಿಗೆ ಘಾಟಿಗಳು ಎಂದು ಹೆಸರು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಆಗುಂಬೆಘಾಟಿ, ಹೊಸನಗರ ತಾಲ್ಲೂಕಿನಲ್ಲಿ ಹುಲಿಕಲ್ಲು ಘಾಟಿ ಮತ್ತು ಕೊಲ್ಲೂರು ಘಾಟಿ ಇವೆ. ಮಹಾಬಲೇಶ್ವರ, ಕೊಲ್ಹಾಪುರ, ಶೃಂಗೇರಿ, ತಲಕಾವೇರಿ, ಸುಬ್ರಮಣ್ಯ, ಕೊಲ್ಲೂರು ಮುಂತಾದ ಪುಣ್ಯಕ್ಷೇತ್ರಗಳು ಸಹ್ಯಾದ್ರಿ ಪರ್ವತಶ್ರೇಣಿಯ ನೆರಳಿನಲ್ಲಿವೆ. ಪಶ್ಚಿಮಘಟ್ಟಗಳ ಸೌಂದರ್ಯಕ್ಕೆ ಮಾರುಹೋದ ಪೆಟ್ರೋ ಡೆಲ್ಲಾವೆಲ್ಲೆ ಎಂಬ ವಿದೇಶಿ ಪ್ರವಾಸಿ ಈ ಘಟ್ಟಗಳನ್ನು ನೋಡಿದಾಗ ತಾನು ಇಟಲಿಯ ಅಪೆನೈನ್ ಪರ್ವತಶ್ರೇಣಿಯನ್ನು ಕಂಡಂತಾಯಿತೆಂದು ಹೇಳಿದ್ದಾನೆ. ಕುವೆಂಪು ಅವರ ಸಾಹಿತ್ಯಕೃತಿಗಳಲ್ಲಿ ಸಹ್ಯಾದ್ರಿಯ ಸುಂದರ ಗಿರಿಶಿಖರಗಳ ವರ್ಣನೆ ಕಂಡುಬರುತ್ತದೆ. ದಕ್ಷಿಣ ಕನ್ನಡದ ಪ್ರಾಚೀನ ಹೆಸರು ಸಹ್ಯಾದ್ರಿಯೆಂದೂ ಪ್ರತೀತಿ. **(ಕೆ.ಎಂ.ಎಸ್.)**

**ಸಳ:** ಹೊಯ್ಸಳ ಸಂತತಿಯ ಮೂಲಪುರುಷ. ಕೆಲವು ಶಾಸನಗಳ ಪ್ರಕಾರ ಇವನು ಶಶಕಪುರದ (ಈಗಿನ ಅಂಗಡಿ, ಚಿಕ್ಕಮಗಳೂರು ಜಿಲ್ಲೆ) ಜೈನಮುನಿ ಸುದತ್ತಾಚಾರ್ಯರ ಶಿಷ್ಯನಾಗಿದ್ದ. ಅಲ್ಲಿನ ವಾಸಂತಿಕಾ ದೇವಿಯ ದೇವಾಲಯದಲ್ಲಿ ಒಂದು ದಿನ ಸುದತ್ತಾಚಾರ್ಯರು ಪೂಜೆಯಲ್ಲಿ ತೊಡಗಿರುವಾಗ ಹುಲಿಯೊಂದು ಹಾರಿ ಬಂತು. ಮುನಿ ತಮ್ಮ ಕೈಯಲ್ಲಿದ್ದ ಕುಂಚವನ್ನು ಶಿಷ್ಯನ ಕೈಗಿತ್ತು ಅದಂ ಪೊಯ್ ಸಳ ಎಂದು ಅಪ್ಪಣೆ ಮಾಡಿದರು. ಸಳ ಧೈರ್ಯದಿಂದ ಹುಲಿಯ ಮೇಲೆರಗಿ ಅದನ್ನು ಕೊಂದ. ಆ ಮುನಿ ಸಳನ ಧೈರ್ಯ, ಸಾಹಸಗಳಿಗೆ ಮೆಚ್ಚಿ ಅವನು ರಾಜನಾಗುವಂತೆ ವಾಸಂತಿಕಾದೇವಿಯಿಂದ ವರ ಪಡೆದು ಅನುಗ್ರಹಿಸಿದರು. ಸುದತ್ತಾಚಾರ್ಯರು ಅಪ್ಪಣೆ ಕೊಡಿಸಿದಂತೆ ಹೊಯ್ಸಳ ಎಂಬ ಹೆಸರಿನಿಂದ ಸಳ ರಾಜನಾದ. ಅವನ ಸಂತತಿಗೆ ಹೊಯ್ಸಳ ಎಂದು ಹೆಸರಾಯಿತು. ಹಳೇಬೀಡಿನ ಕೈಫಿಯತ್ತಿನ ಪ್ರಕಾರ ಸೊಸೆವೂರಿನ ವಾಸಂತಿಕಾ ದೇವತೆಯ ಜಾತ್ರೆ ಪ್ರತಿವರ್ಷವೂ ವಿಜೃಂಭಣೆಯಿಂದ ವಸಂತಕಾಲದಲ್ಲಿ ನಡೆಯುತ್ತಿತ್ತು. ಸುತ್ತುಮುತ್ತಲಿನ ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಅಲ್ಲಿ ನೆರೆಯುತ್ತಿದ್ದರು. ಕ್ರಮೇಣ ಒಂದು ಕ್ರೂರ ಹುಲಿ ಅಲ್ಲಿ ವಾಸಿಸತೊಡಗಿ ಜನರಿಗೆ ಉಪದ್ರವ ಕೊಡತೊಡಗಿತು. ಹುಲಿಯ ಉಪದ್ರವವನ್ನು ನಿರ್ಮೂಲ ಮಾಡುವ ಧೀರವ್ಯಕ್ತಿಗೆ ಅಲ್ಲಿ ಸೇರಲಿದ್ದ ಭಕ್ತಾದಿಗಳು ತಲಾ ಒಂದು ಪಣವನ್ನು ಕಾಣಿಕೆಯಾಗಿ ಕೊಡುವುದಾಗಿ ಒಪ್ಪಂದ ಮಾಡಿಕೊಂಡರು. ಸಳ ಹುಲಿಯನ್ನು ಕೊಂದ. ಸಂಪ್ರೀತರಾದ ಜನ ತಮ್ಮ ಒಪ್ಪಂದದ ಪ್ರಕಾರ ಅವನಿಗೆ ಕಾಣಿಕೆ ಸಲ್ಲಿಸಿದರು. ಸಳ ಈ ಕಾಣಿಕೆಯನ್ನು ಹಲವು ವರ್ಷಗಳು ತನ್ನ ಗುರುವಿನ ಬಳಿಯಲ್ಲಿ ಶೇಖರಿಸಿಟ್ಟು ಅನಂತರ ಒಂದು ಸೈನ್ಯವನ್ನು ಕಟ್ಟಿ ಸುತ್ತುಮುತ್ತಲಿನ ಪ್ರದೇಶವನ್ನು ಗೆದ್ದು ರಾಜನಾದ.

ಇನ್ನೊಂದು ಶಾಸನದಲ್ಲಿ ಯೋಗೀಂದ್ರನೊಬ್ಬ ವಾಸಂತಿಕಾದೇವಿಯನ್ನು ವಶಪಡಿಸಿಕೊಳ್ಳಲು ಪೂಜಾದಿಗಳಲ್ಲಿ ನಿರತನಾಗಿದ್ದಾಗ, ಇವನ ಕ್ರಿಯೆಯನ್ನು ಮುರಿಯಲು ದೇವಿಯೇ ವ್ಯಾಘ್ರ ರೂಪದಲ್ಲಿ ಬಂದಳು ಎಂದು ಹೇಳಿದೆ. ಇನ್ನು ಕೆಲವು ಶಾಸನಗಳ ಪ್ರಕಾರ ಸಳ ಕೊಂದದ್ದು ವ್ಯಾಘ್ರವಲ್ಲ,

ಶಾರ್ದೂಲ. ಕೆಲವು ಶಾಸನಗಳಲ್ಲಿ ಹುಲಿಯನ್ನು ಭರ್ಜಿಯಿಂದ ಕೊಂದ ಎಂದು ಹೇಳಿದರೆ, ಇನ್ನು ಕೆಲವು ಜೈನಮುನಿಯ ಕುಂಚದಿಂದ ಅಥವಾ ಒಂದು ಕಡ್ಡಿಯಿಂದ ಎಂದೆಲ್ಲ ತಿಳಿಸುತ್ತವೆ. ಇವೆಲ್ಲವನ್ನೂ ಗಮನಿಸಿದಲ್ಲಿ ಈ ಸಳನ ವೃತ್ತಾಂತ ಕೇವಲ ಕಟ್ಟುಕಥೆ ಎಂದು ತೋರುತ್ತದೆ. ಈ ಎಲ್ಲ ಕಥೆಗಳೂ ಹೊಯ್ಸಳರ ಸಾಮ್ರಾಜ್ಯ ಭದ್ರವಾಗಿ ನೆಲೆನಿಂತ ಮೇಲೆ ಅಂದರೆ 1116ರ ಅನಂತರದ ಶಾಸನಗಳಲ್ಲಷ್ಟೇ ಕಂಡುಬರುವುದು ಗಮನಾರ್ಹ.

ಸಳನ ಕಾಲದ ನಿರ್ದಿಷ್ಟ ಶಾಸನಗಳು ದೊರೆತಿಲ್ಲ. ಅವನು ಐತಿಹಾಸಿಕ ವ್ಯಕ್ತಿಯೇ ಎಂಬುದೂ ಅನುಮಾನಾಸ್ಪದ. ಹಲವು ಶಾಸನಗಳನ್ನು ಹೊರಡಿಸಿರುವ ನೃಪಕಾಮನೇ ಸಳ, ವಿನಯಾದಿತ್ಯ ಇವನ ಮಗ ಮತ್ತು ಇವನ ಆಳಿಕೆಯ ಕಾಲ 983–84 ಇತ್ಯಾದಿಯಾಗಿ ಕೆಲವು ವಿದ್ವಾಂಸರು ಬಹಳ ಶಿಥಿಲ ಆಧಾರಗಳನ್ನಿಟ್ಟುಕೊಂಡು ಊಹೆ ಮಾಡಿದ್ದಾರೆ. ಕುರುಡಿಹಳ್ಳಿ ಮತ್ತು ಕಣಚೂರು ಶಾಸನಗಳಲ್ಲಿ ಉಲ್ಲೇಖಿಸಲಾಗಿರುವ ಹೊಯ್ಸಳನು ಸಳನೇ ಎಂಬುದು ದಿವಂಗತ ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಪ್ರಾಯ. ಆದರೆ ಇತ್ತೀಚೆಗೆ ಚಿಕ್ಕಮಗಳೂರು ಬಳಿ ಉಪ್ಪಳ್ಳಿಯಲ್ಲಿ ದೊರೆತಿರುವ ಹೊಯ್ಸಳ ಶಾಸನ ಈ ಬಗ್ಗೆ ಹೊಸ ಬೆಳಕು ಬೀರುವಂಥದು(ನೋಡಿ: ಹೊಯ್ಸಳರು).

ಸಳ (ಶಾರ್ದೂಲ) ಹುಲಿಯನ್ನು ಕೊಲ್ಲುತ್ತಿರುವ ದೃಶ್ಯವನ್ನು ಶಿಲ್ಪಕ್ಕೆ ಅಳವಡಿಸಿ ಹೊಯ್ಸಳ ಕಾಲದಲ್ಲಿ ಕಟ್ಟಿದ ದೇವಾಲಯಗಳಲ್ಲೆಲ್ಲ ಸ್ಥಾಪಿಸಲಾಗಿದೆ. ಹುಲಿ ಹೊಯ್ಸಳರ ರಾಜಚಿಹ್ನೆಯಾಗಿತ್ತು. (ಜಿ.ಆರ್.ಆರ್.)

**ಸಾಂಡರ್ಸ್, ಸಿ.ಬಿ.:** ಮೈಸೂರು ಸಂಸ್ಥಾನದ ಬ್ರಿಟಿಷ್ ಕಮಿಷನರ್ (1876–78). ಈಸ್ಟ್ ಇಂಡಿಯ ಕಂಪನಿಯ ಸೇವೆಯಲ್ಲಿದ್ದ ಈತ 1849ರಲ್ಲಿ ಪಂಜಾಬ್ ಸೈನ್ಯದಲ್ಲಿ ಅಧಿಕಾರಿಯಾಗಿದ್ದ. 1857ರಲ್ಲಿ ಬ್ರಿಟಿಷ್ ದಂಡು ದೆಹಲಿಗೆ ಮುತ್ತಿಗೆ ಹಾಕಿದಾಗ ಸೈನ್ಯದಲ್ಲಿ ಪೊಲಿಟಿಕಲ್ ಏಜೆಂಟ್ ಮತ್ತು ಕಮಿಷನರ್ ಆಗಿದ್ದ. 1861ರಲ್ಲಿ ಮೈಸೂರಿನ ಕಮಿಷನರ್ ಆಗಿದ್ದ ಮಾರ್ಕ್ ಕಬ್ಬನ್ ಅನಾರೋಗ್ಯದಿಂದ ರಾಜೀನಾಮೆ ಕೊಟ್ಟು ಇಂಗ್ಲೆಂಡಿಗೆ ಹೋದಾಗ ಸಾಂಡರ್ಸ್ ಹಂಗಾಮಿ ಕಮಿಷನರಾಗಿ, ಮುಂದೆ ಎಲ್.ಬಿ.ಬೌರಿಂಗ್ ಅಧಿಕಾರ ವಹಿಸಿಕೊಳ್ಳುವ ವರೆಗೆ (ಫೆಬ್ರವರಿ 1862) ಆ ಹುದ್ದೆಯಲ್ಲಿದ್ದ. ತರುವಾಯ 1866–67ರಲ್ಲಿ ಬೌರಿಂಗ್ ರಜೆಯ ಮೇಲೆ ಹೋದಾಗ ಮತ್ತೆ ಹಂಗಾಮಿ ಕಮಿಷನರ್ ಆಗಿದ್ದ. ಅನಂತರ ಹೈದರಾಬಾದಿನಲ್ಲಿ ರೆಸಿಡೆಂಟ್ ಆಗಿದ್ದು, 1876ರಲ್ಲಿ ಮೈಸೂರು ಸಂಸ್ಥಾನದಲ್ಲಿ ಚೀಫ್ ಕಮಿಷನರ್ ಆಗಿ ನೇಮಿತನಾದ. 1878ರಲ್ಲಿ ಈತ ಕಮಿಷನರ್ ಹುದ್ದೆಯಿಂದ ನಿವೃತ್ತನಾಗಿ ಇಂಗ್ಲೆಂಡಿಗೆ ಹಿಂತಿರುಗಿದ. ಕೆಲವು ವರ್ಷಗಳ ತರುವಾಯ ಸ್ವದೇಶದಲ್ಲಿ ನಿಧನನಾದ. ಈತ ಚೀಫ್ ಕಮಿಷನರ್ ಆಗಿದ್ದ 2 ವರ್ಷ ಮೈಸೂರು ಸಂಸ್ಥಾನದಲ್ಲಿ ಘೋರಕ್ಷಾಮ ಇದ್ದ ಕಾಲ. ಸಾಂಡರ್ಸ್ ಕ್ಷಾಮಪರಿಹಾರ ಕ್ರಮಗಳನ್ನು ತೀವ್ರವಾಗಿ ಕೈಕೊಂಡ. ಬ್ರಿಟಿಷ್ ಸಾರ್ವಭೌಮರಿಂದ ಇವನಿಗೆ 1864ರಲ್ಲಿ ಕಂಪ್ಯಾನಿಯನ್ ಆಫ್ ದಿ ಬಾತ್ ಪದವಿ ದೊರಕಿತು. (ವಿ.ಜಿ.ಕೆ.)

**ಸಾಂತರರು:** ಸು. 7–17ನೆಯ ಶತಮಾನದ ವರೆಗೆ ಕರ್ನಾಟಕದಲ್ಲಿ ಆಳಿದ ಒಂದು ಸಾಮಂತ ಮನೆತನ. ಬಾದಾಮಿಯ ಚಳುಕ್ಯರ ಕಾಲದಲ್ಲಿ ಬನವಾಸಿಯ ಕದಂಬರ ಬಲ ಕುಂದಿದಾಗ ಕದಂಬರ ರಾಜ್ಯದ ಕೆಲವು ಭಾಗಗಳಲ್ಲಿ ಇವರು ಅಧಿಕಾರಕ್ಕೆ ಬಂದರೆಂದು ರೈಸ್ ಅವರು ಅಭಿಪ್ರಾಯ ಪಡುತ್ತಾರೆ. ಶಾಸನವೊಂದರಲ್ಲಿ ಈ ವಂಶದ ಮೂಲದ ವಿವರಗಳನ್ನು ಹೀಗೆ ಹೇಳಿದೆ: ಇವರು ಉಗ್ರವಂಶಕ್ಕೆ ಸೇರಿದವರು ಹಾಗೂ ಉತ್ತರ ಮಧುರೆಯವರು (ಮಧುರಾ). ರಾಹ ಈ ವಂಶದ ಮೂಲ ಪುರುಷ. ಅವನ ಅನಂತರ ಸಹಕಾರ ಆಳಿದ. ಈತನ ಮಗ ಜಿನದತ್ತ. ಈತ ತಂದೆಯ ವರ್ತನೆಗೆ ಬೇಸತ್ತು ಪದ್ಮಾವತಿ ಎಂಬ ಜೈನ ದೇವತೆಯ ವಿಗ್ರಹದೊಂದಿಗೆ ದಕ್ಷಿಣಕ್ಕೆ ಬಂದ. ಹೊಂಬುಚವನ್ನು (ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿರುವ ಹುಮಚ) ರಾಜಧಾನಿಯಾಗಿ ಮಾಡಿಕೊಂಡು ಸಾಂತರ ರಾಜ್ಯವನ್ನು ಕಟ್ಟಿದ. ಮುಂದೆ ಇದು ಸಾಂತಳಿಗೆ 1000 (ತೀರ್ಥಹಳ್ಳಿ ತಾಲ್ಲೂಕು ಹಾಗೂ ಸುತ್ತಲ ಪ್ರದೇಶ) ಎಂದು ಹೆಸರಾಯಿತು. ಇವನು ತನ್ನ ರಾಜ್ಯವನ್ನು ದಕ್ಷಿಣಕ್ಕೆ ಕಳಸದವರೆಗೂ (ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು) ಉತ್ತರಕ್ಕೆ ಗೋವರ್ಧನಗಿರಿಯವರೆಗೂ (ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು) ವಿಸ್ತರಿಸಿದನೆಂದು ಹೇಳಿದೆ. ಇವನ ಅನಂತರ ಶ್ರೀಕೇಶಿ, ಜಯಕೇಶಿ, ರಣಕೇಶಿ, ವಿಕ್ರಮ, ವೀರ, ಭುಜಬಲ, ನನ್ನಿ, ರಾಮ, ಚಾಗಿ, ಕನ್ನರ, ಕಾಮದೇವ, ತ್ಯಾಗಿ, ರಾಯ, ಚಿಕ್ಕವೀರ, ಅಮ್ಮಣದೇವ, ತೈಲಪದೇವ, ಬೀರದೇವ, ಶ್ರೀವಲ್ಲಭ, ತೈಲ, ಜಗದೇವ, ಜಯಕೇಶಿ, ಸಾಂತಿಯದೇವ (ಶಾಂತೆಯ) ಮುಂತಾದ ಅರಸರು ರಾಜ್ಯವಾಳಿದರು. ಹನ್ನೆರಡನೆಯ ಶತಮಾನದಲ್ಲಿ ಈ ಮನೆತನ ಒಡೆದು ಎರಡು ಶಾಖೆಗಳಾಗಿ ಒಂದು ಶಾಖೆ ಕಳಸದಿಂದಲೂ ಇನ್ನೊಂದು ಶಾಖೆ ಹೊಸಗುಂದದಿಂದಲೂ ಆಳಿದುದಾಗಿ ತಿಳಿದುಬರುತ್ತದೆ. ಸುಮಾರು ಹನ್ನೆರಡನೆಯ ಶತಮಾನದ ಪ್ರಾರಂಭದಿಂದ ಇವರು ತಮ್ಮ ರಾಜ್ಯವನ್ನು ಕಳಸರಾಜ್ಯವೆಂದು ಕರೆದರು. ಬೀರದೇವರಸ, ಬೊಮ್ಮರಸ, ಕಮ್ಮರಸ–ಇವರು ಹೊಸಗುಂದದ ಶಾಖೆಯ ಕೆಲವು ದೊರೆಗಳು. ಶಾಂತಮರುದೇವ, ಜಾಕಲದೇವಿ, ಕಾಳಲಮಹಾದೇವಿ, ಬಾಲದೇವ ಇವರು ಕಳಸದಿಂದ ರಾಜ್ಯವಾಳಿದ ಅರಸ ಅರಸಿಯರು.

ಹೊಯ್ಸಳರ ಪ್ರಾಬಲ್ಯದಿಂದಾಗಿ ಕ್ರಮೇಣ ಇವರು ತಮ್ಮ ರಾಜಧಾನಿಯನ್ನು ಕಳಸದಿಂದ ದಕ್ಷಿಣ ಕನ್ನಡ ಜಿಲ್ಲೆಯ ಕೆರವಸೆ ಮತ್ತು ಕಾರ್ಕಳಗಳಿಗೆ ಸ್ಥಳಾಂತರಿಸಿದರು. ಸುಮಾರು ಹದಿನಾರನೆಯ ಶತಮಾನದ ಪ್ರಾರಂಭದಲ್ಲಿ(ಸು. 1516) ಇವರು ತಮ್ಮ ರಾಜ್ಯವನ್ನು ಕಳಸ–ಕಾರ್ಕಳ ರಾಜ್ಯವೆಂದೂ (ಘಟ್ಟದ ಕೆಳಗೆ ಹಾಗೂ ಮೇಲೆ) ತದನಂತರ ಸು. 1530ರ ಹೊತ್ತಿಗೆ ಇದನ್ನು ಕೇವಲ ಕಾರ್ಕಳ ರಾಜ್ಯವೆಂದೂ ಕರೆಯಲಾರಂಭಿಸಿದರು. ತಮ್ಮ ದೀರ್ಘಕಾಲದ ಆಳಿಕೆಯಲ್ಲಿ ರಾಷ್ಟ್ರಕೂಟರ, ಕಲ್ಯಾಣದ ಚಾಳುಕ್ಯರ, ಹೊಯ್ಸಳರ, ವಿಜಯನಗರದ ದೊರೆಗಳ ಹಾಗೂ ಕೆಳದಿ ನಾಯಕರ ಸಾಮಂತರಾಗಿದ್ದರು. ಮುಂದೆ ಸುಮಾರು ಹದಿನೇಳನೆಯ ಶತಮಾನದ ಮಧ್ಯಭಾಗದ ವರೆಗೆ ಕಾರ್ಕಳದಿಂದ ರಾಜ್ಯವಾಳಿದ ಇವರನ್ನು ಕೆಳದಿ ನಾಯಕರು ಸಂಪೂರ್ಣವಾಗಿ ಸೋಲಿಸಿದುದರ ಪರಿಣಾಮವಾಗಿ ಇವರ ಆಳಿಕೆ ಕೊನೆಗೊಂಡಿತು.

ಸಾಂತರರು ವಾನರಧ್ವಜರೆಂದೂ ಸಿಂಹಲಾಂಛನರೆಂದೂ ಶಾಸನಗಳಲ್ಲಿ ಹೇಳಿದೆ. ಈ ವಂಶದ ದೊರೆಗಳು ಜೈನರು. ಹೊಸಗುಂದದ ಶಾಖೆಯಲ್ಲಿದ್ದ ದೊರೆಗಳು ಶೈವರು. ಹುಮಚದ ಪದ್ಮಾವತಿಯ ಆರಾಧಕರಾದ ಈ ಜೈನ ದೊರೆಗಳಿಗೆ ಕಳಸದ ಕಳಸನಾಥ ಕುಲದೈವ. ಧರ್ಮ, ವಾಸ್ತುಶಿಲ್ಪ, ಸಾಹಿತ್ಯ, ಕಲೆಗಳಿಗೆ ಇವರು ಉದಾರ ಆಶ್ರಯ ನೀಡಿದ್ದರೆಂದೂ ಇವರ ರಾಜ್ಯ ಅತ್ಯಂತ ವೈಭವದಿಂದ ಕೂಡಿತ್ತೆಂದೂ ತಿಳಿದುಬರುತ್ತದೆ.

(ಕೆ.ಎಮ್.ಎಸ್.)

**ಸಾಗರ:** ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಜಿಲ್ಲಾ ಉಪ ವಿಭಾಗದ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಸೊರಬ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕುಗಳೂ ಪೂರ್ವದಲ್ಲಿ ಶಿಕಾರಿಪುರ ಮತ್ತು ಶಿವಮೊಗ್ಗ ತಾಲ್ಲೂಕುಗಳೂ ದಕ್ಷಿಣದಲ್ಲಿ ಹೊಸನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕುಗಳೂ ಪಶ್ಚಿಮ ಮತ್ತು ವಾಯವ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಮತ್ತು

ಹೊನ್ನಾವರ ತಾಲ್ಲೂಕುಗಳೂ ಸುತ್ತುವರಿದಿವೆ. ಸಾಗರ, ಆವಿನಹಳ್ಳಿ, ತಾಳಗುಪ್ಪ, ಭಾರಂಗಿ, ಕರೂರು ಮತ್ತು ಆನಂದಪುರ ಹೋಬಳಿಗಳು. 263 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,938.4 ಚ.ಕಿಮೀ. ತಾಲ್ಲೂಕಿನಲ್ಲಿ 1,00,600 ಮಂದಿ ಗಂಡಸರು, 99,611 ಮಂದಿ ಹೆಂಗಸರಿದ್ದು ಒಟ್ಟು ಜನಸಂಖ್ಯೆ 2,00,995. ಇದರಲ್ಲಿ 1,38,294 ಮಂದಿ ಗ್ರಾಮೀಣರು, 62,701 ಮಂದಿ ಪಟ್ಟಣಿಗರು ಇದ್ದಾರೆ.

ಈ ತಾಲ್ಲೂಕು ಜಿಲ್ಲೆಯ ಮಲೆನಾಡು ಪ್ರದೇಶಕ್ಕೆ ಸೇರಿದೆ. ತಾಲ್ಲೂಕಿನ ಪಶ್ಚಿಮದ ಗಡಿ ಎಲ್ಲೆಯಲ್ಲಿರುವ ಪಶ್ಚಿಮಘಟ್ಟ ಶ್ರೇಣಿಗೆ ಸೇರಿದ ಗೋವರ್ಧನಗಿರಿ ಈ ತಾಲ್ಲೂಕಿನಲ್ಲಿರುವ ದೊಡ್ಡ ಬೆಟ್ಟ. ತಾಲ್ಲೂಕಿನ ಪಶ್ಚಿಮ,ಉತ್ತರ ಮತ್ತು ದಕ್ಷಿಣ ಪ್ರದೇಶಗಳು ಪಶ್ಚಿಮ ಘಟ್ಟಕ್ಕೆ ಸೇರಿದವು. ತಾಲ್ಲೂಕಿನ ನೈಋತ್ಯ ಭಾಗದಲ್ಲಿ ಸಣ್ಣ ಬೆಟ್ಟಗುಡ್ಡಗಳಿವೆ. ಈ ಬೆಟ್ಟಗುಡ್ಡಗಳ ಶಿಖರ ಭಾಗಗಳು ಬೋಳಾಗಿದ್ದು ಬೆಟ್ಟದ ತಪ್ಪಲು ಮತ್ತು ಕಣಿವೆ ಪ್ರದೇಶಗಳು ದಟ್ಟ ಕಾಡುಗಳಿಂದ ಕೂಡಿವೆ. ಈ ತಾಲ್ಲೂಕಿನಲ್ಲಿ 50,595 ಹೆಕ್ಟೇರ್ ಅರಣ್ಯ ಪ್ರದೇಶವಿತ್ತು. ಈ ಅರಣ್ಯಗಳಲ್ಲಿ ಬೆಲೆಬಾಳುವ ವಿವಿಧೋಪಯೋಗಿ ಮರಗಳು ಬೆಳೆಯುತ್ತವೆ. ಅರಣ್ಯದಲ್ಲಿ ವಿವಿಧ ಬಗೆಯ ಕಾಡುಪ್ರಾಣಿಗಳೂ ಇವೆ. ಪಂಚವಾರ್ಷಿಕ ಯೋಜನೆಯಂತೆ ಅರಣ್ಯಾಭಿವೃದ್ಧಿಗೆ ಇತ್ತೀಚೆಗೆ ಹೆಚ್ಚು ಗಮನ ಕೊಡಲಾಗುತ್ತಿದೆ.

ಶರಾವತಿ **(ನೋಡಿ)** ಈ ತಾಲ್ಲೂಕಿನ ಮುಖ್ಯ ನದಿ. ಇದು ದಕ್ಷಿಣದಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ ವಾಯವ್ಯಾಭಿಮುಖವಾಗಿ ಹರಿಯುವುದು. ಸಾಗರದ ವಾಯವ್ಯಕ್ಕೆ 32 ಕಿಮೀ ದೂರದಲ್ಲಿರುವ ಲಿಂಗನಮಕ್ಕಿ **(ನೋಡಿ)** ಎಂಬಲ್ಲಿ ಈ ನದಿಗೆ ದೊಡ್ಡ ಜಲಾಶಯವನ್ನು ನಿರ್ಮಿಸಲಾಗಿದೆ. ಈ ತಾಲ್ಲೂಕಿನ ಸುಮಾರು ಕಾಲುಭಾಗ ಈ ಜಲಾಶಯದ ಹಿನ್ನೀರಿನಿಂದ ಆವೃತವಾಗಿದೆ. ಸರಳ ಹೊಳೆ, ಎರುಕನ ಹೊಳೆ, ದೂಳಮಕ್ಕೆ ಹೊಳೆ, ಹಾಗಿನಕ್ಕು ಹೊಳೆ, ಎಣ್ಣೆ ಹೊಳೆ, ಬೊರದ ಹೊಳೆ, ಬಿರ್ದನ ಹೊಳೆ, ಹುರ್ಳಿ ಹೊಳೆ, ಸರ್ಮಣಾವತಿ ನದಿ ಮತ್ತು ಹರಿದ್ರಾವತಿ-ಇವು ಶರಾವತಿಯ ಉಪನದಿಗಳು. ಇವಲ್ಲದೆ ವರದಾನದಿ, ನಂದಿ ಹೊಳೆ, ಮಾವಿನ ಹೊಳೆ ಮುಂತಾದವು ಈ ತಾಲ್ಲೂಕಿನಲ್ಲಿ ಹರಿದು ವ್ಯವಸಾಯಕ್ಕೆ ಅನುಕೂಲ ಕಲ್ಪಿಸಿವೆ. ಈ ತಾಲ್ಲೂಕಿನಲ್ಲಿ 948 ಕೆರೆಗಳಿದ್ದವು. ಕುಮುದ್ವತಿ ನದಿಯ ಉಪನದಿಯಾದ ಸಾಲೂರು ಹಳ್ಳಕ್ಕೆ ಅಂಬ್ಳಿಗೊಳದ ಬಳಿ ಕಟ್ಟೆ ಕಟ್ಟಿ ಜಲಾಶಯವನ್ನು ನಿರ್ಮಿಸಲಾಗಿದೆ. ಇದು ಈ ತಾಲ್ಲೂಕಿನ ಪೂರ್ವದಲ್ಲಿ ಆನಂದಪುರ ಮತ್ತು ಶಿಕಾರಿಪುರದ ಮಾರ್ಗದಲ್ಲಿದೆ. ಅಂಬ್ಳಿಗೋಳ ಗ್ರಾಮ ಶಿಕಾರಿಪುರ ತಾಲ್ಲೂಕಿಗೆ ಸೇರಿದ್ದು ಅದಕ್ಕೆ ಒಂದೂವರೆ ಕಿಮೀ ದೂರದಲ್ಲಿ ಈ ಕಟ್ಟೆ ಕಟ್ಟಿದ್ದು ಈ ಜಲಾಶಯದ ಹಿನ್ನೀರು ಸಾಗರ ತಾಲ್ಲೂಕಿನಲ್ಲಿದೆ.

ಈ ತಾಲ್ಲೂಕಿನ ಕಣಿವೆಗಳಲ್ಲಿರುವ ತೋಟ-ಗದ್ದೆಗಳನ್ನು ಬಿಟ್ಟು ಉಳಿದೆಲ್ಲ ಭಾಗ ಕೆಂಪು ಜೇಡಿಮಣ್ಣಿನ ಭೂಮಿಯಿಂದ ಕೂಡಿದೆ. ತಗ್ಗಿನ ಕಣಿವೆ ಪ್ರದೇಶಗಳಲ್ಲಿ ಫಲವತ್ತಾದ ಮರಳು ಮಿಶ್ರಿತ ಮೆದುಮಣ್ಣಿನ ಭೂಮಿ ಇದ್ದರೆ, ಉಳಿದ ಕಡೆ ಭೂಮಿ ಅಷ್ಟೊಂದು ಫಲವತ್ತಾಗಿಲ್ಲ, ವಾರ್ಷಿಕ ಸರಾಸರಿ ಮಳೆ 2,240.54 ಮಿಮೀ.

ಈ ತಾಲ್ಲೂಕಿನ 31.525 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಈ ತಾಲ್ಲೂಕಿನ 16.113 ಹೆಕ್ಟೇರ್‌ಗಳಲ್ಲಿ ಬತ್ತವನ್ನೂ 325 ಹೆಕ್ಟೇರ್‌ಗಳಲ್ಲಿ ಕಬ್ಬನ್ನೂ ಬೆಳೆಯಲಾಗಿತ್ತು. ಇವುಗಳ ಜೊತೆಗೆ ರಾಗಿ, ನೆಲಗಡಲೆ, ಹತ್ತಿ ಮತ್ತು ದ್ವಿದಳ ಧಾನ್ಯಗಳನ್ನೂ ಬೆಳೆಯುತ್ತಾರೆ. ಅಡಕೆ, ತೆಂಗು ಇಲ್ಲಿನ ಮುಖ್ಯ ತೋಟದ ಬೆಳೆಗಳು. ಜೊತೆಗೆ ಗೇರು, ವಿವಿಧ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ಮತ್ತಿಕೊಪ್ಪದಲ್ಲಿ ಹಣ್ಣು ಸಂಸ್ಕರಣ ಕೇಂದ್ರವಿದೆ. ಇಲ್ಲಿ ಅನಾನಸ್ ಹಣ್ಣಿನ ಹಾಗೂ ಇತರ ಹಣ್ಣಿನ ಪಾನೀಯಗಳನ್ನು ತಯಾರಿಸಲಾಗುತ್ತದೆ. ವ್ಯವಸಾಯ ಪ್ರಧಾನವಾದ ಈ ತಾಲ್ಲೂಕಿನಲ್ಲಿ ಪಶುಸಂಪತ್ತೂ ಇದೆ. ಅದಕ್ಕೆ ಕಾರಣ ಇಲ್ಲಿ ಹೇರಳವಾಗಿ ದೊರಕುವ ಹಸಿರು ಮೇವು. ಈ ತಾಲ್ಲೂಕಿನಲ್ಲಿ 61,752 ಹೆಕ್ಟೇರ್ ಹುಲ್ಲುಗಾವಲಿತ್ತು. ಪಶು ಅಭಿವೃದ್ಧಿ ಮತ್ತು ರಕ್ಷಣೆಗೆ ತಾಲ್ಲೂಕಿನಲ್ಲಿ 5 ಪಶುವೈದ್ಯಾಲಯಗಳಿದ್ದುವು. ಮತ್ಸ್ಯೋದ್ಯಮವೂ ಈ ತಾಲ್ಲೂಕಿನಲ್ಲಿ ಪ್ರಗತಿದಾಯಕವಾಗಿದೆ. ಉದ್ಯಮಗಳಿಗೆ ಸಂಬಂಧಿಸಿದಂತೆ ಬೆಂಬಲ ನೀಡಲು ಸಹಕಾರ ಸಂಘಗಳಿವೆ.

ಈ ತಾಲ್ಲೂಕು ಗಂಧದ ಗುಡಿಗಾರಿಕೆ ಮತ್ತು ಮರ, ಬೊಂಬು ಇವುಗಳ ವಿವಿಧ ವಸ್ತುಗಳಿಗೆ ಪ್ರಸಿದ್ಧವಾಗಿದೆ. ಈ ತಾಲ್ಲೂಕಿನಲ್ಲಿ ಒಟ್ಟು 411 ಸಣ್ಣ ಕೈಗಾರಿಕಾ ಘಟಕಗಳಿದ್ದುವು. ತಾಲ್ಲೂಕಿನ ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದ ಬೆಳೆವಣಿಗೆಗೆ ಸಹಕಾರಿಯಾಗಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ತಾಲ್ಲೂಕಿನಲ್ಲಿ ಭದ್ರಾವತಿ-ತಾಳಗುಪ್ಪ ರೈಲುಮಾರ್ಗ ಹಾದುಹೋಗಿದೆ. ಸಾಗರ, ತಾಳಗುಪ್ಪ, ಆನಂದಪುರ ಮುಖ್ಯ ರೈಲುನಿಲ್ದಾಣಗಳು. ಬೆಂಗಳೂರು-ಹೊನ್ನಾವರ, ಆವಿನಹಳ್ಳಿ-ಸೊರಬ ಮುಖ್ಯ ರಸ್ತೆಗಳು ಈ ತಾಲ್ಲೂಕಿನ ಮುಖಾಂತರ ಹಾದು ಹೋಗಿದ್ದು ಉಳಿದ ಕಡೆಗಳಲ್ಲಿ ಗ್ರಾಮಾಂತರ ರಸ್ತೆಗಳಿವೆ. ಶಾಲೆಗಳೂ ಮತ್ತು ಒಂದು ಕಲಾ ಮತ್ತು ವಿಜ್ಞಾನ ಕಾಲೇಜೂ ಇದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಈ ತಾಲ್ಲೂಕಿನ ಸಾಗರದ ಮಾರಿಕಾಂಬಾ ಜಾತ್ರೆ, ಕೆಳದಿಯ ರಾಮೇಶ್ವರ ಜಾತ್ರೆ ಹೆಸರಾದವು.

ಈ ತಾಲ್ಲೂಕಿನ ಮುಖ್ಯ ಸ್ಥಳಗಳ ಪೈಕಿ ಒಂದಾದ ಆನಂದಪುರ ಸಾಗರದ ಆಗ್ನೇಯಕ್ಕೆ 24 ಕಿಮೀ ದೂರದಲ್ಲಿ ಬೀರೂರು-ತಾಳಗುಪ್ಪ ರೈಲುಮಾರ್ಗದಲ್ಲಿದೆ, ಇದೊಂದು ವ್ಯಾಪಾರ ಕೇಂದ್ರ. ಹಿಂದೆ ಅನಂತಪುರ ವೆಂಬ ತಾಲ್ಲೂಕಿಗೆ ಅದೇ ಹೆಸರಿನಿಂದ 1838-75 ರವರೆಗೆ ಆಡಳಿತ ಕೇಂದ್ರವಾಗಿತ್ತು. ಕೆಳದಿಯ ರಾಜ ಸೋಮಶೇಖರ ನಾಯಕ ಇದನ್ನು ಆನಂದಪುರವೆಂದು ಕರೆದನೆಂದು ಪ್ರತೀತಿ. ಇಲ್ಲಿ ಶಿವ, ಹನುಮಂತ ಮತ್ತು ರಂಗನಾಥ ಎಂಬ ಮೂರು ಇತ್ತೀಚಿನ ದೇವಾಲಯಗಳಿವೆ. ಸಾಗರದ ದಕ್ಷಿಣಕ್ಕೆ 6 ಕಿಮೀ ದೂರದಲ್ಲಿರುವ ಇಕ್ಕೇರಿ **(ನೋಡಿ)** ಕೆಳದಿ ಸಂಸ್ಥಾನದ ರಾಜಧಾನಿಯಾಗಿದ್ದ ಐತಿಹಾಸಿಕ ಸ್ಥಳ, ಸಾಗರದ ದಕ್ಷಿಣಕ್ಕೆ 11 ಕಿಮೀ ದೂರದಲ್ಲಿರುವ ಆವಿನಹಳ್ಳಿ ಕೆಳದಿ ನಾಯಕರ ಕಾಲದಲ್ಲಿ ಪ್ರಾಮುಖ್ಯ ಪಡೆದಿದ್ದ ಸ್ಥಳ. ಇಲ್ಲಿ ಕೆಲವು ದೇವಾಲಯಗಳು ಮತ್ತು ಕೋಟೆಯ ಅವಶೇಷಗಳಿವೆ. ಸಾಗರಕ್ಕೆ ಉತ್ತರದಲ್ಲಿ 8 ಕಿಮೀ ದೂರದಲ್ಲಿರುವ ಕೆಳದಿ **(ನೋಡಿ)** ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳ. ಸಾಗರದ ಆಗ್ನೇಯಕ್ಕೆ 25 ಕಿಮೀ ದೂರದಲ್ಲಿರುವ ಮಾಲಂದೂರಿನಲ್ಲಿ ಕೆಳದಿಯ ಶಿವಪ್ಪನಾಯಕ ಕಟ್ಟಿಸಿದುದೆಂದು ಹೇಳುವ ದೊಡ್ಡ ಕೆರೆಯಿದ್ದು, ಕೆರೆಯ ಮಧ್ಯದಲ್ಲಿ ಬಸವನ ಮಂಟಪವಿದೆ. ಇಲ್ಲಿರುವ ಚಂಪಕಸರಸಿ ಮಹತ್ತುಮಠ ಕೆಳದಿ ನಾಯಕರ ಆಶ್ರಯದಲ್ಲಿದ್ದುದೆಂದು ಹೇಳುವರು. ಈ ಮಠದ ಪ್ರವೇಶದ್ವಾರ ದಲ್ಲಿ ಕಲ್ಲಿನ ಆನೆಗಳಿವೆ. ಸಾಗರದ ಈಶಾನ್ಯದಲ್ಲಿ 10 ಕಿಮೀ ದೂರಕ್ಕೆ ಇರುವ ನಾಡಕಳಸಿಯಲ್ಲಿ ಎರಡು ಹೊಯ್ಸಳ ದೇವಾಲಯಗಳೂ ವೀರಗಲ್ಲು ಗಳೂ ಮತ್ತು ಕೆಳದಿನಾಯಕರ ಕಾಲದ ಕೆಲವು ಹಳೆಯ ಕಟ್ಟಡಗಳೂ ಇವೆ. ಸಾಗರದ ವಾಯವ್ಯಕ್ಕೆ 16 ಕಿಮೀ ದೂರದಲ್ಲಿರುವ ತಾಳಗುಪ್ಪ, ಬೀರೂರು ರೈಲುಮಾರ್ಗದ ಕೊನೆಯ ನಿಲ್ದಾಣ, ತಾಳಗುಪ್ಪದ ರೈಲುನಿಲ್ದಾಣ ದಿಂದ ಜೋಗ ಜಲಪಾತಕ್ಕೆ 16 ಕಿಮೀ ದೂರ. ಸಾಗರದ ವಾಯವ್ಯಕ್ಕೆ 38 ಕಿಮೀ ದೂರದಲ್ಲಿರುವ ತಳಕಳಲೆಯ ಹತ್ತಿರ ಶರಾವತಿ ನದಿಯ ಉಪನದಿಯಾದ ತಳಕಳಲೆ ತೊರೆಗೆ ಅಡ್ಡಗಟ್ಟೆ ಕಟ್ಟಲಾಗಿದೆ. ಇದು ಪ್ರಕೃತಿಯ ಸುಂದರ ನೆಲೆಯಲ್ಲಿದೆ.

ಸಾಗರ ಈ ತಾಲ್ಲೂಕಿನ ಜಿಲ್ಲಾ ಉಪವಿಭಾಗದ ಆಡಳಿತ ಕೇಂದ್ರ ಹಾಗೂ ಪಟ್ಟಣ. ಶಿವಮೊಗ್ಗದ ವಾಯವ್ಯಕ್ಕೆ 71 ಕಿಮೀ ದೂರದಲ್ಲಿ ಬೆಂಗಳೂರು–ಹೊನ್ನಾವರ ಮಾರ್ಗದಲ್ಲಿ, ವರದಾನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 62,701. ಬೀರೂರು–ತಾಳಗುಪ್ಪ ರೈಲು ಮಾರ್ಗದಲ್ಲಿ ಒಂದು ಪ್ರಮುಖ ರೈಲ್ವೆ ನಿಲ್ದಾಣವಾಗಿರುವ ಈ ಪಟ್ಟಣ ಅಡಕೆ, ಬತ್ತ, ಮೆಣಸು ಮತ್ತು ಗಂಧದ ಸಾಮಾನುಗಳ ಪ್ರಸಿದ್ಧ ವ್ಯಾಪಾರ ಕೇಂದ್ರ. ಇಲ್ಲಿ ವಿದ್ಯುತ್, ಅಂಚೆ, ತಂತಿ, ದೂರವಾಣಿ ಮುಂತಾದ ಸೌಲಭ್ಯಗಳಿವೆ. ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜೂ ಸರ್ಕಾರಿ ತಾಂತ್ರಿಕ ತರಬೇತಿ ಶಾಲೆ, ಆಸ್ಪತ್ರೆ ಮುಂತಾದವುಗಳ ಸೌಲಭ್ಯವಿದೆ. ಹೆಂಚು ತಯಾರಿಸುವ ಎರಡು ಕಾರ್ಖಾನೆ ಹಾಗೂ ಕಾಫಿಪುಡಿಯ ಮತ್ತು ಬತ್ತದ ಗಿರಣಿಗಳಿವೆ. ಸಿದ್ಧಿವಿನಾಯಕ, ಕಾಳಿಂಗಮರ್ದನ ಮತ್ತು ಗೋಪಾಲಕೃಷ್ಣ, ಶಿವ ಮತ್ತು ಮಾರಿಕಾಂಬ ದೇವಾಲಯಗಳು ಈ ಪಟ್ಟಣದಲ್ಲಿವೆ. 1923 ರಿಂದ ಈ ಪಟ್ಟಣದಲ್ಲಿ ನಗರಸಭಾಡಳಿತವಿದೆ. ಈ ತಾಲ್ಲೂಕಿಗೆ ಸೇರಿದ ಜೋಗ ಜಲಪಾತದಲ್ಲಿ ಇರುವ ಒಟ್ಟು ಜನಸಂಖ್ಯೆ 12,570. *

**ಸಾತನೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಒಂದು ಗ್ರಾಮ. ಮಾಗಡಿಯ ನೈಋತ್ಯಕ್ಕೆ 10 ಕಿಮೀ ದೂರದಲ್ಲಿ ಮಾಗಡಿ–ಕುಣಿಗಲು ಮಾರ್ಗದಲ್ಲಿದೆ. ಜನಸಂಖ್ಯೆ 1,469.

ಇಲ್ಲಿನ ವಿಠಲರಾಯ ದೇವಾಲಯದಲ್ಲಿ ವಿಠಲಮೂರ್ತಿಯ ಭವ್ಯಮೂರ್ತಿಯಿದೆ. ಮೂರ್ತಿಯ ಎರಡು ಕೈಗಳು ನಡುವಿನ ಮೇಲೆ ಇರಿಸಿದಂತಿದ್ದು ಬಲ ಹಸ್ತದಲ್ಲಿ ಶಂಖ ಮತ್ತು ಕೊಳಲೂ ಎಡಹಸ್ತದಲ್ಲಿ ದಾರದಿಂದ ಕಟ್ಟಿದ ಒಂದು ಥೈಲಿಯೂ ಇದೆ. ಈ ಮೂರ್ತಿಯ ಪಕ್ಕದಲ್ಲಿರುವ ದೇವಪತ್ನಿಯರು ಒಂದು ಕೈಯಲ್ಲಿ ಚಾಮರವನ್ನೂ ಇನ್ನೊಂದು ಕೈಯಲ್ಲಿ ಕಮಲವನ್ನೂ ಹಿಡಿದಿರುವರು. ಪ್ರಭಾವಲಯದ ಮೇಲ್ಭಾಗದಲ್ಲಿ ಕಲಾಪೂರ್ಣವಾಗಿ ಕಡೆದಿರುವ ದಶಾವತಾರದ ಮೂರ್ತಿಶಿಲ್ಪಗಳನ್ನು ಕಾಣಬಹುದು. ತಳಭಾಗದ ಎಡಬಲಪಾರ್ಶ್ವಗಳಲ್ಲಿ ಮಕರ ವಾಹನಾರೂಢನಾಗಿರುವ ವರುಣನ ಮೂರ್ತಿಯನ್ನು ಕಡೆದಿದೆ. ಈ ದೇವಾಲಯಕ್ಕೆ ವಿಠಲಗೋಪಾಲಸ್ವಾಮಿ ದೇವಾಲಯವೆಂಬ ಹೆಸರೂ ಉಂಟು. ಈ ಗ್ರಾಮದಲ್ಲಿ ವಿದ್ಯುತ್ ಸೌಕರ್ಯದ ಜೊತೆಗೆ ಶಾಲೆಗಳೂ ಇವೆ. **(ಎಸ್.ವಿ.ಎಸ್.)**

**ಸಾತವಾಹನರು:** ಮೌರ್ಯರ ಅನಂತರ ದಖನ್ ಪ್ರದೇಶದಲ್ಲಿ ಆಳಿದ ರಾಜಮನೆತನ. ಸೀಮುಕ ಈ ಮನೆತನದ ಮೂಲಪುರುಷ. ಈ ವಂಶದ ಅರಸರನ್ನು ದಕ್ಷಿಣಾಪಥೇಶ್ವರರೆಂದು ಕರೆಯಲಾಗಿದೆ. ದಕ್ಷಿಣಾಪಥ ಎಂಬ ಮಾತಿಗೆ ವಿಂಧ್ಯಪರ್ವತದ ದಕ್ಷಿಣಕ್ಕಿರುವ ಭಾರತದ ಭೂಭಾಗ, ಎಂದರೆ ಸಮಗ್ರ ದಕ್ಷಿಣಭಾರತ ಎಂಬುದು ಕೆಲವರ ಅಭಿಪ್ರಾಯ. ಆದರೆ ಇದು ವಿಂಧ್ಯಪರ್ವತದ ಕೆಳಗಿನ ಈಗಿನ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳನ್ನೊಳಗೊಂಡ ದಖನ್ ಪ್ರದೇಶವೆಂಬುದು ಬಹುಜನರ ಅಭಿಮತ.

**ರಾಜಕೀಯ ಇತಿಹಾಸ:** ಸಾತವಾಹನರು ಯಾರು, ಸಾತವಾಹನ ಎಂದರೇನು ಎಂಬ ಬಗ್ಗೆ ಜಿಜ್ಞಾಸೆಯಿದೆ. ಸಾತವಾಹನ ಎಂಬ ಪದ ಶಾಸನಗಳಲ್ಲಿ ಮಾತ್ರ ಕಂಡುಬಂದಿದೆ. ಸಾತ ಎಂದರೆ ಮೊನಚಾದ, ತೆಳುವಾದ ಎಂದು ಅರ್ಥ. ಇದಕ್ಕೆ ಚುರುಕಾದ ಎಂಬ ಅರ್ಥವೂ ಇದೆ. ವಾಹನ ಎಂಬ ಮಾತನ್ನು ಕುದುರೆಗೂ ಅನ್ವಯಿಸಬಹುದು. ಆಗ ಸಾತವಾಹನ ಎಂದರೆ ಚುರುಕಾದ (ಶೀಘ್ರಗಾಮಿಯಾದ) ಕುದುರೆಯನ್ನೇರುವವ ಎಂದಾಗುತ್ತದೆ. ಸಾತಕಣ್ಣಿ (ಸಾತಕರ್ಣಿ) ಎಂದೂ ಇವರು ತಮ್ಮನ್ನು ಕರೆದುಕೊಂಡಿದ್ದಾರೆ. ಸಾತಕಣ್ಣಿ ಎಂದರೆ ಚುರುಕಾದ ಕಿವಿ (ಕರ್ಣ) ಉಳ್ಳವನೆಂದಾಗುತ್ತದೆ. ಇವರನ್ನು ಕುರಿತು ನಮಗೆ ಪುರಾಣಗಳಲ್ಲಿ ವಿಶೇಷವಾದ ಮಾಹಿತಿ ದೊರಕುತ್ತದೆಯಾದರೂ ಅಲ್ಲೆಲ್ಲೂ ಇವರನ್ನು ಈ ಹೆಸರಿನಿಂದ ಕರೆದಿಲ್ಲ. ಪುರಾಣಗಳಲ್ಲಿ, ಅವುಗಳಲ್ಲೂ ಮತ್ಸ್ಯ, ವಾಯು, ವಿಷ್ಣು ಮತ್ತು ಭಾಗವತ ಪುರಾಣಗಳಲ್ಲಿ ಈ ಅರಸರನ್ನು ಕುರಿತ ವಿವರಗಳಿವೆ. ಆದರೆ ಅವುಗಳಲ್ಲಿ ಇವರನ್ನು ಆಂಧ್ರರೆಂದೋ ಆಂಧ್ರಭೃತ್ಯರೆಂದೋ ಕರೆಯಲಾಗಿದೆ. ಆಂಧ್ರಭೃತ್ಯ ಎಂಬ ಮಾತಿಗೆ ಆಂಧ್ರರಿಗೆ ಭೃತ್ಯರಾಗಿದ್ದವರೆಂದೂ ಭೃತ್ಯರಾಗಿದ್ದ ಆಂಧ್ರರೆಂದೂ ಎರಡು ಅರ್ಥಗಳನ್ನು ಮಾಡಲಾಗಿದೆ.

ಸಾತವಾಹನರ ಮೂಲ ಪ್ರದೇಶ ಯಾವುದು ಎಂಬುದನ್ನು ಕುರಿತು ಸಹ ಹಲವಾರು ವಿರೋಧಾಭಿಪ್ರಾಯಗಳಿವೆ. ಇವರ ಪ್ರಾಚೀನ ಶಾಸನಗಳೆಲ್ಲ ಪಶ್ಚಿಮ ತೀರದಲ್ಲಿ, ಮಹಾರಾಷ್ಟ್ರದ ನಾಸಿಕ್, ನಾನಾಘಾಟ್, ಕಾರ್ಲೆ ಮುಂತಾದ ಸ್ಥಳಗಳಲ್ಲಿ ಲಭಿಸಿವೆ. ಕ್ರಿ.ಪೂ. 1ನೆಯ ಶತಮಾನಕ್ಕೆ ಸೇರಿದ ಒರಿಸ್ಸದ ಖಾರವೇಲನ ಹಥಿಗುಂಫಾ ಶಾಸನದಲ್ಲಿ ತನ್ನ ರಾಜ್ಯದ ಪಶ್ಚಿಮದಲ್ಲಿ ರಾಜ್ಯವನ್ನಾಳುತ್ತಿದ್ದ ಸಾತಕರ್ಣಿಯನ್ನು ಲೆಕ್ಕಿಸದೆ ಆತ ಹಿರಿದಾದ ಸೈನ್ಯವನ್ನು ಪಶ್ಚಿಮಾಭಿಮುಖವಾಗಿ ಕಳುಹಿಸಿದನೆಂದು ಹೇಳಿದೆ. ಇದನ್ನವಲಂಬಿಸಿ ಸಾತಕರ್ಣಿಯ ರಾಜ್ಯ ಕಲಿಂಗದೇಶದ ಪಶ್ಚಿಮಕ್ಕಿದ್ದಿತೇ ಹೊರತು, ದಕ್ಷಿಣದ ಆಂಧ್ರವಾಗಿರಲಿಲ್ಲ ಎಂಬುದೊಂದು ವಾದ. ಆರಂಭದಲ್ಲಿ ಈ ಸಾತವಾಹನರು ಪಶ್ಚಿಮ ಭಾಗದಲ್ಲಿದ್ದು ಕ್ರಮೇಣ ಪೂರ್ವಭಾಗಕ್ಕೆ ಸರಿದರೆಂದೂ ಪುರಾಣಗಳು ತಮ್ಮ ಅಂತಿಮರೂಪವನ್ನು ತಾಳಿದ ಸು. 3ನೆಯ ಶತಮಾನದ ವೇಳೆಗೆ ಇವರು ಆಂಧ್ರದಲ್ಲಿ ನೆಲಸಿದ್ದರೆಂದೂ ಎಂತಲೇ ಇವರನ್ನು ಪುರಾಣಗಳಲ್ಲಿ ಆಂಧ್ರರೆಂದು ಹೆಸರಿಸಲಾಗಿದೆಯೆಂದೂ ಹಲವರು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಈ ವಾದಗಳನ್ನು ಅಲ್ಲಗಳೆದು ಕೃಷ್ಣಾ, ಗೋದಾವರಿ ನದಿಗಳ ನಡುವಣ ಆಂಧ್ರಪ್ರದೇಶದ ಭಾಗ ಇವರ ಮೂಲಸ್ಥಾನವೆಂದೂ ಕೃಷ್ಣಾನದೀತೀರದ ಶ್ರೀಕಾಕುಳಂ ಇವರ ರಾಜಧಾನಿಯಾಗಿತ್ತೆಂದೂ ಇವರು ಕ್ರಮೇಣ ಪಶ್ಚಿಮದಿಕ್ಕಿನ ಕಡೆ ತಮ್ಮ ಪ್ರಭಾವವನ್ನು ಬೆಳೆಸುತ್ತ ಹೋದರೆಂದೂ ಕೆಲವರು ವಾದಿಸಿದ್ದಾರೆ. ಈ ವಾದಗಳು ಸದ್ಯಕ್ಕೆ ಅಷ್ಟು ಸಮರ್ಪಕವಾಗಿಲ್ಲ.

ಸಾತವಾಹನರ ಆಳಿಕೆಯ ಕಾಲ, ಈ ವಂಶಕ್ಕೆ ಸೇರಿದ ಅರಸರ ಸಂಖ್ಯೆ ಇತ್ಯಾದಿಗಳನ್ನು ಕುರಿತೂ ಭಿನ್ನಾಭಿಪ್ರಾಯಗಳಿವೆ. ಪುರಾಣಗಳಲ್ಲಿಯೇ ಈ ಬಗೆಗೆ ವಿಭಿನ್ನ ಹೇಳಿಕೆಗಳಿವೆ. ಸಾಮಾನ್ಯವಾಗಿ ಒಟ್ಟು 30 ಅರಸರು ಆಳಿದರೆಂದು ಹೇಳಿದ್ದರೂ ಇವರ ಆಳಿಕೆಯ ಕಾಲ 300 ವರ್ಷಗಳಿಂದ 460ರವರೆಗೂ ಹೋಗಿದೆ. ಈ ಅರಸರನ್ನು ಕುರಿತು ಮಾಡಿದ ಉಲ್ಲೇಖಗಳನ್ನು ಗಮನಿಸಿದರೆ ಇನ್ನೂ ಕೆಲವು ವ್ಯತ್ಯಾಸಗಳು ಗೋಚರಿಸುತ್ತವೆ. ಮತ್ಸ್ಯಪುರಾಣದಲ್ಲಿ 25 ಅರಸರು ಆಳಿದರೆಂದು ಹೇಳಿದ್ದರೂ 30 ಅರಸರನ್ನು ಕುರಿತು ವಿವರಗಳಿವೆ. ವಾಯುಪುರಾಣದಿಂದ 17 ಅರಸರು ಸು. 273 ವರ್ಷಗಳು ಮಾತ್ರ ಆಳಿದರೆಂದು ತಿಳಿದಿದೆ. 30 ಅರಸರು (111 ಅಥವಾ 300 ವರ್ಷಗಳು) ಆಳಿದರೆಂದು ಅದರಲ್ಲೂ ಸಾಮಾನ್ಯ ಹೇಳಿಕೆ. ಭಾಗವತಪುರಾಣದಲ್ಲಿ 22 ಅರಸರನ್ನು ಕುರಿತು ಮಾತ್ರ ವಿವರಗಳು ಲಭಿಸಿವೆ. ಈ ಅರಸರಲ್ಲಿ ಅನೇಕ ಹೆಸರುಗಳು ಇತರ ಯಾವ ಆಧಾರಗಳಿಂದಲೂ ತಿಳಿದುಬಂದಿಲ್ಲ.

ಮಗಧರಾಜ್ಯದ ಚಂದ್ರಗುಪ್ತಮೌರ್ಯ ಆಳತೊಡಗಿದುದು ಪ್ರ.ಶ.ಪೂ. 324ರಲ್ಲಿ. ಬಳಿಕ ಶುಂಗಮನೆತನದ ಅರಸರು ಅಧಿಕಾರಕ್ಕೆ ಬಂದರು. ಅವರು 112 ವರ್ಷಗಳು ಅನಂತರ ಬಂದ ಕಣ್ವರು 45 ವರ್ಷಗಳು ಆಳಿದರೆಂದೂ ಸಾಮಾನ್ಯವಾಗಿ ಒಪ್ಪಲಾಗಿದೆ. ಎಂದಮೇಲೆ, ಕಣ್ವಮನೆತನ ಪ್ರ.ಶ.ಪೂ. 33ರಲ್ಲಿ ಕಣ್ಮರೆಯಾಯಿತು. ಇದಕ್ಕೆ ಕಾರಣ ಸೀಮುಕ. ಈತನ ಆಳಿಕೆ ಆ ವರ್ಷದಿಂದ ಆರಂಭವಾಯಿತು. ಇದೊಂದು ಅಭಿಪ್ರಾಯ. ಆದರೆ ಕಣ್ವವಂಶದ ಸುಶರ್ಮನನ್ನು ಸೋಲಿಸಿದಾತ ಸೀಮುಕನಲ್ಲವೆಂದೂ ಸೀಮುಕ ಎಂಬಾತ ಸಾತವಾಹನರ ಅರಸರಲ್ಲಿ ಅನಂತರ ಆಳಿಕೆಗೆ ಬಂದಾತ

ನೆಂದೂ ಮತ್ಸ್ಯಪುರಾಣದಲ್ಲಿ ಹೇಳಿದಂತೆ ಸಾತವಾಹನರು 460 ವರ್ಷಗಳ ಕಾಲ ಆಳಿದ್ದೂ ಸೀಮುಕ 271ರಲ್ಲಿ ಆಳಿಕೆಗೆ ಬಂದನೆಂದೂ ಕೆಲವರು ಕಣ್ವಮನೆತನದ ಸುಶರ್ಮನನ್ನು ಸೋಲಿಸಿದಾತ ಸಾತವಾಹನರ ಹದಿನೈದನೆಯ ಅರಸನಾದ ಮೊದಲನೆಯ ಪುಳುಮಾವಿ ಎಂದೂ ಇನ್ನು ಕೆಲವರು ವಾದಿಸಿದ್ದಾರೆ.

ಈ ವಾದವಿವಾದಗಳೇನೇ ಇರಲಿ, ಸಾತವಾಹನರು ದಖನ್ನಿನಲ್ಲಿ ಮೌರ್ಯರ ಅನಂತರ ಅವರ ಉತ್ತರಾಧಿಕಾರಿಗಳಾಗಿ ಆಳಿದ ಅರಸುಗಳೆಂಬುದು ನಿಜ. ಸೀಮುಕ, ಆತನ ಸೋದರ ಕೃಷ್ಣ, ಕೃಷ್ಣನ ಮಗ ಸಾತಕರ್ಣಿ-ಇವರು ಆರಂಭದ ಅರಸರು. ಇವರು ಕ್ರಮವಾಗಿ 23, 18 ಮತ್ತು 18 ವರ್ಷಗಳ ಕಾಲ ಆಳಿದರು. ಸಾತಕರ್ಣಿ ಒಂದು ರಾಜಸೂಯ, ಎರಡು ಅಶ್ವಮೇಧ ಹಾಗೂ ಇತರ ವೈದಿಕಯಾಗಗಳನ್ನು ಮಾಡಿದನೆಂದು ಹೇಳಿದೆ. ರಠಿಕ ಮತ್ತು ಭೋಜಕ ವಂಶಗಳಿಗೆ ಸೇರಿದ ಈತನ ಸೇನಾನಿಗಳ ನೆರವಿನಿಂದ ರಾಜ್ಯವನ್ನು ವಿಸ್ತರಿಸಿದ. ಅನಂತರ ಈ ಸೇನಾನಾಯಕರು ಪ್ರಾಂತಾಧಿಕಾರಿಗಳಾದರು. ಸಾತಕರ್ಣಿಯ ಪತ್ನಿ ನಾಗನಿಕಾ ಮಹಾರಠಿಕ ವಂಶದವಳು. ಸಾತಕರ್ಣಿಯ ಅನಂತರದ ಒಂದು ಶತಮಾನ ಕಾಲ ಸಾತವಾಹನರು ತೆರೆಯ ಮರೆಯಲ್ಲಿ ಇರಬೇಕಾಯಿತು. ಆಗ ಭಾರತದಲ್ಲಿ ಗ್ರೀಕರು, ಶಕರು ದಂಡೆತ್ತಿ ಬಂದು ಭಾರತದ ರಾಜಕೀಯದಲ್ಲಿ ಅಭದ್ರತೆ ಉಂಟುಮಾಡಿದ್ದರು. ಅದರ ಬೇಗೆ ಸಾತವಾಹನರಿಗೂ ತಟ್ಟಿತ್ತು. ಆದರೆ ಸಾತವಾಹನರ ಗೌತಮೀಪುತ್ರ ಸಾತಕರ್ಣಿ ಈ ಅರಸರ ಶಕ್ತಿಯನ್ನು ಪುನಶ್ಚೇತನಗೊಳಿಸಿದ. ಶಕರ ಅರಸನಾದ ಕ್ಷಹರಾತಕುಲದ ನಹಪಾಣನನ್ನು ಸೋಲಿಸಿ ಅಪರಾಂತ, ಅನೂಪ, ಸೌರಾಷ್ಟ್ರ, ಅಕರ, ಅವಂತಿ ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡ. ಇದರಿಂದ ಇವನ ರಾಜ್ಯ ಕೊಂಕಣ, ಸೌರಾಷ್ಟ್ರ, ಮಾಳವ, ಬೀರಾರ್ ಮತ್ತು ಕೃಷ್ಣಾ ಕಣಿವೆ ಪ್ರದೇಶಗಳವರೆಗೂ ವಿಸ್ತರಿಸಿ, ಉತ್ತರ ಕರ್ನಾಟಕದ ಬಹುಭಾಗವೂ ಇವನ ವಶವಾಯಿತು. ಕ್ಷಹರಾತ ವಂಶವನ್ನು ನಿರ್ನಾಮಮಾಡಿದವನು (ಕ್ಷಹರಾತವಂಶನಿರವಶೇಷಕರ), ಮೂರು ಸಮುದ್ರಗಳ ನೀರನ್ನು ಕುಡಿದ ಕುದುರೆಯನ್ನು ವಾಹನವಾಗಿ ಹೊಂದಿದವನು (ತ್ರಿಸಮುದ್ರತೋಯಪೀತವಾಹನ) ಸಾತವಾಹನರ ಯಶಸ್ಸನ್ನು ಪ್ರತಿಷ್ಠಾಪಿಸಿ ದವನು (ಸಾತವಾಹನ ಯಶಃಪ್ರತಿಷ್ಠಾಪನಕರ) ಇತ್ಯಾದಿ ಬಿರುದುಗಳನ್ನು ಈತ ಧರಿಸಿದ್ದ. ಇದರಿಂದ ಸಾತವಾಹನರ ಯಶಸ್ಸು ಪುನಃ ಪ್ರತಿಷ್ಠಾಪಿಸಲಾಯಿತು. ಈ ಘಟನೆ ನಡೆದುದು ಸು. 124-25ರಲ್ಲಿ. ಗೌತಮೀಪುತ್ರನ ಆಳಿಕೆಯ ಕಾಲ ಸು. 106ರಿಂದ 130ರವರೆಗೆ. ನಾಸಿಕದಲ್ಲಿ ದೊರೆತ ಈತನ ಮಗ ವಾಶಿಷ್ಠೀಪುತ್ರ ಪುಳುಮಾವಿಯ ಶಾಸನದಲ್ಲಿ ಈತನನ್ನು ಮುಕ್ತಕಂಠದಿಂದ ಹೊಗಳಲಾಗಿದೆ. ಇಷ್ಟಾದರೂ ಈತನ ಅಂತ್ಯ ದಾರುಣ ರೀತಿಯಲ್ಲಾಯಿತು. ಮಹಾಕ್ಷತ್ರಪನೆನಿಸಿದ ಶಕರ ಕುಲದ ಕಾರ್ದಮಕ ವಂಶಕ್ಕೆ ಸೇರಿದ ಚಷ್ಟನನ ಮೊಮ್ಮಗ ರುದ್ರದಾಮ ಈತನನ್ನು ಕದನದಲ್ಲಿ ಸೋಲಿಸಿದ. ಅದರ ಪರಿಣಾಮವಾಗಿ ಈತನ ರಾಜ್ಯದ ಉತ್ತರದ ಹಲವು ಭಾಗಗಳು ಈತನ ಕೈಬಿಟ್ಟುವು. ಈತನ ಮಗ ವಾಶಿಷ್ಠೀಪುತ್ರ (130-59) ರಾಜ್ಯವನ್ನು ಪೂರ್ವದಿಕ್ಕಿನಲ್ಲಿ ವಿಸ್ತರಿಸಿ ಕೃಷ್ಣಾನದಿಯ ಮುಖಜ ಪ್ರದೇಶಗಳನ್ನು ಆಕ್ರಮಿಸಿದ. ಕರ್ನಾಟಕದ ಬಳ್ಳಾರಿ ಜಿಲ್ಲೆ ಸಹ ಆಗ ಈತನ ವಶವಾದಂತೆ ತೋರುತ್ತದೆ. ಇವನ ಅನಂತರ ಕ್ರಮವಾಗಿ ಶಿವಶ್ರೀ(159-66), ಶಿವಸ್ಕಂಧ(166-74) ಮತ್ತು ಯಜ್ಞಶ್ರೀ (174-203) ಸಾತಕರ್ಣಿಗಳು ಆಳಿದರು. ಈ ಮನೆತನದ ಕೊನೆಯ ಖ್ಯಾತ ಅರಸನಾದ ಯಜ್ಞಶ್ರೀ ಶಕರನ್ನು ಸೋಲಿಸಿ ಉತ್ತರ ಮತ್ತು ಪಶ್ಚಿಮಭಾರತದ ಪ್ರದೇಶಗಳಿಂದ ಅವರನ್ನು ಹೊರಗಟ್ಟಿದ. ಈತನ ಬಳಿಕ ಸಾತವಾಹನರ ಬಲ ಕ್ರಮೇಣ ಕುಗ್ಗಿತು.

ಸಾತವಾಹನ ಕುಲಕ್ಕೆ ಸೇರಿದ ಕೆಲವು ಶಾಖೆಗಳವರು ಪೈಠಣ ಮತ್ತು ಕುಂತಲದೇಶ ಹಾಗೂ ಬನವಾಸಿ-ಇವುಗಳಿಂದ ಆಳುತ್ತಿದ್ದರು. ಕರ್ನಾಟಕದ ಸಾತವಾಹನರಲ್ಲಿ ಕುಂತಲ ಸಾತಕರ್ಣಿ ಮತ್ತು ಹಾಲ ಪ್ರಮುಖರು. ಪುರಾಣಗಳಲ್ಲಿ ಕುಂತಲ ಸಾತಕರ್ಣಿಯ ಪ್ರಸ್ತಾಪವಿದೆ. ವಾತ್ಸ್ಯಾಯನನ ಕಾಮಸೂತ್ರದಲ್ಲೂ ಈ ಅರಸನ ಹೆಸರಿದೆ. ಕಾವ್ಯಮೀಮಾಂಸದ ಕರ್ತೃವಾದ ರಾಜಶೇಖರನೂ ಕುಂತಲದ ಅರಸನೊಬ್ಬ ಸಾತವಾಹನನಾಗಿದ್ದನೆಂದಿದ್ದಾನೆ. ಪ್ರಾಕೃತಭಾಷೆಯ ಗಾಥಾಸಪ್ತಸೈ (ಗಾಥಾ ಸಪ್ತಶತಿ) ಎಂಬ ಕೃತಿಯ ಕರ್ತೃವಾದ ಹಾಲ ಒಬ್ಬ ಕವಿ. ಶಾಂತಿವರ್ಮನ ತಾಳಗುಂದ ಶಾಸನದಲ್ಲಿ ಕದಂಬರಿಗೂ ಮೊದಲು ಸಾತಕರ್ಣಿ ಮತ್ತು ಇತರ ಅರಸರು ಅಲ್ಲಿನ ಪ್ರಣವೇಶ್ವರ ದೇವರನ್ನು ಅರ್ಚಿಸುತ್ತಿದ್ದರೆಂದು ಹೇಳಿದೆ. ನಾಸಿಕದ ಶಾಸನದಲ್ಲಿ ಗೌತಮೀಪುತ್ರ ಸಾತಕರ್ಣಿಯು ವೈಜಯಂತೀಯಲ್ಲಿದ್ದಾಗ (ಈಗಿನ ಬನವಾಸಿ) ಆಜ್ಞೆ ಹೊರಡಿಸಿದನೆಂದು ಹೇಳಿದೆ. ಇತ್ತೀಚೆಗೆ (1974) ಬನವಾಸಿಯಲ್ಲಿಯೇ ವಾಶಿಷ್ಠೀಪುತ್ರನ ಮಗ ಶಿವಶ್ರೀ ಪುಳುಮಾವಿಯ ಮಹಾದೇವಿಯ (ಅರಸಿ ?) ಸ್ಮಾರಕಶಿಲೆಯ ಶಾಸನವೊಂದು ದೊರೆತಿದೆ. ಬಳ್ಳಾರಿಯ ಸಮೀಪದ ಮ್ಯಾಕದೋಣಿಯಲ್ಲಿ 3ನೆಯ ಶತಮಾನಕ್ಕೆ ಸೇರಿದ ಪುಳುಮಾವಿಯ ಶಾಸನವೊಂದಿದೆ. ಇದರಲ್ಲಿ ಸಾತಾವಾಹನಿಹಾರ ಎಂಬ ಭೌಗೋಳಿಕ ಭಾಗವನ್ನು ಹೆಸರಿಸಿದೆ. ಹಿರೇಹಡಗಲಿಯಲ್ಲಿ ದೊರೆತ ಪಲ್ಲವ ಶಿವಸ್ಕಂಧವರ್ಮನ ತಾಮ್ರಶಾಸನದಲ್ಲಿ ಆ ಸುತ್ತಲಿನ ಪ್ರದೇಶ, ಸಾತಹನಿರಟ್ಟಕ್ಕೆ (ಸಾತವಾಹನ ರಾಷ್ಟ್ರ) ಸೇರಿದುದೆಂದು ಹೇಳಿದೆ. ಇವುಗಳಿಂದ ಸಾತವಾಹನ ಕುಲದ ಅನೇಕ ಅರಸರು ಕರ್ನಾಟಕದಲ್ಲೂ ಆಳಿದರೆಂಬುದು ಸ್ಪಷ್ಟವಾಗುತ್ತವೆ. ಚುಟು ಮುಂತಾದ ಸಾತವಾಹನರ ಸಾಮಂತರ ಹಲವಾರು ನಾಣ್ಯಗಳು ಕರ್ನಾಟಕದ ಚಿತ್ರದುರ್ಗ ಹಾಗೂ ಕಾರವಾರ ಜಿಲ್ಲೆಗಳಲ್ಲಿ, ಮತ್ತಿತರ ಕೆಲವು ಕಡೆಗಳಲ್ಲಿ ದೊರೆತಿವೆ.

**ಆಡಳಿತ ವ್ಯವಸ್ಥೆ:** ಅರ್ಥಶಾಸ್ತ್ರದಲ್ಲಿ ನಿರೂಪಿಸಿದಂತೆ ರಾಜ್ಯವನ್ನು ಆಹಾರ ಅಥವಾ ರಾಷ್ಟ್ರಗಳಾಗಿ ವಿಂಗಡಿಸಲಾಗಿತ್ತು. ಒಂದೊಂದು ಆಹಾರದಲ್ಲಿಯೂ ನಿಗಮ ಎನಿಸಿದ ಒಂದಾದರೂ ಪಟ್ಟಣವಿರುತ್ತಿತ್ತು. ಗ್ರಾಮಗಳಂತೂ ರಾಜ್ಯದ ಜೀವನಾಡಿಗಳು. ಪ್ರತಿ ಆಹಾರಕ್ಕೂ ಅಮಾತ್ಯ ಮುಖ್ಯಾಧಿಕಾರಿಯಾಗಿ ನಿಯಮಿಸಲ್ಪಟ್ಟಿದ್ದ. ವಿಷ್ಣುಪಾಲಿತ, ಸ್ಯಮಕ ಮತ್ತು ಶಿವಸ್ಕಂಧ ದತ್ತರು, ಗೌತಮೀಪುತ್ರ ಸಾತಕರ್ಣಿ ಹಾಗೂ ಪುಳುಮಾವಿಯರ ಅಧೀನದಲ್ಲಿ ಗೋವರ್ಧನದ (ನಾಸಿಕ್) ಅಮಾತ್ಯರಾಗಿದ್ದರೆಂದು ತಿಳಿದಿದೆ. ರಾಜಾಮಾತ್ಯ ಎನಿಸಿದ ಅಧಿಕಾರಿಗಳು ಬಹುಶಃ ಇವರಿಗೂ ಮೇಲ್ದರ್ಜೆಯವರಾಗಿದ್ದು ಅರಸನ ಮಂತ್ರಿವರ್ಗಕ್ಕೆ ಸೇರಿದವರಾಗಿರಬಹುದು. ಭಾಂಡಾಗಾರಿಕಾ, ಹೇರಣಿಕ, ಮಹಾಸೇನಾಪತಿ, ಲೇಖಕ, ನಿಬಂಧಕ ಇವರು ಕೇಂದ್ರಾಡಳಿತದ ಇತರ ಪ್ರಮುಖ ಅಧಿಕಾರಿಗಳು. ಲೇಖಕ ರಾಜ್ಯದ ಮುಖ್ಯ ಕಾರ್ಯದರ್ಶಿ ಇದ್ದಂತೆ. ರಾಜನ ಬಾಯಿಮಾತಿನ ಆಜ್ಞೆಗಳಿಗೆ ದಾಖಲೆಗಳ ಸ್ವರೂಪ ಕೊಟ್ಟು ಅವನ್ನು ಇತರ ಅಧಿಕಾರಿಗಳಿಗೆ ತಿಳಿಯಪಡಿಸುವ, ಕಾರ್ಯಗತಗೊಳಿಸುವ ಹೊಣೆಗಾರಿಕೆ ಈತನದಾಗಿತ್ತು. ಲೇಖಕ ಸಿದ್ಧಗೊಳಿಸಿದ ದಾಖಲೆಗಳನ್ನು ವ್ಯವಸ್ಥಿತವಾಗಿಡುವ ಕಾರ್ಯ ನಿಬಂಧಕನದು. ಭಾಂಡಾಗಾರಿಕಾ ರಾಜ್ಯದ ಉಗ್ರಾಣಾಧಿಕಾರಿ. ಹೇರಣಿಕ ಬೊಕ್ಕಸದ ಅಧಿಕಾರಿ. ಲಭ್ಯವಿರುವ ಆಧಾರಗಳಿಂದ ರಾಜ್ಯದಲ್ಲಿ ಸುವ್ಯವಸ್ಥಿತವಾದ, ಕಾನೂನುಬದ್ಧವಾದ ಆಡಳಿತ ಪದ್ಧತಿ ಇದ್ದಿತೆಂದು ಸಹಜವಾಗಿ ಊಹಿಸಬಹುದು.

ರಾಜನ ನೇರವಾದ ಆಡಳಿತಕ್ಕೊಳಪಟ್ಟ ಭಾಗಗಳಲ್ಲದೆ ರಾಜನ ಸಾಮಂತರಾಗಿ ತಮ್ಮ ತಮ್ಮ ಪ್ರದೇಶಗಳ ಒಳಾಡಳಿತದಲ್ಲಿ ಸ್ವತಂತ್ರರಾಗಿದ್ದ ಮಹಾರಥಿ, ಮಹಾಭೋಜ ಎಂಬ ಮಾಂಡಳಿಕರು ಹಲವರು ಕಂಡು ಬರುತ್ತಾರೆ. ಮಹಾರಥಿಗಳು ಪಶ್ಚಿಮಘಟ್ಟಗಳ ಉತ್ತರ ಭಾಗದಲ್ಲಿಯೂ ಮಹಾಭೋಜರು ಉತ್ತರ ಕೊಂಕಣ ಪ್ರದೇಶದಲ್ಲಿಯೂ ಆಳುತ್ತಿದ್ದರೆಂದು

ಕಂಡುಬಂದಿದೆ. ಇವರು ಸ್ವತಂತ್ರರಾಗಿ ಭೂಮಿದಾನ ಮುಂತಾದವುಗಳನ್ನು ಮಾಡಬಹುದಾಗಿದ್ದರಿಂದ ಕೆಲವು ವೇಳೆ ಇವರು ತಮ್ಮದೇ ಆದ ನಾಣ್ಯಗಳನ್ನು ಸಹ ಅಚ್ಚುಹಾಕಿಸಿ ತಮ್ಮ ಆಡಳಿತ ಪ್ರದೇಶದಲ್ಲಿ ಚಲಾವಣೆಗೆ ತಂದಿದ್ದರು. ಸಾತವಾಹನರ ಪ್ರಾಬಲ್ಯ ಪಶ್ಚಿಮ ದಖನ್‌ನಲ್ಲಿ ಇಳಿಮುಖವಾದಾಗ ಬನವಾಸಿಯ ಸುತ್ತಲಿನ ಪ್ರದೇಶದಲ್ಲಿ ಚುಟುಗಳು ಸ್ವತಂತ್ರರಾಗಿ ಆಳುತ್ತಿದ್ದರು.

ರಾಜ್ಯದಲ್ಲಿ ಹಲವು ಪಟ್ಟಣಗಳೂ (ನಿಗಮ) ಅನೇಕ ಗ್ರಾಮಗಳೂ ಇದ್ದುವೆಂದು ಹೇಳಿದೆ. ಗ್ರಾಮ ಆಡಳಿತದ ಅತಿ ಸಣ್ಣ ಘಟಕ. ಇದರ ಅಧಿಕಾರಿ ಗ್ರಾಮಣಿ. ಹಾಲನ ಗಾಥಾಸತ್ತಸೈನಲ್ಲಿ ಈ ಗ್ರಾಮಣಿಯು ಐದು ಅಥವಾ ಒಮ್ಮೊಮ್ಮೆ ಹತ್ತು ಗ್ರಾಮಗಳ ಅಧಿಕಾರಿಯಾಗಿದ್ದನೆಂದು ಹೇಳಿದೆ. ಪರದೇಶ ವಾಣಿಜ್ಯ ಬಹುಮಟ್ಟಿಗೆ ಅಭಿವೃದ್ಧಿ ಹೊಂದಿದ್ದ ಈ ಕಾಲದಲ್ಲಿ ಪೂರ್ವ ಹಾಗೂ ಪಶ್ಚಿಮ ತೀರಗಳಲ್ಲಿಯೂ ಒಳನಾಡಿನಲ್ಲಿಯೂ ಅನೇಕ ನಿಗಮಗಳಿದ್ದುವು. ಈಗಿನ ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಗೋದಾವರಿಯ ಉತ್ತರತೀರದ ಪೈಠಣ ಹಾಗೂ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಧನಕಟ–ಧಾನ್ಯಕಟಕ–ಧರಣೀಕೋಟೆ–ಇವರ ರಾಜಧಾನಿಗಳಾಗಿ ಮೆರೆದುವು. ಭರುಕಚ್ಛ, ಸೋಪಾರ, ಕಲ್ಯಾಣ, ಕನ್ಹೇರಿ, ತಗರ, ಜನ್ನರ್, ಕಾರ್ಲೆ, ಗೋವರ್ಧನ ಮುಂತಾದವು ಇತರ ನಿಗಮಗಳು. ಇವುಗಳ ಆಡಳಿತ ಒಂದು ಸಭೆಗೆ (ನಿಗಮ ಸಭೆ) ಸೇರಿದ್ದಿತೆನ್ನಲು ಆಧಾರಗಳಿವೆ. ಈ ಸಭೆಯ ಮೂಲಕ ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದಾಗಿದ್ದಿತು. ಗ್ರಾಮಗಳಲ್ಲಿ ಗಹಪತಿಯೂ (ಬಹುಶಃ ಬೇಸಾಯಗಾರರ ಒಂದು ಸಂಘವೂ) ವ್ಯಾಪಾರ ಕೇಂದ್ರಗಳೆನಿಸಿದ ಪಟ್ಟಣಗಳಲ್ಲಿ ಸೇನಿ (ಶ್ರೇಣಿ) ಎಂಬ ವಣಿಕ ಸಂಘವೂ ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡಿದ್ದುವು. ಈ ವಣಿಕ ಸಂಘ ಅನೇಕ ಸಂದರ್ಭಗಳಲ್ಲಿ ಆಧುನಿಕ ಬ್ಯಾಂಕ್‌ಗಳಂತೆ ಲೇವಾದೇವಿ ವ್ಯವಹಾರಗಳಲ್ಲಿ ನಿರತವಾಗಿದ್ದಿತು. ಈ ಸಂಘಗಳು ಹಲವಾರು ದತ್ತಿಗಳನ್ನು ಸ್ವೀಕರಿಸಿ ಅದರಿಂದ ಬರುವ ಬಡ್ಡಿಹಣದಲ್ಲಿ ದಾನಕಾರ್ಯಗಳನ್ನು ಮಾಡಬಹುದಾಗಿದ್ದಿತಲ್ಲದೆ ಮೂಲಧನವನ್ನು ವರ್ತಕ ಹಾಗೂ ಇತರರಿಗೂ ಸಾಲ ಕೊಡುವ, ತನ್ಮೂಲಕ ವ್ಯಾಪಾರಕ್ಕೆ ಬಂಡವಾಳವನ್ನೊದಗಿಸುವ ಸಂಸ್ಥೆಗಳಂತೆ ಕಾರ್ಯನಿರತವಾಗಿದ್ದುವು. ಬೇಸಾಯಕ್ಕೂ ವಾಣಿಜ್ಯಕ್ಕೂ ಪೋಷಕವಾಗಿ ಇತರ ಅನೇಕ ವೃತ್ತಿಸಂಘಗಳೂ ಇದ್ದವು. ಶಾಸನಗಳಲ್ಲಿ ಕುಲರಿಕ (ಕುಂಬಾರ), ಒದಯಂತ್ರಿಕ, ತಿಲಪಿಸಕ (ಗಾಣಿಗ), ಧನ್ನಿಕ (ಧಾನ್ಯಗಳ ಮಾರಾಟಗಾರ ?), ಕೊಲಿಕ (ನೇಕಾರ ?), ವಸಕಾರ, ಕಸಕಾರ (ಕಾಸ್ಯಕಾರ) ಮುಂತಾದ ವೃತ್ತಿಗಾರರನ್ನು ಹೆಸರಿಸಿದೆ. ಈ ವೃತ್ತಿಸಂಘಗಳು ಶ್ರೇಣಿಧರ್ಮಗಳನ್ನು ಪಾಲಿಸುತ್ತಿದ್ದುವು.

**ಆರ್ಥಿಕ, ಸಾಮಾಜಿಕ ಸ್ಥಿತಿ:** ಈ ಕಾಲದಲ್ಲಿ ವ್ಯಾಪಾರ ಬಹಳ ಅಭಿವೃದ್ಧಿಹೊಂದಿತ್ತು. ಪೆರಿಪ್ಲಸ್ ಆಫ್ ದಿ ಎರಿಥ್ರಿಯನ್ ಸೀ, ಟಾಲೆಮಿಯ ಜೊಗ್ರಫಿಗಳಲ್ಲಿ ದಖನ್ ಪ್ರದೇಶದಿಂದ ರಫ್ತಾಗುತ್ತಿದ್ದ, ಇಲ್ಲಿನ ಜನ ಆಮದು ಮಾಡಿಕೊಳ್ಳುತ್ತಿದ್ದ ವಸ್ತುಗಳ ವಿವರಗಳನ್ನು ಕೊಟ್ಟಿದೆ. ಸುಗಂಧದ್ರವ್ಯಗಳು, ಹತ್ತಿ ಹಾಗೂ ರೇಷ್ಮೆಯ ಬಟ್ಟೆಗಳು, ಮೆಣಸು ಮುಂತಾದ ಸಂಬಾರ ಪದಾರ್ಥಗಳು, ದಂತ, ಅಗೇಟ್, ಕಾರ್ನಿಲಿಯನ್ ಮತ್ತು ಲೀಸಿಯಮ್ ಮುಂತಾದ ಪ್ರಶಸ್ತ ಶಿಲೆಗಳು ಮುಂತಾದವುಗಳನ್ನು ರಫ್ತುಮಾಡಿ ತಾಮ್ರ, ತವರ, ಸೀಸ, ಉತ್ತಮ ದರ್ಜೆಯ ಹಲವು ಬಗೆಯ ಮದ್ಯಪೇಯಗಳು, ಅಲಂಕಾರವಸ್ತುಗಳು, ಗಾಜು ಮುಂತಾದವುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ರೋಮ್ ದೇಶದೊಡನೆ ವಾಣಿಜ್ಯ ಸಂಬಂಧಗಳು ಉತ್ತಮವಾಗಿದ್ದುವು. ದಖನ್ ಹಾಗೂ ದಕ್ಷಿಣ ಭಾರತದ ಅನೇಕ ಭಾಗಗಳಲ್ಲಿ ರೋಮನ್ ನಾಣ್ಯಗಳು ಲಭಿಸಿವೆ. ಅಲ್ಲದೆ ಬರ್ಮಾ, ಸುಮಾತ್ರ, ಅರಕಾನ್, ಚಂಪಾದೇಶಗಳೊಂದಿಗೂ ಈ ಕಾಲದ ವ್ಯಾಪಾರಿಗಳು ಸಂಪರ್ಕ ಹೊಂದಿದ್ದರು. ರೋಮನರೂ ಅರಬರೂ ಪರದೇಶದ ವರ್ತಕರಲ್ಲಿ ಪ್ರಮುಖರು. ಕಾಹಾಪಾನಾ (ಕರ್ಷಾಪಣ) ಹಾಗೂ ಸುವರ್ಣವೆಂಬ ನಾಣ್ಯಗಳು ಚಲಾವಣೆಯಲ್ಲಿದ್ದರೂ ಅವುಗಳು ಮಿತವಾಗಿ ಉಪಯೋಗಿಸಲ್ಪಟ್ಟಂತೆ ತೋರುತ್ತದೆ. ತಾಮ್ರ, ಸೀಸ, ಪೊಟಿನ್, ಚಿನ್ನ, ಬೆಳ್ಳಿ–ಈ ಲೋಹಗಳ ನಾಣ್ಯಗಳು ಲಭಿಸಿವೆ. ಇವುಗಳಲ್ಲಿ ಯಾವ ಕಲಾತ್ಮಕ ವಿಶೇಷವೂ ಇಲ್ಲ. ಆದರೂ ಇತ್ತೀಚೆಗೆ ದೊರೆತ ಹಲವಾರು ನಾಣ್ಯಗಳಲ್ಲಿ ಸಾತವಾಹನ ಅರಸರ ಚಿತ್ರಗಳು ಕಾಣಿಸಿಕೊಂಡಿವೆ. ವಾಣಿಜ್ಯ ಅಭಿವೃದ್ಧಿ ಹೊಂದಿದ್ದರೂ ವ್ಯವಸಾಯ ಮುಖ್ಯ ಕಸಬಾಗಿಯೇ ಉಳಿದಿತ್ತು. ಅರಸರು, ಜನರು ಮಾಡುತ್ತಿದ್ದ ಭೂದಾನ, ಗೋದಾನಗಳಿಂದ ಭೂಮಿಗೂ ಪಶುಗಳಿಗೂ ಇವರು ಕೊಟ್ಟಿದ್ದ ಪ್ರಾಶಸ್ತ್ಯ ಸ್ಪಷ್ಟವಾಗುತ್ತದೆ. ಬೆಳೆಯ ಷಡ್ಭಾಗ ರಾಜಾದಾಯಕ್ಕಾಗಿ ಹೋಗುತ್ತಿತ್ತು. ಉಪ್ಪನ್ನು ತಯಾರಿಸುವುದು ಬಹುಶಃ ಸರ್ಕಾರದ ಏಕಸ್ವಾಮ್ಯವಾಗಿತ್ತು.

ಸಮಾಜದಲ್ಲಿ ಪಿತೃಪ್ರಧಾನ ಸಹಕುಟುಂಬ ಪದ್ಧತಿ ಜಾರಿಯಲ್ಲಿತ್ತು. ಸಾತವಾಹನ ಅರಸರ ಹೆಸರುಗಳ ಆರಂಭದಲ್ಲಿ ತಾಯಿಯ ಹೆಸರನ್ನು (ಗೌತಮೀಪುತ್ರ, ವಾಶಿಷ್ಠೀಪುತ್ರ ಇತ್ಯಾದಿ) ಬಳಸುತ್ತಿದ್ದರು. ಅದು ಮಾತೃಪ್ರಧಾನ ಪದ್ಧತಿಯ ಪರಿಣಾಮವಲ್ಲ. ಶಾಸನಗಳಲ್ಲಿ ಮೊದಲ ಸ್ಥಾನ ಪಿತೃವಿಗೆ, ಅನಂತರ ಮಾತೃ, ಗಂಡುಮಕ್ಕಳು, ಹೆಣ್ಣುಮಕ್ಕಳು ಈ ಕ್ರಮದಲ್ಲಿ ಸ್ಥಾನಗಳನ್ನು ಕೊಟ್ಟಿದೆ. ಹಾಗೆಂದಾಕ್ಷಣ ಸ್ತ್ರೀಯರಿಗೆ ಸಮಾಜದಲ್ಲಿ ಪ್ರಮುಖಸ್ಥಾನವಿರಲಿಲ್ಲವೆಂದೇನೂ ಅಲ್ಲ. ಅನೇಕ ಸ್ತ್ರೀದಾನಿಗಳು ಶಾಸನಗಳಲ್ಲಿ ಕಂಡುಬಂದಿದ್ದಾರೆ. ಪಿತೃಪ್ರಧಾನಪದ್ಧತಿ ಆರ್ಯೀಕರಣದ ಪ್ರಭಾವವೆನ್ನಬಹುದು.

ಸಮಕಾಲೀನ ಶಾಸನಗಳನ್ನು, ಚಿತ್ರಗಳನ್ನು ಗಮನಿಸಿದಾಗ ಇವರ ಉಡುಗೆತೊಡುಗೆಗಳ ಬಗೆಗೆ ಹಲವಾರು ಅಂಶಗಳು ಗೋಚರವಾಗುತ್ತವೆ. ಸ್ತ್ರೀಯರು ಸೊಂಟದ ಕೆಳಗೆ ನೆರಿಗೆಹಿಡಿದ ಒಂದು ವಸ್ತ್ರವನ್ನುಡುತ್ತಿದ್ದರು. ಬಲಗಡೆಗೆ ಗಂಟನ್ನು ಹಾಕಿಕೊಂಡು ಸ್ವಲ್ಪ ಚುಂಗನ್ನು ಕೆಳಗೆ ಬಿಡುತ್ತಿದ್ದರು. ಎದೆಯನ್ನು ಮುಚ್ಚಿಕೊಳ್ಳುವ ಪದ್ಧತಿ ಇನ್ನೂ ಬಂದಿರಲಿಲ್ಲವೆಂದು ತೋರುತ್ತದೆ. ಕಿವಿಗಳಿಗೆ ಉಂಗುರ, ಮೊಳಕೈವರೆಗೂ ಕೈತುಂಬ ಬಳೆಗಳು, ಕಂಠಹಾರಗಳು ಮತ್ತು ಕಡಗಗಳನ್ನು ಧರಿಸುತ್ತಿದ್ದರು. ಕಾಲುಗಳಿಗೆ ಕಾಲಂದಿಗೆಗಳನ್ನು ಸ್ತ್ರೀಪುರುಷರೆಲ್ಲರೂ ಧರಿಸುತ್ತಿದ್ದರು. ಗಂಡಸರು ಸೊಂಟದ ಕೆಳಗೆ ವಸ್ತ್ರವನ್ನು ಉಟ್ಟು ತಲೆಗೆ ರುಮಾಲನ್ನು ಸುತ್ತುತ್ತಿದ್ದರು. ಪುರುಷರೂ ಆಭರಣಗಳನ್ನು ತೊಡುತ್ತಿದ್ದರು. ಚಿನ್ನದ ಆಭರಣಗಳ ಮೇಲೆ ಇವರಿಗೆ ಹೆಚ್ಚಿನ ಒಲವು.

ಈ ಕಾಲದಲ್ಲಿ ವೈದಿಕಮತ ಪ್ರಧಾನ ಧರ್ಮವಾಗಿದ್ದಿತು. ಅರಸರು ವೈದಿಕ ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ವರ್ಣಾಶ್ರಮ ಧರ್ಮಗಳ ಪಾಲನೆ ಅವರ ಕರ್ತವ್ಯವಾಗಿತ್ತು. ಗೌತಮೀಪುತ್ರ ಸಾತಕರ್ಣಿಯು ವರ್ಣಸಂಕರವನ್ನು ತಡೆಯಲು ಯತ್ನಿಸಿದನೆಂಬುದು ಶಾಸನಗಳಿಂದ ತಿಳಿದ ವಿಷಯ. ಈವೇಳೆಗೆ ಪುರಾಣಗಳು ತಮ್ಮ ಅಂತಿಮ ರೂಪವನ್ನು ತಾಳಿದ್ದು ಪೌರಾಣಿಕ ದೇವತೆಗಳೆನಿಸಿದ ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರ, ಸೂರ್ಯ, ಯಮ, ವರುಣ, ಕುಬೇರ, ಪಶುಪತಿ, ಗೌರಿ, ಲಕ್ಷ್ಮೀನಾರಾಯಣ ಮೊದಲಾದವರನ್ನು ಪೂಜಿಸುವ ಪರಿಪಾಠ ಬೆಳೆದು ಬಂದಿತ್ತು. ಪರದೇಶೀಯರೆನಿಸಿದ ಶಕ, ಪಹೂವ, ಕುಷಾಣ ಮೊದಲಾದವರು ಸಹ ವೈದಿಕಮತದ ಪ್ರಭಾವಕ್ಕೊಳಗಾಗಿ ವೈದಿಕದೇವತೆಗಳೆನಿಸಿದ ಶಿವ ಮತ್ತು ವಿಷ್ಣುವನ್ನು ಪೂಜಿಸುತ್ತಿದ್ದರು. ಗೋದಾನ ಭೂದಾನಗಳು, ಕೆರೆ ಕಟ್ಟಿಸುವುದು, ಬಾವಿಗಳನ್ನು ತೋಡುವುದು, ಪ್ರಯಾಣಿಕರ

ಸೌಕರ್ಯಕ್ಕಾಗಿ ಛತ್ರಗಳನ್ನು ಕಟ್ಟಿಸಿ ಊಟ ವಸತಿ ಸೌಕರ್ಯಗಳನ್ನೇರ್ಪಡಿಸುವುದು, ತೀರ್ಥಯಾತ್ರೆ ಮಾಡುವುದು ಪವಿತ್ರ ಕರ್ತವ್ಯಗಳೆನಿಸಿಕೊಂಡಿದ್ದವು.

ಈ ಕಾಲದಲ್ಲಿ ಜೈನ ಹಾಗೂ ಬೌದ್ಧಧರ್ಮಗಳು ಸಹ ಪ್ರಮುಖ ಧರ್ಮಗಳೆನಿಸಿದ್ದುವು; ಬೌದ್ಧಧರ್ಮ ದಖನ್ನಿನ ಪೂರ್ವತೀರ ಪ್ರದೇಶಗಳಲ್ಲಿ ಬಹುಮಟ್ಟಿಗೆ ವ್ಯಾಪಿಸಿತ್ತು. ಜಗ್ಗಯ್ಯಪೇಟೆ, ಅಮರಾವತಿ ಮತ್ತು ಭಟ್ಟಿಪ್ರೋಲುಗಳಲ್ಲಿ ದೊರೆತ ಸ್ತೂಪಗಳಲ್ಲಿ ಕ್ರಿ.ಪೂ. 2ನೆಯ ಶತಮಾನಕ್ಕೆ ಸೇರಿದ ಬ್ರಾಹ್ಮೀಲಿಪಿಯ ಶಾಸನಗಳು ಲಭಿಸಿವೆ. ಅಶೋಕನ ಶಾಸನಗಳು ಉತ್ತರ ಕರ್ನಾಟಕದ ಹಲವಾರು ಕಡೆ ಲಭಿಸಿರುವುದನ್ನು ಗಮನಿಸಿ ಆ ಪ್ರದೇಶಗಳು ಬೌದ್ಧಧರ್ಮ ಪ್ರಭಾವಕ್ಕೊಳಪಟ್ಟಿದ್ದುವೆಂದು ಹೇಳಬಹುದು. ಬನವಾಸಿ ಒಂದು ಪ್ರಮುಖ ಬೌದ್ಧಕೇಂದ್ರವಾಗಿದ್ದಿತು. ಅಶೋಕನ ಧರ್ಮಪ್ರಸಾರಕ್ಕಾಗಿ ಕಳುಹಿಸಿದ ಭಿಕ್ಷುಗಳಲ್ಲಿ ಕೆಲವರು ಬನವಾಸಿಗೆ ಬಂದಿದ್ದರೆಂದು ತಿಳಿದಿದೆ. ನಾಗಾರ್ಜುನಕೊಂಡದಲ್ಲಿ ದೊರೆತ ಬೌದ್ಧಶಾಸನಗಳಲ್ಲಿಯೂ ಬನವಾಸಿಯಲ್ಲಿ ನೆಲಸಿದ್ದ ಬೌದ್ಧಭಿಕ್ಷುಗಳ ಪ್ರಸ್ತಾಪವಿದೆ. ಇತ್ತೀಚೆಗೆ ಬನವಾಸಿಯಲ್ಲಿ ನಡೆಸಿದ ಉತ್ಖನನದಲ್ಲಿ ಗಜಪೃಷ್ಠಾಕಾರದ ಕಟ್ಟಡದ ಅವಶೇಷಗಳು ಲಭಿಸಿವೆಯಾದರೂ ಅದು ಬೌದ್ಧ ಧರ್ಮಕ್ಕೆ ಸಂಬಂಧಿಸಿದುದೆಂದು ಖಚಿತವಾಗಿ ಹೇಳಲಾಗದು. ಲಭ್ಯ ಆಧಾರಗಳಿಂದ ಗುಲ್ಬರ್ಗ ಜಿಲ್ಲೆಯ ಸನ್ನತಿ **(ನೋಡಿ)** ಒಂದು ಬೌದ್ಧ ಕೇಂದ್ರವಾಗಿದ್ದಿತೆಂದು ತಿಳಿದಿದೆ. ಅಲ್ಲಿ ಪ್ರ.ಶ.ಪೂ. 1ನೆಯ ಶತಮಾನದ ಬ್ರಾಹ್ಮೀ ಲಿಪಿಯ ಶಾಸನಗಳು ಲಭಿಸಿವೆ. ಇವುಗಳಿಂದ ಹೆಚ್ಚಿನ ವಿವರಗಳು ತಿಳಿಯದಿದ್ದರೂ ಇದು ಬೌದ್ಧಕೇಂದ್ರಗಳಲ್ಲೊಂದಾಗಿತ್ತೆಂದು ಇಲ್ಲಿ ದೊರೆತ ಅವಶೇಷಗಳಿಂದ ಊಹಿಸಬಹುದಾಗಿದೆ. (ಬಿ.ಆರ್.ಜಿ.)

**ವಾಸ್ತುಶಿಲ್ಪ:** ದಕ್ಷಿಣ ಭಾರತದ ಬಹುಭಾಗವನ್ನು ಆಕ್ರಮಿಸಿದ್ದ ಸಾತವಾಹನರ ಆಳಿಕೆ ವಾಸ್ತುಶಿಲ್ಪಕ್ಕೆ ಬಹುಮುಖ್ಯವಾದ ತಿರುವುಕೊಟ್ಟ ಕಾಲ. ಇವರು ವೈದಿಕಮತಾವಲಂಬಿಗಳಾಗಿದ್ದರೂ ಬೌದ್ಧಧರ್ಮಕ್ಕೆ ಕೊಟ್ಟ ಪ್ರೋತ್ಸಾಹ ಅಪಾರ. ಹೊರದೇಶಗಳ ವ್ಯಾಪಾರಾಭಿವೃದ್ಧಿಯಿಂದಾಗಿ ಬೆಳೆದ ಶ್ರೀಮಂತವರ್ಗ ಹೇರಳವಾಗಿ ದಾನದತ್ತಿಗಳನ್ನು ಬಿಟ್ಟು ಅನೇಕ ಗುಹಾವಾಸ್ತುಗಳ ನಿರ್ಮಾಣಕ್ಕೆ ಕಾರಣವಾಯಿತು. ಜೊತೆಗೆ ಮಹಾಯಾನದ ಪ್ರಾಬಲ್ಯ ಮೂರ್ತಿಶಿಲ್ಪಕ್ಕೆ ಪ್ರಾಧಾನ್ಯತೆಯುಂಟಾಗಲು ಕಾರಣವಾಯಿತು. ಆದರೂ ಕರ್ನಾಟಕದಲ್ಲಿ ಈ ಕಾಲದ ವಾಸ್ತುಶಿಲ್ಪಗಳು ಉಳಿದುಬಂದಿರುವುದು ಅತ್ಯಲ್ಪ. ಬಹುಶಃ ಬೌದ್ಧಧರ್ಮಕ್ಕೆ ಕರ್ನಾಟಕದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯದಿದ್ದುದು, ಸಮುದ್ರತೀರದಿಂದ ದೇಶದೊಳಕ್ಕೆ, ಸಾತವಾಹನರ ರಾಜಧಾನಿಗೆ, ಹಾದುಹೋಗುತ್ತಿದ್ದ ವ್ಯಾಪಾರಮಾರ್ಗ ಕರ್ನಾಟಕದ ಮೂಲಕ ಹೋಗದಿದ್ದುದು ಇದಕ್ಕೆ ಮುಖ್ಯ ಕಾರಣವಿರಬಹುದು. ಆಂಧ್ರದಲ್ಲಿ ಅದ್ಭುತವಾಗಿ ಬೆಳೆದ ಬೌದ್ಧ ಸ್ತೂಪ, ವಿಹಾರಗಳು ಕರ್ನಾಟಕದಲ್ಲಿ ಆ ಮಟ್ಟದಲ್ಲಿ ವ್ಯಾಪಿಸಲೇ ಇಲ್ಲ. ಈ ಗುಂಪಿಗೆ ಸೇರಿದ ಒಂದೇ ಒಂದು ಸ್ಥಳವೆಂದರೆ ಸನ್ನತಿ. ಇಲ್ಲಿ ಸ್ತೂಪಗಳಿದ್ದ ಕುರುಹು ಮಾತ್ರ ಉಳಿದಿದೆ.

ಕರ್ನಾಟಕದ ಬಹುಭಾಗ ಸಾತವಾಹನರ ನೇರ ಆಳಿಕೆಗೆ ಒಳಪಡದೆ ಇವರ ಸಾಮಂತರಾಗಿದ್ದ ಚುಟುಕುಲದ ಅರಸರು ಇಲ್ಲಿ ಆಳುತ್ತಿದ್ದುದರಿಂದ ಅವರಿಗೆ ಸಂಬಂಧಿಸಿದಂತೆ ಕೆಲವು ಸ್ಥಳಗಳಲ್ಲಿ ವಾಸ್ತುಶಿಲ್ಪಗಳ ಅವಶೇಷಗಳನ್ನು ಕಾಣಬಹುದು. ಚಿತ್ರದುರ್ಗದ ಬಳಿಯ ಚಂದ್ರವಳ್ಳಿಯಲ್ಲಿ ಅವರ ಕಾಲದ ವಾಸದ ಮನೆಗಳಿದ್ದ ಕುರುಹುಗಳು ಉತ್ಖನನಗಳಲ್ಲಿ ಕಂಡುಬಂದಿದ್ದರೂ ಅವುಗಳ ವಿನ್ಯಾಸ, ಇತರ ವಿವರಣೆಗಳು ಉಳಿದು ಬಂದಿಲ್ಲ. ಇಟ್ಟಿಗೆಯಿಂದ ಕಟ್ಟಿದ್ದ ಹಲವು ಕಟ್ಟಡಗಳಿದ್ದುವೆಂದು ಹೇಳಬಹುದು. ಇವಲ್ಲದೆ ಬೌದ್ಧ ಅಥವಾ ವೈದಿಕಧರ್ಮಕ್ಕೆ ಸೇರಿದ ಯಾವ ಕಟ್ಟಡವೂ ಅಲ್ಲಿ ಕಂಡುಬಂದಿಲ್ಲ; ಮೃಣ್ಮೂರ್ತಿಗಳೂ ದೊರೆತಿಲ್ಲ. ನಿಗದಿಯಾದ ಪ್ರಮಾಣದ ಇಟ್ಟಿಗೆಗಳಿಗಿಂತ ಹೆಚ್ಚು ದೊಡ್ಡದಾದ ಇಟ್ಟಿಗೆಗಳೂ ಹೇರಳವಾಗಿ ದೊರೆತಿರುವುದರಿಂದ ಅವು ಅಲ್ಲಿದ್ದ ಕೋಟೆಯನ್ನು ಸೂಚಿಸುತ್ತವೆ ಎಂದು ಹೇಳಲಾಗಿದೆ.

ಲೌಕಿಕ ವಾಸ್ತುರೀತಿಗೆ ಸಂಬಂಧಿಸಿದಂತೆ ಸಾತವಾಹನರ ಕಾಲದ ಎರಡು ಕೋಟೆಗಳು ಒಂದು ಸನ್ನತಿಯಲ್ಲಿ, ಇನ್ನೊಂದು ಬನವಾಸಿಯಲ್ಲಿ ಉಳಿದುಬಂದಿವೆ. ಇವು ಇಟ್ಟಿಗೆಯಿಂದ ಕಟ್ಟಿದ ದಪ್ಪ ನೇರ ಗೋಡೆಗಳು. ವಡಗಾಂವ–ಮಾಧವಪುರದಲ್ಲಿ ಉತ್ಖನನಗಳಲ್ಲಿ ಕಂಡುಬಂದ ಚೌಕನಾದ ಅಥವಾ ದೀರ್ಘಚತುರಸ್ರಾಕಾರದ ವಾಸದ ಮನೆಗಳ ಅವಶೇಷಗಳನ್ನೂ ಇಲ್ಲಿ ಸೂಚಿಸಬಹುದು.

ಹಲವು ಅವಶೇಷಗಳುಳ್ಳ ಮತ್ತೊಂದು ಊರೆಂದರೆ ಬನವಾಸಿ. ಇಲ್ಲಿ ಇವರ ಕಾಲದಲ್ಲಿ ಬೌದ್ಧಧರ್ಮ ಪ್ರಬಲವಾಗಿದ್ದು ಹಲವು ಚೈತ್ಯಗಳು, ಸ್ತೂಪಗಳು ಇದ್ದುದರ ಕುರುಹುಗಳನ್ನು ಕಾಣಬಹುದು. ಇಲ್ಲಿ ನಡೆದ ಉತ್ಖನನಗಳಿಂದ ಗಜಪೃಷ್ಠಾಕೃತಿಯ ಚೈತ್ಯಾಲಯವೊಂದಿದ್ದುದು ಪತ್ತೆಯಾಗಿದೆ. ಇದಕ್ಕೆ ತುಂಬ ದಪ್ಪವಾದ ಇಟ್ಟಿಗೆಗೋಡೆಯಿದ್ದು ಇಂಥ ಮೂರು ಗೋಡೆಗಳು ಒಂದನ್ನೊಂದು ಬಳಸಿ ಒಳಗೆ ಎರಡು ಪ್ರದಕ್ಷಿಣಾಪಥವನ್ನುಂಟುಮಾಡಿವೆ. ತಲವಿನ್ಯಾಸ ಮತ್ತು ಕೆಲವು ವರಿಸೆ ಇಟ್ಟಿಗೆಗಳನ್ನುಳ್ಳ ಗೋಡೆಗಳು ಮಾತ್ರ ಉಳಿದುಬಂದಿದ್ದು ಆ ಚೈತ್ಯಾಲಯದ ಪೂರ್ಣಸ್ವರೂಪ ತಿಳಿದುಬರುವಂತಿಲ್ಲ. ಚೈತ್ಯವಲ್ಲದೆ ಸ್ತೂಪಗಳೂ ಇಲ್ಲಿ ಇದ್ದಿರಬೇಕು. ಆದರೆ ಅವು ಅಲ್ಲಿರುವ ದಿಬ್ಬಗಳಲ್ಲಿ ಅಡಗಿರುವ ಸಾಧ್ಯತೆ ಇದೆ. ಸನ್ನತಿಯಲ್ಲಾದರೆ ಒಂದು ಗುಂಡಾದ ವಿನ್ಯಾಸದ ಸ್ತೂಪವಿದ್ದ ಕುರುಹುಮಾತ್ರ ಉಳಿದಿದ್ದು ಆ ಸ್ತೂಪ ಪೂರ್ತಿಯಾಗಿ ನಾಶವಾಗಿದೆ. ಅದರ ತಲವಿನ್ಯಾಸವನ್ನು ಮಾತ್ರ ಈಗ ಗುರುತಿಸಬಹುದು. ಇದು ಬಹುಮಟ್ಟಿಗೆ ಕಲ್ಲುತುಂಡುಗಳಿಂದ ನಿರ್ಮಿತವಾಗಿದ್ದು, ಮೇಲೆ ಶಿಲ್ಪಿತ ಶಿಲಾಫಲಕಗಳಿಂದ ಮುಚ್ಚಲ್ಪಟ್ಟಿದ್ದಿತೆಂದು ತೋರುತ್ತದೆ. ಈ ಸ್ತೂಪದ ಪೂರ್ಣಮಾದರಿ ಹೇಗಿತ್ತೆಂಬುದೂ ಈಗ ತಿಳಿದು ಬರುವಂತಿಲ್ಲ. ಬನವಾಸಿಯ ಶಾಸನ ಫಲಕವೊಂದರ ಮೇಲಿನ ಮತ್ತು ಸನ್ನತಿಯ ಆಯಕ ಸ್ತಂಭವೊಂದರ ಮೇಲಿನ ಚೈತ್ಯಾಕಾರದ ಕಮಾನಿನ ಅಲಂಕರಣಗಳಿಂದ ಆಗ ನಿರ್ಮಿತವಾಗಿದ್ದಿರಬಹುದಾದ ಚೈತ್ಯಾಲಯ ಅಥವಾ ವಿಹಾರಗಳ ಮಾದರಿಯನ್ನು ಗುರುತಿಸಬಹುದೇನೋ. ಬನವಾಸಿಯಲ್ಲಿ ವಿಹಾರವೊಂದನ್ನು ಕಟ್ಟಿಸಿದುದನ್ನು ಅಲ್ಲಿನ ಶಾಸನವೊಂದು ತಿಳಿಸುತ್ತದೆ. ಹಾಗೆಯೇ ಇಲ್ಲಿನ ಸ್ತೂಪ ಹಾಗೂ ವಿಹಾರಗಳನ್ನು ವರ್ಣಿಸಿದ್ದಾನೆ.

ಬೌದ್ಧವಾಸ್ತುವಲ್ಲದೆ ವೈದಿಕ ವಾಸ್ತುಗಳೂ ಸಾತವಾಹನರ ಕಾಲದಲ್ಲಿ ಇದ್ದುದಕ್ಕೆ ಸೂಚನೆಗಳಿವೆ. ಮಳವಳ್ಳಿಯ ಸ್ತಂಭಶಾಸನದಲ್ಲಿ ಮಳ್ಳಪಳ್ಳಿ ದೇವರ ಹೆಸರು ಬಂದರೆ, ತಾಳಗುಂದದ ಪ್ರಣವೇಶ್ವರ ದೇವರು ಸಾತಕರ್ಣಿಗಳಿಂದ ಪೂಜೆಗೊಂಡಂತೆಯೂ ತಿಳಿದುಬರುತ್ತದೆ. ಮೊದಲ ದೇವಾಲಯ ಈಗ ಉಳಿದು ಬಂದಿಲ್ಲ; ಎರಡನೆಯದರ ಮೂಲಸ್ವರೂಪ ಈಗ ತಿಳಿಯದು. ಐಹೊಳೆಯಲ್ಲಿ ಬಾದಾಮಿ ಚಳುಕ್ಯರಿಗಿಂತ ಮುಂಚೆ ಸಾತವಾಹನರ ಕಾಲದಲ್ಲಿಯೇ ಇಟ್ಟಿಗೆಯಿಂದ ನಿರ್ಮಿಸಿದ ವಾಸ್ತುರೂಪಗಳಿದ್ದುದು ಈಚೆಗೆ ಬೆಳಕಿಗೆ ಬಂದಿದೆ. ದೊಡ್ಡ ಮಂಟಪಗಳ ಮಾದರಿಯಲ್ಲಿ ಕಂಬಸಾಲುಗಳನ್ನು ಹೊಂದಿದ್ದ ಚೌಕಾಕಾರದ ಕಟ್ಟಡಗಳು ಅವಾಗಿರಬೇಕೆಂದು ಈಗ ಉಳಿದು ಬಂದಿರುವ ತಲವಿನ್ಯಾಸದಿಂದ ಊಹಿಸಲಾಗಿದ್ದು ಅದು ಮುಂದೆ ಕೊಂತಿ ಗುಡಿ, ಲಾಡಖಾನ್ ಗುಡಿ ಮೊದಲಾದುವಕ್ಕೆ ಮಾದರಿಯಾಯಿತೆಂದು ಭಾವಿಸಲಾಗಿದೆ.

ಹೀಗೆ ಸಾತವಾಹನರ ಕಾಲದ ವಾಸ್ತುರೂಪಗಳು ಕರ್ನಾಟಕದಲ್ಲಿ ಪೂರ್ಣರೂಪದಲ್ಲಿ ಉಳಿದು ಬಂದಿಲ್ಲದಿದ್ದರೂ ಇದ್ದುದರಲ್ಲಿ ಶಿಲ್ಪ ಸ್ವರೂಪವೇ ಸ್ವಲ್ಪಮಟ್ಟಿಗೆ ಬೆಲೆ ಕಟ್ಟಬಹುದಾದ ಸ್ಥಿತಿಯಲ್ಲಿದೆ. ಬನವಾಸಿ

ಯಲ್ಲಿ ದೊರೆತ ಕೆಲವು ಕಿರುಪ್ರಮಾಣದ ಮೃಣ್ಮೂರ್ತಿಗಳು, ಸನ್ನತಿಯಲ್ಲಿ ದೊರೆತ ಇದೇ ಕಾಲದ ಮೃಣ್ಮೂರ್ತಿಗಳು ಈ ಕಲೆ ಸಾಕಷ್ಟು ಪ್ರಬುದ್ಧ ಸ್ಥಿತಿಯಲ್ಲಿದ್ದುದನ್ನು ಸೂಚಿಸುತ್ತದೆ. ಯಕ್ಷಯಕ್ಷಿಯರಾಗಲಿ, ಪ್ರಾಣಿಗಳಾಗಲಿ ಸ್ವಾಭಾವಿಕವಾಗಿದ್ದು ಅವುಗಳ ಗುಣ ಸ್ವಭಾವಗಳನ್ನು ಚೆನ್ನಾಗಿ ವ್ಯಕ್ತಪಡಿಸುವಂತಿವೆ. ಅಚ್ಚಿನಲ್ಲಿ ಒತ್ತಿ ಮಾಡಿದ ಈ ಮೂರ್ತಿಗಳು ಒಳಗೆ ಟೊಳ್ಳಾಗಿರುವುದೇ ಹೆಚ್ಚು. ಬನವಾಸಿಯಲ್ಲಿ ದೊರೆತ ನಾಗರಕಲ್ಲಿನ ಶಿಲ್ಪ ಸಾತವಾಹನರ ಕಾಲದ ಶಿಲಾಶಿಲ್ಪ ಮಾದರಿಗೆ ಉತ್ತಮ ಉದಾಹರಣೆ. ಸನ್ನತಿಯಲ್ಲಿ ದೊರೆತ ನಾಗರಕಲ್ಲುಗಳೂ ಇದರಂತೆಯೇ ಇದ್ದು, ಅರೆಯುಬ್ಬಿ ಬಿಡಿಸಿರುವ ನಾಗ ಸುಳಿಸುಳಿಯಾಗಿ ಸುತ್ತಿಕೊಂಡು ತನ್ನ ಐದು ಹೆಡೆಗಳನ್ನು ತೆರೆದಿದೆ. ಈ ಶಿಲ್ಪದಲ್ಲಿ ಗಂಭೀರತೆಯಿದೆ, ಭವ್ಯತೆ ಇದೆ. ಬನವಾಸಿಯ ನಾಗರಕಲ್ಲನ್ನು ಕಂಡರಿಸಿದ ನಟಕ ಅಥವಾ ನರ್ತಕ ಎಂಬ ಶಿಲ್ಪಿಯ ಹೆಸರೂ ಉಳಿದುಬಂದಿದ್ದು ಈಗ ತಿಳಿದಿರುವ ಮಟ್ಟಿಗೆ ಕರ್ನಾಟಕದ ಆದ್ಯ ರೂವಾರಿ ಇವನೆಂದು ಪರಿಗಣಿಸಬಹುದು. ಸನ್ನತಿಯಲ್ಲಿ ದೊರೆತ ಕೆಲವು ಶಿಲ್ಪಗಳಲ್ಲಿನ ಪ್ರಾಣಿಗಳನ್ನು ಅತ್ಯಂತ ಸ್ವಾಭಾವಿಕವಾಗಿ ಬಿಡಿಸುವ ಪ್ರಯತ್ನವಿದೆ. ಗಾಡಿಗೆ ಕಟ್ಟಿದ ಎತ್ತುಗಳಾಗಲಿ, ಸಂತೋಷದಿಂದ ಚಿಮ್ಮುತ್ತಿರುವ ಕೋಣವಾಗಲಿ, ಪಿತಾಲ್‌ಖೋರ ಮೊದಲಾದೆಡೆ ಇರುವಂತೆ ರೆಕ್ಕೆಹೊಂದಿದ ಕುದುರೆಯಾಗಲಿ ಕಂಡರಿಸುವಲ್ಲಿ ಶಿಲ್ಪನೈಪುಣ್ಯವಿದೆ. ಇವೆಲ್ಲಕ್ಕಿಂತ ಮಾನವ ಸಂವೇದನೆ, ಅಂತರ್ಭಾವಗಳನ್ನು ಹೊಮ್ಮಿಸುವ ಸನ್ನತಿಯಲ್ಲಿನ ಹಲವಾರು ಶಿಲ್ಪಗಳು ಈ ಕಾಲದ ಶ್ರೇಷ್ಠಮಟ್ಟದ ಶಿಲ್ಪ ಪ್ರತೀಕಗಳು. ಇವುಗಳಲ್ಲಿ ಅತ್ಯುತ್ತಮ ಮಾದರಿಯೆಂದರೆ ಆಯಕಸ್ತಂಭವೊಂದರ ಮೇಲೆ ಬಿಡಿಸಿರುವ ದಂಪತಿ ಶಿಲ್ಪ. ಬೌದ್ಧ ಜಾತಕಗಳ ಮೂಲಕ ಕಥನಶಿಲ್ಪ ಕರ್ನಾಟಕದಲ್ಲಿ ಆರಂಭವಾದುದೂ ಈ ಕಾಲದಲ್ಲಿಯೇ. ಕಾಲದ ಪೂರ್ಣರೂಪದ ಮೂರ್ತಿಗಳು ದೊರೆತಂತಿಲ್ಲ. ಐಹೊಳೆಯಲ್ಲಿ ಬುದ್ಧನ ಭಗ್ನಮೂರ್ತಿಯೊಂದು ದೊರೆತಿದ್ದು ಅದು ಸಾತವಾಹನರ ಕಾಲದ್ದೆನ್ನಲಾಗಿದೆ. ಈಚೆಗೆ ಹಂಪೆಯ ಉತ್ಖನನದಲ್ಲಿ ದೊರೆತಿರುವ ಈ ಕಾಲದ ಗಚ್ಚಿನ ಬೋಧಿಸತ್ವನ ತಲೆಯೊಂದು ಕುತೂಹಲವನ್ನು ಕೆರಳಿಸುವಂತಿದೆ. ಸುಣ್ಣಕಲ್ಲಿನಲ್ಲಿ ತೆಳುವುಬ್ಬಿನಲ್ಲಿ ಬಿಡಿಸಿರುವ ಶಿಲ್ಪಗಳು ಬೆರಗುಗೊಳಿಸುವಂಥವು.

**ಶಾಸನಗಳು:** ಸಾತವಾಹನರ ತಕ್ಕಷ್ಟು ದೊಡ್ಡದಾದ ಮತ್ತು ಐತಿಹಾಸಿಕವಾಗಿ ಬಹುಪ್ರಮುಖವಾದ ಶಾಸನಗಳು ನಾನಾಘಾಟ್, ನಾಸಿಕ್, ನಾಗಾರ್ಜುನಕೊಂಡ, ಜಗ್ಗಯ್ಯಪೇಟೆ ಮೊದಲಾದ ಕರ್ನಾಟಕದ ಹೊರಗಿನ ಸ್ಥಳಗಳಲ್ಲಿ ದೊರೆತಿದ್ದರೂ ಕರ್ನಾಟಕದಲ್ಲಿ ಅಂಥ ಶಾಸನಗಳಿಲ್ಲವೆಂದೇ ಹೇಳಬೇಕು. ಇಲ್ಲಿ ದೊರೆತಿರುವ ಈ ಕಾಲದ ಶಾಸನಗಳಲ್ಲಿ ದೊಡ್ಡದಾದುದೆಂದರೆ ಮಳವಳ್ಳಿಯ ಸ್ತಂಭಶಾಸನ. ಇದಲ್ಲದೆ ಬನವಾಸಿ, ಸನ್ನತಿ, ಬೆಳ್ವಾಡಗಿ, ಚುರುಸುಗುಂಡಿ, ಹಂಪೆಗಳಲ್ಲಿ ಈ ಕಾಲಕ್ಕೆ ಸೇರಿರಬಹುದಾದ ಹಲವಾರು ಶಾಸನಗಳು ದೊರೆತಿವೆ. ಪ್ರ.ಶ.ಪೂ.ಸು.1ನೆಯ ಶತಮಾನದಿಂದ ಕ್ರಿ.ಶ.ಸು.3ನೆಯ ಶತಮಾನದವರೆಗಿನ ಕಾಲಕ್ಕೆ ಸೇರಿದ ಈ ಶಾಸನಗಳು ಬ್ರಾಹ್ಮೀಲಿಪಿ ಮತ್ತು ಪ್ರಾಕೃತಭಾಷೆಗಳಲ್ಲಿವೆ. ಬನವಾಸಿಯಲ್ಲಿ ದೊರೆತ ಒಂದು ಶಾಸನ ಸು.2ನೆಯ ಶತಮಾನದ ಮಧ್ಯಭಾಗದಲ್ಲಿ ಆಳುತ್ತಿದ್ದ ವಾಶಿಷ್ಠೀಪುತ್ರ ಶಿವಶ್ರೀ ಪುಳುಮಾವಿಯ ಆಳಿಕೆಗೆ ಸೇರಿದ್ದು, ಅದು ಆತನ ರಾಣಿಯ ನೆನಪಿಗಾಗಿ ಹಾಕಿಸಿದ ಛಾಯಾದ್ರಸ್ತರವಾಗಿದೆ. ಆದರೆ ಆ ರಾಣಿಯ ಹೆಸರನ್ನು ತಿಳಿಸಿಲ್ಲ. ಮಳವಳ್ಳಿಯ ಸ್ತಂಭಶಾಸನ ಸಾತವಾಹನರ ಮಾಂಡಲಿಕನಾಗಿದ್ದ, ಚುಟುವಂಶಕ್ಕೆ ಸೇರಿದ ಏಣ್ಹುಕಡ ಚುಟುಕುಲಾನಂದನ ಎರಡನೆಯ ಆಳಿಕೆಯ ವರ್ಷಕ್ಕೆ ಸೇರಿದ್ದು ರಾಜನು ಮಳ್ಪಪಳ್ಳಿ ದೇವರಿಗೆ ಸಹಲಾಟವಿ ಗ್ರಾಮವನ್ನು ದತ್ತಿಯಾಗಿ ಬಿಟ್ಟುದನ್ನು ಈ ಶಾಸನ ತಿಳಿಸುತ್ತದೆ. ಇದೇ ರಾಜನ 12ನೆಯ ಆಳಿಕೆಯ ವರ್ಷಕ್ಕೆ ಸೇರಿದುದು ಬನವಾಸಿಯಲ್ಲಿರುವ ನಾಗರಕಲ್ಲಿನ ಶಾಸನ. ಮಹಾಭೋಜನೆಂಬೊಬ್ಬನ ಹೆಂಡತಿ ಶಿವಸ್ಕಂದ ನಾಗಶ್ರೀ ಕೆರೆ, ವಿಹಾರಗಳನ್ನು ಕಟ್ಟಿಸಿ ಈ ಶಾಸನವಿರುವ ನಾಗರಕಲ್ಲನ್ನು ಮಾಡಿಸಿದುದಾಗಿ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನಕಲ್ಲನ್ನು ಮಾಡಿದ ರೂವಾರಿ ಸಂಜಯಂತಿಯ, ಎಂದರೆ ಬನವಾಸಿಯ ಇಂದ್ರಮಯೂರಕನ ಶಿಷ್ಯ ನರ್ತಕ. ಸನ್ನತಿಯ ಒಂದು ತುಂಡುಶಾಸನದಲ್ಲಿ ವಾಶಿಷ್ಠೀಪುತ್ರ ಸಿರಿಸಾತ . . . ಎಂದಿದ್ದು ಅದು ವಾಶಿಷ್ಠೀಪುತ್ರ ಶ್ರೀ ಸಾತಕರ್ಣಿಯನ್ನು ನಿರ್ದೇಶಿಸುವುದಾಗಿದೆ. ಉಳಿದಂತೆ ಅಲ್ಲಿನ ಹಲವಾರು ಶಾಸನಗಳು ದತ್ತಿಬಿಟ್ಟವರ ಇತರರ ಹೆಸರುಗಳನ್ನು ಸೂಚಿಸುತ್ತವೆ. ಬೆಳ್ವಾಡಿಗಿಯಲ್ಲಿರುವ ಶಾಸನವು ಆ ಕಲ್ಲಿನ ಮೇಲೆ ಎತ್ತಿನ ಗಾಡಿಯಲ್ಲಿರುವ ಮೂರ್ತಿಯನ್ನು ಕಲಕ ಎನ್ನುವವನ ಛಾಯಾಪ್ರತಿಮೆ ಎನ್ನುತ್ತದೆ. ಹಾಗೆಯೇ ಹಂಪೆಯಲ್ಲಿ ಉತ್ಖನನದಲ್ಲಿ ದೊರೆತ ಶಾಸನಸ್ತಂಭವೊಂದನ್ನು ಬೌದ್ಧವಿಹಾರವೊಂದಕ್ಕೆ ದತ್ತಿಬಿಟ್ಟುದನ್ನು ಸೂಚಿಸುವಂತೆ ತೋರುತ್ತದೆ. ಈ ಶಾಸನಗಳ ವ್ಯಾಪ್ತಿಯಿಂದ ಸಾತವಾಹನರು ಅಥವಾ ಅವರ ಸಾಮಂತರಾದ ಚುಟುಕುಲ ಸಾತಕರ್ಣಿಗಳು ಕರ್ನಾಟಕದ ಬಹುಭಾಗವನ್ನು ಆಳುತ್ತಿದ್ದರೆಂಬುದು ವಿದಿತವಾಗುತ್ತದೆ. **(ಎಮ್.ಎಚ್.)**

**ನಾಣ್ಯಗಳು:** ಕೃಷ್ಣಾ, ಗೋದಾವರಿ ಪ್ರದೇಶ, ಮಾಲವ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕಗಳ ಹಲವಾರು ಕಡೆಗಳಲ್ಲಿ ಸಾತವಾಹನರ ವಿವಿಧ ನಾಣ್ಯಗಳು ಅಪಾರವಾಗಿ ದೊರೆತಿವೆ. ಅವುಗಳ ರಚನೆ, ಅವುಗಳ ಮೇಲಿನ ಚಿತ್ರಾಲಂಕರಣ ಮತ್ತು ಅವುಗಳಿಗಾಗಿ ಬಳಸಲಾದ ಲೋಹ ಇವುಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಪೊಟಿನ್, ಸೀಸ, ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳನ್ನು ಅವರು ಅಚ್ಚುಹಾಕಿಸಿದ್ದಾರೆ. ಆದರೆ ಸೀಸ ಮತ್ತು ಪೊಟಿನ್ ನಾಣ್ಯಗಳೇ ಹೆಚ್ಚು. ವಿದೇಶ ಹಾಗೂ ಸುತ್ತಲಿನ ಪ್ರದೇಶಗಳನ್ನು ಹೊರತುಪಡಿಸಿ ಅನ್ಯತ್ರ ದೊರಕಿರುವುದು ಹೆಚ್ಚಾಗಿ ಅಚ್ಚುಹಾಕಿದವುಗಳೇ. ಸಾಮಾನ್ಯವಾಗಿ ಈ ನಾಣ್ಯಗಳ ಮೇಲೆ ಬ್ರಾಹ್ಮೀಲಿಪಿಯಲ್ಲಿ ಆಲೇಖ್ಯಗಳಿದ್ದು, ಇನ್ನೊಂದು ಮುಖದಲ್ಲಿ ಸಿಂಹ, ಆನೆ, ಕುದುರೆ, ಬಾಣ, ಬೆಟ್ಟ ಮುಂತಾದ ಚಿತ್ರಗಳಿರುತ್ತವೆ. ಆಕಾರದಲ್ಲಿ ಇವು ಬಹುಮಟ್ಟಿಗೆ ದುಂಡು. ದಪ್ಪದಾದ ಈ ನಾಣ್ಯಗಳ ವ್ಯಾಸ 1.5", 0.9" ಮತ್ತು 0.6". ಅರಸರ ಹೆಸರುಗಳನ್ನು ನಾಣ್ಯಗಳಲ್ಲಿ ಮೂಡಿಸಿದ್ದರೂ ಒಂದೇ ಹೆಸರಿನ ಹಲವಾರು ಅರಸರು ಈ ವಂಶದಲ್ಲಿರುವ ಕಾರಣ ಅವರನ್ನು ಗುರುತಿಸುವುದು ಕಷ್ಟವಾಗಿದೆ.

ಬನವಾಸಿಯ ಉತ್ಖನನದಲ್ಲಿ ಗೌತಮೀಪುತ್ರ ಸಾತಕರ್ಣಿಯ ಅನೇಕ ನಾಣ್ಯಗಳೂ ಯಜ್ಞಶ್ರೀ ಸಾತಕರ್ಣಿಯ ಒಂದೆರಡು ನಾಣ್ಯಗಳೂ ದೊರೆತಿವೆ. ಬನವಾಸಿಯಲ್ಲಿ ದೊರೆತ ನಾಣ್ಯಗಳು ಸೀಸದಿಂದ ಮಾಡಲ್ಪಟ್ಟಿದ್ದು ಇವುಗಳ ವ್ಯಾಸ ಸಾಮಾನ್ಯವಾಗಿ 0.6". ಇವುಗಳ ಮುಮ್ಮುಖ ಸವೆದಿದ್ದರೂ ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆ ಇದೆ. ಚಂದ್ರವಳ್ಳಿಯಲ್ಲಿ ವಾಶಿಷ್ಠೀಪುತ್ರ ಪುಳುಮಾವಿ ಮತ್ತು ಯಜ್ಞಶ್ರೀ ಸಾತಕರ್ಣಿಯರ ನಾಣ್ಯಗಳು ದೊರೆತಿವೆ. ಪುಳುಮಾವಿಯ ನಾಣ್ಯದ ಒಂದು ಮುಖದಲ್ಲಿ ಸೊಂಡಿಲು ಮೇಲಕ್ಕೆತ್ತಿದ ಆನೆಯ ಚಿತ್ರ ಮತ್ತು ಬ್ರಾಹ್ಮೀಲಿಪಿಯಲ್ಲಿ ಪುಳುಮಾವಿ ಎಂಬ ಆಲೇಖ್ಯವಿದೆ. ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆಯಿದ್ದು, ಅದರ ಒಂದೊಂದು ವೃತ್ತದಲ್ಲಿ ಒಂದೊಂದು ಗೂಡು ಇದೆ. ಯಜ್ಞಶ್ರೀ ಸಾತಕರ್ಣಿಯ ನಾಣ್ಯಗಳೂ ಹೀಗೇ ಇವೆ. ಒಂದು ನಾಣ್ಯದಲ್ಲಿ ಆ ಸಿರಿಯನ ಸತಾ ಎಂಬ ಆಲೇಖ್ಯವೂ ಇನ್ನೊಂದರಲ್ಲಿ ನಸತಕ . . . ಎಂಬ ಆಲೇಖ್ಯವೂ ಇದೆ. ಪೊಟಿನ್ ನಾಣ್ಯವೊಂದರಲ್ಲಿ ಹಕು ಶ್ರೀ ಎಂಬ ಆಲೇಖ್ಯವಿರುವುದನ್ನೂ ಇನ್ನೊಂದು ಸೀಸದ ನಾಣ್ಯದಲ್ಲಿ ಶ್ರೀಸದಕ ಎಂಬ ಆಲೇಖ್ಯವಿರುವುದನ್ನೂ ಎಂ.ಎಚ್.ಕೃಷ್ಣ ಅವರು ಗುರುತಿಸಿದ್ದಾರಾದರೂ ಈ ರಾಜರು ಯಾರು ಎಂಬುದನ್ನು ಗುರುತಿಸಲಾಗಿಲ್ಲ. **(ಬಿ.ಆರ್.ಜಿ.)**

**ಸಾಧ್ವಿ:** ಮೈಸೂರಿನಿಂದ ಪ್ರಕಟವಾಗುತ್ತಿದ್ದ ಒಂದು ಸಂಜೆ ದಿನಪತ್ರಿಕೆ. ಎಂ.ವೆಂಕಟಕೃಷ್ಣಯ್ಯನವರು 1899ರಲ್ಲಿ ಇದನ್ನು ವಾರಪತ್ರಿಕೆಯಾಗಿ ಪ್ರಾರಂಭಿಸಿದರು. ಮುದ್ರಣಾಲಯದ ಮೇಲ್ವಿಚಾರಕರಾಗಿದ್ದ ಎಂ.ಎಸ್. ಲಕ್ಷ್ಮಣರಾವ್ ಈ ಪತ್ರಿಕೆಯ ಸಂಪಾದಕರಾಗಿದ್ದರೂ ಪತ್ರಿಕೆಗೆ ಲೇಖನ ಬರೆಯುವುದೂ ಸಂಪಾದನ ಕಾರ್ಯ ಮೊದಲಾದವುಗಳನ್ನು ವೆಂಕಟಕೃಷ್ಣಯ್ಯನವರೇ ನಿರ್ವಹಿಸುತ್ತಿದ್ದರು. 1908ರಲ್ಲಿ ಮೈಸೂರು ಪತ್ರಿಕಾ ಕಾನೂನು ಜಾರಿಗೆ ಬಂದಾಗ ಅದನ್ನು ವಿರೋಧಿಸಿ ವೆಂಕಟಕೃಷ್ಣಯ್ಯನವರು ತಮ್ಮ ಇತರ ಪತ್ರಿಕೆಗಳೊಡನೆ ಸಾಧ್ವಿಯ ಪ್ರಕಟಣೆಯನ್ನೂ ನಿಲ್ಲಿಸಿ ಮತ್ತೆ 1909ರಲ್ಲಿ ಪ್ರಕಟಣೆ ಪ್ರಾರಂಭಿಸಿದರು. ಸಾಧ್ವಿ 1928ರಲ್ಲಿ ಬೆಂಗಳೂರಿನ ಸುಲ್ತಾನ್ ಪೇಟೆಯ ಗಣೇಶ ಹಬ್ಬದಲ್ಲಿ ಆದಂಥ ಗಲಾಟೆ ಕುರಿತು ಪಕ್ಷಪಾತವಿಲ್ಲದೆ ಸಮಾಚಾರವನ್ನು ಪ್ರಕಟಿಸಿದುದನ್ನು ಸಹಿಸದೆ 1929ರಲ್ಲಿ ಆಗಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರ ಸರ್ಕಾರ ವೆಂಕಟಕೃಷ್ಣಯ್ಯ ನವರ ಎಲ್ಲ ಪತ್ರಿಕೆಗಳ ಜೊತೆಗೆ ಸಾಧ್ವಿಯ ಪ್ರಕಟಣೆಯನ್ನೂ ತಡೆಯಿತು. ವೆಂಕಟಕೃಷ್ಣಯ್ಯನವರು **(ನೋಡಿ)** 1933 ನವೆಂಬರ್ 11ರಂದು ನಿಧನರಾದರು.

ಇವರ ಜ್ಞಾಪಕಾರ್ಥ ಅಗರ ರಂಗಯ್ಯನವರು 1936 ಫೆಬ್ರವರಿ 24ರಂದು ಸಾಧ್ವಿ ವಾರಪತ್ರಿಕೆಯನ್ನು ಪ್ರಾರಂಭಿಸಿದರು. 1939ರಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಸತ್ಯಾಗ್ರಹ ಚಳವಳಿಯನ್ನು ಮೈಸೂರು ಕಾಂಗ್ರೆಸ್ ಪ್ರಾರಂಭಿಸಿದಾಗ ಸಾಧ್ವಿ ಪತ್ರಿಕೆ ಆ ಸಂಬಂಧದಲ್ಲಿ ಅನೇಕ ಲೇಖನಗಳನ್ನು ಪ್ರಕಟಪಡಿಸಿತು. ಆ ವರ್ಷದ ಆಗಸ್ಟ್‌ನಲ್ಲಿ ಸಾಧ್ವಿ ಪತ್ರಿಕೆಯ ಸಂಪಾದಕರನ್ನು ಸರ್ಕಾರ ದಸ್ತಗಿರಿ ಮಾಡಿ ಪತ್ರಿಕಾ ಕಾನೂನಿನ ಪ್ರಕಾರ ಪತ್ರಿಕೆಯ ರಹದಾರಿಯನ್ನು ರದ್ದುಪಡಿಸಿತು. ಪತ್ರಿಕೆಯ ಪ್ರಕಟಣೆ 1936 ಅಕ್ಟೋಬರ್ 16ರಂದು ಮತ್ತೆ ನಿಂತಿತು. ಮುಂದೆ ಮೈಸೂರಿನಲ್ಲಿ ಜಾರಿಗೆ ಬಂದ ಪತ್ರಿಕಾ ಕಾನೂನಿನಂತೆ ರೂ.250 ಠೇವಣಿ ಕಟ್ಟಿ ಪತ್ರಿಕೆ ನಡೆಸಲು ಸಂಪಾದಕರು ನಿರಾಕರಿಸಿದರು. ಆದರೆ ಮಿರ್ಜಾ ಇಸ್ಮಾಯಿಲರ ಪರಿಚಯವಿದ್ದ ಪತ್ರಿಕೆಯ ಹಿತೈಷಿಗಳಲ್ಲಿ ಒಬ್ಬರಾದ ನಂಜನಗೂಡಿನ ಸುಪ್ರಸಿದ್ಧ ಸಾಹಿತಿ ಎನ್. ಸುಬ್ರಹ್ಮಣ್ಯಯ್ಯನವರು ಸಾಧ್ವಿಪತ್ರಿಕೆಯ ಸಂಪಾದಕರಾಗಿ ಪ್ರಕಟಣೆಯನ್ನು ಪ್ರಾರಂಭಿಸಿದರು. 1942 ಜುಲೈ 20ರಿಂದ ಸಾಧ್ವಿ ದಿನಪತ್ರಿಕೆಯಾಯಿತು. ಕ್ವಿಟ್ ಇಂಡಿಯ ಚಳವಳಿಯ ಪರಿಣಾಮ, ಸರ್ಕಾರಿ ಅಧಿಕಾರಿಗಳ ಒತ್ತಡದ ಕಾರಣಗಳಿಂದ 1942 ಆಗಸ್ಟ್ 21ರಂದು ಎನ್. ಸುಬ್ರಹ್ಮಣ್ಯಯ್ಯನವರು ಪತ್ರಿಕೆಯ ಸಂಪಾದಕತ್ವವನ್ನು ಬಿಟ್ಟರು. ಅಂದಿನಿಂದ 1958 ನವೆಂಬರ್ 11ರವರೆಗೆ ಎ.ಆರ್.ನಾಗರಾಜನ್ ಈ ಪತ್ರಿಕೆಯ ಸಂಪಾದಕರಾಗಿದ್ದರು. ಅನಂತರ ಅಗರ ರಂಗಯ್ಯನವರು ಪತ್ರಿಕೆಯ ಸಂಪಾದಕರಾಗಿದ್ದರು. 1962 ಆಗಸ್ಟ್ 3ರಂದು ಆಗ ಭಾರತದ ರಾಷ್ಟ್ರಾಧ್ಯಕ್ಷರಾಗಿದ್ದ ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಸಾಧ್ವಿ ಪತ್ರಿಕೆ ರಜತಮಹೋತ್ಸವವನ್ನು ಆಚರಿಸಿತು. ಇದರ ಅಂಗವಾಗಿ ವಿಶೇಷ ಸಂಚಿಕೆಯೊಂದನ್ನು ಪ್ರಕಟಿಸಿದ್ದಲ್ಲದೆ, ಆ ಉತ್ಸವದ ನೆನಪಿಗಾಗಿ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಲ್ಲಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗೆ ಚಿನ್ನದ ಪದಕ ಕೊಡಲು ಒಂದು ನಿಧಿಯನ್ನು ವಿಶ್ವವಿದ್ಯಾನಿಲಯಕ್ಕೆ ಅರ್ಪಿಸಲಾಯಿತು. *

**ಸಾಯಿಸುತೆ:** 1942– . ಪ್ರಸಿದ್ಧ ಕಾದಂಬರಿಗಾರ್ತಿ. ಸಾಯಿಸುತೆ ಎಂಬುದು ಇವರ ಕಾವ್ಯನಾಮ. ಮೂಲ ಹೆಸರು ರತ್ನ ಅಶ್ವತ್ಥ್. ಇವರು 1942 ಆಗಸ್ಟ್ 20ರಂದು ಕೋಲಾರದಲ್ಲಿ ಜನಿಸಿದರು. ತಂದೆ ವೆಂಕಟಪ್ಪ, ತಾಯಿ ಲಕ್ಷ್ಮಮ್ಮ. ಕಾಲೇಜು ವ್ಯಾಸಂಗದವರೆಗೂ ಶಿಕ್ಷಣ ಪಡೆದ ಇವರು ಮೊದಲು ಬರೆದ ಕಾದಂಬರಿ 'ಮಿಂಚು' ಧಾರಾವಾಹಿಯಾಗಿ ಪ್ರಕಟವಾಯಿತು (1976). ಇವರ 26ಕ್ಕೂ ಹೆಚ್ಚು ಕಾದಂಬರಿಗಳು ಹೆಸರಾಂತ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿವೆ. ಬಾಡದಹೂ (1977), ಗಂಧರ್ವಗಿರಿ (1980), ಶ್ವೇತಗುಲಾಬಿ (1981), ಇಬ್ಬನಿ ಕರಗಿತು (1982), ಅಮೃತಸಿಂಧು

(1983), ಮೂಡಿಬಂದ ಶಶಿ (1984), ಪಸರಿಸಿದ ಶ್ರೀಗಂಧ (1986), ಪ್ರೀತಿಯ ಹೂಬನ (1989), ಅಪೂರ್ವ ಮೈತ್ರಿ (1989) ಮೊದಲಾದ 134ಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿದ್ದಾರೆ. ಬಾಡದಹೂ, ಗಂಧರ್ವಗಿರಿ, ಶ್ವೇತಗುಲಾಬಿ ಮೊದಲಾದ ಕಾದಂಬರಿಗಳು ಚಲನಚಿತ್ರಗಳಾಗಿವೆ. ಬಾಡದಹೂವು, ಮಿಡಿದ ಶ್ರುತಿ ಕಾದಂಬರಿಗಳಿಗೆ ಶ್ರೇಷ್ಠ ಚಲನಚಿತ್ರ ರಾಜ್ಯ ಪ್ರಶಸ್ತಿಯೂ ಚಲನಚಿತ್ರ ರಸಿಕರ ಸಂಘದ ಪ್ರಶಸ್ತಿಯೂ (1982) ಲಭಿಸಿದೆ.

ಇವರು ಸಣ್ಣಕಥೆಗಳನ್ನು, ಬಾನುಲಿ ನಾಟಕಗಳನ್ನು, ಶಿಶುಸಾಹಿತ್ಯ ಹಾಗೂ ವಯಸ್ಕರ ಶಿಕ್ಷಣಕ್ಕಾಗಿ ಹಲವು ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. ಇವರ ಪ್ರತಿಭೆಗೆ ಅನೇಕ ಪ್ರಶಸ್ತಿ ಗೌರವಗಳು ದೊರಕಿವೆ. ಬೆಳಗಾಂವಿ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಶ್ರೀ ಪ್ರಶಸ್ತಿ, ತುಮಕೂರು ಜಿಲ್ಲಾ ಲೇಖಕಿಯರ ಸಂಘದಿಂದ ಸಾಹಿತ್ಯ ಸಂಪನ್ನ ಪ್ರಶಸ್ತಿ ಹಾಗೂ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಮುಖ್ಯವಾದುವು. ಹಲವಾರು ಮಹಿಳಾ ಸಮ್ಮೇಳನಗಳಲ್ಲಿ ಅಧ್ಯಕ್ಷತೆಯ ಗೌರವಕ್ಕೂ ಇವರು ಭಾಜನರಾಗಿದ್ದಾರೆ. *

**ಸಾರಾ ಅಬೂಬಕರ್:** 1936– . ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಹಾಗೂ ಸ್ತ್ರೀ ಸಂವೇದನೆಗಳನ್ನು ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ ಪ್ರಸಿದ್ಧ ಲೇಖಕಿ, ಸಾಮಾಜಿಕ ಚಿಂತಕಿ. ತಂದೆ ಪಿ.ಅಹಮ್ಮದ್, ತಾಯಿ ಜೈನಾಬಿ. ಕೇರಳದ ಕಾಸರಗೋಡು ತಾಲ್ಲೂಕಿನ ಚಂದ್ರಗಿರಿ ನದೀತೀರದ ಚಮನಾಡು ಎಂಬ ಗ್ರಾಮದಲ್ಲಿ 1936 ಜೂನ್ 30ರಂದು ಜನಿಸಿದರು. ಮುಸ್ಲಿಂ ಮಹಿಳೆಯರಿಗೆ ಶಿಕ್ಷಣದ ಅವಕಾಶವೇ ವಿರಳವಾಗಿದ್ದ ಕಾಲದಲ್ಲೂ ತಂದೆ ಮತ್ತು ಅಣ್ಣಂದಿರ ಒತ್ತಾಸೆಯಿಂದ ಓದಿ ಎಸ್.ಎಸ್.ಎಲ್.ಸಿ. ವರೆಗೆ ಶಿಕ್ಷಣ ಪಡೆದರು. ಮುಂದೆ ಅಬೂಬಕರ್ ಎಂಬುವವರನ್ನು ವಿವಾಹವಾದ ಅನಂತರ ಸಾರಾ ಅಬೂಬಕರ್ ಎಂಬ ಹೆಸರಿನಿಂದ ಕನ್ನಡ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡರು.

ಇವರ ಮೊದಲ ಕಾದಂಬರಿ 'ಚಂದ್ರಗಿರಿಯ ತೀರದಲ್ಲಿ' (1984). ಇದರಲ್ಲಿ ಮುಸ್ಲಿಂ ಧರ್ಮ ವ್ಯವಸ್ಥೆಯಲ್ಲಿರುವ ತಲಾಕ್ ಪದ್ಧತಿಯ ವಿವಾಹ ವಿಚ್ಛೇದನದ ಸಮಸ್ಯೆಯನ್ನು ಸ್ತ್ರೀಪರ ನೆಲೆಯಿಂದ ಹೃದಯ ಸ್ಪರ್ಶಿಯಾಗಿ ವಿಶ್ಲೇಷಿಸಲಾಗಿದೆ. ಸಹನಾ (1985), ವಜ್ರಗಳು (1988), ಕದನ ವಿರಾಮ (1991), ಸುಳಿಯಲ್ಲಿ ಸಿಕ್ಕವರು (1994), ಪ್ರವಾಹ–ಸುಳಿ (1996), ತಳವೊಡೆದ ದೋಣಿಯಲ್ಲಿ (1997)– ಇವು ಇವರ ಇತರ ಕಾದಂಬರಿಗಳು. ಚಪ್ಪಲಿಗಳು (1989), ಪಯಣ ಮತ್ತು ಇತರ ಕಥೆಗಳು (1992), ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು (1996), ಖೆಡ್ಡಾ (1999)– ಇವು ಕಥಾ ಸಂಕಲನಗಳು. ಮುಸ್ಲಿಂ ಸಮುದಾಯದ ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ಕುಟುಂಬಗಳ ಸಂಕೀರ್ಣ ಬದುಕಿನ ಸೂಕ್ಷ್ಮಗಳನ್ನು ಇವರ ಕಥೆ ಕಾದಂಬರಿಗಳು ಅನಾವರಣ ಮಾಡುತ್ತವೆ.

ಬಡತನ, ಅನಕ್ಷರತೆ, ಧಾರ್ಮಿಕ ಅಂಧಃಶ್ರದ್ಧೆ, ಪಿತೃಪ್ರಧಾನ ಸಮಾಜದ ಮೌಲ್ಯಗಳು ಮುಸ್ಲಿಂ ಮಹಿಳೆಯರ ಬದುಕಿನ ಶೋಷಣೆಗೆ ಪೋಷಕವಾಗಿ ನಿಲ್ಲುವ ಬಗೆಯನ್ನು ಇವರ ಸಾಹಿತ್ಯ ಓದುಗರಿಗೆ ತೆರೆದಿರಿಸಿದೆ.

ಇವರು ಅನುವಾದಕ್ಷೇತ್ರದಲ್ಲಿಯೂ ಕೆಲಸ ಮಾಡಿದ್ದಾರೆ. ಮಲಯಾಳಂ ಲೇಖಕಿ ಬಿ.ಎಂ. ಸುಹರ ಅವರ ಕಾದಂಬರಿ 'ಬಲಿ' (1998), ಕಮಲಾದಾಸ್ ಅವರ ಕೃತಿ 'ಮನೋಮಿ' (1993), ಪಿ.ಕೆ. ಬಾಲಕೃಷ್ಣನ್ ಅವರ ಕೃತಿ 'ನಾನಿನ್ನು ನಿದ್ರಿಸುವೆ' (2001)– ಇವು ಅನುವಾದಗಳು. ಐಷಾರಾಮದ ಆಳದಲ್ಲಿ (2001) ಎಂಬುದು ಇವರ ಅಮೆರಿಕ ಪ್ರವಾಸಕಥನ. ಲೇಖನ ಗುಚ್ಛ (1997), ಅನಾವರಣ (2001)– ಇವು ಇವರ ಲೇಖನಗಳ ಸಂಕಲನಗಳು.

ಸಾರಾ ಅವರು ಸಾಮಾಜಿಕ ಅನ್ಯಾಯ, ಅಸಮಾನತೆ, ಶೋಷಣೆಗಳನ್ನು ಸದಾ ಪ್ರತಿಭಟಿಸುತ್ತ ಬಂದವರು. ಬಿಜಾಪುರದ ನಾಜಿಮಾ ಭಾಂಗಿ ಪ್ರಕರಣದಲ್ಲಿ, ಮುಸ್ಲಿಂ ಮೂಲಭೂತವಾದಿಗಳು ಮಹಿಳೆಯರು ಸಿನಿಮಾ ನೋಡಬಾರದು ಎಂದು ಫತ್ವಾ ಹೊರಡಿಸಿದಾಗ ಅದನ್ನು ವಿರೋಧಿಸಿದವರು. ಲಂಕೇಶ್ ಪತ್ರಿಕೆಗೆ ಬರೆದವರು. ಪ್ರಗತಿಪರ, ಜಾತ್ಯಾತೀತ ಹೋರಾಟಗಳ ಪರವಾಗಿ ಹಾಗೂ ಮೂಲಭೂತವಾದಿ ಮನಸ್ಸುಗಳ ವಿರುದ್ಧ ದಂಗೆಯ ಧ್ವನಿಯನ್ನು ಎತ್ತುತ್ತಲೇ ಕನ್ನಡಿಗರಿಗೆ ಪರಿಚಿತರಾದವರು. ಇಂಥ ಸಂದರ್ಭಗಳು ಇವರನ್ನು ಹಲವು ಕಠಿಣ ಪರೀಕ್ಷೆಗಳಿಗೆ ಒಳಗು ಮಾಡಿದ್ದೂ ಉಂಟು; ಆದರೆ ಎಂದೂ ಹಿಮ್ಮೆಟ್ಟಿದವರಲ್ಲ.

ಇವರ ಸಾಹಿತ್ಯಕ ಸಾಧನೆಗಾಗಿ ಅನೇಕ ಗೌರವ, ಪ್ರಶಸ್ತಿಗಳು ದೊರಕಿವೆ. ವರ್ಧಮಾನ ಪ್ರಶಸ್ತಿ (1987), ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (1991), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1995), ಅನುಪಮಾ ನಿರಂಜನ ಪ್ರಶಸ್ತಿ (1995), ರತ್ನಮ್ಮ ಹೆಗ್ಗಡೆ ಮಹಿಳಾ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಬಿ. ಸರೋಜಾದೇವಿ, ಶ್ರೀಹರ್ಷ ಪ್ರಶಸ್ತಿ (1996), ಎಚ್.ವಿ. ಸಾವಿತ್ರಮ್ಮ ದತ್ತಿನಿಧಿ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನಗಳನ್ನು ಹೆಸರಿಸಬಹುದು ದೊರೆತಿವೆ. ಕರ್ನಾಟಕ ಸರ್ಕಾರ ದಾನಚಿಂತಾ ಮಣಿ ಅತ್ತಿಮಬ್ಬೆ ಪ್ರಶಸ್ತಿ ನೀಡಿ ಗೌರವಿಸಿದೆ (2002). ಹಂಪಿ ಕನ್ನಡ ವಿಶ್ವವಿದ್ಯಾಲಯ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯೂ ಇವರಿಗೆ ಲಭಿಸಿದೆ (2006). **(ಎಸ್‌ಎ.)**

**ಸಾರಿಗೆ:** ಜನರನ್ನೂ ವಸ್ತುಗಳನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಅನುಕೂಲ ಕಲ್ಪಿಸುವ ಸಾರಿಗೆ ವ್ಯವಸ್ಥೆ ಕರ್ನಾಟಕದಲ್ಲಿ ಪ್ರಾಚೀನದಿಂದಲೂ ಉತ್ತಮ ಮಟ್ಟದಲ್ಲಿತ್ತೆಂದು ತಿಳಿದುಬರುತ್ತದೆ. ಸಾರಿಗೆಯಲ್ಲಿ ರೈಲು, ರಸ್ತೆ, ಜಲ, ವಿಮಾನ ಮಾರ್ಗಗಳು ಸೇರುತ್ತವೆ. ಈ ಲೇಖನದಲ್ಲಿ ಕರ್ನಾಟಕದಲ್ಲಿ ಇವುಗಳ ಆಂತರಿಕ ಸಾರಿಗೆ ಜಾಲವನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ರೈಲು ಸಾರಿಗೆ: ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಪ್ರಯತ್ನದಲ್ಲಿ ರೈಲು ಸಾರಿಗೆಗೆ ಉನ್ನತ ಸ್ಥಾನವಿದೆ. ಭಾರತದಲ್ಲಿ ರೈಲುಮಾರ್ಗದ ನಿರ್ಮಾಣ ಕಾರ್ಯ 1844ರಲ್ಲಿ ಪ್ರಾರಂಭವಾಯಿತು. ರಾಷ್ಟ್ರದ ಒಟ್ಟು ವಿಸ್ತೀರ್ಣದಲ್ಲಿ ಕರ್ನಾಟಕ ರಾಜ್ಯ ಸೇ. 5.9 ಭಾಗದಷ್ಟಿದ್ದರೂ ಇಲ್ಲಿರುವ ರೈಲು ಮಾರ್ಗಗಳ ಉದ್ದ ರಾಷ್ಟ್ರದಲ್ಲಿರುವ ರೈಲು ಮಾರ್ಗಗಳ ಸೇ. 5ರಷ್ಟು ಮಾತ್ರ. ಎಂದರೆ ಸುಮಾರು 3,041 ಕಿಮೀಗಳಷ್ಟು. ಇದರಲ್ಲಿ ಬ್ರಾಡ್‌ಗೇಜ್ ಮಾರ್ಗದ ಉದ್ದ 2,667 ಕಿಮೀ, ಮೀಟರ್‌ಗೇಜ್ ಮಾರ್ಗದ ಉದ್ದ 374 ಕಿಮೀ, ಉಳಿದದ್ದು ಮೀಟರ್ ಗೇಜ್ ಮಾರ್ಗ. ದಕ್ಷಿಣ ರೈಲ್ವೆಯ ಮೈಸೂರು ವಿಭಾಗ ರಾಜ್ಯದ ಬಹುಪಾಲು ರೈಲುಮಾರ್ಗಗಳನ್ನು ನೋಡಿಕೊಳ್ಳುತ್ತದೆ. ಉತ್ತರದಲ್ಲಿ ಹುಬ್ಬಳ್ಳಿಯ ವರೆಗೆ, ಪೂರ್ವಕ್ಕೆ ಬಂಗಾರಪೇಟೆಯ ವರೆಗೆ, ದಕ್ಷಿಣದಲ್ಲಿ ಸೇಲಂ ವರೆಗೆ ಮತ್ತು ಈಶಾನ್ಯದಲ್ಲಿ ಧರ್ಮಾವರಂ ವರೆಗೆ ಇರುವ ರೈಲು ಮಾರ್ಗಗಳೆಲ್ಲ ದಕ್ಷಿಣ ರೈಲ್ವೆಯ ಮೈಸೂರು ವಿಭಾಗಕ್ಕೆ ಸೇರಿವೆ. ಉತ್ತರ ಕರ್ನಾಟಕದ ರೈಲುಮಾರ್ಗಗಳು ಮಧ್ಯರೈಲ್ವೆಯ ಮೇಲ್ವಿಚಾರಣೆಗೆ ಒಳಪಟ್ಟಿವೆ.

**2001ರಲ್ಲಿ ಕರ್ನಾಟಕ ರಾಜ್ಯದ ಜಿಲ್ಲಾವಾರು ರೈಲುಮಾರ್ಗಗಳ ವಿವರ.**

| | ಜಿಲ್ಲೆಗಳು | ಬ್ರಾಡ್ ಗೇಜ್ ಕಿಮೀ | ಮೀಟರ್ ಗೇಜ್ ಕಿಮೀ | ಒಟ್ಟು ಕಿಮೀ | ರೈಲು ನಿಲ್ದಾಣಗಳ ಸಂಖ್ಯೆ |
|---|---|---|---|---|---|
| 1. | ಬೆಂಗಳೂರುನಗರಜಿಲ್ಲೆ | | | | |
| 2. | ಬೆಂಗಳೂರು ಗ್ರಾಮಾಂತರಜಿಲ್ಲೆ | 288 | – | 288 | 47 |
| 3. | ಚಿತ್ರದುರ್ಗ | 171 | – | 171 | 17 |
| 4. | ದಾವಣಗೆರೆ | 43 | – | 43 | 6 |
| 5. | ಕೋಲಾರ | 115 | – | 115 | 18 |
| 6. | ಶಿವಮೊಗ್ಗ | 29 | 97 | 126 | 13 |
| 7. | ತುಮಕೂರು | 97 | – | 97 | 17 |
| 8. | ಬೆಳಗಾಂವಿ | 220 | – | 220 | 23 |
| 9. | ಬಿಜಾಪುರ | 68 | 64 | 132 | 19 |
| 10. | ಬಾಗಲಕೋಟೆ | – | 76 | 76 | 11 |
| 11. | ಧಾರವಾಡ | 82 | – | 82 | 10 |
| 12. | ಗದಗ | 62 | 50 | 112 | 12 |
| 13. | ಹಾವೇರಿ | 79 | – | 79 | 9 |
| 14. | ಉತ್ತರಕನ್ನಡ | 179 | – | 179 | 15 |
| 15. | ಬಳ್ಳಾರಿ | 240 | 26 | 266 | 21 |
| 16. | ಬೀದರ್ | 79 | – | 79 | 5 |
| 17. | ಗುಲ್ಬರ್ಗ | 119 | – | 119 | 14 |
| 18. | ರಾಯಚೂರು | 51 | – | 51 | 6 |
| 19. | ಕೊಪ್ಪಳ | 55 | – | 55 | 7 |
| 20. | ಚಿಕ್ಕಮಗಳೂರು | 91 | – | 11 | |
| 21. | ದಕ್ಷಿಣಕನ್ನಡ | 155 | – | 155 | 19 |
| 22. | ಉಡುಪಿ | 101 | – | 101 | 8 |
| 23. | ಹಾಸನ | 201 | – | 201 | 15 |
| 24. | ಕೊಡಗು | – | – | – | – |
| 25. | ಮಂಡ್ಯ | 83 | – | 83 | 14 |

| | | | | | |
|---|---|---|---|---|---|
| 26. | ಮೈಸೂರು | 59 | 43 | 102 | 20 |
| 27. | ಚಾಮರಾಜನಗರ | – | 18 | 18 | 03 |
| | **ರಾಜ್ಯದ ಒಟ್ಟು ರೈಲುಮಾರ್ಗ** | **2,667** | **374** | **3,041** | **357** |

ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ರೈಲುಮಾರ್ಗದ ಸೌಲಭ್ಯ ಪಡೆದಿರುವ ಜಿಲ್ಲೆ ಬೆಂಗಳೂರು. ಈ ಜಿಲ್ಲೆಯಲ್ಲಿ ಪ್ರತಿ 1,000 ಚ.ಕಿಮೀ ವಿಸ್ತೀರ್ಣದಲ್ಲಿ 43.5 ಕಿಮೀ ಉದ್ದದ ರೈಲುಮಾರ್ಗವಿದೆ. ಎರಡನೆಯ ಸ್ಥಾನ ಪಡೆದಿರುವ ಕೋಲಾರ ಜಿಲ್ಲೆಯಲ್ಲಿ ಪ್ರತಿ 1,000 ಚ.ಕಿಮೀ ವಿಸ್ತೀರ್ಣದಲ್ಲಿ 29.3 ಕಿಮೀ ಉದ್ದದ ರೈಲುಮಾರ್ಗವಿದೆ. ಮೂರನೆಯ ಸ್ಥಾನದಲ್ಲಿರುವ ಧಾರವಾಡ ಜಿಲ್ಲೆಯಲ್ಲಿ ಪ್ರತಿ 1,000 ಚ.ಕಿಮೀ ವಿಸ್ತೀರ್ಣದಲ್ಲಿ 22.3 ಕಿಮೀ ಉದ್ದ ರೈಲುಮಾರ್ಗವಿದೆ. ಸದ್ಯಕ್ಕೆ ರೈಲು ಸಂಚಾರವೇ ಇಲ್ಲದ ಕೊಡಗು ಜಿಲ್ಲೆಯ ಬಹುಪಾಲು ಪ್ರದೇಶಕ್ಕೆ ಹಾಸನ–ಮಂಗಳೂರು ರೈಲು ಸಂಚಾರ ಆರಂಭವಾದ ಮೇಲೆ ರೈಲು ಸಾರಿಗೆ ಸೌಲಭ್ಯ ದೊರೆಯಲಿದೆ. ಕಡಲ ತೀರದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಅತ್ಯಂತ ಕಡಿಮೆ ರೈಲು ಸಾರಿಗೆ ಸೌಲಭ್ಯವನ್ನು ಪಡೆದಿರುವ ಜಿಲ್ಲೆಗಳಾಗಿದ್ದು ಇವೆಲ್ಲವೂ ಈಗ ಹೆಚ್ಚಿನ ಸೌಲಭ್ಯ ಪಡೆಯಲು ಪ್ರಯತ್ನಿಸುತ್ತಿವೆ.

ಕೈಗಾರಿಕಾ ಬೆಳೆವಣಿಗೆಯಲ್ಲಿ ರೈಲುಸಾರಿಗೆ ನಿರ್ವಹಿಸುವ ಪಾತ್ರ ಮಹತ್ತ್ವದ್ದು. ದೂರದ ಸ್ಥಳಗಳಿಗೆ ಬೃಹತ್ ಪ್ರಮಾಣದ ಸರಕು–ಸಾಮಗ್ರಿಗಳ ಸಾಗಾಣಿಕೆ ರೈಲುಮಾರ್ಗಗಳಿಲ್ಲದಿದ್ದರೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ರಾಜ್ಯದ ರೈಲು ಸಾರಿಗೆಯ ವಿಸ್ತರಣೆ ಅತ್ಯಗತ್ಯವಾಗಿದೆ. ಅಲ್ಲದೆ ಮಲೆನಾಡು ಕರಾವಳಿ ಮತ್ತು ಪೂರ್ವ ಹಾಗೂ ಉತ್ತರ ಜಿಲ್ಲೆಗಳ ಬಹುತೇಕ ಪ್ರದೇಶಗಳಿಗೆ ಸಾಕಷ್ಟು ರೈಲಿನ ಸೌಲಭ್ಯವಿಲ್ಲ. ಮಲೆನಾಡಿನ ಒಳಭಾಗಕ್ಕಂತೂ ಹೆಚ್ಚು ರೈಲಿನ ಸಂಪರ್ಕವೇ ಇಲ್ಲವಾಗಿದೆ. ಇಡೀ ಪ್ರಪಂಚದ ಗಮನ ಸೆಳೆದಿರುವಂಥ ಸಹಜವಾದ ಬಂದರನ್ನು ಹೊಂದಿರುವ ಕಾರವಾರ ಮತ್ತು ಪ್ರಮುಖ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಹುಬ್ಬಳ್ಳಿ ನಡುವಣ ರೈಲ್ವೆ ನಿರ್ಮಾಣ ಕೆಲವಾರು ವರ್ಷಗಳ ಹಿಂದೆಯೇ ಸರ್ಕಾರದ ಗಮನಕ್ಕೆ ಬಂದಿದ್ದರೂ ಇನ್ನೂ ಆರಂಭವಾಗಿಲ್ಲ. ಮುಂಬಯಿ–ಕೊಚ್ಚಿನ್‌ಗಳನ್ನು ಸೇರಿಸುವ ಕೊಂಕಣ ರೈಲ್ವೆ ನಿರ್ಮಾಣ ಪೂರ್ಣಗೊಂಡದ್ದು ವಾಣಿಜ್ಯ ಮತ್ತು ಕೈಗಾರಿಕಾಭಿವೃದ್ಧಿಯ ದೃಷ್ಟಿಯಿಂದ ಇದೊಂದು ಅತ್ಯುಪಯುಕ್ತ ರೈಲುಮಾರ್ಗವಾಗಿದೆ. ರಾಜ್ಯದ ಎಲ್ಲ ಪ್ರಮುಖ ನಗರಗಳೂ ಹಾಗೂ ದೊಡ್ಡ ಪಟ್ಟಣಗಳೂ ರೈಲುಮಾರ್ಗದ ಸಾಮೀಪ್ಯ ಪಡೆದಿವೆ. ಸೇ. 50ರಷ್ಟು ಪಟ್ಟಣಗಳು ರೈಲು ಮಾರ್ಗಗಳಿಂದ 15–20 ಕಿಮೀ ಅಂತರದಲ್ಲಿವೆ.

ಪಶ್ಚಿಮ ತೀರದ ಮಂಗಳೂರು ಮತ್ತು ಹಾಸನ ಜಿಲ್ಲೆಯ ಮಲೆನಾಡು ಪ್ರದೇಶಗಳಿಗೆ ಅನುಕೂಲವಾಗುವ ಹಾಸನ–ಮಂಗಳೂರು ರೈಲುಮಾರ್ಗದ ನಿರ್ಮಾಣಕಾರ್ಯ ಪೂರ್ಣಗೊಂಡಿದೆ. ಕುದುರೆಮುಖ ಕಬ್ಬಿಣ ಅದಿರು ಯೋಜನೆಯಿಂದ ಮಂಗಳೂರು ಬಂದರಿಗೆ ಕಬ್ಬಿಣದ ಅದಿರು ಸಾಗಿಸಲು ಈ ಮೀಟರ್‌ಗೇಜ್ ಮಾರ್ಗ ಬಹು ಸಹಕಾರಿ. ಈ ಮಾರ್ಗದ ಉದ್ದ 374 ಕಿಮೀ.

ರಸ್ತೆ ಸಾರಿಗೆ: ಒಳನಾಡಿನಲ್ಲಿ ಸಾಕಷ್ಟು ರೈಲುಮಾರ್ಗಗಳಿರದ ಮತ್ತು ಜಲಮಾರ್ಗಗಳಿಲ್ಲದಿರುವ ಕರ್ನಾಟಕದಂಥ ಮೈದಾನ ಪ್ರದೇಶದಲ್ಲಿ ರಸ್ತೆ ಸಾರಿಗೆಗೆ ಹೆಚ್ಚಿನ ಪ್ರಾಮುಖ್ಯತೆ ಸಲ್ಲುತ್ತದೆ. ರಾಜ್ಯದ ರಸ್ತೆ ಸಾರಿಗೆಯ ಅಭಿವೃದ್ಧಿಗೆ ಅಗತ್ಯ ಮನ್ನಣೆ ದೊರೆತುದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲೆನ್ನಬಹುದು. ಎರಡನೆಯ ಪಂಚವಾರ್ಷಿಕ ಯೋಜನೆಯಿಂದ ಪಂಚವಾರ್ಷಿಕ ಯೋಜನೆಯ ಅಂತ್ಯದ ವರೆಗೆ ರಸ್ತೆ ಸಾರಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಸು. 57.15 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಐದನೆಯ ಯೋಜನೆಯಲ್ಲಿ 32.76 ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಯಿತು. ರಾಜ್ಯದ ರಸ್ತೆ ಅಭಿವೃದ್ಧಿ ಕಾರ್ಯಗಳನ್ನು, ರಸ್ತೆಗಳ ನಿರ್ಮಾಣ ಹಾಗೂ ಸುಧಾರಣೆ, ಗ್ರಾಮಾಂತರ ಸಂಪರ್ಕ ರಸ್ತೆಗಳು, ಟಾರು ರಸ್ತೆಗಳು, ಸಿಮೆಂಟು ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ ಎಂದು ಐದು ವಿಧವಾಗಿ ವರ್ಗೀಕರಿಸಲಾಗಿದೆ. ಅಭಿವೃದ್ಧಿ ಕಾರ್ಯಗಳಿಗಾಗಿ ಮಾಡುವ ವೆಚ್ಚದಲ್ಲಿ ರಾಜ್ಯಸರ್ಕಾರದ ಹಣದ ಜೊತೆಗೆ ಕೇಂದ್ರ ಸರ್ಕಾರವೂ ಒಂದಷ್ಟು ಭಾಗವನ್ನು ನೀಡುತ್ತದೆ. ಕೇಂದ್ರದ ನೆರವು ದೊರೆಯುವ ಕಾರ್ಯಕ್ರಮಗಳೆಂದರೆ (1) ಪಶ್ಚಿಮ ಕರಾವಳಿ ರಸ್ತೆ ಅಭಿವೃದ್ಧಿ (2) ಪಶ್ಚಿಮ ಕರಾವಳಿ ಬಂದರುಗಳಿಗೆ ಕಬ್ಬಿಣದ ಅದುರನ್ನು ಸಾಗಿಸಲು ಅನುಕೂಲವಾಗುವ ರಸ್ತೆಗಳ ಅಭಿವೃದ್ಧಿ (3) ಅಂತಾರಾಜ್ಯ ಪ್ರಾಮುಖ್ಯತೆ ಪಡೆದಿರುವ ರಸ್ತೆಗಳ ಅಭಿವೃದ್ಧಿ ಮತ್ತು (4) ರಾಜ್ಯದ ಕಬ್ಬು ಬೆಳೆಯುವ ಪ್ರದೇಶದ ರಸ್ತೆಗಳ ಅಭಿವೃದ್ಧಿ.

ರಾಜ್ಯದ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ರಸ್ತೆಗಳು ಮತ್ತು ಗ್ರಾಮಾಂತರ ರಸ್ತೆಗಳೆಂದು ವರ್ಗೀಕರಿಸಲಾಗಿದೆ. ಈಗ ರಾಜ್ಯದಲ್ಲಿ ಒಟ್ಟು 1,47,093 ಕಿಮೀ ಉದ್ದ ರಸ್ತೆಗಳಿವೆ. ಇದರಲ್ಲಿ 92,232 ಕಿಮೀ ಪಕ್ಕಾರಸ್ತೆಗಳಿವೆ.

**ರಸ್ತೆ ಉದ್ದಳತೆ ಕಿಮೀ 31.3.1999**

| ಕ್ರಮ ಸಂಖ್ಯೆ | ಜಿಲ್ಲೆಯಹೆಸರು | ರಾಷ್ಟ್ರೀಯ ಹೆದ್ದಾರಿ | ರಾಜ್ಯ ಹೆದ್ದಾರಿ | ಮುಖ್ಯಜಿಲ್ಲಾ ರಸ್ತೆಗಳು | ಇತರಜಿಲ್ಲಾ ರಸ್ತೆಗಳು | ಹಳ್ಳಿ ರಸ್ತೆಗಳು |
|---|---|---|---|---|---|---|
| 1. | ಬೆಂಗಳೂರು | 153 | 194 | 381 | 6 | 978 |
| 2. | ಬೆಂಗಳೂರು(ಗ್ರಾ) | 276 | 374 | 1,045 | 48 | 1,417 |
| 3. | ಚಿತ್ರದುರ್ಗ | 164 | 485 | 888 | 26 | 1,439 |
| 4. | ದಾವಣಗೆರೆ | 85 | 263 | 992 | 86 | 1,172 |
| 5. | ಕೋಲಾರ | 129 | 433 | 1,598 | 54 | 2,371 |
| 6. | ಶಿವಮೊಗ್ಗ | 222 | 402 | 1,229 | 251 | 1,367 |
| 7. | ತುಮಕೂರು | 195 | 471 | 1,902 | 148 | 2,203 |
| 8. | ಬೆಳಗಾವಿ | 201 | 732 | 2,331 | 53 | 2,360 |
| 9. | ಬಿಜಾಪುರ | 127 | 476 | 1,202 | 10 | 1,349 |
| 10. | ಬಾಗಲಕೋಟೆ | 60 | 396 | 1,052 | 77 | 1,190 |
| 11. | ಧಾರವಾಡ | 143 | 163 | 599 | 2 | 2,788 |
| 12. | ಗದಗ | 46 | 203 | 663 | – | 2,462 |
| 13. | ಹಾವೇರಿ | 103 | 197 | 742 | 20 | 2,080 |
| 14. | ಉತ್ತರಕನ್ನಡ | 329 | 669 | 801 | 28 | 3,344 |
| 15. | ಬಳ್ಳಾರಿ | 181 | 300 | 1,135 | 108 | 1,750 |
| 16. | ಬೀದರ್ | 75 | 276 | 763 | 48 | 753 |
| 17. | ಗುಲ್ಬರ್ಗ | – | 797 | 1,510 | 63 | 2,805 |
| 18. | ರಾಯಚೂರು | – | 505 | 638 | 4 | 996 |
| 19. | ಕೊಪ್ಪಳ | 125 | 270 | 537 | 28 | 1,251 |
| 20. | ಚಿಕ್ಕಮಗಳೂರು | 124 | 315 | 1,251 | 213 | 1,335 |

| | | | | | | |
|---|---|---|---|---|---|---|
| 21. | ದಕ್ಷಿಣಕನ್ನಡ | 177 | 338 | 849 | – | 1,269 |
| 22. | ಉಡುಪಿ | 142 | 283 | 631 | 8 | 700 |
| 23. | ಹಾಸನ | 167 | 480 | 1,668 | 10 | 2,052 |
| 24. | ಕೊಡಗು | – | 311 | 804 | – | 1,167 |
| 25. | ಮಂಡ್ಯ | 73 | 244 | 1,340 | 120 | 4,549 |
| 26. | ಮೈಸೂರು | 79 | 338 | 1,038 | 209 | 2,074 |
| 27. | ಚಾಮರಾಜನಗರ | 160 | 106 | 658 | – | 927 |
| **ರಾಜ್ಯ** | | **3,536** | **10,021** | **28,247** | **1,620** | **48,148** |

**ರಸ್ತೆ ಉದ್ದಳತೆ ಕಿಮೀ 31.3.1999**

| ಕ್ರಮ ಸಂಖ್ಯೆ | ಜಿಲ್ಲೆಯಹೆಸರು | ಟಿ.ಡಿ.ಬಿ. ರಸ್ತೆಗಳು | ನೀರಾವರಿ ಇಲಾಖೆ ರಸ್ತೆಗಳು | ಅರಣ್ಯ ಇಲಾಖೆ ರಸ್ತೆಗಳು | ಮುನಿಸಿಪಾಲಿಟಿ ರಸ್ತೆಗಳು | ಪಂಚಾಯತ್ ರಸ್ತೆಗಳು |
|---|---|---|---|---|---|---|
| 1. | ಬೆಂಗಳೂರು | 940 | 10 | 18 | 1,535 | 409 |
| 2. | ಬೆಂಗಳೂರು(ಗ್ರಾ) | 1,473 | 140 | – | – | – |
| 3. | ಚಿತ್ರದುರ್ಗ | 1,297 | 218 | 14 | 498 | 195 |
| 4. | ದಾವಣಗೆರೆ | 761 | 1,225 | – | – | – |
| 5. | ಕೋಲಾರ | 1,535 | 72 | 24 | 356 | – |
| 6. | ಶಿವಮೊಗ್ಗ | 1,651 | 916 | 203 | 281 | 184 |
| 7. | ತುಮಕೂರು | 3,513 | 509 | 79 | 599 | – |
| 8. | ಬೆಳಗಾವಿ | 1,767 | 602 | 30 | 550 | 503 |
| 9. | ಬಿಜಾಪುರ | 650 | 222 | – | – | – |
| 10. | ಬಾಗಲಕೋಟೆ | 947 | 193 | – | 321 | 39 |
| 11. | ಧಾರವಾಡ | 265 | 189 | 32 | – | – |
| 12. | ಗದಗ | 889 | 118 | – | 746 | 20 |
| 13. | ಹಾವೇರಿ | 1,681 | 292 | 13 | – | – |
| 14. | ಉತ್ತರಕನ್ನಡ | 513 | 68 | 521 | 204 | 573 |
| 15. | ಬಳ್ಳಾರಿ | 754 | 424 | 15 | 415 | – |
| 16. | ಬೀದರ್ | 907 | 51 | 4 | 64 | – |
| 17. | ಗುಲ್ಬರ್ಗ | 1,454 | 930 | 5 | 57 | 2 |
| 18. | ರಾಯಚೂರು | 341 | 738 | – | – | – |
| 19. | ಕೊಪ್ಪಳ | 507 | 228 | – | 281 | – |
| 20. | ಚಿಕ್ಕಮಗಳೂರು | 2,521 | 196 | 232 | 113 | 935 |
| 21. | ದಕ್ಷಿಣಕನ್ನಡ | 368 | – | 93 | 752 | 1,414 |
| 22. | ಉಡುಪಿ | 268 | 5 | 150 | – | – |
| 23. | ಹಾಸನ | 2,022 | 399 | 47 | 417 | 179 |
| 24. | ಕೊಡಗು | 622 | 29 | 278 | 60 | – |
| 25. | ಮಂಡ್ಯ | 1,108 | 569 | – | 166 | 140 |
| 26. | ಮೈಸೂರು | 1,400 | 741 | 375 | – | – |
| 27. | ಚಾಮರಾಜನಗರ | 337 | 333 | 449 | 951 | 72 |
| | **ರಾಜ್ಯ** | **30,491** | **9,417** | **2,582** | **8,366** | **4,665** |

ರಸ್ತೆಗಳ ಉದ್ದಳತೆ (ಕಿಮೀ) 1999

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಒಟ್ಟು | ಪಕ್ಕಾ ರಸ್ತೆಗಳು | ಭಾರಿ ಸೇತುವೆಗಳು |
|---|---|---|---|---|
| 1. | ಬೆಂಗಳೂರು | 9,397 | 1,792 | 1 |
| 2. | ಬೆಂಗಳೂರು(ಗ್ರಾ) | – | 3,092 | 10 |
| 3. | ಚಿತ್ರದುರ್ಗ | 9,808 | 3,163 | 22 |
| 4. | ದಾವಣಗೆರೆ | – | 3,465 | 7 |
| 5. | ಕೋಲಾರ | 6,572 | 4,387 | 10 |
| 6. | ಶಿವಮೊಗ್ಗ | 6,706 | 4,062 | 17 |
| 7. | ತುಮಕೂರು | 9,619 | 5,842 | 20 |
| 8. | ಬೆಳಗಾವಿ | 9,129 | 6,402 | 38 |
| 9. | ಬಿಜಾಪುರ | 8,311 | 3,200 | 33 |
| 10. | ಬಾಗಲಕೋಟೆ | – | 2,963 | 26 |
| 11. | ಧಾರವಾಡ | 14,456 | 2,142 | 12 |
| 12. | ಗದಗ | – | 2,025 | 7 |
| 13. | ಹಾವೇರಿ | – | 3,237 | 8 |
| 14. | ಉತ್ತರಕನ್ನಡ | 7,050 | 4,271 | 16 |
| 15. | ಬಳ್ಳಾರಿ | 5,082 | 3,878 | 16 |
| 16. | ಬೀದರ್ | 2,941 | 1,830 | 19 |
| 17. | ಗುಲ್ಬರ್ಗ | 7,623 | 5,389 | 45 |
| 18. | ರಾಯಚೂರು | 6,449 | 2,594 | 27 |
| 19. | ಕೊಪ್ಪಳ | – | 1,794 | 19 |
| 20. | ಚಿಕ್ಕಮಗಳೂರು | 7,235 | 3,229 | 10 |
| 21. | ದಕ್ಷಿಣಕನ್ನಡ | 7,447 | 2,430 | 44 |
| 22. | ಉಡುಪಿ | – | 1,756 | 19 |
| 23. | ಹಾಸನ | 7,441 | 4,996 | 10 |
| 24. | ಕೊಡಗು | 3,271 | 2,179 | 11 |
| 25. | ಮಂಡ್ಯ | 8,309 | 5,787 | 14 |
| 26. | ಮೈಸೂರು | 10,247 | 4,471 | 17 |
| 27. | ಚಾಮರಾಜನಗರ | – | 1,856 | 9 |
| | **ರಾಜ್ಯ** | **1,47,093** | **92,232** | **487** |

ರೈಲು ಸಾರಿಗೆಯನ್ನು ಬಿಟ್ಟರೆ ರಸ್ತೆಸಾರಿಗೆ ಹೆಚ್ಚು ಅನುಕೂಲಕರವೆಂದು ಕಂಡುಬಂದಿರುವುದರಿಂದ ಮೋಟಾರು ವಾಹನಗಳ ಬಳಕೆ ಬಹಳವಾಗಿ ಹೆಚ್ಚಿದೆ. ರಾಜ್ಯದಲ್ಲಿರುವ ಒಟ್ಟು ವಾಹನಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿಯೇ ಸೇ. 43.5 ಭಾಗ ಇವೆ ಎಂದು ತಿಳಿದು ಬಂದಿದೆ.

ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಮಂಡಳಿ ರಾಷ್ಟ್ರೀಕೃತ ಪ್ರಯಾಣಿಕರ ರಸ್ತೆಸಾರಿಗೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ.

ಮಂಗಳೂರು, ಶಿವಮೊಗ್ಗ ಮತ್ತು ಕೋಲಾರ ವಿಭಾಗಗಳು ರಾಷ್ಟ್ರೀಕರಣಕ್ಕೆ ಒಳಪಟ್ಟವು. 1972ರಿಂದ 1977ರ ವರೆಗಿನ ಐದು ವರ್ಷಗಳಲ್ಲಿ ರಾಷ್ಟ್ರೀಕೃತ ರಸ್ತೆ ಸಾರಿಗೆಯ ಕ್ರೋಡೀಕರಣಕ್ಕೆ ಆದ್ಯತೆ ಕೊಡಲಾಯಿತು. 1976ರ ಜನವರಿ 30ನೆಯ ತಾರೀಖು ಎಲ್ಲಾ ಖಾಸಗಿ ಗುತ್ತಿಗೆ ಬಸ್ಸುಗಳನ್ನು ರಾಷ್ಟ್ರೀಕರಿಸಲಾಯಿತು.

**ಮೋಟಾರು ವಾಹನಗಳು (2001)**

| ಕ್ರಮ ಸಂಖ್ಯೆ | ಜಿಲ್ಲೆಯಹೆಸರು | ಮೋಟಾರು ಸೈಕಲ್ಲುಗಳು | ಕಾರುಗಳು | ಬಾಡಿಗೆ ಕಾರುಗಳು | ಆಟೋರಿಕ್ಷಾಗಳು |
|---|---|---|---|---|---|
| 1. | ಬೆಂಗಳೂರು | 10,49,281 | 2,01,869 | 6,023 | 60,329 |
| 2. | ಬೆಂಗಳೂರು(ಗ್ರಾ) | 42,852 | 5,473 | 523 | 2,070 |
| 3. | ಚಿತ್ರದುರ್ಗ | 34,525 | 2,122 | 183 | 2,572 |
| 4. | ದಾವಣಗೆರೆ | 76,287 | 4,280 | 264 | 3,569 |
| 5. | ಕೋಲಾರ | 75,775 | 4,633 | 175 | 3,624 |
| 6. | ಶಿವಮೊಗ್ಗ | 92,048 | 7,551 | 647 | 4,080 |
| 7. | ತುಮಕೂರು | 85,634 | 3,863 | 667 | 5,147 |
| 8. | ಬೆಳಗಾವಿ | 1,79,340 | 14,586 | 602 | 6,340 |
| 9. | ಬಿಜಾಪುರ | 39,332 | 1,507 | 269 | 1,416 |
| 10. | ಬಾಗಲಕೋಟೆ | 40,467 | 2,077 | 117 | 623 |
| 11. | ಧಾರವಾಡ | 97,393 | 10,509 | 411 | 8,396 |
| 12. | ಗದಗ | 23,190 | 1,548 | 166 | 667 |
| 13. | ಹಾವೇರಿ | 27,525 | 1,231 | 106 | 1,083 |
| 14. | ಉತ್ತರಕನ್ನಡ | 62,993 | 4,323 | 328 | 2,482 |
| 15. | ಬಳ್ಳಾರಿ | 76,461 | 4,224 | 201 | 2,017 |
| 16. | ಬೀದರ್ | 29,759 | 1,143 | 423 | 1,419 |
| 17. | ಗುಲ್ಬರ್ಗ | 63,615 | 3,157 | 238 | 4,654 |
| 18. | ರಾಯಚೂರು | 33,318 | 1,655 | 80 | 1,055 |
| 19. | ಕೊಪ್ಪಳ | 21,048 | 586 | 67 | 346 |
| 20. | ಚಿಕ್ಕಮಗಳೂರು | 35,202 | 5,762 | 461 | 2,353 |
| 21. | ದಕ್ಷಿಣಕನ್ನಡ | 97,968 | 25,553 | 3,947 | 13,325 |
| 22. | ಉಡುಪಿ | 45,267 | 8,395 | 1,132 | 4,778 |
| 23. | ಹಾಸನ | 48,651 | 4,488 | 450 | 4,000 |
| 24. | ಕೊಡಗು | 15,538 | 7,336 | 458 | 2,696 |
| 25. | ಮಂಡ್ಯ | 45,840 | 1,962 | 149 | 2,259 |
| 26. | ಮೈಸೂರು | 1,95,307 | 19,879 | 1,144 | 10,949 |
| 27. | ಚಾಮರಾಜನಗರ | 16,239 | 1,049 | 11 | 560 |
| | **ರಾಜ್ಯ** | **26,50,855** | **3,50,761** | **19,242** | **1,52,809** |

**ಮೋಟಾರು ವಾಹನಗಳು (2001)**

| ಕ್ರಮ ಸಂಖ್ಯೆ | ಜಿಲ್ಲೆಯಹೆಸರು | ಆಮ್ನಿ ಬಸ್‌ಗಳು | ಸರಕುಸಾಗಿಸುವ ವಾಹನಗಳು | ಇತರೆ | ಒಟ್ಟು |
|---|---|---|---|---|---|
| 1. | ಬೆಂಗಳೂರು | 11,936 | 40,087 | 41,331 | 14,10,856 |
| 2. | ಬೆಂಗಳೂರು(ಗ್ರಾ) | 325 | 3,538 | 8,007 | 62,788 |
| 3. | ಚಿತ್ರದುರ್ಗ | 69 | 1,074 | 8,294 | 48,839 |
| 4. | ದಾವಣಗೆರೆ | 176 | 1,430 | 21,724 | 1,07,730 |
| 5. | ಕೋಲಾರ | 532 | 3,743 | 11,591 | 1,00,073 |
| 6. | ಶಿವಮೊಗ್ಗ | 372 | 3,599 | 16,903 | 1,25,200 |
| 7. | ತುಮಕೂರು | 833 | 3,282 | 114,585 | 1,14,011 |
| 8. | ಬೆಳಗಾವಿ | 3,707 | 11,823 | 34,004 | 2,50,402 |
| 9. | ಬಿಜಾಪುರ | 1,342 | 2,299 | 11,113 | 57,278 |
| 10. | ಬಾಗಲಕೋಟೆ | 1,083 | 1,702 | 14,684 | 60,753 |
| 11. | ಧಾರವಾಡ | 1,359 | 7,122 | 20,192 | 1,45,382 |
| 12. | ಗದಗ | 282 | 949 | 9,487 | 36,289 |
| 13. | ಹಾವೇರಿ | 151 | 1,246 | 11,754 | 43,096 |
| 14. | ಉತ್ತರಕನ್ನಡ | 1,185 | 4,678 | 5,469 | 81,458 |
| 15. | ಬಳ್ಳಾರಿ | 576 | 3,315 | 14,061 | 1,00,855 |
| 16. | ಬೀದರ್ | 497 | 3,557 | 5,697 | 42,495 |
| 17. | ಗುಲ್ಬರ್ಗ | 802 | 3,944 | 15,156 | 91,566 |
| 18. | ರಾಯಚೂರು | 528 | 1,297 | 9,027 | 46,960 |
| 19. | ಕೊಪ್ಪಳ | 274 | 881 | 6,289 | 29,491 |
| 20. | ಚಿಕ್ಕಮಗಳೂರು | 950 | 2,375 | 13,636 | 60,739 |
| 21. | ದಕ್ಷಿಣಕನ್ನಡ | 2,331 | 10,087 | 10,430 | 1,63,641 |
| 22. | ಉಡುಪಿ | 919 | 4,792 | 2,536 | 67,819 |
| 23. | ಹಾಸನ | 388 | 3,224 | 13,567 | 74,768 |
| 24. | ಕೊಡಗು | 2,086 | 2,322 | 15,022 | 45,458 |
| 25. | ಮಂಡ್ಯ | 123 | 2,246 | 6,075 | 58,654 |
| 26. | ಮೈಸೂರು | 1,452 | 4,682 | 9,824 | 2,43,237 |
| 27. | ಚಾಮರಾಜನಗರ | 87 | 928 | 2,793 | 21,667 |
| | **ರಾಜ್ಯ** | **34,365** | **1,30,222** | **3,53,251** | **36,91,505** |

ಜಲಸಾರಿಗೆ: ಸು. 820 ಕಿಮೀ ಉದ್ದ ಕಡಲತೀರವನ್ನು ಪಡೆದಿರುವ ಕರ್ನಾಟಕ ರಾಜ್ಯದಲ್ಲಿ ಇಂದು ಒಟ್ಟು 19 ಬಂದರುಗಳಿವೆ. ಭಟ್ಕಳ, ಶಿರಾಳಿ, ಮುರುಡೇಶ್ವರ, ಮಂಕಿ, ಹೊನ್ನಾವರ, ಕುಮಟ, ತದಡಿ, ಗಂಗಾವಳಿ, ಅಂಕೋಲ, ಬೇಲೆಕೇರಿ, ಚಂಡಿಯೆ, ಬಿಣಗೆ, ಕಾರವಾರ ಮತ್ತು ಮಾಜಾಳಿ, ಮಂಗಳೂರು, ಮಲ್ಪೆ, ಹಂಗಾರಕಟ್ಟೆ, ಕುಂದಾಪುರ ಮತ್ತು ಬೈಂದೂರು ಬಂದರುಗಳು. ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿವೆ.

ಕರ್ನಾಟಕಕ್ಕೆ ಈ ಬಂದರುಗಳಿಂದಾಗುವ ಪ್ರಯೋಜನ ಅಪಾರ. ಇದನ್ನು ಗಮನಿಸಿ ಅವುಗಳ ಅಭಿವೃದ್ಧಿಗೆ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರಿಗೆಯ ದೃಷ್ಟಿಯಿಂದ ಅತ್ಯುಪಯುಕ್ತವೆಂದು ಕಂಡು ಬಂದಿರುವ ಮಂಗಳೂರು ಮತ್ತು ಕಾರವಾರ ಬಂದರುಗಳ ಅಭಿವೃದ್ಧಿಗೆ ವಿಶೇಷ ಗಮನ ಕೊಡಲಾಗುತ್ತಿದೆ.



ಸ್ಯಾಟಲೈಟ್ ಬಸ್ ನಿಲ್ದಾಣ, ಬೆಂಗಳೂರು

ಬಂದರುಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಅಧಿಕ ಹಣವನ್ನು ವೆಚ್ಚ ಮಾಡಲಾಗಿದೆ. 1957ರಲ್ಲಿ ಬಂದರುಗಳ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಗಾಗಿ ರಾಜ್ಯ ಸರ್ಕಾರ ಒಂದು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿತು. ಈ ಇಲಾಖೆಯ ಆಶ್ರಯದಲ್ಲಿ ಬಂದರುಗಳ ತಾಂತ್ರಿಕ ಹಾಗೂ ಆರ್ಥಿಕ ಉಪಯುಕ್ತತೆಯ ಸಮೀಕ್ಷೆಯನ್ನು ಕೈಗೊಂಡು ಎಲ್ಲ ಬಂದರುಗಳಲ್ಲೂ ಸರಕು ಕಟ್ಟೆಗಳು, ಬಂದರು ಕಾಪುಗಳು, ತೇಲುದೋಣಿಗಳು, ಮಾರ್ಗದರ್ಶಿಗಳು ಮೊದಲಾದ ಆಧುನಿಕ ರೀತಿಯ ಸೌಕರ್ಯಗಳನ್ನು ಒದಗಿಸಲಾಗಿದೆ. ಈ ನಡುವೆ ಮಂಗಳೂರು ಮತ್ತು ಕಾರವಾರ ಬಂದರುಗಳನ್ನು ಸರ್ವಋತು ಬಂದರುಗಳಾಗಿ ಮಾರ್ಪಡಿಸಲಾಗಿದ್ದು ಕಾರವಾರ ಬಂದರಿನ ಎರಡನೆಯ ಹಂತದ ಅಭಿವೃದ್ಧಿ ಕಾರ್ಯ ಈಗ ನಡೆಯುತ್ತಿದೆ.

1975ರಲ್ಲಿ ಉದ್ಘಾಟಿಸಲಾದ ಪಣಂಬೂರಿನಲ್ಲಿರುವ ಹೊಸ ಮಂಗಳೂರು ಬಂದರು ರಾಜ್ಯದ ಮುಖ್ಯ ಬಂದರು. ಇದು ಕೇಂದ್ರ ನಿಯೋಜಿತ ಬಂದರಾಗಿದ್ದು ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು ಸಾಗಣೆ, ಗೊಬ್ಬರದ ಕಾರ್ಖಾನೆಗೆ ಬೇಕಾಗುವ ಕಚ್ಚಾ ಮಾಲಿನ ಸರಬರಾಜು ಮತ್ತು ಎಣ್ಣೆ ಹಾಗೂ ಪೆಟ್ರೋಲಿಯಂ ಪದಾರ್ಥಗಳ ಸಾಗಣೆಗೆ ತಲಾ ಒಂದೊಂದು ಕಾರ್ಗೊ ಹಡಗುಗಳನ್ನು ಹೊಂದಿದೆ.

ಕುದುರೆಮುಖ ಯೋಜನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಹೊಸ ಮಂಗಳೂರು ಬಂದರನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗಿದೆ. ಕಾರ್ಯಕ್ರಮಗಳು ಜರುಗುತ್ತಿವೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಾಣಿಜ್ಯಾಭಿವೃದ್ಧಿಯಲ್ಲಿ ಹೊಸ ಮಂಗಳೂರು ಬಂದರಿನ ಸೇವೆ ಗಮನಾರ್ಹ. 1975–76ನೆಯ ಸಾಲಿನಲ್ಲಿ ಈ ಬಂದರಿನ ಮೂಲಕ ಸಾಗಿದ 3.39 ಲಕ್ಷ ಟನ್ನುಗಳಷ್ಟು ಪ್ರಮಾಣದ ವ್ಯಾಪಾರದಲ್ಲಿ ವಿದೇಶಿ ವ್ಯಾಪಾರದ ಪ್ರಮಾಣ ಸೇ. 97.6 ಆಗಿತ್ತು. ಇದೇ ಅವಧಿಯಲ್ಲಿ ರಾಜ್ಯದ ವಿವಿಧ ಬಂದರುಗಳ ಮೂಲಕ ಸಾಗಿದ 8.85 ಲಕ್ಷ ಟನ್ನುಗಳಷ್ಟು ಪ್ರಮಾಣ ಸರಕು ಸಾಗಾಣಿಕೆಯಲ್ಲಿ ಹೊಸ ಮಂಗಳೂರು ಬಂದರಿನ ಪಾಲು 3.39 ಲಕ್ಷ ಟನ್ನುಗಳಷ್ಟಾಗಿತ್ತೆಂದು ತಿಳಿದು ಬಂದಿದೆ. ಹೀಗೆ ಹೊಸ ಮಂಗಳೂರು ಬಂದರು ರಾಜ್ಯದ ಜಲಸಾರಿಗೆ ಅಭಿವೃದ್ಧಿಯ ಮೂಲವಾಗಿ ಅಭಿವೃದ್ಧಿಯಾಗುತ್ತಿದೆ.

ಕಾರವಾರ ಮತ್ತು ಮಂಗಳೂರಿನ ಹಳೆಯ ಬಂದರುಗಳು ಮಧ್ಯಮ ಪ್ರಮಾಣದ ಬಂದರುಗಳಾಗಿವೆ. ಮೇಲೆ ತಿಳಿಸಿದಂತೆ ಕಾರವಾರ ಬಂದರಿನ ಮೊದಲನೆಯ ಹಂತದ ಅಭಿವೃದ್ಧಿ ಪೂರ್ಣಗೊಂಡಿದ್ದು ಎರಡನೆಯ ಹಂತದ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳಲಿವೆ. 770 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಬಳ್ಳಾರಿ ಮತ್ತು ಹೊಸಪೇಟೆಯಿಂದ ಬರುವ ಕಬ್ಬಿಣದ ಅದಿರನ್ನು ಈ ಬಂದರಿನ ಮೂಲಕ ರಫ್ತು ಮಾಡಲಾಗುತ್ತದೆ.

ಮಂಗಳೂರಿನ ಹಳೆಯ ಮತ್ತು ಹೊಸ ಬಂದರುಗಳನ್ನು ಒಟ್ಟು ರಾಜ್ಯದ ಉಳಿದ ಬಂದರುಗಳ ಪೈಕಿ ಕರಾವಳಿ ಹಾಗೂ ವಿದೇಶಿ ವ್ಯಾಪಾರಗಳೆರಡೂ ಸಾಗುವ ಬಂದರುಗಳೆಂದರೆ ಕಾರವಾರ ಮತ್ತು ಕುಂದಾಪುರ ಬಂದರುಗಳು. 1973ರಿಂದ 1976ರ ವರೆಗೆ ಈ ಎರಡು ಬಂದರುಗಳ ಮೂಲಕ ಸಾಗಿದ ವ್ಯಾಪಾರದ ಪ್ರಮಾಣ 7.44 ಲಕ್ಷ ಟನ್ನುಗಳಷ್ಟಾಗಿದ್ದು, ಇದರಲ್ಲಿ ಕರಾವಳಿ ಮತ್ತು ವಿದೇಶಿ ವ್ಯಾಪಾರದ ಪಾಲು ಕ್ರಮವಾಗಿ 1.18 ಮತ್ತು 6.26 ಲಕ್ಷ ಟನ್ನುಗಳಷ್ಟಾಗಿತ್ತು.

ರಾಜ್ಯದಲ್ಲಿ ಬಂದರುಗಳ ಅಭಿವೃದ್ಧಿಯ ಜೊತೆಗೆ ಒಳನಾಡು ಜಲಸಾರಿಗೆಯ ಅಭಿವೃದ್ಧಿ ಕೈಗೊಳ್ಳಲಾಗಿದೆ. ಕೇಂದ್ರ ಯೋಜಿತ ಕಾರ್ಯಕ್ರಮಗಳ ಅಂಗವಾಗಿ ಗಂಗಾವತಿ ಮತ್ತು ರಾಯಚೂರು ನಡುವೆ ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ಒಂದು ಪ್ರಾಯೋಗಿಕ ಜಲಯಾನವನ್ನು ಆರಂಭಿಸಲಾಗಿದೆ. ಇಲ್ಲಿ ಸದ್ಯಕ್ಕೆ ಮೂರು ದೋಣಿಗಳು ಸರಕು ಸಾಗಾಣಿಕೆ ಕಾರ್ಯದಲ್ಲಿ ನಿರತವಾಗಿವೆ. ಬಿಜಾಪುರ ಜಿಲ್ಲೆಯ ಧನೂರಿನಲ್ಲಿಯೂ ಆಧುನಿಕ ದೋಣಿ ಸಾರಿಗೆ ಪ್ರಾರಂಭವಾಗಿದೆ. ಈಗ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 72 ಒಳನಾಡಿನ ಜಲಮಾರ್ಗಗಳನ್ನು ಸಂಚಾರ ಯೋಗ್ಯವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ವಿಮಾನ ಸಾರಿಗೆ: ವಿಮಾನ ಸಾರಿಗೆ ವೆಚ್ಚದ ಬಾಬಾದರೂ ಕಾಲ ಉಳಿತಾಯದ ದೃಷ್ಟಿಯಿಂದ ಮಹತ್ತ್ವ ಪಡೆದಿದೆ. ಈಗ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಅಂತರದೇಶೀಯ ವಿಮಾನ ನಿಲ್ದಾಣವಿದ್ದು ಇಲ್ಲಿಂದ ದೆಹಲಿ, ಕೋಲ್ಕತ, ಮುಂಬಯಿ, ಚೆನ್ನೈ, ಹೈದರಾಬಾದು, ಕೊಚ್ಚಿನ್ ಮತ್ತು ತಿರುವಾಂಕೂರು ಮೊದಲಾದ ಪ್ರಮುಖ ನಗರಗಳಿಗೆ ವಿಮಾನ ಸಂಚಾರ ಸಂಪರ್ಕವಿದೆ. ಹಾಗೆಯೇ ರಾಜ್ಯದ ಒಳಭಾಗದಲ್ಲೂ ಬೆಂಗಳೂರಿನಿಂದ ಬೆಳಗಾಂವಿ, ಮಂಗಳೂರು ಮತ್ತು ಮೈಸೂರು ನಗರಗಳಿಗೆ ವಿಮಾನ ಸಂಚಾರ ಸೌಕರ್ಯವನ್ನು ಕಲ್ಪಿಸಲಾಗಿದೆ. ಬೆಂಗಳೂರಿನ ದೇವನಹಳ್ಳಿಯ ಬಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕಾರ್ಯ ನಡೆದಿದೆ.

(ಕೆ.ಜಿ.)

**ಸಾಲಿ ರಾಮಚಂದ್ರರಾವ್:** 1888–1978. ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಕ ಮತ್ತು ಸಾಹಿತಿಗಳು. ಹುಟ್ಟಿದ್ದು ರಾಮದುರ್ಗದಲ್ಲಿ. ಇವರ ಮನೆತನದ ಹಿರಿಯರೆಲ್ಲ ಶಿರಸಂಗಿ ದೇಸಾಯಿಯವರಿಗೆ ವಿದ್ಯಾಗುರುಗಳಾಗಿದ್ದುದರಿಂದ ಇವರ ಮನೆತನಕ್ಕೆ ಸಾಲಿ ಮನೆತನ ಎಂದೆ ಹೆಸರಾಯಿತು. ರಾಮಚಂದ್ರರಾಯರು ಬೆಳೆದದ್ದು ಬಡತನದಲ್ಲಿ. ಚಿಕ್ಕಂದಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡ ಇವರು ಸ್ವಂತ ಪರಿಶ್ರಮದಿಂದ ಬೆಳಗಾಂವಿ, ಬಿಜಾಪುರಗಳಲ್ಲಿ ವ್ಯಾಸಂಗ ಮಾಡಿ, ಆಗಿನ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಅಂಚೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಿಂದ ಪ್ರಭಾವಿತರಾದ ಇವರು, ಬಾಲ ಗಂಗಾಧರ ತಿಲಕ್‌ರ ಬಂಧನವಾದಾಗ ಅಂಚೆ ಕಛೇರಿಯ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು. ಪುಣೆ ಮತ್ತು ಮುಂಬಯಿಗಳಲ್ಲಿ ತಮ್ಮ ಬದುಕಿನ ಹಲವು ವರ್ಷಗಳನ್ನು ಕಳೆದ ಇವರು 1923ರಲ್ಲಿ ಧಾರವಾಡಕ್ಕೆ ಬಂದು

ನೆಲಸಿದರು. ಅದೇ ತಾನೆ ಅಲ್ಲಿ ಆರಂಭವಾದ ಕರ್ನಾಟಕ ವಿದ್ಯಾ ಸಂಸ್ಥೆಯಲ್ಲಿ ಶಿಕ್ಷಕರಾದ ಇವರು, ಆ ಸಂಸ್ಥೆಯ ಬೆಳವಣಿಗೆಗಾಗಿ ಶ್ರಮಿಸಿ, 1946ರಲ್ಲಿ ಆ ಸಂಸ್ಥೆಯ ಕೆಲಸದಿಂದ ನಿವೃತ್ತರಾದರು.

ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳ ಜತೆಗೆ ಪಾಲಿ, ಮರಾಠಿ, ಹಿಂದಿ ಮತ್ತು ಗುಜರಾತಿ ಭಾಷೆಗಳಲ್ಲೂ ಪರಿಶ್ರಮವನ್ನು ಸಂಪಾದಿಸಿಕೊಂಡಿದ್ದ ರಾಮಚಂದ್ರರಾಯರು, ಆಲೂರ ವೆಂಕಟರಾವ್, ಮುದವೀಡು ಕೃಷ್ಣರಾವ್, ರೊದ್ದ ಶ್ರೀನಿವಾಸ ರಾವ್ ಮೊದಲಾದ ಹೆಸರಾಂತ ಕನ್ನಡ ಕಾರ್ಯಕರ್ತರ ಸ್ನೇಹ ಸಹವಾಸಗಳಿಂದ ಸ್ಫೂರ್ತಿಗೊಂಡು ಮಾಡಿರುವ ಸಾಹಿತ್ಯ ಸೇವೆ ಗಮನಾರ್ಹವಾದುದು.



ಕಥೆ ಕವನ ಸಂಗ್ರಹಗಳು. ಈ ಸಂಕಲನಗಳಲ್ಲಿರುವ ಕೊಡಗು, ಬೇಸಗೆ, ಬಿರುಗಾಳಿ, ಕಾರ್ಮೋಡ, ಇಂಚರ ಮುಂತಾದ ಕವನಗಳಲ್ಲಿ ಇವರ ಪ್ರಕೃತಿಪ್ರೇಮವನ್ನು, ದೇಶಭಕ್ತಿಯನ್ನು ಗುರುತಿಸಬಹುದು. ಅಭಿಸಾರಿಕೆ ಎಂಬುದು ಇವರು ರಚಿಸಿರುವ ಒಂದು ನೀಳ್ಗವನ; ಬೌದ್ಧ ಗುರು ಉಪಗುಪ್ತನನ್ನು ಕುರಿತ ಕಥೆಯೊಂದನ್ನು ಆಧರಿಸಿಕೊಂಡು, ರವೀಂದ್ರರ ಇದೇ ಹೆಸರಿನ ಕವನದಿಂದ ಸ್ಫೂರ್ತಿ ಹೊಂದಿ ಬರೆದದ್ದು. ಇವರ ಇನ್ನೊಂದು ನೀಳ್ಗವನ ತಿಲಾಂಜಲಿ ಒಂದು ಶೋಕಗೀತೆ; ಆಕಸ್ಮಿಕವಾಗಿ ಅಗಲಿದ ಪುತ್ರನನ್ನು ನೆನೆದು ಬರೆದದ್ದು. ಯದುಪತಿ (1961) ಇವರ ಒಂದು ಕಾದಂಬರಿ. ಬಡ ವಿದ್ಯಾರ್ಥಿಯೊಬ್ಬನ ಬಾಳಿನ ಕಥೆಯನ್ನು ಹೇಳುವ ಈ ಕಾದಂಬರಿ, ರಾಮಚಂದ್ರರಾಯರ ಸರಳ, ನೇರ ಗದ್ಯಶೈಲಿಗೆ ಸಾಕ್ಷಿಯಾಗಿದೆ. ಜಯ ಗುರುದೇವ ಎಂಬುದು ಇವರ ಇನ್ನೊಂದು ಕಾದಂಬರಿ. ಮಕ್ಕಳಿಗಾಗಿ ಸಿಪಾಯಪ್ಪ, ಐದು ಜನ ಪ್ರಾಣಿಗಳು ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸುಕನ್ಯ ಎಂಬುದು ಇವರು ಬರೆದಿರುವ ಒಂದು ನಾಟಕ. ಪಾಲಿ ಭಾಷೆಯಿಂದ ಬುದ್ಧನ ಕೆಲವು ಉಪದೇಶ ಕಥೆಗಳನ್ನು ಕನ್ನಡಿಸಿ ಬುದ್ಧ ಜಾತಕಗಳು (1948) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ವಿನೋಬಾರವರ ಸ್ಥಿತಪ್ರಜ್ಞ ದರ್ಶನವನ್ನು ಮತ್ತು ಕಾಕಾ ಕಾಲೇಲಕರರ ಜೀವನಲೀಲೆಯನ್ನು ಕನ್ನಡಕ್ಕೆ ತಂದಿದ್ದಾರೆ. ಸುದಾಮಚರಿತ್ರಂ, ಗದ್ಯರಾಮಾಯಣಂ– ಇವು ಸಂಸ್ಕೃತದಲ್ಲಿ ಇವರು ಬರೆದಿರುವ ಕೆಲವು ಕೃತಿಗಳು.

ಸಾಲಿ ರಾಮಚಂದ್ರರಾಯರ ಸಾಹಿತ್ಯ ಸೇವೆಯನ್ನು ಮನ್ನಿಸಿ ಇವರ ಎಂಬತ್ತು ಮತ್ತು ತೊಂಬತ್ತನೆಯ ಹುಟ್ಟುಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸಲಾಯಿತು. ರಾಜ್ಯ ಸಾಹಿತ್ಯ ಅಕಾಡೆಮಿ 1968ರಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತು. ಇವರು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ, ಧಾರವಾಡದಲ್ಲಿ ನಿಧನರಾದರು. (ಪಿ.ಎಂ.ಎಚ್.)

**ಸಾಲಿಗ್ರಾಮ:** ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಒಂದು ಗ್ರಾಮ; ಹೋಬಳಿ ಕೇಂದ್ರ. ಕಸಬೆಯ ವಾಯವ್ಯಕ್ಕೆ 26 ಕಿಮೀ ದೂರದಲ್ಲಿದೆ. ಜನಸಂಖ್ಯೆ 11,780.

ಇದು ವೈಷ್ಣವರ ಪವಿತ್ರ ಸ್ಥಳ. ರಾಮಾನುಜಾಚಾರ್ಯರು ಈ ಊರಿನಲ್ಲಿ ಕೆಲಕಾಲ ನೆಲಸಿದ್ದರೆಂದು ಪ್ರತೀತಿ. ಇವರ ಪಾದವೆನ್ನಲಾದ ಕಲ್ಲಿನ ಶಿಲ್ಪ ಇಲ್ಲಿಯ ದೇವಾಲಯದಲ್ಲಿದೆ. ಈ ಗ್ರಾಮದಲ್ಲಿ ಹೊಯ್ಸಳರ ಕಾಲದ ಕೆಲವು ದೇವಾಲಯಗಳಿವೆ. ಅವುಗಳಲ್ಲಿ ನರಸಿಂಹಸ್ವಾಮಿ ದೇವಾಲಯ ಮುಖ್ಯವಾದುದು. ಈ ದೇವಾಲಯದಲ್ಲಿ ಒಂದು ಶಾಸನವಿದೆ. ಈ ಗ್ರಾಮದಲ್ಲಿ ಅಂಚೆ ಕಚೇರಿ, ಆರೋಗ್ಯ ಕೇಂದ್ರ, ಜೂನಿಯರ್ ಕಾಲೇಜು ಇವೆ. ಇಲ್ಲಿ ಪ್ರತಿ ಶನಿವಾರ ಸಂತೆ ನಡೆಯುತ್ತದೆ. ಇಲ್ಲೊಂದು ಪುರಸಭೆ ಇದೆ.

ಗಂಗರ, ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಈ ಗ್ರಾಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಕಾವೇರಿ ನದಿಯಿಂದ ತೋಡಿರುವ ಸಾಲಿಗ್ರಾಮ ಕಾಲುವೆ ಈ ಗ್ರಾಮದ ಮೂಲಕ ಹಾದುಹೋಗುತ್ತದೆ. (ಎಚ್.ಪಿ.ಕೆ.)

**ಸಾಲು ಮರದ ತಿಮ್ಮಕ್ಕ:** ಹುಟ್ಟಿದ ಊರಿನಲ್ಲಿ ಸಾಲುಮರ ನೆಟ್ಟು ಬೆಳೆಸಿ, ಕನ್ನಡ ಜನಪದ ಸಂಸ್ಕೃತಿಯ ಪರಿಸರ ಪ್ರೀತಿಗೆ ಹೆಸರಾದ ವೃಕ್ಷಪ್ರೇಮಿ. ಸಾಲುಮರದ ತಿಮ್ಮಕ್ಕ ಹುಟ್ಟಿದ್ದು ಬೆಂಗಳೂರು ಜಿಲ್ಲೆ ಮಾಗಡಿ ತಾಲ್ಲೂಕು ಹುಲಿಕಲ್ಲು ಎಂಬ ಪುಟ್ಟ ಹಳ್ಳಿಯಲ್ಲಿ. ಕಿರಿಯ ವಯಸ್ಸಿನಲ್ಲಿ ಮದುವೆಯಾಯಿತು. ಗಂಡನ ಹೆಸರು ಚಿಕ್ಕಯ್ಯ. ಮಕ್ಕಳು ಬೇಕೆಂಬ ಬಯಕೆ ಬಯಕೆಯಾಗಿಯೇ ಉಳಿಯಿತು. ಮರ ನೆಡುವುದು ಪುಣ್ಯದ ಕೆಲಸವೆಂದು ದಂಪತಿಗಳು ಯೋಚಿಸಿದರು. ಆಗಲಾದರೂ ತಮಗೆ ಮಕ್ಕಳಾಗಬಹುದೆಂದು ಆಸೆಪಟ್ಟರು. ಹುಟ್ಟಿದ ಊರ ರಸ್ತೆಯ

ಎರಡೂ ಬದಿಗೆ ಹತ್ತಾರು ಮರಗಳನ್ನು ನೆಟ್ಟು ನೀರುಣಿಸಿ ಬೆಳೆಸತೊಡಗಿದರು. ಮರಗಳು ಬೆಳೆದಂತೆ ಮಕ್ಕಳಿಲ್ಲವೆಂಬ ಚಿಂತೆ ದೂರವಾಯಿತು; ಹೀಗೆ ಗಿಡಮರ ನೆಡುವ ಕಾಯಕ ಮುಂದುವರಿಯಿತು. ಅವುಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಯಿತು. ನಲವತ್ತು ವರ್ಷಗಳಲ್ಲಿ ತಿಮ್ಮಕ್ಕ ನೆಟ್ಟು ಬೆಳೆಸಿದ ಮರಗಳ ಸಂಖ್ಯೆ ಇನ್ನೂರ ಎಂಬತ್ತನ್ನು ಮುಟ್ಟಿತು. ಸಾಲುಮರಗಳು ಹುಲಿಕಲ್ಲಿನಿಂದ ಕುದೂರುವರೆಗೆ ವಿಸ್ತರಿಸಿದವು. ಇದೊಂದು ಏಕವ್ಯಕ್ತಿಯ ಅದ್ವಿತೀಯ ಸಾಧನೆ.

ಗ್ರಾಮೀಣ ಪರಿಸರದಲ್ಲಿ ತಿಮ್ಮಕ್ಕ ಈಗ ಒಬ್ಬ ಆದರ್ಶ ಮಹಿಳೆ. ಜನಪದರು ಇವರ ಕೆಲಸವನ್ನು ಕೊಂಡಾಡಿದ್ದಾರೆ. ಮಾಧ್ಯಮಗಳು ತಿಮ್ಮಕ್ಕನವರನ್ನೂ ಇವರ ಕೆಲಸವನ್ನೂ ಮೆಚ್ಚಿ ಹಾಡಿ ಹೊಗಳಿ ಪ್ರೋತ್ಸಾಹಿಸಿವೆ. ಎಲೆ ಮರೆಯ ಕಾಯೊಂದು ಸಾರ್ಥಕತೆಯ ಸಾಧನೆಗೈದುದಕ್ಕೆ ಫಲಶ್ರುತಿ ಎಂಬಂತೆ ಅನೇಕ ಗೌರವ, ಪ್ರಶಸ್ತಿಗಳಿಗೆ, ಸನ್ಮಾನಗಳಿಗೆ ಇವರು ಭಾಜನರಾಗಿದ್ದಾರೆ. ಸರ್ಕಾರ 'ಉತ್ತಮ ನಾಗರಿಕ' ಪ್ರಶಸ್ತಿ ನೀಡಿ ಗೌರವಿಸಿದೆ. ಒಂದು ಲಕ್ಷ ರೂಪಾಯಿ ಬಹುಮಾನ ನೀಡಿದೆ. ಸುಮಾರು ಎಪ್ಪತ್ತೈದು ವಯಸ್ಸಿನ ತಿಮ್ಮಕ್ಕನವರು ಈಗ ತಮಗೆ ದೊರೆತ ಪ್ರಶಸ್ತಿ ಗೌರವದ ಹಣದಲ್ಲಿ ತಮ್ಮ ಹುಟ್ಟೂರಲ್ಲಿ ಗಂಡನ ನೆನಪಿನಲ್ಲಿ ಒಂದು ಆಸ್ಪತ್ರೆಯನ್ನು ನಿರ್ಮಿಸುವ ಕಾರ್ಯ ಕೈಗೊಂಡಿದ್ದಾರೆ. ಈ ಕಾರ್ಯ ಪ್ರಗತಿಯಲ್ಲಿದೆ. *

**ಸಾಲೆತೊರೆ, ಬಿ.ಎ.:** 1900–63. ಕನ್ನಡನಾಡಿನ ಹೆಸರಾಂತ ಇತಿಹಾಸ ವಿದ್ವಾಂಸರು. ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ ಭಾರತದ ವಿವಿಧ ಪ್ರಾಂತಗಳಲ್ಲೂ ಮತ್ತು ಭಾರತ ಸರ್ಕಾರದ ಪ್ರಾಚೀನ ಐತಿಹಾಸಿಕ ದಾಖಲೆಗಳ

ಸಂಗ್ರಹಾಲಯದಲ್ಲೂ ಅಮೋಘವಾದ ಸೇವೆಸಲ್ಲಿಸಿದರು. ಭಾಸ್ಕರ ಆನಂದ ಸಾಲೆತೊರೆ ಎಂಬುದು ಇವರ ಪೂರ್ಣ ಹೆಸರು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸಾಲೆತೊರೆ ಗ್ರಾಮದಲ್ಲಿ 1900 ಅಕ್ಟೋಬರ್ 11ರಂದು ಜನಿಸಿದರು. ಫಾದರ್ ಹೆರಾಸರ ಆಶ್ರಯದಲ್ಲಿ ಶಿಕ್ಷಣ ಮುಗಿಸಿದ ಅನಂತರ ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ಜೀವನ ಎಂಬ ಪ್ರೌಢ ಪ್ರಬಂಧವನ್ನು ಲಂಡನ್ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ 1931ರಲ್ಲಿ ಪಿಎಚ್.ಡಿ. ಪದವಿ ಪಡೆದರು. ಇವರಿಗೆ ಕನ್ನಡವಲ್ಲದೆ ಸಂಸ್ಕೃತ, ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ವಿತ್ತು. 1936ರಲ್ಲಿ ಇವರು ಪುಣೆಯ ಸರ್ ಪರಶುರಾಮಭಾವು ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದರು. ಅನಂತರ ಅಲಹಾಬಾದ್ ವಿಶ್ವವಿದ್ಯಾಲಯದಲ್ಲೂ ಪ್ರಾಧ್ಯಾಪಕ ವೃತ್ತಿ ನಿರ್ವಹಿಸಿದರು. ಇವರ ವಿದ್ವತ್ತನ್ನು ಗಮನಿಸಿದ ಭಾರತ ಸರ್ಕಾರ ಇವರನ್ನು ಐತಿಹಾಸಿಕ ದಾಖಲೆಗಳ ಸಂಗ್ರಹಾಲಯದ ನಿರ್ದೇಶಕರನ್ನಾಗಿ ನೇಮಿಸಿತು. ಕಡೆಯವರೆಗೆ ಆ ಹುದ್ದೆಯನ್ನು ನಿರ್ವಹಿಸಿ ನಿವೃತ್ತಿಹೊಂದಿದರು. ಅನಂತರ ಇವರು ಕರ್ನಾಟಕ ವಿಶ್ವವಿದ್ಯಾಲಯದ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದ ಪ್ರಾಧ್ಯಾಪಕರಾಗಿಯೂ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿಯೂ ಕೆಲಸ ನಿರ್ವಹಿಸಿದರು.

ಇವರು ಪ್ರಥಮ ದರ್ಜೆಯ ಸಂಶೋಧಕರು, ಇತಿಹಾಸಜ್ಞರು. ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಅಂಡರ್ ವಿಜಯನಗರ ಎಂಪೈರ್, ಏನ್ಸಿಯಂಟ್ ಕರ್ನಾಟಕ, ಸಂಪುಟ 1–ಹಿಸ್ಟರಿ ಆಫ್ ದಿ ತುಳುವ, ಇಂಡಿಯಾಸ್ ಡಿಪ್ಲೊಮ್ಯಾಟಿಕ್ ರಿಲೇಷನ್ಸ್ ವಿತ್ ದಿ ವೆಸ್ಟ್, ಏನ್ಸಿಯಂಟ್ ಇಂಡಿಯನ್ ಪೊಲಿಟಿಕಲ್ ಥಾಟ್ ಅಂಡ್ ಇನ್‌ಸ್ಟಿಟ್ಯೂಷನ್ಸ್, ಮಿಡೀವಲ್ ಜೈನಿಸಮ್, ವೈಲ್ಡ್ ಟ್ರೈಬ್ಸ್ ಇನ್ ಇಂಡಿಯನ್ ಹಿಸ್ಟರಿ, ದಿ ಮರಾಠ ಡೊಮಿನಿಯನ್ ಇನ್ ಕರ್ನಾಟಕ ಮುಂತಾದ ಗ್ರಂಥಗಳು ಇಂಗ್ಲಿಷ್‌ನಲ್ಲಿವೆ. ವರ್ಟ ಡೆರ್ ಉಸ್ಟಿಷೆನ್ ಲೆ ಹ್ರೆನ್ ಫುರ್ ಡೈ ಲೂಸಂಗ್ ಎಂಬ ಗ್ರಂಥ ಜರ್ಮನ್ ಭಾಷೆಯಲ್ಲಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ ನಾಡಿನ ಚರಿತ್ರೆಯ ಒಂದನೆಯ ಸಂಪುಟವನ್ನು ಇಲ್ಲಿ ಹೆಸರಿಸಬಹುದಾಗಿದೆ. ಇವುಗಳ ಜೊತೆಗೆ ಇತಿಹಾಸ, ಕಲೆ, ಸಾಹಿತ್ಯ ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ.

ಸಾಲೆತೊರೆಯವರು ಹಂಪೆಯಲ್ಲಿ ವಿಜಯನಗರ ಸಾಮ್ರಾಜ್ಯದ 6ನೆಯ ಶತಮಾನದ ನೆನಪಿಗಾಗಿ ನಡೆದ ಮಹೋತ್ಸವದಲ್ಲಿ ಭಾಗವಹಿಸಿದ್ದರು (1936). 1957ರಲ್ಲಿ ಧಾರವಾಡದಲ್ಲಿ ನಡೆದ ಇತಿಹಾಸ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಇವರು 1963 ಡಿಸೆಂಬರ್ 18ರಂದು ನಿಧನಹೊಂದಿದರು. **(ಆರ್.ಟಿ.ಎಸ್.;ಬಿ.ಕೆ.ಜಿ.)**

**ಸಾಲೊಟಗಿ:** ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಒಂದು ಗ್ರಾಮ; ಇತಿಹಾಸಪ್ರಸಿದ್ಧ ಸ್ಥಳ. ಇಂಡಿಯಿಂದ ಆಗ್ನೇಯಕ್ಕೆ 8 ಕಿಮೀ ದೂರದಲ್ಲಿದೆ. ಜನಸಂಖ್ಯೆ 10,664.

ಈ ಗ್ರಾಮದಲ್ಲಿ ಪ್ರಾಚೀನ ಶಿವಯೋಗೀಶ್ವರ ದೇವಾಲಯವಿದೆ. ಬಿದರೆಯ ದೊರೆಗಳು ಇದನ್ನು ಕಟ್ಟಿಸಿ ಅನೇಕ ದತ್ತಿಗಳನ್ನು ಬಿಟ್ಟರೆಂದು ಸ್ಥಳೀಯ ಹೇಳಿಕೆ. ಇಲ್ಲಿ ಪ್ರತಿ ವರ್ಷ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ.

10–12ನೆಯ ಶತಮಾನಗಳ ಅವಧಿಯಲ್ಲಿ ಈ ಗ್ರಾಮ ಪಾವಿಟ್ಟಗೆ ಎಂಬ ಹೆಸರಿನ ಒಂದು ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಇಲ್ಲಿನ ವಿದ್ಯಾಶಾಲೆ ಅದರಿಂದೀಚೆಗೂ ಪ್ರವರ್ಧಮಾನಸ್ಥಿತಿಯಲ್ಲಿದ್ದು, ಗ್ರಾಮಶಾಲಾ ಪಾವಿಟ್ಟಗೆ ಎಂಬ ಹೆಸರು ತಳೆದಿರಬೇಕು; ಅದೇ ಕಾಲಕ್ರಮೇಣ ಸಾಲೊಟಗಿ ಎಂದಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಮೂಲತಃ ಸಾಲೊಟಗಿಯಲ್ಲಿದ್ದ ಒಂದು ಸ್ತಂಭದ ಮೇಲೆ ಕೆತ್ತಿರುವ 3 ಶಾಸನಗಳಿಂದ ಇಲ್ಲಿನ ವಿದ್ಯಾಶಾಲೆಯ ವಿವರಗಳು ದೊರಕುತ್ತವೆ. 945ರಲ್ಲಿ ಬರೆಯಲಾದ ಸಂಸ್ಕೃತ ಪದ್ಯರೂಪದಲ್ಲಿರುವ ಮೊದಲನೆಯ ಶಾಸನದಲ್ಲಿ ರಾಷ್ಟ್ರಕೂಟ 3ನೆಯ ಕೃಷ್ಣನ ಪ್ರಧಾನಮಂತ್ರಿಯೂ ಸಂಧಿವಿಗ್ರಹಿಯೂ ಸ್ವಯಂ ಪಂಡಿತನೂ ಆಗಿದ್ದ ನಾರಾಯಣನೆಂಬಾತ ಪಾವಿಟ್ಟಗೆ ಗ್ರಾಮದಲ್ಲಿ ಒಂದು ಶಾಲೆಯನ್ನು ಕಟ್ಟಿಸಿ, ಅಲ್ಲಿ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಿದ ಎಂದು ತಿಳಿಸುತ್ತದೆ. ಇದೇ ಶಾಸನದ ಪ್ರಕಾರ ಈ ಶಾಲೆಯಲ್ಲಿದ್ದ ವಿದ್ಯಾರ್ಥಿಗಳು ಹಲವಾರು ದೇಶಗಳಿಂದ ಬಂದವರು (ಅತ್ರ ವಿದ್ಯಾರ್ಥಿನಃ ಸಂತಿ ನಾನಾ ಜನಪದೋದ್ಭವಾಃ).

ಪಾವಿಟ್ಟಗೆಯ ಗ್ರಾಮಪತಿಯಾಗಿದ್ದ ಚಕ್ರಾಯುಧಭಟ್ಟ ಈ ವಿದ್ಯಾಶಾಲೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗಾಗಿ $27^1/_2$ ನಿವೇಶನಗಳನ್ನೂ ದೀಪಗಳ ಖರ್ಚಿಗಾಗಿ 12 ನಿವರ್ತನ ಭೂಮಿಯನ್ನೂ ವಿದ್ಯಾರ್ಥಿಗಳ ಭೋಜನ ವ್ಯವಸ್ಥೆಗಾಗಿ 500 ನಿವರ್ತನ ಭೂಮಿಯನ್ನೂ ಅಲ್ಲಿನ ಅಧ್ಯಾಪಕರೊಬ್ಬರಿಗೆ 50 ನಿವರ್ತನ ಭೂಮಿ ಮತ್ತು ಒಂದು ವಾಸಸ್ಥಾನವನ್ನೂ ಮಾನ್ಯವಾಗಿ ಬಿಟ್ಟುಕೊಟ್ಟಿದ್ದ. ಅಲ್ಲದೆ ಗ್ರಾಮಸ್ಥರು ವಿವಾಹದ ಸಮಯಗಳಲ್ಲಿ 5 ನಾಣ್ಯಗಳನ್ನೂ (ಸು–ದ್ರವ್ಯಾಣಿ ಪಂಚ ಪುಷ್ಪಾಣಿ), ಉಪನಯನದ ಸಂದರ್ಭಗಳಲ್ಲಿ ಅದರ ಅರ್ಧದಷ್ಟನ್ನೂ ಮತ್ತು ಚೂಡಾಕರ್ಮದ ಸಮಯದಲ್ಲಿ ಅದರ ಅರ್ಧದಷ್ಟನ್ನೂ ಶಾಲಾ ವಿದ್ಯಾರ್ಥಿ ಸಂಘಕ್ಕೆ ಕೊಡುತ್ತಿದ್ದರು. ಅಲ್ಲದೆ, ಬ್ರಾಹ್ಮಣ ಭೋಜನವೇರ್ಪಟ್ಟಾಗಲೆಲ್ಲ ಶಾಲೆಯ ಉಪಾಧ್ಯಾಯರುಗಳನ್ನೂ ವಿದ್ಯಾರ್ಥಿಗಳನ್ನೂ ಯಥಾಶಕ್ತಿ ಆಹ್ವಾನಿಸಬೇಕೆಂಬ ನಿರ್ಧಾರವೂ ಆಗಿತ್ತು.

ಸು.11ನೆಯ ಶತಮಾನದಲ್ಲಿ ರಚಿತವಾಗಿರಬಹುದಾದ ಒಂದು ಶಾಸನದ ಪ್ರಕಾರ ಸಾಲೊಟಗಿಯ ಶಾಲೆಯ ಕಟ್ಟಡ ಬಿದ್ದು ಹೋದಾಗ ಕುಂಚಿಗ ಎಂಬಾತ ಅದನ್ನು ಮತ್ತೆ ಕಟ್ಟಿಸಿದ. ಅಲ್ಲಿನ ಹಲವಾರು ಕಂಬಗಳನ್ನು ನಿಲ್ಲಿಸುವಾಗ, ಕುಂಚಿಗ ತಾನೇ ಒಂದೆರಡನ್ನು ಧರ್ಮವನ್ನೇ ಎತ್ತಿ ನಿಲ್ಲಿಸುತ್ತಿರುವಂತೆ, ನಿಲ್ಲಿಸಿದನಂತೆ; ಹಾಗೆ ನಿಲ್ಲಿಸಿದ ಸ್ತಂಭವೇ ಅವನ ಕೀರ್ತಿಸ್ತಂಭವಾದಂತಾಯಿತು ಎಂದು ತಿಳಿದುಬರುತ್ತದೆ.

ಸು. 11–12ನೆಯ ಶತಮಾನದಲ್ಲಿ ರಚಿತವಾದ ಇನ್ನೊಂದು ಶಾಸನ ಕನ್ನಡ ಗದ್ಯದಲ್ಲಿದ್ದು, ಮಹಾಮಂಡಲೇಶ್ವರ ಗೋವಣರಸ ಈ ಶಾಲೆಗೆ ಬಿಟ್ಟುಕೊಟ್ಟ ಭೂಮಿ–ದತ್ತಿಯ ಬಗ್ಗೆ ಪ್ರಸ್ತಾಪಿಸುತ್ತದೆ. **(ಎಸ್.ಜಿ.)**

**ಸಾಲ್ವಡಗಿ:** ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ತಾಳೀಕೋಟೆಯಿಂದ ಪೂರ್ವಕ್ಕೆ 11 ಕಿಮೀ ದೂರದಲ್ಲಿರುವ ಒಂದು ಸಣ್ಣಹಳ್ಳಿ. ಜನಸಂಖ್ಯೆ 3,133.

ಇಲ್ಲಿನ ಪ್ರಾಗೈತಿಹಾಸಿಕ ನೆಲೆಗಳು ಬಹು ಪ್ರಸಿದ್ಧವಾಗಿವೆ. ಈ ಹಳ್ಳಿಯ ಪೂರ್ವದಿಕ್ಕಿಗೆ ಸು. $2^1/_2$ ಕಿಮೀ ದೂರದಲ್ಲಿ ಮಧ್ಯ ಹಳೆಯ ಶಿಲಾಯುಗದ ಹಾಗೂ ಅಂತ್ಯ ಹಳೆಯ ಶಿಲಾಯುಗದ್ದು ಎನ್ನಬಹುದಾದ ಸಂಸ್ಕೃತಿಗಳ ಕಲ್ಲಿನ ಚಕ್ಕೆ ಆಯುಧಗಳು, ಅವುಗಳ ತಯಾರಿಕೆಗೆ ಉಪಯೋಗಿಸುವ ಕಲ್ಲಿನ ಗಟ್ಟಿಗಳು ಮತ್ತು ಅವುಗಳನ್ನು ಮಾಡುತ್ತಿದ್ದಾಗ ಬಿದ್ದ ಪುಡಿಚಕ್ಕೆಗಳು ಹೇರಳವಾಗಿ ಬಿದ್ದಿವೆ. ಇವುಗಳನ್ನೆಲ್ಲ ಪರಿಶೀಲಿಸಿದರೆ, ಆ ಸ್ಥಳ ಅಂಥ ಕಲ್ಲಿನ ಉಪಕರಣಗಳನ್ನು ಮಾಡುತ್ತಿದ್ದ ಕಾರ್ಯಾಗಾರವೆನ್ನಬಹುದು. ಮಧ್ಯ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಉಪಕರಣಗಳಲ್ಲಿ ಹೆರೆಯಲು ಉಪಯೋಗವಾಗುವಂಥ ವಿವಿಧಾಕಾರಗಳ ಚಕ್ಕೆಗಳು, ತೂತು ಮಾಡುವಂಥ ಮೊನೆಗಳು ಇವೆ. ಅತ್ಯಂತ ಹಳೆಯ ಶಿಲಾಯುಗದ ಉಪಕರಣಗಳಲ್ಲಿ ಹೆಚ್ಚಿನವು ನೀಳವಾದ ಎರಡು ಬದಿಗಳಲ್ಲಿನ ಹರಿತವಾದ ಬಾಯಿಯುಳ್ಳ ಚಕ್ಕೆಗಳು. ಇವುಗಳೆಲ್ಲ ಚರ್ಟ್ ಹಾಗೂ ಜಾಸ್ಪೆರ್ ಕಲ್ಲುಗಳಲ್ಲಿ ಮಾಡಿದವುಗಳು.

ಮತ್ತೊಂದು ಪ್ರಾಚೀನ ನಿವೇಶನ ಈ ಹಳ್ಳಿಯ ಆಗ್ನೇಯ ದಿಕ್ಕಿಗೆ ಕೆಲವೇ ಮೀಟರುಗಳ ದೂರದಲ್ಲಿದೆ. ಇದು ಶಿಲಾ–ತಾಮ್ರಯುಗದ ಹಂತದಲ್ಲಿರುವ ಒಂದು ನೂತನ ಶಿಲಾಯುಗ ಸಂಸ್ಕೃತಿ ಜನರ ನೆಲೆ. ಹರಪ್ಪ ಸಂಸ್ಕೃತಿಯ ನೀಳವಾದ ಉದ್ದ ಚಕ್ಕೆಗಳನ್ನು ಹೋಲುವಂಥ ಕಲ್ಲಿನ ಚಕ್ಕೆಗಳು, ಪಟ್ಟಿಕಟ್ಟೆಯ ಗಟ್ಟಿಗಳು, ಉಜ್ಜಿ ನಯಮಾಡಿದ ಮೈಯುಳ್ಳ ಕಲ್ಲಿನ ಕೊಡಲಿಗಳು, ಬೂದು ಹಾಗೂ ನಸುಗೆಂಪು ಬಣ್ಣಗಳ ವಿಧವಿಧವಾದ ಹರವಿ, ಕೊಡ, ಬಟ್ಟಲು, ತಟ್ಟೆ ಮುಚ್ಚಳ ಮುಂತಾದ ಮಣ್ಣಿನ ಪಾತ್ರೆಗಳ ಅವಶೇಷಗಳು, ಸುಣ್ಣ ಹಿಡಿದ ಪ್ರಾಣಿಗಳ ಎಲುಬುಗಳು ಇವೇ ಮೊದಲಾದ ಅವಶೇಷಗಳು ವಿಪುಲವಾಗಿವೆ. (ಎ.ಎಸ್.)

**ಸಾವನದುರ್ಗ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಕಸಬೆಯಿಂದ ಆಗ್ನೇಯಕ್ಕೆ 11 ಕಿಮೀ ದೂರದಲ್ಲಿರುವ ಇತಿಹಾಸ ಪ್ರಸಿದ್ಧ ಸ್ಥಳ ಹಾಗೂ ಬೆಟ್ಟ. ಈ ಬೆಟ್ಟಕ್ಕೆ ಮಾಗಡಿಬೆಟ್ಟವೆಂದೂ ಕೃಷ್ಣರಾಜಗಿರಿ ಎಂದೂ ಹೆಸರುಗಳಿವೆ. ಹೊಯ್ಸಳರ ಕಾಲದಲ್ಲಿ ಇದೊಂದು ಪ್ರಸಿದ್ಧ ಸ್ಥಳವಾಗಿದ್ದು ಆಗ ಇದನ್ನು ಸಾಮಂತನದುರ್ಗವೆಂದು ಕರೆಯುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. 1150ರ ವೇಳೆಗೆ ಸಾವನದುರ್ಗಕ್ಕೆ ಪಶ್ಚಿಮದಲ್ಲಿ ಒಂದು ನಗರವಿದ್ದುದರ ಬಗೆಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಅಚ್ಯುತದೇವರಾಯನ ಕಾಲದಲ್ಲಿ (1543) ಸಾಮಂತರಾಯನೆಂಬ ಸಾಮಂತ ಮಾಗಡಿ ಪ್ರಾಂತ್ಯವನ್ನು ಆಳುತ್ತಿದ್ದು ಅವನ ಹೆಸರಿನಲ್ಲಿ ಈ ದುರ್ಗಕ್ಕೆ ಸಾಮಂತರಾಯನ ದುರ್ಗವೆಂಬ ಹೆಸರು ಬಂದಂತೆ ತಿಳಿಯುತ್ತದೆ. ಬೆಟ್ಟದ ತಪ್ಪಲಿನಲ್ಲಿ ವೀರಭದ್ರ ಮತ್ತು ನರಸಿಂಹಸ್ವಾಮಿ ದೇವಾಲಯಗಳಿವೆ. ವೀರಭದ್ರ ದೇವಾಲಯ ದ್ರಾವಿಡ ಸಂಪ್ರದಾಯಕ್ಕೆ ಸೇರಿದ ವಿಶಾಲವಾದ ಕಟ್ಟಡವಾಗಿದ್ದು ಪೂರ್ವಾಭಿಮುಖವಾಗಿದೆ. ನರಸಿಂಹಸ್ವಾಮಿ ದೇವಾಲಯ ಪ್ರಾಚೀನವಾದುದು. ಇದರಲ್ಲಿರುವ ವಿಗ್ರಹವನ್ನು ಒಂದು ಬಂಡೆಗಲ್ಲಿನಲ್ಲಿ ಕೆತ್ತಲಾಗಿದ್ದು ಅತ್ಯಂತ ಸುಂದರವಾಗಿದೆ. ಸಾವನದುರ್ಗದ ಬಳಿ ಬೃಹತ್ ಶಿಲಾಸಂಸ್ಕೃತಿಯ ಸಮಾಧಿಗಳು ಇವೆ. (ಎಸ್.ಕೆ.ಒ.)

**ಸಾವಿತ್ರಮ್ಮ, ಎಚ್.ವಿ.:** 1913–1996. ಕನ್ನಡ ನವೋದಯ, ಪ್ರಗತಿಶೀಲ ಚಳವಳಿಗಳ ಸಂದರ್ಭದಲ್ಲಿ ಬರೆಯಲಾರಂಭಿಸಿದ ಹಿರಿಯ ಲೇಖಕಿ. ಇವರ ತಂದೆ ಎಂ.ರಾಮರಾವ್, ತಾಯಿ ಎಂ.ಆರ್.ಮೀನಾಕ್ಷಮ್ಮ. ಇವರ ತಾತ ಎಚ್.ವಿ.ನಂಜುಂಡಯ್ಯನವರು; ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷರೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳೂ ಆಗಿದ್ದವರು. 1931ರಲ್ಲಿ ಸಾವಿತ್ರಮ್ಮ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿಯನ್ನು ಮೂರು ಚಿನ್ನದ ಪದಕಗಳು ಹಾಗೂ ಎರಡು ಬಹುಮಾನಗಳೊಂದಿಗೆ ಪಡೆದರು. ಇಂಗ್ಲಿಷ್, ಹಿಂದಿ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಇಂಗ್ಲಿಷ್ ಅಭಿಜಾತ ಕೃತಿಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಇವರಿಗೆ ಕನ್ನಡದಲ್ಲಿ ಆಸಕ್ತಿ ಮೂಡಿದ್ದು ಕಾಲೇಜಿನ ದಿನಗಳಲ್ಲಿ, ಗುರುಗಳಾಗಿದ್ದ ತೀ.ನಂ.ಶ್ರೀ. ಅವರ ಪ್ರಭಾವದಿಂದ. ಬಿಡುವಿನ ವೇಳೆಯ ಬೇಸರ ಕಳೆಯುವುದಕ್ಕಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿದ ಇವರು ಆ ದಿನಗಳಲ್ಲಿ ಪ್ರಕಟವಾಗುತ್ತಿದ್ದ ಕಥೆಗಾರ, ಕಥಾಂಜಲಿ ಮೊದಲಾದ ಪತ್ರಿಕೆಗಳಿಗೆ ಬರೆದ ಸಣ್ಣಕಥೆಗಳು ಕಥಾಸ್ಪರ್ಧೆಯಲ್ಲಿ ಬಹುಮಾನ ಗಳಿಸಿದವು. ಇದರಿಂದ ಇವರ ಸಾಹಿತ್ಯ ರಚನೆಗೆ ಒಂದು ಉತ್ತಮ ಉತ್ತೇಜನ ಒದಗಿದಂತಾಯಿತು. ಇವರು ಹಲವಾರು ಕತೆ, ಕಾದಂಬರಿಗಳನ್ನು ಬರೆದಿರುವುದಲ್ಲದೆ ಮಕ್ಕಳಿಗಾಗಿಯೂ ಕೃತಿಗಳನ್ನು ರಚಿಸಿದ್ದಾರೆ. ಅನುವಾದ ಸಾಹಿತ್ಯದಲ್ಲಿಯೂ ಗಣನೀಯ ಕೃಷಿ ಮಾಡಿದ್ದಾರೆ.

ಇವರ ಮೊದಲ ಕಥಾಸಂಕಲನ ನಿರಾಶ್ರಿತೆ (1949). ಮರುಮದುವೆ (1954), ಸರಿದ ಬೆರಳು, ಲಕ್ಷ್ಮೀ ಮತ್ತು ಪ್ರತೀಕ್ಷೆ (1980) ಮೊದಲಾದವು ಇವರ ಇತರ ಕಥಾಸಂಕಲನಗಳು. ರಾಮಾಯಣವನ್ನು ಆಧರಿಸಿ ಬರೆದ ಸೀತೆ–ರಾಮ–ರಾವಣ (1980), ವಿಮುಕ್ತೆ (1990) – ಇವು ಇವರ ಕಾದಂಬರಿಗಳು. ಈ ಕಾದಂಬರಿಗಳು ಸ್ತ್ರೀವಾದಿ ನೆಲೆಯಿಂದ ಹೊಸ ಅರ್ಥಕಲ್ಪನೆಯನ್ನು ನೀಡುವ ಪ್ರಯತ್ನಗಳಾಗಿ ಮೂಡಿಬಂದಿವೆ.

ಎಚ್.ವಿ.ನಂಜುಂಡಯ್ಯ ಜೀವನ ಮತ್ತು ಕಾರ್ಯ ಎಂಬ ಜೀವನ ಚರಿತ್ರೆಯನ್ನೂ ಅಜ್ಜಿಯ ಕಥೆ ಎಂಬ ಶೀರ್ಷಿಕೆಯಲ್ಲಿ ಮಕ್ಕಳಿಗಾಗಿ ಎರಡು ಭಾಗಗಳಲ್ಲಿ ಕಥೆಗಳನ್ನೂ ಪ್ರಕಟಿಸಿದ್ದಾರೆ.

ಸ್ವಾತಂತ್ರ್ಯೋತ್ತರ ಭಾರತದ ಪರಿಸ್ಥಿತಿಗಳು, ಸ್ವಾತಂತ್ರ್ಯಸಂಗ್ರಾಮ ನಿರ್ಮಿಸಿದ ವಾತಾವರಣ, ನವಸಾಕ್ಷರತೆ, ಹೊಸ ಸರ್ಕಾರಗಳ ಸಾಮಾಜಿಕ ಪ್ರಭಾವ ಇವರ ಕಥೆಗಳ ಪ್ರಮುಖ ಕಾಳಜಿ. ಇವರ ಕಥೆಗಳ ವಸ್ತು ವೈವಿಧ್ಯಪೂರ್ಣ ಹಾಗೂ ವಿಭಿನ್ನನೆಲೆಯವು : ವಿವಾಹದ ಚೌಕಟ್ಟಿನಲ್ಲಿ ಉಸಿರುಗಟ್ಟಿ ಬದುಕಿನ ನಿರ್ವಹಣೆಯಲ್ಲಿ ಒದ್ದಾಡಿ ಸೋಲುವ, ವಿವಾಹದ ಪರಿಧಿಯಿಂದಾಚೆ ನಿಂತರೂ ಪ್ರೇಮದ ಸೆಲೆಯನ್ನು ಬತ್ತಿಸಿಕೊಳ್ಳದ, ವೃದ್ಧಾಪ್ಯದ ಅಸಹಾಯಕತೆಯಲ್ಲಿ ತೊಳಲಾಡುವ, ವೈಧವ್ಯದ ಪಟ್ಟ ಕಟ್ಟಿಕೊಂಡ, ಸಮಾಜದಲ್ಲಿ ಒಂದು ಬಗೆಯ ಅಧೀರತೆಗೊಳಗಾಗಿರುವ ಹೆಣ್ಣುಮಕ್ಕಳ ಬದುಕಿನ ಚಿತ್ರಣಗಳಿವೆ.

ರವೀಂದ್ರನಾಥ ಠಾಕೂರರ ಗೋರಾ, ಘರೇಬಾಹಿರೇ, ನೌಕಾಡೂಬೀ, ಚಿನ್ನದ ದೋಣಿ; ಭವಾನಿಭಟ್ಟಾಚಾರ್ಯರ ಹಸಿವೋಹಸಿವು; ಎಫ್.ಡಬ್ಲ್ಯು.ಬೀನ್ ಅವರ ಸ್ಮರಭಸ್ಮ, ಶಶಿಕಲಾನೀಲನೇತ್ರೆ, ಮಹಾದೇವ ಜಟಾಜೂಟದಲ್ಲಿ; ಲೂಯಿಸ್ ಫಿಷರನ ಮಹಾತ್ಮಾಗಾಂಧಿ: ಜಗತ್ತಿಗೆ ಅವರ ಸಂದೇಶ – ಇವೇ ಮೊದಲಾದವು ಇವರ ಅನುವಾದ ಕೃತಿಗಳು. ಚರಿತ್ರೆ ಮತ್ತು ಸಂಶೋಧನೆ ಇವರ ಆಸಕ್ತಿಯ ಮತ್ತೆರಡು ಕ್ಷೇತ್ರಗಳು. ಈ ಕಾರಣದಿಂದಲೇ ಸ್ಟೇನ್ ಲ್ವೇ ಲೇನ್‌ಪೂಲ್ ಅವರ ಮಿಡೀವಲ್ ಇಂಡಿಯ ಕೃತಿಯನ್ನು ಮಧ್ಯಯುಗ ಭಾರತದ ಚರಿತ್ರೆ ಎಂದು ಅನುವಾದಿಸಿದ್ದಾರೆ. ರಷ್ಯದ ಮಹಾನ್ ಲೇಖಕ ಚೆಕಾವ್ ಇವರ ಅತ್ಯಂತ ಮೆಚ್ಚುಗೆಯ ಲೇಖಕ. ಇವನ 13 ಸಣ್ಣಕಥೆಗಳನ್ನು ಮದುವಣಗಿತ್ತಿ ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ; ಮೂರು ಕಿರುಕಾದಂಬರಿಗಳನ್ನೂ ಅನುವಾದಿಸಿದ್ದಾರೆ. ಇವರ ಅನುವಾದ ಸಾಹಿತ್ಯದ ಹಿನ್ನೆಲೆಯಲ್ಲಿಯೂ ಇವರು ಕನ್ನಡಿಗರಿಗೆ ಹೇಳಬೇಕೆಂದಿರುವ ಸಂದೇಶ ಹಾಗೂ ವೈಚಾರಿಕ ಚಿಂತನೆಗಳು ಸ್ಪಷ್ಟವಾಗಿ ನಿರೂಪಣೆಗೊಂಡಿವೆ.

ಇವರ ಅನ್ಯಶಾಸ್ತ್ರೀಯ ಶಿಸ್ತುಗಳ ಬಗೆಗಿನ ತೀವ್ರ ಆಸಕ್ತಿ, ಹೆಣ್ಣಿನ ಬದುಕಿನ ವೈಶಾಲ್ಯತೆಗೆ ದೇಶದ ಸಾಂಸ್ಕೃತಿಕ ಹಾಗೂ ರಾಜಕೀಯ ಚರಿತ್ರೆಗಳ ಅವಶ್ಯಕತೆಯ ಅನಿವಾರ್ಯವನ್ನು ಒತ್ತಿ ಹೇಳುವ ಇವರ ವೈಚಾರಿಕ ನಿಲುವು ವೈಶಿಷ್ಟ್ಯಪೂರ್ಣವಾಗಿವೆ. ಪಾರಂಪರಿಕ ಹುಸಿಮೌಲ್ಯಗಳನ್ನು ಯಾವುದೇ ಮುಲಾಜಿಲ್ಲದೆ ಬಯಲು ಮಾಡುವ ಸಾಹಸ, ಮಹಿಳಾಪರ ಧೋರಣೆಗಳು, ಸಮಕಾಲೀನ ಲೇಖಕಿಯರಿಗಿಂತ ಮುಂದುವರೆದ ಆಲೋಚ

ನೆಯ ವೈಚಾರಿಕತೆ ಇಂತಹ ನಿತ್ಯನೂತನವಾದ ಜೀವನಮೌಲ್ಯಗಳು ಇವರ ಕೃತಿಗಳ ವಿಶಿಷ್ಟತೆಗೆ ಕಾರಣಗಳಾಗಿವೆ.

ಇವರ ಸಾಹಿತ್ಯ ಸೇವೆಗೆ ಸಂದಿರುವ ಮುಖ್ಯ ಪ್ರಶಸ್ತಿಗಳಿವು: ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ (1965), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1975), ದೇಜಗೌ ಪ್ರತಿಷ್ಠಾನದ ದತ್ತಿನಿಧಿ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದ ಮೊದಲ ಅನುಪಮಾ ಪ್ರಶಸ್ತಿ. ಇವರು 1996 ಡಿಸೆಂಬರ್ 27ರಂದು ನಿಧನಹೊಂದಿದರು. (ಕೆ.ಆರ್.ಎಸ್.ಆರ್.)

**ಸಾಳುವರು, ಗೇರುಸೊಪ್ಪೆಯ:** 13ನೆಯ ಶತಮಾನದಿಂದ 16ನೆಯ ಶತಮಾನದ ಕೊನೆಯವರೆಗೆ ಉತ್ತರಕನ್ನಡ ಜಿಲ್ಲೆಯ ಗೇರುಸೊಪ್ಪೆಯಿಂದ ಆಳಿದ ಜೈನ ರಾಜವಂಶ. ಈ ಮನೆತನದವರು ಸೋಮವಂಶದ ಕಾಶ್ಯಪಗೋತ್ರದವರು. ಈ ವಂಶದಲ್ಲಿ ಹೆಚ್ಚಾಗಿ ಉತ್ತರಾಧಿಕಾರವು ಸೋದರಳಿಯನಿಗೆ ಸಲ್ಲುತ್ತಿದ್ದು, ಆ ಸೋದರಳಿಯನಿಗೇ ರಾಜ ತನ್ನ ಮಗಳನ್ನು ಮದುವೆ ಮಾಡಿಕೊಡುತ್ತಿದ್ದ. ನಾರಣಾಂಕ, ನಾಗಣಾಂಕ ಮುಂತಾದ ಈ ವಂಶದ ರಾಜರು 13ನೆಯ ಶತಮಾನದಲ್ಲಿ ಇದ್ದು ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದಿರಬಹುದು. ಮುಂದೆ ಕ್ರಮವಾಗಿ ಹೊನ್ನ (ಸು. 1333–47), ಕಾಮ (ಸು. 1347–62), ಮಂಗರಸ (ಸು. 1362–77) ರಾಜ್ಯವಾಳಿದರು. ಅನಂತರ ಹೈವ ಸು. 1377ರಲ್ಲಿ ಪಟ್ಟಕ್ಕೆ ಬಂದು 1392ರವರೆಗೆ ಆಳಿದ. ಹೊನ್ನಾವರದ ಬಸವ ಕದಂಬ ಎಂಬವ ಇವನ ಮಾಂಡಳಿಕನಾಗಿದ್ದ. 1390ರ ಸುಮಾರಿನಲ್ಲಿ ವಿಜಯನಗರದ ಮಂಗಪ್ಪ ದಣ್ಣಾಯಕ ಹೈವನ ಮೇಲೆ ದಂಡೆತ್ತಿ ಬಂದಿದ್ದ. ಹೈವನ ಅನಂತರ ಮಂಗ II (1392–1401), ಕೇಶವ (1401–20) ರಾಜ್ಯವಾಳಿದರು. ಕೇಶವನ ಕಾಲದಲ್ಲಿ ವಿಜಯನಗರದ ಅಧಿಕಾರಿಗಳಾದ ನಾಗಣ್ಣ ಒಡೆಯ ಮತ್ತು ಭಾನಪ್ಪ ಒಡೆಯರು ಅವನ ವಿರುದ್ಧ ಯುದ್ಧ ಹೂಡಿದರು. ಕೇಶವ ಹಾಡುವಳ್ಳಿಯ ಸಂಗಿರಾಯನೊಡನೆಯೂ ಸೆಣಸಿದ. ಕೇಶವನ ಸೋದರಳಿಯ ಸಂಗಮ ಅಥವಾ ಸಂಗಿರಾಯ (1420–38), ಅನಂತರ ಈತನ ಸೋದರಿ ಲಕ್ಷ್ಮೀದೇವಿಯ ಮಗ ಭೈರವ I (1438–62) ಇವರು ಮುಂದಿನ ದೊರೆಗಳು. ಭೈರವ ಸಹ ವಿಜಯನಗರದ ವಿರುದ್ಧ ಬಂಡಾಯ ಹೂಡಿದ್ದ. ಇವನ ಕಾಲದಲ್ಲಿ ಯುವರಾಜನಾಗಿದ್ದ ಇವನ ಸೋದರ ಭೈರವ II ಗೇರುಸೊಪ್ಪೆಯಿಂದ ಆಳುತ್ತಿದ್ದ (1462). ಇದೇ ಕಾಲದಲ್ಲಿ ಸಂಗಿರಾಯನ ಇನ್ನೊಬ್ಬ ಸೋದರಿ ಶಂಕರದೇವಿಯ ಮಗ ಮಲ್ಲಿರಾಯ (ಜಿನದಾಸ ಸಾಳ್ವಮಲ್ಲ, 1462–80) ಹೊನ್ನಾವರದಿಂದ ಆಳುತ್ತಿದ್ದ. 1471ರಲ್ಲಿ ಇವರಿಬ್ಬರಿಗೂ ಯುದ್ಧ ನಡೆದು, ಹಾಡುವಳ್ಳಿಯ ಇದಂಗರಸನ ಸಹಾಯ ಪಡೆದಿದ್ದ ಮಲ್ಲಿರಾಯ ಜಯಗಳಿಸಿದ. ಅದೇ ವರ್ಷದಲ್ಲಿ ಎರಡನೆಯ ಭೈರವ ತೀರಿಕೊಂಡಾಗ ಗೇರುಸೊಪ್ಪೆಯನ್ನೂ ವಶಪಡಿಸಿಕೊಂಡ. ಇವನ ಸೋದರಿ ಮಲ್ಲಿದೇವಿಯ ಮಗ ದೇವರಾಯ (ಸಾಳ್ವದೇವ) ಇವನ ಕಾಲದಲ್ಲಿ ಯುವರಾಜನಾಗಿದ್ದು ಮುಂದೆ ದೊರೆಯಾದ (1481–1510). ಈತ 1481ರಲ್ಲಿ ಗೋವೆಯಲ್ಲಿದ್ದ ಆದಿಲ್‌ಶಾಹಿ ಸೇನಾನಿಯನ್ನು ಸೋಲಿಸಿ ರಾಜಾಧಿರಾಜ ರಾಜಪರಮೇಶ್ವರ ಮುಂತಾದ ಬಿರುದುಗಳನ್ನು ತಳೆದು, 1492ರಲ್ಲಿ ವಿಜಯನಗರದ ವಿರೂಪಾಕ್ಷನ ಮೇಲೂ ಯುದ್ಧಮಾಡಿದ. ಅನಂತರ ವಿಜಯನಗರದ ತುಳುವ ವಂಶದವರ ಆಳಿಕೆ ಆರಂಭವಾದಾಗ, ಅವರೊಡನೆ ರಾಜಿಯಾದಂತೆ ತೋರುತ್ತದೆ. ಈ ದೇವರಾಯನಿಗೂ ಇವನ ಅನಂತರ ರಾಜ್ಯವಾಳಿದ ಎರಡನೆಯ ದೇವರಾಯನಿಗೂ (1511–25) ಇದ್ದ ಸಂಬಂಧ ತಿಳಿಯದು. ಇವರಿಬ್ಬರ ರಾಜ್ಯ ಕಾಲದ ನಡುವೆ ಗೇರುಸೊಪ್ಪೆ ಬೇರೆಯವರ ಕೈವಶವಾಗಿರಲೂಬಹುದು. ದೇವರಾಯ ಮಡಗೋವೆಯವರೆಗೂ ದಂಡೆತ್ತಿ ಹೋಗಿ ಪೋರ್ಚುಗೀಸರನ್ನು ಎದುರಿಸಿದ. ಮುಂದಿನ ದೊರೆ ಕೃಷ್ಣದೇವ (ಸು. 1525–48) 1530ರ ಹೊತ್ತಿಗೆ ಹಾಡುವಳ್ಳಿಯ ದೊರೆಗಳನ್ನು ಸೋಲಿಸಿದ್ದ. ಕೃಷ್ಣದೇವನ ಅನಂತರ ಗೇರುಸೊಪ್ಪೆಯನ್ನು ಆಳಿದ ಚೆನ್ನಭೈರಾದೇವಿ (ಸು. 1548–99) ಪ್ರಾಯಶಃ ಹಾಡುವಳ್ಳಿ ವಂಶದವಳಾಗಿದ್ದು ಇವಳ ಕಾಲದಲ್ಲಿ ಈಕೆ ಎರಡು ರಾಜ್ಯಗಳನ್ನೂ ಒಂದುಗೂಡಿಸಿದಳು. 'ಕರಿಮೆಣಸಿನರಾಣಿ' ಎಂದು ಪೋರ್ಚುಗೀಸರಿಗೆ ಪರಿಚಿತಳಾಗಿದ್ದ ಈಕೆ ಆದಿಲ್‌ಶಾನ ಜೊತೆ ಸ್ನೇಹ ಬೆಳೆಸಿ ಕೆಳದಿಯ ಅರಸರು ಮತ್ತು ಪೋರ್ಚುಗೀಸರ ವಿರುದ್ಧ ಸತತವಾಗಿ ಯುದ್ಧ ನಡೆಸಿದಳು. ಆದರೆ ಮುಂದೆ ಪೋರ್ಚುಗೀಸರೊಡನೆ ಸಂಧಿ ಮಾಡಿಕೊಂಡಳು. ಸು.1599ರಲ್ಲಿ ಕೆಳದಿಯ ವೆಂಕಟಪ್ಪನಾಯಕ ಚೆನ್ನಭೈರಾದೇವಿಯನ್ನು ಸೋಲಿಸಿ ಗೇರುಸೊಪ್ಪೆ ರಾಜ್ಯವನ್ನು ವಶಪಡಿಸಿಕೊಂಡ. ಚೆನ್ನಭೈರಾದೇವಿ ಕೆಳದಿಯ ಸೆರೆಯಲ್ಲಿ ಸತ್ತಳು.

ಗೇರುಸೊಪ್ಪೆಯ ಅರಸರು ಕಲೆ ಹಾಗೂ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದರು. ಮೂಡಬಿದರೆಯ ತ್ರಿಭುವನ ತಿಲಕ ಚೂಡಾಮಣಿ ಬಸದಿಯ (ಸಾವಿರಕಂಬದ ಬಸದಿ) ಮುಂದೆ ಇರುವ ಸುಂದರವಾದ ಭೈರಾದೇವಿ ಮಂಟಪ ಒಂದನೆಯ ಭೈರವನ ಕಾಣಿಕೆ. ಈತನ ರಾಣಿ ನಾಗಲೆ ಈ ಬಸದಿಯ ಮಾನಸ್ತಂಭವನ್ನು ಮಾಡಿಸಿದಳು. ಧನ್ಯಕುಮಾರ ಚರಿತೆಯನ್ನು ಬರೆದ ಆದಿಯಪ್ಪ ಒಂದನೆಯ ಭೈರವನ ಆಶ್ರಯದಲ್ಲಿದ್ದ. ಸಾಳ್ವ ಭಾರತವನ್ನು ಬರೆದ ಸಾಳ್ವ ಒಂದನೆಯ ಮಲ್ಲಿರಾಯನ ಆಸ್ಥಾನದಲ್ಲಿದ್ದ. ಕಾವ್ಯಸಾರವನ್ನು ರಚಿಸಿದ ಜೈನಪಂಡಿತ ಅಭಿನವವಾದಿ ವಿದ್ಯಾನಂದನನಿಗೆ ಕೃಷ್ಣದೇವ ಆಶ್ರಯವಿತ್ತಿದ್ದ. (ಎಸ್.ಕೆ.)

**ಸಾಳುವರು, ಹಾಡುವಳ್ಳಿಯ:** 14–16ನೆಯ ಶತಮಾನಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಾಡುವಳ್ಳಿಯಿಂದ (ಸಂಗೀತಪುರ) ಆ ಸುತ್ತಿನ ಪ್ರದೇಶವನ್ನು ಆಳಿದ ಒಂದು ಅರಸು ಮನೆತನ. ಇವರು ಜೈನರು, ಸೋಮವಂಶಕ್ಕೆ ಸೇರಿದ ಕಾಶ್ಯಪಗೋತ್ರದವರು.

1408ರ ಒಂದು ಶಾಸನದಂತೆ ಈ ಮನೆತನದ ಮೊದಲ ದೊರೆ ಹೈವ ಭೂಪ (ಸು. 1375–1400). ಇವನಿಗೆ ಸಾಳುವೇಂದ್ರ ಎಂಬ ಹೆಸರೂ ಇತ್ತು. ಇವನ ಹೆಂಡತಿ ಭೈರಾದೇವಿ. ಇವನ ಮಗ ಮಲ್ಲಿರಾಯ (ಸು. 1401–08). ಇವನು ಅಕಾಲಮರಣ ಹೊಂದಲಾಗಿ ಇವನ ತಮ್ಮ ಸಂಗಿರಾಯ (1408–49) ಪಟ್ಟಕ್ಕೆ ಬಂದ. ಸಾಳ್ವಮಂಗಿ ಎಂಬವನು ಸಂಗಮ ಅರಸನಾದ ಕುಮಾರ ಕಂಪಣನಿಗೆ ಮಧುರೆಯ ವಿಜಯದಲ್ಲಿ ಸಹಾಯ ಮಾಡಿದ್ದ. ಇಮ್ಮಡಿ ದೇವರಾಯನ ಸಹೋದರಿಯಾದ ಹರಿಮಾದೇವಿಯನ್ನು ಸಾಳ್ವ ತಿಮ್ಮರಾಜ ಮದುವೆಯಾದ. ಇವರ ಮಗನಾದ ಸಾಳುವ ಗೋಪರಾಜನಿಗೆ 1431ರಲ್ಲಿ ಇಮ್ಮಡಿ ದೇವರಾಯ ಟೇಕಲ್ ಅನ್ನು ನೀಡಿದ. ಮುಂದೆ ವಿಜಯನಗರದ ಸಂಗಮವಂಶದವರಿಂದ ರಾಜ್ಯಾಪಹಾರಗೈದ ಸಾಳುವರು ಚರಿತ್ರೆಯಲ್ಲಿ ಬಹುಪ್ರಸಿದ್ಧರು **(ನೋಡಿ: ವಿಜಯನಗರ)**. ಆದರೆ ವಿಜಯನಗರದ ಸಾಳುವರಿಗೂ ಸಂಗೀತಪುರದ ಸಾಳುವರಿಗೂ ಏನಾದರೂ ಸಂಬಂಧವಿದೆಯೇ ಎಂಬುದು ಖಚಿತವಾಗಿ ತಿಳಿಯದು. (ಪಿ.ಜಿ.ಬಿ.)

**ಸಾಳ್ವ:** 16ನೆಯ ಶತಮಾನದ ಜೈನಕವಿ. ಭಾರತ (ಸಾಳ್ವಭಾರತ), ರಸರತ್ನಾಕರ, ಶಾರದಾವಿಲಾಸ, ವೈದ್ಯಸಾಂಗತ್ಯ ಎಂಬ ಗ್ರಂಥಗಳ ಕರ್ತೃ. ಶಾರದಾವಿಲಾಸ ಕೃತಿಯ ಕರ್ತೃತ್ವದ ವಿಚಾರದಲ್ಲಿ ಇನ್ನೂ ಸಂದೇಹವಿದೆ.

ಈತನ ತಂದೆ ಧರ್ಮಚಂದ್ರ. ಗುರು ದೇಶೀಗಣದ ವಿಜಯ ಕೀರ್ತಿಯ ಮಗ ಶ್ರುತಕೀರ್ತಿ. ಈತನ ಆಶ್ರಯದಾತನ ವಿಚಾರವಾಗಿ ಕವಿಯ ಹೇಳಿಕೆ ಹಾಗೂ ಶಾಸನಗಳ ಆಧಾರದಿಂದ ತಿಳಿದುಬರುವ ಅಂಶಗಳಿವು: ತೌಳವ ಹೈವ ಕೊಂಕಣ ದೇಶಗಳ ಆದಿನಾಥನೂ ಲಕ್ಷ್ಮಿಯ ಮಗನೂ ಆದ ಮಹಾಮಂಡಲೇಶ್ವರ ಭೈರವರಾಯ ನಗರಿನಗರ ಆಳುತ್ತಿದ್ದ. ಇವರ ಮಡದಿ ನಾಗಲಾಂಬಿಕೆ ಹಾಗೂ ಚಂದ್ರವಂಶದ ಬೈಯ್ಯನೃಪರಿಗೆ ಮಲಿದೇವಿ

ಎಂಬ ಮಗಳೂ ವಸುದಾನಮೇರು ಎಂಬ ಮಗನೂ ಹುಟ್ಟಿದರು. ವಸುದಾನಮೇರು ಸಾಳ್ವಮಲ್ಲ (ಮಲ್ಲಿರಾಯ) ಎಂಬ ಹೆಸರಿನಿಂದ ಆಳಿದ. ಇವನಿಗೆ ಕವಿ ಸರೋವರ ರಾಜಹಂಸ, ಜಿನಧರ್ಮಧ್ವಜ, ತ್ರಿಭುವನಕರ್ತಾರಿ, ತ್ರಿಣಯನ, ಸಂಯುಕ್ತ್ವಚೂಡಾಮಣಿ ಮೊದಲಾದ ಬಿರುದುಗಳಿದ್ದವು. ಇವನೇ ಸಾಳ್ವ ಕವಿಯ ಪೋಷಕ. ಸಾಳ್ವಮಲ್ಲನ ಸೋದರಿ ಮಲಿದೇವಿಗೂ ಶಾಂತದಂಡಾಧೀಶನಿಗೂ ಹುಟ್ಟಿದ ಸಾಳ್ವದೇವ ತಂದೆಯ ಬಳಿಕ ಪಟ್ಟಕ್ಕೆ ಬಂದ. ಸಾಳ್ವಮಲ್ಲ ಹಾಗೂ ಸಾಳ್ವದೇವ ಇವರಿಬ್ಬರ ಕೋರಿಕೆಯ ಮೇರೆಗೆ ಈಗ ಭಾರತವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಇವನಿಗೆ ಸಾಜಕವಿ, ಕರ್ನಾಟಕ ಲಕ್ಷಣದೋಜ ಮೊದಲಾದ ಬಿರುದುಗಳಿದ್ದಂತೆ ತೋರುತ್ತದೆ. ಪೂರ್ವಕವಿಗಳಲ್ಲಿ ಕವಿ ಕಾಮ, ನಾಗವರ್ಮ, ರುದ್ರಭಟ್ಟ ಇವರನ್ನು ಸ್ತುತಿಸಿದ್ದಾನೆ.

ಭಾರತ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಅಲ್ಲಲ್ಲಿ ವಾರ್ಧಕ ಬಳಸಿದ್ದಾನೆ. ಇದರಲ್ಲಿ 16 ಆಶ್ವಾಸಗಳೂ 8,000 ಪದ್ಯಗಳೂ ಇವೆ. ಇದು ಜೈನ ಸಂಪ್ರದಾಯಕ್ಕೆ ಅನುಸಾರವಾಗಿ ಬರೆದ ಭಾರತವಾದುದರಿಂದ ನೇಮೀಶ್ವರ ಚರಿತೆ ಎಂದೂ ಹೆಸರು ಪಡೆದಿದೆ. ಕವಿ ಇದನ್ನು ಪಾಡುಗಬ್ಬವೆಂದು ಕರೆದಿದ್ದಾನೆ. ಕಾವ್ಯದ ಬಂಧ ಚೆನ್ನಾಗಿದೆ. ಕವಿಯ ಪ್ರೌಢಿಮೆಯನ್ನೂ ಪ್ರತಿಭೆಯನ್ನೂ ಕಾವ್ಯರಚನೆಯ ಸಾಮರ್ಥ್ಯವನ್ನೂ ಬಿಂಬಿಸುವ ಹಲವಾರು ಸಂದರ್ಭಗಳು ಇದರಲ್ಲಿವೆ. ಕವಿಯೇ ಹೇಳಿಕೊಂಡಿರುವಂತೆ ಕಾವ್ಯ ನೆರೆಮೆರೆಯ ಲಲಿತ ಮೃದು ಪದ ರಚನಾದಿ ವಿವಿಧ ಗುಣಗಳಿಂದ ಚದುರರ ಮನವನ್ನು ಸೆಳೆಯುತ್ತದೆ.

ರಸರತ್ನಾಕರ ರಸವಿವೇಚನೆಯನ್ನು ಸಮಗ್ರವಾಗಿ ಒಳಗೊಂಡಿರುವ ಕನ್ನಡದ ಮೊತ್ತ ಮೊದಲ ಲಕ್ಷಣಗ್ರಂಥ. ಇದನ್ನು 'ರಸಮಿಲ್ಲದ ಕಾವ್ಯಂ ನೀರಸವದಱಂ ಕೃತಿಗೆ ರಸಮೆ ಸಾರಂ' ಎಂದು ವಿವರಿಸಿದ್ದಾನೆ. ಇದರಲ್ಲಿ ಶೃಂಗಾರ ಪ್ರಪಂಚ, ನವರಸಗಳು, ನಾಯಕನಾಯಿಕಾ ಪ್ರಕಾರ, ವ್ಯಭಿಚಾರಭಾವ ಎಂಬ ನಾಲ್ಕು ಪ್ರಕರಣಗಳಿವೆ. ಕೆಲವು ವಿಷಯಗಳಲ್ಲಿ ಅಮೃತನಂದಿ, ರುದ್ರಭಟ್ಟ, ವಿದ್ಯಾನಾಥ, ಹೇಮಚಂದ್ರರಿಗೆ ಋಣಿಯಾಗಿದ್ದಾನೆ. ಅಲ್ಲಲ್ಲಿ ಕನ್ನಡ ಲಕ್ಷಣಕಾರರಾದ ನಾಗವರ್ಮ, ಕವಿಕಾಮ, ಗಣೇಶ್ವರಾಗಿ ಇವರ ಮತವನ್ನೂ ಉಲ್ಲೇಖಿಸಿದ್ದಾನೆ. ಪಂಪ, ರನ್ನ, ನೇಮಿಚಂದ್ರ, ನಾಗಚಂದ್ರ ಮುಂತಾದ ಪ್ರಸಿದ್ಧ ಹಳಗನ್ನಡ ಕವಿಗಳ ಲಕ್ಷ್ಯಪದ್ಯಗಳನ್ನು ಯಥೋಚಿತವಾಗಿ ಉದಾಹರಿಸಿರುವುದು ಈ ಗ್ರಂಥದ ವೈಶಿಷ್ಟ್ಯ. ಅಲ್ಲಲ್ಲಿ ಸಂಸ್ಕೃತ ಲಕ್ಷ್ಯಗಳ ಅನುವಾದಗಳೂ ಉಂಟು. ಒಟ್ಟಿನಲ್ಲಿ ಸಾಮಾನ್ಯವಾಗಿ ಸರ್ವಸಮ್ಮತವಾದ ಸಂಸ್ಕೃತ ಲಾಕ್ಷಣಿಕರ ಪ್ರಕ್ರಿಯೆಯನ್ನು ಈತ ಕನ್ನಡದಲ್ಲಿ ಅನುವಾದಿಸಿದ್ದಾನೆನ್ನಬಹುದು.

ಶಾರದಾವಿಲಾಸ ಎಂಬ ಕೃತಿ ರಸರತ್ನಾಕರಕ್ಕೆ ಪೂರಕವಾದುದು. ಧ್ವನಿಯನ್ನು ಕುರಿತು ಕನ್ನಡದಲ್ಲಿ ಬರೆದ ಏಕೈಕ ಕೃತಿ. ಈ ಗ್ರಂಥದ ಧ್ವನಿವ್ಯಂಗ್ಯ ವಿವರಣೆಯೆಂಬ ಎರಡನೆಯ ಆಶ್ವಾಸ ಮಾತ್ರ ದೊರೆತಿದೆ. ಕವಿ ಇದನ್ನು ಸಾಳ್ವಮಲ್ಲನ ಖ್ಯಾತಿಗೋಸ್ಕರ ಬರೆದಂತೆ ತೋರುತ್ತದೆ. ವೈದ್ಯಸಾಂಗತ್ಯ, ಇದರ ಹೆಸರೇ ಸೂಚಿಸುವಂತೆ, ವೈದ್ಯವನ್ನು ಕುರಿತು ಸಾಂಗತ್ಯದಲ್ಲಿ ರಚಿತವಾಗಿರುವ ಕೃತಿ. **(ಎಚ್.ಪಿ.ಎನ್.;ಕೆ.ಕೆ.)**

**ಸಿಂಗ್, ಎಂ.ಬಿ.:** 1925– . ಹೆಸರಾಂತ ಪತ್ರಕರ್ತರು. ಇವರ ಪೂರ್ಣ ಹೆಸರು ಮದನ್‌ಸಿಂಗ್ ಭುವನ್‌ಸಿಂಗ್. ತಂದೆ ಮದನ್‌ಸಿಂಗ್, ತಾಯಿ ವಸಂತಬಾಯಿ. 1925 ಮೇ 24ರಂದು ಮೈಸೂರಿನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಮಂಡ್ಯದಲ್ಲಿ ಪೂರೈಸಿದರು. ಮೈಸೂರಿನ ಯುವರಾಜ ಕಾಲೇಜಿನಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದಾಗಲೇ ಮಾತೃಭೂಮಿ ಕನ್ನಡ ದಿನಪತ್ರಿಕೆಗೆ ಕೆಲಸಮಾಡಿ ಅನುಭವ ಪಡೆದರು. ವಾರ್ತಾ ಮತ್ತು ವಿಶ್ವಕರ್ನಾಟಕ ಪತ್ರಿಕೆಗಳಲ್ಲಿಯೂ ಕೆಲಸಮಾಡಿದರು. 1953ರಲ್ಲಿ ಪ್ರಜಾವಾಣಿ ಕನ್ನಡ ದಿನಪತ್ರಿಕೆ ಸೇರಿದರು. 36 ವರ್ಷಗಳ ಕಾಲ ಅವಿರತ ಸೇವೆ ಸಲ್ಲಿಸಿ ಸಾಪ್ತಾಹಿಕ ಪುರವಣಿ ಸಂಪಾದಕ ಮತ್ತು ಸಹಾಯಕ ಸಂಪಾದಕರಾಗಿಯೇ ಅಲ್ಲದೆ ಆ ಬಳಗದ ಎಲ್ಲ ಕನ್ನಡ ಪತ್ರಿಕೆಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಸುಧಾ ವಾರಪತ್ರಿಕೆ ಮತ್ತು ಮಯೂರ ಮಾಸಪತ್ರಿಕೆಗಳಿಗೆ ಕನ್ನಡ ನಿಯತಕಾಲಿಕ ಪತ್ರಿಕೋದ್ಯಮದಲ್ಲಿ ಮಹತ್ತರ ಸ್ಥಾನ ಗಳಿಸಿಕೊಟ್ಟರು. ಪರಿಣಿತ ಛಾಯಾಗ್ರಾಹಕರೂ ಆಗಿದ್ದ ಇವರು ಕಂಪ್ಯೂಟರ್‌ನಲ್ಲಿ ಕನ್ನಡ ಅಕ್ಷರಗಳ ಅಳವಡಿಕೆಯಲ್ಲಿ ತೋರಿಸಿದ ಆಸಕ್ತಿ ಉಲ್ಲೇಖನೀಯ.



ಕರ್ನಾಟಕ ರಾಜ್ಯಸರ್ಕಾರ ನಿಯಮಿಸಿದ ಸಣ್ಣಪತ್ರಿಕೆಗಳ ಸಮಿತಿಯ ಅಧ್ಯಕ್ಷರಾಗಿ ಇವರು ನೀಡಿದ ವರದಿ ಅತ್ಯುಪಯುಕ್ತವಾಗಿದೆ. ವಿದೇಶಗಳಲ್ಲಿ ಪ್ರವಾಸ ಮಾಡಿದ ಅನುಭವವೂ ಇವರದು. ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ಬಂದಿವೆ. ಅವುಗಳಲ್ಲಿ ಮುಖ್ಯವಾದುವು: ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1989), ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ (1992), ಟಿಎಸ್ಸಾರ್ ಪ್ರಶಸ್ತಿ (2000) ಮತ್ತು ಖಾದ್ರಿ ಶಾಮಣ್ಣ ಪ್ರಶಸ್ತಿ (2000). **(ಕೆ.ವಿ.ಎನ್.)**

**ಸಿಂಗರಾಜಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಒಂದು ಗ್ರಾಮ. ಚನ್ನಪಟ್ಟಣಕ್ಕೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,707. ಇದು ಗವಿ ರಂಗಸ್ವಾಮಿ ಬೆಟ್ಟ ಎಂದು ಕರೆಯುವ ಎತ್ತರವಾದ ಬೆಟ್ಟದ ಬುಡದಲ್ಲಿದೆ. ಹೊಯ್ಸಳ ಕಾಲದ ಸಿಂಗರಾಜ ಎಂಬ ಪಾಳೆಯಗಾರನಿಂದ ಈ ಊರಿಗೆ ಈ ಹೆಸರು ಬಂದಿದೆ. ವಿಜಯನಗರ ಶೈಲಿಯಲ್ಲಿದ್ದು ಈಗ ಜೀರ್ಣೋದ್ಧಾರ ಮಾಡಿರುವ ಗೋಪಾಲಕೃಷ್ಣ ದೇವರ ದೇವಾಲಯ ಇಲ್ಲಿದೆ. ಈ ದೇವಾಲಯದ ಬಲಿಪೀಠದಲ್ಲಿ ಎರಡು ಪಂಕ್ತಿಗಳುಳ್ಳ ಒಂದು ತಮಿಳು ಶಾಸನವಿದೆ. ಇದರ ಬಲಗಡೆ ಕಲ್ಲಿನ ವೃಂದಾವನ ಗೋಪಾಲಕೃಷ್ಣ ಮೂರ್ತಿ ವಿಜಯನಗರ ಶೈಲಿಯಲ್ಲಿದೆ. ನಿಂತಭಂಗಿಯ ಈ ಮೂರ್ತಿ ಸು.1ಮೀ ಎತ್ತರವಿದ್ದು ಅದರ ಕೈಗಳಲ್ಲಿ ಕೊಳಲಿದೆ. ದೇವಾಲಯದ ಬಾಗಿಲಲ್ಲಿ ಗಾರೆಯಿಂದ ಮಾಡಿದ ಎರಡು ದ್ವಾರಪಾಲಕರ ಮೂರ್ತಿಗಳಿವೆ. ನವರಂಗದಲ್ಲಿ ಚಚ್ಚೌಕವಾದ ಹಾಗೂ ಎಂಟು ಮೂಲೆಗಳುಳ್ಳ ಕಂಬಗಳಿವೆ. ತದನಂತರ ಕಂಬಗಳಿಂದ ಕೂಡಿದ ಮುಖಮಂಟಪವಿದೆ. ಈ ಊರಿನಲ್ಲಿ ಮಾರಮ್ಮನ ದೇವಸ್ಥಾನವೂ ಇದೆ.

ಇಲ್ಲಿರುವ ಗವಿರಂಗಸ್ವಾಮಿ ಬೆಟ್ಟ 200 ಮೀ ಎತ್ತರವಾಗಿದೆ. ಬೆಟ್ಟದಲ್ಲಿ ಭೈರವಗವಿ ಎಂಬ ಗವಿ ಇದೆ. ಇಲ್ಲಿ ಕೆಂಚಣ್ಣ ಮತ್ತು ಕರಿಯಣ್ಣ ಎಂದು ಕರೆಯುವ ಬಣ್ಣಬಣ್ಣದ ಎರಡು ಮೂರ್ತಿಗಳ ಜೊತೆಗೆ ಚಿಕ್ಕ ಚಿಕ್ಕ ಕೆಲವು ಮೂರ್ತಿಗಳಿವೆ. ಗುಹೆಯಲ್ಲಿರುವ ರಂಗನಾಥ ದೇವಾಲಯ ಇಲ್ಲಿಯ ಮುಖ್ಯ ದೇವಸ್ಥಾನ. ಗವಿ ರಂಗಸ್ವಾಮಿ ಎಂದು ಕರೆಯುವ ಶ್ರೀನಿವಾಸ ದೇವರ ಚಿಕ್ಕ ಮೂರ್ತಿಯು ಈ ಗವಿಯ ಒಳಗಡೆ ಇದೆ. ಇದರ ಮುಂಭಾಗದಲ್ಲಿ ಒಂದು ಪಡಸಾಲೆ ಇದೆ. ಇದಕ್ಕೆ ಪ್ರಾಕೃತಿಕವಾದ ಕಲ್ಲಿನ ಛಾವಣಿಯೇ ರಕ್ಷಣೆ. ಇದರ ಮುಂಭಾಗದಲ್ಲಿ ಪ್ರಾಕಾರ ಹಾಗೂ ಮುಖಮಂಟಪವಿದ್ದು ಕಲ್ಲಿನ ಛಾವಣಿಯ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ವಿಜಯನಗರ ಅರಸರ ಶೈಲಿಯಲ್ಲಿ ಕಟ್ಟಿರುವ ಶಿಖರವಿದೆ.

ಬೆಟ್ಟದ ತುದಿಯಲ್ಲಿ ಒಂದು ಕೊಳವಿದೆ. ರಂಗಸ್ವಾಮಿ ದೇವಾಲಯದಲ್ಲಿ ಪ್ರತಿ ಶನಿವಾರದಂದು ಪೂಜೆ ನಡೆಯುತ್ತದೆ. ಇದು ಋಷ್ಯಶೃಂಗ ಮುನಿಯ ವಾಸಸ್ಥಾನವಾಗಿದ್ದು ಬೆಟ್ಟದ ಮೇಲೆ ಆತನ ಆಶ್ರಮವಿತ್ತೆಂದು ಪ್ರತೀತಿ. (ಕೆ.ಎಂ.ಎಸ್.)

**ಸಿಂಗರಾರ್ಯ:** ಸು. 1680. ಕನ್ನಡದ ಮೊಟ್ಟಮೊದಲ ನಾಟಕ ‘ಮಿತ್ರವಿಂದಾ ಗೋವಿಂದ’ದ ಕರ್ತೃ. ಚಿಕ್ಕದೇವರಾಜನ (1673–1704) ಆಸ್ಥಾನ ಕವಿಯಾಗಿದ್ದ ಈತ ಅಳಸಿಂಗರಾರ್ಯನ ಮಗ, ತಿರುಮಲಾರ್ಯನ ತಮ್ಮ. ಇವನು ರಾಘವಾಭ್ಯುದಯಂ, ಗೀತರಂಗೇಶ್ವರಂ ಎಂಬ ಗ್ರಂಥಗಳನ್ನೂ ಬರೆದಿರುವಂತೆ ತಿಳಿಯುತ್ತದೆ. ಆದರೆ ಇವು ಉಪಲಬ್ಧವಿಲ್ಲ. ರಾಘವಾಭ್ಯುದಯಂ ಸಂಸ್ಕೃತದಲ್ಲಿ ರಚಿತವಾದ ನಾಟಕವಾಗಿದ್ದಿರಬೇಕೆಂದೂ ಗೀತರಂಗೇಶ್ವರಂ ಗೀತರೂಪಕವಾಗಿರಬೇಕೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಮಿತ್ರವಿಂದಾ ಗೋವಿಂದ ನಾಲ್ಕು ಅಂಕಗಳ ನಾಟಕ. ಭಾಗವತ ದಶಮಸ್ಕಂದದ ಅಧ್ಯಾಯ ಒಂಬತ್ತರಿಂದ ಮಿತ್ರವಿಂದೆಯ ಪರಿಣಯದ ಕಥಾಭಾಗವನ್ನು ತೆಗೆದುಕೊಂಡಿದ್ದು, ಇದನ್ನು ಕವಿ ತನ್ನ ಸ್ವಂತ ಕೃತಿ ಎಂಬ ಭಾವನೆ ಬರುವಂತೆ ಹೇಳಿದ್ದರೂ ಒಂದೆರಡು ಕಡೆ ಹೊರತಾಗಿ ಇದು ಶ್ರೀಹರ್ಷನ ಸಂಸ್ಕೃತ ರತ್ನಾವಲೀ ನಾಟಕದ ತದ್ವತ್ತಾದ ಭಾಷಾಂತರ ಎನ್ನಬಹುದು. ಪ್ರಸ್ತಾವನೆ ದೀರ್ಘವಾಗಿದ್ದು ಚಾರಿತ್ರಿಕ ವಿವರಗಳಿಂದ ಕೂಡಿದೆ. ಪಾತ್ರಗಳ ಹೆಸರುಗಳನ್ನು ಮಾರ್ಪಡಿಸಿದ್ದಾನೆ. ಮೂಲದ ವತ್ಸರಾಜ ಇಲ್ಲಿ ಶ್ರೀಕೃಷ್ಣ, ವಾಸವದತ್ತೆಯು ರುಕ್ಮಿಣಿ, ಸಾಗರಿಕೆಯು ಸರಸ್ವತಿ, ವಿದೂಷಕನು ಕುಚೇಲ ಆಗಿದ್ದಾರೆ. ಈ ನಾಮಾಂತರಗಳಿಂದ ಮೂಲದ ವಾತಾವರಣ, ಕಥಾಸ್ವಾರಸ್ಯ ಕಳೆದುಹೋಗಿದೆ. ನಾಟಕ ಶೃಂಗಾರ–ವೀರ ರಸಪೂರ್ಣವಾಗಿದ್ದು ಗಂಭೀರವಾಗಿದೆ. ವತ್ಸರಾಜ ಉದಯನ ಧೀರ ಲಲಿತನಾಯಕ, ಸದಾ ಶೃಂಗಾರ ಹಾಗೂ ಸಂಗೀತದಲ್ಲಿ ಮಗ್ನ, ಮೂಲತಃ (ಗುಣಾಢ್ಯನ ಬೃಹತ್ಕಥೆಯ) ಕಲ್ಪಿತ ವ್ಯಕ್ತಿ, ಮಾನವ; ಇಂಥ ವ್ಯಕ್ತಿಯ ಸ್ವಭಾವ ವೈಚಿತ್ರ್ಯವನ್ನು, ಗುಣಶೀಲಗಳನ್ನು ಪುರುಷೋತ್ತಮನಾದ ಶ್ರೀಕೃಷ್ಣನಿಗೆ ಆರೋಪಿಸಿರುವುದು ಉಚಿತವಾಗಿಲ್ಲ. ಹಾಗೆಯೇ ವಿದೂಷಕನ ಗುಣಗಳನ್ನು ಕುಚೇಲನಿಗೆ ಆರೋಪಿಸಿರುವುದು. ವಾಸುದೇವ ಈ ನಾಟಕದಲ್ಲಿ ಒಮ್ಮೆ ಮಾನವನಂತೆ, ಒಮ್ಮೆ ಅವತಾರ ಪುರುಷನಂತೆ ವರ್ತಿಸುತ್ತಾನೆ. ಇದರಿಂದ ಮೂಲದ ಧೀರಲಲಿತ ಪಾತ್ರಕಲ್ಪನೆಯ ಹದ ಕೆಟ್ಟಿದೆ. ಕವಿ ಶ್ರೀವೈಷ್ಣವನಾದ ಕಾರಣ ನಾಟಕದಲ್ಲಿ ಮಾಡಿಕೊಂಡಿರುವ ಕೆಲವು ಮಾರ್ಪಾಟುಗಳು ನಾಟಕ ಸುಸಂಗತವಾಗಿ ನಡೆಯಲು ನೆರವಾಗದೆ ಆಭಾಸಕ್ಕೆ ಎಡೆಮಾಡಿಕೊಟ್ಟಿವೆ. ನಾಟಕ ತೀರ ಸಾಮಾನ್ಯವಾದರೂ ಇದರ ಗುಣಭಾಗವೆಲ್ಲ ಭಾಷಾಶೈಲಿಯಲ್ಲಿದೆ ಎಂಬ ಅಭಿಪ್ರಾಯವನ್ನು ವಿದ್ವಾಂಸರು ತಾಳಿದ್ದಾರೆ. ಒಟ್ಟಿನಲ್ಲಿ ಮಿತ್ರವಿಂದಾ ಗೋವಿಂದಕ್ಕೆ ಕಾವ್ಯದೃಷ್ಟಿಯಿಂದಲ್ಲದಿದ್ದರೂ ಕನ್ನಡದ ಪ್ರಥಮ ನಾಟಕ ಎಂಬ ದೃಷ್ಟಿಯಿಂದ ಮಹತ್ತ್ವ ದೊರಕಿದೆ. (ಎಂ.ಎಚ್.ಕೆ.;ಕೆ.ವಿ.ಆರ್.ಜಿ.)

**ಸಿಂಗಾನಲ್ಲೂರು:** ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಒಂದು ಗ್ರಾಮ. ಕೊಳ್ಳೇಗಾಲದ ಆಗ್ನೇಯ ದಿಕ್ಕಿನಲ್ಲಿ 11ಕಿಮೀ ದೂರದಲ್ಲಿ ಮಲೆಮಹದೇಶ್ವರ ಕ್ಷೇತ್ರ ಮಾರ್ಗದಲ್ಲಿದೆ. ಜನಸಂಖ್ಯೆ 3,471. ಈ ಗ್ರಾಮದಲ್ಲಿ ವೀರಭದ್ರ, ಶಂಭುಲಿಂಗೇಶ್ವರ ಅಥವಾ ಕಟ್ಟೆ ಬಸವೇಶ್ವರ ಮತ್ತು ಜನಾರ್ಧನ ದೇವಾಲಯಗಳಿವೆ. ವಿಜಯನಗರದ ಅರಸ ಒಂದನೆಯ ಹರಿಹರನ (1398) ಕಾಲದ ದಾಖಲೆಯೊಂದರಲ್ಲಿ ಈ ಗ್ರಾಮಕ್ಕೆ ಸಿಂಗನಲ್ಲೂರ ಪುರ ಎಂಬ ಹೆಸರಿತ್ತೆಂದು ತಿಳಿದುಬರುತ್ತದೆ. ಬಸಪ್ಪನೆಂಬ ಭಕ್ತನನ್ನು ಮಹದೇಶ್ವರ ಮೆಚ್ಚಿ ಮೊದಲು ನಿನ್ನ ಪೂಜೆ ಅನಂತರ ನನಗೆ ಪೂಜೆಯಾಗಲಿ ಎಂಬ ವರದಾನದಂತೆ ಬೆಟ್ಟಕ್ಕೆ ಹೋಗುವ ಭಕ್ತರೆಲ್ಲ ಈ ಗ್ರಾಮದ ಕಟ್ಟೆ ಬಸವೇಶ್ವರ ದೇವಾಲಯವನ್ನು ಸಂದರ್ಶಿಸಿ, ಪೂಜೆ ಸಲ್ಲಿಸಿ ಮುಂದೆ ಹೋಗುತ್ತಾರೆ. ಕಟ್ಟೆ ಬಸವೇಶ್ವರ ದೇವಾಲಯದ ಪ್ರಾಕಾರದೊಳಗಿರುವ ಶಾಸನದಲ್ಲಿ ಐಯ್ಯಾಹೊಳೆ ಸ್ವಾಮಿಗಳು ಸಿಂಗಾನಲ್ಲೂರುಪುರದ ಶಿವಶಂಕರ ದೇವಾಲಯಕ್ಕೆ ದತ್ತಿದಾನ ನೀಡಿದ ವಿಷಯ ದಾಖಲಿಸಿದೆ.

ಇಲ್ಲಿರುವ ದೇವರಾಜ ಒಡೆಯರ ಕಾಲದ 1659ರ ಶಾಸನ ಒಂದರಲ್ಲಿ ಯೋಗೀಶ್ವರ ದೇವಂಗೆ ಪದಿನಾಡ ಸಿಂಗಾನಲ್ಲೂರು ಸೆಟ್ಟಿಗಳು (ಶೆಟ್ಟಿಗಳು) ದತ್ತಿ ನೀಡಿದ ವಿಷಯವಿದೆ. ಇದರ ಸಮೀಪದಲ್ಲೆ ಒಂದು ಹನುಮಂತ ಸ್ವಾಮಿ ದೇವಾಲಯವಿದೆ. ಚೋಳರ ಕಾಲದ ಶಿಲ್ಪಲಕ್ಷಣಗಳುಳ್ಳ ಜನಾರ್ಧನ ದೇವಸ್ಥಾನದ ಗರ್ಭಗೃಹದಲ್ಲಿ ಎಡಬಲದಲ್ಲಿ ಶ್ರೀದೇವಿ, ಭೂದೇವಿ ವಿಗ್ರಹಗಳಿರುವ ಒಂದು ಮೀಟರ್ ಎತ್ತರದ ಜನಾರ್ಧನ ಮೂರ್ತಿಯಿದೆ. ಇಲ್ಲಿನ ನವರಂಗದ ಕಂಬಗಳು ಅನೇಕ ದೇವತೆಗಳ ಕೆತ್ತನೆಗಳಿಂದ ಕೂಡಿವೆ. ಊರಿನ ಮಧ್ಯದಲ್ಲಿರುವ ಸು. 300 ವರ್ಷಗಳ ಹಿಂದಿನ ವೀರಭದ್ರ ದೇವಾಲಯವನ್ನು ‘ನಡುಕೇರಿಯ ವೀರಭದ್ರೇಶ್ವರ ದೇವಸ್ಥಾನ’ ಎನ್ನುವರು. ಮಲೆಮಹದೇಶ್ವರ ದೇವಸ್ಥಾನದಲ್ಲಿ ಮಹಾಶಿವ ರಾತ್ರಿ ಮತ್ತು ದೀಪಾವಳಿ ಕಾಲದಲ್ಲಿ ದೊಡ್ಡಜಾತ್ರೆ ನಡೆಯುತ್ತದೆ. ಅದೇ ಕಾಲದಲ್ಲಿ ಈ ಊರಿನಲ್ಲಿ ಜಾತ್ರೆ ಹಾಗೂ ದನಗಳ ಸಂತೆ ನಡೆಯುತ್ತದೆ. ಈ ಗ್ರಾಮದ ಪಕ್ಕದಲ್ಲಿರುವ ಕನಕಗಿರಿಯ ಗುಡ್ಡದ ಮಾರಮ್ಮನಿಗೂ ಗ್ರಾಮದ ಜನ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ವರನಟ ರಾಜಕುಮಾರ್ ಅವರ ತಂದೆಯವರಾದ ಪುಟ್ಟಸ್ವಾಮಯ್ಯನವರು ಈ ಊರಿನವರಾಗಿ ಕನ್ನಡದ ಜನರಿಗೆ ಪರಿಚಿತರು. (ಜಿ.ಎಸ್‍ಎಚ್.)

**ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ:** –1951. ಕನ್ನಡ ರಂಗಭೂಮಿಯ ಪ್ರಸಿದ್ಧ ನಟರು. ಕೊಳ್ಳೇಗಾಲ ತಾಲ್ಲೂಕಿನ ಸಿಂಗಾನಲ್ಲೂರಿನಲ್ಲಿ ಜನಿಸಿದರು. ಇವರ ತಂದೆ ನಾಗೇಗೌಡ, ತಾಯಿ ಪುಟ್ಟತಾಯಮ್ಮ. ಪುಟ್ಟಸ್ವಾಮಯ್ಯನವರಲ್ಲಿದ್ದ ಕಲೆಯ ವಿಕಾಸಕ್ಕೆ ನೆರವಾದವರು ಇವರ ತಂದೆ ನಾಗೇಗೌಡರು. ಸೀತಾಮನೋಹರ ನಾಟಕ ಮಂಡಲಿಯ ಮಾಲೀಕರೂ ಸ್ತ್ರೀಪಾತ್ರಗಳಿಗಾಗಿ ಪ್ರಸಿದ್ಧರಾಗಿದ್ದ ತುಮಕೂರಿನ ಸೀತಾರಾಮಯ್ಯನವರು

(ಸೀತು) ಇವರ ಅಭಿನಯ ಕಲೆಗೆ ಸುಸ್ಪಷ್ಟರೂಪ ಕೊಟ್ಟರು. ಜೊತೆಗೆ ಜಿ.ಎಚ್. ವೀರಣ್ಣನವರ ಪ್ರೋತ್ಸಾಹವೂ ಒದಗಿಬಂತು. ಗುಬ್ಬಿ ಕಂಪನಿಯಲ್ಲಿ ಇವರಿಗೆ ಸಾಕಷ್ಟು ಹೆಸರು ಬಂತು. ಇಲ್ಲಿರುವಾಗ ಭೀಮ, ಕಂಸ, ಹಿರಣ್ಯಕಶಿಪು ಮೊದಲಾದ ದೈತ್ಯ ಪಾತ್ರಗಳ ಪ್ರೌಢ ಅಭಿನಯದಿಂದ ಪ್ರೇಕ್ಷಕರನ್ನು ರಂಜಿಸಿದರು. ಈ ಪಾತ್ರಗಳ ಅಭಿನಯದಲ್ಲಿ ಗಂಗಾಧರರಾಯರ ಪ್ರಭಾವ ಪುಟ್ಟಸ್ವಾಮಯ್ಯನವರ ಮೇಲೆ ಸಾಕಷ್ಟು ಬಿದ್ದಿತ್ತು. ದೈತ್ಯ ಪಾತ್ರಕ್ಕೆ ಬೇಕಾದ ಭೀಮಕಾಯ, ಕಂಠಮಾಧುರ್ಯ, ಕಲಾಚಾತುರ್ಯ ಇವರಲ್ಲಿದ್ದುದರಿಂದ ಇವರು ನಿರ್ವಹಿಸಿದ ದೈತ್ಯ ಪಾತ್ರಗಳು ಯಶಸ್ವಿಯಾಗಲು ಕಾರಣವಾಯಿತು. ಕೆಲಕಾಲ ಪುಟ್ಟಸ್ವಾಮಯ್ಯನವರು ಎ.ಎನ್.ಶೇಷಾಚಾರ್ಯರ ಶೇಷಕಮಲ ಕಲಾ ಮಂಡಲಿಯಲ್ಲಿಯೂ ಸೇವೆ ಸಲ್ಲಿಸಿದ್ದರು. ಗುಬ್ಬಿ ಕಂಪನಿಯ ಮತ್ತೊಂದು ಶಾಖೆಯಾಗಿದ್ದ

ನೀಲಕಂಠಪ್ಪನವರ ಕಂಪನಿಯಲ್ಲೂ ಪ್ರಧಾನ ಪಾತ್ರಗಳನ್ನು ನಿರ್ವಹಿಸಿ ತಮ್ಮ ಪ್ರಾಶಸ್ತ್ಯವನ್ನು ಹೆಚ್ಚಿಸಿಕೊಂಡರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇವರ ಅಭಿನಯವನ್ನು ಸ್ವತಃ ಕಂಡು ಮೆಚ್ಚಿಕೊಂಡಿದ್ದರು. ಭಕ್ತಮಾರ್ಕಂಡೇಯ ನಾಟಕದಲ್ಲಿ ಪುಟ್ಟಸ್ವಾಮಯ್ಯನವರು ನಿರ್ವಹಿಸುತ್ತಿದ್ದ ಯಮನ ಪಾತ್ರ ಇವರ ಕಲಾನೈಪುಣ್ಯಕ್ಕೆ ಸಾಕ್ಷಿಯಾಗಿತ್ತು.

ಪುಟ್ಟಸ್ವಾಮಯ್ಯನವರು ಚಲನಚಿತ್ರಗಳಲ್ಲಿಯೂ ಅಭಿನಯಿಸಿದ್ದರು. ಗುಬ್ಬಿ ಕರ್ನಾಟಕ ಫಿಲಂಸ್ ಅವರು ನಿರ್ಮಿಸಿದ 'ಜೀವನ ನಾಟಕ' ಇವರು ಅಭಿನಯಿಸಿದ ಒಂದು ಚಿತ್ರ. ಇವರು 1951ರಲ್ಲಿ ಮೈಸೂರಿನಲ್ಲಿ ನಿಧನ ಹೊಂದಿದರು. ಕನ್ನಡ ಚಲನಚಿತ್ರ ರಂಗದಲ್ಲಿ ನಾಯಕನಟರಾಗಿ ಖ್ಯಾತಿಗಳಿಸಿರುವ ರಾಜಕುಮಾರ್ (ಮುತ್ತುರಾಜ್) ಅವರು ಪುಟ್ಟಸ್ವಾಮಯ್ಯನವರ ಪುತ್ರ **(ನೋಡಿ: ರಾಜಕುಮಾರ್)**. **(ಎಸ್.ಎಚ್.ವಿ.)**

**ಸಿಂಗಿರಾಜ:** ಸು. 1500. ವೀರಶೈವ ಕವಿ. ಅಮಲಬಸವರಾಜಚಾರಿತ್ರ ಎಂಬ ಕಾವ್ಯದ ಕರ್ತೃ. ಶಾಸ್ತ್ರಾಗಮನಿಪುಣನಾದ ದೇಮಿದೇವ ಈತನ ಗುರು. ಕಾಶಿ ವಿಶ್ವನಾಥ ಮತ್ತು ವೀರಭದ್ರ ಇವನ ಕುಲದೈವ. ಇವನ ಕಾಲ ದೇಶಗಳ ಬಗ್ಗೆ ವಿದ್ವಾಂಸರಲ್ಲಿ ಚರ್ಚೆಯಿದೆ. ಮಹಾದೇವಿಯಕ್ಕನ ಪುರಾಣವನ್ನು ಬರೆದ ಚೆನ್ನಬಸವಾಂಕ (ಸು. 1550) ಈತನನ್ನು ಸ್ಮರಿಸಿದ್ದಾನೆ.

ಅಮಲಬಸವರಾಜಚಾರಿತ್ರ ವಾರ್ಧಕ ಷಟ್ಪದಿಯಲ್ಲಿದೆ. ಅಲ್ಲಲ್ಲಿ ಇತರ ಷಟ್ಪದಿಗಳೂ ವಚನಗಳೂ ಇವೆ. ಇದಕ್ಕೆ ಸಿಂಗಿರಾಜ ಪುರಾಣ ಎಂಬ ಹೆಸರೂ ಇದೆ. ನಲವತ್ತೆಂಟು ಸಂಧಿಗಳಷ್ಟು (ಪದ್ಯ 1907) ದೀರ್ಘವಾಗಿರುವ ಈ ಕಾವ್ಯ ಬಸವಣ್ಣನವರ ಜೀವನ ವೃತ್ತಾಂತವನ್ನೊಳಗೊಂಡಿದೆ. ಈ ಕಾವ್ಯವನ್ನು ಬರೆಯಲು ಕವಿಯು ಬಸವರಾಜದೇವರ ರಗಳೆ, ಬಸವಪುರಾಣ ಮತ್ತು ಶಿವತತ್ತ್ವ ಚಿಂತಾಮಣಿ– ಈ ಗ್ರಂಥಗಳಿಗೆ ಋಣಿಯಾಗಿದ್ದಾನೆ. ಕಾವ್ಯದಲ್ಲಿ ಬಸವಣ್ಣನವರ ಪಾತ್ರ ಉದಾತ್ತವಾಗಿ ಚಿತ್ರಣಗೊಂಡಿದೆ. ಬಸವಣ್ಣ ಮರ್ತ್ಯದಲ್ಲಿ ಹುಟ್ಟಿದರೂ ಮಹಿಮಾವಂತನೆಂದು ಕವಿ ಪ್ರತಿಪಾದಿಸಿದ್ದಾನೆ. ಅದಕ್ಕಾಗಿಯೇ ಬಸವಣ್ಣನವರ ಇತರ ವಿಷಯಗಳಿಗೆ ಹೆಚ್ಚು ಗಮನಹರಿಸದೆ ಅರವತ್ತನಾಲ್ಕು ಪವಾಡಗಳನ್ನೇ ವರ್ಣಿಸುತ್ತೇನೆ ಎಂದು ಚೌಕಟ್ಟು ಹಾಕಿಕೊಂಡಿದ್ದಾನೆ. ಅಲ್ಲದೆ, ಪ್ರತಿ ಸಂಧಿಯ ಕೊನೆಯಲ್ಲೂ ಈ ವಿಷಯವನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾನೆ. ಹೀಗಿದ್ದೂ ಪವಾಡಗಳನ್ನು ಜೀವನದ ವಾಸ್ತವಿಕ ಚಿತ್ರಗಳೊಂದಿಗೆ ಹೆಣೆದು ಸಾಮಾನ್ಯರಂತೆಯೇ ಬಸವಣ್ಣನೂ ಕಷ್ಟಗಳನ್ನು ಎದುರಿಸಬೇಕಾಯಿತೆಂಬುದನ್ನು ಹೇಳಲು ಮರೆತಿಲ್ಲ. ಇದರಿಂದಲೇ ಸಿಂಗಿರಾಜಪುರಾಣ ಐತಿಹಾಸಿಕ ಹಾಗೂ ಸಾಹಿತ್ಯಕ ದೃಷ್ಟಿಯಿಂದ ವೀರಶೈವ ಪುರಾಣಗಳಲ್ಲಿ ಗಮನಿಸ ಬಹುದಾದಂಥ ಕೃತಿಯಾಗಿದೆ. **(ಆರ್.ಆರ್‌ಇ.)**

**ಸಿಂಘಣ II:** ಸೇವುಣ ವಂಶದ ಖ್ಯಾತ ದೊರೆ (ಸು. 1200–47). ಇವನ ತಂದೆ ಒಂದನೆಯ ಜೈತುಗಿಯ ಮರಣಾನಂತರ ಪಟ್ಟಕ್ಕೆ ಬಂದ. ಪಟ್ಟಕ್ಕೆ ಬಂದ ಕೂಡಲೇ ಹೊಯ್ಸಳ ರಾಜ್ಯದ ವಿವಿಧ ಭಾಗಗಳನ್ನು ಆಕ್ರಮಿಸಿಕೊಳ್ಳಲು ಪ್ರಾರಂಭಿಸಿದ. ಈ ಸಂದರ್ಭದಲ್ಲಿ ಹೊಯ್ಸಳ ಬಲ್ಲಾಳನಿಗೆ ಪರಿಸ್ಥಿತಿ ಅಷ್ಟೇನೂ ಅನುಕೂಲಕರವಾಗಿರಲಿಲ್ಲವಾಗಿ ಆತ ಸೇವುಣ ಸೈನ್ಯವನ್ನು ತಡೆಯಲಾರದೆ ಹೋದ. 1212ರಲ್ಲಿ ಸಿಂಘಣನ ಸೈನ್ಯ ಬಂದಣಿಕೆಯನ್ನು ಲೂಟಿ ಮಾಡಿತು. ಬೊಮ್ಮಿದೇವರಸ ಎಂಬವನು 1217ರಲ್ಲಿ ಹೊಯ್ಸಳ ಸೈನ್ಯವನ್ನು ಸೋಲಿಸಿ ಸೊರಬ, ಹೊನ್ನಾಳಿ ಪ್ರದೇಶದ ಅನೇಕ ಭಾಗಗಳನ್ನು ವಶಮಾಡಿಕೊಂಡ. ಸಿಂಘಣ ಹೊಯ್ಸಳರ ಮೇಲಿನ ವಿಜಯ ಸೂಚಕವಾದ ಬಿರುದುಗಳನ್ನು ಧರಿಸಿ ಅನೇಕ ದೇವಾಲಯಗಳಿಗೆ ದತ್ತಿಗಳನ್ನು ಕೊಟ್ಟ. ಹೊಯ್ಸಳ ಬಲ್ಲಾಳನ ಅನಂತರ ಪಟ್ಟಕ್ಕೆ ಬಂದ ನಾರಸಿಂಹ ಶಕ್ತನಾಗಿರಲಿಲ್ಲವಾಗಿ ಹೊಯ್ಸಳ ನಾಡಿನ ಬಹುಭಾಗಗಳು ಸಿಂಘಣನ ವಶವಾದವು.

ತನ್ನ ಸೈನ್ಯ ಹೊಯ್ಸಳರನ್ನು ಸೋಲಿಸುತ್ತಿರುವಾಗಲೇ, ಸು. 1210ರ ಸಮಯದಲ್ಲಿ ಸಿಂಘಣ ಮಾಳವ ದೇಶಕ್ಕೆ ನುಗ್ಗಿ ಸುಭಟವರ್ಮನನ್ನು ಕೊಂದು, ಅರ್ಜುನವರ್ಮನನ್ನು ಸೋಲಿಸಿದ. ಅನಂತರ ಲಾಟರಾಜ್ಯದ ಮೇಲೆ ನುಗ್ಗಿದ. ಆದರೆ ಚಾಳುಕ್ಯರ ಸಹಾಯದಿಂದ ಚಾಹಮಾನಸಿಂಹನು ಸಿಂಘಣನನ್ನು ಓಡಿಸಿದ. ಸಿಂಘಣ 1216ರಲ್ಲಿ ಶಿಲಾಹಾರ ಭೋಜನನ್ನು ಸೋಲಿಸಿ ಕೊಲ್ಲಾಪುರವನ್ನು ತನ್ನ ವಶಮಾಡಿಕೊಂಡ. ಅನಂತರ ಕೊಂಕಣಕ್ಕೆ ಹೋಗಿ ಕೇಶಿರಾಜನನ್ನು ಸೋಲಿಸಿದ. ಈ ವಿಜಯಗಳಿಂದ ಉತ್ತೇಜಿತನಾದ ಸಿಂಘಣ ಮತ್ತೊಮ್ಮೆ ಲಾಟ ರಾಜ್ಯದ ಮೇಲೆ ದಂಡೆತ್ತಿ ಹೋದ. ಇವನ ಸೇನಾಧಿಪತಿ ಖೋಲೇಶ್ವರನ ನೇತೃತ್ವದಲ್ಲಿ ಮುಂದುವರಿದ ಸೈನ್ಯ ಚಾಹಮಾನ ಸಿಂಹನ ಮೇಲೆ ಯುದ್ಧಮಾಡಿತು. ಈ ಯುದ್ಧದಲ್ಲಿ ಸಿಂಹ ಮತ್ತು ಅವನ ಸಹೋದರ ಸಿಂಧುರಾಜ ಕೊಲ್ಲಲ್ಪಟ್ಟರು. ಶಂಖ ಸೆರೆಸಿಕ್ಕಿದ. ಖೋಲೇಶ್ವರ ಬ್ರೋಚ್ ನಗರವನ್ನು ತನ್ನ ವಶಮಾಡಿಕೊಂಡು ಅಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದ. ಅನಂತರ ಸಿಂಘಣ ಗುಜರಾತಿಗೆ ನುಗ್ಗಿದ. ಈ ಸಂದರ್ಭದಲ್ಲಿ ಲವಣಪ್ರಸಾದನು ಶರಣಾಗತನಾಗಿ ಸಂಧಿಯನ್ನು ಮಾಡಿಕೊಂಡ. ಸಿಂಘಣ ಹೆಚ್ಚಿನ ಪ್ರಯೋಜನವಿಲ್ಲದೆ ಹಿಂದಿರುಗಿದ. ಈ ಕಡೆ ಸಿಂಘಣನ ಸೈನ್ಯ ಅನೇಕ ರಾಜರನ್ನು ಬಗ್ಗುಬಡಿಯುತ್ತಿತ್ತು. ಕದಂಬ ಚಕ್ರವರ್ತಿ ಮಲ್ಲಿದೇವ ಸೋತು ಮಹಾಮಂಡಲೇಶ್ವರನಾದ. ಗುತ್ತ ದೊರೆ ಎರಡನೆಯ ಜೋಯಿದೇವ ಸೋತು ಸಾಮಂತನಾದ. ರಟ್ಟರಾಜ ಎರಡನೆಯ ಲಕ್ಷ್ಮೀದೇವನನ್ನು ಸೇವುಣ ಸೇನಾಧಿಪತಿ ಬೀಚಣ ಸೋಲಿಸಿ ಅವನ ರಾಜ್ಯವನ್ನು ಸೇವುಣ ರಾಜ್ಯಕ್ಕೆ ಸೇರಿಸಿದ. ಬೆಳಗುತ್ತಿಯ ಸಿಂದ ದೊರೆ ಮೂರನೆಯ ಈಶ್ವರದೇವ ಶರಣಾಗತನಾದ. ಯಲಬುರ್ಗಿಯ ಸಿಂದರೂ ಶರಣಾಗತರಾದರು. ಸಿಂಘಣ ತೆಲುಗು ಚೋಳ ತಿಕ್ಕನ ಮೇಲೆಯೂ ಯುದ್ಧಮಾಡಿದ. ಸಿಂಘಣನಿಗೂ ಕಾಕತೀಯ ಗಣಪತಿಗೂ ಯುದ್ಧಗಳು ನಡೆದರೂ ಅವುಗಳ ವಿವರಗಳು ತಿಳಿದಿಲ್ಲ. ಸಿಂಘಣ ಆಭೀರ ಲಕ್ಷ್ಮೀದೇವನನ್ನೂ ಜಜ್ಜಲದೇವನನ್ನೂ ಸೋಲಿಸಿದನೆಂದು ತಿಳಿದುಬರುತ್ತದೆ.

ಸು. 1240ರಲ್ಲಿ ಮತ್ತೊಮ್ಮೆ ಸಿಂಘಣನ ಸೈನ್ಯ ರಾಮನ ನೇತೃತ್ವದಲ್ಲಿ ಗುಜರಾತಿಗೆ ನುಗ್ಗಿತು. ವೀರಧವಳನ ಮಗನಾದ ವೀಸಲದೇವ ರಾಮನನ್ನು ಕೊಂದ. ಸೇವುಣ ಸೈನ್ಯ ಹಿಂತಿರುಗಿತು. ಕೊನೆಗೂ ಗುಜರಾತನ್ನು ವಶಮಾಡಿಕೊಳ್ಳಲು ಸಿಂಘಣನಿಗೆ ಆಗಲಿಲ್ಲ.

ಸಿಂಘಣನ ರಾಜ್ಯ ಬಹು ವಿಸ್ತಾರವಾಗಿತ್ತು. ಉತ್ತರದಲ್ಲಿ ನರ್ಮದಾ ತೀರದವರೆಗೆ, ದಕ್ಷಿಣದಲ್ಲಿ ಕಾವೇರಿಯವರೆಗೆ ಇವನು ವಿಜಯ ಯಾತ್ರೆಗಳನ್ನು ಕೈಗೊಂಡಿದ್ದ. ಸಿಂಘಣ ಸಾಹಿತ್ಯ ಮತ್ತು ಕಲೆಗಳಿಗೂ ಆಶ್ರಯ ಕೊಟ್ಟಿದ್ದಾನೆ. ಖ್ಯಾತ ಸಂಗೀತಶಾಸ್ತ್ರಜ್ಞ ಶಾರ್ಙ್ಗದೇವ ಸಿಂಘಣನ ಆಶ್ರಯದಲ್ಲಿ ಸಂಗೀತ ರತ್ನಾಕರವನ್ನು ಬರೆದ. ಶಾಂತೇಶ್ವರ ಪುರಾಣದ ಕರ್ತೃವಾದ ಕಮಲಭವ ಸಿಂಘಣನ ಆಸ್ಥಾನದಲ್ಲಿದ್ದ. ಚಂಗದೇವ ಮತ್ತು ಅನಂತದೇವ ಎಂಬ ಖ್ಯಾತ ಖಗೋಳಶಾಸ್ತ್ರಜ್ಞರು ಇವನ ಆಶ್ರಯದಲ್ಲಿದ್ದರು. ಸಿಂಘಣ ಜೈನ, ವೈಷ್ಣವ, ಶೈವ ಮತ್ತು ಪಾಶುಪತ ದೇವಾಲಯಗಳಿಗೆ ಅನೇಕ ದತ್ತಿಗಳನ್ನು ನೀಡಿದ್ದಾನೆ. ಸಮಕಾಲೀನ ದಕ್ಷಿಣಾಪಥದಲ್ಲಿ ಸೇವುಣರಿಗೆ ಒಂದು ಗಣ್ಯಸ್ಥಾನವನ್ನು ಸಂಪಾದಿಸಿಕೊಟ್ಟ ಕೀರ್ತಿ ಈತನಿಗೆ ಸಲ್ಲುತ್ತದೆ.

ಇವನಿಗೆ ಜೈತುಗಿ II ಎಂಬ ಮಗನಿದ್ದ. ಆದರೆ ಅವನು ಮುಂಚೆಯೇ ಮರಣ ಹೊಂದಿದುದರಿಂದ ಸಿಂಘಣನ ಮೊಮ್ಮಗನಾದ ಕೃಷ್ಣ ಸಿಂಘಣನ ನಿಧನಾನಂತರ (1247) ಪಟ್ಟಕ್ಕೆ ಬಂದ. **(ಎ.ವಿ.ಎನ್.)**

**ಸಿಂದಗಿ:** ಬಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಈ ತಾಲ್ಲೂಕಿನ ದಕ್ಷಿಣಕ್ಕೆ ಬಸವನಬಾಗೇವಾಡಿ, ಪಶ್ಚಿಮಕ್ಕೆ ಬಿಜಾಪುರ, ವಾಯುವ್ಯದಲ್ಲಿ ಇಂಡಿ

ತಾಲ್ಲೂಕು, ಉತ್ತರ ಮತ್ತು ಪೂರ್ವಕ್ಕೆ ಗುಲ್ಬರ್ಗ ಜಿಲ್ಲೆಯ ಅಫಜಲಪುರ, ಜೇವರಗಿ ತಾಲ್ಲೂಕುಗಳೂ ಸುತ್ತುವರಿದಿವೆ. ಈ ತಾಲ್ಲೂಕು ಇಂಡಿ ವಿಭಾಗಕ್ಕೆ ಸೇರಿದೆ. ಆಲಮೇಲ, ಸಿಂದಗಿ ಮತ್ತು ದೇವರ ಹಿಪ್ಪರಗಿ ಈ ತಾಲ್ಲೂಕಿನ ಹೋಬಳಿಗಳು. 141 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 2,180.8 ಚ.ಕಿಮೀ. ಈ ತಾಲ್ಲೂಕಿನಲ್ಲಿ 1,67,341 ಮಂದಿ ಗಂಡಸರು, 1,59,055 ಮಂದಿ ಹೆಂಗಸರಿದ್ದು ಒಟ್ಟು ಜನಸಂಖ್ಯೆ 3,26,665. ಇದರಲ್ಲಿ 2,98,993 ಮಂದಿ ಗ್ರಾಮೀಣರು, 27,732 ಮಂದಿ ಪಟ್ಟಣಿಗರಿದ್ದಾರೆ.

ಈ ತಾಲ್ಲೂಕು ದಖನ್ ಪ್ರಸ್ಥಭೂಮಿಯ ಮಧ್ಯದಲ್ಲಿರುವ ಅರೆ ಒಣ ಪ್ರದೇಶ. ಉತ್ತರದಲ್ಲಿ ಭೀಮಾ ಮತ್ತು ದಕ್ಷಿಣದಲ್ಲಿ ಡೋಣಿ ನದಿಗಳ ನಡುವಿರುವ ಈ ತಾಲ್ಲೂಕಿನಲ್ಲಿ ವಿಸ್ತಾರ ಬಯಲುಗಳು ಮತ್ತು ಅಲ್ಲಲ್ಲಿ ಸಣ್ಣ ಗುಡ್ಡಗಳು ಇವೆ. ಕಡಿಮೆ ಪ್ರಮಾಣದ ಮಳೆ ಮತ್ತು ಹಿಂದಿನಿಂದಲೂ ವ್ಯಾಪಕ ಸಾಗುವಳಿಗೆ ಒಳಗಾಗದ ಈ ತಾಲ್ಲೂಕಿನಲ್ಲಿ ಸಸ್ಯ ಸಂಪತ್ತು ವಿರಳ. ಗುಡ್ಡ ಪ್ರದೇಶಗಳಲ್ಲಿ ಕುರುಚಲು ಕಾಡು ಕಂಡುಬರುತ್ತದೆ. ಭೀಮಾ ಮತ್ತು ಡೋಣಿ ನದಿಗಳನ್ನು ಸೇರುವ ಅನೇಕ ತೊರೆಗಳಿಂದ ಭೂಪ್ರದೇಶದಲ್ಲಿ ಅಲ್ಲಲ್ಲಿ ಉಂಟಾಗಿರುವ ಸಣ್ಣ ಕಣಿವೆಗಳು ವ್ಯವಸಾಯ ಯೋಗ್ಯ ಪ್ರದೇಶಗಳಾಗಿವೆ. ಭೀಮಾ ನದಿಯ ಸುತ್ತಲ ಪ್ರದೇಶ ಕಪ್ಪುಮಣ್ಣಿನಿಂದ ಕೂಡಿದ್ದು ಫಲವತ್ತಾಗಿದೆ. ಕಣಿವೆ ಪ್ರದೇಶಗಳ ಹೊರತು ಮಿಕ್ಕ ಪ್ರದೇಶಗಳಲ್ಲಿ ಅಲ್ಪ ಸಸ್ಯವರ್ಗದ ಬೋಳು ಬಯಲುಗಳಿವೆ. ಇಲ್ಲಿನ ಬಂಡೆಗಳು ಬೆಣಚುಕಲ್ಲು ವರ್ಗಕ್ಕೆ ಸೇರಿದವು.

ಭೀಮಾ ನದಿ ಈ ತಾಲ್ಲೂಕಿನ ಉತ್ತರದಲ್ಲಿ ಪೂರ್ವಾಭಿಮುಖವಾಗಿ, ಅನಂತರ ಸ್ವಲ್ಪ ದೂರ ಆಗ್ನೇಯಾಭಿಮುಖವಾಗಿ ಹರಿದು ಗುಲ್ಬರ್ಗ ಜಿಲ್ಲೆಯ ಅಫಜಲಪುರ ತಾಲ್ಲೂಕನ್ನು ಬೇರ್ಪಡಿಸಿದೆ. ದಕ್ಷಿಣದಲ್ಲಿ ಡೋಣಿ ನದಿ ಪೂರ್ವಾಭಿಮುಖವಾಗಿ ಹರಿಯುವುದಲ್ಲದೆ ಸ್ವಲ್ಪದೂರ ಬಸವನಬಾಗೇವಾಡಿ ತಾಲ್ಲೂಕನ್ನು ಬೇರ್ಪಡಿಸಿದೆ. ಮುಂದೆ ಮತ್ತೆ ತಾಲ್ಲೂಕಿನ ಒಳಗೆ ಸ್ವಲ್ಪದೂರ ಹರಿದು ಅನಂತರ ಬಸವನ ಬಾಗೇವಾಡಿ ತಾಲ್ಲೂಕನ್ನು ಪ್ರವೇಶಿಸುವುದು. ಈ ನದಿಯ ಎಡದಂಡೆ ಪ್ರದೇಶ ಮತ್ತು ಭೀಮಾ ನದಿಯ ಬಲದಂಡೆ ಪ್ರದೇಶ ಸಿಂದಗಿ ತಾಲ್ಲೂಕಿಗೆ ಸೇರಿದ್ದು ದಂಡೆಯ ಜಮೀನುಗಳಿಗೆ ಪ್ರವಾಹ ಕಾಲದಲ್ಲಿ ಮೆಕ್ಕಲು ಮಣ್ಣು ತೂರುವುದರಿಂದ ವ್ಯವಸಾಯಕ್ಕೆ ಉತ್ತಮ ಪ್ರದೇಶವಾಗಿದ್ದು ಫಲವತ್ತಾಗಿವೆ. ಇವಲ್ಲದೆ ನಾವಲಿ ಮತ್ತು ಹೆಬ್ಬಾಲ ನದಿಗಳು ಈ ತಾಲ್ಲೂಕಿನಲ್ಲೆ ಹುಟ್ಟಿ ಭೀಮಾ ನದಿಯನ್ನು ಸೇರುವುವು.

ಈ ತಾಲ್ಲೂಕಿನಲ್ಲಿ ಮಳೆ ಕಡಿಮೆ. ವಾರ್ಷಿಕ ಸರಾಸರಿ ಮಳೆ 675.66 ಮಿಮೀ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆಗಾಲ. ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಈಶಾನ್ಯ ಮಾರುತದಿಂದ ಸ್ವಲ್ಪ ಪ್ರಮಾಣದ ಮಳೆಯಾಗುತ್ತದೆ. ವರ್ಷದಿಂದ ವರ್ಷಕ್ಕೆ ಇಲ್ಲಿನ ಮಳೆಯ ಪ್ರಮಾಣದಲ್ಲಿ ಅಧಿಕ ಏರಿಳಿತ ಕಂಡುಬರುತ್ತದೆ.

ಈ ತಾಲ್ಲೂಕಿನ ಬೆಳೆಗಳಲ್ಲಿ ಜೋಳ, ಸಜ್ಜೆ, ಬತ್ತ, ಮೆಕ್ಕೆಜೋಳ, ನೆಲಗಡಲೆ, ಮೆಣಸಿನಕಾಯಿ ಮುಖ್ಯವಾದುವು. ಕಬ್ಬು, ಗೋದಿ, ಹುರುಳಿ ಮತ್ತು ಕುಸುಬೆಯನ್ನೂ ಬೆಳೆಯುತ್ತಾರೆ. ಹತ್ತಿ ಇಲ್ಲಿನ ಮುಖ್ಯ ವಾಣಿಜ್ಯ ಬೆಳೆ.

ಈ ತಾಲ್ಲೂಕು ಕೈಗಾರಿಕೆಯಲ್ಲಿ ಅಷ್ಟಾಗಿ ಮುಂದುವರಿದಿಲ್ಲ. ಹತ್ತಿ ಬೆಳೆಯುವ ಈ ಪ್ರದೇಶದಲ್ಲಿ ಹತ್ತಿ ಆಧರಿಸಿದ ಕೈಗಾರಿಕೆಗಳೇ ಹೆಚ್ಚು. ತಾಲ್ಲೂಕಿನಲ್ಲಿ ಹತ್ತಿ ಹದಮಾಡುವ ಎರಡು ಕಾರ್ಖಾನೆಗಳಿವೆ. ಕೈಮಗ್ಗಗಳು, ಯಂತ್ರ ಮಗ್ಗಗಳೂ ಇವೆ. ಇವುಗಳಲ್ಲದೆ ಮರ, ಚರ್ಮದ ಕೆಲಸಗಳ ಉದ್ಯಮಗಳಿವೆ. ಮಡಕೆ ಮಾಡುವುದು, ಪಾತ್ರೆ ತಯಾರಿಕೆ, ಗಾಡಿ ಕಟ್ಟುವುದು, ಕಬ್ಬಿಣದ ಕೆಲಸ ಮೊದಲಾದವು ಇತರ ಗೃಹ ಕೈಗಾರಿಕೆಗಳು.

ಈ ತಾಲ್ಲೂಕಿನಲ್ಲಿ ಕೆಲವು ಪ್ರಾಚೀನ ದೇವಾಲಯಗಳೂ ಐತಿಹಾಸಿಕ ಸ್ಥಳಗಳೂ ಇವೆ. ಅವುಗಳಲ್ಲಿ ಆಲಮೇಲ ಗ್ರಾಮ ಕಳಚುರಿ ಬಿಜ್ಜಳನ ಕಾಲದಲ್ಲಿ ಸ್ಥಾಪನೆಯಾದದ್ದೆಂದು ತಿಳಿದುಬರುತ್ತದೆ. ಇಲ್ಲಿನ ರಾಮದೇವ ದೇವಾಲಯದಲ್ಲಿ ಅಮೃತಶಿಲೆಯ ರಾಮ, ಸೀತೆ ಮತ್ತು ಲಕ್ಷ್ಮಣರ ವಿಗ್ರಹಗಳಿವೆ. ಹಿಪ್ಪರಗಿ ಪ್ರಸಿದ್ಧ ವಚನಕಾರ ಮಡಿವಾಳ ಮಾಚಯ್ಯನ ಊರು. ಇಲ್ಲಿ ಜಮದಗ್ನಿ ಋಷಿಯಿಂದ ಸ್ಥಾಪಿತವಾದದ್ದೆನ್ನಲಾದ ಕಾಳಮೇಶ್ವರ ದೇವಾಲಯದಲ್ಲಿ ಲಿಂಗವಿದೆ. ಇಲ್ಲಿ ಕಾರ್ತೀಕದಲ್ಲಿ ಕಾಳಮೇಶ್ವರ ಜಾತ್ರೆ ನಡೆಯುತ್ತದೆ. ಚಟ್ಟರ್ಕಿ, ದೇವಗಾಂವ, ಕೊರವಾರ, ಗೊಲ್ಲಗೇರಿಗಳಲ್ಲಿ ಹಳೆಯ ದೇವಾಲಯಗಳಿವೆ. ಕೊರವಾರದಲ್ಲಿ ಚೈತ್ರಮಾಸದಲ್ಲಿ ರಥೋತ್ಸವ ನಡೆಯುತ್ತದೆ.

ಸಿಂದಗಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬಿಜಾಪುರದ ಈಶಾನ್ಯಕ್ಕೆ 60 ಕಿಮೀ ದೂರದಲ್ಲೂ ಇಂಡಿಗೆ ಆಗ್ನೇಯದಲ್ಲಿ 50 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 27,732. *

ಈ ಊರನ್ನು ಸು. 1200ರಲ್ಲಿ ಸಿಂದ ಬಲ್ಲಾಳನೆಂಬುವ ಸ್ಥಾಪಿಸಿದ ನೆಂದು ತಿಳಿದುಬರುತ್ತದೆ. ಇದಕ್ಕೆ ಹಿಂದೆ ಸಿಂದಪುರವೆಂದು ಹೆಸರಿತ್ತು. ಊರ ದಕ್ಷಿಣಕ್ಕಿರುವ ಸಂಗಮೇಶ್ವರ ದೇವಾಲಯ ಪ್ರಸಿದ್ಧವಾದುದು. ಈ ದೇವಾಲಯದ ಆವರಣದಲ್ಲಿ ಭ್ರಮರಾಂಬಿಕ ದೇವತೆಯ ಗುಡಿ ಇದೆ. ಈ ಊರಿನ ಇನ್ನೊಂದು ಆಕರ್ಷಕ ಸ್ಥಳ ಜಕ್ಕಪ್ಪಯ್ಯನ ಮಠ. ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಈ ಊರಲ್ಲಿ ನೀಲಗಂಗಮ್ಮ (ಭಾಗೀರಥಿ) ದೇವಾಲಯವಿದೆ. *

**ಸಿಂದರು:** ಒಂದು ಸಾಮಂತ ರಾಜಮನೆತನ. ಇವರ ಮೂಲದ ಬಗ್ಗೆ 10ನೆಯ ಶತಮಾನದ ಒಂದು ಶಾಸನದಲ್ಲಿ, ನಾಗರಾಜ ಧರಣೇಂದ್ರ ಪಾತಾಳದಿಂದ ಭೂಲೋಕವನ್ನು ನೋಡಲು ಬಂದಾಗ ಇವನಿಗೆ ನಿಡುದೋಳ ಸಿಂದನೆಂಬ ಮಗ ಅಹಿಚ್ಛತ್ರದಲ್ಲಿ ಹುಟ್ಟಿದ. ಈ ರಾಜವಂಶದ ಆದ್ಯನಾದ ನಿಡುದೋಳ ಸಿಂದರಾಜ್ಯಕ್ಕೆ ಪ್ರಭುವಾಗಿ ಕದಂಬ ರಾಜಕುಮಾರಿ ಯನ್ನು ಮದುವೆಯಾದ ಎಂಬ ಒಂದು ಕಥೆ ಇದೆ. ಅದೇ ಕಾಲದ ಹಲವು ಶಾಸನಗಳಲ್ಲಿ ಇವರನ್ನು ನಾಗವಂಶೀಯರು, ಭೋಗಾವತೀಪುರ ವರಾಧೀಶ್ವರರು ಎಂದು ಕರೆಯಲಾಗಿದೆ. ಇಮ್ಮಡಿ ವಿಕ್ರಮಾದಿತ್ಯನ (655–81) ಕಾಲದ ಕುಕ್ಕನೂರಿನ ಒಂದು ಶಾಸನ ಸಿಂದರಸನೆಂಬವ ಆ ಪ್ರದೇಶವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಹಾಗೆಯೇ ಇಮ್ಮಡಿ ಕೀರ್ತಿವರ್ಮನ (745–57) ಕಾಲದ ಆಡೂರು (ಧಾರವಾಡ ಜಿಲ್ಲೆ) ಶಾಸನದಲ್ಲಿ ಪಾಂಥಿಪುರ ವನ್ನು (ಹಾನುಗಲ್ಲು) ಆಳುತ್ತಿದ್ದ ಸಿಂದರಸ ಎಂಬವನ ಹೆಸರಿದೆ. ಇವೇ ಈ ವಂಶೀಯರ ಬಗ್ಗೆ ದೊರಕಿರುವ ಅತ್ಯಂತ ಪ್ರಾಚೀನ ಉಲ್ಲೇಖಗಳು. ಈ ವಂಶದ ಶಾಖೆಗಳು ಕರ್ನಾಟಕದ ಹಲವು ಭಾಗಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಅಧಿಕಾರದಲ್ಲಿದ್ದುವು. (ಬಿ.ಆರ್.ಜಿ.;ಎ.ವಿ.ಎನ್.)

**ಸಿಂಧಘಟ್ಟ:** ಮಂಡ್ಯಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ. ಕೃಷ್ಣರಾಜಪೇಟೆಯ ಈಶಾನ್ಯಕ್ಕೆ 8 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,770.

ಈ ಗ್ರಾಮ ಹಿಂದೆ ಒಂದು ಅಗ್ರಹಾರವಾಗಿತ್ತು. ಇಲ್ಲಿ ಹೊಯ್ಸಳರ ಕಾಲದ ಲಕ್ಷ್ಮೀನಾರಾಯಣ ದೇವಾಲಯ, ಹದಿಮೂರನೆಯ ಶತಮಾನಕ್ಕೆ ಸೇರಿರಬಹುದಾದ ಸಂಗಮೇಶ್ವರ ದೇವಾಲಯ ಇವೆ. ವಿಜಯನಗರ ಕಾಲದ ಒಂದು ಮಸೀದಿಯೂ ಇಲ್ಲಿದೆ.

ದ್ವಿಕೂಟ ಮಾದರಿಯ ಲಕ್ಷ್ಮೀನಾರಾಯಣ ದೇವಾಲಯ ಪೂರ್ವಾಭಿ ಮುಖವಾಗಿದೆ. ಈ ದೇವಾಲಯ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪಗಳನ್ನೊಳಗೊಂಡಿದೆ. ದೇವಾಲಯಕ್ಕೆ ಎರಡು

ದ್ವಾರಮಂಟಪಗಳಿದ್ದು ಒಂದು ಮುರಿದು ಬಿದ್ದಿದೆ. ಸುಕನಾಸಿಯ ದ್ವಾರಗಳಲ್ಲಿ ಉತ್ತಮ ಕೆತ್ತನೆಯ ಚಿತ್ರಗಳಿವೆ. ಮೊಗಸಾಲೆಯಲ್ಲಿ 12 ಕಂಬಗಳು ಮತ್ತು 20 ಅರೆಗಂಬಗಳಿವೆ. ಮೇಲ್ಛಾವಣಿಯಲ್ಲಿ ಇಪ್ಪತ್ತೊಂದು ಕೆತ್ತನೆಯ ಚಿತ್ರಗಳಿವೆ. ನವರಂಗಗಳಲ್ಲಿ ವಿಷ್ಣು, ಗಣಪತಿ, ಸುಬ್ರಹ್ಮಣ್ಯ, ಸೂರ್ಯ ಮತ್ತು ಸಪ್ತಮಾತೃಕೆಯರ ಚಿತ್ರಗಳಿವೆ. ಸಂಗಮೇಶ್ವರ ದೇವಾಲಯ ಜೀರ್ಣಾವಸ್ಥೆಯಲ್ಲಿದೆ.

ಲಕ್ಷ್ಮೀನಾರಾಯಣ ದೇವಾಲಯ

ಊರಿನ ಒಳಕೇರಿಯ ಎಡಭಾಗದಲ್ಲಿ ಪೂರ್ವಾಭಿಮುಖವಾಗಿ ಒಂದು ಮಸೀದಿ ಇದೆ. ಇದು ಕಲ್ಲಿನ ಚೌಕಾಕಾರದ ಕಟ್ಟಡ. ಈ ಮಸೀದಿಯನ್ನು ಕಟ್ಟಿಸಿದವ ಬಾಬುಶೆಟ್ಟಿ. ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಈ ಮಸೀದಿಯಲ್ಲಿ ಹಿಂದು ಲಕ್ಷಣಗಳು ಕಂಡುಬರುತ್ತವೆ. ಮಸೀದಿಯಲ್ಲಿ ಒಂದು ಕನ್ನಡ ಶಾಸನವಿದೆ. ಅದರ ಕಾಲ 1537. ಈ ಶಾಸನದಿಂದ ಪಾಳೆಯಗಾರ ರಂಗಯ್ಯನಾಯಕ ಹಿಂದುಗಳಿದ್ದ ಶಿವಪುರಗ್ರಾಮವನ್ನು ಈ ಮಸೀದಿಗಾಗಿ ದತ್ತಿ ಬಿಟ್ಟುಕೊಟ್ಟನೆಂದು ತಿಳಿದುಬರುತ್ತದೆ. ಈ ಶಾಸನ ವಿಜಯನಗರ ಕಾಲದಲ್ಲಿದ್ದ ಧಾರ್ಮಿಕ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ. ಈ ಊರಿನಲ್ಲಿ ಇನ್ನೂ ಕೆಲವು ಶಾಸನಗಳಿವೆ. ಅವುಗಳಲ್ಲಿ ಎರಡು ಸು. 1179ಕ್ಕೆ ಸೇರಿದ ಹೊಯ್ಸಳರ ಶಾಸನಗಳು. ಸಂಗಮೇಶ್ವರ ದೇವಸ್ಥಾನದಲ್ಲಿರುವ ಇನ್ನೊಂದು ಶಾಸನ 1248ಕ್ಕೆ ಸೇರಿದ್ದು, ಇದು ದೇವರಸನೆಂಬವನು ಈ ದೇವಾಲಯದ ದುರಸ್ತಿ ಕೆಲಸ ಮಾಡಿಸಿದುದರ ಬಗ್ಗೆ ತಿಳಿಸುತ್ತದೆ.

ಈ ಗ್ರಾಮ ರೇಷ್ಮೆಬಟ್ಟೆಗಳ ತಯಾರಿಕೆ ಮತ್ತು ಚಾಪೆಗಳಿಗೆ ಪ್ರಸಿದ್ಧ. ಪ್ರತಿ ಭಾನುವಾರ ಇಲ್ಲಿ ಸಂತೆ ಸೇರುವುದು. ಈ ಗ್ರಾಮಕ್ಕೆ ಅಂಚೆ, ವಿದ್ಯುತ್ತು, ಔಷಧಾಲಯ, ಪ್ರೌಢಶಾಲೆ ಮುಂತಾದವುಗಳ ಸೌಲಭ್ಯವಿದೆ.

**(ಡಿ.ಎಸ್.ಜಿ.)**

**ಸಿಂಧನೂರು:** ರಾಯಚೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ತಾಲ್ಲೂಕಿನ ಉತ್ತರದಲ್ಲಿ ಲಿಂಗಸುಗೂರು ಮತ್ತು ಮಾನ್ವಿ ತಾಲ್ಲೂಕುಗಳೂ ಪಶ್ಚಿಮಕ್ಕೆ ಕೊಪ್ಪಳ ಜಿಲ್ಲೆಯ ಕುಷ್ಟಗಿ, ದಕ್ಷಿಣದಲ್ಲಿ ಗಂಗಾವತಿ ತಾಲ್ಲೂಕುಗಳೂ ಪೂರ್ವಕ್ಕೆ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕೂ ಸುತ್ತವರಿದಿವೆ. ಜಿಲ್ಲೆಯ ಲಿಂಗಸುಗೂರು ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ ಗೋರೆಬಾಳ, ಜಾಲಿಹಾಳ, ಗುಂಜಳ್ಳಿ, ತುರುವಿಹಾಳ, ಗುಡೂರು, ಕುಂಟಗಿ, ಬಾಳಗನೂರು, ವಾಲ್ಕಂದಿನ್ನಿ, ಬದರ್ಲಿ, ಸಿಂಧನೂರು, ಹೆಡಗಿನಹಾಳ ಜವಳ್‌ಗೆರೆ, ಸಲಗುಂದಿ ಮತ್ತು ಹುದ ಹೋಬಳಿಗಳಿವೆ. ಒಟ್ಟು 172 ಗ್ರಾಮಗಳಿರುವ ತಾಲ್ಲೂಕಿನ ವಿಸ್ತೀರ್ಣ 1,598 ಚ.ಕಿಮೀ. ತಾಲ್ಲೂಕಿನಲ್ಲಿ 1,80,354 ಮಂದಿ ಪುರುಷರು, 1,79,801 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 3,60,164. ಇದರಲ್ಲಿ 2,98,902 ಮಂದಿ ಗ್ರಾಮವಾಸಿಗರು 61,262 ಮಂದಿ ಪಟ್ಟಣಿಗರಿದ್ದಾರೆ.

ತಾಲ್ಲೂಕಿನ ಪಶ್ಚಿಮದ ಗಡಿ ಹತ್ತಿರದ ಜಗದಗುಡ್ಡ ಮತ್ತು ಗೋರೆಬಾಳದ ಪೂರ್ವಕ್ಕಿರುವ ಅಂಬಾದೇವಿ ಗುಡ್ಡ ಇವನ್ನು ಬಿಟ್ಟರೆ ತಾಲ್ಲೂಕಿನಲ್ಲಿ ಉಲ್ಲೇಖನಾರ್ಹವಾದ ಬೇರೆ ಬೆಟ್ಟಗಳಿಲ್ಲ. ತಾಲ್ಲೂಕಿನ ನದಿದಂಡೆಯ ಕೆಲವೆಡೆ ವಿರಳವಾದ ಅರಣ್ಯ ಪ್ರದೇಶವುಂಟು. ತುಂಗಭದ್ರಾ ಈ ತಾಲ್ಲೂಕಿನ ಮುಖ್ಯನದಿ. ತಾಲ್ಲೂಕಿನ ಪೂರ್ವದಲ್ಲಿ ಉತ್ತರಾಭಿಮುಖವಾಗಿ ತಾಲ್ಲೂಕಿನ ಗಡಿಯಾಗಿ ಹರಿದು ಸಿರಗುಪ್ಪ ತಾಲ್ಲೂಕನ್ನು ಬೇರ್ಪಡಿಸಿದೆ. ಈ ನದಿಯ ಫಲವತ್ತಾದ ಎಡದಂಡೆ ಪ್ರದೇಶ ಈ ತಾಲ್ಲೂಕಿಗೆ ಸೇರಿದೆ. ಸಿಂಧನೂರು ಹಳ್ಳ ಕೆಲವೊಂದು ಸಣ್ಣಪುಟ್ಟ ತೊರೆಗಳನ್ನು ಕೂಡಿಕೊಂಡು ತಾಲ್ಲೂಕಿನಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿದು ತುಂಗಭದ್ರಾ ನದಿಯನ್ನು ಸೇರುವುದು. ತಾಲ್ಲೂಕಿನ ಉತ್ತರದ ಗಡಿಯಲ್ಲಿ ಮಸ್ಕಿನದಿ ಅಥವಾ ಹಿರೇಹಳ್ಳ ಪಶ್ಚಿಮದಿಂದ ಪೂರ್ವಕ್ಕೆ ಹರಿದು ಮಾನ್ವಿ ತಾಲ್ಲೂಕನ್ನು ಬೇರ್ಪಡಿಸಿ ತುಂಗಭದ್ರಾ ನದಿಯನ್ನು ಕೂಡಿಕೊಳ್ಳುವುದು. ವರ್ಷದಲ್ಲಿ ಹೆಚ್ಚುಕಾಲ ಒಣಹವೆ ಇರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 573.20 ಮಿಮೀ. ತಾಲ್ಲೂಕಿನಲ್ಲಿ ತುಂಗಭದ್ರಾ ಎಡದಂಡೆಯ ಮುಖ್ಯನಾಲೆ ಹಾದುಹೋಗಿದ್ದು ತಾಲ್ಲೂಕಿನ ಒಟ್ಟು 172 ಗ್ರಾಮಗಳಲ್ಲಿ 146 ಗ್ರಾಮಗಳು ಈ ನಾಲೆಯಿಂದ ಉಪಕೃತವಾಗಿವೆ. ಜಿಲ್ಲೆಯ ನೀರಾವರಿಯಲ್ಲಿ ಎರಡನೆಯ ತಾಲ್ಲೂಕಾಗಿ ಸಿಂಧನೂರನ್ನು ಪರಿಗಣಿಸಲಾಗಿದೆ. ನದಿ, ಕಾಲುವೆ, ಬಾವಿ ಈ ಎಲ್ಲವುಗಳಿಂದಲೂ ತಾಲ್ಲೂಕಿನ ವ್ಯವಸಾಯಕ್ಕೆ ನೀರೊದಗಿಸಿಕೊಳ್ಳಲಾಗುತ್ತಿದೆ. ಬೂದು ಕಪ್ಪಿನ ಮತ್ತು ಜೇಡಿಕಪ್ಪುಮಣ್ಣಿನ ಭೂಪ್ರದೇಶವುಳ್ಳ ಈ ತಾಲ್ಲೂಕಿನಲ್ಲಿ ಜೋಳ, ಬತ್ತ, ಸಜ್ಜೆ, ಗೋದಿ, ವಿವಿಧ ದ್ವಿದಳ ಧಾನ್ಯಗಳು, ಕಬ್ಬು, ಸೇಂಗಾ, ಹರಳು, ಹತ್ತಿ ಮುಂತಾದವನ್ನು ಬೆಳೆಯುತ್ತಾರೆ. ತಾಲ್ಲೂಕಿನಲ್ಲಿ ಕೃಷಿ ಅಭಿವೃದ್ಧಿ ಕಾರ್ಯಗಳ ಜೊತೆಗೆ ತೋಟಗಾರಿಕೆಯ ಅಭಿವೃದ್ಧಿಯೂ ಯೋಜನಾರೀತಿ ನಡೆಯುತ್ತಿವೆ. ಮಾವು, ಸಪೋಟ, ಬಾಳೆ, ಅಂಜೂರ, ಸೀಬೆ, ದಾಳಿಂಬೆ ಮುಂತಾದ ವಿವಿಧ ಫಲಗಳನ್ನು ಬೆಳೆಯುವುದಲ್ಲದೆ ತೋಟಗಾರಿಕೆಯ ಆಸಕ್ತರಿಗೆ ಸಹಾಯ ನೀಡುವ ತೋಟಗಾರಿಕೆ ಇಲಾಖೆಯಿದೆ. ಪಶುಪಾಲನೆಯಿದ್ದು ಅದರ ಅಭಿವೃದ್ಧಿಗೆ ನೆರವಾಗಲು ಪಶುವೈದ್ಯಶಾಲೆಗಳಿವೆ. ನದಿ, ನಾಲೆ, ಹಳ್ಳತೊರೆಗಳಿದ್ದು ಅವುಗಳಲ್ಲಿ ಮೀನು ಸಿಕ್ಕುವುದರಿಂದ ಸ್ವಲ್ಪಮಟ್ಟಿಗೆ ಮತ್ಸ್ಯೋದ್ಯಮವಿದೆ.

ತಾಲ್ಲೂಕು ಕೈಗಾರಿಕೆಯಲ್ಲಿ ಪ್ರಮುಖವಾದದ್ದು. ಹತ್ತಿಸಂಸ್ಕರಣ, ಅದಕ್ಕೆ ಸಂಬಂಧಪಟ್ಟ ಕಾರ್ಖಾನೆಗಳಿವೆ. ಅಕ್ಕಿಗಿರಣಿ, ಮರಕೊಯ್ಯುವ ಕಾರ್ಖಾನೆಗಳೂ ಉಂಟು. ಚರ್ಮೋದ್ಯಮ ಮತ್ತು ಇತರ ಗ್ರಾಮೀಣ ಕೈಗಾರಿಕೋದ್ಯಮಗಳುಂಟು. ತಾಲ್ಲೂಕಿನ ವಾಣಿಜ್ಯ, ವ್ಯವಹಾರ, ಕೈಗಾರಿಕೆಗಳಿಗೆ ಆರ್ಥಿಕ ಸಹಕಾರ ನೀಡುವ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ವಿದ್ಯುತ್ತು, ಅಂಚೆ, ತಂತಿ, ದೂರವಾಣಿ, ಪ್ರೌಢಶಾಲೆ, ಆಸ್ಪತ್ರೆ ಮುಂತಾದವುಗಳ ಸೌಲಭ್ಯವಿದೆ. ತಾಲ್ಲೂಕಿನಲ್ಲಿ ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳಿದ್ದು ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ.

ಸಿಂಧನೂರಿನ ಆಗ್ನೇಯಕ್ಕೆ ಸು. 32 ಕಿಮೀ ದೂರದಲ್ಲಿ ತುಂಗಭದ್ರಾ ನದಿಯ ಎಡದಂಡೆಯ ಮೇಲಿರುವ ಮುಕ್ಕುಂದ ಗ್ರಾಮದ ಪ್ರವೇಶ ಮಾರ್ಗದಲ್ಲಿ ಕಲ್ಲಿನ ಕಟ್ಟಡದ ಹಳೆಯ ಮುರಾರಿ ದೇವಾಲಯವಿದೆ. ಈ ಗ್ರಾಮದ ಬಳಿಯ ಬೆಟ್ಟದ ಮೇಲೆ ಒಂದು ದೊಡ್ಡ ಕೋಟೆಯಿದೆ. ಈ ಗ್ರಾಮದ ಬಳಿ ನದಿಯಲ್ಲಿ ಒಂದು ಪುಟ್ಟ ದ್ವೀಪವಿದ್ದು ಅಲ್ಲಿ ಗಡ್ಡಿ ಖಾದರ್‌ವಾಲಿ ಎಂಬವರ ಗೋರಿಯಿದೆ. ಪ್ರತಿವರ್ಷ ಅಲ್ಲಿ ಉರುಸ್ ನಡೆಯುವುದು. ಸಿಂಧನೂರಿನ ಪ್ರದೇಶಕ್ಕೆ 16 ಕಿಮೀ ದೂರದಲ್ಲಿರುವ ತಾದಿಕುಂದ ಒಂದು ನವಶಿಲಾಯುಗ ದಕ್ಷಿಣಕ್ಕೆ ಸೇರಿದ ಒಂದು ಮುಖ್ಯ ಗ್ರಾಮ. ಈ ಗ್ರಾಮದ ಪಶ್ಚಿಮಕ್ಕೆ ಎರಡು ಕಿರುಬೆಟ್ಟಗಳಿದ್ದು ಒಂದರ

ಮೇಲೆ 16ನೆಯ ಅಥವಾ 17ನೆಯ ಶತಮಾನಕ್ಕೆ ಸೇರಿದ ಒಂದು ಸಣ್ಣ ಕೋಟೆಯಿದೆ. ಈ ಎರಡು ಬೆಟ್ಟಗಳ ನಡುವಿನ ಕಣಿವೆಯಲ್ಲಿ ಮತ್ತು ಕೋಟೆಯಿರುವ ಬೆಟ್ಟದ ಇಳಿಜಾರಿನಲ್ಲಿ ಅನೇಕ ಪುರಾತನ ಅವಶೇಷಗಳು ದೊರಕಿವೆ. ಸಿಂಧನೂರಿನ ಆಗ್ನೇಯಕ್ಕೆ 24 ಕಿಮೀ ದೂರದಲ್ಲಿರುವ ಸೋಮಲಾಪುರದ ಬೆಟ್ಟದ ತಡಿಯಲ್ಲಿರುವ ಅಂಬಾದೇವಿ ದೇವಾಲಯ ಬಹು ಪ್ರಸಿದ್ಧ. ಪ್ರತಿವರ್ಷ ಪುಷ್ಯಮಾಸದಲ್ಲಿ ಇಲ್ಲಿ ಜಾತ್ರೆ ಸೇರುವುದು.

ಸಿಂಧನೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಗಂಗಾವತಿ–ಮಾನ್ವಿ ರಾಜ್ಯಹೆದ್ದಾರಿಯ ಮಧ್ಯದಲ್ಲಿ ರಾಯಚೂರಿನ ನೈಋತ್ಯಕ್ಕೆ 87 ಕಿಮೀ ದೂರದಲ್ಲಿದೆ. ಸಿಂಧನೂರು ಪಟ್ಟಣದಲ್ಲಿ 31,376 ಮಂದಿ ಗಂಡಸರು, 29,916 ಮಂದಿ ಹೆಂಗಸರಿದ್ದು ಒಟ್ಟು ಜನಸಂಖ್ಯೆ 61,262.

ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ಇಲ್ಲಿಂದ ಉತ್ತಮ ರಸ್ತೆ ಸಂಪರ್ಕವಿದ್ದು ಇದೊಂದು ಮುಖ್ಯ ವ್ಯಾಪಾರ ಕೇಂದ್ರವಾಗಿದೆ. ಹತ್ತಿ, ಸೇಂಗಾ ಮತ್ತು ಬತ್ತ ಇಲ್ಲಿನ ಮುಖ್ಯ ವ್ಯಾಪಾರ ಬೆಳೆಗಳು. ವಿದ್ಯುತ್ತು, ಅಂಚೆ, ದೂರವಾಣಿ, ತಂತಿ, ಆಸ್ಪತ್ರೆ, ಔಷಧಾಲಯ, ಪ್ರೌಢಶಾಲೆ, ಉಪಾಧ್ಯಾಯ ತರಬೇತಿ ಶಾಲೆ, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕು ಮುಂತಾದ ಸೌಲಭ್ಯಗಳು ಇಲ್ಲಿವೆ. ಸಿಂಧನೂರು ತುಂಗಭದ್ರಾ ಯೋಜನೆಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಒಂದು ಮುಖ್ಯ ಪಟ್ಟಣ. ಈ ಪಟ್ಟಣದಿಂದ ಸುಮಾರು ಒಂದು ಕಿಮೀ ದೂರದಲ್ಲಿ ಔರಂಗಜೇಬನ ಕಾಲದಲ್ಲಿ ಕಟ್ಟಿದ್ದೆಂದು ಹೇಳುವ ಒಂದು ಮಸೀದಿ ಇದೆ. ಈ ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ. (ಎನ್.ಸಿ.ವಿ.)

**ಸಿಂಹ, ಎಚ್.ಎಲ್.ಎನ್.:** 1904–72. ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ನಟ, ನಿರ್ಮಾಪಕ, ನಿರ್ದೇಶಕ.ಇವರು 1904ರಲ್ಲಿ ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಜನಿಸಿದರು. ಲಕ್ಷ್ಮೀನರಸಿಂಹ ಎಂಬುದು ಇವರ ಹುಟ್ಟು ಹೆಸರು. ಇವರ ತಂದೆ ಎಚ್. ನರಸಿಂಹಯ್ಯನವರು ಸರ್ಕಾರಿ ಉದ್ಯೋಗದಲ್ಲಿದ್ದರು. ಸಿಂಹ ಅವರಿಗೆ ಬಾಲ್ಯದಿಂದಲೂ ನಾಟಕ ಕಲೆಯ ಬಗ್ಗೆ ವ್ಯಾಮೋಹ. ಮೆತೋಡಿಸ್ಟ್ ಮಿಷನ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಇವರಿಗೆ ಶಾಲಾ ನಾಟಕವೊಂದರಲ್ಲಿ ಅಭಿನಯಿಸಲು ದೊರೆತ ಅವಕಾಶ ತಪ್ಪಿಹೋಯಿತು. ಆಗ ಇವರು ರೊಚ್ಚಿನಿಂದ ಶಾಲಾ ಪ್ರಾರ್ಥನಾ ಸಭೆಯಲ್ಲಿಯೇ ಕುಳಿತು ಡೆಸ್ಟಿನಿ ರೂಲ್ಸ್ ಹ್ಯುಮ್ಯಾನಿಟಿ ಎಂಬ ನಾಟಕವನ್ನು ಇಂಗ್ಲಿಷಿನಲ್ಲಿ ಬರೆದು ಅಂದೇ ಅಭ್ಯಸಿಸಿ ಅಭಿನಯಿಸಿದರು. ಇವರ ಸಹಪಾಠಿ ಮಹಮದ್ ಪೀರ್ ಅವರೂ ಈ ನಾಟಕದಲ್ಲಿ ಪಾತ್ರವಹಿಸಿದ್ದರು. ಶಾಲೆಯ ಪ್ರಿನ್ಸಿಪಾಲ್ ರೆವೆರೆಂಡ್ ಸ್ಪೆನ್ಸರ್ ಅವರು ಸಿಂಹ ಅವರ ಪ್ರತಿಭೆಯನ್ನು ಮೆಚ್ಚಿಕೊಂಡರು. ಅಭಿನಯ ಶಿರೋಮಣಿ ವರದಾಚಾರ್ಯರ ನಾಟಕಗಳನ್ನು ನೋಡಿದ ಅನಂತರ ಇವರಿಗೆ ನಾಟಕಗಳಲ್ಲಿ ಹೆಚ್ಚು ಆಸಕ್ತಿ ಬಲಿಯಿತು. ಚನ್ನಪಟ್ಟಣದ ಗುರಿಕಾರ್ ಅವರ ಭಾರತ ಜನಮನೋಲ್ಲಾಸಿನಿ ಎಂಬ ನಾಟಕ ಸಂಸ್ಥೆ ಪ್ರದರ್ಶಿಸುತ್ತಿದ್ದ ನಾಟಕಗಳನ್ನು ವೀಕ್ಷಿಸಿ ತಮ್ಮನ್ನು ನಾಟಕರಂಗಕ್ಕೇ ಅರ್ಪಿಸಿಕೊಳ್ಳಲು ನಿಶ್ಚಯಿಸಿದರು. ಈ ಕಂಪನಿಯಲ್ಲಿ ಮಹಮದ್ ಪೀರ್ ಅವರು ನಿರ್ವಹಿಸುತ್ತಿದ್ದ ಹಾಸ್ಯಪಾತ್ರಗಳು ಇವರ ಆಸಕ್ತಿಯನ್ನು ಪೂರ್ಣವಾಗಿ ಕೆರಳಿಸಿದವು. ಕೆಲಕಾಲ ಭಾರತ ಜನಮನೋಲ್ಲಾಸಿನಿ ಕಂಪನಿಯಲ್ಲಿ ಸೇವೆಗೈದರು. ಅನಂತರ ಸಿ.ಬಿ. ಮಲ್ಲಪ್ಪನವರ ಕಂಪನಿ ಹಾಗೂ ಗುಬ್ಬಿ ಕಂಪನಿಯಲ್ಲಿ ತಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳತೊಡಗಿದರು. ಈ ವೇಳೆಗಾಗಲೇ ಮಹಮದ್ ಪೀರ್ ಅವರ ಪ್ರತಿಭೆ, ಉತ್ಸಾಹ, ಆದರ್ಶಗಳು ಇವರನ್ನು ಪ್ರಬಲವಾಗಿ ಆಕರ್ಷಿಸಿದ್ದು ಪೀರರ ಸ್ವಂತ ಸಂಸ್ಥೆಯಾದ ಚಂದ್ರಕಲಾ ನಾಟಕ ಮಂಡಳಿಗೆ ಪದಾರ್ಪಣ ಮಾಡಿದರು. ಕನ್ನಡ ರಂಗಭೂಮಿಯಲ್ಲಿ ಕ್ರಾಂತಿ ಎಬ್ಬಿಸುವಂಥ ಮೂರೂವರೆ ಗಂಟೆಗಳ ಅವಧಿಯ ಸಾಮಾಜಿಕ ನಾಟಕವೊಂದನ್ನು ಈ ಕಂಪನಿಗೆ ರಚಿಸಿಕೊಡಲು ತೀರ್ಮಾನಿಸಿ 1931ರಲ್ಲಿ ಸಂಸಾರನೌಕ ಎಂಬ ಸಾಮಾಜಿಕ ನಾಟಕವನ್ನು ಬರೆದು ಪೂರ್ಣಗೊಳಿಸಿದರು. ಇದು ವೃತ್ತಿರಂಗದಲ್ಲಿ ಸರ್ವತ್ರ ವಿಜಯಗಳಿಸಿದ ಮೊದಲ ನಾಟಕವೆನಿಸಿತು. ಈ ನಾಟಕದಲ್ಲಿ ಮಾಧುವಾಗಿ ಇವರೂ ಸುಂದರನಾಗಿ ಪೀರ್ ಅವರೂ ಅಭಿನಯಿಸಿ ಸಂಗೀತ ಬಾಹುಳ್ಯದ ದೃಢಮುಷ್ಟಿಯಿಂದ ಕೂಡಿದ್ದ ವೃತ್ತಿರಂಗವನ್ನು ಗದ್ಯ ನಾಟಕಗಳ ಕಡೆ ತಿರುಗಿಸಿದರು. ಕಂಪನಿಯ ಜನಪ್ರಿಯ ನಾಟಕಗಳೆನಿಸಿದ್ದ ಸಾಮ್ರಾಟ್ ಷಾಜಹಾನ್ ಮತ್ತು ಗೌತಮಬುದ್ಧ ನಾಟಕಗಳಲ್ಲಿ ಷಾಜಹಾನ್ ಮತ್ತು ಚೆನ್ನನ ಪಾತ್ರಗಳನ್ನು ನಿರ್ವಹಿಸಿ ಪ್ರೇಕ್ಷಕರ ಕಣ್ಣಲ್ಲಿ ಶಕ್ತಿಶಾಲಿ ನಟ ಎನಿಸಿಕೊಂಡರು. ಸಂಸಾರನೌಕ ಕನ್ನಡದಲ್ಲಿ ಅದ್ಭುತ ವಿಜಯಗಳಿಸಿತಲ್ಲದೆ ತಮಿಳಿಗೂ ಭಾಷಾಂತರಗೊಂಡಿತು. ತಮಿಳುನಾಡಿನಲ್ಲಿ ನೂರಾರು ಬಾರಿ ಯಶಸ್ವಿಯಾಗಿ ಪ್ರದರ್ಶಿತವಾಯಿತು. ದಾಕ್ಷಿಣಾತ್ಯ ಚಿತ್ರರಂಗದ ಪ್ರಥಮ ಸಾಮಾಜಿಕ ಚಲನಚಿತ್ರವಾಗಿಯೂ ಇದು ನಿರ್ಮಾಣವಾಯಿತು (1936).

ಮಹಮದ್ ಪೀರ್ ಅವರ ಮಂಡಳಿಯಲ್ಲಿ ಕೆಲವು ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತಂದ ಅನಂತರ ತಮ್ಮದೇ ಆದ ಸಿಂಹಾಸ್ ಸೆಲೆಕ್ಟ್ ಆರ್ಟಿಸ್ಟ್ಸ್ ಎಂಬ ನಾಟಕ ವೃಂದವನ್ನು ಕಟ್ಟಿ ಸಂಸಾರನೌಕ, ಅಬ್ಬಾ ಆ ಹುಡುಗಿ, ಷಾಜಹಾನ್ ಮೊದಲಾದ ನಾಟಕಗಳನ್ನು ಕರ್ನಾಟಕಾದ್ಯಂತ ಪ್ರದರ್ಶಿಸತೊಡಗಿದರು. ಷಾಜಹಾನ್ ನಾಟಕವಂತೂ ಅಪಾರ ಜನಪ್ರಿಯತೆ ಗಳಿಸಿತು. ಅಂದು ಕನ್ನಡದ ಅತ್ಯಂತ ಪ್ರಸಾರದ ಜನಪ್ರಿಯ ದಿನಪತ್ರಿಕೆ ಎನಿಸಿದ್ದ ವಿಶ್ವಕರ್ನಾಟಕದ ಸಂಪಾದಕರೂ ಸಂಶೋಧಕರೂ ಸಾಹಿತಿಗಳೂ ಆದ ತಿ.ತಾ. ಶರ್ಮರು 'ಷಾಜಹಾನ್ ಪಾತ್ರಧಾರಿಗಳಾದ ಸಿಂಹ ಅವರು ಯಾವ ದೇಶಕ್ಕೆ ಆಗಲಿ ಭೂಷಣಪ್ರಾಯರು. ಕನ್ನಡಿಗರನೇಕರಿಗೂ ಈ ಪಾತ್ರಚೂಡಾಮಣಿಗಳು ಕಣ್ಣಿಗೆ ಬೀಳದಿದ್ದುದು ಅವರ ದುರದೃಷ್ಟವಲ್ಲ–ಕನ್ನಡ ಜನತೆಯ ದುರದೃಷ್ಟ' ಎಂದು ಆ ಪತ್ರಿಕೆಯಲ್ಲಿ ಉಲ್ಲೇಖಿಸಿದ್ದರು.

ಇವರ ಹಲವಾರು ಸಾಧನೆಗಳಲ್ಲಿ ಚಿತ್ರರಂಗವೂ ಒಂದು. ಮದರಾಸಿನ ದೇವಿ ಫಿಲಂಸ್ ಅವರಿಂದ ನಿರ್ಮಾಣವಾದ ಸಂಸಾರನೌಕ ಇವರು ನಿರ್ದೇಶಿಸಿದ ಮೊದಲ ಕನ್ನಡ ಚಿತ್ರ. ಈ ಚಿತ್ರದ ಮುಖಾಂತರ ಬಿ.ಆರ್. ಪಂತಲು, ಎಂ.ವಿ. ರಾಜಮ್ಮ, ಡಿಕ್ಕಿಮಾಧವರಾವ್, ಎಂ.ಎಸ್. ಮಾಧವರಾವ್ (ತಮಾಷ) ಮೊದಲಾದವರು ಪ್ರಸಿದ್ಧರಾದರು. ಮದರಾಸಿನ ಎ.ವಿ.ಎಂ., ಗುಬ್ಬಿ, ಕರ್ನಾಟಕ ಪ್ರೊಡಕ್ಷನ್ಸ್ ಲಾಂಛನದಡಿ ನಿರ್ಮಾಣವಾದ ಗುಣಸಾಗರಿ ಎಂಬ ಕನ್ನಡ ಚಿತ್ರಕ್ಕೆ ಚಿತ್ರಸಾಹಿತ್ಯ, ನಿರ್ದೇಶನಗಳ ಹೊಣೆಯನ್ನು ಹೊತ್ತವರು ಇವರೇ. ಅನಂತರ ಬೇಡರ ಕಣ್ಣಪ್ಪ ಚಿತ್ರವನ್ನು ನಿರ್ದೇಶಿಸಿದರು. ಈ ಚಿತ್ರದ ಮುಖಾಂತರ ಕನ್ನಡ ಚಿತ್ರರಂಗಕ್ಕೆ ರಾಜಕುಮಾರ್ ಅವರಂಥ ಸತ್ತ್ವಶಾಲಿ ನಟನೊಬ್ಬನನ್ನು ಕೊಡುಗೆಯಾಗಿತ್ತರು. ರಾಜಕುಮಾರರ ಪ್ರತಿಭೆಯನ್ನು ರಂಗಭೂಮಿಯ ಮೇಲೆ ಮೊದಲೇ ಗುರುತಿಸಿದ್ದ ಇವರು ಬೇಡರ ಕಣ್ಣಪ್ಪ ಚಿತ್ರದ ನಾಯಕ ಕಣ್ಣಪ್ಪನ ಪಾತ್ರಕ್ಕೆ ಆಯ್ಕೆಮಾಡಿದರು. ಬೇಡರ ಕಣ್ಣಪ್ಪ ತೆಲುಗಿನಲ್ಲೂ ಹಿಂದಿಯಲ್ಲೂ ಇವರ ನಿರ್ದೇಶನದಲ್ಲೇ

ನಿರ್ಮಾಣಗೊಂಡಿತು. ಅನಂತರ ಸ್ವಂತ ಸಂಸ್ಥೆ ಸ್ಥಾಪಿಸಿ ಅಬ್ಬಾ ಆ ಹುಡುಗಿ ಚಿತ್ರ ನಿರ್ದೇಶಿಸಿದರು. ಪಂಡರಿಬಾಯಿ ಅವರ ಸ್ವಂತ ಚಿತ್ರ 'ತೇಜಸ್ವಿನಿ'ಯ ನಿರ್ದೇಶನದ ಹೊಣೆ ಹೊತ್ತವರೂ ಇವರೇ. ಅನುಗ್ರಹ ಇವರು ನಿರ್ದೇಶಿಸಿದ ಕಡೆಯ ಚಿತ್ರ. ರತ್ನಹಾರ ಎಂಬ ಸ್ವಂತ ಚಿತ್ರದ ಸಿದ್ಧತೆಯಲ್ಲಿರುವಾಗಲೇ ಇವರು 1972 ಜುಲೈ 2ರಂದು ನಿಧನ ಹೊಂದಿದರು. 1969ರಲ್ಲಿ ಇವರಿಗೆ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಲಭಿಸಿತು. 2004ರಲ್ಲಿ ಕನ್ನಡ ಚಿತ್ರರಂಗ ಮತ್ತು ರಂಗಭೂಮಿಗಳು ಇವರ ಜನ್ಮಶತಾಬ್ದಿಯನ್ನು ಆಚರಿಸಿದವು. (ಎಸ್.ಎಚ್.ವಿ.)

**ಸಿಂಹ, ಸಿ.ಆರ್.:** 1942– . ಸುಪ್ರಸಿದ್ಧ ರಂಗಭೂಮಿ ಕಲಾವಿದ, ಚಿತ್ರನಟ ಹಾಗೂ ನಿರ್ದೇಶಕರು. ಬೆಂಗಳೂರಿನಲ್ಲಿ 1942 ಜೂನ್ 6ರಂದು ಜನಿಸಿದರು. ಬಾಲ್ಯದಿಂದಲೂ ನಾಟಕಾಭಿನಯದಲ್ಲಿ ಅತೀವ ಆಸಕ್ತಿ ಹೊಂದಿದ್ದ ಇವರಿಗೆ ನಾಟಕಕಾರರಾಗಿದ್ದ ಇವರ ತಾತ ಸಿ.ಎನ್.ಶಾಸ್ತ್ರಿಯವರ ಪ್ರೋತ್ಸಾಹ ದೊರೆಯಿತು. ತಾತ ರಚಿಸಿದ ವಿಶ್ವವ್ಯವಸ್ಥೆ ಎಂಬ ಮಕ್ಕಳ ನಾಟಕದಲ್ಲಿ ತಮ್ಮ 11ನೆಯ ವಯಸ್ಸಿನಲ್ಲಿಯೇ ಇವರು ಮೊಟ್ಟಮೊದಲು ಅಭಿನಯಿಸಿದರು. ಬೆಂಗಳೂರಿನ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಕಾಲೇಜಿನ ಹಿಸ್ಟ್ರಿಯಾನಿಕ್ ಕ್ಲಬ್‌ನ ಆಶ್ರಯದಲ್ಲಿ ಬಹದ್ದೂರ್ ಗಂಡ ಮತ್ತು ಮನವೆಂಬ ಮರ್ಕಟ ಎಂಬ ನಾಟಕಗಳಲ್ಲಿ ಅಭಿನಯಿಸಿದರು. ಅನಂತರ ಗಿರೀಶ ಕಾರ್ನಾಡ್ ಅವರ ತುಘಲಕ್ ನಾಟಕದಲ್ಲಿ ಅತ್ಯುತ್ತಮವಾಗಿ ಅಭಿನಯಿಸಿ (1969) ಯಶಸ್ಸಿನ ಕಡೆಗೆ ಹೆಜ್ಜೆಹಾಕಿದರು.



ಇವರು ನಟರಂಗ ಎಂಬ ನಾಟ್ಯಸಂಘವನ್ನು ಪ್ರಾರಂಭಿಸಿ (1972) ಕನ್ನಡ ರಂಗಭೂಮಿಗೆ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದಾರೆ. ಈ ನಾಟ್ಯಸಂಘದ ಮೂಲಕ ಇವರು ನಿರ್ದೇಶಿಸಿ ನಟಿಸಿದ ಪ್ರಮುಖ ನಾಟಕಗಳಿವು: ಮಾಸ್ತಿಯವರ ಕಾಕನಕೋಟೆ, ಕಾರ್ನಾಡರ ತುಘಲಕ್ ಮತ್ತು ತಲೆದಂಡ, ಲಂಕೇಶರ ಸಂಕ್ರಾಂತಿ, ಬೆಕೆಟ್‌ನ ವೇಟಿಂಗ್ ಫಾರ್ ಗೋಡೊ, ಷೇಕ್ಸ್‌ಪಿಯರನ ಮಿಡ್‌ಸಮ್ಮರ್ ನೈಟ್ಸ್‌ಡ್ರೀಮ್, ಒಥೆಲೊ, ಬ್ರೆಕ್ಟ್‌ನ ಕಕೇಷಿಯನ್ ಚಾಕ್‌ಸರ್ಕಲ್, ಶೂದ್ರಕನ ಮೃಚ್ಛಕಟಿಕ ಮೊದಲಾದವು. ಷೇಕ್ಸ್‌ಪಿಯರನ ಆಧುನಿಕ ಭಾಷಾಂತರಿತ ನಾಟಕಗಳನ್ನು ಕರ್ನಾಟಕದಲ್ಲಿ ಮೊದಲ ಬಾರಿಗೆ ರಂಗಭೂಮಿಯ ಮೇಲೆ ತಂದು ನಿರ್ದೇಶಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ನಾಟಕಗಳು ದೇಶದ ಹಲವಾರು ಕೇಂದ್ರಗಳಲ್ಲಿ ಪ್ರದರ್ಶನಗೊಂಡಿವೆ. ಇವರ ನಿರ್ದೇಶನದ 'ತುಘಲಕ್' ನಾಟಕ 100ಕ್ಕೂ ಹೆಚ್ಚು ರಂಗಪ್ರಯೋಗ ಕಂಡಿದೆ. 'ಕಾಕನಕೋಟೆ' ಇವರು ಪ್ರಥಮವಾಗಿ ನಿರ್ದೇಶಿಸಿದ ಕಲಾತ್ಮಕ ಕನ್ನಡ ವರ್ಣಚಿತ್ರ. ಇದು ಕಥೆ, ನಿರ್ದೇಶನ ಮತ್ತು ನಟನೆಗಾಗಿ ಮೂರು ರಾಜ್ಯಪ್ರಶಸ್ತಿಗಳನ್ನು ಗಳಿಸಿತು. ಮದರಾಸಿನಲ್ಲಿ ನಡೆದ ಅಂತಾರಾಷ್ಟ್ರೀಯ ಹಬ್ಬದ ಭಾರತ ಪನೋರಮದಲ್ಲಿ (1978) ಕೂಡ ಪ್ರದರ್ಶನಗೊಂಡಿತು.

ಇವರು 1983ರಲ್ಲಿ ವೇದಿಕೆ ಎಂಬ ನಾಟಕ ಮಂಡಳಿಯನ್ನು ರಚಿಸಿ ಕನ್ನಡದ ಹೆಸರಾಂತ ನಾಟಕಕಾರರಾದ ಟಿ.ಪಿ.ಕೈಲಾಸಂ ಅವರನ್ನು ಕುರಿತು 'ಟಿಪಿಕಲ್ ಟಿ.ಪಿ.ಕೈಲಾಸಂ' ನಾಟಕವನ್ನು ನಿರ್ದೇಶಿಸಿದರು. ಈ ನಾಟಕದಲ್ಲಿ ತಾವೇ ಕೈಲಾಸಂ ಪಾತ್ರವನ್ನು ಅಭಿನಯಿಸುವ ಮೂಲಕ ಕೈಲಾಸಂ ಅವರ ದರ್ಶನವನ್ನು ನಾಡಿನ ಜನತೆಗೆ ತೋರಿಸಿದ ಕೀರ್ತಿ ಇವರದು. ದೆಹಲಿಯಲ್ಲಿ ನಡೆದ ರಾಷ್ಟ್ರೀಯ ನಾಟಕೋತ್ಸವದಲ್ಲಿ ಈ ನಾಟಕ ಪ್ರದರ್ಶಿತವಾಯಿತು. ಈ ನಾಟಕದ ಪ್ರಯೋಗ ಭಾರತವಷ್ಟೇ ಅಲ್ಲದೆ ಅಮೆರಿಕ, ಕೆನಡ, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿಯೂ ಯಶಸ್ಸು ಗಳಿಸಿತು. ಮೀಸೆ ಬಂದೋರು, ಭೈರವಿ, ಕರ್ಣ, ರಸಋಷಿ, ಕೋಲ್ಮಿಂಚು, ಅಗ್ನಿ ಮತ್ತು ಮಳೆ, ಹಾವು–ಏಣಿ ಮೊದಲಾದ ಹಲವಾರು ಹೆಸರಾಂತ ನಾಟಕಗಳು 'ವೇದಿಕೆ' ನಾಟಕ ಮಂಡಳಿಯಿಂದ ಪ್ರದರ್ಶನಗೊಂಡಿವೆ. ಈ ನಾಟಕ ಮಂಡಳಿ ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. 'ವೀಕ್ ಎಂಡ್ ಥಿಯೇಟರ್' ಹೆಸರಿನಲ್ಲಿ ವಾರಾಂತ್ಯದ ಪ್ರತಿ ಶನಿವಾರ ಬೆಂಗಳೂರಿನ ಎಚ್.ಎನ್.ಕಲಾಕ್ಷೇತ್ರದಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತದೆ. ಇದಲ್ಲದೆ ಎರಡುಮೂರು ತಿಂಗಳಿಗೊಮ್ಮೆ ಹೊಸನಾಟಕಗಳನ್ನು ಪ್ರಯೋಗಮಾಡುವ ಪ್ರಯತ್ನವೂ ಇದರಿಂದ ನಡೆಯುತ್ತಿದೆ. 2002 ಮಾರ್ಚ್ 2ರಂದು 'ವೇದಿಕೆ ರಂಗಮಾಲಿಕೆ' ಅಸ್ತಿತ್ವಕ್ಕೆ ಬಂದು ಇದರ ಆಶ್ರಯದಲ್ಲಿ ವರ್ಷವಿಡೀ ನಾಟಕಗಳ ಪ್ರಯೋಗ ನಡೆಯುತ್ತಿದೆ.

ಲಿಟಲ್ ಥಿಯೇಟರ್‌ನ ಸ್ಥಾಪಕ ಸದಸ್ಯರೂ ಆದ (1960) ಇವರು ಮೋಲಿಯೇರ್, ಬರ್ನಾರ್ಡ್‌ಷಾ, ಎಡ್ವರ್ಡ್, ಆಲ್ ಬೀ, ನೇಲ್‌ಸೈಮನ್ ಮೊದಲಾದ ಹಲವು ಪಾಶ್ಚಾತ್ಯ ನಾಟಕಕಾರರ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ಮೀಸೆ ಬಂದೋರು ಎಂಬುದು ನೇಲ್‌ಸೈಮನ್‌ನ ಕಮ್ ಬ್ಲೊ ಯುವರ್ ಹಾರ್ನ್ ಎಂಬ ನಾಟಕದ ಕನ್ನಡ ರೂಪಾಂತರ. ಹಾಗೆಯೇ ಪೀಟರ್ ಶಫ಼ರ್ಸ್‌ನ 'ಅಮೆಡ್ಯೂಸ್' ನಾಟಕವನ್ನು ಇವರು ಭೈರವಿ ಎಂದು ಕನ್ನಡಕ್ಕೆ ರೂಪಾಂತರಿಸಿದ್ದಾರೆ.

ಇವರು ಚಿತ್ರರಂಗವನ್ನು ಪ್ರವೇಶಿಸಿದ್ದು ಸಂಸ್ಕಾರ ಚಲನಚಿತ್ರದ ಮೂಲಕ (1970). ರಾಜ್ಯ ಹಾಗೂ ರಾಷ್ಟ್ರಪ್ರಶಸ್ತಿಗಳನ್ನು ಗಳಿಸಿದ ಸಂಸ್ಕಾರ (ಗಿರೀಶ ಕಾರ್ನಾಡ್), ಸಂಕಲ್ಪ(ಪಿ.ವಿ.ಎನ್.), ಬರ(ಎಂ.ಎಸ್.ಸತ್ಯು), ಚಿತೆಗೂಚಿಂತೆ (ಎಂ.ಎಸ್.ಸತ್ಯು) ಮೊದಲಾದ ಚಿತ್ರಗಳು ಇವರ ಅಭಿನಯದ ಪ್ರಭುತ್ವಕ್ಕೆ ನಿದರ್ಶನಗಳಾಗಿವೆ. ನೂರಕ್ಕಿಂತ ಹೆಚ್ಚು ವಾಣಿಜ್ಯ ಚಿತ್ರಗಳಲ್ಲಿ ಇವರು ಅಭಿನಯಿಸಿದ್ದಾರೆ. ಭೂಮಿಗೆ ಬಂದ ಭಗವಂತ, ಸುಖಸಂಸಾರಕ್ಕೆ 12 ಸೂತ್ರಗಳು, ರಾಮಾಪುರದ ರಾಮ, ಇಂದಿನ ರಾಮಾಯಣ, ಶರವೇಗದ ಸರದಾರ, ರಾಯರು ಬಂದರು ಮಾವನ ಮನೆಗೆ – ಇವು ಇಂಥ ಕೆಲವು ಚಿತ್ರಗಳು. ಶಿಕಾರಿ, ಅಶ್ವಮೇಧ, ಕಾಕನಕೋಟೆ ಮೊದಲಾದವು ಇವರ ನಿರ್ದೇಶನದ ಚಿತ್ರಗಳು. ನಾವು ಮನುಜರು, ಪಾತಾಳಗಂಗೆ ಮೊದಲಾದ ಸಾಕ್ಷ್ಯಚಿತ್ರಗಳನ್ನೂ ಇವರು ನಿರ್ದೇಶಿಸಿದ್ದಾರೆ. ವೈದ್ಯೋ ನಾರಾಯಣೋ ಹರಿಃ, ಪ್ರತಿಧ್ವನಿ, ನಾವೆಲ್ಲರೂ ಒಂದೆ, ಮನವೆಂಬ ಮರ್ಕಟ, ಕೈಲಾಸಂ ಮೊದಲಾದವು ಇವರ ನಿರ್ದೇಶನ ಹಾಗೂ ಅಭಿನಯದ ದೂರದರ್ಶನ ಧಾರಾವಾಹಿಗಳು. ಸಾರಜಹಾನ್, ಕೃಷ್ಣಾವತಾರ್, ಘರ್‌ಜಮಾಯ್ – ಮೊದಲಾದ ಹಿಂದಿ ಧಾರಾವಾಹಿಗಳನ್ನೂ, ಬಿ.ಬಿ.ಸಿ. ದೂರದರ್ಶನದ ರ್‍ಯಾಗ್ ಪಿಕರ್ಸ್ ಮೊದಲಾದ ಇಂಗ್ಲಿಷ್ ನಾಟಕಗಳನ್ನೂ ನಿರ್ದೇಶಿಸಿದ್ದಾರೆ. ಕನ್ನಡ ದಿನಪತ್ರಿಕೆ ವಿಜಯಕರ್ನಾಟಕದ 'ನಿಮ್ಮಸಿಂಹ' ಶೀರ್ಷಿಕೆಯ ಅಂಕಣ ಬರೆಹಗಾರರಾಗಿಯೂ ಇವರು ಪ್ರಸಿದ್ಧರು.

ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿನ ಅಪಾರವಾದ ಇವರ ಸೇವೆಗೆ ಸಂದಿರುವ ಪ್ರಶಸ್ತಿ ಗೌರವಗಳು ಹಲವಾರು. ಕರ್ನಾಟಕ ರಾಜ್ಯ ಪ್ರಶಸ್ತಿ (1978), ಕರ್ನಾಟಕ ರಾಜ್ಯನಾಟಕ ಅಕಾಡೆಮಿ ಪ್ರಶಸ್ತಿ (1986), ಶಂಕರಗೌಡ ರಂಗಪ್ರಶಸ್ತಿ (1993), ರಾಜ್ಯೋತ್ಸವ ಪ್ರಶಸ್ತಿ (2000) ಮೊದಲಾದವುಗಳನ್ನು ಹೆಸರಿಸಬಹುದು. (ಎಸ್.ಜಿ.ಪಿ.)

**ಸಿಕಂದರ್ ಆದಿಲ್ ಷಾ:** ಆದಿಲ್ ಶಾಹೀ ವಂಶದ ಕೊನೆಯ ಸುಲ್ತಾನ (1672–86). ಎರಡನೆಯ ಅಲಿ ಆದಿಲ್ ಷಾ 1672ರಲ್ಲಿ ನಿಧನವಾದ ಅನಂತರ ಈತ ಪಟ್ಟಕ್ಕೆ ಬಂದ. ಆಗ ಇವನು ಕೇವಲ

ನಾಲ್ಕು ವರ್ಷದ ಬಾಲಕ. ಈ ಹೊತ್ತಿಗಾಗಲೇ ದಕ್ಷಿಣದಲ್ಲಿ ಪ್ರಬಲವಾಗಿದ್ದ ದಾಕ್ಷಿಣಾತ್ಯ ಮುಸಲ್ಮಾನರೂ ಅಬಿಸೀನಿಯನ್ನರೂ ಒಂದು ಕಡೆ, ಆಫ್ಘನ್ನರು ಮತ್ತೊಂದು ಕಡೆ ಸುಲ್ತಾನನ ಮೇಲೆ ತಮ್ಮ ಪ್ರಭಾವವನ್ನು ಬೀರಲು ಉದ್ಯುಕ್ತರಾಗಿದ್ದರು. ಈ ಸಂಕಷ್ಟಗಳೊಂದಿಗೆ ಮುಗಲರ ಆಕ್ರಮಣವೂ ಒದಗಿಬಂದಿತ್ತು. ಈ ಸಂದರ್ಭದಲ್ಲಿ ಬಾಲಕನಾಗಿದ್ದ ಸುಲ್ತಾನನು ರಾಜ್ಯಾಡಳಿತವನ್ನು ಮಂತ್ರಿಗಳ ವಶಕ್ಕೊಪ್ಪಿಸಬೇಕಾಗಿ ಬಂತು.

ಮುಗಲರ ಸೇನೆ 1676ರಲ್ಲಿ ಬಹದೂರ್ ಖಾನನ ನೇತೃತ್ವದಲ್ಲಿಯೂ 1679ರಲ್ಲಿ ದಿಲೀರ್ ಖಾನನ ನೇತೃತ್ವದಲ್ಲಿಯೂ 1682ರಲ್ಲಿ ಔರಂಗಜೇಬನ ಮಗ ಆಜಮ್‌ನ ನೇತೃತ್ವದಲ್ಲಿಯೂ ಬಿಜಾಪುರದ ಮೇಲೆ ದಾಳಿ ನಡೆಸಿತು. 1684ರಲ್ಲಿ ಶಿವಾಜಿಯ ಮಗ ಸಾಂಬಾಜಿಯ ವಿರುದ್ಧ ಮುಗಲರಿಗೆ ಸಹಾಯ ಮಾಡಬೇಕೆಂದು ಆಗ್ರಹ ಪಡಿಸಿದರೂ ಸಿಕಂದರ್ ಈ ಕೋರಿಕೆಯನ್ನು ನಿರಾಕರಿಸಿ ಮರಾಠರೊಂದಿಗೆ ಸಹಕರಿಸುವುದಾಗಿ ನೇರವಾಗಿಯೇ ತಿಳಿಸಿದ. 1685 ಜನವರಿಯ ಹೊತ್ತಿಗೆ ಯುದ್ಧ ಸನ್ನಾಹ ಮಾಡತೊಡಗಿದ. ಇದೇ ಸುಮಾರಿಗೆ ಸಾಂಬಾಜಿಯ ದಿವಾನ ಮೇಲ್‌ಗಿರಿ ಪಂಡಿತನ ನಾಯಕತ್ವದಲ್ಲಿ ಮರಾಠರ ಸೇನಾ ತುಕಡಿಯೊಂದು ಬಿಜಾಪುರವನ್ನು ತಲುಪಿತು. ಗೋಲ್ಕೊಂಡದ ಸುಲ್ತಾನನೂ ಸಿಕಂದರ್‌ಗೆ ಸಹಾಯ ಒದಗಿಸುವುದಾಗಿ ಆಶ್ವಾಸನೆ ನೀಡಿದ. 1685 ಏಪ್ರಿಲ್ ಸುಮಾರಿಗೆ ಮುಗಲರ ಮತ್ತು ಬಿಜಾಪುರದ ಸುಲ್ತಾನರ ನಡುವಣ ಮಾತುಕತೆಗಳು ಮುರಿದು ಬಿದ್ದುವು. ಮುಗಲರ ಸೇನೆ ಬಿಜಾಪುರವನ್ನು ಮುತ್ತುವ ಸಿದ್ಧತೆಯಲ್ಲಿ ತೊಡಗಿತು. ಮರಾಠರು ಬಿಜಾಪುರದ ಸುಲ್ತಾನನೊಂದಿಗೆ ಕಲೆತು ಮುಗಲರ ದಾಳಿಯನ್ನು ಎದುರಿಸಿದರು. ಒಂದು ವರ್ಷ ಸತತ ಪ್ರಯತ್ನಪಟ್ಟರೂ ಬಿಜಾಪುರ ಮುಗಲರ ವಶವಾಗುವ ಸೂಚನೆಗಳು ಕಂಡುಬರಲಿಲ್ಲ. ಸಿಕಂದರನಿಗೆ ಸಹಾಯ ಮಾಡಿದನೆಂಬ ಕಾರಣದಿಂದ ಗೋಲ್ಕೊಂಡದ ಸುಲ್ತಾನನ ಮೇಲೆ ಮುಗಲರು ದಾಳಿ ನಡೆಸಿದರು. ಈ ಸಮಯದಲ್ಲಿ ಬಿಜಾಪುರದವರು ಸಹಾಯಕ್ಕೆ ಕಳುಹಿಸಿದ್ದ ಸೇನೆಯನ್ನು ಗೋಲ್ಕೊಂಡದ ಸುಲ್ತಾನ ವಾಪಸು ಕರೆಸಿಕೊಂಡ. ಇದು ಸಿಕಂದರನಿಗೆ ಅನನುಕೂಲವನ್ನುಂಟುಮಾಡಿತು. ಈ ವೇಳೆಗೆ ಔರಂಗಜೇಬ್ ಸ್ವತಃ ಯುದ್ಧಭೂಮಿಗೆ ಬಂದು ಯುದ್ಧವನ್ನು ಮುಂದುವರಿಸಿದ. 1686 ಸೆಪ್ಟೆಂಬರ್ ಸುಮಾರಿಗೆ ಸಿಕಂದರ್ ತನ್ನೆಲ್ಲ ಸಾಮರ್ಥ್ಯವನ್ನೂ ಕಳೆದುಕೊಂಡ. ವಿಧಿಯಿಲ್ಲದೆ 1686 ಸೆಪ್ಟೆಂಬರ್ 9 ರಂದು ಔರಂಗಜೇಬನೊಡನೆ ಸಂಧಿಮಾಡಿಕೊಳ್ಳಬೇಕಾಯಿತು. 1686 ಸೆಪ್ಟೆಂಬರ್ 12ರಂದು ಸಿಕಂದರ್ ತನ್ನ ಆಡಳಿತ ಸಮಸ್ತವನ್ನು ಮುಗಲರ ವಶಕ್ಕೊಪ್ಪಿಸಿಕೊಟ್ಟ. 200 ವರ್ಷಗಳ ಕಾಲ ಸ್ವತಂತ್ರವಾಗಿ ಆಳಿದ ಆದಿಲ್ ಶಾಹೀ ಸಂತತಿ ಅಲ್ಲಿಗೆ ಅಂತ್ಯಗೊಂಡಿತು.

ಸಿಕಂದರ್ ಆದಿಲ್ ಷಾ ವೀರ ಯೋಧ. ಕೇವಲ ಹದಿನೆಂಟು ವರ್ಷದ ಯುವಕನಾಗಿದ್ದಾಗ ಹಿರಿಯನೂ ಯುದ್ಧಕುಶಲಿಯೂ ಸಾಮ್ರಾಟನೂ ಆದ ಔರಂಗಜೇಬನ ವಿರುದ್ಧ ದಿಟ್ಟತನದಿಂದ ಹೋರಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಇವನ ಪರಾಕ್ರಮವನ್ನು ಕಂಡು, ಇವನ ವ್ಯಕ್ತಿತ್ವಕ್ಕೆ ಮಾರುಹೋದ ಔರಂಗಜೇಬ್ ಇವನನ್ನು ಮುಗಲರ ಸೇನೆಯಲ್ಲಿ ಖಾನನ ದರ್ಜೆಗೇರಿಸಿ ವಾರ್ಷಿಕ ಜೀವನ ಭತ್ಯವಾಗಿ ಒಂದು ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿದ. ಮುಂದೆ ತನ್ನ ಸೇನೆಯೊಂದಿಗಿರಲು ಅಪ್ಪಣೆ ಮಾಡಿದ. ದೌಲತಾಬಾದಿನ ಬಂದೀಖಾನೆಯಲ್ಲಿ ಕೆಲವು ಕಾಲವಿಟ್ಟಿದ್ದು ಅನಂತರ ಸಿಕಂದರನನ್ನು ಔರಂಗಜೇಬನ ಶಿಬಿರದೊಂದಿಗೆ ಕರೆದೊಯ್ಯಲಾಯಿತು. 1700ರ ಏಪ್ರಿಲ್ 3 ರಂದು ಸತಾರದ ಸಮೀಪದಲ್ಲಿ ಸಿಕಂದರ್ ನಿಧನ ಹೊಂದಿದ. ಆಗ ಇವನಿಗೆ 32 ವರ್ಷ ವಯಸ್ಸು. ಸಿಕಂದರನ ಅಂತಿಮ ಕೋರಿಕೆಯಂತೆ ಇವನ ಪಾರ್ಥಿವ ಶರೀರವನ್ನು ಬಿಜಾಪುರದಲ್ಲಿದ್ದ ಈತನ ಆಧ್ಯಾತ್ಮಿಕ ಗುರು ಷೇಕ್‌ಫಹೀವುಲ್ಲಾನ ಸಮಾಧಿಯ ಸಮೀಪದಲ್ಲಿಯೇ ಸಮಾಧಿ ಮಾಡಲಾಯಿತು. (ಎಮ್.ಎಸ್.ವಿ.)

**ಸಿಡಿ:** ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ, ನಿರ್ದಿಷ್ಟದೈವಕ್ಕೆ ಹೊತ್ತ ಹರಕೆ ತೀರಿಸುವ ಜನಪದ ಉಗ್ರ ಸಂಪ್ರದಾಯಗಳಲ್ಲಿ ಒಂದು. ಈ ಸಂಪ್ರದಾಯ ಶಾಕ್ತೇಯ ಪಂಥದ ಪ್ರಭಾವದಿಂದ ರೂಢಿಗೆ ಬಂದಂತೆ ತಿಳಿಯುತ್ತದೆ. ಸಿಡಿ ಆಡುವುದು ನಿರ್ದಿಷ್ಟ ದೇವತೆಯ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ನಡೆಯುತ್ತದೆ. ಈ ಸಂಪ್ರದಾಯವಿರುವ ಎಲ್ಲ ದೇವತೆಗಳೂ ಮಾರಿ, ದುರ್ಗಿ, ಊರಮ್ಮಗಳೇ ಆಗಿರುವುದು ಕುತೂಹಲದ ಸಂಗತಿ.

ಸಿಡಿಯಲ್ಲಿ ಮುಖ್ಯವಾಗಿ ಬೆನ್ನುಸಿಡಿ, ಬಟ್ಟೆಸಿಡಿ ಎಂಬ ಎರಡು ವಿಧಾನಗಳಿವೆ. ಬೆನ್ಸಿಡಿ ಆಡುವುದು ತುಂಬ ಅಪಾಯಕರ ಹಾಗೂ ಭಯಂಕರ ದೃಶ್ಯ. ಕುಣಿಗಲ್ ತಾಲ್ಲೂಕಿನಲ್ಲಿ ಗುನ್ನಾಗೆರೆ ಎಂಬ ಗ್ರಾಮದಲ್ಲಿ ಬೆನ್ಸಿಡಿಯಾಡುವ ಪರಿಪಾಠವಿದೆ. ಈ ಊರಿನ ಗ್ರಾಮದೇವತೆ ಎಲ್ಲಮ್ಮನ ನಿಷ್ಠಾವಂತ ಭಕ್ತರು ಆ ದೇವತೆಯ ಜಾತ್ರೆಯಂದು ಬೆನ್ಸಿಡಿಯಾಡುತ್ತಾರೆ. ಸಿಡಿಯಾಡುವ ಹರಕೆ ಹೊತ್ತ ಭಕ್ತ ಆ ದಿನ ಸ್ನಾನ, ಮಡಿಗಳೊಂದಿಗೆ ಸಂಜೆಯವರೆಗೆ ಉಪವಾಸವಿದ್ದು ಸಂಜೆಯ ಹೊತ್ತಿಗೆ ಚೆನ್ನಾಗಿ ಹೆಂಡ ಕುಡಿದು, ವೀರಗಚ್ಚೆ ಹಾಕಿ, ಕೋರೆಪೇಟ ಧರಿಸಿ, ಅಂಗವಸ್ತ್ರವನ್ನು ಹೊದ್ದು ಹರೇ ದೋಣಿನ ಮೊರೆತಕ್ಕೆ ತಕ್ಕಂತೆ ಆವೇಶಭರಿತನಾಗಿ ವೀರಗುಣಿತ ಕುಣಿಯುತ್ತ ದೇವಸ್ಥಾನದ ಹತ್ತಿರ ಬರುತ್ತಾನೆ. ರಾತ್ರಿ ಎಂಟು ಗಂಟೆಯ ಸುಮಾರಿಗೆ ಆತ ದೇವರಿಗೆ ಎದುರಾಗಿ ಅಂಗಾತ ಮಲಗಿಕೊಳ್ಳುವನು. ಆಗ ತಲೆತಲಾಂತರದಿಂದ ನಡೆದುಬಂದ ಪರಿಪಾಠದಂತೆ ಆಯಾ ಕಾರ್ಯದ ವಂಶಸ್ಥ ಹಿರಿಯ ಪರಿಣತರು ಬೆನ್ಸಿಡಿಯಾಡುವಾತನ ಬೆನ್ನು(ಹುರಿ)ನರವನ್ನು ಹಿಡಿದು, ಶಸ್ತ್ರದಿಂದ ಅದರ ಹಿಂದಿನ ಭಾಗಕ್ಕೆ ಚುಚ್ಚಿ, ಕಬ್ಬಿಣದ ಕೊಂಡಿಗಳನ್ನು ನರಕ್ಕೆ ಸಿಕ್ಕಿಸುವರು. ಇದೇ ರೀತಿ ಇನ್ನೊಂದು ಭಾಗದ ಬೆನ್ನುಹುರಿ ನರಕ್ಕೂ ಚುಚ್ಚಿದ ಅನಂತರ ಅವನ ಮೇಲೆ ದೇವರ ತೀರ್ಥ ತಳಿಯುವರು. ಆತ ಎದ್ದು ಶ್ರದ್ಧಾಭಕ್ತಿಯಿಂದ ದೇವತೆಗೆ ಕೈಮುಗಿದ ಅನಂತರ ಆತನ ಒಂದು ಕೈಗೆ ಅಡಕೆಯ ಹೊಂಬಾಳೆಯನ್ನೂ ಇನ್ನೊಂದು ಕೈಗೆ ಕತ್ತಿಯನ್ನೂ ಕೊಟ್ಟು ಬೆನ್ನಿಗೆ ನಾಟಿಕೊಂಡಿರುವ ಕಬ್ಬಿಣದ ಕೊಕ್ಕೆಗಳಿಗೆ ಹೊಂದಿಕೊಂಡಿರುವ ಸರಪಳಿಗಳನ್ನು ತುಸು ಬಿಗಿಯಾಗಿ ಹಿಡಿದುಕೊಂಡು ಮುನ್ನಡೆಸುವರು. ಧಗಧಗನೆ ಕೆಂಡ ಕಾರುತ್ತ ಸಿದ್ಧವಾಗಿರುವ ಕೊಂಡವನ್ನು ಆತನಿಂದ ಹಾಯಿಸಿದ ಅನಂತರ, ಸಿಡಿಕಂಬವನ್ನು ನೆಲದತ್ತ ಬಗ್ಗಿಸುವರು. ಕಲ್ಲುಕಂಬದ ನಡುವೆ ನೆಟ್ಟ ತಿರುಗಣೆಗೆ ಅಡ್ಡಲಾಗಿ ಏತದ ಮರದಂತೆ ತೋರುವ ದಪ್ಪ ಮರದ ಮುಂದಿನ ತುದಿಗೆ ಸಿಕ್ಕಿಸಿದ ಕಬ್ಬಿಣದ ಕೊಂಡಿಗೆ ಸಿಡಿಯಾಡುವಾತನ ಬೆನ್ನ ಸರಪಳಿಗಳನ್ನು ಸಮಾಂತರವಾಗಿ ಕಟ್ಟಿ, ಸಿಡಿಕಂಬವನ್ನು ಭೂಮಿಗೆ ಸಮಾಂತರವಾಗಿ ಮೇಲಕ್ಕೆ ಏರಿಸುವರು. ಆಗ ಸಿಡಿಕಂಬಕ್ಕೆ ಬೆನ್ನು ಹಿಂದಾಗಿ ನೇತು ಬಿದ್ದ ಸಿಡಿಯಾಡುವಾತ ಮರಕ್ಕೆ ಕಾಲು ಮೇಲಾಗಿ ನೇತುಬಿದ್ದ ಬಾವಲಿಯಂತೆ ತೋರುತ್ತಿದ್ದು, ತನಗಾದ ನೋವಿನ ಪರಿವೆಯೇ ಇಲ್ಲದೆ ಅಟ್ಟಹಾಸದಿಂದ ಕತ್ತಿಯನ್ನು ಎಡಬಲಕ್ಕೆ ಬೀಸುತ್ತ, ದೇವತೆಗೆ ಎತ್ತಿ ಎತ್ತಿ ಕೈಮುಗಿಯುತ್ತಿರುತ್ತಾನೆ.

ಅನಂತರ ಸಿಡಿಕಂಬ ಮೆಲ್ಲಗೆ ತಿರುಗಲಾರಂಭಿಸುತ್ತದೆ. ಎಡಗಡೆಯಿಂದ ಬಲಗಡೆಗೆ, ಬಲಗಡೆಯಿಂದ ಎಡಗಡೆಗೆ ಮೂರಾವರ್ತಿ ತಿರುಗಿದ ಅನಂತರ, ಸಿಡಿಯಾಡುವವನನ್ನು ಸಿಡಿಕಂಬದಿಂದ ಕೆಳಗಿಳಿಸುತ್ತಾರೆ. ಅಲ್ಲಿಂದ ಆತನನ್ನು ದೇವರೆದುರು ಕರೆದೊಯ್ದು, ಅಲ್ಲಿ ಬೆನ್ನಿಗೆ ಸಿಕ್ಕಿಸಿದ ಕೊಂಡಿಗಳನ್ನು ತೆಗೆದು, ಗಾಯಗಳಿಗೆ ದೇವರ ಭಂಡಾರವನ್ನು (ಅರಿಸಿನ ಕುಂಕುಮದ ವಿಶೇಷ ಮಿಶ್ರಣ) ಮೆತ್ತಿ ಬಿಳಿಯ ವಸ್ತ್ರದ ಪಟ್ಟಿ ಕಟ್ಟುತ್ತಾರೆ. ಗಾಯಗಳು ಅಲ್ಲಿಂದ ಒಂಬತ್ತು ದಿನಗಳಲ್ಲಿ ಸಂಪೂರ್ಣ ವಾಸಿಯಾಗುತ್ತವಂತೆ. ಅನಂತರ ಯಥಾಕ್ರಮ ಇನ್ನೊಬ್ಬ ಸಿಡಿಯಾಡುವವನಿಗೆ ಬೆನ್ನಿಗೆ ಚುಚ್ಚಿ ಅಣಿಗೊಳಿಸುತ್ತಾರೆ. ಸಿಡಿಯಾಡಿದಾತ ಮಾರನೆಯ ದಿನ ಮದುವೆಯ

ಗಂಡಿನಂತೆ ವೇಷ ಧರಿಸಿಕೊಂಡು ಮನೆಮನೆಯ ಭಿಕ್ಷಕ್ಕೆ ಬರುತ್ತಾನೆ. ಆಗ ಹಳ್ಳಿಯ ಸಮಸ್ತರು ಆತನಿಗೆ ತಮ್ಮ ಕೈಲಾದುದನ್ನು ನೀಡುತ್ತಾರೆ.

ಬಟ್ಟೆ ಸಿಡಿಯಾಡುವುದು ಸುಲಭ ಹಾಗೂ ನಿರಪಾಯಕರ. ಬೆನ್ಸಿಡಿಯಾಡುವವರಂತೆಯೇ ಸ್ನಾನ ಉಪವಾಸಾದಿಗಳನ್ನು ಮಾಡಿದ ಭಕ್ತರು, ಸಿಡಿಕಂಬದ ತುದಿಗೆ ಬಂದು ತಮ್ಮ ದೇಹವನ್ನು ಚಾಚಿ ಮಲಗಿ ಕೊಳ್ಳುತ್ತಾರೆ. ಅವರನ್ನು ಸಿಡಿಕಂಬಕ್ಕೆ ಬಟ್ಟೆಯ ಕಟ್ಟುಗಳಿಂದ ಬಿಗಿದು, ಸಿಡಿಕಂಬ ಏರಿಸಿ ಸುತ್ತ ತಿರುಗಿಸಿ ಸಿಡಿಯಾಡಿಸುತ್ತಾರೆ. ಬಟ್ಟೆಸಿಡಿಯನ್ನು ಹೆಂಗಸರೂ ಆಡಬಹುದೆಂಬುದಕ್ಕೆ ಜನಪದ ಗೀತೆಗಳು ನಿದರ್ಶನ ಒದಗಿಸುತ್ತವೆ. ಬೆನ್ಸಿಡಿ ಮಾತ್ರ ಗಂಡುಗಳ ವೀರಕ್ಷೇತ್ರ.

ಸಿಡಿಯಾಡುವುದರ ಜೊತೆಗೆ ಹಿಂದೆ ಸಿಡಿದಲೆ ಕೊಡುವ ಸಂಪ್ರದಾಯವೂ ಕರ್ನಾಟಕದಲ್ಲಿ ರೂಢಿಯಲ್ಲಿದ್ದುದಕ್ಕೆ ಶಾಸನಾಧಾರವಿದೆ. ಸಿಡಿದಲೆಯಾಗುವ ಹರಕೆಹೊತ್ತ ಜನ ಸಿಡಿಕಂಬಕ್ಕೆ ಕಟ್ಟಿರುತ್ತಿದ್ದ ಹಸಿಬಿದಿರಿನ ತುದಿಯನ್ನು ಬಗ್ಗಿಸಿ ತಮ್ಮ ತಲೆಯನ್ನು ಅದಕ್ಕೆ ಕಟ್ಟಿಸಿಕೊಂಡು, ಕತ್ತನ್ನು ಕತ್ತರಿಸುವಂತೆ ಮಾಡಿ, ತಮ್ಮ ವೀರಭಕ್ತಿ, ಸ್ವಾಮಿನಿಷ್ಠೆಯನ್ನು ಮೆರೆಯುತ್ತಿದ್ದರು. ಅಂಥವರನ್ನು ಕುರಿತು ಶಾಸನಗಳು ಪ್ರಶಂಸೆ ಮಾಡಿವೆ, ಇತರ ಜನತೆ ವೀರದೀಕ್ಷೆ ತೊಡುವಂತೆ ಪ್ರೇರೇಪಿಸಿವೆ. (ಎನ್.ಟಿ.)

**ಸಿದ್ದಯ್ಯ, ಎಚ್.:** –1952. ಹಿಂದಿನ ಮೈಸೂರು ಸಂಸ್ಥಾನದ ರಾಜಕಾರಣದಲ್ಲಿ ಅಜಾತಶತ್ರು, ಸಾತ್ವಿಕ ರಾಜಕಾರಣಿ ಎಂದು ಹೆಸರಾಗಿದ್ದವರು. ಶಿವಮೊಗ್ಗದವರಾದ ಇವರು ಅಲ್ಲಿ ವಕೀಲವೃತ್ತಿಯನ್ನು ಆರಂಭಿಸಿ ಹೆಸರಾಗಿದ್ದರು. ತಮ್ಮ ವಕೀಲಿವೃತ್ತಿಯಲ್ಲಿ ಒಳ್ಳೆಯ ಸಂಪಾದನೆಯಿದ್ದರೂ ಅದನ್ನು ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದಿಂದ ಆಕರ್ಷಿತರಾದರು. ಒಮ್ಮೆ ಇವರು ತಮ್ಮ ವೃತ್ತಿಗೆ ಸಂಬಂಧಿಸಿದ ಕೆಲಸಕ್ಕಾಗಿ ಶಿವಮೊಗ್ಗದಿಂದ ಚನ್ನಗಿರಿಗೆ ಹೋಗಿದ್ದಾಗ ಅಲ್ಲಿ ಶಾಂತವಾಗಿ ನಡೆಯುತ್ತಿದ್ದ ಕಾಂಗ್ರೆಸ್ಸಿನ ಸಭೆಯ ಮೇಲೆ ಪೊಲೀಸರು ನಿಷೇಧಾಜ್ಞೆ ಹೊರಡಿಸಿ ನಡೆದುಕೊಂಡ ರೀತಿಯಿಂದ ತೀವ್ರ ಅಸಮಾಧಾನಗೊಂಡರು. ಮೂಲಭೂತ ಸ್ವಾತಂತ್ರ್ಯಕ್ಕಾಗಿ ಹೋರಾಟ ಅನಿವಾರ್ಯವೆಂದು ಭಾವಿಸಿದ ಇವರು 1938ರಲ್ಲಿ ಅಂದಿನ ಮೈಸೂರು ಸಂಸ್ಥಾನ ಕಾಂಗ್ರೆಸ್‌ಗೆ ಸೇರಿದರು. ಅದೇ ವರ್ಷ ಏಪ್ರಿಲ್‌ನಲ್ಲಿ ಶಿವಪುರದಲ್ಲಿ ಸಮಾವೇಶಗೊಂಡಿದ್ದ ಅಖಿಲ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನದಲ್ಲಿ ಭಾಗವಹಿಸಿ, ಅಲ್ಲಿ ನಡೆದ ಧ್ವಜಸತ್ಯಾಗ್ರಹದಲ್ಲೂ ಪಾಲ್ಗೊಂಡರು. ಅಂದಿನಿಂದ ಇವರು ಸಂಸ್ಥಾನದ ಕಾಂಗ್ರೆಸ್ ಚಳವಳಿಯ ಮುಂಚೂಣಿಯ ನಾಯಕರಲ್ಲೊಬ್ಬರಾದರು. ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ನಡೆದ ಸತ್ಯಾಗ್ರಹಗಳಲ್ಲಿ ಇವರು ಭಾಗವಹಿಸಿ ಸರ್ಕಾರದ ಪ್ರತಿಬಂಧಕಾಜ್ಞೆಗಳನ್ನು ಮುರಿದು ಹಲವು ಬಾರಿ ಜೈಲುವಾಸವನ್ನೂ ಅನುಭವಿಸಿದರು.

ಇವರು 1941–42ರ ಆಗಿನ ರಾಜಕೀಯ ಸಂದಿಗ್ಧ ಸಮಯದಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾದರು. ಆಗ ಸಂಸ್ಥಾನದಾದ್ಯಂತ ಪ್ರವಾಸಮಾಡಿ ಚಳವಳಿಗೆ ಜನರನ್ನು ಹುರಿದುಂಬಿಸಿದರು. ಆ ಸಂದರ್ಭಗಳಲ್ಲಿ ಇವರು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿಚಾರಗಳಿಗೆ ಆಧ್ಯಾತ್ಮಿಕ ವಿಷಯಗಳನ್ನು ಲೇಪನಮಾಡಿ ಮಾಡುತ್ತಿದ್ದ ಭಾಷಣಗಳು ಜನಪ್ರಿಯವಾಗಿದ್ದವು.

ಮೈಸೂರು ಕಾಂಗ್ರೆಸ್ ಆಶ್ರಯದಲ್ಲಿ 1947ರ ಸೆಪ್ಟಂಬರ್‌ನಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಮೈಸೂರು ಚಲೋ ಸತ್ಯಾಗ್ರಹ ಆರಂಭವಾಯಿತು. ಅಂದಿನ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ರೆಡ್ಡಿಯವರ ನಾಯಕತ್ವದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರೂ ಬೆಂಗಳೂರಿನಿಂದ ಹೊರಟು ಪಾದಯಾತ್ರೆಯಲ್ಲಿ ಮೈಸೂರಿಗೆ ಬಂದು ಅರಮನೆ ಮುಂದೆ ಸತ್ಯಾಗ್ರಹ ಮಾಡುವ ಕಾರ್ಯಕ್ರಮವಿತ್ತು. ಈ ತಂಡದಲ್ಲಿ ಇವರೂ ಇದ್ದರು. ಸರ್ಕಾರದವರು ಮೈಸೂರು ಚಲೋ ತಂಡವನ್ನು ಬೆಂಗಳೂರಿನಲ್ಲೇ ಬಂಧಿಸಿದರು. ಆಗ ಇವರೂ ಬಂಧಿತರಾದರು. ಈ ಹೋರಾಟದ ಅನಂತರ ಕೆ.ಸಿ. ರೆಡ್ಡಿಯವರು ರಚಿಸಿದ ಪ್ರಪ್ರಥಮ ಪ್ರಜಾಸತ್ತಾತ್ಮಕ ಮಂತ್ರಿಮಂಡಲದಲ್ಲಿ ಇವರು ಸಚಿವರಾಗಿದ್ದರು. 1952ರ ಪ್ರಥಮ ಮಹಾಚುನಾವಣೆಗಳ ಅನಂತರ ಮೈಸೂರು ವಿಧಾನ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾದ ಇವರು ಆ ಹುದ್ದೆಯಲ್ಲಿದ್ದಾಗಲೇ ನಿಧನರಾದರು. (ಬಿ.ಆರ್.ಪಿ.)

**ಸಿದ್ದಲಿಂಗಯ್ಯ, ಟಿ.:** 1898– . ಸ್ವಾತಂತ್ರ್ಯ ಹೋರಾಟಗಾರರು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದ ಮುಂಚೂಣಿಯಲ್ಲಿದ್ದ ಪ್ರಮುಖರು. 1898ರಲ್ಲಿ ದೊಡ್ಡಬಳ್ಳಾಪುರದಲ್ಲಿ ಜನಿಸಿದರು. ಇವರ ವಿದ್ಯಾಭ್ಯಾಸ ಮೈಸೂರು ಹಾಗೂ ಬೆಂಗಳೂರಿನಲ್ಲಿ ನಡೆಯಿತು. ಮದರಾಸಿನಲ್ಲಿ ಕಾನೂನು ವಿಷಯ ವ್ಯಾಸಂಗ ಮಾಡಿದರು. ಚಿಕ್ಕ ವಯಸ್ಸಿನಲ್ಲೇ ಆನಿಬೆಸೆಂಟರ ಮಾತುಗಳಿಂದ ಪ್ರಭಾವಿತರಾದ ಇವರಲ್ಲಿ ರಾಷ್ಟ್ರಸೇವೆಯ ಆಸೆ ಮೂಡಿತು. 1932ರಲ್ಲಿ ಅಮೆರಿಕಕ್ಕೆ ಭೇಟಿ ಕೊಟ್ಟಾಗ ಅಲ್ಲಿ ಇವರು ವಲಸೆ ಕಾನೂನು ಮುರಿದರೆಂಬ ಕಾರಣದಿಂದ ಒಂದೂವರೆ ತಿಂಗಳು ಜೈಲುವಾಸ ಅನುಭವಿಸಿದರು. ಭಾರತಕ್ಕೆ ವಾಪಸು ಬಂದ ಮೇಲೆ ಸ್ವಾತಂತ್ರ್ಯ ಹೋರಾಟದಲ್ಲಿ ದುಮುಕಿದರು.

1935ರಲ್ಲಿ ಮಹಾತ್ಮಗಾಂಧೀಜಿಯವರು ಕರ್ನಾಟಕಕ್ಕೆ ಬಂದು ಸರ್ದಾರ್ ಪಟೇಲರೊಂದಿಗೆ ನಂದಿಬೆಟ್ಟದಲ್ಲಿ ತಂಗಿದ್ದರು. ಆಗ ಸರ್ದಾರ್ ಪಟೇಲರು ದೊಡ್ಡಬಳ್ಳಾಪುರದಲ್ಲಿ ಮಾಡಿದ ಭಾಷಣದಿಂದ ಪ್ರಭಾವಿತರಾಗಿ ಇವರು ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಸಂಘಟಿಸುವ ಸಂಕಲ್ಪ ಮಾಡಿದರು. ತಗಡೂರು ರಾಮಚಂದ್ರರಾವ್, ವೀರಕೇಸರಿ ಸೀತಾರಾಮಶಾಸ್ತ್ರೀ ಅವರೊಂದಿಗೆ ಕಾಂಗ್ರೆಸ್ ಸಂಘಟನೆಯ ಕಾರ್ಯದಲ್ಲಿ ತೊಡಗಿ ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಜನರನ್ನು ಸಂಘಟಿಸಿದರು. 1938ರಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾದರು. ಮೈಸೂರು ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಅಂದಿನ ಮೈಸೂರು ಕಾಂಗ್ರೆಸ್ಸಿನ ಧ್ಯೇಯವಾಗಿತ್ತು. ಸಂಸ್ಥಾನದಲ್ಲಿ ಹೋರಾಟವನ್ನು ಆರಂಭಿಸುವುದಕ್ಕೆ ಮುನ್ನ ಇವರು ಮಹಾತ್ಮ ಗಾಂಧೀಜಿಯವರನ್ನು ಭೇಟಿಮಾಡಿ ಅವರ ಅಭಿಪ್ರಾಯ ಕೇಳಿದರು. ಗಾಂಧೀಜಿಯವರು ಅಂದಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಇವರ ಮೂಲಕ ಪತ್ರ ಕಳುಹಿಸಿದರು. ಆದರೆ ಅಂದಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ಮಹಾರಾಜರನ್ನು ಭೇಟಿಮಾಡಲು ಇವರಿಗೆ ಅವಕಾಶಕೊಡಲಿಲ್ಲ. ಗಾಂಧೀಜಿಯವರ ಪತ್ರಕ್ಕೆ ಮಹಾರಾಜರಿಂದ ಉತ್ತರವನ್ನೂ ಬರೆಸಲಿಲ್ಲ. ದಿವಾನರ ಈ ಗಡಸು ಧೋರಣೆಯನ್ನು ವಿರೋಧಿಸಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಹೋರಾಟವನ್ನು ಮೈಸೂರು ಕಾಂಗ್ರೆಸ್ ಘೋಷಿಸಿತು. 1938ರ ಏಪ್ರಿಲ್‌ನಲ್ಲಿ ಮದ್ದೂರಿನ ಬಳಿ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನದಲ್ಲಿ ಇವರು ಕಾಂಗ್ರೆಸ್ಸಿನ ತ್ರಿವರ್ಣಧ್ವಜ ಹಾರಿಸುವುದರ ಮೂಲಕ ಸತ್ಯಾಗ್ರಹವನ್ನು ಆರಂಭಿಸಿದರು. ಅನಂತರ ಮುಂದಿನ ಹತ್ತು ವರ್ಷಗಳಲ್ಲಿ ನಾಲ್ಕಾರು ಬಾರಿ ಇವರು ಸತ್ಯಾಗ್ರಹದ ಮುಂಚೂಣಿಯಲ್ಲಿದ್ದು ಜೈಲುವಾಸ ಅನುಭವಿಸಿದರು. ಕರ್ನಾಟಕದ ಇತರ ಪ್ರದೇಶಗಳಲ್ಲೂ ದೇಶೀಯ ಸಂಸ್ಥಾನಗಳಲ್ಲೂ ಓಡಾಡಿ ಸ್ವಾತಂತ್ರ್ಯ ಹೋರಾಟಕ್ಕೆ ಜನರನ್ನು ಸಜ್ಜುಗೊಳಿಸಿದರು.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಅಂತಿಮ ಹೋರಾಟ ನಡೆದು ಕಾಂಗ್ರೆಸ್ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂತು. ಅನಂತರ ಇವರು ಎರಡು ಬಾರಿ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಕೆ.ಸಿ. ರೆಡ್ಡಿ ಮತ್ತು ಕೆ. ಹನುಮಂತಯ್ಯನವರ ಮಂತ್ರಿಮಂಡಲಗಳಲ್ಲಿ ಕೆಲವು ಕಾಲ ಸಚಿವರೂ ಆಗಿದ್ದರು. ಭಾರತದ ರಾಜ್ಯಾಂಗ ರಚನಾಸಭೆಯ ಸದಸ್ಯರಾಗಿಯೂ ರಾಜ್ಯಸಭಾ ಸದಸ್ಯರಾಗಿಯೂ ಚುನಾಯಿತರಾಗಿದ್ದರು. ಇವರು ಭಾರತ ಸೇವಾದಳ, ಭೂದಾನ ಚಳವಳಿ ಮತ್ತಿತರ ವಿಧಾಯಕ ಕಾರ್ಯಗಳಲ್ಲೂ ಆಸ್ಥೆಯುಳ್ಳವರಾಗಿದ್ದರು. (ಬಿ.ಆರ್.ಪಿ.)

**ಸಿದ್ದವನಹಳ್ಳಿ ಕೃಷ್ಣಶರ್ಮ:** 1904–73. ಪ್ರಸಿದ್ಧ ಪತ್ರಿಕೋದ್ಯಮಿ, ಸಾಹಿತಿ, ಗಾಂಧೀವಾದಿ ಮತ್ತು ಸ್ವಾತಂತ್ರ್ಯ ಹೋರಾಟಗಾರರು. ಚಿತ್ರದುರ್ಗ ಜಿಲ್ಲೆಯ ಸಿದ್ದವನಹಳ್ಳಿಯಲ್ಲಿ 1904 ಜುಲೈ 31ರಂದು ಜನಿಸಿದರು. ಮೂಲತಃ ಇವರು ತೆಲುಗು ವೈದಿಕ ಮನೆತನಕ್ಕೆ ಸೇರಿದವರು. ಇವರ ತಂದೆ ರಂಗಾಚಾರ್ಯರು, ತಾಯಿ ಶೇಷಮ್ಮ. ತಮ್ಮ ಹುಟ್ಟೂರಲ್ಲಿ ಆರಂಭದ ಶಿಕ್ಷಣವನ್ನು ಮುಗಿಸಿದ ಇವರು ಅನಂತರ ಚಿತ್ರದುರ್ಗ, ಮೈಸೂರುಗಳಲ್ಲಿ ಪ್ರಥಮ ಬಿ.ಎ. ತರಗತಿಯವರೆಗೆ ಓದಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವಕ್ಕೆ ಒಳಗಾಗಿ ಓದನ್ನು ಬಿಟ್ಟು ದೇಶಸೇವೆಗೆ ದುಮುಕಿದರು. ಜೊತೆಗೆ ಪತ್ರಿಕೋದ್ಯಮ, ಬರೆವಣಿಗೆ ಕೆಲಸವನ್ನೂ ನಡೆಸಿದರು.



1920–21ರ ಸುಮಾರಿಗೆ ಪಂಡಿತ ತಾರಾನಾಥರ ಆಕರ್ಷಣೆಯಿಂದಾಗಿ ಅವರ ಆಶ್ರಮದಲ್ಲಿ ಸ್ವಲ್ಪಕಾಲವಿದ್ದ ಇವರು ಅಲ್ಲಿಂದ ಬಂದ ನಂತರ 1925ರಲ್ಲಿ ವಿವಾಹವಾದರು. 1927ರಲ್ಲಿ ಹೈದರಾಬಾದಿಗೆ ಹೋಗಿ ಅಲ್ಲಿ ಮೆಥಡಿಸ್ಟ್ ಶಾಲೆಯೊಂದರಲ್ಲಿ ಮಾಸ್ತರರಾಗಿ ಕೆಲಸಮಾಡಿದರು; ಅಲ್ಲಿನ ರಾಜಕೀಯ ಆಂದೋಲನದಲ್ಲೂ ಸಕ್ರಿಯವಾಗಿ ಪಾಲುಗೊಂಡರು. ನಿಜಾಮ್ ಆಡಳಿತದ ವಿರುದ್ಧ ಲೇಖನಗಳನ್ನು ಬರೆದು ಜನತೆಯನ್ನು ಪ್ರಚೋದಿಸಿದರು. ಇವರನ್ನು ಬಂಧಿಸಿ ಶಿಕ್ಷಿಸಲು ನಿಜಾಮ್ ಸರ್ಕಾರ ಪಟ್ಟ ಪ್ರಯತ್ನಗಳೆಲ್ಲ ವಿಫಲವಾಯಿತು. ಕಡೆಗೆ ಇವರಿಗೆ ಹೈದರಾಬಾದು ತೊರೆಯುವಂತೆ ಗಡಿಪಾರು ಆಜ್ಞೆಯಾಯಿತು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರವಾಗಿದ್ದ ವಾರ್ಧಾಕ್ಕೆ ಹೋಗಿ ಗಾಂಧೀಜಿಯವರ ಒಡನಾಡಿಯಾಗಿ ಆಶ್ರಮದಲ್ಲಿದ್ದು ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಿದ ಇವರು ರಾಜ್ಯ ಪುನರ್ವಿಂಗಡನಾ ಆಯೋಗದ ಅಧ್ಯಕ್ಷರಾಗಿದ್ದ ಜವಾಹರಲಾಲ್ ನೆಹರೂ ಅವರಿಗೆ ಕಾರ್ಯದರ್ಶಿಯಾಗಿಯೂ (1936–39) ಕೆಲಸ ಮಾಡಿದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ಶಿಕ್ಷೆ ಅನುಭವಿಸಿದರು.

ಕನ್ನಡ ಪತ್ರಿಕೋದ್ಯಮದ ಬೆಳೆವಣಿಗೆಗೆ ಶ್ರಮಿಸಿದವರಲ್ಲಿ ಇವರೂ ಒಬ್ಬರು. ಇವರು ಪ್ರಥಮ ಬಾರಿಗೆ ಕನ್ನಡದಲ್ಲಿ ಹರಿಜನ ಪತ್ರಿಕೆಯನ್ನು ಪ್ರಕಟಿಸಿದರು. ವಿಶ್ವಕರ್ನಾಟಕ ಪತ್ರಿಕೆಗೆ ಕೆಲಕಾಲ ಸಂಪಾದಕರಾಗಿದ್ದರು. ಆ ಪತ್ರಿಕೆಯಲ್ಲಿ ಆಕರ್ಷಕ ಗದ್ಯಶೈಲಿಯಲ್ಲಿ ಇವರು ಬರೆಯುತ್ತಿದ್ದ ಲೇಖನಗಳು, ಸಂಪಾದಕೀಯಗಳು ಬಹುಬೇಗ ಜನಪ್ರಿಯವಾದುವು. ನಾಡಿನ ಎಲ್ಲ ಪ್ರಮುಖ ಪತ್ರಿಕೆಗಳಿಗೂ ಅಂಕಣಕಾರರಾಗಿದ್ದ ಇವರು ಬೆಡಗಿನ ಭಾಷೆಯಲ್ಲಿ ನಿರ್ಮಿಸುತ್ತಿದ್ದ ಶಬ್ದ ಶಿಲ್ಪಗಳು ಆಕರ್ಷಣೀಯವಾಗಿರುತ್ತಿದ್ದುವು. ಇವರು ನಿರ್ವಹಿಸಿದ ಮಾತಿನ ಮಂಟಪ, ಚಿಂತನ–ಮಂಥನ ಎಂಬ ಅಂಕಣಗಳಂತೂ ಸುಪ್ರಸಿದ್ಧವಾದುವು. ವಾಹಿನಿ, ಜಯಕರ್ನಾಟಕ, ನವೋದಯ, ಭೂದಾನ, ಕನ್ನಡನುಡಿ ಈ ಪತ್ರಿಕೆಗಳ ಸಂಪಾದಕರಾಗಿಯೂ ಇವರು ಕೆಲಸಮಾಡಿದ್ದಾರೆ.

ಕನ್ನಡ ಸಂಘ ಸಂಸ್ಥೆಗಳ ಬೆಳೆವಣಿಗೆಗೆ ಇವರು ಶ್ರಮಿಸಿದ್ದಾರೆ. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು (1949–50). ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಗಾಂಧೀ ಸಾಹಿತ್ಯ ಸಂಘವನ್ನೂ ಸಹಕಾರಿ ಸಂಘವನ್ನೂ ಸ್ಥಾಪಿಸಿ ಬೆಳೆಸಿದರು. ಗೋಸೇವಾ ಕ್ಷೇತ್ರದಲ್ಲೂ ಇವರು ಕೆಲಸ ಮಾಡಿದ್ದಾರೆ. ಸಹಕಾರ ಗೋಸೇವಾಕ್ಷೇತ್ರ ಸ್ಥಾಪನೆ ಮತ್ತು ಬೆಳೆವಣಿಗೆಯಲ್ಲಿ ಇವರ ಪಾತ್ರ ಮಹತ್ತ್ವದ್ದು. ಇದಕ್ಕಾಗಿ ಇವರು ರಚಿಸಿದ ಕಾಮಧೇನು ಎಂಬ ಗ್ರಂಥದ ಪೂರ್ಣ ವರಮಾನವನ್ನು ಗೋಸೇವೆಗೆ ಬಿಟ್ಟಿದ್ದಾರೆ.

ಸಂಸ್ಕೃತ, ಕನ್ನಡ, ಇಂಗ್ಲಿಷ್, ಬಂಗಾಲಿ, ಹಿಂದಿ, ತೆಲುಗು, ತಮಿಳು ಮತ್ತು ಉರ್ದು ಭಾಷೆಗಳಲ್ಲಿ ಪರಿಶ್ರಮ ಪಡೆದಿದ್ದ ಇವರು ದೊಡ್ಡ ಪ್ರಮಾಣದಲ್ಲಿ ಸಾಹಿತ್ಯಸೇವೆ ಮಾಡಿದ್ದಾರೆ. ಸಾಹಿತ್ಯ, ಭೂಗೋಳ, ಚರಿತ್ರೆ, ಧರ್ಮ, ಸಹಕಾರ, ಶಿಕ್ಷಣ, ಗಾಂಧೀವಾದ, ಭೂದಾನ, ರಾಜಕೀಯ ಮುಂತಾದ ನಾನಾ ವಿಷಯಗಳ ಬಗ್ಗೆ ಅನೇಕ ಲೇಖನಗಳನ್ನು, ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಧಾರವಾಡದ ಗೆಳೆಯರ ಗುಂಪಿನ ಪ್ರಕಟಣೆಯಾದ ಯತಿರಾಜ ರಾಮಾನುಜ ಎಂಬುದು ಇವರ ಪ್ರಥಮ ಕೃತಿ. ವಾರ್ಧಾದಲ್ಲಿದ್ದಾಗ ಅಲ್ಲಿನ ಪರಿಸರದಿಂದ ಪ್ರಭಾವಿತರಾಗಿ ಪರ್ಣಕುಟಿ, ವಾರ್ಧಾಯಾತ್ರೆ ಎಂಬ ಪುಸ್ತಕಗಳನ್ನು ಬರೆದರು. ವಿನೋಬಾ ಅವರಿಂದ ಪ್ರೇರಿತರಾಗಿ ನವೋದಯ ಯಾತ್ರೆ, ರಾಮನಾಮ, ಆಶ್ರಮಜೀವನ, ಬೆಂಗಳೂರಿನಲ್ಲಿ ವಿನೋಬಾ, ಭೂದಾನ ಮುಂತಾದ ಕಿರುಹೊತ್ತಗೆಗಳನ್ನು ಪ್ರಕಟಿಸಿದ್ದಾರೆ. ಕನ್ನಡದ ಕಿಡಿಗಳು, ದೀಪಮಾಲೆ, ಕುಲದೀಪಕರು ಇವು ಇವರು ಪ್ರಕಟಿಸಿರುವ ವ್ಯಕ್ತಿಚಿತ್ರ ಸಂಕಲನಗಳು. ರಾಜೇಂದ್ರ ಪ್ರಸಾದ್, ಮೋತಿಲಾಲ್, ಜವಾಹರ ಲಾಲ್ ನೆಹರು, ಕಸ್ತೂರಬಾ–ಇವು ಇವರು ಬರೆದಿರುವ ಜೀವನಚರಿತ್ರೆಗಳು. ಭಾಷಾಂತರದಲ್ಲಿ ನುರಿತಿದ್ದ ಇವರು ಗಾಂಧೀಜಿಯವರ ಹಿಂದ್ ಸ್ವರಾಜ್ಯ, ಆರೋಗ್ಯರಹಸ್ಯ, ಸಂವಾದ ಮಾಲೆ, ಆತ್ಮಕಥೆ, ಗೀತಾಮಾತೆ, ಮೀನೂ ಮಸಾನಿಯವರ ನಮ್ಮ ಹಿಂದೂಸ್ತಾನ, ನೆಹರೂರವರ ಗಾಂಧಿ, ಕೃಪಲಾನಿಯವರ ಮೂಲಶಿಕ್ಷಣ ಮುಂತಾದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕೆ.ಎಂ. ಮುನ್ಷಿಯವರ ಕೃಷ್ಣಾವತಾರ ಎಂಬ ಗ್ರಂಥವನ್ನು ಕನ್ನಡದಲ್ಲಿ ಅರ್ಥವತ್ತಾಗಿ ಮೂಡಿಸಿದ್ದಾರೆ. ರಾಮಾವತಾರ ಎಂಬುದು ಇವರ ಸ್ವತಂತ್ರಕೃತಿ. ಸಮಾಜಶಿಕ್ಷಣ, ಗಾಂಧಿ ಮತ್ತು ಕರ್ನಾಟಕ ಎಂಬ ಎರಡು ಗ್ರಂಥಗಳನ್ನು ಇವರು ಸಂಪಾದಿಸಿದ್ದಾರೆ.

ಕೃಷ್ಣಶರ್ಮರಿಗೆ 1973ರಲ್ಲಿ ಸಿದ್ಧಹಸ್ತ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. ಅದೇ ವರ್ಷ ಇವರು ನಿಧನರಾದರು. (ಎ.ಎಮ್.ಪಿ.)

**ಸಿದ್ದಾಪುರ[1]:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆ ತಾಲ್ಲೂಕಿನ ಆಡಳಿತ ಕೇಂದ್ರ. ಕಾರವಾರಕ್ಕೆ ಆಗ್ನೇಯದಲ್ಲಿರುವ ಈ ತಾಲ್ಲೂಕಿನ ಉತ್ತರಕ್ಕೆ ಶಿರಸಿ, ಪಶ್ಚಿಮಕ್ಕೆ ಕುಮಟ ಮತ್ತು ಹೊನ್ನಾವರ ತಾಲ್ಲೂಕುಗಳೂ ಪೂರ್ವ ಮತ್ತು ದಕ್ಷಿಣಕ್ಕೆ ಶಿವಮೊಗ್ಗ ಜಿಲ್ಲೆಯ ಸೊರಬ ಮತ್ತು ಸಾಗರ ತಾಲ್ಲೂಕುಗಳೂ ಇವೆ. ಉಂಬಳಮನೆ, ಸಿದ್ದಾಪುರ ಈ ತಾಲ್ಲೂಕಿನಲ್ಲಿರುವ ಹೋಬಳಿಗಳು. ಒಟ್ಟು 200 ಗ್ರಾಮಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 619 ಚ.ಕಿಮೀ. ಜನಸಂಖ್ಯೆ 1,00,870.

ತಾಲ್ಲೂಕಿನ ದಕ್ಷಿಣದಲ್ಲಿ ಸಿದ್ದಾಪುರ ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಗಡಿಯಾಗಿ ಶರಾವತಿ ನದಿ ಪಶ್ಚಿಮಾಭಿಮುಖವಾಗಿ ಹರಿದು ಮುಂದೆ ಹೊನ್ನಾವರ ತಾಲ್ಲೂಕಿನ ಮುಖಾಂತರ ಅರಬ್ಬೀ ಸಮುದ್ರ ಸೇರುವುದು. ಇಲ್ಲಿಂದ ಶರಾವತಿ ನದಿಯ ಗೇರುಸೊಪ್ಪೆ ಜಲಪಾತ ಸು. 19 ಕಿಮೀ ದೂರದಲ್ಲಿದೆ. ಅಘನಾಶಿನಿ ನದಿಯ ಪೂರ್ವಭಾಗ ಈ ತಾಲ್ಲೂಕಿನ ಈಶಾನ್ಯದಲ್ಲಿ ಪಶ್ಚಿಮಾಭಿಮುಖವಾಗಿ ತದಡಿ ನದಿ ಎಂಬ ಹೆಸರಿನಿಂದ ಮುತ್ತಳ್ಳಿ, ಬಳೂರು ಮತ್ತು ಉಂಚಳ್ಳಿ ಮುಖಾಂತರ ಹರಿದು ಕುಮಟ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ದೊಡ್ಡ ನದಿಗಳಿಗಿಂತ ಇಲ್ಲಿ ಹರಿಯುವ ಅನೇಕ ಸಣ್ಣ ತೊರೆಗಳು ತಾಲ್ಲೂಕಿನ ವ್ಯವಸಾಯಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿವೆ.

ತಾಲ್ಲೂಕಿನ ಪಶ್ಚಿಮ ಭಾಗ ಬೆಟ್ಟಗಳಿಂದ ಕೂಡಿದ್ದು ದಕ್ಷಿಣ ಭಾಗ ದಟ್ಟಕಾಡುಗಳಿಂದ ಕೂಡಿದ್ದರೆ ಉತ್ತರ ಭಾಗ ಕೆಲವೆಡೆ ಬೋಳು ನೆಲದಿಂದ ಕೂಡಿದೆ. ಈ ಪಶ್ಚಿಮ ಬೆಟ್ಟಗಳ ಕಣಿವೆ ಪ್ರದೇಶಗಳೆಲ್ಲ ತೋಟಗಳಿಂದ ತುಂಬಿವೆ. ಮಧ್ಯಭಾಗ ಸಣ್ಣ ಬೆಟ್ಟಗುಡ್ಡಗಳಿಂದ ಕೂಡಿದ್ದು ಸದಾ ಹರಿಯುವ ಝರಿಗಳಿಂದ ಕೂಡಿದೆ. ತಾಲ್ಲೂಕಿನ ಪೂರ್ವಭಾಗ ಬೆಟ್ಟಗುಡ್ಡಗಳು ವಿರಳವಾಗಿರುವ ಮೈದಾನ ಪ್ರದೇಶ. ಈ ಭಾಗವೂ ದಟ್ಟ ಮರಗಿಡಗಳಿಂದ ಬತ್ತ ಕಬ್ಬು ಗದ್ದೆಗಳಿಂದ ಕೂಡಿದೆ. ಅತ್ಯಂತ ಪೂರ್ವ ಮತ್ತು ಆಗ್ನೇಯ ದಿಕ್ಕಿನಲ್ಲಿ ಸದಾ ಹಸುರಾಗಿರುವ ದಟ್ಟ ಕಾಡುಗಳಿಂದ ತುಂಬಿದೆ. ವಾರ್ಷಿಕ ಸರಾಸರಿ ಮಳೆ 2,428 ಮಿಮೀ.

ತಾಲ್ಲೂಕಿನ ಅರಣ್ಯಗಳಲ್ಲಿ ಬೆಲೆಬಾಳುವ, ಉಪಯುಕ್ತ ಮರಗಳು ಬೆಳೆಯುವುವು. ಜೇನು, ಕೆಲವು ಜಾತಿಯ ಫಲಗಳು, ಗಿಡಮೂಲಿಕೆಗಳು ಇತರ ಉತ್ಪನ್ನಗಳು. ಕಾಡುಗಳಲ್ಲಿ ಹುಲಿ, ಚಿಗರೆ, ಮೊಲ, ಕಾಡುಹಂದಿ, ಕಾಡುಕೋಣ, ಕಾಡುಕೋಳಿ, ನರಿ ಮುಂತಾದವುಗಳನ್ನೂ ವಿವಿಧ ಬಗೆಯ ಹಾವುಗಳನ್ನೂ ನೋಡಬಹುದು.

ತಾಲ್ಲೂಕಿನ ಪಶ್ಚಿಮ ಭಾಗದ ಎತ್ತರ ಪ್ರದೇಶಗಳಲ್ಲಿ ಕೆಂಪುಮಣ್ಣಿನ ಭೂಮಿಯೂ ಕಣಿವೆಗಳಲ್ಲಿ ಫಲವತ್ತಾದ ಜಂಬುಮಣ್ಣಿನ ಪ್ರದೇಶವೂ ಇದ್ದು ಪೂರ್ವದಲ್ಲಿ ಕೆಂಪುಮಣ್ಣಿನ ಭೂಪ್ರದೇಶದಿಂದ ಕೂಡಿದೆ. ಬತ್ತ ಮತ್ತು ಕಬ್ಬು ಇಲ್ಲಿನ ಮುಖ್ಯ ಬೆಳೆಗಳು. ತೊಗರಿ, ಹುರುಳಿ ಮುಂತಾದ ಧಾನ್ಯಗಳನ್ನೂ ಬೆಳೆಯುತ್ತಾರೆ. ಅಡಕೆ, ಮೆಣಸು, ಏಲಕ್ಕಿ, ವೀಳೆಯದೆಲೆ, ನಿಂಬೆ ಮತ್ತು ಕಿತ್ತಳೆಹಣ್ಣು ಇವು ತೋಟದ ಬೆಳೆಗಳು.

ಸಿದ್ದಾಪುರ ತಾಲ್ಲೂಕು ಸ್ವಾತಂತ್ರ್ಯ ಸಂಗ್ರಾಮದ ಕರನಿರಾಕರಣೆ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿ ಪ್ರಸಿದ್ಧವಾಗಿದೆ.

ಈ ತಾಲ್ಲೂಕಿನ ಉಂಚಳ್ಳಿ ಜಲಪಾತ ಸಿದ್ದಾಪುರಕ್ಕೆ ಈಶಾನ್ಯದಲ್ಲಿ ಸು.19 ಕಿಮೀ ದೂರದಲ್ಲಿದೆ. ತಾಲ್ಲೂಕಿನ ಗಡಿಯ ಸಮೀಪ ಶರಾವತಿ ನದಿಯ ಜೋಗ ಜಲಪಾತವಿದೆ **(ನೋಡಿ)**. ಸಿದ್ದಾಪುರಕ್ಕೆ ಪಶ್ಚಿಮದಲ್ಲಿ ಸು. 8 ಕಿಮೀ ದೂರದಲ್ಲಿರುವ ಬಿಳಗಿ ಗ್ರಾಮದಲ್ಲಿ ಕೋಟೆ ಮತ್ತು ಅರಮನೆಯ ಅವಶೇಷಗಳಿವೆ. ಇಲ್ಲೊಂದು ಪಾರ್ಶ್ವನಾಥ ಬಸದಿ ಇದೆ. ಸಿದ್ದಾಪುರದ ಪಶ್ಚಿಮಕ್ಕೆ ಸು. 22 ಕಿಮೀ ದೂರದಲ್ಲಿ ಕುಮಟ–ಸಿದ್ದಾಪುರ ಗಡಿಯ ದೊಡ್ಡಮನೆ ಘಾಟ್ ಮಾರ್ಗದಲ್ಲಿ ದೊಡ್ಡ ಮನೆ, ಸಿರಿಗುಣ ಗ್ರಾಮಗಳಿವೆ. ಸಿದ್ದಾಪುರದ ಪಶ್ಚಿಮಕ್ಕೆ ಸುಮಾರು ಒಂದೂವರೆ ಕಿಮೀ ದೂರದಲ್ಲಿರುವ ಹೊಸೂರು ಗ್ರಾಮದಲ್ಲಿ ಒಂದು ಹಳೆಯ ದೇವಾಲಯ ಮತ್ತು ಎರಡು ಶಿಲಾಶಾಸನಗಳಿವೆ. ಬಿಳಗಿಯ ನೈಋತ್ಯಕ್ಕೆ ಸು. 8 ಕಿಮೀ ದೂರದಲ್ಲಿ ಸಮುದ್ರಮಟ್ಟದಿಂದ 457 ಮೀಟರ್ ಎತ್ತರವಿರುವ ಹುಕಾಳಿ ಗುಡ್ಡವಿದೆ. ಬಿಳಗಿಯ ಪಶ್ಚಿಮಕ್ಕೆ ಸು. 5 ಕಿಮೀ ದೂರದಲ್ಲಿರುವ ಇಟಗಿಯಲ್ಲಿ ರಾಮೇಶ್ವರ ದೇವಾಲಯವಿದೆ. ಸಿದ್ದಾಪುರದ ನೈಋತ್ಯಕ್ಕೆ ಸು. 16 ಕಿಮೀ ದೂರದಲ್ಲಿ ಇರುವ ಕೊಡಕಣಿ ಗ್ರಾಮ ಒಂದು ಜೈನಕೇಂದ್ರ. ಇದು ಗೇರುಸೊಪ್ಪೆ ಜಲಪಾತಕ್ಕೆ ಹತ್ತಿರದ ಗ್ರಾಮವಾಗಿದ್ದು ಇಲ್ಲಿ ಒಂದು ಪ್ರವಾಸಿ ಮಂದಿರವಿದೆ. ಸಿದ್ದಾಪುರದ ಉತ್ತರಕ್ಕೆ ಸುಮಾರು 3 ಕಿಮೀ ದೂರದಲ್ಲಿ ಕೊಂಡ್ಲಿ ಗ್ರಾಮವಿದೆ. ಇಲ್ಲೊಂದು ಹಳೆಯ ಕೋಟೆ ಮತ್ತು ಕಾಳಮ್ಮ ದೇವಾಲಯವಿದೆ. ಸಿದ್ದಾಪುರ–ಕುಮಟ ಗಡಿಯ ದೊಡ್ಡಮನೆಯ ಉತ್ತರಕ್ಕೆ ನಿಲಕುಂದ ಘಾಟ್ ಮಾರ್ಗವಿದೆ. ನಿಲಕುಂದ, ಕುಲುಗಾಡಿ ಗ್ರಾಮಗಳು ಈ ಮಾರ್ಗದಲ್ಲಿವೆ.

ಸಿದ್ದಾಪುರ ಈ ತಾಲ್ಲೂಕಿನ ಮುಖ್ಯಸ್ಥಳ ಮತ್ತು ಆಡಳಿತ ಕೇಂದ್ರ. ಶಿವಮೊಗ್ಗ ಜಿಲ್ಲಾ ಗಡಿಯ ಪಶ್ಚಿಮಕ್ಕೆ 5ಕಿಮೀ ದೂರದಲ್ಲಿದೆ. ಪಶ್ಚಿಮಘಟ್ಟಗಳ ಪೂರ್ವ ಇಳಿಜಾರಿನಲ್ಲಿ (ಹರಿಯುವ ವರದಾ ನದಿಯ ಆಸರೆಯಲ್ಲಿ) ಸಹ್ಯಾದ್ರಿಯ ನಿಸರ್ಗ ಸೌಂದರ್ಯದ ಮಡಿಲಲ್ಲಿರುವ ಈ ಊರು ಸಮುದ್ರ ಪಾತಳಿಯಿಂದ 606 ಮೀ ಎತ್ತರದಲ್ಲಿದೆ. ಜೋಗ ಜಲಪಾತ ಇದರ ದಕ್ಷಿಣಕ್ಕೆ 16 ಕಿಮೀ ದೂರದಲ್ಲಿದೆ. ಕಾರವಾರ, ಅಂಕೋಲ, ಕುಮಟ ಪಟ್ಟಣಗಳಿಗೆ ಆಗ್ನೇಯ ದಿಕ್ಕಿನಲ್ಲೂ ಹೊನ್ನಾವರಕ್ಕೆ ಪೂರ್ವದಲ್ಲೂ ಭಟ್ಕಳಕ್ಕೆ ಈಶಾನ್ಯದಲ್ಲೂ ಶಿರಸಿಗೆ ದಕ್ಷಿಣದಲ್ಲೂ ಇರುವ ಈ ಪಟ್ಟಣ ಒಂದು ವ್ಯಾಪಾರ ಕೇಂದ್ರವಾಗಿದೆ. ತಾಳಗುಪ್ಪ ರೈಲುನಿಲ್ದಾಣ ಈ ಪಟ್ಟಣಕ್ಕೆ ಹತ್ತಿರವಾದದ್ದು. ಜನಸಂಖ್ಯೆ 14,050.

ಬಿಳಗಿಯ ಸಿದ್ದಮ್ಮ ರಾಣಿಯ ಹೆಸರಿನಿಂದ ಈ ಊರಿಗೆ ಸಿದ್ದಾಪುರ ಎಂದು ಹೆಸರಾಯಿತು ಎಂದು ಪ್ರತೀತಿ. *

**ಸಿದ್ದಾಪುರ²:** ಕೋಲಾರ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನ ಒಂದು ಗ್ರಾಮ. ಕಸಬೆಗೆ 18 ಕಿಮೀ ದೂರದಲ್ಲಿ ಹಗರಿ ನದಿಯ ದಂಡೆಯಲ್ಲಿದೆ. ಜನಸಂಖ್ಯೆ 2,777. ಇಲ್ಲಿನ ಬ್ರಹ್ಮಗಿರಿ ಬೆಟ್ಟದ ಬುಡದಲ್ಲಿ ಒಂದು ಸುಂದರವಾದ ಜೈನಬಸದಿ ಇದೆ. ಬ್ರಹ್ಮಗಿರಿ ಬೆಟ್ಟದ ನೈಋತ್ಯದಲ್ಲಿ ಮತ್ತೊಂದು ಬೆಟ್ಟವಿದ್ದು ಅದನ್ನು ಪಗಡೆಸಾಲು ಬೆಟ್ಟ ಎಂದು ಕರೆಯುತ್ತಾರೆ. ಇಲ್ಲಿನ ಈಶ್ವರ ದೇವಾಲಯವನ್ನು ಕಟ್ಟಿದ ಅಕ್ಕತಂಗಿಯರು ಇಲ್ಲಿ ಪಗಡೆಯಾಡುತ್ತಿದ್ದುದರಿಂದ ಈ ಹೆಸರು ಬಂದಿದೆ ಎಂದು ಐತಿಹ್ಯ. ಈ ಗ್ರಾಮಕ್ಕೆ ಸಮೀಪದಲ್ಲಿ ಏಮ್ಮೆ ತಮ್ಮಣ್ಣನ ಬೆಟ್ಟವೆಂಬ ಇನ್ನೊಂದು ಬೆಟ್ಟವಿದೆ. ಈ ಬೆಟ್ಟದ ಮೇಲೆ ತ್ರಿಸಂಕೇಶ್ವರ ದೇವಾಲಯ ಮತ್ತು ಒಂದು ಸಣ್ಣ ಅರಮನೆ ಇವೆ. ಇದನ್ನು ಹಿಂದೆ ಒಬ್ಬ ವೀರಶೈವ ಗುರು ನಿರ್ಮಿಸಿದನೆಂದು ಪ್ರತೀತಿ. ಈ ಗ್ರಾಮದಲ್ಲಿ ಔಷಧಾಲಯ, ಅಂಚೆ ಮತ್ತು ತಂತಿ ಕಚೇರಿಗಳು, ಆಸ್ಪತ್ರೆ ಇವೆ. (ಆರ್.ಸಿ.)

**ಸಿದ್ದಾಪುರ³:** ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ. ಮೈಸೂರು–ಮಡಿಕೇರಿ, ಮೈಸೂರು–ವಿರಾಜಪೇಟೆ ಮಾರ್ಗಮಧ್ಯದಲ್ಲಿ ವಿರಾಜಪೇಟೆಯ ಈಶಾನ್ಯಕ್ಕೆ 25 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,872.

ಈ ಗ್ರಾಮದ ಬಳಿ ಗ್ರ್ಯಾನೆಟ್ ದೊರೆಯುತ್ತದೆ. ಗ್ರಾಮದ ಸುತ್ತಣ ಪ್ರದೇಶದಲ್ಲಿ ಬಿದಿರು ಹೆಚ್ಚು ಬೆಳೆಯುವ ಕಾಡುಗಳು ಇವೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಿವೆ. ವಿದ್ಯುತ್ತಿನ ಸೌಲಭ್ಯವಿದೆ. ಪ್ರತಿ ಭಾನುವಾರ ಇಲ್ಲಿ ಸಂತೆ ಸೇರುವುದು. ಸುತ್ತಲ ಗ್ರಾಮಗಳಿಗೆ, ಕಾಫಿ ತೋಟದ ಕೆಲಸಗಾರರಿಗೆ ಇದೊಂದು ಮುಖ್ಯ ವ್ಯಾಪಾರ ಕೇಂದ್ರ. *

**ಸಿದ್ಧಕಸಿದ್ಧಿ:** ಕರ್ನಾಟಕದ ಒಂದು ಅಲೆಮಾರಿ ಜನಾಂಗ; ವೃತ್ತಿ ಗಾಯಕರು. ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಮತ್ತು ಪಶ್ಚಿಮ ಕರಾವಳಿಯ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುವ ಇವರು ಮುಸಲ್ಮಾನ ಪಂಗಡಕ್ಕೆ ಸೇರಿದವರು (ಮೊದಲಿಗೆ ಹಿಂದುಗಳಾಗಿದ್ದವರು). ತಮ್ಮನ್ನು ಜಾತಿಗಾರರು, ಭೈರೂಪಗಾರರು ಎಂದು ಕರೆದುಕೊಳ್ಳುತ್ತಾರೆ. ಮೂಲತಃ ಇವರು ನೀಗ್ರೊ ಬುಡಕಟ್ಟಿನವರು ಎಂಬ ಅಭಿಪ್ರಾಯವಿದೆ.

ಇವರಿಗೆ ಹಿಂದು ಹಬ್ಬ, ಹುಣ್ಣಿಮೆ, ಜಾತ್ರೆಗಳು ಬಹು ಸೇರುತ್ತವೆ. ಇವರ ಹೆಣ್ಣುಮಕ್ಕಳು ಅರಿವೆಯ ಡೇರೆಗಳನ್ನು ತಯಾರಿಸುವ ಕಸಬಿನಲ್ಲಿ ಸಿದ್ಧಹಸ್ತರು. ಪುರುಷರು, ಮಕ್ಕಳು ಸೋಗುಹಾಕಿ ಕಾಣಿಕೆ ಪಡೆಯುವುದರ ಜೊತೆಗೆ ಎಮ್ಮೆಗಳನ್ನು ಸಾಕುವುದು, ವ್ಯಾಪಾರ ಮಾಡುವುದು ಇತ್ಯಾದಿ ಉಪಕಸಬುಗಳನ್ನು ಮಾಡುತ್ತಾರೆ.

ಸಿದ್ಧಕಸಿದ್ಧಿಗಳು ಹಾಕುವ ಸಿದ್ಧಿಯ ಸೋಗು ಮನರಂಜಕವಾದುದು. ಅದು ಹೀಗಿದೆ: ಗಂಡಸೊಬ್ಬ ತನ್ನ ಕುಂಡಿಗಳ ಮೇಲೆ ಅರಿವೆಯ ಉಂಡಿಗಳನ್ನು ಕಟ್ಟಿಕೊಂಡು, ಮೇಲೊಂದು ಅರಿವೆಯನ್ನು ಸುತ್ತಿ ಹಿಂಭಾಗವನ್ನು ಏರುಕುಂಡಿಗಳನ್ನಾಗಿ ಮಾಡಿಕೊಳ್ಳುತ್ತಾನೆ. ಮುಖಕ್ಕೆ ಮರದಲ್ಲಿ ಮಾಡಿದ ದೊಡ್ಡ ಮೂಗನ್ನು ಹಾಕಿಕೊಂಡು, ಅದಕ್ಕೆ ಮೀಸೆಗಡ್ಡಗಳನ್ನು ಅಂಟಿಸಿ ಮುಖವಾಡ ಮಾಡಿಕೊಂಡು ಮುಖಕ್ಕೆ ಹಾಕಿಕೊಳ್ಳುತ್ತಾನೆ. ಜೊತೆ ಪುರುಷನೊಬ್ಬನಿಗೆ ಮುಖಕ್ಕೆ ಬಣ್ಣ ಬಳಿದು, ಸ್ತ್ರೀವೇಷ ಹಾಕಿ ಜೊತೆಗಾರ್ತಿಯನ್ನಾಗಿ ಮಾಡಿಕೊಳ್ಳುತ್ತಾನೆ. ಈ ವೇಷವನ್ನು ಚಿಮಣಾ ಎಂದು ಕರೆಯಲಾಗುತ್ತದೆ. ಸಿದ್ಧಿಯು ತನ್ನ ಕೈಯಲ್ಲಿಯ ಟೆಂಗಿನ ಪಟ್ಟೆಯಲ್ಲಿ ಹರಳು ಹಾಕಿ ಅದಕ್ಕೊಂದು ಶುಭ್ರ ಅರಿವೆಯ ಮುಚ್ಚಿ ಗುಳಗುಳಿಸಿ, ತನ್ನ ಹಾಡಿನೊಂದಿಗೆ ಬಲಗೈಯಲ್ಲಿ ಹಿಡಿದು ನುಡಿಸುತ್ತಾನೆ. ಚಿಮಣಾ ಅವನ ಜೊತೆ ತಾಳವನ್ನಾಗಲೀ ದಮಡಿಯನ್ನಾಗಲೀ ಹಿಡಿದು ಬಾರಿಸುತ್ತ ದನಿಗೂಡಿಸಿ ಹಿಮ್ಮೇಳ ಕೊಡುತ್ತಾಳೆ. ಸಿದ್ಧಿಚಿಮಣಾ ಜೊತೆಯಾಗಿ ಹಾಡುವ ಹಾಡುಗಳು ಆಕರ್ಷಕವಾಗಿರುತ್ತವೆ.

ಡರ್ರ್ ಸಿದ್ಧಿ, ಹರ್ರ್ ಸಿದ್ಧಿ, ಸಿದ್ಧಕಸಿದ್ಧಿ, ಹಗೆದಾಗ ಬಿದ್ದಿ, ಹಳಜೋಳ ತಿಂದಿ, ಹಗೆದಾಗ ಹಾಂವಾ, ಬಡಿಬ್ಯಾಡ ಮಾಂವಾ; ಕುಂತರ್ಯಾಕ, ಕುಂತರ್ಯಾಕ, ಚಿಮಣಾ ಬಂದಾಳ, ಮದವಿ ಆಗಾಕ, ಮಾವನ ಹುಡಕಾಕ, ಒಳಗಿನ ಕಸಾ ಹೊರಗ ಒಗಿರಿ, ಹೊರಗಿನ ಕಸಾ ಒಳಗ ಒಗಿರಿ, ದಾಬೇದಾಗ ಕಣಕಿ ಒಗಿರಿ, ಗ್ವಾದಿನ್ಯಾಗ ಎತ್ತಾ ಕಟ್ಟರಿ–ಇತ್ಯಾದಿ ಹಾಡುಗಳನ್ನು ಹಾಡುವುದಲ್ಲದೆ ಅನೇಕ ಜನಪದ ಕಥನಗೀತೆಗಳನ್ನೂ ಹಾಡುತ್ತಾರೆ.

ಸಿದ್ಧಕಸಿದ್ಧಿಗಳು ಹಾಕುವ ಬಯಲು ಸೋಗುಗಳಲ್ಲಿ ಚಿಮಣಾ ಸೋಗು, ಸಿದ್ಧಿಸೋಗು, ಮುಖರಿಸೋಗು, ಬ್ಯಾಡ್ರಸೋಗು, ಕುದರಿಸೋಗು ಮುಖ್ಯವಾದುವು. ಇವರು ಬಯಲು ಆಟಗಳನ್ನು ಆಡುವುದರಲ್ಲಿಯೂ ನಿಸ್ಸೀಮರು. ಅವುಗಳಲ್ಲಿ ಲಾಗದ ಆಟ, ಕಸರತ್ತಿನ ಆಟ, ಹಾರಿ ಎತ್ತುವ ಆಟ ಇವು ಮುಖ್ಯವಾದುವು. (ಎನ್.ಎನ್.ಎಸ್.)

**ಸಿದ್ಧಗಂಗಾ:** ತುಮಕೂರು ಜಿಲ್ಲೆ ಅದೇ ತಾಲ್ಲೂಕಿನ ಒಂದು ಗ್ರಾಮ. ತುಮಕೂರು–ಬೆಂಗಳೂರು ಹೆದ್ದಾರಿಯಲ್ಲಿ ತುಮಕೂರಿನ ಆಗ್ನೇಯಕ್ಕೆ 5 ಕಿಮೀ ದೂರದಲ್ಲಿದೆ. ಜನಸಂಖ್ಯೆ 6,335.

ಸಿದ್ಧಲಿಂಗೇಶ್ವರ ದೇವಾಲಯ

ಇದೊಂದು ವೀರಶೈವ ಧಾರ್ಮಿಕ ಕ್ಷೇತ್ರ. ಬೆಟ್ಟದ ಮೇಲೆ ಸಿದ್ಧಲಿಂಗೇಶ್ವರ ದೇವಾಲಯ ಮತ್ತು ಜಲಬುಗ್ಗೆಯೊಂದಿದ್ದು ಅದನ್ನು ಸಿದ್ಧಗಂಗೆ ಎಂದು ಕರೆಯುವರು. ಆರು ಶತಮಾನಗಳಷ್ಟು ಪ್ರಾಚೀನ ಇತಿಹಾಸವುಳ್ಳ ಸಿದ್ಧಗಂಗಾ ಮಠ ಇಲ್ಲಿದೆ. ಸಾರ್ವಜನಿಕ ಸೇವೆಗೆ ಹೆಸರಾದ ಈ ಮಠದ ಆಶ್ರಮದಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳಿವೆ. ಇಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಉಚಿತ ಊಟ–ವಸತಿಯ ವ್ಯವಸ್ಥೆ ಉಂಟು. ಈ ಕ್ಷೇತ್ರದಲ್ಲಿ ಪ್ರತಿವರ್ಷ ಶಿವರಾತ್ರಿ ಸಮಯದಲ್ಲಿ 12 ದಿನಗಳ ಜಾತ್ರೆಯಲ್ಲಿ ಸಿದ್ಧಲಿಂಗೇಶ್ವರ ಸ್ವಾಮಿ ರಥೋತ್ಸವ ನಡೆಯುವುದು. ಜಾತ್ರೆಯ ಸಂದರ್ಭದಲ್ಲಿ ಕೃಷಿ ಮತ್ತು ಕೈಗಾರಿಕಾ ಪ್ರದರ್ಶನವನ್ನು ಏರ್ಪಡಿಸಲಾಗುತ್ತದೆ.

ಕ್ಯಾತಸಂದ್ರ ರೈಲ್ವೆ ನಿಲ್ದಾಣ ಈ ಗ್ರಾಮಕ್ಕೆ ಎರಡು ಫರ್ಲಾಂಗ್ ದೂರದಲ್ಲಿದೆ. ಇಲ್ಲಿ ಪ್ರಸಿದ್ಧ ಶಿವಗಂಗೆ ಬೆಟ್ಟವಿದೆ. ಶ್ರೀ ಶಿವಕುಮಾರ ಸ್ವಾಮಿಗಳು ಈ ಕ್ಷೇತ್ರದ ಪೀಠಾಧಿಪತಿಗಳಾಗಿದ್ದು ಶತಮಾನದ ಹೊಸ್ತಿಲಿನಲ್ಲಿದ್ದಾರೆ. ಅವರ ಕಾಲದಲ್ಲಿ ಇಲ್ಲಿನ ಮಠ ನೂರ್ಮಡಿ ಬೆಳೆದು ಸಮಾಜಸೇವೆ, ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ದಾಸೋಹದಿಂದಾಗಿ ರಾಷ್ಟ್ರೀಯ ಖ್ಯಾತಿ ಪಡೆದಿದೆ. (ಜಿ.ಬಿ.)

**ಸಿದ್ಧನಂಜೇಶ:** ಸು. 1650. ವೀರಶೈವ ಕವಿ. ರಾಘವಾಂಕ ಚಾರಿತ್ರ, ಗುರುರಾಜ ಚಾರಿತ್ರ, ತೋಂಟದ ಸಿದ್ಧದೇಶಿಕನ ಭಾವರತ್ನಾಭರಣ, ಬಸವಶತಕ ಎಂಬ ಗ್ರಂಥಗಳ ಕರ್ತೃ. ಇವನಿಗೆ ಚಿಕ್ಕನಂಜೇಶ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಈತ ಶ್ರೀಶೈಲದ ನೈಋತ್ಯ ದಿಕ್ಕಿನಲ್ಲಿರುವ ನವನಂದಿ ಮಂಡಲದ ನಂದ್ಯಾಲಪುರದ ಸಿಂಹಾಸನಾಧೀಶನೂ ಆಗಿದ್ದ. ಹೂಲಿಯ ಪೂವಲ್ಲಿಯ ಪುರದ ಸಿಂಹಾಸನಾಧೀಶ ಸಿದ್ಧನಂಜೇಶ್ವರ ಈತನ ಗುರು.

ರಾಘವಾಂಕಚಾರಿತ್ರ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 19 ಸಂಧಿಗಳೂ 1,495 ಪದ್ಯಗಳೂ ಇದ್ದು ಕವಿ ರಾಘವಾಂಕನ ಜೀವನಚರಿತ್ರೆ ನಿರೂಪಿತವಾಗಿದೆ. ರಾಘವಾಂಕನ ಜನನ, ಹರಿಹರನಿಂದ ವಿದ್ಯಾಭ್ಯಾಸ, ದೇವರಾಜನ ಆಸ್ಥಾನದಲ್ಲಿ ಹರಿಶ್ಚಂದ್ರ ಕಾವ್ಯದ ವಾಚನ, ಮುರಿದ ಹಲ್ಲನ್ನು ಮತ್ತೆ ಪಡೆದದ್ದು, ಭೀಮಕವಿಗೆ ವಿದ್ಯೆ ಕಲಿಸಿದ್ದು, ಸಿದ್ಧರಾಮಚಾರಿತ್ರದ ರಚನೆ, ಪದ್ಮರಸ–ರಾಘವಾಂಕರ ಸಂದರ್ಶನ, ಓರಂಗಲ್ಲಿಗೆ ರಾಘವಾಂಕನ ಪ್ರಯಾಣ, ಪ್ರತಾಪರುದ್ರನ ಆಸ್ಥಾನ ಪಂಡಿತರನ್ನು ಗೆದ್ದು ಗುರುವಿನ ಬಳಿಗೆ ಬಂದದ್ದು, ರಾಘವಾಂಕ ಸಮಾಧಿಯಾದದ್ದು ಈ ಮೊದಲಾದ ಸಂಗತಿಗಳು ಸವಿಸ್ತಾರವಾಗಿ ಚಿತ್ರಿತವಾಗಿವೆ. ಈ ಕಾವ್ಯ ಮಹತ್ತ್ವದ ಐತಿಹಾಸಿಕ ಸಂಗತಿಗಳನ್ನು ಒಳಗೊಂಡಿರುವುದರ ಜೊತೆಗೆ ಧಾರ್ಮಿಕ ವಿಚಾರಗಳನ್ನೂ ಹೊಂದಿದೆ. ಹರಿಹರನು ರಾಘವಾಂಕನಿಗೆ ಕೊಟ್ಟ ಉಪದೇಶದಲ್ಲಿ ಅಷ್ಟಾವರಣಗಳ ಆಳವಾದ ನಿರೂಪಣೆಯಿದೆ. ಧರ್ಮಜಿಜ್ಞಾಸುಗಳ ತೃಷೆ ಹಿಂಗಿಸುವ ಧರ್ಮ ವಿವೇಚನೆ ಇದೆ. ಸೋಮನಾಥ ಕಥೆ, ಶರಭಾದಿಗಳ ಚರಿತ್ರೆ ಮೊದಲಾದವೂ ಕಾವ್ಯದಲ್ಲಿ ನಿರೂಪಿತವಾಗಿವೆ.

ಗುರುರಾಜಚಾರಿತ್ರ ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ 16 ಸಂಧಿ, 1,277 ಪದ್ಯಗಳು ಇವೆ. ಗುರು ಸಿದ್ಧನಂಜೇಶನ ಅಪ್ಪಣೆಯಂತೆ ಈ ಕೃತಿ ರಚನೆ ಮಾಡಿದುದಾಗಿಯೂ ಗುರುಸಿದ್ಧನಂಜೇಶ ತನ್ನ ಸತಿ ವೀರಾಂಬೆಗೆ ಹೇಳಿದುದನ್ನೇ ತಾನು ನಿರೂಪಿಸುತ್ತಿರುವಂತೆಯೂ ಕವಿ ಹೇಳಿಕೊಂಡಿದ್ದಾನೆ. ಪ್ರತಿಸಂಧಿ ಗುರುದಂಪತಿಗಳ ಸಂಭಾಷಣೆಯಿಂದಲೇ ಆರಂಭವಾಗಿ ಮುಂದೆ ಸಾಗುತ್ತದೆ. ವೈವಿಧ್ಯಮಯ ಕಾವ್ಯಕ್ಕೆ ಗುರು ದಂಪತಿಗಳ ಸಂಭಾಷಣೆಯಿಂದ ಏಕತೆಯನ್ನು ಒದಗಿಸಿದ್ದಾನೆ. ಆಚಾರ್ಯರ ಉದ್ಭವ, ಗುರು ಸಂಪ್ರದಾಯ, ಸ್ಥಲವಿವರಣೆ, ಶಿವನ ಪಂಚವಿಂಶತಿ ಲೀಲೆಗಳು, ಇಷ್ಟಲಿಂಗ ಪೂಜಾವಿಧಿ ದೃಷ್ಟಾಂತಗಳು, ಬಸವಣ್ಣನವರ ಮಹಿಮೆ, ನೂತನರ ಚರಿತೆ, ಈಚಿನ ನೂತನರ ಕಥೆ ಮೊದಲಾದ ಪ್ರಸಂಗಗಳು ಕಾವ್ಯದಲ್ಲಿ ಬಂದಿವೆ. ಕವಿ ತನ್ನ ಗುರುವಿನಲ್ಲಿ ಇಟ್ಟ ಶ್ರದ್ಧಾಭಕ್ತಿ, ಶರಣರಲ್ಲಿ ಈತನಿಟ್ಟ ನಿಷ್ಠೆ, ಶೈವಾಚಾರದಲ್ಲಿ ಈತನಿಗಿದ್ದ ವಿಶ್ವಾಸ, ನಂಬಿಕೆಗಳು ಕಾವ್ಯದ ತುಂಬ ತುಂಬಿಕೊಂಡಿವೆ. ವೀರಶೈವಧರ್ಮದ ಪ್ರಕ್ರಿಯೆಗಳು ಕಾವ್ಯದಲ್ಲಿ ಸಂದರ್ಭೋಚಿತವಾಗಿ ಬಂದಿವೆ. ಅಂತೆಯೇ ಕಾವ್ಯಾಂಶಕ್ಕಿಂತ ಧರ್ಮಾಂಶ ಹೆಚ್ಚಾಗಿದೆ. ಆದ್ದರಿಂದ ಇದೊಂದು ಸಣ್ಣ ಶಿವಕಥಾಸರಿತ್ಸಾಗರ; ಬಹು

ವಿಷಯಗರ್ಭಿತ ಧಾರ್ಮಿಕ ಕೋಶ ಎನ್ನಬಹುದು. ಕೃತಿಯಲ್ಲಿ ಕಾವ್ಯಾಂಶ ಕಡಿಮೆ ಇದ್ದರೂ ಸಾಹಿತ್ಯ ಚರಿತ್ರೆಗೆ, ಅನೇಕ ಕವಿಗಳ ಕಾಲನಿರ್ಣಯಕ್ಕೆ ಈತನ ಗ್ರಂಥಗಳು ಸಹಕಾರಿಯಾಗಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಕಾವ್ಯದ ಇನ್ನೊಂದು ವೈಶಿಷ್ಟ್ಯವೆಂದರೆ ಕವಿ ಇಲ್ಲಿ ಒದಗಿಸುವ ನೂರಾರು ಶರಣರ ವ್ಯಕ್ತಿಚಿತ್ರಗಳು, ಸಾರವತ್ತಾದ ಕಥೆಗಳು ಬಸವಾದಿ ಪ್ರಮಥರಿಂದ ಆರಂಭವಾಗಿ ಬೆಳೆಯುತ್ತ ಬಂದ ನೂತನರ ಶ್ರೇಣಿಗೆ ಕವಿ ಸಮಕಾಲೀನರಾದ ಇನ್ನೂ ಕೆಲವು ಶರಣರ ಹೆಸರುಗಳನ್ನು ಸೇರಿಸಿ ಹೇಳಿದ್ದಾನೆ. ಕವಿ ನೆಲಸಿದ್ದ ಹೂಲಿಯ ಪ್ರಕೃತಿ ವರ್ಣನೆ, ವೀರಭದ್ರ ಲೀಲೆಯ ವರ್ಣನೆ ಇಂಥ ಪ್ರಸಂಗಗಳು ಕಾವ್ಯಮಯವಾಗಿವೆ. ಕಾವ್ಯಶೈಲಿ ಮೃದುಮಧುರವಾಗಿದ್ದು ಅದರಲ್ಲಿ ಸರಳತೆ, ಸ್ಫುಟತೆಗಳು ಎದ್ದು ಕಾಣುತ್ತವೆ. ಜೊತೆಗೆ ಕವಿಗೆ ಸಂಸ್ಕೃತಶಾಸ್ತ್ರ ಗ್ರಂಥಗಳ ಮೇಲಿದ್ದ ಪಾಂಡಿತ್ಯ, ಶೈವಪುರಾಣಗಳಲ್ಲಿದ್ದ ಆಳವಾದ ಅಭ್ಯಾಸ– ಈ ಅಂಶಗಳು ವ್ಯಕ್ತವಾಗುತ್ತವೆ.

ಇವನ ತೋಂಟದ ಸಿದ್ಧದೇಶಿಕನ ಭಾವರತ್ನಾಭರಣ, ಬಸವಶತಕ ಎಂಬ ಗ್ರಂಥಗಳು ಉಪಲಬ್ಧವಿಲ್ಲ. (ಟಿ.ಆರ್.ಎಂ.)

**ಸಿದ್ದಯ್ಯ ಪುರಾಣಿಕ:** 1918–94. ಪ್ರಸಿದ್ಧ ಕವಿ ಹಾಗೂ ಆಡಳಿತ ಗಾರರು. ಕಾವ್ಯಾನಂದ ಎನ್ನುವುದು ಇವರ ಕಾವ್ಯನಾಮ. ಇಂದಿನ ಕೊಪ್ಪಳ ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರದಲ್ಲಿ 1918 ಆಗಸ್ಟ್ 18ರಂದು ಜನಿಸಿದರು. ತಂದೆ ಕಲ್ಲಿನಾಥಶಾಸ್ತ್ರಿ, ತಾಯಿ ದಾನಮ್ಮ. ದ್ಯಾಂಪುರ ಮತ್ತು ಕುಕ್ಕನೂರುಗಳಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಪ್ರೌಢಶಾಲೆಯಿಂದ ಇಂಟರ್ ಮೀಡಿಯೇಟ್‌ವರೆಗಿನ ವಿದ್ಯಾಭ್ಯಾಸವನ್ನು ಗುಲ್ಬರ್ಗದಲ್ಲಿ ಪೂರೈಸಿದರು. ಬಿ.ಎ. ಮತ್ತು ಎಲ್‌ಎಲ್.ಬಿ. ಗಳನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಓದಿದರು. ಅನಂತರ ಐ.ಎ.ಎಸ್. ಪರೀಕ್ಷೆ ಪಾಸು ಮಾಡಿದರು.

ಇವರು ನಾಂದೇಡದಲ್ಲಿ ಅಸಿಸ್ಟೆಂಟ್ ಕಲೆಕ್ಟರ್‌ರಾಗಿ (1944), ಸಹಾಯಕ ಕಂದಾಯ ಕಾರ್ಯದರ್ಶಿಯಾಗಿ (1951–52) ಹೈದರಾಬಾದ್ ಸಂಸ್ಥಾನದಲ್ಲಿ, ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿಯಾಗಿ (1952–53) ಕೃಷಿ ಯೋಜನೆ ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿಯಾಗಿ (1953) ಡೆಪ್ಯುಟಿ ಕಲೆಕ್ಟರ್‌ರಾಗಿದ್ದರು. ಅನಂತರ ಭಾರತೀಯ ನಾಗರಿಕ ಸೇವೆ (ಐ.ಎ.ಎಸ್.) ಸೇರಿದರು (1960). ಅದೇ ವರ್ಷ ವಿದ್ಯಾ ಇಲಾಖೆಯ ಉಪಕಾರ್ಯದರ್ಶಿಯಾಗಿ ವಾರ್ತಾ ಮತ್ತು ಪ್ರವಾಸೋದ್ಯಮ ನಿರ್ದೇಶಕರಾಗಿ (1962) ಅರ್ಥಖಾತೆಯಲ್ಲಿ ಉಪಕಾರ್ಯದರ್ಶಿಯಾಗಿ, ಚಿನ್ನ ನಿಯಂತ್ರಣಾಧಿಕಾರಿಯಾಗಿ (1964), ಮಡಿಕೇರಿಯಲ್ಲಿ ಡೆಪ್ಯುಟಿ ಕಮಿಷನರಾಗಿ (1965), ಸಾರಿಗೆ ಖಾತೆಯ ಆಯುಕ್ತರಾಗಿ (1967), ಬೆಳಗಾಂವಿಯ ಡೆಪ್ಯುಟಿ ಕಮಿಷನರಾಗಿ (1970), ರಾಜ್ಯದ ಲೇಬರ್ ಕಮಿಷನರಾಗಿ 1972ರಲ್ಲಿ ನೇಮಕಗೊಂಡು ಅದೇ ಹುದ್ದೆಯಲ್ಲಿ ನಿವೃತ್ತಿ ಹೊಂದಿದರು (1976).

ಇವರು ಕನ್ನಡ, ಸಂಸ್ಕೃತ, ಉರ್ದು, ಮರಾಠಿ, ಪರ್ಷಿಯನ್, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿ ಪಡೆದಿದ್ದರು. ಅಮೆರಿಕ, ಕೆನಡ, ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್ ಮೊದಲಾದ ದೇಶಗಳಲ್ಲಿ ವ್ಯಾಪಕ ಪ್ರವಾಸ ಮಾಡಿದ ಅನುಭವ ಇವರದು.

ಕಾಲೇಜಿನಲ್ಲಿದ್ದಾಗಲೇ ಇವರು ಬರೆವಣಿಗೆಯಲ್ಲಿ ತೊಡಗಿದರು. ಇವರ ಜಲಪಾತ, ಕರುಣಾಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು, ಕಲ್ಲೋಲಮಾಲೆ, ಹಾಲ್ದೆನೆ– ಇವು ಕವನ ಸಂಗ್ರಹಗಳು. ಶರಣ ಚರಿತಾಮೃತ, ಸಿದ್ಧರಾಮ, ನಜೀರ್ ಅಕಬರಾಬಾದಿ, ಹರ್ಡೇಕರ್ ಮಂಜಪ್ಪನವರು, ಮಿರ್ಜಾಗಾಲಿಬ್, ಮಹಾದೇವಿ ಜೀವನಚರಿತ್ರೆ. ಭಾರತವೀರ, ಭಗ್ನನೂಪುರ, ಆತ್ಮಾರ್ಪಣೆ, ಗಿರಿಜಾಕಲ್ಯಾಣ– ಇವು ನಾಟಕಗಳು; ಕಥಾಮಂಜರಿ, ತುಷಾರ ಹಾರ ಕಥಾ ಸಂಕಲನಗಳು. ತ್ರಿಭುವನ ಮಲ್ಲ ಐತಿಹಾಸಿಕ ಕಾದಂಬರಿ; ಗಿಲ್ ಗಿಲ್ ಗಿಲ್‌ಗಚ್ಚಿ, ತುಪ್ಪರೊಟ್ಟಿಗೇ ಗೇ ಗೇ, ಮಕ್ಕಳ ಸಾಹಿತ್ಯ; ಕನ್ನಡ ಪದರತ್ನಾಕರ ಪ್ರಬಂಧ; ಮಾಲೆ, ಸರಹದ್ ಗಾಂಧಿ ಮಹಾತ್ಮ ಕನಕದಾಸ ಪ್ರಶಸ್ತಿ, ಮಣುಹ ಶರಣರ ಪ್ರಸಾದ, ಸಂಪಾದಿತ ಕೃತಿಗಳು; ಬಸವಣ್ಣನವರ ಜೀವನ ಹಾಗೂ ಸಂದೇಶ ಉಪನ್ಯಾಸಗಳನ್ನು (1977) ಪ್ರಕಟಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ವಚನೋದ್ಯಾನ ಎಂಬ ವಚನಗ್ರಂಥ ನೀಡಿದ್ದಾರೆ. ಇದಲ್ಲದೆ ರಜತರೇಖೆ ಎಂಬ ಪ್ರಸಾರ ನಾಟಕಗಳು, ನಿರ್ಬಂಧನ ಎಂಬ ಎರಡು ಏಕಾಂಕ ನಾಟಕಗಳೂ ಪ್ರಕಟವಾಗಿವೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃಷಿ ಮಾಡಿದ್ದರೂ ಇವರು ಕವಿಯೆಂದೇ ಪ್ರಸಿದ್ಧರಾದವರು.

ಕಾವ್ಯಾನಂದರಿಗೆ ಅನೇಕ ಗೌರವ–ಪ್ರಶಸ್ತಿಗಳು ಲಭ್ಯವಾಗಿವೆ. ಅವುಗಳಲ್ಲಿ ಮುಖ್ಯವಾದುವು: ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (1976), ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1978), ಮಾಳವಾಡ ಪ್ರಶಸ್ತಿ (1981). ಇವರ ವಚನೋದ್ಯಾನ ಗ್ರಂಥಕ್ಕೆ ಭಾರತೀಯ ಭಾಷಾ ಪರಿಷತ್ತು ಆರಂಭಿಸಿದ ರಾಷ್ಟ್ರೀಯ ಬಹುಮಾನವಾದ ಬಿಲ್ವಾರ ಪ್ರಶಸ್ತಿ ಬಂದಿದೆ. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ 'ಕಾವ್ಯಾನಂದ' ಗೌರವ ಗ್ರಂಥ ಅರ್ಪಿಸಲಾಯಿತು (1981). ಇವರು ಗುಲ್ಬರ್ಗದಲ್ಲಿ ಜರುಗಿದ 58ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (1987). ಕೆಲವು ಕಾಲ ಗುಲ್ಬರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸದಾಕಾಲ ಸಾಹಿತ್ಯ ಸೃಜನಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಇವರು 1994 ಸೆಪ್ಟೆಂಬರ್ 18ರಂದು ಬೆಂಗಳೂರಿನಲ್ಲಿ ನಿಧನರಾದರು. (ಎಸ್.ಎಂ.ಕೆ.)

**ಸಿದ್ಧರಾಮ:** ಹನ್ನೆರಡನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಮುದ್ದುಗೌಡ, ಸುಗ್ಗವ್ವೆ ಎಂಬ ದಂಪತಿಗಳಿಗೆ ಮಗನಾಗಿ ಹುಟ್ಟಿದ ಈತ ಬಾಲ್ಯದಿಂದಲೂ ಲೋಕಕ್ಕೆ ವಿಚಿತ್ರವೆನಿಸುವ ರೀತಿಯಲ್ಲಿ ಬೆಳೆದು ಕೊನೆಗೆ ಶ್ರೀಶೈಲದಲ್ಲಿ ಮಲ್ಲಿಕಾರ್ಜುನನ ಸಾಕ್ಷಾತ್ಕಾರ ಪಡೆದುದನ್ನೂ ಅನಂತರ ಸೊನ್ನಲಿಗೆಗೆ ಹಿಂದಿರುಗಿ ಈತ ಕೈಗೊಂಡ ಕಾರ್ಯಸಾಧನೆಯನ್ನೂ ರಾಘವಾಂಕ ತನ್ನ ಸಿದ್ಧರಾಮಚಾರಿತ್ರದಲ್ಲಿ ಬಹಳ ಅರ್ಥವತ್ತಾಗಿ ನಿರೂಪಿಸಿದ್ದಾನೆ. ಶರಣರ ಕಾರ್ಯಕ್ಷೇತ್ರಕ್ಕೆ ಒಳಗಾಗುವುದಕ್ಕೆ ಮುನ್ನವೇ ಈತ ಸಾಧನೆಯಲ್ಲಿ ಉನ್ನತವಾದ ನಿಲವನ್ನು ಪಡೆದವನಾಗಿದ್ದ. ಸೊನ್ನಲಿಗೆ (ಈಗಿನ ಸೊಲ್ಲಾಪುರ) ಇವನ ಕಾರ್ಯಕ್ಷೇತ್ರವಾಗಿತ್ತು. ಅನೇಕ ಕಡೆಗಳಿಂದ ಶಿಷ್ಯರನ್ನು ಆಕರ್ಷಿಸಿ ತನ್ನದೇ ಆದ ರೀತಿಯಲ್ಲಿ ಜಗತ್ತಿನ ಹಿತಕ್ಕಾಗಿ ದುಡಿಯುತ್ತಿದ್ದ ಈತ ಕರ್ಮಯೋಗಿಯಾಗಿದ್ದ. ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು, ಅನುಗೊಂಬನಿತು ಕಾಯಕಂ ನಡೆಯುತ್ತಿರಬೇಕು ಎನ್ನುವ ಸೂತ್ರವನ್ನು ಅವಲಂಬಿಸಿ ತನ್ನ ಶಿಷ್ಯರೊಡನೆ ತಾನೂ ಗುದ್ದಲಿ ಹಿಡಿದು ಅಗೆಯುತ್ತಿದ್ದ, ಕೆರೆ, ಅರವಟ್ಟಿಗೆ, ಗುಡಿಗೋಪುರಗಳನ್ನು ಕಟ್ಟಿಸುತ್ತ ಬಹು ದೊಡ್ಡ ಆದರ್ಶವನ್ನು ಸಾಧಿಸಿ ತೋರಿಸುತ್ತಿದ್ದ.

ಸಾಮಾಜಿಕವಾಗಿ ಇದು ಬಹಳ ದೊಡ್ಡ ಆದರ್ಶವೆಂಬುದು ನಿಜವಾದರೂ ಆಧ್ಯಾತ್ಮಿಕ ಸಾಧನೆ ಇದನ್ನೂ ಒಳಗೊಂಡು ಇದಕ್ಕೂ ಮಿಗಿಲಾಗಿ ಬೆಳೆಯಬೇಕೆಂಬುದನ್ನು ತಿಳಿಸಲು ಅಲ್ಲಮಪ್ರಭು ಸಿದ್ಧರಾಮನ ಬಳಿಗೆ ಬಂದು, ಆತನ ಸಾಧನೆಯಲ್ಲಿದ್ದ ಅರಕೆಯನ್ನು ತೋರಿಸಿ ಆತನನ್ನು ಕಲ್ಯಾಣಕ್ಕೆ ಕರೆದುಕೊಂಡು ಬಂದ. ಅಲ್ಲಿ ಸಿದ್ಧರಾಮ ಬಸವಾದಿ ಶರಣರ ಕಾರ್ಯಕ್ಷೇತ್ರದಲ್ಲಿ ಭಾಗಿಯಾಗಿ ಅವರ ಅನುಭಾವದ ಮಥನದಿಂದ ಶಿವಯೋಗಿಯಾಗಿ ಪರಿಣಮಿಸಿದ.

ಕಲ್ಯಾಣದಲ್ಲಿ ಸಂಭವಿಸಿದ ಕ್ರಾಂತಿಯ ಅನಂತರ ಅಲ್ಲಿನ ಪರಂಪರೆಯನ್ನು ಸೊನ್ನಲಿಗೆಯಲ್ಲಿ ಕಾಯ್ದಿಡಲು ಸಿದ್ಧರಾಮ ಪ್ರಯತ್ನಿಸಿದ. ಈತನ ಕಾರ್ಯಕ್ಷಮತೆಯಿಂದ ಮತ್ತು ಆಧ್ಯಾತ್ಮಿಕ ಸಾಧನೆಯಿಂದ ಸೊನ್ನಲಿಗೆ, ಅಭಿನವ ಶ್ರೀಶೈಲ ಎಂಬ ಕೀರ್ತಿಯನ್ನು ಪಡೆಯಿತು. ಇದನ್ನು ನಿರ್ದೇಶಿಸಿ ಅನೇಕ ಶಾಸನಗಳು ದೊರೆತಿವೆ. ಈತ ಕಟ್ಟಿಸಿದ ಕೆರೆ ಮತ್ತು ದೇವಾಲಯಗಳು ಈಗಲೂ ಸೊಲ್ಲಾಪುರದಲ್ಲಿ, ಆ ಜೀವಂತ ಪರಂಪರೆಯ ಸಾಕ್ಷಿಯಾಗಿ ಉಳಿದಿರುವುದನ್ನು ಕಾಣಬಹುದು.

ಶ್ರೇಷ್ಠ ವಚನಕಾರನಾಗಿದ್ದ ಈತ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾನೆ. ಅಪಾರವಾದ ಲೋಕಕಾರುಣ್ಯ, ನಿರಂತರ ಆತ್ಮಜಾಗೃತಿ, ಕರ್ಮಮಾರ್ಗದಲ್ಲಿ ಒಲವು, ಅದರೊಡನೆ ಜ್ಞಾನಭಕ್ತಿಗಳ ಸಮನ್ವಯ ಮತ್ತು ಕೊನೆಯಲ್ಲಿ ಏರಿನಿಂತ ಆಧ್ಯಾತ್ಮಿಕ ನಿಲವು–ಇವು ಇವನ ವಚನಗಳಲ್ಲಿ ಸುಂದರವಾಗಿ ಪ್ರತಿಬಿಂಬಿತವಾಗಿವೆ. ವಚನಗಳನ್ನಲ್ಲದೆ ಈತ ಬಸವಸ್ತೋತ್ರದ ತ್ರಿವಿಧಿ (ಪದ್ಯ 125), ಮಿಶ್ರಸ್ತೋತ್ರದ ತ್ರಿವಿಧಿ (ಪದ್ಯ 109), ಅಷ್ಟಾವರಣ ಸ್ತೋತ್ರದ ತ್ರಿವಿಧಿ (ಪದ್ಯ 144), ಸಂಕೀರ್ಣ ತ್ರಿವಿಧಿಗಳನ್ನು ಯೋಗಿನಾಥ ಎಂಬ ಅಂಕಿತದಲ್ಲಿ ಬರೆದಿದ್ದಾನೆ. ಇಲ್ಲಿಯೂ ಈತನ ಸಾಧನೆ ಮತ್ತು ಸಿದ್ಧಿಗಳು ವ್ಯಕ್ತವಾಗಿವೆ. **(ಎಚ್.ಟಿ.ಎಸ್.)**

**ಸಿದ್ದಲಿಂಗಯ್ಯ:** 1936– . ಕನ್ನಡದ ಹೆಸರಾಂತ ಚಲನಚಿತ್ರ ನಿರ್ದೇಶಕರು. 1936 ಡಿಸೆಂಬರ್ 15ರಂದು ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ತರೂರು ಎಂಬ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಲಿಂಗಣ್ಣ, ತಾಯಿ ಸಿದ್ಧಬಸವಮ್ಮ. ಇವರದ್ದು ಕೃಷಿಕರ ಮನೆತನ. ಇವರ ತಾತ ಹಾಗೂ ಸೋದರ ಮಾವ, ಅಂದಿನ ದಿನಗಳಲ್ಲಿ ಹಳ್ಳಿಯ ಪ್ರತಿಷ್ಠಿತ ಕಲಾವಿದರೆಂದು ಹೆಸರು ಪಡೆದಿದ್ದವರು. ಹೀಗಾಗಿ ಪರಂಪರೆಯಿಂದ ಬಂದ ಕಲಾಪ್ರೇಮ ಬಾಲಕ ಸಿದ್ದಲಿಂಗಯ್ಯನಲ್ಲಿ ರಕ್ತಗತವಾಗಿಯೇ ಹರಿದುಬಂದಿತ್ತು.

ಮಾಧ್ಯಮಿಕ ಶಿಕ್ಷಣಕ್ಕೇ ತಮ್ಮ ಶಿಕ್ಷಣ ಮುಗಿಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮನೆಯಲ್ಲಿ ಆರ್ಥಿಕ ಅನುಕೂಲತೆಗಳಿರಲಿಲ್ಲ. 16 ವರ್ಷದವರಿದ್ದಾಗ ತುಂಬಿದ ಮನೆಯನ್ನು ಬಿಟ್ಟು ಮೈಸೂರಿಗೆ ಬಂದರು (1952–53). ಇವರಲ್ಲಿ ಕಲಾವಿದನಾಗಬೇಕೆಂಬ ಅದಮ್ಯವಾದ ಬಯಕೆಯಿತ್ತು. ಮೈಸೂರಿನ ನವಜ್ಯೋತಿ ಸ್ಟುಡಿಯೋ ಆಗ ಕರ್ನಾಟಕದಲ್ಲಿದ್ದ ಏಕೈಕ ಸ್ಟುಡಿಯೋ. ಅಲ್ಲಿ ಸಿದ್ದಲಿಂಗಯ್ಯ ಕೆಲಸಕ್ಕೆ ಸೇರಿದರು. ಸ್ಟುಡಿಯೋದ ಫ್ಲೋರ್ ಬಾಯ್ ಆಗಿ ಅನಂತರ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ಲೈಟ್ ಬಾಯ್ ಆಗಿ ಬಡ್ತಿ ದೊರೆಯಿತು. ಅಲ್ಲಿ ಚಿತ್ರ ತಯಾರಿಸುತ್ತಿದ್ದ ನಿರ್ಮಾಪಕ–ನಿರ್ದೇಶಕ ಶಂಕರಸಿಂಗ್‌ರಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುವ ಅವಕಾಶ ದೊರೆಯಿತು. ಜೊತೆಜೊತೆಯಲ್ಲಿ ಕನ್ನಡವಲ್ಲದೆ ತಮಿಳು, ತೆಲುಗು ಭಾಷೆಯನ್ನು ಕಲಿತು ಪರಿಣತಿಯನ್ನು ಪಡೆದರು.

1956ರ ವೇಳೆಗೆ ಮದರಾಸಿಗೆ ಪ್ರಯಾಣ ಮಾಡಿದರು. ಆ ಸಮಯದಲ್ಲಿ ಮೈಸೂರಿನವರೇ ಆಗಿದ್ದ ನಿರ್ಮಾಪಕ ನಿರ್ದೇಶಕ ಬಿ. ವಿಠ್ಠಲಾಚಾರ್ಯ ಮದರಾಸಿನಲ್ಲಿ ತೆಲುಗು ಚಿತ್ರರಂಗದಲ್ಲಿ ಹೆಸರು ಮಾಡಿದ್ದರು. ಅವರ ಬಳಿ ಸಹಾಯಕನಾಗಿ ಸೇರಿಕೊಂಡರು. ಅವರ ಸಂಸ್ಥೆಯ 15 ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ದುಡಿದು ನಿರ್ದೇಶನದ ಮರ್ಮವನ್ನು ಅರಿತುಕೊಂಡರು. ಇವರಿಗೆ ದ್ವಾರಕೀಶ್‌ರವರ ಮೇಯರ್ ಮುತ್ತಣ್ಣ ಚಲನಚಿತ್ರದ ನಿರ್ದೇಶನ ಮಾಡುವ ಸದವಕಾಶ ಬಂದದ್ದು 1969ರಲ್ಲಿ. ಇದು ಇವರ ಕಲಾಪ್ರತಿಭೆಯನ್ನು ತೋರಲು ಒಂದು ದೊಡ್ಡ ಸೋಪಾನವಾಯಿತು. ಅಲ್ಲಿಂದ ಇವರ ಭಾಗ್ಯದ ಬಾಗಿಲು ತೆರೆಯಿತೆಂದು ಹೇಳಬಹುದು. ಹಿಂದಿರುಗಿ ನೋಡದೇ ಕನ್ನಡ ಚಲನಚಿತ್ರ ರಂಗದಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಮೇಲೇರುತ್ತಲೇ ನಡೆದರು. ಇವರ ನಿರ್ದೇಶನದ ಚಲನಚಿತ್ರ 'ಬಂಗಾರದ ಮನುಷ್ಯ' ಎರಡು ವರ್ಷಕ್ಕೂ ಹೆಚ್ಚು ದಿನ ಬೆಂಗಳೂರಿನಲ್ಲಿ ಪ್ರದರ್ಶನಗೊಂಡು ಒಂದು ದಾಖಲೆಯನ್ನೇ ಸ್ಥಾಪಿಸಿತು. ಈ ಚಿತ್ರ ಕರ್ನಾಟಕ ಸರ್ಕಾರದಿಂದ ಚಿತ್ರನಾಟಕ ಹಾಗೂ ದ್ವಿತೀಯ ಚಿತ್ರ ಪ್ರಶಸ್ತಿ ಪಡೆಯಿತು. ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಣ್ಣಕಥೆ ಆಧಾರಿತ 'ಬೂತಯ್ಯನ ಮಗ ಅಯ್ಯು' ಚಲನಚಿತ್ರಕ್ಕೆ ಕರ್ನಾಟಕ ಸರ್ಕಾರ ಅನೇಕ ಪ್ರಶಸ್ತಿಗಳನ್ನು ನೀಡಿತು. ಈ ಚಿತ್ರ ತಮಿಳು, ತೆಲುಗು ಹಾಗೂ ಹಿಂದಿ ಭಾಷೆಗಳಲ್ಲೂ ಮೂಡಿಬಂತು. ಇಂದಿಗೂ ಈ ಚಿತ್ರದ ಪ್ರವಾಹದ ದೃಶ್ಯಗಳು ಒಂದು ತಾಂತ್ರಿಕ ಪರಿಣತಿ ಎಂಬ ಹೆಗ್ಗಳಿಕೆಯನ್ನು ಗಳಿಸಿಕೊಂಡಿವೆ.

ಇವರು ಇಪ್ಪತ್ತೊಂದಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಕನ್ನಡ ಚಲನಚಿತ್ರ ರಂಗದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವ ನಿರ್ದೇಶಕರಾಗಿ ತಮ್ಮ ಛಾಪನ್ನು ಒತ್ತಿದ್ದಾರೆ. ಹಲವಾರು ಕಾದಂಬರಿಗಳನ್ನೂ ಚಲನಚಿತ್ರಕ್ಕೆ ಅಳವಡಿಸಿದ ಹೆಗ್ಗಳಿಕೆ ಇವರದು. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಹೇಮಾವತಿ, ಸಿ.ಎನ್. ಜಯಲಕ್ಷ್ಮಿದೇವಿಯವರ ಕೂಡಿಬಾಳಿದರೆ ಸ್ವರ್ಗ ಸುಖ, ಬಿ.ಎಲ್. ವೇಣುರವರ ಪರಾಜಿತ, ಅಜೇಯ, ಬಿ.ಎ. ಮಧುರವರ 'ಬಾ ನನ್ನ ಪ್ರೀತಿಸು' ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ನಾರದವಿಜಯ, ಬಾಳುಬೆಳಗಿತು, ನಮ್ಮ ಸಂಸಾರ, ತಾಯಿದೇವರು, ದೂರದಬೆಟ್ಟ, ಭೂಲೋಕದಲ್ಲಿ ಯಮರಾಜ, ನಾರಿ ಸ್ವರ್ಗಕ್ಕೆ ದಾರಿ, ಸಂಭವಾಮಿ ಯುಗೇ ಯುಗೇ, ಬಾರೇ ನನ್ನ ಮುದ್ದಿನ ರಾಣಿ, ಭೂತಾಯ ಮಕ್ಕಳು ಇವರ ನಿರ್ದೇಶನದ ಇನ್ನಿತರ ಚಿತ್ರಗಳು. ಇವರು ಕನ್ನಡ ಚಲನಚಿತ್ರರಂಗಕ್ಕೆ ಸಲ್ಲಿಸಿದ ಅಪೂರ್ವ ಸೇವೆಯನ್ನು ಗುರುತಿಸಿ ಅನೇಕ ಸಂಘಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಇವರಿಗೆ ಕರ್ನಾಟಕ ಸರ್ಕಾರ 1993–94 ಸಾಲಿನ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕನ್ನಡ ಚಲನಚಿತ್ರರಂಗಕ್ಕೆ ಹೊಸಹೊಸ ಕಲಾವಿದರು, ತಂತ್ರಜ್ಞರನ್ನು ಪರಿಚಯಿಸಿದ ಖ್ಯಾತಿ ಇವರದು. **(ಎಚ್.ಆರ್.ಎಲ್.)**

**ಸಿದ್ದಿ:** ಕರ್ನಾಟಕದ ಒಂದು ಪ್ರಮುಖ ಬುಡಕಟ್ಟು. ಇಂದಿಗೂ ಗುಡ್ಡಗಾಡುಗಳಲ್ಲಿ ವಾಸಿಸುತ್ತಿರುವ ಇವರನ್ನು ಪರಿಶಿಷ್ಟ ಪಂಗಡವೆಂದು ಗುಜರಾತಿನಲ್ಲಿ ಮಾತ್ರ ಗುರುತಿಸಲಾಗಿದೆ. ಕರ್ನಾಟಕದಲ್ಲಿ ಸಿದ್ದಿಯರನ್ನು ಹಿಂದುಳಿದ ಗುಂಪಿಗೆ ಸೇರಿಸಲಾಗಿದೆ. ಇವರದು ದಪ್ಪತುಟಿ, ಚಪ್ಪಟೆಮೂಗು,

ಚಿಕ್ಕಹಣೆ, ಒರಟಾದ ಗುಂಗುರುಗೂದಲು, ಕಪ್ಪುವರ್ಣ, ಎತ್ತರದ ಸಶಕ್ತ ಮೈಕಟ್ಟು. ಇವರು ನೀಗ್ರೊ ಗುಂಪಿಗೆ ಸೇರಿದವರೆಂಬುದು ಇವರ ಚಹರೆಗಳಿಂದ ತಿಳಿದುಬರುತ್ತದೆ. ಡಚ್ಚರು, ಪೋರ್ಚುಗೀಸರು, ಅರಬರು ಮತ್ತು ಇಂಗ್ಲಿಷರು ಗುಲಾಮರ ಸಂತೆಯಲ್ಲಿ ಕಾಂಗೋ, ಬೆಜಾ ಮುಂತಾದ ಬೇರೆ ಬೇರೆ ಮೂಲಕ್ಕೆ ಸೇರಿದ ಜನರನ್ನು ಭಾರತಕ್ಕೆ ತಂದರು. ಆ ರೀತಿ ತಂದ ಬೆಜಾ ಎಂಬ ಗುಂಪಿನವರೇ ಸಿದ್ದಿಗಳಿರಬೇಕೆಂಬುದು ವಿದ್ವಾಂಸರ ಊಹೆ. ಸಿದ್ದಿ ಎಂಬ ಹೆಸರು ಸಿದಿ ಎಂಬುದರಿಂದ ಬಂದಿರಬಹುದು. ಹರ್ಬರ್ಟ್ ರಿಸ್ಲೇ ಎಂಬ ವಿದ್ವಾಂಸ ಸಿದಿ ಎಂದರೆ ಕೂಲಿಕಾರರೆಂದು ಹೇಳಿದ್ದಾನೆ. ಸಿದ್ದಿನಾಸ ಎಂಬ ತಮ್ಮ ಮೂಲ ದೇವರಿಂದ ಈ ಹೆಸರು ಬಂದಿತೆಂಬುದು ಸಿದ್ದಿಗಳ ಅಭಿಪ್ರಾಯ.

ಇವರು ಕರ್ನಾಟಕದಲ್ಲಷ್ಟೇ ಅಲ್ಲದೆ ಗುಜರಾತ್, ಗೋವ, ಕೇರಳಗಳಲ್ಲಿಯೂ ನೆಲಸಿದ್ದಾರೆ. ಪೋರ್ಚುಗೀಸರ ವಸಾಹತಾಗಿದ್ದ ಗೋವದಿಂದ ಇವರು ಕರ್ನಾಟಕಕ್ಕೆ ಬಂದಂತೆ ತೋರುತ್ತದೆ. ಪೋರ್ಚುಗೀಸರು ತಮ್ಮ ವಶದಲ್ಲಿದ್ದ ಆಫ್ರಿಕದ ಮೊಜಾಂಬಿಕ್ ಎಂಬ ಪ್ರದೇಶದಿಂದ ಸುಮಾರು ನಾಲ್ಕೈದುನೂರು ವರ್ಷಗಳ ಹಿಂದೆ ಗೋವಕ್ಕೆ ಕೂಲಿ ಮತ್ತು ಸೈನ್ಯಕ್ಕಾಗಿ ಇವರನ್ನು ಕರೆತಂದರು. ಪೋರ್ಚುಗೀಸರಿಂದ ತಪ್ಪಿಸಿಕೊಂಡ ಈ ಸಮುದಾಯ ಕರ್ನಾಟಕದ ಗಡಿಭಾಗದ ಅರಣ್ಯಗಳನ್ನು ಸೇರಿತು. ಆ ಮೂಲದ ಜನ ಉತ್ತರಕನ್ನಡ ಜಿಲ್ಲೆಯ ಅಂಕೋಲ, ಯಲ್ಲಾಪುರ, ಶಿರಸಿ, ಹಳಿಯಾಳ, ಮುಂಡಗೋಡು ತಾಲ್ಲೂಕುಗಳ ಊರುಗಳಲ್ಲಿ ಮತ್ತು ಸುತ್ತುಮುತ್ತಲಿನ ಗುಡ್ಡಗಾಡುಗಳಲ್ಲಿ ವಾಸವಾಗಿದ್ದಾರೆ. ಇವರಲ್ಲಿ ಕ್ರಿಶ್ಚಿಯನ್ ಸಿದ್ದಿ, ಮುಸ್ಲಿಮ್ ಸಿದ್ದಿ ಮತ್ತು ಹಿಂದು ಸಿದ್ದಿಗಳೆಂದು ಮೂರು ಪಂಗಡಗಳಿವೆ. ಹಬ್ಬ ಹರಿದಿನಗಳ ಆಚರಣೆ, ಭಾಷೆಯ ವ್ಯತ್ಯಾಸವನ್ನು ಬಿಟ್ಟರೆ ಉಳಿದಂತೆ ವಿಶೇಷ ಭಿನ್ನತೆ ಈ ಪಂಗಡಗಳ ನಡುವೆ ಕಾಣಬರುವುದಿಲ್ಲ. ಇವರ ಬದುಕನ್ನು ಗಮನಿಸಿದಾಗ ತಮ್ಮದೇ ಆದ ಧರ್ಮ, ಸಂಪ್ರದಾಯ ರೀತಿನೀತಿಗಳು ಯಾವುದೂ ಇವರಿಗೆ ನೆನಪಿನಲ್ಲಿ ಇದ್ದಂತೆ ತೋರುವುದಿಲ್ಲ. ಧರ್ಮದಿಂದ ಧರ್ಮಕ್ಕೆ ಸಂಪ್ರದಾಯದಿಂದ ಸಂಪ್ರದಾಯಕ್ಕೆ ಇವರು ತುಂಬ ಸುಲಭವಾಗಿ ಬದಲಾಗುತ್ತಾರೆ. ಸಿದ್ದಿಗಳು ಯಾರ ಮನೆಯಲ್ಲಿ ಕೂಲಿ ಮಾಡುತ್ತಾರೋ ಅಲ್ಲಿಯ ಧರ್ಮವನ್ನು ಸುಲಭವಾಗಿ ಅಂಗೀಕರಿಸುತ್ತಾರೆ. ಕ್ರಿಶ್ಚಿಯನ್ ಸಿದ್ದಿಗಳು ಕನ್ನಡ ಮಿಶ್ರಿತ ಗೋವ ಕೊಂಕಣಿ, ಮುಸ್ಲಿಮ್ ಸಿದ್ದಿಗಳು ಉರ್ದು, ಹಿಂದು ಸಿದ್ದಿಗಳು ಮರಾಠಿ, ಕನ್ನಡ, ಕೊಂಕಣಿ ಸೇರಿದ ಮಿಶ್ರಭಾಷೆ ಮಾತನಾಡುತ್ತಾರೆ. ಅನ್ನ, ಗಂಜಿ ಇವರ ಮುಖ್ಯ ಆಹಾರ. ಮಾಂಸದ ಬಳಕೆಯೂ ಉಂಟು. ಚಿಗರೆ, ಹಂದಿ, ಉಡ, ಪುನುಗುಬೆಕ್ಕು, ಮುಂಗುಸಿ, ಕಾಡುಕೋಳಿ, ಇಣಚಿ, ಮೀನು, ಏಡಿ, ಆಮೆ ಮುಂತಾದ ಪ್ರಾಣಿ, ಪಕ್ಷಿಗಳ ಮಾಂಸ ಇವರಿಗೆ ಪ್ರಿಯವಾದುದು. ಜೇನು ಇಳಿಸುವುದರಲ್ಲಿ ಇವರು ಪಳಗಿದವರು.

ಸಾಂಪ್ರದಾಯಿಕವಾಗಿ ಕಸೆಅಂಗಿ, ಕಚ್ಚೆ ಪಂಚೆ, ರುಮಾಲು ಅಥವಾ ಟೋಪಿಯನ್ನು ಧರಿಸುತ್ತಾರೆ. ಮಹಿಳೆಯರು ಸೀರೆ, ಕುಪ್ಪಸ ತೊಡುತ್ತಾರೆ. ಬೆಳ್ಳಿಬಂಗಾರದ ಆಭರಣಗಳನ್ನು ಧರಿಸುವರು. ಇವರಲ್ಲಿ ಸ್ವಂತ ಭೂಮಿ, ಮನೆ ಹೊಂದಿರುವವರು ವಿರಳ. ಇವರು ಕೂಲಿಯಾಗಿಯೋ ಜೀತದಾಳಾಗಿಯೋ ತಮ್ಮ ಬದುಕನ್ನು ಕಳೆಯುತ್ತಾರೆ.

ಸ್ಥಳೀಯ ಒಕ್ಕಲಿಗರ ಮತ್ತು ಹವ್ಯಕರ ಪ್ರಭಾವಕ್ಕೆ ಇವರು ಒಳಗಾಗಿದ್ದಾರೆ. ಇದನ್ನು ಇವರ ಆಚರಣೆಗಳಲ್ಲಿ ಗುರುತಿಸಬಹುದು. ಹಿಂದು, ಕ್ರೈಸ್ತ, ಮುಸ್ಲಿಮ್ ಸಿದ್ದಿಗಳಲ್ಲಿ ಪರಸ್ಪರ ವಿವಾಹಸಂಬಂಧವಿದೆ. ಮದುವೆಯಲ್ಲಿ ತೆರ ಕೊಡುವ ಪದ್ಧತಿ ಇಂದಿಗೂ ಇದೆ. ಮನೆಯ ಹಿರಿಯರಿಗೆ, ಹೆಣ್ಣುಮಕ್ಕಳಿಗೆ, ಬುದ್ವಂತ, ಕೋಲುಕಾರರಿಗೆ ಮದುವೆಯ ಸಮಾರಂಭದಲ್ಲಿ ಹೆಚ್ಚಿನ ಪ್ರಾಮುಖ್ಯ. ಮದುವೆಯ ಶಾಸ್ತ್ರ ಹವ್ಯಕರಿಂದ ಪ್ರಭಾವಿತವಾಗಿದೆ. ಮುಸ್ಲಿಮ್ ಸಿದ್ದಿಯರಲ್ಲಿ ಮದುವೆ ಶಾಸ್ತ್ರ ನೆರವೇರಿಸುವವನು ಕಾಜಿ. ಕ್ರಿಶ್ಚಿಯನ್ ಸಿದ್ದಿಗಳ ಮದುವೆ ಚರ್ಚಿನಲ್ಲಿ ನಡೆದರೂ ಉಳಿದ ಶಾಸ್ತ್ರ ಮನೆಯಲ್ಲೇ ನಡೆಯುತ್ತದೆ. ಉಡಿಕೆ ಮಾಡಿಕೊಳ್ಳುವುದು, ಸಿದ್ದಿಯಲ್ಲದ ಹೆಣ್ಣನ್ನು ಮದುವೆಯಾಗುವುದು, ಮದುವೆಯಾಗದೆ ಗರ್ಭಿಣಿಯಾದರೆ ಬಹಿಷ್ಕಾರ ಹಾಕದಿರುವುದು ಮೊದಲಾದ ನಡಾವಳಿ ಇವರಲ್ಲಿದೆ. ಸುಲಿದ ತೆಂಗಿನಕಾಯಿ ಇವರ ಮನೆದೇವರು. ದೇವರಿಗೆ, ಭೂತಕ್ಕೆ ಕುರಿ, ಕೋಳಿ ಬಲಿಕೊಡುತ್ತಾರೆ. ಗ್ರಾಮದೇವತೆಗಳಿಗೂ ನಡೆದುಕೊಳ್ಳುತ್ತಾರೆ. ಡೋಲಿನ ರೀತಿಯ ಢಮಾಮಿ ಎಂಬ ವಾದ್ಯವನ್ನು ಗಂಡಸರು ನುಡಿಸುತ್ತಾರೆ. ಅದರ ಗತ್ತಿಗೆ ತಕ್ಕಂತೆ ಹೆಂಗಸರು ಕುಣಿಯುತ್ತಾರೆ. ಸಂಗ್ಯಾ-ಬಾಳ್ಯ ಯಕ್ಷಗಾನ ಬಯಲಾಟವೂ ಇವರಲ್ಲಿ ರೂಢಿಯಲ್ಲಿದೆ. ದೊಡ್ಡಾಟದ ಧರ್ತಿ, ಗತ್ತುಗಳನ್ನು ಇವರ ಬಯಲಾಟದಲ್ಲಿ ಗುರುತಿಸಬಹುದು. **(ಆರ್.ಎಸ್.ಜಿ.)**

ಗುಮಟೆಪಾಂಗು ಎಂಬ ಮಣ್ಣಿನ ಕೊಡ ನುಡಿಸುವ ಸಿದ್ದಿಯರು ಅದರ ತಾಳಕ್ಕೆ ತಕ್ಕಂತೆ ನರ್ತಿಸುವರು. ಮಹಿಳೆಯರಲ್ಲಿ ಪುಗಡಿ ನೃತ್ಯ ಕಂಡುಬರುತ್ತದೆ. ಮುಸ್ಲಿಮ್ ಸಿದ್ದಿಯರಲ್ಲಿ ಅಲಾವಿ ನೃತ್ಯ ಮೊಹರಂ ವೇಳೆಯಲ್ಲಿ ಕಂಡುಬರುತ್ತದೆ.

ಮಹಾಲಯ ಅಮಾವಾಸ್ಯೆಯ ದಿನ ತಾವೇ ತಯಾರಿಸಿದ ಮದ್ಯ ಸೇವಿಸಿ, ವಯಸ್ಸು-ಲಿಂಗ ಭೇದವಿಲ್ಲದೆ ಢಮಾಮಿ, ಗುಮಟೆಪಾಂಗು ನುಡಿಸಿ ನರ್ತಿಸುತ್ತಾರೆ. ಪಿತೃಗಳ ಆರಾಧನೆಯನ್ನು ಅಂದು ನಡೆಸುತ್ತಾರೆ. ಸತ್ತವರು ಸಿದ್ದಿನಾಸ ಸೇರುತ್ತಾರೆಂದು ತಿಳಿಯುವ ಸಿದ್ದಿಗಳು ಶವವನ್ನು ಹೂಳುತ್ತಾರೆ. ಮಡಿಮೈಲಿಗೆಗಳ ಕಟ್ಟುಪಾಡು ಸಿದ್ದಿಗಳಲ್ಲಿ ಇಲ್ಲ.

ಆಧುನಿಕ ಅಕ್ಷರ-ಆರೋಗ್ಯ ಸೌಲಭ್ಯಗಳಿಗೆ ಸಿದ್ದಿಗಳು ನಿಧಾನವಾಗಿ ಹೊಂದಿಕೊಳ್ಳುತ್ತಿದ್ದಾರೆ. ಸಿದ್ದಿ ಅಭಿವೃದ್ಧಿಗಾಗಿ ಸರ್ಕಾರೇತರ ಸಂಘಸಂಸ್ಥೆಗಳು ದುಡಿಯುತ್ತಿವೆ. ದೃಢಕಾಯರಾದ ಸಿದ್ದಿಯರನ್ನು ಕ್ರೀಡಾ ಉದ್ದೇಶಕ್ಕೆ ಬಳಸಿಕೊಳ್ಳುವ ಪ್ರಯತ್ನವನ್ನೂ ಸರ್ಕಾರ ಮಾಡುತ್ತಿದೆ.

ಸಿದ್ದಿಗಳಿಗೆ ಸಂಬಂಧಿಸಿದ ಜನಪದ ಕಥೆಗಳನ್ನು ಎಲ್.ಆರ್.ಹೆಗಡೆ ಸಂಗ್ರಹಿಸಿದ್ದಾರೆ (1971). ಟಿ.ಸಿ. ಫಾಲಾಕ್ಷಪ್ಪ (1968-70) ಸಿದ್ದಿಯರನ್ನು ಕುರಿತು ಸಾಮಾಜಿಕ ಅಧ್ಯಯನ ಮಾಡಿದ್ದಾರೆ. ಉಡುಪಿಯ ಆರ್.ಆರ್.ಸಿ. ಸಂಸ್ಥೆ ಸಿದ್ದಿಯರ ಸಮಗ್ರ ದಾಖಲಾತಿಯನ್ನು ಮಾಡಿದೆ (1996-2000).

*

**ಸಿದ್ದಲಿಂಗಸ್ವಾಮಿ:** 1885-1952. ಅಭಿನವ ಜಕಣಾಚಾರ್ಯರೆಂದು ಪ್ರಸಿದ್ಧರಾಗಿದ್ದ ಕರ್ನಾಟಕದ ಖ್ಯಾತ ಶಿಲ್ಪಿಗಳಲ್ಲೊಬ್ಬರು. ಇವರು ಚಾಮರಾಜನಗರ ತಾಲ್ಲೂಕಿನ ಬೆಂಡರವಾಡಿ (ತಾಯಿಯ ಊರು) ಗ್ರಾಮದಲ್ಲಿ 1885 ರಂದು ಜನಿಸಿದರು. ಅಂದು ನಂಜುಂಡ ಶಿವಯೋಗೀಂದ್ರ ಸ್ವಾಮಿಗಳು ಆ ಊರಿಗೆ ಆಕಸ್ಮಿಕವಾಗಿ ಬಂದಿದ್ದು ಮಗುವಿಗೆ ಸಿದ್ಧಲಿಂಗಸ್ವಾಮಿ ಎಂದು ನಾಮಕರಣ ಮಾಡಿದರು. ಇವರ ತಂದೆ ಸಿದ್ದಪ್ಪಾಜಿಸ್ವಾಮಿ, ತಾಯಿ ಮಲ್ಲಾಜಮ್ಮಣ್ಣಿ. ಇವರ ಪೂರ್ವಿಕರು ವಿಜಯನಗರದಲ್ಲಿದ್ದವರೆಂದು ತಿಳಿಯುತ್ತದೆ.

ಇವರು ಗುರುಗಳ ಆಶೀರ್ವಾದದಿಂದ ವಂಶಪಾರಂಪರ್ಯವಾಗಿ ಬಂದ ವೇದ, ಶಿಲ್ಪ, ಮಂತ್ರಶಾಸ್ತ್ರ, ಜ್ಯೋತಿಷ ಮುಂತಾದ ವಿದ್ಯೆಗಳನ್ನು ತಮ್ಮ ತಂದೆಯವರಿಂದಲೂ ಪ್ರಸಿದ್ಧ ಶಿಲ್ಪಿಗಳೂ ಮಂತ್ರ ಶಾಸ್ತ್ರವೇತ್ತರೂ ಆದ ಇವರ ದೊಡ್ಡಪ್ಪ ಸಿದ್ಧಲಿಂಗಸ್ವಾಮಿಗಳಿಂದಲೂ ಅಭ್ಯಾಸ ಮಾಡಿದರು. ಇವರು ತಮ್ಮ ತಂದೆಯವರನ್ನೂ ದೊಡ್ಡಪ್ಪನವರನ್ನೂ

ಕಳೆದುಕೊಂಡ ಸಂದರ್ಭದಲ್ಲಿ ಗುರುಗಳಾದ ನಂಜುಂಡ ಶಿವಯೋಗೀಂದ್ರ ಸ್ವಾಮಿಗಳು ಇವರಿಗೆ ಧೈರ್ಯ ಉತ್ಸಾಹವನ್ನು ತುಂಬಿ ವಿದ್ಯಾಭ್ಯಾಸದಲ್ಲಿ ಮುಂದುವರಿಯಲು ನೆರವಾದರು. ಗುರುಗಳ ಆಶೀರ್ವಾದದಿಂದ ಇವರು ದಾರು, ಶಿಲಾ, ಲೋಹ, ಮೃತ್ತಿಕೆ ಮುಂತಾದ ಮೂರ್ತಿಶಿಲ್ಪದಲ್ಲೂ ಚಿತ್ರಕಲೆಯಲ್ಲೂ ನೈಪುಣ್ಯಗಳಿಸಿದರು. ಬೆಂಡರವಾಡಿ ಗ್ರಾಮದ ಪಟೇಲ್ ಚನ್ನದೇವಸ್ವಾಮಿ ಅವರ ಪುತ್ರಿ ವೀರಮ್ಮನವರನ್ನು ವಿವಾಹವಾಗಿ ಗೃಹಸ್ಥಧರ್ಮವನ್ನು ಸ್ವೀಕರಿಸಿದರು.

ನಂಜುಂಡ ಶಿವಯೋಗೀಂದ್ರ ಸ್ವಾಮಿಗಳು ತಮ್ಮ ಮುಖ್ಯ ಗುರುಗಳಾದ ಕರಸ್ಥಲ ನಾಗಲಿಂಗಸ್ವಾಮಿಗಳ ಹೆಸರಿನಲ್ಲಿ ಒಂದು ಮಠವನ್ನು ಸ್ಥಾಪಿಸಲು ತಮ್ಮ ಮೆಚ್ಚಿನ ಶಿಷ್ಯ ಸಿದ್ಧಲಿಂಗ ಸ್ವಾಮಿಗಳಿಗೆ ತಿಳಿಸಿದರು. ಗುರುಗಳ ಅಪೇಕ್ಷೆಯಂತೆ ಇವರು ಮೈಸೂರಿನ ಮಠವನ್ನು ನಿರ್ಮಿಸಲು ಪ್ರಯತ್ನಪಟ್ಟರು. ಹಗಲಿರುಳು ಶಿಲ್ಪಕೃತಿಗಳನ್ನು ರಚಿಸಿ ಒಂದು ಪುಟ್ಟ ದೇವರಗುಡಿಯ ಅಂಕಣವನ್ನು ಕಟ್ಟಿಸಿದರು. ಅನಂತರ ಅದು ಕ್ರಮೇಣ ಬೃಹತ್‌ಮಠವಾಗಿ ಬೆಳೆಯಿತು.



ಇವರು ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಹು ಮುಖ್ಯವಾದುವನ್ನು ಮೈಸೂರು, ತುಮಕೂರು ಮತ್ತು ಮಂಗಳೂರು ನಗರಗಳಲ್ಲಿ ಕಾಣಬಹುದು. ಇವರು ನಿರ್ಮಿಸಿದ ಪರಶಿವ, ವಿಶ್ವಕರ್ಮನ ಶಿಲಾವಿಗ್ರಹಗಳು ಸುಂದರವಾಗಿವೆ. ಜರ್ಮನಿಯಲ್ಲಿರುವ ಮರದ ಶಂಕರಾಚಾರ್ಯರ ವಿಗ್ರಹ ರಡಾಲ್ಫ್ ಆಟೋ ಎಂಬುವರ ವಿಜ್ಞಾಪನೆಯ ಮೇರೆಗೆ ನಿರ್ಮಿಸಿಕೊಟ್ಟದ್ದೆಂದು ತಿಳಿಯುತ್ತದೆ. ಕೃಷ್ಣರಾಜ ಸಾಗರ ಬೃಂದಾವನದಲ್ಲಿರುವ ಕೃಷ್ಣಶಿಲೆಯ ಕಾವೇರಿ ವಿಗ್ರಹ, ಅಲ್ಲಿನ ಅಮೃತ ಶಿಲೆಯ ರಾಧಾಕೃಷ್ಣ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿರುವ ನವಗ್ರಹ ದೇವತಾವಿಗ್ರಹಗಳು, ಹಾಸನ ಜಿಲ್ಲೆಯ ಆನೆಕೆರೆ ಗ್ರಾಮದ ಚನ್ನಕೇಶವಸ್ವಾಮಿ ವಿಗ್ರಹ, ಶಿಕಾರಿಪುರದಲ್ಲಿ ಬಹು ಎತ್ತರವಾದ ಸ್ತಂಭದ ಮೇಲೆ ಕಂಗೊಳಿಸುತ್ತಿರುವ ಗಂಡಭೇರುಂಡ ವಿಗ್ರಹ, ಜೋಗದಲ್ಲಿರುವ ಚಾಮುಂಡೇಶ್ವರಿ ವಿಗ್ರಹ, ದಾವಣಗೆರೆಯ ಶ್ರೀರಾಮ ಸೀತಾಲಕ್ಷ್ಮಣ ಆಂಜನೇಯ ವಿಗ್ರಹಗಳು, ಹಿಂದೂಪುರದಲ್ಲಿರುವ ಅಮೃತಶಿಲೆಯ ಕನ್ನಿಕಾಪರಮೇಶ್ವರಿ, ಶ್ರೀರಂಗನಾಥಸ್ವಾಮಿ ವಿಗ್ರಹಗಳು, ಚಿಕ್ಕಮಗಳೂರಿನಲ್ಲಿರುವ ವಿಘ್ನೇಶ್ವರ ವಿಗ್ರಹ, ಕೂಡಲಿ ಶೃಂಗೇರಿ ಸಂಸ್ಥಾನದಲ್ಲಿರುವ ಪಂಚಲೋಹದ ಶಾರದಾ ವಿಗ್ರಹ, ಆಂಧ್ರದ ಗುಂಟೂರು ಜಿಲ್ಲೆಯ ಚಿದಾಲ ಎಂಬಲ್ಲಿರುವ ಕಾಮಾಕ್ಷಿ ವಿಗ್ರಹ, ಮೈಸೂರಿನ ಪರಕಾಲಮಠದಲ್ಲಿರುವ ಕೃಷ್ಣಬ್ರಹ್ಮತಂತ್ರ ಜಯಚಾಮರಾಜ ಒಡೆಯರ ಕಾಲದಲ್ಲಿ ಸ್ಥಾಪಿಸಿದ ಮೈಸೂರು ಅರಮನೆಯ ಕೋಟೆಯ ದೇವಸ್ಥಾನದಲ್ಲಿರುವ ಭುವನೇಶ್ವರಿ, ಚಾಮುಂಡೇಶ್ವರಿ, ರಾಜರಾಜೇಶ್ವರಿ ವಿಗ್ರಹ–ಇವು ಇವರಿಂದ ನಿರ್ಮಿತವಾದ ಸುಂದರ ಶಿಲ್ಪಕೃತಿಗಳು. ಮುಮ್ಮುಡಿ ಕೃಷ್ಣರಾಜ ಒಡೆಯರ ಕೋರಿಕೆಯಂತೆ ಇವರು 1950ರಲ್ಲಿ ಚಾಮುಂಡೇಶ್ವರಿ, ರಾಜರಾಜೇಶ್ವರಿ, ಗಾಯಿತ್ರಿ, ಭುವನೇಶ್ವರಿ, ಕಾಳಿಕಾ ಪರಮೇಶ್ವರಿ, ಲಕ್ಷ್ಮೀ ಮತ್ತು ಸರಸ್ವತಿ ಮುಂತಾದ ತೈಲವರ್ಣದ ಬೃಹದಾಕಾರದ ಚಿತ್ರಗಳನ್ನೂ ರಚಿಸಿಕೊಟ್ಟಿದ್ದಾರೆ. ಇವು ಈಗ ಮೈಸೂರು ಅರಮನೆಯ ದರ್ಬಾರ್ ಹಾಲಿನಲ್ಲಿವೆ. ಮೈಸೂರಿನಲ್ಲಿರುವ ಶ್ರೀ ಜಗದ್ಗುರು ಶೈವಶಿಲ್ಪ ಬ್ರಹ್ಮರ್ಷಿ ಗುರುಕುಲಂ ಎಂಬ ಶಿಲ್ಪಶಾಲೆಯನ್ನು ಸ್ಥಾಪಿಸಿದವರೂ ಇವರೇ. ಈ ಆಶ್ರಮ ಕಲಾ ಪೂರ್ಣವಾಗಿದೆ. ಇಲ್ಲಿರುವ ಚಿತ್ರಶಾಲೆಯಲ್ಲಿ ನಾನಾಬಗೆಯ ನಾನಾವರ್ಣಗಳ ಕಲಾಕೃತಿಗಳು ತುಂಬಿವೆ. ಇಲ್ಲಿರುವ ಶಿಲ್ಪ ವಿದ್ಯಾಲಯದಲ್ಲಿ ಸಿದ್ಧಲಿಂಗಸ್ವಾಮಿಗಳ ನೂರಾರು ಶಿಲ್ಪಕೃತಿಗಳಿವೆ. ಈ ವಿಗ್ರಹಗಳು ಇವರ ಶಿಲ್ಪಪ್ರೌಢಿಮೆಯನ್ನು ಸಾರುತ್ತವೆ. ಈ ಗುರುಕುಲದ ಎದುರಿನಲ್ಲಿರುವ ಹೊಯ್ಸಳ ಮಾದರಿಯಲ್ಲಿ ಕಟ್ಟಿರುವ ಸುಂದರ ಕಾಮಕಾಮೇಶ್ವರಿ ದೇವಾಲಯವೂ ಇವರ ರಚನೆಯೇ. ಈ ದೇವಾಲಯದ ಭಿತ್ತಿಗಳಲ್ಲಿ ಶಿವಲೀಲೆಗೆ ಸಂಬಂಧಪಟ್ಟ ಅನೇಕ ಸುಂದರ ಶಿಲಾಮೂರ್ತಿಗಳನ್ನು ಕಡೆಯಲಾಗಿದೆ. ಈ ದೇವಾಲಯದ ಮುಂಭಾಗದಲ್ಲಿ ಪ್ರತಿಷ್ಠಾಪಿಸಲಾಗಿರುವ ಮಹಾನಂದಿ ವಿಗ್ರಹ ಉನ್ನತಾಕಾರವಾಗಿದೆ. ದೇವಾಲಯದ ಪಕ್ಕದಲ್ಲೇ ಶ್ರೀ ನಾಗಲಿಂಗಸ್ವಾಮಿ ಮಠವಿದೆ.

ಇವರು ಮಹಾಶಿಲ್ಪಿಗಳೆಂದು ಹೆಸರುಗಳಿಸಿದ್ದಂತೆ ಸಾಹಿತಿಗಳೂ ಕವಿಗಳೂ ಆಗಿದ್ದರು. ಶಿಲ್ಪವಿದ್ಯಾರಹಸ್ಯೋಪನಿಷತ್ ಎಂಬ ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಶಿಲ್ಪಸಾರ ಎಂಬುದು ಇವರ ಕವನಸಂಕಲನ. ಇದರಲ್ಲಿ ಶಿಲ್ಪಮಹಿಮೆಯನ್ನು ಪದ್ಯರೂಪದಲ್ಲಿ ರಚಿಸಿದ್ದಾರೆ. ಅಜಪಾಗಾಯತ್ರಿ ಜಪವಿಧಾನಂ ಎಂಬುದು ಇವರ ಮತ್ತೊಂದು ಗ್ರಂಥ. ಸಾಮಾನ್ಯರಿಗೂ ಸುಲಭವಾಗಿ ದೊರೆಯುವಂತೆ ಋಗ್ವೇದಸಂಹಿತೆ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿಸುವಲ್ಲಿಯೂ ಇವರು ವಹಿಸಿದ ಪಾತ್ರ ಬಹುದೊಡ್ಡದು.

ಇವರು ಜಗದ್ಗುರು ಕರಸ್ಥಲ ನಾಗಲಿಂಗಸ್ವಾಮಿಗಳ ಮಠದ ಪೀಠಾಧ್ಯಕ್ಷರಾಗಿದ್ದರು. ಇವರ ತರುವಾಯ ಇವರ ಕರಕಮಲಸಂಜಾತರಾದ ಶಿಲ್ಪಿಸಿದ್ಧಾಂತಿ ಮಹದೇವಸ್ವಾಮಿಗಳು ಈ ಮಠದ ಅಧ್ಯಕ್ಷರಾಗಿ ಶಿಲ್ಪಕಲೆಗೆ ಹೆಚ್ಚಿನ ಸ್ಥಾನವನ್ನು ತಂದುಕೊಟ್ಟರು. ಜೀವನದಲ್ಲಿ ಶ್ರದ್ಧೆ, ಆಸಕ್ತಿ, ಗುರುವಿನಲ್ಲಿ ಭಕ್ತಿ ಇವುಗಳನ್ನೇ ತಮ್ಮ ಮೂಲ ಮಂತ್ರಗಳನ್ನಾಗಿಟ್ಟುಕೊಂಡು ಕಲಾಸೇವೆಗೈದ ಇವರು 1952 ಮೇ 2ರಂದು ಮೈಸೂರಿನಲ್ಲಿ ನಿಧನಹೊಂದಿದರು.

**(ಪಿ.ಆರ್.ಟಿ.)**

**ಸಿದ್ಧಾಂತಿ ಶಿವಶಂಕರಶಾಸ್ತ್ರಿ:** 1864–1942. ಕನ್ನಡ ವಿದ್ವಾಂಸರು. ಇವರದು ಪಂಡಿತ ಮನೆತನ. ತಂದೆ ಸುಬ್ರಹ್ಮಣ್ಯ ಶಾಸ್ತ್ರೀಗಳು ಸಂಸ್ಕೃತದಲ್ಲಿ ಹೆಸರಾಂತ ವಿದ್ವಾಂಸರಾಗಿದ್ದರು. ವ್ಯಾಸಂಗವನ್ನು ತಂದೆಯವರ ಬಳಿ ನಡೆಸಿದ ಇವರು ಸಂಸ್ಕೃತದ ಜೊತೆಗೆ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿಕೊಂಡು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಪಂಡಿತ ರಾಗಿ ನೇಮಕಗೊಂಡರು. ಕ್ರಿಶ್ಚಿಯನ್ ಕಾಲೇಜು ಮತ್ತು ಪ್ರೆಸಿಡೆನ್ಸಿ ಕಾಲೇಜುಗಳಲ್ಲಿ ಸು. 30

ವರ್ಷಗಳ ಕಾಲ ಕನ್ನಡ ಪಂಡಿತರಾಗಿ ಸೇವೆಸಲ್ಲಿಸಿದ ಇವರು 1921ರಲ್ಲಿ ಸೇವೆಯಿಂದ ನಿವೃತ್ತರಾಗಿ ಬೆಂಗಳೂರಿಗೆ ಬಂದು, ಬಸವನಗುಡಿಯ ಆನಂದಗಿರಿ ದೇವಾಲಯದಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದರು.



ಇವರಿಗೆ ಭಾಷಾಪಾಂಡಿತ್ಯದ ಜೊತೆಗೆ ಜ್ಯೋತಿಶ್ಯಾಸ್ತ್ರದಲ್ಲೂ ಪ್ರವೇಶವಿತ್ತು. ಇವರು ರಚಿಸಿರುವ ಕರ್ನಾಟಕ ನಳೋಪಾಖ್ಯಾನ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿದೆ. ಅಭಿನವಕಾದಂಬರಿ, ಕರ್ನಾಟಕ ನರಕಾಸುರ ವಿಜಯು ವ್ಯಾಂಯೋಗಂ, ಶ್ರೀಶಂಕರ ಕಥಾಮೃತಂ, ಪ್ರಶ್ನೋತ್ತರ ಮಾಲಿಕೆ, ಶ್ರೀಕಾವೇರಿ ಮಾಹಾತ್ಮ್ಯವು-ಇವು ಇತರ ಗ್ರಂಥಗಳು.

ಇವರು ಸಲ್ಲಿಸಿದ ಭಾಷಾಸೇವೆಗೆ ಹಲವು ಬಗೆಯ ಗೌರವಗಳು ಲಭಿಸಿವೆ. ಶೃಂಗೇರಿ ಮಠದಿಂದ ಸನ್ಮಾನಿತರಾದ ಇವರಿಗೆ ಭಾರತ ಸರ್ಕಾರದಿಂದ ಮಹಾಮಹೋಪಾಧ್ಯಾಯ ಎಂಬ ಪ್ರಶಸ್ತಿಯೂ 1938ರಲ್ಲಿ ಮೈಸೂರು ಮಹಾರಾಜರಿಂದ ವಿದ್ಯಾನಿಧಿ ಎಂಬ ಪ್ರಶಸ್ತಿಯೂ ದೊರಕಿತು. 1923ರಲ್ಲಿ ಬಿಜಾಪುರದಲ್ಲಿ ನಡೆದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಕನ್ನಡಿಗರು ಇವರನ್ನು ಗೌರವಿಸಿದರು.

(ಎಚ್.ಸಿ.ಎಸ್.)

**ಸಿರಗುಪ್ಪ:** ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ದಕ್ಷಿಣದಲ್ಲಿ ಬಳ್ಳಾರಿ, ನೈಋತ್ಯದಲ್ಲಿ ಹೊಸಪೇಟೆ ತಾಲ್ಲೂಕುಗಳೂ ಪಶ್ಚಿಮದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕುಗಳೂ ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶವೂ ಈ ತಾಲ್ಲೂಕನ್ನು ಸುತ್ತುವರಿದಿವೆ. ಹಟಚೊಳ್ಳಿ, ಸಿರಗುಪ್ಪ, ತೆಕ್ಕಲಕೋಟೆ ಮತ್ತು ಕರೂರು ಹೋಬಳಿಗಳು. 84 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,044 ಚ.ಕಿಮೀ. ಜನಸಂಖ್ಯೆ 2,35,344.

ಈ ತಾಲ್ಲೂಕಿನಾದ್ಯಂತ ಅಲ್ಲಲ್ಲಿ ಕೆಂಚನಗುಡ್ಡ ಬೆಟ್ಟಶ್ರೇಣಿಗೆ ಸೇರಿದ ಕಲ್ಲುಬೆಟ್ಟಗಳು ಮತ್ತು ಕಪ್ಪುಮಣ್ಣಿನ ವಿಶಾಲ ಬಯಲುಗಳನ್ನು ಕಾಣಬಹುದು. ತಾಲ್ಲೂಕಿನ ಪಶ್ಚಿಮ ಮತ್ತು ವಾಯವ್ಯ ಭಾಗದ ಉದ್ದಕ್ಕೂ ಈಶಾನ್ಯಾಭಿಮುಖವಾಗಿ ಈ ತಾಲ್ಲೂಕನ್ನು ರಾಯಚೂರು ಜಿಲ್ಲೆಯಿಂದ ವಿಂಗಡಿಸಿ ತುಂಗಭದ್ರಾ ನದಿ ಹರಿಯುತ್ತದೆ. ಆಗ್ನೇಯ ಭಾಗದಿಂದ ತಾಲ್ಲೂಕನ್ನು ಪ್ರವೇಶಿಸುವ ಹಗರಿನದಿ ಈ ತಾಲ್ಲೂಕಿನ ಮಧ್ಯದಲ್ಲಿ ಉತ್ತರಾಭಿಮುಖವಾಗಿ ಹರಿದು ಬಾಗವಾಡಿ ಬಳಿ ತುಂಗಭದ್ರಾ ನದಿಯನ್ನು ಕೂಡುತ್ತದೆ. ಹಗರಿ ನದಿಯ ಉಪಹೊಳೆಯೊಂದು ಬಳ್ಳಾರಿ ತಾಲ್ಲೂಕಿನಿಂದ ಸಿರಗುಪ್ಪ ತಾಲ್ಲೂಕನ್ನು ಪ್ರವೇಶಿಸಿ ಬೂದಗುಪ್ಪ ಬಳಿ ಹಗರಿ ನದಿಯನ್ನು ಸೇರುತ್ತದೆ. ತಾಲ್ಲೂಕಿನ ಈಶಾನ್ಯಭಾಗದಲ್ಲಿ ಹುಟ್ಟುವ ತೊರೆಯೊಂದು ತುಂಗಭದ್ರಾ ನದಿಯನ್ನು ಸೇರುತ್ತದೆ. ಈ ತಾಲ್ಲೂಕು ನದಿ ಮತ್ತು ಕಾಲುವೆಗಳಿಂದ ಸಾಕಷ್ಟು ಜಲಪೂರೈಕೆ ಪಡೆದಿದೆ. ತಾಲ್ಲೂಕಿನಲ್ಲಿ ವರ್ಷದ ಹೆಚ್ಚು ಕಾಲ ಒಣಹವೆ ಇದ್ದು ಬೇಸಗೆ ಹೆಚ್ಚು ಉಷ್ಣತೆಯಿಂದ ಕೂಡಿರುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 639.15 ಮಿಮೀ.

ಈ ತಾಲ್ಲೂಕಿನಲ್ಲಿ ಹೇರಳವಾಗಿ ಜಿಪ್ಸಮ್ ಖನಿಜ ದೊರೆಯುತ್ತದೆ. ಮನೆಕಟ್ಟಲು ಉಪಯುಕ್ತವಾದ ಗ್ರ್ಯಾನೈಟ್ ಕಲ್ಲು ಈ ತಾಲ್ಲೂಕಿನಲ್ಲಿ ದಮ್ಮೂರು ಮತ್ತು ಸಿರಿಗೆರೆ ಎಂಬ ಸ್ಥಳದಲ್ಲಿ ವಿಶೇಷವಾಗಿದೆ. ಇಲ್ಲಿ ಮಳೆ ಅವಲಂಬಿತ ಸಸ್ಯವರ್ಗ ಕಡಿಮೆ. ಹಗರಿ ನದಿಯ ದಂಡೆಗಳಲ್ಲಿ ವಿಶೇಷವಾಗಿ ಕುರುಚಲು ಕಾಡು ಕಂಡುಬರುತ್ತದೆ. ಬೇವು, ಮಾವು, ಕಕ್ಕೆ, ದಿಂಡಿಗ ಮೊದಲಾದ ಮರಗಳು ಬೆಳೆಯುತ್ತವೆ. ಗುಗ್ಗುಳ, ಸೀತಾಫಲ, ಸೀಗೆಕಾಯಿ, ತೂಪರದ ಎಲೆ, ಜೇನು ಮೊದಲಾದವು ಇಲ್ಲಿನ ಅರಣ್ಯ ಉತ್ಪನ್ನಗಳು.

ಈ ತಾಲ್ಲೂಕಿನ ಕಪ್ಪುಮಣ್ಣಿನ ಜಮೀನು ಫಲವತ್ತಾಗಿದ್ದು ಜೋಳ, ಬತ್ತ, ಕಬ್ಬು, ಹತ್ತಿ, ನೆಲಗಡಲೆ-ಈ ಮುಖ್ಯ ಬೆಳೆಗಳಲ್ಲದೆ ನವಣೆ, ಹೆಸರು, ಸಾವೆ, ಮೆಣಸಿನಕಾಯಿ, ಹೊಗೆಸೊಪ್ಪು ಮೊದಲಾದ ಬೆಳೆಗಳನ್ನೂ ಬೆಳೆಯುತ್ತಾರೆ. ಈ ತಾಲ್ಲೂಕಿನಲ್ಲಿ ತುಂಗಭದ್ರಾ ನದಿಗೆ ಸಿರಗುಪ್ಪ ಮತ್ತು ದೇಸನೂರು ಅಣೆಕಟ್ಟೆದ್ದು ಅದರಿಂದ ಹೊರಡುವ ನಾಲೆಗಳು ವಿಜಯನಗರದ ಕಾಲದಿಂದಲೂ ಬಳಕೆಯಲ್ಲಿವೆ. ಇವುಗಳಿಂದ ಮತ್ತು ತುಂಗಭದ್ರಾ ಮೇಲ್ದಂಡೆ ನಾಲೆಯಿಂದ ತಾಲ್ಲೂಕಿನ ಜಮೀನಿಗೆ ನೀರೊದಗಿದೆ. ಸಿರಗುಪ್ಪಕ್ಕೆ 2ಕಿಮೀ ದೂರದಲ್ಲಿ ಸಿರಗುಪ್ಪ-ಆದವಾನಿ ಮಾರ್ಗದಲ್ಲಿ ವ್ಯವಸಾಯ ಸಂಶೋಧನ ಕೇಂದ್ರವಿದೆ.

ಕೊಠಾರಿ ಸಕ್ಕರೆ ಕಾರ್ಖಾನೆ ಸೇರಿದಂತೆ ಈ ತಾಲ್ಲೂಕಿನಲ್ಲಿ ಅನೇಕ ಕೈಗಾರಿಕೆಗಳಿವೆ. ತೆಕ್ಕಲಕೋಟೆಯಲ್ಲಿ ಬಟ್ಟೆ ತಯಾರಿಕಾ ಕೇಂದ್ರ, ಸಿರಗುಪ್ಪದಲ್ಲಿ ಹತ್ತಿ ಸಂಸ್ಕರಿಸುವ ಅನೇಕ ಕಾರ್ಖಾನೆಗಳಿವೆ. ಪಾನೀಯಗಳು ಮತ್ತು ಹೊಗೆಸೊಪ್ಪಿಗೆ ಸಂಬಂಧಿಸಿದ ಹಲವಾರು ಉದ್ಯಮಗಳು ಸಿರಗುಪ್ಪದಲ್ಲಿವೆ. ಎಂಜಿನಿಯರಿಂಗ್ ಉದ್ಯಮಗಳಿವೆ. ಎಣ್ಣೆ ತಯಾರಿಕಾ ಘಟಕಗಳು, ಚರ್ಮದ ಉದ್ಯಮಗಳು ಈ ತಾಲ್ಲೂಕಿನಾದ್ಯಂತ ಕಂಡುಬರುತ್ತವೆ. ಸಿರಗುಪ್ಪದಲ್ಲಿ ಕುಶಲ ಕೈಗಾರಿಕಾ ತರಬೇತಿ ಸಂಸ್ಥೆ ಇದೆ.

ಸಿರಗುಪ್ಪದ ನೈಋತ್ಯಕ್ಕೆ 5ಕಿಮೀ ದೂರದಲ್ಲಿರುವ ಕೆಂಚನಗುಡ್ಡದಲ್ಲಿ ಎರಡು ಕೋಟೆಗಳಿವೆ. ಸಿರಗುಪ್ಪದ ದಕ್ಷಿಣಕ್ಕೆ 9 ಕಿಮೀ ದೂರದಲ್ಲಿರುವ ತೆಕ್ಕಲಕೋಟೆ **(ನೋಡಿ)** ಈ ತಾಲ್ಲೂಕಿನ ಮುಖ್ಯ ಪಟ್ಟಣಗಳಲ್ಲೊಂದು. ತೆಕ್ಕಲಕೋಟೆಯ ಉತ್ತರಕ್ಕೆ 2 ಕಿಮೀ ದೂರದಲ್ಲಿರುವ ಮಳೆಕೋಟೆ ಎಂಬಲ್ಲಿಯ ವೀರಭದ್ರಸ್ವಾಮಿ ರಥೋತ್ಸವ, ತೆಕ್ಕಲಕೋಟೆಯ ನೈಋತ್ಯಕ್ಕೆ 12 ಕಿಮೀ ದೂರದಲ್ಲಿರುವ ಸಿರಿಗೆರೆಯ ನಾಗಲಿಂಗಸ್ವಾಮಿ ಜಾತ್ರೆ, ತೆಕ್ಕಲಕೋಟೆಯ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿರುವ ದರೂರಿನ ವೀರಭದ್ರಸ್ವಾಮಿ ರಥೋತ್ಸವ ಪ್ರಸಿದ್ಧವಾದುವು.

ಸಿರಗುಪ್ಪ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬಳ್ಳಾರಿ-ರಾಯಚೂರು ಮಾರ್ಗದಲ್ಲಿ ಬಳ್ಳಾರಿಯ ಉತ್ತರಕ್ಕೆ 56 ಕಿಮೀ ದೂರದಲ್ಲಿದೆ. ಜನಸಂಖ್ಯೆ 66,502.

ವ್ಯಾಪಾರ ಕೇಂದ್ರವಾಗಿರುವ ಈ ಪಟ್ಟಣದಿಂದ ಹೆಚ್ಚು ಪ್ರಮಾಣದಲ್ಲಿ ಬತ್ತ, ತೆಂಗು, ಬೆಲ್ಲ, ಬಾಳೆಹಣ್ಣುಗಳನ್ನು ಹೊರಪ್ರದೇಶಗಳಿಗೆ ಕಳಿಸಲಾಗುತ್ತದೆ. ಇಲ್ಲಿನ ಮುಖ್ಯ ಉತ್ಪಾದನೆ ಬೆಲ್ಲ, ಕಡಲೆಕಾಯಿ ಎಣ್ಣೆ ಮತ್ತು ಮರದ ಸಾಮಾನುಗಳು.

ಒಂದು ಕಾಲದಲ್ಲಿ ಸಿರಗುಪ್ಪ, ಸಿರಿಕುಪ್ಪೆ ಎಂಬ ಹೆಸರಿದ್ದಿರಬೇಕು ಎಂಬ ಅಭಿಪ್ರಾಯ ವಿದೆ. ವಿಜಯನಗರದ ಅರಸರು ಕಟ್ಟಿಸಿದ ಕುತೂಹಲಕಾರಿ ಶಿಲ್ಪವುಳ್ಳ ಅಣೆಕಟ್ಟುಗಳು ಸಿರಗುಪ್ಪದ ಹತ್ತಿರವಿರುವ ಕೆಂಚನಗುಡ್ಡದ ಬಳಿ ಇವೆ. ಸಮೀಪದಲ್ಲೇ ಮಂತ್ರಾಲಯ ಮಠದ ಶ್ರೀವಸುಧೇಂದ್ರಸ್ವಾಮಿಗಳ ಬೃಂದಾವನ ವಿದೆ. ಇಲ್ಲಿಯ ಕೋಟೆ ಕೊತ್ತಲದ ಮೇಲೆ ಪ್ರಾಚೀನ ಶಂಭುಲಿಂಗ ದೇವಾಲಯವಿದೆ. ಸ್ಥಳೀಯ ಶ್ರೀಮಂತ ವ್ಯಾಪಾರಿಯೊಬ್ಬ 1887ರಲ್ಲಿ ಕಟ್ಟಿಸಿದ ಇಲ್ಲಿನ ಕೊಟ್ಟೂರು ಬಸವಣ್ಣ ದೇವಾಲಯ ಆಧುನಿಕ ನಿರ್ಮಾಣ. *

**ಸಿರಿಗೆರೆ:** ಚಿತ್ರದುರ್ಗ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ಚಿತ್ರದುರ್ಗಕ್ಕೆ ವಾಯವ್ಯದಲ್ಲಿ 32 ಕಿಮೀ ದೂರದಲ್ಲಿದೆ. ಜನಸಂಖ್ಯೆ 4,421.

ಈ ಊರಿನಲ್ಲಿ ತರಳಬಾಳು ಸಂಪ್ರದಾಯದ ಪ್ರಸಿದ್ಧ ವೀರಶೈವ ಮಠವಿದೆ. ಇದು ಹಿಂದೆ ಉಜ್ಜಯಿನಿ ಪೀಠಕ್ಕೆ ಸೇರಿತ್ತೆಂದು ತಿಳಿದು ಬರುತ್ತದೆ. ಈ ಮಠ ಸಾರ್ವಜನಿಕ ಸೇವೆಗೆ ಹೆಸರಾಗಿದೆ. ಶಿಶುವಿಹಾರ ದಿಂದ ಕಾಲೇಜು ಮಟ್ಟದವರೆಗೆ ಶಿಕ್ಷಣ ಸಂಸ್ಥೆಗಳನ್ನೂ ನಡೆಸುತ್ತಿದೆ. ಅಧ್ಯಾಪಕರ ಶಿಕ್ಷಣಕ್ಕಾಗಿ ಚಿತ್ರದುರ್ಗದಲ್ಲಿ ಪದವಿಮಟ್ಟದ ಪ್ರಶಿಕ್ಷಣ ಕಾಲೇಜನ್ನೂ ಸ್ಥಾಪಿಸಲಾಗಿದೆ. ರಾಜ್ಯದ ಅನೇಕ ಕಡೆ ತರಳಬಾಳು ಜಗದ್ಗುರು ವಿದ್ಯಾರ್ಥಿನಿಲಯಗಳಿವೆ. ಇಲ್ಲಿ ಈ ಮಠಕ್ಕೆ ಸೇರಿದ ಒಂದು ಅನಾಥಾಲಯವಿದೆ. ಈ ಮಠದ ಹಿಂದಿನ ಅನೇಕ ಪೀಠಾಧ್ಯಕ್ಷರು ವಿದ್ವಾಂಸರಾಗಿದ್ದು ವೀರಶೈವ ಧರ್ಮ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಅನೇಕ ವ್ಯಾಖ್ಯಾನ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ಮಾಘಮಾಸದ ವ್ಯಾಸಪೂರ್ಣಿಮೆಯ ದಿನ ನಡೆಯುವ ಇಲ್ಲಿನ ತರಳಬಾಳು ಹುಣ್ಣಿಮೆ ಉತ್ಸವದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸುತ್ತಾರೆ. ಊರಿನಲ್ಲಿ ಅಂಚೆ, ತಂತಿ, ದೂರವಾಣಿ, ವಿದ್ಯುತ್ತು, ಆರೋಗ್ಯ ಕೇಂದ್ರ, ಔಷಧಾಲಯ ಮುಂತಾದವುಗಳ ಸೌಲಭ್ಯಗಳಿವೆ. ಶಾಲಾ ಕಾಲೇಜುಗಳಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಪ್ರತಿ ಗುರುವಾರ ಸಂತೆ ಸೇರುತ್ತದೆ. (ಎಸ್.ವಿ.ಎಸ್.)

**ಸಿರಿಜಾತ್ರೆ:** ತುಳುನಾಡಿನ ಒಂದು ವಿಶಿಷ್ಟ ಧಾರ್ಮಿಕ ಉತ್ಸವ. ಸಿರಿ ಎಂದರೆ ಒಂದೇ ದೈವ ಅಲ್ಲ. ಮಾತೃವಂಶೀಯ ಕುಟುಂಬ ವ್ಯವಸ್ಥೆಗೆ ಸೇರಿದ ಅಕ್ಕೆಸಿರಿ, ಸೊನ್ನೆ, ಗಿಂಡೆ, ಅಬ್ಬಗ, ದಾರಗ ಎನ್ನುವ ಸ್ತ್ರೀ ದೈವಗಳನ್ನೆಲ್ಲ ಒಟ್ಟಾಗಿ ಸಿರಿ ಎಂದು ಕರೆಯುವುದು ವಾಡಿಕೆ. ದಕ್ಷಿಣ ಕನ್ನಡ ಜಿಲ್ಲೆಯ ಪಾಂಗಾಳ, ಕವತ್ತಾರು, ನಂದಳಿಕೆ, ನಿಡಿಗಲ್ಲು, ಬೊಳ್ಳೊಟ್ಟು, ಜರೆಗುಡ್ಡ ಮುಂತಾದ ಊರುಗಳ ಶೈವ ದೇವಾಲಯಗಳಲ್ಲಿ ಸಿರಿಜಾತ್ರೆ ಜರುಗುತ್ತದೆ. ಆದರೆ ವಾಸ್ತವವಾಗಿ ಅವು ಶೈವದೇವಾಲಯಗಳಲ್ಲ. ಅವು ತುಳುವರ ಆಲಡೆಗಳು ಅಥವಾ ಮೂಲಸ್ಥಾನಗಳು. ಮಾರ್ಚ್, ಏಪ್ರಿಲ್, ಮೇ ತಿಂಗಳ ಹುಣ್ಣಿಮೆಯ ರಾತ್ರಿ ಸಿರಿಜಾತ್ರೆ ಜರುಗುವುದು.

ಜಾತ್ರೆಯ ದಿನ ಮುಸ್ಸಂಜೆಯ ಹೊತ್ತಿಗೆ ಸಿರಿಭಕ್ತರು ಹಾಗೂ ಅವರ ಬಂಧುಗಳು ಸಿರಿಗುಡಿಗೆ ಬಂದು, ಮಿಂದು ಕಾಣಿಕೆ ಒಪ್ಪಿಸುತ್ತಾರೆ. ಅರ್ಚಕರಿಂದ ಪೂಜೆ ನಡೆಯುತ್ತದೆ. ಸಿರಿ ಮತ್ತು ಕುಮಾರ ಮೈದುಂಬುವ ವ್ಯಕ್ತಿಗಳು. ಅಂದು ಶುಚಿಯಿಂದಿರಬೇಕು. ಸ್ನಾನ, ಮಡಿಬಟ್ಟೆ, ನಡೆಹಾಸು, ವೇಷಭೂಷಣ, ಹಿಂಗಾರ, ವಾದ್ಯಮೇಳಗಳ ಮೂಲಕ ಅವರನ್ನು ಉಳಿದವ ರಿಂದ 'ಪ್ರತ್ಯೇಕ'ಗೊಳಿಸಲಾಗುವುದು. ದೈಹಿಕ ಹಾಗೂ ಹುಣ್ಣಿಮೆರಾತ್ರಿ ಮಾನಸಿಕವಾದ ಈ ಪ್ರತ್ಯೇಕೀಕರಣ ಹಾಗೂ ಪೂರ್ವಸಿದ್ಧತೆಗಳು ಮುಂದೆ ಏರ್ಪಡಲಿರುವ ಆವೇಶಕ್ಕೆ ಪೂರಕವಾಗಿ ದುಡಿಯುತ್ತವೆ. ಪ್ರತಿಯೊಂದು ಸಿರಿ ಆರಾಧನಾ ಕೇಂದ್ರಕ್ಕೆ ಸಂಬಂಧಪಟ್ಟಂತೆ ನಿಗದಿಯಾದ ಮೂಲಕುಮಾರ ಅಥವಾ ಸ್ಥಳಕುಮಾರ ಮತ್ತು ಅವನ ಅಧೀನ ಕುಮಾರರು ಹಾಗೂ ಸಿರಿಗಳ ಸಮೂಹ ಇರುತ್ತದೆ. ಹೆಣ್ಣೊಬ್ಬಳು ಸಿರಿಯಾಗುವ ಪ್ರಕ್ರಿಯೆ ಹೀಗಿರುತ್ತದೆ: ಸಾಮಾನ್ಯವಾಗಿ ಹದಿನಾಲ್ಕರಿಂದ ಮೂವತ್ತೈದರ ಹೆಣ್ಣು ಮಗಳು ಸಿರಿ ಆಕರ್ಷಣೆಗೆ ಗುರಿಯಾಗುತ್ತಾಳೆ. ಒಬ್ಬಾಕೆಯಲ್ಲಿ ದೈಹಿಕ/ಮಾನಸಿಕ ಅಸ್ವಸ್ಥತೆಯ ಚಹರೆಗಳು ಕಂಡುಬಂದಾಗ ಅದು ದುಷ್ಟಶಕ್ತಿಯ ಕಾಟ, ಉಪದ್ರವೆಂದು ತಿಳಿದು ಪರಿಹಾರೋಪಾಯಗಳನ್ನು ನಡೆಸಲಾಗು ವುದು. ಆಗಲೂ ಫಲ ಕಂಡುಬಾರದಿದ್ದಲ್ಲಿ ಸಿರಿಜಾತ್ರೆಗೆ ಹೋಗಿ 'ದಲಿಯ ಸೇವೆ' ಮಾಡುವುದಾಗಿ ಹರಕೆ ಹೊರುತ್ತಾರೆ. ಅದರಂತೆ ಕುಮಾರನನ್ನು ಮನೆಗೆ ಕರೆಯಿಸಿ ಅಥವಾ ಕುಮಾರನಲ್ಲಿಗೆ ಹುಡುಗಿಯನ್ನು ಕರೆದೊಯ್ದು ಅಥವಾ ವಾರ್ಷಿಕ ಸಿರಿಜಾತ್ರೆಗೆ ಕರೆತಂದು ದಲಿಯಸೇವೆ ಮಾಡಿಸುತ್ತಾರೆ. ಹೊಸದಾಗಿ ದಲಿಯ ಸೇವೆಗೆ ಕರೆತಂದ ಹೆಣ್ಣನ್ನು ಸಿರಿ ತಂಡದೊಂದಿಗೆ ಸೇರಿಸುತ್ತಾರೆ. ಆರಾಧನಾ ಪ್ರಕ್ರಿಯೆಯೊಳಗೆ ಆವೇಶಿತಳಾಗುವ ಈ ಹೆಣ್ಣನ್ನು ಕುಮಾರ ಸಿರಿಪಾಡ್ದನದ ಭಾಗಗಳನ್ನು ಹಾಡುವ ಮೂಲಕ ಮಧ್ಯಂತರ ಜಗತ್ತಿಗೆ ಪ್ರವೇಶಿಸುವಂತೆ ಪ್ರಚೋದಿಸುತ್ತಾನೆ. ಈ ಪ್ರವೇಶ ಸಾಧ್ಯವಾಗಿ ಆಕೆ ಸಿರಿಬಳಗದ ಯಾವುದಾದರೂ ಒಂದು ಪಾತ್ರವಾಗಿ ತನ್ನನ್ನು ಭಾವಿಸಿಕೊಳ್ಳುತ್ತಾಳೆ. ಆವೇಶದ ನಿರಂತರ ಸ್ಥಿತಿಯಲ್ಲಿ ಆಕೆಯನ್ನು ಅನುಭವಿ ಸಿರಿಗಳು ಹಾಗೂ ಕುಮಾರ 'ಬಾಯಿಬಿಡಿಸುವ' ಕಾರ್ಯ ಮಾಡುತ್ತಾರೆ. ಆಗ ಆಕೆ ತಾನು ಸಿರಿಬಳಗದ ಸೊನ್ನೆಯೋ ಅಬ್ಬಗಳೋ, ದಾರಗಳೋ ಎಂದು ಹೇಳಿ ಕುಮಾರನೊಂದಿಗೆ ಪಾಡ್ದನ ಧಾಟಿಯಲ್ಲಿ ಸಂಭಾಷಿಸುವಲ್ಲಿ ಆಕೆ ಸಿರಿಬಳಗದ ನಿರ್ದಿಷ್ಟ ಸದಸ್ಯೆಯಾಗಿ ನಾಮಕರಣ ಹೊಂದುತ್ತಾಳೆ. ಮತ್ತಾಕೆ ವರ್ಷವರ್ಷವೂ ಜಾತ್ರೆಗೆ ಬಂದು ಸೇವೆ ಸಲ್ಲಿಸಲು ನಿಬದ್ಧಳಾಗುತ್ತಾಳೆ.

ಜಾತ್ರೆಯಲ್ಲಿ ಅರ್ಚಕರಿಂದ ತೀರ್ಥ ಪ್ರಸಾದ ಸ್ವೀಕರಿಸಿದ ಸಿರಿಗಳು ಮತ್ತು ಕುಮಾರ ಎದುರುಬದುರಿಗೆ ಸಾಲಾಗಿ ಅಥವಾ ಸುತ್ತುವರಿದು ನಿಲ್ಲುವರು. ಸಿರಿಪಾಡ್ದನದ ಹಂದರವು ಅನಾವರಣಗೊಳ್ಳುತ್ತ ಹೋದಾಗ ಲೌಕಿಕ ಜಗತ್ತಿನ ಈ ವ್ಯಕ್ತಿಗಳು ಅಲೌಕಿಕ ಜಗತ್ತನ್ನು ಪ್ರವೇಶಿಸುತ್ತಾರೆ ಹಾಗೂ ಮಧ್ಯಂತರ ಜಗತ್ತಿನ ಪಾತ್ರಗಳಾಗಿ ರೂಪಾಂತರಗೊಳ್ಳುತ್ತಾರೆ. ಆಗ ಅವರು ಸಿರಿ–ಕುಮಾರ, ಕುಮಾರ–ಸೊನ್ನೆ, ಕುಮಾರ–ಅಬ್ಬಗ ದಾರಗರಾಗಿ ಪರಸ್ಪರ ಸಂಬಂಧವನ್ನು ಸ್ಥಾಪಿಸಿಕೊಂಡು ಪಾಡ್ದನದ ಮೂಲಕ 'ಉತ್ತಮ ಪುರುಷ' ನಿವೇದನಾ ರೂಪದಲ್ಲಿ ಸಂವಾದ ಬೆಳೆಸುತ್ತಾರೆ. ತುಳುವ ಬಂಧುತ್ವ ವ್ಯವಸ್ಥೆಯಲ್ಲಿ ಈ ಜೋಡಿಗಳು ರಕ್ತಬಾಂಧವ್ಯ ಘಟಕವಾಗಿದ್ದು ಅವು ತಾಯಿ–ಮಗ, ಅಣ್ಣ–ತಂಗಿ, ಸೋದರಮಾವ–ಸೊಸೆಯದಾಗಿವೆ. ಮಾತೃರೂಪಿ ತುಳುವ ಸಂಸ್ಕೃತಿಯಲ್ಲಿ ತಾಯಿ ಬಳಗವು 'ಕುಟುಂಬ'ವೆಂದು ಪರಿಗಣಿತವಾಗುವುದರಿಂದ ಸೋದರಮಾವ ಕುಟುಂಬದ ಸದಸ್ಯನಾಗಿದ್ದು ಸೋದರಮಾವ–ಸೊಸೆಯು ಒಂದೇ ಬಳಿ (ಗೋತ್ರ) ಹೊಂದಿದ್ದು ಅವರೊಳಗಿನ ವಿವಾಹ ನಿಷಿದ್ಧವಾದುದು. ಈ ತಿಳಿವಳಿಕೆ ಸಿರಿಜಾತ್ರೆ ಸಂತಾನಾಪೇಕ್ಷಿ ಮೇಳವೆಂಬ ಗ್ರಹಿಕೆಯನ್ನು ಮರುವಿಮರ್ಶೆಗೆ ಒಡ್ಡಲು ಒತ್ತಾಯಿಸುತ್ತದೆ.

ಸಿರಿಜಾತ್ರೆಯ ಸಂದರ್ಭದಲ್ಲಿ ಸಮಗ್ರ ಸಿರಿಪಾಡ್ದನವನ್ನು ಹಾಡಲಾಗು ವುದಿಲ್ಲ. ಕೆಲವೊಂದು ಉತ್ಕಟ ಸಂದರ್ಭದ ಘಟನಾವಳಿಗಳನ್ನಷ್ಟೇ ಪ್ರದರ್ಶಿಸಲಾಗುವುದು. ಪಾಡ್ದನದೊಳಗಿನ ಘಟನೆಗಳ ವಿವರಗಳು ಉತ್ಕಟಸ್ಥಿತಿಯನ್ನು ತಲಪುವಲ್ಲಿ ಆವೇಶವೂ ತೀವ್ರಗೊಳ್ಳುತ್ತದೆ. ಹೀಗೆ ಪಾಡ್ದನ ಹಾಡುತ್ತ ಆವೇಶ ತೀವ್ರಗೊಳ್ಳುತ್ತ ಹೋದಂತೆ ತಮ್ಮ ವೈಯಕ್ತಿಕತೆಯನ್ನು ಕಳೆದುಕೊಳ್ಳುತ್ತ ಸಿರಿಕುಟುಂಬದ ಪಾತ್ರಗಳಲ್ಲಿ ಒಂದಾಗುತ್ತಾರೆ. ಆಗ ಅಲ್ಲಿ ಒಂದು ಬಗೆಯ ಅನುಭಾವಿಕ ರಕ್ತಬಾಂಧವ್ಯ ಏರ್ಪಡುತ್ತದೆ. ಪಾಡ್ದನದ ಮಾತೃರೂಪಿ ಕುಟುಂಬವೊಂದರ ಮೂರು ತಲೆಮಾರುಗಳ ಹೆಣ್ಣುಗಳು ತಮ್ಮ ಬದುಕಿನುದ್ದಕ್ಕೂ ಅನುಭವಿಸಿದ ಯಾತನೆ, ಎದುರಿಸಿದ ಸಮಸ್ಯೆಗಳ ಸನ್ನಿವೇಶಕ್ಕೂ ತಮ್ಮ ಕೌಟುಂಬಿಕ ಸನ್ನಿವೇಶಕ್ಕೂ ಸಾಮ್ಯ ಏರ್ಪಟ್ಟಾಗ ಅವರು ತೀವ್ರತರವಾದ ಆವೇಶಕ್ಕೆ ಒಳಗಾಗುತ್ತಾರೆ. ಜೊತೆಗೆ ಸಿರಿ ಹಾಗೂ ಅವಳ ಸಂತಾನ ಸಂಘರ್ಷವನ್ನು ಎದುರಿಸಿದ ಬಗೆ ಅವರಲ್ಲಿ ಒಂದು ಆತ್ಮವಿಶ್ವಾಸ ಮತ್ತು ಹೊಸ ಶಕ್ತಿಯನ್ನು ಹುಟ್ಟುಹಾಕುತ್ತದೆ. ಹೀಗೆ ಸಿರಿ ಪಾಡ್ದನಕ್ಕೂ ಆಚರಣೆಗೂ ಆವೇಶಿತ ಮಹಿಳೆಯರಿಗೂ ತ್ರಿಕೋನ ಮಾದರಿಯ ಒಂದು ಅಂತಃ ಸಂಬಂಧ ಸ್ಥಾಪಿವಾಗುತ್ತದೆ. ಹೀಗೆ ಸಿರಿ ಆಚರಣೆ ಪರ್ಯಾಯ ತಾತ್ಕಾಲಿಕ ಕುಟುಂಬವೊಂದನ್ನು ಒದಗಿಸಿಕೊಟ್ಟು ದಮನಕ್ಕೊಳಗಾದ – ನೊಂದ ಮಹಿಳೆಯರಿಗೆ ತಮ್ಮ ಒತ್ತಡ – ಸಂಘರ್ಷಗಳಿಗೊಂದು ಹೊರಹರಿವಿನ ಕಿಂಡಿಯಾಗಿ ಕಾರ್ಯನಿರ್ವಹಿಸುತ್ತದೆ, ಸಿರಿಯಿಂದ ಆವೇಶಿತರಾದ ಮಹಿಳೆ

ಯರು ಅಲೌಕಿಕ ಜಗತ್ತಿನ ಸಿರಿಬಳಗವಾಗಿ ರೂಪಾಂತರಗೊಂಡು ಅವರು ಎದುರಿಸುತ್ತಿರುವ ಸಂಘರ್ಷವನ್ನು ಪ್ರಕಟಪಡಿಸುತ್ತಲೇ ತಮ್ಮ ಲೌಕಿಕ ಬದುಕಿಗೂ ಪ್ರತಿಕ್ರಿಯಿಸಿ ವಾಸ್ತವದ ಒತ್ತಡಗಳಿಂದ ಪಾರಾಗುವ, ಪುರುಷ ವ್ಯವಸ್ಥೆಯನ್ನು ಪ್ರತಿರೋಧಿಸುವ ಪ್ರಯತ್ನವಾಗಿ ಸಿರಿಜಾತ್ರೆಯ ಮಹತ್ವವಿದೆ.

ಪಾಡ್ದನ ಹಾಡಿಕೆ ಉತ್ಕಟಬಿಂದು ತಲಪಿದಾಗ ಸಮಾನಾಂತರವಾಗಿ ಸಿರಿ ಮಹಿಳೆಯರ ಆವೇಶ ತೀವ್ರತೆಯನ್ನು ಪಡೆದುಕೊಳ್ಳುತ್ತದೆ. ಪಾಡ್ದನ ಹಾಡುವ, ತಲೆ, ಸೊಂಟಗಳನ್ನು ವೃತ್ತಾಕಾರದಲ್ಲಿ ತಿರುಗಿಸುವ, ಅಳುವ, ಕಿರಿಚುವ, ಅಟ್ಟಹಾಸ ಮಾಡುವ, ಹಿಂಗಾರವನ್ನು ಮುಖಕ್ಕೆ ಉಜ್ಜಿಕೊಳ್ಳುವ, ನಿಟ್ಟುಸಿರು ಬಿಡುವ ಮೈ ಕೈ ಸೆಟೆದು ಕಣ್ಣು ತಿರುಗಿಸುವ ಕೆಲವೊಮ್ಮೆ ನೆಲಕ್ಕೆ ಬೀಳುವ ಕ್ರಿಯೆಗಳಲ್ಲಿ ಆವೇಶಗೊಳ್ಳುವ ಕ್ರಿಯೆ ಇಡೀ ರಾತ್ರಿ ನಡೆಯುತ್ತದೆ. ತೀವ್ರ ದೈವಾವೇಶದಿಂದ ಬಿಡುಗಡೆಗೊಂಡಾಗ ಪಾಡ್ದನ ಹಾಡಿಕೆ ಪುನರಾರಂಭವಾಗುತ್ತದೆ. ಪಾಡ್ದನ ಹಾಡಿಕೆ – ತೀವ್ರ ಆವೇಶ – ಬಿಡುಗಡೆ – ಈ ಆವರ್ತದ ಹಲವು ಹಂತಗಳಲ್ಲಿ ನಡೆಯುತ್ತದೆ.

ಕುಟುಂಬದ ಜಂಜಾಟದ ವ್ಯವಸ್ಥೆಯಲ್ಲಿ ಕರಗಿ ಕೊರಗಿ ಹೋದಾಕೆ ಕುಟುಂಬದ ಸದಸ್ಯರ ಅನುಕಂಪೆ ಪಡೆಯಲು ನಡೆಸಿದ ಪ್ರಯತ್ನ ಈ ದೈವಾವೇಶದಲ್ಲಿ ಇರಬಹುದು. ಆದರೆ ಈ ಕ್ರಿಯೆ ಪ್ರಜ್ಞಾಪೂರ್ವಕವಾಗಿ ನಡೆಯುವಂತಹದಲ್ಲ. ಸುಪ್ತಪ್ರಜ್ಞೆಯೊಳಗೆ ಹುದುಗಿದ ತೀವ್ರ ಆಕಾಂಕ್ಷೆಯೇ ಹೀಗೆ ದೈವಾವೇಶದ ರೂಪದಲ್ಲಿ ವ್ಯಕ್ತಗೊಳ್ಳುತ್ತದೆ. ಇದರಿಂದ ಕುಟುಂಬ ದಲ್ಲಿ ಅವಳ ಸ್ಥಾನಮಾನ ಹೆಚ್ಚುತ್ತದೆ. (ಎ.ವಿ.ಎನ್.ಎ.)

**ಸಿರಿಯಜ್ಜಿ:** ಕಾಡುಗೊಲ್ಲ ಸಮುದಾಯಕ್ಕೆ ಸೇರಿದ ಜನಪದ ಸಿರಿ ಎಂದು ಕರೆಯಲಾಗುವ ಹೆಸರಾಂತ ಜನಪದ ಗಾಯಕಿ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ಚಿಕ್ಕೇನಹಳ್ಳಿಯ ಗೊಲ್ಲರಹಟ್ಟಿ ಈಕೆಯ ಹುಟ್ಟೂರು. ಕಡುಬಡತನವನ್ನು ಬಾಳಿದ ಸಿರಿಯಜ್ಜಿಯ ತಂದೆಯ ಹೆಸರು ಗುಡ್ಡದ ಈರಪ್ಪ. ತಾಯಿ ಕಾಡಮ್ಮ. ಹೊಸ ಗೊಲ್ಲರಹಟ್ಟಿಯ ತಿಪ್ಪೇಸ್ವಾಮಿಯನ್ನು ಸಿರಿಯಮ್ಮ ಲಗ್ನ ಆದಾಗ ಈಕೆಯ ವಯಸ್ಸು ಹನ್ನೆರಡು; ಗಂಡನಿಗೆ ಇಪ್ಪತ್ತೈದು. ಇವರಿಗೆ ಇಬ್ಬರು ಗಂಡು ಮಕ್ಕಳು. ಬರಗಾಲವೊಂದರಲ್ಲಿ ಗಂಡ ತಿಪ್ಪೇಸ್ವಾಮಿ ತೀರಿಕೊಂಡಾಗ ಈಕೆ ನೆರೆಹೊರೆಯವರ ಸಹಾಯದಿಂದ ತಾನೇ ದುಡಿದು ಮಕ್ಕಳನ್ನು ಬೆಳೆಸಿದಳು. ಗೊಲ್ಲರ ಹಟ್ಟಿಯ ಕ್ಯಾತರುಲಿಂಗ, ಪಾತರಲಿಂಗ, ಸಿರಿಯಣ್ಣ ಸಿರಿಯಜ್ಜಿಯ ಆರಾಧ್ಯದೇವತೆಗಳು.

ಸಿರಿಯಜ್ಜಿ ಚಿಕ್ಕಂದಿನಲ್ಲಿ ಹಾಡುಗಾರಿಕೆ ಕಲಿತದ್ದು ತಾಯಿಯಿಂದಲೇ. ಹಟ್ಟಿಯ ದೇವರುಗಳನ್ನು ಉತ್ಸವಕ್ಕೆ ಹೊರಡಿಸುವುದು, ಜಲಧಿಗೆ ಕೊಂಡೊಯ್ಯುವುದು, ದೇವರ ಅಲಂಕಾರ ಮಾಡುವುದು ಇಂಥ ವೇಳೆ ಹಾಡುವ ಪದಗಳನ್ನೆಲ್ಲ ಈಕೆಗೆ ತಾಯಿಯೇ ಕಲಿಸಿದ್ದಂತೆ. ಅತ್ತೆಯ ಮನೆಯಲ್ಲಿಯೂ ಅತ್ತೆ ಶರಿಸಿರಿಯಜ್ಜಿ ಕೊಂಡದ ಕಾಟವ್ವ ಹಾಡು, ಸಿರಿಯಣ್ಣ, ಚಿತ್ರದೇವರು, ಜುಂಜಪ್ಪ ಮತ್ತು ತಮ್ಮದೇ ಹಟ್ಟಿಯ ಗೊಲ್ಲರ ಮದುವೆ ಸಂದರ್ಭದ ಹಾಡುಗಳನ್ನು ಕಲಿಸಿಕೊಟ್ಟಳು. ಕಾಡುಗೊಲ್ಲರ ವಿವಾಹ ಸಂದರ್ಭದಲ್ಲಿ ಸಿರಿಯಜ್ಜಿ ಆರಂಭದಿಂದ ಅಂತ್ಯದವರೆಗೂ ಹಾಡುವ ಪದಗಳೇ ಸುಮಾರು ಒಂದೂವರೆ ಸಾವಿರ ತ್ರಿಪದಿಗಳಾಗುತ್ತವೆ. ಇವುಗಳ ವಿಷಯವ್ಯಾಪ್ತಿ ಗೊಲ್ಲರ ಹೆಣ್ಣುಮಕ್ಕಳು ಮೈನೆರೆದಾಗ, ಆ ಹೆಣ್ಣುಮಕ್ಕಳ ಸೂತಕ ಕಳೆದು ಗುಡಿಗೆ ಹೋಗಿ ಅಲ್ಲಿಂದ ಕೈಯ್ಯಲ್ಲಿ ಜ್ಯೋತಿ ಹಿಡಿಸಿಕೊಂಡು ಮನೆ ತುಂಬಿಸಿಕೊಳ್ಳುವವರೆಗೆ ಹರಡಿದೆ. ಈಕೆ ಹಾಡುವ ನಿಂಗಣ್ಣ ಸೆರೆಹೋದ, ಜುಂಜಪ್ಪ ಕಥಾನಕಗಳಂತೂ ಅತ್ಯಂತ ದೀರ್ಘವಾದವು.

ಜುಂಜಪ್ಪ ಗದ್ಯಕಥನ ಗೀತೆಯನ್ನು ಚಿತ್ರದುರ್ಗ ಸುತ್ತಿನಲ್ಲಿ ಗಂಡಸರು ಗಣೆ ವಾದ್ಯದೊಡನೆ ಹಾಡಿದರೆ, ಅದೇ ಜುಂಜಪ್ಪನ ಪದ್ಯ ಸ್ವರೂಪದ ಕಥನಗೀತೆಯನ್ನು ಹೆಂಗಸರು ಹಿಮ್ಮೇಳ–ಮುಮ್ಮೇಳದಲ್ಲಿ ಹಾಡುತ್ತಾರೆ. ಜನಪದ ಕಥನಗೀತೆಗಳನ್ನು ಹೆಣ್ಣು ಮಕ್ಕಳು ಹಾಡುವ ಕ್ರಮವೇ ವಿಶಿಷ್ಟವಾದುದು. ಮುಮ್ಮೇಳದಲ್ಲಿ ಒಂದು ಹೆಂಗಸರ ಗುಂಪು, ಹಿಮ್ಮೇಳ ದಲ್ಲಿ ಒಂದು ಗುಂಪು ಇರುತ್ತದೆ. ಮೂರು ಸಾಲಿನ ತ್ರಿಪದಿಗಳನ್ನು ನಾಲ್ಕು ಸಾಲುಗಳನ್ನಾಗಿ ಮಾಡಿಕೊಂಡು, ಮೊದಲ ಎರಡು ಸಾಲನ್ನು ಎರಡು ಬಾರಿ, ಮುಂದಿನ ಎರಡು ಸಾಲನ್ನು ಎರಡು ಬಾರಿ ಹಾಡುತ್ತಾರೆ. ಈ ಬಗೆಯ ಹಾಡುಗಾರಿಕೆಯ ಕ್ರಮ ಹೊಸದಾಗಿ ಕಲಿಯುವ ಹೆಣ್ಣುಮಕ್ಕಳಿಗೆ ಅನುಕೂಲವಾಗುತ್ತದೆ. ಈ ಬಗೆಯ ಹಾಡುಗಾರಿಕೆಯಲ್ಲಿ ಸಿರಿಯಜ್ಜಿ ಯಾವಾಗಲೂ ಮುಮ್ಮೇಳದಲ್ಲಿ ಇರುತ್ತಾಳೆ.

ಸುಮಾರು ಒಂಬತ್ತು ಸಾವಿರ ತ್ರಿಪದಿಗಳನ್ನು ಹಾಡುವ ಸಿರಿಯಜ್ಜಿಯ ನೆನಪಿನ ಶಕ್ತಿ ಅಗಾಧವಾದುದು. ಜನಪದ ಹಾಡುಗಾರಿಕೆಯ ಪ್ರತಿಭೆಗಾಗಿ ಅನೇಕ ಗೌರವ, ಸನ್ಮಾನ, ಪ್ರಶಸ್ತಿಗಳು ಈಕೆಗೆ ದೊರಕಿವೆ. ಈಕೆಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1981), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿವೆ. ಗುಂಡೂರಾವ್ ಅವರು ಮುಖ್ಯಮಂತ್ರಿ ಯಾಗಿದ್ದಾಗ ಸಿರಿಯಜ್ಜಿಯನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ನಡೆಸುತ್ತಿರುವ ಪ್ರೌಢಶಾಲೆಯ ಆವರಣದಲ್ಲಿ ಸನ್ಮಾನಿಸಲಾಯಿತು. ಹಂಪಿ ಕನ್ನಡ ವಿಶ್ವವಿದ್ಯಾನಿಲಯ 2004ರಲ್ಲಿ ಈಕೆಗೆ ನಾಡೋಜ ಪ್ರಶಸ್ತಿ ನೀಡಿ ಗೌರವಿಸಿದೆ (2004). ಜೊತೆಗೆ ಈಕೆ ಹಾಡಿದ ತ್ರಿಪದಿಗಳನ್ನು (3500) ಸಾವಿರದ ಸಿರಿಬೆಳಗು ಎಂಬ ಹೆಸರಿನಲ್ಲಿ ಪ್ರಕಟಿಸಿದೆ (2005). *

**ಸಿಸು ಸಂಗಮೇಶ:** 1929–2001. ಸುಪ್ರಸಿದ್ಧ ಶಿಶುಸಾಹಿತಿ. ಇವರ ಪೂರ್ಣ ಹೆಸರು ಸಂಗಮೇಶ ಸಿದ್ಧರಾಮಪ್ಪ ಮನಗೊಂಡ. ಸಿಸು ಸಂಗಮೇಶ ಎಂಬುದು ಕಾವ್ಯನಾಮ. ಬಿಜಾಪುರ ಜಿಲ್ಲೆಯ ಯರನಾಳ ಗ್ರಾಮದಲ್ಲಿ 1929 ಏಪ್ರಿಲ್ 29ರಂದು ಜನಿಸಿದರು. ತಂದೆ ಸಿದ್ಧರಾಮಪ್ಪ, ತಾಯಿ ಗೌರಮ್ಮ. ಸುಮಾರು ನಾಲ್ಕು ದಶಕಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಸುಮಾರು ಐದು ದಶಕಗಳಿಗೂ ಹೆಚ್ಚು ಕಾಲ ಮಕ್ಕಳ ಸಾಹಿತ್ಯ ರಚನೆ, ಸಂಪಾದನೆ, ಪ್ರಕಟಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಮಕ್ಕಳು ಮಾನವಕುಲದ ಭವ್ಯ ಭವಿಷ್ಯತ್ತಿನ ಆಶಾಕಿರಣಗಳೆಂದು ಗಾಢವಾಗಿ ನಂಬಿರುವ ಇವರು ನಿರಂತರ ಮಕ್ಕಳ ಒಡನಾಟದಿಂದ ಮಕ್ಕಳ ಭಾವಲೋಕದ ಸೂಕ್ಷ್ಮತೆಗಳನ್ನು ಅತಿ ಹತ್ತಿರದಿಂದ ಕಂಡುಕೊಂಡು ಮಕ್ಕಳ ಸಾಹಿತಿಯಾದವರು. ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಹಿತ್ಯದ ಅಗತ್ಯವನ್ನು ಅರಿತು ಮಕ್ಕಳ ಮಾನಸಿಕ–ಬೌದ್ಧಿಕ ವಿಕಾಸ ಮತ್ತು ಚಾರಿತ್ರ್ಯನಿರ್ಮಾಣದ ಉದಾತ್ತ ಉದ್ದೇಶಕ್ಕೆ ಪೂರಕವಾದ ವಸ್ತು, ಭಾಷೆ, ಆಕರ್ಷಕ ವರ್ಣಚಿತ್ರಗಳನ್ನೊಳಗೊಂಡ ಸಂವಿಧಾನಗಳನ್ನು ಅಳವಡಿಸಿ ಪರಿಸರ ಪ್ರಜ್ಞೆ, ಪ್ರೀತಿಗಳನ್ನು ಹಾಗೂ ವ್ಯಕ್ತಿತ್ವವಿಕಾಸ, ಉನ್ನತ ಮೌಲ್ಯಗ ಳನ್ನು ಬಿಂಬಿಸುವಂತಹ ಹಲವಾರು ಕಥೆಗಳನ್ನು ರಚಿಸಿದ್ದಾರೆ. ಈ ಕಾರಣಕ್ಕಾಗಿಯೇ ಬಿಜಾಪುರ ಜಿಲ್ಲಾಪರಿಷತ್ತು ಇವರಿಗೆ ಶಿಶುಸಾಹಿತ್ಯ ಶಿಲ್ಪಿ ಎಂಬ ಬಿರುದು ನೀಡಿ ಗೌರವಿಸಿದೆ (1978).

ಇವರು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ತೋಳಬಂದಿ(1963), ನನ್ನ ಮನೆ(1963), ನನ್ನ ಗೆಳೆಯ ಜಪಾನದ ಜಾರೊ(1968), ಮೊಲದ ಮೂಗು ಮೊಂಡಾಯಿತು(1986), ನನ್ನ ಗೆಳೆಯ ಎಸ್ಕಿಮೋ ಇಗ್ಲಿಯನ್(1980–89), ಆಶೆಬುರುಕಿ ಆಶಾ(1989), ಯಾರು ಜಾಣರು(1993), ನರಿಯ ಫಜೀತಿ(1993) ಮೊದಲಾದ 18 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'ನನ್ನಮನೆ' ಸಂಕಲನ ಪಕ್ಷಿ ಪ್ರಪಂಚದ ವಿಸ್ಮಯಗಳನ್ನು ಪಶುಪಕ್ಷಿಗಳ ಸಂಭಾಷಣೆಯ ಆಕರ್ಷಕ ವಿನ್ಯಾಸದೊಂದಿಗೆ ಪರಿಚಯಿಸುವ ವಿಶಿಷ್ಟ ಕೃತಿ. ನನ್ನ ಗೆಳೆಯ ಜಪಾನದ ಜಾರೊ

ಎಂಬುದು ಜಪಾನ್ ಮತ್ತು ಗ್ರೀನ್‌ಲೆಂಡ್‌ನ ಭೌಗೋಳಿಕ, ಸಾಂಸ್ಕೃತಿಕ ವಿವರಗಳನ್ನು ಪತ್ರಲೇಖನ ಶೈಲಿಯಲ್ಲಿ ಪರಿಚಯಿಸುವ ತಂತ್ರವುಳ್ಳದ್ದು. ಈ ಎರಡೂ ಕೃತಿಗಳಿಗೆ ರಾಷ್ಟ್ರಪ್ರಶಸ್ತಿ ಲಭಿಸಿದೆ (1968). ನನ್ನ ಗೆಳೆಯ ಎಸ್ಕಿಮೊ ಇಗ್ಲಿಯಿನ್ ಕೃತಿಗೆ ಕರ್ನಾಟಕ ರಾಜ್ಯಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೊತಿದೆ(1980). ಮೊಲದ ಮೂಗು ಮೊಂಡಾಯಿತು ಎಂಬ ಸಂಕಲನವೂ ಸೇರಿದಂತೆ ಈ ನಾಲ್ಕು ಕಥಾಸಂಕಲನಗಳಿಗೆ 1980ರ ಕಾವ್ಯಾನಂದ ಪ್ರಶಸ್ತಿಯೂ ಸಂದಿದೆ.

ಕುತೂಹಲಕರ ವಸ್ತುವಿನ್ಯಾಸ, ನಾಟಕೀಯ ಶೈಲಿ, ಆಡುನುಡಿಯ ಬಳಕೆ, ಸರಳ ನಿರೂಪಣೆ, ಆಕರ್ಷಕ ತಂತ್ರ ಇವೇ ಮೊದಲಾದವು ಇವರ ಕಥೆಗಳ ವೈಶಿಷ್ಟ್ಯ. ಮಕ್ಕಳಲ್ಲಿ ಕಲ್ಪನಾಶೀಲತೆ, ತಾರ್ಕಿಕತೆ, ವೈಜ್ಞಾನಿಕತೆ, ಪರಿಸರ ಪ್ರೇಮ, ನೈತಿಕತೆ, ಸಮಯಪ್ರಜ್ಞೆ, ಪ್ರಾಮಾಣಿಕತೆ, ದೇಶಪ್ರೇಮ, ಪರಿಶ್ರಮ ಹೀಗೆ ಅವರ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವ ಹಲವಾರು ಮೌಲ್ಯಗಳನ್ನು ಪ್ರತಿಬಿಂಬಿಸುವುದೇ ಇವರ ಕಥೆಗಳ ಪ್ರಧಾನ ಉದ್ದೇಶ. ಹೊರದೇಶಗಳ ವೈಜ್ಞಾನಿಕ ಕೃಷಿ ವ್ಯವಸ್ಥೆಯನ್ನು ಮಕ್ಕಳ ತಿಳಿವಿಗೆ ನಿಲುಕುವಂತೆ ನಿರೂಪಿತವಾದ ಕೃತಿ 'ಹೊರನಾಡ ರೈತರು'. ಜಪಾನ್, ರಷ್ಯ, ಅಮೆರಿಕ, ಜರ್ಮನಿ ಮೊದಲಾದ ಹೊರದೇಶಗಳ ಸಂಸ್ಕೃತಿಯನ್ನು ಇವರ ಅನೇಕ ಕಥೆಗಳು ಮಕ್ಕಳಿಗಾಗಿ ಪರಿಚಯಿಸುತ್ತವೆ. ಇವರ ಹಲವಾರು ಕಥೆಗಳು ಹಿಂದಿ, ಬಂಗಾಲಿ ಮೊದಲಾದ ಹಲವು ಭಾಷೆಗಳಿಗೆ ಅನುವಾದಗೊಂಡಿವೆ.



ನಾವು ನಾಳೆಯ ರವಿಗಳು(1990), ಬಿದ್ದ ಚಂದಿರನ ಒದ್ದು ಓಡಿಸಿದ (1990), ಚಕ್ಕಾಚೌಕುಳಿ(1997), ಸೂರ್ಯಚಂದ್ರರ ನಡುವೆ(1997), ಕಾಡಿನಲ್ಲಿ ಕಲಿಗಳು(1997), ಅಂಗಿಯಲ್ಲಿ ತಂಗಿ(1998) ಮೊದಲಾದ 22 ಸಚಿತ್ರ ಕಾವ್ಯಸಂಕಲನಗಳನ್ನು ಇವರು ರಚಿಸಿದ್ದಾರೆ. ಮನುಷ್ಯ ಮತ್ತು ಪ್ರಕೃತಿಯ ಪರಸ್ಪರಾವಲಂಬನೆಯ ಸೃಷ್ಟಿತತ್ತ್ವ, ಗಿಡಮರ, ಪಶುಪಕ್ಷಿ ಇತ್ಯಾದಿ ಸಚರಾಚರ ಪ್ರಪಂಚದ ಸಾಮರಸ್ಯದ ಬದುಕಿನ ಚಿತ್ರಣಗಳ ಮೂಲಕ ಮಕ್ಕಳಲ್ಲಿ ಸ್ನೇಹ, ಸಹಬಾಳ್ವೆ, ಭಾವೈಕ್ಯಗಳನ್ನು ಕುದುರಿಸುವ ಇವರ ಕಾವ್ಯೋದ್ದೇಶ ಅನನ್ಯವಾದದ್ದು. ಮಕ್ಕಳ ಶಿಕ್ಷಣದ ವೈಜ್ಞಾನಿಕ ಚಿಂತನೆ, ಆಧುನಿಕ ಶಿಕ್ಷಣ ಪದ್ಧತಿಯ ವಿಡಂಬನೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿರುವ ಇವರ ಕಾವ್ಯಸಂಕಲನಗಳಿವು: ಶಾಲೆಗಿಂತ ಚೀಲ ಭಾರ, ನಾಡಿನ ಕಲಿಗಳು ಮತ್ತು ಸೂರ್ಯಚಂದ್ರರ ನಡುವೆ.

ಆಣೆಕಲ್ಲು (ಭಾಗ 1 ಮತ್ತು 2), ಪುಟಚಂಡು (ಭಾಗ 1 ಮತ್ತು 2), ನಾವು ನಮ್ಮವರು (ಭಾಗ 1 ಮತ್ತು 2), ಸೀತನಿ ಸುಲಗಾಯಿ, ಪಂಚಗಂಗೆ, ಅನಿ ಬತ್ತಾನಿ, ಮಿಡಿಗೊಂಚಲು, ಮಕ್ಕಳ ಸಾಹಿತ್ಯ 1984, ಕಿರಿಯರ ಕರ್ನಾಟಕ, ಕನ್ನಡ ಸಾಂಸ್ಕೃತಿಕ ಪದಕೋಶ – ಮೊದಲಾದವು ಇವರ ಸಂಪಾದಿತ ಕೃತಿಗಳು. ಕನಸಿನ ಲೋಕ ಎಂಬುದು ಅನುವಾದಿತ ಕಥೆಗಳ ಸಂಕಲನ. ಇಂಗ್ಲಿಷ್, ಮರಾಠಿ, ಹಿಂದಿ ಭಾಷೆಯ ಮಕ್ಕಳ ಸಾಹಿತ್ಯಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಮಕ್ಕಳ ಸಾಹಿತ್ಯ ಪ್ರಕಟಣೆಗಾಗಿ ಹುಟ್ಟೂರು ಯರನಾಳದಲ್ಲಿ ಭಾರತಿ ಸಾಹಿತ್ಯ ಭಂಡಾರ ಎಂಬ ಪ್ರಕಾಶನ ಸಂಸ್ಥೆಯನ್ನೂ (1954) ಬಿಜಾಪುರದಲ್ಲಿ ಶ್ರೀಶಕ್ತಿ ಮುದ್ರಣಾಲಯವನ್ನೂ ಸ್ಥಾಪಿಸಿದ ಸಾಧನೆ ಇವರದು. ಇದುವರೆಗೆ ಈ ಸಂಸ್ಥೆಗಳಿಂದ ಅಸಂಖ್ಯ ಮಕ್ಕಳ ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. 'ಬಾಲಭಾರತ' ಮಕ್ಕಳ ಮಾಸಪತ್ರಿಕೆಯ ಸಂಪಾದಕರಾಗಿ (1978), ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿಯ ಸ್ಥಾಪಕರಾಗಿ (1983) ಶಿಶುಸಾಹಿತ್ಯ ಅಭಿವೃದ್ಧಿಗೆ ಅವಿರತ ಸೇವೆ ಸಲ್ಲಿಸಿದ ಹಿರಿಮೆ ಇವರದು.

ಕರ್ನಾಟಕ ಸರ್ಕಾರದಿಂದ ಆದರ್ಶ ಶಿಕ್ಷಕ ಪ್ರಶಸ್ತಿ (1980), ರಾಷ್ಟ್ರಪ್ರಶಸ್ತಿ (1968), ಕರ್ನಾಟಕ ರಾಜ್ಯಸಾಹಿತ್ಯ ಅಕಾಡೆಮಿ ಪುರಸ್ಕಾರ (1980) ಮೊದಲಾದವು ಇವರ ವೃತ್ತಿ ಹಾಗೂ ಸಾಹಿತ್ಯಕೃಷಿಗೆ ದೊರೆತ ಪ್ರಶಸ್ತಿ ಮತ್ತು ಗೌರವಗಳು. ಇವರು 2001ರಲ್ಲಿ ನಿಧನಹೊಂದಿದರು. (ಎಸ್‌ಎಚ್‌ಎ.ಐ.)

**ಸೀತಪ್ಪ:** –1954. ರಂಗಭೂಮಿ ನಟರು. ರಾಣಿ ಪಾತ್ರದ ಸೀತಪ್ಪ ಎಂದೇ ಹೆಸರಾಗಿದ್ದ ಇವರ ಪೂರ್ಣ ಹೆಸರು ಕೆ. ಸೀತಾರಾಮಯ್ಯ. ಹುಟ್ಟಿದ್ದು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಗುಬ್ಬಿಹೊಸಹಳ್ಳಿಯಲ್ಲಿ. ಚಿಕ್ಕಂದಿನಲ್ಲಿಯೇ ಸಂಗೀತ ಮತ್ತು ಅಭಿನಯ ಕಲೆಯಲ್ಲಿ ಆಸಕ್ತಿ ವಹಿಸಿದ ಇವರು ಆಗ್ಗೆ ಪ್ರಸಿದ್ಧವಾಗಿದ್ದ ಚಂದಣ್ಣನವರ ಗುಬ್ಬಿ ಚೆನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಸಂಸ್ಥೆಗೆ ಸೇರಿ (1914) ಸುಮಾರು ಎರಡು ವರ್ಷಗಳು ಅಲ್ಲಿದ್ದು, ತರಬೇತು ಹೊಂದಿ ಕೆಲವು ಸ್ತ್ರೀಪಾತ್ರಗಳನ್ನು ವಹಿಸಿದರು. ಅನಂತರ ಬೆಳ್ಳಾವೆ ಸೋಮೇಶ್ವರ ವಿಲಾಸ ನಾಟಕ ಸಂಘ ಮೊದಲಾದ ನಾಟಕ ಮಂಡಲಿಯಲ್ಲಿ ಸೀತೆ, ದ್ರೌಪದಿ, ಸತ್ಯಭಾಮೆ, ಚಾರುಮತಿ, ವಿದ್ಯಾಧರಿ, ಸದಾರಮೆ ಮುಂತಾದ ಸ್ತ್ರೀ ಪಾತ್ರಗಳನ್ನು ನಿರ್ವಹಿಸಿ ಪ್ರಸಿದ್ಧರಾದರು.

ಸೀತಪ್ಪನವರು ತುಮಕೂರಿನಲ್ಲಿ ಸೀತಾಮನೋಹರ ಕರ್ನಾಟಕ ನಾಟಕ ಮಂಡಲಿ ಎಂಬ ಸ್ವಂತ ನಾಟಕ ಮಂಡಲಿಯನ್ನು ಕಟ್ಟಿ ಕೆಲವು ವರ್ಷ ನಡೆಸಿದರು. ಈ ನಾಟಕ ಮಂಡಲಿಯಲ್ಲಿ ಆಡಿದ ತೋರಣಗಲ್ ರಾಜಾರಾಯರ ರಾಮಾಂಜನೇಯ ಸಂವಾದ ನಾಟಕದ ಚಾರುಮತಿ ಪಾತ್ರ ಇವರಿಗೆ ಪ್ರಸಿದ್ಧಿಯನ್ನು ಗಳಿಸಿಕೊಟ್ಟಿತು. ಬೆಂಗಳೂರಿನಲ್ಲೂ ಇವರು ಮೊಕ್ಕಾಂ ಮಾಡಿ, ತುಳಸಿ ತೋಟದ ರಂಗಮಂದಿರದಲ್ಲಿ ಅನೇಕ ನಾಟಕಗಳನ್ನು ಪ್ರದರ್ಶಿಸಿದರು. ಈ ಸಮಯದಲ್ಲಿಯೇ ಕನ್ನಡ ರಂಗಭೂಮಿಯ ಪ್ರಸಿದ್ಧ ನಟ, ನಾಟಕಶಿರೋಮಣಿ ಎ.ವಿ. ವರದಾಚಾರ್ಯರು ಸೀತಪ್ಪನವರ ರಾಣಿ ಪಾತ್ರದ ಇವರ ಅಭಿನಯವನ್ನು ಮೆಚ್ಚಿದರು. ಸೀತಪ್ಪನವರಿಗೆ ಹಾರ್ಮೋನಿಯಂ ವಾದನದಲ್ಲೂ ಮೃದಂಗವಾದನದಲ್ಲೂ ಪರಿಶ್ರಮ ಇತ್ತು; ಹಾಡುವ ಕಲೆಯೂ ಸಿದ್ಧಿಸಿತ್ತು.

ಸೀತಪ್ಪನವರು ನಟರಾಗಿ ನಾಟಕ ಕಂಪನಿಯ ಮಾಲಿಕರಾಗಿ ಸು. 18 ವರ್ಷಗಳ ಕಾಲ ದುಡಿದು ಕನ್ನಡ ರಂಗಭೂಮಿಯ ಅಭಿವೃದ್ಧಿಗೆ ಶ್ರಮಿಸಿದರು. ಕನ್ನಡ ಜನತೆಯಿಂದ ರಂಗಭೂಮಿಯ ರಾಣಿ, ನಾಟ್ಯ ಸಾಮ್ರಾಜ್ಞಿ ಎಂಬ ಪ್ರಶಂಸೆಗಳನ್ನು ಗಳಿಸಿದರು. ಇವರು 1954 ಸೆಪ್ಟೆಂಬರ್ 6ರಂದು ನಿಧನರಾದರು. (ಎಸ್.ಎಚ್.ವಿ.)

**ಸೀತಾ:** ಉಡುಪಿ ಜಿಲ್ಲೆಯ ಒಂದು ಚಿಕ್ಕನದಿ. ಕಾರ್ಕಳ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ಹರಿಯುವ ಈ ನದಿ ಉಡುಪಿಗೆ ಈಶಾನ್ಯದಲ್ಲಿ, ಕಾರ್ಕಳ ತಾಲ್ಲೂಕಿನ ಸೋಮೇಶ್ವರದ ಆಚೆ ಇರುವ ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬಿ ಸಮುದ್ರವನ್ನು ಸೇರುವುದು. ಕಾರ್ಕಳ ತಾಲ್ಲೂಕಿನ ಪೂರ್ವಭಾಗದಲ್ಲಿರುವ ಪಶ್ಚಿಮಘಟ್ಟಗಳಲ್ಲಿ ಹುಟ್ಟುವ ಸ್ವರ್ಣನದಿ ಬಾರಕೂರಿನ ಬಳಿ ಸೀತಾನದಿಯೊಂದಿಗೆ ಸಂಗಮವಾಗುವುದು. ಈ ಸಂಗಮ ಸ್ಥಳ ಉಡುಪಿಗೆ ಸು. 13 ಕಿಮೀ ದೂರದಲ್ಲಿದೆ. ಸಂಗಮ ಸ್ಥಳದಲ್ಲಿ ನೀರು ವಿಶಾಲವಾಗಿ ಹರಡಿಕೊಂಡು ಸಮುದ್ರದ ಹಿನ್ನೀರ ಭಾಗವಾಗಿ ಪರಿಣಮಿಸಿದೆ. ಗೋಕರ್ಣದವರೆಗೆ ಸೀತಾನದಿಯ ಮೇಲೆ

ಸು. 18 ಕಿಮೀ ದೂರ ಒಳನಾಡ ದೋಣಿ ಸಂಚಾರವಿದೆ. ಬಾರಕೂರು **(ನೋಡಿ)** ಸೀತಾನದಿಯ ದಂಡೆಯ ಮೇಲಿದೆ. **(ವಿ.ಜಿ.ಕೆ.)**

**ಸೀತಾರಾಂ, ಎ.:** 1902-63. ಆನಂದ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕಥೆಗಾರರು. ಸೀತಾರಾಂ ಅಜ್ಜಂಪುರ ಇವರ ಹೆಸರು. 1902ರಲ್ಲಿ ಜನಿಸಿದರು. ಅಜ್ಜಂಪುರದ ಅನಂತಯ್ಯ ಇವರ ತಂದೆ, ಶಿವಮೊಗ್ಗದಲ್ಲಿ ವಕೀಲರಾಗಿದ್ದರು.

ಇವರು ತಮ್ಮ ಶಿಕ್ಷಣವನ್ನು ಶಿವಮೊಗ್ಗದಲ್ಲಿ ಮುಗಿಸಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿ, ಮೈಸೂರು ವಿಶ್ವವಿದ್ಯಾನಿಲಯದ ಬಿ.ಎಸ್‌ಸಿ. ಪದವೀಧರರಾದರು (1923-24). ಅನಂತರ ಪುಣೆಯಲ್ಲಿ ಎಲ್‌ಎಲ್.ಬಿ. ಪರೀಕ್ಷೆಗೆ ವ್ಯಾಸಂಗ ಮಾಡಿದರು. ಅನಂತರ ಇವರು ಕೆಲಕಾಲ ಮೈಸೂರು ರೇಷ್ಮೆ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದರು. ಅನ್ಯಾಯ ಕಂಡರೆ ಇವರಿಗೆ ಆಗದು. ಅನ್ಯಾಯ ಸಹಿಸದ ಮನೋ ಭಾವದವರಾಗಿದ್ದ ಇವರು ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಇವರ ಮೊದಲ ಸಣ್ಣ ಕಥೆ 'ಭವತಿ ಭಿಕ್ಷಾಂದೇಹಿ' ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಯಿತು. ಇವರ ಮತ್ತೊಂದು ಸಣ್ಣಕಥೆ 'ನಾವೂ ಹಾಗೆಯೇ' ಎನ್ನುವುದಕ್ಕೆ ಆಗ ಮುದ್ದಣ ಸ್ವರ್ಣಪದಕ ದೊರೆಯಿತು. ಅನಂತರ ಇವರ ಸಣ್ಣಕಥೆಗಳು ಪ್ರಬುದ್ಧ ಕರ್ಣಾಟಕ, ಜಯ ಕರ್ಣಾಟಕ, ಕಥಾಂಜಲಿ ಮೊದಲಾದ ಸಾಹಿತ್ಯ ಪತ್ರಿಕೆಗಳಲ್ಲಿ ನಿರಂತರವಾಗಿ ಪ್ರಕಟವಾಗತೊಡಗಿದವು. ಕನ್ನಡ ಸಣ್ಣಕಥೆಗಳ ಜನಕರೆನಿಸಿದ ಶ್ರೀನಿವಾಸರ ಹಾದಿಯಲ್ಲಿ ಇವರು ನಡೆದು ಜನಪ್ರಿಯ ಕಥೆಗಾರರಾದರು. ವಿದ್ಯಾರ್ಥಿಯಾಗಿದ್ದಾಗ ಕ್ರಿಕೆಟ್ ಕ್ರೀಡೆಯ ಬಗ್ಗೆ ಅಪಾರ ಆಸಕ್ತಿ ಶ್ರದ್ಧೆಗಳನ್ನು ಬೆಳಸಿಕೊಂಡಿದ್ದ ಇವರಿಗೆ ಚಿತ್ರಕಲೆ ಮತ್ತು ಚಿತ್ರಕಲಾ ಸಾಹಿತ್ಯದಲ್ಲಿಯೂ ಆಸಕ್ತಿಯಿತ್ತು. ಇವರ ಅನೇಕ ಕೃತಿಗಳಿಗೆ ಇವರೇ ಚಿತ್ರಗಳನ್ನು ಬರೆದಿದ್ದಾರೆ.

ಸಾಹಿತ್ಯ ಸೃಷ್ಟಿಯಿಂದಲೇ ಜೀವನ ನಡೆಸುವ ಸಾಹಸ ಕಾರ್ಯಕ್ಕೆ ತೊಡಗಿದ ಇವರಿಗೆ ಕಸವನ್ನೂ ರಸವನ್ನಾಗಿ ಮಾಡುವ ಕಲಾವಂತಿಕೆ ಸಿದ್ಧಿಸಿತ್ತು. ಸತಿಪತಿಗಳ ಅನ್ಯೋನ್ಯ ಜೀವನವನ್ನು ಸುಂದರವಾಗಿ ಚಿತ್ರಿಸುವ ಅಸಾಮಾನ್ಯ ಕೌಶಲ ಇವರಿಗೆ ಕರಗತವಾಗಿತ್ತು. ಹೃದಯವನ್ನು ಕಲಕಿ ಆಲೋಚನಾ ತರಂಗವನ್ನೆಬ್ಬಿಸುವ ಸಾಹಿತ್ಯ ಸಂವಿಧಾನ ಇವರ ನಾನು ಕೊಂದ ಹುಡುಗಿ ಎಂಬ ಕಥೆಯಲ್ಲಿ ಚೆನ್ನಾಗಿ ಮೂಡಿಬಂದಿದೆ. ಇವರು ತಮ್ಮ ಕೃತಿಗಳಿಂದ ಹುಟ್ಟುಕಥೆಗಾರ ಅನ್ನಿಸಿಕೊಂಡರು. ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆಗಳನ್ನು ಕೊಟ್ಟರು. ಕೆಲವು ಕಥೆಗಳು, ಬೇವು ಬೆಲ್ಲ, ಚಂದ್ರಗ್ರಹಣ ಮತ್ತು ಇತರ ಕಥೆಗಳು, ಮಾಟಗಾತಿ ಮತ್ತು ಇತರ ಕಥೆಗಳು, ಜೋಯಿಸರ ಚೌಡಿ ಮತ್ತು ಇತರ ಕಥೆಗಳು, ಸ್ವಪ್ನಜೀವಿ ಮತ್ತು ಇತರ ಕಥೆಗಳು, ಸಂಸಾರ ಶಿಲ್ಪಿ ಮತ್ತು ಶಿಲ್ಪ ಸಂಕುಲ-ಇವು ಇವರ ಕಥಾ ಸಂಕಲನಗಳು. ವೀರಯೋಧ, ದಹನ ಚಿತ್ರ-ಇವು ಇವರು ಬರೆದ ನಾಟಕಗಳು. ಪಕ್ಷಿಗಾನ (ಖಂಡ-ಭಾವ ಗದ್ಯಕೃತಿ)-ಒಂದು ಪ್ರಯೋಗಾತ್ಮಕ ಗದ್ಯ ಕವನ. ಆನಂದಲಹರಿ ಎಂಬುದು ಇವರ ಹಾಸ್ಯಪ್ರಬಂಧ ಸಂಕಲನ.

ಇವರು ಅನೇಕ ಆಂಗ್ಲ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ಡೇನಿಯಲ್ ಡೇಫೋನ ರಾಬಿನ್‌ಸನ್ ಕ್ರೂಸೊ ಎಂಬ ಪ್ರಸಿದ್ಧ ಕಾದಂಬರಿಯನ್ನು ಇವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಪುರುಷಾಮೃಗ (ಡಾ.ಜೆಕಲ್ ಮತ್ತು ಮಿ. ಹೈಡ್) ಇವರ ಇನ್ನೊಂದು ಅನುವಾದಿತ ಕೃತಿ.

ಇವರು ಜೀವನ ರಂಗದಲ್ಲೂ ಸಾಹಿತ್ಯ ಕ್ಷೇತ್ರದಲ್ಲೂ ಶ್ರದ್ಧಾಸಕ್ತಿಯ ಬಾಳು ನಡೆಸಿದರು. ಇವರ ಸಾಹಿತ್ಯ ಸಾಧನೆಗಾಗಿ ಅನೇಕ ಗೌರವಗಳು ಇವರಿಗೆ ದೊರಕಿದ್ದವು. ಇವರು 1945ರಲ್ಲಿ ಬೆಂಗಳೂರಿನಲ್ಲಿ ನಡೆದ ಸಣ್ಣಕಥಾ ಬರೆಹಗಾರರ ಮೂರನೆಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಇವರ ಸಾಹಿತ್ಯಸೇವೆಗಾಗಿ 1958ರಲ್ಲಿ ಅಭಿಮಾನಿಗಳು ಇವರಿಗೆ ನಿಧಿಯನ್ನು ಸಮರ್ಪಿಸಿದರು. ರಾಜ್ಯ ಸರ್ಕಾರದ ಪುರಸ್ಕಾರವೂ ಇವರಿಗೆ ದೊರೆತಿತ್ತು. ಇವರ ಹಲವು ಕಥೆಗಳು ಹಿಂದಿ, ಮರಾಠಿ, ಬಂಗಾಲಿ, ತಮಿಳು ಮೊದಲಾದ ಭಾಷೆಗಳಿಗೆ ಅನುವಾದಿತವಾಗಿವೆ. ಇಂಗ್ಲಿಷ್ ಭಾಷೆಗೂ ಕೆಲವು ಕಥೆಗಳು ಭಾಷಾಂತರಿಸಲ್ಪಟ್ಟಿವೆ. **(ಕೆ.ಜಿ.ಎ.ಆರ್.)**

**ಸೀತಾರಾಮ್, ಟಿ.ಎನ್:** ಪ್ರಸಿದ್ಧ ರಂಗನಟ, ಚಲನಚಿತ್ರ ನಿರ್ದೇಶಕ ಹಾಗೂ ಸೃಜನಶೀಲ ಲೇಖಕರು. ಮೂಲತಃ ದೊಡ್ಡಬಳ್ಳಾಪುರದವರು. ಇವರು ವಕೀಲರಾಗಿ ವೃತ್ತಿ ಜೀವನವನ್ನು ಆರಂಭಿಸಿದರು. ಆದರೆ ನಾಟಕಗಳ ರಚನೆ, ಪ್ರಯೋಗ, ನಟನೆ ಮೊದಲಾದವುಗಳಲ್ಲಿ ಇವರ ಆಸಕ್ತಿ ನಿರಂತರವಾಗಿ ಕೇಂದ್ರೀಕೃತವಾಗಿತ್ತು. ಮೊದಮೊದಲು ರಂಗಕಲಾವಿದರಾಗಿ ನಟಿಸಲು ಆರಂಭಿಸಿದ್ದು ಲಂಕೇಶರ ಒಂದಂಕದ ನಾಟಕಗಳಲ್ಲಿ. ಇವರು ಅಭಿನಯಿಸಿದ ಪಲ್ಲವಿ, ಅನುರೂಪ ಚಿತ್ರಗಳಿಗೆ ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿ ಲಭಿಸಿವೆ. ಪುಟ್ಟಣ್ಣ ಕಣಗಾಲರಂತಹ ನಿರ್ದೇಶಕರ ಗರಡಿಯಲ್ಲಿ ಪಳಗಿ ನಿರ್ದೇಶನದ ಸೂಕ್ಷ್ಮಗಳನ್ನು ಅರಿತ ಇವರು ಪುಟ್ಟಣ್ಣನವರ ಚಿತ್ರವೊಂದಕ್ಕೆ ಪರಿಣಾಮಕಾರಿಯಾಗಿ ಚಿತ್ರಕಥೆ, ಸಂಭಾಷಣೆಗಳನ್ನು ಬರೆದು ಪ್ರಶಸ್ತಿ ಗಳಿಸಿದರು. ನಟನೆಯ ಮೂಲಕ ಪ್ರಾರಂಭವಾದ ಇವರ ಆಸಕ್ತಿ ಸ್ವತಃ ನಾಟಕಗಳನ್ನು ರಚಿಸುವತ್ತ ಹರಿಯಿತು. ಇವರು ಬರೆದ ಮೊದಲ ನಾಟಕ 'ಬದುಕ ಮನ್ನಿಸು ಪ್ರಭುವೆ'. ಆಸ್ಫೋಟ, ನಮ್ಮೊಳಗೊಬ್ಬ ನಾಜೂಕಯ್ಯ ಇವರ ಮತ್ತೆರಡು ನಾಟಕಗಳು. ವಿಮರ್ಶಕರ ಅಭಿಪ್ರಾಯದಂತೆ ಇವರ ಕಾನೂನು ಜ್ಞಾನ ಇವರ ಕೃತಿಗಳಲ್ಲಿ ಹೆಚ್ಚು ಪ್ರಕಟಗೊಂಡಿದೆ. ಆಸ್ಫೋಟ ನಾಟಕ ಬಹಿರಂಗದ ಭೋಳೆತನವನ್ನು ಅನಾವರಣಗೊಳಿಸಿದರೆ, ನಮ್ಮೊಳಗೊಬ್ಬ ನಾಜೂಕಯ್ಯ ನಾಟಕ ಪ್ರತಿ ವ್ಯಕ್ತಿಯ ಅಂತರಂಗದಲ್ಲಿ ಹುದುಗಿರುವ ಅವಕಾಶವಾದಿತನ ಹಾಗೂ ಗೋಸುಂಬೆತನವನ್ನು ಬಯಲಿಗೆಳೆಯುತ್ತದೆ. ಸಮಾಜದ ಉಕ್ಕಿನ ಹಿಡಿತಕ್ಕೆ ಸಿಕ್ಕಿದ ನಾಯಕ ಅದನ್ನು ತಿರಸ್ಕರಿಸಿ ಅದರ ಕುಟಿಲ ಕಾರಸ್ಥಾನಕ್ಕೆ ಬಲಿಯಾಗಿ ತಾನು ಉತ್ಕಟವಾಗಿ ಪ್ರೀತಿಸಿದ ಬದುಕಿನಿಂದ ದೂರವಾಗುಳಿಯುವುದನ್ನೂ ನೆಲರಹಿತ ತಪ್ತಯುವಕರ ಪ್ರತಿನಿಧಿಯಾಗಿರುವುದನ್ನೂ ಈ ನಾಟಕದಲ್ಲಿ ಚಿತ್ರಿಸಲಾಗಿದೆ.



ಕನ್ನಡದ ಕಿರುತೆರೆಯ ಅತ್ಯಂತ ಜನಪ್ರಿಯ ಧಾರಾವಾಹಿಗಳನ್ನು ನಿರ್ದೇಶಿಸಿದ ಕೀರ್ತಿ ಇವರದು. ನಾಟಕಗಳಲ್ಲಿ ರಾಜಕೀಯ, ಸಾಂಸ್ಕೃತಿಕ ಪಲ್ಲಟಗಳನ್ನು ಚಿತ್ರಿಸಿದ ಇವರು ಇಂಥ ಧಾರಾವಾಹಿಗಳಲ್ಲಿ ಮಧ್ಯಮವರ್ಗದ ಸ್ತ್ರೀಯರ ಕಷ್ಟಕಾರ್ಪಣ್ಯಗಳಿಗೆ, ಆಸೆ, ತಾಕಲಾಟಗಳಿಗೆ ದನಿ ನೀಡಿದರು. ಮಾಯಾಮೃಗ, ದಶಾವತಾರ, ಮನ್ವಂತರ, ಮಳೆಬಿಲ್ಲು, ಮುಕ್ತ, ಮಿಂಚು ಮೊದಲಾದವು ಇವರ ಅತ್ಯುತ್ತಮ ಟಿ.ವಿ.ಧಾರಾವಾಹಿಗಳು. ಇವರ ಇತ್ತೀಚಿನ ಬೆಳ್ಳಿತೆರೆಯ ನಿರ್ದೇಶನದ ಮತದಾನ (ಎಸ್.ಎಲ್.ಭೈರಪ್ಪ) ಉತ್ತಮ ಕನ್ನಡ ಚಿತ್ರವೆಂದು ರಾಷ್ಟ್ರೀಯ ಪ್ರಶಸ್ತಿಗಳಿಸಿದೆ. ಇವರು ನಿರ್ದೇಶಿಸುತ್ತಿರುವ ಸದ್ಯದ ಚಲನಚಿತ್ರ ಮೀರಾ–ಮಾಧವ–ರಾಘವ. ಬದುಕಿನ ವಾಸ್ತವಗಳನ್ನೇ ಕಲಾತ್ಮಕವಾಗಿ ನಾಟಕ, ಸಿನಿಮಾಗಳಲ್ಲಿ ತೋರಿಸುತ್ತ ಬದುಕಿನ ಹೊಲಸನ್ನು ತೊಳೆಯುವ ಪ್ರಯತ್ನ ಇವರದು ಎಂಬ ಪ್ರಶಂಸೆ ಇವರಿಗಿದೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. *

**ಸೀತಾರಾಮಯ್ಯ, ಪಾಲಹಳ್ಳಿ:** 1892–1977. ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಮಾಜ ಸೇವಕರು. ಮೈಸೂರಿನಲ್ಲಿ ಜನಿಸಿದ ಇವರು ಅಲ್ಲಿಯೇ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ, ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ವೆಂಕಟಕೃಷ್ಣಯ್ಯನವರ ಪ್ರಭಾವಕ್ಕೆ ಒಳಗಾಗಿ ಅವರ ಮಾರ್ಗದರ್ಶನದಿಂದ ತಮ್ಮ ಬದುಕನ್ನು ರೂಪಿಸಿಕೊಂಡರು. ಮದರಾಸಿನಲ್ಲಿ ಪದವಿ ಪರೀಕ್ಷೆ ಹಾಗೂ ನ್ಯಾಯಾಂಗ ವ್ಯಾಸಂಗ ಮುಗಿಸಿ ಮೈಸೂರಿಗೆ ಬಂದು ವಕೀಲಿ ವೃತ್ತಿಯನ್ನು ಆರಂಭಿಸಿದರಾದರೂ ತಮ್ಮ ಬಹುಪಾಲು ವೇಳೆಯನ್ನು ಕಾರ್ಮಿಕರ ಸಂಘಟನೆ ಮತ್ತು ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳಲ್ಲಿ ಕಳೆದರು. ವಿ.ವಿ.ಗಿರಿಯವರ ಜೊತೆಗಾರರಾಗಿ ಮೈಸೂರು ರೈಲ್ವೆ ಕಾರ್ಮಿಕರ ಸಂಘವನ್ನು ಕಟ್ಟಿದ ಇವರು ಸಂಘದ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದರು (ವಿ.ವಿ.ಗಿರಿ ಅಧ್ಯಕ್ಷರಾಗಿದ್ದರು). ರೈಲ್ವೆ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿದ್ದಾರೆಂದು ಅಂದಿನ ಸರ್ಕಾರ ಇವರನ್ನು ಒಮ್ಮೆ ಮೈಸೂರಿನಿಂದ ಗಡಿಪಾರು ಮಾಡಿತು. ಇನ್ನೊಮ್ಮೆ ವಿ.ವಿ. ಗಿರಿಯವರು ಮೈಸೂರು ನಗರಕ್ಕೆ ಬರಬಾರದೆಂದು ಸರ್ಕಾರ ನಿಷೇಧಾಜ್ಞೆ ವಿಧಿಸಿದಾಗ ಇವರು ಮೈಸೂರಿನ ರೈಲ್ವೆ ಕಾರ್ಮಿಕರನ್ನೆಲ್ಲ ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಅಲ್ಲಿ ಗಿರಿಯವರ ಭಾಷಣ ಕೇಳುವಂತೆ ಮಾಡಿದರು.

ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನ ಆಶ್ರಯದಲ್ಲಿ 1938ರಲ್ಲಿ ಮದ್ದೂರು ಬಳಿಯ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಸೀತಾರಾಮಯ್ಯ ದಂಪತಿಗಳು ಭಾಗವಹಿಸಿದ್ದರು. ಮುಂದೆ ವಿದುರಾಶ್ವತ್ಥದಲ್ಲಿ ನಡೆದ ಸತ್ಯಾಗ್ರಹದಲ್ಲೂ ಭಾಗವಹಿಸಿದ್ದ ಇವರಿಗೆ ಎರಡು ವರ್ಷ ಜೈಲುಶಿಕ್ಷೆಯೂ ಆಯಿತು. ಮತ್ತೆ ಚಲೇಜಾವ್ ಚಳವಳಿ ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ಮೈಸೂರಿನಲ್ಲಿ ನಡೆದ ಸತ್ಯಾಗ್ರಹದಲ್ಲೂ ಇವರ ಬಂಧನವಾಗಿತ್ತು.

ಇವರು ಹಿಂದಿನ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರಲ್ಲದೆ, ಆ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿಯೂ ಕೆಲಸ ಮಾಡಿದರು. ಮೈಸೂರು ಪುರಸಭೆಯ ಸದಸ್ಯರಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ ಇವರು, ಸ್ವಾತಂತ್ರ್ಯೋತ್ತರದಲ್ಲಿ ಮೈಸೂರು ಪುರಸಭೆಯ ಪ್ರಪ್ರಥಮ ಚುನಾಯಿತ ಅಧ್ಯಕ್ಷರಾದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರೂ ಆಗಿದ್ದ ಇವರು ಮೈಸೂರು ವಿಧಾನ ಪರಿಷತ್ತಿನ ಅಧ್ಯಕ್ಷರಾಗಿಯೂ ಸ್ವಲ್ಪಕಾಲ ಕಾರ್ಯನಿರ್ವಹಿಸಿದರು. ಇವರ ಸಾರ್ವಜನಿಕ ಸೇವೆಯನ್ನು ಗಮನಿಸಿ ಭಾರತ ಸರ್ಕಾರ 1973ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. (ಬಿ.ಆರ್.ಪಿ.)

**ಸೀತಾರಾಮಯ್ಯ, ಎಂ.ವಿ.:** 1910–90. ಕನ್ನಡದ ಪ್ರಸಿದ್ಧ ಸೃಜನಶೀಲ ಲೇಖಕರು, ವಿದ್ವಾಂಸರು. ರಾಘವ ಎಂಬುದು ಇವರ ಕಾವ್ಯನಾಮ. ಪೂರ್ಣ ಹೆಸರು ಮೈಸೂರು ವೆಂಕಟದಾಸಪ್ಪ ಸೀತಾರಾಮಯ್ಯ. 1910 ಸೆಪ್ಟೆಂಬರ್ 9ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ವೆಂಕಟದಾಸಪ್ಪ, ತಾಯಿ ಸಾವಿತ್ರಮ್ಮ. ತಂದೆಯವರು ಅದ್ವೈತ ಕೀರ್ತನ ಪರಂಪರೆಯ ಹರಿಕಾರರಾದ ತಿಮ್ಮಪ್ಪದಾಸರ ವಂಶಸ್ಥರು. ಸೀತಾರಾಮಯ್ಯನವರು ತಂದೆಯ ಕಾಲದಿಂದ ನಡೆದುಬಂದ ಪೂರ್ವಿಕರ ಕೀರ್ತನೆಗಳ ಹಾಡುಗಾರಿಕೆ, ಭಜನೆ, ಪೂಜೆ ಇತ್ಯಾದಿ ಧಾರ್ಮಿಕ ಪರಿಸರದಲ್ಲಿ ಬೆಳೆದರು. ಮೈಸೂರಿನ ಬನುಮಯ್ಯ ಶಾಲೆಯಲ್ಲಿ ಪ್ರೌಢ ಶಿಕ್ಷಣವನ್ನು ಮುಗಿಸಿ ಮಹಾರಾಜ ಕಾಲೇಜಿನಲ್ಲಿ ಬಿ.ಎ.ವ್ಯಾಸಂಗ ಮಾಡಿದರು. ಅನಂತರ ಮೈಸೂರು



ವಿಶ್ವವಿದ್ಯಾನಿಲಯದಿಂದ ಎಂ.ಎ.ಪದವಿ ಗಳಿಸಿದರು. ಬಹುಮುಖ ಪ್ರತಿಭೆಯ ಇವರು ಈ ಅವಧಿಯಲ್ಲಿಯೇ ಪ್ರಸಿದ್ಧ ಸಂಗೀತ ವಿದ್ವಾಂಸರಾಗಿದ್ದ ಎಲ್.ರಾಜಾರಾಯರಲ್ಲಿ ಮೃದಂಗಾಭ್ಯಾಸ ಮಾಡಿ ವೀಣೆ ಶೇಷಣ್ಣನವರಂಥ ವಿದ್ವಾಂಸರಿಗೆ ಪಕ್ಕವಾದ್ಯ ನುಡಿಸುವಷ್ಟು ಎತ್ತರದ ಸಾಧನೆ ಮಾಡಿದರು. ಹಾಗೆಯೇ ಪ್ರಸಿದ್ಧ ಚಿತ್ರ ಕಲಾವಿದ ಕೆ.ವೆಂಕಟಪ್ಪನವರಲ್ಲಿ ಕೆಲಕಾಲ ಶಿಷ್ಯರಾಗಿದ್ದು ಚಿತ್ರಕಲೆಯಲ್ಲೂ ನೈಪುಣ್ಯ ಪಡೆದು ಹೆಚ್ಚಿನ ಅಭ್ಯಾಸಕ್ಕಾಗಿ ಶಾಂತಿನಿಕೇತನಕ್ಕೂ ಹೋಗಿದ್ದರು. ಮೈಸೂರು ದಸರ ವಸ್ತುಪ್ರದರ್ಶನ (1922), ಮದರಾಸಿನ ಕಾಂಗ್ರೆಸ್ ವಸ್ತುಪ್ರದರ್ಶನ(1923)ಗಳಲ್ಲಿ ಇವರು ರಚಿಸಿದ ಅನೇಕ ಚಿತ್ರಗಳು ಪ್ರದರ್ಶನಗೊಂಡಿದ್ದವು.

ಪ್ರಾಮಾಣಿಕತೆ, ಸೇವಾಪರತೆ, ಶ್ರದ್ಧೆ, ನಿಷ್ಠೆ, ಛಲ ಇಂತಹ ಮೌಲ್ಯಗಳ ಆಗರದಂತಿದ್ದ ಇವರ ಮೇಲೆ ಪ್ರಭಾವ ಬೀರಿದ ಸಾಹಿತಿಗಳೆಂದರೆ ಬಿ.ಎಂ.ಶ್ರೀ., ಎ.ಆರ್.ಕೃ., ಟಿ.ಎಸ್.ವೆಂಕಣ್ಣಯ್ಯ, ತೀ.ನಂ.ಶ್ರೀ., ಡಿ.ಎಲ್.ಎನ್. ಮೊದಲಾದವರು. ವಿದ್ಯಾರ್ಥಿದೆಸೆಯಿಂದಲೂ ಕಾವ್ಯ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ಭಾಷೆ, ಛಂದಸ್ಸು, ವ್ಯಾಕರಣ, ಗ್ರಂಥಸಂಪಾದನೆ – ಹೀಗೆ ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲಿಯೂ ಯಶಸ್ವಿಯಾಗಿ ದುಡಿದಿರುವುದು ಇವರ ಹೆಗ್ಗಳಿಕೆ. ಹಕ್ಕಿಹಾಡು (1944), ಮುಗಿಯದ ಮಾಯೆ (1958), ಆ ಚಿತ್ರಗಳು (1946), ಗೀತ ಭಾರತಿ (1969), ಹಂಸಪಥ (1971), ಕಾವ್ಯಾಲಾಪ (1944) ಮೊದಲಾದ 13 ಕವನ ಸಂಕಲನಗಳನ್ನು ಇವರು ರಚಿಸಿದ್ದಾರೆ. ಶಿಲಾಮುಖ (1946), ಕರುಣಾಲಹರಿ (1955), ಮಾರ್ಗದರ್ಶಕ (1940, 48), ಬಿಸಿಲು ಬೆಳದಿಂಗಳು (1953, 54, 62) ನಿಲ್ದಾಣಗಳ ನಡುವೆ (1974) ಮೊದಲಾದ 8 ಸಣ್ಣ ಕಥಾಸಂಕಲನಗಳನ್ನೂ ಭಾಗ್ಯಲಕ್ಷ್ಮಿ (1942, 44), ಮಾದನ ಮಗಳು (1950), ನಂಜಿನ ಸವಿ (1952), ತಾಯ ಬಯಕೆ (1954, 59) ಮೊದಲಾದ 12 ಕಾದಂಬರಿಗಳನ್ನೂ ಹೂವಿನ ಆಸೆ (1936, 43), ಕವಿಯ ಹೆಂಡತಿ (1955), ತೊಟ್ಟಿಲು ತೂಗದ ಕೈ (1959) ಮೊದಲಾದ 8 ನಾಟಕಗಳನ್ನು ರಚಿಸಿದ್ದಾರೆ. ಕನ್ನಡಮ್ಮನ ಕೊಡುಗೆ ಎಂಬ ಹೆಸರಿನಲ್ಲಿ ಹಿಡಿಹೂವು (1946, 83), ಮುಗಿಲುಗಳು (1950), ಬಾಳಿನ ಬುತ್ತಿ (1953) – ಎಂಬ ಪ್ರಬಂಧ ಸಂಕಲನಗಳನ್ನು ರಚಿಸಿದ್ದಾರೆ. ಜೀವನ ನಾಟಕ(1961), ಪ್ರತಿಮಾಗೃಹ – ಇವು ವ್ಯಕ್ತಿಚಿತ್ರಗಳು. ಹೂವಾಡಗಿತ್ತಿ (1946, 68), ಹಾವಾಡಿಗ(1958, 68), ಕುಮಾರ ಗೌತಮ(1979), ಕನ್ನಡದ ಕತೆ(1979) ಮೊದಲಾದವು ಇವರ ಶಿಶುಸಾಹಿತ್ಯ ಕೃತಿಗಳು. ಇವುಗಳಷ್ಟೇ ಅಲ್ಲದೆ

ಗಂಭೀರ ಅಧ್ಯಯನ ವಿಷಯಗಳಾದ ಕಾವ್ಯಮೀಮಾಂಸೆ, ಛಂದಸ್ಸು, ವ್ಯಾಕರಣ, ಗ್ರಂಥಸಂಪಾದನೆಗಳಿಗೆ ಸಂಬಂಧಿಸಿದಂತೆಯೂ ಹಲವಾರು ಕೃತಿಗಳನ್ನುರಚಿಸಿದ್ದಾರೆ: ಕವಿರಾಜಮಾರ್ಗ(1968), ಉದಯಾದಿತ್ಯಾಲಂಕಾರ (1969), ಭಾರತೀಯ ಕಾವ್ಯಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ (1970), ಕನ್ನಡ ಸಾಹಿತ್ಯದಲ್ಲಿ ಶಾಂತರಸ(1970), ಪ್ರಾಚೀನ ಕನ್ನಡ ವ್ಯಾಕರಣ (1980), ಕನ್ನಡ ಜೀವನ ಚರಿತ್ರೆ (1973), ಶಾಸ್ತ್ರ ಸಾಹಿತ್ಯ (1975), ಚಿನ್ನದ ಬೆಳಸು(ಸಂಪಾದನೆ) (1970), ಕೌಸ್ತುಭ (1977), ಧೀಮಂತ (1988) ಮೊದಲಾದವು. ಇವರ ಅನೇಕ ಸಾಹಿತ್ಯಕೃತಿಗಳು ಪ್ರತಿಷ್ಠಿತ ಬಹುಮಾನಗಳನ್ನು ಪಡೆದುಕೊಂಡಿವೆ.

ಅರ್ಚನ (1971), ಕೀರ್ತನ ಕುಸುಮಾಂಜಲಿ (1980) ಎಂಬ ಕೃತಿಗಳು ಇವರ ಏಳು ತಲೆಮಾರುಗಳ ಇತಿಹಾಸವನ್ನು ದಾಖಲಿಸುವುದರೊಂದಿಗೆ ಸಾಹಿತ್ಯಕ್ಕೂ ಅಮೂಲ್ಯ ಕೊಡುಗೆಗಳಾಗಿವೆ. ಶ್ರೀಕೃಷ್ಣಬಾಲಲೀಲೆ (1987, 1996) ಎಂಬುದು ಎರಡು ಸಂಪುಟಗಳ ಇವರ ಸಂಪಾದಿತ ಕೃತಿ.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ (1934–39), ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ರಚನೆಯಲ್ಲಿ ಸಹಸಂಪಾದಕರಾಗಿ (1939–46), ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ (1946), ಪ್ರವಾಚಕರಾಗಿ (1963) ಸೇವೆ ಸಲ್ಲಿಸಿದ ಇವರು ನಿವೃತ್ತರಾದ ಬಳಿಕ (1967) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 1974ರವರೆಗೆ ಯು.ಜಿ.ಸಿ. ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

1979ರಲ್ಲಿ ಬಿ.ಎಂ.ಶ್ರೀ.ಪ್ರತಿಷ್ಠಾನವನ್ನು ಸ್ಥಾಪಿಸಿ 1990ರ ವರೆಗೆ ಅದರ ಕೆಲಸಕಾರ್ಯಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಅದನ್ನು ನಾಡಿನ ಪ್ರತಿಷ್ಠಿತ ಸಂಸ್ಥೆಯನ್ನಾಗಿ ರೂಪಿಸಿದರು. ಇದು ನಾಡಿನ ಮಹತ್ವಪೂರ್ಣ ಸಂಶೋಧನ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಈ ಸಂಸ್ಥೆಯ ಮೂಲಕ ಎಂ.ವಿ.ಸೀ. ಅವರು ಪ್ರಕಟಿಸಿರುವ ಗಮನಾರ್ಹ ಕೃತಿಗಳಿವು: ಸರ್ವಜ್ಞನ ವಚನಗಳು (1982), ಮಣಿಹ (1982), ಹಸ್ತಪ್ರತಿಶಾಸ್ತ್ರ (1983), ಚಂದ್ರಚೂಡಾಮಣಿ ಶತಕ (1988), ಕುಮಾರವ್ಯಾಸ ಭಾರತ ಸಂಗ್ರಹ (1989). ಈ ಸಂಸ್ಥೆ ಕೃತಿ ಪ್ರಕಟಣೆಯೊಂದಿಗೆ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆಗಳನ್ನೂ ಮಾಡುತ್ತಿದೆ. ಹಸ್ತಪ್ರತಿಶಾಸ್ತ್ರದಂತಹ ನೂತನ ಅಧ್ಯಯನದ ಶಿಸ್ತನ್ನು ರೂಪಿಸಿದ ಕೀರ್ತಿ ಇದರದು.

ಇವರ ಅವಿರತ ಸಾಹಿತ್ಯ ಸೇವೆಗೆ ಹಲವಾರು ಸಂಘಸಂಸ್ಥೆಗಳಿಂದ, ಜನತೆಯಿಂದ, ಸರ್ಕಾರದಿಂದ ದೊರೆತಿರುವ ಗೌರವ, ಪ್ರಶಸ್ತಿ, ಸನ್ಮಾನಗಳು ಅಪಾರ. ಅವುಗಳಲ್ಲಿ ಮುಖ್ಯವಾದುವು: ದೇವರಾಜ ಬಹದ್ದೂರ್ ಪ್ರಶಸ್ತಿ, ಸಾಹಿತ್ಯ ಪರಿಷತ್ ಪ್ರಶಸ್ತಿ, ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ (1980), ರಾಜ್ಯೋತ್ಸವ ಪ್ರಶಸ್ತಿ (1985). ಆಸ್ವಾದ (1983), ಎಂ.ವಿ.ಸೀ. 80 (1989) – ಇವು ಇವರಿಗೆ ಅರ್ಪಿಸಿರುವ ಅಭಿನಂದನ ಗ್ರಂಥಗಳು. ಗೋಕಾಕ್ ಚಳವಳಿ ಮತ್ತು ಕನ್ನಡಪರ ಹೋರಾಟಗಳಲ್ಲಿ (1982–90) ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಕನ್ನಡ ಚಳವಳಿಗಾರರಲ್ಲಿ ಸ್ಫೂರ್ತಿ ಉಕ್ಕಿಸಿದ್ದ ಇವರು 1990 ಮಾರ್ಚ್ 12ರಂದು ನಿಧನರಾದರು. (ಎನ್.ಜಿ.)

**ಸೀತಾರಾಮಯ್ಯ, ವಿ.:** 1899–1983. ವಿ.ಸೀ. ಎಂಬ ಸಂಕ್ಷಿಪ್ತ ನಾಮದಿಂದ ಕನ್ನಡ ನಾಡಿನಲ್ಲೂ ಭಾರತದಲ್ಲೂ ಹೆಸರಾದ ಸಾಹಿತಿ, ವಾಗ್ಮಿ, ಸಾಹಿತ್ಯ ಕಲೆಗಳ ವಿಮರ್ಶಕ, ವಿಚಾರವಾದಿ. ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಬೂದಿಗೆರೆಯಲ್ಲಿ 1899 ಅಕ್ಟೋಬರ್ 2ರಂದು ಜನಿಸಿದರು. ಹುಲ್ಲೂರು ವೆಂಕಟರಾಮಯ್ಯ ಇವರ ತಂದೆ, ತಾಯಿ ಬೂದಿಗೆರೆ ದೊಡ್ಡವೆಂಕಟಮ್ಮ. 1907ರಲ್ಲಿ ಬೆಂಗಳೂರು ನಗರದ ಪ್ರಾಥಮಿಕ ಶಾಲೆಯೊಂದರಲ್ಲಿ ಕಲಿತು 1917ರಲ್ಲಿ ಮೈಸೂರು ಮಹಾರಾಜ ಕಾಲೇಜು ಸೇರಿ ಅರ್ಥಶಾಸ್ತ್ರದಲ್ಲಿ 1920ರಲ್ಲಿ ಬಿ.ಎ., 1922ರಲ್ಲಿ ಎಂ.ಎ. ಪದವಿ ಪಡೆದರು. 1923ರಿಂದ 1928ರ ವರೆಗೆ ಮೈಸೂರಿನ ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ, 1928ರಿಂದ 1955ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಕನ್ನಡದ ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ (ಮಧ್ಯೆ ಕೆಲವು ವರ್ಷ ಚಿಕ್ಕಮಗಳೂರು ಕಾಲೇಜಿನ ಸೂಪರಿಂಟೆಂಡೆಂಟರಾಗಿ) ಕೆಲಸ ಮಾಡಿ ನಿವೃತ್ತರಾದರು. ಬಳಿಕ ಬೆಂಗಳೂರು ಆಕಾಶವಾಣಿ ಕೇಂದ್ರದ ಭಾಷಣ ವಿಭಾಗದ ಮುಖ್ಯಸ್ಥರಾಗಿಯೂ (1956–58), ಹೊನ್ನಾವರದ ಕಾಲೇಜಿನ ಪ್ರಾಂಶುಪಾಲರಾಗಿಯೂ (1964–68) ಸೇವೆ ಸಲ್ಲಿಸಿದರು. ಅಲ್ಲದೆ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧಿಕಾರಿಯಾಗಿಯೂ ಕನ್ನಡ ನುಡಿ (1939–42), ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ

(1939–42 ಹಾಗೂ 1955–56), ಪ್ರಬುದ್ಧ ಕರ್ಣಾಟಕ (1943–47) ಈ ಪತ್ರಿಕೆಗಳ ಸಂಪಾದಕರಾಗಿಯೂ ದುಡಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಮತ್ತು ಜ್ಞಾನಪೀಠ ಪ್ರಶಸ್ತಿಯ ಸಲಹಾ ಮಂಡಲಿಯ ಸದಸ್ಯರಾಗಿಯೂ ಕೆಲಸ ಮಾಡಿದರು.

ಇವರಿಗೆ ಕನ್ನಡ, ಇಂಗ್ಲಿಷ್ ಭಾಷೆಗಳ ಮೇಲೆ ಸಮಾನ ಪ್ರಭುತ್ವವಿತ್ತು. ಇವರದು ಬಹುಮುಖ ಸಾಹಿತ್ಯಸೇವೆ. ಕಾವ್ಯ, ವಿಮರ್ಶೆ, ನಾಟಕ, ಜೀವನ ಚರಿತ್ರೆ, ಗ್ರಂಥಸಂಪಾದನೆ, ಲಲಿತ ಪ್ರಬಂಧಗಳು, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದ ವಿವಿಧ ಪ್ರಕಾರಗಳಿಗೆ ಸೇರಿದ 21ಕ್ಕೂ ಹೆಚ್ಚಿನ ಕೃತಿಗಳನ್ನೂ 6 ಇಂಗ್ಲಿಷ್ ಕೃತಿಗಳ ಅನುವಾದಗಳನ್ನೂ ಅನೇಕ ಬಿಡಿ ಲೇಖನಗಳು, ಕಾವ್ಯಾವಲೋಕನ, ಸಮೀಕ್ಷೆಗಳನ್ನೂ ಇವರು ಪ್ರಕಟಿಸಿದ್ದಾರೆ.

ಇವರ ಕೆಲವು ಮುಖ್ಯ ಕೃತಿಗಳು ಹೀಗಿವೆ: ಕವನಸಂಗ್ರಹಗಳು–ಗೀತೆಗಳು (1931), ದೀಪಗಳು (1933), ನೆಳಲು –ಬೆಳಕು (1935), ದ್ರಾಕ್ಷಿ–ದಾಳಿಂಬೆ(1948), ಹೆಜ್ಜೆ ಪಾಡು (1958), ಅರಲುಬರಲು (1972); ಲಲಿತ ಪ್ರಬಂಧಗಳು –ಪಂಪಾಯಾತ್ರೆ (1928), ಬೆಳುದಿಂಗಳು (1959), ಸೀಕರಣೆ (1976); ನಾಟಕಗಳು –ಸೊಹ್ರಾಬ್ ರುಸ್ತುಂ (1930), ಶ್ರೀಶೈಲ ಶಿಖರ (1960); ಜೀವನ ಚಿತ್ರಗಳು–ಭಾರತದ ಐವರು ಮಾನ್ಯರು (1951), ಮಹನೀಯರು (1970); ಹಿರಿಯರು, ಗೆಳೆಯರು (1980); ಅನುವಾದಗಳು–ಪಿಗ್‌ಮೇಲಿಯನ್ (1963), ಮೇಜರ್ ಬಾರ್ಬರ (1968), ಬಂಗಾಳಿ ಸಾಹಿತ್ಯಚರಿತ್ರೆ (1966); ವಿಮರ್ಶೆ–ಅಶ್ವತ್ಥಾಮನ್ (1946), ಕವಿಕಾವ್ಯದೃಷ್ಟಿ (1955), ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ (1961), ಸಾಹಿತ್ಯ:ಸಂಪ್ರದಾಯ ಮತ್ತು ಹೊಸ ಮಾರ್ಗ (1967), ಸತ್ಯ ಮತ್ತು ಮೌಲ್ಯ (1972) ಸಾಹಿತ್ಯಾವಲೋಕನ (1979); ಇಂಗ್ಲಿಷ್‌ನಲ್ಲಿ–ಪಂಪ (1967), ಕೆ.ವೆಂಕಟಪ್ಪ (1968), ಪುರಂದರದಾಸ (1971), ಎಂ.ವಿಶ್ವೇಶ್ವರಯ್ಯ (1971), ಡಿ.ವಿ.ಗುಂಡಪ್ಪ (1972), ವಾಲ್ಮೀಕಿ ರಾಮಾಯಣ (1972). ಐ.ಬಿ.ಹೆಚ್.ನ ಕವಿಕಾವ್ಯಪರಂಪರೆ ಎಂಬ ಸರಣಿಯಲ್ಲಿನ ಪಂಪ, ರನ್ನ ಜನ್ನ, ಒಂದನೆಯ ನಾಗವರ್ಮ, ಎರಡನೆಯ ನಾಗವರ್ಮ, ಕುಮಾರವ್ಯಾಸ, ಹರಿಹರದೇವ, ನಾಗಚಂದ್ರ, ರಾಘವಾಂಕ ಮೊದಲಾದ ಕವಿಗಳ ವಿಷಯಕವಾದ ಗ್ರಂಥಗಳನ್ನಿವರು ಸಂಪಾದಿಸಿ, ಪೀಠಿಕೆಯಾಗಿ ಕವಿಯ ಕಾವ್ಯದ ಸಮಗ್ರ ಸಮೀಕ್ಷೆಯನ್ನು ನೀಡಿದ್ದಾರೆ. ಕವಿರಾಜಮಾರ್ಗ, ವಡ್ಡಾರಾಧನೆ, ವ್ಯಾಕರಣಗಳು, ಯಕ್ಷಗಾನ, ಜನಪದ ಸಾಹಿತ್ಯ – ಈ

ವಿಷಯಗಳನ್ನು ಕುರಿತ ಗ್ರಂಥಗಳು ಇದೇ ಮಾಲಿಕೆಯಲ್ಲಿ ಇವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿವೆ.

ಇವರ ಗದ್ಯ ಆಧುನಿಕವಾದ್ದು; ಆಡುಮಾತಿಗೆ ಹತ್ತಿರದ್ದು; ಸುಲಭವಾದರೂ ಅಚ್ಚುಕಟ್ಟಾದ್ದು. ಇವರ ಭಾವಗೀತೆಗಳಲ್ಲಿ ಕೋಮಲ ಅಭಿಪ್ರಾಯಗಳು ಮೂಡಿವೆ. ಇವುಗಳ ಗೇಯ ಗುಣ ತುಂಬ ಆಕರ್ಷಕವಾದುದು.

ಇವರಿಗೆ ಅನೇಕ ಗೌರವಗಳು ಲಭಿಸಿವೆ. 1931ರಲ್ಲಿ ಕಾರವಾರದಲ್ಲಿ ಸೇರಿದ್ದ ಕವಿ ಸಮ್ಮೇಳನದ ಅಧ್ಯಕ್ಷತೆಯೂ 1954ರಲ್ಲಿ ಕುಮಟದಲ್ಲಿ ನಡೆದ 36ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯೂ ಕನ್ನಡ ಜನತೆ ಇವರಿಗೆ ಸಲ್ಲಿಸಿದ ಪ್ರಮುಖ ಗೌರವಗಳು. ಕೇಂದ್ರ ಸಾಹಿತ್ಯ ಅಕಾಡೆಮಿ ಇವರ ಅರಲುಬರಲು ಕವನ ಸಂಗ್ರಹಕ್ಕೆ 1973ರಲ್ಲಿ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಕರ್ನಾಟಕ ರಾಜ್ಯ ಸರ್ಕಾರ ಇವರಿಗೆ ಆಜೀವ ಗೌರವ ವೇತನವನ್ನು ನೀಡಿ ಪುರಸ್ಕರಿಸಿತ್ತು. ಇವರಿಗೆ ವಿ.ಸೀ.(1954) ಮತ್ತು ವಿ.ಸೀ. 75 (1973) ಎಂಬ ಅಭಿನಂದನ ಗ್ರಂಥಗಳನ್ನು ಅರ್ಪಿಸಲಾಗಿದೆ. ಇವರು 1983ರಲ್ಲಿ ನಿಧನರಾದರು. (ಕೆ.ಎಸ್.ಎನ್‌ಎ.)

**ಸೀತಿ:** ಕೋಲಾರ ತಾಲ್ಲೂಕಿನ ಒಂದು ಗ್ರಾಮ. ಕೋಲಾರದ ವಾಯವ್ಯಕ್ಕೆ 20 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,290.

ಚೋಳ ಮತ್ತು ಹೊಯ್ಸಳರ ಕಾಲದಲ್ಲಿ ಈ ಗ್ರಾಮಕ್ಕೆ ಹೆಚ್ಚು ಪ್ರಾಮುಖ್ಯ ಇದ್ದಂತೆ ಕಂಡುಬರುವುದು. ಗ್ರಾಮದ ಬಳಿ ಸೀತಿ ಬೆಟ್ಟವಿದೆ. ಬೆಟ್ಟದ ಪೂರ್ವ ತಪ್ಪಲಲ್ಲಿ ಜೋಗೇಶ್ವರ, ವೇಣುಗೋಪಾಲಸ್ವಾಮಿ, ವೀರಭದ್ರ ಮುಂತಾದ ಶಿಥಿಲ ದೇವಾಲಯಗಳಿವೆ. ಸೀತಿ ನಡುಬೆಟ್ಟದಲ್ಲಿ ಶ್ರೀಪತೀಶ್ವರ ಮತ್ತು ಕಾಲಭೈರವ ದೇವಾಲಯಗಳು ಅಕ್ಕಪಕ್ಕದಲ್ಲಿ ಇವೆ. ಶ್ರೀಪತೀಶ್ವರ ಗರ್ಭಗುಡಿ ಒಂದು ಸಹಜ ಗುಹೆ. ಈ ಗುಡಿಯಲ್ಲಿರುವ ಲಿಂಗ ವಿಷ್ಣುಸ್ಥಾಪಿತವೆಂದೂ ಅದರಿಂದ ಶ್ರೀಪತೀಶ್ವರ ಎಂಬ ಹೆಸರು ಬಂದಿರುವುದಾಗಿಯೂ ಪ್ರತೀತಿ. ಇದರಿಂದಲೇ ಈ ಗ್ರಾಮಕ್ಕೆ ಶ್ರೀಹಟ್ಟಿ ಅಥವಾ ಶಿಹಟ್ಟಿ ಎಂದು ಕರೆಯುತ್ತಿದ್ದು ಸೀತಿ ಆಯಿತೆಂದು ಪ್ರತೀತಿ. ಶ್ರೀಪತೀಶ್ವರ ಗರ್ಭಗುಡಿಯ ಬಲಭಾಗದಲ್ಲಿ ಮಹಿಷಮರ್ದಿನಿ, ವಿಘ್ನೇಶ್ವರ ಮತ್ತು ವೀರಭದ್ರ ಗುಡಿಗಳೂ ಎಡಭಾಗದಲ್ಲಿ ಷಣ್ಮುಖಸ್ವಾಮಿ ಮತ್ತು ಪಾರ್ವತಿದೇವಿ ಗುಡಿಗಳೂ ಇವೆ. ಮಹಿಷಮರ್ದಿನಿ ಗರ್ಭಗುಡಿಯ ಒಳಭಾಗದ ಬಂಡೆಯ ಮೇಲೆ ರಾಜೇಂದ್ರಚೋಳನ ಒಂದು ತಮಿಳು ಶಾಸನ (1024) ಇದೆ. ಕಾಲಭೈರವನ ಗುಡಿಯಲ್ಲಿರುವ ಶಾಸನಗಳಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ (1108–1142) ಒಂದು ಶಾಸನವೂ ಇದೆ.

ಕಾಲಭೈರವ ದೇವಾಲಯದ ಗೋಡೆಯ ಮೇಲೆ ಚೋಳ, ಗಂಗ, ಹೊಯ್ಸಳ ಮತ್ತು ವಿಜಯನಗರ ರಾಜರ ಶಾಸನಗಳಿವೆ. ಈ ಶಾಸನಗಳಲ್ಲಿ ಕಾಲಭೈರವನನ್ನು ತ್ರಿಭುವನವಿಡಂಗ ಕ್ಷೇತ್ರಪಾಲಕ ಪಿಳ್ಳೆಯಾರ್ ಎಂದು ಹೆಸರಿಸಲಾಗಿದೆ. ಕಾಲಭೈರವ ಈ ಪ್ರದೇಶದ ಮರಸು ಒಕ್ಕಲಿಗರಿಗೆ ಮತ್ತು ರೆಡ್ಡಿಗಳಿಗೆ ಮನೆದೇವರು. ಈ ದೇವರಿಗೆ ತೋರುಬೆರಳ ಮುಂಭಾಗವನ್ನು ಕಾಣಿಕೆಯಾಗಿ ಕೊಡುವ ಪದ್ಧತಿ ಈ ಶತಮಾನದ ಪ್ರಾರಂಭದವರೆಗೂ ಇತ್ತು. ಪುರಾಣ ಕಥೆಯಂತೆ ಭಸ್ಮಾಸುರ ಶಿವನಿಂದ ವರವನ್ನು ಪಡೆದು, ಆತನ ಮೇಲೆಯೇ ಪ್ರಯೋಗಿಸಲು ಪ್ರಯತ್ನಿಸಿದಾಗ, ಶಿವ ಸೀತಿ ಬೆಟ್ಟದ ಮೇಲ್ಭಾಗದಲ್ಲಿದ್ದ ಗೌತಮ ಮುನಿಯ ಮೊರೆಹೊಕ್ಕು ಮುನಿಯ ಸಲಹೆಯಂತೆ ಶ್ರೀಪತೀಶ್ವರ ದೇವಾಲಯದ ಗುಹೆಯಲ್ಲಿ ಅಡಗಿಕೊಂಡನಂತೆ. ಭಸ್ಮಾಸುರ ಬೆಟ್ಟದ ಪಕ್ಕದಲ್ಲಿಯೇ ಉಳುತ್ತಿದ್ದ ರೈತನನ್ನು ಕೇಳಿದಾಗ ರೈತ ಶಿವ ಹೋದ ದಾರಿಯನ್ನು ತನ್ನ ತೋರು ಬೆರಳಿನಿಂದ ತೋರಿಸಿದನಂತೆ. ಈ ಮಧ್ಯೆ ವಿಷ್ಣು ಮೋಹಿನಿ ರೂಪದಲ್ಲಿ ಬಂದು ಭಸ್ಮಾಸುರನನ್ನು ಸೀತಿ ಬೆಟ್ಟದ ದಕ್ಷಿಣಕ್ಕಿರುವ ಮತ್ತೊಂದು ದೊಡ್ಡಬೆಟ್ಟಕ್ಕೆ ಕರೆದೊಯ್ದು ಭಸ್ಮಾಸುರ ತನ್ನಿಂದಲೇ ತಾನು ಭಸ್ಮವಾಗುವಂತೆ ಮಾಡಿದ. ಆ ಬೆಟ್ಟವನ್ನೇ ಭಸ್ಮಾಸುರ ಬೆಟ್ಟವೆನ್ನುವರು. ಅನಂತರ ಶಿವ ವಿಷ್ಣುವನ್ನು ಯಾವ ಆಕಾರದಲ್ಲಿ ನೀನು ಭಸ್ಮಾಸುರನನ್ನು ವಂಚಿಸಿದೆ ಎಂದು ಕೇಳಲು ಆಗ ವಿಷ್ಣು ಮೋಹಿನಿ ವೇಷದಲ್ಲಿ ಕಾಣಿಸಿಕೊಂಡನೆಂತಲೂ ಶಿವ ಮೋಹಿನಿಯಲ್ಲಿ ವ್ಯಾಮೋಹ ಗೊಳ್ಳಲು ಅದರ ಫಲವಾಗಿ ಕಾಲಭೈರವ ಹುಟ್ಟಿದನೆಂದೂ ಕಥೆ. ಭಸ್ಮಾಸುರನಿಗೆ ದಾರಿತೋರಿದ ರೈತನ ತಪ್ಪಿನಿಂದಾಗಿ ಆತನ ವಂಶಜರು ತೋರುಬೆರಳಿನ ಮುಂಭಾಗವನ್ನು ಕಾಲಭೈರವನಿಗೆ ಕಾಣಿಕೆಯಾಗಿ ಕೊಡುತ್ತ ಬಂದರು. ಈ ಶತಮಾನದ ಪ್ರಾರಂಭದಲ್ಲಿ ಸರ್ಕಾರ ಈ ಪದ್ಧತಿಯನ್ನು ನಿಷೇಧಿಸಿತು. ಈಗ ಇದನ್ನು ಸಾಂಕೇತಿಕವಾಗಿ ಆಚರಿಸುತ್ತ ಬೆರಳಿಗೆ ಸುತ್ತಿದ ಹೂದಂಡೆಯನ್ನು ದೇವರಿಗೆ ಅರ್ಪಿಸುತ್ತಾರೆ.

ಬಹಳ ಹಿಂದೆ ಬೆಟ್ಟದ ಮೇಲ್ಭಾಗದಲ್ಲಿ ಒಂದು ಹಳ್ಳಿ ಇತ್ತೆಂಬುದಕ್ಕೆ ಇಲ್ಲಿನ ಅವಶೇಷಗಳಾದ ತೋರಣಗಂಬ ಮತ್ತು ಬೆಟ್ಟಕ್ಕೆ ಹತ್ತುವ ಮೆಟ್ಟಿಲುಗಳು ಸಾಕ್ಷಿಯಾಗಿವೆ. ತೋರಣಗಂಬಕ್ಕೆ ಸ್ವಲ್ಪದೂರದಲ್ಲಿ 35" ಉದ್ದ ಮತ್ತು 12" ಅಗಲವಿರುವ ಗುಹೆಯ ಭೂಪತಮ್ಮನ ಗುಡಿ ಇದೆ. ಪ್ರತಿ ಯುಗಾದಿಯಲ್ಲೂ ಶ್ರೀಪತೀಶ್ವರಸ್ವಾಮಿ ಜಾತ್ರೆ ಐದು ದಿನ ನಡೆಯುತ್ತದೆ. ಇದನ್ನು ಭೂಪತಮ್ಮನ ಜಾತ್ರೆಯೆಂದೂ ಕರೆಯುವುದುಂಟು. (ಎ.ಬಿ.ಬಿ.)

**ಸೀಬಿ:** ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಒಂದು ಪ್ರೇಕ್ಷಣೀಯ ಸ್ಥಳ. ಶಿರಾ ಪಟ್ಟಣದ ದಕ್ಷಿಣಕ್ಕೆ 26 ಕಿಮೀ ದೂರದಲ್ಲಿ ತುಮಕೂರು–ಚಿತ್ರದುರ್ಗದ ಹೆದ್ದಾರಿಯಲ್ಲಿದೆ. ಇಲ್ಲಿರುವ ನರಸಿಂಹಸ್ವಾಮಿ ದೇವಾಲಯ ಮತ್ತು ಪ್ರತಿ ಮಾಘ ಮಾಸದಲ್ಲಿ ನಡೆಯುವ ಜಾತ್ರೆ ಸುತ್ತಲ ಜನರನ್ನು ಆಕರ್ಷಿಸುತ್ತವೆ. ವಿಜಯನಗರದ ಇಮ್ಮಡಿ ಹರಿಹರನ (1377–1404) ಕಾಲದಲ್ಲಿ ಇದೊಂದು ಅಗ್ರಹಾರವಾಗಿದ್ದು ಹರಿಹರರಾಯಪುರ ಎಂದು ಕರೆಯುತ್ತಿದ್ದರೆಂದು ತಿಳಿದುಬರುವುದು. ಶಾಸನಗಳಲ್ಲಿ ಸಿಬೂರು, ಶಿಬಿಯೂರು ಎಂದೂ ಗುರುತಿಸಲಾಗಿದೆ. ಊರಿನಲ್ಲಿ ಹಿಂದೆ ಚಂದ್ರವತಾಳೇಶ್ವರ ಮತ್ತು ನರಸಿಂಗ ದೇವಾಲಯಗಳಿದ್ದವೆಂದೂ ಈಗ ಇರುವ ನರಸಿಂಹ ದೇವಾಲಯ ಹಾಗೂ ಇಲ್ಲಿರುವ ಭಿತ್ತಿಚಿತ್ರಗಳಿಂದ ಸೀಬಿ ಹೆಚ್ಚು ಪ್ರಸಿದ್ಧವಾಗಿದೆ.

ಇಲ್ಲಿನ ದೇವಾಲಯದ ರಚನೆ ಕೋಟೆಕೊತ್ತಲಗಳನ್ನು ನೆನಪಿಗೆ ತರುವಂತಿದೆ. ದೇವಾಲಯದ ಗರ್ಭಗೃಹ, ಸುಕನಾಸಿ, ನವರಂಗ ಹಾಗೂ ಮಹಾದ್ವಾರಗಳು ವಿಜಯನಗರದ ವಾಸ್ತುವನ್ನು ಹೋಲುತ್ತವೆ. ಗರ್ಭಗೃಹದ ಎಡಬಲದಲ್ಲಿರುವ ಬಿಡಿ ವಿಗ್ರಹಗಳುಳ್ಳ ಕೊಠಡಿಗಳು, ವಿಗ್ರಹಗಳು ಮತ್ತು ಬೃಹತ್ ಪ್ರಾಕಾರ ಇವು ನಾಯಕರ ಕಾಲದ ಜೋಡಣೆಗಳು. ದೇವಾಲಯದ ಮಹಾದ್ವಾರ ಹಾಗೂ ಮುಖಮಂಟಪಗಳ ಚಾವಣಿಯ ಮೇಲಿನ ಭಿತ್ತಿಯ ಚಿತ್ರಗಳು ಮರಾಠರ (ಶಹಾಜಿ ಹಾಗೂ ಶಿವಾಜಿ) ಮುಗಲರ (ಕಾಸಿಂಖಾನ್) ಹಾಗೂ ಮೈಸೂರರಸರ ಆಳ್ವಿಕೆಯ ಕಾಲದಲ್ಲಿ ರಚಿತವಾದವು. 1761ರ ಪಾಣಿಪತ್ ಕಾಳಗದಲ್ಲಿ ಮರಾಠರಿಗೆ ಆದ ಸೋಲು ಶಿರಾವನ್ನು ಗೆದ್ದುಕೊಳ್ಳಲು ಹೈದರ್ ಅಲಿಗೆ ಸುಲಭವಾದ ಸಮಯವಾಯಿತು. ಆಗ ಹೈದರನ ಸೈನ್ಯಕ್ಕೆ ದವಸಧಾನ್ಯ, ಕಾಳುಕಡ್ಡಿ ಇತ್ಯಾದಿಗಳನ್ನು ತುಮಕೂರಿನ ವೈದಿಕ ಬ್ರಾಹ್ಮಣ ನಲ್ಲಪ್ಪನು ಒದಗಿಸುತ್ತ ಅವರ ಪ್ರೀತಿಗೆ ಪಾತ್ರನಾಗಿದ್ದ. ತತ್ಕಾರಣ ಅವನು ಆಸ್ಥಾನದ ಸಭಾಸದನಾದ. ನವಾಬನ ನಿಕಟವರ್ತಿಯಾಗಿದ್ದ ಆತ ಹೈದರ್ ನಾಮಾ ಎಂಬ ಚಾರಿತ್ರಿಕ ಕೃತಿಯನ್ನು ನಡುಗನ್ನಡದಲ್ಲಿ ಬರೆದಿದ್ದಾನೆ. ಹೈದರ್ ಅಲಿಯೊಂದಿಗೆ ಇದ್ದ ಒಳ್ಳೆಯ ಸಂಬಂಧವನ್ನು ಬಳಸಿಕೊಂಡು ನಲ್ಲಪ್ಪ ಮತ್ತು ಅವನ ಸಹೋದರರು ಸೀಬಿಯ ನರಸಿಂಹಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದುದಲ್ಲದೆ ಅದನ್ನು ವಿಸ್ತರಿಸಿದರು. ನವರಂಗ, ಮಹಾದ್ವಾರ ಮತ್ತು ಅವುಗಳ ಚಾವಣಿಯಲ್ಲಿರುವ ಭಿತ್ತಿ ಚಿತ್ರಗಳು ಈ ಕಾಲದಲ್ಲಿ ರಚಿತವಾದವುಗಳು

ಎಂದು ಭಾವಿಸಲಾಗಿದೆ. ಸೀಬಿಯ ಭಿತ್ತಿ ಚಿತ್ರಗಳನ್ನು ಧಾರ್ಮಿಕ, ಸಾಮಾಜಿಕ, ನೈಸರ್ಗಿಕ, ವೈಯಕ್ತಿಕ ಹಾಗೂ ಲೈಂಗಿಕ ಚಿತ್ರಗಳೆಂದು ಐದು ಭಾಗಗಳಲ್ಲಿ ಗುರುತಿಸಬಹುದು. ಮಹಾಭಾರತ, ರಾಮಾಯಣ, ಭಾಗವತ ಮತ್ತು ಪುರಾಣಗಳಿಂದ ಘಟನೆಗಳನ್ನು ಆರಿಸಿಕೊಂಡು ರೂಪಿಸಲಾದ ಚಿತ್ರಗಳು ಇಲ್ಲಿವೆ. ಹಂಪೆಯ ವಿರೂಪಾಕ್ಷ ದೇವಾಲಯದ ಭಿತ್ತಿ ಚಿತ್ರಗಳನ್ನು ಇವು ಹೋಲುತ್ತವೆ. ಕೆಲವೊಂದು ಚಿತ್ರ ಕೆತ್ತನೆಗಳು ಆಕರ್ಷಕವಾಗಿವೆ. ಇಳಿಜಾರು ಪ್ರದೇಶದಲ್ಲಿ ತೋಪು ಉರುಳಿಕೊಂಡು ಹೋಗದಹಾಗೆ ಆನೆ ತನ್ನ ಸೊಂಡಿಲಿನಿಂದ ಹಿಡಿದು ಎಳೆದೊಯ್ಯುವ ದೃಶ್ಯ, ಅದನ್ನು ಸರಿದಾರಿಯತ್ತ ಎಳೆಯುತ್ತಿರುವ ನಾಲ್ಕೆತ್ತುಗಳು ಚೆನ್ನಾಗಿ ಮೂಡಿಬಂದಿವೆ. ಇನ್ನೊಂದೆಡೆ ಮೈದಾನದಲ್ಲಿ ಡೇರೆ, ಅದರ ಸುತ್ತಲೂ ಜನರು ಬಂದು ಹೋಗುವ ದೃಶ್ಯ, ಮತ್ತೊಂದೆಡೆಯಲ್ಲಿ ಮೇನೆಯಲ್ಲಿ ಅಧಿಕಾರಿಯೊಬ್ಬನ ಪ್ರಯಾಣ ಸೊಗಸಾಗಿ ಚಿತ್ರಣಗೊಂಡಿವೆ. ಅವಕಾಶ ಸಿಕ್ಕಿದಾಗಲೆಲ್ಲ ಕಲಾಕಾರ ನಿಸರ್ಗವನ್ನೂ ಬಣ್ಣದಲ್ಲಿ ಸೆರೆಹಿಡಿದಿ ದ್ದಾನೆ. ತನ್ನ ಆಳವಾದ ತಿಳಿವಳಿಕೆಗಳನ್ನೂ–ಒಲವರಗಳನ್ನೂ ಭಿತ್ತಿ ಚಿತ್ರಗಳಲ್ಲಿ ವ್ಯಕ್ತಪಡಿಸಲು ಯತ್ನಿಸಿದ್ದಾನೆ. ಪಶುಪಕ್ಷಿ, ದನಕರುಗಳ ನಿತ್ಯಬದುಕನ್ನು ಒಂದು ಚಿತ್ರದಲ್ಲಿ ಬಿಡಿಸಲಾಗಿದೆ. ಪ್ರಾಣಿ ಪ್ರಪಂಚದ ಚಿತ್ರಗಳೂ ಅದ್ವಿತೀಯವಾಗಿ ಮೂಡಿಬಂದಿವೆ. ಸಮುದ್ರಮಥನ ಚಿತ್ರದಲ್ಲಿ ಅನೇಕ ಜಲಚರಗಳನ್ನು ಚಿತ್ರಿಸಲಾಗಿದೆ. ಹೈದರ್ ಅಲಿಯ ದರ್ಬಾರಿನ ಚಿತ್ರ ಒಂದು ಅತ್ಯಾಕರ್ಷಕ ಹಾಗೂ ಚಾರಿತ್ರಿಕ ಚಿತ್ರ. ಆದರೆ ಈ ಚಿತ್ರದ ಮೇಲ್ಭಾಗವನ್ನು ಮುಚ್ಚಿ ಗೋಡೆಯೊಂದನ್ನು ಕಟ್ಟಿದ್ದಾರೆ.

ಸೀಬಿಯ ಚಿತ್ರಗಳು ವಿಜಯನಗರ, ಮರಾಠಾ ಹಾಗೂ ತಂಜಾವೂರು ಮುಂತಾಗಿ ದಕ್ಷಿಣ ಭಾರತದ ಸಮ್ಮಿಶ್ರ ಶೈಲಿಯ ಚಿತ್ರಗಳೆಂದೂ ಮೈಸೂರು–ಮರಾಠಾ ಶೈಲಿ ಎಂಬ ಹೊಸ ಶೈಲಿಯ ಚಿತ್ರಗಳೆಂದೂ ಹೇಳುತ್ತಾರೆ. ಹೆಚ್ಚು ಪ್ರಚಾರ ಪಡೆಯದ ಸೀಬಿ ತನ್ನ ದೇವಾಲಯಗಳಲ್ಲಿ ಅದ್ಭುತ ಕಲಾಲೋಕವನ್ನೇ ಹುದುಗಿಸಿಕೊಂಡಿದೆ. **(ಎಸ್.ಜಿ.ಎ.)**

**ಸುಂದರ ನಾಡಕರ್ಣಿ:** 1937–1994. ಯಕ್ಷಗಾನ ಕಲಾವಿದ ಮತ್ತು ಲೇಖಕರು. ಉತ್ತರಕನ್ನಡ ಜಿಲ್ಲೆ ಬಂಕಿಕೊಡ್ಲದಲ್ಲಿ 1937 ಅಕ್ಟೋಬರ್ 23ರಂದು ಜನಿಸಿದರು. ಇವರ ತಂದೆ ವಿಠ್ಠಲ ನಾಡಕರ್ಣಿ, ತಾಯಿ ಶಾಂತಾಬಾಯಿ.

ನಾಡಕರ್ಣಿಯವರು ಬಂಕಿಕೊಡ್ಲದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಣ ಮುಗಿಸಿ, ಅಲ್ಲಿನ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು (1948–55). ಖಾಸಗಿಯಾಗಿ ಓದಿ 1962ರಲ್ಲಿ ಗುಜರಾತ್ ವಿಶ್ವವಿದ್ಯಾಲಯದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಅಹಮದಾಬಾದ್‌ನ ಸೇಂಟ್ ಸೇವಿಯರ್ ಕಾಲೇಜಿನಲ್ಲಿ ಇಂಗ್ಲಿಷನ್ನು ಮುಖ್ಯ ವಿಷಯವನ್ನಾಗಿ ಆಯ್ದುಕೊಂಡು ಬಿ.ಎ. ಪದವಿ ಪಡೆದರು (1964). ಬಳಿಕ ವಲ್ಲಭ ವಿದ್ಯಾನಗರ ಆರ್ಟ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತ (1964–66) ಇಂಗ್ಲಿಷ್ ಸಾಹಿತ್ಯವನ್ನು ಓದಿ ಸರದಾರ ಪಟೇಲ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು (1966). ಮೊದಲಿಗೆ ಗುಜರಾತಿನ ಪೆಟ್ಲದ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ (1966–69), ಅನಂತರ ಆನಂದ ಆರ್ಟ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ (1969), ವಿಭಾಗ ಮುಖ್ಯರಾಗಿ ತಮ್ಮ ಜೀವಿತದ ಕಡೆಯವರೆಗೆ (1994 ಡಿಸೆಂಬರ್ 22) ಕೆಲಸ ಮಾಡಿದರು. ಮಿರ್ಜಿ ಅಣ್ಣಾರಾಯರ ಮೊಮ್ಮಗ ಮಿಣಜಗಿಯವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿ ಪಡೆದರು (1987–88). ಇವರ ಪತ್ನಿ ಸುರೇಖಾ. ಇವರಿಗೆ ಮಕ್ಕಳಿರಲಿಲ್ಲ. ಇವರ ಅಣ್ಣ ಮಂಗೇಶ ನಾಡಕರ್ಣಿ.

ಶಾಲೆಯಲ್ಲಿದ್ದಾಗಿನಿಂದಲೂ ಇವರಿಗೆ ಯಕ್ಷಗಾನದಲ್ಲಿ ಆಸಕ್ತಿ ಬೆಳೆದು ಸ್ತ್ರೀ ಪಾತ್ರಗಳಲ್ಲಿ ಅಭಿನಯಿಸಿ ಹೆಸರು ಮಾಡಿದರು. ಮೆಟ್ರಿಕ್ ತೇರ್ಗಡೆಯಾದ ಬಳಿಕ ಯಕ್ಷಗಾನ ಕ್ಷೇತ್ರದಲ್ಲಿ ಐದಾರು ವರ್ಷ ಕಳೆದು ಇಡೀ ಜೀವನವನ್ನು ಯಕ್ಷಗಾನ ಕಲೆಗೇ ಮೀಸಲಾಗಿಡಲು ನಿರ್ಧರಿಸಿದರು. ಆಗ (1961) ಇವರ ಅಣ್ಣ ಇವರನ್ನು ಅಹಮದಾಬಾದಿಗೆ ಕರೆದು ಶಿಕ್ಷಣ ಮುಂದುವರಿಸಬೇಕೆಂದು ಸಲಹೆ ನೀಡಿದರು. ಮುಂದೆ ವಿದ್ಯಾಭ್ಯಾಸವನ್ನು ಮುಗಿಸಿ ಅಧ್ಯಾಪಕರಾದರೂ ಇವರ ಒಲವು ಯಕ್ಷಗಾನದತ್ತಲೇ ಇತ್ತು. ಉತ್ತರ ಕನ್ನಡದ ಪ್ರಸಿದ್ಧ ಕಲಾವಿದರಾದ ಶಂಭು ಹೆಗಡೆಯವರ ತಂಡವನ್ನು ಆನಂದಕ್ಕೆ (ಗುಜರಾತ) ಕರೆಸಿಕೊಂಡು (1994) ಪ್ರಯೋಗ ಮಾಡಿಸಿದರು. ಇವರು ಬರೆದ 'ವೇಷ' ಕಾದಂಬರಿಯಲ್ಲಿ ತಾವು ಯಕ್ಷರಂಗ ಭೂಮಿಯಲ್ಲಿ ಕಂಡುಂಡ ಅನುಭವದ ಕಥನವಿದೆ.



ನಾಡಕರ್ಣಿಯವರಿಗೆ ಸಂಗೀತದಲ್ಲಿ ಅಭಿರುಚಿಯಿತ್ತು. ಪುಸ್ತಕ ವ್ಯಾಸಂಗವೂ ಇವರಿಗೆ ಪ್ರಿಯವಾಗಿತ್ತು. ತೋಟಗಾರಿಕೆ, ಪ್ರವಾಸ, ಪುಸ್ತಕ ಸಂಗ್ರಹಗಳಲ್ಲಿ ಇವರಿಗಿದ್ದ ಆಸಕ್ತಿ ಅಪಾರ. ಮಂಥನ (1968), ಹಸಿರು ದೀಪ (1973), ಉಸಿರುಗಳ ಬೀದಿಯಲ್ಲಿ (1976), ಅಂತರದ ನೀರು, ನೆಗಸು (1981), ತುಂಡು ಬಯಲು ಬುಂಡು ಆಕಾಶ (1983), ದಣಪೆಯಲ್ಲಿ ನಿಂತು (1987), ಮಾತನಾಡುವ ಮೌನ (1993), ಕದಿರು ತೋರಣ (1994) ಎಂಬ ಎಂಟು ಕವನ ಸಂಗ್ರಹಗಳನ್ನೂ ಮೋಹಿತರು (1971), ಗೋಡೆಗಳು (1975), ಮಂದಿಮನೆ (1978), ಅವರ ನಡುವೆ (1980), ವೇಷ (1982), ಜಾನಕಿಯ ಮೂರನೆ ಜನ್ಮ (1985), ಈ ಕೂಪ (1987), ಕೈಕೊಟ್ಟವರು (1992) ಎಂಬ ಎಂಟು ಕಾದಂಬರಿಗಳನ್ನೂ ಸುದ್ದಿ ಎಂಬ ಸಣ್ಣಕಥಾಸಂಕಲನವನ್ನೂ (1984), ತೆಂಗಾಡಿನ ಅತ್ತ ಇತ್ತ ಎಂಬ ಪ್ರವಾಸ ಕಥನವನ್ನೂ ಪ್ರಕಟಿಸಿದ್ದಾರೆ. ಇವರು ಬರೆದ ದಿಕ್ಕು ತಪ್ಪಿದ ದೈವ, ಉಪ್ಪು ಎಂಬ ಕಾದಂಬರಿಗಳು ಮುದ್ರಣದಲ್ಲಿವೆ. ಮೂರು ದಶಕಗಳ ಕಾಲ ಗುಜರಾತಿನಲ್ಲಿದ್ದ ಇವರು ಗುಜರಾತಿ ಭಾಷೆಯನ್ನು ಚೆನ್ನಾಗಿ ಕಲಿತಿದ್ದರು. ತಮ್ಮದೇ 'ಮೋಹಿತರು' ಕಾದಂಬರಿಯನ್ನೂ ಯು.ಆರ್. ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯನ್ನೂ ಗುಜರಾತಿ ಭಾಷೆಗೆ ಅನುವಾದಿಸಿದ್ದಾರೆ.

ಇವರ ಮಂದೀಮನೆ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. ಸಂಯುಕ್ತ ಕರ್ನಾಟಕ ಏರ್ಪಡಿಸಿದ್ದ ಕಾದಂಬರಿ ಸ್ಪರ್ಧೆಯಲ್ಲಿ 'ಗೋಡೆಗಳು' ಕಾದಂಬರಿಗೆ ಪ್ರಥಮ ಬಹುಮಾನ ದೊರಕಿದೆ. ಇವರನ್ನು ಇಂಟರ್‌ನ್ಯಾಷನಲ್ ಸೊಸೈಟಿ ಆಫ್ ಪೊಯೆಟ್ಸ್ ಸಂಸ್ಥೆ ಮೇರಿಲ್ಯಾಂಡ್‌ನಲ್ಲಿ ಅತ್ಯುತ್ತಮ ಕವಿ ಎಂದು ಸನ್ಮಾನಿಸಿತು (1991). **(ಎಸ್.ಎಂ.ಕೆ.)**

**ಸುಂದರಶಾಸ್ತ್ರೀ, ಪಾನ್ಯಂ:** ಹೆಸರಾಂತ ವಿದ್ವಾಂಸರು. ಬೆಂಗಳೂರಿನವರು. ಮದರಾಸು ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ಕೆಲವು ವರ್ಷಗಳ ಕಾಲ ಕೆಲಸ ಮಾಡಿದರು. ಅನಂತರ 1916ರಲ್ಲಿ ಅನಂತಪುರದ ಸರ್ಕಾರಿ ಕಾಲೇಜಿನಲ್ಲೂ ಕನ್ನಡ ಪಂಡಿತರಾಗಿದ್ದರು. 1920ರಲ್ಲಿ ಇವರು ಮದರಾಸಿನ ಸರ್ಕಾರಿ ಪ್ರಾಚ್ಯ ಗ್ರಂಥಭಂಡಾರದಲ್ಲಿ ಉಪಗ್ರಂಥಾಲಯಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದರು.

ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಒಳ್ಳೆಯ ಪಾಂಡಿತ್ಯ ಗಳಿಸಿಕೊಂಡಿದ್ದ ಇವರು ಸಂಸ್ಕೃತದಿಂದ ಭಾಸನ ಕೆಲವು ನಾಟಕಗಳನ್ನು ಮೊಟ್ಟಮೊದಲಿಗೆ ಕನ್ನಡಿಸಿಕೊಟ್ಟರು. ಅವುಗಳಲ್ಲಿ ಅಭಿಷೇಕ ನಾಟಕ, ಊರುಭಂಗ, ಕರ್ಣಭಾರ, ದೂತವಾಕ್ಯ, ದೂತಘಟೋತ್ಕಚ, ಪಂಚರಾತ್ರ– ಇವು ಮುಖ್ಯವಾದುವು. ಬೆನಗಲ್ ರಾಮರಾಯರೊಂದಿಗೆ **(ನೋಡಿ)** ಕೂಡಿಕೊಂಡು ಇವರು ಸಂಪಾದಿಸಿರುವ ಪುರಾಣನಾಮ ಚೂಡಾಮಣಿ ಒಂದು ಒಳ್ಳೆಯ ಆಕರಗ್ರಂಥ. ಮಕ್ಕಳಿಗಾಗಿ ಹಿತೋಪದೇಶವನ್ನೂ ಶಿವತತ್ತ್ವ ರತ್ನಾಕರದ ಭಾಗಗಳನ್ನೂ ಕನ್ನಡಿಸಿದ್ದಾರೆ. ಇವರಿಗೆ ಶೃಂಗೇರಿಯ ಶಿವಗಂಗಾ ಸಂಸ್ಥಾನದಿಂದ ಸಾಹಿತ್ಯರತ್ನ ಎಂಬ ಪ್ರಶಸ್ತಿ ಲಭಿಸಿತ್ತು. **(ಕೆ.ಕೆ.)**

**ಸುಕುಮಾರಭಾರತಿ:** ಸು. 1550. ಬ್ರಾಹ್ಮಣಕವಿ. ಚಾಯಣ ಭಾರತ ಎಂಬ ಗ್ರಂಥದ ಕರ್ತೃ. ಈತ ಅಹೋಬಲದ ನರಸಿಂಹನನ್ನು ಸ್ತುತಿಸಿರುವುದರಿಂದ ಆ ಪ್ರಾಂತದವನಾಗಿದ್ದರೂ ಆಗಿರಬಹುದು. ಚಾಯಣ ಎಂಬುದೇ ಕವಿಯ ಹೆಸರಾಗಿದ್ದು ಸುಕುಮಾರಭಾರತಿ ಈತನ ಬಿರುದಾಗಿರಬೇಕೆಂದು ವಿದ್ವಾಂಸರ ಊಹೆ. ಈತ ಸ್ವವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ.

ಚಾಯಣಭಾರತ ವಾರ್ಧಕ ಷಟ್ಪದಿಯಲ್ಲಿದೆ. ಈ ಗ್ರಂಥದ ಮೊದಲನೆಯ 153 ಪದ್ಯಗಳು ನಷ್ಟವಾಗಿದ್ದು ಇವನ್ನು ಮನೋಹರ ವಿಠಲಾಂಕಿತನಾದ ಮಾವಿನದೇಶದ ಕರಣಿಕೋತ್ತಮ ತಿರುಮಲರಾಯನ ಸುತ ನಾರಾಯಣಾಖ್ಯನು ಬರೆದಂತೆ ತಿಳಿದುಬರುತ್ತದೆ. ಕಾವ್ಯದಲ್ಲಿ ಭಾರತದ ಯುದ್ಧ ಪಂಚಕಗಳಾದ ಭೀಷ್ಮ, ದ್ರೋಣ, ಕರ್ಣ, ಶಲ್ಯ, ಗದಾಪರ್ವಗಳಿವೆ. ಭೀಷ್ಮಪರ್ವದಲ್ಲಿ 4 ಸಂಧಿ 249 ಪದ್ಯಗಳು, ದ್ರೋಣಪರ್ವದಲ್ಲಿ 11 ಸಂಧಿ 435 ಪದ್ಯಗಳು, ಕರ್ಣಪರ್ವದಲ್ಲಿ 3 ಸಂಧಿ 180 ಪದ್ಯಗಳು, ಶಲ್ಯಪರ್ವದಲ್ಲಿ 1 ಸಂಧಿ 43 ಪದ್ಯಗಳು, ಗದಾಪರ್ವದಲ್ಲಿ 2 ಸಂಧಿ 96 ಪದ್ಯಗಳು ಇವೆ. ಕಥಾವಸ್ತು ಕುಮಾರವ್ಯಾಸನಷ್ಟು ಸುದೀರ್ಘವಾಗದೆ ಸಂಗ್ರಹವಾಗಿದೆ. ಪಂಪ, ರನ್ನ, ಕುಮಾರವ್ಯಾಸರ ಪ್ರಭಾವ ಈ ಕಾವ್ಯದ ಮೇಲೆ ಆಗಿರುವುದಕ್ಕೆ ಅನೇಕ ಉದಾಹರಣೆಗಳು ದೊರೆಯುತ್ತವೆ. ಆದರೂ ಸಂಗ್ರಹಕಾರ್ಯ, ಹೊಸ ಹೊಸ ಭಾವನೆಗಳ ನಿರೂಪಣೆ, ಸನ್ನಿವೇಶ ಚಿತ್ರಣ ಇವುಗಳಲ್ಲಿ ಸ್ವಂತಿಕೆಯಿದೆ. ಕಾವ್ಯ ಶೈಲಿ ಸುಪ್ರೌಢವೂ ಮನೋಹರವೂ ಆಗಿದೆ. ಭಾಷೆ ನಡುಗನ್ನಡದ್ದಾಗಿದ್ದರೂ ಹಳಗನ್ನಡದ ಶಬ್ದಗಳು ಅಲ್ಲಲ್ಲಿ ನುಸುಳಿಕೊಂಡಿವೆ. ಆರಂಭದಲ್ಲಿ ಬರುವ 153 ಪದ್ಯಗಳ ಕರ್ತೃ ನಾರಾಯಣಾಖ್ಯನ ಶೈಲಿಗೂ ಇವನ ಶೈಲಿಗೂ ವ್ಯತ್ಯಾಸ ಎದ್ದು ಕಾಣಿಸುತ್ತದೆ. **(ಆರ್.ಕೆ.)**

**ಸುಕ್ರಿ ಬೊಮ್ಮೇಗೌಡ:** 1934– . ಪ್ರಸಿದ್ಧ ಜನಪದ ಹಾಡುಗಾರ್ತಿ. ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಬಡಗೇರಿ ಇವರ ಊರು. ಸು. 1934ರಲ್ಲಿ ಅಂಕೋಲದ ಅಂಬಾರ ಕೊಡ್ಲು ಎಂಬ ಗ್ರಾಮದಲ್ಲಿ ಜನಿಸಿದರು. ಇವರಿಗೆ ಸುಮಾರು ಹನ್ನೆರಡು ವರ್ಷ ವಯಸ್ಸಾದಾಗ ಬೊಮ್ಮೇಗೌಡ ಎಂಬ ನಲ್ವತ್ತೆಂಟು ವರ್ಷ ವಯಸ್ಸಾದ ವ್ಯಕ್ತಿಗೆ ಮದುವೆ ಮಾಡಿಕೊಡಲಾಯಿತು. ಕೆಲಕಾಲ ಬದುಕಿದ್ದು ಗಂಡ ತೀರಿಹೋದ ಕಾರಣ ಸುಕ್ರಿ ಎಳೆಹರೆಯದಲ್ಲಿ ವಿಧವೆಯಾದರು. ಕೃಷಿಕೂಲಿ ನಡೆಸುತ್ತಿದ್ದ ಸುಕ್ರಿಯ ಕುಟುಂಬ ಈಗಲೂ ಕೃಷಿಕೂಲಿಯನ್ನೇ ಆಧರಿಸಿದೆ.

ಇವರು ತಾಯಿ ದೇವಿಯವರಿಂದ ಹಾಡುಗಳನ್ನು ಕಲಿತು ತನ್ನ ಸ್ವಂತ ಪ್ರತಿಭೆಯಿಂದ ಜನಪದ ಗಾಯನ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಮಾದೇವರಾಯ, ಚಂದನರಾಯ, ರಾಮ–ಲಕ್ಷ್ಮಣ, ಐರಾವತ, ಕುಂತಿಕಥೆ, ಸಿರಿಕವುಲಿ ಮುಂತಾದ ಕಾವ್ಯಗಳನ್ನು ಹಾಡುತ್ತಾರೆ. ಬಲೀಂದ್ರರಾಯ, ಗೋವಿಂದರಾಯ, ತಂಗಿ ತುಳಸಮ್ಮ ಹಾಗೂ ಕರಿದೇವರ ಬಗೆಗಿನ ಕಥನ ಕಾವ್ಯಗಳನ್ನು ಹಾಡುವ ಅಪರೂಪದ ಕಲಾವಿದೆಯಾಗಿ ಸುಕ್ರಿ ಕಂಡುಬರುತ್ತಾರೆ. ಮದುವೆಹಾಡು, ಸೋಬಾನೆಹಾಡು, ಸುಗ್ಗಿಪದ, ಕಳೆ–ನಾಟಿ ಸಂದರ್ಭದ ಅಸಂಖ್ಯಾತ ಜನಪದ ಗೀತೆಗಳನ್ನು ಇವರು ಹಾಡಬಲ್ಲರು.

ಇವರು ಆಧುನಿಕ ಶಾಲಾ ವಿದ್ಯಾಭ್ಯಾಸವನ್ನು ಪಡೆದವರಲ್ಲ. ಸುತ್ತಲಿನ ಪರಿಸರ, ಸಮಾಜದ ಬಗ್ಗೆ ಅಪಾರ ಕಾಳಜಿಯುಳ್ಳ ಇವರು ಖ್ಯಾತ ಪರಿಸರ ಹೋರಾಟಗಾರ್ತಿ. ಪರಿಸರ ಹೋರಾಟಗಾರ್ತಿಯಾಗಿದ್ದ ಕುಸುಮಾ ಸೊರಬ ಅವರಿಂದ ಹೊಸ ಚಿಂತನೆಯನ್ನು ಪಡೆದವರು. ಅನಂತರ ಸಾಮಾಜಿಕ ಚಳವಳಿಗಳಲ್ಲಿಯೂ ತಮ್ಮನ್ನು ಗುರುತಿಸಿಕೊಂಡರು. ಹಾಲಕ್ಕಿ ಒಕ್ಕಲಿಗರ ಬಡತನ, ಆರ್ಥಿಕ ಅಸಮಾನತೆ, ನಿರಕ್ಷರತೆ ಹಾಗೂ ಮದ್ಯಪಾನ ಪಿಡುಗುಗಳ ಬಗ್ಗೆ ಇವರು ದನಿ ಎತ್ತಿದರು. ಅಂಕೋಲ, ಕಾರವಾರ, ಸಿರ್ಸಿ ಹಾಗೂ ಬೆಳಗಾಂವಿಗಳಲ್ಲಿ ಮದ್ಯಪಾನ ವಿರೋಧಿ ಚಳವಳಿಗಳ ಮುಂಚೂಣಿಯಲ್ಲಿ ಕೆಲಸ ಮಾಡಿದ ಇವರು ತಮ್ಮ ಊರು ಬಡಗೇರಿಯಲ್ಲಿ ಮದ್ಯಪಾನಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ.

ಹಾಲಕ್ಕಿ ಒಕ್ಕಲಿಗ ಸಮುದಾಯದ ಜನಪದ ಸಂಪತ್ತನ್ನು ಉಳಿಸುವ ದೃಷ್ಟಿಯಿಂದ ಬಡಗೇರಿಯಲ್ಲಿ ಸ್ವತಃ ಒಂದು ತರಬೇತಿ ಕೇಂದ್ರವನ್ನು ಇವರು ನಡೆಸುತ್ತಿದ್ದಾರೆ. ಕಾರ್ಲೆಕುಣಿತ, ಪುಗಡೆ, ಬಿದರಂಡೆ ಮುಂತಾದ ಹೆಣ್ಣುಮಕ್ಕಳ ಕಲೆಗಳಲ್ಲಿ ಇಲ್ಲಿ ತರಬೇತಿ ನೀಡಲಾಗುತ್ತಿದೆ. ಇವರ ಸೇವೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಕರ್ನಾಟಕ ಸರ್ಕಾರ ಇವರಿಗೆ ಜಾನಪದಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ (1999). **(ಎಸ್.ಬಿಎಚ್‌ವಿ.)**

**ಸುಖಾಡಿಯಾ, ಮೋಹನ ಲಾಲ್:** 1916– . ಕರ್ನಾಟಕದ ಮಾಜಿ ರಾಜ್ಯಪಾಲರು. ಹಿರಿಯ ರಾಜಕಾರಣಿ. ಸ್ವಾತಂತ್ರ್ಯ ಹೋರಾಟಗಾರರು.

ರಾಜಸ್ಥಾನದ ಉದಯಪುರದಲ್ಲಿ 1916ರಲ್ಲಿ ಜನಿಸಿದರು. ವಿದ್ಯಾರ್ಥಿ ಜೀವನ ಕಳೆಯುವಷ್ಟರಲ್ಲಿ ಇವರನ್ನು ಸ್ವಾತಂತ್ರ್ಯ ಹೋರಾಟ ಕೈಬೀಸಿ ಕರೆಯಿತು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಜವಾಬ್ದಾರಿ ಸರ್ಕಾರದಲ್ಲಿ ಮೇವಾಡ ರಾಜ್ಯದಲ್ಲಿ



ಸಚಿವರಾಗಿ ಕಾರ್ಯನಿರ್ವಹಿಸಿದರು. 1949ರಲ್ಲಿ ಅಸ್ತಿತ್ವಕ್ಕೆ ಬಂದ ರಾಜಸ್ಥಾನ ರಾಜ್ಯದಲ್ಲಿ ಸಚಿವರಾಗಿ ಪ್ರಭಾವಿ ವ್ಯಕ್ತಿಯಾಗಿ ಬೆಳೆದರು. ಅಲ್ಲಿನ ರಾಜಶಾಹೀ ವ್ಯಕ್ತಿಗಳ ನಡುವೆ ಸಾಮಾನ್ಯ ಜನರ ಪ್ರತಿನಿಧಿಯಾಗಿ ರೂಪುಗೊಂಡ ಇವರು ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಲೇ ಮುನ್ನಡೆದರು. ಐದು ವರ್ಷಗಳಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಕಂಡಿದ್ದ ಅಲ್ಲಿನ ಡೋಲಾಯಮಾನ ರಾಜಕೀಯದಲ್ಲಿ ಇವರು ಭರವಸೆಯ ಮುಖಂಡರಾಗಿ ಕಾಣಿಸಿಕೊಂಡರು. 1954ರಲ್ಲಿ ರಾಜಸ್ಥಾನದ ಮುಖ್ಯಮಂತ್ರಿಯಾದರು. ಅಲ್ಲಿಂದ ಮುಂದೆ ಸುಮಾರು ಹದಿನೇಳು ವರ್ಷಗಳ ಕಾಲ ಈ ಅಧಿಕಾರಸ್ಥಾನದಲ್ಲಿ ಮುಂದುವರಿದದ್ದು ಇವರ ಅಸಾಮಾನ್ಯ ಮುತ್ಸದ್ದಿತನಕ್ಕೆ ಸಾಕ್ಷಿ. 1967ರ ಚುನಾವಣೆಯಲ್ಲಿ ರಾಷ್ಟ್ರದ್ಯಂತ ಕಾಂಗ್ರೆಸ್ ವಿರೋಧಿ ಅಲೆ ಕಂಡುಬಂದಾಗಲೂ ಇವರು ಕಾಂಗ್ರೆಸ್ ಪಕ್ಷವನ್ನು ಸುರಕ್ಷಿತವಾಗಿ ದಡಮುಟ್ಟಿಸಿದರು.

ಇವರು ರಾಜಕೀಯವಾಗಿ ಅನೇಕ ಆರೋಪಗಳನ್ನೆದುರಿಸಬೇಕಾಗಿ ಬಂತು. ಆದರೆ ಇವರು ಶ್ರೀಸಾಮಾನ್ಯರ ಚಿಂತಕರಾಗಿ ಜನಾನುರಾಗಿಯಾಗಿದ್ದರು. 1969ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಇಬ್ಭಾಗವಾಗುವ ಅನಿವಾರ್ಯತೆಯನ್ನು ಎದುರಿಸಿದಾಗ ಇವರು ಅಂದಿನ ಪ್ರಧಾನಿ ಇಂದಿರಾಗಾಂಧಿಯವರ ಬೆಂಬಲಕ್ಕೆ ನಿಂತರು. 1971ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸುವಲ್ಲಿ ಸುಖಾಡಿಯ ಅವರ ಪಾತ್ರವೂ ಇತ್ತು. ಆದರೆ ರಾಜಕೀಯ ವಿದ್ಯಮಾನಗಳ ಪರಿಣಾಮವಾಗಿ ಇವರು ಮುಖ್ಯಮಂತ್ರಿ ಸ್ಥಾನ ತ್ಯಜಿಸ ಬೇಕಾಯಿತು. ಇವರು ಹಿರಿತನ ಹಾಗೂ ಪಕ್ಷಕ್ಕಾಗಿ, ರಾಜ್ಯಕ್ಕಾಗಿ ಸಲ್ಲಿಸಿದ ಸೇವೆಯನ್ನು ಗುರುತಿಸಿದ ಕಾಂಗ್ರೆಸ್ ಸರ್ಕಾರ ಇವರನ್ನು 1972ರಲ್ಲಿ ಕರ್ನಾಟಕದ ರಾಜ್ಯಪಾಲರಾಗಿ ನೇಮಿಸಿತು. ಡಿ. ದೇವರಾಜ ಅರಸು ಅವರ ಆಡಳಿತದಲ್ಲಿ (1972–76) ಇವರು ರಾಜ್ಯಪಾಲರಾಗಿದ್ದರು. ಇವರು ರಾಜಕೀಯ ಗರಡಿಯಲ್ಲೇ ತಯಾರಾಗಿದ್ದರೂ ರಾಜ್ಯಪಾಲ ಹುದ್ದೆಯ ಘನತೆ ಗೌರವಗಳನ್ನು ಎತ್ತಿಹಿಡಿಯುವಲ್ಲಿ ಸದಾ ಎಚ್ಚರ ವಹಿಸಿದರು. 1976ರಲ್ಲಿ ರಾಜ್ಯಪಾಲ ಹುದ್ದೆಯಿಂದ ನಿವೃತ್ತರಾದರು. ನಿವೃತ್ತಿಯ ಅನಂತರವೂ ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. *

**ಸುಗಟೂರು ಪಾಳೆಯಗಾರರು:** ಕೋಲಾರ ಜಿಲ್ಲೆಯ ಸುಗಟೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆ ಸುತ್ತಣ ಪ್ರದೇಶಗಳನ್ನು ಆಳಿದ ಒಂದು ಮಾಂಡಲಿಕ ಮನೆತನ. ಈ ಕುಲದ ಪಾಳೆಯಗಾರರಿಗೆ ತಮ್ಮೇಗೌಡ ಎಂಬ ಕುಲನಾಮವಿತ್ತು. ಮುಸಲ್ಮಾನರು ಪೆನುಕೊಂಡೆಯನ್ನು ಆಕ್ರಮಿಸಿದಾಗ, ತಮ್ಮೇಗೌಡ ಸಲ್ಲಿಸಿದ ಸಹಾಯಕ್ಕೆ ಕೃತಜ್ಞತಾರೂಪವಾಗಿ ಅವನಿಗೆ ಪೆನುಕೊಂಡೆಯ ಅರಸನು ಚಿಕ್ಕರಾಯ ಎಂಬ ಬಿರುದನ್ನು ದಯಪಾಲಿಸಿದನಂತೆ. ತಮ್ಮೇಗೌಡರು ತಮ್ಮ ಪ್ರಭೂಪ ಎಂಬವನ ಮಗನೆಂದೂ ಅವನು ಹುಟ್ಟುವಾಗಲೇ ಜಟಾಧಾರಿಯಾಗಿದ್ದನೆಂದೂ ಜಂಗಮನಾಗಿದ್ದನೆಂದೂ ಪ್ರತೀತಿ. ಆತ ಶಿವಪ್ರಸಾದದಿಂದ ಕುರುಡನೊಬ್ಬನಿಗೆ ದೃಷ್ಟಿಶಕ್ತಿ ನೀಡಿದನಂತೆ. ತಮ್ಮೇಗೌಡನ ಪತ್ನಿ ವೀರಮಾಂಬೆ. ಈ ದಂಪತಿಗಳ ಮಗ ಇಮ್ಮಡಿ ತಮ್ಮಭೂಪಾಲ. ಇವನೂ ಜಂಗಮಭಕ್ತ. ಇಮ್ಮಡಿ ತಮ್ಮ ಭೂಪಾಲನು ಭೀಮನದುರ್ಗವನ್ನು ಹಿಡಿದು ಕರ್ನಾಟಕದ ಒಬ್ಬ ರಾಜನ ಶತ್ರುಗಳನ್ನು ನಾಶಮಾಡಿದನಂತೆ. ಇದಕ್ಕೆ ಪ್ರತಿಯಾಗಿ ಕರ್ನಾಟಕ ರಾಜನಿಂದ ಸುವರ್ಣ ವೃಷಭಧ್ವಜವನ್ನು ಪಡೆದನಂತೆ (1632). ಇವನ ಪತ್ನಿ ವೆಂಕಟಾಂಬೆ, ಈ ದಂಪತಿಗಳ ಮಗನೇ ಮುಮ್ಮಡಿ ತಮ್ಮಭೂಪ.

ಹೊಸಕೋಟೆದುರ್ಗ ತಮ್ಮೇಗೌಡನಿಂದ 1595ರಲ್ಲಿ ನಿರ್ಮಿತವಾಯಿತು. ತಮ್ಮೇಗೌಡ ಇಲ್ಲಿ ಒಂದು ದೊಡ್ಡ ಕೆರೆಯನ್ನೂ ಎರಡು ಮೈಲಿ ಉದ್ದ ಕಟ್ಟೆಯನ್ನೂ ಕಟ್ಟಿಸಿದ. ಹಾಗೆಯೇ ಅಲ್ಲಿ ನೆಲಸಿದ ಈತ ಒಂದು ಸೈನ್ಯ ಸಜ್ಜುಗೊಳಿಸಿಕೊಂಡು ಆನೇಕಲ್ಲು, ಮುಳಬಾಗಲು, ಪುಂಗನೂರು ಪ್ರಾಂತ್ಯಗಳನ್ನು ಜಯಿಸಿ ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಈ ಕಾಲಕ್ಕೆ ಬಿಜಾಪುರದ ಚಿಕ್ಕಣ್ಣಸೆಟ್ಟಿ, ಕಳಸಣ್ಣಸೆಟ್ಟಿ ಎಂಬ ವ್ಯಾಪಾರಿಗಳಿಬ್ಬರು ಬಂದು ತಮ್ಮೇಗೌಡನಲ್ಲಿ ಆಶ್ರಯ ಬೇಡಿದರು. ತಮ್ಮೇಗೌಡನು ಚಿಕ್ಕಣ್ಣಸೆಟ್ಟಿಯನ್ನು ಕೋಲಾರಕ್ಕೂ ಕಳಸಣ್ಣ ಸೆಟ್ಟಿಯನ್ನು ಹೊಸಕೋಟೆಗೂ ಪಟ್ಟಣಸೆಟ್ಟಿಗಳನ್ನಾಗಿ ನೇಮಿಸಿದ. ತಮ್ಮೇಗೌಡ 1632ರ ವರೆಗೆ ಅಧಿಕಾರದಲ್ಲಿದ್ದ. ಇವನ ಉತ್ತರಾಧಿಕಾರಿ ಇಮ್ಮಡಿ ತಮ್ಮೇಗೌಡ. ಇವನಿಗೆ ಇಬ್ಬರು ಪುತ್ರರಿದ್ದರು. ಈತ ತನ್ನ ಮರಣಕಾಲಕ್ಕೆ ಪಾಳೆಯವನ್ನು ವಿಭಾಗಿಸಿ ಹೊಸಕೋಟೆಯನ್ನು ಒಬ್ಬನಿಗೂ (ಮುಮ್ಮಡಿ ತಮ್ಮೇಗೌಡ) ಕೋಲಾರವನ್ನು ಇನ್ನೊಬ್ಬನಿಗೂ ನೀಡಿದ.

ಮುಮ್ಮಡಿ ತಮ್ಮೇಗೌಡ ರಾಜ್ಯದಲ್ಲಿ ಬಹುಮುಖವಾದ ಪ್ರಗತಿಗೆ ಕಾರಣನಾದ, ಇವನ ಆಡಳಿತ ವ್ಯವಸ್ಥೆ ಸುಸ್ಥಿತಿಯಲ್ಲಿತ್ತು. ಇವನ ಕಾಲದಲ್ಲಿ ವಾಣಿಜ್ಯ, ಕೃಷಿ, ತೀವ್ರವಾಗಿ ಅಭಿವೃದ್ಧಿ ಹೊಂದಿದವು. ಮಹಮ್ಮದೀಯರಿಂದ ಹಲಬಗೆಯ ಉಪಟಳಕ್ಕೆ ಗುರಿಯಾಗಿ ಮನೆಮಾರು ಕಳೆದುಕೊಂಡು ನಿರ್ಗತಿಕರಾದ ಅಸಂಖ್ಯ ಹಿಂದು ಜನರಿಗೆ ಇವನು ಆಶ್ರಯ ನೀಡಿ ಕಾಪಾಡಿದ. ಈತ ವಿದ್ಯಾಪಕ್ಷಪಾತಿಯಾಗಿದ್ದ. ಕನ್ನಡ, ಸಂಸ್ಕೃತ, ತೆಲುಗು ಭಾಷೆಗಳಲ್ಲಿ ಉದ್ದಾಮ ಕವಿಯಾಗಿದ್ದ ಈತ ನಾಲ್ಕು ಸಾವಿರ ಷಟ್ಪದಿಗಳಿಂದ ಕೂಡಿದ ಶಂಕರವಿಜಯ ಎಂಬ ಕಾವ್ಯವನ್ನು ಕನ್ನಡದಲ್ಲಿ ರಚಿಸಿದ್ದಾನೆ. ರಸಿಕ ಮನೋರಂಜನಿ, ಕೌಮುದೀವ್ಯಾಖ್ಯಾನ ಎಂಬ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಈತ ರಚಿಸಿದ ಸೌಂದರೇಶ ಚರಿತ್ರಮು, ರಾಜೇಂದ್ರ ಚೋಳ ಚರಿತ್ರಮು, ಕುಮಾರಾರ್ಜುನೀಯ ಎಂಬ ಕೃತಿಗಳು ತೆಲುಗಿನಲ್ಲಿವೆ. ಇವುಗಳ ಜೊತೆಗೆ ಶಿವದರ್ಪಣ ಎಂಬ ಗ್ರಂಥವನ್ನು ವಿದ್ವಾಂಸರಿಂದ ಬರೆಯಿಸಿದ. ಇವನ ಬಳಿ ಅಮೂಲ್ಯ ಗ್ರಂಥಭಂಡಾರವಿತ್ತು. ಹೊಸಕೋಟೆಯಲ್ಲಿರುವ ದ್ರಾವಿಡ ಶೈಲಿಯ ಅವಿಮುಕ್ತೇಶ್ವರ ದೇವಾಲಯ ನಿರ್ಮಾಣವಾದದ್ದು ಇವನ ಕಾಲದಲ್ಲೇ.

ಕೆಲಕಾಲಾನಂತರ ಸುಗಟೂರು ಪಾಳೆಯಪಟ್ಟು ಬಿಜಾಪುರ ನವಾಬನ ಕೈವಶವಾಗಿ ಆಗ ಬಿಜಾಪುರದ ಮಾಂಡಲಿಕನಾಗಿ ಬೆಂಗಳೂರಲ್ಲಿ ನೆಲಸಿದ್ದ ಶಹಾಜಿಗೆ ಜಹಗೀರಿಯ ರೂಪದಲ್ಲಿ ಸೇರಿತು. 1663ರಲ್ಲಿ ಈ ಪ್ರಾಂತ್ಯಗಳು ಮುಗಲ್ ದಳಪತಿ ಖಾಸಿಂಖಾನನ ವಶವಾದುವು. ಅನಂತರ ಅವು ಶಿರಾ ಪ್ರಾಂತ್ಯದ ಭಾಗವಾದುವು. 1756ರಲ್ಲಿ ಹೊಸಕೋಟೆಯನ್ನು ಮೈಸೂರು ಸೇನೆಗಳು ಜಯಿಸಿದುವು. ಮರುವರ್ಷವೇ ಅದು ಮರಾಠರ ಕೈವಶವಾಯಿತು. ಹೊಸಕೋಟೆ ಹೀಗೆ ಹಲವಾರು ಬಾರಿ ಹಸ್ತಾಂತರವಾಗಿ, ಕೊನೆಗೆ ಹೈದರ್ ಅಲಿಯ ವಶಕ್ಕೆ ಬಂದು 1761ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸೇರ್ಪಡೆ ಹೊಂದಿತು. (ಎಂ.ಕೆ.ಬಿ.)

**ಸುಗಮ ಸಂಗೀತ:** ಭಾವ ಪ್ರಧಾನವಾದ ಸಂಗೀತ. ಮನೋಹರ ಗಾಯನ ವಿಧಾನದಿಂದಾಗಿ ಸುಗಮ ಸಂಗೀತವೆನಿಸಿದೆ. ಸೃಜನಶೀಲ ವ್ಯಕ್ತಿತ್ವದಿಂದ ಸೃಷ್ಟಿಯಾಗುವ ಸಂಗೀತ ಇದಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಲಲಿತಕಲೆಗಳಲ್ಲಿ ಸಂಗೀತ ಕಲೆಯೂ ಒಂದು. ಸಂಗೀತ ಕಲೆಯ ಮೂಲದ್ರವ್ಯ ನಾದ ಮತ್ತು ಲಯ. ಅದರ ಉತ್ಪತ್ತಿಯೇ ಹೇಳುವಂತೆ (ಸಮಗೀತ) ಮಧುರಗಾಯನವೆಂದು ಹೇಳಬಹುದು. ನಾದದ ಏರಿಳಿತಗಳಿಂದ, ತರಂಗಿತೆಗಳಿಂದ, ಲಯವಿನ್ಯಾಸದ ವಿಭಿನ್ನ ನಡೆಗಳಿಂದ ಮೇಳವಿಸಿದ ಸಂಗೀತ ಮಾಧುರ್ಯದ ರಸಪಾಕ. ಇದೊಂದು ಅಮೂರ್ತ ಕಲೆ. ಹಾಗಾಗಿ ಸಂಗೀತ ಕಲೆ ಪ್ರಪಂಚವ್ಯಾಪಕ. ಇದು ಇಡೀ ಜಗತ್ತಿನ ಒಂದು ಮಾಧುರ್ಯವನ್ನು ಒಳಗೊಂಡ ನಾದಮಯ ಭಾಷೆ. ಇಂಥ ಈ ಕಲೆ ಮಾನವನ ಹೃದಯದ ಭಾವೋದ್ವೇಗಗಳ ಭಾಷೆಯಾಗಿ ಅಂತರಂಗದಲ್ಲಿ ಹುದುಗಿರುವ ಭಾವತರಂಗಗಳನ್ನು ಇತರರಿಗೆ ಹೃದ್ಯವಾಗುವಂತೆ ಅವರ ಮನೋವೇದಿಕೆಯನ್ನು ತಲುಪುತ್ತದೆ. ಲಲಿತ ಕಲೆಗಳಲ್ಲಿ ಶ್ರೇಷ್ಠವಾದ ಸಂಗೀತ ಕಲೆ ಮಾನವನ ಮನೋವೇದಿಕೆಗೆ ತಲುಪಿ ಚೈತನ್ಯವನ್ನುಂಟುಮಾಡುತ್ತದೆ.

ಭಾರತದಲ್ಲಿ 'ಋಗ್ವೇದ'ದ ಸ್ತೋತ್ರ ಗಾನರೂಪದಲ್ಲಿ ಮೂಡಿಬಂದು, ಭರತಮುನಿಯ ಪ್ರತಿಭೆಯಿಂದ ಶಾಸ್ತ್ರೀಯ ರೂಪವನ್ನು ಪಡೆಯಿತು. ಋಷಿಮುನಿಗಳು ಮೋಕ್ಷ ಸಾಧನೆಗಾಗಿ ಸಂಗೀತದ ಆರಾಧನೆ ನಡೆಸಿದ್ದರು. ಆದರೆ ಸಾಮಾನ್ಯರು ದೇವರ ಪೂಜೆಯ ಜೊತೆಗೆ ಉಳಿದ ಪ್ರಸಂಗಗಳಲ್ಲಿಯೂ ಸಂಗೀತವನ್ನು ಬಳಸತೊಡಗಿದರು. ಮನರಂಜನೆಗಾಗಿ ಸಂಗೀತವನ್ನು ಬಳಸತೊಡಗಿದ ಮೇಲೆ ಹೊಸ ಹೊಸ ಸಂಗೀತ ಪ್ರಕಾರಗಳು ಕುಡಿಯೊಡೆದವು. ದಿನ ಕಳೆದಹಾಗೆ ಭಾರತ ದೇಶದ ಪ್ರತಿಯೊಂದು ಪ್ರಾಂತ್ಯದಲ್ಲೂ ಅಲ್ಲಿಯ ಜನರ ಅಭಿರುಚಿಯನ್ನನುಸರಿಸಿ ಬೇರೆ ಬೇರೆ ಸ್ವರೂಪದ ಸಂಗೀತ ಪ್ರಕಾರಗಳು ಆವಿರ್ಭವಿಸಿದವು. ಇದಕ್ಕೆ ಸಾಕ್ಷಿಯಾಗಿ ಭಾರತೀಯ ಸಂಗೀತ

ವನ್ನು ಗಮನಿಸಬಹುದು. ಜನಪದ ಸಂಗೀತವಲ್ಲದೆ ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ಕರ್ನಾಟಕ ಶೈಲಿಯ ಸಂಗೀತ ಪದ್ಧತಿ ಮಾತ್ರ ಭಾರತದಲ್ಲಿತ್ತು. ಆದರೆ ಕಾಲಕ್ರಮೇಣ ದೆಹಲಿಯಲ್ಲಿ ಮುಸಲ್ಮಾನರ ಆಳ್ವಿಕೆಯಿಂದ ಭಾರತದ ಸಂಗೀತದ ಮೇಲೆ ಪರ್ಷಿಯನ್ ಹಾಗೂ ಅರೇಬಿಯನ್ ಸಂಗೀತ ಪದ್ಧತಿಗಳ ಪ್ರಭಾವದಿಂದಾಗಿ, ಹಿಂದುಸ್ಥಾನಿ ಸಂಗೀತವೆಂಬ ಪ್ರಭೇದ ಅನಿವಾರ್ಯವಾಗಿ ರೂಪು ತಳೆಯಿತು. ಆ ಎರಡೂ ಪದ್ಧತಿಯಲ್ಲೂ ಹೊಸ ಹೊಸ ಟೊಂಗೆಗಳು ಮೂಡಿ ಅದರದೇ ಆದ ಸತ್ವದಿಂದ ಬೇರೂರಿತು. ಕರ್ನಾಟಕ ಶಾಸ್ತ್ರೀಯ ಸಂಗೀತದ ಹಲವಾರು ರೂಪರೇಷೆಗಳು ಪದ, ಜಾವಳಿ, ತಿಲ್ಲಾನ, ದೇವರನಾಮ ತರಂಗಗಳ ಜೊತೆಗೆ ಗಮಕ, ವಚನ, ನಾಟಕದ ಹಾಡುಗಳು, ಚಿತ್ರಗೀತೆಗಳು, ಭಾವಗೀತೆಗಳು ತನ್ನತನದ ಚೌಕಟ್ಟಿನಲ್ಲಿ ಜನಮನವನ್ನು ರಂಜಿಸತೊಡಗಿದವು. ಹಿಂದುಸ್ಥಾನಿ ಶಾಸ್ತ್ರೀಯ

ಅನೂರಾಧಾ ಧಾರೇಶ್ವರ್

ರತ್ನಮಾಲಾ ಪ್ರಕಾಶ್

ಬಿ.ಕೆ. ಸುಮಿತ್ರ



ಸಿ. ಅಶ್ವತ್ಥ್

ಸಂಗೀತ ಪದ್ಧತಿಯಲ್ಲಿಯೂ ಖ್ಯಾಲ್ ಜೊತೆಗೆ ಚೀಸ್, ಠುಮ್ರಿ, ಟಪ್ಪಾ, ತರಾನಗಳಲ್ಲದೆ ಕವ್ವಾಲಿ, ಗಜ಼ಲ್, ಲೋರಿಫ್, ಭಜನ್, ಸವಾಲ್–ಜವಾಬ್, ಮರಾಠಿಯ ಕೋಳಿಗೀತ್, ಬಂಗಾಲದ ರಬೀಂದ್ರ ಸಂಗೀತ್, ಶ್ಯಾಮಾ ಸಂಗೀತ್, ನಜ಼ರುಲ್‌ಗೀತ್ ಇತ್ಯಾದಿ ಶೈಲಿಗಳು ರೂಪುತಳೆದವು.

ಲಘುಸಂಗೀತ ಅಥವಾ ಸುಗಮ ಸಂಗೀತ ಎಂದು ಈಗ ನಾವು ಸಾಮಾನ್ಯವಾಗಿ ಕರೆಯುವುದು ಭಾವಗೀತೆಗಳ ಗಾಯನಕ್ಕೆ. ಆಧುನಿಕ ಕವನಗಳ ಹಾಡಿಕೆಯ ಕಾಲ ಪ್ರಾರಂಭವಾಗಿ ಇನ್ನೂ ಶತಮಾನ ಕೂಡ ಕಳೆದಿಲ್ಲ. ಇಂಥ ಈ ಕವನಗಳ ಗಾಯನವನ್ನು ಹಿಂದೆ ಲಘು ಸಂಗೀತ, ಲಲಿತ ಸಂಗೀತ, ಭಾವಗೀತ ಗಾಯನ ಎಂದು ಕರೆಯುತ್ತಿದ್ದು ಈಗ ಅದಕ್ಕೆ ಸುಗಮ ಸಂಗೀತ ಎಂಬ ಹೊಸ ನಾಮಕರಣವೇ ಆಗಿದೆ. ಗೀತರೂಪದಲ್ಲಿ ಪ್ರಕಟವಾಗುವ ಭಾವನಾತ್ಮಕ ಕವಿತೆಗಳ ವಿಶಿಷ್ಟ ಹಾಡುವಿಕೆಯೇ ಸುಗಮ ಸಂಗೀತ ಎನಿಸಿಕೊಳ್ಳುತ್ತದೆ. ಇವು ಮಾನವನ ಸುಪ್ತ ಭಾವನೆಗಳನ್ನು ಪ್ರತಿಬಿಂಬಿಸುವ ಕವನಗಳು.

ಕನ್ನಡ ಗೀತೆಗಳನ್ನು ಸುಗಮ ಸಂಗೀತ ಸಂಪ್ರದಾಯಕ್ಕೆ ಅಳವಡಿಸಿ ನಾಡಿನಾದ್ಯಂತ ಮೊದಲು ಪ್ರಸಾರ ಮಾಡಿದ ಕೀರ್ತಿ ಮುಂಬಯಿ ಆಕಾಶವಾಣಿ ಕೇಂದ್ರಕ್ಕೆ ಸಲ್ಲುತ್ತದೆ. ಸೀತಾ ಮುಲ್ಕಿಯವರು ಕನ್ನಡ ಭಾವಗೀತೆಗಳನ್ನು ಮರಾಠಿ ಗೀತೆಗಳ ಧಾಟಿಯಲ್ಲಿ ಸ್ವರ ಸಂಯೋಜಿಸಿ ಪ್ರಸಾರ ಮಾಡಿದರು. ಗಿಡಗಿಡದಲಿ ಹಾರಾಡುವ ಗಿಳಿಯೆ; ನುಡಿದಳು ಶಬರಿ ರಘುವರಗೆ; ಬೇಡಕೃಷ್ಣ – ಈ ಮೊದಲಾದ ಕವಿತೆಗಳು ಇವರ ಸಂಯೋಜನೆಯ ಜನಪ್ರಿಯ ಗೀತೆಗಳು. ಉತ್ತರ ಕರ್ನಾಟಕದಲ್ಲಿ 1926ರ ವೇಳೆಗೆ ಕವಿ ಬೇಂದ್ರೆಯವರು ಸ್ಥಾಪಿಸಿದ 'ಗೆಳೆಯರ ಗುಂಪು' ವಿಶೇಷವಾಗಿ ಭಾವಗೀತೆಗಳ ಗಾಯನ ಪ್ರಚಾರವಾಗುವಲ್ಲಿ ಕಾರಣವಾಯಿತು. ಬಾಳಪ್ಪ ಹುಕ್ಕೇರಿಯವರು ಕನ್ನಡ ಸುಗಮ ಸಂಗೀತದ ಆದ್ಯ ಗಾಯಕರೆನಿಸಿದ್ದಾರೆ. 30ರ ದಶಕದಲ್ಲಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಊರಿಂದೂರಿಗೆ ಪ್ರಯಾಣ ಕೈಗೊಂಡು ಕನ್ನಡ ಕವಿಗಳ ದೇಶಭಕ್ತಿ ಗೀತೆಗಳನ್ನು ಹಾಡಿ ಜನಜಾಗೃತಿಗೆ ಶ್ರಮಿಸಿದವರು. ಈ ಕಾಲದಲ್ಲಿಯೇ ಪಿ.ಆರ್. ಭಾಗವತ ಅವರು ಸುಗಮ ಸಂಗೀತ ಕಚೇರಿಗಳನ್ನು ನಡೆಸಿ ಹೆಚ್ಚು ಪ್ರಸಿದ್ಧರಾದರು. ಬೇಂದ್ರೆಯವರ ಕುಣಿಯೋಣು ಬಾರ, ಭೃಂಗದ ಬೆನ್ನೇರಿಬಂತು, ಆನಂದ ಕಂದರ ಚೆಲುವು ಹಿರಿಯದೋ ಮೊದಲಾದ ಗೀತೆಗಳನ್ನು ಜನಪ್ರಿಯಗೊಳಿಸಿದರು. ಉತ್ತರ ಕರ್ನಾಟಕದಲ್ಲಿ ಸುಗಮ ಸಂಗೀತದ ಹೊನಲನ್ನೇ ಹರಿಸಿದವರು ಜಯಂತಿದೇವಿ ಹಿರೇಬೇಟ್. ಭಾವಗೀತೆಗಳ ಮೊಟ್ಟಮೊದಲ ಧ್ವನಿಮುದ್ರಿಕೆಗೆ ಇವರೇ ಕಾರಣರು. ವಿಜಯಾ ದೇಸಾಯಿ, ಸುಶೀಲಾ ಟೇಂಬೆ, ಭೀಮಸೇನಜೋಷಿ, ಕೃಷ್ಣ ಹಾನಗಲ್, ಅಮೀರ್‌ಬಾಯಿ ಕರ್ನಾಟಕಿ, ಕಮಲಾಪಾಗೆ– ಇವರು ಭಾವಗೀತೆಗಳ ಹಣತೆಗಳನ್ನು ಬೆಳಗಿಸಿದವರಾದರೆ ದಕ್ಷಿಣ ಕರ್ನಾಟಕದಲ್ಲಿ ಬಾಪುರಾಮಣ್ಣ, ಎಚ್.ಆರ್. ರಂಗನಾಥ್, ಡಿ.ಟಿ. ಚಂದ್ರಶೇಖರ್, ಬಿ.ಜಿ. ರಾಮನಾಥ್, ಬಿ.ಎಸ್. ರಾಮಾಚಾರ್, ಪಿ. ಕಾಳಿಂಗರಾವ್, ಎಚ್.ಆರ್. ಲೀಲಾವತಿ ಭಾವಗೀತಾ ಪತಾಕೆಯನ್ನು ಹಾರಿಸಿದವರು. ಭಾವಗೀತ ಗಾಯನದ ಒಂದು ನವೀನ ಶೈಲಿಯ ಆವಿಷ್ಕಾರವಾಯಿತು. ಲಲಿತ ಪದಬಂಧವುಳ್ಳ, ಪ್ರಾಸಬದ್ಧವಾದ, ಸುಂದರ ಅರ್ಥವುಳ್ಳ ಚೆಂದದ ಭಾವಗೀತೆಗಳಿಗೆ ರಾಗಸಂಯೋಜನೆಯ ದೃಷ್ಟಿಯಿಂದಲೂ ವೈವಿಧ್ಯತೆ ಮೂಡಿತು. ಇಲ್ಲಿ ಕವನದ ಭಾವ ಮುಖ್ಯವೇ ಹೊರತು ಸಂಗೀತದ ಹೊರೆಯಲ್ಲ ಎಂದು ಅರ್ಥಮಾಡಿಕೊಂಡ ಕಲಾವಿದರು ಇದಕ್ಕೊಂದು ಹೊಸ ಆಯಾಮವನ್ನು ನೀಡುವಲ್ಲಿ ಯಶಸ್ವಿಯಾದರು. ಸಂಗೀತವನ್ನು ವಾಹಕವಾಗಿ ಮತ್ತು ವೈವಿಧ್ಯಪೂರ್ಣವಾಗಿ ಬಳಸಿದರು. ಇಲ್ಲಿ ಯಾವುದೇ ಒಂದು ರಾಗ ಆಧಾರವಾಗಿದ್ದರೂ ರಂಜನೆಯ ದೃಷ್ಟಿಯಿಂದ ಅದರಲ್ಲಿ ಅನ್ಯ ರಾಗ, ಸ್ವರಗಳ ಬಳಕೆಯೂ ಆರಂಭವಾಯಿತು. ಅನ್ಯಸ್ವರಗಳ ಬಳಕೆಯೇ ಹೆಚ್ಚಳಿಕೆ ಎಂದಲ್ಲ. ಆದರೆ ಶಾಸ್ತ್ರೀಯ ಸಂಗೀತದಲ್ಲಿ ತಪ್ಪೆನಿಸುವ ಇಂಥ ಈ ರಾಗಮಿಶ್ರಣಗಳು ಇಲ್ಲಿ ಮೆರುಗಿಗೆ ಕಾರಣವಾಯ್ತು. ಅಂದರೆ ಎಲ್ಲ ಕವನಗಳ ರಾಗ ಸಂಯೋಜನೆಯ ರಾಗಗಳೂ ಬೆರಕೆಯ ಸ್ವರಗಳ ಸೃಷ್ಟಿಯಲ್ಲ. ಆದರೆ ಅನ್ಯಸ್ವರಗಳು ಬಂದಾಗ ಇಲ್ಲಿ ಅಪವಾದವಾಗಲಿ, ಅಪರಾಧವಾಗಲೀ ಎನಿಸಲಿಲ್ಲ. ಈ ಶೈಲಿ ಹೆಚ್ಚು ಜನಪ್ರಿಯವಾಯಿತು. ಹಾಗಾಗಿ ಹಲವಾರು ಗೀತೆಗಳಿಗೆ ರಾಗವನ್ನು ನಿರ್ದಿಷ್ಟವಾಗಿ ಇಂಥವೇ ಎಂದು ಹೇಳಲಾಗದೆ, ಈ ರಾಗದ ಛಾಯೆ ಎಂದು ಮಾತ್ರ ಗುರುತಿಸಬಹುದಾಗಿರುತ್ತದೆ. ಕವನಗಳ ರಾಗ ಸಂಯೋಜನೆಯ ನಾವೀನ್ಯತೆಯ ಜೊತೆಗೆ ಹಿನ್ನೆಲೆ ವಾದ್ಯಗಳ ಬಳಕೆಯಲ್ಲಿ ವೈವಿಧ್ಯತೆ ಮೂಡಿತು. ನುಡಿಗೂ ಪಲ್ಲವಿಯಾಗಿ ಹೊಂದುವಂಥ ಸ್ವರ ಸಂಯೋಜನೆಯ ಜಾಲ ಮೋಹಕವಾಗಿ ವಾದ್ಯಗಳಲ್ಲಿ ನುಡಿಯಿತು. ವಾದ್ಯಗಳ ಪರಿಮಿತಿಯನ್ನರಿತು, ಹಾಡಿನ ಭಾವವನ್ನರಿತು ಹಿನ್ನೆಲೆ ವಾದ್ಯಗಳಿಗೆ ಸ್ವರ ಪಂಕ್ತಿಗಳನ್ನು ಹಂಚಿ ನುಡಿಸುವ ಪ್ರಯೋಗವೂ ಬಳಕೆಗೆ ಬಂತು. ಇಂತಹ ಪ್ರಯೋಗಗಳನ್ನು ಜನತೆಯ ಹತ್ತಿರಕ್ಕೆ

ಒಯ್ಯುವಲ್ಲಿ ಆಕಾಶವಾಣಿಯ ಕೊಡುಗೆ ಮಹತ್ವದ್ದು. ಮೈಸೂರು ಆಕಾಶವಾಣಿಯ ಮೂಲಕ ಕನ್ನಡ ಕವಿತೆಗಳ ಗಾಯನಕ್ಕೆ ಪರಿಶ್ರಮಿಸಿದವರು ಪದ್ಮಚರಣ್. ಇವರ ನಿರ್ದೇಶನದಲ್ಲಿ ಎಚ್.ಆರ್. ಲೀಲಾವತಿಯವರು ಬಹಳಷ್ಟು ಗೀತೆಗಳನ್ನು ಹಾಡಿದ್ದಾರೆ. ಮುಂದೆ ಇವರು ಸಂಗೀತ ನಿರ್ದೇಶಕಿಯಾಗಿಯೂ ರೂಪುಗೊಂಡರು. 70–80ರ ದಶಕದಲ್ಲಿ ಬೆಂಗಳೂರು ಆಕಾಶವಾಣಿಯಲ್ಲಿ ಸುಗಮ ಸಂಗೀತಕ್ಕೆ ಒಂದು ವಿಶೇಷ ಸ್ಥಾನ ಕಲ್ಪಿಸಿದವರು ಎಚ್.ಕೆ. ನಾರಾಯಣ್. ಎಲ್ಲ ಕವಿಗಳ ಕವಿತೆಗಳಿಗೂ ರಾಗ ಸಂಯೋಜಿಸಿ ಬಹಳಷ್ಟು ಕಲಾವಿದರು ಅವುಗಳನ್ನು ಹಾಡುವಂತೆ ಮಾಡಿದರು.

ಹಾಡಿನ ಮೂಲಕ ಕನ್ನಡ ಕವಿತೆಗಳ ಪ್ರಚಾರವನ್ನು ಗಣನೀಯವಾಗಿ ಮಾಡಿರುವ ಕಲಾವಿದರಲ್ಲಿ ಮೈಸೂರು ಅನಂತಸ್ವಾಮಿಯವರು ಮುಖ್ಯರು. 1956ರ ಸುಮಾರಿನಲ್ಲಿ ಈ ಕ್ಷೇತ್ರಕ್ಕೆ ಇವರು ಪಾದಾರ್ಪಣೆ ಮಾಡಿದರು. ಇವರ ಮಾರ್ಗದರ್ಶನದಲ್ಲಿಯೂ ಬಹಳಷ್ಟು ಕಲಾವಿದರು ಬೆಳಕು ಕಂಡಿದ್ದಾರೆ. ಇದೇ ರೀತಿಯಲ್ಲಿ ರಾಗ ಸಂಯೋಜಕರಾಗಿ, ಕಲಾವಿದರಾಗಿ ಪ್ರಸಿದ್ಧಿ ಪಡೆದವರು ಸಿ. ಅಶ್ವತ್, ಕಾಳಿಂಗರಾವ್ ಹಾಗೂ ಲೀಲಾವತಿಯವರು.

ಕನ್ನಡ ಭಾವಗೀತೆಗಳು ಮನೆಮನೆ ತಲುಪುವಲ್ಲಿ, ಹೊರನಾಡು, ಹೊರದೇಶಗಳಿಗೆ ತಲುಪುವಲ್ಲಿ ಧ್ವನಿಸುರುಳಿಗಳ ಪಾತ್ರ ವಿಶೇಷವಾಗಿದೆ. ಇಂತಹ ಧ್ವನಿಸುರುಳಿಗಳನ್ನು ನಿರ್ಮಿಸುವಲ್ಲಿ ಹಲವಾರು ಕಲಾವಿದರು ಹಾಗೂ ಸಂಗೀತ ಸಂಸ್ಥೆಗಳು ಶ್ರಮಿಸಿವೆ. ಇವುಗಳಲ್ಲಿ ಲಹರಿ, ಐ.ಬಿ.ಎಚ್, ಸಿ.ಬಿ.ಎಸ್, ಎಚ್.ಎಂ.ವಿ, ಪುರಂದರ ಪ್ರತಿಷ್ಠಾನ ಮೊದಲಾದ ಕ್ಯಾಸೆಟ್ ತಯಾರಿಕಾ ಸಂಸ್ಥೆಗಳು ಗಮನಾರ್ಹ. ರತ್ನನ ಪದಗಳು, ನಿತ್ಯೋತ್ಸವ, ಭಾವಸಂಗಮ, ನಾಕುತಂತಿ, ಹೇಳತೇನ ಕೇಳ ಮೊದಲಾದ ಪ್ರಸಿದ್ಧ ಕ್ಯಾಸೆಟ್‌ಗಳು ಅನಂತಸ್ವಾಮಿಯವರ ನಿರ್ದೇಶನದಲ್ಲಿ ಹೊರಬಂದಿವೆ. ಪದ್ಮಚರಣ್ ಅವರ ನವೋದಯ ಕ್ಯಾಸೆಟ್; ಎಚ್.ಕೆ. ನಾರಾಯಣ ಅವರ ಬಾರೋ ವಸಂತ ಕ್ಯಾಸೆಟ್; ಸಿ. ಅಶ್ವತ್ಥ್ ಅವರ ಮೈಸೂರು ಮಲ್ಲಿಗೆ, ಕನ್ನಡವೇ ಸತ್ಯ ಕ್ಯಾಸೆಟ್‌ಗಳು, ಶಿವಮೊಗ್ಗ ಸುಬ್ಬಣ್ಣ ಅವರ ಕುವೆಂಪು ಗೀತೆಗಳು ಮೊದಲಾದ ಧ್ವನಿಸುರುಳಿಗಳು ಅತ್ಯಂತ ಜನಪ್ರಿಯವಾಗಿವೆ. ಈ ರೀತಿಯ ಗಾಯನದಿಂದಾಗಿ ಕನ್ನಡದ ಹಲವಾರು ಕವಿಗಳ ಹಲವಾರು ಕವನಗಳು ಜನರ ಮನಸ್ಸಿನಲ್ಲಿ ಉಳಿಯುವಂತಾಗಿದೆ.

ಸಾಹಿತ್ಯಕ, ಸಾಂಸ್ಕೃತಿಕ ಸಭೆ ಸಮಾರಂಭಗಳು, ಗಣೇಶೋತ್ಸವ, ರಾಮೋತ್ಸವ, ಸಂಗೀತ ಕಛೇರಿಗಳಲ್ಲೂ ಭಾವಗೀತೆ ಸ್ಥಾನವನ್ನು ಪಡೆಯಿತು. ಪಿ. ಕಾಳಿಂಗರಾಯರು, ಮೈಸೂರು ಅನಂತಸ್ವಾಮಿಯವರು ಹಾಕಿಕೊಟ್ಟ ಹಾದಿಯಲ್ಲಿ ಅನೇಕರು ಸುಗಮ ಸಂಗೀತ ಕಚೇರಿಗಳನ್ನು ನೀಡುತ್ತಿದ್ದಾರೆ. ಶಿವಮೊಗ್ಗ ಸುಬ್ಬಣ್ಣ, ರತ್ನಮಾಲಾ ಪ್ರಕಾಶ್, ಮಾಲತಿ ಶರ್ಮ, ಅನೂರಾಧಾ ಧಾರೇಶ್ವರ್, ಈಶ್ವರಪ್ಪ ಜಿ. ಮಿಣಜಿಗಿ, ನಾರಾಯಣರಾವ್ ಮಾನೆ, ಪುತ್ತೂರು ನರಸಿಂಹನಾಯಕ, ನಗರ ಶ್ರೀನಿವಾಸ ಉಡುಪ, ಎಂ.ಕೆ. ಜಯಶ್ರೀ, ಉಷಾಗಣೇಶ್ ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ಆರಂಭದ ದಿನಗಳಲ್ಲಿ ಔಚಿತ್ಯಪೂರ್ಣವಾಗಿದ್ದ ಹಿನ್ನೆಲೆ ಸಂಗೀತ ಇತ್ತೀಚಿನ ವರ್ಷಗಳಲ್ಲಿ ಎಲೆಕ್ಟ್ರಾನಿಕ್ ವಾದ್ಯಗಳು ಹಾಗೂ ಹತ್ತಾರು ಲಯವಾದ್ಯಗಳನ್ನು ಬಳಸತೊಡಗಿದ್ದರಿಂದ ಭಾವಗೀತೆಯ ಮುಖ್ಯ ಸತ್ತ್ವವಾದ ಸಾಹಿತ್ಯ ಭಾಗದ ಪ್ರಾಮುಖ್ಯತೆ ಗೌಣವಾಗುತ್ತಿದೆ ಎಂಬ ಭಾವನೆಯೂ ಮೂಡಿದೆ.

ಭಾವಗೀತ ಗಾಯನ ತನ್ನ ಯಶಸ್ಸಿನಿಂದ ಕ್ಯಾಸೆಟ್ ವಲಯವನ್ನೂ ಸಿ.ಡಿ. ವಲಯವನ್ನೂ ವ್ಯಾಪಿಸಿದೆ. ನಿಸಾರ್ ಅಹಮದ್‌ರವರ ನಿತ್ಯೋತ್ಸವ ಅನಂತಸ್ವಾಮಿಯವರ ಸಂಗೀತ ನಿರ್ದೇಶನದಲ್ಲಿ ದಾಖಲೆಯನ್ನೇ ಸ್ಥಾಪಿಸಿದ ಮೊಟ್ಟಮೊದಲ ಕ್ಯಾಸೆಟ್. ಅನಂತರ ಕ್ಯಾಸೆಟ್ ಯುಗವೇ ಪ್ರಾರಂಭವಾಯಿತು. ಅಸಂಖ್ಯಾತ ಕ್ಯಾಸೆಟ್‌ಗಳು ಮಾರುಕಟ್ಟೆಗೆ ಬಂದವು. ಕಾಲಕ್ರಮದಲ್ಲಿ ಕ್ಯಾಸೆಟ್‌ಗಳೂ ಕೂಡ ಗುಣಮಟ್ಟವನ್ನೂ ಬೇಡಿಕೆಯನ್ನೂ ಕಳೆದುಕೊಳ್ಳುತ್ತಿರುವುದು ಕಂಡುಬರುತ್ತಿದೆ. ಸಧ್ಯದಲ್ಲಿ ಕ್ಯಾಸೆಟ್ ಯುಗದ ಕಾಲವೂ ಮುಗಿದು ಸಿ.ಡಿ. ಮತ್ತು ಡಿ.ವಿ.ಡಿ. ಯುಗ ಪ್ರಾರಂಭವಾಗಿದೆ. ಇದು ಸುಗಮ ಸಂಗೀತದ ಜನಪ್ರಿಯತೆಯ ಮತ್ತೊಂದು ಮಜಲಾಗಿದೆ.

(ಎಚ್.ಆರ್.ಎಲ್.)

**ಸುಗ್ಗಲೆ:** ಚಾಳುಕ್ಯ ಜಗದೇಕಮಲ್ಲ ಎರಡನೆಯ ಜಯಸಿಂಹನ (ಸು.1015–44) ಪಟ್ಟದರಸಿ. ಈಕೆ ಮೊದಲು ಶೈವಳಾಗಿದ್ದು ಅನಂತರ ದೇವರ ದಾಸಿಮಯ್ಯನಿಂದ ವೀರಶೈವ ದೀಕ್ಷೆಯನ್ನು ಸ್ವೀಕರಿಸಿದಳೆಂಬುದು ಸಾಹಿತ್ಯಕೃತಿಗಳಲ್ಲಿನ ಹೇಳಿಕೆ. ವೀರಶೈವ ಕವಿಗಳು ಮತ್ತು ಪುರಾಣಕರ್ತೃಗಳು ಈಕೆಯನ್ನು ಭಕ್ತಿಯಿಂದ ಸ್ಮರಿಸಿದ್ದಾರೆ. ಅನೇಕ ಶಾಸನಕವಿಗಳು, ಕವಿಗಳು ಈಕೆಯನ್ನು ಹೊಗಳಿದ್ದಾರೆ. ದೇವೂರು (1029), ಕೆರೆಸಂತೆ (1182) ಮತ್ತು ಬೇಲೂರಿನ (1220) ಶಾಸನಗಳು ಈಕೆಯನ್ನು ಮುಕ್ತಕಂಠದಿಂದ ಹೊಗಳಿವೆ. ಪಾಶುಪತಯೋಗಾಚಾರ್ಯ ಬ್ರಹ್ಮರಾಶಿ ಪಂಡಿತರಿಗೆ ದತ್ತಿಬಿಟ್ಟ ವಿವರಣೆಯಿರುವ ದೇವೂರು ಶಾಸನ ಈಕೆಯನ್ನು ದ್ವಿತೀಯಲಕ್ಷ್ಮಿ, ವಿಶಿಷ್ಟಜನಕಾಮಧೇನು, ಆಶ್ರಿತಜನಕಲ್ಪಲತೆ, ರೂಪವಿದ್ಯಾಧರಿ, ಕಲಿಕಾಲ ಸರಸ್ವತಿ, ಶ್ರೀಮಜ್ಜಗದೇಕಮಲ್ಲದೇವರ ವಿಶಾಲ ವಕ್ಷಸ್ಥಳ ನಿವಾಸಿನಿ ಶ್ರೀಮತ್ಸುಗ್ಗಲದೇವಿ ಎಂದು ಹೊಗಳಿವೆ. ಕೆರೆಸಂತೆಯ ಶಾಸನ ಕವಿಯು ಸುಗ್ಗಲದೇವಿ, ಶಾಂತಲದೇವಿ (ವಿಷ್ಣುವರ್ಧನನ ರಾಣಿ), ಕೇತಲದೇವಿ (ಬಲ್ಲಾಳನ ರಾಣಿ) ಈ ಮೂವರು ಭಾಗ್ಯವಂತೆಯರು, ಘನತೆವೆತ್ತವರು ಎಂದು ವರ್ಣಿಸಿದ್ದಾನೆ. ಹೊಯ್ಸಳ ದಂಡನಾಯಕ ಕುವರಲಕ್ಷ್ಮನ ಹೆಂಡತಿ ಸುಗ್ಗಲೆಯು ಜಯಸಿಂಹನ ರಾಣಿ ಸುಗ್ಗಲೆಗೆ ಸಮಾನಳು ಎಂದು ಬೇಲೂರಿನ ಶಾಸನ ಬಣ್ಣಿಸಿದೆ. ಅತ್ತಿಮಬ್ಬೆಯ ತರುವಾಯ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಸುಗ್ಗಲೆಯ ಹೆಸರು ಪ್ರಖ್ಯಾತವಾದುದು. (ಎಸ್.ಆರ್.ಎ.)

**ಸುಗ್ಗಿಯ ಕುಣಿತ:** ಜನಪದ ಲೌಕಿಕ ನೃತ್ಯ. ಸುಗ್ಗಿಯ ಕಾಲದಲ್ಲಿ, (ರೈತರು ಹುಲ್ಲು ಒಕ್ಕುವ ಕೆಲಸ ಮುಗಿಸಿ ಮುಂದಿನ ಬಿತ್ತನೆ ಕೆಲಸಕ್ಕಾಗಿ ಕಾಯುವ ನಡುವಿನ ಕಾಲ) ಅಂದರೆ, ಸುಮಾರು ಫೆಬ್ರವರಿ–ಮಾರ್ಚ್ ತಿಂಗಳಿನ ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಈ ನೃತ್ಯದ ಉದ್ದೇಶ ಕೇವಲ ಮನರಂಜನೆ.

ಸುಗ್ಗಿಯ ಕುಣಿತ ಒಂದು ಸಾಮೂಹಿಕ ನೃತ್ಯ. ಇದನ್ನು ಕೆಲವು ಕಡೆ ರಂಗದ ಕುಣಿತ, ಮಾರಿ ಕುಣಿತ ಎಂದೂ ಕರೆಯುತ್ತಾರೆ. ಕುಣಿಯಲು ಸಮತಟ್ಟಾದ ಬಯಲು ಪ್ರದೇಶವನ್ನು ರಂಗಸ್ಥಳವಾಗಿ ಆರಿಸಿಕೊಳ್ಳುತ್ತಾರೆ. ಇದಕ್ಕೆ ಸಮೀಪದಲ್ಲೇ ತಿಮ್ಮಪ್ಪಗುಡಿ, ಇಲ್ಲವೆ ಮಾರಿಗುಡಿ ಇರುತ್ತದೆ.

ಸಾಮಾನ್ಯವಾಗಿ ನೃತ್ಯ ಆರಂಭವಾಗುವುದು ರಾತ್ರಿ ಊಟದ ಅನಂತರ. ನೃತ್ಯದ ಆರಂಭಕ್ಕೆ ಮುನ್ನ ತಮಟೆ ವಾದ್ಯಗಾರ ನೆಲ್ಲು ಹುಲ್ಲಿನಿಂದ ತಮಟೆ ಕಾಯಿಸಿ ಊರಿಗೆಲ್ಲ ಕೇಳುವಂತೆ ಜೋರಾಗಿ ಬಡಿಯುತ್ತಾನೆ. ಈ ಶಬ್ದ ಕೇಳಿದೊಡನೆ ನೃತ್ಯದಲ್ಲಿ ಭಾಗವಹಿಸುವ ಕಲಾವಿದರು ಗೆಜ್ಜೆ ಸರದೊಡನೆ ರಂಗಸ್ಥಳಕ್ಕೆ ಬರುತ್ತಾರೆ. ಅಲ್ಲಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನೃತ್ಯಕ್ಕೆ ಅಣಿಯಾಗುತ್ತಾರೆ.

ಸುಗ್ಗಿ ಕುಣಿತದಲ್ಲಿ ತಮಟೆ ವಾದ್ಯಗಾರನ ಪಾತ್ರ ಅತಿ ಮುಖ್ಯವಾದುದು. ಈತ ನಾನಾ ಗತ್ತಿನಲ್ಲಿ ತಮಟೆ ಬಾರಿಸುತ್ತಿರುವಂತೆ, ಅದಕ್ಕೆ ಹೊಂದಿಕೊಂಡಂತೆ ಕಲಾವಿದರು ಕುಣಿತ ಆರಂಭಿಸುತ್ತಾರೆ. ಸುಗ್ಗಿ ಕುಣಿತದ ಪ್ರಮುಖ ವ್ಯಕ್ತಿಯೊಬ್ಬ ಹೆದ್ದನಿಯಲ್ಲಿ ಸೈಯೋ ಸೈ ಎಂದು ಕೇಕೆ ಹೊಡೆಯುತ್ತಿರುತ್ತಾನೆ. ಇದಕ್ಕೆ ಕೆಲವರು ದನಿಗೂಡಿಸುತ್ತ ಕುಣಿಯುತ್ತಾರೆ. ಅನೇಕ ಬಗೆಯ ಕುಣಿತ ಸುಮಾರು ಸರಿಹೊತ್ತಿನ ತನಕ ಸಾಗುತ್ತದೆ. ಕೊನೆಯಲ್ಲಿ ತಮಟೆ ವಾದ್ಯಗಾರನ ಬಡಿತದ ಸೂಚನೆಯೊಂದಿಗೆ ನೃತ್ಯ ಕೊನೆಗೊಳ್ಳುತ್ತದೆ. ನೃತ್ಯದಲ್ಲಿ ಪರಿಣಿತ ಕುಣಿತಗಾರರ ಜೊತೆಗೆ, ಕಲಿಕೆಯಲ್ಲಿ ಇರುವವರೂ ಭಾಗವಹಿಸುವುದುಂಟು.

ಸುಗ್ಗಿಯ ಕುಣಿತ ಒಂದೊಂದು ಗ್ರಾಮದಲ್ಲಿ ಆ ಗ್ರಾಮದ ಪದ್ಧತಿಗನುಸಾರವಾಗಿ ನಡೆಯುತ್ತದೆ. ಕುಣಿತದ ಕೊನೆಯ ದಿನವನ್ನು ಬೆಳಗ್ಗುಣಿತವೆಂದು ಆಚರಿಸುತ್ತಾರೆ. ಅಂದು ಇಡೀ ರಾತ್ರಿ ಕುಣಿತ ನಡೆಯುತ್ತದೆ. ಒಮ್ಮೊಮ್ಮೆ ನೆರೆಗ್ರಾಮದ ಕುಣಿತದವರೂ ಇದಕ್ಕೆ ಬಂದು ಸೇರುತ್ತಾರೆ. ಆಗ ಒಂದು ಗ್ರಾಮದವರ ಕುಣಿತ ಮುಗಿದ ಮೇಲೆ ಮತ್ತೊಂದು ಗ್ರಾಮದವರ ಕುಣಿತ ಪ್ರಾರಂಭವಾಗುತ್ತದೆ. ರಾತ್ರಿಯ ಕುಣಿತ ಮುಗಿದ ಮಾರನೆಯ ದಿನ ಬೆಳಗ್ಗೆ ಗ್ರಾಮದ ಯುವತಿಯರು ಧೂಪಾರತಿಗಳೊಂದಿಗೆ ರಂಗಕ್ಕೆ ಬಂದು ರಂಗದ ಸುತ್ತಲೂ ಪ್ರದಕ್ಷಿಣೆ ಹಾಕಿ ರಂಗವನ್ನು ಪೂಜಿಸುತ್ತಾರೆ. ಅನಂತರ ಗ್ರಾಮದ ಹೆಬ್ಬಾಗಿಲಿಗೆ ಬರುತ್ತಾರೆ. ಇವರ ಹಿಂದೆ ವೀರಕಥೆ ಹಾಡುವವರೂ ಊರ ಯಜಮಾನರೂ ಕುಣಿತದವರೂ ಊರ ಜನರೂ ಇರುತ್ತಾರೆ. ತಮಟೆ ವಾದ್ಯಗಾರ ಗುಂಪಿನ ಮುಂದಿರುತ್ತಾನೆ. ವೀರಕಥೆಯನ್ನು ನಡುನಡುವೆ ನಿಲ್ಲಿಸಿ ಹಾಡುತ್ತಾರೆ. ಹಾಡು

ನಿಂತಾಗ ಕುಣಿತ ಶುರುವಾಗುತ್ತದೆ; ಮೆರವಣಿಗೆ ಸಾಗುತ್ತದೆ. ವೀರಕಥೆಯ ಹಾಡು ಮುಗಿಯುವಷ್ಟರಲ್ಲಿ ಆ ಊರಿನ ವೀರಗಲ್ಲಿನ ಬಳಿ ಬರುತ್ತಾರೆ. ತಂಡದಲ್ಲಿ ಮೊದಲು ಯಾರು ವೀರಗಲ್ಲಿಗೆ ವಂದಿಸುತ್ತಾನೋ ಅವನೇ ಆ ವರ್ಷದ ವೀರನೆಂದು ಸಾರಲಾಗುತ್ತದೆ.

ಕೊಡಗು ಜಿಲ್ಲೆಯ ಗಿರಿಜನ ವರ್ಗಕ್ಕೆ ಸೇರಿದ ಎರವರಲ್ಲೂ ಸುಗ್ಗಿ ಕುಣಿತವಿದೆ. ಇದನ್ನು ಅವರು ಎರಕದ ಕುಣಿತ ಎನ್ನುತ್ತಾರೆ. ಅವರ ಈ ಕುಣಿತಕ್ಕೆ ಯಾವ ಜಾಗವಾದರೂ ಸರಿಯೆ ಸುಗ್ಗಿಯ ಕಾಲದಲ್ಲಿ ರಾತ್ರಿಯ ವೇಳೆ ಬೆಂಕಿಯನ್ನು ಹಾಕಿಕೊಂಡು ಅದರ ಸುತ್ತಲೂ ಹಿರಿಕಿರಿಯರೆನ್ನದೆ, ಗಂಡು ಹೆಣ್ಣೆನ್ನದೆ ಎಲ್ಲರೂ ಕುಣಿತದಲ್ಲಿ ಸೇರುತ್ತಾರೆ. ಕುಣಿತದ ಹಿನ್ನೆಲೆಗೆ ದುಡಿ ಮತ್ತು ಚೀನಿ ವಾದ್ಯಗಳನ್ನು ಬಳಸಲಾಗುತ್ತದೆ. ಈ ರೀತಿಯ ಕುಣಿತ ಜೇನುಕುರುಬರಲ್ಲೂ ಕಾಡುಕುರುಬರಲ್ಲೂ ಸೋಲಿಗರಲ್ಲೂ ಕಾಣಬರುತ್ತದೆ. ಇಲ್ಲಿ ಇವರು ಸೋರೆಬುರುಡೆಯ ಮದ್ಯವನ್ನು ಕುಣಿತದ ಹಿನ್ನೆಲೆಗೆ ಬಳಸುತ್ತಾರೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಹಾಲಕ್ಕಿ ಒಕ್ಕಲಿಗರಲ್ಲೂ ಸುಗ್ಗಿಯ ಕುಣಿತ ರೂಢಿಯಲ್ಲಿದೆ. ಇವರ ಸುಗ್ಗಿ ಕುಣಿತದಲ್ಲಿ ಆರಂಭದ ದಿನ ಕುಣಿತದ ಯಜಮಾನನು (ಗುನಗ) ಪ್ರತಿ ಕುಣಿತದವನಿಗೂ ಕರಿಅಕ್ಕಿ ಮಂತ್ರಿಸಿ ಕೊಡುತ್ತಾನೆ. ಹಾಗೆ ಪಡೆದ ಕರಿಅಕ್ಕಿಯನ್ನು ತಮ್ಮ ತಮ್ಮ ಸೊಂಟದ ಬಟ್ಟೆಗೆ ಸೇರಿಸುತ್ತಾರೆ. ಕರಿಅಕ್ಕಿ ಹಿಡಿಯದ ಕುಣಿತಗಾರರು ಬಿಳಿಅಕ್ಕಿ ಹಿಡಿದಿರುತ್ತಾರೆ. ಎಲ್ಲರೂ ಕರಿಕಣಕ್ಕೆ ಬರುತ್ತಾರೆ. ಮೂರು ಕಡೆಯೂ ಮರೆಮಾಡಿದ ಆರೇಳು ಅಡಿ ಎತ್ತರದ ಚೌಕದ ಚಪ್ಪರವೇ ಕರಿಕಣ. ಇದರ ನಡುವೆ ಒಂದು ಕಂಬವಿರುತ್ತದೆ. ಇದೇ ಸುರಗಿ ಕಂಬ, ಇದಕ್ಕೆ ಹಲವು ಕೊಂಬೆಗಳಿರುತ್ತವೆ. ಈ ಕೊಂಬೆಗಳಿಗೆ ಕುಣಿತದ ತಂಡದವರು ತಮ್ಮ ತಮ್ಮ ಗೆಜ್ಜೆ, ಕುಂಚ, ಜಾಗಟೆ, ತಾಳ, ಕೋಲುಗಳನ್ನು ನೇತು ಹಾಕುತ್ತಾರೆ. ಯಜಮಾನನ ಸೂಚನೆಯ ಮೇರೆಗೆ ಕುಣಿತದವರು ಕಾಲಿಗೆ ಗೆಜ್ಜೆಕಟ್ಟಿ, ಪೈಜಾಮದಂಥ ದೋತರ ಉಟ್ಟು, ನಿಲುವಂಗಿಯ ಮೇಲೆ ಕೆಂಪು ಜಾಕೀಟು ತೊಟ್ಟು, ಸೊಂಟಕ್ಕೆ ಶಲ್ಯ ಬಿಗಿದು, ಕೊರಳಲ್ಲಿ ಹೂಮಾಲೆ ಧರಿಸಿ, ತಲೆಯಲ್ಲಿ ಪೇಟ ಕಟ್ಟಿ ಕುಣಿತಕ್ಕೆ ಸಿದ್ಧರಾಗುತ್ತಾರೆ. ಕುಣಿತದೊಡನೆ ಯಜಮಾನ ಹೇಳಿಕೊಟ್ಟ ಹಾಡಿಗೆ ದನಿಗೂಡಿಸುತ್ತಾರೆ. ಕೆಲವು ಕಡೆ ಇವರ ಸುಗ್ಗಿಯ ಕುಣಿತದಲ್ಲಿ ತಂಡದ ರಕ್ಷಕನಂತೆ ಕೈಲಿ ಖಡ್ಗ ಹಿಡಿದ ಕರಡಿ ವೇಷಧಾರಿ ಮುಂಭಾಗದಲ್ಲಿರುತ್ತಾನೆ.

ಹಾಲಕ್ಕಿಗೌಡರ ಸುಗ್ಗಿ ಕುಣಿತದಲ್ಲಿ ಕುಣಿತದ ಹಿನ್ನೆಲೆಗೆ ಹೆದ್ದುಂಬೆ ಕೋಲು ಎಂಬ ವಾದ್ಯವನ್ನು ಬಳಸುತ್ತಾರೆ. ಗುಮ್ಮಟೆ ಇವರ ಸುಗ್ಗಿ ಕುಣಿತದ ಮುಖ್ಯ ವಾದ್ಯ. ಜಾಗಟೆಯನ್ನು ಇದರ ಜೊತೆಗೆ ಬಳಸುತ್ತಾರೆ. ಇಂಥದೇ ವಾದ್ಯಗಳನ್ನು ಸಿದ್ಧಿ ಎಂಬ ಗಿರಿಜನರೂ ಬಳಸುತ್ತಾರೆ. ಸಂಜೆಯ ವೇಳೆ ಈ ನೃತ್ಯದವರೂ ಗ್ರಾಮಸ್ಥರೂ ಸೇರಿ ಕಾಮದಹನ ಆಚರಿಸುತ್ತಾರೆ. ಅಗ್ನಿಕೊಂಡವನ್ನು ಹಾದು ಕೋಲು ಕುಂಚಗಳನ್ನೆಲ್ಲ ಕೊಂಡದ ಎದುರಿಗೆ ಇರಿಸಿ ವಂದಿಸುತ್ತಾರೆ.

ಕುಮಟ ತಾಲ್ಲೂಕಿನ ಕಡೆ ಇದೇ ಸುಗ್ಗಿ ಕುಣಿತ ಕೊಂಚ ಭಿನ್ನವಾಗಿರುತ್ತದೆ. ಕೊಂಡವನ್ನು ಹಾದು ಕರಿಕಣಕ್ಕೆ ಬಂದು ಅಲ್ಲಿನ ಕರಿಹೊಂಡದಲ್ಲಿ ಮಿಂದು ಗುನಗನ ಮನೆಗೆ ಬರುತ್ತಾರೆ. ಅಲ್ಲಿ ಅವರಿಗೆ ಆರತಿ ಬೆಳಗುತ್ತಾರೆ. ಇಲ್ಲಿಗೆ ಸುಗ್ಗಿ ಕುಣಿತ ಮುಕ್ತಾಯವಾಗುತ್ತದೆ.

ಸುಗ್ಗಿ ಕುಣಿತದಲ್ಲಿ ಐದು ದಿನಗಳು ಆಚರಿಸುವುದನ್ನು ಹೀರೇ ಸುಗ್ಗಿ ಎನ್ನುತ್ತಾರೆ. ಸಾಮಾನ್ಯ ವೇಷದಲ್ಲಿ ಆಚರಿಸುವುದನ್ನು ಕೀರೇ ಸುಗ್ಗಿ ಎನ್ನುತ್ತಾರೆ. ಕುಣಿತದ ಕೋಲಾಟಕ್ಕೆ ಬೋಳು ಸುಗ್ಗಿ ಎಂದೂ ಕರೆಯಲಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರ ಸುಗ್ಗಿ ಕುಣಿತವಿದೆ. ಇವರಲ್ಲಿ ಇದು ನವರಾತ್ರಿ ವೇಳೆಯಲ್ಲಿ ಪ್ರಚಲಿತವಿದೆ. ಕೊಡಗಿನ ಉಮ್ಮತ್ತಾಟ, ಬೊಳುಕಾಟ ಇವೆಲ್ಲ ಸುಗ್ಗಿ ಕುಣಿತದ ಪ್ರಾದೇಶಿಕ ಮಾದರಿಗಳಾಗಿ ಕಂಡುಬರುತ್ತವೆ.

ಹಾಸನ ಜಿಲ್ಲೆಯ ಸುಗ್ಗಿ ಕುಣಿತದಲ್ಲಿ ಒಂದು ವಿಶೇಷ ರೀತಿಯನ್ನು ಗಮನಿಸಬಹುದು. ಇಲ್ಲಿ ಕೈಯಲ್ಲಿ ಪಂಜನ್ನು ಹಿಡಿದು ಕುಣಿಯುವುದು ವಾಡಿಕೆ. **(ಪಿ.ಆರ್.ಟಿ.)**

**ಸುತ್ತೂರು:** ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಒಂದು ಗ್ರಾಮ; ಪುಣ್ಯಕ್ಷೇತ್ರ. ಕಪಿಲಾ ನದಿಯ ಬಲದಂಡೆಯ ಮೇಲೆ ನಂಜನಗೂಡಿನ ಈಶಾನ್ಯಕ್ಕೆ 18 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,850.

ಹಿಂದೆ ಈ ಊರಿಗೆ ಶ್ರೋತ್ರಿಯೂರು ಎಂಬ ಹೆಸರಿದ್ದುದಾಗಿ 1032ರ ಒಂದು ಚೋಳ ಶಾಸನದಿಂದ, 1169ರ ಹೊಯ್ಸಳ ಶಾಸನವೊಂದರಿಂದ ತಿಳಿದುಬರುತ್ತದೆ. ವಿಜಯನಗರದ ಕಾಲದ ದಾಖಲೆಗಳಲ್ಲಿ ಇದನ್ನು ಸುತ್ತೂರು ಎಂದು ಕರೆದಿರುವುದು ಕಂಡುಬರುತ್ತದೆ.

ಹೊಯ್ಸಳ ಒಂದನೆಯ ನರಸಿಂಹನ ದಂಡನಾಯಕ ಲಕ್ಷ್ಮಯ್ಯ 1169ರ ಸುಮಾರಿನಲ್ಲಿ ಈ ಊರನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದ. ಇಲ್ಲಿ ಆಗ ಕಟ್ಟಿದ್ದೆನ್ನಲಾದ ಸೋಮೇಶ್ವರ ದೇವಾಲಯವಿದೆ. ಮುಂಭಾಗದ ಹಜಾರವನ್ನು 1264ರಲ್ಲಿ ಕಟ್ಟಿರುವುದಾಗಿ ತಿಳಿದುಬರುತ್ತದೆ. ಗರ್ಭಗುಡಿಯಲ್ಲಿ ಒಂದು ಲಿಂಗವೂ ದಕ್ಷಿಣದ ಕೋಣೆಯಲ್ಲಿ ಹರಿಹರೇಶ್ವರ ವಿಗ್ರಹವೂ ಇವೆ. ಚತುರ್ಬಾಹುಗಳಿರುವ ಇಲ್ಲಿನ ಹರಿಹರೇಶ್ವರ ವಿಗ್ರಹ ಒಂದು ಸುಂದರ ಕಲಾಕೃತಿ. ಈ ವಿಗ್ರಹದ ಬಲಪಾರ್ಶ್ವದಲ್ಲಿ ಪಾರ್ವತಿಯ, ಎಡಪಾರ್ಶ್ವದಲ್ಲಿ ಲಕ್ಷ್ಮಿಯ ವಿಗ್ರಹಗಳಿವೆ. ಆಧಾರಪೀಠದ

ಮೇಲೆ ನಂದಿ ಮತ್ತು ಗರುಡರನ್ನು ಕೆತ್ತಿದೆ. ನವರಂಗದ ಎಡಗಡೆ ಮೂರೂವರೆ ಅಡಿ ಎತ್ತರದ ದೇವತಾ ಸ್ತ್ರೀ ವಿಗ್ರಹ ಎರಡು ಮುಂಗುಸಿಗಳ ಮೇಲೆ ನಿಂತಿರುವಂತೆ ಕೆತ್ತಿದೆ.

ಇಲ್ಲಿನ ನಾರಾಯಣ ದೇವಾಲಯವೂ ಹೊಯ್ಸಳರ ಕಾಲದ ರಚನೆ. ಶಿಥಿಲವಾದ ಈ ದೇವಾಲಯದ ಗರ್ಭಗುಡಿಯಲ್ಲಿ ಮೂರುವರೆ ಅಡಿ ಎತ್ತರದ ನಾರಾಯಣ ವಿಗ್ರಹವಿದೆ. ಇಲ್ಲಿನ ಶಾಸನವೊಂದರಲ್ಲಿ ಈ ದೇವಾಲಯವನ್ನು 1169ರಲ್ಲಿ ಲಕ್ಷ್ಮಯ್ಯ ಕಟ್ಟಿಸಿದನೆಂದು ಉಲ್ಲೇಖಿಸಿದೆ. ಅದೇ ಶಾಸನದಲ್ಲಿ ನಾರಾಯಣ ವಿಗ್ರಹವನ್ನು ನಾಗಕೇಶವ ಎಂದು ಹೆಸರಿಸಿದೆ.

ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ಸುತ್ತೂರು

ಈ ಗ್ರಾಮದಲ್ಲಿ ಪ್ರಾಚೀನ ಪರಂಪರೆಯ ಒಂದು ವೀರಶೈವ ಮಠವಿದೆ. ಇದು ಸುತ್ತೂರು ಮಠವೆಂದೇ ಪ್ರಸಿದ್ಧ. ಈಚೆಗೆ ದೊರೆತಿರುವ ಆಧಾರಗಳ ಮೇಲೆ ಈ ಮಠದ ಪ್ರಾಚೀನತೆಯನ್ನು 10ನೆಯ ಶತಮಾನದ ಮಧ್ಯ ಭಾಗಕ್ಕೆ ಒಯ್ಯುವ ಯತ್ನ ನಡೆದಿದೆ. ನಂಜನಗೂಡಿನ ಮತ್ತು 1032–1090ರ ಶಾಸನದಲ್ಲಿ ಉಕ್ತವಾಗಿರುವ ಈಶಾನ್ಯೇಶ್ವರ ಒಡೆಯರ್ ಎಂಬುವರು ಕಂಚಿಯ ರಾಜೇಂದ್ರ ಚೋಳನಿಗೆ ಗುರುವಾಗಿದ್ದರೆಂದು ನಂಜನಗೂಡು 164ರ ಶಾಸನದ ಪ್ರಕಾರ ತಿಳಿದು ಬರುತ್ತದೆ. ಪಂಡಿತಾರಾಧ್ಯರ ಗಣಸಹಸ್ರ ನಾಮದಲ್ಲಿ ಶಿವರಾತ್ರೀಶ್ವರ ಗುರುಗಳೊಬ್ಬರ ಹೆಸರಿದೆ. ಈಶಾನ್ಯೇಶ್ವರರಿಗೂ ಹಿಂದೆ ಸುಮಾರು ಒಂದು ತಲೆಮಾರಿನಷ್ಟು ಹಿಂದಿನವರೆಂದು ಭಾವಿಸುವುದಾದರೆ, ಮಠದ ಐತಿಹ್ಯವನ್ನು ಆಧಾರ ಮಾಡಿಕೊಂಡು ಆ ಶಿವರಾತ್ರೀಶ್ವರರೇ ಮಠದ ಸ್ಥಾಪಕರೂ ಆದಿಶಿವರಾತ್ರೀಶ್ವರರೂ ಆಗುತ್ತಾರೆ. ಆದರೆ ಗಣಸಹಸ್ರ ನಾಮದಲ್ಲಿ ಈ ಹೆಸರಿನ ಇನ್ನಿಬ್ಬರು ಯತಿಗಳ ಉಲ್ಲೇಖವಿರುವುದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ. ಇಲ್ಲಿನ ಮಠಾಧೀಶರ ಪರಂಪರೆಯಲ್ಲಿ ಕೆಲವರು ಉದ್ದಾಮ ಪಂಡಿತರಾಗಿದ್ದು ಗ್ರಂಥರಚನೆ ಮಾಡಿದ್ದಂತೆ ತಿಳಿದುಬರುವುದು. ಅವರಲ್ಲೊಬ್ಬರಾದ ಶಿವರಾತ್ರಿ ಸ್ವಾಮಿಗಳ ಮತ್ತು ಇತರ ಸಂತರ ಗದ್ದುಗೆಗಳು ಕುಪ್ಪರವಳ್ಳಿಯಿಂದ ಬರುವ ರಸ್ತೆಯ ಎಡಗಡೆಯಲ್ಲಿರುವ ಒಂದು ಮಂದಿರದಲ್ಲಿವೆ. ಈ ಮಠದವರು ಸೋಮೇಶ್ವರ ದೇವಾಲಯವನ್ನೂ ಭುಜಂಗರಾಯನಿಂದ ನಿರ್ಮಿತವಾದ (ಸು. 1508) ವೀರೇಶ್ವರ ದೇವಾಲಯವನ್ನೂ ಜೀರ್ಣೋದ್ಧಾರ ಮಾಡಿಸಿದ್ದಾರೆ. ಈ ಮಠ ದೇಶವಿದೇಶಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತಿದೆ. ಕೆಲವು ಬಡ ವಿದ್ಯಾರ್ಥಿಗಳಿಗೆ ಊಟ ವಸತಿಗಳನ್ನು ಒದಗಿಸುತ್ತಿದೆ.

ಸುತ್ತೂರು ಮಠ ಶಿವರಾತ್ರೀಶ್ವರ ಸ್ವಾಮಿಗಳು ಮತ್ತು ದೇಶಿಕೇಂದ್ರಸ್ವಾಮಿಗಳ ಕಾಲದಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಸಮಾಜ ಸೇವಾಕಾರ್ಯದಲ್ಲಿ ಅದ್ವಿತೀಯ ಸಾಧನೆ ಮಾಡಿದೆ. (ಎಸ್.ವಿ.ಎಸ್.)

**ಸುದರ್ಶನ:** ಉಡುಪಿಯಿಂದ ಪ್ರಕಟವಾಗುತ್ತಿದ್ದ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇಶಿಯರಿಂದ ಆರಂಭವಾದ ಮೊಟ್ಟಮೊದಲ ಮಾಸಪತ್ರಿಕೆ. 1886ರ ಆಗಸ್ಟ್ ತಿಂಗಳಿನಲ್ಲಿ ಆರಂಭವಾಯಿತು. ಕುಂದಾಪುರ ಕೃಷ್ಣರಾಯ ( – 1907) ಇದರ ಸ್ಥಾಪಕ ಸಂಪಾದಕರು. ಅನಂತರ ಎಂ.ಉಮಾಶಂಕರ ರಾವ್, ಬೈಲೂರು ರಾಮರಾಯ–ಇವರು ಸಂಪಾದಕರಾಗಿದ್ದರು. ಪತ್ರಿಕೆ ಉಡುಪಿಯ ಹಿಂದೂ ಮುದ್ರಣಾಲಯದಲ್ಲಿ ಪ್ರಕಟವಾಗುತ್ತಿತ್ತು. ಇದರಲ್ಲಿ ಹಿಂದುಧರ್ಮ ಮತ್ತು ಸಂಸ್ಕೃತಿ, ಸ್ತ್ರೀ ಶಿಕ್ಷಣ, ರಾಜಕೀಯ ವಿಚಾರಗಳನ್ನು ಕುರಿತ ಬೋಧಪ್ರದವಾದ ಲೇಖನಗಳು, ಸ್ಥಳೀಯ ಸುದ್ದಿಗಳು, ಕಥೆಗಳು, ಪುಸ್ತಕ ವಿಮರ್ಶೆ ಮೊದಲಾದ ವಿಷಯಗಳಿರುತ್ತಿದ್ದವು. ಯಲಕೂರು ಸುಬ್ಬಣ್ಣ, ಬೊಳಂಗಡೆ ಸುಬ್ಬರಾಯ, ಕೆ.ಭಾನಪ್ಪಾ, ಕೀಲಾರ ತಿಮ್ಮಯ್ಯ, ಬಡಾಜೆ ಲಿಂಗಪ್ಪಯ್ಯ, ಎಚ್.ಲಿಂಗರಾಜ ಅರಸು, ಪಂಡಿತ ಮಂಜಪ್ಪಯ್ಯ, ಬೆನಗಲ್ ರಾಮರಾವ್, ಹಟ್ಟಿಯಂಗಡಿ ನಾರಾಯಣರಾವ್, ಹರಿದಾಸ ವೆಂಕಟರಮಣಪ್ರಭು, ಉಲ್ಲಾಳ ಮಂಗೇಶರಾವ್, ಬೈಂದೂರು ವೆಂಕಟೇಶ, ಐರೋಡಿ ಶಿವರಾಮ ಉಡುಪ, ಸಿದ್ಧಾಂತಿ ಶಿವಶಂಕರಶಾಸ್ತ್ರೀ, ಎನ್. ಮಂಜುನಾಥಯ್ಯ, ಎಂ.ಶ್ರೀನಿವಾಸರಾವ್ ಮೊದಲಾದ ಲೇಖಕರು ಈ ಪತ್ರಿಕೆಗೆ ಬರೆಯುತ್ತಿದ್ದರು. ಈ ಪತ್ರಿಕೆ ಸುಮಾರು ಒಂದು ದಶಕಕಾಲ ಪ್ರಕಟವಾಗಿ ಅನಂತರ ನಿಂತುಹೋಯಿತು. *

**ಸುದರ್ಶನ್, ಎಚ್.:** 1950– . ಪ್ರಸಿದ್ಧ ಸಮಾಜ ಸೇವಕರು ಮತ್ತು ವೈದ್ಯರು. ರೈಟ್‌ಲೈವ್ಲಿಹುಡ್ ಪ್ರಶಸ್ತಿ ಪುರಸ್ಕೃತರು. ಇವರ ಪೂರ್ಣ ಹೆಸರು ಹನುಮಪ್ಪರೆಡ್ಡಿ ಸುದರ್ಶನ್. 1950 ಡಿಸೆಂಬರ್ 30ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಹನುಮಪ್ಪರೆಡ್ಡಿ. ಬಾಲ್ಯದಲ್ಲಿ ಬಹಳ ಕಷ್ಟದ ಜೀವನ ಅನುಭವಿಸಿದ ಇವರು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ತಂದೆಯವರನ್ನು ಕಳೆದುಕೊಂಡರು. ವ್ಯಾಸಂಗದ ಅವಧಿಯಿಂದಲೂ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದ, ಗಾಂಧೀಜಿ – ಇಂತಹ

ಆದರ್ಶ ಪುರುಷರ ತತ್ತ್ವಗಳ ಆರಾಧಕರೂ ಅನುಯಾಯಿಗಳೂ ಆಗಿದ್ದ ಇವರು ಬಾಲ್ಯದಿಂದಲೂ ದುರ್ಬಲವರ್ಗದವರನ್ನು ಕಂಡು ಮರುಗುವ, ಅವರಿಗೆ ಸಹಾಯಹಸ್ತ ನೀಡುವ ಮೃದು ವ್ಯಕ್ತಿತ್ವವನ್ನು ಹೊಂದಿದ್ದರು. ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ ಬೆಂಗಳೂರಿನಲ್ಲಿ ವೈದ್ಯಪದವಿಗಳಿಸಿ (1973) ರಾಮಕೃಷ್ಣ ಮಿಷನ್ ಪರವಾಗಿ ಉತ್ತರ ಪ್ರದೇಶದ ಹಿಮಾಲಯ ಶ್ರೇಣಿಯಲ್ಲೂ ಪಶ್ಚಿಮ ಬಂಗಾಲದ ಬೇಲೂರ ಮಠ ಮತ್ತು ಕರ್ನಾಟಕದ ಪೊನ್ನಂಪೇಟೆಯಲ್ಲೂ ಕೆಲಕಾಲ ಕೆಲಸ ನಿರ್ವಹಿಸಿದರು (1975–79). ಅನಂತರ ಈಗಿನ ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟಕ್ಕೆ ಬಂದು (1979) ಸೋಲಿಗ ಬುಡಕಟ್ಟು ಪಂಗಡದ ಸೇವಾಕಾರ್ಯದಲ್ಲಿ ತೊಡಗಿ, ಅಲ್ಲಿಯೇ ನೆಲೆಸಿದರು. ಕಾಡುಪ್ರಾಣಿಗಳ ಉಪಟಳದಿಂದ ತೊಂದರೆಗಳನ್ನು ಅನುಭವಿಸುತ್ತಿದ್ದ ಸೋಲಿಗರ ಕಷ್ಟಸುಖಗಳನ್ನು ಪ್ರತ್ಯಕ್ಷವಾಗಿ ಕಂಡ ಇವರು ಜಿ.ಎಸ್.ಜಯದೇವ, ವಿಜಯಂ ಕೃಷ್ಣಮೂರ್ತಿ, ಎಚ್.ಎನ್.ಸೋಮಸುಂದರಂ, ಮಲ್ಲೇಶಪ್ಪ,

ಚಕ್ರವರ್ತಿ ಮೊದಲಾದ ಹಲವು ಸ್ನೇಹಿತರ ಸಹಕಾರದಿಂದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರವನ್ನು (ನೋಡಿ) ಸ್ಥಾಪಿಸಿದರು (1980). ಈ ಕೇಂದ್ರ ಸೋಲಿಗರ ಆರೋಗ್ಯ, ಶಿಕ್ಷಣ, ವೈದ್ಯಪದ್ಧತಿ, ಪರಿಸರಪ್ರಜ್ಞೆ ಮತ್ತು ಪ್ರಾಕೃತಿಕ ಸಂಪತ್ತಿನ ಉಳಿವಿನ ಬಗೆಗೆ ಜನರಲ್ಲಿ ಅರಿವು ಮೂಡಿಸುವುದು, ಪಲ್ಲಟಗೊಂಡ ಸೋಲಿಗರಿಗೆ ನೆಲೆ ನೀಡುವುದು ಮತ್ತು ಕಡಿಮೆ ವೆಚ್ಚದಲ್ಲಿ ಮನೆನಿರ್ಮಾಣ ಮಾಡಿ ವಿತರಿಸುವ ಕೆಲಸಗಳನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದೆ. ಈ ಬಗೆಯ ಸಮಾಜಕಾರ್ಯದೊಂದಿಗೇ ಸಾಂಸ್ಕೃತಿಕವಾಗಿಯೂ ಸೋಲಿಗರಲ್ಲಿರುವ ಜನಪದ ಕಲೆಗಳು, ಸಂಪ್ರದಾಯಗಳು, ಅವರ ವೈದ್ಯಪದ್ಧತಿಗಳನ್ನು ಗುರುತಿಸಿ ಅವರು ಉಪಯೋಗಿಸುವ ಗಿಡಮೂಲಿಕೆಗಳನ್ನು ಅವುಗಳ ಉಪಯೋಗ ಮತ್ತು ಸಂಗ್ರಹಣೆಯ ದೃಷ್ಟಿಯಿಂದ ವೈಜ್ಞಾನಿಕವಾಗಿ ವಿಂಗಡಿಸಿ ಯುವಪೀಳಿಗೆಯಲ್ಲಿ ಆ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಸುದರ್ಶನ್ ತೊಡಗಿಕೊಂಡಿದ್ದಾರೆ.

ಇವರು ಚಾಮರಾಜನಗರ ಜಿಲ್ಲೆಯ ಯಳಂದೂರಿನಲ್ಲಿ ಪ್ರಾರಂಭಿಸಿದ (1986) ಕರುಣಾ ಟ್ರಸ್ಟ್ ಕೂಡ ಗ್ರಾಮೀಣ ಆರೋಗ್ಯ ಮತ್ತು ಜೀವನಮಟ್ಟದ ಸುಧಾರಣೆ ಹಾಗೂ ಕಡುಬಡವರಲ್ಲಿ ಪೌಷ್ಟಿಕಾಂಶದ ಕೊರತೆಯನ್ನು ಸಾಧ್ಯವಾದಷ್ಟು ಹೋಗಲಾಡಿಸಬೇಕೆಂಬ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಯನಿರತವಾಗಿದೆ. ಗಿರಿಜನರಲ್ಲಿ ವಂಶಪಾರಂಪರ್ಯವಾಗಿ ಬಂದಿದ್ದೆಂದು ತಿಳಿದ ಸಿಕಲ್ ಸೆಲ್ ಅನೀಮಿಯ ರೋಗವನ್ನು ನಿವಾರಿಸಲು ಕಾರ್ಯತಂತ್ರ ರೂಪಿಸಿದ ಹಿರಿಮೆ ಇವರದು.

ಇವರು ಸಾರ್ವಜನಿಕ ಹಾಗೂ ಸರ್ಕಾರಿ ವಲಯಗಳ ಅನೇಕ ಸಂಘಸಂಸ್ಥೆ, ಸಮಿತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ: ಕರ್ನಾಟಕ ಗ್ರಾಮೀಣ ಅಭಿವೃದ್ಧಿ ಸ್ವಯಂ ಸೇವಾಸಂಸ್ಥೆಯ ಗೌರವ ಕೋಶಾಧಿಕಾರಿಯಾಗಿ (1985–87), ಭಾರತದ ಸ್ವಯಂ ಸೇವಾ ಆರೋಗ್ಯ ಸಂಘದ ಸಹಕಾರ್ಯದರ್ಶಿಯಾಗಿ (1988–89), ಅದರ ಉಪಾಧ್ಯಕ್ಷರಾಗಿ (1993–95), ಬೆಂಗಳೂರು ವಿಶ್ವವಿದ್ಯಾಲಯ ಆಡಳಿತ ಮಂಡಳಿಯ ಸದಸ್ಯರಾಗಿ (1990–92), ವಿವೇಕಾನಂದ ಪ್ರತಿಷ್ಠಾನದ ಸ್ಥಾಪಕ ಸದಸ್ಯರಾಗಿ (1995), ಭಾರತೀಯತೆ ಚಳವಳಿಯ ಪುನರುಜ್ಜೀವನ ಎಂಬ ಸಂಘಟನೆಯ ಸ್ಥಾಪಕರಾಗಿ (1999), ಕರ್ನಾಟಕ ಸ್ವಯಂ ಸೇವಾ ಆರೋಗ್ಯ ಸಂಘದ ಅಧ್ಯಕ್ಷರಾಗಿ (1997–99), ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ಮತ್ತು ಕ್ಷೇಮಾಭಿವೃದ್ಧಿ ಯೋಜನಾ ಆಯೋಗದ ಚಾಲನಾತಂಡದ ಸದಸ್ಯರಾಗಿ, 9ನೆಯ ಪಂಚವಾರ್ಷಿಕ ಯೋಜನೆಯ ಆರೋಗ್ಯ ಮತ್ತು ಕುಟುಂಬ ಕ್ಷೇಮಾಭಿವೃದ್ಧಿಯ ಕಾರ್ಯಗಾರದ ಸದಸ್ಯರಾಗಿ, ರಾಷ್ಟ್ರೀಯ ಸುರಕ್ಷತಾ ಮಂಡಳಿಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ, ರಾಷ್ಟ್ರೀಯ ಯುವಪ್ರಶಸ್ತಿ ಆಯ್ಕೆಯ ಕೇಂದ್ರಸಮಿತಿ ಸದಸ್ಯರಾಗಿ, ಹೈದರಾಬಾದ್‌ನ ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಸಂಸ್ಥೆಗಳ ಸದಸ್ಯರಾಗಿ, ಕಾರ್ಯನಿರ್ವಾಹಕರೂ ಆಗಿ, ಕರ್ನಾಟಕ ಲೋಕಾಯುಕ್ತದ ವಿಜಿಲೆನ್ಸ್ ಡೈರೆಕ್ಟರಾಗಿ ಇವರು ಸಲ್ಲಿಸಿರುವ ಸೇವೆ ಅಸಾಧಾರಣವಾದದ್ದು.

ಇವರ ಲೋಕೋಪಕಾರಿ ಸೇವೆಗಳಿಗಾಗಿ ಸಂದಿರುವ ಪ್ರಶಸ್ತಿ, ಗೌರವ, ಸನ್ಮಾನಗಳು ಅಗಣಿತ. ರಾಜ್ಯೋತ್ಸವ ಪ್ರಶಸ್ತಿ (1984), ರಾಷ್ಟ್ರೀಯ ಸೇವಾ ಪ್ರಶಸ್ತಿ (1991), ಕರ್ನಾಟಕ ಸರ್ಕಾರದ ಪರಿಸರ ಪ್ರಶಸ್ತಿ (1992), ಬಿ.ಆರ್.ಅಂಬೇಡ್ಕರ್ ಶತಮಾನೋತ್ಸವ ಪ್ರಶಸ್ತಿ (1994), ವಿವೇಕಾನಂದ ಗಿರಿಜನ ಕಲ್ಯಾಣಕ್ಕಾಗಿ ನೀಡಿದ ರಾಜ್ಯಪ್ರಶಸ್ತಿ (1994), ಅತ್ಯುತ್ತಮ ಶಿಶು ಕ್ಷೇಮಾಭಿವೃದ್ಧಿ ಸಂಸ್ಥೆಯ ಸ್ಥಾಪನೆಗಾಗಿ ನೀಡಿದ ಕರ್ನಾಟಕ ರಾಜ್ಯಪ್ರಶಸ್ತಿ (1994), ಪರ್ಯಾಯ ನೊಬೆಲ್ ಎಂದೇ ಪ್ರಸಿದ್ಧವಾದ ರೈಟ್ ಲೈವ್ಲಿಹುಡ್ ಪ್ರಶಸ್ತಿ (1994), ಅಂತಾರಾಷ್ಟ್ರೀಯ ಖ್ಯಾತವೈದ್ಯ ಪ್ರಶಸ್ತಿ (1995), ಸಾಮಾಜಿಕ ಸೇವೆಯನ್ನು ಮೆಚ್ಚಿ ನೀಡಿದ ಡಾ.ಪಿನ್ನಾಮನೇನಿ ಮತ್ತು ಸೀತಾದೇವಿ ಸಂಸ್ಥಾಪನಾ ಪ್ರಶಸ್ತಿ (1995), ಕರ್ನಾಟಕ ಜ್ಯೋತಿ ಪ್ರಶಸ್ತಿ (1997), ಬಸವಶ್ರೀ ಪ್ರಶಸ್ತಿ (1999), ಪದ್ಮಶ್ರೀ ಪ್ರಶಸ್ತಿ (2000), ಮಾನವ ಹಕ್ಕುಗಳ ಆಯೋಗದ ಪ್ರಶಸ್ತಿ (2001), ಮಹಾವೀರ್ ಪ್ರಶಸ್ತಿ (2001) – ಇವುಗಳನ್ನು ಹೆಸರಿಸಬಹುದು. ಸದ್ಯದಲ್ಲಿ ಇವರು ಆರೋಗ್ಯ ಕಾರ್ಯಪಡೆಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

*

**ಸುಧಾ:** ಕನ್ನಡದ ಸಚಿತ್ರ ವಾರಪತ್ರಿಕೆ. ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ಈ ಪತ್ರಿಕೆಯ ಮೊದಲ ಸಂಚಿಕೆ ಬಂದದ್ದು 1965 ಜನವರಿ 11ರಂದು. 15,000 ಪ್ರತಿಗಳ ಪ್ರಸಾರದೊಡನೆ ಆರಂಭವಾಗಿ ಶೀಘ್ರವಾಗಿ ಜನಪ್ರಿಯವಾಯಿತು. ಈಗ ಇದರ ಪ್ರಸಾರ ಒಂದು ಲಕ್ಷ

ಗಡಿಯನ್ನೂ ದಾಟಿದೆ. ಎಲ್ಲ ಬಗೆಯ ಆಸಕ್ತಿಗಳನ್ನು ಕುರಿತ ಲೇಖನಗಳನ್ನೊಳಗೊಳ್ಳುವ ಸಂಕೀರ್ಣ ಪತ್ರಿಕೆ ಇದು. ವಾರದಿಂದ ವಾರಕ್ಕೆ, ವಾರದ ವ್ಯಕ್ತಿ, ನೀವು ಕೇಳಿದಿರಿ ಇತ್ಯಾದಿ ಜನಪ್ರಿಯ ಸ್ಥಿರ ಶೀರ್ಷಿಕೆಗಳಿವೆ. ಬಣ್ಣದ ಬದುಕು ಶೀರ್ಷಿಕೆಯಡಿಯಲ್ಲಿ ಕನ್ನಡ ರಂಗಭೂಮಿ ಕಲಾವಿದರ ಆತ್ಮಕಥನಗಳು ಪ್ರಕಟವಾಗಿವೆ. ಡೆಮ್ಮಿ ಚತುರ್ಥದಳ ಆಕಾರದಲ್ಲಿ ಪ್ರಕಟವಾಗುವ ಈ ಸಾಪ್ತಾಹಿಕದ ಮುಖಪುಟಕ್ಕೆ ಆಕರ್ಷಕ ವರ್ಣಚಿತ್ರಗಳನ್ನು ಬಳಸಲಾಗುತ್ತದೆ. ಆಫ್‌ಸೆಟ್ ಮುದ್ರಣದಲ್ಲಿ ಆಕರ್ಷಕವಾಗಿ ಮುದ್ರಿತವಾಗುತ್ತಿದೆ. ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಮಾಲೀಕತ್ವದ ಪತ್ರಿಕಾ ಬಳಗಕ್ಕೆ ಸೇರಿದ ಈ ಪತ್ರಿಕೆಯ ಹಾಲಿ ಸಂಪಾದಕರು ಕೆ.ಎನ್. ಶಾಂತಾರಾಮ್ ಕುಮಾರ್.

(ಬಿ.ವಿ.ವಿ.)

**ಸುನಂದಮ್ಮ, ಟಿ.:** 1917–2006. ಹಿರಿಯ ತಲೆಮಾರಿನ ಹಾಸ್ಯ ಸಾಹಿತಿ. ಕನ್ನಡ ಹಾಸ್ಯ ಸಾಹಿತ್ಯದ ಹಿರಿಯಜ್ಜಿ ಎಂದು ಖ್ಯಾತರಾದವರು. 1917 ಆಗಸ್ಟ್ 8ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಟಿ. ರಾಮಯ್ಯ, ತಾಯಿ ನಾಗಮ್ಮ. ತಂದೆಯವರು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸರ್ಕಾರದ ಉನ್ನತ ಹುದ್ದೆಯಲ್ಲಿದ್ದರು. ಸುನಂದಮ್ಮ ಅವರ ತಾಯಿಯ ತಂದೆ (ತಾತ) ವೆಂಕಟರಾಮಯ್ಯ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಹೊಂದಿ ಸಂಸ್ಕೃತದ ಕಠೋಪನಿಷತ್, ಪಂಚಪಾದುಕಾ ಮೊದಲಾದವನ್ನು ಕುರಿತು ಇಂಗ್ಲಿಷ್‌ನಲ್ಲಿ ವ್ಯಾಖ್ಯಾನ ಕೃತಿಗಳನ್ನು ರಚಿಸಿದ್ದರು. ಈ ರೀತಿ ಸುಶಿಕ್ಷಿತ ಕುಟುಂಬ ಪರಿಸರ ಸಹಜವಾಗಿಯೇ ಸುನಂದಮ್ಮನವರ ವಿದ್ಯಾಭ್ಯಾಸಕ್ಕೆ ಅಪಾರ ಪ್ರೋತ್ಸಾಹ ದೊರೆಯಲು ಸಹಕಾರಿಯಾಯಿತು. ಬಾಲಕಿಯರಿಗೆ ಪ್ರತ್ಯೇಕ ಶಾಲೆಯಿಲ್ಲದಿದ್ದ ಆಗಿನ ಕಾಲದಲ್ಲಿ ಇವರು ಏಕೈಕ ವಿದ್ಯಾರ್ಥಿನಿಯಾಗಿ ಊರಿನ ಗಂಡು ಮಕ್ಕಳ ಶಾಲೆಯಲ್ಲಿಯೇ ಇಂಟರ್‌ಮೀಡಿಯಟ್ ಹಂತದವರೆಗೂ ಪ್ರತಿಭಾವಂತೆಯಾಗಿ ಓದಿ ಮುಗಿಸಿದರು. ಇವರಿಗೆ

11ನೆಯ ವಯಸ್ಸಿಗೆ ವಿವಾಹವಾಯಿತು. ಸಂಪ್ರದಾಯ ಆಧುನಿಕತೆಗಳೆರಡೂ ಮೇಳೈಸಿದ್ದ ತೌರಿನ ವಾತಾವರಣಕ್ಕೂ ಮಡಿ, ಆಚಾರ, ವ್ರತ ಪೂಜೆಗಳಲ್ಲಿ ಮುಳುಗಿ ಹೆಣ್ಣುಮಕ್ಕಳಿಗೆ ಅನೇಕ ನಿಷೇಧಗಳನ್ನು ಹೇರಿದ್ದ ಗಂಡನ ಮನೆಯ ವಾತಾವರಣಕ್ಕೂ ಬಹಳ ವ್ಯತ್ಯಾಸವಿತ್ತು. ಈ ಎರಡೂ ವಾತಾವರಣದ ಅನುಭವಗಳನ್ನು ಇವರು ಸಮಾನವಾಗಿ ತಾಳಿಕೊಂಡರು.

ಪ್ರೌಢಶಾಲೆಯಲ್ಲಿದ್ದಾಗಲೇ ಸ್ಕಾಟ್, ಡಿಕನ್ಸ್, ವೇಲ್ಸ್, ರೈಡರ್, ಹ್ಯಾನರ್ಡ್, ಜೇನ್ ಆಸ್ಟಿನ್ ಮೊದಲಾದ ಪ್ರಖ್ಯಾತ ಇಂಗ್ಲಿಷ್ ಲೇಖಕರ ಕೃತಿಗಳನ್ನು ಓದಿ ಮುಗಿಸಿದ್ದ ಇವರು ಸೃಜನಶೀಲ ಬರೆವಣಿಗೆಗೆ ತೊಡಗಿದ್ದು ಒಂಬತ್ತರ ಹರೆಯದಲ್ಲಿ. ಇವರು ಬರೆದ ಹೂವು ಎಂಬ ಮೊದಲ ಪದ್ಯ ಅಂದಿನ ದಿನಗಳಲ್ಲಿ ಅಶ್ವತ್ಥ ನಾರಾಯಣರಾಯರು ಪ್ರಕಟಿಸುತ್ತಿದ್ದ 'ಮಕ್ಕಳ ಪುಸ್ತಕ' ಪತ್ರಿಕೆಯಲ್ಲಿ ಪ್ರಕಟವಾಯಿತು. ಇವರು ಪ್ರೌಢಶಾಲೆಯ ದಿನಗಳಲ್ಲೇ ಬರೆದಿರುವ ಸಣ್ಣಕಥೆಗಳು ಕಥಾವಳಿ, ಕಥೆಗಾರ ಮಾಸಪತ್ರಿಕೆಗಳಲ್ಲಿ ಪ್ರಕಟಗೊಂಡವು. ಅಂದಿನ ಸಮಾಜದ ಗಂಭೀರ ಸಮಸ್ಯೆಗಳೆನಿಸಿದ್ದ ಬಾಲ್ಯವಿವಾಹ, ಸ್ತ್ರೀ ವಿದ್ಯಾಭ್ಯಾಸ, ವರದಕ್ಷಿಣೆ–ಈ ವಿಚಾರಗಳು ಇವರ ಕಥೆಗಳ ಕೇಂದ್ರವಾಗಿದ್ದವು. ಕಾಲೇಜು ವ್ಯಾಸಂಗದ ದಿನಗಳಲ್ಲಿ ಕೆಲವು ಇಂಗ್ಲಿಷ್ ಪ್ರಹಸನಗಳನ್ನೂ ಬರೆದು ರಂಗಕ್ಕೆ ತಂದರು. ಕನ್ನಡದ ಸುಪ್ರಸಿದ್ಧ ಹಾಸ್ಯಸಾಹಿತಿ ರಾಶಿ (ಎಂ.ಶಿವರಾಂ) ಅವರು ಪ್ರಕಟಿಸುತ್ತಿದ್ದ 'ಕೊರವಂಜಿ' ಹಾಸ್ಯ ಪತ್ರಿಕೆಗೆ ನಿರಂತರವಾಗಿ ಸು. 25 ವರ್ಷಗಳ ಕಾಲ ಹಾಸ್ಯ ಲೇಖನಗಳನ್ನು ಬರೆದ ಇವರು ಹಿರಿಯ ವಿನೋದ ಸಾಹಿತಿಗಳಿಂದ ಪ್ರಶಂಸೆ, ಮೆಚ್ಚುಗೆ ಪಡೆದಿದ್ದಾರೆ. ಇವರ ಮೊದಲ ಹಾಸ್ಯ ಬರೆಹ 'ನಾನ್ಯಾಕರಿಟ್ಟದ್ದು'.

ಇವರ ನಗೆ ಬರಹಗಳಲ್ಲಿ ಬರುವ ಸರಸು ಮತ್ತು ಮೈಲಾರಯ್ಯ ಇವರೇ ಸೃಷ್ಟಿಸಿರುವ ಕಾಲ್ಪನಿಕ ಸ್ಥಿರ ದಂಪತಿಗಳು. ಇವರ ಹೆಚ್ಚಿನ ಬರೆಹಗಳು ಈ ದಂಪತಿಗಳು ಮತ್ತು ಇವರ ಆರು ಮಕ್ಕಳ ಸುತ್ತ ಹೆಣೆದಂತಹವು. ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗಗಳ ಬದುಕಿನ ಏರು–ಪೇರು ಇಕ್ಕಟ್ಟು–ಬಿಕ್ಕಟ್ಟುಗಳು ಇವರ ಬರೆಹಗಳಲ್ಲಿ ಚಿತ್ರಿತವಾಗಿವೆ. ಸಮಕಾಲೀನ ವಸ್ತು ವಿಷಯಗಳನ್ನು ಆಯ್ದುಕೊಂಡಾಗ ಮಾತ್ರ ಹಾಸ್ಯ ಸಾಹಿತ್ಯಕ್ಕೆ ದೀರ್ಘಕಾಲದ ಜೀವಂತಿಕೆ ಇರುತ್ತದೆ; ಅಪಹಾಸ್ಯವೆನಿಸದ ರೀತಿಯಲ್ಲಿ ಅರಿವು–ನಲಿವು ಕೂಡಿದಾಗ ಮಾತ್ರ ಉತ್ತಮ ಹಾಸ್ಯ ಮೂಡಿಬರಲು ಸಾಧ್ಯ ಎಂಬಂತಹ ಕೆಲವು ಮೌಲಿಕ ಧೋರಣೆಗಳು ಇವರದಾಗಿವೆ.

ಬಾನುಲಿಗಾಗಿ ಇವರು ಅನೇಕ ಪ್ರಹಸನಗಳು, ಲಘು ಭಾಷಣಗಳು, ರೇಡಿಯೋ ನಾಟಕಗಳು, ಐತಿಹಾಸಿಕ, ಪೌರಾಣಿಕ ಹಾಗೂ ಗೀತ ರೂಪಕಗಳನ್ನು ರಚಿಸಿದ್ದಾರೆ. ಜಂಬದ ಚೀಲ (1971), ಪೆಪ್ಪರಮೆಂಟ್ (1972), ಬಣ್ಣದ ಚಿಟ್ಟೆ (1972), ವೃಕ್ಷವಾಹನ (1973), ತೆನಾಲಿ ರಾಮಕೃಷ್ಣ (1974), ಮುತ್ತಿನ ಚೆಂಡು (1975), ಆಧುನಿಕ ನಗೆ ಸಾಹಿತ್ಯ (1976), ರೂಢಿಗಾಡಿ (1980), ನನ್ನ ಅತ್ತೆಗಿರಿ (1980), ಡಾ.ಎಂ. ಶಿವರಾಂ (ವ್ಯಕ್ತಿಚಿತ್ರ), ಆದರ್ಶದ ಆಡಂಬರ, ಗೃಹಲಕ್ಷ್ಮಿ, ಚಿಕ್ಕಪ್ಪನ ಉಯಿಲು, ಕೂಸು ಹುಟ್ಟುವುದಕ್ಕೆ ಮುಂಚೆ, ಚಕ್ರಚುಕ್ಕೆ, ಬಾದರಾಯಣಿ– ಹೀಗೆ ಅನೇಕ ಹಾಸ್ಯ ಲೇಖನ ಸಂಗ್ರಹಗಳು, ನಾಟಕಗಳು, ಕಿರುನಾಟಕಗಳನ್ನು ಇವರು ರಚಿಸಿದ್ದಾರೆ.

ಇವರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿ ಗೌರವಗಳು ದೊರೆತಿವೆ: ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಫಲಕ (1980), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1981), ಕರ್ನಾಟಕ ಸರ್ಕಾರದ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ– ಇವುಗಳನ್ನು ಹೆಸರಿಸಬಹುದು. ಇವರು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾಗಿದ್ದರು (1979–81). 'ಸುನಂದಾಭಿನಂದನ' (1979 ಇವರ ಅಭಿಮಾನಿಗಳು ಇವರಿಗೆ ಅರ್ಪಿಸಿರುವ ಅಭಿನಂದನ ಗ್ರಂಥ. ಇವರು ಜನವರಿ, 2006 ರಂದು ನಿಧನರಾದರು. **(ಕೆ.ಆರ್.ಎಸ್.ಆರ್.)**

**ಸುಪ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಆಡಳಿತ ಕೇಂದ್ರ. ಕಾಳಿನದಿಗೆ, ಅಡ್ಡಲಾಗಿ ನಿರ್ಮಿಸಲಾದ ಅಣೆಕಟ್ಟಿನಿಂದ ಸುಪ ಮುಳುಗಿ ಹೋದದ್ದ ರಿಂದ ಜೋಯಿಡಾವನ್ನು 1981 ರಿಂದ ಸುಪ ತಾಲ್ಲೂಕಿನ ಆಡಳಿತ ಕೇಂದ್ರವಾಗಿ ಮಾಡಲಾಗಿದೆ. ಈ ತಾಲ್ಲೂಕಿನ ಪೂರ್ವದಲ್ಲಿ ಹಳಿಯಾಳ, ಆಗ್ನೇಯದಲ್ಲಿ ಯಲ್ಲಾಪುರ, ದಕ್ಷಿಣದಲ್ಲಿ ಕಾರವಾರ ತಾಲ್ಲೂಕುಗಳೂ ಪಶ್ಚಿಮಕ್ಕೆ ಗೋವ ರಾಜ್ಯವೂ ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕೂ ಸುತ್ತುವರಿದಿವೆ. ಕುಂಬಾರವಾಡ, ಸುಪ ಮತ್ತು ಕ್ಯಾಸಲ್‌ರಾಕ್ ಹೋಬಳಿಗಳು. ಒಟ್ಟು 139 ಗ್ರಾಮಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 1,871 ಚ.ಕಿ.ಮೀ. ಜನಸಂಖ್ಯೆ 48,901.

ಇದು ಅರಣ್ಯಸಮೃದ್ಧ ಪ್ರದೇಶ. ತಾಲ್ಲೂಕಿನ ಸೇಕಡ 95 ಭಾಗ ಕಾಡುಗಳಿಂದ ಕೂಡಿದೆ. ಈ ಕಾಡುಗಳಲ್ಲಿ ಬೆಲೆ ಬಾಳುವ ಉಪಯುಕ್ತ ಮರಗಳಾದ ತೇಗ, ಮತ್ತಿ, ಕರಿಮರ, ಶ್ರೀಗಂಧ, ಹೊನ್ನೆ ಹಲಸು ಮುಂತಾದವುಗಳಲ್ಲದೆ ಕೆಲವು ಮೃದು ಮರಗಳೂ ಔಷಧೋಪಯೋಗಿ ಗಿಡ ಮೂಲಿಕೆಗಳೂ ಬೆಳೆಯುತ್ತವೆ. ದಾಲಚಿನ್ನಿ, ಅಳಲೇಕಾಯಿ, ಶ್ರೀಗಂಧ, ಜೇನು ಇತರ ಅರಣ್ಯ ಉತ್ಪನ್ನಗಳು. ಅರಣ್ಯಗಳಿಂದ ಉರುವಲಿಗೆ ಸೌದೆ, ಕಟ್ಟಡಗಳಿಗೆ ಮರಮುಟ್ಟು, ರೈಲ್ವೆ ಸ್ಲೀಪರುಗಳು, ಬೆಂಕಿಕಡ್ಡಿ ತಯಾರಿಕೆಗೆ ಮೃದುಮರ ದೊರೆಯುತ್ತವೆ. ಈ ಕಾಡುಗಳಲ್ಲಿ ಆನೆ, ಕಾಡೆಮ್ಮೆ, ಹಂದಿ, ಜಿಂಕೆ ಮುಂತಾದ ವನ್ಯಮೃಗಗಳನ್ನು ಕಾಣಬಹುದು.

ಕಾಳಿ **(ನೋಡಿ)** ಈ ತಾಲ್ಲೂಕಿನಲ್ಲಿ ಹರಿಯುವ ಮುಖ್ಯ ನದಿ. ಇದು ತಾಲ್ಲೂಕಿನ ಪಶ್ಚಿಮದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಸುಪ, ದಾಂಡೇಲಿ ಮುಖಾಂತರ ಹರಿದು ಹಳಿಯಾಳ ತಾಲ್ಲೂಕಿನಲ್ಲಿ ಸ್ವಲ್ಪ ದೂರ ಆಗ್ನೇಯಾಭಿಮುಖವಾಗಿ ಹರಿದು, ಅನಂತರ ದಕ್ಷಿಣ ಮುಖವಾಗಿ ಪ್ರವಹಿಸಿ ಯಲ್ಲಾಪುರ, ಕಾರವಾರ ತಾಲ್ಲೂಕನ್ನು ಸುಪದಿಂದ ಪ್ರತ್ಯೇಕಿಸುವ ಎಲ್ಲೆಯಾಗಿ ಪಶ್ಚಿಮಾಭಿಮುಖವಾಗಿ ಹರಿದು ಕಾರವಾರದ ಬಳಿ ಅರಬ್ಬೀಸಮುದ್ರವನ್ನು ಸೇರುವುದು. ಈ ನದಿಗೆ ಪಂಡರಿ, ವಾಕಿ, ಕಾನೇರಿ ಮುಂತಾದ ಉಪನದಿಗಳ ಜೊತೆಗೆ ಅನೇಕ ತೊರೆಗಳು ಸೇರಿಕೊಳ್ಳುತ್ತವೆ. ವಾರ್ಷಿಕ ಸರಾಸರಿ ಮಳೆ 2,667.09 ಮಿಮೀ.

ಈ ತಾಲ್ಲೂಕಿನ ಉತ್ತರ ಮತ್ತು ಪೂರ್ವಭಾಗಗಳಲ್ಲಿ ಫಲವತ್ತಾದ ಕರಿಮಣ್ಣಿನ ಭೂಪ್ರದೇಶವೂ ದಕ್ಷಿಣ ಮತ್ತು ಪಶ್ಚಿಮದಲ್ಲಿ ಅರೆಕೆಂಪು, ಅರೆಬಿಳುಪು ಮಣ್ಣಿನ ಅಷ್ಟೇನೂ ಫಲವತ್ತಲ್ಲದ ಭೂಪ್ರದೇಶವೂ ಇದೆ. ತಾಲ್ಲೂಕಿನ ಕಣಿವೆ ಮತ್ತು ನದಿ ಪ್ರದೇಶಗಳಲ್ಲಿ ಬತ್ತದ ಬೆಳೆ

ಹೆಚ್ಚು. ಕಬ್ಬು ಮತ್ತು ಇತರ ಧಾನ್ಯಗಳ ಜೊತೆಗೆ ತೋಟಗಳಲ್ಲಿ ಅಡಕೆ, ಮೆಣಸು, ತೆಂಗು ಬೆಳೆಯುತ್ತಾರೆ.

ಈ ತಾಲ್ಲೂಕಿನ ಉತ್ತರದ ಕೊನೆಯಲ್ಲಿ ಲೋಂಡಾದಿಂದ ಕ್ಯಾಸಲ್ ರಾಕ್ ಮುಖಾಂತರ ಗೋವವನ್ನು ಪ್ರವೇಶಿಸುವ ಸು. 17 ಕಿಮೀ ರೈಲುಮಾರ್ಗವಿದೆ. ಇಲ್ಲಿಗೆ ಸಮೀಪವಿರುವ ಇನ್ನೊಂದು ರೈಲುನಿಲ್ದಾಣವೆಂದರೆ ಸುಪದ ಪೂರ್ವಕ್ಕಿರುವ ದಾಂಡೇಲಿಯ

ಸುಪ ಅಣೆಕಟ್ಟು

ರೈಲುನಿಲ್ದಾಣ. ಇಲ್ಲಿಂದ ಹಳಿಯಾಳ, ಕ್ಯಾಸಲ್‌ರಾಕ್, ದಾಂಡೇಲಿ ಮುಂತಾದ ಕಡೆಗಳಿಗೆ ಸಾರಿಗೆ ವ್ಯವಸ್ಥೆಯಿದೆ.

ಈ ತಾಲ್ಲೂಕಿನ ಮುಖ್ಯಸ್ಥಳಗಳಲ್ಲಿ ಉಳುವಿ **(ನೋಡಿ)** ಒಂದು ಯಾತ್ರಾಸ್ಥಳ. ಕ್ಯಾಸಲ್ ರಾಕ್‌ನಲ್ಲಿ ರೈಲ್ವೆನಿಲ್ದಾಣವಿದ್ದು ಇದು ಬೇಸಗೆಯ ವಿಶ್ರಾಂತಿ ಧಾಮವಾಗಿದೆ.

ಜೋಯಿಡಾ ಒಂದು ಮುಖ್ಯ ಪಟ್ಟಣವೂ ಆಗಿದೆ. ಕಾರವಾರಕ್ಕೆ ಈಶಾನ್ಯದಲ್ಲಿ ಕಾಳಿ ನದಿಯ ದಕ್ಷಿಣ ದಂಡೆಯ ಮೇಲಿದೆ. ಈ ಪಟ್ಟಣದ ವಾಯವ್ಯಕ್ಕೆ ಕ್ಯಾಸಲ್‌ರಾಕ್ ರೈಲ್ವೆ ನಿಲ್ದಾಣವೂ ಪೂರ್ವಕ್ಕೆ ದಾಂಡೇಲಿ ರೈಲುನಿಲ್ದಾಣವೂ ಇವೆ.

ಈ ಪ್ರದೇಶದಲ್ಲಿ ಹಿಂದೆ ರಾವಣನ ತಂಗಿ ಶೂರ್ಪನಖಿ ವಾಸಮಾಡುತ್ತಿದ್ದಳೆಂದೂ ಅದರಿಂದಾಗಿ ಈ ಪಟ್ಟಣಕ್ಕೆ ಸುಪ ಎಂಬ ಹೆಸರು ಬಂತೆಂದೂ ಐತಿಹ್ಯ. ಇಲ್ಲಿ ರಾಮಲಿಂಗ ದೇವಾಲಯವಿದೆ. ಊರ ಸಮೀಪ ಕೆಲವು ಬೌದ್ಧಗುಹೆಗಳಿವೆ ಎನ್ನಲಾಗಿದೆ. ಈ ಪಟ್ಟಣ ಸ್ವಾದಿ ರಾಜರ ಆಳಿಕೆಗೆ ಸೇರಿತ್ತೆಂದು ತಿಳಿದುಬರುತ್ತದೆ. *

**ಸುಬೋಧ ರಾಮರಾಯ:** 1890–1970. ಸುಬೋಧ ಎಂಬ ಮಾಸ ಪತ್ರಿಕೆಯ ಸಂಪಾದಕರಾಗಿ, ನೈತಿಕ ಮೌಲ್ಯವುಳ್ಳ ನೂರಾರು ಮಕ್ಕಳ ಪುಸ್ತಕಗಳ ಕರ್ತೃವಾಗಿ ಹೆಸರಾದವರು. ಹುಟ್ಟಿದ್ದು ಚಿಕ್ಕಮಗಳೂರಿನಲ್ಲಾದರೂ ಬಡತನದಲ್ಲಿ ಬಾಲ್ಯವನ್ನು ಕಳೆದದ್ದು ಶಿವಮೊಗ್ಗ, ಹೊನ್ನಾಳಿ, ಬೆಂಗಳೂರುಗಳಲ್ಲಿ. ಉಟ್ಟ ಸಾದಾ ಉಡುಪಿನೊಂದಿಗೆ ಹದಿನೇಳನೆಯ ಪ್ರಾಯದಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದರು. ಸುಮಾರು ಅರವತ್ತು ಮೂರು ವರ್ಷಗಳ ಕಾಲ ಬೆಂಗಳೂರಿನ ಪ್ರಜೆಯಾಗಿದ್ದು, ಅಧ್ಯಾಪಕರಾಗಿ, ಲೇಖಕರಾಗಿ, ಉಪನ್ಯಾಸಕರಾಗಿ, ಪತ್ರಿಕಾ ಸಂಪಾದಕರಾಗಿ, ಪುರಸಭೆಯ ಸದಸ್ಯರಾಗಿ, ಹಲವು ಸಂಘಸಂಸ್ಥೆಗಳ ಸಂಸ್ಥಾಪಕರಾಗಿ, ಸದಸ್ಯ ಅಧ್ಯಕ್ಷ ಉಪಾಧ್ಯಕ್ಷ ಕಾರ್ಯದರ್ಶಿಗಳಾಗಿ ವಿವಿಧ ರೀತಿಯಲ್ಲಿ ನಾಡುನುಡಿಗಳ ಸೇವೆಯನ್ನು ನಿಃಸ್ವಾರ್ಥವಾಗಿ ಮಾಡಿದರು. ಐವತ್ತು ನಾಲ್ಕು ವರ್ಷಗಳ ಕಾಲ ಶ್ರಮಿಸಿ ನೂರ ಅರವತ್ತು ಕೃತಿಗಳನ್ನು ರಚಿಸಿದರು. ನಲವತ್ತುನಾಲ್ಕು ವರ್ಷಗಳ ಕಾಲ ಸುಬೋಧ ಪತ್ರಿಕೆಯನ್ನು ನಡೆಸಿಕೊಂಡು ಬಂದರು. ಸುಧಾ ಪತ್ರಿಕೆಯ ವಿಶೇಷ ಸಂಚಿಕೆಗಳು, ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯ ನೂರ ನಲವತ್ತು ಪುಸ್ತಕಗಳು, ಹರಿದಾಸ ಕೀರ್ತನ ತರಂಗಿಣಿಯ ಒಂಬತ್ತು ಗ್ರಂಥಗಳು, ರಾಮಾಯಣ ಮಹಾಭಾರತ ಭಾಗವತಸಾರಗಳೇ ಮೊದಲಾದ ಇತರ ಹನ್ನೊಂದು ಕೃತಿಗಳು ಇವು ಕನ್ನಡ ಸಾರಸ್ವತ ಲೋಕದಲ್ಲಿ ಇವರ ಅಪೂರ್ವಸೇವೆಯ ಸ್ಮಾರಕವಾಗಿ ಬಹುಕಾಲ ನಿಲ್ಲತಕ್ಕವಾಗಿವೆ.

ಸುಭೋಧ ಪತ್ರಿಕೆ ರುಚಿಶುದ್ಧಿಯ ಬೋಧಪ್ರದವಾದ ಮಾಸಿಕ. ಅದರ ಮೊದಲ ಪುಟದಲ್ಲಿ ದಾಸರ ಒಂದು ಹಾಡು ಇರುತ್ತಿತ್ತು. ಒಳಗೆ ರೋಚಕವಾದ ಕಥೆಗಳು, ವಿಚಾರ ಪ್ರಧಾನವಾದ ಲೇಖನಗಳು, ಪುಸ್ತಕ ವಿಮರ್ಶೆ ಮೊದಲಾದುವು ಇರುತ್ತಿದ್ದುವು. ರಾಮರಾಯರ ಅನಂತರ ಅವರ ಮಗ ಸಬೋಧ ಪ್ರಹ್ಲಾದರಾಯರು ಈ ಪತ್ರಿಕೆಯನ್ನು ಕೆಲಕಾಲ ನಡೆಸಿದರು. ರಂಗುರಂಗಿನ ಚಿತ್ರ ಹಾಗೂ ವಿಷಯಗಳನ್ನೊಳಗೊಂಡ ಇತರ ಪತ್ರಿಕೆಗಳೊಡನೆ ಸ್ಪರ್ಧಿಸಲಾಗದೆ ಸುಬೋಧ ಈಗ ನಿಂತುಹೋಗಿದೆ.

**ಸುಬೋಧ ಕುಸುಮಾಂಜಲಿ ಗ್ರಂಥಮಾಲೆ:** ಸು. 80 ವರ್ಷಗಳ ಹಿಂದೆ ಬೆಳೆಯುವ ಚೇತನಕ್ಕೆ, ವಿದ್ಯೆ ಹೆಚ್ಚಿಲ್ಲದವರಿಗೆ, ಪ್ರಪಂಚದ ಅನೇಕ ಪ್ರಸಿದ್ಧ ಪುರುಷರ, ಮಹಿಳಾಮಣಿಯರ ಜೀವನ–ಸಾಧನೆಗಳನ್ನು ಸರಳವಾಗಿ ಸಂಗ್ರಹವಾಗಿ ತಿಳಿಸುವ ಧ್ಯೇಯದಿಂದ ರಾಮರಾಯರು ಆರಂಭಿಸಿದ ಗ್ರಂಥಮಾಲೆ. ಈ ಗ್ರಂಥಮಾಲೆಯ ಕುಸುಮಗಳು ತಿಂಗಳಿಗೊಂದರಂತೆ ಪ್ರಕಟವಾಗುತ್ತಿದ್ದುವು. ವಾರ್ಷಿಕ ಚಂದಾ ಒಂದೂವರೆ



ರೂಪಾಯಿ ಮಾತ್ರ. ಹೀಗೆ ಈ ಮಾಲೆ ಪ್ರಕಟಿಸಿದ್ದು ನೂರನಲವತ್ತು ಪುಸ್ತಕಗಳು. ನಾರದ ಪ್ರಹ್ಲಾದರಂಥ ಭಗವದ್ಭಕ್ತರು, ಬುದ್ಧ ಶಂಕರ ಮಧ್ವರಂಥ ಮತೋದ್ಧಾರಕರು, ರಾಮಕೃಷ್ಣ ಪರಮಹಂಸ ನಾನಕ್ ರಾಘವೇಂದ್ರ ಸ್ವಾಮಿಗಳಂಥ ಧರ್ಮೋದ್ಧಾರಕರು, ವಾಲ್ಮೀಕಿ ಭಗೀರಥರಂಥ ಪೌರಾಣಿಕ ಪುರುಷರು; ಶಕುಂತಲೆ ಸಾವಿತ್ರಿ ಸೀತಾದೇವಿಯರಂಥ ಪವಿತ್ರ ಮಹಿಳಾ ಮಣಿಗಳು, ಅಶೋಕ ಶಿವಾಜಿ ಸಾಲಾರ್ ಜಂಗರಂಥ ಚಾರಿತ್ರಿಕ ವ್ಯಕ್ತಿಗಳು, ಝಾನ್ಸಿ ರಾಣಿ ಲಕ್ಷ್ಮೀಬಾಯಿಯರಂಥ ಐತಿಹಾಸಿಕ ವೀರಮಹಿಳೆಯರು, ಗಾಂಧಿ, ಗೋಖಲೆ, ತಾತ ಅವರಂಥ ಆಧುನಿಕ ಮಹಾಪುರುಷರು, ಲಿಂಕನ್, ನೆಪೋಲಿಯನ್, ಸಾಕ್ರಟೀಸ್ ಮೊದಲಾದವರಂಥ ಮಹಾವ್ಯಕ್ತಿಗಳು– ಹೀಗೆ ಈ ಕುಸುಮಾಂಜಲಿಯ ಪ್ರಕಟಣೆಗಳಲ್ಲಿ ಎಲ್ಲ ವಿಧದ ವ್ಯಕ್ತಿಗಳನ್ನೂ ಕುರಿತಂತೆ ಗ್ರಂಥಗಳಿವೆ. ಲೇಖಕರಿಗೂ ಉಪನ್ಯಾಸಕರಿಗೂ ಅರಿವಿನ ದಾಹವುಳ್ಳವರಿಗೂ ವಿದ್ಯಾರ್ಥಿಗಳಿಗೂ ಬಲು ಉಪಯುಕ್ತವಾದ ಸಾಮಗ್ರಿ ಇಲ್ಲಿದೆ. ಏಕಾಂಗಿಯಾಗಿ ಒಬ್ಬ ವ್ಯಕ್ತಿ ಕೇವಲ ಚಂದಾದಾರರ ನೆರವಿನಿಂದ ರಚಿಸಿ

ಇಂಥ ಪುಸ್ತಕಗಳನ್ನು ಪ್ರಕಟಿಸಿದ್ದು ಪ್ರಶಂಸನೀಯವಾದ ಒಂದು ಸಾಧನೆಯೇ. ಈ ಕೃತಿಗಳ ವೈಶಿಷ್ಟ್ಯವೆಂದರೆ ಇವಕ್ಕೆ ರಾಮರಾಯರು ಬರೆದಿರುವ ಮುನ್ನುಡಿಗಳು. ಅವುಗಳಲ್ಲಿ ರಾಯರು ಅಂದಂದಿನ ಸಾಮಾಜಿಕ ರಾಜಕೀಯ ಪರಿಸ್ಥಿತಿಗಳನ್ನು ಸರಳವಾಗಿ ಚರ್ಚಿಸಿ ಆಯಾ ಮಹಾವ್ಯಕ್ತಿ ಏನನ್ನು ಎದುರಿಸಿ ಏನನ್ನು ಸಾಧಿಸಿತು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಗ್ರಂಥಗಳ ಭಾಷೆಯಂತೂ ವ್ಯಾಕರಣಶುದ್ಧವಾಗಿ ಸರಳವಾಗಿ ಇದೆ.

ರಾಮರಾಯರ ಅನಂತರ ಇವರ ಮಗ ಸುಬೋಧ ಪ್ರಹ್ಲಾದರಾಯರು ಈ ಮಾಲೆಯ ಅನೇಕ ಪುಸ್ತಕಗಳನ್ನು ಬಲು ಸುಂದರವಾಗಿ ಮರು ಮುದ್ರಿಸಿದರು. *

**ಸುಬ್ಬಣ್ಣ, ಕೆ.ವಿ.:** 1932–2005. ಮ್ಯಾಗ್ಸೇಸೆ ಪ್ರಶಸ್ತಿ ಪುರಸ್ಕೃತ ಪ್ರಸಿದ್ಧ ರಂಗಕರ್ಮಿ, ಸಾಹಿತಿ. ಇವರ ಪೂರ್ಣಹೆಸರು ಕುಂಟಗೋಡು ವಿಭೂತಿ ಸುಬ್ಬಣ್ಣ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೊನ್ನೇಸರದಲ್ಲಿ 1932 ಫೆಬ್ರವರಿ 30ರಂದು ಜನಿಸಿದರು. ಇವರ ತಂದೆ ರಾಮಪ್ಪ, ತಾಯಿ ಸಾವಿತ್ರಮ್ಮ. ನೀಲಕಂಠೇಶ್ವರ ನಾಟ್ಯ ಸೇವಾ ಸಂಘದ(ನೀನಾಸಂ) ಸ್ಥಾಪಕ ಸದಸ್ಯರಾಗಿ, ಅಕ್ಷರ ಪ್ರಕಾಶನದ ಸ್ಥಾಪಕರಾಗಿ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಹೆಗ್ಗೋಡು ಹಳ್ಳಿಗೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಸ್ಥಾನಮಾನ ತಂದಿದ್ದಾರೆ.



ಇವರು ಸಾಗರ, ಶಿವಮೊಗ್ಗ ಹಾಗೂ ಮೈಸೂರುಗಳಲ್ಲಿ ವ್ಯಾಸಂಗ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಸಾಹಿತ್ಯದ ಬಿ.ಎ. ಆನರ್ಸ್‌ನಲ್ಲಿ ಮೊದಲ ರ್‍ಯಾಂಕ್ ಪಡೆದರು (1953). ತರುವಾಯ ತಮ್ಮ ಹಳ್ಳಿಗೆ ಮರಳಿದರು. ಮನೆತನದ ಮೂಲ ಉದ್ಯೋಗವಾಗಿದ್ದ ಅಡಕೆ ಕೃಷಿಯಲ್ಲಿ ತೊಡಗಿಸಿ ಕೊಂಡರು. ಬಿಡುವಿನ ವೇಳೆಯಲ್ಲಿ ಲೇಖಕರಾಗಿ, ನಾಟಕಕಾರರಾಗಿ, ಸಂಘಟಕರಾಗಿ, ಸಮಕಾಲೀನ ವಿಚಾರಗಳಿಗೆ ತೀವ್ರವಾಗಿ ಸ್ಪಂದಿಸುವ ಚಿಂತಕರಾಗಿ ಪ್ರಸಿದ್ಧರಾದರು.

ಹೆಗ್ಗೋಡಿನ ನೀನಾಸಂ ಚಿತ್ರಸಮಾಜ, ನೀನಾಸಂ ರಂಗಶಿಕ್ಷಣ ಕೇಂದ್ರ, ನೀನಾಸಂ ಪ್ರತಿಷ್ಠಾನ ಮುಂತಾಗಿ 1953ರಿಂದ ನೀನಾಸಂ ಕೈಗೊಂಡ ಎಲ್ಲ ಚಟುವಟಿಕೆಗಳ ಹಿಂದೆ ಇವರ ಪರಿಶ್ರಮವಿದೆ. ಇದನ್ನು ಗುರುತಿಸಿ 1991ರಲ್ಲಿ ಸೃಜನಶೀಲ ಸಂವಹನಕ್ಕಾಗಿ ಮ್ಯಾಗ್ಸೇಸೆ ಅಂತಾರಾಷ್ಟ್ರೀಯ ಪುರಸ್ಕಾರ ಲಭಿಸಿತು.

ಇವರು 1958ರಲ್ಲಿ ಆರಂಭಿಸಿದ ಅಕ್ಷರ ಪ್ರಕಾಶನ ಈವರೆಗೆ 400ಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತಂದಿದೆ. ಕನ್ನಡದಲ್ಲಿ ಸಿನಿಮಾ ಮತ್ತು ನಾಟಕ ಕುರಿತ ಕೃತಿಗಳು ಇದರಲ್ಲಿ ಸೇರಿವೆ. ಕನ್ನಡದಲ್ಲಿ 1960ರ ದಶಕದಲ್ಲಿ ಪ್ರಕಟಗೊಂಡ ನವ್ಯ ಚಳವಳಿಗೆ ನೀರೆರೆದ ಹೆಮ್ಮೆ ಅಕ್ಷರ ಪ್ರಕಾಶನದ್ದು. ಗೋಪಾಲಕೃಷ್ಣ ಅಡಿಗರು ಸಂಪಾದಿಸುತ್ತಿದ್ದ ಸಾಕ್ಷಿ ಪತ್ರಿಕೆಗೆ ಇವರು ಪ್ರಕಾಶಕರಾಗಿದ್ದರು.

ಇವರ ಪ್ರಕಟಿತ ಕೃತಿಗಳು ವೈವಿಧ್ಯಮಯವಾಗಿವೆ. ಕೈಲಾಸಂ ದರ್ಶನ (1952), ನಾವು ತಿನ್ನುವ ಅಡಕೆ (1953), ಜೇನು ಸಾಕುವ ಬಗೆ (1955), ಗೋರ್ಕಿಯ ಕಥೆಗಳು (ಗೋರ್ಕಿ ಕಥೆಗಳ ಭಾಷಾಂತರ, 1955), ಬಾಗಿನ (ಸಂಪಾದನಗ್ರಂಥ, 1956), ಹೂವು ಚೆಲ್ಲಿದ ಹಾದಿಯಲ್ಲಿ (ಕವನ ಸಂಕಲನ, 1957), ಅಭಿಸಾರ (ರೇಡಿಯೊನಾಟಕಗಳು, 1957), ದಶರೂಪಕ (ಸಂಸ್ಕೃತ ನಾಟಕದ ಸಿದ್ಧಾಂತಗಳ ಭಾಷಾಂತರ, 1958), ಅವರು ನೀಡಿದ ದೀಪ (ಜನಪದ ಸಾಹಿತ್ಯ ಪರಿಚಯ, 1958), ರಾಜಕೀಯದ ಮಧ್ಯೆ ಬಿಡುವು (ಲೋಹಿಯ ಕುರಿತು, 1970), ಕಾಡಿನಲ್ಲಿ ಕಥೆ (ಮಕ್ಕಳ ನಾಟಕ, 1971), ಚಲನಚಿತ್ರದ ಮಹಾನೌಕೆ (ಐನ್‌ಸ್ಟೀನ್‌ನ ಬ್ಯಾಟಲ್‌ಶಿಪ್ ಪೊಟೆಮ್ಕಿನ್ ಚಿತ್ರಕಥೆಯ ಅನುವಾದ, 1974), ಭಗವದುಜ್ಜುಕೀಯಂ ಮತ್ತು ಸೂಳೆ ಸನ್ಯಾಸ (ಸಂಸ್ಕೃತ ನಾಟಕ ರೂಪಾಂತರ, 1977), ಅಂಚೆಮನೆ (ಮಕ್ಕಳ ನಾಟಕದ ರೂಪಾಂತರ, 1978), ಬೈಸಿಕಲ್ ಥೀವ್ಸ್ (ಭಾಷಾಂತರ, 1979), ನಾಟಕ ಮತ್ತು ಸಿನಿಮಾ (1979), ಅಭಿವೃದ್ಧಿಗಾಗಿ ಸಿನಿಮಾ (1980), ಪಥೇರ್ ಪಾಂಚಾಲಿ (ಭಾಷಾಂತರ, 1980), ಮಾರ್ಕ್ಸ್‌ವಾದ ಮತ್ತು ಗಾಂಧಿ (ಮಧು ದಂಡವತೆಯವರ ಪುಸ್ತಕದ ಭಾಷಾಂತರ, ಅಕ್ಷರ ಅವರೊಡನೆ, 1980), ಸಿನಿಮಾ ಯಂತ್ರ ಭಾಷೆ (1980), ಬೆಟ್ಟಕ್ಕೆ ಚಳಿಯಾದರೆ (ಮಕ್ಕಳ ನಾಟಕ, 1981), ರಂಗದಲ್ಲಿ ಅಂತರಂಗ (ಭಾಷಾಂತರ, 1982), ರಂಗಮಾಧ್ಯಮ ಚಿತ್ರಮಾಧ್ಯಮ (1982), ಜೆನ್–ಕಥೆಗಳು(1982), ಜಯಂತ್ ಮಾಮ (ಮಕ್ಕಳ ನಾಟಕ, 1984), ನನ್ನ ಪ್ರೀತಿಯ ಹಿರೋಷಿಮಾ (ಅನುವಾದ, 1985), ಸೆಜುವಾನ್ ನಗರದ ಸಾಧ್ವಿ (1987), ಮೂರು ಕಾಸಿನ ಸಂಗೀತ ನಾಟಕ (1987), ತಾಯಿ (1987), ಬ್ರೆಕ್ಟನ ನಾಟಕಗಳ ಭಾಷಾಂತರಗಳು, ಲೋಕ ಶಾಕುಂತಲ (ಕಾಳಿದಾಸನ ಅಭಿಜ್ಞಾನ ಶಾಕುಂತಲ ಆಧರಿಸಿದ ನಾಟಕ 1990) ವೋಯ್‌ಜೆಕ್ (ಜರ್ಮನ್ ನಾಟಕದ ಭಾಷಾಂತರ, 1993), ಆಯ್ದ ಬರೆಹಗಳು (1992), ಅಥೆನ್ಸಿನ ಅರ್ಥವಂತ (ಷೇಕ್ಸ್‌ಪಿಯರನ ನಾಟಕದ ಭಾಷಾಂತರ), ಕುವೆಂಪುಗೆ ಪುಟ್ಟ ಕನ್ನಡಿ (1995) ಮತ್ತು ನಮ್ಮ ತವಕ ತಲ್ಲಣಗಳು (1998). ಇವರಿಗೆ ನಮ್ಮ ಸುಬ್ಬಣ್ಣ ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಗಿದೆ.

ಇವರು ಸಮಕಾಲೀನ ಸಂಗತಿಗಳಿಗೆ ತೀವ್ರವಾಗಿ ಸ್ಪಂದಿಸುವ ಸ್ವಭಾವದವರೂ ಆಗಿದ್ದರು. ತಮಗೆ ಅನ್ನಿಸಿದ್ದನ್ನು ನಿರ್ಭಿಡೆಯಿಂದ ಹೇಳುವ ಜಾಯಮಾನದವರು. ಇವರು ಸಂಘಟಿಸಿದ 'ನೀನಾಸಂ ಸಂಸ್ಕೃತಿ ಶಿಬಿರಗಳು' ಪ್ರಾಚೀನ ಹಾಗೂ ಅರ್ವಾಚೀನ ಭಾರತದ ಒಳಿತು ಕೆಡುಕುಗಳನ್ನು ತಲಸ್ಪರ್ಶಿಯಾಗಿ ಚರ್ಚಿಸುವ ವೇದಿಕೆಯೆಂದು ಹೆಸರಾಗಿದೆ. ಶೈಲಜಾ ಇವರ ಪತ್ನಿ. ರಂಗಕರ್ಮಿ ಹಾಗೂ ಪ್ರಕಾಶಕ ಕೆ.ವಿ.ಅಕ್ಷರ ಇವರ ಮಗ. ಸುಬ್ಬಣ್ಣನವರು 2005 ಜುಲೈನಲ್ಲಿ ನಿಧನರಾದರು. *

**ಸುಬ್ಬಯ್ಯ ಅಂಜಪರವಂದ ಭೂಪಯ್ಯ:** 1970– . ಅಂತಾರಾಷ್ಟ್ರೀಯ ಪ್ರಸಿದ್ಧ ಹಾಕಿ ಆಟಗಾರ. ಅತ್ಯುತ್ತಮ ಗೋಲ್‌ಕೀಪರ್. ಕ್ರೀಡಾವಲಯದಲ್ಲಿ ಸುಬ್ಬಿ ಎಂದೇ ಜನಪ್ರಿಯರಾಗಿದ್ದಾರೆ. ಇವರು 1970 ಆಗಸ್ಟ್ 8ರಂದು ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೂರ್ಗ್ ಸೇಂಟ್ ಮೈಕಲ್ ಶಾಲೆಯಲ್ಲಿ ಪಡೆದರು. ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಓದಿ ಪದವಿ ಪಡೆದರು. ಇವರು ಬೆಂಗಳೂರು ವಿಶ್ವವಿದ್ಯಾಲಯದ ಹಾಕಿ ತಂಡವನ್ನು ಪ್ರತಿನಿಧಿಸಿದ್ದರು. ಆಗ ಸು. 6 ವರ್ಷ ಕ್ರೀಡಾ ಹಾಸ್ಟೆಲ್ ತಂಡದ ನಾಯಕರಾಗಿದ್ದರು. ಕಿರಿಯ ಮತ್ತು ಹಿರಿಯ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ ಎಂ.ಸಿ.ಸಿ. ಟೂರ್ನಮೆಂಟ್‌ನಲ್ಲಿ ಗೆಲುವು ಸಾಧಿಸಿದರು (1986).

ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಸೇವೆಸಲ್ಲಿಸುತ್ತಿರುವ ಇವರು 1988 ರಿಂದಲೂ ಭಾರತ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಇವರು ತಂಡದಲ್ಲಿದ್ದಾಗ ಮಾಡಿದ ಸಾಧನೆಗಳಿವು: ರಾಷ್ಟ್ರೀಯ ಚಾಂಪಿಯನ್ (1994), ಹಾಕಿ ಫೆಡರೇಷನ್ ಕಪ್ (1995), ಜವಹರ್‌ಲಾಲ್ ನೆಹರು ಕಪ್ (1988–90), ಇಂದಿರಾಗಾಂಧಿ ಗೋಲ್ಡ್‌ಕಪ್ (1998), ಕೆ.ಡಿ. ಸಿಂಗ್‌ಬಾಬು ಹಾಕಿ ಪಂದ್ಯಾವಳಿ (1988–89), ಸಿಂಧಿಯ ಕಪ್ (1991), ಲಾಲ್‌ಬಹದ್ದೂರ್ ಶಾಸ್ತ್ರಿ ಪಂದ್ಯಾವಳಿ (1997). 1994–95ರ ಏರ್‌ಲೈನ್ಸ್ ತಂಡದಲ್ಲಿ ಉತ್ತಮ ಗೋಲ್‌ಕೀಪರ್ ಆಗಿ ಕಾರ್ಯನಿರ್ವಹಿಸಿದ್ದಾರೆ. 1989ರಲ್ಲಿ ದೆಹಲಿಯಲ್ಲಿ ನಡೆದ ಏಷ್ಯಕಪ್ ಪಂದ್ಯಾವಳಿಯಲ್ಲೂ ಜರ್ಮನಿಯಲ್ಲಿ ನಡೆದ ಚಾಂಪಿಯನ್ ಶಿಪ್ ಟ್ರೋಫಿಯಲ್ಲೂ ಸ್ಟ್ಯಾಂಡ್–ಬೈ ಆಗಿ ಆಯ್ಕೆಯಾಗಿದ್ದರು.

ಇವರು ಬೀಜಿಂಗ್ (1990), ಹಿರೋಶಿಮ (1994)ಗಳಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಇವರು ಬಾರ್ಸಿಲೋನ ಒಲಂಪಿಕ್ (1992), ಅಟ್ಲಾಂಟ ಒಲಂಪಿಕ್ಸ್‌ನಲ್ಲಿ (1996) ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಇವರು 1991 ಮತ್ತು 1995ರಲ್ಲಿ ಕೌಲಾಲಂಪುರದಲ್ಲಿ ನಡೆದ ಸುಲ್ತಾನ್ ಅಜ್ಲನ್‌ಷಾ ಪಂದ್ಯಾವಳಿಗಳಲ್ಲಿ ಜಯಗಳಿಸಿದ್ದಾರೆ. ಇವರು ಸು. 260 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದಾರೆ. ಇವರ ಕ್ರೀಡಾ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿ (1993), ಕೊಡವ ಸಮಾಜ ಪ್ರಶಸ್ತಿ (1996), ಭಾರತ ಸರ್ಕಾರದ ಅರ್ಜುನ ಪ್ರಶಸ್ತಿ (1996) ಲಭ್ಯವಾಗಿವೆ. **(ಎಸ್.ಆರ್.ಯು.)**

**ಸುಬ್ಬಯ್ಯನಾಯ್ಡು, ಎಂ.ವಿ.:** 1896–1962. ಪ್ರಸಿದ್ಧ ರಂಗಭೂಮಿ ಮತ್ತು ಚಲನಚಿತ್ರ ನಟ, ನಿರ್ದೇಶಕ. ಹುಟ್ಟಿದ್ದು ಮೈಸೂರು ಜಿಲ್ಲೆಯ ಮಾದಲಾಪುರದಲ್ಲಿ, 1896ರಲ್ಲಿ. ತಂದೆ ವೆಂಕಟರಾಮಪ್ಪ, ತಾಯಿ ರಂಗಮ್ಮ, ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಹಲವು ಬಗೆಯ ಕಷ್ಟಗಳನ್ನು ಎದುರಿಸಿದರು. ತಾಯಿಯ ಜೊತೆಯಲ್ಲಿ ಹೆಗ್ಗಡದೇವನ ಕೋಟೆಯಲ್ಲಿದ್ದ ಸೋದರಮಾವನ ಮನೆಯಲ್ಲಿ ಸ್ವಲ್ಪಕಾಲ ನಿಂತು, ಎಮ್ಮೆ ಕಾಯುವ ಕೆಲಸವನ್ನು ಮಾಡಿದರು. ಅನಂತರ ಸಂತೆಸರಗೂರಿನ ಶ್ಯಾನುಭೋಗರ ಮನೆಯಲ್ಲಿ ದುಡಿದರು. ಮುಂದೆ ಇವರು ಮೈಸೂರಿಗೆ ಬಂದು ಒಂದು ಮಂಡಿಯನ್ನು ಸೇರಿ ಜೀವನೋಪಾಯಕ್ಕೆ ದಾರಿ ಮಾಡಿಕೊಂಡರು. ಚಿಕ್ಕಂದಿನಲ್ಲಿಯೇ ನಾಟಕದ ಖಯಾಲಿ ಹತ್ತಿಸಿಕೊಂಡಿದ್ದ ಇವರು ಊಟಕ್ಕೆ ಇಲ್ಲದಿದ್ದರೂ ದುಡ್ಡು ಕೊಟ್ಟು ನಾಟಕ ನೋಡುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದರು. ಮೈಸೂರಿಗೆ ಬಂದ ಮೇಲೆ ಗರಡಿಮನೆ ಸೇರಿ ಕಸರತ್ತು ಮಾಡಿ ಕುಸ್ತಿಯನ್ನು ಕಲಿತರು; ಅನೇಕ ಕುಸ್ತಿ ಪಂದ್ಯಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿದರು. ಆಗ್ಗೆ ಮೈಸೂರಿನಲ್ಲಿ ಪ್ರಸಿದ್ಧ ನಟರಾಗಿದ್ದ ಎಂ.ವಿ. ಮಾದಪ್ಪ ನವರ ಮಾರ್ಗದರ್ಶನದಲ್ಲಿ ಸಂಗೀತವನ್ನೂ ಅಭಿನಯದಲ್ಲಿ ತರಬೇತಿಯನ್ನೂ ಗಳಿಸಿಕೊಂಡರು. ಮೈಸೂರಿನ ಶಾಕುಂತಲಾ ಕಂಪನಿಯನ್ನು ಸೇರಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಿದ ಇವರು ತುಮಕೂರಿನ ಸೀತಾರಾಮ ಮನೋಹರ ನಾಟಕ ಮಂಡಳಿ ಸೇರಿ ಅನೇಕ ಸ್ತ್ರೀ ಪಾತ್ರಗಳನ್ನು ನಿರ್ವಹಿಸಿ ಹೆಸರು ಗಳಿಸಿದರು. ಅನಂತರ ಚನ್ನಪಟ್ಟಣದ ಭಾರತ ಜನಮನೋಲ್ಲಾಸಿನೀ ನಾಟಕ ಕಂಪನಿಯನ್ನು (ಗುರಿಕಾರ್ ಕಂಪನಿ) ಸೇರಿ ತಮ್ಮ ಅಭಿನಯ ಕಲೆಯನ್ನು ಪ್ರಕಟಿಸಿದರು. ಈ ಕಂಪನಿಯಲ್ಲಿ ಇವರಿಗೆ ಬಿ.ವಿ. ಗುರುಮೂರ್ತಪ್ಪ, ಗಂಗಾಧರರಾವ್, ಎಂ.ಸುಬ್ಬರಾವ್, ಮಹಮ್ಮದ್ ಪೀರ್ ಮೊದಲಾದ ಶ್ರೇಷ್ಠ ನಟರ ಸಹಚರ್ಯೆ ದೊರಕಿತು. ಇವರು ಗುಬ್ಬಿ ನಾಟಕ ಕಂಪನಿಯನ್ನು ಸೇರಿ (1926–27) ನಿರ್ವಹಿಸಿದ ಸ್ತ್ರೀ ಪಾತ್ರಗಳು ಇವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟವು. ಆ ನಾಟಕ ಕಂಪನಿಯ ಮುಖ್ಯ ನಟರಾಗಿದ್ದ ಇವರು ರಾಜಭಕ್ತಿ ನಾಟಕದಲ್ಲಿ ವಿಕ್ರಾಂತನ ಪಾತ್ರ, ಕರ್ನಾಟಕ ಸಾಮ್ರಾಜ್ಯ ನಾಟಕದಲ್ಲಿ ತಿರುಮಲರಾಯ, ಸ್ವಾಮಿನಿಷ್ಠೆ ನಾಟಕದಲ್ಲಿ ಶಿವಾಜಿಯ ಪಾತ್ರ– ಇವುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಿ ಜನಪ್ರಿಯರಾದರು; ಶ್ರೇಷ್ಠನಟನೆಂಬ ಕೀರ್ತಿಗೂ ಭಾಜನರಾದರು. ಆರ್. ನಾಗೇಂದ್ರರಾಯರ ಸಹಕಾರದಿಂದ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ಎಂಬ ಸ್ವತಂತ್ರ ನಾಟಕ ಮಂಡಳಿಯನ್ನು ಆರಂಭಿಸಿದ (1932) ಇವರು ಭೂಕೈಲಾಸ, ಸದಾರಮೆ, ವಸಂತಸೇನಾ, ನಿರುಪಮಾ, ಕೀಚಕವಧೆ

ಮುಂತಾದ ಅನೇಕ ನಾಟಕಗಳನ್ನು ಪ್ರದರ್ಶಿಸಿದರು. ಇವುಗಳಲ್ಲಿ ಭೂಕೈಲಾಸ ಮತ್ತು ವಸಂತಸೇನಾ ನಾಟಕಗಳು ತುಂಬ ಜನಪ್ರಿಯವಾದುವು. ಮಂಗಳೂರು, ಬಿಜಾಪುರ, ಗದಗ, ಬಾಗಲಕೋಟೆ ಮುಂತಾದ ನಾಡಿನ ನಾನಾ ಸ್ಥಳಗಳಲ್ಲದೆ, ನಾಡಿನ ಹೊರಗಿನ ಸ್ಥಳಗಳಾದ ಮದರಾಸು (ಚೆನ್ನೈ), ಕರ್ನೂಲುಗಳಲ್ಲೂ ಈ ಕಂಪನಿ ಪ್ರದರ್ಶಿಸಿದ ನಾಟಕಗಳು ಜನಪ್ರಿಯವಾದುವು. ಪ್ರಯೋಗ ರಂಗಸಜ್ಜಿಕೆಗಳನ್ನು ಅಳವಡಿಸಿ, ನಾಟಕಗಳನ್ನು ಪ್ರದರ್ಶಿಸುತ್ತಿದ್ದರು.

ಸುಬ್ಬಯ್ಯನಾಯ್ಡು ಅವರು ಚಲನಚಿತ್ರ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ಗುಬ್ಬಿ ವೀರಣ್ಣನವರು ನಿರ್ಮಿಸಿದ ಮೂಕಿಚಿತ್ರ ಹಿಸ್ ಲವ್ ಅಫೇರ್ ಮೂಲಕ ಚಿತ್ರರಂಗವನ್ನು ಪ್ರವೇಶಿಸಿದ ಇವರು ಪ್ರಥಮ ಕನ್ನಡ ವಾಕ್ಚಿತ್ರ ಸತಿ ಸುಲೋಚನದಲ್ಲಿ (1934) ನಾಯಕ ಪಾತ್ರವನ್ನು (ಇಂದ್ರಜಿತು) ನಿರ್ವಹಿಸಿದರು. ಆ ಚಿತ್ರದಲ್ಲಿ ಅಭಿನಯಿಸಿದ ಲಕ್ಷ್ಮೀಬಾಯಿಯವರ ಪರಿಚಯವಾಗಿ ಅನಂತರ ಅವರನ್ನು ವಿವಾಹವಾದರು. ವಸಂತಸೇನೆ ಚಿತ್ರದಲ್ಲಿ ಚಾರುದತ್ತನ ಪಾತ್ರವನ್ನು ಅಭಿನಯಿಸಿದ ನಾಯ್ಡು ಅವರು ತೆಲುಗಿನಲ್ಲಿ ತಯಾರಾದ ಭೂಕೈಲಾಸದಲ್ಲೂ ಪಾತ್ರವಹಿಸಿದರು.

ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳೆರಡರಲ್ಲೂ ಸಾರ್ಥಕ ಸೇವೆ ಸಲ್ಲಿಸಿದ ಇವರಿಗೆ ಹಲವು ಬಗೆಯ ಪ್ರಶಸ್ತಿಗಳು, ಬಹುಮಾನಗಳು ಬಂದುವು. ಕನ್ನಡನಾಡಿನ ನಾನಾಭಾಗಗಳಲ್ಲಿ ಸನ್ಮಾನಿತರಾದ ಇವರನ್ನು ಮದರಾಸಿನ ಹೆಸರಾಂತ ಕಲಾವಿಲಾಸ ನಾಟಕ ಸಂಘವಾದ ಸುಗುಣವಿಲಾಸ ಸಭೆ ಚಿನ್ನದ ಪದಕ ನೀಡಿ ಗೌರವಿಸಿತು. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿಯ ಗೌರವಗಳೂ ಇವರಿಗೆ ಲಭಿಸಿವೆ. ಇವರು ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಆರ್ಥಿಕ ನಷ್ಟಕ್ಕೆ ಒಳಗಾಗಬೇಕಾಯಿತು. ಆದರೂ ಧೈರ್ಯದಿಂದ ರಂಗಭೂಮಿ ಸೇವೆಯನ್ನು ಮುಂದುವರಿಸಿದರು. ಇವರು ಮಂಡ್ಯದಲ್ಲಿ ಮೊಕ್ಕಾಂ ಮಾಡಿದ್ದಾಗ 1962 ಜುಲೈ 21ರಂದು ಹೃದಯಾಘಾತದಿಂದ ನಿಧನರಾದರು. *

**ಸುಬ್ಬರಾಯಪ್ಪ, ಡಿ.ಸಿ.:** 1878–1968. ಭಾಷಾ ಸೇವಕರು, ಸಮಾಜ ಸೇವಕರು. ದೊಡ್ಡಬಳ್ಳಾಪುರದ ದೇವಾಂಗ ಕುಟುಂಬವೊಂದರಲ್ಲಿ 1878ರಲ್ಲಿ ಜನಿಸಿದರು. ಇವರ ತಂದೆ ಶಿವಪ್ಪ. ಬೆಂಗಳೂರು ಸೆಂಟ್ರಲ್

ಕಾಲೇಜಿನಲ್ಲಿ ಬಿ.ಎಂ.ಶ್ರೀಕಂಠಯ್ಯನವರೊಂದಿಗೆ ಓದಿ ಕನ್ನಡದಲ್ಲಿ ಮೊದಲ ಶ್ರೇಣಿ ಪಡೆದು ಬಿ.ಎ. ಪದವೀಧರರಾಗಿ (1902) ಎಂಟು ತಿಂಗಳ ಕಾಲ ಅದೇ ಕಾಲೇಜಿನಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರ ಜಾಗದಲ್ಲಿ ಭೌತಶಾಸ್ತ್ರ ವಿಭಾಗದಲ್ಲಿ ಸಹಾಯಕರೆಂದು ಕೆಲಸ ಮಾಡಿದರು. ಆಮೇಲೆ ಬಿ.ಎಲ್. ಪದವಿಯನ್ನು ಪಡೆದು ದಿವಾನರ ಕಚೇರಿ, ಹುಜೂರು ಕಾರ್ಯದರ್ಶಿಗಳ ಕಚೇರಿ ಮತ್ತು ಕಂದಾಯ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದರು. ಇವರು ಕೆಲಕಾಲ ಮೈಸೂರು ನಗರ ನ್ಯಾಯಾಧೀಶರೂ ಆಗಿದ್ದರು. ಸರ್ಕಾರಿ ಸೇವೆಯಿಂದ 1936ರಲ್ಲಿ ನಿವೃತ್ತರಾದ ಇವರು ತಮ್ಮ ಬಿಡುವಿನ ವೇಳೆಯನ್ನು ಸಾರ್ವಜನಿಕ ಕೆಲಸಗಳಲ್ಲಿ ಕಳೆದರು. ಕನ್ನಡ, ಇಂಗ್ಲಿಷ್, ಸಂಸ್ಕೃತ, ಉರ್ದು ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿಕೊಂಡಿದ್ದ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿದ್ದರಲ್ಲದೆ, ಪರಿಷತ್ತಿನ ಕಾರ್ಯದರ್ಶಿ ಹಾಗೂ ಕೋಶಾಧಿಕಾರಿಗಳಾಗಿಯೂ ಪರಿಷತ್ಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದರು. ಇಂಗ್ಲಿಷ್–ಕನ್ನಡ ಮತ್ತು ಕನ್ನಡ–ಕನ್ನಡ ನಿಘಂಟುಗಳ ಸಂಪಾದಕ ಮಂಡಳಿಗಳ ಸದಸ್ಯರೂ ಆಗಿದ್ದರು. ಸರ್ಕಾರದ ಪಠ್ಯಪುಸ್ತಕ ಸಮಿತಿ, ಬೆಂಗಳೂರು ನಗರ ಸಾರಿಗೆ ಸಂಸ್ಥೆ, ಮೈಸೂರು ಸಕ್ಕರೆ ಕಾರ್ಖಾನೆ, ದೇವರಾಜ ಬಹದ್ದೂರ್ ಧರ್ಮನಿಧಿ ಸಮಿತಿ, ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬಸಪ್ಪ ಇಂಟರ್ ಮೀಡಿಯೇಟ್ ಕಾಲೇಜು, ಅಖಿಲ ಕರ್ನಾಟಕ ಮಕ್ಕಳ ಕೂಟ, ದೇವಾಂಗ ಸಂಘ, ಜನೋಪಕಾರಿ ದೊಡ್ಡಣ್ಣಶೆಟ್ಟರ ಮತ್ತು ಬಿ.ಕೆ.ಮರಿಯಪ್ಪನವರ ಧರ್ಮಸಂಸ್ಥೆಗಳು ಈ ಮುಂತಾದ ಸಂಘಸಂಸ್ಥೆಗಳ ಅಭಿವೃದ್ಧಿಗಾಗಿ ಇವರು ಶ್ರಮಿಸಿದರು. ಇವರ ಸಾರ್ವಜನಿಕ ಸೇವೆಯನ್ನುಗಮನಿಸಿ ಆಗಿನ ಮೈಸೂರು ಮಹಾರಾಜರು 1948ರಲ್ಲಿ ಇವರಿಗೆ ರಾಜಸೇವಾಸಕ್ತ ಎಂಬ ಬಿರುದನ್ನು ನೀಡಿ ಗೌರವಿಸಿದರು. (ಡಿ.ಎಸ್.ಎಸ್.)



**ಸುಬ್ಬರಾವ್, ಅ.ನ.:** 1891–1981. ಸುಪ್ರಸಿದ್ಧ ಕಲಾಶಿಕ್ಷಕ, ಕಲಾವಿದ ಹಾಗೂ ಕಲಾಪತ್ರಿಕೋದ್ಯಮಿ. ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಗ್ರಾಮದಲ್ಲಿ 1891ರಲ್ಲಿ ಜನಿಸಿದರು. ತಂದೆ ನರಸಿಂಹಯ್ಯ, ತಾಯಿ ವೆಂಕಮ್ಮ.

ಎಳೆ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಇವರು ತಾಯಿಯ ಜೊತೆ ನಾಗಮಂಗಲದಲ್ಲಿ ತಮ್ಮ ವಿದ್ಯಾಭ್ಯಾಸ ಪ್ರಾರಂಭಿಸಿದರು. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಇವರು ವಾಸಿಸುತ್ತಿದ್ದ ಬೀದಿಯಲ್ಲಿದ್ದ ವಿಶ್ವಕರ್ಮ ವಂಶಸ್ಥರ ಪ್ರಭಾವದಿಂದ ಶಿಲ್ಪಕಲೆ ಹಾಗೂ ಚಿತ್ರಕಲೆಯಲ್ಲಿ ಆಸಕ್ತಿ ಉಂಟಾಯಿತಾದರೂ ಸಂಪ್ರದಾಯಸ್ಥ ಮನೆತನದಿಂದ ಬಂದ ಇವರಿಗೆ ಕಲಿಕೆ ತೊಡಕಾಯಿತು. ಇಂಥ ಪರಿಸ್ಥಿತಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸದ ಆಸೆ ತೊರೆದು ಜೀವನೋಪಾಯಕ್ಕಾಗಿ ತೋಟಗಾರಿಕೆ, ವ್ಯವಸಾಯ, ವ್ಯಾಪಾರಗಳಲ್ಲಿ ತೊಡಗಿಕೊಳ್ಳಬೇಕಾಯಿತು. ಅನಂತರ ತಮ್ಮ ಹಳ್ಳಿಯಲ್ಲಿ ಮೂರು ವರ್ಷ ಶಿಕ್ಷಕರಾಗಿ ದುಡಿದರು.

ಕೇವಲ ಹತ್ತು ತಿಂಗಳ ಶಿಕ್ಷಕ ತರಬೇತಿ ಪಡೆದು ಉತ್ತಮ ಉದ್ಯೋಗದ ಕನಸು ಹೊತ್ತು ಮೈಸೂರಿಗೆ ಬಂದರು. ನಾರ್ಮಲ್ ಸ್ಕೂಲ್‌ನಲ್ಲಿ ಹೆಸರಾಂತ ತತ್ವಶಾಸ್ತ್ರ ಪರಿಣತರೂ ಸೌಂದರ್ಯ ಮೀಮಾಂಸಕರೂ ಆದ ಹಿರಿಯಣ್ಣನವರು ಆ ಶಾಲೆಯ ಪ್ರಾಚಾರ್ಯರಾಗಿ ಇವರಿಗೆ ಆಶ್ರಯ ನೀಡಿದರು. ಈ ಸಂದರ್ಭದಲ್ಲಿ ಅನೇಕ ವಿಷಯಗಳ ಜೊತೆಗೆ ಚಿತ್ರಕಲೆಯನ್ನು ಕಲಿಯಲು ಜಗದೀಶನ್ ಎಂಬ ಕಲಾ ಶಿಕ್ಷಕರ ಸಹಾಯದಿಂದ ಮೂರುವರ್ಷ ಕಲಾಭ್ಯಾಸ ಮಾಡಿ ಮದರಾಸು ಸರ್ಕಾರ ನಡೆಸುತ್ತಿದ್ದ ಕಲಾ ಸಂಬಂಧಿ ಅನೇಕ ಪರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಿದರು. ನಾರ್ಮಲ್ ಟ್ರೈನಿಂಗ್ ಕಾಲೇಜಿನಲ್ಲಿ ಶಿಕ್ಷಕರಾಗಿ ಸೇರಿದರು. ಜೊತೆಗೆ ವಯಸ್ಕರ ಶಿಕ್ಷಕರ ತರಗತಿಗೂ ಕಲಾ ಶಿಕ್ಷಣ ನೀಡುವುದಕ್ಕೆ ಪ್ರಾರಂಭಿಸಿದರು.

ಚಿತ್ರಕಲೆ ಜೊತೆಗೆ ಮಣ್ಣಿನ ಮೂರ್ತಿಕಲೆ, ರಿಲೀಫ್ ಮ್ಯಾಪ್ ಮಾಡಲಿಂಗ್ ಕಾರ್ಯವನ್ನೂ ಮಾಡುತ್ತಿದ್ದರು. ಇವರು ಮಾಡಿದ ದಕ್ಷಿಣ ಭಾರತದ ರಿಲೀಫ್ ಮ್ಯಾಪಿಗೆ ದಸರ ವಸ್ತುಪ್ರದರ್ಶನದಲ್ಲಿ ರಜತ ಪದಕ ಬಹುಮಾನ ಲಭಿಸಿತು. ಈ ಸಂದರ್ಭದಲ್ಲೇ ಪುಷ್ಪರಚನೆ ಹಾಗೂ ಮಕ್ಕಳ ತಿದ್ದುವಿಕೆ ಎಂಬ ಎರಡು ಪುಸ್ತಕಗಳನ್ನು ಇವರು ಪ್ರಕಟಿಸಿದರು.

ಅರ್ಥಸಾಧನ ಸಮ್ಮೇಳನದಲ್ಲಿ ಭಾಗವಹಿಸಿದ್ದ ಇವರಿಗೆ ವರ್ಧಮಾನಯ್ಯನವರ ಪರಿಚಯವಾಗಿ ಅವರ ಮೂಲಕ ವಿಶ್ವೇಶ್ವರಯ್ಯನವರ ಪರಿಚಯವಾಯಿತು. ಬೆಂಗಳೂರಿನ ಸ್ತ್ರೀ ಸಮಾಜದಲ್ಲಿ, ಅನಂತರ ಚಿಕ್ಕಮಗಳೂರಿನ ಪ್ರೌಢಶಾಲೆಯಲ್ಲಿ ಕೆಲಕಾಲ ಕಲಾ ಶಿಕ್ಷಕರಾಗಿ ದುಡಿದರು. ಆದರೆ ವೃತ್ತಿತೃಪ್ತಿ ಇಲ್ಲದೆ ಮೈಸೂರಿಗೆ ಬಂದು ಚಾಮರಾಜೇಂದ್ರ ಕಲಾಶಾಲೆ ಸೇರಿದರು. ಮದರಾಸಿನ ಕಲಾ ವಿಭಾಗದ ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಸ್ವತಂತ್ರವಾಗಿ ಕಲಾಶಾಲೆ ಆರಂಭಿಸುವ ಹಂಬಲದಿಂದ ಎಂ. ವಿಶ್ವೇಶ್ವರಯ್ಯನವರ ಸಲಹೆ ಪಡೆದು 1919 ಆಗಸ್ಟ್ 12ರಂದು ಬೆಂಗಳೂರಿನ ಬಳೇಪೇಟೆಯಲ್ಲಿ ಕಲಾಮಂದಿರವನ್ನು ಪ್ರಾರಂಭಿಸಿದರು.



ಮೊದಲಿಗೆ ಕಲಾಮಂದಿರದಲ್ಲಿ ಬಣ್ಣದ ಬೋರ್ಡ್, ಭಾವಚಿತ್ರ ತಯಾರಿಕೆ, ಕುರ್ಚಿ ತಯಾರಿಕೆ ಮುಂತಾದುವನ್ನು ಮಾಡುತ್ತಿದ್ದವರು ಕಲಾವ್ಯಾಸಂಗದ ಬೇಡಿಕೆಗೆ ಓಗೊಟ್ಟು ಕಲಾಶಿಕ್ಷಣ ವಿಭಾಗ ತೆರೆದರು. ಇಲ್ಲಿ ಇವರು ವಿದ್ಯಾರ್ಥಿಗಳಿಗೆ ಕಲಾಂಗರಾತ್ರಿಗಳನ್ನು ಏರ್ಪಡಿಸುತ್ತಿದ್ದರು. ಎಷ್ಟೋ ವಿದ್ಯಾರ್ಥಿಗಳಿಗೆ ಆಶ್ರಯದಾತರೂ ಅನ್ನದಾತರೂ ಆಗಿದ್ದರು. ದೇವಸ್ಥಾನದ ಪ್ರತಿಕೃತಿ ಇವರ ಮೆಚ್ಚಿನ ವಿಷಯವಾಗಿತ್ತು.

ಇವರು ಒಬ್ಬ ಕಲಾ ಪತ್ರಿಕೋದ್ಯಮಿಯೂ ಆಗಿ ಕಲಾ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಇದರಲ್ಲಿ ಕನ್ನಡನಾಡಿನ ವಿದ್ಯೆ, ಲಲಿತಕಲೆ ಮತ್ತು ಕುಶಲ ವಿದ್ಯೆಗಳ ಸಚಿತ್ರ ಮಾಸಪತ್ರಿಕೆ ಎಂಬ ವಿವರಣೆ ನೀಡುತ್ತಿದ್ದರು. ಮುಂದೆ ಇದೇ ಪತ್ರಿಕೆ ವಿದ್ಯಾ, ಲಲಿತಕಲೆ ರಂಗಭೂಮಿ ಮತ್ತು ಕುಶಲ ವಿದ್ಯೆಗಳ ಮಾಸಪತ್ರಿಕೆಯಾಗಿ ಬದಲಾಯಿತು. ಸ್ವದೇಶಿ, ಸ್ವಾವಲಂಬನೆ ಹಾಗೂ ಸೌಂದರ್ಯ ಪ್ರಜ್ಞೆಗಳನ್ನು ಹೊಂದಿದ್ದ ಇವರು ಸ್ವದೇಶಿಕಲೆಯ ಪ್ರಾಚೀನತೆ ಹಾಗೂ ಛಾಯಾಚಿತ್ರ ಕಲೆಗೂ ಒತ್ತುನೀಡಿದ್ದರು. ಇವರು ತಮ್ಮ ಕಲಮಂದಿರದ ಮೂಲಕ ಅನೇಕ ಅಖಿಲ ಭಾರತ ಕಲಾಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ಪತ್ರಿಕೆಯ ಮೂಲಕ ಅನೇಕ ಉದಯೋನ್ಮುಖ ಬರೆಹಗಾರರನ್ನೂ ಚಿತ್ರಕಲಾಕಾರರನ್ನೂ ಬೆಳಕಿಗೆ ತಂದಿದ್ದರು. ಮಕ್ಕಳ ಕಲೆಯ ಶಿಕ್ಷಣದಿಂದ ಹಿಡಿದು ಧರ್ಮ, ವೈಚಾರಿಕತೆಯ ನೆಲೆಯ

ವಾಗ್ವಾದದವರೆಗೆ ಅನೇಕ ವಿಷಯಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಇವರು 1973ರಲ್ಲಿ ದೃಗ್ದರ್ಶನ ಎಂಬ ಕೃತಿಯನ್ನು ಪ್ರಕಟಿಸಿದರು.

ಇವರೊಬ್ಬ ಉತ್ತಮ ಕಲಾಸಂಘಟಕರಾಗಿಯೂ ಪರಿಚಿತರು. ಇವರ ಪ್ರತಿಭೆಗೆ ಸಂದ ಪುರಸ್ಕಾರಗಳು ಹಲವು. ರಾಜ್ಯ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1968), ಕರ್ನಾಟಕ ಚಿತ್ರಕಲಾವಿದ ಮಹಾ ಪರಿಷತ್ತಿನ ಅಧ್ಯಕ್ಷ ಪದವಿಯನ್ನು ಇಲ್ಲಿ ಉಲ್ಲೇಖಿಸಬಹುದು. ಇವರು 1981 ಮೇ 28ರಂದು ನಿಧನಹೊಂದಿದರು. (ಎಸ್‌ಯು.ಎಂ.)

**ಸುಬ್ಬರಾವ್, ಎ.:** 1923– . ಹಿರಿಯ ಸಂಗೀತ ವಿದ್ವಾಂಸರು. 1923 ಜುಲೈ 28ರಂದು ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಅನಂತರಾಮರಾವ್, ತಾಯಿ ಶಾರದಮ್ಮ. ಚಿಕ್ಕಂದಿನಿಂದಲೇ ಸಂಗೀತ ಶಿಕ್ಷಣ ಇವರಿಗೆ ಲಭ್ಯವಾಯಿತು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಪಾಸು ಮಾಡಿದರು (1943). ಸಂಗೀತದ ಮೊದಲ ಪಾಠ ಇವರಿಗೆ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರಿಂದ ಆಯಿತು. ಮುಂದೆ ಗಾನಭಾಸ್ಕರ ಕೆ. ಲಕ್ಷ್ಮೀದಾಸರಾವ್ ಹಾಗೂ ಸಂಗೀತ ರತ್ನ ಚಿಕ್ಕರಾಮರಾಯರಲ್ಲಿ ಸಂಗೀತದಲ್ಲಿ ಉನ್ನತ ಅಭ್ಯಾಸ ಮಾಡಿದರು. ಇದರ ಜೊತೆಗೆ ಪ್ರಸಿದ್ಧ ಹಿಂದುಸ್ಥಾನಿ ಸಂಗೀತಗಾರರ ಸಂಗೀತವನ್ನೂ ಕೇಳುವುದರ ಮೂಲಕ ಆ ಸಂಗೀತ ಶೈಲಿಯ ಬಗೆಗೂ ಜ್ಞಾನಾರ್ಜನೆ ಮಾಡಿದರು. ಪಿಟೀಲು ವಾದನದಲ್ಲಿಯೂ ಇವರಿಗೆ ಪರಿಶ್ರಮವಿತ್ತು.



ಸುಬ್ಬರಾಯರು ತಮ್ಮ 14ನೆಯ ವಯಸ್ಸಿನಿಂದಲೇ ಕಛೇರಿಗಳನ್ನು ಕೊಡಲು ಆರಂಭ ಮಾಡಿದರು. ಕರ್ನಾಟಕವಲ್ಲದೆ ಆಂಧ್ರಪ್ರದೇಶ, ಕೇರಳ, ಮುಂಬೈ ಮೊದಲಾದ ಸ್ಥಳಗಳಲ್ಲಿ ಇವರು ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಕಾಶವಾಣಿಯಲ್ಲೂ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದ್ದಾರೆ (1940). ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲೂ ಹಾಡಿರುವುದು ಇವರ ಹೆಗ್ಗಳಿಕೆ. ಜಯಚಾಮರಾಜೇಂದ್ರ ಒಡೆಯರ್‌ರವರ ಆಳ್ವಿಕೆಯ ಕಾಲದಲ್ಲೂ ಹಲವಾರು ಬಾರಿ ಮೈಸೂರು ಅರಮನೆಯಲ್ಲಿ ಸಂಗೀತ ಕಛೇರಿಯನ್ನು ನೀಡಿದ್ದರು.

ಇವರು ಹರಿದಾಸ ಕೃತಿಗಳನ್ನು ಹಾಡುವುದರಲ್ಲಿ ನಿಷ್ಣಾತರು. ಅನೇಕ ದೇವರನಾಮಗಳಿಗೆ ಸಂಗೀತ ಸಂಯೋಜನೆಯನ್ನೂ ಮಾಡಿದ್ದಾರೆ. ಇವರು ಹಾಡಿದ ತಾರಕ್ಕ ಬಿಂದಿಗೆ ನಾ ನೀರಿಗ್ಹೋಗುವೆ ಎಂಬ ಕೀರ್ತನೆ ಮನೆಯ ಮಾತಾಗಿತ್ತು. ಆ ಕಾಲದ ಹೆಸರಾಂತ ಪಕ್ಕವಾದ್ಯಗಾರರೆಲ್ಲಾ ಇವರೊಡನೆ ಭಾಗಿಯಾಗಿದ್ದರು.

ಹೆಸರಾಂತ ಹಿಂದುಸ್ಥಾನಿ ಸಂಗೀತಜ್ಞ ಪಂಡಿತ ರಾಮರಾವ್ ನಾಯಕರೊಂದಿಗೆ ಇವರ ಅನೇಕ ಜುಗಲ್‌ಬಂದಿ ಕಾರ್ಯಕ್ರಮಗಳು ನಡೆದಿವೆ. ಕಮಲ ಸುಬ್ಬರಾವ್, ಶ್ಯಾಮಲಾ ಜಿ.ಭಾವೆ, ಡಿ.ವಿ.ಎಸ್. ಆಚಾರ್ಯ, ವೈದೇಹಿ, ಕೆ. ಲಕ್ಷ್ಮೀಕಾಂತ, ಸಿ.ಎನ್. ಕೇದಾರ ಮೊದಲಾದವರು ಮತ್ತು ಇವರ ಮೂವರು ಗಂಡು ಮಕ್ಕಳು ಇವರ ಶಿಷ್ಯ ಪರಂಪರೆಗೆ ಸೇರಿದವರು. ಇವರು ಗಾನಕಲಾ ಭಾರತಿ ಸಂಸ್ಥೆಯ ಸಂಸ್ಥಾಪಕ ಪ್ರಾಂಶುಪಾಲರಾಗಿದ್ದರು. ಕರ್ನಾಟಕ ಗಾನಕಲಾ ಪರಿಷತ್ತಿನ ಮೊಟ್ಟಮೊದಲ ಕಾರ್ಯದರ್ಶಿಯೂ ಅದರ ಉಪಾಧ್ಯಕ್ಷರೂ ಆಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು.

ಇವರ ಸಂಗೀತ ಸೇವೆಯನ್ನು ಗುರುತಿಸಿ ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಇವರಿಗೆ ಕರ್ನಾಟಕ ಕಲಾತಿಲಕ ಪ್ರಶಸ್ತಿಯನ್ನು ನೀಡಿದೆ. ಕರ್ನಾಟಕ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನೂ ಕನಕ ಪುರಂದರ ಪ್ರಶಸ್ತಿಯನ್ನೂ ನೀಡಿದೆ. ಇವರು ಗಾನಕಲಾಭೂಷಣ, ಗಾನಸುಧಾಕರ ಎಂಬ ಬಿರುದಾವಳಿಗೆ ಪಾತ್ರರಾಗಿದ್ದಾರೆ. ರಾಜ್ಯ ಸಂಗೀತ ವಿದ್ವಾನ್ ಎಂಬ ಗೌರವ ಕೂಡ ಇವರಿಗೆ ಸಂದಿದೆ. ಇವರು ಹಾರ್ಮೋನಿಯಂ ಅರುಣಾಚಲಂ ಅವರನ್ನು ಕುರಿತು ಪುಸ್ತಕವನ್ನು ಬರೆದಿದ್ದಾರೆ. (ಎಚ್.ಆರ್.ಎಲ್.)

**ಸುಬ್ಬರಾವ್, ಎನ್.ಎಸ್.:** 1885–1943. ಶಿಕ್ಷಣತಜ್ಞರು. ಅರ್ಥಶಾಸ್ತ್ರ ಪ್ರವೀಣರು. ಕನ್ನಡಕ್ಕಾಗಿ ದುಡಿದವರು. ಶ್ರೀಮಂತ ಮನೆತನದಲ್ಲಿ ಜನಿಸಿದರು. ತಂದೆ ನಂಜನಗೂಡು ಸುಬ್ಬರಾಯರು. ಮೈಸೂರು, ಬೆಂಗಳೂರು, ತಮಿಳುನಾಡು ಮತ್ತು ಕೇಂಬ್ರಿಜ್‌ಗಳಲ್ಲಿ ಓದಿ ಎಂ.ಎ. ಪದವೀಧರರಾಗಿ ಬಾರ್-ಅಟ್-ಲಾ ಆಗಿ ಮೈಸೂರು ಸಂಸ್ಥಾನದ ಸಾರ್ವಜನಿಕ ವಿದ್ಯಾ ಇಲಾಖೆಯ ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು (1937–42) ಮುಂತಾದ ಅನೇಕ ಹುದ್ದೆಗಳನ್ನು ಅಲಂಕರಿಸಿದರು. ಅನೇಕ ವಿಶ್ವವಿದ್ಯಾಲಯಗಳು ಇವರನ್ನು ಅರ್ಥಶಾಸ್ತ್ರದ ಮಹಾ ಪ್ರಾಧ್ಯಾಪಕರೆಂದು ಮನ್ನಿಸಿದ್ದುವು. ತಮ್ಮ ಉನ್ನತ ಅಧಿಕಾರಾವಧಿಯಲ್ಲಿ ಕನ್ನಡ ಸಾಹಿತ್ಯದ ಅಭಿಮಾನವನ್ನು ಮೆರೆದು ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಪುರಸ್ಕಾರಗಳು ದೊರೆಯುವಂತೆ ಮಾಡಿದರು. ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಬೋಧನ ಮಾಧ್ಯಮವಾಗಿ ಬಳಸಲು ಮೊದಲಾದುದು ಇವರ ಕಾಲದಲ್ಲೆ, ಇವರ ಪ್ರೋತ್ಸಾಹದಿಂದಲೇ.

ಪ್ರಸಿದ್ಧ ವಿದ್ವತ್ಪತ್ರಿಕೆಯಾದ ಪ್ರಬುದ್ಧ ಕರ್ನಾಟಕದ ಉದಯ ಹಾಗೂ ವಿಕಾಸಗಳಿಗೆ ಇವರು ಅಪಾರ ನೆರವು ನೀಡಿದರು. ಇವರ ಪ್ರೋತ್ಸಾಹದಿಂದಲೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಗ್ರಂಥಮಾಲೆಯೂ ಪ್ರಚಾರ ಪುಸ್ತಕ ಮಾಲೆಯೂ ಬೆಳೆದು ವಿಕಸಿತವಾದುವು. 1931ರಲ್ಲಿ ಲಂಡನ್ ನಗರದಲ್ಲಿ ಜರುಗಿದ ದುಂಡು ಮೇಜಿನ ಪರಿಷತ್ತಿಗೆ ಇವರು ಭಾರತ ಸರ್ಕಾರದ ಪ್ರತಿನಿಧಿಯಾಗಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರೊಂದಿಗೆ ಹೋಗಿಬಂದರು. ಅಧಿಕಾರದಿಂದ ನಿವೃತ್ತರಾದ ಮೇಲೆ ಇವರು ಅಲಹಾಬಾದ್ ವಿಶ್ವವಿದ್ಯಾಲಯದ ಪ್ರಧಾನ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಇವರು ನಾಡಿಗೆ ಸಲ್ಲಿಸಿದ ಸೇವೆಗೆ ಕೃತಜ್ಞತಾರೂಪವಾಗಿ ಮೈಸೂರಿನ ಮಹಾರಾಜರು ರಾಜಕಾರ್ಯ ಪ್ರವೀಣ ಎಂಬ ಬಿರುದು ನೀಡಿ ಇವರನ್ನು ಸನ್ಮಾನಿಸಿದರು. ರಾಜನಿಷ್ಠೆ ಇವರಲ್ಲಿದ್ದರೂ ಪ್ರಜಾಪ್ರಭುತ್ವದ ಕಡೆಗೆ ಅಪಾರ ಒಲವಿತ್ತು. ಕನ್ನಡ ನಾಡುನುಡಿಯ ಬಗೆಗೆ ಅನನ್ಯ ಕಳಕಳಿಯಿದ್ದ ಇವರನ್ನು ಕನ್ನಡಿಗರು 1935ರಲ್ಲಿ ಮುಂಬಯಿಯಲ್ಲಿ ನಡೆದ 21ನೆಯ ಕನ್ನಡ ಸಾಹಿತ್ಯ ಸಮ್ಮೇಳನದ

ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದರು. ಇವರು 1943 ಜೂನ್ 29ರಂದು ನಿಧನಹೊಂದಿದರು. *

**ಸುಬ್ಬರಾವ್, ಕೆರೋಡಿ:** 1863–1928. ಹೊಸಗನ್ನಡ ಅರುಣೋದಯ ಕಾಲದ ಆದ್ಯ ಲೇಖಕರಲ್ಲೊಬ್ಬರು. ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸಾಹಿತ್ಯ, ಪತ್ರಿಕೋದ್ಯಮ, ಕೃಷಿ ಹಾಗೂ ಸಾಮಾಜಿಕ ರಂಗಗಳಲ್ಲಿ ದುಡಿದವರು. ಗವಾನಂದ ಎಂಬುದು ಇವರ ಕಾವ್ಯನಾಮ. ವಿಚಿತ್ರಮೂರ್ತಿ ಎಂಬ ಹೆಸರಿನಲ್ಲಿಯೂ ಇವರು ಬರೆದಿದ್ದಾರೆ. ಇವರು ಮೂಲತಃ ಶಿವಮೊಗ್ಗ ಜಿಲ್ಲೆಯವರು. ತೀರ್ಥಹಳ್ಳಿ ತಾಲ್ಲೂಕಿನ ಕೆರೋಡಿ ಗ್ರಾಮದಲ್ಲಿ 1863 ಮೇನಲ್ಲಿ ಜನಿಸಿದರು. ಆರಂಭದ ವಿದ್ಯಾಭ್ಯಾಸವನ್ನು ತೀರ್ಥಹಳ್ಳಿ, ಶಿವಮೊಗ್ಗಗಳಲ್ಲಿ ಪಡೆದು 1885ರಲ್ಲಿ ಎಫ್.ಎ. ಪರೀಕ್ಷೆ ಪಾಸು ಮಾಡಿದರು. ಅನಂತರ ಮದರಾಸಿನ ಕ್ರಿಶ್ಚಿಯನ್ ಕಾಲೇಜು ಸೇರಿ ಬಿ.ಎ. ಪದವಿ ಗಳಿಸಿದರು (1891). ಮುಂದೆ ಕಾನೂನು ವ್ಯಾಸಂಗ ಮಾಡುವ ಅಪೇಕ್ಷೆಯಿಂದ ಬಿ.ಎಲ್. ಪದವಿಗೆ ಸೇರಿದರೂ ಅದನ್ನು ಪೂರ್ಣಗೊಳಿಸಲಾಗಲಿಲ್ಲ. ಉಡುಪಿಯಲ್ಲಿ ವೈವಾಹಿಕ ಸಂಬಂಧವನ್ನು ಬೆಳೆಸಿದ್ದರಿಂದ ಹಾಗೂ ಇವರ ಮಾವನವರಾದ ಅನಂತಕೃಷ್ಣರಾಯರು ಅಕಾಲ ಮರಣ ಹೊಂದಿದ್ದರಿಂದ ಇವರು ಉಡುಪಿಯ ಕುತ್ಪಾಡಿಯಲ್ಲಿ ನೆಲೆ ನಿಲ್ಲಬೇಕಾಯಿತು. ಕಮಲಮ್ಮ ಇವರ ಪತ್ನಿ.

ಉಡುಪಿಯಂತಹ ಸಾಂಸ್ಕೃತಿಕ ಕೇಂದ್ರದಲ್ಲಿ ಕೃಷಿ ಹಾಗೂ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರು ಶ್ರೀಕೃಷ್ಣಸೂಕ್ತಿ (1906) ಎಂಬ ಸಾಹಿತ್ಯಕ ಮಾಸಪತ್ರಿಕೆಯನ್ನು ಆರಂಭಿಸಿ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯಕ ಚಟುವಟಿಕೆಗೆ ಚಾಲನೆ ನೀಡಿದರು. ಆಗಿನ ಕಾಲಕ್ಕೆ ಈ ಪತ್ರಿಕೆ ಕನ್ನಡನಾಡಿನ ಹೆಸರಾಂತ ಸಾಹಿತ್ಯಕ ಪತ್ರಿಕೆಯಾಗಿತ್ತು. ಇವರ ಹತ್ತಿರದ ಬಂಧುಗಳಾದ ಕಡೇಕಾರು ರಾಜಗೋಪಾಲಕೃಷ್ಣರಾಯರು (1885–1953) ಈ ಪತ್ರಿಕೆಯ ಇನ್ನೊಬ್ಬ ಸಂಪಾದಕರಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಬಹುಮುಖ್ಯ ಬರೆಹಗಾರರಲ್ಲಿ ಒಬ್ಬರಾಗಿದ್ದ ಕೆರೋಡಿಯವರು ಸುಮಾರು ಮೂರುವರೆ ದಶಕಗಳ ಕಾಲ ಯಕ್ಷಗಾನ, ನಾಟಕ, ಕಾವ್ಯ, ಭಾಷಾಂತರ–ಹೀಗೆ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದಾರೆ. ಇವರು ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಗಳಲ್ಲಿ ವಿದ್ವಾಂಸರಾಗಿದ್ದರು. ಬಂಗಾಲಿ, ಉರ್ದು ಭಾಷೆಗಳನ್ನೂ ಬಲ್ಲವರಾಗಿದ್ದರು. ಸೌಭಾಗ್ಯವತೀ ಪರಿಣಯ (1893), ತಾರಾನಾಥ ಚರಿತ್ರೆ (1896), ಕುಮಾರಶೇಖರ ನಾಟಕ, ಸಂಕ್ಷಿಪ್ತ ಶಾಕುಂತಲ ನಾಟಕ–ಇವು ಇವರ ನಾಟಕ ಕೃತಿಗಳು. ಸೌಭಾಗ್ಯವತೀ ಪರಿಣಯ ಆ ಕಾಲಕ್ಕೆ ಎಫ್.ಎ. ಪರೀಕ್ಷೆಗೆ ಪಠ್ಯಪುಸ್ತಕವಾಗಿತ್ತು. ಪಲಾಂಡುಚರಿತೆ, ಜರಾಸಂಧವಧೆ, ಪಾಂಡವ ದಿಗ್ವಿಜಯ–ಇವು ಇವರ ಸ್ವತಂತ್ರ ಯಕ್ಷಗಾನ ಕೃತಿಗಳು. ಪ್ರಭಾವತೀ ಸ್ವಯಂವರ, ಕಾಲನೇಮಿ ಕಾಳಗ–ಇವು ಸಂಪಾದಿತ ಯಕ್ಷಗಾನಗಳು. ಗಂಭೀರ ಶೃಂಗಾರ ಶತಕ (1905), ಅನುಕೂಲ ಸಿಂಧು (1926), ಗೋಕೀರ್ತನೆ (1920), ದ್ರೌಪದಿಯ ಉದಯರಾಗ (1922), ಶ್ರೀಕೃಷ್ಣ ಜೋಗುಳ (1926)–ಇವು ಕಾವ್ಯಪದ್ಯ ಸಂಗ್ರಹಗಳು. ಸಮೂಲ ಭಾಷಾಂತರಗಳು (ಭಾಗ–1, 2), ಶ್ರೀಕೃಷ್ಣ, ಶ್ರೀಕೃಷ್ಣರಾಸಲೀಲೆ–ಇವು ಅನುವಾದಗಳು. ಇವರ ಅನೇಕ ಲೇಖನಗಳು ಆ ಕಾಲದ ಪ್ರಸಿದ್ಧ ಪತ್ರಿಕೆಗಳಾಗಿದ್ದ ಸುವಾಸಿನಿ (1900), ವಿನೋದಿನಿ (1905), ಶ್ರೀಕೃಷ್ಣಸೂಕ್ತಿ (1906), ಸ್ವದೇಶಾಭಿಮಾನಿ (1907), ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (1916), ಕಂಠೀರವ (1919), ನವಯುಗ (1922), ಕಾನಡಾ ಧುರೀಣ (1923), ಕನ್ನಡಿಗ (1924), ರಂಗಭೂಮಿ (1925) ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಕನ್ನಡದಲ್ಲಿ ಯಕ್ಷಗಾನ ಕುರಿತು ವಿಚಾರಮಾಡಿದವರಲ್ಲಿ ಇವರೇ ಮೊದಲಿಗರು. ಯಕ್ಷಗಾನದ ಉಗಮ, ವಿಕಾಸಗಳನ್ನು ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರು ಇಂಗ್ಲಿಷ್‌ನ ವಿಡಂಬನ ಸಾಹಿತ್ಯದ (ಸೆಟೈರ್) ಮಾದರಿಯಲ್ಲಿ ಕನ್ನಡದಲ್ಲಿ ಸಾಹಿತ್ಯ ರಚಿಸಿದ ಆದ್ಯ ಲೇಖಕರೂ ಆಗಿದ್ದಾರೆ. ಇವರ ಅನುಕೂಲ ಸಿಂಧು (1926) ಆಧುನಿಕ ಕನ್ನಡ ಸಾಹಿತ್ಯದ ಮೊದಲ ವಿಡಂಬನ ಕಾವ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಾವ್ಯಾತ್ಮಕ ಸ್ಪರ್ಶ ಪಡೆದ ಸರಳತೆ ಇವರ ಬರೆವಣಿಗೆಯ ವೈಶಿಷ್ಟ್ಯ. ಇಂಗ್ಲಿಷ್ ಭಾಷೆಯ ವ್ಯಾಮೋಹವನ್ನೂ ಆಗಿನ ಕಾಲಕ್ಕೇ ಆಧುನಿಕ ವಿದ್ಯಾಭ್ಯಾಸ ಕ್ರಮವನ್ನೂ ವಿಡಂಬಿಸುವ ಒಂದು ಪದ್ಯವಿದು :

ಆ ಬಾಲ್ಯದಿನೇ ಮಕ್ಕಳಿ
ಗೇ – ಬಿ – ಸಿ – ಡಿ ಗಳೆ ಶ್ರೀಗಣಾಧಿಪನಮಹಂ
ದೋಬಿಯ ಕೋಟು ವಿಜಾರವೆ
ಶೋಭಿಪನಾರ್ಮಡಿ ಇದೊಂದು ವಿದ್ಯಾಭ್ಯಾಸಂ

ಮೊಮ್ಮಗನ ಮೃತ್ಯು: ಅಜ್ಜನ ಅನುತಾಪ (1927), ಮುದ್ದುಮಣಕನ ಸಾವು (1920) – ಇವು ಇವರ ಎರಡು ಅತ್ಯುತ್ತಮ ಶೋಕಗೀತೆಗಳು. ಕೊಲ್ಲೂರು ಗೋ ಭೂ ನಂದನದ ಆಮೂಲಾಗ್ರ ಚರಿತ್ರೆ ಎಂಬ ಲೇಖನ ಇವರ ಕೃಷಿಯ ಅನುಭವಗಳನ್ನು ಅತ್ಯಂತ ಆಪ್ತವಾಗಿ ವರ್ಣಿಸುತ್ತದೆ; ಇವರ ಅತ್ಯುತ್ತಮ ಗದ್ಯ ಬರೆವಣಿಗೆಗೂ ಇದು ಸಾಕ್ಷಿಯಾಗಿದೆ. ಸಮೂಲ ಭಾಷಾಂತರಗಳು ಎಂಬ ಹೆಸರಿನಲ್ಲಿ ಸಂಸ್ಕೃತದ ಆಯ್ದ ಶ್ಲೋಕಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಗೆ ಇವರು ಭಾಷಾಂತರಿಸಿದ್ದಾರೆ. ಜೊತೆಗೆ ಅರ್ಥವಿವರಣೆ ನೀಡಿರುವುದು ಈ ಅನುವಾದಗಳ ವೈಶಿಷ್ಟ್ಯ. ಈ ಬಗೆಯಲ್ಲಿ ಕನ್ನಡದಲ್ಲಿ ಪ್ರಕಟವಾದ ಕೃತಿಗಳು ವಿರಳವೆಂದೇ ಹೇಳಬೇಕು. ಗಂಭೀರ ಶೃಂಗಾರಶತಕ 100 ಪದ್ಯಗಳ ಶೃಂಗಾರ 'ಜಾವಡಿ' ಗ್ರಂಥ. ಇಲ್ಲಿನ ಹಲವು ಪದ್ಯಗಳು ಆ ಕಾಲದ ನಾಟಕಗಳಲ್ಲಿ ಸಂದರ್ಭೋಚಿತವಾಗಿ ಬಳಕೆಗೊಂಡಿದ್ದವೆಂದು ತಿಳಿದುಬರುತ್ತದೆ.

ಇವರಿಗೆ ಆ ಕಾಲದ ಅನೇಕ ಪ್ರಸಿದ್ಧ ಲೇಖಕರ, ವ್ಯಕ್ತಿಗಳ ಸಂಪರ್ಕ ಹಾಗೂ ಪರಿಚಯವಿತ್ತು. ಅರಮನೆ ಜಯರಾಯಾಚಾರ್ಯ, ಎಂ.ಡಿ. ಅಳಸಿಂಗರಾಚಾರ್ಯ, ಬೆನಗಲ್ ರಾಮರಾವ್, ಪಂಜೆಮಂಗೇಶರಾವ್, ಆಲೂರ ವೆಂಕಟರಾವ್, ಗುಬ್ಬಿವೀರಣ್ಣ, ರಾ.ಹ. ದೇಶಪಾಂಡೆ, ಕಾರ್ನಾಡು ಸದಾಶಿವರಾವ್ ಮೊದಲಾದವರು ಇವರ ಆಪ್ತವರ್ಗಕ್ಕೆ ಸೇರಿದವರಾಗಿದ್ದರು. ಕೆರೋಡಿಯವರು 1928 ಮಾರ್ಚ್ 7ರಂದು ನಿಧನರಾದರು. ಇವರ ಜೀವನ ಹಾಗೂ ಸಾಧನೆಯನ್ನೂ ಸಮಗ್ರ ಸಾಹಿತ್ಯವನ್ನೂ ಕುರಿತಂತೆ ಕೆರೋಡಿ ಸುಬ್ಬರಾಯರು : ಜೀವನ ಮತ್ತು ಕೃತಿಗಳು ಎಂಬ ಕೃತಿ ಪ್ರಕಟವಾಗಿದೆ (ಹಾ.ತಿ.ಕೃಷ್ಣೇಗೌಡ, 1989). *

**ಸುಬ್ಬರಾವ್, ತ.ರಾ.:** 1920–84. ಕನ್ನಡದ ಪ್ರಸಿದ್ಧ ಕಾದಂಬರಿಕಾರರು. ತ.ರಾ.ಸು. ಇವರ ಕಾವ್ಯನಾಮ. ಇವರು ದಾವಣಗೆರೆ ಜಿಲ್ಲೆಯ ಮಲೆಬೆನ್ನೂರಿನಲ್ಲಿ 1920 ಏಪ್ರಿಲ್ 21ರಂದು ಜನಿಸಿದರು. ತಂದೆ ತಳುಕಿನ ರಾಮಸ್ವಾಮಯ್ಯ ಮಲೆಬೆನ್ನೂರಿನಲ್ಲಿ ಶೇಕದಾರ್ ಆಗಿದ್ದರು, ತಾಯಿ ಸೀತಮ್ಮ. ಸುಬ್ಬರಾಯರ

ಅಜ್ಜ ಸುಬ್ಬಣ್ಣ ಆಶುಕವಿಗಳಾಗಿದ್ದರು. ಇವರ ದೊಡ್ಡಪ್ಪ ತಳುಕಿನ ವೆಂಕಣ್ಣಯ್ಯನವರು ಕನ್ನಡ ಸಾಹಿತ್ಯದಲ್ಲಿ ಹೆಸರಾದವರಾಗಿದ್ದರು (ಕುವೆಂಪು ಇವರ ಶಿಷ್ಯರಾಗಿದ್ದರು). ಚಿಕ್ಕಪ್ಪ ತಳುಕಿನ ಶಾಮರಾಯರು ಅಧ್ಯಾಪಕರೂ ವಿದ್ವಾಂಸರೂ ಆಗಿದ್ದರು. ಸಾಹಿತ್ಯ ಪ್ರೇಮಿಯೂ ಕಲಾಪ್ರೇಮಿಯೂ ಆಗಿದ್ದ ರಾಮಸ್ವಾಮಯ್ಯನವರು ತಮ್ಮ ಕೆಲಸಕ್ಕೆ ರಾಜಿನಾಮೆ ನೀಡಿ ವಕೀಲವೃತ್ತಿ ಆರಂಭಿಸಿ ಚಿತ್ರದುರ್ಗದಲ್ಲಿ ನೆಲೆಸಿದ್ದರಿಂದ ಸುಬ್ಬರಾಯರ ಶಿಕ್ಷಣ ಇಲ್ಲಿ ಸೀನಿಯರ್ ಇಂಟರ್‌ಮಿಡಿಯೇಟ್‌ವರೆಗೆ ನಡೆಯಿತು. ಚಿತ್ರದುರ್ಗ, ಶಿವಮೊಗ್ಗ, ತುಮಕೂರುಗಳಲ್ಲಿ ಇವರ ಶಾಲೆ, ಕಾಲೇಜು ವಿದ್ಯಾಭ್ಯಾಸ ನಡೆಯಿತು. ಮನೆಯಲ್ಲಿ ಸಾಹಿತ್ಯಕ ವಾತಾವರಣವಿದ್ದುದರಿಂದ ಇವರಲ್ಲಿ ಓದುವ ಅಭಿರುಚಿ ಬೆಳೆಯಿತು. 'ಪುಟ್ಟಳ ಚೆಂಡು' ಇವರು ಬರೆದ ಮೊದಲ ಕಥೆ.

ಹುಲ್ಲೂರು ಶ್ರೀನಿವಾಸ ಜೋಯಿಸ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ ಮೊದಲಾದವರು ನೇತೃತ್ವದಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲಿಗೆ ಹೋಗಿದ್ದರು (1938). ಗಾಂಧೀವಾದಿಯಾಗಿದ್ದ ಸಿದ್ಧವನಹಳ್ಳಿ ಕೃಷ್ಣ ಶರ್ಮರು ವಿಶ್ವಕರ್ನಾಟಕ ಪತ್ರಿಕೆಯ ಮೂಲಕ ಜನರಲ್ಲಿ ರಾಷ್ಟ್ರೀಯ ಭಾವನೆ ಬಿತ್ತುತ್ತಿದ್ದರು (1942). ಅವರ ಮತ್ತು ತಿ.ತಾ.ಶರ್ಮ ಮಾರ್ಗದರ್ಶನದಲ್ಲಿ ಇವರು ಪತ್ರಿಕೋದ್ಯಮದ ಪಟ್ಟುಗಳನ್ನು ಕಲಿತರು. 1943ರಲ್ಲಿ ಅ.ನ.ಕೃಷ್ಣರಾಯರ ಪರಿಚಯವಾದ ಅನಂತರ ಅವರ ಗರಡಿಯಲ್ಲಿ ಓದು ಮತ್ತು ಬರೆವಣಿಗೆಯಲ್ಲಿ ಪಳಗಿದರು. ಭಾಷಣ ಕಲೆ ಬೆಳೆಯಿಸಿಕೊಂಡರು.



'ಮನೆಗೆ ಬಂದ ಮಹಾಲಕ್ಷ್ಮಿ' ಇವರ ಮೊದಲ ಕಾದಂಬರಿ. ಮಸಣದ ಹೂ, ಕೇದಿಗೆ ವನ, ಮಾರ್ಗದರ್ಶಿ, ಮರಳು ಸೇತುವೆ, ಬೇಲಿ ಮೇಯ್ದ ಹೊಲ, ಪಂಜರದ ಪಕ್ಷಿ, ಚದುರಂಗದ ಮನೆ ಮೊದಲಾದ 53 ಸಾಮಾಜಿಕ ಕಾದಂಬರಿಗಳನ್ನು ಬರೆದಿದ್ದಾರೆ. ನೃಪತುಂಗ, ಸಿಡಿಲಮೊಗ್ಗು, ಶಿಲ್ಪಶ್ರೀ, ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ, ಬೆಳಕು ತಂದ ಬಾಲಕ, ದುರ್ಗಾಸ್ತಮಾನ–ಇವು ಐತಿಹಾಸಿಕ ಕಾದಂಬರಿಗಳು. ನಾಲ್ಕು x ನಾಲ್ಕು=ಒಂದು ಇವರ ಒಂದು ವಿಶಿಷ್ಟ ಬಗೆಯ ಕಾದಂಬರಿ. ರೂಪಸಿ (1946), ತೊಟ್ಟಿಲು ತೂಗಿತು (1947), ಗಿರಿಮಲ್ಲಿಗೆಯ ನಂದನದಲ್ಲಿ (1955), ಇದೇ ನಿಜವಾದ ಸಂಪತ್ತು (1965), ಮೂರು ಮತ್ತೊಂದು (1982, ಸಮಗ್ರ ಕಥಾಸಂಕಲನ)–ಇವು ಕಥಾಸಂಗ್ರಹಗಳು. ಅ.ನ.ಕೃ., ರೇಖಾಚಿತ್ರಗಳು, ಶೃಂಗೇರಿಯ ಸೌಭಾಗ್ಯ –ಇವು ಜೀವನ ಚರಿತ್ರೆ ಗಳು. ಜ್ವಾಲಾ, ಮೃತ್ಯುಸಿಂಹಾಸನ (1955)–ಇವು ನಾಟಕಗಳು. ಅನ್ನಾವತಾರ, ಮಹಾಶ್ವೇತೆ–ಇವು ಬಾನುಲಿ ನಾಟಕಗಳು (1954). ಡಾ. ಕೊಟ್ನೀಸ್, ಬಾರ್ಬೋಸಾ ಕಂಡ ವಿಜಯನಗರ, ನಂದನವನ, ಮದಾಂಬಾವರಿ ಮೊದಲಾದ ಒಂಬತ್ತು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಶಿವಾರ್ಪಣಂ, ಶ್ರೀಜಗದ್ಗುರು ಎಂಬ ಕೃತಿಗಳನ್ನು ಸಂಪಾದಿಸಿದ್ದಾರೆ. 'ಹಿಂತಿರುಗಿ ನೋಡಿದಾಗ' ಇವರ ಆತ್ಮಚರಿತ್ರೆ. ಮಂಥನ ಎಂಬ ಇನ್ನೊಂದು ಕೃತಿಯಲ್ಲಿ ತಾವು ಕಂಡುಂಡ ಅನುಭವಗಳನ್ನು ರಸವತ್ತಾಗಿ ಚಿತ್ರಿಸಿದ್ದಾರೆ.

ಇವರು ಬರೆದ ಹಂಸಗೀತೆ, ಚಂದವಳ್ಳಿಯ ತೋಟ, ಚಕ್ರತೀರ್ಥ, ಸಾಕುಮಗಳು, ಮಾರ್ಗದರ್ಶಿ, ನಾಗರಹಾವು, ಚಂದನದಗೊಂಬೆ, ಗಾಳಿಮಾತು, ಬೆಂಕಿಯಬಲೆ, ಬಿಡುಗಡೆಯ ಬೇಡಿ, ಮಸಣದ ಹೂವು ಮೊದಲಾದ ಕಾದಂಬರಿಗಳು ಜನಪ್ರಿಯ ಚಲನಚಿತ್ರಗಳಾಗಿವೆ. ಇವರ ಕಾದಂಬರಿಯನ್ನಾಧರಿಸಿ ಹಿಂದಿಯಲ್ಲಿ ನಿರ್ಮಿಸಿದ ಬಸಂತಬಹಾರ್, ಕನ್ನಡದಲ್ಲಿ ನಿರ್ಮಿಸಿದ ಚಂದವಳ್ಳಿಯ ತೋಟ, ಹಂಸಗೀತೆ ಚಿತ್ರಗಳಿಗೆ ರಾಷ್ಟ್ರಪ್ರಶಸ್ತಿ ಬಂದಿದೆ. ಚಂದವಳ್ಳಿಯ ತೋಟ, ನಾಗರಹಾವು, ಚಂದನದ ಗೊಂಬೆ ಚಿತ್ರಕಥೆಗಳಿಗೆ ಪ್ರಶಸ್ತಿ ಬಂದಿದೆ. ಯಕ್ಷಪ್ರಶ್ನೆ ಕಾದಂಬರಿಗೆ ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ (1974), ಶಿಲ್ಪಶ್ರೀ ಕಾದಂಬರಿಗೆ ಗೊಮ್ಮಟೇಶ್ವರ ಪ್ರಶಸ್ತಿ, ವಿದ್ಯಾವಾರಿಧಿ ಪ್ರಶಸ್ತಿ ದೊರೆತಿದೆ. ದುರ್ಗಾಸ್ತಮಾನ ಕಾದಂಬರಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ (1983), ಕೇಂದ್ರ ಸಾಹಿತ್ಯ ಅಕಾಡೆಮಿ (1985, ಮರಣೋತ್ತರ) ಪ್ರಶಸ್ತಿ ದೊರಕಿವೆ. ಪ್ರಗತಿಶೀಲ ಚಳವಳಿ, ಕನ್ನಡ ಚಳವಳಿಯಲ್ಲಿ ಸಕ್ರಿಯರಾಗಿ ದುಡಿದ ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೇಷ್ಠ ಕಾದಂಬರಿಕಾರ ಪ್ರಶಸ್ತಿ (1970), ಚಿತ್ರದುರ್ಗದಲ್ಲಿ ನಡೆದ ಭಾರತೀಯ ಧರ್ಮಸಮ್ಮೇಳನದಲ್ಲಿ ಸಾಹಿತ್ಯ ರತ್ನ ಪ್ರಶಸ್ತಿ (1981) ಲಭಿಸಿವೆ.

ವಿಶ್ವಕರ್ನಾಟಕ, ಪ್ರಜಾಮತ, ವಾಹಿನಿ, ಚೇತನ, ಪ್ರಜಾವಾಣಿ, ವಿಚಾರವಾಣಿ, ಕಾಲದೂತ, ಶ್ರೀಶಂಕರಕೃಪಾ ಪತ್ರಿಕೆಗಳಲ್ಲಿ ಸಂಪಾದಕೀಯ ವರ್ಗದಲ್ಲಿ ದುಡಿದ(1942–84) ಇವರು ನುರಿತ ಪತ್ರಕರ್ತರಾಗಿದ್ದರು. ಇವರು ನಾಲ್ಕು ವರ್ಷ ಮೈಸೂರು ಪುರಸಭೆಯ ಸದಸ್ಯರಾಗಿದ್ದರು (1962–66).

ಸ್ವಾತಂತ್ರ್ಯ ಚಳವಳಿಯ ಅನುಭವಗಳನ್ನು ರಕ್ತತರ್ಪಣ ಕಾದಂಬರಿಯಲ್ಲಿ, ಪತ್ರಿಕಾರಂಗದ ಅನುಭವಗಳನ್ನು 'ಮುಂಜಾವಿನಿಂದ ಮುಂಜಾವು' ಕೃತಿಯಲ್ಲಿ, ತಮ್ಮ ಬಾಲ್ಯದ ಒಳತೋಟಿಯನ್ನು ನಾಗರಹಾವು ಕಾದಂಬರಿಯಲ್ಲಿ, ತಮ್ಮ ಊರಿನ ಚರಿತ್ರೆಯನ್ನು ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ, ಹೊಸಹಗಲು, ದುರ್ಗಾಸ್ತಮಾನ ಕಾದಂಬರಿಗಳಲ್ಲಿ ಚಿತ್ರಿಸಿದ ಇವರು ತಮ್ಮ ಆಕರ್ಷಕ ಶೈಲಿ, ವ್ಯಕ್ತಿಚಿತ್ರಣ, ಸನ್ನಿವೇಶ ನಿರ್ಮಾಣ, ಸಂಭಾಷಣೆ, ಚುರುಕು ನಿರೂಪಣೆಯಿಂದ ಕಾದಂಬರಿ ಪ್ರಕಾರಕ್ಕೊಂದು ವಿಶಿಷ್ಟ ಆಯಾಮ ನೀಡಿದರು.

ಇವರ ಪತ್ರಿಕಾರಂಗದ ಸೇವೆ, ಸಾಹಿತ್ಯ ಸೇವೆ, ಸಮಾಜಸೇವೆಗಳನ್ನು ಗುರುತಿಸಿ ಇವರಿಗೆ ತ.ರಾ.ಸು. ಬದುಕು ಬರೆಹ ಎಂಬ ಗೌರವಗ್ರಂಥ ಅರ್ಪಿಸಲಾಯಿತು (1982). ಇವರು 1984 ಏಪ್ರಿಲ್ 10ರಂದು ನಿಧನರಾದರು. ಇವರ ಮರಣಾನಂತರ ಗಿರಿಮಲ್ಲಿಗೆ ಎಂಬ ಸಂಸ್ಮರಣ ಗ್ರಂಥ ಪ್ರಕಟವಾಯಿತು. ಅಂಬುಜಾ ಇವರ ಪತ್ನಿ.

*

**ಸುಬ್ಬುಕೃಷ್ಣ, ಎನ್.ಎಸ್.:** 1914– . ಭಾವಚಿತ್ರಣಕ್ಕೆ ಹೆಸರಾದ ಚಿತ್ರಕಲಾವಿದ. ಪೂರ್ಣ ಹೆಸರು ನಂಜನಗೂಡು ಶ್ರೀನಿವಾಸರಾವ್ ಸುಬ್ಬುಕೃಷ್ಣ. 1914ರ ಮೇ ತಿಂಗಳಲ್ಲಿ ನಂಜನಗೂಡಿನಲ್ಲಿ ಜನಿಸಿದರು. ಪ್ರೌಢಶಾಲಾ ಶಿಕ್ಷಣವನ್ನು ಪೂರೈಸಿದ ಇವರು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿದರು. ಹೆಸರಾಂತ ಕಲಾಶಿಕ್ಷಕರಾದ ಕೇಶವಯ್ಯ ಮತ್ತು ಪಾವಂಜೆಯವರಿಂದ ತರಬೇತಿ ಪಡೆದು 1932ರಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದರು. ಅನಂತರ ಸ್ವತಂತ್ರರಾಗಿ ಕಲಾಕೃತಿಗಳ ರಚನೆಯಲ್ಲಿ ತೊಡಗಿದರು. ಇವರ ನಿಸರ್ಗ ಚಿತ್ರಗಳು ಹಾಗೂ ಭಾವಚಿತ್ರಗಳು ಬಹಳ ಮನ್ನಣೆ ಪಡೆದಿವೆ.

1940ರಲ್ಲಿ ರಾಜ್ಯ ಸರ್ಕಾರದ ಗ್ವಾಲಿಯರ್ ಪಾಟರೀಸ್ ಸಂಸ್ಥೆಯಲ್ಲಿ ವಿನ್ಯಾಸಕಾರರಾಗಿ ವೃತ್ತಿಜೀವನ ಪ್ರಾರಂಭಿಸಿದರು. ಸುಮಾರು 28 ವರ್ಷಗಳ ಕಾಲ ಇಲ್ಲಿ ಸೇವೆ ಸಲ್ಲಿಸಿ ಪಿಂಗಾಣಿ ವಸ್ತುಗಳಿಗೆ ಹಲವು ಕಲಾತ್ಮಕ ಮತ್ತು ಸಾಂಪ್ರದಾಯಿಕ ವಿನ್ಯಾಸಗಳನ್ನು ಅಳವಡಿಸಿದರು. ಆದರೂ ಇವರಿಗೆ

ಭಾವಚಿತ್ರ ರಚನೆಯಲ್ಲಿ ವಿಶೇಷ ಒಲವು. ಇವರು ಅನೇಕ ಗಣ್ಯರ ಭಾವಚಿತ್ರಗಳನ್ನು ರಚಿಸಿದ್ದಾರೆ. ಇವರಿಂದ ರಚಿಸಲ್ಪಟ್ಟ ರಾಷ್ಟ್ರ ನಾಯಕರ ಭಾವಚಿತ್ರಗಳು ದೆಹಲಿಯ ರಾಷ್ಟ್ರಪತಿ ಭವನ ಮತ್ತು ಲಕ್ನೋ ಹಾಗೂ ಪಾಟ್ನಾ ರಾಜಭವನಗಳಲ್ಲಿ ಪ್ರದರ್ಶಿತವಾಗಿವೆ. ಇವುಗಳಲ್ಲಿ ಪ್ರಮುಖವಾಗಿ ಬಾಬು ರಾಜೇಂದ್ರ ಪ್ರಸಾದ್, ಪಂಡಿತ್ ಜವಹರಲಾಲ್ ನೆಹರೂ, ಜಿ.ಎ. ಮಾವಲಂಕರ್, ಫೀಲ್ಡ್ ಮಾರ್ಷಲ್ ಸಿ.ಎಂ. ಕಾರ್ಯಪ್ಪ, ಥೋರಾಟ್ ಬೇವುರ್, ಟಿ.ಎನ್. ರಾಯನಾ ಮತ್ತು ಮಹಾತ್ಮಾ ಗಾಂಧಿ, ಸುತ್ತೂರು ಮಠಾಧ್ಯಕ್ಷ ಜಗದ್ಗುರು ಶ್ರೀ ಶಿವರಾತ್ರೀ ರಾಜೇಂದ್ರಸ್ವಾಮಿಗಳ ಪೂರ್ಣಾಕೃತಿ ತೈಲಚಿತ್ರ ಹೆಚ್ಚು ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುತ್ತಿದೆ.

ಇವರ ಭಾವಚಿತ್ರ ರಚನೆಗಳು ಭಾರತದಲ್ಲಿ ಮಾತ್ರವಲ್ಲದೆ ಇತರ ದೇಶಗಳಲ್ಲೂ ಪ್ರದರ್ಶಿತವಾಗಿವೆ. ಭಾವಚಿತ್ರ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿ ಕಿಂಗ್ಸ್ ಹಜಾರದಲ್ಲಿ ರಾರಾಜಿಸುತ್ತಿದೆ. ಲಾಲ್ ಬಹದೂರ್ ಶಾಸ್ತ್ರಿಯವರ ಭಾವಚಿತ್ರ ತಾಷ್ಕೆಂಟಿನಲ್ಲಿದೆ. ಇತರ ಭಾವಚಿತ್ರಗಳೆಂದರೆ ಶೃಂಗೇರಿ, ಸುತ್ತೂರು ಹಾಗೂ ಪೇಜಾವರ ಮಠಾಧೀಶರ ಚಿತ್ರಗಳು, ಚೆನ್ನೈ ನ್ಯಾಯಾಧೀಶ ರಾಮಪ್ರಸಾದರಾವ್, ಎ.ವಿ.ಎಂ. ಚೆಟ್ಟಿಯಾರ್ ಚಿತ್ರಗಳು.

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಮಾಗಡಿ ಕೆಂಪೇಗೌಡರ ಪ್ರತಿಮೆಯ ಮೂಲ ರೇಖಾಚಿತ್ರವನ್ನು ಇವರು ರಚಿಸಿಕೊಟ್ಟಿದ್ದಾರೆ. ಇದಲ್ಲದೆ ಭಾರತೀಯ ರಿಸರ್ವ್ ಬ್ಯಾಂಕಿನ ವಿನ್ಯಾಸವಾಗಿ ಉಪಯೋಗಿಸಿರುವ ಬಾಪೂಜಿಯವರ ಚಿತ್ರವೂ ಇವರಿಂದ ರಚಿತವಾದದ್ದೇ ಆಗಿದೆ. ಇವರ ಕಲಾನೈಪುಣ್ಯತೆಗೆ ಸಂದಿರುವ ಮಾನ್ಯತೆ, ಸನ್ಮಾನಗಳು ಹಲವು. ಅವುಗಳಲ್ಲಿ ಪ್ರಮುಖವಾದವು: 1932ರಲ್ಲಿ ಕೊಡೈಕೆನಾಲ್ ಕಲಾಪ್ರದರ್ಶನದಲ್ಲಿ ಪ್ರಥಮ ಬಹುಮಾನ: 1946ರಲ್ಲಿ ಮೈಸೂರು ದಸರ ವಸ್ತುಪ್ರದರ್ಶನದಲ್ಲಿ ದೊರೆತ ಮಹಾರಾಜರ ರಜತ ಪದಕ.

ಇವರ ಕಲೆಯನ್ನು ಪುರಸ್ಕರಿಸಿ 1964ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಇವರನ್ನು ಗೌರವಿಸಿತು. 1980ರಲ್ಲಿ ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ದೊರಕಿತು. ಚಿತ್ರಕಲೆಯಲ್ಲದೆ ಇವರು ಸಂಗೀತದಲ್ಲೂ ಅಭಿರುಚಿ ಹೊಂದಿದ್ದರು. ಕಲೆಯಲ್ಲಿ ಸೌಂದರ್ಯೋಪಾಸನೆಯೇ ಕಲಾವಿದರ ಧ್ಯೇಯವೆಂಬುದು ಇವರ ನಂಬಿಕೆ. **(ಎಸ್‌ಯು.ಎಂ.)**

**ಸುಬ್ರಹ್ಮಣ್ಯ:** ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿರುವ ಒಂದು ಗ್ರಾಮ ಹಾಗೂ ತೀರ್ಥಕ್ಷೇತ್ರ. ಸುಳ್ಯಕ್ಕೆ 44 ಕಿಮೀ ದೂರದಲ್ಲೂ ಪುತ್ತೂರಿಗೆ 33 ಕಿಮೀ ದೂರದಲ್ಲೂ ಇದೆ. ಈ ಸ್ಥಳ ಕುಕ್ಕೆ ಸುಬ್ರಹ್ಮಣ್ಯ, ಪುಷ್ಪಗಿರಿ ಎಂದೂ ಪ್ರಸಿದ್ಧವಾಗಿದೆ. ಕುಮಾರ ಪರ್ವತ, ಶೇಷಪರ್ವತ ಎಂಬ ಎರಡು ಬೆಟ್ಟಗಳ ಮಧ್ಯೆ ಇರುವ ಈ ಪ್ರದೇಶ ಒಂದು ಸುಂದರ ತಾಣ. ಈ ಕ್ಷೇತ್ರ ಪ್ರಾಚೀನದಲ್ಲಿ ಕುಕ್ಕೆ ಪಟ್ಟಣವೆಂದು ಪ್ರಸಿದ್ಧವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಸ್ಕಾಂದಪುರಾಣದ ಸನತ್ಕುಮಾರ ಸಂಹಿತೆಯಲ್ಲಿ ಸಹ್ಯಾದ್ರಿಖಂಡ ತೀರ್ಥಕ್ಷೇತ್ರ ಮಹಿಮಾ ನಿರೂಪಣದೊಳಗೆ ಈ ಕ್ಷೇತ್ರ ವರ್ಣಿತವಾಗಿದೆ. ಶಂಕರಾಚಾರ್ಯರು ಈ ಸ್ಥಳವನ್ನು ಸಂದರ್ಶಿಸಿದ್ದರೆಂದು ಆನಂದಗಿರಿ ರಚಿತ ಶಂಕರವಿಜಯ ಎಂಬ ಗ್ರಂಥದಿಂದ ತಿಳಿದುಬರುತ್ತದೆ.

ಇಲ್ಲಿರುವ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ದೇವಾಲಯ ಪ್ರಸಿದ್ಧವಾದುದು. ದೇವಾಲಯದ ಪ್ರಾಕಾರದೊಳಗೆ ಸುಬ್ರಹ್ಮಣ್ಯದೇವರ ಗುಡಿಯೊಳಗಿರುವ ಲಿಂಗ ಕುಕ್ಕೆ ಸುಬ್ರಹ್ಮಣ್ಯ ಎಂದೇ ಪ್ರಸಿದ್ಧ. ಈ ದೇವಾಲಯದ ಉತ್ತರ ಭಾಗದಲ್ಲಿ ಶಂಕರಮಂಠವೆಂಬ ಪ್ರಾಚೀನ ಮಠವಿದೆ. ಲಕ್ಷ್ಮೀನರಸಿಂಹ ದೇವಾಲಯ ಇಲ್ಲಿರುವ ಮಾಧ್ವಮಠದ ಉಸ್ತುವಾರಿಗೆ ಸೇರಿದೆ. ಈ ಕ್ಷೇತ್ರದಲ್ಲಿ ವರ್ಷಕ್ಕೊಮ್ಮೆ ದೊಡ್ಡಜಾತ್ರೆ ನಡೆಯುತ್ತದೆ. ಸುಬ್ರಹ್ಮಣ್ಯದ ಆಸುಪಾಸಿನಲ್ಲಿ ವಿಶೇಷ ಜಾತಿಯ ಬೆತ್ತ ದೊರೆಯುತ್ತದೆ. ಈ ಕ್ಷೇತ್ರಕ್ಕೆ ಸಮೀಪದಲ್ಲಿ ಕುಮಾರಧಾರಾ ನದಿ ಹರಿಯುತ್ತದೆ. ಧರ್ಮಸ್ಥಳಕ್ಕೆ ಹೋಗುವಾಗ ಅಥವಾ ಬರುವಾಗ ಈ ಕ್ಷೇತ್ರವನ್ನು ಭಕ್ತಾದಿಗಳು ಸಂದರ್ಶಿಸುವ ವಾಡಿಕೆಯಿದೆ. (ಬಿ.ಎಂ.ಎಸ್.)

**ಸುಮಾಶಿರೂರ್:** ಅರ್ಜುನ ಪ್ರಶಸ್ತಿ ಗಳಿಸಿದ ಅಂತಾರಾಷ್ಟ್ರೀಯ ಖ್ಯಾತಿಯ ಮಹಿಳಾ ಗುರಿಕಾರ್ತಿ. ದೊಡ್ಡಬಳ್ಳಾಪುರದವರು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಹಾಗೂ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದವರು. ಕಾಲೇಜು ದಿನಗಳಲ್ಲಿ ಎನ್.ಸಿ.ಸಿ. ಯಲ್ಲಿದ್ದಾಗ ಇವರು ಶೂಟಿಂಗ್ ಬಗ್ಗೆ ಆಸಕ್ತರಾದರು. ಸಂಜಯ್ ಚಕ್ರವರ್ತಿ ಎಂಬುವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದರು. 1994ರಲ್ಲಿ ರಾಷ್ಟ್ರೀಯ ಚಾಂಪಿಯನ್ ಆದರು.

ಪ್ರಸ್ತುತ ಮುಂಬೈನ ಪಶ್ಚಿಮ ರೈಲ್ವೆಯಲ್ಲಿ ಉದ್ಯೋಗಿ ಆಗಿರುವ ಸುಮಾ ಕಳೆದ ವರ್ಷ ಇಂಗ್ಲೆಂಡಿನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು. ದಕ್ಷಿಣ ಏಷ್ಯ ಫೆಡರೇಷನ್ ಕೂಟದಲ್ಲಿ ಭಾಗವಹಿಸಿ ಚಿನ್ನ ಮತ್ತು ಎರಡು ಬೆಳ್ಳಿ ಪದಕ ಗೆದ್ದಿದ್ದ ಇವರು ಬ್ಯಾಂಕಾಕ್ ಏಷ್ಯನ್ ಕೂಟದಲ್ಲಿಯೂ ಭಾಗವಹಿಸಿದ್ದರು. ಅಥೆನ್ಸ್‌ನಲ್ಲಿ ನಡೆದ ಒಲಂಪಿಕ್ಸ್ ಕ್ರೀಡಾಕೂಟದಲ್ಲಿಯೂ ಭಾಗಿಯಾಗಿದ್ದರು. ಇವರ ಕ್ರೀಡಾ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ಇವರಿಗೆ ಅರ್ಜುನ ಪ್ರಶಸ್ತಿ ಇತ್ತು ಗೌರವಿಸಿದೆ (2003). **(ಎಸ್.ಆರ್.ಯು.)**

**ಸುರತ್ಕಲ್ಲು:** ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಮಂಗಳೂರು–ಮುಲ್ಕಿ ಮಾರ್ಗದಲ್ಲಿ ಮಂಗಳೂರಿನ ಉತ್ತರಕ್ಕೆ 14 ಕಿಮೀ ದೂರದಲ್ಲೂ ಮುಲ್ಕಿಯ ದಕ್ಷಿಣಕ್ಕೆ 11 ಕಿಮೀ ದೂರದಲ್ಲೂ ಇದೆ.

ಕರ್ನಾಟಕ ಎಂಜಿನಿಯರಿಂಗ್ ಕಾಲೇಜು, ಸುರತ್ಕಲ್ಲು

ಇಲ್ಲಿ ಪ್ರಸಿದ್ಧ ಕರ್ನಾಟಕ ಎಂಜಿನಿಯರಿಂಗ್ ಕಾಲೇಜು, ಕಲಾ ಮತ್ತು ವಿಜ್ಞಾನ ಕಾಲೇಜು, ಜೊತೆಗೆ ವಿವಿಧ ಹಂತಗಳ ಇತರ ಶಾಲೆಗಳಿವೆ. ಕಡಲ ತೀರದಲ್ಲಿರುವ ಈ ಗ್ರಾಮದಲ್ಲಿ ಮತ್ಸ್ಯೋದ್ಯಮವಿದ್ದು, ಮಂಜುಗಡ್ಡೆ ತಯಾರಿಸುವ ಹಾಗೂ ಮೀನು ಸಂಸ್ಕರಿಸುವ ಕಾರ್ಖಾನೆಗಳಿವೆ. ಬೀಡಿ ತಯಾರಿಕೆ, ಬಟ್ಟೆ ತಯಾರಿಕೆಯುಂಟು. ಇತ್ತೀಚೆಗೆ ಮೋಂಬತ್ತಿ, ಬೆಂಕಿಪೆಟ್ಟಿಗೆ, ಅಲ್ಯುಮಿನಿಯಂ ಪಾತ್ರೆಗಳ ತಯಾರಿಕೆಯ ಸಣ್ಣ ಕಾರ್ಖಾನೆಗಳಿವೆ.

ವ್ಯಾಪಾರ ಕೇಂದ್ರವಾಗಿರುವ ಈ ಊರು ಸಮುದ್ರತೀರದ ಒಂದು ಸುಂದರ ಪ್ರವಾಸಿ ತಾಣ. ಇಲ್ಲಿನ ಹೆಬ್ಬಂಡೆಯ ಮೇಲೆ ಇತ್ತೀಚೆಗೆ ಒಂದು ದೀಪಸ್ತಂಭವನ್ನು ಕಟ್ಟಲಾಗಿದೆ. ಕರಾವಳಿಯ ರಾಷ್ಟ್ರೀಯ ಹೆದ್ದಾರಿ ಸುರತ್ಕಲ್ಲನ್ನು ಹಾದು ಹೋಗಿದ್ದು ಸುತ್ತಲ ಗ್ರಾಮ ಮತ್ತು ಪಟ್ಟಣಗಳಿಗೆ ಇಲ್ಲಿಂದ ಮಾರ್ಗ ಸಂಪರ್ಕಗಳಿವೆ. ಕಿರಿಯ ಪಟ್ಟಣ ಪಂಚಾಯಿತಿ ಆಡಳಿತಕ್ಕೆ ಈ ಗ್ರಾಮ ಸೇರಿದೆ.

ಇಲ್ಲಿರುವ ಸದಾಶಿವ ದೇವಾಲಯ ಖರಾಸುರ ಪ್ರತಿಷ್ಠಿತವೆಂದು ಪ್ರತೀತಿ. ಇಲ್ಲಿ ಸದಾಶಿವ ದೇವರ ಪೂಜೆಯ ಅನಂತರವೇ ಗಣಪತಿಪೂಜೆ ನೆರವೇರುವ ಅತಿ ವಿರಳ ಸಂಪ್ರದಾಯವಿದೆ. ಹಿಂದೆ ಈ ದೇವಾಲಯದ ಶಿಲ್ಪ ರಚನೆ ಪೌಳಿಯೆದುರುಗಡೆ ತಡೆಗಟ್ಟು ಮಹಡಿಗಳುಳ್ಳದ್ದಾಗಿ ಉಡುಪಿಯಲ್ಲಿರುವ ಜೈನಶಿಲ್ಪ ಶೈಲಿಯಂತಿತ್ತು; ಇತ್ತೀಚೆಗೆ ಇದು ಸಂಪೂರ್ಣ ರೂಪಾಂತರಗೊಂಡಿದೆ. ಇಡ್ಯದಲ್ಲಿ ಮಹಾಲಿಂಗೇಶ್ವರ ದೇವಾಲಯವಿದೆ. ಇದು ವಿದ್ಯಾಧರಮುನಿ ಪೂಜಿತವೆಂದು ಪ್ರತೀತಿ. ವೀರಭದ್ರ ದೇವಸ್ಥಾನ ಮತ್ತು ಇತ್ತೀಚೆಗೆ ಸ್ಥಾಪನೆಯಾದ ವೆಂಕಟರಮಣ ದೇವಾಲಯ ಹಾಗೂ ಮೂರು ಮಾರಿಯಮ್ಮ ಗುಡಿಗಳಿವೆ. ಇಲ್ಲಿ ನವರಾತ್ರಿಯ ವೇಳೆಗೆ ಬಯಲಾಟಗಳು ನಡೆಯುತ್ತವೆ. ಉಡುಪಿಯ ಅಷ್ಟಮಠಗಳಲ್ಲೊಂದಾದ ಕೃಷ್ಣಾಪುರ ಮಠದ ಮೂಲಭೂಮಿ ಸುರತ್ಕಲ್ಲಿನಲ್ಲಿದೆ. *

**ಸುರಪುರ:** ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಯಾದಗಿರಿ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕನ್ನು ದಕ್ಷಿಣ ಮತ್ತು ಆಗ್ನೇಯದಲ್ಲಿ ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ದೇವದುರ್ಗ ತಾಲ್ಲೂಕುಗಳೂ ಪಶ್ಚಿಮ ಮತ್ತು ವಾಯವ್ಯದಲ್ಲಿ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತ್ತು ಸಿಂದಗಿ ತಾಲ್ಲೂಕುಗಳೂ ಉತ್ತರದಲ್ಲಿ ಜೇವರಗಿ ಮತ್ತು ಪೂರ್ವಕ್ಕೆ ಶಾಹಪುರ ತಾಲ್ಲೂಕುಗಳೂ ಸುತ್ತುವರಿದಿವೆ. ಕಸಬೆ, ಹುಣಸಗಿ, ಕೆಂಭಾವಿ, ಕೊಡೆಕಲ್ಲು, ಕಕ್ಕೇರ ಇವು ಹೋಬಳಿಗಳು. 186 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,854.9 ಚ.ಕಿಮೀ. ಜನಸಂಖ್ಯೆ 3,36,755. ಇದರಲ್ಲಿ 2,93,133 ಮಂದಿ ಗ್ರಾಮಸ್ಥರೂ 43,622 ಮಂದಿ ಪಟ್ಟಣಿಗರೂ ಇದ್ದಾರೆ.

ಈ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿರುವ ಕನ್ನೆಳ್ಳಿ ಮಂಗಳೂರು ಬಳಿ ಬೆಟ್ಟಗಳಿವೆ. ತಾಲ್ಲೂಕಿನ ಉಳಿದೆಡೆ ಸಣ್ಣಪುಟ್ಟ ಗುಡ್ಡಗಳನ್ನು ಕಾಣಬಹುದು. ಗಾಜಿನ ಕೈಗಾರಿಕೆಗೆ ಬೇಕಾದ ಕಣಶಿಲೆ ಜೊತೆಗೆ ಜಿಪ್ಸಂ, ಕ್ಯಾಲ್ಕೇರಿಯಸ್ ಪುಡಿ ಮತ್ತು ಲವಣ ಈ ತಾಲ್ಲೂಕಿನಲ್ಲಿ ಸಿಗುತ್ತವೆ. ಕೃಷ್ಣಾ ಈ ತಾಲ್ಲೂಕಿನ ಮುಖ್ಯ ನದಿ. ತಾಲ್ಲೂಕಿನ ದಕ್ಷಿಣದಲ್ಲಿ ಗಡಿಯಾಗಿ ಹರಿದು ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ದೇವದುರ್ಗ ತಾಲ್ಲೂಕುಗಳನ್ನು ಬೇರ್ಪಡಿಸಿದೆ. ಈ ನದಿಯ ಫಲವತ್ತಾದ ಎಡದಂಡೆಯ ಭೂಪ್ರದೇಶ ಈ ತಾಲ್ಲೂಕಿಗೆ ಸೇರಿದೆ. ಬಿಜಾಪುರ ಜಿಲ್ಲೆಯಿಂದ ಹರಿದು ಬರುವ ಡೋಣಿನದಿ ಈ ತಾಲ್ಲೂಕಿನ ನೈಋತ್ಯ ಭಾಗದಲ್ಲಿ ವಾಯವ್ಯದಿಂದ ಆಗ್ನೇಯಾಭಿಮುಖವಾಗಿ ಹರಿದು ಕೃಷ್ಣಾ ನದಿಯನ್ನು ಸೇರುವ ಮೊದಲು ಅಮ್ಮಾಪುರ ಮತ್ತು ತಂಗದ ಬೈಲು ಗ್ರಾಮಗಳ ಮಧ್ಯೆ ಹರಿಯುವುದು. ಇವಲ್ಲದೆ ಕೆಲವು ತೊರೆಗಳು ಈ ತಾಲ್ಲೂಕಿನಲ್ಲಿ ಹರಿದು ಕೃಷ್ಣಾನದಿಯನ್ನು ಸೇರುತ್ತವೆ. ಈ ತಾಲ್ಲೂಕಿನ ನಾರಾಯಣಪುರದಿಂದ ಸು. 3 ಕಿಮೀ ಕೆಳಗೆ ಕೃಷ್ಣಾನದಿಯ ಜಲದುರ್ಗ ಜಲಪಾತವಿದೆ.

ತಾಲ್ಲೂಕಿನ ವಾಯುಗುಣ ಶುಷ್ಕ ಮತ್ತು ಆರೋಗ್ಯಕರವಾಗಿದ್ದು ವಾರ್ಷಿಕ ಸರಾಸರಿ ಮಳೆ 687.91 ಮಿಮೀ. ತಾಲ್ಲೂಕಿನಲ್ಲಿ ಸು.5,439.15 ಹೆಕ್ಟೇರ್ ಕುರುಚಲು ಅರಣ್ಯಪ್ರದೇಶವಿದೆ. ತೋಳ, ಕಿರುಬ, ಕಾಡುನಾಯಿ, ಜಿಂಕೆ, ನರಿ ಮುಂತಾದ ಪ್ರಾಣಿಗಳನ್ನು ಇಲ್ಲಿ ಕಾಣಬಹುದು.

ಒಣ ಬೇಸಾಯಕ್ಕೆ ಸಹಾಯಕವಾದ ಕಪ್ಪುಮಣ್ಣು ಈ ತಾಲ್ಲೂಕಿನಲ್ಲಿ ಬಹಳ ಆಳದವರೆಗೆ ಹೆಚ್ಚು ಕಂಡುಬರುವುದರ ಜೊತೆಗೆ ಕೆಂಪುಮರಳು ಮಿಶ್ರಿತ ಮಣ್ಣೂ ಅಲ್ಲಲ್ಲಿ ಕಂಡುಬರುವುದು. ಈ ಬಗೆಯ ಮಣ್ಣಿಗನುಗುಣವಾಗಿ ಈ ತಾಲ್ಲೂಕಿನಲ್ಲಿ ಮಳೆ, ಬಾವಿ, ನದಿ ಮುಂತಾದವುಗಳ ನೀರಿನ ಬಳಕೆಯಿಂದ ಜೋಳ, ಸಜ್ಜೆ, ಗೋದಿ, ತೊಗರಿ, ಕಡಲೆ, ಮೆಣಸಿನಕಾಯಿ, ಹತ್ತಿ, ನೆಲಗಡಲೆ ಬೆಳೆಯುತ್ತಾರೆ. ಪಶುಪಾಲನೆಯ ಜೊತೆಗೆ ಮತ್ಸ್ಯೋದ್ಯಮವೂ ಸ್ವಲ್ಪಮಟ್ಟಿಗಿದೆ.

ಈ ತಾಲ್ಲೂಕಿನಲ್ಲಿ ಸಿಮೆಂಟ್ ಉತ್ಪಾದನೆಗೆ ಬೇಕಾದ ಸುಣ್ಣಕಲ್ಲು, ಗಾಜು ತಯಾರಿಕೆಗೆ ಬೇಕಾದ ಉತ್ತಮ ಬೆಣಚುಕಲ್ಲು ಇದ್ದು ಅವನ್ನು ಹತ್ತಿರದ ಕಾರ್ಖಾನೆಗಳಿಗೆ ಸರಬರಾಜು ಮಾಡುತ್ತಾರೆ. ಈ ತಾಲ್ಲೂಕಿನ ತಿಂತಿಣಿ ಗ್ರಾಮದ ಸುತ್ತ ತಾಮ್ರನಿಕ್ಷೇಪಗಳಿವೆ. *

ಈ ತಾಲ್ಲೂಕಿನ ವಾಗಣಗೇರಿ ಚರಿತ್ರಾರ್ಹವಾದದ್ದು. ಸುರಪುರಕ್ಕೆ ಪಶ್ಚಿಮದಲ್ಲಿ 6 ಕಿಮೀ ದೂರದಲ್ಲಿರುವ ಈ ಸ್ಥಳ ಒಮ್ಮೆ ರಾಜಧಾನಿ

ಸುರಪುರದ ಕೋಟೆಯ ದ್ವಾರ

ಯಾಗಿತ್ತು. ಮೊಗಲ್ ಚಕ್ರವರ್ತಿ ಔರಂಗಜೇಬನಿಗೂ (17ನೆಯ ಶತಮಾನ) ಸುರಪುರದ ರಾಜರಿಗೂ ಇಲ್ಲಿ ಯುದ್ಧ ನಡೆದಿತ್ತು. ಇಲ್ಲಿ ಕೋಟೆಯ ಅವಶೇಷವಿದೆ. ಸುರಪುರಕ್ಕೆ ನೈಋತ್ಯದಲ್ಲಿರುವ ಕಕ್ಕೇರದ ಸೋಮನಾಥ ದೇವಾಲಯ ಪ್ರಸಿದ್ಧವಾದದ್ದು. ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶನ ಹುಟ್ಟಿದ ಊರೆನ್ನುವ ದೇವಪುರ ಸುರಪುರದ ದಕ್ಷಿಣಕ್ಕೆ 13 ಕಿಮೀ ದೂರದಲ್ಲಿ ಕೃಷ್ಣಾ ನದಿಯ ಎಡದಂಡೆಯ ಮೇಲಿದೆ. ಸುರಪುರಕ್ಕೆ ನೈಋತ್ಯದಲ್ಲಿ 19 ಕಿಮೀ ದೂರದಲ್ಲಿ ಕೃಷ್ಣಾನದಿಯ ಎಡದಂಡೆಯ ಮೇಲಿರುವ ತಿಂತಿಣಿ ಹಿಂದು ಮತ್ತು ಮುಸಲ್ಮಾನರ ಒಂದು ಪವಿತ್ರ ಕ್ಷೇತ್ರ. ಇಲ್ಲಿನ ಮೌನಪ್ಪಯ್ಯ ದರ್ಗಾ ಎಂದು ಕರೆಯುವ ಮೌನೇಶ್ವರ ದೇವಾಲಯ ಪ್ರಸಿದ್ಧ. ಸುರಪುರದ ನೈಋತ್ಯದಲ್ಲಿರುವ ಕೊಡೆಕಲ್ಲು

ಹೋಬಳಿ ಕೇಂದ್ರ. ತಾಲ್ಲೂಕಿನ ನೈಋುತ್ಯದ ಅಂಚಿನಲ್ಲಿ ಕೃಷ್ಣಾ ನದಿಯ ಎಡದಂಡೆಯ ಮೇಲಿರುವ ನಾರಾಯಣಪುರದ ಬಳಿ ಛಾಯಾಭಗವತಿ ದೇವಾಲಯವಿದೆ. ಕೃಷ್ಣಾನದಿಯ ಒಂದು ಕವಲು ಇಲ್ಲಿನ ಒಂದು ಗುಹೆಯೊಳಗೆ ಹೊಕ್ಕು ಹೊರಗೆ ಬರುವುದು. ವೈಶಾಖ ಶುದ್ಧ ತದಿಗೆ ಯಂದು ಇಲ್ಲಿ ಜಾತ್ರೆ ನಡೆಯುತ್ತದೆ. ಬೆಳಗಿನ ಹೊತ್ತು ಸೂರ್ಯಕಿರಣ ಇಲ್ಲಿನ ಛಾಯಾಭಗವತಿಯ ಪಾದಗಳ ಮೇಲೆ ಬೀಳುತ್ತದೆ. ನಾರಾಯಣ ಪುರದಿಂದ ಸು. 3 ಕಿಮೀ ಕೆಳಗೆ ಕೃಷ್ಣಾನದಿ 60ಮೀಟರ್ ಆಳಕ್ಕೆ ದುಮುಕಿ ಜಲದುರ್ಗ ಜಲಪಾತವನ್ನುಂಟುಮಾಡಿದೆ. ಸುರಪುರದ ನೈಋುತ್ಯ ದಲ್ಲಿ ತಾಲ್ಲೂಕು ಪಶ್ಚಿಮ ಗಡಿಗೆ ಹತ್ತಿರದಲ್ಲಿರುವ ಹಗರಟಗಿಯಲ್ಲಿ ಕಬ್ಬಿಣಯುಗದ ಬೃಹತ್ ಶಿಲಾ ಸಮಾಧಿಗಳು ಕಂಡುಬಂದಿವೆ. ಸುರಪುರದ ವಾಯವ್ಯಕ್ಕೆ 35 ಕಿಮೀ ದೂರದಲ್ಲಿರುವ ಮುದನೂರಿನ ರಾಮನಾಥ ದೇವಾಲಯ ಪ್ರಸಿದ್ಧವಾದದ್ದು, ಈ ಊರು ವಚನಕಾರ ದೇವರದಾಸಿಮಯ್ಯನ ಜನ್ಮಸ್ಥಳವೆಂದೂ ಪ್ರತೀತಿ. ಸುರಪುರದ ವಾಯವ್ಯಕ್ಕೆ 29ಕಿಮೀ ದೂರದಲ್ಲಿ ರುವ ಕೆಂಭಾವಿಯಲ್ಲಿ ಬಹಮನೀ ಸುಲ್ತಾನರ ಕಾಲದ ಅನೇಕ ಚಾರಿತ್ರಿಕ ಅವಶೇಷಗಳು ಇವೆ. ಇದು ಶಿವಶರಣ ಭೋಗಣ್ಣನ ಜನ್ಮಸ್ಥಳ.

ಸುರಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಸುರಪುರ ಪಟ್ಟಣ ಪ್ರದೇಶದಲ್ಲಿ 22,163 ಮಂದಿ ಪುರುಷರು, 21,459 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 43,622. ಇದು ವ್ಯಾಪಾರ ಕೇಂದ್ರ.

ಐತಿಹಾಸಿಕ ಕಾದಂಬರಿಗಳನ್ನು ಬರೆದಿರುವ ಕರ್ನಲ್ ಮೆಡೋಸ್ ಟೇಲರನು ಈ ಪಟ್ಟಣದಲ್ಲಿ ಕಟ್ಟಿದ ಮನೆ ಟೇಲರ್ ಮಂಜ಼ಿಲ್ ಎಂದು ಈಗಲೂ ಪ್ರಸಿದ್ಧವಾಗಿದೆ. ಸುರಪುರ ಸ್ವಲ್ಪಕಾಲ ನಿಜಾಮನ ಸೇನಾ ಕೇಂದ್ರವಾಗಿತ್ತು. ಇಲ್ಲಿರುವ ಗೋಪಾಲಸ್ವಾಮಿ ಗುಡಿ, ಅರಮನೆ ಮತ್ತು ಕೋಟೆ ಅವಶೇಷಗಳು ಪ್ರೇಕ್ಷಣೀಯವಾದವು. *

**ಸುರಪುರದ ನಾಯಕರು:** ಗುಲ್ಬರ್ಗ ಜಿಲ್ಲೆಯ ಸುರಪುರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆ ಸುತ್ತಣ ಪ್ರದೇಶಗಳನ್ನು ಆಳಿದ ಒಂದು ಮಾಂಡಳಿಕ ಮನೆತನ. ಇವರು ಬೇಡ ಜನಾಂಗಕ್ಕೆ ಸೇರಿದವರು. ಕಂಪಿಲಿಯ ರಾಮನಾಥನ ಸೈನ್ಯದಲ್ಲಿ ಇವರು ಸೇವೆ ಸಲ್ಲಿಸುತ್ತಿದ್ದರೆಂಬ ಸಂಗತಿ ನಂಜುಂಡ ಕವಿಯ (ಸು. 1525) ರಾಮನಾಥಚರಿತದಿಂದ ತಿಳಿದು ಬರುತ್ತದೆ. ಚಾಂದಬೀಬಿಯ ಗಂಡ ಮೃತನಾದ ಮೇಲೆ ಆಕೆಗೆ ಸಮರ್ಥ ಆಡಳಿತ ನಿರ್ವಹಿಸಲು ಈ ಬೇಡ ನಾಯಕರ ಸಹಾಯ ಸಹಕಾರಗಳು ದೊರೆತಿದ್ದುವು.

ವಿಜಯನಗರದ ಅರಸರ ಸಾಮಂತರಾಗಿದ್ದ ಇವರು ತಾಳಿಕೋಟೆ ಕದನದ ಅನಂತರ ಬಿಜಾಪುರದ ಸುಲ್ತಾನನ ಅಧೀನಕ್ಕೆ ಒಳಗಾದರು. ಇವರ ಶೌರ್ಯ, ಸಾಹಸಗಳನ್ನು ಗುರುತಿಸಿದ ಸುಲ್ತಾನ ಇವರ ನಾಯಕರಿಗೆ ಬಿರುದುಗಳನ್ನು ನೀಡಿ ವಾಗಣಗೇರಿಯಲ್ಲಿ ಕಂದಾಯ ವಸೂಲಿ ಮಾಡುವ ಅಧಿಕಾರ ವಹಿಸಿಕೊಟ್ಟ. ಔರಂಗಜೇಬ್ ಬಿಜಾಪುರದ ಮೇಲೆ ದಾಳಿ ಮಾಡಿದಾಗ ಇವರು ತಮ್ಮ ಶೌರ್ಯ ಪ್ರತಾಪಗಳನ್ನು ಪ್ರದರ್ಶಿಸಿದರು. ವಾಗಣಗೇರಿಯನ್ನು ಔರಂಗಜೇಬ ಆಕ್ರಮಿಸಿದ ಅನಂತರ ಬೇಡರಸನು ಸುರಪುರದಲ್ಲಿ ದುರ್ಗ ಕಟ್ಟಿಕೊಂಡ. ಬೇಡ ನಾಯಕನ ಪರಾಕ್ರಮಕ್ಕೆ ಮೆಚ್ಚಿದ ಔರಂಗಜೇಬ್ ಅವನಿಗೆ ಹಿಂದೆ ಇದ್ದ ಎಲ್ಲ ಹಕ್ಕುಬಾಧ್ಯತೆಗಳನ್ನು ನೀಡಿದ.

ಹದಿನೆಂಟನೆಯ ಶತಮಾನದ ಅಂತ್ಯಭಾಗದಲ್ಲಿ ನಿಜಾಮ ಮತ್ತು ಮರಾಠರು ಒಂದಾದಾಗ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬೇಡ ನಾಯಕನು ನಿಜಾಮನಿಗೆ 50,000 ರೂಪಾಯಿ ಕಾಣಿಕೆ ಸಲ್ಲಿಸಿ ಅಪಾಯದಿಂದ ಪಾರಾದ. ಪ್ರಬಲ ದೊರೆಯಾಗಿದ್ದ ಸುರಪುರದ ಎಂಕಪ್ಪ ನಾಯಕನ ಮೈತ್ರಿ ಗಳಿಸಲು ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಪ್ರಯತ್ನಿಸಿ ವಿಫಲರಾದರು. ಎಂಕಪ್ಪ ನಾಯಕನ ರಾಜ್ಯದ ಹಲವು ಭಾಗಗಳನ್ನು ಟಿಪ್ಪು ಆಕ್ರಮಿಸಿದರೂ ಆತ ಸುರಪುರದ ಮೇಲೆ ದಾಳಿ ಮಾಡಲಿಲ್ಲ. ಎಂಕಪ್ಪನಾಯಕನ ಮರಣಾ ನಂತರ ನಿಜಾಮನು ಸುರಪುರದ ಮೇಲೆ 15 ಲಕ್ಷ ರೂ.ಗಳ ಉತ್ತರಾಧಿಕಾರ ಶುಲ್ಕ ವಿಧಿಸಿದ. ಇದರಲ್ಲಿ ಬಹು ಭಾಗವನ್ನು ನಗದು ರೂಪದಲ್ಲಿ ಸಲ್ಲಿಸಿದ ಸುರಪುರದ ಅರಸನು ಉಳಿದ ಹಣವನ್ನು ಬ್ರಿಟಿಷರ ಜಾಮೀನಿನ ಮೇಲೆ ಸಲ್ಲಿಸುತ್ತ ಬಂದ ಕೃಷ್ಣಪ್ಪನಾಯಕ 1841ರಲ್ಲಿ ತೀರಿಕೊಳ್ಳುವ ವೇಳೆಗೆ ಸುರಪುರ ರಾಜ್ಯ ಸಾಲದ ಹೊರೆಗೆ ಗುರಿಯಾಗಿ ತನ್ನ ಸತ್ತ್ವವನ್ನು ಕಳೆದುಕೊಂಡಿತು.

ಬ್ರಿಟಿಷರ ಮತ್ತು ನಿಜಾಮನ ಕುಟಿಲೋಪಾಯಗಳಿಂದ ಸುರಪುರದ ಬೊಕ್ಕಸ ಬರಿದಾಯಿತು. ಕೃಷ್ಣಪ್ಪನಾಯಕ ತೀರಿಕೊಂಡಾಗ ಅವನ ಮಗ ವೆಂಕಟಪ್ಪನಾಯಕ ಅಪ್ರಾಪ್ತವಯಸ್ಕನಾಗಿದ್ದರಿಂದ ಮೆಡೋಸ್ ಟೇಲರ್‌ನನ್ನು ಸುರಪುರದ ರಾಜಕೀಯ ಕಾರ್ಯಭಾರಿಯಾಗಿ ನೇಮಕ ಮಾಡಲಾಯಿತು. 1853ರಲ್ಲಿ ವೆಂಕಟಪ್ಪ ನಾಯಕನಿಗೆ ರಾಜ್ಯದ ಆಡಳಿತವನ್ನು ವಹಿಸಿ ಕೊಡಲಾಯಿತು. ಆಗ ಭಾರತದಲ್ಲಿ ಬ್ರಿಟಿಷ್ ಗವರ್ನರ್ ಜನರಲ್ಲನಾಗಿದ್ದ ಡಾಲ್‌ಹೌಸಿ ಸುರಪುರದ ರಾಜನು ಬ್ರಿಟಿಷ್ ಅಧಿಕಾರಿಯೊಬ್ಬನನ್ನು ರಾಜಕೀಯ ಸಲಹೆಗಾರನನ್ನಾಗಿ ನೇಮಿಸಿಕೊಂಡು ಅವನ ವೆಚ್ಚಕ್ಕೆ 20,000 ರೂ.ಗಳನ್ನು ತೆರಬೇಕೆಂದು ಸೂಚಿಸಿದ. ಆರ್ಥಿಕ ಮುಗ್ಗಟ್ಟನ್ನು ಎದುರಿಸು ತ್ತಿದ್ದ ವೆಂಕಟಪ್ಪನಾಯಕ ಡಾಲ್‌ಹೌಸಿಯ ಸೂಚನೆಯನ್ನು ನಿರಾಕರಿಸಿದ. ಅಂತೆಯೇ, ತನ್ನ ಸೈನ್ಯಕ್ಕೆ ಅರಬರು, ರೋಹಿಲ್ಲರು ಮೊದಲಾದವರನ್ನು ಸೇರಿಸಿಕೊಂಡು ವ್ಯವಸ್ಥಿತಗೊಳಿಸಿದ. ನಾನಾ ಸಾಹೇಬನೊಡನೆ ರಾಜಕೀಯ ಸಂಪರ್ಕ ಬೆಳೆಸಿಕೊಂಡ. ಅನೇಕ ಜಮೀನುದಾರರು ವೆಂಕಟಪ್ಪನಾಯಕನಿಗೆ ಧನಸಹಾಯ ಮಾಡಲು ಮುಂದಾದರು. ಇಂಥ ಯುದ್ಧಸಿದ್ಧತೆಗಳು ಬ್ರಿಟಿಷರ ಗಮನಕ್ಕೆ ಬಾರದಿರಲಿಲ್ಲ. ಮಹೀಪಾಲಸಿಂಗ್ ಜವಹಾರಸಿಂಗ ನೆಂಬುವನು ಸುರಪುರದ ರಾಜನಿಂದ ಪ್ರೇರಿತನಾಗಿ ಬೆಳಗಾಂವಿಯಲ್ಲಿ ಬ್ರಿಟಿಷ್ ಸೈನ್ಯ ದಂಗೆ ಏಳಲು ಉತ್ತೇಜನ ನೀಡಿದ. ಇದನ್ನರಿತ ಬ್ರಿಟಿಷರು ಮಹೀಪಾಲಸಿಂಗನನ್ನು ಬಂಧಿಸಿ, ಗುಂಡಿಟ್ಟು ಕೊಂದುದಲ್ಲದೆ ಸುರಪುರದ ನಾಯಕನಿಗೆ ಬೆದರಿಕೆ ಪತ್ರ ಕಳುಹಿಸಿದರು. ವೆಂಕಟಪ್ಪನಾಯಕ ತನ್ನ ಸ್ವಾಮಿನಿಷ್ಠೆಯನ್ನು ಸಾರಿದ. ಈ ಮಧ್ಯದಲ್ಲಿ ಸುರಪುರದಲ್ಲಿ ನಡೆದ ಹಲವು ದರೋಡೆಗಳಿಗೆ ನಾಯಕ ಕಾರಣನೆ ಎಂದು ವಿಚಾರಣೆ ನಡೆಸಲು ಬ್ರಿಟಿಷರು ಕ್ಯಾಪ್ಟನ್ ಕ್ಯಾಂಪ್‌ಬೆಲ್‌ನನ್ನು ನೇಮಿಸಿದರು.

ಈ ವೇಳೆಗಾಗಲೇ ತಮ್ಮ ಕುಟಿಲತಂತ್ರಗಳಿಂದ ನಿಜಾಮ ಮತ್ತು ಬ್ರಿಟಿಷರು ವೆಂಕಟಪ್ಪ ನಾಯಕನನ್ನು ಕೆರಳಿಸಿದ್ದರು. ಬ್ರಿಟಿಷರ ವಿರುದ್ಧ ನಾಯಕನಿಗೆ ಸಹಾಯ ಮಾಡಲು ಮುಂಡರಗಿ ಭೀಮರಾಯ, ನರಗುಂದದ ಬಾಬಾಸಾಹೇಬ ಮೊದಲಾದವರು ಸಿದ್ಧರಿದ್ದರು. ಬ್ರಿಟಿಷರು ರಾಜಕೀಯ ಕುತಂತ್ರ ಆಪಾದನೆಯನ್ನು ಸುರಪುರದ ಮೇಲೆ ಹೊರೆಸಿ ಅದರ ಆಕ್ರಮಣಕ್ಕೆ ಸನ್ನದ್ಧರಾದರು. ಅಭೇದ್ಯವಾದ ಸುರಪುರದ ದುರ್ಗವನ್ನು ಪ್ರವೇಶಿಸಲು ಕ್ಯಾಪ್ಟನ್ ವೈಂಡ್‌ಹ್ಯಾಮ್ ಸತತ ಪ್ರಯತ್ನ ನಡೆಸಿದ. ಕೊನೆಗೂ ಭೀಮರಾಯನೆಂಬ ದೇಶದ್ರೋಹಿಯ ಕುತಂತ್ರದಿಂದಾಗಿ ಸುರಪರ ಬ್ರಿಟಿಷರ ಕೈವಶವಾಯಿತು. ತಲೆ ತಪ್ಪಿಸಿಕೊಂಡು ಹೈದರಾಬಾದು ತಲುಪಿದ ವೆಂಕಟಪ್ಪನಾಯಕ ನಿಜಾಮನ ಮುಖಾಂತರ ಬ್ರಿಟಿಷರ ಬಂದಿಯಾಗಿ ಸಿಕಂದರಾಬಾದಿನ ಸೆರೆಮನೆ ಸೇರಿದ. ಮುಂದೆ ವಿಚಾರಣೆ ನಡೆಸಿದ ಬ್ರಿಟಿಷ್ ನ್ಯಾಯಾಲಯ ಘೋರಾಪರಾಧಗಳನ್ನು ಸಾಬೀತು ಮಾಡಿ ಅವನಿಗೆ ಮರಣದಂಡನೆ ವಿಧಿಸಿತು. ಆದರೆ ಮೆಡೋಸ್ ಟೇಲರ್ ಮಧ್ಯೆ ಪ್ರವೇಶಿಸಿ ಮರಣದಂಡನೆಯನ್ನು ಜೀವಾವಧಿ ಕಾರಾಗೃಹವಾಸಕ್ಕೆ ಇಳಿಸಿದ. ಅನಂತರ ಆ ಶಿಕ್ಷೆಯನ್ನೂ ಕೇವಲ ನಾಲ್ಕು ವರ್ಷಗಳ ಬಂಧನವಾಸಕ್ಕೆ ಸೀಮಿತಗೊಳಿಸ

ಲಾಯಿತು. ಆದರೆ ಕಾರಾಗೃಹಕ್ಕೆ ಹೋಗುವ ಮಾರ್ಗಮಧ್ಯದಲ್ಲೇ ವೆಂಕಟಪ್ಪನಾಯಕ ಆತ್ಮಹತ್ಯೆ ಮಾಡಿಕೊಂಡು ಮರಣಹೊಂದಿದ. 4.3.1861 ರಂದು ಸುರಪುರ ಸಂಸ್ಥಾನ ನಿಜಾಮನ ಸ್ವಾಧೀನಕ್ಕೆ ಒಳಪಟ್ಟಿತು. (ಜಿ.ಆರ್.ಆರ್.)

**ಸುರೇಶ್, ಬೆಂಗಳೂರು ನೀಲಕಂಠನ್:** 1946–90. ಕರ್ನಾಟಕ ವೇಣುವಾದನ ಪ್ರಪಂಚದಲ್ಲಿ ಅಲ್ಪಕಾಲ ಬಾಳಿ ಮಹತ್ಸಾಧನೆ ಮಾಡಿ ಶಾಶ್ವತ ಪರಿಮುದ್ರೆ ಛಾಪಿಸಿ ಮರೆಯಾದ ಕೊಳಲು ಕಲಾವಿದ. ವೃತ್ತಿಯಿಂದ ಎಂಜಿನಿಯರ್, ಪ್ರವೃತ್ತಿಯಿಂದ ವೇಣುವಾದನ ಪಟು. ಇವರು ಕೇವಲ ಎಂಟು ವರ್ಷದ ಬಾಲಕನಾಗಿದ್ದಾಗ ಬೆಂಗಳೂರಿನಲ್ಲಿ ವೇಣು ಗಾರುಡಿಗ ಟಿ.ಆರ್. ಮಹಾಲಿಂಗಂ (1926–86) ಅವರ ಮೋಹಕ ಶೈಲಿಗೆ ಮನ ಸೋತು ಕೊಳಲೇ ತನ್ನ ಮಾಧ್ಯಮ ವೆಂದು ನಿರ್ಧರಿಸಿದರು. ಸ್ವತಃ ಎಂಜಿನಿಯರ್ ಆಗಿದ್ದ ತಂದೆ ಬಿ. ನೀಲಕಂಠನ್ (1916–83), ತಾಯಿ ಜಯಲಕ್ಷ್ಮಿ ಇಬ್ಬರೂ ಸಂಗೀತ ಪ್ರಿಯರಾಗಿದ್ದರು. ಅನೇಕ ಸಂದರ್ಭಗಳಲ್ಲಿ ಪಿಟೀಲು ಮಾಂತ್ರಿಕ ಮೈಸೂರು ಟಿ. ಚೌಡಯ್ಯನವರಿಗೆ (1895–1967) ಆತಿಥೇಯರೂ ಆಗಿದ್ದರು. ಆಗೆಲ್ಲ ಇವರಿಗೆ ಮನೆಯಲ್ಲೇ ಸಂಗೀತದ ಔತಣ.

ಇವರ ಮೊದಲ ಗುರು ಎಂ.ಎಸ್. ಶ್ರೀನಿವಾಸಮೂರ್ತಿ. ಮುಂದೆ ಖುದ್ದು ಮಾಲಿಯವರ (ಮಹಾಲಿಂಗಂ) ನಿರ್ದೇಶನದ ಮೇರೆಗೆ ಅವರ ನಿಕಟ ಅನುವರ್ತಿ ಮಿತ್ರ ಬಿ.ಶಿವರಾಮಯ್ಯನವರ ಬಳಿ ಶಿಷ್ಯತ್ವ. ಇನ್ನು ಶಿವರಾಮಯ್ಯನವರಾದರೂ ಮಾಲಿಯವರ ಏಕಲವ್ಯ ಶಿಷ್ಯ ಮತ್ತು ಗುರುವಿನ ವಿಶ್ವಾಸಗಳಿಸಿದ್ದ ಸ್ನೇಹಿತ. ಹೀಗಾಗಿ ಮಾಲಿ ನಿರ್ಮಿಸಿದ ವಿನೂತನ ಚೌಕಟ್ಟಿನೊಳಗೆ ಸುರೇಶ್ ಅವರ ಶಿಕ್ಷಣ ಮುಂದುವರಿಯಿತು. ಈ ಚೌಕಟ್ಟಿನ ಕ್ರಾಂತಿಕಾರೀ ಸುಧಾರಣೆಗಳು ಮುಖ್ಯವಾಗಿ ಮೂರು: ಉಚ್ಚ ಶ್ರುತಿಯ ಕಡಿಮೆ ಉದ್ದದ ಕೊಳಲು, ತುತ್ತೂಕಾರ ತಂತ್ರದ ಬಳಕೆ ಮತ್ತು ಬೆರಳಾಡಿಕೆಯಲ್ಲಿ ನವಶೈಲಿ.

ದೀರ್ಘಶ್ವಾಸಬಂಧನ ಹಾಗೂ ಕಠಿಣ ಪರಿಶ್ರಮವಿದ್ದ ಹೊರತು ಉಚ್ಚ ಶ್ರುತಿಯ ಕೊಳಲಿನಲ್ಲಿ ಜೀವಭಾವನಾದೋತ್ಪತ್ತಿ ಆಗದು. ತುತ್ತೂಕಾರ ತಂತ್ರವನ್ನು ಕೊಳಲುವಾದನದಲ್ಲಿ ಬಳಸುವುದರಿಂದ ಹಾಡುಗಾರಿಕೆಯ ಪರಿಣಾಮವನ್ನೇ ಕೇಳುಗರಲ್ಲಿ ಮೂಡಿಸಬಹುದು. ಬೆರಳಾಡಿಕೆಯಲ್ಲಿಯ ನಯಗಾರಿಕೆ ಮನೋಧರ್ಮಿಕ ಸಂಗೀತದ ಪ್ರಮುಖ ಅಂಗವಾಗಿರುವ ಜಾದೂಗಮಕಗಳ ಪ್ರಕಾಶನಕ್ಕೆ ಅತ್ಯವಶ್ಯ.

ಇಂಥ ಪ್ರತಿಭೆ ಹೊಂದಿದ್ದ ಇವರು ಅತಿ ಶೀಘ್ರವಾಗಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ್ದು, ಅಂದಿನ ಮುಂಚೂಣಿ ಪಕ್ಕವಾದ್ಯದವರು ಇವರಿಗೆ ಪಿಟೀಲು, ಮೃದಂಗ ಮತ್ತು ಘಟ ಸಾರಥ್ಯ ಒದಗಿಸಲು ಮುಂದೆಬಂದರು. ಘಟವಿದ್ವಾಂಸ ಬೆಂಗಳೂರು ಕೆ.ವೆಂಕಟರಾಮ್ ಇವರಿಗೆ ಮಾರ್ಗದರ್ಶನ ನೀಡಿದರು. ಖಾಸಗಿ ಬೈಠಕ್ಕಿನಲ್ಲಿ ಇವರ ವಾದನವನ್ನು ತನ್ಮಯತೆಯಿಂದ ಆಲಿಸಿದ ಮಾಧುರ್ಯ ಸಾಮ್ರಾಜ್ಞಿ ಎಂ.ಎಸ್.ಸುಬ್ಬುಲಕ್ಷ್ಮಿ (1916–2004) 'ಸಾಕ್ಷಾತ್ ವೇಣುಗಾನ ಲೋಲ ಶ್ರೀಕೃಷ್ಣನೇ ಎದುರಿದ್ದಂಥ ಅನುಭವ' ಎಂದು ಉದ್ಗರಿಸಿದ್ದರು.

ಇವರ ಹೆಸರು ದೇಶ ವಿದೇಶಗಳಲ್ಲಿ ಕೊಳಲಿನೊಂದಿಗೆ ಸಮೀಕೃತವಾಗಿತ್ತು. 1983ರಲ್ಲಿ ಇವರು ಸ್ವಗೃಹದಲ್ಲೇ (ಬೆಂಗಳೂರು) ಅಕಸ್ಮಾತ್ತಾಗಿ ಜಾರಿಬಿದ್ದರು. ಮೂಳೆಗಳು ಮುರಿದವು. ಚಿಕಿತ್ಸಾನಂತರ ಕುರ್ಚಿಯ ಮೇಲೆ ಕುಳಿತು ಕಚೇರಿ ನೀಡುತ್ತಿದ್ದರು. ಆರೋಗ್ಯ ಕೆಡುತ್ತ ಹೋಗಿ 1990 ಅಕ್ಟೋಬರ್ 7ರಂದು ಇವರು ನಿಧನರಾದರು. ಇವರ ವೇಣುವಾದನ ಧ್ವನಿಸುರುಳಿಗಳು ಜನಪ್ರಿಯವಾಗಿವೆ. *

**ಸುರೇಶ್ ಹೆಬ್ಳಿಕರ್:** 1945– . ಹೆಸರಾಂತ ಚಿತ್ರ ನಿರ್ದೇಶಕ, ನಟ ಹಾಗೂ ಪರಿಸರವಾದಿ. 1945ರಲ್ಲಿ ಧಾರವಾಡದಲ್ಲಿ ಜನಿಸಿದರು. ಸ್ನಾತಕೋತ್ತರ ಪದವಿ ಪಡೆದ ಅನಂತರ ಮುಂಬಯಿಗೆ ಹೋಗಿ ಭಾರತೀಯ ವಿದ್ಯಾಭವನದಿಂದ ಮಾರ್ಕೆಟಿಂಗ್ ಅಂಡ್ ಅಡ್ವರ್ಟೈಸ್‌ಮೆಂಟ್ ಎಂಬ ವಿಷಯದಲ್ಲಿ ಡಿಪ್ಲೊಮಾ ಪಡೆದರು. ಬೆಂಗಳೂರಿಗೆ ಬಂದು ನೆಲಸಿದ ಇವರಿಗೆ ಅಧ್ಯಾಪಕನಾಗಬೇಕೆಂಬ ಹೆಬ್ಬಯಕೆ ಇತ್ತು. ಆದರೆ ಇವರ ಫ್ರೆಂಚ್ ಗುರುಗಳಾದ ಮಹಾಲೆ ಎಂಬುವರ ಉತ್ತೇಜನದ ಮೇರೆಗೆ ಚಲನಚಿತ್ರರಂಗವನ್ನು ಪ್ರವೇಶಿಸಿದರು. ಚಿತ್ರಕಥೆ, ಛಾಯಾಗ್ರಹಣ, ನಟನೆ, ನಿರ್ದೇಶನ ಮೊದಲಾದ ಎಲ್ಲ ವಿಭಾಗಗಳಲ್ಲಿಯೂ ಕೆಲಸ ಮಾಡಿದರು. ನಟರಾಗಿಯೂ ತಮ್ಮ ಸರಳ ವಿಶಿಷ್ಟ ಅಭಿನಯದಿಂದ ಚಿತ್ರರಸಿಕರ ಗಮನ ಸೆಳೆದರು. ಇವರು 24ಕ್ಕೂ ಹೆಚ್ಚು ಚಿತ್ರಗಳನ್ನು ತಯಾರಿಸಿದ್ದಾರೆ, 30ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅಪರಿಚಿತ, ಕಾಡಿನಬೆಂಕಿ, ಆಘಾತ, ಉಷಾಕಿರಣ ಮೊದಲಾದುವು ಇವರ ಕೆಲವು ಮುಖ್ಯ ಚಿತ್ರಗಳು. ಆಘಾತ ಎಂಬ ಚಿತ್ರ ರಾಜ್ಯಪ್ರಶಸ್ತಿ ಗಳಿಸಿದೆ. ಕಾಡಿನ ಬೆಂಕಿ ಚಿತ್ರಕ್ಕೆ ರಾಜ್ಯ ಹಾಗೂ ರಾಷ್ಟ್ರಪ್ರಶಸ್ತಿಗಳು ಲಭಿಸಿವೆ.

ಇವರ ಸಾಮಾಜಿಕ ಕಾಳಜಿಯೂ ಗಮನಾರ್ಹವಾದದ್ದು. ಕರ್ನಾಟಕದಲ್ಲಿ ಪರಿಸರ ಚಳವಳಿಯನ್ನು ಸಂಘಟಿಸಿದ ಕೆಲವೇ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಪರಿಸರವಾದಿಯಾಗಿ ರೂಪುಗೊಂಡ ಇವರು ಈ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಇಂಡಿಯನ್ ಸೊಸೈಟಿ ಆಫ್ ಎನ್‌ವಿರನ್‌ಮೆಂಟಲ್ ಸ್ಟೆಬಿಲಿಟಿ ಎಂಬ ಸಂಘಟನೆಯನ್ನು ರೂಪಿಸಿದ ಇವರು ಅದರ ಉಪಾಧ್ಯಕ್ಷರಾಗಿದ್ದಾರೆ. ಸೌರಶಕ್ತಿ, ವನ್ಯಜೀವಿಗಳು, ಕೆರೆಗಳು, ಪಶ್ಚಿಮಘಟ್ಟಗಳು, ಹಸುರು ಸಂರಕ್ಷಣೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಕಿರುಚಿತ್ರಗಳನ್ನು ತಯಾರಿಸಿದ್ದಾರೆ. ಅತಿವೇಗವಾಗಿ ಕಣ್ಮರೆಯಾಗುತ್ತಿರುವ ಅರಣ್ಯಸಂಪತ್ತು ಮತ್ತು ಜಲಸಂಪತ್ತನ್ನು ಸಂರಕ್ಷಿಸುವ ಧ್ಯೇಯದಿಂದ ಇಕೊವಾಚ್ ಎಂಬ ಸಂಘಟನೆಯನ್ನು ಹುಟ್ಟುಹಾಕಿದರು (1994 ಅಕ್ಟೋಬರ್ 1). ನಗರ ಪರಿಸರದಲ್ಲಿ ಅರಣ್ಯ ರೂಪಿಸುವ ಮಹತ್ತರ ಕಾರ್ಯವನ್ನು ಈ ಸಂಘಟನೆ ಕೈಗೊಂಡಿದೆ. ಭಾರತೀಯ ಸೇನೆಯು ಬೆಂಗಳೂರಿನ ಕೋರಮಂಗಲ–ವಿಮಾನ ನಿಲ್ದಾಣ ವರ್ತುಲ ರಸ್ತೆಯ ಬಳಿ ಈ ಸಂಸ್ಥೆಗೆ 200 ಎಕರೆ ಜಾಗವನ್ನು ಅರಣ್ಯ ಬೆಳೆಸಲು ಕೊಡಗೆಯಾಗಿ ನೀಡಿದೆ. ಈ ಜಾಗದಲ್ಲಿ ಸು. 40 ಸಾವಿರ ಸಸಿಗಳನ್ನು ನೆಟ್ಟು, ಸೇನಾರಣ್ಯ ಎಂಬ

ಅರಣ್ಯವನ್ನು ಬೆಳೆಸಲಾಗುತ್ತಿದೆ. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವುದು, ಸಾರ್ವಜನಿಕ ತಿಳಿವಳಿಕೆ ಮೂಡಿಸುವುದು ಈ ಸಂಸ್ಥೆಯ ಪ್ರಧಾನ ಧ್ಯೇಯಗಳು. ಇಂಥ ಧ್ಯೇಯಗಳನ್ನು ಜನತೆಗೆ ತಲುಪಿಸಲು ನಾಟಕ ಮಾಧ್ಯಮವನ್ನೂ ಬಳಸಿಕೊಳ್ಳುತ್ತಿದೆ. ಇಕೊವಾಚ್ ಮೆಮೊರಿ ದಿಕ್ಕೊ – ಇಂಥ ಎರಡು ನಾಟಕಗಳನ್ನು ಈ ಸಂಸ್ಥೆಯ ಮೂಲಕ ಹೆಬ್ಬಿಕರ್ ಅವರು ನಿರ್ದೇಶಿಸಿದ ಶಫರ್ಡ್ಸ್ ಆನ್ ದಿ ಮೂವ್ ಎಂಬ ಡಾಕ್ಯುಮೆಂಟರಿಗೆ 19ನೆಯ ಅಂತಾರಾಷ್ಟ್ರೀಯ ಆಗ್ರೋ ಉತ್ಸವದಲ್ಲಿ ಪ್ರತಿಷ್ಠಿತ ಜಸರಿಸ್ ಪ್ರಶಸ್ತಿ ದೊರಕಿದೆ. ಕರ್ನಾಟಕ ಪರಿಸರ ಚಳವಳಿಯ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು. *

**ಸುರೇಶ್ವರಾಚಾರ್ಯ:** ಶಂಕರಾಚಾರ್ಯರ ನಾಲ್ವರು ಪ್ರಸಿದ್ಧ ಶಿಷ್ಯರಲ್ಲಿ ಒಬ್ಬರು. ಇವರಿಗೆ ವಿಶ್ವರೂಪಾಚಾರ್ಯ ಎನ್ನುವ ಹೆಸರೂ ಇತ್ತೆಂದು ತಿಳಿದುಬರುತ್ತದೆ. ಬಹುಶಃ ಇವರು ಉತ್ತರ ಭಾರತದವರು. ಸಂಪ್ರದಾಯದ ಪ್ರಕಾರ ಪೂರ್ವಮೀಮಾಂಸೆಯ ಪಟುಗಳಾಗಿದ್ದು ಕರ್ಮನಿಷ್ಠರಾಗಿದ್ದ ಮಂಡನಮಿಶ್ರರೇ ಶಂಕರಾಚಾರ್ಯರಿಂದ ಪರಾಜಿತರಾಗಿ ಸುರೇಶ್ವರರಾದರು ಎಂದು ನಂಬಿಕೆ.

ಐತಿಹಾಸಿಕ ದೃಷ್ಟಿಯಿಂದ ಮಂಡನಮಿಶ್ರ–ಸುರೇಶ್ವರರು ಒಬ್ಬರೇ ಅಥವಾ ಬೇರೆ ಬೇರೆ ವ್ಯಕ್ತಿಗಳೇ ಎನ್ನುವ ಜಿಜ್ಞಾಸೆ ವಿದ್ವಾಂಸರಲ್ಲಿದೆ. ಅದೇನೇ ಇರಲಿ, ಸುರೇಶ್ವರರೆಂಬ ವ್ಯಕ್ತಿಯಲ್ಲಿ ಶಂಕರಾಚಾರ್ಯರಿಗೆ ಅಸಾಧಾರಣ ಪ್ರತಿಭೆಯುಳ್ಳ ಮಹಾಶಿಷ್ಯರು ಒದಗಿಬಂದದ್ದಂತೂ ಸತ್ಯ. ಕರ್ಮಮಾರ್ಗದಿಂದ ಜ್ಞಾನಮಾರ್ಗಕ್ಕೆ ಪರಿವರ್ತಿತರಾಗಿದ್ದ ಇವರ ಜ್ಞಾನನಿಷ್ಠೆಯನ್ನು ಕಂಡ ಶಂಕರಾಚಾರ್ಯರು ಇವರಿಗೆ ತಮ್ಮ ಬ್ರಹ್ಮಸೂತ್ರಭಾಷ್ಯಕ್ಕೆ ವಿವರಣಾತ್ಮಕವಾದ ವಾರ್ತಿಕವನ್ನು ಬರೆಯಬೇಕು ಎಂದರಂತೆ. ಆದರೆ ಶಂಕರಾ ಚಾರ್ಯರ ಇತರ ಶಿಷ್ಯರಿಗೆ ಸುರೇಶ್ವರರ ಜ್ಞಾನನಿಷ್ಠೆಯಲ್ಲಿ ಅಪನಂಬಿಕೆಯಿದ್ದು ಅವರು 'ನಿಮ್ಮ ಭಾಷ್ಯಕ್ಕೆ ವಾರ್ತಿಕವನ್ನು ಸುರೇಶ್ವರರು ಬರೆಯಲಾಗದು; ಹಿಂದಿನ ಕರ್ಮಮಾರ್ಗದ ಸಂಸ್ಕಾರ ಅವರಲ್ಲಿ ಮಾಸಿಲ್ಲ; ತಮ್ಮ ಭಾಷ್ಯಕ್ಕೆ ವಿರುದ್ಧವಾಗಿ ಏನನ್ನಾದರೂ ಬರೆದಾರು ಎನ್ನುವ ಭಯ ನಮಗೆ' ಎಂದು ತಮ್ಮ ಗುರುಗಳಲ್ಲಿ ನಿವೇದಿಸಿಕೊಂಡರು. ಶಂಕರಾಚಾರ್ಯರಿಗೆ ಇವರ ಈ ಸಂಶಯ ಹಾಸ್ಯಾಸ್ಪದವಾಗಿ ಕಂಡಿತು. ಆಗ ನೀವು ಸ್ವತಂತ್ರವಾದ ಅದ್ವೈತ ಕೃತಿಯನ್ನೇ ಬರೆಯಿರಿ ಎಂದು ಸುರೇಶ್ವರರಿಗೆ ಹೇಳಿದರಂತೆ. ನಿಸ್ಪೃಹರಾದ ಸುರೇಶ್ವರರು ನೈಷ್ಕರ್ಮ್ಯಸಿದ್ಧಿ ಎನ್ನುವ ಅದ್ಭುತ ಅದ್ವೈತ ಗ್ರಂಥವನ್ನು ರಚಿಸಿ ಗುರುಗಳಿಗೆ ಅರ್ಪಿಸಿದರು. ಸುರೇಶ್ವರರಿಗೆ ಶಂಕರಾಚಾರ್ಯರಲ್ಲಿ ಬೆಳೆದು ಬಂದಿದ್ದ ನಿಷ್ಠೆ ಎಲ್ಲರಿಗೂ ಸ್ಫುಟಗೊಂಡಿತು. ಗುರುಗಳು ಈ ಕೆಲಸವನ್ನು ಮೆಚ್ಚಿ ತಾವು ಬರೆದಿದ್ದ ತೈತ್ತಿರೀಯ ಮತ್ತು ಬೃಹದಾರಣ್ಯಕ ಉಪನಿಷತ್ತುಗಳ ಭಾಷ್ಯಗಳಿಗೆ ವಾರ್ತಿಕಗಳನ್ನು ಬರೆಯುವಂತೆ ಇಚ್ಛೆಪಟ್ಟರು. ಗುರುವಿನ ಪ್ರಸಾದದಿಂದ ಸುರೇಶ್ವರರು ಈ ಎರಡು ಭಾಷ್ಯಗಳಿಗೂ ತಮ್ಮ ವಾರ್ತಿಕಗಳನ್ನು ಬರೆದು ಅರ್ಪಿಸಿದರು. ಈ ವಾರ್ತಿಕಗಳು ಅದ್ವೈತ ಗ್ರಂಥ ಸಮುದಾಯದಲ್ಲಿ ಶಂಕರಾಚಾರ್ಯರ ಕೃತಿಗಳಷ್ಟೇ ಗೌರವ ಪಡೆದಿವೆ.

ಸುರೇಶ್ವರರು ಇವುಗಳಲ್ಲದೆ ಮಾನಸೋಲ್ಲಾಸಪ್ರಣವ ವಾರ್ತಿಕ ಅಥವಾ ಪಂಚೀಕರಣ ವಾರ್ತಿಕ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಮಾನಸೋಲ್ಲಾಸ ಶಂಕರಾಚಾರ್ಯರ ಅದ್ಭುತ ಕೃತಿ ಎನ್ನಲಾಗಿರುವ ದಕ್ಷಿಣಾಮೂರ್ತಿ ಸ್ತೋತ್ರ ಎನ್ನುವುದರ ತಾತ್ತ್ವಿಕ ವಿವರಣೆ. ಪ್ರಣವ ವಾರ್ತಿಕ ಆದಿಶಂಕರರ ಪಂಚೀಕರಣ ಎನ್ನುವ ಕೃತಿಯ ಸಣ್ಣ ಪ್ರಮಾಣದ ವಿವರಣೆ. (ಕೆ.ಬಿ.ಆರ್.)

**ಸುವರ್ಣಮುಖಿ:** ತುಮಕೂರು ಜಿಲ್ಲೆಯಲ್ಲಿ ಹರಿಯುವ ಚಿಕ್ಕ ನದಿ. ಇದು ಚನ್ನರಾಯದುರ್ಗದಲ್ಲಿ ಹುಟ್ಟಿ ಆಗ್ನೇಯಕ್ಕೆ ಹರಿಯುತ್ತದೆ. ಬೆಟ್ಟದಿಂದ ಇಳಿದ ಮೇಲೆ ಈಶಾನ್ಯಕ್ಕೆ ತಿರುಗಿ ಕೊರಟಗೆರೆಯ ಕಡೆ ಸಾಗುತ್ತದೆ. ಕೊರಟಗೆರೆ ಈ ನದಿಯ ಎಡದಂಡೆಯ ಮೇಲಿದೆ. ಕೊರಟಗೆರೆಯಿಂದ ಈ ನದಿ ಮುಂದೆ ಸಾಗಿ ಚನ್ನರಾಯದುರ್ಗದ ಪಶ್ಚಿಮದಲ್ಲಿರುವ ಹಾಗೂ ಕೊರಟಗೆರೆ ತಾಲ್ಲೂಕಿಗೆ ಸೇರಿದ ರಾಂಪುರದ ಬಳಿ ಜಯಮಂಗಲಿ ನದಿಯನ್ನು ಕೂಡುತ್ತದೆ. ಈ ನದಿಯ ಒಟ್ಟು ಹರಿವಿನ ಉದ್ದ ಸು. 24 ಕಿಮೀ. ಬರಡುಭೂಮಿಯಲ್ಲಿ ಹರಿಯುವ ಕಾರಣ ನದಿಯಲ್ಲಿ ನೀರು ಕಡಿಮೆ. ಮಳೆಗಾಲದಲ್ಲಿ ನದಿ ತುಂಬಿರುತ್ತದೆ. ಈ ನದಿ ತಲಪರಿಗೆಗಳಿಂದ ತೋಟಗಳಿಗೆ ನೀರು ಹಾಯಿಸುತ್ತಾರೆ. (ವಿ.ಜಿ.ಕೆ.)

**ಸುವರ್ಣಾವತಿ:** ಕಾವೇರಿಯ ಒಂದು ಉಪನದಿ. ಹೊನ್ನುಹೊಳೆ ಎಂಬ ಹೆಸರು ಇರುವ ಈ ನದಿ ಮೈಸೂರು ಜಿಲ್ಲೆಯ ಆಗ್ನೇಯ ಭಾಗದ ಗಜಹಟ್ಟಿ ಕಣಿವೆಯ ಬಳಿ ಹುಟ್ಟಿ ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಮೂಲಕ ಹರಿದು ತಲಕಾಡಿನ ಸಮೀಪದ ಕಕ್ಕೂರು ಬಳಿ ಕಾವೇರಿಯೊಡನೆ ಸಂಗಮವಾಗುವುದು. ಈ ನದಿಯ ದಂಡೆಗಳ ಮೇಲಣ ಭೂಮಿ ಫಲವತ್ತಾದ್ದರಿಂದ ನದಿಗೆ ಹೊನ್ನುಹೊಳೆಯೆಂಬ ಹೆಸರು ಬಂದಿದೆ. ಚಾಮರಾಜನಗರ ತಾಲ್ಲೂಕಿನಲ್ಲಿ ಗಾಜನೂರು ಮತ್ತು ಹಂಗಲವಾಡಿ ಎಂಬ ಸ್ಥಳಗಳಲ್ಲಿ, ಯಳಂದೂರು ತಾಲ್ಲೂಕಿನಲ್ಲಿ ಗಂಗನೂರ ಬಳಿ ಇದಕ್ಕೆ ಅಣೆಕಟ್ಟು ಕಟ್ಟಲಾಗಿದೆ. (ವಿ.ಜಿ.ಕೆ.)

**ಸುಳ್ಯ:** ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಜಿಲ್ಲೆಯ ದಕ್ಷಿಣದಲ್ಲಿ ಕೊನೆಯ ತಾಲ್ಲೂಕಾದ ಇದನ್ನು ಪಶ್ಚಿಮ, ವಾಯವ್ಯ ಮತ್ತು ಉತ್ತರದಲ್ಲಿ ಪುತ್ತೂರು ತಾಲ್ಲೂಕು, ಈಶಾನ್ಯದಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು, ಪೂರ್ವಕ್ಕೆ ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಸೋಮವಾರಪೇಟೆ ತಾಲ್ಲೂಕುಗಳೂ ಪಶ್ಚಿಮ ಮತ್ತು ನೈಋತ್ಯದಲ್ಲಿ ಕೇರಳ ರಾಜ್ಯ, ದಕ್ಷಿಣ ಮತ್ತು ಆಗ್ನೇಯದಲ್ಲಿ ಮಡಿಕೇರಿ ತಾಲ್ಲೂಕೂ ಸುತ್ತುವರಿದಿವೆ. ಪುತ್ತೂರು ಉಪವಿಭಾಗಕ್ಕೆ ಸೇರಿದ ಈ ಪ್ರದೇಶವನ್ನು 1965 ಡಿಸೆಂಬರ್ 15ರಂದು ಪ್ರತ್ಯೇಕಿಸಿ ತಾಲ್ಲೂಕೆಂದು ಗುರುತಿಸಲಾಯಿತು. ಪಂಜ ಮತ್ತು ಸುಳ್ಯ ಹೋಬಳಿಗಳು. 41 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 826.6 ಚ.ಕಿಮೀ. ಜನಸಂಖ್ಯೆ 1,40,754. ಇದರಲ್ಲಿ 1,22,726 ಮಂದಿ ಗ್ರಾಮವಾಸಿಗಳು, 18,028 ಮಂದಿ ಪಟ್ಟಣಿಗರು ಇದ್ದಾರೆ.

ತಾಲ್ಲೂಕಿನ ಪೂರ್ವಭಾಗ ಪಶ್ಚಿಮಘಟ್ಟ ಶ್ರೇಣಿಗಳಿಂದ ಆವೃತವಾಗಿದೆ. ಪಶ್ಚಿಮ ಭಾಗ ಘಟ್ಟಶ್ರೇಣಿಯ ಇಳಿಜಾರು ಮತ್ತು ವ್ಯವಸಾಯ ಯೋಗ್ಯ ಭೂ ಪ್ರದೇಶದಿಂದ ಕೂಡಿದೆ. ಕುಮಾರಧಾರ ಮತ್ತು ಪಯಸ್ವಿನಿ ಈ ತಾಲ್ಲೂಕಿನ ಮುಖ್ಯ ನದಿಗಳು. ಸುಬ್ರಹ್ಮಣ್ಯದ ಬಳಿಯ ಕುಮಾರ ಪರ್ವತದಿಂದ ಹರಿದುಬರುವ ಕುಮಾರಧಾರ ತಾಲ್ಲೂಕಿನ ಪೂರ್ವದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹರಿಯುವುದು. ಮುಂದೆ ಪುತ್ತೂರು ತಾಲ್ಲೂಕನ್ನು ಪ್ರವೇಶಿಸಿ ಮತ್ತೆ ತಾಲ್ಲೂಕಿನ ಉತ್ತರದಲ್ಲಿ ಸ್ವಲ್ಪದೂರ ತಾಲ್ಲೂಕು ಗಡಿಯಾಗಿ ಹರಿದು ಪುತ್ತೂರನ್ನು ಪ್ರವೇಶಿಸುವುದು. ಈ ನದಿಗೆ ಅನೇಕ ಸಣ್ಣಪುಟ್ಟ ಹೊಳೆ, ತೊರೆಗಳು ಕೂಡಿಕೊಳ್ಳುವುವು. ಪಯಸ್ವಿನಿ ನದಿ ತಾಲ್ಲೂಕಿನ ದಕ್ಷಿಣದಲ್ಲಿ ಆಗ್ನೇಯದಿಂದ ವಾಯವ್ಯಕ್ಕೆ ಹರಿದು ಸುಳ್ಯವನ್ನು ಮುಟ್ಟಿ ಅನಂತರ ಪಶ್ಚಿಮಾಭಿಮುಖವಾಗಿ ಹರಿದು ಕೇರಳ ರಾಜ್ಯವನ್ನು ಪ್ರವೇಶಿಸುವುದು. ತಾಲ್ಲೂಕಿನಲ್ಲಿ ಕರಾವಳಿ ಪರ್ವತ ಪ್ರದೇಶದ ವಾಯುಗುಣವಿದ್ದು ಮಲೆನಾಡ ಪ್ರದೇಶಕ್ಕೆ ಸೇರಿದ್ದರೂ ವರ್ಷದ ಹೆಚ್ಚುಕಾಲ ಸೆಕೆಯಿಂದ ಕೂಡಿರುತ್ತದೆ. ವಾರ್ಷಿಕ ಸರಾಸರಿ ಮಳೆ 4,081.7 ಮಿಮೀ.

ಈ ತಾಲ್ಲೂಕು ಜಲಸಮೃದ್ಧಿಯೊಂದಿಗೆ ಸಸ್ಯಸಮೃದ್ಧಿಯಿಂದಲೂ ಕೂಡಿದೆ. ಬೆಟ್ಟ, ಕಣಿವೆಗಳಲ್ಲಿ ದಟ್ಟ ಅರಣ್ಯಗಳಿವೆ. 46,626 ಹೆಕ್ಟೇರ್ ಅರಣ್ಯ ಪ್ರದೇಶವಿದ್ದು ಸಾಗುವಾನಿ, ಬೀಟೆ, ಮತ್ತಿ, ಜಂಬೆ, ಕಾಡಹಲಸು, ಹುನಗಲು, ನಂದಿ, ಮಾವು, ಕೀರಲಬೋಗಿ ಮುಂತಾದ ಬೆಲೆಬಾಳುವ

ಮರಗಳ ಜೊತೆಗೆ ಹುಣಿಸೆ, ರಾಮಪತ್ರೆ, ಅಂಟುವಾಳದಂತಹ ಮರಗಳೂ ಬಿದಿರು ಮತ್ತು ಬೆತ್ತವೂ ಬೆಂಕಿಕಡ್ಡಿಗೆ ಬೇಕಾದಂಥ ಮೆದು ತಿರುಳಿನ ಮರಗಳೂ ಬೆಳೆಯುತ್ತವೆ. ರಬ್ಬರ್ ತೋಟಗಳನ್ನೂ ಬೆಳೆಸಿ ವಿಸ್ತರಿಸಲಾಗುತ್ತಿದೆ. 1972ರಲ್ಲಿ 4,390 ಹೆಕ್ಟೇರ್ ಪ್ರದೇಶದಲ್ಲಿ ರಬ್ಬರ್ ತೋಟವನ್ನು ಬೆಳೆಸಲಾಗಿತ್ತು.

ತಾಲ್ಲೂಕಿನ ಹೆಚ್ಚುಭಾಗ ಜಂಬುಮಣ್ಣಿನ ಹೆಚ್ಚು ಮಳೆ ಬೀಳುವ ಪ್ರದೇಶಕ್ಕನುಗುಣವಾಗಿರುವ ಪ್ರದೇಶದಿಂದಲೂ ಪೂರ್ವದ ಕಡೆ ಬಂಡು ಮಣ್ಣಿನ ಪ್ರದೇಶದಿಂದಲೂ ಕೂಡಿದೆ. ಬತ್ತ ಇಲ್ಲಿನ ಮುಖ್ಯ ಬೆಳೆ. 4,900 ಹೆ.ಗಳಲ್ಲಿ ಅಡಕೆ, 1,698 ಹೆ.ಗಳಲ್ಲಿ ತೆಂಗು, 3,941 ಹೆ.ಗಳಲ್ಲಿ ಗೋಡಂಬಿ, 55 ಹೆ.ಗಳಲ್ಲಿ ಕೋಕೊ, 100 ಹೆ.ಗಳಲ್ಲಿ ವೀಳೆಯದೆಲೆ, 86 ಹೆ.ಗಳಲ್ಲಿ ಶುಂಠಿ, 50 ಹೆ.ಗಳಲ್ಲಿ ಏಲಕ್ಕಿ, 2,040 ಹೆ.ಗಳಲ್ಲಿ ಬಾಳೆ, 425 ಹೆ.ಗಳಲ್ಲಿ ಮಾವು, 250 ಹೆ.ಗಳಲ್ಲಿ ಗೆಣಸು, 600 ಹೆ.ಗಳಲ್ಲಿ ಬಾಳೆ, 425 ಹೆ.ಗಳಲ್ಲಿ ಮಾವು, 250 ಹೆ.ಗಳಲ್ಲಿ ಗೆಣಸು, 600 ಹೆ.ಗಳಲ್ಲಿ ಹಲಸು, 25 ಹೆ.ಗಳಲ್ಲಿ ಪಪಾಯಿ, 800 ಹೆ.ಗಳಲ್ಲಿ ಮರಗೆಣಸನ್ನು ಬೆಳೆಯಲಾಗಿತ್ತು.

ವ್ಯವಸಾಯಕ್ಕೆ ಬೇಕಾಗುವ ಎಮ್ಮೆಗಳ ಸಾಕಣೆ ಇಲ್ಲಿ ಹೆಚ್ಚು. ಇಲ್ಲಿ ಮಲೆನಾಡ ಗಿಡ್ಡ ಹಸುಗಳಿದ್ದು ಉತ್ತಮ ತಳಿಯ ಹಸುಗಳು ಕಡಿಮೆ. ತಾಲ್ಲೂಕಿನ ನದಿಗಳಲ್ಲಿ ಮೀನು ಹಿಡಿಯುವುದುಂಟು. ತಾಲ್ಲೂಕಿನಲ್ಲಿ ಗೃಹ ಕೈಗಾರಿಕೆಗಳಾದ ಬೀಡಿ ಮತ್ತು ಬಿದಿರು ಬುಟ್ಟಿಗಳ ತಯಾರಿಕೆ ಯುಂಟು. ವಿದ್ಯುತ್, ಅಂಚೆ, ತಂತಿ, ಆಸ್ಪತ್ರೆ, ಪ್ರೌಢಶಾಲೆ ಮತ್ತು ಕಾಲೇಜು ಮುಂತಾದವುಗಳ ಸೌಲಭ್ಯಗಳಿವೆ. ಬಿಸಲೆ ಮತ್ತು ಸಂಪಾಜೆ, ಘಟ್ಟ ರಸ್ತೆಗಳೇ ಈ ತಾಲ್ಲೂಕಿನ ಪೂರ್ವದ ಮುಖ್ಯ ಸಂಪರ್ಕ ಮಾರ್ಗ. ಇವುಗಳಿಂದ ಪಕ್ಕದ ಕೊಡಗು ಜಿಲ್ಲೆಯೊಂದಿಗೆ ವ್ಯಾಪಾರ ವ್ಯವಹಾರ ನಡೆಯುವುದು. ಮಡಿಕೇರಿ–ಸುಳ್ಯ–ಪುತ್ತೂರು–ಬಂಟ್ವಾಳ–ಮಂಗಳೂರು ಗಳಿಗೆ ರಸ್ತೆ ಸಂಪರ್ಕವಿದೆ. ಬಿಸಲೆಘಾಟ್–ಸುಬ್ರಹ್ಮಣ್ಯ–ಪಂಜ–ಬೆಳ್ಳಾರೆ–ಪುತ್ತೂರು ಈ ಮಾರ್ಗವೂ ತಾಲ್ಲೂಕು ಮುಖಾಂತರ ಹಾದುಹೋಗುತ್ತದೆ. ತಾಲ್ಲೂಕಿನ ಭೌಗೋಳಿಕ ಸನ್ನಿವೇಶಕ್ಕನುಗುಣವಾಗಿ ಇಲ್ಲಿ ಬೆಟ್ಟಗುಡ್ಡಗಳನ್ನು ಹತ್ತಿ ಇಳಿಯುವ ಮಣ್ಣಿನ ರಸ್ತೆಗಳೇ ಹೆಚ್ಚು.

ಸುಳ್ಯದ ಈಶಾನ್ಯಕ್ಕೆ 34 ಕಿಮೀ ದೂರದಲ್ಲಿರುವ ಬಳಪ ಗ್ರಾಮ ವಿಜಯನಗರದ ಕಾಲದಲ್ಲಿ ಕೆಲವು ನಾಯಕರ ಆಡಳಿತ ಕೇಂದ್ರವಾಗಿತ್ತು. ಇಲ್ಲಿ ಸ್ವಲ್ಪ ಭಾಗ ಹಾಳಾಗಿರುವ ತ್ರಿಶೂಲಿನಿ ದೇವಾಲಯವಿದೆ. ಸುಳ್ಯದ ಉತ್ತರಕ್ಕೆ 19 ಕಿಮೀ ದೂರದಲ್ಲಿರುವ ಬೆಳ್ಳಾರೆ ಒಂದು ವ್ಯಾಪಾರ ಕೇಂದ್ರ. ಇದು ಬಲ್ಲಾಳ ವಂಶಸ್ಥರ ಗ್ರಾಮವಾಗಿದ್ದು ಇಲ್ಲಿ ಅವರು ಅರಮನೆ ಮತ್ತು ಬಸದಿಯನ್ನು ಕಟ್ಟಿಸಿದ್ದರು. ಇಕ್ಕೇರಿಯ ವೆಂಕಟಪ್ಪನಾಯಕ ಇಲ್ಲಿ ಒಂದು ಕೋಟೆ ಕಟ್ಟಿಸಿದ್ದ. 1775ರಲ್ಲಿ ಟಿಪ್ಪುವಿನ ವಶವಾಗಿದ್ದು ಮತ್ತೆ 1799ರಲ್ಲಿ ಕೊಡಗಿನ ರಾಜರಿಗೆ ಸೇರಿತು. 1834ರಲ್ಲಿ ಈ ಪ್ರದೇಶವೆಲ್ಲ ಕೊಡಗಿನ ಜೊತೆ ಬ್ರಿಟಿಷರಿಗೆ ಸೇರಿಹೋಯಿತು. ಇಲ್ಲೊಂದು ಕಾಲೇಜು ಮತ್ತು ಪ್ರವಾಸಿಮಂದಿರ ಇದೆ. ಸುಳ್ಯದ ಈಶಾನ್ಯಕ್ಕೆ 44 ಕಿಮೀ ದೂರದಲ್ಲಿ ರುವ ಸುಬ್ರಹ್ಮಣ್ಯ ಒಂದು ಪುಣ್ಯಕ್ಷೇತ್ರ. ಕುಮಾರ ಮತ್ತು ಶೇಷ ಪರ್ವತಗಳ ಮಧ್ಯೆ ಇರುವ ಇದನ್ನು ಕುಕ್ಕೆ ಸುಬ್ರಹ್ಮಣ್ಯ ಮತ್ತು ಪುಷ್ಪಗಿರಿ ಎಂದೂ ಕರೆಯುತ್ತಾರೆ. ಮಳೆಗಾಲದಲ್ಲಿ ಹೋಗಲಾಗದ ಈ ಗ್ರಾಮಕ್ಕೆ ತಾಲ್ಲೂಕಿನ ಎಲ್ಲ ಕಡೆಯಿಂದಲೂ ಮಾರ್ಗವಿದೆ. ಇಲ್ಲಿನ ಸುಬ್ರಹ್ಮಣ್ಯ ದೇವಾಲಯ ಮತ್ತು ಪ್ರತಿವರ್ಷ ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಜರಗುವ ಜಾತ್ರೆ ಬಹು ಪ್ರಸಿದ್ಧ.

ಸುಳ್ಯ ತಾಲ್ಲೂಕು ಆಡಳಿತ ಕೇಂದ್ರ. ಸಂಪಾಜೆ–ಪುತ್ತೂರು ಹೆದ್ದಾರಿ ಯಲ್ಲಿ ಮಂಗಳೂರಿನ ಆಗ್ನೇಯಕ್ಕೆ 86 ಕಿಮೀ ದೂರದಲ್ಲೂ ಪುತ್ತೂರಿನ ಆಗ್ನೇಯಕ್ಕೆ 35 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 18,028.

ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಆಸ್ಪತ್ರೆ, ಅಂಚೆ, ತಂತಿ, ವಿದ್ಯುತ್, ಪ್ರೌಢಶಾಲೆ, ಒಂದು ಕಾಲೇಜು ಮುಂತಾದವುಗಳನ್ನೊಳಗೊಂಡಿದೆ. ಶ್ರೀಲಂಕಾದಿಂದ ಬಂದಂಥ ನಿರಾಶ್ರಿತರಿಗೆ ವಸತಿಯನ್ನೊದಗಿಸಿದ್ದಲ್ಲದೆ ಇಲ್ಲಿ ರಬ್ಬರ್ ತೋಟಗಳನ್ನು ಬೆಳೆಸಿ ಅವರಿಗೆ ಉದ್ಯೋಗವನ್ನು ಒದಗಿಸಲಾಗಿದೆ. ರಬ್ಬರ್ ತೋಟಗಳ ಬೆಳವಣಿಗೆ, ವಿಸ್ತರಣೆಯೊಂದಿಗೆ ಸುಳ್ಯ ಅಭಿವೃದ್ಧಿಯಾಗುತ್ತಿದೆ. **(ಡಿ.ಎನ್.ಕೆ.)**

**ಸೂತ್ರದ ಬೊಂಬೆಯಾಟ:** ಒಂದು ಜನಪದ ಕಲೆ, ಕರ್ನಾಟಕದಲ್ಲಿ ಪ್ರಚಲಿತವಿರುವ ಬೊಂಬೆಯಾಟಗಳಲ್ಲೊಂದು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಕರಾವಳಿಯ ಭಾಗಗಳಲ್ಲಿ ಕಂಡುಬರುತ್ತದೆ. ಇದನ್ನು ಪುತ್ತಲಿ ಬೊಂಬೆ ಮೇಳ ಎಂದೂ ಕರೆಯುತ್ತಾರೆ.

ಸೂತ್ರದ ಬೊಂಬೆಯಾಟ ಅತ್ಯಂತ ಪ್ರಾಚೀನವಾದ ಕಲೆ. ಕರ್ನಾಟಕ ದಲ್ಲಿ ಈ ಕಲೆ ತುಂಬ ಹಿಂದಿನಿಂದಲೂ ಇತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಬಸವಣ್ಣನವರ ಕಾಲದಿಂದಲೂ ಇದರ ಉಲ್ಲೇಖ ಲಭ್ಯವಾಗುತ್ತದೆ. ಚೆನ್ನಬಸವಣ್ಣನವರ ಒಂದು ವಚನದಲ್ಲಿ ಸೂತ್ರದ ಬೊಂಬೆಗೆ ಪ್ರಾಣವುಂಟೆ? ಎಂಬ ಮಾತು ಬರುತ್ತದೆ. ಬಸವಣ್ಣನವರ ಒಂದು ವಚನದಲ್ಲಿ 'ಜಗತ್ತೆಂಬ ಯಂತ್ರದ ಹಾಹೆಗೆ ಅಜ್ಞಾನವೆಂಬ ತುಷವ ತೊಡಿಸಿ, ಅಹಂಹಮತೆಯೆಂಬ ಸೊಕ್ಕನಿಕ್ಕಿ ಬಾರದ ಬಟ್ಟೆಯ ಬರಿಸಿ, ಕಾಣದ ದುಃಖವ ಕಾಣಿಸಿ, ಉಣ್ಣದ ಅಪೇಯವನ್ನುಣಿಸಿ ಮಾರಾರಿ ವಿನೋದಿಸಿದನಯ್ಯ' ಎಂಬ ಉಲ್ಲೇಖ ಬರುತ್ತದೆ. ಬಹುರೂಪಿ ಚೌಡಯ್ಯ ತನ್ನ ಒಂದು ವಚನದಲ್ಲಿ ಬಸವಣ್ಣನೆನ್ನ ಬಹುರೂಪಕ್ಕೆ ಸೂತ್ರಧಾರಿಯಾದ ಎಂದಿದ್ದಾನೆ. ಹರಿಹರನ ಬಸವರಾಜದೇವರ ರಗಳೆಯಲ್ಲಿ 'ಶಿವನ ಮನೆಯ ತೊತ್ತಿನ ಮನೆಯ ತೊತ್ತಪ್ಪ ಮಾಯೆ ಮಾಡಿಸುವ ಮಣ್ಣರೂಪು, ಕಪ್ಪಡದ ಹಾಗೆ, ಕಲ್ಲಂತ್ರ, ಹುಲ್ಲಬೊಂಬೆ' ಎಂಬ ಮಾತುಗಳು ಬರುತ್ತವೆ. ಏಕಾಂತ ರಾಮಯ್ಯನ ರಗಳೆಯಲ್ಲಿ ನೋಡೆ ಬೆತ್ತಲೆಯ ಬೊಂಬೆಗಳಿರಲ್ಕ ಳವಳಿದು ಎಂಬ ಮಾತು ಬರುತ್ತದೆ. ನೇಮಿಚಂದ್ರ ಮೊದಲಾದ ಕವಿಗಳೂ ಸೂತ್ರದ ಬೊಂಬೆಯಾಟಗಳ ಪ್ರಸ್ತಾಪವನ್ನು ಮಾಡಿದ್ದಾರೆ. ಪುರಂದರದಾಸ, ಕನಕದಾಸ ಮೊದಲಾದ ದಾಸರ ಕೀರ್ತನೆಗಳಲ್ಲಿಯೂ ಬೊಂಬೆಯಾಟಗಳ ಬಗ್ಗೆ ಉಲ್ಲೇಖಗಳು ಬರುತ್ತವೆ. ಡಿಂಭದಲ್ಲಿ ಪ್ರಾಣವಿರಲು ಕಾಂಬ ಸೂತ್ರದ ಗೊಂಬೆಯಂತೆ, ಬೆಳ್ಳಿ ಬಂಗಾರಿಟ್ಟುಕ್ಕೊಂಡು ಒಳ್ಳೇ ವಸ್ತ್ರ ಹೊದ್ದುಕೊಂಡು ಅಳ್ಳಾಚಾರೀ ಗೊಂಬೆಯಂತೆ ಆಡಿ ಹೋದನು; ಡಿಂಭದೊಳುಕಾಂಬ ಸೂತ್ರಗೊಂಬೆಯಂತೆ; ಬೊಂಬೆಯಾಟವನಾಡಿಸಿದ ಮಹಾಭಾರತದ; ನೀನೆ ಆಡಿಸದಿರಲು ಜಡಒನಕೆಯಾ ಬೊಂಬೆ; ನೀನಿಟ್ಟ ಸೂತ್ರದಿಂ ಚಲಿಸುವುದು ಕೈಕಾಲು ಮುಂತಾದ ಮಾತುಗಳಲ್ಲಿ ಸೂತ್ರದ ಬೊಂಬೆಯಾಟ ಕರ್ನಾಟಕದಲ್ಲಿ ಎಷ್ಟು ಜನಪ್ರಿಯವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ರತ್ನಾಕರವರ್ಣಿಯ ಭರತೇಶವೈಭವದಲ್ಲಿಯೂ ಈ ಬೊಂಬೆಯಾಟಗಳ ಉಲ್ಲೇಖ ಬರುತ್ತದೆ. ಕರ್ನಾಟಕದಲ್ಲಿ ಸೂತ್ರದ ಬೊಂಬೆಯಾಟ ಅತ್ಯಂತ ಜನಪ್ರಿಯವಾಗಿತ್ತು ಎಂಬುದನ್ನು ಮೇಲಿನ ಉಲ್ಲೇಖಗಳು ಸಾರುತ್ತವೆ.

ಸೂತ್ರದ ಬೊಂಬೆಯಾಟ ಸಾಹಿತ್ಯ, ಸಂಗೀತ, ನೃತ್ಯ ಹಾಗೂ ವೇಷಭೂಷಣಗಳಲ್ಲಿ ಯಕ್ಷಗಾನ ಬಯಲಾಟಗಳಿಗೆ ಹತ್ತಿರವಾದ ಕಲೆ. ಆಯಾ ಪ್ರದೇಶಗಳ ಯಕ್ಷಗಾನಗಳ ಪ್ರಭಾವ ಸಹಜವಾಗಿ ಇದರ ಮೇಲೆ ಆಗಿರುತ್ತದೆ. ಬೊಂಬೆಯಾಟದ ಕಲಾವಿದರು ತಮ್ಮದೇ ಆದ ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ಸುತ್ತಿನಲ್ಲಿ ಬೊಂಬೆ ಮೇಳಗಳನ್ನು ನಡೆಸುತ್ತಾರೆ. ಊರಿನ ಕಲಾಭಿಮಾನಿಗಳೆಲ್ಲ ಕಲೆತು ಮೇಳವನ್ನು ನಡೆಸುವುದು ಇಲ್ಲಿ ಗಮನಾರ್ಹ. ಬೊಂಬೆಗಳು ಸಾಮಾನ್ಯವಾಗಿ ಒಂದು ಮನೆತನಕ್ಕೆ ಸೇರಿರುತ್ತವೆ. ಮಾಲೀಕರು ಯಾರೇ ಆದರೂ ಬೊಂಬೆಯಾಟದ ಕಲಾವಿದರು ಬ್ರಾಹ್ಮಣ, ಶೂದ್ರ ಎಂಬ ಭೇದವಿಲ್ಲದೆ ಬೊಂಬೆಯಾಟದ ಸಂಘವನ್ನು ಸ್ಥಾಪಿಸಿಕೊಳ್ಳು

ತ್ತಾರೆ. ಕೆಲವಾರು ತಿಂಗಳು ಬೊಂಬೆಗಳನ್ನು ಕುಣಿಸುವ ಕಲೆಯನ್ನು ಕರಗತ ಮಾಡಿಕೊಳ್ಳುತ್ತಾರೆ. ಯಕ್ಷಗಾನ ಬಯಲಾಟಗಳಲ್ಲಿನ ಪಾತ್ರಗಳ ಹಂಚಿಕೆಯಂತೆ ಇಲ್ಲಿಯೂ ಹತ್ತಾರು ಜನ ಸೂತ್ರಧಾರಿಗಳು ಇರುತ್ತಾರೆ. ಒಬ್ಬೊಬ್ಬರು ಒಂದೊಂದು ಪಾತ್ರವನ್ನು ಹಂಚಿಕೊಂಡು, ಸಂಭಾಷಣೆಯನ್ನು ಕಂಠಪಾಠ ಮಾಡಿಕೊಳ್ಳುತ್ತಾರೆ. ಸನ್ನಿವೇಶಕ್ಕೆ ತಕ್ಕಂತೆ ಬೊಂಬೆಗಳನ್ನು ರಂಗದ ಮೇಲೆ ತಂದು ಭಾಗವತರ ಹಾಡಿಗೆ ಅನುಗುಣವಾಗಿ ಕುಣಿಸುವುದು ಸೂತ್ರಧಾರಿಗಳ ಕಾರ್ಯ, ಬೊಂಬೆಯಾಟದ ತಂಡಗಳಲ್ಲಿ ಹದಿನೈದರಿಂದ ಇಪ್ಪತ್ತು ಮಂದಿ ಕಲಾವಿದರಿರುತ್ತಾರೆ. ಎಲ್ಲರೂ ಒಂದೊಂದು ಕಾರ್ಯವನ್ನು ಹಂಚಿಕೊಂಡು ಕಥೆ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಈ ಮೇಳಗಳ ಕಲಾವಿದರನ್ನು ಹೀಗೆ ವಿಂಗಡಿಸಿಕೊಳ್ಳಬಹುದು:

ಸುಂದರವಾಗಿ ಅಲಂಕೃತವಾದ ಸೂತ್ರದ ಬೊಂಬೆಗಳು

ಸಂಗೀತ: ಭಾಗವತರು, ತಾಳದವರು, ಹಿಮ್ಮೇಳದವರು, ಮುಖವೀಣೆಯವರು ಅಥವಾ ಚಂಡೆಯವರು.

ಕುಣಿತ: ರಾಜಪಾತ್ರಗಳು, ಘೋರಪಾತ್ರಗಳು, ಸ್ತ್ರೀಪಾತ್ರಗಳು, ಹನುಮನಾಯಕ ಇತರ ಪಾತ್ರಗಳು.

ಸಹಾಯಕ ವರ್ಗ: ಕುಣಿಸುವವರಿಗೆ ಬೊಂಬೆಗಳನ್ನು ಒದಗಿಸುವವರು, ಇತರ ಸಹಾಯಕರು.

ಸೂತ್ರದ ಬೊಂಬೆಯಾಟದಲ್ಲಿ ಮರದಿಂದ ಮಾಡಿದ ಬೊಂಬೆಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಎರಡು ಬಗೆಯ ಮರದ ಬಳಕೆ ಇಲ್ಲಿ ಕಂಡುಬರುತ್ತದೆ. ಬೊಂಬೆಗಳ ತಲೆಯ ಭಾಗ ಮತ್ತು ಹಸ್ತಗಳಿಗೂ ಗಟ್ಟಿಮರದ ಬಳಕೆ ಅಗತ್ಯ. ಇದಕ್ಕಾಗಿ ಬೆಪ್ಪಾಲೆ ಅಥವಾ ಸಿಲವಾರದ ಮರವನ್ನು ಬಳಸಲಾಗುತ್ತದೆ. ಕಿರೀಟ ಕರ್ಣಹಾರವೂ ಸೇರಿದಂತೆ, ತಲೆಯನ್ನು ಕುತ್ತಿಗೆಯವರೆಗೆ ಒಂದೇ ಮರದ ತುಂಡಿನಲ್ಲಿ ಕೆತ್ತಿ ಕಿರೀಟದ ತುದಿಯಲ್ಲಿ ಒಂದು ಕಬ್ಬಿಣದ ಕೊಂಡಿಯನ್ನು ಅಳವಡಿಸಲಾಗುತ್ತದೆ. ಈ ಕೊಂಡಿಗೆ ಎರಡು ಅಥವಾ ಮೂರು ಅಡಿ ಉದ್ದದ ಮೂರು ಕರಿಯ ದಾರಗಳನ್ನು ಕಟ್ಟಲಾಗಿದ್ದು ಈ ದಾರಗಳ ಇನ್ನೊಂದು ತುದಿಯಲ್ಲಿ ಕುಣಿಸುವವನ ನೆತ್ತಿಗೆ ಅಳವಡುವಂತೆ ದೊಡ್ಡ ಕಬ್ಬಿಣದ ಬಳೆಯೊಂದಿರುತ್ತದೆ. ತಲೆಗೆ ವಸ್ತ್ರವನ್ನು ಸುತ್ತಿ ಬಳೆಯನ್ನು ನೆತ್ತಿಯ ಮೇಲೆ ಧರಿಸಿದರೆ, ಬೊಂಬೆಯು ಕಲಾವಿದನ ಹೊಟ್ಟೆಯ ಮೇಲೆ ಜಿಗಿಬೀಳುತ್ತದೆ. ಬೊಂಬೆಯನ್ನು ಕೈಯಲ್ಲಿ ಹಿಡಿದುಕೊಳ್ಳುವ ಅಗತ್ಯವನ್ನು ಕಲಾವಿದರು ಹೀಗೆ ನಿವಾರಿಸಿಕೊಳ್ಳುತ್ತಾರೆ. ಬೊಂಬೆಯ ಕೈ ಮತ್ತು ಮುಂಡದ ಭಾಗವನ್ನು ಹಾಲವಾಣದಂಥ ಹಗುರವಾದ ಮರದಿಂದ ಮಾಡುತ್ತಾರೆ. ಈ ಭಾಗ ಒಡವೆ ವಸ್ತ್ರಗಳಿಂದ ಮುಚ್ಚಿ ಹೋಗುವುದರಿಂದ ಇಲ್ಲಿ ಯಾವುದೇ ರೀತಿಯ ಕಲಾತ್ಮಕ ಕೆತ್ತನೆಯಾಗಲಿ ಬಣ್ಣಗಾರಿಕೆಯಾಗಲಿ ಕಂಡುಬರುವುದಿಲ್ಲ. ರುಂಡ ಮತ್ತು ಮುಂಡಗಳನ್ನು ರುಂಡದ (ಕುತ್ತಿಗೆಯ) ಭಾಗದಲ್ಲಿ ಒಂದು ಗೂಟದಿಂದ ಕೂಡಿಸಲಾಗುತ್ತದೆ. ಈ ಗೂಟದಿಂದ ಬೊಂಬೆಯ ಮುಂಡದ ಕೆಳಭಾಗದವರೆಗೆ ಒಂದು ರಂಧ್ರದ ಮೂಲಕ ದಾರವನ್ನು ಅಳವಡಿಸಿ ಕೆಳಗೆ ಕಟ್ಟಲಾಗುವುದು. ಇದರಿಂದ ಬೊಂಬೆಯ ತಲೆಯನ್ನು ಅತ್ತ ಇತ್ತ ಆಡಿಸಲು ಅನುಕೂಲವಾಗುತ್ತದೆ. ಬೊಂಬೆಯ ಶರೀರಕ್ಕೆ ಕೈಗಳನ್ನು ಅಳವಡಿಸುವಲ್ಲಿ ಅನುಸರಿಸುವ ತಂತ್ರ ಕೈಗಳು ಚಲಿಸಲು ಅನುಕೂಲಕರವಾಗಿರುತ್ತದೆ. ಭುಜ, ಮೊಣಕೈ ಮತ್ತು ಹಸ್ತದ ಬಳಿ ಒಂದೊಂದು ಕೀಲನ್ನು ಅಳವಡಿಸಿ ಸೂತ್ರಗಳ ಮೂಲಕ ಒಂದೊಂದನ್ನು ಸೇರಿಸಿರುತ್ತಾರೆ. ಹಸ್ತಭಾಗದಲ್ಲಿ ಹೆಬ್ಬೆರಳು ಮತ್ತು ತೋರ್ಬೆರಳುಗಳನ್ನು ಕೂಡಿಸಿ ಮಾಡಲಾಗುತ್ತದೆ. ಅದರ ಮೂಲಕ ಕೈಗಳನ್ನು ಅತ್ತ ಇತ್ತ ಆಡಿಸಲು ನಾರಾಚಗಳೆಂಬ ಕಬ್ಬಿಣದ ಸಾಧನಗಳನ್ನು ಅಳವಡಿಸುತ್ತಾರೆ. ಇದು ಸುಮಾರು ಮೂರು ಅಡಿ ಉದ್ದವಾಗಿದ್ದು ಒಂದು ತುದಿಯಲ್ಲಿ ಕೊಂಡಿಯನ್ನು ಹೊಂದಿರುತ್ತದೆ. ಮರದ ಹಿಡಿಗೆ ಬದಲಾಗಿ ಮೇಲುಭಾಗದಲ್ಲಿ ಬಳೆಯಂತೆ ಕಂಬಿಯನ್ನು ಬಾಗಿಸಿದರೂ ಹಿಡಿದುಕೊಳ್ಳಲು ಸಾಧನವಾಗುತ್ತದೆ. ಸೂತ್ರಧಾರ ಎರಡು ಕೈಗಳ ಇಂಥ ನಾರಾಚಗಳನ್ನು ಹಿಡಿದಿರುತ್ತಾನೆ. ಬೊಂಬೆಯ ಕೈಗೂ ನಾರಾಚಕ್ಕೂ ಮತ್ತೊಂದು ತುದಿಯಲ್ಲಿ ಬಂಧಿಸಿರುವುದರಿಂದ ಅದನ್ನು ನಿರ್ವಹಿಸಲು ಸುಲಭವಾಗುತ್ತದೆ.

ರುಂಡ, ಮುಂಡ ಮತ್ತು ಕೈಗಳನ್ನು ಅಳವಡಿಸಿದ ಮೇಲೆ ಬೊಂಬೆಗಳಿಗೆ ಒಡವೆ ವಸ್ತ್ರಗಳನ್ನು ತೊಡಿಸಲಾಗುವುದು. ಬೆಳ್ಳೂರು ಭಾಗದ ಬೊಂಬೆಗಳಿಗೆ ಕಾಲುಗಳಿರುವುದಿಲ್ಲ. ಇತರ ಭಾಗದಲ್ಲಿ ಕಾಲುಗಳನ್ನು ಉಳಿಸಿಕೊಳ್ಳಲಾಗಿದೆ. ಕೈಗಳಂತೆಯೇ ಕಾಲುಗಳಿಗೂ ಮೂರು ಕೀಲುಗಳಿದ್ದು ಸಾಧಾರಣ ಮರದಿಂದ ಅವನ್ನು ಮಾಡಿರುತ್ತಾರೆ. ಬೆಳ್ಳೂರು ಬೊಂಬೆಗಳ ಕಾಲಿನ ಭಾಗವನ್ನು ವೀರಗಾಸೆ ಅಥವಾ ಕಚ್ಚೆ ಪಂಚೆಗಳಿಂದ ಮುಚ್ಚಲಾಗುತ್ತದೆ. ಬಹುಮಟ್ಟಿಗೆ ಬಣ್ಣದ ಲಂಗಗಳನ್ನು ಇಲ್ಲಿ ಬಳಸುತ್ತಾರೆ. ಬೊಂಬೆಗಳಿಗೆ ಬಣ್ಣಬಣ್ಣದ ವಸ್ತ್ರಗಳನ್ನು ಧರಿಸಲಾಗುತ್ತದೆ. ತುಂಬುದೋಳಿನ ಬಣ್ಣ ಅಂಗಿ, ಹಸ್ತದವರೆಗೆ ಕೈಗಳನ್ನೂ ಸೊಂಟದವರೆಗೆ ಮೈಯನ್ನೂ ಮುಚ್ಚುತ್ತದೆ. ಅಲ್ಲಿಂದ ಕೆಳಗೆ ಸೀರೆ, ಲಂಗ ಅಥವಾ ಚಲ್ಲಣಗಳಿರುತ್ತವೆ. ಯಕ್ಷಗಾನ ಬಯಲಾಟಗಳಲ್ಲಿನಂತೆ ಭುಜಕೀರ್ತಿ, ಎದೆಹಾರ, ನಡುಪಟ್ಟಿ, ಕೈಕಟ್ಟುಗಳನ್ನು ಪ್ರತ್ಯೇಕವಾಗಿ ಕಟ್ಟಿ ಅಲಂಕರಿಸಲಾಗುತ್ತದೆ.

ಬೊಂಬೆಗಳ ಬಣ್ಣಗಾರಿಕೆಯಲ್ಲಿಯೂ ಕೆಲವು ವೈಶಿಷ್ಟ್ಯಗಳನ್ನು ಗಮನಿಸಬಹುದು. ರಾವಣ, ವಿಭೀಷಣ, ಹಿಡಿಂಬ ಮುಂತಾದ ಘೋರ ಪಾತ್ರಗಳಿಗೆ ಕೆಂಪು ಬಣ್ಣವಿರುತ್ತದೆ. ಕಪ್ಪು ಮತ್ತು ಬಿಳಿಯ ಚುಕ್ಕೆಗಳನ್ನು ಕಣ್ಣು ಮತ್ತು ಬಾಯಿಗಳ ಸುತ್ತ ಹಾಕಿ, ಆ ಪಾತ್ರ ಸಾಕಷ್ಟು ಉಗ್ರವಾಗಿ ಕಾಣುವಂತೆ ಮಾಡಲಾಗುತ್ತದೆ. ಹಸ್ತದ ಭಾಗಕ್ಕೂ ಇದೇ ಬಣ್ಣವಿರುತ್ತದೆ. ರಾಜಪಾತ್ರಗಳಿಗೆ, ಸ್ತ್ರೀ ಪಾತ್ರಗಳಿಗೆ ಹಳದಿಯ ಬಣ್ಣವನ್ನು ಬಳಸಲಾಗುತ್ತದೆ. ಉಳಿದ ಪಾತ್ರಗಳಿಗೆ ಕಂದು ಅಥವಾ ನಸುಹಸುರಿನಿಂದ ಕೂಡಿದ ಹಳದಿ ಬಣ್ಣ ಬಳಸಲಾಗುತ್ತದೆ. ದೈತ್ಯ ಪಾತ್ರಗಳು ಮತ್ತು ರಾಜಪಾತ್ರದ ಬೊಂಬೆಗಳಿಗೆ ಮಾತ್ರ ಭುಜಕೀರ್ತಿ ಮೊದಲಾದ ಆಭರಣಗಳನ್ನು ತೊಡಿಸಲಾಗುವುದು. ಉಳಿದ ಪಾತ್ರಗಳಿಗೆ ಸಾಧಾರಣ ಉಡುಪು ಇರುತ್ತದೆ. ಬ್ರಾಹ್ಮಣ, ಋಷಿ ಮುಂತಾದ ಪಾತ್ರಗಳಿಗೆ ಬಿಳಿಯ ಪಂಚೆಗಳನ್ನು ಮಾತ್ರ ಬಳಸಲಾಗುವುದು. ಹನುಮ ನಾಯಕನಿಗೆ ಬಣ್ಣದ ನಿಲುವಂಗಿ, ಚಲ್ಲಣಗಳನ್ನು ಅಳವಡಿಸಿ ತಲೆಗೆ ಸೇರಿದಂತೆಯೇ ಪೇಟವನ್ನೂ ಕೆತ್ತಲಾಗಿರುತ್ತದೆ. ಹೀಚನೂರು ಸಂಪ್ರದಾಯದಲ್ಲಿ ಬೊಂಬೆಗಳಿಗೆ ಮುಖವಾಡಗಳನ್ನು ಬಳಸುವ ವಿಶಿಷ್ಟ ಕೌಶಲ ಕಂಡುಬರುತ್ತದೆ. ನಾಟಕದ ನಡುವೆ ಹೆಚ್ಚು ಪಾತ್ರಗಳ ಅಗತ್ಯ

ಕಂಡುಬಂದರೆ, ಮುಖವಾಡಗಳನ್ನು ಕಟ್ಟಿ ಅವೇ ಬೊಂಬೆಯನ್ನು ಬೇರೆ ಪಾತ್ರ ಎಂಬಂತೆ ಬಳಸಲಾಗುತ್ತದೆ. ಈ ಮುಖವಾಡದ ಬಳಕೆ ಬೇರೆ ಸಂಘಗಳಲ್ಲಿ ಕಂಡು ಬಂದಿಲ್ಲ. ಒಂದು ಬೊಂಬೆಯಾಟ ಸಂಘದಲ್ಲಿ ಹೆಚ್ಚೆಂದರೆ ಐವತ್ತು ಬೊಂಬೆಗಳಿರಬಹುದು. ಈ ಬೊಂಬೆಗಳನ್ನು ದೊಡ್ಡ ದೊಡ್ಡ ಮರದ ಪೆಟ್ಟಿಗೆಗಳಲ್ಲಿ ರಕ್ಷಿಸಿ ಇಡಲಾಗುತ್ತದೆ.

ಬೊಂಬೆಯಾಟದ ರಂಗಮಂಚ ಅತ್ಯಂತ ಸರಳವಾದುದು. ಮೊದಲಿಗೆ ಕಟ್ಟಡ ನಿರ್ಮಾಣ ನಡೆಯುತ್ತದೆ. ನೆಲಕ್ಕೆ ಒಂದು ಅಡಿ ಎತ್ತರದಲ್ಲಿ ಹಲಗೆಗಳನ್ನು ಹಾಕಿ ಒಂದಕ್ಕೊಂದನ್ನು ಸೇರಿಸಿ ಬಿಗಿದು ಕಟ್ಟುವರು. ಮುಂಭಾಗವನ್ನು ಬಿಟ್ಟು ಉಳಿದ ಭಾಗಗಳನ್ನು ಸೋಗೆ ಅಥವಾ ಗೋಣಿಯ ತಾಟುಗಳಿಂದ ಮುಚ್ಚಲಾಗುವುದು. ಮರದ ಕೊಂಬೆಗಳನ್ನು ನಾಲ್ಕು ಮೂಲೆಗಳಿಗೂ ಉಳಿದೆಡೆಗೆ ಬಿದಿರುಗಳನ್ನೂ ಬಳಸಿ ಈ ಚಪ್ಪರವನ್ನು ಸಿದ್ಧಗೊಳಿಸಲಾಗುವುದು. ಚಪ್ಪರದ ಅಗಲ ಸುಮಾರು 15 ಅಡಿಯಷ್ಟಿರುತ್ತದೆ. ಎತ್ತರ ಮತ್ತು ಉದ್ದ ಸುಮಾರು 12 ಅಡಿಗಳು. ರಂಗದ ಮುಂಭಾಗಕ್ಕೆ ಎರಡು ಕಪ್ಪು ಪರದೆಗಳನ್ನು ಬಳಸುತ್ತಾರೆ. ಹನ್ನೆರಡು ಅಡಿ ಉದ್ದ ಮತ್ತು ಮೂರು ಅಡಿ ಅಗಲದ ಈ ಪರದೆಗಳಲ್ಲಿ ಒಂದನ್ನು ಕೆಳಪರದೆಯಾಗಿಯೂ ಮತ್ತೊಂದನ್ನು ಮೇಲು ಪರದೆಯನ್ನಾಗಿಯೂ ಬಳಸಲಾಗುತ್ತದೆ. ಕೆಳಪರದೆಯ ಮುಂದೆ ಪ್ರೇಕ್ಷಕರಿಗೆ ಅಭಿಮುಖವಾಗಿ ಬೊಂಬೆಗಳನ್ನು ಕುಣಿಸಲಾಗುವುದು. ಇದರ ಮೇಲುಭಾಗದಲ್ಲಿ ಬಲವಾದ ಅಡ್ಡಗಳುವೊಂದನ್ನು ಕಟ್ಟಿರುತ್ತಾರೆ. ತೆರೆಯ ಹಿಂದೆ ಕುಣಿಸುವವರು ಕಾಣಿಸದಂತೆ ಮೇಲುಪರದೆಯನ್ನು ಕಟ್ಟಲಾಗುತ್ತದೆ. ಮೇಲುಪರದೆ ಮತ್ತೆ ಕೆಳಪರದೆಗಳು ಕೂಡುವ ಸ್ಥಳದಲ್ಲಿ ಅರ್ಧ ಅಡಿ ಅಂತರದಷ್ಟು ತೆರವಾದ ಜಾಗವಿರುತ್ತದೆ. ಕುಣಿಸುವಾಗ ಬೊಂಬೆಗಳನ್ನು ನೋಡುತ್ತ ಕುಣಿಸಲು ಇದರಿಂದ ಸಹಾಯಕವಾಗುತ್ತದೆ. ಈ ತೆರೆಗಳ ಜೊತೆಗೆ ಒಂದು ಅಂಕದ ಪರದೆಯೂ ಇರುತ್ತದೆ. ಆಟದ ಆರಂಭದಲ್ಲಿ ಆ ಪರದೆಯನ್ನು ತೆಗೆದರೆ ಮತ್ತೆ ಆಟ ಮುಗಿದಾಗ ಬಿಡಲಾಗುವುದು. ರಂಗದ ಮುಂದೆ ಎರಡು ಬದಿಗಳಲ್ಲಿ ಸೂಕ್ತ ಬೆಳಕಿನ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

ಸೂತ್ರದಬೊಂಬೆ ಹಾಗೂ ಸೂತ್ರಧಾರ

ರಂಗಮಂಚ ಸಿದ್ಧವಾದ ಮೇಲೆ ಕಲಾವಿದರು ಬೊಂಬೆಗಳನ್ನು ಪೆಟ್ಟಿಗೆಯಿಂದ ಹೊರತೆಗೆದು ಸಾಲಾಗಿ ಜೋಡಿಸಿ ವಾದ್ಯಗಳನ್ನೂ ಇರಿಸಿ ಪೂಜೆ ಮಾಡುವರು. ಅನಂತರ ರಂಗದ ಒಳಗೆ ಅಡ್ಡಲಾಗಿ ಕಟ್ಟಿಕೊಂಡ ಉದ್ದನೆಯ ಗಳುವೊಂದಕ್ಕೆ ಪ್ರತಿ ಬೊಂಬೆಯನ್ನೂ ಕಥೆಯ ಕ್ರಮವನ್ನು ಅನುಸರಿಸಿ ದಾರಗಳ ಸಹಾಯದಿಂದ ತೂಗುಬಿಡುವರು. ಕಥೆ ಮುಂದುವರಿದಾಗ ಬೇಕಾದ ಬೊಂಬೆಗಳನ್ನು ಸಹಾಯಕರು ಕೂಡಲೆ ತೆಗೆದುಕೊಡಲು ಇದು ಸಹಾಯಕವಾಗುತ್ತದೆ.

ಸೂತ್ರದ ಬೊಂಬೆಯಾಟಗಳಿಗೆ ಯಕ್ಷಗಾನ ಬಯಲಾಟಗಳ ಸಾಹಿತ್ಯವನ್ನೇ ಬಳಸಿಕೊಳ್ಳಲಾಗುತ್ತದೆ. ಕಥಾವಸ್ತು ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣ ಅಥವಾ ಜಾನಪದ ಮೂಲದಿಂದ ಬಂದದ್ದಾಗಿರಬಹುದು. ಒಂದೊಂದು ಬೊಂಬೆ ಮೇಳದವರಲ್ಲಿಯೂ ಅನೇಕ ಕಥೆಗಳ ಹಸ್ತಪ್ರತಿಗಳಿರುತ್ತವೆ. ಅಭಿಮನ್ಯು ಕಾಳಗ, ಕರಿಭಂಟನ ಕಥೆ, ಪಂಚವಟಿ ರಾಮಾಯಣ, ವಾಲಿ ಸುಗ್ರೀವ ಕಾಳಗ, ಇಂದ್ರಜಿತು ವಧೆ, ಮಹಿರಾವಣ ಚರಿತ್ರೆ, ಬಕಾಸುರವಧೆ, ತ್ರಿಪುರಸಂಹಾರ, ದೇವೀ ಮಹಾತ್ಮೆ ಮೊದಲಾದ ಕಥೆಗಳು ಬೊಂಬೆಯಾಟದಲ್ಲಿ ಜನಪ್ರಿಯವಾಗಿವೆ.

ಕರ್ನಾಟಕದ ಬೊಂಬೆ ಮೇಳಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ಪಡುವಲಪಾಯ, ಮೂಡಲಪಾಯ ಎಂಬ ಎರಡು ಪ್ರಮುಖ ವರ್ಗಗಳಾಗಿ ಗುರುತಿಸಬಹುದು. ಕುಣಿತ, ಭಾಗವಂತಿಕೆ, ವಾದ್ಯ ವಿಶೇಷಗಳ ಬಳಕೆಯಲ್ಲಿ ಆಯಾ ವರ್ಗಗಳಿಗೇ ವಿಶಿಷ್ಟವಾದ ಅಂಶವನ್ನು ಕಾಣಬಹುದು. ಮೂಡಲಪಾಯದಲ್ಲಿ ಮೃದಂಗಧಾರಿಯಾಗಿ ಹಾಡುಗಾರಿಕೆಯನ್ನು ನಡೆಸುವ ಭಾಗವತರ ಜೊತೆಗೆ ಹಿಮ್ಮೇಳ ಹಾಡುವವರ ತಂಡ ಇರುತ್ತದೆ. ಜೊತೆಗೆ ಮುಖವೀಣೆ ಎಂಬ ವಿಶಿಷ್ಟ ವಾದ್ಯವನ್ನೂ ಊದಲಾಗುತ್ತದೆ. ತಾಳದವರು ಒಬ್ಬ ಇಬ್ಬರು ಇರುತ್ತಾರೆ (ಶ್ರುತಿಗೆ ಇತ್ತೀಚೆಗೆ ಹಾರ್ಮೋನಿಯಂ ಬಳಸುತ್ತಿದ್ದಾರೆ. ಹಿಂದೆ ಸೋರೆಬುರುಡೆಯ ಶ್ರುತಿಯ ಸಾಧನವನ್ನು ಬಳಸುತ್ತಿದ್ದರು). ಪಡವಲಪಾಯದಲ್ಲಿ ಮುಖವೀಣೆಯ ಬಳಕೆಯಿಲ್ಲ, ಹಿಮ್ಮೇಳದ ತಂಡವೂ ಇರುವುದಿಲ್ಲ. ಇಲ್ಲಿ ತಾಳ ಮದ್ದಲೆಗಳ ಜೊತೆಗೆ ಚಮಡೆಯನ್ನು ಬಳಸಲಾಗುತ್ತದೆ. ಮೂಡಲ ಪಾಯದಲ್ಲಿ ಸೂತ್ರವನ್ನು ನೆತ್ತಿಯಲ್ಲಿ ಧರಿಸಿದ ಕಲಾವಿದ ತಾನೂ ತೆರೆಯ ಹಿಂದೆ ತಾಳಕ್ಕನುಗುಣವಾಗಿ ಕುಣಿಯುತ್ತಾನೆ. ಅವನು ಕುಣಿದಾಗ ತೆರೆಯ ಮುಂದೆ ಬೊಂಬೆಯೂ ಅದೇ ಗತ್ತಿಗೆ ಕುಣಿಯುತ್ತದೆ. ಕೈಗಳನ್ನು ನಾರಾಚದ ನೆರವಿನಿಂದ ಅತ್ತಿತ್ತ ಆಡಿಸುತ್ತಾನೆ. ಮಾತುಗಳನ್ನು ಪಾತ್ರಧಾರಿ ಆಡುತ್ತಾನೆ. ಪಡುವಲಪಾಯದ ಬೊಂಬೆಗಳು ಚಿಕ್ಕ ಪ್ರಮಾಣದವಾದ್ದರಿಂದ ಕೈಯಲ್ಲೇ ಸೂತ್ರಗಳನ್ನು ಹಿಡಿದು ಕುಣಿಸುತ್ತಾರೆ. ಇಲ್ಲಿನ ಸೂತ್ರ ಅತ್ಯಂತ ಸೂಕ್ಷ್ಮವಾದದ್ದಾಗಿರುತ್ತದೆ. ನಾರಾಚಗಳ ಬಳಕೆ ಇಲ್ಲಿ ಕಂಡುಬರುವುದಿಲ್ಲ. ವೇಷಭೂಷಣಗಳು ಪಡುವಲಪಾಯ ಯಕ್ಷಗಾನ ಸಂಪ್ರದಾಯಾನುಸಾರಿಯಾಗಿಯೇ ಇರುತ್ತವೆ. ಮೂಡಲಪಾಯದಲ್ಲಿ ರಾಕ್ಷಸ ಪಾತ್ರಗಳು ರಂಗವನ್ನು ಪ್ರವೇಶಿಸುವಾಗ ಎರಡು ಕೈಗಳಲ್ಲೂ ಪಂಜುಗಳನ್ನು ಉರಿಸುತ್ತಲೇ ಪ್ರವೇಶಿಸುವ ದೃಶ್ಯ, ಉರಿಯ ಮೇಲೆ ಗುಗ್ಗಳವನ್ನು ಎರಚಿ ಮತ್ತಷ್ಟು ಆಶ್ಚರ್ಯವನ್ನುಂಟುಮಾಡುವ ವೈಖರಿ ಗಮನಾರ್ಹವಾದುದು. ಹನುಮನಾಯಕನ ಬಾಯಿಗೆ ಹೊಗೆ ಬತ್ತಿಯೊಂದನ್ನು ಕೊಟ್ಟು ಸೇದಿಸುವ ಪ್ರಸಂಗ ಕೌತುಕವನ್ನು ತರುತ್ತದೆ. ಕೆಲವು ಸಂದರ್ಭಗಳಲ್ಲಿ ಜರಾಸಂಧನಂಥ ಪಾತ್ರವನ್ನು ಎರಡು ಭಾಗವಾಗಿ ಸೀಳಿ ಎಸೆಯುವ ದೃಶ್ಯವನ್ನೂ ಬೊಂಬೆಯಾಟದವರು ತರಬಲ್ಲರು.

ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಬೊಂಬೆಯಾಟಗಳ ಪಾತ್ರ ವಿಶಿಷ್ಟವಾದುದು. ಸುಶ್ರಾವ್ಯವಾದ ಸಂಗೀತ ಸ್ವಾರಸ್ಯಪೂರ್ಣ ಸಂಭಾಷಣೆ, ಆಕರ್ಷಕವಾದ ಕುಣಿತ, ತಾಳಮೇಳ, ವೈಭವಪೂರ್ಣ ವೇಷಭೂಷಣ, ಅದಕ್ಕೊಪ್ಪುವ ಪುಟ್ಟ ರಂಗಶಾಲೆ–ಇವುಗಳಿಂದ ಸೂತ್ರದ ಬೊಂಬೆಯಾಟ ಒಳ್ಳೆಯ ಕಲೆಯಾಗಿದೆ. ಅನೇಕ ಪ್ರಸಿದ್ಧ ಮೇಳಗಳು ಕಣ್ಮರೆಯಾಗಿದ್ದರೂ ಇನ್ನೂ ಕೆಲವು ತಂಡಗಳು ಉಳಿದು ಬೊಂಬೆ ಮೇಳಗಳನ್ನು ನಡೆಸುತ್ತಿವೆ.

ಕರ್ನಾಟಕದಲ್ಲಿ ಸೂತ್ರದ ಬೊಂಬೆಯಾಟದ ಜೊತೆಗೆ ತೊಗಲು ಬೊಂಬೆಯಾಟ, ಕೀಲುಬೊಂಬೆಯಾಟವೆಂಬ ಪ್ರಕಾರಗಳೂ ಕಂಡುಬರುತ್ತವೆ. ಇವುಗಳಲ್ಲಿ ತೊಗಲು ಬೊಂಬೆಯಾಟ ಯಕ್ಷಗಾನ ಸಂಬಂಧಿಯಾದರೂ ಇಲ್ಲಿ ಕಲಾವಿದರು ಕಥೆಯೊಂದನ್ನು ಆಧಾರವಾಗಿಟ್ಟುಕೊಂಡು ಬೊಂಬೆಗಳನ್ನು ಕುಣಿಸಿ ಮೇಳವನ್ನು ನಡೆಸುತ್ತಾರೆ. ಆದರೆ ಕೀಲುಬೊಂಬೆಯಾಟ ಕೇವಲ ಮನರಂಜನೆಗಾಗಿ ವಿವಿಧ ವೇಷದ ಬೊಂಬೆಗಳನ್ನು ಆಡಿಸುವ

ಒಂದು ಕಲೆಯಾಗಿದೆ. ನವರಾತ್ರಿಯ ಬೊಂಬೆಗಳು, ಗೌರಿಯ ಬೊಂಬೆಗಳು ಮುಂತಾದ ಬೊಂಬೆಗಳ ಪ್ರದರ್ಶನವೂ ಕರ್ನಾಟಕದಲ್ಲಿ ಕಂಡುಬರುತ್ತದೆ. ಇವು ನಿರ್ದಿಷ್ಟ ಸಂದರ್ಭಗಳಲ್ಲಿ ಮನೆಗಳಲ್ಲಿ ಜೋಡಿಸುವ ಬೊಂಬೆಗಳು. ಇಲ್ಲಿ ಕುಣಿಸುವ ಕಲೆ ಇಲ್ಲ(**ನೋಡಿ: ತೊಗಲುಬೊಂಬೆಯಾಟ**).

(ಜಿ.ಎಸ್.ಪಿ.)

**ಸೂಳೆಕೆರೆ:** ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿ ಚನ್ನಗಿರಿಯ ಉತ್ತರಕ್ಕೆ 20 ಕಿಮೀ ದೂರದಲ್ಲಿರುವ ಒಂದು ಕೆರೆ. ಈ ಕೆರೆಯ ಸುತ್ತಳತೆ 64 ಕಿಮೀಗಳು. ಈ ಕೆರೆ ದಕ್ಷಿಣ ಭಾರತದ ಪ್ರಸಿದ್ಧ ಹಾಗೂ ಸುಂದರ ಜಲಾಶಯಗಳ ಲ್ಲೊಂದು. ಈ ಕೆರೆಯನ್ನು ಸ್ವರ್ಗವತಿ ಪಟ್ಟಣದ ದೊರೆ ವಿಕ್ರಮರಾಯನ ಮಗಳು ಶಾಂತವ್ವ ಕಟ್ಟಿಸಿದಳೆಂದು ಪ್ರತೀತಿ. ಶಾಂತವ್ವ ಒಬ್ಬ ದೇವತೆ ಯೊಡನೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದಕ್ಕಾಗಿ, ಆಕೆಯನ್ನು ಸೂಳೆ ಎಂದು ರಾಜ ವಿಕ್ರಮರಾಯ ದೂಷಿಸಿದನಂತೆ. ತಾನು ಮಾಡಿದ ಪಾಪದ ಪರಿಹಾರಕ್ಕಾಗಿ ಶಾಂತವ್ವ ಈ ಕೆರೆಯನ್ನು ಕಟ್ಟಿಸಿದ ಳೆಂದೂ ಸ್ವರ್ಗವತಿ ಪಟ್ಟಣ ಈ ಕೆರೆಯಲ್ಲಿ ಮುಳುಗಡೆಯಾಯಿತೆಂದೂ ಕಥೆ. 11 ಅಥವಾ 12ನೆಯ ಶತಮಾನದಲ್ಲಿ ಹರೀಹಳ್ಳ ಮತ್ತು ಸೊಪ್ಪಿನಹಳ್ಳಗಳಿಗೆ ಅಡ್ಡಲಾಗಿ ಈ ಕೆರೆಯನ್ನು ನಿರ್ಮಿಸಲಾಯಿತು.

ಬೆಟ್ಟಗಳ ನಡುವಿನ ತಗ್ಗು ಪ್ರದೇಶದ ನೀರನ್ನು ಕಾಲುವೆಗಳ ಮೂಲಕ ಈ ಕೆರೆಗೆ ತರಲಾಗುತ್ತದೆ. ಮುಖ್ಯ ಕಾಲುವೆಗೆ ಹರಿದ್ರಾವತಿ ಅಥವಾ ಹರಿದ್ರ ಎಂದು ಹೆಸರು. ಇದಕ್ಕೆ ಎರಡು ನಾಲೆಗಳಿದ್ದು ಉತ್ತರದ ನಾಲೆಗೆ ಸಿದ್ಧನಾಲೆ ಎಂದೂ ದಕ್ಷಿಣದ ನಾಲೆಗೆ ಬಸವನಾಲೆ ಎಂದೂ ಹೆಸರು. ಇದರ ಅಚ್ಚುಕಟ್ಟು ಪ್ರದೇಶ 1,792.5 ಹೆಕ್ಟೇರ್‌ಗಳು. ಈ ಕೆರೆಯ ಕಾಲುವೆಗಳನ್ನೂ ತೂಬುಗಳನ್ನೂ ದುರಸ್ತು ಮಾಡಿ, ಮರದ ಬಿರಡೆಗಳಿಗೆ ಬದಲಾಗಿ ಕಬ್ಬಿಣದ ಬಿರಡೆಗಳನ್ನು ಹಾಕಲಾಯಿತು.

ಕೆರೆಯ ಪೂರ್ವದ ಕೊನೆಯಲ್ಲಿ ಸಿದ್ಧೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ಮಹಾದ್ವಾರದ ಒಳಗೆ ಜಗಲಿ ಇದೆ. ಈ ದೇವಾಲಯದಲ್ಲಿ ಹೊಯ್ಸಳ ಮತ್ತು ಕೆಳದಿ ಅರಸರ ಕಾಲದ ವಾಸ್ತು ರಚನೆಗಳಿವೆ. ಈ ಮುಖ್ಯ ದೇವಾಲಯದ ನೈಋತ್ಯಕ್ಕೆ ದುರ್ಗಿ ಗುಡಿ ಇದೆ. ಶಿವರಾತ್ರಿಯ ಸಮಯದಲ್ಲಿ ಸಿದ್ಧೇಶ್ವರ ದೇವಾಲಯದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

ಈ ಸ್ಥಳದಲ್ಲಿ ಒಂದು ಮೀನುಗಾರಿಕೆ ಕೇಂದ್ರವಿದೆ. ಸೂಳೆಕೆರೆಗೆ ಈಗ ಶಾಂತಿಸಾಗರವೆಂದು ಹೆಸರಿಡಲಾಗಿದೆ. (ಎಂ.ಆರ್.ಪಿ.)

**ಸೇಂದ್ರಕರು:** ಪ್ರಾಚೀನ ಕರ್ನಾಟಕದಲ್ಲಿ ಆಳಿದ ಒಂದು ಸಾಮಂತ ಮನೆತನ. ಇವರ ವಿಚಾರವಾಗಿ ತಿಳಿದಿರುವ ಮಾಹಿತಿ ಬಲು ಕಡಿಮೆ. ಇವರದೇ ಆದ ಶಾಸನಗಳು ಸಿಕ್ಕಿಲ್ಲ. ಕದಂಬ, ರಾಷ್ಟ್ರಕೂಟ ಮತ್ತು ಬಾದಾಮಿಯ ಚಳುಕ್ಯ ಮನೆತನದ ಶಾಸನಗಳಲ್ಲಿ ಇವರ ಬಗೆಗೆ ಉಲ್ಲೇಖಗಳು ಮಾತ್ರ ದೊರಕುತ್ತವೆ. ಈಗ ನಮಗೆ ತಿಳಿದಿರುವಂತೆ ಬನವಾಸಿ 12000 ಎಂದು ಖ್ಯಾತವಾಗಿರುವ ಪ್ರದೇಶದಲ್ಲಿರುವ ನಗರಖಂಡ (ಇಂದಿನ ಶಿವಮೊಗ್ಗ ಜಿಲ್ಲೆಯ ಬಹುಭಾಗಗಳನ್ನು ಒಳಗೊಂಡ ಪ್ರದೇಶ) ಎಂದು ಹೆಸರಿಸಲಾಗಿ ರುವ ಪ್ರಾಚೀನ ಪ್ರಾಂತ್ಯ ಸೇಂದ್ರಕರ ಮೂಲ ನಿವಾಸ. ಇದು ಸೇಂದ್ರಕರಾಜ್ಯ ಅಥವಾ ಸೇಂದ್ರಕವಿಷಯ ಎಂದು ಶಾಸನಗಳಲ್ಲಿ ವರ್ಣಿತವಾಗಿದೆ.

ಸೇಂದ್ರಕರ ಬಗೆಗೆ ಪ್ರಾಚೀನತಮ ಉಲ್ಲೇಖ ದೊರೆಯುವುದು ಮಯೂರ ಶರ್ಮನ ಚಂದ್ರವಳ್ಳಿ ಶಾಸನದಲ್ಲಿ, ಸುಮಾರು ನಾಲ್ಕನೆಯ ಶತಮಾನದ ಮಧ್ಯಭಾಗಕ್ಕೆ ಸೇರಿರಬಹುದಾದ ಈ ಶಾಸನದಲ್ಲಿ ಮಯೂರಶರ್ಮ ಸಯಿಂದಕರನ್ನು ಜಯಿಸಿದುದಾಗಿ ಹೇಳಿದೆ. ಈ ಸಯಿಂದಕರೇ ಸೇಂದ್ರಕರು. ಆದರೆ ರಾಜನ ಹೆಸರನ್ನು ಹೇಳಿಲ್ಲ. ಐದನೆಯ ಶತಮಾನಕ್ಕೆ ಸೇರಬಹುದಾದ ಪಲ್ಲವ ದೊರೆ ಎರಡನೆಯ ಸಿಂಹವರ್ಮನ ಸಕ್ಕರೆಪಟ್ಟಣ ಶಾಸನದಲ್ಲಿ ಸೇಂದ್ರಕ ರಾಜ್ಯದ ಪ್ರಸ್ತಾಪ ಮಾತ್ರವಿದೆ. ಕನ್ನಡದ ಪ್ರಾಚೀನ ಶಾಸನವೆನಿಸಿ ರುವ ಹಲ್ಮಿಡಿ ಶಾಸನದಲ್ಲಿ ಸೇಂದ್ರಕ ರಾಜನೊಬ್ಬನು (ಹೆಸರು ಹೇಳಿಲ್ಲ) ಪಲ್ಲವರ ಮೇಲೆ ಯುದ್ಧ ಮಾಡಿದನೆಂದು ಹೇಳಿದೆ. ಮೊಟ್ಟ ಮೊದಲನೆಯ ಸೇಂದ್ರಕ ರಾಜನ ಹೆಸರು ನಮಗೆ ದೊರಕುವುದು ಕದಂಬ ಹರಿವರ್ಮನ ಹಲಶಿ ತಾಮ್ರಶಾಸನದಲ್ಲಿ. ಈ ಶಾಸನ ಸೇಂದ್ರಕ ವಂಶಕ್ಕೆ ಆಭರಣಪ್ರಾಯ ನಾಗಿದ್ದ ಭಾನುಶಕ್ತಿಯನ್ನು ಹೆಸರಿಸುತ್ತದೆ. ಇವನು ಕದಂಬ ಹರಿವರ್ಮನ ಸಾಮಂತನಾಗಿದ್ದ. ಕದಂಬ ದೊರೆ ಇಮ್ಮಡಿಕೃಷ್ಣವರ್ಮನ ಬೆಣ್ಣೂರು ಶಾಸನದಲ್ಲಿ ಸೇಂದ್ರಕ ವಿಷಯದ ಪ್ರಸ್ತಾಪವಿದೆ.

ಅನಂತರ ಬಹುಶಃ ಸೇಂದ್ರಕರು ರಾಷ್ಟ್ರಕೂಟರ ಸಾಮಂತರಾದಂತೆ ತೋರುತ್ತದೆ. ರಾಷ್ಟ್ರಕೂಟ ದೆಜ್ಜ ಮಹಾರಾಜನ 532–33ರ ಶಾಸನದಲ್ಲಿ, ಸೇಂದ್ರಕ ವಂಶದ ವಿಜಯಾನಂದ ಮಧ್ಯಮರಾಜನ ಮಗನಾದ ಅಧಿರಾಜ ಇಂದ್ರನಂದನ ಉಲ್ಲೇಖವಿದೆ.

**ಸೇಂದ್ರಕರ ವಂಶಾವಳಿ:**

ಮಯೂರಶರ್ಮನಿಂದ ಪರಾಜಿತ
(ಹೆಸರು ತಿಳಿದಿಲ್ಲ) ಹಲ್ಮಿಡಿ ಶಾಸನ
|
ಭಾನುಶಕ್ತಿ (ಕದಂಬ ಹರಿವರ್ಮನ ಹಲಶಿ ಶಾಸನ) (519–30)
|
ವಿಜಯಾನಂದ (532–33)
ಮಗ(ರಾಷ್ಟ್ರಕೂಟ ದೆಜ್ಜಗನ ಶಾಸನ)
|
ಇಂದ್ರನಂದ
|
ಕಣ್ಣಶಕ್ತಿ
|
ಮಗ
|
ರವಿಶಕ್ತಿ
|
ಶ್ರೀವಲ್ಲಭ ಸೇನಾನಂದ (ಪುಲಕೇಶಿ II)
|
ಭೀಮಶಕ್ತಿ (7ನೆಯ ಶತಮಾನ)
|
ವನಶಕ್ತಿ ಅರಸ
|
ಕುಂದಶಕ್ತಿ ಅರಸ
|
ಮಗ
|
ದುರ್ಗಶಕ್ತಿ
|
ಶ್ರೀ ಪೊಗಿಲ್ಲಿ ಸೇಂದ್ರಕ ಮಹಾರಾಜ (682–96)
|
ನಾಗಶಕ್ತಿ (749)
|
ಮಾಧವಶಕ್ತಿ

ಅನಂತರ ಸೇಂದ್ರಕರು ಬಾದಾಮಿಯ ಚಳುಕ್ಯರ ಸಾಮಂತರಾಗಿ ಕಾಣಿಸಿಕೊಳ್ಳುತ್ತಾರೆ. ಚಳುಕ್ಯ ಮಂಗಲೀಶನ (596–610) ಶಾಸನದಲ್ಲಿ

ಸೇಂದ್ರಕ ಕಣ್ಣಶಕ್ತಿಯ ಮಗನಾದ ರವಿಶಕ್ತಿಯ ಉಲ್ಲೇಖವಿದೆ. ಈ ಶಾಸನದಲ್ಲಿ ಇವರು ಫಣಿಕುಲ ಅಥವಾ ನಾಗವಂಶದವರೆಂದು ಹೇಳಿದೆ. ಕಣ್ಣಶಕ್ತಿಗೂ ಅವನ ಹಿಂದೆ ಆಳಿದ ಭಾನುಶಕ್ತಿಗೂ ಇದ್ದ ಸಂಬಂಧ ತಿಳಿದುಬಂದಿಲ್ಲ. ಇಮ್ಮಡಿ ಪುಲಕೇಶಿಯ ಚಿಪಳೂಣ ಶಾಸನದ ಪ್ರಕಾರ ಪುಲಕೇಶಿಯ ತಂದೆ ಒಂದನೆಯ ಕೀರ್ತಿವರ್ಮ ಸೇಂದ್ರಕ ರಾಜಕುಮಾರಿಯನ್ನು ಮದುವೆಯಾಗಿದ್ದನೆಂದು ತಿಳಿಯುತ್ತದೆ. ಅಂದರೆ ಪುಲಕೇಶಿಗೆ ಸೇಂದ್ರಕ ವಂಶದ ಶ್ರೀವಲ್ಲಭ ಸೇನಾನಂದರಾಜ ಸೋದರಮಾವನಾಗಿದ್ದ. ಇವನು ಪರಮ ಮಾಹೇಶ್ವರನಾಗಿದ್ದ. ಜೊತೆಗೆ ವಿಜಯಾನಂದ, ಇಂದ್ರನಂದ, ಸೇನಾನಂದ ಮೊದಲಾದ ಹೆಸರುಗಳಲ್ಲಿ ಸಾಮ್ಯತೆ ಇರುವುದು ಗಮನಾರ್ಹ ಸಂಗತಿ. ಸು. 7ನೆಯ ಶತಮಾನಕ್ಕೆ ಸೇರಬಹುದಾದ ಭೀಮಶಕ್ತಿಯ ಹೆಸರು ಬಾದಾಮಿಯ ಬಂಡೆಯೊಂದರ ಮೇಲೆ ಕಾಣಬರುತ್ತದೆ. ಇವನು ಸೇಂದ್ರಕ ವಂಶದವನೆಂದೂ ಸತ್ಯಾಶ್ರಯ ದೊರೆಯ ಪಾದಪದ್ಮೋಪಜೀವಿಯೆಂದೂ ಈ ಶಾಸನಗಳು ತಿಳಿಸುತ್ತವೆ. ಲಕ್ಷ್ಮೇಶ್ವರದ ಶಾಸನವೊಂದು ಸೇಂದ್ರಕ ವಂಶದ ವಿಜಯಶಕ್ತಿಯ ಮೊಮ್ಮಗನೂ ಕುಂದಶಕ್ತಿಯ ಮಗನೂ ಇಮ್ಮಡಿ ಪುಲಕೇಶಿಯ ಸಾಮಂತನೂ ಆದ ದುರ್ಗಶಕ್ತಿಯನ್ನು ಉಲ್ಲೇಖಿಸುತ್ತದೆ. ಚಳುಕ್ಯ ವಿನಯಾದಿತ್ಯನ ಕಾಲದಲ್ಲಿ ಶ್ರೀ ಪೊಗಿಲ್ಲಿ ಸೇಂದ್ರಕ ಮಹಾರಾಜನು ನಗರಖಂಡದಲ್ಲಿ ಸಾಮಂತನಾಗಿ ಆಳುತ್ತಿದ್ದ, ಇಮ್ಮಡಿ ಕೀರ್ತಿವರ್ಮನ (745–57) ಕಾಲದಲ್ಲಿ ಸೇಂದ್ರಕ ವಂಶಕ್ಕೆ ಆಭರಣದಂತೆ ಇದ್ದ ನಾಗಶಕ್ತಿ ಆಳುತ್ತಿದ್ದ. ಇದೇ ಚಳುಕ್ಯ ದೊರೆಯ ಕಾಲದಲ್ಲಿ ಮಾಧವತ್ರಿಯರಸ (ಮಾಧವಶಕ್ತಿ) ಎಂಬ ಸೇಂದ್ರಕ ಆಳುತ್ತಿದ್ದ. ಆದರೆ ಈ ಮೇಲೆ ಹೇಳಿದ ಸೇಂದ್ರಕ ರಾಜರ ಪರಸ್ಪರ ಸಂಬಂಧ ಮಾತ್ರ ತಿಳಿದಿಲ್ಲ. ಅನಂತರ ಕರ್ನಾಟಕದಲ್ಲಿ ಸೇಂದ್ರಕರು ಅವನತಿ ಹೊಂದಿದರೆಂದು ತಿಳಿದುಬರುತ್ತದೆ.

ಸೇಂದ್ರಕರು ಕರ್ನಾಟಕದಲ್ಲಿ ಮಾತ್ರವಲ್ಲದೆ ಗುಜರಾತ್, ಖಾನ್‌ದೇಶ ಮತ್ತು ಆಂಧ್ರ ದೇಶಗಳಲ್ಲಿಯೂ ಆಳಿದರು. ಇವರಿಗೂ ಕರ್ನಾಟಕದ ಸೇಂದ್ರಕರಿಗೂ ಇದ್ದ ಸಂಬಂಧ ತಿಳಿದಿಲ್ಲ. ಬಹುಶಃ ಕರ್ನಾಟಕದಿಂದ ಖಾನ್‌ದೇಶ, ಗುಜರಾತ್ ಮತ್ತು ಆಂಧ್ರದೇಶಗಳಿಗೆ ಸು. 7ನೆಯ ಶತಮಾನದಲ್ಲಿ ವಲಸೆ ಹೋಗಿರಬಹುದು ಎಂದು ಊಹಿಸಬಹುದು. **(ಎ.ವಿ.ಎನ್.)**

**ಸೇಡಂ:** ಗುಲ್ಬರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಉತ್ತರದಲ್ಲಿ ಚಿತ್ತಾಪುರ ಮತ್ತು ಚಿಂಚೋಳಿ ತಾಲ್ಲೂಕುಗಳೂ ದಕ್ಷಿಣದಲ್ಲಿ ಯಾದಗಿರಿ, ಪಶ್ಚಿಮದಲ್ಲಿ ಚಿತ್ತಾಪುರ ತಾಲ್ಲೂಕುಗಳೂ ಪೂರ್ವಕ್ಕೆ ಆಂಧ್ರಪ್ರದೇಶವೂ ಈ ತಾಲ್ಲೂಕನ್ನು ಸುತ್ತುವರಿದಿವೆ. ಆಡಕಿ, ಮುಧೋಳ, ಸೇಡಂ ಮತ್ತು ಕೊಡ್ಲ ಹೋಬಳಿಗಳಿದ್ದು ಒಟ್ಟು 111 ಗ್ರಾಮಗಳಿವೆ. ಗುಲ್ಬರ್ಗ ಉಪವಿಭಾಗಕ್ಕೆ ಸೇರಿರುವ ಈ ತಾಲ್ಲೂಕಿನ ವಿಸ್ತೀರ್ಣ 1,020.5 ಚ.ಕಿಮೀ. ಜನಸಂಖ್ಯೆ 1,96,087. ಇದರಲ್ಲಿ 1,55,974 ಮಂದಿ ಗ್ರಾಮಸ್ಥರು 40,113 ಮಂದಿ ಪಟ್ಟಣಿಗರೂ ಇದ್ದಾರೆ.

ಈ ತಾಲ್ಲೂಕಿನ ಕೆಲವು ಭಾಗಗಳು ಜಿಲ್ಲೆಯ ಎಲ್ಲ ಭಾಗಗಳಿಗಿಂತ ಎತ್ತರವಾಗಿದ್ದು ಕೆಲವು ಸಣ್ಣ ಬೆಟ್ಟಗುಡ್ಡಗಳಿಂದ ಕೂಡಿದೆ. ಕಾಗಿಣಾ ಈ ತಾಲ್ಲೂಕಿನ ಮುಖ್ಯನದಿ. ಈ ನದಿ ತಾಲ್ಲೂಕಿನ ಉತ್ತರದಲ್ಲಿ ಲೊಹಾದ್ ಗ್ರಾಮದ ಪೂರ್ವದಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ ಪಶ್ಚಿಮಾಭಿಮುಖವಾಗಿ ಹರಿಯುವುದು. ಮಳಖೇಡ ಗ್ರಾಮದ ಪಶ್ಚಿಮದಲ್ಲಿ ಈ ತಾಲ್ಲೂಕನ್ನು ಬಿಟ್ಟು ಚಿತ್ತಾಪುರ ತಾಲ್ಲೂಕನ್ನು ಪ್ರವೇಶಿಸಿ ಹುನಗುಂಟ ಗ್ರಾಮದ ಬಳಿ ಭೀಮಾನದಿಯನ್ನು ಸೇರುವುದು. ಈ ನದಿ ತಾಲ್ಲೂಕಿನ ಉತ್ತರ ಭಾಗಕ್ಕೆ ತನ್ನ ಹರಿವಿನ ಉದ್ದಕ್ಕೂ ಜಲಾಧಾರವಾಗಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 884.30 ಮಿಮೀ.

ತಾಲ್ಲೂಕಿನ ವ್ಯವಸಾಯಕ್ಕೆ ಬಾವಿ ಕೆರೆಗಳ ಜೊತೆಗೆ ಕಿರಿಯ ರಾಜೋಲಿ ಗ್ರಾಮದ ಬಳಿಯ ಮುಧೋಳ ತೊರೆ ಅಡ್ಡಗಟ್ಟೆ ಯೋಜನೆ ಮತ್ತು ಯಡಹಳ್ಳಿ ಬಳಿಯ ಕಾಗಿಣಾ ನದಿಯ ಅಡ್ಡಗಟ್ಟೆಯೋಜನೆಯಿಂದ ನೀರೊದಗಿಸಿಕೊಳ್ಳಲಾಗುವುದು. ಕಪ್ಪುಮಣ್ಣಿನ ಈ ತಾಲ್ಲೂಕಿನಲ್ಲಿ ಜೋಳ, ಸಜ್ಜೆ, ಗೋದಿ, ತೊಗರಿ, ಕಡಲೆ, ಮೆಣಸಿನಕಾಯಿ, ನೆಲಗಡಲೆ ಮುಂತಾದವನ್ನು ಬೆಳೆಯುತ್ತಾರೆ. ಇಲ್ಲಿ ಪಶುಪಾಲನೆಯನ್ನೂ ಮಾಡುತ್ತಾರೆ.

ಸೇಡಂಗೆ ವಾಯವ್ಯದಲ್ಲಿ ಸು. 13 ಕಿಮೀ ದೂರದಲ್ಲೂ ಚಿತ್ತಾಪುರಕ್ಕೆ ಈಶಾನ್ಯದಲ್ಲಿ 10 ಕಿಮೀ ದೂರದಲ್ಲೂ ಇರುವ ಮಳಖೇಡ **(ನೋಡಿ)** ಕಾಗಿಣಾನದಿಯ ಬಲದಂಡೆಯಲ್ಲಿದೆ. ಇದು ಹಿಂದೆ ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಈ ಊರಿಗೆ ಹಿಂದೆ ಮಾನ್ಯಖೇಟಪುರ ಎಂಬ ಹೆಸರಿತ್ತು. ಕವಿರಾಜಮಾರ್ಗದ ಕರ್ತೃ ಇಲ್ಲಿಯವನು. ಮಧ್ವಾಚಾರ್ಯರ ಪ್ರಮುಖ ಶಿಷ್ಯರಲ್ಲಿ ಒಬ್ಬರಾದ ಜಯತೀರ್ಥರು ಇಲ್ಲಿ ನೆಲೆಸಿದ್ದರು. ಇವರ ಬೃಂದಾವನ ಇಲ್ಲಿದೆ. ಅಪಭ್ರಂಶ ಕವಿ ಎಂದು ಹೆಸರಾದ ಪುಷ್ಪದಂತ ಇದೇ ಊರಿನವನು. ಹಿಂದೆ ಜೈನ ಸಂಸ್ಕೃತಿಯ ಕೇಂದ್ರವಾಗಿದ್ದ ಮಳಖೇಡ ಈಗ ಒಂದು ಸಾಮಾನ್ಯ ಗ್ರಾಮ. ಈಗಲೂ ಹಿಂದಿನ ಕೋಟೆಕೊತ್ತಲಗಳ ಅವಶೇಷಗಳನ್ನು ಇಲ್ಲಿ ಕಾಣಬಹುದು.

ಸೇಡಂ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಚಿತ್ತಾಪುರ–ಹೈದರಾಬಾದು ರೈಲ್ವೆ ಮಾರ್ಗದಲ್ಲಿ ಗುಲ್ಬರ್ಗದ ಆಗ್ನೇಯಕ್ಕೆ 56 ಕಿಮೀ ದೂರದಲ್ಲಿದೆ. ಪಟ್ಟಣ ಪ್ರದೇಶದಲ್ಲಿ 20,512 ಮಂದಿ ಗಂಡಸರು, 19,601 ಮಂದಿ ಹೆಂಗಸರಿದ್ದು ಒಟ್ಟು ಜನಸಂಖ್ಯೆ 40,113. ಇದೊಂದು ವ್ಯಾಪಾರ ಕೇಂದ್ರ. ತಾಲ್ಲೂಕಿನ ಮುಖ್ಯ ರೈಲ್ವೆ ನಿಲ್ದಾಣ. ಈ ಊರಿನಲ್ಲಿರುವ ಜಾಮಿ ಮಸೀದಿ, ಪಂಚಲಿಂಗ ದೇವಸ್ಥಾನ, ಜೈನಮಂದಿರ ಮತ್ತು ಮಾಣಿಕೇಶ್ವರ ದೇವಸ್ಥಾನ ಪ್ರೇಕ್ಷಣೀಯವಾದವು. **(ಬಿ.)**

**ಸೇಡಿಯಾಪು ಕೃಷ್ಣಭಟ್ಟ:** 1902–96. ಕನ್ನಡದ ಹೆಸರಾಂತ ಕವಿ, ವಿದ್ವಾಂಸ, ವಿಮರ್ಶಕರಲ್ಲೊಬ್ಬರು. 1902 ಜೂನ್ 8ರಂದು ಪುತ್ತೂರಿನ ಬಳಿಯ ಸೇಡಿಯಾಪು ಎಂಬಲ್ಲಿ ಜನಿಸಿದರು. ಇವರ ತಂದೆ ರಾಮಭಟ್ಟ, ತಾಯಿ ಮೂಕಾಂಬಿಕೆ. ತಂದೆ ವೃತ್ತಿಯಲ್ಲಿ ವೈದ್ಯರೂ ಕವಿ ಹಾಗೂ ಸ್ನೇಹಜೀವಿಯೂ ಆಗಿದ್ದರು. ತಂದೆ ತೀರಿಹೋದಾಗ ಸೇಡಿಯಾಪು ಅವರಿಗೆ ಕೇವಲ ಐದೂವರೆ ವರ್ಷ ವಯಸ್ಸು. ತಾಯಿಯ ತಂದೆಯ ಮನೆಯಲ್ಲಿ ಇವರು ಬೆಳೆದರು. ಇವರ ತಾತನ ಹೆಸರೂ ಕೃಷ್ಣಭಟ್ಟ ಎಂದೇ. ತಾತನ ಊರು ಕುಕ್ಕಿಲ. ದಕ್ಷಿಣ ಕನ್ನಡ ಜಿಲ್ಲೆಯ ಇನ್ನೊಬ್ಬ ದೊಡ್ಡ ವಿದ್ವಾಂಸರಾದ ಕುಕ್ಕಿಲ ಕೃಷ್ಣಭಟ್ಟರು ಸೇಡಿಯಾಪು ಕೃಷ್ಣಭಟ್ಟರ ತಾಯಿಯ ತಂದೆಯಾದ ಕೃಷ್ಣಭಟ್ಟರ ಮಗನ ಮಗ. ತಾತ ಕೃಷ್ಣಭಟ್ಟರ ಪ್ರೋತ್ಸಾಹದಿಂದ ಇವರು ಪುಸ್ತಕ ಪ್ರೀತಿ ಬೆಳೆಸಿಕೊಂಡರು. ರಾಮಾಯಣ, ಮಹಾಭಾರತ ಮೊದಲಾದ ಗ್ರಂಥಗಳನ್ನೋದಿದರು. ಏಕಾಂತಪ್ರಿಯರಾದ ಭಟ್ಟರಿಗೆ ಗಂಭೀರ ವಿಚಾರಗಳಲ್ಲೇ ಆಸಕ್ತಿ.

ಪ್ರಾಥಮಿಕ ಶಿಕ್ಷಣ ಮುಗಿದ ಮೇಲೆ ಇವರು ಪುತ್ತೂರಿನಲ್ಲಿ ಮುಂದಿನ ವಿದ್ಯಾಭ್ಯಾಸ ಮಾಡಿದರು. ಗುರುಗಳಾದ ಉಗ್ರಾಣ ಮಂಗೇಶರಾಯರ ಪ್ರೋತ್ಸಾಹದಿಂದ ಕವಿತೆಗಳನ್ನು ಬರೆಯಲಾರಂಭಿಸಿದರು. ಸ್ವಾತಂತ್ರ್ಯ ಹೋರಾಟ ಬಿರುಸಾದಾಗ ಗಾಂಧಿಯವರಿಂದ ಪ್ರಭಾವಿತರಾದರು. ಆದರೆ ಹೋರಾಟದಲ್ಲಿ ನೇರವಾಗಿ ದುಮುಕದೆ ರಚನಾತ್ಮಕ ಕಾರ್ಯದಲ್ಲಿ ತೊಡಗಿದರು. ನಾಲ್ಕನೆಯ ಫಾರಂ ಕಲಿತ ಮೇಲೆ ಇವರು ಶಾಲಾ ಅಧ್ಯಾಪಕರಾದರು. ಸರ್ಕಾರದ ಯಾವ ಸಂಪರ್ಕವೂ ಇರಬಾರದೆಂಬ ಗಾಂಧೀಜಿಯವರ ಆದೇಶದ ಮೇರೆಗೆ ಇವರು ಶಾಲೆಯ ಕೆಲಸಕ್ಕೆ ರಾಜೀನಾಮೆ ನೀಡಿದರು. ಕೆಲಕಾಲ ವೈದ್ಯವೃತ್ತಿ ಮಾಡಿ ಕೊನೆಗೆ ಸಾಹಿತ್ಯ ಕ್ಷೇತ್ರಕ್ಕೆ ತಮ್ಮನ್ನು ಪೂರ್ತಿಯಾಗಿ ಅರ್ಪಿಸಿಕೊಂಡರು. ಕನ್ನಡ ಛಂದಸ್ಸು ಎಂಬ ಇವರ ನಿಬಂಧ ಕನ್ನಡದ ಆದಿಕಾಲದ ಛಂದೋಬಂಧಗಳ ಬಗೆಗಿನ ಸಂಶೋಧನೆ. 'ಛಂದೋಗತಿ'ಯೆಂಬುದು ಛಂದಸ್ಸಿನ ತತ್ತ್ವಗಳ

ಹಾಗೂ ಗತಿಭೇದಗಳ ವಿವೇಚನೆ ಮತ್ತು ವಿವೃತಿ. ವ್ಯಾಕರಣ ವಿಷಯದಲ್ಲಿ ಇವರು ಬರೆದ ಕೃತಿ 'ಕನ್ನಡ ವರ್ಣಗಳು'. ವ್ಯಾಕರಣಕ್ಕೆ ಸಂಬಂಧಿಸಿದಂತೆ ಪಂಚಮೀ ವಿಭಕ್ತಿ, ಗಮಕ ಸಮಾಸ, ಕ್ರಿಯಾ ಸಮಾಸ, ಸಂಬಂಧ ವಿಭಕ್ತಿ, ವೈಯಾಕರಣನ ತೂಕಡಿಕೆ ಮೊದಲಾದ ಮೌಲಿಕ ಲೇಖನಗಳನ್ನು ಇವರು ಬರೆದಿದ್ದಾರೆ. 1922–1992ರವರೆಗೆ ಇವರು ಬರೆದ ಎಲ್ಲ ಲೇಖನಗಳನ್ನೂ ಸಂಗ್ರಹಿಸಿ ವಿಚಾರ ಪ್ರಪಂಚ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ.

ಇವರ ತಥ್ಯದರ್ಶನ ಎಂಬ ಕೃತಿ ಆರ್ಯವರ್ಣ ಜಾತಿಲಿಂಗ ಎಂಬ ಪದಚತುಷ್ಟಯದ ಅರ್ಥಾನುಸಂಧಾನ ರೂಪವಾದುದು. ಆರ್ಯ ಮತ್ತು ದ್ರಾವಿಡ ಎಂಬ ಶಬ್ದಗಳ ವ್ಯುತ್ಪತ್ತಿಯನ್ನು ಮೊದಲ ಬಾರಿಗೆ ಹೇಳಿದುದು ಈ ಕೃತಿಯ ವೈಶಿಷ್ಟ್ಯ. ಈ ಕೃತಿ ಇಂಗ್ಲಿಷಿಗೂ ಅನುವಾದವಾಗಿದೆ. ಶಬ್ದಾರ್ಥ ವಿಶ್ಲೇಷಣೆಯಲ್ಲಿಯೂ ಇವರಿಗೆ ವಿಶೇಷ ಆಸಕ್ತಿ. ಕೆಲವು ದೇಶನಾಮಗಳು ಎಂಬ ಕೃತಿಯಲ್ಲಿ ತುಳು, ಚೇರ, ಕೊಂಕಣ, ಪಾಂಡಿ, ಪಾಂಡ್ಯ– ಈ ಶಬ್ದಗಳ ವಿವೇಚನೆ ಇದೆ. ಶಬ್ದಾರ್ಥ ವಿಶ್ಲೇಷಣೆಯ ಮೂಲಕ ಸಾಂಸ್ಕೃತಿಕ ಇತಿಹಾಸದ ಶೋಧವನ್ನು ಇವರು ಮಾಡುತ್ತಾರೆ. 'ದ್ರಾವಿಡ ಗೌಡ ವಿಚಾರ' ಮೊದಲಾದ ಲೇಖನಗಳು ಶಬ್ದಾರ್ಥ ವಿವೇಚನೆಯ ಮೂಲಕ ನಡೆಸಿದ ಸಂಶೋಧನೆಯಾಗಿದೆ. ಸಾಮಾನ್ಯ ಶಬ್ದಗಳಾದ ತಾಲಿ (ತಾಳಿ), ಇಡ್ಲಿಯ ಇತಿಹಾಸ ಮೊದಲಾದವುಗಳ ಬಗೆಗೂ ಇವರು ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ.



ಸೃಜನಶೀಲ ಕ್ಷೇತ್ರದಲ್ಲಿಯೂ ಸೇಡಿಯಾಪು ಅವರು ಮೌಲಿಕ ಕೃತಿರಚನೆ ಮಾಡಿದ್ದಾರೆ. ನಾಲ್ಕೇ ಕಥೆಗಳುಳ್ಳ 'ಪಳಮೆಗಳು' (1947) ಇವರನ್ನು ಒಬ್ಬ ಒಳ್ಳೆಯ ಕತೆಗಾರರೆಂಬ ಕೀರ್ತಿಗೆ ಭಾಜನರಾಗುವಂತೆ ಮಾಡಿತು. ಶ್ವಮೇಧ ಅಥವಾ ನಾಯಿ ನಡತೆ, ಪುಣ್ಯಲಹರಿ ಅಥವಾ ಶಬರಿ ಮತ್ತು ತರುಣಧಮನಿ– ಇವು ಇವರ ಕಾವ್ಯಕೃತಿಗಳು. ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು (1969) ಎಂಬ ಕವನ ಸಂಕಲನ ಇವರಿಗೆ ಖ್ಯಾತಿಯನ್ನು ತಂದಿತ್ತಿತು.

ಸೇಡಿಯಾಪು ಅವರದು ಸ್ವತಂತ್ರ ಸಂಶೋಧನ ವಿಧಾನ. ಸ್ವಂತದ್ದೇ ಮಾದರಿಯೆನಿಸಿದ ಬರೆವಣಿಗೆ. ದೈವಶ್ರದ್ಧೆಯ, ಮಾನವ ಪ್ರೇಮದ ಮತ್ತು ಮಾನವೀಯತೆಯ ಮೇಲಿನ ವಿಶ್ವಾಸದ ನಿರ್ಮಲ ಬದುಕು ಇವರದು.

ಕನ್ನಡ ನಿಘಂಟು (ಶಬ್ದಕೋಶ, 1951), ಕನ್ನಡ ವರ್ಣಗಳು (ವರ್ಣಮಾಲಾ ಮೀಮಾಂಸೆ, 1955), ಕೆಲವು ದೇಶನಾಮಗಳು (ಶಬ್ದಾರ್ಥ ಸಂಶೋಧನ ಗ್ರಂಥ, 1975), ಕನ್ನಡ ಗೀತಿಕೆಯ ಲಕ್ಷಣ ಮತ್ತು ಧಾಟಿ (ಕನ್ನಡ ಛಂದೋರೂಪವೊಂದರ ಮೀಮಾಂಸೆ, 1977), ಛಂದೋಗತಿ (ಛಂದಸ್ಸಿನ ತತ್ತ್ವಗಳ ಹಾಗೂ ಗತಿಭೇದಗಳ ವಿವೇಚನೆ ಮತ್ತು ವಿವೃತಿ, 1985), ಕನ್ನಡ ಛಂದಸ್ಸು (ಕನ್ನಡದ ಛಂದೋರೂಪಗಳ ವಿವೇಚನೆ, 1988), ತಥ್ಯದರ್ಶನ (ಆರ್ಯ ವರ್ಣ ಜಾತಿ ಲಿಂಗವೆಂಬೀ ಪದಚತುಷ್ಟಯದ ಅರ್ಥಾನುಸಂಧಾನ, 1991), ಗಮಕ ಸಮಾಸ (ಸಮಾಸ ವಿವೇಚನೆ, 1991) ಇವು ಇವರು ರಚಿಸಿದ ಇತರ ಕೃತಿಗಳು. ಪತ್ರಾವಳಿ (ಸಂ: ಎಂ.ರಾಮಚಂದ್ರ, 1991), ವಿಚಾರ ಪ್ರಪಂಚ– ಸಮಗ್ರ ಲೇಖನ ಸಂಕಲನ. (ಸಂ: ಪಾದೇಕಲ್ಲು ವಿಷ್ಣುಭಟ್ಟ, 1994), Discovery of Facts (ತಥ್ಯದರ್ಶನದ ಇಂಗ್ಲಿಷ್ ಅನುವಾದ. ಅನು: ಪಾದೇಕಲ್ಲು ನರಸಿಂಹಭಟ್ಟ, 1996), ಈಶ್ವರ ಸಂಕಲ್ಪ ಅಥವಾ ದೈವಲೀಲೆ (ಜೀವನದ ಕೆಲವು ಘಟನೆಗಳ ನಿರೂಪಣೆ, 1996) ಮತ್ತು ಸೇಡಿಯಾಪು ನೆನಪುಗಳು (ಸಂಗ್ರಹ: ವೈದೇಹಿ, 1996)– ಇವು ಇವರ ವಿವರ ಹಾಗೂ ಬರೆಹಗಳನ್ನೊಳಗೊಂಡ ಸಂಪಾದಿತ, ಸಂಗ್ರಹಿತ ಕೃತಿಗಳು. ಇವರಿಗೆ 1994ರಲ್ಲಿ ಕರ್ನಾಟಕ ಸರ್ಕಾರ ಪಂಪ ಪ್ರಶಸ್ತಿ ನೀಡಿ (ವಿಚಾರ ಪ್ರಪಂಚ) ಗೌರವಿಸಿತು. ಇವರು 1996ರಲ್ಲಿ ನಿಧನರಾದರು **(ಪಿ.ಇ.ವಿ.)**

**ಸೇತೂರಾಂ, ಇ.ಆರ್.:** 1918–2002. ಹೆಸರಾಂತ ಪತ್ರಕರ್ತರು, ಲೇಖಕರು. ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ 1918 ನವಂಬರ್ 20ರಂದು ಜನಿಸಿದರು. ಎಂದೊರ್ಸೆ ರಾಮರಾವ್ ಸೇತೂರಾಂ ಇವರ ಪೂರ್ಣ ಹೆಸರು. ಇವರ ಕಾಲೇಜು ಶಿಕ್ಷಣ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆಯಿತು. 1941ರಲ್ಲಿ ಬಿ.ಎ.ಪದವಿ ಪಡೆದರು. ಶೈಕ್ಷಣಿಕ ಜೀವನದುದ್ದಕ್ಕೂ ಇವರದು ಪ್ರಕಾಂಡ ಸಾಧನೆ. ಇಂಗ್ಲಿಷ್, ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷಾಕೋವಿದರು.

ನಾಟಕ ಸೇತೂರಾಂ ಅವರ ಬಹುಪ್ರಿಯವಾದ ಕ್ಷೇತ್ರ. ಪ್ರಸಿದ್ಧ ನಾಟಕಕಾರ ಟಿ.ಪಿ. ಕೈಲಾಸಂ ಅವರ ಒಡನಾಟದಲ್ಲಿ ಹಲವಾರು ನಾಟಕಗಳನ್ನು ನಿರ್ಮಿಸಿದರು, ಪ್ರದರ್ಶಿಸಿದರು. ಕೈಲಾಸಂ ಕುರಿತಂತೆ ಅಧಿಕಾರಯುತವಾಗಿ ಉಪನ್ಯಾಸಗಳನ್ನು ನೀಡಬಲ್ಲವರಾಗಿದ್ದರು.

1945–48ರ ಅವಧಿಯಲ್ಲಿ ಮುಂಬಯಿಯ ವಿಜಯ ಪ್ರಕಾಶಕರಲ್ಲಿ ಸಂಪಾದಕರಾಗಿ ಉದ್ಯೋಗ ಆರಂಭಿಸಿದರು. ಕಾಲಿನ್ಸ್, ಜೆಫ್ರಿ ಬ್ಲೂಸ್ ಮತ್ತು ಆಕ್ಸ್‌ಫರ್ಡ್ ಮುಂತಾದ ಹೆಸರಾಂತ ವಿದೇಶೀ ಪ್ರಕಾಶನ ಸಂಸ್ಥೆಗಳ ಪ್ರಕಟಣೆಗಳನ್ನು ಪುನರ್‌ಮುದ್ರಿಸಿದರು. ರೀಡರ್ಸ್ ಡೈಜೆಸ್ಟ್ ಮಾದರಿಯಲ್ಲಿ ಭಾರತೀಯ ಡೈಜೆಸ್ಟ್ ಒಂದನ್ನು ಸ್ಥಾಪಿಸುವ ಇವರ ಪ್ರಯತ್ನವನ್ನು ಆಗಿನ ಸಾಮ್ರಾಜ್ಯಶಾಹೀ ಬ್ರಿಟಿಷ್ ಸರ್ಕಾರ ನಿರರ್ಥಕಗೊಳಿಸಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ನೌಕರಿಗೆ ರಾಜೀನಾಮೆ ನೀಡಿ ಬೆಂಗಳೂರಿಗೆ ಹಿಂದಿರುಗಿದರು. ಕಿಡಿ ಮತ್ತು ಸ್ವಾತಂತ್ರ್ಯೋದಯ ಪತ್ರಿಕೆಗಳ ಭೂಗತ ಸಂಪಾದಕರಾಗಿ 1947ರಲ್ಲಿ ಕಾರ್ಯ ನಿರ್ವಹಿಸಿದರು. 1948ರಲ್ಲಿ ಸುದ್ದಿಸಂಪಾದಕರಾಗಿ ಪ್ರಜಾವಾಣಿ ಪತ್ರಿಕೆ ಸೇರಿದರು ಮತ್ತು 1965 ರವರೆಗೆ ಈ ಹುದ್ದೆಯಲ್ಲಿದ್ದಾಗ ಇವರ ಅವಿರತ ಶ್ರಮದ ಫಲವಾಗಿ ಪ್ರಜಾವಾಣಿ ಅನೇಕ ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿತು. ಸುಧಾ ವಾರಪತ್ರಿಕೆ 1965ರಲ್ಲಿ ಆರಂಭವಾದಾಗ ಅದರ ಸ್ಥಾಪಕ ಸಂಪಾದಕರಾದರು. ಅನತಿ ಕಾಲದಲ್ಲಿಯೇ ಎರಡು ಲಕ್ಷಕ್ಕೂ ಹೆಚ್ಚು ಪ್ರಸಾರ ಗಳಿಸಿದ ಸುಧಾ ಸಾಧನೆಯ ಹಿಂದಿದ್ದ ಕರ್ತೃತ್ವಶಕ್ತಿ ಇವರೇ ಎಂದರೆ ಉತ್ಪ್ರೇಕ್ಷೆಯಲ್ಲ. ಸಾಹಿತ್ಯ, ಸಂಗೀತ, ಕಾವ್ಯ, ಶಿಲ್ಪಕಲೆ, ಜನಪದ, ವಿಜ್ಞಾನ, ಹಾಸ್ಯ ಮತ್ತು ಚೌಪದಿಯಂತಹ ಎಲ್ಲ ಕ್ಷೇತ್ರಗಳಲ್ಲೂ ವಿಸ್ತೃತ ಬರೆಹಕೃಷಿ ನಡೆಸಿದ ಇವರ ಲೇಖನಿಗೆ ಶ್ರಮದ ಅರಿವೇ ಇರಲಿಲ್ಲ.

1981ರಲ್ಲಿ ನಿವೃತ್ತರಾದ ಅನಂತರ ಮೂರು ವರ್ಷಗಳ ಕಾಲ ಡೆಕ್ಕನ್ ಹೆರಾಲ್ಡ್ ಪತ್ರಿಕಾಬಳಗಕ್ಕೆ ಸಂಪಾದಕೀಯ ಸಲಹೆಗಾರರಾಗಿದ್ದರು. ಪತ್ರಿಕಾ ಶಿಕ್ಷಣದಲ್ಲಿ ಅಚಲನಂಬಿಕೆ ಇದ್ದ ಸೇತೂರಾಂ ಬೆಂಗಳೂರಿನ ಎನ್.ಎಂ.ಕೆ. ಆರ್.ವಿ. ಕಾಲೇಜಿನಲ್ಲಿ ಪದವಿಮಟ್ಟದಲ್ಲಿ ಪತ್ರಿಕಾ ಶಿಕ್ಷಣ ಆರಂಭಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದರು. ಭಾರತೀಯ ವಿದ್ಯಾಭವನದಲ್ಲಿ ಒಪ್ಪೊತ್ತಿನ ಉಪನ್ಯಾಸಕರಾಗಿ ಎರಡು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದರು.

ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆ ತನ್ನ ಪ್ರಕಟಣೆಗಳಿಗೆ ಸೇತೂರಾಂ ಅವರನ್ನು 1984ರಿಂದ ಎಂಟು ವರ್ಷಗಳ ಕಾಲ ಸಲಹೆಗಾರರನ್ನಾಗಿ

ನೇಮಿಸಿಕೊಂಡಿದ್ದಾಗ ಕರ್ನಾಟಕ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಅವರು ಮಾರ್ಚ್ ಆಫ್ ಕರ್ನಾಟಕ ನಿಯತಕಾಲಿಕದ ಮೂಲಕ ಬಿತ್ತರಿಸುವಲ್ಲಿ ಯಶಸ್ವಿಯಾದರು.

ಪತ್ರಿಕೋದ್ಯಮವೇ ಅಲ್ಲದೆ ಇತರ ಕ್ಷೇತ್ರಗಳಲ್ಲೂ ಅವರ ಸಾಧನೆ ಅಪಾರ. ಕರ್ನಾಟಕ ಗಾನಕಲಾ ಪರಿಷತ್ ಅಧ್ಯಕ್ಷರಾಗಿ (1970–81) ಇವರ ಕಾರ್ಯತತ್ಪರತೆ ಅದ್ವಿತೀಯ. ಸ್ವತಂತ್ರ ಬಾನುಲಿ ಪ್ರಸಾರಕ್ಕಾಗಿ, ಡಾಕ್ಯುಮೆಂಟರಿ ಚಲನಚಿತ್ರ ಸಾಹಿತ್ಯರಚನಕಾರರಾಗಿ ಇವರು ಗಳಿಸಿದ ಹೆಸರು ಯುವಪೀಳಿಗೆಗೆ ಆದರ್ಶ.

ಇವರಿಗೆ ದೊರಕಿದ ಪ್ರಶಸ್ತಿ ಪುರಸ್ಕಾರಗಳು ಅನೇಕ: ಪಿ.ಆರ್. ರಾಮಯ್ಯ ಪ್ರಶಸ್ತಿ, ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1993), ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ (1996), ರಾಜ್ಯ ಸರ್ಕಾರದ ಟಿಎಸ್ಸಾರ್ ಪ್ರಶಸ್ತಿ (2001) ಮತ್ತು ತಿಲಕ್ ಮೊಹರೆ ಪತ್ರಕರ್ತ ಪ್ರಶಸ್ತಿ (2002). ಕನ್ನಡ ಪತ್ರಿಕೋದ್ಯಮಕ್ಕೆ, ಸಾಹಿತ್ಯಕ್ಕೆ, ಮತ್ತಿತರ ಸಾರ್ವಜನಿಕ ಕ್ಷೇತ್ರಗಳಿಗೆ ಇವರು ನೀಡಿದ ಕೊಡುಗೆ ಅನನ್ಯವಾದದ್ದು. ಇವರು 2002ರಲ್ಲಿ ನಿಧನರಾದರು. **(ಕೆ.ವಿ.ಎಸ್.)**

**ಸೇನವಾರರು:** ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮಭಾಗದಲ್ಲಿ ಚಿಕ್ಕ ರಾಜ್ಯವನ್ನು ಸ್ಥಾಪಿಸಿ ಆಳಿದ ಒಂದು ಮಾಂಡಲಿಕ ಮನೆತನ. ಈ ಮನೆತನದ ರಾಜರು ಮತ್ತು ಅವರ ಆಳ್ವಿಕೆಗೆ ಸಂಬಂಧಿಸಿದಂತೆ ಹೆಚ್ಚು ಮಾಹಿತಿ ದೊರೆಯುವುದಿಲ್ಲ. ಇವರು ಜೈನಧರ್ಮಾವಲಂಬಿಗಳಾಗಿದ್ದರೆಂದು ತಿಳಿದುಬರುತ್ತದೆ. ದೊರೆತಿರುವ ಶಾಸನಗಳಲ್ಲಿ ಇವರನ್ನು ಖಚನ ವಂಶೀಯರೆಂದೂ ಫಣಿಧ್ವಜವುಳ್ಳವರೆಂದೂ ಕೂಡಲೂರುಪುರವರಾಧೀಶ್ವರರೆಂದೂ ವರ್ಣಿಸಲಾಗಿದೆ. ಈ ವಂಶದ ಮೊಟ್ಟ ಮೊದಲನೆಯ ರಾಜ ಚಿತ್ರವಾಹನನೆಂದೂ ಇವನು 690ರಲ್ಲಿ ಆಳುತ್ತಿದ್ದುದಾಗಿಯೂ ತಿಳಿದು ಬರುತ್ತದೆ. ಸು.1010ರ ಸುಮಾರಿನಲ್ಲಿ ಚಾಳುಕ್ಯ ವಿಕ್ರಮಾದಿತ್ಯನ ಮಾಂಡಲಿಕನಾಗಿ ಸೇನವಾರ ರಾಜನೊಬ್ಬ ಬನವಾಸಿ ಪ್ರಾಂತ್ಯದಲ್ಲಿ ಆಡಳಿತ ನಡೆಸುತ್ತಿದ್ದುದಾಗಿ ಸೊರಬ ತಾಲ್ಲೂಕಿನ ಶಾಸನವೊಂದರಿಂದ ತಿಳಿದುಬರುತ್ತದೆ. 1058ರಲ್ಲಿ ಜೀವಿತವಾರ, ಅವನ ಮಗ ಜೀವನವಾಹನ ಮತ್ತು ಅವನ ಮಗ ಮಾರ ಅಥವಾ ಮಾರಸಿಂಹ ಎಂಬುವರು ಆಳ್ವಿಕೆ ನಡೆಸಿದುದಾಗಿ ಚಿಕ್ಕಮಗಳೂರು ತಾಲ್ಲೂಕಿನ ಶಾಸನವೊಂದರಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ಮಾರ ಎಂಬುವನು ಹೇಮಕೂಟಪುರದ ಸ್ವಾಮಿ ಎಂಬುದಾಗಿ ವರ್ಣಿಸಲಾಗಿದೆ. ಸೇನವಾರ ರಾಜಕುಮಾರರಾದ ಸೂರ್ಯ ಮತ್ತು ಆದಿತ್ಯ ಎಂಬುವರು ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿ ವಿಶೇಷ ಸಚಿವರಾಗಿದ್ದರೆಂದು ಮತ್ತೊಂದು ಶಾಸನ ತಿಳಿಸುತ್ತದೆ. ಇವರ ರಾಜ್ಯದ ವಿಸ್ತೀರ್ಣ, ವಂಶಾನುಕ್ರಮಣಿಕೆ, ಕಾಲಾನುಕ್ರಮಣಿಕೆ ಮತ್ತು ಇವರ ಸಾಧನೆಗಳನ್ನು ಕುರಿತಾದ ಸಂಗತಿಗಳು ತಿಳಿದುಬರುವುದಿಲ್ಲ. **(ಜಿ.ಆರ್.ಆರ್.)**

**ಸೇವುಣ ವಂಶ:** ಸು. 9ನೆಯ ಶತಮಾನದಿಂದ 14ನೆಯ ಶತಮಾನದ ಆರಂಭದವರೆಗೆ ಆಳಿದ ಒಂದು ರಾಜಮನೆತನ. ಇವರು ಇತ್ತೀಚಿನವರೆಗೂ ಇತಿಹಾಸಕಾರರಿಗೆ ದೇವಗಿರಿಯ ಯಾದವರೆಂದೇ ಪರಿಚಿತರಾಗಿದ್ದರು. ಮುಸ್ಲಿಂ ಚರಿತ್ರಕಾರರನ್ನು ಅನುಸರಿಸಿ ಇತ್ತೀಚಿನ ಇತಿಹಾಸಕಾರರೂ ಇವರನ್ನು ಯಾದವ ವಂಶದವರೆಂದೇ ವ್ಯವಹರಿಸುತ್ತಿದ್ದರು. ಆದರೆ ಎ.ವಿ. ನರಸಿಂಹ ಮೂರ್ತಿ ಮತ್ತು ಶ್ರೀನಿವಾಸ ರಿತ್ತಿ ಎಂಬ ವಿದ್ವಾಂಸರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಇವರನ್ನು ದೇವಗಿರಿಯ ಸೇವುಣರೆಂದು ಕರೆಯಬೇಕೆಂಬ ವಾದವನ್ನು ಮಂಡಿಸಿದ ಅನಂತರ ಇವರನ್ನು ಸೇವುಣರೆಂದೇ ವ್ಯವಹರಿಸಲು ಪ್ರಾರಂಭಿಸಲಾಗಿದೆ.

**ರಾಜಕೀಯ ಇತಿಹಾಸ:** ಸೇವುಣರು ಯಾದವ ವಂಶದವರು. ಆದರೆ ಸೇವುಣಚಂದ್ರ ಎಂಬ ರಾಜನು ಪ್ರಸಿದ್ಧಿಯನ್ನು ಗಳಿಸಿದ್ದರಿಂದ ಇವನ ವಂಶಕ್ಕೆ ಸೇವುಣ ವಂಶವೆಂದು ಹೆಸರಾಯಿತೆಂದು ಚಾತುರ್ವರ್ಗ ಚಿಂತಾಮಣೀ ಗ್ರಂಥದ ಕರ್ತೃವಾದ ಹೇಮಾದ್ರಿ ಹೇಳಿದ್ದಾನೆ. ಇದನ್ನು ಕೆಲವು ಶಾಸನಗಳು ಸ್ಪಷ್ಟೀಕರಿಸುತ್ತವೆ. ಈ ವಂಶದ ಹೆಸರನ್ನು ಉಲ್ಲೇಖಿಸುವಾಗ ಸೇವುಣ, ಸೇಉಣ ಎಂದೂ ಬರೆಯಲಾಗುತ್ತದೆ. ಶಾಸನಗಳಲ್ಲಿ ಈ ಎರಡು ರೂಪಗಳೂ ದೊರೆಯುತ್ತವೆ. ಈ ಪದದ ಅರ್ಥ ಮಾತ್ರ ಇನ್ನೂ ತಿಳಿದಿಲ್ಲ. ಸೇವುಣ ವಂಶದ ಮೂಲದ ಬಗೆಗೂ ವಾದಗಳಿವೆ. ಫ್ಲೀಟ್, ಭಂಡಾರ್‌ಕರ್, ಅಳತೇಕರ, ಡೆರೆಟ್ ಮೊದಲಾದ ವಿದ್ವಾಂಸರು ಸೇವುಣರು ಮಹಾರಾಷ್ಟ್ರದವರು ಎಂಬ ವಾದವನ್ನು ಮಂಡಿಸಿದ್ದರು. ಇಲ್ಲಿನವರೆಗೂ ಈ ಅಭಿಪ್ರಾಯವೇ ಮಾನ್ಯವಾಗಿತ್ತು. ಆದರೆ ಇತ್ತೀಚೆಗೆ ನಡೆದಿರುವ ಸಂಶೋಧನೆಗಳಿಂದ ಈ ವಾದದಲ್ಲಿ ಹುರುಳಿಲ್ಲವೆಂದೂ ಇವರು ಕನ್ನಡಿಗರೆಂದೂ ಸ್ಪಷ್ಟವಾಗಿದೆ. ಸೇವುಣರು ಮಧುರಾ ನಗರದಲ್ಲಿದ್ದವರೆಂದೂ ಅನಂತರವೇ ಕೃಷ್ಣನ ಕಾಲದಲ್ಲಿ ದ್ವಾರಾವತಿಗೆ ಬಂದರೆಂದೂ ಹೇಮಾದ್ರಿಯ ಗ್ರಂಥ ಮತ್ತು ಕೆಲವು ಶಾಸನಗಳಿಂದ ತಿಳಿಯುತ್ತದೆ. ಆದರೆ ಇದಕ್ಕೆ ಚರಿತ್ರಾಧಾರವಿಲ್ಲ. ಸೇವುಣ ರಾಜರ ಹೆಸರುಗಳಾದ ಧಡಿಯಪ್ಪ, ವಡ್ಡಿಗ, ರಾಜಗ, ಮಲ್ಲುಗಿ, ಜೈತುಗಿ ಮುಂತಾದವು ಕನ್ನಡದ ಪದಗಳು. ಸೇವುಣ ರಾಜರು ಹಾಕಿಸಿದ ಶಾಸನಗಳೆಲ್ಲ ಬಹುಪಾಲು ಕನ್ನಡ ಭಾಷೆಯಲ್ಲಿವೆ. ಇವರ ರಾಜ್ಯ ಬಹುಪಾಲು ಕನ್ನಡನಾಡನ್ನು ಒಳಗೊಂಡಿತ್ತು. ಇವರು ವಿವಾಹ ಸಂಬಂಧ ಬೆಳೆಸಿದ ರಾಜವಂಶಗಳೂ ಕನ್ನಡ ನಾಡಿನವು. ಇವರು ಮರಾಠಿಯನ್ನು ಪ್ರೋತ್ಸಾಹಿಸಿದರೂ ಕನ್ನಡಕ್ಕೂ ಸಾಕಷ್ಟು ಪ್ರೋತ್ಸಾಹ ಕೊಟ್ಟರು. ಕೆಲವು ರಾಜರು ಸಲ್ಲವಿಡೆಗ, ಕರ್ನಾಟರಾಯ ವಂಶಾಭಿರಾಮ ಎಂಬ ಬಿರುದುಗಳನ್ನೂ ಧರಿಸಿದರು. ಈ ಎಲ್ಲ ಅಂಶಗಳನ್ನೂ ಪರಿಶೀಲಿಸಿದರೆ, ಸೇವುಣರು ಕನ್ನಡನಾಡಿನವರು ಮತ್ತು ರಾಜಕೀಯ ಕಾರಣಗಳಿಗೋಸ್ಕರ ಉತ್ತರ ಕರ್ನಾಟಕದಲ್ಲಿ ತಮ್ಮ ರಾಜ್ಯಸ್ಥಾಪನೆ ಮಾಡಿ ಮಹಾರಾಷ್ಟ್ರದಲ್ಲಿಯೂ ತಮ್ಮ ರಾಜ್ಯವನ್ನು ವಿಸ್ತರಿಸಿದರೆಂದು ತಿಳಿಯುತ್ತದೆ.

ಸೇವುಣರ ರಾಜಕೀಯ ಇತಿಹಾಸವನ್ನು ಪರಿಶೀಲಿಸುವಾಗ ಇವರನ್ನು ಸಾಮಂತರು ಮತ್ತು ಸ್ವತಂತ್ರರು ಎಂದು ವಿಭಾಗಿಸಬೇಕಾಗುತ್ತದೆ. ಮೊದಲನೆಯ ರಾಜನಿಂದ ಪ್ರಾರಂಭವಾಗಿ ಐದನೆಯ ಭಿಲ್ಲಮನವರೆಗೆ ಇವರು ಸಾಮಂತರಾಗಿ ಆಳಿದರು. ಅನಂತರ ಐದನೆಯ ಭಿಲ್ಲಮ ಸ್ವತಂತ್ರನಾಗಿ ರಾಜ್ಯ ಸ್ಥಾಪನೆ ಮಾಡಿದ. ಇವನಿಂದ ಪ್ರಾರಂಭವಾಗಿ ಇವರ ರಾಜ್ಯ ಮಹಮದೀಯರ ಅಧೀನವಾಗುವವರೆಗೆ ಇವರು ಸ್ವತಂತ್ರವಾಗಿ ಆಳಿದರು. ಇವರು ಸಾಮಂತರಾಗಿದ್ದಾಗ ಹೊರಡಿಸಿದ ಶಾಸನಗಳು ಬಹು ಕಡಿಮೆ. ಕೆಲವು ರಾಜರ ಶಾಸನಗಳು ದೊರಕಿಲ್ಲ. ಇದರಿಂದ ಈ ಕಾಲದ ಇವರ ರಾಜಕೀಯ ಚರಿತ್ರೆಯನ್ನು ತಿಳಿಯುವುದು ಕಷ್ಟವಾಗಿದೆ.

ಹೇಮಾದ್ರಿಯ ರಾಜಪ್ರಶಸ್ತಿಯ ಪ್ರಕಾರ ಪ್ರತಿಬಾಹುವಿನ ಮಗನಾದ ಸುಬಾಹು ತನ್ನ ರಾಜ್ಯವನ್ನು ನಾಲ್ಕು ಭಾಗಗಳಾಗಿ ಮಾಡಿ, ದಕ್ಷಿಣ ಭಾಗವನ್ನು ದೃಢಪ್ರಹಾರನಿಗೆ ಕೊಟ್ಟನೆಂದು ತಿಳಿಯುತ್ತದೆ. ಶಾಸನಗಳಲ್ಲಿ ಸುಬಾಹುವಿನ ಹೆಸರು ಕಾಣಬರುವುದಿಲ್ಲ. ಬಹುಶಃ ಇವನು ಚರಿತ್ರಾರ್ಹನಲ್ಲ. ಅನಂತರ ಆಳಿದ ದೃಢಪ್ರಹಾರನ ಹೆಸರು ಕೆಲವು ಶಾಸನಗಳಲ್ಲಿ ಮಾತ್ರ ಕಾಣಬರುತ್ತದೆ. ಅನಂತರ ಬಂದವನೇ ಸೇವುಣ ಚಂದ್ರ I. ಬಹುಶಃ ಇವನೇ ಈ ವಂಶದ ಮೊದಲನೆಯ ದೊರೆ. ಇವನ ರಾಜಧಾನಿ ಸಿಂದಿನೇರ ಎಂಬ ಪ್ರಾಂತ್ಯದಲ್ಲಿದ್ದ ಸೇವುಣಪುರ. ಇವನ ಕಾಲ ಸು. 850–75. ಇವನ ತರುವಾಯ ರಾಜರಾದ ಒಂದನೆಯ ಧಡಿಯಪ್ಪ, ಒಂದನೆಯ ಭಿಲ್ಲಮ ಮತ್ತು ರಾಜಗ ಇವರ ವಿಷಯ ತಿಳಿಯದು. ಅನಂತರ ಬಂದವನು ಒಂದನೆಯ ವಡ್ಡಿಗ (960–75). ಇವನು ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಸಾಮಂತನಾಗಿದ್ದ. ನಾಲ್ವಡಿ ಗೋವಿಂದನನ್ನು ಪದಚ್ಯುತನನ್ನಾಗಿ ಮಾಡಲು ಇವನು ಮುಮ್ಮಡಿ ಕೃಷ್ಣನಿಗೆ ಸಹಾಯ ಮಾಡಿ ಪ್ರಾಮುಖ್ಯವನ್ನು ಪಡೆದು ದೋರಪ್ಪನ ಮಗಳಾದ ವಡ್ಡಿಯವ್ವಳನ್ನು ವಿವಾಹವಾದ. ಇವಳು ರಾಷ್ಟ್ರಕೂಟ

ರಾಜಕುಮಾರಿ ಎನ್ನುವುದರಲ್ಲಿ ಸಂದೇಹವಿಲ್ಲ. ವಡ್ಡಿಗನ ಅನಂತರ ಇಮ್ಮಡಿ ಭಿಲ್ಲಮ (975–1000) ರಾಜನಾದ. ಇವನು ರಾಷ್ಟ್ರಕೂಟರನ್ನು ಕಡೆಗಣಿಸಿ ಚಾಳುಕ್ಯ ತೈಲಪನಿಗೆ ಸಹಾಯ ಮಾಡಿದುದಕ್ಕಾಗಿ ಆತ ಇವನಿಗೆ ಮಹಾ ಸಾಮಂತ ಎಂಬ ಬಿರುದನ್ನೂ ಅಹಮದ್‌ನಗರ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳನ್ನೂ ಕೊಟ್ಟ. ಇದರಿಂದ ಸೇವುಣರ ಪ್ರಾಬಲ್ಯ ಹೆಚ್ಚಲು ಅವಕಾಶವಾಯಿತು. ಇವನು ಝಂಝರಾಜನ ಮಗಳಾದ ಲಚ್ಚಿಯವ್ವಳನ್ನು ಮದುವೆಯಾದ. ಒಟ್ಟಿನಲ್ಲಿ ಸೇವುಣ ರಾಜ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಎರಡನೆಯ ಭಿಲ್ಲಮನಿಗೆ ಸಲ್ಲುತ್ತದೆ.

ಅನಂತರ ರಾಜನಾದ ವೇಣುಗಿ ಚಾಳುಕ್ಯ ಗೊಗ್ಗಿದೇವನ ಮಗಳಾದ ನಾಯಿಲ್ಲದೇವಿಯನ್ನು ಮದುವೆಯಾದ. ಅನಂತರ ರಾಜನಾದವನು ಮುಮ್ಮಡಿ ಭಿಲ್ಲಮ (1025–55). ಕಲಸ್ ಬದ್ರುಕ್ ಮತ್ತು ದೇವಲಾಲಿಯಲ್ಲಿ ಇವನ ಶಾಸನಗಳು ದೊರಕಿವೆ. ಇವನು ಚಾಳುಕ್ಯ ಎರಡನೆಯ ಜಯಸಿಂಹನ ಪುತ್ರಿಯೂ ಆಹವಮಲ್ಲ ಸೋಮೇಶ್ವರನ ಸಹೋದರಿಯೂ ಆದ ಆವಲ್ಲದೇವಿಯನ್ನು ವಿವಾಹವಾದ. ಜಯಸಿಂಹ ಮತ್ತು ಆಹವಮಲ್ಲ ಸೋಮೇಶ್ವರರಿಬ್ಬರಿಗೂ ವಿಧೇಯನಾಗಿದ್ದ ಈತ ಅವರ ಯುದ್ಧಗಳಲ್ಲಿ ಸಹಾಯ ಮಾಡಿದ. ಇವನ ಮರಣಾನಂತರ ವಡ್ಡಿಗ II, ವೇಸುಗಿ II, ಮತ್ತು ಭಿಲ್ಲಮ IV ರಾಜ್ಯವಾಳಿದರು. ಇವರನ್ನು ಸೋಲಿಸಿ ಇಮ್ಮಡಿ ಸೇವುಣಚಂದ್ರ ರಾಜನಾದ (1069–98), ಚಾಳುಕ್ಯ ವಿಕ್ರಮಾದಿತ್ಯನಿಗೆ ಸಹಾಯ ಮಾಡಿ ಮಹಾಮಂಡಳೇಶ್ವರ ಎಂಬ ಪದವಿಯನ್ನು ಪಡೆದ. ಈತ ಕೊಂಕಣದ ರಾಜಕೀಯದಲ್ಲಿ ಪ್ರವೇಶಿಸಿ, ಥಾನ ಜಿಲ್ಲೆಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇವನ ಅನಂತರ ಇವನ ಮಗನಾದ ಐರಮದೇವ ಆಳಿದ (1098–1123). ಇವನೂ ಚಾಳುಕ್ಯ 2ನೆಯ ಸೋಮೇಶ್ವರನನ್ನು ಸೋಲಿಸಲು ವಿಕ್ರಮಾದಿತ್ಯನಿಗೆ ಸಹಾಯ ಮಾಡಿದನೆಂದು ತನ್ನ ಆಶ್ವಿ ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಇವನ ರಾಜ್ಯ ನರ್ಮದಾ ತೀರದವರೆಗೂ ಹಬ್ಬಿತ್ತೆಂದು ಈ ಶಾಸನದಿಂದ ಗೊತ್ತಾಗುತ್ತದೆ. ಇವನ ಮರಣಾನಂತರ ಇವನ ಸಹೋದರನಾದ ಒಂದನೆಯ ಸಿಂಘಣ ರಾಜನಾದ (1123–42). ಕೆಲವು ಶಾಸನಗಳು ಇವನನ್ನು ಸೇವುಣದೇವ ಎಂದೂ ಕರೆಯುತ್ತವೆ. ಇವನು ಲಂಜೀಪುರದಿಂದ ಕರ್ಪೂರತಿಲಕ ಎಂಬ ಆನೆಯನ್ನು ತಂದು ವಿಕ್ರಮಾದಿತ್ಯನು ಕರ್ಪೂರ ವ್ರತವನ್ನು ಪೂರೈಸಲು ಸಹಾಯಕನಾದನೆಂದು ಹೇಮಾದ್ರಿ ಹೇಳಿದ್ದಾನೆ. ಲಂಜೀಪುರ ಕೊಂಕಣದಲ್ಲಿ ಅಥವಾ ಮಧ್ಯಪ್ರದೇಶದಲ್ಲಿದ್ದಿರಬಹುದು. ಅನಂತರ ರಾಜನಾದವನು ಮಲ್ಲುಗಿ (1142–67). ಇವನು ಪರ್ಣಖೇಟವನ್ನು ತನ್ನ ಶತ್ರುಗಳಿಂದ ಗೆದ್ದು ಉತ್ಕಲದೇಶದ ರಾಜನಿಂದ ಆನೆಗಳನ್ನು ಕಡ ಪಡೆದನು ಎಂದು ಹೇಮಾದ್ರಿ ಹೇಳಿದ್ದಾನೆ. ಪರ್ಣಖೇಟವು ಅಕೋಲಾ ಜಿಲ್ಲೆಯ ಪಾಟ್‌ಖೇಡ್ ಆಗಿರಬೇಕೆಂದು ಊಹೆ. ಉತ್ಕಲದ ವಿಜಯದ ವಿಷಯದಲ್ಲಿ ಏನೂ ತಿಳಿಯದು. ಜಲ್ಹಣನ ಸೂಕ್ತಿಮುಕ್ತಾವಳಿ ಗ್ರಂಥ ಮಲ್ಲುಗಿಯ ವಿಜಯಗಳನ್ನು ವಿವರಿಸುತ್ತದೆ. ಮಲ್ಲುಗಿಯ ಮರಣಾನಂತರ ಸೇವುಣ ವಂಶದಲ್ಲಿ ಕಲಹಗಳು ಪ್ರಾರಂಭವಾದವು. ರಾಜ್ಯದಲ್ಲಿ ಕ್ಷೋಭೆ ಉಂಟಾಯಿತೆಂದೂ ಇದರಲ್ಲಿ ಅಮರ ಮಲ್ಲುಗಿ, ಅಮರ ಗಾಂಗೇಯ, ಗೋವಿಂದರಾಜ, ಕಾಲಿಯ ಬಲ್ಲಾಳ ಮತ್ತು ಕರ್ಣ ಎಂಬುವರು ಪಾಲ್ಗೊಂಡಿದ್ದರೆಂದೂ ಹೇಮಾದ್ರಿಯ ರಾಜ್ಯ ಪ್ರಶಸ್ತಿ ಮತ್ತು ಸಮಕಾಲೀನ ಶಾಸನಗಳಿಂದ ತಿಳಿಯುತ್ತದೆ. ಇವರ ಪರಸ್ಪರ ಸಂಬಂಧಗಳು ಅಸ್ಪಷ್ಟ. ಈ ಅರಾಜಕತೆಯನ್ನು ಹೋಗಲಾಡಿಸಿ ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿದವನು ಐದನೆಯ ಭಿಲ್ಲಮ.

ಶೂರನೂ ಧೀರನೂ ಆದ ಐದನೆಯ ಭಿಲ್ಲಮ (1173–92) ತನ್ನ ದಾಯಾದಿಗಳನ್ನು ಸದೆಬಡಿದು ಚಾಳುಕ್ಯರಿಂದ ಸ್ವತಂತ್ರನಾಗಿ ಸೇವುಣರ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದ. 1173ರ ಶಾಸನವೊಂದರಲ್ಲಿ ಭಿಲ್ಲಮನ ಹೆಸರು ಕಾಣಸಿಗುವುದರಿಂದ ಇವನು ಆ ಸಮಯಕ್ಕಾಗಲೇ ರಾಜನಾಗಿದ್ದನೆಂದು ತಿಳಿಯುತ್ತದೆ. ಆದರೆ ಇವನು ಸ್ವತಂತ್ರನಾದುದು 1184ರಲ್ಲಿ ಎಂದು ಇವನ ಶಾಸನಗಳಿಂದ ಹೇಳಬಹುದು. ಭಿಲ್ಲಮ ರಾಜನಾದ ಸಮಯದಲ್ಲಿ ಮಹತ್ತರ ರಾಜಕೀಯ ಬದಲಾವಣೆಗಳುಂಟಾಗುತ್ತಿದ್ದವು. ಕಳಚುರಿ ಬಿಜ್ಜಳನು ಚಾಳುಕ್ಯರನ್ನು ಸೋಲಿಸಿ ಪ್ರಭಾವಿತನಾಗಿದ್ದ. ಇದನ್ನು ಗಮನಿಸಿದ ಭಿಲ್ಲಮ ತಾನೂ ಚಾಳುಕ್ಯರನ್ನು ಕಡೆಗಣಿಸಿ, ಕಳಚುರಿಗಳ ಸಾಮಂತನಾದ. ಆದರೆ ಕಳಚುರಿ ಬಿಜ್ಜಳನ ಮರಣಾನಂತರ ಆ ರಾಜ್ಯಕ್ಕೆ ಎಲ್ಲೆಡೆಯಲ್ಲಿಯೂ ವಿರೋಧ ಹೆಚ್ಚಿತು. ಇದರಿಂದ ಸ್ಫೂರ್ತಿಯನ್ನು ಪಡೆದ ಭಿಲ್ಲಮನೂ ಕಳಚುರಿಗಳನ್ನು ಎದುರಿಸಲು ಹವಣಿಸಿ, ಬಿಜ್ಜಳನ ಮಗನಾದ ಮೈಲುಗಿಯ ಮೇಲೆ ಯುದ್ಧ ಮಾಡಿ ಆತನನ್ನು ಸೋಲಿಸಿದ. ಈ ಮಧ್ಯೆ ಚಾಳುಕ್ಯ ನಾಲ್ಕನೆಯ ಸೋಮೇಶ್ವರ ಹೇಗಾದರೂ ಮಾಡಿ ತನ್ನ ರಾಜ್ಯವನ್ನು ಸ್ಥಾಪಿಸಬೇಕೆಂದು ಪ್ರಯತ್ನಗಳನ್ನು ನಡೆಸುತ್ತಿದ್ದ. ಸು. 1180ರ ಸಮಯಕ್ಕೆ ಕಳುಚುರಿಗಳನ್ನು ಸೋಮೇಶ್ವರ ಸೋಲಿಸಿದ. ಇದೇ ಸಮಯದಲ್ಲಿ ಹೊಯ್ಸಳರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಇವುಗಳೆಲ್ಲವನ್ನು ಭಿಲ್ಲಮ ಗಮನಿಸುತ್ತಿದ್ದರೂ ಉತ್ತರ ದೇಶದ ಕಡೆಗೆ ತನ್ನ ಗಮನವನ್ನು ಹರಿಸಿದ. ಮಂಗಳವೇಷ್ಟಕದ ರಾಜನಾದ ರಾಯಮುರಾರಿ ಸೋವಿದೇವನ ಮಗನಾದ ಬಿಜ್ಜಳನನ್ನು ಸೋಲಿಸಿದ. ಅನಂತರ ಅಂಸಲ ರಾಜ್ಯದ ದೊರೆಯನ್ನು ಸೋಲಿಸಿ ಅವನಿಂದ ಶ್ರೀವರ್ಧನವೆಂಬ ನಗರವನ್ನು ವಶಪಡಿಸಿಕೊಂಡ (ಕೊಂಕಣದಲ್ಲಿ ಶ್ರೀವರ್ಧನವೆಂಬ ನಗರವಿದೆ. ಪುಣೆ ನಗರಕ್ಕೆ ಸಮೀಪದಲ್ಲಿ ಮತ್ತೊಂದು ಇದೇ ಹೆಸರಿನ ನಗರವಿದೆ). ವೀರವರ್ಧನವೆಂಬ ನಗರವನ್ನು ಹೊಯ್ಸಳ ಬಲ್ಲಾಳನು ಸೇವುಣರಿಂದ ಗೆದ್ದುಕೊಂಡನೆಂದೂ ಶಾಸನವೊಂದರಲ್ಲಿ ಹೇಳಿದೆ. ಈ ಶ್ರೀವರ್ಧನ ನಗರ ಯಾವುದು ಎನ್ನುವುದು ಖಚಿತವಾಗಿ ತಿಳಿದಿಲ್ಲ. ಭಿಲ್ಲಮ ಪ್ರತ್ಯಾಂಡಕ ರಾಜನ ಮೇಲೆ ವಿಜಯವನ್ನು ಸಂಪಾದಿಸಿದನೆಂದು ಹೇಮಾದ್ರಿ ಹೇಳಿದ್ದಾನೆ. ಇದು ಭೋರ್ ರಾಜ್ಯದ ಪ್ರಚ್ಛಂದಗಡವೇ ಅಥವಾ ತೋರಣ ನಗರವೇ ಎಂಬುದು ತಿಳಿದಿಲ್ಲ.

ಈ ಸಣ್ಣಪುಟ್ಟ ರಾಜರ ಮೇಲಿನ ವಿಜಯಗಳಿಂದ ಉತ್ತೇಜಿತನಾದ ಭಿಲ್ಲಮ ಮಾಳ್ವದೇಶಕ್ಕೆ ನುಗ್ಗಿದ. ಭಿಲ್ಲಮನ ಕರಿವೃಂದನಾಥನಾದ ಜಲ್ಹನು ಆನೆಗಳೊಡನೆ ನುಗ್ಗಿ ಮಾಳ್ವ ರಾಜನ ಸೈನ್ಯದಲ್ಲಿ ಕೋಲಾಹಲವನ್ನುಂಟು ಮಾಡಿ, ವಿಂಧ್ಯವರ್ಮನನ್ನು ಸೋಲಿಸಿದ. ಅನಂತರ ಭಿಲ್ಲಮನ ಸೈನ್ಯ ಗುಜರಾತಿನ ಚಾಳುಕ್ಯರ ಮೇಲೆ ನುಗ್ಗಿ ಎರಡನೆಯ ಭೀಮನನ್ನು ಸೋಲಿಸಿತು. ಅನಂತರ ಸೈನ್ಯ ಮಾರವಾರ ದೇಶಕ್ಕೆ ನುಗ್ಗಿತು. ನಡ್ಡೋಲದಲ್ಲಿ ಆಳುತ್ತಿದ್ದ ಚಾಹಮಾನ ಕಲ್ಹಣನು ಭಿಲ್ಲಮನನ್ನು ತಡೆದ. ಮುಂದೆ ನುಗ್ಗಲಾರದೆ ಭಿಲ್ಲಮ ಸೋತು ಹಿಂತಿರುಗಿದ. ಈ ವಿಜಯಗಳಿಂದ ಭಿಲ್ಲಮನಿಗೆ ಯಾವ ರಾಜ್ಯ ವಿಸ್ತರಣೆಯೂ ಆಗಲಿಲ್ಲ. ಇತ್ತ ದಕ್ಷಿಣದಲ್ಲಿ 1184–86ರಲ್ಲಿ ಚಾಳುಕ್ಯ ಸೋಮೇಶ್ವರ ಕಲ್ಯಾಣವನ್ನು ಬಿಟ್ಟು ಜಯಂತಿಪುರಕ್ಕೆ ಓಡಿಹೋದ. ಮಾರ್ಗದಲ್ಲಿ ಭಿಲ್ಲಮ ಚಾಳುಕ್ಯ ಸೋಮೇಶ್ವರನನ್ನು ಎದುರಿಸಿದ. ಆದರೆ ಹೊಯ್ಸಳ ಬಲ್ಲಾಳ ಕಲ್ಯಾಣವನ್ನು ತನ್ನ ವಶಮಾಡಿಕೊಂಡ. ಕೂಡಲೆ ಭಿಲ್ಲಮ ಕಲ್ಯಾಣಕ್ಕೆ ಬಂದು ಬಲ್ಲಾಳನ ಮೇಲೆ ಯುದ್ಧವನ್ನು ಮಾಡಿ ಅವನು ಓಡಿಹೋಗುವಂತೆ ಮಾಡಿ ಅವನ ಬೆನ್ನಟ್ಟಿ ಮಾರ್ಗಮಧ್ಯದಲ್ಲಿ ತರ್ದವಾಡಿ, ಬೆಳ್ವೊಲ, ಎಡೆದೊರೆನಾಡುಗಳನ್ನು ತನ್ನ ವಶಮಾಡಿಕೊಂಡ. ಇನ್ನೇನು ಭಿಲ್ಲಮನೇ ದಕ್ಷಿಣಾಪಥದ ರಾಜನಾಗುತ್ತಾನೋ ಎನ್ನುವ ಮಟ್ಟಿಗೆ ವಿಜಯವನ್ನು ಸಂಪಾದಿಸಿದ. ಹಿಮ್ಮೆಟ್ಟಿದ ಬಲ್ಲಾಳ 1191ರಲ್ಲಿ ಯುದ್ಧಸಿದ್ಧತೆಗಳನ್ನು ಮಾಡಿಕೊಂಡು ಭಿಲ್ಲಮನ ಮೇಲೆ ಸೊರಟೂರು ಎಂಬಲ್ಲಿ ಯುದ್ಧ ಮಾಡಿದ. ಈ ಯುದ್ಧದಲ್ಲಿ ಸೋತ ಭಿಲ್ಲಮನ ಸೈನ್ಯ ಲೊಕ್ಕಿಗುಂಡಿ ಕೋಟೆಯನ್ನು ಹೊಕ್ಕಿತು. ಚೈತ್ರಸಿಂಹನ ನೇತೃತ್ವದಲ್ಲಿದ್ದ

ಸೇವುಣ ಸೈನ್ಯವನ್ನು ಬಲ್ಲಾಳನು ಸೋಲಿಸಿ, ಸೇವುಣರನ್ನು ಓಡಿಸಿದ. ಭಿಲ್ಲಮ ಈ ಯುದ್ಧದಲ್ಲಿ ಪೂರ್ಣವಾಗಿ ಸೋತ. ಇವನು ಈ ಯುದ್ಧದಲ್ಲಿ ಮಡಿದನೇ ಎಂಬುದು ಸಂದೇಹಾಸ್ಪದ ವಿಷಯ. ಆದರೂ ಇವನು ಹೆಚ್ಚು ಕಾಲ ಬದುಕಲಿಲ್ಲ. ಅದೇ ವರ್ಷವೇ ಮರಣಹೊಂದಿದ. ದೇವಗಿರಿ ನಗರವನ್ನು ಸ್ಥಾಪಿಸಿ, ಸ್ವಶಕ್ತಿ ಸಾಮರ್ಥ್ಯಗಳಿಂದ ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿ ಸೇವುಣ ರಾಜ್ಯದ ನಿಜಸ್ಥಾಪಕನೆನಿಸಿಕೊಂಡ ಕೀರ್ತಿ ಇವನಿಗೆ ಸಲ್ಲುತ್ತದೆ.

ಇವನ ಮರಣಾನಂತರ ಇವನ ಮಗನಾದ ಜೈತುಗಿ 1192ರಲ್ಲಿ ರಾಜನಾದ. ಹೊಯ್ಸಳರು ಸಾಧಿಸಿದ ವಿಜಯಗಳಿಂದ ಅವರು ಪ್ರಬಲರಾಗಿದ್ದರು. ಆದುದರಿಂದ ಜೈತುಗಿ ತನ್ನ ಗಮನವನ್ನು ಆ ಕಡೆ ಹರಿಸಲಿಲ್ಲ. ಇತರ

ಸೇವುಣವಂಶದ ಲಾಂಛನ

ಕಡೆಗಳಲ್ಲಿ ರಾಜ್ಯ ವಿಸ್ತರಣೆಯ ದೃಷ್ಟಿಯಿಂದ ಜೈತುಗಿಯು ಕಾಕತೀಯರ ಕಡೆ ತಿರುಗಿದ. ಕಾಕತೀಯ ರಾಜನಾದ ರುದ್ರ ಮತ್ತು ಮಹದೇವ ಇಬ್ಬರನ್ನೂ ಸೋಲಿಸುದುದೇ ಅಲ್ಲದೆ ಯುದ್ಧದಲ್ಲಿ ಕೊಂದು ತೆಲುಂಗುರಾಯ ಶಿರಃಕಮಲಮೂಲೋತ್ಪಾಟನ ಮತ್ತು ತೆಲುಂಗರಾಯ ಸ್ಥಾಪನಾಚಾರ್ಯ ಎಂಬ ಬಿರುದುಗಳನ್ನು ಧರಿಸಿದ. ರುದ್ರ ಮತ್ತು ಮಹದೇವ ಇಬ್ಬರೂ ಮರಣಹೊಂದಿದ ಅನಂತರ ಗಣಪತಿಯನ್ನು ಸೆರೆ ಹಿಡಿದು, ಅವನನ್ನೇ ಕಾಕತೀಯ ರಾಜನನ್ನಾಗಿ ಮಾಡಿದ ಕೀರ್ತಿ ಜೈತುಗಿಗೆ ಸಲ್ಲುತ್ತದೆ. ಅನಂತರ ಜೈತುಗಿಯ ಸೇನಾಧಿಪತಿಯಾದ ಸಹದೇವ ಮಾಳ್ವದೇಶಕ್ಕೆ ನುಗ್ಗಿ ಸುಭಟ ವರ್ಮನನ್ನು ಸೋಲಿಸಿ ಹಿಂದಿರುಗಿದ. ಜೈತುಗಿ 1200ರಲ್ಲಿ ಮರಣ ಹೊಂದಲು ಇವನ ಮಗನಾದ ಎರಡನೆಯ ಸಿಂಘಣ ರಾಜನಾದ.

ಸಿಂಘಣನ ರಾಜ್ಯಾರಂಭದ ಕಾಲದ ವಿಷಯದಲ್ಲಿ ವಿದ್ವಾಂಸರಲ್ಲಿ ಒಮ್ಮತ ವಿರಲಿಲ್ಲ. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇವನು 1200ರಲ್ಲಿ ಪಟ್ಟಕ್ಕೆ ಬಂದನೆಂದು ಖಚಿತವಾಗಿ ತಿಳಿದು ಬಂದಿದೆ. ಇವನು ರಾಜನಾದ ಕೂಡಲೆ ತನ್ನ ಗಮನವನ್ನು ಹೊಯ್ಸಳರತ್ತ ತಿರುಗಿಸಿದ. ಹೊಯ್ಸಳ ರಾಜ್ಯದ ಭಾಗಗಳನ್ನು ಆಕ್ರಮಿಸಲು ಪ್ರಾರಂಭಿಸಿದ. ಹೊನ್ನಾಳಿ, ಸೊರಬ, ಶಿವಮೊಗ್ಗ ಇವನ ವಶವಾದವು. ಇಷ್ಟರಲ್ಲಿಯೇ ಬಲ್ಲಾಳ ಮೃತನಾದ. ಇದರಿಂದ ಪರಿಸ್ಥಿತಿ ಸೇವುಣರಿಗೆ ಇನ್ನೂ ಉತ್ತೇಜನಕರವಾಯಿತು. ಹೊಯ್ಸಳ ನಾರಸಿಂಹ ಸೇವುಣ ಸೈನ್ಯವನ್ನು ಸ್ವಲ್ಪ ಮಟ್ಟಿಗೆ ತಡೆದರೂ ಏನೂ ಪ್ರಯೋಜನವಾಗಲಿಲ್ಲ. ನಾರಸಿಂಹನ ಮರಣಾನಂತರ ಹೊಯ್ಸಳ ಸೋಮೇಶ್ವರನೂ ಸಿಂಘಣನನ್ನು ಓಡಿಸುವ ಪ್ರಯತ್ನ ಮಾಡಿದ. ಈ ಪ್ರಯತ್ನ ಹೆಚ್ಚು ಫಲಕಾರಿಯಾಗಲಿಲ್ಲ.

ಒಂದು ಕಡೆ ಹೊಯ್ಸಳರ ಮೇಲೆ ದಂಡಯಾತ್ರೆ ನಡೆಸುತ್ತಿದ್ದರೂ ಅದೇ ಸಮಯದಲ್ಲಿ ಸಿಂಘಣ ಉತ್ತರ ಭಾರತದ ಕಡೆ ವಿಜಯಕ್ಕೆ ಏರ್ಪಾಟು ನಡೆಸುತ್ತಿದ್ದ. ಮೊದಲಿಗೆ ಮಾಳ್ವ ದೇಶಕ್ಕೆ ನುಗ್ಗಿ ಪರಮಾರ ರಾಜ ಸುಭಟವರ್ಮನನ್ನು ಕೊಂದ ಅನಂತರ ಯುದ್ಧವನ್ನು ಮುಂದುವರಿಸಿದ ಸುಭಟವರ್ಮನ ಮಗ ಅರ್ಜುನವರ್ಮನೂ ಸೋತ. ಅನಂತರ ಸಿಂಘಣ ಲಾಟ ರಾಜ್ಯದ ಮೇಲೆ ಮುಂದುವರಿದ. ಚಾಹಮಾನ ಸಿಂಹ, ಶಂಖ ಮತ್ತು ಚೌಳುಕ್ಯ ಭೀಮನ ಸೈನ್ಯಗಳು ಸಿಂಘಣನನ್ನು ಎದುರಿಸಿದವು. ಸಿಂಘಣನಿಗೆ ಜಯವಾಗಲಿಲ್ಲ; ಹಿಂದಿರುಗಿದ. ಈ ಘಟನೆಗಳು ನಡೆದದ್ದು ಸು. 1210ರಲ್ಲಿ.

ಅನಂತರ ಸಿಂಘಣ ಸುಮಾರು 1213ರಲ್ಲಿ ಶಿಲಾಹಾರ ಎರಡನೆಯ ಭೋಜನನ್ನು ಸೋಲಿಸಿದ. ಆತ ಸೋತು ಕೊಲ್ಲಾಪುರದಿಂದ ಪನ್ಹಾಲ ಎಂಬಲ್ಲಿಗೆ ಓಡಿಹೋದ. ಅಲ್ಲಿಗೂ ಬೆನ್ನಟ್ಟಿಹೋದ ಸೇವುಣ ಸೈನ್ಯ ಭೋಜನನ್ನು ಸೋಲಿಸಿ ಕೊಲ್ಲಾಪುರವನ್ನು ವಶಮಾಡಿಕೊಂಡಿತು. ಅಲ್ಲಿಂದ ಸಿಂಘಣನ ಸೈನ್ಯ ಕೊಂಕಣದ ಕಡೆ ತಿರುಗಿ ಕೇಶಿರಾಜನನ್ನು ಸೋಲಿಸಿ ಅವನನ್ನು ಸಾಮಂತನನ್ನಾಗಿ ಮಾಡಿತು. ಸಿಂಘಣ ಹಿಂದೆ ಒಂದು ಬಾರಿ ಲಾಟದೇಶದ ಮೇಲೆ ದಂಡೆತ್ತಿಹೋಗಿ ವಿಫಲನಾಗಿದ್ದ. ಈ ಬಾರಿ ಸಫಲ ನಾಗುವ ಆಸೆ ಹೊತ್ತು ಅತ್ಯಂತ ಸಮರ್ಥನಾದ ಖೋಲೇಶ್ವರ ಎಂಬ ದಂಡನಾಯಕನ ನೇತೃತ್ವದಲ್ಲಿ ಸಿಂಘಣನ ಸೈನ್ಯ ಲಾಟದೇಶಕ್ಕೆ ನುಗ್ಗಿತು. ಯುದ್ಧದಲ್ಲಿ ಸಿಂಹನೂ ಅವನ ಸಹೋದರ ಸಿಂಧುರಾಜನೂ ಕೊಲ್ಲಲ್ಪಟ್ಟರು. ಶಂಖ ಸೆರೆಸಿಕ್ಕಿದ. ಖೋಲೇಶ್ವರ ಬ್ರೋಚ್ ನಗರವನ್ನು ತನ್ನ ವಶಮಾಡಿಕೊಂಡು ವಿಜಯಸ್ತಂಭವನ್ನು ಸ್ಥಾಪಿಸಿದ. ಸೆರೆಯಿಂದ ಶಂಖನನ್ನು ಬಿಡಿಸಿ ರಾಜ್ಯವನ್ನು ಅವನಿಗೆ ಹಿಂದಿರುಗಿಸಿದ. ಅಲ್ಲಿಂದ ಮುಂದೆ ಸಿಂಘಣ ಚೌಳುಕ್ಯ ರಾಜ್ಯಕ್ಕೆ ನುಗ್ಗಿದ. ಲವಣಪ್ರಸಾದನಿಗೂ ಸಿಂಘಣನಿಗೂ ಸಂಧಿಯಾಯಿತು. ಅನಂತರ ಸಿಂಘಣ ಹಿಂದಿರುಗಿದ.

ಈ ಕಡೆ ಸಿಂಘಣನ ದಂಡನಾಯಕರು ಸಣ್ಣಪುಟ್ಟ ರಾಜರುಗಳನ್ನು ಸೋಲಿಸುತ್ತಿದ್ದರು. ಸು.1239ರಲ್ಲಿ ಕದಂಬ ಮಲ್ಲಿದೇವ ಸೋತ. ಗುತ್ತವೊಳಲಿನ ಜೋಯಿದೇವ ಸಾಮಂತನಾದ. ಸಿಂಘಣನ ಸೈನ್ಯಾಧಿಪತಿ ಬೀಚಣನು ರಟ್ಟರಾಜ ಲಕ್ಷ್ಮೀದೇವನನ್ನು ಸೋಲಿಸಿದ. ಬೆಳಗುತ್ತಿಯ ಮತ್ತು ಯಲಬುರ್ಗಿಯ ಸಿಂದರೂ ಸೋತು ಸಾಮಂತರಾದರು. ಅನಂತರ ಸೇವುಣ ಸೈನ್ಯ ತೆಲುಗು ಚೋಳರನ್ನು ಸೋಲಿಸಿತು. 1240ರಲ್ಲಿ ಸಿಂಘಣನ ಸೈನ್ಯಾಧಿಪತಿ ಯಾದ ರಾಮ ಮತ್ತೊಮ್ಮೆ ಲಾಟದೇಶಕ್ಕೆ ನುಗ್ಗಿದ. ನರ್ಮದಾ ನದಿಯನ್ನು ದಾಟಿದ ಸೇವುಣನ ಸೈನ್ಯವನ್ನು ವೀರಧವಳನ ಮಗನಾದ ವೀಸಲದೇವ ತಡೆದು ರಾಮನನ್ನು ಕೊಂದ. ಸಿಂಘಣನ ರಾಜ್ಯ ದಕ್ಷಿಣಾಪಥದ ಬಹುಭಾಗ ಗಳನ್ನು ಒಳಗೊಂಡಿತ್ತು. ಉತ್ತರದಲ್ಲಿ ನರ್ಮದಾ ತೀರದವರೆಗೂ ದಕ್ಷಿಣ ದಲ್ಲಿ ಕಾವೇರಿಯವರೆಗೂ ಇವನು ವಿಜಯಯಾತ್ರೆಯನ್ನು ಕೈಗೊಂಡಿದ್ದ. ಪೂರ್ವದಲ್ಲಿ ಜಾಂದ ಜಿಲ್ಲೆಯವರೆಗೆ ಇವನ ರಾಜ್ಯ ಹಬ್ಬಿತ್ತು. ಆಂಧ್ರದ ಪಶ್ಚಿಮ ಭಾಗ ಎರಡು ದಶಕಗಳ ಕಾಲ ಇವನ ಆಳ್ವಿಕೆಗೆ ಸೇರಿದ್ದಿತು. ಸಿಂಘಣ ಶೂರನು ಮಾತ್ರವಲ್ಲದೆ ಸಾಹಿತ್ಯಪ್ರಿಯನೂ ಆಗಿದ್ದ. ಸಂಗೀತಶಾಸ್ತ್ರಜ್ಞ ಶಾರ್ಙ್ಗದೇವ, ಕಮಲಭವ, ಖಗೋಳಶಾಸ್ತ್ರಜ್ಞ ಚಂಗದೇವ ಮತ್ತು ಅನಂತದೇವ ಇವನ ಆಶ್ರಯದಲ್ಲಿದ್ದರು. ಇವನಿಗೆ ಜೈತುಗಿ ಎಂಬ ಮಗನಿದ್ದ. ಇವನು ಸಿಂಘಣನಿಗಿಂತ ಮುಂಚೆಯೇ ಮರಣ ಹೊಂದಲು, ಇವನ ಮೊಮ್ಮಗನಾದ ಕೃಷ್ಣ 1247ರಲ್ಲಿ ದೊರೆಯಾದ.

ಅಧಿಕಾರ ವಹಿಸಿಕೊಂಡ ಕೂಡಲೇ ಕೃಷ್ಣ ತನ್ನ ಗಮನವನ್ನು ಗುಜರಾತಿನ ಕಡೆಗೆ ಹರಿಸಿದ. ಮಾಳ್ವ ರಾಜ್ಯಕ್ಕೆ ನುಗ್ಗಿ ರಾಜನಾದ ಜೈತುಗಿದೇವನನ್ನು ಇವನು ಸೋಲಿಸಿರಬೇಕೆಂದು ಹೇಳಬಹುದು. ಅನಂತರ ಗುಜರಾತಿಗೆ

ನಡೆದು ವೀರಧವಳನ ಮಗನಾದ ವೀಸಲದೇವನ ಸೈನ್ಯವನ್ನು ಸೋಲಿಸಿದ. ಇದಾದನಂತರ ತನ್ನ ಗಮನವನ್ನು ಹೊಯ್ಸಳರ ಕಡೆಗೆ ಹರಿಸಿದ. ಹೊಯ್ಸಳ ನಾರಸಿಂಹನು ಕೃಷ್ಣನನ್ನು ಎದುರಿಸುವಷ್ಟು ಸಮರ್ಥನಾಗಿರಲಿಲ್ಲ. ಇದರಿಂದ ಸೇವುಣ ಸೈನ್ಯ ಚಿತ್ರದುರ್ಗದ ಅನೇಕ ಭಾಗಗಳನ್ನು ತನ್ನ ವಶಮಾಡಿ ಕೊಂಡಿತು. ಕೃಷ್ಣನ ಸೇನಾಧಿಪತಿಗಳಾದ ಚಂಗದೇವ ಮತ್ತು ಕೇಶವದೇವ ಗೋವೆಯ ಕದಂಬ ರಾಜ ಷಷ್ಠರಾಜನನ್ನು ಸೋಲಿಸಿದರು. ಅವನು ಕೃಷ್ಣನ ಸಾಮಂತನಾದ. ಗುತ್ತವೊಳಲಿನ ಗುತ್ತರು ಕೃಷ್ಣನನ್ನು ಕಡೆಗಣಿಸಿದರು. ಮೂರನೆಯ ಗುತ್ತರಾಜನನ್ನು ಕೃಷ್ಣನ ಸೇನಾಧಿಪತಿಗಳು ಸೋಲಿಸಿದರು. ಅವನು 1259 ರಲ್ಲಿ ಸಾಮಂತನಾಗಿ ಆಳುತ್ತಿದ್ದುದು ಗೊತ್ತಾಗುತ್ತದೆ. ಸಿಂದವಂಶದ ಬೀರದೇವನೂ ಸೋಲಿಸಲ್ಪಟ್ಟ. ಅವನ ರಾಜ್ಯ ಸೇವುಣ ರಾಜ್ಯದಲ್ಲಿ ಲೀನವಾಗಿ ಹೋಯಿತು. ಇದೇ ರೀತಿ ನಾಗರಸ ಸವದತ್ತಿಯ ರಟ್ಟರನ್ನು ಸೋಲಿಸಿ ಲಕ್ಷ್ಮೀದೇವ ಸಾಮಂತನಾಗುವಂತೆ ಮಾಡಿದ. ಕೃಷ್ಣನೂ ಕಾಕತೀಯ ಗಣಪತಿಯೂ ಮಿತ್ರರಾಗೇ ಇದ್ದರು. ಕೃಷ್ಣನ ರಾಜ್ಯ ವಿಸ್ತಾರವಾಗಿಯೇ ಇದ್ದಿತು. ದಕ್ಷಿಣದಲ್ಲಿ ನೊಳಂಬವಾಡಿ ಪ್ರದೇಶ ಸೇರಿಸಲ್ಪಟ್ಟಿತು. ಪೂರ್ವದಲ್ಲಿ ಛತ್ತೀಸ್‌ಘಡ್ ಇವನ ಆಳ್ವಿಕೆಗೆ ಸೇರಿತ್ತು. ಸೂಕ್ತಿಮುಕ್ತಾವಳಿ ಗ್ರಂಥದ ಕರ್ತೃ ಜಲ್ಹಣ. ಕಲ್ಪತರು ಗ್ರಂಥಕರ್ತೃ ಅಮಲಾನಂದ ಮೊದಲಾದವರು ಕೃಷ್ಣನ ಆಸ್ಥಾನದಲ್ಲಿದ್ದರು. ಕೃಷ್ಣ ಮಹಾನುಭಾವ ಪಂಥದ ಗುರು ಚಕ್ರಧರನನ್ನು ಸಂದರ್ಶಿಸಿದ್ದ. ಇವನು 1261ರಲ್ಲಿ ಮರಣ ಹೊಂದಲು ಇವನ ಸಹೋದರನಾದ ಮಹಾದೇವ ರಾಜನಾದ.

ಕೃಷ್ಣನ ರಾಜ್ಯಭಾರ ಕಾಲದಲ್ಲಿ ಯುವರಾಜನಾಗಿದ್ದ ಮಹಾದೇವ ರಾಜನಾದ ಕೂಡಲೇ ಕೊಂಕಣದಲ್ಲಿ ಆಳುತ್ತಿದ್ದ ಶಿಲಾಹಾರ ರಾಜ ಸೋಮೇಶ್ವರನ ಮೇಲೆ ಯುದ್ಧಮಾಡಿ ಅವನನ್ನು ಸೋಲಿಸಿದ. ಅವನು ಸೋತು ಸಮುದ್ರದ ಮೂಲಕ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಮಹಾದೇವ ಅವನನ್ನು ಹಿಂಬಾಲಿಸಿ ನೌಕಾಯುದ್ಧದಲ್ಲಿ ಸೋಲಿಸಿದ. ಗುಜರಾತಿನ ವೀಸಲದೇವ ಮಹಾದೇವನ ಮೇಲೆ ಒಂದು ಸೈನ್ಯವನ್ನು ಕಳುಹಿಸಿದ. ಈ ಯುದ್ಧದಲ್ಲಿಯೂ ಮಹಾದೇವ ಜಯಶಾಲಿಯಾದ. ಮಹಾದೇವನ ಸಮಕಾಲೀನ ಕಾಕತೀಯ ರಾಣಿ ರುದ್ರಮದೇವಿಗೂ ಮಹಾದೇವನಿಗೂ ಯುದ್ಧಗಳಾದವು. ಈ ಯುದ್ಧಗಳಲ್ಲಿ ರುದ್ರಮದೇವಿ ಗೆದ್ದಳೆಂದು ತೆಲುಗು ಗ್ರಂಥಗಳು ತಿಳಿಸಿದರೆ, ಮಹಾದೇವನ ಶಾಸನಗಳು ಮಹಾದೇವನೇ ಜಯಶಾಲಿಯಾದನೆಂದು ತಿಳಿಸುತ್ತವೆ.

ಮಹಾದೇವ ಹೊಯ್ಸಳರ ಮೇಲೆ ದಂಡೆತ್ತಿಹೋಗುವ ಮುನ್ನ 1270ರಲ್ಲಿ ಕದಂಬ ಕಾಮದೇವನನ್ನು ಸೋಲಿಸಿದ. ಅನಂತರ ಹೊಯ್ಸಳರ ಮೇಲೆ ದಂಡೆತ್ತಿಹೋದ. ಹೊಯ್ಸಳ ಶಾಸನಗಳ ಪ್ರಕಾರ ಮಹಾದೇವ ಸೋತು ಓಡಿಹೋದ. ರಟ್ಟರು ಮತ್ತು ಸಿಂದರು ಮಹಾದೇವನ ಸಾಮಂತರಾಗಿದ್ದರು. 1270ರಲ್ಲಿ ಮಹಾದೇವ ಮರಣಹೊಂದಲು ಇವನ ಮಗನಾದ ಆಮಣ ದೊರೆಯಾದ. ಆದರೆ ಕೆಲವೇ ತಿಂಗಳುಗಳಲ್ಲಿ ಕೃಷ್ಣನ ಮಗನಾದ ರಾಮಚಂದ್ರ ಇವನನ್ನು ಕೊಂದು ತಾನೇ ದೊರೆಯಾದನೆಂದು ಮಹಾನುಭಾವ ಪಂಥದ ಗ್ರಂಥಗಳಿಂದ ತಿಳಿಯುತ್ತದೆ.

1271ರಲ್ಲಿ ದೊರೆಯಾದ ರಾಮಚಂದ್ರ ಸೇವುಣವಂಶದ ಕೊನೆಯ ಪ್ರಖ್ಯಾತ ದೊರೆ. ಇವನು ದೊರೆಯಾದ ಕೂಡಲೆ ಮಾಳವದೇಶಕ್ಕೆ ಹೋಗಿ ಪರಮಾರ ಅರ್ಜುನವರ್ಮನನ್ನು ಸೋಲಿಸಿದ. ಅನಂತರ ಗುಜರಾತಿಗೆ ಮುಂದುವರಿದು ವಾಘೇಲರಾಜ ಅರ್ಜುನನನ್ನು ಸೋಲಿಸಿದ. ಅಲ್ಲಿಂದ ಹಿಂದಿರುಗಿ ಹೊಯ್ಸಳರ ಕಡೆಗೆ ತನ್ನ ಗಮನವನ್ನು ಹರಿಸಿದ. ಹೊಯ್ಸಳರು ಸೇವುಣ ಸಾಮಂತ ಕದಂಬ ಕಾಮದೇವನ ಮೇಲೆ ಯುದ್ಧ ಮಾಡಿದರು. ಕೂಡಲೇ ರಾಮಚಂದ್ರ ತನ್ನ ಸೇನಾಧಿಪತಿ ಸಾಳುವ ತಿಕ್ಕಮನನ್ನು ಯುದ್ಧಕ್ಕೆ ಕಳುಹಿಸಿದ. ತಿಕ್ಕಮ ಹೊಯ್ಸಳರನ್ನು ಸೋಲಿಸಿ ಕದಂಬರಿಗೆ ಒದಗಿದ್ದ ವಿಪತ್ತನ್ನು ತಪ್ಪಿಸಿದ. ಅನಂತರ ತಿಕ್ಕಮ ಸಾಂತರ ಬೊಮ್ಮರಸನನ್ನು ಸೋಲಿಸಿದ. ಅಲ್ಲಿಂದ ಮುಂದೆ ಗುತ್ತವೊಳಲಿಗೆ ಹೋಗಿ ಮೂರನೆಯ ಗುತ್ತನೊಡನೆ ಬೆಳವಾಡಿ ಕೋಟೆಗೆ ಮುತ್ತಿಗೆ ಹಾಕಿದ. ಈ ಯುದ್ಧದಲ್ಲಿ ಹೊಯ್ಸಳ ಸೇನಾಧಿಪತಿಗಳಾದ ನಂಜಯ್ಯ ಮತ್ತು ಗುಲ್ಲಯ್ಯ ತಿಕ್ಕಮನನ್ನು ಗಾಯಗೊಳಿಸಿದರು. ಅಲ್ಲಿಂದ ಮುಂದೆ ಹೋಗಲಾರದೆ ತಿಕ್ಕಮನ ಸೈನ್ಯ ಹಿಂದಿರುಗಿತು. 1296ರಲ್ಲಿ ಕಾಕತೀಯ ರಾಣಿ ರುದ್ರಮದೇವಿ ರಾಮಚಂದ್ರನನ್ನು ಸೋಲಿಸಿದಳು. ಹೀಗೆ ರಾಮಚಂದ್ರ ಯುದ್ಧ ನಿರತನಾಗಿದ್ದಾಗ ದೇವಗಿರಿಗೆ ಒಂದು ದೊಡ್ಡ ವಿಪತ್ತು ಬಂದೊದಗಿತ್ತು. ರಾಮಚಂದ್ರನ ಐಶ್ವರ್ಯದ ವಿಷಯವನ್ನು ಕೇಳಿದ್ದ ಅಲಾಉದ್ದೀನನು 1296 ಫೆಬ್ರವರಿ 26ರಂದು ದೇವಗಿರಿಗೆ ಮುತ್ತಿಗೆ ಹಾಕಿದ. ರಾಮಚಂದ್ರನ ಸಾಮಂತನಾದ ಕರ್ಣ ಅಲಾಉದ್ದೀನನನ್ನು ಎದುರಿಸಿ ಸೋತ. ರಾಮಚಂದ್ರ ಅಸಹಾಯಕತೆಯಿಂದ ಕೋಟೆಯೊಳಗೆ ಸೇರಿಕೊಂಡ. ಒಳಗಿದ್ದ ಆಹಾರ ಪದಾರ್ಥಗಳು ಮುಗಿಯುತ್ತ ಬಂದಿದ್ದವು. ಈ ಮಧ್ಯದಲ್ಲಿ ಅಲಾಉದ್ದೀನನು ಈಗಿನ ತನ್ನ ಸೈನ್ಯ ಕೇವಲ ಒಂದು ಭಾಗವೆಂದೂ ಎಪ್ಪತ್ತು ಸಾವಿರದ ಸೈನ್ಯ ಹಿಂದೆ ಬರುತ್ತಿದೆಯೆಂದೂ ಒಂದು ಸುಳ್ಳು ಸಮಾಚಾರವನ್ನು ಹಬ್ಬಿಸಿ ರಾಮಚಂದ್ರ ಈ ಸುದ್ದಿಯನ್ನು ನಂಬುವಂತೆ ಮಾಡಿದ. ಮೋಸಹೋದ ರಾಮಚಂದ್ರ ಮುಸ್ಲಿಂ ಸೈನ್ಯದೊಡನೆ ಹೋರಾಡುವುದು ಉಪಯೋಗವಿಲ್ಲವೆಂದು ಅಲಾಉದ್ದೀನನಿಗೆ ಶರಣಾಗತನಾದ. ಅನಂತರ ಏನಾಯಿತು ಎಂಬುದು ಸ್ಪಷ್ಟವಾಗಿ ತಿಳಿಯದು. ಮುಸ್ಲಿಂ ಇತಿಹಾಸಕಾರರಲ್ಲಿ ಒಮ್ಮತವಿಲ್ಲ. ಇಸಾಮಿಯ ಪ್ರಕಾರ ರಾಮಚಂದ್ರನ ಮಗ ಸಿಂಘಣ ತನ್ನ ತಂದೆಯ ಮಾತನ್ನು ನಿರಾಕರಿಸಿ ಅಲಾಉದ್ದೀನನಿಗೆ 'ನಿನಗೆ ನಿನ್ನ ಪ್ರಾಣದ ಮೇಲೆ ಆಸೆ ಇದ್ದರೆ ನೀನು ಲೂಟಿ ಮಾಡಿರುವುದೆಲ್ಲವನ್ನೂ ಹಿಂದಿರುಗಿಸಿ, ತಪ್ಪಿಸಿಕೊಂಡು ಓಡಿಹೋಗುವುದು ನಿನ್ನ ಅದೃಷ್ಟವೆಂದು ಭಾವಿಸು' ಎಂದು ತಿಳಿಸಿದ. ಇದರಿಂದ ಕೋಪಗೊಂಡ ಅಲಾಉದ್ದೀನ ಸಿಂಘಣನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿ 600 ಮಣ ಮುತ್ತು, 1 ಮಣ ವಜ್ರ, 1 ಸಾವಿರ ಮಣ ಬೆಳ್ಳಿ, 4 ಸಾವಿರ ರೇಷ್ಮೆ ಬಟ್ಟೆ ಮತ್ತು ಎಲಿಚ್‌ಪುರದ ವಾರ್ಷಿಕ ಆದಾಯ ಇವುಗಳನ್ನು ತೆಗೆದುಕೊಂಡು ಹಿಂದಿರುಗಿದ. ಈ ಎರಡರಲ್ಲಿ ಯಾವುದು ಸರಿ ಎಂದು ಖಚಿತವಾಗಿ ತಿಳಿದಿಲ್ಲ.

ರಾಮಚಂದ್ರ ಇಷ್ಟಾದರೂ ಬುದ್ಧಿಯನ್ನು ಕಲಿಯಲಿಲ್ಲ. ಮುಸ್ಲಿಮರನ್ನು ಸೋಲಿಸಲು ತನ್ನ ಸೈನ್ಯವನ್ನು ಬಲಪಡಿಸಿಕೊಳ್ಳುವ ಬದಲು 1303ರಲ್ಲಿ ಹೊಯ್ಸಳರ ಮೇಲೆ ದ್ವೇಷ ತೀರಿಸಿಕೊಳ್ಳಲು ನಿಂತ. ಹೊಳಲ್ಕೆರೆಯಲ್ಲಿ ಆ ವರ್ಷ ಹೊಯ್ಸಳರಿಗೂ ಸೇವುಣರಿಗೂ ಯುದ್ಧವಾಯಿತು. ರಾಮಚಂದ್ರನಿಗೆ ಜಯ ಲಭಿಸಲಿಲ್ಲ.

ಸ್ವಲ್ಪಕಾಲದವರೆಗೆ ರಾಮಚಂದ್ರ ಅಲಾಉದ್ದೀನನಿಗೆ ವಿಧೇಯನಾಗಿ ನಡೆದುಕೊಂಡ, 1306ರ ವೇಳೆಗೆ ತಾನು ಕಳುಹಿಸಬೇಕಾದ ಕಾಣಿಕೆಯನ್ನು ನಿಲ್ಲಿಸಿದ. ಇದರಿಂದ ಕುಪಿತನಾದ ಅಲಾಉದ್ದೀನ ಮಲ್ಲಿಕ್‌ಕಾಫೂರನನ್ನು ದೇವಗಿರಿಗೆ ಕಳುಹಿಸಿದ. ಅಲ್ಫ್‌ಖಾನನ ಸಹಾಯದಿಂದ ಮಲ್ಲಿಕ್ ಕಾಫೂರನು ಹಿಂದೂ ಸೈನ್ಯವನ್ನು 1307 ಮಾರ್ಚ್ 24ರಂದು ಸೋಲಿಸಿದ. ರಾಮಚಂದ್ರ ಶರಣಾಗತನಾದ. ಇವನ ಮಕ್ಕಳು ಓಡಿಹೋದರು. ರಾಮಚಂದ್ರ ಕೈದಿಯಂತೆ ದೆಹಲಿಗೆ ಒಯ್ಯಲ್ಪಟ್ಟ. ಅಲಾಉದ್ದೀನನು ಇವನನ್ನು ಬಹು ಮರ್ಯಾದೆಯಿಂದ ಬರಮಾಡಿಕೊಂಡು ಬಹುಮಾನಗಳೊಡನೆ ವಾಪಸ್ ಕಳುಹಿಸಿದ. 1309ರಲ್ಲಿ ಅಲಾಉದ್ದೀನನ ಸೈನ್ಯ ಓರಂಗಲ್ಲಿಗೆ ಹೋಗುವ ಮಾರ್ಗದಲ್ಲಿ ದೇವಗಿರಿಯಲ್ಲಿ ತಂಗಿತು. ರಾಮಚಂದ್ರ ಅದಕ್ಕೆ ತಕ್ಕ ಅನುಕೂಲತೆಗಳನ್ನು ಮಾಡಿಕೊಟ್ಟು ಓರಂಗಲ್ಲಿಗೆ ದಾರಿ ತೋರಿಸಲು ದಳವಾಯಿ ಪರಶುರಾಮ

ನನ್ನು ಕಳುಹಿಸಿದ. ಈ ರೀತಿ ಇವನು ಸುಲ್ತಾನನಿಗೆ ವಿಧೇಯನಾಗಿ ನಡೆದುಕೊಂಡ.

ರಾಮಚಂದ್ರ ಮರಾಠಿ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟ. ಮಹಾನಳಭಾವ ಪಂಥದ ಅನೇಕ ಗ್ರಂಥಗಳು ಇವನ ಕಾಲದಲ್ಲಿ ರಚಿತವಾದವು. ಇವನು 1312ರಲ್ಲಿ ಮರಣಹೊಂದಲು ಇವನ ಮಗ ಮೂರನೆಯ ಸಿಂಘಣ ರಾಜನಾದ. ಇವನನ್ನು ಹಿಂದಿನ ಇತಿಹಾಸಕಾರರು ಸಂಗಮ, ಶಂಕರ ಎಂಬ ಹೆಸರಿನಿಂದ ಕರೆದಿದ್ದರು. ಸಿಂಘಣನಿಗೂ ದೇವಲದೇವಿಗೂ ಇದ್ದ ಪ್ರೇಮದ ವಿಷಯದಲ್ಲಿ ಅಮೀರ್ ಖುಸ್ರೋ ಒಂದು ಕಾವ್ಯವನ್ನೇ ರಚಿಸಿದ್ದಾನೆ. ಇದು ಎಷ್ಟರಮಟ್ಟಿಗೆ ಚರಿತ್ರಾರ್ಹವೆಂದು ಹೇಳುವುದು ಕಷ್ಟ. ತಾನು ಪ್ರೇಮಿಸಿದ್ದ ದೇವಲದೇವಿಯನ್ನು ಅಲಾಉದ್ದೀನನು ಅಪಹರಿಸಿದ್ದುದು ಸಿಂಘಣ ಅಲಾಉದ್ದೀನನನ್ನು ದ್ವೇಷಿಸಲು ಕಾರಣವಿರಬಹುದು. ಅಲಾಉದ್ದೀನನಿಗೆ ಕೊಡಬೇಕಾದ ಕಪ್ಪಕಾಣಿಕೆಗಳನ್ನು ನಿಲ್ಲಿಸಿದ್ದರಿಂದ ಕೋಪಗೊಂಡ ಮಲ್ಲಿಕ್ ಕಾಪೂರನು ಮತ್ತೆ (ಮೂರನೆಯ ಸಾರಿ) ದೇವಗಿರಿಗೆ ಬಂದು ಸಿಂಘಣನನ್ನು ಸೋಲಿಸಿ ಅವನನ್ನು ಅಮಾನುಷ ರೀತಿಯಲ್ಲಿ ಕೊಲ್ಲಿಸಿದ. ದೇವಗಿರಿ ಮಹಮ್ಮದೀಯರ ವಶವಾಯಿತು. 1316ರಲ್ಲಿ ಅಲಾಉದ್ದೀನನು ಮರಣಹೊಂದಲು, ಮಲ್ಲಿಕ್ ಕಾಪೂರನು ದೇವಗಿರಿಯಿಂದ ಮುಸ್ಲಿಂ ಗವರ್ನರ್ ಐನ್ ಉಲ್‌ಮುಲ್ಕನನ್ನು ಹಿಂದಕ್ಕೆ ಕರೆಯಿಸಿಕೊಂಡ. ದೇವಗಿರಿಯಲ್ಲಿ ಮುಸ್ಲಿಂ ಗವರ್ನರ್ ಇಲ್ಲದಿರುವುದನ್ನು ಗಮನಿಸಿದ ರಾಮಚಂದ್ರನ ಅಳಿಯನಾದ ಹರಪಾಲದೇವ ತನ್ನ ಮಂತ್ರಿ ರಾಘವನ ಸಹಾಯದಿಂದ ದೇವಗಿರಿಯನ್ನು ತನ್ನ ವಶಪಡಿಸಿಕೊಂಡ. ಖುಸ್ರುಖಾನನು ಕೂಡಲೇ ಹಿಂದಿರುಗಿ 1318 ರಲ್ಲಿ ಹರಪಾಲನನ್ನು ಸೋಲಿಸಿ ಅವನನ್ನು ಜೀವಸಹಿತ ಸುಡಿಸಿ ಅವನ ತಲೆ ಬುರುಡೆಯನ್ನು ದೇವಗಿರಿಯ ಕೋಟೆಯ ಮೇಲೆ ನೇತುಹಾಕಿಸಿದ ಎಂದು ಫೆರಿಸ್ತ ಹೇಳುತ್ತಾನೆ. ಅನಂತರ ಮಲ್ಲಿಕ್ ಯಾಖ್‌ಲಾಖಿ ದೇವಗಿರಿಯ ರಾಜ್ಯಪಾಲನಾದ. 1333–34ರ ಶಾಸನವೊಂದರಲ್ಲಿ ಸೇವುಣ ವಂಶದ ಮೇಲುಗಿದೇವನ ಪ್ರಸ್ತಾಪವಿದೆ. ಇವನು ಮುಸ್ಲಿಮರ ಅಧೀನದಲ್ಲಿ ಆಳುತ್ತಿದ್ದಿರಬಹುದೆಂದು ಊಹಿಸಲಾಗಿದೆ. ಅನಂತರ ಸೇವುಣರ ವಿಷಯ ತಿಳಿದುಬರುವುದಿಲ್ಲ. (ಎ.ವಿ.ಎನ್.)

**ಆಡಳಿತ ವ್ಯವಸ್ಥೆ:** ಕೆಲವು ಶತಮಾನಗಳ ಕಾಲ ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದ ಸೇವುಣರು ತಾವು ಪರಮಾಧಿಕಾರ ಪಡೆದ ಮೇಲೂ ಹಿಂದಿನ ಆಡಳಿತ ವ್ಯವಸ್ಥೆಯ ಮೂಲಸ್ವರೂಪವನ್ನೇ ಮುಂದುವರಿಸಿಕೊಂಡು ಬಂದರು. ಇವರ ಆಡಳಿತ ಕ್ರಮದಲ್ಲಿ ಇವರ ಸಮಕಾಲೀನಸ್ಥಿತಿಗನುಗುಣವಾಗಿ ರಾಜನು ರಾಜ್ಯದ ಮುಖ್ಯನೂ ನಿರಂಕುಶನೂ ಆಗಿದ್ದ. ಇವನು ವಿವಿಧ ಬಿರುದುಗಳನ್ನು ಧರಿಸುತ್ತಿದ್ದ. ರಾಜನಿಗೆ ರಾಜಗುರುಗಳು ಇರುತ್ತಿದ್ದರು. ಅವರ ಸಲಹೆಗೆ ಮಾನ್ಯತೆ ಇತ್ತು.

ರಾಜನು ಜ್ಯೇಷ್ಠಪುತ್ರನನ್ನು ಯುವರಾಜನನಾಗಿ ನೇಮಿಸುತ್ತಿದ್ದ. ಈತ ರಾಜನ ಮರಣಾನಂತರ ಉತ್ತರಾಧಿಕಾರಿಯಾಗುತ್ತಿದ್ದ. ಉತ್ತರಾಧಿಕಾರಿ ಅಸಮರ್ಥನಾಗಿದ್ದಾಗ ಅಥವಾ ರಾಜನಿಗೆ ಗಂಡು ಮಕ್ಕಳಿಲ್ಲದಾಗ ಎರಡನೆಯ ಮಗ ಅಥವಾ ತಮ್ಮಂದಿರು ಸಿಂಹಾಸನ ಏರಿರುವ ಪ್ರಕರಣಗಳೂ ಉಂಟು. ರಾಜ ನಿರಂಕುಶನಾಗಿದ್ದರೂ ಇವನ ಸಹಾಯಕ್ಕೆ ಮಂತ್ರಿಮಂಡಲ ವಿರುತ್ತಿತ್ತು. ಆಡಳಿತ ವಿಷಯಗಳಲ್ಲಿ ಮಂತ್ರಿಮಂಡಲದ ಸಲಹೆ ಕೇಳುವುದು ಪರಿಪಾಠವಾಗಿತ್ತು. ಮಹಾಮಾತ್ಯ, ಮಹಾಪ್ರಧಾನಿ, ಸಂಧಿವಿಗ್ರಹಿ, ಕೋಶಾಧ್ಯಕ್ಷ, ಶ್ರೀಕರಣಾಧಿಪ, ಮಹತ್ತಮ, ರಾಜಾಧ್ಯಕ್ಷ, ಅಪಾಯಿಕ ಮೊದಲಾದ ಮಂತ್ರಿಗಳ ಮತ್ತು ಉನ್ನತಾಧಿಕಾರಿಗಳ ಹುದ್ದೆಗಳ ಹೆಸರುಗಳು ಕಂಡುಬರುತ್ತವೆ. ಮಹಾಮಾತ್ಯ ಕಂದಾಯ ಸಚಿವನಾಗಿದ್ದನೆಂದು ಅಭಿಪ್ರಾಯವಿದೆ. ಆದರೆ ಇವನೇ ಮುಖ್ಯಮಂತ್ರಿಯಾಗಿದ್ದಿರಬೇಕು. ಪ್ರಾಂತ ಮತ್ತು ಜಿಲ್ಲೆಯ ಅಧಿಕಾರಿಗಳನ್ನು ಮಹಾಪ್ರಧಾನರೆಂದು ಕರೆಯಲಾಗುತ್ತಿತ್ತು. ಕೆಲವು ವಿದ್ವಾಂಸರು ಮಹಾಪ್ರಧಾನನನ್ನು ಪ್ರಧಾನಮಂತ್ರಿ ಎಂದು ಭಾವಿಸಿದ್ದಾರೆ. ಆದರೆ ಆಗಿನ ಶಾಸನಗಳಿಂದ ಅವರು ಅಧಿಕಾರಿಗಳಾಗಿ ವಿವಿಧ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದುದು ತಿಳಿದುಬರುವುದರಿಂದ ಈ ಅಂಶ ದೃಢಪಡುವುದಿಲ್ಲ. ಸರ್ವಾಧಿಕಾರಿ ಎಂಬ ಇನ್ನೊಂದು ವರಿಷ್ಠ ಹುದ್ದೆಯೂ ಇತ್ತು. ಈ ಅಧಿಕಾರಿಗಳನ್ನು ರಾಜನು ನೇಮಿಸುತ್ತಿದ್ದ. ಕೆಲವೊಮ್ಮೆ ಆನುವಂಶಿಕವಾಗಿಯೂ ಈ ಹುದ್ದೆಗಳು ದೊರೆಯುತ್ತಿದ್ದವು.

ಸೇವುಣರಿಗೆ ಅನೇಕ ಮನ್ನೆಯರು ಅಥವಾ ಸಾಮಂತರಿದ್ದರು. ವಾರ್ಷಿಕ ಕಪ್ಪಕಾಣಿಕೆಗಳನ್ನು ಕೊಡುವುದು, ಯುದ್ಧಕಾಲದಲ್ಲಿ ಸೈನ್ಯವನ್ನು ಒದಗಿಸುವುದು, ಚಕ್ರವರ್ತಿಗೆ ಸಂಬಂಧಿಸಿದಂತೆ ಅವರ ಮುಖ್ಯ ಕರ್ತವ್ಯಗಳಾಗಿದ್ದವು. ಅವರವರ ಪ್ರದೇಶಗಳಲ್ಲಿ ಶಾಂತಿ ಶಿಸ್ತು ವ್ಯವಸ್ಥೆ ಮಾಡಬೇಕಾಗಿತ್ತು. ಈ ಸಾಮಂತರಲ್ಲಿ ಶ್ರೇಷ್ಠರೆನಿಸಿದವರನ್ನು ಅಥವಾ ಬಲಿಷ್ಠರೆನಿಸಿದವರನ್ನು ಚಕ್ರವರ್ತಿಯು ಮಹಾಮಂಡಲೇಶ್ವರರೆಂದು ಮಾನ್ಯ ಮಾಡುತ್ತಿದ್ದ. ಸಾಮಂತರ ರಾಜಧಾನಿಯಲ್ಲಿ ಚಕ್ರವರ್ತಿಯ ಪ್ರತಿನಿಧಿಗಳಾಗಿ ಮಹಾಪ್ರಧಾನರಿರುತ್ತಿದ್ದರು.

ಸಾಮ್ರಾಜ್ಯವನ್ನು ವಿಷಯ ಅಥವಾ ಪ್ರಾಂತಗಳಾಗಿ ವಿಂಗಡಿಸಲಾಗಿತ್ತು. ದೇಶವೆಂಬ ಆಡಳಿತ ವಿಭಾಗವಿತ್ತೆಂಬ ಅಭಿಪ್ರಾಯವಿದೆ. ಆದರೆ ದೇಶದ ವ್ಯಾಪ್ತಿಯ ಬಗ್ಗೆ ನಿಖರವಾಗಿ ತಿಳಿದುಬರುವುದಿಲ್ಲ. ವಿಷಯವನ್ನು ನಾಡು ಮತ್ತು ಕಂಪಣಗಳಾಗಿ ವಿಭಜಿಸಲಾಗಿತ್ತು. ನಾಡುಗಳಲ್ಲಿ ಮಹಾನಾಡು ಮತ್ತು ನಾಡುಗಳೆಂಬ ವರ್ಗಗಳಿದ್ದುವು. ನಾಡಿಗೆ ನಾಡಗೌಡ, ನಾಡಪ್ರಭು, ನಾಡ ಹೆಗ್ಗಡೆ ಮೊದಲಾದ ಮುಖ್ಯಾಧಿಕಾರಿಗಳಿರುತ್ತಿದ್ದರು. ಸೇನಬೋವ ಎಂಬ ಲೆಕ್ಕಾಧಿಕಾರಿ ನಾಡಗೌಡನ ಸಹಾಯಕನಾಗಿದ್ದ. ನಾಡಿನಲ್ಲಿ ಪಟ್ಟಣಗಳೂ ಗ್ರಾಮಗಳೂ ಇದ್ದವು. ಪಟ್ಟಣಕ್ಕೆ ಪಟ್ಟಣಸ್ವಾಮಿ ಎಂಬುವನು ಮುಖ್ಯನಾಗಿರುತ್ತಿದ್ದ, ಗೌಡ, ಪ್ರಭು, ಹೆಗ್ಗಡೆ ಮೊದಲಾದವರು ಗ್ರಾಮಾಧಿಕಾರಿಗಳಾಗಿದ್ದರು. ಪಟ್ಟಣಸಭೆ ಮತ್ತು ಗ್ರಾಮಸಭೆಗಳು ಅಸ್ತಿತ್ವದಲ್ಲಿದ್ದವು. ಅಗ್ರಹಾರಗಳಲ್ಲಿ ಮಹಾಜನ ಸಭೆಗಳಿರುತ್ತಿದ್ದವು.

**ಆರ್ಥಿಕ–ಸಾಮಾಜಿಕ ಸ್ಥಿತಿ:** ಸೇವುಣರ ಸಾಮ್ರಾಜ್ಯದ ಆರ್ಥಿಕತೆಯ ಮುಖ್ಯ ಆಧಾರ ವ್ಯವಸಾಯ. ಜನತೆ ಬಹುಪಾಲು ವ್ಯವಸಾಯ ಮತ್ತು ಅದಕ್ಕೆ ಸಂಬಂಧಿಸಿದ ಉಪಕಸಬುಗಳನ್ನು ಜೀವನೋಪಾಯಕ್ಕಾಗಿ ಅವಲಂಬಿಸಿತ್ತು. ಬತ್ತ, ಗೋದಿ, ಧಾನ್ಯಗಳು, ಎಣ್ಣೆಬೀಜಗಳು ಮುಖ್ಯ ಬೆಳೆಗಳಾಗಿದ್ದವು. ತೆಂಗು ಅಡಕೆ, ವೀಳೆಯದೆಲೆ, ನಿಂಬೆ, ಮಾವು, ಸೇಬು, ದ್ರಾಕ್ಷಿ ಮೊದಲಾದ ತೋಟದ ಬೆಳೆಗಳಿದ್ದವು. ಹತ್ತಿ, ಮೆಣಸು, ಏಲಕ್ಕಿ, ಶುಂಠಿ ಮೊದಲಾದ ವಾಣಿಜ್ಯ ಬೆಳೆಗಳಿದ್ದವು.

ನೀರಾವರಿ ವ್ಯವಸ್ಥೆಯನ್ನು ವಿಸ್ತರಿಸಿ ಉತ್ಪನ್ನ ಹೆಚ್ಚಿಸಲು ಸರ್ಕಾರದಿಂದ ಪ್ರೋತ್ಸಾಹ ದೊರೆಯುತ್ತಿತ್ತು. ರಾಜರು, ಸಾಮಂತರು, ಅಧಿಕಾರಿಗಳು, ವಣಿಕರು, ಧನಿಕರು, ತಮ್ಮ ಹೆಸರುಗಳಲ್ಲಿ ಕೆರೆಗಳನ್ನು ಕಟ್ಟಿಸುತ್ತಿದ್ದರು. ಕಾಲುವೆಗಳನ್ನು ತೋಡಿಸುತ್ತಿದ್ದರು. ರೈತರ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಗೇಣಿಪದ್ಧತಿ ಇತ್ತು. ಶ್ರೀಮಂತ ಭೂಮಾಲೀಕರು, ಜಹಗೀರದಾರರು ರೈತರನ್ನು ಶೋಷಿಸುತ್ತಿದ್ದರು. ಯುದ್ಧಕಾಲದ ಕೊಳ್ಳೆಗೆ, ಅಧಿಕಾರಿಗಳ ಕಿರುಕುಳಕ್ಕೆ ಜನಸಾಮಾನ್ಯರೇ ಈಡಾಗುತ್ತಿದ್ದರು. ಅಗ್ರಹಾರಗಳಿಗೆ ಬ್ರಾಹ್ಮಣರಿಗೆ ಅಧ್ಯಯನ ಮತ್ತು ಧಾರ್ಮಿಕ ಉದ್ದೇಶಗಳಿಗಾಗಿ ಭೂಮಿಯನ್ನು ದತ್ತಿ ನೀಡಲಾಗುತ್ತಿತ್ತು. ವ್ಯವಸಾಯ ಜಮೀನಿನ ಮೇಲೆ ವಿಧಿಸಲಾಗುತ್ತಿದ್ದ ಕಂದಾಯ ರಾಜಾದಾಯದ ಬಹುದೊಡ್ಡ ಭಾಗವಾಗಿತ್ತು.

ಹತ್ತಿ ಬಟ್ಟೆ ನೇಯುವುದು, ಚರ್ಮ ಹದ ಮಾಡುವುದು, ಚಾಪೆ ನೇಯುವುದು, ಬುಟ್ಟಿ ಹೆಣೆಯುವುದು, ವ್ಯವಸಾಯ ಉಪಕರಣಗಳನ್ನು ತಯಾರಿಸುವುದು ಮೊದಲಾದವಕ್ಕೆ ಸಂಬಂಧಿಸಿದ ಉದ್ಯಮಗಳಿದ್ದವು. ಗಾಣದಿಂದ ಎಣ್ಣೆ ತೆಗೆಯುವುದು, ಬಟ್ಟೆ ಹೊಲಿಯುವುದು ಮೊದಲಾದ

ಕಸಬುಗಳಿದ್ದವು. ಗಣಿಕಾರಿಕೆ, ಲೋಹದ ಪಾತ್ರೆಗಳ ತಯಾರಿಕೆ ನಡೆಯುತ್ತಿತ್ತು. ರತ್ನಗಳು, ಹವಳ, ವಜ್ರ, ವೈಡೂರ್ಯಗಳಿಗೆ ದಖ್ಖನ್ ಪ್ರಸಿದ್ಧವಾಗಿತ್ತು. ಕಲಾವಸ್ತುಗಳು ಮತ್ತು ಆಭರಣಗಳ ತಯಾರಿಕೆ ಕುಶಲಕರ್ಮಿಗಳ ಮಾಧ್ಯಮವಾಗಿದ್ದವು. ದೇವಾಲಯಗಳನ್ನು ಕಟ್ಟಲು ಶಿಲ್ಪಿಗಳ ಪಡೆಯೇ ಇತ್ತು.

ವ್ಯಾಪಾರ ಸಂಘಗಳು ಸುಸ್ಥಿತಿಯಲ್ಲಿದ್ದವು. ಅವು ದೇಶವಿದೇಶಗಳಲ್ಲಿ ವ್ಯಾಪಾರ ನಡೆಸುತ್ತಿದ್ದವು. ಅಂತಹ ಸಂಘಗಳಲ್ಲಿ ಐಯ್ಯಾವೊಳೆ ಐನೂರ್ವರು ಎಂಬುದು ಪ್ರಸಿದ್ಧವಾಗಿತ್ತು. ಇವರು ಮತ್ತು ದಕ್ಷಿಣ ಭಾರತದಲ್ಲಿ ಪ್ರಸಿದ್ಧರಾಗಿದ್ದ ನಾನಾದೇಶಿಗಳು, ನೇಪಾಳ, ಕಾಂಬೋಜ, ಮಲಯ, ಸಿಂಹಳ ಮೊದಲಾದ ದೇಶಗಳಿಗೆ ಹೋಗಿ ವ್ಯಾಪಾರ ನಡೆಸುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಇವರನ್ನು ವೀರ ಬಣಜಿಗರೆಂದೂ ಕರೆಯಲಾಗುತಿತ್ತಿತ್ತು. ದ್ವಾರಾವತಿ, ಬಳ್ಳಿಗಾಮೆ, ಐಹೊಳೆ, ಕೊಲ್ಹಾಪುರ, ದೇವಗಿರಿ, ವಾರಂಗಲ್ಲು, ಕಾಂಚಿಪುರ, ಮಧುರೆ ಮೊದಲಾದ ಸ್ಥಳಗಳು ಇವರ ಚಟುವಟಿಕೆಯ ಕೇಂದ್ರಗಳಾಗಿದ್ದವು.

ಇವರ ವ್ಯಾಪಾರ ವಸ್ತುಗಳಲ್ಲಿ ರತ್ನ, ವಜ್ರ, ವೈಡೂರ್ಯಗಳ ಜೊತೆಗೆ ಆನೆಗಳು, ಕುದುರೆಗಳು, ಸಂಬಾರ ಪದಾರ್ಥಗಳು, ಚಂದನ, ಕರ್ಪೂರ, ದಂತ, ಸುಗಂಧ ವಸ್ತುಗಳು ಮೊದಲಾದವು ಸೇರಿದ್ದವು. ಅರೇಬಿಯಾ ಮತ್ತು ಚೀನ, ದಖ್ಖನ್ನಿನೊಂದಿಗೆ ನಿಕಟ ವ್ಯಾಪಾರ ಸಂಬಂಧವಿಟ್ಟುಕೊಂಡಿದ್ದುದು ಪ್ರವಾಸಿಗರ ಕಥನಗಳಿಂದ ತಿಳಿದುಬರುತ್ತದೆ. ದಖ್ಖನ್‍ನ ಮಸ್ಲಿನ್ ಬಟ್ಟೆ, ದಂತ, ವಜ್ರಗಳು, ಸುಗಂಧ ವಸ್ತುಗಳು, ಸಂಬಾರ ವಸ್ತುಗಳನ್ನು ಕೊಳ್ಳಲು ವಿದೇಶಗಳಿಂದ ವ್ಯಾಪಾರಿಗಳ ಸಮೂಹವೇ ಬರುತ್ತಿತ್ತು.

ಸೇವುಣರ ಕಾಲದಲ್ಲಿ ರಾಜಭಂಡಾರದಲ್ಲಿ, ಶ್ರೀಮಂತರಲ್ಲಿ ಅಪಾರ ಐಶ್ವರ್ಯವಿತ್ತು. ಅಲ್ಲಾಉದ್ದೀನನು ಸೇವುಣರನ್ನು ಸೋಲಿಸಿದಾಗ ಅವನಿಗೆ ಒಪ್ಪಿಸಿದ ಬಂಗಾರ, ವಜ್ರವೈಡೂರ್ಯಗಳ ರಾಶಿಯೇ ಇದಕ್ಕೆ ಸಾಕ್ಷಿ. ಆಹಾರ ಮತ್ತು ಅಗತ್ಯ ವಸ್ತುಗಳಲ್ಲಿ ದೇಶ ಸ್ವಾವಲಂಬಿಯಾಗಿದ್ದು ಸಾಮಾನ್ಯರೂ ಸಮಾಧಾನದಿಂದ ಬದುಕುತ್ತಿದ್ದರು.

**ವಾಸ್ತು-ಶಿಲ್ಪ:** ಸೇವುಣರ ವಾಸ್ತುಶಿಲ್ಪ ಕೆಲವೊಂದು ವ್ಯತ್ಯಾಸಗಳೊಂದಿಗೆ ದಖ್ಖನ್ನಿನ ಚಾಳುಕ್ಯ ಶೈಲಿಯ ಮುಂದುವರಿಕೆಯಾಗಿದೆ. ಈ ಕಾಲದಲ್ಲಿ ಹೊಯ್ಸಳ ವಾಸ್ತುಶಿಲ್ಪ ಗಮನಾರ್ಹ ಬದಲಾವಣೆ ತೋರಿಸಿದರೆ, ಸೇವುಣ ವಾಸ್ತುಶಿಲ್ಪ ಹೆಚ್ಚಿನ ವೈಶಿಷ್ಟ್ಯಗಳನ್ನು ಪ್ರದರ್ಶಿಸಲಿಲ್ಲ. ಅಂಬರನಾಥ ಬಲಸಾನೆ, ಪೆಡಗುಂದ, ಸಾತಗಾಂವ, ಲೊಣರ್, ಪಾಟಣ, ವಾಘುಲಿ, ತಹಕಾರಿ, ಅಕೋಲಾ, ಕೊಕಮಠಾನ್ ಮೊದಲಾದೆಡೆಗಳಲ್ಲಿ ಸೇವುಣರ ವಾಸ್ತುಶಿಲ್ಪದ ಪ್ರಾತಿನಿಧಿಕವೆನ್ನಬಹುದಾದ ದೇವಾಲಯಗಳಿವೆ. ಶಿವ, ವಿಷ್ಣು, ಗಣಪತಿ, ಜಗದಾಂಬಿಕೆ, ಭವಾನಿ ಮೊದಲಾದ ದೇವತೆಗಳ ಹೆಸರಿನಲ್ಲಿ ಈ ದೇವಾಲಯಗಳಿವೆ.

ಸೇವುಣರ ದೇವಾಲಯಗಳು ಗಾತ್ರದಲ್ಲಿ ಚಿಕ್ಕವು. ಅವುಗಳಲ್ಲಿ ಅತಿದೊಡ್ಡದೆಂದರೆ ನಾಸಿಕ್ ಜಿಲ್ಲೆಯ ಸಿನ್ನಾರ್‌ನಲ್ಲಿರುವ ಗೊಂಡೇಶ್ವರ ದೇವಾಲಯ. ಈ ದೇವಾಲಯಗಳಲ್ಲಿ ಬಳಸಿದ ಕೂಡುಕಂಬಗಳು ಏಕಶಿಲೆಯಾಗಿದ್ದು, ಮೊಟಕಾಗಿದ್ದುದರಿಂದ ಮತ್ತು ಅದನ್ನಾಧರಿಸಿ ಇಡೀ ದೇವಾಲಯದ ರಚನೆ ರೂಪಿಸಿದ್ದರಿಂದ ಅವು ದೊಡ್ಡದಾಗಿ ರೂಪಗೊಳ್ಳಲು ಅವಕಾಶವಾಗಲಿಲ್ಲ. ದೇವಾಲಯಗಳು ಸಮಕೋನಾಕಾರದಲ್ಲಿ ಅಥವಾ ನಕ್ಷತ್ರಾಕಾರದಲ್ಲಿವೆ. ಈ ಆಕಾರಕ್ಕೆ ಉತ್ತರದ ಸೋಲಂಕಿ ದೇವಾಲಯಗಳ ಮಾದರಿಯ ಪ್ರಭಾವ ಕಾರಣವೆಂದು ಭಾವಿಸಲಾಗಿದೆ. ಸೇವುಣ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಮುಂಗೋಣೆ ದೊಡ್ಡ ಮಂಟಪ ಮತ್ತು ದ್ವಾರಮಂಟಪಗಳು ಕಂಡುಬರುತ್ತವೆ. ಶಿವಾಲಯಗಳ ಮುಂಭಾಗದಲ್ಲಿ ನಂದಿಮಂಟಪಗಳಿರುತ್ತವೆ. ಕೆಲವು ಪಂಚಕೂಟ ದೇವಾಲಯಗಳಿವೆ.

ಈ ದೇವಾಲಯ ರಚನೆಗೆ ಜ್ವಾಲಾಮುಖಿ ಶಿಲೆಗಳನ್ನು ಬಳಸುತ್ತಿದ್ದರು. ಇದರಿಂದ ಇವು ಚಾಳುಕ್ಯರ ದೇವಾಲಯಗಳ ನಯಗಾರಿಕೆ ಕಳೆದುಕೊಂಡುವು. ಕೆಲವೆಡೆ ಬಿಟ್ಟರೆ ಉಳಿದಂತೆ ದೇವಾಲಯಗಳ ಕಂಬಗಳಲ್ಲಿ ಕಲಾಕುಶಲತೆ ವಿರಳ, ಸಭಾಮಂಟಪದ ಚಾವಣಿ ಕಲಾತ್ಮಕವಾಗಿದ್ದರೆ ಗರ್ಭಗುಡಿಯ ಚಾವಣಿ ಸರಳವಾಗಿರುತ್ತದೆ. ಚಾವಣಿಗಳನ್ನು ಕೆಲವೆಡೆ ಮೂಲೆಚಪ್ಪಡಿಗಳನ್ನು ಬಳಸಿ ಗೋಪುರದಂತೆ ನಿರ್ಮಿಸಿ ಮೇಲೆ ಕಿರಿದಾದ ಬಾಯಿಬಿಟ್ಟು ಅದನ್ನು ಇನ್ನೊಂದು ಚಪ್ಪಡಿಯಿಂದ ಮುಚ್ಚಲಾಗಿದೆ. ಇಂತಹ ಮೇಲು ಚಪ್ಪಡಿಗಳಲ್ಲಿ ಕಮಲದ ಕೆತ್ತನೆಗಳಿರುತ್ತವೆ.

ಈ ಕಾಲದ ದೇವಾಲಯಗಳ ವೈಶಿಷ್ಟ್ಯವೆಂದರೆ ಅವುಗಳ ಶಿಖರದ ವಿನ್ಯಾಸ. ಇದು ಈ ದೇವಾಲಯಗಳನ್ನು ಉತ್ತರದ ಸೋಲಂಕಿ ಮತ್ತು ದಕ್ಷಿಣ ಚಾಳುಕ್ಯ ಶೈಲಿಯಿಂದ ಬೇರ್ಪಡಿಸಿದೆ. ಈ ಶಿಖರಗೋಪುರ ನಾಲ್ಕು ಮೂಲೆಯಾಕಾರದಲ್ಲಿದ್ದು ನೇರವಾಗಿ ಮೇಲೇರುತ್ತ ಅಟ್ಟಗಳ ನಡುವೆ ಚಿತ್ರಿತ ಅಲಂಕಾರ ಕೆಲಸ ಮಾಡಲಾಗಿದೆ. ತುದಿಯಲ್ಲಿ ಚಪ್ಪಡಿಯಿಂದ ಮುಚ್ಚಲಾಗಿರುತ್ತದೆ. ಕೆಲವು ಗೋಪುರಗಳನ್ನು ಇಟ್ಟಿಗೆಗಳಿಂದ ಕಟ್ಟಲಾಗಿದೆ.

ಸೇವುಣರ ಕಾಲದ ದೇವಾಲಯಗಳಲ್ಲಿ ಬಹುತೇಕ ದೇವಾಲಯಗಳು ಒಂದಲ್ಲ ಒಂದು ರೀತಿಯಲ್ಲಿ ಜೀರ್ಣಗೊಂಡಿವೆ. ಹೀಗೆ ಭಗ್ನಗೊಳ್ಳಲು ಅವುಗಳ ಅಡಿಪಾಯ ಆಳವಾಗಿರದಿದ್ದುದು ಮತ್ತು ಸುಭದ್ರವಾಗಿರದಿದ್ದು ಹಾಗೂ ಗೋಪುರಗಳನ್ನು ಇಟ್ಟಿಗೆಗಳಿಂದ ಕಟ್ಟುತ್ತಿದ್ದುದು ಕಾರಣವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸೇವುಣ ದೇವಾಲಯಗಳನ್ನು ವಾಸ್ತುತಜ್ಞರು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಪ್ರಾರಂಭದವು ಮೊದಲ ಗುಂಪಿಗೂ ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನದಲ್ಲಿ ಕಟ್ಟಲಾದ ದೇವಾಲಯಗಳು ಎರಡನೆಯ ಗುಂಪಿಗೂ ಸೇರುತ್ತವೆ. ಹೊಯ್ಸಳರ ಜಕಣಾಚಾರಿಯಂತೆಯೇ ಮಹಾರಾಷ್ಟ್ರದಲ್ಲಿ ಹೇಮಾದ್ ಪಂತ್ ಅಥವಾ ಹೇಮಾದ್ರಿ ಪಂತನೆಂಬುವನು ಇಲ್ಲಿನ ಬಹುತೇಕ ದೇವಾಲಯಗಳನ್ನು ನಿರ್ಮಿಸಿದನೆಂದು ಪ್ರತೀತಿ. ಆದರೆ ಸೇವುಣರ ಕೊನೆಯ ಕಾಲದ ದೇವಾಲಯಗಳ ಶೈಲಿಯಲ್ಲಿ ಸ್ವಲ್ಪ ಭಿನ್ನತೆಯಿದ್ದು ಅವು ಹೇಮಾದ್ರಿ ರೂಪಿಸಿದ ಶೈಲಿಗೆ ಸೇರಿರಬಹುದೆಂದೂ ಆದ್ದರಿಂದ ಈ ಶೈಲಿಗೆ ಸೇರಿದ ದೇವಾಲಯಗಳನ್ನು ಹೇಮಾದ್ರಿಪಂತ್ ನಿರ್ಮಿಸಿದನೆಂಬ ಪ್ರತೀತಿ ಬೆಳೆಯಿತೆಂದೂ ಅಭಿಪ್ರಾಯವಿದೆ. ಈ ಶೈಲಿಯಲ್ಲಿ ಮಂಟಪದ ಮಧ್ಯೆ ವೇದಿಕೆ ಇದ್ದು ಗುಡಿಯ ಮೂರು ಕಡೆ ಗೂಡುಗಳಿರುವುದು ಕಂಡುಬರುತ್ತದೆ. ನಾಸಿಕ್ ಜಿಲ್ಲೆಯ ಚಾಂದರ್ ಅಥವಾ ಚಂದ್ರಾದಿತ್ಯಪುರ ಮತ್ತು ತ್ರಿಂಗಲ್ವಾಡಿಗಳಲ್ಲಿರುವ ಜೈನ ಗುಹಾ ದೇವಾಲಯಗಳೂ ಈ ಕಾಲದ ವಾಸ್ತು ಮತ್ತು ಕಲೆಯ ನಿದರ್ಶನಗಳಾಗಿವೆ. ಈ ಕಾಲದಲ್ಲಿ ಧರ್ಮ ಶಾಲೆಗಳು, ಮಠಗಳು, ದುರ್ಗಗಳು ನಿರ್ಮಿತವಾದವು. ದೇವಗಿರಿದುರ್ಗ ಸೇವುಣ ವಾಸ್ತುಶಿಲ್ಪದ ಮಹತ್ಸಾಧನೆ.

(ಡಿ.ಎಸ್.ಜೆ.)

ನಾಣ್ಯಗಳು: ದೊರಕಿರುವ ಸೇವುಣರ ನಾಣ್ಯಗಳು ಕಡಿಮೆ. ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸುವ ವಿಷಯ ಶಾಸನಗಳಲ್ಲಿ ಕಾಣಸಿಗುತ್ತದೆ. ಟಂಕೆ ಎಂಬ ತೆರಿಗೆ ಈ ಕಾಲದ ಶಾಸನವೊಂದರಲ್ಲಿ ಕಾಣಬರುತ್ತದೆ. ನಾಣ್ಯಗಳನ್ನು ಅಚ್ಚು ಹಾಕಿಸುವ ಹಕ್ಕನ್ನು ಪಡೆದಿದ್ದವರು ಕೊಡಬೇಕಾಗಿದ್ದ ತೆರಿಗೆ ಇದೆಂದು ವಿದ್ವಾಂಸರ ಮತ. ಅದೇ ರೀತಿಯಲ್ಲಿ ನಾಣ್ಯಗಳ ಅಚ್ಚನ್ನು ತಯಾರು ಮಾಡುವವರು, ಅದನ್ನು ಹೊಂದಿರುವವರು ಮುದ್ರೆ ಎಂಬ ತೆರಿಗೆಯನ್ನು ಕೊಡಬೇಕಾಗಿತ್ತು. ಸೇವುಣರ ಶಾಸನಗಳಲ್ಲಿ ನಿಷ್ಕ, ದ್ರಮ್ಮ, ಗದ್ಯಾಣ, ಸುವರ್ಣಪಣ, ಚವುಲ, ಹಾಗಕಾಕಿನಿ, ಬೇಳೆ, ವೀಸ ಮುಂತಾದ ನಾಣ್ಯಗಳ ಹೆಸರುಗಳು ಕಾಣಸಿಗುತ್ತವೆ. ಈ ಕಾಲದಲ್ಲಿ

ಬಹುವಾಗಿ ಬಳಕೆಯಲ್ಲಿದ್ದ ನಾಣ್ಯ ಗದ್ಯಾಣ, ರಾಯಗದ್ಯಾಣ, ಅಂಬಿಲಿಗ ದ್ಯಾಣ, ಪ್ರಿಯಗ್ರಾಹಿಗಜಮಲ್ಲಗದ್ಯಾಣ ಎಂಬ ಪ್ರಭೇದಗಳು ಕಾಣಬಂದರೂ ಅವುಗಳ ಖಚಿತ ರೂಪ ತಿಳಿದಿಲ್ಲ. ಲೊಕ್ಕಿ ಗದ್ಯಾಣ. ಅಂದರೆ ಲೊಕ್ಕಿಗುಂಡಿ ಯಲ್ಲಿ ಟಂಕಿಸಲಾದ ಗದ್ಯಾಣಗಳು ಈ ಕಾಲದಲ್ಲಿಯೂ ಬಳಕೆಯಲ್ಲಿದ್ದವು.

ಇದುವರೆಗೂ ದೊರಕಿರುವ ಸೇವುಣ ನಾಣ್ಯಗಳು ಪದ್ಮಟಂಕ ಎಂಬ ಪ್ರಭೇದಕ್ಕೆ ಸೇರಿದವು. ತೆಳುವಾದ ಚಿನ್ನದ ತಗಡಿನ ಮೇಲೆ ಮಧ್ಯದಲ್ಲಿ ಪದ್ಮದ ಚಿಹ್ನೆಯ ತಲೆ ಇರುವ ಅಚ್ಚನ್ನು ಬಡಿದು ಮಾಡಿದವು. ಈ ಬಡಿಯುವಿಕೆಯಿಂದ ನಾಣ್ಯ ಸಣ್ಣ ಬಟ್ಟಲಿನ ಆಕಾರವನ್ನು ಪಡೆದಿರುತ್ತದೆ. ಸುತ್ತಲೂ ಕೆಲವು ಚಿಹ್ನೆಗಳು ಮತ್ತು ರಾಜನ ಹೆಸರೂ ಇರುತ್ತವೆ. ಮಧ್ಯದಲ್ಲಿ ಪದ್ಮವಾದರೆ, ಅದರ ಎದುರುಬದರಿನಲ್ಲಿ ಶ್ರೀ ಎಂಬ ಕನ್ನಡ ಅಕ್ಷರ, ಮೂರನೆಯದು ಶಂಖ. ನಾಲ್ಕನೆಯದು ನಾಗರೀಲಿಪಿಯಲ್ಲಿ ಬರೆದ ರಾಜನ ಹೆಸರು. ಮಧ್ಯದ ಜಾಗ ಕೆಲವು ವೇಳೆ ಚುಕ್ಕೆಗಳು ಇಲ್ಲವೆ ಪ್ರಾಣಿಗಳನ್ನು ಒಳಗೊಂಡಿರುತ್ತವೆ. ಸಾಮಾನ್ಯವಾಗಿ ಸೇವುಣ ಚಿನ್ನದ ಪದ್ಮಟಂಕೆಗಳ ತೂಕ 57 ಗ್ರೇನ್‌ಗಳು. ಇವು ವೃತ್ತಾಕಾರದವು. ಇವುಗಳ ವ್ಯಾಸ 15 ಮಿಮೀ.

ಇದುವರೆಗೂ ಐದನೆಯ ಭಿಲ್ಲಮ, ಎರಡನೆಯ ಸಿಂಘಣ, ಕೃಷ್ಣ, ಮಹಾದೇವ ಮತ್ತು ರಾಮಚಂದ್ರ-ಇವರ ನಾಣ್ಯಗಳು ಮಾತ್ರ ದೊರಕಿವೆ. ಇವರ ನಾಣ್ಯಗಳು ಆಂಧ್ರ ಪ್ರದೇಶದ ಕರೀಂನಗರ, ಮೇದಕ್, ಮಹಬೂಬ ನಗರ ಮತ್ತು ಕೃಷ್ಣ ಜಿಲ್ಲೆಗಳಲ್ಲೂ ಮಹಾರಾಷ್ಟ್ರ, ಒರಿಸ್ಸ, ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ ದೊರಕಿವೆ. ಕೃಷ್ಣ ಜಿಲ್ಲೆಯ ರಾಚಪಟ್ಟಣದಲ್ಲಿ ದೊರಕಿದ ನಾಣ್ಯಗಳು ಇತಿಹಾಸದ ದೃಷ್ಟಿಯಿಂದ ಮುಖ್ಯವಾದವು. ಇತ್ತೀಚೆಗೆ ದೇವಲಜಹರಿಯಲ್ಲಿ ದೊರಕಿದ 5ನೆಯ ಭಿಲ್ಲಮನ ನಾಣ್ಯಗಳಲ್ಲಿ ಶ್ರೀಭಿಲ್ಲಮದೇವ ಎಂಬ ನಾಗರೀ ಬರೆಹವಿದೆ. ಸೋನ್‌ಪುರದಲ್ಲಿ ದೊರೆತ 2ನೆಯ ಸಿಂಘಣನ ನಾಣ್ಯಗಳಲ್ಲಿ ಸಿಂಘಣ ಎಂಬ ನಾಗರೀ ಬರೆಹ, ಶ್ರೀ ಎಂಬ ಕನ್ನಡ ಅಕ್ಷರ ಮತ್ತು ಚಿತ್ರಗಳಿವೆ. ಮಧ್ಯಪ್ರದೇಶದ ಪರಸಿದ್‌ನಲ್ಲಿ ದೊರಕಿದ ಇವನ ನಾಣ್ಯದ ಮೇಲೆ, ಸಿಂಘಣ ಎಂಬ ನಾಗರೀ ಲಿಪಿಯ ಬರೆಹದ ಕೆಳಗೆ ಕತ್ತಿಯಿದೆ. ಇನ್ನೊಂದು ರೀತಿಯ ನಾಣ್ಯದ ಮೇಲೆ ಕತ್ತಿಗೆ ಬದಲು ಬಿಲ್ಲು, ಕೃಷ್ಣನ ನಾಣ್ಯಗಳ ಮೇಲೆ ಕನ್ಹಪ ಮತ್ತು ಕನ್ಹ ಎಂಬ ಬರೆವಣಿಗೆಯಿದೆ. ಮಹಾದೇವನ ನಾಣ್ಯಗಳ ಮೇಲೆ ನಾಗರೀಲಿಪಿ ಯಲ್ಲಿ ಮಹಾದೇವ, ಮಹಾದೇ, ಮಹಾ ಎಂಬ ಬರೆಹ ಕಾಣುತ್ತದೆ. ರಾಮಚಂದ್ರನ ನಾಣ್ಯಗಳ ಮೇಲೆ ಶ್ರೀರಾಮ ಅಥವಾ ರಾಮ ಎನ್ನುವ ನಾಗರೀ ಬರೆಹವಿದೆ. ಇವನ ಇನ್ನೊಂದು ನಮೂನೆಯ ನಾಣ್ಯದಲ್ಲಿ ಪದ್ಮದ ಬದಲು ಗರುಡನ ಚಿತ್ರವೂ ರಾಮಚ ಎಂಬ ನಾಗರೀ ಲಿಪಿಯ ಬರೆಹವೂ ಇದೆ. **(ಎ.ವಿ.ಎನ್.)**

**ಶಾಸನಗಳು:** ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಸೇವುಣರಿಗೆ ಸೇರಿದ ಒಟ್ಟು ಸು. 600 ಶಾಸನಗಳು ಉಪಲಬ್ಧವಾಗಿವೆ. ಶಾಸನಗಳಲ್ಲಿ ಸೆಉಣ, ಸೇಗುಣ, ಸೇವುಣ, ಸೇಮುಣ ಮತ್ತು ಸೇಗುಣ್ಣ ಎಂಬ ರೂಪಗಳು ಕಾಣಸಿಗುತ್ತವೆ. ಸೇವುಣ ಶಾಸನಗಳಲ್ಲಿ ಎರಡನೆಯ ಭಿಲ್ಲಮನ ಕಾಲದ (1000) ಸಂಗಮನೇರ್ ಶಾಸನ ಅತ್ಯಂತ ಪ್ರಾಚೀನವಾದುದು; ಮೇಲುಗಿದೇವನ ಕಾಲದ 1334ರ ಬೋರಾಡ್ಡೀ ಶಾಸನ ಅತ್ಯಂತ ಈಚಿನದು. ಎಲ್ಲ ಅರಸರ ಶಾಸನಗಳೂ ದೊರೆತಿಲ್ಲ. ಎರಡನೆಯ ಭಿಲ್ಲಮ, ಮೂರನೆಯ ಭಿಲ್ಲಮ, ಎರಡನೆಯ ಸೇವುಣ ಚಂದ್ರ, ಐರಮದೇವ, ಸೇವುಣದೇವ, ಐದನೆಯ ಭಿಲ್ಲಮ, ಜೈತುಗಿ, ಸಿಂಘಣ, ಕೃಷ್ಣ, ಮಹಾದೇವ, ರಾಮಚಂದ್ರ, ಮೇಲುಗಿದೇವ-ಈ ಅರಸರ ಶಾಸನಗಳು ಲಭ್ಯವಾಗಿವೆ. ಸೇವುಣರಿಗೆ ಸೇರಿದ, ಆದರೆ ಅರಸರ ಹೆಸರಿಲ್ಲದ ಸುಮಾರು 25 ಶಾಸನಗಳು ದೊರೆತಿವೆ. ಒಟ್ಟು ಶಾಸನಗಳಲ್ಲಿ ಐದು ತಾಮ್ರ ಶಾಸನಗಳು, ಮಿಕ್ಕವು ಶಿಲಾಶಾಸನಗಳು. ಇವುಗಳಲ್ಲಿ ಯಾದವ ನಾರಾಯಣ, ಯಾದವ ವಂಶೋದ್ಭವ, ದ್ವಾರಾವತೀ ಪುರವರಾಧೀಶ್ವರ, ಸೇಉಣ ಚಕ್ರವರ್ತಿ, ಸೇವುಣವಂಶ ಶಿಖಾಮಣಿ ಮುಂತಾದ ಬಿರುದುಗಳಿವೆ.

1896ರಲ್ಲಿ ಫ್ಲೀಟ್ ಅವರು ದಿ ಡೈನಾಸ್ಟೀಸ್ ಆಫ್ ಕ್ಯಾನರೀಸ್ ಡಿಸ್ಟ್ರಿಕ್ಟ್ಸ್ ಎಂಬ ಕೃತಿಯನ್ನು ಪ್ರಕಟಿಸಿದಾಗ ಲಭ್ಯವಿದ್ದ ಸೇವುಣರ ಶಾಸನಗಳ ಸಂಖ್ಯೆ ಕೇವಲ 120. ಆದರೆ ಅನಂತರ ಕಾಲದಲ್ಲಿ ಮುಖ್ಯವಾಗಿ ಭಾರತದ ಪುರಾತತ್ತ್ವ ಸರ್ವೇಕ್ಷಣದ ಶಾಸನ ಶಾಖೆಯ ಸತತ ಕ್ಷೇತ್ರಕಾರ್ಯಗಳಿಂದಾಗಿ ಶಾಸನಗಳ ಸಂಖ್ಯೆ ನಾಲ್ಕೈದು ಪಟ್ಟು ಹೆಚ್ಚಿದೆ. ಈ ಶಾಸನಗಳನ್ನು ಆನ್ಯುಯಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಫಿಯ ಪುರವಣಿಗಳಲ್ಲಿ ಪಟ್ಟಿ ಮಾಡಿದೆ. ಅನೇಕ ಶಾಸನಗಳು ಎಪಿಗ್ರಾಫಿಯ ಇಂಡಿಕಾ, ಎಪಿಗ್ರಾಫಿಯ ಕರ್ನಾಟಿಕ, ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸೋರ್ಸಸ್ ಆಫ್ ಮಿಡೀವಲ್ ಹಿಸ್ಟರಿ ಆಫ್ ಡೆಕ್ಕನ್, ಇನ್‌ಸ್ಕ್ರಿಪ್ಷನ್ಸ್ ಆಫ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಹಾಪುರ ಸ್ಟೇಟ್, ಜೈನಿಸಮ್ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನ ಎಪಿಗ್ರಾಫ್ಸ್, ಎ ಕಾರ್ಪಸ್ ಆಫ್ ಇನ್‌ಸ್ಕ್ರಿಪ್ಷನ್ಸ್ ಫ್ರಮ್ ದಿ ಕನ್ನಡ ಡಿಸ್ಟ್ರಿಕ್ಟ್ಸ್ ಆಫ್ ಹೈದರಾಬಾದ್ ಸ್ಟೇಟ್, ಸೆಲೆಕ್ಟಡ್ ಇನ್‌ಸ್ಕ್ರಿಪ್ಷನ್ಸ್ ಫ್ರಮ್ ಮಹಾರಾಷ್ಟ್ರ, ಇನ್‌ಸ್ಕ್ರಿಪ್ಷನ್ಸ್ ಫ್ರಮ್ ದಿ ನಾಂದೇಡ್ ಡಿಸ್ಟ್ರಿಕ್ಟ್, ಪ್ರಾಚೀನ ಮರಾಠೀ ಕೋರೀವ್ ಲೇಖ್ ಮುಂತಾದ ಹತ್ತು ಹಲವು ಸಂಪುಟಗಳಲ್ಲಿ ಸಂಪಾದಿತವಾಗಿವೆ. ಆದರೆ ಇನ್ನೂ ಹಲವಾರು ಶಾಸನಗಳು ಪ್ರಕಟವಾಗಬೇಕಾಗಿವೆ.

ಸೇವುಣರ ಶಾಸನಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯ ಶಾಸನಗಳೇ ಹೆಚ್ಚು. ಕೆಲವು ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿಯಲ್ಲಿಯೂ ಮತ್ತೆ ಕೆಲವು ಸಂಸ್ಕೃತ ಭಾಷೆ ಮತ್ತು ನಾಗರೀ ಲಿಪಿಯಲ್ಲಿಯೂ ಇವೆ. ಸೇವುಣರ ಆಳಿಕೆಯ ಕೊನೆಗಾಲಕ್ಕೆ ಸೇರಿದ ಕೆಲವು ಶಾಸನಗಳು ಮರಾಠಿ ಭಾಷೆಯಲ್ಲಿವೆ. ಕಳಚುರಿ, ಹೊಯ್ಸಳ ಮತ್ತು ಸೇವುಣ ಶಾಸನಗಳಲ್ಲಿ ಬಳಸಿದ ಲಿಪಿಯಲ್ಲಿ ಅಂಥ ಭಿನ್ನತೆಯೇನೂ ಕಂಡುಬರುವುದಿಲ್ಲ. ಅಕ್ಷರಗಳು ತುಂಬ ಗುಂಡಾಗಿಯೂ ಅಲಂಕಾರಯುಕ್ತವಾಗಿಯೂ ಇವೆ.

ಸೇವುಣರ ಶಾಸನಗಳಲ್ಲಿ ಸಮಕಾಲೀನ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳ, ವಿದ್ಯಾಭ್ಯಾಸ ಮತ್ತು ಆಡಳಿತ ಪದ್ಧತಿಗಳ ಒಂದು ಚಿತ್ರ ಕಾಣಸಿಗುತ್ತದೆ. ಮಾಳವದ ಅರಸರು, ಘೂರ್ಜರ, ಹೊಯ್ಸಳ ಮತ್ತು ಕಾಕತೀಯ ಮುಂತಾದ ರಾಜಮನೆತನಗಳ ಮೇಲೆ ಸೇವುಣ ಅರಸರು ಸಾಧಿಸಿದ ದಿಗ್ವಿಜಯಗಳನ್ನು ಕುರಿತು ಸೇವುಣ ಶಾಸನಗಳು ಬಹುವಾಗಿ ವರ್ಣಿಸುತ್ತವೆ.

ಶಾಸನ ಕಲ್ಲುಗಳ ಮೇಲೆ ಶಂಖ, ಲಿಂಗ, ಪ್ರತಿಗ್ರಹಿ, ಹಸು ಕರು, ಸೂರ್ಯ, ಚಂದ್ರ, ನಂದಿ, ಗರುಡ, ವಿಷ್ಣು ಮತ್ತು ಲಕ್ಷ್ಮೀ, ಕಲಶ, ಮುಕ್ಕೊಡೆ, ಕಂಡಲು ಮುಂತಾದ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ.

ಮಹಾಮಂಡಲೇಶ್ವರ ಬಂದರಸ ಅಥವಾ ಬಂದುಗಿ, ಚೈತ್ರಸಿಂಹ, ವಿರುಪ ದೇವರಸ, ಮಾಯಿದೇವ, ಬೀಚಿಸೆಟ್ಟಿ, ಲಕ್ಷ್ಮೀದೇವ, ಸಹದೇವ ದಂಡನಾಥ, ಸಾಮಂತ ಖೋಲೇಶ್ವರ ಮತ್ತು ಅವನ ಮಗ ರಾಮ, ಹರದೇವ ಮತ್ತು ಮಹದೇವ, ಮಾಯಿದೇವ ಪಂಡಿತ, ಹೊನ್ನಬೊಮ್ಮಿಸೆಟ್ಟಿ, ಬೀಚಣ, ಮಲ್ಲಿಸೆಟ್ಟಿ, ಲೆಕ್ಕರಸ, ಚಂದ್ರದೇವ, ಕೇಶವದೇವ, ಕೂಚರಸ, ಚಟ್ಟರಸ, ದೇವರಾಜ, ಸಾಳುವ ಲೆಕ್ಕಮ ಹಾಗೂ ಪುರುಷೋತ್ತಮ ಮೊದಲಾದವರು ಸೇವುಣ ಶಾಸನಗಳು ಉಲ್ಲೇಖಿಸುವ ಪ್ರಮುಖ ಅಧಿಕಾರಿಗಳಲ್ಲಿ ಕೆಲವರು. ಭಾಗುಬಾಯಿ ಎಂಬ ಸ್ತ್ರೀಯೊಬ್ಬಳು ಸರ್ವಾಧಿಕಾರಿ

ಯಾಗಿರುವುದು ಗಮನ ಸೆಳೆಯುವಂಥದು. ಪ್ರಸಿದ್ಧ ವೀರಶೈವ ಸುಧಾರಕ ಸಂಗನಬಸವ, ಖಗೋಳಶಾಸ್ತ್ರಜ್ಞ ಚಂಗದೇವ, ಗಣಿತಶಾಸ್ತ್ರಜ್ಞ ಭಾಸ್ಕರಾ ಚಾರ್ಯ, ಧರ್ಮಗುರು ಶಂಕರಸ್ವಾಮಿ, ರಾಜಗುರು ಸರ್ವೇಶ್ವರದೇವ ಮುಂತಾದವರ ಉಲ್ಲೇಖ ಶಾಸನಗಳಲ್ಲಿ ಕಾಣಸಿಗುತ್ತದೆ. ಹಾವೇರಿ, ಹೆಮ್ಮೆನಬೇತೂರು, ಹಿಲ್ಲ, ಸೊನ್ನಲಿಗೆ, ಗದಗ, ಬಳ್ಳಿಗಾವೆ, ಲಕ್ಷ್ಮೇಶ್ವರ, ಚೌಡದಾನಪುರ ಮೊದಲಾದ ಧಾರ್ಮಿಕ ಕೇಂದ್ರಗಳನ್ನು ಮತ್ತು ಬೊಮ್ಮ ಕೂರು, ಅಕ್ಕಲಕೋಟೆ, ಹಿರೇಬೇವಿನೂರು, ದೇವಣಗಾವೆ, ಮುದ್ಗಲ್, ಅಣ್ಣಿಗೇರಿ, ಲಕ್ಕುಂಡಿ, ಕುಕ್ಕನೂರು, ಗಬ್ಬೂರು ಮುಂತಾದ ಹಲವು ಬ್ರಹ್ಮಪುರಿ ಅಥವಾ ಅಗ್ರಹಾರಗಳನ್ನು ಶಾಸನಗಳು ಹೆಸರಿಸುತ್ತವೆ.

ಸೇವುಣರ ಶಾಸನಗಳಲ್ಲಿ ಹೆಚ್ಚಿನವು ದಾನಶಾಸನಗಳು. ಇವುಗಳಲ್ಲಿ ಶಿವ, ಬ್ರಹ್ಮ, ವಿಷ್ಣು, ಸೂರ್ಯ, ಭವಾನಿ, ಲಕ್ಷ್ಮಿ, ನರಸಿಂಹ ಮುಂತಾದ ದೇವತೆಗಳ ಹಾಗೂ ಜಿನತೀರ್ಥಂಕರರ ಸ್ತುತಿ ಇವೆ. ನೊಳಂಬವಾಡಿ 32000, ಬನವಾಸಿ 12000, ಪಲಸಿಗೆ 12000, ಪಾಳಿಯಾಂಡ 4000, ಕರಹಡ 4000, ಕೊಂಡಿ 3000, ಮಿರಿಂಜೆ 3000, ಎಡೆದೊರೆ 2000, ಅಲಂದೆ 1000, ಸಿಂದವಾಡಿ 1000, ತರ್ದವಾಡಿ 1000, ಬೆಳ್ವೊಲ 300, ಪುಲಿಗೆರೆ 300, ಅರಳು 300, ಹಗರಿಟಗೆ 300 ಮುಂತಾದ ಪ್ರಸಿದ್ಧ ನಾಡುಗಳನ್ನಲ್ಲದೆ ಹತ್ತಾರು ಸಣ್ಣಪುಟ್ಟ ಆಡಳಿತ ವಿಭಾಗಗಳನ್ನು ಸೇವುಣ ಶಾಸನಗಳು ಹೆಸರಿಸುತ್ತವೆ.

ಸಾಹಿತ್ಯಕವಾಗಿಯೂ ಸೇವುಣ ಶಾಸನಗಳು ಗಮನಾರ್ಹವಾಗಿವೆ. ತಿಳಿವಳ್ಳಿ, ದೇವಸ್ಥಾನ ಹಕ್ಕಲು ಹಾಗೂ ದಾವಣಗೆರೆ ಶಾಸನಗಳು ಒಳ್ಳೆಯ ಶಾಸನ ಕಾವ್ಯಕ್ಕೆ ನಿದರ್ಶನಗಳು. ವಚನಸಾಹಿತ್ಯ ಬೆಳೆದಂತೆ, ಶಾಸನಗಳ ಮೇಲೆ ಅದರ ಪ್ರಭಾವ ಪ್ರಾರಂಭವಾಯಿತು. ಸು. 25 ಶಾಸನಗಳಲ್ಲಿ ಸೊನ್ನಲಿಗೆಯ ಸಿದ್ಧರಾಮನ ವಚನಗಳು ಉದಾಹೃತವಾಗಿವೆ. ಕೃಷ್ಣನ ಟಾಕಳಿ ಶಾಸನದಲ್ಲಿ ಸಿದ್ಧರಾಮನ ವಚನವೊಂದರ ಸಂಸ್ಕೃತ ಭಾಷಾಂತರ ಕೊಟ್ಟಿರುವುದು ಗಮನಾರ್ಹ. ಕೆಲವು ಸಂಸ್ಕೃತ ಶಾಸನಗಳನ್ನು ಹರಿಶ್ಚಂದ್ರ, ವೈಜನಾಥ, ಮಾಧವ, ಕವಿರಾಜ ವಾಗ್ದೇವತಾ ಭಟ್ಟ, ವೇದಾರ್ಥವಾದಿ ಸೂರ್ಯನರಸಿಂಹ, ವೈಜಾರ್ಯ ಹಾಗೂ ಶಾರದಾದರ್ಪಣನೆನಿಸಿದ ಮಾಯಿದೇವ ಮುಂತಾದವರು ರಚಿಸಿದ್ದಾರೆ. ಕನ್ನಡ ಶಾಸನ ಕವಿಗಳಲ್ಲಿ ಬೆಡಗಿನ ಸೋಮನಾಥ ಪಂಡಿತ, ವಾಮನ, ಕನ್ನಡ ಸರಸತಿ ಎನಿಸಿದ ದೇವ, ಹುಡುಗೆಯ ಸೋಮಯ್ಯ, ಸೇನಬೋವ ಬಾಚರಸ, ಗೋಪಿರಾಜ ಮತ್ತು ಈಶ್ವರಾರ್ಯ ಮೊದಲಾದವರು ಸೇರಿದ್ದಾರೆ. ಕವಿಯ ಹೆಸರಿಲ್ಲದಿದ್ದರೂ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದ ಶಾಸನಗಳೂ ಇವೆ.

(ಎಚ್.ಎಂ.ಎನ್.ಆರ್.)

**ಸೊಡ್ಡಳ ಬಾಚರಸ:** ಸು. 1160. ವಚನಕಾರ. ವಚನಗಳ ಜೊತೆಗೆ ಈತ ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತೋರುತ್ತದೆ ಎಂದು ಕವಿಚರಿತ್ರೆಕಾರರು ಅಭಿಪ್ರಾಯಪಟ್ಟಿದ್ದಾರೆ. ಬಸವಣ್ಣನವರು ಬಿಜ್ಜಳನ ಕೋಶಾಧಿಕಾರಿಯಾಗಿದ್ದಾಗ ಅಲ್ಲಿ ಕಣಜದಿಂದ ಧಾನ್ಯ ಅಳೆದು ಕೊಡುವುದು, ಲೆಕ್ಕ ಬರೆದುಕೊಂಡಿರುವುದು ಈತನ ಉದ್ಯೋಗವಾಗಿತ್ತು. ಬಸವಣ್ಣ ನವರಿಗೆ ತೀರ ಹತ್ತಿರದವನಾಗಿದ್ದ ಈತ ಅಲ್ಲಮಪ್ರಭುವಿಗೂ ಆಪ್ತನಾಗಿದ್ದ. ಶ್ರೇಷ್ಠ ಶಿವಾನುಭವಿಯೂ ಆಗಿದ್ದ ಈತ ಸೌರಾಷ್ಟ್ರದ ಸೋಮನಾಥನ ಭಕ್ತನಾಗಿದ್ದ. ಬಸವಣ್ಣನವರ ಶಿವಾನುಭವಗೋಷ್ಠಿಯಲ್ಲಿ ಸಕ್ರಿಯ ಪಾಲುದಾರನಾಗಿದ್ದ. ಲೆಕ್ಕಕ್ಕೆ ಬದಲಾಗಿ ಷಡಕ್ಷರ ಮಂತ್ರ ಬರೆಯುತ್ತಿದ್ದರೂ ಬಸವಣ್ಣನವರು ಬಾಚರಸನನ್ನು ಕೇಳುತ್ತಿಲ್ಲ ಎಂದು ಕೊಂಡೆಯರು ಬಿಜ್ಜಳನಿಗೆ ದೂರು ಕೊಟ್ಟಾಗ ಬಸವಣ್ಣನವರು ಸೂರ್ಯಗತಿಯನ್ನು ಹನ್ನೊಂದು ದಿನ ನಿಲ್ಲಿಸಿ ಲೆಕ್ಕಾಚಾರವನ್ನು ಪೂರ್ತಿ ಮಾಡಿ ತೋರಿಸಿದರಂತೆ. ಅದೇನೇ ಇರಲಿ, ಈ ಘಟನೆ ಬಸವಣ್ಣ ಹಾಗೂ ಬಾಚರಸರ ಗಾಢಸಂಬಂಧವನ್ನು ಸೂಚಿಸುತ್ತದೆ. ಶಿವರಾತ್ರಿಯಂದು ಸೌರಾಷ್ಟ್ರಕ್ಕೆ ಹೋಗಿ ಬರಲು ಬಿಜ್ಜಳನನ್ನು ಅನುಮತಿ ಕೇಳಿದಾಗ ಸೂಳೆಯ ಊಳಿಗದಂತೆ ನಿನ್ನ ಶಿವಭಕ್ತಿಯೆ? ನಿನಗೆ ಅಲ್ಲೊಬ್ಬ ಶಿವನೆ, ನಿಮ್ಮ ಸೋಮೇಶ್ವರನನ್ನು ಇಲ್ಲಿಯೇ ಬರಮಾಡಿ ಕೊಳ್ಳಿ ಎಂದು ಅಣಕಿಸಿ ನುಡಿದಾಗ ಶಿವರಾತ್ರಿಯಂದು ಕಣಜದಲ್ಲಿ ಶಿವ ಪ್ರತ್ಯಕ್ಷನಾಗುವಂತೆ ಮಾಡಿದ್ದು ಬಾಚರಸ ನಡೆಸಿದನೆನ್ನಲಾದ ಪವಾಡ. ಶಿವ ಪ್ರತ್ಯಕ್ಷವಾದ ಸ್ಥಳದಲ್ಲಿ ಪ್ರಮಥರು ದೇಗುಲ ಕಟ್ಟಿಸಲಾಗಿ ಅಂದಿನಿಂದ ಅದು ಕೊಟ್ಟಾರದ ಸೋಮನಾಥ ಎಂದು ಹೆಸರಾಯಿತೆಂದು ತಿಳಿದು ಬರುತ್ತದೆ.

ಈತ ಸೊಡ್ಡಳ ಎಂಬ ಅಂಕಿತದಿಂದ ಅನೇಕ ವಚನಗಳನ್ನು ಬರೆದಿದ್ದಾನೆ. ಎಲ್ಲ ವಚನಕಾರರಂತೆ ಸಾಮಾಜಿಕ ವಿಷಮತೆಯ ಜತೆಗೆ ಸಾಂಸಾರಿಕ ನಶ್ವರತೆಯನ್ನು ಈತ ತನ್ನ ವಚನಗಳಲ್ಲಿ ಅಳೆಯುತ್ತಾನೆ. ತನ್ನ ಕಾಲದ ಹದಿನೆಂಟು ಜಾತಿಗಳ ಪಟ್ಟಿಯನ್ನು ಮನುಷ್ಯನ ಅಂಗಾಂಗಳನ್ನೇ ತೋರಿಸಿ ಪ್ರತಿಯೊಬ್ಬರಲ್ಲೂ ಅವೆಲ್ಲವೂ ಇರುವುದರಿಂದ ಉತ್ತಮ–ಅಧಮ ಎಂದು ಹೋರಾಡುವುದನ್ನು ಪ್ರಶ್ನಿಸಿದ್ದಾನೆ. ಆತ್ಮಂಗೆ ಆವ ಕುಲವುಂಟು ಹೇಳಿರೋ ಎಂದಿದ್ದಾನೆ. ಇವನ ವ್ಯಂಗ್ಯ ಚೂಪಾದುದು. ಅನ್ಯಾಸಕ್ತ ಮಾನಸಿಕ ಸ್ಥಿತಿ, ವಿಕೃತ ಅವಸ್ಥೆಗಳನ್ನು ಕಟುವಾಗಿ ಟೀಕಿಸಿದ್ದಾನೆ. ಈತನ ವಚನಗಳಲ್ಲಿ ಆತ್ಮಾವಲೋಕನ ಹೆಚ್ಚು. ಹುಟ್ಟು ಸಾವಿಗೆ ನಾಂದಿಯಾದ್ದರಿಂದ ಬದುಕಿರು ವಾಗ ದೇವರನ್ನು ನಂಬಿ ಪೂಜಿಸಬೇಕೆಂಬುದು ಈತನ ನಿಲವು. ಒಟ್ಟಾರೆ ಇವನ ವಚನಗಳು ಸಾಹಿತ್ಯಕ ಮೌಲ್ಯದ ಜತೆಗೆ ಆತ್ಮಶೋಧನೆ, ಶರಣ ಹಾಗೂ ತನ್ನ ಸಂಬಂಧ, ಸಾಮಾಜಿಕ ಅವ್ಯವಸ್ಥೆ, ಭಕ್ತಿಯ ಉತ್ಕಟತೆ, ನೀತಿ ಮುಂತಾದುವನ್ನು ಕುರಿತವಾಗಿವೆ. (ಎಸ್.ಜಿ.ಎನ್.;ಕೆ.ಎಚ್.)

**ಸೊರಬ:** ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕು ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ಶಿಕಾರಿಪುರ, ದಕ್ಷಿಣದಲ್ಲಿ ಸಾಗರ ತಾಲ್ಲೂಕುಗಳೂ ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಶಿರಸಿ ತಾಲ್ಲೂಕುಗಳೂ ಉತ್ತರ ಮತ್ತು ಈಶಾನ್ಯದಲ್ಲಿ ಹಾವೇರಿ ಜಿಲ್ಲೆಯ ಹಾನಗಲ್ಲು, ಹಿರೇಕೆರೂರು ತಾಲ್ಲೂಕುಗಳೂ ಸುತ್ತುವರೆದಿವೆ. ಸೊರಬ, ಚಂದ್ರಗುತ್ತಿ, ಉಳವಿ, ಕುಪ್ಪಗಡ್ಡೆ, ಜಡೆ ಹಾಗೂ ಆನವಟ್ಟಿ ಹೋಬಳಿ ಗಳನ್ನೊಳಗೊಂಡ ಈ ತಾಲ್ಲೂಕಿನಲ್ಲಿ 305 ಗ್ರಾಮಗಳಿವೆ. ವಿಸ್ತೀರ್ಣ 1,138.7 ಚ.ಕಿಮೀ. ಜನಸಂಖ್ಯೆ 1,85,572. ಇದರಲ್ಲಿ 1,78,145 ಮಂದಿ ಗ್ರಾಮವಾಸಿಗಳು, 7,427 ಮಂದಿ ಪಟ್ಟಣಿಗರಿದ್ದಾರೆ.

ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿರುವ ಈ ತಾಲ್ಲೂಕಿನ ಬೆಟ್ಟಗುಡ್ಡ ಗಳ ಚಂದ್ರಗುತ್ತಿ ಬೆಟ್ಟ (848 ಮೀ) ಮುಖ್ಯವಾದದ್ದು. ವರದಾ ಮತ್ತು ದಂಡಾವತಿ ಈ ತಾಲ್ಲೂಕಿನ ಮುಖ್ಯ ನದಿಗಳು. ವರದಾ ನೈಋತ್ಯ ದಿಕ್ಕಿನಿಂದ ತಾಲ್ಲೂಕನ್ನು ಪ್ರವೇಶಿಸಿ ಉತ್ತರಾಭಿಮುಖವಾಗಿ ಹರಿದು ಮೂರು ಕಡೆ ಶಿರಸಿಯಿಂದ ಸೊರಬ ತಾಲ್ಲೂಕನ್ನು ಬೇರ್ಪಡಿಸುವ ಗಡಿಯಾಗಿ, ಮಧ್ಯೆ ಸ್ವಲ್ಪ ದೂರ ಶಿರಸಿ ತಾಲ್ಲೂಕಿನಲ್ಲಿ ಹರಿದು ಮತ್ತೆ ಈ ತಾಲ್ಲೂಕನ್ನು ಪಶ್ಚಿಮ ದಿಕ್ಕಿನಿಂದ ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಹರಿದು ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕನ್ನು ಪ್ರವೇಶಿಸುವುದು. ದಂಡಾವತಿ ನದಿ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹರಿದು ವರದಾ ನದಿಯನ್ನು ಸೇರಿಕೊಳ್ಳುವುದು. ಇವಲ್ಲದೆ ಈ ತಾಲ್ಲೂಕಿನಲ್ಲಿ ನಾಗರಹಳ್ಳ, ಯಲವಾತದಹಳ್ಳ, ಗುಡ್ವಿ ಹಳ್ಳ, ಕನ್ನನಮನೆಹಳ್ಳ ಮತ್ತು ಕುಪ್ಪೆಹಳ್ಳ ಮುಂತಾದ ಸಣ್ಣಪುಟ್ಟ ಹಳ್ಳಗಳು ಹರಿದು ದಂಡಾವತಿಯನ್ನು ಸೇರುವುವು. ಮಲೆನಾಡು ಪ್ರದೇಶಕ್ಕೆ ಸೇರಿರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 2,135.05 ಮಿಮೀ. ಚಂದ್ರಗುತ್ತಿ ಅರಣ್ಯಪ್ರದೇಶ ಈ ತಾಲ್ಲೂಕಿನ

ಲ್ಲಿದೆ. 2000–2001ರ ಅಂಕಿ ಅಂಶದ ಪ್ರಕಾರ ತಾಲ್ಲೂಕಿನಲ್ಲಿ 26,667 ಹೆಕ್ಟೇರ್ ದಟ್ಟ ಅರಣ್ಯ ಪ್ರದೇಶವಿದ್ದು ನೇರಳೆ, ಶಿವನಿ, ಕರಿಮರ, ಹತ್ತಿ, ನಂದಿ, ಹೊನ್ನೆ, ಮತ್ತಿ, ಆಲ, ದಿಂಡಿಗ, ಬಿಲ್ವಾರ, ಬನ್ನಿ, ಬಾಗೆ, ಶಾಲಿ, ಹಲಸು, ಬೇವು, ಹಿಪ್ಪೆ, ಮಾವು, ಬೂರುಗ, ಬಗನಿ, ಕಕ್ಕೆ, ಬೀಟೆ, ಸಂಪಿಗೆ, ಹೊಂಗೆ, ಸಾಗುವಾನಿ, ದೇವದಾರು, ಧೂಪ ಇತ್ಯಾದಿ ಅಮೂಲ್ಯವಾದ ಅನೇಕ ಬೆಲೆಬಾಳುವ ಮರಗಳು ಇಲ್ಲಿ ಬೆಳೆಯುತ್ತವೆ.

ತಾಲ್ಲೂಕಿನ ಹೆಚ್ಚು ಪ್ರದೇಶ ಸಾರಜನಕಾಂಶ ಹೆಚ್ಚುಳ್ಳ ಕೆಂಪುಜೇಡಿ ಮತ್ತು ಜಂಬು ಮಣ್ಣಿನಿಂದ ಕೂಡಿದೆ. ಈ ತಾಲ್ಲೂಕಿನ ವ್ಯವಸಾಯಕ್ಕೆ ವರದಾ ಮತ್ತು ದಂಡಾವತಿ ನದಿಗಳಲ್ಲದೆ ಕೆಲವು ಹಳ್ಳಗಳೂ ಕೆರೆಗಳೂ ಬಾವಿಗಳೂ ಇದ್ದು 2000–2001ರ ಪ್ರಕಾರ ಕೆರೆಗಳಿಂದ 20,935 ಹೆ.ಗಳು, ಬಾವಿ ಮತ್ತು ಕೊಳವೆ ಬಾವಿಗಳಿಂದ 1,774, ಹೆ.ಗಳು, ಏತ ನೀರಾವರಿ ಯಿಂದ 703 ಹೆ.ಗಳಿಗೆ ಜಲಪೂರೈಕೆ ಮಾಡುತ್ತಿವೆ. 2001ರಲ್ಲಿ 30,684 ಹೆಕ್ಟೇರ್‌ಗಳಲ್ಲಿ ಬತ್ತವನ್ನೂ 1,727 ಹೆಕ್ಟೇರ್‌ಗಳಲ್ಲಿ ದ್ವಿದಳ ಧಾನ್ಯಗಳನ್ನು 233 ಹೆಕ್ಟೇರ್‌ಗಳಲ್ಲಿ ಕಬ್ಬನ್ನೂ 545 ಹೆಕ್ಟೇರ್‌ಗಳಲ್ಲಿ ರಾಗಿ, 235 ಹೆಕ್ಟೇರ್‌ಗಳಲ್ಲಿ ಜೋಳ, 962 ಹೆಕ್ಟೇರ್‌ಗಳಲ್ಲಿ ಮುಸುಕಿನ ಜೋಳವನ್ನೂ ಬೆಳೆಯಲಾಗಿತ್ತು. ಈ ತಾಲ್ಲೂಕಿನಲ್ಲಿ ತೋಟದ ಬೆಳೆಗಳಾದ ಅಡಕೆ, ತೆಂಗು, ಗೋಡಂಬಿ, ಬೆಳೆಯುವುದುಂಟು. ತಾಲ್ಲೂಕಿನಲ್ಲಿ ಪಶುಪಾಲನೆಯಿದ್ದು ಅವುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಒಟ್ಟು 21 ಪಶುವೈದ್ಯಾಲಯಗಳಿ ದ್ದವು (1972). ನದಿ, ಹಳ್ಳ, ಕಾಲುವೆ, ಕೆರೆ, ಕಟ್ಟೆಗಳಿದ್ದು ಅವುಗಳಲ್ಲಿ ಸಾಕಷ್ಟು ಮೀನು ಸಿಗುವುದರಿಂದ ಮತ್ಸ್ಯೋದ್ಯಮವೂ ಇದ್ದು 2002ರಲ್ಲಿ 1,139 ಟನ್ ಮೀನುಗಳನ್ನು ಹಿಡಿಯಲಾಗಿತ್ತು.

ಗಂಧ, ದಂತ ಮತ್ತು ಬೆಲೆಬಾಳುವ ಮರದ ಸಾಮಾನುಗಳಿಗೆ ಈ ತಾಲ್ಲೂಕು ಪ್ರಸಿದ್ಧ. ಕೈಮಗ್ಗದ ಹತ್ತಿ ಬಟ್ಟೆ, ಸುಣ್ಣ ತಯಾರಿಕೆ ಮತ್ತು ಬೊಂಬಿನಿಂದ ವಿವಿಧ ವಸ್ತುಗಳ ತಯಾರಿಕೆ, ಮರಗೆಲಸ, ಕುಶಲ ಕೆತ್ತನೆ ಮುಂತಾದವುಗಳಿಗೆ ಈ ತಾಲ್ಲೂಕು ಹೆಸರಾದದ್ದು. ಇಲ್ಲಿನ ಗುಡಿಗಾರರು ಕೆತ್ತನೆಯ ಕುಸುರಿ ಕೆಲಸದಲ್ಲಿ ನಿಪುಣರು. ಈ ತಾಲ್ಲೂಕಿನಲ್ಲಿ ಚರ್ಮೋದ್ಯೋಗವೂ ಸ್ವಲ್ಪಮಟ್ಟಿಗೆ ಇದೆ. ತಾಲ್ಲೂಕಿನ ವಾಣಿಜ್ಯ, ಕೈಗಾರಿಕೆಗಳಿಗೆ ಆರ್ಥಿಕ ಬೆನ್ನೆಲುಬಾಗಿ 2002ರಲ್ಲಿ 10 ವಾಣಿಜ್ಯ ಬ್ಯಾಂಕುಗಳು, 5 ಗ್ರಾಮೀಣ, 2 ಸಹಕಾರ ಬ್ಯಾಂಕುಗಳಿವೆ. ಇಲ್ಲಿನ ಗುಡಿಗಾರರು ತಮ್ಮ ವೃತ್ತಿರಕ್ಷಣೆ ಮತ್ತು ಅಗತ್ಯ ಧನಸಹಾಯಕ್ಕೆ ತಮ್ಮದೇ ಆದ ಒಂದು ಸಹಕಾರ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಸೊರಬಕ್ಕೆದಕ್ಷಿಣದಲ್ಲಿರುವಸಾಗರ ರೈಲ್ವೆ ನಿಲ್ದಾಣ 29ಕಿಮೀ ದೂರದಲ್ಲಿದೆ. ತಾಳಗುಪ್ಪ ಹತ್ತಿರದ ಇನ್ನೊಂದು ರೈಲ್ವೆನಿಲ್ದಾಣ. ಸಾಗರ–ಹಿರೇಕೆರೂರು, ಸಾಗರ–ಶಿರಸಿ ರಸ್ತೆಗಳು ಈ ತಾಲ್ಲೂಕಿನ ಮೂಲಕ ಹಾದುಹೋಗಿವೆ. ತಾಲ್ಲೂಕಿನಲ್ಲಿ 55ಕಿಮೀ ರಾಜ್ಯ ಹೆದ್ದಾರಿ, 203 ಕಿಮೀ ಮುಖ್ಯ ಜಿಲ್ಲಾ ಹೆದ್ದಾರಿ, 242 ಕಿಮೀ ಗ್ರಾಮ ರಸ್ತೆಗಳು, 353 ಕಿಮೀ ಟಿ.ಡಿ.ಬಿ. ರಸ್ತೆಗಳಿದ್ದು ತಾಲ್ಲೂಕಿನ ಕೇಂದ್ರದಿಂದ ಎಲ್ಲಾ ಮುಖ್ಯಸ್ಥಳಗಳಿಗೂ ಗ್ರಾಮಗಳಿಗೂ ಉತ್ತಮ ರಸ್ತೆಗಳಿವೆ.

ಸೊರಬ ತಾಲ್ಲೂಕಿನಲ್ಲಿ ಕೆಲವು ಐತಿಹಾಸಿಕ, ಸಾಂಸ್ಕೃತಿಕ, ಪ್ರೇಕ್ಷಣೀಯ ಸ್ಥಳಗಳಿವೆ. ಅವುಗಳಲ್ಲಿ ಸೊರಬದ ಆಗ್ನೇಯಕ್ಕೆ 13 ಕಿಮೀ ದೂರದಲ್ಲಿ ರುವ ಪುರವನ್ನು ಹಿಂದೆ ಭವ್ಯಪುರವೆಂದು ಕರೆಯುತ್ತಿದ್ದರೆಂದು ತಿಳಿದು ಬರುವುದು. ಇಲ್ಲಿನ ಸೋಮೇಶ್ವರ ದೇವಾಲಯ ಚಾಳುಕ್ಯ ಹೊಯ್ಸಳ ಶೈಲಿಯ ಒಂದು ವಾಸ್ತುರತ್ನವಾಗಿದೆ. ಇದರ ಗರ್ಭಗುಡಿಯಲ್ಲಿ ಲಿಂಗದ ಬದಲು ಸೋಮೇಶ್ವರನು ನಂದಿಯ ಮೇಲೆ ಕುಳಿತಿರುವುದು ಗಮನಾರ್ಹ. ಸೊರಬದ ಪೂರ್ವಕ್ಕೆ 3 ಕಿಮೀ ದೂರದಲ್ಲಿರುವ ಕೋಡಕಣಿಯನ್ನು ಹಿಂದೆ ಬಲ್ಲಾಳಗಿರಿಯೆಂದು ಕರೆಯುತ್ತಿದ್ದರು. ಇಲ್ಲಿ ಸಿದ್ಧೇಶ್ವರ ಹಾಗೂ ನಾರಾಯಣ ಮಂದಿರಗಳಿವೆ. ಸೊರಬದ ಈಶಾನ್ಯಕ್ಕೆ 11 ಕಿಮೀ ದೂರದಲ್ಲಿ ರುವ ಉದ್ರಿಯಲ್ಲಿ ಕೋಟೆಕೊತ್ತಲ, ವೀರಗಲ್ಲುಗಳು ಕಂಡುಬರುತ್ತವೆ. ಶೈವದೇವಾಲಯಗಳಲ್ಲದೆ ಜೈನಬಸದಿಯನ್ನು ಇಲ್ಲಿ ನೋಡಬಹುದು. ಸೊರಬದ ಉತ್ತರಕ್ಕೆ ಸು.20 ಕಿಮೀ ದೂರದಲ್ಲಿರುವ ಕುಪಟೂರು **(ನೋಡಿ)** ಚಂದ್ರಹಾಸನ ಕುಂತಳನಗರವಾಗಿತ್ತೆಂಬುದು ಸ್ಥಳಪುರಾಣ. ಇಲ್ಲಿಯ ಕೈಟಭೇಶ್ವರ ದೇವಾಲಯ ಉತ್ತಮ ವಾಸ್ತುಕೃತಿ. ಸೊರಬದ ವಾಯವ್ಯಕ್ಕೆ 16 ಕಿಮೀ ಅಂತರದಲ್ಲಿರುವ ಚಂದ್ರಗುತ್ತಿ **(ನೋಡಿ)** ಇತಿಹಾಸ ಪ್ರಸಿದ್ಧ ಸ್ಥಳ. ಸೊರಬದ ಉತ್ತರಕ್ಕೆ 15 ಕಿಮೀ ದೂರದಲ್ಲಿರುವ ಕುಪ್ಪಗದ್ದೆಯ ರಾಮೇಶ್ವರ ದೇವಾಲಯ 12ನೆಯ ಶತಮಾನದ ಉತ್ತಮ ವಾಸ್ತುಶಿಲ್ಪ. ಸೊರಬದ ಈಶಾನ್ಯಕ್ಕೆ ಸು. 38 ಕಿಮೀ ದೂರದಲ್ಲಿರುವ ಭಾರಂಗಿಯ ಜೈನಬಸದಿ, ತ್ರಿಕೂಟಾಚಲ ಶೈವದೇಗುಲ, ಮಲ್ಲಿಕಾರ್ಜುನ ದೇವಾಲಯ, ಬನಶಂಕರಿ ಗುಡಿ ಮುಂತಾದವು ಗಮನಾರ್ಹವಾದವು. ಭಾರಂಗಿಯ ಶೈವಾಲಯದ ಶಿವಲಿಂಗದಲ್ಲಿ ಕೆತ್ತಿರುವ ಶಿವನ ಮುಖ ವೈಶಿಷ್ಟ್ಯಪೂರ್ಣವಾಗಿದೆ. ಸೊರಬದ ಉತ್ತರಕ್ಕೆ 38 ಕಿಮೀ ದೂರದಲ್ಲಿರುವ ಬಂಕದಾಣದಲ್ಲಿ ಪ್ರತಿವರ್ಷ ಜನವರಿಯಲ್ಲಿ ದಂಡಾವತಿ–ವರದಾನದಿ ಸೇರುವೆಡೆ ಹೊಳೆಲಿಂಗೇಶ್ವರನ ಜಾತ್ರೆ ಜರುಗುತ್ತದೆ.

ಸೊರಬ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ದಂಡಾವತಿ ನದಿಯ ಬಲದಂಡೆಯ ಮೇಲೆ ಶಿವಮೊಗ್ಗದ ವಾಯವ್ಯಕ್ಕೆ 88 ಕಿಮೀ ದೂರದಲ್ಲೂ ಸಾಗರದ ಉತ್ತರಕ್ಕೆ 29 ಕಿಮೀ ದೂರದಲ್ಲೂ ಇದೆ. ಪಟ್ಟಣದಲ್ಲಿ 3,812 ಮಂದಿ ಪುರುಷರು, 3,612 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 7,427.

ಇಲ್ಲಿಯ ಸ್ಥಳಪುರಾಣದಂತೆ ಶ್ರೀರಂಗನಾಥ ದೇವರ ಮೇಲೆ ಸುರಲೋಕದ ಸುರಭಿಗಳು ದಿನನಿತ್ಯ ಹಾಲು ಸುರಿಸುತ್ತಿದ್ದರಿಂದ ಈ ಸ್ಥಳಕ್ಕೆ ಸೊರಬ ಎಂದು ಹೆಸರು ಬಂದಿತೆಂದು ಪ್ರತೀತಿ. ಪ್ರಾಚೀನ ರಂಗನಾಥ ದೇವಾಲಯ ಕೆಳದಿ ನಾಯಕರ ಕಾಲದಲ್ಲಿ ಜೀರ್ಣೋದ್ಧಾರ ಹೊಂದಿತು. ಈ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮಂಟಪಗಳನ್ನು ಒಳಗೊಂಡಿದೆ. ಸೊರಬದ ದಂಡಾವತಿ ನದಿ ತೀರದಲ್ಲೇ ಕೆಲವು ಸಣ್ಣಪುಟ್ಟ ಗುಡಿಗಳಿವೆ. ಇವುಗಳಲ್ಲಿ ಒಂದು ಮಂಟಪದ ಕಂಬದ ಮೇಲೆ ಹೊಯ್ಸಳರ ಕಾಲದ ಶಾಸನವಿದೆ. 1890ರಲ್ಲಿ ಸ್ಥಾಪಿತವಾಯಿತೆಂದು ಹೇಳಲಾದ ನರಹರಿಸ್ವಾಮಿ ಆಶ್ರಮ, ಪುರಾಣ ಮಠಗಳಿವೆ. ಈ ಪಟ್ಟಣದಲ್ಲಿ ಹೆಚ್ಚು ತಯಾರಿಸುವ ಶ್ರೀಗಂಧದ ಕೆತ್ತನೆಯ ವಿವಿಧ ವಸ್ತುಗಳು ಹಾಗೂ ಕೆರೆಯಬೆಂಡಿನ ಬಾಸಿಂಗ ಬಹು ಆಕರ್ಷಣೀಯವಾದವು.

ಇಲ್ಲಿ ಜೂನಿಯರ್ ಕಾಲೇಜು, ಪ್ರೌಢಶಾಲೆಗಳು, ಆಸ್ಪತ್ರೆ, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ಸಂಘಗಳೂ ಇವೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್ ಮುಂತಾದವುಗಳಿದ್ದು ಈ ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ. **(ಎಚ್.ಆರ್.ಆರ್.ಬಿ.;*)**

**ಸೋಂದಾ:** ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಒಂದು ಗ್ರಾಮ. ಶಿರಸಿಯಿಂದ ಉತ್ತರಕ್ಕೆ ಯಲ್ಲಾಪುರಕ್ಕೆ ಹೋಗುವ ಮಾರ್ಗದಲ್ಲಿ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,104.

ಇಲ್ಲಿ ಜೈನ, ವೈಷ್ಣವ, ಸ್ಮಾರ್ತ ಮತ್ತು ವೀರಶೈವ ಮಠಗಳಿವೆ. ಇಲ್ಲಿರುವ ಮಾಧ್ವಯತಿವರ್ಯ ವಾದಿರಾಜರ ವೃಂದಾವನ ಯಾತ್ರಾಸ್ಥಳ ವೆಂದು ಪ್ರಸಿದ್ಧಿ ಪಡೆದಿದೆ. 1550–1672ರ ಅವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಉತ್ತರ ಪಶ್ಚಿಮ ಭಾಗಗಳನ್ನು ವೈಭವದಿಂದ ಆಳಿದ ಪುಟ್ಟ ಅರಸೊತ್ತಿಗೆಯೊಂದರ ರಾಜಧಾನಿಯಾಗಿ ಮೆರೆದ ಇತಿಹಾಸ ಪ್ರಸಿದ್ಧಿ ಈ ಗ್ರಾಮಕ್ಕೆ ಇದೆ**(ನೋಡಿ: ಸೋದೆ ಅರಸರು)**. ಸ್ವಾದಿ, ಸೋಂದಕರ,

ಸುಂದಾ, ಸುಧಾಪುರ, ಸೋಧಾಭಿದಾನ ನಗರ ಎಂದು ಪ್ರಸಿದ್ಧವಾಗಿದ್ದ ಈ ಊರು ಸೋದೆ ಅರಸರ ಆಳ್ವಿಕೆಯ ಕಾಲದಲ್ಲಿ ಮೆಣಸಿನ ವ್ಯಾಪಾರ ದಿಂದ ದೇಶವಿದೇಶಗಳ ಜನರನ್ನು ಆಕರ್ಷಿಸಿತ್ತು. ಕೆಳದಿನೃಪ ವಿಜಯ, ಬಿಳಗಿ ಅರಸರ ವಂಶಾವಳಿ ಎಂಬ ಕೃತಿಗಳಲ್ಲಿ ಜೈನಮಠ, ವೀರಶೈವಮಠ, ಸ್ವರ್ಣವಲ್ಲೀಮಠ, ವಾದಿರಾಜ ಮಠಗಳಲ್ಲಿರುವ ಶಾಸನಗಳಲ್ಲಿ ಈ ಗ್ರಾಮದ ಬಗ್ಗೆ ಅನೇಕ ಉಲ್ಲೇಖಗಳಿವೆ. ಸೋಂದಾದಲ್ಲಿ ದಟ್ಟವಾದ ಅರಣ್ಯ ಮಧ್ಯದಲ್ಲಿ ಅಲ್ಲಲ್ಲಿ ಚೆದರಿ ಬಿದ್ದಿರುವ ಅವಶೇಷಗಳಿಂದ ಸೋದೆ ಅರಸು ಮನೆತನದ ಗತವೈಭವವನ್ನು ತಿಳಿಯಬಹುದು. ಹೆಬ್ಬಾಗಿಲಿನ 14'–16' ಗಳಷ್ಟು ಎತ್ತರದ ಏಕವೃಕ್ಷಸ್ತಂಭಗಳು, ಕಲಾಸಂಪತ್ತಿನಿಂದ ಕೂಡಿರುವ ಗಾರೆ ಸಾರಣಿಗಳ ಅವಶೇಷಗಳು, ಕೊಳಗಳು–ಇವುಗಳೇ ನಮಗೆ ದೊರಕುವ ಹಿಂದಿನ ಹಿರಿಮೆಯ ಕುರುಹುಗಳು. ಕೆತ್ತನೆಯುಳ್ಳ ಚೆಲುವಿನ ಕಂಬಗಳ ಮೇಲೆ ಐದು ಅಡಿಗಳೆತ್ತರದಲ್ಲಿ 12' ಚಚ್ಚೌಕವೂ ಅರ್ಧ ಅಡಿ ದಪ್ಪವೂ ಇರುವ ಒಂದು ನುಣುಪು ಮಾಡಿದ ಶಿಲಾಫಲಕ ಹಿಂದಿನ ಅರಸರ ಸಿಂಹಾಸನದ ಅವಶೇಷವೆಂದು ಹೇಳಲಾಗುತ್ತದೆ. ಏಳಿಗೆಯ ದಿನಗಳಲ್ಲಿ ಸೋಂದಾನಗರ ಮೂರು ಸುತ್ತಿನ ಕೋಟೆ ಆವರಣವನ್ನು ಹೊಂದಿತ್ತೆಂದೂ ತಿಳಿದುಬರುತ್ತದೆ.

ಇಲ್ಲಿಯ ಸ್ವರ್ಣವಲ್ಲೀಮಠದಲ್ಲಿ ನರಸಿಂಹ ಜ್ಞಾನೇಶ್ವರಿ ದೇವತೆಯನ್ನು ಸ್ಥಾಪಿಸಲಾಗಿದೆ. ನರಸಿಂಹಜಯಂತಿ ಉತ್ಸವದಲ್ಲಿ ದೇವರ ರಥವನ್ನು ಮುಸಲ್ಮಾನರು ಎಳೆಯುವ ಸಂಪ್ರದಾಯ ಇದೆ. ಕಲ್ಲುಗುಡಿ, ಬೇಣ ಎಂಬಲ್ಲಿ ತೀರ್ಥಂಕರರ ಸಮಾಧಿಕಲ್ಲುಗಳು ಹೇರಳವಾಗಿವೆ. ಗದ್ದಿಗೆಮಠ, ಹುಣಿಸೆಹೊಂಡ, ದೇವರಹೊಳೆ, ಮತ್ತಿನಕೆರೆ, ಶಂಕರನಾರಾಯಣ ದೇವಾಲಯ ಮೊದಲಾದವು ನೋಡತಕ್ಕವು.

ವಾದಿರಾಜತೀರ್ಥರು ತಮ್ಮ ಕೃತಿಗಳಿಂದ ಹೆಸರುವಾಸಿಯಾಗಿರುವಷ್ಟೇ ಸೋದೆಯ ನವ ಇತಿಹಾಸ ನಿರ್ಮಾಪಕರೆಂಬ ಖ್ಯಾತಿಯನ್ನೂ ಪಡೆದಿರು ವರು. ವಾದಿರಾಜರು ತಮ್ಮ ಪ್ರವಾಸಗಳಲ್ಲಿ ಸಂದರ್ಶಿಸಿದ ಪುಣ್ಯಕ್ಷೇತ್ರಗಳ ಮತ್ತು ಪವಿತ್ರನದಿಗಳ ವರ್ಣನೆಯನ್ನು ತಮ್ಮ ಕೃತಿಯಾದ ತೀರ್ಥಪ್ರಬಂಧ ದಲ್ಲಿ ಕೊಟ್ಟಿದ್ದಾರೆ. ಇವರು ತಮ್ಮ ಪ್ರವಾಸಕಾಲದಲ್ಲಿ ಶಾಲ್ಮಲೀ ನದಿಯ ಪರಿಸರದ ಪ್ರಶಾಂತ ವಾತಾವರಣದಲ್ಲಿ ಕೆಲಕಾಲ ತಪಸ್ಸಿಗಾಗಿ ತಂಗಿದ್ದಾಗ ಸೋದೆಯ ಒಡೆಯ ಅರಸಪ್ಪನಾಯಕನನ್ನು ವಿಪತ್ತಿನಿಂದ ಪಾರುಮಾಡಿದ್ದ ರಿಂದ, ಅವನು ಅವರ ಶಿಷ್ಯನಾಗಿ ಮುತ್ತಿನ ಸಿಂಹಾಸನ, ಛತ್ರ, ಚಾಮರ, ಸ್ವರ್ಣಪಾದುಕೆ, ಮುತ್ತಿನ ಕಿರೀಟ ಮೊದಲಾದ ಸಕಲ ರಾಜಮರ್ಯಾದೆಗ ಳನ್ನು ಯತಿಗಳಿಗೆ ಅರ್ಪಿಸಿದನಲ್ಲದೆ, ತನ್ನ ಮೊದಲಿನ ಗುರುವಿನ ಬಸವನ ಗಂಟೆಯನ್ನು ಪೂಜೆಯ ಉಪಯೋಗಕ್ಕಾಗಿ ಕಾಣಿಕೆಯಾಗಿತ್ತ. ಈ ಗಂಟೆಯನ್ನು ಈಗಲೂ ವಾದಿರಾಜರು ಸ್ಥಾಪಿಸಿದ ಸೋದೆ ಮಠದಲ್ಲಿ (ತೇರುಬೀದಿ ಮಠ) ಪೂಜೆಯ ಸಂದರ್ಭದಲ್ಲಿ ಉಪಯೋಗಿಸಲಾಗುತ್ತದೆ. ವಾದಿರಾಜತೀರ್ಥರು ತಪಸ್ಸು ಮಾಡಿದ ಶಾಲ್ಮಲೀ ನದಿ ಮಧ್ಯದ ಸ್ಥಳ ತಪೋವನವೆಂಬ ಹೆಸರು ಪಡೆದಿದೆ. ಅವರು ತಪಸ್ಸು ಮಾಡುತ್ತಿದ್ದ ಶಿಲೆಯ ಮೇಲೆ ವಾದಿರಾಜರ ಪಾದಚಿಹ್ನೆ ಮತ್ತು ಹಯಗ್ರೀವ ಮೂರ್ತಿಗಳನ್ನು ಕೆತ್ತಲಾಗಿದೆ. ಈ ಪ್ರದೇಶ ಸಹಸ್ರಲಿಂಗದ ಪರಿಸರದಲ್ಲಿದೆ. ಸೋದೆಯಲ್ಲಿ ವಾದಿರಾಜರ ಬೃಂದಾವನವಿದೆ. ಪ್ರತಿವರ್ಷ ಫಾಲ್ಗುಣ ಬಹುಳ ತೃತೀಯ ಜಾತ್ರೆ ನಡೆಯುವುದು.

ಈ ಗ್ರಾಮದಲ್ಲಿ ತ್ರಿವಿಕ್ರಮ ಮತ್ತು ಲಕ್ಷ್ಮೀ ದೇವಾಲಯ ಸಹ ಇವೆ.

(ಎಂ.ವಿ.)

**ಸೋಗಾಲ:** ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಒಂದು ಗ್ರಾಮ. ಚನ್ನಪಟ್ಟಣಕ್ಕೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,670. ಇಲ್ಲಿ ಈಶ್ವರ, ಆಂಜನೇಯ, ಕೆಂಪಮ್ಮ, ಚಾಮುಂಡೇಶ್ವರಿ ಮುಂತಾದ ದೇವಾಲಯಗಳಿವೆ. ಈಶ್ವರ ದೇವಾಲಯ ವಿಜಯನಗರ ಶೈಲಿಯಲ್ಲಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ವಿಶಾಲವಾದ ನವರಂಗಗ ಳಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ನವರಂಗದಲ್ಲಿ ಒಂದು ದಕ್ಷಿಣಕ್ಕೂ ಮತ್ತೊಂದು ಪೂರ್ವಕ್ಕೂ ಇರುವ ಎರಡು ಪ್ರವೇಶ ದ್ವಾರಗಳಿವೆ. ಎರಡೂ ದ್ವಾರಗಳಲ್ಲೂ ಚಿಕ್ಕ ತೆರೆದ ಮುಖಮಂಟಪಗಳಿವೆ. ಪೂರ್ವ ದ್ವಾರದಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ನವರಂಗದಲ್ಲಿ ಸೂರ್ಯ ಹಾಗೂ ಗಣಪತಿಯ ಮೂರ್ತಿಗಳಿವೆ. ಮುಖಮಂಟಪದ ಮುಂಭಾಗದಲ್ಲಿ ಎರಡು ಕಂಬಗಳಿದ್ದು ಅವುಗಳಲ್ಲಿ ಭಕ್ತ ದಂಪತಿಗಳ ಮೂರ್ತಿಗಳಿವೆ. ನವರಂಗದ ಮೇಲ್ಛಾವಣಿಯಲ್ಲಿ ದಕ್ಷಿಣ ದೇವಾಲಯದ ಹಿಂಭಾಗದಲ್ಲಿ ಕೆಲವು ವೀರಗಲ್ಲುಗಳಿವೆ. ಎರಡು ವೀರಗಲ್ಲುಗಳಲ್ಲಿ ವೀರನೊಬ್ಬ ಹುಲಿಯೊಡನೆ ಕಾದಾಡುವ ದೃಶ್ಯವಿದೆ. ಆಂಜನೇಯ ದೇವಾಲಯಕ್ಕೆ ಸಮೀಪ ಒಂದು ವೀರಗಲ್ಲು ಹಾಗೂ ಎರಡು ಮಾಸ್ತಿ ಕಲ್ಲುಗಳಿವೆ. ಒಂದು ಕಲ್ಲು ಚಪ್ಪಡಿಯ ಮೇಲೆ ಟಗರು ಕಾಳಗದ ಸುಂದರವಾದ ಕೆತ್ತನೆ ಇದೆ.

(ಕೆ.ಎಂ.ಎಸ್.)

**ಸೋದೆ ಅರಸರು:** 16ನೆಯ ಶತಮಾನದ ಮಧ್ಯಭಾಗದಿಂದ 18ನೆಯ ಶತಮಾನದ ಮೂರನೆಯ ಪಾದದವರೆಗೆ, ಆರಂಭದಲ್ಲಿ ವಿಜಯನಗರದ ಅರಸರ, ಮುಂದೆ ಕೆಳದಿ ಮತ್ತು ಬಿಜಾಪುರದ ಅರಸರ ಮಾಂಡಲಿಕರಾಗಿ ಆಳುತ್ತಿದ್ದ ಒಂದು ರಾಜಮನೆತನ. ಇವರ ರಾಜಧಾನಿ ಸೋದೆ (ಉತ್ತರ ಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕು). ಬನವಾಸಿ 12000 ನಾಡು ತಮ್ಮ ರಾಜ್ಯವೆಂದು ಇವರು ಹೇಳಿಕೊಂಡಿದ್ದಾರೆ. ಶಿರಸಿ, ಅಂಕೋಲ, ಕಾರವಾರ, ಹಳಿಯಾಳ ತಾಲ್ಲೂಕುಗಳ ಹಾಗೂ ಇಂದಿನ ಗೋವೆಯ ಕೆಲಪ್ರದೇಶಗಳ ಮೇಲೆ ಇವರ ಆಡಳಿತವಿತ್ತು.

ಒಂದು ಶಾಸನದ ಪ್ರಕಾರ ಸೋದೆಯ ಸಂಕಣ್ಣನಾಯಕ ಮತ್ತು ಅವನ ಮಗ ಅರಸಪ್ಪನಾಯಕ ಈ ವಂಶದ ಆದ್ಯರು. ಮೊದಲ ದೊರೆ ವೆಂಕಟಪ್ಪನಾಯಕ. ಅನಂತರ ರಾಮಚಂದ್ರ, ವಜ್ರವಡೇರ ಹಾಗೂ ದೇವರಾಜ ಎಂಬುವರ ಅನುಕ್ರಮ ಬಖೈರುಗಳಿಂದ ತಿಳಿಯುತ್ತದೆ. ವಿಜಯನಗರದ ಕೃಷ್ಣದೇವರಾಯ ತನ್ನ ಸಹೋದರಿಯ ಮಗ ಅರಸಪ್ಪನಾಯಕನಿಗೆ ಸ್ವಾದಿಯನ್ನು ಕೊಟ್ಟನೆಂದು ಈತ ಅನಂತರದಲ್ಲಿ ಈ ಪ್ರದೇಶದ ನಾಯಕನಾಗಿ ಆಳಲು ಪ್ರಾರಂಭಿಸಿದನೆಂದೂ ಹೇಳಿಕೆ ಇದೆ. ಅರಸಪ್ಪನಾಯಕ (ಸು.1555–98) ಸ್ಪಷ್ಟವಾಗಿ ತಿಳಿದಿರುವ ಈ ವಂಶದ ಮೊದಲ ದೊರೆ. 1591–93, 95ರ ಇವನ ಶಾಸನಗಳು ದೊರಕಿದ್ದು, ಅವುಗಳಲ್ಲಿ ಇಮ್ಮಡಿ ಅರಸಪ್ಪನೆಂದು ಉಲ್ಲೇಖಿತನಾಗಿದ್ದಾನೆ. ಈತ 1578–79ರ ಸುಮಾರಿನಲ್ಲಿ ಬಿಜಾಪುರದ ಜೊತೆ ಸೇರಿ ಕೆಳದಿಯ ವಿರುದ್ಧ ಯುದ್ಧ ಹೂಡಿದ್ದ. ಈತ ಖ್ಯಾತ ಮಾಧ್ವಸಂನ್ಯಾಸಿಗಳಾದ ಸೋದೆ ಮಠದ ವಾದಿರಾಜತೀರ್ಥರ ಭಕ್ತನಾಗಿದ್ದ. ಮುಂದೆ ಅರಸಪ್ಪನ ಮಗ ರಾಮಚಂದ್ರ, ಅವನ ಮಗ ರಘುನಾಥ (1611; 1629) ಆಳಿದರು. ರಘುನಾಥ ಮಾಧ್ವಸಂಪ್ರದಾಯ ತೊರೆದು ವೀರಶೈವನಾದ. ಈತ 1611ರಲ್ಲಿ ವಿಜಯನಗರದ ಮಾಂಡಲಿಕನಾಗಿದ್ದಂತೆ ಒಂದು ಶಾಸನದಿಂದ ತಿಳಿಯುತ್ತದೆ. ಮಧುಲಿಂಗನಾಯಕ, ಸದಾಶಿವನಾಯಕ (1694), ಇಮ್ಮಡಿ ಸದಾಶಿವ ನಾಯಕ (1696; 1702) ಇವರು ಆಮೇಲೆ ಆಳಿದ ದೊರೆಗಳು. ಬಿಜಾಪುರದ ಪತನಾನಂತರ ಸೋದೆಯ ದೊರೆಗಳು ಮರಾಠರ, ಮುಂದೆ ಮುಗಲರ ಅನಂತರ ಮತ್ತೆ ಮರಾಠರ ಮಾಂಡಲಿಕರಾಗಿದ್ದರು. ಇಮ್ಮಡಿ ಸದಾಶಿವ ನಾಯಕ ಮರಾಠರಿಂದ ಪಂಚಮಹಾಲ್ ಪ್ರದೇಶ ಪಡೆದು, ಅವರಿಗೆ ಕಪ್ಪ ನೀಡಲು ಒಪ್ಪಿದ. 1706ರಲ್ಲಿ ಮುಗಲರು ಪೊಂಡ (ಈಗಿನ ಪೋಂಡಾ) ಕೋಟೆ ಮತ್ತು ಸುತ್ತಲ ಕೆಲವು ಪ್ರದೇಶಗಳನ್ನು ಸೋದೆಗೆ ನೀಡಿ

80,000 ರೂಪಾಯಿಗಳ ವಾರ್ಷಿಕ ಪೊಗದಿ ಪಡೆಯಲು ನಿರ್ಧರಿಸಿದರು. ಬಸವಲಿಂಗನಾಯಕ, ಇಮ್ಮಡಿ ಬಸವಲಿಂಗನಾಯಕ (1705; 1732) ಹಾಗೂ ಸದಾಶಿವ ಮುಂದಿನ ದೊರೆಗಳು. ಇಮ್ಮಡಿ ಬಸವಲಿಂಗನಾಯಕ ಕೊಲ್ಲಾಪುರದ ಮರಾಠರ ಸಾಮಂತನಾಗಿದ್ದ (ಸು. 1715–18). 1764ರಲ್ಲಿ ಹೈದರ್ ಸೋದೆಯನ್ನು ಗೆದ್ದುಕೊಂಡ. ಈ ವಂಶದವರು ಗೋವೆಯ ಪ್ರದೇಶದಲ್ಲಿ ಪೋರ್ಚುಗೀಸರ ಆಶ್ರಯ ಪಡೆದರು. ಅಲ್ಲಿಯೂ ಕೆಲಕಾಲ ರಾಜಕೀಯ ಚಟುವಟಿಕೆಯನ್ನು ಮುಂದುವರಿಸಿದರೂ ಕಳೆದುಕೊಂಡ ರಾಜ್ಯವನ್ನು ಮತ್ತೆ ಪಡೆಯಲಾಗಲಿಲ್ಲ. ಈ ವಂಶಸ್ಥರು ಈಗಲೂ ಗೋವ ರಾಜ್ಯದ ಪೋಂಡಾ ಎಂಬಲ್ಲಿದ್ದಾರೆ.

ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿರುವ ಸುಂದರ ಕೆತ್ತನೆಯ ಕಲ್ಲುಮಂಚ ಮತ್ತು ಆಸನ ಇವರ ಕಾಲದ ಅಸಾಮಾನ್ಯ ಕಲಾಕೃತಿಗಳು, ಸದಾಶಿವಗಡ ಕೋಟೆ ಸಹ ಇವರ ಕಾಲದ್ದು. ಬಿಳಗಿ ಮತ್ತು ಕೆಳದಿ ರಾಜವಂಶಗಳ ಜೊತೆ ರಕ್ತಸಂಬಂಧ ಹೊಂದಿದ್ದ ಈ ವಂಶ ಕೊಂಕಣ ಪ್ರದೇಶದಲ್ಲಿನ ಪೋರ್ಚುಗೀಸರ, ಮರಾಠರ ಮತ್ತು ಮುಗಲರ ಚಟುವಟಿಕೆಗಳ ಕಥನಗಳಲ್ಲಿ ತತ್ಕಾಲದ ರಾಜಕೀಯದಲ್ಲಿ ಪ್ರಧಾನ ಪಾತ್ರ ವಹಿಸಿದ ಒಂದು ರಾಜಸತ್ತೆಯಾಗಿ ಹೇಳಿದೆ. **(ಎಸ್.ಕೆ.)**

**ಸೋಮನ ಕುಣಿತ:** ಕರ್ನಾಟಕದ ಜನಪದ ನೃತ್ಯಗಳಲ್ಲೊಂದು. ಸೋಮಗಳೆಂದರೆ, ಕೊಂಚ ಉಗ್ರವಾಗಿಯೇ ಕಾಣುವಂಥ ಮುಖಭಾವವುಳ್ಳ ಮುಖವಾಡಗಳು. ಇವಕ್ಕೆ ತಲೆಯ ಭಾಗವಷ್ಟೆ ಅಮಾನುಷಾಕೃತಿಯದು, ಮಿಕ್ಕ ದೇಹಭಾಗವೆಲ್ಲ ಜೀವಂತಮಾನವನಿಂದ ತುಂಬಿಕೊಳ್ಳಬೇಕಾಗುತ್ತದೆ. ಕೋರೆಮೀಸೆ, ಕೋರೆದಾಡೆ, ಅಗಲಮುಖ, ನೀಳಮೂಗು, ತಿದ್ದಿದ ಹುಬ್ಬು, ಹಣೆಗೆ ಧರಿಸಿದ ನಾಮಗಳಿಂದ ಕೂಡಿದ ಸೋಮನ ಮುಖ ಭಯಂಕರವಾದರೂ ಸುಂದರವಾಗಿರುತ್ತದೆ. ಇದರ ತಲೆಯ ಭಾಗಕ್ಕೆ ಅಲಂಕೃತವಾದ ತ್ರಿಕೋನಾಕೃತಿಯ ಬೆತ್ತದ ಹೆಣಿಗೆಯ ಸಾಧನ ಎದ್ದು ನಿಂತಿದ್ದು ಇದನ್ನು ಮನುಷ್ಯ ಧರಿಸಿಕೊಂಡು ಕುಣಿಯುವಾಗ ಇದು ಭವ್ಯಾಕೃತಿಯ ಸ್ವರೂಪ ತಂದುಕೊಡುವುದಲ್ಲದೆ ನೋಡುವವರಿಗೆ ಆಕರ್ಷಕವಾಗಿರುತ್ತದೆ. ಸೋಮನನ್ನು ಧರಿಸಿಕೊಂಡು ಕುಣಿಯುವಾತ ಯಾವಾಗಲೂ ಗಂಡಸು.

ಕುಣಿತದಲ್ಲಿ ಸಾಮಾನ್ಯವಾಗಿ ಎರಡು ಸೋಮಗಳಿರುವುದು ರೂಢಿ. ಒಂದು ಕೆಂಪುಬಣ್ಣದ ಉಗ್ರಸ್ವರೂಪದ ಕೆಂಚರಾಯ, ಇನ್ನೊಂದು ಹಳದಿ ಬಣ್ಣದ ಕೊಂಚ ಸೌಮ್ಯ ರೂಪದ ಈರಣ್ಣ. ಕೆಲವು ಕಡೆ ಮೂರು ಸೋಮಗಳಿವೆ. ಈ ಮೂರನೆಯದು ನೀಲವರ್ಣದ್ದಾಗಿದ್ದು ಇದನ್ನು ಕರಿರಾಯ ಎಂದೂ ಕರೆಯುತ್ತಾರೆ. ಕುಣಿಯುವಾಗ ಸಾಮಾನ್ಯವಾಗಿ ದೇವರ ಸೀರೆಯನ್ನು ಲಂಗದಂತೆ ಹೊಲಿದು ಸೊಂಟಕ್ಕೆ ಕಟ್ಟಿಕೊಳ್ಳುವುದು ಪದ್ಧತಿ. ಕೆಲವು ಕಡೆ ಬಿಗಿ ಶರಾಯಿಗಳನ್ನು ತೊಟ್ಟಿರುವುದು ಇತ್ತೀಚೆಗೆ ಕಾಣಬರುತ್ತದೆ. ಈ ಕುಣಿತ ಮಾಡುವ ವ್ಯಕ್ತಿ ಕೈಗಳಿಗೆ ಬೆಳ್ಳಿಯ ಮುರಿ ಎಂಬ ಆಭರಣವನ್ನೂ ಕಾಲು ಮತ್ತು ಸೊಂಟಗಳಿಗೆ ದಪ್ಪ ಕುದುರೆ ಗೆಜ್ಜೆಗಳನ್ನೂ ಕಟ್ಟಿಕೊಂಡು ಸೋಮನ ಮೂಗಿನ ಹೊಳ್ಳೆಗಳಿರುವ ರಂಧ್ರದ ಮುಖಾಂತರ ನೋಡುತ್ತ, ಹರೆ ದೋಣಿನ ತಾಳಲಯಕ್ಕೆ ತಕ್ಕಂತೆ ತೂಗುತ್ತ ಬಾಗುತ್ತ ಹಿಂದೆ ಮುಂದೆ ಓಡಾಡುತ್ತ, ಲಾಸ್ಯ ತಾಂಡವ ನೃತ್ಯ ಮಾಡುತ್ತಿರುತ್ತಾನೆ. ದೇವರ ಪರವಾಗಿ ಹಾಕುವ ಮಣೇವನ್ನುಳಿದು ಇತರ ಮೀಸಲು ತೀರಿಸುವುದು ಇವನ ಕರ್ತವ್ಯ. ದೆವ್ವ, ಪೀಡೆಗಳ ಶಂಕೆಯಿಂದ ಭಕ್ತರನ್ನು ಮುಕ್ತಗೊಳಿಸುವ ಜವಾಬ್ದಾರಿಯೂ ಸೋಮನದೆ. ಸೋಮನ ಕುಣಿತ ನೇಪಾಳ ಹಾಗೂ ಭೂತಾನ ದೇಶಗಳ ದೆವ್ವದ ಕುಣಿತವನ್ನೇ ಬಹುಪಾಲು ಹೋಲುವಂತಿದ್ದರೂ ಇವುಗಳಲ್ಲಿ ಪರಸ್ಪರ ಯಾವುದೇ ಸಂಬಂಧ ಕಂಡುಬರುವುದಿಲ್ಲ.

ಸೋಮನ ಕುಣಿತವನ್ನು ನೃತ್ಯಕಲೆಯಾಗಿ ಯಾರೂ ಅಭ್ಯಾಸ ಮಾಡಿದಂತಿಲ್ಲ. ಏಕೆಂದರೆ ದೇವರ ಮೆರವಣಿಗೆಯ ಸಂದರ್ಭದಲ್ಲಿ ಮಾತ್ರ ಕುಣಿಯಬೇಕೆಂಬ ನಿಯಮವಿರುವುದರಿಂದ ಈ ಕುಣಿತವಿರುತ್ತದೆ. ಕುಣಿಯುವ ಕಲೆಯ ಅಥವಾ ಕಲಿಕೆಯ ಸಲುವಾಗಿಯೇ ಇತರ ದಿನಗಳಲ್ಲಿ ಯಾರೂ ಸೋಮನನ್ನು ಧರಿಸಿ ಕುಣಿಯುವುದಿಲ್ಲ. ಹಾಗಾಗಿ ಸೋಮನ ಕುಣಿತ ಒಂದು ಧಾರ್ಮಿಕ ವಿಧಿಯಾಗಿ ಮಾತ್ರ ಉಳಿದು ಬಂದಿದೆ.

ಸೋಮಗಳು

ಸೋಮನ ಕುಣಿತ ಪೂಜೆ, ಸೇವೆಗಳಿಗೂ ಶಕ್ತಿಪೂಜೆಗೂ ನಿಕಟಸಂಬಂಧವಿದೆ. ಆದರೆ ಪ್ರತಿಯೊಂದು ಶಕ್ತಿ ದೇವತೆಗೂ ಸೋಮಗಳಿರಲೇಬೇಕೆಂಬ ನಿಯಮವೇನಿಲ್ಲ. ಇದ್ದರೂ ಇವು ಆ ದೇವತೆಯ ಸೌಂದರ್ಯ ಸಂಪತ್ಸಾಧನೆಯ ಅಂಗಗಳು ಮಾತ್ರವಾಗಿರದೆ, ಆಯಾ ದೇವತೆಯ ಅಂಶೀಭೂತ ಗಣಾಚಾರದ ಶಕ್ತಿಸಹಚರರಾಗಿರುತ್ತವೆ. ಸೋಮಗಳೆಲ್ಲ ಗಂಡೇ ಆಗಿರುವುದು ದೇವಿಯ ಉಪಾಸನೆ ಹಾಗೂ ಸಂರಕ್ಷಣೆಯ ಜವಾಬ್ದಾರಿ ಅವುಗಳ ಮೇಲಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಆದ್ದರಿಂದಲೇ ಮಾರಿದೇವತೆಗೆ ತೋರುವ ಶ್ರದ್ಧೆ, ಮಾಡುವ ಪೂಜೆಗಳೆಲ್ಲ ಇವಕ್ಕೂ ಸಲ್ಲುತ್ತವೆ. **(ಎಸ್.ಟಿ.)**

**ಸೋಮನಾಥಪುರ:** ಮೈಸೂರು ಜಿಲ್ಲೆ ತಿರುಮಕೂಡಲುನರಸೀಪುರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಕಸಬೆಗೆ 10 ಕಿಮೀ, ಮೈಸೂರಿಗೆ 40 ಕಿಮೀ ದೂರದಲ್ಲಿ ಕಾವೇರಿ ನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 4,554.

13ನೆಯ ಶತಮಾನದಲ್ಲಿ ಇದೊಂದು ಅಗ್ರಹಾರವಾಗಿತ್ತು. ಈ ಅಗ್ರಹಾರಕ್ಕೆ ಸರ್ವನಮಸ್ಯ ಮಹಾಗ್ರಹಾರ ವಿದ್ಯಾನಿಧಿಪ್ರಸನ್ನ ಸೋಮನಾಥಪುರ ಅಥವಾ ಚತುರ್ವೇದಿಮಂಗಲ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ ಎಂಬ ಹೆಸರಿದ್ದಿತು. ಈ ಊರಿನಲ್ಲಿರುವ ಏಳು ಶಾಸನಗಳಲ್ಲದೆ ಹರಿಹರದಲ್ಲಿರುವ ಒಂದು ಶಾಸನವೂ ಹೆಬ್ಬಕವಾಡಿಯಲ್ಲಿರುವ ಮತ್ತೊಂದು ಶಾಸನವೂ ಈ ಅಗ್ರಹಾರದ ಬಗೆಗೆ, ಇಲ್ಲಿನ ದೇವಾಲಯಗಳ ಬಗೆಗೆ ಸಾಕಷ್ಟು ವಿವರಗಳನ್ನೊದಗಿಸುತ್ತವೆ. ಕಲೆ ಹಾಗೂ ವಿದ್ಯೆಗೆ ಈ ಅಗ್ರಹಾರ ಆಗರವಾಗಿತ್ತೆಂದು ಶಾಸನಗಳು ವರ್ಣಿಸುತ್ತವೆ. ಹೊಯ್ಸಳ ಚಕ್ರವರ್ತಿ ಮುಮ್ಮಡಿ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಆತನ ಸಂಧಿವಿಗ್ರಹಿಯೂ ಮಂತ್ರಿಯೂ ದಂಡನಾಯಕನೂ ಆಗಿದ್ದ ಸೋಮನಾಥ ಈ ಅಗ್ರಹಾರವನ್ನು ಸು. 1258ರಲ್ಲಿ ನಿರ್ಮಿಸಿ, ತನ್ನ ಹೆಸರಿನಿಂದ ಸೋಮನಾಥಪುರವೆಂದು ಕರೆದು, ಇಲ್ಲಿ ಒಂದು ವಿಷ್ಣು ದೇವಾಲಯವನ್ನೂ (ಕೇಶವ) ಒಂದು ಶಿವಾಲಯವನ್ನೂ (ಪಂಚಲಿಂಗ) ಕಟ್ಟಿಸಿದ. ಈ ದೇವಾಲಯಗಳಲ್ಲದೆ ಕಾವೇರಿ ನದಿಯ ದಡಕ್ಕೆ ಹೊಂದಿಕೊಂಡಂತೆ ಲಕ್ಷ್ಮೀನರಸಿಂಹ ಯೋಗನಾರಾಯಣ ಮತ್ತು ನಾರಸಿಂಹೇಶ್ವರ ದೇವಾಲಯಗಳನ್ನೂ

ಪಂಚಲಿಂಗ ದೇವಾಲಯದ ಬಳಿ ಸೋವಲೇಶ್ವರವೆಂಬ ಮತ್ತೊಂದು ಶಿವದೇವಾಲಯವನ್ನೂ ಈತ ಕಟ್ಟಿಸಿದುದಾಗಿ ತಿಳಿದುಬರುತ್ತದೆ.

ಕೇಶವ ದೇವಾಲಯ ಮೂರು ಗರ್ಭಗೃಹಗಳುಳ್ಳ ತ್ರಿಕೂಟಾಚಲ. ಬೇಲೂರಿನ ಚೆನ್ನಕೇಶವ ದೇವಾಲಯಕ್ಕಿಂತ ಸಣ್ಣದಾಗಿದ್ದರೂ ಇಲ್ಲಿ ಕೆತ್ತನೆಯ ಅಲಂಕಾರದ ಕೆಲಸಗಳು ಹೆಚ್ಚು. ಹಾಗಾಗಿ ಇದು ಉತ್ತಮ ಹೊಯ್ಸಳ ದೇವಾಲಯವೆಂದು ಪರಿಗಣಿತವಾಗಿದೆ.



ಕೇಶವ ದೇವಾಲಯ

ಈ ದೇವಾಲಯ 218' ಉದ್ದ, 117' ಅಗಲದ ಚತುರಸ್ರಾಕಾರದ ಅಂಗಳದ ಮಧ್ಯದಲ್ಲಿದೆ. ಈ ಅಂಗಳದ ಒಳಭಾಗದಲ್ಲಿ ಪ್ರಾಕಾರದ ಗೋಡೆಗೆ ಸೇರಿದಂತೆ ಎರಡು ಅಂಕಣಗಳ 64 ಕೈಸಾಲೆ ಮಂಟಪಗಳಿವೆ. ದೇವಾಲಯ ಪೂರ್ವಾಭಿಮುಖವಾಗಿದ್ದು ಮೂರು ಅಡಿಯ ಜಗತಿಯ ಮೇಲೆ ನಿಂತಿದೆ. ಜಗತಿಯನ್ನು ಹತ್ತಲು ಮೆಟ್ಟಲುಗಳಿದ್ದು ಅವುಗಳ ಎರಡು ಪಾರ್ಶ್ವಗಳಲ್ಲಿಯೂ ಸಣ್ಣ ದೇವಾಲಯಗಳಿವೆ. ಜಗತಿಯು ಹದಿನಾರು ಕೋಣಗಳ ನಕ್ಷತ್ರಾಕಾರದ್ದಾಗಿದ್ದು, ಅದರ ಕೆಳಭಾಗದ ಮೂಲೆಗಳಲ್ಲಿ, ಕಟ್ಟಡವನ್ನು ಹೊತ್ತು ನಿಂತಿರುವಂತೆ ಆನೆಗಳು ನಿಲ್ಲಿಸಲ್ಪಟ್ಟಿವೆ. ಜಗತಿಗೆ ಒರಗಿಕೊಂಡಂತೆ ಕೆಲವು ವಿಗ್ರಹಗಳಿವೆ.

ದೇವಾಲಯದ ಗೋಡೆಯನ್ನು ಕೆಳಭಾಗ, ಮಧ್ಯಭಾಗ ಮತ್ತು ಮೇಲ್ಭಾಗವೆಂದು ವಿಂಗಡಿಸಬಹುದು. ಕೆಳಭಾಗದ ಪಟ್ಟಿಕೆಗಳಲ್ಲಿ ಆನೆ, ಅಶ್ವಾರೋಹಿಗಳು, ಲತಾಪಟ್ಟಿಕೆ, ಪೌರಾಣಿಕ ಕಥೆಗಳ ಪಟ್ಟಿಕೆ, ಮಕರ, ಹಂಸಗಳು ಕೆತ್ತಲ್ಪಟ್ಟಿವೆ. ಈ ಪ್ರತಿಯೊಂದು ಪಟ್ಟಿಕೆಯೂ ಏಳು ಅಂಗುಲ ಅಗಲವಾಗಿದೆ. ಆನೆಗಳು ಮತ್ತು ಅಶ್ವಾರೋಹಿಗಳ ಪಟ್ಟಿಕೆಯಲ್ಲಿ ಕಾಣಬರುವ ಉಡುಗೆ ತೊಡುಗೆ, ಆಭರಣ, ಆಯುಧ ವಿಶೇಷಗಳು ಗಮನಾರ್ಹವಾದವು. ರಾಮಾಯಣ, ಭಾಗವತ ಮತ್ತು ಮಹಾಭಾರತದ ಕಥೆಗಳು ಪೌರಾಣಿಕ ಕಥೆಗಳ ಪಟ್ಟಿಕೆಯಲ್ಲಿ ಕಾಣಬರುತ್ತವೆ. ಪೂರ್ವದಿಂದ ಪ್ರಾರಂಭಿಸಿದರೆ ರಾಮಾಯಣದ ಕಥೆಯು ದಶರಥನ ಆಸ್ಥಾನ, ಪುತ್ರಕಾಮೇಷ್ಠಿಯಾಗದಿಂದ ಹಿಡಿದು ರಾಮ-ಸುಗ್ರೀವರ ಸ್ನೇಹದವರೆಗೂ ಕೆತ್ತಲ್ಪಟ್ಟಿದೆ. ಅನಂತರ ಕೃಷ್ಣಜನ್ಮದಿಂದ ಕಂಸವಧೆಯವರೆಗಿನ ಭಾಗವತ ಕಥೆಯಿದೆ. ಈ ಪಟ್ಟಿಕೆಗಳ ಮೇಲೆ, ಗರ್ಭಗುಡಿಯ ಸುತ್ತಲೂ ಹೊರ ಭಾಗದಲ್ಲಿ ಸುಂದರವಾದ 194 ದೊಡ್ಡ ಶಿಲ್ಪಗಳಿವೆ. ಇವುಗಳಲ್ಲಿ ನಾರಸಿಂಹ, ಹಯಗ್ರೀವ, ವೇಣುಗೋಪಾಲ, ವರಾಹ, ಶಿವ, ಇಂದ್ರ, ಮನ್ಮಥ, ಸೂರ್ಯ, ಮಹಿಷಾಸುರಮರ್ದಿನಿ, ಸರಸ್ವತಿ ಮುಖ್ಯವಾದವು. ಈ ವಿಗ್ರಹಗಳ ಪೀಠದ ಮೇಲೆ ಇವುಗಳನ್ನು ಕೆತ್ತಿದ ಮಲ್ಲಿತಮ್ಮ, ಚೌಡಯ್ಯ, ಬಾಲಯ್ಯ, ಮಸಣಿತಮ್ಮ, ಲೋಹಿತ, ಎಲೆಮಸ್ಸೆಯ್ಯ ಮೊದಲಾದ ರೂವಾರಿಗಳ ಹೆಸರುಗಳಿವೆ. ಈ ವಿಗ್ರಹಗಳ ಮೇಲಿನ ತೋರಣಗಳಲ್ಲಿ ಲತಾ ಫಲಪುಷ್ಪ, ಕೀರ್ತಿಮುಖ ಬಲು ಸೂಕ್ಷ್ಮವಾಗಿ ಶಿಲ್ಪಿತವಾಗಿವೆ. ಈ ವಿಗ್ರಹಗಳ ಮೇಲೆ ಸಣ್ಣ ಪ್ರಮಾಣದ ಶಿಖರಗಳು ಕೆತ್ತಲ್ಪಟ್ಟಿವೆ. ಎಲ್ಲಕ್ಕೂ ಮೇಲೆ ಗೋಡೆಯ ತುದಿಯಲ್ಲಿ ದೇವಸ್ಥಾನದ ಸುತ್ತಲೂ ಲೋವೆಕಲ್ಲು ಇದೆ.

ಈ ದೇವಾಲಯದ ಮುಖ್ಯ ಆಕರ್ಷಣೆಯೆಂದರೆ ಮೂರು ಶಿಖರಗಳು, ಹದಿನಾರು ಕೋಣಗಳ ನಕ್ಷತ್ರಾಕಾರದ ವಿನ್ಯಾಸದ ಮೇಲೆ ರಚಿತವಾಗಿರುವ ಶಿಖರಗಳು ಮಧ್ಯದಲ್ಲಿ ಒಂದು, ಎರಡು ಪಾರ್ಶ್ವಗಳಲ್ಲಿ ಒಂದೊಂದರಂತೆ ಇವೆ. ಇದರಿಂದ ಈ ದೇವಾಲಯ ಬಹು ರಮ್ಯವಾಗಿ ಕಾಣುತ್ತದೆ. ಇವು ಅಷ್ಟೇನೂ ಎತ್ತರವಾಗಿಲ್ಲ. ಜಗತಿಯಿಂದ ಮೇಲಕ್ಕೆ 32" ಮಾತ್ರ. ಆಕಾರದಲ್ಲಿ ಗರ್ಭಗುಡಿಯ ಗೋಡೆಯ ಮೇಲೆ ಗೋಡೆಯ ಶೈಲಿಯನ್ನೇ ಅನುಸರಿಸಿ ನಕ್ಷತ್ರಾಕಾರವಾಗಿ ಮೇಲಕ್ಕೆ ಹೋಗುತ್ತ ಸಣ್ಣದಾಗುತ್ತ ಹೋಗುತ್ತವೆ. ಇವು ಸುಕನಾಸಿಯ ಮೇಲ್ಭಾಗದಲ್ಲಿ ಸ್ವಲ್ಪ ಮುಂದಕ್ಕೆ ಚಾಚಿಕೊಂಡಿವೆ. ಶಿಖರದ ಹಂತಗಳಲ್ಲಿ ಸಿಂಹಮುಖ, ಕೀರ್ತಿಮುಖ, ಗಂಧರ್ವರು, ಯಕ್ಷರು, ನರ್ತಕರು, ಅಷ್ಟದಿಕ್ಪಾಲಕರು ಮತ್ತು ಇತರ ಸುಂದರ ವಿಗ್ರಹಗಳಿವೆ. ಶಿಖರದ ತುದಿಯಲ್ಲಿ ಬೋಗುಣಿಯಾಕಾರದ

ವೇಣುಗೋಪಾಲ ವಿಗ್ರಹ

ಮಗುಚಿ ಹಾಕಿದ ಪದ್ಮವಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಮೂರು ಶಿಖರಗಳ ಹೊಂದಾಣಿಕೆ ಇಷ್ಟರಮಟ್ಟಿಗೆ ಬೇರೆ ಯಾವ ಹೊಯ್ಸಳ ದೇವಾಲಯದಲ್ಲೂ ಕಾಣಬರುವುದಿಲ್ಲ.

ದೇವಾಲಯದಲ್ಲಿ ಒಂದು ಮುಖಮಂಟಪ, ನವರಂಗ, ಮೂರು ಗರ್ಭಗೃಹಗಳಿವೆ. ಈ ಒಂದೊಂದು ಗರ್ಭಗೃಹದ ಮುಂಭಾಗದಲ್ಲಿಯೂ

ಒಂದು ಸುಕನಾಸಿ ಇದೆ. ಏಳು ಅಂಕಣದ ಮುಖಮಂಟಪ, ಒಂಬತ್ತು ಅಂಕಣದ ನವರಂಗ, ಒಂದೊಂದು ಅಂಕಣದ ಮೂರು ಸುಕನಾಸಿ ಮತ್ತು ಗರ್ಭಗೃಹಗಳ ಕಲ್ಪನೆ ಬಹು ಸುಂದರ. ಮುಖಮಂಟಪದ ಗೋಡೆಯ ಸುತ್ತಲೂ ಒಳಗೆ ಎತ್ತರವಾದ ಜಗತಿ ಇದೆ. ನವರಂಗದಲ್ಲಿ ರತಕ್ಕ ಕಂಬಗಳು ಮಧ್ಯದ ನಾಲ್ಕನ್ನು ಬಿಟ್ಟರೆ ಮಿಕ್ಕೆಲ್ಲವೂ ಒಂದೇ ರೀತಿಯಲ್ಲಿವೆ. ಮಧ್ಯದ ನಾಲ್ಕು ಕಂಬಗಳ ಬುಡದಲ್ಲಿ ಯಕ್ಷರು, ನಾಲ್ಕು ಮುಖಗಳಲ್ಲಿಯೂ ಇರುವರು; ಇವುಗಳ ಪೂರ್ವದಲ್ಲಿರುವ ಎರಡು ಕಂಬಗಳು 32 ಕೋಣಗಳ ನಕ್ಷತ್ರಾಕೃತಿಯಲ್ಲಿವೆ. ನವರಂಗದ ಮೇಲ್ಛಾವಣಿ



ಶಿಲ್ಪಕಲಾಕೃತಿಗಳ ಪಟ್ಟಿಕೆಗಳು, ಕೇಶವ ದೇವಾಲಯ

ಯಲ್ಲಿ 16 ಅಂಕಣಗಳಿವೆ. ಪ್ರತಿಯೊಂದು ಅಂಕಣದಲ್ಲಿಯೂ ಭುವನೇಶ್ವರಿಗಳಿವೆ. ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು, ಅದರ ಮೇಲೆ 32 ಬಗ್ಗಿದ ತೊಲೆಗಳಿಂದ ಮಾಡಿದ ಕಮಾನು, ಅದರ ಮಧ್ಯದಲ್ಲಿ ತೂಗಾಡುವ ರೀತಿಯ ಕಮಲದ ಮೊಗ್ಗು ಇವೆ. ಪೂರ್ವದ್ವಾರದ ಭುವನೇಶ್ವರಿ ಅತ್ಯಂತ ಸುಂದರವಾಗಿದೆ. ಇದರಲ್ಲಿ ಅಷ್ಟದಿಕ್ಪಾಲಕರು, ಅವರ ಪರಿವಾರ, ನರ್ತಕರ ಮೇಲೆ ಮೂವತ್ತೆರಡು ಶಿಖರಗಳು, ಮಧ್ಯೆ ಶೈವ ವೈಷ್ಣವ ವಿಗ್ರಹಗಳ ಮಧ್ಯದಲ್ಲಿ ನಾಲ್ಕು ಅಡಿ ಉದ್ದದ ಕಮಲದ ಮೊಗ್ಗು ಜೋಲಾಡುತ್ತಿದೆ. ಭುವನೇಶ್ವರಿಗಳಲ್ಲಿ ಕಾಣಬರುವ ವೈವಿಧ್ಯತೆ, ತೊಡಕಿನ ಮಾದರಿಗಳು, ಸೂಕ್ಷ್ಮ ಪ್ರಮಾಣದ ವಿಗ್ರಹಗಳು, ಕೆತ್ತನೆಗಳು ನಮ್ಮನ್ನು ಬೆರಗುಗೊಳಿಸುತ್ತವೆ.

ಈ ದೇವಾಲಯದ ಮೂರು ಗರ್ಭಗೃಹಗಳ ಪೈಕಿ ಉತ್ತರ ಗರ್ಭಗೃಹದಲ್ಲಿ ಜನಾರ್ದನ ವಿಗ್ರಹವೂ ದಕ್ಷಿಣ ಗರ್ಭಗೃಹದಲ್ಲಿ ವೇಣುಗೋಪಾಲ ವಿಗ್ರಹವೂ ಇವೆ. ಮಧ್ಯದ ಗರ್ಭಗೃಹದಲ್ಲಿ ಹಿಂದೆ ಕೇಶವನ ವಿಗ್ರಹವಿದ್ದಿತೆಂದು ಹೇಳುತ್ತಾರಾದರೂ ಈಗ ಯಾವ ವಿಗ್ರಹವೂ ಇಲ್ಲ. ಜನಾರ್ದನ ಮತ್ತು ವೇಣುಗೋಪಾಲ ವಿಗ್ರಹಗಳು ಸುಂದರವಾಗಿವೆ. ವೇಣುಗೋಪಾಲ ವಿಗ್ರಹ ನಾಲ್ಕೂವರೆ ಅಡಿ ಎತ್ತರವಿದೆ; ಈ ದೇವಾಲಯದ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ಗರ್ಭಗೃಹ ಮತ್ತು ಸುಕನಾಸಿಯ ಬಾಗಿಲುವಾಡಗಳು, ಇವು ಬಲು ಸೂಕ್ಷ್ಮ ಕೆತ್ತನೆ ಕೆಲಸದಿಂದ ಕೂಡಿವೆ. ಪಶ್ಚಿಮ ಸುಕನಾಸಿ ದ್ವಾರದ ಮೇಲೆ ಕೇಶವ, ಗಜಲಕ್ಷ್ಮೀ, ವೈಕುಂಠ ನಾರಾಯಣನ ಶಿಲ್ಪಗಳಿವೆ. ಪಶ್ಚಿಮ ಗರ್ಭಗುಡಿಯ ಬಾಗಿಲುವಾಡದ ಮೇಲೆ ಲಕ್ಷ್ಮೀನಾರಾಯಣ ವಿಗ್ರಹವಿದೆ. ಉತ್ತರ ಸುಕನಾಸಿಯ ದ್ವಾರದ ಮೇಲೆ ದ್ವಾರಪಾಲಕರು, ಜನಾರ್ದನ, ಲಕ್ಷ್ಮೀನೃಸಿಂಹ ವಿಗ್ರಹಗಳಿವೆ. ಉತ್ತರ ಗರ್ಭಗೃಹದಲ್ಲಿರುವ ಜನಾರ್ದನ ವಿಗ್ರಹ ಆರು ಅಡಿ ಎತ್ತರವಾಗಿದ್ದು ಒಂದೂವರೆ ಅಡಿ ಎತ್ತರದ ಪೀಠದ ಮೇಲಿದೆ. ಶಂಖ ಚಕ್ರ ಗದಾ ಪದ್ಮಗಳನ್ನು ಹಿಡಿದು ನಿಂತಿರುವ ಈ ಶಿಲ್ಪ ಬಲು ಸುಂದರವಾಗಿದೆ. ಈ ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರದ ಚಿತ್ರಗಳು ಸೂಕ್ಷ್ಮವಾಗಿ ಶಿಲ್ಪಿತವಾಗಿವೆ.

ಈ ದೇವಾಲಯದ ಕೆಲವು ಪ್ರಮುಖ ಶಿಲ್ಪಗಳಲ್ಲಿ ತಾಂಡವ ಗಣಪತಿಯ ಶಿಲ್ಪ ಗಮನಾರ್ಹವಾದುದು. ದಂತ, ಅಭಯಹಸ್ತ, ಪದ್ಮ ಮತ್ತು ಕಡುಬನ್ನು ಕೈಗಳಲ್ಲಿ ಹಿಡಿದಿರುವ ಗಣೇಶನ ವಿಗ್ರಹ ನೃತ್ಯದ ಭಂಗಿಯಲ್ಲಿದೆ. ಗಣೇಶನ ಇಬ್ಬದಿಗಳಲ್ಲಿ ವಾದ್ಯಗಳನ್ನು ನುಡಿಸುವ ಸ್ತ್ರೀಯರಿದ್ದಾರೆ. ಅವರ ಪಕ್ಕದಲ್ಲಿ ಮುನಿಗಳಿದ್ದಾರೆ. ಇನ್ನೊಂದು ಆಕರ್ಷಕ ಶಿಲ್ಪವೆಂದರೆ ನೃತ್ಯ ಸರಸ್ವತಿ. ನಂಜಯ್ಯನೆಂಬ ರೂವಾರಿ ಕೆತ್ತಿದ ಈ ಶಿಲ್ಪದಲ್ಲಿ ಅಷ್ಟಭುಜೆಯಾದ ಸರಸ್ವತಿ ನೃತ್ಯ ಭಂಗಿಯಲ್ಲಿದ್ದಾಳೆ. ಎರಡು ಪಕ್ಕದಲ್ಲಿ ವಾದ್ಯವನ್ನು ಬಾರಿಸುವ ಸ್ತ್ರೀಯರಿದ್ದಾರೆ. ಮಲ್ಲಿತಮ್ಮನ ನೃತ್ಯಲಕ್ಷ್ಮಿಯೂ ಒಂದು ಉತ್ತಮ ಶಿಲ್ಪ. ಕೂರ್ಮಾವತಾರ, ಮತ್ಸ್ಯಾವತಾರ, ಶಚೀ ಮತ್ತು ಇಂದ್ರ ಐರಾವತದ ಮೇಲೆ ಕುಳಿತಿರುವುದು, ಬ್ರಹ್ಮ, ಮಸಣಿತಮ್ಮನ ರತಿ ಮನ್ಮಥ, ಚಾಮಯನ ಪರಶುರಾಮ, ಮಾರಣನು ಕೆತ್ತಿದ ಯಮ, ಮಲ್ಲಿತಮ್ಮನ ಕಲ್ಕಿ ಮತ್ತು ಮಹಿಷಾಸುರಮರ್ದಿನಿ ಮುಂತಾದವು ಹೊಯ್ಸಳ ಶಿಲ್ಪಕ್ಕೆ ಉತ್ತಮ ಉದಾಹರಣೆಗಳು. **(ಎ.ವಿ.ಎನ್.)**

ಕೇಶವ ದೇವಾಲಯಕ್ಕೆ ಈಶಾನ್ಯದಲ್ಲಿ ಸು. 250 ಮೀ ಅಂತರದಲ್ಲಿರುವ ಪಂಚಲಿಂಗೇಶ್ವರ ದೇವಾಲಯ 5 ಗರ್ಭಗೃಹಗಳುಳ್ಳ ಪಂಚಕೂಟಾಚಲ. ಇವು ಒಂದು ಸಾಲಿನಲ್ಲಿದ್ದು ಅವುಗಳಲ್ಲಿನ ಲಿಂಗಗಳಿಗೆ ಬಿಜ್ಜಲೇಶ್ವರ, ಹೆಮ್ಮೇಶ್ವರ ಅಥವಾ ಪೆರ್ಗಡೇಶ್ವರ, ರೇವಲೇಶ್ವರ, ಬಯಿರಲೇಶ್ವರ ಮತ್ತು ಸೋಮನಾಥೇಶ್ವರ ಎಂಬ ಹೆಸರಿದೆ (ಈ ಪಂಚಲಿಂಗೇಶ್ವರ ದೇವಾಲಯದ ಸಮೀಪದಲ್ಲಿಯೇ ನಿರ್ಮಿಸಿದ್ದ ಮತ್ತೊಂದು ಶಿವದೇವಾಲಯದಲ್ಲಿದ್ದುದು ಸೋವಲೇಶ್ವರಲಿಂಗ). ಈ ದೇವಾಲಯಗಳು ಕಗ್ಗಲ್ಲಿನಲ್ಲಿ ನಿರ್ಮಿತವಾಗಿವೆ. ಒಂದೊಂದರಲ್ಲಿಯೂ ಒಂದು ಗರ್ಭಗೃಹ, ಒಂದು ಸುಕನಾಸಿ ಮುಂದೆ ಒಂಬತ್ತು ಅಂಕಣಗಳ ತೆರೆದ ಮಂಟಪಗಳಿವೆ. ಸುಕನಾಸಿಗಳ ಮುಂಭಾಗದ ಒಂದು ಸಾಲು ಅಂಕಣಗಳು ಮಾತ್ರ ಒಂದಕ್ಕೊಂದು ಜೋಡಿಸಲ್ಪಟ್ಟು

ಮೂರ್ತಿಶಿಲ್ಪಕಲಾಕೃತಿಗಳು, ಕೇಶವ ದೇವಾಲಯ

ಈ ಐದು ದೇವಾಲಯಗಳನ್ನೂ ಒಂದಾಗಿ ಸೇರಿಸಿರುವ ನೀಳವಾದ ಮೊಗಸಾಲೆಯಾಗಿದೆ. ಉಳಿದಂತೆ ದೇವಾಲಯಗಳು ಬೇರೆ ಬೇರೆಯೇ. ಈ ದೇವಾಲಯಗಳಿಗೆ ಜಗತಿಯಿಲ್ಲ. ಚೌಕ ವಿನ್ಯಾಸದಲ್ಲಿರುವ ಗರ್ಭಗೃಹಗಳ ಹೊರಗೋಡೆಗಳ ಬುಡದಲ್ಲಿ ಮೂರು ಸರಳವಾದ ಕಾರ್ನಿಸುಗಳೂ ಗೋಡೆಗಳ ಮೇಲೆ ಅಲ್ಲಲ್ಲಿ ಅರೆಗಂಬಗಳೂ ಅರೆಗಂಬಗಳ ನಡುವೆ ದೊಡ್ಡದಾಗಿ ಬಿಡಿಸಿರುವ ಹೂಗಳೂ ಗೋಡೆಯ ನಡುವೆ ಅಡ್ಡಲಾಗಿ ಮತ್ತೊಂದು ಕಾರ್ನಿಸಿನ ಪಟ್ಟಿಕೆಯೂ ಇದ್ದು ಈ ಪಟ್ಟಿಕೆಯಿಂದ ಮೇಲೆದ್ದಿರುವ ಅರೆಗಂಬಗಳು ಗಂಟೆಯ ಆಕೃತಿಯನ್ನು ತಾಳಿ ಮೇಲೆ ಚೌಕ ಬೋದಿಗೆಯನ್ನು ಹೊಂದಿದೆ. ಲೋವೆ ಕಿರಿದಾಗಿದ್ದು

ಅದರ ಮೇಲೆ ಅಲ್ಲಲ್ಲಿ ದಂತಾಕೃತಿಗಳಿವೆ. ಗರ್ಭಗೃಹಗಳ ಮೇಲೆ ಅಂತಸ್ತುಗಳಾಗಿ ಮೇಲೆದ್ದಿರುವ ಚೌಕವಿನ್ಯಾಸದ ಗೋಪುರಗಳಿವೆ. ಲೋವೆಯ ಮುಂಭಾಗದಲ್ಲಿ ಗೋಪುರದ ಮುಂಚಾಚಿದ ಭಾಗಗಳಲ್ಲಿ ಅಚ್ಚುಪಟ್ಟಿಗಳಿವೆ. ಆದರೆ ಈ ದೇವಾಲಯದ ಯಾವ ಭಾಗದಲ್ಲಿಯೇ ಆಗಲಿ ಮೂರ್ತಿಶಿಲ್ಪಗಳಾಗಲಿ, ಬಳ್ಳಿಸುರುಳಿಯಾಕೃತಿಗಳಾಗಲಿ ಇಲ್ಲ. ಎಲ್ಲವೂ ನೇರ, ಸರಳ. ಮುಂದಣ ತೆರೆದ ಮಂಟಪಗಳು ಒಂದೇ ರೀತಿಯ ಉರುಳೆಯಾಕಾರದ ದಪ್ಪ ಕಂಬಗಳಿಂದ ಕೂಡಿವೆ. ಒಂದೊಂದು ಕಂಬವೂ ಚೌಕನಾದ ಬುಡ, ಅದರ ಮೇಲೆ ಅಷ್ಟಮುಖ, ಅನಂತರ

ಕೇಶವ ವಿಗ್ರಹ

16 ಮುಖಗಳ ಪಟ್ಟಿಕೆಗಳು ಇದ್ದು, ಉಳಿದಂತೆ ಉರುಳೆಯಾಕಾರದ ದಿಂಡನ್ನು ಹೊಂದಿದೆ. ಪ್ರತಿ ಅಂಕಣದ ಚಾವಣಿಯೂ ಎರಡು ವರಿಸೆ ಮೂಲೆಗಲ್ಲುಗಳನ್ನು ಸೇರಿಸಿ, ಮೇಲೆ ಅರಳಿದ ಕಮಲದಾಕೃತಿಯನ್ನು ಕಂಡರಿಸಿರುವ ಮುಚ್ಚಿಕೆಗಳಿಂದ ಕೂಡಿದೆ. ಸುಕನಾಸಿ ಮತ್ತು ಗರ್ಭಗೃಹಗಳ ಚಾವಣಿಗಳೂ ಹೀಗೆಯೇ. ಅವುಗಳ ಬಾಗಿಲುವಾಡಗಳೂ ಬಹುಮಟ್ಟಿಗೆ ಸರಳ. ಎರಡು ಕಡೆಯ ದ್ವಾರಬಂಧಗಳ ಮೇಲೆ ಸರಳವಾದ ಅರೆಗಂಬಗಳು, ಮೇಲೆ ಕಾರ್ನಿಸು ಮತ್ತು ಅರೆಗೋಪುರಾಕೃತಿಗಳಿಗಾಗಿ ಅಲ್ಲಲ್ಲಿ ಅಚ್ಚುಪಟ್ಟಿಗಳಿವೆ. ಗರ್ಭಗುಡಿಗಳಲ್ಲಿ ಈಗ ಲಿಂಗಗಳಿಲ್ಲ. ಆದರೆ ದುಂಡಾಗಿ ಸುಂದರವಾಗಿ ಕಂಡರಿಸಿದ ಪಾಣಿಪೀಠಗಳು ಬುಡಮೇಲಾಗಿ ಬಿದ್ದಿವೆ. ಸುಕನಾಸಿಗಳ ಬಾಗಿಲಿನ ಎಡಭಾಗಕ್ಕೆ ಗೋಡೆಗೆ ಸೇರಿದಂತೆ ಒಂದೊಂದು ವಿಗ್ರಹಗಳ ಪೀಠಗಳು ಇವೆ. ಅವು ಬಹುಶಃ ಶಿವಪಂಚಾಯತನ ಮೂರ್ತಿಗಳನ್ನು ಹೊಂದಿದ್ದಿರಬೇಕು. ಆದರೆ ಈಗ ಯಾವ ಮೂರ್ತಿಯೂ ಉಳಿದು ಬಂದಿಲ್ಲ. ಸೋಮದಂಡನಾಯಕ ಈ ದೇವಾಲಯವನ್ನು ಕಟ್ಟಿಸಿದ ವಿವರಗಳನ್ನು ತಿಳಿಸುವ ದೊಡ್ಡ ಶಾಸನ ದೇವಾಲಯದ ದಕ್ಷಿಣಕ್ಕೆ ನಿಂತಿದೆ. ಇದು ಮತ್ತು ಕೇಶವ ದೇವಾಲಯದ ಶಿಲಾಶಾಸನವೂ ಹೊಯ್ಸಳರ ಶಿಲಾಶಾಸನಗಳಲ್ಲಿ ಅತಿ ಸುಂದರವಾದ ಮಾದರಿಗಳಾಗಿವೆ. ಹೊಯ್ಸಳ ರೂವಾರಿಗಳು ವೈವಿಧ್ಯಮಯವಾದ ಅಲಂಕಾರಾತಿಶಯಗಳಿಂದ ತುಂಬಿ ತುಳುಕುವಂತೆ, ಅತಿ ಸೂಕ್ಷ್ಮವಾಗಿ, ನವುರಾಗಿ, ಅತಿಯಾಯಿತೇನೋ ಎನ್ನುವಷ್ಟರ ಮಟ್ಟಿಗೆ ಕಂಡರಿಸಿ ದೇವಾಲಯಗಳನ್ನು ನಿರ್ಮಿಸುವಲ್ಲಿ ನಿಷ್ಣಾತರಾಗಿದ್ದುದನ್ನು ಕೇಶವ ದೇವಾಲಯ ಎತ್ತಿ ತೋರಿಸಿದರೆ ಅತ್ಯಂತ ಸರಳವಾಗಿಯೂ ಆದರೂ ಶ್ಲಾಘ್ಯವಾಗಿಯೂ ಇರುವಂತೆಯೂ ದೇವಾಲಯಗಳನ್ನು ನಿರ್ಮಿಸಬಲ್ಲವರಾಗಿದ್ದರೆಂಬುದಕ್ಕೆ ಈ ಪಂಚಲಿಂಗೇಶ್ವರ ದೇವಾಲಯ ನಿದರ್ಶನವಾಗಿದೆ. ಹೊಯ್ಸಳ ದೇವಾಲಯಗಳಲ್ಲಿಯೇ ಇದೊಂದು ಅಪೂರ್ವ ಮಾದರಿ. ಗೋವಿಂದನಹಳ್ಳಿಯ ಪಂಚಲಿಂಗ ದೇವಾಲಯವೂ ಇದರಂತೆಯೇ ಒಂದೇ ಸಾಲಿನಲ್ಲಿ ಐದು ದೇವಾಲಯಗಳಿದ್ದರೂ ಇದರಲ್ಲಿನ ಸರಳತೆ, ಗಾಂಭೀರ್ಯ, ಸಮಪ್ರಮಾಣ ಅದರಲ್ಲಿಲ್ಲ.

ಕಾವೇರಿ ತೀರದಲ್ಲಿ ಸೋಮದಂಡನಾಯಕ ಕಟ್ಟಿಸಿದ ದೇವಾಲಯಗಳಲ್ಲಿ ಈಗ ಉಳಿದು ಬಂದಿರುವುದು ಲಕ್ಷ್ಮೀನರಸಿಂಹ ದೇವಾಲಯ ಒಂದೇ. ಕೇಶವ ದೇವಾಲಯದ ನೈಋತ್ಯಕ್ಕೆ ಸುಮಾರು ಅರ್ಧ ಕಿಮೀ ದೂರದಲ್ಲಿರುವ ಈ ದೇವಾಲಯ ಬಳಪದ ಕಲ್ಲಿನಲ್ಲಿ ನಿರ್ಮಿತವಾಗಿದೆ. ಹೆಚ್ಚು ಅಲಂಕರಣಗಳಿಲ್ಲ. ಒಂದು ಗರ್ಭಗೃಹ, ಒಂದು ಸುಕನಾಸಿ, ಒಂದು ನವರಂಗ ಮತ್ತು ಅದರ ಮುಂದೆ ಒಂದಂಕಣದ ಮುಖಭದ್ರವಿರುವ ಈ ದೇವಾಲಯ ತಕ್ಕಮಟ್ಟಿಗೆ ದೊಡ್ಡದಾಗಿದೆ. ಮುಖಭದ್ರದ ಎರಡು ಕಡೆಯೂ ಜಗಲಿಯಿದ್ದು ಅವಕ್ಕೆ ಹಿಂದೆ ಬಾಗಿರುವ ಕಟಾಂಜನಗಳಿವೆ.

ಇಲ್ಲಿನ ದೇವಾಲಯಗಳು ಕಾಲಕಾಲಕ್ಕೆ ದುರಸ್ತಿ ಹೊಂದಿದವು. ವಿಜಯನಗರದ ಕಾಲದಲ್ಲಿ ಸಾಳ್ವ ನರಸನಾಯಕ ಆಳುತ್ತಿದ್ದಾಗ ಆತನ ಅಪ್ಪಣೆ ಮೇರೆಗೆ ಈ ಅಗ್ರಹಾರದ ಜೀರ್ಣೋದ್ಧಾರ ಕಾರ್ಯವನ್ನು ಉಮ್ಮತ್ತೂರಿನ ನಂಜರಾಜ ಒಡೆಯ ಕೈಕೊಂಡು 1497ರಲ್ಲಿ ಕೇಶವ ದೇವಾಲಯ, ಪಂಚಲಿಂಗ ದೇವಾಲಯಗಳ ಪೂಜೆಗೂ ಅಲ್ಲಿನ ಬ್ರಾಹ್ಮಣರ ಜೀವಿತಕ್ಕೂ ವೃತ್ತಿಗಳನ್ನು ದಾನ ಮಾಡಿದುದಾಗಿ ತಿಳಿದುಬರುತ್ತದೆ. ಹಿಂದೆ ಕೇಶವ ದೇವಾಲಯಕ್ಕೆ ದತ್ತಿ ಬಿಟ್ಟಿದ್ದ ಹೆಬ್ಬಕವಾಡಿ ಎಂಬ ಗ್ರಾಮ ಈ ದೇವಾಲಯದ ಕೈಬಿಟ್ಟಿದ್ದಂತೆ ತೋರುತ್ತದೆ. ವಿಜಯನಗರದ ಅಚ್ಯುತರಾಯನ ಆಳ್ವಿಕೆಯಲ್ಲಿ ಆತನಿಗೆ ಪುಣ್ಯವಾಗಬೇಕೆಂದು ವಾರಣಾಸಿ ವರದಯ್ಯನೆನ್ನುವವನು ಆ ಗ್ರಾಮವನ್ನು ಪುನರ್ದತ್ತಿಯಾಗಿ ಬಿಟ್ಟಂತೆ ಶಾಸನವೊಂದು ತಿಳಿಸುತ್ತದೆ. 16ನೆಯ ಶತಮಾನದಲ್ಲಿ ಈ ಅಗ್ರಹಾರದ ಪ್ರಸಿದ್ಧಿಯನ್ನು ಕೇಳಿದ ಔಬಳರಾಜಯ್ಯನು ಅಲ್ಲಿನ ದೇವಾಲಯಗಳಿಂದ ಬ್ರಾಹಣರಿಂದ ಅರಮನೆಗೆ ಬರಬೇಕಾಗಿದ್ದ 30 ವರಹಗಳ ತೆರಿಗೆಯನ್ನು ಮನ್ನಾ ಮಾಡಿದ್ದ.

ಈಗ ಸೋಮನಾಥಪುರದಲ್ಲಿ ಮೂಲ ಅಗ್ರಹಾರದ ಬೀದಿಗಳಾಗಲಿ ಕೋಟೆಯ ಗೋಡೆಗಳಾಗಲಿ ಉಳಿದು ಬಂದಿಲ್ಲ. ಅಲ್ಲಲ್ಲಿ ಕೋಟೆಯ ಗೋಡೆಯ ಪಾಳನ್ನು ಮಾತ್ರ ಗುರುತಿಸಬಹುದು. ಕೇಶವ ದೇವಾಲಯದ ಮುಂದೆ ಅದರ ಈಶಾನ್ಯಕ್ಕೆ ಮಾತ್ರ ಈಗಿನ ಹಳ್ಳಿ ಸೀಮಿತಗೊಂಡಿದೆ. ಹಿಂದಿನ ಕಾಲದ ಕಟ್ಟಡಗಳಲ್ಲಿ ಕೇಶವ ದೇವಾಲಯವೊಂದನ್ನು ಬಿಟ್ಟು ಉಳಿದುವು ಕೇಳುವವರಿಲ್ಲದಂತಾಗಿವೆ. ಪಂಚಲಿಂಗೇಶ್ವರ ಮತ್ತು ಲಕ್ಷ್ಮೀನರಸಿಂಹ ದೇವಾಲಯಗಳು ಹೆಚ್ಚು ಶಿಥಿಲಾವಸ್ಥೆಯಲ್ಲಿ ಉಳಿದು ಬಂದಿದ್ದರೆ ಸೋವಲೇಶ್ವರ, ನರಸಿಂಹೇಶ್ವರ ಮತ್ತು ಯೋಗನಾರಾಯಣ ದೇವಾಲಯಗಳು ಅವುಗಳಿದ್ದ ಕುರುಹೂ ಉಳಿಯದಂತೆ ನಾಶವಾಗಿವೆ. ಈಗ ಲಕ್ಷ್ಮೀನರಸಿಂಹ ದೇವಾಲಯದ ಬಳಿ ಬಿದ್ದಿರುವ ಯೋಗನಾರಾಯಣನ ಮೂರ್ತಿ ಬಹುಶಃ ಯೋಗನಾರಾಯಣ ದೇವಾಲಯಕ್ಕೆ ಸೇರಿದ್ದುದಾಗಿರ

ಬೇಕು. ಕೇಶವ ದೇವಾಲಯವೂ ವಿಜಯನಗರದ ಕಡೆಯ ಕಾಲದ ಹೊತ್ತಿಗೆ ಶಿಥಿಲವಾಗಿದ್ದಿರಬೇಕು. ಬಹುಶಃ 16ನೆಯ ಶತಮಾನದಲ್ಲಿ ಪ್ರಾಕಾರಕ್ಕೆ ಸೇರಿದ ಉತ್ತರ ಪಶ್ಚಿಮ ಭಾಗಗಳ ಸುತ್ತಾಲಯದ ಭಾಗಗಳು ಬಿದ್ದುಹೋಗಿದ್ದು ಅವನ್ನು ಪುನರ್ನಿರ್ಮಿಸಲಾಗಿದೆ. ಮೊದಲಿದ್ದ ಬಳಪದ ಕಲ್ಲಿನ ಗುಂಡು ಕಂಬಗಳಿಗೆ ಬದಲಾಗಿ ಒರಟಾದ ಕಗ್ಗಲ್ಲಿನ ಚೌಕ ಕಂಬಗಳನ್ನೂ ಚಾವಣಿಗೆ ಒರಟು ತೊಲೆಗಳನ್ನೂ ಬಳಸಿದೆ. ಬಹುಶಃ ಇದೇ ಕಾಲದಲ್ಲಿಯೇ ದೇವಾಲಯದ ಮುಂದಿನ ಉನ್ನತವಾದ ದೀಪಸ್ತಂಭವನ್ನೂ ಪೂರ್ವದಿಕ್ಕಿನಲ್ಲಿ ದೇವಾಲಯದಿಂದ ಸು. 100 ಮೀ ಅಂತರದಲ್ಲಿ ನಿಂತಿರುವ ಮಂಟಪವನ್ನೂ ನಿರ್ಮಿಸಿರಬೇಕು. 19ನೆಯ ಶತಮಾನದಲ್ಲಿ ಆಂಗ್ಲವಿದ್ವಾಂಸರು ಈ ದೇವಾಲಯದ ಬಗೆಗೆ ತಾಳಿದ ಆಸಕ್ತಿ ಮತ್ತು ಅವರು ಅದನ್ನು ವರ್ಣಿಸಿ ವಿವರಗಳನ್ನು ಪ್ರಕಟಿಸಿದ ಫಲವಾಗಿ ಆಗಿನ ಮೈಸೂರು ಸರ್ಕಾರ ಈ ದೇವಾಲಯವನ್ನು ಸ್ವಲ್ಪಮಟ್ಟಿಗೆ ದುರಸ್ತಿಪಡಿಸಿತು. ಮುಂದೆ 1924ರಲ್ಲಿ ಹೆಚ್ಚಿನ ಉದ್ಧಾರ ಕಾರ್ಯ ನಡೆಯಿತು. ಮಹಾದ್ವಾರದ ಎರಡು ಕಡೆಯೂ ಬಿದ್ದುಹೋಗಿದ್ದ ಸುತ್ತಾಲಯದ ಗುಡಿಗಳನ್ನು ತೆಗೆದು ಹಾಕಲಾಯಿತು; ಮಹಾದ್ವಾರವನ್ನು ಸರಿಪಡಿಸಲಾಯಿತು ಮತ್ತು ಮೂಲದೇವಾಲಯವನ್ನು ಭದ್ರಪಡಿಸಲಾಯಿತು. 1953ರಲ್ಲಿ ಈ ದೇವಾಲಯದ ಒಳಭಾಗದ ಅಪರಿಮಿತ ಸೌಂದರ್ಯವನ್ನು ನೋಡಿ ಆನಂದಿಸಲು ಅನುಕೂಲವಾಗುವಂತೆ ವಿದ್ಯುದ್ದೀಪದ ಸೌಕರ್ಯವನ್ನೊದಗಿಸಲಾಯಿತು. ಈಗ ಈ ದೇವಾಲಯ ಕೇಂದ್ರ ಸರ್ಕಾರದ ರಕ್ಷಣೆಗೊಳಪಟ್ಟು ಸುಸ್ಥಿತಿಯಲ್ಲಿಡಲ್ಪಟ್ಟಿದೆ. **(ಎಂ.ಎಚ್.)**

**ಸೋಮಮಲೆ:** ಕೊಡಗಿನ ಒಂದು ಬೆಟ್ಟ. ತಡಿಯಂಡಮೋಳ್ ಶಿಖರದಿಂದ ಆಗ್ನೇಯಕ್ಕೆ 9 ಕಿಮೀ ದೂರದಲ್ಲಿದೆ. ಎತ್ತರ ಸು. 1371.6 ಮೀ. ಇದಕ್ಕೆ ಹೊಂದಿಕೊಂಡಂತೆ ತಂಬಿಮಲೆ ಬೆಟ್ಟವಿದೆ. ಇಲ್ಲಿ ಮಲೆತಂಬಿರನ್ (ಮಲೆಯಾಳಿಗಳ ದೇವತೆ) ದೇವಾಲಯವಿದೆ. ಇದು ಮಲೆಯಾಳಿಗಳ ಪುಣ್ಯಕ್ಷೇತ್ರ. ಪ್ರತಿವರ್ಷ ಸಾವಿರಾರು ಭಕ್ತರು ಈ ದೇವತೆಯ ದರ್ಶನಕ್ಕಾಗಿ ಇಲ್ಲಿಗೆ ಬರುತ್ತಾರೆ. ಇವರಲ್ಲಿ ಮಲೆತಂಬಿರನ್ ಶಿವನ ಅವತಾರವೆಂಬ ನಂಬಿಕೆಯಿದೆ. ಸೋಮ ಮಲೆಗೆ ಹೊಂದಿಕೊಂಡಂತೆಯೇ ಇರುವ ಇನ್ನೊಂದು ಬೆಟ್ಟ ಇಗ್ಗುತಪ್ಪದೇವರ ಶಿಖರ. ಇದು ಪಾಡಿ ಟೋರಾದುದ್ದಕ್ಕೂ (ಪಾಡಿ–ಒಂದು ಹಳ್ಳಿಯ ಹೆಸರು, ಟೋರಾ ಕಣಿವೆ) ಹಬ್ಬಿದೆ. ಇದು ಕೂಡ ಮಲೆಯಾಳಿಗಳ ಪುಣ್ಯಕ್ಷೇತ್ರ. ಸೋಮಮಲೆಯ ಸಮೀಪ ಇರುವ ಕೋದಂಡತೋರಾ ಕಣಿವೆಯೂ ತಡಿಯಂಡ ಮೋಳ್ ಕಣಿವೆಯಂತೆ ತುಂಬ ರಮ್ಯವಾಗಿದೆ. **(ವಿ.ಎಸ್.ಎಸ್.)**

**ಸೋಮವಾರಪೇಟೆ:** ಕೊಡಗು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಉತ್ತರದಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು ತಾಲ್ಲೂಕುಗಳೂ ಪಶ್ಚಿಮಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕೂ ಮತ್ತು ಮಡಿಕೇರಿ ತಾಲ್ಲೂಕೂ ದಕ್ಷಿಣ ಮತ್ತು ಆಗ್ನೇಯಕ್ಕೆ ವಿರಾಜಪೇಟೆ ತಾಲ್ಲೂಕೂ ಪೂರ್ವಕ್ಕೆ ಹಾಸನ ಜಿಲ್ಲೆಯ ಅರಕಲಗೂಡು ಮತ್ತು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕುಗಳೂ ಸುತ್ತುವರಿದಿವೆ. ಶನಿವಾರಸಂತೆ, ಶುಂಠಿಕೊಪ್ಪ, ಸೋಮವಾರಪೇಟೆ ಮತ್ತು ಕುಶಾಲನಗರ, ಶಾಂತಳ್ಳಿ, ಕೊಡ್ಲಿಪೇಟೆ ಹೋಬಳಿಗಳು. 132 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 938.9 ಚ.ಕಿಮೀ. ಜನಸಂಖ್ಯೆ 2,05,921. ಇದರಲ್ಲಿ 1,85,515 ಗ್ರಾಮಸ್ಥರೂ 20,406 ಪಟ್ಟಣಿಗರೂ ಇದ್ದಾರೆ.

ಕೊಡಗು ಜಿಲ್ಲೆಯ ಉತ್ತರ ಮತ್ತು ಪೂರ್ವದ ಕಡೆ ಇರುವ ಈ ತಾಲ್ಲೂಕು ಹೆಚ್ಚು ಭಾಗ ಪ್ರಸ್ಥಭೂಮಿಯಿಂದ ಕೂಡಿದೆ. ಇಲ್ಲಿ ಹೆಚ್ಚು ಎತ್ತರವಾದ ಬೆಟ್ಟಗಳಿಲ್ಲ. ಮಡಿಕೇರಿಯ ದಕ್ಷಿಣದಲ್ಲಿ ಎರಡು ಕವಲುಗಳಾಗಿ ಒಡೆಯುವ ಬೇಂಗುನಾಡು ಶ್ರೇಣಿಯ ಒಂದು ಕವಲು ಡೊಂಕುಡೊಂಕಾಗಿ ಕುಶಾಲನಗರದ ಕಡೆಗೆ ಸಾಗಿದೆ. ಇದರ ಉನ್ನತ ಶಿಖರ ಕಲ್ಲೂರು ಬೆಟ್ಟ. ಕೋಟೆಬೆಟ್ಟದ ಉತ್ತರಕ್ಕಿರುವುವು ಸಂತೆಹಳ್ಳಿ ಬೆಟ್ಟಗಳು, ಮುಕ್ರಿಬೆಟ್ಟವೇ ಇವುಗಳ ಕೊನೆ. ಈ ತಾಲ್ಲೂಕಿನ ಬೆಟ್ಟಗಳು ಕಡಿದಾಗಿಲ್ಲ. ಇಲ್ಲಿ ನಡುನಡುವೆ ಹಸಿರು ಇಳಿಜಾರುಗಳೂ ದಟ್ಟ ಕಾಡುಗಳೂ ಇದ್ದು ಯುರೋಪಿನ ಉದ್ಯಾನ, ನೆಲದ ದೃಶ್ಯವನ್ನು ನೆನಪಿಗೆ ತರುತ್ತವೆಂದು ಹೇಳುವರು. ಕಲ್ಲೂರು ಬೆಟ್ಟದ ಕಾಡುಗಳಲ್ಲಿ ತೇಗದ ಮರ ಹೆಚ್ಚು. ಇಲ್ಲಿನ ಕಾಡುಗಳಲ್ಲಿ ಶ್ರೀಗಂಧ ಮುಂತಾದ ಬೆಲೆಬಾಳುವ ಮರಗಳು ಬೆಳೆಯುತ್ತವೆ. ತಾಲ್ಲೂಕಿನ ಪೂರ್ವಕ್ಕೆ ಬಯಲು ಭೂಪ್ರದೇಶ ಕಾಣುತ್ತದೆ.

ವರ್ಷದಲ್ಲಿ ಹೆಚ್ಚುಕಾಲ ಹಸುರಾಗಿರುವ ಇಲ್ಲಿನ ಕಾಡುಗಳಲ್ಲಿ ವಿವಿಧ ಕಾಡು ಪ್ರಾಣಿಗಳನ್ನು ಕಾಣಬಹುದು. ತಂಪಾದ ಹವೆ ಇರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 2,301.10 ಮಿಮೀ.

ಹೇಮಾವತಿ, ಕಾವೇರಿ ಮತ್ತು ಹಾರಂಗಿ ಈ ತಾಲ್ಲೂಕಿನ ನದಿಗಳು. ತಾಲ್ಲೂಕಿನ ಉತ್ತರದ ಗಡಿಯಂಚಿನಲ್ಲಿ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುವ ಹೇಮಾವತಿ ಈ ತಾಲ್ಲೂಕನ್ನು ಆಲೂರು ತಾಲ್ಲೂಕಿನಿಂದ ಬೇರ್ಪಡಿಸಿ ಮುಂದೆ ಹಾಸನ ಜಿಲ್ಲೆಯನ್ನು ಪ್ರವೇಶಿಸುವುದು. ಕಾವೇರಿ ನದಿಯು ದಕ್ಷಿಣದಿಂದ ಉತ್ತರಕ್ಕೆ ಈ ತಾಲ್ಲೂಕಿನ ಪೂರ್ವದ ಗಡಿಯಲ್ಲಿ ಹರಿದು ವಿರಾಜಪೇಟೆ, ಪಿರಿಯಾಪಟ್ಟಣ ತಾಲ್ಲೂಕುಗಳನ್ನು ಬೇರ್ಪಡಿಸಿದೆ. ಮಡಿಕೇರಿ ತಾಲ್ಲೂಕಿನಿಂದ ಹರಿದುಬರುವ ಹಾರಂಗಿ, ಕಕ್ಕೆಹೊಳೆ, ಚೇರಹೊಳೆ, ಮಾದಾಪುರಹೊಳೆ ಮತ್ತು ಹಟ್ಟಿಹೊಳೆ ಉಪನದಿಗಳನ್ನು ಕೂಡಿಕೊಂಡು ಪೂರ್ವಾಭಿಮುಖ ಹರಿದು ಕುಶಾಲನಗರದ ಉತ್ತರಕ್ಕೆ ಕೂಡಿಗೆ ಬಳಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಉಪಯೋಗವಾಗಿರುವ ಮುಖ್ಯ ಕೆರೆಗಳಲ್ಲಿ ಹಲಗೋಟೆ ಬಳಿಯ ಹಲಗೋಟೆ ಕೆರೆ, ಸೋಮವಾರಪೇಟೆ ಬಳಿಯಲ್ಲಿರುವ ಹಳೆಯದಾದ ಹೊನ್ನಮ್ಮನ ಕೆರೆಗಳನ್ನು ಹೆಸರಿಸಬಹುದು. ಸೋಮವಾರಪೇಟೆ ಬಳಿ ಕಟ್ಟಿರುವ ಸೌತಿಹಳ್ಳ ಅಣೆಕಟ್ಟಿನಿಂದಲೂ ನೀರಾವರಿ ಸೌಕರ್ಯವನ್ನು ಪಡೆಯಲಾಗುತ್ತದೆ.

ತಾಲ್ಲೂಕಿನಲ್ಲಿ ಕಪ್ಪು, ಕೆಂಪು ಜೇಡಿಮಿಶ್ರಿತ ಮಣ್ಣಿನ ಭೂಮಿಯಿದೆ. ಬೆಟ್ಟಕಣಿವೆ ಪ್ರದೇಶದಲ್ಲಿ ಕಾಫಿ, ಏಲಕ್ಕಿ ಮುಂತಾದ ತೋಟದ ಬೆಳೆಗಳಿಗೆ ಸೂಕ್ತವಾಗಿರುವ ಫಲವತ್ತಾದ ಕೆಂಪು ಜೇಡಿಮಣ್ಣಿನ ಭೂಪ್ರದೇಶವೂ ನದೀ ದಡಗಳಲ್ಲಿ ಮೆಕ್ಕಲುಮಣ್ಣಿನ ಹರಹೂ ಇದೆ. ವ್ಯವಸಾಯ ಪ್ರಧಾನವಾದ ಈ ತಾಲ್ಲೂಕಿನಲ್ಲಿ ಬತ್ತ, ಕಾಫಿ, ಏಲಕ್ಕಿ ಮತ್ತು ಕಿತ್ತಳೆ ಬೆಳೆಯುತ್ತಾರೆ. ವ್ಯವಸಾಯಾಭಿವೃದ್ಧಿಗೆ ಸಹಾಯಕವಾಗಿ ಕೂಡಿಗೆಯಲ್ಲಿ ಒಂದು ಸರ್ಕಾರಿ ಬೀಜಸಂಸ್ಕರಣ ಕೇಂದ್ರವಿದೆ. ಪಶುಪಾಲನೆ ಮತ್ತು ಅಭಿವೃದ್ಧಿಗೆ ಸಹಕರಿಸುವ ಮುಖ್ಯ ಅಭಿವೃದ್ಧಿ ಕೇಂದ್ರಗಳು ಸೋಮವಾರಪೇಟೆ ಮತ್ತು ಕೂಡಿಗೆಯಲ್ಲಿವೆ. ಕೊಡ್ಲಿಪೇಟೆ, ಶಾಂತಳ್ಳಿ, ಸೋಮವಾರಪೇಟೆ, ಶನಿವಾರಸಂತೆ, ಮಾದಾಪುರ ಮತ್ತು ಕುಶಾಲನಗರ ಮುಂತಾದ ಕಡೆ ಪಶುವೈದ್ಯಾಲಯಗಳಿವೆ. ಹಂದಿ ಸಾಕಣೆಗೂ ಉತ್ತೇಜನ ನೀಡಲಾಗುತ್ತಿದೆ. ಮೀನುಸಾಕಣೆಯೂ ಸ್ವಲ್ಪಮಟ್ಟಿಗೆ ಇದೆ.

ಸೋಮವಾರಪೇಟೆ ಮತ್ತು ಕೂಡಿಗೆಯಲ್ಲಿ ಒಂದೊಂದು ವ್ಯವಸಾಯೋಪಕರಣಗಳ ಕಾರ್ಖಾನೆಯುಂಟು. ಕಾಫಿ ತೋಟಗಳಿಗೆ ಅವಶ್ಯವಾದ ಉಪಕರಣಗಳನ್ನು ಇಲ್ಲಿ ತಯಾರಿಸುತ್ತಾರೆ. ಶನಿವಾರಸಂತೆಯಲ್ಲಿ ಒಂದು ನೇಯ್ಗೆಯ ಶಾಲೆಯಿದೆ. ಕೂಡಿಗೆಯಲ್ಲಿ ಕಾಫಿ ಪರಿಷ್ಕರಣ ಕಾರ್ಖಾನೆಯುಂಟು. ಕೆಲವು ಅಕ್ಕಿ ಗಿರಣಿಗಳು ಈ ತಾಲ್ಲೂಕಿನಲ್ಲಿವೆ. ಜೇನುಸಾಕಣೆ, ಚಾಪೆ ತಯಾರಿಕೆ ಮುಂತಾದವುಗಳಿದ್ದು ಸಂಬಂಧಿಸಿದ ಸಹಕಾರ ಸಂಘಗಳೂ ಇವೆ.

ತಾಲ್ಲೂಕಿನ ಕೃಷಿ ಮತ್ತು ಕೈಗಾರಿಕೆಗಳಿಗೆ ಆರ್ಥಿಕ ಸಹಕಾರ ನೀಡುವ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಅಂಚೆ, ತಂತಿ, ದೂರವಾಣಿ, ಪ್ರೌಢಶಾಲೆ, ಆಸ್ಪತ್ರೆ, ವಿದ್ಯುತ್ ಮುಂತಾದವುಗಳ ಸೌಲಭ್ಯ ವಿದೆ. ಮೈಸೂರು–ಕುಶಾಲನಗರ–ಶುಂಠಿಕೊಪ್ಪ–ಮಡಿಕೇರಿ ರಾಜ್ಯ ಹೆದ್ದಾರಿಯಿದ್ದು ತಾಲ್ಲೂಕಿನ ಉಳಿದ ಎಲ್ಲ ಪಟ್ಟಣ ಮತ್ತು ಗ್ರಾಮಗಳಿಗೆ ಮಾರ್ಗಸಂಪರ್ಕಗಳಿವೆ.

ಸೋಮವಾರಪೇಟೆಯ ವಾಯವ್ಯಕ್ಕೆ 6 ಕಿಮೀ ದೂರದಲ್ಲಿ ದೊಡ್ಡವೀರ ರಾಜೇಂದ್ರ ಒಡೆಯ (18ನೆಯ ಶತಮಾನ) ಸ್ಥಾಪಿಸಿದ ವೀರಶೈವ ಮಠವಿದೆ. ಇದನ್ನು ಅಬ್ಬಿಮಠವೆಂದು ಕರೆಯುತ್ತಾರೆ. ಇಲ್ಲಿ ಅನೇಕ ಪುರಾತನ ಓಲೆಗರಿ ಗ್ರಂಥಗಳು ಇವೆ. ಶುಂಠಿಕೊಪ್ಪದ ಉತ್ತರಕ್ಕೆ 8 ಕಿಮೀ ದೂರದಲ್ಲಿ ರುವ ಗರ್ಗಂದೂರಿನಲ್ಲಿ ಚೆಂಗಾಳ್ವರಿಗೆ ಸೇರಿದ (12ನೆಯ ಶತಮಾನ) ಹಳೆಕೋಟೆಯ ಸ್ಥಳವೂ ಮಹಾದೇವ ಚೆಂಗಾಳ್ವನನ್ನು ಕುರಿತ 1174ರ ಒಂದು ವೀರಗಲ್ಲೂ ಇದೆ. ಸೋಮವಾರಪೇಟೆಯ ಉತ್ತರಕ್ಕೆ 31 ಕಿಮೀ ದೂರದಲ್ಲಿರುವ ಕೊಡ್ಲಿಪೇಟೆ **(ನೋಡಿ)** ಒಂದು ವ್ಯಾಪಾರ ಕೇಂದ್ರ ಮತ್ತು ಪಟ್ಟಣ. ಕುಶಾಲನಗರದ ಉತ್ತರಕ್ಕೆ 6 ಕಿಮೀ ದೂರದಲ್ಲಿರುವ ಕೂಡಿಗೆ **(ನೋಡಿ)** ಕುಶಾಲನಗರ–ಸೋಮವಾರಪೇಟೆ ಮಾರ್ಗ ಮಧ್ಯದಲ್ಲಿದೆ. ಇಲ್ಲಿ ಮಾದರಿ ಪಶುಸಂಗೋಪನ ಮತ್ತು ವ್ಯವಸಾಯ ಕೇಂದ್ರವಿದೆ. ಸೋಮವಾರ ಪೇಟೆಯ ವಾಯವ್ಯಕ್ಕೆ 21 ಕಿಮೀ ದೂರದಲ್ಲಿರುವ ಕುಮಾರ ಹಳ್ಳಿಯಿಂದ ಸು. 2 ಕಿಮೀ ದೂರದಲ್ಲಿ ಪುಷ್ಪಗಿರಿ ಅಥವಾ ಸುಬ್ರಹ್ಮಣ್ಯ ಬೆಟ್ಟವಿದೆ. ಬೆಟ್ಟದ ಮೇಲೆ ಈಶ್ವರ ದೇವಾಲಯವಿದ್ದು ತುಲಾಸಂಕ್ರಮಣ ದಂದು ವಿಶೇಷ ಪೂಜೆ ನಡೆಯುವುದು. ಸೋಮವಾರಪೇಟೆಯ ಆಗ್ನೇಯಕ್ಕೆ 28 ಕಿಮೀ ದೂರದಲ್ಲಿರುವ ಕುಶಾಲನಗರ **(ನೋಡಿ)** ತಾಲ್ಲೂಕಿನ ಒಂದು ಮುಖ್ಯ ವ್ಯಾಪಾರ ಕೇಂದ್ರ ಮತ್ತು ಪಟ್ಟಣ. ಶನಿವಾರಸಂತೆಯ ಆಗ್ನೇಯಕ್ಕೆ 5 ಕಿಮೀ ದೂರದಲ್ಲಿ ಇರುವ ನಿಡ್ತ ಗ್ರಾಮದಲ್ಲಿ ಹೊಯ್ಸಳ ದೊರೆ ಮೂರನೆಯ ನರಸಿಂಹನ ಕಾಲದ 1255 ಮತ್ತು 1285ಕ್ಕೆ ಸೇರಿದ ಎರಡು ವೀರಗಲ್ಲುಗಳಿವೆ. ಶನಿವಾರಸಂತೆಗೆ ಆಗ್ನೇಯದಲ್ಲಿ 6 ಕಿಮೀ ದೂರದಲ್ಲಿರುವ ಮಳ್ಳೂರಿನ ಜೈನಬಸದಿ ಪ್ರಸಿದ್ಧವಾದದ್ದು. ಇಲ್ಲಿರುವ 1058ಕ್ಕೆ ಸೇರಿದ ಶಾಸನದಲ್ಲಿ ಎರಡನೆಯ ರಾಜೇಂದ್ರ ಚೋಳ ಪೃಥ್ವಿ ಕೊಂಗಾಳ್ವ ಈ ಬಸದಿಗೆ ತೈಲವನ್ನೂ ಕೆಲವು ಗ್ರಾಮಗಳನ್ನೂ ತನ್ನ ತಾಯಿ ಪೋಚಬ್ಬರಸಿಯ ಜ್ಞಾಪಕಾರ್ಥ ನೀಡಿದನೆಂದು ತಿಳಿದುಬರುವುದು. ಸೋಮವಾರಪೇಟೆಯ ನೈಋತ್ಯಕ್ಕೆ ಸು. 19 ಕಿಮೀ ದೂರದಲ್ಲಿರುವ ಮಾದಾಪುರದಲ್ಲಿ ಒಂದನೆಯ ಮತ್ತು ಎರಡನೆಯ ಲಿಂಗರಾಜೇಂದ್ರ ಒಡೆಯರ್ ಇವರ ಸಮಾಧಿಗಳು ನದಿ ದಡದಲ್ಲಿವೆ. ಹಿಂದೆ ಕೊಡಗಿನ ಹಾಲೇರಿ ರಾಜರು ಮಾದಾಪುರ ಮಠದಿಂದ ನದಿಯ ಆಚೆ ದಡದಲ್ಲಿದ್ದ ಗ್ರಾಮಕ್ಕೆ ಮೆರವಣಿಗೆ ಹೋಗುತ್ತಿದ್ದ ರೆಂದೂ ಆ ಮೆರವಣಿಗೆಯನ್ನು ಜಂಬೂಸವಾರಿ ಎಂದು ಕರೆಯುತ್ತಿದ್ದು ಈ ಊರಿಗೆ ಜಂಬೂರು ಎಂಬ ಹೆಸರೂ ಬಂದಿದೆ. ಕುಶಾಲನಗರಕ್ಕೆ ನೈಋತ್ಯ ದಲ್ಲಿ 13 ಕಿಮೀ ದೂರದಲ್ಲಿರುವ ನಂಜರಾಜಪಟ್ಟಣ ಸ್ವಲ್ಪಕಾಲ ಕೊಡಗಿನ ಚೆಂಗಾಳ್ವರ ರಾಜಧಾನಿಯಾಗಿತ್ತು. ಈ ಪಟ್ಟಣವನ್ನು ಪಿರಿಯಾಪಟ್ಟಣದ ದೊರೆ ನಂಜರಾಜ ಸ್ಥಾಪಿಸಿ ಇಲ್ಲಿದ್ದ. ಇಲ್ಲೊಂದು ನಂಜುಂಡೇಶ್ವರ ದೇವಾಲಯ ವಿದೆ. ಕೂಡಿಗೆಯಿಂದ ಹಾಸನ ಜಿಲ್ಲೆಯ ಕೊಣನೂರಿಗೆ ಹೋಗುವ ಮಾರ್ಗದಲ್ಲಿ ಸಿಗುವ ರಾಮಸ್ವಾಮಿ ಕಣಿವೆಯಲ್ಲಿ ಪುರಾತನವಾದ ಪ್ರಸಿದ್ಧ ರಾಮಸ್ವಾಮಿ ದೇವಾಲಯ ವಿದೆ. ಸೋಮವಾರಪೇಟೆಯ ಉತ್ತರಕ್ಕೆ 20 ಕಿಮೀ ದೂರದಲ್ಲಿರುವ ಶನಿವಾರಸಂತೆ ಒಂದು ಹೋಬಳಿ ಮತ್ತು ವ್ಯಾಪಾರಕೇಂದ್ರ. ಪ್ರತಿ ಶನಿವಾರ ಸಂತೆ ಸೇರುವುದು. ಇಲ್ಲಿನ ದನಗಳ ಜಾತ್ರೆ ಬಹು ಪ್ರಸಿದ್ಧ. ಸೋಮವಾರ ಪೇಟೆಯ ದಕ್ಷಿಣಕ್ಕೆ 28 ಕಿಮೀ ದೂರದಲ್ಲಿರುವ ಶುಂಠಿಕೊಪ್ಪ **(ನೋಡಿ)** ಮಡಿಕೇರಿ–ಮೈಸೂರು ರಾಜ್ಯ ಹೆದ್ದಾರಿಯಲ್ಲಿರುವ ಒಂದು ಪಟ್ಟಣ ಮತ್ತು ವ್ಯಾಪಾರಕೇಂದ್ರ. *

ಸೋಮವಾರಪೇಟೆ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಮಡಿಕೇರಿಯ ಈಶಾನ್ಯಕ್ಕೆ 40 ಕಿಮೀ ದೂರದಲ್ಲಿ ಮಡಿಕೇರಿ–ಶನಿವಾರಸಂತೆ ಮಾರ್ಗಮಧ್ಯದಲ್ಲಿದೆ. ಜನಸಂಖ್ಯೆ 20,406.

ಈ ಪಟ್ಟಣದ ಸುತ್ತಲೂ ಕಾಫಿ, ಏಲಕ್ಕಿ, ಕಿತ್ತಳೆ ತೋಟಗಳೂ ಬತ್ತದ ಗದ್ದೆಗಳೂ ವ್ಯಾಪಿಸಿವೆ. ಸುತ್ತಲ ಗ್ರಾಮಗಳಿಗೆ ಮುಖ್ಯ ವ್ಯಾಪಾರ ಕೇಂದ್ರವಾಗಿದ್ದು ಇಲ್ಲಿ ಗ್ರಾಮ ಮತ್ತು ಸುತ್ತಲ ಪಟ್ಟಣಗಳಿಗೆ ರಸ್ತೆ ಸಂಪರ್ಕವಿದೆ. ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ವಿದ್ಯುತ್, ಅಂಚೆ, ತಂತಿ, ದೂರವಾಣಿ ಆಸ್ಪತ್ರೆ, ಔಷಧಾಲಯ, ಪ್ರೌಢಶಾಲೆ, ಒಂದು ತಾಂತ್ರಿಕ ಶಾಲೆ ಮುಂತಾದವುಗಳ ಸೌಲಭ್ಯವಿದೆ. ಪ್ರತಿ ಸೋಮವಾರ ಇಲ್ಲಿ ಸಂತೆ ಸೇರುತ್ತಿದ್ದುದರಿಂದ ಸೋಮವಾರಪೇಟೆ ಎಂಬ ಹೆಸರು ಬಂದು, ಮುಂದೆ ಅದೇ ಪಟ್ಟಣ ಮತ್ತು ತಾಲ್ಲೂಕಿನ ಹೆಸರಾಗಿ ನಿಂತಿದೆ ಎಂದು ಪ್ರತೀತಿ. ಈ ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ. **(ಡಿ.ಎನ್.ಕೆ.)**

**ಸೋಮಶೇಖರನಾಯಕ I:** ಕೆಳದಿ ವಂಶದ ರಾಜ (1664–71). ಭದ್ರಪ್ಪನಾಯಕನಿಗೆ ಪುತ್ರಸಂತಾನವಿಲ್ಲದಿದ್ದುದರಿಂದ ಅವನ ತಮ್ಮ ಮತ್ತು ಶಿವಪ್ಪನಾಯಕನ ಕನಿಷ್ಠ ಪುತ್ರ ಹಿರಿಯ ಸೋಮಶೇಖರ ನಾಯಕ ಪಟ್ಟಕ್ಕೆ ಬಂದ.

ಭದ್ರಪ್ಪನಾಯಕನ ಕಾಲದಲ್ಲಿ ಕೆಳದಿ ಅರಸರು ಮೈಸೂರು ಒಡೆಯರಿಗೆ ಕಳೆದುಕೊಂಡಿದ್ದ ಚಿಕ್ಕೋಡು, ಬೆಳಗೋಡು, ಕಣತೂರು, ಅಬ್ಬಿಣ ಮತ್ತು ಬೇಲೂರುಗಳನ್ನು ಸೋಮಶೇಖರನಾಯಕ ವಶಪಡಿಸಿಕೊಂಡ. ಇದಕ್ಕೆ ಪ್ರತಿಯಾಗಿ ಮೈಸೂರಿನ ದಳವಾಯಿ ನಂಜನಾಥಯ್ಯನು ಕಳಸ, ಖಾಂಡ್ಯ, ದಾನಿವಾಸ, ಹೆಬ್ಬೆ, ಜಾಗರ ಬಿದನೂರು, ಹೊನ್ನೂರು ಮತ್ತು ಇಕ್ಕೇರಿಗಳಿಗೆ ತುಂಬಾ ಹಾನಿಯುಂಟು ಮಾಡಿದ (1664). ಪರಿಸ್ಥಿತಿ ವಿಕೋಪಕ್ಕೆ ಹೋಗಲು ಸೋಮಶೇಖರನಾಯಕ ತನ್ನ ರಾಯಭಾರಿ ಪುರುಷೋತ್ತಮಯ್ಯನನ್ನು ಆನೆ, ಕುದುರೆ, ಆಭರಣ ಮತ್ತು ಬಟ್ಟೆಗ ಳೊಂದಿಗೆ ಶ್ರೀರಂಗಪಟ್ಟಣಕ್ಕೆ ಕಳಿಸಿ ಶಾಂತಿಸಂಧಾನ ಪ್ರಾರಂಭಿಸಿದನೆಂದು ಚಿಕ್ಕದೇವರಾಯ ವಿಜಯ ಹೇಳುತ್ತದೆ. ಈ ವಿಜಯದಿಂದ ಮೈಸೂರಿನವರು ಚಿಕ್ಕನಾಯಕನಹಳ್ಳಿ, ಹಾಸನ, ಸಕ್ಕರೆಪಟ್ಟಣ ಮತ್ತು ವಸ್ತಾರೆವರೆಗೂ ತಮ್ಮ ಪ್ರಭಾವವನ್ನು ಬೀರಿದರು.

ತರೀಕೆರೆಯ ಹನುಮಪ್ಪನಾಯಕ ತನ್ನ ಅವ್ಯವಸ್ಥಿತ ವ್ಯವಹಾರಗಳಿಂದ ರಾಜ್ಯವನ್ನು ಹಾಳು ಮಾಡುತ್ತಿದ್ದಾನೆಂದು ಕೇಳಿ ಸೋಮಶೇಖರನಾಯಕ ತನ್ನ ಸೇನಾನಿ ಸಬ್ಬುನೀಸ್ ಕೃಷ್ಣಪ್ಪಯ್ಯನನ್ನು ಕಳಿಸಿ ಹನುಮಪ್ಪನಾಯಕ ನನ್ನು ಬಿದನೂರಿಗೆ ಕರೆತರಿಸಿ, ಆತನ ಮಗ ಸೀತಾರಾಮಪ್ಪನಾಯಕನನ್ನು ಪಟ್ಟಕ್ಕೇರಿಸಿ ಆ ಸಂಸ್ಥಾನವನ್ನು ಉದ್ಧರಿಸಿದನೆಂದು ಕೆಳದಿ ನೃಪವಿಜಯ ಹೇಳುತ್ತದೆ. ಸೋಮಶೇಖರನಾಯಕನ ಕೊನೆಯ ದಿನಗಳು ಯಾತನಾಮ ಯವಾಗಿದ್ದವು. ಬರಮೆ ಮಾವುತನೆಂಬ ಕುಹಕಿ 'ನೀವು ಆನೆಯ ಮದವನ್ನು ಸೇವಿಸಿದರೆ ದೇಹದಾರ್ಢ್ಯ ಹೆಚ್ಚುವುದೆಂದು' ಹೇಳಿ ಅದನ್ನು ಇವನಿಗೆ ಕುಡಿಸಿದ. ಇದರಿಂದ ಸೋಮಶೇಖರನಾಯಕ ಉನ್ಮಾದಾವಸ್ಥೆಗೆ ಬಂದು ಭ್ರಮಿಷ್ಠನಾಗಿ ಕ್ಷುದ್ರ ಜನರೊಡನೆ ಸ್ವೇಚ್ಛೆಯಾಗಿ ವ್ಯವಹರಿಸಲಾರಂಭಿಸಿದ ಎಂದು ಕೆಳದಿ ನೃಪವಿಜಯ ಹೇಳುತ್ತದೆ. ಇವನ ಪ್ರಜೆಗಳು ಇವನ ದುರ್ವ್ಯಾಪಾರಗಳನ್ನು ಸಹಿಸದೆ ಕೊಂದು ಹಾಕಿದರೆಂದು ಬ್ರಿಟಿಷ್ ಪ್ರವಾಸಿ ಜಾನ್ ಫ್ರೈಯರ್ ಬರೆದಿದ್ದಾನೆ. ಇವನ ಅನಂತರ ಇವನ ಪತ್ನಿ ಚೆನ್ನಮ್ಮಾಜಿ ಆಳಿದಳು. **(ಜಿ.ಎಸ್.ಡಿ.)**

**ಸೋಮಶೇಖರನಾಯಕ II:** ಕೆಳದಿ ರಾಜವಂಶದ ಅರಸು (ಸು. 1714–39). ಹಿರಿಯ ಬಸವಪ್ಪನಾಯಕನ ಮಗ. ಇವನ ಕಾಲದಲ್ಲಿ ಬಿದನೂರಿಗೂ ಮಲೆಯಾಳದಲ್ಲಿನ ಕೋಲತ್ತಿರಿವಂಶಸ್ಥರಿಗೂ ಬಹುಕಾಲ ಯುದ್ಧ ನಡೆಯಿತು. ಈ ವಂಶದ ಅರಸುಮನೆತನದಲ್ಲಿ ಒಳಜಗಳಗಳಿದ್ದವು.

ಇವರಿಗೂ ಮತ್ತು ಮಲಬಾರಿನ ಇತರ ಚಿಕ್ಕಪುಟ್ಟ ಸಂಸ್ಥಾನಗಳಾದ ಕಣ್ಣಾನೂರು ಮತ್ತು ಕೊಟ್ಟಾಯಮ್‌ನ ರಾಜನಿಗೂ ಪದೇ ಪದೇ ಜಗಳಗಳಾಗುತ್ತಿದ್ದುವು. ಬಿದನೂರಿನವರು ಈ ಜಗಳಗಳನ್ನು ಉಪಯೋಗಿಸಿ ಕೊಂಡು ತಮ್ಮ ರಾಜ್ಯವಿಸ್ತರಣೆ ಮಾಡಬಯಸಿದರು. ಆದರೆ ಡಚ್ ಮತ್ತು ಇಂಗ್ಲಿಷ್‌ನವರಿಗೆ ನಷ್ಟವಾಗುತ್ತಿದ್ದುದರಿಂದ ಈ ಯುದ್ಧವನ್ನು ಅವರು ನಿಲ್ಲಿಸಬಯಸುತ್ತಿದ್ದರು. ಈ ಯುದ್ಧದಿಂದ ಬಿದನೂರಿನವರಿಗೆ ತುಂಬಾ ನಷ್ಟವಾಯಿತು. ಜಗಳವಾಡುತ್ತಿರುವ ಪಂಗಡಗಳಿಂದ ತಮಗೆ ಅನುಕೂಲ ವಾಗುವಂತೆ ಡಚ್ ಮತ್ತು ಇಂಗ್ಲಿಷರು ವ್ಯಾಪಾರೀ ಕರಾರುಗಳನ್ನು ಮಾಡಿಕೊಂಡರು.

ಸವಣೂರು ನವಾಬ ಅಬ್ದುಲ್ ಮಹಮದ್ ಖಾನ್ ಪತ್ತೆಲಸ್ಕರಿ ಎಂಬ ಆನೆ, ಕುದುರೆ ಮತ್ತು ಉಚಿತ ಉಡುಗೊರೆಗಳನ್ನು ಕಳಿಸಿ ಸೋಮಶೇಖರ ನೊಡನೆ ಸ್ನೇಹವನ್ನು ಮಾಡಿಕೊಂಡ. ಇದೇ ರೀತಿ ಸೋದೆಯ ಸದಾಶಿವನಾಯಕ ಈತನ ಸ್ನೇಹವನ್ನು ದೊರಕಿಸಿಕೊಂಡ. ಮೊದಲನೆಯ ಬಾಜೀರಾಯ ಇವರೆಲ್ಲರನ್ನೂ ಸೋಲಿಸಿ ಚೌತನ್ನು ವಸೂಲಿ ಮಾಡಿದ (1726–27).

ಚಿತ್ರದುರ್ಗದ ಭರಮಪ್ಪನಾಯಕ ಗುತ್ತಲದ ಹನುಮಂತ ದೇಸಾಯಿ ಯೊಡನೆ ಸಖ್ಯ ಬೆಳೆಸಿ ಬಿದನೂರಿನ ಕಡೆಯಾಗಿದ್ದ ತರೀಕೆರೆ ಪಾಳ್ಯಕ್ಕೆ ಮುತ್ತಿಗೆ ಹಾಕಿದಾಗ ಸೋಮಶೇಖರ ಭರಮಪ್ಪನನ್ನು ಹಿಮ್ಮೆಟ್ಟಿಸಿದ.

ಎಲ್ಲ ಕೆಳದಿ ಅರಸರಂತೆ ಈತನೂ ಶೃಂಗೇರಿ ಮಠದ ವ್ಯವಹಾರದಲ್ಲಿ ಆಸ್ಥೆತೋರಿಸಿದ. ಈ ವ್ಯವಹಾರಗಳಲ್ಲಿ ಕಂಡುಬಂದ ಲೋಪದೋಷಗಳನ್ನು ಗುರುತಿಸಿ, ಅವುಗಳಿಗೆ ಕಾರಣರಾದವರನ್ನು ದಂಡಿಸಬೇಕೆಂದು ಸಚ್ಚಿದಾನಂದ ಭಾರತಿಸ್ವಾಮಿಗಳನ್ನು ಕೇಳಿಕೊಂಡ. ಈತನ ಬಿನ್ನಹದ ಮೇರೆಗೆ ಸ್ವಾಮಿಗಳು ಬಿದನೂರಿಗೆ ದಯಮಾಡಿಸಿ ಭವ್ಯವಾದ ಸ್ವಾಗತವನ್ನು ಪಡೆದರು. ಕೂಡಲಿ ಮಾಧ್ವಮಠದ ರಘುರಾಜತೀರ್ಥಸ್ವಾಮಿಗಳಿಗೆ ಗಾಜನೂರು ಸೀಮೆಯಲ್ಲಿಯ ಜಿನ್ನಗೊಂಡನ ಕೊಪ್ಪವನ್ನು ದಾನಮಾಡಿದ. ಕೆಂಚವ್ವ ಮತ್ತು ಮಲ್ಲಶೆಟ್ಟಿಯರು ಕಟ್ಟಿದ ಎರಡು ವಿರಕ್ತಮಠಗಳನ್ನು ಈತ ಪೋಷಿಸಿದ. ಮತ್ತೂರುಸೀಮೆಯ ಮಲೆಯಾಳ ಮಠದ ಗ್ರಾಮದಲ್ಲಿ ವೆಂಕಟಯ್ಯ ಎಂಬವನು ಸ್ಥಾಪಿಸಿದ ಅವಿಮುಕ್ತೇಶ್ವರ ಮತ್ತು ಬಿಂದುಮಾಧವ ದೇವರ ಆರಾಧನೆಗೂ ಮತ್ತು ತಾನು ಈ ದೇವಸ್ಥಾನದ ಹತ್ತಿರ ಸ್ಥಾಪಿಸಿದ ಚಂದ್ರಶೇಖರಪುರ ಅಗ್ರಹಾರಕ್ಕೂ ಭೂದಾನಮಾಡಿದ. ಬಿದನೂರಿನಲ್ಲಿ ತಟಾಕ–ತೋಟಗಳಿಂದ ಶೋಭಿಸುತ್ತಿದ್ದ ಅರಮನೆಯನ್ನು ಕಟ್ಟಿದ. ನೀಲಕಂಠೇಶ್ವರ ದೇವಸ್ಥಾನವನ್ನು ಪುನರುಜ್ಜೀವನಗೊಳಿಸಿ ಸುವರ್ಣ ಶಿಖರದಿಂದ ಅಲಂಕರಿಸಿದ. ಪ್ರಜೆಗಳ ಹಿತಕ್ಕೆ ಬಹುವಾಗಿ ಶ್ರಮಿಸಿದ. ವೃದ್ಧಾಪ್ಯದಲ್ಲಿ ತೀರ್ಥಯಾತ್ರೆ ಹೊರಟು ಶೃಂಗೇರಿ, ಶಂಕರನಾರಾಯಣ, ಕೊಲ್ಲೂರು, ಗೋಕರ್ಣಗಳನ್ನು ಸಂದರ್ಶಿಸಿದ. 25 ವರ್ಷ ಆಳಿದ ಅನಂತರ ಶಿವಮೊಗ್ಗದಲ್ಲಿ ನಿಧನನಾದ. ಬಿದನೂರಿನಲ್ಲಿ ಇವನ ಸಮಾಧಿ ಮಾಡಲಾಯಿತು. (ಜಿ.ಎಸ್.ಡಿ.)

**ಸೋಮಶೇಖರನಾಯಕ III:** ಕೆಳದಿ ವಂಶದ ಕೊನೆಯ ರಾಜ (1757–63). ಅವಿವಾಹಿತನಾದ ಚೆನ್ನಬಸವನಾಯಕನ ಮರಣಾನಂತರ ರಾಜಮಾತೆ ವೀರಮ್ಮಾಜಿ ತನ್ನ ಸೋದರಮಾವನಾದ ಬಂಕಾಪುರದ ಪಟ್ಟಣಸೆಟ್ಟಿಯಾಗಿದ್ದ ವೀರಪ್ಪನ ಕೊನೆಯ ಮಗನನ್ನು ದತ್ತು ತೆಗೆದುಕೊಂಡು ಮುಮ್ಮಡಿ ಸೋಮಶೇಖರನಾಯಕನೆಂಬ ಹೆಸರಿನಿಂದ ಪಟ್ಟಕ್ಕೆ ತಂದಳು. ಇವನು ನಾಮಮಾತ್ರ ದೊರೆ. ವೀರಮ್ಮಾಜಿಯೇ ಸ್ವತಃ ಆಡಳಿತ ನಡೆಸುತ್ತಿದ್ದಳು. ಕೆಳದಿ ರಾಜ್ಯದ ಅಪಾರ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದ ಮರಾಠರು ಮತ್ತೆ ಮತ್ತೆ ಕೆಳದಿಯ ಮೇಲೆ ದಾಳಿ ಮಾಡುತ್ತಿದ್ದುದರಿಂದ ವೀರಮ್ಮಾಜಿ ಪ್ರಜೆಗಳ ಮೇಲೆ ಹೆಚ್ಚಿನ ತೆರಿಗೆಗಳನ್ನು ವಿಧಿಸಿ, ಹಣ ಸಂಗ್ರಹಿಸಿ ಮರಾಠರಿಗೆ ತೆರಲಾರಂಭಿಸಿದಳು. ಜನತೆ ಈ ಹೆಚ್ಚಿನ ತೆರಿಗೆಗಳಿಂದ ರೋಚ್ಚಿಗೆದ್ದರು. ಪ್ರಜೆಗಳ ಹಿತಚಿಂತನೆಗಾಗಿ ವಾದಿಸಿದ ಪ್ರಧಾನಿ ಮುಂತಾದ ಹಿರಿಯ ಅಧಿಕಾರಿಗಳನ್ನು ರಾಜಮಾತೆ ವೀರಮ್ಮಾಜಿ ಸೆರೆಗೆ ತಳ್ಳಿದಳು. ಹೆಸರಿಗೆ ರಾಜನಾದ ಸೋಮಶೇಖರ ನಾಯಕ ನಿಸ್ಸಹಾಯಕನಾಗಿ ಪ್ರಜಾಕ್ಷೋಭೆಯನ್ನು ನೋಡಿಕೊಂಡಿರ ಬೇಕಾಯಿತು.

ಮೈಸೂರು ರಾಜ್ಯದಲ್ಲಿ ಕ್ರಮೇಣ ಪ್ರಬಲನಾಗುತ್ತಿದ್ದ ಹೈದರ್‌ಅಲಿಯ ದೃಷ್ಟಿ ಕೆಳದಿಯತ್ತ ಬೀಳಲಾರಂಭಿಸಿತು. ಕೆಳದಿಯ ನೆರೆಹೊರೆಯ ಪಾಳೆಯಗಾರರನ್ನು ಜಯಿಸಿ ಚಿತ್ರದುರ್ಗ ಕೋಟೆಯನ್ನೂ ವಶಪಡಿಸಿಕೊಂಡ ಹೈದರ್ ಕೆಳದಿಯನ್ನು ವಶಪಡಿಸಿಕೊಳ್ಳಲು ಸಮಯ ಕಾಯುತ್ತಿದ್ದ. ಆ ಸಂದರ್ಭದಲ್ಲಿ ರಾಜ್ಯಭ್ರಷ್ಟನಾಗಿದ್ದ ಚಿತ್ರದುರ್ಗದ ಪಾಳೆಯಗಾರ ಮದಕರಿನಾಯಕ, ಮೃತನಾಗಿದ್ದ ಕೆಳದಿಯ ಸಿಂಹಾಸನದ ಹಕ್ಕುದಾರ ಚೆನ್ನಬಸವನಾಯಕ ಸತ್ತಿಲ್ಲವೆಂದು ಒಬ್ಬ ಕೃತ್ರಿಮ ವ್ಯಕ್ತಿಯನ್ನು ಮುಂದು ಮಾಡಿಕೊಂಡು ಪ್ರಚಾರ ಮಾಡುತ್ತಿದ್ದ. ಹೈದರ್ ಆ ಕಪಟ ಹಕ್ಕುದಾರನ ಪರವಾಗಿ ಕೆಳದಿಯ ಮೇಲೆ ದಂಡೆತ್ತಿಬಂದ. ವೀರಮ್ಮಾಜಿ ಈ ಕುತ್ತಿನಿಂದ ಪಾರಾಗಲು ಸವಣೂರಿನ ನವಾಬ ಅಬ್ದುಲ್ ಹಕೀಮ್‌ಖಾನನ ನೆರವಿನಿಂದ ಹೋರಾಡಿದಳು. ಆದರೂ ಹೈದರನ ಸೈನ್ಯ ಜಯಗಳಿಸಿ ರಾಜಧಾನಿ ಬಿದನೂರನ್ನು ಸೂರೆಮಾಡಿತು. ಬಿದನೂರಿಗೆ ಹೈದರ್‌ನಗರವೆಂದು ಹೆಸರಾಯಿತು. ವೀರಮ್ಮಾಜಿ ತಪ್ಪಿಸಿಕೊಂಡು ಪುಣೆಯತ್ತ ಹೋಗುತ್ತಿದ್ದಾಗ ದಾರಿಯಲ್ಲಿ ನಿಧನಳಾದಳು. ಕೃತ್ರಿಮ ಚೆನ್ನಬಸವನಾಯಕ ಮತ್ತು ಸೋಮಶೇಖರನಾಯಕ ಇಬ್ಬರೂ ಹೈದರನ ಸೆರೆ ಸೇರಿದರು. ಸೋಮಶೇಖರ ನಾಯಕ ಮಧುಗಿರಿಯ ಸೆರೆಯಲ್ಲಿ ಏಕಾಂಗಿಯಾಗಿದ್ದು ಅಲ್ಲಿಯೇ ನಿಧನನಾದ. ಕೆಳದಿಯ ಇತಿಹಾಸ ಇಂಥ ದುಃಸ್ಥಿತಿಯಲ್ಲಿ ಕೊನೆಗೊಂಡಿತು.

ವಿಜಯನಗರದ ತರುವಾಯ ಕರ್ನಾಟಕ ಸಂಸ್ಕೃತಿಯ ಮೇಲ್ಮೆಗಾಗಿ ಶ್ರಮಿಸಿದ ಕೆಳದಿಯ ಧೀರೋದಾತ್ತ ಇತಿಹಾಸದಲ್ಲಿ ಸೋಮಶೇಖರ ನಾಯಕ ಕೊನೆಯ ಮತ್ತು ದುರ್ಬಲ ಅರಸನಾಗಿದ್ದು ಅದರ ನಾಶಕ್ಕೆ ಕಾರಣನಾದನೆನ್ನಬಹುದು. (ಬಿ.ಕೆ.ಎಸ್.;ಟಿ.ಎಸ್.ಎಸ್.ಎನ್.)

**ಸೋಮೇಶ್ವರ:** ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ನಾಡ್‌ಪಾಲಿ ಗ್ರಾಮಕ್ಕೆ ಹೊಂದಿಕೊಂಡಿರುವ ಒಂದು ಊರು. ಮಂಗಳೂರು–ಕಾರ್ಕಳ– ಆಗುಂಬೆ ಮಾರ್ಗದಲ್ಲಿ ಕಾರ್ಕಳದಿಂದ 40 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,578.

ಈ ಊರಿನ ಪೂರ್ವದ ಅಂಚಿನಲ್ಲಿ ಪಶ್ಚಿಮಘಟ್ಟಗಳು ತಲೆಯೆತ್ತಿ ನಿಂತಿವೆ. ಇಲ್ಲಿ ಜೂನ್‌ನಿಂದ ಅಕ್ಟೋಬರ್ ವರೆಗೆ ಅಧಿಕ ಮಳೆ ಬಿದ್ದರೂ ವಾಯುಗುಣ ತುಂಬ ಹಿತಕರವಾಗಿದೆ. ಈ ಘಟ್ಟವನೇರಿ ಪೂರ್ವದ ಆಗುಂಬೆಯತ್ತ ಸಾಗುವ ಘಾಟಿ ರಸ್ತೆ ಈ ಊರಿನಿಂದ ಪ್ರಾರಂಭವಾಗು ತ್ತದೆ. ಘಾಟಿ ರಸ್ತೆ ಕೊನೆಗೊಳ್ಳುವ ಭಾಗದಲ್ಲಿ ಘಟ್ಟದ ಶಿಖರದ ಮೇಲೆ ನಿಂತು ಕರಾವಳಿಯ ಸುಂದರ ನೋಟವನ್ನು ಕಾಣಬಹುದು. ಈ ಘಾಟಿ ರಸ್ತೆ ಕೆಲವೆಡೆ ಬಹಳ ಕಿರಿದಾಗಿದ್ದು ಹಲವು ಕಡಿದಾದ ತಿರುವುಗಳನ್ನು ಪಡೆದಿದೆ. ಆದ್ದರಿಂದ ಆಗುಂಬೆ, ಶಿವಮೊಗ್ಗಗಳತ್ತ ಹೋಗುವ ಪ್ರಯಾಣಿಕರು ಸೋಮೇಶ್ವರದ ತನಕ ದೊಡ್ಡ ವಾಹನಗಳಲ್ಲಿ ಬಂದು, ಅನಂತರ ಪ್ರತ್ಯೇಕವಾದ ಚಿಕ್ಕ ವಾಹನಗಳಲ್ಲಿ ಕುಳಿತು ಘಟ್ಟವನ್ನೇರಬೇಕಾಗುತ್ತದೆ. ಕರಾವಳಿ ಪ್ರದೇಶದ ಉಪ್ಪು, ಮೆಣಸು ಮೊದಲಾದ ಪದಾರ್ಥಗಳು ಸೋಮೇಶ್ವರದ ಮಾರ್ಗವಾಗಿ ಪಶ್ಚಿಮಘಟ್ಟ ಗಳ ಪಶ್ಚಿಮ ಪ್ರದೇಶಗಳಿಗೆ ಸರಬರಾಜಾಗುತ್ತವೆ. ಆ ಪ್ರದೇಶಗಳ ಉತ್ಪನ್ನ ಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕಳುಹಿಸುವುದೂ ಈ ಮಾರ್ಗವಾಗಿಯೆ.

ಇಲ್ಲಿ ಸೋಮೇಶ್ವರ, ವೆಂಕಟರಮಣ ಎಂಬ ಎರಡು ದೇವಾಲಯಗಳಿವೆ. ಹಳೆಯದಾದ ಸೋಮೇಶ್ವರ ದೇವಾಲಯ ಬಾರಕೂರು ಅರಸರಿಂದ

ನಿರ್ಮಿತವಾದುದು. ವೆಂಕಟರಮಣ ದೇವಾಲಯ ಸು. 16–17ನೆಯ ಶತಮಾನದ್ದೆಂದು ತೋರುತ್ತದೆ. ಇಲ್ಲಿ ಒಂದು ಜೈನ ಬಸದಿಯೂ ಇದೆ. ವರ್ಷಕ್ಕೊಮ್ಮೆ ಈ ಊರಿನಲ್ಲಿ ನಡೆಯುವ ಜಾನುವಾರು ಜಾತ್ರೆ ಸುತ್ತಮುತ್ತಣ ಪ್ರದೇಶದಲ್ಲಿ ಹೆಚ್ಚು ಪ್ರಸಿದ್ಧ. (ಎಚ್.ಜಿ.)

**ಸೋಮೇಶ್ವರ I:** ಕಲ್ಯಾಣದ ಚಾಳುಕ್ಯವಂಶದ ದೊರೆ (1044–68). ಎರಡನೆಯ ಜಯಸಿಂಹ ಜಗದೇಕಮಲ್ಲನ ಮಗ. ಆಹವಮಲ್ಲ, ರಾಯನಾರಾಯಣ, ವೀರಮಾರ್ತಾಂಡ ಇವನ ಬಿರುದುಗಳು.

ಪಟ್ಟಕ್ಕೆ ಬಂದಕೂಡಲೇ ಸೋಮೇಶ್ವರ ವೆಂಗಿಯನ್ನು ಆಕ್ರಮಿಸಿದ. ದನ್ನಾಡ ಎಂಬಲ್ಲಿ ಚೋಳರಿಗೂ ಚಾಳುಕ್ಯರಿಗೂ ಯುದ್ಧ ನಡೆದು, ಚೋಳ ದೊರೆ ರಾಜಾಧಿರಾಜ ಜಯಗಳಿಸಿ, ಚಾಳುಕ್ಯರಾಜಧಾನಿಯಾದ ಕೊಳ್ಳಿಪಾಕೆಯನ್ನು ಭಗ್ನಗೊಳಿಸಿದನೆಂದು ಚೋಳ ದಾಖಲೆಗಳು ತಿಳಿಸುತ್ತವೆ. ಆದರೆ ಕೊಳ್ಳಿಪಾಕೆಯನ್ನು ರಕ್ಷಿಸಿಕೊಳ್ಳಲು ಸಾಧ್ಯವಾಯಿತೆಂದು ಚಾಳುಕ್ಯ ದಾಖಲೆಗಳು ತಿಳಿಸುತ್ತವೆ. ಇವನ ಕಾಲದಲ್ಲಿ 1048ರ ಹೊತ್ತಿಗೆ ಕಲ್ಯಾಣ ಪಟ್ಟಣ ಚಾಳುಕ್ಯರ ರಾಜಧಾನಿಯಾಯಿತು. ಸು. 1054ರಲ್ಲಿ ಚೋಳರಿಗೂ ಚಾಳುಕ್ಯರಿಗೂ ಕೊಪ್ಪಳದ ಬಳಿ ನಡೆದ ಹೋರಾಟದಲ್ಲಿ ಚೋಳ ದೊರೆ ರಾಜಾಧಿರಾಜ ಮರಣಹೊಂದಿದ. ಚೋಳರ ಮೇಲಿನ ಈ ವಿಜಯದ ಕುರುಹಾಗಿ ಅಣ್ಣಿಗೆರೆ ಎಂಬಲ್ಲಿ ಚೋಳಂಗೊಂಡ ತ್ರೈಪುರುಷ ದೇವಾಲಯ ನಿರ್ಮಿತವಾಯಿತು. 1059ರಲ್ಲಿ ದಕ್ಷಿಣ ದಿಗ್ವಿಜಯ ಯಾತ್ರೆಯನ್ನು ಕೈಗೊಂಡ ಸೋಮೇಶ್ವರ ಚೋಳ ದೊರೆಯನ್ನು ಸೋಲಿಸಿದ. ವೆಂಗಿ ಸಿಂಹಾಸನಕ್ಕಾಗಿ ನಡೆದ ಹೋರಾಟದಲ್ಲಿ ಸೋಮೇಶ್ವರ ಶಕ್ತಿವರ್ಮನಿಗೆ (II) ಸಹಾಯ ಮಾಡಿದ. 1064ರಲ್ಲಿ ಮತ್ತೊಮ್ಮೆ ಚೋಳರಿಗೂ ಚಾಳುಕ್ಯರಿಗೂ ಕೂಡಲ ಸಂಗಮದ ಬಳಿ ಯುದ್ಧ ನಡೆಯಿತೆಂದು ತಿಳಿದುಬರುತ್ತದೆ. ಚಾಳುಕ್ಯರ ಶತ್ರುಗಳಾದ ಪರಮಾರರನ್ನು ಸದೆಬಡಿಯಲು ಅಪೇಕ್ಷಿಸಿದ ಸೋಮೇಶ್ವರ 1051ರ ಹೊತ್ತಿಗೆ ಮಾಂಡವವನ್ನು ವಶಪಡಿಸಿಕೊಂಡನಲ್ಲದೆ, ಪರಮಾರ ರಾಜಧಾನಿಯಾದ ಧಾರಾಪುರಿಯನ್ನು ನಾಶಮಾಡಿದ. ಈತ ಕಳಚುರಿ ದೊರೆಯಾದ ಕರ್ಣನೆಂಬುವವನನ್ನೂ ಚಕ್ರಕೂಟದ ದೊರೆ ಧಾರಾವರ್ಷನೆಂಬುವವನನ್ನೂ ಸೋಲಿಸಿದನೆಂದೂ ತನಗೆ ಅವಿಧೇಯರಾಗಿ ನಡೆದ ಮುಮ್ಮಣಿ ಮತ್ತು ಮಾರಸಿಂಹ ಎಂಬ ಶಿಲಾಹಾರ ಸಾಮಂತರನ್ನು ಸದೆಬಡಿದನೆಂದೂ ತಿಳಿದುಬರುತ್ತದೆ. ತೀವ್ರ ಅನಾರೋಗ್ಯದಿಂದ ನರಳುತ್ತಿದ್ದ ಸೋಮೇಶ್ವರ ಕೊನೆಗಾಲದಲ್ಲಿ ತುಂಗಭದ್ರಾ ನದಿಯಲ್ಲಿ ಜಲಸಮಾಧಿ ಹೊಂದಿದನೆಂಬುದಾಗಿ ಬಿಲ್ಹಣ ತನ್ನ ಕಾವ್ಯದಲ್ಲಿ ತಿಳಿಸುತ್ತಾನೆ. ಉತ್ಕಟವಾದ ಜ್ವರಬಾಧೆಯಿಂದ ನರಳುತ್ತಿದ್ದ ಅರಸ ತನ್ನ ಅಂತ್ಯ ಸಮೀಪಿಸಿದುದನ್ನು ಮನಗಂಡು ತುಂಗಭದ್ರಾನದಿಯಲ್ಲಿ ಜಲಸಮಾಧಿ ಹೊಂದಿದನೆಂದು ಒಂದು ಶಾಸನ ತಿಳಿಸುತ್ತದೆ. ಈ ಘಟನೆ ನಡೆದದ್ದು ಕುರುವತ್ತಿಯಲ್ಲಿ (ಬಳ್ಳಾರಿ ಜಿಲ್ಲೆ), 1068 ಮಾರ್ಚ್ 29ರಂದು.

ಸೋಮೇಶ್ವರನಿಗೆ ಎಂಟು ಜನ ಪತ್ನಿಯರಿದ್ದರೆಂದು ತಿಳಿದುಬರುತ್ತದೆ. ಇವನಿಗೆ ಸೋಮೇಶ್ವರ II, ವಿಕ್ರಮಾದಿತ್ಯ VI ಮತ್ತು ಜಯಸಿಂಹ ಎಂಬ ಮೂವರು ಗಂಡುಮಕ್ಕಳು; ಸುಗ್ಗಲದೇವಿ ಎಂಬ ಮಗಳನ್ನು ಇವನು ಸೇವುಣ ಸಿಂಘಣನಿಗೆ ವಿವಾಹಮಾಡಿಕೊಟ್ಟಿದ್ದ. ಸೋಮೇಶ್ವರನ ಇಪ್ಪತ್ತೈದು ವರ್ಷಗಳ ಕಾಲದ ಆಳಿಕೆಯಲ್ಲಿ ಚಾಳುಕ್ಯ ಸಾಮ್ರಾಜ್ಯ ವಿಸ್ತಾರವಾದುದು ಮಾತ್ರವಲ್ಲದೆ ಸುಭದ್ರವೂ ಆಯಿತೆಂದು ಹೇಳಬಹುದು.

(ಎಚ್.ಎಮ್.ಎನ್.ಆರ್.)

**ಸೋಮೇಶ್ವರ II:** ಕಲ್ಯಾಣದ ಚಾಳುಕ್ಯ ವಂಶದ ದೊರೆ (1068–76). ಒಂದನೆಯ ಸೋಮೇಶ್ವರ ಆಹಮಲ್ಲನ ಮಗ ಮತ್ತು ಉತ್ತರಾಧಿಕಾರಿ. ಭುವನೈಕಮಲ್ಲನೆಂದು ಪ್ರಸಿದ್ಧನಾಗಿದ್ದ ಈತ 1068 ಏಪ್ರಿಲ್ 11ರಂದು ಪಟ್ಟಕ್ಕೆ ಬಂದ. ಶಾಸನವೊಂದು ಹೇಳುವಂತೆ ಇವನು ಇನ್ನೂ ಕಂಠಿಕೆಯನ್ನು ಧರಿಸುತ್ತಿದ್ದಂತೆಯೇ ಚೋಳ ದೊರೆ ವೀರರಾಜೇಂದ್ರ ಗುತ್ತಿ ಎಂಬಲ್ಲಿಗೆ ಬಂದು ಚಾಳುಕ್ಯರಾಜ್ಯದ ಮೇಲೆ ಮುತ್ತಿಗೆ ಹಾಕಿದ. ಆದರೆ ಅಲ್ಲಿ ನಡೆದ ಯುದ್ಧದಲ್ಲಿ ಚೋಳ ದೊರೆ ಪರಾಜಿತನಾಗಿ ಪಲಾಯನ ಮಾಡಿದ.

ಅನಂತರ ಈ ಹಿಂದೆ ಆರನೆಯ ವಿಕ್ರಮಾದಿತ್ಯನ ಸಹಾಯದಿಂದ ಪರಮಾರ ಸಿಂಹಾಸನವನ್ನೇರಿದ್ದ ಜಯಸಿಂಹನನ್ನು ಅವನ ವೈರಿ ಉದಯಾದಿತ್ಯ ಸೋಲಿಸಿ ಪರಮಾರ ರಾಜ್ಯವನ್ನು ಹಿಡಿದಿದ್ದರಿಂದ ಅವನನ್ನು ಶಿಕ್ಷಿಸಲು ಸೋಮೇಶ್ವರ ಉತ್ತರಕ್ಕೆ ನಡೆದ. ಕಳಚುರಿ ಕರ್ಣ ಮತ್ತು ಗುಜರಾತಿನ ಚಾಳುಕ್ಯ ಕರ್ಣ ಇವರೂ ಇವನ ಜೊತೆ ಸೇರಿ ಉದಯಾದಿತ್ಯನ ಮೇಲೆ ಬಿದ್ದರೂ ಪರಾಭವವನ್ನು ಅನುಭವಿಸಿ ಹಿಮ್ಮೆಟ್ಟಬೇಕಾಯಿತು.

ಸೋಮೇಶ್ವರ ತನ್ನ ಕಿರಿಯ ಸೋದರನಾದ ವಿಕ್ರಮಾದಿತ್ಯನ ರಾಜನಿಷ್ಠೆಯನ್ನು ಸಂದೇಹಿಸುತ್ತಿದ್ದನೆನ್ನಲು ಸಾಕಷ್ಟು ಆಧಾರಗಳಿವೆ. ಉತ್ತರದಲ್ಲಿ ಪರಮಾರ ರಾಜ್ಯಕ್ಕಾಗಿ ಉದಯಾದಿತ್ಯ ಮತ್ತು ಜಯಸಿಂಹರ ನಡುವೆ ಉಂಟಾಗಿದ್ದ ಹೋರಾಟದಲ್ಲಿ ಜಯಸಿಂಹನಿಗೆ ಸಹಾಯ ಮಾಡುತ್ತಿದ್ದ ವಿಕ್ರಮಾದಿತ್ಯನನ್ನು ಸೋಮೇಶ್ವರ ಹಿಂದಕ್ಕೆ ಕರೆಸಿಕೊಂಡ. ಉತ್ತರ ದೊರೆಗಳ ಸಹಾಯದಿಂದ ವಿಕ್ರಮಾದಿತ್ಯ ತನ್ನನ್ನು ಪದಚ್ಯುತಿಗೊಳಿಸಬಹುದೆಂಬ ಸಂದೇಹವೇ ಸೋಮೇಶ್ವರನ ಈ ವರ್ತನೆಗೆ ಕಾರಣವೆನ್ನಬಹುದು. ಇದೇ ರೀತಿಯ ಕೆಲವಾರು ಘಟನೆಗಳಿಂದ ಸೋಮೇಶ್ವರ ವಿಕ್ರಮಾದಿತ್ಯರ ನಡುವೆ ವೈಮನಸ್ಯ ತಲೆದೋರಿತು. 1073–76ರ ವರೆಗೆ ಸೋಮೇಶ್ವರ ಬನವಾಸಿಯ ಬಳಿಯಲ್ಲಿ ಬೀಡುಬಿಟ್ಟಿದ್ದನೆಂದು ತಿಳಿದುಬರುತ್ತದೆ. ಬಂಕಾಪುರ ಇವನ ಎರಡನೆಯ ರಾಜಧಾನಿಯಾಗಿತ್ತು. ಪೂರ್ವದಲ್ಲಿ ಹಲವಾರು ಯುದ್ಧಗಳಿಗೆ ಕಾರಣವಾದ ವೆಂಗಿ ದೇಶದ ಮೇಲೆ ಚಾಳುಕ್ಯರ ಸಿಂಹಾಸನಕ್ಕಾಗಿ ಹೋರಾಟ ನಡೆಸಲು ಉದ್ಯುಕ್ತನಾದ ವಿಕ್ರಮಾದಿತ್ಯ ಚೋಳರೊಂದಿಗೆ ರಕ್ತಸಂಬಂಧವನ್ನು ಬೆಳೆಸಿ, ಅವರ ಸ್ನೇಹ ಬೆಳೆಸಿದ. ಸೋಮೇಶ್ವರ ವಿಕ್ರಮಾದಿತ್ಯನಿಗೆ ಸೆರೆಸಿಕ್ಕನೆಂದು ಬಿಲ್ಹಣ ತನ್ನ ಕಾವ್ಯದಲ್ಲಿ ತಿಳಿಸುತ್ತಾನೆ. 1071ರ ಕೆಲವು ದಾಖಲೆಗಳಲ್ಲಿ ವಿಕ್ರಮಾದಿತ್ಯನನ್ನು ಚಾಳುಕ್ಯ ದೊರೆ ಎಂದು ಉಲ್ಲೇಖಿಸಲಾಗಿದೆ. ಆದರೂ 1086ರ ವರೆಗೆ ಸೋಮೇಶ್ವರ ದೊರೆಯಾಗಿದ್ದನೆನ್ನಲು ಆಧಾರಗಳಿವೆ. ಅನಂತರ ವಿಕ್ರಮಾದಿತ್ಯ ಪಟ್ಟಕ್ಕೆ ಬಂದ.

ಕಂಚಲದೇವಿ ಮತ್ತು ಮೈಳಲದೇವಿಯರು ಸೋಮೇಶ್ವರನ ಪತ್ನಿಯರು. ಈತನಿಗೆ ಒಬ್ಬ ಮಗಳಿದ್ದು ಆಕೆ ಅಯೋಧ್ಯಾಪುರಾಧೀಶ್ವರನೆನಿಸಿದ ಮಹಾಮಂಡಲೇಶ್ವರ ರವಿಯರಸನನ್ನು ಮದುವೆಯಾಗಿದ್ದಂತೆ ತೋರುತ್ತದೆ. ಮಹಾಮಂಡಲೇಶ್ವರ ಲಕ್ಷ್ಮರಸ ಇವನ ಅಧಿಕಾರಿಗಳಲ್ಲಿ ಅತಿ ಪ್ರಮುಖನಾದವ. ಈತ ರಾಜನ ಸಮೀಪದ ಸಲಹೆಗಾರ ಹಾಗೂ ಹಿತೈಷಿಯಾಗಿದ್ದ. ತನ್ನ ಇಬ್ಬರು ತಮ್ಮಂದಿರ ಬಳಿಕ ಈತನೇ ಪ್ರಮುಖನೆಂದು ಶಾಸನವೊಂದರಲ್ಲಿ ಹೇಳಿದೆ. ಬೆದ್ದಣ ಚೋಳ, ಮಹಾಪ್ರಧಾನ ಬಲದೇವಯ್ಯ, ನೊಳಂಬಾಧಿರಾಜ ಸಿಂಗಣದೇವ, ಸಾಕಿಮಯ್ಯ ಬಡರಕುಂದ ಮಹಾಸಾಮಂತ ಕಲಿಯಮ್ಮರಸ, ಮಣಲೇರಾನ್ವಯದ ಮಹಾಸಾಮಂತ ಜಯಕೇಶಿಯರಸ ಮುಂತಾದವರು ಈತನ ಇತರ ಅಧಿಕಾರಿಗಳು ಮತ್ತು ಸಾಮಂತರು.

(ಎಚ್.ಎಮ್.ಎನ್.ಆರ್.)

**ಸೋಮೇಶ್ವರ III:** ಕಲ್ಯಾಣದ ಚಾಳುಕ್ಯವಂಶದ ದೊರೆ (1127–39). ಆರನೆಯ ವಿಕ್ರಮಾದಿತ್ಯನ ಮಗ. ಭೂಲೋಕಮಲ್ಲ ಈತನ ಪ್ರಸಿದ್ಧ ಬಿರುದು. ಇದಲ್ಲದೆ ತ್ರಿಭುವನಮಲ್ಲ, ಸರ್ವಜ್ಞಚಕ್ರವರ್ತಿ ಮುಂತಾದ ಬಿರುದುಗಳೂ ಇವನಿಗಿದ್ದುವು. ಇವನ ಪಟ್ಟಾಭಿಷೇಕ ವಿಕ್ರಮಾದಿತ್ಯನ ಮರಣಾನಂತರ 1127 ಫೆಬ್ರವರಿ 20ರಂದು ಜರುಗಿತು.

ಇವನ ಆಳ್ವಿಕೆಯ ಪ್ರಾರಂಭದಲ್ಲಿಯೇ ವಿಕ್ರಮಾದಿತ್ಯನ ಮರಣದಿಂದ ಉತ್ತೇಜಿತನಾದ ವಿಕ್ರಮಚೋಳನು ಚೋಳರು ಕಳೆದುಕೊಂಡಿದ್ದ ವೆಂಗಿಯ ಭಾಗಗಳನ್ನು ಪುನರ್ವಶಪಡಿಸಿಕೊಳ್ಳಲು ಕಾರ್ಯನಿರತನಾದ. 1127ರ ಹೊತ್ತಿಗೆ ಕೊಲ್ಲಿಪಾಕೆಯ ಭಾಗ ಅವನ ವಶಕ್ಕೆ ಬಂದು, ಅಲ್ಲಿ ನಂಬಯ್ಯ ನೆಂಬುವನೊಬ್ಬ ಅವನ ಸಾಮಂತನಾಗಿ ಆಳುತ್ತಿದ್ದ. ವೆಂಗಿಯ ಕರಾವಳಿ ಹಾಗೂ ಉತ್ತರದ ಭಾಗಗಳೂ 1130ರ ಹೊತ್ತಿಗೆ ಚೋಳರ ವಶವಾಗಿ ಸೋಮೇಶ್ವರನ ಕಾಲದಲ್ಲಿ ವೆಂಗಿಪ್ರಾಂತ್ಯ ಪೂರ್ಣವಾಗಿ ಚಾಳುಕ್ಯರ ಕೈಬಿಟ್ಟಿತು. ದಕ್ಷಿಣದಲ್ಲಿದ್ದ ವಿಷ್ಣುವರ್ಧನ ಭೂಲೋಕಮಲ್ಲನ ಸಾಮಂತ ನಾಗಿದ್ದರೂ 1135–36ರ ಸುಮಾರಿನಲ್ಲಿ ಇವನು ಉಚ್ಚಂಗಿ ಮತ್ತು ಬನವಾಸಿಗಳನ್ನು ಆಕ್ರಮಿಸಿದನೆಂದು ಕೆಲವು ಶಾಸನಗಳು ತಿಳಿಸುತ್ತವೆ.

ಒಟ್ಟಿನಲ್ಲಿ ಇವನ ಕಾಲದಲ್ಲಿ ರಾಜ್ಯದಲ್ಲಿ ಶಾಂತಿ ನೆಲೆಸಿತ್ತು. ಅರಸನ ಒಲವು ರಾಜಕೀಯಕ್ಕಿಂತಲೂ ಹೆಚ್ಚಾಗಿ ಸಾಹಿತ್ಯ ಕಲೆಗಳ ಕಡೆಗೆ ಇತ್ತು. ಈತ ರಾಜನಾಗಿದ್ದಂತೆ ಸ್ವತಃ ಕವಿಯೂ ಕವಿಪೋಷಕನೂ ಆಗಿದ್ದ. ವಿಕ್ರಮಾಂಕಾಭ್ಯುದಯ ಮತ್ತು ಮಾನಸೋಲ್ಲಾಸ ಇವನ ಕೃತಿಗಳು. ವಿಕ್ರಮಾಂಕಾಭ್ಯುದಯ ಐತಿಹಾಸಿಕ ಕಾವ್ಯ. ಚಂಪೂವಿನಲ್ಲಿದೆ. ಈ ಕಾವ್ಯ ಚಾಳುಕ್ಯರ ಇತಿಹಾಸದ ಮೇಲೆ ಸ್ವಲ್ಪಮಟ್ಟಿಗೆ ಬೆಳಕು ಚೆಲ್ಲುತ್ತದೆ. ಕೃತಿ ಸಂಪೂರ್ಣವಾಗಿ ಉಪಲಬ್ಧವಿಲ್ಲ. **(ಟಿ.ಎಸ್.ಎಸ್.ಎನ್.)**

ಮಾನಸೋಲ್ಲಾಸ ಸು. 1130ರಲ್ಲಿ ರಚಿತವಾದಂತೆ ತೋರುತ್ತದೆ. ಸಂಸ್ಕೃತದಲ್ಲಿರುವ ಈ ಗ್ರಂಥ ಸೋಮೇಶ್ವರ ರಚಿಸಿದ್ದಲ್ಲವೆಂದೂ ಅವನ ಆಸ್ಥಾನದಲ್ಲಿದ್ದ ಯಾರೊ ಒಬ್ಬ ಪಂಡಿತ ಗ್ರಂಥರಚನೆ ಮಾಡಿದ್ದಾನೆಂದೂ ತರುವಾಯ ಸೋಮೇಶ್ವರನ ಹೆಸರಿನಲ್ಲಿ ಪ್ರಕಾಶಕ್ಕೆ ಬಂದಿರಬಹುದೆಂದೂ ಕೆಲವು ವಿದ್ವಾಂಸರ ಮತ. ಇದೊಂದು ವಿಶ್ವಕೋಶ ಲಕ್ಷಣವುಳ್ಳ ಗ್ರಂಥ. ಇದಕ್ಕೆ ಅಭಿಲಷಿತಾರ್ಥ ಚಿಂತಾಮಣಿ ಎಂಬ ಹೆಸರೂ ಇದೆ. ಅಲ್ಲಲ್ಲಿ ಗದ್ಯಭಾಗಗಳೂ ಕಂಡುಬರುತ್ತವೆ. ಇದರಲ್ಲಿ ಐದು ಪ್ರಕರಣಗಳೂ 100 ಅಧ್ಯಾಯಗಳೂ ಇವೆ. ಅನುಷ್ಟುಭ್‌ವೃತ್ತದಲ್ಲಿ ರಚಿತವಾಗಿದೆ. ಅನೇಕ ಪ್ರಾಪಂಚಿಕ ವಿಷಯಗಳ ಮತ್ತು ವಸ್ತುಗಳ ಪ್ರತಿಪಾದನೆಯಿಂದ ಕೂಡಿದ ಇದರ ವೈಶಿಷ್ಟ್ಯವೆಂದರೆ ವಿಚಾರ ವೈವಿಧ್ಯ. ಒಂದನೆಯ ಪ್ರಕರಣದಲ್ಲಿ ವರ್ಜ್ಯಗಳ, ದಾನ, ದೇವತಾಭಕ್ತಿಗಳ ವಿಚಾರವಿದೆ. ಎರಡನೆಯದು ರಾಜನೀತಿ ವಿಷಯಕವಾಗಿದ್ದು ಅಮಾತ್ಯ, ಕೋಶ, ರಾಷ್ಟ್ರ, ದುರ್ಗ, ಬಲ, ಸಂಧಿವಿಗ್ರಹ, ಉಪಾಯ, ದಂಡ ಮುಂತಾದವುಗಳ ವಿವರಣೆಯನ್ನೊಳಗೊಂಡಿದೆ. ಮೂರನೆಯ ಪ್ರಕರಣ ಉಪಭೋಗಗಳಿಗೆ ಸಂಬಂಧಪಟ್ಟಿದೆ. ಇದರಲ್ಲಿ ಸ್ನಾನ, ತಾಂಬೂಲ, ವಿಲೇಪನ, ವಸ್ತ್ರ, ಮಾಲ್ಯ, ಭೂಷಣ, ಪುತ್ರ, ಅನ್ನ, ಪಾನೀಯ, ಶಯ್ಯಾ, ಯೋಷಿತ್ ಮುಂತಾದ ಭೋಗಗಳ ವಿಚಾರಗಳೂ ಗೃಹನಿರ್ಮಾಣೋಪಯುಕ್ತ ಮುಹೂರ್ತಾದಿಗಳು, ಶಿಲ್ಪ, ಮೂರ್ತಿಲಕ್ಷಣ, ಚಿತ್ರಲಕ್ಷಣ ಮುಂತಾದ ವಿಷಯಗಳೂ ಕಂಡುಬರುತ್ತವೆ. ನಾಲ್ಕು ಮತ್ತು ಐದನೆಯ ಪ್ರಕರಣಗಳಲ್ಲಿ ವಿನೋದಗಳ ಮತ್ತು ಕ್ರೀಡೆಗಳ ವಿಷಯ ಪ್ರತಿಪಾದಿತವಾಗಿವೆ. ಅಲ್ಲದೆ ಗಣಿತ, ಜ್ಯೋತಿಷ, ಹಸ್ತಸಾಮುದ್ರಿಕ, ಅಶ್ವಗಜಗಳ ಶಿಕ್ಷಣ, ರತ್ನಗಳು, ವಿವಾಹ, ಪಾಕವಿದ್ಯೆ, ಸಂಗೀತ, ಸುಗಂಧಗಳು ಇತ್ಯಾದಿ ವಿಷಯಗಳೂ ಇವುಗಳಲ್ಲಿದೆ. ಹೀಗೆ ಅನೇಕ ವಸ್ತುಗಳ ಮತ್ತು ವಿದ್ಯೆಗಳ ವಿಚಾರವನ್ನು ತಿಳಿಸುವ ಈ ಗ್ರಂಥ ಭಾರತೀಯ ಸಂಸ್ಕೃತಿಯ ಬೆಳೆವಣಿಗೆಯ ದೃಷ್ಟಿಯಿಂದ ಮಹತ್ತ್ವದ ಸ್ಥಾನವನ್ನು ಪಡೆದಿರುವುದಲ್ಲದೆ ಎಲ್ಲರ ಪ್ರೀತಿಮನ್ನಣೆಗಳಿಗೂ ಪಾತ್ರವಾಗಿದೆ.

ಸೋಮೇಶ್ವರನಿಗೆ ಏಕ್ಕಲದೇವಿ ಮತ್ತು ಬರ್ಮಲದೇವಿ ಎಂಬ ಪತ್ನಿಯರೂ ಜಗದೇಕಮಲ್ಲII ಮತ್ತು ತೈಲಪ III ಎಂಬ ಪುತ್ರರೂ ಇದ್ದರು. ಸೋಮೇಶ್ವರ 1139ರಲ್ಲಿ ಮೃತನಾದ. ಅನಂತರ ಇವನ ಮಗ ಎರಡನೆಯ ಜಗದೇಕಮಲ್ಲ ಪಟ್ಟಕ್ಕೆ ಬಂದ. **(ಬಿ.ಕೆ.ಎಸ್.)**

**ಸೋಮೇಶ್ವರ IV:** ಕಲ್ಯಾಣದ ಚಾಳುಕ್ಯ ವಂಶದ ಕೊನೆಯ ದೊರೆ (1182–89). ವೀರಸೋಮೇಶ್ವರ, ತ್ರಿಭುವನಮಲ್ಲ, ವೀರನಾರಾಯಣ ಮುಂತಾದ ಬಿರುದುಗಳಿದ್ದ ಈತ 3ನೆಯ ತೈಲಪನ ಮಗ. ತನ್ನ ತಂದೆಯ ಕಾಲದಲ್ಲಿ ಚಿನ್ನತುಂಬಲ ರಾಜಧಾನಿಯಲ್ಲಿ ಮಹಾಮಂಡಲೇಶ್ವರನಾಗಿದ್ದ.

ಸು. 1162ರಲ್ಲಿ 3ನೆಯ ತೈಲಪನನ್ನು ಕೊನೆಗಾಣಿಸಿ ಕಳಚುರಿಗಳು ಚಾಳುಕ್ಯರ ರಾಜ್ಯವನ್ನು ಆಕ್ರಮಿಸಿಕೊಂಡರು. ಸು. 1182ರ ವರೆಗೆ ಸೋಮೇಶ್ವರ ಅಜ್ಞಾತವಾಸದಲ್ಲಿದ್ದ. ಆ ಹೊತ್ತಿಗೆ ಕಳಚುರಿಗಳ ಬಲ ಕುಂದುತ್ತಿದ್ದು, ದಂಡನಾಯಕ ಬಮ್ಮ, ತೇಜಿಮಯ್ಯ, ಶ್ರೀಧರ ಮುಂತಾದವರು ಚಾಳುಕ್ಯರ ಆಳ್ವಿಕೆಯನ್ನು ಪುನರ್‌ಸ್ಥಾಪಿಸಲು ಯತ್ನಿಸಿ ಸಫಲರಾದರು. ಬಮ್ಮ ಚಾಳುಕ್ಯ ರಾಜ್ಯಪ್ರತಿಷ್ಠಾಪಕ, ಕಲಚುರಿಕುಲಕಾಲಾಗ್ನಿ ಇತ್ಯಾದಿ ಬಿರುದುಗಳನ್ನು ಗಳಿಸಿದ. ಚಾಳುಕ್ಯರಾಜ್ಯ ಸೋಮೇಶ್ವರನ ವಶಕ್ಕೆ ಬಂದಿತಾದರೂ ಇವನ ಅಧಿಕಾರ ರಾಜ್ಯದ ದಕ್ಷಿಣಭಾಗಕ್ಕಷ್ಟೇ ಸೀಮಿತವಾಗಿತ್ತು. ಉತ್ತರದಲ್ಲಿ ಸೇವುಣರೂ ದಕ್ಷಿಣದಲ್ಲಿ ಹೊಯ್ಸಳರೂ ಬಹು ಪ್ರಬಲರಾಗಿದ್ದರು. ಸೋಮೇಶ್ವರನಿಗೆ ಸಾಕಷ್ಟು ಜನ ಹಾಗೂ ಧನ ಬೆಂಬಲವಿಲ್ಲವೆಂದರಿತ ಈ ರಾಜಕೀಯ ಶಕ್ತಿಗಳು ಕೆಲವೇ ವರ್ಷಗಳಲ್ಲಿ ಇವನ ಆಳ್ವಿಕೆಯನ್ನು ಕೊನೆಗಾಣಿಸಿದವು.

ಸು. 1189ರ ಹೊತ್ತಿಗೆ ದೇವಗಿರಿಯ ಯಾದವ ಭಿಲ್ಲಮ ಚಾಳುಕ್ಯ ರಾಜ್ಯದ ಉತ್ತರ ಮತ್ತು ಪೂರ್ವ ಭಾಗಗಳನ್ನು ವಶಪಡಿಸಿಕೊಂಡ. ಇದೇ ಸಮಯದಲ್ಲಿ ಹೊಯ್ಸಳರ ದೊರೆಯಾದ ಇಮ್ಮಡಿ ವೀರಬಲ್ಲಾಳ ಸೋಮೇಶ್ವರನ ಪ್ರಸಿದ್ಧ ದಂಡನಾಯಕನಾದ ಬಮ್ಮರಸನನ್ನು ಸೋಲಿಸಿ ಚಾಳುಕ್ಯ ಸಾಮ್ರಾಜ್ಯದ ದಕ್ಷಿಣ ಭಾಗವನ್ನು ಸ್ವಾಧೀನಪಡಿಸಿಕೊಂಡ. 1189ರ ಹೊತ್ತಿಗೆ ಚಾಳುಕ್ಯ ರಾಜ್ಯ ನಿರ್ಮೂಲವಾಯಿತು. ಗೋವೆಯ ಕದಂಬರು ಮುಂದೆ ಕೆಲವು ವರ್ಷಗಳ ಕಾಲ ಚಾಳುಕ್ಯ ಸಾಮಂತರೆಂದು ಕರೆದುಕೊಂಡರೂ ಅದು ಕೇವಲ ಸ್ವಾಮಿನಿಷ್ಠೆಯೆಂದಷ್ಟೇ ತೋರುತ್ತದೆ. ಇತ್ತೀಚೆಗೆ ದೊರೆತ ಒಂದು ಶಾಸನ ಸೋಮೇಶ್ವರ 1215ರ ವರೆಗೂ ಇದ್ದನೆಂಬುದನ್ನು ತೋರಿಸಿದೆ. ಆದರೆ ವಿವರಗಳು ದೊರಕುವುದಿಲ್ಲ. **(ಟಿ.ಎಸ್.ಎಸ್.ಎನ್.)**

**ಸೋಮೇಶ್ವರ (ಕಳಚುರಿ):** ಕಲ್ಯಾಣದ ಕಳಚುರಿ ವಂಶದ ರಾಜ (1167–76). ರಾಯಮುರಾರಿ ಸೋವಿದೇವ ಎಂದೂ ಪ್ರಸಿದ್ಧನಾಗಿರುವ ಈತ ಇಮ್ಮಡಿ ಬಿಜ್ಜಳನ ಮಗ ಮತ್ತು ಉತ್ತರಾಧಿಕಾರಿ. ಬಿಜ್ಜಳನ ಕಾಲದಲ್ಲಿ ಈತ ಮಂಗಳವೇಡೆಯಲ್ಲಿ ತರ್ದವಾಡಿ 1000ವನ್ನು (ಈಗಿನ ಬಿಜಾಪುರ ಜಿಲ್ಲೆಯ ಪ್ರದೇಶ) ಆಳುತ್ತಿದ್ದ. 1167ರ ಹೊತ್ತಿಗೆ ಬಿಜ್ಜಳ ರಾಜ್ಯವನ್ನು ಸೋವಿದೇವನಿಗೆ ವಹಿಸಿದ. ಆದರೆ ಸಿಂಹಾಸನಕ್ಕಾಗಿ ಇತರ ಪ್ರತಿಸ್ಪರ್ಧಿಗಳೂ ಇದ್ದರು. ಅವರಲ್ಲಿ ಬಿಜ್ಜಳನ ತಮ್ಮ ಮೈಳುಗಿ ಮತ್ತು ಬಿಜ್ಜಳನ ಹಿರಿಯ ಮಗ ವಜ್ರದೇವನ ಪುತ್ರ ಕರ್ಣ ಮುಖ್ಯರು. ಇವರು ರಾಜ್ಯದ ಕೆಲವು ಭಾಗಗಳಲ್ಲಿ ಸ್ವಲ್ಪಕಾಲ ಸ್ವತಂತ್ರರಾಗಿ ಆಳಿದರೂ ಸೋವಿದೇವ ಶೀಘ್ರದಲ್ಲಿ ಇವರೆಲ್ಲರನ್ನೂ ಹತ್ತಿಕ್ಕಿದ. ಈ ಕಾರ್ಯದಲ್ಲಿ ದಂಡನಾಯಕ ಮಾಧವ ಇವನಿಗೆ ಸಹಾಯಕನಾಗಿದ್ದ.

ಸೋವಿದೇವನ ಶಾಸನಗಳು ಕಲ್ಯಾಣದಿಂದ ಬಳ್ಳಿಗಾಮೆ ವರೆಗಿನ ವಿಶಾಲ ಪ್ರದೇಶದಲ್ಲಿ ಸಿಕ್ಕಿವೆ. ಪಿತ್ರಾರ್ಜಿತವಾಗಿ ಬಂದ ರಾಜ್ಯವಲ್ಲದೆ, ಬೆಳಗಾಂವಿ, ಬಲ್ಲಕುಂದೆ ಮತ್ತು ಮಡಗಿಹಾಳ ಪ್ರಾಂತ್ಯಗಳನ್ನು ಈತ ಆಕ್ರಮಿಸಿದಂತೆ ತೋರುತ್ತದೆ. ಆದರೆ ಇವನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ, ಅಂದರೆ 1175–76ರ ಸುಮಾರಿನಲ್ಲಿ ಇವನ ತಮ್ಮಂದಿರಾದ

ಮೈಳುಗಿ ಮತ್ತು ಸಂಕಮರು ಸೊಲ್ಲಾಪುರ ಮತ್ತು ಬಿಜಾಪುರ ಜಿಲ್ಲೆಯ ಭಾಗಗಳಲ್ಲಿ ಸ್ವತಂತ್ರವಾಗಿ ಆಳಲಾರಂಭಿಸಿದರು.

ಸೋವಿದೇವ ತನ್ನನ್ನು ಕುಂತಳದೇಶ ಚಕ್ರವರ್ತಿ ಎಂದು ಕರೆದುಕೊಂಡಿದ್ದಾನೆ. ಈತನ ರಾಣಿ ಸಾವಲದೇವಿ ಸಂಗೀತ ಮತ್ತು ನೃತ್ಯದಲ್ಲಿ ನಿಪುಣೆಯಾಗಿದ್ದಳೆಂದು ಶಾಸನಗಳು ತಿಳಿಸುತ್ತವೆ. (ಎ.ವಿ.ವಿ.)

**ಸೋಮೇಶ್ವರ (ಹೊಯ್ಸಳ):** ಹೊಯ್ಸಳ ದೊರೆ (1235–1253). ಎರಡನೆಯ ನರಸಿಂಹ ಮತ್ತು ಅವನ ಪಟ್ಟದ ರಾಣಿಯಾದ ಕಾಳಲದೇವಿಯ ಮಗ. ಇವನಿಗೆ ವೀರಸೋಮೇಶ್ವರ, ಪ್ರತಾಪ ಸೋವಿದೇವ ಎಂಬ ಹೆಸರುಗಳೂ ಇದ್ದವು. ಇವನ ತಾಯಿ ಬಾಲ್ಯದಲ್ಲೇ ಮರಣ ಹೊಂದಿದ್ದರಿಂದ ಇವನು ನರಸಿಂಹನ ಸಹೋದರಿಯೂ ಮೂರನೆಯ ರಾಜರಾಜ ಚೋಳನ ರಾಣಿಯರಲ್ಲೊಬ್ಬಳೂ ಆದ ಸೋಮಲದೇವಿಯ ಪೋಷಣೆಯಲ್ಲಿ ತಮಿಳುನಾಡಿನಲ್ಲಿ ಬೆಳೆದ. ತನ್ನ ತಂದೆಯ ಆಳ್ವಿಕೆಯ ಕಾಲದಿಂದಲೂ (1228) ಈತ ಹೊಯ್ಸಳ ಸಾಮ್ರಾಜ್ಯದ ತಮಿಳು ಪ್ರದೇಶಗಳ ಆಳ್ವಿಕೆಯನ್ನು ತನ್ನ ರಾಜಧಾನಿಯಾದ ವಿಕ್ರಮಪುರದಿಂದ ನಿರ್ವಹಿಸುತ್ತಿದ್ದು ತಮಿಳುನಾಡಿನ ರಾಜಕೀಯದಲ್ಲಿ ಹೆಚ್ಚು ಆಸಕ್ತನಾಗಿದ್ದ. ತಂದೆಯ ಮರಣಾನಂತರ 1235ರಲ್ಲಿ ದೋರಸಮುದ್ರದಲ್ಲಿ ಸೋಮೇಶ್ವರ ಪಟ್ಟಾಭಿಷಿಕ್ತನಾದ. ಇವನ ಆಳ್ವಿಕೆಯ ಪ್ರಾರಂಭದಲ್ಲಿ ಸೇವುಣರು ಹೊಯ್ಸಳರ ಮೇಲೆ ಯುದ್ಧ ಹೂಡಿದರು. ಸೇವುಣ ಕೃಷ್ಣನ ದಂಡನಾಯಕನೊಬ್ಬ ಪ್ರಬಲ ವಿರೋಧಿಗಳಾದ ಹೊಯ್ಸಳರನ್ನು ಸೋಲಿಸಿ ಕಾವೇರಿ ತೀರದವರೆಗೂ ದಂಡೆತ್ತಿ ಹೋಗಿ ವಿಜಯಸ್ಥಂಬವನ್ನು ಸ್ಥಾಪಿಸಿದುದಾಗಿ ಧಾರವಾಡ ಜಿಲ್ಲೆಯಲ್ಲಿ ಸಿಕ್ಕಿರುವ ಶಾಸನವೊಂದರಲ್ಲಿ ಹೇಳಿಕೊಂಡಿದ್ದಾನೆ. ಆದರೆ ಈ ಹೇಳಿಕೆ ಉತ್ಪ್ರೇಕ್ಷೆಯಿಂದ ಕೂಡಿದ್ದು ಸತ್ಯಕ್ಕೆ ದೂರವಾಗಿದೆ. ಹೊಯ್ಸಳ ಸೈನ್ಯ ಸೋಮೇಶ್ವರನ ದಂಡನಾಯಕನಾದ ಕಾಮೇಯ ನಾಯಕನ ನೇತೃತ್ವದಲ್ಲಿ ಸೇವುಣರನ್ನು ತುಂಗಭದ್ರಾತೀರದಲ್ಲಿ ಸೋಲಿಸಿ ಹಿಮ್ಮೆಟ್ಟಿಸಿತು. 1236ರಲ್ಲಿ ಸೋಮೇಶ್ವರ ಸೋಲಾಪುರದ ಬಳಿಯ ಪಂಡರಾಪುರದ ಬಳಿಯ ಪಂಡರಾಪುರ ದೇವಾಲಯಕ್ಕೆ ಮಹಾದಾನಗಳನ್ನು ನೀಡಿ ಅಲ್ಲಿ ಒಂದು ಶಾಸನವನ್ನು ಹಾಕಿಸಿದ.

ಸೋಮೇಶ್ವರ ತಮಿಳುನಾಡಿನಲ್ಲಿ ಚೋಳ, ಪಾಂಡ್ಯರೊಡನೆ ಅನೇಕ ಯುದ್ಧಗಳಲ್ಲಿ ತೊಡಗಬೇಕಾಯಿತು. ಮೂರನೆಯ ರಾಜರಾಜ ಚೋಳನ ಉತ್ತರಾಧಿಕಾರಿಯಾದ ಮೂರನೆಯ ರಾಜೇಂದ್ರ ಹೊಯ್ಸಳರ ಆಶ್ರಯವನ್ನು ತಿರಸ್ಕರಿಸಿ ಸ್ವತಂತ್ರನಾಗಿ ಆಳಲುಪಕ್ರಮಿಸಿದ. ಆದರೆ ಅವನು ಸೋಮೇಶ್ವರನಿಂದ ಪರಾಜಿತನಾಗಿ, ಶರಣಾಗತನಾಗಿ ತನ್ನ ಸಿಂಹಾಸನವನ್ನು ಮರಳಿ ಪಡೆದ. ಆ ವೇಳೆಗೆ ಹೆಚ್ಚು ಪ್ರಬಲರಾಗುತ್ತಿದ್ದ ಮಧುರೆಯ ಪಾಂಡ್ಯರು ಹೊಯ್ಸಳ ಸೈನ್ಯವನ್ನು ಸೋಲಿಸಿದರು. ಇದರಿಂದ ಕುಪಿತನಾದ ಸೋಮೇಶ್ವರ ತಾನೇ ಸೈನ್ಯದ ನೇತೃತ್ವವನ್ನು ವಹಿಸಿ ಪಾಂಡ್ಯರಾಜನಾದ ಮಾರವರ್ಮನ್ ಸುಂದರ ಪಾಂಡ್ಯನನ್ನು ಅವನ ಮಿತ್ರನಾದ ಕಾಡವ ಕೋಪೆರುಂಜಿಂಗನನ್ನು ಸೋಲಿಸಿದ. ಅನಂತರ ರಾಮೇಶ್ವರದವರೆಗೂ ದಿಗ್ವಿಜಯ ಮಾಡಿ ಅಲ್ಲಿ ಪ್ರಸಿದ್ಧ ದೇವಾಲಯಕ್ಕೆ ತನ್ನ ಹೆಸರಿನಲ್ಲಿ ದಾನಧರ್ಮಗಳನ್ನು ನೀಡಿದ. ಇಡೀ ತಮಿಳುನಾಡಿನಲ್ಲಿ ತನ್ನ ಪರಮಾಧಿಕಾರವನ್ನು ಸ್ಥಾಪಿಸಿದ. ಹೊಯ್ಸಳ ಚೋಳ ಮತ್ತು ಪಾಂಡ್ಯ ರಾಜಮನೆತನಗಳ ಮಧ್ಯೆ ರಕ್ತಸಂಬಂಧವೂ ಏರ್ಪಟ್ಟಿತ್ತು. ಮುಮ್ಮಡಿ ರಾಜೇಂದ್ರಚೋಳ ಮತ್ತು ಇಮ್ಮಡಿ ಮಾರವರ್ಮನ್ ಸುಂದರ ಪಾಂಡ್ಯರು ಸೋಮೇಶ್ವರನನ್ನು ತಮ್ಮ ಶಾಸನಗಳಲ್ಲಿ ಮಾಮಾದಿಗಳ್ ಎಂಬುದಾಗಿ ಸಂಬೋಧಿಸಿ, ಇವನ ಹೆಸರಿನಲ್ಲಿ ಅನೇಕ ದಾನ ಶಾಸನಗಳನ್ನು ನೀಡಿದ್ದಾರೆ. ಕನ್ನಡನಾಡಿನ ಹೆಚ್ಚು ಮಂದಿ ದಂಡನಾಯಕರೂ ಅಧಿಕಾರಿಗಳೂ ಇವನ ಕಾಲದಲ್ಲಿ ತಮಿಳುನಾಡಿನಲ್ಲಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದರು. ಪುದುಕೋಟೆ ಸಮೀಪದ ತಿರುಮಾಯಂ ಬಳಿಯಲ್ಲಿ ದೊರೆತಿರುವ ಸೋಮೇಶ್ವರನ ಶಾಸನದ ಪ್ರಕಾರ ಇವನು ಅಲ್ಲಿ ಶೈವ ಮತ್ತು ವೈಷ್ಣವ ಪಂಥೀಯರ ಮಧ್ಯೆ ತಲೆದೋರಿದ್ದ ವಿವಾದವನ್ನು ಪರಿಹರಿಸಿದ. ಶ್ರೀರಂಗಂ ಬಳಿಯಲ್ಲಿದ್ದ ತನ್ನ ರಾಜಧಾನಿಯಾದ ವಿಕ್ರಮಪುರದಲ್ಲಿ (ಕಣ್ಣಾನೂರು) ಹೊಯ್ಸಳ ಶೈಲಿಯಲ್ಲಿ ಸುಂದರವಾದ ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಿಸಿ ಅಲ್ಲಿ ತನ್ನ ತಂದೆ ಮತ್ತು ತಾತಂದಿರ ಶಿಲಾಪ್ರತಿಮೆಗಳನ್ನು ಸ್ಥಾಪಿಸಿದ. ಹಿರಣ್ಯಗರ್ಭ, ತುಲಾಪುರುಷ ಮೊದಲಾದ ವೇದೋಕ್ತ ಯಜ್ಞಗಳನ್ನು ಆಚರಿಸಿದ. ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ, ಜಾವಗಲ್ಲಿನ ಲಕ್ಷ್ಮೀನಾರಾಯಣ ಮೊದಲಾದ ಸುಂದರ ದೇವಾಲಯಗಳು ಇವನ ಆಳ್ವಿಕೆಯಲ್ಲಿ ಕಟ್ಟಲ್ಪಟ್ಟುವು. ಇವನ ಆಸ್ಥಾನ ಕವಿಯಾದ ಎರಡನೆಯ ವಿದ್ಯಾಚಕ್ರವರ್ತಿಯು ಗದ್ಯಕರ್ಣಾಮೃತ ಎಂಬ ಗ್ರಂಥವನ್ನು ರಚಿಸಿದ. ಸೋಮೇಶ್ವರ ಜೈನಮತೀಯರಿಗೂ ಪ್ರೋತ್ಸಾಹ ನೀಡಿದ್ದ.

ಸೋಮೇಶ್ವರನಿಗೆ ಬಿಜ್ಜಳದೇವಿ ಮತ್ತು ದೇವಲದೇವಿ ಎಂಬ ಇಬ್ಬರು ರಾಣಿಯರಿದ್ದರು. ಬಿಜ್ಜಳದೇವಿಗೆ ನರಸಿಂಹ ಎಂಬ ಮಗ, ದೇವಲದೇವಿಗೆ ರಾಮನಾಥ ಎಂಬ ಮಗ ಜನಿಸಿದರು. ಪ್ರಾಪ್ತವಯಸ್ಕರಾದ ಮೇಲೆ ಮಲಸಹೋದರರಲ್ಲಿ ಹೊಂದಾಣಿಕೆಯಿಲ್ಲದಿದ್ದುದರಿಂದಲೂ ಸಾಮ್ರಾಜ್ಯ ಹೆಚ್ಚು ವಿಸ್ತಾರವಾಗಿದ್ದುದರಿಂದಲೂ ಸೋಮೇಶ್ವರ ತನ್ನ ಕೊನೆಗಾಲದಲ್ಲಿ ರಾಜ್ಯವನ್ನು ಎರಡು ಭಾಗವಾಗಿ ಮಾಡಿದ. ದೋರಸಮುದ್ರ ರಾಜಧಾನಿಯಾಗಿದ್ದ ಉತ್ತರ ಕರ್ನಾಟಕದ ಭಾಗವನ್ನು ಮೂರನೆಯ ನರಸಿಂಹನಿಗೂ ವಿಕ್ರಮಪುರ ರಾಜಧಾನಿಯಾಗಿದ್ದ ತಮಿಳುನಾಡು ಭಾಗಗಳನ್ನು ರಾಮನಾಥನಿಗೂ ಹಂಚಿದ. ಈ ವಿಭಜನೆ 1253ರಲ್ಲಿ ಆಗಿರಬೇಕೆಂಬುದಕ್ಕೆ ಸೂಚನೆಗಳಿವೆ. ಅನಂತರ ಸ್ವಲ್ಪಕಾಲದಲ್ಲೇ ಸೋಮೇಶ್ವರ ಮರಣ ಹೊಂದಿದ (ಸು. 1255). (ಜಿ.ಆರ್.ಆರ್.)

**ಸೋಮೇಶ್ವರ ಭಾಗವತ:** 1891–1943. ಯಕ್ಷಗಾನ ಗಾಯಕರು. ಹುಟ್ಟಿದ್ದು ದಕ್ಷಿಣ ಮಲಬಾರಿನ ಕೊಂಟಿಕುಳಂ ಗ್ರಾಮದಲ್ಲಿ. ತಂದೆ ಪರಮೇಶ್ವರ ಅಯ್ಯರ್; ತಾಯಿ ಪಾರ್ವತಮ್ಮ. ಗಾಯಕಶಿಖಾಮಣಿ ಅನಂತರಾಮ ಭಾಗವತ ಇವರ ಚಿಕ್ಕಪ್ಪ. ತಿರುವಾಂಕೂರು ಆಸ್ಥಾನವಿದ್ವಾನ್ ಮಹದೇವ ಭಾಗವತ ಇವರ ವಿದ್ಯಾಗುರು. ಸೋಮೇಶ್ವರ ಭಾಗವತರು 1918ರಲ್ಲಿ ಬೆಂಗಳೂರಿಗೆ ಬಂದು ನೆಲಸಿದರು. ದ್ರುತಕಾಲಕ್ಕೊದಗದ ಕಟ್ಟೆ ಶಾರೀರವನ್ನು ಬಹುಜಾಣ್ಮೆಯಿಂದ ಮಧ್ಯಕಾಲಕ್ಕಳವಡಿಸಿಕೊಂಡು ಭಾವಪೂರಿತವಾಗಿಯೂ ಸಂಪ್ರದಾಯಬದ್ಧವಾಗಿಯೂ ಹಾಡುತ್ತಿದ್ದರು. ತಾಳ ಕ್ಷೇತ್ರದಲ್ಲಿಯೂ ಇವರು ಬಹು ಗಟ್ಟಿಗರು. ಅನೇಕ ಅಪರೂಪ ವರ್ಣ ಕೀರ್ತನೆಗಳನ್ನೂ ಇವರು ತಿಳಿದಿದ್ದರು. ಇವರ ಶಿಷ್ಯವೃಂದ ಅಪಾರ. (ಆರ್.ಆರ್.ಕೆ.)

**ಸೋಲಿಗರು:** ಕರ್ನಾಟಕ ರಾಜ್ಯದ ಪ್ರಮುಖ ಬುಡಕಟ್ಟುಗಳ ಪೈಕಿ ಒಂದು. ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ, ಬೂದಿಪಡಗ, ಮಾದೇಶ್ವರಬೆಟ್ಟ, ಬೈಲೂರು ಕಾಡುಗಳಲ್ಲಿ ಇವರ ವಾಸ. ಸೋಲಿಗರ ಮೂಲದ ಬಗೆಗೆ ಹಲವಾರು ದಂತಕಥೆಗಳಿವೆ. ಕಾರಯ್ಯ, ಮಾದೇಶ್ವರ ಅಣ್ಣತಮ್ಮಂದಿರು ಎಂದೂ ಒಮ್ಮೆ ಇವರಿಬ್ಬರು ಸಾವಣನೆಂಬ ರಕ್ಕಸನ ಕೈಗೆ ಸಿಕ್ಕಿಬಿದ್ದಾಗ ರಕ್ಕಸನು ಮಾದೇಶ್ವರನಿಂದ ಒಂದು ಜೊತೆ ಜೋಡುಗಳನ್ನು ಬಯಸಿದನೆಂದೂ ಮಾದೇಶ್ವರ ಉಪಾಯದಿಂದ ಅವನನ್ನು ಕೊಂದನೆಂದೂ ಪ್ರತೀತಿ. ಈಗಲೂ ಸೋಲಿಗರು ನಾವು ಕಾರಯ್ಯನ ಮಕ್ಕಳೆಂದು ಹೇಳಿಕೊಳ್ಳುತ್ತಾರೆ. ಇವರದು ಇಂದಿಗೂ ಅತ್ಯಂತ ಕಠಿಣ ಬದುಕು.

ಸೋಲಿಗರು ವಲಸೆಗಾರರು; ಒಂದೇ ಸ್ಥಳದಲ್ಲಿ ಜೀವನವಿಡೀ ವಾಸಿಸುವುದಿಲ್ಲ. ಮುಖ್ಯ ಕಸಬು ಬೇಸಾಯ. ಚೆನ್ನಾಗಿ ಫಸಲು ಕೊಡುವ ಸ್ಥಳಗಳನ್ನು ಆಯ್ದುಕೊಂಡು ಗುಂಪುಗಳಲ್ಲಿ ವಾಸಮಾಡುತ್ತಾರೆ. ರಾಗಿಹಿಟ್ಟು, ಅಂಬಲಿ, ಕಾಡಿನಲ್ಲಿ ದೊರೆಯುವ ಕಂದಮೂಲಾದಿ ಫಲಗಳೇ ಇವರ ದಿನನಿತ್ಯದ ಉಣಿಸು. ಜೇನುತುಪ್ಪ, ಅಳಲೆಕಾಯಿ, ನೆಲ್ಲಿಕಾಯಿ, ಶುಂಠಿ, ಜಿಂಕೆಕೊಂಬು, ಪ್ರಾಣಿ ಚರ್ಮ ಮಾರಿ ತಮಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ.

ಸೋಲಿಗರಲ್ಲಿ ಉರಾಳಿಸೋಲಿಗ, ಮರ ಸೋಲಿಗ, ಕಾಡು ಸೋಲಿಗ, ಉದುಕತ್ತಿ ಸೋಲಿಗ, ಬುರುಡೆ ಸೋಲಿಗ ಎಂಬ ಒಳಪಂಗಡಗಳಿವೆ. ಇವರ ವಿವಾಹ ಪದ್ಧತಿ ತುಂಬ ಸರಳ. ಗಂಡು ಹೆಣ್ಣು ಮೆಚ್ಚಿ ಕೆಲಕಾಲ ಕಾಡಿನಲ್ಲಿ ಕಣ್ಮರೆಯಾಗಿ ತಮ್ಮ ಪೋಡಿಗೆ ವಾಪಸಾಗಿ ಕುಲಕ್ಕೆ ಊಟ ಹಾಕಿಸಿದರೆ ಹೊಸ ದಂಪತಿಗಳನ್ನು ಹಿರಿಯರು ಒಪ್ಪಿಕೊಂಡು ಅವರನ್ನು ಆಶೀರ್ವದಿಸುತ್ತಾರೆ. ಬುಡಕಟ್ಟಿನಲ್ಲಿ ಉಂಟಾಗುವ ವಾದವಿವಾದಗಳನ್ನು ತೀರ್ಮಾನಿಸುವವನು ಪೋಡಿನ ಯಜಮಾನ. ಸೋಲಿಗರು ಮಹಾದೈವ ಭಕ್ತರು. ಬಿಳಿಗಿರಿರಂಗನಾಥಸ್ವಾಮಿ ಇವರ ಆರಾಧ್ಯದೈವ. ಸ್ವಾಮಿಯ ಹಬ್ಬ ಉತ್ಸವಗಳಲ್ಲಿ ಹರ್ಷದಿಂದ ಭಾಗವಹಿಸುತ್ತಾರೆ. ಸೋಲಿಗರ ಬೊಮ್ಮಗೌಡನ ಮಗಳು ಕುಸುಮಾಲೆಯನ್ನು ರಂಗನಾಥಸ್ವಾಮಿ ಮದುವೆಯಾಗಿದ್ದರಿಂದ ರಂಗನಾಥಸ್ವಾಮಿ ತಮಗೆ ಭಾವನಾಗಬೇಕು ಎಂದು ಹೇಳುತ್ತಾರೆ. ಜಡೆಸ್ವಾಮಿ, ಕಾರಯ್ಯ, ಹುಲೀರಪ್ಪ, ಬಿಲ್ಲಯ್ಯ, ಮಾದೇಶ್ವರ ಆಯಾಯ ಮನೆತನಗಳಿಗೆ ಪೂಜ್ಯದೈವಗಳು.

ವರ್ಷಕ್ಕೊಂದು ಬಾರಿ ಕ್ಯಾತೇದೇವರ ಹಬ್ಬವನ್ನು ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಮಾಡುವ ಕುಣಿತ ಬಲು ಆಕರ್ಷಕ. ಇದರಲ್ಲಿ 20-25ಮಂದಿ ಭಾಗವಹಿಸುತ್ತಾರೆ. ವಿಶೇಷ ವೇಷಭೂಷಣಗಳೇನೂ ಇರುವುದಿಲ್ಲ. ಚಡ್ಡಿ ಅಥವಾ ಪಂಚೆ, ಬನಿಯನ್ ಇಲ್ಲವೆ ಅಂಗಿ. ಕೆಲವು ಸಾರಿ ಬರಿ ಚಡ್ಡಿ ಹಾಕಿ ಮೈಗೆ ಸೊಪ್ಪನ್ನು ಕಟ್ಟಿಕೊಂಡು ಕುಣಿಯುತ್ತಾರೆ. ಧಾರ್ಮಿಕ ಚೌಕಟ್ಟಿನಲ್ಲಿ ಈ ಕಲೆ ಬೆಳೆದುಬಂದರೂ ಹವ್ಯಾಸಿಕಲೆಯಾಗಿ ಮನರಂಜನೆ ನೀಡುತ್ತ ಬಂದಿರುವುದು ವಿಶೇಷ.

ಸೋಲಿಗರ ಸಂಪ್ರದಾಯಗಳು ವಿಶಿಷ್ಟವಾಗಿವೆ. ಸೋಲಿಗರ ಗರ್ಭಿಣಿ ಹೆಂಗಸು ಹೆರಲು ಒಂದು ವಾರವಿರುವಾಗಲೇ ಅವಳ ಗಂಡ ಮೂರು ದಿನದ ಬುತ್ತಿಯೊಡನೆ ಅವಳನ್ನು ಕಾಡಿನೊಳಗೆ ಬಿಟ್ಟುಬರುತ್ತಾನೆ. ಮಗು ಹುಟ್ಟುವತನಕ ಅವಳು ಮನೆಗೆ ಬರುವಂತಿಲ್ಲ. ಮಗುವಿನೊಂದಿಗೆ ಮರಳಿ ಬಂದರೆ ಅವಳ ಗೌರವಾರ್ಥವಾಗಿ ತಮ್ಮಟೆ ಬಡಿದು ಸ್ವಾಗತಿಸುತ್ತಾರೆ. ಮಗುವಿಗೆ ಐದು ದಿನ ತುಂಬಿದ ಮೇಲೆ ಕುಲದ ಯಜಮಾನನಿಂದ ತಮಗೆ ಇಷ್ಟವಾದ ಹೆಸರನ್ನು ಕರೆಸುತ್ತಾರೆ.

ಇವರಲ್ಲಿ ವಿಧವಾ ವಿವಾಹಪದ್ಧತಿ ಇದೆ. ವಿಧವೆ ಮದುವೆಯಾಗುವ ಸಂದರ್ಭದಲ್ಲಿ ಪೋಡಿನ ಹತ್ತು ಸಮಸ್ತರ ಎದುರಿನಲ್ಲಿ ಕಡ್ಡಿ ಮುರಿದು, ಆ ತುಂಡುಗಳನ್ನು ಗಂಡನ ಸಂಬಂಧಿಗಳಿಗೆ ತಾಳಿಯೊಡನೆ ಒಪ್ಪಿಸಿ ಬಿಡುತ್ತಾಳೆ. ಅವಳನ್ನು ವಿವಾಹವಾಗುವ ಪುರುಷ ಅವಳ ಮುಂಚಿನ ಮಕ್ಕಳನ್ನು ಸಹ ಪ್ರೀತಿಯಿಂದ ಸಾಕುತ್ತಾನೆ. ದುರ್ಬರ ಬದುಕನ್ನು ನಡೆಸುತ್ತಿರುವ ಇವರ ಅಭಿವೃದ್ಧಿಗಾಗಿ ಸರ್ಕಾರ, ಸಂಘಸಂಸ್ಥೆಗಳು ಅನೇಕ ಯೋಜನೆಗಳನ್ನು ರೂಪಿಸಿವೆ. ಇತ್ತೀಚಿನ ದಿನಗಳಲ್ಲಿ ಇವರಲ್ಲಿ ಕೆಲವರು ಅಕ್ಷರಸ್ಥರಾಗುತ್ತಿದ್ದಾರೆ. ಸೋಲಿಗರನ್ನು ಕುರಿತು ಚಂದ್ರು ಕಾಳೇನಹಳ್ಳಿಯವರು ಸಾಂಸ್ಕೃತಿಕ ಅಧ್ಯಯನ ಮಾಡಿದ್ದಾರೆ (1992). ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಸೋಲಿಗರಿಗೆ ಆರೋಗ್ಯ, ಶಿಕ್ಷಣಗಳನ್ನು ನೀಡುವ ನಿಟ್ಟಿನಲ್ಲಿ ಕೆಲಸಮಾಡುತ್ತಿದೆ. *

**ಸೋಸಲೆ:** ಮೈಸೂರು ಜಿಲ್ಲೆಯ ತಿರುಮಕೂಡಲುನರಸೀಪುರ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಕಸಬೆಯ ಉತ್ತರಕ್ಕೆ 4 ಕಿಮೀ ದೂರದಲ್ಲಿ ಕಾವೇರಿ ನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 7,064. ಪ್ರಾಚೀನ ಕಾಲದಿಂದಲೂ ಬತ್ತದ ಬೆಳೆಗೆ ಪ್ರಸಿದ್ಧಿ ಹೊಂದಿರುವ ಈ ಗ್ರಾಮ ಒಂದು ಧರ್ಮಕ್ಷೇತ್ರ. ಹಿಂದೆ ಈ ಗ್ರಾಮ ವಡಕರೆನಾಡು (ಬಡಗರೆ) 200ರಲ್ಲಿ ಸೇರಿತ್ತು. ಸು. 8-9ನೆಯ ಶತಮಾನದ ಶಾಸನವೊಂದರಿಂದ ವಿಕ್ರಮಾದಿತ್ಯನೆಂಬ ಅರಸನ ಆಳ್ವಿಕೆಗೆ ಒಳಪಟ್ಟಿತೆಂಬುದಾಗಿ ತಿಳಿದುಬರುತ್ತದೆ. ಇಲ್ಲಿ ಪ್ರಸಿದ್ಧ ವ್ಯಾಸರಾಯರ ಮಠವಿದೆ. ಇದು ಮಧ್ವಾಚಾರ್ಯರ ಶಿಷ್ಯಪರಂಪರೆಯಲ್ಲಿ ಬಂದ ರಾಜೇಂದ್ರತೀರ್ಥರಿಂದ ಸ್ಥಾಪಿತವಾದುದು. ಈ ಮಠದಲ್ಲಿ ಸುಮಾರು ಹದಿನೈದು ಶಾಸನಗಳು ದೊರಕಿದ್ದು ಅವು ಮಠಕ್ಕೆ ದತ್ತಿ ದಾನ ನೀಡಿದ ವಿಷಯಗಳನ್ನು ತಿಳಿಸುತ್ತವೆ. ಇವು ವಿಜಯನಗರ ದೊರೆಗಳಿಗೆ ಮತ್ತು ಮಧುರೆ ನಾಯಕರಿಗೆ ಸೇರಿದ್ದವೆಂದು ತಿಳಿದುಬರುತ್ತದೆ. ಈ ಶಾಸನಗಳು ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿವೆ. ಪ್ರತಿವರ್ಷವೂ ವಿದ್ವಾಂಸರ ಸಭೆ ಸೇರಿಸಿ ವಿದ್ವಾಂಸರನ್ನು ಗೌರವಿಸುವ ಪರಂಪರೆಯನ್ನು ಈ ಮಠ ನಡೆಸಿಕೊಂಡು ಬರುತ್ತಿದೆ. ಕನ್ನಡದಲ್ಲಿ ಶಾರೀರಕ ಪ್ರಕಾಶಿಕೆ, ಅಂತಃಕರಣ ಪ್ರಕಾಶಿಕೆ, ಸ್ವರೂಪ ಪ್ರಕಾಶಿಕೆ, ಪರಮಾತ್ಮ ಪ್ರಕಾಶಿಕೆ, ನಿಜದೀಪ್ತಿ ಪ್ರಕಾಶಿಕೆ, ಪರಮುಕ್ತಿ ಪ್ರದೀಪಿಕೆ ಎಂಬ ಕೃತಿಗಳನ್ನೂ ಸಂಸ್ಕೃತದಲ್ಲಿ ಶಿವಾಧಿಕ್ಯ ಶಿಖಾಮಣಿ, ಸಿದ್ಧಾಂತ ಶಿಖಾಮಣಿ, ಸಾಂಬಶಿವಾಧಿಕ್ಯಂ, ಶಿವಾಧಿಕ್ಯ ಪ್ರದೀಪಿಕಾ, ಶಿವಮತಾಧಿಕ್ಯ ತಾರಾವಳಿ, ಪ್ರಾರಬ್ಧ ದೀಪಿಕಾ ಎಂಬ ಗ್ರಂಥಗಳನ್ನೂ ಮಹಿಮ್ನ ಪ್ರದೀಪಿಕಾ ಮತ್ತು ಸಿದ್ಧಾರ್ಥ ಸಂಬೋಧಿನಿ ಎಂಬ ಟೀಕೆಗಳನ್ನೂ ಬರೆದ ವೀರಶೈವ ಕವಿ ರೇವಣಾಚಾರ್ಯ (ಸು. 1623) ಈ ಸ್ಥಳದವನು. (ಎಸ್.ಜೆ.ಎ.)

**ಸೋಸಲೆ ರಾಮದಾಸ:** 1890-1950. ಹೆಸರಾಂತ ಕೀರ್ತನಕಾರರು. ಹುಟ್ಟಿದ್ದು ತಿರುಮಕೂಡಲು ನರಸೀಪುರ ತಾಲ್ಲೂಕಿನ ಸೋಸಲೆಯಲ್ಲಿ. ಹರಿಕಥೆ ಮತ್ತು ಮೃದಂಗವಾದನದಲ್ಲಿ ನೈಪುಣ್ಯಗಳಿಸಿಕೊಂಡಿದ್ದ ಇವರ ತಾತ ಪುರುಷೋತ್ತಮದಾಸ ಮತ್ತು ತಂದೆ ಶ್ರೀನಿವಾಸದಾಸರೂ ಮೈಸೂರರಸರ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದರು.

ಚಿಕ್ಕಂದಿನಲ್ಲಿಯೇ ಕೀರ್ತನಕಲೆಗೆ ಮನಸೋತಿದ್ದ ರಾಮದಾಸರೂ 14ನೆಯ ವಯಸ್ಸಿನಲ್ಲೇ ಗೃಹತ್ಯಾಗ ಮಾಡಿ ಶ್ರೀಶೈಲಪ್ರಾಂತ್ಯದಲ್ಲಿ ಯೋಗಿಗಳೊಬ್ಬರ ಅನುಗ್ರಹಕ್ಕೆ ಪಾತ್ರರಾಗಿ ಹನ್ನೆರಡು ವರುಷಗಳ ಕಾಲ ಅವರ ಆಶ್ರಯದಲ್ಲಿದ್ದರು. ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಹರಿಕಥೆ ಮಾಡುವ ಸಾಮರ್ಥ್ಯ ಪಡೆದಿದ್ದ ಇವರಿಗೆ ಸಂಸ್ಕೃತ, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲೂ ತಕ್ಕಷ್ಟು ಪರಿಶ್ರಮವಿತ್ತು. ಶ್ರೀಉಚ್ಛಿಷ್ಟ ಗಣಪತಿಯ ಉಪಾಸಕರೆಂದು ಕರೆಸಿಕೊಳ್ಳುತ್ತಿದ್ದ ಇವರು ಯಶೋಭಿಲಾಷಿಗಳಾಗಿ ತಮ್ಮ ಗುರುಗಳನ್ನು ಒಡಗೊಂಡು ಸಂಚಾರ ಹೊರಟು ಕರ್ನೂಲು, ಕಡಪ, ರಾಜವೇಡೆ, ಅನಂತಪುರ, ಹಿಂದೂಪುರ, ಪೆನುಕೊಂಡೆ, ಬಳ್ಳಾರಿ, ಕೊಳ್ಳೇಗಾಲ, ಮದರಾಸು, ತಿರುಪತಿ ಮೊದಲಾದ ಪ್ರಾಂತ್ಯಗಳಲ್ಲೆಲ್ಲ ಸಂಚರಿಸಿ ಆಕರ್ಷಕವೂ ವಿದ್ವತ್ಪೂರ್ಣವೂ ಆದ ಹರಿಕಥೆಗಳನ್ನು ಮಾಡಿ ಹೆಸರಾದರು. ಒಳ್ಳೆಯ ಲಯಜ್ಞಾನವಿದ್ದ ಇವರ ಜತೆಯಲ್ಲಿ ಆಗಿನ ಕಾಲದ ಪ್ರಸಿದ್ಧ ವಿದ್ವಾಂಸರುಗಳಾದ ಫಿಡಲ್ ತಾಯಪ್ಪ, ಪುಟ್ಟಪ್ಪ, ಮೃದಂಗದ ಮುತ್ತುಸ್ವಾಮಿ ದೇವರು, ಕಂಜರಿ ಸಿಂಗಾರಂ ಪಿಳ್ಳೆ, ತಬಲ ನಂಜಪ್ಪ ಮೊದಲಾದವರು ಪಕ್ಕವಾದ್ಯ ನುಡಿಸುತ್ತಿದ್ದರು. ಮೈಸೂರು, ಬೆಂಗಳೂರು ಮೊದಲಾದ ಕಡೆಗಳಲ್ಲಿನ ಗಾಯನ ಸಮಾಜಗಳಲ್ಲೂ ಇವರ ಹರಿಕಥೆಗಳು ಜರುಗುತ್ತಿದ್ದುವು. ಇವರಿಗೆ ಕೀರ್ತನ ಶಿರೋಮಣಿ ಎಂಬ ಪ್ರಶಸ್ತಿ ಬಂದಿತ್ತು.

ಸರಳಜೀವಿಗಳೂ ಮಿತಭಾಷಿಗಳೂ ಆಗಿದ್ದ ರಾಮದಾಸರು ತಮ್ಮ ಬದುಕಿನ ಕೊನೆಯ ದಿನಗಳನ್ನು ಕನಕಪುರದ ಸಮೀಪದಲ್ಲಿ ಕಳೆದು 1950ರಲ್ಲಿ ತೀರಿಕೊಂಡರು. ಇವರು ವಾಸವಾಗಿದ್ದ ಆ ಪ್ರದೇಶ ದಾಸರದೊಡ್ಡಿ ಎಂದೇ ಹೆಸರಾಗಿದೆ. (ಎನ್.ಸಿ.)

**ಸೋಸಲೆ ರೇವಣಚಾರ್ಯ:** ಸು. 1623. ವೀರಶೈವ ಕವಿ ಹಾಗೂ ವ್ಯಾಖ್ಯಾನಕಾರ. ಇವನು ವೀರಶೈವಾಗಮದಲ್ಲಿ ಪಂಡಿತನಾಗಿದ್ದ ಕಾರಣ ಮುದಿಗೆರೆಯ ರಘುವಪ್ಪನಾಯಕ ಇವನನ್ನು ಕರೆಸಿ, ಸಮಸ್ತ ದರ್ಶನದವ ರೊಡನೆ ವಾದಮಾಡಿ ತನ್ನ ಮನಸ್ಸಿನ ಶಂಕೆಯನ್ನು ಪರಿಹರಿಸಬೇಕೆಂದು ಹೇಳಲು, ಅದಕ್ಕಾಗಿ ಪೂರ್ವಕವಿಗಳ ಕೃತಿಗಳ ಸಾರವನ್ನು ಸ್ವೀಕರಿಸಿ ಕೃತಿರಚನೆ ಮಾಡಿದಂತೆ ತಿಳಿಯುತ್ತದೆ. ಚಿಕ್ಕನಾಯಕಪುರದ ರಾಜನಾದ ಮುದಿನಾಯಕನ ಸಂತೋಷಾರ್ಥವಾಗಿ ಮಹಿಮ್ನಸ್ತವಕ್ಕೆ ಟೀಕೆ ಬರೆದು ಕೊಡುವಂತೆ ಸೋಮಶೇಖರಯೋಗಿ ಎಂಬಾತ ಪ್ರಾರ್ಥಿಸಲು ತಾನು ಮಹಿಮ್ನಪ್ರದೀಪಿಕಾ ಎಂಬ ಟೀಕೆಯನ್ನು ರಚಿಸಿದನೆಂದು ಹೇಳಿಕೊಂಡಿದ್ದಾನೆ. ಸಿದ್ಧವೃಷೇಶ್ವರನ ಅಪ್ಪಣೆಯಂತೆ ವೀರಶೈವ ಸಿದ್ಧಾಂತಶಿಖಾಮಣಿಗೆ ಸಂಬೋಧಿನಿ ಎಂಬ ಟೀಕೆಯನ್ನೂ ಮುದಿಗೆರೆಯ ರಘುವಪ್ಪನಾಯಕ, ಕಳಲೆ ಕೆಂಪನಂಜಾರ್ಯ, ನಮಸ್ಕಾರ ಪುರಿಯ ಸಿದ್ಧನಂಜಾರ್ಯ, ಚೆನ್ನಬಸವ– ಇವರ ಇಚ್ಛೆಯಂತೆ ಶಿವಾಧಿಕ್ಯ ಚಿಂತಾಮಣಿ ಟೀಕೆಯನ್ನೂ ರಚಿಸಿದಂತೆ ತಿಳಿಯುತ್ತದೆ. ಈ ಗ್ರಂಥಗಳೇ ಅಲ್ಲದೆ ಈತ ಪಾಲ್ಕುರಿಕೆ ಸೋಮನಾಥನ ಸದ್ಗುರು ರಗಳೆಗೆ ಟೀಕೆಯನ್ನೂ ಶಾರೀರಿಪ್ರಕಾಶಿಕೆ, ಅಂತಃಕರಣಪ್ರಕಾಶಿಕೆ, ಪರಮಾತ್ಮಪ್ರಕಾಶಿಕೆ, ನಿಜದೀಪ್ತಿಪ್ರಕಾಶಿಕೆ ಎಂಬ ಇತರ ಕೃತಿಗಳನ್ನೂ ರಚಿಸಿದ್ದಾನೆ. ಇವನ ಕೃತಿಗಳಲ್ಲಿ ಕಾವ್ಯಗುಣಕ್ಕಿಂತಲೂ ಹೆಚ್ಚಾಗಿ ವೀರಶೈವ ವೇದಾಂತ ಬೋಧನೆ, ಶಬ್ದಾಲಂಕಾರಗಳತ್ತ ಹೆಚ್ಚಿನ ಒಲವು ಕಂಡುಬರುತ್ತದೆ. (ಎಂ.ಎಚ್.ಕೆ.)

**ಸೌಂದರ್ಯ:** 1971–2004. ಪ್ರಸಿದ್ಧ ಪಂಚಭಾಷಾನಟಿ ಹಾಗೂ ಚಿತ್ರನಿರ್ಮಾಪಕಿ. 1971 ಜುಲೈ 17ರಂದು ಕೋಲಾರ ಜಿಲ್ಲೆ ಮುಳಬಾಗಲು ತಾಲ್ಲೂಕಿನಲ್ಲಿ ಜನಿಸಿದರು. ಇವರ ಮೂಲ ಹೆಸರು ಸೌಮ್ಯ. ತಂದೆ ಸತ್ಯನಾರಾಯಣ ಅವರು ವೃತ್ತಿಯಲ್ಲಿ ಕನ್ನಡ ಚಿತ್ರ ನಿರ್ಮಾಪಕರೂ ನಿರ್ದೇಶಕರೂ ಆಗಿದ್ದರು. ಸೌಂದರ್ಯ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ತಂದೆಯ ಸ್ನೇಹಿತರು ನಿರ್ಮಿಸಿದ ಗಂಧರ್ವ ಚಿತ್ರದಲ್ಲಿ ನಟಿಸಿದ್ದರು. ಚಿತ್ರಗಳಲ್ಲಿ ಅಭಿನಯಿಸುವ ಸಲುವಾಗಿಯೇ ತಮ್ಮ ವೈದ್ಯಕೀಯ ವಿದ್ಯಾಭ್ಯಾಸ ವನ್ನು ಅರ್ಧಕ್ಕೇ ನಿಲ್ಲಿಸಿದರು.

ಇವರು ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಭಾಷೆಗಳಲ್ಲಿ ನೂರಕ್ಕಿಂತ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಹಿಂದಿಯಲ್ಲಿ ಬಿಗ್ ಬಿ ಎಂದೇ ಪ್ರಸಿದ್ಧರಾಗಿರುವ ನಟ ಅಮಿತಾಬ್ ಬಚ್ಚನ್‌ರೊಂದಿಗೆ ಸೂರ್ಯವಂಶಂ ಎಂಬ ಚಿತ್ರದಲ್ಲಿ ನಟಿಸಿ ಪ್ರಸಿದ್ಧಿ ಪಡೆದರು. ತಮಿಳಿನ ಹೆಸರಾಂತ ನಟ ರಜನೀಕಾಂತ್ ಅವರೊಂದಿಗೆ ಪಡೈಯಪ್ಪಾ ಚಿತ್ರದಲ್ಲಿ ನಟಿಸಿ ಖ್ಯಾತಿಯ ಶಿಖರವೇರಿದರು.

ಇವರು ಚಿತ್ರ ನಿರ್ಮಾಪಕಿಯೂ ಆಗಿದ್ದರು. ಗಿರೀಶ್ ಕಾಸರವಳ್ಳಿ ಅವರ ನಿರ್ದೇಶನದಲ್ಲಿ ದ್ವೀಪ (ನಾ.ಡಿಸೋಜ) ಚಿತ್ರವನ್ನು ನಿರ್ಮಿಸಿ, ನಟಿಸಿದರು (2001). ಪ್ರಾದೇಶಿಕ ಭಾಷಾಸೌಂದರ್ಯ, ಪ್ರಕೃತಿ ಸೌಂದರ್ಯ ಹಾಗೂ ಪ್ರಾಂತೀಯ ಜೀವನದ ಸೊಗಡನ್ನು ತುಂಬಿಕೊಂಡ ಈ ಚಿತ್ರಕ್ಕೆ ರಾಷ್ಟ್ರಮಟ್ಟದ ಸ್ವರ್ಣಕಮಲ ಪ್ರಶಸ್ತಿ ದೊರೆಯಿತು. ಅಲ್ಲದೆ ಈ ಚಿತ್ರದಲ್ಲಿ ಇವರ ಉತ್ತಮ ಅಭಿನಯಕ್ಕಾಗಿ ಶ್ರೇಷ್ಠನಟಿ ಪ್ರಶಸ್ತಿಯೂ ಅತ್ಯುತ್ತಮ ಚಿತ್ರನಿರ್ಮಾಣ ಹಾಗೂ ಛಾಯಾಗ್ರಹಣಗಳಿಗೆ ರಾಷ್ಟ್ರಪ್ರಶಸ್ತಿಗಳೂ ದೊರಕಿದವು. ಐದು ಚಲನಚಿತ್ರೋತ್ಸವಗಳಲ್ಲಿ ಈ ಚಿತ್ರ ಪ್ರದರ್ಶನಗೊಂಡಿರುವುದು ಈ ಚಿತ್ರದ ಹೆಚ್ಚುಗಾರಿಕೆಯಾಗಿದೆ. ಸೌಂದರ್ಯ ನಟಿಸಿರುವ ದ್ವಾರಕೀಶ್ ನಿರ್ಮಾಣದ ಆಪ್ತಮಿತ್ರ (2004) ಎಂಬ ಚಿತ್ರ ಕನ್ನಡದಲ್ಲಿ ದಾಖಲೆ ಗಳಿಕೆ ಮಾಡಿದೆ. ಇವರು ನಟಿಸಿರುವ ಇತರ ಭಾಷೆಯ ಕೆಲವು ಚಿತ್ರಗಳು: ಹಲೋಬ್ರದರ್ (1994), ಪ್ರಿಯರಾಗಾಲು, ಆಜ಼ಾದ್ (2000, ತೆಲುಗು); ಕಿಳಿಚುಂಡನ್ ಮಾಂಬಳಮ್ (2003, ಮಲಯಾಳಂ); ತವಸಿ, ಅರುಣಾಚಲಮ್ (ತಮಿಳು). ಇವರು 2004 ಏಪ್ರಿಲ್ 17ರಂದು ವಿಮಾನ ದುರಂತದಲ್ಲಿ ನಿಧನರಾದರು. (ಜಿ.ಎನ್.)

**ಸ್ಥಳೀಯ ಸಂಸ್ಥೆಗಳು:** ಭಾರತದ ಇತರ ಭಾಗಗಳಂತೆಯೇ ಕರ್ನಾಟಕದಲ್ಲೂ ಪ್ರಾಚೀನ ಕಾಲದಿಂದಲೂ ಸ್ಥಳೀಯ ಸಂಸ್ಥೆಗಳು ಬೆಳೆದು ಬಂದಿವೆ. ಗ್ರಾಮಪಂಚಾಯಿತಿ, ಪಟ್ಟಣಸಭಾ, ಅಗ್ರಹಾರ, ಮಹಾಸಭಾ ಮೊದಲಾದವು ಈ ಬಗೆಯವು. ಗ್ರಾಮಗಳಲ್ಲಿ ಪ್ರಾಚೀನ ಕಾಲದಿಂದಲೂ ಬಹುಮಟ್ಟಿನ ಸ್ವಾಯತ್ತತೆ ಇತ್ತು. ಗ್ರಾಮಸಭೆಯು ಗ್ರಾಮದ ಸಮಸ್ತ ಆಡಳಿತವನ್ನು ನಿರ್ವಹಿಸುತ್ತಿತ್ತು **(ನೋಡಿ: ಗ್ರಾಮಗಳು)**. ಗ್ರಾಮಗಳಂತೆಯೇ ಪಟ್ಟಣಗಳಲ್ಲಿ ಪಟ್ಟಣಗಳ ಆಡಳಿತಕ್ಕಾಗಿ ಒಂದೊಂದು ಸಭೆ ಇರುತ್ತಿತ್ತು. ಈ ಸಭೆಯಲ್ಲಿ ಒಬ್ಬ ಅಧ್ಯಕ್ಷ, ಸೇನಬೋವ, ಮಣೆಗಾರ, ಮುಮ್ಮುರಿದಂಡ ಮತ್ತು ವ್ಯಾಪಾರ ಶ್ರೇಣಿಗಳ ಪ್ರತಿನಿಧಿಗಳಿರುತ್ತಿದ್ದರು. ಈ ಸಭೆಗಳಿಗೆ ನಿಗಮ ಸಭೆಗಳೆಂದೂ ಹೆಸರಿತ್ತು. ಇಂಥ ಸಭೆಯ ಅಥವಾ ನಾಗರಿಕರೆಲ್ಲರ ಸಮೂಹದ ನಾಯಕನೆನಿಸಿದ ಪಟ್ಟಣಸ್ವಾಮಿ ಎಂಬುವನ ನಿರ್ದೇಶದಂತೆ ಆಡಳಿತವು ನಡೆಯುತ್ತಿತ್ತು.

ನಾಗರಿಕ ಸಂಸ್ಥೆಗಳ ಮತ್ತು ವ್ಯಾಪಾರ ಶ್ರೇಣಿಗಳ ಅಧಿಕಾರಿಯಾಗಿರುತ್ತಿದ್ದ ಈತ ಜನಾರೋಗ್ಯ ರಕ್ಷಣೆ, ಅನ್ನಸತ್ರಗಳ ಪಾಲನೆ, ರಸ್ತೆಗಳ ದುರಸ್ತಿಕಾರ್ಯ ಮೊದಲಾದ ಜನೋಪಯೋಗಿ ಕಾರ್ಯಗಳ ಹೊಣೆ ಹೊತ್ತವನಾಗಿರುತ್ತಿದ್ದ. ಪಟ್ಟಣಗಳಲ್ಲಿ ಏರ್ಪಟ್ಟಿದ್ದ ಪ್ರಾತಿನಿಧಿಕವಾದ ಪೌರಸಭೆಗಳ ಅಧ್ಯಕ್ಷನೂ ಆಗಿರುತ್ತಿದ್ದ. ಈತನಿಗೆ ನಗರಪತಿ ಎಂಬ ಹೆಸರು ರೂಢಿಯಲ್ಲಿತ್ತು. ಕದಂಬರ ಶಿಲಾಲೇಖನಗಳಲ್ಲಿ ಪಟ್ಟಣಸ್ವಾಮಿಯ ಕರ್ತವ್ಯಗಳ ಬಗೆಗೆ ವಿಚಾರಗಳಿಲ್ಲದಿದ್ದರೂ ಅರಸರು ಪಟ್ಟಣಗಳಿಗೆ ವಿಶೇಷ ಅನುಮತಿ ಪತ್ರಗಳಿಂದ ಪಟ್ಟಣದ ಆಡಳಿತಕ್ಕಾಗಿ ಸಂಘಟನೆಯನ್ನು ನೀಡುತ್ತಿದ್ದರೆಂಬ ಅಂಶ ಮಾತ್ರ ನಿರ್ವಿವಾದವಾಗಿದೆ. ಪಟ್ಟಣಸ್ವಾಮಿ ಪ್ರಮುಖ ವರ್ತಕನೂ ಆಗಿದ್ದ. ಕರ್ನಾಟಕದ ಇತರ ರಾಜ್ಯಗಳಲ್ಲಿಯೂ ವಿಜಯನಗರ ಸಾಮ್ರಾಜ್ಯದ ಅವನತಿಯ ವರೆಗೂ ವ್ಯಾಪಾರ ಶ್ರೇಣಿಗಳು (ವೀರಬಣಜಿಗರು ಎಂಬುವರು) ಪ್ರಖ್ಯಾತರಾಗಿದ್ದರು. ಪ್ರಮುಖ ವ್ಯಾಪಾರಿಗಳಾದ ಇವರಲ್ಲಿ ಒಬ್ಬನನ್ನು ಪಟ್ಟಣಸ್ವಾಮಿ ಎಂದು ಕರೆಯುತ್ತಿದ್ದರು. ವಾರಕ್ಕೊಮ್ಮೆ ಸರ್ವರ ಸಹಕಾರದಿಂದ ಜರುಗುತ್ತಿದ್ದ ಸಂತೆಗಳ ಮೇಲ್ವಿಚಾರಣೆ ಪಟ್ಟಣಸ್ವಾಮಿಯದಾಗಿತ್ತು. ಕೆಲವು ವ್ಯಾಪಾರ ಶ್ರೇಣಿಗಳು ಸರ್ಕಾರಿ ಅಧಿಕಾರಿಗಳಿಗೆ ಪೃಥ್ವೀಸೆಟ್ಟಿ ಎಂಬ ಪದವಿಯನ್ನೂ ವಹಿಸಿಕೊಟ್ಟಿದ್ದವು. ಶ್ರೇಣಿಯ ಪ್ರಮುಖರಿಗೆ ಬಳಕೆಯಲ್ಲಿದ್ದ ಈ ಹೆಸರಿನ ಅಧಿಕಾರಿಗಳು ರಾಜನ ಆಸ್ಥಾನದಲ್ಲಿ ಆಡಳಿತ ಬಗೆಗೆ ಹೆಚ್ಚಿನ ಪ್ರಭಾವ ಬೀರಿದ್ದರು. ಕದಂಬರ

ಕಾಲದಲ್ಲಿಯೂ ಎಲ್ಲ ನಾಗರಿಕ ಸಂಸ್ಥೆಗಳಲ್ಲಿಯೂ ಪಟ್ಟಣಸ್ವಾಮಿ ಎಂಬುವವನೇ ಪ್ರಮುಖಾಧಿಕಾರಿಯಾಗಿದ್ದ.

ಗಂಗರ ಕಾಲದಲ್ಲಿ ತಲಕಾಡು, ಮನೆಕುಂದ ಮತ್ತು ಮಾನ್ಯಪುರಗಳು ಗಂಗರ ಪ್ರಮುಖ ರಾಜಧಾನಿ(ಪಟ್ಟಣ)ಗಳಾಗಿದ್ದುವು. ಈ ಪಟ್ಟಣಗಳಲ್ಲಿಯೂ ಪಟ್ಟಣ ಸ್ವಾಮಿ ಎಂಬ ಉಚ್ಚಮಟ್ಟದ ಕಾರ್ಯನಿರ್ವಾಹಕನಾಗಿದ್ದ. ಪಟ್ಟಣ ಆಡಳಿತದಲ್ಲಿ ವರ್ತಕ ವರ್ಗಗಳಾದ ಗಾಣಿಗರು, ಕುಂಬಾರರು, ದಿನಗೂಲಿಗಾರರು, ಬಿದಿರು ಕೆಲಸಗಾರರು ಮತ್ತು ಐದು ಕುಶಲ ಕೆಲಸದವರ ವರ್ಗಗಳಿಂದ ಆಯ್ಕೆಗೊಂಡ ಪ್ರಮುಖರು ಪಾಲುಗೊಳ್ಳುತ್ತಿದ್ದರು. ಕೆಲವು ವರ್ಗಗಳು ಠೇವಣಿಗಳನ್ನು ಸ್ವೀಕರಿಸಿ ಅವುಗಳನ್ನು ಬಡ್ಡಿಸಮೇತ ಹಿಂತಿರುಗಿಕೊಡುತ್ತಿದ್ದವು. ಬಾಹ್ಮಣ ವರ್ಗಗಳು ಕುದುರೆ ಆನೆಗಳನ್ನು ಆಮದುಮಾಡಿಕೊಂಡು, ಸಮುದ್ರದಿಂದ ಮುತ್ತುಗಳನ್ನು ತೆಗೆಸಿ, ಕೆಲವೊಮ್ಮೆ ಆಮದು ಮಾಡಿಕೊಂಡು ರಾಜರಿಗೆ ಮಾರುತ್ತಿದ್ದವು. ಇವರಲ್ಲಿ ವಂಶಪಾರಂಪರ್ಯವಾಗಿ ಬಂದ ವರ್ತಕರೇ ಹೆಚ್ಚಾಗಿದ್ದರು. ಇವರಿಗೆ ವೀರಬಣಜಿಗರೆಂಬ ಹೆಸರೂ ಇತ್ತು. ಪಟ್ಟಣಗಳಲ್ಲಿ ಇತರ ದೇಶಗಳಿಂದ ಬರುತ್ತಿದ್ದ ವ್ಯಾಪಾರಿಗಳು ತಂಗುತ್ತಿದ್ದರು. ಕೇರಳದಿಂದ ಬರುತ್ತಿದ್ದ ವರ್ತಕರು ಹಣೆಯ ಮೇಲೆ ವಿಭೂತಿಪಟ್ಟೆಯನ್ನು ಬಳಿದುಕೊಂಡು ವಜ್ರವೈಡೂರ್ಯಗಳ ಪರೀಕ್ಷಕರಾಗಿಯೂ ಮುತ್ತು ಮಾರಾಟಗಾರರಾಗಿಯೂ ಬರುತ್ತಿದ್ದರು. ಇಂಥ ವ್ಯಾಪಾರಿಗಳು ರಾಜರುಗಳ ನಡುವೆ ಉಂಟಾಗಿದ್ದ ವೈಮನಸ್ಯವನ್ನು ಹೋಗಲಾಡಿಸುವಷ್ಟು ಸಂಧಾನಕುಶಲಿಗಳಾಗಿರುತ್ತಿದ್ದರು.

ಮನೆ ಕೆಲಸ, ಎಣ್ಣೆಗಾಣಗಳು, ಕುಂಬಾರ ಕೆಲಸ, ಅಗಸ ಕೆಲಸ, ಗಚ್ಚಿನ ಕೆಲಸ, ಅಂಗಡಿಗರು ಮೊದಲಾದವರ ಆಯಾತ-ನಿರ್ಯಾತ ವಸ್ತುಗಳ ಮೇಲೆ ಪಟ್ಟಣ ಸಭೆಗಳು ಕರ ವಿಧಿಸುತ್ತಿದ್ದವು. ಶಾಸನಪಾಲನ ಕಾರ್ಯ ನಗರಕ ಅಥವಾ ತೋಟಿಗಾರ ಮೊದಲಾದ ಅಧಿಕಾರಿಗಳಿಂದ ನೆರವೇರಿಸಲ್ಪಡುತ್ತಿತ್ತು. ಈ ಅಧಿಕಾರಿಗೆ ಸಾರಿಗೆ, ರಕ್ಷಣೆ, ಲೆಕ್ಕಪತ್ರಗಳ ಮೇಲ್ವಿಚಾರಣೆ ಮತ್ತು ಅರಸರಿಗೆ ಲೆಕ್ಕವನ್ನೊಪ್ಪಿಸುವುದು ಮೊದಲಾದ ವಿಶೇಷ ಅಧಿಕಾರಗಳಿದ್ದವು. ಈತನ ಸಹಾಯಕ್ಕೆ ಗೋಪ ಮತ್ತು ಸ್ಥಾನಿಕರೆಂಬ ಅಧಿಕಾರಿಗಳಿದ್ದರು. ಬ್ರಾಹ್ಮಣರಿಗೆ ನಾಡಿನ ಕರ ಸಲ್ಲಿಸುವ ವಿಚಾರದಲ್ಲಿ ರಿಯಾಯಿತಿಯಿತ್ತು.

ಆಡಳಿತ ವಿಷಯಗಳಲ್ಲಿ ಪಟ್ಟಣ ಸಭೆಗಳಿಗೆ ಸ್ವಾತಂತ್ರ್ಯವಿತ್ತು. ಅವುಗಳ ಹಕ್ಕುಬಾಧ್ಯತೆಗಳನ್ನೂ ವ್ಯಾಪಾರದ ಅನುಮತಿಪತ್ರಗಳನ್ನೂ ಅರಸ ರಕ್ಷಿಸುತ್ತಿದ್ದ. ಗಂಗರ ಶಿಲಾಲೇಖನದಲ್ಲಿ ಅರಸನು ಪಟ್ಟಣಸೆಟ್ಟಿ ಅಥವಾ ಪಟ್ಟಣಸ್ವಾಮಿಗೆ ಸೇರಿದ್ದ ಉಂಬಳಿ ಭೂಮಿಯನ್ನು ಆತನ ಪಾದಪ್ರಕ್ಷಾಳನ ಮಾಡಿ, ಪುರೋಹಿತ ಮತ್ತು ಪಟ್ಟಣಿಗರ ಸಮ್ಮುಖದಲ್ಲಿ ಕೊಂಡುಕೊಳ್ಳುವ ಒಪ್ಪಂದವನ್ನು ಮಾಡಿಕೊಂಡನೆಂಬ ಉಲ್ಲೇಖವಿದೆ.

ಬಾದಾಮಿ ಚಳುಕ್ಯರ, ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಪಟ್ಟಣ ಆಡಳಿತ ಮೇಲಿನಂತೆಯೇ ವ್ಯವಸ್ಥೆಗೊಂಡಿತ್ತು. ಆದರೆ ಬಾದಾಮಿ ಚಳುಕ್ಯರ ಕಾಲದಲ್ಲಿ ಪಟ್ಟಣ ಸಭೆಗಳು ಉದ್ದಿಮೆಗಳನ್ನು ನಡೆಸಿ, ಭೂಸಾಗುವಳಿಯ ಕಾರ್ಯವನ್ನು ನೆರವೇರಿಸುತ್ತಿದ್ದವು. ಈ ಸಭೆಗಳ ಅಧಿಕಾರಿಗಳ ವ್ಯಾಪ್ತಿ ವಿಸ್ತೃತಗೊಂಡಿತ್ತು. ಕೆಲವು ಆಡಳಿತಾಧಿಕಾರಿಗಳು ವಿದ್ವಾಂಸರಾಗಿದ್ದರು. ಮಹಾಜನ ಎಂಬ ಸಭೆಯ ಉದಯವನ್ನು ಈ ಕಾಲದಲ್ಲಿ ನಾವು ಕಾಣಬಹುದು. ಸು.725ರಲ್ಲಿ ಯುವರಾಜ ವಿಕ್ರಮಾದಿತ್ಯನು ಮಹಾಜನ ಮತ್ತು ನಗರಗಳಲ್ಲಿದ್ದ ಹದಿನೆಂಟು ಪ್ರಕೃತಿಗಳಿಗೆ ತಮ್ಮ ಹಕ್ಕುಬಾಧ್ಯತೆಗಳ ಅನುಮತಿ ಪತ್ರವೊಂದನ್ನು ಕೊಟ್ಟ ಶಿಲಾಶಾಸನದ ಉಲ್ಲೇಖವಿದೆ. ಶ್ರೇಣಿಗಳು ಪ್ರಬಲವಾಗಿದ್ದು ಐಯ್ಯಾವೊಳೆ ಐನೂರ್ವರು ಮೊದಲಾದ ಪ್ರಧಾನ ಕಾರ್ಯ ಮಂಡಲಿಯು ಬಳ್ಳಿಗಾವೆ, ಮುಳುಂದ, ಲಕ್ಷ್ಮೇಶ್ವರ ಮೊಲಾದ ಅಂಗಸಂಸ್ಥೆಗಳನ್ನು ಹೊಂದಿದ್ದುವೆಂದು ತಿಳಿದುಬರುತ್ತದೆ. ಈ ಸಂಸ್ಥೆಗಳಿಗೆ ನಾನಾದೇಸಿ, ನಕರ, ಮುಮ್ಮುರಿದಂಡ ಮುಂತಾದ ಸ್ಥಳೀಯ ಸಂಸ್ಥೆಗಳು ಸೇರಿದ್ದವು. ಇವುಗಳಿಗೆ ರಾಜನಿಂದ ಕೊಡಲ್ಪಟ್ಟಿದ್ದ ಗೌರವಸೂಚಕ ವಜ್ರದ ಬೀಸಣಿಗೆ ಛತ್ರಚಾಮರಾದಿಗಳಿದ್ದವು. ಪೃಥ್ವೀಸೆಟ್ಟಿಯು ಪಟ್ಟಣಸ್ವಾಮಿ, ವಡ್ಡವ್ಯವಹಾರಿ ಮೊದಲಾದ ಅಧಿಕಾರಿಗಳಲ್ಲೆಲ್ಲ ಪ್ರಮುಖನಾದವನು. ರಾಷ್ಟ್ರೀಯ ಜೀವನದಲ್ಲಿ ಮಹತ್ವ ಸ್ಥಾನ ಹೊಂದಿದ್ದವನು. ಇಂಥ ಆಡಳಿತ ಪದ್ಧತಿ ರಾಷ್ಟ್ರಕೂಟ ಅರಸರ ಕಾಲದಲ್ಲಿ ಅವರು ಪ್ರಕಟಪಡಿಸಿದ ಸಂಘಟನೆಯನ್ನು ಅನುಸರಿಸಿ ನಡೆಯುತ್ತಿತ್ತು. ಮಹಾಜನಸಭೆಯು ಬಲಗೊಂಡಿತ್ತು. ಈ ಸಭೆಗೆ ಊರ್, ಊರವರ್, ಒಕ್ಕಲು ಎಂಬ ಪದಗಳು ರೂಢಿಗೆ ಬಂದವು. ಸಭೆಯ ಅಧ್ಯಕ್ಷ ಊರೊಡೆಯನಾಗಿರುತ್ತಿದ್ದ. ಈ ಸಭೆಯ ಅಧಿಕಾರಗಳೂ ಅಧಿಕವಾಗಿದ್ದವು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಸ್ಥಾನಿಕ ಆಡಳಿತ ಪದ್ಧತಿ ವಿಸ್ತೃತವಾಯಿತು. ಪ್ರಭು, ನಾಡಗಾವುಂಡ, ಗ್ರಾಮಮಹತ್ತರ, ರಾಷ್ಟ್ರಮಹತ್ತರ, ಸರ್ವಾಧಿಕಾರಿ, ಪೆರ್ಗಡೆ ಮೊದಲಾದ ವಿಶೇಷ ಅಧಿಕಾರಿಗಳಿದ್ದರು. ಹೊಯ್ಸಳರ ಕಾಲದಲ್ಲಿ ರಾಜಧಾನಿ ಪಟ್ಟಣಗಳು ಹೆಚ್ಚಿದ್ದವು. ತಲಕಾಡು, ಗಂಗವಾಡಿ ಮೊದಲಾದ ಭಾಗಗಳಲ್ಲಿದ್ದ ಪಟ್ಟಣಗಳಿಗೆ ಶ್ರೀಕರಣಾಧಿಕಾರಿ, ರಾಜ್ಯಾಧ್ಯಕ್ಷಕರಣ ಮೊದಲಾದ ವಿಶೇಷ ಅಧಿಕಾರಿಗಳು ನೇಮಕಗೊಂಡಿದ್ದರು **(ನೋಡಿ: ಪಟ್ಟಣಗಳು).** **(ಸಿ.ವಿ.ಆರ್.)**

ಕಾಲಕ್ರಮೇಣ ಈ ಸ್ಥಳೀಯ ಸಂಸ್ಥೆಗಳ ರಚನೆ ಹಾಗೂ ಅವುಗಳ ಕಾರ್ಯ ನಿರ್ವಹಣೆಯಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಳ್ಳ ತೊಡಗಿದವು. ಬ್ರಿಟಿಷರ ಕಾಲದಲ್ಲಿ ಇಂಥ ಸಂಸ್ಥೆಗಳ ಕಲ್ಪನೆ ಸಮಗ್ರವಾಗಿ ಬದಲಾಯಿತು. ಹದಿನೆಂಟನೆಯ ಶತಮಾನದಲ್ಲಿ ಬ್ರಿಟನ್‌ನಲ್ಲಿ ದೃಢವಾಗಿ ನೆಲೆಯೂರಿದ್ದ ಸ್ಥಳೀಯ ಸಂಸ್ಥೆಗಳ ಪ್ರಭಾವ ಭಾರತದ ಪ್ರಾಂತಗಳ ಮತ್ತು ಸಂಸ್ಥಾನಗಳ ಆಡಳಿತದ ಮೇಲೂ ಆಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಉತ್ತರಾರ್ಧದಲ್ಲಿ ಸ್ಥಳೀಯ ಸಂಸ್ಥೆಗಳ ಪುನರುಜ್ಜೀವನಕ್ಕೆ ನವಚೇತನ ದೊರೆಯಿತು. ಸಾಮಾನ್ಯ ಆಡಳಿತವನ್ನು ಸರ್ಕಾರವೇ ವಹಿಸಿಕೊಂಡು ಜಿಲ್ಲೆ, ತಾಲ್ಲೂಕು, ಪಟ್ಟಣ ಮತ್ತು ಗ್ರಾಮಗಳ ಜೀವನ ಸ್ಥಿತಿಯನ್ನು ಉತ್ತಮಪಡಿಸುವ ಕಾರ್ಯವನ್ನು ಪ್ರತ್ಯೇಕ ಮಂಡಳಿಗಳಿಗೆ ನಿಯೋಗಿಸಬೇಕೆಂದು ದೃಷ್ಟಿ ಸಾಮಾನ್ಯ ಎಲ್ಲೆಡೆ ಕಂಡುಬಂತು. ಇದರ ಪರಿಣಾಮವಾಗಿ ಸು. 1850-1900 ಅವಧಿಯಲ್ಲಿ ಬ್ರಿಟಿಷ್ ಆಡಳಿತ ಪ್ರಾಂತಗಳು ಮತ್ತು ಹಲವಾರು ಸಂಸ್ಥಾನಗಳು ಸ್ಥಳೀಯ ಸಂಸ್ಥೆಗಳ ಅಸ್ತಿತ್ವಕ್ಕೆ ಬುನಾದಿ ಹಾಕಿದವು.

ಹಿಂದಿನ ಮೈಸೂರು ಸಂಸ್ಥಾನ ಬ್ರಿಟಿಷ್ ಆಡಳಿತ ಪ್ರಾಂತಗಳಾದ ಮುಂಬಯಿ, ಮದರಾಸು, ಹೈದರಾಬಾದು ಸಂಸ್ಥಾನ ಹಾಗೂ ಮತ್ತಿತರ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಹಂಚಿಹೋಗಿತ್ತಾಗಿ ಆಯಾ ಸರ್ಕಾರಗಳು ರೂಪಿಸಿದ ಶಾಸನಗಳು ಕರ್ನಾಟಕದ ವಿವಿಧ ಪ್ರದೇಶಗಳ ಸ್ಥಳೀಯ ಸಂಸ್ಥೆಗಳ ಬೆಳೆವಣಿಗೆಗೆ ವಿಶಿಷ್ಟ ಕಾಣಿಕೆ ಸಲ್ಲಿಸಿವೆ ಮತ್ತು ಪ್ರಭಾವ ಬೀರಿವೆ. ಆದರೂ ಈ ಸರ್ಕಾರಗಳು ಜಾರಿಗೆ ತಂದ ಶಾಸನಗಳಲ್ಲಿ ಕೆಲವು ಸಾಮಾನ್ಯ ಲಕ್ಷಣಗಳಿದ್ದವು. ಈ ಶಾಸನಗಳ ಮೂಲಕ ಮೊದಲಿಗೆ ಅಥವಾ ತರುವಾಯ ಗ್ರಾಮಾಂತರ ಪ್ರದೇಶಗಳು ಮತ್ತು ಪಟ್ಟಣ ಪ್ರದೇಶಗಳ ಸಂಸ್ಥೆಗಳನ್ನು ಪ್ರತ್ಯೇಕವಾಗಿ ರಚಿಸಲಾಯಿತು. ಗ್ರಾಮಾಂತರ ಪ್ರದೇಶದಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ ಪ್ರತ್ಯೇಕ ಮಂಡಳಿಗಳು, ಪಂಚಾಯಿತಿಗಳು ಸ್ಥಾಪನೆಯಾದವು. ಈ ಸಂಸ್ಥೆಗಳಿಗೆ ತೆರಿಗೆ ವಿಧಿಸುವ ಅಧಿಕಾರ ದೊರೆಯಿತು. ಮೊದಲಿಗೆ ಈ ಸಂಸ್ಥೆಗಳಲ್ಲಿ ಹೆಚ್ಚಾಗಿ ಸರ್ಕಾರಿ ಅಧಿಕಾರಿಗಳಿದ್ದರೂ ಕ್ರಮೇಣ ಸಾರ್ವಜನಿಕ

ಪ್ರತಿನಿಧಿಗಳು ಬಹುಮತ ಪಡೆದರು. ಇವುಗಳ ಕಾರ್ಯವ್ಯಾಪ್ತಿಯನ್ನೂ ಸ್ವಯಮಾಡಳಿತ ಅಧಿಕಾರವನ್ನೂ ಹೆಚ್ಚಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿ ಕಮೀಷನರುಗಳ ಆಡಳಿತಕಾಲದಲ್ಲಿ ಆಧುನಿಕ ಸ್ಥಳೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಗ್ರಾಮಾಂತರ ಪ್ರದೇಶಕ್ಕಾಗಿ ಜಿಲ್ಲಾ ನಿಧಿ ವಲಯಗಳು ಸ್ಥಾಪಿತವಾದವು. 1902ರಲ್ಲಿ ಮೈಸೂರು ಸ್ಥಳೀಯ ಮಂಡಳಿಗಳ ಕಾಯಿದೆ ರಚಿತವಾಗಿ 1903ರಿಂದ ಜಾರಿಗೆ ಬಂತು. ಇದರ ಪರಿಣಾಮವಾಗಿ ಜಿಲ್ಲಾನಿಧಿವಲಯಗಳ ಬದಲು ಜಿಲ್ಲಾ ಮಂಡಳಿಗಳು ರಚಿತವಾದವು. ಜೊತೆಗೆ ತಾಲ್ಲೂಕು ಮಂಡಳಿಗಳೂ ಅಸ್ತಿತ್ವಕ್ಕೆ ಬಂದವು. ಈ ಸಂಸ್ಥೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ನಾಮಕರಣ ಹೊಂದಿದ ಖಾಸಗಿ ಸದಸ್ಯರಿರುತ್ತಿದ್ದರು. ಜಿಲ್ಲಾ ಮಂಡಳಿಗೆ ಜಿಲ್ಲಾಧಿಕಾರಿಗಳೂ ತಾಲ್ಲೂಕು ಮಂಡಳಿಗೆ ಅಮಲ್ದಾರರೂ ಅಧ್ಯಕ್ಷರಾಗಿರುತ್ತಿದ್ದರು.

ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ 1916ರಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮಪಂಚಾಯಿತಿಗಳಿಗೆ ಹೊಸ ಸ್ವರೂಪ ನೀಡುವ ಕಾಯಿದೆ ರಚಿತವಾಯಿತು. ಅದು 1918ರಿಂದ ಜಾರಿಗೆ ಬಂತು. ಈ ಕಾಯಿದೆಯ ಪ್ರಕಾರ ಮಂಡಳಿಗಳಲ್ಲಿ ಚುನಾಯಿತ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿರುವಂತೆ ಅವಕಾಶ ಕಲ್ಪಿಸಲಾಯಿತು. ತೆರಿಗೆದಾರರು ಸದಸ್ಯರನ್ನು ಚುನಾಯಿಸುತ್ತಿದ್ದರು. 1926ರಲ್ಲಿ ರಚಿತವಾಗಿ 1927ರಲ್ಲಿ ಜಾರಿಗೆ ಬಂದ ಕಾಯಿದೆ ತಾಲ್ಲೂಕು ಮಂಡಳಿಗಳನ್ನು ರದ್ದುಪಡಿಸಿತು. ಜಿಲ್ಲಾ ಮಂಡಳಿಗಳಿಗೆ ಹೆಚ್ಚು ಅಧಿಕಾರ ದೊರೆಯಿತು. ಅನೇಕ ಗ್ರಾಮಪಂಚಾಯಿತಿಗಳಿಗೆ ತಮ್ಮ ಅಧ್ಯಕ್ಷರನ್ನು ಚುನಾವಣೆ ಮೂಲಕ ಆರಿಸಿಕೊಳ್ಳುವ ಅವಕಾಶ ನೀಡಲಾಯಿತು. ಗ್ರಾಮೀಣ ರಸ್ತೆಗಳು, ಸಣ್ಣ ನೀರಾವರಿ, ಕುಡಿಯುವ ನೀರು ಪೂರೈಕೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮೊದಲಾದ ಕೆಲಸಗಳಿಗೆ ಸಂಬಂಧಿಸಿದಂತೆ ಹೆಚ್ಚು ಸ್ವಾಯತ್ತ ಅಧಿಕಾರ ಪಡೆದವು. ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೆ ಸುಮಾರಾಗಿ ಇದೇ ಸ್ಥಿತಿ ಮುಂದುವರಿಯಿತು.

ಮುಂಬಯಿ ಪ್ರಾಂತದಲ್ಲಿ 1863ರಲ್ಲಿ ಜಿಲ್ಲಾ ಸ್ಥಳೀಯನಿಧಿ ಎಂಬ ಪ್ರಾಧಿಕಾರವನ್ನು ಸ್ಥಾಪಿಸಲಾಯಿತು. ಈ ಪ್ರಾಧಿಕಾರದಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರಿದ್ದರು. ಜಿಲ್ಲಾ ಕಲೆಕ್ಟರ್ ಅಧ್ಯಕ್ಷರಾಗಿದ್ದರು. ಜಿಲ್ಲೆಯಲ್ಲಿ ತೆರಿಗೆ ಸಂಗ್ರಹಿಸುವುದು, ವಿವಿಧ ಅಭಿವೃದ್ಧಿಕಾರ್ಯಗಳಿಗೆ ವಿನಿಯೋಗಿಸುವುದು ಅದರ ಮುಖ್ಯಕಾರ್ಯಗಳಾಗಿದ್ದವು. 1923ರ ಕಾಯಿದೆ ಜಿಲ್ಲಾ ಸ್ಥಳೀಯ ಮಂಡಳಿಯ ಅಧ್ಯಕ್ಷರನ್ನು ಮಂಡಳಿಯ ಸದಸ್ಯರಿಂದಲೇ ಆಯ್ಕೆಮಾಡಿಕೊಳ್ಳುವ ಅವಕಾಶ ದೊರೆಯಿತು. ಮುಂಬಯಿ ಗ್ರಾಮಪಂಚಾಯಿತಿ ಕಾಯಿದೆ (1933) ಪಂಚಾಯಿತಿ ಸದಸ್ಯರನ್ನು ವಯಸ್ಕರ ಮತದಾನದ ಆಧಾರದ ಮೇಲೆ ಚುನಾಯಿಸುವ ಅವಕಾಶ ಕಲ್ಪಿಸಿತು. ಮಹಿಳೆಯರಿಗೆ, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲು ಸ್ಥಾನಗಳು ಸ್ಥಾಪನೆಯಾದವು. ಈ ಕಾಯಿದೆಯ ಇನ್ನೊಂದು ವೈಶಿಷ್ಟ್ಯವೆಂದರೆ ನ್ಯಾಯಪಂಚಾಯಿತಿಗಳ ರಚನೆ. ಪ್ರತಿ ಪಂಚಾಯಿತಿಯೂ ನ್ಯಾಯಪಂಚಾಯಿತಿ ರಚಿಸಿಕೊಳ್ಳಲು ಅವಕಾಶ ನೀಡಲಾಯಿತು. ಈ ನ್ಯಾಯಪಂಚಾಯಿತಿಗಳು ಸಾಮಾನ್ಯ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ತೀರ್ಮಾನಿಸುವ ಅಧಿಕಾರ ಪಡೆದಿದ್ದವು. ಆದರೆ ಕಾಲಾನಂತರ ಇವುಗಳನ್ನು ರದ್ದುಪಡಿಸಲಾಯಿತು.

ಮದರಾಸು ಪ್ರಾಂತ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಕಾಯಿದೆ 1871ರಲ್ಲೇ ಜಾರಿಗೆ ಬಂತಾದರೂ ಆ ಬಗ್ಗೆ ಸಮಗ್ರ ಕಾಯಿದೆ ರಚನೆಯಾದುದು 1884ರಲ್ಲಿ. ಜಿಲ್ಲಾ ಮಂಡಳಿಗಳು, ತಾಲ್ಲೂಕು ಮಂಡಳಿಗಳು, ಗ್ರಾಮ ಪಂಚಾಯಿತಿಗಳು ರಚನೆಯಾದುವು. ಮಂಡಳಿಯ ಅಧಿಕಾರಾವಧಿ ಮೂರು ವರ್ಷಗಳು. ತಾಲ್ಲೂಕು ಮಂಡಳಿಗಳು ಮತ್ತು ಪಂಚಾಯಿತಿಗಳಿಗೆ ತೆರಿಗೆದಾರರು ಮತದಾನ ಮಾಡುವ ಹಕ್ಕು ನೀಡಲಾಯಿತು. ಅಧಿಕಾರಿ ಸದಸ್ಯರ ಸಂಖ್ಯೆಯನ್ನು 1/3 ಭಾಗಕ್ಕೆ ಇಳಿಸಲಾಯಿತು. 1920ರ ಸ್ಥಳೀಯ ಮಂಡಳಿಗಳ ಕಾಯಿದೆ ಹೆಚ್ಚು ವ್ಯಾಪಕವಾಗಿದ್ದ ಈ ಸಂಸ್ಥೆಗಳು ಹೆಚ್ಚಿನ ಸ್ವತಂತ್ರ ಸ್ಥಾನಮಾನ ಪಡೆದವು. ಸ್ಥಳೀಯ ಮಂಡಳಿಗಳ ಮೇಲ್ವಿಚಾರಣೆಗೆ ಇನ್ಸ್‌ಪೆಕ್ಟರನ್ನು ನೇಮಿಸಲಾಯಿತು. 1920ರ ಗ್ರಾಮಪಂಚಾಯಿತಿ ಕಾಯಿದೆಯಿಂದ ಪಂಚಾಯಿತಿಗಳು ಸಂಪೂರ್ಣವಾಗಿ ಚುನಾಯಿತ ಸಂಸ್ಥೆಗಳಾದವು. 25 ವರ್ಷಕ್ಕೆ ಮೇಲ್ಪಟ್ಟ ಎಲ್ಲ ವಯಸ್ಕರೂ ಮತದಾನದ ಹಕ್ಕು ಪಡೆದರು. ಪಂಚಾಯಿತಿ ರಿಜಿಸ್ಟ್ರಾರ್ ಜನರಲ್ ನೇಮಿತರಾದರು. 1934ರಲ್ಲಿ ತಾಲ್ಲೂಕು ಮಂಡಳಿಗಳನ್ನು ರದ್ದುಪಡಿಸಲಾಯಿತು.

ಹೈದರಾಬಾದು ಸಂಸ್ಥಾನದಲ್ಲಿ 1869ರಿಂದ ಸ್ಥಳೀಯ ಸಂಸ್ಥೆಗಳ ರಚನೆಗೆ ಕ್ರಮ ಕೈಗೊಳ್ಳಲಾಯಿತು. 1887-88ರಲ್ಲಿ ಸ್ಥಳೀಯನಿಧಿ ಇಲಾಖೆ ಅಸ್ತಿತ್ವಕ್ಕೆ ಬಂತು. 1888-89ರಲ್ಲಿ ಶಾಸನದ ಮೂಲಕ ಸ್ಥಳೀಯ ಮಂಡಳಿಗಳು ಕ್ರಮಬದ್ಧಗೊಂಡವು. ಅಧಿಕಾರಿ ಸದಸ್ಯರ ಜೊತೆಗೆ ಅಧಿಕಾರೇತರ ಸದಸ್ಯರೂ ನೇಮಿತರಾದರು. ಜಿಲ್ಲಾ ಮಂಡಳಿಗಳಿಗೆ ಜಿಲ್ಲಾಧಿಕಾರಿಗಳು, ತಾಲ್ಲೂಕು ಮಂಡಳಿಗಳಿಗೆ ತಹಸೀಲ್ದಾರರು ಅಧ್ಯಕ್ಷರಾಗಿದ್ದರು. ಕ್ರಮೇಣ ಈ ಸಂಸ್ಥೆಗಳ ವ್ಯಾಪ್ತಿ ಹೆಚ್ಚಿತು. 1899ರಲ್ಲಿ ಈ ಕಾಯಿದೆ ತಿದ್ದುಪಡಿಗೊಂಡಿತು. ಬದಲಾದ ಸಂದರ್ಭಗಳಿಗೆ ಅನುಗುಣವಾಗಿ ಸ್ಥಳೀಯ ತೆರಿಗೆ ಕಾಯಿದೆಯನ್ನು 1900, 1908, 1910 ಮತ್ತು 1940ರಲ್ಲಿ ತಿದ್ದುಪಡಿ ಮಾಡಲಾಯಿತು. ಬಹುಕಾಲದವರೆಗೆ ಅಧಿಕಾರಿ ಸದಸ್ಯರು ಮತ್ತು ಅಧಿಕಾರೇತರ ಸದಸ್ಯರು ಸುಮಾರಾಗಿ ಸಮಪ್ರಮಾಣದಲ್ಲಿದ್ದರು. 1940ರ ತರುವಾಯ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ವಿವಿಧ ಪ್ರಗತಿಪರ ಕಾಯಿದೆಗಳು ರಚಿತವಾದವು.

ಸ್ವಾತಂತ್ರ್ಯಪೂರ್ವಕಾಲದಲ್ಲಿ ಪರಾಧೀನತೆ, ಸಂಪನ್ಮೂಲಗಳ ಕೊರತೆ, ಸ್ವಾತಂತ್ರ್ಯ ಹೋರಾಟ, ಸ್ವಾಯತ್ತ ಅಧಿಕಾರದ ಪರಿಮಿತಿ ಮೊದಲಾದ ಕಾರಣಗಳಿಂದಾಗಿ ಸ್ಥಳೀಯ ಸಂಸ್ಥೆಗಳ ಪ್ರಗತಿ ಕುಂಠಿತವಾಗಿತ್ತು. ಆದರೆ ಈ ಸಂಸ್ಥೆಗಳು ಜನತೆಗೆ ಪ್ರಜಾಪ್ರಭುತ್ವ ವಿಧಾನದಲ್ಲಿ ತರಬೇತಿ ನೀಡುವ ಸಂಸ್ಥೆಗಳಾಗಿ ಪರಿಣಮಿಸಿ ಮಹತ್ತರ ಪಾತ್ರವಹಿಸಿದವು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ವಿವಿಧ ಪ್ರಾಂತ ಸರ್ಕಾರಗಳು ಸ್ಥಳೀಯ ಸಂಸ್ಥೆಗಳನ್ನು ಪುನರುಜ್ಜೀವಿಸುವ ಕ್ರಮ ಕೈಗೊಂಡವು. 1948ರಲ್ಲಿ ದೆಹಲಿಯಲ್ಲಿ ಸ್ಥಳೀಯ ಸಂಸ್ಥೆಗಳ ಸಚಿವರ ಸಮ್ಮೇಳನ ನಡೆಯಿತು. ಅದರಲ್ಲಿ ಈ ಸಂಸ್ಥೆಗಳನ್ನು ಸಂಪೂರ್ಣವಾಗಿ ಪ್ರಜಾತಂತ್ರಾತ್ಮಕ ವ್ಯವಸ್ಥೆಯ ಮೇಲೆ ರೂಪಿಸಲು ನಿರ್ಣಯಿಸಲಾಯಿತು. ತರುವಾಯ ವಿವಿಧ ರಾಜ್ಯಸರ್ಕಾರಗಳು ಕಾಯಿದೆಗಳನ್ನು ರಚಿಸಿದವು. ಆದರೆ ಭಾಷಾವಾರು ರಾಜ್ಯಗಳ ರಚನೆಯಿಂದ ರಾಜ್ಯಗಳ ಪ್ರಾದೇಶಿಕ ವ್ಯಾಪ್ತಿಯಲ್ಲಿ ಆಮೂಲಾಗ್ರ ಬದಲಾವಣೆಯಾಯಿತು. ವಿಶಾಲ ಮೈಸೂರು ರಾಜ್ಯ 1956ರ ನವೆಂಬರ್ 1ರಂದು ರಚನೆಯಾಯಿತು. ಅದರಲ್ಲಿ ಹಿಂದಿನ ವಿವಿಧ ಪ್ರಾಂತಗಳಿಗೆ ಸೇರಿದ ಪ್ರದೇಶಗಳಿದ್ದು ಆಯಾ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಭಿನ್ನ ಕಾಯಿದೆಗಳು ಅಸ್ತಿತ್ವದಲ್ಲಿದ್ದವು. ಅವನ್ನೆಲ್ಲ ನಿವಾರಿಸಿ ಏಕರೂಪದ ಕಾಯಿದೆಯನ್ನು 1959ರಲ್ಲಿ ರಚಿಸಲಾಯಿತು.

1959ರಲ್ಲಿ ರಚಿತವಾದ ಮೈಸೂರು ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿ ಕಾಯಿದೆ ವಿಶೇಷ ಮಹತ್ವ ಪಡೆದಿದೆ. ಒಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಸೇರಿಸಲಾಯಿತು. ಗ್ರಾಮಾಂತರ ಪ್ರದೇಶದ ಸರ್ವತೋಮುಖ ಅಭಿವೃದ್ಧಿ ಸಾಧಿಸುವುದು ಇದರ ಗುರಿ. ಈ ಯೋಜನೆಯಂತೆ ಪ್ರತಿ ಕ್ಷೇತ್ರವನ್ನು

(ಬ್ಲಾಕ್) ಪ್ರತ್ಯೇಕ ಘಟಕವಾಗಿ ವಿಂಗಡಿಸಲಾಯಿತು. ಸು. 60 ರಿಂದ 75 ಸಾವಿರ ಜನಸಂಖ್ಯೆ ಇರುವ ಪ್ರದೇಶ ಈ ಕ್ಷೇತ್ರದ ವ್ಯಾಪ್ತಿಗೆ ಸೇರಬೇಕೆಂದು ನಿರ್ಧರಿಸಲಾಯಿತು. ಇಂಥ ಕ್ಷೇತ್ರ ಸಾಮಾನ್ಯವಾಗಿ ಒಂದು ತಾಲ್ಲೂಕು ಪ್ರದೇಶವನ್ನು ವ್ಯಾಪಿಸುತ್ತದೆ. ಸಮುದಾಯ ಅಭಿವೃದ್ಧಿ ಯೋಜನೆಯೊಂದಿಗೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಮೊದಲಾದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಇದಕ್ಕಾಗಿ ಪ್ರತ್ಯೇಕ ಸಿಬ್ಬಂದಿವ್ಯವಸ್ಥೆ ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ನಿಯೋಜಿತರಾದರು. ಈ ಸರ್ಕಾರಿ ಅಂಗದೊಡನೆ ಜನತಾ ಪ್ರತಿನಿಧಿಗಳಿಂದ ಕೂಡಿದ ಸಂಸ್ಥೆ ಒಟ್ಟಾಗಿ ಕೆಲಸ ಮಾಡಿದರೆ ಕ್ಷಿಪ್ರ ಹಾಗೂ ಸಮಗ್ರ ಪ್ರಗತಿ ಸಾಧ್ಯವೆಂಬ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳನ್ನು ಇದರೊಂದಿಗೆ ಸೇರಿಸಲು ಉದ್ದೇಶಿಸಲಾಯಿತು. ಬಲವಂತರಾಯ್ ಮೆಹ್ತಾ ವರದಿ ಆಧಾರದ ಮೇಲೆ ಕೇಂದ್ರ ಸರ್ಕಾರ ಮೂರು ಹಂತಗಳ ಸ್ಥಳೀಯ ಸಂಸ್ಥೆಗಳ ವ್ಯವಸ್ಥೆಯನ್ನು ಜಾರಿಗೆ ತಂದಿತು. ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಲು ಉದ್ದೇಶಿಸಲಾಯಿತು, ಈ ಯೋಜನೆಯ ಇಂಗಿತವನ್ನು ಅನುಷ್ಠಾನಕ್ಕೆ ತರುವ ದೃಷ್ಟಿಯಿಂದ ಕರ್ನಾಟಕದಲ್ಲಿ 1956ರಲ್ಲಿ ಮೇಲ್ಕಂಡ ಕಾಯಿದೆ ರಚಿತವಾಯಿತು. ಈ ಕಾಯಿದೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿ, ತಾಲ್ಲೂಕು ಮಂಡಳಿ ಮತ್ತು ಗ್ರಾಮ ಪಂಚಾಯಿತಿ ಎಂಬ ಮೂರು ಹಂತದ ವ್ಯವಸ್ಥೆಯಿತ್ತು.

**ಜಿಲ್ಲಾ ಅಭಿವೃದ್ಧಿ ಸಮಿತಿ:** ಈ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರು ಇದರಲ್ಲಿ ಆಯಾಜಿಲ್ಲೆಯ ಅಥವಾ ಅದರ ಭಾಗವನ್ನು ಪ್ರತಿನಿಧಿಸುವ ಲೋಕಸಭಾ ಸದಸ್ಯರು, ರಾಜ್ಯದ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು ಮತ್ತು ಜಿಲ್ಲೆಯಲ್ಲಿ ವಾಸವಾಗಿರುವ ರಾಜ್ಯಸಭಾ ಸದಸ್ಯರು ಹಾಗೂ ಜಿಲ್ಲೆಗೆ ಸೇರಿದ ತಲ್ಲೂಕು ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರುಗಳು ಪದನಿಮಿತ್ತ ಸದಸ್ಯರಾಗಿರುತ್ತಿದ್ದರು. ಸರ್ಕಾರ ಇತರ ಅಧಿಕಾರಿಗಳನ್ನು, ಪರಿಶಿಷ್ಟವರ್ಗದ ಪ್ರತಿನಿಧಿಗಳನ್ನು ಮತ್ತು ಮಹಿಳೆಯರನ್ನು ನಿಯಮಾನುಸಾರ ನಾಮಕರಣ ಮಾಡುತ್ತಿತ್ತು. ಈ ಸಮಿತಿಗೆ ನೇರ ಚುನಾವಣೆ ಇರಲಿಲ್ಲ. 1983ರಲ್ಲಿ ಕೇಂದ್ರೀಕೃತವಾಗಿ 1985ರಿಂದ ಜಾರಿಗೆ ಬಂದ ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯಿತಿ ಸಮಿತಿ ಮತ್ತು ಮಂಡಳ ಪಂಚಾಯಿತಿ ಅಧಿನಿಯಮದಿಂದಾಗಿ ಈ ವ್ಯವಸ್ಥೆ ಬದಲಾಯಿತು. ಹಿಂದಿನ ಜಿಲ್ಲಾ ಬೋರ್ಡ್‍ಗಳಂತೆ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದು ನೇರ ಚುನಾವಣೆಯ ಮೂಲಕ ಸದಸ್ಯರನ್ನು ಆರಿಸಲಾಗುತ್ತಿದೆ. ಇದಕ್ಕೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಸಮಿತಿಯ ಸದಸ್ಯರು ಆರಿಸುತ್ತಾರೆ. ಇಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹುದ್ದೆ ಸಹ ಪ್ರಮುಖ ಸ್ಥಾನ ಪಡೆದಿದೆ. ತರುವಾಯ ತಂದ ತಿದ್ದುಪಡಿಯ ಪ್ರಕಾರ ಜಿಲ್ಲಾ ಪಂಚಾಯಿತಿ ಎಂದು ಹೆಸರು ಬದಲಾಗಿದ್ದರೂ ಮೂಲ ಸ್ವರೂಪ ಹಾಗೆಯೇ ಇದೆ. ಈ ಸಂಸ್ಥೆಯಲ್ಲಿ ಅನುಸೂಚಿತ ಜಾತಿ ಪಂಗಡಗಳಲ್ಲದೆ ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ಮೀಸಲು ಸ್ಥಾನಗಳ ಅವಕಾಶವಿದೆ.

**ತಾಲ್ಲೂಕು ಅಭಿವೃದ್ಧಿ ಮಂಡಳಿ:** 1959ರ ಕಾಯಿದೆಯಂತೆ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಪ್ರತಿ ತಾಲ್ಲೂಕಿಗೆ ಒಂದರಂತೆ ಇರತಕ್ಕದ್ದೆಂದು ನಿಗದಿಪಡಿಸಲಾಗಿತ್ತು. ಈ ಮಂಡಳಿಯ ವ್ಯಾಪ್ತಿಗೆ ಪುರಸಭೆ (ಕಾರ್ಪೊರೇಷನ್), ನೈರ್ಮಲ್ಯ ಮಂಡಳಿ, ಪಟ್ಟಣ ಪ್ರದೇಶ ಸಮಿತಿ–ಇವುಗಳಿಗೆ ಸೇರಿದ ಪ್ರದೇಶಗಳನ್ನು ಹೊರತುಪಡಿಸಿ ಸಮಗ್ರ ತಾಲ್ಲೂಕು ಪ್ರದೇಶ ಸೇರುತ್ತಿತ್ತು. ತಾಲ್ಲೂಕು ಮಂಡಳಿಯ ವ್ಯಾಪ್ತಿಯಲ್ಲಿರುವ ವಯಸ್ಕರ ಮತದಾರರು ಅದರ ಸದಸ್ಯರನ್ನು ರಹಸ್ಯ ಮತದಾನದ ಮೂಲಕ ಆರಿಸುತ್ತಾರೆ. ಒಂದು ಲಕ್ಷ ಜನಸಂಖ್ಯೆಗೆ (ಪಟ್ಟಣ ಪ್ರದೇಶಗಳ ಜನಸಂಖ್ಯೆ ಹೊರತುಪಡಿಸಿ) ಕಡಿಮೆ ಇರುವ ತಾಲ್ಲೂಕಿನ ಮಂಡಳಿಯಲ್ಲಿ 15 ಜನ ಸದಸ್ಯರಿರತಕ್ಕದ್ದು ಮತ್ತು ಒಂದು ಲಕ್ಷಕ್ಕೆ ಮೀರಿದ ಜನಸಂಖ್ಯೆ ಇರುವ ತಾಲ್ಲೂಕಿನ ಮಂಡಳಿಯಲ್ಲಿ 19 ಜನ ಸದಸ್ಯರಿರತಕ್ಕದ್ದೆಂದು ಗೊತ್ತುಪಡಿಸಲಾಗಿದೆ. ತಾಲ್ಲೂಕನ್ನು ಚುನಾವಣಾ ವಿಭಾಗಗಳಾಗಿ ವಿಂಗಡಿಸಿ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಲಾಗಿತ್ತು. ಮಹಿಳೆಯರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲು ಸ್ಥಾನಗಳಿದ್ದವು. ಚುನಾಯಿತ ಸದಸ್ಯರ ಕಾಲಾವಧಿ ನಾಲ್ಕು ವರ್ಷಗಳು. 1078ರ ತಿದ್ದುಪಡಿಯಲ್ಲಿ ಇದನ್ನು ಐದು ವರ್ಷಗಳಿಗೆ ವಿಸ್ತರಿಸಲಾಯಿತು. ಸದಸ್ಯರು ತಮ್ಮಲ್ಲೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳಬಹುದು. ಆಯಾ ತಾಲ್ಲೂಕು ಮತ್ತು ತಾಲ್ಲೂಕಿನ ಭಾಗಕ್ಕೆ ಸೇರಿದ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ರಾಜ್ಯದ ವಿಧಾನಸಭಾ ಸದಸ್ಯರು ಮತ್ತು ವಿಧಾನಪರಿಷತ್ತಿನ ಸದಸ್ಯರು ಮಂಡಳಿಯ ಸಭೆಗಳಲ್ಲಿ ಭಾಗವಹಿಸಲು ಮತ್ತು ಮತದಾನ ಮಾಡಲು ಹಕ್ಕು ಪಡೆದವರಾಗಿದ್ದರು. ಆದರೂ ಇವರು ಮಂಡಳಿಯ ಸದಸ್ಯರಲ್ಲ. ಮಂಡಳಿಯ ಕಾಲಾವಧಿಯನ್ನು ಸರ್ಕಾರ ಕಾಲಕಾಲಕ್ಕೆ ವಿಸ್ತರಿಸಬಹುದು. ಪ್ರತಿ ಮಂಡಳಿ ಕಡ್ಡಾಯವಾಗಿ ಮೂರು ಸಮಿತಿಗಳನ್ನು ಹೊಂದಿರಬೇಕು: 1 ಸ್ಥಾಯಿ ಸಮಿತಿ, 2 ಲೆಕ್ಕಪರಿಶೀಲನ ಸಮಿತಿ, 3ಸಾರ್ವಜನಿಕ ಆರೋಗ್ಯ ಸಮಿತಿ. ಮಂಡಳಿಯು ತನಗೆ ಸೂಕ್ತವೆನಿಸಿದ ಉದ್ದೇಶಗಳ ಬಗ್ಗೆ ಇತರ ಸಮಿತಿಗಳನ್ನು ರಚಿಸಿಕೊಳ್ಳಬಹುದು. ಮೊದಲ ಎರಡು ಸಮಿತಿಗಳಿಗೆ ಮಂಡಳಿಯ ಅಧ್ಯಕ್ಷರು ಪದನಿಮಿತ್ತ ಅಧ್ಯಕ್ಷರಾಗಿರುತ್ತಿದ್ದರು.

ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು ಮಂಡಳಿಯ ಆಡಳಿತ ಮತ್ತು ಕಾರ್ಯಕ್ರಮಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಸಮುದಾಯ ಅಭಿವೃದ್ಧಿ ಯೋಜನೆಯ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮಂಡಳಿಯ ಮುಖ್ಯಾಧಿಕಾರಿಯಾಗಿದ್ದರು. ಈ ಯೋಜನೆ ಇಲ್ಲದಿರುವ ಕಡೆಗಳಲ್ಲಿ ತಹಸೀಲ್ದಾರರು ಮುಖ್ಯಾಧಿಕಾರಿಯ ಕಾರ್ಯನಿರ್ವಹಿಸುತ್ತಿದ್ದರು. ಮುಖ್ಯಾಧಿಕಾರಿಗಳು ಮಂಡಳಿಯ ಸಭೆಯನ್ನು ಕರೆಯುವುದರಿಂದ ಹಿಡಿದು, ಅದರ ನಿರ್ಣಯಗಳನ್ನು ಕಾರ್ಯಗತಗೊಳಿಸುವವರೆಗೆ ವಿವಿಧ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತಿತ್ತು.

ಮಂಡಳಿಯ ಕಾರ್ಯಗಳನ್ನು ಮುಖ್ಯವಾಗಿ ಎರಡು ಗುಂಪಾಗಿ ವಿಂಗಡಿಸಲಾಗಿದೆ: ಮೊದಲ ಗುಂಪಿನ ಕಾರ್ಯಗಳನ್ನು ಮಂಡಳಿ ತನ್ನ ಅಸ್ತಿತ್ವದ ದೃಷ್ಟಿಯಿಂದ ಮಾಡಲೇಬೇಕಾದವು. ಅವುಗಳಲ್ಲಿ ರಸ್ತೆ, ಕುಡಿಯುವ ನೀರು, ಸಣ್ಣ ನೀರಾವರಿ, ಆರೋಗ್ಯ ಸಂರಕ್ಷಣೆ, ಮಾರುಕಟ್ಟೆ ಸ್ಥಾಪನೆ ಮತ್ತಿತರ ಆರ್ಥಿಕ ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ಸೇರಿವೆ. ಎರಡನೆಯ ಗುಂಪಿನ ಕಾರ್ಯಗಳು ಮಂಡಳಿ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಮೂಲಕ ಜನತೆಯ ಸೇವೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ತನ್ನ ಸಾರ್ಥಕತೆಯನ್ನು ಹೆಚ್ಚಿಸಿಕೊಳ್ಳುವುದು. ಅವುಗಳಲ್ಲಿ ಸಹಕಾರ, ಕೃಷಿ, ಗೃಹೋದ್ಯಮಗಳು ಮೊದಲಾದವುಗಳ ಅಭಿವೃದ್ಧಿಗೆ ಶ್ರಮಿಸುವ ಕಾರ್ಯಗಳಿವೆ. ಗ್ರಾಮಪಂಚಾಯಿತಿಯ ಮೇಲ್ವಿಚಾರಣೆ ನಡೆಸುವುದು ಮಂಡಳಿಯ ಕಾರ್ಯಕ್ರಮಗಳಲ್ಲೊಂದು.

ತಾಲ್ಲೂಕು ಅಭಿವೃದ್ಧಿ ಮಂಡಳಿ ತನ್ನದೇ ಆದ ನಿಧಿ ಹೊಂದಿರುತ್ತಿತ್ತು. ಸರ್ಕಾರದ ಸಹಾಯಧನ, ವಿವಿಧ ಕರಗಳಿಂದ ಬಂದ ಕಂದಾಯ, ಪರವಾನಗಿಗಳ ಶುಲ್ಕ ಇತ್ಯಾದಿಗಳು ಅದಕ್ಕೆ ಸೇರುತ್ತವೆ. ಮಂಡಳಿ ಸ್ವಂತ ಆಸ್ತಿ ಹೊಂದಿರಬಹುದು. ಈ ಹಿಂದೆ ಹೇಳಿದ ತಿದ್ದುಪಡಿಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡಿದ್ದರೂ ಅದರ ಹೆಸರನ್ನು ತಾಲ್ಲೂಕು ಪಂಚಾಯಿತಿ ಎಂದು ಬದಲಾಯಿಸಲಾಗಿದೆ. 1985ರಲ್ಲಿ ಜಾರಿಗೆ ಬಂದಂತೆ ಈ ತಾಲ್ಲೂಕು ಪಂಚಾಯಿತಿಗೆ ಚುನಾವಣೆ ಇರಲಿಲ್ಲ. ತರುವಾಯದ ತಿದ್ದುಪಡಿಯಲ್ಲಿ

ಚುನಾವಣೆಯ ಮೂಲಕ ಸದಸ್ಯರನ್ನು ಭರ್ತಿ ಮಾಡುವ ವಿಧಾನ ಜಾರಿಗೆ ಬಂದಿದೆ. ಇದರಲ್ಲೂ ಜಿಲ್ಲಾ ಪಂಚಾಯಿತಿಯಂತೆಯೇ ಇಲ್ಲಿಯೂ ಮೀಸಲು ಸ್ಥಾನಗಳಿವೆ. ಅಧ್ಯಕ್ಷ ಉಪಾಧ್ಯಕ್ಷರನ್ನು ಸಮಿತಿಯ ಚುನಾಯಿತ ಸದಸ್ಯರು ಆಯ್ದುಕೊಳ್ಳುತ್ತಾರೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಹುದ್ದೆ ಪ್ರಭಾವಶಾಲಿಯಾಗಿದೆ.

ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ, ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ, ತಾಲ್ಲೂಕು ಪಂಚಾಯಿತಿಯ ಪಾತ್ರ ಮಹತ್ತ್ವದ್ದು. ಸರ್ಕಾರದ ಪ್ರೋತ್ಸಾಹ ಮತ್ತು ಮಂಡಳಿಯ ಸದಸ್ಯರ ಸೇವಾಮನೋಭಾವ, ಉತ್ಸಾಹ, ಶ್ರದ್ಧೆಗಳು ಇವುಗಳ ಯಶಸ್ಸಿಗೆ ಆವಶ್ಯಕ.

**ಗ್ರಾಮ ಪಂಚಾಯಿತಿ:** ಇದು ಅತ್ಯಂತ ಪ್ರಾಚೀನ ಸಂಸ್ಥೆ. ಆಧುನಿಕ ಕಾಲದಲ್ಲಿ ಈ ಸಂಸ್ಥೆಯ ಪುನಶ್ಚೇತನಕ್ಕೆ ಪ್ರಯತ್ನ ನಡೆದಿದೆ. ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಇದನ್ನು ಮೂಲಭೂತ ಘಟಕವಾಗಿ ಮಾರ್ಪಡಿಸಲಾಗಿದೆ.

1959ರ ಕಾಯಿದೆಯಲ್ಲಿ ಗ್ರಾಮಪಂಚಾಯಿತಿಯ ಸ್ವರೂಪ ಮತ್ತು ಕಾರ್ಯಗಳನ್ನು, ಅದರ ಗುರಿಯನ್ನು ವಿಶದವಾಗಿ ನಿರೂಪಿಸಿದೆ. 1,500 ಜನಸಂಖ್ಯೆಗೆ ಕಡಿಮೆ ಇರದ, 10,000ಕ್ಕಿಂತ ಹೆಚ್ಚು ಜನಸಂಖ್ಯೆ ಇರದ ಪ್ರದೇಶವನ್ನು ಪಂಚಾಯಿತಿ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ. ವಿಶೇಷ ಸಂದರ್ಭದಲ್ಲಿ ಈ ನಿಯಮವನ್ನು ಸಡಿಲಿಸುವ ಅವಕಾಶವಿತ್ತು. ಹಿಂದಿನ ಭೂಕಂದಾಯ ಗ್ರಾಮಗಳಿಗೂ ಈ ಗ್ರಾಮಪಂಚಾಯಿತಿಗಳಿಗೂ ಸಂಬಂಧ ವಿಲ್ಲ. ಒಂದು ಗ್ರಾಮಪಂಚಾಯಿತಿಯಲ್ಲಿ ಒಂದೇ ಕಂದಾಯ ಗ್ರಾಮವಿರ ಬಹುದು ಅಥವಾ ಒಂದಕ್ಕಿಂತ ಹೆಚ್ಚು ಗ್ರಾಮಗಳಿರಬಹುದು. ಯಾವುದೇ ಗ್ರಾಮದ ಜನಸಂಖ್ಯೆ5,000ಕ್ಕಿಂತ ಕಡಿಮೆ ಇರದೆ ಮತ್ತು ಅದರ ವಾರ್ಷಿಕ ಆದಾಯ 10,000 ರೂ.ಗಳಷ್ಟು ಅಂದಾಜು ಇದ್ದಾಗ ಅಂಥ ಗ್ರಾಮವನ್ನು ಪಟ್ಟಣ ಪಂಚಾಯಿತಿ ಎಂದು ಸರ್ಕಾರ ಪರಿಗಣಿಸಬಹುದು. ಕೆಲವು ನಿಯಮಗಳ ಹೊರತು ಉಳಿದಂತೆ ಗ್ರಾಮಪಂಚಾಯಿತಿ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಒಂದೇ ನಿಬಂಧನೆ ಅನ್ವಯವಾಗುತ್ತದೆ. 2001ರ ಅಂಕಿಅಂಶಗಳ ಪ್ರಕಾರ ರಾಜ್ಯದ 27 ಜಿಲ್ಲೆಗಳಲ್ಲಿ ಒಟ್ಟು 5,692 ಗ್ರಾಮಪಂಚಾಯಿತಿಗಳೂ 209 ಪುರಸಭೆಗಳೂ ಇದ್ದವು.

ಗ್ರಾಮಪಂಚಾಯಿತಿಯಲ್ಲಿ 11 ಜನರಿಗೆ ಕಡಿಮೆ ಇಲ್ಲದಂತೆ ಮತ್ತು 19 ಜನರಿಗೆ ಹೆಚ್ಚಿಲ್ಲದಂತೆ ಸದಸ್ಯರು ಇರತಕ್ಕದ್ದು. ಈ ಎಲ್ಲ ಸದಸ್ಯರು ಚುನಾಯಿತ ಸದಸ್ಯರಾಗಿರಬೇಕು. ಈ ಸದಸ್ಯತ್ವಗಳಲ್ಲಿ ಮಹಿಳೆಯರಿಗೆ ಮತ್ತು ವಿಶಿಷ್ಟ ವರ್ಗಗಳಿಗೆ ನಿಯಮಾನುಸಾರ ಮೀಸಲಾತಿ ಇದೆ. ಪ್ರತಿ ಪಂಚಾಯಿತಿಯ ಪ್ರದೇಶವನ್ನು ಚುನಾವಣಾ ವಿಭಾಗಗಳಾಗಿ ವಿಂಗಡಿಸಲಾಗುತ್ತದೆ. ಆ ವಿಭಾಗಗಳು ಕನಿಷ್ಠ ಎರಡು ಸ್ಥಾನಗಳಿರುವಂತೆ ವಿಂಗಡಿತವಾಗಿರಬೇಕು. ವಯಸ್ಕರ ಮತದಾನದ ಆಧಾರದ ಮೇಲೆ ಚುನಾವಣೆ ನಡೆಯಬೇಕು. ಯಾವುದೇ ಪಂಚಾಯಿತಿಯಲ್ಲೂ ಯಾವುದೇ ಕಾರಣದಿಂದಲಾದರೂ ಚುನಾವಣೆ ಸಂಪೂರ್ಣವಾಗದೆ 11ಕ್ಕಿಂತ ಕಡಿಮೆ ಸಂಖ್ಯೆಯ ಸದಸ್ಯರು ಚುನಾಯಿತರಾಗಿದ್ದರೆ ಕಡಿಮೆ ಬಿದ್ದ ಸ್ಥಾನಗಳಿಗೆ ಪಂಚಾಯಿತಿ ರಚಿಸುವ ಉದ್ದೇಶದಿಂದ ಅರ್ಹ ವ್ಯಕ್ತಿಗಳನ್ನು ನಾಮಕರಣ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗಿದೆ.

ಪಂಚಾಯಿತಿ ಸದಸ್ಯರು ತಮ್ಮಲ್ಲೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳುತ್ತಿದ್ದರು. ಪಂಚಾಯಿತಿ ವಿವಿಧ ಸಮಿತಿಗಳನ್ನು ರಚಿಸಿಕೊಳ್ಳಬಹುದಿತ್ತು: 1ಒಕ್ಕಲುತನ ಸಮಿತಿ, 2 ಆರೋಗ್ಯ ಸಮಿತಿ ಮತ್ತು 3 ಗ್ರಾಮೋದ್ಯೋಗ ಸಮಿತಿ– ಇವು ಕಾಯಿದೆಯಲ್ಲಿ ಹೆಸರಿಸಿರುವ ಸಮಿತಿಗಳು. ಇವುಗಳನ್ನು ಚುನಾವಣೆಯ ಮೂಲಕ ರಚಿಸಬೇಕು. ಪಂಚಾಯಿತಿಗೆ ಗ್ರಾಮಲೆಕ್ಕಿಗ ಕಾರ್ಯದರ್ಶಿಯಾಗಿರುತ್ತಿದ್ದನು. ಹಿಂದಿನ ತಳವಾರ ಅಥವಾ ಕುಳವಾಡಿ ಇತ್ಯಾದಿ ಹುದ್ದೆಗಳ ಕಾರ್ಯನಿರ್ವಹಿಸಲು ಸರಕಾರ ಇತ್ತೀಚೆಗೆ ಗ್ರಾಮಸಹಾಯಕರನ್ನು ನೇಮಿಸಿದೆ. ತಿಂಗಳಿಗೆ ಒಂದು ಬಾರಿಯಾದರೂ ಪಂಚಾಯಿತಿ ಸಭೆ ಸೇರಬೇಕೆಂಬ ನಿಯಮವಿತ್ತು. ಸಭೆಯನ್ನು ನಿಯಮ ಪ್ರಕಾರ ಸೇರಿಸಬೇಕಲ್ಲದೆ ಸಭೆ ಜರುಗಿಸಲು ಕೋರಂ ಇರಬೇಕು.

ಪಂಚಾಯಿತಿಯ ಕಾರ್ಯಗಳು ವೈವಿಧ್ಯದಿಂದ ಕೂಡಿವೆ. ಇಲ್ಲಿಯೂ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಂತೆ ಪಂಚಾಯಿತಿಗಳು ಮಾಡಲೇಬೇಕಾದ ಕಾರ್ಯಗಳು ಮತ್ತು ಮಾಡಬಹುದಾದ ಕಾರ್ಯಗಳು ಎಂಬ ಎರಡು ಗುಂಪಿನ ಕಾರ್ಯಗಳಿವೆ. ಮೊದಲ ಗುಂಪಿನಲ್ಲಿ ಸಂಪರ್ಕವ್ಯವಸ್ಥೆ, ಕುಡಿಯುವ ನೀರು ಪೂರೈಕೆ, ಗ್ರಾಮದ ನೈರ್ಮಲ್ಯ ರಕ್ಷಿಸುವುದು, ದೀಪದ ವ್ಯವಸ್ಥೆ, ಗೋಮಾಳ ಮತ್ತು ಅರಣ್ಯ ಭೂಮಿಯನ್ನು ಸುಸ್ಥಿತಿಯಲ್ಲಿಡುವುದು, ಗ್ರಾಮ ವಿಸ್ತರಣೆಗೆ ಕ್ರಮ ಕೈಗೊಳ್ಳುವುದು ಇತ್ಯಾದಿ ಕಾರ್ಯಗಳು ಸೇರಿವೆ. ಎರಡನೆಯ ಗುಂಪಿನಲ್ಲಿ ಪಶುಸಂಗೋಪನೆ ಅಭಿವೃದ್ಧಿ ಸ್ಥಾಪನೆ, ಆಟದ ಬಯಲುಗಳು ಮತ್ತು ಉದ್ಯಾನವನಗಳ ನಿರ್ಮಾಣ, ಸಹಕಾರಿ ಚಟುವಟಿಕೆಗೆ ಉತ್ತೇಜನ, ಗ್ರಾಮೀಣ ಗ್ರಂಥಾಲಯ ಮತ್ತು ವಾಚನಾಲಯ ಸ್ಥಾಪನೆ, ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿ ಕ್ರಮಕೈಗೊಳ್ಳುವುದು ಇತ್ಯಾದಿ ಕಾರ್ಯಗಳು ಸೇರಿವೆ.

ಪ್ರತಿ ಪಂಚಾಯಿತಿಗೂ ಪಂಚಾಯಿತಿ ನಿಧಿ ಎಂಬ ನಿಧಿ ಇತ್ತು. ಇದರಲ್ಲಿ ಸರ್ಕಾರ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ಬಂದ ಸಹಾಯಧನ ಹಾಗೂ ಪಂಚಾಯಿತಿಗೆ ಇತರ ಮೂಲಗಳಿಂದ ಬಂದ ಆದಾಯ ಸೇರಿರುತ್ತಿತ್ತು. ಪಂಚಾಯಿತಿಯು ಮನೆಗಳ ಮೇಲೆ ಮತ್ತು ನಿರ್ದಿಷ್ಟ ವ್ಯವಹಾರದ ಮೇಲೆ ತೆರಿಗೆಗಳನ್ನು ಹಾಕಬಹುದಿತ್ತು.

ಗ್ರಾಮಪಂಚಾಯಿತಿಗಳು ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತಿದ್ದವು. ಪ್ರತಿ ಪಂಚಾಯಿತಿಯು ಆಡಳಿತದ ವಾರ್ಷಿಕ ವರದಿ ಮುಂಗಡ ಪತ್ರ ಮತ್ತು ಆಯವ್ಯಯದ ಲೆಕ್ಕಪತ್ರ ಸಿದ್ಧಪಡಿಸಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಮುಖ್ಯಾಧಿಕಾರಿಗೆ ಕಳುಹಿಸಬೇಕು.

ಗ್ರಾಮೀಣ ಅಭಿವೃದ್ಧಿಗಾಗಿಯೇ ಮೀಸಲಾಗಿರುವ ಈ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಪ್ರಯತ್ನಗಳು ನಡೆಯುತ್ತಿವೆ. ರಾಜ್ಯದ ಸಚಿವಾಲಯದಲ್ಲಿ ಗ್ರಾಮಾಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆ ಇದೆ. ಕೇಂದ್ರ ಸರ್ಕಾರ ಈ ಬಗ್ಗೆ ವರದಿ ಸಲ್ಲಿಸಲು ನೇಮಿಸಿದ್ದ ಅಶೋಕ ಮೆಹತ ಸಮಿತಿ (1978) ಗ್ರಾಮಪಂಚಾಯಿತಿಗಳಿಗೆ ಶಾಸನದತ್ತವಾದ ಆಡಳಿತಾಧಿಕಾರವಿರಬೇಕು; ಚುನಾವಣೆಗಳು ಪಕ್ಷರಾಜಕೀಯದ ಆಧಾರದ ಮೇಲೆಯೇ ನಡೆಯಬೇಕು; ರಾಜ್ಯಗಳು ತಮ್ಮ ಆದಾಯದ ದೊಡ್ಡ ಭಾಗವನ್ನು ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸಬೇಕು; ಅಲ್ಲಿಂದ ಅದು ಗ್ರಾಮಗಳಿಗೆ ಹಂಚಿಕೆ ಆಗಬೇಕು–ಈ ಮೊದಲಾದ ಸಲಹೆಗಳನ್ನು ಮಾಡಿತು.

1985ರಿಂದ ಜಾರಿಗೆ ಬಂದ ಕಾಯಿದೆಯಂತೆ ಗ್ರಾಮಮಟ್ಟದಲ್ಲಿ ಮಂಡಲ ಪಂಚಾಯಿತಿ ಎಂಬ ಆಡಳಿತ ವ್ಯವಸ್ಥೆ ಜಾರಿಗೆ ಬಂದಿತು. ಇದರಲ್ಲಿ ಹಿಂದಿನ ಒಂದು ಅಥವಾ ಒಂದಕ್ಕಿಂತ ಹೆಚ್ಚು ಗ್ರಾಮ ಸಮೂಹ ಪಂಚಾಯಿತಿಗಳು ಸೇರಿದ್ದವು. ಇದರ ಮುಖ್ಯರನ್ನು ಪ್ರಧಾನರೆಂದು ಕರೆಯಲಾಗಿತ್ತು. ಸ್ವಾತಂತ್ರ್ಯಾನಂತರ ಪ್ರಥಮಬಾರಿಗೆ ಈ ಗ್ರಾಮೀಣ ಸ್ಥಳೀಯ ಸಂಸ್ಥೆಗೆ ವ್ಯಾಪಕ ಅಧಿಕಾರಗಳನ್ನು ನಿಯೋಜಿಸಲಾಯಿತು. ಅಂದು ಗ್ರಾಮಾಭಿವೃದ್ಧಿ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್‌ರವರು ವಿಶೇಷ ಆಸಕ್ತಿಯಿಂದ ಈ ಸಂಸ್ಥೆಗೆ ರೂಪರೇಷೆ ಕೊಟ್ಟಿದ್ದರು. ಮುಂದೆ ಇದಕ್ಕೆ ಸರ್ಕಾರ ತಿದ್ದುಪಡಿತಂದು ಗ್ರಾಮ ಪಂಚಾಯಿತಿ ವ್ಯವಸ್ಥೆ ಜಾರಿಗೆ ತಂದಿತು. ಇದರಿಂದ ಹಿಂದಿನ ಮಂಡಲ ಪಂಚಾಯಿತಿಯ ಪ್ರಾದೇಶಿಕ ವ್ಯಾಪ್ತಿ ಕಿರಿದಾದರೂ ಅಧಿಕಾರ ವ್ಯಾಪ್ತಿ ಹಾಗೆಯೇ ಉಳಿದಿದೆ. ಪ್ರತಿ ಪಂಚಾಯಿತಿಗೂ ನಿರ್ದಿಷ್ಟ ಮೀಸಲಾತಿಯನ್ನು ಆಧರಿಸಿ ಸದಸ್ಯರನ್ನು

ಚುನಾಯಿಸಲಾಗುತ್ತದೆ. ಇವರಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆಯ ಮೂಲಕ ಆರಿಸಲಾಗುತ್ತದೆ. ಪ್ರತಿ ಪಂಚಾಯಿತಿಗೆ ಒಂದು ಅಧಿಕಾರಿ ಕಾರ್ಯದರ್ಶಿ ಹುದ್ದೆ ಇರುತ್ತದೆ. ಇಂದು ಈ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಅಧಿಕಾರಗಳನ್ನು ನೀಡಲಾಗಿದೆ.

**ಪುರಸಭೆ:** ಪುರಸಭಾ ಪದ್ಧತಿ ಒಂದಲ್ಲ ಒಂದು ರೀತಿಯಲ್ಲಿ ಭಾರತದಲ್ಲಿದ್ದಿತಾದರೂ ಆಧುನಿಕ ಪೌರಾಡಳಿತ ಪಾಶ್ಚಾತ್ಯರ ಕೊಡುಗೆ ಎಂದು ಕೆ. ಎಂ. ಪಣಿಕ್ಕರ್ ಮೊದಲಾದವರು ಅಭಿಪ್ರಾಯಪಟ್ಟಿದ್ದಾರೆ. ಪೌರಸೌಲಭ್ಯಗಳನ್ನು ಒದಗಿಸಲು, ಪಟ್ಟಣಗಳ ಆಡಳಿತ ನಿರ್ವಹಣೆ ಮಾಡಲು, ತೆರಿಗೆ ವಸೂಲು ಮಾಡಲು ಆಡಳಿತ ಮಂಡಳಿಯ ಅಗತ್ಯ ಕಂಡುಬಂದಾಗ ವಿವಿಧ ಪ್ರಾಂತ್ಯಸರ್ಕಾರಗಳು, ಸಂಸ್ಥಾನಗಳು ಪುರಸಭೆಗಳನ್ನು ಸ್ಥಾಪಿಸಿದವು. ಅವು ಏಕಪ್ರಕಾರವಾಗಿ ತಮ್ಮ ಕಾರ್ಯಭಾರಗಳನ್ನು ಹೆಚ್ಚಿಸಿಕೊಂಡು ಇಂದು ಮಹತ್ತ್ವದ ಸಂಸ್ಥೆಗಳಾಗಿವೆ.

ಮೈಸೂರು ಸಂಸ್ಥಾನದಲ್ಲಿ 1862ರಲ್ಲಿ ಬೆಂಗಳೂರು ಮತ್ತು ಮೈಸೂರುಗಳಲ್ಲೂ 1864–65 ರಲ್ಲಿ ಶಿವಮೊಗ್ಗದಲ್ಲೂ ತರುವಾಯ ಇತರೆಡೆಗಳಲ್ಲೂ ಪುರಸಭೆಗಳನ್ನು ರಚಿಸಲಾಯಿತು. ಅವು ಪುರಸಮಿತಿಗಳು ಎಂಬ ಹೆಸರಿನಿಂದ ಅಸ್ತಿತ್ವಕ್ಕೆ ಬಂದವು. ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಿದ್ದರು. ಇತರೆಡೆಗಳಲ್ಲಿ ಉಪವಿಭಾಗಾಧಿಕಾರಿಗಳು ಅಥವಾ ಅಮಲ್ದಾರರು ಅಧ್ಯಕ್ಷರಾಗಿರುತ್ತಿದ್ದರು. ಅಧಿಕಾರಿ ಸದಸ್ಯರು ಮತ್ತು ನಾಮಕರಣ ಸದಸ್ಯರು ಸಮಿತಿಯಲ್ಲಿರುತ್ತಿದ್ದರು. 1891ರ ಹೊತ್ತಿಗೆ ಬಹುತೇಕ ತಾಲ್ಲೂಕು ಕೇಂದ್ರಗಳಲ್ಲಿ ಪುರಸಭೆಗಳನ್ನು ರಚಿಸಲಾಯಿತು. ಗೃಹತೆರಿಗೆ, ವೃತ್ತಿತೆರಿಗೆ, ವ್ಯಾಪಾರತೆರಿಗೆ, ಆಕ್ಟ್ರಾಯ್ ಸುಂಕ–ಈ ಸಂಸ್ಥೆಗಳ ಮುಖ್ಯ ಆದಾಯ ಮೂಲಗಳಾಗಿದ್ದವು. ಕ್ರಮೇಣ ಪರಿಮಿತ ಮತದಾರ ಸಮುದಾಯದ ಮೂಲಕ ಸದಸ್ಯರನ್ನು ಚುನಾಯಿಸುವ ಅವಕಾಶ ಕಲ್ಪಿಸಲಾಯಿತು.

ಸರ್ಕಾರ 1916ರಲ್ಲಿ ಪುರಭೆಗಳನ್ನು ನಗರ, ಪಟ್ಟಣ ಮತ್ತು ಕಿರಿಯ ಪುರಸಭೆಗಳೆಂದು ವಿಂಗಡಿಸಿತು. 1918ರ ಕಾಯಿದೆ ಪುರಸಭೆಗಳಿಗೆ ಹೆಚ್ಚಿನ ಅಧಿಕಾರ ನೀಡಿತು. ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಅವುಗಳಿಗೆ ವಹಿಸಲಾಯಿತು. ಈ ಶಾಸನದಿಂದ ಚುನಾಯಿತ ಸದಸ್ಯರ ಪ್ರಮಾಣ ಅರ್ಧಭಾಗಕ್ಕೆ ಏರಿತು. 1932–33ರಲ್ಲಿ ಮಾಡಿದ ತಿದ್ದುಪಡಿಯಿಂದ ಮತದಾರರ ಸಮುದಾಯದ ವ್ಯಾಪ್ತಿ ಹೆಚ್ಚಿತು.

ಬ್ರಿಟಿಷ್ ಆಡಳಿತದಲ್ಲಿದ್ದ ಪ್ರಾಂತಗಳಲ್ಲೂ ಪುರಸಭೆಗಳು ತ್ವರಿತವಾಗಿ ಬೆಳೆದವು. 1854ರಷ್ಟು ಹಿಂದೆಯೇ ಮುಂಬಯಿ ಪ್ರಾಂತ್ಯಕ್ಕೆ ಸೇರಿದ್ದ ಬಿಜಾಪುರದಲ್ಲಿ ಪುರಸಭೆ ರಚಿತವಾಯಿತು. 1873ರ ಮುಂಬಯಿ ಪ್ರಾಂತ್ಯದ ಕಾಯಿದೆ ಮೂಲಕ ಪುರಸಭೆಗಳನ್ನು ನಗರ ಪುರಸಭೆ ಮತ್ತು ಪಟ್ಟಣ ಪುರಸಭೆಗಳೆಂದು ವಿಂಗಡಿಸಲಾಯಿತು. ಜಿಲ್ಲಾ ಕಲೆಕ್ಟರು ಮತ್ತು ಇತರ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಿದ್ದರು. 1901ರ ಮುಂಬಯಿ ಜಿಲ್ಲಾ ಪುರಸಭೆ ಕಾಯಿದೆಯ ಪುರಸಭಾ ಸದಸ್ಯರಲ್ಲೇ ಒಬ್ಬರು ಅಧ್ಯಕ್ಷರಾಗಲು ಅವಕಾಶ ನೀಡಿತು. ಅಂಥ ಅಧ್ಯಕ್ಷರನ್ನು ಸರ್ಕಾರ ನೇಮಿಸಬಹುದಿತ್ತು ಇಲ್ಲವೇ ಸರ್ಕಾರ ಸೂಚಿಸಿದ ಮೇರೆಗೆ ಸದಸ್ಯರೇ ಚುನಾಯಿಸಬಹುದಿತ್ತು. ಮುಂಬಯಿ ನಗರ ಯೋಜನಾ ಕಾಯಿದೆ (1915) ಮತ್ತು ಮುಂಬಯಿ ಪುರಸಭಾ ಬರೋ ಕಾಯಿದೆಗಳು (1925) ಪೌರಾಡಳಿತದ ಪ್ರಗತಿಗೆ ಸಹಾಯಕವಾದವು. ಅದರಲ್ಲಿ ಜನತೆಗೆ ಹೆಚ್ಚಿನ ಅವಕಾಶ ಒದಗಿಸಲಾಯಿತು.

ಮದರಾಸು ಪ್ರಾಂತ್ಯದಲ್ಲಿ 1865ರಲ್ಲಿ ಪಟ್ಟಣ ಅಭಿವೃದ್ಧಿ ಕಾಯಿದೆ ಜಾರಿಗೆ ಬಂತು. ಈ ಕಾಯಿದೆಯಿಂದ ಪುರಸಭೆಗಳು ಸ್ಥಾಪಿತವಾದವು. 1871ರಲ್ಲಿ ಹೊಸ ಕಾಯಿದೆ ರಚಿಸಲಾಯಿತು. ಅದರಿಂದ ತೆರಿಗೆದಾರರಿಗೆ ಸದಸ್ಯರನ್ನೂ ಉಪಾಧ್ಯಕ್ಷರನ್ನೂ ಚುನಾಯಿಸುವ ಅವಕಾಶ ದೊರೆಯಿತು. ಜಿಲ್ಲಾ ಕಲೆಕ್ಟರು ಅಥವಾ ಇತರ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಿದ್ದರು. 1884 ಮತ್ತು 1920ರಲ್ಲಿ ರಚಿಸಿದ ಕಾಯಿದೆಗಳಿಂದ ಪುರಸಭೆಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಿತು. ಹೆಚ್ಚಿನ ಸಂಪನ್ಮೂಲಗಳಿಗೆ ಅವಕಾಶ ಕಲ್ಪಿಸಲಾಯಿತು. 1930ರ ಕಾಯಿದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿ ಸದಸ್ಯರು ಚುನಾಯಿತ ಸದಸ್ಯರಾಗಿರಬೇಕೆಂದೂ ಪ್ರತಿ ತೆರಿಗೆದಾರರು ಮತದಾರರಾಗಿರಬೇಕೆಂದೂ ನಿಯಮಮಾಡಿತು.

ಹೈದರಾಬಾದು ಸಂಸ್ಥಾನದಲ್ಲಿ 1887–88ರಿಂದ ಸ್ಥಳೀಯ ಸಂಸ್ಥೆಗಳು ಶಾಸನರೂಪ ತಳೆದವು. 1900ರ ಕಾಯಿದೆ ಪುರಸಭೆಗಳಿಗೆ ಸ್ಥಳೀಯ ತೆರಿಗೆ ವಿಧಿಸುವ ಅಧಿಕಾರ ನೀಡಿತು. ತರುವಾಯ ಕೆಲವು ತಿದ್ದುಪಡಿಗಳನ್ನು ತಂದರೂ ಸಂಸ್ಥಾನದಲ್ಲಿ ಸಾಕಷ್ಟು ದೀರ್ಘಕಾಲ ಪುರಸಭೆಗಳ ಕಾರ್ಯಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳೇ ನೋಡಿಕೊಳ್ಳುತ್ತಿದ್ದವು. 1928–29 ರಿಂದ ಪಟ್ಟಣಗಳಿಗೆ ಪ್ರತ್ಯೇಕ ಮುಂಗಡಪತ್ರ ಸಿದ್ಧಿಪಡಿಸಲಾಯಿತು. 1934ರ ಕಾಯಿದೆಯು ಪುರಸಭೆಗಳಿಗೆ ಸ್ವತಂತ್ರ ಅಸ್ತಿತ್ವ ತಂದುಕೊಟ್ಟಿತು. ಅಧಿಕಾರೇತರ ಸದಸ್ಯರು ಬಹುಮತ ಪಡೆದಿರುವಂತೆ ಅವನ್ನು ರಚಿಸಲಾಯಿತು. 1942ರಲ್ಲಿ ಇನ್ನೊಂದು ಕಾಯಿದೆ ಜಾರಿಗೆ ಬಂತು.

ಸ್ವಾತಂತ್ರ್ಯಪೂರ್ವಕಾಲದಲ್ಲಿ ಪುರಸಭೆಗಳು ಅನಿವಾರ್ಯವೆನ್ನಿಸುವಷ್ಟರ ಮಟ್ಟಿಗೆ ಅವುಗಳ ಅಗತ್ಯ ಕಂಡುಬಂತು. ಆದರೆ ಸ್ವಾತಂತ್ರ್ಯ ಹೋರಾಟಗಾರರಿಗೆ ಇವು ಆಶ್ರಯಸ್ಥಾನಗಳಾಗಬಾರದೆಂಬ ದೃಷ್ಟಿಯಿಂದ ಸರ್ಕಾರಗಳು ಅವುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಹಿಂಜರಿದವು. ಆದರೆ ವಾಸ್ತವವಾಗಿ ನಮ್ಮ ಕೆಲವು ರಾಷ್ಟ್ರೀಯ ನಾಯಕರೂ ಸೇರಿದಂತೆ ಸಾವಿರಾರು ಜನರಿಗೆ ಪುರಸಭೆಗಳು ಪ್ರಜಾತಂತ್ರಾತ್ಮಕ ವಿಧಾನದ ತರಬೇತಿ ಸಂಸ್ಥೆಗಳಾಗಿ ಪರಿಣಮಿಸಿದವು.

ಸ್ವಾತಂತ್ರ್ಯಾನಂತರ ರಚಿತವಾದ ಕಾಯಿದೆಗಳು ಈ ಸಂಸ್ಥೆಗಳನ್ನು ಸಂಪೂರ್ಣವಾಗಿ ಪ್ರಜಾತಂತ್ರಾತ್ಮಕವಾಗಿಸಿದವು. ಕರ್ನಾಟಕ ರಾಜ್ಯಕ್ಕೆ ಸೇರಿದ ವಿವಿಧ ಭಾಗಗಳಲ್ಲಿ ವಿಭಿನ್ನ ಕಾಯಿದೆಗಳು ಜಾರಿಯಲ್ಲಿದ್ದುದರಿಂದ ಅವುಗಳಿಗೆ ಏಕಶಾಸನ ಸ್ವರೂಪ ನೀಡುವ ಪ್ರಯತ್ನ ನಡೆಯಿತು. 1964ರಲ್ಲಿ ಮೈಸೂರು ಪುರಸಭೆಗಳ ಕಾಯಿದೆ ರಚನೆಯಾಗಿ 1965ರ ಏಪ್ರಿಲ್ 1 ರಿಂದ ಜಾರಿಗೆ ಬಂತು.

ಪುರಸಭೆಗಳಲ್ಲಿರಬೇಕಾದ ಸದಸ್ಯರ ಸಂಖ್ಯೆಯನ್ನು ಜನಸಂಖ್ಯೆಯ ಆಧಾರದ ಮೇಲೆ ನಿಗದಿಗೊಳಿಸಲಾಗಿದೆ. 20,000ಕ್ಕಿಂತ ಹೆಚ್ಚು ಜನಸಂಖ್ಯೆ ಇರದ ಪಟ್ಟಣಗಳಲ್ಲಿ ಹದಿನೈದು ಜನ ಸದಸ್ಯರಿರತಕ್ಕದ್ದೆಂದೂ 20,000ಕ್ಕಿಂತ ಹೆಚ್ಚಿರುವ ಕಡೆ ಪ್ರತಿ 10,000 ಜನಸಂಖ್ಯೆಗೆ ನಾಲ್ವರು ಸದಸ್ಯರಂತೆ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸತಕ್ಕದ್ದೆಂದೂ ಗೊತ್ತುಪಡಿಸಲಾಗಿದೆ. ಎಲ್ಲ ಪುರಸಭೆಗಳನ್ನೂ ಚುನಾವಣಾ ವಿಭಾಗಗಳಾಗಿ ವಿಂಗಡಿಸಿ ನಿರ್ದಿಷ್ಟ ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲು ಸ್ಥಾನಗಳಿವೆ. ಪುರಸಭಾ ಸದಸ್ಯತ್ವದ ಕಾಲಾವಧಿ ನಾಲ್ಕು ವರ್ಷಗಳು. ಪುರಸಭಾ ಸದಸ್ಯರು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ತಮ್ಮಲ್ಲೇ ಚುನಾಯಿಸಿಕೊಳ್ಳಬೇಕು. ಹೀಗೆ ಚುನಾಯಿತರಾದ ಪದಾಧಿಕಾರಿಗಳ ಅವಧಿ ನಾಲ್ಕು ವರ್ಷಗಳು. ಆದರೆ ಯಾವುದೇ ಪುರಸಭೆಯೂ ಪ್ರತಿವರ್ಷವೂ ಅಧ್ಯಕ್ಷ–ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಅಪೇಕ್ಷಿಸಿದರೆ ಅದು ಹಾಗೆ ಮಾಡಬಹುದು.

ಪ್ರತಿಯೊಂದು ಪುರಸಭೆಯೂ ಸ್ಥಾಯೀ ಸಮಿತಿಯನ್ನು ಹೊಂದಿರುತ್ತದೆ. ಈ ಸಮಿತಿಯನ್ನು ಚುನಾವಣೆಯ ಮೂಲಕ ರಚಿಸಬೇಕು. ಇದರ

ಅಧ್ಯಕ್ಷತೆಯನ್ನು ಪುರಸಭಾ ಅಧ್ಯಕ್ಷರು ಅಥವಾ ಅವರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ವಹಿಸತಕ್ಕದ್ದು. ನಿರ್ದಿಷ್ಟ ಉದ್ದೇಶಗಳಿಗಾಗಿ ಪುರಸಭೆ ಇತರ ಸಮಿತಿಗಳನ್ನು ರಚಿಸಿಕೊಳ್ಳಬಹುದು. ಪ್ರತಿ ಪುರಸಭೆಗೂ ಒಬ್ಬ ಮುಖ್ಯಾಧಿಕಾರಿಗಳಿರುತ್ತಾರೆ. ನಗರಸಭೆಗಳಿಗೆ ಕಮೀಷನರ್ ಇರುತ್ತಾರೆ. ಇವರು ಅಧ್ಯಕ್ಷರ ನಿರ್ದೇಶನದ ಮೇರೆಗೆ ಪುರಸಭೆಯ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುತ್ತಾರೆ; ಆಡಳಿತ ನಿರ್ವಹಣೆ ಮಾಡುತ್ತಾರೆ. ಸ್ಥಾಯೀ ಸಮಿತಿಗೆ ಪುರಸಭಾ ಅಧಿಕಾರಿಯೊಬ್ಬರನ್ನು ಕಾರ್ಯದರ್ಶಿಯಾಗಿ ನೇಮಿಸಬಹುದು. ಪುರಾಸಭಾ ಅಧ್ಯಕ್ಷರಿಗೆ ಪುರಸಭೆಯ ಆಡಳಿತದ ಮೇಲ್ವಿಚಾರಣೆ ಮಾಡುವ ಮತ್ತು ಎಲ್ಲ ಅಧಿಕಾರಿಗಳನ್ನೂ ನೌಕರರನ್ನೂ ನಿಯಂತ್ರಿಸುವ ಅಧಿಕಾರವಿದೆ.

ಪುರಸಭೆಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಪುರಸಭೆಗಳು, ನಗರಸಭೆಗಳು, ನಗರ ಕಾರ್ಪೋರೇಷನ್‌ಗಳೆಂದು ವಿಂಗಡಿಸಲಾಗಿದೆ. ಒಂದು ಲಕ್ಷಕ್ಕೆ ಮೀರಿದ ಜನಸಂಖ್ಯೆ ಇರುವ ಪಟ್ಟಣಗಳನ್ನು ನಗರಗಳೆಂದು ಪರಿಗಣಿಸಲಾಗಿದೆ.

ಪಟ್ಟಣ ಸಂಸ್ಕೃತಿ ಬೆಳೆಯುತ್ತಿರುವ ಮತ್ತು ಪಟ್ಟಣ ಪ್ರದೇಶಗಳು ಏಕಪ್ರಕಾರವಾಗಿ ಅಭಿವೃದ್ಧಿಗೊಳ್ಳುತ್ತಿರುವ ಈ ಕಾಲದಲ್ಲಿ ಪುರಸಭೆಗಳ ಪಾತ್ರ ಹಿರಿದಾಗಿದೆ. ಪಟ್ಟಣ ಜೀವನದ ಸಮಸ್ಯೆಗಳನ್ನು ನಿವಾರಿಸುವ ಮತ್ತು ನಾಗರಿಕ ಸೌಲಭ್ಯಗಳನ್ನು ಕಲ್ಪಿಸುವ ಹೊಣೆ ಇವಕ್ಕಿದೆ. ಇದರಿಂದಾಗಿ ಇವುಗಳ ಕಾರ್ಯಭಾರ ದಿನೇ ದಿನೇ ಹೆಚ್ಚುತ್ತಿದೆ. ರಸ್ತೆಗಳು, ಕುಡಿಯುವ ನೀರು, ಸ್ಥಳೀಯ ಮಾರುಕಟ್ಟೆಗಳ ನಿರ್ಮಾಣ ಮತ್ತು ನಿಯಂತ್ರಣ, ದೀಪವ್ಯವಸ್ಥೆ, ಚರಂಡಿ ವ್ಯವಸ್ಥೆ, ಬಸ್ ನಿಲ್ದಾಣಗಳು ಮತ್ತು ಉದ್ಯಾನವನಗಳ ನಿರ್ಮಾಣ, ಸಾರ್ವಜನಿಕ ಗ್ರಂಥಾಲಯಗಳು ಮತ್ತು ವಾಚನಾಲಯಗಳ ಸ್ಥಾಪನೆ, ನೈರ್ಮಲ್ಯ ಸಂರಕ್ಷಣೆ ಮೊದಲಾದ ಕಾರ್ಯಗಳನ್ನು ಪುರಸಭೆಗಳು ನಡೆಸುತ್ತಿವೆ. ಕೆಲವೆಡೆ ಆಸ್ಪತ್ರೆಗಳನ್ನು, ಶಾಲಾ ಕಾಲೇಜುಗಳನ್ನು ನಡೆಸುತ್ತಿವೆ. ರಾಜ್ಯದಲ್ಲಿದ್ದ ಪುರಸಭೆಗಳು ಮತ್ತು ನಗರ ಸಭೆಗಳ ಸಂಖ್ಯೆ 226 (1974–75). ಇಷ್ಟು ವ್ಯಾಪಕ ಕಾರ್ಯಭಾರವಿರುವ ಸಂಸ್ಥೆಗಳಿಗೆ ಆರ್ಥಿಕ ಸಂಪನ್ಮೂಲಗಳ ವ್ಯವಸ್ಥೆ ಇದೆ. ಅವು ತೆರಿಗೆ ವಿಧಿಸಲು, ಸುಂಕದ ದರಗಳನ್ನು ವಿಧಿಸಲು, ಲೈಸೆನ್ಸ್ ಶುಲ್ಕ, ಜಾಹೀರಾತುತೆರಿಗೆ, ಆಸ್ತಿತೆರಿಗೆ ಮೊದಲಾದ ತೆರಿಗೆಗಳನ್ನು ಹಾಕಲು ಹಕ್ಕುಳ್ಳವಾಗಿವೆ. ವಾಹನಗಳು, ಸಂತೆ, ವ್ಯಾಪಾರವ್ಯವಹಾರ ಮೊದಲಾದವುಗಳ ಮೇಲೂ ತೆರಿಗೆ ಹಾಕಬಹುದು. ಪುರಸಭೆಗಳ ಮುಖ್ಯ ಆದಾಯಮೂಲವಾಗಿದ್ದ ಆಕ್ಟ್ರಾಯ್ ಸುಂಕವನ್ನು ತಿದ್ದುಪಡಿಸಲಾಗಿದೆ (1979). ಸರ್ಕಾರ ಇದಕ್ಕೆ ಪರಿಹಾರವಾಗಿ ಸಹಾಯಧನ ಕೊಡುತ್ತಿದೆ. ಪುರಸಭೆಗಳು ಮುಂಗಡಪತ್ರ ಸಿದ್ಧಿಪಡಿಸಿ ವಾರ್ಷಿಕ ವರದಿ ತಯಾರಿಸಬೇಕು. ಪೌರಾಡಳಿತಕ್ಕೆ ಸಚಿವಾಲಯದಲ್ಲಿ ಪ್ರತ್ಯೇಕ ಖಾತೆ ಇದೆ. 1974ರ ಪುರಸಭಾ ಕಾಯಿದೆ 1977ರಲ್ಲಿ ಕರ್ನಾಟಕ ಪುರಸಭಾ ನಿಯಮಗಳು ಎಂಬ ತಿದ್ದುಪಡಿ ತರಲಾಗಿದೆ. ಇದರಲ್ಲಿ ಪುರಸಭೆಯ ಸಭಾ ಕಲಾಪಗಳನ್ನು ನಡೆಸುವ ಬಗ್ಗೆ, ಸ್ಥಾಯೀಸಮಿತಿ ಚುನಾವಣೆ ಮತ್ತು ಕಾರ್ಯ ನಿರ್ವಹಣೆಗಳ ಬಗ್ಗೆ ನಿಯಮಗಳನ್ನು ರಚಿಸಲಾಗಿದೆ.

**ನಗರಸಭೆ ಮತ್ತು ನಗರಪಾಲಿಕೆಗಳು:** ಐವತ್ತು ಸಾವಿರ ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶ ನಗರಸಭೆಯ ಕಕ್ಷೆಗೆ ಬರುತ್ತದೆ. ನಗರದ ಆಡಳಿತದ ಹೊಣೆ ಈ ನಗರಸಭೆಗೆ ಸೇರಿದ್ದು. ಆಯಾ ನಗರದ ಜನಸಂಖ್ಯೆಗನುಗುಣವಾಗಿ ಈ ನಗರ ಸಭೆಗಳಲ್ಲಿ ಹದಿನೈದಕ್ಕೆ ಕಡಿಮೆಯಿಲ್ಲದೆ, ಮೂವತ್ತೈದಕ್ಕೆ ಮೀರದ ಸದಸ್ಯರಿರುವರು. ಅನುಸೂಚಿತ ವರ್ಗದವರ ಜನಸಂಖ್ಯೆಗನುಗುಣವಾಗಿ ಸದಸ್ಯ ಸ್ಥಾನಗಳಲ್ಲಿ ಮೀಸಲಾತಿ ಇರುತ್ತದೆ. ಎರಡು ಸ್ಥಾನಗಳು ಮಹಿಳೆಯರಿಗಾಗಿ ಮೀಸಲಾಗಿರುತ್ತವೆ. ನಗರಸಭೆಯ ಚುನಾವಣೆ ನಾಲ್ಕು ವರ್ಷಕ್ಕೊಮ್ಮೆ ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ನಡೆಯುತ್ತದೆ. ಆಯಾ ನಗರಗಳಿಂದ ವಿಧಾನ ಸಭೆಯ ಮತದಾರರ ಪಟ್ಟಿಯಲ್ಲಿ ಸೇರಿರುವ ಮತದಾರರೇ ನಗರಸಭೆಯ ಮತದಾರರ ಪಟ್ಟಿಗೆ ಸೇರುವರು. ನಗರಸಭೆಯ ಮುಖ್ಯ ಅಧಿಕಾರಿಗಳು ಇಂಥ ಪಟ್ಟಿಯನ್ನು ಸಿದ್ಧಪಡಿಸುವರು. ನಗರಸಭೆಯ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಚುನಾಯಿಸಿಕೊಳ್ಳುವರು. ಮುಖ್ಯ ಆಡಳಿತಗಾರರಾದ ಕಮೀಷನರ್ ಅಥವಾ ಚೀಫ್ ಎಗ್ಸಿಕ್ಯುಟಿವ್ ಆಫೀಸರ್ ಎಂಬ ಅಧಿಕಾರಿಗಳನ್ನು ಸರ್ಕಾರವೇ ನೇಮಿಸುವುದು.

ನಗರದ ಪೌರರ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬರುವುದು ನಗರಸಭೆಯ ಆದ್ಯ ಜವಾಬ್ದಾರಿ. ರಸ್ತೆ, ಚರಂಡಿಗಳ ಸೂಕ್ತ ವ್ಯವಸ್ಥೆ, ನೈರ್ಮಲ್ಯ ರಕ್ಷಣೆ, ಮನೆಗಳ ನಿರ್ಮಾಣ, ನಗರದ ಸೌಂದರ್ಯ ರಕ್ಷಣೆ, ಮಾರುಕಟ್ಟೆಗಳು, ಭೋಜನ ಮತ್ತು ಫಲಾಹಾರ ಮಂದಿರಗಳು, ಅಂಗಡಿಗಳು ಜನರ ಆರೋಗ್ಯಕ್ಕೆ ಹಾನಿ ಆಗದಂತೆ ನಿಯಂತ್ರಿಸುವುದು, ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆಯ ಕ್ರಮವನ್ನು ತೆಗೆದುಕೊಳ್ಳುವುದು, ಶುದ್ಧ ಕುಡಿಯುವ ನೀರನ್ನು ಒದಗಿಸುವುದು, ಶ್ಮಶಾನ ಮೊದಲಾದವುಗಳಿಂದ ಜನರ ಆರೋಗ್ಯಕ್ಕೆ ಧಕ್ಕೆ ಉಂಟಾಗದಂತೆ ನೋಡಿಕೊಳ್ಳುವುದು– ಇವೇ ಮೊದಲಾದ ಅಗತ್ಯ ಕರ್ತವ್ಯಗಳನ್ನು ನಗರಸಭೆ ಪಾಲಿಸುತ್ತದೆ.

ಈಗ ಕರ್ನಾಟಕದಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿ–ಧಾರವಾಡ, ಮೈಸೂರು, ಬೆಳಗಾಂವಿ ಸೇರಿದಂತೆ ಅನೇಕ ನಗರಪಾಲಿಕೆಗಳಿವೆ. ಇವುಗಳಿಗೆ ಕಮಿಷನರ್ ಎಂಬ ಆಡಳಿತ ಅಧಿಕಾರಿ ಹುದ್ದೆ ಸೃಷ್ಟಿಸಲಾಗಿದೆ. ಬೆಂಗಳೂರು ನಗರಸಭೆ ಶಾಸನ 1949ರಲ್ಲಿ ಜಾರಿಗೆ ಬಂತು. ಇದುವರೆಗೆ ಆ ಶಾಸನದಲ್ಲಿ ಕೆಲವು ತಿದ್ದುಪಡಿಗಳಾಗಿವೆ. ಇದರ ಮೇಲೆ ಸರ್ಕಾರದ ನಿಯಂತ್ರಣವಿರುತ್ತದೆ. ಇತ್ತೀಚೆಗೆ ನಗರಸಭೆಯ ಶಾಸನಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಸದಸ್ಯತ್ವದಲ್ಲಿ ಮೀಸಲಾತಿ ನಿಯಮಗಳು ನಗರಸಭೆ ಮತ್ತು ನಗರ ಪಾಲಿಕೆಗಳಿಗೂ ಅನ್ವಯಿಸುತ್ತವೆ. ಇವು ತಮ್ಮದೇ ಆದ ಆಯವ್ಯಯ ರೂಪಿಸಿಕೊಂಡು ಕಾರ್ಯ ನಿರ್ವಹಿಸುತ್ತವೆ. ಅಧ್ಯಕ್ಷ ಉಪಾಧ್ಯಕ್ಷರು ಸದಸ್ಯರಿಂದ ಆಯ್ಕೆಯಾಗುತ್ತಾರೆ. ಇವುಗಳಿಗೆ ವಿವಿಧ ಸ್ಥಾಯೀ ಸಮಿತಿಗಳಿರುತ್ತವೆ. ನಗರ ಪಾಲಿಕೆಗಳ ಚುನಾಯಿತ ಮುಖ್ಯರನ್ನು ಮೇಯರ್ ಮತ್ತು ಉಪಮೇಯರ್ ಎಂದು ಕರೆಯಲಾಗಿದೆ.

**ನಗರಾಭಿವೃದ್ಧಿ ಮಂಡಳಿ:** ನಗರಗಳು ವ್ಯವಸ್ಥಿತ ರೀತಿಯಲ್ಲಿ ಬೆಳೆಯಬೇಕಾದರೆ ನಗರ ಬಡಾವಣಾ ಕಾರ್ಯಗಳ ಹಾಗೂ ಕೊಳಚೆ ಪ್ರದೇಶಗಳ ನಿರ್ಮೂಲನಾಕಾರ್ಯಗಳ ಜವಾಬ್ದಾರಿಯನ್ನು ಹೊರಬಲ್ಲ ಒಂದು ವಿಶಿಷ್ಟ ಸಂಸ್ಥೆ ಆವಶ್ಯಕ. ಈ ದೃಷ್ಟಿಯಿಂದ ಪ್ರಕೃತ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ನಗರಾಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಗಿದೆ. ಈ ಬಗ್ಗೆ 1903ರಲ್ಲಿಯೇ ಮೈಸೂರು ನಗರಾಭಿವೃದ್ಧಿ ಶಾಸನದ ಪ್ರಕಾರ ಆಯಾ ನಗರಸಭೆಗಳ ಪ್ರಾರ್ಥನೆಯ ಅನುಸಾರವಾಗಿ ಅಥವಾ ಸ್ವ–ಇಚ್ಛೆಯಿಂದ ಸರ್ಕಾರ ಯಾವ ನಗರದ ಅಭಿವೃದ್ಧಿಗಾಗಿಯೂ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಬಹುದು. ಇಂಥ ಮಂಡಳಿಗಳ ಮುಖ್ಯ ಜವಾಬ್ದಾರಿ ನಗರದ ಬಡಾವಣೆಗಳು ಯೋಜನಾನುಸಾರ ಬೆಳೆಯುವಂತೆ ನೋಡಿಕೊಳ್ಳುವುದು. ಬೃಹತ್ ನಗರಗಳಲ್ಲಿರುವ ಕೊಳಚೆ ಪ್ರದೇಶಗಳನ್ನು ಉತ್ತಮಪಡಿಸಿ, ಅಲ್ಲಿ ವಾಸಿಸುವ ಜನರಿಗೆ ಪ್ರತ್ಯೇಕ ವಸತಿಸೌಕರ್ಯವನ್ನು ಕಲ್ಪಿಸುವುದೂ ಈ ಮಂಡಳಿಯ ಜವಾಬ್ದಾರಿ, ನಗರಾಭಿವೃದ್ಧಿ ಮಂಡಳಿಯ ರಚನೆಯು ಸರ್ಕಾರದಿಂದ ನೇಮಿತರಾದ ಅಧ್ಯಕ್ಷರು, ನಗರಸಭೆಯ ಉಪಾಧ್ಯಕ್ಷರು,

ನಗರ ಕಮಿಷನರ್ ಅಥವಾ ಮುಖ್ಯ ಕಾರ್ಯಾಧಿಕಾರಿ, ಒಬ್ಬರು ಲೋಕೋಪಯೋಗಿ ಇಲಾಖೆಯ ಎಂಜಿನಿಯರ್ (ಎಗ್ಸಿಕ್ಯುಟಿವ್ ಎಂಜಿನಿಯರ್ ಅಂತಸ್ತಿನವರು), ಜಿಲ್ಲಾ ಆರೋಗ್ಯಾಧಿಕಾರಿಗಳ ಅಂತಸ್ತಿನ ಒಬ್ಬ ಆರೋಗ್ಯಾಧಿಕಾರಿ, ನಗರಸಭೆಯಿಂದ ಚುನಾಯಿತರಾದ ಮೂರು ಸದಸ್ಯರು, ಸರ್ಕಾರದಿಂದ ನೇಮಿತರಾದ ಮೂವರು ಸದಸ್ಯರನ್ನು ಒಳಗೊಂಡಿರುತ್ತದೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾಂವಿಯಂತಹ ನಗರಗಳಿಗೆ ನಗರ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ಊರುಗಳಿಗೆ ನಗರ ಯೋಜನಾ ಪ್ರಾಧಿಕಾರಗಳು ಅಸ್ತಿತ್ವಕ್ಕೆ ಬಂದಿವೆ.

(ಸಿ.ವಿ.ಆರ್.;ಡಿ.ಎಸ್.ಜಿ.;ಎ.ಎಸ್.ಐ.)

**ಸ್ನೇಹಲತಾ ರೆಡ್ಡಿ:** 1935–77. ನೃತ್ಯ, ನಾಟಕ ಹಾಗೂ ಸಿನಿಮಾ ಕಲೆಗಳ ಪ್ರಸಿದ್ಧ ಕಲಾವಿದೆ. ಸಮಾಜ ಸೇವಕಿ. ಕ್ರೈಸ್ತ ಕುಟುಂಬ ದಲ್ಲಿ ಏಡನ್ ನಗರದಲ್ಲಿ ಜನಿಸಿದರು. ಇವರ ತಂದೆ ತಮಿಳುನಾಡಿನವರು. ಅವರು ಬ್ರಿಟಿಷ್ ಸೈನ್ಯದಲ್ಲಿ ಕರ್ನಲ್ ಹುದ್ದೆಯಲ್ಲಿದ್ದರು. ತಾಯಿ ಬಂಗಾಲಿ. ಸ್ನೇಹಲತಾ ಶಾಲಾ ಶಿಕ್ಷಣವನ್ನು ಮಧ್ಯಪ್ರದೇಶದ ಜಬ್ಬಲ್‌ಪುರದಲ್ಲೂ ಕಾಲೇಜು ವ್ಯಾಸಂಗವನ್ನು ಮದರಾಸಿನ ಮೇರಿ ಕಾಲೇಜಿನಲ್ಲೂ ನಡೆಸಿ ಬಿ.ಎ. ಪದವಿ ಪಡೆದರು. ಆಂಧ್ರಕವಿ ಹಾಗೂ ಕಲಾವಿದ ತಿಕ್ಕವರಪು ಪಟ್ಟಾಭಿರಾಮ ರೆಡ್ಡಿಯವರನ್ನು 1947ರಲ್ಲಿ ವಿವಾಹವಾದರು. ಇವರಿಗೆ ಇಬ್ಬರು ಮಕ್ಕಳು; ನಂದನಾ ಮಗಳು, ಕೊನಾರ್ಕ ಮನೋಹರ್ ಮಗ.

ಸ್ನೇಹಲತಾ ಅವರಿಗೆ ಬಾಲ್ಯದಿಂದಲೂ ನೃತ್ಯಸಂಗೀತಗಳಲ್ಲಿ ಆಸಕ್ತಿಯಿತ್ತು. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಭರತನಾಟ್ಯದಲ್ಲಿ ಹೆಸರುಗಳಿಸಿದ್ದರು. ಪಾಶ್ಚಾತ್ಯ ನರ್ತನ ವಿಧಾನದಲ್ಲಿಯೂ ಇವರಿಗೆ ಅಪಾರ ಒಲವಿತ್ತು. ಸ್ಪ್ಯಾನಿಷ್ ನೃತ್ಯ ಕಲಿಯಲು ಇವರು 1951ರಲ್ಲಿ ಸ್ಪೇನ್ ದೇಶಕ್ಕೆ ಹೋಗಿ ಅಲ್ಲಿಯ ನಾಟ್ಯಶಾಸ್ತ್ರಜ್ಞ ರಿಯಾಲಿಯೋ ಎಂಬಾತನ ಅಕಾಡೆಮಿಯಲ್ಲಿ ಒಂದು ವರ್ಷ ಶಿಕ್ಷಣ ಪಡೆದರು. ನೃತ್ಯಪ್ರದರ್ಶನದಲ್ಲಿ ಅನೇಕ ಬಹುಮಾನಗಳನ್ನು ಗಳಿಸಿದರು. ಮದರಾಸಿನಲ್ಲಿದ್ದಾಗ ಮದರಾಸ್ ಪ್ಲೇಯರ್ಸ್ ನಾಟಕ ಸಂಸ್ಥೆಯನ್ನೂ ಬೆಂಗಳೂರಿನಲ್ಲಿ ಬೆಂಗಳೂರು ಥಿಯೇಟರ್ಸ್ ಕಲಾವಿಲಾಸಿ ನಾಟಕ ಸಂಸ್ಥೆಯನ್ನೂ ಸ್ಥಾಪಿಸಿ ಯುವಜನರಿಗೆ ಅಭಿನಯ, ನೃತ್ಯಗಳಲ್ಲಿ ಶಿಕ್ಷಣ ನೀಡಿದರು. ಸ್ವತಃನಾಟಕಗಳಲ್ಲೂ ಅಭಿನಯಿಸುತ್ತಿದ್ದುದಲ್ಲದೆ, ಅವುಗಳನ್ನು ನಿರ್ದೇಶಿಸುತ್ತಿದ್ದರು.

ಇವರಂತೆಯೇ ಕಲಾಭಿಮಾನಿಗಳಾದ ಇವರ ಪತಿ ಪಟ್ಟಾಭಿರಾಮರೆಡ್ಡಿಯವರು ಶಾಂತಿನಿಕೇತನ, ಕೋಲ್ಕತ್ತ, ಅಮೆರಿಕ ಮೊದಲಾದ ಕಡೆ ವ್ಯಾಸಂಗ ಮಾಡಿ ಸಂಗೀತ, ಚಲನಚಿತ್ರ ಮೊದಲಾದ ಕಲೆಗಳಲ್ಲಿ ನುರಿತವರಾಗಿದ್ದರು. ಕಲೆ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿಯ ಇವರ ಚಟುವಟಿಕೆಗಳಿಂದಾಗಿ ಇವರಿಗೆ ಅನೇಕ ಪ್ರಸಿದ್ಧ ಬರೆಹಗಾರರು, ಸಾಹಿತಿಗಳು, ಕಲಾವಿದರು, ರಾಜಕೀಯ ಧುರೀಣರೊಡನೆ ಸಂಪರ್ಕವಿತ್ತು. ಚಲನಚಿತ್ರದ ಬಗ್ಗೆ ಹೆಚ್ಚಿನ ಒಲವನ್ನು ಹೊಂದಿದ್ದ ಸ್ನೇಹಲತಾ ಅವರು ತಮ್ಮ ಪತಿ ತಯಾರಿಸಿದ ಸಂಸ್ಕಾರ (1970), ಚಂಡಮಾರುತ (1978) ಎಂಬ ಚಿತ್ರಗಳಲ್ಲಿ ಅಭಿನಯಿಸಿದ್ದರು. ಸಂಸ್ಕಾರದ ನಾಯಕಿ ಚಂದ್ರಿಯ ಪಾತ್ರದಲ್ಲಿನ ಇವರ ಅಭಿನಯ ಉನ್ನತಮಟ್ಟದ್ದಾಗಿತ್ತು. ಈ ಚಿತ್ರಕ್ಕೆ 1970ರಲ್ಲಿ ರಾಷ್ಟ್ರೀಯ ಅತ್ಯುತ್ತಮ ಚಿತ್ರವೆಂಬ ಪ್ರಶಸ್ತಿ (ಸುವರ್ಣ ಪದಕ) ಲಭಿಸಿತು. ಸ್ನೇಹಲತಾ ಅವರು ಪತಿಯೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದಾಗ ಇವರ ಮನೆ ನಾಟಕಕಾರರು, ಕಲಾವಿದರು, ಲೇಖಕರು, ರಾಜಕಾರಣಿಗಳು ಹಾಗೂ ವಿದೇಶಿ ಸಾಂಸ್ಕೃತಿಕ ತಂಡಗಳ ಸದಸ್ಯರಿಗೆ ಆಶ್ರಯತಾಣವಾಗಿತ್ತು. ಇವರಿಗೆ ಲೋಹಿಯಾ ವಾದದಲ್ಲಿ ಅಪಾರ ಒಲವಿತ್ತು. ಬಡವರ ಹಾಗೂ ಮಹಿಳೆಯರ ಅಭ್ಯುದಯಕ್ಕಾಗಿ ಇವರು ಬಹುವಾಗಿ ದುಡಿದರು. ಸಮಾಜವಾದದಲ್ಲಿ ದೃಢನಂಬಿಕೆಯಿಟ್ಟಿದ್ದ ಇವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ (1975) ಸೆರೆಯಾದರು. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಒಂಬತ್ತು ತಿಂಗಳ ಕಾಲ (1976ರ ಮೇ 1 ರಿಂದ 1977ರ ಜನವರಿ 13) ಸೆರೆವಾಸದಲ್ಲಿದ್ದರು. ಸೆರೆಯಲ್ಲಿದ್ದಾಗ ಇವರು ಬಂಧಿತ ಮಹಿಳೆಯರ ಸೆರೆವಾಸದ ಕಠಿಣ ಪರಿಸ್ಥಿತಿಯನ್ನು ನೀಗಲು 9 ದಿನ ಉಪವಾಸವಿದ್ದು ಅವರಿಗೆ ಒಳ್ಳೆಯ ಆಹಾರ ದೊರಕುವಂತೆ ಮಾಡಿದರು. ಇವರಿಗೆ ಆಸ್ತಮ ವ್ಯಾಧಿ ಇದ್ದು ಸೆರೆವಾಸದಲ್ಲಿದ್ದಾಗ ಸರಿಯಾದ ಆರೋಗ್ಯರಕ್ಷಣೆ ಇಲ್ಲದೆ ರೋಗ ಉಲ್ಬಣಿಸಿ ದೇಹಸ್ಥಿತಿ ಕೆಟ್ಟಿತು. ಅನಾರೋಗ್ಯ, ಪತಿ ಹಾಗೂ ಮಕ್ಕಳನ್ನು ಕಾಣದಂತಹ ಪರಿಸ್ಥಿತಿ ಇವರ ವ್ಯಥೆಯನ್ನು ಹೆಚ್ಚಿಸಿತು; ಸೆರೆಯಿಂದ ಬಿಡುಗಡೆಯಾದ ಕೆಲವೇ ದಿನಗಳಲ್ಲಿ 1977 ಜನವರಿ 25ರಂದು ನಿಧನರಾದರು.

ಸ್ನೇಹಲತಾ ಅವರು ಸಾಹಿತ್ಯದಲ್ಲಿ ಆಸಕ್ತಿಯುಳ್ಳವರಾಗಿದ್ದು, ಅನೇಕ ಲೇಖನಗಳನ್ನು ಬರೆದಿದ್ದಾರೆ. ತಮ್ಮ ಸೆರೆವಾಸದ ಘೋರ ಅನುಭವಗಳನ್ನು ಜೈಲಿನ ದಿನಚರಿ ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಇವರನ್ನು ಕುರಿತು ತೆಲುಗಿನಲ್ಲಿ ಸ್ನೇಹಾಭಿರಾಮಂ (1978) ಮತ್ತು ಕನ್ನಡದಲ್ಲಿ ಸ್ನೇಹಲತಾ (1977) ಎಂಬ ಎರಡು ಸಂಸ್ಮರಣ ಸಂಪುಟಗಳು ಪ್ರಕಟವಾಗಿವೆ.(ವಿ.ಜಿ.ಕೆ.)

**ಸ್ವರ್ಣಾ:** ಉಡುಪಿ ಜಿಲ್ಲೆಯ ಒಂದು ಚಿಕ್ಕ ನದಿ. ಪಶ್ಚಿಮಘಟ್ಟಗಳ ಸಾಲಿನಲ್ಲಿ ಹುಟ್ಟುವ ಈ ನದಿ ಮೊದಲು ಕಾರ್ಕಳ ತಾಲ್ಲೂಕಿನಲ್ಲಿ ಹರಿದು ಅನಂತರ ಉಡುಪಿ ತಾಲ್ಲೂಕಿನ ಆಗ್ನೇಯ ಎಲ್ಲೆಯ ಮೂಲಕ ತಾಲ್ಲೂಕನ್ನು ಪ್ರವೇಶಿಸಿ, ಹಿರಿಯಡ್ಕ ಬಜ್ಪೆಗಳ ಮಾರ್ಗವಾಗಿ ವಾಯವ್ಯದತ್ತ ಹರಿದು ಉಡುಪಿಯ ಉತ್ತರಕ್ಕೆ 13 ಕಿಮೀ ದೂರದ ಬಾರಕೂರು ಬಳಿ ಸಮುದ್ರವನ್ನು ಸೇರುತ್ತದೆ. ಇಲ್ಲಿಯೇ ಇದರ ಜೊತೆ ಸಮುದ್ರ ಸೇರುವ ಇನ್ನೊಂದು ನದಿ ಸೀತಾ. ಜೂನ್‌ನಿಂದ ಅಕ್ಟೋಬರ್‌ವರೆಗಿನ ಮಳೆಗಾಲದ ಅವಧಿಯಲ್ಲಿ ಸ್ವರ್ಣಾನದಿ ತುಂಬಿ ಹರಿಯುತ್ತದೆ. ಈ ನದಿಯ ಬಿರುಸು ಹರಿವಿನಿಂದಾಗಿ ಹಾಗೂ ನದಿಯ ತಳಭಾಗದಲ್ಲಿರುವ ಬಂಡೆಗಳಿಂದಾಗಿ ಈ ನದಿ ಸಾರಿಗೆಗೆ ಉಪಯುಕ್ತವಾಗಿಲ್ಲ. ಸಮುದ್ರ ಸೇರುವ ಸ್ಥಳದಿಂದ ಹಿಮ್ಮುಖವಾಗಿ ಸು. 19 ಕಿಮೀ ದೂರದವರೆಗೆ ಈ ನದಿಯಲ್ಲಿ ದೋಣಿಗಳ ಸಂಚಾರ ಸೌಲಭ್ಯ ಸಾಧ್ಯವಿದೆ.

(ಎಚ್.ಜಿ.)

**ಸ್ವತಂತ್ರ ಸಿದ್ದಲಿಂಗೇಶ್ವರ:** ಸು.1480. ಬಸವೇಶ್ವರರ ತರುವಾಯದ ವಚನಕಾರರಲ್ಲಿ ಪ್ರಸಿದ್ಧರಾದವರು. ತೋಂಟದ ಸಿದ್ದಲಿಂಗೇಶ್ವರರ ಪರಮ ಶಿಷ್ಯರು. ಚಾಮರಾಜನಗರ ಜಿಲ್ಲೆಯ ಹರದನಹಳ್ಳಿ (ವಾಣಿಜ್ಯಪುರ) ಇವರ ಜನ್ಮಸ್ಥಳ. ಇವರು ವಿಶೇಷ ಮಹಿಮಾನ್ವಿತರೂ ಪವಾಡಪುರುಷರೂ ಆಗಿದ್ದರೆಂದು ಐತಿಹ್ಯ. ವೀರಶೈವಧರ್ಮ ಪ್ರಸಾರಕ್ಕಾಗಿ ಇವರು ತಮ್ಮ ಗುರುಗಳಾದ ತೋಂಟದ ಸಿದ್ದಲಿಂಗೇಶ್ವರರೊಡನೆ ದೇಶಪರ್ಯಟನವನ್ನೂ ಕೈಗೊಂಡಿದ್ದಂತೆ ತಿಳಿದುಬರುತ್ತದೆ. ಕೃಷ್ಣರಾಜಪೇಟೆ ತಾಲ್ಲೂಕಿನ ಕಾಪನಹಳ್ಳಿಯ ಸಮೀಪದಲ್ಲಿರುವ ಗಜರಾಜಗಿರಿ ಇವರ ಶಿವಯೋಗಧಾಮವಾಗಿತ್ತು.

ಇದೇ ಇವರ ನಿರ್ವಾಣಸ್ಥಾನವೂ ಆಯಿತೆಂದು ತಿಳಿದುಬರುತ್ತದೆ. ಗಜರಾಜಗಿರಿಯಲ್ಲಿ ಇವರ ಗದ್ದುಗೆ ಇದೆ. ಪ್ರತಿವರ್ಷ ಮಾಘಮಾಸದಲ್ಲಿ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

ಸ್ವತಂತ್ರ ಸಿದ್ಧಲಿಂಗೇಶ್ವರರು ವಚನಗಳನ್ನೂ ಮುಕ್ತ್ಯಂಗನಾಕಂಠಮಾಲೆ, ಜಂಗಮರಗಳೆ ಎಂಬ ಕೃತಿಗಳನ್ನೂ ಬರೆದಿದ್ದಾರೆ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ಎಂಬುದು ಇವರ ವಚನಗಳ ಅಂಕಿತ. ಇದುವರೆಗೆ 430 ವಚನಗಳು ದೊರಕಿವೆ. ಈ ವಚನಗಳಲ್ಲಿ ವೀರಶೈವ ಸಿದ್ಧಾಂತ, ಯೋಗ, ಷಟ್ಸ್ಥಲಶಾಸ್ತ್ರ, ಅನುಭಾವ-ಇವೇ ಮೊದಲಾದ ವಿಷಯಗಳು ಪ್ರತಿಪಾದಿತವಾಗಿವೆ. ಕೆಲವು ಬೆಡಗಿನ ವಚನಗಳನ್ನೂ ಇವರು ಬರೆದಿದ್ದಾರೆ. ಸಾಹಿತ್ಯಕ ದೃಷ್ಟಿಯಿಂದ ಇವರ ವಚನಗಳು ಗಮನಾರ್ಹವೆನ್ನಬಹುದಾಗಿದೆ. ಇವರ ಒಂದು ಬೆಡಗಿನ ವಚನ ಈ ರೀತಿಯಿದೆ:

ಗುರು ಶಿಷ್ಯನ ಕೊಂದು ಶಿಷ್ಯನಾದನು
ಶಿಷ್ಯ ಹೋಗಿ ಮರಳಿ ಗುರುವ ಕೊಂದು ಗುರುವಾದನು
ಗುರುಶಿಷ್ಯರೊಬ್ಬರನೊಬ್ಬರು ಕೊಂದು ಇಬ್ಬರೂ ಸತ್ತರು
ಇವರಿಬ್ಬರೂ ಸತ್ತ ಠಾವದೊಬ್ಬರಿಗೂ ಕಾಣಬಾರದು
ಸತ್ತಸಾವ ಕಂಡಹೆನೆಂದು ಉಟ್ಟುದಳಿದು ಬತ್ತಲೆ ಹೋಗಿ
ತಲವಾಗಿಲ ತೆಗೆದು ನೋಡಲು ಇವರಿಬ್ಬರೂ ಒಬ್ಬನೊಳಗಳಿದು ಒಬ್ಬನೈದಾನೆ
ಇಂತಿವರಿಬ್ಬರೂ ಸತ್ತ ಸಾವನಾರಿಗೂ ಅರಿಯಬಾರದು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಕರುಣವುಳ್ಳವರಿಗಲ್ಲದೆ.

ಮುಕ್ತ್ಯಂಗನಾ ಕಂಠಮಾಲೆ 21 ವಚನಗಳಿಂದ ಕೂಡಿದ ಒಂದು ಅನುಭಾವ ಗ್ರಂಥ. ವಚನಗಳು ಮುಕ್ತಿಯ ಗೊನೆಯಂತಿದ್ದು ಮುಕ್ತ್ಯಂಗನೆಗೆ ಕಂಠಮಾಲೆಯಾಗಲು ಅರ್ಹವಾದುದರಿಂದ ಇದಕ್ಕೆ ಮುಕ್ತ್ಯಂಗನಾ ಕಂಠಮಾಲೆ ಎಂದು ಹೆಸರಿಡಲಾಗಿದೆ. ಈ ಸಂಕಲನದಲ್ಲಿ ಅತ್ಯಂತ ಗೋಪ್ಯವಾದ ವಚನಗಳಿವೆ. ಶ್ರೀ ಚೆನ್ನದೇವರೆಂಬುವರು ಇದಕ್ಕೆ ವ್ಯಾಖ್ಯಾನವೊಂದನ್ನು ಬರೆದಂತೆ ತಿಳಿದುಬರುತ್ತದೆ.

ಜಂಗಮ ರಗಳೆಯಲ್ಲಿ 108 ನುಡಿಗಳಿವೆ. ಇದರಲ್ಲಿ ಜಂಗಮದ ಮಹೋನ್ನತ ನಿಲವು ಹಾಗೂ ಹಿರಿಮೆಯನ್ನು ಪ್ರತಿಪಾದಿಸಲಾಗಿದೆ.

(ಎನ್.ಬಿ.;ಜಿ.ಎಸ್.ಪಿ.ಎಂ.)

**ಸ್ವಾತಂತ್ರ್ಯ ಸಂಗ್ರಾಮ:** ಭಾರತ ಸ್ವಾತಂತ್ರ್ಯ ಸಮರದಲ್ಲಿ ಕರ್ನಾಟಕದ ಪಾತ್ರ ಗಣನೀಯವಾದದ್ದು. ಈ ಹೋರಾಟವನ್ನು ಮೂರು ಹಂತಗಳಲ್ಲಿ ನಾವು ಕಾಣಬಹುದಾಗಿದೆ. ದೇಶೀಯ ರಾಜರು ಬ್ರಿಟಿಷರ ವಿರುದ್ಧ ಹೋರಾಡಿದ್ದು ಮೊದಲನೆಯದು. ದೇಶಪ್ರೇಮಿಗಳೂ ಸ್ವಾತಂತ್ರ್ಯಪ್ರಿಯ ವೀರ ಸರದಾರರೂ ಪಾಳೆಯಗಾರರೂ ಮತ್ತು ಇತರರು ಬ್ರಿಟಿಷರ ವಿರುದ್ಧ ಸಶಸ್ತ್ರ ಬಂಡಾಯವೆದ್ದು ಅವರ ಗುಂಪಿಗೆ ಎದೆಯೊಡ್ಡಿದ್ದು ಎರಡನೆಯದು. ಕಾಂಗ್ರೆಸ್ ಮತ್ತು ಗಾಂಧೀಜಿಯವರ ನೇತೃತ್ವದ ಜನಸಾಮಾನ್ಯರ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟ ಮೂರನೆಯದೆನ್ನಬಹುದು.

ಬ್ರಿಟಿಷರ ದತ್ತುಸ್ವೀಕಾರ ಕಾಯಿದೆ, ಸಹಾಯಕ ಸೈನ್ಯ ಪದ್ಧತಿ ಮತ್ತು ಅವರ ಒಡೆದು ಆಳುವ ಕುಟಿಲನೀತಿಯಿಂದ ಭಾರತದ ಎಲ್ಲ ರಾಜ್ಯಗಳನ್ನೂ ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದರೂ ಅದರಲ್ಲಿ ಕೆಲವೊಂದು ರಾಜ್ಯಗಳು ಅವರ ಹಿಡಿತಕ್ಕೆ ಸಿಕ್ಕಿರಲಿಲ್ಲ. ಬ್ರಿಟಿಷರ ರಾಜ್ಯದಾಹ ಮತ್ತು ಮತ್ತು ಆಕ್ರಮಣನೀತಿಯೇ ಈ ಹೋರಾಟಗಳಿಗೆ ಮೂಲ. ದೇಶೀಯ ರಾಜರು ತಮ್ಮ ರಾಜ್ಯ ಮತ್ತು ಹಕ್ಕುಗಳನ್ನು ಕಾಯ್ದುಕೊಳ್ಳಬೇಕಾಗಿ ಬಂದಾಗ ಬ್ರಿಟಿಷರ ವಿರುದ್ಧ ಹೋರಾಡಬೇಕಾಯಿತು. ಅವರಲ್ಲಿ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರನ್ನು ನಾವು ಪ್ರಥಮವಾಗಿ ಗಮನಿಸಬೇಕಾಗಿದೆ. ದಿನದಿನಕ್ಕೆ ಬೆಳೆಯುತ್ತಿದ್ದ ಬ್ರಿಟಿಷರ ಬಲವನ್ನು ಗಮನಿಸಿದ ಹೈದರ್ ಮರಾಠರ ಮತ್ತು ಹೈದರಾಬಾದಿನ ನಿಜಾಮನ ಸಹಕಾರದೊಂದಿಗೆ ಕೆಲವು ಸಾರಿ ಹೋರಾಡಿದ. ಆದರೆ ಮರಾಠರೂ ನಿಜಾಮನೂ ಬ್ರಿಟಿಷರ ಕಡೆಯೇ ಸೇರಿಹೋದದ್ದು ಸ್ವಾತಂತ್ರ್ಯ ಸಂಗ್ರಾಮದ ದಿಕ್ಕನ್ನೇ ಬದಲಿಸಿತೆನ್ನಬಹುದು. ಹೈದರನ ಅಕಾಲಮರಣ ಬ್ರಿಟಿಷರಿಗೆ ಅನುಕೂಲಪರಿಸ್ಥಿತಿಯಾಯಿತು. ಟಿಪ್ಪುಸುಲ್ತಾನ್ ತಂದೆಯಂತೆಯೇ ಹೋರಾಟವನ್ನು ಮುಂದುವರಿಸಿದ. ಆದರೆ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಆತ ಮರಣವನ್ನಪ್ಪಿದ (1799). ಅವನ ಸಾವಿನೊಂದಿಗೆ ಅಂದಿನ ಮೈಸೂರು ರಾಜ್ಯ ಹರಿದು ಹಂಚಿಹೋಯಿತು.

ಮುಂದೆ ಕರ್ನಾಟಕದಲ್ಲಿ ಸಶಸ್ತ್ರ ಬಂಡಾಯದ ಹೋರಾಟವನ್ನು ಕಾಣುತ್ತೇವೆ. ಶಿವಮೊಗ್ಗ ಜಿಲ್ಲೆಯ ಚನ್ನಗಿರಿಗೆ ಸೇರಿದ ಶೂರ ಧೋಂಡಿಯ ವಾಘ 1780ರಲ್ಲಿ ಹೈದರನ ಸೈನ್ಯ ಸೇರಿ ತರಬೇತಿಪಡೆದು ಓಡಿಹೋಗಿದ್ದವನು ಟಿಪ್ಪುವಿನ ಆಹ್ವಾನಕ್ಕೆ ಕಿವಿಗೊಟ್ಟು ಮತ್ತೆ ಶ್ರೀರಂಗಪಟ್ಟಣಕ್ಕೆ ಬಂದಾಗ ಬಲಾತ್ಕಾರದಿಂದ ಮುಸಲ್ಮಾನನಾದ. 1799ರಲ್ಲಿ ಶ್ರೀರಂಗಪಟ್ಟಣದ ಪತನದ ಕಾಲದಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಹೋಗಿ ಬಿದನೂರು, ಶಿಕಾರಿಪುರ ಪ್ರದೇಶಗಳ ಜನರನ್ನು ಸಂಘಟಿಸಿದ. ಐಗೂರಿನ ಕೃಷ್ಣಪ್ಪ ನಾಯಕ, ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದ ಹೆಗ್ಗಡೆ, ಬಳ್ಳಾರಿಯ ರಾಯದುರ್ಗದ ಪಾಳೆಯಗಾರ ಮತ್ತು ಆನೆಗೊಂದಿಯ ಪಾಳೆಯಗಾರರ ನೆರವಿನಿಂದ ಬ್ರಿಟಿಷರ ಎದುರಾಗಿ ಬಂಡಾಯ ಹೂಡಿದ. ಲೋಂಡಾದಲ್ಲಿ ಬ್ರಿಟಿಷರಿಗೆ ಸಹಾಯ ಮಾಡಲು ಬಂದ ಮರಾಠ ಸೇನಾನಿ ಗೋಖಲೆಯನ್ನು ಕೊಂದ. ಬ್ರಿಟಿಷ್ ವಿರೋಧಿಗಳನ್ನೆಲ್ಲ ಸಂಘಟಿಸಲು ಪ್ರಯತ್ನಿಸಿದ. ಇವನ ಚಟುವಟಿಕೆಯನ್ನು ಬ್ರಿಟಿಷರು ಸಹಿಸಲಾರದೆ ಹೋದರು. ಆರ್ಥರ್ ಧೋಂಡಿಯನನ್ನು ಹಿಡಿಯಲು ಟೋರಿನ್, ಸ್ಟೀವನ್‌ಸನ್ ಮತ್ತು ಪೇಟ್ಕರ್ ಎಂಬ ಮೂರು ಸೇನಾಪತಿಗಳನ್ನು ಕಳುಹಿಸಿದ. ಧೋಂಡಿಯು ತಂಗಿದ್ದನೆಂಬ ಕೋಟೆ, ಸ್ಥಳಗಳನ್ನೆಲ್ಲ ಶೋಧಿಸುತ್ತ ಅವನ ಕಡೆಯವರನ್ನೆಲ್ಲ ಕೊಲ್ಲುತ್ತ ಬ್ರಿಟಿಷ್ ಸೇನೆ ದಾಂದಲೆ ನಡೆಸಿತು. ಕೊನೆಗೆ ಒಬ್ಬ ಸೈನಿಕ ಮತ್ತು ಧೋಂಡಿಯನ ಕೈಲಿ ಅನ್ನ ತಿಂದ ಸಲಬತ್ ಎಂಬ ದ್ರೋಹಿಗಳು ಕೊಟ್ಟ ಸುಳುವಿನ ಮೇಲೆ ಬ್ರಿಟಿಷ್ ಸೇನೆ ಧೋಂಡಿಯನ ಬೆನ್ನುಹತ್ತಿತು. 1800ರ ಸೆಪ್ಟೆಂಬರ್‌ನಲ್ಲಿ ರಾಯಚೂರು ಜಿಲ್ಲೆಯ ಕೋಣಗಲ್ಲಿನಲ್ಲಿ ಧೋಂಡಿಯ ವಾಘ ಮರಾಠರ, ನಿಜಾಮನ ಮತ್ತು ಆಂಗ್ಲರ ಮೂರೂ ಸೇನೆಗಳನ್ನು ಎದುರಿಸಿ ಹೋರಾಡುತ್ತ ಮಡಿದ. ಐಗೂರು ಕೃಷ್ಣಪ್ಪನಾಯಕ 1802ರ ಫೆಬ್ರವರಿಯವರೆಗೂ ಹೋರಾಡುತ್ತ ಕೊನೆಗೆ ವಿದ್ರೋಹಿಗಳಿಂದ ಸೆರೆಸಿಕ್ಕಿ ಗಲ್ಲಿಗೇರಿಸಲ್ಪಟ್ಟ. ಕೊಪ್ಪಳದ ಕೋಟೆಯನ್ನು ಗೆದ್ದುಕೊಂಡು ಬಂಡಾಯ ಹೂಡಿದ (1819) ವೀರಪ್ಪನನ್ನೂ ಬ್ರಿಟಿಷ್ ಸೇನೆ ಕೊಂದಿತು. 1820-21ರಲ್ಲಿ ಬಿದರೆ ಜಿಲ್ಲೆಯ ಸುಳಿಯಳ್ಳಿ ಮತ್ತು ಕೃಷ್ಣಾಪುರಗಳ ದೇಶಮುಖರು ಬಂಡಾಯವೆದ್ದರು. ಶಿವಲಿಂಗಪ್ಪ ದೇಶಮುಖ್, ತಿರುಮಲ ರಾವ್ ಮತ್ತು ಮೇಘಶ್ಯಾಮ್ ದೇಶಮುಖರು ಬಂಡಾಯದ ಮುಂದಾಳಾಗಿದ್ದರು. 1824ರಲ್ಲಿ ಬಿಜಾಪುರ ಜಿಲ್ಲೆಯ ಸಿಂದಗಿಯ ಬಂಡಾಯವನ್ನು ಇಂಗ್ಲಿಷ್ ಸೇನೆ ಕ್ರೌರ್ಯದಿಂದ ಹತ್ತಿಕ್ಕಿತು. ಸಿಂದಗಿಯ ಬಂಡಾಯಗಾರರಾಗಿದ್ದ ದಿವಾಕರ ದೀಕ್ಷಿತ, ರಾವ್‌ಜಿ ರಾಸ್ತಿಯ, ಬಾಳಪ್ಪ ದೇಶಪಾಂಡೆ, ಅಲೂಪ ಪಿಂಡಾರಿ, ಶೆಟ್ಟಿಯಪ್ಪ ಮತ್ತು ಶೀನಪ್ಪ ಇವರನ್ನು ಹಿಡಿದುಕೊಟ್ಟವರಿಗೆ ಬಹುಮಾನ ನೀಡುವುದಾಗಿ ಬ್ರಿಟಿಷ್ ಸರ್ಕಾರ ಘೋಷಿಸಿತ್ತು. ದೇಶದ್ರೋಹಿ ಅಣ್ಣಪ್ಪ ಪಟಕಿ ಎಂಬಾತ ಮೋಸ ಬಗೆದ. ಸಿಂದಗಿ ಬ್ರಿಟಿಷ್ ವಶವಾಯಿತು, ಬಂಡಾಯಗಾರರೆಲ್ಲ ಸೆರೆಯಾದರು.

ಬ್ರಿಟಿಷರು ವಾರಸುದಾರರಿಲ್ಲವೆಂಬ ನೆಪದಿಂದ ಕಿತ್ತೂರು ಸಂಸ್ಥಾನವನ್ನು ನುಂಗಲು ಹವಣಿಸಿದರು, ಬ್ರಿಟಿಷರಿಗೆ ಕಿತ್ತೂರಿನ ಮೇಲೆ ಮೊದಲಿನಿಂದಲೂ ಕಣ್ಣಿತ್ತು. 1822ರಲ್ಲೇ ಧಾರವಾಡದ ಕಲೆಕ್ಟರ್ ಥ್ಯಾಕರೆ ಕಿತ್ತೂರು ದೇಸಾಯಿಗೆ "ಕಳ್ಳಕಾಕರಿಗೆ ಆಶ್ರಯ ಕೊಡುತ್ತಿದ್ದೀಯೆ. ಸುತ್ತಮುತ್ತಣ ಪ್ರಾಂತ್ಯದವರಿಗೆ ತೊಂದರೆಯಾಗುತ್ತಿದೆ" ಎಂದೆಲ್ಲ ಆಪಾದನೆ ಮಾಡಿದ್ದರಿಂದ ಇದು ಗೊತ್ತಾಗುತ್ತದೆ. ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ಕುಟಿಲನೀತಿಯನ್ನರಿತು ಯುದ್ಧಸನ್ನದ್ಧಳಾದಳು. ಕೊಲ್ಲಾಪುರದ ಅರಸ ಬ್ರಿಟಿಷರ ಕೈಗೊಂಬೆಯೆನ್ನುವುದು ತಿಳಿಯದೆ ಚೆನ್ನಮ್ಮ ಅವನ ಸಹಾಯ ಬೇಡಿದಳು. ಅವನಿಂದ ಬ್ರಿಟಿಷರಿಗೆ ವಿಷಯ ತಿಳಿದು ಅವರು ಹೆದರಿದರು. ಬ್ರಿಟಿಷ್ ಸೈನಿಕರು ಕಿತ್ತೂರಿನ ಕೋಟೆಯನ್ನು ಮುತ್ತಿದರು. 1824 ಅಕ್ಟೋಬರ್ 23ರ ಮೊದಲ ಮುತ್ತಿಗೆಯಲ್ಲಿ ಥ್ಯಾಕರೆ ಸತ್ತು ಕಿತ್ತೂರ ವೀರರಿಗೆ ಜಯವಾಯಿತು. ಆದರೆ ಮುಂದೆ ದೇಶದ್ರೋಹಿಗಳ ಸಂಚಿನಿಂದ 1824 ನವೆಂಬರ್ 3ರ ಯುದ್ಧದಲ್ಲಿ ಕಿತ್ತೂರಿಗೆ ಸೋಲಾಯಿತು. ಚೆನ್ನಮ್ಮನನ್ನು ಬಂಧಿಸಿ ಬೈಲಹೊಂಗಲದಲ್ಲಿ ಸೆರೆಹಾಕಿದರು. ಚೆನ್ನಮ್ಮ 1830ರ ಫೆಬ್ರವರಿ 30ರಂದು ಸೆರೆಯಲ್ಲೇ ನಿಧನಳಾದಳು.

ಮುಂದೆ ರಾಜ್ಯ ಅಥವಾ ಸಂಸ್ಥಾನಗಳ ಮಟ್ಟದಲ್ಲಿ ಬಂಡಾಯ ನಡೆಯದಿದ್ದರೂ ಪಾಳೆಯಗಾರರೂ ಅನೇಕ ದೇಶಪ್ರೇಮಿಗಳೂ ಒಟ್ಟುಗೂಡಿ ಬ್ರಿಟಿಷರೊಂದಿಗೆ ಹೋರಾಡಿದರು.

ಕಿತ್ತೂರಿನ ಪತನದ ಅನಂತರ ವೀರ ಸೈನಿಕ ಸಂಗೊಳ್ಳಿ ರಾಯಣ್ಣ ಕಿತ್ತೂರ ದತ್ತಕ ಶಿವಲಿಂಗಪ್ಪನ ಪರ ಬಂಡಾಯದ ನೇತೃತ್ವ ವಹಿಸಿ ಊರಲ್ಲಿನ ಬ್ರಿಟಿಷ್ ಕಚೇರಿ ಸುಟ್ಟು (1830) ಮುಂದೆ ಅನೇಕ ಕಡೆಗಳಲ್ಲಿ ಬ್ರಿಟಿಷರ ಸೈನ್ಯಕ್ಕೆ ಮಣ್ಣುಮುಕ್ಕಿಸಿದ. ಆದರೆ ದ್ರೋಹಿಗಳ ಮೋಸದಿಂದ ಬಂಧಿತನಾಗಿ ಗಲ್ಲಿಗೆ ಏರಿಸಲ್ಪಟ್ಟ. ಕಿತ್ತೂರಲ್ಲಿ ಶಂಕ್ರಣ್ಣ (1833), ಗಜಪತಿ, ಸುನಾಯಿ ಶೆಟ್ಟಿ ಮತ್ತು ಕೊಟಗಿ (1836) ಇವರ ಬಂಡಾಯಗಳಾದವು. ರಾಯಣ್ಣನನ್ನು ಹಿಡಿದುಕೊಟ್ಟ ದ್ರೋಹಿಯ ಕೊಲೆಯಾಗಿ 1837–38ರಲ್ಲಿ ಇನ್ನೊಂದು ಬಂಡಾಯ ನಡೆಯಿತು.

ಕಿತ್ತೂರಲ್ಲಿ ಈ ಬಂಡಾಯಗಳ ಸರಣಿ ನಡೆಯುತ್ತಿದ್ದಾಗಲೇ 1830–31ರಲ್ಲಿ ಬಿದನೂರಲ್ಲಿ ಬೂದಿಬಸಪ್ಪನೆಂಬ ವ್ಯಕ್ತಿಯ ನಾಯಕತ್ವದಲ್ಲಿ ಬಂಡಾಯವಾಯಿತು. ಬ್ರಿಟಿಷರ ಕಂದಾಯ ವಸೂಲಿ ಮಿತಿಯ ಬಗ್ಗೆ ಅಸಮಾಧಾನ ತಳೆದ ಶಿವಮೊಗ್ಗ ಹಾಗೂ ದಕ್ಷಿಣಕನ್ನಡದ ರೈತರು ಈ ಬಂಡಾಯದಲ್ಲಿ ವ್ಯಾಪಕವಾಗಿ ಪಾಲುಗೊಂಡರು. ಚಿತ್ರದುರ್ಗ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲೂ ಇದರ ಪ್ರಭಾವ ಕಾಣಿಸಿತು. ಈ ಬಂಡಾಯ 1931ರಲ್ಲೇ ಕೊನೆಗೊಂಡರೂ ಬೂದಿಬಸಪ್ಪನ ಬಂಧನ 1834ರಲ್ಲಿ ಆಯಿತು. ಇದರ ಹಿಂದೆಯೇ 1835–37ರಲ್ಲಿ ಕೊಡಗಿನ ಬಂಡಾಯಗಳ ಸರಣಿ ಆರಂಭವಾಯಿತು. ಅಪರಂಪರಸ್ವಾಮಿ ಮತ್ತು ಕಲ್ಯಾಣಸ್ವಾಮಿ ಇವರು ಒಬ್ಬರ ಅನಂತರ ಒಬ್ಬರಾಗಿ ತಾವು ಕೊಡಗಿನ ಪದಚ್ಯುತ ರಾಜರ ವಂಶಸ್ಥರೆಂದು ಹೇಳಿಕೊಂಡು ಬಂಡು ಹೂಡಿ ಬಂಧಿತರಾದರು. ಕಲ್ಯಾಣಸ್ವಾಮಿಯ ಬಂಧನವಾದಾಗ ಪುಟ್ಟಬಸಪ್ಪನೆಂಬಾತ ತಾನೇ ಕಲ್ಯಾಣಸ್ವಾಮಿಯೆಂದು ಹೇಳಿಕೊಂಡು, ಕೊಡಗಿನ ಅರಸರ ಹೆಸರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಡು ಹೂಡಿದ. ಬಂಗವಾಡಿಯ ಬಂಗ ಅರಸನೂ ಈತನನ್ನು ಸೇರಿಕೊಂಡ. 1837ರ ಮೇ ತಿಂಗಳಿನಲ್ಲಿ ಪುಟ್ಟಬಸಪ್ಪನನ್ನು ಬಂಧಿಸಿ ಗಲ್ಲಿಗೇರಿಸಲಾಯಿತು. ಬೆಳ್ಳಾರೆ, ಬಂಟವಾಳ, ಮಂಗಳೂರು, ಕಾಸರಗೋಡುಗಳವರೆಗೂ ಈ ಬಂಡಾಯ ವ್ಯಾಪಿಸಿತ್ತು.

ಸಾತಾರಾದ ಛತ್ರಪತಿಯ ಅಧಿಕಾರಿಯಾಗಿದ್ದ ನರಸಿಂಗ ದತ್ತಾತ್ರೇಯ ಪೇಟ್ಕರ್ ಸುರಪುರದ ಜಮಾದಾರ ಕೊಹೆರನ್ ಎಂಬಾತನ ಜೊತೆ ಸೇರಿ 1841ರ ಮೇನಲ್ಲಿ ಬಾದಾಮಿಯಲ್ಲಿ ಹೂಡಿದ ಬಂಡಾಯ ಸುಮಾರು ಒಂದು ತಿಂಗಳು ಸಾಗಿತು. 1852ರ ಮಾರ್ಚ್‌ನಲ್ಲಿ ಬಿದರೆ ಜಿಲ್ಲೆಯಲ್ಲಿ ಲಿಂಗಪ್ಪ ಎಂಬಾತ ಬಂಡಾಯವೇಳಲು ಬ್ರಿಟಿಷ್ ಸೇನೆಯ ನೆರವಿನಿಂದ ನಿಜಾಮನು ಅದನ್ನು ಹತ್ತಿಕ್ಕಿದ.

ಅಖಿಲ ಭಾರತ ಮಟ್ಟದಲ್ಲಿ 1857ರಲ್ಲಿ ಭಾರತೀಯರು ಬ್ರಿಟಿಷರ ವಿರುದ್ಧ ಬಂಡಾಯವೆದ್ದಾಗ, ಕರ್ನಾಟಕದಲ್ಲೂ ಸ್ವಾತಂತ್ರ್ಯ ಹೋರಾಟ ಮತ್ತೆ ಬಿರುಸಾಯಿತು. ಮುಧೋಳ ಸಂಸ್ಥಾನಕ್ಕೆ ಸೇರಿದ್ದ ಹಲಗಲಿಯ ಬೇಡರು ಬಾಬಾಜಿ ನಿಂಬಾಳ್ಕರ್ ಎಂಬಾತನಿಂದ ಪ್ರೇರಿತರಾಗಿ ಅಸ್ತ್ರಗಳ ಕಾಯಿದೆಯನ್ನು (ನಿಶ್ಶಸ್ತ್ರೀಕರಣ) ಪ್ರತಿಭಟಿಸಿ 1857ರ ನವೆಂಬರ್‌ನಲ್ಲಿ ಬಂಡೆದ್ದರು. ಲೆಫ್ಟಿನೆಂಟ್ ಕರ್ನಲ್ ಮಾಲ್ಕಂ ಇವರ ವಿರುದ್ಧ ಕಾರ್ಯಾಚರಣೆ ನಡೆಸಿದ. ಬೇಡನಾಯಕರಾದ ಜಡಗ್ಯಾ, ಬಾಳ್ಯಾ ಮುಂತಾದ 290 ಜನರನ್ನು ಬಂಧಿಸಿ 19 ಜನರನ್ನು ಗಲ್ಲಿಗೇರಿಸಲಾಯಿತು. ಗುಲ್ಬರ್ಗ ಜಿಲ್ಲೆಯ ಸುರಪುರದ ದೊರೆ ವೆಂಕಟಪ್ಪನಾಯಕ ಬ್ರಿಟಿಷರ ಬೆಳಗಾಂವಿಯ ಸೇನೆಯಲ್ಲಿ ದಂಗೆಯೇಳಲು ಪ್ರಚೋದನೆ ನೀಡಿದ್ದ ವಿಚಾರ ಬ್ರಿಟಿಷರಿಗೆ ತಿಳಿದು ಸಂಧಾನಗಳೆಲ್ಲವೂ ಮುರಿದುಬಿದ್ದು ಯುದ್ಧವಾಯಿತು. ವೆಂಕಟಪ್ಪ ನಾಯಕ ಕೋಟೆಯಿಂದ ತಪ್ಪಿಸಿಕೊಂಡು, ಹೈದರಾಬಾದಿನ ನಿಜಾಮನ ಸಹಾಯ ಬೇಡಿದ. ಆದರೆ ನಿಜಾಮ ನಾಯಕನನ್ನು ಹಿಡಿದು ಬ್ರಿಟಿಷರಿಗೆ ಒಪ್ಪಿಸಿದ. ವಿಚಾರಣೆಯಾಗಿ ವೆಂಕಟಪ್ಪನಾಯಕನಿಗೆ ನಾಲ್ಕು ವರ್ಷ ಶಿಕ್ಷೆಯಾಗಿ, ದೂರದ ಬಂದೀಖಾನೆಗೆ ಅವನನ್ನು ಸಾಗಿಸುತ್ತಿದ್ದಾಗ ಆತ ದಾರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡು ಮರಣಹೊಂದಿದ. ಧಾರವಾಡ ಜಿಲ್ಲೆಯ ನರಗುಂದದ ಪಾಳೆಯಗಾರ ಭಾಸ್ಕರರಾವ್ ಭಾವೆ (ಬಾಬಾಸಾಹೇಬ) ದತ್ತಕ ಪ್ರಕರಣದಿಂದಾಗಿ ಬ್ರಿಟಿಷರ ವಿರುದ್ಧ ಸಿಡಿದೆದ್ದ. ಮುಂಡರಗಿ ಭೀಮರಾಯನೆಂಬ ಬ್ರಿಟಿಷ್ ಸರ್ಕಾರದ ಮಾಜಿ ಅಧಿಕಾರಿ, ಹಮ್ಮಿಗೆಯ ಕೆಂಚನಗೌಡ, ಡಂಬಳ, ಸೊರಟೂರು ಮತ್ತು ಗೋವನಕೊಪ್ಪಗಳ ದೇಸಾಯರು ಇವರ ಜೊತೆ ಸಹಕರಿಸಿದರು. ನರಗುಂದ ಮುತ್ತಲು ಹೊರಟ ಮ್ಯಾನ್ಸನ್ ಎಂಬ ಅಧಿಕಾರಿಯನ್ನು ಸುರೇಬಾನ ಎಂಬಲ್ಲಿ ಭಾವೆ ಕೊಂದು 1858 ಜೂನ್‌ನಲ್ಲಿ ಮಾಲ್ಕಂ ನರಗುಂದ ಕೋಟೆ ಮುತ್ತಿದ. ಬಾಬಾಸಾಹೇಬ್ ಕೋಟೆಯಿಂದ ಪಾರಾಗಿ, ಮುಂದೆ ವಂಚನೆಗೆ ಈಡಾಗಿ ಬಂಧಿತನಾಗಿ ಬೆಳಗಾಂವಿಯಲ್ಲಿ ಗಲ್ಲಿಗೆ ಏರಿಸಲ್ಪಟ್ಟ. ಇದೇ ಕಾಲಕ್ಕೆ ಮುಂಡರಗಿ ಭೀಮರಾಯ ಗದುಗಿನ ಖಜಾನೆ ಲೂಟಿಮಾಡಿ ಕೊಪ್ಪಳ ದುರ್ಗವನ್ನು ಕೇಂದ್ರವಾಗಿಟ್ಟುಕೊಂಡು ಬ್ರಿಟಿಷರನ್ನು ಪ್ರತಿಭಟಿಸಿದ. ಬ್ರಿಟಿಷ್ ಸೇನೆ ಕೋಟೆಯನ್ನು ಮುತ್ತಲು ಭೀಮರಾಯನೂ ಹಮ್ಮಿಗೆ ಕೆಂಚನಗೌಡನೂ ಹೋರಾಡಿ ಹತರಾದರು. ಅನೇಕರ ಬಂಧನವಾಗಿ 75 ಜನಕ್ಕೆ ಗಲ್ಲಾಯಿತು. ಮೇಲೆ ಹೇಳಿದ ಕೆಲವರಲ್ಲದೆ ಅನೇಕ ಮಂದಿ ದೇಶಭಕ್ತವೀರರು ಹೋರಾಡಿ ತಮ್ಮ ಪ್ರಾಣವನ್ನರ್ಪಿಸಿದ್ದಾರೆ. ಎಲ್ಲ ವೀರ ಹೊರಾಟಗಾರರನ್ನು ಬ್ರಿಟಿಷರು ನೇರವಾಗಿ ಸೋಲಿಸಲಾಗಲಿ, ಹಿಡಿಯಲಾಗಲಿ ಆಗದೆ ವಂಚನೆಯಿಂದ, ದ್ರೋಹಿಗಳ ಸಹಾಯದಿಂದ ಹಿಡಿಸಿರುವುದು ಗಮನಿಸಬೇಕಾದ ಅಂಶ. ಇಲ್ಲಿಗೆ 1857–58ರ ಸಶಸ್ತ್ರ ಸ್ವಾತಂತ್ರ್ಯ ಹೋರಾಟ ಕರ್ನಾಟಕದಲ್ಲಿ ಕೊನೆಯಾಯಿತೆನ್ನಬಹುದು. **(ಕೆ.ಆರ್.ಆರ್.;ಎಚ್.ಪಿ.ಎಸ್.;ಜಿ.ಆರ್.ಆರ್.)**

ಕರ್ನಾಟಕದಲ್ಲಿ ಅಹಿಂಸಾತ್ಮಕ ಹೋರಾಟ ಕಾಂಗ್ರೆಸ್‌ನ ಪ್ರವೇಶದೊಂದಿಗೆ ಪ್ರಾರಂಭವಾಯಿತು. ಕರ್ನಾಟಕದ ಜನತೆಗೆ ದೊರಕಿದ ಪಾಶ್ಚಾತ್ಯ ಶಿಕ್ಷಣ, ಕರ್ನಾಟಕದ ಹಿಂದಿನ ಇತಿಹಾಸ ಮತ್ತು ಸ್ವಾತಂತ್ರ್ಯ ಹೋರಾಟದ ಅಭ್ಯಾಸ ಮತ್ತು ಅದರ ಜೊತೆ ಬಂದ ಸಾಮಾಜಿಕ ಚಳವಳಿಗಳು ಹಾಗೂ ಟಿಳಕರ ಮತ್ತು ಇತರರ ಪ್ರಭಾವದಿಂದ ಕರ್ನಾಟಕದಲ್ಲಿ ಸುಪ್ತವಾಗಿದ್ದ ರಾಷ್ಟ್ರೀಯ ಜಾಗೃತಿ ಮತ್ತೆ ಪ್ರಬಲವಾಯಿತು. ಅಖಂಡ ಭಾರತದೊಡನೆ ಕರ್ನಾಟಕವನ್ನೂ ಕುಟಿಲೋಪಾಯಗಳಿಂದ ತಮ್ಮ ಹಿಡಿತದಲ್ಲಿ

ವಶಪಡಿಸಿಕೊಂಡಿದ್ದ ಬ್ರಿಟಿಷರನ್ನು ಬಲಪ್ರಯೋಗದಿಂದ ಗೆಲ್ಲುವ ಬದಲು ಅಸಹಕಾರ ಅಸ್ತ್ರದಿಂದ ಜಯಿಸಬೇಕೆಂದು ತೀರ್ಮಾನಿಸಿದ ಭಾರತ ಜನತೆಗೆ ಕಾಂಗ್ರೆಸ್ ದಾರಿ ತೋರಿತು. 1885ರಲ್ಲಿ ಕಾಂಗ್ರೆಸ್ ಸ್ಥಾಪನೆ ಆದಾಗ ಬೆಳಗಾಂವಿ, ಬಳ್ಳಾರಿಗಳಿಂದ ಪ್ರತಿನಿಧಿಗಳು ಹೋಗಿದ್ದರು. 1893ರಲ್ಲಿ ಎ. ಒ. ಹ್ಯೂಮ್ ಬೆಳಗಾಂವಿ ಧಾರವಾಡಗಳಿಗೆ ಭೇಟಿ ನೀಡಿ ಭಾಷಣ ಮಾಡಿದರು. ಬೆಳಗಾಂವಿಯಲ್ಲಿ 1895ರಲ್ಲಿ ದಿನ್‌ಶಾ ವಾಚ್ಛಾರ ಅಧ್ಯಕ್ಷತೆಯಲ್ಲೂ 1906ರಲ್ಲಿ ಧಾರವಾಡದಲ್ಲಿ ದಾಜಿ ಆಬಾಜಿ ಖರೆ ಅವರ ಅಧ್ಯಕ್ಷತೆಯಲ್ಲೂ ಮುಂಬಯಿ ಪ್ರಾಂತೀಯ ರಾಜಕೀಯ ಸಮ್ಮೇಳನ ಸೇರಿತು. ಧಾರವಾಡದ ಪರಿಷತ್ತಿಗೆ ಟಿಳಕರು, ಫಿರೋಜ್ ಮೆಹ್ತಾ ಬಂಡೆದ್ದರು. ಟಿಳಕರು 1905ರಲ್ಲಿ ಬಳ್ಳಾರಿಗೂ 1906ರಲ್ಲಿ ಬೆಳಗಾಂವಿ, ಗುರ್ಲಹೊಸೂರು, ಬೈಲಹೊಂಗಲಗಳಿಗೂ ಭೇಟಿ ನೀಡಿ ಭಾಷಣ ಮಾಡಿದರು. ಬಂಗಾಲದ ವಿಭಜನೆಯನ್ನು ಪ್ರತಿಭಟಿಸಿ 1906–7ರಲ್ಲಿ ಧಾರವಾಡ, ಬೆಳಗಾಂವಿ, ಗದಗ, ಕಿತ್ತೂರು, ಅಳಣಾವರ, ಬಾಗಲಕೋಟೆ ಮುಂತಾದ ಊರುಗಳಲ್ಲಿ ಪ್ರತಿಭಟನಾ ಸಭೆಗಳೂ ವಿದೇಶೀ ವಸ್ತ್ರಗಳ ಬಹಿಷ್ಕಾರ ಮತ್ತು ದಹನ ಆಯಿತು. ಬೆಳಗಾಂವಿಯಲ್ಲಿ ಮದ್ಯದ ಅಂಗಡಿಗಳ ಮುಂದೆ ಧರಣಿ ನಡೆದು 15 ಜನರಿಗೆ ಶಿಕ್ಷೆಯೂ ಆಯಿತು. ಬೆಳಗಾಂವಿ, ಧಾರವಾಡ, ಹುಬ್ಬಳ್ಳಿ, ನವಲಗುಂದ, ನರಗುಂದ, ಹಾನಗಲ್ಲು, ಅಗಡಿ, ಬಾಗಲಕೋಟೆ, ಬಾದಾಮಿ, ಬಿಜಾಪುರಗಳಲ್ಲಿ ರಾಷ್ಟ್ರೀಯ ಶಾಲೆಗಳ ಸ್ಥಾಪನೆ ಆಯಿತು. 1910ರ ವರೆಗೆ ಈ ಶಾಲೆಗಳು ನಡೆದವು. ಟಿಳಕರ ಕೇಸರಿಯೇ ಅಲ್ಲದೆ ರಾಜಹಂಸ, ಕರ್ನಾಟಕವೃತ್ತ, ಕರ್ನಾಟಕ ಧನಂಜಯ, ಕರ್ನಾಟಕ ಕೇಸರಿ ಮುಂತಾದ ಕನ್ನಡ ಪತ್ರಿಕೆಗಳು ಆಗ ರಾಷ್ಟ್ರೀಯ ವಿಚಾರದತ್ತ ಜನರ ಗಮನ ಸೆಳೆಯುತ್ತಿದ್ದವು. 1970ರಲ್ಲಿ ಸೂರತ್ ಕಾಂಗ್ರೆಸ್ಸಿಗೆ ಬೆಳಗಾಂವಿಯ ಗಂಗಾಧರರಾವ್ ದೇಶಪಾಂಡೆ, ಧಾರವಾಡದ ಆಲೂರ ವೆಂಕಟರಾವ್, ಬಿಜಾಪುರದ ಶ್ರೀನಿವಾಸರಾವ್ ಕೌಜಲಗಿ ಇವರು ತೆರಳಿ ಟಿಳಕರ ಪಕ್ಷವಹಿಸಿದರು.

ಹೋಂ ರೂಲ್ ಚಳವಳಿ ಆರಂಭ ಆದಾಗ (1916) ಟಿಳಕರು ಬೆಳಗಾಂವಿ, ನಿಪ್ಪಾಣಿ, ಸಂಕೇಶ್ವರಗಳಲ್ಲಿ ಹೋಂ ರೂಲ್ ಲೀಗ್ ಸಂಘಟನೆಗೆ ಬಂದರು. ಆನಿಬೆಸೆಂಟರೂ ಅವರ ನ್ಯೂ ಇಂಡಿಯಾ ಪತ್ರಿಕೆಯೂ ಮೈಸೂರು ಸಂಸ್ಥಾನದಲ್ಲಿ ವಿಶೇಷ ಜಾಗೃತಿಗೆ ಕಾರಣವಾದವು. ಧಾರವಾಡ, ಉತ್ತರ ಕನ್ನಡದ ಸಿದ್ದಾಪುರ, ದಕ್ಷಿಣ ಕನ್ನಡದ ಮುಲ್ಕಿಗಳಲ್ಲೂ ಹೋಂ ರೂಲ್ ಲೀಗಿನ ಶಾಖೆಗಳು ಆರಂಭವಾದವು. 1920ರಲ್ಲಿ ಟಿಳಕರು ನಿಧನರಾದಾಗ ರಾಷ್ಟ್ರೀಯ ಜಾಗೃತಿಯ ದ್ಯೋತಕವಾಗಿ ಕರ್ನಾಟಕದ ಪ್ರಮುಖ ನಗರಗಳಲ್ಲಿ, ಮೈಸೂರು–ಬೆಂಗಳೂರುಗಳಲ್ಲೂ ಕೂಡ ಹರತಾಳ–ಮೆರವಣಿಗೆಗಳಾದವು.

ಅಸಹಕಾರ ಚಳವಳಿ ಘೋಷಣೆ ಆಗುವ ಮೊದಲೇ ಕರ್ನಾಟಕದಲ್ಲಿ ಸಾಕಷ್ಟು ಜಾಗೃತಿಯಾಗಿತ್ತು. ಜಾಗೃತ ಭಾರತೀಯರು ಬ್ರಿಟಿಷರು ತಮ್ಮ ದೇಶದಲ್ಲಿ ಅನುಸರಿಸುತ್ತಿದ್ದ ರಾಜಕೀಯ ನೀತಿತತ್ತ್ವಗಳಿಗೂ ಭಾರತದಲ್ಲಿ ಅವರು ಅನುಸರಿಸುತ್ತಿದ್ದ ನೀತಿಗೂ ಇದ್ದ ಭಿನ್ನತೆಯನ್ನು ಅರಿತುಕೊಂಡರು. ಇಂಗ್ಲೆಂಡಿನಲ್ಲಿದ್ದುದು ಉದಾರನೀತಿಯಾದರೆ ಭಾರತದಲ್ಲಿ ಇದ್ದದ್ದು ಪ್ರಗತಿವಿರೋಧ ನೀತಿ. ಇಂಗ್ಲೆಂಡಿನಲ್ಲಿ ಬ್ರಿಟಿಷರು ಪ್ರಜಾಭಿಪ್ರಾಯಕ್ಕೆ ತಲೆಬಾಗಿದ್ದರೆ ಭಾರತದಲ್ಲಿ ಸಾಮ್ರಾಜ್ಯ ನೀತಿಯನ್ನು ಅನುಸರಿಸುತ್ತಿದ್ದರು. ಈ ವಿಚಾರಗಳು ಭಾರತೀಯರಲ್ಲಿ ಅಸಮಾಧಾನವನ್ನುಂಟುಮಾಡಿದ್ದವು. ಈ ಕಾಲಕ್ಕೆ ಸರಿಯಾಗಿ ಗಾಂಧಿಯವರು ಮುಂದೆ ಬಂದರು, ಕರ್ನಾಟಕದಲ್ಲಿ ಏಕೀಕರಣದ ಬೇಡಿಕೆಗಳು ರಾಷ್ಟ್ರೀಯತೆಗೆ ಪೂರಕವಾಗಿ ಬೆಳೆದು ಅಖಿಲ ಕರ್ನಾಟಕ ಪ್ರಥಮ ರಾಜಕೀಯ ಪರಿಷತ್ತು ಧಾರವಾಡದಲ್ಲಿ 1920ರಲ್ಲಿ ಸೇರಿತು. ನಾಗಪುರ ಕಾಂಗ್ರೆಸ್ ಸಮ್ಮೇಳನಕ್ಕೆ ಕರ್ನಾಟಕದಿಂದ 800 ಪ್ರತಿನಿಧಿಗಳು ತೆರಳಿದರು. ಆಗ ಅಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತೀಯ ಕಾಂಗ್ರೆಸ್ ಘಟಕ ನೀಡಲು, ಗಂಗಾಧರರಾವ್ ದೇಶಪಾಂಡೆ ಅದರ ಪ್ರಥಮಾಧ್ಯಕ್ಷರಾದರು. ಅಸಹಕಾರದ ಕರೆಯಂತೆ ಅನೇಕರು ತಮ್ಮ ವಕೀಲಿ, ಕಾಲೇಜು ಮುಂತಾದ ವೃತ್ತಿಯನ್ನು ತ್ಯಜಿಸಿದರು. ವಕೀಲಿ ತ್ಯಜಿಸಿದವರಲ್ಲಿ ವೆಂಕಟರಾವ್, ಕೌಜಲಗಿ ಶ್ರೀನಿವಾಸರಾವ್ ಹಾಗೂ ಎಸ್. ಎಸ್. ಶಾಸ್ತ್ರಿ ಪ್ರಮುಖರು. ಕರ್ನಾಟಕದಲ್ಲಿ 50 ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸಲಾಯಿತು. ಬ್ರಿಟಿಷ್ ಕರ್ನಾಟಕದಲ್ಲಿ ರಾಜದ್ರೋಹಿ ಭಾಷಣ, ಲೇಖನ, ಸಾರಾಯಿ ಅಂಗಡಿ ಮುಂದೆ ಧರಣಿ ಮುಂತಾದ ಚಟುವಟಿಕೆಗಳಿಗಾಗಿ 100 ಜನ ಬಂಧಿತರಾದರು. ಧಾರವಾಡದಲ್ಲಿ 1921ರ ಜುಲೈನಲ್ಲಿ ಗೋಲೀಬಾರಾಗಿ ಮೂವರೂ ಬೆಂಗಳೂರಲ್ಲಿ 1921ರ ನವೆಂಬರ್‌ನಲ್ಲಿ ಗೋಲೀಬಾರಾಗಿ ಇಬ್ಬರೂ ಮಡಿದರು. ಖಿಲಾಫತ್ ಚಳುವಳಿಯಿಂದಾಗಿ ಕರ್ನಾಟಕದಲ್ಲೂ ಮುಸಲ್ಮಾನರು ಹೋರಾಟಕ್ಕೆ ಇಳಿದರು. ನಾಗಪುರ ಧ್ವಜಸತ್ಯಾಗ್ರಹದಲ್ಲಿ (1923) ಕರ್ನಾಟಕದ 50 ಜನರಾದರೂ ಬಂಧಿತರಾದರು. ಆ ಕಾಲದಲ್ಲೇ ಬಂಧಿತರಾದ ನಾ. ಸು. ಹರ್ಡೀಕರರು ಜೈಲಿನಲ್ಲಿದ್ದಾಗ ಹಿಂದುಸ್ಥಾನೀ ಸೇವಾದಳವೆಂಬ ಅಖಿಲ ಭಾರತ ಸಂಘಟನೆ ಕಟ್ಟಿದರು. ಹುಬ್ಬಳ್ಳಿ ಇದರ ಕೇಂದ್ರವಾಗಿ ಅಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಅಧಿವೇಶನದ ಕಾಲಕ್ಕೂ ಮುಂದೆ ನಡೆದ ಇತರ ಎಲ್ಲ ಚಳವಳಿಗಳ ಕಾಲಕ್ಕೂ ಸೇವಾದಳದ ಶಿಸ್ತಿನ ಸ್ವಯಂಸೇವಕ ಸೇವಕಿಯರು ಅಪೂರ್ವ ಸೇವೆ ಸಲ್ಲಿಸಿದರು.

ಮುಂದೆ 1930ರಲ್ಲಿ ಕಾನೂನುಭಂಗ ಚಳವಳಿ ಆರಂಭ ಆದಾಗ ಕರ್ನಾಟಕದಲ್ಲಿ ಕಾಂಗ್ರೆಸ್ ವ್ಯಾಪಕವಾಗಿ ಸಂಘಟಿತವಾಗಿತ್ತು. ಉಪ್ಪಿನ ಸತ್ಯಾಗ್ರಹವನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಉತ್ತರ ಕನ್ನಡ ಜಿಲ್ಲೆಯ ಅಂಕೋಲದಲ್ಲಿ ಸಂಘಟಿಸಿತು. ಏಪ್ರಿಲ್ 13ರಂದು ಅನೇಕ ಸಹಸ್ರ ಜನರು ಭಾಗವಹಿಸಿ ಉಪ್ಪಿನ ಕಾನೂನನ್ನು ಮುರಿದರು. ಅಂಕೋಲದಲ್ಲಿ ಸತತವಾಗಿ 45 ದಿನ ಉಪ್ಪಿನ ಸತ್ಯಾಗ್ರಹ ನಡೆಯಿತಲ್ಲದೆ ಆ ಜಿಲ್ಲೆಯ ಇತರ ಕರಾವಳಿ ಕೇಂದ್ರಗಳಲ್ಲೂ ಇದೇ ರೀತಿ ಸತ್ಯಾಗ್ರಹವಾಗಿ ಉಪ್ಪಿನ ಕಾನೂನು ಇಲ್ಲದ ಸ್ಥಿತಿಗೆ ಬಂತು. ಕರ್ನಾಟಕದಲ್ಲಿ ಒಟ್ಟು 30 ಕೇಂದ್ರಗಳಲ್ಲಿ ಉಪ್ಪಿನ ಸತ್ಯಾಗ್ರಹವಾಯಿತು. ಈ ಪೈಕಿ ಮಂಗಳೂರು, ಮಲ್ಪೆ, ಧಾರವಾಡ ಜಿಲ್ಲೆಯ ಕಿರೇಸೂರ, ಯಾವಗಲ್ಲ, ಬಿಜಾಪುರ ಜಿಲ್ಲೆಯ ಬಿಸನಾಳ ಮುಖ್ಯವಾದವು. ಇದರ ಹಿಂದೆಯೇ ಕಾದಿಟ್ಟ ಅಡವಿಗಳಲ್ಲಿ ಮರ ಕಡಿದು ಅರಣ್ಯ ಸತ್ಯಾಗ್ರಹ, ಗೋಮಾಳ ತೆರಿಗೆ ಕೊಡದ ಸತ್ಯಾಗ್ರಹ, ಮದ್ಯದ ಅಂಗಡಿಗಳ ಮುಂದೆ ಧರಣಿ, ಈಚಲುಮರಗಳನ್ನು ಕಡಿದುಹಾಕುವುದು ಮುಂತಾದವೆಲ್ಲ ನಡೆದು ಧಾರವಾಡ ಜಿಲ್ಲೆಯ ಹಿರೇಕೆರೂರು ಹಾಗೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ಹಾಗೂ ಅಂಕೋಲ ತಾಲ್ಲೂಕುಗಳಲ್ಲಿ ಭೂಕಂದಾಯ ನಿರಾಕರಣ ಸತ್ಯಾಗ್ರಹವೂ ಆಯಿತು. 1931ರ ಮಾರ್ಚ್‌ನಲ್ಲಾದ ಗಾಂಧಿ–ಇರ್ವಿನ್ ಒಪ್ಪಂದದ ವರೆಗೆ ನಡೆದ ಈ ಚಳವಳಿಯಲ್ಲಿ ಬೆಳಗಾಂವಿ ಜಿಲ್ಲೆಯ 750 ಮಂದಿಯನ್ನು ಸೇರಿಸಿ ಕರ್ನಾಟಕದ ಏಳು ಜಿಲ್ಲೆಗಳಲ್ಲಿ 1850 ಸ್ತ್ರೀ ಪುರುಷರು ಶಿಕ್ಷೆಗೆ ಒಳಗಾದರು.

1932–33ರಲ್ಲಿ ಚಳವಳಿ ಮತ್ತೆ ಆರಂಭವಾದಾಗ, ಮೇಲಿನಂತೆಯೇ ವಿವಿಧ ಸ್ವರೂಪದ ಚಳವಳಿಗಳಾದವು. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಹಾಗೂ ಅಂಕೋಲ ತಾಲ್ಲೂಕುಗಳಲ್ಲಿ ಕರನಿರಾಕರಣ ಚಳವಳಿ ಇನ್ನಷ್ಟು ಉಗ್ರವಾಗಿ ಸಾಗಿ ಸಿದ್ದಾಪುರ ತಾಲ್ಲೂಕಿನ 420 ಕುಟುಂಬಗಳೂ ಅಂಕೋಲ ತಾಲ್ಲೂಕಿನ 400 ಕುಟುಂಬಗಳೂ ಸರ್ಕಾರದ ಎಲ್ಲ ವಿಧದ ದಬ್ಬಾಳಿಕೆ ಹಿಂಸೆಗಳನ್ನು ಕೊನೆತನಕ ಎದುರಿಸಿ ಹೋರಾಡಿ ಬರ್ಡೋಲಿಗೆ ಸರಿಗಟ್ಟುವ ತ್ಯಾಗಮಾಡಿ ಕರ್ನಾಟಕದ ಕೀತಿಗೆ ಕಾರಣರಾದರು. ಉತ್ತರಕನ್ನಡ ಜಿಲ್ಲೆ ಒಂದರಲ್ಲೇ 100 ಜನ ಸ್ತ್ರೀಯರೂ ಸೇರಿದಂತೆ 1,000 ಜನ ಶಿಕ್ಷೆಗೆ

ಒಳಗಾದರು. ಇತರ ಬ್ರಿಟಿಷ್ ಜಿಲ್ಲೆಗಳಿಂದಲೂ ಸುಮಾರು 2,000 ಜನ ಕಾರಾಗೃಹವಾಸ ಅನುಭವಿಸಿದರು. 1937ರಲ್ಲಿ ಮದರಾಸು ಮತ್ತು ಮುಂಬಯಿ ವಿಧಾನಸಭೆಗಳಿಗೆ ಚುನಾವಣೆಗಳಾದಾಗ ಕರ್ನಾಟಕ ಜಿಲ್ಲೆಗಳಿಂದಲೂ ಕಾಂಗ್ರೆಸ್ ಹೆಚ್ಚಿನ ಸ್ಥಾನ ಗಳಿಸಿತು. ಜಿಲ್ಲಾ ಸಮಿತಿಗಳೆಲ್ಲ ಕಾಂಗ್ರೆಸ್ಸಿನ ವಶವಾದುವು.

ಸಂಸ್ಥಾನ ಪ್ರದೇಶಗಳಲ್ಲಿ ಚಳವಳಿ ನಡೆಸಲು ಕಾಂಗ್ರೆಸ್ ಅನುಮತಿ ನೀಡಿರದಿದ್ದರೂ ಕಾಂಗ್ರೆಸ್ ಸಮಿತಿಗಳ ಸಂಘಟನೆ, ಖಾದಿ, ಅಸ್ಪೃಶ್ಯತಾ ನಿರೋಧ ಮುಂತಾದ ರಚನಾತ್ಮಕ ಕಾರ್ಯಗಳಿಗೆ ಅನುಮತಿ ನೀಡಿತ್ತು. 1915ರಲ್ಲಿ ಗಾಂಧೀಜಿಯವರು ಬೆಂಗಳೂರಿಗೆ ಭೇಟಿಕೊಟ್ಟದ್ದು ಮೈಸೂರು ಸಂಸ್ಥಾನದ ದೇಶಪ್ರೇಮಿಗಳಲ್ಲಿ ನವೋಲ್ಲಾಸ ತಂದಿತ್ತು. ಮೈಸೂರು ಸಂಸ್ಥಾನದಲ್ಲಿ (1921) ಇಡೀ ಸಂಸ್ಥಾನಕ್ಕೆ ಒಂದೇ ಜಿಲ್ಲಾ ಕಾಂಗ್ರೆಸ್ ಸಮಿತಿಯೆಂದು ಸಂಘಟಿಸಿದ್ದರು. ಎಸ್.ಎಸ್.ಸೆಟ್ಟೂರು ಇದರ ಅಧ್ಯಕ್ಷರೂ ಎನ್.ಎನ್. ಎಂ. ರಜ್ಜಿ ಕಾರ್ಯದರ್ಶಿಗಳೂ ಆಗಿದ್ದರು. ಸೇವಾದಳದ ಸಂಘಟನೆ ಕೂಡ ಹಳೆಯ ಮೈಸೂರಲ್ಲಿ ಆಗಿ 1917ರಲ್ಲಿ ಸ್ಥಾಪನೆಗೊಂಡ ನ್ಯಾಷನಲ್ ಹೈಸ್ಕೂಲ್ ಸೇವಾದಳದ ಚಟುವಟಿಕೆಗಳ ಕೇಂದ್ರವಾಯಿತು. 1924ರ ಜನವರಿಯಲ್ಲಿ ಕೊಪ್ಪ ತಾಲ್ಲೂಕಿನ ಹರಿಹರಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತ ಹೊಸಕೊಪ್ಪ ಕೃಷ್ಣರಾಯರು ಸಂಘಟಿಸಿದ ಸಭೆಯೊಂದು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಮಂಡಿಸಿತು. 1927ರಲ್ಲಿ ಗಾಂಧೀಜಿ ಖಾದಿ ಪ್ರಚಾರಕ್ಕಾಗಿ ಹಳೆಯ ಸಂಸ್ಥಾನದಲ್ಲಿ ಪ್ರವಾಸ ಮಾಡಿದರು. 1928 ಹಾಗೂ 29ರಲ್ಲಿ ಬೆಂಗಳೂರಲ್ಲಿ ಆದ ಗಣಪತಿ ಗಲಭೆಗಳು ಜನಜಾಗೃತಿಗೆ ಕಾರಣ ಆದವು. 1930ರ ಜನವರಿ 26ಕ್ಕೆ ಮೈಸೂರು ಸಂಸ್ಥಾನದಲ್ಲೆಲ್ಲ ಅನೇಕ ಕಡೆ ತ್ರಿವರ್ಣಧ್ವಜ ಹಾರಿಸಿ ಸ್ವಾತಂತ್ರ್ಯದಿನ ಆಚರಿಸಲಾಯಿತು. 1930–33ರ ಅವಧಿಯಲ್ಲಿ ಬ್ರಿಟಿಷ್ ಜಿಲ್ಲೆಗಳಲ್ಲಿ ನಡೆದ ಚಳವಳಿಗಳಲ್ಲಿ ಸಂಸ್ಥಾನದ ನೂರಾರು ಸೇವಾದಳದ ಸ್ವಯಂಸೇವಕರು ಭಾಗವಹಿಸಿ ಜೈಲು ಸೇರಿದರು. ಬ್ರಿಟಿಷ್ ಪ್ರಾಂತ್ಯಗಳಲ್ಲಿ ನಡೆದ 1937ರ ಚುನಾವಣೆಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಅಧಿಕಾರಕ್ಕೆ ಬಂದುದರಿಂದಲೂ ಕೆಲವು ಅನ್ಯ ಕಾರಣಗಳಿಂದಲೂ ಹೊಸದಾಗಿ ಹುಟ್ಟಿಕೊಂಡಿದ್ದ ಸಂಯುಕ್ತ ಪ್ರಜಾಪಕ್ಷ ಮತ್ತು ಕಾಂಗ್ರೆಸ್ ಒಂದಾಗಿ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ 1938ರ ಏಪ್ರಿಲ್‌ನಲ್ಲಿ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಮೈಸೂರು ಕಾಂಗ್ರೆಸ್ಸಿನ ಮೊದಲ ಅಧಿವೇಶನವಾಯಿತು. ಸಾವಿರಾರು ಜನ ಸೇರಿದ ಈ ಕಾರ್ಯಕ್ರಮದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ತ್ರಿವರ್ಣಧ್ವಜ ಹಾರಿಸಿ ಅನೇಕ ನಾಯಕರು ಬಂಧಿತರಾದರು. ಇಡೀ ಸಂಸ್ಥಾನದಲ್ಲಿ ಧ್ವಜಸತ್ಯಾಗ್ರಹವಾಗಿ ನೂರಾರು ಜನ ಜೈಲುವಾಸ ಕಂಡರು. ಏಪ್ರಿಲ್ ತಿಂಗಳ ಕೊನೆಗೆ ವಿದುರಾಶ್ವತ್ಥದಲ್ಲಿ ನಡೆದ ಕಾಂಗ್ರೆಸ್ ಸಭೆಯ ಕಾಲಕ್ಕೆ ಗೋಲೀಬಾರಾಗಿ ಕೆಲವರು ಸತ್ತರು. ಇದರಿಂದಾಗಿ ಸಂಸ್ಥಾನದಲ್ಲಿ ಅಪೂರ್ವ ಜಾಗೃತಿ ಉಂಟಾಯಿತು. ವಿದುರಾಶ್ವತ್ಥ **(ನೋಡಿ)** ಮೈಸೂರಿನ ಜಲಿಯನ್‌ವಾಲಾಬಾಗ್ ಎಂದು ಪ್ರಸಿದ್ಧವಾಯಿತು. ಮೈಸೂರು ಪೋಲಿಸ್ ಠಾಣೆಯ ಕಟ್ಟಡಕ್ಕೆ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂಬುದಾಗಿ ಒಬ್ಬ ಕುಖ್ಯಾತ ಬಿಳಿಯ ಪೋಲಿಸ್ ಅಧಿಕಾರಿಯೊಬ್ಬನ ಹೆಸರನ್ನು ಇಟ್ಟಾಗ ತಗಡೂರು ರಾಮಚಂದ್ರರಾಯರೂ ಎಂ. ಎನ್. ಜೋಯಿಸರೂ ಹ್ಯಾಮಿಲ್ಟನ್ ಸತ್ಯಾಗ್ರಹವನ್ನು ಸಂಘಟಿಸಲು 1929ರ ಫೆಬ್ರವರಿ 15ರಲ್ಲಿ ಅನೇಕರು ಬಂಧಿತರಾದರು. ಅದೇ ವರ್ಷ ಆಗಸ್ಟ್‌ನಲ್ಲಿ ಪ್ರತಿಬಂಧಕಾಜ್ಞೆ ಉಲ್ಲಂಘಿಸಿ ಕೋಲಾರ ಚಿನ್ನದ ಗಣಿ ಪ್ರದೇಶ ಸಂದರ್ಶಿಸಿದ ಕಾಂಗ್ರೆಸ್ ಕಾರ್ಯಸಮಿತಿಯ ಅಧ್ಯಕ್ಷ ಎಚ್. ಸಿ. ದಾಸಪ್ಪ ಹಾಗೂ 12 ಮಂದಿ ಸದಸ್ಯರನ್ನು ಬಂಧಿಸಿದಾಗ ಅಲ್ಲಿ ಸತ್ಯಾಗ್ರಹವನ್ನು ಬಿರುಸಿನಿಂದ ನಡೆಸಿ ನುರಾರು ಜನ ಬಂಧಿತರಾದರು. ಇದರ ಹಿಂದೆಯೇ ಜವಾಬ್ದಾರಿ ಸರ್ಕಾರದ ಬೇಡಿಕೆ ಒತ್ತಾಯಯಿಸಲು ಸಂಸ್ಥಾನದಲ್ಲಿ ಅರಣ್ಯಸತ್ಯಾಗ್ರಹವನ್ನು ಸೆಪ್ಟಂಬರ್‌ನಲ್ಲಿ ಆರಂಭಿಸಲು ಚಿತ್ರದುರ್ಗ ಜಿಲ್ಲೆಯ ತುರುವನೂರಲ್ಲಿ ಎಸ್. ನಿಜಲಿಂಗಪ್ಪ ಹಾಗೂ ಇತರರ ಬಂಧನವಾಯಿತು. ಅದರ ಅನಂತರ ಗ್ರಾಮಾಂತರ ಪ್ರದೇಶಗಳಲ್ಲಿ ಈ ಸತ್ಯಾಗ್ರಹ ಉಗ್ರವಾಗಿ ನಡೆದು 1600ಕ್ಕೂ ಅಧಿಕ ಜನಕ್ಕೆ ಶಿಕ್ಷೆಯಾಯಿತು. ಬಂಧಿತರಿಗೂ ಸತ್ಯಾಗ್ರಹಕ್ಕೆ ಬೆಂಬಲ ನೀಡಿದ ಗ್ರಾಮಸ್ಥರಿಗೂ ಪೋಲಿಸರು ಅಮಾನುಷ ಹಿಂಸೆ ಕೊಟ್ಟರು. ಮುಂದೆ ಗಾಂಧೀಜಿಯ ಸಲಹೆಯಂತೆ ಸತ್ಯಾಗ್ರಹ ನಿಂತು 1939–41ರ ಅವಧಿಯಲ್ಲಿ ನಡೆದ ಚುನಾವಣೆಗಳಲ್ಲಿ ಪುರಸಭೆ, ಜಿಲ್ಲಾ ಸಮಿತಿ ಮತ್ತು ಪ್ರಜಾಪ್ರತಿನಿಧಿ ಸಭೆಗಳಲ್ಲಿ ಕಾಂಗ್ರೆಸ್ ಅಪೂರ್ವ ವಿಜಯ ಗಳಿಸಿತು.

ಹೈದರಾಬಾದು ಸಂಸ್ಥಾನದಲ್ಲಿ ಮೊದಲಿನಿಂದ ಜನರ ಹಕ್ಕುಗಳ ರಕ್ಷಣೆಗೆ ಮುಂದಾದ ಸಂಸ್ಥೆ ಆರ್ಯಸಮಾಜ. 1920ರಲ್ಲಿ ರಾಯಚೂರಿನಲ್ಲಿ ಹಮ್ದರ್ದ್ ರಾಷ್ಟ್ರೀಯ ಶಾಲೆ ಆರಂಭಿಸಿದ ಪಂಡಿತ ತಾರಾನಾಥರನ್ನು ಅದೇ ವರ್ಷ ಸಂಸ್ಥಾನದಿಂದ ಗಡೀಪಾರು ಮಾಡಿದ್ದರು. ಸಂಸ್ಥಾನದಲ್ಲಿ ರಾಜಕೀಯ ಚಳವಳಿಗೆ ಇದ್ದ ವಿರೋಧವನ್ನು ಗಮನಿಸಿ, ರಾಜಕೀಯ ಉದ್ದೇಶವನ್ನೇ ಇಟ್ಟುಕೊಂಡು, ಸಾಹಿತ್ಯ ಚಟುವಟಿಕೆಗಳ ಹೆಸರಲ್ಲಿ 1934ರಲ್ಲಿ ರಾಯಚೂರಲ್ಲಿ ಕಾರವಾನ ಶ್ರೀನಿವಾಸರಾಯರು ಅಧ್ಯಕ್ಷರಾಗಿ ಹೈದರಾಬಾದು ಕರ್ನಾಟಕ ಪರಿಷತ್ತನ್ನು ಸಂಘಟಿಸಲಾಯಿತು. 1938ರಲ್ಲಿ ಹೈದರಾಬಾದು ಕಾಂಗ್ರೆಸ್ ಸ್ಥಾಪನೆ ಆದಾಗ ಈ ಪರಿಷತ್ತು ಅದರಲ್ಲಿ ಐಕ್ಯಗೊಂಡಿತು. ಕಾಂಗ್ರೆಸ್ ಮೇಲೆ ಪ್ರತಿಬಂಧ ಹೇರಿದಾಗ ಐದು ಜನರ ಪ್ರಥಮ ತಂಡ ಹೈದರಾಬಾದಿನಲ್ಲಿ ಸತ್ಯಾಗ್ರಹ ಹೂಡಲು ಅದರಲ್ಲಿ ಕನ್ನಡಿಗರಾದ ಜನಾರ್ದನರಾವ್ ದೇಸಾಯಿ ಒಬ್ಬರಾಗಿದ್ದರು. ಮತ್ತೆ ಕರ್ನಾಟಕ ಪರಿಷತ್ತನ್ನು ಸಂಘಟಿಸಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಬಿದರೆಯಲ್ಲಿ ಅದರ ಅಧಿವೇಶನವನ್ನು 1940ರಲ್ಲಿ ನಡೆಸಿದರು. ಇದೇ ಹೈದರಾಬಾದು ಕರ್ನಾಟಕದ ರಾಜಕೀಯ ಸಂಘಟನೆ ಆಯಿತು.

ಇತರ ಕನ್ನಡ ಸಂಸ್ಥಾನಗಳ ಪೈಕಿ ಸಾಂಗಲಿ, ಮಿರ್ಜಿ, ಜಮಖಂಡಿ, ಮುಧೋಳ ಹಾಗೂ ರಾಮದುರ್ಗಗಳಲ್ಲಿ ಪ್ರಜಾ ಚಳವಳಿ ಬಲವಾಗಿದ್ದು, ಬೇರೆ ಬೇರೆ ಕಿರು ಸಂಸ್ಥಾನಗಳಲ್ಲಿ ಇದ್ದ ಪ್ರಜಾ ಸಂಘಟನೆಗಳನ್ನು ಒಟ್ಟುಗೂಡಿಸಿ ಬೆಳಗಾಂವಿ ಜಿಲ್ಲೆಯ ಕುಡಚಿಯಲ್ಲಿ ದಕ್ಷಿಣ ಸಂಸ್ಥಾನಗಳ ಪ್ರಜಾಪರಿಷತ್ತನ್ನು ನಾರಿಮನ್ ಅವರ ಅಧ್ಯಕ್ಷತೆಯಲ್ಲಿ 1937ರಲ್ಲಿ ಸಂಘಟಿಸಿದರು. ಈ ಸಂಸ್ಥಾನಗಳ ಪೈಕಿ ರಾಮದುರ್ಗದಲ್ಲಿ ನಡೆದ ಚಳವಳಿ ಹಿಂಸಾರೂಪ ತಾಳಿ 1939ರ ಏಪ್ರಿಲ್‌ನಲ್ಲಿ ಎಂಟುಮಂದಿ ಪೋಲೀಸರ ಹತ್ಯೆಯಾಗಿ ಸಂಬಂಧಿಸಿದ ಆರು ಜನರಿಗೆ ಗಲ್ಲು ಶಿಕ್ಷೆ ಆದ ಪ್ರಕರಣ ಒಂದು ದುರಂತ ಘಟನೆ. ಎಲ್ಲ ಸಂಸ್ಥಾನಗಳಲ್ಲೂ ನಡೆದ ಘಟನೆಗಳು 1942ರ ಭಾರತ ಬಿಟ್ಟು ತೊಲಗಿ ಚಳವಳಿಗೆ ಹಿನ್ನೆಲೆ ಒದಗಿಸಿದವೆನ್ನಬಹುದು.

1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾದಾಗ ಬ್ರಿಟಿಷ್ ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಸರ್ಕಾರಗಳು ರಾಜೀನಾಮೆ ನೀಡಿದ್ದರ ಹಿಂದೆಯೆ ಯುದ್ಧವಿರೋಧಿ, ವೈಯಕ್ತಿಕ ಸತ್ಯಾಗ್ರಹಕ್ಕೆ ಗಾಂಧೀಜಿ ಕರೆ ನೀಡಲು ಕರ್ನಾಟಕದ ಜಿಲ್ಲೆಗಳಲ್ಲಿ ನೂರಾರು ಸತ್ಯಾಗ್ರಹಿಗಳು 1940–41ರಲ್ಲಿ ವೈಯಕ್ತಿಕ ಸತ್ಯಾಗ್ರಹ ನಡೆಸಿ ಜೈಲು ಕಂಡರು. ಇದರ ಹಿಂದೆಯೇ ಹೋರಾಡಿದ ಅಂತಿಮ ಘಟ್ಟವಾದ ಭಾರತ ಬಿಟ್ಟು ತೊಲಗಿ ಚಳವಳಿಯನ್ನು 1942ರ ಆಗಸ್ಟ್‌ನಲ್ಲಿ ಹೂಡಿದಾಗ ಸಂಸ್ಥಾನದಲ್ಲಿ ಎಲ್ಲ ಕಡೆ ಸಮಾನವಾಗಿ ಈ ಚಳವಳಿ ಸಾಗಿತು. ವಿದ್ಯಾರ್ಥಿಗಳೂ ಕಾರ್ಮಿಕರೂ ಬೃಹತ್ ಪ್ರಮಾಣದಲ್ಲಿ ಚಳವಳಿಯಲ್ಲಿ ಪಾಲುಗೊಂಡರಲ್ಲದೆ ಸರ್ಕಾರವನ್ನೇ ಸ್ಥಗಿತಗೊಳಿಸಬೇಕೆಂಬ ಉದ್ದೇಶದಿಂದ ಎಲ್ಲೆಡೆ ಬುಡಮೇಲು ಹಾಗೂ ವಿಧ್ವಂಸಕ ಕೃತ್ಯಗಳೂ ನಡೆದವು. ಚನ್ನಬಸಪ್ಪ ಅಂಬಲಿ ಅವರು ಅಧ್ಯಕ್ಷರಾಗಿದ್ದ

ಒಂದು ಕ್ರಿಯಾಸಮಿತಿ ಮುಂಬಯಿ ಕೇಂದ್ರದಿಂದ ಚಳವಳಿಗೆ ಮಾರ್ಗದರ್ಶನ ಮತ್ತು ನೆರವು ನೀಡುತ್ತಿತ್ತು. ಬೆಳಗಾಂವಿ, ಧಾರವಾಡ ಜಿಲ್ಲೆಗಳಲ್ಲೂ ಮೈಸೂರು, ಬೆಂಗಳೂರು ನಗರಗಳಲ್ಲೂ ಈ ಚಳವಳಿ ಉಗ್ರವಾಗಿತ್ತು. ಬೆಂಗಳೂರು, ಭದ್ರಾವತಿ, ಕೆ.ಜಿ.ಎಫ್, ದಾವಣಗೆರೆಗಳಲ್ಲಿ 33,000 ಕಾರ್ಮಿಕರು ಮೂರು ವಾರ ಸತತ ಸಂಪುಹೂಡಿದರು. ದೂರವಾಣಿ ತಂತಿ ಕತ್ತರಿಸುವುದು, ರೈಲುಕಂಬಿ ಕೀಳುವುದು ಎಲ್ಲೆಡೆ ಸಾಗಿತು. ಇದರಿಂದ ಬೆಂಗಳೂರು-ಗುಂತಕಲ್ಲು ನಡುವೆ ಎರಡು ವಾರ ರೈಲು ಓಡಾಟ ನಿಂತಿತು. ಕರ್ನಾಟಕದಲ್ಲಿ 26 ರೈಲು ನಿಲ್ದಾಣಗಳು ಹಾನಿಗೊಳಗಾದವು. ಬ್ರಿಟಿಷರ ವಿರುದ್ಧ ವಿಧ್ವಂಸಕ ಕೃತ್ಯ ನಡೆಸಲು ನೂರಾರು ಸ್ವಾತಂತ್ರ್ಯಯೋಧರು ಭೂಗತರಾಗಿ ಜೀವದ ಹಂಗುತೊರೆದು ಕೆಲಸಮಾಡಿದರು. ಬೆಂಗಳೂರು, ನಿಪ್ಪಾಣಿಗಳಲ್ಲಿ ಅಂಚೆಕಚೇರಿಗಳನ್ನು ಸುಟ್ಟರು. ಇದರಂತೆ ಗ್ರಾಮಚಾವಡಿ ಮುಂತಾದ ಸರ್ಕಾರೀ ಕೇಂದ್ರಗಳೂ ಹಾನಿಗೊಳಗಾದವು. ಬೆಂಗಳೂರಿನಲ್ಲಿ ಆಗಸ್ಟ್ ತಿಂಗಳಲ್ಲಿ ಗಾಂಧೀಜಿಯವರ ಬಂಧನ ಮತ್ತು ಮಹಾದೇವ ದೇಸಾಯಿಯವರ ಮರಣಗಳ ಬಗ್ಗೆ ನಡೆದ ಪ್ರತಿಭಟನಾ ಮೆರವಣಿಗೆಗಳ ಮೇಲೆ ಗೋಲೀಬಾರಾಗಿ ಅನೇಕ ಜನ ಸತ್ತರು. ಇದೇ ರೀತಿ ದಾವಣಗೆರೆಯಲ್ಲಿ5, ಬೈಲಹೊಂಗಲದಲ್ಲಿ 7, ತಿಪಟೂರು, ನಿಪ್ಪಾಣಿ, ಹುಬ್ಬಳ್ಳಿ, ಕಡಿವೆ-ಶಿವಾಪುರಗಳಲ್ಲಿ (ಬೆಳಗಾಂವಿ ಜಿಲ್ಲೆ) ಒಂದೊಂದು ಮರಣಗಳಾದವು. ಕೊಲ್ಲಾಪುರ ಸಂಸ್ಥಾನದ ಗಾರಗೋಟಿ ಎಂಬಲ್ಲಿ ಕಂದಾಯದ ಹಣ ಲೂಟಿಮಾಡಲು ಯತ್ನಿಸಿ, ನಿಪ್ಪಾಣಿಯ ಏಳು ಸ್ವಾತಂತ್ರ್ಯ ಯೋಧರು ಅಸುನೀಗಿದರು. ಹಾವೇರಿ ತಾಲ್ಲೂಕು ಹೊಸರೀತಿಯಲ್ಲಿ 1943 ಏಪ್ರಿಲ್ 1ರಂದು ಹಪ್ತೆ ಲೂಟಿಮಾಡುವ ಯತ್ನದಲ್ಲಿ ಸ್ವಾತಂತ್ರ್ಯಯೋಧರಾದ ಮೈಲಾರ ಮಹಾದೇವಪ್ಪ, ಮಡಿವಾಳರ ತಿರುಕಪ್ಪ, ಹಿರೇಮಠದ ವೀರಯ್ಯನವರು ಪೋಲಿಸರ ಗುಂಡಿಗೆ ಬಲಿಯಾದರು. ಹಾಸನ ಜಿಲ್ಲೆಯಲ್ಲಿ ಸಂತೆಸುಂಕದ ವಿರುದ್ಧ ವ್ಯಾಪಕ ಧರಣಿ ನಡೆದಿರಲು ಶ್ರವಣಬೆಳಗೊಳದಲ್ಲಿ ಪೋಲಿಸ್ ಪೇದೆ ಅಸುನೀಗಿದ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಲ್ಲಿ ಕಂದಾಯ ವಸೂಲಿ ವಿರುದ್ಧ ಪ್ರತಿಭಟಿಸಿ ಗ್ರಾಮವನ್ನು ಸ್ವತಂತ್ರ ಹಳ್ಳಿ ಎಂಬುದಾಗಿ ಸಾರಿದರು. ತಮ್ಮದೇ ಆದ ಸರ್ಕಾರ ರಚಿಸಿಕೊಂಡು ಗ್ರಾಮದ ಆಡಳಿತ ನಡೆಸತೊಡಗಿದರು. ಜನರನ್ನು ಹದ್ದಿಗೆ ತರಲು ಹೋದ ಅಮಲ್ದಾರರೂ ಪೋಲಿಸ್ ಇನ್ಸ್‌ಪೆಕ್ಟರರೂ ನಿರಾಯುಧ ಹಳ್ಳಿಗರ ಮೇಲೆ ಲಾಠಿಪ್ರಯೋಗ ನಡೆಸಿದಾಗ ರೊಚ್ಚಿಗೆದ್ದ ಜನರ ಏಟಿನಿಂದ ಅಮಲ್ದಾರರೂ ಪೋಲಿಸ್ ಅಧಿಕಾರಿಯೂ ಸತ್ತರು. ಈ ಪ್ರಕರಣದಲ್ಲಿ ಪೋಲಿಸರ ದೌರ್ಜನ್ಯಕ್ಕೆ ಆ ಊರವರು ಒಳಗಾದರಲ್ಲದೆ 1943ರ ಮಾರ್ಚ್‌ನಲ್ಲಿ ಐದು ಮಂದಿಯನ್ನು ಗಲ್ಲಿಗೇರಿಸಿ ಅಂದಿನ ಬ್ರಿಟಿಷ್ ಸರ್ಕಾರ ತನ್ನ ಸೇಡನ್ನು ತೀರಿಸಿಕೊಂಡಿತು. 1942-43ರಲ್ಲಿ ಚಳವಳಿ ಉಗ್ರವಾಗಿ ಸಾಗಿತು. ಇಡೀ ಕರ್ನಾಟಕದಲ್ಲಿ 7,000 ಜನ ಶಿಕ್ಷೆಗೆ ಒಳಗಾದರು. ಕೊಡಗಿನಿಂದ 50 ಜನರೂ ಹೈದರಾಬಾದು ಕರ್ನಾಟಕದಿಂದ 200 ಜನರೂ ಆಗ ಜೈಲಿಗೆ ಹೋದರು. 1944ರ ಆಗಸ್ಟ್‌ನಲ್ಲಿ ಕ್ರಿಯಾಸಮಿತಿಯ ಸದಸ್ಯರಾಗಿದ್ದು ಭೂಗತರಾಗಿದ್ದ ರಂಗನಾಥ ದಿವಾಕರರು ಪೋಲಿಸರಿಗೆ ಶರಣಾಗುವವರೆಗೆ ಕರ್ನಾಟಕದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಚಳವಳಿ ಸಾಗಿಯೇ ಇತ್ತು. ಕೋಲಾರ ಜಿಲ್ಲೆಯ ವಿದುರಾಶ್ವತ್ಥದಲ್ಲಿ ನಡೆದ ದಂಗೆ ಇತಿಹಾಸ ಪ್ರಸಿದ್ಧವಾಗಿದೆ.

ದೇಶ ಸ್ವತಂತ್ರವಾದ ಮೇಲೆ ಮೈಸೂರು ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ಸೇರಿಸಲು ಚಳವಳಿ ನಡೆಯಿತು. ಎಲ್ಲ ಪ್ರಮುಖ ಊರುಗಳಿಂದ ಮೈಸೂರಿಗೆ ಸತ್ಯಾಗ್ರಹಿಗಳ ಜಾಥಾ ಕಾಲ್ನಡಿಗೆಯಿಂದ ಸಾಗಿದುದರ ಜೊತೆಗೆ ತಾಲ್ಲೂಕು ಕಚೇರಿಗಳ ಮುಂದೆ ಧರಣಿ ಮುಂತಾದವೂ ಸಂಸ್ಥಾನದ ಗಡಿಯಾಚೆಯ ಶಿಬಿರಗಳಿಂದ ಸಂಸ್ಥಾನದಲ್ಲಿ ಕೆಲವು ವಿಧ್ವಂಸಕ ಕೃತ್ಯಗಳೂ ನಡೆದವು. ಈ ಅಲ್ಪಕಾಲದ ಚಳವಳಿಯಲ್ಲಿ ಸುಮಾರು 20 ಜನ ಅಸುನೀಗಿದರು. ಕಡೆಗೆ 42 ದಿನಗಳ ತೀವ್ರ ಸತ್ಯಾಗ್ರಹದ ನಂತರ ಕೆ. ಸಿ. ರೆಡ್ಡಿಯವರ ನೇತೃತ್ವದಲ್ಲಿ 1947 ಅಕ್ಟೋಬರ್ 24ರಂದು ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಿ ಮೈಸೂರು ಭಾರತದ ಒಕ್ಕೂಟದಲ್ಲಿ ಸೇರಿತು.

ಹೈದರಾಬಾದಿನಲ್ಲಿ 1948ರ ಸೆಪ್ಟೆಂಬರಿನಲ್ಲಿ ಪೋಲಿಸ್ ಕಾರ್ಯಾಚರಣೆ ಆಗುವವರೆಗೂ ಸ್ಫೋಟಕ ಪರಿಸ್ಥಿತಿ ಮುಂದುವರಿಯಿತು. ಹೈದರಾಬಾದು ಕರ್ನಾಟಕದ ನೂರಾರು ತರುಣರು ಈ ಕಾಲದಲ್ಲಿ ಒಕ್ಕೂಟದ ಪರ ಚಳವಳಿ ನಡೆಸಿ ಜೈಲು ಸೇರಿದರು. ಹೈದರಾಬಾದಿನ ಮತಾಂಧ ರಜಾಕಾರರು ಈ ಕಾಲದಲ್ಲಿ ನಡೆಸಿದ ಹಿಂಸೆ, ಅನಾಚಾರ, ಕೊಲೆಸುಲಿಗೆಗಳು ಲೆಕ್ಕವಿಲ್ಲದಷ್ಟು. ಈ ರಜಾಕಾರರಿಂದ ಪ್ರಾಣ, ಮಾನ ಕಳೆದುಕೊಂಡವರೆಷ್ಟೋ ಮಂದಿ. ಸಾವಿರಾರು ಮಂದಿ ನಿರಾಶ್ರಿತರಾದರು. ಈ ಕಾಲದಲ್ಲಿ ಕರ್ನಾಟಕದ ನೂರಾರು ಜನ ಗಡಿಯ ಈಚೆ ಶಿಬಿರಗಳನ್ನು ಏರ್ಪಡಿಸಿ ಗಡಿಯೊಳಗಿನ ಜನರಿಗೆ ರಜಾಕಾರರಿಂದ ರಕ್ಷಣೆ ನೀಡಲು ತಿಂಗಳುಗಟ್ಟಲೆ ಸಶಸ್ತ್ರರಾಗಿ ದುಡಿಯಬೇಕಾಯಿತು. ಈ ಕಾಲದಲ್ಲಿ ಕನ್ನಡಿಗರೇ ಆದ ಸ್ವಾಮಿ ರಮಾನಂದ ತೀರ್ಥರು ಹೈದರಾಬಾದು ಸಂಸ್ಥಾನದ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಜನರಿಗೆ ಯೋಗ್ಯ ಮಾರ್ಗದರ್ಶನ ನೀಡಿದರು. ಇಲ್ಲಿ ಉಲ್ಲೇಖಿಸಿರುವ ಸ್ವಾತಂತ್ರ್ಯ ವೀರರುಗಳಲ್ಲದೆ ಇತರ ಸಾವಿರಾರು ಮಂದಿ ವೀರರು ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ತಮ್ಮ ಪ್ರಾಣ ಅರ್ಪಿಸಿದ್ದಾರೆ. ಎಷ್ಟೋ ಮಂದಿ ಗುಪ್ತವಾಗಿ ಕಾರ್ಯಾಚರಣೆ ನಡೆಸಿ ಯಾರಿಗೂ ತಿಳಿಯದಂತೆಯೇ ಪೋಲಿಸರ ಗುಂಡಿಗೆ ಬಲಿಯಾಗಿದ್ದಾರೆ. ಹೀಗೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಅಪಾರ. **(ಎಸ್.ಕೆ.;ಎ.ಎಂ.)**

**ಸ್ವಾಮಿ, ಬಿ.ಜಿ.ಎಲ್.**: 1918-80. ವಿಜ್ಞಾನ ವಿಷಯಗಳನ್ನು ಸಾಹಿತ್ಯದಷ್ಟೇ ಸುಲಲಿತವಾಗಿ ಮನರಂಜಕವಾಗಿ ಹೇಳಬಹುದು ಎಂದು ತೋರಿಸಿಕೊಟ್ಟ ವಿಜ್ಞಾನಿ-ಸಾಹಿತಿ. ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ ಎಂಬುದು ಇವರ ಪೂರ್ಣ ಹೆಸರು. 1918ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಕನ್ನಡ ಸಾಹಿತ್ಯಕ್ಷೇತ್ರದ ದಿಗ್ಗಜರಲ್ಲಿ ಒಬ್ಬರಾದ ಡಿ.ವಿ. ಗುಂಡಪ್ಪನವರು ಇವರ ತಂದೆ; ತಾಯಿ ಭಾಗೀರಥಮ್ಮ. ಸ್ವಾಮಿಯವರ ಮನೆಮಾತು ತಮಿಳು. ಜೊತೆಗೆ ಇವರ ಹಿರಿಯರು ಮುಳಬಾಗಲು ಮುಂತಾದ ಕಡೆಗಳಲ್ಲಿ ಇದ್ದುದರಿಂದ ಇವರಿಗೆ ತೆಲುಗು ಭಾಷೆಯ ಪರಿಚಯವೂ ಇತ್ತು.

1930ರಲ್ಲಿ ಸಸ್ಯಶಾಸ್ತ್ರದ ಬಿ.ಎಸ್‌ಸಿ. (ಆನರ್ಸ್) ಮುಗಿಸಿದ ಇವರು 1945ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಡಿ.ಎಸ್‌ಸಿ. ಪದವಿ ಪಡೆದರು. ಡಿ.ಎಸ್‌ಸಿ. ಬರುವುದಕ್ಕೆ ಸ್ವಲ್ಪ ಮುಂಚೆ ಅಮೆರಿಕದ ಪ್ರಖ್ಯಾತ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸಿದರು. ಭಾರತಕ್ಕೆ ಹಿಂದಿರುಗಿದ ಮೇಲೆ 1953ರಲ್ಲಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಮುಖ್ಯ ಪ್ರಾಧ್ಯಾಪಕರಾಗಿ ನೇಮಕವಾದರು. ಕೆಲವು ವರ್ಷ ಅಲ್ಲೇ ಪ್ರಿನ್ಸಿಪಾಲರೂ ಆಗಿದ್ದರು. 1978ರಲ್ಲಿ ನಿವೃತ್ತರಾದರು.

ಸ್ವಾಮಿಯವರು ಸಸ್ಯಶಾಸ್ತ್ರದಲ್ಲಿ ಪ್ರಥಮ ದರ್ಜೆಯ ಸಂಶೋಧಕರು. ವಿದ್ಯಾರ್ಥಿದೆಸೆಯಿಂದಲೇ ಸಂಶೋಧನೆಯ ಜೊತೆಗೆ ಬರೆಯುವ ಹವ್ಯಾಸವನ್ನೂ ಬೆಳೆಸಿಕೊಂಡು ಬಂದರು. ಇವರ ಬರೆಹಗಳನ್ನು ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ಸಂಶೋಧನ ಲೇಖನಗಳು, ವಿಜ್ಞಾನ ಕೃತಿಗಳು, ವಿಜ್ಞಾನೇತರ ಕೃತಿಗಳು, ಚರಿತ್ರೆಗೆ ಸಂಬಂಧಿಸಿದ ಸಂಶೋಧನ ಕೃತಿಗಳು ಎಂದು ನಾಲ್ಕು ವಿಭಾಗಗಳಲ್ಲಿ ವರ್ಗೀಕರಿಸಬಹುದು. ಇವರಿಗೆ ಶಾಸ್ತ್ರ ವಿಷಯಗಳಲ್ಲಿ ಬರೆಯುವ ಹುಮ್ಮಸ್ಸು ಮತ್ತು ಉತ್ತೇಜನ ದೊರೆತಿದ್ದು ಎ. ಆರ್. ಕೃಷ್ಣಶಾಸ್ತ್ರಿಗಳಿಂದ. ಸ್ವಾಮಿಯವರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯದರ್ಶಿಗಳಾಗಿದ್ದ ಸಂದರ್ಭದಲ್ಲಿ 1936-37 ಸಂಘದ

ಅಧ್ಯಕ್ಷರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳು ಸಸ್ಯಶಾಸ್ತ್ರದ ಬಗ್ಗೆ ಏನನ್ನಾದರೂ ಬರೆಯುವಂತೆ ಇವರನ್ನು ಒತ್ತಾಯಿಸುತ್ತಿದ್ದರು. ಸ್ವಾಮಿಯವರು ಕಾಲೇಜನ್ನು ಬಿಟ್ಟರೂ ಕೃಷ್ಣಶಾಸ್ತ್ರಿಗಳು ಇವರನ್ನು ಬಿಡಲಿಲ್ಲ. ಹಿಂದೂ ಪತ್ರಿಕೆಯಲ್ಲಿ ಕದಂಬ ಮರದ ವಿಚಾರ ಒಂದು ಟಿಪ್ಪಣಿ ಪ್ರಕಟವಾಗಿತ್ತು. ಕೃಷ್ಣಶಾಸ್ತ್ರಿಗಳು ಅದನ್ನು ಕತ್ತರಿಸಿ ಕಳಿಸಿ ಜತೆಯಲ್ಲಿ ಇದರ ವಿಷಯವಾಗಿ ಕನ್ನಡದಲ್ಲಿ ಬರೆದು ಕೊಡುತ್ತೀಯ ಎಂದು ಕೇಳಿ ಒಂದು ಕಾಗದ ಬರೆದರು. ತತ್ಫಲವಾಗಿ 1941ರ ಪ್ರಬುದ್ಧ ಕರ್ಣಾಟಕದಲ್ಲಿ ಕದಂಬ ಲೇಖನ ಪ್ರಕಟವಾಯಿತು. ಇದಕ್ಕೂ ಮುನ್ನ ಕ್ರಮವಾಗಿ 1939-1940ರಲ್ಲಿ ಪ್ರಬುದ್ಧ ಕರ್ಣಾಟಕದಲ್ಲಿ ಆರ್ಜಿತ ಗುಣಗಳೂ ಆನುವಂಶೀಯತೆಯೂ ಮತ್ತು ಲಿಂಗ ಜಾತಿಯ ಪರಸ್ಪರ ಪರಿಣಾಮ ಎಂಬ ಲೇಖನಗಳು ಪ್ರಕಟವಾಗಿದ್ದವು. 1941ರಲ್ಲಿ ಕನ್ನಡ ನುಡಿಯಲ್ಲಿ ವಿಜ್ಞಾನ ವಿಹಾರ ವೆಂಬ ಶೀರ್ಷಿಕೆಯುಲ್ಲಿ ಪ್ರಣಯಪ್ರಸಂಗ, ಪ್ಲಾಟಿಪಸ್, ಜೇಡನ ಚರಕ ಮತ್ತು ಹಸಿವಿನ ಬಳ್ಳಿ ಎಂಬ ಲಘು ಪ್ರಬಂಧಗಳು ಪ್ರಕಟವಾದವು. 1946ರ ಸುಮಾರಿನಲ್ಲಿ ಇವರ ಎರಡು ಕೃತಿಗಳು ಪ್ರಕಟವಾದುವು-ಮೊದಲನೆಯದು ವಧೂವರರಿಗೆ ಎಂಬ ಹೆಸರಿನ ಆರೋಗ್ಯ ವಿಜ್ಞಾನದ ಪುಸ್ತಕ; ಎರಡನೆಯದು ಬಯಾಗ್ರಫಿ ಆಫ್ ದಿ ಅನ್‌ಬಾರ್ನ್ ಎಂಬುದರ ಅನುವಾದ.



ದೌರ್ಗಂಧಿಕಾಪಹರಣ ಎಂಬುದು ಇವರ ಮೊದಲ ಶಾಸ್ತ್ರಗ್ರಂಥ. ಶಾಸನಗಳಲ್ಲಿ ಗಿಡಮರಗಳು ಎಂಬ ಕೃತಿ 1975ರಲ್ಲಿ ಪ್ರಕಟವಾಯಿತು. ಹಸುರು ಹೊನ್ನು (1976), ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ (1978)- ಇವು ಜನಪ್ರಿಯ ವಿಜ್ಞಾನ ಪುಸ್ತಕಗಳು. ನಾವು ದಿನವೂ ಬಳಸುವ ನಮ್ಮದೇ ಎಂದು ಭಾವಿಸುವ ವಿದೇಶಿ ಕಾಯಿಪಲ್ಲೆಗಳ ಬಗ್ಗೆ ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ ಸ್ವಾರಸ್ಯಕರವಾಗಿ ತಿಳಿಸುತ್ತದೆ. ಇಂಥ ಜನಪ್ರಿಯ ಪುಸ್ತಕವನ್ನು ಬರೆಯಲು 400 ಲೇಖನಗಳು ಮತ್ತು ಗ್ರಂಥಗಳನ್ನು ಪರಿಶೀಲಿಸಿದ್ದಾರೆಂದರೆ ಇವರ ಅಧ್ಯಯನಶೀಲತೆಯನ್ನು ಅರಿಯಬಹುದು. ಹಸುರು ಹೊನ್ನು ಜನಪ್ರಿಯ ವಿಜ್ಞಾನದ ಪುಸ್ತಕಗಳಲ್ಲಿ ಗಮನಾರ್ಹವಾದುದು ಎಂಬುದು ಹಲವಾರು ವಿದ್ವಾಂಸರ ಅಭಿಮತ.

ಕನ್ನಡ ಸಾಹಿತ್ಯಕ್ಕೂ ಸ್ವಾಮಿಯವರಿಗೂ ಚಿಕ್ಕಂದಿನಿಂದಲೇ ನಂಟು; ತಂದೆಯವರು ಕೊಟ್ಟ ಹಸ್ತಪ್ರತಿ ಅಥವಾ ಅಚ್ಚಾದ ಹಾಳೆಗಳನ್ನು ವೆಂಕಣ್ಣಯ್ಯನವರಿಗೆ, ಬೆಳ್ಳಾವೆ ವೆಂಕಟನಾರಣಪ್ಪನವರಿಗೆ ಕೊಟ್ಟು ಬರುವುದು ಇವರ ಕೆಲಸವಾಗಿತ್ತು. ಸಾಹಿತಿಗಳ ಸತ್ಸಂಗದಿಂದ ಇವರಿಗೆ ಉತ್ತಮ ಗ್ರಂಥಗಳ ಪರಿಚಯವಾಯಿತು. ಓದು ಬರೆಹದ ಹವ್ಯಾಸ ಬೆಳೆಸಿಕೊಂಡರು. ಕನ್ನಡದ ಉತ್ತಮ ಗ್ರಂಥಗಳ ಪರಿಚಯವಾಗಲು ಕಾರಣವಾಯಿತು.

1947ರಲ್ಲಿ ಕೊರವಂಜಿ ಮಾಸಪತ್ರಿಕೆಯಲ್ಲಿ ಇವರು ಬರೆದ ಮೀನಾಕ್ಷಿಯ ಸೌಗಂಧ ಎಂಬ ಹಾಸ್ಯರಸಪೂರ್ಣವಾದ ರೂಪಕ ಪ್ರಕಟವಾಯಿತು. ಅಮೆರಿಕದಿಂದ ಹಿಂದಿರುಗಿದ ಮೇಲೆ ಅಮೆರಿಕದಲ್ಲಿ ನಾನು ಎಂಬ ಲೇಖನಮಾಲೆಯನ್ನು ಬರೆದರು. 1962ರಲ್ಲಿ ಇದು ಪುಸ್ತಕರೂಪದಲ್ಲಿ ಪ್ರಕಟವಾಯಿತು. ಮದರಾಸಿಗೆ ಹೋದಮೇಲೆ ತಮಿಳನ್ನು ಕಲಿತು ದಿವಂಗತ ಸುಬ್ರಹ್ಮಣ್ಯ ಭಾರತಿ ಅವರ ನವತಂತ್ರದ ಕತೆಗಳು ಎಂಬ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು (1959). ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಹಾಗೂ ಐವರು ಪ್ರಸಿದ್ಧ ಕನ್ನಡ ಸಾಹಿತಿಗಳನ್ನು ಕುರಿತು ಲಲಿತ ಶೈಲಿಯಲ್ಲಿ ಇವರು ಬರೆದ ಪಂಚಕಲಶ ಗೋಪುರ 1964ರಲ್ಲಿ ಪ್ರಕಟವಾಯಿತು.

ಚಲನಚಿತ್ರವಾಗಿರುವ ಇವರ ಪ್ರಸಿದ್ಧ ಕೃತಿ ಕಾಲೇಜುರಂಗ ರಚಿತವಾದ ಬಗೆ ಸ್ವಾರಸ್ಯವಾಗಿದೆ. ಸ್ವಾಮಿಯವರ ಧರ್ಮಪತ್ನಿ ವಸಂತ ಅವರು ಕಾಯಿಲೆಯಿಂದ ಬಳಲಿ ಕುಗ್ಗಿ ಖಿನ್ನರಾಗಿದ್ದರು. ಅವರ ಮನಸ್ಸನ್ನು ಹಗುರವಾಗಿಡುವುದು ಅಗತ್ಯವಾಗಿತ್ತು. ಇದನ್ನು ಮನಗಂಡು ಸ್ವಾಮಿಯವರು ತಮ್ಮ ಅಧ್ಯಾಪಕ ವೃತ್ತಿಯ ಸರಸ ಘಟನೆಗಳನ್ನು ದಿನವೂ ಹೇಳತೊಡಗಿದರು. ಅನಂತರ ಈ ಘಟನೆಗಳನ್ನೇ ಹೆಣೆದು ಪುಸ್ತಕರೂಪದಲ್ಲಿ ಬರೆದರು. ಇಲ್ಲಿನ ವ್ಯಂಗ್ಯ ವಿಡಂಬನೆಗಳಲ್ಲಿ ತಮ್ಮ ಸ್ವಾಮಿತನವೊಂದನ್ನು ಸ್ಥಾಪಿಸಿದರು. ಇದೇ ರೀತಿಯ ಇವರ ಇನ್ನೊಂದು ಪುಸ್ತಕ ಕಾಲೇಜುತರಂಗ. ಕಾಲೇಜುರಂಗಕ್ಕೆ ರಾಜ್ಯ ಸಾಹಿತ್ಯ ಅಕಾಡಮಿ ಮತ್ತು ಕ್ರಿಶ್ಚಿಯನ್ ಲಿಟರರಿ ಸೊಸೈಟಿಗಳ ಬಹುಮಾನ ಬಂದಿದೆ.

ಸ್ವಾಮಿಯವರು ಸಸ್ಯಶಾಸ್ತ್ರದಲ್ಲಿ ಪರಿಣತರಾಗಿದ್ದದ್ದು, ಸಾಹಿತ್ಯದಲ್ಲಿ ಆಳವಾದ ಜ್ಞಾನ ಪಡೆದಿದ್ದದ್ದು ಆಶ್ಚರ್ಯವಿಲ್ಲ. ಆದರೆ ಚರಿತ್ರೆಯಲ್ಲಿ ಹೆಚ್ಚಿನ ಜ್ಞಾನಗಳಿಸಿದ್ದು ವಿಶೇಷ. ಇವರಿಗೆ ಚರಿತ್ರೆಯಲ್ಲಿ ಆಸಕ್ತಿ ಬೆಳೆದದ್ದು ಹೀಗೆ: ಸುಮಾರು ವರ್ಷಗಳ ಹಿಂದೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಪ್ರೆಸಿಡೆನ್ಸಿ ಕಾಲೇಜಿಗೆ ಒಂದು ಕಾಗದ ಬಂತು. ಅಲ್ಲಿ ಸಸ್ಯಶಾಸ್ತ್ರ ಚರಿತ್ರೆಯನ್ನು ಬೋಧಿಸಲು ಸೂಚನೆಯಿತ್ತು. ಗ್ರಂಥಗಳನ್ನು ತಿರುವಿ ಹಾಕಿದಾಗ ಕೇವಲ ಪಾಶ್ಚಿಮಾತ್ಯರ ಸಸ್ಯಶಾಸ್ತ್ರ ಚರಿತ್ರೆಯೇ ಕಾಣುತ್ತಿತ್ತು. ಭಾರತದ ಹೆಸರು ಎಲ್ಲೂ ಇರಲಿಲ್ಲ. ಸಾವಿರಾರು ವರ್ಷಗಳ ಚರಿತ್ರೆಯಿರುವ ಭಾರತದಲ್ಲಿ ಜನರಿಗೆ ಎಂದೂ ಸಸ್ಯಗಳ ಸಂಪರ್ಕವೇ ಇರಲಿಲ್ಲವೆ ಎಂದು ಇವರಿಗೆ ಆಶ್ಚರ್ಯವಾಯಿತು. ಇದನ್ನು ತಿಳಿಯುವ ಕುತೂಹಲದಿಂದ ಶಾಸನ ಮುಂತಾದವುಗಳ ಅಭ್ಯಾಸದಲ್ಲಿ ತೊಡಗಿದರು. ಇದರ ಫಲಿತಾಂಶವನ್ನು ಇವರ ಸಸ್ಯಶಾಸ್ತ್ರ ಗ್ರಂಥಗಳಲ್ಲೂ ಕಾಣಬಹುದು. ದಿ ಡೇಟ್ ಆಫ್ ತೇವರಾಮ್, ಎನ್ ಅನ್ಯಾಲಿಸಿಸ್ ಅಂಡ್ ರೀ ಅಪ್ರೈಸಲ್ (1975) ಮುಂತಾದ 15 ಶುದ್ಧ ಚಾರಿತ್ರಿಕ ಲೇಖನಗಳನ್ನು ಬರೆದಿದ್ದಾರೆ. ಇವರ ಕೆಲವು ಲೇಖನಗಳು ತೆಲುಗಿಗೂ ಅನುವಾದವಾಗಿವೆ.

ಕನ್ನಡವಲ್ಲದೆ ಇವರು ತಮಿಳು ಮತ್ತು ಇಂಗ್ಲಿಷ್‌ನಲ್ಲೂ ಪುಸ್ತಕಗಳನ್ನು ರಚಿಸಿದ್ದಾರೆ. ತಮಿಳು ಬೋಧೆಯಿನ್ ಪಾದೆಯಿಲ್ 1978ರಲ್ಲಿ ಪ್ರಕಟವಾಯಿತು. ಫ್ರಂ ಫ್ಲವರ್ ಟು ಫ್ರೂಟ್ ಇವರ ಇಂಗ್ಲಿಷ್ ಪುಸ್ತಕ.

1940 ರಿಂದ 1978ರ ವರೆಗೆ ಪ್ರಕಟವಾಗಿರುವ ಇವರ ಸಂಶೋಧನ ಲೇಖನಗಳು ಸುಮಾರು 300. ಇವುಗಳಲ್ಲಿ ಅನೇಕವು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸಸ್ಯಶಾಸ್ತ್ರಕ್ಕೆ ಇವರ ಕೊಡುಗೆಯನ್ನು ಮೆಚ್ಚಿ ಬೀರ್ಬಲ್ ಸಾಹ್ನಿ ಚಿನ್ನದ ಪದಕವನ್ನು ಕೊಡಲಾಯಿತು. ಇವರು 1973-74ರಲ್ಲಿ ರಾಷ್ಟ್ರೀಯ ಪ್ರಾಧ್ಯಾಪಕರಾಗಿದ್ದರು. ಕೆಲಕಾಲ ಮರಾಠವಾಡ ವಿಶ್ವವಿದ್ಯಾಲಯಕ್ಕೆ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು. ಇವರು 1975ರಲ್ಲಿ ರಷ್ಯದ ಲೆನಿನ್‌ಗ್ರಾಡ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಸ್ಯಶಾಸ್ತ್ರ ಸಮ್ಮೇಳನದ ಉಪಾಧ್ಯಕ್ಷರಾಗಿದ್ದರು. ಇವರ ಹಸುರು ಹೊನ್ನು ಕೃತಿಗೆ 1978ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಚಿತ್ರಕಲೆ, ಸಂಗೀತ ಇವರಿಗೆ ಆಸಕ್ತಿಯ ಇತರ ಹವ್ಯಾಸಗಳಾಗಿದ್ದವು. ಇವರು 1980ರಲ್ಲಿ ನಿಧನರಾದರು.

(ಕೆ.ಆರ್.ಎಂ.)

**ಸ್ವಾಮಿ, ಎಸ್. ಎನ್.:** ಭಾವಚಿತ್ರ ರಚನೆಯಿಂದಲೇ ಪ್ರಖ್ಯಾತರಾದ ಮೈಸೂರಿನ ಕಲಾವಿದರು. ತಂದೆ ಸ್ವರ್ಣಕಲಾನಿಪುಣರೆಂಬ ಬಿರುದು ಪಡೆದಿದ್ದ ಶಿಲ್ಪಕಲಾಪಿತಾಮಹ ಸಿಂಗಣ್ಣಾಚಾರ್ಯ. ಸ್ವಾಮಿಯವರು ಮೈಸೂರಿನಲ್ಲಿ ಜನಿಸಿದರು. ಬಾಲ್ಯದಿಂದಲೂ ಕಲೆಯ ಒಂದು ಮಧುರ ಸನ್ನಿವೇಶದಲ್ಲಿ ಬೆಳೆದುಬಂದ ಇವರಿಗೆ ಕಲೆಯಲ್ಲಿ ಒಳ್ಳೆಯ ಆಸಕ್ತಿ ಮೂಡಿತು. ತಂದೆ ಕಡೆಯುತ್ತಿದ್ದ ಮೂರ್ತಿಗಳನ್ನು ನೋಡಿ ತಾವೂ ಒಬ್ಬ ಕಲೆಗಾರರಾಗಬೇಕೆಂಬ ಮಹದಾಸೆ ಅಂಕುರಿಸಿತು. ರೇಖಾಚಿತ್ರಗಳನ್ನು ಅಭ್ಯಸಿಸುತ್ತ ಬಂದರು. ಪುರಭವನದಲ್ಲಿ ಪುರಸಭೆಯವರು ಏರ್ಪಡಿಸಿದ ವಸ್ತುಪ್ರದರ್ಶನದಲ್ಲಿ ನರಸಿಂಹಸ್ವಾಮಿಯವರು ತಮ್ಮ ಹದಿನೈದನೆಯ ವಯಸ್ಸಿನಲ್ಲೇ ರಜತ ಪಾರಿತೋಷಕ ಪಡೆದು ಒಪ್ಪೊತ್ತಿನ ವಿದ್ಯಾರ್ಥಿಯಾಗಿ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕೇಶವಯ್ಯನವರಂಥ ಪ್ರಸಿದ್ಧ ಕಲಾವಿದರ ಕೈಕೆಳಗೆ ವ್ಯಾಸಂಗ ಮಾಡತೊಡಗಿದರು. ತಮ್ಮ ಮಗನನ್ನು ಒಬ್ಬ ಪದವೀಧರ ನನ್ನಾಗಿ ಮಾಡಬೇಕೆಂದು ಸಿಂಗಣ್ಣಾಚಾರ್ಯರಿಗೆ ಮೊದಲಿನಿಂದಲೂ ಆಸಕ್ತಿ ಇತ್ತು. ಆದರೆ ಸ್ವಾಮಿಯವರ ಅತೀವವಾದ ಕಲಾಭಿರುಚಿ ವಿದ್ಯಾಭ್ಯಾಸಕ್ಕೆ ಅಡ್ಡಿಯನ್ನು ತಂದೊಡ್ಡಿತು. ಮೈಸೂರಿನ ಮಿಷನ್ ಹೈಸ್ಕೂಲಿನಲ್ಲಿ ಮೆಟ್ರಿಕ್ ಪರೀಕ್ಷೆಯವರೆಗೂ ಓದಿ ವ್ಯಾಸಂಗವನ್ನು ಕೈಬಿಟ್ಟರು. ಅನಂತರ ಮದರಾಸಿನ ಕಲಾಪರೀಕ್ಷೆಗಳಿಗೆ ಖಾಸಗಿಯಾಗಿ ಕೂಡುತ್ತ ಬಂದರು. ಈ ಮಧ್ಯೆ ತಂದೆಯವರ ಜೊತೆಯಲ್ಲಿ ಅರಮನೆಗೆ ಹೋಗಿಬರುವ ಒಂದು ಸುಯೋಗವೂ ಆ ಮೂಲಕ ಆಗಿನ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ದೃಷ್ಟಿಗೆ ಬೀಳುವ ಸೌಭಾಗ್ಯವೂ ಇವರ ಪಾಲಿಗೆ ದೊರಕಿತು. ಮಹಾರಾಜರ ಪ್ರೋತ್ಸಾಹದಿಂದಾಗಿ ಸ್ವಾಮಿಯವರು ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಶಾಲೆಯಲ್ಲಿ ತಮ್ಮ ಕಲಾವ್ಯಾಸಂಗವನ್ನು ಪ್ರಾರಂಭಿಸಿದರು (1930). ಅಲ್ಲಿ ಅನೇಕ ಹಿರಿಯ ಕಲಾವಿದರ ಸಹವಾಸ, ಸಂಪರ್ಕ ದೊರಕಿ ಭಾವಚಿತ್ರ ರಚನೆಯಲ್ಲಿ ಸ್ವಾಮಿಯವರ ಕೈ ಚೆನ್ನಾಗಿ ಪಳಗಿತು.

ನರಸಿಂಹಸ್ವಾಮಿಗಳು ಇದ್ದಿಲಿನಿಂದ ಬಿಡಿಸಿದ ಮಹಾರಾಷ್ಟ್ರ ವನಿತೆಯೊಬ್ಬಳ ಮೈ ಮಾಡೆಲ್ ಎಂಬ ಭಾವಚಿತ್ರಕ್ಕೆ ಸಿಮ್ಲಾ ಕಲಾಪ್ರದರ್ಶನದಲ್ಲಿ ಸುವರ್ಣಪದಕ ಬಂತು. ಮೈಸೂರಿನ ದಸರ ಕಲಾಪ್ರದರ್ಶನದಲ್ಲೂ ಎಸ್.ಜಿ. ಶಾಸ್ತ್ರಿಗಳವರ ಬಹುಮಾನವೂ ಅದಕ್ಕೆ ದೊರಕಿತು. ಮುಂಬಯಿಯ ಚೋರ್ ಬಜಾರಿಗೆ ನಿತ್ಯವೂ ಹೋಗಿಬರುತ್ತ ಸ್ವಾಮಿಗಳು ಅನೇಕ ರೇಖಾಚಿತ್ರಗಳನ್ನು ಬರೆದರು. ಮದರಾಸಿನ ಕಲಾಪ್ರದರ್ಶನಗಳಲ್ಲಿ ಇವರ ಕೃತಿಗೆ ಬಹುಮಾನ ಬಂದಿತು. ಕಲಾವಿದ ಸರ್‌ದೇಸಾಯಿಯವರು ಇವರನ್ನು ಮನೆಯಲ್ಲಿ ಇಟ್ಟುಕೊಂಡು ಪ್ರೀತಿವಿಶ್ವಾಸಗಳನ್ನು ತೋರಿಸಿ ಪ್ರೋತ್ಸಾಹಿಸಿದರು. ಮುಂಬಯಿಯಲ್ಲಿ ಭಾವಚಿತ್ರ ರಚನಾಸಾಮರ್ಥ್ಯದಲ್ಲಿ ಕೀರ್ತಿಶಿಖರವನ್ನೇರಿದ್ದವರೆಂದರೆ ಅಗಸ್ಕರ್ ಎಂಬ ಕಲಾವಿದರು. ಇವರಿಂದ ಸ್ವಾಮಿಗಳು ರೇಖಾವಿನ್ಯಾಸಕ್ಕೆ ಅದೆಷ್ಟು ಮಹತ್ತ್ವವಿದೆಯೆಂಬುದನ್ನು ಅರಿತರು.

ಮುಂಬಯಿಯಲ್ಲಿ ವ್ಯಾಸಂಗವನ್ನು ಮುಗಿಸಿ ಮರಳಿದ ಅನಂತರ ಸ್ವಾಮಿಯವರು 1934ರಲ್ಲಿ ವಿಶ್ವಕವಿ ರವೀಂದ್ರರ ಭಾವಚಿತ್ರವನ್ನು ಛಾಯಾಚಿತ್ರ ಒಂದರ ಆಧಾರದಿಂದ ರಚಿಸಿ, ರವೀಂದ್ರರಿಂದಲೇ ಪ್ರಶಂಸೆ ಪಡೆದರು. ಅಲ್ಲಿಂದಾಚೆಗೆ ಸ್ವಾಮಿಯವರು ಸಾಮ್ರಾಟ ಸಾಮ್ರಾಜ್ಞಿಯವರನ್ನು, ರಾಜಕೀಯ ಧುರೀಣರನ್ನು, ತತ್ತ್ವಜ್ಞಾನಿಗಳು, ಕವಿಕುಲತಿಲಕರನ್ನು, ನಾಟಕಕಾರರನ್ನು, ಮಹಾವಿಜ್ಞಾನಿಗಳನ್ನು, ಸುಪ್ರಸಿದ್ಧ ನಟನಟಿಯರನ್ನು ಭಾವಚಿತ್ರಗಳ ವಸ್ತುವಾಗಿ ಬಳಸಿಕೊಂಡು ಚಿತ್ರರಚನೆಯಲ್ಲಿ ಯಶಸ್ಸನ್ನು ಪಡೆದರು. ಸ್ವಾಮಿಯವರು ರಚಿಸಿದ ಪ್ರಸಿದ್ಧ ಭಾವಚಿತ್ರಗಳಲ್ಲಿ ಹಿಟ್ಲರ್, ಚೇಂಬರಲಿನ್, ಮುಸೋಲಿನಿ, ಆಂತೊನಿ ಈಡನ್, ಚರ್ಚಿಲ್, ಲೆನಿನ್, ಬರ್ನಾರ್ಡ್ ಷಾ, ಸರ್ ಆಲಿವರ್ ಲಾಡ್ಜ್, ಬರ್ಟ್ರಂಡ್ ರಸೆಲ್, ಹ್ಯಾವಲಾಕ್ ಎಲ್ಲಿಸ್, ರೊಮೇನ್ ರೋಲಾ ಮುಂತಾದವರ ಚಿತ್ರಗಳು ಮುಖ್ಯವಾದವು.

1941ರಲ್ಲಿ ಸ್ವಾಮಿಯವರು ವಾರ್ಧಾಕ್ಕೆ ಹೋಗಿ ಬಾಪೂಜಿಯವರ ದರ್ಶನ ಪಡೆದು ಅವರ ಭಾವಚಿತ್ರವನ್ನು ವರ್ಣಗಳಲ್ಲಿ ಬಿಡಿಸಿದರು. ಅದನ್ನು ಮೆಚ್ಚಿಕೊಂಡ ಬಾಪೂಜಿಯವರು ಆ ಕಲಾಕೃತಿಯ ಮೇಲೆ ಗುಜರಾತಿ ಭಾಷೆಯಲ್ಲಿ ನಿಜವಾದ ಕಲೆ ಅಮರವಾದುದು ಎಂದು ಬರೆದುಕೊಟ್ಟರು. ಒಮ್ಮೆ ಮೈಸೂರಿಗೆ ಸಂದರ್ಶನ ನೀಡಿದ ಲಾರ್ಡ್ ಮೌಂಟ್‌ಬ್ಯಾಟನ್ ಅವರು ಸ್ವಾಮಿಯವರನ್ನು ದೆಹಲಿಗೆ ಕರಸಿಕೊಂಡು ತಮ್ಮ ಭಾವಚಿತ್ರವನ್ನು ಬಿಡಿಸಲು ಅವಕಾಶ ಇತ್ತರು. ಗಾಂಧೀಜಿಯವರ ಚಿತ್ರವನ್ನು ನೆಹರು ಅವರು ಕೊಂಡು ತಮ್ಮ ಅತಿಥಿಗೃಹದಲ್ಲಿ ಇರಿಸಿಕೊಂಡಿದ್ದರು. ಈಗ ಅದು ತೀನ್‌ಮೂರ್ತಿ ಭವನದ ಸಂಗ್ರಹಾಲಯದಲ್ಲಿದೆ.

ಕಸ್ತೂರಬಾ, ನೆಹರು, ರಾಜೇಂದ್ರಪ್ರಸಾದ್, ಸಿ. ರಾಜಗೋಪಾಲಾಚಾರಿ, ಎಂ. ವಿಶ್ವೇಶ್ವರಯ್ಯ, ರಾಧಾಕೃಷ್ಣನ್, ಮಿರ್ಜಾ ಇಸ್ಮಾಯಿಲ್ ಮೊದಲಾದವರ ಭಾವಚಿತ್ರಗಳನ್ನೂ ಸ್ವಾಮಿಯವರು ಬಿಡಿಸಿದ್ದಾರೆ.

ನೃತ್ಯಕಲೆಯಲ್ಲಿ ಅಭಿರುಚಿಯಿದ್ದ ಸ್ವಾಮಿಯವರು ನಾಟ್ಯಸರಸ್ವತಿ ಜಟ್ಟಿ ತಾಯಮ್ಮನವರ ಶಿಷ್ಯರಾಗಿ ನೃತ್ಯಾಭ್ಯಾಸಕ್ಕೆ ತೊಡಗಿದರು (1940), ಮತ್ತು ಆ ಕಲೆಯಲ್ಲೂ ಖ್ಯಾತಿಪಡೆದರು.

ಸ್ವಾಮಿಯವರು ಚಿತ್ರಿಸಿರುವ ಭಾವಚಿತ್ರಗಳೆಲ್ಲ ಸಾಮಾನ್ಯವಾಗಿ ಅಂತಾರಾಷ್ಟ್ರೀಯ ಗೌರವವನ್ನು ಪಡೆದ ವ್ಯಕ್ತಿಗಳು. ಪ್ರಪಂಚದ ಅನೇಕ ಕಡೆಗಳಲ್ಲಿ ಇವರ ಕೃತಿಗಳು ಶೋಭಿಸುತ್ತಿವೆ. ಸುಪ್ರಸಿದ್ಧ ಆಂಗ್ಲ ಸಾಹಿತಿ ಬರ್ನಾರ್ಡ್ ಷಾ ಅವರ ಭಾವಚಿತ್ರ ಈಗ ಲಂಡನ್ನಿನ ಇಂಡಿಯನ್ ಎಂಬಸಿಯಲ್ಲಿದೆ. ಗಾಂಧೀಜಿಯವರು ರಾಟೆ ನೂಲುತ್ತಿರುವಂತಿರುವ ಇವರ ಮತ್ತೊಂದು ಚಿತ್ರ ಪ್ಯಾರಿಸ್‌ನ ಯುನೆಸ್ಕೋ ಭವನದಲ್ಲಿದೆ. ಹಾಗೆಯೇ ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನರ ಭಾವಚಿತ್ರ ಅಮೆರಿಕದಲ್ಲಿದೆ. ರೂಸ್‌ವೆಲ್ಟರ ಚಿತ್ರ ಶ್ವೇತಭವನದಲ್ಲಿದೆ. ಭಾರತದ ಪ್ರಥಮ ದಂಡನಾಯಕ ಜನರಲ್ ಕಾರಿಯಪ್ಪನವರ ತೈಲ ಭಾವಚಿತ್ರ ಮಡಿಕೇರಿಯ ಕಾಲೇಜಿನಲ್ಲಿದೆ. ಮೈಸೂರು ನಗರದ ನಾನಾ ಸಂಘಸಂಸ್ಥೆಗಳ ಭವನಗಳಲ್ಲಿ ಇವರು ರಚಿಸಿದ ಅನೇಕ ತೈಲಚಿತ್ರಗಳು ನೋಡಸಿಗುತ್ತವೆ. ಇವರ ಈಚಿಜಿನ ಕಲಾ ಕೃತಿಗಳೆಂದರೆ ಕನ್ನಡ ಕುಲಪಿತಾಮಹ ಆಲೂರ ವೆಂಕಟರಾಯರ ಹಾಗೂ ಇಂದಿರಾ ಗಾಂಧಿ ಅವರ ರೇಖಾಚಿತ್ರಗಳು. ಭಾರತ ಸರ್ಕಾರ ಇವರಿಗೆ 1969ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. *

# ಹ

**ಹಂತಿಯ ಹಾಡುಗಳು**: ಸುಗ್ಗಿಯ ಕಾಲದಲ್ಲಿ ಹಂತಿ ಹೂಡಿದಾಗ ಹೇಳುವ ಹಾಡುಗಳು. ಕಣದ ಮಧ್ಯದಲ್ಲಿ ನೆಟ್ಟ ಮೇಟಿ ಕಂಬದ ಸುತ್ತಲು ಅನುಕೂಲವಾದ ವರ್ತುಲಸ್ಥಳದಲ್ಲಿ ಜೋಳದ ತೆನೆಗಳನ್ನು ಹರಡಿ, ವ್ಯವಸ್ಥಿತವಾಗಿ ತಳಕುಗೊಳಿಸಿದ ಎತ್ತುಗಳಿಂದ ತುಳಿಸುವ ವಿಧಾನಕ್ಕೆ ಹಂತಿ ಎನ್ನುತ್ತಾರೆ. ಹಂತಿ ಎಂದರೆ ಸಾಲು ಎಂದರ್ಥ. ರಾತ್ರಿ ಎಂಟು–ಒಂಬತ್ತು ಗಂಟೆಗೆ ಆರಂಭವಾದ ಹಂತಿ ತುಳಿಸುವ ಕೆಲಸ ಬೆಳಗಿನ ತನಕ ಸಾಗುತ್ತದೆ.

ಹಂತಿಯ ಹಾಡುಗಳನ್ನು ಹಾಡುವವರು ಹೆಚ್ಚಾಗಿ ಪುರುಷರು; ಕೆಲವು ಕಡೆ ಸ್ತ್ರೀಯರೂ ಹಾಡುವುದುಂಟು. ಹಂತಿ ಹೂಡುವಿಕೆಯ ಆರಂಭ ದೊಂದಿಗೇ ಹಂತಿಯ ಹಾಡು ದೇವತಾಸ್ತುತಿಯೊಡನೆ ಪ್ರಾರಂಭವಾಗುತ್ತದೆ. ಹೆಚ್ಚಾಗಿ ಬಿಡಿಬಿಡಿ ಗೀತೆಗಳನ್ನು ಹಾಡಿದರೂ ಮಹಾಪುರುಷರ, ವೀರರ, ದೈವಗಳ ಚರಿತ್ರೆಯನ್ನು ಹಾಡುವುದುಂಟು. ಇತಿಹಾಸಪುರುಷರಲ್ಲಿ ಸಂಗೊಳ್ಳಿ ರಾಯಣ್ಣ, ಮಲ್ಲಸರ್ಜ ದೊರೆ, ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾವ್, ರಾಣಿ ಚೆನ್ನಮ್ಮಾಜಿ, ಬೆಳವಡಿ ಮಲ್ಲವ್ವ–ಇವರ ಚರಿತ್ರೆಗಳು ಪ್ರಖ್ಯಾತವಾಗಿವೆ. (ಎಸ್.ಎಲ್.)

ಹಂತಿಯ ಹಾಡುಗಳು ಸಮೂಹಗೀತೆಗಳು; ಬಹುವಾಗಿ ತ್ರಿಪದಿ ರೂಪದಲ್ಲಿ ದೊರೆಯುತ್ತವೆ; ಕೆಲವು ಸವಾಲ್–ಜವಾಬ್ ಮಾದರಿಯಲ್ಲಿವೆ; ಇನ್ನು ಕೆಲವು ಒಡಗತೆಗಳ (ಒಗಟು) ರೂಪದಲ್ಲಿಯೂ ಕಾಣಬರುತ್ತವೆ. ಒಕ್ಕುವ ಕಾಯಕದಲ್ಲಿ, ರಾತ್ರಿಯ ಏಕಾಂತದಲ್ಲಿ ಬೇಸರ ನೀಗಲು ಕೆಲಸದಲ್ಲಿ ತತ್ಪರರಾದ ಕೆಲಸಗಾರರು ನಿದ್ದೆಹೋಗದಿರಲು, ಲವಲವಿಕೆ ಯಿಂದ ಇಡೀ ರಾತ್ರಿ ಕೆಲಸಮಾಡಲು ಈ ಹಾಡುಗಳು ನೆರವಾಗುತ್ತವೆ. ಹಾಡಿನ ಮಧ್ಯದಲ್ಲಿ ಹುಲ್ಲುಲಿಗೊ, ಹುಲಸಿಗೊ ಹುಲಿಗ್ಯೊ ಎಂಬ ಕಾಕು ಹಾಕುವುದುಂಟು. ಮನೆ ತುಂಬ ಕಾಳು ಬರಲಿ, ಧಾನ್ಯರಾಶಿ ಹುಲುಸಾಗಲಿ ಎಂಬುದು ಇವುಗಳ ಅರ್ಥವೆಂದು ತಿಳಿದುಬರುತ್ತದೆ. ಈ ಹಾಡುಗಳಲ್ಲಿ ಮನಸೂರೆಗೊಳ್ಳುವ ಸಂದರ್ಭವೆಂದರೆ ಕಂಕಿ ತೆಗೆವಾಗಿನದಾಗಿರುತ್ತದೆ. ಇವು ಜನಪದರ ರಸಿಕಮನೋವೃತ್ತಿಯನ್ನೂ ಬಿಂಬಿಸುತ್ತವೆ. ಒಂದು ತ್ರಿಪದಿ ಹೀಗಿದೆ:

ಹಚ್ಚನ ಹಚ್ಚಿಬಟ್ಟು ಉದ್ದನ ಮಲಿಕಟ್ಟು
ಸಿಗದಂತೆ ಸಣ್ಣ ನಡುವಿನ ಎಲೆ ಬಾಲೆ
ಮುರುಕ ಮಾಡಬ್ಯಾಡ ಮುರದೀತು

ಒಕ್ಕಲಿಗರ ಆಪ್ತ ಸಂಗಾತಿಗಳೆಂದರೆ ಉಳುಮೆ ಮಾಡುವ ಎತ್ತುಗಳು. ಅವು ಅವರಿಗೆ ದೈವಸ್ವರೂಪಿ. ಇಂಥ ಜೀವನದ ಸಂಗಾತಿಗಳನ್ನು ಕುರಿತ ಹಾಡುಗಳು ಹಂತಿಯ ಹಾಡುಗಳಲ್ಲಿ ರಾಶಿಯಾಗಿ ದೊರೆಯುತ್ತವೆ. ಮುದ್ದು ಬಸವಣ್ಣ, ಸರದಾರನನ್ನೆತ್ತೆ, ಬಂಟ ಬಸವಣ್ಣ ಎಂದು ಎತ್ತುಗಳನ್ನು ಕುರಿತು ಎಷ್ಟು ಹಾಡಿ ಹೊಗಳಿದರೂ ಅವರಿಗೆ ತೃಪ್ತಿಯಿಲ್ಲ. ಒಂದು ತ್ರಿಪದಿ ಹೀಗಿದೆ:

ಪುಂಡಾನ ಎತಗೋಳು ತಿಂಡೀನೆ ತಿಂದಾವೊ
ಗುಂಡದ ನೀರ ಕುಡಿದಾವೊ ನಮ್ಮೆತ್ತು
ಗಂಡೆಳ್ಳಿ ಕಂಡು ಹೆದರ್ಯಾವೊ

ಹಂತಿಯ ಹಾಡುಗಳಲ್ಲಿ ಹಾಡಿನ ನಡುವೆ ಹೇಳುವ ಒಡಗತೆಗಳು ಬಹುಸ್ವಾರಸ್ಯವಾಗಿರುತ್ತವೆ. ಇಂಥ ಒಡಗತೆಗಳ ಪ್ರಶ್ನೋತ್ತರ ರೂಪದ ಚಕಮಕಿ ಕೇಳುಗರಿಗೆ ಹುರುಪು ತರಿಸುತ್ತದೆ. ಒಂದು ಒಡಗತೆ ಹೀಗಿದೆ:

ಪ್ರಶ್ನೆ : ಸಣ್ಣವನ ಸಣಕುಂಡಿ ದೊಡ್ಡವನ ದೊಡಕುಂಡಿ ಒಬ್ಬವಗ ಕುಂಡಿ ಮೊದಲಿಲ್ಲೊ

ಉತ್ತರ : ಸೂಚಿಗಿ ಸಣಕುಂಡಿ ಡಬ್ಬಣಕ ದೊಡಕುಂಡಿ ಕುದರಿಗಿ ಕುಂಡಿ ಮೊದಲಿಲ್ಲೊ.

ಹಂತಿಯ ಹಾಡುಗಳಲ್ಲಿ ಉಕ್ಕಿ ಹರಿದಿರುವುದು, ಬೆವರು ಸುರಿದು ದಿನಬೆಳಗು ದುಡಿವ ಒಕ್ಕಲಿಗರ ಮೃದುಮಧುರ ಭಾವನೆಗಳು, ಅವರ ಬದುಕಿಗೆ ಸಂಬಂಧಿಸಿದ ವಿವರಗಳು, ನಂಬಿಕೆ, ನಡವಳಿಕೆಗಳು. ಹಂತಿ ತುಳಿಸುವ ಕೆಲಸದಲ್ಲಿ ಉಪಯೋಗಿಸುವ ಸಾಧನಗಳ ಹೆಸರುಗಳಾದ ಕಡೆಗೋಲು, ಕುಡುಗೋಲು, ಸೆಡ್ಡಿ ಮಂಡೆಯಗೋಲು, ಬ್ಯಾಕೋಲು, ಬಾರ್ಕೋಲು, ವಾರ್ಗೋಲು ಇತ್ಯಾದಿಗಳು–ಈ ಹಾಡುಗಳಲ್ಲಿ ಆನುಷಂಗಿಕ ವಾಗಿ ಬರುತ್ತದೆ. ಬೆಳಗುಮುಂಜಾವು ಹಂತಿಯ ಕಡೆಯ ಭಾಗ, ಹಂತಿ ಬಿಡುವ ಸಂದರ್ಭದಲ್ಲಿ ಹೀಗೆ ಹಾಡುತ್ತಾರೆ: ಹಂತಿ ಹೊಡೆಯೋದ್ ಆಯ್ತು ಕಂತಿ ಕಡಿಯಸ ಆಯ್ತು, ಕಡಿಯತ್ತಿನ ಹೆಂಡಿ ಹಿಡಿಬೇಕು ಬೂದಗನ, ಕಟ್ಟಬೇಕು ಚಂಡಿಕಿ, ಹಚ್ಚಬೇಕು ಬೂದಗನ, ಪದವೊಂದು ಅನಬೇಕು ಹಂತಿ ಬಿಡಬೇಕು.

ಹಂತಿ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವ ಕಲಾವಿದರು ಗುಲ್ಬರ್ಗ ಜಿಲ್ಲೆಯಲ್ಲಿ ಅದರಲ್ಲಿಯೂ ಸಿರೂರ, ಮುಗಳಿ, ಕಡಗಂಚಿ, ಶಿಂಗನಹಳ್ಳಿ, ಬಾನಾಳ, ಹಗರಟಗಿ ಮೊದಲಾದ ಕಡೆ ಕಂಡುಬರುತ್ತಾರೆ. ಈ ಹಾಡುಗಳ ಸಂಗ್ರಹಕಾರ್ಯ ನಡೆದಿದ್ದು ಅನೇಕ ಕೃತಿಗಳು ಪ್ರಕಟಗೊಂಡಿದೆ. ಬಿ. ಎಸ್. ಗದ್ದಗಿಮಠ ಅವರ ಕನ್ನಡ ಜಾನಪದ ಗೀತೆಗಳು (1963) ಎಂಬ ಕೃತಿಯಲ್ಲಿ ಸಾವಿರಾರು ಪದಗಳಿವೆ. ಉತ್ತರ ಕರ್ನಾಟಕದ ಹಂತಿಯ ಹಾಡುಗಳು ಎಂಬ ಗ್ರಂಥವನ್ನು ಎಮ್. ಎಸ್. ಲಠ್ಠೆ ಅವರು ಪ್ರಕಟಿಸಿದ್ದಾರೆ (1975). *

**ಹಂದಿಗನೂರು ಸಿದ್ಧರಾಮಪ್ಪ:** ಸು. 1902–47. ಪ್ರಸಿದ್ಧ ರಂಗಭೂಮಿ ನಟರು. ಬಿಜಾಪುರ ಜಿಲ್ಲೆಯ ಹಂದಿಗನೂರಿನಲ್ಲಿ ಸು. 1902ರಲ್ಲಿ ಜನಿಸಿದರು. ಚಿಕ್ಕಂದಿನಿಂದಲೇ ನಾಟಕ, ಬಯಲಾಟಗಳ ಬಗ್ಗೆ ವ್ಯಾಮೋಹ ಬೆಳೆಸಿಕೊಂಡ ಇವರು ಸು. 15 ವರ್ಷದ ಹುಡುಗನಾಗಿದ್ದಾಗ ರಂಗಭೂಮಿ ಪ್ರವೇಶಿಸಿದರು. ಹುಟಗಿ ಕಂಪನಿ, ಮೈದರ್ಗಿ ಕಂಪನಿ, ಗುಳೇದಗುಡ್ಡ ಗಂಗೂಬಾಯಿ ಕಂಪನಿಗಳಲ್ಲಿ ನಟಿಸಿ ಉತ್ತಮ ನಟರೆಂಬ ಅಭಿದಾನಕ್ಕೆ ಪಾತ್ರರಾದರು. ಅನಂತರ ಇವರೇ ವಿಶ್ವಕಲಾರಂಜನ ನಾಟ್ಯಸಂಸ್ಥೆಯನ್ನು 1937ರಲ್ಲಿ ಸ್ಥಾಪಿಸಿದರು. ಉಷಾಸ್ವಯಂವರ, ಅಕ್ಷಯಾಂಬರ, ಲಂಕಾದಹನ, ರಾಜಾ ಹರಿಶ್ಚಂದ್ರ, ದ್ರೌಪದಿಸ್ವಯಂವರ, ಕಿತ್ತೂರು ರುದ್ರಮ್ಮ, ಉತ್ತರ ಭೂಪ–ಇವು ಇವರು ಪ್ರಯೋಗಿಸುತ್ತಿದ್ದ ಮುಖ್ಯ ನಾಟಕಗಳು. ಇವರ ಅಭಿನಯ ರಂಗಭೂಮಿಯ ಶ್ರೋತೃಗಳನ್ನು ಸೆರೆಹಿಡಿದುಬಿಡುತ್ತಿತ್ತು. ರಾಜಾ ಹರಿಶ್ಚಂದ್ರ, ಚಂದ್ರಹಾಸ ನಾಟಕಗಳು ಇವರಿಗೆ ಅಪಾರ ಕೀರ್ತಿ ತಂದುಕೊಟ್ಟವು. ಚಂದ್ರಹಾಸ ನಾಟಕದಲ್ಲಿ ದುಷ್ಟಬುದ್ಧಿಯಾಗಿ, ರಾಜಾ ಹರಿಶ್ಚಂದ್ರದಲ್ಲಿ ಹರಿಶ್ಚಂದ್ರನಾಗಿ ಇವರ ಅಭಿನಯ ಸ್ಮರಣೀಯವಾದುದು. ರಂಗಭೂಮಿ ಯಲ್ಲಿ ಚಂದ್ರಹಾಸ ನಾಟಕದ ಜಯಭೇರಿಯನ್ನು ಕಂಡು ಅದೇ ನಾಟಕವನ್ನು ಚಲನಚಿತ್ರವಾಗಿ ತೆರೆಯ ಮೇಲೆ ತರಲು ಮುಂಬಯಿ ಪಂಪಾ ಪಿಕ್ಚರ್ಸ್ ಸಂಸ್ಥೆ ಮುಂದೆ ಬಂತು. ಈ ಚಿತ್ರದಲ್ಲಿ ಇವರು ದುಷ್ಟ ಬುದ್ಧಿಯ ಪಾತ್ರವನ್ನು ವಹಿಸಿದರು. ಆದರೆ ತಮ್ಮ ಅಭಿನಯವನ್ನು ಬೆಳ್ಳಿಯ

ತೆರೆಯ ಮೇಲೆ ನೋಡುವ ಭಾಗ್ಯ ಇವರದಾಗಿರಲಿಲ್ಲ. ಬೆಳಗಾಂವಿಯಲ್ಲಿ ಚಂದ್ರಹಾಸ ಪ್ರದರ್ಶನಕ್ಕೆಂದು ಹೊರಡುವ ಮುನ್ನಾದಿನವೇ 1947 ನವೆಂಬರ್ 8ರಂದು ಹಠಾತ್ ನಿಧನ ಹೊಂದಿದರು. **(ಎನ್.ಕೆ.ಕೆ.)**

**ಹಂಪೆ:** ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಒಂದು ಪಟ್ಟಣ. ಇತಿಹಾಸ ಪ್ರಸಿದ್ಧ ಸ್ಥಳ. ಬೆಂಗಳೂರಿಗೆ 360 ಕಿಮೀ ದೂರದಲ್ಲಿ, ಬಳ್ಳಾರಿಗೆ 77 ಕಿಮೀ ದೂರದಲ್ಲಿ, ಹೊಸಪೇಟೆಗೆ 13 ಕಿಮೀ ದೂರದಲ್ಲಿ ತುಂಗ ಭದ್ರಾನದಿಯ ದಂಡೆಯ ಮೇಲಿದೆ.

ಭಾರತ ಮತ್ತು ವಿದೇಶಿ ಇತಿಹಾಸ ಗ್ರಂಥಗಳಲ್ಲಿ ವಿಜಯನಗರವೆಂದು ಪ್ರಸಿದ್ಧವಾಗಿರುವ ಹಂಪೆ, ಮಧ್ಯಯುಗದ ದಖನ್ ಭಾಗದ ಪ್ರಖ್ಯಾತ ಹಿಂದು ಮಹಾನಗರಗಳಲ್ಲಿ ಒಂದು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಕೀರ್ತಿ ಈ ಸ್ಥಳಕ್ಕೆ ಇದೆ. ಕೃಷ್ಣದೇವರಾಯನ ಕಾಲದಲ್ಲಿ (1509–30) ವಿಜಯನಗರ ಖ್ಯಾತಿಯ ಪರಾಕಾಷ್ಠೆಯನ್ನು ಮುಟ್ಟಿತು. ಅದರ ಉಚ್ಛ್ರಾಯ ದಿನಗಳ ವೈಭವವನ್ನು ಅನೇಕ ವಿದೇಶಿ ಪ್ರವಾಸಿಗರು, ರಾಯಭಾರಿಗಳು ಹಾಗೂ ಚರಿತ್ರಕಾರರು ವರ್ಣಿಸಿದ್ದಾರೆ. ಅವರಲ್ಲಿ ನಿಕೊಲೋ ಕೊಂಟಿ, ಅಬ್ದುಲ್ ರಜಾಕ್, ಡೊಮಿಂಗೋ ಪೇಯಿಸ್–ಇವರು ಇತಿಹಾಸ ಪ್ರಸಿದ್ಧರು (ನೋಡಿ: ವಿಜಯನಗರ).

ಐತಿಹ್ಯದ ಪ್ರಕಾರ ವಿಜಯನಗರ ಸಾಮ್ರಾಜ್ಯದ ಉದಯಕ್ಕೂ ಮುನ್ನ ಇಲ್ಲಿ ಒಂದು ಪಟ್ಟಣವಿತ್ತು. ಇದರ ಹೆಸರು ಪಂಪಾ. ಬ್ರಹ್ಮನ ಮಾನಸ ಕನ್ಯೆ ಪಂಪಾ ಇಲ್ಲಿ ಶಿವನನ್ನು (ವಿರೂಪಾಕ್ಷ) ಕುರಿತು ತಪಸ್ಸುಮಾಡಿ ಆತನ ಪತ್ನಿಯಾದಳು; ಶಿವ ಪಂಪಾಪತಿಯಾದ, ಪಂಪಾ ವಿರೂಪಾಕ್ಷನಾದ ಎಂದು ಪುರಾಣಕಥೆ. ರಾಮಾಯಣ ಕಾಲದಲ್ಲಿ ಶ್ರೀರಾಮ ಇಲ್ಲಿಗೆ ಬಂದಿದ್ದನಂತೆ. ವಾನರ ಸಹೋದರರಾದ ವಾಲಿ–ಸುಗ್ರೀವರ ಕಿಷ್ಕಿಂಧೆ ರಾಜಧಾನಿ ಆನೆಗೊಂದಿಯಾಗಿತ್ತೆಂದು ಪ್ರತೀತಿ. ಪಂಪಾಸರೋವರ, ವಾಲಿಯ ದಿಬ್ಬ, ಸುಗ್ರೀವ ಗವಿ ಮುಂತಾದ ಹೆಸರಿನ ಸ್ಥಳಗಳು ಇಲ್ಲಿವೆ. ಪಂಪಾ ಎಂಬುದು ತುಂಗಭದ್ರಾ ನದಿಯ ಪ್ರಾಚೀನ ಹೆಸರು ಎಂದೂ ಪ್ರತೀತಿ.

ವಿರೂಪಾಕ್ಷ ದೇವಾಲಯ

ವಿಜಯನಗರಕ್ಕೆ ಏಳು ಸುಭದ್ರ ಕೋಟೆಗಳಿದ್ದುವೆಂದು ಹೇಳಲಾಗಿದೆ. ಅವುಗಳಿಗೆ ಅನೇಕ ದ್ವಾರಗಳಿದ್ದುವು; ಅವುಗಳಲ್ಲಿ ಒಳಭಾಗದ ಹೆಬ್ಬಾಗಿಲು ಅರಮನೆಯ ಉತ್ತರಭಾಗದಲ್ಲಿತ್ತು. ಹೇಮಕೂಟ, ಮಾತಂಗ ಪರ್ವತ, ಋಷ್ಯಮೂಕ, ಮಾಲ್ಯವಂತ ಮೊದಲಾದ ಬೆಟ್ಟಸಾಲುಗಳ ಮಧ್ಯೆ ಕಂಗೊಳಿಸುತ್ತಿದ್ದ ಈ ನಗರ ರೋಂ ಮಹಾನಗರದಷ್ಟೇ ದೊಡ್ಡದೆಂದು ಪ್ರವಾಸಿಗ ಪೇಯಿಸ್ ಹೇಳಿದ್ದಾನೆ.

ಈಗಿನ ಶಿಥಿಲಾವಸ್ಥೆಯಲ್ಲಿ ಸಹ ಒಳಭಾಗದ ಕೋಟೆ ಮತ್ತು ಇತರ ಪಾಳು ಬಿದ್ದ ನಗರಭಾಗಗಳು ಸುಮಾರು 23.30 ಚ.ಕಿಮೀ ಪ್ರದೇಶವನ್ನು ವ್ಯಾಪಿಸಿಕೊಂಡಿವೆ. ಭೀಮನ ದ್ವಾರ, ಗೋಪುರ ದ್ವಾರ, ಯೋಧರ ದ್ವಾರ, ತಾಂಬೂಲ ದ್ವಾರ ಮೊದಲಾದ ನಗರದ ಬಾಗಿಲುಗಳು ತಮ್ಮ ಅವಶೇಷ ವೈಭವದಿಂದ ನಿಂತಿವೆ. ಹಂಪೆ ಬಜಾರ್, ವಿಠಲ ಬಜಾರ್, ಅಚ್ಯುತರಾಯ ಬಜಾರ್, ಹಜಾರರಾಮ ಬಜಾರ್– ಈ ಅಂಗಡಿಸಾಲುಗಳ

ವಿಠಲ ದೇವಾಲಯ ಮತ್ತು ಕಲ್ಲಿನ ರಥ, ಹಂಪೆ

ಅವಶೇಷಗಳು ವ್ಯವಸ್ಥಿತ ರೀತಿಯಲ್ಲಿ ನಿರ್ಮಾಣವಾಗಿದ್ದು ತಮ್ಮ ಸಾಲುಗಳ ಭವ್ಯರಚನೆಯನ್ನು ಈಗಲೂ ಸಹ ಭಾಗಶಃ ಉಳಿಸಿಕೊಂಡಿವೆ. ನಗರದ ಪ್ರಮುಖ ಬೀದಿಗಳ ಇಕ್ಕೆಲದಲ್ಲಿ ಅನೇಕ ಅಲಂಕಾರ ಮಂಟಪಗಳು. ವೀಕ್ಷಕ ಮಂಟಪಗಳು ಮತ್ತು ಕಲ್ಯಾಣಿಗಳಿದ್ದವು. ರಾಣಿಯರ ಸ್ನಾನ ಘಟ್ಟದಿಂದ ಹಿಡಿದು. (ಅಂತಃಪುರದ ಆವರಣದೊಳಗಿನ) ಆನೆಲಾಯಗಳ ವರೆಗೆ ವ್ಯಾಪಿಸಿರುವ ಪ್ರದೇಶವು ಅವಶೇಷಗಳ ಶೋಭಾಯಮಾನವಾದ ಭಾಗವಾಗಿದೆ ನಗರದ ಪ್ರಮುಖ ಸ್ನಾನಘಟ್ಟ, ಸಿಂಹಾಸನ ವೇದಿಕೆ, ಸಭಾಂಗಣ, ಹಜಾರ ರಾಮಸ್ವಾಮಿ ದೇವಾಲಯ, ದಣ್ಣಾಯಕನ ಆವರಣ, ಯೋಜಿತ ರೀತಿಯಲ್ಲಿ ಶಿಲೆಯಲ್ಲಿ ರಚಿತವಾದ ಜಲಾಶಯಗಳು, ಗಟ್ಟಿಮಣ್ಣಿನ ನಳಿಗೆಗಳ ಮೂಲಕ ನಗರಕ್ಕೆ ನೀರು ಹಾಯಿಸುತ್ತಿದ್ದ ಈಗ ಶಿಥಿಲಾವಸ್ಥೆಯಲ್ಲಿರುವ ಮೇಲ್ಗಾಲುವೆಗಳು. ಅಷ್ಟಕೋನಾಕೃತಿಯ ಸ್ನಾನಗೃಹಗಳು ಹಾಗೂ ಅಲಂಕಾರ ಮಂಟಪಗಳು ಈ ಭಾಗದಲ್ಲಿವೆ. ನಗರದ ಹಲವಾರು ದೇವಾಲಯಗಳು, ಕೋಟೆಯ ಗೋಡೆಗಳು ಮತ್ತು ಸಾರ್ವಜನಿಕ ಕಟ್ಟಡಗಳು ಬೆಣಚುಕಲ್ಲಿನ ಭಾರಿ ಬಂಡೆಗಳಿಂದ ನಿರ್ಮಿತವಾಗಿವೆ. ನಗರದ ಸುಂದರವಾದ ದೇವಾಲಯಗಳಲ್ಲಿ ಪ್ರಮುಖವಾದವು ವಿಠಲರಾಯ ಗುಡಿ, ಕೃಷ್ಣನ ಗುಡಿ, ವಿರೂಪಾಕ್ಷ ದೇವಾಲಯ, ಅಚ್ಯುತರಾಯ ದೇವಸ್ಥಾನ, ಪಟ್ಟಾಭಿರಾಮ ಗುಡಿ, ಚಂದ್ರಶೇಖರ ದೇವಾಲಯ, ಗಾಣಿಗಿತ್ತಿ ಜಿನಾಲಯ, ಬಂಡೆಯ ಮೇಲೆ ಕಟ್ಟಿರುವ ಹಾಗೂ ದಕ್ಷಿಣದಿಂದ ಪಂಪಾವತಿ ದೇವಾಲಯಕ್ಕೆ ಅಭಿಮುಖವಾಗಿರುವ ಹೇಮಕೂಟದ ಗುಡಿಗಳ ಸಮೂಹ, ನದಿಯ ಬಳಿ ಬೆಟ್ಟದ ಇಳಿಜಾರಿನಲ್ಲಿರುವ ವೈಷ್ಣವ ದೇವಾಲಯಗಳ ಸಮೂಹ ಮತ್ತು ಕಲ್ಲಿನ ನರಸಿಂಹ, ರಾಣಿಯರ ಸ್ನಾನಘಟ್ಟ, ನಯನಮನೋಹರವಾದ ಮಹಾನವಮಿ ದಿಬ್ಬ, ಕಮಲಮಹಲ್, ಅಂತಃಪುರದ ಮೂಲೆಗೋಪುರಗಳು, ಅರಮನೆಯ ವಿಶಾಲವಾದ ಆನೆ ಮತ್ತು ಕುದುರೆಲಾಯಗಳು–ಇವುಗಳೆಲ್ಲ ಸಮಕಾಲೀನ ಮಹಮದೀಯ ಕಟ್ಟಡ ರಚನಾ ಶೈಲಿಯನ್ನು ಅನುಸರಿಸದೆ ತಮ್ಮದೇ ಆದ ವೈಶಿಷ್ಟ್ಯ ಹಾಗೂ ವೈವಿಧ್ಯವನ್ನು ಉಳಿಸಿಕೊಂಡಿದ್ದು ಹಿಂದು ವಾಸ್ತುಶಿಲ್ಪಶೈಲಿಯ ಘನತೆಯನ್ನು ಪ್ರತಿನಿಧಿಸುತ್ತವೆ.

ವಾಸ್ತವಿಕವಾಗಿ, ವಿಜಯನಗರದ ದೇವಾಲಯಗಳು ಈವರೆಗೂ ಅನುಕರಿಸಲಾಗದಿರುವ ಮತ್ತು ತಮ್ಮದೇ ವೈಶಿಷ್ಟ್ಯವುಳ್ಳ ಬೆಣಚುಕಲ್ಲು ಚಪ್ಪಡಿಗಳ ಕಟ್ಟಡರಚನೆ ಮತ್ತು ವಾಸ್ತುಶಿಲ್ಪಕ್ಕೆ ಮಾದರಿಗಳಾಗಿವೆ. ಶೈಲಿಯ ದೃಷ್ಟಿಯಲ್ಲಿ ಈ ದೇವಾಲಯಗಳು ಚಾಳುಕ್ಯರಲ್ಲಿ ಅಥವಾ ಹೊಯ್ಸಳರಲ್ಲಿ ರೂಢಿಯಲ್ಲಿದ್ದ ವಿಧಾನಗಳಿಂದ ಪ್ರಭಾವಿತವಾಗದೆ ದಕ್ಷಿಣದ ಶುದ್ಧ ವಿಮಾನ ಶೈಲಿಯನ್ನು ವ್ಯಕ್ತಪಡಿಸುತ್ತವೆ. ಮಧ್ಯಯುಗದ ಹಿಂದು ವಾಸ್ತುಶಿಲ್ಪಕ್ಕೆ ಸೇರಿದ ವಿಜಯನಗರದ ಕಟ್ಟಡ ರಚನೆಯ ಶೈಲಿಯಲ್ಲಿ ನೆಲಗಟ್ಟಿಗೆ ಶಿಲೆಯನ್ನು ಮತ್ತು ದೇವಾಲಯದ ಮೇಲ್‌ಕಟ್ಟಡ ಹಾಗೂ

ಉಗ್ರ ನರಸಿಂಹ

ಗೋಪುರ ರಚನೆಗೆ ಇಟ್ಟಿಗೆ ಮತ್ತು ನಯಗಾರೆಯನ್ನು ಉಪಯೋಗಿಸುತ್ತಿದ್ದುದು ಕಂಡಬರುತ್ತದೆ. ಆ ಕಾಲದಲ್ಲಿ ದೇವಾಲಯ ರಚನೆಯಲ್ಲಿ ಹೆಚ್ಚಿಗೆ ಸೇರಿಸಿದ ಭಾಗವೆಂದರೆ ಅಮ್ಮನವರ ಪ್ರತ್ಯೇಕವಾದ ಗುಡಿ, ಸೂಕ್ಷ್ಮ ಕೆತ್ತನೆಯ ಗೋಡೆಯ ಅಲಂಕೃತ ಬೋದಿಗೆ (ಕಾರ್ನೀಸು) ಮತ್ತು ಅಲಂಕೃತ ಚಾವಣಿಯುಳ್ಳ ಪ್ರತ್ಯೇಕವಾದೊಂದು ಕಲ್ಯಾಣಮಂಟಪ. ಶಿಲ್ಪಕಲೆಯ ಬಗ್ಗೆ ಆ ಕಾಲದಲ್ಲಿದ್ದ ಉತ್ಸಾಹ ಹಂಪೆಯ ವಿಠಲ ದೇವಾಲಯದ ಅಂಗಣದಲ್ಲಿರುವ ಕಲ್ಲುರಥದಿಂದ ವ್ಯಕ್ತವಾಗುತ್ತದೆ. ಹಂಪೆಯು ಪುನರುಜ್ಜೀವನಗೊಂಡ ಹಿಂದುಧರ್ಮ, ಸಾಹಿತ್ಯ ಮತ್ತು ಜನಜೀವನಕ್ಕೆ ಪ್ರಸಿದ್ಧವಾಗಿದ್ದುದಲ್ಲದೆ ತಾನು ಅಸ್ತಿತ್ವದಲ್ಲಿದ್ದ ಎರಡು ಕಾಲದಲ್ಲಿ (14ನೆಯ ಶತಮಾನದ ಉತ್ತರಾರ್ಧದಿಂದ 16ನೆಯ ಶತಮಾನದ ಉತ್ತರಾರ್ಧದವರೆಗೆ) ಶಿಲ್ಪದ ನವಶೈಲಿಗೆ ಹೆಸರುವಾಸಿಯಾಗಿತ್ತು.

ಇಲ್ಲಿನ ದೇವಾಲಯಗಳಲ್ಲಿ ಹಂಪೆ ಬಜಾರಿನ ಕೊನೆಯಲ್ಲಿರುವ ವಿರೂಪಾಕ್ಷದೇವಾಲಯ ಪ್ರಸಿದ್ಧವಾದುದು. ಈ ದೇವಾಲಯಕ್ಕೆ ಪಂಪಾಪತಿ ದೇವಾಲಯ ಎಂಬ ಹೆಸರೂ ಇದೆ. ವಿರೂಪಾಕ್ಷ ವಿಜಯನಗರದ ಅರಸರ ಕುಲದೈವ. ಈ ದೇವಾಲಯ ಮೂಲಗುಡಿ ಬಲ್ಲಾಳನ ಕಾಲದಲ್ಲಿ ಶತಮಾನದಲ್ಲಿ ಪಶ್ಚಿಮ ಚಾಳುಕ್ಯರ ಶಿಲ್ಪಶೈಲಿಯಲ್ಲಿ ರಚಿತವಾಯಿತು. ಇದು 16ನೆಯ ಶತಮಾನದ ಹೊತ್ತಿಗೆ ಹಲವಾರು ಸೇರ್ಪಡೆಗಳೊಂದಿಗೆ ಬೃಹತ್ ದೇವಾಲಯವಾಗಿ ವೃದ್ಧಿಗೊಂಡಿತು. ದೇವಾಲಯ ಶಿವ, ಪಂಪಾ, ಭುವನೇಶ್ವರಿಯ ಗುಡಿಗಳನ್ನು ಹೊಂದಿದೆ. ಈ ದೇವಾಲಯದ ಪೂರ್ವ ದ್ವಾರದ ಗೋಪುರ 120 ಅಡಿ ಎತ್ತರವಿದೆ. ಕಲ್ಯಾಣಮಂಟಪವನ್ನು ಮತ್ತು ಒಳಗಡೆಯ ಕಿರುಗೋಪುರಗಳನ್ನು ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಿಸಲಾಯಿತು. ಕಲ್ಯಾಣಮಂಟಪದ ಚಾವಣಿಯ ಮೇಲೆ ಅಮೂಲ್ಯ ಭಿತ್ತಿ ಚಿತ್ರಗಳು ರಚಿತವಾಗಿವೆ. ಅವುಗಳಲ್ಲಿ ಪಲ್ಲಕ್ಕಿಯಲ್ಲಿ ಕುಳಿತಿರುವ ವಿದ್ಯಾರಣ್ಯರ ಚಿತ್ರ, ತ್ರಿಪುರಸಂಹಾರಿ ಶಿವ, ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸುವ ಚಿತ್ರ ಚಿತ್ತಾಕರ್ಷಕವಾಗಿವೆ.

ಹಂಪೆಯ ಒಳಕೋಟೆಯ ಭಾಗದಲ್ಲಿರುವ ಹಲವು ದೇವಾಲಯಗಳಲ್ಲಿ ಹಜಾರ ರಾಮಸ್ವಾಮಿ ದೇವಾಲಯ ಬಹುಮುಖ್ಯವಾದುದು. ಹಜಾರ ಎಂಬ ಹೆಸರೇ ಸೂಚಿಸುವಂತೆ ಅರಮನೆಯ ಹೊರಗಿನ ಹೆಬ್ಬಾಗಿಲ ಬಳಿ ರಚಿತವಾಗಿರುವ ಈ ದೇವಾಲಯ ಅರಮನೆಗೆ ಸೇರಿದ ಗುಡಿಯಾಗಿದ್ದಂತೆ ಕಾಣುತ್ತದೆ. ಈ ದೇವಾಲಯವನ್ನು ಕೃಷ್ಣದೇವರಾಯ ಕಟ್ಟಿಸಿದನೆಂದು ಪ್ರತೀತಿ. ಆದರೆ ಗುಡಿಯ ಶಾಸನಗಳು ಮತ್ತು ಅಲ್ಲಿನ ಶಿಲ್ಪಶೈಲಿಯನ್ನು ನೋಡಿದರೆ ಇದು ಕೃಷ್ಣದೇವರಾಯನ ಕಾಲಕ್ಕೂ ಹಿಂದಿನದೆಂದು ತೋರುತ್ತದೆ. ಬಹುಶಃ ಇದು ಇಮ್ಮಡಿ ದೇವರಾಯನ (1422–66) ಕಾಲಕ್ಕೆ ಸೇರಿರಬಹುದು. ಈ ದೇವಾಲಯ ಸ್ಥಾಪಿತವಾಗಿರುವ ಸ್ಥಳದ ವಿಸ್ತೀರ್ಣಕ್ಕೆ ಹೋಲಿಸಿದರೆ ಗಾತ್ರದಲ್ಲಿ ಸಣ್ಣದು; ಇದು ಆಕ್ರಮಿಸಿಕೊಂಡಿರುವ ಸ್ಥಳವೂ ಸ್ವಲ್ಪವೇ. ಇದರ ನಿವೇಶನ ಲಕ್ಷಣ ಮತ್ತು ಅಲಂಕಾರವೈವಿಧ್ಯ ವಿಜಯನಗರ ಸಾಮ್ರಾಜ್ಯದ ಉತ್ತರೋತ್ತರ ಕಾಲದಲ್ಲಿ ಮುಂದುವರಿಯಲ್ಲಿಲ್ಲವೆಂದು ತೋರುತ್ತದೆ. ಸ್ವಲ್ಪ ಎತ್ತರವಾಗಿರುವ ಭಾಗದಲ್ಲಿ ಗರ್ಭಗುಡಿ, ಆರಾಧನಮಂಟಪ ಮತ್ತು ಮುಖಮಂಟಪಗಳಿವೆ; ಅವುಗಳಿಗೆ ಸ್ವಲ್ಪ ತಗ್ಗಿನಲ್ಲಿ ಸಭಾಮಂಟಪವಿದೆ. ಸಭಾಮಂಟಪಕ್ಕೆ ಸೇರಿದಂತೆ ದ್ವಾರ ಮಂಟಪದ ಎರಡು ಚಾಚುಗಳಿದ್ದು, ಒಳಪಾರ್ಶ್ವಗಳಲ್ಲಿ ಪ್ರದಕ್ಷಿಣಾಪಥಕ್ಕೆ ಹೋಗಲು ಅನುಕೂಲವಾದ ಹೊರಬಾಗಿಲುಗಳಿವೆ. ಸಭಾಮಂಟಪದ ಮಧ್ಯ ಅಂಕಣದ ನಯಗೊಳಿಸಿದ ಮತ್ತು ಕಡೆತಸಾಧನದಿಂದ ಸೃಷ್ಟಿಯಾದ ಮನಮೋಹಕ ವಿಗ್ರಹಗಳು ಮತ್ತು ಕೆತ್ತನೆಗಳು ಚಾಳುಕ್ಯ ಶಿಲ್ಪಶೈಲಿಯನ್ನು ಸ್ಮರಣೆಗೆ ತರುತ್ತವೆ. ದೇವಾಲಯದ ಅಗ್ರಮಂಟಪಕ್ಕೆ ಕಿರುಸ್ತಂಭಗಳ ಮೇಲೆ ಜೋಡಿಸಿರುವ ಎತ್ತರವಾದ ಪಾರ್ಶ್ವವೇದಿಕೆಗಳಿವೆ. ಹಾಗೂ ಭೂಮಟ್ಟದಿಂದ ಎದ್ದಿರುವ ಎತ್ತರವಾದ ಕಂಬಗಳು ಮಂಟಪದ ಮುಂಭಾಗದಲ್ಲಿವೆ. ಈಶಾನ್ಯ ಮೂಲೆಯಲ್ಲಿ ದಕ್ಷಿಣಾಭಿಮುಖವಾಗಿರುವ ಕಲ್ಯಾಣಮಂಟಪ ಸರಳ ಸುಂದರವಾದದ್ದು; ಅದು ಮೂಲ ಗುಡಿಯ ಪ್ರಾಕಾರದ ಗೋಡೆಗಳು ರಚನೆಯಾದ ಮೇಲೆ ಕಟ್ಟಿದ ಮಂಟಪವೆಂದು ಕಾಣುತ್ತದೆ. ಈ ಮಂಟಪದಲ್ಲಿ ರಾಮಾಯಣ ಮತ್ತು ಇತರ ಪೌರಾಣಿಕ ಕಥೆಗಳ ಘಟನೆಗಳನ್ನು ತೋರಿಸುವ ಉಬ್ಬುಚಿತ್ರಗಳ ಶ್ರೇಣಿಗಳಿವೆ. ಈ ಉಬ್ಬು ಶಿಲ್ಪ ಮಹಾನವಮಿ ದಿಬ್ಬದ ತಳವೇದಿಕೆಯ ಉಬ್ಬುಚಿತ್ರ ಶೈಲಿಯನ್ನು ಹೋಲುತ್ತದೆ (ಮಹಾನವಮಿ ದಿಬ್ಬ ಸಹ ಕೃಷ್ಣದೇವರಾಯನ ಕಾಲಕ್ಕೆ ಹಿಂದಿನದು). ಪ್ರಾಕಾರದ ಮೇಲೆ ಧ್ಯಾನಮಂಟಪಗಳು ಯಾವುವೂ ಇಲ್ಲ; ನೈಋತ್ಯ ಮೂಲೆಯಲ್ಲಿ ಮಾತ್ರ ಅಡುಗೆಯ ಕೋಣೆಗಳಿವೆ. ದೇವಾಲಯಕ್ಕೆ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಎರಡು ಗೋಪುರದ್ವಾರಗಳಿವೆ. ಸುಂದರವಾಗಿ ಕೆತ್ತಿರುವ ಗೋಡೆಗಂಬಗಳ ಮತ್ತು ಕುಂಬಪಂಜರದ ಅಲಂಕಾರವೈವಿಧ್ಯವನ್ನು ಬಿಟ್ಟರೆ ಗೋಡೆಗಳ ರಚನೆ

ಸಾಧಾರಣವಾದದ್ದು. ದೇವಾಲಯದ ಮೇಲ್ ಕಟ್ಟಡ ಇಟ್ಟಿಗೆ ಮತ್ತು ನಯಗಾರೆಯಿಂದ ನಿರ್ಮಿತವಾಗಿದೆ. ಪಶ್ಚಿಮದ ಪ್ರಮುಖ ಗೋಪುರಕ್ಕೆ ಸುಖಾಸನವಿದೆ. ಅದು ರಾಜಧಾನಿ ವಿಜಯನಗರದಲ್ಲಿ ರೂಢಿಯಲ್ಲಿದ್ದ ಶೈಲಿಗೆ ಅನುಗುಣವಾದದ್ದು ಹಾಗೂ ದಕ್ಷಿಣದಿಂದ ಪಡೆದುಕೊಂಡ ಕೆಲವೇ ಶಿಲ್ಪಶೈಲಿಗಳಲ್ಲೊಂದು.

ಅಮ್ಮನವರ ಗುಡಿ ಒಂದಷ್ಟು ಮಟ್ಟಿಗೆ ವಾಸ್ತುಶಿಲ್ಪ ವೈಶಿಷ್ಟ್ಯವನ್ನು ಹೊಂದಿದೆ. ಅದರ ಗರ್ಭಗುಡಿಯ ಮುಂದಿರುವ ಮುಖ ಮಂಟಪದ ಸ್ತಂಭಗಳ ಮೇಲೆ ಅರಸನೊಬ್ಬ ಗುಡಿಯ ಪ್ರಮುಖರಿಗೆ ದಾನ ನೀಡುವ ಹಾಗೂ ಅವರಿಂದ ಕಾಣಿಕೆ ಸ್ವೀಕರಿಸುವ ದೃಶ್ಯಗಳು ಕೆತ್ತನೆಗೊಂಡಿವೆ. ಪ್ರಮುಖ ದೇವಾಲಯಕ್ಕೆ ಚಾವಣಿಯ ಹೊದಿಕೆಯುಳ್ಳ ಪ್ರದಕ್ಷಿಣಾಪಥವಿಲ್ಲ; ವಿಠಲ ಮತ್ತು ಅಚ್ಯುತರಾಯ ದೇವಾಲಯಗಳ ಆಕಾರ ಮತ್ತು ಲಕ್ಷಣಗಳಿಗೆ ಹೋಲಿಸುವಂಥ ಕೆಲವು ಅಂತರ್ಭಾವವನ್ನು ಅದು ಪ್ರಕಟಿಸುವುದಿಲ್ಲ; ಚಾಳುಕ್ಯ ಶೈಲಿಯ ನಿವೇಶನ ಮತ್ತು ಸ್ತಂಭರಚನೆಯನ್ನು ಹೊಂದಿದೆ. ಹಾಗೂ ಉಬ್ಬುಶಿಲ್ಪದ ಬಗ್ಗೆ ಮಹಾನವಮಿದಿಬ್ಬದ ರಚನೆಯ ಪ್ರಥಮ ಹಂತವನ್ನೇ ಹೋಲುತ್ತದೆ. ಈ ಕಾರಣಗಳಿಂದ ಇದು 15ನೆಯ ಶತಮಾನದ ಮಧ್ಯಭಾಗದಲ್ಲಿ ರಚಿತವಾಗಿರಬೇಕು. ಇದು ಇಮ್ಮಡಿ ದೇವರಾಯನ ಕಾಲಕ್ಕೂ ಹಿಂದಿನದೆಂದು ಹೇಳಬಹುದು. ಈ ದೇವಾಲಯ ತನ್ನ ಕಾಲದ ಮತ್ತು ಪ್ರದೇಶದ ಚೊಕ್ಕ ಮಾದರಿಯಾಗಿದೆ. ರಚನೆ ಮತ್ತು ಶಿಲ್ಪವೈವಿಧ್ಯದಲ್ಲಿ ಇದು ವಿಜಯನಗರ ಸಾಮ್ರಾಜ್ಯದ ಪ್ರಾರಂಭಿಕ ಹಂತಕ್ಕೆ ಸೇರಿದ ದೇವಾಲಯ.

ಕಮಲ ಮಹಲ್

ವಿಜಯವಿಠಲ ದೇವಾಲಯ ಬಹುಪಾಲು ನಶಿಸಿ ಹೋಗಿದ್ದರೂ ವಾಸ್ತುಶಿಲ್ಪ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಈ ದೇವಾಲಯದ ಸುತ್ತಮುತ್ತ ಸುಮಾರು 23ಕ್ಕೂ ಹೆಚ್ಚು ಶಾಸನಗಳು ದೊರೆತಿವೆ(ಇವುಗಳ ಕಾಲ 1516–64). ಈ ದೇವಾಲಯದ ನಿರ್ಮಾಣವನ್ನು (1513) ಕೃಷ್ಣದೇವರಾಯ ಕೈಗೊಂಡ ವಿಷಯವನ್ನು ಒಂದು ಶಾಸನ ತಿಳಿಸುತ್ತದೆ. ಇನ್ನೊಂದು ಶಾಸನ ಇವನ ಇಬ್ಬರು ರಾಣಿಯರು ಈ ದೇವಾಲಯ ಗೋಪುರವನ್ನು ಕಟ್ಟಿಸಿದರೆಂದು ತಿಳಿಸುತ್ತದೆ. ಇನ್ನು ಕೆಲವು ಶಾಸನಗಳು ಈ ದೇವಾಲಯದ ನಿರ್ಮಾಣಕಾರ್ಯವನ್ನು ಅಚ್ಯುತರಾಯ ಸದಾಶಿವರಾಯ ಮುಂದುವರಿಸಿದರೆಂದು ತಿಳಿಸುತ್ತವೆ. ಈ ದೇವಾಲಯದಲ್ಲಿರುವ ಕಲ್ಲಿನ ರಥ ಸುಂದರ ಕೆತ್ತನೆಕೆಲಸದಿಂದ ಕೂಡಿದೆ. ಉಗ್ರನರಸಿಂಹ ಗುಡಿಯಲ್ಲಿರುವ 22 ಅಡಿ ಎತ್ತರದ ನರಸಿಂಹ ವಿಗ್ರಹ, ಮಹಾ ನವಮಿ ದಿಬ್ಬ, ಕಮಲ ಮಹಲ್, ಗಜಶಾಲೆ, ದಣ್ಣಾಯಕ ನಿವಾಸ, ಕಾವಲು ಗೋಪುರ ಈ ಮೊದಲಾದವೂ ನೋಡತಕ್ಕುವಾಗಿವೆ. ಹಂಪೆ ಜಾಗತಿಕ ವಾಸ್ತು ಮತ್ತು ಕಲಾ ಕ್ಷೇತ್ರದಲ್ಲಿ ಅಗ್ರ ಪಂಕ್ತಿಯಲ್ಲಿದೆ. ಇಲ್ಲಿ ಅವಿರತವಾಗಿ ನಡೆಯುತ್ತಿರುವ ಉತ್ಖನನಗಳಿಂದ ಹೊಸಹೊಸ ವಾಸ್ತು ಲಕ್ಷಣಗಳು ಗೋಚರಿಸುತ್ತಿವೆ. ಇಲ್ಲಿನ ಅರಮನೆಗೆ ನಿರ್ಮಿಸಿದ್ದ ಕೊಳಾಯಿ ವ್ಯವಸ್ಥೆ, ಆಧುನಿಕ ಶೌಚಾಲಯಗಳನ್ನು ಹೋಲುವ ರಾಣೀವಾಸದ ಬಚ್ಚಲುಗಳು, ವಿವಿಧ ದೇವಾಲಯಗಳ ನೆಲಮಾಳಿಗೆ ನಿರ್ಮಾಣ ಇವೆಲ್ಲ ಅಂದಿನ ತಾಂತ್ರಿಕ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ಇಲ್ಲಿ ದೇವಾಲಯಗಳಿಗೆ ಅಗಾಧ ಪ್ರಮಾಣದಲ್ಲಿ ಶಿಲೆಗಳನ್ನು ಬಳಸಿದ್ದರೂ ಒಟ್ಟಿನ ಪರಿಸರಕ್ಕೆ ಧಕ್ಕೆ ಬರದಂತೆ ಪ್ರಕೃತಿ ವೈಶಿಷ್ಟ್ಯವನ್ನು ಕಾಪಾಡಲಾಗಿದೆ. ಈ ಕ್ಷೇತ್ರಕ್ಕೆ ಯುನೆಸ್ಕೊ ಜಾಗತಿಕ ಪರಂಪರೆಯ ಸ್ಥಾನಮಾನ ನೀಡಿದೆ.

(ಕೆ.ವಿ.ಎಸ್.)

**ಹಗರಿ:** ತುಂಗಭದ್ರಾ ನದಿಯ ಒಂದು ಮುಖ್ಯ ಉಪನದಿ. ಇದಕ್ಕೆ ಹಗರ, ಅಘಹರ ಅಥವಾ ಪಾಪನಾಶಿನಿ ಎಂಬ ಹೆಸರುಗಳೂ ಇವೆ. ಚಿಕ್ಕಮಗಳೂರಿನಲ್ಲಿ ಇದಕ್ಕೆ ವೇದಾವತಿ ಎಂಬ ಹೆಸರಿದೆ. ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿಯ ಗೌರಿಗಳ್ಳದಲ್ಲಿ ಹುಟ್ಟಿ ಪೂರ್ವಕ್ಕೆ ಹರಿಯುವ ವೇದಾನದಿ ಮುಳ್ಳಯ್ಯನ ಗಿರಿಯ ಬಳಿಯೇ ಹುಟ್ಟುವ ಆವತಿ ನದಿಯನ್ನು ಕಡೂರಿನ ಆಗ್ನೇಯಕ್ಕೆ ಸುಮಾರು 5 ಕಿಮೀ ದೂರದಲ್ಲಿರುವ ತಂಗಳಿ ಬಳಿ ಕೂಡಿಕೊಂಡು ವೇದಾವತಿ ಎಂಬ ಹೆಸರಿನಿಂದ ಮುಂದೆ ಸಾಗುತ್ತದೆ. ವೇದಾನದಿಗೆ ಶಕುನಗಿರಿಯ ಬಳಿ ಅಣೆಕಟ್ಟೆ ಕಟ್ಟಿದೆ. ಈ ಜಲಾಶಯಕ್ಕೆ ಅಯ್ಯನ ಕೆರೆ ಎಂದು ಹೆಸರು. ಆವತಿ ನದಿಗೆ ಕಟ್ಟಿರುವ ಅಣೆಕಟ್ಟೆ ಮದಗಕೆರೆ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ವೇದಾವತಿ ನೈಋತ್ಯದಿಂದ ಈಶಾನ್ಯಾಭಿಮುಖವಾಗಿ ಹರಿದು ಹಿರಿಯೂರಿಗೆ 11 ಕಿಮೀ ದೂರದಲ್ಲಿ ಶಿರಾ ಮತ್ತು ಹಾಗಲವಾಡಿ ಕಡೆಗಳಿಂದ ಬರುವ ಸಣ್ಣ ತೊರೆಗಳನ್ನು ಕೂಡಿಕೊಂಡು ಉತ್ತರಕ್ಕೆ ತಿರುಗಿ ಹಗರಿ ಎಂಬ ಹೆಸರನ್ನು ಪಡೆದು ಮುಂದೆ ಪ್ರವಹಿಸುತ್ತದೆ. ಈ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಬ್ರಹ್ಮಗಿರಿಯ ದಕ್ಷಿಣಕ್ಕೆ ಮಾರಿಕಣಿವೆ ಎಂಬಲ್ಲಿ ಈ ನದಿಗೆ ಅಡ್ಡಲಾಗಿ ವಾಣಿವಿಲಾಸ ಸಾಗರ ಎಂಬ ಅಣೆಕಟ್ಟನ್ನು ಕಟ್ಟಲಾಗಿದೆ. ಚಳ್ಳಕೆರೆ ತಾಲ್ಲೂಕಿನ ಘಟಪರ್ಶಿ ಗ್ರಾಮದ ಉತ್ತರಕ್ಕೆ 8 ಕಿಮೀ ದೂರದಲ್ಲಿ ಹಗರಿ ನದಿ ಈ ಜಿಲ್ಲೆಯನ್ನು ಬಿಟ್ಟು ಬಳ್ಳಾರಿ ತಾಲ್ಲೂಕಿನ ರೂಪನಗುಡಿಗೆ ಕೆಲವು ಕಿಮೀಗಳ ದೂರದಲ್ಲಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ನದಿ ಉತ್ತರಾಭಿಮುಖವಾಗಿ ಮಧ್ಯೆ ಸ್ವಲ್ಪ ದೂರ ಕರ್ನಾಟಕ, ಆಂಧ್ರಪ್ರದೇಶದ ಗಡಿಯಾಗಿ ಹರಿದು, ಮತ್ತೆ ಜಿಲ್ಲೆಯ ಒಳಗೆ ಉತ್ತರಾಭಿಮುಖವಾಗಿ ಪ್ರವಹಿಸಿ ಜಿಲ್ಲೆಯಲ್ಲಿ ಒಟ್ಟು 92.8 ಕಿಮೀ ದೂರ ಹರಿದು ತಾಲ್ಲೂಕಿನ ಸಿದ್ದರಗದ್ದೆ ಗ್ರಾಮದ ಬಳಿ ತುಂಗಭದ್ರೆಯನ್ನು ಸೇರುತ್ತದೆ.

ಹಗರಿಯ ಕೂಡುನದಿಗಳಲ್ಲಿ ಚಿನ್ನಹಗರಿ ಮತ್ತು ಚಿಕ್ಕಹಗರಿ ಪ್ರಧಾನವಾದವು. ಚಿನ್ನಹಗರಿ ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆ ತಾಲ್ಲೂಕಿನಲ್ಲಿ ಹುಟ್ಟಿ ಜನಗಹಳ್ಳ ಎಂಬ ಹೆಸರಿನಿಂದ ಚಿತ್ರದುರ್ಗ, ಜಗಳೂರು, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹರಿದು ಅನೇಕ ಕೆರೆಗಳಿಗೆ ಜಲಮೂಲವಾಗಿದ್ದು ಮುಂದೆ ಕೂಡ್ಲಿಗಿ ತಾಲ್ಲೂಕಿನ ದಕ್ಷಿಣದಲ್ಲಿ ಕಲ್ಲಹಳ್ಳಿ ಹತ್ತಿರ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿ, ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳ ಗಡಿಯಾಗಿ ಸ್ವಲ್ಪ ದೂರ ಹರಿದು, ಮುಂದೆ ಆಂಧ್ರಪ್ರದೇಶದ ರಾಯದುರ್ಗ ತಾಲ್ಲೂಕಿನ ಉತ್ತರದಲ್ಲಿ ಹಗರಿನದಿಯನ್ನು ಕೂಡಿಕೊಳ್ಳುತ್ತದೆ. ಪೆದ್ದವಂಕ (ದೊಡ್ಡ ತೊರೆ) ಕೂಡ್ಲಿಗಿಯ ಆಗ್ನೇಯದಲ್ಲಿ ಚಿನ್ನಹಗರಿಗೆ ಸೇರುವ ಒಂದು ಮುಖ್ಯ ಉಪನದಿ.

ಚಿಕ್ಕಹಗರಿ, ಚಿತ್ರದುರ್ಗದಲ್ಲಿ ಹುಟ್ಟಿ ಹರಪನಹಳ್ಳಿ ತಾಲ್ಲೂಕಿನ ಅಂಜಿಗೇರಿ ಗ್ರಾಮದ ಬಳಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿ ಉತ್ತರಾಭಿ

ಮುಖವಾಗಿ ಸು. 64 ಕಿಮೀ ದೂರಹರಿದು ತುಂಗಭದ್ರಾ ಅಣೆಕಟ್ಟಿನ ಹಿನ್ನೀರನ್ನು ಕೂಡಿಕೊಳ್ಳುತ್ತದೆ. ಈ ನದಿಗೆ ಹಗರಿಬೊಮ್ಮನಹಳ್ಳಿಯ ನೀರಾವರಿಗಾಗಿ ಒಂದು ಅಣೆಕಟ್ಟೆ ಕಟ್ಟಿದೆ.

ಹಗರಿ ನದಿ ಬೇಸಗೆಯಲ್ಲಿ ಬತ್ತಿಹೋದರೂ ನದಿಯ ಅಂಚಿನ ಕಪಿಲೆಗಳಿಂದ ವ್ಯವಸಾಯಕ್ಕೆ ನೀರೊದಗಿಸಿಕೊಳ್ಳಲಾಗುತ್ತದೆ. ಈ ನದಿಗೆ ಪರದೇವನ ಹಳ್ಳಿಯ ಬಳಿ ಒಂದು ರೈಲು ಸೇತುವೆ ಕಟ್ಟಲಾಗಿದೆ. ಹಿರಿಯೂರಿನ ಬಳಿಯೂ ಈ ನದಿಗೆ ಅಡ್ಡಲಾಗಿ ಸೇತುವೆ ಕಟ್ಟಲಾಗಿದ್ದು ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗಿದೆ. (ವಿ.ಜಿ.ಕೆ.)

**ಹಗರಿಬೊಮ್ಮನಹಳ್ಳಿ:** ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ತುಂಗಭದ್ರಾ ಜಲಾಶಯದ ವಿಶಾಲವಾದ ಹಿನ್ನೀರಿನ ಹರವು ಮತ್ತು ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕು, ಪೂರ್ವದಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲ್ಲೂಕುಗಳೂ ದಕ್ಷಿಣದಲ್ಲಿ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕೂ ಪಶ್ಚಿಮದಲ್ಲಿ ಹಡಗಲಿ ತಾಲ್ಲೂಕೂ ಸುತ್ತುವರಿದಿವೆ. ಹಗರಿಬೊಮ್ಮನಹಳ್ಳಿ ಮೊದಲು ಹಡಗಲಿ ತಾಲ್ಲೂಕಿನ ಒಂದು ಹೋಬಳಿ ಕೇಂದ್ರವಾಗಿತ್ತು. ಅನಂತರ ಕೂಡ್ಲಿಗಿ ತಾಲ್ಲೂಕಿನಿಂದ 13 ಗ್ರಾಮಗಳನ್ನೂ ಹಡಗಲಿ ತಾಲ್ಲೂಕಿನಿಂದ 22 ಗ್ರಾಮಗಳನ್ನೂ ಮಲ್ಲಾಪುರ ತಾಲ್ಲೂಕಿನಿಂದ 20 ಗ್ರಾಮಗಳನ್ನೂ ತೆಗೆದುಕೊಂಡು ಮಲ್ಲಾಪುರ ತಾಲ್ಲೂಕಿನ ಬದಲು ಹಗರಿಬೊಮ್ಮನಹಳ್ಳಿಯನ್ನು ಕೇಂದ್ರವಾಗುಳ್ಳ ಈ ತಾಲ್ಲೂಕನ್ನು ರಚಿಸಲಾಯಿತು. ಹಂಪಸಾಗರ (ಹಂಪಾಪಟ್ಟಣ), ಮಾಳವಿ, ಹಗರಿಬೊಮ್ಮನಹಳ್ಳಿ, ತಾಂಬ್ರಹಳ್ಳಿ ಹೋಬಳಿಗಳು. ಒಟ್ಟು 55 ಗ್ರಾಮಗಳೂ ಒಂದು ಪಟ್ಟಣವೂ ಇದೆ. ತಾಲ್ಲೂಕಿನ ವಿಸ್ತೀರ್ಣ 977 ಚ.ಕಿಮೀ. ಜನಸಂಖ್ಯೆ 1,59,886.

ತಾಲ್ಲೂಕಿನ ಉತ್ತರದಲ್ಲಿ ತುಂಗಭದ್ರಾ ನದಿ ಮತ್ತು ತುಂಗಭದ್ರಾ ಜಲಾಶಯದ ಹಿನ್ನೀರು ಹರಡಿದ್ದು ತಾಲ್ಲೂಕು ಗಡಿಯಾಗಿ ಗದಗ ಮತ್ತು ಕೊಪ್ಪಳ ಜಿಲ್ಲೆಗಳನ್ನು ಈ ತಾಲ್ಲೂಕಿನಿಂದ ಬೇರ್ಪಡಿಸಿದೆ. ಚಿಕ್ಕಹಗರಿ ಈ ತಾಲ್ಲೂಕಿನ ಮುಖ್ಯ ನದಿ. ತಾಲ್ಲೂಕಿನ ದಕ್ಷಿಣದಿಂದ ಉತ್ತರಾಭಿಮುಖವಾಗಿ ಹರಿದು ತುಂಗಭದ್ರಾ ನದಿಯನ್ನು ಸೇರಿಕೊಳ್ಳುತ್ತದೆ. ಸಾಮಾನ್ಯ ಮಳೆಯಾಗುವ ಈ ತಾಲ್ಲೂಕಿನ ವ್ಯವಸಾಯಕ್ಕೆ ಅನುಕೂಲವಾಗಲು ಚಿಕ್ಕಹಗರಿ ನದಿಗೆ ಹಗರಿಬೊಮ್ಮನಹಳ್ಳಿಯ ದಕ್ಷಿಣಕ್ಕೆ 4 ಕಿಮೀ ದೂರದಲ್ಲೂ ಮಾಳವಿಯ ನೈಋತ್ಯಕ್ಕೆ ಸುಮಾರು 0.80 ಕಿಮೀ ದೂರದಲ್ಲೂ ಹಗರಿಬೊಮ್ಮನಹಳ್ಳಿ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಜಲಾಶಯದ ಎರಡು ನಾಲೆಗಳಿಂದ ಸು. 2,977 ಹೆಕ್ಟೇರ್‌ಗಳಿಗೆ ನೀರೊದಗುತ್ತದೆ. ಈ ತಾಲ್ಲೂಕಿನಲ್ಲಿ ಕಪ್ಪುಮಣ್ಣಿನ ಭೂಮಿ ಹೆಚ್ಚಿದ್ದು ಮರಳುಗಲ್ಲಿನ ಕೆಂಪುಭೂಮಿಯೂ ಕಂಡುಬರುವುದು. ಜೋಳ, ಕಬ್ಬು, ಬತ್ತ, ಸೇಂಗಾ, ಹತ್ತಿ, ಮೆಣಸಿನಕಾಯಿ ಮುಖ್ಯ ಬೆಳೆಗಳು. ಪಶುಪಾಲನೆ ಹಾಗೂ ಮತ್ಸ್ಯೋದ್ಯಮವಿದೆ. ಈ ತಾಲ್ಲೂಕಿನಲ್ಲಿ ಅನೇಕ ಎಣ್ಣೆ ಕಾರ್ಖಾನೆಗಳಿದ್ದು, ತೈಲೋತ್ಪತ್ತಿ ಒಂದು ಮುಖ್ಯ ಕೈಗಾರಿಕೆ. ವಾಣಿಜ್ಯ ಬ್ಯಾಂಕುಗಳು, ನಿಯಂತ್ರಿತ ಮಾರುಕಟ್ಟೆ ಮುಂತಾದವುಗಳಿದ್ದು ವ್ಯಾಪಾರ ವಾಣಿಜ್ಯಾಭಿವೃದ್ಧಿಗೆ ಸಹಕಾರ ನೀಡುತ್ತಿವೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್, ಆಸ್ಪತ್ರೆ ಮುಂತಾದ ಸೌಕರ್ಯಗಳಿವೆ. ತಾಲ್ಲೂಕಿನಲ್ಲಿ ಕೊಟ್ಟೂರು–ಹೊಸಪೇಟೆ ರೈಲುಮಾರ್ಗ ಹಾದು ಹೋಗಿದ್ದು ಸುತ್ತಲ ಪಟ್ಟಣ ಮತ್ತು ಊರುಗಳಿಗೆ ಉತ್ತಮ ಮಾರ್ಗಸಂಪರ್ಕಗಳಿವೆ.

ಹಗರಿಬೊಮ್ಮನಹಳ್ಳಿಯ ಈಶಾನ್ಯಕ್ಕೆ ತುಂಗಭದ್ರಾ ನದಿಯ ಬಲದಂಡೆಯ ಕಡೆಗಿರುವ ಹಂಪಾಪಟ್ಟಣ ಗ್ರಾಮ ಕೈಮುಗ್ಗದ ಬಟ್ಟೆಗೆ ಪ್ರಸಿದ್ಧ. ಹಗರಿಬೊಮ್ಮನಹಳ್ಳಿಯ ದಕ್ಷಿಣಕ್ಕಿರುವ ಕೋಗಳಿ ಗ್ರಾಮ ಹಿಂದೆ ನೊಳಂಬವಾಡಿ 32,000ದ ಒಂದು ಭಾಗವಾಗಿದ್ದು ಕೋಗಳಿ 500 ಎಂದು ಹೆಸರಾಗಿತ್ತು. ಇಲ್ಲಿರುವ ಜೈನ ದೇವಾಲಯದಲ್ಲಿ ತೀರ್ಥಂಕರ ವಿಗ್ರಹವಿದೆ. ದೇವಾಲಯದ ಒಳಗೆ ಮತ್ತು ಹತ್ತಿರದಲ್ಲಿ ಕೆಲವು ಶಾಸನಗಳಿವೆ. ಕೋಗಳಿಯಲ್ಲಿ ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ಕಾಲದ ಕೆಲವು ಶಾಸನಗಳಿವೆ. ಹಗರಿಬೊಮ್ಮನಹಳ್ಳಿಗೆ ವಾಯವ್ಯದಲ್ಲಿ ತುಂಗಭದ್ರಾ ನದಿಯ ಬಲದಂಡೆಯಲ್ಲಿರುವ ತಾಂಬ್ರಹಳ್ಳಿಯಲ್ಲಿ ಸು. 300 ವರ್ಷಗಳ ಹಿಂದೆ ಕಟ್ಟಿದ ರಂಗನಾಥ ದೇವಾಲಯವಿದೆ. ಇಲ್ಲಿ ಆದಿಶೇಷನ ಮೇಲೆ ಒರಗಿರುವ ನಾರಾಯಣನ ಮೂರ್ತಿ ಇದ್ದು ಅದರ ಪಕ್ಕದಲ್ಲಿ ಶಿವಲಿಂಗವಿದೆ. ಇಲ್ಲಿ ಪ್ರತಿ ವರ್ಷ ಫಾಲ್ಗುಣ ಮಾಸದಲ್ಲಿ ರಥೋತ್ಸವ ಜರುಗುವುದು.

ಹಗರಿಬೊಮ್ಮನಹಳ್ಳಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯ ಪಟ್ಟಣ. ಹರಪನಹಳ್ಳಿ–ಹೊಸಪೇಟೆ ರಾಜ್ಯ ಹೆದ್ದಾರಿಯಲ್ಲಿ ಹಡಗಲಿಯ ಪೂರ್ವಕ್ಕೆ 40 ಕಿಮೀ ದೂರದಲ್ಲಿದೆ. ತುಂಗಭದ್ರಾ ಅಣೆಕಟ್ಟಿನಿಂದ ಮುಳುಗಡೆಯಾದ ಗ್ರಾಮಗಳ ಜನರಿಗೆ ಹಗರಿಬೊಮ್ಮನಹಳ್ಳಿಯಲ್ಲಿ ಪುನರ್ವಸತಿಯನ್ನು ಕಲ್ಪಿಸಲಾಯಿತು. ಇದು ಈಗ ಒಂದು ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಅನೇಕ ಎಣ್ಣೆ ಕಾರ್ಖಾನೆಗಳಿವೆ. ಹಗರಿಬೊಮ್ಮನಹಳ್ಳಿ ಜಲಾಶಯ ಇಲ್ಲಿಗೆ 4 ಕಿಮೀ ದೂರದಲ್ಲಿದೆ. ಇದು ಹೊಸಪೇಟೆ–ಕೊಟ್ಟೂರು ನಡುವಣ ಒಂದು ರೈಲ್ವೆ ನಿಲ್ದಾಣ.

ಇಲ್ಲಿ ಅಂಚೆ, ತಂತಿ, ದೂರವಾಣಿ, ವಿದ್ಯುತ್ತು, ಆಸ್ಪತ್ರೆ ಮುಂತಾದವುಗಳ ಸೌಲಭ್ಯಗಳಿವೆ. ಮಾಧ್ಯಮಿಕ, ಪ್ರೌಢಶಾಲೆಯಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ವಾಣಿಜ್ಯ ಬ್ಯಾಂಕ್, ನಿಯಂತ್ರಿತ ಮಾರುಕಟ್ಟೆ ಮುಂತಾದವುಗಳಿವೆ. (ವಿ.ಜಿ.ಕೆ.)

**ಹಚ್ಚೆ:** ಪ್ರಪಂಚದ ಎಲ್ಲ ಕಡೆ ದೊರೆಯುವ ಜನಪ್ರಿಯ ಪ್ರಾಚೀನ ಜನಪದ ಕಲಾಪ್ರಕಾರ. ಮಾನವ ಸಂಸ್ಕೃತಿ ಕಾಲಕ್ರಮೇಣ ಹೇಗೆ ರೂಪುಗೊಂಡಿತು ಎಂಬುದನ್ನು ತೋರಿಸಬಲ್ಲ ವಿಶಿಷ್ಟ ಕಲೆ. ಮಾನವ ಅನಾದಿಕಾಲದಿಂದಲೂ ತನ್ನ ನಂಬಿಕೆ, ಆಚರಣೆ, ಆರಾಧನೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಅನೇಕ ಕಲಾ ಪ್ರಕಾರಗಳನ್ನು ರೂಪಿಸಿಕೊಂಡು ಅವುಗಳನ್ನು ಉಳಿಸಿಕೊಂಡು ಬಂದಿದ್ದಾನೆ. ಕೆಲವು ಕಲಾಪ್ರಕಾರಗಳು ಕಾಲಗರ್ಭದಲ್ಲಿ ನಶಿಸಿ ಹೋಗಿವೆ. ಮತ್ತೆ ಕೆಲವು ಕಲೆಗಳು ನಶಿಸಿಹೋಗುವ ಸ್ಥಿತಿಯಲ್ಲಿವೆ. ಜನಪದ ದೃಶ್ಯಕಲೆಗೆ ಸೇರಿದ ಹಚ್ಚೆ ಕೂಡ ಪ್ರಪಂಚದ ಅನೇಕ ದೇಶಗಳಲ್ಲಿ ಸಾಯುತ್ತಾ ಮರುಹುಟ್ಟು ಪಡೆಯುತ್ತಾ ಉಳಿದುಕೊಂಡು ಬಂದಿದೆ. ಪಾಶ್ಚಾತ್ಯರಲ್ಲಿ ಬಳಸುವ ಟ್ಯಾಟೂ ಎಂಬ ಪದ ಹಚ್ಚೆಗೆ ಸಂವಾದಿಯಾಗಿದೆ. ಉತ್ತರ ಧ್ರುವದಿಂದ ಹಿಡಿದು ದಕ್ಷಿಣದ ನ್ಯೂಜಿಲೆಂಡ್‌ವರೆಗೆ ಹಚ್ಚೆ ಹಾಕಿಸಿಕೊಳ್ಳದ ಜನರಿರುವ ಯಾವುದೇ ದೊಡ್ಡ ರಾಷ್ಟ್ರವನ್ನು ಹೆಸರಿಸಲಾಗದು ಎಂದು ಡಾರ್ವಿನ್ ಬಹಳ ಹಿಂದೆಯೇ ಹೇಳಿದ್ದಾನೆ. ಭಾರತದ ಎಲ್ಲ ರಾಜ್ಯಗಳಲ್ಲಿ ಕಂಡುಬರುವ ಹಚ್ಚೆ ಸಂಪ್ರದಾಯ ಕರ್ನಾಟಕದಲ್ಲಿಯೂ ಅತ್ಯಂತ ಜನಪ್ರಿಯ ಕಲೆಯಾಗಿದೆ.

ಕರ್ನಾಟಕದಲ್ಲಿ ಹಚ್ಚೆ ಅನೇಕ ಹೆಸರುಗಳಿಂದ ಕರೆಯಲ್ಪಡುತ್ತದೆ. ಹಚ್ಚೆ, ಅಚ್ಚೆ, ಹಂಚೆ, ಹಣಚೆ, ಅಣಚೆ, ಅಣ್ಣೆ ಎಂದು ವಿವಿಧ ಪ್ರಾದೇಶಿಕ ರೂಪಗಳಿಂದ ಕರೆಯಲ್ಪಡುವ ಈ ಕಲೆಗೆ ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ಪಚ, ಪಚ್ಚ ಎಂಬ ರೂಪಗಳಿವೆ. ಪಚ್ಚ ಪಚ್ಚೆ ಹಚ್ಚೆ ಎಂದರೆ ಹಸುರು ಎಂಬ ಅರ್ಥವಿದೆ. ಇತರ ದ್ರಾವಿಡ ಭಾಷೆಗಳಲ್ಲಿಯೂ ಇಂತಹವೇ ರೂಪಗಳಿವೆ. ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ರಸವು ದೇಹದ ಮೇಲಿನ ಚಿತ್ರಗಳಿಗೆ ಹಳದಿ ಮಿಶ್ರಿತ ಹಸುರು ಬಣ್ಣದ ಛಾಯೆಯನ್ನು ಕೊಡುವುದರಿಂದ ಈ ಹೆಸರು ಬಂದಿರಬಹುದು ಎಂಬ

ಅಭಿಪ್ರಾಯವಿದೆ. ಅಣಚಿ ಎಂದರೆ ಮುತ್ತೈದೆ ಎಂಬ ಅರ್ಥವೂ ಇದೆ. ಮುತ್ತೈದೆತನದ ಸಂಕೇತವಾದ ಹಚ್ಚೆ ದೇಹದ ಮೇಲೆ ಅಲಂಕಾರವೂ ಹೌದು, ಜನರ ನಂಬಿಕೆಗಳ ಸಂಕೇತವೂ ಹೌದು. ನಮ್ಮ ಪೂರ್ವಿಕರು ಗರತಿತನದ, ಸೌಭಾಗ್ಯದ ಸಂಕೇತವಾಗಿ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಿದ್ದರು. ಕನ್ಯೆ ಪ್ರಾಪ್ತವಯಸ್ಕಳಾಗುವ ಮೊದಲೇ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಿದ್ದಳು. ಬದುಕಿದ್ದಾಗ ಹಾಗೂ ಸತ್ತ ಅನಂತರ ತಮ್ಮೊಡನೆ ಬರುವಂತಹವು ಈ ಹಚ್ಚೆ ಗುರುತುಗಳು ಎಂಬ ಗಾಢವಾದ ನಂಬಿಕೆ ಜನಪದರಿಗಿದ್ದುದು ಅವರ ಹಾಡುಗಳಿಂದಲೇ ನಮಗೆ ತಿಳಿಯುತ್ತದೆ. 'ಸತ್ತಾರೆ ನಮುಕೂಟೆ ಮತ್ತೇನು ಬರಬಹುದು ಹಚ್ಚೆಯ ಬಟ್ಟು ಸುಲಿಹಲ್ಲು ಕಟ್ಟೇರೋ ತುರುಬು'. ನಾವು ಸತ್ತಾಗ ನಮ್ಮೊಡನೆ ಬರುವುದು ನಮ್ಮೊಡನೆ ಇರುವ ಹಲ್ಲುಗಳು, ಕಲೆಯ ತುರುಬಿನ ಕೂದಲು ಮತ್ತು ಮೈಮೇಲೆ ಹಾಕಿಸಿಕೊಂಡಿರುವ ಹಚ್ಚೆ ಎಂದು ನಂಬಿರುವ ಜನಪದರಿಗೆ ತಾವು ಬದುಕಿದ್ದಾಗ ಹಾಕಿಕೊಳ್ಳುವ ಬಟ್ಟೆ ಹಾಗೂ ಬಂಗಾರ ಬೆಳ್ಳಿಯ ಒಡವೆಗಳು ತಮ್ಮೊಡನೆ ಸಮಾಧಿಯೊಳಗೆ ಬರುವುದಿಲ್ಲ ಎನ್ನುವ ವಾಸ್ತವದ ಅರಿವು ಇದೆ. ಹಾಗಾಗಿ ಹಚ್ಚೆ ನಮ್ಮೊಡನೆ ಬದುಕಿದ್ದಾಗ ಅನಂತರ ಸತ್ತಾಗ ಬರುವ ನಿರಂತರ ಸಂಗಾತಿ ಎನ್ನುವ ನಂಬಿಕೆ ಅವರದು. ಹಚ್ಚೆ ಕೇವಲ ಮುತ್ತೈದೆತನದ ಸಂಕೇತವಾಗಿರದೆ ಸೌಂದರ್ಯವನ್ನೂ ಇಮ್ಮಡಿಸುವ ಸಾಧನ. ಹಾಗಾಗಿ ಹಚ್ಚೆಯ ಬಗ್ಗೆ ಗರತಿಯೊಬ್ಬಳು ಅತ್ತೆ ಬೈದರೆ ಒಪ್ಪು ಮಾಮ ಬೈದರೆ ಒಪ್ಪು ಹಚ್ಚೆಯ ಬೊಟ್ಟು ಹಣೆಗೊಪ್ಪು ತಂಗೆವ್ವ ಚೊಚ್ಚಲ ಬಸುರು ನಿನಗೊಪ್ಪು ಎನ್ನುತ್ತಾಳೆ.

ಹಚ್ಚೆ ಹಾಕಿಸಿಕೊಳುತ್ತಿರುವುದು

ಹಚ್ಚೆ ಸಂಪ್ರದಾಯ ಯಾವಾಗ ಆರಂಭವಾಯಿತು ಎಂದು ಹೇಳುವುದು ಕಷ್ಟ. ಆದರೂ ಇದು ಅತ್ಯಂತ ಪ್ರಾಚೀನ ಕಲೆ ಎಂಬ ಬಗ್ಗೆ ಎರಡು ಅಭಿಪ್ರಾಯಗಳಿಲ್ಲ. ಮನುಷ್ಯ ಪ್ರಕೃತಿಯಿಂದ ಅನೇಕ ಪ್ರೇರಣೆಗಳನ್ನು ಪಡೆದ. ಅದರಲ್ಲಿ ಹಚ್ಚೆ ಕಲೆಗಾರಿಕೆ ಕೂಡ ಒಂದು ಎಂದು ಕೆಲವರ ಅಭಿಪ್ರಾಯ. ಸುಂದರವಾಗಿ ಹಾರಾಡುವ ಹಕ್ಕಿಗಳ ಸಮೂಹ ಆಗಾಗ ಗರಿಗಳನ್ನು ತಿಕ್ಕಿ ತೀಡಿ ಹೊಳಪುಗೊಳಿಸಿಕೊಳ್ಳುವುದನ್ನು ಮನುಷ್ಯ ನೋಡಿದ. ಜಿಂಕೆ, ಚಿರತೆ, ಹುಲಿಗಳ ಮೈಮೇಲಿನ ಸುಂದರ ಬಣ್ಣಗಳನ್ನು ಕಂಡು ತಾನೂ ಹಾಗೇಕೆ ಬಣ್ಣಬಳಿದುಕೊಳ್ಳಬಾರದೆಂಬ ಆಸೆ ಮೂಡಿರಬೇಕು. ಹಾಗಾಗಿ ದೇಹಕ್ಕೆ ಬಣ್ಣಬಳಿದುಕೊಂಡು ಬೇಟೆಯಾಡುವ, ಪ್ರಾಣಿಗಳನ್ನು ಮೋಸಗೊಳಿಸಿ ಕೊಲ್ಲುವ ಕಲೆಯನ್ನು ಕಲಿತುಕೊಂಡ. ದೇಹದ ಮೇಲೆ ಬಳಿದುಕೊಂಡ ಬಣ್ಣ ತಾತ್ಕಾಲಿಕವಾದುದರಿಂದ ಕಾಲಾನಂತರದಲ್ಲಿ ಶಾಶ್ವತವಾಗಿ ಬಣ್ಣ ಬಳಿಯುವುದನ್ನು ಕಲಿತುಕೊಂಡ. ಗೋಸುಂಬೆ ಹಾಗೂ ಅನೇಕ ಬಗೆಯ ಕೀಟಗಳ ತಮ್ಮ ದೇಹದ ಬಣ್ಣವನ್ನು ಬದಲಾಯಿಸಿಕೊಂಡು ಅತಿಚತುರತೆಯಿಂದ ಬೇಟೆಯಾಡುವುದನ್ನು ಕರಗತ ಮಾಡಿಕೊಂಡಿವೆ. ಹಾಗೆಯೆ ಕಾಡಿನ ಮನುಷ್ಯ ಕೂಡ ತನ್ನ ಆಹಾರದ ಬೇಟೆಯ ಸಂದರ್ಭದಲ್ಲಿ ಅನಿವಾರ್ಯವಾಗಿ ಮೈಗೆ ಶಾಶ್ವತ ಬಣ್ಣ ಬಳಿಯುವ ಕಲೆ ರೂಢಿಸಿಕೊಂಡಿರಬಹುದು ಎಂಬುದು ಹಚ್ಚೆ ಉಗಮದ ಬಗ್ಗೆ ಇರುವ ಒಂದು ಅಭಿಪ್ರಾಯ. ಆದರೆ ಹರ್ಬರ್ಟ್ ಸ್ಪೆನ್ಸರ್ ಎಂಬ ವಿದ್ವಾಂಸ, ಆದಿಮಾನವರು ಭೂತ ಪ್ರೇತಗಳಿಗೆ ಮತ್ತು ಸತ್ತುಹೋದ ತಮ್ಮ ನಾಯಕನಿಗೆ ರಕ್ತತರ್ಪಣ ಕೊಡುವುದಕ್ಕಾಗಿ ಈ ಸಂಪ್ರದಾಯವನ್ನು ಬೆಳೆಸಿಕೊಂಡಿರಬಹುದೆಂದು ಊಹಿಸುತ್ತಾರೆ. ದೇಹವನ್ನು ವಿರೂಪಗೊಳಿಸುವ ಕ್ರಿಯೆ ಅನೇಕ ಆದಿವಾಸಿ ಜನಾಂಗಗಳಲ್ಲಿ ಧಾರ್ಮಿಕ ವಿಧಿಯಾಗಿ ಉಳಿದುಕೊಂಡು ಬಂದಿರುವುದನ್ನು ಇಂದಿಗೂ ಕಾಣಬಹುದು. ತಿರುವಾಂಕೂರಿನ ಕಾಡಿನ ಕಾಡಾರ್ ಎಂಬ ಬುಡಕಟ್ಟು ಸಮೂಹ ಕೆಳದವಡೆ ಮತ್ತು ಮೇಲಿನದವಡೆಯ ಕೋರೆ ಹಲ್ಲುಗಳನ್ನು ಚೂಪುಗೊಳಿಸುವುದು, ಆಸ್ಟ್ರೇಲಿಯದ ಬಂತೂಸ್ ಮತ್ತು ಕಾಂಗೋ ನಿವಾಸಿಗಳು ತಮ್ಮ ಹಲ್ಲುಗಳನ್ನು ಕಿತ್ತುಕೊಳ್ಳುವುದು ಇಂದಿಗೂ ಸಂಪ್ರದಾಯವಾಗಿದೆ. ಕರ್ನಾಟಕದ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ದೇವರಿಗೆ ಬೆರಳನ್ನು ಅರ್ಪಿಸಿಕೊಳ್ಳುವ ಪದ್ಧತಿಯೂ ಇತ್ತೆಂದು ತಿಳಿದು ಬರುತ್ತದೆ. ಹೀಗೆ ದೈವದ ಹೆಸರಿನಲ್ಲಿ ದೇಹದ ಭಾಗವನ್ನು ಊನಗೊಳಿಸಿಕೊಳ್ಳುವ ಹಾಗೂ ಗಾಯಮಾಡಿಕೊಂಡು ರಕ್ತವನ್ನು ದೇವರಿಗೆ ಅರ್ಪಿಸುವ ಸಂಪ್ರದಾಯವಿದೆ. ಈ ಹಿನ್ನಲೆಯಲ್ಲಿ ಹಚ್ಚೆ ಕಲೆ ಉಗಮಗೊಂಡಿರಬಹುದೆಂಬ ಅಭಿಪ್ರಾಯವೂ ಇದೆ.

ಸು.2000 ವರ್ಷಗಳ ಹಿಂದೆಯೇ ಈಜಿಪ್ಟಿನಲ್ಲಿ ಹಚ್ಚೆ ಪ್ರಚಲಿತವಿದ್ದುದು ಕಂಡುಬರುತ್ತದೆ. ಗ್ರೀಕರು, ರೋಮನ್ನರು, ಪೂರ್ವಜರ್ಮನರಲ್ಲಿ ಹಚ್ಚೆ ಪ್ರಚಲಿತದಲ್ಲಿತ್ತೆಂದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ದೊರೆಯುವ ದಾಖಲೆಯ ಮೂಲಕ ಹೇಳುವುದಾದರೆ 12ನೆಯ ಶತಮಾನದ ಪೂರ್ವದಲ್ಲಿಯೇ ಈ ಕಲೆ ಪ್ರಚಲಿತದಲ್ಲಿತ್ತೆಂಬುದನ್ನು ಸೂಕ್ತಿಸುಧಾರ್ಣವ ಗ್ರಂಥದಲ್ಲಿ ನೋಡಬಹುದು. ಮಾರ್ಕೋಪೋಲೋ, ನಿಕಾಲೋ ಕೊಂಟಿ, ತಾವರ್ನಿಯರ್ ಮುಂತಾದ ಪಾಶ್ಚಿಮಾತ್ಯ ಪ್ರವಾಸಿಗರು ಭಾರತದಲ್ಲಿ ಪ್ರಚಲಿತದಲ್ಲಿದ್ದ ಹಚ್ಚೆಯ ಬಗ್ಗೆ ಬರೆದಿದ್ದಾರೆ. ನೀಲಗಿರಿಯ ಗೊಂಡರು ಕೋಚಿನ್ ಬೆಟ್ಟಗಳಲ್ಲಿ ವಾಸವಾಗಿದ್ದ ಮಲಯ ಮುಂತಾದ ಬುಡಕಟ್ಟು ಸಮೂಹಗಳ ಸ್ತ್ರೀಯರು ತಮ್ಮ ದೇಹದ ತುಂಬ ವಿವಿಧ ಹೂಗಳ ಕುಸುರಿ ಚಿತ್ರಗಳ ಹಚ್ಚೆ ಹಾಕಿಸಿಕೊಂಡು ಅತ್ಯಂತ ಸುಂದರವಾಗಿ ಕಾಣುತ್ತಿದ್ದುದನ್ನು ನಿಕಾಲೊಕೊಂಟಿ ವಿವರಿಸಿದ್ದಾನೆ.

ಚರ್ಮದ ಮೇಲಿನ ಕೆತ್ತನೆಯಲ್ಲಿ ಎರಡು ರೀತಿಗಳಿವೆ. ಚರ್ಮವನ್ನು ಸುಲಿದು ಮಾಂಸಖಂಡದಲ್ಲಿ ಕಪ್ಪು ಮಸಿಯನ್ನು ತುಂಬಿ ಅದರಿಂದ ಚರ್ಮವನ್ನು ಕೆತ್ತುವುದಕ್ಕೆ ಉಬ್ಬು ಚರ್ಮದ ಕೆತ್ತನೆ ಎನ್ನುತ್ತಾರೆ. ಕಪ್ಪು ನೀಗ್ರೊ ಜನಾಂಗಗಳಿರುವ ಆಫ್ರಿಕ, ಆಸ್ಟ್ರೇಲಿಯ, ಫಿಜಿ, ಮಲೇಷ್ಯ ಮುಂತಾದ ಕಡೆ ಇದು ಪ್ರಚಲಿತದಲ್ಲಿದೆ. ಆದರೆ ಪ್ರಪಂಚದ ಎಲ್ಲಕಡೆ ಹೆಚ್ಚು ಪ್ರಚಲಿತದಲ್ಲಿರುವುದು ಚರ್ಮಕ್ಕೆ ಗಾಯಮಾಡಿ ಅದರ ಮೇಲೆ ಬಣ್ಣವನ್ನು ಸವರಿ ವಿವಿಧ ಮಾದರಿಯ ಚಿತ್ರಗಳನ್ನು ಬಿಡಿಸುವ ಹಚ್ಚೆಯ ಕಲೆ. ಹಚ್ಚೆ ಕಲೆ ನಯಗಾರಿಕೆ, ಸುಂದರ ಚಿತ್ರವಿನ್ಯಾಸಗಳಿಗೆ ಹೆಸರಾಗಿದೆ. ಆದರೆ ಉಬ್ಬು ಚರ್ಮದ ಕೆತ್ತನೆ ಭೀಕರವಾದುದು. ಪೌರುಷ ಪ್ರದರ್ಶಿಸುವ ಮಾವೋರಿ ನಾಯಕರು ಯುದ್ಧದಲ್ಲಿ ಕಾದಾಡುವ ವೀರರು ಉಬ್ಬು ಚರ್ಮದ ಕೆತ್ತನೆಯನ್ನು ಹೊಂದುತ್ತಾರೆ. ಸುಮಾತ್ರ ಬುಡಕಟ್ಟು ಸಮೂಹಗಳಲ್ಲಿ ಪುರುಷರು ತಮ್ಮ ಮುಖವನ್ನು ಹನ್ನೆರಡು ಜಾಗಗಳಲ್ಲಿ ಸುಟ್ಟುಕೊಂಡು ಭಯಾನಕ ಬರುವಂತೆ ಮಾಡಿಕೊಳ್ಳುತ್ತಾರೆ. ಇದರಿಂದ ದೈವ ತಮಗೆ ಒಲಿಯುತ್ತದೆ ಎಂಬ ನಂಬಿಕೆ ಅವರದಾಗಿದೆ. ಪ್ರಪಂಚದ ಎಲ್ಲೆಡೆ ಪ್ರಚಲಿತದಲ್ಲಿರುವ ಹಚ್ಚೆ ಕರ್ನಾಟಕದಲ್ಲಿ ಜನಪ್ರಿಯವಾಗಿದೆ ಎಂಬುದಕ್ಕೆ ಗ್ರಾಮೀಣ ಪ್ರದೇಶದಲ್ಲಿ ಹಚ್ಚೆಯ ವಿವಿಧ ಆಕಾರಗಳನ್ನು ದೇಹದ ಮೇಲೆ ಹಾಕಿಸಿಕೊಂಡಿರುವ ಅನೇಕ ಮಹಿಳೆಯರು ದೊರೆಯುತ್ತಾರೆ.

ಶಿವಮೊಗ್ಗ ಜಿಲ್ಲೆಯ ದೀವರು, ಕೊಟ್ಟೆ ಒಕ್ಕಲಿಗ ಸಮೂಹಕ್ಕೆ ಸೇರಿದ ಮಹಿಳೆಯರು, ಬಿಜಾಪುರ ಜಿಲ್ಲೆಯ ಲಂಬಾಣಿ ಮಹಿಳೆಯರು ಹಚ್ಚೆ ಚಿತ್ರಗಳನ್ನು ಹಾಕಿಸಿಕೊಂಡಿರುವುದನ್ನು ನೋಡಿದರೆ ಹಚ್ಚೆ ಶ್ರೀಮಂತ ಕಲಾಪ್ರಕಾರ ಎಂಬುದು ಗೊತ್ತಾಗುತ್ತದೆ.

ಕರ್ನಾಟಕದಲ್ಲಿ ಹಚ್ಚೆ ಹಾಕುವವರು ಹಚ್ಚೆ ಹಾಕುವ ಕಸಬನ್ನು ತಮ್ಮ ಪೂರ್ಣ ವೃತ್ತಿಯನ್ನಾಗಿಟ್ಟುಕೊಳ್ಳದೆ ಉಪಕಸಬನ್ನಾಗಿ ಇಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ ಕುಕ್ಕೆ ಕೊರವರು, ಬೆಸ್ತರು, ಬುರುಡೆ ಬೆಸ್ತರು, ಸಿಳ್ಳೆಕ್ಯಾತರು, ಮೋಡಿಗೊಲ್ಲರು, ಗೊಂಬೆಯಾಟ ಮರಾಠಿಗರು, ಮೇದರು, ಜೋಗಿಗಳು ಮುಂತಾದ ಸಮೂಹದವರು ಹೆಚ್ಚಾಗಿ ಹಚ್ಚೆ ಹಾಕುತ್ತಾರೆ. ಸುಗ್ಗಿಯ ಅನಂತರ ದಿನಗಳು ರೈತರಿಗೆ ಬಿಡುವಿನ ಕಾಲ. ಈ ಸಮಯದಲ್ಲಿ ಹಚ್ಚೆ ಹಾಕುವವರು ಊರೂರು ಅಲೆಯುತ್ತಾ ಬರುತ್ತಾರೆ. ಕೆಲವರು ಜಾತ್ರೆ ಮತ್ತು ಸಂತೆಗಳಲ್ಲಿ ಕ್ಷೌರಿಕರಂತೆ ಒಂದೆಡೆ ಕುಳಿತು ಹಚ್ಚೆ ಹಾಕುವ ಕಾರ್ಯವನ್ನು ಮಾಡುತ್ತಿರುತ್ತಾರೆ. ಅಲೆಮಾರಿ ಹಚ್ಚೆಯವರು ಊರಿನ ದೇವಸ್ಥಾನದ ಜಗುಲಿಯ ಮೇಲೆ, ಮನೆಯ ಪಡಸಾಲೆಯ ಕಟ್ಟೆಯ ಮೇಲೆ ಕುಳಿತುಕೊಂಡು ಹಚ್ಚೆ ಹಾಕುತ್ತಾರೆ.

ಹಚ್ಚೆ ಹಾಕಲು ಬಳಸುವ ಉಪಕರಣಗಳೆಂದರೆ ಸಾಮಾನ್ಯವಾಗಿ ಬಟ್ಟೆ ಹೊಲಿಯಲು ಮತ್ತು ಕಸೂತಿ ಕೆಲಸ ಮಾಡಲು ಬಳಸುವ ಸೂಜಿಗಳು ಅಥವಾ ಬಾಚಣಿಗೆಗಳು. 3, 4, 5, 6, 7 ಅಥವಾ 9 ಮೊನಚಾದ ಸೂಜಿಗಳನ್ನು ಕೂಡಿಸಿ ಅವುಗಳನ್ನು ಒಂದರ ಪಕ್ಕದಲ್ಲಿ ಮತ್ತೊಂದರಂತೆ ಜೋಡಿಸಿ ಕಬ್ಬಿಣದ ಎರಡು ಪಟ್ಟಿಗಳ ಮಧ್ಯೆ ಭದ್ರವಾಗಿ ಇರುವಂತೆ ಒತ್ತಿ ದಾರದಿಂದ ಕಟ್ಟಿರುತ್ತಾರೆ. ಇಂತಹ ಸೂಜಿಗಳ ಕಟ್ಟಿಗೆ 'ಚಕ್ರ' ಎಂದು ಕರೆಯುತ್ತಾರೆ. ಕೆಲವು ಸಲ ಸೂಜಿಗಳನ್ನು ಜೋಡಿಸಿ ಬಾಚಣಿಗೆಯ ಆಕಾರದಂತೆ ಮಾಡುತ್ತಾರೆ. ಇದರಿಂದ ಉದ್ದನೆಯ ಗೆರೆಯಾಕಾರದ ಚಿತ್ರವನ್ನು ಬಿಡಿಸಲು ಅನುಕೂಲವಾಗುತ್ತದೆ. ಮರದ ಹಿಡಿಕೆಯುಳ್ಳ ಸೂಜಿಯ ಕಟ್ಟನ್ನು ಜಪಾನ್ ದೇಶದಲ್ಲಿ ಉಪಯೋಗಿಸುತ್ತಾರೆ. ಬರ್ಮಾ ದೇಶದಲ್ಲಿ ಕಂಚಿನಿಂದ ಮಾಡಿದ ಲೇಖನಿಯಂತಹ ಉಪಕರಣವನ್ನು ಬಳಸುತ್ತಾರೆ. ಪ್ರಾಚೀನದಲ್ಲಿ ಹಚ್ಚೆಯ ಚಿತ್ರ ಹುಯ್ಯಲು ಮೊನಚಾದ ಮೂಳೆಯ ಚೂರುಗಳನ್ನು ಬಳಸುತ್ತಿದ್ದರು. ಸೂಜಿಗಳ ಜೊತೆಗೆ ಬಿದಿರಿನ ಕಡ್ಡಿಗಳ ಬಳಕೆಯೂ ಕಂಡುಬರುತ್ತದೆ. ಹಚ್ಚೆ ಹಾಕುವ ಮೊದಲು ಚಿತ್ರಗಳನ್ನು ಬಣ್ಣದಲ್ಲಿ ಕಡ್ಡಿಯಿಂದ ಅದ್ದಿ ಚರ್ಮದ ಮೇಲೆ ಬರೆದುಕೊಂಡು ಅನಂತರ ಸೂಜಿಯಿಂದ ಚುಚ್ಚುತ್ತಾರೆ. ಹಚ್ಚೆ ಹಾಕುವವರು ತಮ್ಮ ಕೈಯಲ್ಲಿ ಮಸಿಯಿಂದ ಬರೆದ ವಿವಿಧ ಚಿತ್ತಾರದ ಹಾಳೆಗಳನ್ನು ತಂದಿರುತ್ತಾರೆ. ಕೆಲವರು ನೆನಪಿನ ಶಕ್ತಿಯಿಂದಲೇ ಚಿತ್ರವನ್ನು ಚರ್ಮದ ಮೇಲೆ ಬರೆದುಕೊಳ್ಳದೆಯೇ ನೇರವಾಗಿ ಸೂಜಿಯಿಂದ ಚಿತ್ರವನ್ನು ಚುಚ್ಚುತ್ತಾ ಹೋಗುತ್ತಾರೆ. ಚಿತ್ರದ ಗಾತ್ರ ಮತ್ತು ಆಕಾರಕ್ಕೆ ತಕ್ಕಂತೆ ಸೂಜಿಯ ಕಟ್ಟನ್ನು ಬಾಗಿದಂತೆ ಹಿಡಿದು ಧರ್ಮವನ್ನು ಚುಚ್ಚುತ್ತಾರೆ. ಚುಚ್ಚುವಾಗ ಚಿಮ್ಮಿದ ರಕ್ತವನ್ನು ತಮ್ಮ ಸೀರೆಯ ಸೆರಗು ಅಥವಾ ಮೃದುವಾದ ಒಣ ಬಟ್ಟೆಯಿಂದ ಒರೆಸುತ್ತಾರೆ. ಕೆಲವರಿಗೆ ರಕ್ತ ಹೆಚ್ಚಾಗಿ ಬಂದರೆ ಮತ್ತೆ ಕೆಲವರಿಗೆ ರಕ್ತ ಜಿನುಗುತ್ತದೆ. ಹಚ್ಚೆ ಹಾಕುವಾಗ ಉಂಟಾಗುವ ನೋವನ್ನು ಮರೆಸಲೋಸುಗ ವಿವಿಧ ಧಾಟಿಯಿಂದ ಹಾಡುಗಳನ್ನು ಹಾಡುತ್ತಾರೆ. ಹಾಡಿನ ವಸ್ತು ಹಾಗೂ ಶೈಲಿಯಲ್ಲಿ ಹೆಚ್ಚಿನ ಆಕರ್ಷಣೆ ಇರುವುದರಿಂದ ಅವು ಹಚ್ಚೆ ಹಾಕಿಸಿಕೊಳ್ಳುವವರನ್ನು ಆಕರ್ಷಿಸುತ್ತವೆ. ಹಚ್ಚೆ ಹಾಕಿಸಿಕೊಳ್ಳುವವರೂ ಹಚ್ಚೆ ಹಾಕುವವರೊಂದಿಗೆ ಹಾಡಿಗೆ ದನಿಗೂಡಿಸುತ್ತಾರೆ. ಇದರಿಂದ ಅವರಿಗೆ ನೋವಿನ ಅನುಭವ ಹೆಚ್ಚು ಆಗುವುದಿಲ್ಲ. ಕೆಲವು ಸಲ ಮಕ್ಕಳಿಗೆ ಹಚ್ಚೆ ಚುಚ್ಚುವಾಗ ಹಾಸ್ಯದ ಹಾಡುಗಳನ್ನು ಹಾಡುತ್ತಾರೆ. ಇದರಿಂದ ಮಕ್ಕಳಿಗೆ ಖುಷಿಯಾಗಿ ಸೂಜಿಯಿಂದ ಚುಚ್ಚಿಸಿಕೊಂಡ ನೋವನ್ನು ಮರೆಯುವುದುಂಟು. ಹಚ್ಚೆಯನ್ನು ಹಾಕಿಸಿಕೊಳ್ಳುವಾಗ ಆಗುವ ನೋವು ಹೆರಿಗೆ ಬೇನೆಗೆ ಸಮಾನವಾಗಿರುತ್ತದೆ ಎಂದು ಕೆಲವರು ಹೇಳುತ್ತಾರೆ. ಆದರೂ ಹೆಂಗಸರು ಹಚ್ಚೆಯನ್ನು ಹಾಕಿಸಿಕೊಳ್ಳಲು ಕಾರಣ ಇದೊಂದು ಮುತ್ತೈದೆತನದ ಸಂಕೇತವೆಂಬುದೇ ಆಗಿದೆ. ಹಚ್ಚೆ ಹಾಕುವವರೂ ಹಚ್ಚೆಯ ಮಹತ್ವವನ್ನು ಹೇಳಿ ಜನರನ್ನು ಆಕರ್ಷಿಸುತ್ತಾರೆ. ಹಚ್ಚೆ ಹಾಕಿಸಿಕೊಂಡರೆ ನೀನು ಶಾಶ್ವತ ಮುತ್ತೈದೆ ಆಗುತ್ತೀಯ, ಸುರಲೋಕದ ಸುಂದರಿಯಂತೆ ಕಾಣುತ್ತೀಯ, ನಿನ್ನನ್ನು ನಿನ್ನ ಗಂಡ ಅರಗಿಣಿಯಂತೆ ಸಾಕುತ್ತಾನೆ ಎಂದು ಮುತ್ತಿನಂತೆ ಮಾತನಾಡುವ ಇವರ ಮಾತುಗಳಿಗೆ ಎಂತಹವರೂ ಮರುಳಾಗುತ್ತಾರೆ.

ಹಚ್ಚೆ ಹಾಕುವವರಿಗೆ ದೊರೆಯುವ ಸಂಭಾವನೆ ಅತ್ಯಲ್ಪ. ಕೆಲವರು ಒಂದೋ ಎರಡೋ ರೊಟ್ಟಿಯನ್ನು ಕೊಟ್ಟು ಹಚ್ಚೆ ಹಾಕಿಸಿಕೊಂಡರೆ, ಕೆಲವರು ತಾವು ಬೆಳೆದ ಬತ್ತ, ರಾಗಿ, ಜೋಳ, ಶೇಂಗಾ, ಹೆಸರು, ಕಡಲೆ ಮೊದಲಾದ ಧಾನ್ಯಗಳನ್ನು ಕೊಡುತ್ತಾರೆ. ಕೆಲವರು ನಾಲ್ಕು ಆಣೆ, ಒಂದು ರೊಟ್ಟಿ, ಮೂರು ಮೆಣಸಿನಕಾಯಿ ಕೊಡುತ್ತಾರೆ. ಮತ್ತೆ ಕೆಲವರು ಹಬ್ಬದ ಸಂದರ್ಭದಲ್ಲಿ ಮಾಡಿದ ಉಂಡೆ, ಚಕ್ಕುಲಿಗಳನ್ನು ಕೊಟ್ಟು ಹಚ್ಚೆ ಹಾಕಿಸಿಕೊಳ್ಳುವರು. ಹಚ್ಚೆ ಹಾಕುವ ಸಾಮಗ್ರಿಗಳನ್ನು ಮೊದಲು ಪೂಜೆ ಮಾಡಿ ಅನಂತರ ಹಚ್ಚೆ ಹಾಕಿಸಿಕೊಳ್ಳುವ ಸಂಪ್ರದಾಯ ಇದೆ. ಚಿಕ್ಕಪ್ಪ, ಚಿಕ್ಕಮ್ಮ, ಅಪ್ಪ, ಅಮ್ಮಂದಿರು ತಮ್ಮ ಮಕ್ಕಳಿಗೆ ನೆನಪಿಗಾಗಿ ಹಚ್ಚೆ ಹಾಕಿಸಿದರೆ ಅಜ್ಜ ಅಜ್ಜಿಯರು ತಾವು ಸತ್ತ ನಂತರವೂ ತಾವು ಹಾಕಿಸಿದ ಹಚ್ಚೆ ತಮ್ಮ ಮೊಮ್ಮಕ್ಕಳ ಕೈಯಲ್ಲಿದ್ದು ತಮ್ಮ ನೆನಪನ್ನು ತರುತ್ತದೆ ಎಂಬ ಕಾರಣದಿಂದ ಹಚ್ಚೆ ಹಾಕಿಸುತ್ತಾರೆ. ಅಣ್ಣ, ಅಕ್ಕ, ದೊಡ್ಡಪ್ಪ, ದೊಡ್ಡಮ್ಮ, ಅತ್ತಿಗೆ, ಭಾವ ಹಾಗೂ ತೌರುಮನೆಯವರು ಹೆಣ್ಣು ಮಕ್ಕಳಿಗೆ ತಾವೇ ಸಂಭಾವನೆ ನೀಡಿ ಹಚ್ಚೆ ಹಾಕಿಸುತ್ತಾರೆ. ಇದಕ್ಕೆಲ್ಲ ಮುಖ್ಯ ಕಾರಣ ತಮ್ಮ ನೆನಪು ಶಾಶ್ವತವಾಗಿರಲಿ ಎಂಬುದೇ ಆಗಿದೆ.

ಹಚ್ಚೆ ಹಾಕಿಸಿಕೊಂಡ ಅನಂತರ ಅದಕ್ಕೆ ದೃಷ್ಟಿ ತಗುಲಬಾರದು ಎಂದು ಮೆಣಸಿನಕಾಯಿ ಮತ್ತು ಉಪ್ಪನ್ನು ನಿವಾಳಿಸಿ ಬೆಂಕಿಗೆ ಹಾಕುತ್ತಾರೆ. ಕೆಲವರು ನಿವಾಳಿಸಿದ ವಸ್ತುಗಳನ್ನು ಹಚ್ಚೆ ಹಾಕಿದವರಿಗೆ ಕೊಡುತ್ತಾರೆ. ಹಚ್ಚೆ ಹಾಕಿದ ಅನಂತರ ಒಂದು ವಾರದವರೆಗೆ ಹಚ್ಚೆ ಹಾಕಿದ ಜಾಗದ ಮೇಲೆ ಕೊಬ್ಬರಿ ಎಣ್ಣೆ ಹಾಗೂ ಅರಿಶಿನ ಪುಡಿಯನ್ನು ಕಲಸಿ ಹಚ್ಚುತ್ತಾರೆ. ಇದರಿಂದ ನಂಜಾಗುವುದಿಲ್ಲವೆಂಬ ತಿಳಿವಳಿಕೆ ಅವರದು. ಹಚ್ಚೆ ಹಾಕಿದ ಅನಂತರ ಚರ್ಮ ಸುಲಿದು ಉದುರುತ್ತದೆ. ಅನಂತರ ಹಚ್ಚೆ ಶಾಶ್ವತವಾಗಿ ಉಳಿಯುತ್ತದೆ. ಹಚ್ಚೆ ಹಾಕಿಸಿಕೊಂಡವರು ನಂಜಾಗದಿರಲು ಬದನೇಕಾಯಿ ಹಾಗೂ ಜಿಡ್ಡು ಪದಾರ್ಥಗಳನ್ನು ತಿನ್ನದೆ ಪಥ್ಯವನ್ನು ಮಾಡುತ್ತಾರೆ. ಹಚ್ಚೆ ಹಾಕಿಸಿಕೊಂಡ ಅನಂತರ ಸರಿಯಾಗಿ ಅದರ ಆರೈಕೆ ಮಾಡದಿದ್ದರೆ ಅಥವಾ ತುಕ್ಕು ಹಿಡಿದ ಸೂಜಿಯಿಂದ ಚುಚ್ಚಿಸಿಕೊಂಡಿದ್ದರೆ ತೊಂದರೆಯಾಗುವುದುಂಟು. ಕೆಲವರಿಗೆ ನಂಜಾಗಿ ಕೈಯೇ ಊನವಾಗಿರುವ ಉದಾಹರಣೆಗಳೂ ಇವೆ.

**ಹಚ್ಚೆಯ ಬಣ್ಣ**: ಹಚ್ಚೆಗೆ ಹಾಕುವ ಬಣ್ಣದ ತಯಾರಿಕೆಯಲ್ಲಿ ವಿಶಿಷ್ಟ ವಿಧಾನಗಳಿವೆ. ಭಾರತದಲ್ಲಿ ಪ್ರಚಲಿತವಿರುವ ಬಣ್ಣಗಳು ಎರಡು ಪ್ರಕಾರವಾಗಿವೆ: 1. ಹಸುರು ಮಿಶ್ರಿತ ಹಳದಿ ಬಣ್ಣ, 2. ನೀಲಿ ಮಿಶ್ರಿತ ಕಪ್ಪು ಬಣ್ಣ. ಪ್ರಪಂಚದ ಅನೇಕ ಕಡೆ ಕೆಂಪು, ಗುಲಾಬಿ, ಹಳದಿ ಮುಂತಾದ ಬಣ್ಣಗಳ ಹಚ್ಚೆಗಳಿವೆ. ಹಚ್ಚೆಗೆ ಹಾಕುವ ಬಣ್ಣ ತಯಾರಿಕೆಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಿದೆ. ಆಯಾ ಪ್ರದೇಶದಲ್ಲಿ ದೊರೆಯುವ ಗಿಡಮೂಲಿಕೆಗಳ ಆಧಾರದ ಮೇಲೆ ಈ ಬಣ್ಣಗಳನ್ನು ತಯಾರಿಸುತ್ತಾರೆ. ಸಸ್ಯಗಳ ಕಾಯಿ, ಬೇರು, ಕಾಂಡ, ಬಳ್ಳಿ, ಎಲೆಗಳನ್ನು ಬಳಸಿಕೊಂಡು ಬಣ್ಣ ತಯಾರಿಸುವ ಕ್ರಮ ಭಾರತದಲ್ಲಿದೆ. ಬಣ್ಣ ತಯಾರಿಸುವ

ಗಿಡಮೂಲಿಕೆಗಳಲ್ಲಿ ಎರಡು ಅಂಶಗಳನ್ನು ಜನಪದರು ಗಮನಿಸಿದ್ದಾರೆ: 1. ಹಾಕಿದ ಬಣ್ಣ ದೇಹದ ಮೇಲೆ ಶಾಶ್ವತವಾಗಿ ಉಳಿಯಬೇಕು, 2. ದೇಹಕ್ಕೆ ನಂಜನ್ನು ಉಂಟುಮಾಡಬಾರದು. ಬಣ್ಣ ತಯಾರಿಕೆಗಾಗಿ ಬಳಸುವ ಅನೇಕ ಮಾದರಿಗಳಲ್ಲಿ ಕೆಲವು ಉದಾಹರಣೆಗಳಿವು:

1. ಮನೆಯವರೇ ಸೊಪ್ಪನ್ನು ಕಾವಲಿಗೆ ಹಾಕಿ ಬಿಸಿ ಮಾಡಿ ಅದನ್ನು ತಿಕ್ಕಿ ಹರಳೆಣ್ಣೆ ದೀಪಕ್ಕೆ ಹಿಡಿದು ಅದರಿಂದ ಬರುವ ಕಪ್ಪಿಗೆ ನೀರನ್ನು ಸೇರಿಸಿ ಬಣ್ಣ ತಯಾರಿಸುತ್ತಾರೆ.

2. ವೀಳ್ಯದೆಲೆ ರಸವನ್ನು ಕಾವಲಿಗೆ ಹಚ್ಚಿ ಹರಳೆಣ್ಣೆ ದೀಪಕ್ಕೆ ಹಿಡಿದರೆ ಅದರಿಂದ ಕಪ್ಪುಬಣ್ಣ ಬರುತ್ತದೆ. ಅದಕ್ಕೆ ಆಕಳ ಹಾಲು ಅಥವಾ ಮೊಲೆಯ ಹಾಲನ್ನು ಸೇರಿಸಿ ಬಣ್ಣ ತಯಾರಿಸುತ್ತಾರೆ.

3. ಹಾಗಲಕಾಯಿರಸ ಅಥವಾ ಚಪ್ಪರದವರೆ ರಸವನ್ನು ಮಣ್ಣಿನ ಮಡಕೆಯಲ್ಲಿ ಹಾಕಿ ಸ್ವಲ್ಪ ಬೆಚ್ಚಗೆ ಮಾಡಿದರೆ ಲೋಳೆಯಾಕಾರದ ರಸ ಬರುತ್ತದೆ. ಇದನ್ನೇ ಬಣ್ಣವನ್ನಾಗಿ ಉಪಯೋಗಿಸುತ್ತಾರೆ.

4. ಕಿರುಗೋಣಿ ಸೊಪ್ಪಿನ ರಸಕ್ಕೆ ಅಥವಾ ನೆಲ್ಲಿ ಸೊಪ್ಪಿನ ರಸಕ್ಕೆ ಎಳ್ಳೆಣ್ಣೆ ದೀಪದ ಕರಿಯನ್ನು ಸೇರಿಸಿ ಬಣ್ಣ ತಯಾರಿಸುತ್ತಾರೆ.

5. ನೀಲಗಿರಿ ಮರದ ಎಲೆಯ ರಸಕ್ಕೆ ದೀಪದ ಕಪ್ಪನ್ನು ಹಾಕಿ ಬಣ್ಣವನ್ನು ತಯಾರಿಸುತ್ತಾರೆ.

6. ಮಧ್ಯ ಭಾರತದ ಕೆಲವು ಬುಡಕಟ್ಟು ಸಮೂಹಗಳು ಬೀಟೆ ಮರದ ತೊಗಟೆಗೆ ನೀರು ಹಾಗೂ ಅರಿಶಿನ ಪುಡಿಗಳನ್ನು ಹಾಕಿ ಬಣ್ಣ ತಯಾರಿಸುತ್ತಾರೆ.

7. ತುಂಬೇಸೊಪ್ಪಿನ ರಸಕ್ಕೆ ಮೊಲೆಹಾಲು ಮತ್ತು ಕೊಬ್ಬರಿ ಎಣ್ಣೆ ಬೆರೆಸಿ ಬಣ್ಣ ತಯಾರಿಸುತ್ತಾರೆ.

8. ಕಾವಲಿಯ ತಳದ ಕರಿಗೆ ನೀರನ್ನು ಬೆರೆಸಿ ಬಣ್ಣ ತಯಾರಿಸುತ್ತಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ಹಚ್ಚೆ ಹಾಕುವ ಮಹಿಳೆಯರು ಕಾಚು, ಅಳಲೆಕಾಯಿ, ವೀಳ್ಯದೆಲೆಯನ್ನು ಸುಟ್ಟು ಕರಿ ಮಾಡಿ ಅದಕ್ಕೆ ಚಿಮಣಿಯ ಕಪ್ಪನ್ನು ಸೇರಿಸಿ ಬಣ್ಣ ತಯಾರಿಸುತ್ತಾರೆ. ಕೆಲವರು ಬಣ್ಣವನ್ನು ಹುಡಿ ರೂಪದಲ್ಲಿ ತಯಾರಿಸಿ ಅನಂತರ ಬೇಕಾದಾಗ ನೀರನ್ನು ಬೆರೆಸುತ್ತಾರೆ. ಇವಲ್ಲದೆ ಇನ್ನೂ ನೂರಾರು ವಿಧಾನಗಳಿಂದ ಬಣ್ಣ ತಯಾರಿಸುವ ರೂಢಿ ಪ್ರಪಂಚದಲ್ಲಿದೆ.

**ಹಚ್ಚೆಯ ಬಗೆಗಿರುವ ನಂಬಿಕೆಗಳು**: ಯಾವುದೇ ಜನಪದ ಸಂಪ್ರದಾಯಗಳಿಗೆ ಜನಪದರಲ್ಲಿ ಬೇರೂರಿರುವ ಗಾಢ ನಂಬಿಕೆಯೇ ಕಾರಣವಾಗಿರುತ್ತದೆ. ಹಚ್ಚೆಯ ಬಗೆಗೆ ಪ್ರಪಂಚದಾದ್ಯಂತ ಅನೇಕ ನಂಬಿಕೆಗಳು ಪ್ರಚಲಿತದಲ್ಲಿವೆ. ಜನಪದರ ನಂಬಿಕೆಗಳೇ ಅವರ ಮನಸ್ಸಿನ ನಿಯಂತ್ರಣಾಂಶಗಳಾಗಿ ಜನಪದ ಸಂಪ್ರದಾಯಗಳ ಬಗ್ಗೆ ಅವರಲ್ಲಿ ಭಯ, ಭಕ್ತಿ ಅಚಲ ಶ್ರದ್ಧೆಯನ್ನು ಮೂಡಿಸುತ್ತವೆ. ಹಾಗಾಗಿ ಕಲೆಗಳು ಜನಾಂಗದಿಂದ ಜನಾಂಗಕ್ಕೆ ಕೊಡುಗೆಗಳ ರೂಪದಲ್ಲಿ ಮುಂದುವರೆಯುತ್ತಾ ಬರುತ್ತವೆ. ಭಾರತ ಹಾಗೂ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಈ ಜನಪದ ಕಲೆ ಅಲಂಕಾರ, ಧರ್ಮ, ಮಾಟ, ಮಂತ್ರ, ತಂತ್ರ, ಮೂಢನಂಬಿಕೆಗಳ ಅಡಿಯಲ್ಲಿ ಬೆಳೆದು ಬಂದಿದೆ.

ಹಚ್ಚೆ ಬೊಟ್ಟಿನ ಕೈಯ ಒತ್ತಿ ಹಿಡಿಯಲು ಬ್ಯಾಡ ನೆತ್ತರ ಇಳಿದಾವು ಕಿರಿಬಳ್ಳಿ ಎಂದು ಹಚ್ಚೆ ಹಾಕಿಸಿಕೊಂಡ ಹೆಣ್ಣು ತನ್ನ ಪ್ರಿಯಕರನನ್ನು ಎಚ್ಚರಿಸುತ್ತಾಳೆ. ಇಷ್ಟೆಲ್ಲಾ ನೋವುಗಳನ್ನು ಅನುಭವಿಸಿಯೂ ಹಚ್ಚೆಯ ಚಿತ್ರಗಳನ್ನು ದೇಹದ ಮೇಲೆ ಹಾಕಿಸಿಕೊಂಡು ಖುಷಿ ಪಡುವುದನ್ನು ನೋಡಿದರೆ ಜನಪದ ಮಹಿಳೆಯರಿಗೆ ಈ ಕಲೆಯ ಬಗ್ಗೆ ಎಂತಹ ಗಾಢವಾದ ಪ್ರೀತಿ ಇದೆ ಎಂಬುದನ್ನು ತೋರಿಸುತ್ತದೆ. ಪುರಾತನ ಇಥಿಯೋಪಿಯನ್ನರು ತಮ್ಮ ಪೂರ್ವಿಕರ ಚಿತ್ರಗಳನ್ನು ದೇಹದ ಮೇಲೆ ಬರೆಯಿಸಿಕೊಳ್ಳುತ್ತಿದ್ದರಂತೆ. ತಮ್ಮ ದೇಹದ ಮೇಲೆ ಪೂರ್ವಿಕರ ಗುರುತುಗಳಿದ್ದರೆ, ಅಲ್ಲಿ ಪೂರ್ವಿಕರು ಬಂದು ನೆಲೆಸಿ ತಮಗೆ ರಕ್ಷಣೆ ನೀಡುತ್ತಾರೆ ಎಂಬ ನಂಬಿಕೆ ಅವರಲ್ಲಿತ್ತು. ಉತ್ತರ ಸಿರಿಯದ ಪಾಪುಲಿನ್ ಜನಾಂಗ ತಮ್ಮ ದೇಹದ ಮೇಲೆ ಕತ್ತರಿಯಾಕಾರದ ಎರಡು ಭರ್ಜಿ ಅಥವಾ ಖಡ್ಗಗಳ ಚಿತ್ರಗಳನ್ನು ಹಾಕಿಸಿಕೊಳ್ಳುತ್ತಿದ್ದರು. ಇದರಿಂದ ಅವರಿಗೆ ಶೌರ್ಯ ಬರುತ್ತದೆ ಎನ್ನುವ ನಂಬಿಕೆ ಇತ್ತು. ಅಮೆರಿಕದ ರೆಡ್ ಇಂಡಿಯನ್ನರು ಹಚ್ಚೆ ಹಾಕಿಸಿಕೊಳ್ಳುವುದರಿಂದ ಲೈಂಗಿಕ ಸಾಮರ್ಥ್ಯ ಅಧಿಕವಾಗುತ್ತದೆ ಎಂದು ನಂಬುತ್ತಾರೆ. ಮಾವೋರಿಗಳಲ್ಲಿ ಹಚ್ಚೆ ಭಯೋತ್ಪಾದಕತೆಯನ್ನು ಉಂಟುಮಾಡುತ್ತದೆ ಎನ್ನುವ ನಂಬಿಕೆ ಇದೆ. ಬರ್ಮಿಯರು ತಮ್ಮ ಹೆಣ್ಣುಮಕ್ಕಳ ಮುಖಗಳನ್ನು ಹಚ್ಚೆಯ ಕಲೆಯಿಂದ ವಿರೂಪಗೊಳಿಸುತ್ತಾರೆ. ಹೀಗೆ ಮಾಡುವುದರಿಂದ ಅವರನ್ನು ಯಾರೂ ಅಪಹರಿಸುವುದಿಲ್ಲ ಎನ್ನುವ ನಂಬಿಕೆ ಇದೆ.

ಹಚ್ಚೆ ಹಾಕಿಸಿಕೊಂಡು ಪಾಪ ಮಾಡಿದರೆ ಅಂಥವರನ್ನು ಯಮರಾಜ ಕ್ಷಮಿಸಿ ಸ್ವರ್ಗಕ್ಕೆ ಕಳಿಸುತ್ತಾನೆ ಎನ್ನುವ ನಂಬಿಕೆ ಜನಪದರಲ್ಲಿದೆ. ಹಚ್ಚೆ ಹಾಕಿಸಿಕೊಂಡರೆ ಗರ್ಭಪಾತವಾಗುವುದಿಲ್ಲ, ಗರ್ಭಿಣಿ ಇದ್ದಾಗ ಕಿರೀಟದ ಹಚ್ಚೆ ಹಾಕಿಸಿಕೊಂಡರೆ ಮನೆ ಬೆಳಗುವ ಸುಂದರ ಮಗಳು ಹುಟ್ಟುತ್ತಾಳೆ, ಮಕ್ಕಳು ಹುಟ್ಟಿ ತಕ್ಷಣ ಸಾಯುತ್ತಿದ್ದರೆ ಅಂತಹ ಗರ್ಭಿಣಿ ತಾಯಿಯ ನಡುವಿನ ಮೇಲೇ ಹಚ್ಚೆ ಚುಚ್ಚಿದರೆ ಹುಟ್ಟುವ ಮಕ್ಕಳು ಸಾಯುವುದಿಲ್ಲ ಎನ್ನುವ ನಂಬಿಕೆ ಇದೆ. ಕಾಲಿನ ಮೊಣಚಿಪ್ಪು ಅಥವಾ ತೋಳಿನ ಸಂದಿಗಳಿಗೆ ವಾತರೋಗ ತಗುಲಿದ್ದರೆ ಅಂಥವರು ಹಚ್ಚೆ ಹಾಕಿಸಿಕೊಂಡರೆ ವಾತ ಕಡಿಮೆಯಾಗುತ್ತದೆ ಎನ್ನುವ ನಂಬಿಕೆ ಇದೆ. ಹಚ್ಚೆ ಹಾಕಿಸಿಕೊಂಡರೆ ವೈಧವ್ಯ ಬರುವುದಿಲ್ಲ, ಶ್ರೀಮಂತಿಕೆ ಬರುತ್ತದೆ ಎನ್ನುವ ನಂಬಿಕೆ ಜನರಲ್ಲಿದೆ. ತಲೆಶೂಲೆಯಾದವರು ಹಣೆಯ ಮೇಲೆ ಹಚ್ಚೆ ಹಾಕಿಸಿಕೊಂಡರೆ ತಲೆಶೂಲೆ ಬರುವುದಿಲ್ಲ ಎನ್ನುವ ನಂಬಿಕೆ ಇದೆ. ಗರ್ಭಿಣಿ ಇದ್ದಾಗ ಮೈ ಹಸಿ ಇರುವುದರಿಂದ ಹಚ್ಚೆ ಹಾಕಿಸಿಕೊಂಡರೆ ಚಿತ್ರಗಳು ಚೆನ್ನಾಗಿ ಮೂಡುತ್ತವೆ ಎನ್ನುವ ನಂಬಿಕೆ ಇದೆ. ಬುಡಕಟ್ಟು ಸಮೂಹಗಳಲ್ಲಿ ಹಚ್ಚೆಯ ಬಗ್ಗೆ ವಿವಿಧ ನಂಬಿಕೆಗಳು ಇವೆ. ರಾಮನ ಮಂಚದ ಚಿತ್ರವನ್ನು ಹಾಕಿಸಿಕೊಂಡ ಕನ್ಯೆ ಹೆಚ್ಚಿನ ಲೈಂಗಿಕ ಸುಖವನ್ನು ಪಡೆಯುತ್ತಾಳೆ ಹಾಗೂ ರಾಮನಂತೆ ಆಕೆಯ ಗಂಡ ಏಕಪತ್ನೀವ್ರತಸ್ಥನಾಗುತ್ತಾನೆ ಎನ್ನುವ ನಂಬಿಕೆ ಇದೆ. ಕೆಲವು ಬುಡಕಟ್ಟುಗಳಲ್ಲಿ ಮಹಿಳೆಯರು ವಿವಾಹದ ಪೂರ್ವದಲ್ಲಿ ಹಚ್ಚೆ ಹಾಕಿಸಿಕೊಳ್ಳುವುದು ನಿಷಿದ್ಧ. ಆದರೆ ಕೆಲವು ಬುಡಕಟ್ಟುಗಳಲ್ಲಿ ವಿವಾಹದ ಅನಂತರ ಹಚ್ಚೆ ಹಾಕಿಸಿಕೊಳ್ಳುವುದು ನಿಷಿದ್ಧ. ಗೊಂಡರು ಹಾಗೂ ಇತರ ಬುಡಕಟ್ಟುಗಳಲ್ಲಿ ಅವಿವಾಹಿತರು ಕೇವಲ ಕೈಗೆ ಮಾತ್ರ ಹಚ್ಚೆ ಹಾಕಿಸಿಕೊಳ್ಳಬೇಕು; ಅನಂತರ ಮದುವೆಯಾದ ಮೇಲೆ ಇತರ ಭಾಗಗಳಿಗೆ ಹಚ್ಚೆ ಹಾಕಿಸಿಕೊಳ್ಳಬೇಕೆಂಬ ನಂಬಿಕೆ ಇದೆ.

ಕರ್ನಾಟಕದಲ್ಲಿ ಹಚ್ಚೆ ಗುರುತುಗಳಿದ್ದ ಸ್ತ್ರೀ ಮಾಡಿದ ಅಡುಗೆ ಹಳಸುವುದಿಲ್ಲ ಎನ್ನುವ ನಂಬಿಕೆ ಇದೆ. ಸರ್ಪಹುಣ್ಣು, ತೊನ್ನು, ಹೀನಸುಳಿ ಇದ್ದ ಕಡೆ ಹಚ್ಚೆ ಹಾಕಿಸಿಕೊಂಡರೆ ಇತರರು ತಮಗೆ ಮಾಡಿಸಿದ ಮಾಟ, ಮಂತ್ರಗಳು ಯಾವುದೇ ತೊಂದರೆ ಕೊಡುವುದಿಲ್ಲ ಎನ್ನುವ ನಂಬಿಕೆ ಇದೆ. ಭೂಮಿ, ಸ್ವರ್ಗ, ಅಷ್ಟದಿಕ್ಕುಗಳು, ನವಗ್ರಹ ಮುಂತಾದ ಪ್ರಪಂಚದ ಶಕ್ತಿ ಸಂಕೇತಗಳ ಹಚ್ಚೆ ಹಾಕಿಸಿಕೊಂಡರೆ ಅವು ತಮಗೆ ಒಲಿದು ರಕ್ಷಣೆ ನೀಡುತ್ತವೆ ಎನ್ನುವ ನಂಬಿಕೆ ಇದೆ. ಹಚ್ಚೆ ಗುರುತುಗಳನ್ನು ಹಾಕಿಸಿಕೊಂಡ ಸ್ತ್ರೀ ಕಣದಲ್ಲಿ ಅಡ್ಡಾಡಿದರೆ ಧಾನ್ಯರಾಶಿ ಹೆಚ್ಚುತ್ತದೆ ಎನ್ನುವ ನಂಬಿಕೆಯೂ ಇದೆ.

ದೇಹದ ಎಲ್ಲ ಭಾಗಗಳ ಮೇಲೆ ಹಚ್ಚೆ ಹಾಕುತ್ತಾರೆ. ಅಂಗೈ, ಮುಂಗೈ, ಹಿಂಗೈ, ಮೊಳಕೈ, ತೋಳು, ಕೆನ್ನೆ, ಗಲ್ಲ, ಹಣೆ, ಹುಬ್ಬು, ಕಣ್ಣಿನ ಅಂಚು, ಎದೆ, ನಡು, ಹೊಕ್ಕಳು, ಮೊಲೆ, ತೊಡೆ, ಯೋನಿ, ಶಿಶ್ನ, ನಿತಂಬ, ಮೊಣಕಾಲು, ಮೀನಖಂಡ, ಕಾಲಿನ ಮೇಲುಭಾಗ, ಹಿಮ್ಮಡಿ, ಹೊಟ್ಟೆ, ಬೆನ್ನು ಹೀಗೆ ದೇಹದ ಎಲ್ಲ ಭಾಗಗಳ ಮೇಲೂ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ದೇಹದ ವಿವಿಧ ಭಾಗಗಳ ಮೇಲೆ ವಿಶಿಷ್ಟ ರೀತಿಯ ಹಚ್ಚೆಗಳನ್ನು ಹಾಕಿಸಿಕೊಳ್ಳುವ ಸಂಪ್ರದಾಯವಿದೆ. ಕೆಲವು ಭಾಗಗಳಲ್ಲಿ ಹಾಕುವ ಹಚ್ಚೆ ಚಿತ್ರಗಳು ಹೀಗಿವೆ:

**ಹಣೆಯ ಮೇಲೆ:** ದೃಷ್ಟಿಬೊಟ್ಟು, ಹೂವು, ಚಂದ್ರ, ಸೂರ್ಯ, ನಕ್ಷತ್ರ, ಶಿಲುಬೆ, ಕಮಲ, ಚುಕ್ಕೆ, ಶಂಖ ಇತ್ಯಾದಿ.ಹುಬ್ಬಿನ ನಡುವೆ: ದೃಷ್ಟಿಬೊಟ್ಟು ಇತ್ಯಾದಿ. ಗಲ್ಲದ ಮೇಲೆ: ಗಲ್ಲಹಚ್ಚೆ, ಸಣ್ಣಚುಕ್ಕೆ ಇತ್ಯಾದಿ. ತೋಳು: ಮುತ್ತಿನ ಬೊಟ್ಟು, ಸೀರೆ ಸೆರಗು, ತೋಳು ಚಪ್ಪರ, ಮುತ್ತಿನ ಬಳ್ಳಿ, ಮುತ್ತಿನ ಮಲಕು, ತೊಂಡೆ ಚಪ್ಪರ, ಒಡವೆಗಳು ಇತ್ಯಾದಿ. ಬಲಮೊಣಕೈ: ಬಾಳೆಗಿಡ, ಮುತ್ತಿನಾರತಿ, ಜೋಗಿ ಜಡೆ, ಹನುಮಪ್ಪ, ಸೀರೆ ಸೆರಗು, ನಾಗಪ್ಪ, ರಾಮನತೊಟ್ಲು ಇತ್ಯಾದಿ. ಎಡಮೊಣಕೈ: ಗೌರಿಗದ್ದಿಗೆ, ಜೋಗಿ ಜಡೆ, ತಾವರೆ ಹೂ, ಗಾಲಿತೇರು, ಶಿವನ ಬಾಸಿಂಗ, ನವಿಲ ಕಣ್ಣು ಇತ್ಯಾದಿ. ಮೂಗು: ಮುಕ್ತ ಚುಕ್ಕೆ ಇತ್ಯಾದಿ.

**ಮುಂಗೈ:** ಬಾಳೆಗಿಡ, ತಾವರೆ ಹೂ, ಶಾವಂತಿಗೆ ಹೂ, ಶಿವನಗುಡಿ, ಮಾವಿನ ಎಲೆ, ಹನುಮಪ್ಪನ ತೇರು, ಹಂಪಿತೇರು ಇತ್ಯಾದಿ. ಮೆಲುಕು: ಕುದುರೆ, ಚುಕ್ಕಿ. ಕಣ್ಣುಗಳ ಪಕ್ಕ: ಕಣ್ಣುಶಾವಿಗೆ, ಚುಕ್ಕಿಗಳು. ಎಡ ಮುಂಗೈ: ಅಪ್ಪಕೊಳ, ತಾವರೆ ಹೂ, ನಿಂಬೆ ಸಸಿ, ನಂದೀಕೋಲು, ಜಿರಲೆ ಇತ್ಯಾದಿ. ಬಲ ಮುಂಗೈ: ಗಂಡ–ಹೆಂಡತಿಯ ಹೆಸರು, ಗೆಳೆಯ–ಗೆಳತಿ, ಪ್ರಿಯಕರ–ಪ್ರಿಯತಮೆ, ಅಜ್ಜ–ಅಜ್ಜಿ, ಅಪ್ಪ–ಅವ್ವನ ಹೆಸರುಗಳು ಇತ್ಯಾದಿ. ಹೆಬ್ಬೆರಳು: ಚೇಳು, ನೊಣ ಇತ್ಯಾದಿ. ನಿತಂಬ: ಗುಲಾಬಿ ಹೂ, ಚುಕ್ಕೆಗಳ ಚಿತ್ರ, ಸರ್ಪಗಳುಬೆರೆತ ಚಿತ್ರ, ಇತ್ಯಾದಿ. ದೇಹದ ವಿವಿಧ ಭಾಗಗಳಿಗೆ ತನ್ನದೇ ಆದ ವೈಶಿಷ್ಟ್ಯಪೂರ್ಣ ಚಿತ್ರಗಳನ್ನು ಜನಪದರು ಹಾಕಿಸಿಕೊಳ್ಳುತ್ತಾರೆ. ಅನೇಕ ಬುಡಕಟ್ಟು ಸಮೂಹಗಳು ಜೇಡ, ಆನೆ, ಹುಲಿ, ನೊಣ, ಜಿಗಣೆ, ಕಾಗೆ, ಸರಪಳಿ, ಹದ್ದು, ಮಾಲೆ, ಉಗುರು, ಜರಡಿ, ಮಂಚ, ತಕ್ಕಡಿ ಮುಂತಾದ ಚಿತ್ರಗಳನ್ನು ಹಾಕಿಸಿಕೊಳ್ಳುತ್ತಾರೆ.

ಕರ್ನಾಟಕದ ಹಚ್ಚೆಗೆ ತನ್ನದೇ ವಿಶಿಷ್ಟ ಸ್ಥಾನವಿದೆ. ಇಲ್ಲಿಯ ಮಹಿಳೆಯರು ಹಾಕಿಸಿಕೊಳ್ಳುವ ಜೋಗಿ ಜಡೆ, ಸೀರೆ ಸೆರಗು, ಶಿವನ ಬಾಸಿಂಗ, ಹಂಪಿತೇರು, ತೊಂಡೆಚಪ್ಪರ, ತಾವರೆ ಹೂ, ಮುತ್ತಿನ ಮಲಕು, ನವಿಲಿನ ಕಣ್ಣು, ಚಂದಪ್ಪ(ಚಂದ್ರ) ಮುಂತಾದ ಚಿತ್ರಗಳು ತನ್ನದೇ ಆದ ವೈಶಿಷ್ಟ್ಯ ಪಡೆದಿವೆ. ಕೈತುಂಬ ಹಚ್ಚೆ ಹಾಕಿಸಿಕೊಂಡ ಮಹಿಳೆಯ ಕೈ ಅನೇಕ ನಾಜೂಕಿನ ಚಿತ್ರಗಳ ಗುಂಪುಗಳನ್ನೇ ಒಳಗೊಂಡಿರುತ್ತದೆ. ಅನೇಕ ರಂಗೋಲಿಯ ಚಿತ್ರಗಳೂ ಹಚ್ಚೆಯ ಚಿತ್ರಗಳಾಗಿ ಅನೇಕ ಅಂಗನೆಯರ ಕೈ ಕಾಲು ಮುಖಗಳನ್ನು ಶೋಭಿಸಿವೆ. ಪ್ರಪಂಚದ ಯಾವುದೇ ಜನಾಂಗದ ಹಚ್ಚೆ ಚಿತ್ರಗಳ ಜೊತೆಗೆ ಕರ್ನಾಟಕದ ಹಚ್ಚೆ ಚಿತ್ರಗಳ ನಯಗಾರಿಕೆ ಹಾಗೂ ಆಕರ್ಷಕ ಶಕ್ತಿಯನ್ನು ಹೋಲಿಸಬಹುದು. ಒಂದು ಕಾಲದಲ್ಲಿ ಬರ್ಮೀಯರು ಹಾಕಿಸಿಕೊಳ್ಳುವ ಹಚ್ಚೆ ಚಿತ್ರಗಳು ಹೆಚ್ಚು ಕಲಾತ್ಮಕ ವಾಗಿರುತ್ತಿದ್ದವು. ಆದರೆ ಪ್ರಪಂಚದ ಅನೇಕ ದೇಶಗಳಲ್ಲಿ ಹಚ್ಚೆ ಚಿತ್ರಕಲೆ ಕ್ಷೀಣಿಸುತ್ತ ಬಂದಿದೆ. ಆದರೆ ಅಮೆರಿಕ, ಜಪಾನ್ ಹಾಗೂ ಇತರ ಮುಂದುವರೆದ ದೇಶಗಳಲ್ಲಿ ಕೋಟ್ಯಂತರ ಮಂದಿ ಹಚ್ಚೆ ಹಾಕಿಸಿಕೊಳ್ಳುವರು ಎಂಬ ಅಂಶ ಆಶ್ಚರ್ಯವನ್ನುಂಟುಮಾಡುತ್ತದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಹೊಸ ಪೀಳಿಗೆಯ ಒಲವು ಹಚ್ಚೆಯ ಬಗ್ಗೆ ಕಡಿಮೆಯಾಗಿದೆ. ಹಾಗಾಗಿ ಕೆಲವು ವರ್ಷಗಳ ಅನಂತರ ಅನೇಕ ಮಾದರಿಯ ಹಳೆ ಚಿತ್ರಗಳು ಮಾಯವಾಗಬಹುದು. ಈಗೀಗ ಇಂಗ್ಲಿಷಿನ ಅಕ್ಷರಗಳು, ನೆಚ್ಚಿನ ಸಿನಿಮಾ ತಾರೆಯರ ಹೆಸರುಗಳು ಹಚ್ಚೆಯ ಮೂಲಕ ಪ್ರಸಿದ್ಧಿ ಪಡೆಯುತ್ತಿವೆ. ಹಚ್ಚೆಯ ಜಾಗವನ್ನು ಸ್ಟಿಕ್ಕರ್‌ಗಳು ಆಕ್ರಮಿಸತೊಡಗಿರುವುದು ಹಚ್ಚೆಯ ರೂಪಾಂತರದ ಜನಪದ ರೂಪ ಎನ್ನಬಹುದು. *

**ಹಟ್ಟಿ:** ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಒಂದು ಪಟ್ಟಣ. ರಾಯಚೂರು–ಲಿಂಗಸುಗೂರು ಮಾರ್ಗ ಮಧ್ಯದಲ್ಲಿ ಲಿಂಗಸುಗೂರಿಗೆ ಈಶಾನ್ಯದಲ್ಲಿ 17 ಕಿಮೀ ದೂರದಲ್ಲಿದೆ. ಜನಸಂಖ್ಯೆ 14,722. ಚಿನ್ನದ ಗಣಿಗಳಿಗೆ ಈ ಊರು ಹಿಂದಿನಿಂದಲೂ ಪ್ರಸಿದ್ಧ.

ಗಣಿ ಉದ್ಯಮದ ಫಲವಾಗಿ ಈ ಗ್ರಾಮ ಪಟ್ಟಣವಾಗಿ ಬೆಳೆದಿದೆ. ಪ್ರೌಢಶಾಲೆ, ಆಸ್ಪತ್ರೆ, ವಿದ್ಯುತ್, ಅಂಚೆ, ದೂರವಾಣಿ ಮುಂತಾದ ಸೌಲಭ್ಯಗಳಿವೆ. ಸುತ್ತಲ ಗ್ರಾಮಗಳಿಗೆ ವ್ಯಾಪಾರ ಕೇಂದ್ರವಾಗಿ ವಿಸ್ತರಿಸುತ್ತಿದೆ. ಗಣಿಕಾರ್ಮಿಕರ ಮತ್ತು ಅಧಿಕಾರಿಗಳ ಸಲುವಾಗಿ ಎಲ್ಲ ವಿಧದ ಪಟ್ಟಣಸೌಕರ್ಯಗಳನ್ನು ಇಲ್ಲಿ ಒದಗಿಸಿಕೊಡಲಾಗಿದೆ. ರಾಯಚೂರು ಜಿಲ್ಲೆಯ ಅನೇಕ ಭಾಗಗಳಲ್ಲಿ ಅನೇಕ ಚಿನ್ನದ ಗಣಿಗಳ ಅವಶೇಷಗಳು ಕಂಡುಬರುತ್ತವೆ. ಅಶೋಕನ ಕಾಲಕ್ಕೂ ಹಿಂದೆಯೆ ಈ ಗಣಿಗಳಲ್ಲಿ ಕೆಲಸ ನಡೆಯುತ್ತಿತ್ತೆಂದೂ ಆತನ ದಕ್ಷಿಣ ರಾಜಧಾನಿಯಾದ ಸುವರ್ಣನಗರಿ ಹಟ್ಟಿಗೆ ಸಮೀಪವಾಗಿರುವ ಮಸ್ಕಿಯ ಬಳಿ ಇತ್ತೆಂದೂ ಪ್ರತೀತಿ ಇದೆ. ಹಟ್ಟಿಯ ಬಳಿ ಎರಡು ಸಾವಿರ ವರ್ಷಗಳಿಗೂ ಹಿಂದೆ ಚಿನ್ನಕ್ಕಾಗಿ ಪರಿಶೋಧನೆ ನಡೆಸಿ ಆಳವಾದ ಗಣಿಗಳನ್ನು ತೋಡಲಾಗಿದ್ದು, ಆ ಗಣಿಗಳು 640 ಅಡಿ ಆಳವಾಗಿವೆ. ಬ್ರಿಟಿಷರ ಕಾಲದಲ್ಲಿ ಈ ಗಣಿಗಳನ್ನು ಊರ್ಜಿತಗೊಳಿಸಿ ಚಿನ್ನ ಪಡೆಯುವ ಕಾರ್ಯ ಮೊದಲಾಗಿ ಸು. 1800 ರಿಂದ 1920ರವರೆಗೆ ಸಣ್ಣ ಪ್ರಮಾಣದಲ್ಲಿ ಕೆಲಸ ನಡೆಯಿತು. ಆಗ ಚಿನ್ನದ ಬೆಲೆ ತೀರ ಕಡಿಮೆಯಾಗಿದ್ದುದರಿಂದ ಗಣಿ ಉದ್ಯಮ ಲಾಭದಾಯಕವಾಗದೆ 1920ರ ಸುಮಾರಿಗೆ ಕೆಲಸ ನಿಂತಿತು. ಈ ಕಾಲದಲ್ಲಿ ಸು. 2,37,000 ಔನ್ಸ್ (6,04,350 ತೊಲ) ಚಿನ್ನ ಪಡೆಯಲಾಯಿತು.

ನಿಜಾಮ ಸರ್ಕಾರ 1937ರಲ್ಲಿ ಹಟ್ಟಿ ಗಣಿಗಳನ್ನು ಊರ್ಜಿತಗೊಳಿಸಲು ತೀರ್ಮಾನಿಸಿತು. ಆದರೆ ಎರಡನೆಯ ಮಹಾಯುದ್ಧ ಕಾಲದಲ್ಲಿ ಕೆಲಸ ಕುಂಠಿತಗೊಂಡು 1947 ರಿಂದೀಚೆಗೆ ಕೆಲಸ ಮುಂದುವರಿಯುತ್ತಿದ್ದು ಹಟ್ಟಿಯ ಚಿನ್ನದ ಗಣಿ ಉದ್ಯಮ ಭಾರತದ ಗಣಿ ಉದ್ಯಮಗಳಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿತು.

ಹಟ್ಟಿ ಗಣಿ ಪ್ರದೇಶವನ್ನು ಪ್ರತ್ಯೇಕವಾಗಿ ಅನುಸೂಚಿತ ಪಟ್ಟಣ ಪ್ರದೇಶವಾಗಿ ಪರಿಗಣಿಸಲಾಗಿದೆ. ಇಲ್ಲಿನ ಜನಸಂಖ್ಯೆ 14,716. ಕೋಲಾರದ ಚಿನ್ನದ ಗಣಿಯಲ್ಲಿ ಚಿನ್ನದ ಅದಿರಿನ ಉತ್ಪಾದನೆ ಕುಸಿದ ಹಿನ್ನೆಲೆಯಲ್ಲಿ ಹಟ್ಟಿಯ ಸುತ್ತಮುತ್ತಲಿನ ಗಣಿಗಳು ಮಹತ್ವ ಪಡೆದುಕೊಂಡವು.

(ಬಿ.ಪಿ.ಆರ್.)

**ಹಟ್ಟಿಯಂಗಡಿ:** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕುಂದಾಪುರದ ಈಶಾನ್ಯಕ್ಕೆ 8 ಕಿಮೀ ದೂರದಲ್ಲಿ ವರಾಹಿ ನದಿಯ ಉತ್ತರ ದಂಡೆಯ ಮೇಲಿರುವ ಗ್ರಾಮ. ಜನಸಂಖ್ಯೆ 1,849.

ಇಲ್ಲಿ ಲೋಕನಾಥೇಶ್ವರ ಎಂಬ ಪ್ರಾಚೀನ ದೇವಾಲಯವಿದೆ. ಈ ದೇವಾಲಯದಲ್ಲಿರುವ ಲೋಕನಾಥ ವಿಗ್ರಹವನ್ನು ಸು.900ರಲ್ಲಿ ಲೋಕಾದಿತ್ಯರಾಯ ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ. ಈ ಊರಿನಲ್ಲಿ ಶಿವಲಿಂಗ, ದುರ್ಗಾ ಪರಮೇಶ್ವರಿ, ಗಣಪತಿ ಮತ್ತು ದಧಿವಾಮನ ಗುಡಿಗಳಿವೆ. ಇಲ್ಲಿನ ವೇಣುಗೋಪಾಲ ದೇವಾಲಯದಲ್ಲಿರುವ ವಿಗ್ರಹವನ್ನು ಸ್ವಾಮಿ ಗಂಗಾಧರ ಉಮಾವಲ್ಲಭದಾಸ ಎಂಬ ಯತಿಗಳು ಗೇರುಸೊಪ್ಪೆ

ಯಿಂದ ತಂದು ಪ್ರತಿಷ್ಠಾಪಿಸಿದರೆಂದು ಪ್ರತೀತಿ. ಇಲ್ಲಿ ಇನ್ನಿತರ ಹಲವು ಮಧ್ಯಕಾಲೀನ ಶಿಲಾಶಾಸನಗಳಿವೆ. ಅರಮನೆ ಅಡಿಸ್ಥಳವೆಂಬ ಚಾರಿತ್ರಿಕ ಅವಶೇಷ ಇಂದಿಗೂ ನದಿಯ ತಟಾಕದಲ್ಲಿ ಕಂಡುಬರುತ್ತದೆ. ದಕ್ಷಿಣ ಕನ್ನಡ ಪ್ರಾಚೀನ ಜೈನಧರ್ಮದ ಕೇಂದ್ರಗಳಲ್ಲಿ ಹಟ್ಟಿಯಂಗಡಿ ಒಂದು. ಹೊಯ್ಸಳರ ಕಾಲದ ಶಾಸನವನ್ನೊಳಗೊಂಡ ಪಾರ್ಶ್ವನಾಥನ ಮೂರ್ತಿ, 1428ರಲ್ಲಿ ಪ್ರತಿಷ್ಠಾಪನೆಗೊಂಡ ಚಂದ್ರನಾಥಸ್ವಾಮಿಯ ಮೂರ್ತಿ ಇಲ್ಲಿವೆ. ಜಟರಾಯ ಅಥವಾ ಕ್ಷೇತ್ರಪಾಲ ಬಸದಿಯೂ ಇದ್ದು, ಇದರಲ್ಲಿ ಎರಡು ಶಾಸನಗಳಿವೆ. ಮುಖ್ಯದ್ವಾರದಲ್ಲಿ ಸುಂದರವಾದ ಮರದ ಸ್ತಂಭಗಳಿವೆ. ಹೊಸಗನ್ನಡ ಕಾವ್ಯದ ಆರಂಭ ಕಾಲದ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾದ ಹಟ್ಟಿಯಂಗಡಿ ನಾರಾಯಣರಾಯರು ಇಲ್ಲಿಯವರು. (ಪಿ.ಜಿ.ಬಿ.)

**ಹಟ್ಟಿಯಂಗಡಿ ನಾರಾಯಣರಾಯ:** 1863-1921. ಹೊಸಗನ್ನಡ ಅರುಣೋದಯ ಕಾಲದ ಆದ್ಯಲೇಖಕರಲ್ಲೊಬ್ಬರು. ಆಂಗ್ಲ ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಹೊಸಗನ್ನಡದ ನವೋದಯಕ್ಕೆ ಅಡಿಗಲ್ಲು ಹಾಕಿದವರು. 1863 ಫೆಬ್ರವರಿ 11ರಂದು ಮಂಗಳೂರಿನಲ್ಲಿ ಜನಿಸಿದರು. ಕಾರ್ಕಳ ಮತ್ತು ಮದರಾಸುಗಳಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು. ಸರಳತೆ, ಸಾತ್ವಿಕತೆ, ಸಹಾಯ ತತ್ಪರತೆಗಳು ಇವರ ವ್ಯಕ್ತಿತ್ವದ ವೈಶಿಷ್ಟ್ಯಗಳು. ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದರು. ವಕೀಲರಾಗಬೇಕೆಂಬ ಆಸೆಯಿಂದ ಕೆಲಸಕ್ಕೆ ರಾಜೀನಾಮೆ ನೀಡಿ ಮದರಾಸಿಗೆ ತೆರಳಿ ಕಾನೂನು ಪದವಿ ಗಳಿಸಿದರು. ವಕೀಲವೃತ್ತಿ ಹಿಡಿದು ಅದರೊಂದಿಗೇ ಇಂಡಿಯನ್ ಸ್ಪೆಕ್ಟೇಟರ್ ಎಂಬ ರಾಷ್ಟ್ರೀಯ ಪತ್ರಿಕೆಯಲ್ಲಿ ಅನಾಮಧೇಯರಾಗಿ ಲೇಖನ ಬರೆಯುತ್ತಿದ್ದರು. ಕಾರಣಾಂತರಗಳಿಂದ ಪತ್ರಿಕೆ ಮುಂಬಯಿಗೆ ಸ್ಥಳಾಂತರಗೊಂಡಾಗ ಇವರೂ ಮುಂಬಯಿಗೆ ತೆರಳಿ(1903) ಅಲ್ಲಿಯೇ ನೆಲೆಸಿದರು.

ಇವರು ತಮ್ಮ 50ನೆಯ ವರ್ಷದಲ್ಲಿ ಕನ್ನಡದಲ್ಲಿ ಬರೆವಣಿಗೆ ಆರಂಭಿಸಿದರು. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಆರಂಭಗೊಂಡದ್ದು ಇವರ ಬರೆವಣಿಗೆಗೆ ಸ್ಫೂರ್ತಿಯಾಯಿತು. ಇದೇ ಅವಧಿಯಲ್ಲಿ ಮಂಗಳೂರಿನ ಸ್ವದೇಶಾಭಿಮಾನಿ, ಧಾರವಾಡದ ವಾಗ್ಭೂಷಣ ಮೊದಲಾದ ಪತ್ರಿಕೆಗಳಲ್ಲಿ ಆಂಗ್ಲಕವಿತಾನುವಾದವನ್ನು ಪ್ರಕಟಿಸತೊಡಗಿದರು. ಇಂಥ ಅನುವಾದಗಳ ಸಂಕಲನವೇ ಇವರ ಆಂಗ್ಲಕವಿತಾವಳಿ(1919).

ಭಾಷಾಶಾಸ್ತ್ರ ಮತ್ತು ತತ್ತ್ವಜ್ಞಾನಗಳು ಇವರ ವಿಶೇಷ ಆಸಕ್ತಿಯ ವಿಷಯಗಳಾಗಿದ್ದವು. ಇವರ ಕನ್ನಡ ಕಥಾನಕ, ಕನ್ನಡಭಾಷೆ ಮತ್ತು ಅದರ ಶಬ್ದಸಂಪತ್ತುಗಳನ್ನು ಕುರಿತು ಮಾಡಿದ ಮೌಲಿಕ ವಿವೇಚನೆಯಾಗಿದೆ. ಕನ್ನಡ ಶಬ್ದಗಳು ದೇಶ್ಯ, ಸಂಸ್ಕೃತದ ತದ್ಭವ-ತತ್ಸಮ ಎಂಬಷ್ಟೇ ಪರಿಮಿತಿಯಲ್ಲಿವೆ ಎಂದು ತಿಳಿದಿದ್ದ ಆ ಕಾಲದಲ್ಲಿ, ಕನ್ನಡದಲ್ಲಿ ಪ್ರಾಕೃತದಿಂದಲೂ ಸ್ವೀಕೃತವಾಗಿರುವ ಹಲವಾರು ಶಬ್ದ, ಪದಗಳ ಕಡೆಗೆ ಎಲ್ಲರ ಗಮನವನ್ನು ವಿಸ್ತರಿಸಿದರು. ಈ ಎಲ್ಲ ಭಾಷೆಗಳೊಂದಿಗೆ ಮರಾಠಿಯನ್ನೂ ಒಳಗೊಂಡು ಮುಂಬಯಿಯ ಏಷ್ಯಾಟಿಕ್ ಸೊಸೈಟಿಯಲ್ಲಿ ನೀಡಿದ ಇವರ ಭಾಷಣ ಬಹಳ ಮಹತ್ತ್ವದ್ದಾಗಿದೆ. ಇವರ ಮಾತೃಭಾಷೆ ಕೊಂಕಣಿಯಲ್ಲೂ ಚಿಂತನೆ ನಡೆಸಿ ಕೊಂಕಣೀಚೆ ಮೂಲಾದರ್ಶೋ ಎಂಬ ಕೃತಿಯನ್ನು ರಚಿಸಿದ್ದಾರೆ. ಬ್ರಹ್ಮಸಮಾಜದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದ ಇವರು ಗಾಯತ್ರಿಮಂತ್ರ, ಭಜನೆಯ ಪದಗಳನ್ನು ಕನ್ನಡದಲ್ಲಿ ತಂದದ್ದು ಮಾತ್ರವಲ್ಲ ಅವುಗಳನ್ನು ಸೊಗಸಾಗಿ ಹಾಡುತ್ತಿದ್ದರು. ಟ್ರಾಕ್ಸ್ ಫಾರ್ ಥಿಂಕರ್ಸ್ ಎಂಬ ಇವರ ಕಿರುಹೊತ್ತಗೆಯೂ ಈ ನಿಟ್ಟಿನದೇ ಆಗಿದೆ.

ಇವರು ಬರೆದದ್ದು ಕಡಿಮೆಯಾದರೂ ಮೌಲ್ಯ ಹಾಗೂ ಸತ್ತ್ವದಲ್ಲಿ ಹಿರಿಯದಾಗಿದೆ. ಇವರ ಅನುವಾದಿತ ಕವಿತೆಗಳಿಗೆ ಐತಿಹಾಸಿಕ ಮಹತ್ತ್ವವಿದೆ. ಇವರ ಆಂಗ್ಲಕವಿತಾವಳಿಯ ವಿಸ್ತೃತ ಪ್ರತಿ 1985ರಲ್ಲಿ ಪ್ರಕಟಗೊಂಡಿದೆ (ಸಂ: ಎಂ.ಎನ್.ಪಂಡಿತಾರಾಧ್ಯ). ಇವರ ಗದ್ಯ ಲೇಖನಗಳ ಸಂಪುಟವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಇವರು 1921 ಜೂನ್ 17ರಂದು ನಿಧನರಾದರು. *

**ಹಡಗಲಿ:** ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಹೂವಿನ ಹಡಗಲಿ ಎಂದು ಕರೆಯುವ ಈ ತಾಲ್ಲೂಕನ್ನು ಗದಗ ಜಿಲ್ಲೆಯ ಮುಂಡರಿ ತಾಲ್ಲೂಕು, ಈಶಾನ್ಯದಲ್ಲಿ ತುಂಗಭದ್ರಾನದಿ ಜಲಾಶಯದ ಹಿನ್ನೀರ ಪ್ರದೇಶ ಪೂರ್ವದಲ್ಲಿ ಹಗರಿ ಬೊಮ್ಮನಹಳ್ಳಿ, ಪಶ್ಚಿಮದಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ದಕ್ಷಿಣದಲ್ಲಿ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಸುತ್ತುವರಿದಿವೆ. ತಾಲ್ಲೂಕಿನಲ್ಲಿ ಈಗ ಹಡಗಲಿ, ಇಟಗಿ, ಹಿರೇಹಡಗಲಿ-ಈ ಮೂರು ಹೋಬಳಿಗಳೂ 53 ಗ್ರಾಮಗಳೂ ಒಂದು ಪಟ್ಟಣ ಇವೆ. ತಾಲ್ಲೂಕಿನ ವಿಸ್ತೀರ್ಣ 948.4 ಚ. ಕಿಮೀ, ಜನಸಂಖ್ಯೆ 1,47,309. ಇದರಲ್ಲಿ 1,28,596 ಮಂದಿ ಗ್ರಾಮೀಣರೂ 18,713 ಮಂದಿ ಪಟ್ಟಣಿಗರೂ ಇದ್ದಾರೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕು ರಚನೆಗೆ ಮೊದಲು ಈ ತಾಲ್ಲೂಕನ್ನು ಮಲ್ಲಾಪುರ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಶಿರಹಟ್ಟಿ, ಹಾವೇರಿ ಮತ್ತು ರಾಣೆಬೆನ್ನೂರು ತಾಲ್ಲೂಕುಗಳು ಸುತ್ತುವರಿದಿದ್ದುವು. ಇಟ್ಟಿಗೆ, ಹಿರೇಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಹಡಗಲಿ ಹೋಬಳಿಗಳಿದ್ದವು. ಒಟ್ಟು 69 ಗ್ರಾಮಗಳೂ 1 ಪಟ್ಟಣವೂ ಸೇರಿ ಆಗ ತಾಲ್ಲೂಕು ವಿಸ್ತೀರ್ಣ 1,254.1 ಚ.ಕಿಮೀ. ಜನಸಂಖ್ಯೆ 1,27,452 ಇತ್ತು. ಇತ್ತೀಚೆಗೆ ಕೊಡ್ಲಿಗಿ, ಹಡಗಲಿ ಮತ್ತು ಮಲ್ಲಾಪುರ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಸೇರಿಸಿ ಮಲ್ಲಾಪುರ ತಾಲ್ಲೂಕಿನ ಬದಲು ಹಗರಿಬೊಮ್ಮನಹಳ್ಳಿ ತಾಲ್ಲೂಕು ರಚನೆಯಾಗಿದೆ.

ತಾಲ್ಲೂಕಿನ ದಕ್ಷಿಣ ಮತ್ತು ಪಶ್ಚಿಮದ ಅಂಚಿನಲ್ಲಿ ತಾಲ್ಲೂಕು ಗಡಿಯಾಗಿ ತುಂಗಭದ್ರಾ ನದಿ ಸ್ವಲ್ಪ ದೂರಹರಿಯುವುದು. ಈ ನದಿಯೇ ರಾಣೆಬೆನ್ನೂರು, ಹಾವೇರಿ ಮತ್ತು ಶಿರಹಟ್ಟಿ ತಾಲ್ಲೂಕುಗಳನ್ನು ಹಡಗಲಿ ತಾಲ್ಲೂಕಿನಿಂದ ಬೇರ್ಪಡಿಸಿದೆ. ತಾಲ್ಲೂಕಿನ ಪೂರ್ವದಲ್ಲಿ ಸ್ವಲ್ಪದೂರ ಚಿನ್ನಹಗರಿ ನದಿ ಹರಿಯುವುದು. ಮಲ್ಲಪ್ಪನ ಗುಡ್ಡ ಶ್ರೇಣಿ ಈ ತಾಲ್ಲೂಕಿನಲ್ಲಿ ಹಾದುಹೋಗಿದೆ. ಈ ಶ್ರೇಣಿಯ ಮಲ್ಲಪ್ಪನ ಬೆಟ್ಟ 978 ಮೀ ಎತ್ತರವಿದೆ. ಉತ್ತಮ ಹವಾಗುಣವಿರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 671.61 ಮಿಮೀ.

ಈ ತಾಲ್ಲೂಕಿನಲ್ಲಿ ಹತ್ತಿ ಬೆಳೆಯುವ ಕಪ್ಪು ಮಣ್ಣಿನ ಪ್ರದೇಶ ಹೆಚ್ಚು. ಚಿನ್ನಹಗರಿ ಮತ್ತು ತುಂಗಭದ್ರಾ ನದಿ ಬಯಲು ಪ್ರದೇಶಗಳಲ್ಲಿ ಕೆಂಪುಮಿಶ್ರಿತ ಮತ್ತು ಮರಳಿನಿಂದ ಕೂಡಿದ ಜೇಡಿಮಣ್ಣಿನ ಫಲವತ್ತಾದ ಪ್ರದೇಶವಿದೆ. ನದೀ ನೀರಿನ ಜೊತೆಗೆ ತಾಲ್ಲೂಕಿನ ಕೆಲವು ಬಾವಿ ಮತ್ತು ಕೆರೆಗಳು ವ್ಯವಸಾಯಕ್ಕೆ ಅನುಕೂಲವಾಗಿವೆ. ಜೋಳ, ಬತ್ತ, ಕಬ್ಬು, ಹತ್ತಿ, ಮೆಣಸಿನಕಾಯಿ ಇವುಗಳ ಜೊತೆಗೆ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೂ ಹೆಚ್ಚಾಗಿ ಈ ತಾಲ್ಲೂಕಿನಲ್ಲಿ ಸೇಂಗಾ ಬೆಳೆಯುತ್ತಾರೆ. ಪಶುಪಾಲನೆ ಇದ್ದು ಮತ್ಸ್ಯೋದ್ಯಮ ಸ್ವಲ್ಪಮಟ್ಟಿಗೆ ಇವೆ.

ಈ ತಾಲ್ಲೂಕಿನಲ್ಲಿ ಉತ್ಪಾದನೆ ಮತ್ತು ಹತ್ತಿ ಸಂಸ್ಕರಣ ಕೈಗಾರಿಕೆಗಳುಂಟು. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು, ಆಸ್ಪತ್ರೆ, ಅಂಚೆ, ತಂತಿ, ದೂರವಾಣಿ, ವಿದ್ಯುತ್ ಸೌಲಭ್ಯಗಳಿವೆ. ಪ್ರೌಢಶಾಲೆ, ವಿಜ್ಞಾನ ಮತ್ತು ಕಲಾ ಕಾಲೇಜು ಇದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ.

ತಾಲ್ಲೂಕಿನಲ್ಲಿ ಹರಪನಹಳ್ಳಿ-ಹೊಸಪೇಟೆ ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿ ಮತ್ತು ತಾಲ್ಲೂಕು ಮಾರ್ಗಗಳಿದ್ದು ಈ ತಾಲ್ಲೂಕಿನಿಂದ ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ಉತ್ತಮ ಮಾರ್ಗಸಂಪರ್ಕವಿದೆ.

ಹಡಗಲಿಯ ಆಗ್ನೇಯಕ್ಕೆ 11 ಕಿಮೀ ದೂರದಲ್ಲಿರುವ ಸೋಗಿ ಗ್ರಾಮ ವಿಶೇಷ ರುಚಿಯ ದೊಡ್ಡಗಾತ್ರದ ಕಲ್ಲಂಗಡಿ ಹಣ್ಣುಗಳಿಗೆ ಪ್ರಸಿದ್ಧ. ಇಲ್ಲಿ ಚಾಳುಕ್ಯ ಶೈಲಿಯ ಕಲ್ಲೇಶ್ವರ ದೇವಾಲಯವಿದೆ. ಸೋಗಿಯ ನೈಋತ್ಯಕ್ಕೆ ಸುಮಾರು 5 ಕಿಮೀ ದೂರದಲ್ಲಿ ಮಲ್ಲಪ್ಪನ ಬೆಟ್ಟವಿದೆ. ಇಲ್ಲಿನ ಗುಹೆಯೊಂದರಲ್ಲಿ ಮುದಿಮಲ್ಲಪ್ಪನ ಮೂರ್ತಿಯಿದೆ. ಪ್ರತಿ ತಿಂಗಳ ಪೂರ್ಣಿಮೆಯಂದು ಇಲ್ಲಿ ಜಾತ್ರೆ ಸೇರುತ್ತದೆ. ಹಡಗಲಿಯ ನೈಋತ್ಯಕ್ಕೆ 24 ಕಿಮೀ ದೂರದಲ್ಲಿರುವ ಮಾಗಳದಲ್ಲಿ ಚಾಳುಕ್ಯ ಶೈಲಿಯ ವೇಣುಗೋಪಾಲಸ್ವಾಮಿ ದೇವಾಲಯ ಪ್ರಸಿದ್ಧ. ಇದು ಬಳಪದ ಕಲ್ಲಿನಲ್ಲಿ ನಿರ್ಮಿತವಾಗಿದೆ. ಇದರ ಹತ್ತಿರದಲ್ಲೆ ಇರುವ ಸೂರ್ಯನಾರಾಯಣ ದೇವಸ್ಥಾನದ ಒಳಚಾವಣಿ ಸೂಕ್ಷ್ಮ ಕೆತ್ತನೆಕೆಲಸದಿಂದ ಕೂಡಿದೆ. ಹಡಗಲಿಯ ನೈಋತ್ಯಕ್ಕೆ ರಾಣೆಬೆನ್ನೂರು–ಹಡಗಲಿ ಮಾರ್ಗದಲ್ಲಿ ತುಂಗಭದ್ರಾ ನದಿಯ ಬಲದಂಡೆಯ ಹತ್ತಿರವಿರುವ ಮೈಲಾರ ಹಡಗಲಿಗೆ 33 ಕಿಮೀ ದೂರದಲ್ಲಿದೆ. ಇಲ್ಲಿದ್ದ ಮಲ್ಲನೆಂಬ ರಾಕ್ಷಸನನ್ನು ಶಿವ ಕೊಂದದ್ದರಿಂದ ಮಲ್ಲಾರಿ ಎಂಬ ಹೆಸರು ಮುಂದೆ ಮೈಲಾರವಾಯಿತೆಂದು ಹೇಳುವರು. ಇಲ್ಲಿ ಪ್ರತಿವರ್ಷ ನಡೆಯುವ ಮೈಲಾರಲಿಂಗನ ಜಾತ್ರೆ ಹೆಸರಾದದ್ದು. ಹಡಗಲಿಯ ನೈಋತ್ಯದಲ್ಲಿ ರಾಣೆಬೆನ್ನೂರು–ಹಡಗಲಿ ಮಾರ್ಗದಲ್ಲಿರುವ ಹೊಳಲು ಹಡಗಲಿಗೆ 32 ಕಿಮೀ ದೂರದಲ್ಲಿದೆ. ಇಲ್ಲಿರುವ ಆದಿಶೇಷನ ಮೇಲೆ ಮಲಗಿರುವ ಅನಂತಶಯನ ಮೂರ್ತಿ ಬಹು ಸುಂದರವಾದದ್ದು. ಇಲ್ಲಿ ಪ್ರತಿವರ್ಷ ಏಪ್ರಿಲ್–ಮೇ ತಿಂಗಳಲ್ಲಿ ನಡೆಯುವ ವೀರಭದ್ರ ದೇವಾಲಯದ ಜಾತ್ರೆ ಪ್ರಸಿದ್ಧವಾದದ್ದು. ಹಡಗಲಿಯ ನೈಋತ್ಯದಲ್ಲಿ 16 ಕಿಮೀ ದೂರದಲ್ಲಿರುವ ಹಿರೇಹಡಗಲಿ ಯಲ್ಲಿರುವ ಚಾಳುಕ್ಯ ಶೈಲಿಯ ದೇವಾಲಯ ಬಾಗಿಲುಗಳು ಮತ್ತು ಹೊರಗೋಡೆಗಳು ಸುಂದರ ಕೆತ್ತನೆಗಳಿಂದ ಕೂಡಿವೆ. ಇಲ್ಲಿ ಪ್ರತಿವರ್ಷ ಜನವರಿ–ಫೆಬ್ರವರಿ ತಿಂಗಳಲ್ಲಿ ನಡೆಯುವ ಕಟ್ಟೆ ಬಸವೇಶ್ವರ ರಥೋತ್ಸವ ಬಹು ಹೆಸರಾದದ್ದು.

ಹಡಗಲಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬಳ್ಳಾರಿಯ ಪಶ್ಚಿಮಕ್ಕೆ 140 ಕಿಮೀ ದೂರದಲ್ಲಿದೆ. ಜನಸಂಖ್ಯೆ 18,713.

ಪಟ್ಟಣದಲ್ಲಿ ಅಂಚೆ, ತಂತಿ, ದೂರವಾಣಿ, ವಿದ್ಯುತ್, ಆಸ್ಪತ್ರೆ, ಔಷಧಾಲಯ ಮುಂತಾದವುಗಳ ಸೌಕರ್ಯವಿದೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು ಮತ್ತು ಪ್ರೌಢಶಾಲೆ, ಒಂದು ವಿಜ್ಞಾನ, ಕಲಾ ಕಾಲೇಜು ಇಲ್ಲಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ.

ಈ ಪಟ್ಟಣ ಬಳ್ಳಾರಿ ಜಿಲ್ಲೆಯಲ್ಲೇ ಅತ್ಯಂತ ಆರೋಗ್ಯಕರ ಸ್ಥಳವೆಂದು ಹಿಂದಿನಿಂದಲೂ ಪ್ರಸಿದ್ಧಿ ಪಡೆದಿದೆ. ಇತ್ತೀಚೆಗೆ ಈ ಊರಿನ ಸುತ್ತಮುತ್ತ ವೀಳೆಯದೆಲೆ ಮತ್ತು ಬಾಳೆ ತೋಟಗಳು ಹೆಚ್ಚಾಗುತ್ತಿದ್ದು ಒಂದು ಮುಖ್ಯ ವ್ಯಾಪಾರಕೇಂದ್ರವಾಗಿ ಬೆಳೆಯುತ್ತಿದೆ. ಇಲ್ಲಿನ ಪ್ರಸಿದ್ಧ ರಾಮದೇವರ ಜಾತ್ರೆ ಚೈತ್ರಮಾಸದ ಪೂರ್ಣಿಮೆಯಂದು ನಡೆಯುತ್ತದೆ. ವಿಜಯನಗರ ವೈಭವದ ಕಾಲದಲ್ಲಿ ಈ ಊರಿನ ಸುತ್ತಮುತ್ತ ನೂರಾರು ಹೂವಿನ ತೋಟಗಳಿದ್ದುವೆಂದು ಹೇಳುತ್ತಾರೆ. ವಿಜಯನಗರದ ಅರಮನೆಗಳಿಗೆ, ದೇವಾಲಯಗಳಿಗೆ ಹಾಗೂ ಶ್ರೀಮಂತರ ಮನೆಗಳಿಗೆ ಶ್ರೇಷ್ಠಮಟ್ಟದ ಹೂವಿನ ಸರಬರಾಜು ಇಲ್ಲಿಂದಲೇ ಆಗುತ್ತಿತ್ತೆಂದೂ ಆದ್ದರಿಂದಲೇ ಈ ಪಟ್ಟಣಕ್ಕೆ ಹೂವಿನಹಡಗಲಿ ಎಂಬ ಹೆಸರು ಬಂದಿತೆಂದೂ ಪ್ರತೀತಿ. ಇಲ್ಲಿ ಚಾಳುಕ್ಯರ ಕಾಲದ ಕಲ್ಲೇಶ್ವರ ಮತ್ತು ಕೇಶವಸ್ವಾಮಿ ದೇವಾಲಯಗಳಿವೆ. ಈ ದೇವಾಲಯಗಳಲ್ಲಿ ಮುಕ್ಕಾದ ಸುಂದರ ಶಿಲ್ಪಗಳೂ ಜಾಲಂದ್ರಗಳೂ ಇವೆ. ಕೇಶವಸ್ವಾಮಿ ದೇವಾಲಯದಲ್ಲಿರುವ 6ನೆಯ ವಿಕ್ರಮಾದಿತ್ಯನ ಕಾಲದ ಒಂದು ಶಾಸನದಿಂದ ಈ ದೇವಾಲಯವನ್ನು ರೇವಿದೇವ ದಂಡನಾಯಕನ ಹೆಂಡತಿ ರೆಬ್ಬಳದೇವಿ ಕಟ್ಟಿಸಿದಳೆಂದು ತಿಳಿದು ಬರುವುದು.

(ಕೆ.ಆರ್.ಆರ್.)

**ಹಡಪದ ಅಪ್ಪಣ್ಣ:** ಸು. 1160. ಶಿವಶರಣ ಹಾಗೂ ವಚನಕಾರ ಕಲ್ಯಾಣದಲ್ಲಿ ಬಸವಣ್ಣನವರ ಮಹಾಮನೆಯಲ್ಲಿ ವೀಳ್ಯವಿತರಣೆಯ ಕಾಯಕದಲ್ಲಿದ್ದುದರಿಂದ ಇವನಿಗೆ ಹಡಪದ ಅಪ್ಪಣ್ಣ ಎಂಬ ಹೆಸರು ಬಂತು. ಇವನು ಕಲ್ಯಾಣದಲ್ಲಿ ಬಸವಣ್ಣನವರು ಮತ್ತು ಅಲ್ಲಮಪ್ರಭುಗಳ ಸಂದರ್ಶನ ಸಂದರ್ಭದಲ್ಲಿ ನಿರ್ವಹಿಸಿದ ಕಾಲೋಚಿತಕರ್ತವ್ಯ ಧರ್ಮಶ್ರದ್ಧೆ ಮತ್ತು ತೋರಿಸಿದ ಜಾಣ್ಮೆ ಶೂನ್ಯ ಸಂಪಾದನೆಯಲ್ಲಿ ಕಂಡುಬರುತ್ತವೆ. ಬಸವಣ್ಣನವರ ವಿಶೇಷ ಅನುಗ್ರಹ ಇವನ ಮೇಲಿತ್ತು. ಇವನು ತನ್ನ ಮುಖದಲ್ಲಿ ಕುಟ್ಟಿಕೊಟ್ಟ ತಾಂಬೂಲವನ್ನು ಸೇವಿಸುವುದು ಬಸವಣ್ಣನವರ ಅಭ್ಯಾಸವಾಗಿತ್ತು. ಅವರೊಮ್ಮೆ ಓಲಗದಲ್ಲಿದ್ದಾಗ ಅಡಕೊತ್ತಿಗಾಗಿ ಹೇಳಿಕಳಿಸಿದರೆ, ಅಪ್ಪಣ್ಣ ತನ್ನ ಶಿರಸ್ಸನ್ನೇ ಕೊಯ್ದು ಕಳಿಸಿದನಂತೆ. ಆಗ ಬಸವಣ್ಣನವರು ಅದರ ಬಾಯಲ್ಲಿಯ ತಾಂಬೂಲವನ್ನು ಮೆದ್ದು ಅದನ್ನು ಮರಳಿ ಕಳಿಸಿದರಂತೆ. ತನ್ನ ಕೊನೆಗಾಲದಲ್ಲಿ ಅಪ್ಪಣ್ಣನೂ ಬಸವಣ್ಣನವರೊಡನೆ ಸಂಗಮಕ್ಕೆ ಹೋಗಿದ್ದ. ಅವರ ಅಪ್ಪಣೆಯಂತೆ ನೀಲಾಂಬಿಕೆಯನ್ನು ಕಲ್ಯಾಣದಿಂದ ಕರೆದುಕೊಂಡು ಬರುತ್ತಿದ್ದಾಗ ಬಸವಣ್ಣನವರು ಲಿಂಗೈಕ್ಯರಾದ ಸುದ್ದಿಯನ್ನು ಕೇಳಿದೊಡನೆ ತಂಗಡಿಗಿ ಎಂಬಲ್ಲಿ ಇವನೂ ಲಿಂಗೈಕ್ಯನಾದನಂತೆ. ಇಲ್ಲಿಯ ನದೀತೀರದಲ್ಲಿ ಇವನ ಸಮಾಧಿಯನ್ನು ಈಗಲೂ ತೋರಿಸುತ್ತಾರೆ.

ಇವನು ಬಸವಪ್ರಿಯ ಕೂಡಲ ಚೆನ್ನಸಂಗಮದೇವ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. 276 ವಚನಗಳು ದೊರಕಿವೆ. ಷಟ್‌ಸ್ಥಲ ತತ್ತ್ವಗಳ ಸುಲಭ ನಿರೂಪಣೆ ಇವನ ವಚನಗಳ ವೈಶಿಷ್ಟ್ಯ. ಇವನ ವೇದಾಗಮ ಪರಿಜ್ಞಾನ ಅಗಾಧವಾದುದು. ಈ ಅನುಭವವನ್ನು ತನ್ನ ವಚನಗಳಲ್ಲಿ ವಿಶೇಷವಾಗಿ ವ್ಯಕ್ತಪಡಿಸಿದ್ದಾನೆ. ಧಾರ್ಮಿಕ ಆಚಾರ ವಿಚಾರಗಳನ್ನು ನಿಗಮಾಗಮ ಶಾಸ್ತ್ರ ಪುರಾಣಗಳಿಂದ ಪ್ರತಿಪಾದನ ಮಾಡುವುದರಲ್ಲಿ ಇವನಿಗೆ ವಚನವಾಙ್ಮಯದಲ್ಲಿ ಅಗ್ರಸ್ಥಾನ ಸಲ್ಲುತ್ತದೆ. ಶೂನ್ಯಸಂಪಾದನೆಗಳಲ್ಲಿ ಇವನ ಕೆಲವು ವಚನಗಳು ಉದ್ಧೃತವಾಗಿವೆ. ಈತ ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತಿಳಿದುಬರುತ್ತದೆ. ಮಹಾಶಿವಶರಣೆ ಲಿಂಗಮ್ಮ ಈತನ ಸತಿ.

(ಎಂ.ಎಂ.)

**ಹಡಪದ, ಆರ್.ಎಮ್.:** 1932–. ಕರ್ನಾಟಕದ ಪ್ರಸಿದ್ಧ ಕಲಾವಿದರು, ವರ್ಣಚಿತ್ರಕಾರರು. 1932ರಲ್ಲಿ ಬಿಜಾಪುರ ಜಿಲ್ಲೆಯ ಬಾದಾಮಿಯಲ್ಲಿ ಜನಿಸಿದ ಇವರು ದಂಡಾವತಿಮಠ, ಮಿಣಜಗಿ ಮತ್ತು ಟಿ.ಪಿ. ಅಕ್ಕಿ

ಮುಂತಾದವರಲ್ಲಿ ಕಲಾಭ್ಯಾಸ ಮಾಡಿದರು. 1951ರಲ್ಲಿ ಮುಂಬೈನ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಸೇರಿ ಉತ್ತಮ ದರ್ಜೆಯಲ್ಲಿ ಡಿಪ್ಲೊಮಾ ಗಳಿಸಿದರು. ಇವರ ಕಲಾ ನೈಪುಣ್ಯತೆ ಯಶಸ್ಸು ಗಳಿಸಿದ್ದು ಬೆಂಗಳೂರಿನಲ್ಲಿ. ಕೆನ್ ಕಲಾಶಾಲೆಯ ಪ್ರಾಂಶು ಪಾಲರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.

ಸಮಕಾಲೀನ ಚಿತ್ರಕಲೆಯ ಹಲವು ಪ್ರಕಾರಗಳಲ್ಲಿ

ಪ್ರಯೋಗಗಳನ್ನು ನಡೆಸಿರುವ ಇವರು ಸಾಂಸ್ಕೃತಿಕ ಕಲಾಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರವಾದುದು. ನಾಡಿನ ಹಲವಾರು ಸಂಘಗಳು, ಕಲಾಶಾಲೆಗಳು, ಕೇಂದ್ರ ಹಾಗೂ ರಾಜ್ಯ ಲಲಿತ ಕಲಾ ಅಕಾಡೆಮಿಗಳು, ರಾಜ್ಯದ ಕಲಾ ಸಲಹಾ ಮಂಡಲಿಗಳು, ದಾವಣಗೆರೆಯ ಸರ್ಕಾರಿ ಕಲಾಶಾಲೆ, ಗುಲ್ಬರ್ಗದ ಆದರ್ಶ ಕಲಾಶಾಲೆ, ಹಾಸನದ ಮಲೆನಾಡು ಎಂಜಿನಿಯರಿಂಗ್ ಕಾಲೇಜು ಮೊದಲಾದವು ಇವರ ಮಾರ್ಗದರ್ಶನ ಪಡೆದುಕೊಂಡಿವೆ. ಇವರು ಕರ್ನಾಟಕ ರಾಜ್ಯ ಯುವಜನ ಕೇಂದ್ರ ನಡೆಸಿದ ಕಲಾಭಿರುಚಿ ಬೆಳವಣಿಗೆಯ ಕಾರ್ಯಕ್ರಮದ ನಿರ್ದೇಶಕರಾಗಿಯೂ ಕಂಕಣ ಎಂಬ ಕನ್ನಡ ಚಲನಚಿತ್ರದ ಕಲಾ ನಿರ್ದೇಶಕರಾಗಿಯೂ ಕೆಲಸಮಾಡಿದ್ದಾರೆ. ಕಲೆಯ ಕ್ಷೇತ್ರವಲ್ಲದೆ ಸಾಹಿತ್ಯ ಕ್ಷೇತ್ರದಲ್ಲೂ ಇವರು ಪರಿಚಿತರಾಗಿದ್ದಾರೆ. ಕಲಾವಿಕಾಸ ಎಂಬ ಮಾಸಿಕವನ್ನು ಇವರು ನಡೆಸುತ್ತಿದ್ದಾರೆ. ತಮ್ಮ ರಚನೆಗಳ ನಾಲ್ಕು ಸ್ಕೆಚ್ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರಿಗೆ ರಾಜ್ಯ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಲಭಿಸಿದೆ (1982). **(ಜಿ.ಆರ್.ಟಿ.)**

**ಹತ್ತಿ:** ಕರ್ನಾಟಕದಲ್ಲಿ ಬೆಳೆಯುವ ನಾರಿನ ಬೆಳೆಗಳಲ್ಲಿ ಒಂದು. ಇದನ್ನು ರಾಜ್ಯದ ಕಪ್ಪುಮಣ್ಣು ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ರಾಯಚೂರು ಮತ್ತು ಧಾರವಾಡ ಜಿಲ್ಲೆಗಳು ಹತ್ತಿ ಬೆಳೆಗೆ ಪ್ರಸಿದ್ಧ. ಈ ಜಿಲ್ಲೆಗಳಲ್ಲೇ ಅಲ್ಲದೆ ನೀರಾವರಿ ಸಹಾಯದಿಂದ ಬಿಜಾಪುರ, ಘಟಪ್ರಭಾ, ತುಂಗಭದ್ರಾ ಮತ್ತು ಭದ್ರಾ ಜಲಾಶಯ ಪ್ರದೇಶಗಳಲ್ಲೂ ಹತ್ತಿಯನ್ನು ಬೆಳೆಯುತ್ತಾರೆ. ಖುಷ್ಕಿಯಲ್ಲಿ ನೀರಾವರಿಗಿಂತ ಹತ್ತು ಪಟ್ಟು ಹೆಚ್ಚು ಭೂಮಿಯಲ್ಲಿ ಇದನ್ನು ಬೆಳೆಯಲಾಗುತ್ತಿದೆ. ಧಾರವಾಡ, ಗುಲ್ಬರ್ಗ ರಾಯಚೂರು, ಬಳ್ಳಾರಿ, ಬಿಜಾಪುರ, ಬೀದರ್, ಚಿತ್ರದುರ್ಗ, ಹಾಸನ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳು ಹತ್ತಿಯ ಖುಷ್ಕಿ ಬೆಳೆಗೆ ಪ್ರಸಿದ್ಧ.

ಕರ್ನಾಟಕ ರಾಜ್ಯದಲ್ಲಿ 1998-99ರ ಅಂಕಿಅಂಶದ ಪ್ರಕಾರ 6,36,495 ಹೆಕ್ಟೇರುಗಳಲ್ಲಿ ಹತ್ತಿ ಬೆಳೆಯಲಾಗಿದ್ದು 9,76,876 ಬೇಲುಗಳ ಉತ್ಪತ್ತಿಯಾಗಿದೆ.

ಕರ್ನಾಟಕದಲ್ಲಿನ ಪ್ರಮುಖ ಹತ್ತಿ ತಳಿಗಳು ಮತ್ತು ಬಿತ್ತನೆ ಕಾಲಗಳನ್ನು ಈ ಮುಂದೆ ಕೊಟ್ಟಿದೆ:

| ತಳಿ | ಬಿತ್ತನೆ ಕಾಲ |
|---|---|
| ನೀರಾವರಿ | |
| ಮೈಸೂರುವಿಜಯ | ಮೇ 15 ರಿಂದ ಜೂನ್ 15 |
| ಹಂಪಿ | ಆಗಸ್ಟ್ ಮಧ್ಯಭಾಗ |
| 170 ಸಿ.ಒ-2 | ಏಪ್ರಿಲ್ 15ರಿಂದ ಮೇ 15 |
| ವಿರ್‌ನಾರ್ | ಏಪ್ರಿಲ್ ಮಧ್ಯಭಾಗ |
| ಖುಷ್ಕಿ | |
| ಲಕ್ಷ್ಮಿ. ಎ.ಕೆ. 235 ಜಿ-223 | ಜೂನ್ |
| ಎಂ. ವೈ.-14 | ಏಪ್ರಿಲ್‌ನಿಂದ ಮೇ |
| ಜಯಧರ್ ಮತ್ತು | ಜುಲೈ ಕೊನೆಯ ವಾರದಿಂದ |
| ಸುಯೋಧರ್ | ಆಗಸ್ಟ್ ಎರಡನೆಯ ವಾರ |
| ವೆಸ್ಟರ್ನ್-1 ಮತ್ತು | ಆಗಸ್ಟ್ ಎರಡನೆಯ ವಾರದಿಂದ |
| ರಾಯಚೂರು-51 | ಸೆಪ್ಟೆಂಬರ್ ಎರಡನೆಯ ವಾರ |
| ಭಾಗ್ಯ | ಆಗಸ್ಟ್ ಕೊನೆಯ ವಾರದಿಂದ |
| ಶಕ್ತಿಮಾನ್ | ಸೆಪ್ಟೆಂಬರ್ ಎರಡನೆಯ ವಾರ |
| ವರಲಕ್ಷ್ಮಿ ಹಾಗೂ ಹೈಬ್ರಿಡ್ | ಜುಲೈ 15ರಿಂದ ಆಗಸ್ಟ್ 15 |

ನೀರಾವರಿ ತಳಿಗಳಲ್ಲಿ 170 ಸಿ.ಒ.-250 ದಿವಸಗಳಲ್ಲೂ ಮೈಸೂರು ವಿಜಯ 210 ದಿವಸಗಳಲ್ಲೂ ಹಂಪಿ 190 ದಿವಸಗಳಲ್ಲೂ ಮತ್ತು ವಿರ್‌ನಾರ್ 150 ದಿವಸಗಳಲ್ಲೂ ಕಟಾವಿಗೆ ಬರುತ್ತವೆ. ಶಕ್ತಿಮಾನ್ ತಳಿಗಳಾದ ವರಲಕ್ಷ್ಮಿ ಮತ್ತು ಹೈಬ್ರಿಡ್-4 ಇವು 180 ರಿಂದ 190 ದಿವಸಗಳ ಬೆಳೆಗಳು. ಖುಷ್ಕಿಯಲ್ಲಿ ತಳಿಗಳಿಗನುಸಾರವಾಗಿ 165 ರಿಂದ 230 ದಿವಸಗಳಲ್ಲಿ ಕಟಾವಿಗೆ ಬರುತ್ತವೆ.

ಶಕ್ತಿಮಾನ್ ತಳಿಗಳಾದರೆ ಹೆಕ್ಟೇರಿಗೆ 2.5 ಕೆಜಿ ಬಿತ್ತನೆಯೂ ಇತರ ತಳಿಗಳಾದರೆ 5-12.5 ಕೆಜಿ ಬಿತ್ತನೆಯೂ ಬೇಕಾಗುತ್ತದೆ. ತಳಿಗಳಿಗೆ ಅನುಸಾರವಾಗಿ ಬಿತ್ತನೆಯಗುಳಿಗಳ ಹಾಗೂ ಸಾಲುಗಳ ಅಂತರದಲ್ಲಿ ವ್ಯತ್ಯಾಸವಾಗುತ್ತವೆ. ವಿರ್‌ನಾರ್ ತಳಿಯನ್ನು 75 ಸೆಮೀ ಅಂತರದ ಸಾಲುಗಳಲ್ಲಿ ಗುಳಿಯಿಂದ ಗುಳಿಗೆ 37.5 ಸೆಮೀ ಅಂತರವಿರುವಂತೆಯೂ ಇತರ ತಳಿಗಳನ್ನು 25 ಸೆಂಮೀ ಅಂತರವಿರುವಂತೆಯೂ ಬಿತ್ತಲಾಗುತ್ತದೆ. ಖುಷ್ಕಿ ಬೆಳೆಯಾದರೆ 75 ಸೆಂಮೀ ಅಂತರದ ಸಾಲುಗಳಲ್ಲಿ ಗುಳಿಯಿಂದ ಗುಳಿಗೆ 30 ಸೆಂಮೀ ಅಂತರವಿರುವಂತೆ ಬಿತ್ತುವುದಿದೆ. ಶಕ್ತಿಮಾನ್ ತಳಿಗಳಾದ ವರಲಕ್ಷ್ಮಿಯನ್ನು ಗುಳಿಯಿಂದ ಗುಳಿಗೆ 60 ಸೆಂಮೀ ಅಂತರದಲ್ಲೂ ಹೈಬ್ರಿಡ್-4 ನ್ನು 90 ಸೆಂಮೀ ಅಂತರದಲ್ಲೂ ಬಿತ್ತಲಾಗುವುದು. ಶಿಫಾರಸು ಮಾಡಿದ ರಸಗೊಬ್ಬರಗಳನ್ನು ಕಾಲಕ್ಕನುಸಾರವಾಗಿ ಕೊಡುವುದಲ್ಲದೆ ಮಣ್ಣು ಮತ್ತು ಹವಾಗುಣಕ್ಕನುಗುಣವಾಗಿ ನೀರಾವರಿ ಬೆಳೆಗಳಿಗೆ ನೀರು ಹಾಕಿ ಆರೈಕೆ ಮಾಡಲಾಗುತ್ತದೆ. ಮುಖ್ಯವಾಗಿ ಬಿತ್ತನೆ ಮಾಡಿದಾಗ ಒಂದು ಬಾರಿ ಮತ್ತು ಹೂ ಬಿಟ್ಟ ಅನಂತರ ನಾಲ್ಕು ಬಾರಿ ತಪ್ಪದೆ ನೀರು ಹಾಯಿಸಲಾಗುತ್ತದೆ. ಕಾಯಿ ಕಚ್ಚುವಾಗ ಶಕ್ತಿಮಾನ್ ತಳಿಗಳಿಗೆ ಹೆಚ್ಚು ನೀರು ಹಾಯಿಸುವುದಿಲ್ಲ. ಪ್ರತಿಬಾರಿ ಹತ್ತಿಯನ್ನು ಬಿಡಿಸಿದ ಅನಂತರ ತೆಳ್ಳಗೆ ನೀರು ಕೊಡುವುದಿದೆ. ಕಪ್ಪುಮಣ್ಣಿನ ಪ್ರದೇಶಗಳಲ್ಲಿ ಬಸಿಕಾಲುವೆಗಳನ್ನು ತೆಗೆಯುವುದು ವಾಡಿಕೆಯಲ್ಲಿದೆ.

ಶಕ್ತಿಮಾನ್ ತಳಿಗಳಿಂದ ಹೆಕ್ಟೇರಿಗೆ 30-35 ಕ್ವಿಂಟಾಲ್, ನೀರಾವರಿ ತಳಿಗಳಿಂದ 20-25 ಕ್ವಿಂಟಾಲ್ ಮತ್ತು ಖುಷ್ಕಿ ತಳಿಗಳಿಂದ 6.5-10 ಕ್ವಿಂಟಾಲ್ ಇಳುವರಿ ದೊರೆಯುತ್ತದೆ. **(ಕೆ.ಆರ್.ಜಿ.)**

ಕರ್ನಾಟಕ ಹತ್ತಿ ಬೆಳೆಗೆ ಪ್ರಸಿದ್ಧಿಯಾಗಿರುವಂತೆ ಅದರ ವಿವಿಧ ಬಗೆಯ ಉತ್ಪತ್ತಿಯಲ್ಲಿನ ಅಭಿವೃದ್ಧಿ ಪರಿಶೀಲನೆಗೆ, ಹೊಸ ಪ್ರಯೋಗಗಳಿಗೆ ಮತ್ತು ಅದರ ಫಲವಾಗಿ ದೊರೆತ ಆವಿಷ್ಕಾರಗಳಿಗೆ ಹೆಸರು ಪಡೆದಿದೆ. ಧಾರವಾಡದ ಹೆಬ್ಬಳ್ಳಿ ಕೃಷಿ ಸಂಶೋಧನ ಕೇಂದ್ರದ ಆಶ್ರಯದಲ್ಲಿ ಹತ್ತಿ ಬೆಳೆಗೆ ಸಂಬಂಧಿಸಿದಂತೆ ಧಾರವಾಡ ಫಾರ್ಮಿನ ಬೆಳವಣಿಗೆಯಲ್ಲಿ ಕಾರ್ಯನಿರ್ವಹಿಸಿದ ಮುಖ್ಯ ವಿಜ್ಞಾನಿಗಳಾದ ಎಸ್.ಎ.ಪಾಟೀಲ್, ಬಿ.ಎಚ್.ಕಾತರಕಿ, ಬಿ.ಎಂ.ಖಾದಿ, ಜಿ.ಎಲ್.ಕೊಟ್ಟೂರು, ಎಸ್.ಜಿಲಕೆಳ್ಕರ್, ಎಸ್.ಎನ್.ಕಡಪ, ವಿ.ಆರ್.ಕೊರಡ್ಡಿ ಮತ್ತು ಎಸ್.ಎಸ್.ಪಾಟೀಲರ ಕೊಡುಗೆ ಅಪಾರ. ಮಾನವನ ನಾಗರಿಕತೆಯ ಬೆಳವಣಿಗೆಯ ಮುಖ್ಯ ಹೆಗ್ಗುರುತಾಗಿ ಬಿಳಿಬಂಗಾರ ಎಂದು ಕರೆಸಿಕೊಳ್ಳುವ ಹತ್ತಿಯ ಪಾತ್ರ ಪ್ರಮುಖವಾದುದಾಗಿದೆ. ಹತ್ತಿಯ ತವರು ಭಾರತ. ಮೊಹೆಂಜೊದಾರೊ ಸಂಸ್ಕೃತಿಯಿಂದ ವೇದಗಳ ಕಾಲದಲ್ಲಿ ಹತ್ತಿಯ ವಿವಿಧ ಉತ್ಪನ್ನಗಳಿದ್ದವೆಂಬುದು ತಿಳಿದಿರುವ ವಿಷಯ. ಟೆಕ್ನಲಾಜಿಕಲ್ ಲ್ಯಾಬೋರೇಟರಿ - ಇಂಡಿಯನ್ ಸೆಂಟರ್ ಕಾಟನ್ ಕಮಿಟಿಯ ಅಧ್ಯಯನದ ವರದಿಯಂತೆ ಭಾರತದಲ್ಲಿ ಸುಮಾರು ಐದು ಸಾವಿರ ವರ್ಷಗಳ ಹಿಂದೆಯೇ ಹತ್ತಿ ಬೆಳೆಯುತ್ತಿದ್ದರೆಂದು ತಿಳಿದುಬರುತ್ತದೆ. ಆ ಕಾಲದಲ್ಲಿ ಗೌರಾಣಿ ಜಾತಿಯ (ಆರ್ ಬೋರಿಯನ್ ಟೈಪ್) ಹತ್ತಿಯಿಂದ ಬಟ್ಟೆ ತಯಾರಿಸುತ್ತಿದ್ದರಂತೆ. ಋಗ್ವೇದ ಮತ್ತು ಮನುವಿನ ಧರ್ಮಸೂತ್ರಗಳಲ್ಲೂ ಹತ್ತಿಯ ಉಲ್ಲೇಖ

ವಿದೆಯೆನ್ನುವರು. ಅಲೆಕ್ಸಾಂಡರನ ಸೈನ್ಯದಲ್ಲಿ ಮಹಾದಂಡನಾಯಕರಾಗಿದ್ದ ನಿರಕಸ್ ಮತ್ತು ಥಿಯೋಫ್ರೆಟಸ್ ಎಂಬುವರು ಭಾರತದ ಹತ್ತಿ ಗಿಡಗಳನ್ನು ವರ್ಣಿಸಿದ್ದಾರೆನ್ನುವರು. ಹತ್ತಿ ಎಲೆಗಳಿಗೂ ಕುರಿಯ ತುಪ್ಪಳಕ್ಕೂ ಸಾಮ್ಯತೆ ಇರುವುದರಿಂದ ಹತ್ತಿ ಗಿಡವನ್ನು ಸಸ್ಯಕುರಿ ಎಂದೂ ಭಾರತದ ಗಂಗಾನದಿ ಪ್ರದೇಶದಲ್ಲಿ ಉತ್ಪಾದಿಸುತ್ತಿದ್ದ ಮಸ್ಲಿನ್ ಬಟ್ಟೆಯನ್ನು ಗ್ರೀಕರು ಗಂಗಿಟಿಕಿ ಎಂದೂ ಹೆಸರಿಸಿದ್ದರು. ರೋಮ್‌ನಲ್ಲಿ ಭಾರತದ ಮಸ್ಲಿನ್ ಬಟ್ಟೆಗಳು ರಾಜವೈಭೋಗದ ಗುರುತಾಗಿದ್ದವು. ಭಾರತ ಪ್ರ.ಶ.ಪೂ.565ರಿಂದಲೇ ಈ ಬಟ್ಟೆಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಿತ್ತೆನ್ನಲಾಗಿದೆ. ಮಾರ್ಕೊಪೊಲೋ ಭಾರತದ ಕೋರಮಂಡಲ ತೀರಪ್ರದೇಶದಲ್ಲಿ ಸೂಕ್ಷ್ಮವಾದ, ಸುಂದರ ಹತ್ತಿ ಬಟ್ಟೆಗಳ ತಯಾರಿಕೆ ಬಗ್ಗೆ ದಾಖಲಿಸಿದ್ದಾನೆಂದು ತಿಳಿದುಬರುತ್ತದೆ. ರೋಮಿನ ಚಕ್ರವರ್ತಿ ಮಾರ್ಕ್ ಆಂಟೋನಿ ತನ್ನ ಸೈನಿಕರಿಗೆ ಹತ್ತಿ ಬಟ್ಟೆ ಒದಗಿಸಿದ್ದನೆಂದು ಹೇಳಲಾಗಿದೆ. ಭಾರತದ ಹತ್ತಿಯ ಸರಕು 1631ರಲ್ಲಿ ಯುರೋಪನ್ನು ತಲುಪಿದಾಗ ಉಣ್ಣೆ ಕಾರ್ಖಾನೆಗಳ ಕಾರ್ಮಿಕರು ನಿರುದ್ಯೋಗ ಭಯದಿಂದ ಸರ್ಕಾರಕ್ಕೆ ತಮ್ಮ ಪ್ರತಿಭಟನೆ ತೋರಿದ್ದರು. 1708ರಲ್ಲಿ ಭಾರತದ ಮಸ್ಲಿನ್ ಬಟ್ಟೆಗಳನ್ನು ಇಂಗ್ಲೆಂಡ್ ನಿಷೇಧಿಸಿದ್ದಲ್ಲದೆ ಭಾರತದಲ್ಲೂ ಅದರ ಉತ್ಪತ್ತಿಯನ್ನು ಹಾಳುಮಾಡಿತು. ಭಾರತದಿಂದ ಹತ್ತಿ ತರಿಸಿಕೊಂಡು ಅಲ್ಲಿ ಕಾರ್ಖಾನೆಗಳಲ್ಲಿ ತಯಾರಾದ ಬಟ್ಟೆಗಳಿಗೆ ಮಾರುಕಟ್ಟೆಯನ್ನಾಗಿ ಭಾರತವನ್ನು ಬಳಸಿಕೊಂಡಿತು. ಗಾಂಧೀಜಿಯವರು ಇದರ ವಿರುದ್ಧವಾಗಿಯೇ ಸ್ವದೇಶಿ ಮತ್ತು ಖಾದಿ ಚಳವಳಿಯನ್ನು ಪ್ರಾರಂಭಿಸಿದರೆನ್ನಬಹುದು. ಉತ್ತಮ ಹತ್ತಿಯ ಸರಬರಾಜಿಗಾಗಿ ಆಗಿನ ಗವರ್ನರ್ ಜನರಲ್ ಲಾರ್ಡ್ ಎಡೆನ್ ಬರೊ ಧಾರವಾಡದಿಂದ ಎರಡು ಕಿಮೀದೂರದಲ್ಲಿದ್ದ ಹೆಬ್ಬಳ್ಳಿಯಲ್ಲಿ ಒಂದು ಕೃಷಿ ಸಂಶೋಧನ ಕೇಂದ್ರವನ್ನು 1904ರಲ್ಲಿ ಸ್ಥಾಪಿಸಿದ. ಪುಣೆ ಕೃಷಿ ಮಹಾವಿದ್ಯಾಲಯದ ಆಗಿನ ಪ್ರಾಧ್ಯಾಪಕ ಜೆ.ಬಿ.ನೈಟ್ ಈ ಕೇಂದ್ರದ ರೂವಾರಿಯಾದರೆ ಇದರ ಪ್ರಥಮ ಕ್ಷೇತ್ರ ನಿರ್ವಾಹಕರಾದವರು ಎಂ.ಎಲ್.ಕುಲಕರ್ಣಿ. 1764ರಲ್ಲಿ ಭಾರತದಿಂದ ಬ್ರಿಟನ್ನಿಗೆ-ರಫ್ತಾಗುತ್ತಿದ್ದ ಹತ್ತಿ ಪ್ರಮಾಣ ನಾಲ್ಕು ಮಿಲಿಯನ್ ಪೌಂಡ್ಗಳಿದ್ದದ್ದು 1801ರ ಹೊತ್ತಿಗೆ 156 ಮಿಲಿಯನ್ ಪೌಂಡ್‌ಗೆ ಏರಿತ್ತು.

ಧಾರವಾಡ ಫಾರ್ಮ್ ಎಂದು ಹೆಸರಾದ ಈ ಕೇಂದ್ರದ ವಿಜ್ಞಾನಿಗಳು ಅಮೆರಿಕದ ಹತ್ತಿಗಿಂತ ದೇಶೀಯ ಹತ್ತಿ ತಳಿಗಳಿಗೆ ರೋಗನಿರೋಧಕ ಶಕ್ತಿ ಹೆಚ್ಚೆಂದು ಕಂಡುಕೊಂಡದ್ದಲ್ಲದೆ 1972ರಲ್ಲಿ ದೇಶದಲ್ಲೆ ಪ್ರಥಮ ಬಾರಿಗೆ ವಿಜಾತಿ ಹೈಬ್ರಿಡ್ ತಳಿ ವರಲಕ್ಷ್ಮಿಯನ್ನು ಬಿಡುಗಡೆ ಮಾಡಿದರು. ಅನಂತರ ಬಿಡುಗಡೆ ಮಾಡಿದ ಡಿಸಿಎಚ್-32 ತಳಿ ರೈತರಿಗೆ ಮತ್ತು ದೇಶಕ್ಕೆಹೆಚ್ಚುಹಣ ನೀಡಿತು. ಇದರ ಇಳುವರಿ ಕಡಿಮೆಯಾದ ಪ್ರಯುಕ್ತ ಇತ್ತೀಚೆಗೆ ಡಿಎಚ್‌ಬಿ-290 ಮತ್ತು ಆರ್‌ಎಎಚ್‌ಬಿ-87 ಎಂಬ ಎರಡು ಹೊಸ ಹೈಬ್ರಿಡ್ ತಳಿಗಳನ್ನು ಸಿದ್ಧಪಡಿಸಲಾಗುತ್ತಿದೆ. ಸ್ವಜಾತಿ ಹೈಬ್ರಿಡ್ ಉತ್ಪಾದನೆಯಲ್ಲೂ ಗಣನೀಯ ಸಾಧನೆ ಮಾಡಿ ಆರ್‌ಎಎಚ್‌ಎಸ್-95, ಡಿಎಚ್‌ಎಚ್-509 ಎಂಬ ತಳಿಗಳನ್ನು ಹೆಚ್ಚು ಪ್ರಚುರಪಡಿಸಲಾಗಿದೆ. ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಇಂದಿಗೂ ದೇಶೀಯ ಹತ್ತಿಯನ್ನೇ ಬೆಳೆಯಲಾಗುತ್ತಿದೆ. ಹರ್ಬೇಸಿಯಂ ಜಾತಿಯ ದೇಶೀಯ ತಳಿಗಳ ಅಭಿವೃದ್ಧಿ ಮಾಡಿ ಸೊರಗು ರೋಗ ನಿರೋಧಕ ಕೆಎಫ಼್‌ಟಿ 12-2, ಜಯಧರ, ರೇಣುಕಾ, ಸುಯೋಧರ ಮುಂತಾದ ತಳಿಗಳ ಬಿಡುಗಡೆ ಮಾಡಿದೆ. ಕಡಿಮೆ ಮಳೆ ಬೀಳುವ ಪ್ರದೇಶಕ್ಕಾಗಿ ಡಿಡಿಎಚ್‌ಸಿ-11 ತಳಿ ಬಿಡುಗಡೆ ಮಾಡಿದ್ದು ಇದು ರೈತರಿಗೆ ಲಾಭದಾಯಕವಾಗಿದೆ. ಗೌರಾಣಿ ಜಾತಿಯ ದೇಶೀಯ ತಳಿ ಗುಂಪಿಗೆ ಸೇರಿದ ಉದ್ದನೆಯ ಗುಣವಂತಿ ತಳಿಯನ್ನು 2004ರಲ್ಲಿ ಬಿಡುಗಡೆ ಮಾಡಲಾಗಿದೆ. ಧಾರವಾಡ ಫಾರ್ಮ್ ಬಿ.ಟಿ.ವಂಶವಾಹಿಯನ್ನು ಇತರ ತಳಿಗಳಿಗೆ ಬಿಡುಗಡೆ ಮಾಡುವ ವಿಧಾನವನ್ನು ಅಭಿವೃದ್ಧಿಪಡಿಸಿದ್ದು ಸರ್ಕಾರಿ ವಲಯದಲ್ಲಿ ಬಿ.ಟಿ.ತಂತ್ರಜ್ಞಾನ ಅಭಿವೃದ್ಧಿಪಡಿಸಿದ ಪ್ರಥಮ ಸಂಸ್ಥೆಯಾಗಿದೆ. ಮೊದಲ ಬಿ.ಟಿ.ಹೈಬ್ರಿಡ್ ಎನ್‌ಎಚ್‌ಎಚ್-44 ಬಿಡುಗಡೆಯ ಹಂತದಲ್ಲಿದೆ. ಉದ್ದ ಎಳೆಯ ತಳಿಗಳಲ್ಲಿ 1972ರಲ್ಲಿ ವರಲಕ್ಷ್ಮಿ, 1981ರಲ್ಲಿ ಜಯಲಕ್ಷ್ಮಿ ತಳಿಗಳು ಬಿಡುಗಡೆಗೊಂಡಿವೆ. ಇದರಿಂದಾಗಿ ಅತಿ ಉದ್ದನೆ ಎಳೆಯ ಹತ್ತಿಗಳ ಉತ್ಪಾದನೆಯಲ್ಲಿ ಕರ್ನಾಟಕ ಭಾರತದ ಎಲ್ಲ ರಾಜ್ಯಗಳಿಗಿಂತ ಮುಂಚೂಣಿಯಲ್ಲಿದೆ. ವರಲಕ್ಷ್ಮಿ ಪಿರಾಮಿಡ್ ರೀತಿಯಲ್ಲಿ ಬೆಳೆಯುವ ಸಸ್ಯ. ಬೆಳೆಯಲು 190 ದಿನಗಳು ಬೇಕು. ಹೆಕ್ಟೇರಿಗೆ 20-25 ಕ್ವಿಂಟಾಲ್ ಇಳುವರಿ ಸಿಗುತ್ತದೆ. ಇದರ ಎಳೆಯ ಉದ್ದ 32 ಮಿಮೀ. ಜಯಲಕ್ಷ್ಮಿ ಬೆಳೆಯಲು 180 ದಿನಗಳು ಬೇಕು. ಎಳೆಯ ಉದ್ದ ಸು.33 ಮಿಮೀ. ಧಾರವಾಡ ಫಾರ್ಮ್ ಕೇಂದ್ರದವರು ಹತ್ತಿ ಬೆಳೆಯ ಕೀಟ ನಿರ್ವಹಣೆಗೆ ಕೆಲವು ಕೀಟನಿರೋಧಕ ಗಳನ್ನೂ ಪರೀಕ್ಷಿಸುವರು. ಜೊತೆಗೆ ದೇಶದ ಹಲವಾರು ಖಾಸಗಿ ಕಂಪನಿಗಳು, ವಿಶ್ವವಿದ್ಯಾಲಯಗಳೊಂದಿಗೆ ತಳಿ ಉತ್ಪಾದನೆಯ ಒಡಂಬಡಿಕೆಯನ್ನೂ ಮಾಡಿಕೊಂಡಿದೆ.

ಹತ್ತಿಯ ಬಣ್ಣ ಶುಭ್ರ ಬಿಳುಪು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ನೈಸರ್ಗಿಕವಾಗಿ ಕಂದು ಮತ್ತು ಹಸುರು ಬಣ್ಣದ ಕಾಡುಜಾತಿಯ ಹತ್ತಿ ತಳಿಗಳಿರುವುದು ಹೆಚ್ಚು ಪರಿಚಿತವಿಲ್ಲ. ಧಾರವಾಡ ಫಾರ್ಮ್ ಹಲವು ಪ್ರಯೋಗಗಳ ಬಳಿಕ ಕಂದು ದೇಶೀತಳಿ ಡಿಡಿಸಿಸಿ-1ನ್ನು 1999ರಲ್ಲಿ ಬಿಡುಗಡೆ ಮಾಡಿದೆ. ಬಣ್ಣದ ಹತ್ತಿ ತಳಿಯನ್ನು ಬಿಡುಗಡೆ ಮಾಡಿದ ಪ್ರಥಮ ಕೇಂದ್ರವೆಂದು ಪ್ರಸಿದ್ಧವಾಗಿದೆ. ಸಹಜ ಬಣ್ಣ ಪಡೆದ ಬಟ್ಟೆಗಳು ಸೂರ್ಯನ ಕಡುನೇರಳೆ ಕಿರಣಗಳಿಂದ ನಮ್ಮ ಚರ್ಮವನ್ನು ರಕ್ಷಿಸಬಲ್ಲವಾಗಿವೆ. ಹಿಂದೆ ಪೆರು ದೇಶದ ಉತ್ತರ ಕರಾವಳಿಯ ಪಿಟ್ರಾ ಎಂಬಲ್ಲಿ ನಡೆದ ಉತ್ಖನನದಿಂದ ನಸುಗೆಂಪಿನಿಂದ ಕೆಂಪು ಬಣ್ಣದವರೆಗಿನ ಹತ್ತಿ ಅಲ್ಲಿ ಬೆಳೆಯುತ್ತಿದ್ದರೆಂಬುದು ತಿಳಿದುಬಂದಿದೆ. ಆದರೆ ಇವುಗಳ ಸಸ್ಯಶಾಸ್ತ್ರೀಯ ವಿವರಣೆ ಎಲ್ಲೂ ದಾಖಲಾಗಿಲ್ಲ. ಧಾರವಾಡ ಫಾರ್ಮಿನ ಕೃಷಿ ವಿಜ್ಞಾನಿಗಳು ಪೆಟೂನಿಯಾ ಹೂವಿನ ಬಣ್ಣಕ್ಕೆ ಕಾರಣವಾದ ಜೀನ್ಸ್ (ವಂಶವಾಯಿ) ಪತ್ತೆಹಚ್ಚಿ ಅದನ್ನು ಬಿಳಿ ಮತ್ತು ಕಂದು ಬಣ್ಣದ ಹತ್ತಿಗೆ ವರ್ಗಾಯಿಸಿ ಗುಲಾಬಿ ಬಣ್ಣದ ಹತ್ತಿಯನ್ನು ಸೃಷ್ಟಿಸಿ ಈ ಕ್ಷೇತ್ರದಲ್ಲಿ ಮತ್ತಷ್ಟು ಗಮನಾರ್ಹ ಪ್ರಯೋಗಗಳನ್ನು ನಡೆಸಿದ್ದಾರೆ. *

**ಹದಿನಾರು ಪಾಳೆಯಗಾರರು:** ಸು. 16-17ನೆಯ ಶತಮಾನಗಳಲ್ಲಿ ಮೈಸೂರು ಜಿಲ್ಲೆಯ ಹದಿನಾರು (ಹದಿನಾಡು) ಪ್ರಾಂತವನ್ನು ಆಳಿದ ಒಂದು ಮಾಂಡಳಿಕ ಮನೆತನ. ಗಂಗರ, ಚೋಳರ ಶಾಸನಗಳಲ್ಲಿ ಅದಿರಾರು ಎಂದಿರುವ, ಹೊಯ್ಸಳ ಹಾಗೂ ವಿಜಯನಗರದ ಕಾಲದ ಶಾಸನಗಳಲ್ಲಿ ಹದಿನಾಡೆಂದು ಉಕ್ತವಾಗಿರುವ ಹದಿನಾಡು, ಪದಿನಾಡು ಅಥವಾ ಹತ್ತುನಾಡು ಎಂದು ಪರಿಗಣಿಸಲ್ಪಟ್ಟಿದ್ದ ಈ ಹದಿನಾರು ಬಹುಶಃ ಪ್ರಾಚೀನಕಾಲದ ಪುನ್ನಾಡು 1000 ಎಂಬ ಒಂದು ಹೇಳಿಕೆ ಇದೆ. ಆದರೆ ಇದಕ್ಕೆ ಪುರಾವೆ ಸಾಲದು. ಯಳಂದೂರು ಇದರ ಮುಖ್ಯ ಪಟ್ಟಣವಾಗಿತ್ತು. ಸು. 900ರ ಹೊತ್ತಿಗೆ ಚೋಳ ಮುತ್ತರಸ ಎಂಬುವನನ್ನು ಕೊಂದು ತಮ್ಮ ಅಸುವನ್ನು ನೀಗಿದರೆಂದು ಹೇಳಲಾದ ಯರೆಯಂಗ, ಪಲ್ಲಪೋಚ ಮತ್ತು ಚೋಳ ಮುತ್ತರಸನ ಇಬ್ಬರು ಮಕ್ಕಳಿಗೆ ಈ ಹದಿನಾರು 12 ಪ್ರಾಂತ ಕಲ್ನಾಡಾಗಿ ಕೊಡಲ್ಪಟ್ಟಿತೆಂದು ಒಂದು ಶಾಸನದಿಂದ ತಿಳಿದುಬರುತ್ತದೆ. ಹೊಯ್ಸಳರ ಕಾಲದಲ್ಲಿ ಹದಿನಾಡು ಮೇಂಟೆ ಎಂದು ಕರೆಯಲ್ಪಟ್ಟಿದ್ದ

ಇದು ದಕ್ಷಿಣ ವಾರಾಣಸಿ ಎನ್ನಿಸಿಕೊಂಡಿತ್ತು. ವಿಜಯನಗರದ ಅರಸರ ಸಾರ್ವಭೌಮತ್ವವನ್ನು ಇವರು ಒಪ್ಪಿಕೊಂಡಿದ್ದರು. ಕೊನೆಕೊನೆಗೆ ಆಳಿದ ಈ ವಂಶದ ನಾಯಕರು ವಿಜಯನಗರದ ಕೊನೆಯ ಅರಸರ ಹೆಸರುಗಳ ಅನುಕರಣೆ ಮಾಡಿದ್ದು ಅವರ ಹೆಸರುಗಳಿಂದ ತಿಳಿದುಬರುತ್ತದೆ. ಇದಕ್ಕೆ ವಿಜಯನಗರದ ಅರಸರ ಪ್ರೋತ್ಸಾಹವೂ ಇದ್ದಿತೆಂದು ತೋರುತ್ತದೆ. ವಿಜಯನಗರದ ವೆಂಕಟಪತಿರಾಯನ ಕಾಲದಲ್ಲಿ ಈ ಅನುಕರಣೆಗೆ ಸಮ್ಮತಿಸಿ ಅದಕ್ಕೋಸ್ಕರವಾಗಿ ಮೂಗೂರು ಸೀಮೆಯ ತಾಯೂರು ಮತ್ತು ಇತರ 14 ಹಳ್ಳಿಗಳನ್ನು ಅವರ ಪಲ್ಲಕ್ಕಿಯ ಉಂಬಳಿಯಾಗಿ ಕೊಟ್ಟ ವಿಚಾರವನ್ನು ಒಂದು ಶಾಸನ ವಿವರಿಸುತ್ತದೆ. ಸಿಂಗದೇಪ ರಾಮರಾಜನಾಯಕ, ಚೆನ್ನ, ತಿರುಮಲ ರಾಜ, ನಂಜರಾಜ, ಮುದ್ದರಾಜ ಮುಂತಾದವರು ಈ ಪ್ರಾಂತದ ನಾಯಕರಾಗಿದ್ದರು. ಸಿಂಗದೇಪನು ಯಳಂದೂರಿನ ಗೌರೀಶ್ವರ ದೇವಾಲಯವನ್ನು ಕಟ್ಟಿಸಿದ. ಅವನ ಅನಂತರದ ನಾಯಕರು ಆ ದೇವಾಲಯಕ್ಕೆ ದತ್ತಿಗಳನ್ನು ಬಿಟ್ಟ ವಿಚಾರ ಶಾಸನಗಳಿಂದ ತಿಳಿದುಬರುತ್ತದೆ. ಮುದ್ದರಾಜ ಈ ದೇವಾಲಯದ ಗೋಪುರವನ್ನು ಕಟ್ಟಿಸಿದನೆಂದೂ ಮತ್ತು ಬಿಳಿಕಲ್ಲಿನ ತಿರುವೆಂಗಳನಾಥ ದೇವಾಲಯಕ್ಕೆ 30 ವರಹಗಳನ್ನು ಕೊಟ್ಟು ಅದರಿಂದ ಬಂದ ಬಡ್ಡಿಯ ಹಣದಿಂದ ಮಹಾ ನವಮಿಯ ಪೂಜೆ ನಡೆಯುವ ಏರ್ಪಾಡನ್ನು ಮಾಡಿದ ಸಂಗತಿಯನ್ನು ಒಂದು ಶಾಸನ ತಿಳಿಸುತ್ತದೆ. ಒಂದು ಶಾಸನದಲ್ಲಿ ದೇವಪ್ಪಗೌಡನ ಮಗ ರಾಜನಾಯಕನು ನಂದ್ಯಾಲ ಸೀಮೆಯ ಜನರ ಸಹಾಯದಿಂದ ಒಂದು ದಟ್ಟಿಯನ್ನು ದುರಸ್ತಿಪಡಿಸಿದ ವಿಚಾರ ತಿಳಿದು ಬರುತ್ತದೆ. ಈ ವಂಶದ ಕಡೆಯ ಅರಸು ಮೈಸೂರು ಹಾಗೂ ಕಳಲೆಯ ಮನೆತನಗಳೊಡನೆ ಸ್ನೇಹಸಂಬಂಧವಿರಿಸಿಕೊಂಡಿದ್ದರೆಂದು ಹೇಳಲಾಗಿದೆ. ಹಲವು ಕಾಲಾನಂತರ ಈ ಹದಿನಾಡು ಪ್ರಾಂತ ಮೈಸೂರು ರಾಜ್ಯದಲ್ಲಿ ಲೀನವಾಯಿತು.

**ಶಾಸನಗಳಿಂದ ತಿಳಿದುಬರುವ ಹದಿನಾರು ಪಾಳೆಯಗಾರರ ವಂಶಾವಳಿ:**

- ದೇವಪ್ಪಗೌಡ
  - ರಾಯನಾಯಕ (1530)
    - ಬಾಚರಸಯ್ಯ (1531–46)
      - ಜಗದೇವರಾಯ (1563–64)
        - ಸಿಂಗದೇಪ
          - ರಾಮರಾಜನಾಯಕ
            - ತಿರುಮಲರಾಜನಾಯಕ (1583)
              - ಮುದ್ದರಾಜ (1654–67)
            - ಚನ್ನ ಒಡೆಯರ್ ಚನ್ನಂಜೆಯ
              - ನಟರಾಜ ಒಡೆಯರ್ (1604–12)

ಈ ವಂಶದವರೇ ಮುಂದೆ ಮೈಸೂರು ಒಡೆಯರ ಪೂರ್ವಜರೆಂದು ಒಂದು ಹೇಳಿಕೆ ಇದೆ. ಈ ಹೇಳಿಕೆಯಂತೆ ಸು. 15ನೆಯ ಶತಮಾನದ ಹೊತ್ತಿಗೆ ಉತ್ತರದಿಂದ ಬಂದ ವಿಜಯ ಮತ್ತು ಕೃಷ್ಣ ಎನ್ನುವ ಸಹೋದರರು ಈ ಪ್ರಾಂತದಲ್ಲಿ ನೆಲೆಸಿದ್ದರು. ಅದೇ ಹೊತ್ತಿಗೆ ಹದಿನಾಡ ಒಡೆಯನು ಮತಿಭ್ರಮಣೆಗೊಳಗಾಗಿದ್ದರಿಂದ ನೆರೆಯ ಪ್ರಾಂತವಾದ ಕಾರುಗಹಳ್ಳಿಯ ಮಾರನಾಯಕನು ಅನಾಯಕವಾಗಿದ್ದ ಹದಿನಾಡ ರಾಜಪುತ್ರಿಯನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಆಗ್ರಹಪಡಿಸುತ್ತಿದ್ದನು. ಇದರಿಂದ ದಿಕ್ಕುಕಾಣದ ಆ ಮನೆತನದವರು ಬಲವಂತದಿಂದ ಈ ಮದುವೆಗೆ ತಮ್ಮ ಸಮ್ಮತಿಯನ್ನು ಕೊಡಬೇಕಾಯಿತು. ಇದನ್ನರಿತ ಈ ಇಬ್ಬರು ಸಾಹಸಿ ಸಹೋದರರು ಚಾಣಾಕ್ಷತನದಿಂದಲೂ ಪರಾಕ್ರಮದಿಂದಲೂ ಕಾರುಗ ಹಳ್ಳಿಯ ನಾಯಕನನ್ನು ಕೊನೆಗಾಣಿಸಿದರು. ಹದಿನಾಡ ರಾಜಕುವರಿ ಇಬ್ಬರು ಸಹೋದರರಲ್ಲಿ ವಿಜಯನನ್ನು ವರಿಸಿದಳು. ಹೀಗೆ ವಿಜಯನು ಕಾರುಗಹಳ್ಳಿ ಹಾಗೂ ಹದಿನಾಡು ಪ್ರಾಂತಗಳ ಒಡೆಯನಾದ. ಮೈಸೂರು ಒಡೆಯರ ಮನೆತನ ಇಲ್ಲಿಂದ ಪ್ರಾರಂಭವಾಯಿತು. ಆದರೆ ಈ ಹೇಳಿಗಳ ಸತ್ಯಾಸತ್ಯತೆಗಳ ಬಗ್ಗೆ ಖಚಿತವಾಗಿ ಏನೂ ತಿಳಿಯದು. **(ಎಲ್.ಎಸ್.ಕೆ.)**

**ಹದಿನಾಲ್ಕುನಾಡ ಅರಸರು:** ಹೊಯ್ಸಳ ಅರಸರ ಮಾಂಡಲಿಕರಾಗಿದ್ದ ಒಂದು ಅರಸುಮನೆತನ. ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡುಗಳ ಕೆಲ ಪ್ರದೇಶಗಳನ್ನೊಳಗೊಂಡ ಈ ಹದಿನಾಲ್ಕು ನಾಡು ಎಂಬ ಪ್ರದೇಶ ಮೇರೆಗಳನ್ನು ಗುರುತಿಸಲಾಗಿಲ್ಲವಾದರೂ ಕುಡುಗು ನಾಡು ಎಂಬುದು 14 ನಾಡುಗಳಲ್ಲಿ ಒಂದೆಂದು ಶಾಸನಗಳಿಂದ ತಿಳಿಯುತ್ತದೆ.

ಈ ವಂಶದ ಮೂಲಪುರುಷ ಹೊಯ್ಸಳ ಮೂರನೆಯ ನರಸಿಂಹನ ಸೇನಾನಿ ಪರುಮಾಳೆ ದಂಡನಾಯಕನಾಗಿದ್ದು, 1285ರ ಶಾಸನದಲ್ಲಿ ಮೊಟ್ಟಮೊದಲ ಬಾರಿಗೆ ಈತ ಉಲ್ಲೇಖಗೊಂಡಿದ್ದಾನೆ. ಈತನಿಗೆ ಹೊಯ್ಸಳ ರಾಜಲಕ್ಷ್ಮೀ ರಕ್ಷಾಪ್ರಾಕಾರ ಎಂಬ ಬಿರುದಿರುವುದರಿಂದ ಈತ ಹೊಯ್ಸಳರ ಗಣ್ಯ ಸೇನಾನಿಯಾಗಿದ್ದಿರಬೇಕು. ಇದಲ್ಲದೆ ಸಿತಗರಗಂಡ, ಕೊಂಗಮಾರಿ, ಕೊಂಗದಿಶಾಪಟ್ಟ, ನೀಲಗಿರಿ ಮುಂತಾದ ಬಿರುದುಗಳಿಂದ ಇವನು ತಮಿಳುನಾಡಿನಲ್ಲಿ ವಿಜಯಗಳನ್ನು ಸಾಧಿಸಿರಬೇಕೆಂದು ಊಹಿಸಬಹುದು. ತೆರಕಣಾಂಬಿ ಇವನ ರಾಜಧಾನಿಯಾಗಿತ್ತು ತೆರಕಣಾಂಬಿಯ ಅಲ್ಲಾಳನಾಥ (ವರದರಾಜಸ್ವಾಮಿ) ಈ ವಂಶದವರ ಕುಲದೇವರು. ಇವರ ಕೆಲ ಶಾಸನಗಳು ವೈಷ್ಣವಸ್ತುತಿಯಿಂದ ಆರಂಭವಾಗುವುದರಿಂದಲೂ ಶ್ರೀವೈಷ್ಣವರಿಗೆ ಇವರು ಅನೇಕ ದತ್ತಿಗಳನ್ನು ನೀಡಿರುವುದರಿಂದಲೂ ಏಕಾದಶೀವ್ರತನಿರತನೆಂಬ ಬಿರುದಿನಿಂದಲೂ ಇವರು ಶ್ರೀವೈಷ್ಣವರಿರಬೇಕೆಂದು ಊಹಿಸಬಹುದು. ಮುಂದೆ ಪೆರುಮಾಳೆಯ ಮಗ ಮಾಧವ 1308 ರಿಂದ 1315ರವರೆಗೆ ಇದ್ದನೆಂದು ಸೂಚಿಸುವ ಶಾಸನಗಳಿದ್ದು ಈತ ಇಮ್ಮಡಿ ಉತ್ತರಾಯ ಎಂಬ ಬಿರುದನ್ನು ತಳೆದಿದ್ದ. ಗೋಪಾಲಸ್ವಾಮಿಬೆಟ್ಟದ (ಗೋವರ್ಧನಗಿರಿ) ಮೇಲೆ ಇವನು ಗೋಪನಾಥ ದೇವಾಲಯವನ್ನು 1315ರಲ್ಲಿ ಕಟ್ಟಿಸಿದ. ಮುಂದೆ ಆಳಿದ ಈತನ ಮಗ ಭರತಜೀಯನ 1320ರ ಶಾಸನವಿದ್ದು, ಇವನ ಅನಂತರ ಆಳಿದ ಇವನ ಸೋದರ ಕೇತಯ್ಯನ 1334 ವರೆಗಿನ ಶಾಸನಗಳು ದೊರಕುತ್ತವೆ. ಬಂಗಯ್ಯನೆಂಬಾತ ಈ ವಂಶದ ಕೊನೆಯ ಅರಸು. ಈತ ಸು. 1338ರಲ್ಲಿ ಆಳುತ್ತಿದ್ದ. ಇವನ ಅನಂತರ ಹದಿನಾಲ್ಕು ನಾಡು ವಿಜಯನಗರ ಅರಸರ ಕಾಲದಲ್ಲಿ ಉಮ್ಮತ್ತೂರು ಪಾಳೆಯಗಾರರ ವಶಕ್ಕೆ ಹೋದಂತೆ ತೋರುತ್ತದೆ. ಮುಂದೆ ಬೆಟ್ಟದ ಕೋಟೆಯಿಂದ ಆಳುತ್ತಿದ್ದ ಒಂದು ವಂಶ ಇವರ ಸಂಬಂಧಿಗಳೇ ಎನ್ನಲು ಖಚಿತ ಆಧಾರವಿಲ್ಲ. **(ಎಸ್.ಕೆ.)**

**ಹನಸೋಗೆ:** ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಒಂದು ಗ್ರಾಮ. ಚುಂಚನಕಟ್ಟೆ–ರಾಮನಾಥಪುರ ರಸ್ತೆಯಲ್ಲಿ ಕಾವೇರಿ ನದಿಯ ಬಲದಂಡೆಯ ಮೇಲೆ ಕೃಷ್ಣರಾಜನಗರಕ್ಕೆ ವಾಯವ್ಯದಲ್ಲಿ 34 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,648.

ಇಲ್ಲಿನ ನದಿ ದಂಡೆಯ ಮೇಲೆ ಚೋಳರ ಕಾಲದ ಈಶ್ವರ ದೇವಸ್ಥಾನ, ಹನುಮಂತರಾಯನ ಗುಡಿ ಮತ್ತು ರಾಘವೇಂದ್ರಸ್ವಾಮಿ ದೇವಸ್ಥಾನಗಳಿವೆ. ಈಗಿನ ಚಿಕ್ಕಹನಸೋಗೆಯೇ ಮೂಲತಃ ಪನಸೋಗೆಯಾಗಿತ್ತು. ಅಲ್ಲಿನ ಬ್ರಾಹ್ಮಣರು ಬಂದು ನದೀ ದಡದಲ್ಲಿ ನೆಲೆಸಿದುದರಿಂದ ಈ ಊರು ದೊಡ್ಡ ಗ್ರಾಮವಾಗಿ ಬೆಳೆದು ದೊಡ್ಡಹನಸೋಗೆಯಾಯಿತು. ಈಗ ಈ ಎರಡೂ ಗ್ರಾಮಗಳ ಮಧ್ಯೆ ಒಂದೂವರೆ ಕಿಮೀ ಅಂತರವಿದ್ದು ನಡುವೆ ವಿಶಾಲವಾದ ಗದ್ದೆ ಹಾಗು ತೋಟದ ಬಯಲಿದೆ. ಚಿಕ್ಕಹನಸೋಗೆಯಲ್ಲಿ ಶಿಥಿಲಗೊಂಡಿರುವ ಆದಿನಾಥ ಬಸದಿಯಿದೆ.

ಇಲ್ಲಿರುವ ಜೈನಬಸದಿಗಳು ಗಂಗರ ಕಾಲದವು. ಇವು ಚೆಂಗಾಳ್ವರಿಂದ ದುರಸ್ತು ಹೊಂದಿರಬೇಕೆಂದೂ ಅಥವಾ ಚೆಂಗಾಳ್ವರಿಂದಲೇ ರಚಿತವಾಗಿರಬೇಕೆಂದೂ ಊಹಿಸಲಾಗಿದೆ. ಪನಸೋಗೆಯಲ್ಲಿ ಗಂಗರಸ ಮಾರಸಿಂಹ ಕಟ್ಟಿಸಿ ಭೂಮಿಯನ್ನು ದಾನವಾಗಿ ಕೊಟ್ಟಿದ್ದ ಒಂದು ಜೈನ ಬಸದಿಯನ್ನು ಹತ್ತನೆಯ ಶತಮಾನದ ಕೊನೆಯಲ್ಲಿ ನನ್ನಿಚೆಂಗಾಳ್ವನೆಂಬ ಅರಸ ದುರಸ್ತುಗೊಳಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಇಲ್ಲಿನ ಬಸದಿಗಳು ಮೂಲತಃ ಶ್ರೀರಾಮನಿಂದ ರಚನೆಗೊಂಡು ಗಂಗರಸರಿಂದ ರಕ್ಷಿತವಾಗಿ ತರುವಾಯ ರಾಜೇಂದ್ರ ಚೋಳ ನನ್ನಿ ಚೆಂಗಾಳ್ವನಿಂದ ಜೀರ್ಣೋದ್ಧಾರ ಹೊಂದಿದವೆಂದು ಚಿಕ್ಕಹನಸೋಗೆಯ 26ನೆಯ ಶಾಸನವೂ ಬಲಾತ್ಕಾರಗಣದ ನಾಗಚಂದ್ರದೇವನ ಶಿಷ್ಯ ಸಮಯಾಭರಣ ಭಾನುಕೀರ್ತಿ ಪಂಡಿತನು ಮೂಲಸಂಘ, ದೇಸಿಗಣ ಮತ್ತು ಪುಸ್ತಕಗಚ್ಛದ ತೀರ್ಥಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿದನೆಂದು ಅದೇ 73ನೆಯ ಶಾಸನವೂ ತಿಳಿಸುತ್ತವೆ. ಚಾಳುಕ್ಯ ರೀತಿಯಲ್ಲಿರುವ ಆದಿನಾಥ ಬಸದಿಯ ತ್ರಿಕೂಟಾಚಲವನ್ನು ಕಣಶಿಲೆಯಿಂದ ಕಟ್ಟಿದ್ದರೂ ವಿಗ್ರಹಗಳು, ದ್ವಾರಗಳು ಬಳಪದ ಕಲ್ಲಿನವಾಗಿವೆ. ಪಶ್ಚಿಮದಲ್ಲಿ ಆದಿನಾಥ ದಕ್ಷಿಣದಲ್ಲಿ ಶಾಂತಿನಾಥ, ಉತ್ತರದಲ್ಲಿ ಚಂದ್ರನಾಥ ಗುಡಿಗಳಿವೆ. ಹೊಯ್ಸಳರ ಕಾಲದಲ್ಲಿ ಇಲ್ಲಿ ವೈಷ್ಣವ ದೇವಾಲಯವಿದ್ದಿತೆಂದು ಹತ್ತಿರ ಬಿದ್ದಿರುವ ದ್ವಾರಪಾಲಕ ವಿಗ್ರಹಗಳಿಂದ ಊಹಿಸಬಹುದು. ಚಿಕ್ಕಹನಸೋಗೆಯ ದೊಡ್ಡ ಕೆರೆಯ ಏರಿಯ ಮೇಲೆ 11 ಮತ್ತು 12 ನೆಯ ಶತಮಾನದ ವೀರಗಲ್ಲುಗಳಿವೆ. ಛಂದೋನುಶಾಸನದ ಕರ್ತೃ ಜಯಕೀರ್ತಿ ಪನಸೋಗೆ ಜೈನಮಠದ ಗುರು ಪರಂಪರೆಗೆ ಸೇರಿದವನೆಂದು ತಿಳಿದುಬಂದಿದೆ. ಚಾಂದ್ರಾಯಣದೇವ ಎಂಬುದು ಜಯಕೀರ್ತಿಯ ಇನ್ನೊಂದು ಹೆಸರೆಂದೂ ಚಾಂದ್ರಾಯನ ಎಂಬ ನೋಂಪಿಯನ್ನು ಆಚರಿಸಿದುದರಿಂದ ಜಯಕೀರ್ತಿಗೆ ಚಾಂದ್ರಾಯಣ ದೇವ ಅಥವಾ ಚಾಂದ್ರಾಯಣಿದೇವ ಎಂಬ ಹೆಸರು ಬಂದಿತೆಂದೂ ಚಿಕ್ಕಹನಸೋಗೆಯ ಎರಡು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಗಂಗರ ಕಾಲದಲ್ಲಿ ಇಲ್ಲಿನ ಜೈನ ಗುರುಪರಂಪರೆ ಉನ್ನತಿಗೆ ಬಂದು ಪನಸೋಗೆ ಬಳಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಈ ಬಳಿಗೆ ಸೇರಿದ ಗುರುಗಳು ನಾಡಿನ ಹಲವೆಡೆ ನೆಲಸಿ ಜೈನಧರ್ಮವನ್ನು ಪ್ರಕಾಶಗೊಳಿಸಿದ ಸಂಗತಿಗಳು ಗಂಗ–ಹೊಯ್ಸಳ ಕಾಲದ ಶಾಸನಗಳಿಂದ ತಿಳಿದುಬರುತ್ತದೆ. ಪಂಪಭಾರತ ಮುಂತಾದ ಕನ್ನಡ ಗ್ರಂಥಗಳ ತಾಳೆಗರಿಯ ಪ್ರತಿಗಳು ಉತ್ತರ ಭಾರತದ ಆರಾ ಎಂಬಲ್ಲಿಯ ಜೈನ ಪ್ರಾಚ್ಯ ಕೇಂದ್ರ ಗ್ರಂಥಾಲಯದಲ್ಲಿ ದೊರೆಯಲು ಹನಸೋಗೆ ಹಾಗೂ ಆರಾಮಠಕ್ಕೆ ಇದ್ದ ಸಂಬಂಧವೇ ಕಾರಣವಿರಬೇಕೆಂದು ತೋರುತ್ತದೆ. **(ಎಂ.ಎಚ್.)**

**ಹನುಮಂತಯ್ಯ, ಕೆಂಗಲ್:** 1908–80. ಹಿರಿಯ ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರ, ಮೈಸೂರು ರಾಜ್ಯದ ಮುಖ್ಯಮಂತ್ರಿ (1952–56). ಬೆಂಗಳೂರು ಜಿಲ್ಲೆಯ ರಾಮನಗರ ತಾಲ್ಲೂಕಿನ ಲಕ್ಕಪ್ಪನಹಳ್ಳಿಯಲ್ಲಿ 1908 ಫೆಬ್ರವರಿ 10ರಂದು ಜನಿಸಿದರು. ವೆಂಕಟೇಗೌಡ ಮತ್ತು ನಂಜಮ್ಮ ಇವರ ತಂದೆತಾಯಿಗಳು. ಪ್ರೌಢಶಾಲಾಭ್ಯಾಸವನ್ನು ಮುಗಿಸಿದ ಅನಂತರ ಇವರು ಮೈಸೂರು ಮಹಾರಾಜ ಕಾಲೇಜು ಸೇರಿ 1930ರಲ್ಲಿ ಬಿ.ಎ. ಪದವಿಗಳಿಸಿದರು. ಪುಣೆಯ ಕಾನೂನು ಕಾಲೇಜಿನಲ್ಲಿ 1932ರಲ್ಲಿ ಎಲ್.ಎಲ್.ಬಿ ಪದವಿಯನ್ನು ಗಳಿಸಿದ ಅನಂತರ ಬೆಂಗಳೂರಿನಲ್ಲಿ ವಕೀಲವೃತ್ತಿಯಲ್ಲಿ ತೊಡಗಿದರು (1938). ಇವರು ವಿದ್ಯಾರ್ಥಿಯಾಗಿದ್ದಾಗಲೇ ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿವಹಿಸಿದ್ದರು. 1925ರಲ್ಲಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿದ್ದುದಲ್ಲದೆ 1927ರಲ್ಲಿ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ವಿದ್ಯಾರ್ಥಿಪ್ರತಿನಿಧಿಯಾಗಿ ಭಾಗವಹಿಸಿದರು. 1928ರಲ್ಲಿ ಸೈಮನ್ ಸಮಿತಿ ಬಂದಾಗ ವಿದ್ಯಾರ್ಥಿಗಳನ್ನು ಸಂಘಟಿಸಿ ಅದನ್ನು ಪ್ರತಿಭಟಿಸಿದರು. 1933ರಲ್ಲಿ ಬೆಂಗಳೂರು ಜಿಲ್ಲೆ ಹರಿಜನ ಸೇವಕ ಸಂಘದ ಕಾರ್ಯದರ್ಶಿಯಾಗಿಯೂ 1934ರಲ್ಲಿ ಬೆಂಗಳೂರು ಹಿಂದೀ ಪ್ರಚಾರ ಸಭೆಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ಈ ಸಾಮಾಜಿಕ, ರಾಜಕೀಯ, ನೈತಿಕ ಚಟುವಟಿಕೆಗಳ ಜೊತೆಗೆ ತಮ್ಮ ವಕೀಲವೃತಿಯನ್ನು ಚೆನ್ನಾಗಿ ಕರಗತ ಮಾಡಿಕೊಂಡು ಕಾನೂನುಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿದರು.

1936ರಲ್ಲಿ ವಕೀಲವೃತ್ತಿಯನ್ನು ಬಿಟ್ಟು, ದೇಶಸೇವೆಗಾಗಿ ತಮ್ಮ ಇಡೀ ವೇಳೆಯನ್ನೆಲ್ಲ ಸ್ವಾತಂತ್ರ್ಯ ಸಂಗಾಮದಲ್ಲಿ ನಿರತವಾಗಿದ್ದ ಕಾಂಗ್ರೆಸ್‌ನ ದುಡಿತಕ್ಕೆ ಮೀಸಲಾಗಿಟ್ಟರು. ಆಗ ಬೆಂಗಳೂರು ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಿ ಮುಂದೆ ಹತ್ತು ವರ್ಷಗಳ ಕಾಲ ಆ ಸ್ಥಾನದಲ್ಲಿ ದುಡಿದರು. ಮೈಸೂರು ರಾಜ್ಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ (ಸಂಸತ್), ಉಪಸಮಿತಿಗಳಲ್ಲಿ ಕೆಲಸಮಾಡಿದರು.

1940ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿ ಆರಿಸಿಬಂದರಲ್ಲದೆ ಆ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ 1944ರವರೆಗೆ ಸೇವೆ ಸಲ್ಲಿಸಿದರು. ಈ ಮಧ್ಯೆ 1942ರಲ್ಲಿ ಬೆಂಗಳೂರು ಪುರಸಭೆಯ ಅಧ್ಯಕ್ಷರಾಗಿದ್ದರು. 1944–49ರಲ್ಲಿ ಕಾಂಗ್ರೆಸ್‌ನ ಉಪನಾಯಕರಾಗಿ ಮೈಸೂರು ಪ್ರತಿನಿಧಿಸಭೆಯಲ್ಲಿ ಕೆಲಸ ಮಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುತ್ತಿದ್ದುದರಿಂದ ಇವರು ಜೈಲುವಾಸವನ್ನು ಅನುಭವಿಸಿದರು. ಪ್ರಜಾಸರ್ಕಾರಕ್ಕಾಗಿ 1947ರಲ್ಲಿ ಅರಮನೆ ಸತ್ಯಾಗ್ರಹವನ್ನು ಆರಂಭಿಸಿದರು. 1948ರಲ್ಲಿ ಸಂವಿಧಾನರಚನಾ ಸಮಿತಿಗೆ ಚುನಾಯಿಸಲ್ಪಟ್ಟು ಅನೇಕ ಸಮಿತಿಗಳಲ್ಲಿ ಕೆಲಸ ಮಾಡಿದರು. ಸಂವಿಧಾನದ ಕರಡುಪ್ರತಿಯ ಸಿದ್ಧತೆಗಳಲ್ಲಿ ಇವರ ಪಾತ್ರ ಸಾಕಷ್ಟು ಮಹತ್ತ್ವಪೂರ್ಣವಾದುದು. ಇಂಟರ್ ಪಾರ್ಲಿಮೆಂಟರಿ ಯೂನಿಯನ್ನಿನ (ಸಂಸತ್ ಸಂಘದ) ಸಮ್ಮೇಳನಗಳಿಗೆ

ಭಾರತ ಸರ್ಕಾರದ ಪ್ರತಿನಿಧಿಯಾಗಿ 1949ರಲ್ಲಿ ಸ್ಟಾಕ್‌ಹೋಮ್, 1950ರಲ್ಲಿ ಡಬ್ಲಿನ್ ಮತ್ತು 1962ರಲ್ಲಿ ಬ್ರೆಜಿಲ್‌ಗೆ ತೆರಳಿದ್ದರು. 1958ರಲ್ಲಿ ರಷ್ಯಕ್ಕೆ ಹೋಗಿ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. 1966ರಲ್ಲಿ ಇವರು ಯುರೋಪ್, ಇಂಗ್ಲೆಂಡ್, ಕೆನಡ, ಅಮೆರಿಕ ದೇಶಗಳಲ್ಲಿ ಪ್ರವಾಸ ಮಾಡಿಬಂದರು.

1950–52ರಲ್ಲಿ ಮೈಸೂರು ಕಾಂಗ್ರೆಸ್‌ನ ಪ್ರಾದೇಶಿಕ ಸಮಿತಿಯ ಅಧ್ಯಕ್ಷರಾದರು. 1952ರಲ್ಲಿ ಮೈಸೂರು ವಿಧಾನಸಭೆಗೆ ಆಯ್ಕೆಯಾಗಿ, ಅಲ್ಲಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತರಾದರು. 1952ರ ಮಾರ್ಚ್ 30ರಂದು ಮೊಟ್ಟಮೊದಲಿನ ಚುನಾಯಿತ ಮುಖ್ಯ ಮಂತ್ರಿಯಾಗಿ ಅಧಿಕಾರಕ್ಕೆ ಬಂದರು. 1956ರ ಆಗಸ್ಟ್ ವರೆಗೂ ಅಧಿಕಾರ ವಹಿಸಿದ್ದರು. ತಮ್ಮ ಆಡಳಿತ ಕಾಲದಲ್ಲಿ ಮೈಸೂರು ರಾಜ್ಯದ ಆರ್ಥಿಕ ಸಾಂಸ್ಕೃತಿಕ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಹಾಕಿದ್ದಲ್ಲದೆ ಹಲವನ್ನು ಕಾರ್ಯಗತ ಮಾಡಿದರು. ಕೋಲಾರ ಚಿನ್ನದಗಣಿಗಳ ರಾಷ್ಟ್ರೀಕರಣ ಮತ್ತು ಪ್ರಾಥಮಿಕ ಶಾಲಾ ಹಂತದಿಂದ ಕಾಲೇಜು ಮಟ್ಟದವರೆಗೂ ವಿದ್ಯಾಸುಧಾರಣೆಗೆ ಪ್ರಯತ್ನಿಸಿದ್ದು ಇವರ ಮುಖ್ಯ ಸಾಧನೆಗಳು. ರಾಜ್ಯಾಂಗದ 40ನೆಯ ಅನುಚ್ಛೇದದ ಪ್ರಕಾರ ಎಲ್ಲ ಮಕ್ಕಳಿಗೂ 14 ವರ್ಷದ ತನಕ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಲು ವಿದ್ಯಾದಾನ, ಭೂದಾನ ಎಂಬ ಎರಡು ಚಟುವಟಿಕೆಗಳನ್ನು ಆರಂಭಿಸಿದರು. ಈ ಕಾರ್ಯಗಳು ಮೈಸೂರು ರಾಜ್ಯದಲ್ಲೇ ಅಲ್ಲದೆ ಕೇಂದ್ರದಿಂದಲೂ ಮೆಚ್ಚುಗೆಯನ್ನು ಪಡೆದುವು. ಕನ್ನಡ ವಿಶ್ವಕೋಶದ ಯೋಜನೆ ರೂಪಗೊಂಡಿದ್ದು ಇವರು ಮುಖ್ಯಮಂತ್ರಿಗಳಾಗಿದ್ದಾಗಲೇ. ಇವರು ಸ್ಥಾಪಿಸಿದ ಸಂಸ್ಕೃತಿ ಪ್ರಚಾರ ವಿಭಾಗ ದೇಶದಲ್ಲೇ ಹೊಸ ರೀತಿಯದು. ಗ್ರಾಮೀಣ ಪ್ರದೇಶಗಳಲ್ಲಿ ಸಂಸ್ಕೃತಿ ಪ್ರಚಾರ ಮಂದಿರಗಳನ್ನು ಕಟ್ಟುವ ಯೋಜನೆಯ ಶಿಲ್ಪಿ ಇವರು. ಕನ್ನಡದ ಪ್ರಸಿದ್ಧ ಕೃತಿಗಳನ್ನು ಅಗ್ಗದ ಬೆಲೆಗೆ ಜನಸಾಮಾನ್ಯರಿಗೆ ದೊರಕುವಂತೆ ಸರ್ಕಾರದಿಂದ ಸಹಾಯಧನ ದೊರಕಿಸಿಕೊಟ್ಟು ಕನ್ನಡ ಸಾಹಿತ್ಯ ಪ್ರಚಾರಕ್ಕೆ ಹಾಗೂ ಬೆಳವಣಿಗೆಗೆ ನೆರವಾದರು. ಈ ಯೋಜನೆಯಲ್ಲಿ ಪ್ರಕಟವಾದ ಜೈಮಿನಿ ಭಾರತ, ಗದುಗಿನ ಭಾರತ ಮತ್ತು ಹರಿಶ್ಚಂದ್ರಕಾವ್ಯಗಳ ಲಕ್ಷಗಟ್ಟಲೆ ಪ್ರತಿಗಳು ಮಾರಾಟವಾದುವು. ಮೈಸೂರು ರಾಜ್ಯದ ವಿಧಾನಸಭೆಯ ಅಧಿವೇಶನಗಳಿಗೆ ಯೋಗ್ಯವಾದ ಕಟ್ಟಡವಿಲ್ಲದುದನ್ನು ಮನಗಂಡು ರಾಷ್ಟ್ರ ಪ್ರಸಿದ್ಧವಾದ ವಿಧಾನಸೌಧವನ್ನು ಬಹಳ ಆಸಕ್ತಿವಹಿಸಿ ಬೆಂಗಳೂರಿನಲ್ಲಿ ನಿರ್ಮಿಸಿದವರೂ ಇವರೇ. ದಕ್ಷ ಆಡಳಿತ ಮತ್ತು ತ್ವರಿತ ತೀರ್ಮಾನಗಳಿಗೆ ಇವರು ಹೆಸರಾಗಿದ್ದರು.

1955ರ ನವೆಂಬರ್–ಡಿಸೆಂಬರ್, 1956 ಮಾರ್ಚ್–ಏಪ್ರಿಲ್‌ನಲ್ಲಿ ಮೈಸೂರು ವಿಧಾನಸಭೆಗಳಲ್ಲಿ ಮತ್ತು ಪ್ರಾಂತ ಪುನರ್‌ವಿಂಗಡಣ ಸಮಿತಿಯಲ್ಲಿ ಚರ್ಚಿಸಿ ಒಮ್ಮತವನ್ನು ಸಂಗ್ರಹಿಸಿ ಮೈಸೂರು ಕರ್ನಾಟಕವಾಗಲು ತಳಹದಿ ಹಾಕಿದರು. ಬಳ್ಳಾರಿ ಜಿಲ್ಲೆ ಇವರ ಕಾಲದಲ್ಲೇ ಹಳೆಯ ಮೈಸೂರು ರಾಜ್ಯದೊಂದಿಗೆ ವಿಲೀನವಾಯಿತು. 1957ರಲ್ಲಿ ಮತ್ತೆ ಮೈಸೂರು ವಿಧಾನಸಭೆಯ ಸದಸ್ಯರಾದರು. 1962ರಲ್ಲಿ ಲೋಕಸಭೆಗೆ ಚುನಾಯಿತರಾದರು. 1966ರಲ್ಲಿ ಒಟ್ಟಾವದಲ್ಲಿ ನಡೆದ ಕಾಮನ್‌ವೆಲ್ತ್ ಸಂಸತ್ ಸಮ್ಮೇಳನದಲ್ಲಿ ಭಾರತ ತಂಡದ ನಾಯಕರಾಗಿ ಭಾಗವಹಿಸಿದ್ದರು. 1967–68ರಲ್ಲಿ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಕೆಲಸ ಮಾಡಿದರು. ಇದೇ ಅವಧಿಯಲ್ಲಿ ಪಂಜಾಬ್ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಅಮೋಘ ಸೇವೆಸಲ್ಲಿಸಿದರು. ಇದಾದಮೇಲೆ ಅಖಿಲ ಭಾರತ ಆಡಳಿತ ಸುಧಾರಣಾ ಸಮಿತಿಯ ಉಪಾಧ್ಯಕ್ಷರಾಗಿ ಅನಂತರ ಅಧ್ಯಕ್ಷರಾಗಿ (1969) ಸುಮಾರು ಭಾರತ ಸಂವಿಧಾನದಷ್ಟೇ ಸುಧಾರಣೆಗಳನ್ನು ಬೃಹತ್ ವರದಿಯ ಮೂಲಕ ಒಪ್ಪಿಸಿದರು. ಇವರು ಮಾಡಿದ ಶಿಫಾರಸುಗಳು ಅನೇಕ ಕ್ಷೇತ್ರಗಳಲ್ಲಿ ಅನುಷ್ಠಾನಕ್ಕೆ ಬಂದಿವೆ.

ಕಾಂಗ್ರೆಸ್ ಪಕ್ಷ ಎರಡಾದಮೇಲೆ ಇವರು ಇಂದಿರಾಗಾಂಧಿಯವರ ನೇತೃತ್ವದಲ್ಲಿನ ಆಡಳಿತ ಪಕ್ಷದಲ್ಲಿ ನಿಂತು ಅವರ ಸಂಪುಟದಲ್ಲಿ ನ್ಯಾಯ ಮತ್ತು ಸಮಾಜಕಲ್ಯಾಣದ ಮಂತ್ರಿಯಾಗಿ ಕೆಲಸಮಾಡಿದರು (1970–71). 1971ರ ಚುನಾವಣೆಯಲ್ಲಿ ಮತ್ತೆ ಲೋಕಸಭೆಗೆ ಆರಿಸಿ ಬಂದು ಕೇಂದ್ರದ ರೈಲ್ವೆಮಂತ್ರಿಯಾಗಿ ಸುಮಾರು ಒಂದು ವರ್ಷಸೇವೆ ಸಲ್ಲಿಸಿದರು. ಅನಂತರ ರಾಜೀನಾಮೆ ನೀಡಿ ಹೊರಬಂದರು.

ರಾಜಕೀಯ ಚಟುವಟಿಕೆಗಳಿಂದ ಸಂಪೂರ್ಣ ಮುಕ್ತರಾಗಿ ಕೆಲಕಾಲವಿದ್ದ ಇವರು 1977ರಲ್ಲಿ ಆಡಳಿತ ಕಾಂಗ್ರೆಸ್ ಪಕ್ಷದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಪರಾಜಿತರಾದರು. ಅನಂತರ ಕಾಂಗ್ರೆಸ್ ಪಕ್ಷದಿಂದ ಹೊರಬಂದು ತಮ್ಮದೇ ಆದ ಸುರಾಜ್ಯ ಪಕ್ಷ ಎಂಬ ಹೊಸ ಪಕ್ಷವೊಂದನ್ನು ಕಟ್ಟಿದರು. ರಾಜಕೀಯ ಹೊಲಸನ್ನು ನಿರ್ಮೂಲನಮಾಡುವ ಧ್ಯೇಯವಿಟ್ಟುಕೊಂಡು ಸ್ಥಾಪಿತವಾದ ಈ ಪಕ್ಷದ ಅಧ್ಯಕ್ಷರೂ ಇವರೆ. ಮದ್ದೂರು ಬಳಿ ಶಿವಪುರದಲ್ಲಿ ವೀರಸೌಧ ನಿರ್ಮಾಣದ ಕರ್ತೃ ಇವರೆ. ರಾಜ್ಯಪಾಲ ಹುದ್ದೆಗೆ ಆಹ್ವಾನ ಬಂದರೂ ಅದನ್ನು ಒಪ್ಪಿಕೊಳ್ಳಲಿಲ್ಲ. ಉತ್ತಮ ವಾಗ್ಮಿ, ದಕ್ಷ ಆಡಳಿತಗಾರ ಎಂದು ಹೆಸರುಗಳಿಸಿದ್ದ ಇವರು ಅನೇಕ ಸರ್ಕಾರಿ ಹಾಗೂ ಸಾರ್ವಜನಿಕ ಸಂಘಸಂಸ್ಥೆಗಳೊಡನೆ ಸಂಪರ್ಕವಿಟ್ಟುಕೊಂಡಿದ್ದರು. ಇವರು 1980ರಲ್ಲಿ ನಿಧನಹೊಂದಿದರು. (ಎಚ್.ಎಚ್.ಎ.)

**ಹನುಮಂತರಾವ್, ಕಂದಗಲ್:** 1895–1966. ಕನ್ನಡ ವೃತ್ತಿರಂಗ ಭೂಮಿಯ ಹೆಸರಾಂತ ನಾಟಕಕಾರ. ವೃತ್ತಿರಂಗಭೂಮಿಯ ಅಭಿವೃದ್ಧಿಗಾಗಿ ದುಡಿದು ಉತ್ತರ ಕರ್ನಾಟಕ ಭಾಗದಲ್ಲಿ ಕರ್ನಾಟಕದ ಷೇಕ್ಸ್‌ಪಿಯರ್ ಎಂದು ಖ್ಯಾತರಾದವರು. ಇವರು 1985ರಲ್ಲಿ ಕಂದಗಲ್ ಗ್ರಾಮದಲ್ಲಿ ಜನಿಸಿದರು. ಬಿಜಾಪುರದ ಸರ್ಕಾರಿ ಶಾಲೆಯಲ್ಲಿ ಮಾಧ್ಯಮಿಕ ತರಗತಿವರೆಗೆ ಅಭ್ಯಾಸ ಮಾಡಿದ ಅನಂತರ ಇವರು ಪುಣೆಯ ಕಾಲೇಜುಗಳಲ್ಲಿ ಓದಿದರು. ಆಂಗ್ಲ ಭಾಷೆಯಲ್ಲಿ ಪರಿಣತಿ ಪಡೆದರು. ಪುಣೆಯಲ್ಲಿ ಮಿಲಿಟರಿ ಅಕೌಂಟ್ಸ್ ಅಫೀಸಿನಲ್ಲಿ ಕೆಲಸಕ್ಕೆ ಸೇರಿದರು. ಕೆಲಕಾಲ ಕೆಲಸ ಮಾಡಿ ಅನಂತರ ನೌಕರಿಯನ್ನು ತೊರೆದು (1924–25) ತಮ್ಮ ಹೆಂಡತಿ ಅಂಬುಜಾ ಅವರ ತೌರೂರಾದ ಗುಳೇದಗುಡ್ಡಕ್ಕೆ ತೆರಳಿದರು. ಅಲ್ಲಿಯೇ ಇವರ ಲಲಿತಕಲಾ ನಾಟ್ಯ ಸಂಘ ಸ್ಥಾಪನೆಯಾದದ್ದು. ಸಂಧ್ಯಾರಾಗ ಎಂಬ ಸಾಮಾಜಿಕ ನಾಟಕವನ್ನು ರಚಿಸಿ ರಂಗಪ್ರಯೋಗ ನಡೆಸಿದರು. ಯಾವುದೋ ಸಾಲದ ವಿಚಾರದಲ್ಲಿ ಜೈಲುವಾಸ ಅನುಭವಿಸಿದರು (1939–40). ಈ ಅವಧಿಯಲ್ಲಿ ಬಡತನ ಭೂತ ಎಂಬ ನಾಟಕ ರಚಿಸಿದರು. ಅನಂತರ ಈ ನಾಟಕ ಮಿತ್ರಮಂಡಳಿಯ ಮುಖಾಂತರ ಹುಬ್ಬಳ್ಳಿಯಲ್ಲಿ ರಂಗ ಪ್ರಯೋಗಗೊಂಡಿತು. 1945ರಲ್ಲಿ ಗುಳೇದಗುಡ್ಡದಲ್ಲಿ ಕೊಪರ್ಡೆ ಅವರ ಮುಖಾಂತರ ರಾಜಕಮಲ ನಾಟ್ಯಸಂಘ ಸ್ಥಾಪಿಸಿದರು. 1966ರಲ್ಲಿ ಕಿತ್ತೂರ ಚೆನ್ನಮ್ಮ ನಾಟಕ ರಚಿಸಿದರು.

ಗದುಗಿನ 'ವಾಣೀವಿಲಾಸ ನಾಟಕ ಮಂಡಳಿ' ಕಂಪನಿಯ ಮಾಲೀಕ ಐರಾಸಿ ಭರಮಪ್ಪನವರು ಹನುಮಂತರಾಯರನ್ನು ಒಲಿಸಿ ತಮ್ಮ ಕಂಪನಿಗೆ ಕರೆಸಿಕೊಂಡು ಅಲ್ಲಿನ ನಟರಿಗೆ ಇವರಿಂದ ಅಭಿನಯವನ್ನು ಹೇಳಿಸಿಕೊಟ್ಟರು. ಇವರು ಬರೆದ ಬೆಳ್ಳಿ ಚುಕ್ಕಿ, ಮಾತಂಗಕನ್ಯಾ ನಾಟಕಗಳು ಅಪಾರ ಜನಪ್ರಿಯತೆ ಗಳಿಸಿದವು. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ವರಪ್ರದಾನ ಎಂಬ ನಾಟಕವನ್ನು ಬರೆಯಿಸಿದರು. ಈ ನಾಟಕದ ಪ್ರದರ್ಶನಗಳು ಬಹಳ ತೀವ್ರದಲ್ಲಿ ಜನಮನವನ್ನು ಗೆದ್ದುಕೊಂಡವು. ನಾಟಕದೊಳಗಿನ ಅತ್ಯಂತ ಮಾರ್ಮಿಕವಾದ ಸಂಭಾಷಣೆಗಳು ರಾಷ್ಟ್ರೀಯ ಆಂದೋಲ

ನಕ್ಕೆ ತನ್ನದೇ ಆದ ಸಮಯಸ್ಫೂರ್ತಿಯನ್ನು ಇತ್ತವು ಎಂದು ತಿಳಿದು ಬರುತ್ತದೆ. ಅ.ನ. ಕೃಷ್ಣರಾಯರಿಂದ ಈ ನಾಟಕ ಮತ್ತು ಇದರ ಪ್ರದರ್ಶನ ಪ್ರಶಂಸೆ ಪಡೆಯಿತು.

ಆ ಕಾಲದಲ್ಲಿ ಹೆಚ್ಚಾಗಿ ಪೌರಾಣಿಕ ನಾಟಕಗಳನ್ನು ಆಡುತ್ತಿದ್ದರು. ಅಲ್ಲದೆ, ನಾಟಕ ಮಂಡಳಿಯವರ ಅಪೇಕ್ಷೆಯ ಮೇರೆಗೆ ಮತ್ತು ಆ ಕಾಲದ ರಂಗಭೂಮಿಯ ನಟರಿಗಾಗಿಯೇ ನಾಟಕಗಳು ರಚನೆಯಾಗುತ್ತಿದ್ದವು. ಅಂಥ ಹೊತ್ತಿನಲ್ಲಿ ಇವರು ಹಂದಿಗನೂರು ಸಿದ್ಧರಾಮಪ್ಪನವರಿಗಾಗಿ ಕುರುಕ್ಷೇತ್ರ, ಸತ್ಯ ಹರಿಶ್ಚಂದ್ರ ನಾಟಕಗಳನ್ನೂ ದುರ್ಗಾದಾಸರಿಗಾಗಿ ಚಿತ್ರಾಂಗದಾ ನಾಟಕವನ್ನೂ ಸುಭದ್ರಮ್ಮ ಮನ್ಸೂರರಿಗಾಗಿ ರಕ್ತರಾತ್ರಿ ಎಂಬ ನಾಟಕವನ್ನೂ ಬರೆದರೆಂದು ಪ್ರತೀತಿ. ಸಂಸ್ಕೃತದ ಪುರಾಣ ನಾಟಕಗಳ ದಟ್ಟ ಪ್ರಭಾವದ ಜೊತೆಗೆ

ಇಂಗ್ಲಿಷಿನ ನಾಟಕಗಳ ವಿದ್ವದ್ವಿಲಾಸವೂ ಕನ್ನಡ ನಾಟಕಗಳಲ್ಲಿ ಕೂಡಿ ರಂಗಮಂಚದಲ್ಲಿ ಮೆರೆಯುವಂತೆ, ಮಿಂಚುವಂತೆ ಮಾಡಿದವರಲ್ಲಿ ಇವರು ಅಗ್ರಗಣ್ಯರು. ಇವರ ನಾಟಕಗಳಲ್ಲಿ ಸಂಸ್ಕೃತದ ಮಾಧುರ್ಯ, ಇಂಗ್ಲಿಷಿನ ಸನ್ನಿವೇಶ ಚಾತುರ್ಯ, ಮರಾಠಿಯ ಸಂಗೀತ ರಂಗದ ರಾಗರಾಗಿಣಿಯರು ಮತ್ತು ಬಂಗಾಲದ ಬಹುಸುಂದರ ಪದಪುಂಜಗಳು ಮೇಳೈಸಿ ಮೆರೆದವು.

ಬಸವರಾಜ ಮನ್ಸೂರ, ಮಲ್ಲಿಕಾರ್ಜುನ ಮನ್ಸೂರ, ಗೋಹರ್ ಜಾನ್ ಕರ್ನಾಟಕೀ, ಗೋಪಾಳರಾವ್ ಕುಂಬಾರ್, ಮಡಿವಾಳಯ್ಯ ಸ್ವಾಮಿ ಶಮಿಕೇರಿ (ಹಾಸ್ಯನಟ), ಮಾನಪ್ಪ ಮಂಕಣ, ಹಂದಿಗನೂರ ಸಿದ್ಧರಾಮಪ್ಪ, ವೀರಪ್ಪ ಹಕ್ಕಂಡಿ, ವಾಣಗಿ ಬಾಳಪ್ಪ, ದುರ್ಗಾದಾಸ, ಚನ್ನಬಸಪ್ಪ ಕವಲಿ, ಸುಭದ್ರಮ್ಮ ಮನ್ಸೂರ, ಪುಷ್ಪಮಾಲಾ ಅಣ್ಣಿಗೇರಿ, ಅದೃಶಪ್ಪ ಮಾನಿ, ವಸಂತ ಕುಲಕರ್ಣಿ, ಮಧ್ವರಾಜ ಉಮರ್ಜಿ ಮೊದಲಾದವರ ಸ್ನೇಹ ಸಂಪರ್ಕಗಳು ಇವರಿಗೆ ಒದಗಿದ್ದವು.

ಇವರು 1966 ಸೆಪ್ಟೆಂಬರ್ 13ರಂದು ನಿಧನರಾದರು. (ಎಸ್.ಜಿಎ.)

**ಹನುಮಂತರಾಯ, ಗೋರೆಬಾಳ:** 1893-1969. ಹರಿದಾಸ ಸಾಹಿತ್ಯ ಸಂಗ್ರಹ, ಸಂಸ್ಕರಣ, ಸಂಕಲನ, ಶೋಧನ, ಪ್ರಕಟಣ ಹಾಗೂ ಪ್ರಸರಣಕ್ಕಾಗಿ ತನ್ನ ಬದುಕನ್ನೇ ಮುಡಿಪಾಗಿಟ್ಟ ನುಡಿ ಸೇವಕರು. ರಾಯಚೂರು ಜಿಲ್ಲೆ ಲಿಂಗಸುಗೂರಿನಲ್ಲಿ 'ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲಿ'ಯನ್ನು ಸ್ಥಾಪಿಸಿ ಅದರ ಮೂಲಕ ಮೌಖಿಕ ಪರಂಪರೆಯಲ್ಲಿದ್ದ ಕನ್ನಡ ಹರಿದಾಸ ಸಾಹಿತ್ಯವನ್ನು ಅಕ್ಷರ ಮಾಧ್ಯಮದಲ್ಲಿ ದಾಖಲಿಸಿ ಪ್ರಕಟಿಸಿದರು. ಇವರು ರಾಯಚೂರು ಜಿಲ್ಲೆ ಲಿಂಗಸುಗೂರಿನ ಗೋರೆಬಾಳ ಗ್ರಾಮದಲ್ಲಿ 1893 ಜೂನ್‌ನಲ್ಲಿ ಜನಿಸಿದರು. ಇವರ ತಂದೆ ವೆಂಕಣ್ಣಯ್ಯನವರು ಕುಲಕರ್ಣಿಗಳಾಗಿದ್ದರು. ಅವರು ಗುರು ಶ್ರೀಶಪ್ರಾಣೇಶ ವಿಠಲ ಎಂಬ ಅಂಕಿತದಲ್ಲಿ ಅನೇಕ ಕೀರ್ತನೆ, ಸುಳಾದಿಗಳನ್ನು ರಚಿಸಿದ್ದರು. ಹನುಮಂತರಾಯರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದವರೆಂದರೆ ಸಂತಿಕೆ ಗ್ರಾಮದ ಸ್ವಾಮಿರಾಯರು. ಅವರು ಕನ್ನಡ, ಉರ್ದು, ಪಾರಸಿ, ಮರಾಠಿ ಭಾಷೆಗಳಲ್ಲಿ ಪರಿಣತರಾಗಿದ್ದರು. ಹನುಮಂತರಾಯರು ಕೋಸಗಿ ಸ್ವಾಮಿ ರಾಮಾಚಾರ್ಯರಿಂದ ಸುಂದರ ವಿಠಲ ಎಂಬ ಅಂಕಿತ ಪಡೆದು ದೀಕ್ಷೆ ಸ್ವೀಕರಿಸಿದರು. ಇವರು ವಿದ್ಯಾಭ್ಯಾಸ ಮಾಡುತ್ತಿದ್ದ ರಾಮಣ್ಣನವರ ಮನೆಯ ಒಂದು ಭಾಗದಲ್ಲಿ ಜಗನ್ನಾಥ ದಾಸರ ವಿದ್ಯಾಗುರುಗಳಾಗಿದ್ದ ವರದೇಂದ್ರರ ಮೃತ್ತಿಕಾ ವೃಂದಾವನವಿತ್ತು. ಅಲ್ಲಿ ನಿತ್ಯ ನಡೆಯುತ್ತಿದ್ದ ಪುರಾಣ ಪ್ರವಚನ-ಭಜನೆ ಇವರ ಮನಸ್ಸಿನಲ್ಲಿ ವಿಶೇಷ ಪರಿಣಾಮ ಬೀರಿತು. ನಡುಹರೆಯದಲ್ಲೇ ಕೈಹಿಡಿದ ಹೆಂಡತಿಯ ಅಕಾಲ ಮರಣ, ಮೂವರು ಹೆಣ್ಣು ಮಕ್ಕಳ ತಾಯಾಗಿದ್ದ ಹಿರಿಯ ಮಗಳ ಸಾವು ಇವರ ಮನಸ್ಸಿನಲ್ಲಿ ಗಾಢ ವಿರಕ್ತಿಯನ್ನು ಮೂಡಿಸಿದವು. ವಕೀಲ ವೃತ್ತಿಯಲ್ಲಿ ನಿರಾಸಕ್ತಿ ಬಂದಿತು. ಹರಿದಾಸ ಸಾಹಿತ್ಯ ಸಂಗ್ರಹ-ಪ್ರಕಟಣೆ-ಮಾರಾಟಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು.

ಇವರು ದಾಸರ ಕೀರ್ತನೆಗಳಿಗಾಗಿ ಉತ್ತರ ಕರ್ನಾಟಕದಾದ್ಯಂತ ತಿರುಗಾಡಿದರು. ಚಿಪ್ಪಗಿರಿ, ಮಾನ್ವಿ, ಮೈಸೂರು ಕಡೆ ಸಂಚರಿಸಿ ಹಸ್ತಪ್ರತಿ ಸಂಗ್ರಹಿಸಿದರು. ಐದು ವರ್ಷಗಳ ಸತತ ಹಸ್ತಪ್ರತಿ ಸಂಗ್ರಹದ ಬಳಿಕ ದೊರೆತ ಸಾಮಗ್ರಿಯನ್ನು ಶಾಸ್ತ್ರೀಯವಾಗಿ ವಿಂಗಡಿಸಿದರು. ಸು. 4,500 ಕೀರ್ತನೆ, 1,000 ಸುಳಾದಿ, 700 ಉಗಾಭೋಗ ಪ್ರಕಟಣೆಗೆ ಸಿದ್ಧವಾದವು. ಅಂದಿನ ಕಾಲದಲ್ಲಿ ದಾಸ ಸಾಹಿತ್ಯವನ್ನು ಮುದ್ರಿಸಿ ಅದು ಎಲ್ಲರ ಕೈಗೆ ಸೇರುವಂತಾದರೆ ಅದರ ಪಾವಿತ್ರ್ಯ ಕೆಡುತ್ತದೆ ಎನ್ನುವ ತಪ್ಪುಕಲ್ಪನೆ ಜನರಲ್ಲಿತ್ತು. ಇವರು ಮೊದಲಿಗೆ ಪ್ರಾಣೇಶದಾಸರ ದೇವರನಾಮಗಳನ್ನು ತಾರತಮ್ಯಾನುಸಾರ ವಿಂಗಡಿಸಿ ಹನ್ನೆರಡು ಸಂಚಿಕೆಗಳಲ್ಲಿ ಮುದ್ರಿಸಿದರು. ಮುಂದೆ ಮನೋಹರ ವಿಠಲರ, ಗುರು ಪ್ರಾಣೇಶದಾಸರ, ಶ್ರೀಶಪ್ರಾಣೇಶದಾಸರ, ಪ್ರಾಣೇಶದಾಸರ ಕೀರ್ತನೆಗಳನ್ನು, ವರದೇಶ ವಿಠಲರ ಸ್ವಪ್ನವೃಂದಾವನಾಖ್ಯಾನವನ್ನು ಪ್ರಕಟಿಸಿದರು.

ದಾಸರ ರಚನೆಗಳ ಪ್ರಕಟಣೆಗಳಿಗೆ ಆಸಕ್ತರಿಂದ ದೊರೆತ ಪ್ರೋತ್ಸಾಹದಿಂದ ಉಲ್ಲಸಿತರಾದ ಇವರು ಮುಂದೆ ಪುರಂದರದಾಸ, ಗೋಪಾಲದಾಸ, ಶ್ರೀಪಾದರಾಜ, ಮೊದಲಕಲ್ಲು ಶೇಷದಾಸ, ಜಗನ್ನಾಥದಾಸ, ಮೋಹನ ವಿಠಲ, ವೇಣುಗೋಪಾಲವಿಠಲ, ಹಯವದನ ವಿಠಲ, ವಾಸುದೇವ ವಿಠಲರ ರಚನೆಗಳನ್ನು ಸಂಗ್ರಹಿಸಿ ಶಾಸ್ತ್ರೀಯವಾದ ಪ್ರಸ್ತಾವನೆಯೊಂದಿಗೆ ಪ್ರಕಟಿಸಿ ದರು. ತಮ್ಮ ಬಹುತೇಕ ಭೂಮಿಕಾಣಿಗಳನ್ನು ಮಾರಿ ಪ್ರಕಟಣ ಕಾರ್ಯಕ್ಕೆಂದೇ ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಲ ಎಂಬ ಸಂಸ್ಥೆಯನ್ನು ಕಟ್ಟಿದರು. ವಿಜಯದಾಸರ ಎಲ್ಲ ಕೃತಿಗಳನ್ನು ಒಂಬತ್ತು ಸಂಪುಟಗಳಲ್ಲಿ ಪ್ರಕಟಿಸಿದುದು ಇವರ ಮಹತ್ವದ ಸಾಧನೆ. ದಾಸರ ಕೃತಿಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸುಳುಹುದೋರಿರುವ ಮಾಧ್ವ ಸಿದ್ಧಾಂತ ಕೃತಿಗಳಾದ ಪಂಚಭೇದ, ಸದಾಚಾರ, ಗದ್ಯ ಚಕ್ರಾಬ್ಜ ಮಂಡಲವೇ ಮುಂತಾದ ಕೃತಿಗಳನ್ನು ಪ್ರಕಟಿಸಿದರು. 1964ರಲ್ಲಿ ಇವರು ಪಂಚಟೀಕಾರತ್ನಗಳಿಂದೊಡಗೂಡಿದ ಜಗನ್ನಾಥದಾಸರ ಹರಿಕಥಾಮೃತಸಾರವನ್ನು ಆರು ಸಂಪುಟಗಳಲ್ಲಿ ಪ್ರಕಟಿಸಿದುದು ಇವರ ಮಹೋನ್ನತ ಬೌದ್ಧಿಕ ಸಾಹಸ. ಇದರ ಪ್ರಕಟಣೆಯ ಹೊತ್ತಿಗೆ ಇವರ ಕೈಬರಿದಾಗಿತ್ತು. ವಕೀಲ ವೃತ್ತಿಯನ್ನು ಕೈಬಿಟ್ಟ ಸಲುವಾಗಿ ಆದಾಯ ಮೂಲಕ್ಕೂ ತಡೆ ಬಂದಿತ್ತು. ಪ್ರಕಟಿತ ಗ್ರಂಥಗಳ ದೊಡ್ಡ ರಾಶಿಯೇ ಮನೆಯಲ್ಲಿತ್ತು. ಅವುಗಳನ್ನೆಲ್ಲ ಮೂಟೆಕಟ್ಟಿ ತಲೆಯ ಮೇಲೆ ಹೊತ್ತು ಊರೂರು ಅಲೆಯುತ್ತ ಕನ್ನಡಿಗರ ಮನೆಬಾಗಿಲಿಗೆ ಕೊಂಡೊಯ್ದು ಮಾರಾಟ ಮಾಡಿದರು.

ಗೋರೆಬಾಳ ಹನುಮಂತರಾಯರು ದಾಸರ ಕೀರ್ತನೆ, ಸುಳಾದಿ, ಉಗಾಭೋಗಗಳ ಸಂಗ್ರಹಕ್ಕೆ ಬರೆದ ಪ್ರಸ್ತಾವನೆ ಬರಿಯ ವಿವರಣಾತ್ಮಕವಾಗಿರಲಿಲ್ಲ. ವಾಮನಪುರಾಣ, ಪಾಂಚರಾತ್ರ, ವ್ಯಾಸತೀರ್ಥರ ಧ್ಯಾನಾನುಭವ, ರಾಘವೇಂದ್ರತೀರ್ಥರ ಭಗವದ್ಧ್ಯಾನ, ವ್ಯಾಸತತ್ತ್ವಜ್ಞರ ಮಾನಸಸ್ಮೃತಿ

ಮುಂತಾದ ಗ್ರಂಥಗಳು. ಮಾಧ್ವ ತತ್ತ್ವಸಿದ್ಧಾಂತಗಳಿಗೆ ಆಕರಗಳಾಗಿದ್ದವು. ಇವರು ಪ್ರಕಟಿಸಿದ ದಾಸಸಾಹಿತ್ಯದ ಕೃತಿಗಳಿಗೆ ಬರೆದ ಮುನ್ನುಡಿ, ಪ್ರಸ್ತಾವನೆ, ಪೀಠಿಕೆಗಳು ದಾಸರ ರಚನೆಗಳ ಸಾಂಸ್ಕೃತಿಕ, ಆಧ್ಯಾತ್ಮಿಕ ಮಹತ್ವವನ್ನೂ ಸಾಹಿತ್ಯಕ ಒಳನೋಟಗಳನ್ನೂ ಒಳಗೊಂಡಿವೆ. ಇವರು ಹಸ್ತಪ್ರತಿಗಳನ್ನು ಅತ್ಯಂತ ವೈಜ್ಞಾನಿಕ ಕ್ರಮದಲ್ಲಿ ಸಂಪಾದಿಸಿದರು. ಶ್ರೀ ಆದಿತ್ಯ ಪುರಾಣೋಕ್ತ ಶ್ರೀ ವೆಂಕಟೇಶ ಮಹಾತ್ಮ್ಯವನ್ನು ಇವರು ಕನ್ನಡದಲ್ಲಿ ಸುಳಾದಿ ರೂಪದಲ್ಲಿ ರಚಿಸಿದ್ದಾರೆ.

ಇವರು ಪತ್ರಿಕಾ ಸಂಪಾದಕರೂ ಆಗಿದ್ದರು. ದಾಸ ಸಾಹಿತ್ಯ, ಪ್ರಚಾರಕ್ಕಾಗಿ ಕರ್ನಾಟಕ ಹರಿದಾಸ ಸಾಹಿತ್ಯ ಎಂಬ ದ್ವೈಮಾಸಿಕ ಪತ್ರಿಕೆಯನ್ನು ಆರಂಭಿಸಿದರು (1957). ದಾಸಸಾಹಿತ್ಯದ ಸಂದೇಶವನ್ನು ಜನರಿಗೆ ನೇರವಾಗಿ ತಲುಪಿಸುವಲ್ಲಿ ಈ ಪತ್ರಿಕೆ ಬಹಳ ಪ್ರಯೋಜನಕಾರಿಯಾಗಿತ್ತು.

ಇವರು ಗಾಂಧೀಜಿಯವರ ಅಸಹಕಾರ ಚಳವಳಿಯಲ್ಲಿಯೂ ಪಾಲ್ಗೊಂಡಿದ್ದರು. ಲಿಂಗಸುಗೂರಿನಲ್ಲಿ ಹರಿಜನ ಬಾಲಕರಿಗಾಗಿ ಒಂದು ಶಾಲೆಯನ್ನು ತೆರೆದರು. ಸ್ವತಃ ಖಾದಿಧಾರಿಯಾಗಿದ್ದುದಲ್ಲದೆ ಖಾದಿ ಪ್ರಚಾರ ನಡೆಸಿದರು. ಮದ್ಯಪಾನ ವಿರೋಧಿ ಚಳವಳಿಯಲ್ಲಿ ಪಾಲ್ಗೊಂಡರು. ತಮ್ಮ ಜೀವಿತಾವಧಿಯಲ್ಲಿ ಸಂಗ್ರಹಿಸಿ ಪ್ರಕಟಣೆಯಾಗದೆ ಉಳಿದ ಹರಿದಾಸ ಸಾಹಿತ್ಯವನ್ನೆಲ್ಲ ಹದಿನೈದು ಸಂಪುಟಗಳಲ್ಲಿ ಬರೆಸಿ ರಟ್ಟುಕಟ್ಟಿಸಿ ವರದೇಂದ್ರ ಸಾಹಿತ್ಯ ಮಂಡಲಿಗೆ ಅರ್ಪಿಸಿದ್ದರು. ತಮ್ಮ ಅಳಿಯ ದಾಮೋದರರಾಯರ ಮನೆಯಲ್ಲಿ 1969ರಲ್ಲಿ ನಿಧನಹೊಂದಿದರು. **(ಎ.ವಿ.ಎನ್‌ಎ.)**

**ಹನುಮಂತರಾವ್, ಮಾಂಜರೇಕರ್:** 1903–86. ಸ್ವಾತಂತ್ರ್ಯ ಹೋರಾಟಗಾರ, ಆದರ್ಶ ಶಿಕ್ಷಕ, ಪತ್ರಕರ್ತ ಮತ್ತು ಲೇಖಕ. ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ನಂದನಗದ್ದೆಯಲ್ಲಿ 1903 ಸೆಪ್ಟೆಂಬರ್ 19ರಂದು ಜನಿಸಿದರು. ಕಾರವಾರದ ಸರ್ಕಾರಿ ಹೈಸ್ಕೂಲಿನಲ್ಲಿ ಮೆಟ್ರಿಕ್‌ನಲ್ಲಿ ಓದುತ್ತಿದ್ದಾಗ ಅಸಹಕಾರ ಚಳವಳಿಯಲ್ಲಿ ಪಾಲ್ಗೊಳ್ಳಲು ಶಾಲೆಯಿಂದ ಹೊರಬಿದ್ದರು (1921). ರಾಷ್ಟ್ರೀಯ ಚಳವಳಿಯ ಅಂಗವಾಗಿ ಆರಂಭವಾದ ರಾಷ್ಟ್ರೀಯ ವಿಶ್ವವಿದ್ಯಾಲಯ ಪುಣೆಯ ಟಿಳಕ ಮಹಾರಾಷ್ಟ್ರ ವಿದ್ಯಾಪೀಠದ ಪ್ರವೇಶ ಪರೀಕ್ಷೆಗೆ ಕುಳಿತು ಉತ್ತೀರ್ಣರಾದರು. ಮುಂದೆ ಕಾಲೇಜು ಶಿಕ್ಷಣಕ್ಕಾಗಿ ಟಿಳಕ ಮಹಾವಿದ್ಯಾಲಯವನ್ನು ಸೇರಿದರು. ರಾಷ್ಟ್ರೀಯ ಮನೋವೃತ್ತಿ ಬೆಳೆಸುವ ಅಲ್ಲಿನ ಶಿಕ್ಷಣ ಇವರ ಮೇಲೆ ಗಾಢ ಪ್ರಭಾವ ಬೀರಿತು. ಮಹಾರಾಷ್ಟ್ರೀಯರಿಗೆ ಇರುವ ಮರಾಠಿ ಪ್ರೇಮವನ್ನು ನೋಡಿ ಕನ್ನಡದ ಪ್ರೇಮ ಬೆಳೆಸಿಕೊಂಡು ಕಟ್ಟಾ ಕನ್ನಡಾಭಿಮಾನಿಯಾದರು.

ಪುಣೆಯ ಕಾಲೇಜಿನಲ್ಲಿ ಕನ್ನಡದ ವಿದ್ಯಾರ್ಥಿಗಳನ್ನು ಸಂಘಟಿಸಿ ಕರ್ನಾಟಕ ಸಂಘ ಸ್ಥಾಪಿಸಿ ಅದರ ಕಾರ್ಯದರ್ಶಿಯಾಗಿ ಒಂದು ವರ್ಷ ಕಾಲ ದುಡಿದರು. ಪುಣೆಯಲ್ಲಿ ಕನ್ನಡದ ಬಾವುಟ ಎತ್ತಿಹಿಡಿದರು. ಬಿ.ಎ. ಪದವೀಧರರಾಗಿ ಊರಿಗೆ ಬಂದರು. ಪುಣೆಯಲ್ಲಿ ಲೋಕಮಾನ್ಯ ಟಿಳಕರು ಸ್ಥಾಪಿಸಿದ ನ್ಯೂ ಇಂಗ್ಲಿಷ್ ಸ್ಕೂಲ್, ಫರ್ಗ್ಯುಸನ್ ಕಾಲೇಜಗಳ ಮಾದರಿಯಲ್ಲಿ ಸ್ವಂತ ಊರಿನಲ್ಲಿ ಒಂದು ಹೈಸ್ಕೂಲು ಪ್ರಾರಂಭಿಸಲು ಸಿದ್ಧತೆ ನಡೆಸಿದರು. ಮುಕುಂದ ಬಾಬುರಾವ್ ನಾಯಕರೊಂದಿಗೆ ಸೇರಿ ಬಾಡದಲ್ಲಿ ನ್ಯೂ ಇಂಗ್ಲಿಷ್ ಸ್ಕೂಲ್ ಪ್ರೌಢಶಾಲೆ ಆರಂಭಿಸಿದರು (1925); ಶಿಕ್ಷಕರಾಗಿಯೂ ದುಡಿದರು.

ಇವರು ಗಾಂಧೀಜಿಯವರ ಶಿಕ್ಷಣ ಪ್ರಣಾಲಿ– ಮೂಲ ಶಿಕ್ಷಣದ ಕುರಿತು ಆಳವಾದ ಅಭ್ಯಾಸ ಮಾಡಿದ್ದರು. ಕೇವಲ ಬಡಿಗತನ ಕೃಷಿ ನೂಲುವುದು, ನೇಯುವುದಕ್ಕಷ್ಟೇ ಪ್ರಾಮುಖ್ಯ ಕೊಡದೆ ಕರಾವಳಿಯ ಪ್ರಮುಖ ಉದ್ಯೋಗ ಮೀನುಗಾರಿಕೆಯನ್ನೂ ಶಿಕ್ಷಣ ಕ್ರಮದಲ್ಲಿ ಸೇರಿಸಬೇಕೆಂದು ಹರಿಜನ ಪತ್ರಿಕೆಯಲ್ಲಿ ಬರೆದರು.

ಅಸಹಕಾರ ಆಂದೋಲನದಲ್ಲಿ ದುಮುಕಿದ ಬಳಿಕ (1921) ತಮ್ಮ ಊರು ಮತ್ತು ಸುತ್ತಲಿನ ಊರುಗಳಲ್ಲಿ ಮದ್ಯದ ಅಂಗಡಿ ಮುಚ್ಚಿಸಲು ಪಿಕೆಟಿಂಗ್ ಮಾಡಿದರು. ಟಿಳಕ ಸ್ವರಾಜ್ಯ ನಿಧಿಗೆ ಹಣ ಕೂಡಿಸಲು ಊರೂರು ಸುತ್ತಾಡಿದರು. ಹೆಗಲಮೇಲೆ ಖಾದಿಯ ಗಂಟು ಇಟ್ಟುಕೊಂಡು ಹಳ್ಳಿಹಳ್ಳಿಗೆ, ಮನೆಮನೆಗೆ ಹೋಗಿ ಮಾರಿ ಖಾದಿ ಪ್ರಚಾರ ಕೈಗೊಂಡರು. ಬೆಳಗಾಂವಿಯಲ್ಲಿ ಜರುಗಿದ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ದುಡಿದರು (1924).



ಇವರು ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ 15 ತಿಂಗಳ ಸಶ್ರಮ ಶಿಕ್ಷೆ ಅನುಭವಿಸಿದರು (1930). ಪ್ರಥಮ ಕಾಂಗ್ರೆಸ್ ಮಂತ್ರಿಮಂಡಳ ಅಂಕೋಲೆಯಲ್ಲಿ ಮದ್ಯಪಾನ ನಿಷೇಧ ಜಾರಿಗೆ ತಂದಾಗ ಇವರು ಒಂದು ತಿಂಗಳು ಹಳ್ಳಿಹಳ್ಳಿಗೆ ಹೋಗಿ ಜನಜಾಗೃತಿ ಮೂಡಿಸಿದರು (1939). ಚಲೇಜಾವ್ ಚಳವಳಿಯಲ್ಲಿ ಭೂಗತರಾಗಿ ಕೆಲಸ ಮಾಡುವವರಿಗೆ ಗೋವೆಯಿಂದ ಪಿಸ್ತೂಲು, ಡೈನಮೈಟ್ ತರಿಸಿಕೊಟ್ಟು ಹುಬ್ಬಳ್ಳಿ–ಕಾರವಾರ ರಸ್ತೆಯ ಸೇತುವೆ–ಸಂಕಗಳನ್ನು ಹಾರಿಸಿಬಿಡಲು ನಿರ್ಧರಿಸಿದ್ದರು.

ಭಾರತ ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಸರ್ಕಾರ ಮದ್ಯಪಾನ ನಿಷೇಧವನ್ನು ಮುಂಬಯಿ ರಾಜ್ಯಕ್ಕೆ ಅನ್ವಯಿಸಿತು. ಇವರನ್ನು ಜಿಲ್ಲಾ ಪಾನನಿಷೇಧಾಧಿಕಾರಿಯಾಗಿ ನೇಮಿಸಿತು (1947). 22 ವರ್ಷ ಕಾಲ ಸೇವೆ ಸಲ್ಲಿಸಿದ ತಮ್ಮ ಶಿಕ್ಷಕ ವೃತ್ತಿ ತ್ಯಜಿಸಿದರು. ಅನಂತರ ಜಿಲ್ಲಾ ಪ್ರಸಿದ್ಧಿ ಮತ್ತು ಪ್ರಚಾರ ಅಧಿಕಾರಿಯೆಂದು ಸರ್ಕಾರ ಇವರನ್ನು ನಿಯಮಿಸಿತು. ಅಲ್ಲಿ ಇವರು ಏಳು ವರ್ಷ ಸೇವೆ ಸಲ್ಲಿಸಿ ನಿವೃತ್ತರಾದರು (1958 ಸೆಪ್ಟೆಂಬರ್ 19).

ಕಾರವಾರದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ (1931) ಕಾರ್ಯದರ್ಶಿಯಾಗಿ ದುಡಿದರು. ಗಾಂಧೀಜಿಯವರ ಗೀತಾಬೋಧವನ್ನು ಭಾಷಾಂತರಿಸಿದರು. ಗಾಂಧೀಜಿಯವರ ಆತ್ಮಕಥೆ ನನ್ನ ಬಾಲ್ಯದ ನೆನಹುಗಳು (1961), ರವೀಂದ್ರನಾಥರ ಕಿರುಗತೆಗಳು (1962), ಅರವಿಂದ ಗೀತೆಯ ಭೂಮಿಕೆ, ಖಲೀಲ್ ಜಿಬ್ರಾನ್‌ನ ಮ್ಯಾಡ್‌ಮನ್ ಮತ್ತು ವಾಂಡರರ್ ಮೊದಲಾದವುಗಳನ್ನು ಅನುವಾದಿಸಿ ಹಿರಿಯ ಸಾಹಿತಿಗಳ ಮೆಚ್ಚುಗೆ ಪಡೆದರು. ಇದಲ್ಲದೆ ನಾಡಿನ ಹಲವು ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಪತ್ರಿಕಾ ಪ್ರತಿನಿಧಿಯಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಇವರಿಗೆ ಪಿ.ಆರ್. ರಾಮಯ್ಯ ಪ್ರಶಸ್ತಿ (1980), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985) ಸಂದಿವೆ. ಇವರು 1986 ಜನವರಿ 27ರಂದು ಕಾರವಾರದಲ್ಲಿ ನಿಧನರಾದರು. **(ಎಸ್.ಎಂ.ಕೆ.)**

**ಹನುಮನಮಟ್ಟಿ ಗ್ರಾಮೀಣ ವಿಶ್ವವಿದ್ಯಾಲಯ:** ರಾಧಾಕೃಷ್ಣನ್ ಶಿಕ್ಷಣ ಆಯೋಗದ ಶಿಫಾರಸಿನಿಂದ ಧಾರವಾಡದ ಹನುಮನಮಟ್ಟಿ ಎಂಬಲ್ಲಿ ಸ್ಥಾಪನೆಗೊಂಡ ವಿಶ್ವವಿದ್ಯಾಲಯ. ಉನ್ನತ ಶಿಕ್ಷಣ ಪಡೆದ ಗ್ರಾಮೀಣ ಯುವಕರು ಮರಳಿ ಗ್ರಾಮಜೀವನದಲ್ಲಿ ಉದ್ಯೋಗ ನಿರತರಾಗಲಾರದೆ ನಗರಗಳಲ್ಲಿ ಕೆಲಸ ಹುಡುಕುತ್ತಾರೆ. ಗ್ರಾಮಗಳಲ್ಲೂ

ಆಗಬೇಕಾದ ಕೆಲಸ ಬಹಳಷ್ಟು ಇದೆ. ಕಟ್ಟಡ ಮತ್ತು ರಸ್ತೆಗಳ ಕೆಲಸ, ಸೇತುವೆಗಳ ನಿರ್ಮಾಣ, ವ್ಯವಸಾಯೋಪಕರಣಗಳ ದುರಸ್ತು, ಹೊಲಗದ್ದೆಗಳ ಮಣ್ಣಿನ ರಕ್ಷಣೆ, ಕಾಲುವೆಗಳ ನಿರ್ಮಾಣ, ಬಾವಿ ತೋಡುವುದು, ಮರಗೆಲಸ, ಕಬ್ಬಿಣದ ಕೆಲಸ, ರೇಡಿಯೊ ದುರಸ್ತು, ಬೀಸುವ ಯಂತ್ರ, ವಿದ್ಯುಚ್ಛಕ್ತಿಯ ತಂತಿಯನ್ನು ಅಳವಡಿಸುವುದು–ಇವೇ ಮುಂತಾದ ಉದ್ಯೋಗಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯಲು ಅವಕಾಶವಿರುವುದರಿಂದ ಅಲ್ಲಿನ ಯುವಕರಿಗೆ ಆ ಮುಖವಾದ ಶಿಕ್ಷಣವಿತ್ತು ಅವರು ಅಲ್ಲೇ ಉದ್ಯೋಗನಿರತರಾಗುವಂತೆ ಮಾಡುವುದು ಅಗತ್ಯ. ಆಗ ಅಲ್ಲಿನ ಜೀವನ ಆಕರ್ಷಣೀಯವಾಗಿ ಗ್ರಾಮಗಳ ಪುನರುಜ್ಜೀವನವಾದೀತು. ಅಂಥ ಶಿಕ್ಷಣ ವೀಯಲು ಮುಖ್ಯ ವ್ಯವಸಾಯೋದ್ಯಮಗಳ ಪಾಲಿಟೆಕ್ನಿಕ್‌ಗಳನ್ನೇ ಅಂಗಸಂಸ್ಥೆಗಳನ್ನಾಗಿ ಹೊಂದಿರುವ ಗ್ರಾಮೀಣ ವಿದ್ಯಾಲಯಗಳ ಸ್ಥಾಪನೆಯ ಅಗತ್ಯವನ್ನು ಕುರಿತು 1949ರಲ್ಲಿ ರಾಧಾಕೃಷ್ಣನ್ ಶಿಕ್ಷಣ ಆಯೋಗ ಸಲಹೆ ನೀಡಿತು. ಆ ಸಲಹೆಗಳನ್ನು ಆಧರಿಸಿ ಭಾರತ ಸರ್ಕಾರ ಬೇರೆ ಬೇರೆ ರಾಜ್ಯಗಳಲ್ಲಿ ಅಂಥ ವಿಶ್ವವಿದ್ಯಾಲಯಗಳ ಸ್ಥಾಪನೆಯ ಪೂರ್ವಭಾವಿಯಾಗಿ ಹದಿನೈದು ಗ್ರಾಮೀಣ ವಿದ್ಯಾಸಂಸ್ಥೆಗಳನ್ನು (ರೂರಲ್ ಇನ್‌ಸ್ಟಿಟ್ಯೂಟ್) ಆರಂಭಿಸಿತು. ಅವುಗಳಲ್ಲಿ ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯ ಹನುಮನಮಟ್ಟಿಯದೂ ಒಂದು.

ಹನುಮನಮಟ್ಟಿಯ ಗ್ರಾಮೀಣ ವಿದ್ಯಾಸಂಸ್ಥೆ ಕರ್ನಾಟಕ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಸೇರಿದ್ದರೂ ಅದು ಇಲ್ಲಿರುವ ಯಾವ ವಿಶ್ವವಿದ್ಯಾಲಯಕ್ಕೂ ಅಂಗೀಕೃತ ಸಂಸ್ಥೆಯಾಗಿಲ್ಲ. ವಿಶ್ವವಿದ್ಯಾಲಯದ ಅಂತಸ್ತನ್ನು ಹೊಂದಿದ್ದು ತನ್ನದೇ ಆದ ಡಿಪ್ಲೊಮ, ಸರ್ಟಿಫಿಕೇಟ್ ಮುಂತಾದ ಪದವಿಗಳನ್ನು ನೀಡುವ ಅಧಿಕಾರ ಹೊಂದಿದೆ. ಅಲ್ಲಿ ಗ್ರಾಮಸೇವೆಯ ಮೂರು ವರ್ಷದ ಡಿಪ್ಲೊಮ ಪಠ್ಯಕ್ರಮ, ವಾಸ್ತು ಮತ್ತು ಗ್ರಾಮೀಣ ಶಿಲ್ಪಗಳಲ್ಲಿ ಮೂರು ವರ್ಷದ ಡಿಪ್ಲೊಮ ಪಠ್ಯಕ್ರಮ, ಕೃಷಿ ವಿಜ್ಞಾನದ ಎರಡು ವರ್ಷದ ಸರ್ಟಿಫಿಕೇಟ್ ಪಠ್ಯ ಕ್ರಮ, ಒಂದು ವರ್ಷದ ಗ್ರಾಮನೈರ್ಮಲ್ಯದ ತನಿಖಾಧಿಕಾರಿಗಳ (ಸ್ಯಾನಿಟರಿ ಇನ್ಸ್‌ಪೆಕ್ಟರ್) ತರಗತಿ, ಗ್ರಾಮೀಣ ಸಾಮಾಜಿಕ ವಿಜ್ಞಾನ ಮತ್ತು ಸಮುದಾಯಾಭಿವೃದ್ಧಿಯ ಎರಡು ವರ್ಷಗಳ ಸ್ನಾತಕೋತ್ತರ ತರಗತಿ, ಗ್ರಾಮೀಣ ಅರ್ಥಶಾಸ್ತ್ರ ಮತ್ತು ಸಹಕಾರಗಳಲ್ಲಿ ಎರಡು ವರ್ಷದ ಸ್ನಾತಕೋತ್ತರ ತರಗತಿ, ಮೂರು ವರ್ಷದ ಡಿಪ್ಲೊಮ ತರಗತಿಗೆ ಸೇರಲು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಒಂದು ವರ್ಷದ ಸಿದ್ಧತಾ ತರಗತಿ–ಇವೇ ಮುಂತಾದ ತರಗತಿಗಳನ್ನು ನಡೆಸಲು ಆಲೋಚಿಸಲಾಗಿದ್ದರೂ ಸದ್ಯದಲ್ಲಿ ಅಲ್ಲಿ ಕೆಲವು ಸ್ನಾತಕೋತ್ತರ ಡಿಪ್ಲೊಮ ಮತ್ತು ಸರ್ಟಿಫಿಕೇಟ್ ತರಗತಿಗಳೂ ಕೆಲವು ಸಾಧಾರಣ ಡಿಪ್ಲೊಮ ತರಗತಿಗಳೂ ಆರಂಭವಾಗಿವೆ. ಸಿದ್ಧತಾ ತರಗತಿಯೊಂದನ್ನು ಬಿಟ್ಟರೆ ಮಿಕ್ಕ ಎಲ್ಲ ತರಗತಿಗಳಿಗೂ ಪಿ.ಯು.ಸಿ. ಮುಗಿಸಿದವರಿಗೆ ಪ್ರವೇಶಾವಕಾಶ ದೊರೆಯುವುದು. ಇಲ್ಲಿ ಏರ್ಪಡಿಸಿರುವ ಮೂರು ವರ್ಷದ ಡಿಪ್ಲೊಮ ಪದವಿಯನ್ನು ಕೆಲವು ವಿಶ್ವವಿದ್ಯಾಲಯಗಳೂ ಕೇಂದ್ರ ಸರ್ಕಾರವೂ (ಕೆಲಸ ನೀಡುವ ಉದ್ದೇಶಗಳಿಗಾಗಿ) ಬಿ.ಎ., ಬಿ.ಎಸ್‌ಸಿ. ಮುಂತಾದ ಪದವಿಗಳಿಗೆ ಸಮನೆಂದು ಅಂಗೀಕರಿಸಿವೆ. ಅಲ್ಲಿ 1961ರಲ್ಲಿ ಆರಂಭವಾದ ಗ್ರಾಮೀಣ ಸಹಕಾರ ಮತ್ತು ಸಾಮಾಜಿಕ ವಿಜ್ಞಾನದ ಸ್ನಾತಕೋತ್ತರ ಡಿಪ್ಲೊಮವನ್ನು ಎಂ.ಎ., ಎಂ.ಎಸ್‌ಸಿ. ಮುಂತಾದ ಸ್ನಾತಕೋತ್ತರ ಪದವಿಗಳಿಗೆ ಸಮನೆಂದು ಅಂಗೀಕರಿಸಿವೆ.

ಹನುಮನಮಟ್ಟಿಯ ಎಲ್ಲ ತರಗತಿಗಳಲ್ಲೂ ಸಾಂಸ್ಕೃತಿಕ ವಿಷಯಗಳ ಅಧ್ಯಯನಕ್ಕೂ ಅವಕಾಶ ಕಲ್ಪಿಸಿದೆ. ಗ್ರಾಮಜೀವನದ ಸಮಸ್ಯೆಗಳು, ಭಾಷೆಯ ಮತ್ತು ಸಂಸ್ಕೃತಿಯ ಇತಿಹಾಸ ಮುಂತಾದ ವಿಷಯಗಳನ್ನು ಬೋಧಿಸುವುದರ ಜೊತೆಗೆ ಗ್ರಾಮಜೀವನಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವುದಕ್ಕೂ ಜ್ಞಾನಪ್ರಸಾರಕಾರ್ಯಕ್ಕೂ ಅವಕಾಶ ಕಲ್ಪಿಸಿದೆ.

ಗ್ರಾಮೀಣ ಜನತೆಯ ಸರ್ವತೋಮುಖವಾದ ಅಭಿವೃದ್ಧಿಗಾಗಿ ಆರಂಭವಾದ ಈ ವಿದ್ಯಾಲಯ ಅಷ್ಟಾಗಿ ಜನಪ್ರಿಯತೆ ಗಳಿಸಿಲ್ಲ. ಈ ಮಾತು ಭಾರತದಲ್ಲಿರುವ ಇತರ ಗ್ರಾಮೀಣ ವಿದ್ಯಾಲಯಗಳಿಗೂ ಅನ್ವಯಿಸುತ್ತದೆ. ಇದಕ್ಕೆ ಕಾರಣಗಳು ಇಲ್ಲದೇ ಇಲ್ಲ. ಉದ್ದೇಶಿಸಿದ ಎಲ್ಲ ತರಗತಿಗಳೂ ಇಲ್ಲಿ ಇನ್ನೂ ಆರಂಭವಾಗಿಲ್ಲ; ಅಲ್ಲಿಂದ ಹೊರಬಂದ ವಿದ್ಯಾರ್ಥಿಗಳು ತಮ್ಮ ಕಾರ್ಯದಕ್ಷತೆಯನ್ನು ಇನ್ನೂ ಅಷ್ಟಾಗಿ ಪ್ರದರ್ಶಿಸಿಲ್ಲ; ಅದರ ಫಲವಾಗಿ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳೂ ರಾಜ್ಯ ಸರ್ಕಾರವೂ ಅದು ನೀಡುವ ಡಿಪ್ಲೊಮ, ಸರ್ಟಿಫಿಕೇಟ್ ಮುಂತಾದ ಪದವಿಗಳಿಗೆ ಉದ್ದೇಶಿಸಿದ ಸ್ಥಾನವನ್ನು ನೀಡುತ್ತಿಲ್ಲ. ಈ ವಿಶ್ವವಿದ್ಯಾಲಯಕ್ಕೆ ಭಾರತ ಸರ್ಕಾರದಂತೆ ರಾಜ್ಯ ಸರ್ಕಾರವೂ ಹಣ ಒದಗಿಸುತ್ತಿದೆ. ಆದರೆ ಅಲ್ಲಿ ಉದ್ದೇಶಿಸಲಾಗಿರುವ ಕಾರ್ಯಗಳನ್ನು ಆರಂಭಿಸಲು ನೆರವಾಗುವಷ್ಟು ಹಣ ಒದಗುತ್ತಿಲ್ಲ. ಇದೆಲ್ಲದರ ಫಲವಾಗಿ ಮೂಲ ಶಿಕ್ಷಣಕ್ಕೊದಗಿದ ಗತಿಯೇ ಇದಕ್ಕೂ ಒದಗಬಹುದೆಂಬ ಶಂಕೆ ಕೆಲವರಲ್ಲಿ ಅಂಕುರಿಸಿದೆ. ಗ್ರಾಮವೃದ್ಧಿಯ ಕಡೆ ನೂತನವಾಗಿ ಆರಂಭವಾಗಿರುವ ರಾಷ್ಟ್ರದ ಆಸಕ್ತಿಯ ಫಲವಾಗಿ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವಂತಾಗಬಹುದೆಂದು ಆಶಿಸಲಾಗಿದೆ. (ಎನ್.ಎಸ್.ವಿ.)

**ಹನೇಹಳ್ಳಿ:** ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ ಒಂದು ಗ್ರಾಮ. ಕುಮಟದಿಂದ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,796. ಈ ಗ್ರಾಮವನ್ನು ದಾಖಲೆಗಳಲ್ಲಿ ಹನೆಯಹಳ್ಳಿ ಎಂದು ಕರೆಯಲಾಗಿದೆ. 1424ರ ಒಂದು ಶಾಸನದಲ್ಲಿ ಈ ಗ್ರಾಮವನ್ನು ಹನಿಹಳ್ಳಿ ಎಂದು ಕರೆದಿದೆ. ಹನೆ ಎಂದರೆ ತಾಳೆಮರ ಎಂದರ್ಥವೆನ್ನಲಾಗಿದೆ. ಗ್ರಾಮದಲ್ಲಿ ಹೆಡ್ಸೆ ಬೀರೆದೇವರು, ಲಕ್ಷ್ಮೀನಾರಾಯಣ, ಮುರ್ಕುಂಡಿ ಮತ್ತು ದುರ್ಗಾಂಬಿಕಾ ದೇವಾಲಯಗಳಿವೆ. ಹೆಡ್ಸೆ ಬೀರೆದೇವರ ದೇವಾಲಯದ ಬಳಿ ನಾಲ್ಕು ವೀರಗಲ್ಲುಗಳಿವೆ. ತೆಂಗಿನ ತೋಪಿನ ಬಂಕಿಕೊಡ್ಲು ಹತ್ತಿರವಿರುವ ಶಾಸನ ವಿಜಯನಗರದ ಕಾಲಕ್ಕೆ ಸೇರಿದ್ದು. ಇದರಲ್ಲಿ ಕೊಂಕಣದ ಮಹಾಪ್ರಧಾನ ಹರಿದೇವ ಒಡೆಯ ಮಾಡಿರುವ ಭೂದಾನದ ವಿವರಗಳಿವೆ. ಮುರ್ಕುಂಡಿ ದೇವಾಲಯದಲ್ಲಿ ಎರಡು ವೀರಗಲ್ಲುಗಳೂ ಅಷ್ಟಕೋನಾಕಾರದ ಗರ್ಭಗುಡಿಯಲ್ಲಿ ಒಂದು ಭಗ್ನಮೂರ್ತಿಯೂ ಇವೆ. ಲ್ಯಾಟರೈಟ್ ಶಿಲೆಯ ಗೋಡೆಗಳ ಮೇಲೆ 'ಕಾವಿ' ಚಿತ್ರಕಲೆ ಕಂಡುಬರುತ್ತದೆ. ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಗಂಗಾಧರ ಚಿತ್ತಾಲ, ಯಶವಂತ ಚಿತ್ತಾಲ ಈ ಗ್ರಾಮದವರು. (ಎಸ್.ಎಚ್‌ಇ.)

**ಹಬ್ಬಗಳು:** ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿರುವ ಎಲ್ಲ ಹಬ್ಬಗಳೂ ಸಾಮಾನ್ಯವಾಗಿ ಕರ್ನಾಟಕದಲ್ಲಿ ಆಚರಣೆಯಲ್ಲಿವೆ. ಅಲ್ಲದೆ ಹಲವು ಮತ ಪಂಥಗಳ, ಉದಾಹರಣೆಗೆ, ಮುಸಲ್ಮಾನರು, ಕ್ರೈಸ್ತರು ಕ್ರಿಶ್ಚಿಯನ್ನರು, ಜೈನರು, ಬೌದ್ಧರು ಇತ್ಯಾದಿ ಜನರು ಶತಶತಮಾನಗಳಿಂದ ಇಲ್ಲಿ ನೆಲೆಸಿರುವ ಕಾರಣ ಅವರ ಹಬ್ಬಗಳೂ ಅಚರಣೆಯಲ್ಲಿವೆ.

ಮೂಲತಃ ಈ ಹಬ್ಬಗಳು ವಿಜಯೋತ್ಸವಗಳಾಗಿರಬೇಕು. ದುಷ್ಟಶಕ್ತಿಯನ್ನು ದಮನ ಮಾಡಿದುದರ ಜ್ಞಾಪಕಾರ್ಥವಾಗಿ ಇವು ಆಚರಣೆಯಲ್ಲಿ ಬಂದಿರಬೇಕು. ಕೆಲವೊಂದು ಅಂಥ ವಿಜಯಕ್ಕೆ ಕಾರಣರಾದ ಮಹಾಪುರುಷರು ಹುಟ್ಟಿದ ದಿನಗಳಲ್ಲಿ ಕೆಲವು ಹಬ್ಬಗಳಾಗಿವೆ. ಇವುಗಳಲ್ಲಿ ಕೆಲವು ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸಲಾಗುವುದು. ಕೆಲವು ಹಬ್ಬಗಳು ಸಂಪ್ರದಾಯದವರಿಗೆ ಮಾತ್ರ ಮೀಸಲು; ಇನ್ನು ಕೆಲವು ಅನುಕರಣೆಯಿಂದಲೂ ಬಂದಿರಬಹುದು. ಅಂಥವುಗಳ ಹಿಂದಿನ ಐತಿಹ್ಯವನ್ನು ಹೇಳುವುದು ಕಷ್ಟ. ಆದರೆ ಎಲ್ಲ ಹಬ್ಬಗಳಿಗೂ ಸಾಮಾನ್ಯವಾಗಿ ಒಂದಲ್ಲ ಒಂದು ಐತಿಹ್ಯವಿದ್ದೇ ಇರುತ್ತದೆ ಅಥವಾ ಪುರಾಣ, ಸ್ಮೃತಿ ಕೆಲವು ಸಂಪ್ರದಾಯಗಳು ಹಿನ್ನೆಲೆಯಾಗಿರುತ್ತವೆ. ಕೆಲವಾರು ವ್ರತಗಳೂ ಹಬ್ಬಗಳ ಸಾಲಿನಲ್ಲಿ ಸೇರಿ ಹೋಗಿವೆ. ಕರಗ, ರಥೋತ್ಸವ ಮುಂತಾದುವುಗಳೂ ಹಬ್ಬಗಳೆನಿಸಿಕೊಂಡಿವೆ. ಇತ್ತೀಚೆಗೆ ಸ್ವಾತಂತ್ರ್ಯ ದಿನೋತ್ಸವ,

ಗಣರಾಜ್ಯೋತ್ಸವ, ಗಾಂಧೀಜಯಂತಿ ಇಂಥ ರಾಷ್ಟ್ರೀಯ ಹಬ್ಬಗಳೂ ಕರ್ನಾಟಕ ರಾಜ್ಯೋತ್ಸವದಂಥ ನಾಡಹಬ್ಬಗಳೂ ಆಚರಣೆಯಲ್ಲಿವೆ.

ಮಾವಿನ ತಳಿರುತೋರಣಗಳಿಂದ ಮನೆಬಾಗಿಲನ್ನು ಅಲಂಕರಿಸುವುದು, ಮನೆಗೆ ಸುಣ್ಣಬಣ್ಣ ಹೊಡೆಯುವುದು ರಂಗವಲ್ಲಿಯಿಂದ ಮನೆಯನ್ನಲಂಕರಿಸುವುದು ಹಬ್ಬದ ಕುರುಹು. ವಿಶೇಷ ಅಡುಗೆ ಹಬ್ಬದ ಆಚರಣೆಗೊಂದು ಮಹತ್ತ್ವ ನೀಡುತ್ತದೆ. ಒಂದೊಂದು ಹಬ್ಬದಲ್ಲೂ ವಿಶಿಷ್ಟವಾದ ಪೂಜೆಪುನಸ್ಕಾರಗಳು ಇತ್ಯಾದಿ ಇದ್ದೇ ಇರುತ್ತದೆ. ಹೀಗೆ ಹಬ್ಬದ ಆಚರಣೆಯಲ್ಲಿ ಕಲೋಪಾಸನೆಗೂ ಸೌಂದರ್ಯಪ್ರಜ್ಞೆಗೂ ರಸಿಕತೆಗೂ ಸಾಮಾಜಿಕ ಚೈತನ್ಯದ ಜಾಗೃತಿಗೂ ಸಾಕಷ್ಟು ಎಡೆದೊರೆತಿದೆ.

**ವಸಂತ ಋತುವಿನ ಹಬ್ಬಗಳು:** ಯುಗಾದಿ : ಚೈತ್ರಮಾಸದ ಮೊದಲ ದಿನ ಚತುರ್ಮುಖ ಬ್ರಹ್ಮದೇವ ಶ್ವೇತವರಾಹಕಲ್ಪದಲ್ಲಿ ಸೃಷ್ಟಿಯನ್ನು ಆರಂಭಿಸಿದನೆಂದೂ ಆದುದರಿಂದ ನವವರ್ಷಾರಂಭದ ಗಣನೆಯನ್ನು ಅಂದಿನಿಂದ ಮಾಡಬೇಕೆಂದೂ ಐತಿಹ್ಯವಿದೆ. ಇದನ್ನು ಚಾಂದ್ರಮಾಸದ ರೀತ್ಯಾ ಆಚರಿಸಲಾಗುವುದು. ಶಾಲಿವಾಹನ ಶಕೆಯ ಆರಂಭವನ್ನು ಅಂದಿನಿಂದ ಲೆಕ್ಕಹಾಕುತ್ತಾರೆ. ಈ ಹಬ್ಬದ ಆಚರಣೆಯಲ್ಲಿ ಮುಖ್ಯವಾದುದು ಬೇವು-ಬೆಲ್ಲ ತಿನ್ನುವುದು. ಪ್ರಾತಃಕಾಲವೇ ಎದ್ದು ಅಭ್ಯಂಜನ ಸ್ನಾನಮಾಡಿ ದೇವರನ್ನು ಪ್ರಾರ್ಥಿಸುವುದು, ಅನಂತರ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವುದು. ಮಧ್ಯಾಹ್ನ ಊಟಕ್ಕೆ ಮುಂಚೆ ಬೇವು-ಬೆಲ್ಲವನ್ನು ಸೇವಿಸುವುದು. ಸಾಯಂಕಾಲ ಪಂಚಾಂಗ ಶ್ರವಣ ಮಾಡುವುದು ಈ ಹಬ್ಬದ ವಿಶೇಷ ಆಚರಣೆ. ಯುಗಾದಿಯ ದಿನದಂದು ರೈತರು ಹೊಸದಾಗಿ ಸಿದ್ಧಪಡಿಸಿರುವ ಮರದ ನೇಗಿಲುಗಳನ್ನು ಪೂಜಿಸಿ, ಬಿತ್ತನೆಮಾಡುವ ಎಲ್ಲ ಧಾನ್ಯಗಳ ಮಾದರಿ ಬೆಳೆಯನ್ನು ಬಿತ್ತಿ ಪೂಜಿಸುತ್ತಾರೆ. ಈ ಮಾದರಿ ಬೆಳೆ ಹುಲುಸಾಗಿ ಬಂದರೆ ಆ ವರ್ಷದ ಬೆಳೆಯೂ ಸಮೃದ್ಧ ಎಂಬ ನಂಬಿಕೆಯಿದೆ. ಹಬ್ಬದ ಮೂರನೆಯ ದಿನವನ್ನು ಹಬ್ಬದ ಕರಿ ಎಂದು ಆಚರಿಸುತ್ತಾರೆ. ಸೌರಮಾನ ಯುಗಾದಿಯನ್ನು ಸೌರಮಾನದ ರೀತ್ಯ ಆಚರಿಸುವರು. ಸೂರ್ಯ ಮೇಷ ಸಂಕ್ರಾಂತಿ ವೃತ್ತವನ್ನು ಪ್ರವೇಶಿಸಿದ ದಿನ ಈ ಹಬ್ಬದ ಆಚರಣೆ ಇದ್ದು ಚಾಂದ್ರಮಾನ ಯುಗಾದಿಯಂತೆಯೇ ನಡೆಯುತ್ತದೆ.

ಮುಸಲ್ಮಾನರು ಮೊಹರಂನ ದಿನದಂದು ಚಾಂದ್ರಮಾನ ರೀತ್ಯಾ ಹಿಜರಿಯನ್ನು ಯುಗಾದಿಯಾಗಿ ಆಚರಿಸಿದರೆ ಕ್ರಿಶ್ಚಿಯನ್ನರು ಜನವರಿ ಮೊದಲನೆಯ ತಾರೀಖಿನಂದು ಯುಗಾದಿಯನ್ನು (ನ್ಯೂ ಇಯರ್ಸ್ ಡೇ) ಆಚರಿಸುತ್ತಾರೆ. ಕರ್ನಾಟಕದಲ್ಲಿರುವ ಮಾರವಾಡಿಗಳು ದೀಪಾವಳಿಯ ದಿನ ಯುಗಾದಿಯನ್ನು ಆಚರಿಸುವರು.

ರಾಮನವಮಿ: ಚೈತ್ರ ಶುಕ್ಲ ನವಮಿಯಂದು ರಾವಣನ ಸಂಹಾರಕ್ಕಾಗಿ ಪರಬ್ರಹ್ಮ ದಾಶರಥಿ ರಾಮನಾಗಿ ಅವತರಿಸಿದನೆಂದು ಈ ದಿನವನ್ನು ಇಂದಿಗೂ ವೈಭವದಿಂದ ಆಚರಿಸುತ್ತಾರೆ. ಪಾನಕ, ಕೋಸುಂಬರಿ ಈ ದಿನದ ಪ್ರಾಶಸ್ತ್ಯ. ಹರಿಕಥೆ, ಸಂಗೀತ ಮುಂತಾದವುಗಳಿಗೆ ಪೋಷಕವಾಗಿರುವ ಈ ನವಮಿಯನ್ನು ಅನೇಕ ದಿನಗಳವರೆಗೆ ಸಾಮೂಹಿಕವಾಗಿ ಆಚರಿಸುವುದು ಕಂಡುಬರುತ್ತದೆ. ರಾಮಪಟ್ಟಾಭಿಷೇಕದೊಂದಿಗೆ ಹಬ್ಬ ಮುಕ್ತಾಯವಾಗುತ್ತದೆ.

ಚಿತ್ರಾಪೂರ್ಣಿಮಾ: ಇದನ್ನು ಕರಗದ ಹುಣ್ಣಿಮೆ, ದವನದ ಹುಣ್ಣಿಮೆ ಎಂದೂ ಕರೆಯುತ್ತಾರೆ. ಅನೇಕ ಕಡೆ ಈ ದಿನದಂದು ಕರಗದ ಉತ್ಸವ ನಡೆಯುತ್ತದೆ. ಕರ್ನಾಟಕದಲ್ಲಿ ಬೆಂಗಳೂರಿನ ಧರ್ಮರಾಯಸ್ವಾಮಿ ಕರಗ ಪ್ರಸಿದ್ಧವಾದದ್ದು. ಇದು ರಥೋತ್ಸವಕ್ಕೆ ಪ್ರಶಸ್ತ ದಿನ, ದೊಡ್ಡ ದಿನ ಎಂದೂ ಪ್ರಸಿದ್ಧವಾಗಿದೆ. ಮುತ್ತೈದೆಯರಿಗೆ ಅರಿಸಿನ ಕುಂಕುಮ ಹೂ ದವನ ಮುಂತಾದ ಮಂಗಳದ್ರವ್ಯಗಳನ್ನು ದಾನಮಾಡಬೇಕೆಂದು ವಿಧಿ. ಚಿತ್ರಾನ್ನವನ್ನು ಊಟ ಮಾಡುವುದು ವಾಡಿಕೆ. ಚೈತ್ರಮಾಸದಲ್ಲಿ ಪಾನಕ ದಾನಕ್ಕೆ ವಿಶೇಷ ಮಹತ್ತ್ವವಿರುವುದರಿಂದ ಅನುಕೂಲವಿದ್ದವರು ವ್ಯಕ್ತಿಶಃ ಇಲ್ಲವೆ ಸಾಮೂಹಿಕವಾಗಿ ಅರವಟ್ಟಿಗೆಗಳನ್ನು ನಡೆಸುವುದು ಬಹುಹಿಂದಿನಿಂದಲೂ ರೂಢಿಯಲ್ಲಿತ್ತು. **ನೋಡಿ : ಕರಗ.**

**ಗ್ರೀಷ್ಮ ಋತುವಿನ ಹಬ್ಬಗಳು :** ಅಮಾವಾಸ್ಯೆ : ಇದು ರೈತರ ಹಬ್ಬ. ಇದನ್ನು ಮಣ್ಣೆತ್ತಿನ ಅಮಾವಾಸ್ಯೆ ಎಂದು ಕರೆಯುತ್ತಾರೆ. ಶ್ರಮದಿಂದ ಉತ್ತು, ಬಿತ್ತಿ, ಲೋಕಕ್ಕೆ ಅನ್ನವನ್ನು ಕೊಡುವ ಬಸವನ ಬಗ್ಗೆ ಕೃತಜ್ಞತೆಯನ್ನು ಸೂಚಿಸುವ ದಿನ. ಚಕ್ಕುಲಿಯನ್ನು ಮಾಡಿ ಬಸವನಿಗೆ ನೈವೇದ್ಯ ಮಾಡುತ್ತಾರೆ. ಮಣ್ಣಿನಲ್ಲಿ ಮಾಡಿದ ಬಸವನಿಗೆ ಅಂದು ಪೂಜೆ ಮಾಡಲೇಬೇಕೆಂದು ವಿಧಿ.

ಆಷಾಢ ಬಹುಳ ಅಮಾವಾಸ್ಯೆ: ಈ ದಿನ ಜ್ಯೋತಿರ್ಭೀಮೇಶ್ವರ ವ್ರತವನ್ನು ಆಚರಿಸುತ್ತಾರೆ. ಬ್ರಾಹ್ಮಣ ಕನ್ಯೆಯೋರ್ವಳನ್ನು ಹಣದಾಸೆಗೆ ಕಡುಬಡವರಾದ ತಂದೆತಾಯಿಗಳು ಮೃತ ರಾಜಕುಮಾರನಿಗೆ ಕೊಟ್ಟು ಧಾರೆಯೆರೆಯುತ್ತಾರೆ. ಆಗ ಆ ಕನ್ಯೆ ದೃಢವಾದ ನಿಲುವಿನಿಂದಲೂ ಭಕ್ತಿಯಿಂದಲೂ ಉಮಾಮಹೇಶ್ವರನನ್ನು ಪೂಜಿಸಿ ಅವರ ವರಪ್ರಸಾದದಿಂದ ಶಾಶ್ವತವಾದ ಸುಮಂಗಲಿತ್ವವನ್ನು ಪಡೆದಳೆಂಬ ನಂಬುಗೆ ಈ ವ್ರತಾಚರಣೆಯ ಹಿನ್ನೆಲೆಯಾಗಿದೆ.

ಆಡಿ ಶುಕ್ರವಾರ: ಕರ್ಕಾಟಕ ಮಾಸದಲ್ಲಿ ಬರುವ ಶುಕ್ರವಾರದಲ್ಲಿ ಲಕ್ಷ್ಮೀ ಪೂಜೆಯನ್ನು ಮಾಡುವ ಪದ್ಧತಿ ದ್ರಾವಿಡ ಸಂಪ್ರದಾಯಸ್ಥರಲ್ಲಿದೆ. ಆಡಿ ಎಂಬುದು ಆಷಾಢದ ತಮಿಳು ರೂಪ.

ಆಷಾಢ ಶುಕ್ಲ ಏಕಾದಶಿ: ಇದಕ್ಕೆ ಗಾಳೀಪಟದ ಹಬ್ಬವೆಂದೂ ಹೆಸರು. ಅಂದು ಗಾಳಿಪಟವನ್ನು ಹಾರಿಸುವುದು ರೂಢಿ. ಪ್ರಥಮೈಕಾದಶಿ ಎಂದೂ ಪ್ರಸಿದ್ಧಿ.

**ವರ್ಷಋತುವಿನ ಹಬ್ಬಗಳು:** ಲಕ್ಷ್ಮೀಪೂಜೆ:ಶ್ರಾವಣ ಮಾಸದ ಶುಕ್ರವಾರಗಳಲ್ಲಿ ವಿಶೇಷವಾಗಿ ಹುಣ್ಣಿಮೆಯ ಹಿಂದಿನ ಶುಕ್ರವಾರ ವರಮಹಾಲಕ್ಷ್ಮಿಯ ಪೂಜೆ ನಡೆಯುತ್ತದೆ. ತಳಿರುತೋರಣ ಬಾಳೆಕಂಬ ಮುಂತಾದುವುಗಳಿಂದ ಅಲಂಕೃತವಾದ ಮಂಟಪದ ಮಧ್ಯದಲ್ಲಿ ರತ್ನಾಭರಣಗಳಿಂದಲೂ ಮಂಗಳದ್ರವ್ಯಗಳಿಂದಲೂ ಸಿಂಗರಿಸಿರುವ ಲಕ್ಷ್ಮಿಯ ಪ್ರತಿಕೃತಿಯನ್ನು ಇಟ್ಟು ಷೋಡಶೋಪಚಾರಗಳಿಂದ ಪೂಜಿಸಿ ಮರದ ಬಾಗಿನ ಕೊಟ್ಟು ಮುತ್ತೈದೆಯರಿಗೆ ಭೋಜನ ಮಾಡಿಸುತ್ತಾರೆ. ಕಲಶದಲ್ಲಿ ಲಕ್ಷ್ಮಿಯನ್ನು ಆವಾಹನೆ ಮಾಡಿ ಪೂಜಿಸುವ ಪದ್ಧತಿಯೂ ಇದೆ.

ಶ್ರಾವಣ ಶನಿವಾರಗಳು: ತಿರುಪತಿ ಶ್ರೀನಿವಾಸನ ಪೂಜೆಗೆ ಮೀಸಲಾದ ವಾರಗಳಿವು. ಆ ದೇವರ ಒಕ್ಕಲು ಆ ದಿನಗಳಲ್ಲಿ ಹಣೆಯ ಮೇಲೆ ಮೂರು ನಾಮ ಧರಿಸಿ ಶ್ರೀಮನ್ನಾರಾಯಣ ಗೋವಿಂದ, ಗೋವಿಂದ ಎಂದು ಹೇಳುತ್ತ ಐದು ಮನೆಗಳಿಗಾದರೂ ಹೋಗಿ ಭಿಕ್ಷೆ ತರಬೇಕೆಂಬ, ಶ್ರೀನಿವಾಸ ಪ್ರೀತ್ಯರ್ಥ, ಯಥಾ ಶಕ್ತಿ ದಾನ, ಸಂತರ್ಪಣೆಗಳನ್ನು ಮಾಡಬೇಕೆಂಬ ಸಂಪ್ರದಾಯವಿದೆ. ಇದನ್ನು ಸಿರಿಸಂಪತ್ತಿನ ಶನಿವಾರವೆಂದು ತಿಳಿದು ತಂಬಿಟ್ಟಿನಲ್ಲಿ ತುಪ್ಪದ ದೀಪವನ್ನು ಹಚ್ಚಿಡುತ್ತಾರೆ. ಅಂದು ಸಿಹಿಯೂಟದ ಏರ್ಪಾಟಿರುತ್ತದೆ. ಈ ದಿನಗಳಲ್ಲಿ ತಿರುಪತಿಗೆ ಶ್ರೀನಿವಾಸ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರೆಹೋಗುತ್ತಾರೆ.

ಪಂಚಮಿ: ಈ ಹಬ್ಬ ನಾಗರ ಪಂಚಮಿ ಅಥವಾ ಗರುಡಪಂಚಮಿ ಎಂದು ಪ್ರಸಿದ್ಧವಾಗಿದೆ. ಸಹೋದರರ ಬೆನ್ನುಹುರಿಗೆ ದೂರ್ವೆಯಿಂದ ಹಾಲು ನೀರು ಪ್ರೋಕ್ಷಿಸಿ, ಪೂಜಿಸಿ ಅವರಿಗೆ ತಂಬಿಟ್ಟಿನ ಬಾಗಿನವನ್ನು ಕೊಡುವುದು, ಬಂಧು ಬಾಂಧವರಿಗೆ ಇಷ್ಟಮಿತ್ರರಿಗೆ ತಂಬಿಟ್ಟು ಕೊಡುವುದು ರೂಢಿಯಲ್ಲಿದೆ. ಸಹೋದರನ ಸುಖಸಂತೋಷಕ್ಕೂ ದೀರ್ಘಜೀವನಕ್ಕೂ ಹೆಣ್ಣು ಮಕ್ಕಳು ಪ್ರಾರ್ಥಿಸಿಕೊಳ್ಳುತ್ತಾರೆ. ಇದರಿಂದ ಅಪಮೃತ್ಯು

ಪರಿಹಾರವಾಗುವುದೆಂದು ನಂಬಿಕೆ. ಬಾಗಿಲಿನಲ್ಲಿ ಅರಿಸಿನದಿಂದ ನಾಗರ ಹಾವಿನ ಚಿತ್ರವನ್ನು ಬರೆದು ಹಳದಿ ಗೆಜ್ಜೆವಸ್ತ್ರದಿಂದ ಪೂಜಿಸುತ್ತಾರೆ.

ಕೃಷ್ಣಜನ್ಮಾಷ್ಟಮಿ: ಇದು ಶ್ರೀ ಕೃಷ್ಣನ ಜನ್ಮದಿನವೆಂದು ನಂಬಿಕೆ. ಅಂದು ಶ್ರೀಕೃಷ್ಣನ ಮತ್ತು ಗೋಕುಲದ ಪ್ರತಿಮೆಗಳನ್ನು ಮಣ್ಣಿನಲ್ಲಿ ಮಾಡಿಟ್ಟು ಷೋಡಶೋಪಚಾರಪೂಜೆಯನ್ನು ಮಾಡಿ ಬಗೆಬಗೆಯ ತಿಂಡಿತಿನಿಸುಗಳನ್ನು ಕೃಷ್ಣನಿಗೆ ನೈವೇದ್ಯಮಾಡುತ್ತಾರೆ.

ಗೌರೀ ಹಬ್ಬ: ಭಾದ್ರಪದ ಶುಕ್ಲ ತದಿಗೆ ಹೆಣ್ಣು ಮಕ್ಕಳಿಗೆ ಸಂಭ್ರಮದ ಹಬ್ಬ. ದೊಡ್ಡಗೌರೀ ಸ್ವರ್ಣಗೌರೀ ಮುಂತಾದ ಹೆಸರಿನಿಂದ ಪ್ರಸಿದ್ಧವಿದೆ. ಅಂದು ಗೌರಿಯ ಪ್ರತಿಮೆಯನ್ನು ಅಥವಾ ಪ್ರತಿಕೃತಿಯನ್ನು ಷೋಡಶೋಪ ಚಾರಗಳಿಂದ ಪೂಜಿಸಿ ವ್ರತಕಥೆಯನ್ನು ಕೇಳುತ್ತಾರೆ ಮತ್ತು ಮೊರದ ಬಾಗಿನವನ್ನು ಕೊಡುತ್ತಾರೆ. ಹಳ್ಳಿಗಳಲ್ಲಿ ಗೌರಿ ಮತ್ತು ಗಣೇಶರನ್ನು ಮನೆಯಲ್ಲಿ ಪೂಜಿಸಿ ಮಾರನೆಯ ದಿವಸ ಹೊಳೆ ಅಥವಾ ಕೆರೆಗಳಿಗೆ ಆ ದೇವರನ್ನು ಕೊಂಡೊಯ್ದು ವಿಸರ್ಜಿಸಿ ಗೌರಿ ಕಳುಹಿಸುವ ಹಬ್ಬ ಆಚರಿಸುತ್ತಾರೆ.

ಗಣೇಶಚತುರ್ಥೀ: ವಿಘ್ನನಿವಾರಕ ವಿನಾಯಕ ಹಬ್ಬ. ಮಣ್ಣಿನಿಂದ ನಿರ್ಮಿಸಿದ ಗಣಪತಿಯನ್ನು ಅಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಿ ಪೂಜೆಸಲ್ಲಿಸುತ್ತಾರೆ. ಸಾಮೂಹಿಕವಾಗಿಯೂ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದಂದು ಮೋದಕ ವಿಶೇಷ ಭಕ್ಷ್ಯ. ಭಾದ್ರಪದಶುಕ್ಲ ಚತುರ್ಥೀ ದಿನ ಈ ಹಬ್ಬ ಬರುತ್ತದೆ. ಆ ದಿನ ಚಂದ್ರನನ್ನು ನೋಡಬಾರದೆಂದು ನಂಬಿಕೆ. ಅಕಸ್ಮಾತ್ ನೋಡಿದರೆ ದೋಷಪರಿಹಾರಕ್ಕಾಗಿ ಸ್ಯಮಂತ ಕೋಪಾಖ್ಯಾನವನ್ನು ಕೇಳಬೇಕೆಂದು ವಿಧಿ. ಅದು ಸಾಧ್ಯವಿಲ್ಲದಿದ್ದರೆ, ಕನಿಷ್ಠ ಇಪ್ಪತ್ತೊಂದು ಮನೆಗಳಿಗಾದರೂ ಹೋಗಿ ಗಣೇಶನನ್ನು ನೋಡಿ ನಮಸ್ಕರಿಸ ಬೇಕೆಂದು ವಿಧಿ. ಶುಭಮಹೂರ್ತದಲ್ಲಿ ಗಣೇಶನ ವಿಸರ್ಜನೆ ನಡೆಯುತ್ತದೆ. ಆಗ ನಡೆಯುವ ಗಣೇಶನ ಮೆರವಣಿಗೆ ವರ್ಣಮಯವಾಗಿರುತ್ತದೆ.

**ಶರದೃತುವಿನ ಹಬ್ಬಗಳು:** ನವರಾತ್ರಿ:ಆಶ್ವೀಜ ಶುಕ್ಲ ಪಾಡ್ಯಮಿ ದಿನದಿಂದ ದಶಮಿಯ ವರೆಗೆ ಬರುವ ದಿನಗಳನ್ನು ನವರಾತ್ರಿ ಅಥವಾ ದಶಹರಾ(ದಸರ) ಎಂದೂ ಶರನ್ನವರಾತ್ರಿ ಎಂದೂ ಕರೆಯುವುದು ರೂಢಿ. ರಾಮಾಯಣ, ಮಹಾಭಾರತ ಕಾಲದಿಂದಲೂ ಈ ಹಬ್ಬ ಆಚರಣೆಯಲ್ಲಿತ್ತೆಂದು ತಿಳಿದು ಬರುತ್ತದೆ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನ ಶಕ್ತಿಸ್ವರೂಪಿಯಾದ ಬನ್ನಿ ಮರವನ್ನು ಪೂಜಿಸಿ, ಅದರಲ್ಲಿ ಬಚ್ಚಿಟ್ಟಿದ್ದ ತಮ್ಮ ಆಯುಧಗಳನ್ನು ಪಡೆದು ಯುದ್ಧಮಾಡಿ ವಿಜಯಿಯಾದ ಕಾರಣ ಈ ದಿನವನ್ನು ವಿಜಯದಶಮಿಯೆಂದು ಕರೆಯ ಲಾಗುತ್ತದೆ. ಈ ದಿನವನ್ನು ಕನ್ನಡನಾಡಿನಲ್ಲಿ ಅನೇಕ ರಾಜಮನೆತನಗಳು ನಾಡಹಬ್ಬವೆಂದು ತಿಳಿದು ಆಚರಿಸುತ್ತಿದ್ದವು. ಈ ಹಬ್ಬ ವಿಜಯನಗರ ಕಾಲದಿಂದೀಚೆಗೆ ಹೆಚ್ಚು ಪ್ರಾಮುಖ್ಯ ಗಳಿಸಿದಂತೆ ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಮನೆಮನೆಯಲ್ಲೂ ಅಂದಚಂದದ ನಾನಾ ತೆರನ ಗೊಂಬೆಗಳನ್ನು ಸಿಂಗರಿಸಿ ಮಂಟಪದಲ್ಲಿ ಒಪ್ಪವಾಗಿ ಕೂಡಿಸಿ ಮಕ್ಕಳಿಂದ ಪೂಜಿಸುವುದು ವಾಡಿಕೆ. ಸಂಜೆಯ ಸಮಯದಲ್ಲಿ ಹೆಣ್ಣು ಮಕ್ಕಳು ಶೃಂಗಾರಗೊಂಡು ಮನೆಯಿಂದ ಮನೆಗೆ ಹೋಗಿ ಹಾಡುಹೇಳಿ ಕೋಲಾಟ ವಾಡುವ ದೃಶ್ಯ ಕಣ್ಮನಗಳನ್ನು ಸೆಳೆಯುವಂತಿರುತ್ತವೆ. (ಎಂ.ಎಚ್.ಆರ್.)

ದುರ್ಗಾಷ್ಟಮಿ: ಮಹಿಷಾಸುರನನ್ನು ಸಂಹರಿಸಿದ ದುರ್ಗಾದೇವಿಯ ಪ್ರೀತ್ಯರ್ಥವಾಗಿ ವಿಶೇಷ ಪೂಜೆಯನ್ನು ಮಾಡುವ ದಿನ. ಶರದೃತುವಿನ ಪ್ರಾರಂಭದ ಒಂಬತ್ತು ತಿಥಿಗಳಲ್ಲಿ ದುರ್ಗಿಯನ್ನು ಪೂಜಿಸುವುದು ಒಂದು ವಿಶೇಷ. ಶರತ್ಕಾಲದ ದುರ್ಗಾಪೂಜೆ ಸಾತ್ವಿಕ, ರಾಜಸ, ತಾಮಸ ಎಂದು ಮೂರು ವಿಧ. ಜಪ ಯಜ್ಞ ಮೊದಲಾದವುಗಳಿಂದ ಮಾಂಸ ರಹಿತ ನೈವೇದ್ಯದಿಂದ ಅರ್ಚಿಸುವುದು ಸಾತ್ವಿಕಪೂಜೆ. ಈ ಪೂಜೆಯನ್ನು ಆಶ್ವಯುಜ ಶುಕ್ಲಪಕ್ಷದ ಸಪ್ತಮಿ ಅಷ್ಟಮಿ ನವಮಿಗಳಲ್ಲಿ ಮಾತ್ರ ಮಾಡುವುದುಂಟು. ಸಪ್ತಮಿ ದಿವಸ ದೇವಿಯ ಸ್ಥಾಪನೆ, ಅಷ್ಟಮಿ ದಿವಸ ಪೂಜೆ, ನವಮಿ ದಿವಸ ಬಲಿದಾನ, ದಶಮಿ ದಿವಸ ವಿಸರ್ಜನೆ. ಅಷ್ಟಮಿಗೆ ಮಹಾಷ್ಟಮಿ ಎಂಬ ಹೆಸರೂ ಇದೆ. ಅಷ್ಟಮಿ ತಿಥಿ ದುರ್ಗಿಗೆ ಪ್ರೀತಿಕರವಾದ ತಿಥಿ ಎಂದು ನಂಬುಗೆ. ದುರ್ಗಿಯನ್ನು ಆಶ್ವಯುಜ ಮಾಸದ ಶುಕ್ಲಾಷ್ಟಮಿಯ ದಿವಸ ನಿಯತವಾಗಿ ಪೂಜಿಸಬೇಕೆಂದು ವಿಷ್ಣುಧರ್ಮೋತ್ತರಪುರಾಣದಲ್ಲಿ ಹೇಳಿದೆ. ನಾರದೀಯ ಪುರಾಣದಲ್ಲಿ ಈ ಅಷ್ಟಮಿಯ ದಿವಸ ಉಪವಾಸವಿದ್ದು ಗೀತವಾದ್ಯಗಳೊಡನೆ ದುರ್ಗಿಯನ್ನು ರಾತ್ರಿಯಲ್ಲಿ ಪೂಜಿಸಬೇಕು. ಪುತ್ರವಂತ ಗೃಹಸ್ಥರಿಗೆ ಉಪವಾಸ ಕೂಡದು ಎಂದು ಹೇಳಿದೆ. ದೇವಿಯನ್ನುದ್ದೇಶಿಸಿ ಈ ದಿವಸದಲ್ಲಿ ಜಾತವೇದಸೇ ಎಂಬ ಮಂತ್ರ ಅಥವಾ ಗುರೂಪದಿಷ್ಟವಾದ ಮಂತ್ರಪೂರ್ವಕ ತಿಲ ಆಜ್ಯ ಕುಸುಮ ಪಾಯಸ ಮಧು ಈ ಹವಿರ್ದ್ರವ್ಯಗ ಳಿಂದ ಹೋಮ ಮಾಡಬೇಕು. ಆ ರಾತ್ರಿ ಎಚ್ಚರದಿಂದಿದ್ದು ವಸ್ತ್ರ, ಧೂಪ, ಮಾಲ್ಯ, ದೀಪ, ರತ್ನ, ಭಕ್ಷ್ಯಫಲಾದಿಗಳಿಂದ ದುರ್ಗಿಯನ್ನು ಆರಾಧಿಸ ಬೇಕು. ಹೀಗೆ ಆರಾಧಿಸಿದರೆ ದುರ್ಗಿ ಸರ್ವಮಂಗಳವನ್ನು ಉಂಟುಮಾಡು ತ್ತಾಳೆ ಎಂಬ ನಂಬಿಕೆಯಿದೆ. ಮೈಸೂರು ಅರಸರು ಇಂದಿನವರೆಗೆ ದುರ್ಗಾಪೂಜೆಯನ್ನು ಆಚರಿಸುತ್ತ ಬಂದಿದ್ದಾರೆ. (ಎಸ್.ಎನ್.ಕೆ.)

ವಿಜಯದಶಮಿ: ದೊಡ್ಡ ದಿನವೆಂದು ಪ್ರಸಿದ್ಧಿ. ಚಾತುರ್ಮಾಸ್ಯ ಸಂಕಲ್ಪ ಮಾಡಿ ಒಂದೇ ಕಡೆ ಕುಳಿತಿರುವ ಸಂನ್ಯಾಸಿಗಳಿಗೂ ಸಂಚಾರ ಹೊರಡುವ ದಿನ. ಸೀಮೋಲ್ಲಂಘನ ಮಾಡಬೇಕೆಂದು ಪದ್ಧತಿ. ಮೈಸೂರಿನಲ್ಲಿ ವಿಜಯನಗರದ ಪರಂಪರೆಗನುಸಾರವಾಗಿ ಜಂಬೂ ಸವಾರಿ ನಡೆಯುತ್ತಿತ್ತು. ಪ್ರತಿ ಊರಿನಲ್ಲೂ ದೇವರ ಉತ್ಸವ ನಡೆಯುತ್ತದೆ. ಶಮೀವೃಕ್ಷವನ್ನೂ ಪೂಜಿಸುವುದು ಮುಖ್ಯ. ಪರಸ್ಪರ ಶಮೀ ಕೊಟ್ಟು ನಮಸ್ಕರಿಸುವುದೂ ಶುಭಾಶಯವನ್ನು ಹೇಳುವುದೂ ವಾಡಿಕೆ.

ಸೀಗೆ ಹುಣ್ಣಿಮೆ: ಆಶ್ವೀಜ ಶುಕ್ಲ ಪೂರ್ಣಿಮೆಗೆ ಸೀಗೆ ಹುಣ್ಣಿಮೆ ಎಂದು ಕರೆಯುತ್ತಾರೆ. ಸೀಗೆಗೌರಿ ಹಬ್ಬ ಎಂದೂ ಪ್ರಚಲಿತವಿದೆ. ಇದು ರೈತರ ಹಬ್ಬ. ಮುತ್ತೈದೆಯರು ಹಸುರು ಪಯಿರನ್ನು (ಸಾಮಾನ್ಯವಾಗಿ ರಾಗಿ) ಬೆಳೆಸಿರುವ ಗೆರಸಿಯನ್ನು ತಲೆಯ ಮೇಲೆ ಹೊತ್ತು ಹಾಡುಗಳನ್ನು ಹೇಳುತ್ತ ಜಲಾಶಯಕ್ಕೆ ಹೋಗಿ ಸೀಗೆಗೌರಿಯನ್ನು ಪೂಜೆಮಾಡಿ ಬರುತ್ತಾರೆ. ಭೂಮಿತಾಯಿಗೆ ಬಯಕೆ ಊಟ ಮಾಡಿಸಲು ಬಗೆಬಗೆಯ ತಿಂಡಿತಿನಿಸುಗಳನ್ನು ತೆಗೆದುಕೊಂಡು ಹೋಗಿ ಹೊಲಗದ್ದೆಗಳಲ್ಲಿ ಎಡೆಯಿಟ್ಟು ಊಟಮಾಡಿ ಬರುತ್ತಾರೆ. ಕೆಲವರು ಬೆಳದಿಂಗಳಲ್ಲಿ ಪಾಯಸದ ಊಟ ಮಾಡುತ್ತಾರೆ. ಇದು ಮಳೆಬೆಳೆಯನ್ನು ಕೊಡುವ ದೇವೇಂದ್ರನನ್ನು ತೃಪ್ತಿಪಡಿಸಲು ಮಾಡುವ ಹಬ್ಬವೆಂದು ನಂಬಿಕೆ.

ಉತ್ತರ ಕರ್ನಾಟಕದಲ್ಲಿ ಈ ಹಬ್ಬ ಹೆಚ್ಚು ಪ್ರಚಲಿತವಿದೆ. ಇದನ್ನು ಹೆಚ್ಚಾಗಿ ಬ್ರಾಹ್ಮಣರು ಆಚರಿಸುತ್ತಾರೆ. ದಸರ ಹಬ್ಬದ ದಿವಸ ಬನ್ನಿ ಮುಡಿದ ಅನಂತರ ಸುಮಂಗಲಿಯರು ಕುಂಬಾರರ ಮನೆಗೆ ಹೋಗಿ ಜೋಳ, ಅರಿಶಿಣ ಕುಂಕುಮವನ್ನೂ ದಕ್ಷಿಣೆಯ ರೂಪದಲ್ಲಿ ಸ್ವಲ್ಪ ಹಣವನ್ನೂ ಕೊಟ್ಟು ಮಣ್ಣಿನಿಂದ ಮಾಡಿದ ಕಂಬದ ಆಕಾರವನ್ನು ಹೋಲುವ ಎರಡು ಪ್ರತಿಮೆಗಳನ್ನು ತರುವರು. ಇವುಗಳ ಆಕಾರ ಗುಂಡಾಗಿದ್ದು, ಒಂದರಮೇಲೊಂದು ಮಣ್ಣಿನಿಂದಲೇ ಮಾಡಿದ ಗುಂಡುಗಳನ್ನು ಜೋಡಿಸಿರುತ್ತಾರೆ. ತಳಭಾಗದಲ್ಲಿರುವುದು ಎಲ್ಲವುಗಳಿಗಿಂತ ಸ್ವಲ್ಪ ದೊಡ್ಡದಾಗಿದ್ದು ಕ್ರಮೇಣ ಮೇಲಿನವು ಚಿಕ್ಕದಾಗುತ್ತ ಹೋಗುತ್ತವೆ. ಸಾಧಾರಣವಾಗಿ ಇವುಗಳ ಸುತ್ತ ಮಣ್ಣಿನಿಂದಲೇ ಮಾಡಿದ ಆದರೆ ಇದೇ ರೀತಿಯ ಚಿಕ್ಕಚಿಕ್ಕ ಐದು ಅಥವಾ ಒಂಬತ್ತು ಹನ್ನೆರಡು ಮರಿಗಳೆಂದು ಅಥವಾ ಕೊಂತಿಗ ಳೆಂದು ಕರೆಯುವ ಪ್ರತಿಮೆ ಇಡುತ್ತಾರೆ. ಕುಂಬಾರರ ಮನೆಯಿಂದ ತೆಗೆದುಕೊಂಡು ಬಂದು ಮನೆಯೊಳಗಡೆ ಮಣೆ ಹಾಕಿ ಅದರ ಮೇಲಿಟ್ಟು

ಹೂವಿನಿಂದ ಮತ್ತು ಸುತ್ತಣ ಜಾಗವನ್ನು ರಂಗೋಲಿಯಿಂದ ಅಲಂಕರಿಸಿ ಎರಡು ಪಕ್ಕದಲ್ಲಿ ನೀಲಾಂಜನಗಳನ್ನಿಟ್ಟು ಮುತ್ತೈದೆಯರು ಪೂಜೆ ಮಾಡುತ್ತಾರೆ.

ದಸರ ಹಬ್ಬದ ದಿನದಿಂದ ಏಳು ದಿವಸ ಸೀಗೆಗೌರಿಯನ್ನು ಮನೆಯೊಳ ಗಿಟ್ಟುಕೊಂಡು ಪೂಜೆ ಮಾಡುತ್ತಾರೆ. ಸಾಯಂಕಾಲದ ವೇಳೆ ಮಕ್ಕಳು ಮತ್ತು ಮುತ್ತೈದೆಯರು ಬಂದು ಆರತಿ ಮಾಡಿ ಹೋಗುತ್ತಾರೆ. ಪೂಜೆಯ ವೇಳೆಯಲ್ಲಿ ಸಿಹಿತಿಂಡಿ ಅಥವಾ ಹಣ್ಣುಗಳ ನೈವೇದ್ಯ ಮಾಡುವುದ ರೊಂದಿಗೆ ಬಂದ ಹೆಣ್ಣು ಮಕ್ಕಳಿಗೆ ತಾಂಬೂಲ ಹಾಗೂ ಪ್ರಸಾದವನ್ನು ಕೊಡುತ್ತಾರೆ. ಹುಣ್ಣಿಮೆಯ ದಿವಸ ಸುಮಂಗಲಿಯರು ಸ್ನಾನಮಾಡಿ ಹೋಳಿಗೆ, ಹುಗ್ಗಿ ಮಾಡಿ ದೇವರನ್ನು ಪೂಜಿಸಿ ನೈವೇದ್ಯ ಮಾಡುತ್ತಾರೆ. ಸಾಯಂಕಾಲ ಆರತಿ ಮಾಡಿ ಉಡಿ ತುಂಬುತ್ತಾರೆ. ಕುಪ್ಪಸ, ಕಾಯಿ, ಹಣ್ಣು, ತಾಂಬೂಲಗಳೊಂದಿಗೆ ಈ ಸಂದರ್ಭದಲ್ಲಿ ಬಳಗದವರು ಹೆಣ್ಣು ಕೊಡುವ ಇಲ್ಲವೇ ತರುವ ಮದುವೆಯ ಒಪ್ಪಂದವನ್ನು (ನಿಶ್ಚಿತಾರ್ಥ) ಸಂತೋಷದಿಂದ ಮಾಡಿಕೊಳ್ಳುತ್ತಾರೆ. ಅನಂತರ ಚಿಕ್ಕ ಚಿಕ್ಕ ಪ್ರತಿಮೆಗ ಳನ್ನು ಆಪ್ತರಿಗೆ ಮತ್ತು ಬಂಧುವರ್ಗದವರಿಗೆ ಕೊಟ್ಟು ಉಳಿದವುಗಳನ್ನು ನೀರಿನಲ್ಲಿ ಬಿಡುತ್ತಾರೆ. ತೆಗೆದುಕೊಂಡು ಹೋದವರು ಅದನ್ನು ತಮ್ಮ ಮನೆಯಲ್ಲಿಟ್ಟು ಪೂಜಿಸುತ್ತಾರೆ. ಕೆಲವೊಮ್ಮೆ ಹೊಲದಲ್ಲಿಟ್ಟು ಪೂಜಿಸಿ ಬರುತ್ತಾರೆ. ಹೀಗೆ ಮಾಡುವುದರಿಂದ ಶುಭವಾಗುತ್ತದೆಂದು ನಂಬಿಕೆ. ದೊಡ್ಡವುಗಳನ್ನು ನೀರಿನಲ್ಲಿಯೇ ಬಿಡುತ್ತಾರೆ. ಮೇಲ್ಕಂಡ ಆಕಾರದಲ್ಲಿಯೇ ಮರದಿಂದ ಮಾಡಿಸಿದ ಎರಡು ಪ್ರತಿಮೆಗಳನ್ನು ಮನೆಯಲ್ಲಿ ದೇವರ ಮುಂದಿಟ್ಟು ಸದಾ ಪೂಜೆ ಮಾಡುತ್ತಾರೆ. **(ಟಿ.ಎಸ್.ಆರ್.)**

ನರಕಚತುರ್ದಶೀ (ದೀಪಾವಳಿ): ಭೂಮಿಯ ಪುತ್ರನಾದ ನರಕಾಸುರ ಲೋಕಕಂಟಕನಾದಾಗ ಭೂಮಾತೆಯೇ ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡು ನರಕಾಸುರನನ್ನು ಸಂಹಾರ ಮಾಡಿಸಿದಳೆಂದು ಪುರಾಣಪ್ರಸಿದ್ಧ ಕಥೆಯಿದೆ. ಆ ನೆನಪಿಗಾಗಿ ಈ ಹಬ್ಬದ ಆಚರಣೆ. ರಾತ್ರಿ ಹಬ್ಬದೂಟವಾದ ಮೇಲೆ ಬಾಣ ಬಿರುಸುಗಳನ್ನು ಹಚ್ಚಿ ನಲಿಯುತ್ತಾರೆ.

ಬಲಿಪಾಡ್ಯಮಿ: ವಾಮನಾವತಾರದ ಕಥೆಯ ಹಿನ್ನಲೆಯಲ್ಲಿ ಲೋಕಪ್ರಸಿದ್ಧವಾದ ಬಲಿಪಾಡ್ಯಮಿಯ ಹಬ್ಬ ನಡೆಯುತ್ತದೆ. ಇದು ಗೋಕ್ರೀಡನಕ್ಕೆ ಹೆಸರಾದದ್ದು. ಬೆಳಗ್ಗೆ ಗೋಪೂಜೆಯನ್ನು ಮಾಡುವರು. ಸಂಜೆಯ ಹೊತ್ತಿಗೆ ಮನೆಯ ಹೊಸ್ತಿಲಿನಲ್ಲೆಲ್ಲ ಬಲೀಂದ್ರನನ್ನು ಮಾಡಿಟ್ಟು ಷೋಡಶೋಪಚಾರಗಳಿಂದ ಪೂಜಿಸುವರು. ಬಾಣಬಿರುಸುಗಳನ್ನು ಹಾರಿಸುವುದುಂಟು. ಬಲೀಂದ್ರ ಭೂಲೋಕಕ್ಕೆ ಬಂದು ಮೂರೂಮುಕ್ಕಾಲು ಗಳಿಗೆ ಇರುವನೆಂಬ ನಂಬಿಕೆ ಇದೆ.

ಕಾರ್ತೀಕ ಪೂರ್ಣಿಮೆ: ವ್ಯಾಸಪೂಜೆ ಮಾಡಿ ಕಾರ್ತೀಕ ಮಾಸ ಮಹಾತ್ಮೆಯ ಮೂಗಳವನ್ನಾಚರಿಸುತ್ತಾರೆ. ರಾತ್ರಿ ಮನೆಯಲ್ಲೂ ಮಂದಿರಗ ಳಲ್ಲೂ ದೀಪಗಳನ್ನು ಬೆಳಗಿಸುತ್ತಾರೆ. ದೀಪೋತ್ಸವ ನಡೆಯುವುದು ಇಂದಿನಿಂದಲೇ. ಈ ದಿನ ದೀಪದಾನಕ್ಕೆ ಮಹತ್ತ್ವ. ಇದನ್ನು ದೊಡ್ಡ ಗೌರಿಹುಣ್ಣಿಮೆ ಎಂದು ಕರೆಯುತ್ತಾರೆ. ಸ್ತ್ರೀಯರು ಗೌರೀಪೂಜೆಯನ್ನು ಮಾಡುತ್ತಾರೆ.

ಕಾರ್ತೀಕ ಬಹುಳ ಅಮಾವಾಸ್ಯೆ: ಕಡೆಯ ಕಾರ್ತೀಕ ಎಂದೂ ಪ್ರಸಿದ್ಧಿ. ದೀಪೋತ್ಸವಕ್ಕೆ ಹೆಸರಾದ ದಿನ ಪಂಜನ್ನು ಹಿಡಿದು ತಿರುಗಿಸುತ್ತ ಊರಿನಲ್ಲೆಲ್ಲ ಸುತ್ತುಹಾಕುವ ಪದ್ಧತಿ ಹಿಂದೆ ಇತ್ತು. ಉತ್ತರಗೋಗ್ರಹಣದ ಜ್ಞಾಪಕಾರ್ಥವಾಗಿ ಹಾಗೆ ಮಾಡಬೇಕೆಂದು ನಂಬಿಕೆ. ಪಿತೃದೇವತೆಗಳಿಗೆ ಮರಳಿ ಹೋಗಲು ದಾರಿತೋರುವ ವಿಧಾನವಿದೆಂದು ಪುರಾಣವಾಕ್ಯ. ಎಲ್ಲೆಡೆಯಲ್ಲೂ ದೀಪೋತ್ಸವ, ತೆಪ್ಪೋತ್ಸವ ಮುಂತಾದವು ವಿಜೃಂಭಣೆ ಯಿಂದ ನಡೆಯುತ್ತವೆ.

ಹನುಮಜಯಂತಿ: ಮಾರ್ಗಶೀರ್ಷಮಾಸದ ದ್ವಾದಶಿ ಶ್ರೀರಾಮಭಕ್ತ ಹನುಮಂತ ಜನಿಸಿದ ದಿನ. ಅವನ ಹೆಸರಿನಿಂದ ಈ ಜಯಂತಿ ಆಚರಿಸಲಾಗು ತ್ತದೆ. ಹನುಮದ್ವಿಲಾಸ ಹರಿಕಥೆ ನಡೆಸುವುದು ವಿಶೇಷ. ಕೆಲವು ಕಡೆ ರಾಮದೇವರ ಸಂಗಡ ಹನುಮಂತನ ಪಲ್ಲಕ್ಕಿ ಉತ್ಸವವನ್ನೂ ಮಾಡುತ್ತಾರೆ.

ಎಳ್ಳಮಾವಾಸ್ಯೆ: ತಂದೆಯ ಆಜ್ಞೆಯಂತೆ ತಾಯಿಯ ಶಿರಶ್ಛೇದನ ಮಾಡಿದ ಪರಶುರಾಮ ಮಾತೃಹತ್ಯೆಯ ದೋಷದಿಂದ ಮುಕ್ತನಾದ ದಿನ. ಎಳ್ಳಿನಷ್ಟು ಪಾಪವಿಲ್ಲದಂತೆ ತೊಳೆದುಹಾಕುವ ಈ ದಿನ ಸ್ನಾನಕ್ಕೆ ಪ್ರಾಶಸ್ತ್ಯ. ಸೂರ್ಯೋದಯಕ್ಕೆ ಮುಂಚಿತವಾಗಿ ಸ್ನಾನ ಮಾಡಬೇಕು.

ಧನುರ್ಮಾಸ: ಸೂರ್ಯದೇವ ವೃಶ್ಚಿಕ ಮಾಸದಿಂದ ಸಂಕ್ರಮಿಸಿ ಧನು ರಾಶಿಗೆ ಪ್ರವೇಶ ಮಾಡುವ ದಿನ ಮೊದಲ್ಗೊಂಡು ಆತ ಮಕರಸಂಕ್ರಾಂತಿ ಪ್ರವೇಶಿಸುವವರೆಗೂ ಧನುರ್ಮಾಸವೆನ್ನುತ್ತಾರೆ. ಮಹಾವಿಷ್ಣುವನ್ನು ಸೂರ್ಯೋದಯಕ್ಕೆ ಮುಂಚಿತವಾಗಿಯೇ ಷೋಡಶೋಪಚಾರಗಳಿಂದ ಪೂಜಿಸಿ ಹುಗ್ಗಿಯನ್ನು(ಪೊಂಗಲ್) ನೈವೇದ್ಯ ಮಾಡಬೇಕೆಂದು ವಿಧಿ. ತಿಂಗಳಲ್ಲಿ ಪ್ರತಿದಿನ ಮಾಡಲು ಅಸಮರ್ಥರಾದವರು ಒಂದು ದಿನವಾದರೂ ಹುಗ್ಗಿ ಮಾಡಿ ದಾನಮಾಡಬಹುದು.

ಮಕರಸಂಕ್ರಾಂತಿ: ಪೊಂಗಲ್ ಎಂದು ಪ್ರಸಿದ್ಧಿ. ಸೂರ್ಯ ಮಕರರಾಶಿಗೆ ಪ್ರವೇಶಿಸುವ ದಿನ. ಉತ್ತರಾಯಣ ಪುಣ್ಯಕಾಲವೆಂದೂ ಕರೆಯುತ್ತಾರೆ. ಅಂದು ಎಳ್ಳು ಬೀರುವುದು ವೈಶಿಷ್ಟ್ಯ. ದ್ರಾವಿಡ ಸಂಪ್ರದಾಯಸ್ಥರಿಗೆ ಇದೊಂದು ಸಂಭ್ರಮದ ದಿನ. ಇಂದು ಸ್ವರ್ಗದ ಬಾಗಿಲು ತೆರೆಯುತ್ತದೆಂದು ನಂಬಿಕೆ. ರೈತರಿಗೆ ಇಂದು ಬಿಡುವು. ಜಾನುವಾರುಗಳಿಗೆ ಮೈತೊಳೆದು ಸಿಂಗರಿಸಿ ಮೆರವಣಿಗೆ ಮಾಡುತ್ತಾರೆ. ಸಂಜೆ ಕಿಚ್ಚು ಹಾಯಿಸುತ್ತಾರೆ.

ಪುಷ್ಯ ಬಹುಳ ಅಮಾವಾಸ್ಯೆ: ದಾಸಶ್ರೇಷ್ಠ ಪುರಂದರದಾಸರ ಪುಣ್ಯತಿಥಿ. ಪ್ರಸಿದ್ಧ ವಾಗ್ಗೇಯಕಾರರೂ ಭಕ್ತ ಶ್ರೇಷ್ಠರೂ ಆದ ತ್ಯಾಗರಾಜ ಭಾಗವತರ ಆರಾಧನೆಯನ್ನೂ ಈ ದಿನ ಆಚರಿಸುತ್ತಾರೆ. ಸಂಗೀತ ಹರಿಕಥೆ ಮುಂತಾದ ಸಾಮೂಹಿಕ ಕಾರ್ಯಕ್ರಮಗಳು ಜರುಗುತ್ತವೆ.

**ಶಿಶಿರ ಋತುವಿನ ಹಬ್ಬಗಳು:** ರಥಸಪ್ತಮೀ : ಮಾಘಶುಕ್ಲ ಸಪ್ತಮಿ ದಿನದಂದು ಸೂರ್ಯನ ರಥಕ್ಕೆ ಪೂಜೆ. ಅಂಗಳದಲ್ಲಿ ರಂಗವಲ್ಲಿಯಿಂದ ರಥವನ್ನು ಬರೆದು ಪೂಜಿಸುತ್ತಾರೆ. ಹಾಲನ್ನು ಉಕ್ಕಿಸಿ ಪಾಯಸ ಮಾಡಿ ಸೂರ್ಯನಾರಾಯಣನಿಗೆ ನೈವೇದ್ಯ ಮಾಡುತ್ತಾರೆ. ಎಕ್ಕದ ಎಲೆಯನ್ನು ಧರಿಸಿ ಸ್ನಾನಮಾಡುವ ವಿಧಿ ಇದೆ. ವೈವಸ್ವತ ಮನ್ವಂತರದ ಮೊದಲ ದಿನವಿದು; ಮನ್ವಾದಿ.

ಮಹಾಶಿವರಾತ್ರಿ: ಮಾಘ ಬಹುಳದಲ್ಲಿ ಪ್ರದೋಷ ವ್ಯಾಪಿನಿಯಾದ ಚತುರ್ದಶಿ ದಿವಸ ಶಿವರಾತ್ರಿಯನ್ನು ಆಚರಿಸಬೇಕೆಂದು ಸ್ಮೃತಿಯಲ್ಲಿ ಹೇಳಿದೆ. ಅಂದು ಶೈವರು ಉಪವಾಸವನ್ನಾಚರಿಸಿ ವಿಶೇಷ ಪೂಜಾದಿಗಳನ್ನು ಮಾಡುತ್ತಾರೆ. ಈ ದಿನ ಉಪವಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ. ರಾತ್ರಿಯಲ್ಲಿ ಪ್ರತೀಯಾಮದಲ್ಲೂ ಬಿಲ್ವಾದಿಗಳಿಂದ ಶಿವನನ್ನು ಪೂಜಿಸಬೇಕು. ವೈಷ್ಣವರೂ ಈ ದಿನ ಹಬ್ಬವನ್ನು ಆಚರಿಸುತ್ತಾರೆ. ಶಿವಮಂದಿರಕ್ಕೆ ಹೋಗಿ ದರ್ಶನ ಮಾಡಲೇಬೇಕೆಂಬ ವಿಧಿ ಇದೆ. ಅಂದು ಜಾಗರಣೆಯನ್ನು ವಿಧಿಸಲಾಗಿದೆ. ಶಿವರಾತ್ರಿಯ ವ್ರತಕಥೆ ಮತ್ತು ಮಹಾತ್ಮೆ ಸಾಮಾನ್ಯವಾಗಿ ಎಲ್ಲ ಪುರಾಣಗಳಲ್ಲೂ ಬಂದಿದೆ. ಅನೇಕ ಪುಣ್ಯಸ್ಥಳಗಳಲ್ಲಿ ರಥೋತ್ಸವಗಳೂ ಜಾತ್ರೆಗಳೂ ಜರುಗುತ್ತವೆ.

ಹೋಳಿ ಹಬ್ಬ: ಫಾಲ್ಗುಣ ಶುಕ್ಲಪಕ್ಷದಲ್ಲಿ ಹೋಳಿ ಹಬ್ಬವನ್ನಾಚರಿಸು ತ್ತಾರೆ. ಕಾಮನ ಹಬ್ಬವೆಂದು ಇದು ಪ್ರಸಿದ್ಧಿ. **ನೋಡಿ: ಕಾಮನ ಹಬ್ಬ.** *

ಈ ಮೇಲೆ ನಿರೂಪಿಸಿದ ಹಬ್ಬಗಳಲ್ಲದೆ ಕರ್ನಾಟಕದಲ್ಲಿ ಕೆಲವು ವಿಶೇಷ ರೀತಿಯ ಹಬ್ಬಗಳೂ ಪ್ರಚಲಿತವಿದ್ದವು: ಮಾರಿಹಬ್ಬ, ಬಂಡಿಹಬ್ಬ, ಬಾದುಬ್ಬೆಪರ್ವ. ಗ್ರಾಮದೇವತೆಗಳಿಗೆ ಸಂಬಂಧಿಸಿದ ಈ ಹಬ್ಬಗಳನ್ನು ಜನಪದ ಹಬ್ಬಗಳೆಂದು ಕರೆಯಬಹುದು. ಇನ್ನು ಕೆಲವು ಹಬ್ಬಗಳು ಕೆಲವು ಪ್ರಾಂತ್ಯಗಳಿಗೆ ಮಾತ್ರ ಸೀಮಿತವಾಗಿದ್ದಂಥವು. ಉದಾಹರಣೆಗೆ ಹುತ್ತರಿ ಹಬ್ಬ ಕೊಡಗಿನವರಿಗೆ ಮಾತ್ರ ಸಂಬಂಧಪಟ್ಟದ್ದು.

ಬಾದುಬ್ಬೆ ಪರ್ವ: ಪ್ರಾಚೀನ ಕರ್ನಾಟಕದಲ್ಲಿ ಬಾದುಬ್ಬೆ ಎಂಬ ಹಬ್ಬ ಹೆಣ್ಣುದೇವತೆಯ ಹೆಸರಿನಲ್ಲಿ ಆಚರಿಸುತ್ತಿದ್ದ ಒಂದು ಹಬ್ಬ. ಈ ದೇವತೆ ಯಾರಿರಬಹುದು ಎಂಬುದರ ಬಗ್ಗೆ ಸ್ವಲ್ಪ ಚರ್ಚೆ ನಡೆದಿದೆ. ಇವಳು ವಸಂತಾಂಬೆ ಎಂದೂ ಭದ್ರಾಂಬೆ ಎಂದೂ ಬನದಬ್ಬೆ (ಅಥವಾ ಬನಶಂಕರಿ) ಎಂದೂ ಅಭಿಪ್ರಾಯಗಳಿವೆ. ಈ ದೇವತೆಯ ಉಲ್ಲೇಖಗಳನ್ನು ಗಮನಿಸಿದರೆ ಸಾಮಾನ್ಯ ಜನತೆ ಪೂಜಿಸುತ್ತಿದ್ದ ಒಬ್ಬ ಗ್ರಾಮದೇವತೆ ಎಂಬ ಭಾವನೆಯುಂಟಾಗುತ್ತದೆ.

ಬಾದುಬ್ಬೆ ಪರ್ವ ಹೇಗೆ ಆರಂಭವಾಯಿತೆಂಬುದರ ಬಗ್ಗೆ ವಡ್ಡಾರಾಧನೆಯಲ್ಲಿ ಒಂದು ಕಥೆಯಿದೆ. ವೀರಶ್ರೀ ಎಂಬ ರಾಣಿ ತನ್ನ ಅಣ್ಣನನ್ನು ಕಳೆದುಕೊಂಡು ಬಹಳವಾಗಿ ದುಃಖಿಸುತ್ತಿದ್ದಳು. ಅವಳನ್ನು ಬಹುವಾಗಿ ಪ್ರೀತಿಸುತ್ತಿದ್ದ ಅವಳ ಗಂಡ ಕ್ರೌಂಚನೆಂಬುವವನು ಅವಳು ದುಃಖವನ್ನು ಮರೆಯುವಂತೆ ಯಾರಾದರೂ ಮಾಡುವುದಾದರೆ ಅವರಿಗೆ ಬಹುಮಾನ ಕೊಡುವುದಾಗಿ ಡಂಗುರ ಹೊಯಿಸಿದ. ಯಾರು ಏನೇ ಪ್ರಯತ್ನಪಟ್ಟರೂ ಅವಳ ಮುಖದಲ್ಲಿ ನಗು ಕಾಣಿಸಲಿಲ್ಲ. ಕೊನೆಗೆ ಒಬ್ಬ ವ್ಯಕ್ತಿ ಕರಿಯ ಕಚ್ಚೆ ಹಾಕಿಕೊಂಡು, ಮೈಗೆಲ್ಲ ಮಸಿ ಬಳಿದುಕೊಂಡು, ತಲೆ ಬೋಳಿಸಿಕೊಂಡು, ಬಾಯಿಲ್ಲಿ ಹಲ್ಲಿನಂತೆ ಕವಡೆಗಳನ್ನು ಕಟ್ಟಿಕೊಂಡು ಕುಂಚ ಕಮಂಡಲುಗಳ ಸಮೇತ ಬಂದಾಗ ರಾಜ ಇಗೋ ನಿನ್ನ ಅಣ್ಣ ಭಟಾರರು ಬಂದರು ಎಂದಾಗ ರಾಣಿ ಸಂಭ್ರಮದಿಂದ ತಿರುಗಿ ನೋಡಿದಾಗ–ಅಲ್ಲಿ ಕಾಣಿಸಿದ್ದು ಅಣ್ಣನಲ್ಲ, ಒಬ್ಬ ವಿಕಟವೇಷಧಾರಿ. ರಾಣಿಗೆ ನಗು ತಡೆಯದಾಯಿತು, ನಕ್ಕಳು. ರಾಜ ಸುಪ್ರೀತನಾಗಿ ಆ ಪಗರಣಿಗನಿಗೆ (ವೇಷದವನಿಗೆ) ಬೇಕಾದಷ್ಟು ಐಶ್ವರ್ಯ ಕೊಟ್ಟುಕಳುಹಿಸಿದ. ಅಂದಿನಿಂದ ಬಾದುಬ್ಬೆಯ ಹಬ್ಬವೂ ಪಗರಣದ ಆಟಪಾಟಗಳೂ ಆದುವೆಂದು ಕಥೆ.

ಬಾದುಬ್ಬೆಯ ಹಬ್ಬಕ್ಕೂ ಮೇಲಿನ ಕಥೆಗೂ ಏನು ಸಂಬಂಧವೋ ವಿವರಿಸಿ ಹೇಳುವುದು ಕಷ್ಟವಾದರೂ ಬಾದುಬ್ಬೆಯ ಹಬ್ಬದ ದಿನ ವಿಚಿತ್ರವೇಷಗಳನ್ನು ಧರಿಸಿ ಜನರು ನಕ್ಕು ನಲಿಯುತ್ತಿದ್ದರೆಂದು ಮಾತ್ರ ತಿಳಿದುಬರುತ್ತದೆ. ಬಾದುಬ್ಬೆಯ ಮದುವೆ ಎಂಬುದು (ಗಣಪತಿಯ ಮದುವೆ ಇದ್ದಂತೆ) ಒಂದು ತಮಾಷೆಯ ಗಾದೆಯ ಮಾತಾಗಿ ಪರಿಣಮಿಸಿತು. ಅವಳಿಗೆ ಸಂಬಂಧಿಸಿದ ಯಾವುದೋ ಜನಪದಕಥೆ ಈ ಮಾತಿನಲ್ಲಿ ಹುದುಗಿರುವಂತಿದೆ.

ಬಾದುಬ್ಬೆಯ ಅಮಾವಾಸ್ಯೆ ಎಂಬ ಮಾತು ಶಾಸನಗಳಲ್ಲಿ ಬರುತ್ತದೆ. ಇದೇ ಬಾದುಬ್ಬೆ ಪರ್ವವಿರಬಹುದು. ಈ ಹಬ್ಬ ಮೇ ತಿಂಗಳ ಸುಮಾರಿನಲ್ಲಿ, ಎಂದರೆ ಬೇಸಗೆಯಲ್ಲಿ ನಡೆಯುತ್ತಿದ್ದಿತೆಂದು ಒಂದು ಶಾಸನಾಧಾರದಿಂದ ಹೇಳಬಹುದು. ಈಗಲೂ ಉತ್ತರ ಕರ್ನಾಟಕದಲ್ಲಿ ವೈಶಾಖದ ಅಮಾವಾಸ್ಯೆಯಂದು ಒಂದು ಹಬ್ಬದ ಆಚರಣೆಯಿದೆ. ಅದರ ವಿವರಗಳನ್ನು ಬೆಟಗೇರಿ ಕೃಷ್ಣಶರ್ಮರು ಹೀಗೆ ಕೊಟ್ಟಿದ್ದಾರೆ: ದೇವರ ಮನೆಯಲ್ಲಿ ಅಥವಾ ಅನುಕೂಲ ಸ್ಥಳದಲ್ಲಿ ಗೋಡೆಗೆ ಚಿಕ್ಕದಾದ ಒಂದು ಹಂದರವನ್ನು (ಮಂಟಪ) ಕಟ್ಟುವರು. ಅದನ್ನು ಬೇವಿನ ಸೊಪ್ಪಿನಿಂದ ಹೊದಿಸಿ ಅಲಂಕರಿಸುವರು. ನದಿಯಿಂದಾಗಲಿ ಹೊಲದಿಂದಾಗಲಿ ಐದು ಚಿಕ್ಕ ಕಲ್ಲುಗಳನ್ನು ಆಯ್ದು ತಂದು, ಅವುಗಳನ್ನು ತೊಳೆದು ಒರಸಿ, ಅವುಗಳಿಗೆ ಸುತ್ತಲೂ ಸುಣ್ಣದ ಪಟ್ಟೆಯನ್ನು ಹಚ್ಚಿ, ಹಂದರದೊಳಕ್ಕೆ ಇರಿಸಿದ ಪೀಠದ ಮೇಲೆ ಸಾಲಾಗಿ ಇಡುವರು. ಯಥಾಕ್ರಮ ಮನೆಯ ಯಜಮಾನ ಅವುಗಳನ್ನು ಪೂಜಿಸಿ ಹೂರಣದ ಹೋಳಿಗೆಯ ನೈವೇದ್ಯಮಾಡುವನು. ನೈವೇದ್ಯ ಮಾಡಿದ ಹೋಳಿಗೆಯನ್ನು ಆ ಬೇವಿನ ಹಂದರದ ಮೇಲೆ ಅಗಲವಾಗಿ ಬಿಚ್ಚಿ ಹೊದಿಸುವನು. ಪ್ರತ್ಯೇಕವಾದ ಎಡೆಯಲ್ಲಿ ಬಿಡಿಸಿ ಈ ನೈವೇದ್ಯವನ್ನು ಬಾದಮೀ ನೈವೇದ್ಯ ಎಂದು ಹೇಳುವರು. ಪೂಜೆಯಾದ ಮೇಲೆ ಎಲ್ಲರಿಗೂ ಹಬ್ಬದ ಊಟವಾಗುವುದು. ಇದಿಷ್ಟೇ ಹಬ್ಬದ ಆಚರಣೆ.

ವೈಶಾಖದ ಅಮಾವಾಸ್ಯೆ, ಬಾದಮೀ ನೈವೇದ್ಯ ಈ ಮಾತುಗಳು ಕರ್ನಾಟಕದಲ್ಲಿ ಜೀವಂತವಾಗಿದ್ದ ಬಾದುಬ್ಬೆಯ ಅಮಾವಾಸ್ಯೆ ಅಥವಾ ಬಾದುಬ್ಬೆ ಪರ್ವದ ಅವಶೇಷವೆಂದು ಭಾವಿಸಲು ಅವಕಾಶಮಾಡಿಕೊಡುತ್ತದೆ. ಬಾದುಬ್ಬೆ ಎಂಬ ಪದ ಬಾದುಮೆ, ಬಾದುಂಬೆ, ಬಾದುಬೆ ಎಂಬ ರೂಪಗಳಲ್ಲಿಯೂ ದೊರಕುತ್ತದೆ. ಬಾದುಬ್ಬೆಯ ಪ್ರತಿಮೆಯೊಂದು ಇಂದಿಗೂ ಉಳಿದುಕೊಂಡು ಬಂದಿದೆ. (ಎಂ.ಸಿ.)

ಬಂಡಿಹಬ್ಬ: ಗ್ರಾಮದೇವತೆಯ ಹೆಸರಿನಲ್ಲಿ ನಡೆಸುವ ಈ ಹಬ್ಬವನ್ನು ಹಸುರು ಬಂಡಿ ಎಂದೂ ಕರೆಯುತ್ತಾರೆ. ಹಸಿರು ಎಲೆ ಚಿಗುರುಗಳ ತೋರಣ, ತೆಂಗಿನ ಗರಿ, ಅಡಕೆ ಹೊಂಬಾಳೆ ಇವುಗಳಿಂದ ಬಂಡಿಯನ್ನು (ಗಾಡಿ ಅಥವಾ ರಥ) ಅಲಂಕರಿಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಈ ಹಬ್ಬ ನಡೆಯುವುದು ಸಾಧಾರಣವಾಗಿ ಮಂಗಳವಾರ. ಗ್ರಾಮದೇವತೆಯ ವಿಗ್ರಹವನ್ನು ತಾತ್ಕಾಲಿಕವಾಗಿ ಮಣ್ಣಿನಲ್ಲಿ ಬಹು ಸುಂದರವಾಗಿ ನಿರ್ಮಿಸಿರುತ್ತಾರೆ. ಅಕ್ಕಿ ತೆಂಗಿನಕಾಯಿ ರಾಸಿರಾಸಿ ಬಿದ್ದಿರಲಾಗಿ ಗ್ರಾಮದೇವತೆ ಒಕ್ಲೂನ ಹಾಸ್ಕೊಂಡು ಒಕ್ಲೂನ ಹೊದ್ದು ಕಿವಿಯಲ್ಲಿ ಮುತ್ತಿಕ್ಕಿದ ಓಲೆ ತೊಟ್ಟು ಕಿಡಗಣ್ಣಿಯಾಗಿ ಮೆರೆಯುತ್ತಾಳೆ. ಭಕ್ತರು ಬಾಗಿಲಿಗೆ ಛತ್ರಿ ಏರಿಸುತ್ತಾರೆ. ಏಳೂರು ಸಿಡಿಗಳು ಬರುತ್ತವೆ. ಹೆಡಗೇಲಿ ಹಣ್ಣು, ಗಡಿಗೇಲಿ ತುಪ್ಪ, ಇಡಗಾಯಿಗಳು, ಕುರಿಗಳ ಸಾಲು ಮಡಲಕ್ಕಿ–ಎಲ್ಲ ಬರುತ್ತವೆ. ಕೆಲವರು ಊರುಗಳಲ್ಲಿ ಕೊಂಡವನ್ನೂ ಹಾಯುತ್ತಾರೆ. ಮೆರವಣಿಗೆಯಲ್ಲಿ ದೊಡ್ಡ ದೊಡ್ಡ ಪಂಜುಗಳು ಉರಿಯುತ್ತವೆ. ಭಕ್ತರು ಭಕ್ತಿಯಿಂದ ದೇವತೆಯ ಮಹಿಮೆಯನ್ನು ಕುರಿತು ಹಾಡುತ್ತಾರೆ. ದೇವತೆಯನ್ನು ಬಂಡಿಯ ಮೇಲೆ ಮೆರವಣಿಗೆಯಲ್ಲಿ ಕೊಂಡೊಯ್ಯುವಾಗ ಅಕ್ಕಪಕ್ಕದಲ್ಲಿ ದಾಸ ಮತ್ತು ಪುರುಷ (ಧಾರ್ಮಿಕ ಪೂಜಾರಿ) ಇರುತ್ತಾರೆ. ದಾಸ, ಹೆಗಲ ಮೇಲೆ ಕಿರುಗಂಟೆ ಕಟ್ಟಿದ ಒಂದು ಒನಕೆ, ಎಡಕಂಕುಳಲ್ಲಿ ಕಡಾಸು, ಬವನಾಸಿ, ಬಲ ಕಂಕುಳಲ್ಲಿ ತುತ್ತೂರಿ, ಭಾಂಕಿ, ಶಂಖ, ಎದೆಯ ಮೇಲೆ ಆನೆಯ ವಿಗ್ರಹ, ಬಲಗೈಯಲ್ಲಿ ಜಾಗಟೆ ಹಿಡಿದಿರುತ್ತಾನೆ. ಪುರುಷ, ಭೈರವನ ಶಿಷ್ಯ, ಈತ ಕಬ್ಬಿಣದ ದೊಡ್ಡ ತ್ರಿಶೂಲ, ಬೆಳ್ಳಿಯ ಸಣ್ಣ ತ್ರಿಶೂಲಗಳನ್ನು ಸೇರಿಸಿದ ನವಿಲುಗರಿ ಕಂತೆಯನ್ನು ಹೆಗಲ ಮೇಲೆ ಇಟ್ಟುಕೊಂಡು ಕಂಕುಳಲ್ಲಿ ವಿಭೂತಿ ಚೀಲ, ಕೈಯಲ್ಲಿ ಜಿಂಕೆಯ ಕೊಂಬಿನ ವಾದ್ಯ, ತೀರ್ಥದ ಬಟ್ಟಲು ಇವನ್ನು ಹಿಡಿದಿರುತ್ತಾನೆ. ಸುಮಂಗಲಿಯರು ಐರಣ (ಪಂಚಕಲಶ) ಹೊತ್ತು ನಡೆಯುವರು. ಒಬ್ಬ ಆಚಾರಿ ಬಣ್ಣಹಾಕಿದ ಮರದ ಕುದುರೆಯ ಒಂದು ಕತ್ತನ್ನು ಕಂಕುಳಲ್ಲಿ ಹಿಡಿದುಕೊಂಡು ಕುಣಿಯುತ್ತಾನೆ (ಹಿಂದೆ ಒಂದು ಸಲ ಬಸವ, ಈಶ್ವರನ ಸನ್ನಿಧಿಗೆ ಹಿಂದಿರುಗದೆ ಇದ್ದುದರಿಂದ ಭೂಲೋಕದ ಆಚಾರಿಗಳು (ಬಡಗಿಗಳು) ಒಂದು ಕೀಲುಕುದುರೆ ಮಾಡಿ, ಈಶ್ವರನ ಬಳಿಗೆ ಕೊಂಡು ಹೋಗಿ ಅದರಿಂದಲೇ ಬೇಸಾಯ ಮಾಡುವುದಾಗಿ ಹೇಳಿದರಂತೆ. ಸೃಷ್ಟಿ ಒಮ್ಮುಖವಾಗಿರಲಿ ಎಂದು ಯೋಚಿಸಿ ಈಶ್ವರ ಬಸವನನ್ನು ಭೂಲೋಕಕ್ಕೆ ಕಳಿಸಿದನೆಂದು ಒಂದು ಜನಪದ ಕಥೆ ಇದೆ).

ಗ್ರಾಮದೇವತೆಗೆ ಹರಕೆ ಹೊತ್ತವರೆಲ್ಲ ತಮ್ಮ ತಮ್ಮ ಶಕ್ತಿಗನುಗುಣವಾಗಿ ಹರಕೆ ತಂದು ಒಪ್ಪಿಸುತ್ತಾರೆ. ಆಡು, ಕುರಿ, ಅಸಂಖ್ಯಾತ ಕೋಳಿಗಳು ಬಲಿಯಾಗುತ್ತವೆ. ಭಕ್ತರು ಮಾಲೆ, ಕಣ್ಣಪ್ಪು ಎಲ್ಲವನ್ನೂ ತಂದು

ಗ್ರಾಮ ದೇವತೆಗೆ ಒಪ್ಪಿಸುತ್ತಾರೆ. ತಾಯಿಯವರು ಮಗುವಿಗೆ ಹೆಸರಿಡು ಎಂದು ಬೇಡುತ್ತಾರೆ. ಕೋಲಾಟ, ದೊಣ್ಣೆ ವರಸೆ, ಪಟ್ಟಾವರಸೆ, ರಮಡೋಲು, ವಾದ್ಯ, ಬಾಣಬಿರುಸು–ಎಲ್ಲ ನಡೆಯುತ್ತವೆ. ಕೆಲವೆಡೆ ಬಂಡಿಹಬ್ಬಕ್ಕೂ ಹಂದಿಮಾಂಸದ ಊಟಕ್ಕೂ ಗಂಟು. ಈ ಊಟದ ಅನಂತರ ತಮಟೆಗಳ ರಣವಾದ್ಯದ ಗತ್ತಿಗೆ ಅನುಗುಣವಾಗಿ ಕೈಯಲ್ಲಿ ಕೆಂಪು ವಸ್ತ್ರದ ಚೌಕಗಳನ್ನು ಹಿಡಿದುಕೊಂಡು ಆಯಾಸವಾಗುವವರೆಗೆ ಕೆಲವರು ವೀರಕುಣಿತವನ್ನು ಕುಣಿಯುತ್ತಾರೆ. ಕೊಂಬು ಕಹಳೆ ತುತ್ತೂರಿ ಕುಣಿಮಿಣಿ ತಾಳ ತಮಟೆ ಮೋರಿಗಳ ಕೋಲಾಹಲದೊಂದಿಗೆ ಕುಣಿತ ಕೊನೆಯಾಗುತ್ತದೆ.

**ಹುತ್ತರಿ:** ಕೊಡಗಿನ ಹಬ್ಬಗಳಲ್ಲೆಲ್ಲ ಅತ್ಯಂತ ವರ್ಣರಂಜಿತವಾದ ಈ ಹಬ್ಬ ನವೆಂಬರ್, ಡಿಸೆಂಬರ್ ತಿಂಗಳ ಹುಣ್ಣಿಮೆ ದಿನಗಳಲ್ಲಿ ನಡೆಯುತ್ತದೆ. ಪೂದಿ+ಅರಿ=ಪುತ್ತರಿ < ಹುತ್ತರಿ ಎಂದರೆ ಹೊಸ ಅಕ್ಕಿ ಎಂದರ್ಥ. ಗದ್ದೆಯಲ್ಲಿ ಹುಲುಸಾಗಿ ಬೆಳೆದು ನಿಂತ ಬತ್ತದ ಪೈರನ್ನು ಆರಾಧಿಸಿ ಕುಯಿಲು ಮಾಡಿ ವಿಧ್ಯುಕ್ತವಾಗಿ ಮನೆ ತುಂಬಿಸಿಕೊಳ್ಳುವ ಸುಮುಹೂರ್ತವೇ ಹುತ್ತರಿ. ಈ ಹಬ್ಬ ಹಿಂದೆ ಮೂರು ದಿನ ದೇವಪೊಳ್ದು, ಅರಮನೆ ಪೊಳ್ದು, ನಾಡ್ ಪೊಳ್ದು ಎಂಬ ಹೆಸರಿನಲ್ಲಿ ನಡೆಯುತ್ತಿತ್ತು. ಊರಿನ ದೇವಸ್ಥಾನಕ್ಕೆ ಸೇರಿದ ಭೂಮಿಯಲ್ಲಿ ಬೆಳೆ ಕುಯ್ಯುವ ಸಮಾರಂಭ ದೇವಪೊಳ್ದು. ಅರಸರ ಗದ್ದೆಯ ಬೆಳೆ ಕುಯ್ಯುವ ಸಮಾರಂಭ ಅರಮನೆ ಪೊಳ್ದು. ತಮ್ಮ ಊರಿನ ಗದ್ದೆಯ ಕುಯಿಲಿನ ಸಮಾರಂಭ ನಾಡ್‌ಪೊಳ್ದು. ಈಗ ನಾಡ್‌ಪೊಳ್ದು ಮಾತ್ರ ವಿಜೃಂಭಣೆ ಯಿಂದ ನಡೆಯುತ್ತದೆ. ರೋಹಿಣಿ ನಕ್ಷತ್ರದಲ್ಲೇ ಕದಿರು(ಬುಡಮಟ್ಟ ಇರುವ ಬತ್ತದ ಸಸಿ) ತೆಗೆಯುವುದರಿಂದ ಆ ನಕ್ಷತ್ರ ಇರುವ ದಿನ ರಾತ್ರಿ ಕದಿರು ತೆಗೆಯುವವರು ರಾತ್ರಿ ತೆಗೆಯುತ್ತಾರೆ, ಹಗಲು ತೆಗೆಯುವವರು ಹಗಲು ತೆಗೆಯುತ್ತಾರೆ.

ಪೊಳ್ದುದಿನ ಪ್ರತಿಯೊಬ್ಬ ಕೊಡವನು ತಾನು ಎಲ್ಲಿದ್ದರೂ ತನ್ನ ಐನ್ ಮನೆಗೆ(ಮನೆತನದ ಮೂಲಪುರುಷನ ಮನೆ) ಬರಲೇಬೇಕು. ಅಂದು ಕುಟುಂಬದ ಜನರು ಮಾತ್ರವಲ್ಲ ಕುಟುಂಬಕ್ಕೆ ಸೇರಿದ ಆಳುಗಳೂ ಪ್ರಾಣಿಗಳೂ ಮನೆಗೆ ಬಂದಿರಬೇಕು. ದೂರದ ಊರಲ್ಲಿ ಮೇಯಲು ಬಿಟ್ಟಿರುವ ದನಕರುಗಳನ್ನೂ ಆ ದಿನ ಅಟ್ಟಿಕೊಂಡು ಬರುತ್ತಾರೆ. ಪ್ರಾಣಿಗಳಿಗೆ ಮೈತೊಳೆದು ಅವುಗಳ ಕೊರಳಿಗೆ ಗೆಜ್ಜೆ ಮುಂತಾದುವುಗಳನ್ನು ಕಟ್ಟಿ ಅಲಂಕರಿಸುವುದಲ್ಲದೆ ಸುಣ್ಣಬಣ್ಣಗಳಿಂದ ಮನೆಯನ್ನೂ ಮನೆಗೆ ಸೇರುವ ರಸ್ತೆ, ಓಣಿಗಳನ್ನೂ ಶುಚಿಗೊಳಿಸಿ, ತೋರಣ ಕಟ್ಟಿ, ಪ್ರತಿ ಬಾಗಿಲಿಗೂ ಚೆಂಡು ಹೂವಿನ ಹಾರಗಳನ್ನು ಕಟ್ಟಿ ಅಲಂಕರಿಸುತ್ತಾರೆ.

ಪೊಳ್ದುದಿನ ಗ್ರಾಮದ ಬಿದಿರುಕೆಲಸ ಮಾಡುವವನು ಹುತ್ತರಿಕುಕ್ಕೆಯನ್ನು (ಪುತ್ತರಿ ಪಚ್ಚೆಯ), ಕುಂಬಾರನು ಹುತ್ತರಿಯ ಕುಡಿಕೆಯನ್ನು, ಚಾಪೆ ಹೆಣೆಯವವನು ಚಾಪೆಯನ್ನು, ಮರಗೆಲಸದವನು ಕುತ್ತಿಯನ್ನು, ಬಡಗಿ ಕತ್ತಿಯನ್ನು ತಂದು ಕೊಡಬೇಕು. ಈ ವಸ್ತುಗಳನ್ನು ಒದಗಿಸುವವರಿಗೆ ಅಕ್ಕಿ, ಬೆಲ್ಲ, ಬಾಳೆ, ಉಪ್ಪು, ಮೆಣಸು, ತೆಂಗಿನ ಎಣ್ಣೆ, ಎಳ್ಳು, ತೆಂಗಿನ ಕಾಯಿ, ಹುತ್ತರಿಗೆಣಸು ಮೊದಲಾದುವನ್ನು ಕೊಟ್ಟು ಸತ್ಕರಿಸುತ್ತಾರೆ. ಊರಿನ ದೇವಸ್ಥಾನದ ಪೂಜಾರಿ ಊರಿನ ಪ್ರತಿಮನೆಗೆ ಹೋಗಿ ಪುಣ್ಯತೀರ್ಥವೆಂದು ನೀರು ಚಿಮುಕಿಸಿ ಮನೆಯನ್ನು ಶುದ್ಧಿಗೊಳಿಸುತ್ತಾನೆ.

ಹೀಗೆ ಎಲ್ಲ ಸಿದ್ಧತೆಗಳಾದ ಮೇಲೆ ಮನೆಯ ನೆಲ್ಲಕ್ಕಿ ನಡುಬಾಡೆಯನ್ನು (ಪೂಜಾಗೃಹ) ಗುಡಿಸಿ, ಶುದ್ಧಮಾಡಿ, ತೂಗುದೀಪದ ಕೆಳಗೆ ಹುತ್ತರಿ ಚಾಪೆಯನ್ನು ಹಾಸಿ, ಅದರ ಮೇಲೆ ಹುತ್ತರಿ ಕುಕ್ಕೆಯಲ್ಲಿ ಮಾವಿನ ಎಲೆ, ಅರಳಿ ಎಲೆ, ಅಬ್ಬಿನಾರು ಮೊದಲಾದುವನ್ನು ಇಡುತ್ತಾರೆ. ಹುತ್ತರಿಕುಕ್ಕೆಯ ತುಂಬ ಬತ್ತವನ್ನು ತುಂಬಿಡುತ್ತಾರೆ. ಅದರ ಮೇಲೆ ಒಂದು ಬಳ್ಳದಲ್ಲಿ (ಸೇರು) ಅಕ್ಕಿಯನ್ನು, ಅದರ ಮೇಲೆ ಮಾನದಲ್ಲಿ (ಅರ್ಧಸೇರು) ಅಕ್ಕಿಯನ್ನು, ಅದರ ಮೇಲೆ ಹುತ್ತರಿಕುಡಿಕೆಯನ್ನು ತಂಬಿಟ್ಟುಪುಡಿ ತುಂಬಿ ಇಡುತ್ತಾರೆ. ಅನಂತರ ಚಾಪೆಯ ಮೇಲೆ ಹಾಲು, ತುಪ್ಪ, ಜೇನು, ಎಳ್ಳು, ಶುಂಠಿ, ತೆಂಗಿನಕಾಯಿ, ಹಾಗಲಮುಳ್ಳು ಮೊದಲಾದವನ್ನು ಇಡಬೇಕು. ಹತ್ತಿರದಲ್ಲಿ ಒಂದು ಕುಡುಗೋಲು, ವೀಳ್ಯದೆಲೆ, ಅಡಕೆಗಳನ್ನು ಇಡಬೇಕು. ಅಷ್ಟರಲ್ಲಿ ಕುಟುಂಬದ ವಾದ್ಯಗಾರ ನಾದ ಮೇದ ಕದ್‌ಪರೆ ಹೊಡೆಯಲು ಪ್ರಾರಂಭಿಸುತ್ತಾನೆ. ಆಗ ಕುಟುಂಬದ ಮುತ್ತೈದೆಯೊಬ್ಬಳು ಅಕ್ಕಿಹಿಟ್ಟಿನ ರಂಗೋಲಿಯಿಂದ, ಅಲ್ಲಿರುವ ಮಡಕೆ, ಕತ್ತಿ, ಕದಿರು(ಬತ್ತದ ತೆನೆ) ತೆಗೆಯುವ ಕುತ್ತಿ ಈ ಎಲ್ಲವುಗಳ ಮೇಲೂ ಸುಂದರ ಚಿತ್ರವನ್ನು ಬಿಡಿಸುವಳು(ಇದಕ್ಕೆ ಕುರಿಪ ಎನ್ನುತ್ತಾರೆ). ಈ ರೀತಿ ಸಿದ್ಧತೆಯನ್ನು ನೆರೆಕಟ್ಟುವುದು ಎನ್ನುತ್ತಾರೆ.

ನೆರೆಕಟ್ಟ ಆದಮೇಲೆ ಗೆಣಸನ್ನು ಬೇಯಿಸಿ, ಅದಕ್ಕೆ ಜೇನು, ತುಪ್ಪ, ಬೆಲ್ಲ(ಅಥವಾ ಸಕ್ಕರೆ) ಎಲ್ಲವನ್ನು ಸೇರಿಸಿ ರಸಾಯನದ ರೀತಿಯಲ್ಲಿ ತಯಾರಿಸಿದ ತಿಂಡಿಯನ್ನು ಮನೆಯವರೆಲ್ಲ ಸೇರಿ ತಿನ್ನುವರು. ಅನಂತರ ಎಲ್ಲರೂ ಹೊಸ ಉಡಿಗೆ ತೊಡಿಗೆಗಳನ್ನು ಧರಿಸಿ, ತೂಗುದೀಪದ ಎದುರು ನಿಲ್ಲಬೇಕು. ಆಗ ಮನೆತನದ ಹಿರಿಯ, ಕದಿರು ತೆಗೆಯುವ ಕುತ್ತಿಯನ್ನು ಅದಕ್ಕಾಗಿ ನಿಯಮಿಸಲ್ಪಟ್ಟ ವ್ಯಕ್ತಿಗೆ ಕೊಡುತ್ತಾನೆ. ಕೊಡುವಾಗ, ಕಾಲೋಂರಾಂಡೆಕೊಮ್ಮ ಪುತ್ತರಿ ಪೊಳ್ದ್ ಕೊವ್ವಕ್ ಮೋಪಾಂಗಾಯಿತ್ ಪೊಳ್‌ದ್ ಕುತ್ತಿ ಎಡಪಲ್ಲಿಕ್ ತಟ್ಟ್ ಮುಟ್ಟ್ ಇಲ್ಲತನಕೆ ನಡತಿತಪ್ಪ ಭಾರ ಇಗ್ಗತಪ್ಪಂಗೂ ಈ ಗುರುಕಾರಣವಂಗೂ ಕೂಡಿತ್ತುಂಡು. ಒಂದು ವರ್ಷಕ್ಕೆ ಒಂದೇ ಸಲ ಹುತ್ತರಿಹಬ್ಬ ಬರುತ್ತದೆ. ಕುಯ್ಲಿಗೆ ಹೋಗುವಾಗ, ಹಬ್ಬದ ಕುತ್ತಿ ತೆಗೆಯುವಾಗ ತಪ್ಪು ನೆಪ್ಪು ಇಲ್ಲದ ಹಾಗೆ ನಡೆಸುವ ಬಾ ಇಗ್ಗುತಪ್ಪ, ಗುರುಕಾರಣ ಇಬ್ಬರೂ ಕೂಡಿದ್ದಾರೆ ಇಂದು ಇಲ್ಲಿ– ಎಂದು ಎಚ್ಚರಿಕೆ ಕೊಡುತ್ತಾನೆ. ಅನಂತರ ಮನೆಯವರೆಲ್ಲ ಆ ಹಿರಿಯನಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಆಗ ಮುತ್ತೈದೆಯೊಬ್ಬಳು ತಳಿಯಕ್ಕಿಬೊಳಕನ್ನು ತೆಗೆದು ಕೊಳ್ಳುತ್ತಾಳೆ (ಕಂಚಿನ ತಟ್ಟೆಯಲ್ಲಿ ಸ್ವಲ್ಪ ಅಕ್ಕಿಯನ್ನು ಹರಡಿ, ಅದರ ಮೇಲೆ ಮಣ್ಣಿನ ಹಣತೆ ಹಚ್ಚಿಕೊಳ್ಳುವಿಕೆ. ಇದೇ ತಟ್ಟೆಯಲ್ಲಿ ಚಿಕ್ಕದಾದ ಬಿಳಿಯ ಚೌಕವೊಂದನ್ನು ಸಹ ಇಟ್ಟಿರುತ್ತಾರೆ). ಅನಂತರ ಆಕೆಯ ಹಿಂದೆ ಕದಿರು ಕುಯ್ಯಲು ಗದ್ದೆಗೆ ಹೊರಡುತ್ತಾರೆ. ಕದಿರು ತೆಗೆಯುವ ಗದ್ದೆಗೆ ದಾರಿ ಸರಿಪಡಿಸಿ, ತೋರಣ ಹಾಗೂ ಬಾಳೆಕಂಬಗಳನ್ನು ಕಟ್ಟಿ ಅಲಂಕರಿಸಿರುತ್ತಾರೆ. ಕುಟುಂಬದ ವಾದ್ಯಗಾರರ ಜೊತೆ ಮನೆಯವರೆಲ್ಲ ಗದ್ದೆಗೆ ಬರುತ್ತಾರೆ. ಕುತ್ತಿಯಲ್ಲಿರುವ ಹಾಲು, ಜೇನು ಮೊದಲಾದುವನ್ನು ಕದಿರಿನ ಬುಡಕ್ಕೆ ಸುರಿಯುತ್ತಿರುವಂತೆಯೇ ಅವರಲ್ಲೊಬ್ಬ ಆಕಾಶದತ್ತ ಕೋವಿ ಹಿಡಿದು ಕುಶಾಲುತೋಪು ಹಾರಿಸುತ್ತಾನೆ. ಕುಯ್ಯುವವರು ದೇವರನ್ನು ನೆನೆದು ಕದಿರು ಕುಯ್ಯುತ್ತಾರೆ. ಆಗ ಎಲ್ಲರೂ ಪೊಲಿ ಪೊಲಿ ದೇವ (ಅನ್ನ ಲಕ್ಷ್ಮಿಯೇ ಅಕ್ಷಯವಾಗು) ಎಂದು ಕೂಗುತ್ತಾರೆ. ಕುಯ್ದ ಕದಿರನ್ನು ಕುತ್ತಿಯೊಳಗಿಟ್ಟು ಕುತ್ತಿ ತೆಗೆಯುವವನ ತಲೆಯ ಮೇಲಿಡುತ್ತಾರೆ. ಅನಂತರ ಉಳಿದವರೆಲ್ಲರೂ ಕದಿರನ್ನು ಕೈಗಳಲ್ಲಿ ಹಿಡಿದುಕೊಂಡು ಪೊಲಿ ಪೊಲಿ ದೇವ ಎಂದು ಕೂಗುತ್ತ ಮನೆಯ ಕೈಮಡ, ಸಮಾಧಿ ಮೊದಲಾದ ಸ್ಥಳಗಳಲ್ಲಿ ಕದಿರು ಇಟ್ಟು ಅನಂತರ ಮನೆಗೆ ಬರುತ್ತಾರೆ. ಮನೆಯ ಹೊರಭಾಗದಲ್ಲಿ ಮುತ್ತೈದೆಯೊಬ್ಬಳು ಚೊಂಬಿನಲ್ಲಿ ನೀರು ಹಿಡಿದು ಅವರನ್ನು ಸ್ವಾಗತಿಸಿ, ಕುತ್ತಿ ತೆಗೆದವನ ಕಾಲು ತೊಳೆದು ಅವನಿಗೆ ಕುಡಿಯಲು ಹಾಲು ಕೊಡುತ್ತಾಳೆ. ಅನಂತರ ಮನೆಯನ್ನು ಪ್ರವೇಶಿಸಿ, ನೆಲ್ಲಕ್ಕಿ ನಡುಬಾಡೆಯ ಚಾಪೆಯ ಮೇಲೆ ಕುತ್ತಿಯನ್ನು ಇಡುತ್ತಾರೆ. ಉಳಿದವರು ತಾವು ತಂದ ಕದಿರನ್ನು ಚಾಪೆಯ ಮೇಲಿಡುತ್ತಾರೆ. ಅನಂತರ ಕದಿರಿನ ಮಾಲೆ ಮಾಡಿ

ಜೊತೆಗೆ ಮಾವಿನ ಮತ್ತು ಅರಳಿಯ ಎಲೆಯನ್ನು ಜೋಡಿಸಿ ಮನೆಯ ಬಾಗಿಲುಗಳಿಗೆ ತೋರಣ ಕಟ್ಟುತ್ತಾರೆ.

ಕುತ್ತಿಯನ್ನು ಹಿಡಿದಿದ್ದವನು ಹಿರಿಯನಿಗೆ ನಮಸ್ಕರಿಸುತ್ತಾನೆ (ಕುತ್ತಿಯನ್ನು ಹಿಡಿದಿದ್ದಾಗ ಆತ ಯಾರಿಗೂ ನಮಸ್ಕರಿಸಬಾರದು). ಇದಾದನಂತರ ತಂಬಿಟ್ಟು ಎಳ್ಳು, ಹಾಗಲ ಮುಳ್ಳು, ತೆಂಗಿನಕಾಯಿಯ ಚೂರು, ಕಲ್ಲುಹರಳು, ಪೆರೆಂಬು ಕೊಡಿಗಳನ್ನೂ ಹಾಲು, ಜೇನು, ಪುಡಿಕಾಸು (ಚಿಲ್ಲರೆ ಹಣ), ಚಿನ್ನದ ಚೂರು, ಬಾಳೆಹಣ್ಣುಗಳನ್ನೂ ಕಲಸಿ, ಕಲಸಿದ ಹಿಟ್ಟನ್ನು ಸಣ್ಣ ಉಂಡೆಗಳಾಗಿ ಮಾಡಿ ಅರಳಿ ಎಲೆಯ ಮೇಲಿಟ್ಟು, ಸತ್ತ ಹಿರಿಯರ ಹೆಸರನ್ನು ಹೇಳುತ್ತ ಒಂದೊಂದಾಗಿ ಮನೆಯ ಮೇಲೆ ಎಸೆಯುತ್ತಾರೆ. ಹೀಗೆ ಎಸೆದ ಹಿಟ್ಟಿನ ಉಂಡೆ ಎಲೆಯ ಸಹಿತ, ಮಾಡಿನಲ್ಲಿ (ಮಚ್ಚು) ಅಂಟಿಕೊಂಡರೆ ತಮ್ಮ ಹಿರಿಯರಿಗೆ ತೃಪ್ತಿಯಾಗಿದೆ ಎಂದು ನಂಬಿಕೆ. ಇದರ ಜೊತೆಗೆ ಕನ್ಯೆ ಅಥವಾ ಮುತ್ತೈದೆಯೊಬ್ಬಳು ಆ ದಿನ ತಯಾರಿಸಿದ ಭಕ್ಷ್ಯಗಳನ್ನು ಅಗ್ರದ ಬಾಳೆಎಲೆಯಲ್ಲಿ ಸ್ವಲ್ಪ ಇರಿಸಿ, ಅದನ್ನು ಸಮಾಧಿ ಮತ್ತು ಕನ್ನಿಕೋಂಬರೆಯಲ್ಲಿ ನೈವೇದ್ಯವೆಂದು ಇಡುತ್ತಾಳೆ. ಅನಂತರ ಮನೆಯವರೆಲ್ಲ ಹಬ್ಬದ ಊಟ ಮಾಡುವರು. ಊಟಕ್ಕೆ ಮೊದಲು ಏಳಕ್ಕಿ ಹಿಟ್ಟನ್ನು ಸೇವಿಸಿ, ಆಮೇಲೆ ಇತರ ಭಕ್ಷ್ಯಗಳನ್ನು ತಿನ್ನುತ್ತಾರೆ. ಊಟಮಾಡುವಾಗ ಕಲ್ಲು ದೊರೆತರೆ ಆತನಿಗೆ ಕಲ್ಲಿನಷ್ಟೇ ಆಯುಸ್ಸೆಂದೂ ಚಿನ್ನದ ಚೂರು ಕಾಸು ಮುಂತಾದವು ಸಿಕ್ಕರೆ ಆತ ಸಿರಿವಂತನಾಗುವನೆಂದೂ ನಂಬಿಕೆ. ಪೊಳ್ದು ಮುಗಿದ ಅನಂತರ ಐದು ದಿನಗಳ ಕಾಲ ಊರಿನ ಮಂಡ್‌ನಲ್ಲಿ ಊರಿನವರೆಲ್ಲ ಕಲೆತು ಕೋಲಾಟವನ್ನು ಆಡುತ್ತಾರೆ.

**ನೋಡಿ : ಹುತ್ತರಿ ಕುಣಿತ** **(ಡಿ.ಬಿ.ಆರ್.)**

**ಮುಸ್ಲಿಮರ ಹಬ್ಬಗಳು:** ಕರ್ನಾಟಕದಲ್ಲಿ ಆಚರಿಸಲ್ಪಡುವ ಮುಸ್ಲಿಮರ ಹಬ್ಬಗಳು ಭಾರತ ಹಾಗೂ ಪ್ರಪಂಚದ ಎಲ್ಲ ಕಡೆ ನಡೆಯುವ ದಿನಗಳಲ್ಲೇ ನಡೆಯುತ್ತವೆ. ಈ ಹಬ್ಬಗಳು ವಿಶೇಷವಾಗಿ ಚಾಂದ್ರಮಾನ ವರ್ಷಕ್ಕನುಗುಣವಾಗಿ ಆಚರಿಸಲ್ಪಡುತ್ತವೆ. ಪ್ರವಾದಿ ಮಹಮದ್ ಕ್ರಿ. ಪೂ. 622ರಲ್ಲಿ ತನ್ನ ವಾಸಸ್ಥಾನವನ್ನು ಮೆಕ್ಕಾದಿಂದ ಮದೀನಾಕ್ಕೆ ವರ್ಗಾಯಿಸಿದ. ಹೀಗೆ ವರ್ಗಾಯಿಸಲು ತೆಗೆದುಕೊಂಡು ಕಾಲವನ್ನು ಹಿಜಿರ ಎಂಬುದಾಗಿ ಕರೆಯುತ್ತಾರೆ. ಮೊಹರಂ, ಈದ್ ಎ ಮಿಲಾದ್, ಗೆಹೆರೆ ಹುನ್‌ಶರೀಫ್, ಶಬ್ ಎ ಮಿರಾಜ್, ಶಬ್ ಎ ಬರಾತ್, ಶಬ್ ಎ ಕುದರ್, ಈದ್ ಎ ರಂಜಾನ್, ಬಕ್‌ರೀದ್–ಈ ಎಂಟು ಹಬ್ಬಗಳನ್ನು ವರ್ಷದಲ್ಲಿ ಕಾಲಾನುಸಾರವಾಗಿ ಎಲ್ಲ ವರ್ಗದ ಮುಸ್ಲಿಮರು ಆಚರಿಸುತ್ತಾರೆ.

ಮೊಹರಂ: ಈ ಹಬ್ಬದ ನಿಜವಾದ ಹೆಸರು ಹಷುರಾ ಎಂದು. ಈ ದಿನ ಮೊಹರಂ ತಿಂಗಳಿನ ಹತ್ತನೆಯ ದಿನವಾಗಿದ್ದು ಹಿಜಿರ ತಿಂಗಳ ಮೊದಲ ಶುಭದಿನವಾಗಿರುತ್ತದೆ ಹಾಗೂ ಪುಣ್ಯದಿನವೆಂಬುದಾಗಿ ಮುಸ್ಲಿಮರಿಂದ ಭಾವಿಸಲ್ಪಡುತ್ತದೆ. ಪ್ರಪಂಚದ ಧರ್ಮಕಾರ್ಯ ಅಂದೇ ಮಹಿಮಾವಂತ ಮುಸ್ಲಿಂ ಗುರುಗಳಿಂದ ಪ್ರಾರಂಭಿಸಲ್ಪಟ್ಟಿತು ಹಾಗೂ ಗುರುಗಳು ಹಾಕಿದ ಸನ್ಮಾರ್ಗದಲ್ಲಿ ನಡೆಯುವ ಕಾರ್ಯಕ್ರಮಗಳು, ಅವುಗಳಲ್ಲಿ ಉಪವಾಸವ್ರತ ಹೆಚ್ಚು ಮಹತ್ತ್ವ ಉಳ್ಳದ್ದು ಹಾಗೂ ಕಡ್ಡಾಯ. ಎಲ್ಲ ವರ್ಗದ ಮುಸ್ಲಿಮರು ಇದನ್ನು ಶ್ರದ್ಧೆಯಿಂದ ಪರಿಪಾಲಿಸುತ್ತಾರೆ. ಈ ಹಬ್ಬವನ್ನು ಪ್ರವಾದಿ ಮಹಮದ್ ಸಹ ಆಚರಿಸುತ್ತಿದ್ದನೆಂದು ಪ್ರತೀತಿ. ದುರ್ದೈವದಿಂದ ಮಹಮದ್‌ನ ಮಗಳ ಮಗನಾದ ಹುಸೇನ್, ಆತನ ಮಕ್ಕಳೂ ಆಪ್ತವರ್ಗವೂ ಕರ್ಬಲಾ ಎಂಬ ಜಾಗದಲ್ಲಿ ತಮ್ಮ ವಿರೋಧಿ ಗುಂಪಾದ ಯಾಜೀದ್ ತಂಡದವರಿಂದ ಅಮಾನುಷವಾಗಿ ಕೊಲ್ಲಲ್ಪಟ್ಟರು. ಈ ಪುಣ್ಯದಿನವನ್ನು ಹುತಾತ್ಮ ಹುಸೇನ್‌ನ ಆತ್ಮಶಾಂತಿಗಾಗಿ ಉಪವಾಸ ದಿನವಾಗಿ ಆಚರಿಸುತ್ತಾರೆ. **ನೋಡಿ : ಮೊಹರಂ ಹಾಡುಗಳು.**

ಈದ್ ಎ ಮಿಲಾದ್ ಬರ್‌ಹನ್ ಶರೀಫ್ : ಗುರು ಮಹಮದ್‌ನ ಜನ್ಮದಿನವಾದ ಮೂರನೆಯ ಚಾಂದ್ರಮಾನ ವರ್ಷದ ರಾಭಿ ಅಲ್ ಅವಾಲ್ ತಿಂಗಳಿನ ಹನ್ನೆರಡನೆಯ ದಿನದಂದು ಈ ಹಬ್ಬವನ್ನು ಆಚರಿಸುತ್ತಾರೆ. ಹಬ್ಬದ ಹಿಂದಿನ ರಾತ್ರಿ ಮುಸ್ಲಿಮರು ತಂಡತಂಡವಾಗಿ ಮಸೀದಿಗಳಲ್ಲಿ ಸೇರಿ ಸಂತಸದಿಂದ ಮಹಮದ್ ಕಾರ್ಯಗಳನ್ನು ಶ್ಲಾಘಿಸುತ್ತ ಆತ ನೀಡಿದ ಸಂದೇಶಗಳನ್ನು ಸ್ಮರಿಸಿ ಹಾಡಿ ಭಜಿಸುತ್ತಾರೆ.

ಗೆಹೆರೆ ಹುನ್ ಶರೀಫ್: ಈ ಹಬ್ಬವನ್ನು ಚಾಂದ್ರಮಾನವರ್ಷದ ರಾಭಿ ಅಲ್‌ನಾನಿ ತಿಂಗಳ ಹನ್ನೊಂದನೆಯ ದಿನದಂದು ಆಚರಿಸುತ್ತಾರೆ. ಈ ದಿನ ಮೇಧಾವಿ ಕವಿ, ಸುಜ್ಞಾನಿ ಹಾಗೂ ಪಾಮರನಾದ ಸೈಯದ್ ಅಬ್ದುಲ್ ಕದೀರ್ ಅವರ ವಾರ್ಷಿಕ ಸಮಾರಂಭದ ದಿನವಾಗಿದೆ.

ಶಬ್ ಎ ಮಿರಾಜ್: ಈ ಹಬ್ಬ ಚಾಂದ್ರಮಾನ ವರ್ಷದ ಏಳನೆಯ ತಿಂಗಳ ಇಪ್ಪತ್ತೇಳನೆಯ ರಾತ್ರಿ ಆಚರಿಸಲ್ಪಡುತ್ತದೆ. ಪ್ರವಾದಿ ಮಹಮದ್ ಸ್ವರ್ಗ ಹಾಗೂ ನರಕವನ್ನು ದೇವದೂತನೊಂದಿಗೆ (ಗೇಬ್ರಿಯಲ್) ಸಂದರ್ಶಿಸಿ ಪರಮಾತ್ಮನ ದಿನವ್ಯ ಜ್ಯೋತಿಯ ಸಾಕ್ಷಾತ್ಕಾರ ಮಾಡಿಕೊಂಡು ಅಪೌರುಷೇಯ ಪವಾಡವನ್ನು ಮಾಡಿದನೆಂದು ನಂಬುವ ಮುಸ್ಲಿಮರು ಈ ದಿನ ರಾತ್ರಿ ಮಹಮದ್‌ನನ್ನು ಪ್ರಾರ್ಥಿಸುತ್ತಾರೆ.

ಶಬ್ ಎ ಬರಾತ್: ಈ ಹಬ್ಬ ಚಾಂದ್ರಮಾನ ವರ್ಷದ ಎಂಟನೆಯ ತಿಂಗಳ ಹದಿನೈದನೆಯ ರಾತ್ರಿ ಆಚರಿಸಲ್ಪಡುತ್ತದೆ. ಈ ದಿನದಂದು ಮುಸ್ಲಿಮರು ತಮ್ಮ ಬಂಧುಗಳ ಮನೆಗೆ ಭೇಟಿ ನೀಡಿ ಒಬ್ಬರನ್ನೊಬ್ಬರು ಆಲಿಂಗಿಸಿ ಹಿಂದಿನ ಸತ್ಯಸಂಗತಿ ಹಾಗೂ ಧರ್ಮಗಳನ್ನು ನೆನೆಸಿಕೊಂಡು ಹಿರಿಯರಿಗೆ ತಮ್ಮ ಗೌರವವನ್ನು ಸಲ್ಲಿಸುತ್ತಾರೆ. ತಮ್ಮ ಪಾಪವನ್ನು ಹೋಗಲಾಡಿಸಿಕೊಳ್ಳಲು ಮತ್ತು ಉತ್ತಮ ಮಾರ್ಗದರ್ಶನಕ್ಕಾಗಿ ಶಾರೀರಕ ಚೇತನಕ್ಕಾಗಿ ಖಬರಸ್ಥಾನಕ್ಕೆ (ಸ್ಮಶಾನ) ಹೋಗಿ ದಿವಂಗತರಾದ ಸಂತ ಹಾಗೂ ಸಾಮಾನ್ಯ ವ್ಯಕ್ತಿಗಳ ಮೋಕ್ಷಕ್ಕಾಗಿ ಪ್ರಾರ್ಥಿಸುತ್ತಾರೆ.

ಶಬ್ ಎ ಕುದರ್: ಈ ಹಬ್ಬ ರಂಜಾನ್ ಉಪವಾಸ ದಿನಗಳಲ್ಲಿ ಅತಿಮುಖ್ಯವಾದ ರಾತ್ರಿ ಎಂಬುದಾಗಿ ಮುಸ್ಲಿಮರು ಪರಿಗಣಿಸಿದ್ದಾರೆ. ಇವನ್ನು ಚಾಂದ್ರಮಾನ ವರ್ಷದ 9ನೆಯ ತಿಂಗಳ 27ನೆಯ ರಾತ್ರಿ ಆಚರಿಸುತ್ತಾರೆ. ದೇವದೂತನಿಂದ ಮಹಮದ್‌ನಿಗೆ ಕೊರಾನ್ ಪುಣ್ಯಗ್ರಂಥ ಪ್ರಸಾದಿಸಲ್ಪಟ್ಟು ಮಹಮದ್‌ನನ್ನು ಪ್ರವಾದಿ ಪುರುಷನೆಂದು ಸಾರಲ್ಪಟ್ಟಿತು. ಆಗ ಮಹಮದ್‌ನಿಗೆ 40 ವರ್ಷ. ಈತನ ಮೂಲಕವೇ ಕೊರಾನ್ ಅವತರಿಸಿ ಜನರಿಗೆ ಮುಟ್ಟಿತು. ಈ ಶಾಂತ ರಾತ್ರಿಯಲ್ಲಿ ವರ್ಷದಲ್ಲಿ ನಡೆದ ಸಿಹಿಕಹಿ ಘಟನೆಗಳು ದೇವರಿಂದಲೇ ತೀರ್ಮಾನಿಸಲ್ಪಡುತ್ತದೆ ಎಂದು ನಂಬಿ ಇಡೀ ರಾತ್ರಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ.

ಈದ್ ಎ ರಂಜಾನ್: ಮೊಹರಂ ಹಬ್ಬವನ್ನು ಬಿಟ್ಟರೆ ಇದು ಅತಿ ಮುಖ್ಯವಾದದ್ದು. ಈ ಹಬ್ಬ ರಂಜಾನ್ ತಿಂಗಳ ಮುಕ್ತಾಯದೊಡನೆ ಬರುವ ಶವಲ್ ತಿಂಗಳ ಮೊದಲ ದಿನವಾಗಿರುತ್ತದೆ. ರಂಜಾನ್ ತಿಂಗಳಲ್ಲಿ ದಿನಕ್ಕೊಮ್ಮೆ ಕೊರಾನ್ ಪಠಿಸುವುದು ಮುಸ್ಲಿಂ ಸಂಪ್ರದಾಯದಲ್ಲಿ ಕಡ್ಡಾಯ. ಉಪವಾಸವಿರುವುದು ಕ್ರಮ. ಈ ತಿಂಗಳಲ್ಲಿ ಕೊರಾನಿನ ಮಹತ್ತ್ವವನ್ನು ಪ್ರಚಾರಪಡಿಸುವುದು, ಪೂಜಿಸುವುದು ಮುಂತಾದ ಕಾರ್ಯಕ್ರಮ–ಇವು ಮುಗಿದ ಅನಂತರ ಮುಸ್ಲಿಮರು ನಿರ್ದಿಷ್ಟ ಜಾಗದಲ್ಲಿ ಒಂದಾಗಿ ಸೇರುತ್ತಾರೆ. ಈ ಜಾಗಕ್ಕೆ ಇದ್–ಎ–ಗಾಹ್ ಎಂಬುದಾಗಿ ಕರೆಯುತ್ತಾರೆ. ಈ ಹಬ್ಬದ ದಿನ ದೇವರನ್ನು ಒಳಿತಿಗಾಗಿ ಪ್ರಾರ್ಥಿಸುತ್ತಾರೆ.

ಬಕ್ರೀದ್: ಮುಸ್ಲಿಮರ ಇನ್ನೊಂದು ಪ್ರಮುಖ ಹಬ್ಬ. ಈದ್ ಅಲ್ ಅವಾ ಅಥವಾ ಈದ್ ಎ ಖುರ್ಬಾನ್ ಎಂಬುದು ಈ ಹಬ್ಬದ ನಿಜವಾದ ಹೆಸರು. ಪ್ರವಾದಿ ಇಬ್ರಾಹಿಂ ದೇವರಿಂದ ಸತ್ತ್ವಪರೀಕ್ಷೆಗೆ ಗುರಿಯಾಗುತ್ತಾನೆ. ಅವನ ಸ್ವಂತ ಮಗ ಇಸ್ಮಾಯಿಲ್‌ನನ್ನು ಬಲಿಕೊಡುವ ಪ್ರಸಂಗ ಒದಗಿದಾಗ

ಅಳುಕದೆ ಬಲಿದಾನಕ್ಕೆ ಸಿದ್ಧನಾಗುತ್ತಾನೆ. ಈ ಘೋರ ಪರಿಸ್ಥಿತಿಯನ್ನು ಸಹಿಸಲಾರದ ದೇವರು ಆತನನ್ನು ತಡೆದು ಉಪಾಯವನ್ನು ಸೂಚಿಸುತ್ತಾನೆ. ಮಗನಿಗೆ ಬದಲಾಗಿ ಕುರಿಮರಿಯನ್ನು ಕಳುಹಿಸುತ್ತಾನೆ. ಈ ಕಾರಣಕ್ಕಾಗಿ ಮುಸ್ಲಿಮರು ಈದ್-ಎ-ಗಾಹ್ ಮೈದಾನದಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿ ಬಲಿಯನ್ನು ಅರ್ಪಿಸಿ ಅದರ ಮಾಂಸವನ್ನು ತಮ್ಮ ಬಂಧುಗಳಿಗೆ ಹಾಗೂ ಬಡಬಗ್ಗರಿಗೆ ದಾನ ನೀಡುತ್ತಾರೆ. ಆ ಮೂಲಕ ತಾವೂ ಧರ್ಮಕ್ಕಾಗಿ ಯಾವುದೇ ತರಹದ ತ್ಯಾಗಕ್ಕೂ ಸಿದ್ಧ ಎಂಬುದನ್ನು ವ್ಯಕ್ತಪಡಿಸುತ್ತ ಪಣ ತೊಡುತ್ತಾರೆ. (ಎಂ.ಎಂ.ಕೆ.)

ಜೈನ ಹಬ್ಬಗಳು: ಜೈನಧರ್ಮ ಪಂಥದಲ್ಲಿ ಇತರ ಧರ್ಮ ಪಂಥಗಳಂತೆಯೇ ಸಾಧಾರಣವಾಗಿ ಪರ್ವಗಳು (ಹಬ್ಬಗಳು) ಧಾರ್ಮಿಕ ಆಚರಣೆಯ ಹಿನ್ನೆಲೆಯುಳ್ಳವಾಗಿವೆ. ಸಾಮಾಜಿಕ ಅಥವಾ ಸಾಮೂಹಿಕ ಕ್ರಿಯಾಕಲಾಪಗಳಲ್ಲಿಯೂ ಹಬ್ಬಗಳ ಅಂಗವಿದೆ. ಪರ್ವದಿನಗಳಲ್ಲಿ ನಿತ್ಯ, ನೈಮಿತ್ತಿಕ ಎಂದು ಎರಡು ವಿಧ. ಪ್ರತಿಯೊಂದು ಮಾಸದ ಬಿದಿಗೆ, ಪಂಚಮಿ, ಅಷ್ಟಮಿ, ಏಕಾದಶಿ ಮತ್ತು ಚತುರ್ದಶಿ ತಿಥಿಗಳು ಪಂಚಪರ್ವಗಳು. ಇವು ನಿತ್ಯಪರ್ವಗಳು. ಈ ತಿಥಿಗಳಲ್ಲಿ ಏಕ ಭುಕ್ತವೇ ಮುಂತಾದ ವ್ರತಗಳನ್ನು ಕೈಗೊಳ್ಳಲಾಗುವುದು. ಅಷ್ಟಮಿ ಮತ್ತು ಚತುರ್ದಶಿ ತಿಥಿಗಳಂದು ಈ ವ್ರತಗಳನ್ನು ಕೈಗೊಳ್ಳುವುದು ವಿಶೇಷವಾಗಿ ರೂಢಿಯಲ್ಲಿದೆ. ಆದರೆ ಈ ಪರ್ವದಿನಗಳನ್ನು ಹಬ್ಬ ಎಂದು ಕರೆಯುವ ರೂಢಿಯಿದ್ದಂತಿಲ್ಲ. ನೈಮಿತ್ತಿಕ ಪರ್ವದಿನಗಳನ್ನು ಪ್ರಾಯಿಕವಾಗಿ ಹಬ್ಬವೆಂದು ಆಚರಿಸುವ ರೂಢಿಯಿದೆ. ಇಂಥ ಪರ್ವದಿನಗಳಲ್ಲಿ ಕೆಲವು ಸಾರ್ವತ್ರಿಕ ವ್ಯಾಪ್ತಿಯುಳ್ಳವಾಗಿದ್ದು ಮತ್ತೆ ಕೆಲವು ಕೇವಲ ಪ್ರಾದೇಶಿಕ ವ್ಯಾಪ್ತಿಯುಳ್ಳವಾಗಿವೆ.

ಯುಗಾದಿ: ಈ ಹಬ್ಬ ಜೈನಧರ್ಮ ಸಂಬಂಧಿಯಾದ ಹಬ್ಬವೇನಲ್ಲ. ಆದರೆ ಪ್ರದೇಶವೊಂದರ ಜನತೆಯಲ್ಲಿ ಬಾಹುಲ್ಯ ರೂಪದಿಂದ ಆಚರಣೆಯಲ್ಲಿರುವ ಈ ಹಬ್ಬದದಿನಕ್ಕೆ ಧಾರ್ಮಿಕ ಆಚಾರವನ್ನು ರೂಢಿಸಿ ಆಚರಣೆಯಲ್ಲಿ ತಂದುಕೊಳ್ಳಲಾಗಿದೆ. ಹಬ್ಬದ ಹಿಂದಿನ ರಾತ್ರಿಯಲ್ಲಿ ಗೃಹಸ್ಥ ಶುಚಿರ್ಭೂತನಾಗಿ ತನ್ನ ಮನೆಯಲ್ಲಿ ಆದಿಜಿನನಾದ ವೃಷಭ ತೀರ್ಥಂಕರನ ಪ್ರತಿಕೃತಿಯಾಗಿ ಕಲಶಸ್ಥಾಪನೆ ಮಾಡುತ್ತಾನೆ. ಹಬ್ಬದಂದು ಸೂರ್ಯೋದಯವಾಗುವ ಮುನ್ನವೇ ಎದ್ದು ಆ ಕಲಶದ ಬಳಿ ದೀಪ ಹೊತ್ತಿಸಿ ದರ್ಶನ ಮಾಡಿ ಫಲ ಅರ್ಪಿಸುತ್ತಾನೆ. ಇದಕ್ಕೆ ಶ್ರೀಮುಖದರ್ಶನವೆನ್ನುವರು. ಅನಂತರ ಸ್ನಾನ, ಜಿನದರ್ಶನ ಸುಕೃತ ಕಾರ್ಯಾಚರಣೆ.

ಮಹಾವೀರ ಜಯಂತಿ: ಮಹಾವೀರನ ಹುಟ್ಟುದಿನವಾದ ಚೈತ್ರ ಶುಕ್ಲ ತ್ರಯೋದಶಿಯಂದು ಪ್ರತಿವರ್ಷ ಆಚರಿಸುವ ಹಬ್ಬ. ಅಂದು ಬಸದಿಗಳಲ್ಲೂ ಮನೆಗಳಲ್ಲೂ ಮಹಾವೀರನಿಗೆ ವಿಶೇಷ ಪೂಜೆ ನಡೆಯುತ್ತದೆ. ದಾನಧರ್ಮ, ಮಹಾವೀರ ಚರಿತೆಯ ಸಂಕೀರ್ತನ, ಉತ್ಸವಗಳು ನಡೆಯುತ್ತವೆ.

ಅಕ್ಷಯತದಿಗೆ: ಇದು ಆದಿ ತೀರ್ಥಂಕರನಾದ ವೃಷಭನಾಥ ತಪಸ್ವಿಯಾಗಿದ್ದ ಸಮಯದಲ್ಲಿ ಮೊದಲನೆಯ ಆಹಾರದಾನ ಪಡೆದ ನಿಮಿತ್ತದ ಪರ್ವದಿನ. ಮಹಾರಾಜ ಶ್ರೇಯಾಂಸ ತನ್ನ ಅಣ್ಣನೊಡನೆ ಬಂದು ವೃಷಭನಿಗೆ ಕಬ್ಬಿನಹಾಲಿನ ರೂಪದಲ್ಲಿ ಆಹಾರವನ್ನು ಕೊಟ್ಟನೆಂದೂ ಅದರಿಂದ ಅವನ ದೇಶದಲ್ಲಿ ಆಹಾರ ಅಕ್ಷಯವಾಯಿತೆಂದೂ ಪ್ರತೀತಿ. ವೃಷಭ ತೀರ್ಥಂಕರನಿಗೆ ಅಂದು ನಡೆವ ಅಭಿಷೇಕದಲ್ಲಿ ಕಬ್ಬಿನಹಾಲು ವಿಶೇಷವಸ್ತು. ಮಿಕ್ಕಂತೆ ಗೃಹಸ್ಥರ ಮನೆಗಳಲ್ಲಿ ದಾನಧರ್ಮ, ವೃಷಭ ಚರಿತೆಯ ಪಠಣ, ಉತ್ಸವ ನಡೆಯುತ್ತವೆ.

ಶ್ರುತ ಪಂಚಮಿ: ನಶಿಸಿ ಹೋಗುತ್ತಿದ್ದ ಷಟ್ಖಂಡಾಗಮ ಶ್ರುತವನ್ನು ಪುಷ್ಪದಂತ ಮತ್ತು ಭೂತಬಲಿ ಮುನಿಗಳು ಬರಹಕ್ಕೆ ಇಳಿಸಿ ಅದನ್ನು ಪೂಜಿಸಿದ ದಿನವಿದು. ಅಂದು ತಾಡಪತ್ರಗ್ರಂಥಗಳನ್ನು ಪೀಠಗಳ ಮೇಲಿರಿಸಿ ಪೂಜಿಸುತ್ತಾರೆ. ನೋಂಪಿವ್ರತದ ಆಚರಣೆಯೂ ರೂಢಿಯಲ್ಲಿದೆ. ಅಧ್ಯಾಪನೆಯ ಅನಂತರ ಅನೇಕರು ವ್ರತವಿಧಿಯನುಸಾರ ಆಗಮಗ್ರಂಥಗಳ ಅನೇಕ ಪ್ರತಿಗಳನ್ನು ಬರೆಯಿಸಿ ಶಾಸ್ತ್ರದಾನಮಾಡಿರುವುದುಂಟು. ಏಕಭಕ್ತಾದಿ ವ್ರತಪಾಲನೆ ಶ್ರುತಾರಾಧನೆ ಉಂಟು. ಶ್ವೇತಾಂಬರರಿಗೆ ಕಾರ್ತಿಕ ಶುದ್ಧ ಪಂಚಮಿ (ಜ್ಞಾನ ಪಂಚಮಿ) ಹಬ್ಬ.

ಉಪಾಕರ್ಮ: ಶ್ರಾವಣಮಾಸದ ಪೂರ್ಣಿಮಿಯಂದು ಶ್ರವಣ ನಕ್ಷತ್ರವಿರುವಾಗ ರತ್ನತ್ರಯರ ಪ್ರತೀಕವಾಗಿ ಮೂರು ಎಳೆಗಳುಳ್ಳ ಹೊಸ ಜನಿವಾರವನ್ನು ಧರಿಸುವ ಹಬ್ಬವಿದು. ಇದರಿಂದ ಈ ಹಬ್ಬಕ್ಕೆ ಜನಿವಾರದ ಹಬ್ಬ ಎಂಬ ಹೆಸರೂ ಇದೆ. ಣಮೋಕಾರ ಮಂತ್ರೋಚ್ಚಾರಣೆಯೊಡನೆ ಜಪ ಮಾಡುವುದಿದೆ. ಉತ್ತರ ಭಾರತದಲ್ಲಿ ಈ ಹಬ್ಬದಲ್ಲಿ ರಾಖೀ ಬಂಧನ (ಕೈಗೆ ದಾರ ಕಟ್ಟುವುದು) ವಾಡಿಕೆಯಲ್ಲಿದೆ.

ವೀರ ಶಾಸನ ಜಯಂತಿ: ಶ್ರಾವಣ ಬಹುಳ ಪಾಡ್ಯದಲ್ಲಿ ಬರುವ ಈ ಹಬ್ಬ ಮಹಾವೀರ ಧರ್ಮತೀರ್ಥದ ಉಪದೇಶ ಆರಂಭವಾದುದನ್ನು ನೆನೆವಂಥದ್ದು. ಈ ಕಾರಣದಿಂದ ಇದನ್ನು ಯುಗಾದಿ ಎಂದೂ ಕರೆಯುವುದಿದೆ. ವಿಶೇಷ ಪೂಜೆ ಉಪದೇಶಪಠಣ ಉಂಟು.

ಗೌರಿಹಬ್ಬ: ಭಾದ್ರಪದ ಮಾಸದ ಶುಕ್ಲತದಿಗೆಯಂದು ಬರುವ ಈ ಹಬ್ಬದಲ್ಲಿ ಶ್ರೇಯಾಂಸ ತೀರ್ಥಂಕರನಿಗೆ ಅಭಿಷೇಕ ವಿಶೇಷ ಪೂಜೆ ಅರ್ಚನೆಗಳುಂಟು. ಬಳಿಕ ಈ ತೀರ್ಥಂಕರನ ಯಕ್ಷಿಯಾದ ಗೌರೀದೇವಿಗೆ ಷೋಡಶೋಪಚಾರದ ಅರ್ಚನೆ, ಸುಮಂಗಲಿಯರಿಗೆ ಬಾಗಿನ ವಿತರಣೆ, ಗೌರೀನೋಂಪಿ ಹೊತ್ತವರಿಗೆ ಏಕ ಭುಕ್ತಾದಿ ನೇಮಗಳುಂಟು.

ನವರಾತ್ರಿ: ಆಶ್ವೀಜಮಾಸದ ಶುಕ್ಲಪಾಡ್ಯದಿಂದ ದಶಮಿ ತಿಥಿಯವರೆಗಿನ ಈ ಹಬ್ಬ ಭರತಚಕ್ರವರ್ತಿಯ ದಿಗ್ವಿಜಯ ಯಾತ್ರೆಯನ್ನು ನೆನಪಿಸುವಂಥದು. ಈ ದಿನಗಳಲ್ಲಿ ದಿನಪೂಜೆಯ ಜೊತೆಗೆ ವಿಶೇಷ ರೀತಿಯಿಂದ ಕುಲದೇವತೆಗಳಾದ ಬ್ರಹ್ಮಯಕ್ಷ, ಜ್ವಾಲಾಮಾಲಿನೀ ಪದ್ಮಾವತೀ, ಕೂಷ್ಮಾಂಡಿನಿಯೇ ಮುಂತಾದ ಯಕ್ಷದೇವತೆಗಳ ಅರ್ಚನೆ, ಉತ್ಸವಗಳು ನಡೆಯುತ್ತವೆ. ಅಷ್ಟಮಿ ಜೈನರಿಗೆ ಜೀವ ದಯಾಷ್ಟಮಿ. ನೋಂಪಿವ್ರತದ ಆಚರಣೆಯೂ ಇದೆ. ಯಶೋಧರಚರಿತೆಯ ಕಥಾ ಶ್ರಾವಣ ಉಂಟು. ನವಮಿಯಂದು ಜಿನಶಾಸನದ ಸಂರಕ್ಷಕರೆಂದು ಮಾನ್ಯತೆ ಪಡೆದಿರುವ ಯಕ್ಷ ಯಕ್ಷಿ ದೇವತೆಯರ ಆಯುಧಗಳ ಪೂಜೆ, ದಶಮಿಯಂದು ವಿಶೇಷ ಜಿನಪೂಜೆ ನಡೆಯುತ್ತದೆ.

ದೀಪಾವಳಿ: ಕಾರ್ತೀಕ ಬಹುಳ ಚತುರ್ದಶಿ ರಾತ್ರಿ ಕೊನೆಯಾಗುತ್ತಿರುವಲ್ಲಿ, ಸ್ವಾತಿ ನಕ್ಷತ್ರದಲ್ಲಿ ಮಹಾವೀರ ನಿರ್ವಾಣ ಹೊಂದಿದ. ಶಾಲಿವಾಹನ ಶಕೆಯ ಮಾಸಗಳ ಗಣನೆಯ ಆಧಾರದಂತೆ ಈ ಸಮಯ ಆಶ್ವೀಜ ಬಹುಳ ಚತುರ್ದಶಿ ತಿಥಿ ಕಳೆದ ಬೆಳಗಿನ ಜಾವದೊಡನೆ ಕೂಡಿಬರುತ್ತದೆ. ಸುಮಾರು ಮೂವತ್ತು ವರ್ಷ ಕಾಲ ತನ್ನ ಜ್ಞಾನಜ್ಯೋತಿಯಿಂದ ಲೋಕದ ಅಜ್ಞಾನವೆಂಬ ಕತ್ತಲೆಯನ್ನು ನಿವಾರಣೆ ಮಾಡಿದ ಈ ತೀರ್ಥಂಕರನ ಸ್ಮರಣೆಯ ನಿಮಿತ್ತವಾಗಿ ಈ ದಿನ ದೀಪಗಳನ್ನು ಹತ್ತಿಸಿಡುವ ರೂಢಿಯುಂಟು. ಮಿಕ್ಕಂತೆ ವಿಶೇಷ ಪೂಜೆ, ದಾನಧರ್ಮ ಕಾರ್ಯಗಳು ನಡೆಯುತ್ತವೆ.

ಸಂಕ್ರಾಂತಿ: ಹಿಂದು ಜನರಂತೆ ಎಳ್ಳು ಬೆಲ್ಲ ಬೀರುವುದನ್ನು ಬಿಟ್ಟರೆ, ಈ ಹಬ್ಬದಲ್ಲಿ ಜೈನ ಧಾರ್ಮಿಕ ಆಚರಣೆಗಳು ಏನೂ ಇಲ್ಲ. ಸಮ್ಯಕ್ತ್ವಕ್ಕೆ ಹಾನಿಯಾಗದಿರುವ ಯಾವುದೇ ಲೌಕಿಕ ವಿಧಿಯನ್ನಾಗಲಿ ಶ್ರಾವಕರು ಆಚರಿಸಬಹುದೆಂಬ ಅನುಶಾಸನಕ್ಕೆ ಇದು ಒಂದು ನಿದರ್ಶನ.

ಜಿನರಾತ್ರಿ: ವೃಷಭತೀರ್ಥಂಕರ ಮಾಘಮಾಸ ಬಹುಳ ಚತುರ್ದಶಿಯಂದು ಸೂರ್ಯೋದಯ ಸಮಯದಲ್ಲಿ ನಿರ್ವಾಣ ಹೊಂದಿದ ದಿನ. ಇದನ್ನು ಶಿವರಾತ್ರಿ ಎಂದು ಹೇಳುವುದೂ ಉಂಟು. ಇಲ್ಲಿ ಶಿವ ಎಂದರೆ ಪರಮ ಮಂಗಲಮುಕ್ತಿ. ಇಂಥ ಶಿವಪದವಿಯನ್ನು ಆದಿಜಿನೇಶ್ವರ ಪಡೆದ ನಿಮಿತ್ತ

ಇದು ಶಿವರಾತ್ರಿ ಪರ್ವವೆನ್ನಿಸಿಕೊಂಡಿದೆ. ನಿರ್ವಾಣ ಹೊಂದಿದ ವೃಷಭನಾಥನ ಶರೀರದ ಅವಶೇಷಗಳನ್ನು ದಹನಮಾಡಿದುದರ ಪ್ರತೀಕವಾಗಿ ಹೋಮಕಾರ್ಯ ನಡೆಸಿ ವೃಷಭ ಜಿನನ ಬಿಂಬಕ್ಕೆ ಅಭಿಷೇಕಾದಿ ಪೂಜೆ, ಉತ್ಸವ, ಪುರಾಣ ಶ್ರವಣ, ಸ್ವಾಧ್ಯಾಯ, ಸ್ತೋತ್ರ ಪಠನಾದಿಗಳು ನಡೆಯುತ್ತವೆ.

ಇತರ ಪರ್ವದಿನಗಳು ಮತ್ತು ಸ್ಥಳೀಯ ಹಬ್ಬಗಳು: ಸಾಧಾರಣವಾಗಿ ಜೈನಗೃಹಸ್ಥರು ನೋಂಪಿಗಳನ್ನು ಕೈಗೊಂಡು ವ್ರತಾಚರಣೆ ನಡೆಸುವ ರೂಢಿಯಿದೆ. ಅನೇಕ ವೇಳೆ ನೋಂಪಿ ವಿಧಿವಿಧಾನಗಳನ್ನು ಹಬ್ಬದಂಥ ಸಂಭ್ರಮ ವಿಜೃಂಭಣೆಗಳಿಂದ ನಡೆಸುತ್ತಾರೆ. ಆಷಾಢಶುಕ್ಲ ಪಕ್ಷದಾರಭ್ಯ ಕಾರ್ತೀಕ ಮಾಸದವರೆಗೆ ಈ ನೋಂಪಿಗಳು ಸಾಲಾಗಿ ಬರುತ್ತವೆ. ಇಂಥ ನೋಂಪಿಗಳಲ್ಲಿ ದಶಲಕ್ಷಣ ಅಥವಾ ಪರ್ಯೂಷಣ, ಅನಂತಚತುರ್ದಶಿ ಷೋಡಶ ಭಾವನಾ ಪರ್ವಗಳ ನೋಂಪಿಗಳನ್ನು ಮುಖ್ಯವಾಗಿ ಉದಾಹರಿಸ ಬಹುದು. ಜೈನಧರ್ಮ ಪಂಥದಲ್ಲಿ ತೀರ್ಥಂಕರರ ಪಂಚ ಕಲ್ಯಾಣಗಳು ಧಾರ್ಮಿಕ ಆಚರಣೆಯ ಮುಖ್ಯ ನಿಮಿತ್ತಗಳಾಗಿವೆ. ಜೈನವಸತಿ ಬಾಹುಳ್ಯ ವಿರುವ ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ವಾರ್ಷಿಕ ಪಂಚಕಲ್ಯಾಣ ಮಹೋತ್ಸವ ಗಳನ್ನು ನಡೆಸುವ ಪದ್ಧತಿಯಿದೆ. ಈ ಮಹೋತ್ಸವಗಳ ಅಂಗವಾಗಿ ರಥಯಾತ್ರೆ ನಡೆಯುವುದುಂಟು. ಕೆಲವು ಕ್ಷೇತ್ರಗಳಲ್ಲಿ ಅದೇ ವೇಳೆಗೆ ಯಕ್ಷ ಯಕ್ಷಿ ದೇವತೆಗಳ ಆರಾಧನೆಗಳೂ ನಡೆಯುತ್ತವೆ. **(ಎಂ.ಡಿ.ವಿ.)**

**ಕ್ರೈಸ್ತ ಹಬ್ಬಗಳು:** ಕ್ರಿಸ್ಮಸ್ ಮತ್ತು ಈಸ್ಟರ್ ಹಬ್ಬಗಳು ಕ್ರೈಸ್ತರಿಗೆ ತಾತ್ತ್ವಿಕ ದೃಷ್ಟಿಯಿಂದ, ಚಾರಿತ್ರಿಕ ದೃಷ್ಟಿಯಿಂದ, ಆಧ್ಯಾತ್ಮಿಕ ದೃಷ್ಟಿಯಿಂದ ಅತ್ಯಂತ ಮಹತ್ತ್ವದ ಹಬ್ಬಗಳು.

ಕ್ರಿಸ್ಮಸ್: ಕ್ರಿಸ್ಮಸ್ ಎಂದರೆ ಯೇಸುಕ್ರಿಸ್ತ ಹುಟ್ಟಿದ ದಿನ. ಪ್ರತಿವರ್ಷ ಡಿಸೆಂಬರ್ 25 ರಂದು ಕ್ರೈಸ್ತರು ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಈ ಹಬ್ಬದ ಆಚರಣೆಗಳು ವಿಧರ್ಮೀಯ ಮೂಲಗಳಿಂದ ಪ್ರಭಾವಿತವಾಗಿವೆ. ಅಜೇಯನಾಗಿರುವ ಸೂರ್ಯದೇವನ ಹುಟ್ಟುಹಬ್ಬವನ್ನು ಡಿಸೆಂಬರ್ 25ರಂದು ರೋಮ್‌ನಲ್ಲಿ ಆಚರಿಸುತ್ತಿದ್ದರು. ರೋಮ್‌ನಲ್ಲಿ ಕ್ರೈಸ್ತಧರ್ಮ ಸ್ಥಾಪಿತವಾದ ಮೇಲೆ ಇದೇ ಉತ್ಸವವನ್ನು ಯೇಸುವಿನ ಹುಟ್ಟುಹಬ್ಬವನ್ನಾಗಿ ಮಾರ್ಪಡಿಸಲಾಯಿತು. ಕ್ರಿಸ್ಮಸ್ ಗಿಡವನ್ನು ಅಲಂಕರಿಸುವ ಪದ್ಧತಿಯಿಂದ ಬಂದದ್ದೆನ್ನಲಾಗಿದೆ. ಯೇಸು, ಅವನ ತಾಯಿ ಮೇರಿ, ಸಾಕುತಂದೆ ಜೋಸೆಫ್– ಇವರ ಪುಟ್ಟ ವಿಗ್ರಹಗಳನ್ನು ಜೋಡಿಸಿ ಕ್ರಿಸ್ತಜಯಂತಿಯ ದೃಶ್ಯವನ್ನು ಏರ್ಪಡಿಸುವ ಪದ್ಧತಿಯನ್ನು (ಕ್ರಿಸ್ಮಸ್ ಕ್ರಿಬ್: ಗೋದಲಿ ಕೊಟ್ಟಿಗೆ) 13ನೆಯ ಶತಮಾನದಲ್ಲಿ ಅಸಿಸಿಯ ಫ್ರಾನ್ಸಿಸ್ ಎಂಬ ಭಕ್ತ ಇಟಲಿಯಲ್ಲಿ ಜನಪ್ರಿಯಗೊಳಿಸಿದ. ಸಂತ ನಿಕಲಸ್ (ಕ್ರಿಸ್‌ಮಸ್ ತಾತ) ಉಡುಗೊರೆ ಹಂಚುವ ಪದ್ದತಿ ಅಮೆರಿಕದಲ್ಲಿ ಈಗ ಪ್ರಚಲಿತವಿದೆ. ಚರ್ಚುಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸುವುದು, ಕ್ರಿಸ್ಮಸ್ ಹಾಡುಗಳನ್ನು ಗುಂಪಾಗಿ ಹಾಡುವುದು ಎಲ್ಲ ಕಡೆಯೂ ಉಂಟು.

ಈಸ್ಟರ್ (ಪುನರುತ್ಥಾನದ ಹಬ್ಬ): ಯೇಸುಕ್ರಿಸ್ತ ಶಿಲುಬೆಗೇರಿದ ಮಹಾ ಘಟನೆಯನ್ನು ನೆನಪು ಮಾಡುವ ಈ ಹಬ್ಬ 40 ದಿನಗಳ ಅವಧಿಯದು. ಕ್ರಿಸ್ತನ ಕೊನೆಯ ದಿನಗಳನ್ನು ಧ್ಯಾನಿಸಿ ಜಪಮಾಡುವ ಅವಧಿಯೇ ಪವಿತ್ರವಾರ (ಹೋಲಿ ವೀಕ್). ಇದರಲ್ಲಿ ಪವಿತ್ರ ಗುರುವಾರ, ಪವಿತ್ರ ಶುಕ್ರವಾರ, ಪವಿತ್ರ ಶನಿವಾರ ಮತ್ತು ಪಾಸ್ಕ ಹಬ್ಬದ ಭಾನುವಾರ ಸೇರಿವೆ. ಈ ಕಾಲದಲ್ಲಿ ವಿಶೇಷ ಪೂಜೆ ಇರುತ್ತದೆ. ಈಸ್ಟರ್ ಹಬ್ಬದ ಹಿಂದಿನ ರಾತ್ರಿ ಶನಿವಾರ ಮಧ್ಯರಾತ್ರಿಯ ಪೂಜೆ ಇದೆ. ಅಂದು ಆಚರಿಸುವ ಕೆಲವು ಆರಾಧನಾ ಸಾಂಗ್ಯಗಳು ಅರ್ಥಭರಿತವಾದಂಥವು. ಕ್ರಿಸ್ತನು ಬೆಳಕು ಎಂಬುದನ್ನು ಸೂಚಿಸಲು ಬೆಂಕಿಯನ್ನು ಆಶೀರ್ವದಿಸಲಾಗುತ್ತದೆ. ಆ ಬೆಂಕಿಯಿಂದ ಈಸ್ಟರ್ ಮೇಣದ ಬತ್ತಿಯನ್ನು ಉರಿಸಿ ಪವಿತ್ರಾತ್ಮರ ನೀರನ್ನು ಆಶೀರ್ವದಿಸ ಲಾಗುತ್ತದೆ. ಈ ನೀರು ಆಧ್ಯಾತ್ಮಿಕ ಜೀವನದ ಬುಗ್ಗೆ ಎಂಬುದನ್ನು ತೋರಿಸುತ್ತದೆ. ಪುನರುತ್ಥಾನ ಎಂದರೆ ಹೊಸ ಬಾಳನ್ನು ಪ್ರಾರಂಭಿಸುವುದು ಎಂದರ್ಥವಿದೆ. ಸತ್ತ ಮೂರನೆಯ ದಿನ ಯೇಸು ಪುನಃ ಜೀವವನ್ನು ಪಡೆದಂತೆ ಪ್ರತಿಯೊಬ್ಬ ಮನುಷ್ಯನೂ ಪುನರುತ್ಥಾನ ಹೊಂದುತ್ತಾನೆಂದು ಕ್ರೈಸ್ತರು ದೃಢವಾಗಿ ನಂಬುತ್ತಾರೆ.

ಕ್ರೈಸ್ತರು, ಹೆಚ್ಚಾಗಿ ರೋಮನ್ ಕೆಥೊಲಿಕರು, ಕೆಲವು ಸಂತರ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಪ್ರತಿ ವರ್ಷ ಸೆಪ್ಟಂಬರ್ 8ರಂದು ಮೇರಿಯ ಜಯಂತಿಯನ್ನು ಆಚರಿಸುತ್ತಾರೆ. ಗೋವ ಮತ್ತು ಮಂಗಳೂರು ಕಡೆ ಇದು ಬಹಳ ಪ್ರಸಿದ್ಧ. ಮಂಗಳೂರಿನ ಕ್ರೈಸ್ತರಿಗೆ ಇದು ಸುಗ್ಗಿಯ ಹಬ್ಬವೂ ಹೌದು. ಆಗಸ್ಟ್ 15ರಂದು ಮೇರಿಯನ್ನು ಮೋಕ್ಷಕ್ಕೆ ಎತ್ತಲ್ಪಟ್ಟ ಹಬ್ಬವನ್ನು ಆಚರಿಸುತ್ತಾರೆ. ಯೇಸುವಿನ ಸಾಕುತಂದೆ ಯಾದ ಸಂತ ಜೋಸೆಫನ ಎರಡು ಹಬ್ಬಗಳನ್ನು ಆಚರಿಸುವ ರೂಢಿ ಇದೆ. ಮಾರ್ಚ್ ತಿಂಗಳ 19 ರಂದು ಜಾಗತಿಕ ಪಾಲಕ ಎಂದೂ ಮೇ ತಿಂಗಳ 1 ರಂದು ಕಾರ್ಮಿಕರ ಪಾಲಕ ಎಂದೂ ಅವನನ್ನು ಗೌರವಿಸಲಾಗುತ್ತದೆ.

ಇನ್ನು ಕೆಲವು ಸಂತರ ಹಬ್ಬಗಳು ಸ್ಥಳೀಯ ಆಚರಣೆಗಷ್ಟೇ ಸೀಮಿತವಾ ದಂಥವು. ಹಿಂದೆ ಮೈಸೂರಿನಲ್ಲಿ ನಡೆಯುತ್ತಿದ್ದ ಸಂತ ಫಿಲೋಮಿನಾ ಅವರ ಹಬ್ಬ ಸಾವಿರಾರು ಯಾತ್ರಾರ್ಥಿಗಳನ್ನು ಆಕರ್ಷಿಸುತ್ತಿತ್ತು. ಆದರೆ 1960ರಲ್ಲಿ ವ್ಯಾಟಿಕನಿನಲ್ಲಿ ಆರಾಧನಾ ವಿಧಿಯಲ್ಲಿ ಆದ ಮಾರ್ಪಾಟಿನಿಂದಾಗಿ ಈ ಹಬ್ಬ ನಿಂತುಹೋಯಿತು. 1977ರಿಂದ ಪುನಃ ಆಗಸ್ಟ್ 11 ರಂದು ಈ ಹಬ್ಬವನ್ನು ಆಚರಿಸಲಾಗುತ್ತಿದೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರದ ಪಕ್ಕದಲ್ಲಿರುವ ಡೋರ್ನಹಳ್ಳಿ ಸಂತ ಆಂತೋನಿಯ ಪುಣ್ಯಕ್ಷೇತ್ರ. ಇಲ್ಲಿ ಪ್ರತಿವರ್ಷ ಜೂನ್ 13ರಂದು ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭ ದಲ್ಲಿ ಜಾತ್ರೆ ಸೇರುತ್ತದೆ. ಬೆಂಗಳೂರಿನ ಶಿವಾಜಿನಗರದಲ್ಲಿ ಆರೋಗ್ಯಮಾತೆಯ ಹಬ್ಬವನ್ನು ಸೆಪ್ಟೆಂಬರ್ 8 ರಂದು ಆಚರಿಸಲಾಗುತ್ತದೆ. ಅಂತೆಯೇ ಕಾರ್ಕಳದಲ್ಲಿ ಸಂತ ಲಾರೆನ್ಸನ, ದಕ್ಷಿಣ ಕನ್ನಡ ಜಿಲ್ಲೆಯ ಪಕ್ಷಿಕೆರೆಯಲ್ಲಿ ಸಂತ ಜೂದನ ಹಬ್ಬವನ್ನು ಆಚರಿಸುತ್ತಾರೆ. ತಮಿಳುನಾಡಿನಲ್ಲಿ ವೇಲಾಂಗಣಿ ಮಾತೆಯ ಹಬ್ಬ ಲಕ್ಷಾಂತರ ಜನರನ್ನು ಆಕರ್ಷಿಸುತ್ತದೆ. ಅಲ್ಲಿಯ ಪೂಂಡಿಯ ಪುಣ್ಯಕ್ಷೇತ್ರವೂ ಪ್ರಸಿದ್ಧವಾದುದು. ಗೋವದಲ್ಲಿ ಡಿಸೆಂಬರ್ 3ರಂದು ಸಂತ ಫ್ರಾನ್ಸಿಸ್ ಜೇವಿಯರನ ಹಬ್ಬವನ್ನು ಆಚರಿಸುತ್ತಾರೆ. ಇದಲ್ಲದೆ ಮುಂಬಯಿಯಲ್ಲಿ ಮಾಹಿಮ್, ಕೇರಳದಲ್ಲಿ ಮಾಹಿ ಮತ್ತು ಹರಿಹರದಲ್ಲಿ ಮೇರಿಯ ಹಬ್ಬಗಳನ್ನು ಆಚರಿಸುತ್ತಾರೆ. **(ಡಿ.ಪಿ.)**

**ಹಯವದನರಾವ್, ಸಿ.:** 1865–1946. ಪ್ರಸಿದ್ಧ ವಿದ್ವಾಂಸರು. ಕೃಷ್ಣಗಿರಿ ತಾಲ್ಲೂಕಿನ ಹೊಸೂರಿನಲ್ಲಿ 1865 ಜುಲೈ 10ರಂದು ಜನಿಸಿದರು. ಇವರ ತಂದೆ ರಾಜಾರಾವ್ ಹಯವದನರಾಯರು ಹೊಸೂರಿನಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸವನ್ನೂ ಮದರಾಸಿನ ಹಿಂದೂ ಹೈಸ್ಕೂಲಿ ನಲ್ಲಿ ಪ್ರೌಢಶಾಲಾಭ್ಯಾಸವನ್ನೂ ಮುಗಿಸಿದರು. ಅನಂತರ ಮದರಾಸಿನ ಪ್ರೆಸಿಡೆನ್ಸಿ ಕಾಲೇಜು ಮತ್ತು ಕ್ರಿಶ್ಚಿಯನ್ ಕಾಲೇಜುಗಳಲ್ಲಿ ಅಭ್ಯಾಸ ಮಾಡಿ ಬಿ.ಎ. ಪದವಿ ಪಡೆದರು. ಅಲ್ಲಿಯೇ ಬಿ.ಎಲ್. ಪದವಿಯನ್ನೂ ಪಡೆದರು. ವಿದ್ಯಾರ್ಥಿ ದೆಸೆಯಲ್ಲಿಯೇ ಇವರು ಪತ್ರಿಕೋದ್ಯಮದಲ್ಲಿ ಆಸಕ್ತಿ ತಳೆದಿದ್ದರು. ಸ್ವಲ್ಪಕಾಲ ಮದರಾಸಿನ ಸರ್ಕಾರಿ ವಸ್ತುಸಂಗ್ರಹಾಲಯ ದಲ್ಲಿ ಕ್ಯೂರೇಟರ್ ಆಗಿ ಕೆಲಸ ಮಾಡಿದರು. ಅದನ್ನು ಬಿಟ್ಟು ಮದರಾಸ್ ಟೈಮ್ಸ್ ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡರು. ಅನಂತರ ಅಲಹಾಬಾದಿಗೆ ತೆರಳಿ ದಿ ಲೀಡರ್ ಎಂಬ ಪತ್ರಿಕೆಯ ಸಂಪಾದಕರಾಗಿ ಸಾಕಷ್ಟು ಪ್ರಸಿದ್ಧಿ ಪಡೆದರು. ಇವರ ಖ್ಯಾತಿಯನ್ನು ಗಮನಿಸಿದ ಎಂ. ವಿಶ್ವೇಶ್ವರಯ್ಯನವರು ಇವರನ್ನು ಮೈಸೂರಿಗೆ ಆಹ್ವಾನಿಸಿ ದಿ ಮೈಸೂರ್ ಎಕನಾಮಿಕ್ ಜರ್ನಲ್ ಪತ್ರಿಕೆಯ ಸಂಪಾದಕರಾಗಿ ನೇಮಿಸಿದರು.

ರಾಯರು ತಮ್ಮ ಜೀವಿತದ ಕೊನೆಯವರೆಗೂ ಈ ಪತ್ರಿಕೆಯೊಡನೆ ಸಂಪರ್ಕವಿಟ್ಟುಕೊಂಡಿದ್ದರು.

ಬೆಂಗಳೂರು ಪ್ರೆಸ್‌ನ ಸ್ಥಾಪನೆಗೂ ಹಯವದನರಾಯರು ಮುಖ್ಯ ಕಾರಣಕರ್ತರು. ಅದರ ಕಾರ್ಯದರ್ಶಿ ಮತ್ತು ನಿರ್ದೇಶಕರಾಗಿ ದುಡಿದು ಆ ಮುದ್ರಣಾಲಯದ ಬೆಳೆವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದರು. ಬೆಂಗಳೂರಿನ ಪುರಸಭೆಯಲ್ಲಿ ಬಹುಕಾಲ ಚುನಾಯಿತ ಪ್ರತಿನಿಧಿಯಾಗಿದ್ದ ಇವರು ಈಗಿನ ಗವೀಪುರಂ ಗುಟ್ಟಹಳ್ಳಿ ಬಡಾವಣೆಯ ನಿರ್ಮಿತಿಗೆ ಕಾರಣರಾದರು. 1934–40ರ ವರೆಗೆ ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್‌ಗಳ ಸದಸ್ಯರಾಗಿದ್ದರು. ಶ್ರೀ ಕೃಷ್ಣರಾಜ ಸಿಲ್ವರ್ ಜ್ಯೂಬಿಲಿ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್‌ನ ಸ್ಥಾಪನೆಯಲ್ಲಿಯೂ ಇವರು ಮಹತ್ತರ ಪಾತ್ರವಹಿಸಿದರು. ಇವರು ಅನೇಕ ವ್ಯಾಪಾರ ಉದ್ದಿಮೆಗಳ ಸಂಸ್ಥೆಗಳಲ್ಲಿಯೂ ಸೇವೆಸಲ್ಲಿಸಿದ್ದಾರೆ. ಕೆಲಕಾಲ ಇವರು ಆಮ್ಕೊ ಬ್ಯಾಟರೀಸ್ ಸಂಸ್ಥೆಯ ಸ್ಥಾಪಕ–ನಿರ್ದೇಶಕರಾಗಿದ್ದರು. ಬೆಂಗಳೂರಿನ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿ ಕೆಲಸಮಾಡಿದರು. ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್‌ನ ಸದಸ್ಯರಾಗಿಯೂ ಅದರ ವ್ಯಾವಹಾರಿಕ ಸದಸ್ಯರಾಗಿಯೂ ಕೆಲಸ ಮಾಡಿದರು. ಇಂಡಿಯನ್ ಪಿ.ಇ.ಎನ್. ಸದಸ್ಯರಾಗಿಯೂ ಗ್ರೇಟ್ ಬ್ರಿಟನ್ನಿನ ರಾಯಲ್ ಆಂಥ್ರೊಪಲಾಜಿಕಲ್ ಇನ್‌ಸ್ಟಿಟ್ಯೂಟಿನ ಸದಸ್ಯರಾಗಿಯೂ ರಾಯಲ್ ಸೊಸೈಟಿ ಆಫ್ ಎಕನಾಮಿಕ್ಸನ ಫೆಲೊ ಆಗಿಯೂ ಆಯ್ಕೆಯಾಗಿದ್ದರು.

ಹಯವದನರಾಯರು ಬಹುಭಾಷಾಜ್ಞಾನವುಳ್ಳ ವಿದ್ವಾಂಸರು. ಇಂಗ್ಲಿಷ್, ಲ್ಯಾಟಿನ್, ಫ್ರೆಂಚ್, ಜರ್ಮನ್, ಸಂಸ್ಕೃತ, ಕನ್ನಡ, ತೆಲುಗು, ಮರಾಠಿ, ತಮಿಳು ಭಾಷೆಗಳಲ್ಲಿ ಇವರಿಗೆ ಅಪಾರ ಪರಿಶ್ರಮವಿತ್ತು. ಇವರು ಅನೇಕ ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೆಲುಗು ಭಾಷೆಯ ಪರೀಕ್ಷಕರಾಗಿದ್ದರು.

ಕರ್ನಾಟಕ ಇತಿಹಾಸ ರಚನೆಯಲ್ಲಿ ರಾಯರದು ದೊಡ್ಡ ಹೆಸರು. ದಕ್ಷಿಣ ಕರ್ನಾಟಕದ, ಅಂದರೆ ಆಗಿನ ಮೈಸೂರು ಪ್ರಾಂತದ ಇತಿಹಾಸ ರಚನೆಗೆ ಇವರೇ ನಾಂದಿ ಹಾಡಿದರು. ಇವರು ಸಂಪಾದಿಸಿರುವ ಮೈಸೂರು ಗೆಜೆಟಿಯರ್ಸ್‌ಹೆಬ್ಬೊತ್ತಿಗೆಗಳು ಇತಿಹಾಸದ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಪ್ರಮಾಣಪೂರ್ವಕವಾದ ಗ್ರಂಥಗಳಾಗಿವೆ. ಲೂಯಿ ರೈಸ್ ಅವರು ರಚಿಸಿದ ಗೆಜೆಟಿಯರನ್ನು ನವೀಕರಿಸಲು ಮೈಸೂರು ಸರ್ಕಾರ 1924ರಲ್ಲಿ ರಾಯರನ್ನು ಸಂಪಾದಕರನ್ನಾಗಿ ನಿಯಮಿಸಿತು. ಇವರು ಈ ಕೆಲಸವನ್ನು ಸಮರ್ಪಕವಾಗಿ ಮಾಡಿ ಏಳು ಸಂಪುಟಗಳಲ್ಲಿ ಮೈಸೂರು ಗೆಜೆಟಿಯರ್ ಮಾಲೆಯನ್ನು ಪ್ರಕಾಶಪಡಿಸಿದರು. ಇತಿಹಾಸ, ನಾಣ್ಯಶಾಸ್ತ್ರ, ಶಾಸನಶಾಸ್ತ್ರ, ವಾಸ್ತುಶಿಲ್ಪ ಮುಂತಾದ ವಿಷಯಗಳಲ್ಲಿ ಇಂದಿಗೂ ಈ ಸಂಪುಟಗಳು ಕರ್ನಾಟಕ ಇತಿಹಾಸದ ಅಭ್ಯಾಸಿಗಳಿಗೆ ಅಮೂಲ್ಯ ಆಕರಗಳಾಗಿವೆ. ರಾಯರು ರಚಿಸಿದ ಇನ್ನೊಂದು ಗ್ರಂಥವೆಂದರೆ ಮೂರು ಸಂಪುಟಗಳ ಹಿಸ್ಟರಿ ಆಫ್‌ಮೈಸೂರ್ (1399–1799). ಮೈಸೂರು ಒಡೆಯರ ರಾಜವಂಶಕ್ಕೆ ಸಂಬಂಧಿಸಿದ ಈ ಕೃತಿ 2,840 ಪುಟಗಳನ್ನೊಳಗೊಂಡಿದೆ. ಶ್ರೀಪತಿ ಪಂಡಿತಾಚಾರ್ಯರು ರಚಿಸಿದ ಶ್ರೀಕರಭಾಷ್ಯಕ್ಕೆ ಬರೆದ ದೀರ್ಘವ್ಯಾಖ್ಯಾನ (ಸು. 885 ಪುಟ) ಇವರ ಮತ್ತೊಂದು ಕೃತಿ. ಈ ಗ್ರಂಥಗಳಲ್ಲದೆ ಇವರು ಅನೇಕ ಪ್ರೌಢಲೇಖನಗಳನ್ನು ಬರೆದಿದ್ದಾರೆ.

ಹಯವದನರಾಯರು ಇತಿಹಾಸದ ಮೂಲತತ್ತ್ವಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಇತಿಹಾಸ ರಚನೆಗೆ ಆಕರಗಳೇ ಮೂಲ; ಅವು ಸಮರ್ಪಕವಾಗಿದ್ದರೆ ಮಾತ್ರ ಇತಿಹಾಸ ಪ್ರಮಾಣಪೂರ್ವಕವಾಗಿರುತ್ತದೆ ಎಂಬುದನ್ನು ಬಲ್ಲವರಾಗಿದ್ದ ರಾಯರು ಆಕರಗಳಿಗೆ ವಿಶೇಷ ಗಮನ ಕೊಟ್ಟಿದ್ದಾರೆ. ಇವರ ರಚನೆಗಳಲ್ಲಿ ರಾಜಕೀಯದ ಜೊತೆಗೆ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯಗಳಿಗೆ ಹೆಚ್ಚಿನ ಮಹತ್ತ್ವ ಕಾಣಬರುತ್ತದೆ. ಹೀಗೆ ಇತಿಹಾಸ ರಚಿಸುವವರಿಗೆ ಒಂದು ಮಾದರಿಯನ್ನು ಹಾಕಿಕೊಟ್ಟ ಕೀರ್ತಿ ಹಯವದನರಾಯರಿಗೆ ಸಲ್ಲುತ್ತದೆ.

ಇವರನ್ನು ಅನೇಕ ಸಂಘಸಂಸ್ಥೆಗಳು, ಸರ್ಕಾರಗಳು ಗೌರವಿಸಿವೆ. ಬ್ರಿಟಿಷ್ ಸರ್ಕಾರ1911ರಲ್ಲಿ ಇವರಿಗೆ ರಾವ್ ಸಾಹೇಬ್ ಎಂಬ ಬಿರುದನ್ನು ನೀಡಿ ಗೌರವಿಸಿತು. ಜೊತೆಗೆ ಲಾರ್ಡ್ ಲಿನ್‌ಲಿತ್‌ಗೊ ಇವರಿಗೆ ರಾವ್ ಬಹದ್ದೂರ್ ಎಂಬ ಬಿರುದನ್ನು ನೀಡಿ ಗೌರವಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ ರಾಜಚರಿತವಿಶಾರದ ಎಂಬ ಬಿರುದನ್ನು ನೀಡಿ ಗೌರವಿಸಿದರು.

ಹಯವದನರಾಯರು 1946ರಲ್ಲಿ ನಿಧನರಾದರು. **(ಎ.ವಿ.ಎನ್.)**

**ಹರಕೆ:** ಜನಪದ ಆಚರಣೆಗಳಲ್ಲೊಂದು. ಒಳ್ಳೆಯದಾಗಲಿ ಎಂದು ದೇವರಲ್ಲಿ ಬೇಡಿಕೊಳ್ಳುವಿಕೆಯೇ ಹರಕೆ. ಪ್ರಕೃತಿಯ ಅನಂತಶಕ್ತಿಯನ್ನು ಒಲಿಸಿಕೊಳ್ಳಲು ಅಥವಾ ಪ್ರಸನ್ನಗೊಳಿಸಿಕೊಳ್ಳಲು ಜನಪದರು ನಡೆಸುತ್ತ ಬಂದ ಹಲವು ಬಗೆಯ ಆಚರಣೆಗಳಲ್ಲಿ ಇದೂ ಒಂದು. ಹರಕೆ ನಿತ್ಯದ ಪ್ರಾರ್ಥನೆಯಿಂದ ಭಿನ್ನವಾದುದು ಹಾಗೂ ವಿಶಿಷ್ಟವಾದುದು. ನಿತ್ಯದ ಪ್ರಾರ್ಥನೆ ಬಹುಪಾಲು ವ್ಯಕ್ತಿಗತವಾಗಿರುತ್ತದೆ; ಹರಕೆಯಲ್ಲಿ ವ್ಯಕ್ತಿಗತವಾದ ಅಂಶ ಭಾಗಶಃ ಇದ್ದರೂ ಸಾರ್ವತ್ರಿಕ ಅಥವಾ ಸಾಮೂಹಿಕ ಇಲ್ಲವೆ ಕೌಟುಂಬಿಕ ಹಿತ ಪ್ರಧಾನವಾಗಿರುತ್ತದೆ ಎನ್ನಬಹುದು.

ಪ್ರತಿಯೊಂದು ಮನೆಗೂ ಒಂದು ಹೆಣ್ಣು, ಒಂದು ಗಂಡು–ಹೀಗೆ ಎರಡು ಮನೆದೇವರಿರುತ್ತವೆ. ಮನೆಯಲ್ಲಿ ಯಾರಿಗಾದರೂ ಕೇಡಾದರೆ, ಕಾಯಿಲೆಯಾದರೆ ಬಂದಿರುವ ಎಡರನ್ನೂ ರೋಗವನ್ನೂ ನಿವಾರಿಸಿದರೆ ಮನೆದೇವರಿಗೆ ಬಲಿಕೊಡುತ್ತೇನೆ, ಅಭಿಷೇಕ ಮಾಡಿಸುತ್ತೇನೆ, ತೀರ್ಥಯಾತ್ರೆ ಮಾಡುತ್ತೇನೆ ಎಂದು ಮೊದಲಾಗಿ ತಮ್ಮ ಶಕ್ತ್ಯನುಸಾರ ಮನೆಯ ಯಜಮಾನ ಇಲ್ಲವೆ ಯಜಮಾನಿ ರೋಗಿಯ ಪರವಾಗಿ ಹರಕೆ ಮಾಡಿಕೊಳ್ಳುತ್ತಾರೆ. ವಿರಳವಾಗಿ ತಮ್ಮ ಇಷ್ಟಹರಕೆ ಮಾಡಿಕೊಳ್ಳುವುದೂ ಉಂಟು. ತಮ್ಮ ಮಾತಿಗೆ ಪ್ರಮಾಣ ಎಂಬ ಅರ್ಥದಲ್ಲಿ ಶುಭ್ರವಾದ ಒಂದು ತುಂಡುಬಿಳಿಯ ಬಟ್ಟೆಯನ್ನು ತುಂಬಿದ ಕೊಡದಲ್ಲಿ ಅದ್ದಿ ಒದ್ದೆ ಮಾಡಿ, ಅದಕ್ಕೆ ಅರಿಶಿನ ಹಚ್ಚಿ ಅದರಲ್ಲಿ ನಾಣ್ಯವನ್ನು ಕಟ್ಟಿ (ಸಾಮಾನ್ಯವಾಗಿ ಬಿಡಿಗಾಸು, ಒಂದು ಪಾವಲಿ) ಅದನ್ನು ದೇವರ ಮುಂದಿಟ್ಟು ಪೂಜಿಸುತ್ತಾರೆ. ಕೆಲವೊಮ್ಮೆ ಇದನ್ನು ನೆಲವಿನ ಕಾಲಿಗೆ, ಮನೆಯ ಮುಂದಿನ ಸೂರಿಗೆ ಕಟ್ಟುವುದು ಉಂಟು. ಹೀಗೆ ಕಟ್ಟುವುದನ್ನು ಹೊನ್ನೆಸಳು ಮಾಡಿ ಕಟ್ಟುವುದು, ಮುಡಿಪು ಕಟ್ಟುವುದು ಎನ್ನುತ್ತಾರೆ. ಹಿಂದಿನವರು ನಾಣ್ಯವನ್ನು ಅರಶಿನದಿಂದ ಬಟ್ಟೆಯನ್ನು ಹೊನ್ನಿನ ಬಣ್ಣ ಮಾಡಿ ಹರಕೆ ಕಟ್ಟಿ ಕೊಳ್ಳುತ್ತಿದ್ದುದರಿಂದ ಹೊನ್ನೆಸಳು ಎಂದು ಕರೆದಿರಬಹುದು; ಹೊನ್ನಿನ ಎಸಳನ್ನೇ ಹರಕೆಯಾಗಿ ಕಟ್ಟಿಕೊಳ್ಳುತ್ತಿದುದೂ ಇರಬಹುದು; ಏಕೆಂದರೆ ಕೆಲವೊಮ್ಮೆ ಹೊನ್ನಿನ ಆಭರಣವನ್ನು ಹರಕೆ ಕಟ್ಟುವುದೂ ಉಂಟು. ಬೆಳ್ಳಿಯ ನಾಣ್ಯವನ್ನಾಗಲಿ ಇತರ ಯಾವುದೇ ಲೋಹದ ನಾಣ್ಯವನ್ನಾಗಲಿ ಹರಕೆ ಕಟ್ಟಿದರೂ ಹೊನ್ನೆಸಳು ಮಾಡಿ ಕಟ್ಟುವುದು ರೂಢಿ.

ಹರಕೆ ಕಟ್ಟಿಕೊಂಡ ವ್ಯಕ್ತಿ ಕಷ್ಟಗಳು ಬಯಲಾದಾಗ ತಾನು ಹರಕೆ ಹೊತ್ತ ದೇವರ ಹಬ್ಬದ ದಿನ ತೀರಿಸುತ್ತಾನೆ. ಹರಕೆಯಲ್ಲಿ ವೈಯಕ್ತಿಕ ಹರಕೆ, ಕೌಟುಂಬಿಕ ಹರಕೆ, ಊರ ಹರಕೆ ಎಂಬ ಹಲವಾರು ವಿಧಗಳಿವೆ. ವೈಯಕ್ತಿಕ ಹರಕೆ–ವ್ಯಕ್ತಿಗತವಾದ ಕುಂದುಕೊರತೆಗಳನ್ನು, ಸಂಕಷ್ಟಗಳನ್ನು ಹೋಗಲಾಡಿಸು ಎಂದು ದೇವರಲ್ಲಿ ಹರಕೆ ಮಾಡಿಕೊಂಡು, ಅದನ್ನು ತೀರಿಸುವುದು. ಕೌಟುಂಬಿಕವಾದ ಹರಕೆ–ಕುಟುಂಬದಲ್ಲಿ ಶಾಂತಿ, ಸುಖ, ಆರೋಗ್ಯ ನೆಲೆಸಲೆಂದು ಮನೆಯ ಯಜಮಾನ ಹರಕೆ ಹೊತ್ತು ಅದನ್ನು ತೀರಿಸುವುದು. ತಮಗೆ ಯಾರಿಂದಲಾದರೂ ಅನ್ಯಾಯವಾಗಿದೆ ಎಂದು

ಕಂಡುಬಂದರೆ ಅಂತಹವರ ವಿರುದ್ಧ ಅವರಿಗೆ ಸರಿಯಾದ ಶಾಸ್ತಿಯಾಗು ವಂತೆ ಅಥವಾ ತಮ್ಮ ವಸ್ತು ಹಿಂದಿರುಗಿ ಬರುವಂತೆ ದೇವರಿಗೆ ಹರಕೆ ಹೊರುವುದುಂಟು. ಊರ ಹರಕೆ –ಸಾಮಾನ್ಯವಾಗಿ ಊರಿಗೆ ಕಾಲರ, ಸಿಡುಬು, ಪ್ಲೇಗು ಇತ್ಯಾದಿ ರೋಗರುಜಿನಗಳು ಬಂದಾಗ ಕಾಲದಿಂದ ಕಾಲಕ್ಕೆ ಆಯಾ ರೋಗದೇವತೆಗಳಿಗೆ ಸರಿಯಾಗಿ, ಮಳೆಯಾಗದೆ ಹೋದಾಗ ಗ್ರಾಮದೇವತೆಗೆ ಹರಕೆ ಮಾಡಿಕೊಳ್ಳುವುದು ಮತ್ತು ಶುಭವಾದಾಗ ದೊಡ್ಡ ಹಬ್ಬವನ್ನಾಚರಿಸುವುದು. ಸಾಮಾನ್ಯವಾಗಿ ಊರಿನ ಹರಕೆಯನ್ನು ಆಯಾ ಊರಿನ ಪ್ರಮುಖರಾದ ಪಟೇಲ, ಶಾನುಭೋಗ ಮತ್ತು ಊರಿನ ಗಣ್ಯವ್ಯಕ್ತಿಗಳು ಮಾಡಿಕೊಳ್ಳುತ್ತಾರೆ. ಊರಿನ ಜನರ ಸಹಕಾರದಿಂದ ಊರೊಟ್ಟಿನ ಹರಕೆಯನ್ನು ತೀರಿಸುತ್ತಾರೆ.

ಹರಕೆ ಮಾಡಿಕೊಳ್ಳುವ ಸನ್ನಿವೇಶ ಹಾಗೂ ಪ್ರಮುಖ ಹರಕೆಗಳು: ಚರ್ಮರೋಗ ಸಂಬಂಧವಾದ ಹುಲ್ಲುಗುರಾದರೆ ಕೊಂಡಕ್ಕೆ ಹರಳು ಹಾಕುವುದು, ಹುರಳೀ ಮೂಟೆ ಉರುಳಿಸುವುದಾಗಿ ಹರಕೆ ಮಾಡಿಕೊಳ್ಳು ತ್ತಾರೆ. ನಾಗರು ಆದರೆ, ಅದು ವಾಸಿಯಾಗಲು ನಾಗರಕಲ್ಲು ಮಾಡಿಸುವು ದಾಗಿ, ಬೆಳ್ಳಿಯ ನಾಗರು ಮಾಡಿಸಿ ದೇವರಿಗೆ ಅರ್ಪಿಸುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಮಕ್ಕಳಿಗೆ ಅಮ್ಮ (ಸಿಡುಬು) ಆದಾಗ ವಾಸಿಯಾಗಲು ಬೇವಿನ ಉಡುಗೆ ಉಡಿಸುವುದಾಗಿ, ಮಕ್ಕಳ ಆರೋಗ್ಯ ಕೆಟ್ಟಾಗ ಒಳ್ಳೆಯದಾ ಗಲು ಮಗುವಿನ ಉದ್ದ ಅಥವಾ ತೂಕದ ಬೆಲ್ಲ ಕೊಡುವುದಾಗಿ, ಮನೆಮಂದಿಗೆ ಆಗಿಂದಾಗ್ಗೆ ತೊಂದರೆಯಾಗುತ್ತಿದ್ದರೆ ಒಳ್ಳೆಯದಾಗಲು ಕೊಂಡಕ್ಕೆ ಸೌದೆ ಹಾಕುವುದಾಗಿ ಮಾರಮ್ಮನಿಗೆ ಹರಕೆ ಮಾಡಿಕೊಳ್ಳುತ್ತಾರೆ. ಮದುವೆಯಾಗಿ ಕೆಲವು ವರ್ಷಗಳು ಕಳೆದರೂ ಮಕ್ಕಳಾಗದಿದ್ದಾಗ ಮಕ್ಕಳಾದರೆ ತನ್ನ ಇಷ್ಟದೇವರಿಗೆ ಯಾತ್ರೆ ಬರುವುದಾಗಿಯೂ ಕೆಲವರು ಹರಕೆ ಹೊರುವುದುಂಟು. ವಂಶಾಭಿವೃದ್ಧಿಯಾಗದಿದ್ದಾಗ ಗಂಡುಮಗುವಾ ದರೆ ಆ ದೇವರ ಹೆಸರನ್ನು ಮಗುವಿಗಿಡುವುದಾಗಿ, ಯಾತ್ರೆ ಬಂದು ಮಗುವಿನ ಮುಡಿ ಕೊಡುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಮಕ್ಕಳಾಗದ ಹೆಂಗಸರು ತಮಗೆ ಮಕ್ಕಳಾದರೆ ಮೈಸುಲಿಗೆ ಕೊಡುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಮೈಸುಲಿಗೆ ಎಂದರೆ ತಾನು ಮೈಮೇಲೆ ಧರಿಸಿರುವ ಹೊನ್ನಿನ, ಬೆಳ್ಳಿಯ ಹಾಗೂ ಇತರ ಆಭರಣಗಳನ್ನು ಕಳಚಿ ದೇವರಿಗೆ ಕಾಣಿಕೆಯಾಗಿ ಅರ್ಪಿಸುವುದು. ಮಕ್ಕಳಾಗಲು ಮತ್ತು ಕಷ್ಟಕಾರ್ಪಣ್ಯಗಳು ದೂರವಾಗಲು ಸ್ತ್ರೀಪುರುಷರು ಬಾಯಿಬೀಗ ಚುಚ್ಚಿಸಿಕೊಳ್ಳುವ ಹರಕೆ ಯನ್ನು ಹೊರುವುದುಂಟು.

ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತು ಎಂದು ಹರಕೆಯ ವಿಷಯ ಸೂಚಿಸಿದ್ದಾರೆ. ಜನ್ನ ಕವಿಯ ಯಶೋಧರಚರಿತೆಯಲ್ಲೂ ಹರಕೆಯ ಪ್ರಸ್ತಾಪ ಕಂಡುಬರುತ್ತದೆ. **(ಜಿ.ವಿ.ಡಿ.)**

**ಹರತಿಯ ಪಾಳೆಯಗಾರರು:** ಸು. 16–17ನೆಯ ಶತಮಾನಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಹರತಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆ ಸುತ್ತಣ ಪ್ರದೇಶಗಳನ್ನು ಆಳಿದ ಒಂದು ಮಾಂಡಲಿಕ ಮನೆತನ. ಇವರ ಪೂರ್ವಜರು ಬಿಜಾಪುರದ ಕಡೆಯಿಂದ ವಲಸೆ ಬಂದವರೆಂದೂ ಅವರು ಕ್ಷತ್ರಿಯ ಕುಲಕ್ಕೆ ಸೇರಿದವರೆಂದೂ ಒಂದು ಹೇಳಿಕೆ ಇದೆ. ಈ ವಂಶದ ಮೂಲಪುರುಷನ ಬಗ್ಗೆ ಒಂದು ಜನಜನಿತ ಕಥೆಯಿದೆ. ಆತ ವಿಜಾಪುರ ಪ್ರಾಂತಕ್ಕೆ ಸೇರಿದವನು. ಕ್ಷತ್ರಿಯ ಕುಲಜನಾದ ಅವನು ತಿಮ್ಮರಾಜನೆಂಬುವನ ಮಗಳಲ್ಲಿ, ಅವಳು ಕೇವಲ ಏಳು ವರ್ಷದವಳಿದ್ದಾಗ ಸೂರ್ಯದೇವನಿಂದ ಜನಿಸಿದನಂತೆ. ಕಳಂಕದಿಂದ ಪಾರಾಗಲು ತಾಯಿ ಮತ್ತು ಅಜ್ಜ ಅವನನ್ನು ತಿಪ್ಪೆಯ ಮೇಲೆ ಬಿಸಾಡಿ ತ್ಯಜಿಸಿದರು. ಕಮ್ಮನೆನ್ನುವ ಒಬ್ಬ ಗೊಲ್ಲ ತಿಪ್ಪೆಯ ಮೇಲೆ ದೊರೆತ ಈ ಮಗುವನ್ನು ತನ್ನ ಮಗುವಿನಂತೆಯೇ ಪೋಷಿಸಿದ. ಸ್ವಲ್ಪಕಾಲಾನಂತರ ಅವನು ವಿಜಯನಗರದ ಸಮೀಪದ ಊರಾದ ಕಮಲಾಪುರ ಎಂಬಲ್ಲಿಗೆ ಬಂದು ನೆಲಸಿದ. ಅದು ಹುಲಿಕಾಳಗ ಪ್ರದರ್ಶನಕ್ಕೆ ಪ್ರಖ್ಯಾತವಾದ ಊರಾಗಿತ್ತು. ಒಮ್ಮೆ ಕೃಷ್ಣದೇವರಾಯ ಇಂಥ ಕಾಳಗವನ್ನು ವೀಕ್ಷಿಸುತ್ತಿದ್ದಾಗ ಅವನ ಎದುರಿನಲ್ಲೇ ಹುಲಿಯೊಂದು ತಪ್ಪಿಸಿಕೊಂಡು ದನಕರುಗಳ ಮೇಲೆ ಬೀಳಲು ಆ ಬಾಲಕ ತನ್ನ ಕೊಡಲಿಯಿಂದ ಹುಲಿಯನ್ನು ಕೊಂದ. ಅವನ ಸಾಹಸದ ಬಗ್ಗೆ ಕೇಳಿದ್ದ ಅರಸ ಅವನನ್ನು ದನ ಕಾಯುವ ಕೆಲಸದಿಂದ ತಪ್ಪಿಸಿ ತನ್ನ ರಾಜ್ಯದಲ್ಲಿ ಒಂದು ಕೆಲಸಕ್ಕೆ ನೇಮಿಸಿದ, ತಿಪ್ಪೆಯ ಮೇಲೆ ದೊರೆತುದರಿಂದ ಅವನಿಗೆ ತಿಪ್ಪೆಯನಾಯಕನೆಂದು (ತಿಪ್ಪಣ್ಣನಾಯಕ) ಹೆಸರು ಬಂದಿತೆಂದು ತಿಳಿದುಬರುತ್ತದೆ. ಇದಾದ ಕೆಲವು ದಿನಗಳ ಅನಂತರ ವಿಜಯನಗರದ ಆಸ್ಥಾನದ ಪ್ರಸಿದ್ಧ ಜಟ್ಟಿಯನ್ನು ಸೋಲಿಸಿ ಕೊಂದು ರಾಜನ ಮನ್ನಣೆಗೆ ಪಾತ್ರನಾದ. ಅವನ ಶೌರ್ಯಸಾಹಸ ಗಳಿಗೆ ಮೆಚ್ಚಿದ ಕೃಷ್ಣದೇವರಾಯ ಅವನಿಗೆ ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗದ ವನರಾಜ್ಯವನ್ನು ಜಹಗೀರಾಗಿ ಕೊಟ್ಟ. ಈ ರಾಜ್ಯದಲ್ಲಿ ಮಾಜಿ ಸಮುದ್ರ, ಗೊಸಿಕೆರೆ ಮತ್ತು ಚಳ್ಳಕೆರೆ ಪ್ರಾಂತಗಳಿದ್ದವು. ಅವುಗಳಿಗೆ ದೊಡ್ಡೇರಿ, ಹರತಿ ಎಂದು ತನ್ನ ಪೂರ್ವಿಕರ ಹೆಸರನ್ನಿಟ್ಟ. ಚಿತ್ರದುರ್ಗ ದಿಂದ ಪಾವಗಡ ಮತ್ತು ಮೊಳಕಾಲ್ಮೂರಿನಿಂದ ಶಿರಾದವರಗೆ ತನ್ನ ಪ್ರಾಂತವನ್ನು ಬೆಳೆಸಿಕೊಂಡ. ಅವನಿಗೆ ಶ್ರೀಮನ್ಮಹಾಮಂಡಲೇಶ್ವರನೆಂಬ ಬಿರುದಿತ್ತು. ಆತ ಅನೇಕ ದೇವಸ್ಥಾನಗಳನ್ನೂ ಒಂದು ಕೆರೆಯನ್ನೂ ತನ್ನ ಹೆಂಡತಿ ಲಕ್ಷ್ಮೀದೇವಿಯ ಹೆಸರಿನಲ್ಲಿ ಕಟ್ಟಿಸಿದ. ಸು. 16ನೆಯ ಶತಮಾನದ ಅಂತ್ಯಭಾಗದಲ್ಲಿ ಆತ ಗತಿಸಿದನೆಂದೂ ಸಾಯುವ ಮುನ್ನ ತನ್ನ ಏಳು ಜನ ಮಕ್ಕಳಿಗೆ ರಾಜ್ಯವನ್ನು ಹಂಚಿಕೊಟ್ಟನೆಂದೂ ಪ್ರತೀತಿ.

ಕೆಲಕಾಲಾನಂತರ ಬಿಜಾಪುರದ ಸೈನ್ಯ ಇವರ ಅಧೀನದಲ್ಲಿದ್ದ ಪ್ರಾಂತವನ್ನು ಸ್ವಾಧೀನಪಡಿಸಿಕೊಂಡಾಗ ದೊಡ್ಡೇರಿಯನ್ನು ಕಳೆದುಕೊಂಡ ತಿಮ್ಮಣ್ಣನಾಯಕ ನಿಡುಗಲ್ಲನ್ನು ಆಶ್ರಯಿಸಿ ಅಲ್ಲೊಂದು ಕೋಟೆ ಕಟ್ಟಿಕೊಂಡ. ಇವನ ವಂಶಜರು ಶಿರಾದ ನವಾಬನ ಅಧೀನಕ್ಕೆ ಒಳಪಡಬೇಕಾಗಿ ಬಂದು ವರ್ಷಕ್ಕೆ 3,000 ವರಹ ಪೊಗದಿ ಸಲ್ಲಿಸುತ್ತಿದ್ದರು. 1761ರಲ್ಲಿ ನಿಡುಗಲ್ಲು ಹೈದರ್ ಅಲಿಯ ವಶವಾದಾಗ, ತಿಮ್ಮಣ್ಣನಾಯಕ ಆತನಿಗೆ 7,000 ವರಹ ಪೊಗದಿ ಮತ್ತು ಅವನ ಸೈನ್ಯಕ್ಕೆ 300 ಜನ ಯೋಧರನ್ನು ಒದಗಿಸುವ ಕರಾರಿಗೆ ಮಣಿಯಬೇಕಾಯಿತು. ಟಿಪ್ಪು ಮಂಗಳೂರು ದಂಡಯಾತ್ರೆ ಸಮಯದಲ್ಲಿ ನಿಡುಗಲ್ಲನ್ನು ತಿಮ್ಮಣ್ಣನಾಯಕನಿಂದ ಮೋಸ ದಿಂದ ವಶಪಡಿಸಿಕೊಂಡು ಅವನ ಮಕ್ಕಳಾದ ಹೊಟ್ಟೆಣ್ಣನಾಯಕ ಮತ್ತು ಅವನ ತಮ್ಮನನ್ನು ಬಂಧಿಸಿ, ಅವರನ್ನು ಶ್ರೀರಂಗಪಟ್ಟಣಕ್ಕೆ ಕರೆತಂದು ಅನಂತರ ಕೊಲ್ಲಿಸಿದ. ಟಿಪ್ಪುವಿನ ಮರಣಾನಂತರ ಅಸ್ತಿತ್ವಕ್ಕೆ ಬಂದ ಮೈಸೂರು ಸಂಸ್ಥಾನದಲ್ಲಿ ಚಿತ್ರದುರ್ಗದ ಸೇರ್ಪಡೆಯೊಂದಿಗೆ ಹರತಿ ಪಾಳೆಯ ಅಂತ್ಯಗೊಂಡಿತು.

ಹರತಿ ನಾಯಕರ ಬಗ್ಗೆ ಇದಕ್ಕಿಂತ ಹೆಚ್ಚಿನ ವಿವರಗಳು ತಿಳಿದುಬರುವು ದಿಲ್ಲವಾದರೂ 1592ರ ಹಿರಿಯೂರಿನ ಒಂದು ಶಾಸನದಲ್ಲಿ ಇವರ ವಂಶಾವಳಿ ಯನ್ನು ಹೀಗೆ ಕೊಟ್ಟಿದೆ: ಕಮಿನಾಯಕ, ಅಬಿನಾಯಕ, ಕಮಿನಾಯಕ, ಗುಡ್ಡಬ್ರಹ್ಮ ನಾಯಕ, ಹೊಟ್ಟೆಣ್ಣನಾಯಕ, ಇಮ್ಮಡಿ ಬೀರಣ್ಣನಾಯಕ, ಈಶ್ವರದೇವನಾಯಕ, ಬಸವೈನಾಯಕ, ಮುಮ್ಮಡಿ ಬ್ರಹ್ಮನಾಯಕ, ಈಶ್ವರ ದೇಪನಾಯಕ, ದುಂಡಪ್ಪನಾಯಕ, ಲಕ್ಷ್ಮೀಪತಿನಾಯಕ, ಚಿಕ್ಕರಂಗಪ್ಪ ನಾಯಕ. ಚಳ್ಳಕೆರೆಯ ಒಂದು ಶಾಸನದಲ್ಲಿ ಇಮ್ಮಡಿ ಹೊಟ್ಟೆಣ್ಣನಾಯಕ, ವೀರಹೊಟ್ಟೆಣ್ಣನಾಯಕ, ವೀರತಿಮ್ಮಣ್ಣನಾಯಕ, ಹೊಟ್ಟೆಣ್ಣನಾಯಕ ಮುಂತಾದ ಹೆಸರುಗಳು ಬಂದಂತೆ ಇನ್ನೂ ಹಲವು ಶಾಸನಗಳಲ್ಲಿ ಹರತಿಯ ಅನೇಕ ನಾಯಕರುಗಳ ಹೆಸರುಗಳು ಬರುತ್ತವೆ. ಬಹುಶಃ ಈ ನಾಯಕರು

ಈ ವಂಶದ ಮೂಲಪುರುಷನಾದ ತಿಪ್ಪೆಯನಾಯಕನ ಏಳು ಜನ ಮಕ್ಕಳ ವಂಶಗಳಿಗೆ ಸೇರಿರಬಹುದೆಂದು ಹೇಳಲಾಗಿದೆ. (ಎಲ್.ಎಸ್.ಕೆ.;ಎಚ್.ವಿ.ಎಸ್.)

**ಹರದನಹಳ್ಳಿ:** ಚಾಮರಾಜನಗರ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ ಹಾಗೂ ಹೋಬಳಿ ಕೇಂದ್ರ. ಚಾಮರಾಜನಗರದ ದಕ್ಷಿಣಕ್ಕೆ 5 ಕಿಮೀ ದೂರದಲ್ಲಿದೆ. ಜನಸಂಖ್ಯೆ 4,784. ವಾಣಿಜ್ಯಪುರ ಇದರ ಪ್ರಾಚೀನ ಹೆಸರು. ಈ ಊರಿನಲ್ಲಿ ಪಾಳುಬಿದ್ದ ಕೋಟೆಯ ಅವಶೇಷಗಳು ಕಂಡುಬರುತ್ತಿದ್ದು ಹಿಂದೆ ಇದು ಪಾಳೆಯಪಟ್ಟಿನ ಕೇಂದ್ರವಾಗಿದ್ದಿತೆಂದು ತೋರುತ್ತದೆ. ನಂಜರಾಜ ಒಡೆಯನಿಗೆ ಸೇರಿದ್ದ ಈ ಊರನ್ನು ರಾಜ ಒಡೆಯನು 1614ರಲ್ಲಿ ವಶಪಡಿಸಿಕೊಂಡ.

ಈ ಊರಿನಲ್ಲಿ ದಿವ್ಯಲಿಂಗೇಶ್ವರ ಎಂಬ ಪ್ರಸಿದ್ಧ ದೇವಾಲಯವಿದೆ. ಇದಕ್ಕೆ ಅಮೃತೇಶ್ವರ ಎಂಬ ಹೆಸರೂ ಇದೆ. ಈ ದೇವಾಲಯದ ಮೂಲ ಹೆಸರು ಅಳಿಲೇಶ್ವರ. 1317ರ ಶಾಸನವೊಂದರಲ್ಲಿ ಅಳಿಲೇಶ್ವರ ದೇವಾಲಯದ ಉಲ್ಲೇಖ ಕಂಡುಬರುತ್ತದೆ. ಈ ದೇವಾಲಯಕ್ಕೆ ವಿಜಯನಗರ ಶೈಲಿಯ ಗೋಪುರವಿದೆ. ದೇವಸ್ಥಾನದ ನವರಂಗದ ಎಡಭಾಗದಲ್ಲಿ ವೀರಭದ್ರನ ಗುಡಿ, ಪ್ರಾಕಾರದಲ್ಲಿ ಸರಸ್ವತಿ ಗುಡಿ ಇವೆ. ಸರಸ್ವತಿ ಗುಡಿಯ ಪಕ್ಕದಲ್ಲಿ ಕಾಮಾಕ್ಷಿ ಗುಡಿ ಇದೆ. ಲಿಂಗಗಳಿರುವ ಪೂಜಾಮಂದಿರಗಳ ಸಾಲಿನ ಚಾವಣಿಯಲ್ಲಿ ಶೈವಪುರಾಣದ ಘಟನೆಗಳಿಗೆ ಸಂಬಂಧಿಸಿದ ಸುಮಾರು ಒಂದೂವರೆ ಶತಮಾನದ ಹಿಂದಿನ ಚಿತ್ರಗಳಿವೆ. ದೇವಾಲಯದ ಮುಂಭಾಗದಲ್ಲಿ ಒಂದು ದೊಡ್ಡ ದೀಪಸ್ತಂಭವಿದೆ. ದೇವಸ್ಥಾನದ ಪ್ರಾಕಾರದ ಮಂಟಪಗಳ ಪೈಕಿ ಒಂದು ಮಂಟಪವನ್ನು ಒಡೆದು ಅದರ ಶಿಲೆಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ತಂದೆ ಚಾಮರಾಜ ಒಡೆಯರ ಜನನದ ಸ್ಮಾರಕವಾಗಿ ಚಾಮರಾಜನಗರದಲ್ಲಿ ಕಟ್ಟಿದ ಜನನಮಂಟಪಕ್ಕೆ ಉಪಯೋಗಿಸಲಾಯಿತೆಂದು ತಿಳಿದುಬರುತ್ತದೆ. ಈ ದೇವಸ್ಥಾನ ಹಿಂದೆ ಅಮೂಲ್ಯ ಆಭರಣಗಳನ್ನು ಹೊಂದಿದ್ದು ಅವುಗಳನ್ನು 1787ರಲ್ಲಿ ಸುಲ್ತಾನನ ಆದೇಶದ ಪ್ರಕಾರ ಶ್ರೀರಂಗಪಟ್ಟಣದ ಖಜಾನೆಗೆ ಸೇರಿಸಲಾಯಿತೆಂದು ದೇವಸ್ಥಾನದ ಕಡತದಿಂದ ತಿಳಿದುಬರುತ್ತದೆ.

ಈ ಊರಿನಲ್ಲಿ ವೀರಶೈವ ಗುರು ಗೋಸಲ ಚೆನ್ನಬಸವರ ಮಠವಿತ್ತು. 15ನೆಯ ಶತಮಾನದಲ್ಲಿ ಪಂಡಿತ ತೋಂಟದ ಸಿದ್ಧಲಿಂಗಯತಿ ಈ ಮಠದಲ್ಲಿ ದೀಕ್ಷೆವಹಿಸಿದ್ದ. ಚಿಕ್ಕದೇವರಾಯ ಒಡೆಯರು ಈ ಮಠವನ್ನು ನಾಶಪಡಿಸಿ ಅದೇ ಸ್ಥಳದಲ್ಲಿ ಆ ಕಟ್ಟಡದ ಭಾಗಗಳನ್ನೇ ಉಪಯೋಗಿಸಿ ಗೋಪಾಲಕೃಷ್ಣ ದೇವಾಲಯವನ್ನು ಕಟ್ಟಿಸಿದರಂತೆ. ಈ ದೇವಾಲಯದ ಕೆಲವು ಸ್ತಂಭಗಳಲ್ಲಿ ಶಿವನ ವಿಗ್ರಹಗಳಿವೆ; ನವರಂಗದಲ್ಲಿ ವರದರಾಜ, ಶ್ರೀನಿವಾಸ, ರಾಮಾನುಜಾಚಾರ್ಯರ ವಿಗ್ರಹಗಳು ಮತ್ತು ಎರಡು ಪ್ರತ್ಯೇಕ ಮಾಡಗಳಲ್ಲಿ ಲಕ್ಷ್ಮೀ ವಿಗ್ರಹಗಳು ಇವೆ. ಪ್ರಾಕಾರದ ಕಡೆಯ ಪೂಜಾಗೃಹವೊಂದರಲ್ಲಿ ಶ್ರೀವೈಷ್ಣವ ಆಳ್ವಾರುಗಳ ವಿಗ್ರಹಗಳಿವೆ. (ಪಿ.ಬಿ.;ಎಚ್.ಎಂ.ಎನ್.)

**ಹರಪನಹಳ್ಳಿ:** ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಹಿಂದೆ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಈ ತಾಲ್ಲೂಕನ್ನು ಇಂದು ಪಶ್ಚಿಮದಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕೂ ಉತ್ತರದಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಮತ್ತು ಹಗರಿ ಬೊಮ್ಮನಹಳ್ಳಿ ತಾಲ್ಲೂಕುಗಳೂ ಪೂರ್ವದಲ್ಲಿ ಕೂಡ್ಲಿಗಿ ತಾಲ್ಲೂಕೂ ದಕ್ಷಿಣದಲ್ಲಿ ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳೂ ಸುತ್ತುವರೆದಿವೆ. ಚಿಗಟೇರಿ, ಅರಸೀಕೆರೆ, ಹರಪನಹಳ್ಳಿ ಮತ್ತು ತೆಲಿಗಿ ಹೋಬಳಿಗಳು. 75 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,422.3 ಚ.ಕಿಮೀ. ಜನಸಂಖ್ಯೆ 2,68,793.

ಈ ತಾಲ್ಲೂಕು ಜಿಲ್ಲೆಯ ಇತರ ಕಡೆಗಳಿಗಿಂತ ಹೆಚ್ಚು ಮಳೆ ಬೀಳುವ ಎತ್ತರ ಪ್ರದೇಶಕ್ಕೆ ಸೇರಿದೆ. ಉತ್ತರಕ್ಕೆ ಇಳಿಜಾರಾಗಿರುವ ಈ ತಾಲ್ಲೂಕಿನ ಕಲ್ಲಹಳ್ಳಿ ಗುಡ್ಡಶ್ರೇಣಿಯಿದೆ. ಈ ಶ್ರೇಣಿಯ ಕಲ್ಲಹಳ್ಳಿ ಶಿಖರ 853 ಮೀ ಎತ್ತರವಿದೆ. ಮುಂದೆ ಈ ಶ್ರೇಣಿಯೇ ಕವಲೊಡೆದು ತೆಲಿಗಿ ಗುಡ್ಡ ಸಮೂಹ ಮತ್ತು ಹರಪನಹಳ್ಳಿಯ ದಕ್ಷಿಣದ ಗುಡ್ಡಸಮೂಹವಾಗಿದೆ. ಈ ಗುಡ್ಡಗಳಲ್ಲಿ ನರಸಿಂಹದೇವರ ಗುಡ್ಡ 775 ಮೀ ಎತ್ತರವಿದೆ. ಮತ್ತೆ ಈ ಶ್ರೇಣಿಯೇ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಉಚ್ಚಂಗಿದುರ್ಗದ ವರೆಗೂ ಮುಂದುವರಿದಿದೆ. ತಾಲ್ಲೂಕಿನ ಪಶ್ಚಿಮದ ಎಲ್ಲೆಯಲ್ಲಿ ತುಂಗಭದ್ರಾ ನದಿ ಗಡಿಯಾಗಿ ಸ್ವಲ್ಪದೂರ ಹರಿದು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕನ್ನು ಬೇರ್ಪಡಿಸಿದೆ. ತಾಲ್ಲೂಕಿನ ಪೂರ್ವದಲ್ಲಿ ಚಿಕ್ಕಹಗರಿ ನದಿ ಉತ್ತರಾಭಿಮುಖವಾಗಿ ಹರಿಯುವುದು. ಸಹ್ಯವೆನಿಸುವ ಉತ್ತಮ ಹವಾಗುಣವಿದೆ. ವಾರ್ಷಿಕ ಸರಾಸರಿ ಮಳೆ 730 ಮಿಮೀ.

ತಾಲ್ಲೂಕಿನಲ್ಲಿ ಮರಳು ಮತ್ತು ಕೆಂಪುಜೇಡಿ ಮತ್ತು ಕಪ್ಪುಜೇಡಿಮಣ್ಣಿನ ಭೂಮಿಯಿದೆ. ತಾಲ್ಲೂಕಿನಲ್ಲಿ ಒಟ್ಟು 22.247 ಹೆಕ್ಟೇರ್ ಅರಣ್ಯ ಪ್ರದೇಶವೂ ಸು. 1,605 ಹೆಕ್ಟೇರ್ ಖಾಯಂ ಹುಲ್ಲುಗಾವಲೂ ಇದ್ದು ಒಟ್ಟು 89,047 ಹೆಕ್ಟೇರ್‌ಗಳಲ್ಲಿ ಬಿತ್ತನೆ ಮಾಡಲಾಗಿತ್ತು. ತಾಲ್ಲೂಕಿನಲ್ಲಿ ಅನೇಕ ವ್ಯವಸಾಯ ಯೋಗ್ಯ ಕೆರೆಗಳಿವೆ. ಬಾವಿಗಳೂ ತಾಲ್ಲೂಕಿನಲ್ಲಿದ್ದು ಸ್ವಲ್ಪಮಟ್ಟಿಗೆ ವ್ಯವಸಾಯಕ್ಕೆ ನೀರೊದಗಿಸುತ್ತವೆ. ಜೋಳ, ಬತ್ತ, ಕಬ್ಬು ಮತ್ತು ಹತ್ತಿ ಬೆಳೆಯುವುದರ ಜೊತೆಗೆ ಈ ತಾಲ್ಲೂಕಿನಲ್ಲಿ ಕಡಲೆ ಮತ್ತು ಸೇಂಗಾವನ್ನು ಹೆಚ್ಚು ಬೆಳೆಯುತ್ತಾರೆ. ಇಲ್ಲಿ ಪಶುಪಾಲನೆಯೂ ಉಂಟು.

ಈ ತಾಲ್ಲೂಕಿನಲ್ಲಿ ಮ್ಯಾಂಗನೀಸ್ ಅದಿರು ಹೆಚ್ಚಾಗಿ ದೊರೆಯುತ್ತದೆ. ಚಿಗಟೇರಿ, ಕೊನಗನಹೊಸೂರು ಮತ್ತು ಕಲ್ಲಹಳ್ಳಿ ಬಳಿಯ ಮೆಕ್ಕಲು ಮಣ್ಣಿನಲ್ಲಿ ಚಿನ್ನದ ಅದಿರು ಕಂಡುಬರುತ್ತದೆ. ಹರಪನಹಳ್ಳಿ ಬಳಿ ತಾಮ್ರದ ಅದಿರು ದೊರೆಯುತ್ತದೆ. ಹತ್ತಿಬಟ್ಟೆ ತಯಾರಿಕೆ, ಹೊಗೆಸೊಪ್ಪು, ಬೀಡಿ, ಕಂಬಳಿ ಮತ್ತು ಚರ್ಮ ವಸ್ತುಗಳ ಜೊತೆಗೆ ಸೇಂಗಾ ಎಣ್ಣೆ ತಯಾರಿಕೆಯುಂಟು. ತಾಲ್ಲೂಕಿನಲ್ಲಿ ವಿದ್ಯುತ್, ಅಂಚೆ, ತಂತಿ, ದೂರವಾಣಿ, ಪ್ರೌಢಶಾಲೆ, ಆಸ್ಪತ್ರೆ, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕ್ ಮುಂತಾದವುಗಳ ಸೌಲಭ್ಯಗಳಿವೆ. ಹರಿಹರ–ಹೊಸಪೇಟೆ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಹೆದ್ದಾರಿಗಳ ಜೊತೆಗೆ ತಾಲ್ಲೂಕು ರಸ್ತೆಗಳಿದ್ದು ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ.

ಹರಪನಹಳ್ಳಿಯ ಉತ್ತರಕ್ಕೆ ಸು. 8 ಕಿಮೀ ದೂರದಲ್ಲಿರುವ ಬಗಲಿ ಗ್ರಾಮದಲ್ಲಿ ಚಾಳುಕ್ಯರ ಕಾಲದ ಕಲ್ಲೇಶ್ವರ ದೇವಾಲಯವಿದೆ. ಕೆರೆಯ ಏರಿಯ ಮೇಲಿರುವ ಈ ದೇವಾಲಯದಲ್ಲಿ 59 ಕಂಬಗಳಿದ್ದು ಒಂದೊಂದೂ ವೈವಿಧ್ಯಮಯ ಕೆತ್ತನೆಯಿಂದ ಕೂಡಿವೆ. ಈ ದೇವಸ್ಥಾನಕ್ಕೆ 1018ರ ಶಾಸನದಲ್ಲಿ ದತ್ತಿ ಬಿಟ್ಟ ವಿಚಾರ ಇರುವುದರಿಂದ ಇದಕ್ಕೂ ಮುಂದೆ ಈ ದೇವಸ್ಥಾನದ ನಿರ್ಮಾಣವಾಗಿರಬೇಕೆಂದು ತಿಳಿದುಬರುವುದು. ಈ ದೇವಸ್ಥಾನದಲ್ಲಿ 36 ಶಾಸನಗಳು ಇವೆ. ಇವುಗಳಲ್ಲಿ 12 ಶಾಸನಗಳು ಪಶ್ಚಿಮ ಚಾಳುಕ್ಯ ಚಕ್ರವರ್ತಿ 6ನೆಯ ವಿಕ್ರಮಾದಿತ್ಯನ ಕಾಲದವು. ಈ ಗ್ರಾಮಕ್ಕೆ ಹಿಂದೆ ಬಳ್ಳುಗಲಿ ಎಂಬ ಹೆಸರಿತ್ತೆಂದೂ ಹೊಯ್ಸಳ 2ನೆಯ ಬಲ್ಲಾಳನ ರಾಜಧಾನಿಗಳಲ್ಲಿ ಒಂದಾಗಿತ್ತೆಂದೂ ತಿಳಿದುಬರುವುದು. ಹರಪನಹಳ್ಳಿಯ ಈಶಾನ್ಯಕ್ಕೆ 13 ಕಿಮೀ ದೂರದಲ್ಲಿರುವ ಚಿಗಟೇರಿ ಹೋಬಳಿ ಕೇಂದ್ರ. ಇಲ್ಲಿನ ಜಾಜಿಕಲ್ಲುಗುಡ್ಡದ ಬಳಿ ಚಿನ್ನ ತೆಗೆಯಲಾಗುತ್ತಿತ್ತೆಂದು ತಿಳಿದುಬರುತ್ತದೆ. ಇಲ್ಲಿ ಪ್ರತಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಶ್ರೀಕರ್ಣಿ ಕೋಟೆಸ್ವಾಮಿ ರಥೋತ್ಸವ ಪ್ರಸಿದ್ಧವಾದದ್ದು. ಹರಪನಹಳ್ಳಿ–ಅರಸೀಕೆರೆ ಮಾರ್ಗದಲ್ಲಿ ಹರಪನಹಳ್ಳಿಗೆ ಸುಮಾರು 3 ಕಿಮೀ ದೂರದಲ್ಲಿರುವ ದೇವರ ತಿಮ್ಮಲಾಪುರ ಎಂಬಲ್ಲಿ ಹರಪನಹಳ್ಳಿ ಪಾಳೆಯಗಾರ ದಾದಯ್ಯನಾಯಕ ಮತ್ತು ಅವನ ಮಗ ರಂಗನಾಯಕ ಕಟ್ಟಿಸಿರುವ ವೆಂಕಟೇಶ್ವರನ ದೊಡ್ಡ ದೇವಾಲಯವಿದೆ. ಈ ದೇವಾಲಯದ ಪ್ರಾಕಾರದ

ಒಳಗೆ ಕಣ್ಣಕೊಟ್ಟಪ್ಪನ ದೇವಾಲಯವಿದೆ. ಪ್ರತಿವರ್ಷ ಇಲ್ಲಿ ರಥೋತ್ಸವ ಜರುಗುವುದು. ಹರಪನಹಳ್ಳಿಯ ನೈಋತ್ಯದಲ್ಲಿ ಸುಮಾರು 13 ಕಿಮೀ ದೂರದಲ್ಲಿರುವ ಹಳವಗಲು ಗ್ರಾಮದಲ್ಲಿ ಕಪ್ಪುಶಿಲೆಯ ಒಂದು ಚಾಳುಕ್ಯ ದೇವಾಲಯವಿದೆ. ಹರಪನಹಳ್ಳಿಗೆ ವಾಯವ್ಯದಲ್ಲಿ ಸುಮಾರು 10 ಕಿಮೀ ದೂರದಲ್ಲಿರುವ ಕುಲಹಳ್ಳಿಯಲ್ಲಿ ಗೋಣಿಬಸಪ್ಪ ದೇವಾಲಯವಿದ್ದು ಮಾರ್ಚ್ ತಿಂಗಳಲ್ಲಿ ಜಾತ್ರೆ ನಡೆಯುವುದು. ಹರಪನಹಳ್ಳಿಯ ನೈಋತ್ಯಕ್ಕೆ 13 ಕಿಮೀ ದೂರದಲ್ಲಿರುವ ನೀಲಗುಂದ ಗ್ರಾಮದಲ್ಲಿ ಚಾಳುಕ್ಯ ಶೈಲಿಯ ಭೀಮೇಶ್ವರ ದೇವಾಲಯವಿದೆ. ಹರಪನಹಳ್ಳಿಯ ಆಗ್ನೇಯಕ್ಕೆ 35 ಕಿಮೀ ದೂರದಲ್ಲಿರುವ ರಾಮಘಟ್ಟ ಗ್ರಾಮದ ಕಂಬಳಿಗಳು ಉತ್ತಮ ದರ್ಜೆಯ ವೆಂದು ಪ್ರಸಿದ್ಧವಾಗಿವೆ. ಹರಪನಹಳ್ಳಿಯ ಆಗ್ನೇಯಕ್ಕೆ 28 ಕಿಮೀ ದೂರದಲ್ಲಿರುವ ಉಚ್ಚಂಗಿದುರ್ಗ ಒಂದು ಗಿರಿದುರ್ಗ. ಇದು ಕದಂಬರ ಒಂದು ಮುಖ್ಯ ಪಟ್ಟಣವಾಗಿತ್ತು. ಅನಂತರ ನೊಳಂಬರ ವಶಕ್ಕೆ ಬಂದು ಇದನ್ನು ಗಂಗದೊರೆ ಎರಡನೆಯ ಮಾರಸಿಂಹ ಸು. 970ರಲ್ಲಿ ವಶಪಡಿಸಿ ಕೊಂಡ. ಈ ದುರ್ಗದ ಮೇಲಿನ ಕೋಟೆ ಅಭೇದ್ಯವೆನಿಸಿಕೊಂಡಿತ್ತು. ಕೋಟೆಯೊಳಗೆ ಉಚ್ಚಂಗಿಯಮ್ಮನ ದೇವಾಲಯವಿದೆ. ಇಲ್ಲಿ ದಸರ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು. ಬೆಟ್ಟದ ಪಾದದಲ್ಲಿ ಉಚ್ಚಂಗಿ ಗ್ರಾಮವಿದೆ.

ಹರಪನಹಳ್ಳಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬಳ್ಳಾರಿಯ ನೈಋತ್ಯದಲ್ಲಿ ಹರಿಹರ-ಹೊಸಕೋಟೆ ಮಾರ್ಗದಲ್ಲಿ ಬಳ್ಳಾರಿಗೆ 124 ಕಿಮೀ ದೂರದಲ್ಲೂ ಹೊಸಪೇಟೆಗೆ 77 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 41,907.

ಇದು ಈ ಸುತ್ತಲ ವ್ಯಾಪಾರ ಕೇಂದ್ರ. ಸೇಂಗಾ ಎಣ್ಣೆ, ಬೀಡಿ, ಜೋಳ ಇಲ್ಲಿಂದ ಹೆಚ್ಚಾಗಿ ಹೊರಪ್ರದೇಶಗಳಿಗೆ ಹೋಗುವ ವಸ್ತುಗಳು. ಇಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುತ್ ಸೌಲಭ್ಯಗಳಿವೆ. ಆಸ್ಪತ್ರೆ, ಔಷಧಾಲಯ, ಪ್ರೌಢಶಾಲೆ, ಉಪಾಧ್ಯಾಯ ತರಬೇತಿ ಮತ್ತು ಇತರ ಕಾಲೇಜುಗಳಿವೆ. ಪಟ್ಟಣ ಪುರಸಭಾ ಆಡಳಿತಕ್ಕೆ ಸೇರಿದೆ.

ಈ ಪಟ್ಟಣ ಸಣ್ಣಪುಟ್ಟ ಗುಡ್ಡಗಳಿಂದ ಸುತ್ತುವರಿದಿದೆ. ಇವುಗಳಲ್ಲಿ ಗೋಸಾಯಿಯ ಸಮಾಧಿ ಇರುವ ಗೋಸಾಯಿ ಗುಡ್ಡ ಒಂದು. ಈ ಪಟ್ಟಣದಲ್ಲಿ ಎರಡು ಸುತ್ತಿನ ಒಂದು ಕೋಟೆ ಇದೆ. ಕೋಟೆಯ ಎರಡು ಪಕ್ಕಗಳಲ್ಲೂ ಎರಡು ಕೆರೆಗಳಿದ್ದು ಇವು ಕೋಟೆಗೆ ರಕ್ಷಣೆಯಂತಿವೆ. ಕೋಟೆಯ ಸುತ್ತಲೂ ಕಂದಕವಿದೆ. ಕೋಟೆಯೊಳಗೆ ಹನುಮಂತನ ಗುಡಿ ಹಾಗೂ ಜೈನ ದೇವಾಲಯವಿದೆ. ಬೋಗಾರ ಬಸದಿಯೆಂಬ ಈ ಜೈನ ದೇವಾಲಯದ ಧ್ವಜಸ್ತಂಭ ಸುಂದರ ಕಲಾಕೃತಿ. ತೀರ್ಥಂಕರರ ಮೂರ್ತಿಗಳನ್ನು ಇದರ ಮೇಲೆ ಕೆತ್ತಲಾಗಿದೆ. ಹರಪನಹಳ್ಳಿಯ ಬೇಡರ ದಾದಯ್ಯನಾಯಕನ ಮನೆತನವೇ ಈ ಜಿಲ್ಲೆಯ ಇತರ ಪಾಳೆಯಗಾರರಲ್ಲೆಲ್ಲ ಪ್ರಸಿದ್ಧವಾದದ್ದು.

(ಜಿ.ಆರ್.ಪಿ.)

**ಹರಪನಹಳ್ಳಿ ಪಾಳೆಯಗಾರರು:** ಬಳ್ಳಾರಿ ಜಿಲ್ಲೆಯ ಪಾಳೆಯಗಾರರಲ್ಲಿ ಪ್ರಬಲವಾಗಿದ್ದ ಮನೆತನ. ಜಾತಿಯಲ್ಲಿ ಬೇಡರಾಗಿದ್ದ ಇವರು ಅನಂತರ ವೀರಶೈವ ಧರ್ಮವನ್ನು ಸ್ವೀಕರಿಸಿದರು. ಇವರಿಗೆ ಒಟ್ಟು 460 ಹಳ್ಳಿಗಳು ಸೇರಿದ್ದು, ಎಂಟು ಲಕ್ಷ ರೂಪಾಯಿಗಳ ವಾರ್ಷಿಕ ವರಮಾನವಿತ್ತು. ಈ ವಂಶದ ಮೂಲಪುರುಷ ದಾದಯ್ಯನಾಯಕ. ವಿಜಯನಗರ ಪತನಾನಂತರ ಈತ ತನ್ನ ಅನುಯಾಯಿಗಳ ಬೆಂಬಲಪಡೆದು ನಾಯಕನಾಗಿ ಬಾಗಳಿ ಮತ್ತು ಅದರ ಸುತ್ತಣ ಪ್ರದೇಶವನ್ನು ಆಳಲಾರಂಭಿಸಿದ.

ದಾದಯ್ಯನ ಸಂಬಂಧಿ ಜಕ್ಕಣ್ಣನಾಯಕ ಚಿತ್ರದುರ್ಗದ ಪಾಳೆಯಗಾರ ನಾಗಿದ್ದ. ನೆರೆಯ ಪಾಳೆಯಗಾರನಾಗಿದ್ದ ಕೆಂಗಣ್ಣನಾಯಕ ಈತನ ಮೇಲೆ ಯುದ್ಧಕ್ಕೆ ಬಂದಾಗ ಜಕ್ಕಣ್ಣನಾಯಕ ದಾದಯ್ಯನ ಸಹಾಯವನ್ನು ಕೋರಿದ. ಹೊಸ ರಾಜ್ಯವನ್ನು ಕಟ್ಟುವ ಉತ್ಸಾಹದಲ್ಲಿದ್ದ ದಾದಯ್ಯ ಈ ಕರೆಯನ್ನು ಒಂದು ಸವಾಲೆಂದು ಭಾವಿಸಿ, ಕೆಂಗಣ್ಣನಾಯಕನನ್ನು ಎದುರಿಸಿ ಸೋಲಿಸಿದ. ಉಪಕೃತನಾದ ಜಕ್ಕಣ್ಣನಾಯಕ ತನ್ನ ಮಗಳು ಹೊನ್ನಾಯಿ ನಾಯಕಿಯನ್ನು ದಾದಯ್ಯನಿಗೆ ಕೊಟ್ಟು ಮದುವೆ ಮಾಡಿದನಲ್ಲದೆ ಚಿತ್ರದುರ್ಗ ಪ್ರಾಂತ್ಯದ ಸ್ವಲ್ಪ ಭಾಗವನ್ನು ಮತ್ತು ಉಚ್ಚಂಗಿದುರ್ಗವನ್ನು ಬಳುವಳಿಯಾಗಿ ಕೊಟ್ಟ. ಕೆಲಕಾಲಾನಂತರ ದಾದಯ್ಯ ನಾಯಕನಿಗೂ ಜಕ್ಕಣ್ಣ ನಾಯಕನಿಗೂ ವಿರಸವುಂಟಾಗಿ ಯುದ್ಧ ನಡೆಯಿತು. ಆ ಸಮಯದಲ್ಲಿ ಹೊನ್ನಾಯಿ ತಂದೆಯ ಕಡೆ ತನ್ನ ಒಲವನ್ನು ವ್ಯಕ್ತಪಡಿಸಿದಳು. ಆಗ ದಾದಯ್ಯ ಆಕೆಯನ್ನು ಉಚ್ಚಂಗಿ ದುರ್ಗದ ಶಿಖರದ ಮೇಲಿಂದ ಕೆಳಗಿನ ಕೆರೆಗೆ ತಳ್ಳಿ ಕೊಂದ ಎಂಬುದು ಕಥೆ. ಈಗಲೂ ಈ ಕೆರೆಗೆ ಹೊನ್ನಾಯಿಕೆರೆ ಎಂದೇ ಹೆಸರು. ಅನಂತರ ದಾದಯ್ಯ ಅಕ್ಕಪಕ್ಕದ ಪಾಳೆಯಗಾರರಾದ ಜರಮಲೆಯ ನಾಯಕನ ಮಗಳು ಜಂಪಾನಾಗತಿಯನ್ನೂ ಗುಡಿಕೋಟೆ ಪಾಳೆಯಗಾರನ ಮಗಳಾದ ಭರಮನಾಗತಿಯನ್ನೂ ವಿವಾಹವಾದ. ದಾದಯ್ಯ ಬಿಜಾಪುರದ ಸುಲ್ತಾನರಿಗೆ ಅಧೀನನಾಗಿದ್ದಂತೆ ತೋರುತ್ತದೆ. ಇವನು 1592ರಲ್ಲಿ ನಿಧನನಾದ.

ದಾದಯ್ಯನ ಅನಂತರ ಆಳಿದ ಪ್ರಮುಖ ಪಾಳೆಯಗಾರರಿವರು: ರಂಗನಾಯಕ (ಸು. 1592-1616); ಬರ್ಮಣ್ಣನಾಯಕ (ಸು. 1616-50); ಓಬಣ್ಣನಾಯಕ (ಸು. 1650-55); ವೀರ ಮುಮ್ಮಡಿನಾಯಕ (ಸು. 1655-67); ಮುಮ್ಮಡಿನಾಯಕ (ಸು. 1667-87); ಬಸವಂತನಾಯಕ (ಕೊಟ್ರಪ್ಪನಾಯಕ, ಸು. 1687-1705); ಮರಿಕೊಟ್ರಪ್ಪನಾಯಕ (ಸು. 1705-15); ಈತನ ಮಗ ಬಸವಂತನಾಯಕ. ಇವನು 1715 -21ರ ವರೆಗೆ ಆಳಿದ. ಇವನಿಗೆ ಮಕ್ಕಳಿರಲಿಲ್ಲ. ಇವನ ಅನಂತರ ಈ ವಂಶಕ್ಕೆ ದತ್ತುಮಗನಾಗಿ ಬಂದ ಇವನ ಸಂಬಂಧಿಯೊಬ್ಬ ಮುದಿಬಸಪ್ಪನಾಯಕ ಎಂಬ ಹೆಸರಿನಿಂದ ಸು. 1741-42 ರವರೆಗೆ ರಾಜ್ಯವಾಳಿದ. ಅನಂತರ ಈತನ ಹಿರಿಯ ಮಗ ವೀರಬಸಪ್ಪನಾಯಕ ಅಧಿಕಾರಕ್ಕೆ ಬಂದ. ಅನಂತರ ಈತನ ಮಗ ಸೋಮಶೇಖರನಾಯಕ ಪಟ್ಟಕ್ಕೆ ಬಂದ.

ಸೋಮಶೇಖರನಾಯಕ (ಸು. 1742-66) ಹರಪನಹಳ್ಳಿ ಪಾಳೆಯಗಾರ ರಲ್ಲಿ ಪ್ರಸಿದ್ಧನಾದವನು. ಈತ ಪರಾಕ್ರಮಿ ಮತ್ತು ದಕ್ಷ ಆಡಳಿತಗಾರ. ರಾಯದುರ್ಗದ ಪಾಳೆಯಗಾರರೊಂದಿಗೆ ಸೇರಿ, ಚಿತ್ರದುರ್ಗದ ಕೋಟೆಯನ್ನು ಮುತ್ತುವುದರಲ್ಲಿ ಬಿದನೂರು ನಾಯಕರಿಗೆ ಸಹಾಯಕನಾಗಿದ್ದ. ಈತನ ಆಡಳಿತಾವಧಿಯಲ್ಲಿ ಹರಪನಹಳ್ಳಿ ವೈಭವದ ಸ್ಥಿತಿಯಲ್ಲಿತ್ತು.

ಹರಪನಹಳ್ಳಿ ಪಾಳೆಯಗಾರರು ದಕ್ಷರೂ ಪರಾಕ್ರಮಿಗಳೂ ಆಗಿದ್ದರೂ ಸ್ವತಂತ್ರವಾಗಿ ಆಳಲಿಲ್ಲ. ಬಿಜಾಪುರದ ಆದಿಲ್‌ಶಾಹೀ ಅರಸರಿಗೆ ಕಪ್ಪ ಕೊಡುತ್ತಿದ್ದರಲ್ಲದೆ ಅವರಿಗೆ ನೇರವಾಗಿ ಯುದ್ಧಗಳಲ್ಲೂ ಭಾಗವಹಿಸುತ್ತಿ ದ್ದರು. ಕಾಲಕ್ರಮೇಣ ಈ ವಂಶದ ನಾಯಕರು ಅಭಿವೃದ್ಧಿಗೆ ಬಂದರು. ಆದಿಲ್‌ಶಾಹೀ ಆಳಿಕೆಯ ಅನಂತರ ಮರಾಠರು ಪ್ರಬಲರಾದಾಗ, ಹರಪನ ಹಳ್ಳಿ ಪಾಳೆಯಗಾರರು ಅವರಿಗೂ ಕಪ್ಪವನ್ನು ಒಪ್ಪಿಸುತ್ತಿದ್ದರು. ಹೈದರ್ ಹರಪನಹಳ್ಳಿ ಪ್ರಾಂತ್ಯಕ್ಕೆ ದಂಡೆತ್ತಿ ಬಂದಿದ್ದಾಗ ಈ ಪಾಳೆಯಗಾರರು ಅವನಿಗೆ ಸಹಾಯಕರಾಗಿದ್ದರು.

ಸೋಮಶೇಖರನಾಯಕನ ಮರಣಾನಂತರ ಈತನ ಪತ್ನಿ ಸೋಮಮ್ಮಾಜಿ ಗಂಡನ ಸಂಬಂಧಿಯೊಬ್ಬನನ್ನು ರಾಜ್ಯಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಿದಳು. ಈತ ವೀರಬಸಪ್ಪನಾಯಕ ಎಂಬ ಹೆಸರಿನಿಂದ ಆಳಿದ (ಸು. 1766-68). ಈತನ ಅನಂತರ ಸೋಮಮ್ಮಾಜಿ ಮತ್ತೊಬ್ಬ ಸಂಬಂಧಿ ಬಸಪ್ಪನಾಯಕನನ್ನು (ಸು. 1768-87) ಪಟ್ಟಕ್ಕೆ ತಂದಳು. ಹೈದರ್ ಅಲಿ 1775ರಲ್ಲಿ ಹರಪನಹಳ್ಳಿಯ ಮೇಲೆ ಮತ್ತೆ ದಾಳಿ

ಮಾಡಿ ಕಪ್ಪ ವಸೂಲಿ ಮಾಡಿದ. 1787ರಲ್ಲಿ ಟಿಪ್ಪು ಮೋಸದಿಂದ ಬಸಪ್ಪನಾಯಕನನ್ನು ಹಿಡಿದು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟನಲ್ಲದೆ, ಆತನ ಅನೇಕ ಸಂಬಂಧಿಗಳನ್ನು ಚಿತ್ರದುರ್ಗದಲ್ಲಿ ಬಂಧಿಸಿದ. ಅವರಲ್ಲಿ ಬಸವಪ್ಪನಾಯಕನ ಒಬ್ಬ ಪತ್ನಿ ಮತ್ತು ಮಗ, ಸೋಮಶೇಖರನಾಯಕ ಸೇರಿದ್ದರು. 1792ರಲ್ಲಿ ಮರಾಠ ದಳಪತಿ ಪರಶುರಾಮ ಭಾವು ಹರಪನಹಳ್ಳಿ ಪ್ರದೇಶದಲ್ಲಿ ಯುದ್ಧನಿರತನಾಗಿದ್ದಾಗ ಸೋಮಶೇಖರನಾಯಕನಿಗೆ ರಾಜ್ಯವನ್ನು ದಕ್ಕಿಸಿಕೊಡಲು ಪ್ರಯತ್ನಿಸಿದ. ಆದರೆ ಟಿಪ್ಪು ಹರಪನಹಳ್ಳಿಯ ಮೇಲೆ ದಾಳಿ ಮಾಡಿ ಇವರನ್ನೆಲ್ಲ ಅಲ್ಲಿಂದ ಓಡಿಸಿದ.1799ರಲ್ಲಿ ಟಿಪ್ಪು ಸತ್ತಮೇಲೆ ಹರಪನಹಳ್ಳಿಯ ದಿವಾನನಾಗಿದ್ದವನು ಸೋಮಶೇಖರನಾಯಕನನ್ನು ಮತ್ತೆ ಮರಾಠ ಪ್ರದೇಶದಿಂದ ಕರೆತಂದು ಹರಪನಹಳ್ಳಿಯನ್ನು ಆಕ್ರಮಿಸಿಕೊಂಡ. ಶೀಘ್ರದಲ್ಲಿಯೇ ಈಸ್ಟ್ ಇಂಡಿಯಾ ಕಂಪನಿಯ ದಳಪತಿ ಹ್ಯಾರಿಸ್ ಈ ಪ್ರದೇಶವನ್ನು ಕಂಪನಿಯ ಸ್ವಾಧೀನಕ್ಕೆ ತರಲು ನಿರತನಾಗಿದ್ದಾಗ ಸೋಮಶೇಖರನಾಯಕ ಮತ್ತು ಆತನ ದಿವಾನ ಇಬ್ಬರೂ ಕಂಪನಿಗೆ ಕಪ್ಪ ಒಪ್ಪಿಸಿ, ತಮ್ಮ ಪ್ರದೇಶದ ಆಳಿಕೆಯನ್ನು ಉಳಿಸಿಕೊಳ್ಳಲು ಸನ್ನಾಹ ನಡೆಸಿದರು. ಆದರೆ ಅವರಲ್ಲಿ ಆದ ಒಪ್ಪಂದ ಸೋಮಶೇಖರನಾಯಕನಿಗೆ ಅನುಕೂಲವಾಗಿರಲಿಲ್ಲ. 1825ರಲ್ಲಿ ಸೋಮಶೇಖರನಾಯಕ ತೀರಿಕೊಂಡ. ಈ ವಂಶಸ್ಥರ ಹಕ್ಕನ್ನು ಕಂಪನಿ ಮಾನ್ಯ ಮಾಡಲಿಲ್ಲ. ಇದರೊಂದಿಗೆ ಹರಪನಹಳ್ಳಿ ಪಾಳೆಯಪಟ್ಟು ಕೊನೆಗೊಂಡಿತು. **(ಎಚ್.ವಿ.ಎಸ್.)**

**ಹರಪನಹಳ್ಳಿ ಭೀಮವ್ವ:** 1822–1902. ಹರಿದಾಸ ಸಾಹಿತ್ಯದ ಪ್ರಖ್ಯಾತ ಕವಯಿತ್ರಿ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ನಾರಾಯಣ ದೇವರಕೆರೆ ಈಕೆಯ ಜನ್ಮಸ್ಥಳ. ತಂದೆ ನರೇಭಟ್ಟ, ತಾಯಿ ರಾಘಮ್ಮ. ಭೀಮವ್ವನ ಹುಟ್ಟು ಹೆಸರು ಕಮಲಾಕ್ಷಿ.

ಈಕೆಗೆ ಹನ್ನೊಂದು ತುಂಬಿದಾಗ ರಾಯದುರ್ಗ ತಾಲ್ಲೂಕಿನ ಹರೇ ಸಮುದ್ರದ ಮುನಿಯಪ್ಪ ಎಂಬುವವನೊಡನೆ ಮದುವೆಯಾಯಿತು. ನಲವತ್ತೈದು ವಯಸ್ಸಿನ ಮುನಿಯಪ್ಪನ ಮೂರನೆಯ ಹೆಂಡತಿಯಾಗಿ ಭೀಮವ್ವ ಅವನ ಮನೆ ತುಂಬಿದಳು. ಅತ್ತೆ ಮನೆಯವರು ಇವಳಿಗೆ ಕೃಷ್ಣಾಬಾಯಿ ಎಂದು ಹೆಸರಿಟ್ಟರು. ಮದುವೆಯಾದ ಹದಿನಾಲ್ಕು ವರ್ಷಕ್ಕೆ ಹಾಜೂರು ಸೋಮರಾಯ ಎಂಬ ಮಗನೂ ನಾಲ್ಕು ವರ್ಷಗಳ ಅನಂತರ ಸುಬ್ಬಾಬಾಯಿ ಎಂಬ ಮಗಳೂ ಹುಟ್ಟಿದರು. ಅನಂತರ ಭೀಮವ್ವ ನಾನಾ ಕಷ್ಟ ಪರಂಪರೆಗಳನ್ನು ಎದುರಿಸಿದಳು. ಒಮ್ಮೆ ಇವಳ ಮನೆಗೆ ಕಳ್ಳರು ನುಗ್ಗಿ ಇದ್ದಬಿದ್ದ ನಗನಾಣ್ಯಗಳನ್ನೆಲ್ಲ ದೋಚಿಕೊಂಡು ಹೋದರಂತೆ. ಕಳ್ಳತನವಾದ ಒಂದು ವರ್ಷದಲ್ಲಿ ಭೀಮವ್ವನಿಗೆ ಪತಿವಿಯೋಗವೂ ಆಯಿತು. ಆಗ ಇವಳಿಗೆ ಕೇವಲ ಮೂವತ್ತೈದು ವರ್ಷ. ಅಲ್ಲಿಂದಾಚೆಗೆ ಭೀಮವ್ವೆಯ ಜೀವನಮಾರ್ಗವೇ ಬದಲಾಯಿತು. ತಾನೇ ಸ್ವತಃ ಹಾಡುಗಳನ್ನು ರಚಿಸಿ ಹಾಡತೊಡಗಿದಳು. ನಾರದರು ಇವಳ ಸ್ವಪ್ನದಲ್ಲಿ ಬಂದು ಭೀಮೇಶಕೃಷ್ಣ ಎಂಬ ಅಂಕಿತವನ್ನು ಕೊಟ್ಟರಂತೆ. ಅವಳ ಎಲ್ಲ ಹಾಡುಗಳು ಈ ಅಂಕಿತದಲ್ಲಿಯೇ ರಚಿತವಾಗಿವೆ. 'ರಕ್ಷಿಸಬೇಕೆನ್ನ ಲಕ್ಷ್ಮೀನರಸಿಂಹಾನ ಭಕ್ತಾನೆ' ಎಂಬುದು ಇವಳ ಮೊದಲನೆಯ ಕೃತಿ.

ಸುಭದ್ರಾಕಲ್ಯಾಣ, ಮುಯ್ಯದ ಹಾಡು, ನಳಚರಿತ್ರೆ, ರತಿಕಲ್ಯಾಣ, ಪತಿದಾನಕೊಟ್ಟ ಹಾಡು ಮತ್ತು ಶಕುಂತಲನ ಹಾಡು–ಇವು ಭೀಮವ್ವನಿಂದ ರಚಿತವಾಗಿರುವ ದೊಡ್ಡ ಹಾಡುಗಳು. ಅರ್ಜುನ–ಸುಭದ್ರೆಯರ ವಿವಾಹವೇ ಸುಭದ್ರಾ ಕಲ್ಯಾಣದ ವಸ್ತು. ಒಟ್ಟು 32 ಧ್ವನಿ ವಚನಗಳಲ್ಲಿ ಕಥೆ ಮೂಡಿಬಂದಿದೆ. ಕೃಷ್ಣ–ಸತ್ಯಭಾಮೆ, ಕೃಷ್ಣ–ಬಲರಾಮರ ಸಂಭಾಷಣೆಗಳು ಸೊಗಸಾಗಿವೆ. ಬಲರಾಮನ ವಿರುದ್ಧ ಕೃಷ್ಣ ತನ್ನ ತಂಗಿಯನ್ನು ಪಾರ್ಥನಿಗೆ ಮದುವೆ ಮಾಡಿಕೊಟ್ಟ ರೀತಿ ನಿರೂಪಿತವಾಗಿದೆ. ಸನ್ಯಾಸಿವೇಷದ ಅರ್ಜುನನಿಗೆ ಸುಭದ್ರೆ ಉಪಚರಿಸುವ ಸನ್ನಿವೇಶದ ಚಿತ್ರಣ ಮೋಹಕವಾಗಿ ಬಂದಿದೆ. ಪರಸ್ಪರರ ಗುರುತು ಇಂಗಿತಗಳನ್ನರಿತ ಅವರ ಮನೋಭಾವವನ್ನು ಭೀಮವ್ವ ಜೀವಂತವಾಗಿ ಚಿತ್ರಿಸಿದ್ದಾಳೆ.

ಮುಯ್ಯದ ಹಾಡು ರುಕ್ಮಿಣಿ–ಸತ್ಯಭಾಮೆಯರು ಕುಂತಿಯ ಸೊಸೆಯರನ್ನು ಪಂಥದಲ್ಲಿ ಸೋಲಿಸಿ ಮುಯ್ಯಿ ಕೊಟ್ಟು ಬರುವುದೇ ಇದರ ವಸ್ತು. ಇದರಲ್ಲಿ 82 ಧ್ವನಿಗಳಿದ್ದು ಕೃಷ್ಣನ ರಾಣಿಯರು ಹೊರಡುವ ಸಂಭ್ರಮ, ಮಾಡಿಕೊಳ್ಳುವ ಸಿದ್ಧತೆಗಳ ವರ್ಣನೆಗಳು ವಿಪುಲವಾಗಿ ಬಂದಿವೆ. ನಳಚರಿತ್ರೆ ಮಹಾಭಾರತದಿಂದ ಆರಿಸಿಕೊಂಡ ವಸ್ತು. ಇದರಲ್ಲಿ 103 ಧ್ವನಿಗಳಿವೆ. ಭೀಮವ್ವನ ಕೃತಿಗಳಲ್ಲಿ ಇದೇ ಅತ್ಯಂತ ದೊಡ್ಡದು. ಕತೆಯ ಓಟ ಕನಕದಾಸರ ನಳಚರಿತ್ರೆಯನ್ನೇ ಅನುಕರಿಸಿದಂತಿದೆ. ಅವರು ಷಟ್ಪದಿಯಲ್ಲಿ ಸಾಧಿಸಿದ ಬಿಗಿಯನ್ನು ಈಕೆ ದ್ವಿಪದಿಯಲ್ಲಿ ಹಿಡಿದಿಟ್ಟಿದ್ದಾಳೆ. ರತಿಕಲ್ಯಾಣದಲ್ಲಿ ದ್ರೌಪದಿ ರಣಚಂಡಿಯಾಗಿ ಪೌಂಡ್ರಕಾದಿಗಳನ್ನು ತರಿದೊಟ್ಟುವುದು ಕವಯಿತ್ರಿಯ ಹೊಸ ಕಲ್ಪನೆ. ಸತ್ಯಭಾಮೆ ಕೃಷ್ಣನನ್ನು ನಾರದರಿಗೆ ದಾನ ಕೊಟ್ಟದ್ದು ಪತಿದಾನ ಕೊಟ್ಟ ಹಾಡಿನ ವಸ್ತು. ಇದರಲ್ಲಿ ಕೃಷ್ಣನ ದಶಾವತಾರ, ತುಳಸೀ ಮಹಾತ್ಮೆ, ನಾರದನ ಚಾಡಿಕೋರಬುದ್ಧಿಗಳೆಲ್ಲವೂ ವರ್ಣಿತವಾಗಿವೆ. ಶಕುಂತಲನ ಹಾಡು ಕಾಳಿದಾಸನ ಶಾಕುಂತಲ ನಾಟಕದ ಕಥೆಯನ್ನು ಕೇಳಿ, ಅದನ್ನೇ ಸಂಕ್ಷಿಪ್ತವಾಗಿ ದ್ವಿಪದಿಯಲ್ಲಿ ಹೇಳಿದಂತಿದೆ. ಇದರಲ್ಲಿ 61 ಧ್ವನಿಗಳಿವೆ. ಈ ಕೃತಿಗಳ ವೈಶಿಷ್ಟ್ಯವೆಂದರೆ ಹಾಡು ಮತ್ತು ವಚನಗಳಲ್ಲಿ ಕಥೆ ಹೇಳಿರುವುದು. ಇದು ಚಂಪೂ ಸಂಪ್ರದಾಯವನ್ನು ನೆನಪಿಗೆ ತರುತ್ತದೆ. ಈ ಕೃತಿಗಳೇ ಅಲ್ಲದೆ ಭೀಮವ್ವ ಸುಮಾರು 150 ಬಿಡಿಹಾಡುಗಳನ್ನು ರಚಿಸಿದ್ದಾಳೆ. ಶ್ರೀಹರಿಗೆ ಅರ್ಪಿಸಿದ ಮಾಡೋಣೇ ಮುತ್ತೈದೇರು ಜೋಡು ಜ್ಯೋತಿ ಆರತೀ ಎಂಬ ಆರತಿ ಹಾಡು ಈಕೆಯಿಂದ ರಚಿತವಾದ ಕೊನೆಯ ಕೃತಿ.

ಸಾಹಿತ್ಯಕ ಮೌಲ್ಯದ ದೃಷ್ಟಿಯಿಂದ ಭೀಮವ್ವನ ಕೃತಿಗಳನ್ನು ನೋಡಿದಾಗ ಇವಳಿಗೆ ಕಥನಕಲೆ, ವರ್ಣನಾಕೌಶಲ ಸಿದ್ಧಿಸಿದೆ ಎನ್ನಬಹುದು. ಆದರೆ ಕೆಲವು ವೇಳೆ ಅನವಶ್ಯವಾಗಿ ಬೆಳೆಯುವ ವರ್ಣನೆಗಳು ಬೇಸರ ತರಿಸುತ್ತವೆ. ಈಕೆ ಕಲಿತು ಅಕ್ಷರಸ್ಥಳಾಗಿದ್ದರೂ ಹಾಡುಗಳಲ್ಲಿ ಪುರಾಣದ ಪ್ರಸಂಗಗಳನ್ನು ಸೂಕ್ಷ್ಮವಾಗಿ ಹೇಳಿರುವುದನ್ನು ನೋಡಿದರೆ ಇವಳ ಕವಿತಾಶಕ್ತಿ ಉನ್ನತಮಟ್ಟದ್ದೆಂದು ತೋರುತ್ತದೆ. ಕನ್ನಡದಲ್ಲಿ ಹೆಚ್ಚು ಕೃತಿಗಳನ್ನು ರಚಿಸಿದ ಮಹಿಳೆಯೂ ಇವಳೇ ಎನ್ನುವ ಅಂಶವೂ ಇಲ್ಲಿ ಗಮನೀಯ. ಒಟ್ಟಿನಲ್ಲಿ ಇವಳ ರಚನೆಗಳನ್ನು ಸಂಪ್ರದಾಯದ ಹಾಡುಗಳೆಂದು ಕರೆಯಬಹುದು. **(ಟಿ.ಎನ್.ಎಸ್.)**

**ಹರಳಯ್ಯ:** 12ನೆಯ ಶತಮಾನದ ಶಿವಶರಣ. ಬಸವಣ್ಣನವರ ಸಮಕಾಲೀನ. ಪಾದರಕ್ಷೆಗಳನ್ನು ಸಿದ್ಧಪಡಿಸುವ ಕಾಯಕದಲ್ಲಿ ನಿರತನಾಗಿದ್ದ ಈತ ಗುರು ಲಿಂಗ ಜಂಗಮ ಸೇವೆಗೆ ತನ್ನ ತನುಮನಧನಗಳನ್ನು ಮುಡಿಪಾಗಿಟ್ಟಿದ್ದವ. ಒಮ್ಮೆ ಬಸವಣ್ಣನವರನ್ನು ಮಾರ್ಗಮಧ್ಯದಲ್ಲಿ ಭೇಟಿಯಾದ ಹರಳಯ್ಯ, ಶರಣು ಬಸವರಸ ಎಂದು ತಲೆಬಾಗಿ ವಂದಿಸಿದ. ಅದಕ್ಕೆ ಪ್ರತಿಯಾಗಿ ಬಸವಣ್ಣನು ಶರಣು, ಶರಣಾರ್ಥಿ ಹರಳಯ್ಯ ತಂದೆ ಎಂದು ವಂದಿಸಿದ. ತನ್ನ ಒಂದು ಶರಣಾರ್ಥಿಗೆ ಬಸವಣ್ಣ ಎರಡು ಶರಣಾರ್ಥಿ ಹೇಳಿದ. ಬಸವಣ್ಣನ ಒಂದು ಶರಣಾರ್ಥಿ ತನ್ನ ಮೇಲೆ ಹೊರೆಯಾಗಿ ಕುಳಿತಂತೆ ಭಾಸವಾಯಿತು, ಹರಳಯ್ಯನಿಗೆ. ಆ ಕುರಿತು ಪತ್ನಿಯೊಡನೆ ಸಮಾಲೋಚಿಸಿದ. ಏನೂ ತೋಚದೆ ಕೊನೆಗೆ ತಮ್ಮಿಬ್ಬರ ತೊಡೆಯ ಚರ್ಮದಿಂದ ಪಾದರಕ್ಷೆಗಳನ್ನು ಮಾಡಿ ಬಸವಣ್ಣನವರ ಪಾದಗಳಿಗೆ ತೊಡಿಸಿ ತಮ್ಮ ಹೊರೆ ಹಗುರ ಮಾಡಿಕೊಳ್ಳಲು ನಿರ್ಧರಿಸಿದರು. ಅದರಂತೆ ಸುಂದರವಾದ ಒಂದು ಜೊತೆ ಪಾದರಕ್ಷೆಗಳನ್ನು ತಯಾರಿಸಿಕೊಂಡು

ಹೋಗಿ ಬಸವಣ್ಣನವರಿಗೆ ಕೊಟ್ಟರು. ಬಸವಣ್ಣ ಅವುಗಳ ಶ್ರೇಷ್ಠತೆಯನ್ನು ಹೊಗಳಿ, ಅವನ್ನು ಹರಳಯ್ಯ ದಂಪತಿಗಳಿಗೆ ಹಿಂತಿರುಗಿಸಿದ ಎಂಬುದಾಗಿ ಬಸವಪುರಾಣ, ಭೈರವೇಶ್ವರಕಾವ್ಯ ಕಥಾಮಣಿಸೂತ್ರರತ್ನಾಕರ, ಶರಣ ಲೀಲಾಮೃತ ಗ್ರಂಥಗಳಿಂದ ಗೊತ್ತಾಗುತ್ತದೆ.

ಅನಂತರ ನಡೆದ ಕಲ್ಯಾಣದ ಕ್ರಾಂತಿಗೆ ಕಾರಣವಾದ ಘಟನೆಗಳಲ್ಲಿ ಕೀಳು ಜಾತಿಯ ಹರಳಯ್ಯನ ಮಗನ ಮದುವೆ ಮೇಲು ಜಾತಿಯ ಮಧುವಯ್ಯನ ಮಗಳೊಂದಿಗೆ ನಡೆದದ್ದು ಮುಖ್ಯವಾದದ್ದು. ಹರಳಯ್ಯ ಅನುಭವ ಮಂಟಪದ ಚರ್ಚಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದಿರ ಬಹುದಾದರೂ ಇವನ ವಚನಗಳು ದೊರೆತಿಲ್ಲ. *

**ಹರಳಳ್ಳಿ:** ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಒಂದು ಗ್ರಾಮ. ಕಲ್ಯಾಣಿ ಚಾಳುಕ್ಯರ ಕಾಲದ ಪ್ರಮುಖ ಸಾಂಸ್ಕೃತಿಕ ಕೇಂದ್ರ. ಇದರ ಮತ್ತೊಂದು ಹೆಸರು ನದೀಹರಳಳ್ಳಿ. ಈ ಊರಿನಲ್ಲಿ ಕಲ್ಯಾಣಿ ಚಾಳುಕ್ಯರ ಕಾಲದಲ್ಲಿ ನಿರ್ಮಿತವಾದ ಸೋಮೇಶ್ವರ ದೇವಾಲಯ ಇಂದಿಗೂ ಸುಸ್ಥಿತಿಯಲ್ಲಿ ಉಳಿದುಬಂದಿದೆ. ಇದು ತ್ರಿಕೂಟಾಚಲ. ಇಲ್ಲಿರುವ ಲಿಂಗ



ಸೋಮೇಶ್ವರ ದೇವಾಲಯ

ಸ್ವಯಂಭೂ ಲಿಂಗವಾಗಿದೆ. ಮೂರು ಗರ್ಭಗುಡಿಗಳಲ್ಲಿ ಮೂರು ಲಿಂಗಗಳು ಪ್ರತಿಷ್ಠಾಪಿತವಾಗಿದ್ದು ಅವುಗಳನ್ನು ಬ್ರಹ್ಮೇಶ್ವರ, ವಿಷ್ಣ್ವೇಶ್ವರ ಮತ್ತು ಶಿವೇಶ್ವರ ಲಿಂಗಗಳೆಂದು ಗುರುತಿಸಲಾಗುತ್ತದೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಹೆಚ್ಚು ಪ್ರಚಲಿತವಿದ್ದ ತ್ರೈಪುರುಷಾರಾಧನೆಯನ್ನು ಪ್ರತಿಫಲಿಸುವ ಈ ದೇಗುಲ ಕಾಳಾಮುಖ ಪಂಥದ ಶಿವದೇವಾಲಯವಾಗಿದೆ. ಶಂಕರಾಚಾರ್ಯರ ಪಂಚಾಯತನ ಪದ್ಧತಿಯ ಪ್ರತೀಕವಾಗಿ ಕಾಣಬರುವ ಈ ದೇಗುಲದಲ್ಲಿ ತ್ರಿಮೂರ್ತಿಗಳ ಜೊತೆ ಶಕ್ತಿ, ಗಣಪತಿ ಮತ್ತು ಕುಮಾರಸ್ವಾಮಿಯ ಶಿಲ್ಪಗಳೂ ಕಂಡುಬರುತ್ತವೆ.

980ರಲ್ಲಿ ವಿಕ್ರಮಪುರ ಎಂಬ ಹೆಸರಿನ ಈ ಊರಿನಲ್ಲಿ ಮೊದಲಿಗೆ ಏಕಕೂಟ ಸೋಮನಾಥ ದೇಗುಲ ನಿರ್ಮಾಣವಾಗಿದ್ದು, ಅನಂತರ 1188ರಲ್ಲಿ ರಾಜಗುರುಗಳಾಗಿದ್ದ ಕಲ್ಯಾಣ ಶಕ್ತಿ ಪಂಡಿತರಿಂದ ತ್ರಿಕೂಟವಾಗಿ ಮಾರ್ಪಾಟಾಗಿದೆ. ಈ ಸ್ಥಳ ಆಗ ಕಲ್ಯಾಣದ ಒಂದು ಪ್ರಸಿದ್ಧ ನೆಲೆಯಾಗಿರುವುದು ಶಾಸನಗಳಲ್ಲಿ ವ್ಯಕ್ತವಾಗಿದೆ. ಇದೇ ವೇಳೆಯಲ್ಲಿ ಕಿಟ್ಟಗಾವಿ ಸಂತತಿಯ ಕಾಳಾಮುಖ ಕಲ್ಯಾಣಶಕ್ತಿಯ ಪ್ರೇರಣೆಯಿಂದ, ಈ ಏಕಕೂಟ ಶಿವಾಲಯವನ್ನು ತ್ರಿಕೂಟ ದೇಗುಲವಾಗಿ ಪರಿವರ್ತಿಸಿದುದಕ್ಕೆ ಶಾಸನಾಧಾರಗಳಿವೆ. ಅನಂತರದ ಕಾಲದಲ್ಲಿ ಇಲ್ಲಿ ಗುತ್ತೇಶ್ವರ ಮತ್ತು ವಿಕ್ರಮೇಶ್ವರ ಎಂಬ ಮತ್ತೆರಡು ಲಿಂಗಗಳ ಸ್ಥಾಪನೆಯಾಗಿದ್ದು ಈ ದೇಗುಲ ಪಂಚಶಿವ ದೇಗುಲವಾಯಿತು. (ಎಂ.ಎನ್.ಎಸ್.)

**ಹರಳುಕೋಟೆ:** ಚಾಮರಾಜನಗರ ತಾಲ್ಲೂಕಿನಲ್ಲಿ ಚಾಮರಾಜ ನಗರಕ್ಕೆ ಸು. 5 ಕಿಮೀ ದೂರದಲ್ಲಿರುವ ಪಾಳುಗ್ರಾಮ. ಇತಿಹಾಸ ಪ್ರಸಿದ್ಧ ಸ್ಥಳ. ಹಳೆಯ ಊರಿಗೆ ಎರಡು ಸುತ್ತು ಮಣ್ಣಿನ ಕೋಟೆಯಿದ್ದು ಅವುಗಳ ಅವಶೇಷಗಳು ಮಾತ್ರ ಈಗ ಅಲ್ಲಲ್ಲಿ ಕಾಣಿಸುತ್ತವೆ. ಆ ಕೋಟೆಯ ಒಳಗೂ ಸುತ್ತಮುತ್ತಲೂ ಇಟ್ಟಿಗೆಯ ಕಟ್ಟಡಗಳಿದ್ದ ಕುರುಹುಗಳನ್ನೂ ಹೇರಳವಾಗಿ ಹರಡಿರುವ ಕೆಂಪುಬಣ್ಣದ ಬೋಕಿಯ ಚೂರುಗಳನ್ನೂ ನೋಡಿದರೆ ಇಲ್ಲಿ ಒಂದು ಕಾಲದಲ್ಲಿ ತಕ್ಕಷ್ಟು ದೊಡ್ಡದಾದ ಊರು ಇತ್ತೆಂದು ಹೇಳಬಹುದು. ಸ್ಥಳ ಪುರಾಣದಂತೆ ಈ ಊರು ಬಭ್ರುವಾಹನನ ರಾಜಧಾನಿಯಾಗಿದ್ದ ಮಣಿಪುರ ಎಂಬುದಾಗಿ ತಿಳಿದುಬರುತ್ತದೆ. ಹರಳುಕೋಟೆ ಎಂಬುದು ಸಂಸ್ಕೃತದಲ್ಲಿ ಮಣಿಪುರ ಎಂದಾಗಿದೆ. ಆದರೆ ಶಾಸನಗಳಲ್ಲಿ ಈ ಊರನ್ನು ಹಟ್ಟಲಕೋಟೆ ಎಂದು ಕರೆದಿದೆ. ಹಟ್ಟಲ ಕೇರಳಾಂತಕ ಚತುರ್ವೇದಿಮಂಗಲ ಎಂಬ ಹೆಸರೂ ಇದಕ್ಕೆ ಇದ್ದಂತೆ ತೋರುತ್ತದೆ. ವಿಜಯನಗರದ ಕಾಲದಿಂದೀಚೆಗೆ ಇದಕ್ಕೆ ಹರಳುಕೋಟೆ ಎಂಬ ಹೆಸರೂ ಅದರಿಂದಲೇ ಇದು ಬಭ್ರುವಾಹನನ ಮಣಿಪುರ ಎಂಬ ಪ್ರತೀತಿಯೂ ಹುಟ್ಟಿರಬಹುದು.

ಇಲ್ಲಿನ ಅವಶೇಷಗಳಲ್ಲಿ ಮುಖ್ಯವಾದುದು ಜನಾರ್ದನ ದೇವಾಲಯ. ದ್ರಾವಿಡ ರೀತಿಯಲ್ಲಿ ಕಟ್ಟಿರುವ ಈ ದೇವಾಲಯ ಈಗ ಶಿಥಿಲವಾಗಿದೆ. ಇದನ್ನು ಹೊಯ್ಸಳರ ಒಂದನೆಯ ನರಸಿಂಹನ ಆಳಿಕೆಯಲ್ಲಿ (1167) ನಿರ್ಮಿಸಿದಂತೆ ಇಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ಗರ್ಭಗೃಹದಲ್ಲಿ ಮೊದಲಿದ್ದ ಕೇಶವನ ಮೂರ್ತಿಗೆ ಬದಲಾಗಿ ಈಗ ಶ್ರೀನಿವಾಸನ ಅತಿಸಾಮಾನ್ಯವಾದ ಮೂರ್ತಿಯೊಂದಿದೆ. ಈ ದೇವಾಲಯದ ಮುಂದೆ ವಿಜಯನಗರದ ಕಾಲದಲ್ಲಿ ನಿಲ್ಲಿಸಿರುವ ಉನ್ನತವಾದ ಗರುಡಗಂಬವಿದೆ. ಇದಲ್ಲದೆ ಇಲ್ಲಿರುವ ವೀರಭದ್ರ ಮತ್ತು ಆಂಜನೇಯ ದೇವಾಲಯಗಳು ಸಾಮಾನ್ಯವಾದ ಕಟ್ಟಡಗಳು. ಕೃಷ್ಣದೇವರಾಯನ ಕಾಲದಲ್ಲಿ ಪ್ರತಿಷ್ಠಾಪಿಸಲಾದ ವೀರಭದ್ರನ ಮೂರ್ತಿ ಸುಂದರವಾಗಿದೆ. ಆಂಜನೇಯನ ದೇವಾಲಯದಲ್ಲಿ ಮುಮ್ಮುಖವಾಗಿ ನಿಂತಿರುವ ಬೃಹದಾಕಾರದ ಮೂರ್ತಿ ಭವ್ಯವಾಗಿದೆ. ಇಲ್ಲಿನ ಬಸ್ತಿತಿಟ್ಟು ಎಂಬ ದಿಣ್ಣೆಯ ಮೇಲೆ ಹಳೆಯ ಜೈನಬಸದಿಗಳ ಅವಶೇಷಗಳಿವೆ. (ಎಂ.ಎಚ್.)

**ಹರಿದಾಸಭಟ್ಟ, ಕು.ಶಿ.:** 1924–2000. ಕುಶಿ ಎಂಬ ಎರಡಕ್ಷರಗಳಿಂದ ಶಿಕ್ಷಣ ಕ್ಷೇತ್ರದಲ್ಲೂ ಸಾಹಿತ್ಯ ಲೋಕದಲ್ಲೂ ಅರ್ಥಶಾಸ್ತ್ರ ವಲಯದಲ್ಲೂ ಪ್ರಸಿದ್ಧರಾಗಿದ್ದ ಲೇಖಕ, ವಿದ್ವಾಂಸ. ಕುಂಜಿಬೆಟ್ಟು ಶಿವ ಹರಿದಾಸಭಟ್ಟ

# ಹರಿದಾಸಭಟ್ಟ, ಕು.ಶಿ.

ಇವರ ಪೂರ್ಣ ಹೆಸರು. 1924ರಲ್ಲಿ ಉಡುಪಿಯ ಕುಂಜಿಬೆಟ್ಟುವಿನಲ್ಲಿ ಜನಿಸಿದರು. ಉಡುಪಿಯ ಕುಂಜಿಬೆಟ್ಟು ಶಿವಗೋಪಾಲಭಟ್ಟ ಇವರ ತಂದೆ.

ಪ್ರಾಥಮಿಕ ಶಿಕ್ಷಣವನ್ನು ಕಡಿಯಾಳಿಯ ಬೋರ್ಡ್ ಶಾಲೆಯಲ್ಲಿ ಪಡೆದು ಅನಂತರ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಓದಿ, ಪ್ರೌಢಶಿಕ್ಷಣ ಮುಗಿಸಿ, ಶಿಕ್ಷಕ ತರಬೇತಿ ಪಡೆದು ಸ್ವಲ್ಪ ಸಮಯ ತಾವು ಕಲಿತ ಕಡಿಯಾಳಿ ಶಾಲೆಯಲ್ಲಿ ಶಿಕ್ಷಕವೃತ್ತಿ ಕೈಗೊಂಡರು. ಕಡಿಯಾಳಿಯಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಇವರ ಕನ್ನಡ ಉಪಾಧ್ಯಾಯರಾದ ಕಡಿಯಾಳಿಯ ರಾಮಚಂದ್ರ ಉಪಾಧ್ಯಾಯರಿಂದಾಗಿ ಹಳೆಗನ್ನಡ ಕಾವ್ಯಗಳಲ್ಲಿ ಇವರಿಗೆ ಒಲವು ಮೂಡಿತ್ತು. ಮಾಧ್ಯಮಿಕ ಶಿಕ್ಷಣದ ಬಳಿಕ ಮಂಗಳೂರಲ್ಲಿ ಶಿಕ್ಷಕ ತರಬೇತಿ ಪಡೆಯುತ್ತಿದ್ದಾಗ ಮುಳಿಯ ತಿಮ್ಮಪ್ಪಯ್ಯನವರೇ ಮೊದಲಾದ ಪಂಡಿತರಿಂದ ಕನ್ನಡಜಾಣ ತರಗತಿಯ ಪಾಠ ಹೇಳಿಸಿಕೊಂಡರು. ಅಧ್ಯಾಪಕರಾಗಿ ಹೆಸರು ಗಳಿಸಿದ ಭಟ್ಟರು ತಮ್ಮ ಚಿಕ್ಕಪ್ಪ ಶಿವ ಅನಂತಭಟ್ಟರ ಆರ್ಥಿಕ ನೆರವಿನಿಂದ ಮದರಾಸಿನ ಕ್ರಿಶ್ಚಿಯನ್ ಕಾಲೇಜನ್ನು ಸೇರಿದರು. ಕಡಂದಲೆ ಕೃಷ್ಣಭಟ್ಟರ ಉಚಿತ ಅಶನವ್ಯವಸ್ಥೆ ಇವರಿಗೆ ಒದಗಿ ಬಂತು. ಸ್ನಾತಕೋತ್ತರ ಪದವಿ ಪಡೆದು ಉಡುಪಿಗೆ ಮರಳಿದರು. ಉಡುಪಿಯಲ್ಲಿ ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ನಿನ ಕುಲಸಚಿವರಾದ ತೋನ್ಸೆ ಮಾಧವ ಅನಂತ ಪೈ ಅವರು ಸ್ಥಾಪಿಸಿದ, ಟಿ.ಎ.ಪೈಯವರು ಸಂಚಾಲಕರಾಗಿದ್ದ, ಕುಂಜಿಬೆಟ್ಟುವಿನಲ್ಲಿ ನೆಲೆಗೊಂಡಿದ್ದ ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಉಪನ್ಯಾಸಕರಾದರು. ಅರ್ಥಶಾಸ್ತ್ರ ಇವರ ಬೋಧನೆಯ ವಿಷಯವಾದರೂ ಸಾಹಿತ್ಯ, ಕಲೆ, ನಾಟಕ, ಯಕ್ಷಗಾನ ಮುಂತಾದ ಹತ್ತು ಹಲವು ವಿಷಯಗಳಲ್ಲಿ ಇವರು ಆಸಕ್ತಿ ಬೆಳೆಸಿಕೊಂಡರು. ಈ ಆಸಕ್ತಿಗಳಿಗೆಲ್ಲ ಕಾಲೇಜಿನಲ್ಲಿ ಒಂದು ಮೂರ್ತ ರೂಪ ಸಿಕ್ಕಿತು. ಪ್ರಾಂಶುಪಾಲರ ಮತ್ತು ಒರಗೆಯವರ ನೆರವು, ಪ್ರೋತ್ಸಾಹ, ಆಡಳಿತ ಮಂಡಳಿಯವರ ನೆರವು, ಅಂದಿನ ವಿದ್ಯಾರ್ಥಿ ಸಮೂಹದಲ್ಲಿದ್ದ ಉತ್ಸಾಹ ಇವುಗಳಿಂದಾಗಿ ಆ ಕಾಲೇಜು ಒಂದು ಕಲಾ ಕೇಂದ್ರವಾಗಿಯೂ ಸಾಹಿತ್ಯ ಮಂದಿರವಾಗಿಯೂ ಸದಾ ಚಟುವಟಿಕೆಗಳ ಬೀಡಾಗಿಯೂ ರೂಪು ತಾಳಿ ಬೆಳೆಯಿತು. ಕರ್ನಾಟಕದ ಹೆಸರಾಂತ ಬರೆಹಗಾರರೆಲ್ಲ ಇವರ ಆಮಂತ್ರಣವನ್ನು ಸ್ವೀಕರಿಸಿ ಉಡುಪಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪರಿಚಿತರಾದರು.

ಮಣಿಪಾಲದಲ್ಲಿ ಇವರ ನೇತೃತ್ವದಲ್ಲಿ 42ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಟ್ಟಿತ್ತು(1960). ಅ.ನ.ಕೃಷ್ಣರಾಯರು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಶಿವರಾಮ ಕಾರಂತರ ಅರವತ್ತು (1969), ಎಪ್ಪತ್ತು ಸಂಭ್ರಮಿಸಿದವು; ಯಕ್ಷಗಾನ ಕಮ್ಮಟಗಳು ರಾಷ್ಟ್ರಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ವೈಭವಿಸಿದವು (1970). ಹೊಸ ಅಲೆಯ ನಾಟಕಗಳ ಬಿ.ವಿ. ಕಾರಂತರನ್ನು ಇವರು ಕರೆಯಿಸಿ ಪರಿಚಯಿಸಿದರು. ಸ್ವತಃ ಇವರೇ ಪಾತ್ರವಹಿಸಿದರು, ಸಹೋದ್ಯೋಗಿಗಳನ್ನು ರಂಗಕ್ಕೆ ತಂದರು. ವಾದಿರಾಜ, ಕನಕದಾಸರ ಹೆಸರಲ್ಲಿ ಶಾಸ್ತ್ರೀಯ ಸಂಗೀತಕ್ಕೊಂದು ವೇದಿಕೆ ನಿರ್ಮಾಣವಾಯಿತು (1978). ಹೀಗೆ ಸಂಸ್ಥೆಯ ವಿದ್ಯಾವಲಯದಲ್ಲಿದ್ದುಕೊಂಡೇ ಅದರ ಬೆಳ್ಳಿ ಹಬ್ಬದ ಸಮಯದಲ್ಲಿಯೇ ಊರ ಪರವೂರ ಜನರಿಗೆ ಉಡುಪಿಯೆಂದರೆ ಪೊಡವಿಗೊಡೆಯ ಕೃಷ್ಣ ಹಾಗೂ ಎಂ.ಜಿ.ಎಂ. ಎಂಬಷ್ಟರ ಮಟ್ಟಿಗೆ ಅದನ್ನು ಬೆಳೆಸಿದರು.

ಇವರು ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಮದರಾಸು ವಿಶ್ವವಿದ್ಯಾಲಯಗಳ ಸೆನೆಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್‌ಗಳ ಸದಸ್ಯರಾಗಿದ್ದರು. ವಿಶ್ವವಿದ್ಯಾಲಯದ ಸಕಲ ರೀತಿಯ ಸೌಲಭ್ಯಗಳು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಮಿತ್ರರಿಗೆ ಲಭ್ಯವಿರುವಂತೆ ಕಟ್ಟಿ ಬೆಳೆಸಿದರು. ಕಾಲೇಜಿಗೆ ಆಸುಪಾಸುಗಳಲ್ಲಿ ವಿದ್ಯಾರ್ಥಿ ನಿಲಯಗಳು; ಆಟೋಟಗಳಿಗೆ ಸುಂದರವಾದ ಆಟದ ಬಯಲು; ರಣಜಿ ಪಂದ್ಯಾಟವನ್ನು ನೇರ್ಪುಗೊಳಿಸುವಷ್ಟು ವಿಶಾಲವಾದ ಸುಂದರ ಬಯಲು; ರಾತ್ರಿ ಗಂಟೆ 8ರ ತನಕ ತೆರೆದಿಟ್ಟ ಗ್ರಂಥಾಲಯ; ಊರ ಹಿರಿಯರಿಗೂ ಆಸಕ್ತರಿಗೂ ಗ್ರಂಥಾಲಯದ ಸದುಪಯೋಗಕ್ಕೆ ಅವಕಾಶ; ಉಪನ್ಯಾಸಕರಿಗೆ ಕೃತಿರಚನೆಗೆ ಪ್ರೋತ್ಸಾಹ, ನವೋದಯ ಪುಸ್ತಕಮಾಲೆಯ ಪ್ರಚಾರ, ಕರ್ನಾಟಕದ ಗಂಡುಕಲೆಯಾದ ಯಕ್ಷಗಾನಕ್ಕೆ ಶಾಶ್ವತ ರೀತಿಯಲ್ಲಿ ಗುರುಕುಲ ಮಾದರಿಯ ಶಿಕ್ಷಣ ಕೇಂದ್ರ; ತನ್ಮೂಲಕ ವಿಶ್ವಮನ್ನಣೆ; ಪರ್ಯಟನ- ಇವು ಕುಶಿ ಅವರ ಹಲವು ಸಾಧನೆಗಳ ಪೈಕಿ ಕೆಲವು.

ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಮೊದಲ ಸ್ಥಾಪಕ ಪ್ರಾಂಶುಪಾಲರಾಗಿದ್ದ ಎಚ್.ಸುಂದರರಾಯರ ಅನಂತರ ಹರಿದಾಸ ಭಟ್ಟರು ಪ್ರಾಂಶುಪಾಲರಾದರು (1964-79). ನಿವೃತ್ತಿಯ ಅನಂತರವೂ ಇವರು ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆ ಪಡೆದ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಹಾಗೂ ಯಕ್ಷಗಾನ ಕೇಂದ್ರಗಳ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು.

1965ರಲ್ಲಿ ಮಂಜೇಶ್ವರ ಗೋವಿಂದ ಪೈ ಅವರ ವೈಯಕ್ತಿಕ ಗ್ರಂಥ ಭಂಡಾರ ಎಂ.ಜಿ.ಎಂ. ಕಾಲೇಜಿಗೆ ಅರ್ಪಿತವಾದರೂ ತದನಂತರ ಸಂಶೋಧನ ಕೇಂದ್ರವಾಗಿ ವಿಶ್ವವಿದ್ಯಾಲಯದ ಮನ್ನಣೆ ಬಂದರೂ ಅದರ ಚಟುವಟಿಕೆಗಳು ತ್ರಿಸ್ತರವಾಗಿ ಬೆಳೆದುಬಂದುದು ಭಟ್ಟರ ನಿವೃತ್ತಿಯ ಅನಂತರ, ಅದರ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಅನಂತರವೇ. ಸಂಶೋಧನಾಸಕ್ತರಿಗೆ ಮಾರ್ಗದರ್ಶನ ನೀಡಲು ಆ ಕೇಂದ್ರದಲ್ಲಿ ಪ್ರಾಧ್ಯಾಪಕರ ವ್ಯವಸ್ಥೆ, ಅಂದಿನ ಅವಿಭಕ್ತ ಜಿಲ್ಲೆಯ ಭಾಷೆ, ಸಾಹಿತ್ಯ, ಕಲೆ, ಆರಾಧನೆ ಮೊದಲಾದ ವಿಷಯಗಳ ಮೇಲೆ ಬೆಳಕು ಬೀರುವ ಪುಸ್ತಕಗಳ ಪ್ರಕಟಣೆ, ವಿಶೇಷ ಉಪನ್ಯಾಸಗಳ ಆಯೋಜನೆಗಳು-ಇವು ಈ ಕ್ಷೇತ್ರದಲ್ಲಿ ಇವರ ಸಾಧನೆಗಳು.

1979ರಲ್ಲಿ ಗಾಂಧಿ ಜಯಂತಿಯಂದು ತುಳು ನಿಘಂಟು ಯೋಜನೆ ಆರಂಭವಾಯಿತು. ಇದು ತುಳುವರೆಲ್ಲರ ಹೆಮ್ಮೆಯ ವಿದ್ವಾಂಸರ ಮನ್ನಣೆಗೆ ಪಾತ್ರವಾದ ಸಾಧನೆಯೆಂದು ಪರಿಗಣಿತವಾಗಿದೆ. ಯು.ಪಿ. ಉಪಾಧ್ಯಾಯ ದಂಪತಿಗಳ ತಪಸ್ಸಿನ ಫಲವಾಗಿ, ರಾಜ್ಯ ಸರಕಾರದ ಅನುದಾನದಿಂದಾಗಿ ಕಾಲೇಜಿನ ವಿಶ್ವಸ್ಥ ಮಂಡಳಿಯ ಸಕಲ ನೆರವಿನಿಂದ ಇದು ಸಂಪನ್ನಗೊಂಡಿದೆ. ಅಲ್ಲದೆ, ಕೇವಲ ಆಡುಭಾಷೆಯಾದ, ವಿಪುಲ ಮೌಖಿಕ ಸಾಹಿತ್ಯವುಳ್ಳ ಒಂದು ಭಾಷೆಗೆ ಅತ್ಯಂತ ವೈಜ್ಞಾನಿಕವಾದ ಒಂದು ನಿಘಂಟು ಪ್ರಕಟವಾಯಿತು. ಯಾವುದೇ ಸಾಮಾನ್ಯ ಭಾಷೆಗೆ ದೊರೆಯುವ ರಾಜಮನ್ನಣೆ ತುಳುವಿಗೆ ದೊರೆಯಿತು.

ಮಹಾತ್ಮಾಗಾಂಧಿ ಕಾಲೇಜಿನಲ್ಲಿ ವಾರ್ಷಿಕೋತ್ಸವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಎರಡು ವಿಚಾರಗಳು ಕಡ್ಡಾಯ. ಒಂದು ಮುದ್ದಣ ಸಾಹಿತ್ಯೋತ್ಸವ, ಮಗದೊಂದು ಕರಾವಳಿ ಕಲೆ ಯಕ್ಷಗಾನ ಪ್ರದರ್ಶನ. ಬಿ.ವಿ. ಆಚಾರ್ಯರು ಯಕ್ಷಗಾನ ಕಲೆಯ ಆರಾಧಕರು. ಕು.ಶಿ.ಯವರಿಗೂ ಅದರಲ್ಲಿ ಪ್ರೀತಿ. ಹೀಗೆ ಬೆಸೆದುಕೊಂಡು ಬೆಳೆಸಿಕೊಂಡ ಕಲಾರಾಧನೆಯೇ

ಯಕ್ಷಗಾನ ಕೇಂದ್ರದ ಹುಟ್ಟಿಗೆ ಕಾರಣವಾಯಿತು (1971). ಶಿವರಾಮ ಕಾರಂತರ ಪ್ರಯೋಗಗಳಿಗೆ ಅದು ಒಂದು ರಂಗವಾಯಿತು. ಕು.ಶಿ.ಯವರ ಸಂಘಟನಾ ಸಾಮರ್ಥ್ಯ, ಹಳೆಯ ವಿದ್ಯಾರ್ಥಿಗಳ ಬೆಂಬಲ, ವಿದ್ಯಾರ್ಥಿಗಳ ಹೆತ್ತವರ ನೆರವು, ಆಡಳಿತ ಮಂಡಳಿಯವರ ಪ್ರೋತ್ಸಾಹ, ರೋಟರಿ ಸಂಸ್ಥೆಯ ಒತ್ತಾಸೆ, ಟಿ.ಎ.ಪೈ ಅವರ ಕೇಂದ್ರ ಮಂತ್ರಿ ಪದವಿ – ಹೀಗೆ ಹಲವು ರೀತಿಯಲ್ಲಿ ಕಾರಂತರ ಪ್ರಯೋಗ ದೇಶಾದ್ಯಂತ 1975–78ರಲ್ಲಿ 165 ಪ್ರದರ್ಶನಗಳನ್ನು ಕಾಣುವುದು ಸಾಧ್ಯವಾಯಿತು. ಕಲೆಗೆ ಬೇರೆಡೆಯ ರಂಗತಜ್ಞರಿಂದಲೂ ಕನ್ನಡಿಗರಲ್ಲದ ನೋಡುಗರ ಸಮೂಹವೂ ವಿದೇಶೀ ವಿದ್ಯಾರ್ಥಿಗಳೂ ಆಕರ್ಷಿತರಾದರು.

ಯಕ್ಷಗಾನ ಕಲಾಶಿಕ್ಷಣ ಹಾಗೂ ಯಕ್ಷಗಾನ ಪ್ರಸಾರಗಳನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಿದ ಕು.ಶಿ.ಯವರು ಕರ್ನಾಟಕ ಜಾನಪದ ಕಲೆಗಳನ್ನು ವೈಜ್ಞಾನಿಕವಾಗಿ ದಾಖಲಿಸಿ ಆಧುನಿಕ ದಾಖಲೆಗಳ ಆಗರವನ್ನು (ಆರ್ಕೈವ್ಸ್) ಸಂಘಟಿಸಲು ಅಮೆರಿಕದ ಬೃಹತ್ ದಾನಿಸಂಸ್ಥೆ ಫೋರ್ಡ್ ಪ್ರತಿಷ್ಠಾನ ಕೇಳಿಕೊಂಡಾಗ ಈ ಪಂಥಾಹ್ವಾನವನ್ನು ಸ್ವೀಕರಿಸಿ ಫೋರ್ಡ್ ನೆರವಿನಿಂದ ಕರ್ನಾಟಕ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರವೆಂಬ ಅಂತಾರಾಷ್ಟ್ರೀಯ ಮಟ್ಟದ ದಾಖಲಾತಿ ಕೇಂದ್ರವನ್ನು ಸ್ಥಾಪಿಸಿದರು (1983). ಕಾಲಕಾಲಕ್ಕೆ ಫೋರ್ಡ್ ಸಂಸ್ಥೆಯಿಂದ ದೊರೆತ ಸಹಾಯಧನದಿಂದ ಕೇಂದ್ರ ಪ್ರವರ್ಧಿಸುತ್ತ ಬಂದು ಇದು ಶಾಶ್ವತವಾಗಿ ನಡೆದುಕೊಂಡು ಬರುವಂತೆ ಫೋರ್ಡ್ ಪ್ರತಿಷ್ಠಾನ ಮತ್ತು ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಇವು ಮೂಲನಿಧಿಯನ್ನು ಸ್ಥಾಪಿಸಿದುವು. ಕ್ಷೇತ್ರಕಾರ್ಯ, ಬಹುಮಾಧ್ಯಮ ದಾಖಲಾತಿ, ಮಾಹಿತಿಗಳ ಗಣಕೀಕರಣ, ಮಾಹಿತಿ ಸಂಪನ್ಮೂಲಗಳ ಸಂಗ್ರಹ ಹಾಗೂ ರಕ್ಷಣೆ, ಪ್ರಸಾರ, ಸಂಶೋಧನೆಗೆ ಪ್ರೋತ್ಸಾಹ, ಪುಸ್ತಕ ಪ್ರಕಟಣೆ ಮುಂತಾದವು ಈ ಕೇಂದ್ರದ ವಿಶೇಷ ಸಾಧನೆಗಳು. ಇವು ಕು.ಶಿ.ಯವರ ಕರ್ತೃತ್ವಶಕ್ತಿಯ ದ್ಯೋತಕಗಳಾಗಿವೆ.

ಕು.ಶಿ.ಯವರು ಸಾಹಿತ್ಯಾಸಕ್ತರೂ ಸಾಹಿತಿಗಳಿಗೆ ಪೋಷಕರೂ ಉತ್ತಮ ಆತಿಥೇಯರೂ ಅಂತೆಯೇ ಚತುರ ವಾಗ್ಮಿಗಳೂ ಉತ್ತಮ ಲೇಖಕರೂ ಆಗಿದ್ದರು. ಉಡುಪಿಯ ನವಯುಗದ ಹೊನ್ನಯ್ಯಶೆಟ್ಟರಿಂದ ಬರೆವಣಿಗೆಯ ಪ್ರಚೋದನೆಯನ್ನು ಪಡೆದ ಇವರು ಅನುವಾದ ಸಾಹಿತ್ಯ, ಅಂಕಣ ಸಾಹಿತ್ಯ ಹಾಗೂ ಪ್ರವಾಸ ಸಾಹಿತ್ಯದಲ್ಲಿ ತಮ್ಮದೇ ಛಾಪು ಸ್ಥಾಪಿಸಿದರು. ನಡುಹಗಲಲ್ಲಿ ಕತ್ತಲು, ಘಂಟಿಮಾರಾ, ಅರ್ಥಶಾಸ್ತ್ರಗಳು ಅನುವಾದ ಸಾಹಿತ್ಯವಾದರೆ, ಲೋಕಾಭಿರಾಮ ಮೂಲಕ ಅಂಕಣ ಸಾಹಿತಿಯಾಗಿದ್ದಾರೆ. ಪ್ರಸ್ತುತ ವಿಷಯವನ್ನೆತ್ತಿಕೊಂಡು ಭೂತಕಾಲದ ಉದಾಹರಣೆಯೊಂದಿಗೆ ಭವಿಷ್ಯವನ್ನು ಎಚ್ಚರಿಸುವ ಉದಯವಾಣಿಯಲ್ಲಿ ವಾರವಾರವೂ ಕಾಣಿಸಿಕೊಳ್ಳುತ್ತಿದ್ದ ಇವರ ಲೇಖನಮಾಲೆಯ ಬರೆಹಗಳು ಲೋಕದ ಅಂಕುಡೊಂಕನ್ನು ತಿದ್ದುವ, ಒಳಿತನ್ನು ಹೇಳುವ ಅನೌಪಚಾರಿಕ ಶಿಕ್ಷಣಕ್ಕೆ ಮಾದರಿಯಾಗಿದ್ದುವು. ಅರ್ಥಶಾಸ್ತ್ರದಲ್ಲಿ ವಿಶೇಷ ಅಧ್ಯಯನಕ್ಕಾಗಿ ಇಟಲಿಗೆ ತೆರಳಿ ಮರಳಿ ಬಂದು ಬರೆದ ಪ್ರಥಮ ಪ್ರವಾಸ ಕಥನ 'ಇತಾಲಿಯಾ ನಾನು ಕಂಡಂತೆ'. ಈ ಕೃತಿಗೆ ಅಕಾಡೆಮಿ ಪುರಸ್ಕಾರವೂ ಸಂದಿದೆ. ಮುಂದೆ ಇವರ ಅದಮ್ಯ ಲೋಕಸಂಚಾರದ ಹುಚ್ಚನ್ನು ಸ್ವಲ್ಪಮಟ್ಟಿಗೆ ತಣಿಸಿದ್ದು ಯಕ್ಷಗಾನ ಕೇಂದ್ರದ ವ್ಯವಸಾಯ ಮೇಳ 'ಯಕ್ಷರಂಗ'. ಇವರೇ ಅಂದಂತೆ ಯಕ್ಷಗಾನದ ಅಶ್ವಮೇಧವನ್ನು ಹಿಂಬಾಲಿಸಿ ಭರತಖಂಡದ ಛಪ್ಪನ್ನ ದೇಶಗಳನ್ನು ಸಂಚರಿಸಿದರು. ಅಸ್ಸಾಂ, ಶಿಲ್ಲಾಂಗ್, ಚಂಡೀಗಢ, ಸಮುದ್ರೋಲ್ಲಂಘನ ಮೂಲಕ ಹಾಂಕಾಂಗ್, ಜಪಾನ್, ಬ್ಯಾಂಕಾಕ್, ಅಬುಧಾಬಿ, ಫಿನ್ಲೆಂಡ್, ಇಟಲಿ, ಯೂಗೋಸ್ಲಾವಿಯ, ಬಲ್ಗೇರಿಯ, ಇಂಗ್ಲೆಂಡ್, ರಷ್ಯ, ಕುವೈತ್ ಇಲ್ಲೆಲ್ಲ ಸಂಚರಿಸಿ ತಮ್ಮ ಅನುಭವಗಳನ್ನು ಒಮ್ಮೆ ರಶಿಯಾ ಮತ್ತೊಮ್ಮೆ ಇತಾಲಿಯಾ ಎಂಬ ಬರೆಹದಲ್ಲಿ ಮೂಡಿಸಿದರು. ಮುಂದೆ ಡೊಳ್ಳಿನ ನೇತಾರರಾಗಿ ರಷ್ಯ ದೇಶವನ್ನು ಸಂಚರಿಸಿದ ಅನುಭವಗಳು 'ರಶಿಯಾದಲ್ಲಿ ಡೊಳ್ಳಿನ ದಿಗ್ವಿಜಯ'ದಲ್ಲಿ ಮೂಡಿದವು. ಅಲೆಕ್ಸಿಸ್ ಕೆರೆಲರ ಮ್ಯಾನ್ ದಿ ಅನ್ನೋನ್ ಎಂಬ ಗ್ರಂಥವನ್ನು ಉ.ಲಕ್ಷ್ಮೀನಾರಾಯಣಾಚಾರ್ಯರ ಜತೆ ಸೇರಿ ಅನುವಾದ ಮಾಡಿದ್ದಾರೆ. ಈ ಕೃತಿಗೆ ಮದರಾಸು ವಿಶ್ವವಿದ್ಯಾಲಯದ ಪುರಸ್ಕಾರ ದೊರೆತಿದೆ.

ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ಲಭ್ಯವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1982), ಕರ್ನಾಟಕ ರಾಜ್ಯ ಶಿಕ್ಷಣ ಪ್ರಶಸ್ತಿ (1985), ವಿಶ್ವಮಾನವ ಪ್ರಶಸ್ತಿ (1989)– ಇವು ಇವರು ಪಡೆದ ಕೆಲವು ಪುರಸ್ಕಾರಗಳು. ರೋಮ್ ವಿಶ್ವವಿದ್ಯಾಲಯದ ರಂಗಕಲೆಗಳ ಸಂದರ್ಶಕ ಪ್ರಾಧ್ಯಾಪಕರೂ (1984) ತುಳು ನಿಘಂಟಿನ ಸಂಪಾದನ ಸಮಿತಿಯ ಅಧ್ಯಕ್ಷರೂ (1979–91) ಆಗಿದ್ದರು. ಬೆಂಗಳೂರಿನಲ್ಲಿನ ರಾಜ್ಯಮಟ್ಟದ ಪ್ರಥಮ ತುಳು ಸಮ್ಮೇಳನದ ಅಧ್ಯಕ್ಷರೂ (1983) ಆದಿಚುಂಚನಗಿರಿಯಲ್ಲಿ ನಡೆದ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷರೂ ಪುತ್ತೂರಿನಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ (1991) ಆಗಿದ್ದರು. ಇವರು 2000 ಆಗಸ್ಟ್ 20 ರಂದು ನಿಧನರಾದರು. (ಎಚ್.ಕೆ.)

**ಹರಿವರ್ಮ:** ಬನವಾಸಿಯ ಮೂಲ ಕದಂಬ ವಂಶದ ಕೊನೆಯ ರಾಜ (ಸು. 519–30). ರವಿವರ್ಮನ ಮಗ ಮತ್ತು ಉತ್ತರಾಧಿಕಾರಿ. ಇವನ ಆಳಿಕೆ ಪ್ರಾರಂಭವಾದ ಕೆಲವು ವರ್ಷಗಳಲ್ಲೇ ತ್ರಿಪರ್ವತದ ಕದಂಬ ಶಾಖೆಯ ಇಮ್ಮಡಿ ಕೃಷ್ಣವರ್ಮ ಈತನನ್ನು ಸೋಲಿಸಿ ಸು. 526ರ ಅನಂತರ ಬನವಾಸಿಯನ್ನು ಆಕ್ರಮಿಸಿಕೊಂಡ. ಇದೇ ಕಾಲದಲ್ಲಿ ಚಳುಕ್ಯ ಒಂದನೆಯ ಪುಲಕೇಶಿ ಕದಂಬರನ್ನು ಧಿಕ್ಕರಿಸಿ ಬಾದಾಮಿಯ ಸುತ್ತಣ ಪ್ರದೇಶದ ಆಧಿಪತ್ಯವನ್ನು ಸಾಧಿಸಿಕೊಂಡ.

ಹರಿವರ್ಮನ ಒಬ್ಬ ಮಗಳನ್ನು ಸಾಂತರ ವಂಶದ ತ್ಯಾಗಿಸಾಂತರ ಮದುವೆಯಾಗಿದ್ದ. ಸೇಂದ್ರಕ ವಂಶದ ಭಾನುಶಕ್ತಿ ಹರಿವರ್ಮನ ಸಾಮಂತ ನಾಗಿದ್ದ ಎಂಬ ವಿಷಯಗಳು ಶಾಸನಗಳಿಂದ ತಿಳಿಯುತ್ತವೆ. (ಜಿ.ಆರ್.ಆರ್.)

**ಹರಿಸೇವೆ:** ದೇವರಿಗೆ ಹೊತ್ತ ಹರಕೆ ತೀರಿಸುವ ಒಂದು ವಿಶಿಷ್ಟ ಬಗೆಯ ಜನಪದ ಆಚರಣೆ. ಹರಿಸೇವೆ ಎಂದರೆ ವಿಷ್ಣುವಿನ ಸೇವೆ ಎಂದರ್ಥ. ಆದರೆ ಯಾವುದೇ ದೈವವನ್ನು ಪೂಜಿಸಿ ಅನ್ನದಾನ ಮಾಡುವುದಕ್ಕೂ ಹರಿಸೇವೆ ಎನ್ನುವುದುಂಟು. ಇದರಲ್ಲಿ ಸೌಮ್ಯ ಹರಿಸೇವೆ ಮತ್ತು ಬಲಿ ಹರಿಸೇವೆ ಎಂದು ಎರಡು ವಿಧ. ಹರಿಯ ಹೆಸರಿನಲ್ಲಿ ಅನ್ನಸಂತರ್ಪಣೆ ಮಾಡುವುದು, ಹರಿಯ ಉತ್ಸವ ಏರ್ಪಡಿಸುವುದು, ಹರಿಯ ಅಭಿಷೇಕ ಮಾಡಿಸುವುದು–ಇವು ಸೌಮ್ಯ ಹರಿಸೇವೆ. ಹರಿಯ ಹೆಸರಿನಲ್ಲಿ ಕುರಿ ಇಲ್ಲವೆ ಕೋಳಿಯನ್ನು ಬಲಿಕೊಟ್ಟು ಅನ್ನದಾನ ಮಾಡುವುದು – ಬಲಿ ಹರಿಸೇವೆ. ಬಲಿಕೊಡುವುದಾಗಿ ಹರಕೆ ಹೊತ್ತವರು ತಮ್ಮ ಮನೆಯಲ್ಲಿಯೇ ಕುರಿಗಳಿದ್ದರೆ ತಮಗೆ ಇಷ್ಟಬಂದಷ್ಟು ಕುರಿಗಳನ್ನು ಪೂಜಿಸಿ ದೇವರಿಗೆ ಬಿಟ್ಟಕುರಿ ಎಂಬ ಗುರುತಿಗಾಗಿ ಕುರಿಗಳ ಕಿವಿಯ ತುದಿಯನ್ನು ಕತ್ತರಿಸಿ, ಕೋಳಿಗಳಿಗೆ ಅವುಗಳ ತಲೆಯ ಮೇಲಿನ ಸ್ವಲ್ಪ ಪುಕ್ಕ ತರಿದು ಬೋಳು ಮಾಡಿಬಿಡುತ್ತಾರೆ. ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಬಿಡುವುದಕ್ಕೆ 'ದೇವರಿಗೆ ಬಿಡುವುದು' ಎನ್ನುತ್ತಾರೆ. ಹೀಗೆ ದೇವರಿಗೆ ಬಿಟ್ಟ ಪ್ರಾಣಿಗಳನ್ನು ಯಾವ ಕಾರಣದಿಂದಲೂ ಮಾರುವಂತಿಲ್ಲ ಹಾಗೂ ಬೇರೆ ಸಂದರ್ಭದಲ್ಲಿ ಕುಯ್ಯುವಂತಿಲ್ಲ.

ಹರಿಸೇವೆಯನ್ನು ಹೆಚ್ಚಾಗಿ ಆಚರಿಸುವವರು ದಾಸಮತದವರು ಮತ್ತು ದಾಸಮತಾಭಿಮಾನಿಗಳು. ಈ ಸೇವೆಯನ್ನು ಕ್ರಮಬದ್ಧವಾಗಿ ಆಚರಿಸಲು ದಾಸಯ್ಯಗಳಿರುತ್ತಾರೆ. ಇವರಿಂದಲೇ ಶೂದ್ರರು ಹರಿಸೇವೆ ಮಾಡಿಸುವುದು ಪರಂಪರಾಗತವಾಗಿ ಬಂದಿದೆ. ದಾಸಯ್ಯಗಳ ಹತ್ತಿರ ಹರಿಸೇವೆಗಾಗಿ

ವಿಶೇಷವಾಗಿ ಬಳಸುವ ಆಂಜನೇಯನ ಲೋಹದ ಮೂರ್ತಿ, ತಿರುಪತಿ ತಿಮ್ಮಪ್ಪನ ಹರಿಗೆ, ನರಸಿಂಹಸ್ವಾಮಿಯ ಲೋಹದ ಮೂರ್ತಿ ಇಲ್ಲವೆ ಹರಿಗೆ, ರಾಮಬಾಣ (ಬಿಲ್ಬಾಣ), ಬಾಂಕಿ, ಶಂಖ, ಜಾಗಟೆ, ಬವನಾಸಿ, ಗರುಡಗಂಬ ಮೊದಲಾದ ಪೂಜಾಸಾಧನಗಳಿರುತ್ತವೆ.

ಹಿಂದೆ ತಿರುಪತಿಗೆ ವಿಶೇಷವಾಗಿ ಹಳ್ಳಿಯ ಜನ ಸಾಮೂಹಿಕವಾಗಿ ಯಾತ್ರೆಯನ್ನು ಕೈಗೊಳ್ಳುತ್ತಿದ್ದರು. ಆಗ ತಿರುಪತಿ ತಿಮ್ಮಪ್ಪನ ಬಂಟನೆಂದು ದಾಸಯ್ಯನನ್ನು ಕರೆದುಕೊಂಡು ಹೋಗುತ್ತಿದ್ದುದು ವಾಡಿಕೆಯಾಗಿತ್ತು. ದಾಸಯ್ಯ ಅವರಿಗೆ ಯಾತ್ರಾಸ್ಥಳಗಳಲ್ಲಿ ಮಾರ್ಗದರ್ಶಕ ನಾಗುತ್ತಿದ್ದ. ಯಾತ್ರೆ ಹೊರಡುವ ಹಿಂದಿನ ದಿನ ಯಾತ್ರಿಕರೂ ದಾಸಯ್ಯಗಳೂ ಸೇರಿ ಹರಿಸೇವೆ ನೆರವೇರಿಸುತ್ತಿದ್ದರು.

ಯಾತ್ರೆ ಹೊರಡುವ ಹಿಂದಿನ ದಿನ ಸಾಯಂಕಾಲ ಯಾತ್ರಿಕರು ದಾಸಯ್ಯನ ಮನೆಯಲ್ಲಿಯೇ ಸ್ನಾನ ಮಾಡಿ ಅವನ ಕೈಯಿಂದಲೇ ತೀರ್ಥ ಹಾಕಿಸಿ ಕೊಳ್ಳಬೇಕು. ದಾಸಯ್ಯ ಹರಿಯ ಸ್ತುತಿ ಮಾಡಿ ತಿರುಮಂತ್ರ ಹೇಳಿ ಯಾತ್ರಾರ್ಥಿಗೆ ಸೀಗೆಕಾಯಿ ನುಂಗಿಸಿ, ತಲೆ ಹಾಗೂ ಮೈಗೆ ಅರಿಶಿನ ಹಾಕಿ ಶುದ್ಧಿ ಮಾಡುತ್ತಾನೆ. ಹೀಗೆ ಶುದ್ಧರಾದ ಯಾತ್ರಾರ್ಥಿಗಳೆಲ್ಲರೂ ದಾಸಯ್ಯನ ದೇವರ ಮನೆಯ ಮುಂದೆ ನಿಂತು, ಓಜೆಯಿಂದ ಒಡ್ಡಿರುವ ದೇವರನ್ನು ಅನನ್ಯಭಕ್ತಿಯಿಂದ ಪೂಜಿಸಿ ತೀರ್ಥ ತೆಗೆದುಕೊಳ್ಳುತ್ತಾರೆ. ಆ ದಿನ ರಾತ್ರಿ ದಾಸಯ್ಯಗಳ ಮನೆಯಲ್ಲಿ ಹರಿಸೇವೆ ನಡೆಯುತ್ತದೆ. ಅಂದು ದಾಸಯ್ಯಗಳೇ ಅವರೆಕಾಳಿನ ಸಾರು, ಹಿಟ್ಟು, ಅನ್ನ, ತಾಳದ, ಪಾಯಸಗಳ ಅಡಿಗೆ ಮಾಡಿ ಊರಿನ ಎಲ್ಲ ಶೂದ್ರಜನಾಂಗಗಳ ಪ್ರಮುಖ ರನ್ನೂ ಪ್ರತಿಯೊಂದು ಮನೆಯಿಂದಲೂ ಒಬ್ಬ ಪ್ರತಿನಿಧಿಯನ್ನು ಹರಿಸೇವೆ ಪ್ರಸಾದ ಸ್ವೀಕರಿಸಲು ಆಹ್ವಾನಿಸಿರುತ್ತಾರೆ. ಅನ್ನಸಂತರ್ಪಣೆಯಾದ ಅನಂತರ ಅದೇ ರಾತ್ರಿ ಯಾತ್ರಾರ್ಥಿಗಳೆಲ್ಲರೂ ದಾಸಯ್ಯಗಳ ಜೊತೆ ಹರಿಯ ಹೆಸರು ಹೇಳಿ ಜೈಕಾರ ಹಾಕುತ್ತ ನೆಲಮಡಿ (ನಡೆಯುವ ದಾರಿಯಲ್ಲಿ ಹಾಕಿದ ಶುಭ್ರವಾದ ಪಂಚೆ ಅಥವಾ ದುಪ್ಪಟಿ ಮೇಲೆ ನಡೆದುಕೊಂಡು ಹೋಗುವುದು) ಮೇಲೆ ಊರುಸುತ್ತ ಪ್ರದಕ್ಷಿಣೆ ಹೊರಡುತ್ತಾರೆ. ದಾಸಯ್ಯಗಳಲ್ಲಿ ಪ್ರಮುಖರಾದವರು ಬಿಲ್ಬಾಣ ಹೊತ್ತು, ಶಂಖ, ಜಾಗಟೆ, ಬವನಾಸಿ ಧರಿಸಿ, ತಲೆಗೆ ವರ್ಣರಂಜಿತ ಬಟ್ಟೆಯ ಪೇಟ ಸುತ್ತಿ, ಪೇಟದ ಮುಂಭಾಗದಲ್ಲಿ ದೇವರ ಸಣ್ಣ ಮೂರ್ತಿಯನ್ನು ಕಟ್ಟಿಕೊಳ್ಳುತ್ತಾರೆ. ಆಗ ದಾಸಯ್ಯಗಳಿಂದ ಮಣೇವು ಹಾಕಿಸುವ ಕಾರ್ಯ ನಡೆಯುತ್ತದೆ. ಮೆರವಣಿಗೆ ಮುಗಿದ ಮೇಲೆ ಯಾತ್ರಾರ್ಥಿಗಳು ಅಂದು ಊರ ಮುಂದಿನ ದೇವಾಲಯದಲ್ಲಿ ತಂಗಿದ್ದು ಮಾರನೆಯ ದಿನ ಯಾತ್ರೆ ಹೊರಡುತ್ತಾರೆ.

ಊರ ಹರಕೆಯಿದ್ದರೆ ಹಳ್ಳಿಯ ಪ್ರತಿ ಮನೆಯಲ್ಲಿಯೂ ಬತ್ತ, ರಾಗಿ, ಅಕ್ಕಿ, ಹಸಿಟ್ಟು, ಕಾಳು, ಉಪ್ಪು, ಖಾರದ ಪುಡಿ, ಹುಣಿಸೆಹಣ್ಣು ಮೊದಲಾದ ಅಡಿಗೆ ಪದಾರ್ಥಗಳನ್ನೆಲ್ಲ ಸಂಗ್ರಹಿಸಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಮೂರು ಹಳ್ಳಿ, ಐದು ಹಳ್ಳಿ, ಏಳು ಹಳ್ಳಿಗಳು ಒಟ್ಟಾಗಿ ಸೇರಿ ಹರಿಸೇವೆ ಮಾಡುತ್ತಾರೆ.

ಕೆಲವರು ಮದುವೆಯಲ್ಲಿಯೂ ಹರಿಸೇವೆ ಮಾಡಿಸುತ್ತಾರೆ (ಇದು ವೈಯಕ್ತಿಕ ಹರಿಸೇವೆ). ಚಪ್ಪರದ ದಿನ ಗಂಗೆಪೂಜೆಯಾದ ಮೇಲೆ ಹರಿಯ ಹೆಸರೆತ್ತಿ ಬಿಟ್ಟಿದ್ದ ಟಗರು ಅಥವಾ ಕುರಿಯನ್ನು ಪೂಜೆ ಮಾಡಿ ಬಲಿಕೊಟ್ಟು, ಅಡುಗೆ ಮಾಡಿ ದಾಸಯ್ಯಗಳನ್ನು ಕರೆದು ತಿರುಪತಿ ತಿಮ್ಮಪ್ಪನ ಹರಿಗೆ ತಂದಿಟ್ಟು, ಎಡೆಯಿಟ್ಟು ಪೂಜಿಸಿ ಹರಕೆ ಒಪ್ಪಿಸಿ ಅನ್ನಸಂತರ್ಪಣೆ ನಡೆಸುತ್ತಾರೆ. ಬಿಡಿದಿನಗಳಲ್ಲೂ ಹರಿಸೇವೆ ಮಾಡುವುದುಂಟು. ನರಸಿಂಹಸ್ವಾಮಿಗೆ ಹರಕೆ ಹೊತ್ತವರು ನರಸಿಂಹಸ್ವಾಮಿಯ ಬೆಟ್ಟಕ್ಕೆ ಹೋಗಿ ಮರಿ ಕುಯ್ದು ಅಡಿಗೆಮಾಡಿ ದಾಸಯ್ಯಗಳಿಂದ ಧೂಪ ಹಾಕಿಸಿ, ಬಂದವರೆಲ್ಲರಿಗೂ ಹರಿಯ ಹೆಸರಿನಲ್ಲಿ ದಾಸೋಹ (ಅನ್ನದಾನ) ನಡೆಸಿ, ಬಲಿಯ ಹರಿಸೇವೆ ನಡೆಯಿಸುತ್ತಾರೆ.

ವೈದಿಕರೂ ಹರಿಸೇವೆ ಮಾಡುತ್ತಾರೆ. ಇವರಲ್ಲಿ ಇದು ಪ್ರತಿ ಏಕಾದಶಿಯ ದಿನ ನಡೆಯುತ್ತದೆ. ಆ ದಿನ ಮನೆಯವರೆಲ್ಲ ಉಪವಾಸವಿದ್ದು ಹರಿನಾಮ ಸ್ಮರಣೆ ಮಾಡಿ ಹರಿಯನ್ನು ಅನನ್ಯಭಕ್ತಿಯಿಂದ ಪೂಜಿಸುತ್ತಾರೆ. ದ್ವಾದಶಿಯ ದಿನ ಸೂರ್ಯೋದಯಕ್ಕೆ ಮೊದಲು ಹರಿಯ ಹೆಸರಿನಲ್ಲಿ ಬ್ರಾಹ್ಮಣರಿಗೆ ಅನ್ನಸಂತರ್ಪಣೆ ಮಾಡುತ್ತಾರೆ. ಇವರಲ್ಲಿ ಬಲಿ ಹರಿಸೇವೆ ಇಲ್ಲ. (ಜಿ.ವಿ.ಹಿ.)

**ಹರಿಹರ[1]:** ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ದಾವಣಗೆರೆ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕನ್ನು ಪೂರ್ವದಲ್ಲಿ ದಾವಣಗೆರೆ ತಾಲ್ಲೂಕೂ ದಕ್ಷಿಣದಲ್ಲಿ ಇದೇ ಜಿಲ್ಲೆಯ ಹೊನ್ನಾಳಿ ತಾಲ್ಲೂಕೂ ಪಶ್ಚಿಮದಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕೂ ಉತ್ತರದಲ್ಲಿ ಹರಪನಹಳ್ಳಿ ತಾಲ್ಲೂಕೂ ಸುತ್ತುವರಿದಿವೆ. ಮಲೆಬೆನ್ನೂರು ಮತ್ತು ಹರಿಹರ ಹೋಬಳಿಗಳು. ಜಿಲ್ಲೆಯಲ್ಲೇ ಚಿಕ್ಕದಾದ ಈ ತಾಲ್ಲೂಕಿನಲ್ಲಿ 86 ಗ್ರಾಮಗಳಿವೆ. ವಿಸ್ತೀರ್ಣ 486.8 ಚ.ಕಿಮೀ. ಜನಸಂಖ್ಯೆ 2,45,654. ಇದರಲ್ಲಿ 1,57,910 ಮಂದಿ ಗ್ರಾಮಸ್ಥರೂ 87,744 ಮಂದಿ ಪಟ್ಟಣಿಗರೂ ಇದ್ದಾರೆ.

ಜಿಲ್ಲೆಯ ಪಶ್ಚಿಮದಂಚಿನಲ್ಲಿರುವ ಈ ತಾಲ್ಲೂಕು ಹೆಚ್ಚು ಮೈದಾನ ಪ್ರದೇಶದಿಂದ ಕೂಡಿದೆ. ಸು. 1,395 ಹೆಕ್ಟೇರ್‌ಗಳ ಸಾಮಾನ್ಯ ಕುರುಚಲ ಅರಣ್ಯಪ್ರದೇಶವಿದೆ. ತುಂಗಭದ್ರಾ ಈ ತಾಲ್ಲೂಕಿನ ಪಶ್ಚಿಮದ ಎಲ್ಲೆಯಾಗಿ ಉತ್ತರಾಭಿಮುಖವಾಗಿ ಹರಿದು ಹಾವೇರಿ ಜಿಲ್ಲೆಯನ್ನು ಈ ತಾಲ್ಲೂಕಿ ನಿಂದ ವಿಂಗಡಿಸಿದೆ. ನದಿಯ ಬಲದಂಡೆ ಈ ತಾಲ್ಲೂಕಿಗೆ ಸೇರಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಹರಿದ್ರಾ ನದಿ ಹೊಳಲ್ಕೆರೆ ತಾಲ್ಲೂಕಿನ ಪಶ್ಚಿಮ ಬೆಟ್ಟಗಳಲ್ಲಿ ಹುಟ್ಟಿ ದಾವಣಗೆರೆ ತಾಲ್ಲೂಕಿನ ಮುಖಾಂತರ ಹರಿದು ಈ ತಾಲ್ಲೂಕನ್ನು ಪೂರ್ವದಲ್ಲಿ ಪ್ರವೇಶಿಸಿ ಸ್ವಲ್ಪದೂರ ವಾಯವ್ಯಾಭಿ ಮುಖವಾಗಿ ಹರಿದು ಅನಂತರ ಉತ್ತರಾಭಿಮುಖವಾಗಿ ಪ್ರವಹಿಸಿ ಹರಿಹರದ ಬಳಿ ತುಂಗಭದ್ರಾ ನದಿಯನ್ನು ಸೇರುವುದು. ಈ ನದಿಗೆ ಸ್ಯಾಗಲಹಳ್ಳ ಮತ್ತು ಸೂಳೆಕೆರೆ ಹಳ್ಳ ಎಂದೂ ಕರೆಯುತ್ತಾರೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 634.6ಮಿಮೀ. ಲಕ್ಕವಳ್ಳಿಯ ಭದ್ರಾಜಲಾಶಯದ ನಾಲೆಯಿಂದಲೂ ಈ ತಾಲ್ಲೂಕಿಗೆ ನೀರೊದಗುತ್ತದೆ. ಕಪ್ಪು ಮತ್ತು ಕೆಂಪು ಮಿಶ್ರಿತ ಕಪ್ಪುಮಣ್ಣಿನ ಭೂಮಿಯಿರುವ ಈ ತಾಲ್ಲೂಕಿನಲ್ಲಿ ಜೋಳ, ರಾಗಿ, ತೊಗರಿ, ಹತ್ತಿ, ಸೇಂಗಾ, ಮೆಣಸಿನಕಾಯಿ ಮತ್ತು ದ್ವಿದಳ ಧಾನ್ಯಗಳನ್ನೂ ಸ್ವಲ್ಪ ಬತ್ತವನ್ನೂ ಬೆಳೆಯುತ್ತಾರೆ. ಪಶುಪಾಲನೆ ಯಿದ್ದು ಅದರ ಅಭಿವೃದ್ಧಿಗಾಗಿ ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ. ಸ್ವಲ್ಪಮಟ್ಟಿನ ಮತ್ಸ್ಯೋದ್ಯಮವಿದೆ.

ಈ ತಾಲ್ಲೂಕಿನಲ್ಲಿ ಹಿಂದೆ ಇದ್ದ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆ ಯಲ್ಲಿ ಕಡೆತದ ಯಂತ್ರಗಳೇ ಮೊದಲಾದ ಯಂತ್ರೋಪಕರಣಗಳನ್ನು ತಯಾರಿಸಲಾಗುತ್ತಿತ್ತು. ಇಲ್ಲಿ ಪಾಲಿಫೈಬರ್ ಕಾರ್ಖಾನೆಯಿದೆ. ಈ ಬಗೆಯ ಕಾರ್ಖಾನೆ ಇಡೀ ರಾಜ್ಯದಲ್ಲಿರುವುದು ಇದೊಂದೇ. ಎಣ್ಣೆಗಿರಣಿಗಳು ಇವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಔದ್ಯೋಗಿಕ ತರಬೇತಿ ಕೇಂದ್ರವಿದೆ. ಬೆಂಗಳೂರು-ಧಾರವಾಡ ರೈಲುಮಾರ್ಗ ಈ ತಾಲ್ಲೂಕಿನ ಕೈಗಾರಿಕೆ ಮತ್ತು ವಾಣಿಜ್ಯಾಭಿವೃದ್ಧಿಗೆ ನೆರವಾಗಿದೆ.

ಮಲೆಬೆನ್ನೂರು ಆಗ್ನೇಯಕ್ಕೆ ಇರುವ ಕುಮಾರನಹಳ್ಳಿಗೆ ಸುಮಾರು 3ಕಿಮೀ ದೂರದಲ್ಲಿ ಒಂದು ಚಾಳುಕ್ಯ ದೇವಾಲಯದ ಅವಶೇಷವಿದ್ದು ಅದರ ಎದುರು ಚಾಳುಕ್ಯರ ಕಾಲದ ವೀರಗಲ್ಲುಗಳಿವೆ. ಹರಿಹರದ ದಕ್ಷಿಣಕ್ಕೆ 12 ಕಿಮೀ ದೂರದಲ್ಲಿರುವ ನಂದಿತಾವರೆಯಲ್ಲಿ ಪ್ರಸಿದ್ಧ ಈಶ್ವರ ದೇವಾಲಯ

ವಿದೆ. ಇದನ್ನು ಅಮೃತಲಿಂಗ ಮಾಣಿಕೇಶ್ವರ ದೇವಾಲಯವೆಂದೂ ಕರೆಯುತ್ತಾರೆ. 1220ರಲ್ಲಿ ಹೊಯ್ಸಳ ಅಧಿಕಾರಿ ಮಾಣಿಕಣ್ಣ ಎಂಬುವನು ಇದನ್ನು ಕಟ್ಟಿಸಿದ್ದೆಂದು ತಿಳಿದುಬರುತ್ತದೆ. *

ಹರಿಹರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಚಿತ್ರದುರ್ಗಕ್ಕೆ ವಾಯವ್ಯದಲ್ಲಿ 78 ಕಿಮೀ ದೂರದಲ್ಲೂ ಬೆಂಗಳೂರು–ಧಾರವಾಡ ರಾಜ್ಯ ಹೆದ್ದಾರಿಯಲ್ಲಿ ದಾವಣಗೆರೆಗೆ ವಾಯವ್ಯದಲ್ಲಿ 14 ಕಿಮೀ ದೂರದಲ್ಲೂ ಇದೆ. ಅಮರಾವತಿ, ಹರಳಪುರ ಮತ್ತು ಗುಟ್ಟೂರು ವಿಸ್ತರಣೆಗಳನ್ನು ಸೇರಿಸಿ ಹರಿಹರನಗರದಲ್ಲಿ 45,016 ಮಂದಿ ಪುರುಷರು, 42,733 ಮಂದಿ ಸ್ತ್ರೀಯರು ಸೇರಿ ಒಟ್ಟು ಜನಸಂಖ್ಯೆ 87,744.



ಹರಿಹರೇಶ್ವರ ದೇವಾಲಯ

ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ ಈ ಪಟ್ಟಣ ಒಂದು ಕೈಗಾರಿಕಾ ಕೇಂದ್ರ. ಈ ಪಟ್ಟಣದ ಆರ್ಥಿಕ ಚಟುವಟಿಕೆಗಳಿಗೆ ಮತ್ತು ಔದ್ಯೋಗಿಕ ಅವಕಾಶಗಳಿಗೆ ಹಿಂದೆ ಇದ್ದಂಥ ಕಿರ್ಲೋಸ್ಕರ್ ಕಾರ್ಖಾನೆ ಈಗಿರುವ ಪಾಲಿಫೈಬರ್ ಕಾರ್ಖಾನೆ ಮತ್ತು ಇತರೇ ಸಣ್ಣ ಕೈಗಾರಿಕೆಗಳ ಘಟಕಗಳು ಮುಖ್ಯವಾದವುಗಳೆನ್ನಬಹುದು. ಇನ್ನೂ ಕೆಲವು ಸಣ್ಣ ಕೈಗಾರಿಕಾ ಘಟಕಗಳಿದ್ದು ಇದೊಂದು ಕೈಗಾರಿಕ ಮತ್ತು ವ್ಯಾಪಾರ ಕೇಂದ್ರ.

ಇಲ್ಲಿಯ ಸ್ಥಳಪುರಾಣದ ಪ್ರಕಾರ ಹಿಂದೆ ಇದು ಗುಹಾಸುರ ಎಂಬ ರಾಕ್ಷಸನ ರಾಜಧಾನಿಯಾಗಿತ್ತು. ಆತ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ, ತನಗೆ ಹರಿಯಿಂದಾಗಲಿ ಹರನಿಂದಾಗಲಿ ಸಾವು ಬರದಂತೆ ವರ ಪಡೆದು ಕೊಂಡ. ಈ ವರದ ಬಲದಿಂದ ಮದೋನ್ಮತ್ತನಾಗಿ ಮಾನವರನ್ನೂ ದೇವತೆಗಳನ್ನೂ ಕಾಡತೊಡಗಿದ. ಆಗ ಶಿವ ಮತ್ತು ವಿಷ್ಣು ಒಂದುಗೂಡಿ ಹರಿಹರರೂಪಿನಿಂದ ಈ ರಾಕ್ಷಸನನ್ನು ಕೊಂದುಹಾಕಿದರು. ಈ ಕಾರಣ ದಿಂದಾಗಿ ಇದಕ್ಕೆ ಹರಿ–ಹರವೆಂಬ ಹೆಸರು ಬಂದಿತ್ತೆನ್ನುವರು. ಸಾಯುವ ಮೊದಲು ಈ ರಾಕ್ಷಸ ಈ ಕ್ಷೇತ್ರಕ್ಕೆ ತನ್ನ ಹೆಸರನ್ನು ಇಡಬೇಕೆಂದು ಕೇಳಿಕೊಂಡದ್ದರಿಂದ ಇದಕ್ಕೆ ಗುಹಾರಣ್ಯಕ್ಷೇತ್ರವೆಂಬ ಹೆಸರು ಬಂತೆಂದು ಪ್ರತೀತಿ. ಹರಿದ್ರಾ ನದಿ ತುಂಗಭದ್ರಾ ನದಿಯನ್ನು ಕೂಡುವ ಸಂಗಮ ಸ್ಥಳದಲ್ಲಿರುವ ಈ ಪಟ್ಟಣಕ್ಕೆ ಕೂಡಲೂರು ಎಂದು ಕರೆಯಲಾಗುತ್ತಿತ್ತು. ಇಲ್ಲಿನ ಹರಿಹರೇಶ್ವರ ಅಥವಾ ಶಂಕರನಾರಾಯಣ ದೇವಾಲಯ ಬಹು ಪ್ರಸಿದ್ಧವಾದದ್ದು. ಈ ದೇವಾಲಯದಲ್ಲಿ ಅನೇಕ ಶಾಸನಗಳಿವೆ. ಚಾಳುಕ್ಯರ ಕಾಲದಲ್ಲಿ ಈ ಊರು ಒಂದು ಅಗ್ರಹಾರವಾಗಿದ್ದು ನೊಳಂಬವಾಡಿಗೆ ಸೇರಿತ್ತೆಂದು ತಿಳಿದುಬರುವುದು. ಹರಿಹರೇಶ್ವರ ದೇವಾಲಯಕ್ಕೆ ಹೊಯ್ಸಳರೂ ವಿಜಯನಗರದ ರಾಜರೂ ಸೇವುಣರೂ ದತ್ತಿಗಳನ್ನು ಬಿಟ್ಟಿದ್ದಾರೆ. ವಿಜಯನಗರದ ಅನಂತರ ತರೀಕೆರೆ ಪಾಳೆಯಗಾರರಿಗೆ ಈ ಊರು ಸೇರಿತು. ಇಲ್ಲಿ ಅವರು ಒಂದು ಕೋಟೆ ಕಟ್ಟಿದರು. ಮುಂದೆ ಈ ಊರು ಸವಣೂರು ನವಾಬನಿಗೆ ಸೇರಿ ಆತ ಶೇರ್‌ಖಾನ್ ಎಂಬುವನಿಗೆ ಜಹಗೀರಿಯಾಗಿ ಕೊಟ್ಟ. ಮುಂದೆ ಬಿದನೂರಿನ ಅರಸರಿಗೆ ಸೇರಿತು. ಸ್ವಲ್ಪಕಾಲ ಮರಾಠರಿಗೆ ಸೇರಿದ್ದು ಬಳಿಕ ಹೈದರನ ವಶವಾಯಿತು. 1865ರಲ್ಲಿ ಬ್ರಿಟಿಷರು ಇಲ್ಲಿ ತಮ್ಮ ಸೈನ್ಯವನ್ನಿಟ್ಟಿದ್ದರು. 1868ರಲ್ಲಿ ತುಂಗಭದ್ರಾನದಿಗೆ ಇಲ್ಲಿ ಸೇತುವೆ ಕಟ್ಟಿದ್ದರಿಂದ ಬೆಂಗಳೂರು–ಧಾರವಾಡ ಮಾರ್ಗಸಂಪರ್ಕ ಸುಲಭವಾಯಿತು. **(ಪಿ.ಜಿ.;ಡಿ.ಸಿ.ಜಿ.)**

**ಹರಿಹರ²:** ಕನ್ನಡದಲ್ಲಿ ರಗಳೆ ಕಾವ್ಯಪ್ರಕಾರವನ್ನು ಜೀವಂತಗೊಳಿಸಿದ ಸುಪ್ರಸಿದ್ಧ ಕವಿ. ಗಿರಿಜಾಕಲ್ಯಾಣ ಎಂಬ ಗ್ರಂಥದ ಕರ್ತೃ. ಹಂಪೆಯವನಾದ ಈತ ಪಂಪಾಕ್ಷೇತ್ರದ ವಿರೂಪಾಕ್ಷನ ಪರಮಭಕ್ತ. ವೇದವೇದಾಂಗ ಪುರಾಣಾದಿ ವಿದ್ಯೆಗಳಲ್ಲಿ ಪಾರಂಗತನಾಗಿದ್ದ. ಮಹಾದೇವ ಈತನ ತಂದೆ, ಮಾದರಸ ಈತನ ಗುರು. ಕನ್ನಡದ ಇನ್ನೊಬ್ಬ ಪ್ರಸಿದ್ಧ ಕವಿ ರಾಘವಾಂಕ **(ನೋಡಿ)** ಈತನ ಶಿಷ್ಯ.

ಹರಿಹರನ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಈತ ಹೊಯ್ಸಳ ಎರಡನೆಯ ವೀರಬಲ್ಲಾಳನ (1173–1220) ಆಳಿಕೆಯಲ್ಲಿದ್ದ ಬಗೆಗಿನ ಒಂದು ಆಧಾರದಿಂದ ಈತನ ಕಾಲವನ್ನು ಸು. 1216 ಎಂದಿಟ್ಟುಕೊಳ್ಳಲಾಗಿದೆ. ದ್ವಾರಸಮುದ್ರದ ಬಲ್ಲಾಳರಾಜನ ಆಸ್ಥಾನದಲ್ಲಿ ಈತ ಕೆಲಕಾಲ ಸೇವೆ ಕೈಕೊಂಡಿದ್ದ. ಬಲ್ಲಾಳನ ಮಂತ್ರಿ ಕೆರೆಯ ಪದ್ಮರಸನ ಸಂಪರ್ಕ ಈತನಿಗಿತ್ತು.

ಹರಿಹರ ಆತ್ಮಾಭಿಮಾನಿಯೂ ನಿಸ್ಪೃಹಿಯೂ ಆದ ಕವಿ. 'ಪೋಗೆನೆ ಪೋಪ ಬಾರೆಲವೊ ಬಾರೆನೆ ಜೀಯ ಹಸಾದವೆಂದು ಬೆಳ್ಳಾಗುತೆ ಬರ್ಪ ಮಾಣೆಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮತ್ತಾಗಳೆ ಝುಂಕಿಸಲ್ ನಡುಗಿ ಬೀಳುವ ಸೇವೆಯ ಕಷ್ಟವೃತ್ತಿಯಂ ನೀಗಿದೆನಿಂದು ನಿಮ್ಮ ದೆಸೆಯಿಂ ಕರುಣಾಕರ ಹಂಪೆಯಾಳ್ದನೆ' ಎಂಬ ಮಾತುಗಳಿಂದ ಈತ ರಾಜಸೇವೆಯನ್ನು ಧಿಕ್ಕರಿಸಿದನೆಂದು ತಿಳಿದುಬರುತ್ತದೆ. ಹೀಗೆ ರಾಜಾಶ್ರಯ ವನ್ನು ತ್ಯಜಿಸಿದ ಅನಂತರ ಈತ ಹಂಪೆಗೆ ಮರಳಿ ಅಲ್ಲಿಯೇ ನೆಲಸಿದ.

ಪದ್ಮಣಾಂಕ, ವಿರೂಪಾಕ್ಷ ಪಂಡಿತ, ಶಾಂತಲಿಂಗದೇಶಿಕ, ಸಿದ್ಧನಂಜೇಶ ಮೊದಲಾದವರು ತಮ್ಮ ಕಾವ್ಯಗಳಲ್ಲಿ ಹರಿಹರನಿಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ನಿರೂಪಿಸಿದ್ದಾರೆ. ರಾಘವಾಂಕನು ಹರಿಹರಮಹತ್ತ್ವ ಎಂಬ ಕೃತಿಯನ್ನು ಬರೆದಿದ್ದು, ಇದು ಹರಿಹರನ ಜೀವನ ಸಾಧನೆಗಳಿಗೆ ಸಂಬಂಧಿಸಿದ ಮಹತ್ತ್ವದ ಕೃತಿಯಾಗಿದ್ದಿರಬೇಕು. ಆದರೆ ದುರದೃಷ್ಟವಶಾತ್ ಈ ಗ್ರಂಥ ಉಪಲಬ್ಧವಿಲ್ಲ. ಆದರೆ ಆ ಗ್ರಂಥದ ಕೆಲವಂಶಗಳನ್ನು ಸಿದ್ಧನಂಜೇಶ ತನ್ನ ರಾಘವಾಂಕಚಾರಿತ್ರದಲ್ಲಿ ಕೆಲಮಟ್ಟಿಗೆ ನಿರೂಪಿಸಿದ್ದಾನೆ. ಈ ಎಲ್ಲ ಕೃತಿಗಳಿಂದ ಹರಿಹರನ ಜೀವನದ ಪೂರ್ವಾರ್ಧದ ಕೆಲವು ಘಟನೆಗಳು ತಿಳಿಯುತ್ತವೆಯಾದರೂ ಈತನ ಜೀವನದ ಉತ್ತರಾರ್ಧ ಹಾಗೂ ಇವನು ತನ್ನ ಕೊನೆಯ ದಿನಗಳನ್ನು ಹೇಗೆ ಕಳೆದ ಈ ಮೊದಲಾದ ಸಂಗತಿಗಳು ಸ್ಪಷ್ಟವಿಲ್ಲ.

ಗಿರಿಜಾಕಲ್ಯಾಣ ಪ್ರೌಢ ಚಂಪೂ ಪರಂಪರೆಯಲ್ಲಿ ರಚಿತವಾದ ಕಾವ್ಯ. ಇದರಲ್ಲಿ ಹತ್ತು ಆಶ್ವಾಸಗಳಿವೆ. ಕಾಳಿದಾಸ ಕವಿಯ ಕುಮಾರಸಂಭವ ಈ ಕಾವ್ಯಕ್ಕೆ ಮೂಲ ಸಾಮಗ್ರಿ. ಆ ಕಥಾವಸ್ತುವಿನಲ್ಲಿ ಹರಿಹರ ಹೊಸ ಅರ್ಥ ಹೊರ ಹೊಮ್ಮುವಂತೆ ನವೀನ ದೃಷ್ಟಿಯ ಕಾವ್ಯವನ್ನು ರಚಿಸಿದ್ದಾನೆ. ಕಾವ್ಯದ ಹೆಸರೇ ಸೂಚಿಸುವಂತೆ, ಇದರಲ್ಲಿ ಗಿರಿಜೆಯ ವಿವಾಹ ಪ್ರಧಾನ ಅಂಶವಾಗಿದೆ. ಹರನು ಪುರುಷ; ಗಿರಿಜೆ ಪ್ರಕೃತಿ. ಪ್ರಕೃತಿ–ಪುರುಷರ ಮಿಲನದಿಂದ ಲೋಕಕಲ್ಯಾಣ ಎಂಬ ಉದಾತ್ತದೃಷ್ಟಿ ಈ ಕಾವ್ಯದಲ್ಲಿ ಮೂಡಿಬಂದಿದೆ. ತಂದೆಯಾದ ದಕ್ಷ ತನ್ನ ಪತಿಗೆ ಅಪಮಾನ ಮಾಡಿದುದ ರಿಂದ ಪಾರ್ವತಿಯು ದೇಹ ತೊರೆದು ಮುಂದೆ ಗಿರಿರಾಜನ ಪುತ್ರಿಯಾಗಿ ಜನಿಸುತ್ತಾಳೆ. ಈಕೆಯೇ ಗಿರಿಜೆ. ಈಕೆಗೆ ಬಾಲ್ಯದಿಂದಲೂ ಶಿವನತ್ತಲೇ

ಒಲವು. ಪ್ರೌಢಳಾದಾಗ ತನ್ನ ಸೌಂದರ್ದದ ನೆರವಿನಿಂದ ತಪಸ್ವಿ ಶಿವನನ್ನು ಆಕರ್ಷಿಸುವಲ್ಲಿ ವಿಫಲಳಾಗಿ ಅನಂತರ ನಿಷ್ಠುರತಪಸ್ಸು ಕೈಗೊಂಡು ಶಿವನೇ ತನ್ನಲ್ಲಿಗೆ ಬರುವಂತೆ ಮಾಡಿ ಹರನೊಡನೆ ವಿವಾಹವಾಗುತ್ತಾಳೆ.

ಈ ಕಾವ್ಯ ಪಾಂಡಿತ್ಯಪೂರ್ಣವಾಗಿದೆ; ರಸವತ್ತಾಗಿದೆ. ಸಂಭಾಷಣೆಯ ಶೈಲಿ ಕಾವ್ಯಕ್ಕೆ ನಾಟಕೀಯ ಕಳೆ ತಂದಿದೆ. ಗದ್ಯವನ್ನು ಹೊಸ ಧಾಟಿಯಲ್ಲಿ ಬಳಸಲಾಗಿದೆ. ಕಂದಗಳು ಅರ್ಥವತ್ತಾಗಿ ಸ್ವಚ್ಛಂದವಾಗಿ ಹರಿದು ಬಂದಿವೆ. ಪಾರ್ವತಿಯ ಬಾಲ್ಯ, ಶಿವಭಕ್ತಿ, ಸೌಂದರ್ಯಗಳು, ಕಾಮದಹನ, ರತಿವಿಲಾಪ, ಋತುಗಳು, ಉಗ್ರತಪಸ್ಸು, ವಟುವೇಷದ ಶಿವ, ಹರಗಿರಿಜೆಯರ ವಿವಾಹ– ಈ ವರ್ಣನೆಗಳು ಸುಂದರವೂ ಪರಿಣಾಮಕಾರಿಯೂ ಆಗಿವೆ. ಶೃಂಗಾರ, ಕರುಣ, ಭಕ್ತಿಭಾವಗಳು ಮನೋಹರವಾಗಿ ಚಿತ್ರಿತವಾಗಿವೆ.

ಹರಿಹರನ ಹೆಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸ್ಥಾನಗಳಿಸಿರುವುದು ಈತ ರಚಿಸಿರುವ ರಗಳೆ ಕಾವ್ಯಗಳ ಮೂಲಕ. ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರಮೇಲೆಯಕ್ಕಟಾ ತನತನಗಿಂದ್ರ ಚಂದ್ರರವಿಕರ್ಣದಧೀಚಿಬಲೀಂದ್ರನೆಂದು ಮೇಣ್ ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ ನೆನೆಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ ಎಂಬ ಕಡುನಿಷ್ಠೆಯಿಂದ ಕಾವ್ಯರಚನೆಗೆ ತೊಡಗಿದ ಹರಿಹರ ಶಿವನನ್ನು, ಶಿವಶರಣರನ್ನು ಸ್ತುತಿಸಲು ಮಾತ್ರ ಕಾವ್ಯಶಕ್ತಿಯನ್ನು ಬಳಸಬೇಕಲ್ಲದೆ ಮಾನವರನ್ನು ಹೊಗಳಲು ಅಲ್ಲವೆಂಬ ಸಂಪ್ರದಾಯವನ್ನೂ ಕನ್ನಡ ಸಾಹಿತ್ಯದಲ್ಲಿ ರೂಢಿಗೆ ತಂದ. ಹಳಗನ್ನಡ ಭಾಷೆಯಲ್ಲಿ ಪ್ರಾಸದ ಬಗೆಗಿದ್ದ ಮೂರು ಬಗೆಯ 'ಳ'ಕಾರಗಳಿಗೆ ಪ್ರತಿಯಾಗಿ ಒಂದನ್ನೇ ರೂಢಿಸುವ ದಿಟ್ಟತನವನ್ನೂ ಈತ ತೋರಿದ. ಅದುವರೆಗೆ ಕನ್ನಡ ಸಾಹಿತ್ಯದಲ್ಲಿ ಪ್ರಧಾನವಾಗಿದ್ದ ಚಂಪೂ ಕಾವ್ಯಪರಂಪರೆಯನ್ನು ಹಿಂದೆ ಸರಿಸಿ ರಗಳೆಗಳಲ್ಲಿ ಕಾವ್ಯ ರಚಿಸುವ ಹೊಸ ಸಂಪ್ರದಾಯಕ್ಕೆ ಅಸ್ತಿಭಾರ ಹಾಕಿದ. ತಮಿಳು ದೇಶದ ಅರವತ್ತುಮೂವರು ಪುರಾತನರ, ಬಸವಣ್ಣ, ದೇವರದಾಸಿಮಯ್ಯ, ಪ್ರಭುದೇವ ಮೊದಲಾದ ಶಿವಶರಣರ, ಆತ್ಮನಿವೇದನ ರೂಪವಾದ ನೂರಾರು ರಗಳೆಗಳನ್ನು ಈತ ರಚಿಸಿದ್ದಾನೆ. ಈ ರಗಳೆಗಳ ಸಂಖ್ಯೆಯ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಈತ 106 ರಗಳೆಗಳನ್ನು ರಚಿಸಿದ್ದಾನೆ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಪಾದಗಳ ನಿರ್ಬಂದವಿಲ್ಲದ ಈ ರಗಳೆಗಳಲ್ಲಿ ಕಥಾ ನಿರೂಪಣೆ ನಿರರ್ಗಳವಾಗಿ ಸಾಗುತ್ತದೆ. ರಗಳೆಗಳಲ್ಲಿ ಸುಲಭ, ಸುಂದರ, ಸಮುಚಿತ ಪದಗಳ ಬಳಕೆ ಹೆಚ್ಚಾಗಿದೆ. ಈ ಮೂಲಕ ಕನ್ನಡ ಭಾಷೆಗೆ ಹೊಸ ಆಯಾಮ ಒದಗಿಬರಲು ಸಾಧ್ಯವಾಯಿತು. ರಗಳೆಗಳಲ್ಲಿ ಕೆಲವುಸ್ಥಳಗಳು ಪೂರ್ತಿಯಾಗಿ ಗದ್ಯದಲ್ಲಿದ್ದು ಹೊಸಬಗೆಯ ಗದ್ಯವಿಕಾಸಕ್ಕೆ ಅದು ಕಾರಣವಾಯಿತು. ಈ ರಗಳೆಗಳಲ್ಲಿ ಭಕ್ತಿಭಾವ ಉತ್ಕಟವಾಗಿ ಮೂಡಿಬಂದಿದೆ; ಭಾವಗೀತೆಯ ಗುಣಾಂಶಗಳೂ ಕಂಡುಬರುತ್ತವೆ. ಹರಿಹರ ನಿರ್ಮಿಸಿದ ಶಿವಗಣ ಪ್ರಪಂಚ ವಿಶಾಲವೂ ವೈವಿಧ್ಯಮಯವೂ ಆಗಿದೆ. ಅದರಲ್ಲಿ ಮುಗ್ಧರು, ಉಗ್ರರು, ಬೇಸಾಯಗಾರರು, ಕವಿಗಳು, ವಿವಿಧ ವೃತ್ತಿಯವರು, ಜನಸಾಮಾನ್ಯರು ಇದ್ದಾರೆ. ಬಗೆಬಗೆಯಾಗಿ ದೇವಲೋಕ ಪ್ರವೇಶಿಸಿದವರಿದ್ದಾರೆ. ಮಾನವೀಯ ಪ್ರವೃತ್ತಿಗಳನ್ನು ವೃತ್ತಿಗಳನ್ನು ಆಧ್ಯಾತ್ಮಿಕಕ್ಕೆ ತಿರುಗಿಸಿದ ದೃಷ್ಟಿ ಅವರೆಲ್ಲರಿಗೆ ಸಾಮಾನ್ಯ ಅಂಶವಾಗಿದೆ. ಶಿವಗಣದ ಬಾಳನ್ನು ಹರಿಹರ ಉತ್ಸಾಹದಿಂದ, ತಲ್ಲೀನತೆಯಿಂದ ವರ್ಣಿಸಿದ್ದಾನೆ. ಅವುಗಳಲ್ಲಿಯ ದರ್ಶನ ಮಾನವನ ಬದುಕಿಗೆ ದಾರಿದೀಪವಾಗಿದೆ. ಹರಿಹರನ ರಗಳೆಗಳಲ್ಲೆಲ್ಲ ಬಸವರಾಜದೇವರ ರಗಳೆ ಮತ್ತು ನಂಬಿಯಣ್ಣನ ರಗಳೆ ಮಹತ್ತ್ವದ ಕೃತಿಗಳೆಂಬ ಮನ್ನಣೆಗೆ ಪಾತ್ರವಾಗಿವೆ.

**(ಎಸ್.ಎಸ್.ಎಂ.ಎ.)**

ಹರಿಹರನು ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ ಎಂಬ ಕೃತಿಗಳನ್ನೂ ರಚಿಸಿದ್ದಾನೆ. ಪಂಪಾಶತಕ 103 ವೃತ್ತಗಳನ್ನುಳ್ಳ ಭಕ್ತಿವೈರಾಗ್ಯ ನೀತಿಗಳನ್ನು ಬೋಧಿಸುವ ಗ್ರಂಥ. ಬೇಲೂರಿನಿಂದ ಹಂಪೆಗೆ ಹೋಗುವಾಗ ಹರಿಹರ ಈ ಶತಕವನ್ನು ಹಾಡುತ್ತ ಹೋದನೆಂದು ಪ್ರತೀತಿ. ಭಕ್ತಿಯ ಸ್ತೋತ್ರ ಈ ಕಾವ್ಯದಲ್ಲಿ ಧಾರೆಯಾಗಿ ಹರಿದಿದೆ. ರಕ್ಷಾಶತಕ 101 ವೃತ್ತಗಳನ್ನುಳ್ಳ ಗ್ರಂಥ. ಇದರಲ್ಲಿಯೂ ತಾತ್ತ್ವಿಕ ವಿಷಯಗಳನ್ನು ನಿರೂಪಿಸಲಾಗಿದೆ. ಈ ಎರಡೂ ಕೃತಿಗಳಲ್ಲಿ ಭಕ್ತಿಭಾವದ ಗತಿಶೀಲತೆಯನ್ನು ಸುಂದರವಾಗಿ ನಿರೂಪಿಸಲಾಗಿದೆ. ಮುಡಿಗೆಯ ಅಷ್ಟಕ 8 ವೃತ್ತಿಗಳಿಂದ ಕೂಡಿದ ಚಿಕ್ಕ ಕೃತಿ. ಶಿವಪಾರಮ್ಯವನ್ನು ಸಾರುವುದೇ ಈ ಗ್ರಂಥದ ಉದ್ದೇಶ.

ಹರಿಹರನನ್ನು ಎರಡು ದೃಷ್ಟಿಗಳಿಂದ ಕ್ರಾಂತಿಕಾರಿ ಕವಿಯೆನ್ನಬಹುದು. ಒಂದು, ಈತ ಹಿಂದಿನ ಕವಿಗಳಂತೆ ತನ್ನ ಕಾವ್ಯಕ್ಕೆ ವಸ್ತುವಾಗಿ ಸ್ವೀಕರಿಸಿದ್ದು ರಾಜಮಹಾರಾಜರುಗಳ ಬದುಕನ್ನಲ್ಲ; ಶಿವಶರಣರ, ಶಿವಭಕ್ತರ ಜೀವನವನ್ನು; ಅಂದರೆ ಜನಸಾಮಾನ್ಯರ ಬದುಕನ್ನು. ಎರಡು, ಈತ ಕಾವ್ಯರಚನೆಗೆ ತೊಡಗಿದ್ದು ಸರಳ ಸುಲಲಿತ ರಗಳೆ ಛಂದಸ್ಸಿನಲ್ಲಿ. ಚಂಪೂವಿನ ಚಕ್ರಬಂಧದಲ್ಲಿ ತೊಳಲುತ್ತಿದ್ದ ಕಾವ್ಯತ್ವವನ್ನು ಬಿಡಿಸಿ ಅದು ಜನಸಾಮಾನ್ಯರಿಗೆ ನಿಲುಕುವಂತೆ ಮಾಡುವಲ್ಲಿ, ಶಿವಶರಣರ ವಚನಗಳ ಅನಂತರ ಸಲ್ಲುವ ಪ್ರಮುಖ ಸ್ಥಾನ ಹರಿಹರನ ರಗಳೆಗೇ. ಹೊಸ ಕಾವ್ಯಸಂಪ್ರದಾಯವನ್ನು ನಿರ್ಮಿಸಿ, ಅನೇಕ ಕೃತಿಗಳನ್ನು ರಚಿಸಿ, ಭಕ್ತಕವಿ ಎಂಬ ಖ್ಯಾತಿಗೆ ಪಾತ್ರನಾದ ಹರಿಹರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾನೆ. ಆದರೆ ಈತ ನಿರ್ಮಿಸಿದ ರಗಳೆ ಕಾವ್ಯಸಂಪ್ರದಾಯ, ಈತನ ಅನಂತರ ಚಾಲನೆಗೊಳ್ಳದೆ ಕನ್ನಡ ಸಾಹಿತ್ಯದಲ್ಲಿ ಒಂದು 'ದ್ವೀಪ'ವಾಗಿ ಉಳಿದದ್ದು ಮಾತ್ರ ಆಶ್ಚರ್ಯಕರ ಸಂಗತಿಯಾಗಿದೆ.

*

**ಹರಿಹರ I:** ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣವಾದ ಸಂಗಮ ಸಂತತಿಯ ಪ್ರಥಮ ರಾಜ (1336–56).

14ನೆಯ ಶತಮಾನದ ಆದಿಭಾಗದ ರಾಜಕೀಯದಲ್ಲಿ ಪ್ರಭಾವಿಯಾಗಿದ್ದ ಹೊಯ್ಸಳ 3ನೆಯ ಬಲ್ಲಾಳನ ಸೋದರಳಿಯ ಬಲ್ಲಪ್ಪದಣ್ಣಾಯಕ ಹರಿಹರನ ಮಗಳನ್ನು ಮದುವೆಯಾಗಿದ್ದ. ಈ ನಂಟಸ್ತನ ಹಾಗೂ ಸ್ವಶಕ್ತಿಯಿಂದ ಹರಿಹರ ಮೊದಲು ಪ್ರಾಯಶಃ ಹೊಯ್ಸಳ ರಾಜ್ಯದ ಉತ್ತರಭಾಗದಲ್ಲಿ ಬಲ್ಲಾಳ ಮಂಡಲೇಶ್ವರನಾಗಿ ಅಧಿಕಾರಕ್ಕೆ ಬಂದಂತೆ ತೋರುತ್ತದೆ. ಈತನ ಆರಂಭದ ಶಾಸನಗಳಲ್ಲಿ ಇವನಿಗೆ ಮಹಾಮಂಡಳೇಶ್ವರ ಎಂಬ ಬಿರುದು ಇರುವುದಲ್ಲದೆ ಹೊಯ್ಸಳರಿಗೂ ಇವನಿಗೂ ಒಳ್ಳೆಯ ಸಂಬಂಧವೇ ಇದ್ದಿತೆಂಬುದಕ್ಕೆ ಆಧಾರಗಳಿವೆ. 1336ರಲ್ಲಿ ಹರಿಹರನು ಕರಾವಳಿಯಲ್ಲಿ ಆಯಕಟ್ಟಿನ ಸ್ಥಾನದಲ್ಲಿರುವ ಬಾರಕೂರಿನಲ್ಲಿ ಒಂದು ಕೋಟೆಯನ್ನು ಕಟ್ಟಿದ. 1338ರಲ್ಲಿ 3ನೆಯ ಬಲ್ಲಾಳ ಅದನ್ನು ಸಂದರ್ಶಿಸಿದ. ಹಂಪೆಗೆ 1339ರಲ್ಲಿ ಭೇಟಿ ಇತ್ತ. 1340ರಲ್ಲಿ ತನ್ನ ಮಗ ವಿರೂಪಾಕ್ಷನಿಗೆ ಹಂಪೆಯಲ್ಲಿ ಯುವರಾಜಪಟ್ಟ ಕಟ್ಟಿದ. ಬಲ್ಲಾಳನ ಈ ಹಂಪೆಯ ಭೇಟಿಗಳಿಗೂ ಅವನಿಗೂ ಪ್ರಾಯಶಃ ಆ ಭಾಗದಲ್ಲಿ ಅಧಿಕಾರವಹಿಸಿದ್ದ ಹರಿಹರನಿಗೂ ಇದ್ದ ಸುಸಂಬಂಧದ ಸೂಚಕವೆಂದು ತಿಳಿಯಬಹುದು. ಬಲ್ಲಾಳ ದಕ್ಷಿಣದಲ್ಲಿ ಸೈನ್ಯ ಕಾರ್ಯಾಚರಣೆಯಲ್ಲಿ ನಿರತನಾಗಿದ್ದಾಗ ಹರಿಹರ ಉತ್ತರಭಾಗದಲ್ಲಿ ಶತ್ರುನಿಗ್ರಹಕ್ಕಾಗಿ ಶ್ರಮಿಸಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡ. ಕರ್ನೂಲು ಜಿಲ್ಲೆಯಲ್ಲಿರುವ 1339ರ ಒಂದು ಶಾಸನದಲ್ಲಿ ಈತ ಪೂರ್ವಪಶ್ಚಿಮ ಸಮುದ್ರಾಧಿಪತಿಯೆಂದು ಕರೆದುಕೊಂಡಿದ್ದರೆ 1340ರ ಬಾದಾಮಿ ಶಾಸನದಲ್ಲಿ ಇವನನ್ನು ಅರಿರಾಯ ವಿಭಾಡ, ಭಾಷೆಗೆತಪ್ಪುವ ರಾಯರಗಂಡ ಎಂದು ಹೊಗಳಲಾಗಿದೆ. 1340ರ ಇನ್ನೊಂದು ಶಾಸನದಲ್ಲಿ ಈತ ಚತುಃಸಮುದ್ರಾಧಿಪತಿ ಎಂಬ ಬಿರುದಿನೊಡನೆ ಕಾಣಿಸಿಕೊಂಡಿದ್ದಾನೆ. 1340ರ ಸುಮಾರಿನಲ್ಲಿ ಗುತ್ತಿ ಇವನ ನೆಲೆವೀಡಾಗಿತ್ತು. 1342ರ ಹೊತ್ತಿಗೆ ಪಶ್ಚಿಮ ಕರಾವಳಿಯಲ್ಲಿ ಇವನ ಅಧಿಕಾರ ನೆಲೆಗೊಂಡಿತ್ತು. 1343ರ

ಹೊತ್ತಿಗೆ ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪ, ಮಹಾರಾಜ ಮೊದಲಾದ ಸಾರ್ವಭೌಮ ಬಿರುದುಗಳನ್ನೂ ಧರಿಸಿದ್ದ. 1346ರ ಹೊತ್ತಿಗೆ ಹೊಯ್ಸಳ ವಂಶದ ಕೊನೆಯ ರಾಜ 4ನೆಯ ಬಲ್ಲಾಳನ ಆಳಿಕೆಯೂ ಮುಗಿದಿತ್ತಾಗಿ ಈತ ಹೊಯ್ಸಳರಾಜ್ಯದ ಉತ್ತರಭಾಗದ ಏಕಮೇವ ಅಧಿಪತಿಯಾದ. ಈ ವಿಜಯೋತ್ಸವವನ್ನು ಶೃಂಗೇರಿಯಲ್ಲಿ ವಿದ್ಯಾತೀರ್ಥರ ನೇತೃತ್ವದಲ್ಲಿ ಅದ್ದೂರಿಯಿಂದ ಆಚರಿಸಲಾಯಿತು. ಹರಿಹರ ತನ್ನ ತಮ್ಮಂದಿರು, ದಂಡನಾಯಕರು ಮತ್ತು ಪುರಪ್ರಮುಖರೊಡಗೂಡಿ ಈ ಉತ್ಸವದಲ್ಲಿ ಪಾಲ್ಗೊಂಡ. ಅಲ್ಲಿನ ಗುರು ಭಾರತಿತೀರ್ಥರಿಗೆ ದತ್ತಿಗಳನ್ನು ನೀಡಿದ.

ಆಡಳಿತದ ಆರಂಭದಲ್ಲಿಯೇ ಹರಿಹರ ರಾಜ್ಯದ ಸುಭದ್ರತೆಗೆ ಹೆಚ್ಚಿನ ಗಮನ ಹರಿಸಿದ. ನೆಲ್ಲೂರು ಜಿಲ್ಲೆಯ ಪ್ರಸಿದ್ಧವಾದ ಉದಯಗಿರಿ ಕೋಟೆಯನ್ನು ಪೂರ್ವಪ್ರಾಂತಗಳ ಕೇಂದ್ರವಾಗಿ ಮಾಡಿ ಅದರ ಆಡಳಿತವನ್ನು ತನ್ನ ಕಿರಿಯ ತಮ್ಮ ಕಂಪಣನಿಗೆ ವಹಿಸಿದ. ದೋರಸಮುದ್ರದ ಭಾಗಕ್ಕೆ ತನ್ನ ತಮ್ಮ ಹಾಗೂ ಯುವರಾಜ ಒಂದನೆಯ ಬುಕ್ಕನನ್ನು ನೇಮಿಸಿದ. ತುಂಗಭದ್ರಾ ಪ್ರದೇಶದಲ್ಲಿ ಸೀಮಿತವಾಗಿದ್ದ ತನ್ನ ರಾಜ್ಯವನ್ನು ಬಹುವಾಗಿ ವಿಸ್ತರಿಸಿದ.

ಮಧುರೆಯ ಸುಲ್ತಾನನ ಕಾರ್ಯಚಟುವಟಿಕೆಗಳತ್ತ ಹರಿಹರನ ಗಮನ ಹರಿಯಿತು. ಶಂಬುರಾಯನನ್ನು ಸೋಲಿಸಿ ಸೆರೆಹಿಡಿದು ಮಧುರೆಗೆ ಕರೆದೊಯ್ದಾಗ ಅವನನ್ನು ಬಂಧನದಿಂದ ವಿಮುಕ್ತಗೊಳಿಸಲು 1352–53ರಲ್ಲಿ ಕಂಪಣನ ಮಗ ರಾಜಕುಮಾರ ಸಾವಣ ಹಾಗೂ ಬುಕ್ಕನ ಮಗ ಕುಮಾರ ಕಂಪಣ ಅವರ ನಾಯಕತ್ವದಲ್ಲಿ ಎರಡು ಸೈನ್ಯವನ್ನು ಕಳಿಸಿದ. ಅವರು ಸುಲ್ತಾನನನ್ನು ಸೋಲಿಸಿ, ಶಂಬುರಾಯನನ್ನು ಬಿಡುಗಡೆ ಮಾಡಿದರು. ಅವನನ್ನು ಪುನಃ ಸಿಂಹಾಸನದಲ್ಲಿ ಸ್ಥಾಪಿಸಲಾಯಿತು.

ಹರಿಹರ ಪ್ರಸಿದ್ಧ ಆಡಳಿತಗಾರ. ತನ್ನ ಮಂತ್ರಿ ಅನಂತರಸ ಚಿಕ್ಕ ಒಡೆಯನ ಸಹಾಯದಿಂದ ಪೌರಾಡಳಿತ ವ್ಯವಸ್ಥೆಯನ್ನು ದೃಢಪಡಿಸಿದ. ಈ ವ್ಯವಸ್ಥೆ ವಿಜಯನಗರದ ಕಡೆಯ ದಿನಗಳವರೆಗೂ ಮುಂದುವರಿಯಿತು. ತನ್ನ ರಾಜ್ಯವನ್ನು ಸ್ಥಳ, ನಾಡು, ಸೀಮೆಗಳಾಗಿ ವಿಂಗಡಿಸಿ ಕಂದಾಯದ ವಸೂಲಿ ಹಾಗೂ ಸ್ಥಳೀಯ ಆಡಳಿತಕ್ಕಾಗಿ ವಿವಿಧ ದರ್ಜೆಯ ಅಧಿಕಾರಿಗಳನ್ನು ನೇಮಿಸಿದ. ಇವನ ಆಳ್ವಿಕೆಯ ಕಾಲ ಹೆಚ್ಚಿನ ರಾಜಕೀಯ ಚಟುವಟಿಕೆಗಳಿಗೆ ಹೆಸರಾಗಿತ್ತು. ಈತ 1356ರಲ್ಲಿ ಮಕ್ಕಳಿಲ್ಲದೆ ಮರಣಹೊಂದಿದ.

(ಎಚ್.ವಿ.ಎಸ್.)

**ಹರಿಹರ II:** ವಿಜಯನಗರದ ಇತಿಹಾಸದಲ್ಲಿ ಚಕ್ರವರ್ತಿ ಎಂದು ಕರೆಸಿಕೊಂಡ ಪ್ರಥಮ ರಾಜ (1377–1404). ಒಂದನೆಯ ಬುಕ್ಕನ ಮಗ. ಬುಕ್ಕ ಕಾಲವಾಗುವ ಮುನ್ನವೇ ಇವನನ್ನು ಯುವರಾಜನನ್ನಾಗಿ ನಾಮಕರಣ ಮಾಡಿದ್ದರಿಂದ ಇವನ ಪಟ್ಟಾಭಿಷೇಕ ಶಾಂತಿಯುತವಾಗಿ ನೆರವೇರಿತು. ಆದರೆ ಬುಕ್ಕನ ಮರಣ ವ್ಯಾಪಕವಾದ ದಂಗೆಗೆ ಎಡೆಮಾಡಿಕೊಟ್ಟಿತು. ತಮಿಳುನಾಡಿನಲ್ಲಿ ತುಂಡೀರ, ಚೋಳ ಮತ್ತು ಪಾಂಡ್ಯದೇಶಗಳ ನಾಯಕರು ಹಾಗೂ ಕೊಂಕಣ ಮತ್ತಿತರ ಪ್ರಾಂತಗಳ ಅರಸರು ದಂಗೆ ಎದ್ದರು. ಹರಿಹರನ ಮಗ ವಿರೂಪಣ್ಣ ಒಡೆಯ ತಮಿಳುನಾಡಿನ ದಂಗೆಯನ್ನು ಹತ್ತಿಕ್ಕಿ, ಸಿಂಹಳ ದ್ವೀಪದವರೆಗೂ ಮುಂದುವರಿದು ಅಲ್ಲಿನ ಅರಸನಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡಿಕೊಂಡು ಹಿಂತಿರುಗಿದ.

ಇವನ ಕಾಲದಲ್ಲಿ ಬಹಮನೀ ಸುಲ್ತಾನ ಮಹಮದ್ ಷಾ ಕಾಲವಾದ ಅನಂತರ ಯುದ್ಧಾಕಾಂಕ್ಷಿಯಾದ ಅವನ ಮಗ ಮುಜಾಹಿದ್ ಷಾ ಕದನ ಮಾಡಲು ಕಾತುರನಾಗಿದ್ದ. ಒಂದನೆಯ ಬುಕ್ಕನ ಕಾಲದಲ್ಲಿ ಮಾಡಿಕೊಂಡ ಕೌಲನ್ನು ರದ್ದುಪಡಿಸಿ ತುಂಗಭದ್ರಾನದಿಯನ್ನು ತನ್ನ ರಾಜ್ಯದ ದಕ್ಷಿಣದ ಗಡಿಯನ್ನಾಗಿ ಪರಿಗಣಿಸುವಂತೆ ತಿಳಿಸಿ ಆತ ಹರಿಹರನ ಆಸ್ಥಾನಕ್ಕೆ ರಾಯಸವನ್ನು ಕಳಿಸಿದ. ಹರಿಹರ ಈ ಸಲಹೆಯನ್ನು ತಳ್ಳಿಹಾಕಿದ್ದರಿಂದ ಮುಜಾಹಿದ್ 1377ರಲ್ಲಿ ವಿಜಯನಗರದ ಮೇಲೆ ದಾಳಿ ಮಾಡಿದ. ಹರಿಹರ ತನ್ನ ಸೇನೆಯೊಂದಿಗೆ ಅವನನ್ನು ಎದುರಿಸಿ, ಆದವಾನಿಯ ಹತ್ತಿರ ಸೋಲಿಸಿ ಆತ ತನ್ನ ರಾಜ್ಯಕ್ಕೆ ಹಿಮ್ಮೆಟ್ಟುವಂತೆ ಮಾಡಿದ. ಆದರೆ ಮಾರ್ಗದಲ್ಲಿ ಸುಲ್ತಾನನ ಹತ್ಯೆಯಾಗಿ ಬಹಮನೀ ರಾಜ್ಯದಲ್ಲಿ ಅರಾಜಕತೆ ಉಂಟಾಯಿತು. ಇದನ್ನು ಸದುಪಯೋಗಪಡಿಸಿಕೊಂಡ ಹರಿಹರ ಕೊಂಕಣ ಮತ್ತು ಉತ್ತರ ಕರ್ನಾಟಕದ ಮೇಲೆ ದಾಳಿ ನಡೆಸಿದ. ಇದರ ಪರಿಣಾಮವಾಗಿ ಚೌಲ್ ಮತ್ತು ದಾಬೋಲ್ ಖಾರ್ ಪಟನ್ ಬಂದರುಗಳು ಈತನ ಕೈವಶವಾದವು (1391). ಪಾನಗಲ್ ಪ್ರಾಂತ (ಮಹಬೂಬ್‌ನಗರ ಜಿಲ್ಲೆ, ಆಂಧ್ರಪ್ರದೇಶ) 1398ರಲ್ಲಿ ಇವನ ವಶವಾಗಿ ಅದು ಇವನ ಮುಂದಿನ ಕಾರ್ಯಾಚರಣೆಯ ಮುಖ್ಯ ಕೇಂದ್ರವಾಯಿತು.

ಹರಿಹರನ ಆಳಿಕೆಯ ಕೊನೆಯ ವರ್ಷಗಳು ಹೊರಗಿನ ದಾಳಿಗಳು ಅಥವಾ ಆಂತರಿಕ ಕ್ಷೋಭೆಗಳಿಗೆ ತುತ್ತಾಗದೆ ಶಾಂತವಾಗಿತ್ತು. ಸುಮಾರು ಇಪ್ಪತ್ತೆಂಟು ವರ್ಷಗಳ ಆಳಿಕೆಯಲ್ಲಿ ವಿಜಯನಗರದ ಎಲ್ಲೆಯನ್ನು ಎಲ್ಲ ದಿಕ್ಕುಗಳಲ್ಲಿಯೂ ವಿಸ್ತರಿಸಿ ಅದನ್ನು ಮಹಾಸಾಮ್ರಾಜ್ಯದ ಶ್ರೇಣಿಗೆ ಸೇರಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ವೇದವಿದ್ಯೆಯಲ್ಲಿ ಆಸ್ಥೆವಹಿಸಿದ ಇವನು ಪಂಡಿತರಿಂದ ವೇದಮಾರ್ಗ ಸ್ಥಾಪನಾಚಾರ್ಯ ಎಂಬ ಬಿರುದನ್ನು ಪಡೆದ. ಅನೇಕ ಪ್ರಜೋಪಕಾರಿ ಕಾರ್ಯಗಳನ್ನು ಮಾಡಿ ಸರ್ವಧರ್ಮಾವಲಂಬಿಗಳ ಮನ್ನಣೆಯನ್ನು ಗಳಿಸಿದ.

ಈತನಿಗೆ ಪಂಪಾದೇವಿ ಮತ್ತು ಮಲ್ಲಾದೇವಿ ಎಂಬ ಇಬ್ಬರು ಪತ್ನಿಯರೂ ಬುಕ್ಕ (II), ವಿರೂಪಾಕ್ಷ (II), ದೇವರಾಯ (I) ಮತ್ತು ಚಿಕ್ಕರಾಯ ಎಂಬ ಮಕ್ಕಳೂ ಇದ್ದರು. ಮುದ್ದ, ಗುಂಡ, ವಸಂತಮಾಧವ ಮತ್ತು ಇರುಗಪ್ಪ ಇವನ ಮುಖ್ಯ ದಂಡನಾಯಕರು. (ಎಚ್.ವಿ.ಎಸ್.)

**ಹರಿಹರಪುರ:** ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಒಂದು ಗ್ರಾಮ ಹಾಗೂ ಹೋಬಳಿ ಕೇಂದ್ರ. ಕೊಪ್ಪದಿಂದ ಪಶ್ಚಿಮಕ್ಕೆ 10 ಕಿಮೀ ದೂರದಲ್ಲಿ ತುಂಗಾ ನದಿಯ ಬಲದಂಡೆಯಲ್ಲಿ ಕೊಪ್ಪ-ಶೃಂಗೇರಿ ಮಾರ್ಗದಲ್ಲಿದೆ.

ವಿಜಯನಗರದ ಒಂದನೆಯ ದೇವರಾಯನ ಆಳಿಕೆಯಲ್ಲಿ ಆರಗ ರಾಜ್ಯದ ಪ್ರಾಂತ್ಯಾಧಿಪತಿ ಶಾಬಣ್ಣ ಒಡೆಯ 1418ರಲ್ಲಿ ಹರಿಹರಪುರ ಅಗ್ರಹಾರವನ್ನು ಸ್ಥಾಪಿಸಿದ. ಮೈಸೂರು ಅರಸರ ಆಳಿಕೆಯಲ್ಲಿ 1897 ರವರೆಗೆ ಈ ಗ್ರಾಮ ಕೊಪ್ಪ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು.

ಇಲ್ಲಿ ಸ್ಮಾರ್ತರ ಒಂದು ಮಠವಿದೆ. ಶಂಕರಾಚಾರ್ಯರ ನಿಕಟ ಶಿಷ್ಯವರ್ಗದವರಲ್ಲಿ ಒಬ್ಬರಾದ ಭಟ್ಟಾಚಾರ್ಯರ ಶಿಷ್ಯಪರಂಪರೆಯವರು ಮಠದ ಸ್ವಾಮಿಗಳಾಗಿದ್ದಾರೆ. ಮಠಕ್ಕೆ ಸೇರಿದಂತೆ ನರಸಿಂಹಸ್ವಾಮಿ ಹಾಗೂ ಶಾರದಾ ದೇವಸ್ಥಾನಗಳಿವೆ. ನರಸಿಂಹಸ್ವಾಮಿ ದೇವಾಲಯವನ್ನು ಶಂಕರಾಚಾರ್ಯರ ಶಿಷ್ಯರಲ್ಲೊಬ್ಬರಾದ ಸುರೇಶ್ವರಾಚಾರ್ಯರು ಸ್ಥಾಪಿಸಿದರೆಂದು ತಿಳಿದು ಬರುತ್ತದೆ. ವೈಶಾಖಮಾಸದಲ್ಲಿ ಇಲ್ಲಿ ರಥೋತ್ಸವ ನಡೆಯುತ್ತದೆ. ಈ ಗ್ರಾಮಕ್ಕೆ ಸಮೀಪದ ಸೋಮೇಶ್ವರ ದೇವಾಲಯದಲ್ಲಿ ದಕ್ಷನು ಯಾಗ ನಡೆಸಿದನೆಂದು ಸ್ಥಳಪುರಾಣ.

ಇಲ್ಲಿ ಸರ್ಕಾರಿ ಆಸ್ಪತ್ರೆ, ಪ್ರೌಢಶಾಲೆ, ಪ್ರವಾಸಿಮಂದಿರ, ಗ್ರಾಮಪಂಚಾಯಿತಿ ಇವೆ. (ವಿ.ಜಿ.ಕೆ.)

**ಹರ್ಡೀಕರ್, ಎನ್.ಎಸ್.:** 1889–1975. ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು, ಸಮಾಜಸೇವಕರು. ಹಿಂದಿನ ಹಿಂದುಸ್ತಾನೀ ಸೇವಾದಳದ ಸೇನಾಪತಿಗಳು. ಘಟಪ್ರಭಾ ಆರೋಗ್ಯಧಾಮದ ಸೇವಾನಿರತ ಸಾಧುಗಳಾಗಿದ್ದರು. 1889 ಮೇ 7ರಂದು ಧಾರವಾಡದಲ್ಲಿ ಬ್ರಾಹ್ಮಣ ಮನೆತನ ಒಂದರಲ್ಲಿ

ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಮುಂದಿನ ಅಧ್ಯಯನಕ್ಕೆ ಪುಣೆಗೆ ತೆರಳಿದರು. ಅಲ್ಲಿನ ವಿದ್ಯಾರ್ಥಿದೆಸೆಯಲ್ಲೇ ಟಿಳಕರ ಪ್ರಭಾವಕ್ಕೆ ಸಿಕ್ಕಿದರು. ಎಲ್ಲೆಡೆ ವಂಗವಿಭಜನೆಯ ಕಾಲದಲ್ಲಿ ಆಂದೋಳನವಾಗುತ್ತಿದ್ದಾಗ, ಕರ್ನಾಟಕ ಸುಪ್ತವಾಗಿದ್ದುದನ್ನು ಕಂಡು ಹುಬ್ಬಳ್ಳಿಗೆ ಬಂದು 'ಆರ್ಯಬಾಲಸಭಾ' ಸಂಸ್ಥೆಯನ್ನು ಸ್ಥಾಪಿಸಿದರು. 'ಸ್ವದೇಶಿ' ಅಂಗಡಿಯನ್ನು ತೆರೆದು ಹೊರನಾಡಿನ ಪದಾರ್ಥಗಳನ್ನು ಬಹಿಷ್ಕರಿಸುವ ಕರೆಯಿತ್ತರು. ಪ್ರಸಿದ್ಧ ಕೇಸರಿ ಪತ್ರಿಕೆಯ ಕನ್ನಡ ಆವೃತ್ತಿಯನ್ನು ಹೊರತರಲಾರಂಭಿಸಿದರು. ಇಂಟರ್‌ಮೀಡಿಯೆಟ್ ಪರೀಕ್ಷೆಯನ್ನು ಮುಗಿಸಿ ಕಲ್ಕತ್ತೆಗೆ ಹೋಗಿ ವೈದ್ಯಶಾಸ್ತ್ರಾಭ್ಯಾಸ ಮಾಡಿದರು. ಸ್ನೇಹಿತರಿಂದ ಸಾಕಷ್ಟು ಹಣ ಸಂಗ್ರಹಮಾಡಿ ಅಮೆರಿಕಕ್ಕೆಹೋಗಿ (1913) ಮಿಶಿಗನ್ ವಿಶ್ವವಿದ್ಯಾಲಯ ಸೇರಿ, 1916ರಲ್ಲಿ ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ಎಂ.ಎಸ್. ಪದವಿಯನ್ನು ಪಡೆದರು. ಮುಂದೆ ಅದೇ ವಿಷಯದಲ್ಲಿ ಪಿಎಚ್.ಡಿ. ಪಡೆಯಲು ಅರ್ಬಾನದಲ್ಲಿನ ಇಲಿನಾಯ್ ವಿಶ್ವವಿದ್ಯಾಲಯ ಸೇರಿದರು. ಈ ಸಂದರ್ಭದಲ್ಲಿ ಭಾರತದ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ವಿಷಯದಲ್ಲಿ ಅಧ್ಯಯನ ಮಾಡಿದ್ದಲ್ಲದೆ, ಅಮೆರಿಕದ ಹಿಂದುಸ್ತಾನ್ ಅಸೋಸಿಯೇಷನ್ ಆಫ್ ಅಮೆರಿಕ ಸಂಸ್ಥೆಯ ಚಟುವಟಿಕೆಗಳಲ್ಲಿ ಆಸ್ಥೆವಹಿಸಿ ಒಮ್ಮೆ ಅದರ ಅಧ್ಯಕ್ಷರೂ ಆದರು (1916). 1916ರಲ್ಲಿ ಲಾಲಾ ಲಜಪತ್‌ರಾಯರ ಅಧ್ಯಕ್ಷತೆಯಲ್ಲಿ 'ದಿ ಇಂಡಿಯನ್ ಹೋಮ್ ರೂಲ್ ಲೀಗ್ ಆಫ್ ಅಮೆರಿಕ' ಸಂಸ್ಥೆ ಪ್ರಾರಂಭವಾದಾಗ ಹರ್ಡೀಕರರು ಅದರ ಕಾರ್ಯದರ್ಶಿಯಾಗಿ (1916–21) ಕೆಲಸ ನಿರ್ವಹಿಸಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಅಮೆರಿಕದಲ್ಲಿ ಒಳ್ಳೆಯ ಅಭಿಪ್ರಾಯ ಮೂಡಿಸುವ ಪ್ರಯತ್ನ ಮಾಡಿದರು.



ಭಾರತಕ್ಕೆ ಹಿಂತಿರುಗಿದ ಮೇಲೆ (1921 ಸೆಪ್ಟೆಂಬರ್) ಕರ್ನಾಟಕ ಇವರ ಕಾರ್ಯಕ್ಷೇತ್ರವಾಯಿತು. ಇವರನ್ನು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರಾಗಿ ನೇಮಿಸಲಾಯಿತು. ತರುಣ ತರುಣಿಯರಲ್ಲಿ ರಾಷ್ಟ್ರಪ್ರಜ್ಞೆ ಬೆಳೆಯಬೇಕು ಎಂಬ ಉದ್ದಿಶ್ಯದಿಂದ, ಗಣೇಶಮಂಡಳ, ಪ್ರಬುದ್ಧವರ್ಗ, ವಾರ್ತಾ ಪ್ರಸಾರಕ ಸಂಘ, ಭಗಿನೀ ಮಂಡಲ, ತಿಲಕ ಕನ್ಯಾಶಾಲಾ, ತಿಲಕ ಗ್ರಂಥ ಸಂಗ್ರಹ ಮುಂತಾದ ಸಂಸ್ಥೆಗಳನ್ನೂ ಒಂದು ದೇಶೀ ಶಾಲೆ ಮತ್ತು ವಾಣಿಜ್ಯ ಶಾಲೆಯನ್ನೂ ಸ್ಥಾಪಿಸಿದರು. ಇವರು 1923ರಲ್ಲಿ ಸ್ಥಾಪಿಸಿದ ಹಿಂದುಸ್ತಾನೀ ಸೇವಾದಳ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇವರಿತ್ತ ಕಾಣಿಕೆ. ಈ ಸಂಸ್ಥೆಯ ಶಾಖೆಗಳು ದೇಶದಲ್ಲೆಲ್ಲ ಹಬ್ಬಿದುವು. ಅದರ ಮೊದಲನೆಯ ಸಮ್ಮೇಳನದ ಅಧ್ಯಕ್ಷರು ಜವಾಹರಲಾಲ್ ನೆಹರೂ. ಸೇವಾದಳದ ಉದ್ದಿಶ್ಯಗಳನ್ನು ವಿವರಿಸುವುದಕ್ಕಾಗಿ ವಾಲಂಟೀರ್ ಎಂಬ ಪತ್ರಿಕೆಯನ್ನು ಹೊರಡಿಸಿದರು. ಅಖಿಲ ಭಾರತ ಮಟ್ಟದಲ್ಲಿ ಜನಸೇವಕರ ತರಬೇತಿಗೆ ಬಾಗಲಕೋಟೆಯಲ್ಲಿ ಒಂದು ಶಾಲೆಯನ್ನು ತೆರೆದರು. ಹಿಂದುಸ್ತಾನೀ ಸೇವಾದಳದ ಪ್ರಭಾವ ವರ್ಧಿಸಿ ನಿಂತಾಗ ಬ್ರಿಟಿಷರು ಈ ಸಂಸ್ಥೆಯನ್ನು ಬಹಿಷ್ಕರಿಸಿದರು. ಹರ್ಡೀಕರರನ್ನು ಸೆರೆಗೆ ದೂಡಿದರು (1930). ಅನಂತರವೂ ಕಾಂಗ್ರೆಸ್‌ನ ಅನೇಕ ಆಂದೋಳನ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು. ಸ್ವಾತಂತ್ರ್ಯಾನಂತರ ಹರ್ಡೀಕರರು ರಾಜ್ಯ ಸಭೆಯ ಸದಸ್ಯರಾಗಿದ್ದರು (1952–62).

ರೋಗಿಗಳ ಸೇವೆ ಇವರ ಹೃದಯಕ್ಕೆ ಬಹಳ ಪ್ರಿಯವಾದ ಕೆಲಸವಾಗಿತ್ತು. ಅದಕ್ಕಾಗಿ ಘಟಪ್ರಭಾದಲ್ಲಿ ಆರೋಗ್ಯಧಾಮವನ್ನು ಸ್ಥಾಪಿಸಿದರು (1935). ಅನಂತರ ಇವರು ಅಲ್ಲೇ ಇದ್ದುಕೊಂಡು ಅದರ ಸರ್ವತೋಮುಖ ಬೆಳವಣಿಗೆಯ ಕಾರ್ಯದಲ್ಲಿ ನಿರತರಾಗಿದ್ದರು. ಇವರ ರಾಷ್ಟ್ರಸೇವೆಯನ್ನು ಗಮನಿಸಿದ ಭಾರತ ಸರ್ಕಾರ 1958ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತು. **(ಟಿ.ಟಿ.ಎಸ್.)**

**ಹರ್ಡೇಕರ್ ಮಂಜಪ್ಪ:** 1886–1947. ಖ್ಯಾತ ಸಮಾಜಕಾರ್ಯಕರ್ತ, ಚಿಂತಕ, ಪತ್ರಿಕೋದ್ಯಮಿ ಹಾಗೂ ಲೇಖಕರು. 1886 ಫೆಬ್ರವರಿ 18ರಂದು ಬನವಾಸಿಯಲ್ಲಿ ಲಿಂಗಾಯತ ಕುಟುಂಬವೊಂದರಲ್ಲಿ ಜನಿಸಿ, ಶಿರಸಿಯಲ್ಲಿ ಶಿಕ್ಷಣ ಪಡೆದು, ಶಿಕ್ಷಕ ವೃತ್ತಿಯನ್ನು ಕೈಕೊಂಡರು (1903). ಸಾರ್ವಜನಿಕ ರಂಗದಲ್ಲಿ ಆಸಕ್ತಿ ವಹಿಸಿದ ಇವರು ವಂಗಭಂಗ ಚಳವಳಿ ದೇಶದ ಮೂಲೆಮೂಲೆಗೂ ಪಸರಿಸಿದ್ದ ಸಮಯದಲ್ಲಿ 1906ರಲ್ಲಿ ಶಿಕ್ಷಕ ವೃತ್ತಿಯನ್ನು ತೊರೆದು ಸಕ್ರಿಯವಾಗಿ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿದರು. ಆ ವರ್ಷ ಶಿರಸಿಯಿಂದ ದಾವಣಗೆರೆಗೆ ಬಂದು ಧನುರ್ಧಾರಿ ಪತ್ರಿಕೆ ಹೊರಡಿಸಹತ್ತಿದರು. ಈ ಪತ್ರಿಕೆ ಟಿಳಕರ ಕೇಸರಿ ಪತ್ರಿಕೆಯ ಅಭಿಪ್ರಾಯವನ್ನು ಕರ್ನಾಟಕದಲ್ಲಿ ಪ್ರಸಾರ ಮಾಡುತ್ತಿದ್ದಿತು. ಮೊದಲು ಟಿಳಕರು ಮಂಜಪ್ಪನವರಿಗೆ ಸ್ಫೂರ್ತಿಯ ನೆಲೆಯಾಗಿದ್ದರಾದರೂ ಅನಂತರ ಗಾಂಧೀಜಿಯವರ ಜೀವನ ಮತ್ತು ರಾಜಕೀಯ ಚಟುವಟಿಕೆಗಳು ಇವರ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡಿದವು. ಗಾಂಧೀಜಿಯವರ ಸತ್ಯಾಗ್ರಹಧರ್ಮದ ತತ್ತ್ವಗಳನ್ನು ಕೃತಿಗಿಳಿಸಲು ಬ್ರಹ್ಮಚರ್ಯವ್ರತವನ್ನು ಕೈಕೊಂಡುದಲ್ಲದೆ ಖಾದಿವ್ರತವನ್ನು ಕೊನೆಯವರೆಗೂ ಪರಿಪಾಲಿಸಿಕೊಂಡು ಬಂದರು. ಸತ್ಯಾಗ್ರಹ ತತ್ತ್ವಗಳನ್ನು ಪ್ರಚಾರಮಾಡಲು ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಸಮಾಜವನ್ನೂ (1922) ಹರಿಹರದಲ್ಲಿ ಸತ್ಯಾಗ್ರಹ ಆಶ್ರಮವನ್ನೂ (1924) ಸ್ಥಾಪಿಸಿ ಎಲ್ಲರನ್ನೂ ತಮ್ಮ ಕಡೆಗೆ ಆಕರ್ಷಿಸಿಕೊಂಡರಲ್ಲದೇ ಮೊಟ್ಟಮೊದಲ ಬಾರಿಗೆ ಗಾಂಧೀಚರಿತ್ರೆಯನ್ನು ಕನ್ನಡದಲ್ಲಿ ಬರೆದರು. ಖಾದೀಶಾಸ್ತ್ರ ಎಂಬ ಗ್ರಂಥ ಬರೆದು, ಸರ್ವಜನರು ಖಾದಿಧಾರಿಗಳಾಗಿರೆಂದು ಉಪದೇಶಿಸಿದರು. ಸತ್ಯಾಗ್ರಹಧರ್ಮವನ್ನು ಚಾಚೂ ತಪ್ಪದೆ ನಿಷ್ಠೆಯಿಂದ ಪರಿಪಾಲಿಸಿಕೊಂಡು ಬಂದಿದ್ದರಿಂದ ಜನರು ಇವರನ್ನು ಕರ್ನಾಟಕ ಗಾಂಧಿ ಎಂದು ಕರೆದು ಗೌರವಿಸಿದರು. ಆದಾಗ್ಯೂ ಮಂಜಪ್ಪನವರು ಗಾಂಧೀಜಿಯವರ ಎಲ್ಲ ವಿಚಾರಗಳನ್ನು ಮಾನ್ಯ ಮಾಡುತ್ತಿರಲಿಲ್ಲ. ಅಂತೆಯೇ ಕಾಂಗ್ರೆಸ್ ಪಕ್ಷದಿಂದ ಇವರು ಹೊರಗುಳಿದಿದ್ದರು. ಆದರೆ ತಮ್ಮ ಸಮಾಜದ ಪ್ರತಿಯೊಬ್ಬರು ಕಾಂಗ್ರೆಸ್ ಪಕ್ಷ ಸೇರಿ ದೇಶಸೇವೆ ಮಾಡಬೇಕೆಂತಲೂ ಪದೇ ಪದೇ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಉಪದೇಶಿಸುತ್ತಿದ್ದರು. ದೇಶಭಕ್ತಿಯನ್ನು ಬೆಳೆಸಲೋಸುಗ 1921ರಲ್ಲಿ ಭಾರತೀಯ ದೇಶಭಕ್ತಿ ಎಂಬ ವಿಚಾರಪೂರಿತ ಗ್ರಂಥವನ್ನು ಬರೆದರು.

ಮಂಜಪ್ಪನವರು ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿ ಸ್ವಾತಂತ್ರ್ಯ ದೊರಕಿಸುವ ಸಲುವಾಗಿ ಹೋರಾಡುವುದಲ್ಲದೆ ಗಾಂಧೀಜಿಯವರಂತೆ ಸಮಾಜ ಸುಧಾರಣೆಗೂ ಯತ್ನಿಸಿದರು. ಅಸ್ಪೃಶ್ಯರ ಸಂಕಷ್ಟಗಳನ್ನು ಮನವರಿತು ಆದಿಜನ ಸುಧಾರಣೆ ಎಂಬ ಹೊತ್ತಗೆಯನ್ನು ಪ್ರಕಟಿಸಿ, ತನ್ಮೂಲಕ ಸಮಾಜದ ಪ್ರತಿಯೊಬ್ಬನೂ ಅಸ್ಪೃಶ್ಯರ ಸರ್ವತೋಮುಖ ಅಭಿವೃದ್ಧಿಗೆ ಪ್ರಯತ್ನಿಸಬೇಕೆಂದು ಕಳಕಳಿಯಿಂದ ಭಿನ್ನವಿಸಿಕೊಂಡರು. ಸಮಾಜದಲ್ಲಿಯ ಮಹಿಳೆಯರ ಸ್ಥಾನಮಾನಗಳನ್ನು ಮನಗಂಡು ನಾರಿಸಮಾಜದ ಉದ್ಧಾರಕ್ಕೆ ಸರ್ವವಿಧದಿಂದಲೂ ಪುರುಷರು ಸಹಾಯ ನೀಡಬೇಕೆಂದು ಒತ್ತಾಯಪಡಿಸಿದರು. ಅಲ್ಲದೆ ಸ್ತ್ರೀನೀತಿ ಎಂಬ

ಕಿರುಹೊತ್ತಿಗೆಯನ್ನು ಪ್ರಕಟಿಸಿ, ಸ್ತ್ರೀಯರೇ ಜನಾಂಗದ ಜನನಿಯರು, ಅವರು ನೀತಿಪರರಾಗಿದ್ದರೆ ಮಾತ್ರ ಸಮಾಜದ ಜನಾಂಗ ಸುಖಶಾಂತಿಗಳಿಂದ ಜೀವಿಸುವುದು. ಸ್ತ್ರೀಯರಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ, ಅವರು ನೀತಿಪರರಾಗುವಂತೆ ಮಾಡುವುದೇ ಜನಾಂಗದ ಸುಖಾಪೇಕ್ಷಿಗಳ ಕರ್ತವ್ಯವೆಂದು ಪ್ರತಿಪಾದಿಸಿದರು. ಪ್ರಚಲಿತ ಶಿಕ್ಷಣಕ್ರಮ ಸರಿಯಾದುದಲ್ಲವೆಂದು ವಾದಿಸಿದ ಇವರು ನೈತಿಕ, ಧಾರ್ಮಿಕ ಶಿಕ್ಷಣವನ್ನು ಮತ್ತು ಹಳ್ಳಿಗರಿಗೆ ಉಪಯೋಗವಾಗುವಂಥ ಉದ್ಯೋಗ ಶಿಕ್ಷಣವನ್ನು ಮಕ್ಕಳಿಗೆ ಕೊಟ್ಟರೆ ಭವಿಷ್ಯತ್ತಿನಲ್ಲಿ ಮಕ್ಕಳು ಸುರಕ್ಷಿತವಾಗಬಹುದೆಂದು ಅಭಿಪ್ರಾಯಪಟ್ಟರು. ಅಲ್ಲದೆ ಈ ಮಾದರಿಯ ಶಿಕ್ಷಣವನ್ನು ಆಲಮಟ್ಟಿಯ ತಮ್ಮ ವಿದ್ಯಾಲಯದಲ್ಲಿ ಕೊಡಲು ಪ್ರಾರಂಭಿಸಿದರು. ದೇಶದಲ್ಲಿ ಹಿಂದು ಮುಸಲ್ಮಾನರಲ್ಲಿ ಬೆಳೆಯುತ್ತಿದ್ದ ವೈಷಮ್ಯದ ದೃಷ್ಟಿಯಿಂದ, ಕೊನೆಕೊನೆಗೆ ಮಂಜಪ್ಪನವರು ಹಿಂದು ಸಂಘಟನೆಯ ಕಡೆಗೆ ಆಸ್ಥೆವಹಿಸಿದರು. ಸದ್ಯದ ಶೋಚನೀಯ ಸ್ಥಿತಿಗಳಿಗೆ ಹಿಂದು ಸಮಾಜದಲ್ಲಿರುವ



ವರ್ಣಕಲ್ಪನೆ ಮತ್ತು ಜಾತಿಗಳು ಮುಖ್ಯ ಕಾರಣಗಳಾಗಿವೆ. ಇವುಗಳನ್ನು ಅಳಿಸಲು ಜನರಲ್ಲಿ ವಿಚಾರ ಕ್ರಾಂತಿಯನ್ನುಂಟುಮಾಡಿ, ಒಂದೊಂದು ಜಾತಿ ಮತಗಳಲ್ಲಿರುವ ಒಳಭೇದಗಳನ್ನು ಮೊದಲು ಕಳೆದು ನವೀನ ಸಮಾಜವನ್ನು ನಿರ್ಮಿಸಬೇಕೆಂದು ಇಚ್ಛಿಸಿದರು. ಕಡೆಯವರೆಗೂ ಅದಕ್ಕಾಗಿ ಹೋರಾಡಿದ ಇವರು 1947 ಜನವರಿ 3ರಂದು ನಿಧನರಾದರು.

ಮಂಜಪ್ಪನವರು ಉತ್ತಮ ಬರೆಹಗಾರರು. ಅನೇಕ ವಿಷಯಗಳನ್ನು ಕುರಿತು ಗ್ರಂಥಗಳನ್ನು ರಚಿಸಿದ್ದಾರೆ. ಸ್ವಕರ್ತವ್ಯಸಿದ್ಧಾಂತ, ಮಹಾತ್ಮಾ ಗಾಂಧಿಯವರ ಈವರೆಗಿನ ಚರಿತ್ರೆ, ಸ್ವಾಮಿ ರಾಮತೀರ್ಥರವರ ಚರಿತ್ರೆ ಮತ್ತು ಉಪನ್ಯಾಸಗಳು (ನಾಲ್ಕು ಪುಸ್ತಕಗಳು), ಬುದ್ಧಿಯ ಮಾತು, ಆರೋಗ್ಯ ಜೀವನ, ಪತಿತೋದ್ಧಾರ, ವಾರದ ಮಲ್ಲಪ್ಪನವರ ಚರಿತ್ರೆ, ಭಾರತೀಯರ ದೇಶಭಕ್ತಿ, ಶ್ರೀಬಸವಚರಿತ್ರೆ, ಬುದ್ಧಚರಿತ್ರೆ, ಖಾದೀಶಾಸ್ತ್ರ, ಬಸವಬೋಧಾಮೃತ, ಶುದ್ಧಿ ಮತ್ತು ಸಂಘಟನೆ, ಪ್ರಮಥಾಚಾರದೀಪಿಕೆ, ಸ್ತ್ರೀನೀತಿ ಸಂಗ್ರಹ, ದಾಂಪತ್ಯಧರ್ಮ, ಲಜಪತರಾಯರ ಚರಿತ್ರೆ, ಶ್ರೀಲಿಂಗರಾಜರ ಚರಿತ್ರೆ, ವೀರಶೈವ ಮತಬೋಧೆ, ವೀರಶೈವ ಮತತತ್ವ, ಕಾಯಕವೇ ಕೈಲಾಸ, ಪ್ರಭುದೇವರ ಕಥೆ, ಏಕಲವ್ಯನ ಕಥೆ, ಜಾತೀಯವಾದ ವಿಮರ್ಶೆ, ವಚನಕಾರರ ಸಮಾಜರಚನೆ (ಸಂಪಾದಿತ), ವೀರಶೈವ ಏಕೀಕರಣ, ಪುಲಿಕೇಶಿಯ ಚರಿತ್ರೆ, ಕಚದೇವನ ಕಥೆ, ಸ್ವಾಮಿ ವಿವೇಕಾನಂದರ ಚರಿತ್ರೆ, ಸುಗ್ಗಲಾದೇವಿಯ ಕಥೆ, ದೇವಯಾನಿಯ ಕಥೆ, ಅಕ್ಕನ ಉಪದೇಶ, ಅಣ್ಣನ ಅರ್ಪಣಯೋಗ, ತರುಣರ ಕೈಗನ್ನಡಿ, ಗಾಂಧಿಯವರ ಗೋಸೇವೆ, ಕಳೆದ ಮೂವತ್ತು ವರ್ಷಗಳಿಂದ ನನ್ನ ಕಾಣಿಕೆ, ತೇರ ಹಾರ್ಡಿಯವರ ಭಾರತ ಪರ್ಯಟನೆ, ಸತ್ಯಾಗ್ರಹ, ಬ್ರಹ್ಮಚರ್ಯ, ಖಾದಿ, ಅಹಿಂಸೆ, ಸತ್ಯಾಗ್ರಹ ಪದ್ಯಾವಳಿ, ಸುಬೋಧಸಾರ (ಸಂಪಾದಿತ), ಎಚ್ಚೆತ್ತ ಹಿಂದೂಸ್ಥಾನ, ಋಗ್ವೇದಸಾರ (ಅಪ್ರಕಟಿತ), ಶ್ರೀಗುರು ಸಂಗನಬಸವ ಸ್ತುತಿ (ಹಾಡುಗಬ್ಬ) ಮೊದಲಾದ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ.

(ಜಿ.ಎಸ್.ಎಚ್.)

**ಹರ್ಮನ್ ಮೋಗ್ಲಿಂಗ್:** 1811–81. ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸ. ಜರ್ಮನಿಯ ಫ್ರಾಕನ್ ಹೈಮ್‌ನಲ್ಲಿ ಜನಿಸಿದ ಈತ ತನ್ನ ಎಳವೆಯಲ್ಲಿಯೇ ತಾಯಿಯನ್ನು ಕಳೆದುಕೊಂಡ. ತನ್ನ 18ನೆಯ ವರ್ಷದಲ್ಲಿ, 1829ರಲ್ಲಿ ಟ್ಯೂಬಿಂಗೆನ್ ವಿಶ್ವವಿದ್ಯಾಲಯದಲ್ಲಿ ಐದು ವರ್ಷ ವ್ಯಾಸಂಗ ಮಾಡಿ ಡಾಕ್ಟೊರೇಟ್ ಪದವಿ ಪಡೆದ. 1836ರಲ್ಲಿ ಭಾರತಕ್ಕೆ ಬಂದ.

ಮೊದಲಿಗೆ ಈತ ಧಾರವಾಡ, ಮಂಗಳೂರು, ಕೊಡಗು ಪ್ರದೇಶಗಳಲ್ಲಿ ಕ್ರೈಸ್ತಧರ್ಮ ಪ್ರಸಾರ, ಶಿಕ್ಷಣಾಭಿವೃದ್ಧಿ ಮತ್ತು ಕನ್ನಡ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡತೊಡಗಿದ. ಈ ಸಂಬಂಧದಲ್ಲಿ ಈತ ರಚಿಸಿದ ಜಾತಿ (ಮತ) ವಿಚಾರಣೆ (1845), ದೇವ ವಿಚಾರಣೆ (1852) ಎಂಬ ಪುಸ್ತಕಗಳು ಹೊಸಗನ್ನಡದ ಆದ್ಯಪ್ರಬಂಧಗಳೆಂದು ಹೆಸರು ಪಡೆದಿವೆ. ಹೆಬಿಕ್‌ನ ಎಂಬುವನ ಜೊತೆಗೂಡಿ 1842ರಲ್ಲಿ ಹೃದಯದರ್ಪಣವೆಂಬ ಧಾರ್ಮಿಕ ಕೃತಿಯನ್ನು ರಚಿಸಿದ. ಈತನ ಈರಾರು ಪತ್ರಿಕೆ ಎಂಬ 12 ಪತ್ರಗಳ ಪುಟ್ಟಪುಸ್ತಕ ಆ ಕಾಲದಲ್ಲಿ ಆನಂದರಾಯ ಕೌಂಡಿನ್ಯ ನೆಂಬಾತ ಮತಾಂತರ ಹೊಂದಿದ್ದನ್ನು ಕಥನರೀತಿಯಲ್ಲಿ ನಿರೂಪಿಸುತ್ತದೆ. ನೈಗಲ್ ಎಂಬುವನೊಡನೆ ಕೆಲವೊಂದು ಕ್ರೈಸ್ತಗೀತೆಗಳನ್ನು ರಚಿಸಿದ್ದಲ್ಲದೆ, ಪಿಲ್‌ಗ್ರಿಮ್ಸ್ ಪ್ರೋಗ್ರೆಸ್ ಗ್ರಂಥವನ್ನು ಯಾತ್ರಿಕನ ಸಂಚಾರ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ. ಚಿಕ್ಕವನಾದ ಹೆನ್ರಿಯೂ ಅವನ ಬೋಯಿಯೂ (1849), ದೇವವಾಕ್ಯ ವ್ಯಾಖ್ಯಾನ, ಬಾಸೆಲ್ ಮಿಶನ್ನಿನ ಸಭಾಕ್ರಮ–ಈತನ ಇತರ ಕೃತಿಗಳು. ಇವುಗಳಲ್ಲಿ ಕೆಲವು ಕೃತಿಗಳು ಪುನರ್ಮುದ್ರಣಗೊಂಡಿವೆ.

ಮೋಗ್ಲಿಂಗ್ ಹಳಗನ್ನಡ ಸಾಹಿತ್ಯಕ್ಕೆ ಗ್ರಂಥಸಂಪಾದನೆಯ ಮೂಲಕ ಸೇವೆಸಲ್ಲಿಸಿದ್ದು ಗಮನೀಯ. ಬಿ.ಎಲ್.ರೈಸ್ ಅವರಿಗಿಂತಲೂ ಮೊದಲೇ ಬಿಬ್ಲಿಯೋಥಿಕ ಕರ್ನಾಟಿಕ ಮಾಲೆಯನ್ನಾರಂಭಿಸಿ 1848ರಲ್ಲಿ ಜೈಮಿನಿಭಾರತವನ್ನೂ (ಅಪೂರ್ಣ) 1849ರಲ್ಲಿ ತೊರವೆರಾಮಾಯಣವನ್ನೂ ಅಚ್ಚುಮಾಡಿದ. 1850ರಲ್ಲಿ ನೂರು ಹಾಡುಗಳುಳ್ಳ ದಾಸರ ಪದಗಳು ಎಂಬ ಕೃತಿಯನ್ನು ತಂದ. ಅನಂತರ ಕನಕದಾಸರ ಹರಿಭಕ್ತಿಸಾರ, ಕುಮಾರವ್ಯಾಸಭಾರತ, ಬಸವಪುರಾಣ, ಚೆನ್ನಬಸವಪುರಾಣ ಈ ಕಾವ್ಯಗಳನ್ನು ಅಚ್ಚುಮಾಡಿದ.

1847ರ ವೇಳೆಗೆ ಕನ್ನಡ ಗಾದೆಗಳು ಎಂಬ ಪುಸ್ತಕವನ್ನು ಇವನು ಪ್ರಕಟಿಸಿದ. ಒಂದು ಹೇಳಿಕೆಯಂತೆ ಇದರಲ್ಲಿ 3,547 ಗಾದೆಗಳಿದ್ದುವೆಂದು ತಿಳಿದುಬರುತ್ತದೆ. ಈ ದೃಷ್ಟಿಯಿಂದ ಕನ್ನಡ ಜಾನಪದ ಕ್ಷೇತ್ರದಲ್ಲಿ ಇವನ ಹೆಸರು ಸ್ಮರಣೀಯವಾದದ್ದು. 1843 ಜುಲೈ 1 ರಂದು ಈತ ಪ್ರಕಟಿಸಲಾರಂಭಿಸಿದ ಮಂಗಳೂರ ಸಮಾಚಾರ ಎಂಬ ಪತ್ರಿಕೆ ಕನ್ನಡ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿತು. ಇದರಿಂದಾಗಿ ಈತ ಕನ್ನಡ ಪತ್ರಿಕೋದ್ಯಮರಂಗದ ಜನಕನೆಂಬ ಖ್ಯಾತಿಗೆ ಪಾತ್ರನಾದ. 8 ತಿಂಗಳ ಅನಂತರ ಮಂಗಳೂರು ಸಮಾಚಾರವೇ ಕಂನಡ ಸಮಾಚಾರವೆಂಬ ಹೆಸರಿನಿಂದ ಬಳ್ಳಾರಿಯಿಂದ ಹೊರಡಲಾರಂಭಿಸಿತು. ಅನಂತರ 1857ರಲ್ಲಿ ಕನ್ನಡ ಸುವಾರ್ತಿಕ ಎಂಬ ಪತ್ರಿಕೆಯನ್ನು ಹೊರಡಿಸಲಾರಂಭಿಸಿದ. ಇದು ಕನ್ನಡದ ಎರಡನೆಯ ಪತ್ರಿಕೆ. ಮೈಸೂರಿನಿಂದ ಬರುತ್ತಿದ್ದ ಕರ್ನಾಟಕ ವಾಗ್ವಿಧಾಯಿನಿ, ಉಡುಪಿಯಿಂದ ಬರುತ್ತಿದ್ದ ಕ್ರೈಸ್ತ ಸಭಾಪತ್ರ ಪತ್ರಿಕೆಗಳಲ್ಲೂ ಇವನ ಪಾತ್ರವಿತ್ತು. 1854ರಲ್ಲಿ ಈತ ರಾಜೇಂದ್ರನಾಮೆ ಎಂಬ ಗ್ರಂಥವನ್ನು ಪ್ರಕಟಿಸಿದ. ಇದು ಕೊಡಗಿನ ಇತಿಹಾಸದಲ್ಲಿ ಈತನಿಗಿದ್ದ ಆಸಕ್ತಿಯ ಕುರುಹಾಗಿದೆ. 1852ರಲ್ಲಿ ಕೂರ್ಗ್ ಮೆಮೋರೀಸ್ ಎಂಬ ಪುಸ್ತಕವನ್ನು ಈತ ಪ್ರಕಟಿಸಿದ್ದು ಈ ಹಿನ್ನೆಲೆಯಲ್ಲಿ ಸ್ಮರಣೀಯ. ಮೋಗ್ಲಿಂಗ್ 1860ರಲ್ಲಿ ತನ್ನ ಸ್ವದೇಶವಾದ ವರ್ಟೆಂಬರ್ಗ್‌ಗೆ

ಹಿಂದಿರುಗಿದನಾದರೂ ಕನ್ನಡದ ಕೆಲಸವನ್ನು ಅವ್ಯಾಹತವಾಗಿ ಕೈಗೊಂಡ. ದಾಸರ ಪದಗಳು ಎಂಬ ಪುಸ್ತಕದಿಂದ 24 ಪದಗಳನ್ನಾಯ್ದುಕೊಂಡು ಅವುಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ ಪೀಠಿಕೆಯೊಂದಿಗೆ (ಜಡ್‌ಡಿಎಂಜಿ) ಪತ್ರಿಕೆಯಲ್ಲಿ ಪ್ರಕಟಿಸಿದ್ದು ಈತನ ಕನ್ನಡ ಪ್ರೇಮಕ್ಕೆ ಸಾಕ್ಷಿಯಾಗಿದೆ. ಈತ ತುಳು ಪಾಡ್ದನಗಳನ್ನು ಸಂಗ್ರಹಿಸಿದ್ದ. ಈರಾರು ಪತ್ರಿಕೆ ಈತನ ಇನ್ನೊಂದು ಕೃತಿ. ಕನ್ನಡ ಲಿಪಿ ಸುಧಾರಣೆಯ ಬಗ್ಗೆ ಇವನಿಗೆ ತೀವ್ರವಾದ ಕಾಳಜಿ ಇತ್ತು. ಕನ್ನಡ ಲಿಪಿ ಸುಧಾರಕರಲ್ಲಿ ಈತನಿಗೆ ಗಣ್ಯಸ್ಥಾನವಿದೆ ಎಂಬುದು ಹೊಸಗನ್ನಡ ಸಾಹಿತ್ಯ ಚರಿತ್ರಕಾರರ ಅಭಿಪ್ರಾಯ. (ಎನ್.ಎಸ್.ಟಿ.)

**ಹಲಗ:** ಹದಿನೇಳನೆಯ ಶತಮಾನದಲ್ಲಿದ್ದ ವೀರಶೈವ ಕವಿ. ಹರಿಶ್ಚಂದ್ರ ಸಾಂಗತ್ಯ ಎಂಬ ಕಾವ್ಯದ ಕರ್ತೃ. ಗುಮ್ಮಳಾಪುರ ಇವನ ಸ್ಥಳ. ವೀರಗಣಾಚಾರಿ ಇವನ ತಂದೆ.

ಹರಿಶ್ಚಂದ್ರ ಸಾಂಗತ್ಯ ಸು. 823 ಪದ್ಯಗಳನ್ನುಳ್ಳ ಚಿಕ್ಕ ಕಾವ್ಯ. ಹರಿಶ್ಚಂದ್ರನ ಕಥೆ ಈ ಕಾವ್ಯದ ವಸ್ತು. ಕವಿ ಕಥೆಗಿಂತ ವರ್ಣನೆಗಳಿಗೇ ಹೆಚ್ಚು ಪ್ರಾಧಾನ್ಯವನ್ನು ನೀಡಿದ್ದಾನೆ. ಸಾಂಗತ್ಯ ಶೈಲಿ ಸುಲಲಿತವಾಗಿದೆ. ಇವನ ಕಾವ್ಯದ ಮೇಲೆ ರಾಘವಾಂಕನ ಹರಿಶ್ಚಂದ್ರಕಾವ್ಯದ ದಟ್ಟ ಪ್ರಭಾವ ಕಂಡುಬರುತ್ತದೆ. ಹರಿಶ್ಚಂದ್ರನ ಕಥೆಯನ್ನು ಸಾಂಗತ್ಯದಲ್ಲಿ ನಿರೂಪಿಸಿದ ಮೂವರು ಕವಿಗಳಲ್ಲಿ (ಒದುವ ಗಿರಿಯ, ಬೊಂಬೆಯಲಕ್ಕ) ಇವನಿಗೂ ಒಂದು ಮುಖ್ಯ ಸ್ಥಾನ ಸಲ್ಲುತ್ತದೆ. (ಆರ್.ಎನ್.ವಿ)

**ಹಲಗಲಿ:** ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಒಂದು ಗ್ರಾಮ. ಮುಧೋಳದ ಪೂರ್ವಕ್ಕೆ 29 ಕಿಮೀ ದೂರದ ಬೆಟ್ಟಗುಡ್ಡಗಳ ಮಧ್ಯದಲ್ಲಿದೆ. ಜನಸಂಖ್ಯೆ 4,940. ಘಟಪ್ರಭಾ ಎಡದಂಡೆ ಕಾಲುವೆ ಈ ಗ್ರಾಮಕ್ಕೆ ನೀರಿನ ವ್ಯವಸ್ಥೆಯನ್ನು ಒದಗಿಸಿದೆ. ಈ ಗ್ರಾಮ ಇಂದಿಗೂ ಪೈಲವಾನರಿಗೆ ಪ್ರಸಿದ್ಧ. ಇಲ್ಲಿ ಪ್ರತಿವರ್ಷ ಹೊಸ್ತಲ ಹುಣ್ಣಿಮೆಗೆ ವೀರಭದ್ರದೇವ ಜಾತ್ರೆಯಾಗುತ್ತದೆ. ಗ್ರಾಮದಲ್ಲಿ ಪಂಚಾಯಿತಿ ಆಡಳಿತವಿದೆ.

ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ಈ ಗ್ರಾಮ ಹೆಸರಾಯಿತು. ಇಲ್ಲಿನ ಹೆಚ್ಚು ಮಂದಿ ಬೇಡರು. ಬೇಟೆಯಾಡುವುದೇ ಅವರ ಉದ್ಯೋಗ. ಅದಕ್ಕಾಗಿ ಮತ್ತು ಅವರ ಆತ್ಮರಕ್ಷಣೆಗೆ ಅವರಲ್ಲಿ ಆಯುಧಗಳ ಸಂಗ್ರಹವಿತ್ತು. 1857ನೆಯ ನಿರಾಯುಧ ಕಾಯಿದೆಯಂತೆ ಪ್ರತಿಯೊಬ್ಬ ಭಾರತೀಯನೂ ತಮ್ಮ ಆಯುಧಗಳನ್ನು ಮೊದಲು ಸರ್ಕಾರಕ್ಕೆ ಒಪ್ಪಿಸಿ ಅವಶ್ಯಕತೆಯನ್ನು ವಿವರಿಸಿ ಅನಂತರ ಸರ್ಕಾರದ ಅಪ್ಪಣೆ ಪಡೆದುಕೊಂಡು ಆಯುಧಗಳನ್ನು ಪಡೆಯಬೇಕಿತ್ತು. ಇದು ಸ್ವಭಾವತಃ ಸಾಹಸಿಗಳೂ ಶೂರರೂ ಆತ್ಮಾಭಿಮಾನಿಗಳೂ ಆದ ಬೇಡರಿಗೆ ನುಂಗಲಾರದ ತುತ್ತಾಯಿತು. ತಮ್ಮ ಜೀವನಾಧಾರವಾದ ಆಯುಧಗಳನ್ನು ಒಪ್ಪಿಸುವುದಕ್ಕೆ ಅವರು ಒಪ್ಪಲಿಲ್ಲ. ಈ ಸಂಧರ್ಭದಲ್ಲಿ ಬ್ರಿಟಿಷರಿಗೂ ಇವರಿಗೂ ಘರ್ಷಣೆ ಉಂಟಾಯಿತು. 1857 ನವೆಂಬರ್ 29ರಂದು ಬ್ರಿಟಿಷರು ಇವರ ಮೇಲೆ ದಾಳಿ ನಡೆಸಿದರು. ದಾಳಿಯಲ್ಲಿ ಅನೇಕ ವೀರರು ಮರಣಹೊಂದಿದರು. ಈ ಸಂದರ್ಭದಲ್ಲಿ ಲೆಫ್ಟಿನೆಂಟ್ ಕರ್ನಲ್ ಮಾಲ್ಕಂ 290 ಜನರನ್ನು ಸೆರೆಹಿಡಿದು ಕಲಾದಗಿಗೆ ಹಿಂದುರುಗಿ 1857 ಡಿಸೆಂಬರ್ 11ರಂದು 13 ಜನರನ್ನು ಮುಧೋಳದಲ್ಲೂ ಮೂರು ದಿನಗಳ ತರುವಾಯ 6 ಜನರನ್ನು ಹಲಗಲಿಯಲ್ಲೂ ಗಲ್ಲಿಗೇರಿಸಿದ. ಕನ್ನಡಿಗರ ಉತ್ಕಟ ಆತ್ಮಾಭಿಮಾನಕ್ಕೆ ಉಜ್ಜ್ವಲ ನಿದರ್ಶನವಾಗಿ ಈ ದುರಂತದ ಕಥೆ ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಅಮರವಾಗಿದೆ. ಅಂದಿನ ಘಟನೆಗಳಿಗೆ ಸಂಬಂಧಿಸಿದ ವಿವರಗಳು ಮತ್ತು ಶೂರ ಬೇಡರು ತಳೆದ ಧೀರನೀತಿ ಅವರು ಎದುರಿಸಿದ ಕಷ್ಟಗಳನ್ನು ಫ್ಲೀಟರು ಸಂಗ್ರಹಿಸಿರುವ ಐದು ಐತಿಹಾಸಿಕ ಲಾವಣಿಗಳಲ್ಲಿ ಕಾಣಬಹುದು. (ಎಸ್.ಎಸ್.ಬಿ.)

**ಹಲಶಿ:** ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಒಂದು ಐತಿಹಾಸಿಕ ಸ್ಥಳ. ಖಾನಾಪುರಕ್ಕೆ 14 ಕಿಮೀ ದೂರದಲ್ಲಿದೆ.

ಪ್ರಾಚೀನ ಕಾಲದಲ್ಲಿ ಶ್ರೀ ವಿಜಯ ಪಲಾಶಿಕಾ ಅಥವಾ ಹಲಶಿಗೆ ಎಂಬ ಹೆಸರನ್ನು ಹೊಂದಿದ್ದ ಈ ಸ್ಥಳ ಬನವಾಸಿಯ ಕದಂಬರ ಕಾಲದಲ್ಲಿ ಅವರ ಎರಡನೆಯ ರಾಜಧಾನಿಯಾಗಿಯೂ ಗೋವ ಕದಂಬರ ಕಾಲದಲ್ಲಿ ಹಲಶಿಗೆ 12000 ವಿಭಾಗದ ಪ್ರಮುಖ ಸ್ಥಳವಾಗಿಯೂ ಪ್ರಾಮುಖ್ಯತೆ ಗಳಿಸಿತ್ತು. ಹಲಶಿಯ ಹತ್ತಿರದಲ್ಲಿರುವ ಕಂಡಿಕೋಣೆ ಗೋರಿಗಳು ಈ ಸ್ಥಳದ ಇತಿಹಾಸವನ್ನು ಕ್ರಿ.ಪೂ. 500ಕ್ಕೂ ಹಿಂದಕ್ಕೆ ಕೊಂಡೊಯ್ಯುತ್ತವೆ. ಇವಲ್ಲದೆ ಸಾತವಾಹನರ ಆಳಿಕೆಯ ಕಾಲದ ಉತ್ತರಾರ್ಧ (ಸು.1–3ನೆಯ ಶತಮಾನ) ಹಾಗೂ ಸಾತವಾಹನಾನಂತರ ಕಾಲದ (ಸು.4–5ನೆಯ ಶತಮಾನ) ಇಟ್ಟಿಗೆಯ ಕಟ್ಟಡ, ಕೆಂಪು ಮಡಕೆ ಚೂರುಗಳು ಇತ್ಯಾದಿ ಅವಶೇಷಗಳು ಹತ್ತಿರದ ಬೊಡ್ಕಟೆಂಬೆ ಎಂದು ಕರೆಯಲ್ಪಡುವ ದಿಬ್ಬದಲ್ಲಿ ಕಾಣಸಿಗುತ್ತದೆ. ಬಹುಶಃ ಇದು ಪ್ರಾಚೀನ ಪಲಾಶಿಕಾ ನಗರವಿದ್ದ ಸ್ಥಳವನ್ನು ನಿಶಿರ್ದೇಸುತ್ತದೆ. ಇಲ್ಲಿ ಬನವಾಸಿ ಕದಂಬ ಅರಸುಮನೆತನದ ಪುರಾತನ ತಾಮ್ರಶಾಸನಗಳು ದೊರೆತಿವೆ.

ಹಲಶಿಯಲ್ಲಿ ಶಾಂತಿವರ್ಮನ ಸ್ಮರಣಾರ್ಥವಾಗಿ ಜಿನಾಲಯವೊಂದು ಕಟ್ಟಲ್ಪಟ್ಟಿತೆಂದು ಕದಂಬ ಮೃಗೇಶವರ್ಮನ (ಸು.455–80) ಶಾಸನವೊಂದ ರಿಂದ ತಿಳಿಯುತ್ತದೆ. ಆತನ ಅನಂತರ ಆಳಿದ ರವಿವರ್ಮ (ಸು.485–519) ಹಲಶಿಯನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡ. ಅಲ್ಲದೆ, ಜಿನೇಂದ್ರನ ಪೂಜಾರ್ಥವಾಗಿ ನಡೆಯಬೇಕಾದ ಆಚರಣೆಗಳನ್ನು ಆತ ನಿರ್ದಿಷ್ಟಗೊಳಿಸಿದ. ಆತನ ತಮ್ಮ ಭಾನುವರ್ಮನೂ ಜಿನಾಲಯಕ್ಕೆ ಭೂಮಿದಾನ ಮಾಡಿದ್ದಾಗಿ ತಿಳಿಯುತ್ತದೆ. ಮನೆತನದ ಕೊನೆಯ ಅರಸು ಹರಿವರ್ಮ ವಸಂತವಾಟಕ ಹಳ್ಳಿಯನ್ನು ಅರ್ಹದಾಯತನಕ್ಕೆ ಪೂಜಾದಿಗಳಿಗಾಗಿ ನೀಡಿದ.

ಬನವಾಸಿ ಕದಂಬರ ಪತನಾನಂತರ ಹಲಶಿ ಮತ್ತೆ ಉಚ್ಛ್ರಾಯಸ್ಥಿತಿ ಗೇರಿದುದು ಗೋವ ಕದಂಬರ ಕಾಲದಲ್ಲಿ. ವರಾಹನರಸಿಂಹ ದೇವಾಲಯ ದಲ್ಲಿರುವ ಶಾಸನವೊಂದರಿಂದ ಗೋವ ಕದಂಬ ಅರಸು ಶಿವಚಿತ್ತ ಪೆರ್ಮಾಡಿ ದೇವ 1171ರಲ್ಲಿ ತನ್ನ ತಾಯಿಯ ಇಚ್ಛೆಯಂತೆ ಸಿಂಧವಳ್ಳಿಯನ್ನು ನರಸಿಂಹದೇವರ ಪೂಜೋಪಚಾರಕ್ಕಾಗಿ ದತ್ತಿ ಕೊಟ್ಟಂತೆ ತಿಳಿಯುತ್ತದೆ. ಈ ನರಸಿಂಹ ದೇವಾಲಯವನ್ನು ಮತಯೋಗಿ ಅಥವಾ ಯೋಗಿಮತೇಶ ಎಂಬುವವನು ಕಟ್ಟಿಸಿದ್ದನೆಂದೂ ಶಿವಚಿತ್ತನ ತಮ್ಮ ವಿಷ್ಣುಚಿತ್ತ ಕೂಡ ನರಸಿಂಹದೇವರ ಅಷ್ಟೋಪಚಾರಕ್ಕಾಗಿ ಭಾಲಕ ಹಳ್ಳಿಯನ್ನು ಭೂದಾನ ಮಾಡಿದನೆಂದೂ ಇದೇ ಶಾಸನದಿಂದ ತಿಳಿದುಬರುತ್ತದೆ. ಹಲಶಿಯು ಹಲಶಿಗೆ 12000 ವಿಭಾಗದ ರಾಜಧಾನಿಯಾಗಿತ್ತೆಂದು ಇತರ ಶಾಸನಗಳಿಂದ ತಿಳಿಯುತ್ತದೆ. 14ನೆಯ ಶತಕದ ಅನಂತರದ ಇತಿಹಾಸದಲ್ಲಿ ಹಲಶಿಯ ಪ್ರಾಮುಖ್ಯತೆ ಇಳಿಮುಖವಾದಂತೆ ತೋರುತ್ತದೆ. 15–16ನೆಯ ಶತಮಾನಗ ಳಿಗೆ ಸೇರುವ ಕೆಲವೇ ಶಿಲ್ಪಗಳು, ಸತಿಗಲ್ಲು–ವೀರಗಲ್ಲುಗಳನ್ನುಳಿದರೆ ವಿಶೇಷವಾಗಿ ಬೇರೇನೂ ದೊರೆಯುವುದಿಲ್ಲ.

ಇಲ್ಲಿ ವರಾಹನರಸಿಂಹ, ಸುವರ್ಣೇಶ್ವರ, ಲಕ್ಷ್ಮೀನಾರಾಯಣ, ಕಲ್ಲೇಶ್ವರ, ಹಾಟಕೇಶ್ವರ, ರಾಮಲಿಂಗೇಶ್ವರ, ಸೂರ್ಯ, ಶಂಕರನಾರಾಯಣ ಮೊದಲಾದ ದೇವಾಲಯಗಳಿವೆ. ಇವುಗಳಲ್ಲಿ ಕೆಲವು ಮಾತ್ರ ಸುಸ್ಥಿತಿಯಲ್ಲುಳಿದಿವೆ. ಐತಿಹಾಸಿಕ ಹಾಗೂ ಸೌಂದರ್ಯದ ದೃಷ್ಟಿಯಲ್ಲಿ ವರಾಹನರಸಿಂಹ ದೇವಾಲಯ ಮುಖ್ಯವಾದುದು. ಇದೊಂದು ದ್ವಿಕೂಟ ದೇವಾಲಯವಾಗಿದ್ದು ಒಂದು ಗರ್ಭಗೃಹದಲ್ಲಿ ನರಸಿಂಹ ಹಾಗೂ ಭೂವರಾಹ ವಿಗ್ರಹಗಳನ್ನೂ ಇನ್ನೊಂದರಲ್ಲಿ ಯೋಗಿನಾರಾಯಣ ದೇವರ ವಿಗ್ರಹಗಳನ್ನೂ ಇರಿಸಲಾಗಿದೆ. ಭೂವರಾಹ ಹಾಗೂ ಯೋಗಿನಾರಾಯಣ ವಿಗ್ರಹಗಳು ಅತ್ಯುತ್ತಮ

ಮಟ್ಟದ ಶಿಲ್ಪಗಳಾಗಿದ್ದು ಕರ್ನಾಟಕ ಶಿಲ್ಪಕ್ಕೆ ಗೋವೆ ಕದಂಬರ ಅಪೂರ್ವ ಕೊಡುಗೆಗಳಾಗಿವೆ. ಈ ದೇವಾಲಯದ ಶಿಖರಗಳು ಕದಂಬ ನಾಗರ ಶೈಲಿಯಲ್ಲಿವೆ. ಸೂರ್ಯ, ಲಕ್ಷ್ಮೀ ನಾರಾಯಣ, ಕಾಲಭೈರವ, ಗರುಡ, ಮಹಾಲಕ್ಷ್ಮಿ, ಕೇಶವ ಇತ್ಯಾದಿ ಶಿಲ್ಪಗಳೂ ಇಲ್ಲಿವೆ. **(ಎಸ್.ಆರ್.ಪಿ.)**

**ಹವೆ ಮತ್ತು ಮಳೆ:** ಕರ್ನಾಟಕ ರಾಜ್ಯ ಸಮಭಾಜಕ ವೃತ್ತಕ್ಕೆ ಹತ್ತಿರದಲ್ಲಿರುವುದರಿಂದ ಅಧಿಕ ಉಷ್ಣತೆಯ ವಾಯುಗುಣವನ್ನು ಹೊಂದಿದೆ. ರಾಜ್ಯದ ಭೂಭಾಗ ಪ್ರಸ್ಥಭೂಮಿಯಾಗಿದ್ದು, ಇದರ ಸರಾಸರಿ ಎತ್ತರ 500 ಮೀಗಳಿಗಿಂತ ಎತ್ತರದಲ್ಲಿರುವುದರಿಂದ, ತಗ್ಗು ಪ್ರದೇಶದಲ್ಲಿ ಕಂಡುಬರುವ ಉಷ್ಣತೆಗಿಂತ ಕಡಿಮೆ ಉಷ್ಣತೆ ಪಡೆದಿದೆ. ಕರ್ನಾಟಕ ಕರಾವಳಿ ತೀರಪ್ರದೇಶ ವರ್ಷದ ಎಲ್ಲ ಕಾಲದಲ್ಲೂ ಅತಿ ಹೆಚ್ಚು ಅಥವಾ ಅತಿ ಕಡಿಮೆ ಉಷ್ಣತೆಯನ್ನು ಪಡೆಯುವುದಿಲ್ಲ. ಆದರೆ ರಾಜ್ಯದ ಉಳಿದ ಪ್ರದೇಶಗಳಿಗಿಂತ ಕಡಿಮೆ ಎತ್ತರವಾಗಿರುವುದರಿಂದಲೂ ಇಲ್ಲಿ ಬೇಸಗೆ ಉಷ್ಣತೆ ಅತಿ ಹೆಚ್ಚಾಗಿರುತ್ತದೆ. ಪಶ್ಚಿಮಘಟ್ಟಗಳು ಸಾಗರ ಮಾರುತಗಳಾದ ನೈಋತ್ಯ ಮಾನ್ಸೂನ್ ಗಾಳಿಗಳನ್ನು ತಡೆಯುವುದರಿಂದಲೂ ತೀರಪ್ರದೇಶ ಹಾಗೂ ಘಟ್ಟಪ್ರದೇಶಗಳಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ.

**ಸಾಮಾನ್ಯ ವಾಯುಗುಣ ಕ್ರಮ:** ಕರ್ನಾಟಕ ರಾಜ್ಯ ಭಾರತ ಪರ್ಯಾಯ ದ್ವೀಪದ ಒಂದು ಭಾಗವಾದುದರಿಂದ ಇದೂ ಭಾರತದಂತೆಯೇ ವಿಲಕ್ಷಣವಾದ ಮಾನ್ಸೂನ್ ವಾಯುಗುಣವನ್ನು ಪಡೆದಿದೆ. ಬೇಸಗೆ ತಿಂಗಳುಗಳಲ್ಲಿ ರಾಜ್ಯದ ಒಳಭಾಗದ ಪ್ರದೇಶಗಳು ಅಧಿಕ ಉಷ್ಣತೆಯಿಂದ ಕೂಡಿರುವುದರಿಂದ ಈ ಪ್ರದೇಶಗಳು ಕಡಿಮೆ ಒತ್ತಡದ ಭಾಗಗಳಾಗುತ್ತವೆ. ಗಾಳಿ ಅಧಿಕ ಒತ್ತಡ ಪ್ರದೇಶದಿಂದ ಕಡಿಮೆ ಒತ್ತಡ ಪ್ರದೇಶಕ್ಕೆ ಬೀಸುವುದರಿಂದ ಸಮಭಾಜಕ ವೃತ್ತದ ಕಡಿಮೆ ಒತ್ತಡ ಪ್ರದೇಶದೆಡೆಗೆ ಬೀಸುವ ಈಶಾನ್ಯ ಮಾರುತಗಳು ಬಂಗಾಳ ಕೊಲ್ಲಿಯಿಂದ ರಾಜ್ಯದೆಡೆಗೆ ತಿರುಗುವುದರಿಂದ ರಾಜ್ಯದ ಕೆಲವು ಪ್ರದೇಶಗಳು ಬೇಸಗೆ ಕಾಲದಲ್ಲಿ ಮಳೆಯನ್ನು ಪಡೆಯುತ್ತವೆ.

ಚಳಿಗಾಲದ ತಿಂಗಳುಗಳಲ್ಲಿ, ಹಿಂದೂಸಾಗರ ಭೂಭಾಗಕ್ಕಿಂತ ಹೆಚ್ಚು ಉಷ್ಣವನ್ನು ಹೊಂದಿರುವುದರಿಂದ ಮಾರುತಗಳು ಭೂಭಾಗದಿಂದ ಸಮುದ್ರದೆಡೆಗೆ ಬೀಸುತ್ತವೆ. ಆದ್ದರಿಂದ ಈ ಕಾಲದಲ್ಲಿ ರಾಜ್ಯದ ಬಹುಪಾಲು ಭಾಗ ಮಳೆಯನ್ನು ಪಡೆಯುವುದಿಲ್ಲ. ಈ ಕಾಲದಲ್ಲಿ ಉಷ್ಣತೆ ರಾಜ್ಯದ ಕರಾವಳಿ ಪ್ರದೇಶವನ್ನುಳಿದು ಇತರೆ ಪ್ರದೇಶಗಳಲ್ಲಿ ಸಾಮಾನ್ಯವಾಗಿ $21^0$ ಸೆ.ಗಿಂತ ಕಡಿಮೆಯಿರುತ್ತದೆ.

ಮಾರ್ಚ್ ತಿಂಗಳಿಂದ ಮೇ ತಿಂಗಳವರೆಗೆ ಒಣ ಬೇಸಗೆ ಕಾಲ ಕಂಡುಬರುತ್ತದೆ. ಇದು ಇಡೀ ಭಾರತ ದೇಶಕ್ಕೆ ಅನ್ವಯಿಸಿದರೂ ಕರ್ನಾಟಕ ರಾಜ್ಯದ (ಉತ್ತರ ಭಾಗವನ್ನುಳಿದು) ಭಾಗಗಳಲ್ಲಿ ಅತಿ ಬಿಸಿಲು ಹಾಗೂ ಅತಿ ಹೆಚ್ಚಿನ ಒಣ ಅಂಶಗಳು ಕಂಡುಬರುವುದಿಲ್ಲ. ಉತ್ತರ ಮೈದಾನ ಪ್ರದೇಶದಲ್ಲಿ ಉಷ್ಣತೆ $40^0$ ಸೆ.ಗಿಂತಲೂ ಹೆಚ್ಚಾಗುವ ಸಂಭವವುಂಟು. ಆದರೆ ದಕ್ಷಿಣ ಪ್ರದೇಶಗಳಲ್ಲಿನ ಉಷ್ಣಾಂಶ $25^0$ ಸೆ. ಇಂದ $40^0$ ಸೆ.ಗಳಷ್ಟು ಕಂಡುಬರುತ್ತದೆ. ಮೈದಾನ ಭಾಗ ಕಡಿಮೆ ಒತ್ತಡ ಪ್ರದೇಶವಾಗಿದ್ದು ಕಡಲ್ಗಾಳಿಯನ್ನು ಆಕರ್ಷಿಸುವುದರಿಂದ ರಾಜ್ಯದ ದಕ್ಷಿಣ ಭಾಗದಲ್ಲಿ ಮುಂಗಾರು ಮಳೆಯುಂಟಾಗುತ್ತದೆ.

ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ರಾಜ್ಯದಲ್ಲಿ ಮಳೆಗಾಲ ಕಂಡುಬರುತ್ತದೆ. ಈ ಕಾಲದಲ್ಲಿ, ವಾಯುಮಂಡಲದಲ್ಲಿ ಹೆಚ್ಚಿನ ಆರ್ದ್ರತೆಯಿರುವುದರಿಂದ ಉಷ್ಣತೆ ಕಡಿಮೆ. ಮಳೆಯ ಹಂಚಿಕೆ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಅಧಿಕವಾಗಿದ್ದು, ಈ ಅಧಿಕತೆ ನೈಋತ್ಯ ಕಡೆಯಿಂದ ಪೂರ್ವ ಹಾಗೂ ಈಶಾನ್ಯ ಭಾಗಗಳ ಕಡೆ ಹೋದಂತೆಲ್ಲ ಕಡಿಮೆಯಾಗುತ್ತ ಹೋಗುತ್ತದೆ.

ಅಕ್ಟೋಬರ್‌ನಿಂದ ಡಿಸೆಂಬರ್ ತಿಂಗಳವರೆಗೆ ಹಿಮ್ಮೆಟ್ಟುವ ಮಾನ್ಸೂನ್ ಕಾಲ ಕಂಡುಬರುತ್ತದೆ. ಈ ಕಾಲ ಮಧ್ಯ ಅಕ್ಟೋಬರ್‌ನಲ್ಲಿ ಪ್ರಾರಂಭವಾಗಿ ಮಧ್ಯ ಜನವರಿಯವರೆಗೂ ಇರುತ್ತದೆ. ಈ ಕಾಲದಲ್ಲಿ ಸರಾಸರಿ ಉಷ್ಣತೆ $30^0$ ಸೆ. ಗಳಷ್ಟಿದ್ದು ಈಶಾನ್ಯ ಮಾನ್ಸೂನ್ ಮಾರುತಗಳಿಂದ ಉಂಟಾಗುವ ಮಳೆ ರಾಜ್ಯದ ಆಗ್ನೇಯ ಭಾಗಗಳಲ್ಲಿ ಮಾತ್ರ ಕಂಡುಬರುತ್ತದೆ.

**ಉಷ್ಣತೆಯ ಹಂಚಿಕೆ:** ಕರ್ನಾಟಕ ರಾಜ್ಯದಲ್ಲಿನ ಸರಾಸರಿ ಉಷ್ಣತೆ ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುತ್ತದೆ. ಚಳಿಗಾಲದಲ್ಲಿ ಗರಿಷ್ಠ ಸರಾಸರಿ ಉಷ್ಣತೆ ಉತ್ತರ ಮೈದಾನದಲ್ಲಿ ಕಂಡುಬರುತ್ತದೆ. ಕನಿಷ್ಠ ಸರಾಸರಿ ಉಷ್ಣತೆ ಇಲ್ಲಿ ಕಡಿಮೆಯಿರುವುದರಿಂದ ತಿಂಗಳಲ್ಲಿನ ಉಷ್ಣತೆ ವ್ಯತ್ಯಾಸ ಹೆಚ್ಚು. ಏಪ್ರಿಲ್ ತಿಂಗಳಿನಲ್ಲಿ ಗರಿಷ್ಠ ಹಾಗೂ ಕನಿಷ್ಠ ಉಷ್ಣತೆಗಳೆರಡೂ ಸಾಪೇಕ್ಷವಾಗಿ ಹೆಚ್ಚಾಗಿರುವುದರಿಂದ ದೈನಂದಿನ ಹಾಗೂ ಮಾಹೆಯಾನ ಬದಲಾವಣೆ ಕಡಿಮೆಯಾಗುತ್ತದೆ.

ದಕ್ಷಿಣ ಮೈದಾನ ಪ್ರದೇಶ ಒಂದೇ ಸಮಾನಾಂತರ ಉಷ್ಣತೆಯನ್ನು ಹೊಂದಿದ್ದು, ಮಲೆನಾಡು ಪ್ರದೇಶ ತಂಪು ಹವೆಯನ್ನು ಹೊಂದಿರುತ್ತದೆ. ಕರಾವಳಿಗಳಲ್ಲಿ ಉಷ್ಣತೆಯ ಏರಿಳಿತ ಕಡಿಮೆಯಿರುತ್ತದೆ. ಜುಲೈ ತಿಂಗಳ ವೇಳೆಗೆ ವಾಯುಮಂಡಲದಲ್ಲಿ ಹೆಚ್ಚಿನ ಆರ್ದ್ರತೆ ಕಂಡಬರುವುದರಿಂದ ಕರಾವಳಿ ಪ್ರದೇಶದಲ್ಲಿನ ಉಷ್ಣತೆ ಕಡಿಮೆಯಾಗಿರುತ್ತದೆ. ಹಾಗೂ ದೈನಂದಿನ ಉಷ್ಣತೆಯ ಏರಿಳಿತ ಸುಮಾರು $5^0$ ಸೆಂ.ಗಳಿರುತ್ತದೆ. ನವಂಬರ್‌ನಲ್ಲಿ ರಾಜ್ಯದ ಕೆಲವು ಪ್ರದೇಶಗಳು ಮಳೆಯನ್ನು ಪಡೆಯುವುದರಿಂದ ಅಲ್ಲಿ ಉಷ್ಣತೆ ಕಡಿಮೆಯಿರುತ್ತದೆ.

**ಮಳೆಯ ಹಂಚಿಕೆ:** ಕರ್ನಾಟಕ ರಾಜ್ಯ, ದೇಶದ ಸಾಧಾರಣ ಮಳೆ ಪಡೆಯುವ ರಾಜ್ಯಗಳ ಪೈಕಿ ಒಂದು. ಇಲ್ಲಿ ಬೀಳುವ ಮಳೆಯ ಪರಿಮಾಣ ಪ್ರಾದೇಶಿಕ ಹಾಗೂ ಕಾಲಕ್ಕನುಗುಣವಾಗಿ ವ್ಯತ್ಯಾಸ ಹೊಂದುತ್ತವೆ. ಸಾಮಾನ್ಯವಾಗಿ ಮಳೆಯ ಪ್ರಾರಂಭ ನಿರ್ದಿಷ್ಟವಲ್ಲದಿರುವುದರಿಂದ ಹಾಗೂ ಮಳೆಯ ಪರಿಮಾಣ ವರ್ಷವರ್ಷಕ್ಕೆ ಹಾಗೂ ಒಂದೇ ವರ್ಷದಲ್ಲಿ ವ್ಯತ್ಯಾಸವಾಗುವುದರಿಂದ ರಾಜ್ಯದ ಕೆಲವು ಭಾಗಗಳು ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತವೆ. ರಾಜ್ಯದಲ್ಲಿನ ಸರಾಸರಿ ವಾರ್ಷಿಕ ಮಳೆ ಸು. 1,190 ಮಿಮೀಗಳಷ್ಟಾದರೆ, ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಇದು ಸು. 7,620 ಮಿಮೀಗಳಷ್ಟಿದ್ದು ಈಶಾನ್ಯ ಭಾಗಗಳಲ್ಲಿ ಕೇವಲ 380 ಮಿಮೀಗಳಷ್ಟು ಕಡಿಮೆಯಾಗುತ್ತದೆ. ಮಳೆಯ ಹೆಚ್ಚಿನ ಪ್ರಮಾಣ ಜೂನ್‌ನಿಂದ ಸೆಪ್ಟೆಂಬರ್ ತಿಂಗಳುಗಳಲ್ಲಿ ಬೀಳುತ್ತದೆ.

ನೈಋತ್ಯ ಮಾನ್ಸೂನ್ ಮಾರುತಗಳು ಜೂನ್ ಮಧ್ಯದಲ್ಲಿ ಪ್ರಾರಂಭವಾಗಿ ಭೂಮಿಯೆಡೆಗೆ ಸಮುದ್ರದಿಂದ ಬೀಸುವಾಗ ಪಶ್ಚಿಮಘಟ್ಟಗಳು ಅವುಗಳನ್ನು ತಡೆಯುವುದರಿಂದ ಮಲೆನಾಡು ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತದೆ. ಘಟ್ಟಗಳಿಂದ ತಡೆದ ಮಾನ್ಸೂನ್ ಗಾಳಿಗಳಲ್ಲಿ ಕೆಲವು ಹಿಂತಿರುಗಿ ಸಮುದ್ರದೆಡೆಗೆ ಬೀಸುವಾಗ ಕರಾವಳಿ ಪ್ರದೇಶಗಳಲ್ಲಿ ಎಡಬಿಡದೆ ಮಳೆ ಸುರಿಸುತ್ತವೆ. ಘಟ್ಟವನ್ನು ಬಿಟ್ಟು ಪೂರ್ವಾಭಿಮುಖವಾಗಿ ಹೊರಟ ಮಾನ್ಸೂನ್ ಗಾಳಿಗಳು ಕೆಳಪ್ರದೇಶಗಳಿಗೆ ಇಳಿಯುವುದರಿಂದ ಹಾಗೂ ಮುಂದಕ್ಕೆ ಉಷ್ಣತೆ ಹೆಚ್ಚಾಗುವುದರಿಂದ, ಇವುಗಳ ಆರ್ದ್ರತೆಯನ್ನು ಹೊಂದುವ ಸಾಮರ್ಥ್ಯ ಹೆಚ್ಚುತ್ತದೆ. ಆದ್ದರಿಂದ ಮಳೆಯನ್ನೇ ಆಶ್ರಿತ ಪ್ರದೇಶ ಹಾಗೂ ಪೂರ್ವಭಾಗಗಳಲ್ಲಿ ಮಳೆಯ ಪರಿಮಾಣ ಕಡಿಮೆಯಾಗುತ್ತದೆ. ತೀರಪ್ರದೇಶದಲ್ಲಿರುವ ಮಂಗಳೂರಿನಲ್ಲಿ 3,820 ಮಿಮೀ ಮಳೆ ಪಡೆದರೆ, ಶಿವಮೊಗ್ಗ ಜಿಲ್ಲೆಯ ಆಗುಂಬೆ ಘಟ್ಟದಲ್ಲಿ ಸು. 9,820 ಮಿಮೀ ಮಳೆಯಾಗುತ್ತದೆ (ಸರಾಸರಿ 7,600 ಮಿಮೀ) ಇನ್ನೂ ಮುಂದೆ ಹೋದಂತೆ (ಹಾಸನ ಕೇವಲ 1,010 ಮಿಮೀ) ಮಳೆಯ ಪರಿಮಾಣ ಕಡಿಮೆಯಾಗುತ್ತ ಹೋಗುತ್ತದೆ.

**ಕರ್ನಾಟಕ ರಾಜ್ಯದಲ್ಲಿ ಮಳೆಯ ವಿಭಾಗಗಳು:** ಮೇಲೆ ಹೇಳಿದಂತೆ, ರಾಜ್ಯದ ಭಾಗಗಳು ವಿವಿಧ ಪರಿಮಾಣಗಳಲ್ಲಿ ಮಳೆಯನ್ನು ಪಡೆಯುತ್ತವೆ. ಮಳೆಬೀಳುವ ಪರಿಮಾಣವನ್ನು ಅನುಸರಿಸಿ ರಾಜ್ಯವನ್ನು ಕರಾವಳಿ ಪ್ರದೇಶ, ಮಲೆನಾಡು ಪ್ರದೇಶ, ಉತ್ತರ ಭಾಗದ ಮೈದಾನ ಪ್ರದೇಶ, ದಕ್ಷಿಣ ಭಾಗದ ಮೈದಾನ ಪ್ರದೇಶ ಎಂದು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಬಹುದು.

**ಕರಾವಳಿ ಪ್ರದೇಶ:** ಕರಾವಳಿ ಪ್ರದೇಶದಲ್ಲಿ ಸರಾಸರಿ 2,000– 2,500 ಮಿಮೀ ಮಳೆ ಬೀಳುತ್ತದೆ. ನೈಋತ್ಯ ಮಾರುತಗಳನ್ನು ಪಶ್ಚಿಮ ಘಟ್ಟಗಳು ಅಡ್ಡಗೋಡೆಯಂತೆ ತಡೆಯುವುದರಿಂದ ಕರಾವಳಿ ಪ್ರದೇಶಗಳಲ್ಲಿ ಈ ಮಾರುತಗಳು ಹೆಚ್ಚು ಮಳೆಯನ್ನುಂಟುಮಾಡುತ್ತವೆ. ಕರಾವಳಿಯ ಉತ್ತರಭಾಗದಲ್ಲಿ 5 ತಿಂಗಳುಗಳವರೆಗೂ ದಕ್ಷಿಣಭಾಗದಲ್ಲಿ 7 ತಿಂಗಳುಗಳ ವರೆಗೂ ಮಳೆ ಬರುತ್ತದೆ. ಇಲ್ಲಿನ ಹವೆ ತುಂಬ ಹಿತಕರವಾಗಿದೆ. ಅಂದರೆ ಬೇಸಗೆ ಮತ್ತು ಚಳಿಗಾಲದ ಉಷ್ಣತಾಮಾನಗಳಲ್ಲಿಯ ಹಾಗೂ ಹಗಲು-ಇರುಳು ಉಷ್ಣತಾಮಾನಗಳಲ್ಲಿಯ ಅಂತರ ತುಂಬಾ ಕಡಿಮೆಯಾಗಿರುತ್ತದೆ. ಬೇಸಗೆಯಲ್ಲಿ ಉಷ್ಣತೆ 26.4$^0$ ಸೆ.–29.4$^0$ ಸೆ.ದ ವರೆಗೆ ಇದ್ದರೆ ಚಳಿಗಾಲದಲ್ಲಿ ಅದು 21$^0$ ಸೆ. 24$^0$ ಸೆ.ವರೆಗೆ ಇರುತ್ತದೆ. ಹವೆಯಲ್ಲಿ ಆರ್ದ್ರತೆ ಹೆಚ್ಚಾಗಿರುವುದರಿಂದ ಇಲ್ಲಿ ಧಾರಾಕಾರವಾಗಿ ಮಳೆ ಬೀಳುವಾಗಲೂ ಸೆಕೆ ಉಂಟಾಗುತ್ತದೆ.

ಕರ್ನಾಟಕ ರಾಜ್ಯದ ಈ ಕೆಳಕಂಡ ಜಿಲ್ಲೆಗಳಲ್ಲಿ ಆಗಿರುವ ಮಳೆ ಪ್ರಮಾಣ ಇಂತಿದೆ–

| ಜಿಲ್ಲೆ | ವಾಡಿಕೆ ಮಳೆ ಪ್ರಮಾಣ ಮಿಮೀ (1901–1970) | ವಾಸ್ತವಿಕವಾಗಿ ಮಳೆಬಿದ್ದ ಪ್ರಮಾಣ ಮಿಮೀ (2000) |
|---|---|---|
| 1. ಬೆಂಗಳೂರು,ನಗರ | 867 ಮಿಮೀ | 1060 ಮಿಮೀ |
| 2. ಬೆಂಗಳೂರು ಗ್ರಾಮಾಂತರ | 817 ,, | 1143 ,, |
| 3. ಚಿತ್ರದುರ್ಗ | 573 ,, | 753 ,, |
| 4. ದಾವಣಗೆರೆ | 649 ,, | 738 ,, |
| 5. ಕೋಲಾರ | 744 ,, | 852 ,, |
| 6. ಶಿವಮೊಗ್ಗ | 1664 ,, | 1957 ,, |
| 7. ತುಮಕೂರು | 688 ,, | 923 ,, |
| 8. ಬೆಳಗಾಂವಿ | 808 ,, | 762 ,, |
| 9. ಬಿಜಾಪುರ | 578 ,, | 607 ,, |
| 10. ಬಾಗಲಕೋಟೆ | 562 ,, | 593 ,, |
| 11. ಧಾರವಾಡ | 772 ,, | 726 ,, |
| 12. ಗದಗ | 612 ,, | 698 ,, |
| 13. ಹಾವೇರಿ | 753 ,, | 848 ,, |
| 14. ಉತ್ತರ ಕನ್ನಡ | 2835 ,, | 3085 ,, |
| 15. ಬಳ್ಳಾರಿ | 636 ,, | 622 ,, |
| 16. ಬೀದರ್ | 847 ,, | 959 ,, |
| 17. ಗುಲ್ಬರ್ಗ | 777 ,, | 805 ,, |
| 18. ರಾಯಚೂರು | 631 ,, | 640 ,, |
| 19. ಕೊಪ್ಪಳ | 572 ,, | 701 ,, |
| 20. ಚಿಕ್ಕಮಗಳೂರು | 1925 ,, | 1831 ,, |
| 21. ದಕ್ಷಿಣಕನ್ನಡ | 3975 ,, | 3303 ,, |
| 22. ಉಡುಪಿ | 4119 ,, | 3805 ,, |
| 23. ಹಾಸನ | 1031 ,, | 1100 ,, |
| 24. ಕೊಡಗು | 2718 ,, | 2641 ,, |
| 25. ಮಂಡ್ಯ | 700 ,, | 967 ,, |
| 26. ಮೈಸೂರು | 782 ,, | 960 ,, |
| 27. ಚಾಮರಾಜನಗರ | 751 ,, | 1016 ,, |

**ಮಲೆನಾಡು ಪ್ರದೇಶ:** ಮಲೆನಾಡು ಘಟ್ಟದ ಮೇಲಿನ ಪ್ರದೇಶವಾದುದರಿಂದ ಇಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ. ನೈಋತ್ಯ ಮಾನ್ಸೂನ್ ಮಾರುತಗಳು ಈ ಪ್ರದೇಶದಲ್ಲಿ ಅತ್ಯಧಿಕ ಮಳೆಯನ್ನು ಸುರಿಸಿ ಆರ್ದ್ರತೆಯನ್ನು ಪಡೆಯುವ ಸಾಮರ್ಥ್ಯವನ್ನು ಕಳೆದುಕೊಂಡು ಪೂರ್ವಾಭಿಮುಖವಾಗಿ ಮುಂದೆ ಹೋಗುತ್ತವೆ. ಮಳೆಯ ಪ್ರಮಾಣ 2,500–5,000 ಮಿಮೀ ಇರುತ್ತದೆ. ಸರಾಸರಿ ಮಳೆಯ ಪ್ರಮಾಣ ಸುಮಾರು 3,753 ಮಿಮೀ ಇದೆ. ಈ ಪ್ರದೇಶದೊಳಗಿನ ವಿವಿಧ ಭಾಗಗಳು ಬೇರೆ ಬೇರೆ ಪ್ರಮಾಣದಲ್ಲಿ ಮಳೆಯನ್ನು ಪಡೆಯುತ್ತವೆ. ಧಾರಾಕಾರವಾಗಿ ಮಳೆ ಬೀಳುವುದರಿಂದ ಇಲ್ಲಿನ ಹವೆ ಆರ್ದ್ರವೂ ಶೀತಯುಕ್ತವೂ ಆಗಿರುತ್ತದೆ. ಈ ವಿಭಾಗದಲ್ಲಿನ ಕೊಡಗು ಜಿಲ್ಲೆಯ ಹವೆ ಆರೋಗ್ಯದಾಯಕವೂ ಮತ್ತು ಆಹ್ಲಾದಕರವೂ ಆಗಿದೆ. ಈ ವಿಭಾಗದಲ್ಲಿನ ಇತರೇ ಪ್ರದೇಶಗಳೆಂದರೆ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳ ಪಶ್ಚಿಮದ ಭಾಗಗಳು. ಈ ಪ್ರದೇಶಗಳೆಲ್ಲ ಘಟ್ಟದ ಪಶ್ಚಿಮ ಭಾಗದಲ್ಲಿ ಇವೆ.

ಆದರೆ ಘಟ್ಟದ ಪೂರ್ವಭಾಗದಲ್ಲಿನ ಮಲೆನಾಡು ಪ್ರದೇಶ ಕಡಿಮೆ ಪರಿಮಾಣದಲ್ಲಿ ಮಳೆಯನ್ನು ಅಂದರೆ ಸು. 750–1,250 ಮಿಮೀ ಮಳೆಯನ್ನು ಪಡೆಯುತ್ತದೆ. ಈ ವಿಭಾಗದಲ್ಲಿ ಬೆಳಗಾಂವಿ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳ ಪಶ್ಚಿಮ ಭಾಗಗಳೂ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಯ ಮಧ್ಯಭಾಗವೂ ಬರುತ್ತವೆ.

**ಉತ್ತರಭಾಗದ ಮೈದಾನ ಪ್ರದೇಶ:** ಈ ಪ್ರದೇಶದಲ್ಲಿ ಹವೆ ಬೇಸಗೆಯಲ್ಲಿ ಉಷ್ಣತೆಯಿಂದ ಕೂಡಿರುವಂಥದೂ ಚಳಿಗಾಲದಲ್ಲಿ ತಂಪಾಗಿರುವಂಥದೂ ಮಳೆಗಾಲದಲ್ಲಿ ಹೆಚ್ಚು ಆರ್ದ್ರತೆಯುಳ್ಳದ್ದೂ ಆಗಿರುತ್ತದೆ. ಮಳೆ ಅನಿಯಮಿತವಾಗಿಯೂ ಅನಿಶ್ಚಿತವಾಗಿಯೂ ಬೀಳುತ್ತದೆ. ಅದರ ಪರಿಮಾಣ ಕೂಡ ಆಗಿಂದಾಗ್ಗೆ ಹೆಚ್ಚು ಕಡಿಮೆಯಾಗುವುದುಂಟು. ಬೇಸಗೆಯಲ್ಲಿ ಉಷ್ಣತೆ 32.2$^0$ ಸೆ.–43.3$^0$ ಸೆ.ವರೆಗೂ ಏರುತ್ತದೆ. ಸಾಮಾನ್ಯವಾಗಿ ಇಲ್ಲಿಯ ಹವೆ ತೀಕ್ಷ್ಣವಾಗಿರುತ್ತದೆ. ಬೇಸಗೆ ಕಾಲದಲ್ಲಿ ಮಳೆಯಾಗುವುದರಿಂದ ಹವೆ ಹೆಚ್ಚಿನ ಉಷ್ಣತೆಯಿಂದ ಒಡಗೂಡಿದ್ದೂ ಆರ್ದ್ರವೂ ಆಗಿರುತ್ತದೆ. ಇಲ್ಲಿ ಬೀಳುವ ಬಹುಪಾಲು ಮಳೆ ನೈಋತ್ಯ ಮಾನ್ಸೂನ್ ಗಾಳಿಗಳಿಂದ ಉಂಟಾಗುತ್ತದೆ. ಈ ಪ್ರದೇಶ ಮಳೆಯ ಆಶ್ರಿತ ಪ್ರದೇಶದಲ್ಲಿ ಕಂಡುಬರುವುದರಿಂದ ಇಲ್ಲಿ ಬೀಳುವ ಬಹುಪಾಲು ಮಳೆ ನೈಋತ್ಯ ಮಾನ್ಸೂನ್ ಗಾಳಿಗಳಿಂದ ಉಂಟಾಗುತ್ತದೆ. ಈ ಪ್ರದೇಶ ಮಳೆಯ ಆಶ್ರಿತ ಪ್ರದೇಶದಲ್ಲಿ ಕಂಡುಬರುವುದರಿಂದ ಇಲ್ಲಿ ಮಳೆಯ ಪರಿಮಾಣ ಕಡಿಮೆ. ಇಲ್ಲಿನ ಯಾವುದೇ ಭಾಗ 875 ಮಿಮೀಗಿಂತ ಹೆಚ್ಚು ಮಳೆಯನ್ನು ಪಡೆಯುವುದಿಲ್ಲ. ಕೆಲವು ಕಡೆಗಳಲ್ಲಿ 250 ಮಿಮೀ ಮಳೆಯಾದರೆ ಮತ್ತೆ ಕೆಲವೆಡೆಗಳಲ್ಲಿ 375ರಿಂದ 625 ಮಿಮೀ ಮಳೆ ಬೀಳುತ್ತದೆ. ಈ ವಿಭಾಗದಲ್ಲಿ ಬಿಜಾಪುರ ಜಿಲ್ಲೆ ಅತಿಕಡಿಮೆ ಮಳೆಯನ್ನು

ಪಡೆಯುತ್ತದೆ. ಅಧಿಕ ಉಷ್ಣದಿಂದ ಆವಿಯಾಗುವಿಕೆ ಹಾಗೂ ಇತರ ಕಾರಣಗಳಿಂದ ಈ ಭಾಗದಲ್ಲಿ ಹಲವು ಸಲ ಮಳೆಯಾಗದೆ ಬರಗಾಲ ಕಾಡುವುದುಂಟು. ಬಿಜಾಪುರ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳು ರಾಜ್ಯದಲ್ಲಿನ ಬರಗಾಲಕ್ಕೆ ಆಗಾಗ ತುತ್ತಾಗುವ ಜಿಲ್ಲೆಗಳಾಗಿವೆ.

**ದಕ್ಷಿಣ ಮೈದಾನ ಪ್ರದೇಶ:** ಈ ವಿಭಾಗದಲ್ಲಿ ಮಳೆಯ ಪರಿಮಾಣ ಕಡಿಮೆಯಿದ್ದು, ಅದು ಅನಿಯಮಿತವಾಗಿಯೂ ಅನಿಶ್ಚಿತವಾಗಿಯೂ ಇರುತ್ತದೆ. ಮಳೆಯ ವಾರ್ಷಿಕ ಸರಾಸರಿ ಪರಿಮಾಣ 500 ಮಿಮೀಗಿಂತಲೂ ಕಡಿಮೆ ಇರುತ್ತದೆ. ಕೆಲವು ಭಾಗದಲ್ಲಿ ಮಾತ್ರ 750 ಮಿಮೀಗಳವರೆಗೂ ಬೀಳುತ್ತದೆ. ಮಳೆಯ ಪರಿಮಾಣ ಈ ಪ್ರದೇಶದಲ್ಲಿ ಕಡಿಮೆ ಇರುವುದರಿಂದ ನೀರಾವರಿಯ ಮೂಲಕ ಸಾಗುವಳಿಯನ್ನು ಮಾಡಲಾಗುತ್ತದೆ. (ಪಿ.ಬಿ.)

**ಹವ್ಯಕರ ಹಾಡುಗಳು:** ಶಿವಮೊಗ್ಗ, ಕೊಡಗು, ಉತ್ತರಕನ್ನಡ, ದಕ್ಷಿಣಕನ್ನಡ – ಈ ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿರುವ ಬ್ರಾಹ್ಮಣವರ್ಗದ ಒಂದು ಉಪಪಂಗಡವಾದ ಹವ್ಯಕರು ಹಾಡುವ ಪದಗಳನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಹವ್ಯಕರು, ಕದಂಬ ಮಯೂರವರ್ಮನ ಕಾಲದಲ್ಲಿ ವಿಂಧ್ಯದಿಂದ ಇಲ್ಲಿಗೆ ಬಂದು ನೆಲೆಸಿದವರು ಎಂದು ಐತಿಹ್ಯ. ಆಚಾರ ಪದ್ಧತಿಗಳಲ್ಲಿ ಈ ವರ್ಗಕ್ಕೆ ತನ್ನದೇ ಆದ ವೈಶಿಷ್ಟ್ಯಗಳಿವೆ. ಮುಖ್ಯವಾಗಿ ಇವರು ಆಡುವುದು ಇವತ್ತಿನ ರೂಢಿಯ ಕನ್ನಡಕ್ಕಿಂತ ತುಂಬ ಬೇರೆಯಾದ, ಹಳಗನ್ನಡ ಪ್ರಚುರವಾದ ಒಂದು ವಿಶಿಷ್ಟ ಭಾಷೆ. ಇವರ ಜೀವನವೃತ್ತಿ ಸರ್ವೇಸಾಧಾರಣವಾಗಿ ಅಡಕೆ ತೋಟದ ವ್ಯವಸಾಯ.

ಹವ್ಯಕರಲ್ಲಿ ಸಾವಿರಗಟ್ಟಲೆ ಹಾಡುಗಳು ಪ್ರಚಲಿತವಿವೆ. ಈ ಹಾಡುಗಳನ್ನು ಸ್ಥೂಲವಾಗಿ ಹಬ್ಬದ ಹಾಡುಗಳು (ದೀಪಾವಳಿ, ಗಣೇಶಚೌತಿ, ಭೂಮಿ ಹುಣ್ಣಿಮೆ ಮುಂತಾದ ಹಬ್ಬಗಳ ಸಂದರ್ಭದಲ್ಲಿ ಹೇಳುವಂಥವು), ಮದುವೆಯ ಹಾಡುಗಳು (ಮದುವೆ, ವಧು ಗೃಹಪ್ರವೇಶ, ಗರ್ಭದಾನ ಮುಂತಾದ ಸಮಾರಂಭಗಳಿಗೆ ಸಂಬಂಧಿಸಿದವು; ಹವ್ಯಕರ ಹಾಡುಗಳಲ್ಲಿ ಇದೇ ದೊಡ್ಡ ಭಾಗ), ಹೋಮಹವನ, ಚೌಲೋಪನಯನ ಇತ್ಯಾದಿ ವೈದಿಕ ಕ್ರಿಯೆ ಸಂಸ್ಕಾರಗಳಿಗೆ ಸಂಬಂಧಿಸಿದವು. ಉದಯರಾಗದ ಹಾಡುಗಳು, ಕೆಲಸದ ಹಾಡುಗಳು (ಮೊಸರು ಕಡೆಯುವುದು, ಸಾರಿಸುವುದು, ಗುಡಿಸುವುದು ಇತ್ಯಾದಿ ಮನೆವಾರ್ತೆಯ ಕೆಲಸಗಳಲ್ಲಿ ಹೇಳಿಕೊಳ್ಳುವಂಥವು), ವ್ರತಕಥೆಗಳು, ಪುರಾಣಗಳು, ಮಹಾತ್ಮೆಗಳು ಇತ್ಯಾದಿಯಾಗಿ ವರ್ಗೀಕರಿಸ ಬಹುದು. ಈ ಹಾಡುಗಳಲ್ಲಿ ಅರ್ಧಕ್ಕೆ ಮಿಕ್ಕು ತ್ರಿಪದಿಗಳೇ. ತ್ರಿಪದಿಗಳನ್ನು ಹಾಡುವಾಗ ಸಾಮಾನ್ಯವಾಗಿ, ಎರಡನೆಯ ಸಾಲನ್ನು ಒಂದು ಸಲ ಮುಕ್ಕಾಲು ಹೇಳಿ ಇನ್ನೊಮ್ಮೆ ಇಡಿಯಾಗಿ ಪುನರಾವರ್ತನೆ ಮಾಡುವುದು ರೂಢಿಯಷ್ಟೆ. ಆದರೆ ಹವ್ಯಕರು ಆ ಪದಗಳನ್ನು ಹಾಡುವ ಪದ್ಧತಿ ಬೇರೆ. ಅದು ಹೀಗೆ:

ಹತ್ತೆಳೆಯ ಜನಿವಾರ ಹೊಟ್ಟೆಮೇಲಲೆಯುತ್ತ
ಇಟ್ಟ ಶ್ರೀಗಂಧ ಬೆವರುತ್ತ
ಬೆವರುತ್ತಲಪ್ಪಯ್ಯ
ಮಂತ್ರಬಿನ್ನಪವ ತೊಡಗಿದ

ಅಂಶಷಟ್ಪದಿಗಳ ಅರ್ಧವಿರಬಹುದಾದ ಇನ್ನೊಂದು ರೀತಿಯ ತ್ರಿಪದಿಗಳೂ ಇಲ್ಲಿ ಬಳಕೆಯಲ್ಲಿವೆ. ಉದಾ:

ಕಟ್ಟಿದ ಕಣ್ಣಿಯ ಬಿಡುವನಕ
ಸುತ್ತಣ ದೇವರ ಬಲಗೊಂಬೆ
ಹೊಲಕ್ಹೋಗಿ ಬರುವನಕ ಹುಲಿಯಣ್ಣನ ಕೃಪೆಯಿರಲಿ

ಕಥನಗೀತೆಗಳಲ್ಲಿ ವಿವಿಧ ಚೌಪದಿಗಳು ಹೆಚ್ಚಾಗಿ ಬಳಕೆಯಾಗುತ್ತವೆ. ಈ ಚೌಪದಿಗಳು ವಿವಿಧ ದ್ವಿಪದ ಪಲ್ಲವಿಗಳಿಂದ ಕೂಡಿರುತ್ತವೆ. ಚೌಪದಿಯ ಎರಡು ಸಾಲುಗಳ ಜೊತೆ ತ್ರಿಪದಿಯ ಉತ್ತರಾರ್ಧವನ್ನು ಕೂಡಿಸಿ ಮಾಡಿಕೊಂಡ ಹೊಸ ಬಂಧಗಳೂ ಇಲ್ಲಿ ಕಾಣಸಿಗುತ್ತವೆ. ಇವೇ ಅಲ್ಲದೆ ಯಕ್ಷಗಾನದ ಪ್ರಭಾವದಿಂದ ರೂಪುಗೊಂಡಿರಬಹುದಾದ ಅನೇಕ ಬೇರೆ ಬೇರೆ ಬಂಧಗಳನ್ನೂ ನೋಡಬಹುದು. ಹಾಡುಗಳ ಭಾಷೆ ಸಂಪೂರ್ಣ ವಾಗಿ ಹವ್ಯಕರ ಆಡುಗನ್ನಡವಾಗಿರದೆ ಗ್ರಾಂಥಿಕ ಭಾಷೆಯ ಮಿಶ್ರಣವಾಗಿರುತ್ತದೆ.

ಈ ಹಾಡುಗಳಲ್ಲಿ ಶಂಕರಾಭರಣ, ಮೋಹನ, ಬೃಂದಾವನ, ಸಾರಂಗ ಮುಂತಾದ ಕೆಲವು ರಾಗಗಳು ಕಾಣದೊರೆಯುತ್ತವೆ. ಇವಲ್ಲದೆ ಪೂರ್ಣ ಸಂಚಾರವಿಲ್ಲದ ನಾಲ್ಕಾರು ಮಟ್ಟುಗಳನ್ನೂ ಕಾಣಬಹುದು. ಸ್ವರಗಳನ್ನು ಗಮಕವಿಲ್ಲದೆ ಹಾಡುತ್ತಾರೆ. ತಾಳದಲ್ಲಿ ಪ್ರಾಯಃ ಯಕ್ಷಗಾನದ ಪ್ರಭಾವದಿಂದಾಗಿ ಸಾಕಷ್ಟು ವೈವಿಧ್ಯವಿರುವ ರಚನೆಗಳಿವೆ.

ಈ ಹಾಡುಗಳ ರಚನೆ ದೇಸಿಯೇ ಆಗಿದ್ದರೂ ಮಾರ್ಗದತ್ತ ಕೈಚಾಚುತ್ತಿರುವುದನ್ನು ಸ್ಪಷ್ಟ ಕಾಣಬಹುದು. ಭಾವದ ಸಹಜ ನಿರ್ಭರತೆ ಮತ್ತು ಬುದ್ಧಿಯ ಸಂಸ್ಕೃತ ಗಾಂಭೀರ್ಯ, ಜೀವನ ಲೋಲುಪ್ತಿ ಹಾಗೂ ಬೌದ್ಧಿಕ ಸಂಯಮ – ಈ ಎರಡರ ರುಚಿಯೂ ಕಾಣಬರುವ, ಎರಡೂ ಒಂದಕ್ಕೊಂದು ತಾಕಲಾಡಿ ಹೊಸ ಪಾಕವಾಗುವ ಸೊಬಗು ಈ ಗೀತೆಗಳಲ್ಲಿ ಕಂಡುಬರುತ್ತದೆ. ಇವುಗಳ ಅಭಿವ್ಯಕ್ತಿ ಉತ್ಸವ ಹಾಗೂ ಪುರಾಣಗಳ ಚೌಕಟ್ಟಿನಲ್ಲೇ ಆದರೂ ಉತ್ಸವ ನಿತ್ಯಭಾವಗಳ ತೀವ್ರ ಅನುಭೂತಿಯೇ ಆಗುತ್ತದೆ; ಪುರಾಣ ಆತ್ಮೀಯವಾಗಿ ವರ್ತಮಾನದಲ್ಲಿ ಅರಳಿಬಿಡುತ್ತದೆ. ಅಪ್ಪ ಅಮ್ಮ ಮಾವ ಅತ್ತೆ ತಮ್ಮ ತಂಗಿ ಬಂಧುಗಳು – ಇವರುಗಳ ವಿವಿಧ ಭಂಗಿಗಳೇ ಈ ಹಾಡುಗಳಲ್ಲಿ ಶೋಭಿಸುವುದನ್ನು ಗಮನಿಸಬಹುದು. ಪುಟ್ಟ ಬೆನಮಯ್ಯನ ಅಪ್ಪ ಕರೆವೋಲೆ ಬಂದ, ಅಕ್ಕ ಬರಬೇಕು ಮುಕ್ಕಣ್ಣ ನರಸಿಯು; ಕಣ್ಣುಗಳು ಕರಗಿದೊ ಸರ್ವಾಂಗ ಬೆವರಿದೊ ಸೀತಾಂಗನೆಯನೆತ್ತಿ, ಬೆವರಿಬಂದಳಿಯಗೆ ಮುತ್ತಿನ ಬೀಸಣಿಗೆ ಕೊಡಿರವ್ವ ಇತ್ಯಾದಿ.

ಈ ಹಾಡುಗಳಲ್ಲಿ ಹವ್ಯಕರ ಸರ್ವತ್ರ ಸಮೂಹ ಗುಣಗಳೆನ್ನಬಹುದಾದ ಉತ್ಸಾಹೋನ್ಮಾದ, ಬಂಧುವಾತ್ಸಲ್ಯ, ಅತಿಥಿಪ್ರೇಮ, ದುಂದುಗಾರಿಕೆ ಯೆನಿಸಬಹುದಾದಷ್ಟು ಬಿಚ್ಚುಗೈ ಮುಂತಾದ ಗುಣಗಳು ಪ್ರತಿಬಿಂಬಿತ ವಾಗಿರುವುದನ್ನು ಕಾಣಬಹುದು. (ಕೆ.ವಿ.ಎಸ್.)

**ಹಸಲರು:** ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ ಪ್ರಮುಖ ಬುಡಕಟ್ಟು ಗಳ ಪೈಕಿ ಒಂದು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಸೊರಬ, ಸಾಗರ, ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರಗಳಲ್ಲಿ ಕಂಡುಬರುತ್ತಾರೆ. ಇವರಲ್ಲಿ ಬೆಳ್ಳಿಹಸಲರು, ಬಗ್ಗಾಲಿನ ಹಸಲರು, ನಾಡಹಸಲರು, ಕರು ಎಳೆಯುವ ಹಸಲರು ಮುಂತಾದ ಒಳಪಂಗಡಗಳಿವೆ. ಮರಗೆಲಸ ಇವರ ಕುಲಕಸಬು. ಹೆಂಗಸರು ಮನೆ ಕೆಲಸದೊಂದಿಗೆ ಹೊಲ, ಗದ್ದೆ ಹಾಗೂ ತೋಟಗಳಲ್ಲಿ ಅಡಕೆ ಸುಲಿಯುತ್ತಾರೆ. ಬಗ್ಗಾಲಿನ ಹಸಲರು ಹೆಚ್ಚಾಗಿ ಮಲೆನಾಡಿನ ಅಡಕೆ ತೋಟಗಳಲ್ಲಿ ಕೆಲಸಮಾಡುತ್ತಾರೆ. ಬಿದಿರು, ಕಣಜ, ಬೆತ್ತದ ಬುಟ್ಟಿಗಳನ್ನು ಹೆಣೆಯುವವರೂ ಉಂಟು. ಇವರು ಶ್ರಮಜೀವಿಗಳು. ತಮ್ಮ ಪ್ರದೇಶದ ಮೇಲ್ವರ್ಗದ ಜಮೀನುದಾರರನ್ನು ಆಧರಿಸಿ ಬದುಕುತ್ತಿದ್ದಾರೆ. ಸಾಮಾಜಿಕವಾಗಿ ಯಾವುದೇ ಸ್ಥಾನಮಾನಗಳು ಇವರಿಗಿಲ್ಲ. ಇವರ ಉಡುಗೆ ತೊಡುಗೆಗಳು ತುಂಬ ಸರಳ. ಪುರುಷರು ತುಂಡು ಪಂಚೆಯುಟ್ಟು ಅಂಗಿ ಧರಿಸುತ್ತಾರೆ. ಸ್ತ್ರೀಯರು ಮೊಣಕಾಲವರೆಗೆ ಮಾತ್ರ ಸೀರೆ ಉಡುತ್ತಾರೆ. ಕರಿಮಣಿ, ಕಾಲುಂಗುರ, ಐದಾಳಿ ಮಂಗಳ ಸೂತ್ರ, ಕೊಲ್ಲಡಗ ಧರಿಸುತ್ತಾರೆ. ಇವರಲ್ಲಿ ತಿಳಿವಳಿಕೆ ಇರುವ ವ್ಯಕ್ತಿಯೊಬ್ಬ ಹಿರಿಯ ಎಂದು ಕರೆಸಿಕೊಂಡು ಆಚಾರ್ಯಸ್ಥಾನ ಗಳಿಸುತ್ತಾನೆ. ಶುಭಕಾರ್ಯಗಳಲ್ಲಿ ಈ ಹಿರಿಯನಿಗೆ ವಿಶೇಷ ಸ್ಥಾನಮಾನ. ಇವರಲ್ಲಿ ಮದುವೆಯಾಗುವವ ತೆರಕೊಟ್ಟು ಮದುವೆಯಾಗ ಬೇಕು. ಈ ತೆರದ ಮೌಲ್ಯ ನೂರರಿಂದ ನೂರೈವತ್ತು ರೂಪಾಯಿಗಳು. ಆರು ದಿನಗಳ ತನಕ ಮದುವೆ ನಡೆಯುತ್ತದೆ. ಮದುವೆ ಸಂದರ್ಭದಲ್ಲಿ

ಬಿಲ್ಲು–ಬಾಣಗಳನ್ನು ಪೂಜಿಸುವುದು ಇವರ ಸಂಪ್ರದಾಯ. ವಿಧವಾವಿವಾಹ ಈ ಜನರಲ್ಲಿ ಪ್ರಚಲಿತವಲ್ಲಿದೆ. ವಿಧುರ ಮರುಮದುವೆಯಾದರೆ ತೆರದ ಮೌಲ್ಯ ಇನ್ನೂರು ರೂಪಾಯಿಗಳಿಗೂ ಅಧಿಕ.

ಹಸಲರ ಹುಡುಗಿ ಮೈನೆರದ ಬಳಿಕ ಹನ್ನೆರಡು ದಿನಗಳ ತನಕ ಪ್ರತ್ಯೇಕ ಜಾಗದಲ್ಲಿ ಉಳಿದುಕೊಳ್ಳಲು ವ್ಯವಸ್ಥೆಮಾಡುತ್ತಾರೆ. ಐದು, ಏಳು ಅಥವಾ ಹನ್ನೆರಡನೆಯ ದಿನದಂದು ಆಕೆಗೆ ಸ್ನಾನಮಾಡಿಸಿ ದಾಸಯ್ಯನ ಮನೆಯಿಂದ ತೀರ್ಥತಂದು ಕುಡಿಸಿ ಶುದ್ಧಿಗೊಳಿಸುತ್ತಾರೆ. ಇವರಿಗೆ ದೀಪಾವಳಿ ದೊಡ್ಡಹಬ್ಬ. ಅಲ್ಲದೆ ಗಣೇಶ ಚತುರ್ಥಿ, ನವರಾತ್ರಿ ಹಬ್ಬಗಳನ್ನು ಉತ್ಸಾಹದಿಂದ ಆಚರಿಸುತ್ತಾರೆ. ಜಟಗ, ಭೂತ, ಗಾಮ, ಮಾರಿ ದೇವತೆಗಳನ್ನು ಭಯಭಕ್ತಿಗಳಿಂದ ಪೂಜಿಸುತ್ತಾರೆ. ಕಡುಕಪ್ಪು ಬಣ್ಣದ ಮಿಂಚುವ ಗಟ್ಟಿದೇಹದ ಪುರುಷರಿಗೆ ತೋಟದ ಕೆಲಸ ಎಷ್ಟು ಪ್ರಿಯವೋ ಕೋವಿ ಹಿಡಿದು ಬೇಟೆಯಾಡುವುದೂ ಅಷ್ಟೇ ಪ್ರಿಯ. ದೀಪಾವಳಿ ಹಬ್ಬದಲ್ಲಿ ಅಂಟಿಕೆ ಪಂಟಿಕೆ ಹಾಡುಗಳನ್ನು ಹಾಡುತ್ತಾರೆ. ಡೊಳ್ಳುಕಟ್ಟಿ ಕುಣಿಯುತ್ತಾರೆ. ಮದುವೆ ಸಮಯದಲ್ಲಿ ಹಾಡಿಕೊಂಡು ಕುಣಿಯುವುದುಂಟು. ಇವರಲ್ಲಿ ಎಲ್ಲಮ್ಮ ದೇವತೆಯ ತಾಳಿ ಮತ್ತು ಗುತ್ಯಮ್ಮ ದೇವತೆಯ ಮಣಿ ಪಡೆದವರ ದೇಹಗಳನ್ನು ಸುಡುತ್ತಾರೆ. ಪ್ರೇತಗಳಲ್ಲಿ ಇವರಿಗೆ ಬಲು ನಂಬಿಕೆ. ಜಾನುವಾರುಗಳಿಗೆ ತೊಂದರೆಯಾದಾಗ ಗಾಚಿಗನೆಂಬ ಮಂತ್ರವಾದಿಯಲ್ಲಿ ನಿಮಿತ್ತಕೇಳುವುದು ಪರಿಹಾರದ ಮಾರ್ಗ.

ಇವರಲ್ಲಿ ಅಕ್ಷರಸ್ಥರು ಕಡಿಮೆ. ಸೇ. 3ರಷ್ಟು ಮಂದಿ ಮಾತ್ರ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಮಲೆನಾಡಿನ ಕೆಲವಡೆ ಇವರನ್ನು 'ಹುಟ್ಟಾಳು'ಗಳೆಂದು ಕರೆಯುವುದುಂಟು. **(ಎಮ್.ಆರ್.ಇ.)**

**ಹಸ್ತಿಮಲ್ಲ:** ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಗ್ರಂಥ ರಚಿಸಿದ ಜೈನಕವಿ. ಉಪಲಬ್ಧ ಕೃತಿಗಳಲ್ಲಿ ಮೈಥಿಲೀಕಲ್ಯಾಣ ಅಥವಾ ಸೀತಾನಾಟಕ, ವಿಕ್ರಾಂತಕೌರವ, ಸುಭದ್ರಾಹರಣ ಅಥವಾ ಸುಭದ್ರಾನಾಟಿಕಾ, ಅಂಜನಾಪವನಂಜಯ ನಾಲ್ಕು ಸಂಸ್ಕೃತ ನಾಟಕಗಳು. ಆದಿಪುರಾಣ ಎಂಬ ಕಾವ್ಯ ಕನ್ನಡದಲ್ಲಿ ಅರ್ಜುನರಾಜನಾಟಕ, ಉದಯನರಾಜಕಾವ್ಯ, ಭರತರಾಜನಾಟಕ ಮೇಘೇಶ್ವರನಾಟಕ, ಪುರುಚರಿತ ಮತ್ತು ಶ್ರೀಪುರಾಣ ಎಂಬ ಕೃತಿಗಳನ್ನೂ ಈತನೇ ರಚಿಸಿರಬೇಕೆಂಬ ಅಭಿಪ್ರಾಯವಿದೆ. ಆದರೆ ಈ ಗ್ರಂಥಗಳು ದೊರೆತಿಲ್ಲ.

ಈತ ತನ್ನ ಗುರುಪರಂಪರೆಯಲ್ಲಿ ಮೂಲಸಂಘ (ಗಂಧಹಸ್ತಿ ಮತ್ತು ದೇವಾಗಮದ ಕರ್ತೃವಾದ) ಸಮಂತಭದ್ರ, ಶಿವಕೋಟಿ, ಶಿವಾಯನರನ್ನು, ವೀರಸೇನ, ಜಿನಸೇನ, ಗುಣಭದ್ರರನ್ನು ಸ್ಮರಿಸಿದ್ದಾನೆ. ಸುಭದ್ರಾನಾಟಿಕಾದಲ್ಲಿ ಒಬ್ಬ ಪ್ರಭಾಚಂದ್ರನ ನಿರ್ದೇಶವೂ ಇದೆ. ವತ್ಸಗೋತ್ರದ ಗೋವಿಂದಭಟ್ಟ ಇವನ ತಂದೆ. ಗೋವಿಂದಭಟ್ಟ ದೇವಾಗಮಸ್ತೋತ್ರವನ್ನು ಕೇಳಿ ಜೈನಧರ್ಮವನ್ನು ಸ್ವೀಕರಿಸಿದ. ಇವನಿಗೆ ಆರು ಜನ ಮಕ್ಕಳು. ಶ್ರೀಕುಮಾರಕವಿ, ಸತ್ಯವಾಕ್ಯ, ದೇವರವಲ್ಲಭ, ಉದಯಭೂಷಣ, ಹಸ್ತಿಮಲ್ಲ ಮತ್ತು ವರ್ಧಮಾನ. ಇವರೆಲ್ಲರೂ ಕವಿಗಳೇ. ಹಸ್ತಿಮಲ್ಲನಿಗೆ ಕರ್ನಾಟಕದ ಪಾಂಡ್ಯ ದೊರೆಯೊಬ್ಬನ ಆಶ್ರಯವಿದ್ದಂತೆ ತಿಳಿಯುತ್ತದೆ. ಸರಣ್ಯಾಪುರದಲ್ಲಿ ಪಾಂಡ್ಯರಾಜನ ಮದೋನ್ಮತ್ತ ಆನೆಯನ್ನು ಅಂಕಿತದಲ್ಲಿ ತಂದದ್ದರಿಂದ ಇವನಿಗೆ ಹಸ್ತಿಮಲ್ಲ ಎಂಬ ಹೆಸರಾಯಿತೆಂದು ತಿಳಿಯುತ್ತದೆ. ಇವನು ಮೊದಲಿಗೆ ತಮಿಳುಪ್ರದೇಶದಲ್ಲಿದ್ದು ಮುಂದೆ ಕನ್ನಡನಾಡಿನಲ್ಲಿ ಬಂದು ನೆಲಸಿರಬೇಕು.

ಹಸ್ತಿಮಲ್ಲನಿಗೆ ಪಾರ್ಶ್ವಪಂಡಿತನೆಂಬ ಪುತ್ರನಿದ್ದ. ಅವನು ಉತ್ತಮ ಧರ್ಮನಿಷ್ಠ ಮತ್ತು ಪಂಡಿತ. ಕಾರಣಾಂತರದಿಂದ ಹೊಯ್ಸಳರಾಜ್ಯದಲ್ಲಿನ ಛತ್ರತ್ರಯಪುರಿಯಲ್ಲಿ (ಹಳೇಬೀಡು ?) ಬಂದು ನೆಲಸಿದ. ಅವನಿಗೆ ಮೂವರು ಮಕ್ಕಳು–ಚಂದ್ರಪ, ಚಂದ್ರನಾಥ ಮತ್ತು ವೈಜಯ್ಯ. ಚಂದ್ರನಾಥ ಹೇಮಾಚಲದಲ್ಲಿ (ಪೊನ್ನೂರು ?) ಬಂದು ನಿಂತ. ಉಳಿದವರು ಬೇರೆ ಕಡೆಗೆ ಹೋದರು. ಪ್ರತಿಷ್ಠಾತಿಲಕವನ್ನು ರಚಿಸಿದ ಬ್ರಹ್ಮಸೂರಿ ಚಂದ್ರಪನ ಮೊಮ್ಮಗ.

ಹಸ್ತಿಮಲ್ಲನ ಕಾಲದ ವಿಷಯ ತಿಳಿಯದು. ಇವನ ಕನ್ನಡ ಆದಿಪುರಾಣ ಗುಣಭದ್ರನ (ಸು.897) ಅನಂತರದ್ದು. ಇವನು ಜಿನೇಂದ್ರಕಲ್ಯಾಣಾಭ್ಯುದಯದ ಕರ್ತೃವಾದ ಅಯ್ಯಪಾರ್ಯನಿಗಿಂತ (ಸು. 1319) ಮುಂಚಿನವನು. ಆದ್ದರಿಂದ ಇವನು ಸು. 897 ಮತ್ತು 1319 ಇವುಗಳ ಮಧ್ಯಕಾಲದಲ್ಲಿ ಆಗಿಹೋಗಿರಬಹುದು. ಪ್ರಾಕೃತ–ಸಂಸ್ಕೃತ ಭಾಷೆಗಳ ಮೇಲಿನ ಇವನ ಪ್ರಭುತ್ವ ಇವನ ಸಂಸ್ಕೃತ ನಾಟಕಗಳಿಂದ ಕಂಡುಬರುತ್ತದೆ. ನಾಟಕಕಾರನಾಗಿ ದಿಗಂಬರ ಜೈನಕವಿಗಳಲ್ಲಿ ಇವನಿಗೆ ಅದ್ವಿತೀಯ ಸ್ಥಾನವಿದೆ. **(ಎ.ಎನ್.ಯು.)**

**ಹಳಕಟ್ಟಿ, ಪಿ.ಜಿ.:** 1880–1964. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಗಳ ಏಳಿಗೆಗಾಗಿ ದುಡಿದ ಹೆಸರಾಂತ ಸಂಶೋಧಕರು, ಸಂಪಾದಕರು. ಹಳಕಟ್ಟಿ ಫಕೀರಪ್ಪ ಗುರುಬಸಪ್ಪ ಇವರ ಪೂರ್ಣ ಹೆಸರು. 1880 ಜುಲೈ 2ರಂದು ಧಾರವಾಡದಲ್ಲಿ ಜನಿಸಿದರು. ತಂದೆ ಗುರುಬಸಪ್ಪನವರಿಂದ ಇವರಿಗೆ ವಚನಸಾಹಿತ್ಯದ ಬಗ್ಗೆ ವಿಶೇಷ ಅಭಿರುಚಿ ಹುಟ್ಟಿತು. ಬಿ.ಎ. ಮತ್ತು ಎಲ್‌ಎಲ್.ಬಿ ಪದವಿಗಳನ್ನು ಪಡೆದು ಬಿಜಾಪುರದಲ್ಲಿ ನೆಲೆನಿಂತು ವಕೀಲಿ ವೃತ್ತಿಯನ್ನು ಆರಂಭಿಸಿದರು. ಶಿಕ್ಷಣ ಸಂಸ್ಥೆ, ಸಹಕಾರಿ ಸಂಸ್ಥೆಗಳ ಏಳ್ಗೆಗಾಗಿ ದುಡಿದರು. ಸಾಮಾಜಿಕ ಸೇವೆಯ ಜೊತೆಗೆ ಸಾಹಿತ್ಯದ ಸೇವೆಗೂ ತೊಡಗಿದರು. ವಚನಸಾಹಿತ್ಯವನ್ನು ಸಂಶೋಧಿಸಿ ಬೆಳಕಿಗೆ ತರುವ ಉದ್ದೇಶದಿಂದ 1926ರಲ್ಲಿ ಶಿವಾನುಭವ ಎಂಬ ಪತ್ರಿಕೆಯನ್ನು ಆರಂಭಿಸಿದರು. 1928ರಲ್ಲಿ ನವ ಕರ್ನಾಟಕ ವಾರಪತ್ರಿಕೆಯೊಂದನ್ನೂ ಆರಂಭಿಸಿದರು.

ಬಿಜಾಪುರದ ವೀರಶೈವ ಶಿಕ್ಷಣ ಫಂಡ್, ಸಿದ್ಧೇಶ್ವರ ಧರ್ಮಾದಾಯ ಶಿಕ್ಷಣ ಫಂಡ್, ಜಿಲ್ಲಾ ವೀರಶೈವ ವಿದ್ಯಾವರ್ಧಕ ಸಂಘ, ಸಿದ್ಧೇಶ್ವರ ಮಾಧ್ಯಮಿಕ ಶಾಲೆ ಮುಂತಾದುವುಗಳ ಸ್ಥಾಪನೆಗೆ ಇವರು ಕಾರಣರಾದರು. ಬಿಜಾಪುರ ನಗರಸಭೆಯ ಸ್ಕೂಲ್ ಬೋರ್ಡಿನ ಅಧ್ಯಕ್ಷರೂ ಮುಂಬಯಿ ಸರ್ಕಾರದ ಪ್ರಾಥಮಿಕ ಶಿಕ್ಷಣ ಸಮಿತಿ, ಕನ್ನಡ ಪಠ್ಯಪುಸ್ತಕ ಸಮಿತಿ, ಮುಂಬಯಿ ವಿಶ್ವವಿದ್ಯಾಲಯದ ಸೆನೆಟ್, ಧಾರವಾಡದ ಕನ್ನಡ ಸಂಶೋಧನ ಮಂಡಲಿಗಳಲ್ಲಿಯೂ ಸದಸ್ಯರಾಗಿದ್ದರು.

ಶಿವಾನುಭವ ಧಾರ್ಮಿಕ ವಿಚಾರ ವೇದಿಕೆಯಾಗಿ ಸು. 40 ವರ್ಷಗಳ ಕಾಲ ನಡೆಯಿತು. ಎಂಥ ತೊಡಕು, ಕಷ್ಟನಷ್ಟ ಬಂದರೂ ಸಂಪಾದಕತ್ವ ವಹಿಸಿದ ಹಳಕಟ್ಟಿಯವರು ಪತ್ರಿಕೆಯನ್ನು ನಡೆಸಿಕೊಂಡು ಹೋದರು. ಮೊದಲು ತ್ರೈಮಾಸಿಕವಾಗಿದ್ದ ಪತ್ರಿಕೆ ಅನಂತರದ ಕಾಲದಲ್ಲಿ ಮಾಸಿಕವಾಗಿ ಮಾರ್ಪಟ್ಟಿತು. ಧರ್ಮಕ್ಕೆ ಸಂಬಂಧಿಸಿದ ಹಲವು ಲೇಖನಗಳು ಶಿವಾನುಭವದಲ್ಲಿ ಬೆಳಕು ಕಂಡವು. ಬಿಜಾಪುರ ಜಿಲ್ಲೆ ಹಾಗೂ ಇನ್ನಿತರ ಕಡೆಗಳಲ್ಲಿನ ಹಲವು ಅಪ್ರಕಟಿತ ತಾಡವೋಲೆಗರಿಗಳನ್ನು ಸಂಗ್ರಹಿಸಿ ಸಂಶೋಧನೆ ನಡೆಸಿ ವಚನಗಳನ್ನು ಸಾಮಾನ್ಯರಿಗೆ ತಿಳಿಯುವ ಹಾಗೆ ಟೀಕೆ–ಟಿಪ್ಪಣಿ

ಸಹಿತ ಹಳಕಟ್ಟಿಯವರು ಪ್ರಕಟಿಸಿದರು. ಮೂಲಗ್ರಂಥ, ಟೀಕಾ ಗ್ರಂಥ, ಸ್ವತಂತ್ರ ಗ್ರಂಥ, ಪಠ್ಯ ಪುಸ್ತಕ, ಗದ್ಯಗ್ರಂಥ, ಐತಿಹಾಸಿಕ ಗ್ರಂಥ, ಪದ್ಯಗ್ರಂಥ, ಧಾರ್ಮಿಕ ಪುರುಷರ ಚರಿತ್ರೆ ಮೊದಲಾದ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಟ್ಟು 165ಕ್ಕೂ ಹೆಚ್ಚು ಗ್ರಂಥಗಳನ್ನು ಬೆಳಕಿಗೆ ತಂದರು. ದೇವರ ದಾಸಿಮಯ್ಯ, ಪ್ರಭುದೇವ, ಬಸವಣ್ಣ, ಮಹಾದೇವಿಯಕ್ಕ ಮೊದಲಾದವರ ವಚನಗಳನ್ನಲ್ಲದೆ ಅಂಬಿಗರ ಚೌಡಯ್ಯ, ಉರಿಲಿಂಗಪೆದ್ದಿ, ಗೋರಕ್ಷ, ಮಾಚಿದೇವ, ಮಾದಾರ ಚೆನ್ನಯ್ಯ, ತಿಮ್ಮಬ್ಬೆ, ಲಿಂಗಮ್ಮ, ಸತ್ಯಕ್ಕ ಮೊದಲಾದ ಹಲವು ವಚನಕಾರರ ವಚನಗಳನ್ನು ಬೆಳಕಿಗೆ ತಂದ ಶ್ರೇಯಸ್ಸು ಇವರದು. ವಿಷಯಗಳನ್ನು ವಿಂಗಡಿಸಿ ಸುಸಂಬದ್ಧ ರೀತಿಯಲ್ಲಿ ಸಂಗ್ರಹಿಸಿ ಪ್ರಕಟಿಸುವ ಜಾಣ್ಮೆ ಹಳಕಟ್ಟಿಯವರಿಗಿತ್ತು. ಸಟೀಕಾತ್ಮಕವಾಗಿ ಶೂನ್ಯಸಂಪಾದನೆಯ ಪೂರ್ಣ ಪ್ರತಿಯನ್ನು ಇವರು ಪ್ರಕಟಿಸಿದರು. ಎಂಟು ಭಾಗಗಳಲ್ಲಿ ಹರಿಹರದೇವನ ನೂರಿಪ್ಪತ್ತನಾಲ್ಕು ರಗಳೆಗಳನ್ನೂ ಷಟ್‌ಸ್ಥಳಸಿದ್ಧಾಂತ ಸೂತ್ರ, ಶಿವಾನುಭವ ಶಬ್ದಕೋಶದಂಥ ಪುಸ್ತಕಗಳನ್ನೂ ಪ್ರಕಟಿಸಿದರು. ವೀರಶೈವರ ಇತಿಹಾಸ ರಚನೆಗೆ ಉಪಯುಕ್ತವಾಗುವ ಸಾಮಗ್ರಿಯನ್ನು ಸಂಗ್ರಹಿಸುವುದರಲ್ಲಿ ಇವರಿಗೆ ವಿಶೇಷ ಆಸಕ್ತಿಯಿತ್ತು. ಹಲವು ಶಿವಶರಣರು ಹಾಗೂ ಮಠಾಧೀಶರು ಮೊದಲಾದವರ ಚರಿತ್ರೆಗಳನ್ನೂ ಇವರು ಹೊರತಂದರು. ಇವರು ಪ್ರಕಟಿಸಿದ ವಚನಶಾಸ್ತ್ರಸಾರ ಸು. 60 ವರ್ಷಗಳ ಸಾರಸ್ವತ ದಾಸೋಹದ ಫಲ.

ಇವರು 1926ರಲ್ಲಿ ಬಳ್ಳಾರಿಯಲ್ಲಿ ನಡೆದ 12ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1928ರ ಜೂನ್ ತಿಂಗಳಲ್ಲಿ ನಡೆದ 3ನೆಯ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಇವರ ಸಾಹಿತ್ಯ ಸೇವೆಯನ್ನು ಮೆಚ್ಚಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪದವಿಯನ್ನು ಕೊಟ್ಟು ಗೌರವಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಸನ್ಮಾನಿಸಿದೆ. ಬ್ರಿಟಿಷ್ ಸರ್ಕಾರದಿಂದ ಇವರಿಗೆ ರಾವ್‌ಬಹದ್ದೂರ್ ಹಾಗೂ ರಾವ್‌ಸಾಹೇಬ್ ಪ್ರಶಸ್ತಿ ದೊರಕಿದ್ದುವು. ವಚನಶಾಸ್ತ್ರಪ್ರವೀಣ, ವಚನಶಾಸ್ತ್ರ ಪಿತಾಮಹ ಎಂಬಂಥ ಗೌರವಗಳಿಗೂ ಇವರು ಪಾತ್ರರಾಗಿದ್ದರು. ಇವರು 1964 ಜೂನ್ 29ರಂದು ನಿಧನ ಹೊಂದಿದರು. (ಬಿ.ಬಿ.ಎಚ್.)

**ಹಳದೀಪುರ:** ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಒಂದು ಪ್ರಾಚೀನ ಸ್ಥಳ. ಜಿಲ್ಲೆಯ ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಂಚಿಗೆ ಸೇರಿದಂತಿರುವ ಈ ಊರು ಹೊನ್ನಾವರ ಮತ್ತು ಕುಮಟಗಳ ನಡುವೆ ಹೊನ್ನಾವರದಿಂದ 13 ಕಿಮೀ ದೂರದಲ್ಲಿದೆ. ಜನಸಂಖ್ಯೆ 10,132. ಹೊನ್ನಾವರ ತಾಲ್ಲೂಕು ಕೇಂದ್ರವಾಗುವ ಮೊದಲು ಇದೇ ಮುಖ್ಯ ಕೇಂದ್ರವಾಗಿತ್ತು. 1801ರಲ್ಲಿ ಇದನ್ನು ಹಾದಿಪುರ ಹಾಗೂ ಹಾಂಗ್‌ಟೌನ್ ಎಂದು ಕರೆಯುತ್ತಿದ್ದರು. 1492ರಲ್ಲಿ ಹಂದಿಕಾಂಡ ಎಂಬುದಾಗಿ ಕರೆಯುತ್ತಿದ್ದರೆನ್ನಲಾಗಿದೆ. ಈ ಊರು ದೇವಮಂದಿರಗಳ ಊರು. ಇಲ್ಲಿ ಶಂಕರನಾರಾಯಣ, ಚಂಡೇಶ್ವರ, ಗೋಪಾಲಕೃಷ್ಣ, ಗಣಪತಿ, ವೆಂಕಟೇಶ್ವರ, ಮುಖ್ಯಪ್ರಾಣ ಹಾಗೂ ಸುಂಕದ ಕಟ್ಟೆ ಗಣಪತಿ, ಸಾಲೇಕೇರಿ ಚನ್ನಕೇಶವ, ಮಾರಿಕಾಂಬ ಮೊದಲಾದ ದೇವಾಲಯಗಳಿವೆ.

ಅಗ್ರಹಾರದಲ್ಲಿನ ಶಂಕರನಾರಾಯಣ ದೇವಾಲಯದಲ್ಲಿರುವ ಲಿಂಗಕ್ಕೆ ಪೂಜೆ ನಡೆಯುತ್ತದೆ. ಚಾಳುಕ್ಯ ಶೈಲಿಯ ಗೋಪಾಲಕೃಷ್ಣನನ್ನು ಗ್ರಾಮದೇವತೆಯಾಗಿ ಪರಿಗಣಿಸಲಾಗಿದೆ. ಇಡಗುಂಜಿ ಸಭಾಹಿತರಿಗೆ ಸೇರಿದ ಅಗ್ರಹಾರದ ಗಣಪತಿ ಮೂರ್ತಿಯನ್ನು ಬಸವರಾಜದುರ್ಗದಿಂದ ತರಿಸಲಾಗಿದೆ. ಪರ್ವತಗಾಳಿ ಮಠಕ್ಕೆ ಸೇರಿದ ಲಕ್ಷ್ಮೀವೆಂಕಟೇಶ್ವರ ದೇವಾಲಯ ಸು. 200 ವರ್ಷಗಳಷ್ಟು ಹಳೆಯದೆನ್ನಲಾಗಿದೆ. ಇದರ ಎದುರುಗಿರುವ ಗೋಪಿನಾಥ ಮತ್ತು ವೆಂಕಟೇಶ ಮಂದಿರ ಸು. 250 ವರ್ಷಗಳ ಹಿಂದಿನದೆನ್ನುವರು. ಇಲ್ಲಿನ ಶಿಲಾಶಾಸನ ಹಾಗೂ ಕಾವಿಕಲೆಯ ಕುಶಲ ಚಿತ್ರ ದಶಾವತಾರಕ್ಕೆ ಸಂಬಂಧಿಸಿದ್ದಾಗಿವೆ. ಇಲ್ಲಿ ನಡೆಯುವ ವಾರ್ಷಿಕ ಜಾತ್ರೆಗಳಿಗೆ ಸುತ್ತಲಿನ ಹೆಚ್ಚು ಮಂದಿ ಸೇರುತ್ತಾರೆ. ಇಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಪಲ್ಲವ ಗೋಪಾಲದೇವನಿಗೆ ಸೇರಿದ ಒಂದು ಹಳೆಯ ಶಾಸನವಿದೆ. ಸು. 1079ರಲ್ಲಿ ಹೊನ್ನಾವರವನ್ನು ಆಳುತ್ತಿದ್ದ ಚಾಂಡವರಶಾಖೆಯ ಕದಂಬದೇವನ ಶಾಸನ ಇಲ್ಲಿನ ಚಂದ್ರಕೇಶ್ವರ ದೇವಾಲಯದ ಕಂಬದಲ್ಲಿದೆ. ಬಿಳಿಗಿಯ ನರಸಪ್ಪ ನಾಯಕನಿಗೂ ಚೆನ್ನಭೈರಾದೇವಿಗೂ ನಡೆದ ಯುದ್ಧದ ವಿಚಾರ 1573ರ ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ. 1492ರ ಗೇರುಸೊಪ್ಪೆಯ ದೇವರಸ ಒಡೆಯನ ಒಂದು ಶಾಸನ ದೊರಕಿದ್ದು ಇವುಗಳಿಂದ ನಡೆದ ಯುದ್ಧ ಮತ್ತು ಯುದ್ಧದಲ್ಲಿ ತೀರಿಕೊಂಡವರ ವಿಷಯ ತಿಳಿದುಬರುತ್ತದೆ. ಇಲ್ಲಿನ ಮಾರಿಕಾಂಬ ದೇವಾಲಯ ಶಿಖರವನ್ನೊಳಗೊಂಡಿದೆ. ಹಳೆಯ ಮಸೀದಿಯೊಂದಿದೆ. ಕೆಳದಿ ಅರಸ ಸ್ಥಾಪಿಸಿದನೆನ್ನುವ ಬಸವರಾಜನಾಯಕ ಅಗ್ರಹಾರವಿದೆ. (ಎಸ್.ಎಚ್.ಇ.)

**ಹಳಿಯಾಳ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ ಮತ್ತು ಧಾರವಾಡ ತಾಲ್ಲೂಕುಗಳೂ ಉತ್ತರದಲ್ಲಿ ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕೂ ಪಶ್ಚಿಮದಲ್ಲಿ ಸುಪ, ದಕ್ಷಿಣದಲ್ಲಿ ಯಲ್ಲಾಪುರ ತಾಲ್ಲೂಕುಗಳೂ ಸುತ್ತುವರಿದಿವೆ. ದಾಂಡೇಲಿ, ಹಳಿಯಾಳ, ಮುರ್ತವಾಡ ಮತ್ತು ಸಾಂಬ್ರಾಣಿ ಹೋಬಳಿಗಳು. ಈ ತಾಲ್ಲೂಕಿನಲ್ಲಿ 110 ಗ್ರಾಮಗಳಿದ್ದು 2 ಪಟ್ಟಣಗಳಿವೆ. ವಿಸ್ತೀರ್ಣ 845.7 ಚ.ಕಿಮೀ. ಜನಸಂಖ್ಯೆ 1,05,851. ಇದರಲ್ಲಿ ನಗರವಾಸಿಗಳ ಸಂಖ್ಯೆ 25,501, ಗ್ರಾಮಾಂತರವಾಸಿಗಳ ಸಂಖ್ಯೆ 80,350.

ಈ ತಾಲ್ಲೂಕು ಸಣ್ಣ ಬೆಟ್ಟಗುಡ್ಡಗಳಿಂದಲೂ ಅರಣ್ಯಪ್ರದೇಶದಿಂದಲೂ ಕೂಡಿದೆ. ಇಲ್ಲಿನ ಅರಣ್ಯದಲ್ಲಿ ತೇಗ, ಹೊನ್ನೆ, ಕೆಂದಳ, ನಂದಿ, ಬೀಟೆ, ಮತ್ತಿ, ಜಂಬೆ, ಶ್ರೀಗಂಧ, ನೀಲಗಿರಿ, ಬೆತ್ತ ಮತ್ತು ಬಿದಿರು ಬೆಳೆಯುತ್ತವೆ. ಗೋಂದು, ಜೇನು, ಸೀಗೆಕಾಯಿ, ಕಾಡುಮೆಣಸು, ಗಿಡಮೂಲಿಕೆಗಳು-ಇವು ಅರಣ್ಯೋತ್ಪನ್ನಗಳು. ಹುಲಿ, ಆನೆ, ಕರಡಿ, ಕಾಡುಕೋಣ, ಚಿಗರೆ, ಚಿರತೆ ಮತ್ತು ವಿವಿಧ ಬಗೆಯ ಹಾವುಗಳನ್ನು ಇಲ್ಲಿನ ಅರಣ್ಯಪ್ರದೇಶದಲ್ಲಿ ಕಾಣಬಹುದು. ಈ ತಾಲ್ಲೂಕಿನಲ್ಲಿ ಒಟ್ಟು ಅರಣ್ಯ ಪ್ರದೇಶ 59.539 ಹೆಕ್ಟೇರ್‌ಗಳು ದಾಂಡೇಲಿ ಅಭಯಾರಣ್ಯ 204 ಚ.ಕಿಮೀ. ಸಾಮಾನ್ಯವಾಗಿ ಇಲ್ಲಿನ ಹವೆ ತಂಪಾಗಿದ್ದರೂ ಸೆಕೆ ಹೆಚ್ಚು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 986.5 ಮಿಮೀ. ಕಾಳಿ **(ನೋಡಿ)** ತಾಲ್ಲೂಕಿನ ಮುಖ್ಯ ನದಿ. ಈ ನದಿ ಸುಪ ತಾಲ್ಲೂಕಿನಲ್ಲಿ ಹುಟ್ಟಿ ಈ ತಾಲ್ಲೂಕನ್ನು ಪಶ್ಚಿಮದಲ್ಲಿ ಪ್ರವೇಶಿಸಿ ದಾಂಡೇಲಿ ಮುಖಾಂತರ ತಾಲ್ಲೂಕಿನ ವಾಯವ್ಯದಿಂದ ಆಗ್ನೇಯಾಭಿಮುಖವಾಗಿ ಬೊಮ್ಮನಹಳ್ಳಿಯವರೆಗೂ ಹರಿದು ಅನಂತರ ದಕ್ಷಿಣಾಭಿಮುಖವಾಗಿ ಸ್ವಲ್ಪ ದೂರ ಪ್ರವಹಿಸಿ ಮುಂದೆ ಪಶ್ಚಿಮಾಭಿಮುಖವಾಗಿ ತಾಲ್ಲೂಕಿನ ಗಡಿಯಾಗಿ ಹರಿಯುವುದು. ಇದರ ಉಪನದಿ ತಟ್ಟಿಹಳ್ಳ ತಾಲ್ಲೂಕಿನ ಒಳಗೆ ಉತ್ತರದಿಂದ ಆಗ್ನೇಯಾಭಿಮುಖವಾಗಿ ಹರಿದು ಮುಂದೆ ತಾಲ್ಲೂಕಿನ ದಕ್ಷಿಣದಲ್ಲಿ ಗಡಿಯಾಗಿ ಪಶ್ಚಿಮಾಭಿಮುಖವಾಗಿ ಸ್ವಲ್ಪ ದೂರ ಹರಿದು ಕಾಳಿ ನದಿಯನ್ನು ಸೇರಿಕೊಳ್ಳುವುದು.

ತಾಲ್ಲೂಕಿನಲ್ಲಿ ಸು. 17,302 ಹೆಕ್ಟೇರ್ ಭೂಪ್ರದೇಶ ಸಾಗುವಳಿಗೆ ಯೋಗ್ಯವಾಗಿದೆ; 4,480 ಹೆಕ್ಟೇರ್ ಬಂಜರುಭೂಮಿ ಇದೆ. ಸು. 4,000 ಹೆಕ್ಟೇರ್ ಭೂಮಿ ನೀರಾವರಿ ಸೌಲಭ್ಯ ಪಡೆದಿದೆ. ಬತ್ತ ತಾಲ್ಲೂಕಿನ ಮುಖ್ಯ ಬೆಳೆ. ರಾಗಿ, ಜೋಳ, ದ್ವಿದಳ ಧಾನ್ಯಗಳನ್ನೂ ಕಬ್ಬನ್ನೂ ಬೆಳೆಯುತ್ತಾರೆ. ಹುಲ್ಲುಗಾವಲೂ ಸಾಕಷ್ಟಿದ್ದು ತಾಲ್ಲೂಕಿನಲ್ಲಿ ಪಶುಸಂಗೋಪನೆ ಇದೆ. ಮತ್ಸ್ಯೋದ್ಯಮ ಸಾಮಾನ್ಯ.

ಈ ತಾಲ್ಲೂಕು ಕೈಗಾರಿಕೆಯಲ್ಲೂ ಮುಂದುವರಿಯುತ್ತಿದೆ. 34 ಸಣ್ಣ ಪ್ರಮಾಣದ ಮತ್ತು ಗ್ರಾಮಾಂತರ ಕೈಗಾರಿಕೆಗಳೂ ಇದ್ದವು. ಈ ತಾಲ್ಲೂಕಿನ ದಾಂಡೇಲಿಯಲ್ಲಿ ಕಾಗದದ ಕಾರ್ಖಾನೆ, ಪ್ಲೈವುಡ್, ಚಿಪ್‌ಬೋರ್ಡ್, ಫೆರೊ–ಮ್ಯಾಂಗನೀಸ್ ಮುಂತಾದವುಗಳ ಕಾರ್ಖಾನೆಗಳಿವೆ. ಮರ ಕೊಯ್ಯುವ ಕಾರ್ಖಾನೆಗಳಿವೆ. ಬಿದಿರಿನ ಗೃಹ ಕೈಗಾರಿಕೆಯೂ ಇದೆ.

ತಾಲ್ಲೂಕಿನ ಕೈಗಾರಿಕೆ ಮತ್ತು ವ್ಯಾಪಾರ ವಾಣಿಜ್ಯಾಭಿವೃದ್ಧಿಗೆ ಸಹಕಾರಿಯಾಗಿ ಇಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಕೃಷಿ ಸಾಲ ನೀಡಿಕೆ ಸಂಘಗಳಿವೆ. ವಿದ್ಯುತ್, ಅಂಚೆ, ತಂತಿ, ದೂರವಾಣಿ, ಶಾಲಾಕಾಲೇಜುಗಳೂ ಆಸ್ಪತ್ರೆ, ಔಷಧಾಲಯ ಮುಂತಾದುವುಗಳ ಸೌಲಭ್ಯಗಳಿವೆ. ಜಿಲ್ಲಾ ಹೆದ್ದಾರಿ ಮತ್ತು ತಾಲ್ಲೂಕು ರಸ್ತೆಗಳಿದ್ದು ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕಗಳಿವೆ. ದಾಂಡೇಲಿಗೆ ರೈಲು ಸಂಪರ್ಕವಿದ್ದು, ದಾಂಡೇಲಿ–ಅಳವಾರ–ಲೋಂಡಾ ರೈಲುಮಾರ್ಗ ಇಲ್ಲಿಯ ಕೈಗಾರಿಕೆಯ ಅಭಿವೃದ್ಧಿಗೆ ಸಹಾಯಕವಾಗಿದೆ. ಕಾಳೀನದಿ ಯೋಜನೆಯ ಕೇಂದ್ರವಾಗಿ ಅಂಬಿಕಾನಗರ ಕಾಲಕಾಲಕ್ಕೆ ವಿಸ್ತರಿಸುತ್ತಿದೆ (ಜನಸಂಖ್ಯೆ, 4,848). ದಾಂಡೇಲಿಯ ಸುತ್ತಲಿನ ಕೆಲವು ಮುಖ್ಯ ಆಕರ್ಷಣೆಗಳಲ್ಲಿ ಕವಲಾ ಗುಹೆಗಳು, ಮಿಂಚೊಳ್ಳಿ ಜಲಪಾತ, ನಾಗಝರಿ ಕಣಿವೆ, ಸಿಂಥರಿ ರಾಕ್ಸ್, ಸೈಕ್ಸ್ ಪಾಯಿಂಟ್‌ನ ಸುಂದರನೋಟ ಇವುಗಳನ್ನು ಹೆಸರಿಸಬಹುದು. ತಾಲ್ಲೂಕು ಪ್ರಕೃತಿದತ್ತ ಸೌಂದರ್ಯಕ್ಕೆ ಹೆಸರಾಗಿದೆ.

ಹಳಿಯಾಳ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಯಲ್ಲಾಪುರದ ಉತ್ತರಕ್ಕೆ 40 ಕಿಮೀ ಅಂತರದಲ್ಲೂ ಕಾರವಾರದಿಂದ 144 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 25,501.

ಈ ಪಟ್ಟಣ ಹೆದ್ದಾರಿಗಳಿಂದ ಸುತ್ತುವರಿದಿದೆ ಎನ್ನಬಹುದು. ಈ ಪಟ್ಟಣಕ್ಕೆ ಸಮೀಪದ ರೈಲ್ವೆ ನಿಲ್ದಾಣ ಅಳಣಾವರ. ಈ ಪಟ್ಟಣ ಒಂದು ವ್ಯಾಪಾರ ಕೇಂದ್ರ. ಪಟ್ಟಣದಲ್ಲಿ ವಿದ್ಯುತ್, ಅಂಚೆ, ತಂತಿ, ದೂರವಾಣಿ, ಆಸ್ಪತ್ರೆ, ಔಷಧಾಲಯ, ಶಾಲಾಕಾಲೇಜು, ಮತ್ತು ಬ್ಯಾಂಕ್ ಮುಂತಾದ ಸೌಲಭ್ಯಗಳಿವೆ.

ಹಳಿಯಾಳ ಕೋಟೆಯ ಆವಾರದಲ್ಲಿರುವ ಶಿಲಾಶಾಸನದಲ್ಲಿ (ಸು. 800) ಈ ಊರಿನ ಹೆಸರು ಪಿಲ್ಲಿಯಾಳ ಎಂದಿದೆ. ಇದರ ಆಧುನಿಕ ರೂಪವೇ ಹಳಿಯಾಳ. ಈ ಪಟ್ಟಣದಲ್ಲಿ ಒಂದು ವಿಠೋಬ ಮಂದಿರ, ಈಶ್ವರನ ಗುಡಿ, ದತ್ತಾತ್ರೇಯ, ಹನುಮಂತ, ವೆಂಕಟರಮಣ ದೇವರ ಮಂದಿರಗಳಿವೆ. ಇಲ್ಲಿನ ದೇಮವ್ವಾಳ ದೇವಾಲಯದಲ್ಲಿ ದಸರವನ್ನು ಪಾಂಡವರ ವೇಷಗಳೊಂದಿಗೆ ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಸ್ಥಳದಲ್ಲಿ ಪಾಂಡವರಿಗೆ ಸಂಬಂಧಪಟ್ಟ ಅನೇಕ ಪೌರಾಣಿಕ ಕಥೆಗಳಿವೆ. ಹಿಂದೆ ಬಿಜಾಪುರಕ್ಕೆ ಅರೇಬಿಯದಿಂದ ಸುಪ್ತಮಾರ್ಗವಾಗಿ ತರಲಾಗುತ್ತಿದ್ದ ಕುದುರೆಗಳಿಗೆ ಹಳಿಯಾಳ ಶಿಬಿರಸ್ಥಳವಾಗಿತ್ತು. ಹಳಿಯಾಳದಲ್ಲಿ ಮರಾಠರು ಕಟ್ಟಿಸಿದ ಕೋಟೆಯಿದ್ದು ಈಗ ಅದು ಹಾಳಾಗಿದೆ. ಮರಾಠರ ಆಂದೋಲನ ಪೂರ್ವದಲ್ಲಿ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಇಲ್ಲಿ ವಾಸಿಸುತ್ತಿದ್ದ. ಈಗ ಇಲ್ಲಿ ಎರಡು ಪ್ರವೇಶ ಸ್ತಂಭಗಳನ್ನು ಕಾಣಬಹುದು. (ವಿ.ಎನ್.ಬಿ.;ಆರ್.ಜಿ.ಆರ್.)

**ಹಳೇಬೀಡು:** ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಒಂದು ಗ್ರಾಮ. ಇತಿಹಾಸಪ್ರಸಿದ್ಧ ಸ್ಥಳ. ಹೋಬಳಿ ಕೇಂದ್ರ. ಬೇಲೂರಿನ ಪೂರ್ವಕ್ಕೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 6,227.

ಈಗ ಇದು ಸಾಮಾನ್ಯ ಹಳ್ಳಿಯಾಗಿದ್ದರೂ ಲೋಕಪ್ರಸಿದ್ಧವಾದ ಕಲಾಕ್ಷೇತ್ರವಾಗಿ ಉಳಿದುಬಂದಿದೆ. ಮಲೆನಾಡಿನ ಅಂಚಿನಲ್ಲಿದ್ದು ಮಲೆನಾಡಿಗೂ ಬಯಲುಸೀಮೆಗೂ ಸಂಬಂಧವನ್ನು ಕಲ್ಪಿಸುವ ಆಯಕಟ್ಟಿನ ಸ್ಥಳದಲ್ಲಿ ಸುತ್ತಲೂ ಬೆಟ್ಟ ಗುಡ್ಡಗಳಿಂದಾವರಿಸಿ, ನಡುವೆ ವಿಶಾಲವಾದ ಕಣಿವೆಯಿರುವ ಈ ಸ್ಥಳದಲ್ಲಿ ಹತ್ತನೆಯ ಶತಮಾನದಲ್ಲಿಯೇ ಒಂದು ಸಣ್ಣ ಊರು ಹುಟ್ಟಿಕೊಂಡಿದ್ದಿರಬೇಕು. ಆಗ ಇಲ್ಲಿ ನಿರ್ಮಿಸಿದ ದೊಡ್ಡ ಕೆರೆಯಿಂದ ಇದಕ್ಕೆ ದೋರಸಮುದ್ರವೆಂಬ ಹೆಸರು ಬಂತು. ಈ ದೋರಸಮುದ್ರವನ್ನು ಕಟ್ಟಿದುದು ಯಾವಾಗ ಎನ್ನುವುದು ಖಚಿತವಾಗಿಲ್ಲ. ರಾಷ್ಟ್ರಕೂಟ ಚಕ್ರವರ್ತಿ ಧ್ರುವ ಗಂಗವಾಡಿಯನ್ನು ಗೆದ್ದಾಗ ಈ ಕೆರೆ ನಿರ್ಮಾಣವಾಗಿ ಧ್ರುವನದೋರ ಎಂಬ ಹೆಸರಿನಿಂದ ಇದಕ್ಕೆ ದೋರಸಮುದ್ರ

ಹೊಯ್ಸಳೇಶ್ವರ ದೇವಾಲಯ

ಎಂಬ ಹೆಸರು ಬಂತೆಂದು ಒಂದು ಅಭಿಪ್ರಾಯವಿದೆ. ಆದರೆ ಅಷ್ಟು ಹಿಂದೆಯೇ ಇಲ್ಲಿ ಊರು ಹುಟ್ಟಿಕೊಂಡಿದ್ದುದಕ್ಕೆ ಆಧಾರವಿಲ್ಲ. ಹತ್ತನೆಯ ಶತಮಾನದಲ್ಲಿ ಈ ಪ್ರಾಂತ ಗಂಗಬೂತುಗನ ಆಳಿಕೆಗೆ ಒಳಪಟ್ಟು ಅವನ ಅಕ್ಕ ಪಾಂಬಬ್ಬೆ ಮತ್ತು ಭಾವ ದೋರ ಇಲ್ಲಿ ಇದ್ದಂತೆ ಶಾಸನಗಳಿಂದ ತಿಳಿದುಬರುವುದರಿಂದ 950ಕ್ಕೆ ಮುಂಚೆ ಈ ದೋರ ಇಲ್ಲಿ ಕೆರೆಯನ್ನು ಕಟ್ಟಿಸಿ ತನ್ನ ಹೆಸರಿನಲ್ಲಿ ದೋರಸಮುದ್ರವೆಂಬ ಊರನ್ನೂ ನಿರ್ಮಿಸಿ ಇಲ್ಲಿಂದ ರಾಜ್ಯಭಾರ ಮಾಡಿರುವುದು ಹೆಚ್ಚು ಸಂಭವನೀಯ. ಆಗ ಇದು ಜೈನಯತಿಗಳ ವಾಸಸ್ಥಾನವೂ ಆಗಿತ್ತು. ಇಲ್ಲಿನ ಅತ್ಯಂತ ಪ್ರಾಚೀನ ಶಾಸನವೂ ಈ ಕಾಲಕ್ಕೆ ಸೇರಿದುದಾಗಿದ್ದು ಪಾಂಬಬ್ಬೆಯ ಗುರುಗಳ ಪರಂಪರೆಗೆ ಸೇರಿದ ಯತಿಯೊಬ್ಬರ ನಿಷಿಧಿಯಾಗಿದೆ. ಈ ಊರಿಗೆ 950ರ ವೇಳೆಗಾಗಲೇ ದ್ವಾರಾವತಿ ಎಂಬ ಹೆಸರೂ ಬಳಕೆಗೆ ಬಂದಿದ್ದುದಾಗಿ ಮತ್ತೊಂದು ಶಾಸನದಿಂದ ನಿರ್ಧರಿಸಬಹುದು. ಕದಂಬರ ಶಾಸನಗಳಲ್ಲಿ ಕಂಡುಬರುವ ತ್ರಿಪರ್ವತ ಹಳೇಬೀಡು ಆಗಿರಬೇಕೆಂಬ ವಿದ್ವಾಂಸರಾದ ಮೊರೇಸರ ಅಭಿಪ್ರಾಯಕ್ಕೆ ಆಧಾರವಿಲ್ಲ.

ಸೊಸೆವೂರಿನಲ್ಲಿದ್ದ ಹೊಯ್ಸಳರು ಚಾಳುಕ್ಯರ ಸಾಮಂತರಾಗಿ ರಾಜ್ಯ ವಿಸ್ತರಿಸುತ್ತ ಬಂದಂತೆ ಮಲೆನಾಡಿನಿಂದ ಬಯಲುಸೀಮೆಯ ಕಡೆಗೆ ತಮ್ಮ ನೆಲೆವೀಡನ್ನು ಬದಲಾಯಿಸಲು ಹವಣಿಸಿದಾಗ ವಿನಯಾದಿತ್ಯನಿಗೆ ದೋರಸಮುದ್ರ ಆಯಕಟ್ಟಿನ ನೆಲೆಯಾಗಿ ಕಂಡುದರಲ್ಲಿ ಆಶ್ಚರ್ಯವಿಲ್ಲ. ಆತ 1064ರಲ್ಲಿ ಕೆರೆಗೆ ತೂಬನ್ನಿಕ್ಕಿಸಿ ಊರನ್ನು ಅಭಿವೃದ್ಧಿಪಡಿಸಿದ. ಮುಂದೆ ಹೆಚ್ಚು ವಿಸ್ತಾರವಾಗಿ ಬೆಳೆದಂತೆ ಕೆರೆಯನ್ನು ವಿಸ್ತರಿಸಿ ಮತ್ತೊಂದು ತೂಬನ್ನು 1092ರಲ್ಲಿ ವಿನಯಾದಿತ್ಯ ನಿರ್ಮಿಸಿದಂತೆ ತಿಳಿದುಬರುತ್ತದೆ. ಒಂದನೆಯ ಬಲ್ಲಾಳ ಬೇಲೂರನ್ನೂ ವಿಷ್ಣುವರ್ಧನ ವಿಷ್ಣುಸಮುದ್ರವನ್ನೂ ನೆಲೆವೀಡುಗಳನ್ನಾಗಿ ಕಟ್ಟಿಸಿದರೂ ಈ ದೋರಸಮುದ್ರ ಅಥವಾ ದ್ವಾರಾವತೀ ಪುರವೇ ಹೊಯ್ಸಳ ವಂಶದ ಮುಖ್ಯ ನೆಲೆವೀಡಾಗಿ ಮುಂದುವರಿಯಿತು.

ವಿಸ್ತಾರವಾಗಿದ್ದ ದೋರಸಮುದ್ರದ ನಗರವನ್ನು ಬಳಸಿಕೊಂಡು ನಿಂತಿದ್ದ ಕೋಟೆ ಭದ್ರವಾದುದಾಗಿತ್ತು. ದೊಡ್ಡ ದೊಡ್ಡ ಗುಂಡುಗಳನ್ನು ಒಂದರ ಮೇಲೊಂದು ಪೇರಿಸಿ ಒಳಭಾಗದಿಂದ ಮಣ್ಣಿನ ಒತ್ತು ಕೊಟ್ಟಿದ್ದುದಲ್ಲದೆ

ಅಲ್ಲಲ್ಲಿ ಬತೇರಿಯಂತೆ ಗೋಡೆಯ ಮುಂಚಾಚಿಕೊಂಡಿತ್ತು. ಕೆಲವು ಕಡೆ ಆಳವಾದ ಅಗಳು ಕೋಟೆಯನ್ನು ರಕ್ಷಿಸಿಕೊಂಡಿತ್ತು. ಈ ಅಗಳಿನ ಆಳ ಕೆಲವು ಕಡೆ 50 ಅಡಿಗಳಷ್ಟು. ದೋರಸಮುದ್ರವಲ್ಲದೆ ಇನ್ನೂ ಕೆಲವು ಸಣ್ಣಪುಟ್ಟ ಕೆರೆಗಳಿದ್ದರೂ ವಿಸ್ತಾರವಾಗಿ ಬೆಳೆದ ನಗರಕ್ಕೆ ನೀರು ಸಾಲದೆ ಹೋಗಿರಬೇಕು. ಆದ್ದರಿಂದಲೇ ಯಗಚಿ ನದಿಯಿಂದ ಕಾಲುವೆಯನ್ನು ತೋಡಿ ಊರಿಗೆ ನೀರನ್ನು ಒದಗಿಸುವ ಏರ್ಪಾಡು ಆಗಿತ್ತು.

ಊರಿನ ನಡುವೆ ಇದ್ದು, ಬೆಣ್ಣೆಗುಡ್ಡಕ್ಕೆ ಹೊಂದಿಕೊಂಡಂತೆ ಪೂರ್ವದ ಕಡೆ ವಿಶಾಲವಾದ ಬಯಲಿನಲ್ಲಿ ಹೊಯ್ಸಳರ ಅರಮನೆಯಿತ್ತು. ಈಗಲೂ ಆ ಸ್ಥಳಕ್ಕೆ ಅರಮನೆಯ ಹೊಲ ಎಂದೇ ಹೆಸರಿದೆ. ಆ ಹೊಲದ ಬೇರೆ ಬೇರೆ ಭಾಗಗಳನ್ನು ಹಜಾರದ ಗುಂಡ್ಲು, ಲಾಯದ ಸಲಿಗೆ, ಆನೆಗುಂಡಿ, ಟಂಕಸಾಲೆ ಹೊಲ ಎಂದು ಮುಂತಾಗಿ ಕರೆಯುತ್ತಾರೆ. ಅರಮನೆ ಮತ್ತು ಅದರ ಭಾಗಗಳನ್ನು ಕಲ್ಲಿನ ಅಡಿಪಾಯದ ಮೇಲೆ ಮರದ ಕಂಬಗಳು, ಇಟ್ಟಿಗೆ ತುಂಡು ಕಲ್ಲುಗಳಿಂದ ಕಟ್ಟಿದ್ದಂತೆ ತೋರುತ್ತದೆ. ಇದು ಸಂಪೂರ್ಣವಾಗಿ ನಾಶವಾಗಿರುವುದರಿಂದ ಇದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. 80 ಮೀಗೂ ಹೆಚ್ಚು ಉದ್ದವಾಗಿದ್ದ ಅಡುಗೆ ಶಾಲೆ, ಸ್ನಾನದ ಮನೆಗಳಿದ್ದ ಕುರುಹನ್ನು ನೋಡಿದರೆ ಅರಮನೆ ತುಂಬ ವಿಶಾಲವಾಗಿಯೇ ಇದ್ದಿರಬೇಕು. ಈ ಅರಮನೆಯನ್ನು ಸುತ್ತುವರಿದ ಒಳಕೋಟೆಯೂ ದಪ್ಪ ಗುಂಡುಗಳಿಂದ ನಿರ್ಮಿತವಾಗಿದೆ. ಇದರ ಪೂರ್ವಕ್ಕೆ ಕೋಟೆಯ ಬಾಗಿಲು, ಈ ಬಾಗಿಲಿಗೆ ನೇರವಾಗಿ ಅನೇಕ ಜೈನಬಸದಿಗಳೂ ಈಶಾನ್ಯ ದಿಕ್ಕಿನಲ್ಲಿ ಪ್ರಸಿದ್ಧವಾದ ಹೊಯ್ಸಳೇಶ್ವರ ದೇವಾಲಯ, ಕೆರೆಗೆ ಸಮೀಪವಾಗಿ ಕೇದಾರೇಶ್ವರ ದೇವಾಲಯ, ಬೆಣ್ಣೆಗುಡ್ಡದ ಉತ್ತರಕ್ಕೆ ಈಗ ನಾಶವಾಗಿರುವ ಆದರೆ ಅತಿ ಶ್ರೇಷ್ಠವಾದ ಶಿಲ್ಪವನ್ನು ಹೊಂದಿದ್ದ ನಗರೇಶ್ವರ ಮತ್ತು ಪಂಚಲಿಂಗ ದೇವಾಲಯಗಳ ಸಮೂಹ, ಇವಲ್ಲದೆ ಶಾಸನಗಳಲ್ಲಿ ಹೆಸರಿಸಿರುವ ಆದರೆ ಈಗ ಇಲ್ಲವಾಗಿರುವ ಇನ್ನೂ ಅನೇಕ ದೇವಾಲಯಗಳು, ಬಸದಿಗಳಿಂದ ತುಂಬಿ ದ್ವಾರಾವತಿ ನಗರ ಹೊಯ್ಸಳರ ಕಾಲದಲ್ಲಿ ಅತಿವೈಭವದಿಂದ ವಿಜೃಂಭಿಸಿದ ನಗರವಾಗಿತ್ತು. ಕೋಟೆಯ ಒಳಭಾಗದಲ್ಲಿ ಮಾತ್ರವಲ್ಲದೆ ಅದರ ಸುತ್ತಲೂ ಊರು ಹಬ್ಬಿ ಈಗಿನ ನರಸೀಪುರ, ರಾಜನಸಿರಿಯೂರು, ಸಿದ್ಧಾಪುರ, ಹುಲಿಕೆರೆ ಮುಂತಾದ ಸುತ್ತಮುತ್ತಲ ಹಳ್ಳಿಗಳೆಲ್ಲ ಆ ದ್ವಾರಾವತಿಯ ಹರವುಗಳಾಗಿದ್ದುವು. ಪುಷ್ಪಗಿರಿಯ ಮೇಲೆ ಈಗ ಮಲ್ಲಿಕಾರ್ಜುನ ದೇವಾಲಯವೆನ್ನಿಸಿಕೊಂಡಿರುವ ಭವ್ಯವಾದ ಮಂದಿರ ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ಸುಂದರ ಜೈನಬಸದಿ. ಭೈರವನ ಗುಡ್ಡದಲ್ಲಿ ಇರುವ ವೀರಭದ್ರನ ದೇವಾಲಯ ಅದೇ ಕಾಲದ ದೇವಾಲಯ. ಹುಲಿಕೆರೆಯಲ್ಲಿರುವ ಕೊಳ ತನ್ನ 27 ಸುಂದರವಾದ ಕಿರುಮಂಟಪಗಳಿಂದ ಕೂಡಿ ಅಪರೂಪವಾದ ನಿರ್ಮಾಣವೆನ್ನಿಸಿದೆ.

ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಈ ಊರು ಅತ್ಯಂತ ವಿಸ್ತಾರವಾಗಿದ್ದು, ಸಂಪದ್ಭರಿತವಾಗಿದ್ದು ವೈಭವದ ಪರಾಕಾಷ್ಠೆಯನ್ನು ಮುಟ್ಟಿತ್ತು. ಆದರೆ 1310ರಲ್ಲಿ ಅಲಾಉದ್ದೀನನ ದಂಡನಾಯಕ ಮಲ್ಲಿಕ್ ಕಾಫರ್ ಈ ನಗರವನ್ನು ಮುತ್ತಿ ಬಲ್ಲಾಳನನ್ನು ಸೋಲಿಸಿ ಕೊಳ್ಳೆ ಹೊಡೆದಾಗ ತತ್ತರಿಸಿಹೋದ ಈ ಊರು ಮತ್ತೆ ಚೇತರಿಸಿಕೊಳ್ಳಲಾಗಲಿಲ್ಲ. ಮುಂದೆ ಬಲ್ಲಾಳ ಹನ್ನೆರಡು ವರ್ಷಗಳ ಕಾಲ ರಾಜ್ಯವಾಳಿದರೂ ಅವನು ಬೇರೆ ಬೇರೆ ಬೀಡುಗಳಲ್ಲಿ ನೆಲಸುತ್ತಿದ್ದುದರಿಂದ ದೋರಸಮುದ್ರ ತನ್ನ ಪೂರ್ವಸ್ಥಿತಿಗೆ ಮರಳದೆ ಶಿಥಿಲವಾಗುತ್ತ ಹೋಯಿತು. ಬಲ್ಲಾಳನ ಕಾಲದಲ್ಲಿಯೇ ಇದನ್ನು ಹಳೇಬೀಡು – ಎಂದರೆ ಹಿಂದಿನ ರಾಜಧಾನಿ ಎಂದು ಕರೆಯಲಾರಂಭಿಸಿದುದರಿಂದ ಮುಂದೆ ಅದಕ್ಕೆ ಹಳೇಬೀಡು ಎಂಬ ಹೆಸರೇ ನಿಂತುಹೋಯಿತು. ಜನ ದಿಕ್ಕಾಪಾಲಾಗಿ, ಇಲ್ಲಿನ ಭವ್ಯವಾದ ಕಟ್ಟಡಗಳನ್ನು ನೋಡಿಕೊಳ್ಳುವವರಿಲ್ಲದೆ ಅವುಗಳನ್ನುಳಿಸಿಕೊಂಡು ಬರಲೂ ಸಾಧ್ಯವಾಗದೆ ನೂರಾರು ಬಸದಿ, ದೇವಾಲಯಗಳು ನೆಲಸಮವಾದವು. ವಿಜಯನಗರದ ಕಾಲದಲ್ಲಿ ಇಲ್ಲಿನ ದೇವಾಲಯಗಳ ಸೌಂದರ್ಯದಿಂದ ಆಕರ್ಷಿತರಾಗಿ ಮುರಿದು ಬಿದ್ದುಹೋಗುತ್ತಿದ್ದ ದೇವಾಲಯಗಳಿಗೆ ಊರೆಕೊಟ್ಟು ನಿಲ್ಲಿಸಲು ನಡೆದ ಪ್ರಯತ್ನವೂ ಹೆಚ್ಚು ಫಲಕಾರಿಯಾಗಲಿಲ್ಲ. ಹೊಯ್ಸಳೇಶ್ವರ ದೇವಾಲಯ, ಜೈನಬಸದಿಗಳು, ವೀರಭದ್ರ ದೇವಾಲಯ ಮತ್ತು ಬಿದ್ದುಹೋಗಿದ್ದು ಈಚೆಗೆ ಪುನರ್ನಿರ್ಮಾಣಗೊಂಡ ಕೇದಾರೇಶ್ವರ ದೇವಾಲಯಗಳನ್ನು ಬಿಟ್ಟರೆ ಹೊಯ್ಸಳರ ಕಾಲದ ಅದರ ವೈಭವ ವಿಸ್ತಾರಗಳನ್ನು ಅಲ್ಲಿ ಹರಡಿರುವ ಅದರ ಅಸಂಖ್ಯಾತ ಅವಶೇಷಗಳಿಂದ ಮಾತ್ರ ಗುರುತಿಸಬಹುದು.

ಶಿಲಾಬಾಲಿಕೆಯರು ಹೊಯ್ಸಳೇಶ್ವರ ದೇವಾಲಯ

ಹಳೇಬೀಡಿನಲ್ಲಿ ಈಗ ಉಳಿದುಬಂದಿರುವ ದೇವಾಲಯಗಳಲ್ಲೆಲ್ಲ ಅತ್ಯುತ್ತಮವಾದುದೆಂದರೆ ಹೊಯ್ಸಳೇಶ್ವರ ದೇವಾಲಯ. ಅಷ್ಟೇ ಅಲ್ಲ, ಹೊಯ್ಸಳ ದೇವಾಲಯಗಳಲ್ಲಿಯೇ ಅಗ್ರಪಂಕ್ತಿಯಲ್ಲಿ ನಿಲ್ಲುವ, ಈಗ ಉಳಿದಿರುವ ಹೊಯ್ಸಳ ದೇವಾಲಯಗಳಲ್ಲಿಯೇ ಅತಿ ದೊಡ್ಡದಾದ ದೇವಾಲಯವಿದು. ಈ ದೇವಾಲಯವನ್ನು ನಿರ್ಮಿಸಿದ ವಿವರಗಳು ಅಲ್ಲಿನ ಶಾಸನಗಳಲ್ಲಿ ದೊರೆಯದೇ ಹೋದರೂ ಹಳೇಬೀಡಿನ ಸಮೀಪದ ಗಟ್ಟದಹಳ್ಳಿಯಲ್ಲಿರುವ ದೊಡ್ಡದೊಂದು ಶಾಸನದಿಂದ ಹೊಯ್ಸಳ

ವಿಷ್ಣುವರ್ಧನನ ಅಧಿಕಾರಿ ಕೇತುಮಲ್ಲ 1121ರ ಹೊತ್ತಿಗೆ ದೋರಸಮುದ್ರ ದಲ್ಲಿ ತನ್ನ ರಾಜನ ಹೆಸರಿನಲ್ಲಿ (ವಿಷ್ಣುವರ್ಧನ) ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಿಸಿದಂತೆ ತಿಳಿದುಬರುವುದರಿಂದ ಈ ದೇವಾಲಯ ವನ್ನು 1121ರ ಹೊತ್ತಿಗಾಗಲೇ ಕಟ್ಟಿಸಿದ್ದಿರಬೇಕು. ಆದರೂ ಇದಕ್ಕೆ ಮುಂದೆ ಕೆಲವು ಬೇರೆ ಬೇರೆ ಭಾಗಗಳನ್ನು ಒಂದನೆಯ ನರಸಿಂಹ, ಎರಡನೆಯ ಬಲ್ಲಾಳರ ಕಾಲದಲ್ಲಿಯೂ ಸೇರಿಸಿದಂತೆ ತಿಳಿದುಬರುತ್ತದೆ. ಈ ದೇವಾಲಯದ ದಕ್ಷಿಣ ಬಾಗಿಲುವಾಡದ ಮೇಲಿನ ಒಂದು ಶಾಸನ ದಿಂದ ಆ ಬಾಗಿಲನ್ನು ಒಂದನೆಯ ನರಸಿಂಹನ ಸೂತ್ರಧಾರಿ ಕೇದಾರೋಜನಿ ಗಾಗಿ ಕಾಳಿದಾಸಿಯು ಕಂಡರಿಸಿದುದಾಗಿ ತಿಳಿದುಬರುತ್ತದೆ. ಇದೇ ರೀತಿ



ಹೊಯ್ಸಳೇಶ್ವರ ದೇವಾಲಯದ ಒಂದು ಪಾರ್ಶ್ವ ನೋಟ

ಮತ್ತೊಂದು ಶಾಸನ ಪೂರ್ವದಿಕ್ಕಿನ ಬಾಗಿಲುವಾಡವನ್ನು ದೇಮೋಜನು ಮಾಡಿದನೆನ್ನುತ್ತದೆ. ಆದ್ದರಿಂದ ಪೂರ್ತಿಯಾಗಿ ತೆರೆದ ಮಂಟಪದಂತಿದ್ದ ನವರಂಗಗಳಿಗೆ ಬಾಗಿಲುವಾಡಗಳು, ಜಾಲಂಧ್ರಗಳು ನರಸಿಂಹನ ಕಾಲದಲ್ಲಿ ಸೇರಿಸಿರುವ ಕೈಸಾಲೆಯ ಎರಡು ಕಡೆಯೂ ಎರಡು ಚಿಕ್ಕ ಗುಡಿಗಳು ನಿರ್ಮಿತವಾಗಿರಬೇಕು. ಹಾಗೆಯೇ ದಕ್ಷಿಣದ ನಂದಿಮಂಟಪದ ಹಿಂದಿನ ಸೂರ್ಯನ ಗುಡಿಯೂ ಅನಂತರ ಕಟ್ಟಡವಾಗಿರುವಂತೆ ತೋರುತ್ತದೆ.

ಹೊಯ್ಸಳೇಶ್ವರ ದೇವಾಲಯ ಜೋಡಿ ದೇವಾಲಯ. ಬೇಲೂರಿನ ಚೆನ್ನಕೇಶವ ದೇವಾಲಯದ ವಿನ್ಯಾಸದಲ್ಲಿಯೇ ಇರುವ ಎರಡು ದೇವಾಲಯ ಗಳು ಒಂದರ ಪಕ್ಕದಲ್ಲಿ ಒಂದಿದ್ದು ಅವೆರಡರ ನವರಂಗಗಳನ್ನೂ ಒಂದು ಕೈಸಾಲೆಯ ಮೂಲಕ ಒಂದುಗೂಡಿಸಿ ಒಂದೇ ದೇವಾಲಯವೆಂಬ ಭಾವನೆ ಬರುವಂತೆ ಜೋಡಿಸಿದೆ. ಪೂರ್ತಿಯಾಗಿ ಗಟ್ಟಿಜಾತಿಯ ಬಳಪದ ಕಲ್ಲಿನಿಂದ ನಿರ್ಮಿತವಾಗಿ ಪೂರ್ವಾಭಿಮುಖವಾಗಿರುವ ಈ ಒಂದೊಂದು ದೇವಾಲಯದಲ್ಲಿಯೂ ನಕ್ಷತ್ರಾಕಾರದ ಗರ್ಭಗೃಹ, ಸುಕನಾಸಿ ಮತ್ತು ಚೌಕಾಕಾರದ, ಆದರೆ ಒಂದೊಂದು ಮುಖದ ಮಧ್ಯಭಾಗ ಮುಂಚಾಚಿ ದಂತಿರುವ, ನವರಂಗವಿದ್ದು ಇದರಿಂದ ಬೇರೆಯಾಗಿ ಮುಂದೆ ಒಂದೊಂದು ನಂದಿಮಂಟಪವಿದೆ. ದಕ್ಷಿಣದ ನಂದಿಮಂಟಪದ ಹಿಂಭಾಗದಲ್ಲಿ ಸೂರ್ಯನ ಗುಡಿಯೂ ನವರಂಗಗಳನ್ನು ಸೇರಿಸಿರುವ ಕೈಸಾಲೆಯ ಎರಡು ಕಡೆಗಳಲ್ಲಿಯೂ ಒಳಮುಖವಾಗಿ ಒಂದೊಂದು ಗುಡಿಯೂ ಉಂಟು. ಈ ದೇವಾಲಯ ತನ್ನದೇ ವಿನ್ಯಾಸವನ್ನು ಬಹುಮಟ್ಟಿಗೆ ಅನುಸರಿಸಿದ ಎತ್ತರವಾದ ಮತ್ತು ಅಗಲವಾದ ಜಗತಿಯ ಮೇಲಿದೆ. ನಕ್ಷತ್ರಾಕಾರದ ಗರ್ಭಗುಡಿಗಳಿಗೆ ಬಹುಶಃ ಹೊರಗೋಡೆಯು ಭದ್ರವಾಗಿರುವಂತೆ ಮಾಡಲೂ ಅದಕ್ಕೆ ಮತ್ತಷ್ಟು ಅಲಂಕರಣವನ್ನೊದಗಿಸಲೂ ಅವುಗಳ ಮೂರು ಕಡೆಯೂ ದೊಡ್ಡದಾದ ಎರಡು ಅಂತಸ್ತಿನ ಆಸರೆಮಂಟಪಗಳನ್ನು ಜೋಡಿಸಲಾಗಿದೆ. ಇವುಗಳನ್ನು ಅನಂತರದ ಕಾಲದಲ್ಲಿ ಜೋಡಿಸಿರುವುದು ಗೋಡೆಯ ಮೇಲಿನ ಕೆಲವು ಶಿಲ್ಪಗಳು ಮುಚ್ಚಿ ಹೋಗಿರುವುದರಿಂದ ಸ್ಪಷ್ಟಗೊಳ್ಳುತ್ತದೆ. ಗರ್ಭಗೃಹಗಳ ಮೇಲೆ ಗೋಪುರಗಳಿದ್ದುವೇ, ಇದ್ದರೆ ಯಾವ ಮಾದರಿಯಲ್ಲಿದ್ದುವು ಎಂಬುದನ್ನು ತಿಳಿಯಲು ಈಗ ಸಾಧ್ಯವಿಲ್ಲ. ಅವುಗಳ ಮೇಲೆ ಗೋಪುರಗಳಿದ್ದುದೂ ಅವು ನಕ್ಷತ್ರಾಕಾರದ ವಿನ್ಯಾಸದ ಲ್ಲಿಯೇ ಮೇಲೆದ್ದಿದ್ದುದೂ ಸಂಭವನೀಯ. ಒಂದೊಂದು ನವರಂಗದ ಮುಂದೆಯೂ ಒಂದೊಂದು, ಉತ್ತರ ದಕ್ಷಿಣದ ಪಕ್ಕದಲ್ಲಿ ಒಂದೊಂದು, ಹೀಗೆ ನಾಲ್ಕು ಬಾಗಿಲುವಾಡಗಳಿದ್ದು ನವರಂಗದ ಮುಂಭಾಗದ ಜಾಲಂಧ್ರಗಳು ಹೆಚ್ಚು ಸರಳವಾಗಿವೆ. ಆದರೆ ಅವುಗಳ ಹಿಂಭಾಗದ ಎರಡು ಮೂಲೆಗಳಿಗೂ ಸೇರಿದಂತಿರುವ ಭಾಗದ ಹೊರಗೋಡೆಗಳು ಹೆಚ್ಚು ದಪ್ಪವಾಗಿದ್ದು, ಅವುಗಳನ್ನು ಹಲವು ಮುಖಗಳಾಗುವಂತೆ ಕಚ್ಚುಕಚ್ಚಾಗಿ ಮಾಡಿದೆ. ದೇವಾಲಯವನ್ನು ಸುತ್ತುವರಿದಂತೆ ಅದರ ಬುಡದ ಭಾಗ ಒಂದರ ಮೇಲೊಂದರಂತೆ ಹಲವು ಅಡ್ಡಪಟಿಕೆಗಳಾಗಿ ವಿಂಗಡಣೆಗೊಂಡಿದೆ. ಅಲ್ಲಿಂದ ಮೇಲೆ ಉತ್ತರ, ದಕ್ಷಿಣ ಬಾಗಿಲುವಾಡಗಳವರೆಗಿನ ಹಿಂಭಾಗದ ಹಲವು ಮುಖಗಳಾಗಿ ಒಡೆದು ಮಡಿಕೆಗೊಂಡಿರುವ ಗೋಡೆಯಲ್ಲಿ ಒಂದೊಂದು ಮುಖವೂ ತನ್ನ ನೀಳತೆಯನ್ನು ಪ್ರದರ್ಶಿಸುವಂತಿದ್ದು ಅವುಗಳ ವಿನ್ಯಾಸ ವೈವಿಧ್ಯತೆ, ಒಂದೊಂದು ಮುಖವನ್ನೂ ಒಟ್ಟು ವಿನ್ಯಾಸಕ್ಕೆ ಹೊಂದಿಸಿರುವುದು, ನೀಳ ಅಡ್ಡ ವಿಭಾಗಗಳಲ್ಲಿರುವ ಸಾಮರಸ್ಯಗಳು ವಾಸ್ತುಕಲೆಯ ಪ್ರೌಢಿಮೆಯ ಹೆಗ್ಗುರುತು.

ಹಲವು ಮುಖಗಳಾಗಿ ಮಡಿಕೆಗೊಂಡ, ಹೊಯ್ಸಳ ದೇವಾಲಯಗಳ ಲ್ಲಿಯೇ ಅತ್ಯಂತ ವಿಸ್ತಾರವಾದ ಭಿತ್ತಿಪಟಲ ರೂವಾರಿಗಳಿಗೊಂದು ಸುಗ್ಗಿಯಾಯಿತು. ದೇವಾಲಯವನ್ನು ಸುತ್ತುವರಿದು ಬಂದಿರುವ 700 ಅಡಿಗೂ ಹೆಚ್ಚು ಉದ್ದವಾಗಿರುವ ಹಲವಾರು ಪಟ್ಟಿಕೆಗಳು ಆನೆ, ಸಿಂಹ, ಬಳ್ಳಿಸುರುಳಿ, ಕುದುರೆ ಮತ್ತೆ ಬಳ್ಳಿಸುರುಳಿ, ಕಥಾಪಟ್ಟಿಕೆ, ಯಾಳಿಗಳು, ಹಂಸಗಳ ಸಾಲುಗಳನ್ನು ಕ್ರಮವಾಗಿ ಬುಡದಿಂದ ಮೇಲಕ್ಕೆ ಒಂದರ ಮೇಲೊಂದರಂತೆ ಹೊಂದಿದ್ದು, ಆನೆ ಸಾಲಿನ ಪಟ್ಟಿಕೆಯೊಂದರಲ್ಲಿಯೇ ಎರಡು ಸಾವಿರಕ್ಕೂ ಹೆಚ್ಚು ಆನೆಗಳಿವೆ. ಅವು ಸರ್ವಾಲಂಕಾರಭೂಷಿತವಾಗಿ ಮಾವುತರಿಂದೊಡಗೂಡಿ ಗಂಭೀರವಾಗಿ ಮುಂದುವರಿಯುವ, ಹಿಂದಿನ ಆನೆ ತನ್ನೆಲ್ಲ ಬಲವನ್ನೂ ಬಿಟ್ಟು ತಿವಿದಾಗ ಮುದುರಿ, ಅಷ್ಟೇ ರೋಷದಿಂದ ತಲೆಯನ್ನು ಪಕ್ಕಕ್ಕೆ ಹೊರಳಿಸಿ ದುರುಗುಟ್ಟುವ, ಚೆಲ್ಲಾಟವಾಡುವ ಅವುಗಳ ಗುಣಸ್ವಭಾವಗಳನ್ನು ಸೆರೆಹಿಡಿದಿರುವುದೇ ಬೆರಗುಗೊಳಿಸುವ ಒಂದು ಅಂಶವಾದರೆ ಇನ್ನುಳಿದ ಸಾಲುಪಟ್ಟಿಕೆಗಳೂ ಇದೇ ಕುತೂಹಲವನ್ನೇ ಉಂಟುಮಾಡುತ್ತವೆ. ರಾಮಾಯಣ, ಭಾರತ, ಭಾಗವತಗಳ, ಬಲಿ–

ವಾಮನ, ಪ್ರಹ್ಲಾದ, ಸಮುದ್ರಮಥನ, ಶೈವಪುರಾಣದ ಕಥೆಗಳಿರುವ ಕಥಾಪಟ್ಟಿಕೆಯಂತೂ ಆ ಕಥಾಲೋಕವನ್ನೇ ಕಣ್ಣೆದುರಿಗೆ ಬಿತ್ತರಿಸಿದೆ. ಈ ಅಡ್ಡಪಟ್ಟಿಕೆಗಳಲ್ಲಿ ಉದ್ದವಾಗಿ ಹರಿಯುವ ಶಿಲ್ಪವೈಖರಿ ಇದ್ದರೆ ಅವುಗಳ ಮೇಲಿನ ನೀಳಮುಖಗಳು ಒಂದೊಂದು ಬಿಡಿಬಿಡಿಯಾದ ಒಂದೊಂದು ದೊಡ್ಡ ಗಾತ್ರದ ಮೂರ್ತಿಶಿಲ್ಪಗಳನ್ನು ಹೊಂದಿದೆ. ಸುಮಾರು ಒಂದು ಮೀಟರಿನಷ್ಟು ಎತ್ತರವಾಗಿರುವ ಈ ಮೂರ್ತಿಗಳು ಸಾಮಾನ್ಯವಾಗಿ ನವಿರಾಗಿ ಬಿಡಿಸಿರುವ ಲತಾತೋರಣಗಳ ಕೆಳಗಿರುವಂತೆ ಕಂಡರಿಸಿದೆ. ಇವುಗಳಲ್ಲಿ ಶಿವಪಾರ್ವತಿಯರು, ಅವರ ಪರಿವಾರವರ್ಗ, ವಿಷ್ಣು ಲಕ್ಷ್ಮಿ, ವಿಷ್ಣುವಿನ ದಶಾವತಾರಗಳು, ಪಾರಿಜಾತಾಪಹರಣ, ಗಜೇಂದ್ರಮೋಕ್ಷ, ಬ್ರಹ್ಮಸರಸ್ವತಿಯರು, ಗಜಾರಿ, ಮಹಿಷಾಸುರಮರ್ದಿನಿ, ಮೋಹಿನಿ, ದಕ್ಷಿಣಾಮೂರ್ತಿ, ಅಪ್ಸರೆಯರು, ರಾವಣ ಕೈಲಾಸವನ್ನೆತ್ತುತ್ತಿರುವುದು, ನೃತ್ಯಗಾತಿಯರು, ಪರಿವಾರವರ್ಗ–ಹೀಗೆ ನಾನಾ ಬಗೆಯ ಮೂರ್ತಿಗಳನ್ನು ನಾನಾಭಂಗಿಗಳಲ್ಲಿ ಕಾಣಬಹುದು. ದೇವಾಲಯದ ಮುಂಭಾಗದಲ್ಲಿ ಎರಡು ನವರಂಗಗಳ ನಡುವೆ ಮುಂಚಾಚಿದ ಭಾಗದಲ್ಲೂ ಇದೇ ರೀತಿಯ ಶಿಲ್ಪಗಳಿವೆ. ದಕ್ಷಿಣದ ನಂದಿಮಂಟಪವು ದೊಡ್ಡದೂ ಉತ್ತರದ್ದು ಸ್ವಲ್ಪ ಚಿಕ್ಕದೂ ಆಗಿದ್ದು ಅವುಗಳಲ್ಲಿರುವ ನಂದಿಯ ಮೂರ್ತಿಗಳು ಬೃಹದಾಕಾರದವು. ದೇವಾಲಯದ ಎಲ್ಲ ಕಂಬಗಳೂ ತಿರುಗಣೆಯಲ್ಲಿ ಕಡೆದವಾಗಿದ್ದು, ಅನೇಕ ಕಂಬಗಳು ತುಂಬ ಹೊಳಪು ಪಡೆದಿವೆ. ನವರಂಗಗಳ ಮಧ್ಯದ ದಪ್ಪ ಕಂಬಗಳ ಮೇಲೆ ಮಣಿಹಾರಗಳು, ಕೀರ್ತಿಮುಖಗಳು, ಇತರ ಅಲಂಕರಣಗಳೂ ತುಂಬಿವೆ. ಬೇಲೂರಿನಲ್ಲಿರುವಂತೆ ಇಲ್ಲಿಯೂ ಕಂಬಗಳ ಮೇಲೆ ಮದನಿಕೆಗಳನ್ನು ನಿಲ್ಲಿಸಿದ್ದರೂ ಈಗ ಅವು ಹೆಚ್ಚು ಉಳಿದುಬಂದಿಲ್ಲ. ಚಾವಣಿಗಳು ಹೆಚ್ಚು ವಿಸ್ತಾರವಾಗಿ ಕೆಲಸ ಮಾಡಿದವುಗಳಲ್ಲ. ಗರ್ಭಗೃಹಗಳ ಬಾಗಿಲುವಾಡಗಳ ಮೇಲಿನ ಶಿಲ್ಪಗಳು ವೈವಿಧ್ಯಮಯವಾಗಿವೆ. ವಿಸ್ತಾರವಾಗಿ ಬಿಡಿಸಿರುವ ಮಕರತೋರಣದಲ್ಲಿ ಅತಿ ಜಟಿಲವಾಗಿ ಹೆಣೆದುಕೊಂಡಿರುವ ಮಕರಗಳ ಬಾಲದ ಆಡಂಬರದ ಹರವು, ತಗಡುಗಳಿಂದ ಕತ್ತರಿಸಿ ಬಿಡಿಸಿದಂತೆ ಪದರಪದರವಾಗಿ ತೆಳುವಾಗಿ ಬಿಡಿಸಿರುವುದು ಆಶ್ಚರ್ಯಕರವಾಗಿದೆ. ಈ ದೇವಾಲಯಗಳಲ್ಲಿನ ಲಿಂಗಗಳೂ ದೊಡ್ಡವಾಗಿದ್ದು, ಎತ್ತರವಾದ ಪಾಣಿಪೀಠಗಳ ಮೇಲಿವೆ. ಇವುಗಳಲ್ಲಿ ಒಂದು ಹೊಯ್ಸಳೇಶ್ವರ, ಇನ್ನೊಂದು ಶಾಂತಲೇಶ್ವರ; ವಿಷ್ಣುವರ್ಧನ ಮತ್ತು ಅವನ ರಾಣಿ ಶಾಂತಲೆಯ ಹೆಸರಿನಲ್ಲಿ ಸ್ಥಾಪಿಸಿದವು.

ಕುಸುರಿ ಕೆಲಸದಲ್ಲಾಗಲಿ, ಮೂರ್ತಿಶಿಲ್ಪದಲ್ಲಾಗಲಿ ಹೊಯ್ಸಳೇಶ್ವರ ದೇವಾಲಯದ ಮೇಲಿನ ಶಿಲ್ಪಕಲೆ ಹೊಯ್ಸಳ ಶಿಲ್ಪದಲ್ಲಿಯೇ ಅತ್ಯುತ್ತಮವಾದುದು. ಪರಂಪರಾಗತವಾಗಿ ಬಂದ ಶಿಲ್ಪರೀತಿಯನ್ನು ಅಳವಡಿಸಿಕೊಂಡಿದ್ದರೂ ಅದರಲ್ಲಿ ನಾವೀನ್ಯತೆ ಇದೆ. ದೇವಾನುದೇವತೆಗಳು, ವಿಲಾಸಿನಿಯರ ಹಾವಭಾವಗಳು, ನೃತ್ಯಗೀತವಾದ್ಯನಿರತರು, ವೀರರು, ಯೋಧರು, ನಟರು, ನರ್ತಕರು, ಆನೆ ರಥ ಕುದುರೆ ಕಾಲಾಳುಗಳು, ಸುಖಸಂತೋಷಗಳಲ್ಲಿ ಬೆರೆತವರು, ಹಲವು ಬಗೆಯ ಪ್ರಾಣಿಪಕ್ಷಿಗಳು, ಗಿಡಬಳ್ಳಿಗಳು, ಒಡವೆ ವಸ್ತ್ರಗಳು ಹೊರಗೋಡೆಯ ತುಂಬ ಇಡಿಕಿರಿದಂತೆ ತುಂಬಿಹೋಗಿರುವ ಇಲ್ಲಿನ ಅಡ್ಡಪಟ್ಟಿಕೆಗಳಲ್ಲಾಗಲಿ ಉದ್ದ ಅಂಕಣಗಳಲ್ಲಾಗಲಿ ಸಾಲುಸಾಲಾಗಿ, ಬಿಡಿಬಿಡಿಯಾಗಿ, ಸೂಕ್ಷ್ಮಾತಿಸೂಕ್ಷ್ಮವಾಗಿ ಬಿಡಿಸಿರುವ ಮೂರ್ತಿಶಿಲ್ಪವಾಗಲಿ, ಕುಸುರಿ ಶಿಲ್ಪವಾಗಲಿ, ರೂವಾರಿಗಳ ಕಲಾಪ್ರೌಢಿಮೆಯನ್ನೂ ತಾಳ್ಮೆಯನ್ನೂ ಉತ್ಸಾಹವನ್ನೂ ಎತ್ತಿತೋರಿಸುತ್ತದೆ. ವಾಸ್ತುವನ್ನು ಶಿಲ್ಪದಿಂದ ಮುಚ್ಚಿಬಿಡುವುದಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ; ಶಿಲ್ಪ ವೈವಿಧ್ಯತೆಯ ಪ್ರದರ್ಶನಶಾಲೆಯಾಗಿದೆ.

ಇಂಥ ಭವ್ಯವಾದ ದೇವಾಲಯದ ಶಿಲ್ಪಗಳನ್ನು ಕಂಡರಿಸುವಲ್ಲಿ ಹಲವಾರು ಶಿಲ್ಪಿಗಳ ಕೈವಾಡವಿದೆ. ಬೇಲೂರಿನ ಚೆನ್ನಕೇಶವ ದೇವಾಲಯವೂ ಈ ದೇವಾಲಯವೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ನಿರ್ಮಿತವಾದುದಾದರೂ ಎರಡು ಕಡೆಯೂ ಕೆಲಸ ಮಾಡಿದ ರೂವಾರಿಗಳು ಬೇರೆಬೇರೆಯೇ. ದಾಸೋಜನೆಂಬೊಬ್ಬನ ಹೆಸರು ಹಳೇಬೀಡಿನ ದೇವಾಲಯದಲ್ಲಿ ಕಂಡುಬಂದರೂ ಅವನು ಬೇಲೂರಿನಲ್ಲಿ ಕೆಲಸ ಮಾಡಿದ ದಾಸೋಜನೇ ಅಥವಾ ಶ್ರವಣಬೆಳಗೊಳದಲ್ಲಿ ಕೆಲಸ ಮಾಡಿದವನೇ ಹೇಳಲು ಬಾರದು. ಚಡೆಯಗೆರಿಯ ಹರಿಷನು ಬೇಲೂರಿನಲ್ಲಿ ಆಗದೆ ಇಲ್ಲಿ ಬಂದು ಕೆಲಸಮಾಡಿದನೆಂದು ಒಂದು ಶಾಸನ ಸೂಚಿಸುತ್ತದೆ. ಆದ್ದರಿಂದ ಈ ಎರಡು ದೇವಾಲಯಗಳಲ್ಲಿ ಕೆಲಸಮಾಡಿದ ರೂವಾರಿಗಳಲ್ಲಿ ಒಂದು ಬಗೆಯ ಹುರುಡಿದ್ದಂತೆ ತೋರುತ್ತದೆ. ಕಾಳಿದಾಸ, ದೇವೋಜ, ಕೇತಣ, ಬಲ್ಲಣ, ರೇವೋಜ, ಅವನ ಮಗ ಹಪುಗ, ಮಾಣುಬಲಕಿ, ತಣದು ದೂರ ಹರಿಷ, ಕೇಸಿಮೋಜನ ಮಗ ಮಸ ಮೊದಲಾದವರು ಇಲ್ಲಿನ ರೂವಾರಿಗಳಲ್ಲಿ ಕೆಲವರು.



ನಂದಿ: ಹೊಯ್ಸಳೇಶ್ವರ ದೇವಾಲಯ

ಹಿಂದು ವಾಸ್ತುರೀತಿಯನ್ನು ಸಮರ್ಥಿಸುವ ಯಾರೇ ಆದರೂ ಈ ದೇವಾಲಯವನ್ನು ಉದಾಹರಿಸಲಿಚ್ಛಿಸುತ್ತಾರೆ. ಅಡ್ಡನೀಳಗಳ ಕಲಾತ್ಮಕ ಹೊಂದಾಣಿಕೆ, ನೆಳಲು ಬೆಳಕುಗಳ ಚಲ್ಲಾಟದ ಸೊಗಸು ಇಲ್ಲಿನಷ್ಟು ಬೇರೆಲ್ಲಿಯೂ ಕಂಡುಬರದು ಎಂಬುದು ಈ ದೇವಾಲಯವನ್ನು ಕುರಿತು ಫರ್ಗ್ಯೂಸನ್ನರ ಉದ್ಗಾರ.

ಈ ದೇವಾಲಯದ ಆವರಣದಲ್ಲಿರುವ ಬೃಹದ್ಗಣಪತಿ ಮತ್ತು ಇಮ್ಮಡಿ ಬಲ್ಲಾಳನ ಗರುಡ ಕುವರಲಕ್ಷ್ಮನ ನೆನಪಿಗೆ ನಿಲ್ಲಿಸಿರುವ ಗರುಡಸ್ತಂಭ ಶಾಸನಗಳೂ ಹಾಗೆಯೇ ದೇವಾಲಯದೊಳಗೆ ಪ್ರೌಢದೇವರಾಯನ ಸ್ತಂಭವೆಂದು ಕರೆಯುವ ಮತ್ತೊಂದು ಗರುಡ ಸ್ತಂಭವೂ ಉಲ್ಲೇಖನೀಯ.

(ಎಂ.ಎಚ್.)

ಕೇದಾರೇಶ್ವರ ದೇವಾಲಯವನ್ನು ಹೊಯ್ಸಳ ದೊರೆ ಎರಡನೆಯ ಬಲ್ಲಾಳ ಹಾಗೂ ಅವನ ಕಿರಿಯ ರಾಣಿ ಕೇತಲದೇವಿಯವರು ತಮ್ಮ ಆಳಿಕೆಯ ಕೊನೆಯಲ್ಲಿ ಸು. 1219ರಲ್ಲಿ ಕಟ್ಟಿಸಿದರು. ಬಂದಳಿಕೆಯಲ್ಲಿರುವ ಶಾಸನದ ಪ್ರಕಾರ ಎರಡನೆಯ ಬಲ್ಲಾಳ ಈ ದೇವಾಲಯವನ್ನು ಬೆಳಗಾಂವಿಯ ದಕ್ಷಿಣ ಕೇದಾರೇಶ್ವರ ದೇವಾಲಯದಿಂದ ಸ್ಫೂರ್ತಿ ಹೊಂದಿ ಆ ದೇವಾಲಯವನ್ನು ಆಧಾರವಾಗಿಟ್ಟುಕೊಂಡು ಕಟ್ಟಿಸಿದನಂತೆ. ಅನಂತರ ಸು.1220ರಲ್ಲಿ ಈ ದೇವಾಲಯವನ್ನು ಎರಡನೆಯ ನರಸಿಂಹ ಹಾಗೂ ಅವನ ಮಾತೆಯಾದ ಪದುಮಲದೇವಿಯವರು ಉಂಬಳಿಯಾಗಿ ಕೊಟ್ಟರೆಂದು ತಿಳಿದುಬರುತ್ತದೆ.

ಕಂಬಗಳ ಮಂಟಪ

ಈ ದೇವಾಲಯದಲ್ಲಿ ಮೂರು ಕೋಣೆಗಳಿವೆ. ಗರ್ಭಗುಡಿಯಲ್ಲಿ ಯಾವ ವಿಗ್ರಹವೂ ಇಲ್ಲ. ಮೂಲದಲ್ಲಿ ಈ ದೇವಾಲಯಕ್ಕೆ ಬಳಪದ ಕಲ್ಲಿನ ಬಹಳ ಸುಂದರವಾದ ನಕ್ಷತ್ರಾಕಾರದ ಗೋಪುರವಿದ್ದು ಈಗ ಅದು ಹಾಳಾಗಿದೆ. ಹೊಯ್ಸಳೇಶ್ವರ ದೇವಾಲಯದಂತೆ ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದ್ದು ಎತ್ತರವಾದ ಜಗತಿಯ ಮೇಲೆ ಕಟ್ಟಲ್ಪಟ್ಟಿದ್ದು ಅದರಂತೆಯೇ ಅಲಂಕಾರಪಟ್ಟಿಕೆಗಳನ್ನು ಹೊಂದಿದೆ. ಈ ಅಲಂಕಾರ ಪಟ್ಟಿಕೆಗಳಲ್ಲಿ ಬಹಳ ಸುಂದರವಾದ ಪುಷ್ಪಗಳನ್ನು ರಾಮಾಯಣ, ಮಹಾಭಾರತ ಮತ್ತು ಭಾಗವತಗಳ ಕೆಲವು ಕಥೆಗಳನ್ನು ಅತ್ಯಾಕರ್ಷಕವಾಗಿ ಬಿಡಿಸಲಾಗಿದೆ. ಅದರಲ್ಲೂ ಹಂಸಗಳ ಮತ್ತು ಮೊಸಳೆಗಳ ಶಿಲ್ಪಗಳು ಮನಮೋಹಕವಾಗಿವೆ. ಇದಲ್ಲದೆ ಈ ದೇವಾಲಯದ ಬಾಗಿಲುವಾಡ, ಭುವನೇಶ್ವರಿ ಹಾಗೂ ಹೊರಭಾಗದ ಗೋಡೆಗಳಲ್ಲಿ ಕೆಲವು ಸುಂದರ ಮೂರ್ತಿಗಳಿವೆ.

ಈ ದೇವಾಲಯದ ಅನೇಕ ವಿಗ್ರಹಗಳು ಈಗ ಇಲ್ಲ. ಇವುಗಳಲ್ಲಿ ಕೆಲವು ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ, ಮತ್ತೆ ಕೆಲವು ಹೊಯ್ಸಳೇಶ್ವರ ದೇವಾಲಯದ ಸುತ್ತಮುತ್ತಲೂ ಇವೆ. ಈ ದೇವಾಲಯದ ಮೂರ್ತಿಗಳನ್ನು ಕಡೆದ ಶಿಲ್ಪಿಗಳಲ್ಲಿ ರೇವೋಜನ ಹೆಸರು ಮಾತ್ರ ಕಂಡುಬರುತ್ತದೆ. ಈ ದೇವಾಲಯದ ಹೊರಗೋಡೆಯ ಮೇಲೆ ಒಟ್ಟು ಸು.188 ವಿಗ್ರಹಗಳಿವೆ. ಇವುಗಳಲ್ಲಿ ಕೆಲವಂತೂ ಬಹಳ ಸುಂದರವಾಗಿ ಕಡೆದ ಹಾಗೂ ಮಾಟವಾಗಿ ರೂಪಿಸಿದ ಮೂರ್ತಿಗಳು. ಈ ದೇವಾಲಯಗಳ ರಚನೆಯನ್ನೂ ಕೆತ್ತನೆಯ ಕೆಲಸವನ್ನೂ ಕುರಿತಂತೆ ಕಸಿನ್ಸ್, ಫರ್ಗ್ಯೂಸನ್ ಮೊದಲಾದ ವಿದ್ವಾಂಸರು ಅತ್ಯುತ್ಕೃಷ್ಟ ರಚನೆಗಳೆಂದು ಪ್ರಶಂಸಿಸಿದ್ದಾರೆ. **(ಎಚ್.ಎಂ.ವಿ.)**

ಹಳೇಬೀಡಿನಲ್ಲಿ ಮೂಲರೂಪದಲ್ಲಿ ಈಗ ಉಳಿದುಬಂದಿರುವ ಮತ್ತೊಂದು ದೇವಾಲಯವೆಂದರೆ ಊರಿನೊಳಗಿರುವ ವೀರಭದ್ರದೇವಾಲಯ. ಚಿಕ್ಕದಾದ ಈ ದೇವಾಲಯಕ್ಕೂ ಚೌಕವಿನ್ಯಾಸದ ಗರ್ಭಗೃಹ, ಸುಕನಾಸಿ, ನವರಂಗಗಳಿದ್ದು, ಅದರ ಮುಂದೆ ಬಹುಶಃ ವಿಜಯನಗರದ ಕಾಲದಲ್ಲಿ ಹೊಯ್ಸಳ ಕಾಲದ ಯಾವುದೋ ದೇವಾಲಯದ ನವರಂಗ ವೊಂದನ್ನು ತಂದು ಜೋಡಿಸಲಾಗಿದೆ. ಈ ದೇವಾಲಯದ ಹೊರಗೋಡೆಗಳು ಬಹುಮಟ್ಟಿಗೆ ಸರಳವಾಗಿದ್ದರೂ ಅವುಗಳ ಮೇಲೆ ಒಂದು ಸಾಲು ದೇವತಾಮೂರ್ತಿಗಳನ್ನು ಲತಾವಿತಾನಗಳ ಕೆಳಗೆ ಬಿಡಿಸಿದೆ. ಇದರ ಗರ್ಭಗೃಹದ ಮೇಲೆ ಮೆಟ್ಟಿಲುಮೆಟ್ಟಿಲಾಗಿ ಮೇಲೇರುವ ಕದಂಬ ಶೈಲಿಯ ಗೋಪುರವಿದ್ದು, ಅದರ ಮುಂದೆ ಸಳನು ಹುಲಿಯನ್ನು ಇರಿಯುತ್ತಿರುವ ಹೊಯ್ಸಳ ಲಾಂಛನವೂ ಇದೆ. ಇದಕ್ಕೆ ಸಮೀಪವಾಗಿ ಮತ್ತೊಂದು ಗುಡಿಯಿದ್ದು ಅದರ ಕೆಲಭಾಗ ಬಿದ್ದುಹೋಗಿದ್ದು ಮಹಾದ್ವಾರವನ್ನು ಹಳೆಯ ದೇವಾಲಯದ ಶಿಲ್ಪಗಳಿಂದ ಈಚೆಗೆ ಪುನರ್‌ನಿರ್ಮಿಸಲಾಗಿದೆ. ಇದನ್ನು ಈಗ ರಂಗನಾಥಸ್ವಾಮಿ ದೇವಾಲಯವೆನ್ನುತ್ತಾರೆ. ಇದರ ಗರ್ಭಗೃಹದಲ್ಲಿ ಸುಂದರವಾದ ಒಂದು ರಂಗನಾಥನ ಮೂರ್ತಿಯಿದೆ. ಆದರೆ ಇದು ಮೂಲತಃ ಬೂಚೇಶ್ವರ ದೇವಾಲಯವಾಗಿತ್ತೆಂದು ಅಲ್ಲಿನ ಶಾಸನವೊಂದರಿಂದ ತಿಳಿದುಬರುತ್ತದೆ. ಈ ದೇವಾಲಯದ ಗರ್ಭಗೃಹದ ಮೇಲೂ ವೀರಭದ್ರದೇವಾಲಯದ ಮೇಲಿರುವಂಥ ಒಂದು ಗೋಪುರವಿದೆ.

ಪ್ರವಾಸಿ ಮಂದಿರಕ್ಕೆ ಸಮೀಪವಾಗಿ ಈಗ ಪಾಳುಬಿದ್ದಿರುವ ನಗರೇಶ್ವರ, ಪಂಚಲಿಂಗೇಶ್ವರ ದೇವಾಲಯಗಳ ಗುಡ್ಡಗಳಿವೆ. ಇವೂ ಹೊಯ್ಸಳೇಶ್ವರ ದೇವಾಲಯದಷ್ಟೇ ಶಿಲ್ಪಾಲಂಕರಣಗಳಿಂದ ತುಂಬಿದ್ದು ಸುಂದರವಾಗಿದ್ದಿರಬೇಕೆಂದು ಅವುಗಳಿಂದ ಎತ್ತಿತಂದು ಈಗ ಹೊಯ್ಸಳೇಶ್ವರ ದೇವಾಲಯದ ಸಮೀಪದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಿರುವ ಮೂರ್ತಿಗಳಿಂದ ನಿರ್ಧರಿಸಬಹುದು. ಇದರಲ್ಲಿನ ಹಲವಾರು ಮೂರ್ತಿಗಳನ್ನು ಕೇದಾರೇಶ್ವರ ದೇವಾಲಯದ ಪುನರ್ ನಿರ್ಮಾಣದಲ್ಲಿ ಬಳಸಲಾಗಿದೆ; ಹಾಗೂ ಕೆಲವು ಮೂರ್ತಿಗಳು ಮೈಸೂರಿನಲ್ಲಿರುವ ಪ್ರಾಚ್ಯವಿದ್ಯಾ ಸಂಶೋಧನಾಲಯದ ಗೋಡೆಗಳನ್ನು ಅಲಂಕರಿಸಿವೆ.

ಹೊಯ್ಸಳೇಶ್ವರ ದೇವಾಲಯದ ದಕ್ಷಿಣಕ್ಕೆ ಅರ್ಧ ಕಿಮೀ ದೂರದಲ್ಲಿ ಒಂದೇ ಆವರಣದಲ್ಲಿ ಮೂರು ಬಸದಿಗಳಿವೆ. ಇವುಗಳಲ್ಲಿ ಎರಡು ದೊಡ್ಡವು; ನಡುವಿನದು ಚಿಕ್ಕದು. ಇವು ಹೊಯ್ಸಳೇಶ್ವರ ಅಥವಾ ಕೇದಾರೇಶ್ವರ ದೇವಾಲಯಗಳೊಡನೆ ಹೋಲಿಸಿದಾಗ ಸರಳವಾದುವೆ. ಆ ಸರಳತೆಯಲ್ಲಿಯೂ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಇವುಗಳಲ್ಲಿ ಪಶ್ಚಿಮದ ಕಡೆ ಇರುವ ಪಾರ್ಶ್ವನಾಥ ಬಸದಿಯನ್ನು ಗಂಗರಾಜನ ಮಗ ಬೊಪ್ಪಣ ತನ್ನ ತಂದೆಯ ನೆನಪಿಗಾಗಿ 1133ರಲ್ಲಿ ಕಟ್ಟಿಸಿದ. ಅದೇ ಸಮಯಕ್ಕೆ ಸರಿಯಾಗಿ ವಿಷ್ಣುವರ್ಧನ ಬಂಕಾಪುರದಲ್ಲಿ ವಿಜಯವನ್ನು ಸಾಧಿಸಿದ್ದರಿಂದ ಇದರಲ್ಲಿ ಪ್ರತಿಷ್ಠಿತನಾದ ಪಾರ್ಶ್ವನಾಥನಿಗೆ ವಿಜಯಪಾರ್ಶ್ವನಾಥ ಎಂಬ ಹೆಸರು ಬಂತು. ಗರ್ಭಗೃಹ, ಸುಕನಾಸಿ, ನವರಂಗಗಳಿದ್ದು ಮುಂದೆ ಬೇರೆಯಾದ ಮುಖಮಂಟಪವಿದೆ. ಚೌಕವಿನ್ಯಾಸದಲ್ಲಿರುವ ಗರ್ಭಗೃಹ, ನವರಂಗಗಳ ಹೊರಗೋಡೆಗಳು ನೇರವಾಗಿದ್ದು ಹತ್ತಿರಹತ್ತಿರವಾಗಿ ಬಿಡಿಸಿರುವ ಅರೆಗಂಬಗಳಿಂದ ವಿಭಾಗಿಸಲ್ಪಟ್ಟಿವೆ. ಗೋಡೆಗಳ ಬುಡದಲ್ಲಿ ಮತ್ತು ಕೈಪಿಡಿಯಲ್ಲಿ ಮಾತ್ರ ಶಿಲ್ಪಗಳುಂಟು. ನಾಲ್ಕೂವರೆ ಮೀಟರಿಗೂ ಎತ್ತರವಾಗಿರುವ ಪಾರ್ಶ್ವನಾಥನ ಮೂರ್ತಿಯನ್ನುಳ್ಳ ಈ ಬಸದಿ ತಕ್ಕಷ್ಟು ಎತ್ತರವಾಗಿದೆ. ಎತ್ತರವಾದ ಜಗತಿಯ ಮೇಲಿದ್ದು ಸುಂದರವಾದ ಕಂಬಗಳ ಮೇಲೆ ನಿಂತಿರುವ ತೆರೆದ ಮುಖಮಂಟಪದ ಸುತ್ತಲ ಕಟಾಂಜನದಲ್ಲಿ ವಿಶಿಷ್ಟವಾದ ಕಥನಶಿಲ್ಪಗಳಿದ್ದರೆ ಚಾವಣಿಯಲ್ಲಿ ಧರಣೇಂದ್ರ ಯಕ್ಷನ ಮೂರ್ತಿಯಿದೆ. ನವರಂಗದ ಮಧ್ಯದ ಅಂಕಣದ ಚಾವಣಿಯಲ್ಲಿರುವ ಇದೇ ಮೂರ್ತಿ ಹೆಚ್ಚು ಸುಂದರವಾದುದು. ಈ ನವರಂಗದ ವೈಶಿಷ್ಟ್ಯವೆಂದರೆ ಅತ್ಯಂತ ಹೊಳಪು ಕೊಟ್ಟು ತಿರುಗಣೆಯಲ್ಲಿ ಕಡೆದು ನಿಲ್ಲಿಸಿರುವ ಅದರ ಮಧ್ಯದ ಕಂಬಗಳು.

ಅವುಗಳ ನಿಮ್ನೋನ್ನತ ಹಿನ್ನೆಲೆಯಲ್ಲಿ ಚಿತ್ರವಿಚಿತ್ರವಾಗಿ ಪ್ರತಿಬಿಂಬಗಳು ಹೊಮ್ಮುವಷ್ಟು ಅವು ಹೊಳಪಿನಿಂದ ಕೂಡಿವೆ. ಗರ್ಭಗೃಹದಲ್ಲಿರುವ ಪಾರ್ಶ್ವನಾಥನ ಉನ್ನತವಾದ ಮೂರ್ತಿ ನೇರನಿಲುವಿನ ಶಾಂತಮುಖ ಮುದ್ರೆಯ ಪರಿಪೂರ್ಣ ಆಕಾರದ ಭವ್ಯಮೂರ್ತಿ.

ಇದೇ ಬಸದಿಯನ್ನೇ ಹೋಲುವ, ಆದರೆ ಇಷ್ಟು ಭವ್ಯವಾಗಿಲ್ಲದ ಶಾಂತಿನಾಥ ದೇವಾಲಯ ಸು. 1192ರ ಹೊತ್ತಿಗೆ ಇಮ್ಮಡಿ ಬಲ್ಲಾಳನ ಕಾಲದಲ್ಲಿ ನಿರ್ಮಿತವಾಗಿದ್ದಂತೆ ಒಂದು ಶಾಸನದಿಂದ ತಿಳಿದುಬಂದರೆ ಇನ್ನೊಂದು ಶಾಸನ ಅದಕ್ಕೆ ಮುಮ್ಮಡಿ ನರಸಿಂಹನ ಕಾಲದಲ್ಲಿ 1257ರಲ್ಲಿ ದತ್ತಿಬಿಟ್ಟುದನ್ನು ತಿಳಿಸುತ್ತದೆ. ಇದರ ನವರಂಗದ ಕಂಬಗಳೂ ಪಾರ್ಶ್ವನಾಥ ಬಸದಿಯ ಕಂಬಗಳಂತೆಯೇ ಇದ್ದರೂ ಅವುಗಳಲ್ಲಿನ ಕುಸುರಿ ಕೆಲಸವಾಗಲಿ, ಹೊಳಪಾಗಲಿ ಇಲ್ಲ. ಇದರಲ್ಲಿನ ಶಾಂತಿನಾಥನ ಮೂರ್ತಿಯೂ ಮೂರೂವರೆ ಮೀಟರಿಗಿಂತ ಹೆಚ್ಚು ಎತ್ತರವಾಗಿದೆ. ಇದರ ಮುಂದೆ ಕಟ್ಟಿರುವ ದೊಡ್ಡದಾದ ಮುಖಭದ್ರ ವಿಜಯನಗರದ ಕಾಲದ್ದಾಗಿದ್ದು ಈ ಕಟ್ಟಡದಲ್ಲಿ ನಾಜೂಕು ಇಲ್ಲ. ಇದರ ಮುಂದೆ ಸುಮಾರು ಏಳು ಮೀಟರಿನಷ್ಟು ಉನ್ನತವಾದ ಕಂಬವಿದ್ದು, ಅದರ ಮೇಲಿನ ಮಂಟಪದಲ್ಲಿ ಯಕ್ಷನ ಮೂರ್ತಿಯೊಂದಿದೆ.

ಪಾರ್ಶ್ವನಾಥ ಮತ್ತು ಶಾಂತಿನಾಥ– ಈ ಎರಡು ಬಸದಿಗಳ ನಡುವೆ ಇರುವ, ಗರ್ಭಗೃಹ ಸುಕನಾಸಿಗಳನ್ನು ಮಾತ್ರ ಹೊಂದಿರುವ ಚಿಕ್ಕಬಸದಿಯನ್ನು ಆದಿನಾಥ ಬಸದಿ ಎಂದು ಈಗ ಕರೆಯುತ್ತಾರೆ. ಆದರೆ ಅದು ನಕರಜಿನಾಲಯ. ವಿಷ್ಣುವರ್ಧನನ ಕಾಲದಲ್ಲಿ 1138ರಲ್ಲಿ ಹೆಗ್ಗಡೆ ಮಲ್ಲಯ್ಯನೆಂಬುವನು ಕಟ್ಟಿಸಿದ ಈ ಜಿನಾಲಯದಲ್ಲಿ ಅವನು ಪ್ರತಿಷ್ಠಾಪನೆ ಮಾಡಿಸಿದ್ದುದು ಮಲ್ಲಿನಾಥನ ಜಿನಮೂರ್ತಿಯನ್ನು. ಇದನ್ನು ತಿಳಿಸುವ ಶಾಸನದಲ್ಲಿ ಪಂಪನ ಆದಿಪುರಾಣದ ಪದ್ಯವೊಂದನ್ನು ಉಲ್ಲೇಖಿಸಿರುವುದು ಒಂದು ವಿಶೇಷ. (ಎಂ.ಎಚ್.)

**ಹಳೇಬೆಳಗೊಳ:** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಒಂದು ಹಳ್ಳಿ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ, ಚನ್ನರಾಯ ಪಟ್ಟಣದಿಂದ 18 ಕಿಮೀ ದೂರದಲ್ಲೂ ಶ್ರವಣಬೆಳಗೊಳದ ಉತ್ತರಕ್ಕೆ 8 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 1,510. ಈಗ ಪಾಳುಬಿದ್ದಿರುವ ಈ ಊರು ಶ್ರವಣಬೆಳಗೊಳಕ್ಕೂ ಪ್ರಾಚೀನವಾಗಿದ್ದಿರಬಹುದೆಂದು ತಿಳಿದುಬರುತ್ತದೆ. ಕಾಲಕ್ರಮೇಣ ಜನ ಈ ಊರನ್ನು ಬಿಟ್ಟು ಶ್ರವಣಬೆಳಗೊಳದಲ್ಲಿ ನೆಲಸಲಾರಂಭಿಸಿದುದರಿಂದ ಇದು ಪಾಳುಬಿದ್ದು ಹಳೇಬೆಳಗೊಳ ಎಂದು ಹೆಸರು ಪಡೆಯಿತು.

ಇಲ್ಲಿ ಪಾಳುಬಿದ್ದ ಜೈನಬಸದಿಗಳು, ಶೈವ ಮತ್ತು ವೈಷ್ಣವ ದೇವಾಲಯಗಳು ಇವೆ. ಇಲ್ಲಿಯ ಪಾರ್ಶ್ವನಾಥ ಬಸದಿ ಹೊಯ್ಸಳ ಮಾದರಿಯಲ್ಲಿದೆ. ಇದರಲ್ಲಿ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ಗರ್ಭಗುಡಿಯಲ್ಲಿ 2½ ಅಡಿ ಎತ್ತರದ ನಿಂತ ಭಂಗಿಯಲ್ಲಿರುವ ಜಿನವಿಗ್ರಹವಿದೆ. ಸುಕನಾಸಿಯ ಗೋಡೆಗೆ ಸೇರಿದಂತೆ 5 ಅಡಿ ಎತ್ತರದ ಭಗ್ನ ಪಾರ್ಶ್ವನಾಥ ವಿಗ್ರಹವಿದೆ. ಈ ವಿಗ್ರಹದ ಹಿಂದೆ ಸರ್ಪದ ಸುರುಳಿಯ ಮೇಲೆ ಏಳು ಹೆಡೆಗಳ ಛತ್ರವಿದೆ. ನವರಂಗದ ಒಳಮಾಳಿಗೆ ಭವ್ಯವಾಗಿದೆ. ವಾಹನಗಳ ಮೇಲೆ ಪತ್ನಿಸಮೇತ ಕುಳಿತಿರುವ ಅಷ್ಟದಿಕ್ಪಾಲಕರ ಪ್ರತಿಮೆಗಳಿವೆ. ಮಧ್ಯದಲ್ಲಿ ಐದು ಹೆಡೆಗಳ ಕೆಳಗೆ, ಎಡಗೈಯಲ್ಲಿ ಧನುಸ್ಸು ಮತ್ತು ಬಲಗೈಯ್ಯಲ್ಲಿ ಶಂಖ ಹಿಡಿದು ನಿಂತಿರುವ ಧರಣೇಂದ್ರನ ವಿಗ್ರಹವಿದೆ. ನವರಂಗದಲ್ಲಿ ಸುಂದರವಾಗಿ ಕೆತ್ತಿದ 5 ಅಡಿ ಎತ್ತರದ ಎರಡು ಚಾಮರಧರರ ಭಗ್ನ ವಿಗ್ರಹಗಳು ಬಿದ್ದಿವೆ. ಇಲ್ಲೇ ಸುಮಾರು 3 ಅಡಿ ಎತ್ತರದ ಶಿರವಿಲ್ಲದ ಆಸೀನ ಜಿನವಿಗ್ರಹವಿದೆ. ನವರಂಗದ್ವಾರವನ್ನು ಬಹುಸುಂದರವಾಗಿ ಕೆತ್ತಲಾಗಿದೆ. ಹೊರಗಿನ ಗೋಡೆಗಳ ಮೇಲೆ ಅಲ್ಲಲ್ಲಿ ಸಣ್ಣ ಕಂಬಗಳು ಗೂಡುಗಳು ಇವೆ. ದೇವಾಲಯದ ಪೀಠದ ಮೂಲೆಗಳಲ್ಲಿ ಮತ್ತು ಇತರ ಕಡೆಗಳಲ್ಲಿ ಆನೆಗಳ ವಿಗ್ರಹಗಳಿವೆ. ಈ ದೇವಾಲಯದಲ್ಲಿರುವ ಒಂದು ಶಾಸನದ ಪ್ರಕಾರ ಹೊಯ್ಸಳ ವಿಷ್ಣುವರ್ಧನನ ತಂದೆಯಾದ ಎಱೆಯಂಗನು ಜೈನಗುರು ಗೋಪನಂದಿಗೆ ರಾಚನಹಳ್ಳಿ ಮತ್ತು ಬೆಳಗೊಳ ಹಾಗೂ ಇತರ ಪ್ರದೇಶಗಳ ಬಸದಿಗಳನ್ನು ದುರಸ್ತುಗೊಳಿಸಲು ದಾನಕೊಟ್ಟನೆಂದು ತಿಳಿದುಬರುತ್ತದೆ. ಆದ್ದರಿಂದ ಈ ದೇವಾಲಯ 1094ರಲ್ಲಿಯೇ ಇದ್ದಿರಬೇಕೆಂದು ತಿಳಿದುಬರುತ್ತದೆ.

ಇಲ್ಲಿ ಇಟ್ಟಿಗೆಗಳಿಂದ ಕಟ್ಟಿರುವ ವಿಷ್ಣು ಮತ್ತು ಶಿವ ದೇವಾಲಯಗಳಿವೆ. ವಿಷ್ಣು ದೇವಾಲಯದಲ್ಲಿರುವ ಸು. 4 ಅಡಿ ಎತ್ತರವಿರುವ ಕೇಶವ ವಿಗ್ರಹ ಮತ್ತು ಎರಡು ಆಳ್ವಾರರುಗಳ ವಿಗ್ರಹಗಳಿವೆ. ಶಿವ ದೇವಾಲಯದಲ್ಲಿ ಲಿಂಗವೂ ಅದರ ಹಿಂದೆ ನಿಂತ ಭಂಗಿಯಲ್ಲಿರುವ ಸು. $3^1/_2$ ಅಡಿ ಎತ್ತರದ ವಿಷ್ಣುವಿಗ್ರಹವೂ ಇವೆ. ಈ ಊರಿನ ಕೆರೆ ಏರಿಯನ್ನು ದೇವಸ್ಥಾನದ ಕಂಬಗಳು, ಕಲ್ಲು ಮತ್ತು ವಿಗ್ರಹಗಳಿಂದ ಕಟ್ಟಿರುವುದನ್ನು ಕಾಣಬಹುದು. ಇದರಿಂದಾಗಿ ಇಲ್ಲಿ ಒಂದು ಕಾಲಕ್ಕೆ ಅನೇಕ ದೇವಾಲಯಗಳಿದ್ದಿರಬಹುದೆಂದು ಊಹಿಸಲಾಗಿದೆ. (ಜಿ.ಎಂ.ಎಸ್.)

**ಹಳ್ಳಿ ಮೈಸೂರು:** ಹಾಸನ ಜಿಲ್ಲೆ ಹೊಳೇನರಸೀಪುರ ತಾಲ್ಲೂಕಿನ ಒಂದು ಹಳ್ಳಿ ಹಾಗೂ ಹೋಬಳಿ ಕೇಂದ್ರ. ಹಾಸನ–ಮೈಸೂರು ಹೆದ್ದಾರಿಯಲ್ಲಿ ಹೊಳೇನರಸೀಪುರದ ದಕ್ಷಿಣಕ್ಕೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,492.

ಒಂದು ಕಾಲಕ್ಕೆ ಇದು ಪ್ರಾಮುಖ್ಯತೆ ಪಡೆದ ಊರಾಗಿದ್ದು, ಹಳೆಯ ರಾಜ್ಯವೊಂದರ ರಾಜಧಾನಿಯಾಗಿತ್ತೆಂದೂ ಸುತ್ತಮುತ್ತಲ ಅನೇಕ ಹಳ್ಳಿಗಳು ಹಳ್ಳಿ ಮೈಸೂರಿನ ಉಪನಗರಗಳಾಗಿದ್ದವೆಂದೂ ಗೋಹಳ್ಳಿಯಲ್ಲಿ ದೊರೆಗೆ ಸೇರಿದ ಗೋವುಗಳೂ ಕಲ್ಲಹಳ್ಳಿಯಲ್ಲಿ ಕರಾವಿನ ಹಸುಗಳೂ ತೇಜೂರಿನಲ್ಲಿ ಕುದುರೆಗಳೂ ಕನ್ನಂಬಾಡಿಯಲ್ಲಿ ಆನೆಗಳೂ ಇದ್ದುವೆಂದು ಪ್ರತೀತಿ. ಹಳೇ ಕನ್ನಂಬಾಡಿ ಕೋಟೆಗೆ ಉಪಯೋಗಿಸಿರುವ ಬೃಹದಾಕಾರದ ಕಲ್ಲುಗಳು ಹಳ್ಳಿ ಮೈಸೂರಿನವು. ಈಗಿನ ಮೈಸೂರು, ಒಡೆಯರ ರಾಜಧಾನಿಯಾಗುವುದಕ್ಕೆ ಮುಂಚೆ, ಹಳ್ಳಿ ಮೈಸೂರು ಅವರ ನಿವಾಸಸ್ಥಾನವಾಗಿದ್ದಂತೆ ತಿಳಿದುಬರುತ್ತದೆ. ಇಲ್ಲಿ ಗಂಗರಾಜ ಮಾರಸಿಂಹನ ಕಾಲದ ಒಂದು ವೀರಗಲ್ಲಿದೆ. (ಜಿ.ಎಂ.ಎಸ್.)

**ಹಳ್ಳಿಕೇರಿ, ಜಿ.ವಿ.:** 1906–71. ಸ್ವಾತಂತ್ರ್ಯ ಹೋರಾಟಗಾರರು; ಗಾಂಧಿವಾದಿ. ಕರ್ನಾಟಕ ವಿಧಾನಸಭೆಯ ಸಭಾಪತಿಗಳು.

ಇವರು 1906 ಜೂನ್ 6ರಂದು ಹಾವೇರಿ ಜಿಲ್ಲೆ ಹೊಸರಿತ್ತಿ ಗ್ರಾಮದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡ ಇವರು ಪೋಷಕರ ಆರೈಕೆಯಲ್ಲಿ ಬೆಳೆದರು. ವಿದ್ಯೆಯನ್ನು ನಿಷ್ಠೆಯಿಂದ ಕಲಿತು ಇಂಟರ್‌ಮೀಡಿಯೆಟ್‌ವರೆಗೂ ವ್ಯಾಸಂಗ ಮಾಡಿದರು. 1920ರಲ್ಲಿ ಇವರಿಗೆ ಗಾಂಧೀಜಿಯವರನ್ನು ನೇರವಾಗಿ ಕಾಣುವ ಅವಕಾಶ ದೊರೆಯಿತು. ಆ ಕ್ಷಣದಿಂದ ಗಾಂಧೀಜಿಯವರ ನಿಷ್ಠ ಅನುಯಾಯಿಯಾಗಿ ಬಾಳಲು ನಿರ್ಧರಿಸಿದರು. ಇವರು ಯೌವನಕ್ಕೆ ಕಾಲಿಟ್ಟಾಗ ಸ್ವಾತಂತ್ರ್ಯ ಚಳವಳಿ ಇವರನ್ನು ಕೈಬೀಸಿ ಕರೆಯಿತು. ಅದರ ಸೆಳೆತಕ್ಕೊಳಗಾದ ಇವರು ಶಿಕ್ಷಣ ನಿಲ್ಲಿಸಿ ಸ್ವಾತಂತ್ರ್ಯ ಚಳವಳಿಗೆ ತಮ್ಮನ್ನು ಅರ್ಪಿಸಿಕೊಂಡರು. 1930ರ ದಂಡಿಯಾತ್ರೆಯಲ್ಲಿ ಭಾಗವಹಿಸಿದರು. ಮುಂದೆ ಅನೇಕ ಬಾರಿ ಕಾನೂನು ಉಲ್ಲಂಘನೆಗಾಗಿ ಜೈಲುಶಿಕ್ಷೆ ಅನುಭವಿಸಿದರು. 1942ರಲ್ಲಿ ನಡೆದ ಕ್ವಿಟ್ ಇಂಡಿಯ ಚಳವಳಿಯಲ್ಲಿ ಉಗ್ರ ಹೋರಾಟ ನಡೆಸಿದ್ದಕ್ಕಾಗಿ ಮೂರು ವರ್ಷಗಳ ಸೆರೆವಾಸ ಅನುಭವಿಸಿದರು. ಅನಂತರ ತಮ್ಮ ಊರಾದ ಹೊಸರಿತ್ತಿಯಲ್ಲಿ ಗಾಂಧೀ ಆಶ್ರಮ ಸ್ಥಾಪಿಸಿ ಗಾಂಧೀ ವಾಚನಾಲಯ ಮತ್ತು ಚಿಕಿತ್ಸಾಲಯಗಳನ್ನೂ ಪ್ರಾರಂಭಿಸಿದರು.

ಉತ್ತಮ ಸಂಘಟನಕಾರರಾಗಿದ್ದ ಹಳ್ಳಿಕೇರಿಯವರು ತಮ್ಮ ಜಿಲ್ಲೆಯಲ್ಲಿ ನಾಯಕರಾಗಿ ರೂಪಗೊಂಡರು. ದಶಕಗಳ ಕಾಲ ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿ ಮುಂದೆ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಮತ್ತು ಅದರ ಸಹಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಇವರು 1952ರಲ್ಲಿ ಹಾವೇರಿ ಕ್ಷೇತ್ರದಿಂದ ಮುಂಬಯಿ ಪ್ರಾಂತದ ಶಾಸನಸಭೆಗೆ ಸ್ಪರ್ಧಿಸಿ ಶಾಸಕರಾಗಿ ಚುನಾಯಿತರಾದರು. ಏಕೀಕರಣ ಚಳವಳಿಯ ಕಾಲದಲ್ಲಿ ಎಸ್.ನಿಜಲಿಂಗಪ್ಪನವರೊಂದಿಗೆ ನಿಕಟವಾಗಿ ಸಂಘಟನೆಯಲ್ಲಿ ತೊಡಗಿದರು. ಎಸ್.ನಿಜಲಿಂಗಪ್ಪನವರ ರಾಜಕೀಯ ಶ್ರೇಯೋಭಿವೃದ್ಧಿಗೆ ತ್ರಿಕರಣಪೂರ್ವಕವಾಗಿ ಶ್ರಮಿಸಿದರು.

ಇವರು ರಾಜ್ಯ ವಿಧಾನಪರಿಷತ್‍ನ ಸದಸ್ಯರಾಗಿದ್ದರು (1960–71). ಈ ಅವಧಿಯಲ್ಲಿ ಇವರು ಎರಡು ಅವಧಿಗಳಿಗೆ ಸಭಾಪತಿಯಾಗಿ (1962ರ ಜುಲೈನಿಂದ 1966ರ ಮೇ 13 ಮತ್ತು 1970ರ ಡಿಸೆಂಬರ್ 26ರಿಂದ 1971ರ ಮೇ 15ರವರೆಗೆ) ಕಾರ್ಯ ನಿರ್ವಹಿಸುವ ಅವಕಾಶ ಪಡೆದರು. ಶ್ರೇಷ್ಠ ದರ್ಜೆಯ ಸಂಸದೀಯಪಟುವಾಗಿದ್ದ ಇವರು ರಾಜ್ಯದ ಶಾಸಕಾಂಗದ ನಡವಳಿಕೆಗಳಿಗೆ ಮಾದರಿ ಹಾಕಿಕೊಟ್ಟರು. ಸಾಮಾಜಿಕವಾಗಿಯೂ ಇವರ ಕೊಡುಗೆ ಅನುಪಮವಾದುದು. ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ, ರೈತ ಚಳವಳಿ ಸಂಘಟಿಸುವಲ್ಲಿ ಇವರ ಕಾಣಿಕೆ ಸ್ಮರಣಾರ್ಹ. 1932ರಲ್ಲಿ ಬಾಗಲಕೋಟೆಯಲ್ಲಿ ಇವರು ಸಂಘಟಿಸಿದ್ದ ರಾಜಕೀಯ ಸಮಾವೇಶ ಐತಿಹಾಸಿಕವಾದುದು. ಹುಬ್ಬಳ್ಳಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಇವರು ಬಹುತೇಕ ಕಾರಣರು. ಬೆಂಗಳೂರು ಮತ್ತು ತಮ್ಮ ಜನ್ಮಸ್ಥಳ ಹೊಸರಿತ್ತಿಯಲ್ಲೂ ಕಾಲೇಜುಗಳನ್ನು ಸ್ಥಾಪಿಸಿದ ಹೆಗ್ಗಳಿಕೆ ಇವರದು. ಇವರು 1971 ಮೇ 15ರಂದು ನಿಧನರಾದರು. ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಸಂಪಾದಕತ್ವದಲ್ಲಿ ಇವರನ್ನು ಕುರಿತು ರತ್ನಶಿಖಾ ಎಂಬ ನೆನಪಿನ ಗ್ರಂಥ ಹೊರಬಂದಿದೆ (1981). **(ಡಿ.ಎಸ್.ಜಿ.)**

**ಹಳ್ಳೂರು:** ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿ ತುಂಗಭದ್ರಾ ನದೀತೀರದಲ್ಲಿ ಇರುವ ಒಂದು ಪ್ರಮುಖ ಪ್ರಾಗೈತಿಹಾಸಿಕ ನೆಲೆ; ರಾಣೆಬೆನ್ನೂರಿಗೆ 45 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,771.

ಈ ಪ್ರದೇಶದಲ್ಲಿರುವ ಶಾಸನೋಕ್ತ ಹಳ್ಳವೂರು, ವಿಜಯಸಮುದ್ರ, ವಿಜಯಪುರವನ್ನು ಹಳ್ಳೂರೆಂದು ಊಹಿಸಲಾಗಿದೆ. ಈ ಪ್ರದೇಶ ಬೆಳಗುತ್ತಿ ಸಿಂದರ ಅಧಿಪತ್ಯ ಸ್ಥಳವಾಗಿತ್ತು. ಹೊಯ್ಸಳರ ಅಧೀನ ಅರಸರಾಗಿದ್ದ ಇವರು ಹಳ್ಳೂರನ್ನು ಒಂದು ಸೈನಿಕ ಠಾಣೆಯಾಗಿಟ್ಟುಕೊಂಡಿರಬೇಕು. ಈ ಊರಿನಲ್ಲಿ ಶ್ರೀರಂಗನಾಥ ದೇವಾಲಯವಿದೆ.

ಇಲ್ಲಿ ನಡೆಸಿದ ಉತ್ಖನನಗಳಿಂದಾಗಿ ನವಶಿಲಾಯುಗ ಸಂಸ್ಕೃತಿಯಿಂದ ಮೊದಲುಗೊಂಡು ಬೃಹತ್ ಶಿಲಾಯುಗ ಸಂಸ್ಕೃತಿಯವರೆಗಿನ ಚಿತ್ರಣ ಸಾಧ್ಯವಾಗಿದೆ. ನವಶಿಲಾಯುಗದ ಸಂಸ್ಕೃತಿಯಲ್ಲಿ ಆದಿಭಾಗ (ಪ್ರ.ಶ.ಪೂ. ಸು. 1710) ಹಾಗೂ ಉತ್ತರ ಭಾಗ (ಪ್ರ.ಶ.ಪೂ. ಸು. 1425–1195) ಎಂದು ಎರಡು ವಿಭಾಗಗಳನ್ನು ಗುರುತಿಸಬಹುದಾಗಿದೆ. ಆದಿಭಾಗದ ಪದರಿನಲ್ಲಿ ಕಪ್ಪುಬಣ್ಣದ ಮಡಕೆಗಳೂ ಅವುಗಳ ಮೇಲೆ ಕೆಂಪುಬಣ್ಣದ ಅಲಂಕರಣಗಳೂ ಕೆಂಪುಬಣ್ಣದ ಮಡಕೆಗಳೂ ಅವುಗಳ ಮೇಲೆ ಜಾಂಬಳಿ ಬಣ್ಣದ ಅಲಂಕರಣಗಳೂ ಕಂಡುಬಂದಿವೆ. ನಯಗೊಳಿಸಿದ ಕಲ್ಲಿನ ಕೊಡಲಿಗಳು ಈ ಪದರಿನಲ್ಲಿ ಹೇರಳವಾಗಿ ಸಿಕ್ಕಿಲ್ಲ. ಕಟ್ಟಡಗಳ ಅವಶೇಷಗಳೂ ಸಿಕ್ಕಿಲ್ಲ. ಕ್ವಾರ್ಟ್ಜ಼್ ಕಲ್ಲಿನ ಚಕ್ಕೆಗಳು ದೊರೆತಿವೆ. ಚಾಲ್ಕೊಲಿತಿಕ್ ಉದ್ಯಮದಲ್ಲಿ ವಿಶೇಷವಾಗಿ ಸಿಗುವ ಬ್ಲೇಡುಗಳು ಇಲ್ಲಿ ದೊರೆತಿರುವುದು ಗಮನಾರ್ಹ. ಆದರೆ ಲೋಹದ ವಸ್ತುಗಳಾವುವೂ ಸಿಕ್ಕಿಲ್ಲ.

ಉತ್ತರಭಾಗದಲ್ಲಿ, ನವಶಿಲಾಯುಗೀನ ಸಂಸ್ಕೃತಿಯ ಚಿತ್ರಣ ಇನ್ನೂ ಸ್ಪಷ್ಟ. ವೃತ್ತಾಕಾರದ ಕಟ್ಟಡದ ತಳಪಾಯ, ಪೆಟ್ಟಿಸಿ ಗಟ್ಟಿಮಾಡಿದ ನೆಲದ ಭಾಗ, ಒಲೆ, ಬೆಂಕಿ ಉರಿಸುತ್ತಿದ್ದ ಸ್ಥಳ ಇತ್ಯಾದಿಗಳನ್ನು ಗುರುತಿಸಲಾಗಿದೆ. ವೃತ್ತಾಕಾರದ ಕಟ್ಟಡದ ಮಧ್ಯದಲ್ಲಿ ಎರಡು ಕುಣಿಗಳು ಕಂಡುಬಂದಿವೆ. ಇವುಗಳಲ್ಲಿ ಬಹುಶಃ ನೆಟ್ಟಕಂಬದ ಮೇಲೆ ಇಳಿಜಾರಾದ ಮಾಡು ನಿರ್ಮಿತವಾಗಿತ್ತು. ಈ ನೆಲೆಯಲ್ಲಿ ನಯಗೊಳಿಸಿದ ಕಲ್ಲಿನ ಕೊಡಲಿಗಳೂ ತಲೆಗೆ ಊರೆಯಾಗಿ ಇಟ್ಟುಕೊಳ್ಳುತ್ತಿದ್ದಿರಬಹುದಾದ ಕೊರಡು ಸಿಕ್ಕಿವೆ. ಕೈಯಿಂದ ಮಾಡಿದ ಮಡಕೆ ಕುಡಿಕೆಗಳೂ ಶವಸಂಸ್ಕಾರದಲ್ಲಿ ಉಪಯೋಗಿಸುತ್ತಿದ್ದ ಮಣ್ಣಿನ ದೊಡ್ಡ ಪಾತ್ರೆಗಳೂ ಸಿಕ್ಕಿವೆ. ಇಂಥ ಪಾತ್ರೆಗಳಲ್ಲಿ ಎಲುಬುಗಳನ್ನಿಟ್ಟು ಅವುಗಳ ಬಾಯಿಗಳನ್ನು ಒಂದಕ್ಕೊಂದು ಸೇರಿಸಿಬಿಡುತ್ತಿದ್ದರು. ಮಣ್ಣಿನಿಂದ ಮಾಡಿ ಸುಟ್ಟ ಮಣಿಗಳೂ ಚಿಪ್ಪಿನಿಂದ ಮಾಡಿದ ಹಾಗೂ ಸಾಬೂನುಗಲ್ಲಿನ ಮಣಿಗಳೂ ಸಾಕಷ್ಟು ಸಿಕ್ಕಿವೆ. ಎಲುಬಿನಿಂದ ತಯಾರಿಸಿದ ದಬ್ಬಳದಂಥ ಉಪಕರಣಗಳೂ ದೊರೆತಿವೆ. ಎರಡು ಅಲಗುಳ್ಳ ತಾಮ್ರದ ಕೊಡಲು (ಪರಶುವಿನಂಥ ಕೊಡಲಿ), ಮೀನು ಹಿಡಿಯಲು ಬಳಸುವ ಗಾಳಗಳೂ ಕಂಡುಬಂದಿವೆ. ಸುಟ್ಟ ಎಲುಬಿನ ಚೂರುಗಳೂ ಸುಟ್ಟ ರಾಗಿಕಾಳುಗಳೂ ದೊರೆತಿದ್ದು ಇವು ಆ ಕಾಲದ ಜನರ ಆಹಾರ ವಿಧಾನದ ಬಗೆಗೆ ವಿಶೇಷ ಮಾಹಿತಿ ನೀಡುತ್ತವೆ (ರಾಗಿಯ ಅತ್ಯಂತ ಪ್ರಾಚೀನ ಕಾಳುಗಳು ದೊರೆತದ್ದು ಈ ಸ್ಥಳದಲ್ಲಿ (ಪ್ರ.ಶ.ಪೂ. ಸು. 1600) ಎಂಬುದನ್ನು ಇಲ್ಲಿ ಗಮನಿಸಬೇಕು. ಈ ಎಲ್ಲ ವಸ್ತು ವಿಶೇಷಗಳನ್ನು ಆಧರಿಸಿ ಈ ಪ್ರದೇಶದಲ್ಲಿದ್ದ ನವಶಿಲಾಯುಗದ ಜನರ ಜೀವನಕ್ರಮ, ಆಹಾರ ಪದ್ಧತಿ, ಪ್ರಾಣಿ ಸಾಕಣೆ, ಕೃಷಿ, ಕೈಗಾರಿಕೆ, ಚಾಪೆ ಹೆಣಿಗೆ, ಮೀನುಗಾರಿಕೆ ಇತ್ಯಾದಿಗಳನ್ನು ಚಿತ್ರಿಸಬಹುದು. ಶವಸಂಸ್ಕಾರ ಪದ್ಧತಿಯನ್ನು ಗಮನಿಸಿದರೆ ಆ ಜನರಿಗೆ ಬಹುಶಃ ಪುನರ್ಜನ್ಮದಲ್ಲಿ ನಂಬಿಕೆಯಿದ್ದಿರಬೇಕು. ಇಂಥ ನವಶಿಲಾಯುಗದ ಸಂಸ್ಕೃತಿಯ ಅನಂತರ ಪ್ರ.ಶ.ಪೂ. ಸು. 1000ದ ವೇಳೆಗೆ ಬೃಹತ್ ಶಿಲಾಯುಗೀನ ಜನಜೀವನ ಹಳ್ಳೂರಿನಲ್ಲಿ ಆರಂಭವಾಯಿತು. ಸಮಾಧಿ ರಚನೆಯಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸುವುದು, ವಿವರಪೂರ್ಣವಾದ ಶವಸಂಸ್ಕಾರ ಪದ್ಧತಿ, ಚಕ್ರದ ಮೇಲಿಟ್ಟು ರಚಿಸಿದ ಕಪ್ಪು–ಕೆಂಪು ಮಡಿಕೆ ಕುಡಿಕೆಗಳ ಬಳಕೆ, ಕಬ್ಬಿಣದ ಆಯುಧೋಪಕರಣಗಳ ಉಪಯೋಗ (ಬಾಣದ ಮೊನೆ, ಭರ್ಜಿ, ಚಾಕು ಇತ್ಯಾದಿ) ಮುಂತಾದವು ಇಲ್ಲಿಯ ಬೃಹತ್ ಶಿಲಾಯುಗೀನ ಸಂಸ್ಕೃತಿಯ ಕೆಲವು ಲಕ್ಷಣಗಳು. ಇವಲ್ಲದೆ ಹಳ್ಳೂರಿನಲ್ಲಿ ಕಬ್ಬಿಣದ ಉಪಕರಣಗಳಿಗೆ ಅಂಟಿಕೊಂಡಿದ್ದ ಬತ್ತದ ಹೊಟ್ಟು ಪತ್ತೆಯಾಗಿದ್ದು ಅದರಿಂದ ಆ ಕಾಲದ ಆಹಾರ ಪದ್ಧತಿಯ ಬಗೆಗೆ ಮಾಹಿತಿ ದೊರೆಯುತ್ತದೆ. ಇಲ್ಲಿ ದೊರೆತ ಕಬ್ಬಿಣದ ಆಯುಧೋಪಕರಣಗಳ ಕಾಲ ಪ್ರ.ಶ.ಪೂ. ಸು. 1000 **(ನೋಡಿ: ಪ್ರಾಗಿತಿಹಾಸ)**. **(ಎಚ್.ಆರ್.ಆರ್.ಬಿ.)**

**ಹಾಗಲವಾಡಿಯ ಪಾಳೆಯಗಾರರು:** ತುಮಕೂರು ಜಿಲ್ಲೆಯ ಬಹುಭಾಗವನ್ನು ಸು. 1478 ರಿಂದ 1776ರವರೆಗೆ ಆಳುತ್ತಿದ್ದ ಅರಸುಮನೆತನ. ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಇವರ ರಾಜಧಾನಿಯಾಗಿತ್ತು. ಈ ನಾಯಕರ ವಂಶದ ಆಳಿಕೆಯನ್ನು ಸ್ಥಾಪಿಸಿದವನು ಗೌಲಗೋತ್ರದ ಯರಿಮಾದನಾಯಕ. ಇವನ ಅನಂತರ ಆಳಿದ ಸಾಲಿನಾಯಕ (ಸು. 1508–44) ಕಂಡಿಕೆರೆ ಮತ್ತು ಶೆಟ್ಟಿಕೆರೆಗಳನ್ನು ಹಿಡಿದು, ಈ ಸ್ಥಳಗಳನ್ನು ತನಗೆ ಸ್ಥಿರಪಡಿಸಬೇಕೆಂಬ ಷರತ್ತಿನ ಮೇಲೆ ಪೆನುಕೊಂಡೆ ಸೈನ್ಯದ ಸಹಾಯಕ್ಕೆ ಹೋದ. ಆದರೆ ಪೆನುಕೊಂಡೆ ಸೈನ್ಯ ಸೋಲಲು ತನಗೆ ಸಿಕ್ಕಿದಷ್ಟು ಕೊಳ್ಳೆಹೊಡೆದು ರಾಜಧಾನಿಗೆ ಹಿಂದಿರುಗಿದ. ತನ್ನ ಸಹೋದರನ ಹೆಸರಿನಲ್ಲಿ ಚಿಕ್ಕನಾಯಕನಹಳ್ಳಿಯನ್ನು ಸ್ಥಾಪಿಸಿದ. ಹೊನ್ನವಳ್ಳಿ ಮತ್ತು ತುರುವೇಕೆರೆಗಳನ್ನು ಆಕ್ರಮಿಸಿಕೊಂಡ. ಹೀಗೆ ರಾಜ್ಯವನ್ನು ವಿಸ್ತರಿಸಿದ. ಇವನ ಅನಂತರ

ಆಳಿದವನು ಭೈರವನಾಯಕ (ಸು. 1544–78). ಈತ ಹಾಗಲವಾಡಿಯನ್ನು ಸ್ಥಾಪಿಸಿ (1558) ಅದನ್ನು ರಾಜಧಾನಿಯಾಗಿ ಮಾಡಿಕೊಂಡ. ಈತ ವೀರಶೈವ ಧರ್ಮವನ್ನು ಸ್ವೀಕರಿಸಿದ್ದ. ಈತನ ಮಗ ಒಂದನೆಯ ಮುದಿಯಪ್ಪ ನಾಯಕ (ಸು. 1578–1618) ರಾಜ್ಯವನ್ನು ಮತ್ತಷ್ಟು ವಿಸ್ತರಿಸಿದ. ಅನಂತರ ಆಳಿದ ಇಮ್ಮಡಿ ಭೈರಪ್ಪನಾಯಕ (1618–46) ಮೊದಲು ರಣದುಲ್ಲಾಖಾನನ ದಾಳಿಯನ್ನು ಎದುರಿಸಿದರೂ ಕೊನೆಯಲ್ಲಿ ತನ್ನ ರಾಜ್ಯದ ಕೆಲವು ಭಾಗಗಳನ್ನು ಅವನಿಗೆ ಬಿಟ್ಟುಕೊಟ್ಟ. ಈ ವಂಶದ ಒಂಬತ್ತನೆಯವನಾದ ಎರಡನೆಯ ಮುದಿಯಪ್ಪನಾಯಕ (ಸು.1700–40) ರಾಜಋಷಿ, ನಿಷ್ಠ ವೀರಶೈವನಾದರೂ ಎಲ್ಲ ಧರ್ಮಗಳಿಗೂ ಪ್ರೋತ್ಸಾಹವಿತ್ತ. ವಿದ್ವಾಂಸರಿಗೂ ಸಂಗೀತಗಾರರಿಗೂ ಪ್ರೋತ್ಸಾಹವಿತ್ತು ಅವರ ಸಹಾಯದಿಂದ ಜನರಲ್ಲಿ ಧರ್ಮಪ್ರಜ್ಞೆ ಬೆಳೆಸಲು ಪ್ರಯತ್ನಿಸಿದ. ಕೊನೆಯಲ್ಲಿ ಸಿಂಹಾಸನ ತ್ಯಾಗಮಾಡಿ ತಾನೇ ಆ ಕಾರ್ಯವನ್ನು ಕೈಗೊಂಡ. ಈತನ ಮಗ ಮುದ್ದುವೀರಪ್ಪ ನಾಯಕ 1740–53ರ ವರೆಗೆ ಆಳಿದ, ಮುಗಲರಿಂದ ಜಂಗ್‌ಬಹದ್ದೂರ್ ಎಂಬ ಬಿರುದನ್ನು ಪಡೆದ. ಈ ವಂಶದ ಹನ್ನೆರಡನೆಯವನಾದ ಚನ್ನಬಸಪ್ಪ ನಾಯಕನನ್ನು ಹೈದರ್ ಅಲಿ ಕುತಂತ್ರದಿಂದ ಹಿಡಿದು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟ. ಅನಂತರ ಹಾಗಲವಾಡಿ ಪಾಳೆಯಪಟ್ಟು ಮೈಸೂರು ರಾಜ್ಯದಲ್ಲಿ ವಿಲೀನವಾಯಿತು. **(ಎ.ವಿ.ವಿ.)**

**ಹಾಡುವಳ್ಳಿ:** ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕಿನ ಒಂದು ಗ್ರಾಮ; ಇತಿಹಾಸ ಪ್ರಸಿದ್ಧ ಸ್ಥಳ. ಭಟ್ಕಳಕ್ಕೆ ಸು.19 ಕಿಮೀ ದೂರದಲ್ಲಿದೆ. ಜನಸಂಖ್ಯೆ 514.

ಈ ಗ್ರಾಮ ಹಿಂದೆ ಸಂಗೀತಪುರ ಎಂಬ ಹೆಸರಿನಿಂದ ಪ್ರಖ್ಯಾತವಾಗಿದ್ದು ಸಾಳುವರ ರಾಜಧಾನಿಯಾಗಿತ್ತು **(ನೋಡಿ: ಸಾಳುವರು, ಹಾಡುವಳ್ಳಿಯ)**. ಊರು ಇಂದ್ರಗಿರಿ, ಚಂದ್ರಗಿರಿ ಎಂಬ ಎರಡು ಬೆಟ್ಟಗಳ ಬುಡದಲ್ಲಿ ಇದೆ. ಚಂದ್ರಗಿರಿಯ ಮೇಲೆ ಸಂಗೀತ ಬಾರಿಸಿದರೆ ಇಂದ್ರಗಿರಿಯಲ್ಲಿ ಪ್ರತಿಧ್ವನಿಸಿ ತಿರುಗಿ ಸ್ವಲ್ಪ ಸಮಯದಲ್ಲಿ ಕೇಳುತ್ತದೆಯೆಂದೂ ಚೆನ್ನಭೈರಾದೇವಿಯ ಕಾಲದಲ್ಲಿ ಸಂಗೀತ, ನೃತ್ಯ, ಆಟಪಾಠಗಳು ಚಂದ್ರಗಿರಿಯ ಮೇಲೆ ನಡೆಯುತ್ತಿದ್ದು ಅದನ್ನು ಇಂದ್ರಗಿರಿಯಲ್ಲಿ ಕುಳಿತು ನೋಡಿ ನಲಿಯುತ್ತಿದ್ದರೆಂದೂ ತಿಳಿದುಬರುತ್ತದೆ. ಇದೊಂದು ಸಂಗೀತಕೇಂದ್ರವಾಗಿ ಹೆಚ್ಚಿನ ಜನರನ್ನು ಆಕರ್ಷಿಸುತ್ತಿದ್ದುದರಿಂದ ಇದಕ್ಕೆ ಸಂಗೀತಪುರವೆಂಬ ಹೆಸರಾಯಿತು.

ಜೈನಕ್ಷೇತ್ರವೆಂದು ಹೆಸರಾಗಿರುವ ಈ ಊರಿನಲ್ಲಿ ಪದ್ಮಾವತಿ ದೇವಾಲಯ, ಹರಿಪೀಠದಲ್ಲಿಯ 24 ತೀರ್ಥಂಕರರ ವಿಗ್ರಹ, ಚಂದ್ರನಾಥ ದೇವಾಲಯ, ಪಾರ್ಶ್ವನಾಥ, ನೇಮಿನಾಥ ಮೊದಲಾದ ದೇವಾಲಯಗಳು, ಚಂದ್ರಗಿರಿ ಮತ್ತು ಇಂದ್ರಗಿರಿ ಮೊದಲಾದ ಪ್ರೇಕ್ಷಣೀಯ ಸ್ಥಳಗಳು ಇವೆ. ಪದ್ಮಾವತಿ ದೇವಾಲಯದಲ್ಲಿ ತೀರ್ಥಂಕರರನ್ನು ಒಂದೇ ಸಾಲಿನಲ್ಲಿ ಪ್ರತಿಷ್ಠಾಪಿಸಿದ್ದು, ಬಲಬದಿಗೆ ಪದ್ಮಾವತಮ್ಮನವರ ವಿಗ್ರಹ, ಎಡಬದಿಗೆ ಶಾರದಾವಿಗ್ರಹ, ಎದುರಿಗೆ ಪದ್ಮಾವತಮ್ಮನವರ ಕಂಚಿನ ವಿಗ್ರಹ, ಬ್ರಹ್ಮ, ಕ್ಷೇತ್ರಪಾಲ ಮೊದಲಾದ ವಿಗ್ರಹಗಳನ್ನು ಕಾಣಬಹುದು. ದೇವಾಲಯಗಳ ಸುತ್ತಲೂ ಅನೇಕ ವೀರಗಲ್ಲುಗಳು ಇವೆ. ಪದ್ಮಾವತಿ ದೇವಾಲಯದ ಸಮೀಪದಲ್ಲಿಯೆ ಪಾರ್ಶ್ವನಾಥ ದೇವಾಲಯವಿದೆ. ಇಲ್ಲಿರುವ ಪಾರ್ಶ್ವನಾಥನ ಸುಂದರ ವಿಗ್ರಹ ಅಮೃತಶಿಲೆಯದು. ಈ ಮೂರ್ತಿಯ ಪ್ರಭಾವಳಿಯಲ್ಲಿ ಆದಿಶೇಷನ ಚಿತ್ರವನ್ನು ಬಿಡಿಸಲಾಗಿದೆ. ಈ ದೇವಾಲಯಕ್ಕೆ ಸ್ವಲ್ಪ ದೂರದಲ್ಲಿ ನೇಮಿನಾಥ ಬಸದಿ ಇದೆ. ಇದು ವಿಶಾಲವಾಗಿದ್ದು ಆಕರ್ಷಕ ಕೆತ್ತನೆ ಕೆಲಸದಿಂದ ಕೂಡಿದೆ. ಈ ದೇವಾಲಯಕ್ಕೆ ಅನತಿದೂರದಲ್ಲಿ ಚಂದ್ರನಾಥ ಬಸದಿ ಇದೆ. ಇಲ್ಲಿಯ ವಿಗ್ರಹ ಅಮೃತಶಿಲೆಯಿಂದ ರಚಿತವಾಗಿದ್ದು ಸುಂದರವಾಗಿದೆ. ಈ ವಿಗ್ರಹದ ಎಡಬಲಗಳಲ್ಲಿ ಜ್ವಾಲೆ ಮತ್ತು ಮಾಲಿನಿಯರ ವಿಗ್ರಹಗಳಿವೆ. ಈ ದೇವಾಲಯಕ್ಕೆ ಸ್ವಲ್ಪ ದೂರದಲ್ಲಿ ಚಂದ್ರಪ್ರಭ ತೀರ್ಥಂಕರರ ಬಸದಿ ಇದೆ. *

**ಹಾನಗಲ್ಲು:** ಹಾವೇರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಶಿಗ್ಗಾಂವಿ, ಈಶಾನ್ಯದಲ್ಲಿ ಸವಣೂರು, ಪೂರ್ವದಲ್ಲಿ ಹಾವೇರಿ ಮತ್ತು ಬ್ಯಾಡಗಿ ತಾಲ್ಲೂಕುಗಳೂ ದಕ್ಷಿಣದಲ್ಲಿ ಹಿರೇಕೆರೂರು ಮತ್ತು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕುಗಳೂ ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಮುಂಡಗೋಡ ತಾಲ್ಲೂಕುಗಳೂ ಸುತ್ತುವರಿದಿವೆ. ಜಿಲ್ಲೆಯ ನೈಋತ್ಯಕ್ಕಿರುವ ಈ ತಾಲ್ಲೂಕಿನಲ್ಲಿ ಒಟ್ಟು 143 ಗ್ರಾಮಗಳೂ ಒಂದು ಪಟ್ಟಣವೂ ಇವೆ. ವಿಸ್ತೀರ್ಣ 769.9 ಚ.ಕಿಮೀ. ಜನಸಂಖ್ಯೆ 2,30,310.

ಈ ತಾಲ್ಲೂಕು ಜಿಲ್ಲೆಯ ಮಲೆನಾಡು ಪ್ರದೇಶಕ್ಕೆ ಸೇರಿದೆ. ಈ ಪ್ರದೇಶದಲ್ಲಿ ಚಿಕ್ಕ ಬೆಟ್ಟಗುಡ್ಡಗಳನ್ನು ಕಾಣಬಹುದು. ಇಲ್ಲಿನ ಕಾಡುಗಳಲ್ಲಿ ಬೆಲೆಬಾಳುವ ಗಂಧದ ಮರ ಬೆಳೆಯುತ್ತವೆ. ರಕ್ಷಿತ ಅರಣ್ಯ ಪ್ರದೇಶ ಮತ್ತು ಹುಲ್ಲುಗಾವಲುಗಳಿವೆ. ತಾಲ್ಲೂಕಿನ ಮುಖ್ಯನದಿ ವರದಾ. ಇದು ತಾಲ್ಲೂಕಿನ ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಯನ್ನು ವಿಂಗಡಿಸುವ ಗಡಿಯಾಗಿ ಸ್ವಲ್ಪ ದೂರ ಹರಿದು ಹೊಂಕಣದ ಬಳಿ ತಾಲ್ಲೂಕನ್ನು ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಹರಿದು ಮುಂದೆ ಉತ್ತರಾಭಿಮುಖವಾಗಿ ಹಾವೇರಿ ತಾಲ್ಲೂಕನ್ನು ವಿಂಗಡಿಸುವ ಗಡಿಯಾಗಿ ಹರಿಯುವುದು. ಮುಂದೆ ಹಾವೇರಿ ತಾಲ್ಲೂಕಿನ ಉತ್ತರದಲ್ಲಿ ಗಳಗನಾಥ ಗ್ರಾಮದ ಬಳಿ ತುಂಗಭದ್ರಾ ನದಿಯನ್ನು ಸೇರಿಕೊಳ್ಳುವುದು. ಈ ತಾಲ್ಲೂಕಿನ ಮತ್ತೊಂದು ನದಿ ಧರ್ಮಾ. ಇದು ತಾಲ್ಲೂಕನ್ನು ಪಶ್ಚಿಮದಿಂದ ಪ್ರವೇಶಿಸಿ ಸ್ವಲ್ಪ ದೂರ ಪೂರ್ವಾಭಿಮುಖವಾಗಿ ಹರಿದು ಅನಂತರ ಈಶಾನ್ಯಾಭಿಮುಖವಾಗಿ ಹಾನಗಲ್ಲು ಮುಖಾಂತರ ಹರಿದು ನರೇಗಲ್ಲು ಬಳಿ ವರದಾನದಿಯನ್ನು ಸೇರಿಕೊಳ್ಳುವುದು. ಹಾನಗಲ್ಲು, ನರೇಗಲ್ಲು ಮುಂತಾದ ಕಡೆ ದೊಡ್ಡ ಕೆರೆಗಳಿವೆ. ವ್ಯವಸಾಯಕ್ಕೆ ಅನುಕೂಲವಾಗಿ ಕೆಲವು ಬಾವಿಗಳೂ ಕೆರೆಗಳೂ ಇವೆ. ಧರ್ಮಾ ನದಿಗೆ ಹಾನಗಲ್ಲಿನ ನೈಋತ್ಯಕ್ಕೆ 13 ಕಿಮೀ ದೂರದಲ್ಲಿರುವ ಶೃಂಗೇರಿ ಗ್ರಾಮದ ಬಳಿ ಕಟ್ಟೆ ಕಟ್ಟಿ ಕಮನಹಳ್ಳಿ ಮತ್ತು ಧರ್ಮಾ ಎಂಬ ಎರಡು ನಾಲೆಗಳನ್ನು ತೆಗೆದಿದ್ದಾರೆ. ಈ ನಾಲೆ ತಾಲ್ಲೂಕಿನ ಮಧ್ಯದಲ್ಲಿ ಈಶಾನ್ಯಾಭಿಮುಖವಾಗಿ ಹರಿದು ಸುತ್ತಲ ಭೂಮಿಗೆ ಜಲಾಧಾರವಾಗಿದೆ. ಈ ಕಟ್ಟೆ ಮತ್ತು ನಾಲೆಗಳು ಸು.400 ವರ್ಷಗಳಷ್ಟು ಹಳೆಯವಾಗಿದ್ದು 1921–22ರಲ್ಲಿ ದುರಸ್ತಿ ಮಾಡಲಾಯಿತು. ಹಿಂದಿನಿಂದಲೂ ಈ ತಾಲ್ಲೂಕು ನೀರಾವರಿಯಲ್ಲಿ ಮುಂದುವರಿದ ಪ್ರದೇಶವಾಗಿದೆ. ಉತ್ತಮ ಹವಾಗುಣವಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 972.6 ಮಿಮೀ.

ಮಲೆನಾಡ ಪ್ರದೇಶಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ ಬತ್ತದ ಪ್ರದೇಶ ಹೆಚ್ಚು. ಕಂದು ಮತ್ತು ಕೆಂಪು ಮಣ್ಣಿನ ಜಿಗಟು ಭೂಪ್ರದೇಶವಿದ್ದು ಧರ್ಮಾ ಮತ್ತು ವರದಾ ನದಿಯ ದಡಗಳುದ್ದಕ್ಕೂ ರೇವೆಮಣ್ಣಿನ ಫಲವತ್ತಾದ ಪ್ರದೇಶವಿದೆ. ಬತ್ತ, ಕಬ್ಬು, ರಾಗಿ, ದ್ವಿದಳಧಾನ್ಯಗಳು, ಜೋಳ, ಹತ್ತಿ ಮುಂತಾದವುಗಳನ್ನು ಬೆಳೆಯುತ್ತಾರೆ.ತೆಂಗು, ಎಣ್ಣೆಬೀಜಗಳಲ್ಲಿ ಸೇಂಗಾ, ಹರಳು, ಉಚ್ಚೆಳ್ಳು ಮುಂತಾದವನ್ನು ಬೆಳೆಯುತ್ತಾರೆ.

ತಾಲ್ಲೂಕಿನಲ್ಲಿ ಅಕ್ಕಿ ಗಿರಣಿಗಳಿವೆ. ಸೇಂಗಾ ಎಣ್ಣೆ ತಯಾರಿಕೆಯುಂಟು. ಅಕ್ಕಿ ಉರುವಲು ಕಟ್ಟಿಗೆ ಮತ್ತು ಗಂಧದ ಮರ ಇವು ತಾಲ್ಲೂಕಿನಿಂದ ಹೆಚ್ಚಾಗಿ ರಫ್ತಾಗುವುವು. ಇಲ್ಲಿ ವಾಣಿಜ್ಯ, ಮತ್ತು ಸಹಕಾರಿ ಬ್ಯಾಂಕುಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್ ಸೌಲಭ್ಯಗಳಿವೆ. ಆಸ್ಪತ್ರೆ, ಔಷಧಾಲಯಗಳು ಮತ್ತು ಪ್ರೌಢಶಾಲೆಗಳಿವೆ. ಜಿಲ್ಲಾ ಮತ್ತು ತಾಲ್ಲೂಕು ಹೆದ್ದಾರಿಗಳಿದ್ದು ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ

ಸಂಪರ್ಕವಿದೆ. ತಾಲ್ಲೂಕಿಗೆ ಹತ್ತಿರವಾಗಿ, ಹಾನಗಲ್ಲಿಗೆ ಪೂರ್ವದಲ್ಲಿ 35 ಕಿಮೀ ದೂರದಲ್ಲಿ ಹಾವೇರಿ ರೈಲುನಿಲ್ದಾಣವಿದೆ.

ಹಾನಗಲ್ಲಿನ ಈಶಾನ್ಯಕ್ಕೆ 10 ಕಿಮೀ ದೂರದಲ್ಲಿರುವ ಅರಳೇಶ್ವರ ಗ್ರಾಮದ ಬಳಿ ಚಾಳುಕ್ಯ ಶೈಲಿಯ ಕದಂಬೇಶ್ವರ ದೇವಾಲಯವಿದೆ. ಇಲ್ಲಿ ಕದಂಬ ದೊರೆ ಶಾಂತಿವರ್ಮ, ಕಲ್ಯಾಣದ ಚಾಳುಕ್ಯರಾಜ ತೈಲಪ III (1128) ಮತ್ತು ಸೇವುಣ ಕನ್ನರ (1260) ಇವರಿಗೆ ಸೇರಿದ ಏಳು ಶಾಸನಗಳಿವೆ. ಹಾನಗಲ್ಲಿಗೆ ಪೂರ್ವದಲ್ಲಿರುವ ಆಡೂರಿನಲ್ಲಿ ಬಾದಾಮಿ ಚಳುಕ್ಯ ವಂಶಕ್ಕೆ ಸೇರಿದ ಎರಡನೆಯ ಕೀರ್ತಿವರ್ಮನ (745–57) ಶಾಸನವೂ ಸೇರಿದಂತೆ ಏಳು ಶಾಸನಗಳಿವೆ. ಹಾನಗಲ್ಲಿನ ಪೂರ್ವಕ್ಕಿರುವ ಬಾಳಂಬೀಡ ಗ್ರಾಮದಲ್ಲಿ ರಾಮೇಶ್ವರ ಮತ್ತು ಕಮಲೇಶ್ವರ ಎಂಬ ಎರಡು ಪುರಾತನ ದೇವಾಲಯಗಳಿವೆ. ಇಲ್ಲಿನ 1145ರ ಒಂದು ಶಾಸನದಲ್ಲಿ ಪಾರ್ಶ್ವನಾಥ ದೇವಾಲಯದ ರಚನೆ ಕುರಿತ ಮಾಹಿತಿ ಇದೆ. ಕೆಲವು ವೀರಗಲ್ಲುಗಳಿವೆ. ಹಾನಗಲ್ಲಿಗೆ ಈಶಾನ್ಯದಲ್ಲಿ 13 ಕಿಮೀ ದೂರದಲ್ಲಿರುವ ಬೆಳವತ್ತಿ ಗ್ರಾಮ ಹಿಂದಿನ ಲೀಲಾವತಿ ಪಟ್ಟಣವಾಗಿತ್ತೆಂದು ಹೇಳುವರು. ಇಲ್ಲಿ ಕರಿಕಲ್ಲಿನ ಗೋಕುಲೇಶ್ವರ ದೇವಾಲಯವಿದೆ. ಚಾಳುಕ್ಯರ ಕಾಲಕ್ಕೆ ಸೇರಿದ ಈ ದೇವಾಲಯದಲ್ಲಿ ಕೆತ್ತನೆ ಕೆಲಸದ ಗೋಡೆಗಳು, ಶಾಸನಗಳೂ ಇವೆ. ರಾಷ್ಟ್ರಕೂಟ ಗೋವಿಂದನ (930) ಒಂದು ಶಾಸನವೂ ಇಲ್ಲಿದೆ. ಹಾನಗಲ್ಲಿನ ಉತ್ತರಕ್ಕೆ 16 ಕಿಮೀ ದೂರದಲ್ಲಿರುವ ಬೊಮ್ಮನಹಳ್ಳಿಯ ಈಶ್ವರ ದೇವಾಲಯ ಬಹು ಪ್ರಸಿದ್ಧ. ಹಾನಗಲ್ಲಿಗೆ ಆಗ್ನೇಯಕ್ಕೆ 26 ಕಿಮೀ ದೂರದಲ್ಲಿರುವ ಹಳ್ಳಿಬೈಲಿನಲ್ಲಿ ಸಿದ್ಧರಾಮೇಶ್ವರ ದೇವಾಲಯವಿದೆ. ಹಾನಗಲ್ಲಿನ ಆಗ್ನೇಯದಲ್ಲಿ ತಾಲ್ಲೂಕಿನ ಅಂಚಿನಲ್ಲಿರುವ ಹಿರೇಬಾಸೂರು ಹಿಂದೆ ವ್ಯಾಸಪುರವೆಂದು ಪ್ರಸಿದ್ಧವಾಗಿತ್ತೆಂದು ಪ್ರತೀತಿ. ಇಲ್ಲಿ ವಿಶ್ವೇಶ್ವರ ಮತ್ತು ಹನುಮಂತ ದೇವಾಲಯಗಳಿವೆ. ಕಳಚುರಿ ಎರಡನೆಯ ಬಿಜ್ಜಳ ಮತ್ತು ಅವನ ಮಗ ಆಹವಮಲ್ಲ ಮತ್ತು ಯಾದವ ಸಿಂಘಣ ಇವರ ಕಾಲದ ಶಾಸನಗಳಿವೆ. ಹಾನಗಲ್ಲಿನ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿರುವ ಹೊಂಕಣ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಮೂರ್ತಿ ಆಕರ್ಷಕವಾದದ್ದು. ಹಾನಗಲ್ಲಿನ ಈಶಾನ್ಯದಲ್ಲಿ 13 ಕಿಮೀ ದೂರದಲ್ಲಿರುವ ಜಕ್ಕನಾಯಕನಕೊಪ್ಪದಲ್ಲಿ ಸರ್ವೇಶ್ವರದೇವ ದೇವಾಲಯವಿದೆ. ಹಾನಗಲ್ಲಿನ ಈಶಾನ್ಯದಲ್ಲಿರುವ ಕೂಡಲ ಬಳಿ ಧರ್ಮಾನದಿ ವರದಾನದಿಯನ್ನು ಸೇರುವುದು. ಇಲ್ಲಿ ಸಂಗಮೇಶ್ವರ ದೇವಾಲಯ ಮತ್ತು ಇದರ ಹತ್ತಿರವೇ 12ನೆಯ ಶತಮಾನದ ಒಂದು ವೀರಗಲ್ಲು ಇದೆ. ಹಾನಗಲ್ಲಿನ ಈಶಾನ್ಯಕ್ಕಿರುವ ನರೇಗಲ್ಲಿನಲ್ಲಿ ಒಂದು ದೊಡ್ಡಕೆರೆ ಮತ್ತು ಬಸಪ್ಪ ದೇವಾಲಯವಿದೆ. ಪುರಾತನ ಸರ್ವೇಶ್ವರ ದೇವಾಲಯ ಮತ್ತು ರಾಷ್ಟ್ರಕೂಟ ಧ್ರುವನ (780–93) ಶಾಸನವಿದೆ. ಈ ಗ್ರಾಮ 11 ಮತ್ತು 12ನೆಯ ಶತಮಾನದಲ್ಲಿ ಅಗ್ರಹಾರವಾಗಿತ್ತೆಂದು ತಿಳಿದುಬರುವುದು. ಹಾನಗಲ್ಲಿನ ನೈಋತ್ಯಕ್ಕೆ 13 ಕಿಮೀ ದೂರದಲ್ಲಿರುವ ಶೃಂಗೇರಿ ಬಳಿ ಧರ್ಮಾನದಿಗೆ ಅಡ್ಡಗಟ್ಟೆ ಕಟ್ಟಿ ನಾಲೆ ತೆಗೆದಿದೆ. ಹಾನಗಲ್ಲಿನ ಉತ್ತರಕ್ಕೆ 15 ಕಿಮೀ ದೂರದಲ್ಲಿರುವ ಯಳವಟ್ಟಿಯಲ್ಲಿ ರಾಮಲಿಂಗೇಶ್ವರ ದೇವಾಲಯ ಮತ್ತು ಒಂದು ಜೈನ ಬಸದಿಯಿದೆ.

ಹಾನಗಲ್ಲು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಧಾರವಾಡದ ದಕ್ಷಿಣಕ್ಕೆ 90 ಕಿಮೀ ದೂರದಲ್ಲಿದೆ. ಜನಸಂಖ್ಯೆ 25,011. ಈ ಪಟ್ಟಣ ಸುತ್ತಲ ಗ್ರಾಮಗಳಿಗೆ ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಅಂಚೆ, ತಂತಿ, ದೂರವಾಣಿ, ವಿದ್ಯುತ್, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು, ಆಸ್ಪತ್ರೆ, ಔಷಧಾಲಯ ಮತ್ತು ಪ್ರೌಢಶಾಲೆ ಮುಂತಾದ ಸೌಲಭ್ಯಗಳಿವೆ. ಈ ಪಟ್ಟಣದಿಂದ ಸುತ್ತಲ ಗ್ರಾಮ ಮತ್ತು ಪಟ್ಟಣಗಳಿಗೆ ಉತ್ತಮ ರಸ್ತೆ ಸಂಪರ್ಕವಿದೆ. ಪಟ್ಟಣ ಪಂಚಾಯಿತಿ ಆಡಳಿತಕ್ಕೆ ಸೇರಿದೆ. ಹೆಸರಾಂತ ಹಿಂದುಸ್ಥಾನೀ ಗಾಯಕಿ, ಸಂಗೀತ ಸರಸ್ವತಿ ಗಂಗೂಬಾಯಿ ಹಾನಗಲ್ ಈ ಊರಿನವರು.

ಈ ಪಟ್ಟಣಕ್ಕೆ ಹಿಂದೆ ಪಾಂತಿಪುರ, ವೈರಾಟಪುರ, ವಿರಾಟಕೋಟೆ, ವಿರಾಟ ನಗರ, ಪಾನಂಗಲ್ಲ ಮತ್ತು ಹಾನುಗಲ್ಲ ಎಂಬ ಹೆಸರುಗಳಿದ್ದವು. ಇಲ್ಲಿ ಒಂದು ಪಾಳುಬಿದ್ದ ಕೋಟೆ, ದೇವಸ್ಥಾನಗಳು ಮತ್ತು ಶಿಲಾಶಾಸನಗಳಿವೆ. ಹಿಂದೆ ಹಾನಗಲ್ಲು 500 ಹಳ್ಳಿಗಳಿಗೆ ಮುಖ್ಯಪಟ್ಟಣವಾಗಿತ್ತು. ಹಾನಗಲ್ಲು ಕದಂಬರು ಈ ಊರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು 11ನೆಯ ಶತಮಾನದಿಂದ 13ನೆಯ ಶತಮಾನದವರೆಗೂ ಆಳಿದರು.

ಇಲ್ಲಿರುವ ಕೋಟೆ ಮಣ್ಣಿನಿಂದ ಕಟ್ಟಿದ್ದು. ಈ ಕೋಟೆಗೆ 16 ಬುರುಜುಗಳಿದ್ದು ಮೂರು ಗೋಡೆಗಳಿವೆ. ಮತ್ತು ಕೆಲವೆಡೆ ನಾಲ್ಕನೆಯ ಗೋಡೆಯಿದ್ದ ಕುರುಹುಗಳೂ ಕಾಣುತ್ತವೆ. ಕೋಟೆಯ ಸುತ್ತಲೂ ಕಂದಕವಿದೆ. ಕೋಟೆಯ ಮಧ್ಯದಲ್ಲಿ ಹಳೇ ಅರಮನೆ ಗೋಡೆಯ ಅವಶೇಷಗಳಿವೆ. ಧರ್ಮಾನದಿ ಈ ಅರಮನೆ ಗೋಡೆಯ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಹರಿಯುವುದು. ಕದಂಬ ಕಾಮದೇವ ಹೊಯ್ಸಳರ ದಾಳಿಯನ್ನೆದುರಿಸಲು ಭದ್ರವಾಗಿರಬೇಕೆಂದು ಆ ಕೋಟೆಯ ದಕ್ಷಿಣದ ಗೋಡೆಯನ್ನು ದುರಸ್ತಿ ಮಾಡಿಸಿದ. ಈ ಹಳೇಕೋಟೆಯ ಒಂದು ಭಾಗದಲ್ಲಿ ಉತ್ಖನನವನ್ನು ನಡೆಸಲಾಯಿತು. ಆಗ ಕಾಲುಟೆಡ್ ಮಣ್ಣಿನ ಪಾತ್ರೆಗಳ ತುಂಡುಗಳು (ಪ್ರ.ಶ. 50), ಸಾತವಾಹನರ ಕಾಲದ ಬಿಳಿಗೆರೆಗಳ ಮೇಲೆ ಕಂದುಬಣ್ಣದ ಲೇಪಹಚ್ಚಿದ ಸುಟ್ಟ ಮಣ್ಣಿನ ಪಾತ್ರೆಗಳು, ಸುಟ್ಟ ಮಣ್ಣಿನ ಅಡಕೆಯಾಕಾರದ ಮಣಿಗಳು, ಬಾದಾಮಿ ಚಳುಕ್ಯ ಮೊದಲಾದ ರಾಜರ ಕಾಲದ ಅವಶೇಷಗಳು ದೊರೆತಿವೆ. ಈ ಕೋಟೆಯಲ್ಲಿ ಗಚ್ಚಿನ ಕೋಣೆಗಳು, ಕೀಚಕನ ಗರಡಿಯ ಮನೆ, ವಿರಾಟರಾಜನ ಅರಮನೆ ಮುಂತಾದವುಗಳು ಇರುವವೆಂದು ಪ್ರತೀತಿ. ಕೋಟೆಯ ಹೊರಗೆ ಬೆಣಚುಕಲ್ಲಿನ ಚಿಕ್ಕ ಆಯುಧಗಳು, ಅವುಗಳ ಮೂಲಕಲ್ಲುಗಳು ಸಿಕ್ಕಿವೆ. ಕೋಟೆಯ ಆಗ್ನೇಯಕ್ಕೆ ಆನೆಕೆರೆ ಎಂಬ ಕೆರೆ ಇದೆ. ರಾಜರು ಅಲ್ಲಿ ತಮ್ಮ ಆನೆಗಳಿಗೆ ಸ್ನಾನ ಮಾಡಿಸುತ್ತಿದ್ದರಿಂದ ಆ ಕೆರೆಗೆ ಆನೆಕೆರೆಯೆಂಬ ಹೆಸರು ಬಂದಂತೆ ತೋರುವುದು. ಹಾನಗಲ್ಲು, ಹಾನಗಲ್ಲು ಕದಂಬರ ಮುಖ್ಯಪಟ್ಟಣವಾದುದರಿಂದ ಅದನ್ನು ಗೆದ್ದುಕೊಳ್ಳುವುದು ಹೊಯ್ಸಳ ವಿಷ್ಣುವರ್ಧನನಿಗೆ ಹೆಮ್ಮೆಯಾಗಿದ್ದು ತಾನು ಗೆದ್ದ ಪಟ್ಟಣಗಳನ್ನು ಉಲ್ಲೇಖಿಸುವ ಕಡತದಲ್ಲಿ ಈ ಊರನ್ನು ಬರೆದುಕೊಂಡನೆಂದು ಹೊಯ್ಸಳ ಶಾಸನದಿಂದ ತಿಳಿದುಬರುವುದು.

ಇಲ್ಲಿ ಹನುಮಂತ ದೇವರ ಮೂರು ಗುಡಿಗಳು, ದುರ್ಗಾ, ಈಶ್ವರ, ನಾರಾಯಣ, ರಾಮಲಿಂಗ, ತಾರಕೇಶ್ವರ, ಗಣಪತಿ, ವೀರಭದ್ರ ಮತ್ತು ವಿರೂಪಾಕ್ಷ ದೇವರ ಗುಡಿಗಳೂ ಇವೆ. ಇವುಗಳಲ್ಲಿ ತಾರಕೇಶ್ವರ ಗುಡಿ ದೊಡ್ಡದೂ ಕಲಾತ್ಮಕವಾದುದೂ ಆಗಿದೆ. ದೇವಾಲಯ ಕಪ್ಪು ಹಸುರು ಕಲ್ಲಿನಿಂದ ಕಟ್ಟಿದ್ದು ಪೂರ್ವಾಭಿಮುಖವಾಗಿದೆ. ಇದು ಕಲ್ಯಾಣದ ಚಾಳುಕ್ಯರ ಕಾಲದ ಉತ್ತಮ ಗುಡಿಗಳಲ್ಲಿ ಒಂದು. ಈ ಗುಡಿಯ ದಕ್ಷಿಣದ ಹೊರಗೋಡೆಯ ಮೇಲೆ ಶೂರ್ಪನಖಿಯ ಮೂಗು ಕೊಯ್ಯುತ್ತಿರುವುದು, ಮಾರೀಚ ವಧೆ ಮೊದಲಾದ ರಾಮಾಯಣದ ದೃಶ್ಯಗಳೂ ಶ್ರೀಕೃಷ್ಣಜನನ, ವಸುದೇವ ಅವನನ್ನು ಕರೆದುಕೊಂಡು ಯಮುನಾ ನದಿಯನ್ನು ದಾಟಿದ್ದು, ಶಕಟಾಸುರವಧೆ, ಕಾಳಿಯಮರ್ದನ ಇತ್ಯಾದಿ ಭಾಗವತದ ದೃಶ್ಯಗಳೂ ಮತ್ತೊಂದೆಡೆ ಪಾಂಡವರ ಶಿಲ್ಪಗಳೂ ಇವೆ. ಅಲ್ಲದೆ, ಹೊರಗೋಡೆಗಳ ಮೇಲೆ ಕೀರ್ತಿಮುಖಗಳನ್ನು, ಭೈರವ ಮತ್ತು ಬ್ರಹ್ಮ ಇವರ ವಿಗ್ರಹಗಳನ್ನು ಕೆತ್ತಲಾಗಿದೆ. ಈ ಗುಡಿಯ ಮುಂದೆ ಇದ್ದ ಕೋಟೆಕಾಳಗವನ್ನು ತೋರಿಸುವ ವೀರಗಲ್ಲುಗಳನ್ನು ಈಗ ಮಂಟಪದಲ್ಲಿಟ್ಟಿದ್ದಾರೆ. ಅಲ್ಲಿ ಎರಡು ದೊಡ್ಡ ಶೈವ ದ್ವಾರಪಾಲಕರ ವಿಗ್ರಹಗಳನ್ನು ಇಡಲಾಗಿದೆ. ಈ ತಾರಕೇಶ್ವರ ಗುಡಿಯ ಆವರಣದಲ್ಲಿಯೆ ಉತ್ತರ ಭಾಗದಲ್ಲಿ ದಕ್ಷಿಣಕ್ಕೆ ಮುಖಮಾಡಿದ ಗಣಪತಿಯ ಗುಡಿಯಿದೆ. ಇದರ ಶಿಖರ ಸೇವುಣರ ಕಾಲದ ಗುಡಿಗಳನ್ನು ಹೋಲುವುದು. ಹಳೆಯ ಕೋಟೆಯಲ್ಲಿ ವೀರಭದ್ರನ ಗುಡಿಯಿದೆ. ಹಾನಗಲ್ಲಿ

ನಲ್ಲಿ 20ಕ್ಕೂ ಮೇಲ್ಪಟ್ಟು ಶಿಲಾಶಾಸನಗಳಿವೆ. ಅವುಗಳಲ್ಲಿ ಕೆಲವು 12 ಮತ್ತು 13ನೆಯ ಶತಮಾನದವಿದ್ದು ಚಾಳುಕ್ಯ ಆರನೆಯ ವಿಕ್ರಮಾದಿತ್ಯ, ಕಳಚುರಿ ಬಿಜ್ಜಳ ಮತ್ತು ಕದಂಬ ಅರಸರಾದ ತೈಲಪ, ಕಾಮದೇವ, ಸೋವಿದೇವ ಮತ್ತು ಮಲ್ಲಿದೇವರ ಆಳಿಕೆಯವು. ಇಲ್ಲಿನ ತಾರಕೇಶ್ವರ ಗುಡಿಯ ಮುಂದಿನ ಒಂದು ಶಾಸನದಿಂದ ಎರಡನೆಯ ತೈಲಪ, ಮುಖ್ಯಮಂತ್ರಿಯೂ ದಂಡನಾಯಕನೂ ಆದ ಮಸಣ ಎಂಬುವವನು ಕಟ್ಟಿಸಿದ ತೈಲೇಶ್ವರದೇವರಿಗೆ ಭೂಮಿ ದಾನಕೊಟ್ಟದ್ದು ತಿಳಿದುಬರುತ್ತದೆ.

(ಎ.ಎಂ.ಎ.)

**ಹಾರಂಗಿ:** ಕಾವೇರಿ ನದಿಯ ಮುಖ್ಯ ಉಪನದಿಗಳಲ್ಲೊಂದು. ಇದಕ್ಕೆ ಸುವರ್ಣಾವತಿ ಎಂಬ ಹೆಸರೂ ಇದೆ. ಈ ನದಿ ಮಡಿಕೇರಿ ತಾಲ್ಲೂಕಿನ ಬೋರೊ ಬೆಟ್ಟದಲ್ಲಿ ಉಗಮಹೊಂದಿ ಆಗ್ನೇಯಾಭಿಮುಖವಾಗಿ ಹರಿದು ಮೆಗತ್ತಲು ಎಂಬಲ್ಲಿ ದಕ್ಷಿಣಕ್ಕೆ ತಿರುಗಿ, ಸ್ವಲ್ಪ ದೂರ ಹರಿದ ಅನಂತರ ಪೂರ್ವಕ್ಕೆ ತಿರುಗಿ ಪುನಃ ಉತ್ತರಾಭಿಮುಖವಾಗಿ ಹರಿದು ಮತ್ತೊಮ್ಮೆ ಪೂರ್ವಾಭಿಮುಖವಾಗಿ ಸಾಗಿ ಕುಶಾಲನಗರದ ಸ್ವಲ್ಪ ಉತ್ತರದಲ್ಲಿ ಕೂಡಿಗೆ ಎಂಬಲ್ಲಿ ಕಾವೇರಿ ನದಿಯನ್ನು ಕೂಡುತ್ತದೆ. ಹರದೂರು ಮತ್ತು ಗರ್ಗಂದೂರುಗಳ ನಡುವಣ ಇಕ್ಕಟ್ಟಿನ ಕಣಿವೆಯಲ್ಲಿ ಪ್ರವಹಿಸುವಾಗ ಇದಕ್ಕೊಂದು ಸೇತುವೆ ರಚಿಸಲಾಗಿದೆ. ಈ ಸೇತುವೆಯಿಂದಾಗಿ ಮಡಿಕೇರಿ-



ಹಾರಂಗಿ ಅಣೆಕಟ್ಟೆ

ಸೋಮವಾರಪೇಟೆಗಳಿಗೆ ನೇರಮಾರ್ಗಸಂಚಾರ, ಸಾರಿಗೆ ಅನುಕೂಲ ಉಂಟಾಗಿದೆ (ಗರ್ಗಂದೂರಿನಲ್ಲಿ ಚಂಗಾಳ್ವರ ಕಾಲದ ಒಂದು ಕೋಟೆ ಇದೆ). ಹರದೂರಿನ ಸ್ವಲ್ಪ ಪೂರ್ವಕ್ಕೆ ಕೋಟೆಬೆಟ್ಟದಲ್ಲಿ ಹುಟ್ಟುವ ಹುತ್ತೆಹೊಳೆಯನ್ನು ಕೂಡಿಕೊಂಡು ಹರಿಯುವ ಮಾದಾಪುರ ಹೊಳೆ, ಸಾಂತಳ್ಳಿಯ ಕಳಕಂದೂರು ಗುಡ್ಡದ ಬದಿಯಿಂದಿಳಿದು ಬರುವ ಚೋರನ ಹೊಳೆ, ಸೋಮವಾರಪೇಟೆ ಬೆಟ್ಟಗಳಿಂದ ಹುಟ್ಟಿಬರುವ ಕಕ್ಕೆಹೊಳೆ - ಇವು ಹಾರಂಗಿ ನದಿಯ ಉಪನದಿಗಳು. ಹಾರಂಗಿ ಎಂಬಲ್ಲಿಯವರೆಗಿನ ಈ ನದಿಯ ಮೊದಲ ಹರಿವನ್ನು ಹಟ್ಟಿಹೊಳೆಯೆಂದೂ ಅನಂತರ ಹಾರಂಗಿ ನದಿ ಎಂದೂ ಕರೆಯಲಾಗುತ್ತದೆ.

ಕೊಡಗಿನ ಉತ್ತರ-ಮಧ್ಯಭಾಗದ ಬೆಟ್ಟಗಳ ಕಣಿವೆಗಳಲ್ಲಿ ತುಂಬಿ ಹರಿಯುವ ಹಾರಂಗಿ ನದಿಯನ್ನು ಕೊಡಗಿನ ಅತಿದೊಡ್ಡ ನೀರಾವರಿ ಯೋಜನೆಗೆ ಬಳಸಿಕೊಂಡು, ಕಕ್ಕೆಹೊಳೆ ಈ ನದಿಯನ್ನು ಸೇರುವ ಮುನ್ನ ಹುದುಗೂರು ಎಂಬಲ್ಲಿ ಈ ನದಿಗೆ ಅಡ್ಡಲಾಗಿ 67 ಮೀ ಎತ್ತರದ ಅಣೆಕಟ್ಟನ್ನು ರಚಿಸಿ ಜಲಾಶಯ ನಿರ್ಮಿಸಲಾಗಿದೆ. ಈ ಜಲಾಶಯದಿಂದ ಕೊಡಗಿನ ಸು. 30-35 ಸಾವಿರ ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ದೊರೆಯುತ್ತಿದೆ.

(ಎಂ.ವಿ.)

**ಹಾರಾಡಿ ರಾಮ ಗಾಣಿಗ:** 1902-69. ಪ್ರಸಿದ್ಧ ಯಕ್ಷಗಾನ ಕಲಾವಿದರು. ಉಡುಪಿ ತಾಲ್ಲೂಕಿನ ಬ್ರಹ್ಮಾವರ ಎಂಬ ಸ್ಥಳಕ್ಕೆ ಹತ್ತಿರದ ಹಾರಾಡಿಯಲ್ಲಿ 1902 ಮೇ 27ರಂದು ಹಾರಾಡಿ ಸುಬ್ಬಯ್ಯ ಗಾಣಿಗ ಮತ್ತು ಕೊಲ್ಲು ದಂಪತಿಗಳಿಗೆ ಎರಡನೆಯ ಮಗನಾಗಿ ಜನಿಸಿದರು. ಇವರ ಮನೆತನದ ಕಸಬು ಕೈಗಾಣದಲ್ಲಿ ಎಣ್ಣೆ ತೆಗೆಯುವುದು. ಆದರೆ ಇವರ ಹಿರಿಯರು, ತಾಯಿ ಕಡೆಯವರು ಮೂರುನಾಲ್ಕು ತಲೆಮಾರಿನಿಂದಲೂ ಯಕ್ಷಗಾನ ವೇಷಧಾರಿಗಳಾಗಿದ್ದರು. ಈ ಹಿರಿಯರಲ್ಲಿ ದೊಡ್ಡ ಅಣ್ಣಪ್ಪ ಎಂಬುವರು ಯಕ್ಷಗಾನದ ಪ್ರಸಿದ್ಧ ವೇಷಧಾರಿಗಳಾಗಿದ್ದರು. ಅಣ್ಣಪ್ಪನ ಅನಂತರದ ಮಂಜ, ಶೇಷ ಇವರೆಲ್ಲ ಪ್ರಸಿದ್ಧ ವೇಷಧಾರಿಗಳಾಗಿದ್ದರು.

ರಾಮಗಾಣಿಗರ ಬಾಲ್ಯದ ವಿದ್ಯಾಭ್ಯಾಸ ನಡೆದದ್ದು ಐಗಳ ಮಠದಲ್ಲಿ. ಬೈಕಾಡಿ ರಾಮಣ್ಣಯ್ಯ ಎಂಬುವರು ಇವರ ಗುರುಗಳು. ಯಕ್ಷಗಾನದ ಪ್ರಸಂಗಗಳ ಅಭ್ಯಾಸ, ಕುಮಾರವ್ಯಾಸಭಾರತ, ಜೈಮಿನಿಭಾರತ ಇವುಗಳ ಪಠನ, ಮದ್ದಲೆ ಬಾರಿಸುವಿಕೆ ಮೊದಲಾದ ಸಂಗತಿಗಳನ್ನು ಐಗಳ ಶಾಲೆಯಲ್ಲಿ ಕಲಿತರು. ಇವರನ್ನು ಯಕ್ಷಗಾನ ಮೇಳಕ್ಕೆ ಪ್ರೇರೇಪಿಸಿದವರು ಇವರ ತಾಯಿ.

ರಾಮಗಾಣಿಗರು ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಯಕ್ಷಗಾನ ರಂಗವನ್ನು ಪ್ರವೇಶಿಸಿದರು. ಇವರ ಮೊದಲ ಸೇವೆ ಮಾರಣಕಟ್ಟೆ ದೇವಳದ ಮೇಳದಲ್ಲಿ. ಬಾಲಗೋಪಾಲ, ಕೋಡಂಗಿ, ಸ್ತ್ರೀವೇಷ ಮುಂತಾದ ಬಯಲಾಟದ ಆರಂಭದ ವೇಷಗಳಿಂದ ಆರಂಭಿಸಿ ಮುಂದೆ ಆಸಕ್ತಿ ಉತ್ಸಾಹಗಳಿಂದ ಪಾಂಡೇಶ್ವರ ಪುಟ್ಟಯ್ಯನವರಿಂದ ಕುಣಿತವನ್ನೂ ಬಾಬಣ್ಣ ಶಾನುಭಾಗರಿಂದ ಅರ್ಥಗಾರಿಕೆಯನ್ನೂ ಕಲಿತು, ಬಿರ್ತಿ ರಾಮಚಂದ್ರಶಾಸ್ತ್ರಿಗಳಿಂದ ಪುರಾಣದ ಕಥಾಭಾಗವನ್ನೂ ಅಭ್ಯಸಿಸಿ, ಮಂದರ್ತಿ, ಮಾರಣಕಟ್ಟೆ, ವರಂಗ ಮುಂತಾದ ಮೇಳಗಳಲ್ಲಿ ದುಡಿದು ಪ್ರಸಿದ್ಧ ವೇಷಧಾರಿ ಎನಿಸಿಕೊಂಡರು. ಮಂದರ್ತಿ ಮೇಳ ಒಂದರಲ್ಲೇ ಸು.45 ವರ್ಷಗಳ ಕಾಲ ಇವರು ದುಡಿದರು. ಇವರು ಬಯಲಾಟದ ಎಲ್ಲ ವೇಷಗಳನ್ನು ಧರಿಸುವುದರಲ್ಲಿ ಪರಿಣತರಾದರೂ ಮುಂಡಾಸಿನ ವೇಷಗಳಲ್ಲಿ, ದೊಡ್ಡ ಮುಂಡಾಸಿನ ವೇಷಗಳಾದ ಅಂಗಾರವರ್ಮ, ಕರ್ಣ ಮುಂತಾದ ವೇಷಗಳಲ್ಲಿ ಇವರದ್ದು ಎತ್ತಿದ ಕೈ. ಇವರ ಹಿರಿಯರ ಪರಂಪರೆಯನ್ನು ಉಳಿಸಿಕೊಂಡು ಬಂದವರಾಗಿ ಹಾರಾಡಿ ಮುಂಡಾಸು ಎಂಬ ಕೀರ್ತಿಗೆ ತಕ್ಕಂತೆ ವೇಷ ಧರಿಸುತ್ತಿದ್ದರು. ಹಾಗೆಯೇ ಪೌರುಷ ವೇಷಗಳನ್ನು ಧರಿಸುವಲ್ಲಿಯೂ ನಿಪುಣರು. ವಿಜಯಪರ್ವದ ಭೀಷ್ಮ, ದ್ರೌಪದೀಪ್ರತಾಪದ ಭೀಮ, ಸುಬಾಹುಕಾಳಗದ ದಮನ, ಪ್ರಹ್ಲಾದಚರಿತ್ರೆಯ ಹಿರಣ್ಯಕಶಿಪು, ಜಾಂಬವತೀಕಲ್ಯಾಣದ ಜಾಂಬವ, ಕೃಷ್ಣಾರ್ಜುನ ಕಾಳಗದ ಅರ್ಜುನ, ಕರ್ಣ, ದ್ರುಪದ ಸ್ವಯಂವರದ ಅಂಗಾರವರ್ಮ, ರತ್ನಾವತೀಕಲ್ಯಾಣದ ಭದ್ರಸೇನ-ಇವು ಇವರ ಹೆಸರಾದ ವೇಷಗಳು. ವೀರ, ಕರುಣ, ಶೋಕ ಮೊದಲಾದ ರಸಗಳ ಪ್ರತಿಪಾದನೆಯಲ್ಲಿಯೂ ಭಾವಪೂರಿತವಾದ ಅಭಿನಯ ನಿರೂಪಣೆಯ ಸಂಭಾಷಣೆಗಳಲ್ಲಿಯೂ ಇವರು ನಿಸ್ಸೀಮರು. ಪ್ರತ್ಯೇಕವಾದ ಯಾವೊಂದು ಭಾಷಾಶಿಕ್ಷಣವಿಲ್ಲದೆಯೂ ರಾಮಾಯಣ, ಮಹಾಭಾರತದ ಕಥಾನಕಗಳ ಪಾತ್ರ ನಿರೂಪಣೆ

ಯನ್ನು ನಿರ್ದುಷ್ಟವಾದ ಮನೋಹರವಾದ ಶೈಲಿಯಲ್ಲಿ ತೋರಿಸಬಲ್ಲ ಪಾಂಡಿತ್ಯ ಇವರದಾಗಿತ್ತು.

ರಾಮಗಾಣಿಗರಿಗೆ ಅನೇಕ ಗೌರವಗಳೂ ಪ್ರಶಸ್ತಿಗಳೂ ಲಭಿಸಿವೆ. ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ (1961). 1964ರಲ್ಲಿ ಕೇಂದ್ರ ಸರ್ಕಾರ ಇವರಿಗೆ ರಾಷ್ಟ್ರಪ್ರಶಸ್ತಿ ನೀಡಿ ಸನ್ಮಾನಿಸಿತು. ಯಕ್ಷಗಾನಕ್ಕೆ ಕೇಂದ್ರದ ಮನ್ನಣೆ ದೊರಕಿದ್ದು ಇದೇ ಪ್ರಥಮ.

ರಾಮಗಾಣಿಗರ ಕೊನೆಯ ದಿನಗಳು ಅಷ್ಟೇನೂ ಉತ್ತಮವಾಗಿರಲಿಲ್ಲ. ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ ಇವರು 1969 ಡಿಸೆಂಬರ್ 11 ರಂದು ನಿಧನಹೊಂದಿದರು. ಯಕ್ಷಗಾನ ಕ್ಷೇತ್ರದಲ್ಲಿ ಈಗಲೂ ತಮ್ಮನ್ನು ತೊಡಗಿಸಿ ಕೊಂಡಿರುವ ರಾಜ್ಯಪ್ರಶಸ್ತಿ ಪುರಸ್ಕೃತ ಹಾರಾಡಿ ಕೃಷ್ಣಗಾಣಿಗ, ಸ್ತ್ರೀವೇಷಧಾರಿ ಹಾರಾಡಿ ನಾರಾಯಣಗಾಣಿಗ ಇವರ ಹತ್ತಿರದ ಬಂಧುಗಳು. **(ಬಿ.ವಿ.ಕೆ.)**

**ಹಾರೋಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕಿನ ಒಂದು ಗ್ರಾಮ. ಕನಕಪುರದ ಉತ್ತರಕ್ಕೆ 16 ಕಿಮೀ ದೂರದಲ್ಲಿದೆ. ಈ ಊರಿನ ಐತಿಹಾಸಿಕ ಪ್ರಾಮುಖ್ಯತೆ ವಿಜಯನಗರದ ಕಾಲದಿಂದ ಪ್ರಾರಂಭವಾಗುತ್ತದೆ. ವಿಜಯನಗರ ಕಾಲದ ದೇವಾಲಯಗಳು ಮತ್ತು ಶಾಸನಗಳು ಇಲ್ಲಿ ಕಂಡುಬಂದಿವೆ. 1532ರ ಒಂದು ಶಾಸನದಲ್ಲಿ ಈ ಗ್ರಾಮವನ್ನು ಹಾರುವಹಳ್ಳಿ ಎಂದು ಹೆಸರಿಸಲಾಗಿದೆ. ಅಂದರೆ ಇದೊಂದು ಅಗ್ರಹಾರವಾಗಿತ್ತೆಂದು ತೋರುತ್ತದೆ. ಈ ಗ್ರಾಮದಲ್ಲಿ ಅರುಣಾಚಲೇಶ್ವರ, ಕೃಷ್ಣಸ್ವಾಮಿ, ಭೀಮೇಶ್ವರ ಮತ್ತು ಆಂಜನೇಯ ದೇವಾಲಯಗಳಿವೆ. ಇಲ್ಲಿನ ಹೆಚ್ಚಿನ ದೇವಾಲಯಗಳು ವಿಜಯನಗರ ಕಾಲದಲ್ಲಿಯೇ ನಿರ್ಮಾಣ ಗೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಅರುಣಾಚಲೇಶ್ವರ ಮತ್ತು ಕೃಷ್ಣಸ್ವಾಮಿ ದೇವಾಲಯಗಳು ಮಾತ್ರ ವಿಶಾಲವಾದ ದೇವಾಲಯಗ ಳಾಗಿದ್ದು ವಿಜಯನಗರ ಕಾಲದ ದ್ರಾವಿಡ ವಾಸ್ತುಶೈಲಿಯನ್ನು ಹೊಂದಿದೆ.

ಅರುಣಾಚಲೇಶ್ವರ ದೇವಾಲಯ ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ಗರ್ಭಗೃಹ, ಸುನಾಕಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದ ಕಂಬಗಳು ಚತುರಸ್ರ ಮತ್ತು ಅಷ್ಟಸ್ರ ಶೈಲಿಯಲ್ಲಿವೆ. ಕಂಬಗಳ ಚೌಕಟ್ಟಾದ ಮುಖಗಳು ಹಲವಾರು ಸುಂದರವಾದ ಶಿಲ್ಪಗಳನ್ನು ಹೊಂದಿವೆ. ದೇವಾಲಯದ ಮುಂದಿನ ಮಂಟಪವನ್ನು ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ಸುಬೇದಾರರಾದ ಸೂರ್ಯನಾರಾಯಣ ಅಯ್ಯರ್ ಮತ್ತು ವೆಂಕಟೇಶ ಅಯ್ಯರ್ ನಿರ್ಮಿಸಿದರೆಂದು ತಿಳಿದುಬರುತ್ತದೆ. ದೇವಾಲಯದ ಎಡಭಾಗ ದಲ್ಲಿ ಪಾರ್ವತಿ ದೇವಾಲಯವಿದೆ. ದೇವಾಲಯದ ಪ್ರಾಕಾರದ ಪ್ರವೇಶ ಮಂಟಪದ ಮೇಲೆ ವಿಜಯನಗರ ಕಾಲದ ರಾಯಗೋಪುರ ಇದೆ. ಇದರಲ್ಲಿ ಹಲವಾರು ಸುಂದರವಾದ ಗಾರೆಶಿಲ್ಪಗಳು ಕಂಡುಬರುತ್ತವೆ.

ಕೃಷ್ಣಸ್ವಾಮಿ ದೇವಾಲಯ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿ ದ್ದರೂ ಸಂಪೂರ್ಣವಾಗಿ ಜೀರ್ಣೋದ್ಧಾರ ಹೊಂದಿದೆ. ಗರ್ಭಗೃಹ, ಅರ್ಧಮಂಟಪ, ನವರಂಗಗಳು ಕಂಡುಬರುತ್ತವೆ. ಗರ್ಭಗೃಹದ ಇಕ್ಕೆಲಗಳಲ್ಲಿ ಇನ್ನೆರಡು ಚಿಕ್ಕ ಆಲಯಗಳಿವೆ. ಬಲಭಾಗದ ಆಲಯದಲ್ಲಿ ಲಕ್ಷ್ಮಿ ಶಿಲ್ಪವೂ ಎಡಭಾಗದ ಆಲಯದಲ್ಲಿ ಶ್ರೀದೇವಿ ಮತ್ತು ಭೂದೇವಿಯ ರೊಂದಿಗೆ ಇರುವ ವೆಂಕಟೇಶ್ವರನ ಶಿಲ್ಪವೂ ಇದೆ. ಈ ಶಿಲ್ಪದ ಉಲ್ಲೇಖ ಇಲ್ಲಿ ದೊರೆತ ವೀರ ಪ್ರತಾಪ ಅಚ್ಯುತರಾಯನ 1532ರ ಶಾಸನದಲ್ಲಿ ಕಂಡುಬರುತ್ತದೆ. ಈ ಶಾಸನದಲ್ಲಿ ತಿರುವೆಂಗಳನಾಥ ದೇವರನ್ನು, ಅಚ್ಯುತರಾಯನ ಅಧಿಕಾರಿಯಾದ ವರದತಿಮ್ಮಯ್ಯನು ತಂದನೆಂದು, ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದನೆಂದು ವಿವರ ದೊರೆಯು ತ್ತದೆ. ಗ್ರಾಮದ ಹೊರವಲಯದಲ್ಲಿ ಭೀಮೇಶ್ವರ ದೇವಾಲಯವಿದ್ದು, ಇದೂ ಕೂಡಾ ವಿಜಯನಗರ ಶೈಲಿಯಲ್ಲಿದೆ. ದೇವಾಲಯ ಒಳಭಾಗದಲ್ಲಿ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಪಕ್ಕದಲ್ಲಿ ಅಮ್ಮನವರ ದೇವಾಲಯವಿದೆ. ದೇವಾಲಯದ ಗರ್ಭಗೃಹದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳು ಕಂಡುಬರುತ್ತವೆ. **(ಆರ್.ಎಚ್.ಕೆ.)**

**ಹಾರ್ನಹಳ್ಳಿ:** ಹಾಸನ ಜಿಲ್ಲೆ ಅರಸೀಕರೆ ತಾಲ್ಲೂಕಿನಲ್ಲಿ ಅರಸೀಕೆರೆಯ ದಕ್ಷಿಣಕ್ಕೆ 8ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 5,658. ಇದು 1882ರ ವರೆಗೆ ತಾಲ್ಲೂಕಿನ ಮುಖ್ಯ ಕೇಂದ್ರವಾಗಿತ್ತು. ಈ ಗ್ರಾಮದ ಪ್ರಾಚೀನ ಹೆಸರು ಹಾರುವನಹಳ್ಳಿ. ಮೊದಲಿಗೆ ಇದೊಂದು ಅಗ್ರಹಾರವಾಗಿದ್ದು, ಶಾಸನಗಳಲ್ಲಿ ಇದನ್ನು ಲಕ್ಷ್ಮೀನರಸಿಂಹಪುರವೆಂದು ಕರೆಯಲಾಗಿದೆ. 13ನೆಯ ಶತಮಾನದಲ್ಲಿ ಇಮ್ಮಡಿನರಸಿಂಹನ ಸೋದರಿ ಸೋವಲದೇವಿಯು ಇಲ್ಲಿ ಸೋಮನಾಥಪುರವೆಂಬ ಅಗ್ರಹಾರವನ್ನು ನಿರ್ಮಿಸಿದಳು.



ಕೇಶವ ದೇವಾಲಯ

ಇಲ್ಲಿರುವ ಕೇಶವ ಮತ್ತು ಸೋಮೇಶ್ವರ ದೇವಾಲಯಗಳು ಹೊಯ್ಸಳ ಶೈಲಿಯಲ್ಲಿವೆ. ಕೇಶವ ದೇವಾಲಯವನ್ನು 1234ರಲ್ಲಿ ನಿಜೇಶ್ವರ ಭಟ್ಟ, ಸಂಕಣ್ಣ, ಗೋಪಣ್ಣ ಎಂಬ ಸಹೋದರರು ತಮ್ಮ ತಂದೆಯ ನೆನಪಿಗಾಗಿ ಕಟ್ಟಿಸಿ, ಲಕ್ಷ್ಮೀನರಸಿಂಹ ವಿಗ್ರಹವನ್ನು ಪ್ರತಿಷ್ಠೆ ಮಾಡಿದಂತೆ ಅಲ್ಲಿಯ ಶಾಸನ ತಿಳಿಸುತ್ತದೆ. ಎತ್ತರವಾದ ಜಗತಿಯ ಮೇಲೆ ನಿರ್ಮಿತವಾಗಿರುವ ಈ ತ್ರಿಕೂಟಾಚಲದ ನಡುವಿನ ಗರ್ಭಗುಡಿಯ ಮೇಲೆ ಸುಂದರವಾದ ಗೋಪುರವಿದೆ. ದೇವಾಲಯದ ಹೊರಭಿತ್ತಿಯ ಬುಡದಲ್ಲಿ ಆನೆ, ಕುದುರೆ, ಬಳ್ಳಿಯ ಸುರುಳಿ, ಮಕರ, ಹಂಸಗಳ ಸಾಲುಗಳಿದ್ದು ನಡುವಿನ ಪಟ್ಟಿಕೆಯನ್ನು ಮಾತ್ರ ಕಂಡರಿಸದೆ ಹಾಗೆಯೇ ಬಿಟ್ಟಿದೆ. ನಕ್ಷತ್ರಾಕಾರದ ಗರ್ಭಗೃಹಗಳು ಮತ್ತು ಹಲವು ಭಂಗಿಗಳಲ್ಲಿ ನಿಂತಿರುವ ಮೂರ್ತಿಗಳು ಗುಂಡಾಗಿ ಆಭರಣಗಳಿಂದ ತುಂಬಿದ್ದರೂ ಸುಂದರವಾಗಿವೆ; ವಿಷ್ಣುವಿನ ದಶಾವತಾರ, ಬ್ರಹ್ಮ, ಸರಸ್ವತಿ, ಮಹಿಷಮರ್ದಿನಿ, ಅರ್ಜುನನ ಮತ್ಸ್ಯಯಂತ್ರ ಭೇದನ– ಇನ್ನೂ ಹಲವಾರು ಚಿತ್ರಗಳನ್ನು ಕೆತ್ತಲಾಗಿದೆ. ಮಧ್ಯದ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹ ಮತ್ತು ವೇಣುಗೋಪಾಲರ ಸುಂದರ ಮೂರ್ತಿಗಳಿವೆ.

ಸೋಮೇಶ್ವರ ದೇವಾಲಯ ರಚನೆಯಲ್ಲಿ ಕೇಶವ ದೇವಾಲಯದಂತೆ ಇದೆ. ಇದು ಗರ್ಭಗೃಹ ಮತ್ತು ನವರಂಗವನ್ನು ಹೊಂದಿದೆ. ನವರಂಗದ ಭುವನೇಶ್ವರಿಗಳು ವೈವಿಧ್ಯಮಯವಾಗಿವೆ. ಇಲ್ಲಿ 1070ರಲ್ಲಿ ಸೋಮೇಶ್ವರ ಎಂಬ ಹೊಯ್ಸಳ ರಾಜ ಕಟ್ಟಿಸಿದ ಒಂದು ಕೋಟೆಯ ಅವಶೇಷ ಮತ್ತು ಆತ ತನ್ನ ಮಗಳ ಹೆಸರಿನಲ್ಲಿ ಕಟ್ಟಿಸಿರುವ ನಾಗರ್ತಿ ಎಂಬ ಒಂದು ಕೆರೆ ಇದೆ.

**(ಎಂ.ಎಚ್.)**

**ಹಾಲ:** ಸಾತವಾಹನರ ಪ್ರಸಿದ್ಧ ದೊರೆ. ಇವನ ಆಳಿಕೆಯ ಬಗ್ಗೆ ಲೀಲಾವತಿ ಕೃತಿ ಸ್ವಲ್ಪ ಮಾಹಿತಿ ನೀಡುತ್ತದೆ. ಆ ಕೃತಿಯ ಮಾಹಿತಿ ಪ್ರಕಾರ ಇವನ ದಂಡನಾಯಕ ವಿಜಯಾನಂದ ಸಿಂಹಳದ ವಿರುದ್ಧ ದಂಡಯಾತ್ರೆ ಕೈಗೊಂಡು ಸಿಂಹಳವನ್ನು ವಶಪಡಿಸಿಕೊಂಡ. ಅನಂತರ ಇವನು ಅಲ್ಲಿನ ಅಪೂರ್ವ ಸೌಂದರ್ಯಕ್ಕೆ ಹೆಸರಾದ ರಾಜಕುಮಾರಿ ಲೀಲಾವತಿಯೊಡನೆ ಸಪ್ತ ಗೋದಾವರಿ ಭೀಮಮ್ ಅಥವಾ ದ್ರಾಕ್ಷಾರಾಮ ಎಂಬಲ್ಲಿ ವಿವಾಹವಾದ. ಇವನ ಆಡಳಿತಾವಧಿಯಲ್ಲಿ ಪ್ರಾಕೃತ ಆಡಳಿತ ಭಾಷೆಯಾಗಿತ್ತು. ಶಾಂತಿಪ್ರಿಯನಾದ ಇವನು ಘನ ವಿದ್ವಾಂಸನಾಗಿದ್ದು ಮಹಾರಾಷ್ಟ್ರೀ ಪ್ರಾಕೃತ ಭಾಷೆಯಲ್ಲಿ ಗಾಥಾಸಪ್ತಶತಿ (ಗಾಥಾಸತ್ತಸಾಯ್) ಎಂಬ ಶೃಂಗಾರಕಾವ್ಯ ರಚಿಸಿದ. ಇವನು ಪ್ರಾಕೃತದ ಅನೇಕ ಕವಿಗಳ ಗ್ರಂಥಗಳಿಂದ 700 ಶ್ಲೋಕಗಳನ್ನು ಆಯ್ದುಕೊಂಡು ಕಾವ್ಯ ರಚಿಸಿರುವುದರಿಂದ, ಇವನ ಕಾಲಕ್ಕೆ ಮಹಾರಾಷ್ಟ್ರೀ ಪ್ರಾಕೃತದಲ್ಲಿ ವಿಪುಲ ಸಾಹಿತ್ಯ ರಚನೆಯಾಗಿತ್ತೆಂದು ತಿಳಿಯುತ್ತದೆ. ಬಾಣ ತನ್ನ ಹರ್ಷಚರಿತೆಯಲ್ಲಿ ಹಾಲನ ಗಾಥಾಸಪ್ತಶತಿ ಮೇರುಕೃತಿ ಎಂದು ಹೊಗಳಿದ್ದಾನೆ. ಇವನು ತನ್ನ ಕಾವ್ಯವನ್ನು ಶಿವ ಮತ್ತು ಆತನ ಪತ್ನಿ ಗೌರಿಯ ಸ್ತೋತ್ರದಿಂದಲೇ ಪ್ರಾರಂಭಿಸಿದ್ದಾನೆ. ಶಿವದತ್ತ, ಶೀರಕದಿಲ, ಕುಮಾರ, ಸ್ಕಂದ ಮೊದಲಾದ ಹೆಸರುಗಳಿರುವುದರಿಂದ ಸಾತವಾಹನರ ಕಾಲದಲ್ಲಿ ಶೈವಧರ್ಮ ಆಚರಣೆಯಲ್ಲಿತ್ತೆಂಬುದು ತಿಳಿಯುತ್ತದೆ.

ಇದರಲ್ಲಿ ಕನ್ನಡದ ಪೊಟ್ಟ, ತುಪ್ಪ ಎಂಬ ನಾಮಪದಗಳು, ಪೆಟ್ಟು, ತೀರ್ ಎಂಬ ಕ್ರಿಯಾಪದಗಳು ಇವೆ. ಆದ್ದರಿಂದ ಕನ್ನಡ ಆ ಕಾಲದಲ್ಲಿ ವ್ಯಾವಹಾರಿಕ ಭಾಷೆ ಮಾತ್ರವಲ್ಲ, ಸಾಹಿತ್ಯ ಭಾಷೆ ಕೂಡ ಆಗಿತ್ತು ಎಂಬುದು ಗೋವಿಂದ ಪೈ ಅವರ ಅಭಿಮತ. ಅಲ್ಲದೇ ಕ್ರಿಯಾಪದದ ಮೂಲಧಾತುವನ್ನು ಎರವಲಾಗಿ ಪಡೆಯಬೇಕಾದರೆ ತನಗಿಂತ ಸಮೃದ್ಧ ಭಾಷೆಯಿಂದ ಮಾತ್ರ ಸಾಧ್ಯ. ಆದ್ದರಿಂದ ಕನ್ನಡ ಸಾಹಿತ್ಯ 1–2ನೆಯ ಶತಮಾನಕ್ಕಿಂತ ಮುಂಚೆ ಇರಬೇಕೆಂಬುದು ಗೋವಿಂದಪೈ ಅವರ ಅಭಿಪ್ರಾಯವಾಗಿದೆ. ಇವನ ಕಾಲದಲ್ಲಿ ಗುಣಾಢ್ಯನಿಂದ ರಚಿತವಾದ ಬೃಹತ್ಕಥಾ ಕೋಶ ಪೈಶಾಚಿ ಭಾಷೆಯಲ್ಲಿದೆ. ಇವನು 78ರಲ್ಲಿ ಶಾಲಿವಾಹನ ಶಕೆ ಆರಂಭಿಸಿದನೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇವನಿಗೆ ಶಾಲಿವಾಹನ ಎಂಬ ಹೆಸರೂ ಇತ್ತು. *

**ಹಾಲಕ್ಕಿ:** ಕರ್ನಾಟಕ ರಾಜ್ಯದ ಪ್ರಮುಖ ಬುಡಕಟ್ಟುಗಳಲ್ಲಿ ಒಂದು. ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲ, ಕುಮಟ, ಹೊನ್ನಾವರ ತಾಲ್ಲೂಕುಗಳಲ್ಲಿ ಇವರ ವಾಸ. ಕೃಷಿಯೇ ಜೀವನಾಧಾರ. ದುಡಿತವನ್ನು ಮೆಚ್ಚಿಕೊಂಡ ಶ್ರಮಜೀವಿಗಳಿವರು. ಇವರ ಹುಟ್ಟಿನ ಬಗ್ಗೆ ದಂತಕಥೆಯೊಂದು ಪ್ರಚಲಿತವಿದೆ: ಗದ್ದೆ ಉಳುತ್ತಿದ್ದ ಶಿವನಿಗೆ ಅನ್ನ ಹಾಲು ಒಯ್ಯುತ್ತಿದ್ದ ಪಾರ್ವತಿ ಎಡವಿ ಬಿದ್ದಾಗ, ಆ ಹಾಲು ಮತ್ತು ಅನ್ನ ಮಣ್ಣಿನಲ್ಲಿ ಕೂಡಿದವು. ಪಾರ್ವತಿ ಆ ಮಣ್ಣಿನಿಂದ ಎರಡು ಗೊಂಬೆ ತಯಾರಿಸಿದಳು. ಪಾರ್ವತಿಯನ್ನು ಹುಡುಕುತ್ತ ಬಂದ ಶಿವ ಆ ಗೊಂಬೆಗಳಿಗೆ ಜೀವ ಬರಿಸಿದ. ಹೀಗೆ ಇವರು ಹಾಲು ಅಕ್ಕಿ ಮಿಶ್ರಣದಿಂದ ಹುಟ್ಟಿದವರಾದ್ದರಿಂದ ಹಾಲಕ್ಕಿ ಎಂಬ ಹೆಸರು ಬಂದಿತು. ಇನ್ನೊಂದು ಕಥೆಯ ಪ್ರಕಾರ ಕಡು ಬಡವರಾದ ಇವರಿಗೆ ಬತ್ತ ಪೂರ್ತಿ ಬೆಳೆಯುವವರೆಗೆ ಕಾಯುವ ಆರ್ಥಿಕ ಸಾಮರ್ಥ್ಯವಿಲ್ಲದೆ ಬತ್ತದ ತೆನೆ ಇನ್ನೂ ಹಾಲು ತುಂಬಿರುವಾಗಲೇ ಕೊಯ್ದು ಅರೆದು ಪಾಯಸ (ಹಾಲಕ್ಕಿ ಪಾಯಸ) ಮಾಡಿ ಉಣ್ಣುತ್ತಿದ್ದುದರಿಂದ ಇವರಿಗೆ ಹಾಲಕ್ಕಿಗಳು ಎಂಬ ಹೆಸರು ಬಂತೆಂದು ಹೇಳಲಾಗಿದೆ. ಇವರ ಮೈ ಹಾಲು ಅಕ್ಕಿಯ ಬಣ್ಣದ್ದಾಗಿರುವುದರಿಂದ ಇತರ ಒಕ್ಕಲು ಪಂಗಡದವರಿಂದ ಭಿನ್ನ ಎಂದು ಗುರುತಿಸಲು ಇವರಿಗೆ ಹಾಲಕ್ಕಿ ಒಕ್ಕಲು ಎಂಬ ಹೆಸರು ಬಂತೆನ್ನಲಾಗಿದೆ.

ಇವರು ಆದಿವಾಸಿ ಜೀವನ ಪದ್ಧತಿಯನ್ನು ಅನುಸರಿಸುತ್ತಾರೆ. ಬತ್ತದ ಗದ್ದೆಗಳ ಹತ್ತಿರದಲ್ಲಿ ಗುಂಪು ಗುಂಪಾಗಿ ಇವರ ಗುಡಿಸಲುಗಳು. ಮಣ್ಣಿನ ಗೋಡೆಗೆ ಹುಲ್ಲು ಚಾವಣಿಯ ಎರಡು ಅಂಕಣಗಳ ಸಣ್ಣ ಮನೆ. ಇವರಲ್ಲಿ ಎಂಟು ಮೂಲ ಪಂಗಡಗಳನ್ನು ಗುರುತಿಸಲಾಗಿದೆ. ಇವುಗಳಿಗೆ ಬಳಿ ಎಂದು ಹೆಸರು. ಬಳಿಗಳಿಗೆ ಗಿಡ, ಬಳ್ಳಿಗಳ ಮತ್ತು ಪ್ರಾಣಿಗಳ ಹೆಸರು ಸಂಕೇತವಿದೆ. ಗುರಾಣಿ ಬಳಿ, ಖಡಿನ ಬಳಿ, ಕೇದಿಗೆ ಬಳಿ, ಮಂಜಲಿ ಬಳಿ, ಸುಸ್ಕಿನ ಬಳಿ, ದ್ಯಾವನ ಬಳಿ, ಕುಂತಿ ಬಳಿ ಹೀಗೆ ಎಂಟು ಪ್ರಕಾರಗಳಿರುವುವು. ಮಾಂಸಾಹಾರಿಗಳಾದರೂ ಇವರು ತಮ್ಮ ಬಳಿಯ ಹೆಸರಿನ ಪ್ರಾಣಿಗಳನ್ನು ತಿನ್ನುವುದಿಲ್ಲ, ಕೊಲ್ಲುವುದೂ ನಿಷಿದ್ಧ. ಭಿನ್ನಗೋತ್ರ ವಿವಾಹ

ತಾರ್ಲೆ ಕುಣಿತ, ಹಾಲಕ್ಕಿ ಹೆಣ್ಣುಮಕ್ಕಳ ಪ್ರದರ್ಶನಾತ್ಮಕ ಕಲೆ

ಪದ್ಧತಿ ಇವರಲ್ಲಿದೆ. ಹಾಲಕ್ಕಿ ಒಕ್ಕಲಿಗರು ಯಾವುದೇ ಸಂದರ್ಭದಲ್ಲಿ ಬ್ರಾಹ್ಮಣ ಪುರೋಹಿತರನ್ನು ಕರೆಯುವುದಿಲ್ಲ. ಊರ ಗೌಡನ ನೇತೃತ್ವದಲ್ಲಿ ಎಲ್ಲ ಮಂಗಲ ಕಾರ್ಯಗಳು ನಡೆಯುತ್ತವೆ.

ಪ್ರತಿ ಕೊಪ್ಪ ಒಂದು ಹಳ್ಳಿ. ಅಲ್ಲಿ ಊರ ಗೌಡ, ಬುದವಂತ, ಕೋಲಕಾರ ಎಂಬ ಅಧಿಕಾರಿಗಳು ಇರುತ್ತಾರೆ. ಕೊಪ್ಪಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕೂಟದಲ್ಲಿ ಚರ್ಚಿಸುತ್ತಾರೆ. ಕೂಟ ಅಂದರೆ ಸಭೆ. ಕೊಪ್ಪದ ಎಲ್ಲ ವಯಸ್ಕ ಗಂಡಸರೂ ಕೂಟದ ಸದಸ್ಯರು. ಊರ ಅಧಿಕಾರಿಗಳ ಪಟ್ಟ ವಂಶಪಾರಂಪರ್ಯವಾದದ್ದು. ಅನೇಕ ಕೊಪ್ಪಗಳು ಸೇರಿ ಒಂದು ಸೀಮೆಯಾಗುತ್ತದೆ. ಹಾಲಕ್ಕಿ ಒಕ್ಕಲಿಗರ ಇಂಥ ಏಳು ಸೀಮೆಗಳಿವೆ. ಸೀಮೆಯ ಸಭೆಗೆ ಸೀಮಾಕೂಟ ಎಂದು ಹೆಸರು. ಸಮಾಜದ ನಿಯಮಗಳನ್ನು ಉಲ್ಲಂಘಿಸಿದವರಿಗೆ ಸೀಮೆಯ ಕೂಟ ಬಹಿಷ್ಕಾರ ಹಾಕುವುದು. ಬಹಿಷ್ಕಾರಕ್ಕೆ ಜಾತಿ ಕಟ್ಟು ಎಂಬ ಹೆಸರಿದೆ. ಹಾಲಕ್ಕಿ ಮಹಿಳೆಯ ಚೊಚ್ಚಲ ಹೆರಿಗೆ ಗಂಡನ ಮನೆಯಲ್ಲಿಯೇ ಆಗಬೇಕು. ನಾಮಕರಣದ ದಿನ ತವರಿನ ಕೊಪ್ಪದವರೆಲ್ಲ ಬಂದು ತಿಂಡಿಗಳನ್ನು ಹಂಚುತ್ತಾರೆ. ಇದಕ್ಕೆ ನೆಂಟರಆಮೆ ಎಂದು ಹೆಸರು. ಇವರಿಗೆ ಮದುವೆ ಪವಿತ್ರವಾದ ಸಂಸ್ಥೆ. ಮೊದಲು ಬಾಲ್ಯವಿವಾಹ ರೂಢಿಯಲ್ಲಿತ್ತು. ಅಕಸ್ಮಾತ್ ಮದುವೆಯ ಮೊದಲೇ ಹುಡುಗಿ ಮೈನೆರೆದರೆ ಅವಳನ್ನು ಮನೆಯವರೇ ಕಾಡಿಗೆ ಒಯ್ದು ಕಣ್ಣುಕಟ್ಟಿ ಬಿಟ್ಟುಬರುತ್ತಿದ್ದರಂತೆ. ಈಗ ಈ ಶಿಕ್ಷೆಯಿಲ್ಲ. ಹೆಣ್ಣಿಗೆ ಹೆಣ್ಣು ಇವರಲ್ಲಿ ಈಗಲೂ ಪ್ರಚಲಿತವಿರುವ ಪದ್ಧತಿ. ಹೆಣ್ಣಿಗೆ ಮದುವೆಯಲ್ಲಿ ಸ್ವಾತಂತ್ರ್ಯವಿಲ್ಲ. ಹಿರಿಯರೇ ಮದುವೆ ನಿಶ್ಚಯಿಸುತ್ತಾರೆ. ಸಾಮಾನ್ಯವಾಗಿ ಆರ್ದ್ರಾ ನಕ್ಷತ್ರದಲ್ಲಿ ಮದುವೆ ನಡೆಯುತ್ತದೆ. ಊರಿನಲ್ಲಿ ಒಂದೇ ದಿನ ಹತ್ತು ಹನ್ನೆರಡು ಮದುವೆಗಳು ನಡೆಯುವುದುಂಟು. ಹೆಸ್ರೂಟ ಮತ್ತು ಮದುಮಗಳನ್ನು ಅಡಗಿಸಿಡುವ ಪದ್ಧತಿಗಳು ಇವರಲ್ಲಿ ವಿಶೇಷವಾದವು.

ಇವರು ಹೆಣವನ್ನು ಸುಡುತ್ತಾರೆ. ಮಕ್ಕಳ ಸೊಡ್ಲೆ(ಮಕ್ಕಳ ಶ್ಮಶಾನ) ಪ್ರತ್ಯೇಕ. ಸತ್ತ ಮೈಲಿಗೆಯನ್ನು ಊರ ಗೌಡನೇ ನೀರು ಚಿಮುಕಿಸಿ ಶುದ್ಧಿ ಮಾಡುವನು. ತಿರುಪತಿ ಯಾತ್ರೆ ಮಾಡಿ ಬಂದವರಿಗೆ ದಾಸರು ಎಂದು ಕರೆಯುತ್ತಾರೆ. ಅವರು ಸತ್ತಾಗ ಕೊರಳಿಗೆ ತುಳಸಿ ಹಾಕಿ ಅಗೇರ ವಾದ್ಯದೊಡನೆ ಶ್ಮಶಾನಕ್ಕೆ ಒಯ್ಯುತ್ತಾರೆ.

ಹಗರಣ, ಗುಮಟೆಪಾಂಗು, ಕೋಲಾಟ, ಸುಗ್ಗಿಕುಣಿತ ಇವು ಹಾಲಕ್ಕಿ ಒಕ್ಕಲಿಗರ ಮನರಂಜನೆಗಳು. ಕರ್ನಾಟಕದಲ್ಲಿ ಹಾಲಕ್ಕಿ ಒಕ್ಕಲಿಗರ ಸುಗ್ಗಿ ವಿಶಿಷ್ಟವಾದ್ದು. ಬಣ್ಣದ ಉಡುಪು ತೊಟ್ಟು, ಬಣ್ಣದ ಕಾಗದ ಬೆಂಡು ಬೇಗಡೆಗಳಿಂದ ಶೃಂಗರಿಸಿ ತಯಾರಿಸಿದ ತುರಾಯಿಯನ್ನು ತಲೆಯಲ್ಲಿ ಧರಿಸಿ ಕುಣಿಯುವ ಸೊಗಸು ಆಕರ್ಷಕವಾದುದು. ಸುಗ್ಗಿಯಲ್ಲಿ ಕಿರೇಸುಗ್ಗಿ ಮತ್ತು ಹಿರೇಸುಗ್ಗಿ ಎಂದು ಎರಡು ವಿಧಗಳು. ವೇಷಭೂಷಣ, ಹೆಜ್ಜೆಗಾರಿಕೆಗಳಲ್ಲಿ ಇವು ವ್ಯತ್ಯಾಸ ಪಡೆದಿವೆ. ಇವು ಪ್ರತಿ ವರ್ಷ ಪರ್ಯಾಯವಾಗುವುದು ಒಂದು ಪದ್ಧತಿ. ಸುಗ್ಗಿಕುಣಿತಕ್ಕೆ ಗುಮಟೆವಾದ್ಯದ ಹಿನ್ನೆಲೆ ಮೆರುಗನ್ನೀಯುತ್ತದೆ. ಅಡ್ಡ ಕುಣಿತ, ಕೋಲು ಕುಣಿತ, ಕುಂಚ ಕುಣಿತ, ಅಲಾವಿ ಕುಣಿತ–ಹೀಗೆ ವಿವಿಧ ಬಗೆಯ ಕುಣಿತಗಳಿವೆ. ಸುಗ್ಗಿಕುಣಿತ ಕರ್ನಾಟಕ ಜನಪದ ನೃತ್ಯಕಲೆಗೆ ಒಂದು ವಿಶೇಷ ಕೊಡುಗೆ. ಹಗರಣ (ಹಗಣ) ಇವರಿಗೊಂದು ವಿಶೇಷ ವಿನೋದ. ಊರಿಗೆ ಊರೇ ಹೋಗಿ ಬೇಟೆಯಾಡುವುದು ಇವರದೊಂದು ವಿಶಿಷ್ಟ ಹವ್ಯಾಸ. ಇವರ ಬೇಟೆಯಲ್ಲಿ ಬಂದೂಕಿಗೆ ಸ್ಥಾನವಿಲ್ಲ. ಈಟಿಯನ್ನು ಬಳಸುತ್ತಾರೆ. ಬಲೆಕಟ್ಟಿ ಬೇಟೆಯಾಡುತ್ತಾರೆ. ಈ ಬೇಟೆಗೆ ಹೊಲ ಎಬ್ಬಿಸುವುದು ಎನ್ನುತ್ತಾರೆ.

ಇವರು ಆರ್ಥಿಕವಾಗಿ ಹಿಂದುಳಿದವರು. ಹೆಂಗಸರು ಒಕ್ಕಲುತನದಲ್ಲಿ ನೆರವಾಗುವುದಲ್ಲದೇ ದೂರದ ಬೆಟ್ಟ ಕಾಡಿನಿಂದ ಕಟ್ಟಿಗೆ ಹೊತ್ತು ತಂದು ಮಾರುವವರು. ಬದುಕು ಕಷ್ಟದ್ದು. ಆದರೂ ಹಾಡು, ಗುಮಟೆಪಾಂಗಿನ ಖುಷಿಯಲ್ಲಿ ಮೈಮರೆಯುವರು. ಕರಿಹಬ್ಬ(ಸುಗ್ಗಿಹಬ್ಬ), ತುಳಸಿ ಹಬ್ಬ, ಗೋವಿನಹಬ್ಬ, ಹಾವಿನಹಬ್ಬ, ಗಡಿಹಬ್ಬಗಳನ್ನು ಆಚರಿಸುವರು. ದನಗಳ ಹಬ್ಬದಲ್ಲಿ ದನಗಳನ್ನು ಬಣ್ಣಬಣ್ಣದ ಕಾಗದದ ಹಾಗೂ ನಾರಿನ ಚವಲಗಳಿಂದ ಶೃಂಗರಿಸಿ ಪೂಜಿಸುವರು. ದೇವರು ದೆವ್ವಗಳಲ್ಲಿ ಇವರಿಗೆ ನಂಬಿಕೆ. ಇವರು ತಿರುಪತಿ ತಿಮ್ಮಪ್ಪನ ಭಕ್ತರು. ಆಲ, ಅಶ್ವತ್ಥ ವೃಕ್ಷಗಳನ್ನು ಪೂಜಿಸುವರು. ಮೃತರ ಆತ್ಮ ದೈವಗಳಾಗುತ್ತವೆಂಬುದು ಇವರ ನಂಬಿಕೆ. ಕನ್ನೆದೈವ, ಹೆಣ್ಣುಗೊರೆ, ಗಂಡುಗೊರೆ ಇವು ಸಹಾಯ ದೈವಗಳು. ನೂಡಿದೈವ ವಮ್ಮಲ್ತಿ ಹೆಣ್ಣುದೆವ್ವಗಳಲ್ಲಿ ನಂಬಿಕೆ. ಭೂತ ಪಿಶಾಚಿಗಳ ಬಗ್ಗೆ ಭಯ.

ಅಕ್ಕಿ, ರಾಗಿ, ಮೀನು ಮುಖ್ಯ ಆಹಾರ. ರಾಗಿ ಅಂಬಲಿ ಹಾಲಕ್ಕಿಗಳ ವಿಶಿಷ್ಟ ಆಹಾರ. ಇವರದು ರಾಗಿ ಅಂಬಲಿ ಉಂಡ ಕಸುವಿನ ಸೊಬಗಿನ ದೇಹ. ಆದರೆ ಉಡುಪು ಸದಾ ಸರಳ, ಮಾನಮುಚ್ಚಲು ಉಡಿದಾರಕ್ಕೊಂದು ಕಚ್ಚೆ, ಹೆಗಲಿಗೊಂದು ಕಂಬಳಿ, ತಲೆಗೊಂದು ರುಮಾಲು. ಕವಳಿಗೆ ಸಂಚಿ(ತಂಬಾಕು ಸಂಚಿ), ಕೆಲಸದ ಕತ್ತಿ ಸದಾ ಇವರ ಜೊತೆಗಿರುತ್ತವೆ. ಹೆಂಗಸರು ಮಗ್ಗದ ಚೌಕುಳಿ ಸೀರೆಯನ್ನು ಮೊಣಕಾಲಿನವರೆಗೆ ನೆರಿಗೆಮಾಡಿ ಇಳಿಬಿಟ್ಟು ಎಡ ಬಾಜುವಿಗೆ ಸೆರಗನ್ನು ತಂದು ಗಂಟು ಕಟ್ಟಿ ಉಡುವರು. ಕುಪ್ಪಸವಿಲ್ಲದ ಭುಜಗಳ ತುಂಬ ಕರಿಮಣಿ ಸರಗಳ ಹೊರೆ ಹೊತ್ತುಕೊಂಡಿರುವರು. ಏಕ ಪತ್ನಿತ್ವ ಪದ್ಧತಿ ರೂಢಿಯಲ್ಲಿದ್ದರೂ ಬಹುಪತ್ನಿತ್ವಕ್ಕೆ ಸೀರುಡಿಕೆ ಸಂಪ್ರದಾಯದಂತೆ ಅವಕಾಶವಿದೆ. ವಿಧವೆಯರು ವಿಧುರರೊಡನೆ ಮಾತ್ರ ಮದುವೆಯಾಗಬಹುದು. ಇದಕ್ಕೆ ಸೀರುಡಿಕೆ ಎನ್ನುವರು.

ಹಾಲಕ್ಕಿ ಒಕ್ಕಲಿಗರು ಗಿಡಮೂಲಿಕೆಗಳಿಂದ ಔಷಧ ತಯಾರಿಸುವುದರಲ್ಲಿ ಪ್ರಸಿದ್ಧರು. ದನಕರುಗಳ ಹಾಗೂ ಮನುಷ್ಯರ ರೋಗಗಳಿಗೆ ಔಷಧ ಕೊಡುವ ಪ್ರಸಿದ್ಧ ವೈದ್ಯ ಮನೆತನಗಳಿವೆ. ಇದು ವಂಶಪಾರಂಪರ್ಯವಾಗಿ ನಡೆದು ಬಂದ ವೃತ್ತಿ. ಪಕ್ಷವಾತರೋಗಕ್ಕೆ ಬೆಳ್ಳಂಬರದ ಬೊಮ್ಮಗೌಡರ ಮದ್ದು ನಾಡಿನ ಒಳಹೊರಗೆಲ್ಲ ಪ್ರಸಿದ್ಧವಾಗಿದೆ. ಮಕ್ಕಳ ರೋಗಕ್ಕೆ ಕುಮಟದ ವಡಗೇರಿಯ ಗೌಡರು, ಎಲುಬು ರೋಗಕ್ಕೆ ಕಾರವಾರದ ತೋಡೂರು ಗೌಡರು ಪ್ರಸಿದ್ಧರು. ಇವರ ಜನಪದ ಸಾಹಿತ್ಯ ಅತ್ಯಂತ ಶ್ರೀಮಂತವಾಗಿದೆ. ಹಾಲಕ್ಕಿ ಒಕ್ಕಲಿಗರ ಜನಪದ ಕಥೆ, ಗೀತೆ, ಸಂಪ್ರದಾಯಗಳನ್ನು ಎಲ್.ಆರ್.ಹೆಗಡೆ (1971), ಎಲ್.ಜಿ.ಭಟ್ (1972), ಎನ್.ಆರ್. ನಾಯಕ (1992) ಮೊದಲಾದವರು ಸಂಗ್ರಹಿಸಿದ್ದಾರೆ. *

**ಹಾಲಬಾವಿ, ಡಿ.ಸಿ.:** 1907–97. ಹಿರಿಯ ಚಿತ್ರಕಲಾವಿದರು. 1907 ನವೆಂಬರ್ 28ರಂದು ಧಾರವಾಡದಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ದಾನಪ್ಪ ವೀರಭದ್ರಪ್ಪ ಹಾಲಬಾವಿ. ಚಿಕ್ಕವಯಸ್ಸಿನಲ್ಲಿಯೇ ಚಿತ್ರಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಇವರು ಪ್ರೌಢಶಾಲಾಭ್ಯಾಸಂಗವನ್ನು ಪೂರ್ಣಗೊಳಿಸಿ ಇಂಟರ್ ಮೀಡಿಯಟ್ ಕಲಾಶ್ರೇಣಿ ಪರೀಕ್ಷೆ ಹಾಗೂ ಚಿತ್ರರಚನೆಯಲ್ಲಿ ಡಿಪ್ಲೊಮಾ ಪದವಿ ಪಡೆದರು. ಹೆಚ್ಚಿನ ಶಿಕ್ಷಣವನ್ನು ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿ ಪಡೆದು (1926–35) ಆರ್ಟ್ಸ್ ಮಾಸ್ಟರ್ ಪದವಿಯನ್ನೂ ಗಳಿಸಿದರು(1936). ಆರಂಭಿಕ ವೃತ್ತಿಯನ್ನು ಚಿಕ್ಕೋಡಿ, ನಿಪ್ಪಾಣಿಗಳಲ್ಲಿ ಕಲಾಶಿಕ್ಷಕರಾಗಿ ನಿರ್ವಹಿಸಿ ಚಿತ್ರಕಲೆಯನ್ನು ಪೋಷಿಸಿ ಬೆಳೆಸುವ ಘನ ಉದ್ದೇಶದಿಂದ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಮಾದರಿಯಲ್ಲೇ ಧಾರವಾಡದಲ್ಲಿ ಪ್ರಪ್ರಥಮವಾಗಿ ಸ್ಕೂಲ್ ಆಫ್ ಆರ್ಟ್ಸ್ ಎಂಬ ಕಲಾಶಾಲೆಯನ್ನು ಸ್ಥಾಪಿಸಿದರು (1935). ಈ ಕಲಾಶಾಲೆಯಲ್ಲಿ ಡಿ.ಟಿ.ಸಿ(1952) ಹಾಗೂ ಡಿ.ಎಂ.ಸಿ(1981) ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ ಕರ್ನಾಟಕದಲ್ಲೇ ಪ್ರಪ್ರಥಮವಾಗಿ ಈ ಬಗೆಯ ತರಬೇತಿ ನೀಡುವ ಸಂಸ್ಥೆ ಇವರದಾಯಿತು. ಈ ಶಾಲೆ ತನ್ನ ಬೆಳ್ಳಿಹಬ್ಬ (1960) ಹಾಗೂ ಸುವರ್ಣ ಮಹೋತ್ಸವಗಳನ್ನು (1985) ಆಚರಿಸಿಕೊಂಡಿದೆ.

ಹಾಲಬಾವಿಯವರು ಕಲಾಧ್ಯಯನಕ್ಕಾಗಿಯೇ ಅಜಂತ, ಎಲ್ಲೋರ, ಯಾದಗೀರ್, ದೌಲತಾಬಾದ್, ಬಿಜಾಪುರ, ಬಾದಾಮಿ, ಪಟ್ಟದಕಲ್ಲು, ಬೇಲೂರು–ಹೀಗೆ ದೇಶದ ಎಲ್ಲ ಭಾಗಗಳಲ್ಲಿಯೂ ಸಂಚಾರ ಕೈಗೊಂಡವರು. 1978ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಹಿಮಾವೃತ ಶಿಖರಗಳ ಬಗೆಗೆ ಮತ್ತು ಬಷೋಲಿ, ಕಾಂಗ್ರಕಲೆಗಳ ಬಗೆಗೆ ಸಾಕಷ್ಟು ಅಧ್ಯಯನ ನಡೆಸಿದರು. ಕರ್ನಾಟಕದ ಗತಕಾಲದ ಕಲೆ ಹಾಗೂ ಅದರ ಪುನರುಜ್ಜೀವನದ ವಿಷಯಗಳಲ್ಲಿ ಸಂಶೋಧನೆ ನಡೆಸಿದ ಇವರು ಅಸಂಖ್ಯಾತ ಕಲಾಸಕ್ತರಿಗೆ ತರಬೇತಿ ನೀಡಿದ್ದಾರೆ. ಸೋಮಶೇಖರ ಸಾಲಿ, ಆರ್.ಕೆ. ಪರಾಂಜಪೆ, ಬಿ.ಕೆ. ಹುಬ್ಳಿ, ತಾರಾಪವಾರ, ಈಶ್ವರಮುರಗೋಡ, ಆರ್.ಜಿ. ರಾಯಕರ, ಶಂಕರಪಾಟೀಲ, ವಿಮಲಾ ಶೀಲವಂತ ಮೊದಲಾದ ಪ್ರಸಿದ್ಧ ಚಿತ್ರಕಲಾವಿದರು ಇವರ ಶಿಷ್ಯವರ್ಗಕ್ಕೆ ಸೇರಿದವರು.

ಇವರು ಚಿತ್ರರೂಪದಲ್ಲಿ ಚಿತ್ರಿಸಿದ ಚೆನ್ನಬಸವಪುರಾಣ, ಪ್ರಭುಲಿಂಗ ಲೀಲೆ, ಗಿರಿಜಾಕಲ್ಯಾಣ ಮೊದಲಾದ ಕಾವ್ಯಸನ್ನಿವೇಶಗಳೂ ಶಂಕರದಾಸಿಮಯ್ಯ, ಗೋರಖನಾಥ, ಬಸವೇಶ್ವರ ಮೊದಲಾದ ಮಹಾತ್ಮರ ಹಾಗೂ ಮಹಾತ್ಮಗಾಂಧಿ, ಬಿ.ಡಿ. ಜತ್ತಿ, ಡೆಪ್ಯುಟಿ ಚೆನ್ನಬಸಪ್ಪ, ರೊದ್ದ ಶ್ರೀನಿವಾಸರಾವ್, ಎ.ಎಮ್. ಥಾಮಸ್, ಡಿ.ಸಿ. ಪಾವಟೆ ಮೊದಲಾದ ಪ್ರಖ್ಯಾತ ವ್ಯಕ್ತಿಗಳ ತೈಲವರ್ಣ ಚಿತ್ರಗಳೂ ಪ್ರಸಿದ್ಧಿ ಪಡೆದಿವೆ. ಇವರ ಬಹುತೇಕ ನಿಸರ್ಗ ಚಿತ್ರಗಳು ಜಲವರ್ಣಚಿತ್ರಗಳಾಗಿದ್ದು ಅವುಗಳಲ್ಲಿ ಇಂಪ್ರೆಷನಿಸಂನ ಪ್ರಭಾವವನ್ನು ಗುರುತಿಸಬಹುದಾಗಿದೆ. ಇವರು ರಚಿಸಿರುವ ಹಲವಾರು ಚಿತ್ರಗಳು ಭಾರತದಲ್ಲಷ್ಟೇ ಅಲ್ಲದೆ ಅಮೆರಿಕ, ಬ್ರಿಟನ್, ಸ್ವೀಡನ್,

ಹಾಲೆಂಡ್, ಫ್ರಾನ್ಸ್, ಜಪಾನ್ ಹೀಗೆ ಪ್ರಪಂಚದ ನಾನಾ ಭಾಗಗಳಲ್ಲಿನ ವಸ್ತುಸಂಗ್ರಹಾಲಯಗಳಲ್ಲಿ ಅನಾವರಣಗೊಂಡು ಪ್ರಸಿದ್ಧಿ ಗಳಿಸಿವೆ.

ಇವರು ಬೆಳಗಾಂವಿಯ ಕರ್ನಾಟಕ ಕಲಾಸಂಸ್ಥೆ ಹಾಗೂ ಆಗಿನ ಮುಂಬಯಿಯ ರಾಜ್ಯದ ಕಲಾಶಿಕ್ಷಕರ ಸಮ್ಮೇಳನ ಇವುಗಳಿಗೆ ಕಾರ್ಯದರ್ಶಿಗಳಾಗಿ, ಭಾರತೀಯ ಆರ್ಟ್ಸ್ ಅಂಡ್ ಕ್ರಾಫ್ಟ್ ಎಜುಕೇಷನ್ ಸಲಹಾ ಸಮಿತಿಯ ಸದಸ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಕಲಾಶಿಕ್ಷಕರಾಗಿ, ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆಸಲ್ಲಿಸಿದ್ದರು ಕುಂಚಬ್ರಹ್ಮ ಎಂಬ ಬಿರುದಿಗೆ ಪಾತ್ರರಾಗಿದ್ದರು. ಕಲೆಯ ಅಭಿವೃದ್ಧಿಗಾಗಿ ಆರ್ಟ್‌ಗಿಲ್ಡ್ ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನು ಆರಂಭಿಸಿದ್ದರು. ನನ್ನ ಸಮಕಾಲೀನ ಕಲಾವಿದರು, ಸಿಲೋನಿನ ಸಂದರ್ಶನ ಇವು ಇವರು ರಚಿಸಿದ ಎರಡು ಕೃತಿಗಳು.

ಇವರ ಕಲಾಸೇವೆಗಾಗಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (1995), ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (1998), ವೆಂಕಟಪ್ಪ ಪ್ರಶಸ್ತಿ ಲಭಿಸಿವೆ. ಇವರು 1997ರಲ್ಲಿ ನಿಧನಹೊಂದಿದರು. **(ಆರ್.ಜಿ.ಆರ್.)**

**ಹಾಲೇರಿ ರಾಜವಂಶ:** ಕೊಡಗಿನಲ್ಲಿ ಸು. 1633–1834ರ ಅವಧಿಯಲ್ಲಿ ಆಳುತ್ತಿದ್ದ ರಾಜಮನೆತನ. ಇವರ ರಾಜಧಾನಿ ಮಡಿಕೇರಿ. ಮೊದಲು ಹಾಲೇರಿ, ಸ್ವಲ್ಪಕಾಲ ನಾಲ್ಕುನಾಡು ರಾಜಧಾನಿಗಳಾಗಿದ್ದುವು. ಈ ವಂಶದ ರಾಜರು ತಾವು ಚಂದ್ರವಂಶದವರು ಆಶ್ವಲಾಯನಸೂತ್ರ ಋಕ್ ಶಾಖೆಯವರು, ವೀರಶೈವಮತ ಧುರೀಣರು ಎಂದು ಕರೆದುಕೊಂಡಿದ್ದಾರೆ. ಈ ಅರಸರೂ ಒಡೆಯರು ಎಂಬ ಉತ್ತರನಾಮವನ್ನು ಬಳಸುತ್ತಿದ್ದರು. ಈ ವಂಶದ ವೀರರಾಜೇಂದ್ರ (1780–1809) ಬರೆಯಿಸಿದ ರಾಜೇಂದ್ರನಾಮೆ ಮತ್ತು ಹಲವು ಬ್ರಿಟಿಷರ ಬರೆಹಗಳು ಈ ವಂಶದ ಚರಿತ್ರೆಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸುತ್ತವೆ.

17ನೆಯ ಶತಮಾನದ ಆದಿಭಾಗದಲ್ಲಿ ವೀರರಾಜನೆಂಬ ಇಕ್ಕೇರಿಯ ರಾಜಕುಮಾರ ಜಂಗಮ ವೇಷದಲ್ಲಿ ಕೊಡಗಿಗೆ ಬಂದು ಮಡಿಕೇರಿ ಹತ್ತಿರದಲ್ಲಿರುವ ಹಾಲೇರಿಯಲ್ಲಿ ನೆಲಸಿದ. ಇವನೇ ಹಾಲೇರಿ ವಂಶದ ಮೂಲಪುರುಷ. ಇವನು ಒಂದು ದಂಡನ್ನು ಕಟ್ಟಿ ಸುತ್ತಮುತ್ತಲ ಪ್ರದೇಶವನ್ನು ಆಕ್ರಮಿಸಿಕೊಂಡ. ಅಂದು ಕೊಡಗಿನಲ್ಲಿ ಒಡೆತನ ಮಾಡುತ್ತಿದ್ದ ಕಿಗ್ಗಟ್ಟುನಾಡಿನ ಅಚ್ಚುನಾಯಕ, ಬೆಪ್ಪುನಾಡಿನ ಉತ್ತನಾಯಕ, ಪಾಡಿನಾಲ್ಕುನಾಡಿನ ಕರ್ಣಂಬಾಹು ಮೊದಲಾದ ಪಾಳೆಯಗಾರರು ಇವನ ಅಧೀನರಾದರು ಎಂಬ ಹೇಳಿಕೆಗಳಿವೆ. ಆದರೆ ವೀರರಾಜ ಮತ್ತು ಇವನ ಮಗ ಅಪ್ಪಾಜಿರಾಜ ಈ ಮೊದಲ ರಾಜರ ಕಾಲದ ಆಳಿಕೆಯ ಕಾಲ ಮತ್ತು ಇತರ ವಿವರಗಳು ಸರಿಯಾಗಿ ತಿಳಿದುಬಂದಿಲ್ಲ. ಅಪ್ಪಾಜಿರಾಜನ ಮಗ ಮುದ್ದುರಾಜ 1633–87ರ ವರೆಗೆ ಆಳಿದ ಇವನು 1681ರಲ್ಲಿ ಮಡಿಕೇರಿಯಲ್ಲಿ ಅರಮನೆಯನ್ನೂ ಅದರ ಸುತ್ತ ಕೋಟೆಯನ್ನೂ ಕಟ್ಟಿಸಿದ. ಆ ಕಾಲದಲ್ಲಿ ಬಹುಶಃ ಬಲಯುತ ರಾಜನಾಗಿದ್ದ ಈತ ಮೈಸೂರು ಅರಸರಿಂದ ಪಿರಿಯಾಪಟ್ಟಣ ದಾಳಿಗೆ ಒಳಗಾದ ಸಂದರ್ಭದಲ್ಲಿ ಅದನ್ನು ರಕ್ಷಿಸುವ ಮನಸ್ಸು ಮಾಡಿದ್ದ. ಆದರೆ ಇವನು ಕಾರ್ಯನಿರತನಾಗುವ ಹೊತ್ತಿಗೆ ಕೈಮೀರಿಹೋಗಿತ್ತು. ಮುದ್ದುರಾಜನಿಗೆ ದೊಡ್ಡವೀರಪ್ಪ (1687–1736), ಅಪ್ಪಾಜಿರಾಜ ಮತ್ತು ನಂದರಾಜ ಎಂಬ ಮೂವರು ಮಕ್ಕಳಿದ್ದರು. ದೊಡ್ಡವೀರಪ್ಪ ತಂದೆಯ ಮರಣಾನಂತರ ಪಟ್ಟಕ್ಕೆ ಬಂದ. ಈತ ಕೊಟ್ಟಾಯಂ ಅರಸ ವೀರವರ್ಮನನ್ನು ಯುದ್ಧದಲ್ಲಿ ಸೋಲಿಸಿ ಕೊಂದ. ಬಿದನೂರ ಸೋಮಶೇಖರನಾಯಕನೊಡನೆ ಮೈತ್ರಿಯನ್ನು ಸಾಧಿಸಿದ. 49 ವರ್ಷಗಳ ಕಾಲ ಈತ ದಕ್ಷತೆಯಿಂದ ಆಳಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿ ತನ್ನ 78ನೆಯ ವಯಸ್ಸಿನಲ್ಲಿ ಮರಣಹೊಂದಿದ. ಇವನು ಶೂರನೂ ಪ್ರಾಮಾಣಿಕನೂ ದಕ್ಷ ಆಡಳಿತಗಾರನೂ ನಿರ್ದಾಕ್ಷಿಣ್ಯ ಸ್ವಭಾವದವನೂ ಆಗಿದ್ದ. ಇವನ ಅನಂತರ ಆಳಿದವನು ಚಿಕ್ಕವೀರಪ್ಪ (1736–66). ಇವನು ದುರ್ಬಲನಾಗಿದ್ದುದರಿಂದ ಏಳುಸಾವಿರ ಸೀಮೆ, ಬೆಮ್ಮತ್ತಿ, ಮಲ್ಲಿಪಟ್ಟಣ ಮತ್ತು ಹೊಸೂರು ಹೋಬಳಿಗಳನ್ನು ಹೈದರ್‌ಅಲಿ ವಶಪಡಿಸಿಕೊಂಡ. ಚಿಕ್ಕವೀರಪ್ಪನ ಅನಂತರ ಹಾಲೇರಿಯ ಮುದ್ದುರಾಜ ಮತ್ತು ಹೊರಮಲೆಯ ಮುದ್ದಯ್ಯ ಇವರಿಬ್ಬರೂ ಸಮರಸದಿಂದ 1766–70ರ ವರೆಗೆ ಒಟ್ಟಿಗೆ ಆಡಳಿತ ನಡೆಸಿದರು. ಈ ಕಾಲದಲ್ಲಿ ಪಂಜೆ ಮತ್ತು ಬೆಳ್ಳಾರೆಗಳನ್ನು ಸೇರಿಸಿಕೊಂಡು ಕೊಡಗು ವಿಸ್ತರಿಸಲ್ಪಟ್ಟಿತು. ಮುದ್ದಯ್ಯನ ಮಗ ದೇವಪ್ಪರಾಜ 4 ವರ್ಷ ಆಳಿದ ಅನಂತರ ಸಿಂಹಾಸನಕ್ಕಾಗಿ ಹೋರಾಟ ನಡೆಯಿತು. ಹೊರಮಲೆಯವರು ದೇವಪ್ಪನನ್ನು ಸಿಂಹಾಸನಕ್ಕೇರಿಸಿದರೂ ಹಾಲೇರಿಯ ಒಂದನೆಯ ಲಿಂಗರಾಜೇಂದ್ರ (1774–80) ಏಗೂರಿಗೆ ಹೋಗಿ ಹೈದರನ ಸಹಾಯದಿಂದ ಸಿಂಹಾಸನ ಪಡೆದ. ಇವನು 1780ರಲ್ಲಿ ನಿಧನಹೊಂದಿದ. ಇವನ ಮಕ್ಕಳು ಪ್ರಾಪ್ತವಯಸ್ಕರಾಗುವ ತನಕ ಅವರ ಪೋಷಕನಾಗುವ ನೆಪದಲ್ಲಿ ಹೈದರ್ ಕೊಡಗನ್ನು ವಶಪಡಿಸಿಕೊಂಡ. ರಾಜಕುಮಾರರನ್ನು ಮೊದಲು ಹಾಸನ ಜಿಲ್ಲೆಯ ಗೊರೂರಿನಲ್ಲಿಯೂ ಅನಂತರ ಪಿರಿಯಾಪಟ್ಟಣದಲ್ಲಿಯೂ ಸೆರೆಯಲ್ಲಿಟ್ಟಿದ್ದ. 1782ರಲ್ಲಿ ಕೊಡಗರು ದಂಗೆಯೆದ್ದರು. ಅದೇ ವರ್ಷ ಹೈದರನೂ ಮರಣಹೊಂದಿದ.

ಹೈದರನ ಅನಂತರ ಟಿಪ್ಪುಸುಲ್ತಾನ್ ಕೊಡಗಿನಲ್ಲಿ ತನ್ನ ಅಧಿಕಾರ ಸ್ಥಾಪಿಸಿದ. ಈ ಸಂದರ್ಭದಲ್ಲಿ ಪುನಃ ಕೊಡಗಿನಲ್ಲಿ ದಂಗೆಗಳುಂಟಾದಾಗ ಆ ದಂಗೆಗಳನ್ನು ಅಡಗಿಸಿ ಸೆರೆಸಿಕ್ಕವರನ್ನು ಶ್ರೀರಂಗಪಟ್ಟಣಕ್ಕೆ ಕಳಿಸಿದ. ಕೊಡಗು ಪ್ರದೇಶವನ್ನು ಮುಸ್ಲಿಂ ಜಮೀನ್ದಾರರಿಗೆ ಕೊಟ್ಟು ಉಳಿದ ಕೊಡಗರನ್ನೆಲ್ಲ ಕೊಡಗಿನಿಂದ ಉಚ್ಚಾಟಿಸುವಂತೆ ತಿಳಿಸಿದ. ವೀರರಾಜೇಂದ್ರ ತನ್ನ ಪತ್ನಿ ಮತ್ತು ಸಹೋದರರೊಡನೆ ಪಿರಿಯಾಪಟ್ಟಣದಿಂದ ತಪ್ಪಿಸಿಕೊಂಡು ಸ್ವಲ್ಪ ಅಧಿಕಾರ ಹಿಂದಕ್ಕೆ ಪಡೆದ. ಟಿಪ್ಪುವಿನೊಡನೆ ಯುದ್ಧದಲ್ಲಿ ತೊಡಗಿದ್ದ ಬ್ರಿಟಿಷರ ಸಹಾಯದಿಂದ ವೀರರಾಜೇಂದ್ರ ಪುನಃ ಸಿಂಹಾಸನವೇರಿದ. 1792ರಲ್ಲಿ ಲಾರ್ಡ್ ಕಾರ್ನ್‌ವಾಲೀಸ್ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಅನೇಕ ಜನ ಕೊಡಗರು ಕೊಡಗಿಗೆ ಹಿಂದಿರುಗಿದರು. ವೀರರಾಜೇಂದ್ರ ಕೊಡಗಿನ ರಾಜರಲ್ಲೆಲ್ಲ ಅತ್ಯಂತ ಪ್ರಮುಖನಾಗಿದ್ದವ. ಈತ ಟಿಪ್ಪುವನ್ನು ಸೋಲಿಸಿ ಕುಶಾಲನಗರ, ಬೆಪ್ಪುನಾಡು, ಭಾಗಮಂಡಲ–ಈ ಮೂರು ಕೋಟೆಗಳನ್ನು ವಶಪಡಿಸಿಕೊಂಡ.

1790ರಲ್ಲಿ ಮೂರನೆಯ ಮೈಸೂರು ಯುದ್ಧ ಪ್ರಾರಂಭವಾದಾಗ ತಲಚೇರಿಯಲ್ಲಿದ್ದ ಇಂಗ್ಲಿಷ್ ಮುಖಂಡ ರಾಬರ್ಟ್ ಟೇಲರ್ ಕೊಡಗಿನ ರಾಜನೊಡನೆ ಸಂಧಾನ ಆರಂಭಿಸಿ, ವ್ಯಾಪಾರ ಸೌಕರ್ಯಗಳನ್ನು ಪಡೆದ. ಬ್ರಿಟಿಷ್ ಕಂಪನಿ ಕೊಡಗಿನ ಸ್ವಾತಂತ್ರ್ಯ ರಕ್ಷಿಸಲು ಒಪ್ಪಿತು. ಇದೇ ಸಂದರ್ಭದಲ್ಲಿ ಇಂಗ್ಲಿಷರ ವಿರುದ್ಧ ಯುದ್ಧ ಮಾಡಿದರೆ ಕೆಲವು ಪ್ರದೇಶಗಳನ್ನು ಕೊಡುವುದಾಗಿ ಟಿಪ್ಪು ಹೇಳಿಕಳಿಸಿದ. ಆದರೆ ವೀರರಾಜೇಂದ್ರ ಟಿಪ್ಪುವಿನ ಆಹ್ವಾನವನ್ನು ಒಪ್ಪಲಿಲ್ಲ. ಸಿದ್ದೇಶ್ವರದ ಬಳಿ ಬ್ರಿಟಿಷ್ ಸೈನ್ಯ ಬೀಡುಬಿಟ್ಟಿದ್ದಾಗ ವೀರರಾಜ ಅಬರ್‌ಕ್ರಾಂಬಿಯನ್ನು ಭೇಟಿಮಾಡಿದ. ಇದರ ನೆನಪಿಗಾಗಿ 1792ರಲ್ಲಿ ಒಂದು ಪಟ್ಟಣ ಕಟ್ಟಿಸಿ, ಅದಕ್ಕೆ ವೀರರಾಜಪೇಟೆ ಎಂದು ಹೆಸರಿಟ್ಟ. 1793ರಲ್ಲಿ ಬ್ರಿಟಿಷರೊಡನೆ ಪುನಃ ಒಪ್ಪಂದ ಮಾಡಿಕೊಂಡು ಅವರಿಗೆ ವರ್ಷಕ್ಕೆ 24,000 ರೂಪಾಯಿ ಪೊಗದಿ ಕೊಡಲು ಸ್ವಯಂಪ್ರೇರಣೆಯಿಂದ ಒಪ್ಪಿದ. ಮೊದಲ ರಾಣಿಗೆ ಗಂಡು ಮಕ್ಕಳಿಲ್ಲದ್ದರಿಂದ 1796 ಫೆಬ್ರವರಿಯಲ್ಲಿ ಮಹದೇವಮ್ಮಾಜಿಯನ್ನು ವಿವಾಹ ಮಾಡಿಕೊಂಡ. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಈತ ಬ್ರಿಟಿಷರಿಗೆ ಸಹಾಯ ಮಾಡಿದ. ಯುದ್ಧದಲ್ಲಿ ಟಿಪ್ಪು ಮಡಿದಾಗ ಅವನ ಯುದ್ಧಾಶ್ವ, ಪಲ್ಲಕ್ಕಿ ಮತ್ತು ಅಂಬಾರಿಗಳು ವೀರರಾಜೇಂದ್ರನಿಗೆ ಬಹುಮಾನವಾಗಿ ದೊರೆತವು. ಟಿಪ್ಪುವಿನ ಪ್ರದೇಶಗಳ ಹಂಚಿಕೆಯ ಅನಂತರ ಮೈಸೂರು ಮತ್ತು ಕೊಡಗುಗಳ ಗಡಿ ಸ್ಪಷ್ಟವಾಗಿ ಗುರುತಿಸಲ್ಪಟ್ಟವು.

ವೀರರಾಜೇಂದ್ರನ ಸಹೋದರ ಎರಡನೆಯ ಲಿಂಗರಾಜೇಂದ್ರ 1811–20 ರವರೆಗೆ ಆಳಿದ. ಇವನ ಕಾಲದಲ್ಲಿ ಮಡಿಕೇರಿಯ ಅರಮನೆ (1812), ಓಂಕಾರೇಶ್ವರ ದೇವಸ್ಥಾನ (1820) ನಿರ್ಮಾಣಗೊಂಡವು. ಓಂಕಾರೇಶ್ವರ ದೇವಾಲಯಕ್ಕಾಗಿ ಶಿವಲಿಂಗವನ್ನು ಕಾಶಿಯಿಂದ ತರಿಸಿ 1820 ಮಾರ್ಚ್ 26ರಂದು ಪ್ರತಿಷ್ಠಾಪಿಸಿದ.

ಲಿಂಗರಾಜೇಂದ್ರ ದಕ್ಷ ಆಡಳಿತಗಾರನಾಗಿದ್ದ. ಕೋಟೆಗಳನ್ನು ಬಲಪಡಿಸಿದ. ರಾಜ್ಯದ ಜಮೀನನ್ನು ಕ್ರಮವಾಗಿ ಅಳತೆ ಮಾಡಿಸಿ, ಜಮೀನಿನ ಫಲವತ್ತತೆಯ ಆಧಾರದ ಮೇಲೆ ಕಂದಾಯವನ್ನು ನಿರ್ಧರಿಸಿದ. ಸರ್ಕಾರ ದಕ್ಷತೆಯಿಂದ ಕೆಲಸ ಮಾಡಲು 54 ಹುಕುಂ ಅಥವಾ ಆಜ್ಞೆಗಳನ್ನು ಹೊರಡಿಸಿದ. ನಾಡಿನ ಪ್ರತಿಯೊಂದು ಇಲಾಖೆಯ ಆಡಳಿತ ಪಾರುಪತ್ತೇಗಾರರಿಗೆ ವಹಿಸಲ್ಪಟ್ಟಿತು. ಸುಭೇದಾರರು ದೊಡ್ಡ ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದರು. ಹಳ್ಳಿಗಳಲ್ಲಿ ಪಟೇಲರು ಮತ್ತು ನಾಡಟಿಕ್ಕರು ಎಂಬ ಖಾಸಗೀ ನಾಯಕರಿದ್ದರು.

ಇವನ ಮಗ ಚಿಕ್ಕವೀರರಾಜೇಂದ್ರ ಹಾಲೇರಿ ವಂಶದ ಹಾಗೂ ಕೊಡಗಿನ ಕೊನೆಯ ದೊರೆ (1820–34). ಇವನು ಅನೇಕ ಕೊಲೆಗಳಿಗೆ ಕಾರಣನಾಗಿದ್ದುದರ ಫಲವಾಗಿ ವಿಚಾರಣೆ ಮಾಡಲು ತೀರ್ಮಾನಿಸಿದಾಗ ರಾಜ ಅದನ್ನು ಪ್ರತಿಭಟಿಸಿದ. ಸೋದರಿ ದೇವಮ್ಮಾಜಿಯೂ ಆಕೆಯ ಗಂಡ ಚನ್ನಬಸಪ್ಪನೂ 1831ರಲ್ಲಿ ಮೈಸೂರಿಗೆ ಓಡಿಹೋಗಿ ಬ್ರಿಟಿಷರ ರಕ್ಷಣೆ ಕೋರಿದರು. ಬೇಟೆಗೆ ಸೌಕರ್ಯವಾಗಿದ್ದು ಹಿತಕರವಾದ ವಾತಾವರಣವಿದ್ದುದರಿಂದ ಕೊಡಗಿನ ಮೇಲೆ ಬ್ರಿಟಿಷರ ಕಣ್ಣು ಬಿತ್ತು. ಪ್ರಜೆಗಳನ್ನು ಹಿಂಸಿಸುತ್ತಾನೆಂದು ರಾಜನ ಮೇಲೆ ದೂರು ಹೋದಾಗ, ಇದೇ ಸರಿಯಾದ ಕಾಲವೆಂದು ಕೊಡಗನ್ನು ವಶಪಡಿಸಿಕೊಳ್ಳಲು ಲಾರ್ಡ್ ವಿಲಿಯಂ ಬೆಂಟಿಂಕ್ ಆಜ್ಞೆ ಹೊರಡಿಸಿದ. ಕರ್ನಲ್ ಲಿಂಡ್ಸೆ ಒಂದು ಸೈನ್ಯದೊಡನೆ ಮಡಿಕೇರಿಯ ಮೇಲೆ ದಾಳಿಮಾಡಿ ಅದನ್ನು 1834 ಏಪ್ರಿಲ್ 6ರಂದು ವಶಪಡಿಸಿಕೊಂಡ. ಕೊಡಗು ಬ್ರಿಟಿಷರ ವಶವಾಯಿತು. ಈ ಸಂದರ್ಭದಲ್ಲಿ ಬ್ರಿಟಿಷರ ಅಧೀನದಲ್ಲಿ ಸಿಂಹಾಸನದಲ್ಲಿ ಮುಂದುವರಿಯಲು ಅವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಂಡ. ಬ್ರಿಟಿಷರು ಅವನ ಕೋರಿಕೆಯನ್ನು ನಿರಾಕರಿಸಿದರು. ಮೈಸೂರು, ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಕೊಡಗು ಸೂಕ್ತ ಸ್ಥಳವೆಂದು ಅರಿತಿದ್ದ ಬ್ರಿಟಿಷರು ಕೊಡಗನ್ನು ಕಂಪನಿಯ ಆಡಳಿತಕ್ಕೆ ಒಳಪಡಿಸಿಕೊಳ್ಳಲು ನಿರ್ಧರಿಸಿದ್ದರು. ಆದ್ದರಿಂದ ಬ್ರಿಟಿಷ್ ಸೈನ್ಯದ ಮುಖ್ಯಾಧಿಕಾರಿ ಹಾಗೂ ಕಂಪನಿಯ ರಾಜಕೀಯ ಅಧಿಕಾರಿಯಾಗಿದ್ದ ಕರ್ನಲ್ ಫ್ರೇಸರ್ ರಾಜ್ಯದ ಮುಂದಿನ ಆಡಳಿತದ ವಿಷಯದಲ್ಲಿ ಜನಾಭಿಪ್ರಾಯ ಪಡೆಯುವ ಯತ್ನ ಮಾಡಿ, ಜನರೆಲ್ಲ ಬ್ರಿಟಿಷ್ ಕಂಪನಿಯ ಆಡಳಿತ ಒಪ್ಪುತ್ತಾರೆಂದು ಹೇಳಿದ. ಜನಾಭಿಪ್ರಾಯದಂತೆ ಕೊಡಗು ಕಂಪನಿಯ ಆಡಳಿತಕ್ಕೆ ವಶಪಡಿಸಿಕೊಳ್ಳಲ್ಪಟ್ಟಿತೆಂದು ಒಂದು ಘೋಷಣೆ ಹೊರಡಿಸಿದ. ಬ್ರಿಟಿಷರು ವೀರರಾಜನನ್ನೂ ಆತನ ಕುಟುಂಬದವರನ್ನೂ ವಾರಾಣಸಿಗೆ ಕಳಿಸಿದರು. 1852ರಲ್ಲಿ ವೀರರಾಜೇಂದ್ರ ಮತ್ತು ಅವನ ಪುತ್ರಿ ಗೌರಮ್ಮ ಇಂಗ್ಲೆಂಡಿಗೆ ಹೋದರು. ಭಾರತದಿಂದ ಇಂಗ್ಲೆಂಡಿಗೆ ಪ್ರಯಾಣ ಮಾಡಿದ ರಾಜರುಗಳಲ್ಲಿ ವೀರರಾಜೇಂದ್ರ ಮೊದಲನೆಯವನು. ಗೌರಮ್ಮ ಕ್ರೈಸ್ತಧರ್ಮ ಅವಲಂಬಿಸಿ ಇಂಗ್ಲಿಷ್ ಅಧಿಕಾರಿಯೋರ್ವನನ್ನು ವಿವಾಹ ಮಾಡಿಕೊಂಡಳು. ವೀರರಾಜೇಂದ್ರ 1859 ಸೆಪ್ಟೆಂಬರ್ 24ರಂದು ಲಂಡನ್ನಿನಲ್ಲಿ ನಿಧನ ಹೊಂದಿದ. ಅವನ ದೇಹವನ್ನು ವಾರಾಣಸಿಗೆ ತಂದು ಅಲ್ಲಿ ಸಮಾಧಿ ಮಾಡಲಾಯಿತು **(ನೋಡಿ: ಬ್ರಿಟಿಷರ ಆಳ್ವಿಕೆ)**.

**ಹಾಲೇರಿ ರಾಜರ ವಂಶಾವಳಿ:**

- ವೀರರಾಜ
  - ಅಪ್ಪಾಜಿರಾಜ
    - ಮುದ್ದುರಾಜ (1633–87)
      - ದೊಡ್ಡವೀರಪ್ಪ (1687–1736)
        - ಅಪ್ಪಾಜಿರಾಜ
          - ಚಿಕ್ಕವೀರಪ್ಪ (1736–66)
      - ಅಪ್ಪಾಜಿರಾಜ
        - ಮುದ್ದುರಾಜ (1766–70)
          - ಅಪ್ಪಾಜಿ
        - ಲಿಂಗರಾಜೇಂದ್ರ I (1774–80)
          - ವೀರರಾಜೇಂದ್ರ I (1780–1809) (ದೊಡ್ಡವೀರರಾಜೇಂದ್ರ ಒಡೆಯರ್)
            - ದೇವಮ್ಮಾಜಿ (1809–11)
          - ಲಿಂಗರಾಜೇಂದ್ರ II (1811–20)
            - ವೀರರಾಜೇಂದ್ರ II (1820–34)
              - (ಚಿಕ್ಕವೀರರಾಜೇಂದ್ರ ಒಡೆಯರ್)
      - ನಂದರಾಜ
        - ಮುದ್ದಯ್ಯರಾಜ (1766–70)
          - ಮಲ್ಲಯ್ಯ
            - ದೇವಪ್ಪರಾಜ (1770–74)

**(ಕ.ವಿ.ಟ)**

**ಹಾವಿನಹಾಳ ಕಲ್ಲಯ್ಯ:** 12ನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಬಿಜಾಪುರದ ವಾಯುವ್ಯಕ್ಕೆ ಸು.57 ಕಿಮೀ ದೂರದಲ್ಲಿರುವ ಹಾವಿನಹಾಳು (ಇಂಡಿ ತಾಲ್ಲೂಕು) ಇವನ ಜನ್ಮಸ್ಥಳ. ಅಕ್ಕಸಾಲಿ ಶಿವನಯ್ಯ ಮತ್ತು ಸೋಮವ್ವೆ ಎಂಬ ದಂಪತಿಗಳಲ್ಲಿ ಕಲ್ಲಿನಾಥದೇವರ ವರಪ್ರಸಾದದಿಂದ ಹುಟ್ಟಿದ್ದರಿಂದ ಇವನಿಗೆ ಕಲ್ಲಯ್ಯ ಎಂದು ಹೆಸರಿಟ್ಟರು. ಯಾವಾಗಲೂ ಶಿವಧ್ಯಾನಾಸಕ್ತನಾಗಿರುತ್ತಿದ್ದ ಇವನು ಬಿಜ್ಜಳ ಹೇಳಿಕಳಿಸಿದ ಒಂದು ಒಡವೆಯನ್ನು ಮಾಡಲು ನಿರಾಕರಿಸಿ ತಂದೆಯ ಕೋಪಕ್ಕೆ ಪಾತ್ರನಾದ. ಕಲ್ಲಿನಾಥನ ಸನ್ನಿಧಿಯಲ್ಲಿ ಪ್ರಾಣಾರ್ಪಣೆಗೆ ಹವಣಿಸುತ್ತಿರಲು, ದೇವರು ಪ್ರತ್ಯಕ್ಷವಾಗಿ ದೇವರ ಆದೇಶದ ಮೇರೆಗೆ ಸೊನ್ನಲಿಗೆಗೆ ಹೋಗಿ ಸಿದ್ಧರಾಮನ ಶಿಷ್ಯತ್ವವನ್ನು ಕೈಕೊಂಡು ರುದ್ರಮುನಿಯಿಂದ ದೀಕ್ಷೆಪಡೆದ. ಶಿವಪೂಜೆ ಮಾಡುತ್ತಿದ್ದಾಗ ಇವನನ್ನು ಕಚ್ಚಿದ ಹಾವು ತಾನೇ ಸಾಯಲು ಮರುಕಗೊಂಡು ಅದನ್ನು ಬದುಕಿಸಿದ. ಬ್ರಾಹ್ಮಣರೊಡನೆ ಮಡಿಮೈಲಿಗೆ–ಮೇಲುಕೀಳುಗಳ ವಿಷಯದಲ್ಲಿ ವಾದಿಸಿದ್ದು, ನಾಯಿಯಿಂದ ವೇದಮಂತ್ರಗಳನ್ನು ಹೇಳಿಸಿ ಅವರನ್ನು ಭಂಗಿಸಿದ– ಇವು ಈತ ಮೆರೆದನೆನ್ನಲಾದ ಪವಾಡಗಳು. ಸಿದ್ಧರಾಮ ಗುಹಾಪ್ರವೇಶವಾದ ಒಂದು ತಿಂಗಳ ಮೇಲೆ ಈತ ನಿಧನನಾದ. ಸೊಲ್ಲಾಪುರದ ಸಿದ್ಧರಾಮೇಶ್ವರ ದೇವಾಲಯದಲ್ಲಿ ಈತನ ಸಮಾಧಿಯಿದೆ.

ಇವನ ಹೆಸರಿನಲ್ಲಿ ಸು. 60 ವಚನಗಳು ಲಭ್ಯವಾಗಿವೆ. ಮಹಾಲಿಂಗ ಕಲ್ಲೇಶ್ವರ ಎಂಬುದು ಈತನ ವಚನಾಂಕಿತ. ಈತ ಆಗಮಪುರಾಣಾದಿಗಳನ್ನು ಓದಿ ತಿಳಿದವನಾಗಿದ್ದನೆಂದು ವಚನಗಳಲ್ಲಿಯ ಸಾಕ್ಷಿಶ್ಲೋಕಗಳಿಂದ ತಿಳಿದುಬರುತ್ತದೆ. (ಎಂ.ಎಂ.)

**ಹಾವೇರಿ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ ಪಟ್ಟಣ.

ಜಿಲ್ಲೆ: ಧಾರವಾಡ ಜಿಲ್ಲೆಯ ಒಂದು ತಾಲ್ಲೂಕಾಗಿದ್ದ ಹಾವೇರಿ 1997 ಆಗಸ್ಟ್ 15ರಂದು ಒಂದು ಜಿಲ್ಲೆಯಾಗಿ ರೂಪುಗೊಂಡಿತು. ಈ ಜಿಲ್ಲೆಯನ್ನು ಉತ್ತರದಲ್ಲಿ ಧಾರವಾಡ, ಗದಗ ಜಿಲ್ಲೆಗಳೂ ಪೂರ್ವದಲ್ಲಿ ಬಳ್ಳಾರಿ, ದಾವಣಗೆರೆ ಜಿಲ್ಲೆಗಳೂ ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯೂ ದಕ್ಷಿಣದಲ್ಲಿ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳೂ ಸುತ್ತುವರೆದಿವೆ. ಬೆಳಗಾಂವಿ ವಿಭಾಗಕ್ಕೆ ಸೇರಿದ ಈ ಜಿಲ್ಲೆಯಲ್ಲಿ ಶಿಗ್ಗಾಂವಿ, ಹಾವೇರಿ, ಸವಣೂರು, ಹಾನಗಲ್ಲು, ಬ್ಯಾಡಗಿ, ಹಿರೇಕೆರೂರು, ರಾಣೆಬೆನ್ನೂರು – ಈ ಏಳು ತಾಲ್ಲೂಕುಗಳು ಸೇರಿವೆ. 19 ಹೋಬಳಿಗಳೂ 675 ಗ್ರಾಮಗಳೂ ಇವೆ. ಪುರಸಭಾಡಳಿತವಿರುವ 7 ಪಟ್ಟಣಗಳಿವೆ. ಜಿಲ್ಲೆಯ ವಿಸ್ತೀರ್ಣ 4,851 ಚ.ಕಿಮೀ. ಜನಸಂಖ್ಯೆ: 14,39,116.

ಹಾವೇರಿ ಜಿಲ್ಲೆಯ ಮಧ್ಯದಲ್ಲಿ ಹಾವೇರಿ ತಾಲ್ಲೂಕಿನ ದಕ್ಷಿಣದಲ್ಲಿರುವ ಬ್ಯಾಡಗಿ ತಾಲ್ಲೂಕಿನ ಈ ಭೂಪ್ರದೇಶ ಕೆಲವು ಸಣ್ಣಗುಡ್ಡಗಳನ್ನು ಬಿಟ್ಟರೆ ಹೆಚ್ಚು ಭಾಗ ಸಮತಟ್ಟಾಗಿದೆ. ಪೂರ್ವದಲ್ಲಿ ದೇವರ ಗುಡ್ಡಗಳಿವೆ. ಮಸಾರಿ ಮತ್ತು ಎರೆಮಣ್ಣಿನ ಈ ಭಾಗದಲ್ಲಿ ಎರೆಮಣ್ಣಿನ ಪ್ರದೇಶ ಫಲವತ್ತಾದದ್ದು. ಇಲ್ಲಿನ ಬೇಸಾಯ ಮಳೆಯನ್ನೇ ಹೆಚ್ಚಾಗಿ ಅವಲಂಬಿಸಿ ಕೊಂಡಿದೆ. ಬ್ಯಾಡಗಿಯ ಪ್ರಸಿದ್ಧ ಕ್ಷೇತ್ರ ಕನಕದಾಸರ ಕಾಗಿನೆಲೆಯ ಕೆರೆ, ಚಿಕ್ಕಬಾಸೂರ ಕೆರೆ, ತುಂಮೂರ ಕೆರೆ ಇವು ಹೆಸರಿಸಬಹುದಾದ ಕೆರೆಗಳು. ಇಲ್ಲಿಯ ಬೆಳೆಗಳಲ್ಲಿ ಬ್ಯಾಡಗಿ ಮೆಣಸಿನಕಾಯಿ ಪ್ರಸಿದ್ಧಿ ಪಡೆದಿದೆ. ಬಿಳಿಜೋಳ, ಹತ್ತಿ, ಸೇಂಗಾ, ಸಾಮೆ ಬೆಳೆಯುತ್ತಾರೆ. ಜಿಲ್ಲೆಯ ದಕ್ಷಿಣ ಆಗ್ನೇಯ ಪ್ರದೇಶದ ರಾಣೆಬೆನ್ನೂರು ತಾಲ್ಲೂಕು ಸೇರಿದಂತೆ ಇರುವ ಪ್ರದೇಶ ಮಲೆನಾಡ ಅಂಚಿನಲ್ಲಿದೆ. ಐರಣಿಗುಡ್ಡ ಸೇರಿದಂತೆ ಹುಲ್ಲುಗಾವಲಿನ ಅರಣ್ಯ ಪ್ರದೇಶದಲ್ಲಿ ಬೆಲೆಬಾಳುವ ಉಪಯುಕ್ತ ಮರಗಳೊಡನೆ ಗಂಧದ ಮರಗಳೂ ಇವೆ. ಕಪ್ಪು ಮತ್ತು ಕೆಂಪು ಮಸಾರಿ ಭೂಮಿಯಿದ್ದು ಜೋಳ, ಗೋದಿ, ಬತ್ತ, ಸೇಂಗಾ, ರಾಗಿ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಬ್ಯಾಡಗಿಯ ಉತ್ತರ ಮತ್ತು ವಾಯವ್ಯ ಪ್ರದೇಶವನ್ನು ಶಿಗ್ಗಾಂವಿ ತಾಲ್ಲೂಕು ಒಳಗೊಂಡಿದೆ. ಪಶ್ಚಿಮಘಟ್ಟ ಸೆರಗಿನಲ್ಲಿರುವ ಈ ಭೂಪ್ರದೇಶ ಪೂರ್ವದ ಕಡೆಗೆ ಇಳಿಜಾರಾಗಿ ಮುಂದುವರಿದಿದೆ. ಕಾಡು ಸಾಂದ್ರವಾಗಿದ್ದು ತೇಗ, ಗಂಧ, ಹಲಸು, ಅಳಲೆ, ಮಾವು, ಆಲ, ಅತ್ತಿ, ಬಿಳಿನಂದಿ, ಬೀಟೆ ಮರಗಳ ಆಶ್ರಯತಾಣವಾಗಿದೆ. ಹುಲಿ, ಚಿರತೆ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಸಂಪತ್ತಿನಿಂದ ಕೂಡಿದೆ.

ಬತ್ತ, ರಾಗಿ, ಜೋಳ ಮುಖ್ಯ ಬೆಳೆಗಳು. ವಿವಿಧ ದ್ವಿದಳ ಧಾನ್ಯಗಳನ್ನೂ ತೋಟಗಳಲ್ಲಿ ವಿವಿಧ ಹಣ್ಣುಗಳನ್ನೂ ಬೆಳೆಯುತ್ತಾರೆ. ಜಿಲ್ಲೆಯ ಪಶ್ಚಿಮ ಪ್ರದೇಶ ಹಾನಗಲ್ಲು ತಾಲ್ಲೂಕನ್ನು ಒಳಗೊಂಡಿದೆ. ಮಲೆನಾಡು ಭೂಪ್ರದೇಶವನ್ನುಳ್ಳ ಈ ಭಾಗ ಬೆಟ್ಟಗುಡ್ಡಗಳಿಂದ ಕೂಡಿದೆ. ರಕ್ಷಿತ ಅರಣ್ಯ ಪ್ರದೇಶವೂ ಇದ್ದು ಗಂಧದ ಮರವೂ ಸೇರಿದಂತೆ ಬೆಲೆಬಾಳುವ ಮರಗಳಿವೆ. ಬತ್ತದ ಬೆಳೆ ಇಲ್ಲಿ ಹೆಚ್ಚು. ಫಲವತ್ತಾದ ರೇವೆ ಮಣ್ಣಿನ ಪ್ರದೇಶದಲ್ಲಿ ಕಬ್ಬು, ರಾಗಿ, ದ್ವಿದಳಧಾನ್ಯಗಳು, ಜೋಳ, ಹತ್ತಿ ಬೆಳೆಯುವರು. ತೋಟಗಳಲ್ಲಿ ಅಡಕೆ, ತೆಂಗು, ಹೊಗೆಸೊಪ್ಪು ಬೆಳೆಹೆಚ್ಚು. ಸೇಂಗಾ, ಹರಳು, ಹುಚ್ಚೆಳ್ಳು ಬೆಳೆಯುಂಟು. ಜಿಲ್ಲೆಯ ಮಧ್ಯಭಾಗದಲ್ಲಿ ಹಾವೇರಿ ತಾಲ್ಲೂಕು ಸೇರಿದಂತೆ ರೇವೆ ಮಣ್ಣು ಮತ್ತು ಕೆಂಪುಮಿಶ್ರಿತ ಕಪ್ಪುಮಣ್ಣಿನ ಬಯಲು ಪ್ರದೇಶವಿದೆ. ಈ ಭಾಗದಲ್ಲಿ ಜೋಳ, ಬತ್ತ, ರಾಗಿ, ನವಣೆ, ಕಬ್ಬು, ಸೇಂಗಾ, ಗುರೆಳ್ಳು, ಮೆಣಸಿನಕಾಯಿ, ಈರುಳ್ಳಿ, ಹತ್ತಿ ಬೆಳೆಯುವರು. ಈ ಜಿಲ್ಲೆಯ ಉತ್ತರಭಾಗ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಕಪ್ಪುಜೇಡಿಮಣ್ಣು ಮತ್ತು ಮರಳು ಮಿಶ್ರಿತ ಕಪ್ಪುಮಣ್ಣಿನ ಪ್ರದೇಶವಿದೆ. ಇದು ಜೋಳ, ಸೇಂಗಾ, ಹತ್ತಿ ಬೆಳೆಯುವ ಭೂ ಭಾಗವಾಗಿದೆ. ಜಿಲ್ಲೆಯ ದಕ್ಷಿಣ ಭಾಗ ಹಿರೇಕೆರೂರು ತಾಲ್ಲೂಕು ಒಳಗೊಂಡಂತೆ ಸಹ್ಯಾದ್ರಿವಲಯದ ಪೂರ್ವಪ್ರದೇಶವಾಗಿದ್ದು ಮಾಸೂರು ಮತ್ತು ಕಡೂರ ಗುಡ್ಡಗಳಿಂದ ಕೂಡಿದೆ. ಗಂಧದಮರಗಳಿಂದ ಕೂಡಿದ ಕುರುಚಲು ಕಾಡು ಪ್ರದೇಶವಿದೆ. ಹುಳಕೆರೆ ಮಣ್ಣಿನಿಂದ ಕೆಲವೆಡೆ ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣಿನ ಪ್ರದೇಶವಿದ್ದು ಜೋಳ, ಬತ್ತ, ಕಬ್ಬು, ರಾಗಿ, ತೊಗರಿ, ಮೆಣಸಿನಕಾಯಿ ಮತ್ತು ಎಣ್ಣೆ ಬೀಜಗಳನ್ನು ಬೆಳೆಯುತ್ತಾರೆ. ಒಟ್ಟು ಬಿತ್ತನೆಯ ಪ್ರದೇಶ 4,64,193 ಹೆಕ್ಟೇರುಗಳು (1998–99), ಕಾಲುವೆ, ಕೆರೆ, ಬಾವಿಗಳಿಂದ ಒಟ್ಟು ನೀರಾವರಿಯಾದದ್ದು 6,111 ಹೆಕ್ಟೇರ್‌ಗಳು. 1998–99ರಲ್ಲಿ ಈ ಜಿಲ್ಲೆಯ ಮುಖ್ಯಬೆಳೆಗಳಾದ ಬತ್ತವನ್ನು 54,375 ಹೆಕ್ಟೇರ್‌ಗಳಲ್ಲೂ ರಾಗಿ 4,756 ಹೆ, ಜೋಳ 73,706 ಹೆ, ಸಜ್ಜೆ 892 ಹೆ, ಮುಸುಕಿನ ಜೋಳ 54,083 ಹೆ, ಗೋದಿ 2138 ಹೆ, ಕಡಲೆ 1902 ಹೆ, ತೊಗರಿ 7477 ಹೆ, ದ್ವಿದಳಧಾನ್ಯಗಳು 6262 ಹೆ, ನೆಲಗಡಲೆ 37,861 ಹೆ, ಕಬ್ಬು 6,073 ಹೆ, ಹತ್ತಿ 79,382 ಹೆ.ಗಳಲ್ಲಿ ಬೆಳೆಯಲಾಗಿತ್ತು. ಈ ಜಿಲ್ಲೆಯಲ್ಲಿ ಸಾಕಷ್ಟು ಪ್ರಾಣಿಸಂಪತ್ತೂ ಇದೆ. 2001ರಲ್ಲಿ ಜಿಲ್ಲೆಯಲ್ಲಿ ಒಟ್ಟು 3,103 ಮೆಟ್ರಿಕ್ ಟನ್ ಮೀನನ್ನು ಹಿಡಿಯಲಾಗಿತ್ತು.

ಜಿಲ್ಲೆಯಲ್ಲಿ ಉತ್ತಮ ಹವಾಗುಣವಿದೆ. ನವಂಬರ್, ಡಿಸೆಂಬರ್, ಜನವರಿ ತಿಂಗಳು ಚಳಿಗಾಲ. ಫೆಬ್ರವರಿ, ಮಾರ್ಚ, ಏಪ್ರಿಲ್ ಬೇಸಗೆ ಕಾಲವಾಗಿದ್ದು ಮೇ ನಿಂದ ಅಕ್ಟೋಬರ್‌ವರೆಗೆ ಮಳೆಗಾಲವಾಗಿರುತ್ತದೆ. ಜಿಲ್ಲೆಯ ಸರಾಸರಿ ಮಳೆ 753 ಮಿಮೀ. ಜಿಲ್ಲೆಯಲ್ಲಿ 47,454 ಹೆ. ಅರಣ್ಯ ಪ್ರದೇಶವಿದ್ದು ತೊರೆಗಳ ತೀರದಲ್ಲಿ ಬಿದಿರು ಮೆಳೆಯ ಕಾಡು ಪ್ರದೇಶವಿದ್ದು ಹುಲಿ, ಚಿರತೆ, ಕರಡಿ, ತೋಳ ಕಾಡುಹಂದಿ ಮುಂತಾದವುಗಳಿವೆ. ಜಿಲ್ಲೆಯ ಹಸುರು ವನಪ್ರದೇಶಗಳಲ್ಲಿ ಹಾವುಗಳನ್ನೂ ವಿವಿಧ ಪಕ್ಷಿ ಸಮೂಹವನ್ನೂ ಕಾಣಬಹುದು. ರಾಣೆಬೆನ್ನೂರಿನ ಕೃಷ್ಣಮೃಗ ಅಭಯಾರಣ್ಯ 119 ಚ.ಕಿಮೀ ಪ್ರದೇಶವನ್ನಾವರಿಸಿದೆ.

ಈ ಜಿಲ್ಲೆಯ ಮುಖ್ಯನದಿ ತುಂಗಭದ್ರಾ. ದಾವಣಗೆರೆ ಜಿಲ್ಲೆಯಿಂದ ಹರಿದು ಬರುವ ಈ ನದಿ ಜಿಲ್ಲೆಯ ದಕ್ಷಿಣಾಗ್ನೇಯ ದಿಕ್ಕಿನಲ್ಲಿ ಶಂಕರನಹಳ್ಳಿಯ ಬಳಿ ಜಿಲ್ಲಾ ಸಂಪರ್ಕಪಡೆದು ಮುಂದೆ ಈ ಜಿಲ್ಲೆಯ ಗಡಿಯಾಗಿ ಆಗ್ನೇಯಾಭಿಮುಖವಾಗಿ ಮುಂದುವರಿದು ದಾವಣಗೆರೆ ಜಿಲ್ಲೆಯನ್ನು ಬೇರ್ಪಡಿಸುವುದು. ಅನಂತರ ಹಾವೇರಿ ಜಿಲ್ಲೆಯ ಪೂರ್ವದಲ್ಲಿ ಉತ್ತರಾಭಿಮುಖವಾಗಿ ಹರಿದು ಬಳ್ಳಾರಿ ಜಿಲ್ಲೆಯನ್ನು ಬೇರ್ಪಡಿಸುವುದು. ತುಂಗಭದ್ರಾನದಿಯ ಎಡದಂಡೆಯಲ್ಲಿ ಬರುವ ಈ ಜಿಲ್ಲೆಯ ಹಿರೇಕೆರೂರು, ರಾಣೆಬೆನ್ನೂರು ಮತ್ತು ಹಾವೇರಿ ತಾಲ್ಲೂಕುಗಳ ಫಲವತ್ತಾದ ಭೂಮಿಗೆ ನೀರುಣಿಸುವುದು. ವರದಾ ನದಿ ಈ ಜಿಲ್ಲೆಯನ್ನು ನೈಋತ್ಯಭಾಗದಲ್ಲಿ ಹಾನಗಲ್ಲು ತಾಲ್ಲೂಕನ್ನು ಪ್ರವೇಶಿಸುವುದು. ಮುಂದೆ ಪೂರ್ವಾಭಿಮುಖವಾಗಿ ಹರಿದು ಸವಣೂರು, ಹಾವೇರಿ ತಾಲ್ಲೂಕುಗಳ ಗಡಿಯಾಗಿ ಸಾಗಿ ಮುಂದೆ ಹಾವನೂರಿನ ಗಳಗನಾಥ ಗ್ರಾಮದ ಬಳಿ ತುಂಗಭದ್ರೆಯನ್ನು ಸೇರಿಕೊಳ್ಳುವುದು. ಈ ನದಿಯ ಹರಿವಿನ ಉದ್ದ ಸು. 101 ಕಿಮೀ. ಇದರ ಜಲಾನಯನ ಪ್ರದೇಶ 1,200 ಚ.ಕಿಮೀ. ಕುಮುದ್ವತಿ ನದಿ ಜಿಲ್ಲೆಯ ಹಿರೇಕೆರೂರು ಮತ್ತು ರಾಣೆಬೆನ್ನೂರು ತಾಲ್ಲೂಕುಗಳಲ್ಲಿ ಸು.32 ಕಿಮೀ ಪ್ರವಹಿಸಿ ಹೊಳೆಅನವೇರಿ ಬಳಿ ತುಂಗಭದ್ರೆಯನ್ನು ಸೇರಿಕೊಳ್ಳುವುದು. ಈ ನದಿಯ

ಜಲಾನಯನ ಪ್ರದೇಶ ಸು.512 ಚ.ಕಿಮೀ. ಮಾಸೂರು ಮತ್ತು ಮದಗಕೆರೆಗಳಿಗೆ ಕುಮುದ್ವತಿ ನದಿಯೇ ಜೀವನಾಡಿ. ಉತ್ತರಕನ್ನಡಜಿಲ್ಲೆಯಿಂದ ಹರಿದು ಬಂದು ಹಾವೇರಿಜಿಲ್ಲೆಯನ್ನು ಹಾನಗಲ್ಲು ತಾಲ್ಲೂಕಿನ ವಂತಿಗೆ ಗ್ರಾಮದ ಬಳಿ ಪ್ರವೇಶಿಸುವ ಧರ್ಮಾನದಿ ಜಿಲ್ಲೆಯಲ್ಲಿ ಈಶಾನ್ಯಾಭಿಮುಖವಾಗಿ ಹರಿದು ಕೂಡಲ ಗ್ರಾಮದ ಬಳಿ ವರದಾನದಿಯನ್ನು ಸೇರುವುದು.

ಹಾವೇರಿ ಜಿಲ್ಲೆಯಲ್ಲಿ ಕೈಗಾರಿಕಾ ಚಟುವಟಿಕೆಗಳು ಸಾಕಷ್ಟಿವೆ. ರಾಣೆಬೆನ್ನೂರು ಕೈಮಗ್ಗದ ಸೀರೆ, ಕುಪ್ಪಸ, ಪಂಚೆ, ಹಚ್ಚಡಗಳಿಗೆ ಪ್ರಸಿದ್ಧ. ಹಿರೇಕೆರೂರು, ಹಾನುಗಲ್ಲುಗಳಲ್ಲಿ ಅಕ್ಕಿಗಿರಣಿಗಳಿವೆ. ಖಾದಿ ಗ್ರಾಮೋದ್ಯೋಗಕ್ಕೆ ಸಂಬಂಧಿಸಿದ ಚಟುವಟಿಕೆಗಳುಂಟು. ಜಿಲ್ಲೆಯಲ್ಲಿ ಒಟ್ಟು 20ಬಟ್ಟೆಕಾರ್ಖಾನೆಗಳು, 2ರಾಸಾಯನಿಕ, 10ಎಂಜನಿಯರಿಂಗ್, 45ಇತರೇ ಕಾರ್ಖಾನೆಗಳಿವೆ (2001). ಒಂದು ಸಕ್ಕರೆ ಕಾರ್ಖಾನೆಯಿದ್ದು 2000ದ ವರ್ಷದಲ್ಲಿ 276 ಮೆ.ಟನ್ ಕಬ್ಬನ್ನು ಅರೆದು 29 ಮೆ.ಟನ್ ಸಕ್ಕರೆಯನ್ನು ಉತ್ಪಾದಿಸಲಾಗಿತ್ತು. ಜಿಲ್ಲೆಯ ಕೈಗಾರಿಕೆ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ನೆರವಾಗಿ 2001ರಲ್ಲಿ 48 ವಾಣಿಜ್ಯ ಬ್ಯಾಂಕುಗಳೂ 48 ಗ್ರಾಮೀಣ ಬ್ಯಾಂಕುಗಳೂ 6 ನಿಯಂತ್ರಿತ ಮಾರುಕಟ್ಟೆಗಳೂ ಇದ್ದವು. 1999ರಲ್ಲಿ ಈ ಜಿಲ್ಲೆಯಲ್ಲಿ 103 ಕಿಮೀ ರಾಷ್ಟ್ರೀಯ ಹೆದ್ದಾರಿ, 197 ಕಿಮೀ ರಾಜ್ಯ ಹೆದ್ದಾರಿ, 742 ಕಿಮೀ ಮುಖ್ಯ ಜಿಲ್ಲಾ ರಸ್ತೆಗಳಿದ್ದವು. ಬೆಂಗಳೂರು-ಹುಬ್ಬಳ್ಳಿ ರೈಲುಮಾರ್ಗ ಜಿಲ್ಲೆಯಲ್ಲಿ 79 ಕಿಮೀ ದೂರದಷ್ಟಿದ್ದು 9 ರೈಲು ನಿಲ್ದಾಣಗಳಿವೆ.

ಪ್ರಗತಿಯತ್ತ ಹೆಜ್ಜೆಹಾಕುತ್ತಿರುವ ಹಾವೇರಿ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣ ಗಂಡಸರು ಸೆ. 77.94ರಷ್ಟಿದ್ದರೆ, ಹೆಂಗಸರು ಸೆ. 57.60 ಇದೆ (2001). 1190 ಪ್ರಾಥಮಿಕಶಾಲೆಗಳು, 230 ಪ್ರೌಢಶಾಲೆಗಳು, 59 ಪದವಿ ಪೂರ್ವಕಾಲೇಜುಗಳು, 2 ಪಾಲಿಟೆಕ್ನಿಕ್, 1 ಎಂಜಿನಿಯರಿಂಗ್, 1 ಭಾರತೀಯ ವೈದ್ಯಪದ್ಧತಿಯ ಕಾಲೇಜುಗಳಿವೆ. ಜಿಲ್ಲೆಯ ವೈದ್ಯಕೀಯ ಸೌಲಭ್ಯ ಕುರಿತಂತೆ 5 ಸರ್ಕಾರಿ ಆಸ್ಪತ್ರೆಗಳೂ 2 ಆಯುರ್ವೇದ ಆಸ್ಪತ್ರೆಗಳೂ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಪ್ರಾಥಮಿಕ ಆರೋಗ್ಯ ಘಟಕಗಳೂ ಕುಟುಂಬ ಕಲ್ಯಾಣ ಕೇಂದ್ರಗಳೂ ಇವೆ (2001).

ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ ಹಾವೇರಿ ಜಿಲ್ಲೆ ಗಮನಾರ್ಹವಾದದ್ದು. ಇಲ್ಲಿಯ ತುಂಗಭದ್ರಾ ಮತ್ತು ಇತರೆ ನದಿಗಳ ಆಶ್ರಯದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಗಳನ್ನು ಗುರುತಿಸಬಹುದು. ಹಾವೇರಿ ತಾಲ್ಲೂಕಿನ ಜಲ್ಲಾಪುರ, ರಾಣೆಬೆನ್ನೂರು ತಾಲ್ಲೂಕಿನ ಚನ್ನಾಪುರ, ನಲವಾಗಲ ಮತ್ತು ನದೀಹರಳಹಳ್ಳಿ, ಹಾನಗಲ್ಲು ತಾಲ್ಲೂಕಿನ ವರ್ದಿ ಮೊದಲಾದ ಸ್ಥಳಗಳಲ್ಲಿ ಪುರಾತನ ಶಿಲಾಯುಗದ ಆದಿಭಾಗದಲ್ಲಿ ಪ್ರಚಲಿತವಿದ್ದ ಅಬ್ಬೆವಿಲ್ಲಿಯನ್, ಅಶೂಲಿಯನ್ ಶಿಲಾಯುಧಗಳು ದೊರಕಿವೆ.

ನವಶಿಲಾಯುಗದ ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ನೆಲೆಗಳು ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ, ಮುದೇನೂರುಗಳಲ್ಲಿ ದೊರಕಿವೆ. ಇವುಗಳಲ್ಲಿ ದಕ್ಷಿಣಭಾರತದ ನವಶಿಲಾಸಂಸ್ಕೃತಿಯ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿ, ಕಂದು ಬಣ್ಣದ ಮಡಕೆಗಳು ಸಿಕ್ಕಿವೆ. ರಾಣೆಬೆನ್ನೂರು ತಾಲ್ಲೂಕಿನ ಕೂನಬೇವ, ಹಾನಗಲ್ಲು ತಾಲ್ಲೂಕಿನ ಹಾದರಗೇರಿ, ಹಿರೇಕೆರೂರು ತಾಲ್ಲೂಕಿನ ಪುರದಕೇರಿ ಇಲ್ಲೆಲ್ಲ ಕೆಂಪುಬಣ್ಣದ ಮೇಲೆ ಕಪ್ಪುಬಣ್ಣದ ಚಿತ್ರಗಳುಳ್ಳ ಮಡಕೆಯ ಚೂರುಗಳು ದೊರಕಿವೆ. ಬೃಹತ್ ಶಿಲಾ ಸಮಾಧಿಕಾಲದ ಶಿಲಾವೃತ್ತಗಳು ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ, ಕೋಟಿಹಾಳ ಕುಸನೂರು ಮತ್ತು ಮಲಕನಹಳ್ಳಿ, ಬ್ಯಾಡಗಿ ತಾಲ್ಲೂಕಿನ ಬುಡಪನಹಳ್ಳಿ ಮೊದಲಾದೆಡೆ ಸಿಕ್ಕಿವೆ. ಈ ಪ್ರದೇಶಗಳಲ್ಲಿ ಇವುಗಳನ್ನು ಪಾಂಡವರ ಕಟ್ಟೆ ಎಂದು ಕರೆಯುತ್ತಾರೆ. ಬ್ಯಾಡಗಿ ತಾಲ್ಲೂಕಿನ ಆಣೂರು, ಕದರಮಂಡಲಗಿ, ತಡಸಿ, ರಾಣೆಬೆನ್ನೂರು ತಾಲ್ಲೂಕಿನ ಐರಣಿ, ಇಟಗಿ, ಮಾದಾಪುರ, ಹೊನ್ನತ್ತಿ, ಹಾನಗಲ್ಲು ತಾಲ್ಲೂಕಿನ ಹಿರೇಬಾಸೂರು, ಹಾವೇರಿ ತಾಲ್ಲೂಕಿನ ಹಂದಿಗನೂರು, ಸಂಗೂರು, ಹೊಸರಿತ್ತಿ ಈ ನೆಲೆಗಳಲ್ಲಿ ಕೆಂಪು ಮಡಕೆಗಳು, ಗಾಜಿನ ಮಣಿಗಳು, ರೋಮನ್ ಮೂಲದ ರೂಲೆಟೆಡ್ ಇತ್ಯಾದಿ ಸಾತವಾಹನರ ಆಳಿಕೆಯ ಕಾಲದ್ದೆನ್ನುವ ವಸ್ತುಗಳನ್ನು ಪತ್ತೆಹಚ್ಚಿದ್ದಾರೆ. ಹಿರೇಕೆರೂರು ತಾಲ್ಲೂಕಿನ ಹಳ್ಳೂರಿನಲ್ಲಿ ನಡೆದ ಶೋಧನೆಯಲ್ಲಿ ನವಶಿಲಾಯುಗ, ತಾಮ್ರಶಿಲಾಯುಗ ಮತ್ತು ಕಬ್ಬಿಣಯುಗದ ಸ್ತರಗಳನ್ನು ಪತ್ತೆಮಾಡಲಾಗಿದೆ.

1836ರಲ್ಲಿ ಧಾರವಾಡ ಜಿಲ್ಲೆ ರಚನೆಯಾಗಿ ಈಸ್ಟ್ಇಂಡಿಯಾ ಕಂಪನಿಯ ನಿರ್ದೇಶಕರುಗಳ ತೀರ್ಮಾನದಂತೆ ಇದನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲಾಗಿತ್ತು. ಅಂದಿನಿಂದ ಹಾವೇರಿ ಹಾಗೂ ಅದರ ಸುತ್ತ ಮುತ್ತಲ ಪ್ರದೇಶಗಳು ಈ ಜಿಲ್ಲೆಗೆ ಸೇರಿದ್ದುವು. ಇದಕ್ಕೂ ಮೊದಲು ಈ ಭಾಗದ ಇತಿಹಾಸ ಮೌರ್ಯ ಮತ್ತು ಸಾತವಾಹನರ ಕಾಲದಲ್ಲಿ ಪ್ರಾರಂಭವಾಗಿ ಮುಂದುವರಿದು ಬಂತು. ಬನವಾಸಿಯ ಕದಂಬರು, ಬಾದಾಮಿಯ ಚಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಕಳಚುರಿ ಮತ್ತು ಯಾದವರ ಆಡಳಿತಕ್ಕೆ ಈ ಪ್ರದೇಶಗಳು ಸೇರಿದ್ದುವು. ವಿಜಯನಗರದ ಅರಸರ ಅನಂತರ ಸು.1575ರಿಂದ ಈ ಪ್ರದೇಶ ಆದಿಲ್‌ಶಾಹೀ ಆಡಳಿತಕ್ಕೆ ಒಳಪಟ್ಟಿತು. 1686-1820ರ ಕಾಲದಲ್ಲಿ ಮುಗಲರ ಆಡಳಿತ ನಡೆದಿತ್ತು. ಆಗ ಅಬ್ದುಲ್ ರಹೂಫ್ ಸವಣೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ. ಹೈದರಾಬಾದಿನ ನಿಜಾಮರ ಆಡಳಿತಕ್ಕೆ ಮತ್ತು ಸ್ವಲ್ಪಕಾಲ ಟಿಪ್ಪುಸುಲ್ತಾನ್ ಆಡಳಿತಕ್ಕೆ ಸವಣೂರು ಮತ್ತು ಸುತ್ತಲ ಪ್ರದೇಶಗಳು ಸೇರಿದ್ದುವು. ಮುಂದೆ ಮರಾಠರ ಆಡಳಿತ ಬಂತು. 1818-30ರವರೆಗೆ ಬ್ರಿಟಿಷರ ಆಡಳಿತಕ್ಕೆ ಸೇರಿತ್ತು. 1836ರಲ್ಲಿ ಬೆಳಗಾಂವಿ ಜಿಲ್ಲೆ ರಚನೆಯಾಯಿತು. 1857-58ರಲ್ಲಿ ನರಗುಂದದ ಬಾಬಾಸಾಹೇಬ್, ಮುಂಡರಗಿ ಭೀಮರಾವ್ ಮೊದಲಾದವರು ಬ್ರಿಟಿಷ್ ಆಡಳಿತವನ್ನು ಪ್ರತಿಭಟಿಸಿ ಹೋರಾಡಿದ ವಿಷಯ ಬಹು ಮುಖ್ಯವಾದದ್ದು.

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕದರಮಂಡಲಗಿಯಲ್ಲಿ ಪುರಾಣ ಪ್ರಸಿದ್ಧನಾದ ಜನಮೇಜಯ ಮಹಾರಾಜ ಕಟ್ಟಿಸಿದ್ದೆನ್ನಲಾದ ಮಾರುತಿ ದೇವಾಲಯವಿದೆ. ಕಾಗಿನೆಲೆಯಲ್ಲಿ ಕನಕದಾಸರು ಕಟ್ಟಿಸಿರುವ ಆದಿಕೇಶವ ದೇವಾಲಯವಿದೆ. ಮೋಟೆಬೆನ್ನೂರಿನಲ್ಲಿರುವ ಮಲ್ಲಿಕಾರ್ಜುನ ದೇವಾಲಯದಲ್ಲಿ 1051ರ ಒಂದು ಶಾಸನವಿದೆ. ಶಿಗ್ಗಾಂವಿ ತಾಲ್ಲೂಕಿನ ಹಿರೇಬೆಂಡಿಗೇರಿಯ ಕಾಳಪ್ಪನ ದೇವಾಲಯದಲ್ಲಿ 6ನೆಯ ಚಾಳುಕ್ಯವಿಕ್ರಮಾದಿತ್ಯ, 2ನೆಯ ಜಗದೇಕಮಲ್ಲ ಮತ್ತು 2ನೆಯ ಕಳಚುರಿ ಬಿಜ್ಜಳ ಇವರ ಕಾಲದ ಶಾಸನಗಳಿವೆ. ಹುಲಗೂರಿನ ಸಿದ್ಧಲಿಂಗ ದೇವಾಲಯದಲ್ಲಿ ಸು.970ರ ಖೊಟ್ಟಿಗನ ಶಾಸನದ ಜೊತೆಗೆ 15 ಶಾಸನಗಳು ದೊರಕಿವೆ. ಸವಣೂರಿನಲ್ಲಿ ಮಸೀದಿಗಳೂ ದೇವಸ್ಥಾನಗಳೂ ಸತ್ಯಬೋಧಸ್ವಾಮಿಗಳ ಮಠ, ನವಾಬನ ಅರಮನೆ, ಕೋಟೆಯ ಅವಶೇಷಗಳು ಇವೆ. ಹಿರೇಕೆರೂರು ತಾಲ್ಲೂಕಿನಲ್ಲಿ ಮಾಸೂರಿನ ಮದಗ ಕೆರೆ ಹಾಗೂ ಹಳೆಕೋಟೆಯಿದೆ. ಇಲ್ಲಿನ ಅಬ್ಬಲೂರು ಸರ್ವಜ್ಞನ ಹುಟ್ಟೂರೆನ್ನುವರು. ಶಿಗ್ಗಾಂವಿಯ ಬಾಡ, ಸಂತಶಿಶುನಾಳ ಷರೀಫರು ಜನಿಸಿದ ಶಿಶುನಾಳಗ್ರಾಮ ಈ ಜಿಲ್ಲೆಗೆ ಸೇರಿವೆ.

**ತಾಲ್ಲೂಕು:** ಜಿಲ್ಲೆಯ ಮಧ್ಯದಲ್ಲಿರುವ ಹಾವೇರಿ ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಸವಣೂರು ತಾಲ್ಲೂಕೂ ಪೂರ್ವದಲ್ಲಿ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕೂ ದಕ್ಷಿಣದಲ್ಲಿ ಬ್ಯಾಡಗಿ ಮತ್ತು ರಾಣೆಬೆನ್ನೂರು ತಾಲ್ಲೂಕುಗಳೂ ಪಶ್ಚಿಮದಲ್ಲಿ ಹಾನಗಲ್ಲು ತಾಲ್ಲೂಕೂ ಸುತ್ತುವರಿದಿವೆ. ತಾಲ್ಲೂಕಿನಲ್ಲಿ 88 ಗ್ರಾಮಗಳಿವೆ. ವಿಸ್ತೀರ್ಣ 799.9 ಚ.ಕಿಮೀ. ಜನಸಂಖ್ಯೆ 2,52,347.

ಈ ತಾಲ್ಲೂಕು ಸಣ್ಣ ಗುಡ್ಡಗಳಿಂದ ಕೂಡಿದ ಕಪ್ಪು ಮಣ್ಣಿನ ಬಯಲು ಪ್ರದೇಶಕ್ಕೆ ಸೇರಿದೆ. ವರದಾ ಮತ್ತು ತುಂಗಭದ್ರಾ ಈ ತಾಲ್ಲೂಕಿನ ಮುಖ್ಯ ನದಿಗಳು. ವರದಾ ನದಿ ತಾಲ್ಲೂಕಿನ ಪಶ್ಚಿಮದಲ್ಲಿ ಮತ್ತು ಉತ್ತರದಲ್ಲಿ ಸ್ವಲ್ಪ ದೂರದವರೆಗೆ ಗಡಿಯಾಗಿ ಹರಿದು ಹಾನಗಲ್ಲು ಮತ್ತು ಸವಣೂರು ತಾಲ್ಲೂಕುಗಳನ್ನು ಬೇರ್ಪಡಿಸಿ ಮಣ್ಣೂರ ಬಳಿ ತಾಲ್ಲೂಕನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಹರಿದು ಗಳಗನಾಥದ ಬಳಿ ತುಂಗಭದ್ರಾ ನದಿಯನ್ನು ಕೂಡಿಕೊಳ್ಳುವುದು. ತುಂಗಭದ್ರಾ ನದಿ ತಾಲ್ಲೂಕಿನ ಪೂರ್ವ ದಲ್ಲಿ ಗಡಿಯಾಗಿ ಹರಿದು, ಮಧ್ಯೆ ಸ್ವಲ್ಪ ದೂರ ಮಾತ್ರ ತಾಲ್ಲೂಕಿನ ಒಳಗೆ ಪ್ರವೇಶಿಸಿ ಮತ್ತೆ ಗಡಿಯಾಗಿ ಹರಿದು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕನ್ನು ಬೇರ್ಪಡಿಸಿದೆ. ಈ ನದಿಯ ಎಡದಂಡೆ



ಸಿದ್ದೇಶ್ವರ ದೇವಾಲಯ, ಹಾವೇರಿ

ಮತ್ತು ವರದಾ ನದಿಯ ಬಲದಂಡೆ ಮತ್ತು ತಾಲ್ಲೂಕಿನ ಒಳಗೆ ಎರಡೂ ಕಡೆ ರೇವೆಮಣ್ಣಿನ ಪ್ರದೇಶವಿದೆ. ಉಳಿದ ಭಾಗದಲ್ಲಿ ಕೆಂಪುಮಿಶ್ರ ಕಪ್ಪುಮಣ್ಣಿನ ಭೂಮಿಯಿದೆ. ಉತ್ತಮ ಹವಾಗುಣವಿದ್ದು ವಾರ್ಷಿಕ ಸರಾಸರಿ ಮಳೆ 719.92 ಮಿಮೀ. ತಾಲ್ಲೂಕಿನಲ್ಲಿ ಜೋಳ, ಬತ್ತ, ರಾಗಿ, ನವಣೆ, ಕಬ್ಬು, ಸೇಂಗಾ, ಗುರೆಳ್ಳು, ಮೆಣಸಿನಕಾಯಿ, ಈರುಳ್ಳಿ, ಹತ್ತಿ ಮುಂತಾದವನ್ನು ಬೆಳೆಯುತ್ತಾರೆ. ನಿಂಬೆ, ವೀಳೆಯದೆಲೆ, ಕೆಲವು ಬಗೆಯ ಫಲಗಳು, ತಂಬಾಕು, ವಿವಿಧ ತರಕಾರಿಗಳನ್ನೂ ಬೆಳೆಯುತ್ತಾರೆ. ಇಲ್ಲಿ ಪಶುಪಾಲನೆಯುಂಟು. ಕುರಿಸಾಕಣೆ ಕೇಂದ್ರವೂ ಇದ್ದು ಈ ತಾಲ್ಲೂಕಿನಲ್ಲಿ ಕುರಿಗಳ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಡಲಾಗಿದೆ.

ತಾಲ್ಲೂಕಿನಲ್ಲಿ ಕೈಮಗ್ಗದ ಬಟ್ಟೆ ಮತ್ತು ಚರ್ಮ ವಸ್ತುಗಳ ತಯಾರಿಕೆ ಯುಂಟು. ಸೇಂಗಾ ಎಣ್ಣೆ, ಹೆಂಚು ಮತ್ತು ಇಟ್ಟಿಗೆಗಳನ್ನೂ ಇಲ್ಲಿ ತಯಾರಿಸುವರು. ಈ ತಾಲ್ಲೂಕಿನಲ್ಲಿ ಬೆಂಗಳೂರು-ಬೆಳಗಾಂವಿ ರೈಲುಮಾರ್ಗ ಮತ್ತು ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದೆ.

ಹಾವೇರಿಯ ಪಶ್ಚಿಮಕ್ಕೆ 11 ಕಿಮೀ ದೂರದಲ್ಲಿರುವ ಸಂಗೂರು ವರದಾನದಿಯ ಬಲದಂಡೆಯ ಮೇಲಿದೆ. ಇಲ್ಲಿ ಈಶ್ವರ ಮತ್ತು ವೀರಭದ್ರ ದೇವಾಲಯಗಳೂ ಒಂದು ಹಳೇ ಕೋಟೆಯ ಅವಶೇಷಗಳೂ ಇವೆ. ಇಲ್ಲಿನ 1265ರ ಶಾಸನದಲ್ಲಿ ಈ ಗ್ರಾಮವನ್ನು ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದಾನ ಕೊಟ್ಟದ್ದು ತಿಳಿದುಬರುತ್ತದೆ. 1407ರ ಇನ್ನೊಂದು ಶಾಸನದಲ್ಲಿ ವಿಜಯನಗರ ಸ್ಥಾಪನೆಗೆ ಮೊದಲು ಉತ್ತರದಿಂದ ಬರುವ ಮುಸ್ಲಿಮರನ್ನು ತಡೆದ ಕುಮಾರ ರಾಮನಾಥನ ವಿಷಯ ತಿಳಿದು ಬರುತ್ತದೆ. ಹಾವೇರಿಯ ಪಶ್ಚಿಮಕ್ಕೆ 8 ಕಿಮೀ ದೂರದಲ್ಲಿರುವ ದೇವಿಹೊಸೂರು ಗ್ರಾಮದಲ್ಲಿ ಹಾವೇರಿಯ ವಾಯವ್ಯಕ್ಕೆ 11 ಕಿಮೀ ದೂರದಲ್ಲಿರುವ ದೇವಗಿರಿಯಲ್ಲಿ ರಾಷ್ಟ್ರಕೂಟ, ಚಾಳುಕ್ಯ, ಕಳಚುರಿ ಮತ್ತು ಸೇವುಣರ ಕಾಲದ ಶಾಸನಗಳಿವೆ. 12ನೆಯ ಶತಮಾನದಲ್ಲಿ ಇದು ಶಿಲಾಹಾರರ ಒಡೆತನಕ್ಕೆ ಸೇರಿತ್ತು. ಇಲ್ಲಿರುವ ಎಲ್ಲಮ್ಮ ದೇವಾಲಯ ವನ್ನು ಜಕಣಾಚಾರಿ ಕಟ್ಟಿದ್ದೆಂದು ಪ್ರತೀತಿ. ಇಲ್ಲಿ ಹನುಮಂತ ಮತ್ತು ಬಸವಣ್ಣ ದೇವಾಲಯಗಳಿವೆ. ವರದಾನದಿಯ ಬಲದಂಡೆಯ ಮೇಲೆ ಹಾವೇರಿಗೆ ಈಶಾನ್ಯದಲ್ಲಿ 11 ಕಿಮೀ ದೂರದಲ್ಲಿರುವ ಕರ್ಜಗಿ 1905ರ ವರೆಗೆ ಹಿಂದಿನ ಕರ್ಜಗಿ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಹಾವೇರಿಗೆ ಈಶಾನ್ಯದಲ್ಲಿ 40 ಕಿಮೀ ದೂರದಲ್ಲಿರುವ ಗಳಗನಾಥ ತುಂಗಭದ್ರಾ ನದಿಯ ಎಡದಂಡೆಯಲ್ಲಿ ವರದಾನದಿ ತುಂಗಭದ್ರೆಯನ್ನು ಕೂಡುವ ಸಂಗಮದ ಬಳಿಯಿದೆ. ಇಲ್ಲಿ ಪ್ರಸಿದ್ಧ ಗಳಗನಾಥ ದೇವಾಲಯವಿದೆ. ಇಲ್ಲಿರುವ ಹನುಮಂತ ದೇವಾಲಯದಲ್ಲಿ ವೀರಗಲ್ಲೊಂದಿದೆ. ಆರನೆಯ ವಿಕ್ರಮಾ ದಿತ್ಯನ 1079 ಮತ್ತು 1080ರ ಎರಡು ಶಾಸನಗಳಿದ್ದು ಇವನ ತಮ್ಮ ಜಯಸಿಂಹ ಈ ಪ್ರದೇಶದ ಆಡಳಿತಾಧಿಕಾರಿಯಾಗಿದ್ದನೆಂದು ತಿಳಿದುಬರು ವುದು. ಹಾವೇರಿಯ ಪೂರ್ವಕ್ಕೆ ತಾಲ್ಲೂಕಿನ ಅಂಚಿನಲ್ಲಿ ತುಂಗಾಭದ್ರಾನದಿಯ ಎಡದಂಡೆಯ ಮೇಲಿರುವ ಹರಳಹಳ್ಳಿ ಹಾವೇರಿ-ಬಳ್ಳಾರಿ ಮಾರ್ಗದಲ್ಲಿದೆ. ಇಲ್ಲಿ 11 ಮತ್ತು 12ನೆಯ ಶತಮಾನದ ಕಳಚುರಿ ಮತ್ತು ಸೇವುಣರ ಕಾಲದ 5 ಶಾಸನಗಳಿವೆ. ಪ್ರಸಿದ್ಧ ಪುರಾತನ ಸೋಮೇಶ್ವರ ಮತ್ತು ಕಾಳೇಶ್ವರ ದೇವಾಲಯಗಳಿವೆ.

ಹಾವೇರಿ ಪಟ್ಟಣ, ಜಿಲ್ಲೆಯ ಮತ್ತು ಈ ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರು-ಬೆಳಗಾಂವಿ ಹೆದ್ದಾರಿಯಲ್ಲಿ ಧಾರವಾಡಕ್ಕೆ ಆಗ್ನೇಯ ದಲ್ಲಿ 95 ಕಿಮೀ ದೂರದಲ್ಲಿದೆ. ಜನಸಂಖ್ಯೆ 55,913.

ತಾಲ್ಲೂಕಿನ ಮತ್ತು ಸುತ್ತಲ ಗ್ರಾಮಗಳಿಗೆ ಇದು ಒಂದು ಮುಖ್ಯ ವ್ಯಾಪಾರ ಕೇಂದ್ರ. ಬೆಂಗಳೂರು-ಬೆಳಗಾಂವಿ ರೈಲುಮಾರ್ಗದ ಒಂದು ಮುಖ್ಯ ರೈಲು ನಿಲ್ದಾಣವಾಗಿದ್ದು ವ್ಯಾಪಾರ-ವಾಣಿಜ್ಯಾಭಿವೃದ್ಧಿಗೆ ಅನುಕೂಲವಾಗಿದೆ.

ಶಾಸನಗಳ ಮೇರೆಗೆ ಈ ನಗರ ಪಾವರಿ, ಹಾವರಿ, ಹಾಹರಿ, ಹಾವೇರಿ ಮತ್ತು ನಳಪುರಿ ಎಂಬ ಹೆಸರಿನಿಂದ ಪೂರ್ವಕಾಲದಲ್ಲಿ ಪ್ರಸಿದ್ಧವಾಗಿತ್ತು. ರಾಷ್ಟ್ರಕೂಟ ಮೂರನೆಯ ಕೃಷ್ಣನ ಕಾಲದ ಒಂದು ಶಾಸನದಲ್ಲಿ ಈ ನಗರದ ಮೊಟ್ಟಮೊದಲ ಉಲ್ಲೇಖ ಸಿಗುವುದರಿಂದ 10ನೆಯ ಶತಮಾನ ಕ್ಕಿಂತ ಪೂರ್ವದಲ್ಲಿಯೇ ಹಾವೇರಿ ಅಸ್ತಿತ್ವದಲ್ಲಿದ್ದಿತೆಂದು ವ್ಯಕ್ತವಾಗು ತ್ತದೆ. ಚಾಳುಕ್ಯ ವಂಶದ ಒಂದನೆಯ ಸೋಮೇಶ್ವರನ ಕಾಲದಲ್ಲಿ ಇದು ಅಗ್ರಹಾರವಾಗಿ ಮಾರ್ಪಟ್ಟಿತು. ಮಹಾಜನರೆಂದು ಕರೆಯಲ್ಪಡುತ್ತಿದ್ದ ನಗರಪ್ರತಿನಿಧಿಗಳಿಂದ ಈ ನಗರದ ಆಡಳಿತ ನಡೆಯುತ್ತಿತ್ತು. ಚಾಳುಕ್ಯ, ಕಳಚುರಿ, ಹೊಯ್ಸಳ ಮತ್ತು ಸೇವುಣರ ರಾಜ್ಯಗಳಲ್ಲಿ ಇದು ಒಂದು ಪ್ರಸಿದ್ಧವಾದ ನಗರವಾಗಿತ್ತೆಂದು ಇಲ್ಲಿ ದೊರೆಯುವ ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿನ ಸಿದ್ದೇಶ್ವರ, ನರಸಿಂಹ, ವೀರಭದ್ರ ಮತ್ತು ಕಲ್ಲೇಶ್ವರ ದೇವಸ್ಥಾನಗಳಲ್ಲಿ ಅತಿಮುಖ್ಯವಾದ ಸಿದ್ದೇಶ್ವರ ದೇವಸ್ಥಾನ ಕಲ್ಯಾಣ ಚಾಳುಕ್ಯರ ಕಾಲದ ವಾಸ್ತುಶಿಲ್ಪ ಶೈಲಿಯಲ್ಲಿದೆ. ಈ ದೇವಸ್ಥಾನದ ಅಧಿಷ್ಠಾನದಲ್ಲಿನ ಸಾಲು ಪಟ್ಟಿಕೆಗಳ ಕುಸುರಿ ಕೆತ್ತನೆ ಕೆಲಸ ಹೊಯ್ಸಳರ ದೇವಾಲಯಗಳಲ್ಲಿನ ಸೂಕ್ಷ್ಮ ಕೆತ್ತನೆ ಕೆಲಸಗಳಷ್ಟೇ ಆಕರ್ಷಣೀಯವಾಗಿದೆ. ಇದರ ಶಿಖರದ ಪ್ರಮಾಣಬದ್ಧತೆ ಮತ್ತು ಅಚ್ಚುಕಟ್ಟುತನ ಮನೋಹರ ವಾಗಿದೆ. ಈ ದೇವಸ್ಥಾನದೊಳಗಿರುವ ಉಮಾಮಹೇಶ್ವರ, ಶಿವಲಿಂಗ ವನ್ನು ಹಿಡಿದಿರುವ ವಿಷ್ಣು, ಮಹಾಲಕ್ಷ್ಮಿ, ಸೂರ್ಯ ಮತ್ತು ನಾಗ-ನಾಗಿಣಿ ವಿಗ್ರಹಗಳು ಹಾಗೂ ಭಿತ್ತಿನಲ್ಲಿ ಕೆತ್ತಿರುವ ನೃತ್ಯಭಂಗಿಯಲ್ಲಿರುವ ಅಷ್ಟಮಾತೃಕೆಯರು ಗಮನಾರ್ಹವಾದವು. ಈ ನಗರದ ದೊಡ್ಡ ಕೆರೆಯನ್ನು ನಳಚಕ್ರವರ್ತಿ ಕಟ್ಟಿಸಿದನೆಂಬ ಐತಿಹ್ಯ ಶಾಸನಗಳಲ್ಲಿದ್ದು ಇದನ್ನು ಪವಿತ್ರ ತೀರ್ಥವೆಂದು ಪರಿಗಣಿಸಲಾಗಿದೆ. ಈಗಲೂ ಯಾತ್ರಿಗಳು ಸಂಕ್ರಮಣದ

ದಿನ ಪರ್ವಸ್ನಾನಕ್ಕೆಂದು ಈ ಕೆರೆಗೆ ಬರುತ್ತಾರೆ. ಹಾವೇರಿಯ ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಅನೇಕ ವೀರಗಲ್ಲುಗಳು ದೊರೆಯುತ್ತವೆ.

*

**ಹಾಸನ:** ಕರ್ನಾಟಕ ರಾಜ್ಯದ ಒಂದು ಜಿಲ್ಲೆ; ತಾಲ್ಲೂಕು ಮತ್ತು ಅವುಗಳ ಆಡಳಿತ ಕೇಂದ್ರ.

**ಜಿಲ್ಲೆ:** ಮೈಸೂರು ವಿಭಾಗಕ್ಕೆ ಸೇರಿರುವ ಈ ಜಿಲ್ಲೆಯನ್ನು ಉತ್ತರದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪೂರ್ವದಲ್ಲಿ ತುಮಕೂರು ಮತ್ತು ಮಂಡ್ಯ ಜಿಲ್ಲೆಗಳೂ ದಕ್ಷಿಣದಲ್ಲಿ ಕೊಡಗು ಮತ್ತು ಮೈಸೂರು ಜಿಲ್ಲೆಗಳೂ ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸ್ವಲ್ಪ ಭಾಗ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಸುತ್ತುವರಿದಿವೆ. ಪ್ರಕೃತಿ ಸೌಂದರ್ಯದ ನೆಲೆವೀಡಾದ ಮಲೆನಾಡಿನಲ್ಲಿ ಈ ಜಿಲ್ಲೆ $12^{0}$ $31^{1}$ ಮತ್ತು $13^{0}$ $33^{1}$ ಉತ್ತರ ಅಕ್ಷಾಂಶ, $75^{0}$ $33^{1}$ ಮತ್ತು $76^{0}$ $33^{1}$ ಪೂರ್ವ ರೇಖಾಂಶ–ಇವುಗಳ ನಡುವೆ ಪ್ರಸರಿಸಿದೆ. ಜಿಲ್ಲೆಯ ಉತ್ತರ–ದಕ್ಷಿಣ ಗರಿಷ್ಠ ಉದ್ದ 129 ಕಿಮೀ ಮತ್ತು ಪೂರ್ವ–ಪಶ್ಚಿಮವಾಗಿ ಪರಮಾವಧಿ ಅಗಲ 116 ಕಿಮೀ. ಆಡಳಿತಾನುಕೂಲಕ್ಕಾಗಿ ಜಿಲ್ಲೆಯನ್ನು ಹಾಸನ ಮತ್ತು ಸಕಲೇಶಪುರ ಎಂದು ಎರಡು ಉಪವಿಭಾಗ ಗಳನ್ನಾಗಿ ವಿಂಗಡಿಸಲಾಗಿದೆ. ಹಾಸನ ಉಪವಿಭಾಗಕ್ಕೆ ಅರಸೀಕೆರೆ, ಚನ್ನರಾಯ ಪಟ್ಟಣ, ಹಾಸನ, ಹೊಳೆನರಸೀಪುರ ಮತ್ತು ಅರಕಲಗೂಡು ತಾಲ್ಲೂಕು ಗಳೂ ಸಕಲೇಶಪುರ ಉಪವಿಭಾಗಕ್ಕೆ ಬೇಲೂರು, ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳೂ ಸೇರಿವೆ. ಜಿಲ್ಲೆಯಲ್ಲಿ 8 ತಾಲ್ಲೂಕುಗಳೂ 38 ಹೋಬಳಿಗಳೂ 11 ಪಟ್ಟಣಗಳೂ ಮತ್ತು ಜನವಸತಿಯಿಲ್ಲದ ಕೆಲವು ಗ್ರಾಮಗಳೂ ಸೇರಿದಂತೆ ಒಟ್ಟು 2,576 ಗ್ರಾಮಗಳಿವೆ. ಜಿಲ್ಲೆಯ ವಿಸ್ತೀರ್ಣ 6,811.0 ಚ.ಕಿಮೀ. ಜನಸಂಖ್ಯೆ 17,21,669.

ಈ ಜಿಲ್ಲೆ ಮಲೆನಾಡು ಮತ್ತು ಮೈದಾನ ಎರಡೂ ಪ್ರದೇಶಗಳನ್ನೊಳ ಗೊಂಡಿದೆ. ಈ ಜಿಲ್ಲೆಯನ್ನು ದಕ್ಷಿಣ ಮಲೆನಾಡು, ಉಪ ಮಲೆನಾಡು ಮತ್ತು ದಕ್ಷಿಣ ಮೈದಾನ ಪ್ರದೇಶವೆಂದು ಮೂರು ಸ್ವಾಭಾವಿಕ ವಿಭಾಗಗಳ ನ್ನಾಗಿ ವಿಂಗಡಿಸಬಹುದು. ದಕ್ಷಿಣ ಮಲೆನಾಡು ವಿಭಾಗ ಹೆಚ್ಚು ಮಳೆ ಬೀಳುವ ದಟ್ಟವಾದ ಕಾಡುಗಳನ್ನುಳ್ಳ ಪ್ರದೇಶ. ಇದರ ಪಶ್ಚಿಮದ ಮೇರೆ ಬಿಸಲೆಘಾಟಿನಿಂದ ಜೇನಕಲ್ಲು ಬೆಟ್ಟದವರೆಗೆ ಹಬ್ಬಿದ್ದು, ರಮಣೀಯವಾದ ಸುಂದರ ಗಿರಿಶ್ರೇಣಿಯಿಂದ ಕೂಡಿದೆ. ಉಪಮಲೆನಾಡು ಪ್ರದೇಶ ಭೂ ವಿನ್ಯಾಸದಲ್ಲಿ ಮೈದಾನ ಪ್ರದೇಶದಂತೆಯೇ ಕಂಡರೂ ಅದರ ವಾಯುಗುಣ, ಅರಣ್ಯ ಸಂಪತ್ತು ಮತ್ತು ಆರ್ಥಿಕ ಪರಿಸ್ಥಿತಿಗಳು ಮಲೆನಾಡಿನಂತೆಯೇ ಇವೆ. ಮಲೆನಾಡಿಗಿಂತಲೂ ಇಲ್ಲಿನ ಹಳ್ಳಿಗಳು ಒತ್ತಾಗಿದ್ದರೂ ಚದುರಿದಂತೆ ಕಂಡುಬರುತ್ತವೆ. ಇಲ್ಲಿ ಮಲೆನಾಡಿಗಿಂತಲೂ ಮಳೆ ಸ್ವಲ್ಪ ಕಡಿಮೆ. ದಕ್ಷಿಣ ಮೈದಾನ ಪ್ರದೇಶ ಮೇಲಿನ ಎರಡು ಪ್ರದೇಶಗಳಿಗಿಂತ ಹೆಚ್ಚು ವಿಸ್ತಾರವಾ ಗಿದ್ದು ಜಿಲ್ಲೆಯ ಅಧಿಕ ಜನಸಂಖ್ಯೆಯನ್ನು ಹೊಂದಿದೆ. ಹಳ್ಳತಗ್ಗಿನಿಂದ ಕೂಡಿದ ಈ ಮೈದಾನ ಪ್ರದೇಶದಲ್ಲಿ ವಿಸ್ತಾರವಾದ ಬೇಸಾಯ ಭೂಪ್ರದೇಶಗ ಳಿವೆ. ಕೆಲವು ಕಡೆ ಈಚಲುಮರಗಳ ತೋಪುಗಳು ಕಂಡುಬರುತ್ತವೆ. ಹಾಸನ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಕೆಲವು ಕಡೆ ವ್ಯವಸಾಯಕ್ಕೆ ಯೋಗ್ಯವಲ್ಲದ ಎತ್ತರವಾದ ಬರಡು ಪ್ರದೇಶಗ ಳಿವೆ. ಘಾಟ್ ಭಾಗ ಬಿಟ್ಟರೆ ಈ ಜಿಲ್ಲೆಯ ಸಾಮಾನ್ಯ ಇಳಿಜಾರು ಹೇಮಾವತಿ ನದಿ ಕಣಿವೆ ಪ್ರದೇಶದ ಕಡೆಗಿದೆ. ಸಕಲೇಶಪುರ ಪ್ರದೇಶ, ಪಶ್ಚಿಮಘಟ್ಟಗಳ ಇಳಿಜಾರು ಪ್ರದೇಶದಲ್ಲಿದ್ದು ಕರ್ನಾಟಕದ ಸುಂದರ ತಾಣಗಳಲ್ಲಿ ಒಂದಾಗಿದೆ.

ಜಿಲ್ಲೆಯ ಪಶ್ಚಿಮದ ಮೇರೆಯಾಗಿರುವ ಪಶ್ಚಿಮ ಘಟ್ಟದಲ್ಲಿ ಕೆಲವು ಉನ್ನತ ಗಿರಿಶೃಂಗಗಳಿವೆ. ಅವುಗಳಲ್ಲಿ ಮುಖ್ಯವಾದವು ಸುಬ್ರಹ್ಮಣ್ಯ ಅಥವಾ ಪುಷ್ಪಗಿರಿ (1,713 ಮೀ), ದೇವರಬೆಟ್ಟ (1,282ಮೀ), ಮುರುಕನಗುಡ್ಡ (1,300ಮೀ) ಮತ್ತು ಜೇನಕಲ್ಲು ಬೆಟ್ಟ (1,389 ಮೀ). ಇವುಗಳಲ್ಲದೆ ತಗ್ಗಾದ ಗ್ರ್ಯಾನೈಟ್ ಗಿರಿ ಶ್ರೇಣಿಗಳು ಬೇಲೂರು, ಹಾಸನ ಮತ್ತು ಅರಸೀಕೆರೆ ತಾಲ್ಲೂಕುಗಳ ಮೂಲಕ ಹಾದುಹೋಗಿವೆ. ಈ ಶ್ರೇಣಿಗಳಲ್ಲಿನ ಅರಸೀಕೆರೆಯ ಹಿರೇಕಲ್ಲುಗುಡ್ಡ (1,153 ಮೀ), ಗರುಡನಗಿರಿ **(ನೋಡಿ)** ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಶ್ರವಣಬೆಳಗೊಳದ ಗೊಮ್ಮಟಗಿರಿ ಅಥವಾ ಇಂದ್ರಗಿರಿ (1,020 ಮೀ), ಹಾಸನ ತಾಲ್ಲೂಕಿನ ಸೀಗೆಗುಡ್ಡ (1,286 ಮೀ) ಇವಲ್ಲದೆ ಹೊಳೆನರಸೀಪುರದ ಮಲ್ಲಪ್ಪನ ಬೆಟ್ಟ, ಆಲೂರು ತಾಲ್ಲೂಕಿನ ಮಹಾರಾಜನದುರ್ಗ, ಹಾಸನ ತಾಲ್ಲೂಕಿನ ಕೊಂತಿಗುಡ್ಡ, ಮಾಕುಂದೂರು ಬೆಟ್ಟ, ಅರಕಲಗೂಡು ತಾಲ್ಲೂಕಿನ ಹಿಪ್ಪೆಬೆಟ್ಟ ಮುಂತಾದವು ಜಿಲ್ಲೆಯ ಇತರ ಮುಖ್ಯ ಬೆಟ್ಟಗಳು.

ಹೇಮಾವತಿ, ಕಾವೇರಿ ಮತ್ತು ಯಗಚಿ ಈ ಜಿಲ್ಲೆಯ ಮುಖ್ಯ ನದಿಗಳು. ಹೇಮಾವತಿ ಕಾವೇರಿಯ ಉಪನದಿ. ಯಗಚಿ ಹೇಮಾವತಿಯ ಉಪನದಿ. ಕಾವೇರಿ ನದಿ ಜಿಲ್ಲೆಯ ದಕ್ಷಿಣದಲ್ಲಿ ಅರಕಲಗೂಡು ತಾಲ್ಲೂಕಿನ ಕಡವಿನ ಹೊಸಹಳ್ಳಿಯ ಬಳಿ ಜಿಲ್ಲೆಯನ್ನು ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಕೊಣನೂರಿನವರೆಗೂ ಹರಿದು ಅಲ್ಲಿಂದ ಮುಂದಕ್ಕೆ ಈಶಾನ್ಯಾಭಿಮುಖವಾಗಿ ಹರಿದು ಕೇರಳಾಪುರದ ಬಳಿ ಜಿಲ್ಲೆಯನ್ನು ಬಿಟ್ಟು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕನ್ನು ಪ್ರವೇಶಿಸುವುದು. ಅರಕಲಗೂಡು ತಾಲ್ಲೂಕಿ ನಲ್ಲಿ ಈ ನದಿಯ ಹರಿವಿನ ಉದ್ದ 24 ಕಿಮೀ. ಈ ನದಿಗೆ ಕೃಷ್ಣರಾಜೇಂದ್ರ ಕಟ್ಟೆ ಕಟ್ಟಿ ಕಟ್ಟೇಪುರ ಮತ್ತು ರಾಮನಾಥಪುರ ನಾಲೆಗಳನ್ನು ತೆಗೆದು ವ್ಯವಸಾಯಕ್ಕೆ ನೀರೊದಗಿಸಿಕೊಳ್ಳಲಾಗುತ್ತಿದೆ. ಹೇಮಾವತಿ ನದಿ ಜಿಲ್ಲೆಯನ್ನು ಸಕಲೇಶಪುರ ತಾಲ್ಲೂಕಿನ ಆಚನಹಳ್ಳಿ ಬಳಿ ಮುಟ್ಟಿ ಆಗ್ನೇಯಾಭಿಮುಖ ವಾಗಿ ಎಲ್ಲೆಯಲ್ಲೇ ಸ್ವಲ್ಪ ದೂರ ಹರಿದು ಹೊನ್ನಾಳಿ ಗ್ರಾಮದ ಬಳಿ ಜಿಲ್ಲೆಯನ್ನು ಒಳಹೊಕ್ಕು ಸಕಲೇಶಪುರವನ್ನು ಬಳಸಿ ಸ್ವಲ್ಪದೂರ ಹರಿದು ಅನಂತರ ಪೂರ್ವಾಭಿಮುಖವಾಗಿ ಹರಿಯುವುದು. ಅರಕಲಗೂಡಿನ ಉತ್ತರಕ್ಕೆ ಗೊರೂರಿನ ಬಳಿ ಯಗಚಿ ನದಿ ಹೇಮಾವತಿಯನ್ನು ಕೂಡಿಕೊಳ್ಳು ವುದು. ಜಿಲ್ಲೆಯಲ್ಲಿ ಈ ನದಿಯು ಹರಿವಿನ ಉದ್ದ 182 ಕಿಮೀ. ಹೊಳೆನರಸೀಪುರಕ್ಕೆ 6 ಕಿಮೀ ದೂರದಲ್ಲಿ ಈ ನದಿಗೆ ಶ್ರೀರಾಮದೇವರ ಕಟ್ಟೆ ಕಟ್ಟಲಾಗಿದೆ. ಈ ಕಟ್ಟೆ ಒಂದು ಶತಮಾನಕ್ಕೂ ಹಿಂದಿನದು. ಹೇಮಾವತಿ ಯೋಜನೆಯಿಂದ ಹಾಸನ, ಮಂಡ್ಯ ಜಿಲ್ಲೆಗಳ ಒಂದು ಲಕ್ಷ ಎಕರೆ ಭೂಮಿಗೆ ನೀರಾವರಿಯಾಗುವುದು. ಯಗಚಿ ನದಿ ಚಿಕ್ಕಮಗಳೂರಿನ ಬಾಬಾಬುಡನ್ ಗಿರಿಯಲ್ಲಿ ಹುಟ್ಟಿ ಹಾಸನ ಜಿಲ್ಲೆಯನ್ನು ಬೇಲೂರು ತಾಲ್ಲೂಕಿನ ಸಿರಿಘಟ್ಟ ಗ್ರಾಮದ ಬಳಿ ಪ್ರವೇಶಿಸುವುದು. ಹಾಸನ ತಾಲ್ಲೂಕಿನ ಹಾಲವಾಗಲುವರೆಗೆ ನೈಋತ್ಯಾಭಿಮುಖವಾಗಿ ಹರಿದು ಅನಂತರ ದಕ್ಷಿಣಾಭಿಮುಖವಾಗಿ ಜಿಲ್ಲೆ ಯಲ್ಲಿ ಒಟ್ಟು 66 ಕಿಮೀ ದೂರ ಹರಿದು ಗೊರೂರಿನ ಪಶ್ಚಿಮಕ್ಕೆ ಹೇಮಾವತಿ ಯನ್ನು ಸೇರಿಕೊಳ್ಳುವುದು. ಈ ನದಿಗೆ ಬೇಲೂರಿನ ಬಳಿ ಅಣೆಕಟ್ಟು ಕಟ್ಟಲಾಗಿದ್ದು ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ.

ಜಿಲ್ಲೆ ಪ್ರಾಚೀನ ಶಿಲಾಸ್ತರಗಳಿಂದ ಕೂಡಿದೆ. ಜಿಲ್ಲೆಯಲ್ಲಿ ಹೆಚ್ಚು ಬೆಣಚುಕಲ್ಲು ಮತ್ತು ಅಭ್ರಕದಿಂದ ಕೂಡಿದ ಪದರುಪದರಾದ ಶಿಲೆಗಳ ಪ್ರದೇಶ ಕಂಡುಬರುತ್ತದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ ಆರ್ಥಿಕ ಮೌಲ್ಯದ ವಿವಿಧ ಖನಿಜ ಸಂಪತ್ತಿದೆ. ಕಟ್ಟಡಗಳ ನಿರ್ಮಾಣಕ್ಕೆ ಬೇಕಾದ ಗ್ರ್ಯಾನೈಟ್ ಶಿಲೆ ಜಿಲ್ಲೆಯಲ್ಲಿ ಸಮೃದ್ಧವಾಗಿದೆ. ಅದರಲ್ಲೂ ಬಾಣಾವರ, ಅರಸೀಕೆರೆಯಲ್ಲಿ ಸಿಗುವ ಕಟ್ಟಡ ಕಲ್ಲು ಉತ್ತಮ ದರ್ಜೆಯದು. ಇದಲ್ಲದೆ ಬಾಣಾವರ ಮತ್ತು ಅರಸೀಕೆರೆಗಳಲ್ಲಿ ಒರಟಾದ ಬೆಣಚುಕಲ್ಲು ಪ್ರದೇಶವಿದೆ. ಹಾಸನ ತಾಲ್ಲೂಕಿನ ಸೀಗೆಗುಡ್ಡ ಬೆನ್ನಸುರ ಶಿಲಾಶ್ರೇಣಿಯಿಂದ ಕೂಡಿದೆ. ಬಾಗೇಶಪುರದ ಪಶ್ಚಿಮದಲ್ಲಿರುವ ದೊಡ್ಡಗುಡ್ಡ ಕಬ್ಬಿಣಾಂಶದ ಭಿನ್ನಸ್ತರ

ಶಿಲಾಶ್ರೇಣಿಯಿಂದಾಗಿದೆ. ಬೈರಾಪುರದಲ್ಲಿನ ಕ್ರೋಮೈಟ್, ಬಾಗೇಶಪುರದ ಚೀನಾ ಜೇಡಿ ಮತ್ತು ಹೊಳೆನರಸೀಪುರದ ಕಲ್ನಾರು ಮುಖ್ಯವಾದವು. ಹೊಳೆನರಸೀಪುರದ ಈಡಿಗೊಂಡನಹಳ್ಳಿ, ಕಬ್ಬೂರು, ಸುಣ್ಣಕಲ್ಲು, ಕಟ್ಟೆಕೆರೆ, ಬೆಟ್ಟದ ಸಟ್ಟೇನಹಳ್ಳಿ, ಮಂದಗೆರೆ, ತಿಮ್ಮಲಾಪುರ ಮತ್ತು ಎಣ್ಣೆಹೊಳೆ, ರಂಗನಬೆಟ್ಟ ಮುಂತಾದ ಕಡೆ ಕಲ್ನಾರು ಅರಸೀಕೆರೆಗೆ 17 ಕಿಮೀ ದೂರದ ಕಲ್ಯಾಡಿ ಹಳ್ಳಿಯ ಸಮೀಪ ಉತ್ತಮ ತಾಮ್ರದ ಅದಿರಿನ ನಿಕ್ಷೇಪವಿದ್ದು ಗಣಿಗಾರಿಕೆಯಿದೆ. ಹೊಳೆನರಸೀಪುರ ತಾಲ್ಲೂಕಿನ ದೊಡ್ಡಕಾಡನೂರು ಬಳಿ ಬರೈಲ್ ಹರಳುಗಳು ದೊರೆಯುತ್ತವೆ. ಕ್ರೋಮೈಟ್ ನುಗ್ಗೇಹಳ್ಳಿ ಭಿನ್ನಸ್ತರ ಶಿಲಾಶ್ರೇಣಿಯಲ್ಲಿ ಹೆಚ್ಚಾಗಿದೆ. ಪೆನಸಮುದ್ರ, ಭೈರಾಪುರ, ಭಕ್ತಹಳ್ಳಿ, ಚಿಕ್ಕೇನಹಳ್ಳಿ, ರಾಯಸಮುದ್ರ ಮತ್ತು ಜಂಬೂರುಗಳಲ್ಲಿ ಕ್ರೋಮೈಟ್ ಗಣಿಗಳಿವೆ. ಅರಸೀಕೆರೆ, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಕುರಂದ ನಿಕ್ಷೇಪಗಳಿವೆ. ಈ ಜಿಲ್ಲೆಯಲ್ಲಿ ಸಿಗುವ ಇತರ ಖನಿಜಗಳಲ್ಲಿ ಅಭ್ರಕ, ಮ್ಯಾಗ್ನಸೈಟ್, ಗಾರ್ನೆಟ್, ಟಾಲ್ಕ ಮುಂತಾದವು ಮುಖ್ಯವಾದುವು.

ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬೀಳುವುದರಿಂದ ಸಹಜ ಭೌಗೋಳಿಕ ಲಕ್ಷಣಗಳಿಂದ ಸಂಪದ್ಭರಿತ ವೈವಿಧ್ಯಮಯ ಸಸ್ಯವರ್ಗವನ್ನು ಪಡೆದಿದೆ. ಪೂರ್ವದಿಂದ ಪಶ್ಚಿಮದ ಕಡೆಗೆ ಹೋದಂತೆ ಸಸ್ಯವರ್ಗದಲ್ಲಿ ತೀವ್ರ ಬದಲಾವಣೆಯಾಗಿ ದಟ್ಟವಾದ ಮುಂಗಾರು ಕಾಡುಗಳನ್ನುಳ್ಳ ವಿಪುಲ ಸಸ್ಯವರ್ಗ ಕಂಡುಬರುತ್ತದೆ. ಜಿಲ್ಲೆಯ ಒಟ್ಟು ಅರಣ್ಯ ವಿಸ್ತೀರ್ಣ 510

ಚ.ಕಿಮೀ. ಇಲ್ಲಿನ ಕಾಡುಗಳಲ್ಲಿ ಬೆಲೆಬಾಳುವ ಗಂಧದ ಮರ ಮತ್ತು ಇತರ ಉಪಯುಕ್ತ ವಿವಿಧ ಫಲವೃಕ್ಷಗಳೂ ಮೃದು ಮತ್ತು ಗಟ್ಟಿಮರಗಳೂ ತಂಗಡಿ ಮತ್ತು ಕಕ್ಕೆ ತೊಗಟೆ, ಬೀಡಿಗೆ ಉಪಯೋಗಿಸುವ ತೂಪರದ ಎಲೆ, ಗೋಂದು, ಮೇಣ, ಜೇನುತುಪ್ಪ, ಬಿದಿರು ಮುಂತಾದವು ಹೇರಳ ವಾಗಿ ದೊರೆಯುವುವು. ಇತ್ತೀಚೆಗೆ ಕಾಫಿ ಮತ್ತು ಗೋಡಂಬಿ ತೋಟಗಾರಿಕೆ ಹಾಗೂ ವ್ಯವಸಾಯ ವಿಸ್ತರಣೆಗಾಗಿ ಅರಣ್ಯ ಭೂಮಿಯನ್ನು ಉಪಯೋಗಿಸುತ್ತಿದ್ದಾರೆ. ಇದರಿಂದ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ. ಇಲ್ಲಿನ ದಟ್ಟವಾದ ಅರಣ್ಯ ಪ್ರದೇಶ ವೈವಿಧ್ಯಮಯ ಪ್ರಾಣಿ ವರ್ಗಗಳಿಗೆ ಆಶ್ರಯಸ್ಥಾನವಾಗಿದೆ. ಆನೆ, ಹುಲಿ, ಚಿರತೆ, ಕಿರುಬ, ತೋಳ, ಜಿಂಕೆ, ಕಾಡುನಾಯಿ, ನಾಗರಹಾವು, ಮುಂಗುಸಿ, ಕರಡಿ, ನರಿ, ಕಾಡೆಮ್ಮೆ ಮುಂತಾದವುಗಳೂ ವಿವಿಧ ಬಗೆಯ ಪಕ್ಷಿಗಳೂ ದಟ್ಟ ಅರಣ್ಯದಲ್ಲಿನ ಇತರ ಮೃಗಪಕ್ಷಿಗಳೂ ವಿವಿಧ ಹಾವುಗಳೂ ಇಲ್ಲಿನ ಅರಣ್ಯದಲ್ಲಿವೆ.

ಹೇಮಾವತಿ ಅಣೆಕಟ್ಟು, ಗೊರೂರು

ಜಿಲ್ಲೆಯ ವಾಯುಗುಣ ಹಿತಕರ. ಮಾರ್ಚ್‌ನಿಂದ ಮೇ ಅಂತ್ಯದವರೆಗೆ ಬೇಸಗೆಯ ಕಾವೂ ಮುಂದೆ ಸೆಪ್ಟೆಂಬರ್ ಅಂತ್ಯದವರೆಗೆ ಮುಂಗಾರೂ ಅಕ್ಟೋಬರ್ ಮತ್ತು ನವೆಂಬರ್‌ಗಳಲ್ಲಿ ಹಿಂಗಾರು ಮಳೆಯೂ ಆಗುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿ ತನಕ ಚಳಿಗಾಲವಿರುತ್ತದೆ. ಮಳೆಯ ಪ್ರಮಾಣ ಪಶ್ಚಿಮದ ಘಟ್ಟ ಪ್ರದೇಶಗಳಲ್ಲಿ ಅಧಿಕವಾಗಿದ್ದು, ಮೇ ತಿಂಗಳಿನಿಂದ ಅಕ್ಟೋಬರ್‌ವರೆಗೆ ಜಿಲ್ಲೆಯಲ್ಲಿ ಅಧಿಕ ಮಳೆಯಾಗುತ್ತದೆ. ಜಿಲ್ಲೆಯ ಪೂರ್ವಕ್ಕೆಹೋದಂತೆ ಮಳೆ ಕಡಿಮೆಯಾಗುತ್ತ ಬರುವುದು. ಉದಾಹರಣೆಗೆ, ಜಿಲ್ಲೆಯ ಪಶ್ಚಿಮದಲ್ಲಿರುವ ಸಕಲೇಶಪುರದಲ್ಲಿ 2,288.93 ಮಿಮೀ ಮಳೆಯಾದರೆ ಜಿಲ್ಲೆಯ ಮಧ್ಯದಲ್ಲಿರುವ ಹಾಸನದಲ್ಲಿ 893.6 ಮಿಮೀ ಮಳೆ ಬೀಳುತ್ತದೆ. ಜಿಲ್ಲೆಯ ಪೂರ್ವದಲ್ಲಿರುವ ಚನ್ನರಾಯಪಟ್ಟಣದಲ್ಲಿ 684.9 ಮಿಮೀ ಮಳೆಯಾಗುತ್ತದೆ. ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ 1,040.7 ಮಿಮೀ.

ಜಿಲ್ಲೆಯಲ್ಲಿ ವಿವಿಧ ಮಣ್ಣುಳ್ಳ ಪ್ರದೇಶಗಳನ್ನು ಕಾಣಬಹುದು. ಬೆಟ್ಟ ಮತ್ತು ಪಶ್ಚಿಮಘಟ್ಟ ಶ್ರೇಣಿಗಳ ಇಳಿಜಾರು ಪ್ರದೇಶಗಳಲ್ಲಿ ಜೇಡಿಮಣ್ಣನ್ನೂ ಅರಣ್ಯ ಪ್ರದೇಶದಲ್ಲಿ ಸಸ್ಯಮಿಶ್ರಿತ ಫಲವತ್ತಾದ ಕೆಂಪು ಜಂಬುಮಣ್ಣನ್ನೂ ಮೈದಾನ ಪ್ರದೇಶಗಳಲ್ಲಿ ಗರಸುಮಣ್ಣು ಇರುವುದನ್ನೂ ಕಾಣಬಹುದು. ಆಲೂರು, ಸಕಲೇಶಪುರ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಶಿಸ್ಟ್ ಮತ್ತು ಲ್ಯಾಟರೈಟ್‌ನಿಂದಾದ ಮಣ್ಣುಪ್ರದೇಶವಿದ್ದು ಮೇಲೆ ಕೆಂಪಾಗಿದ್ದು ಆಳಕ್ಕೆ ಹೋದಂತೆ ಹಳದಿ ಬಣ್ಣದಿಂದ ಕೂಡಿರುವುದು ಕಂಡುಬರುವುದು. ಆ ಭಾಗದ ಮಣ್ಣು ಕಾಫಿ, ಟೀ, ಮೆಣಸು, ಏಲಕ್ಕಿ, ಅಡಕೆ, ಬತ್ತ ಮತ್ತು ಕಬ್ಬು ಬೆಳೆಗೆ ಬಹುಪ್ರಶಸ್ತವಾದದ್ದು. ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ ಮತ್ತು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಮರಳುಮಿಶ್ರಿತ ಕೆಂಪು ಜೇಡಿಮಣ್ಣಿನ ಪ್ರದೇಶ ಹೆಚ್ಚು. ಬತ್ತ, ಕಬ್ಬು, ತೆಂಗು, ಆಲೂಗಡ್ಡೆ, ತರಕಾರಿಗಳು, ಸೇಂಗಾ, ಹತ್ತಿ, ಜೋಳ ಮುಂತಾದವನ್ನು ಬೆಳೆಯಬಹುದು. ಎಲ್ಲ ಪ್ರದೇಶಗಳಲ್ಲೂ ನೀರಾವರಿಯನ್ನು ಮತ್ತು ಮಳೆಯನ್ನು ಅನುಸರಿಸಿ ಬೆಳೆಗಳನ್ನು ಬೆಳೆಯಲಾಗುವುದು. ಅರಸೀಕೆರೆ ತಾಲ್ಲೂಕಿನಲ್ಲಿ ಕೆಲವು ಕಡೆ ಕಪ್ಪು ಮಣ್ಣಿನ ಪ್ರದೇಶಗಳಿವೆ. ಈ ಬಗೆಯ ಮಣ್ಣಿನಲ್ಲಿ ಮೆಣಸಿನಕಾಯಿ, ಹತ್ತಿ, ಜೋಳ, ರಾಗಿ ಮತ್ತು ತೈಲಬೀಜಗಳನ್ನು ಬೆಳೆಯುತ್ತಾರೆ.

ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬಿದ್ದರೂ ವ್ಯವಸಾಯಾನುಕೂಲಕ್ಕಾಗಿ ನದಿ, ಕೆರೆ ಮತ್ತು ಬಾವಿಗಳ ನೀರಾವರಿ ವ್ಯವಸ್ಥೆಯಿದೆ. ಅವುಗಳಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿರುವ ಹೇಮಾವತಿ ನದಿಯ ಶ್ರೀರಾಮದೇವರ ಕಟ್ಟೆಯ ದಕ್ಷಿಣ ಮತ್ತು ಉತ್ತರ ನಾಲೆಗಳು, ಅರಕಲಗೂಡು ತಾಲ್ಲೂಕಿನಲ್ಲಿ ಕಾವೇರಿ ನದಿಗೆ ಕಟ್ಟಿರುವ ಕೃಷ್ಣರಾಜೇಂದ್ರ ಅಣೆಕಟ್ಟಿನ ಕಟ್ಟೇಪುರ ಮತ್ತು ರಾಮನಾಥಪುರ ನಾಲೆಗಳೂ ಯಗಚಿ ನದಿಗೆ ಮತ್ತು ಅದರ ಉಪನದಿಗಳಿಗೆ ಕಟ್ಟೆ ಕಟ್ಟಿ ಅವುಗಳಿಂದ ತೆಗೆದಿರುವ ಹಾಸನ ತಾಲ್ಲೂಕಿನ ಹಾಲವಾಗಲು, ಚಂಗರವಳ್ಳಿ ನಾಲೆಗಳೂ ಬೇಲೂರು ತಾಲ್ಲೂಕಿನಲ್ಲಿರುವ ಕಿತ್ತೂರು, ಹೊಸಕಡಲೂರು ಮತ್ತು ಹಳೆಕಡಲೂರು ನಾಲೆಗಳೂ ಇವಲ್ಲದೆ ಕೆಲವು ತೊರೆಗಳಿಗೆ ಕಟ್ಟಿರುವ ಅಡ್ಡಗಟ್ಟೆಯಿಂದ ತೆಗೆದಿರುವ ಮದಘಟ್ಟ, ಮಳಲಿ ಕಾಲುವೆಗಳೂ ಮುಖ್ಯವಾದವೆನ್ನಬಹುದು. ಈ ಎಲ್ಲ ಕಾಲುವೆಗಳಿಂದ 7,566 ಹೆಕ್ಟೇರ್‌ಗಳಿಗೂ ಕೆರೆಗಳಿಂದ 31,461 ಹೆಕ್ಟೇರ್‌ಗಳಿಗೂ ಬಾವಿಗಳಿಂದ 2,801 ಹೆಕ್ಟೇರ್‌ಗಳಿಗೂ ನೀರೊದಗಿತ್ತು. ಜಿಲ್ಲೆಯ ಇತರ ಮೂಲಗಳನ್ನೂ ಸೇರಿಸಿ ಒಟ್ಟು 48,952 ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿತ್ತು. ಈಗ ಈ ಕ್ಷೇತ್ರ ವಿಸ್ತರಿಸಿದೆ. ಜಿಲ್ಲೆಯಲ್ಲಿ ನಗರ್ತಿ, ಕಾಮಸಮುದ್ರ ಮತ್ತು ರಾವತನಹಳ್ಳಿಗಳಲ್ಲಿ ಏತ ನೀರಾವರಿಯೂ ಇದೆ.

ಜಿಲ್ಲೆಯಲ್ಲಿ 51,003 ಹೆಕ್ಟೇರ್‌ಗಳಲ್ಲಿ ಬತ್ತವನ್ನೂ 8,151 ಹೆಕ್ಟೇರ್‌ಗಳಲ್ಲಿ ಜೋಳವನ್ನೂ 1,21,425 ಹೆಕ್ಟೇರ್‌ಗಳಲ್ಲಿ ರಾಗಿಯನ್ನೂ 232 ಹೆಕ್ಟೇರ್‌ಗಳಲ್ಲಿ ಗೋದಿಯನ್ನೂ 40,221 ಹೆಕ್ಟೇರ್‌ಗಳಲ್ಲಿ ದ್ವಿದಳ ಧಾನ್ಯಗಳನ್ನೂ 3,333 ಹೆಕ್ಟೇರ್‌ಗಳಲ್ಲಿ ಕಬ್ಬನ್ನೂ 4,857 ಹೆಕ್ಟೇರ್‌ಗಳಲ್ಲಿ ಸೇಂಗಾವನ್ನೂ 6,192 ಹೆಕ್ಟೇರ್‌ಗಳಲ್ಲಿ ಇತರ ಎಣ್ಣೆಬೀಜಗಳನ್ನೂ 8,329 ಹೆಕ್ಟೇರ್‌ಗಳಲ್ಲಿ ಹತ್ತಿಯನ್ನೂ ಬೆಳೆಯಲಾಗಿತ್ತು. ಜಿಲ್ಲೆಯ ಪ್ರಮುಖ ತೋಟದ ಬೆಳೆಗಳಾಗಿ 15,277 ಹೆಕ್ಟೇರ್‌ಗಳಲ್ಲಿ ಕಾಫಿಯನ್ನೂ 443 ಹೆಕ್ಟೇರ್‌ಗಳಲ್ಲಿ ಟೀಯನ್ನೂ 1,257 ಹೆಕ್ಟೇರ್‌ಗಳಲ್ಲಿ ಅಡಕೆ ಮತ್ತು 26,625 ಹೆಕ್ಟೇರ್‌ಗಳಲ್ಲಿ ತೆಂಗನ್ನೂ 7,921 ಹೆಕ್ಟೇರ್‌ಗಳಲ್ಲಿ ಏಲಕ್ಕಿಯನ್ನೂ ಸು. 28 ಹೆಕ್ಟೇರ್‌ಗಳಲ್ಲಿ ಗೋಡಂಬಿಯನ್ನೂ ಬೆಳೆಯಲಾಗಿತ್ತು. ಈಗ ಈ ಎಲ್ಲ ಕ್ಷೇತ್ರ ವಿಸ್ತರಿಸಿದೆ. ಹೇಮಾವತಿ ಯೋಜನೆಯಿಂದ ಜಿಲ್ಲೆಯ ಇನ್ನಷ್ಟು ಹೆಚ್ಚು ಭೂಮಿ ವ್ಯವಸಾಯಕ್ಕೊಳಪಟ್ಟು ಆಹಾರ ಮತ್ತು ಆಹಾರೇತರ ಬೆಳೆಗಳ ಉತ್ಪನ್ನ ಏರುವುದನ್ನು ನಿರೀಕ್ಷಿಸಲಾಗಿದೆ.

ಈ ಜಿಲ್ಲೆ ಕಾಫಿ ಬೆಳೆಗೂ ಪ್ರಸಿದ್ಧ. ಸಕಲೇಶಪುರ, ಬೇಲೂರು ತಾಲ್ಲೂಕುಗಳಲ್ಲಿ ಮತ್ತು ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಪ್ರದೇಶಗಳಲ್ಲಿ ಕಾಫಿ ಹೆಚ್ಚು ಬೆಳೆಯುತ್ತಾರೆ. ಐಗೂರು, ಏಸಳೂರು ಮತ್ತು ಹಾನಬಾಳು ಏಲಕ್ಕಿಗೆ ಪ್ರಸಿದ್ಧವಾಗಿದ್ದವು. ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳು ತೆಂಗು ಬೆಳೆಯಲ್ಲಿ ಮುಂದಾಗಿವೆ. ಅರಸೀಕೆರೆಯಲ್ಲಿ ಒಂದು ತೆಂಗು ಸಂಶೋಧನ ಕೇಂದ್ರವಿದೆ. ಬೇಲೂರು, ಆಲೂರು ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಮೆಣಸನ್ನು ಬೆಳೆಯುತ್ತಾರೆ. ಅಡಕೆಯನ್ನು ಸಕಲೇಶಪುರ ತಾಲ್ಲೂಕಿನ ತಗ್ಗುಪ್ರದೇಶದ ಕಾಫಿ ಪ್ಲಾಂಟೇಷನ್‌ಗಳಲ್ಲಿ, ಅರಕಲಗೂಡು, ಬೇಲೂರು, ಆಲೂರು, ಚನ್ನರಾಯಪಟ್ಟಣ ಮತ್ತು ಹಾಸನ ತಾಲ್ಲೂಕುಗಳಲ್ಲಿ ಬೆಳೆಯುತ್ತಾರೆ. ಹಾಸನ, ಬೇಲೂರು ಮತ್ತು ಅರಕಲಗೂಡು, ಹೊಳೆನರಸೀಪುರ ತಾಲ್ಲೂಕುಗಳು ಆಲೂಗಡ್ಡೆ ಬೆಳೆಗೆ ಹೆಸರಾದುವು. ಸಕಲೇಶಪುರ ಮತ್ತು ಬೇಲೂರು

ತಾಲ್ಲೂಕುಗಳಲ್ಲಿ ಕಿತ್ತಳೆ ಮತ್ತು ಬಾಳೆ ಹೆಚ್ಚು ಬೆಳೆಯಲಾಗುತ್ತದೆ. ಮಾವು, ಸಪೋಟ, ಪರಂಗಿಹಣ್ಣು ಮತ್ತು ಇತರ ಫಲಗಳೂ ಈ ಜಿಲ್ಲೆಯಲ್ಲಿ ಬೆಳೆಯುತ್ತವೆ.

ಜಿಲ್ಲೆಯಲ್ಲಿ ಮಲೆನಾಡಿನ ಮತ್ತು ಮೈದಾನಪ್ರದೇಶದ ಎರಡೂ ಬಗೆಯ ವಿವಿಧ ಫಲಗಳೂ ತರಕಾರಿಗಳೂ ಬೆಳೆಯುತ್ತವೆ. ಅರಕಲಗೂಡು, ಸಕಲೇಶಪುರ, ಆಲೂರು, ಬೇಲೂರು, ಹಾಸನ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರಗಳಲ್ಲಿ ತೋಟಗಾರಿಕೆ ಇಲಾಖೆಯಿದ್ದು ವಿವಿಧ ತರಕಾರಿ ಮತ್ತು ಫಲಪುಷ್ಪಗಳ ಅಭಿವೃದ್ಧಿಗೆ ಸಹಕಾರ ನೀಡುತ್ತಿದೆ.

ಈ ಜಿಲ್ಲೆ ಹಳ್ಳಿಕಾರ್ ಮತ್ತು ಅಮೃತಮಹಲ್ ರಾಸುಗಳಿಗೆ ಪ್ರಸಿದ್ಧ. ಮಲೆನಾಡಬೆಟ್ಟ ಪ್ರದೇಶಗಳಲ್ಲಿ ಸಾಮಾನ್ಯವಾದ ಬೆಟ್ಟದ ಹಸುಗಳಿವೆ. ಅರಸೀಕೆರೆ, ಹಾಸನ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಅಮೃತಮಹಲ್ ಹುಲ್ಲುಗಾವಲುಗಳಿವೆ. ಜಿಲ್ಲೆಯ ಪಶುಸಂಪತ್ತಿನ ಅಭಿವೃದ್ಧಿಗೆ ನೆರವಾಗಲು ಒಟ್ಟು 41 ಪಶುವೈದ್ಯಾಲಯಗಳೂ 13 ಕೃತಕ ಗರ್ಭಧಾರಣಾ ಕೇಂದ್ರಗಳೂ ಇದ್ದವು. ಪ್ರತಿವರ್ಷ ಡಿಸೆಂಬರ್–ಜನವರಿಯಲ್ಲಿ ಹಾಸನದಲ್ಲಿ ನಡೆಯುತ್ತಿದ್ದ ದನಗಳ ಜಾತ್ರೆ ಬಹು ಪ್ರಸಿದ್ಧ. ಆಗ ಜಿಲ್ಲೆಯ ಪ್ರಸಿದ್ಧ ಹಳ್ಳಿಕಾರ್, ಅಮೃತಮಹಲ್ ಮತ್ತು ಮಲೆನಾಡ ಗಿಡ್ಡ ಹಸುಗಳ ಪ್ರದರ್ಶನ–ಮಾರಾಟ ನಡೆಯುತ್ತಿತ್ತು. ಹಾಸನ ಜಿಲ್ಲೆಯಲ್ಲಿ ಕುರಿಸಾಕಣೆಯೂ ಪ್ರಗತಿದಾಯಕವಾಗಿದೆ. ಚನ್ನರಾಯಪಟ್ಟಣದಲ್ಲಿ ಕುರಿ ಸಾಕುವವರ ಒಂದು ಸಂಘವಿದೆ. ಕೋಳಿ ಸಾಕಣೆಯೂ ಬೃಹತ್ತಾಗಿ ಬೆಳೆದಿದೆ. ಜಿಲ್ಲೆಯಲ್ಲಿ ನದಿಗಳೂ ತೊರೆಕೆರೆಗಳೂ ಇದ್ದು ಮತ್ಸ್ಯೋತ್ಪತ್ತಿ ಸಾಕಷ್ಟಿದೆ. ಹಾಸನ, ಹೊಳೆನರಸೀಪುರ, ಚನ್ನರಾಯಪಟ್ಟಣ ಮತ್ತು ರಾಮನಾಥಪುರಗಳಲ್ಲಿ ಮೀನುಗಾರರ ಸಹಕಾರ ಸಂಘಗಳಿವೆ. ಜಿಲ್ಲಾ ಮತ್ಸ್ಯೋದ್ಯಮಾಭಿವೃದ್ಧಿ ಇಲಾಖೆಯಿದ್ದು ಜಿಲ್ಲೆಯಲ್ಲಿ ಮತ್ಸ್ಯ ಸಂಪತ್ತಿನ ಅಭಿವೃದ್ಧಿಗೆ ಸಹಕಾರ ನೀಡುತ್ತಿದೆ.

ಜಿಲ್ಲೆ ಮುಖ್ಯವಾಗಿ ಕೃಷಿ ಆಧಾರಿತವಾದದ್ದು. ಜೊತೆಗೆ ಪ್ಲಾಂಟೇಷನ್‌ಗಳ ಪ್ರದೇಶವಾಗಿದ್ದು ಬಯಲುಸೀಮೆಗಳಲ್ಲಿನ ಕೈಗಾರಿಕಾ ಪ್ರಗತಿ ಕಂಡುಬರುವುದಿಲ್ಲ. ಜಿಲ್ಲೆ ಕುಶಲ ಕೈಗಾರಿಕೆಗಳಿಗೆ ಹಿಂದಿನಿಂದ ಪ್ರಸಿದ್ಧವಾದದ್ದು. ಇತ್ತೀಚೆಗೆ ಸಾಕಷ್ಟು ವಿದ್ಯುತ್ ಪೂರೈಕೆಯಾಗುತ್ತಿದ್ದು ಕೆಲವು ಹೊಸ ಕೈಗಾರಿಕೆಗಳು ಪ್ರಾರಂಭವಾಗಿವೆ. ಹಾಸನದ ಮೈಸೂರು ಉಪಕರಣಗಳ ಕಾರ್ಖಾನೆ 1940ರಲ್ಲೇ ಪ್ರಾರಂಭವಾದದ್ದು. ಈಗ ಇನ್ನಷ್ಟು ವಿಸ್ತಾರಗೊಂಡಿದೆ. ಈ ಕಾರ್ಖಾನೆಯಲ್ಲಿ ಮುಖ್ಯವಾಗಿ ಕೃಷಿ ಉಪಕರಣಗಳಾದ ಹಾರೆ, ಕೊಡಲಿ, ಬಾಚಿ, ಕಬ್ಬಿಣದ ನೇಗಿಲು, ಪಿಕಾಸಿ, ಗುದ್ದಲಿ ಮುಂತಾದ ಉಪಕರಣಗಳ ಜೊತೆಗೆ ಇತ್ತೀಚೆಗೆ ವಿದ್ಯುತ್ ಪ್ರೇಷಕ ಗೋಪುರಗಳು ಮತ್ತು ಆರ್.ಸಿ.ಸಿ. ಕಂಬಗಳನ್ನು ತಯಾರಿಸಲಾಗುತ್ತಿತ್ತು. 1968 ಡಿಸೆಂಬರ್‌ನಿಂದ ಉತ್ಪಾದನೆಯನ್ನು ಆರಂಭಿಸಿರುವ ಮೈಸೂರು ಕಲ್ನಾರು ಕಾರ್ಖಾನೆ (ಮೈಸೂರು ಆಸ್ಬೆಸ್ಟಾಸ್ ಪ್ರೈ.ಲಿ.) ಹೊಳೆನರಸೀಪುರಕ್ಕೆ ಸುಮಾರು 3 ಕಿಮೀ ದೂರದಲ್ಲಿರುವ ಹಳೇಕೋಟೆ ಬಳಿ ಹಾಸನ–ಹೊಳೆನರಸೀಪುರ ಮಾರ್ಗದಲ್ಲಿದೆ. ಈ ಕಾರ್ಖಾನೆಯಲ್ಲಿ ಕಲ್ನಾರು ಹೊದಿಕೆಗಳು, ಕೊಳವೆಗಳು ಇತ್ಯಾದಿ ವಸ್ತುಗಳನ್ನು ತಯಾರಿಸುತ್ತಾರೆ. ಈ ಕೈಗಾರಿಕೆಗಳಲ್ಲದೆ ಜಿಲ್ಲೆಯಲ್ಲಿ 1961ರಲ್ಲಿ ಪ್ರಾರಂಭವಾದ ಕೊಥಾರಿ ಕಾಫಿ ಸಂಸ್ಕರಣ ಕಾರ್ಖಾನೆ, 1962ರಲ್ಲಿ ಪ್ರಾರಂಭವಾದ ಹಾಸನ ಕಾಫಿ ಸಂಸ್ಕರಣ ಕಾರ್ಖಾನೆ ಮತ್ತು 1971ರಲ್ಲಿ ಪ್ರಾರಂಭವಾದ ಪ್ಲಾಂಟರ್ಸ್ ಕಾಫಿ ಸಂಸ್ಕರಣ ಕಾರ್ಖಾನೆಗಳಿವೆ. ಇತ್ತೀಚೆಗೆ ಹೊಸ ಸಂಸ್ಕರಣ ಕಾರ್ಖಾನೆಗಳು ಸೇರ್ಪಡೆಗೊಂಡಿವೆ. ಕೈಮಗ್ಗದ ಕೈಗಾರಿಕೆ, ಬತ್ತ ಮತ್ತು ಎಣ್ಣೆ ಗಿರಣಿಗಳು, ಮರದ ಸಾಮಾನುಗಳ ಕೈಗಾರಿಕೆ, ಹೆಂಚಿನ, ಬೆಂಕಿಪೆಟ್ಟಿಗೆ ಮತ್ತು ತೆಂಗುನಾರಿನ ಕಾರ್ಖಾನೆಗಳು, ಹತ್ತಿಗಿರಣಿಗಳು, ಖಾದಿ ಮತ್ತು ಗ್ರಾಮೋದ್ಯೋಗ ಮುಂತಾದವುಗಳೂ ಈ ಜಿಲ್ಲೆಯಲ್ಲಿವೆ.

ಜಿಲ್ಲೆಯಲ್ಲಿ ಕ್ರೋಮೈಟ್, ಕಲ್ನಾರು, ಬಿಳಿಜೇಡಿಮಣ್ಣು ಮತ್ತು ಕುರಂದ ಮುಂತಾದವುಗಳೂ ಕಲ್ಯಾಡಿ ಪ್ರದೇಶದಲ್ಲಿ ತಾಮ್ರವೂ ದೊರೆತಿರುವುದರಿಂದ ಗಣಿ ಉದ್ಯಮವಿದೆ. ಬೈರಾಪುರ ಮತ್ತು ಭಕ್ತಹಳ್ಳಿ ಗಣಿಗಳಲ್ಲಿ ಹೆಚ್ಚಾಗಿ ಕ್ರೋಮೈಟ್ ದೊರೆಯುತ್ತಿದೆ. ಅರಸೀಕೆರೆ ತಾಲ್ಲೂಕಿನ ಬಾಗೇಶಪುರದ ಬಳಿ ಬಿಳಿಜೇಡಿಮಣ್ಣಿನ ನಿಕ್ಷೇಪವಿದ್ದು ಇದಕ್ಕೆ ಸಂಬಂಧಪಟ್ಟ ಶುದ್ಧೀಕರಣ ಕಾರ್ಖಾನೆಗಳಿವೆ. ಬಳಪದಕಲ್ಲು, ಗಾರ್ನೆಟ್, ಕೆಯನೆಟ್ ಮತ್ತು ಅಭ್ರಕ ಇವುಗಳಿಗೆ ಸಂಬಂಧಿಸಿದಂತೆಯೂ ಗಣಿಕೈಗಾರಿಕೆಗಳಿವೆ. ಶ್ರವಣಬೆಳಗೊಳ ಹಿಂದಿನಿಂದಲೂ ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳಿಗೆ ಪ್ರಸಿದ್ಧ. ಮಲೆನಾಡು ಪ್ರದೇಶವಾದ ಈ ಜಿಲ್ಲೆಯಲ್ಲಿ ಮರಕ್ಕೆ ಸಂಬಂಧಪಟ್ಟ ವಿವಿಧ ಬಗೆಯ ಕೈಗಾರಿಕೆಗಳೂ ಮರಕೊಯ್ಯುವ ಕಾರ್ಖಾನೆಗಳೂ ಇವೆ. ಈ ಜಿಲ್ಲೆಯ ಕೈಗಾರಿಕೋದ್ಯಮ ಮುಂದೆ ಹೆಚ್ಚು ಬೆಳೆಯುವ ಸೂಚನೆಗಳಿವೆ.

ಜಿಲ್ಲೆಯ ಕೈಗಾರಿಕೆ ಕೃಷಿ ಮತ್ತು ವ್ಯಾಪಾರಾಭಿವೃದ್ಧಿಗೆ ಬೆನ್ನೆಲುಬಾಗಿ ಅನೇಕ ವಾಣಿಜ್ಯ, ಕೈಗಾರಿಕಾ ಮತ್ತು ಸಹಕಾರಿ ಬ್ಯಾಂಕುಗಳಿವೆ. ಹೊಳೆನರಸೀಪುರದಲ್ಲಿ ಕೈಮಗ್ಗದವರ ಏಳಿಗೆಗಾಗಿ 1905ರಲ್ಲಿ ಪ್ರಾರಂಭಿಸಿದ ಸಹಕಾರ ಸಂಘ ಜಿಲ್ಲೆಯಲ್ಲಿ ಮೊದಲನೆಯದು. 1927 ಫೆಬ್ರವರಿ 1 ರಂದು ಹಾಸನದಲ್ಲಿ ಪ್ರಾರಂಭವಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಈ ಜಿಲ್ಲೆಯ ಬ್ಯಾಂಕುಗಳಲ್ಲಿ ಮೊದಲನೆಯದು. 9 ವಾಣಿಜ್ಯ ಬ್ಯಾಂಕುಗಳೂ 14 ಸಹಕಾರ ಬ್ಯಾಂಕುಗಳೂ 8 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೂ ಮತ್ತು 329 ಕೃಷಿ ಸಾಲ ನೀಡಿಕೆ ಸಂಘಗಳೂ 364 ಇತರ ಸಹಕಾರ ಸಂಘಗಳೂ ಮತ್ತು 12 ನಿಯಂತ್ರಿತ ಮಾರುಕಟ್ಟೆಗಳೂ ಇದ್ದವು.

ಜಿಲ್ಲೆಯ ಸಾರಿಗೆ ಸಂಪರ್ಕವೂ ಉತ್ತಮವಾಗಿದೆ. ಸುತ್ತಲ ಜಿಲ್ಲಾ ಕೇಂದ್ರಗಳಿಗೆ, ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ. ಹಾಸನ–ಚನ್ನರಾಯಪಟ್ಟಣ–ಕುಣಿಗಲು–ಬೆಂಗಳೂರು, ಹಾಸನ–ಹೊಳೆನರಸೀಪುರ–ಕೃಷ್ಣರಾಜನಗರ–ಮೈಸೂರು, ಹಾಸನ–ಬೇಲೂರು–ಚಿಕ್ಕಮಗಳೂರು, ಹಾಸನ–ಸಕಲೇಶಪುರ–ಬಂಟವಾಳ–ಮಂಗಳೂರು ರಾಜ್ಯ ಹೆದ್ದಾರಿಗಳಿವೆ. ಇದಲ್ಲದೆ ಜಿಲ್ಲಾ ಮತ್ತು ಗ್ರಾಮದ ಮಾರ್ಗಗಳು ಉತ್ತಮ ಮಟ್ಟದ್ದಾಗಿವೆ. ಹಾಸನ–ಮಂಗಳೂರು ರೈಲುಮಾರ್ಗದ ನಿರ್ಮಾಣವನ್ನು 1965ರಲ್ಲಿ ಪ್ರಾರಂಭಿಸಲಾಗಿತ್ತು. ಆ ಕೆಲಸ 1979ರಲ್ಲಿ ಮುಗಿದು 20–5–1979ರಂದು ಪ್ರಥಮವಾಗಿ ಮಂಗಳೂರು–ಹಾಸನ ರೈಲುಸಂಚಾರ ಪ್ರಾರಂಭವಾಯಿತು. ಈ ರೈಲುಮಾರ್ಗದ ಉದ್ದ 188 ಕಿಮೀ. ಹಾಸನ–ಸಕಲೇಶಪುರ–ಸುಬ್ರಹ್ಮಣ್ಯರಸ್ತೆ, ಪುತ್ತೂರು–ಮಂಗಳೂರು ರೈಲು ಸಂಪರ್ಕ ಏರ್ಪಟ್ಟು ಈ ಜಿಲ್ಲೆಯ ಪ್ರಗತಿಗೆ ಮತ್ತು ರಾಜ್ಯದ ಪಶ್ಚಿಮ ತೀರಪ್ರದೇಶದ ಸಂಪರ್ಕಕ್ಕೆ ಅನುಕೂಲವಾಗಿದೆ. ಮೈಸೂರು–ಅರಸೀಕೆರೆ ರೈಲುಮಾರ್ಗ ಬ್ರಾಡ್‌ಗೇಜ್ ಆಗಿ ಪರಿವರ್ತಿತವಾಗಿದೆ. ಹಾಗೆಯೇ ಹಾಸನ–ಮಂಗಳೂರು ರೈಲುಮಾರ್ಗದ ವಿಸ್ತರಣಾಕಾರ್ಯ ಪ್ರಗತಿಯಲ್ಲಿದೆ. ಎಚ್.ಡಿ. ದೇವೇಗೌಡರು ಭಾರತದ ಪ್ರಧಾನ ಮಂತ್ರಿಗಳಾಗಿದ್ದ ಕಾಲದಲ್ಲಿ ಮಂಜೂರಾದ ಬೆಂಗಳೂರು–ಹಾಸನ ರೈಲುಮಾರ್ಗದ ಕೆಲಸ ತ್ವರಿತವಾಗಿ ಮುಂದುವರಿಯುತ್ತಿದೆ. ಈಗ ಒಟ್ಟು 201 ಕಿಮೀ ಉದ್ದದ ಬ್ರಾಡ್‌ಗೇಜ್ ರೈಲು ಮಾರ್ಗ ಈ ಜಿಲ್ಲೆಯಲ್ಲಿದೆ. 15 ರೈಲು ನಿಲ್ದಾಣಗಳಿವೆ. 167 ಕಿಮೀ ರಾಷ್ಟ್ರೀಯ ಹೆದ್ದಾರಿ, 480 ಕಿಮೀ ರಾಜ್ಯ ಹೆದ್ದಾರಿ, 1,668 ಜಿಲ್ಲಾ ಮುಖ್ಯ ರಸ್ತೆಗಳೂ ಇವೆ. 1999–2000ರಲ್ಲಿ ಜಿಲ್ಲೆಯಲ್ಲಿ ಒಟ್ಟು 7 ಆಸ್ಪತ್ರೆಗಳೂ 3 ಭಾರತೀಯ ವೈದ್ಯಪದ್ಧತಿಯ ಆಸ್ಪತ್ರೆಗಳೂ 45 ಔಷಧಾಲಯಗಳೂ 82 ಪ್ರಾಥಮಿಕ ಆರೋಗ್ಯ ಘಟಕಗಳೂ ಕುಟುಂಬ

ಕಲ್ಯಾಣ ಕೇಂದ್ರಗಳೂ ಇದ್ದವು. ಮಲೆನಾಡ ಪ್ರದೇಶವಾದರೂ ಹಾಸನ ಜಿಲ್ಲೆ ಶಿಕ್ಷಣದಲ್ಲಿ ಹಿಂದುಳಿದಿಲ್ಲ. 1999-2000 ಸಾಲಿನಲ್ಲಿ ಜಿಲ್ಲೆಯಲ್ಲಿ 2,795 ಪ್ರಾಥಮಿಕ ಶಾಲೆಗಳು, 372 ಪ್ರೌಢಶಾಲೆಗಳು, 78 ಪದವಿಪೂರ್ವ ಕಾಲೇಜುಗಳೂ ಸರ್ಕಾರಿ ಪದವಿ ಕಾಲೇಜುಗಳೂ ಇವೆ. ಹಾಸನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಹೇಮಗಂಗೋತ್ರಿ ಎಂಬ ಸ್ನಾತಕೋತ್ತರ ಕೇಂದ್ರವಿದೆ. 4 ಪಾಲಿಟೆಕ್ನಿಕ್ ಮತ್ತು 2 ಎಂಜಿನಿಯರಿಂಗ್ ಕಾಲೇಜೂ ಇವೆ. ಇತ್ತೀಚೆಗೆ ಹಾಸನದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭವಾಗಿದೆ. ಜಿಲ್ಲೆಯಲ್ಲಿ ಶಾಲಾಕಾಲೇಜುಗಳ ಗ್ರಂಥಾಲಯಗಳ ಜೊತೆಗೆ ಸರ್ಕಾರಿ ಸಾರ್ವಜನಿಕ ಗ್ರಂಥಾಲಯಗಳಿವೆ. ವೇದ ಮತ್ತು ಸಂಸ್ಕೃತ ಶಾಲೆಗಳಿವೆ. ಹಳೇಬೀಡಿನಲ್ಲಿ ಪುರಾತತ್ತ್ವ ವಸ್ತು ಸಂಗ್ರಹಾಲಯವಿದೆ.

ಈ ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಹಾಗೂ ಪ್ರಸಿದ್ಧ ಸ್ಥಳಗಳಿವೆ. ಜಿಲ್ಲೆಯ ವಾಸ್ತುಶಿಲ್ಪ ಪ್ರಪಂಚಪ್ರಸಿದ್ಧವಾದದ್ದು. ಬೇಲೂರು **(ನೋಡಿ)**, ಹಳೇಬೀಡು **(ನೋಡಿ)**, ಶ್ರವಣಬೆಳಗೊಳ **(ನೋಡಿ)** ಇವು ವಾಸ್ತುಶಿಲ್ಪ ದೃಷ್ಟಿಯಿಂದ ಸುಪ್ರಸಿದ್ಧ ಸ್ಥಳಗಳಾಗಿವೆ. ಇದೇ ರೀತಿ ನುಗ್ಗೇಹಳ್ಳಿ, ದೊಡ್ಡಗದ್ದವಳ್ಳಿ, ಮೊಸಳೆ, ಅರಸೀಕೆರೆ, ಜಾವಗಲ್ಲು ಈ ಸ್ಥಳಗಳಲ್ಲಿ ಹೊಯ್ಸಳ ವಾಸ್ತುಶಿಲ್ಪದ ಉತ್ತಮ ಮಾದರಿಯ ದೇವಾಲಯಗಳನ್ನು ಕಾಣಬಹುದಾಗಿದೆ. ಸಾಹಿತ್ಯ ಮತ್ತು ಸಂಸ್ಕೃತಿಗಳ ದೃಷ್ಟಿಯಿಂದ ಈ ಜಿಲ್ಲೆ ಮಹತ್ತ್ವ ಪಡೆದಿದೆ. ಇಲ್ಲಿನ ಅನೇಕ ಬಸದಿಗಳು ದೇವಾಲಯಗಳು ಜಿಲ್ಲೆಯ ಗತವೈಭವಕ್ಕೆ ಸಾಕ್ಷಿಯಾಗಿವೆ. ಕನ್ನಡದ ಮೊಟ್ಟ ಮೊದಲ ಶಾಸನವೆಂದು ಪರಿಗಣಿಸಲಾಗಿರುವ ಹಲ್ಮಿಡಿ ಶಾಸನ (ಸು. 450) ದೊರೆತದ್ದು ಈ ಜಿಲ್ಲೆಯಲ್ಲಿ. ಕನ್ನಡ ಸಾಹಿತ್ಯಕ್ಕೆ ಈ ಜಿಲ್ಲೆಯ ಕೊಡುಗೆ ಅಪಾರ. ಚಾವುಂಡರಾಯ, ಒಂದನೆಯ ನಾಗವರ್ಮ, ಒಂದನೆಯ ಗುಣವರ್ಮ, ನಾಗಚಂದ್ರ, ಕಂತಿ, ಜನ್ನ, ಕೆರೆಯ ಪದ್ಮರಸ, ರಾಜಾದಿತ್ಯ, ಜಗದ್ದಳ ಸೋಮನಾಥ, ಕುಮಾರ ಪದ್ಮರಸ, ವಿರೂಪಾಕ್ಷ ಪಂಡಿತ, ಎರಡನೆಯ ನಾಗವರ್ಮ, ರುದ್ರಭಟ್ಟ, ಆಚಣ್ಣ, ಮಲ್ಲಿಕಾರ್ಜುನ, ಕೇಶಿರಾಜ, ಆಂಡಯ್ಯ, ನಯಸೇನ, ಪದ್ಮಣಾಂಕ ಮೊದಲಾದ ಕವಿಗಳು ಈ ಜಿಲ್ಲೆಯವರು. ಆಧುನಿಕರಲ್ಲಿ ಕರಿಬಸವಶಾಸ್ತ್ರಿ, ಎಸ್.ವಿ.ರಂಗಣ್ಣ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೆ.ಕೃಷ್ಣಮೂರ್ತಿ, ಎಲ್.ಗುಂಡಪ್ಪ, ಮತಿಘಟ್ಟ ಕೃಷ್ಣಮೂರ್ತಿ, ಅ.ನ.ಕೃಷ್ಣರಾಯ, ಅ.ರಾ.ಮಿತ್ರ, ಹಾಸನ ರಾಜಾರಾವ್, ಎಸ್.ಎಲ್. ಭೈರಪ್ಪ ಮೊದಲಾದ ಸಾಹಿತಿಗಳು ಈ ಜಿಲ್ಲೆಯವರು. ಅರಸೀಕೆರೆಯ ಕೆ. ಅನಂತಸುಬ್ಬರಾಯರು 1933 ರಲ್ಲಿ ಕನ್ನಡ ಬೆರಳಚ್ಚು ಕಂಡುಹಿಡಿದವರು. ಇವರಲ್ಲದೆ ಸಂಗೀತ, ನಾಟಕ, ನೃತ್ಯ ಮುಂತಾದವುಗಳಲ್ಲೂ ಪರಿಣತರಾದ ಮತ್ತು ಪ್ರಸಿದ್ಧ ವ್ಯಕ್ತಿಗಳನ್ನೂ ಈ ಜಿಲ್ಲೆಯಲ್ಲಿ ಕಾಣಬಹುದು. (ಕೆ.ಆರ್.ಎಸ್.)

ಈ ಜಿಲ್ಲೆ ಇತಿಹಾಸ ಪರಂಪರೆಗೆ ಪ್ರಸಿದ್ಧ. ಹಳೆಯ ಶಿಲಾಯುಗ ಕಾಲದಿಂದಲೂ ಮಾನವರು ಈ ಜಿಲ್ಲೆಯಲ್ಲಿ ವಾಸಿಸುತ್ತಿದ್ದುದಕ್ಕೆ ಆಲೂರು ತಾಲ್ಲೂಕಿನ ಕರಡಿಗುಡ್ಡದಲ್ಲಿ ಕೆಲವು ಕುರುಹುಗಳಿವೆ. ಅಲ್ಲದೆ, ನವಶಿಲಾಯುಗ ಮತ್ತು ಕಬ್ಬಿಣ ಯುಗಗಳಿಗೆ ಸಂಬಂಧಿಸಿದ ಆಧಾರಗಳೂ ಈ ಜಿಲ್ಲೆಯಲ್ಲಿ ದೊರೆತಿವೆ.

ನಮಗೆ ದೊರೆತಿರುವ ಈ ಜಿಲ್ಲೆಯ ಪ್ರಾಚೀನ ಇತಿಹಾಸದ ಘಟನಾವಳಿಗಳಲ್ಲಿ ಮೊದಲಿನದೆಂದು ಭಾವಿಸಲಾದ ಭದ್ರಬಾಹು ಮತ್ತು ಮೌರ್ಯ ಚಕ್ರವರ್ತಿ ಚಂದ್ರಗುಪ್ತ ಈ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ನೆಲಸಿ ಅಲ್ಲಿಯೇ ಸಮಾಧಿಗೊಂಡರೆಂದು ತಿಳಿದುಬರುತ್ತದೆ. ಇದಕ್ಕೆ ಅನೇಕ ಸ್ಮಾರಕಗಳೂ ಶಾಸನಗಳೂ ಸಾಹಿತ್ಯ ಗ್ರಂಥಗಳೂ ಆಧಾರವಾಗಿವೆ. ಶ್ರವಣಬೆಳಗೊಳದಲ್ಲಿ ಭದ್ರಬಾಹು ಗುಹೆಯೂ ಚಂದ್ರಗುಪ್ತನ ನೆನಪಾಗಿ ಚಂದ್ರಗಿರಿ ಎಂದು ಹೆಸರಿಸಲಾದ ಬೆಟ್ಟವೂ ಹನ್ನೆರಡನೆಯ ಶತಮಾನದಲ್ಲಿ ಚಂದ್ರಗುಪ್ತನ ಹೆಸರಿನಲ್ಲಿ ಕಟ್ಟಲಾದ ಚಂದ್ರಗುಪ್ತ ಬಸದಿಯೂ ಇವೆ. ಕ್ರಿಸ್ತಶಕದ ಪ್ರಾರಂಭದ ಎರಡು ಮೂರು ಶತಮಾನಗಳಲ್ಲಿ ಈ ಜಿಲ್ಲೆಯ ಭಾಗಗಳು ಸಾತವಾಹನರಿಗೆ ಸೇರಿತ್ತೆಂಬ ಅಭಿಪ್ರಾಯವಿದೆ. 4ನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಹಾಗೂ ಕರ್ನಾಟಕದಲ್ಲಿ ಪ್ರಥಮ ಸ್ವತಂತ್ರ ರಾಜ್ಯ ಸ್ಥಾಪಿಸಿದ ಕದಂಬರು ಈ ಜಿಲ್ಲೆಯೊಡನೆ ನಿಕಟಸಂಪರ್ಕ ಹೊಂದಿದ್ದರು. ಕದಂಬ ಕಾಕುಸ್ಥವರ್ಮನ ಕನ್ನಡ ಶಿಲಾಶಾಸನ ಬೇಲೂರು ತಾಲ್ಲೂಕಿನ ಹಲ್ಮಿಡಿಯಲ್ಲಿ ದೊರೆತಿದೆ. ಈ ಹಿಂದೆ ಹೇಳಿದಂತೆ ಹಲ್ಮಿಡಿ ಶಾಸನವೆಂದು ಹೆಸರಾಗಿರುವ ಈ ಶಾಸನ ಕನ್ನಡದ ಪ್ರಥಮ ಮತ್ತು ಈ ಜಿಲ್ಲೆಯ ಅತ್ಯಂತ ಹಳೆಯ ಶಾಸನ. ಮೈಸೂರು ಜಿಲ್ಲೆಯ ತಲಕಾಡಿನಲ್ಲಿ ನೆಲೆಯೂರಿದ ಗಂಗರು ಐದನೆಯ ಶತಮಾನದ ಕೊನೆಯಲ್ಲಿ ದಕ್ಷಿಣ ಕರ್ನಾಟಕದ ಬಹುಭಾಗವನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡರು. ಹನ್ನೊಂದನೆಯ ಶತಮಾನದ ಪ್ರಾರಂಭದವರೆಗೂ ಅವಿರತವಾಗಿ ಪ್ರಬಲಶಕ್ತಿಯಾಗುಳಿದ ಇವರು ಸ್ವತಂತ್ರರಾಗಿ ಕೆಲವೊಮ್ಮೆ ಬಾದಾಮಿ ಚಳುಕ್ಯರ ಮತ್ತು ರಾಷ್ಟ್ರಕೂಟರ ಸಾಮಂತರಾಗಿ ಈ ಜಿಲ್ಲೆಯನ್ನು ಆಳಿದರು. ಶ್ರವಣಬೆಳಗೊಳದ ಗೊಮ್ಮಟೇಶ್ವರನನ್ನು ಪ್ರತಿಷ್ಠಾಪಿಸಿದ ಚಾವುಂಡರಾಯ **(ನೋಡಿ)** ನಾಲ್ಕನೆಯ ರಾಚಮಲ್ಲನ ಕಾಲದಲ್ಲಿದ್ದ (ಸು. 974-85). ಗಂಗರ ಅನಂತರ ಬಂದ ಕೊಂಗಾಳ್ವರು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ಮತ್ತು ನೆರೆಯ ಕೊಡಗಿನ ಕೆಲ ಪ್ರದೇಶಗಳಲ್ಲಿ ಆಳಿದರು. ಅವರು ಮೊದಲಿಗೆ ಚೋಳರ ತರುವಾಯ ಹೊಯ್ಸಳರ ಸಾಮಂತರಾಗಿ ಸುಮಾರು ಹನ್ನೆರಡನೆಯ ಶತಮಾನದ ಕೊನೆಯವರೆಗೂ ಆಳಿದರು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಮತ್ತು ಹುಣಸೂರು ಪ್ರದೇಶದಲ್ಲಿ ನೆಲೆಯೂರಿದ್ದ ಚೆಂಗಾಳ್ವರ ಶಾಸನಗಳು ಹಾಸನ ಜಿಲ್ಲೆಯ ವಿವಿಧ ಭಾಗಗಳಲ್ಲಿ ದೊರೆತಿವೆ. ಇವರು ಹದಿಮೂರನೆಯ ಶತಮಾನದ ಕೊನೆಯವರೆಗೂ ತಮ್ಮ ಅಸ್ತಿತ್ತ್ವವನ್ನು ಉಳಿಸಿಕೊಂಡಿದ್ದರು.

ಹೊಯ್ಸಳರು ರಾಜ್ಯ ಕಟ್ಟಿ ಆಳಿದುದು ಈ ಜಿಲ್ಲೆಯಿಂದಲೇ. ಹೊಯ್ಸಳರ ಮೂಲಪುರುಷ 'ಸಳ' ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿರುವ ಸೊಸೆವೂರು ಅಥವಾ ಶಶಕಪುರ ಎಂಬ ಸ್ಥಳದಲ್ಲಿ ಪ್ರಥಮತಃ ಹೊಯ್ಸಳ ರಾಜ್ಯ ಸ್ಥಾಪಿಸಿದನೆಂದು ಪ್ರತೀತಿ. ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ಇವರು ತಮ್ಮ ರಾಜಧಾನಿಯನ್ನು ಸೊಸೆವೂರಿನಿಂದ ಸಮೀಪದ ಬೇಲೂರಿಗೆ, ಅನಂತರ ದ್ವಾರಸಮುದ್ರಕ್ಕೆ (ಈಗಿನ ಹಳೇಬೀಡಿಗೆ) ವರ್ಗಾಯಿಸಿದರು. ಹನ್ನೊಂದನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಇವರು ಪಶ್ಚಿಮಘಟ್ಟ ಪ್ರದೇಶದ ಮಲೆಪರು ಮತ್ತಿತರರನ್ನು ಸೋಲಿಸಿ ಹಳೆ ಮೈಸೂರಿನ ಬಹುಭಾಗದಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿದರು. 1116ರಲ್ಲಿ ಹೊಯ್ಸಳ ವಿಷ್ಣುವರ್ಧನ ಚೋಳರನ್ನು ತಲಕಾಡು ಯುದ್ಧದಲ್ಲಿ ಸೋಲಿಸಿದ. ಹೊಯ್ಸಳರು ಬೇಲೂರು ದ್ವಾರಸಮುದ್ರ, ಮೊಸಳೆ, ನುಗ್ಗೇಹಳ್ಳಿ, ದೊಡ್ಡಗದ್ದವಳ್ಳಿ, ಸೋಮನಾಥಪುರ ಮತ್ತಿತರೆಡೆಗಳಲ್ಲಿ ಪ್ರಸಿದ್ಧ ದೇವಾಲಯಗಳನ್ನು ನಿರ್ಮಿಸಿದರು. ಇವರ ಪ್ರೋತ್ಸಾಹದಿಂದ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿ ಉತ್ತುಂಗ ಸಾಧನೆಗಳಾದವು **(ನೋಡಿ: ಹೊಯ್ಸಳವಂಶ)**.

ಹೊಯ್ಸಳರ ಅನಂತರ ವಿಜಯನಗರದ ಅರಸರು ಪ್ರಾಂತ್ಯಾಧಿಕಾರಿಗಳ, ಸಾಮಂತರ ಮೂಲಕ ಈ ಜಿಲ್ಲೆಯ ಪ್ರದೇಶಗಳನ್ನು ಆಳುತ್ತಿದ್ದರು. 1565ರಲ್ಲಿ ವಿಜಯನಗರ ಪತನವಾದ ಮೇಲೂ ಪೆನುಕೊಂಡೆಯಿಂದ ಆಳುತ್ತಿದ್ದ ವಿಜಯನಗರದ ಅರಸರಿಗೆ ಈ ಪ್ರದೇಶದ ರಾಜರುಗಳು, ಪಾಳೆಯಗಾರರು ನಿಷ್ಠರಾಗಿದ್ದರು. ಹದಿನೇಳನೆಯ ಶತಮಾನದಲ್ಲಿ ರಾಜ್ಯಭ್ರಷ್ಟನಾಗಿದ್ದ ವಿಜಯನಗರದ ಅರಸ ನಾಲ್ಕನೆಯ ಶ್ರೀರಂಗರಾಯ ಕೆಳದಿನಾಯಕರ ಬೆಂಬಲದಿಂದ ಕೆಲವು ಕಾಲ ಬೇಲೂರಿನಲ್ಲಿ ನೆಲೆಸಿದ್ದ. ವಿಜಯನಗರದ ಕಾಲದಲ್ಲಿ ಈ ಜಿಲ್ಲೆಯಲ್ಲಿ ಅನೇಕ ಪಾಳೆಯಪಟ್ಟಗಳು ಅಸ್ತಿತ್ವಕ್ಕೆ ಬಂದವು. ಅವರಲ್ಲಿ ಐಗೂರು, ಹೊಳೆನರಸೀಪುರದ ನಾಯಕರೂ

ನುಗ್ಗೇಹಳ್ಳಿಯ ಪಾಳೆಯಗಾರರೂ ಮುಖ್ಯರು. ಇವರಲ್ಲಿ ಐಗೂರು ಪಾಳೆಯಗಾರರ ಹೊರತು ಉಳಿದವರು ಕೆಳದಿನಾಯಕರ ಮತ್ತು ಮೈಸೂರು ಒಡೆಯರ ರಾಜ್ಯ ವಿಸ್ತರಣಾ ಪ್ರಯತ್ನಗಳಿಗೆ ಬಲಿಯಾದರು. ಐಗೂರು ಪಾಳೆಯಗಾರರು ಹೈದರ್-ಟಿಪ್ಪುಗಳ ವಿರೋಧದಲ್ಲೂ ತಮ್ಮ ಉಳಿವನ್ನು ಸಾಧಿಸಿಕೊಂಡು ಬಂದಿದ್ದು, 1799ರ ಅನಂತರ ಬ್ರಿಟಿಷರನ್ನು ಎದುರಿಸಿದರು. ಬ್ರಿಟಿಷರು 1802ರಲ್ಲಿ ಐಗೂರಿನ ಕೊನೆಯ ರಾಜನನ್ನು ಗಲ್ಲಿಗೇರಿಸಿದರು. ಕೆಳದಿ ನಾಯಕರು ಈ ಜಿಲ್ಲೆಯ ಕೆಲವು ಭಾಗಗಳನ್ನು ಆಳಿದರೂ 1694ರ ಹೊತ್ತಿಗೆ ಮೈಸೂರು ಒಡೆಯರು ಜಿಲ್ಲೆಯ ಬಹುತೇಕ ಭಾಗದ ಮೇಲೆ ತಮ್ಮ ಸ್ವಾಮ್ಯ ಸ್ಥಾಪಿಸಿದರು. 1761ರಲ್ಲಿ ಹೈದರ್ ಅಲಿ ಬಿದನೂರನ್ನು ವಶಪಡಿಸಿಕೊಂಡ ಮೇಲೆ ಐಗೂರನ್ನು ಬಿಟ್ಟು ಈ ಜಿಲ್ಲೆಯ ಸಮಗ್ರ ಪ್ರದೇಶ ಮೈಸೂರು ರಾಜ್ಯಕ್ಕೆ ಸೇರಿತು. 1799ರಲ್ಲಿ ಶ್ರೀರಂಗಪಟ್ಟಣದ ಪತನದ ಅನಂತರ ಜಿಲ್ಲೆ ಮೈಸೂರು ಸಂಸ್ಥಾನದ ಒಂದು ಭಾಗವಾಯಿತು. ಸ್ವಾತಂತ್ರ್ಯ ಹೋರಾಟದಲ್ಲೂ ಈ ಜಿಲ್ಲೆ ತನ್ನ ಕಾಣಿಕೆ ಸಲ್ಲಿಸಿದೆ. **(ಡಿ.ಎಸ್.ಜೆ.)**

**ತಾಲ್ಲೂಕು:** ಜಿಲ್ಲೆಯ ಮಧ್ಯದಲ್ಲಿರುವ ಹಾಸನ ತಾಲ್ಲೂಕನ್ನು ಉತ್ತರದಲ್ಲಿ ಬೇಲೂರು, ಅರಸೀಕೆರೆ ತಾಲ್ಲೂಕುಗಳೂ ಪೂರ್ವದಲ್ಲಿ ಚನ್ನರಾಯಪಟ್ಟಣ, ಹೊಳೆನರಸೀಪುರ ತಾಲ್ಲೂಕುಗಳೂ ದಕ್ಷಿಣದಲ್ಲಿ ಅರಕಲಗೂಡು ಮತ್ತು ಪಶ್ಚಿಮದಲ್ಲಿ ಆಲೂರು ತಾಲ್ಲೂಕುಗಳೂ ಸುತ್ತುವರಿದಿವೆ. ಕಟ್ಟಾಯ, ಶಾಂತಿಗ್ರಾಮ, ದುದ್ದ, ಹಾಸನ ಮತ್ತು ಸಾಲಗಾಮೆ ಹೋಬಳಿಗಳು. ತಾಲ್ಲೂಕಿನ ಗ್ರಾಮಗಳ ಸಂಖ್ಯೆ 400. ವಿಸ್ತೀರ್ಣ 943.8 ಚ.ಕಿಮೀ. ಜನಸಂಖ್ಯೆ 3,61,147.

ಈ ತಾಲ್ಲೂಕಿನ ವೈಶಿಷ್ಟ್ಯವೆಂದರೆ ಇದರ ಪಶ್ಚಿಮ ಭಾಗ ಉಪಮಲೆನಾಡು ಪ್ರದೇಶಕ್ಕೆ ಸೇರಿದ್ದರೆ ಉಳಿದ ಪೂರ್ವಭಾಗ ಮೈದಾನ ಪ್ರದೇಶಕ್ಕೆ ಸೇರಿದೆ. ತಾಲ್ಲೂಕಿನ ಬೆಟ್ಟಗುಡ್ಡಗಳಲ್ಲಿ ಸೀಗೆಗುಡ್ಡ (1,286 ಮೀ), ಮಾಕುಂದೂರು ಬೆಟ್ಟ (1,043 ಮೀ) ಐದಳ್ಳಿ ಕಾವಲು ಬೆಟ್ಟ (1,116 ಮೀ), ಕಟ್ಟಾಯ ಕಾರ್ಲೆಕಾವಲು ಬೆಟ್ಟ (1,054 ಮೀ) ಇವನ್ನು ಹೆಸರಿಸಬಹುದು. ಯಗಚಿ ಮತ್ತು ಹೇಮಾವತಿ ಇವು ತಾಲ್ಲೂಕಿನ ಮುಖ್ಯ ನದಿಗಳು. ಯಗಚಿ ತಾಲ್ಲೂಕಿನ ಪಶ್ಚಿಮ ಗಡಿಯಾಗಿ ಹರಿದು ದಕ್ಷಿಣದಲ್ಲಿ ತಾಲ್ಲೂಕು ಗಡಿಯಾಗಿ ಹರಿಯುವ ಹೇಮಾವತಿಯನ್ನು ಗೊರೂರು ಬಳಿ ಕೂಡಿಕೊಳ್ಳುವುದು. ಹಾಸನಕ್ಕೆ ನೈಋತ್ಯದಲ್ಲಿ 5 ಕಿಮೀ ದೂರದಲ್ಲಿ ಯಗಚಿಗೆ ಹಾಲವಾಗಲು ಬಳಿ ಕಟ್ಟೆ ಕಟ್ಟಲಾಗಿದೆ. ಈ ನದಿಯ ನೀರನ್ನೇ ಕುಡಿಯಲು ಹಾಸನ ಪಟ್ಟಣಕ್ಕೆ ಸರಬರಾಜು ಮಾಡಲಾಗುತ್ತಿದೆ. ಈಗ ಹೇಮಾವತಿ ಜಲಾಶಯದಿಂದಲೂ ಹಾಸನ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗುತ್ತಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಸಾಮಾನ್ಯ ಕಾಡು ಇದ್ದು ವಾಯುಗುಣ ಹಿತಕರವೆನ್ನಬಹುದು. ವಾರ್ಷಿಕ ಸರಾಸರಿ ಮಳೆ 893.6 ಮಿಮೀ.

ತಾಲ್ಲೂಕಿನ ವ್ಯವಸಾಯಕ್ಕೆ ಕೆರೆ, ಬಾವಿ, ನಾಲೆಗಳೂ ಉಂಟು. ಯಗಚಿ ನದಿಗೆ ಈ ತಾಲ್ಲೂಕಿನಲ್ಲಿ ಕಟ್ಟಿರುವ ಹಾಲವಾಗಲು ಕಟ್ಟೆನಾಲೆ ಮತ್ತು ಚೆಂಗರವಳ್ಳಿ ನಾಲೆಯಿಂದ ನೀರಾವರಿ ಸೌಕರ್ಯವಿದೆ. ಇತ್ತ ಬತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು, ಸೇಂಗಾ ಕಬ್ಬು, ಹತ್ತಿ, ಅಡಕೆ, ಆಲೂಗೆಡ್ಡೆ ಮುಂತಾದವನ್ನು ಬೆಳೆಯುತ್ತಾರೆ. ವಿವಿಧ ತರಕಾರಿಗಳನ್ನೂ ಫಲಪುಷ್ಪಗಳನ್ನೂ ಬೆಳೆಯುತ್ತಾರೆ. ಹಾಸನದಲ್ಲಿ ತೋಟಗಾರಿಕೆ ಇಲಾಖೆಯಿದ್ದು ತೋಟದ ಬೆಳೆಗಳನ್ನು ಪ್ರೋತ್ಸಾಹಿಸುತ್ತಿದೆ. ತಾಲ್ಲೂಕಿನಲ್ಲಿ ವ್ಯವಸಾಯ, ಪಶುಪಾಲನೆ ಜೊತೆಯಾಗಿದೆಯೆನ್ನಬಹುದು. ಪಶುಪಾಲನೆಯ ಅಭಿವೃದ್ಧಿಗೆ ಸಾಕಷ್ಟು ಪ್ರೋತ್ಸಾಹವಿದ್ದು ತಾಲ್ಲೂಕಿನಲ್ಲಿ ಪಶು ವೈದ್ಯಾಲಯಗಳಿವೆ. ಕೈಗಾರಿಕೆಯಲ್ಲಿ ಈ ತಾಲ್ಲೂಕು ಜಿಲ್ಲೆಯಲ್ಲಿ ಮುಂದಾಗಿದೆ. ಇಲ್ಲಿ ಅನೇಕ ಕಾಫಿ ಸಂಸ್ಕರಣ ಕಾರ್ಖಾನೆಗಳು, ಹೆಂಚು ತಯಾರಿಕೆ, ಬೆಂಕಿಕಡ್ಡಿ ತಯಾರಿಕೆ, ತೆಂಗಿನ ನಾರಿನ ವಸ್ತುಗಳ ತಯಾರಿಕೆಗಳುಂಟು. ಅನೇಕ ಅಕ್ಕಿಗಿರಣಿಗಳಿವೆ. ಸೋಪು ತಯಾರಿಸುವುದೇ ಮುಂತಾದ ಕಾರ್ಖಾನೆಗಳಿವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿದ್ದು ತಾಲ್ಲೂಕಿನ ವ್ಯಾಪಾರ, ಕೈಗಾರಿಕೆಗಳಿಗೆ ಆರ್ಥಿಕ ಬೆಂಬಲವಿದೆ. ಶಾಲಾ ಕಾಲೇಜುಗಳೂ ಆಸ್ಪತ್ರೆ ಔಷಧಾಲಯಗಳೂ ಇವೆ. ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುತ್ ಮುಂತಾದ ಸೌಲಭ್ಯಗಳಿವೆ. ಈ ತಾಲ್ಲೂಕು ಮುಖಾಂತರ ಮೈಸೂರು-ಅರಸೀಕೆರೆ, ಮೈಸೂರು-ಮಂಗಳೂರು ರೈಲುಮಾರ್ಗ ಹಾದುಹೋಗಿದೆ. ರಾಜ್ಯ ಹೆದ್ದಾರಿ ಮತ್ತು ಇತರ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಉತ್ತಮ ಮಾರ್ಗ ಸಂಪರ್ಕಗಳಿವೆ. ಹಾಸನ-ಮಂಗಳೂರು ರೈಲು ಮಾರ್ಗದಿಂದಾಗಿ ಈ ತಾಲ್ಲೂಕಿನ ವ್ಯಾಪಾರ-ವಾಣಿಜ್ಯ ಮುಂತಾದವು ಮತ್ತಷ್ಟು ಅಭಿವೃದ್ಧಿಯಾಗುವ ನಿರೀಕ್ಷೆ ಇದೆ.

ಎಮ್ ಸಿ ಎಫ್ ಕೇಂದ್ರ, ಹಾಸನ

ತಾಲ್ಲೂಕಿನ ಅನೇಕ ಐತಿಹಾಸಿಕ ಮತ್ತು ಪ್ರಾಚೀನ ಸ್ಥಳಗಳಲ್ಲಿ ಹಾಸನಕ್ಕೆ ವಾಯವ್ಯದಲ್ಲಿ 18 ಕಿಮೀ ದೂರದಲ್ಲಿರುವ ದೊಡ್ಡಗದ್ದವಳ್ಳಿ **(ನೋಡಿ)** ಒಂದು. ಇಲ್ಲಿ ಪ್ರಸಿದ್ಧ ಲಕ್ಷ್ಮೀದೇವಿ ದೇವಾಲಯವಿದೆ. ಹಾಸನದ ಈಶಾನ್ಯಕ್ಕೆ 22 ಕಿಮೀ ದೂರದಲ್ಲಿರುವ ಮೂಡಿಗೆರೆಯಲ್ಲಿ ಈಶ್ವರ ದೇವಾಲಯವಿದೆ. ಇದನ್ನು 1155ರಲ್ಲಿ ಯರೆಯಮ ಹೆಗ್ಗಡೆ ಕಟ್ಟಿದುದೆಂದು ಇಲ್ಲಿನ ಒಂದು ಶಾಸನದಿಂದ ತಿಳಿದುಬರುತ್ತದೆ. ಇಲ್ಲೊಂದು ಆಂಜನೇಯ ದೇವಾಲಯವೂ ಇದೆ. ಹಾಸನದ ಈಶಾನ್ಯಕ್ಕೆ 24 ಕಿಮೀ ದೂರದಲ್ಲಿರುವ ಹೆರಗು ಗ್ರಾಮದಲ್ಲಿ ಪ್ರಸಿದ್ಧ ಕೀರ್ತಿನಾರಾಯಣ ದೇವಾಲಯವಿದೆ. ವಿಗ್ರಹ ಏಳೂವರೆ ಅಡಿ ಎತ್ತರವಿದ್ದು ಅದರ ಎಡಬಲದಲ್ಲಿ ಶ್ರೀದೇವಿ ಮತ್ತು ಭೂದೇವಿ ವಿಗ್ರಹಗಳಿವೆ. ಪ್ರಭಾವಳಿಯ ಮೇಲೆ ದಶಾವತಾರವನ್ನು ಬಿಡಿಸಿದೆ. ದೇವಾಲಯದಲ್ಲಿರುವ ಶಾಸನದ ಪ್ರಕಾರ ಇದನ್ನು 1217ರಲ್ಲಿ ಕಟ್ಟಿದ್ದೆಂದು ತಿಳಿದುಬರುವುದು. ಇದೇ ಊರಿನಲ್ಲಿ ಕಾಮತೇಶ್ವರವೆಂದು ಕರೆಯುವ ಈಶ್ವರ ದೇವಾಲಯ, ಒಂದು ಜೈನ ಬಸದಿ ಇವೆ. ಈ ಬಸದಿಯನ್ನು 1155ರಲ್ಲಿ ಕಟ್ಟಿದ್ದೆಂದು ತಿಳಿದುಬರುತ್ತದೆ. ಹಾಸನಕ್ಕೆ ಪೂರ್ವದಲ್ಲಿ 13 ಕಿಮೀ ದೂರದಲ್ಲಿರುವ ಶಾಂತಿಗ್ರಾಮ, ಹೋಬಳಿ ಕೇಂದ್ರ. ಹಾಸನ-ಚನ್ನರಾಯಪಟ್ಟಣ ರಾಜ್ಯ ಹೆದ್ದಾರಿಯಲ್ಲಿರುವ ಈ ಗ್ರಾಮದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ರಾಣಿ ಶಾಂತಲೆ ಈ ಗ್ರಾಮವನ್ನು ಸ್ಥಾಪಿಸಿದ್ದೆಂದು ತಿಳಿಸುವ ಶಾಸನವಿದೆ. ಇಲ್ಲಿ ಕೇಶವ, ಯೋಗಾನರಸಿಂಹ, ಧರ್ಮೇಶ್ವರ ಮತ್ತು ವೀರಭದ್ರ ದೇವಾಲಯಗಳಿವೆ. ಶಾಂತಿನಾಥ ಬಸದಿಯಿದೆ. ಇಲ್ಲಿನ ಒಂದು ಶಾಸನದ ಪ್ರಕಾರ ವಿಷ್ಣುವರ್ಧನ ಈ ಗ್ರಾಮವನ್ನು ಶಾಂತಲೆಗೆ 1123 ರಲ್ಲಿ ಕೊಟ್ಟದ್ದೆಂದು ತಿಳಿದುಬರುತ್ತದೆ. ಹಾಸನಕ್ಕೆ 19 ಕಿಮೀ ದೂರದಲ್ಲಿರುವ ಮರ್ಕುಳಿಯಲ್ಲಿ **(ನೋಡಿ)** ರಂಗನಾಥ ಸ್ವಾಮಿ ದೇವಾಲಯ ಮತ್ತು ಒಂದು ಜೈನ ಬಸದಿಯಿದೆ. ಹಾಸನದಿಂದ 13 ಕಿಮೀ ದೂರದಲ್ಲಿರುವ ಮೊಸಳೆ **(ನೋಡಿ)** ಗ್ರಾಮದಲ್ಲಿ ಈಶ್ವರ ಮತ್ತು

ಚನ್ನಕೇಶವ ದೇವಾಲಯಗಳಿವೆ. ಹಾಸನ-ಹೊಳೆನರಸೀಪುರ ಮಾರ್ಗದಲ್ಲಿ ಹಾಸನದಿಂದ 11 ಕಿಮೀ ದೂರದಲ್ಲಿರುವ ಬಸ್ತಿಹಳ್ಳಿಯಲ್ಲಿ ಪಾರ್ಶ್ವನಾಥ ಮತ್ತು ಆದಿನಾಥ ಬಸದಿಗಳಿವೆ. ಹಾಸನದ ಈಶಾನ್ಯಕ್ಕೆ 14 ಕಿಮೀ ದೂರಲ್ಲಿರುವ ಜಕ್ಕನಹಳ್ಳಿಯಲ್ಲಿ ಹೊಯ್ಸಳ ದೊರೆ ಒಂದನೆಯ ನರಸಿಂಹನ ಮಂತ್ರಿಯಾಗಿದ್ದ ಹೆಗ್ಗಡೆ ಕಾಲಿಮಯ್ಯ 1170ರಲ್ಲಿ ಕಟ್ಟಿಸಿದ್ದೆಂದು ಹೇಳುವ ಈಶ್ವರ ದೇವಾಲಯವಿದೆ. ಗರ್ಭಗೃಹ, ಸುಕನಾಸಿ ಮತ್ತು ಮುಖಮಂಟಪ ವಿರುವ ಈ ದೇವಾಲಯ ಜೀರ್ಣಾವಸ್ಥೆಯಲ್ಲಿದೆ. ಹಾಸನದ ದಕ್ಷಿಣಕ್ಕೆ ಹೇಮಾವತಿ ನದಿಯ ದಡದ ಮೇಲಿರುವ ಗೊರೂರು **(ನೋಡಿ)** ಗ್ರಾಮದಲ್ಲಿ ಪ್ರಸಿದ್ಧ ಯೋಗಾನರಸಿಂಹ ದೇವಾಲಯವಿದೆ. ಇವಲ್ಲದೆ ಸಾಲಗಾಮೆ, ದುದ್ದ, ಕಟ್ಟಾಯ ಇವು ಹೋಬಳಿ ಕೇಂದ್ರಗಳಾಗಿದ್ದು ಸುತ್ತಲ ಗ್ರಾಮಗಳ ವ್ಯಾಪಾರ ಕೇಂದ್ರಗಳಾಗಿವೆ.

**ಪಟ್ಟಣ:** ಹಾಸನ ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಬೆಂಗಳೂರಿನ ಪಶ್ಚಿಮಕ್ಕೆ 186 ಕಿಮೀ ದೂರದಲ್ಲೂ ಮೈಸೂರಿನ ವಾಯವ್ಯಕ್ಕೆ 121 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 1,33,262.

ಜಿಲ್ಲಾ ಪಂಚಾಯಿತಿ ಕಛೇರಿ, ಹಾಸನ

ಶೀಘ್ರವಾಗಿ ಬೆಳೆಯುತ್ತಿರುವ ಮಲೆನಾಡಿನ ಪಟ್ಟಣಗಳಲ್ಲಿ ಹಾಸನ ಒಂದು. ಸಮೀಪದ ಯಗಚಿ ನದಿಯಿಂದ ಹಾಗೂ ಗೊರೂರಿನ ಹೇಮಾವತಿ ಜಲಾಶಯದಿಂದ ಪಟ್ಟಣಕ್ಕೆ ನೀರೊದಗಿಸಲಾಗುತ್ತಿದೆ. ಪಟ್ಟಣ ಹಿತಕರ ಹವೆಯನ್ನು ಹೊಂದಿರುವುದರಿಂದ ಇದನ್ನು ಬಡವರ ಊಟಿ ಎಂದು ಕರೆಯುತ್ತಾರೆ. ಮಲೆನಾಡಿನ ಪಟ್ಟಣಗಳಲ್ಲಿ ಶಿವಮೊಗ್ಗವನ್ನು ಬಿಟ್ಟರೆ ಹಾಸನವೇ ದೊಡ್ಡ ಆಡಳಿತ ಮತ್ತು ಶಿಕ್ಷಣ ಕೇಂದ್ರ. ಇಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಮಲೆನಾಡು ಎಂಜಿನಿಯರಿಂಗ್ ಕಾಲೇಜು, ಎ.ವಿ. ಕಾಂತಮ್ಮ ಮಹಿಳೆಯರ ಕಾಲೇಜು, ವಿವಿಧೋದ್ದೇಶ ತಾಂತ್ರಿಕ ಶಾಲೆ, ಕಾನೂನು ಕಾಲೇಜು, ವೈದ್ಯಕೀಯ ಕಾಲೇಜು, ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಪ್ರೌಢಶಾಲೆಗಳು, ಸಾರ್ವಜನಿಕ ಗ್ರಂಥಾಲಯ ಮುಂತಾದವುಗಳಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ.

ಈ ಪಟ್ಟಣ ಮಲೆನಾಡು ಪ್ರದೇಶದ ಒಂದು ಕೈಗಾರಿಕಾ ಕೇಂದ್ರವೂ ಆಗಿದೆ ಎನ್ನಬಹುದು. ಭಾರಿ ಹಾಗೂ ಮಧ್ಯಮ ದರ್ಜೆಯ ಕೆಲವು ಕೈಗಾರಿಕಾ ಘಟಕಗಳೂ ಮತ್ತು ಅನೇಕ ಸಣ್ಣ ಪ್ರಮಾಣದ ಕೈಗಾರಿಕೆಗಳು ಪಟ್ಟಣದ ಒಳ ಹಾಗೂ ಹೊರವಲಯಗಳಲ್ಲಿವೆ. ಭಾರತೀ ಕಾಫಿ ಕ್ಯೂರಿಂಗ್ ವರ್ಕ್ಸ್, ಹಾಸನ ಕಾಫಿ ಕ್ಯೂರಿಂಗ್ ವರ್ಕ್ಸ್, ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್, ಅಲ್ಲಾನ ಕಾಫಿಕ್ಯೂರಿಂಗ್ ವರ್ಕ್ಸ್, ಬೆಸ್ಟ್‌ಕಾಫಿಕ್ಯೂರಿಂಗ್ ವರ್ಕ್ಸ್ ಮುಂತಾದ ಕಾಫಿ ಸಂಸ್ಕರಣ ಕೇಂದ್ರಗಳು ಇಲ್ಲಿವೆ. ಅಲ್ಲದೆ, ಹೆಂಚಿನ ಕಾರ್ಖಾನೆ, ಮರ ಕೊಯ್ಯುವ ಕಾರ್ಖಾನೆಗಳು, ಎಂಜಿನಿಯರಿಂಗ್ ಮತ್ತು ಆಟೋವರ್ಕ್ಸ್, ಲೋಹ ಕೈಗಾರಿಕೆಗಳು, ಎಣ್ಣೆ ಮತ್ತು ಅಕ್ಕಿ ಗಿರಣಿಗಳು, ಬೆಂಕಿಪೆಟ್ಟಿಗೆ ತಯಾರಿಕಾ ಕಾರ್ಖಾನೆಗಳು, ಮುದ್ರಣಾಲಯಗಳು ಮತ್ತು ಸಾಬೂನು ತಯಾರಿಕಾ ಕಾರ್ಖಾನೆಗಳು ಇಲ್ಲಿವೆ. ಇಲ್ಲಿನ ವ್ಯಾಪಾರ ವಾಣಿಜ್ಯ ಕೈಗಾರಿಕೆಗಳಿಗೆ ಮತ್ತು ಕೃಷಿ ಉತ್ಪಾದನೆಗಳಿಗೆ ಈ ಸ್ಥಳ ಮಲೆನಾಡು ಪ್ರದೇಶದ ದೊಡ್ಡ ಮಾರುಕಟ್ಟೆಯಾಗಿದ್ದು ಸಗಟು ವ್ಯಾಪಾರದ ಕೇಂದ್ರವಾಗಿದೆ. ಪ್ರತಿ ಮಂಗಳವಾರ ದೊಡ್ಡ ಸಂತೆ ಸೇರುತ್ತದೆ. ಆಲೂಗಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ಮೆಣಸಿನಕಾಯಿ, ಬೆಲ್ಲ, ತೆಂಗಿನಕಾಯಿ, ಅಕ್ಕಿ, ರಾಗಿ, ಎಣ್ಣೆ ಬೀಜಗಳು ಮತ್ತು ಹುಣಿಸೆ ಹಣ್ಣು ಮುಂತಾದವುಗಳ ಸಗಟು ವ್ಯಾಪಾರ ಹೆಚ್ಚು ನಡೆಯುವುದು. ಅಲ್ಲದೆ ಪ್ರತಿವರ್ಷ ಈ ಪಟ್ಟಣದಲ್ಲಿ ನಡೆಯುತ್ತಿದ್ದ ದನಗಳ ಜಾತ್ರೆ ಮತ್ತು ವಸ್ತುಪ್ರದರ್ಶನ ಹೆಸರಾದುದು. ಪಟ್ಟಣದಲ್ಲಿ ಅಂಚೆ, ತಂತಿ, ದೂರವಾಣಿ, ವಿದ್ಯುತ್ತು ಸೌಲಭ್ಯಗಳಿವೆ. ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಔಷಧಾಲಯಗಳೂ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕ್ ಮತ್ತು ಸಹಕಾರ ಸಂಘಸಂಸ್ಥೆಗಳೂ ಇವೆ. ಈ ಪಟ್ಟಣ ಮೈಸೂರು-ಅರಸೀಕೆರೆ ರೈಲುಮಾರ್ಗದ ಒಂದು ಮುಖ್ಯ ನಿಲ್ದಾಣ. ಇಲ್ಲಿಂದ ಸುತ್ತಲ ಪಟ್ಟಣಗಳಿಗೆ ಉತ್ತಮ ರಸ್ತೆಸೌಲಭ್ಯಗಳಿವೆ. ಪಟ್ಟಣ ಪುರಸಭಾ ಆಡಳಿತಕ್ಕೆ ಸೇರಿದೆ.

ಇಲ್ಲಿನ ಸ್ಥಳಪುರಾಣದ ಪ್ರಕಾರ ಹಾಸನವೆಂಬ ಹೆಸರು ಸಿಂಹಾಸನಪುರ ವೆಂಬ ಹೆಸರಿನಿಂದ ಬಂದಿದೆ ಎಂದು ಪ್ರತೀತಿ. ಈ ಸಿಂಹಾಸನಪುರ ಅರ್ಜುನನ ಮೊಮ್ಮಗ ಜನಮೇಜಯನ ಸ್ಥಳವೆಂದು ಪ್ರತೀತಿ. ಇಲ್ಲಿನ ಹಾಸನಾಂಬ ದೇವಾಲಯದಿಂದ ಪಟ್ಟಣಕ್ಕೆ ಹಾಸನವೆಂಬ ಹೆಸರು ಬಂತೆಂದೂ ಹಿಂದೆ ಸಪ್ತಮಾತೆಯರು ವಾರಾಣಸಿಯಿಂದ ದಕ್ಷಿಣ ಭಾರತಕ್ಕೆ ಬರುತ್ತಿರು ವಾಗ ಈ ಪ್ರದೇಶದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ನೆಲೆಸಲು ನಿರ್ಧರಿಸಿ, ಅವರಲ್ಲಿ ಆರುಮಂದಿ ಹಾಸನದಲ್ಲೂ ಮತ್ತೊಬ್ಬಳು ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಎಂಬ ಸ್ಥಳದಲ್ಲಿ ಕೆಂಚಾಂಬ ಎಂಬ ಹೆಸರಿನಿಂದಲೂ ನೆಲೆಗೊಂಡರೆಂದು ಜನಜನಿತ ಕಥೆ.

ಐತಿಹಾಸಿಕವಾಗಿ ಸುಮಾರು 11ನೆಯ ಶತಮಾನದಲ್ಲಿ ಚೋಳರಸರ ಅಧಿಪತಿಯಾದ ಬುಕ್ಕಾನಾಯಕ ತನ್ನ ವಿಜಯೋತ್ಸಾಹದ ನೆನಪಾಗಿ ಒಂದು ಕೋಟೆ ಮತ್ತು ಮಾರುಕಟ್ಟೆಯನ್ನು ಕಟ್ಟಿ, ಆ ಸ್ಥಳಕ್ಕೆ ಚನ್ನ-ಪಟ್ಣ (ಚೆಲುವಾದ ಪಟ್ಟಣ) ಎಂಬ ಹೆಸರಿಟ್ಟನೆಂದು ತಿಳಿದುಬರುತ್ತದೆ. ಆತ ಮತ್ತು ಆತನ ವಂಶಸ್ಥರು ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಇಲ್ಲಿ ಆಳಿದ ಅನಂತರ ಅದು ಸಂಜೀವ ಕೃಷ್ಣಪ್ಪನಾಯಕನೆಂಬು ವನಿಗೆ ಸೇರಿತೆಂದು ತಿಳಿದುಬರುವುದು. ಈ ನಾಯಕ ಒಮ್ಮೆ ಪ್ರಯಾಣ ಹೊರಟಾಗ ಒಂದು ಮೊಲ ಅಡ್ಡಬಂದು ಪಟ್ಟಣದ ಹೆಬ್ಬಾಗಿಲಿನೊಳಗೆ ಪ್ರವೇಶಿಸಿತೆಂದೂ ಈ ಅಪಶಕುನದಿಂದ ವ್ಯಾಕುಲಚಿತ್ತನಾದ ನಾಯಕನಿಗೆ ಹಾಸನಾಂಬ ಪ್ರತ್ಯಕ್ಷಳಾಗಿ ಆ ಸ್ಥಳದಲ್ಲಿ ಒಂದು ಕೋಟೆಯನ್ನು ಕಟ್ಟುವಂತೆ ಹೇಳಿ ಆಶೀರ್ವದಿಸಿದಳೆಂದೂ ಅದೇ ಪ್ರಕಾರ ಕೋಟೆಯನ್ನು ಕಟ್ಟಿ ಅದಕ್ಕೆ ಹಾಸನವೆಂಬ ಹೆಸರಿಟ್ಟನೆಂದೂ ಪ್ರತೀತಿ. ಇದರಿಂದ ಹಾಸನ ಸುಮಾರು 12ನೆಯ ಶತಮಾನದ ಅಂತ್ಯದಲ್ಲಿ ಸ್ಥಾಪಿತವಾಯಿತೆಂದು ಹೇಳಬಹುದು. ಹಾಸನ ಎಂಬ ಹೆಸರಿನ ಉಲ್ಲೇಖ ಹಾಸನ ತಾಲ್ಲೂಕಿನ ಕುದರಗುಂಡಿ ಎಂಬ ಗ್ರಾಮದಲ್ಲಿರುವ ಸು. 1140ರ ಒಂದು ಶಿಲಾಶಾಸನದಲ್ಲಿ ಕಂಡುಬರುತ್ತದೆ. ಮುಂದೆ ಹಾಸನ 1690ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರ್ ಅವರ ಕೈವಶವಾಯಿತು. ಹಾಸನಾಂಬ ದೇವಾಲಯ ಪಾಳೆಯಗಾರರ ಕಾಲದಲ್ಲಿ ನಿರ್ಮಿತವಾದದ್ದೆನ್ನಲಾಗಿದೆ. ಪ್ರತಿ ವರ್ಷ ಆಶ್ವೀಜಮಾಸದ ಶುಕ್ಲಪಕ್ಷದಲ್ಲಿ ಒಂದು ವಾರ ಕಾಲ ಈ ದೇವಾಲಯ ತೆರೆದಿರುತ್ತದೆ. ಈ ಕಾಲದಲ್ಲಿ ರಥೋತ್ಸವ ನಡೆಯುತ್ತದೆ. ಪಟ್ಟಣದ ಮಧ್ಯಭಾಗದಲ್ಲಿರುವ ದೇವಿಗೆರೆಯ ದಡದ ಮೇಲೆ ಕೊಳಲು ಗೋಪಾಲಕೃಷ್ಣ ಮತ್ತು ಗಂಗಾಧರೇಶ್ವರ ಮಂದಿರಗಳಿವೆ. ಅಲ್ಲದೆ ಹೊಯ್ಸಳ ದೊರೆ ಒಂದನೆಯ ನರಸಿಂಹನ ಕಾಲದಲ್ಲಿ ಪ್ರಧಾನ ಹೆಗ್ಗಡೆ ಲಕುಮಯ ಎಂಬುವನಿಂದ ಕಟ್ಟಲ್ಪಟ್ಟ ಚನ್ನಕೇಶವ ದೇವಾಲಯವಿದೆ.

ಹೊಯ್ಸಳರ ಕಾಲದ ವಿರೂಪಾಕ್ಷೇಶ್ವರ ದೇವಾಲಯವನ್ನು (ಈಶ್ವರ) ವಿದ್ಯಾರಣ್ಯರು ಜೀರ್ಣೋದ್ಧಾರ ಮಾಡಿದರೆಂದು ಪ್ರತೀತಿ. ಒಂದು ಶತಮಾನದ ಹಿಂದೆ ವೆಂಕಟಕೃಷ್ಣಪ್ಪ ಎಂಬುವರು ಕಟ್ಟಿಸಿದ ಮಲ್ಲೇಶ್ವರ ದೇವಾಲಯವಿದೆ. ಇಲ್ಲಿ ಸು. 900 ವರ್ಷಗಳಷ್ಟು ಹಳೆಯದಾದ ಒಂದು ಜೈನ ಬಸದಿಯೂ ಇದೆ.

(ವಿ.ಜಿ.ಕೆ.;ಕೆ.ಆರ್.ಎಸ್.)

**ಹಿಂದುಸ್ಥಾನೀ ಸಂಗೀತ:** ಭಾರತೀಯ ಸಂಗೀತದ ಒಂದು ಪ್ರಮುಖ ಪದ್ಧತಿ. ಕರ್ನಾಟಕ ಸಂಗೀತ ಹಾಗೂ ಹಿಂದುಸ್ಥಾನೀ ಸಂಗೀತಗಳು ಭಾರತೀಯ ಸಂಗೀತದ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಎರಡು ಪದ್ಧತಿಗಳಿಗೆ ದಕ್ಷಿಣಾದಿ ಮತ್ತು ಉತ್ತರಾದಿ ಎಂಬ ಹೆಸರುಗಳೂ ಇವೆ. ಆರು ನೂರು ವರ್ಷಗಳ ಹಿಂದೆ ಭಾರತೀಯ ಸಂಗೀತದಲ್ಲಿ ಹಿಂದುಸ್ಥಾನೀ, ಕರ್ನಾಟಕಗಳೆಂಬ ಭೇದಗಳಿರಲಿಲ್ಲ. ಸು. ಮೂರು ಕ್ರಿ.ಶ.1300ರಿಂದೀಚೆಗೆ ದೇಶದ ಕಾಲಪರಿಸ್ಥಿತಿಗನುಗುಣವಾಗಿ ಪ್ರಾಯಶಃ ಹರಿಪಾಲರ ಕಾಲದಲ್ಲಿ (14ನೆಯ ಶತಮಾನ) ಈ ರೀತಿ ಭಾರತೀಯ ಸಂಗೀತ ಎರಡು ಕವಲುಗಳನ್ನು ಪಡೆಯಬೇಕಾಯಿತು. ಕರ್ನಾಟಕದಲ್ಲಿ ಹಿಂದುಸ್ಥಾನೀ ಸಂಗೀತದ ಪ್ರವೇಶವನ್ನು ಸು.200 ವರ್ಷಗಳ ಹಿಂದಿನಿಂದ ಗುರುತಿಸುವ ಪ್ರಯತ್ನವನ್ನು ವಿದ್ವಾಂಸರು ಮಾಡಿದ್ದಾರೆ. ಬ್ರಿಟಿಷರ ಕಾಲದಿಂದಲೇ ಇದರ ಪ್ರಚಾರ ವಿಶಿಷ್ಟ ರೂಪ ತಾಳಿತು. ಬ್ರಿಟಿಷರ ಕಾಲದಲ್ಲಿ ಕರ್ನಾಟಕವನ್ನು ಉತ್ತರ-ದಕ್ಷಿಣಗಳೆಂದು ವಿಭಜಿಸಲಾಯಿತು. ಇಂದಿನ ಹಳೆಯ ಮೈಸೂರು ರಾಜ್ಯ ದಕ್ಷಿಣ ಕರ್ನಾಟಕವೆನಿಸಿತು. ಬ್ರಿಟಿಷರ ಆಡಳಿತದಲ್ಲಿದ್ದ ಮುಂಬೈ ವಿಭಾಗಕ್ಕೆ ಉತ್ತರ ಕರ್ನಾಟಕದ ಭಾಗವನ್ನು ಜೋಡಿಸಲಾಗಿತ್ತು. ಹಿಂದುಸ್ಥಾನೀ ಸಂಗೀತವನ್ನು ಪೋಷಿಸಿ ಬೆಳೆಸುವಲ್ಲಿ ಮೈಸೂರು ಆಸ್ಥಾನದ ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಜಯಚಾಮರಾಜ ಒಡೆಯರು ಇವರುಗಳ ಪಾತ್ರ ಹಿರಿದು. ಇವರು ಸ್ವತಃ ಸಂಗೀತಜ್ಞರೂ ಕಲಾಪೋಷಕರೂ ಆಗಿದ್ದುದರಿಂದ ಕರ್ನಾಟಕ ಸಂಗೀತ ವಿದ್ವಾಂಸರನ್ನು ಆದರಿಸುವಂತೆಯೇ ಉತ್ತರ ಭಾರತದ ಹೆಸರುವಾಸಿ ಹಿಂದುಸ್ಥಾನೀ ಸಂಗೀತ ವಿದ್ವಾಂಸರನ್ನು ಆಮಂತ್ರಿಸಿ ಸ್ವತಃ ಆಶ್ರಯ ನೀಡಿದ್ದರು. ಇಂತಹವರಲ್ಲಿ ಆಗ್ರಾ ಘರಾನಾ ಪರಂಪರೆಯ ನಥ್ಥನ್ ಖಾನ್, ಮೌಲಾಭಕ್ಷ್, ವಿಲಾಯತ್ ಹುಸೇನ್ ಖಾನ್, ಕೇಶವ ಬುವಾ ಇಂಗಳೆ ಮೊದಲಾದವರು ಮುಖ್ಯರು.

13ನೆಯ ಶತಮಾನದ ವೇಳೆಗೆ ಪರಕೀಯರ ದಾಳಿಯ ಪರಿಣಾಮವಾಗಿ ಮೊಗಲರು ತುರ್ಕಿ, ಆಫ್ಘಾನಿಸ್ಥಾನ ಮೊದಲಾದ ಕಡೆಗಳಿಂದ ಸಂಗೀತ ವಿದ್ವಾಂಸರನ್ನು ಬರಮಾಡಿಕೊಂಡದ್ದರ ಪರಿಣಾಮದಿಂದ ಮೊದಲಿದ್ದ ಹಿಂದುಸ್ಥಾನೀ ಸಂಗೀತವು ಅನೇಕ ಮಾರ್ಪಾಡುಗಳಿಗೆ ಒಳಗಾಗಿ ತನ್ನದೇ ಶೈಲಿಯೊಂದನ್ನು ರೂಪಿಸಿಕೊಂಡಿತು. ವಿದೇಶೀ ಶೈಲಿಗಳ, ಅದರಲ್ಲೂ ಪಾರ್ಸಿ ಹಾಗೂ ಅರಬ್ಬಿ ಸಂಗೀತಗಳ ಮಿಶ್ರಣವಾಗಿ ತನ್ನ ಮೂಲ ಶಾಸ್ತ್ರೀಯ ಪದ್ಧತಿಯಿಂದ ಸಾಕಷ್ಟು ದೂರ ಸರಿಯಿತು.

ಸಪ್ತಸ್ವರಗಳು, ಸ್ವರ ಸಂಕೇತಗಳು, ಮೂರು ಸ್ಥಾಯಿಗಳು, ಮನೋಧರ್ಮ, ವಾದ್ಯ ವರ್ಗೀಕರಣ, ಶ್ರುತಿ-ಇತ್ಯಾದಿ ವಿಚಾರಗಳು ಎರಡು ಸಂಗೀತ ಪದ್ಧತಿಗಳಿಗೂ ಒಂದೇ ಆಗಿದೆ. ಆದರೆ ರಾಗ ರಾಗಿಣಿ, ಥಾಟ್ ವಿಭಾಗ, ಶ್ರುತಿ ಪ್ರಾಧಾನ್ಯ, ತಾಳದ ಕ್ರಿಯೆಯನ್ನು ತಬಲದ ಬೋಲ್ ಮೂಲಕ ನಿರ್ವಹಿಸುವುದು, ಶುದ್ಧಸ್ವರಕ್ಕೆ ಹೆಚ್ಚು ಪ್ರಾಧಾನ್ಯ ನೀಡುವುದು-ಇವುಗಳೆಲ್ಲವೂ ಹಿಂದುಸ್ಥಾನೀ ಸಂಗೀತದ ಕೆಲವು ಪ್ರಮುಖ ವೈಶಿಷ್ಟ್ಯಗಳು.

ಉತ್ತರ ಕರ್ನಾಟಕದ ಗಡಿಪ್ರದೇಶಗಳಲ್ಲಿದ್ದ ಮೀರಜ್, ಸಾಂಗ್ಲಿ, ಕೊಲ್ಲಾಪುರ, ಹೈದರಾಬಾದ್ ಮೊದಲಾದ ನಗರಗಳು ಪ್ರಸಿದ್ಧ ಹಿಂದುಸ್ಥಾನೀ ವಿದ್ವಾಂಸರ ನೆಲೆಬೀಡಾಗಿತ್ತು. ಇಲ್ಲಿನ ಉಸ್ತಾದ್ ಅಬ್ದುಲ್‌ಕರೀಂಖಾನ್, ನೀಲಕಂಠ ಬುವಾ, ಉಸ್ತಾದ್ ಅಲ್ಲಾದಿಯಾ ಖಾನ್ ಹಾಗೂ ಇವರ ಮಕ್ಕಳಾದ ಮಂಜೀಖಾನ್, ಬುರ್ಜಿಖಾನ್ ಮೊದಲಾದ ಅನೇಕ ಗಾಯಕರ ಪ್ರಭಾವವು ಕರ್ನಾಟಕದಲ್ಲಿ ಸಾಕಷ್ಟು ಪ್ರಮಾಣದಲ್ಲಾಗಿದೆ. ಕರ್ನಾಟಕದಲ್ಲಿ ಹಿಂದುಸ್ಥಾನೀ ಸಂಗೀತದ ಪ್ರಮುಖ ಪ್ರಚಾರಕರೆಂದರೆ, ಮೈಸೂರು ದರ್ಬಾರಿಗೆ ಆಗಾಗ ಭೇಟಿ ಕೊಡುತ್ತಿದ್ದ ಬೀನ್‌ವಾದನಕಾರ ಉಸ್ತಾದ್ ಬಂದೇ ಅಲಿಖಾನ್, ಮುರಾದಾಖಾನ್ ಹಾಗೂ ಸಿತಾರ್ ವಾದಕರಾದ ಉಸ್ತಾದ್ ವಿಲಾಯತ್ ಖಾನ್ ಹಾಗೂ ಅವರ ತಂದೆ ಉಸ್ತಾದ್ ಇನಾಯತ್ ಮೊದಲಾದವರು. ಇಷ್ಟಲ್ಲದೆ ಪ್ರಸಿದ್ಧ ಹಿಂದುಸ್ಥಾನೀ ಗಾಯಕರ, ವಾದಕರ, ವಿದ್ವಾಂಸರ ಪಾಂಡಿತ್ಯಕ್ಕೆ ಮಾರುಹೋಗಿ ಕರ್ನಾಟಕದಲ್ಲಿ ಹಿಂದುಸ್ಥಾನೀ ಸಂಗೀತ ಶಿಕ್ಷಣ ಪಡೆಯುವವರ ಸಂಖ್ಯೆ ಅಧಿಕವಾಯಿತು. ಕುಂದಗೋಳದ ರಾಮಭಾವು ಕುಂದಗೋಳಕರ (ಸವಾಯಿ ಗಂಧರ್ವರು) ಅವರು ಉಸ್ತಾದ್ ಅಬ್ದುಲ್ ಕರೀಂ ಖಾನ್ ಅವರ ಬಳಿ; ಕುಂದಗೋಳದ ಕೃಷ್ಣಾಜಿಪಂತ ಪಾಳುವೆ ಹಾಗೂ ಹುಬ್ಬಳ್ಳಿಯ ದತ್ತೋಪಂತ ಪಾಠಕ-ಇವರುಗಳು ಬೀನ್ ವಾದ್ಯಗಾರರಾದ ಉಸ್ತಾದ್ ಮುರಾದ್‌ಖಾನ್ ಅವರ ಬಳಿ; ಪಂಡಿತ ಶಂಕರ ದೀಕ್ಷಿತ ಜಂತ್ಲಿ, ಗುರುರಾವ ದೇಶಪಾಂಡೆ ಮತ್ತು ಇತರ ಅನೇಕರು ಧಾರವಾಡದಲ್ಲಿ ಘರಾನೆಯ ಪ್ರಸಿದ್ಧ ವಿದ್ವಾಂಸರೆನಿಸಿದ್ದ ಭಾಸ್ಕರ ಬುವಾಬಲೇ ಅವರಲ್ಲಿ ಶಿಕ್ಷಣ ಪಡೆದರು.

ಮಲ್ಲಿಕಾರ್ಜುನ ಮನ್ಸೂರರಿಗೆ ಮಂಜೀಖಾನ್ ಹಾಗೂ ಬುಜ್ಜೀ ಖಾನ್ ಅವರು ಗುರುಗಳು. ಪಂಡಿತ ಬಸವರಾಜ ರಾಜಗುರು ಅವರ ಗುರುಗಳು ನೀಲಕಂಠ ಬುವಾ. ಈ ರೀತಿ ಕರ್ನಾಟಕದಲ್ಲಿ ಹಿಂದುಸ್ಥಾನೀ ಸಂಗೀತ ಪ್ರಚಾರ ಬಹಳ ಬಿರುಸಾಗಿಯೇ ನಡೆಯಿತು.

ಕರ್ನಾಟಕದ ಸುಪ್ರಸಿದ್ಧ ಹಿಂದುಸ್ಥಾನೀ ಸಂಗೀತ ಕಲಾವಿದರೆಂದರೆ ಪಂಚಾಕ್ಷರಿ ಗವಾಯಿ, ರಾಮಭಾವು ಕುಂದಗೋಳಕರ, ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್, ಭೀಮಸೇನ ಜೋಷಿ, ಬಸವರಾಜ ರಾಜಗುರು, ಶಂಕರ ದೀಕ್ಷಿತ ಜಂತ್ಲಿ ಮೊದಲಾದವರು. ಇವರುಗಳ ಶಿಷ್ಯರನೇಕರು ಕರ್ನಾಟಕದಾದ್ಯಂತ ನೆಲೆಸಿದ್ದಾರೆ. ಅಂತಹವರಲ್ಲಿ ಸಿದ್ಧರಾಮ ಜಂಬಲದಿನ್ನಿ, ಪಂಚಾಕ್ಷರಸ್ವಾಮಿ ಮತಿಗಟ್ಟ, ಆರ್.ಎಸ್.ಜಂತ್ಲಿ, ಶಾರದಾ ಶಿರೂರ ಮೊದಲಾದವರು ಪ್ರಸಿದ್ಧ ಗಾಯಕರು. ಬಿಜಾಪುರದ ಸ್ವಾಮಿ ಪರ್ವತೀಕರ, ಕೃಷ್ಣಾಜಿಪಂತ ಪಾಳಂದೆ, ಹುಬ್ಬಳ್ಳಿಯ ದತ್ತೋಪಂತ ಪಾಠಕ-ಇವರುಗಳು ಪ್ರಸಿದ್ಧ ಬೀನ್ ಹಾಗೂ ಸಿತಾರ್ ವಾದಕರು. ನಾಗವೇಕರ ಗುರೂಜಿ, ರಾಜಣ್ಣ ತಬಲಜಿ, ಶೇಷಗಿರಿ ಹಾನಗಲ್, ಕಲ್ಲಪ್ಪ ಹೂಗಾರ ಮೊದಲಾದವರು ಪ್ರಸಿದ್ಧ ತಬಲಾವಾದಕರು. ಧಾರವಾಡದ ಹನುಮಂತರಾವ್ ವಾಳ್ವೇಕರ್, ಬೆಳಗಾಂವಿಯ ರಾಮಭಾವು ವಿಜಾಪುರೆ, ಪಂ.ಕೋರೆಗಾಂವಕರ ಮೊದಲಾದವರು ಪ್ರಸಿದ್ಧ ಹಾರ್ಮೋನಿಯಂ ವಾದಕರು. ಉಷಾಖಾಡಿಲ್‌ಕರ, ಕೃಷ್ಣ ಹಾನಗಲ್, ಅನುರಾಧಾ ಧಾರೇಶ್ವರ, ಪಾರ್ವತಿಬಾಯಿ ಹೊಂಬಳ ಮೊದಲಾದವರು ಹಿಂದುಸ್ಥಾನೀ ಧಾಟಿಯಲ್ಲಿ ಸುಗಮ ಸಂಗೀತ ಹಾಡುಗಾರಿಕೆಯಲ್ಲಿ ಪ್ರಸಿದ್ಧರು. ಹಾಗೆಯೇ ಜೋಳದರಾಶಿ ದೊಡ್ಡನಗೌಡ, ಹುಕ್ಕೇರಿ ಬಾಳಪ್ಪ, ಚಂದ್ರಯ್ಯ ಮೊದಲಾದವರು ಹಿಂದುಸ್ಥಾನಿ ಶೈಲಿಯಲ್ಲಿ ಜನಪದ ಗೀತೆಗಳನ್ನು ಹಾಡುವಲ್ಲಿ ಪ್ರಸಿದ್ಧರು.

ದೇಶದ ಮತ್ಯಾವುದೇ ಭಾಗದಲ್ಲಿ ಕಾಣಸಿಗದ ಹಿಂದುಸ್ಥಾನೀ, ಕರ್ನಾಟಕ ಶೈಲಿಗಳ ಸಂಗೀತದ ಬಳಕೆ ಕರ್ನಾಟಕದಲ್ಲಿದೆ. ಹಿಂದುಸ್ಥಾನೀ ಹಾಗೂ ಕರ್ನಾಟಕ ಸಂಗೀತ ಪದ್ಧತಿಯ ಮಧುರ ಸಂಗಮ ಕರ್ನಾಟಕದ ಸಾಂಸ್ಕೃತಿಕ ವೈಶಿಷ್ಟ್ಯವಾಗಿದೆ. ಕನ್ನಡಿಗರಿಗೆ ಇದೊಂದು ಹೆಮ್ಮೆಯ ಸಂಗತಿ ಎನಿಸಿದೆ.

(ಎಸ್.ಕೆ.)

**ಹಿಪ್ಪರಗಿ:** ಬಿಜಾಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಒಂದು ಗ್ರಾಮ. ಜನಸಂಖ್ಯೆ 11,513. ಹಿಪ್ಪರಗಿ ಎಂಬ ಹೆಸರಿನ ಎರಡು ಗ್ರಾಮಗಳು ಜಿಲ್ಲೆಯಲ್ಲಿದ್ದು ಒಂದನ್ನು ದೇವರ ಹಿಪ್ಪರಗಿ ಎಂದೂ ಮತ್ತೊಂದನ್ನು ಹೂವಿನ ಹಿಪ್ಪರಗಿ ಎಂದೂ ಗುರುತಿಸುತ್ತಾರೆ. ಸಿಂದಗಿಯ ನೈಋತ್ಯದಲ್ಲಿ, ಬಿಜಾಪುರ ನಗರದ ಪೂರ್ವದಲ್ಲಿ ಮತ್ತು ಬಸವನ ಬಾಗೇವಾಡಿಯ ಉತ್ತರದಲ್ಲಿರುವ ದೇವರ ಹಿಪ್ಪರಗಿಯಲ್ಲೆ ಶಿವಶರಣ ಮಡಿವಾಳ ಮಾಚಯ್ಯ ಜನಿಸಿದ್ದನೆನ್ನುವರು. ಮಾಚಯ್ಯನವರ ಆರಾಧ್ಯದೈವ ಕಲ್ಲಿನಾಥನ ದೇವಾಲಯವೂ ಈ ಗ್ರಾಮದಲ್ಲಿದೆ. ಮಾಚಯ್ಯನಿಂದಾಗಿ ಈ ಗ್ರಾಮ ಪ್ರಸಿದ್ಧವಾಯಿತೆನ್ನುವರು. ಶರಣ ಮಾಚಯ್ಯ ಇದೇ ಗ್ರಾಮದಲ್ಲಿ ನಿಧನನಾದನೆಂದೂ ಪ್ರತೀತಿ. ಇವನನ್ನು ಕುರಿತಂತೆ ಅನೇಕ ಜನಪದಗೀತೆಗಳು ದೊರಕುತ್ತವೆ. ಊರಿನ ಪೂರ್ವಕ್ಕೆ ಒಂದು ಪ್ರಾಚೀನ ಮೈಲಾರ ಮಾರ್ತಾಂಡನ ದೇವಾಲಯವಿದೆ. ಈ ಗ್ರಾಮದಲ್ಲಿ ಮೂರು ಶಾಸನಗಳು ದೊರಕಿವೆ.

ಮೊದಲನೆಯ ಶಾಸನದಲ್ಲಿ ವೈಷ್ಣವ ಶಿವಾತ್ಮಕ ಧರ್ಮದ (ಭಾಗವತ ಸಂಪ್ರದಾಯದ) ಬಮ್ಮೆಯ ನಾಯಕ ಹಿಪ್ಪರಗಿಯ ಕಲ್ಲಿನಾಥ ದೇವರಿಗೆ ಪೂಜಾದಿ ಕೈಂಕರ್ಯಗಳು ನಡೆಯಲು ರಾಜಗುರು ಮುನೀಶನಿಗೆ ದಾನದತ್ತಿಗಳನ್ನು ಇತ್ತನೆಂದೂ 'ಭುಜಂಗಾವಳಿ' ಸಂಪ್ರದಾಯಕ್ಕೆ ಸಂಬಂಧಪಟ್ಟಿದ್ದನ್ನೂ ಶಾಸನದಲ್ಲಿ ಕಲ್ಲಿನಾಥದೇವರಿಗೆ ಇಂಗುಣಿ ಗ್ರಾಮವನ್ನು ದತ್ತಿಯಾಗಿತ್ತುದನ್ನೂ ದಾಖಲಿಸಿದೆ. ಈ ಶಾಸನದಲ್ಲಿ ಕುಂತಳನಾಡನ್ನೂ ಸೇವುಣ ವಂಶವನ್ನೂ ಹಿಪ್ಪರಿಗೆ ಊರನ್ನೂ ಸುಂದರವಾಗಿ ವರ್ಣಿಸಿದೆ. ಬಮ್ಮೆಯನಾಯಕ, ಮಲ್ಲೇಶು ಸಾಗಣಿ ಹಾಗೂ ರಾಜಗುರುಗಳ ವ್ಯಕ್ತಿತ್ವವನ್ನು ವಿವರಿಸಿದೆ. ಜೊತೆಗೆ ಇತರ ಅಧಿಕಾರಿಗಳೂ ದಾನದತ್ತಿಗಳನ್ನಿತ್ತುದನ್ನೂ ದಾಖಲಿಸಿದೆ.

ಎರಡನೆಯ ಶಾಸನ ಊರಿನ ಕುಂಬಾರ ಬಾವಿ ಎಂಬ ಬಾವಿಯ ಗೋಡೆಯಲ್ಲಿದೆ. ಬಾವಿಯ ನಿರ್ಮಾಣವನ್ನು ಶೀಲವಂತ ಗೋಪಣ್ಣ ಎಂಬ ವ್ಯಕ್ತಿ ಮಾಡಿಸಿದುದಾಗಿ ತಿಳಿಸಿದೆ.

ಮೂರನೆಯ ಶಾಸನ 1566ರ ಜುಲೈ 24ರಂದು ಬರೆಸಿದುದು. ಅದು ನಾಗರಿ ಲಿಪಿ ಹಾಗೂ ಮರಾಠಿ ಭಾಷೆಯಲ್ಲಿದೆ. ಪ್ರಾಯಃ ಹನುಮಂತ ದೇವರ ಗುಡಿಯನ್ನು ಕಟ್ಟಿಸಿ ಅದಕ್ಕೆ ದತ್ತಿ ಬಿಟ್ಟುದನ್ನು ಇದು ದಾಖಲಿಸಿದೆ.

ಉತ್ತರ ಕರ್ನಾಟಕದ ದಿನಪತ್ರಿಕೆ ಸಂಯುಕ್ತ ಕರ್ನಾಟಕದ ಸಂಪಾದಕರಾದ ಕರ್ಮಯೋಗಿ ಮೊಹರೆ ಹಣಮಂತರಾಯರೂ ಪತ್ರಿಕಾಕರ್ತರೂ ಲೇಖಕರೂ ಆದ ವಿ.ಬಿ. ನಾಯಕರು ಈ ಊರಿನವರು. ಮರಾಠರ ಕಾಲದಲ್ಲೂ ಈ ಊರು ಮಹತ್ವ ಪಡೆದಿದ್ದಿತು. **(ಎಸ್.ಜಿ.ಎ.)**

**ಹಿರಣ್ಣಯ್ಯ, ಕೆ.:** –. 1953 ರಂಗಭೂಮಿಯ ಹಾಸ್ಯಚಕ್ರವರ್ತಿ ಎಂದು ಹೆಸರಾಗಿದ್ದ ಇವರು ನಟರಾಗಿ, ನಾಟಕಕಾರರಾಗಿ, ನಾಟಕ ಕಂಪನಿಯ ಮಾಲೀಕರಾಗಿ ಕಾಲು ಶತಮಾನಕ್ಕೂ ಹೆಚ್ಚು ಕಾಲ ದುಡಿದು ಕನ್ನಡ ರಂಗಭೂಮಿಯ ಬೆಳವಣಿಗೆಗೆ ಶ್ರಮಿಸಿದವರು. ತುಮಕೂರು ಜಿಲ್ಲೆಯ ನೊಣವಿನಕೆರೆ ಸಮೀಪದ ಕಣತ್ತೂರು ಇವರ ಮೂಲಸ್ಥಳವಾದರೂ ವಾಸಿಸುತ್ತಿದ್ದುದು ಬೆಂಗಳೂರಿನಲ್ಲಿ. ತಂದೆ ಅನಂತರಾಮಯ್ಯನವರಿಗೆ ನಾಟಕದ ಗೀಳು ಬಹಳ. ತಾಯಿ ಲಕ್ಷ್ಮಿದೇವಮ್ಮನವರು ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದರು. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಇವರು ಬೆಳೆದದ್ದು ಬಡತನದಲ್ಲಿ. ಬೆಂಗಳೂರು ಕೋಟೆ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿದ ಇವರಿಗೆ ಸಂಗೀತ ಮತ್ತು ಅಭಿನಯ ಕಲೆಯಲ್ಲಿ ಆಸಕ್ತಿ ಹುಟ್ಟಿದುದರಿಂದ ಶಾಲಾ ಶಿಕ್ಷಣವನ್ನು ಮಧ್ಯೆ ಬಿಟ್ಟು ಸಂಗೀತ ಮತ್ತು ಹಾರ್ಮೋನಿಯಮ್ ಅಭ್ಯಾಸದಲ್ಲಿ ತೊಡಗಿದರು. ಈ ಮಧ್ಯೆ ತಂದೆ ತೀರಿಕೊಂಡದ್ದರಿಂದ ಬದುಕುವ ಮಾರ್ಗವನ್ನು ಹುಡುಕಿಕೊಂಡು ಮೈಸೂರಿಗೆ ಹೋದರು. ಅಲ್ಲಿಯ ಸಿನಿಮಾ ಮಂದಿರವೊಂದರಲ್ಲಿ ಸಣ್ಣ ಕೆಲಸ ಹಿಡಿದ ಇವರು ಮುಂದೆ ಅಲ್ಲಿಯೇ ಪೇಂಟರ್‌ರಾಗಿಯೂ ಹಾರ್ಮೋನಿಯಮ್ ಕಲಾವಿದರಾಗಿಯೂ ಸ್ವಲ್ಪಕಾಲ ಕೆಲಸ ಮಾಡಿದರು. ಆಗ್ಗೆ ಮೈಸೂರಿನಲ್ಲಿದ್ದ ಗಾನೋಲ್ಲಾಸಿನಿ ನಾಟಕ ಸಭೆಯನ್ನು ಸೇರಿ, ನಾಟಕ ಕಲಿಸುವ ಮಾಸ್ತರರಾದರು. ಅಲ್ಲಿ ಅವರು ಕಲಿಸಿದ ಪ್ರಹ್ಲಾದ ಚರಿತ್ರೆ ನಾಟಕ ಪ್ರದರ್ಶನಗೊಂಡು ಒಳ್ಳೆಯ ಹೆಸರು ಬಂತು; ಇವರ ಪ್ರತಿಭೆಯೂ ಬೆಳಕಿಗೆ ಬಂತು. ಇದೇ ನಾಟಕಸಭೆ ಪ್ರದರ್ಶಿಸಿದ ನಿರುಪಮ

ನಾಟಕದಲ್ಲಿ, ಯಾವ ಸಿದ್ಧತೆಯೂ ಇಲ್ಲದೆ ನಾಯಕಿಯ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿದ ಇವರು ಪ್ರತಿಭಾವಂತ ನಟರೆಂದು ಹೆಸರಾದರು. ಅನಂತರ ಅದೇ ನಾಟಕಸಭೆ ಪ್ರದರ್ಶಿಸಿದ ಸೀತಾಕಲ್ಯಾಣ ನಾಟಕದಲ್ಲಿ ರಾವಣನ ಪಾತ್ರವನ್ನು ಅಭಿನಯಿಸಿ ಕೀರ್ತಿ ಗಳಿಸಿದರು. ಅನಂತರ ಗುಬ್ಬಿ ಚನ್ನಬಸವೇಶ್ವರ ನಾಟಕ ಕಂಪನಿಯನ್ನು ಸೇರಿ, ಮೂರು ವರ್ಷಗಳ ಕಾಲ ಅಲ್ಲಿ ವಿವಿಧ ಪಾತ್ರಗಳನ್ನು ಅಭಿನಯಿಸಿದರು. ಅನಂತರ ಎಂ.ವಿ.ಸುಬ್ಬಯ್ಯನಾಯ್ಡು ಅವರ ಶ್ರೀ ಸಂಗೀತ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿಯನ್ನು ಸೇರಿದರು. ಅಲ್ಲಿ ಇವರೇ ರಚಿಸಿದ ರಾಮಾಯಣ ನಾಟಕದಲ್ಲಿ ಆಂಜನೇಯ ಪಾತ್ರವನ್ನು ಅಭಿನಯಿಸಿ ಖ್ಯಾತರಾದರು. ಆ ನಾಟಕ ಕಂಪನಿಯನ್ನೂ ಬಿಟ್ಟು ಹಿರಣ್ಣಯ್ಯನವರು ಮದರಾಸಿಗೆ ಹೋಗಿ ಅಲ್ಲಿ ಪರಿಚಿತರಾಗಿದ್ದ ತಮಿಳು ರಂಗಭೂಮಿಯ ಪ್ರಸಿದ್ಧ ಹಾಸ್ಯನಟ ಎನ್.ಎಸ್. ಕೃಷ್ಣನ್ ಅವರ ಆಶ್ರಯದಲ್ಲಿದ್ದುಕೊಂಡು, ತಮಿಳು ನಾಟಕಗಳಲ್ಲೂ ಚಿತ್ರಗಳಲ್ಲೂ ಅಭಿನಯಿಸಿ ತಮಿಳುನಾಡಿನಲ್ಲೂ ಹೆಸರುಗೊಂಡರು. ಎರಡನೆಯ ಮಹಾಯುದ್ಧದ ಕಾರಣದಿಂದ ಮದರಾಸನ್ನು ಬಿಟ್ಟು ತಮ್ಮ ಮಾವನ ಮನೆ ಸಖಾರಾಯನಪಟ್ಟಣಕ್ಕೆ ಹಿಂದಿರುಗಿ ಸ್ವಲ್ಪಕಾಲ ತಂಗಿದರು. ಅಲ್ಲಿದ್ದಾಗಲೇ ದೇವದಾಸಿ ನಾಟಕವನ್ನು ಬರೆದು, ಪ್ರದರ್ಶನಕ್ಕೆ ಸಿದ್ಧಪಡಿಸಿದರು. ತಮ್ಮ ಹಲವು ಮಿತ್ರರ ನೆರವಿನಿಂದ ಮೈಸೂರಿನಲ್ಲಿ ಹಿರಣ್ಣಯ್ಯ ಮಿತ್ರಮಂಡಲಿ ಎಂಬ ನಾಟಕ ಕಂಪನಿಯನ್ನು 1941ರಲ್ಲಿ ಆರಂಭಿಸಿದರು. ಈ ನಾಟಕ ಕಂಪನಿ ಪ್ರದರ್ಶಿಸಿದ ಮೊದಲ ನಾಟಕ ಸದಾರಮೆ. ಈ ನಾಟಕದಲ್ಲಿ ಇವರು ಆದಿಮೂರ್ತಿ ಮತ್ತು ಕಳ್ಳನ ಪಾತ್ರವನ್ನು ಅಭಿನಯಿಸಿದರು. ಈ ನಾಟಕಕ್ಕೆ ಒಳ್ಳೆಯ ಪ್ರೋತ್ಸಾಹ ದೊರೆತು ಅನೇಕ ಪ್ರದರ್ಶನಗಳು ನಡೆದವು. ಮೈಸೂರಿನಲ್ಲಿ ಮಾತ್ರವಲ್ಲದೆ ಕರ್ನಾಟಕದ ನಾನಾ ಭಾಗಗಳಲ್ಲೂ ಈ ಮಂಡಲಿ ಪ್ರದರ್ಶಿಸಿದ ಇವರು ದೇವದಾಸಿ ನಾಟಕದಲ್ಲಿ ಅಭಿನಯಿಸಿದ ನಾಜೂಕಯ್ಯನ ಪಾತ್ರವಂತೂ ಮನೆಮಾತಾಯಿತು.

ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದ ಹಿರಣ್ಣಯ್ಯನವರು ಎಚ್.ಆರ್.ಜಿ.ಸಿ.ಎಸ್. ಪಿಕ್ಚರ್ಸ್ ಎಂಬ ಲಾಂಛನದಡಿ ವಾಣಿ ಎಂಬ ಚಿತ್ರವನ್ನು ನಿರ್ಮಿಸಿದರು.

ಹಿರಣ್ಣಯ್ಯನವರು ಮಡಿಕೇರಿಯಲ್ಲಿ ನಾಟಕಗಳನ್ನು ಪ್ರದರ್ಶಿಸಲು ಮೊಕ್ಕಾಂ ಮಾಡಿದ್ದಾಗ 1953 ಮಾರ್ಚ್ 21ರಂದು ನಿಧನರಾದರು. ರಂಗಭೂಮಿ ಸೇವೆಯನ್ನು ಒಂದು ವ್ರತ ಎಂದು ಭಾವಿಸಿದ್ದ ಇವರು ತಮ್ಮ ಸಹಕಲಾವಿದರನ್ನು ಗೌರವಾದರಗಳಿಂದ ಕಾಣುತ್ತಿದ್ದರು. ಸುಪ್ರಸಿದ್ಧ ರಂಗಭೂಮಿಯ ನಟ ಮಾಸ್ಟರ್ ಹಿರಣ್ಣಯ್ಯನವರು ಇವರ ಪುತ್ರ.

*

**ಹಿರಿಯಡ್ಕ ಗೋಪಾಲರಾವ್:** 1919–. ಬಡಗುತಿಟ್ಟು ಯಕ್ಷಗಾನ ರಂಗದ ಪ್ರಬುದ್ಧ ಮದ್ದಳೆ ಕಲಾವಿದ. ಯಕ್ಷಗಾನ ರಂಗದ ಭೀಷ್ಮಾಚಾರ್ಯ ಎಂದೇ ಪ್ರಸಿದ್ಧಿ ಪಡೆದಿದ್ದವರು. ಇಂದಿನ ಉಡುಪಿ ಜಿಲ್ಲೆಯ ಹಿರಿಯಡ್ಕ ದಲ್ಲಿ 1919ರಲ್ಲಿ ಜನಿಸಿದರು. ಇವರ ಸಾಂಪ್ರದಾಯಿಕ ಓದು ಏಳನೆಯ ತರಗತಿಯವರೆಗೆ ಮಾತ್ರ. ತಂದೆ ಶೇಷಗಿರಿರಾವ್, ತಾಯಿ ಲಕ್ಷ್ಮೀಬಾಯಿ. ತಂದೆ, ತಾತಂದಿರು ಯಕ್ಷಗಾನದ ಹವ್ಯಾಸಿಗಳು, ಮದ್ದಳೆಯ ತಯಾರಕರು. ಹಿರಿಯಡ್ಕ ಮೇಳದ ರಂಗಕಲಾವಿದರಾಗಿ ಸೇರಿಕೊಂಡ ಇವರು (1935) ಎರಡೇ ವರ್ಷಗಳಲ್ಲಿ ತಮ್ಮ ಆಸಕ್ತಿಯ ನೆಲೆಯನ್ನು ಗುರುತಿಸಿಕೊಂಡು ಮದ್ದಳೆಗಾರರಾಗಿ ಹೆಸರುಮಾಡಿದರು.

ಮದ್ದಳೆಯ ನುಡಿತದಲ್ಲಿ ಪಾರಂಪರಿತ ಶೈಲಿಯನ್ನು ಇವರು ಅನುಸರಿಸಿ ದರೂ ಮದ್ದಳೆಯ ಸ್ವರೂಪದಲ್ಲಿ ಹೊಸ ಆವಿಷ್ಕಾರವನ್ನು ಮಾಡುವ ಮೂಲಕ ಹೊಸ ಪ್ರಯೋಗಗಳನ್ನು ಮಾಡಿದರು. ಮದ್ದಳೆಯ ಕರ್ಣ, ಮುಚ್ಚಿಗೆಗಳನ್ನು ಮಾಡುವುದನ್ನು ಹಿರಿಯರಿಂದ ಕಲಿತ ಇವರು ಗೋಪಾಲ ರಾವ್ ಜೋಡಾಟದ ಸಂದರ್ಭದಲ್ಲಿ ಬಳಸಲು ಅನುಕೂಲವಾಗುವಂತೆ ಏರುಮದ್ದಳೆಯನ್ನು ರೂಪಿಸಿದರು. ಸಣ್ಣ ಕಳಸಿಗೆಗೆ ದಪ್ಪ ಚರ್ಮಹಾಕಿ, ಅದರಿಂದ ತಾರಕಧ್ವನಿ ಹೊರಡುವಂತೆ ಮಾಡಿದರು. ಈ ಹೊಸ ಬಗೆಯ ಮದ್ದಳೆಯಲ್ಲಿ ಒಂದೊಂದು ಪಟ್ಟು ಏರಿಸುತ್ತ ಹೊಸ ಪ್ರಯೋಗಗಳನ್ನು ನಡೆಸಿದರು. ಅಲ್ಲಿಯ ತನಕ ತಾರಕಸ್ಥಾಯಿಯನ್ನು ನೀಡುವ ಮದ್ದಳೆಗಳು ಇರಲಿಲ್ಲ. ಅದೇ ಮದ್ದಳೆಯನ್ನು ಅಂತಿಮವಾಗಿ ಆರೂವರೆ ಪಟ್ಟು ಏರಿಸಿ ಏರುಮದ್ದಳೆಯ ಆವಿಷ್ಕಾರ ಮಾಡಿದರು.

ಇವರು ಹಿರಿಯಡ್ಕ ಮೇಳಕ್ಕೆ ವೇಷಧಾರಿಯಾಗಿ ರಂಗ ಪ್ರವೇಶಿಸಿದರು (1939). ಆದರೆ ರಂಗಸಾಹಿತ್ಯದಲ್ಲಿ ಇವರಿಗೆ ಆಸಕ್ತಿ ಇರಲಿಲ್ಲ. ಹೀಗಾಗಿ ವೇಷಗಾರಿಕೆಯನ್ನು ಬಿಟ್ಟು ಮೇಳದಲ್ಲಿ ಒತ್ತು ಮದ್ದಳೆಗಾರರಾಗಿ ಸೇರಿದರು. ಮುಂದೆ ಮೂರು ದಶಕಗಳ ಕಾಲ ಪೆರಡೂರು, ಅಮೃತೇಶ್ವರಿ, ಮಂದರ್ತಿ ಮೇಳಗಳಲ್ಲಿ ಮುಖ್ಯ ಮದ್ದಳೆಗಾರರಾಗಿ ಸೇವೆ ಸಲ್ಲಿಸಿದರು. ವಾಸುದೇವ ಉಪ್ಪಾರರು ಇವರ ಮದ್ದಳೆಯ ಗುರುಗಳು. ಎಪ್ಪತ್ತರ ದಶಕದಲ್ಲಿ ಶಿವರಾಮಕಾರಂತರು ಸ್ಥಾಪಿಸಿದ ಉಡುಪಿಯ ಯಕ್ಷಗಾನ ತರಬೇತಿ ಶಾಲೆಯಲ್ಲಿ ಗೋಪಾಲರಾಯರು ಮದ್ದಳೆ ಗುರುವಾಗಿ ಸಾಂಪ್ರದಾಯಿಕ ಮದ್ದಳೆ ಶೈಲಿಯನ್ನು ಪ್ರಚುರಪಡಿಸಿದರು. ಯಕ್ಷಗಾನದ ಸಾಂಪ್ರದಾಯಿಕ ಶೈಲಿಯನ್ನು ಅಭ್ಯಸಿಸಲು ಅಮೆರಿಕದಿಂದ ಬಂದ ಮಾರ್ಥಾಆ್ಯಸ್ಟನ್ (ಸಿಕೋರ) ಅವರನ್ನು ಶಿಷ್ಯೆಯಾಗಿ ಸ್ವೀಕರಿಸಿದರು. ಆಕೆಯನ್ನು ಯಕ್ಷಗಾನದ ಪ್ರಬುದ್ಧ ರಂಗಕಲಾವಿದೆಯಾಗಿ ರೂಪಿಸಿದರು. ತುಳುನಾಡಿನ ಮಾತೃವಂಶೀಯ ಬಂಧುತ್ವ ವ್ಯವಸ್ಥೆಯನ್ನು ಕುರಿತು ಸಂಶೋಧನೆ ನಡೆಸಲು ಅಮೆರಿಕೆಯಿಂದ ಬಂದ ಪೀಟರ್ ಜೆ. ಕ್ಲಾಸ್ ಅವರಿಗೆ ಮಾಹಿತಿದಾರರಾಗಿ, ಸಹ ಸಂಶೋಧಕರಾಗಿ ಸಹಕರಿಸಿದರು.

ಮಾರ್ಥಾಆ್ಯಸ್ಟನ್ ಜತೆ ಇವರು ಅಮೆರಿಕ ಪ್ರವಾಸ ಕೈಗೊಂಡರು (1976). ಆಗ ಇವರು ಭಾಗವಂತಿಕೆ ಹಾಗೂ ಮದ್ದಳೆ ವಾದಕತ್ವದ ದ್ವಿಪಾತ್ರದಲ್ಲಿ ರಂಗದಲ್ಲಿ ಕಾಣಿಸಿಕೊಂಡರು. ಮಾರ್ಥಾ ಏಕಪಾತ್ರಾಭಿನಯ ನೀಡಿದರು. ಈ ಬಗೆಯ ಹದಿನೈದಕ್ಕೂ ಹೆಚ್ಚು ರಂಗಪ್ರಯೋಗಗಳನ್ನು ಇವರು ಅಮೆರಿಕದಲ್ಲಿ ಪ್ರದರ್ಶಿಸಿದರು. 1980ರಲ್ಲಿ ಹದಿನೈದು ಕಲಾವಿದರ ತಂಡದೊಂದಿಗೆ ನಾಲ್ಕು ತಿಂಗಳ ಕಾಲ ಅಮೆರಿಕ ಪ್ರವಾಸ ಕೈಗೊಂಡರು. ಅಲ್ಲಿ ಲವಕುಶ ಕಾಳಗ, ಅಭಿಮನ್ಯು ಕಾಳಗ ಎಂಬ ಎರಡು ಪ್ರಸಂಗಗಳ ಪ್ರದರ್ಶನ ನೀಡಿದರು. ಇವರ ಕಲಾ ಸಾಧನೆಗಾಗಿ ಹಲವಾರು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ರಾಜ್ಯ ಸಂಗೀತ ಅಕಾಡೆಮಿ ಪ್ರಶಸ್ತಿ (1972), ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1971) ಜಾನಪದ ಶ್ರೀ ಪ್ರಶಸ್ತಿ (1998) ಇವುಗಳನ್ನು ಉಲ್ಲೇಖಿಸಬಹುದು. ಮದ್ದಳೆಯ ಮಾಯಾ ಲೋಕ ಇವರ ಆತ್ಮ ಕಥೆ. ಉಡುಪಿಯ ಜನಪದ ರಂಗ ಕಲೆಗಳ ಅಧ್ಯಯನ ಕೇಂದ್ರ ಇದನ್ನು ಪ್ರಕಟಿಸಿದೆ. ಯಕ್ಷಗಾನದ ಕಲೆಯ ಬೆಳವಣಿಗೆಯೊಂದಿಗೆ ತಮ್ಮ ಬಾಳಿನ ಏಳು ಬೀಳುಗಳನ್ನೂ ಇದರಲ್ಲಿ ಚಿತ್ರಿಸಿದ್ದಾರೆ. ಪಾರಂಪರಿಕ ಶೈಲಿ ಹೊಂದಿರುವ ಯಕ್ಷಗಾನ ಪ್ರಯೋಗಗಳನ್ನು ಜನಪ್ರಿಯಗೊಳಿಸಿದ ಪ್ರಸಿದ್ಧಿ ಇವರದು.

(ಎ.ವಿ.ಎನ್‌ಎ.)

**ಹಿರಿಯಣ್ಣ, ಎಂ.:** 1871–1950. ಸುಪ್ರಸಿದ್ಧ ವಿದ್ವಾಂಸರು, ತತ್ತ್ವಜ್ಞಾನಿ ಗಳು. ಹುಟ್ಟಿದ್ದು 1871ರ ಮೇ 7ರಂದು. ಬಾಲ್ಯದ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ನಡೆಸಿ ಅನಂತರ ಮದರಾಸಿನ ಕ್ರಿಶ್ಚನ್ ಕಾಲೇಜು ಸೇರಿ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಗಳಿಸಿದರು. ಮೈಸೂರು ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿಯ (ಈಗಿನ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) ಲೈಬ್ರೇರಿಯನ್ ಆದರು (1891). ಮುಂದಿನ ವರ್ಷ ಸರ್ಕಾರಿ ಕಚೇರಿಯೊಂದರಲ್ಲಿ ಸ್ವಲ್ಪಕಾಲ ಗುಮಾಸ್ತರಾಗಿದ್ದರು. ಆಮೇಲೆ ಸೈದಾಪೇಟೆಯ ಟೀಚರ್ಸ್ ಕಾಲೇಜಿನಲ್ಲಿ ಎಲ್.ಟಿ. ಪದವಿ ಪಡೆದರು (1895). 1896–1907ರಲ್ಲಿ ಮೈಸೂರಿನ ಗೌರ್ನಮೆಂಟ್ ನಾರ್ಮಲ್ ಸ್ಕೂಲಿನ ಸಹೋಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದು 1907 ರಿಂದ 1912 ರವರೆಗೆ ಅಲ್ಲೇ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಕನ್ನಡ ಶಿಕ್ಷಣದ ಬಗೆಗೆ ಪುಸ್ತಕವೊಂದನ್ನು ಬರೆದುದಲ್ಲದೆ ಕನ್ನಡದ ಪ್ರಚಾರ ಅಭಿವೃದ್ಧಿಗಳಿಗಾಗಿ ಅಂದು ಶ್ರಮಿಸುತ್ತಿದ್ದ ಮುಂದಾಳುಗ ಳಲ್ಲಿ ಒಬ್ಬರಾಗಿದ್ದರು. 1912ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾದರು. 1914 ರಲ್ಲಿ ಉಪಪ್ರಾಧ್ಯಾಪಕರೂ 1917ರಲ್ಲಿ ಪ್ರಾಧ್ಯಾಪಕರೂ ಆಗಿ ಕೆಲಸ ಮಾಡಿ 1927ರಲ್ಲಿ ನಿವೃತ್ತರಾದರು.

ಈ ಮಧ್ಯೆ 1921ರಲ್ಲಿ ಸ್ವಲ್ಪಕಾಲ ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿಯ ಕ್ಯೂರೇಟರ್ ಆಗಿ ಕೆಲಸ ಮಾಡುವ ಸಂದರ್ಭ ಇವರಿಗೆ ಲಭಿಸಿತ್ತು. ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಸಮಯದಲ್ಲಿ ಸಂಸ್ಕೃತ ಭಾಷೆ ಸಾಹಿತ್ಯಗಳನ್ನಲ್ಲದೆ ಭಾರತೀಯ ತತ್ತ್ವಶಾಸ್ತ್ರವನ್ನೂ ಬೋಧಿಸುತ್ತಿದ್ದರು. ಅಷ್ಟೇ ಅಲ್ಲದೆ ಭಾರತೀಯ ತತ್ತ್ವಜ್ಞಾನದ ಸಂಪೂರ್ಣ ವಾದ ಅರ್ಥವನ್ನು ಅರಿತವರಾಗಿ, ಅದರ ತತ್ತ್ವಗಳ ಅನುಷ್ಠಾನದಲ್ಲಿ ತೊಡಗಿದರು. ರಾಧಾಕೃಷ್ಣನ್ ಮುಂತಾದ ಮಹಾವ್ಯಕ್ತಿಗಳು ಇವರೊಡನೆ ನಿಕಟ ಸ್ನೇಹವನ್ನು ಬೆಳೆಸಿದರು. ಇವರ ಅನುಗ್ರಹಪರ ಪ್ರಭಾವದಲ್ಲಿ ಒಂದು ಅಮೋಘ ಶಿಷ್ಯಪರಂಪರೆ ಬೆಳೆಯಿತು. ವಿದ್ವಾಂಸರ ಪರಿಷತ್ತುಗಳು, ಸಮ್ಮೇಳನಗಳು ಇವರನ್ನು ಅಧ್ಯಕ್ಷ ಪದವಿ ಇತ್ಯಾದಿಗಳಿಗೆ ಆರಿಸಿ ಗೌರವಿಸಿ ದುವು. ಮದರಾಸು ಸಂಸ್ಕೃತ ಅಕಾಡೆಮಿಯಿಂದ ಇವರಿಗೆ ಸಂಸ್ಕೃತ ಸೇವಾಧುರೀಣ ಎಂಬ ಪ್ರಶಂಸೆ ದೊರೆತಿತು. ನುಡಿದಂತೆ ನಡೆಯುತ್ತಿ ದ್ದುದೂ ಅದಕ್ಕೋಸ್ಕರ ನುಡಿಯ ವಿಚಾರದಲ್ಲಿ ಮಿತಿ ಎಚ್ಚರಿಕೆಗಳನ್ನು ಸದಾ ಪಾಲಿಸುತ್ತಿದ್ದುದೂ ಇವರ ದೊಡ್ಡ ಗುಣಗಳಲ್ಲೊಂದು. ಚ್ಯುತಿಕಾಣದ ಕರ್ತವ್ಯನಿಷ್ಠೆ ಇವರ ಮತ್ತೊಂದು ಅತಿಶೋಭಾಯಮಾನ ಗುಣ. ಇದರ ಮೂಲಕ ತಮ್ಮ ವ್ಯಕ್ತಿತ್ವದ ಔನ್ನತ್ಯವನ್ನು ಅಸಾಧಾರಣವಾಗಿ ಸಾಧಿಸಿಕೊಂಡಿದ್ದ ಇವರು 1950 ಸೆಪ್ಟೆಂಬರ್ 19 ರಂದು ನಿಧನರಾದರು. ಇವರ ಅನೇಕ ಶಿಷ್ಯರ ಮತ್ತು ಅಭಿಮಾನಿಗಳ ಪ್ರಯತ್ನದಿಂದ ಸ್ಮಾರಕ ಗ್ರಂಥವೊಂದು ಪ್ರೊ.ಎಂ. ಹಿರಿಯಣ್ಣ ಕಮೆಮೊರೇಷನ್ ವಾಲ್ಯೂಂ ಎಂಬ ಹೆಸರಿನಿಂದ 1952ರಲ್ಲಿ ಪ್ರಕಟಗೊಂಡಿತು.

ಹಿರಿಯಣ್ಣನವರ ಸದ್ಗುಣಗಳು ಮತ್ತು ಹಿರಿದಾದ ವ್ಯಕ್ತಿತ್ವ ಇವರ ಬರೆವಣಿಗೆಗಳಲ್ಲಿ ಹಾಗೂ ಗ್ರಂಥಗಳಲ್ಲಿ ಕಂಡುಬರುತ್ತವೆ. ಭಾರತೀಯ ತತ್ತ್ವಜ್ಞಾನದಲ್ಲಿನ ಜೀವನ್ಮುಕ್ತಿ ಮುಂತಾದ ಗಹನ ಸಿದ್ಧಾಂತಗಳ

ಪ್ರತಿಪಾದನೆಯನ್ನೊಳಗೊಂಡ ಅವು ಗಂಭೀರ, ಸ್ವಚ್ಛ, ಸರಳ ಭಾಷೆಯಲ್ಲಿ ಆ ಸಿದ್ಧಾಂತಗಳನ್ನು ವಿವರಿಸುವುದಲ್ಲದೆ ಅವುಗಳ ಅನುಷ್ಠಾನದಲ್ಲಿ ಗ್ರಂಥಕರ್ತರು ಪರಿಣತರಾಗಿದ್ದರೆಂಬುದನ್ನೂ ಸ್ಪಷ್ಟವಾಗಿ ಸೂಚಿಸುತ್ತವೆ.

ಹಿರಿಯಣ್ಣನವರ ಪ್ರಕಟಿತ ಗ್ರಂಥಗಳು ಹೀಗಿವೆ: ಔಟ್‌ಲೈನ್ಸ್ ಆಫ್ ಇಂಡಿಯನ್ ಫಿಲಾಸಫಿ, ದಿ ಎಸೆನ್ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ, ಪಾಪ್ಯುಲರ್ ಎಸ್ಸೇಸ್ ಇನ್ ಇಂಡಿಯನ್ ಫಿಲಾಸಫಿ, ದಿ ಕ್ವೆಸ್ಟ್ ಆಫ್ಟರ್ ಪರ್‌ಫೆಕ್ಷನ್, ಆರ್ಟ್ ಎಕ್ಸ್‌ಪೀರಿಯನ್ಸ್, ಸಂಸ್ಕೃತ ಸ್ಟಡೀಸ್, ಇಂಡಿಯನ್ ಫಿಲಸಾಫಿಕಲ್ ಸ್ಟಡೀಸ್ ಸಂಪುಟ 1, ದಿ ಮಿಷನ್ ಆಫ್ ಫಿಲಾಸಫಿ, ರಿವ್ಯೂಸ್. ಇಲ್ಲಿನ ಮೊದಲ ಎಂಟು ಗ್ರಂಥಗಳಲ್ಲಿ ಭಾರತೀಯ ತತ್ತ್ವಜ್ಞಾನದ ಪ್ರಾರಂಭ ಬೆಳೆವಣಿಗೆಗೂ ಅಲ್ಲಿನ ವಿವಿಧ ಸಮಸ್ಯೆ ಸಿದ್ಧಾಂತಗಳ ಸೂಕ್ತ ವಿವರಣೆಯೂ ಸಂಸ್ಕೃತ ಸಾಹಿತ್ಯದ ಪ್ರಮುಖ ಪ್ರವೃತ್ತಿಗಳೂ ಹಾಗೂ ಸೌಂದರ್ಯ ಮೀಮಾಂಸೆಯ ವಿಚಾರವೂ ಹೃದಯಂಗಮವಾಗಿ ನಿರೂಪಿತವಾಗಿವೆ. ರಿವ್ಯೂಸ್ ಎಂಬ ಗ್ರಂಥದಲ್ಲಿ ಇವರು ಮಾಡಿದ ಪುಸ್ತಕಾವಲೋಕನಕ್ಕೆ ಸಂಬಂಧಪಟ್ಟ ಹಲವಾರು ಪ್ರೌಢ ಲೇಖನಗಳಿವೆ.

ಹಿರಿಯಣ್ಣನವರು ಪೀಠಿಕಾಪೂರ್ವಕವಾಗಿ ಇಂಗ್ಲಿಷ್ ಅನುವಾದಗಳಲ್ಲಿ ಕೊಟ್ಟಿರುವ ಗ್ರಂಥಗಳು: ಈಶಾವಾಸ್ಯೋಪನಿಷದ್, ಕೇನೋಪನಿಷದ್, ಕಠೋಪನಿಷದ್, ಬೃಹದಾರಣ್ಯಕೋಪನಿಷದ್ (ಭಾಗ 1). ಇಂಗ್ಲಿಷಿನಲ್ಲಿ ಪೀಠಿಕೆ ಟಿಪ್ಪಣಿಗಳೊಡನೆ ಇವರಿಂದ ಸಂಪಾದಿತ ಗ್ರಂಥಗಳು: ನೈಷ್ಕರ್ಮ್ಯ ಸಿದ್ಧಿ (ಸುರೇಶ್ವರಾಚಾರ್ಯ), ವೇದಾಂತಸಾರ (ಸದಾನಂದ)- ಅನುವಾದ ಸಹಿತ, ಇಷ್ಟಸಿದ್ಧಿ (ವಿಮುಕ್ತಾತ್ಮ). ಈ ಗ್ರಂಥಗಳನ್ನಲ್ಲದೆ ಅನೇಕ ಲೇಖನಗಳನ್ನೂ ಇವರು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಶಿಕ್ಷಣ ಪದ್ಧತಿಯನ್ನು ಕುರಿತವು, ಉಳಿದವು ಸಂಸ್ಕೃತ ಸಾಹಿತ್ಯಕ್ಕೂ ಭಾರತೀಯ ದರ್ಶನಗಳಿಗೂ ಸಂಬಂಧಿಸಿದವು.

ಹಿರಿಯಣ್ಣನವರಿಂದ ರಚಿತವಾದ, ಸಂಪಾದಿತವಾದ ಗ್ರಂಥಗಳು ಭಾರತೀಯ ತತ್ತ್ವಜ್ಞಾನದ ಹಾಗೂ ಅನುಭವದ ಅಮೂಲ್ಯ ವಿಚಾರಗಳಿಂದ ತುಂಬಿವೆ. ಇವರ ಹಲವಾರು ಗ್ರಂಥಗಳಲ್ಲಿ ಭಾರತೀಯ ತತ್ತ್ವಜ್ಞಾನದ ರೂಪರೇಖೆಗಳೂ ಸಿದ್ಧಾಂತ ಪ್ರತಿಪಾದನೆ, ವಿವರಣೆಗಳೂ ವಿಶೇಷವಾಗಿ ಕಂಡುಬರುತ್ತವೆ. ಅಲ್ಲದೆ ಪ್ರಾಚೀನ ಭಾರತದ ಸಂದೇಶದ ಸಾರವೆನಿಸಿಕೊಳ್ಳ ಬಹುದಾದ ಆಧ್ಯಾತ್ಮಿಕ ಪರಿಪೂರ್ಣತೆಯೆಂಬ ಆದರ್ಶದ ಸ್ವರೂಪ ಎಂಥದೆಂಬುದನ್ನು ಇವರು ಒತ್ತಿ ಹೇಳಿದ್ದಾರೆ. ಈ ಆದರ್ಶ ಕಾಣಬರುವುದು ಕೇವಲ ತತ್ತ್ವಜ್ಞಾನಕ್ಕೆ ಸಂಬಂಧಪಟ್ಟ ಸಂಸ್ಕೃತ ಗ್ರಂಥಗಳಲ್ಲಿ ಮಾತ್ರವಲ್ಲದೆ, ಸಾಮಾನ್ಯವಾಗಿ ಎಲ್ಲ ಸಂಸ್ಕೃತ ಸಾಹಿತ್ಯವೂ ಇದರ ಉಸಿರುಳ್ಳದ್ದೆಂದು ಇವರ ಮತ. ಕಾಳಿದಾಸ, ಭವಭೂತಿ ಮುಂತಾದ ಮಹಾಕವಿಗಳ ಗ್ರಂಥಗಳೂ ಅದೇ ಪ್ರಕಾರ ಅಲಂಕಾರಶಾಸ್ತ್ರವೂ ಈ ಆದರ್ಶದಿಂದ ಪ್ರಭಾವಿತವೆಂಬ ವಿಚಾರವನ್ನು ಸಂದರ್ಭೋಚಿತವಾಗಿ ಇವರು ತೋರಿಸಿಕೊಟ್ಟಿದ್ದಾರೆ. ಅಲಂಕಾರಶಾಸ್ತ್ರದಲ್ಲಿನ ಸೌಂದರ್ಯಮೀಮಾಂಸೆಯು ಭಾರತೀಯ ದರ್ಶನದ ಬ್ರಹ್ಮಾನಂದವೆಂಬ ಮುಖ್ಯತತ್ತ್ವದ ಆಶ್ರಯದಲ್ಲಿ ರೂಪುಗೊಂಡಿರುವ ಬಗೆಯನ್ನು ನಿರೂಪಿಸಿ, ಭಾರತೀಯ ದಾರ್ಶನಿಕರು ಸೌಂದರ್ಯಮೀಮಾಂಸೆಗೂ ಸಾಕಷ್ಟು ಗಮನವನ್ನು ಕೊಟ್ಟಿದ್ದಾರೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಹೀಗೆ ಭಾರತೀಯ ತತ್ತ್ವಜ್ಞಾನದ ಅಧ್ಯಯನ ಅನುಷ್ಠಾನಗಳ ಸಮಗ್ರ ಪರಿಶೀಲನೆ ಪ್ರತಿಪಾದನೆಗಳು ಆ ಕ್ಷೇತ್ರದಲ್ಲಿ ಇವರ ವಿಶಿಷ್ಟ ಕೊಡುಗೆಗಳಾಗಿವೆ. ಅಲ್ಲದೆ ಅಲಂಕಾರಶಾಸ್ತ್ರವನ್ನು ಕುರಿತು ಇವರು ಮಾಡಿರುವ ಸಮೀಕ್ಷೆಗಳು ರಸಸ್ವರೂಪವನ್ನು ವಿವರಿಸುವುದರ ಜೊತೆಗೆ ರಸಾನುಭವಕ್ಕೂ ದರ್ಶನಗಳಲ್ಲಿನ ಬ್ರಹ್ಮಾನಂದಕ್ಕೂ ಇರುವ ಹೋಲಿಕೆ ವ್ಯತ್ಯಾಸಗಳ ನಿರೂಪಣೆಯನ್ನೊಳಗೊಂಡು ಆ ಶಾಸ್ತ್ರದ ವ್ಯಾಪ್ತಿವೈಶಿಷ್ಟ್ಯಗಳ ಅರಿವು ಹೆಚ್ಚುವಂತೆ ಮಾಡಿವೆ.

ಸದ್ಗುಣನಿಷ್ಠೆ, ಧ್ಯೇಯಪರಿಪಾಲನೆ, ಗ್ರಂಥರಚನೆ ಮುಂತಾದ ಸಾಧನೆಗಳಿಂದ ಹಿರಿಯಣ್ಣನವರು ತಮ್ಮ ವ್ಯಕ್ತಿತ್ವದ ಶ್ರೇಷ್ಠತೆಯನ್ನು ರೂಪಿಸಿಕೊಂಡಿದ್ದರು. ಭಾರತೀಯ ದಾರ್ಶನಿಕ ಜೀವನದ ಮಹತ್ತ್ವವನ್ನರಿತು ಅದಕ್ಕೆ ಸಂಬಂಧಪಟ್ಟ ಉಪದೇಶ ಸಂದೇಶಗಳನ್ನು ಆಚರಣೆಗೆ ತಂದ ಇವರ ಜೀವಿತ ಪರಿಪೂರ್ಣತೆ ಹಾಗೂ ಸಾರ್ಥಕತೆಗಳಿಗೆ ಆದರ್ಶವಾಗಿದೆ.

(ಬಿ.ಕೆ.ಎಸ್.)

**ಹಿರಿಯೂರು:** ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕನ್ನು ಉತ್ತರದಲ್ಲಿ ಚಳ್ಳಕೆರೆ, ವಾಯವ್ಯದಲ್ಲಿ ಚಿತ್ರದುರ್ಗ, ಪಶ್ಚಿಮದಲ್ಲಿ ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳೂ ದಕ್ಷಿಣದಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಮತ್ತು ಪೂರ್ವದಲ್ಲಿ ಶಿರಾ ತಾಲ್ಲೂಕುಗಳೂ ಈಶಾನ್ಯದಲ್ಲಿ ಆಂಧ್ರಪ್ರದೇಶವೂ ಸುತ್ತುವರಿದಿವೆ. ಜವಗೊಂಡನಹಳ್ಳಿ, ಹಿರಿಯೂರು, ಐಮಂಗಲ ಮತ್ತು ಧರ್ಮಪುರ ಹೋಬಳಿಗಳು. ಒಟ್ಟು 157 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 1,703.9 ಚ.ಕಿಮೀ. ಜನಸಂಖ್ಯೆ 2,64,719. ಇದರಲ್ಲಿ 2,15,913 ಮಂದಿ ಗ್ರಾಮಸ್ಥರೂ 48,806 ಮಂದಿ ಪಟ್ಟಣಿಗರೂ ಇದ್ದಾರೆ.

ತಾಲ್ಲೂಕಿನ ಪಶ್ಚಿಮದಲ್ಲಿ ಮಾರಿಕಣಿವೆ ಬೆಟ್ಟಸಾಲುಗಳಿವೆ. ಇವು ಉತ್ತರದ ಕಡೆ ಚಿತ್ರದುರ್ಗದವರೆಗೂ ಹಬ್ಬಿವೆ. ಇವುಗಳಲ್ಲಿ ಹೆಚ್ಚು ಎತ್ತರವಿರುವ ಉತ್ತರ ಸಾಲಿನ ಮತ್ತು ಹಿಂದಸಕಟ್ಟೆ ಸಾಲಿನ ಬೆಟ್ಟಗಳು ಮುಖ್ಯವಾದವು. ವೇದಾವತಿ ಈ ತಾಲ್ಲೂಕಿನ ಮುಖ್ಯನದಿ. ತಾಲ್ಲೂಕಿನ ಪಶ್ಚಿಮದಲ್ಲಿ ಪ್ರವೇಶಿಸಿ ತಾಲ್ಲೂಕು ಮಧ್ಯದಲ್ಲಿ ಈಶಾನ್ಯಾಭಿಮುಖವಾಗಿ ಸ್ವಲ್ಪ ದೂರ ಮತ್ತೆ ಪೂರ್ವಾಭಿಮುಖವಾಗಿ, ಅನಂತರ ಉತ್ತರಾಭಿಮುಖವಾಗಿ ಸ್ವಲ್ಪ ದೂರ ಮತ್ತೆ ಪೂರ್ವಾಭಿಮುಖವಾಗಿ, ಅನಂತರ ಉತ್ತರಾಭಿಮುಖವಾಗಿ ಹರಿದು ಚಳ್ಳಕೆರೆ ತಾಲ್ಲೂಕನ್ನು ಪ್ರವೇಶಿಸುವುದು. ಈ ನದಿ ತಾಲ್ಲೂಕಿನ ಉತ್ತರದಲ್ಲಿ ಸ್ವಲ್ಪ ದೂರ ತಾಲ್ಲೂಕಿನ ಎಲ್ಲೆಯಾಗಿ ಹರಿದು ಚಳ್ಳಕೆರೆ ತಾಲ್ಲೂಕನ್ನು ಬೇರ್ಪಡಿಸಿದೆ. ಈ ನದಿಗೆ ಮಾರಿಕಣಿವೆಯ ಬಳಿ ಭಾರಿ ಅಡ್ಡಕಟ್ಟೆ ಕಟ್ಟಿ ವಾಣೀವಿಲಾಸಸಾಗರ ಜಲಾಶಯವನ್ನು ನಿರ್ಮಿಸಲಾಗಿದೆ. ಇದರಿಂದ ಹಿರಿಯೂರು ತಾಲ್ಲೂಕಿನ ವ್ಯವಸಾಯಕ್ಕೆ ಅನುಕೂಲವಾಗಿದೆ. ಗರಣಿಹಳ್ಳ ಮತ್ತು ಸ್ವರ್ಣಮುಖಿ ಈ ತಾಲ್ಲೂಕಿನಲ್ಲಿ ಹರಿದು ವೇದಾವತಿಯನ್ನು ಸೇರುವ ಇನ್ನೆರಡು ಮುಖ್ಯ ನದಿಗಳು. ಉತ್ತಮ ಹವಾಗುಣವಿರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 470.31 ಮಿಮೀ.

ಈ ತಾಲ್ಲೂಕಿನ ಗೋಗುಡ್ಡದ ಬಳಿ ಕಲ್ನಾರು, ಗವನಹಳ್ಳಿ ಬಳಿ ಕ್ಯಾಲ್ಸೈಟ್ ದೊರೆಯುವುದು. ಈ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರು ಸ್ವಲ್ಪಮಟ್ಟಿಗೆ ದೊರೆಯುತ್ತದೆ. ಜವಗೊಂಡನಹಳ್ಳಿ, ಅಣ್ಣಿಸಿದ್ರಿ ಮತ್ತು ದಿಂಡಿವಾರಗಳಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನ ತೆಗೆಯುತ್ತಿದ್ದ ಬಗ್ಗೆ ಸೂಚನೆಗಳಿವೆ. ನಿಶಾನಿಗುಡ್ಡದ ಬಳಿ ಸೀಸದ ಅದಿರು ಇದೆ. ಈ ತಾಲ್ಲೂಕಿನಲ್ಲಿ 11,957 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಮಳೆ ಕಡಿಮೆಯಿರುವ

ಪ್ರಯುಕ್ತ ಕುರುಚಲು ಕಾಡುಗಳೇ ಹೆಚ್ಚಾಗಿದ್ದು ಹುಣಿಸೆ, ಮಾವು, ಹಿಪ್ಪೆ, ಜಾಲಿ ಗಿಡಗಳು ಮತ್ತು ಸೀತಾಫಲ ಮುಂತಾದವು ಬೆಳೆಯುತ್ತವೆ. ಜಿಂಕೆಗಳು ಇತರ ಸಾಮಾನ್ಯ ಕಾಡು ಪ್ರಾಣಿಗಳನ್ನು ಈ ಅರಣ್ಯ ಪ್ರದೇಶದಲ್ಲಿ ಕಾಣಬಹುದು. ಕೆರೆ, ಬಾವಿಗಳ ಜೊತೆಗೆ ವಾಣೀವಿಲಾಸಸಾಗರದ ನಾಲೆಗಳಿಂದ ಮತ್ತು ಗಾಯತ್ರಿ ಜಲಾಶಯದಿಂದ ತಾಲ್ಲೂಕಿಗೆ ಸಾಕಷ್ಟು ಜಲಪೂರೈಕೆಯಾಗಿ ಜೋಳ, ರಾಗಿ, ಬತ್ತ, ತೊಗರಿ, ಕಬ್ಬು, ಹತ್ತಿ, ತೈಲಬೀಜಗಳು, ಅಡಕೆ, ವಿವಿಧ ಫಲ ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತದೆ. ಹಿರಿಯೂರಿಗೆ 3 ಕಿಮೀ ದೂರದಲ್ಲಿರುವ ಬಬ್ಬೂರು ಕೃಷಿ ಕ್ಷೇತ್ರ ಕಬ್ಬು, ಹತ್ತಿ ಮತ್ತು ತೋಟದ ಬೆಳೆಗಳ ಸಂಶೋಧನ ಕೇಂದ್ರಗಳಿಂದ ಇಲ್ಲಿಯ ಪ್ರಯೋಗ–ಫಲಿತಾಂಶಗಳು ಉಪಯುಕ್ತವಾಗಿ ಅದನ್ನು ಮಂಡ್ಯ ಮುಂತಾದ ಕಡೆ ಉಪಯೋಗಿಸಿಕೊಂಡು ಫಲ ಪಡೆಯಲಾಗಿದೆ. ಪಶುಪಾಲನೆಯಿದ್ದು ಪಟ್ಟಣ ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ. ತೊರೆ, ನದಿಗಳು ಮತ್ತು ಜಲಾಶಯಗಳಿರುವುದರಿಂದ ಮತ್ಸ್ಯೋದ್ಯಮವೂ ಇದೆ.

ಈ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಿ ಇತರ ಕೈಗಾರಿಕಾ ಪ್ರಗತಿಗೆ ನಾಂದಿ ಹಾಡಿದೆಯೆನ್ನಬಹುದು. ಕೆಲವೊಂದು ಗ್ರಾಮೋದ್ಯೋಗಗಳ ಸಹಕಾರಿ ಸಂಘಗಳೂ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳೂ ಇವೆ. ವಿದ್ಯುತ್, ಅಂಚೆ, ತಂತಿ, ದೂರವಾಣಿ, ಆಸ್ಪತ್ರೆ, ಪ್ರೌಢಶಾಲೆ ಮುಂತಾದವುಗಳ ಸೌಲಭ್ಯವಿದೆ.

ಹಿರಿಯೂರಿಗೆ ಈಶಾನ್ಯದಲ್ಲಿ 26 ಕಿಮೀ ದೂರದಲ್ಲಿರುವ ಅಬ್ಬಿನಹೊಳೆ ಒಂದು ಪುರಾತನ ಸ್ಥಳ. ನೊಳಂಬ ದೊರೆ ಅಯ್ಯಪ್ಪನ 923ರ ಶಿಲಾಶಾಸನ ಮತ್ತು ಈ ಊರಿನ ಶಾನುಭೋಗದ ಹಕ್ಕಿಗಾಗಿ ಕಾದ ತುಪ್ಪದಲ್ಲಿ ಕೈ ಇಟ್ಟು ನೆರೆದಿದ್ದ ಸಭೆಗೆ ತೋರಿ ತನ್ನ ಹಕ್ಕನ್ನು ಸ್ಥಾಪಿಸಿದವನ ಪ್ರಸಂಗ ಹೇಳಿರುವ 1664ರ ಶಾಸನ ಇಲ್ಲಿವೆ. ಇಲ್ಲೊಂದು ರಂಗನಾಥ ದೇವಾಲಯವಿದೆ. ಹಿರಿಯೂರು–ಚಿತ್ರದುರ್ಗ ಮಾರ್ಗದಲ್ಲಿರುವ ಐಮಂಗಲ **(ನೋಡಿ)** ಹಿರಿಯೂರಿನ ವಾಯವ್ಯಕ್ಕೆ 18 ಕಿಮೀ ದೂರದಲ್ಲಿದೆ. ಈ ಊರಿನ ವೀರಭದ್ರ ದೇವಾಲಯ ಹೆಸರಾದದ್ದು. ಇಲ್ಲಿ ಹಿಂದಿನ ಕೋಟೆಯ ಅವಶೇಷವಿದೆ. ಇದು ಖಾದಿ ಗ್ರಾಮೋದ್ಯೋಗ ಕೇಂದ್ರ. ಹಿರಿಯೂರಿನ ಪಶ್ಚಿಮಕ್ಕೆ 14 ಕಿಮೀ ದೂರದಲ್ಲಿರುವ ಭರಮಗೆರೆಯಲ್ಲಿ ಕಣಿವೆ ಮಾರಮ್ಮನ ಉತ್ಸವಮೂರ್ತಿಯಿದ್ದು ವರ್ಷಕ್ಕೊಮ್ಮೆ ಜಾತ್ರೆಯಾಗುವುದು. ಇದು 17ನೆಯ ಶತಮಾನದ ಪಾಳೆಯಗಾರ ಭರಮಣ್ಣನಾಯಕನ ಹೆಸರಿನಿಂದ ಸ್ಥಾಪಿತವಾದ ಗ್ರಾಮ. ಹಿರಿಯೂರಿನ ಉತ್ತರಕ್ಕೆ 16ಕಿಮೀ ದೂರದಲ್ಲಿರುವ ಹರ್ತಿಕೋಟೆ ತುಮಕೂರು ಜಿಲ್ಲೆಯ ನಿಡುಗಲ್ಲನ್ನು ಆಳಿದ ವಂಶಸ್ಥರಿಗೆ ಸ್ವಲ್ಪಕಾಲ ಮುಖ್ಯ ಕೇಂದ್ರವಾಗಿತ್ತು. ಹಿರಿಯೂರಿಗೆ ನೈಋತ್ಯದಲ್ಲಿ 19ಕಿಮೀ ದೂರದಲ್ಲಿರುವ ವಾಣೀವಿಲಾಸಪುರವೇ ಪ್ರಸಿದ್ಧ ಮಾರಿಕಣಿವೆ ಎಂದು ಕರೆಯುತ್ತಿದ್ದ ಗ್ರಾಮ. ವಾಣೀವಿಲಾಸಸಾಗರಕ್ಕೆ ಈ ಗ್ರಾಮದ ಮುಖಾಂತರ ಹಾದುಹೋಗಬೇಕು.

ಹಿರಿಯೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬೆಂಗಳೂರು–ಚಿತ್ರದುರ್ಗ ಹೆದ್ದಾರಿಯಲ್ಲಿ ಚಿತ್ರದುರ್ಗಕ್ಕೆ ಆಗ್ನೇಯದಲ್ಲಿ 40 ಕಿಮೀ ದೂರದಲ್ಲಿದೆ. ಜನಸಂಖ್ಯೆ 48,806. ವೇದಾವತಿ ನದಿಯ ಬಲದಂಡೆಯ ಮೇಲೆ ಇರುವ ಈ ಪಟ್ಟಣ ಒಂದು ಮುಖ್ಯ ವ್ಯಾಪಾರ ಕೇಂದ್ರ. ಇಲ್ಲಿ ಪ್ರೌಢಶಾಲೆ, ಆಸ್ಪತ್ರೆ, ಅಂಚೆ, ತಂತಿ, ದೂರವಾಣಿ, ವಿದ್ಯುತ್ತು ಮತ್ತು ಬ್ಯಾಂಕ್ ಮುಂತಾದ ಸೌಲಭ್ಯಗಳಿವೆ. ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಿ ಪಟ್ಟಣದ ವಿಸ್ತರಣೆ, ಅಭಿವೃದ್ಧಿಯಾಗುತ್ತಿದೆ. ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ.

ಸು. 16ನೆಯ ಶತಮಾನದಲ್ಲಿ ಮಾಯಾಸಮುದ್ರದ ಕೇಶವನಾಯಕನಿಂದ ಸ್ಥಾಪಿತವಾದ ಈ ಊರನ್ನು ಆ ವಂಶದ ಮೂರು ತಲೆಮಾರಿನವರು ಆಳಿದರು. ಆ ಕಾಲದಲ್ಲಿ ನಗರ ತುಂಬ ಅಭಿವೃದ್ಧಿ ಹೊಂದಿತು. ಅನಂತರ ಇದು ಬಿಜಾಪುರದ ವಶವಾಯಿತು. ಮುಂದೆ ಕೆಲಕಾಲ ಚಿತ್ರದುರ್ಗದ ಪಾಳೆಯಗಾರರ ವಶದಲ್ಲಿದ್ದು 1762ರಲ್ಲಿ ಹೈದರ್ ಅಲಿಯ ಕೈಸೇರಿತು. ಹೈದರ್ ಅಲಿ ಮತ್ತು ಮರಾಠರ ನಡುವಣ ಕದನಗಳ ದೀರ್ಘಾವಧಿಯಲ್ಲಿ ಅಪಾರ ಕಷ್ಟನಷ್ಟಗಳನ್ನು ಅನುಭವಿಸಿತು. ದ್ರಾವಿಡ ಶೈಲಿಯ ತೇರುಮಲ್ಲೇಶ್ವರ ಇಲ್ಲಿನ ಮುಖ್ಯ ದೇವಾಲಯ. ಈ ದೇವಾಲಯಕ್ಕೆ ಮೂರು ಪ್ರವೇಶದ್ವಾರಗಳಿದ್ದು ಮಹಾದ್ವಾರದ ಎದುರು ಉಯ್ಯಾಲೆ ಕಂಬವಿದೆ. ಸು. 45' ಎತ್ತರದ ದೀಪಸ್ತಂಭದ ತುದಿಯಲ್ಲಿ ಬಸವನ ವಿಗ್ರಹ ಮತ್ತು ನಾಲ್ಕೂ ದಿಕ್ಕಿನಲ್ಲಿ ಒಂದೊಂದರಲ್ಲೂ ಸುಮಾರು 10 ಸೇರು ಎಣ್ಣೆಯನ್ನು ತುಂಬಬಹುದಾದ ಎರಡೆರಡು ಕಬ್ಬಿಣದ ದೊಡ್ಡ ಸೊಡರುಗಳಿವೆ. ಇವುಗಳನ್ನು ವರ್ಷಕ್ಕೊಮ್ಮೆ ಹಚ್ಚಲಾಗುತ್ತದೆ. ನವರಂಗದಲ್ಲಿ ಶಿವಪಾರ್ವತಿಯರ ವಿಗ್ರಹಗಳೂ ನಂದಿಯ ಮೇಲೆ ಕುಳಿತ ಉಮಾಮಹೇಶ್ವರರ ವಿಗ್ರಹಗಳೂ ಇವೆ. ಪ್ರತಿವರ್ಷ ಮಾಘಮಾಸದಲ್ಲಿ ರಥೋತ್ಸವ ನಡೆಯುವುದು.

ಅಂಬಿಕಾವಿಜಯ ಮತ್ತು ಪರಶುರಾಮ ರಾಮಾಯಣಗಳನ್ನು ಬರೆದ ಕನ್ನಡ ಕವಿ ಬಬ್ಬೂರು ರಂಗನ ಜನ್ಮಸ್ಥಳ ಹಿರಿಯೂರು ಎಂದು ಹೇಳಲಾಗಿದೆ. ದಂಡಿಯ ಸಂಸ್ಕೃತ ಕಾವ್ಯಾದರ್ಶವನ್ನು ಕನ್ನಡಿಸಿದ ಮಾಧವಕವಿ ತಾನು ಹಿರಿಯೂರ ಪ್ರಭು ಎಂದು ಹೇಳಿಕೊಂಡಿದ್ದರೂ ಆ ಹಿರಿಯೂರು ಇದೇ ಹಿರಿಯೂರೇ ಎಂಬುದು ನಿಶ್ಚಿತವಾಗಿಲ್ಲ. *

**ಹಿರೀಸಾವೆ:** ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ, ಚನ್ನರಾಯಪಟ್ಟಣದ ಈಶಾನ್ಯಕ್ಕೆ 19 ಕಿಮೀ ದೂರದಲ್ಲಿ ಚನ್ನರಾಯಪಟ್ಟಣ–ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿದೆ. ಜನಸಂಖ್ಯೆ 4,260. ಶ್ರವಣಬೆಳಗೊಳ ಈ ಗ್ರಾಮದ ನೈಋತ್ಯಕ್ಕೆ ಸು. 14 ಕಿಮೀ ದೂರದಲ್ಲಿದೆ.

ಗ್ರಾಮಕ್ಕೆ ಇತ್ತೀಚೆಗೆ ಹೇಮಾವತಿ ಜಲಾಶಯದ ನಾಲಾ ನೀರಿನ ಸೌಕರ್ಯ ಕಲ್ಪಿಸಲಾಗುತ್ತಿದೆ. ಇಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆ. ಆಸ್ಪತ್ರೆ, ಬ್ಯಾಂಕ್, ವಿದ್ಯುತ್ತು, ಅಂಚೆ, ತಂತಿ, ದೂರವಾಣಿ ಮುಂತಾದವುಗಳ ಸೌಕರ್ಯವಿದೆ. ಪ್ರತಿ ಭಾನುವಾರ ಇಲ್ಲಿ ಸಂತೆ ನಡೆಯುವುದು. ಊರಿನ ಗ್ರಾಮ ದೇವತೆ ಚೌಡೇಶ್ವರಿಯ ಹಬ್ಬ ವರ್ಷಕ್ಕೊಮ್ಮೆ ನಡೆಯುತ್ತದೆ.

ಈ ಊರು ಹೊಳೆನರಸೀಪುರ, ಚನ್ನರಾಯಪಟ್ಟಣ ಮತ್ತು ನುಗ್ಗೇಹಳ್ಳಿ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟಿದ್ದಂತೆ ತಿಳಿಯುತ್ತದೆ. ಹದಿನಾರನೆಯ ಶತಮಾನದ ಅನಂತರ ಮೈಸೂರು ಅರಸರ ಆಳಿಕೆಗೆ ಸೇರಿತು. ಹಿಂದೆ ಇಬ್ಬರು ಶ್ರೀಮಂತ ಅಕ್ಕತಂಗಿಯರಿದ್ದು ಹಿರಿಯವಳು ತನ್ನ ಸೇವಾರ್ಥ ಹರೀಸೇವೆಯನ್ನೂ ಕಿರಿಯವಳು ಈ ಗ್ರಾಮಕ್ಕೆ ಸಮೀಪದಲ್ಲಿರುವ ಕಿರೀಸೇವೆಯನ್ನೂ ಕಟ್ಟಿಸಿದಳೆಂದು ಐತಿಹ್ಯ. **(ಆರ್.ಸಿ.ಜಿ.)**

**ಹಿರೇಕೆರೂರು:** ಹಾವೇರಿ ಜಿಲ್ಲೆಯ ಒಂದು ತಾಲ್ಲೂಕು, ತಾಲ್ಲೂಕಿನ ಆಡಳಿತ ಕೇಂದ್ರ ಪಟ್ಟಣ. ಈ ತಾಲ್ಲೂಕನ್ನು ಉತ್ತರದಲ್ಲಿ ಬ್ಯಾಡಗಿ, ಪೂರ್ವದಲ್ಲಿ ರಾಣೆಬೆನ್ನೂರು ಮತ್ತು ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕೂ ಪಶ್ಚಿಮ ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ, ಶಿಕಾರಿಪುರ, ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕುಗಳೂ ಸುತ್ತುವರಿದಿವೆ. 126 ಗ್ರಾಮಗಳಿರುವ ತಾಲ್ಲೂಕಿನ ವಿಸ್ತೀರ್ಣ 801.6 ಚ.ಕಿಮೀ. ಜನಸಂಖ್ಯೆ 2,12,458. ಇದರಲ್ಲಿ 1,96,586 ಮಂದಿ ಗ್ರಾಮವಾಸಿಗಳು, 15,872 ಮಂದಿ ಪಟ್ಟಣಿಗರು.

ಜಿಲ್ಲೆಯ ದಕ್ಷಿಣದ ಕೊನೆಯಲ್ಲಿರುವ ಈ ತಾಲ್ಲೂಕು ಸಹ್ಯಾದ್ರಿ ವಲಯದ ಪೂರ್ವ ಪ್ರದೇಶಕ್ಕೆ ಸೇರಿದ್ದು ಸಾಮಾನ್ಯ ಬೆಟ್ಟಗುಡ್ಡಗಳಿಂದ ಕೂಡಿದೆ. ಇವುಗಳಲ್ಲಿ ಮಾಸೂರು ಮತ್ತು ಕಡೂರು ಗುಡ್ಡಗಳು ಮುಖ್ಯವಾದವು. ಗಂಧದ ಮರಗಳಿಂದ ಕೂಡಿದ ಕುರುಚಲು ಅರಣ್ಯ ಪ್ರದೇಶವಿದೆ. ಸಾಕಷ್ಟು ಮಳೆ ಬೀಳುವ ಈ ತಾಲ್ಲೂಕಿನ ಹವಾಗುಣ ಹಿತಕರವೆನ್ನಬಹುದು. ತುಂಗಭದ್ರಾ ಈ ತಾಲ್ಲೂಕಿನ ಮುಖ್ಯ ನದಿ. ತಾಲ್ಲೂಕಿನ ಪೂರ್ವದಂಚಿನಲ್ಲಿ ಸ್ವಲ್ಪ ದೂರ ಗಡಿಯಾಗಿ ಹರಿದು ಹೊನ್ನಾಳಿ ಮತ್ತು ಹರಿಹರ ತಾಲ್ಲೂಕುಗಳನ್ನು ಬೇರ್ಪಡಿಸಿದೆ. ಈ ನದಿಯ ಎಡದಂಡೆಯುದ್ದಕ್ಕೂ ರೇವೆಮಣ್ಣಿನ ಪ್ರದೇಶವಿದೆ. ತಾಲ್ಲೂಕಿನ ದಕ್ಷಿಣ ಮತ್ತು ಪೂರ್ವ ಪ್ರದೇಶ ಹುಳಕೆರೆ ಮಣ್ಣಿನಿಂದಲೂ ಉಳಿದ ಕೆಲವೆಡೆ ಕೆಂಪು ಮತ್ತು ಕಪ್ಪುಮಿಶ್ರಿತ ಮಣ್ಣಿನಿಂದಲೂ ಕೂಡಿದೆ.

ಹಿರೇಕೆರೂರು, ಚಿಕ್ಕೆರೂರು ಕೆರೆಗಳೂ ಪ್ರಸಿದ್ಧ ಮಾಸೂರು ಮದಗ ಕೆರೆಯೂ ಈ ತಾಲ್ಲೂಕಿನಲ್ಲಿವೆ. ನಾಲೆ ಮತ್ತು ಕೆರೆ ಬಾವಿಗಳಿಂದ ವ್ಯವಸಾಯಕ್ಕೆ ನೀರಾವರಿ ಕಲ್ಪಿಸಲಾಗಿದೆ. ಜೋಳ, ಬತ್ತ, ಕಬ್ಬು, ರಾಗಿ, ಹೆಸರು, ಹುರುಳಿ, ಕಡಲೆ, ತೊಗರಿ, ಮೆಣಸಿನಕಾಯಿ, ಸೇಂಗಾ ಮತ್ತು ಇತರ ಎಣ್ಣೆಬೀಜಗಳನ್ನೂ ಬೆಳೆಯುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಉಂಟು. ತಾಲ್ಲೂಕಿನಲ್ಲಿ ಅಕ್ಕಿಗಿರಣಿಗಳು, ಮರಗೆಲಸ, ಮರದ ಸಾಮಾನುಗಳ ತಯಾರಿಕೆ ಮತ್ತು ಗ್ರಾಮೋದ್ಯೋಗಗಳುಂಟು.

ಹಿರೇಕೆರೂರಿನ ಆಗ್ನೇಯಕ್ಕೆ 11 ಕಿಮೀ ದೂರದಲ್ಲಿರುವ ಮಾಸೂರು ಬಳಿ ಪ್ರಸಿದ್ಧ ಮದಗ ಕೆರೆಯೂ ಒಂದು ಹಳೆಯ ಕೋಟೆಯೂ ಇದೆ. ಇದೊಂದು ಸುತ್ತಲ ಗ್ರಾಮಗಳಿಗೆ ವ್ಯಾಪಾರಸ್ಥಳವೂ ಆಗಿದೆ. ಹಿರೇಕೆರೂರಿನ ನೈಋತ್ಯಕ್ಕೆ ಸು. 19 ಕಿಮೀ ದೂರದಲ್ಲಿರುವ ವರಾಹ ಗ್ರಾಮದಲ್ಲಿ ವೀರಬ್ರಹ್ಮ ದೇವಾಲಯದ ಬಳಿ ಕೆಲವು ಮಾಸ್ತಿಕಲ್ಲುಗಳಿವೆ. ಹಿರೇಕೆರೂರಿನ ವಾಯವ್ಯದಲ್ಲಿ ಸು. 2 ಕಿಮೀ ದೂರದಲ್ಲಿರುವ ಬಾಳಂಬೀಡ ಗ್ರಾಮದಲ್ಲಿ ವಿಷಪರಿಹಾರೇಶ್ವರ ಮತ್ತು ಬಸವನ ದೇವಾಲಯಗಳಿವೆ. ಗ್ರಾಮದಲ್ಲಿ ದೊರೆತಿರುವ ಐದು ಶಾಸನಗಳಲ್ಲಿ ಮೂರು ಶಾಸನಗಳು 1058, 1079 ಮತ್ತು 1088ನೆಯ ಕಾಲಗಳಿಗೆ ಸೇರಿದವೆಂದು ಗುರುತಿಸಲಾಗಿದೆ. ಲಿಂಗವಿರುವ ವಿಷಪರಿಹಾರೇಶ್ವರ ದೇವಾಲಯ ವಿಷಜಂತುಗಳ ಕಡಿತದ ವಿಷವನ್ನು ಪರಿಹರಿಸುವುದೆಂದು ಸ್ಥಳೀಯ ನಂಬಿಕೆ. ಹಿರೇಕೆರೂರಿನ ಉತ್ತರಕ್ಕಿರುವ ಚಿನ್ನಮುಳಗುಂದ ಗ್ರಾಮದ ಈಶಾನ್ಯಕ್ಕೆ ಚಿಕ್ಕೇಶ್ವರ ದೇವಾಲಯವಿದೆ. ಗ್ರಾಮದ ಪೂರ್ವದಲ್ಲಿರುವ ಒಂದು ಗುಡ್ಡದಲ್ಲಿ ಸಿದ್ಧೇಶ್ವರ ಉದ್ಭವಲಿಂಗವಿದೆ. ಹಿರೇಕೆರೂರಿನ ಉತ್ತರಕ್ಕೆ ಸು. 9 ಕಿಮೀ ದೂರದಲ್ಲಿರುವ ಅಬ್ಬಲೂರು ಗ್ರಾಮದಲ್ಲಿ ಅನೇಕ ಐತಿಹಾಸಿಕ ಶಾಸನಗಳಿವೆ. 12ನೆಯ ಶತಮಾನದಲ್ಲಿ ಈ ಗ್ರಾಮ ಜೈನರ ಮುಖ್ಯ ಕೇಂದ್ರವಾಗಿತ್ತು. ಏಕಾಂತದ ರಾಮಯ್ಯ ಇಲ್ಲಿನ ಜೈನರೊಡನೆ ವಾದಿಸಿದನೆಂದೂ ಮುಂದೆ ಶೈವಮತ ಅಭಿವೃದ್ಧಿಯಾಯಿತೆಂದೂ ತಿಳಿದು ಬರುತ್ತದೆ. ಇಲ್ಲಿ ಬ್ರಹ್ಮೇಶ್ವರ ಮತ್ತು ಸೋಮೇಶ್ವರ ದೇವಾಲಯಗಳಿವೆ. ಅಬ್ಬಲೂರು ಸರ್ವಜ್ಞನ ಹುಟ್ಟೂರೆನ್ನಲಾಗಿದೆ. ಹಿರೇಕೆರೂರಿನ ಆಗ್ನೇಯಕ್ಕೆ ಸು.14 ಕಿಮೀ ದೂರದಲ್ಲಿರುವ ರಟ್ಟೀಹಳ್ಳಿಯಲ್ಲಿ ಪುರಾತನ ಕದಂಬೇಶ್ವರ ದೇವಾಲಯ ಮತ್ತು ಒಂದು ಹಳೆಯ ಕೋಟೆಯಿದೆ. ಇಲ್ಲಿ ಚಾಳುಕ್ಯ, ಕಳಚುರಿ, ಸೇವುಣ ಮತ್ತು ವಿಜಯನಗರದ ಅರಸರಿಗೆ ಸೇರಿದ ಶಾಸನಗಳಿವೆ. ಹಿರೇಕೆರೂರಿನ ಆಗ್ನೇಯಕ್ಕೆ ಸು. 22 ಕಿಮೀ ದೂರದಲ್ಲಿ ನಾಗವಂದವಿದೆ. ಈ ಗ್ರಾಮದಲ್ಲಿರುವ ನಾಗಾರ್ಜುನ ದೇವಾಲಯ ಹೆಸರಾದದ್ದು.

ಹಿರೇಕೆರೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಹುಬ್ಬಳ್ಳಿ-ಧಾರವಾಡದ ದಕ್ಷಿಣದಲ್ಲಿರುವ ಈ ಊರು ಹತ್ತಿರದ ಬ್ಯಾಡಗಿಯ ನೈಋತ್ಯಕ್ಕೆ 34 ಕಿಮೀ ದೂರದಲ್ಲಿದೆ. ಪಟ್ಟಣದಲ್ಲಿ 8,112 ಮಂದಿ ಪುರುಷರು, 7,762 ಮಂದಿ ಮಹಿಳೆಯರಿದ್ದು ಜನಸಂಖ್ಯೆ 15,872.

ಹಿಂದೆ ಈ ಊರಿಗೆ ಪಿರಿಯ ಕೆರೆಯೂರು (ದೊಡ್ಡಕೆರೆಯುಳ್ಳ ಊರು) ಎಂಬ ಹೆಸರಿದ್ದು ಬರುಬರುತ್ತ ಹಿರೇಕೆರೂರು ಆಯಿತೆಂದು ಪ್ರತೀತಿ. ಊರಿನಲ್ಲಿ ತೋಟದ ವೀರಣ್ಣ, ಜನಾರ್ದನ, ಹನುಮಂತ ಮತ್ತು ದುರ್ಗಾ ದೇವಾಲಯಗಳಿವೆ. ತೋಟದ ವೀರಣ್ಣ ದೇವಾಲಯದ ಬಳಿಯಿರುವ ಸೂರ್ಯದೇವರು, ಜನಾರ್ದನ, ದುರ್ಗಾ ದೇವಾಲಯದಲ್ಲಿರುವ ತ್ರೈಪುರುಷ ಮತ್ತು ದುರ್ಗಾ ಈ ವಿಗ್ರಹಗಳು ನೋಡತಕ್ಕವು. ಇಲ್ಲಿ ಒಂಬತ್ತು ಶಾಸನಗಳು ದೊರಕಿವೆ. *

**ಹಿರೇಬಾಗೇವಾಡಿ:** ಬೆಳಗಾಂವಿಯ ಜಿಲ್ಲೆಯ ಮತ್ತು ಅದೇ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ ಹಾಗೂ ಹೋಬಳಿ ಕೇಂದ್ರ. ಬೆಳಗಾಂವಿಯ ಆಗ್ನೇಯದಲ್ಲಿ 19 ಕಿಮೀ ದೂರದಲ್ಲಿದೆ. ಈ ಊರಿನ ಪ್ರಮುಖ ದೇವತೆಗಳು ಪ್ರಭುದೇವ, ವೀರಭದ್ರ, ಬೆಳ್ಳಿಬಸವಣ್ಣ. ಈ ಗ್ರಾಮಕ್ಕೆ ಭೇಟಿ ನೀಡಿದ್ದ ಅಲ್ಲಮಪ್ರಭುವಿನ ನೆನಪಿಗಾಗಿ ಇಲ್ಲಿ ಪ್ರಭುದೇವರ ದೇವಾಲಯ ನಿರ್ಮಿಸಿದ್ದಾಗಿ ತಿಳಿದುಬರುತ್ತದೆ. 1249ರಲ್ಲಿ ಯಾದವ ಕನ್ನರದೇವ ತನ್ನ ಮಂತ್ರಿಯಾದ ಚೌಡಶೆಟ್ಟಿಯ ಅಪೇಕ್ಷೆಯ ಮೇರೆಗೆ ಈ ಊರನ್ನು ಉಂಬಳಿಯಾಗಿ 110 ಜನ ಬ್ರಾಹ್ಮಣರಿಗೆ ಕೊಟ್ಟದ್ದಾಗಿ ತಿಳಿದುಬರುತ್ತದೆ. ಇದರ ಹೆಸರು ತಾಮ್ರಪುರಿ. ಈ ಊರಿನ ಹರಿಜನಕೇರಿಯಲ್ಲಿ ದುರ್ಗವ್ವನ, ಮರೆವ್ವನ ದೇವಾಲಯಗಳಿವೆ. ನಿಜಗುಣೆಪ್ಪನ ಮಠವೂ ಇಲ್ಲಿದೆ. ದೇಸಾಯಿಯ ಸಣ್ಣ ಗದ್ದುಗೆಯ ಮುಂದೆ ಎರಡು ವೀರಗಲ್ಲುಗಳಿವೆ. ಮಾರುತಿ ದೇವಾಲಯದ ಎದುರಿಗೆ ಒಂದು ಮಹಾಸತಿ ಕಲ್ಲು ಇದೆ. ಪ್ರತಿವರ್ಷ ಯುಗಾದಿಗೆ 'ಬೆಳ್ಳಿ ಬಸವಣ್ಣ' ದೇವರ ಜಾತ್ರೆ ನೆರವೇರುತ್ತದೆ. ಆಗ ಸಾವಿರಾರು ಜನ ಸೇರುತ್ತಾರೆ. ಹಿಂದು-ಮುಸ್ಲಿಮರ ಸಾಮರಸ್ಯದ ಸಂಕೇತವೆಂಬಂತೆ ಇಲ್ಲಿನ ಮುಸ್ಲಿಮ್ ಸಂತನ ದರ್ಗಾಕ್ಕೆ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಹಿಂದು ಅನುಯಾಯಿಗಳಿದ್ದಾರೆ. ಸೈಯ್ಯದ್ ಮಹಮ್ಮದ ಗೌಸ್ ಖಾದ್ರಿ ಮೂಲತಃ ಅರ್ಕಾಡದವನಿದ್ದು ಇಲ್ಲಿ ಎರಡು ಮಸೀದಿ ಹಾಗೂ ದರ್ಗಾ ಸ್ಥಾಪಿಸಿದ್ದ. ಪ್ರತಿವರ್ಷ ಉರುಸ್ ನೆರವೇರುವುದು. ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ವೀರಭದ್ರ ದೇವಾಲಯ ಜೀರ್ಣೋದ್ಧಾರಗೊಂಡಿದೆ. (ಎಂ.ಬಿ.ಎಚ್.)

**ಹಿರೇಮಗಳೂರು:** ಚಿಕ್ಕಮಗಳೂರು ಜಿಲ್ಲೆ ಅದೇ ತಾಲ್ಲೂಕಿನಲ್ಲಿ ಕಸಬೆಯಿಂದ 2 ಕಿಮೀ ವಾಯವ್ಯಕ್ಕಿರುವ ಗ್ರಾಮ.

11ನೆಯ ಶತಮಾನದಲ್ಲಿ ಪಿರಿಯಮುಗುಳಿ ಎಂಬ ಹೆಸರಿನ ಅಗ್ರಹಾರವಾಗಿತ್ತು. ಇದು ಪರಶುರಾಮನ ವಾಸಸ್ಥಾನ, ಜನಮೇಜಯ ಸರ್ಪಯಾಗ ಮಾಡಿದ್ದು ಮತ್ತು ಸರ್ವಸಿದ್ಧರು ತಪಸ್ಸು ಮಾಡಿದ್ದು ಇಲ್ಲಿಯೇ ಎಂದು ಸ್ಥಳಪುರಾಣ. ಜನಮೇಜಯನ ಯಾಗದ ಯೂಪಸ್ತಂಭವೆನ್ನುವ ಈಶ್ವರನ ಗುಡಿಯ ಮುಂದಿರುವ 9 ಅಡಿ ಎತ್ತರವಿರುವ ಒಂದು ಸ್ತಂಭದ ಮೇಲೆ 2-3ನೆಯ ಶತಮಾನದ ಅಸ್ಪಷ್ಟ ಶಾಸನವಿದೆ.

ಇಲ್ಲಿನ ಈಶ್ವರ ದೇವಾಲಯ ಮೂಲತಃ 8-9ನೆಯ ಶತಮಾನದ್ದು. ಕಂಬ, ಬಾಗಿಲುವಾಡ ಬಿಟ್ಟು ಮಿಕ್ಕ ಭಾಗಗಳು ನವೀಕೃತವಾಗಿವೆ. ದೇವಾಲಯದ ಆವರಣದಲ್ಲಿ ನಾಲ್ಕು ಕೈ, ಎಂಟು ಕಾಲು, ಕೆದರಿ ಇಳಿಬಿದ್ದ ಕೂದಲು, ಯಜ್ಞೋಪವೀತ, ಕೃಷ್ಣಾಜಿನ ಇರುವ ಜಡೆಮುನಿ ಎಂದು ಕರೆಯುವ ಒಂದು ಅಪೂರ್ವ ಪ್ರಾಚೀನ ಮೂರ್ತಿ ಶಿಲ್ಪವಿದೆ. ಕೋದಂಡರಾಮನ ದೇವಸ್ಥಾನ ಈ ಊರಿನ ದೊಡ್ಡ ಗುಡಿ. ಇದರ ಗರ್ಭಗೃಹ ಮತ್ತು ಸುಕನಾಸಿಗಳು ಹೊಯ್ಸಳ ಶೈಲಿಯಲ್ಲೂ ಮುಂದಿರುವ ನವರಂಗ ಮಂಟಪ ದ್ರಾವಿಡ ಶೈಲಿಯಲ್ಲೂ ಇವೆ. ದೇವಾಲಯದ ಪ್ರಾಕಾರ

ದಲ್ಲಿ ವೇದಾಂತಾಚಾರ್ಯ, ರಾಮಾನುಜಾಚಾರ್ಯ, ಆಳ್ವಾರುಗಳು, ಯೋಗಾನರಸಿಂಹ (12ನೆಯ ಶತಮಾನ), ಸುಗ್ರೀವ, ಜನಾರ್ದನ (9ನೆಯ ಶತಮಾನ) ಮುಂತಾದ ವಿಗ್ರಹಗಳಿಗೆ ಈಚೆಗೆ ಕಟ್ಟಿದ ಚಿಕ್ಕ ಗುಡಿಗಳಿವೆ. ಪರಶುರಾಮ ಇಲ್ಲಿನ ಇನ್ನೊಂದು ದೇವಾಲಯ. ಕಟ್ಟಡ ಈಚಿನದಾದರೂ ಇಲ್ಲಿರುವ ಪರಶುವಿನ ಆಕಾರದ ಲಿಂಗ ಪ್ರಾಚೀನವಾದುದು. 10ನೆಯ ಶತಮಾನದ ಕೆಲವು ವೀರಗಲ್ಲುಗಳು ಈ ದೇವಾಲಯದ ಮುಂದಿವೆ.

(ಎಂ.ಎಚ್.)

**ಹಿರೇಮಠ, ಆರ್.ಸಿ.:** 1920–98. ಹೆಸರಾಂತ ಸಾಹಿತ್ಯ ಸಂಶೋಧಕರು, ಭಾಷಾವಿಜ್ಞಾನಿ ಹಾಗೂ ವಚನಶಾಸ್ತ್ರಕೋವಿದರು. ಧಾರವಾಡ ಜಿಲ್ಲೆಯ (ಈಗಿನ ಗದಗ ಜಿಲ್ಲೆ) ರೋಣ ತಾಲ್ಲೂಕಿನ ಕುರುಡಗಿಯಲ್ಲಿ 1920 ಜನವರಿ 15ರಂದು ಜನಿಸಿದರು. ರುದ್ರಯ್ಯ ಚಂದ್ರಯ್ಯ ಹಿರೇಮಠ ಎಂಬುದು ಇವರ ಪೂರ್ಣ ಹೆಸರು. ತಂದೆ ಚಂದ್ರಯ್ಯ, ತಾಯಿ ವೀರಮ್ಮ. ಧಾರವಾಡ ಮತ್ತು ಬೆಳಗಾಂವಿಗಳಲ್ಲಿ ಆರಂಭದ ವಿದ್ಯಾಭ್ಯಾಸ ಪೂರೈಸಿ ಮುಂಬಯಿ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿ ಗಳಿಸಿದರು (1945). ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಇವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ದಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿದ್ದರು (1951–74). 1951ರಲ್ಲಿ ಪಿಎಚ್.ಡಿ. ಪದವಿಯನ್ನು ಗಳಿಸಿದರು. ಮುಂದೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ (1975–80) ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅಭಿವೃದ್ಧಿಗೆ ಶ್ರಮಿಸಿದರು. ಇವರ ಅಧಿಕಾರಾವಧಿಯಲ್ಲಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಕನ್ನಡ ಅಧ್ಯಯನ ಪೀಠವಾಯಿತು. ವಚನ ವಾಙ್ಮಯದ ಪ್ರಕಟಣೆಗೆ ಪ್ರೋತ್ಸಾಹ ದೊರೆತು ಬಸವಪೀಠದ ಸ್ಥಾಪನೆಯಾಯಿತು. ಜೈನ, ವೀರಶೈವ, ವೈದಿಕ ಅಧ್ಯಯನ ಶಾಖೆಗಳು ಅಸ್ತಿತ್ವ ಪಡೆದವು. ಭಾಷಾವಿಜ್ಞಾನ ಹಾಗೂ ಜಾನಪದ ಅಧ್ಯಯನ–ಅಧ್ಯಾಪನ ಕ್ಷೇತ್ರಗಳು ಜನ್ಮತಳೆದವು. ಹೀಗೆ ಕನ್ನಡ ಅಧ್ಯಯನ, ಅಭಿವೃದ್ಧಿಗಳಿಗೆ ಭದ್ರ ಬುನಾದಿಹಾಕಿದ ಕೀರ್ತಿ ಇವರದು. ಕುಲಪತಿಗಳಾಗಿ ನಿವೃತ್ತರಾದ ಅನಂತರ ತಿರುವನಂತಪುರದ ಅಂತಾರಾಷ್ಟ್ರೀಯ ದ್ರಾವಿಡ ಭಾಷಾವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಇವರು ಹುಬ್ಬಳ್ಳಿಯಲ್ಲಿ ನಡೆದ ಅಖಿಲ ಭಾರತ 59ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (1990). ರಾಷ್ಟ್ರೀಯ–ಅಂತಾರಾಷ್ಟ್ರೀಯ ವಿಚಾರಸಂಕಿರಣಗಳಲ್ಲಿ ವಿದ್ವತ್ತನ್ನು ಮೆರೆದ ಇವರು ತಮಗಿದ್ದ ತೀವ್ರ ಕನ್ನಡಾಭಿಮಾನದಿಂದ ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಇವರ ಸಾಹಿತ್ಯರಚನೆ ವ್ಯಾಪಕವಾದದ್ದು. ಇದುವರೆಗೆ ಇವರ 77 ಕೃತಿಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಬಹುಪಾಲು ಸಂಪಾದಿತ ಕೃತಿಗಳಾಗಿವೆ. ಉಳಿದವು ಜೀವನಚರಿತ್ರೆ, ಆತ್ಮಚರಿತ್ರೆ, ವಿಮರ್ಶೆ, ಕಾವ್ಯ, ಸಂಶೋಧನೆಗೆ ಸಂಬಂಧಿಸಿವೆ. ಸುಮನಾಂಜಲಿ (1948), ಮೌನಸ್ಪಂದನ (1961)–ಇವು ಇವರ ಕವನಸಂಕಲನಗಳು. ಸಾಹಿತ್ಯ ಸಂಸ್ಕೃಷ್ಟಿ (1951), ಕವಿಪದ್ಮಣಾಂಕ (1958) ಎಂಬುವು ಇವರ ವಿಮರ್ಶೆಯ ಕೃತಿಗಳು.

ವೀರಶೈವ ಸಾಹಿತ್ಯ ಮತ್ತು ಸಂಪಾದನೆ ಹಾಗೂ ಸಂಶೋಧನ ಕ್ಷೇತ್ರಗಳಲ್ಲಿ ಇವರ ಕೊಡುಗೆ ಅಪಾರವಾದದ್ದು. ಬಸವಪುರಾಣ (ಭಾಗ 1 ಮತ್ತು 2; 1953,1955), ಮಹಲಿಂಗ ಲೀಲೆ (1954), ಅಖಂಡೇಶ್ವರ ವಚನ (1956), ಕೈವಲ್ಯದರ್ಪಣ (1957), ಪದ್ಮರಾಜ ಪುರಾಣ (1958), ಸೋಮನಾಥ ಚಾರಿತ್ರ್ಯ (1961), ಕೊಟ್ಟೂರ ಬಸವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ–1 (1964), ಷಟ್‌ಸ್ಥಲಜ್ಞಾನ ಸಾರಾಮೃತ (1964), ಚೆನ್ನಬಸವಣ್ಣನವರ ವಚನಗಳು (1965), ತ್ರಿಷಷ್ಟಿ ಪುರಾತನ ಚಾರಿತ್ರ್ಯ (1966), ಇಪ್ಪತ್ತೇಳು ಶಿವಶರಣೆಯರ ವಚನಗಳು (1968), ಅಮ್ಮುಗೆ ರಾಯಮ್ಮ ಮತ್ತು ಅಕ್ಕಮ್ಮನ ವಚನಗಳು (1968), ಸಿದ್ಧರಾಮೇಶ್ವರನ ವಚನಗಳು (1968), ಬಸವಣ್ಣನವರ ವಚನಗಳು (1968), ವೀರಶೈವ ಚಿಂತಾಮಣಿ (1970), ಸಮಗ್ರ ಬಸವಪುರಾಣ (1971), ನೀಲಮ್ಮ ಮತ್ತು ಲಿಂಗಮ್ಮನ ವಚನಗಳು (1971), ಶೂನ್ಯಸಂಪಾದನೆ ಮಹಾದೇವಯ್ಯ (1971), ವಿಶೇಷಾನುಭವ ಷಟ್‌ಸ್ಥಲ (1971), ಹರಿಹರನ ನೂತನ ರಗಳೆಗಳು (1972), ಸಕಲ ಪುರಾತನರ ವಚನಗಳು (1973), ಪುರಾತನರ ರಗಳೆಗಳು (1973) – ಹೀಗೆ ಇವರ ವೀರಶೈವ ಸಾಹಿತ್ಯ ಸಂಪಾದನೆಯ ಕೃತಿಗಳು ಅಪಾರ. ಇದರ ಜೊತೆಯಲ್ಲೇ ವಚನ ಸಂಗ್ರಹಣೆ, ಸಂಪಾದನೆ, ಪ್ರಕಟಣೆಗೆ ಅನುವಾಗುವಂತೆ ಹಸ್ತಪ್ರತಿ ಭಂಡಾರವನ್ನು ಸ್ಥಾಪಿಸಿ ನಾಡಿನ ಮೂಲೆಮೂಲೆಗಳಿಂದ 10,000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ ಶ್ಲಾಘನೀಯ ಕಾರ್ಯ ಮಾಡಿದರು. ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾ ಭರಣ (1973), ಜಾನಪದ ಸಾಹಿತ್ಯದರ್ಶನ–1 (1974), ಕನ್ನಡ ಶಾಸನ ಸಂಪದ (1974), ರಾಮಚಂದ್ರಚರಿತ ಪುರಾಣ (1975), ಅಮೃತ ಬಿಂದುಗಳು (1978), ರಾಜಶೇಖರ ವಿಳಾಸಂ(1978)–ಇವೇ ಮೊದಲಾದವು ಇವರ ಇನ್ನಿತರ ಸಂಪಾದಿತ ಕೃತಿಗಳು. ಕೃತಿಗಳನ್ನು ಸಂಪಾದಿಸುವ ಜೊತೆಯಲ್ಲೇ ವಿಸ್ತಾರವಾದ ಪ್ರಸ್ತಾವನೆ, ಅರ್ಥಕೋಶ, ವಿಶಿಷ್ಟ ಅಂಶಗಳ ಬಗೆಗೆ ಟಿಪ್ಪಣಿ, ತೌಲನಿಕ ಕಾವ್ಯವಿಮರ್ಶೆ, ಸೂಕ್ತಪಾಠಾಂತರಗಳನ್ನು ನೀಡುವುದು ಇವರ ಸಂಪಾದನೆಯ ಕೆಲಸಕ್ಕೆ ವಿಶಿಷ್ಟತೆಯನ್ನು ತಂದುಕೊಟ್ಟಿರುವುದಲ್ಲದೆ ಇವರ ಅಪಾರ ವಿದ್ವತ್ ಹಾಗೂ ಸಂಶೋಧನೆಯ ನೈಪುಣ್ಯಕ್ಕೆ ಸಾಕ್ಷಿಗಳಾಗಿವೆ.

ಲಿಂಗ್ವಿಸ್ಟಿಕ್ ಇನ್‌ವೆಸ್ಟಿಗೇಷನ್ ಆಫ್ ಸಮ್ ಪ್ರಾಬ್ಲಮ್ಸ್ ಆನ್ ದಿ ರಿಲೇಷನ್‌ಷಿಪ್ ಆಫ್ ಇಂಡೊ–ಆರ್ಯನ್ ಅಂಡ್ ದ್ರವಿಡಿಯನ್ ಲ್ಯಾಂಗ್ವೇಜಸ್ ಎಂಬುದು ಇವರ ಪಿಎಚ್.ಡಿ. ನಿಬಂಧ. ದ್ರಾವಿಡ ಮತ್ತು ಆರ್ಯ ಭಾಷೆಗಳನ್ನು ಭಾಷಾರಚನೆಯ ಎಲ್ಲ ಅಂಶಗಳಲ್ಲಿಯೂ ಹೋಲಿಸಿ ನೋಡಿರುವುದು ಈ ಕೃತಿಯ ವೈಶಿಷ್ಟ್ಯ. ಇವರ ಮತ್ತೊಂದು ಇಂಗ್ಲಿಷ್ ಕೃತಿ ದಿ ಸ್ಟ್ರಕ್ಚರ್ ಆಫ್ ಕನ್ನಡ. ಈ ಕೃತಿ ಧಾರವಾಡದ ಕನ್ನಡವನ್ನು ವಿಶ್ಲೇಷಿಸುತ್ತದೆ. ಇದರಲ್ಲಿ ಧ್ವನಿಮಾ, ಸಂಧಿಪ್ರಕ್ರಿಯೆ, ಆಕೃತಿಮಾ ಮತ್ತು ವಾಕ್ಯರಚನಾ ವಿಧಾನಗಳ ಚರ್ಚೆಯಿಂದ ಉತ್ತರ ಕರ್ನಾಟಕದ ಹಲವಾರು ಪ್ರಭೇದಗಳ ವೈಶಿಷ್ಟ್ಯವನ್ನು ಪ್ರಥಮ ಬಾರಿಗೆ ಬೆಳಕಿಗೆ ತಂದಿರುವುದು ಉಲ್ಲೇಖನೀಯ. ಪ್ಲೇಸ್ ನೇಮ್ಸ್ ಇನ್ ಕರ್ನಾಟಕ, ಕಾಂಪೌಂಡ್ ವರ್ಬ್ಸ್ ಇನ್ ಕನ್ನಡ ಮೊದಲಾದ ಇವರ ಇಂಗ್ಲಿಷ್ ಬರೆಹಗಳು ಗಮನಾರ್ಹವಾಗಿವೆ. ಬುದ್ಧಿಸಂ ಇನ್ ಕರ್ನಾಟಕ ಎಂಬುದು ಇವರ ಇನ್ನೊಂದು ಕೃತಿ. ಇವರ ತಥಾಗತ ಚಾರಿತ್ರ್ಯ ಬುದ್ಧನನ್ನು ಕುರಿತ ಇವರ ಅಪೂರ್ಣ ಮಹಾಕಾವ್ಯ.

ಉತ್ತರ ಕರ್ನಾಟಕದಲ್ಲಿ ಕನ್ನಡವನ್ನು ಕಟ್ಟಿ ಬೆಳೆಸಿದ ಇವರ ಗೌರವಾರ್ಥ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠಕ್ಕೆ ಡಾ.ಆರ್.ಸಿ.

ಹಿರೇಮಠ ಕನ್ನಡ ಅಧ್ಯಯನ ಪೀಠ ಎಂದು ಹೆಸರಿಡಲಾಗಿದೆ. ಇಲ್ಲಿ ಇವರ ಹೆಸರಿನಲ್ಲಿ ಅನೇಕ ವಿಶೇಷೋಪನ್ಯಾಸಗಳು ನಡೆಯುತ್ತಿವೆ. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳೊಂದಿಗೆ ಬಹಳ ಕಾಲದ ಸಂಬಂಧ ಹೊಂದಿದ್ದ ಇವರು ಕನ್ನಡ-ಕನ್ನಡ ನಿಘಂಟು ಯೋಜನೆಯಲ್ಲಿ ಹಾಗೂ ಇತರ ಹಲವಾರು ಕನ್ನಡಪರ ಸಮಿತಿಗಳಲ್ಲಿ ದುಡಿದಿದ್ದರು. ಇವರು 1998 ನವೆಂಬರ್ 2ರಂದು ಧಾರವಾಡದಲ್ಲಿ ನಿಧನಹೊಂದಿದರು. **(ಜಿ.ಎಂ.ಎಚ್.)**

**ಹುಕ್ಕೇರಿ:** ಬೆಳಗಾಂವಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಚಿಕ್ಕೋಡಿ, ಪೂರ್ವದಲ್ಲಿ ಗೋಕಾಕ, ದಕ್ಷಿಣದಲ್ಲಿ ಬೆಳಗಾಂವಿ ತಾಲ್ಲೂಕು ಗಳೂ ಪಶ್ಚಿಮ ಮತ್ತು ದಕ್ಷಿಣದ ಸ್ವಲ್ಪ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯವೂ ಸುತ್ತುವರಿದಿವೆ. ಎರಡು ಪಟ್ಟಣಗಳಿದ್ದು ಒಟ್ಟು 119 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 992.0 ಚ.ಕಿಮೀ. ಜನಸಂಖ್ಯೆ 3,57,193. ಇದರಲ್ಲಿ 3,04,765 ಮಂದಿ ಗ್ರಾಮೀಣರೂ 52,428 ಮಂದಿ ಪಟ್ಟಣಿಗರೂ ಇದ್ದಾರೆ.

ತಾಲ್ಲೂಕಿನಲ್ಲಿ ಸಹ್ಯಾದ್ರಿ ಶ್ರೇಣಿಯ ಅನೇಕ ಕವಲುಗಳು ಹಬ್ಬಿಕೊಂಡಿವೆ. ಇವನ್ನು ಘಟಪ್ರಭಾ ಶ್ರೇಣಿಗಳೆಂದೂ ಹೇಳುವುದುಂಟು. ಘಟಪ್ರಭಾ ತಾಲ್ಲೂಕಿನ ಮುಖ್ಯನದಿ. ಈ ನದಿ ತಾಲ್ಲೂಕಿನ ಶೆಟ್ಟಿಹಳ್ಳಿಯ ಬಳಿ ದಕ್ಷಿಣದ ಅಂಚಿನಲ್ಲಿ ತಾಲ್ಲೂಕನ್ನು ಮುಟ್ಟಿ ಪೂರ್ವಾಭಿಮುಖವಾಗಿ ಮತ್ತು ತಾಲ್ಲೂಕಿನ ಗಡಿಯಾಗಿ ಸ್ವಲ್ಪ ದೂರ ಹರಿಯುವುದು. ಮುಂದೆ ಮಹಾರಾಷ್ಟ್ರ ಮತ್ತು ಬೆಳಗಾಂವಿ ತಾಲ್ಲೂಕನ್ನು ಬೇರ್ಪಡಿಸಿ ಅನಂತರ ಈ ತಾಲ್ಲೂಕಿನಲ್ಲಿ ಈಶಾನ್ಯಾಭಿಮುಖವಾಗಿ ಹರಿದು ಮುಂದೆ ಗೋಕಾಕ ತಾಲ್ಲೂಕನ್ನು ಸ್ವಲ್ಪ ದೂರ ಪ್ರತ್ಯೇಕಿಸಿ ಅನಂತರ ಗೋಕಾಕ ತಾಲ್ಲೂಕನ್ನು ಪ್ರವೇಶಿಸುವುದು. ಮಾರ್ಕಂಡೇಯ ಮತ್ತು ಹಿರಣ್ಯಕೇಶಿ ಘಟಪ್ರಭಾದ ಉಪನದಿಗಳು. ಹಿಡಕಲ್ಲು ಬಳಿ ಘಟಪ್ರಭಾ ನದಿಗೆ ಒಂದು ದೊಡ್ಡ ಅಣೆಕಟ್ಟನ್ನು ಕಟ್ಟಿ ನೀರಾವರಿಗೆ ಅನುಕೂಲ ಕಲ್ಪಿಸಲಾಗಿದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 808.19 ಮಿಮೀ.

ಇಲ್ಲಿನ ನೆಲ ವಿಶೇಷವಾಗಿ ಕಪ್ಪು ಮಣ್ಣಿನದು, ಕಬ್ಬು, ತಂಬಾಕು, ಮೆಣಸಿನ ಕಾಯಿ, ನೆಲಗಡಲೆ, ಬತ್ತ ಮತ್ತು ಜೋಳ ಇಲ್ಲಿನ ಮುಖ್ಯ ಬೆಳೆಗಳು. ಇವುಗಳ ಜೊತೆಗೆ ಹತ್ತಿ, ಗೋದಿ, ದ್ವಿದಳ ಧಾನ್ಯ ಮುಂತಾದುವನ್ನು ಬೆಳೆಯುತ್ತಾರೆ. ಕೃಷಿ ಹಾಗೂ ವ್ಯಾಪಾರ ತಾಲ್ಲೂಕಿನ ಮುಖ್ಯ ಉದ್ಯೋಗಗಳು.

ತಾಲ್ಲೂಕು ಕೈಗಾರಿಕೆಯಲ್ಲೂ ಮುಂದಡಿಯಿಟ್ಟಿದೆ. ಇಲ್ಲಿ ಸಕ್ಕರೆ ಕಾರ್ಖಾನೆಯಿದ್ದು ಸಕ್ಕರೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಸ್ತುಗಳ ತಯಾರಿಕೆಯುಂಟು. ಬೆಲ್ಲ, ಪಾದರಕ್ಷೆ, ಸೇಂಗಾ ಎಣ್ಣೆ, ಅಗರಬತ್ತಿ, ಕಂಬಳಿ ಮುಂತಾದವುಗಳ ತಯಾರಿಕೆಗೆ ಈ ತಾಲ್ಲೂಕು ಹೆಸರಾಗಿದೆ. ವ್ಯಾಪಾರ ವಾಣಿಜ್ಯಾಭಿವೃದ್ಧಿಗೆ ಸಹಕಾರವಾಗಿ ತಾಲ್ಲೂಕಿನಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್ತು, ಆಸ್ಪತ್ರೆ, ಔಷಧಾಲಯ ಮುಂತಾದವುಗಳ ಸೌಲಭ್ಯವಿದೆ. ತಾಲ್ಲೂಕಿನ ಪೂರ್ವದ ಅಂಚಿನಲ್ಲಿ ಸ್ವಲ್ಪ ದೂರ ಬೆಳಗಾಂವಿ-ಮೀರಜ್ ರೈಲು ಮಾರ್ಗ ಹಾದುಹೋಗಿದೆ. ಬೆಳಗಾಂವಿ-ಸಂಕೇಶ್ವರ-ನಿಪ್ಪಾಣಿ, ಬೆಳಗಾಂವಿ ಹುಕ್ಕೇರಿ-ಚಿಕ್ಕೋಡಿ, ನಿಪ್ಪಾಣಿ-ಸಂಕೇಶ್ವರ-ಹುಕ್ಕೇರಿ-ಗೋಕಾಕ ಜಿಲ್ಲಾ ಹೆದ್ದಾರಿಗಳಿದ್ದು ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ಮಾರ್ಗಸಂಪರ್ಕವಿದೆ.

ತಾಲ್ಲೂಕಿನ ಕೆಲವು ಪ್ರೇಕ್ಷಣೀಯ ಸ್ಥಳಗಳಲ್ಲಿ ಸಂಕೇಶ್ವರದ ಉತ್ತರಕ್ಕೆ 6 ಕಿಮೀ ದೂರದಲ್ಲಿರುವ ಅಕ್ಕಿವಾಟ ಒಂದು. ಇದು ಕೊಲ್ಲಾಪುರದ ಅರಸರಿಗೆ ಸೇರಿತ್ತು. 1777ರಲ್ಲಿ ತಾಸಗಾಂವದ ಪರಶುರಾಮ ಭಾವು ಇದನ್ನು ತನ್ನ ವಶಪಡಿಸಿಕೊಂಡ. ಮುಂದೆ ಈ ಪ್ರದೇಶ ದರೋಡೆಕೋರರಿಗೆ ವಾಸಸ್ಥಾನವಾಗಲು ಕೊಲ್ಲಾಪುರದ ರಾಜ 1827ರಲ್ಲಿ ಬ್ರಿಟಿಷರಿಗೆ ಒಪ್ಪಿಸಬೇಕಾಯಿತು. ಇಲ್ಲೊಂದು ಹಳೆಯ ಕೋಟೆಯಿದೆ. ಸಂಕೇಶ್ವರಕ್ಕೆ ಈಶಾನ್ಯದಲ್ಲಿ 10 ಕಿಮೀ ದೂರದಲ್ಲಿರುವ ಅಮ್ಮಣಗಿಯ ಮಲ್ಲೇಶ್ವರ ದೇವಸ್ಥಾನ ಬಹು ಪ್ರಸಿದ್ಧ. ಇಲ್ಲಿ ಪ್ರತಿ ಸಂಕ್ರಮಣದಲ್ಲಿ ಜಾತ್ರೆ ನಡೆಯುತ್ತದೆ. ಹುಕ್ಕೇರಿಯ ನೈಋತ್ಯದಲ್ಲಿ 5 ಕಿಮೀ ದೂರದಲ್ಲಿರುವ ಅರ್ಜುನವಾಡ ಹಿರಣ್ಯಕೇಶಿ ನದಿಯ ಎಡದಂಡೆಯ ಮೇಲಿದೆ. 12-13ನೆಯ ಶತಮಾನ ಗಳಲ್ಲಿ ಇದು ಕವಿಳಾಸಪುರವೆಂಬ ಪ್ರಸಿದ್ಧ ತೀರ್ಥಕ್ಷೇತ್ರವಾಗಿತ್ತೆಂದು ತಿಳಿದು ಬರುವುದು. ಈಗಿನ ಅರ್ಜುನವಾಡದ ಅಡವಿಯಲ್ಲಿ ಕವಿಳಾಸಪುರದ ದೇವಸ್ಥಾನ ಹಾಗೂ ಶಾಸನಗಳಿವೆ. ಸಂಕೇಶ್ವರದ ಈಶಾನ್ಯಕ್ಕೆ 5 ಕಿಮೀ ದೂರದಲ್ಲಿರುವ ನಿಡುಸೋಸಿಯಲ್ಲಿ ಪ್ರಸಿದ್ಧ ದುರುದುಂಡೀಶ್ವರ ಮಠವಿದೆ. ಇದರ ವತಿಯಿಂದ ಅನ್ನದಾನ ಹಾಗೂ ವಿದ್ಯಾದಾನಕ್ಕೆ ಅವಕಾಶವಿದ್ದು ಪ್ರೌಢಶಾಲೆ ಹಾಗೂ ಸಂಸ್ಕೃತ ಪಾಠಶಾಲೆಯನ್ನು ನಡೆಸುತ್ತಿದೆ. ಹುಕ್ಕೇರಿಯ ಆಗ್ನೇಯದಲ್ಲಿ 29 ಕಿಮೀ ದೂರದಲ್ಲಿರುವ ಪಾಚ್ಛಾಪುರದಲ್ಲಿ ಹಳೆಯ ಕೋಟೆಯಿದೆ. ಶಿಲಾಶಾಸನಗಳೂ ವೀರಗಲ್ಲುಗಳೂ ಮಾಸ್ತಿಕಲ್ಲುಗಳೂ ಊರಿನಲ್ಲಿವೆ. 18ನೆಯ ಶತಮಾನದ ಕೊನೆಯಲ್ಲಿ ಇಲ್ಲಿನ ರಾಮಚಂದ್ರ ಭೋಜರಾವ್ ದೇಶಪಾಂಡೆ ಎಂಬುವರು ಸಂಸ್ಕೃತದಲ್ಲಿ ಚಿದಂಬರಚರಿತ್ರ ಎಂಬ ಕಾವ್ಯವನ್ನೂ ಮರಾಠೀ ಭಾಷೆಯ ಕೆಲವು ಕೃತಿಗಳನ್ನೂ ರಚಿಸಿದುದಾಗಿ ತಿಳಿದು ಬರುತ್ತದೆ. ಹುಕ್ಕೇರಿಯ ನೈಋತ್ಯಕ್ಕೆ 6 ಕಿಮೀ ದೂರದಲ್ಲಿರುವ ಬಡಕುಂದ್ರಿ ಹಿರಣ್ಯಕೇಶಿ ನದಿಯ ಬಲದಂಡೆಯಲ್ಲಿದೆ. ಇಲ್ಲಿನ ಲಕ್ಷ್ಮೀ ದೇವಸ್ಥಾನ ಪ್ರಸಿದ್ಧ. ಈಕೆಯನ್ನು ಹೊಳೆವ್ವ ಎಂದೂ ಕರೆಯುತ್ತಾರೆ. ಹುಕ್ಕೇರಿಯ ನೈಋತ್ಯದಲ್ಲಿರುವ ಯಮನಕನಮರಡಿ ಬೆಳಗಾಂವಿ-ಹುಕ್ಕೇರಿ ಮಾರ್ಗದಲ್ಲಿದೆ. ಈ ಊರು ಕೊಲ್ಲಾಪುರದ ಅಧಿಕಾರಿ ಮಾಮಲೇದಾರ ವಿರುಪಣ್ ಅಂಬಾಜಿ ಎಂಬವನಿಂದ ಅಸ್ತಿತ್ವಕ್ಕೆ ಬಂತೆಂದು ತಿಳಿದುಬಂದಿದೆ. 1827ರಲ್ಲಿ ಕೊಲ್ಲಾಪುರದ ದರೋಡೆಕೋರರರು ಇಲ್ಲಿ ಬಂದು ಸೇರಿದ್ದರಿಂದ ಇಂಗ್ಲಿಷ್ ಅಧಿಕಾರಿಗಳು ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇಲ್ಲಿ ಒಂದು ಹಳೆಯ ಕೋಟೆಯಿದೆ. ಈ ಊರಿನ ನಡುವೆ ವೇಣುಗೋಪಾಲಸ್ವಾಮಿ ದೇವಸ್ಥಾನವಿದೆ. ಇಲ್ಲಿ ಒಂದೇ ಸುತ್ತಾಲಯದಲ್ಲಿ ಐದು ಗುಡಿಗಳಿವೆ. ನೇಯ್ಗೆ ಉದ್ಯಮಕ್ಕೆ ಈ ಊರು ಪ್ರಸಿದ್ಧ. ಸಂಕೇಶ್ವರ **(ನೋಡಿ)** ಈ ತಾಲ್ಲೂಕಿನ ಒಂದು ಪಟ್ಟಣ. ಸಂಕೇಶ್ವರಕ್ಕೆ ವಾಯವ್ಯದಲ್ಲಿ 3 ಕಿಮೀ ದೂರದಲ್ಲಿರುವ ಹರಗಪುರವನ್ನು ವಲ್ಲಭಗಡ ಎಂದೂ ಕರೆಯುತ್ತಾರೆ. ಇಲ್ಲಿ ಸು. 300' ಎತ್ತರದ ಬೆಟ್ಟದ ಮೇಲೆ ವೃತ್ತಾಕಾರದ ಒಂದು ಹಳೆಯ ಕೋಟೆಯ ಅವಶೇಷವಿದೆ. ಈ ಕೋಟೆಗೆ ಎರಡು ಬಾಗಿಲುಗಳಿವೆ. ಕೋಟೆಯ ಒಳಗೆ ನೀರಿನ ನಾಲ್ಕು ಊಟೆಗಳಿವೆ. ಒಂದು ದೊಡ್ಡ ಬಾವಿಯಿದೆ. ಬೆಳಗಾಂವಿ ಜಿಲ್ಲೆಯಲ್ಲಿ ಶಿವಾಜಿ ಆಕ್ರಮಿಸಿ ವಶಪಡಿಸಿಕೊಂಡ ಹತ್ತು ಕೋಟೆಗಳಲ್ಲಿ ಇದೂ ಒಂದು. 1783ರಲ್ಲಿ ನೇಸರ್ಗಿಯ ದೊರೆ ಇದನ್ನು ಕೊಲ್ಲಾಪುರದ ಅರಸರಿಂದ ಕಸಿದುಕೊಂಡ. ಇದನ್ನು ಮತ್ತೆ 1787ರಲ್ಲಿ ಕೊಲ್ಲಾಪುರದ ಅರಸ ಗೆದ್ದುಕೊಂಡ. ಹುಕ್ಕೇರಿಯ ಆಗ್ನೇಯಕ್ಕೆ 14 ಕಿಮೀ ದೂರದಲ್ಲಿರುವ ಹಿಡಕಲ್ಲು ಬಳಿ ಘಟಪ್ರಭಾ ನದಿಗೆ ಅಣೆಕಟ್ಟನ್ನು ಕಟ್ಟಲಾಗಿದೆ. ಘಟಪ್ರಭಾ ಯೋಜನೆಯಿಂದ ಈ ಪ್ರದೇಶ ಅಭಿವೃದ್ಧಿಗೊಳ್ಳುತ್ತಿದೆ. ಇದರ ಹತ್ತಿರದಲ್ಲಿಯೇ ಘಟಪ್ರಭಾ ಆರೋಗ್ಯಧಾಮ ಇದೆ. ಇಲ್ಲಿ ದೇಶಭಕ್ತರಾದ ನಾ.ಸು. ಹರ್ಡೀಕರ ಇದ್ದರು. ಹುಕ್ಕೇರಿಗೆ ದಕ್ಷಿಣದಲ್ಲಿ 18 ಕಿಮೀ ದೂರದ ಹುನೂರಿನ ಬೆಟ್ಟದ ಮೇಲೆ ಒಂದು ಕೋಟೆಯಿದೆ. ಶಿವಾಜಿ ವಶಪಡಿಸಿಕೊಂಡಿದ್ದ ಹತ್ತು ಕೋಟೆಗಳಲ್ಲಿ ಇದೂ ಒಂದು ಸು. 1550ರಲ್ಲಿ ಇದನ್ನು ಕೊಲ್ಲಾಪುರದ ರಾಜ ಕಟ್ಟಿಸಿದ್ದೆಂದು ತಿಳಿದುಬರುತ್ತದೆ.

ಹುಕ್ಕೇರಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಚಿಕ್ಕೋಡಿ–ಬೆಳಗಾಂವಿ ಮತ್ತು ನಿಪ್ಪಾಣಿ–ಗೋಕಾಕ ಮಾರ್ಗಮಧ್ಯದಲ್ಲಿ ಬೆಳಗಾಂವಿಯ ಈಶಾನ್ಯಕ್ಕೆ 48 ಕಿಮೀ ದೂರದಲ್ಲೂ ಸಂಕೇಶ್ವರದ ಆಗ್ನೇಯಕ್ಕೆ 13 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 52,428. ಪಟ್ಟಣ ಹಿರಣ್ಯಕೇಶಿ ನದಿಗೆ ಸೇರುವ ಒಂದು ಹಳ್ಳದ ದಡದಲ್ಲಿದೆ. ಪ್ರೌಢಶಾಲೆ, ಆಸ್ಪತ್ರೆ, ಸಾರ್ವಜನಿಕ ವಾಚನಾಲಯ, ತಾಲ್ಲೂಕು ಕಚೇರಿ, ಅಂಚೆ, ತಂತಿ, ದೂರವಾಣಿ, ವಿದ್ಯುತ್ ಮುಂತಾದ ಸೌಲಭ್ಯಗಳಿವೆ. ಈ ಪಟ್ಟಣ ಮುಖ್ಯ ವ್ಯಾಪಾರ ಕೇಂದ್ರವಾಗಿದ್ದು ಇಲ್ಲಿ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ಪಟ್ಟಣ ನಗರ ಪಂಚಾಯಿತಿಯ ಆಡಳಿತಕ್ಕೆ ಸೇರಿದೆ.

ಹುಕ್ಕೇರಿ 14ನೆಯ ಶತಮಾನದಿಂದ ಇತಿಹಾಸಪ್ರಸಿದ್ಧ. 1327ರಲ್ಲಿ ಮಹಮ್ಮದ್ ಬಿನ್ ತುಗಲಕ್ ಇಲ್ಲಿ ಒಬ್ಬ ಅಮೀರನನ್ನು ನೇಮಿಸಿದ್ದ. 1500ರಲ್ಲಿ ಹುಕ್ಕೇರಿ ಹಾಗೂ ಅದರ ಸುತ್ತಲಿನ ಪ್ರದೇಶ ಫತೇಬಹದ್ದೂರ ಎಂಬ ವಾಜಿದಳದ ಸೇನಾ ನಾಯಕನ ಅಧೀನದಲ್ಲಿತ್ತೆಂದು 1502ರಲ್ಲಿ ಇದನ್ನು ಬಿಜಾಪುರದ ಸುಲ್ತಾನ ಯೂಸುಫ್ ಆದಿಲ್‌ಷಾ ತನ್ನ ವಶಕ್ಕೆ ತೆಗೆದುಕೊಂಡನೆಂದೂ ತಿಳಿದುಬರುವುದು. ಈತನ ಕಾಲದಲ್ಲಿಯೆ ಇಲ್ಲಿದ್ದ ಅಧಿಕಾರಿ ಐನ್ ಉಲ್ ಮುಲ್ಕ ಜಿಲಾನಿ ಹುಕ್ಕೇರಿಯ ಕೋಟೆಯನ್ನೂ ಅರಮನೆಯನ್ನೂ ನೀರಿನ ಕಾರಂಜಿಗಳನ್ನೂ ಕಟ್ಟಿಸಿದ. 1542ರಲ್ಲಿ ಈತ ಅಹಮದ್‌ನಗರದ ಬುರಾನ್ ನಿಜಾಮ್‌ಷಾನೊಂದಿಗೆ ಸೇರಿ ಬಿಜಾಪುರದ ಸುಲ್ತಾನನನ್ನು ವಿರೋಧಿಸಿದ. ಆದರೆ ಬುರಾನ್ ಷಾ ಸೋಲಲು ಪುನಃ ಬಿಜಾಪುರದ ರಣದುಲ್ಲಾಖಾನ್ (1569) ಹಾಗೂ ಆತನ ಪುತ್ರ ರುಸ್ತುಮ್ ಜಮಾನ್ (1616) ಹುಕ್ಕೇರಿಗೆ ಅಧಿಕಾರಿಗಳಾಗಿದ್ದರು. ರುಸ್ತುಮ್ ಇಲ್ಲಿನ ಚೀನೀ ಗುಮ್ಮಟವನ್ನೂ ಕದಮ್ ರಸೂಲ್ ಮಸೀದಿಯನ್ನೂ ಕಟ್ಟಿಸಿದ. ರುಸ್ತುಮನ ತರುವಾಯ ಅಬ್ದುಲ್ ಖಾದರ್ ಹುಕ್ಕೇರಿಗೆ ಒಡೆಯನಾದ. ಪನಹಾಲದ ದೊರೆ ಇವನನ್ನು ಅಧಿಕಾರದಿಂದ ಇಳಿಸಿದಾಗ 1643ರಲ್ಲಿ ಈತ ಮರಣಹೊಂದಿದ. 1668–86ರವರೆಗೆ ಹುಕ್ಕೇರಿಯನ್ನು ಇಂದುರಾವ್ ಘೋರ್ಪಡೆ ಆಳಿದುದಾಗಿ ತಿಳಿದು ಬಂದಿದೆ. ಅನಂತರ ಹುಕ್ಕೇರಿ ಒಂದು ದೇಶಗತಿಯಾಯಿತು. ಈ ದೇಸಾಯಿಯು ಸಂಸ್ಥಾನಿಕನೆನ್ನಿಸಿಕೊಂಡ. 1687ರಲ್ಲಿ ಮುಗಲರು ಬಿಜಾಪುರವನ್ನು ನಾಶಮಾಡಿದಾಗ ದೇಸಾಯಿ ಸ್ವತಂತ್ರನಾಗಿ ಆಳಲು ಆರಂಭಿಸಿದ. ಈ ಮನೆತನದವರೇ ವಂಟಮುರಿ ದೇಸಾಯರ ಮನೆತನದ ಪೂರ್ವಿಕರೆಂದು ತಿಳಿದುಬಂದಿದೆ. 1763ರಲ್ಲಿ ನಾಲ್ಕನೆಯ ಪೇಶ್ವೆ ಮಾಧವರಾವ್ ದೇಸಾಯಿಯವರ ಮನೆತನವನ್ನು ಮುರಿದು ಸಂಸ್ಥಾನವನ್ನು ಕೊಲ್ಲಾಪುರದ ದೊರೆಗೆ ಪ್ರತಿವರ್ಷ 5,00,000 ಹಣವನ್ನು ನಜರ್ ಕೊಡುವಂತೆ ತಿಳಿಸಿ ಒಪ್ಪಿಸಿಕೊಟ್ಟ. ಆದರೆ ಕೊಲ್ಲಾಪುರದ ದೊರೆ ನಜರ್ ಕೊಡದಿರಲು ಪುನಃ ಸಂಸ್ಥಾನವನ್ನು ಹಿಂತೆಗೆದುಕೊಂಡು ಒಬ್ಬ ಮಾಮಲೆದಾರನನ್ನು ನೇಮಿಸಿದ. ನಿಪ್ಪಾಣಿಯ ದೇಸಾಯಿ ಜನರಲ್ ವೆಲ್ಲೆಸ್ಲಿಗೆ ಸಹಾಯ ಮಾಡಿದುದಕ್ಕೆಂದು ಪೇಶ್ವೆ ಹುಕ್ಕೇರಿಯನ್ನು ಚಿಕ್ಕೋಡಿ ಹಾಗೂ ಮನೋಳಿ ಭಾಗಗಳೊಂದಿಗೆ 1804ರಲ್ಲಿ ಬಹುಮಾನವೆಂದು ದೇಸಾಯಿಗೆ ಉಂಬಳಿಯಾಗಿ ಕೊಟ್ಟ. 1827ರ ಹೊತ್ತಿಗೆ ಹುಕ್ಕೇರಿ ಪುನಃ ಕೊಲ್ಲಾಪುರದ ದೊರೆಗಳಿಗೆ ಸೇರಿತು. 1906ರಲ್ಲಿ ಬ್ರಿಟಿಷರ ಆಳಿಕೆಯಲ್ಲಿ ಇದು ಸ್ವತಂತ್ರ ತಾಲ್ಲೂಕಾಯಿತು. ಇಂದಿಗೂ ಉಳಿದು ನಿಂತಿರುವ ಇಲ್ಲಿನ ದರ್ಗಾ, ಮಸೀದಿ, ಜೋಡಿಗುಮ್ಮಟಗಳು, ಅರಮನೆ, ಕಾರಂಜಿ ಇವು ಬಹು ಆಕರ್ಷಕವಾಗಿವೆ.

*

**ಹುಚ್ಚಮಾಸ್ತಿಗೌಡ, ಎನ್.:** 1913– . ಸ್ವಾತಂತ್ರ್ಯ ಹೋರಾಟಗಾರರು. ಮಾಜಿ ವಿಧಾನ ಸಭಾಧ್ಯಕ್ಷರು. ಇವರು 1913 ನವೆಂಬರ್ 18ರಂದು ಕುಣಿಗಲು ತಾಲ್ಲೂಕಿನ ಯಡವಾಣಿಯಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಇವರು ಕುಸ್ತಿಪಟುವೂ ವ್ಯಾಯಾಮಪಟುವೂ ಆಗಿದ್ದರು. ವಿಶ್ವವಿದ್ಯಾಲಯದ ಬಿ.ಎ.ಪದವೀಧರರಾಗಿದ್ದ ಇವರು ಬೆಳಗಾಂವಿಯ ಆರ್.ಎಲ್.ಕಾನೂನು ಕಾಲೇಜಿನ ವಿದ್ಯಾರ್ಥಿಯಾಗಿದ್ದು ಸ್ವಾತಂತ್ರ್ಯ ಹೋರಾಟದ ಕರೆಗೆ ಓಗೊಟ್ಟು 1942ರಲ್ಲಿ ಕಾನೂನು ಅಧ್ಯಯನ ತೊರೆದರು. 19 ವರ್ಷಗಳ ಕಾಲ ಇವರು ತುಮಕೂರು ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರು. 1948ರಲ್ಲಿ ಮೈಸೂರು ಸಂವಿಧಾನ ಸಭೆಯ ಸದಸ್ಯರಾಗಿದ್ದರು. 1950ರಲ್ಲಿ ವಿಧಾನ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಆಯ್ಕೆಗೊಂಡರು. ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯ ಸಚೇತಕರಾಗಿದ್ದರು (1952–57). ಅನಂತರ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು (1950–52 ಮತ್ತು 1959–61). ನಾಲ್ಕು ಬಾರಿ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಕುಣಿಗಲು ಮತ್ತು ಹುಲಿಯೂರು ದುರ್ಗಗಳು ಇವರ ನೆಚ್ಚಿನ ಕ್ಷೇತ್ರಗಳಾಗಿದ್ದವು.

ಇವರು ಡಿ.ದೇವರಾಜಅರಸು ಸಂಪುಟದಲ್ಲಿ ಕಂದಾಯ ಸಚಿವರಾಗಿದ್ದರು (1972). 1983ರಲ್ಲಿ ಏಳನೆಯ ವಿಧಾನಸಭೆಗೆ ಪಕ್ಷೇತರರಾಗಿ ಆಯ್ಕೆಯಾಗಿ 1984ರ ಫೆಬ್ರವರಿಯಲ್ಲಿ ಕಾಂಗ್ರೆಸ್(ಐ) ಪಕ್ಷ ಸೇರಿದರು. 1989ರ ನವೆಂಬರ್‌ನಲ್ಲಿ ಹುಲಿಯೂರುದುರ್ಗ ಕ್ಷೇತ್ರದಿಂದ 9ನೆಯ ವಿಧಾನಸಭೆಗೆ ಚುನಾಯಿತರಾಗಿದ್ದರು. ಸರಳ ಜೀವಿಯಾಗಿದ್ದ ಇವರು ಗ್ರಾಮೀಣ ಪ್ರದೇಶದ ಜನರ ಏಳಿಗೆಗಾಗಿ ಶ್ರಮಿಸಿ ಅತ್ಯಂತ ದೀರ್ಘಕಾಲ ಶಾಸಕರಾಗಿದ್ದ ಹೆಗ್ಗಳಿಕೆಗೂ ಪಾತ್ರರಾಗಿದ್ದರು.

(ಎಸ್.ಎನ್.ಜಿ.)

**ಹುಣಸಗಿ:** ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ಒಂದು ಗ್ರಾಮ; ಕರ್ನಾಟಕದ ವಿಶಿಷ್ಟ ಪ್ರಾಗೈತಿಹಾಸಿಕ ನೆಲೆಗಳಲ್ಲೊಂದು. ದೇವದುರ್ಗಕ್ಕೆ 27 ಕಿಮೀ ದೂರದಲ್ಲಿದೆ. ಜನಸಂಖ್ಯೆ 3,495.

ಈ ಭಾಗದಲ್ಲಿ ಕೆ. ಪದ್ದಯ್ಯನವರು ಅನ್ವೇಷಣೆ ನಡೆಸುತ್ತಿದ್ದಾಗ 1974ರಲ್ಲಿ ಲೋಕೋಪಯೋಗಿ ಇಲಾಖೆಯವರು ಇಲ್ಲಿ ನೀರಾವರಿ ಅಣೆಕಟ್ಟೆಗಾಗಿ ಅಗೆದ ಒಂದು ಗುಂಡಿಯಲ್ಲಿ ಹಳೆಯ ಶಿಲಾಯುಗದ ಅನೇಕ ಶಿಲಾಯುಧಗಳು ದೊರಕಿದವು. ಅನ್ವೇಷಣೆಯನ್ನು ಮುಂದುವರಿಸಿದಾಗ ಇಂಥ 5 ನೆಲೆಗಳು ಶೋಧವಾದವು. 1975–76ರ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಈ ಊರಿನ ಈಶಾನ್ಯ ದಿಕ್ಕಿಗೆ ಸುಮಾರು 200 ಮೀ ದೂರದಲ್ಲಿರುವ 5ನೆಯ ನೆಲೆಯಲ್ಲಿ ಉತ್ಖನನ ನಡೆಸಲಾಯಿತು. ಒಂದು ಹಳ್ಳದ ಬದಿಯಲ್ಲಿ ತೋಡಿದ ಒಂದು ಮೀಟರ್ ಚದರದ ಗುಂಡಿಗಳಲ್ಲಿ ಸುಣ್ಣ ಕಲ್ಲು ಮತ್ತು ಕಣಶಿಲೆಯ ಚೂರುಗಳಿಂದ ಮಿಶ್ರಿತವಾದ ಗರಸು ಮಣ್ಣು ಇದ್ದು, ಸುಮಾರು 0.75 ಸೆಂಮೀ ಆಳದಿಂದ ಕೆಳಗೆ ಶಿಲಾಯುಧಗಳಿದ್ದುದು ಕಂಡುಬಂತು. ದೊರೆತ ಅವಶೇಷಗಳಿಂದ ಆ ಭಾಗದಲ್ಲಿ ಶಿಲಾಯುಗ ಮಾನವನು ನೆಲೆಸಿದ್ದಿರಬಹುದೆಂಬ ಸೂಚನೆ ಕಂಡುಬಂದದ್ದರಿಂದ ಆ ಗುಂಡಿಯನ್ನು 9X7 ಮೀ ಕ್ಷೇತ್ರದಷ್ಟು ವಿಸ್ತರಿಸಲಾಯಿತು.

ಸುಮಾರು 10 ರಿಂದ 30 ಸೆಂಮೀ ದಪ್ಪನೆಯ ಪದರದಲ್ಲಿ ಶಿಲಾಯುಧಗಳಲ್ಲದೆ ಸುಣ್ಣಕಲ್ಲು ಬಂಡೆಗಳು (25 ಸೆಂಮೀ), ನೀರಿನಿಂದ ಸವೆದ ಸುಣ್ಣಕಲ್ಲು, ಕಲ್ಲಿನ ತುಂಡುಗಳು, ಕಣಶಿಲೆಯ ಗುಂಡುಗಳು, ಸ್ಥಳದಲ್ಲೇ ಕ್ರಮೇಣ ಮರಳಾದ ಗ್ರಾನೈಟ್ ಗರಸಿ ಗಟ್ಟಿಯಾಗಿ ಅಂಟಿಕೊಂಡಿತ್ತು. ಶಿಲಾಯುಧಗಳು ಉತ್ಖನನ ಮಾಡಿದ ನೆಲದ ಮೇಲೆಲ್ಲ ಹರಡಿದ್ದವು. ಈ ನೆಲದ ಮಧ್ಯದಲ್ಲಿ ಎರಡು ಕಣಶಿಲೆಯ ಗುಂಡುಗಳ ನಡುವೆ ಶಿಲಾಯುಧಗಳು ದಟ್ಟವಾಗಿ ಹರಡಿಕೊಂಡಿದ್ದವು. ಆದಿಮಾನವನು ಶಿಲಾಯುಧಗಳ ತಯಾರಿಕೆಯಲ್ಲಿ ತೊಡಗಿದಾಗ ಈ ಗುಂಡುಗಳನ್ನು ಆಸರೆಯನ್ನಾಗಿ ಪೀಠವನ್ನಾಗಿ ಉಪಯೋಗಿಸಿರಬಹುದು. ಗುಂಡಿಯ ಉತ್ತರ ಮತ್ತು ದಕ್ಷಿಣದ ಅಂಚಿನಲ್ಲಿ ಶಿಲಾಯುಧಗಳು ಕಡಿಮೆ ಪ್ರಮಾಣದಲ್ಲಿ ಇದ್ದವು. ಇದು ವಾಸ್ತವ್ಯ ನೆಲೆಯ ವಿಸ್ತಾರವನ್ನು ಸೂಚಿಸುತ್ತದೆ. ಈ ನೆಲೆಯ ಉತ್ತರಕ್ಕೆ ಸುಮಾರು ಎಂಟು ಹತ್ತು ಕಣಶಿಲೆಯ ಗುಂಡುಗಳನ್ನು ಸಾಲಾಗಿಡಲಾಗಿದ್ದು ಇದನ್ನು ಚಳಿಗಾಳಿಗಳ ಹೊಡೆತವನ್ನು ತಡೆಯಲು ಮಾಡಿದ ಮೊಟ್ಟ ಮೊದಲನೆಯ ಮಾನವ ನಿರ್ಮಿತ ಒಡ್ಡು ಎಂದು ಊಹಿಸಬಹುದಾಗಿದೆ. ನೆಲೆಯ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ನೈಸರ್ಗಿಕವಾಗಿರುವ ಕಣಶಿಲೆಯ ಗುಂಡುಗಳು ಇದ್ದವು. ಒಟ್ಟಿನಲ್ಲಿ ಈ ನೆಲೆ ತಳವಿನ್ಯಾಸದಲ್ಲಿ ಅಂಡಾಕಾರವಾಗಿದ್ದು ಕಣಶಿಲೆಯ ಗುಂಡುಗಳಿಂದ ಪರಿಧಿಯನ್ನು ಹೊಂದಿತ್ತು ಎಂದು ಹೇಳಬಹುದು. ಇದರ ಕ್ಷೇತ್ರಫಲ ಸುಮಾರು 60 ಚ.ಮೀ. ಈ ನೆಲದ ಗರಸಿನಲ್ಲಿ ದೊರೆತ ಸಸ್ಯಪರಾಗಗಳನ್ನು ಪರಿಶೀಲಿಸಿದ ಹಾಲೆಂಡಿನ ಪ್ರಾಚೀನ ಸಸ್ಯಶಾಸ್ತ್ರಜ್ಞರು ಈ ಸ್ಥಳದಲ್ಲಿ ಈಗಿನಂತೆಯೇ ಆದರೆ ಅತಿ ದಟ್ಟವಾದ, ಜಾಲಿ ಮತ್ತು ಬೋರೆಗಿಡಗಳ ಅಡವಿ ಹಬ್ಬಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಉತ್ಖನನದಿಂದ ಹೊರತೆಗೆದ ಶಿಲಾಯುಧಗಳು ಸು. 800. ಎಲ್ಲವೂ ಸುಣ್ಣಕಲ್ಲಿನವು. ಆದಿಮಾನವನು ಸುತ್ತಲಿನ ಪ್ರದೇಶದಲ್ಲಿ ದೊರಕುವ ಸುಣ್ಣಕಲ್ಲನ್ನು ತಂದು ಇದೇ ಸ್ಥಳದಲ್ಲಿ ಆಯುಧಗಳನ್ನು ತಯಾರಿಸಿದನೆಂದು, ಇನ್ನೂ ಉಪಯೋಗಿಸದ ಶಿಲಾಯುಧಗಳು, ಸುಣ್ಣಕಲ್ಲಿನ ಚೂರುಗಳು ಮತ್ತು ಅಂಗೈ ಗಾತ್ರದ ಗುಂಡುಗಳು ಒಟ್ಟಾಗಿ ಹರಡಿಕೊಂಡಿದ್ದರಿಂದ ಹೇಳಬಹುದಾಗಿದೆ. ಕೈಕೊಡಲಿಗಳು ಹೆಚ್ಚಾಗಿ ಕಂಡುಬಂದವು. ಮೃದುವಾದ ಸುಣ್ಣಕಲ್ಲಿನಿಂದ ಕೊಡಲಿಯನ್ನು ಮಾಡಿರುವುದು ಈ ನೆಲೆಯ ಒಂದು ವೈಶಿಷ್ಟ್ಯವೆಂದೇ ಹೇಳಬಹುದು. ಇದರ ಕಾರ್ಯಸಾಮರ್ಥ್ಯ ಬೆರಗುಗೊಳಿಸುವಂಥದು (ಒಂದು ಚೂಪಾದ ಕೊಡಲಿಗೆ 70 ಸೆಂಮೀ ಉದ್ದನೆಯ ಕಟ್ಟಿಗೆಯ ಹಿಡಿ ಹಾಕಿ ಒಂದು ಜಾಲಿಯ ಮರವನ್ನು ಕಡಿದು ಕೆಡವಲು ಕೇವಲ ಹದಿನೈದು ನಿಮಿಷಗಳು ಸಾಕಾದವು. ಈ ಆಯುಧದ ಮೇಲಿನ ಭಾಗ ಸವೆದರೂ ಕತ್ತರಿಸುವ ಬಾಯಿ ಕೆಡದೆ ಉಳಿಯಿತು). ಇಲ್ಲಿನ ಮಾನವನು ಕಲೆಯ ಸಂಪ್ರದಾಯವನ್ನಿಟ್ಟುಕೊಂಡಿದ್ದನೆಂಬ ಸಂಗತಿ ವಾಸಸ್ಥಳದ ಪದರದಲ್ಲಿ ದೊರೆತ ಹೆಮಟೈಟ್ ವರ್ಣದ್ರವ್ಯದಿಂದ ತಿಳಿದು ಬರುತ್ತದೆ. ಈ ದ್ರವ್ಯ ಇಲ್ಲಿಂದ 25 ಕಿಮೀ ದೂರದಲ್ಲಿ ದೊರಕುತ್ತದೆ. ಅಲೆಮಾರಿ ಅಷೂಲಿಯನ್ ಮಾನವನು ಇಲ್ಲಿಂದ ದೂರ ಹೋಗಿ ತಂಗಿರಲು ಸಾಧ್ಯ. ಇಂಥ ಕುರುಹು ದೇಶದ ಬೇರಾವ ನೆಲೆಗಳಲ್ಲೂ ದೊರೆತಿಲ್ಲ **(ನೋಡಿ: ಪ್ರಾಗಿತಿಹಾಸ)**. **(ಎ.ಎಸ್.)**

**ಹುಣಸೂರು:** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಕೃಷ್ಣರಾಜನಗರ, ಪೂರ್ವ ಮತ್ತು ದಕ್ಷಿಣಗಳಲ್ಲಿ ಮೈಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳೂ ನೈಋತ್ಯದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕೂ ಪಶ್ಚಿಮದಲ್ಲಿ ಪಿರಿಯಾಪಟ್ಟಣ ತಾಲ್ಲೂಕೂ ಸುತ್ತುವರಿದಿವೆ. ಹನಗೋಡು, ಬಿಳಿಕೆರೆ, ಹುಣಸೂರು ಮತ್ತು ಗೌಡಗೆರೆ ಹೋಬಳಿಗಳು, ಒಂದು ಪಟ್ಟಣ ಮತ್ತು 209 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 890.8 ಚ.ಕಿಮೀ. ಜನಸಂಖ್ಯೆ 2,53,926. ಇದರಲ್ಲಿ 2,10,026 ಮಂದಿ ಗ್ರಾಮವಾಸಿಗಳು, 43,900 ಮಂದಿ ಪಟ್ಟಣ ವಾಸಿಗಳು ಇದ್ದಾರೆ.

ತಾಲ್ಲೂಕು ಪಶ್ಚಿಮಘಟ್ಟ ಶ್ರೇಣಿಯ ನೆರಳಲ್ಲಿದ್ದು ಮಲೆನಾಡ ಪ್ರದೇಶಕ್ಕೆ ಸೇರಿದೆ. ಈ ತಾಲ್ಲೂಕಿನ ಹನಗೋಡಿನಿಂದ ಕೊಡಗು ಜಿಲ್ಲೆಯ ಅಂಚಿನವರೆಗೂ ಚಾರ್ನೋಕೈಟ್ ಶಿಲಾಹಾರವಿದೆ. ಉಳಿದ ಭಾಗ ಕಣಶಿಲಾ ಪ್ರದೇಶವೆನ್ನಬಹುದು. ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣದಲ್ಲಿ ಅರಣ್ಯ ಪ್ರದೇಶವಿದ್ದು ತೇಗ, ಗಂಧ, ಬೀಟೆ, ನಂದಿ, ಹೊನ್ನೆ, ಮತ್ತಿ, ಕರಿಮರ, ಬೆಂಕಿಕಡ್ಡಿ ತಯಾರಿಕೆಗೆ ಬೇಕಾದ ಮೃದುಮರ ಬೆಳೆಯುವುದಲ್ಲದೆ ಬಿದಿರು, ಅರಗು,


ತಾಲ್ಲೂಕು ಕಛೇರಿಗಳ ಕಟ್ಟಡ, ಹುಣಸೂರು

ಮರಗೋಂದು ದೊರಕುವುವು. ಕೆಲವು ಬಗೆಯ ಹಣ್ಣಿನ ಮತ್ತು ಮಾವು, ಹುಣಿಸೆ, ತೆಂಗು ತೋಪುಗಳನ್ನೂ ಕಾಣಬಹುದು, ರಕ್ಷಿತ ಅರಣ್ಯ ಪ್ರದೇಶವಿದೆ. ವಿವಿಧ ಕಾಡುಪ್ರಾಣಿಗಳನ್ನೂ ಕಾಣಬಹುದಾದ ಕೆಲವು ಅರಣ್ಯ ಪ್ರದೇಶವಿದೆ. ಲಕ್ಷ್ಮಣತೀರ್ಥ ತಾಲ್ಲೂಕಿನ ಮುಖ್ಯ ನದಿ. ತಾಲ್ಲೂಕನ್ನು ನೈಋತ್ಯದಲ್ಲಿ ಪ್ರವೇಶಿಸಿ ಹನಗೋಡು, ಹುಣಸೂರು ಮತ್ತು ಕಟ್ಟೆಮಳಲವಾಡಿ ಮುಖಾಂತರ ಈಶಾನ್ಯಾಭಿಮುಖವಾಗಿ ಹರಿದು ಸಾಗರಕಟ್ಟೆ ಬಳಿ ಕಾವೇರಿಯನ್ನು ಸೇರುವುದು. ಬೇಸಗೆ ದಿನಗಳನ್ನು ಬಿಟ್ಟು ಉಳಿದ ಕಾಲದಲ್ಲಿ ಸಾಮಾನ್ಯವಾಗಿ ಹವೆ ತಂಪಾಗಿರುತ್ತದೆ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 770.78 ಮಿಮೀ.

ತಾಲ್ಲೂಕಿನಲ್ಲಿ ಮರಳು ಮಿಶ್ರಿತ ಕೆಂಪುಮಣ್ಣಿನ ಪ್ರದೇಶ ಹೆಚ್ಚು. ನೀರಾವರಿಯೂ ಈ ತಾಲ್ಲೂಕಿನಲ್ಲಿದ್ದು ಬತ್ತ, ರಾಗಿ, ಕಬ್ಬು, ದ್ವಿದಳಧಾನ್ಯಗಳನ್ನೂ ಹತ್ತಿ, ಹೊಗೆಸೊಪ್ಪನ್ನೂ ಬೆಳೆಯುತ್ತಾರೆ. ಮಾವು, ಅಡಕೆ, ತೆಂಗು, ಕೆಲವು ಬಗೆಯ ಫಲ ಮತ್ತು ತರಕಾರಿಗಳನ್ನು ತೋಟಗಳಲ್ಲಿ ಬೆಳೆಯುತ್ತಾರೆ. ಪಶುಪಾಲನೆಯಿದ್ದು ಪಶುವೈದ್ಯಶಾಲೆಗಳಿವೆ. ಮತ್ಸ್ಯೋದ್ಯಮ ಸಾಮಾನ್ಯವೆನ್ನಬಹುದು. ತಾಲ್ಲೂಕಿನಲ್ಲಿ ಅರಣ್ಯೋತ್ಪಾದಕ ವಸ್ತುಗಳ ತಯಾರಿಕೆಯ ಜೊತೆಗೆ ಮರ ಕೊಯ್ಯುವ, ಪ್ಲೈವುಡ್ ತಯಾರಿಕೆ, ತಂಬಾಕು ಮತ್ತು ಕಾಫಿಬೀಜ ಶುದ್ಧೀಕರಣ, ಚರ್ಮ ವಸ್ತುಗಳ ಉತ್ಪಾದನೆ, ಅಗರಬತ್ತಿ, ಸಿಮೆಂಟ್ ಪೈಪ್ ಮತ್ತು ಕಿಟಕಿಗಳ ತಯಾರಿಕೆ ಮತ್ತು ಉಜ್ಜುಕಂಬಳಿಗಳ ತಯಾರಿಕೆ ಉಂಟು. ಮರದ ಸಾಮಾನು ಮತ್ತು ಎತ್ತಿನ ಬಂಡಿಗಳನ್ನೂ ತಯಾರಿಸುವುದುಂಟು. ತಾಲ್ಲೂಕಿನ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಸಹಕಾರಿಯಾಗಿ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್, ಆಸ್ಪತ್ರೆ ಮತ್ತು ಔಷಧಾಲಯಗಳ ಸೌಲಭ್ಯಗಳಿವೆ. ಶಾಲಾಕಾಲೇಜುಗಳಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲಗಳಿವೆ. ತಾಲ್ಲೂಕಿನಲ್ಲಿ ಮೈಸೂರು–ಪಿರಿಯಾಪಟ್ಟಣ, ಮೈಸೂರು–ಮಡಿಕೇರಿ ರಾಜ್ಯ ಹೆದ್ದಾರಿ ಹಾದುಹೋಗಿದೆ. ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳಿದ್ದು ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ. *

ಹುಣಸೂರಿನ ಉತ್ತರಕ್ಕೆ 6 ಕಿಮೀ ದೂರದಲ್ಲಿರುವ ಕಟ್ಟೆಮಳಲವಾಡಿ ಗ್ರಾಮ ಲಕ್ಷ್ಮಣತೀರ್ಥ ನದಿಯ ಎಡದಂಡೆಯ ಮೇಲಿದೆ. ಪ್ರಾಥಮಿಕ

ಮತ್ತು ಮಾಧ್ಯಮಿಕ ಶಾಲೆಗಳೂ ವಿದ್ಯುತ್ ಮುಂತಾದ ಸೌಲಭ್ಯ ಇರುವ ಈ ಗ್ರಾಮದಲ್ಲಿ ಒಂದು ಹಳೆ ಕೋಟೆಯ ಅವಶೇಷಗಳೂ ಪುರಾತನ ರಾಮೇಶ್ವರ ದೇವಾಲಯವೂ ಇದೆ. ಹುಣಸೂರಿಗೆ ಈಶಾನ್ಯದಲ್ಲಿ 18 ಕಿಮೀ ದೂರದಲ್ಲಿರುವ ಮಲ್ಲಿನಾಥಪುರ ಮೈಸೂರು–ಹುಣಸೂರು ರಾಜ್ಯ ಹೆದ್ದಾರಿಯಲ್ಲಿದೆ. ಈ ಗ್ರಾಮದಲ್ಲಿ ಪ್ರತಿ ಮೇ ತಿಂಗಳಲ್ಲಿ ನಡೆಯುವ ಮಾರಮ್ಮನ ಜಾತ್ರೆ ಹೆಸರಾದದ್ದು.

ಹುಣಸೂರು ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ, ಮೈಸೂರು–ಮಡಿಕೇರಿ ರಾಜ್ಯ ಹೆದ್ದಾರಿಯಲ್ಲಿ ಮೈಸೂರಿನ ಪಶ್ಚಿಮಕ್ಕೆ 45 ಕಿಮೀ ದೂರದಲ್ಲಿ ಲಕ್ಷ್ಮಣತೀರ್ಥ ನದಿಯ ಎರಡೂ ದಂಡೆಗಳಲ್ಲಿ ಈ ಪಟ್ಟಣ ಹರಡಿದೆ. ಜನಸಂಖ್ಯೆ 43,900.

ತಂಬಾಕು ಹರಾಜು ಮಾರುಕಟ್ಟೆ, ಕಟ್ಟೆಮಳಲವಾಡಿ

ಇಲ್ಲಿ ಅರಣ್ಯಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳು ಹೇರಳವಾಗಿವೆ. ಪಟ್ಟಣಕ್ಕೆ ಹತ್ತಿರವಾಗಿ ರಾಜ್ಯ ಅರಣ್ಯ ಮೀಸಲು ಪ್ರದೇಶವಿದೆ. ಇಲ್ಲಿ ಮರ ಕೊಯ್ಯುವ ಕೈಗಾರಿಕೆ ಮುಖ್ಯವಾದದ್ದು. ಇಲ್ಲಿಗೆ ಸುತ್ತಲ ಗ್ರಾಮಗಳಿಂದ ಮತ್ತು ಕೊಡಗು ಜಿಲ್ಲೆಯಿಂದ ಮರದ ದಿಮ್ಮಿಗಳು ಬರುತ್ತವೆ. ಅರಣ್ಯ ಇಲಾಖೆ ಈ ದಿಮ್ಮಿಗಳನ್ನು ಹರಾಜು ಮೂಲಕ ಮಾರುವುದು. ಕಾಫಿ ಬೀಜದ ಶುದ್ಧೀಕರಣ ಇಲ್ಲಿನ ಒಂದು ಮುಖ್ಯ ಕೈಗಾರಿಕೆಯಾಗಿದೆ. ಹಿಂದೆ ಮೈಸೂರು ರಾಜ್ಯಕ್ಕೇ ಪ್ರಸಿದ್ಧವಾದ ಉಜ್ಜುಕಂಬಳಿಗಳನ್ನು ಇಲ್ಲಿ ತಯಾರಿಸಲಾಗುತ್ತಿತ್ತು. ಇತ್ತೀಚೆಗೆ ಕಡಿಮೆಯಾಗಿದ್ದರೂ ಕಲ್ಲುಣಿಕೆ ಎಂಬಲ್ಲಿಂದ ಬರುವ ಕಂಬಳಿಗಳಿಗೆ ಈಗಲೂ ಈ ಊರು ಪ್ರಸಿದ್ಧ. ಈ ಪಟ್ಟಣ ಚಪ್ಪಲಿಗಳಿಗೆ, ಮರದ ಆಟದ ಸಾಮಾನುಗಳಿಗೆ ಪ್ರಸಿದ್ಧಿಯಾಗಿತ್ತು. ಈಗಲೂ ಚರ್ಮ ವಸ್ತುಗಳ ತಯಾರಿಕೆಯುಂಟು. ಇತ್ತೀಚೆಗೆ ಅಕ್ಕಿ ಮಾಡುವಿಕೆ, ತಂಬಾಕು ಶುದ್ಧೀಕರಣ, ಎಣ್ಣೆ ತಯಾರಿಕೆ, ಅಗರಬತ್ತಿ ತಯಾರಿಕೆ, ಸಿಮೆಂಟ್‍ನ ಪೈಪ್‍ಗಳು ಹಾಗೂ ಕಿಟಕಿಗಳ ತಯಾರಿಕೆ ಹೆಚ್ಚಾಗಿ ಅಭಿವೃದ್ಧಿಗೊಂಡಿವೆ. ಈಗಲೂ ಹುಣಸೂರು ಎತ್ತಿನ ಗಾಡಿಗಳು ಈ ಪ್ರದೇಶದ ಸುತ್ತಮುತ್ತ ಪ್ರಸಿದ್ಧಿ ಪಡೆದಿವೆ. ತಾಲ್ಲೂಕಿನ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೆಗಳ ಕೇಂದ್ರವಾಗಿರುವ ಈ ಪಟ್ಟಣದಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಆಸ್ಪತ್ರೆ, ಔಷಧಾಲಯಗಳು, ಅಂಚೆ, ತಂತಿ, ದೂರವಾಣಿ ವಿದ್ಯುತ್ ಮತ್ತು ಶಾಲಾಕಾಲೇಜುಗಳ ಸೌಕರ್ಯವಿದೆ. ಪಟ್ಟಣ ಪೌರಸಭಾ ಆಡಳಿತಕ್ಕೆ ಸೇರಿದೆ.

ಈ ಪಟ್ಟಣ ಮೈಸೂರು ಜಿಲ್ಲೆಯ ಮುಖ್ಯ ರಸ್ತೆ ಮಾರ್ಗಗಳ ಕೇಂದ್ರವಾಗಿದೆ. ಮಡಿಕೇರಿಗೆ ಹೋಗುವ ಎಲ್ಲ ರಸ್ತೆಗಳೂ ಇದರ ಮುಖಾಂತರವೇ ಹಾದುಹೋಗಬೇಕು. ಇಲ್ಲಿಂದ ದಕ್ಷಿಣದ ಕಡೆ ಹೆಗ್ಗಡದೇವನಕೋಟೆ, ಸರಗೂರು, ಉತ್ತರದ ಕಡೆ ಕಟ್ಟೆಮಳಲವಾಡಿಯ ಮುಖಾಂತರ ಕೃಷ್ಣರಾಜನಗರ, ಚುಂಚನಕಟ್ಟೆ ಕಡೆಗೆ ರಸ್ತೆಗಳಿವೆ. ಈ ಊರಿಗೆ ಸಮೀಪದಲ್ಲಿ ನಿವೃತ್ತ ಸೈನಿಕರ ವಸತಿ ಇದೆ. ಅದಕ್ಕೆ ಸ್ವಲ್ಪ ದೂರದಲ್ಲಿ ಹಿಂದೆ ಪ್ರಸಿದ್ಧವಾಗಿದ್ದು ಈಗ ಹಾಳು ಬಿದ್ದಿರುವ ರತ್ನಪುರಿ ಕೋಟೆಯಲ್ಲಿ ಅನೇಕ ಭಗ್ನ ದೇವಾಲಯಗಳಿವೆ. ಇಲ್ಲಿ ಅಸಂಖ್ಯಾತ ಹುಣಿಸೇ ಮರಗಳಿದ್ದು ಹುಣಿಸೇ ಹಣ್ಣಿನ ಸಂಸ್ಕರಣ ಇಲ್ಲಿನ ಮುಖ್ಯ ಗೃಹ ಕೈಗಾರಿಕೆಯಾಗಿದೆ.

**ಹುಣಸೂರು ಕೃಷ್ಣಮೂರ್ತಿ:** 1914–89. ಹುಣಸೂರ್ ಎಂದೇ ಪ್ರಸಿದ್ಧರಾಗಿದ್ದ ಕನ್ನಡ ರಂಗಭೂಮಿ ನಟ, ಚಲನಚಿತ್ರ ನಿರ್ದೇಶಕ, ಸಾಹಿತಿ. ಇವರು ಮೈಸೂರು ಜಿಲ್ಲೆ ಹುಣಸೂರಿನಲ್ಲಿ 1914 ಫೆಬ್ರವರಿ 9ರಂದು ಜನಿಸಿದರು. ತಂದೆ ರಾಜಾರಾವ್ ಹಾಗೂ ತಾಯಿ ಪದ್ಮಾವತಿ. ಬಾಲ್ಯದಿಂದಲೂ ನಟನೆಯಲ್ಲಿ ಆಸಕ್ತರಾಗಿದ್ದ ಇವರು ಆರನೆಯ ತರಗತಿವರೆಗೆ ವಿದ್ಯಾಭ್ಯಾಸ ಮಾಡಿ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರಗಳನ್ನು ಆಯ್ಕೆಮಾಡಿಕೊಂಡರು. ಗುಬ್ಬಿ ನಾಟಕ ಕಂಪನಿ ಹಾಗೂ ಪೀರ್‌ನಾಟಕ ಕಂಪನಿಗಳಲ್ಲಿ ನಟರಾಗಿ, ಸಾಹಿತಿಯಾಗಿ ಪ್ರಸಿದ್ಧಿಗೆ ಬಂದರು. ಇವರು ಅಭಿನಯಿಸಿದ ಧರ್ಮರತ್ನಾಕರ ನಾಟಕ ರಂಗಭೂಮಿ ಕ್ಷೇತ್ರದಲ್ಲಿ ಪ್ರಸಿದ್ಧವಾಯಿತು. ರಾಜಾಗೋಪಿಚಂದ್ ನಾಟಕಕ್ಕೆ ಬರೆದ ಸಂಭಾಷಣೆ ರಾಜಮನ್ನಣೆ ಗಳಿಸಿತು. 52 ಚಲನಚಿತ್ರಗಳಿಗೆ ಉತ್ತಮ ಸಾಹಿತ್ಯ ರಚಿಸಿ, 74 ಚಿತ್ರಗಳನ್ನು ನಿರ್ದೇಶಿಸಿದ ಕೀರ್ತಿ ಇವರದು.

ಇವರು ಮೊದಲು ನಿರ್ದೇಶಿಸಿದ ಚಿತ್ರ 'ಶೀಕೃಷ್ಣಗಾರುಡಿ'. ಎವರ್‌ಗ್ರೀನ್ ಪ್ರೊಡಕ್ಷನ್ಸ್ ಎಂಬ ಚಲನಚಿತ್ರ ನಿರ್ಮಾಣ ಸಂಸ್ಥೆಯನ್ನು ಸ್ವತಃ ಸ್ಥಾಪಿಸಿ ವೀರಸಂಕಲ್ಪ, ರತ್ನಮಂಜರಿ, ಕನ್ನಿಕಾಪರಮೇಶ್ವರಿಕತೆ, ಮಂತ್ರಶಕ್ತಿ ಹಾಗೂ ಅಡ್ಡದಾರಿ – ಈ ಐದು ಚಲನಚಿತ್ರಗಳನ್ನು ನಿರ್ಮಿಸಿದರು. ಇವರು ನಿರ್ದೇಶಿಸಿದ ಸತ್ಯಹರಿಶ್ಚಂದ್ರ ಚಲನಚಿತ್ರಕ್ಕೆ ರಾಷ್ಟ್ರಪತಿಗಳ ರಜತ ಪದಕ ಪ್ರಶಸ್ತಿ ಲಭಿಸಿದೆ (1966). ಮದುವೆಮಾಡಿ ನೋಡು ಚಲನಚಿತ್ರವೂ ರಾಷ್ಟ್ರಮಟ್ಟದ ಪ್ರಶಸ್ತಿ ಗಳಿಸಿದೆ (1966). ಬಂಗಾರದ ಮನುಷ್ಯ (1971–72), ಬೂತಯ್ಯನ ಮಗ ಅಯ್ಯು (1973–74), ಭಕ್ತಕುಂಬಾರ (1974–75), ಎಡೆಯೂರು ಸಿದ್ಧಲಿಂಗೇಶ್ವರ ಮಹಾತ್ಮೆ (1981) ಈ ಚಿತ್ರಗಳ ಸಾಹಿತ್ಯರಚನೆಗಾಗಿ ಇವರಿಗೆ ರಾಜ್ಯ ಪ್ರಶಸ್ತಿ ದೊರೆತಿದೆ. ಇವರ ನಿರ್ದೇಶನದ ಬಂಗಾರದ ಮನುಷ್ಯ ಸತತವಾಗಿ ಎರಡು ವರ್ಷಗಳ ಕಾಲ ಪ್ರದರ್ಶನ ಕಂಡು ಕನ್ನಡ ಚಿತ್ರರಂಗದಲ್ಲಿ ದಾಖಲೆ ನಿರ್ಮಿಸಿದೆ. ಇವರು ವೀರಸಂಕಲ್ಪ, ಅಡ್ಡದಾರಿ, ಮುತ್ತೈದೆ ಭಾಗ್ಯ ಮೊದಲಾದ ಚಿತ್ರಗಳಲ್ಲಿ ನಟಿಸಿದ್ದರು. 'ಪೌರಾಣಿಕ, ಐತಿಹಾಸಿಕ, ಭಕ್ತಿಪ್ರಧಾನ ಚಿತ್ರಗಳ ನಿರ್ಮಾಣದಲ್ಲಿ ಹುಣಸೂರರಿಗೆ ಯಾರೂ ಸಾಟಿ ಇಲ್ಲ' ಎಂದು ಕನ್ನಡದ ವರನಟ ರಾಜ್‌ಕುಮಾರ್ ಇವರ ಪ್ರತಿಭೆಯನ್ನು ಕುರಿತು ಉದ್ಗರಿಸಿದ್ದರು. ಚಲನಚಿತ್ರ ಕ್ಷೇತ್ರಕ್ಕೆ ಅನೇಕ ಹೊಸ ಪ್ರತಿಭೆಗಳನ್ನು ಪರಿಚಯಿಸಿದ ಹಿರಿಮೆಯೂ ಇವರದು. ಹಾಸ್ಯನಟ ಹಾಗೂ ಚಿತ್ರನಿರ್ಮಾಪಕರಾದ ದ್ವಾರಕೀಶ್ ಇವರ ಸೋದರಳಿಯ. ಚಲನಚಿತ್ರ ನಿರ್ದೇಶಕರಾದ ಭಾರ್ಗವ ಇವರ ಅಣ್ಣನ ಮಗ.

ಕರ್ನಾಟಕ ಸರ್ಕಾರ 1986–87ರಲ್ಲಿ ಸ್ಥಾಪಿಸಿದ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ಪಡೆದ ಮೊದಲಿಗರು ಎಂಬ ಹೆಗ್ಗಳಿಕೆ ಇವರದು. ಇವರು 1989 ಜನವರಿ 13ರಂದು ನಿಧನರಾದರು. *

**ಹುತ್ತರಿ ಕುಣಿತ:** ಹುತ್ತರಿ ಹಬ್ಬದ ಸಂದರ್ಭದಲ್ಲಿ ನಡೆಯುವ ಕೊಡಗಿನ ಒಂದು ಜನಪದ ನೃತ್ಯ. ಹಬ್ಬದ ಅಂಗವಾಗಿ ಊರಿನ ದೇವಸ್ಥಾನದ ಮಂದ್‍ನಲ್ಲಿ (ಬಯಲಿನಲ್ಲಿ) ಒಂದು ವಾರ ಪರ್ಯಂತ ಕೋಲಾಟ ನಡೆಯುತ್ತದೆ. ಹಬ್ಬಕ್ಕೆ ನಾಲ್ಕೈದು ದಿನಗಳಿಗೆ ಮೊದಲು ಗ್ರಾಮದ ಯುವಕರೂ ಹಿರಿಯರೂ ಗ್ರಾಮದ ಮಂದ್‍ನಲ್ಲಿ ಸೇರಿ ಕೋಲಾಟ ಅಭ್ಯಾಸ ಮಾಡುತ್ತಾರೆ. ಇದಕ್ಕೆ ಈಡ್ ಎಂದು ಹೆಸರು. ಈಡ್ ದಿನಗಳಲ್ಲಿ ಮತ್ತು ಹಬ್ಬದ ದಿನಗಳಲ್ಲಿ ಕೋಲಾಟದಲ್ಲಿ ಭಾಗವಹಿಸುವವರು ಮತ್ತು ಕೋಲಾಟ ನೋಡಲು ಆಗಮಿಸುವವರು ದುಡಿ ಬಾರಿಸುವ ವಾದ್ಯಗಾರರೊಂದಿಗೆ ಮಂದ್‍ಗೆ ಬರುತ್ತಾರೆ. ಅವರು ತಲುಪಿದಾಗ –

ಬಾಳ್ ಬಾಳೆನ್ನಡ ಜಬ್ಬೂಮಿ ಬಾಳೋ
ಜಬ್ಬೂಮಿ ಮೀದಲೆ  ಪೂಮಂದ್ ಬಾಳೋ
ಪೂಮಂದ್ ಮೀದಲ್ ದೇವಯ್ಯ ಬಾಳೋ
ದೇವಂಗೊತ್ತಾಚಾರ ಪಾಡಿಚೊ ನಂಗ
ಆಚಾರಪಾಡಿತ್ ಪಾಟ್ ಬೆಕ್ಕನ ಎಂಗ

(ಜೀವನ ಮಾಡು ಒಳ್ಳೆಯ ಭೂಮಿಯ ಮೇಲೆ, ಒಳ್ಳೆಯ ಭೂಮಿಯ ಮೇಲೆ ಚೆನ್ನಾಗಿ ಬಾಳು, ಒಳ್ಳೆಯ ಭೂಮಿಯ ಮೇಲೆ ದೇವಯ್ಯ ನೀನು ಬಾಳು, ದೇವರಿಗೆ ಒಪ್ಪುವಂಥ ಆಚಾರ ವಿಚಾರವನ್ನು ಹಾಡಿದೆವು ನಾವು. ಆಚಾರವನ್ನು ಹಾಡಿ ಪಾಡಿ ಹೇಳುವೆವು ನಾವು) ಎಂದು ಹಾಡಿ ವಾದ್ಯಗಾರರು ಹಾಡು ನಿಲ್ಲಿಸುತ್ತಾರೆ.

ಅನಂತರ ಅನೇಕ ಬಗೆಯ ಕೋಲಾಟ ಪ್ರದರ್ಶಿತವಾಗುತ್ತವೆ. ಬೊಳಕಾಟ್, ಪಡೆಕಳಿ ಇತ್ಯಾದಿ ನೃತ್ಯಗಳೂ ನಡೆಯುತ್ತವೆ. ಹಾಡುಗಳ ರೀತಿ ಧಾಟಿಗಳು, ಹಾಡಿನೊಂದಿಗೆ ನೃತ್ಯದ ಹೆಜ್ಜೆಗಳನ್ನೂ ಜೊತೆಜೊತೆಯಾಗಿಡುವಂತೆ ಪ್ರೇರೇಪಿಸುತ್ತವೆ. ಹುತ್ತರಿ ಕೋಲಾಟದ ಹಾಡುಗಳು ಪೊಯ್ಲ್‌ಲೇ  ಪೊಯ್ಲ್‌ಲೇ ಎಂಬ ಪಲ್ಲವಿಯಿಂದ ಪ್ರಾರಂಭವಾಗುತ್ತವೆ. ಈ ಹಾಡುಗಳಲ್ಲಿ ದೇವರ ಆಶೀರ್ವಾದವನ್ನು ಬೇಡುವ, ವಾದ್ಯದವರಿಗೂ ನೃತ್ಯದವರಿಗೂ ಸಲಹೆಗಳನ್ನು ಕೊಡುವ ವಿಚಾರಗಳೂ ಸರಸ ಮತ್ತು ಹಾಸ್ಯಪ್ರಸಂಗಗಳೂ  ನಿರೂಪಿತವಾಗಿರುತ್ತವೆ.

ಪಡೆಕಳಿ ಅಥವಾ ಪರಿಯಕಳಿ ಯುದ್ಧಪರಂಪರೆಗೆ ಸೇರಿದ ನೃತ್ಯ, ಶೂರ ಯುವಕರು ಪೆಟ್ಟುಗಳನ್ನು ತಡೆಯುವ ಗುರಾಣಿಯಂಥ ಸಾಧನವನ್ನು ತಮ್ಮ ಎಡಗೈಯಲ್ಲಿ ಹಿಡಿದು, ಬಲಗೈಯಲ್ಲಿ ಉದ್ದವಾದ ಬೆತ್ತದ ಕೋಲನ್ನು ಹಿಡಿದು, ನಾನ್ ಬಾಳ್, ನೀನ್ ಬಾಳ್, ಎಡಕೂಡ ಇಳಿಯುವ ಜಂಜದಿ ಬಾಳ್, ಇಗ್ಗ್‌ತಪ್ಪ ಬಾಳ್, ಬಯತೂರಪ್ಪ ಬಾಳ್, ಬಾಳ್ ಬಾಳರೇ ಬಾಳ್ ಎಂದು ಹೇಳುತ್ತ ಹೋರಾಟಕ್ಕೆ ಆಹ್ವಾನಿಸುತ್ತಾರೆ. ಈ ಆಟದಲ್ಲಿ ಪರಸ್ಪರ ಯಾರೂ ಕೂಡ ಮೊಣಕಾಲಿನ ಮೇಲೆ ಹೊಡೆಯಬಾರದು. ಆಟ ಒಂದು ಘಟ್ಟಕ್ಕೆ ಮುಟ್ಟಿದಾಗ (ಒಬ್ಬರಿಗಿಂತ ಮತ್ತೊಬ್ಬರ ಕೈ ಮೇಲಾಗಿದೆ ಎಂದು ತಿಳಿದಾಗ) ಆಟವನ್ನು ನಿಲ್ಲಿಸಿ, ಪರಸ್ಪರ ಅಪ್ಪಿಕೊಂಡು ಅಭಿನಂದಿಸಿ ಬೇರ್ಪಡುತ್ತಾರೆ.

ಹುತ್ತರಿ ಹಬ್ಬದ ಸಂಜೆ ಅಥವಾ ಕೋಲಾಟ ನಡೆಯುವಷ್ಟು ದಿನ ಪ್ರತಿ ರಾತ್ರಿ ಗ್ರಾಮದ ಮನೆ ಮನೆಗೆ ಹೋಗಿ ಮನೆ ಹಾಡು ಹೇಳುವ ಸಂಪ್ರದಾಯವೂ ಇದೆ. ಮನೆಯವರನ್ನು ಹಾಡಿ ಹೊಗಳಿದ ಅನಂತರ ಅವರಿಂದ ಕಾಣಿಕೆಗಳನ್ನು ಪಡೆಯುತ್ತಾರೆ. ಉದಾಹರಣೆಗೆ ಒಂದು ಮನೆಯ ಹಾಡು:

ನಂದಾಟ್ ಈ ಮನೆ ನಂದಿ ಮಹದೇವ
ಪತ್ತಾಯ ಚಿತ್ತಾರಿ ತೊನೆಯತಿರಡೊ
ತೊಟ್ಟಿಲ್ ಪಾಕು ಇತಪ್ಪತಿರಡೊ
ಕೊಟ್ಟಿಲ್ ಕರಪತ್ರ ತಪ್ಪತಿರಡೊ
ಪೊಟ್ಟಿಲ್ ಬೀರಾಳಿ ನೀಂಗತಿರಡೊ
ಬೆಪ್ಪಲ್ ಪೊಂಬಣನಂಗತಿರಡೊ

(ಈ ಮನೆಯವರಿಗೆ ಮಂಗಳವನ್ನುಂಟುಮಾಡು ಮಹದೇವ.  ಈ ಮನೆ ಎಲ್ಲ ದಿಕ್ಕಿನಲ್ಲೂ ಅಭಿವೃದ್ಧಿ ಹೊಂದಲಿ; ಇದರ ಉಗ್ರಾಣದಲ್ಲಿ ಸಣ್ಣಕ್ಕಿ ತುಂಬಿ ತುಳುಕಾಡುತಿರಲಿ, ಸದಾಕಾಲವೂ ತೊಟ್ಟಿಲಲ್ಲಿ ಹಾಲು ಹಸುಳೆ ನಗುತಿರಲಿ, ಕೊಟ್ಟಿಗೆಯಲಿ ಹಾಲು ಕರೆಯುವ ಹಸು ಇರಲಿ ಇತ್ಯಾದಿ). (ಡಿ.ಬಿ.ಆರ್.)

**ಹುತ್ರಿದುರ್ಗ:** ತುಮಕೂರು ಜಿಲ್ಲೆ ಕುಣಿಗಲು ತಾಲ್ಲೂಕಿನಲ್ಲಿ ಕುಣಿಗಲಿಗೆ ಆಗ್ನೇಯಕ್ಕೆ 19 ಕಿಮೀ ದೂರದಲ್ಲಿರುವ ಗ್ರಾಮ ಹಾಗೂ ಬೆಟ್ಟ. ಜನಸಂಖ್ಯೆ 1,193. ಈ ಬೆಟ್ಟ ಸಮುದ್ರಮಟ್ಟದಿಂದ 1,130 ಮೀ ಎತ್ತರದಲ್ಲಿದೆ. ಇದನ್ನು ದೊಡ್ಡ ಬೆಟ್ಟವೆಂದೂ ಕರೆಯುತ್ತಾರೆ. ಬೆಟ್ಟದ ಮೇಲೆ ಕೋಟೆ ಇದೆ. ಇದಕ್ಕೆ 8 ಹೆಬ್ಬಾಗಿಲುಗಳಿವೆ. ಇವುಗಳಲ್ಲದೆ ಎಲೆಯೂರು ಬಾಗಿಲು, ಬಾಲಿಕಟ್ಟೆ ಬಾಗಿಲು, ಮಾಗಡಿ ಬಾಗಿಲು ಎಂಬ ಹೊರಬಾಗಿಲುಗಳೂ ಇವೆ. ಇಲ್ಲಿರುವ ಶಂಕರೇಶ್ವರ ದೇವಾಲಯದಲ್ಲಿರುವ ಕೆಲವು ವಿಗ್ರಹಗಳು ಬಹು ಸುಂದರವಾಗಿವೆ. ಈ ದೇವಾಲಯವನ್ನು ಶಂಕರಾಚಾರ್ಯರು ಪ್ರತಿಷ್ಠಾಪಿಸಿದರೆಂದು ಪ್ರತೀತಿ. ದುರ್ಗದ ಮೇಲ್ಭಾಗದಿಂದ ನೋಡಿದರೆ ಸುತ್ತಲ ರಮಣೀಯ ಪ್ರಕೃತಿ ದೃಶ್ಯವನ್ನು ಕಾಣಬಹುದು.

ಬೆಟ್ಟದ ಬುಡದಲ್ಲಿರುವ ಊರಿನಲ್ಲಿ ಅನೇಕ ಪುರಾತನ ದೇವಾಲಯಗಳಿವೆ. ಇವುಗಳಲ್ಲಿ ಆದಿನಾರಾಯಣ, ವೀರಭದ್ರ ಮತ್ತು ಆಂಜನೇಯ ದೇವಸ್ಥಾನಗಳು ಪ್ರಸಿದ್ಧವಾದವು. (ಡಿ.ಎನ್.ಕೆ.)

**ಹುನಗುಂದ:** ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಪೂರ್ವದಲ್ಲಿ ರಾಯಚೂರು ಜಿಲ್ಲೆ, ದಕ್ಷಿಣದಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕು, ಪಶ್ಚಿಮದಲ್ಲಿ ಬಾಗಲಕೋಟೆ ಮತ್ತು ಬಾದಾಮಿ ತಾಲ್ಲೂಕು, ಉತ್ತರದಲ್ಲಿ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕು ಸುತ್ತುವರಿದಿವೆ. ಕರಡಿ, ಹುನಗುಂದ, ಅಮೀನಗಡ ಮತ್ತು ಇಳಕಲ್ಲು ಹೋಬಳಿಗಳು. ಎರಡು ಪಟ್ಟಣಗಳು ಮತ್ತು 168 ಗ್ರಾಮಗಳು ಇವೆ. ತಾಲ್ಲೂಕಿನ ವಿಸ್ತೀರ್ಣ 1,352.9 ಚ.ಕಿಮೀ. ಜನಸಂಖ್ಯೆ 2,87,086. ಇದರಲ್ಲಿ 2,17,129 ಮಂದಿ ಗ್ರಾಮೀಣರು, 69,957 ಮಂದಿ ಪಟ್ಟಣಿಗರು.

ಈ ತಾಲ್ಲೂಕು ಹುನಗುಂದ ಮೈದಾನ ಪ್ರದೇಶಕ್ಕೆ ಸೇರಿದೆ. ಕೆಂಪು ಮಣ್ಣಿನ ವಿಶಾಲ ಬಯಲಿನ ಮಧ್ಯೆ ಬೋಳುಗುಡ್ಡಗಳಿವೆ. ಕೃಷ್ಣ, ಮಲಪ್ರಭಾ ತಾಲ್ಲೂಕಿನ ಮುಖ್ಯ ನದಿಗಳು. ಇವುಗಳಲ್ಲದೆ ಹುನುಗುಂದದ ಮುಖಾಂತರ ಹರಿಯುವ ಕಡ್ಲಪ್ಪನ ನದಿ ಮತ್ತು ತಾಲ್ಲೂಕಿನ ದಕ್ಷಿಣದಿಂದ ಉತ್ತರಕ್ಕೆ ಹರಿದು ಕೃಷ್ಣಾನದಿಯನ್ನು ಸೇರುವ ಇಳಕಲ್ಲು ನದಿ ಇವೆ. ಮಲಪ್ರಭಾ ನದಿ ತಾಲ್ಲೂಕಿನ ಪಶ್ಚಿಮ ಗಡಿಯಾಗಿ ಹರಿದು ಬಾದಾಮಿ ತಾಲ್ಲೂಕನ್ನು ಬೇರ್ಪಡಿಸಿ ಹೂವಿನ ಹಳ್ಳಿ ಬಳಿ ತಾಲ್ಲೂಕನ್ನು ಪ್ರವೇಶಿಸುವುದು. ತಾಲ್ಲೂಕಿನಲ್ಲಿ ಈಶಾನ್ಯಾಭಿಮುಖವಾಗಿ ಹರಿದು ಸಂಗಮದ ಹತ್ತಿರ ಕೃಷ್ಣಾ ನದಿಯನ್ನು ಕೂಡಿಕೊಳ್ಳುವುದು. ತಾಲ್ಲೂಕಿನ ಉತ್ತರದಲ್ಲಿ ಕೃಷ್ಣಾನದಿ ತಾಲ್ಲೂಕಿನ ಗಡಿಯಾಗಿ ಹರಿದು ಮುದ್ದೇಬಿಹಾಳ ತಾಲ್ಲೂಕನ್ನು ಬೇರ್ಪಡಿಸಿದೆ. ಸಾಮಾನ್ಯ ಕುರುಚಲು ಗಿಡಗಳ ಅರಣ್ಯಪ್ರದೇಶವಿದೆ. ಉತ್ತಮ ಹವೆ ಇದೆ. ವಾರ್ಷಿಕ ಸರಾಸರಿ ಮಳೆ 643.81 ಮಿಮೀ. ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಸಹಾಯಕವಾಗಿ ಕೆಲವು ಬಾವಿಗಳಿವೆ. ಇಳಕಲ್ಲು, ಬೂದಿಹಾಳ, ಚಿಕ್ಕಮಗಿ, ಅಮೀನಗಡ ಮುಂತಾದ ಕಡೆ ಜಿನುಗು ಕೆರೆಗಳ ಬೇಸಾಯವಿದೆ. ಚಿತ್ತವಾಡಗಿ ಕೆರೆ ಯೋಜನೆಯಿಂದ ಲಾಭಪಡೆಯುವ ತಾಲ್ಲೂಕುಗಳಲ್ಲಿ ಹುನಗುಂದವೂ ಒಂದು. ಜೋಳ, ಸಜ್ಜೆ, ಸೇಂಗಾ, ದ್ವಿದಳ ಧಾನ್ಯಗಳು, ಬತ್ತ, ಗೋದಿ, ಹತ್ತಿ ಮುಂತಾದುವನ್ನು ಬೆಳೆಯುತ್ತಾರೆ. ವಿವಿಧ ತೈಲಬೀಜಗಳಲ್ಲಿ ಹೆಚ್ಚಾಗಿ ರೇಪ್ ಬೀಜವನ್ನು ಬೆಳೆಯುತ್ತಾರೆ. ಪಶುಪಾಲನೆಯಿದ್ದು ಅವುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ನೆರವಾಗುವ ಪಶುವೈದ್ಯಾಲಯಗಳಿವೆ. ಮತ್ಸ್ಯೋದ್ಯಮ ಸಾಧಾರಣವಿದೆ. ಈ ತಾಲ್ಲೂಕಿನಲ್ಲಿ ಹತ್ತಿ ಸಂಸ್ಕರಣ ಕಾರ್ಖಾನೆಗಳಿವೆ. ಕೈಮಗ್ಗದ ಖಣಗಳಿಗೆ, ಸೀರೆಗಳಿಗೆ ಈ ತಾಲ್ಲೂಕು ಪ್ರಸಿದ್ಧ. ಮರಗೆಲಸ, ಬಿದಿರು ವಸ್ತುಗಳ ತಯಾರಿಕೆ ಮುಂತಾದ ಕೈಗಾರಿಕೆಗಳಿವೆ.

ಹುನಗುಂದಕ್ಕೆ ಪಶ್ಚಿಮದಲ್ಲಿ 26 ಕಿಮೀ ದೂರದಲ್ಲಿರುವ ಐಹೊಳೆ **(ನೋಡಿ)** ಬಾದಾಮಿ ಚಳುಕ್ಯರ ಕಾಲದ ಸುಂದರ ದೇವಾಲಯ ಸಮೂಹಗಳಿರುವ ಪ್ರವಾಸಿ ಕೇಂದ್ರ. ಹುನಗುಂದಕ್ಕೆ ಆಗ್ನೇಯದಲ್ಲಿ 13 ಕಿಮೀ ದೂರದಲ್ಲಿರುವ ಇಳಕಲ್ಲು ನೇಯ್ಗೆ ಬಟ್ಟೆಗಳಿಗೆ ಪ್ರಸಿದ್ಧ. ಹುನಗುಂದದ ಈಶಾನ್ಯಕ್ಕೆ 24 ಕಿಮೀ ದೂರದಲ್ಲಿರುವ ಕರಡಿ ಗ್ರಾಮದಲ್ಲಿ ಕರಡಿಯ ಮುಖದಂತಿರುವ ನಂದಿ ದೇವಾಲಯವಿದೆ. ಈ ಕರಡಿಮುಖದ ನಂದಿ ದೇವಾಲಯದಿಂದಲೇ ಈ ಗ್ರಾಮಕ್ಕೆ ಕರಡಿ ಎಂಬ ಹೆಸರು ಬಂತೆಂದು ಹೇಳುವರು. ವಿಜಯನಗರದ ರಾಮರಾಯ 1565ರ ರಕ್ಕಸತಂಗಡಗಿ ಯುದ್ಧದಲ್ಲಿ ಇಲ್ಲಿ ಬೀಡುಬಿಟ್ಟಿದ್ದನೆಂದು ಪ್ರತೀತಿ. ಹುನಗುಂದದ ಆಗ್ನೇಯಕ್ಕೆ ಸು. 24 ಕಿಮೀ ದೂರದಲ್ಲಿರುವ ನಂದವಾಡಗಿ ಇಳಕಲ್ಲಿಗೆ ಈಶಾನ್ಯದಲ್ಲಿ 29 ಕಿಮೀ ದೂರದಲ್ಲಿದೆ. ಇದೊಂದು ಪುರಾತನ ಗ್ರಾಮ. ಹಿಂದೆ ನಂದರಾಜನ ರಾಜಧಾನಿಯಾಗಿತ್ತೆಂದು ಹೇಳುವರು. ಗ್ರಾಮದ ಒಂದು ಪ್ರವೇಶದ್ವಾರದ ಮುಂದೆ ಎತ್ತರವಾದ ಜಗಲಿಕಟ್ಟೆಯಿದ್ದು ಅಲ್ಲಿ ಒಂದು ಬೇವಿನ ಮರವೂ ವಿಷ್ಣುಚಕ್ರವುಳ್ಳ ಒಂದು ಕಲ್ಲೂ ಇದೆ. ಕೋಟೆಯೊಳಗೆ ದೊಡ್ಡ ಈಶ್ವರದೇವಾಲಯವಿದೆ. ಹುನಗುಂದಕ್ಕೆ ಉತ್ತರದಲ್ಲಿ 19 ಕಿಮೀ ದೂರದಲ್ಲಿರುವ ಸಂಗಮ**(ನೋಡಿ: ಕೂಡಲ ಸಂಗಮ)** ಒಂದು ಪವಿತ್ರ ಕ್ಷೇತ್ರ. ಇದು ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಕೂಡುವಲ್ಲಿದೆ.

ಹುನಗುಂದ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬಾಗಲಕೋಟೆ-ರಾಯಚೂರು ಮಾರ್ಗದಲ್ಲಿ ಬಾಗಲಕೋಟೆಯ ಆಗ್ನೇಯಕ್ಕೆ 45 ಕಿಮೀ ದೂರದಲ್ಲೂ ಬಿಜಾಪುರಕ್ಕೆ ಆಗ್ನೇಯದಲ್ಲಿ 135 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 69,957.

ಹುನಗುಂದದಲ್ಲಿ ಪುರಾತನ ದೇವಾಲಯಗಳು ಮತ್ತು ಊರಿಗೆ ಹೊಂದಿರುವ ಚಿಕ್ಕಗುಡ್ಡದ ಮೇಲೆ ಜೈನಬಸದಿಯ ಅವಶೇಷಗಳು ಇವೆ. ರಾಮಲಿಂಗ ದೇವಾಲಯವು ಊರೊಳಗಿದ್ದು ಗರ್ಭಗುಡಿಯು ನೆಲದಡಿ ಇದೆ. ಚಾಳುಕ್ಯ ಶೈಲಿಯ ಸ್ತಂಭಗಳು ಈ ಗುಡಿಯ ವೈಶಿಷ್ಟ್ಯ. ಎರಡು ಶಿಲಾಶಾಸನಗಳೂ ಇಲ್ಲಿವೆ. ಇಲ್ಲಿನ ಒಂದು ಪ್ರಾಥಮಿಕ ಶಾಲೆಯ ಅಡಿಯಲ್ಲಿ ಕಲ್ಲಿನ ಸ್ತಂಭಗಳ ಗುಹೆ ಇದೆ. ಮಲ್ಲಿಕಾರ್ಜುನ, ಮುದಮಾರುತಿ, ಸಂಗಮೇಶ್ವರ ದೇವಾಲಯಗಳು ಇತ್ತೀಚಿನವು. ಪ್ರತಿವರ್ಷ ಪಟ್ಟಣದಲ್ಲಿ ನಡೆಯುವ ಸಂಗಮೇಶ್ವರ ಜಾತ್ರೆ ಪ್ರಸಿದ್ಧ. ಹಳೆಯ ಕಾಲದ ಕೋಟೆಯ ಎರಡು ಅಗಸೀಬಾಗಿಲುಗಳುಂಟು. ಇಲ್ಲಿನ ಗುಡ್ಡದ ಮೇಲೆ ಹಳದಿ ಮಣ್ಣು ಸಿಕ್ಕುವುದರಿಂದ ಇದಕ್ಕೆ ಹೊನ್ನಕುಂಡ, ಹೊನ್ನಗುಂಡ ಎಂದು ಹಿಂದೆ ಕರೆಯುತ್ತಿದ್ದರೆಂದು ತಿಳಿದುಬರುವುದು. *

**ಹುಬ್ಬಳ್ಳಿ:** ಧಾರವಾಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಧಾರವಾಡ ಮತ್ತು ನವಲಗುಂದ ತಾಲ್ಲೂಕುಗಳೂ ಪಶ್ಚಿಮದಲ್ಲಿ ಕಲಘಟಗಿ, ದಕ್ಷಿಣದಲ್ಲಿ ಕುಂದಗೋಳ ಮತ್ತು ಶಿರಹಟ್ಟಿ, ಪೂರ್ವದಲ್ಲಿ ನವಲಗುಂದ ಮತ್ತು ಗದಗ ತಾಲ್ಲೂಕುಗಳು ಸುತ್ತುವರಿದಿವೆ. ಒಟ್ಟು 57 ಗ್ರಾಮಗಳಿವೆ. ಹುಬ್ಬಳ್ಳಿ ಪಟ್ಟಣ ಪ್ರದೇಶವನ್ನು ಧಾರವಾಡ ನಗರದೊಡನೆ ಸೇರಿಸಿ ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯನ್ನಾಗಿ ನಿರ್ಮಿಸಿದೆ. ತಾಲ್ಲೂಕಿನ ವಿಸ್ತೀರ್ಣ 826.9 ಚ.ಕಿಮೀ. ಜನಸಂಖ್ಯೆ 1,28,380.

ಈ ತಾಲ್ಲೂಕಿನ ಬೆಟ್ಟಗುಡ್ಡಗಳೆಂದರೆ ಹುಬ್ಬಳ್ಳಿ ಹತ್ತಿರದ ಉಣಕಲ್ಲು ಗುಡ್ಡ ಮತ್ತು ಧಾರವಾಡ-ಹುಬ್ಬಳ್ಳಿ ಮಧ್ಯೆ ಬರುವ ರಾಯಾಪುರ ಬೆಟ್ಟಗಳು. ಈ ತಾಲ್ಲೂಕು ಮಲೆನಾಡು ಮತ್ತು ಪೂರ್ವದ ಬೆಳವಲನಾಡುಗಳ ಮಧ್ಯೆ ಇರುವ ಗಡಿನಾಡ ಪ್ರದೇಶದಿಂದ ಕೂಡಿದೆ. ಶಿಗ್ಗಾಂವಿ ತಾಲ್ಲೂಕಿನ ಧುಂಡಸಿ ಗ್ರಾಮದ ಬಳಿ ಹುಟ್ಟುವ ಬೆಣ್ಣೆಹಳ್ಳ ಈ ತಾಲ್ಲೂಕಿನಲ್ಲಿ ಉತ್ತರಾಭಿಮುಖವಾಗಿ ಹರಿಯುವುದು. ತಾಲ್ಲೂಕಿನ ಪೂರ್ವಭಾಗದಲ್ಲಿ ಎರೆಮಣ್ಣಿನ ಭೂಪ್ರದೇಶವೂ ಪಶ್ಚಿಮ ಭಾಗ ಹುಳಕೆರೆ ಮಣ್ಣಿನ ಪ್ರದೇಶದಿಂದಲೂ ಕೂಡಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಸ್ವಲ್ಪ ಗಂಧದ ಮರಗಳಿರುವ ಸಾಮಾನ್ಯ ಕುರುಚಲು ಕಾಡುಗಳಿವೆ. ಹವೆ ಹಿತಕರ. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 719.62 ಮಿಮೀ.

ತಾಲ್ಲೂಕಿನ ಕೆಲವು ಪ್ರದೇಶಗಳು ಮಲಪ್ರಭಾ ಬಲದಂಡೆ ಯೋಜನೆಯಿಂದ ನೀರಾವರಿಗೊಳಪಡುವುದು. ತಾಲ್ಲೂಕಿನ ಮುಖ್ಯ ಬೆಳೆ ಜೋಳ. ಇದರ ಜೊತೆಗೆ ಬತ್ತ, ಕಬ್ಬು, ಗೋದಿ, ಸೇಂಗಾ, ನವಣೆ ಮತ್ತು ವಿವಿಧ ದ್ವಿದಳಧಾನ್ಯ ಮತ್ತು ತೈಲಬೀಜಗಳನ್ನೂ ಹತ್ತಿ, ತಂಬಾಕು ಇವನ್ನೂ ಬೆಳೆಯುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆಯುಂಟು. ತಾಲ್ಲೂಕಿ


ಕರ್ನಾಟಕ ವೈದ್ಯಕೀಯ ಕಾಲೇಜು

ನಲ್ಲಿ ಬಟ್ಟೆ ಕಾರ್ಖಾನೆಯಿದೆ. ಇಲ್ಲಿ ತಯಾರಾಗುವ ಹಿತ್ತಾಳೆ ಪಾತ್ರೆಗಳು ಪ್ರಸಿದ್ಧ, ಮರ ಕೊಯ್ಯುವ ಕಾರ್ಖಾನೆ, ಕಿರ್ಲೋಸ್ಕರ್ ವಿದ್ಯುತ್ ಕಾರ್ಖಾನೆ, ಎ.ಕೆ. ಇಂಡಸ್ಟ್ರೀಸ್, ಸಿಮೆಂಟ್ ವಸ್ತು ತಯಾರಿಕಾ ಕಾರ್ಖಾನೆ, ಸುದತ್ತಾ ಆಹಾರ ಮತ್ತು ನೂಲಿನ ವಸ್ತುಗಳ ತಯಾರಿಕಾ ಕಾರ್ಖಾನೆಗಳಿವೆ. ಹುಬ್ಬಳ್ಳಿಯಲ್ಲಿ ತಿಜೋರಿ, ಕಪಾಟು, ಕುರ್ಚಿ, ಟೇಬಲ್ ಮುಂತಾದವುಗಳ ಮತ್ತು ಇತರ ಉಕ್ಕು ಮತ್ತು ಕಬ್ಬಿಣ ವಸ್ತುಗಳ ತಯಾರಿಕೆಯುಂಟು. ತಾಲ್ಲೂಕಿನ ಕೈಗಾರಿಕೆ, ವ್ಯಾಪಾರ, ವಾಣಿಜ್ಯಗಳ ಅಭಿವೃದ್ಧಿಗೆ ಸಹಾಯಕವಾಗಿ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳೂ ವಿವಿಧ ಸಹಕಾರಿ ಸಂಘಗಳೂ ಇವೆ.

ತಾಲ್ಲೂಕಿನಲ್ಲಿ ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿಯ ಜೊತೆಗೆ ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳು ಹಾದುಹೋಗಿ ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ಉತ್ತಮ ಮಾರ್ಗಸಂಪರ್ಕವಿದೆ. ಬೆಂಗಳೂರು-ಪುಣೆ ರೈಲು ಮಾರ್ಗ, ಹುಬ್ಬಳ್ಳಿ-ಸೊಲ್ಲಾಪುರ, ಹುಬ್ಬಳ್ಳಿ-ಹೊಸಪೇಟೆ ರೈಲುಮಾರ್ಗಗಳು ಹಾದು ಹೋಗಿದ್ದು ಹುಬ್ಬಳ್ಳಿ ಒಂದು ಮುಖ್ಯ ರೈಲುನಿಲ್ದಾಣವಾಗಿದೆ. ಇದರಿಂದ ತಾಲ್ಲೂಕಿನ ವ್ಯಾಪಾರ ವಾಣಿಜ್ಯ ಮತ್ತು ಕೈಗಾರಿಕಾಭಿವೃದ್ಧಿಗೆ ಅನುಕೂಲವಾಗಿದೆ. ತಾಲ್ಲೂಕಿನಲ್ಲಿ ವೈದ್ಯಕೀಯ ಕಾಲೇಜು ಸೇರಿ ವಿವಿಧ ಶಾಲಾಕಾಲೇಜುಗಳಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್, ಆಸ್ಪತ್ರೆ ಮುಂತಾದವುಗಳ ಸೌಕರ್ಯವಿದೆ.

ಹುಬ್ಬಳ್ಳಿ-ಧಾರವಾಡದ ಹೆದ್ದಾರಿಯಲ್ಲಿ ಹುಬ್ಬಳ್ಳಿಯ ವಾಯವ್ಯಕ್ಕಿರುವ ಅಮರಗೋಳದ ಜನವಸತಿ ಪ್ರದೇಶ ಹುಬ್ಬಳ್ಳಿ-ಧಾರವಾಡ ನಗರಸಭೆಗೆ ಸೇರಿಸಿಕೊಳ್ಳಲಾಗಿದೆ. ಈ ಗ್ರಾಮದ ಮಧ್ಯದಲ್ಲಿ ಜಕಣಾಚಾರಿ ನಿರ್ಮಿತವೆಂದು ಹೇಳುವ ಹಳೆಯ ಶಂಕರಲಿಂಗ ದೇವಾಲಯವೂ ಇದರ ಹತ್ತಿರ ಬನಶಂಕರಿ ದೇವಾಲಯವೂ ಇವೆ. ಹುಬ್ಬಳ್ಳಿಯ ವಾಯವ್ಯಕ್ಕೆ ಹುಬ್ಬಳ್ಳಿ-ಧಾರವಾಡ ಹೆದ್ದಾರಿಯಲ್ಲಿರುವ ಉಣಕಲ್ಲು ಗ್ರಾಮದ ಜನವಸತಿ ಪ್ರದೇಶ ಹುಬ್ಬಳ್ಳಿ-ಧಾರವಾಡ ನಗರಸಭೆಗೆ ಸೇರಿದೆ. ಈ ಗ್ರಾಮದಲ್ಲಿ ಪುರಾತನ ಕಮಲೇಶ್ವರ, ವೀರಭದ್ರ ಮತ್ತು ಚಂದ್ರಮೌಳೇಶ್ವರ ದೇವಾಲಯಗಳೂ

ಒಂದು ಶಿಥಿಲ ಕೋಟೆ ಮತ್ತು 12ನೆಯ ಶತಮಾನಕ್ಕೆ ಸೇರಿದ ಎರಡು ಶಾಸನಗಳೂ ಇವೆ. ಹುಬ್ಬಳ್ಳಿ–ಧಾರವಾಡಕ್ಕೆ 16 ಕಿಮೀ ದೂರದಲ್ಲೂ ಹುಬ್ಬಳ್ಳಿಯ ಪೂರ್ವಕ್ಕೆ ಹುಬ್ಬಳ್ಳಿ–ಗದಗ ರಾಜ್ಯ ಹೆದ್ದಾರಿಯಲ್ಲೂ ಇರುವ ಶಿರಗುಪ್ಪಿಯಲ್ಲಿ ಹನುಮಂತ ದೇವಾಲಯದ ಬಳಿ ಒಂದು, ಕಪ್ಪು ಕಲ್ಲಿನ ಭೈರವ ವಿಗ್ರಹವಿದೆ. ಇಲ್ಲಿ ದೊರೆತಿರುವ ಐದು ಶಾಸನಗಳಲ್ಲಿ



ಸಿದ್ಧಾರೂಢ ಮಠ

ಒಂದು ಸೇಂದ್ರಕದೊರೆ ವನಸತ್ತಿಗೆ (7ನೆಯ ಶತಮಾನ) ಸೇರಿದುದೆಂದು ಗುರುತಿಸಲಾಗಿದೆ. ಹುಬ್ಬಳ್ಳಿ–ಧಾರವಾಡಕ್ಕೆ 33 ಕಿಮೀ ದೂರದಲ್ಲಿರುವ ಕೋಳಿವಾಡ ಹುಬ್ಬಳ್ಳಿಯ ಉತ್ತರಕ್ಕಿದೆ. ಕುಮಾರವ್ಯಾಸ ಹುಟ್ಟಿದ್ದು ಈ ಗ್ರಾಮದಲ್ಲಿ. ಇಲ್ಲಿ ಅವನು ಹುಟ್ಟಿದ ಮನೆಯನ್ನು ಈಗಲೂ ಕಾಣಬಹುದು. ಇಲ್ಲಿನ ವೀರನಾರಾಯಣ ದೇವಾಲಯ ಗ್ರಾಮದ ಒಳಗೂ ಭಗ್ನವಾಗಿರುವ ಬೌದ್ಧದೇವತೆ ತಾರಾ ವಿಗ್ರಹವಿರುವ ಕಾಳಮೇಶ್ವರ ದೇವಾಲಯ ಗ್ರಾಮದ ಹೊರಗೂ ಇದೆ. ಹುಬ್ಬಳ್ಳಿ–ಧಾರವಾಡಕ್ಕೆ 10 ಕಿಮೀ ದೂರದಲ್ಲಿರುವ ಕುಸುಗಲ್ಲು ಹುಬ್ಬಳ್ಳಿಯ ಈಶಾನ್ಯದಲ್ಲಿ ಹುಬ್ಬಳ್ಳಿ–ನವಲಗುಂದ ರಾಜ್ಯ ಹೆದ್ದಾರಿಯಲ್ಲಿದೆ. ಇಲ್ಲಿ ಟಿಪ್ಪುಸುಲ್ತಾನನ ಸೇನಾಧಿಪತಿ ಬದ್ರುಲ್ ಜಮಾನ್‌ಖಾನ್ ಕಟ್ಟಿಸಿದೆಂದು ಹೇಳುವ ಹಳೆಯ ಕೋಟೆಯಿದೆ. ಈ ಕೋಟೆಯಲ್ಲಿ ಒಂದು ಕಾಳಮೇಶ್ವರ ದೇವಾಲಯವಿದೆ. ಹುಬ್ಬಳ್ಳಿ–ಧಾರವಾಡಕ್ಕೆ 16 ಕಿಮೀ ದೂರದಲ್ಲಿರುವ ಬ್ಯಾಹಟ್ಟಿ ಹುಬ್ಬಳ್ಳಿಯ ಈಶಾನ್ಯ ದಲ್ಲಿದೆ. ಈ ಗ್ರಾಮದಲ್ಲಿ ವೀರಭದ್ರ ಮತ್ತು ರಾಮಲಿಂಗ ದೇವಾಲಯಗಳೂ ಕಂಬಳ್ಳಿ ಮತ್ತು ಕರಂಶಿ ವೀರಶೈವ ಮಠಗಳೂ ಸೇವುಣ, ಹೊಯ್ಸಳ ಮತ್ತು ಕದಂಬರಿಗೆ ಸೇರಿದ ಶಾಸನಗಳೂ ಇದ್ದು ಇತ್ತೀಚೆಗೆ ಕಳಚುರಿ ದೊರೆ ಸಿಂಘಣನಿಗೆ ಸೇರಿದ ಒಂದು ತಾಮ್ರಶಾಸನ ಸಿಕ್ಕಿದೆ. ಹುಬ್ಬಳ್ಳಿ–ಧಾರವಾಡಕ್ಕೆ 10 ಕಿಮೀ ದೂರದಲ್ಲಿರುವ ಛಬ್ಬಿ ಹುಬ್ಬಳ್ಳಿಯ ಆಗ್ನೇಯಕ್ಕಿದೆ. ಈ ಗ್ರಾಮ ಹಿಂದೆ ಜೈನ ದೊರೆಯ ಆಡಳಿತಕ್ಕೆ ಸೇರಿದ್ದು ಸೋಭನಪುರ ವೆಂಬ ಹೆಸರಿತ್ತೆಂದೂ ಆಗಿನ ಏಳು ಜೈನದೇವಾಲಯಗಳಲ್ಲಿ ಈಗ ಒಂದು ಉಳಿದಿದೆ. ಚಾಳುಕ್ಯ ದೊರೆಗಳ ಶಾಸನಗಳು ದೊರೆತಿವೆ. ಈ ಊರಿನಲ್ಲಿ ವಿಜಯನಗರದ ಕೃಷ್ಣದೇವರಾಯ (1509–29) ಇದ್ದನೆಂದೂ ಮುಂದೆ ಸವಣೂರ ನವಾಬರ ಆಡಳಿತಕ್ಕೆ ಇದು ಸೇರಿತೆಂದೂ ತಿಳಿದು ಬರುವುದು. ಹುಬ್ಬಳ್ಳಿ–ಧಾರವಾಡಕ್ಕೆ 5 ಕಿಮೀ ದೂರದಲ್ಲಿ ಹುಬ್ಬಳ್ಳಿಯ ದಕ್ಷಿಣಕ್ಕಿರುವ ಅದರಗುಂಚಿ ಗ್ರಾಮದಲ್ಲಿ 10 ರಿಂದ 14ನೆಯ ಶತಮಾನಗಳಿಗೆ ಸೇರಿದ ಶಾಸನಗಳಿವೆ. ಇಲ್ಲಿನ ಗ್ರಾಮಸ್ಥರು ದೊಡ್ಡಪ್ಪ ಎಂದು ಕರೆಯುವ ಕುಳಿತ ಭಂಗಿಯಲ್ಲಿರುವ ಒಂದು ದೊಡ್ಡ ಜಿನಮೂರ್ತಿ ಇಲ್ಲಿದೆ. *

**ಹುಬ್ಬಳ್ಳಿ–ಧಾರವಾಡ:** ಧಾರವಾಡ ಜಿಲ್ಲೆಯ ಎರಡು ಪಟ್ಟಣಗಳು. ಧಾರವಾಡ ಅದೇ ಜಿಲ್ಲೆಯ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರಪಟ್ಟಣ. ಹುಬ್ಬಳ್ಳಿ ಅದೇ ತಾಲ್ಲೂಕಿನ ಆಡಳಿತ ಕೇಂದ್ರಪಟ್ಟಣ. ಈ ಎರಡೂ ಪಟ್ಟಣಗಳನ್ನು ಸೇರಿಸಿ 1962ರಲ್ಲಿ ಏಕನಗರವಾಗಿ ಪರಿಗಣಿಸಿ ಹುಬ್ಬಳ್ಳಿ–ಧಾರವಾಡ ನಗರಪಾಲಿಕೆ ರಚಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಈ ಬಗೆಯ ನಗರ ಇದೊಂದೇ. ಈ ಎರಡು ಪಟ್ಟಣಗಳ ಅಂತರ 19 ಕಿಮೀ. ಇದು ರಾಜ್ಯದ ಎರಡನೆಯ ದೊಡ್ಡ ನಗರವೆನಿಸಿದೆ. ಈ ಪಟ್ಟಣಗಳ ನಡುವಿರುವ ಅಂತರವೂ ಹೊಸ ಕೈಗಾರಿಕೆಗಳ ಸ್ಥಾಪನೆಯಿಂದ ಕಡಿಮೆಯಾಗುತ್ತಿದೆಯೆನ್ನಬಹುದು.

ಈ ಮಹಾನಗರದಲ್ಲಿ ಧಾರವಾಡ ತಾಲ್ಲೂಕಿನ 13 ಗ್ರಾಮಗಳು ಪೂರ್ಣವಾಗೂ 4 ಗ್ರಾಮಗಳು ಭಾಗಶಃವೂ ಹುಬ್ಬಳ್ಳಿ ತಾಲ್ಲೂಕಿನ 14 ಗ್ರಾಮಗಳು ಭಾಗಶಃವೂ ಸೇರಿದ್ದು ಧಾರವಾಡ–ಹುಬ್ಬಳ್ಳಿ ಪಟ್ಟಣಗಳೂ ಸೇರಿ ಕಾರ್ಪೊರೇಷನ್ನಿನ ವಿಸ್ತೀರ್ಣ 182.30 ಚ.ಕಿಮೀ. ಹುಬ್ಬಳ್ಳಿ–ಧಾರವಾಡ ನಗರಪಾಲಿಕೆ ಪ್ರದೇಶದ ಜನಸಂಖ್ಯೆ 7,86,195. ಎರಡೂ ನಗರಗಳಿಗೆ ಸೇರಿದಂತೆ 10 ಅಲೋಪತಿ ಆಸ್ಪತ್ರೆಗಳೂ 2 ಆಯುರ್ವೇದ, 4 ಹೋಮಿಯೋಪತಿ ಆಸ್ಪತ್ರೆಗಳೂ ಒಂದು ಪಶುವೈದ್ಯಾಲಯವೂ ಇದೆ. ಕಾರ್ಪೊರೇಷನ್ ತನ್ನ ಇತರ ಅಭಿವೃದ್ಧಿ ಕಾರ್ಯಗಳ ಜೊತೆಯಲ್ಲಿ ಇತ್ತೀಚೆಗೆ ಮಹಾತ್ಮಾ ಗಾಂಧಿ ವನದಲ್ಲಿ ಮಕ್ಕಳಿಗಾಗಿ ಒಂದು ಪ್ರಾಣಿಸಂಗ್ರಹಾಲಯ ಪ್ರಾರಂಭಿಸಿದೆ. ಧಾರವಾಡದ ಕಲಾಭವನವಿದೆ.

ಈ ಕಾರ್ಪೊರೇಷನ್ನಿನ ಎರಡು ಮುಖ್ಯ ಪಟ್ಟಣಗಳಲ್ಲಿ ಒಂದಾದ ಹುಬ್ಬಳ್ಳಿ ಧಾರವಾಡದ ಆಗ್ನೇಯಕ್ಕೆ 19 ಕಿಮೀ ದೂರದಲ್ಲಿದೆ. ಹುಬ್ಬಳ್ಳಿ–ಧಾರವಾಡ ಎರಡೂ ಔದ್ಯಮಿಕ ಕೇಂದ್ರಗಳಾಗಿದ್ದರೂ ಹುಬ್ಬಳ್ಳಿ ವಿಭಾಗ ದಲ್ಲಿ ಉದ್ದಿಮೆಗಳು ಹೆಚ್ಚು. ಇಲ್ಲಿ ಒಂದು ಬಟ್ಟೆ ಗಿರಣಿ, ಕೆಲವು ಜಿನ್ನಿಂಗ್ ಫ್ಯಾಕ್ಟರಿಗಳು ಮತ್ತು ಒಂದು ಔದ್ಯಮಿಕ ವಸಾಹತು ಇದೆ. ಮಧ್ಯಮ ಪ್ರಮಾಣದ ಹನ್ನೊಂದು ಉದ್ದಿಮೆಗಳೂ ಚಿಕ್ಕ ಉದ್ದಿಮೆಗಳೂ 350 ಘಟಕಗಳೂ ಈ ನಗರದಲ್ಲಿವೆ. ಇವುಗಳಲ್ಲಿ ಮುಖ್ಯವಾಗಿ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯ ವಿವಿಧ ಘಟಕಗಳು, ಸೂಕ್ಷ್ಮ ರೀತಿಯ ಉಪಕರಣ, ಅಚ್ಚು ತಯಾರಿಸುವ ಎನ್.ಟಿ.ಟಿ.ಎಫ್. ಸಂಸ್ಥೆ, ವಿಶಿಷ್ಟ ಸೆಂಟ್ರಿಫ್ಯೂಗಲ್ ಪಂಪು ತಯಾರಿಸುವ ಎ.ಕೆ. ಇಂಡಸ್ಟ್ರೀಸ್, ಪ್ಲೈವುಡ್ ಕಾರ್ಖಾನೆ, ಎ.ಕೆ. ಇಂಡಸ್ಟ್ರೀಸ್ ಸೀಮೆಂಟ್ ವಸ್ತು ತಯಾರಿಕೆ ಕಾರ್ಖಾನೆ–ಇವನ್ನು ಹೆಸರಿಸಬಹುದು. ಬೀಡಿ ಉದ್ದಿಮೆ ಒಂದು ಪ್ರಮುಖ ಗೃಹೋದ್ಯಮ, ಇಲ್ಲಿನ ತಾಮ್ರದ ಪಾತ್ರೆಗಳು ಹೆಸರಾದವು. ರೈಲ್ವೆ ವರ್ಕ್‌ಶಾಪ್, ರಾಜ್ಯ ರಸ್ತೆ ಸಾರಿಗೆಯ ಪ್ರಾದೇಶಿಕ ವರ್ಕ್‌ಶಾಪ್ ಇಲ್ಲಿವೆ.

ಹುಬ್ಬಳ್ಳಿ ಮೂರು ರೈಲುಮಾರ್ಗಗಳ ಕೂಡುದಾರಿಯಲ್ಲಿದ್ದು ಬೆಂಗಳೂರು–ಪುಣೆ, ಹುಬ್ಬಳ್ಳಿ–ಹೊಸಪೇಟೆ, ಹುಬ್ಬಳ್ಳಿ–ಸೋಲಾಪುರ ರೈಲು ಮಾರ್ಗಗಳು ಹುಬ್ಬಳ್ಳಿಯಲ್ಲಿ ಸಂಧಿಸುತ್ತವೆ. ಇದೊಂದು ಮುಖ್ಯ ಸಾರಿಗೆ ಸಂಪರ್ಕ ಕೇಂದ್ರವೂ ಆಗಿದ್ದು ಇಲ್ಲಿಂದ ಶಿರಸಿ, ಬೆಂಗಳೂರು, ಗದಗ, ಸೊಲ್ಲಾಪುರ, ಬೆಳಗಾಂವಿ ಮುಂತಾದ ಕಡೆಗಳಿಗೆ ರಸ್ತೆ ಸಂಪರ್ಕವಿದೆ.

ಹುಬ್ಬಳ್ಳಿಯಲ್ಲಿ ಕಲಾ, ವಿಜ್ಞಾನ, ಶಿಕ್ಷಣ ಮತ್ತು ಲಾ ಕಾಲೇಜುಗಳೂ ವೈದ್ಯಕೀಯ ಮತ್ತು ಎಂಜಿನಿಯರಿಂಗ್, ವಾಣಿಜ್ಯ ಮುಂತಾದ ಕಾಲೇಜು ಗಳೂ ಹೋಮಿಯೋಪಥಿ ಮತ್ತು ಆಯುರ್ವೇದ ಕಾಲೇಜುಗಳೂ ಇವೆ. ಮಹಿಳೆಯರಿಗಾಗಿಯೇ ಎರಡು ಕಾಲೇಜುಗಳುಂಟು. ಕರ್ನಾಟಕ ವೈದ್ಯಕೀಯ ಕಾಲೇಜು ಸುಸಜ್ಜಿತ ಆಸ್ಪತ್ರೆ ಹೊಂದಿದೆ. ಇವಲ್ಲದೆ ಪಟ್ಟಣದಲ್ಲಿ ಅನೇಕ ಶಾಲೆಗಳಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ. ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ, ಜನತಾ ಶಿಕ್ಷಣ ಸಮಿತಿಯ ಅರ್ಥ ಸಂಶೋಧನ ಸಂಸ್ಥೆ ಮೂರು ತಾಂತ್ರಿಕ ತರಬೇತಿ ಸಂಸ್ಥೆಗಳೂ ಪ್ರಾಥಮಿಕ ಶಿಕ್ಷಕರ ಐದು ತರಬೇತಿ ಕಾಲೇಜುಗಳೂ ಇತರ ಸಂಘ ಸಂಸ್ಥೆಗಳೂ ನಗರ ಗ್ರಂಥಾಲಯ ಮುಂತಾದವುಗಳಿವೆ. ಇಲ್ಲಿನ ವ್ಯಾಪಾರ ವಾಣಿಜ್ಯಾಭಿವೃದ್ಧಿಗೆ ಸಹಕಾರವಾಗಿ ನಿಯಂತ್ರಿತ ಮಾರುಕಟ್ಟೆಗಳು, ಕರ್ನಾಟಕ

ವಾಣಿಜ್ಯೋದ್ಯಮ ಸಂಘ ಮುಂತಾದವುಗಳಿದ್ದು ಅಂಚೆ ತಂತಿ, ದೂರವಾಣಿ, ವಿದ್ಯುತ್ತು, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕು ಮುಂತಾದವುಗಳ ಸೌಕರ್ಯಗಳುಂಟು.

ಈ ನಗರದಲ್ಲಿರುವ ಭವಾನಿಶಂಕರ ದೇವಾಲಯ ಬಹು ಪ್ರಾಚೀನವಾದದ್ದು. ಇದಲ್ಲದೆ ಅಂಬಾಭವಾನಿ, ಬನಶಂಕರಿ, ಬಸವಣ್ಣ, ದತ್ತಾತ್ರೇಯ, ದುರ್ಗವ್ವ, ಹರಿ, ಈಶ್ವರ, ಕಾಳಮ್ಮ, ಮಾರುತಿ, ಮುರಲೀಧರ, ನಾಗೇಶ್ವರ, ಪರ್ವತದೇವ, ರಾಧಾಕೃಷ್ಣ, ರಾಘವೇಂದ್ರಸ್ವಾಮಿ, ತುಳಜಾಭವಾನಿ, ವಿಠೋಬ, ವೆಂಕಟರಮಣ, ವೀರಭದ್ರ ಮೊದಲಾದ ದೇವಾಲಯಗಳಿವೆ. ಇಲ್ಲಿ ಪ್ರಸಿದ್ಧ ಸಿದ್ಧಾರೂಢಮಠ ಮತ್ತು ಮೂರು ಸಾವಿರ ಮಠಗಳು ಇವೆ. ಇಲ್ಲಿ ನಡೆಯುವ ಸಿದ್ಧಾರೂಢಸ್ವಾಮಿ ಜಾತ್ರೆ ಬಹು ಪ್ರಸಿದ್ಧವಾದದ್ದು.


ಮುರುಘಾಮಠ, ಧಾರವಾಡ

ಹುಬ್ಬಳ್ಳಿ-ಧಾರವಾಡ ಕಾರ್ಪೋರೇಷನ್ನಿನ ಮತ್ತೊಂದು ಪ್ರಮುಖ ಪಟ್ಟಣವಾದ ಧಾರವಾಡ ಹುಬ್ಬಳ್ಳಿಯ ವಾಯವ್ಯಕ್ಕೆ 19 ಕಿಮೀ ದೂರದಲ್ಲಿ ಹುಬ್ಬಳ್ಳಿ-ಬೆಳಗಾಂವಿ ಹೆದ್ದಾರಿಯಲ್ಲಿದೆ. ಬೆಂಗಳೂರು-ಪುಣೆ ರೈಲುಮಾರ್ಗ ಮತ್ತು ರಾಷ್ಟ್ರೀಯ ಹೆದ್ದಾರಿ ಈ ಪಟ್ಟಣದ ಮಧ್ಯದಲ್ಲಿ ಹಾದುಹೋಗಿದೆ. ಇಲ್ಲಿಂದ ಬಳ್ಳಾರಿ, ಬಿಜಾಪುರ, ಕಾರವಾರ, ಬೆಳಗಾವಿ ಮೊದಲಾದ ಜಿಲ್ಲಾ ಸ್ಥಾನಗಳಿಗೆ ನೇರವಾದ ಸಂಪರ್ಕ ಒದಗಿಸುವ ಉತ್ತಮ ರಾಜ್ಯ ರಸ್ತೆಗಳ ಜೊತೆಗೆ ತಾಲ್ಲೂಕು ರಸ್ತೆಗಳಿದ್ದು ಸಾಕಷ್ಟು ಸಂಪರ್ಕ ಅನುಕೂಲತೆಗಳಿವೆ. ನಗರ ರಸ್ತೆಯ ಒಟ್ಟು ಉದ್ದ 81,878 ಮೀ. ಒಳಚರಂಡಿ ಯೋಜನೆ ಕಾರ್ಯಗತವಾಗಿದೆ. ನಗರಕ್ಕೆ ನೀರಸಾಗರದಿಂದ ಕುಡಿಯುವ ನೀರಿನ ಪೂರೈಕೆಯಾಗುತ್ತಿದೆ. ಮುಂದೆ ನವಿಲುತೀರ್ಥದ ಬಳಿಯ ಮಲಪ್ರಭಾ ಅಣೆಕಟ್ಟಿನ ಸ್ಥಳದಿಂದ ನೀರು ಪೂರೈಸುವ ಯೋಜನೆಯಿದೆ.

ಇಲ್ಲಿಯ ನಿಯಂತ್ರಿತ ಮಾರುಕಟ್ಟೆ 1947ರಿಂದ ಕೆಲಸ ಮಾಡುತ್ತಿದೆ. ಮಣ್ಣು ಪರೀಕ್ಷಣೆ ಮತ್ತು ಬಿತ್ತನೆ ಬೀಜ ಸಂಸ್ಕರಿಸುವ ಕೇಂದ್ರಗಳು ಇವೆ. ಟ್ರ್ಯಾಕ್ಟರ್ ಮೊದಲಾದ ಆಧುನಿಕ ಕೃಷಿ ಉಪಕರಣಗಳನ್ನು ರೈತರಿಗೆ ಒದಗಿಸಿಕೊಡುವ ಸಹಕಾರಿ ಸಂಸ್ಥೆ, ಬತ್ತದ ಗಿರಣಿ, ಟೈಮೆಕ್ಸ್ ಗಡಿಯಾರದ ಕಾರ್ಖಾನೆ, ರಟ್ಟು ಮತ್ತು ಕ್ಯಾಲಿಕಾರ್ಬ್ ತಯಾರಿಕಾ ಕಾರ್ಖಾನೆ, ತಿಜೋರಿ, ಕಪಾಟು, ಕುರ್ಚಿ ತಯಾರಿಕಾ ಕಾರ್ಖಾನೆಗಳುಂಟು. ಬೀಡಿ ತಯಾರಿಕೆ, ಹತ್ತಿ ಕಾರ್ಖಾನೆ, ಸರ್ಕಾರಿ ಮತ್ತು ವಿಶ್ವವಿದ್ಯಾನಿಲಯದ ಮುದ್ರಣಾಲಯಗಳು ಮತ್ತು ಕೆಲವು ಗ್ರಾಮೋದ್ಯೋಗ ಕೇಂದ್ರಗಳೂ ಇವೆ. ಇಲ್ಲಿನ ವ್ಯಾಪಾರ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಆರ್ಥಿಕ ಸಹಕಾರ ನೀಡುವ ಅನೇಕ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಛೋಟಾ ಮಹಾಬಲೇಶ್ವರದ ಪ್ರಶಾಂತಸ್ಥಳದಲ್ಲಿದೆ. ಇದು ಭಾರತದ ಖ್ಯಾತ ವಿಶ್ವವಿದ್ಯಾಲಯಗಳಲ್ಲೊಂದಾಗಿದೆ. ಇಲ್ಲಿ ಕೃಷಿ ಮಹಾವಿದ್ಯಾಲಯ, ಬಾಸೆಲ್ ಮಿಶನ್ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಅನೇಕ ಕಾಲೇಜು, ಪ್ರೌಢಶಾಲೆಗಳೂ ಇವೆ. ಇವಲ್ಲದೆ ಕಲಾ, ವಿಜ್ಞಾನ, ಶಿಕ್ಷಕರ ತರಬೇತಿ, ಒಂದು ತಾಂತ್ರಿಕ ತರಬೇತಿ ಸಂಸ್ಥೆ ಮುಂತಾದವೂ ನಾನಾ ಕಾಲೇಜುಗಳೂ ಪ್ರೌಢಶಾಲೆಗಳೂ ಇದ್ದು ಇದೊಂದು ಶಿಕ್ಷಣ ಕೇಂದ್ರವೆನಿಸಿದೆ. ಧಾರವಾಡದಲ್ಲಿ ಹೆಸರಾಗಿರುವ ಕೆಲವು ಸಂಘ ಸಂಸ್ಥೆಗಳಲ್ಲಿ ಮಲ್ಲಸರ್ಜನ ವ್ಯಾಯಾಮ ಶಾಲೆ, ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ, ಬಾಸೆಲ್ ಮಿಶನ್ ಶೈಕ್ಷಣಿಕ ಸಂಸ್ಥೆ ಮುಂತಾದವನ್ನು ಹೆಸರಿಸಬಹುದು. ಕಿತ್ತೂರ ಚೆನ್ನಮ್ಮ ಉಪವನ, ನಗರಸಭಾಭವನ, ಆಕಾಶವಾಣಿ ಕೇಂದ್ರ ಮುಂತಾದವುಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್ತು ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಗ್ರಂಥಾಲಯ ಮುಂತಾದವುಗಳ ಸೌಲಭ್ಯವಿದೆ.

ಇಲ್ಲಿನ ಕೋಟೆಯಲ್ಲಿರುವ ದುರ್ಗಾ ದೇವಸ್ಥಾನ ಪುರಾತನವಾದುದು. ಇಲ್ಲಿ ಕಲ್ಯಾಣ ಚಾಳುಕ್ಯ ಮನೆತನಕ್ಕೆ ಸೇರಿದ 6ನೆಯ ವಿಕ್ರಮಾದಿತ್ಯನ ಕಾಲದ 1117ರ ಒಂದು ಶಿಲಾಶಾಸನವಿದೆ. ಹಿಂದೆ ಧಾರವಾಡ ಕುಂದೂರು 500 ಜಿಲ್ಲೆಯ ಒಂದು ಭಾಗವಾಗಿತ್ತು. ನರೇಂದ್ರ, ಮನಗುಡಿ, ಹೊಂಬಳ ಶಾಸನಗಳಲ್ಲಿ ಧಾರವಾಡ ಉಲ್ಲೇಖಗಳಿವೆ. ಬಾದಾಮಿಯ ಚಳುಕ್ಯರ ಆಡಳಿತದ ವೇಳೆಯಲ್ಲಿ ಇದು ಅಸ್ತಿತ್ವಕ್ಕೆ ಬಂದಿರಬಹುದಾಗಿದೆ. ಕಲ್ಯಾಣದ ಚಾಳುಕ್ಯರ ಹಾಗೂ ದೇವಗಿರಿ ಸೇವುಣರ ಆಡಳಿತ ಕಾಲದಲ್ಲಿ ಧಾರವಾಡ ನಗರ ಸಮೃದ್ಧ ಸ್ಥಿತಿಯಲ್ಲಿತ್ತು. ಅನಂತರ ಧಾರವಾಡ ವಿಜಯನಗರದ ಪ್ರಭಾವಕ್ಕೆ ಒಳಗಾದಂತೆ ಕಂಡುಬರುತ್ತದೆ. ಮುಸಲ್ಮಾನರ ಆಳಿಕೆಯ ಸಮಯದಲ್ಲಿ ನಗರಕ್ಕೆ ಹೊಸ ಕೋಟೆಯನ್ನು ಕಟ್ಟಲಾಯಿತು. ಬಿಜಾಪುರ ಸುಲ್ತಾನ ಅಲಿ ಆದಿಲ್ ಷಾ 1573ರಲ್ಲಿ ಧಾರವಾಡದ ಮೇಲೆ ದಂಡೆತ್ತಿ ಬಂದಾಗ ಧಾರವಾಡ ಕರ್ನಾಟಕದಲ್ಲಿಯೇ ಅತ್ಯಂತ ಭದ್ರಕೋಟೆಯಾಗಿತ್ತೆಂದು ಪರಿಗಣಿಸಲಾಗಿದೆ. ಶಿಲಾಶಾಸನಗಳ ಮೇರೆಗೆ ಇದರ ಪೂರ್ವ ಹೆಸರು ದಾರವಾಡ ಎಂದಿದೆ. ಧಾರವಾಡಕ್ಕೆ ಈ ಹೆಸರು ಬರಲು ಈ ಸ್ಥಳದ ಭೌಗೋಳಿಕ ಕಾರಣವಿರಬಹುದು. ಧಾರವಾಡ ಬಯಲು ಸೀಮೆ ಹಾಗೂ ಮಲೆನಾಡುಗಳ ನಡುವೆ ಇದ್ದು ಬೆಳವಲ 300 ಜಿಲ್ಲೆಯ ಒಂದು ಭಾಗವಾಗಿತ್ತು. ಶಾಸನದ ಉಲ್ಲೇಖದಂತೆ ಬೆಳವಲದ ಮಾರಾಟಕ್ಕಾಗಿ ಬರುತ್ತಿದ್ದ ಎಲ್ಲ ಸಾಮಗ್ರಿಗಳು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗಲು ಧಾರವಾಡ ದ್ವಾರವಾಗಿತ್ತು. ದ್ವಾರ-ವಾಡಿ ಎಂಬ ಸಂಸ್ಕೃತದ ಮೂಲಶಬ್ದಗಳು ದಾರವಾಡ ಅಥವಾ ಧಾರವಾಡವಾಯಿತೆಂದು ತೋರುತ್ತದೆ.

*

**ಹುಮಚ:** ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ತಾಲ್ಲೂಕಿನ ದಕ್ಷಿಣದ ಅಂಚಿನಲ್ಲಿ ಹೊಸನಗರಕ್ಕೆ ಆಗ್ನೇಯದಲ್ಲಿ 19 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,368. ಇದೊಂದು ಜೈನ ಯಾತ್ರಾಸ್ಥಳ. ಪಶ್ಚಿಮ ಘಟ್ಟಶ್ರೇಣಿಯ ಮಲೆನಾಡು ಪ್ರದೇಶಕ್ಕೆ ಸೇರಿದ್ದು ಇಲ್ಲಿಯ ಪ್ರಕೃತಿ ಸೌಂದರ್ಯ ನೋಡುವಂತಹದು. ಈ ಪುರಾತನ ಗ್ರಾಮ ಎಂಟನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗೆ ಸಾಂತಳಿಗೆ 1000 ನಾಡನ್ನು ಆಳುತ್ತಿದ್ದ ಸಾಂತರರ ರಾಜಧಾನಿಯಾಗಿತ್ತು. ಈ ರಾಜವಂಶದ ಮೂಲಪುರುಷ ಜಿನದತ್ತ, ಉತ್ತರದಿಂದ ಇಲ್ಲಿಗೆ ಬಂದು ಪದ್ಮಾವತಿಯ ವರಪ್ರಸಾದದಿಂದ ಇಲ್ಲಿ ನೆಲಸಿ ರಾಜ್ಯವನ್ನು ಕಟ್ಟಿದನೆಂದು ಪ್ರತೀತಿ. ಶಾಸನಗಳಲ್ಲಿ ಈ ಊರನ್ನು ಹೊಂಬುಚ, ಪೊಂಬುಚ್ಚ, ಪಟ್ಟಿಪೊಂಬುರ್ಚ್ಚ ಎಂದು ಕರೆದಿದೆ.

ಸಾಂತರರು ಜೈನರಾಗಿದ್ದುದರಿಂದ ಇಲ್ಲಿ ಹಲವು ಜೈನ ಬಸದಿಗಳನ್ನು ನಿರ್ಮಿಸಿದರು. ಇಲ್ಲಿ ಒಂದು ಜೈನಮಠವೂ ಸ್ಥಾಪಿತವಾಗಿದ್ದು ಇಂದಿಗೂ ಇದೊಂದು ಜೈನಕ್ಷೇತ್ರವಾಗಿದೆ. ಇಲ್ಲಿನ ಪ್ರಾಚೀನ ಬಸದಿ 850ರ ಕಾಲದ್ದಾ

ಗಿದ್ದು ಅದಕ್ಕೆ ಪಾಲಿಯಕ್ಕನ ಬಸದಿ ಎಂಬ ಹೆಸರಿತ್ತು. ಆದರೆ ಈಗ ಆ ಬಸದಿಯಿಲ್ಲ. ಪಂಚಕೂಟ ಬಸದಿಯ ಆವರಣದಲ್ಲಿ ನಿರ್ಮಿತವಾಗಿರುವ ಪಾರ್ಶ್ವನಾಥ ಬಸದಿಯಲ್ಲಿ ಹಳೆಯ ಬಸದಿಯ ಅವಶೇಷಗಳನ್ನು ನೋಡಬಹುದು. ಶಕ 820ರಲ್ಲಿ ವಿಕ್ರಮಾದಿತ್ಯ ಸಾಂತರನು ಈ ಊರಿನ ಗುಡ್ಡದ ತುದಿಯಲ್ಲಿ ನಿರ್ಮಿಸಿದ ಇನ್ನೊಂದು ಹಳೆಯ ಸಣ್ಣ ಬಸದಿಯಿದೆ. ಮಠದ ಆವರಣದಲ್ಲಿರುವ ಚಂದ್ರನಾಥ ಬಸದಿ ಹತ್ತನೆಯ ಶತಮಾನದಲ್ಲಿ ನಿರ್ಮಿತವಾದದ್ದು. ಇವೆಲ್ಲಕ್ಕಿಂತ ದೊಡ್ಡದೂ ಪ್ರಸಿದ್ಧವೂ ಆದುದು ಪಂಚಕೂಟ ಬಸದಿ. ಐದು ಗರ್ಭಗುಡಿಗಳಿದ್ದು ಒಂದೇ ನವರಂಗವಿರುವ ಈ ಬಸದಿಯನ್ನು ಚಟ್ಟಲದೇವಿ 1077ರಲ್ಲಿ ಕಟ್ಟಿಸಿದಳು. ಶಾಸನಗಳಲ್ಲಿ ಈ ಬಸದಿಯನ್ನು ಉರ್ವ್ವೀತಿಲಕ ಎಂದು ಕರೆದಿದೆ. ಇದರ ಮುಂದೆ ನಿಂತಿರುವ ಉನ್ನತವಾದ ಮಾನಸ್ತಂಭ ಸುಂದರವಾಗಿದೆ. ಈ ಊರಿನಲ್ಲಿ ಮೂವತ್ತಕ್ಕೂ ಹೆಚ್ಚು ಶಾಸನಗಳಿವೆ. ಇಲ್ಲಿಯ ಪದ್ಮಾವತಮ್ಮನ ರಥೋತ್ಸವ ಪ್ರಸಿದ್ಧವಾದದ್ದು. (ಎಂ.ಎಚ್.)

**ಹುಮನಾಬಾದ:** ಬೀದರ್ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕಿನ ಉತ್ತರದಲ್ಲಿ ಭಾಲ್ಕಿ, ಪೂರ್ವದಲ್ಲಿ ಬೀದರ್ ತಾಲ್ಲೂಕುಗಳೂ ಮತ್ತು ಆಂಧ್ರಪ್ರದೇಶವೂ ದಕ್ಷಿಣದಲ್ಲಿ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ಮತ್ತು ಗುಲ್ಬರ್ಗ ತಾಲ್ಲೂಕುಗಳೂ ಪಶ್ಚಿಮದಲ್ಲಿ ಬಸವಕಲ್ಯಾಣ ತಾಲ್ಲೂಕೂ ಸುತ್ತುವರಿದಿವೆ. ಧುಬುಲಗುಂಡಿ, ಹುಮನಾಬಾದ, ಹಳ್ಳಿಖೇಡ(ಬಿ), ಚಿಟಗುಪ್ಪ, ನೀರ್ಣಾ, ಬಿಮಲಖೇಡ ಹೋಬಳಿಗಳು. ಎರಡು ಪಟ್ಟಣಗಳು ಮತ್ತು 87 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 988.2 ಚ.ಕಿಮೀ. ಜನಸಂಖ್ಯೆ 2,94,587. ಇದರಲ್ಲಿ 2,33,651 ಮಂದಿ ಗ್ರಾಮವಾಸಿಗಳು, 60,936 ಮಂದಿ ಪಟ್ಟಣಿಗರಿದ್ದಾರೆ.

ತಾಲ್ಲೂಕು ಭೋರ್ಟುಕಲ್ಲಿನ ಮಿಶ್ರಣವಿರುವ ಭೂಮಿಯಿಂದಲೂ ಜಂಬಿಟ್ಟಿಗೆಯ ಪ್ರದೇಶದಿಂದಲೂ ಕೂಡಿದೆ. ಇಲ್ಲಿನ ಭೂಮಿ ಕೆಂಪು ಮಿಶ್ರಿತ ಮಣ್ಣಿನಿಂದ ಕೂಡಿದ್ದು ಕೆಲವು ಕಡೆಗಳಲ್ಲಿ ಕಪ್ಪುಮಣ್ಣಿನ ಭೂಮಿಯಿದೆ. ತಾಲ್ಲೂಕಿನ ಮಾಣಿಕನಗರನಾಲಾ ಕಾರಂಜಾ ನದಿಯ ಉಪನದಿ. ಇದು ಬಸವಕಲ್ಯಾಣದ ಗುಣತೀರ್ಥವಾಡಿಯಲ್ಲಿ ಹುಟ್ಟುವುದು. ಈ ನಾಲೆಗೆ ಹುಮನಾಬಾದ–ಹುಡುಗಿ ಮಧ್ಯೆ ಕಟ್ಟೆ ಕಟ್ಟುವ ಯೋಜನೆಯಿದೆ. ಹಳ್ಳಿಖೇಡ ನಾಲಾ ಬಸವಕಲ್ಯಾಣ ತಾಲ್ಲೂಕಿನ ಗೋರ್ಟಾ (ಬಿ) ಗ್ರಾಮದ ಬಳಿ ಹುಟ್ಟಿ ಹುಮನಾಬಾದ ತಾಲ್ಲೂಕಿನ ಮಾರ್ಕಲ್ಲು ಗ್ರಾಮದ ಬಳಿ ಮಾಣಿಕನಗರನಾಲಾವನ್ನು ಕೂಡಿಕೊಳ್ಳುವುದು. ತಾಲ್ಲೂಕಿನಲ್ಲಿ ಒಟ್ಟು 6,839.3 ಹೆಕ್ಟೇರುಗಳ ಸಾಮಾನ್ಯ ಅರಣ್ಯವಿದೆ. ಬೇಸಗೆಯಲ್ಲಿ ಸ್ವಲ್ಪ ಬಿಸಿಲಿನ ತಾಪ ಹೆಚ್ಚಾದರೂ ಹವೆ ಸಮಶೀತೋಷ್ಣವೆನ್ನಬಹುದು. ವಾರ್ಷಿಕ ಸರಾಸರಿ ಮಳೆ 894.26 ಮಿಮೀ. 1975ರಲ್ಲಿ 915.5 ಮಿಮೀ ಮಳೆಯಾಗಿತ್ತು. ಬಾವಿ ನೀರಾವರಿ ಹೆಚ್ಚೆನ್ನಬಹುದು. ಸೇಂಗಾ, ಜೋಳ, ಸಜ್ಜೆ, ಗೋದಿ, ಕಡಲೆ, ಕಬ್ಬು, ತೊಗರಿ ಮುಂತಾದುವುಗಳನ್ನು ಬೆಳೆಯುತ್ತಾರೆ. ಪಶುಪಾಲನೆಯುಂಟು.

ತಾಲ್ಲೂಕಿನ ಹಳ್ಳಿಖೇಡ (ಬಿ) ಗ್ರಾಮದಲ್ಲಿ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯೂ ಈ ಕಾರ್ಖಾನೆ ಪಕ್ಕದಲ್ಲೇ ಇಂಡಿಯಾ ಬ್ರಿವರಿ ಆ್ಯಂಡ್ ಡಿಸ್ಟಿಲರಿ ಕಾರ್ಖಾನೆಯೂ ಇದೆ. ಚಿಟಗುಪ್ಪದಲ್ಲಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಮರ ಕುಯ್ಯುವ ಕಾರ್ಖಾನೆ ಮುಂತಾದವುಗಳಿವೆ. ತಾಲ್ಲೂಕಿನಲ್ಲಿ ಕೈಮಗ್ಗದ ಬಟ್ಟೆ ತಯಾರಿಕೆ ಹೆಚ್ಚು. ಕೆಲವೊಂದು ರಾಸಾಯನಿಕ ಮತ್ತು ತಾಂತ್ರಿಕ ಕೈಗಾರಿಕಾ ಘಟಕಗಳಿದ್ದು ತಾಲ್ಲೂಕು ಕೈಗಾರಿಕೆಯಲ್ಲಿ ಮುಂದುವರಿಯುವ ಪ್ರಯತ್ನ ಸಾಗಿದೆ.

ತಾಲ್ಲೂಕಿನ ವಾಣಿಜ್ಯ–ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕವಾಗಿ ವಾಣಿಜ್ಯ, ಸಹಕಾರಿ ಮತ್ತು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೂ ಒಂದು ನಿಯಂತ್ರಿತ ಮಾರುಕಟ್ಟೆಯೂ ಇವೆ.

ತಾಲ್ಲೂಕಿನಲ್ಲಿ ಹೈದರಾಬಾದು–ಸೋಲಾಪುರ ರಾಷ್ಟ್ರೀಯ ಹೆದ್ದಾರಿ ಮತ್ತು ಗುಲ್ಬರ್ಗ–ಬಿದರೆ ರಾಜ್ಯ ಹೆದ್ದಾರಿ ಹಾದುಹೋಗಿವೆ. ಸುತ್ತಲ ತಾಲ್ಲೂಕು, ಪಟ್ಟಣಗಳಿಗೆ ಇಲ್ಲಿಂದ ಮಾರ್ಗಸಂಪರ್ಕಗಳಿವೆ. ಅಂಚೆ, ತಂತಿ, ದೂರವಾಣಿ, ವಿದ್ಯುತ್ತು, ಶಾಲಾಕಾಲೇಜುಗಳು, ತಾಂತ್ರಿಕ ತರಬೇತಿ ಶಾಲೆ, ಆಸ್ಪತ್ರೆ ಮತ್ತು ಔಷಧಾಲಯ ಮುಂತಾದವುಗಳ ಸೌಲಭ್ಯಗಳಿವೆ. ಹುಮನಾಬಾದಿಗೆ ಈಶಾನ್ಯದಲ್ಲಿ 8 ಕಿಮೀ ದೂರದಲ್ಲಿರುವ ಜಲಸಂಗ್ವಿ ಗ್ರಾಮದ ಕೆರೆಯ ಬಳಿ ಹೊಯ್ಸಳ ಶೈಲಿಯ ಜೀರ್ಣ ದೇವಾಲಯವಿದೆ. ಈ ಗುಡಿಯ ಹೊರಗೋಡೆಯ ಮೇಲೆ ಒಂದು ಸುಂದರ ಸ್ತ್ರೀಶಿಲ್ಪವಿದ್ದು


ವೀರಭದ್ರ ದೇವಾಲಯ, ಹುಮನಾಬಾದ

ಅದು ಒಂದು ಓಲೆಯನ್ನು ಬರೆಯುತ್ತಿರುವಂತೆ ಕೆತ್ತಿದೆ. ಆ ಓಲೆಯೇ ಒಂದು ಶಾಸನ. ಗ್ರಾಮದಲ್ಲಿ ಮಹಾದೇವನ ದೇವಾಲಯವಿದೆ. ಹುಮನಾಬಾದಿನ ವಾಯವ್ಯಕ್ಕೆ ಎರಡು ಕಿಮೀ ದೂರದಲ್ಲಿರುವ ಮಾಣಿಕ ನಗರ ಗ್ರಾಮದಲ್ಲಿ ಮಾಣಿಕಪ್ರಭು ದೇವಾಲಯವಿದೆ. ಪ್ರತಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಇಲ್ಲಿನ ಜಾತ್ರೆಗೆ ಸಾವಿರಾರು ಮಂದಿ ಸೇರುವರು. ಹುಮನಾಬಾದಿನ ಪೂರ್ವಕ್ಕೆ 5 ಕಿಮೀ ದೂರದಲ್ಲಿ ಸೋಲಾಪುರ–ಹೈದರಾಬಾದು ರಾಷ್ಟ್ರೀಯ ಹೆದ್ದಾರಿಯಲ್ಲಿ ಹುಡುಗಿ ಗ್ರಾಮವಿದೆ. ಇಲ್ಲಿ ಯಂಕಮ್ಮ ಮತ್ತು ಕರಿಬಸಯ್ಯ ದೇವಾಲಯಗಳಿವೆ. ಇಲ್ಲಿ ಪ್ರತಿ ಮೇ ತಿಂಗಳಲ್ಲಿ ಜಾತ್ರೆ ಸೇರುವುದು. ಹುಮನಾಬಾದಿಗೆ ಈಶಾನ್ಯದಲ್ಲಿ 16 ಕಿಮೀ ದೂರದಲ್ಲಿರುವ ಹಳ್ಳಿಖೇಡ (ಬಿ) ಹೋಬಳಿಯ ಆಡಳಿತ ಕೇಂದ್ರ. ಈ ಗ್ರಾಮದ ನಾಗನಾಥ ದೇವಾಲಯ ಬಹು ಪ್ರಸಿದ್ಧವಾದದ್ದು. ಹುಮನಾಬಾದಿಗೆ ಆಗ್ನೇಯದಲ್ಲಿರುವ ಚಾಂಗಲೇರ ಗ್ರಾಮ ಚಿಟಗುಪ್ಪಿಗೆ ಆಗ್ನೇಯದಲ್ಲಿ 21 ಕಿಮೀ ದೂರದಲ್ಲಿದೆ. ಗ್ರಾಮದಲ್ಲಿ ಪ್ರಸಿದ್ಧ ವೀರಭದ್ರ ದೇವಾಲಯವಿದೆ. ಇಲ್ಲಿ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಎರಡು ದಿನಗಳ ಜಾತ್ರೆ ನಡೆಯುವುದು. ಹುಮನಾಬಾದಿಗೆ ಆಗ್ನೇಯದಲ್ಲಿ 15 ಕಿಮೀ ದೂರದಲ್ಲಿರುವ ಚಿಟಗುಪ್ಪ ಹೋಬಳಿ ಆಡಳಿತ ಕೇಂದ್ರ ಪಟ್ಟಣ. ಇದು ತಾಲ್ಲೂಕಿನ ಎರಡನೆಯ ಮುಖ್ಯ ಪಟ್ಟಣ ಮತ್ತು ವ್ಯಾಪಾರ ಕೇಂದ್ರ. *

ಹುಮನಾಬಾದ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬಿದರೆಯ ನೈಋತ್ಯಕ್ಕೆ 58 ಕಿಮೀ ದೂರದಲ್ಲಿ ಹೈದರಾಬಾದು–ಸೋಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಜನಸಂಖ್ಯೆ 60,936.

ವ್ಯಾಪಾರ ಕೇಂದ್ರವಾದ ಈ ಪಟ್ಟಣದ ಮುಖಾಂತರ ಗುಲ್ಬರ್ಗ–ಬಿದರೆ ರಾಜ್ಯ ಹೆದ್ದಾರಿ ಹಾದುಹೋಗಿದೆ. ಪಟ್ಟಣದಲ್ಲಿ ಅಂಚೆ, ತಂತಿ,

ದೂರವಾಣಿ, ವಿದ್ಯುತ್ತು, ಆಸ್ಪತ್ರೆ ಮತ್ತು ಔಷಧಾಲಯ ಮುಂತಾದುವುಗಳ ಸೌಲಭ್ಯಗಳಿವೆ. ಹುಮನಾಬಾದಿಗೆ ವಾಯವ್ಯದಲ್ಲಿ ಎರಡು ಕಿಮೀ ದೂರದಲ್ಲಿರುವ ಮಾಣಿಕ ನಗರದಲ್ಲಿ ವಿದ್ಯಾಕೇಂದ್ರವಿದ್ದು ಸಂಸ್ಕೃತ ಕಾಲೇಜು, ಗ್ರಾಮಾಂತರ ತಾಂತ್ರಿಕ ತರಬೇತಿ ಕೇಂದ್ರ, ಆಯುರ್ವೇದ ಸಂಶೋಧನ ಕೇಂದ್ರ ಮುಂತಾದವುಗಳಿವೆ. ಪಟ್ಟಣದಲ್ಲಿ ಶಾಲಾಕಾಲೇಜಗಳಿದ್ದು ವಿದ್ಯಾಭ್ಯಾಸಕ್ಕೆ ಅನುಕೂಲವಿದೆ.

ಚಾಳುಕ್ಯ ದೊರೆ ಜಯಸಿಂಹ ಈ ಪಟ್ಟಣವನ್ನು 1040ರಲ್ಲಿ ಕಟ್ಟಿಸಿದನೆಂದೂ ಇದನ್ನು ಜಯಸಿಂಹಪುರವೆಂದು ಕರೆಯುತ್ತಿದ್ದರೆಂದೂ ಹೇಳುವರು. ಇಲ್ಲಿರುವ ವೀರಭದ್ರ ದೇವಾಲಯ ಪೂರ್ವಾಭಿಮುಖವಾಗಿದೆ. ಗರ್ಭಗೃಹದ ಪಕ್ಕದಲ್ಲಿ ಭದ್ರಕಾಳಿ ಮತ್ತು ನಂದಿಕೇಶ್ವರ ಗುಡಿಗಳಿವೆ. ಗರ್ಭಗೃಹದ ಶಿಖರದಲ್ಲಿ ಶಿವನ ಇಪ್ಪತ್ತೆಂಟು ಲೀಲೆಗಳ, ವಿಷ್ಣುವಿನ ದಶಾವತಾರ ಮತ್ತು ಪುರಾಣಗಳ ಕಥೆಗಳಿವೆ. ದೇವಾಲಯದ ಬಳಿ ಸುಂದರವಾಗಿ ಕಟ್ಟಿರುವ ಕೆರೆಯಿದೆ. ಇಲ್ಲಿ ಪ್ರತಿ ಜನವರಿ ತಿಂಗಳಲ್ಲಿ ನಡೆಯುವ ವೀರಭದ್ರೇಶ್ವರ ಜಾತ್ರೆ ಪ್ರಸಿದ್ಧ. *

**ಹುಯಿಲಗೋಳ ನಾರಾಯಣರಾವ್:** 1884–1971. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಪ್ರಸಿದ್ಧ ಕವನದ ಕರ್ತೃಗಳು. ಹಲವು ಹೊಸ ನಾಟಕಗಳನ್ನು ಬರೆದುದಲ್ಲದೆ ರಂಗಭೂಮಿಯಲ್ಲಿ ಹಲವು ಮಾರ್ಪಾಟುಗಳನ್ನು ಮಾಡಿದರು. ಸಾಮಾಜಿಕ ಸಂಸ್ಥೆಗಳ ಸಂಘಟಕರಾಗಿ, ನಿಷ್ಠಾವಂತ ರಾಜಕೀಯ ಕಾರ್ಯಕರ್ತರಾಗಿ, ದೇಶಭಕ್ತರಾಗಿ ಒಂದು ಸತ್ಪರಂಪರೆಯನ್ನು ನಿರ್ಮಿಸಿದವರು.

1884ರ ಅಕ್ಟೋಬರ್ 4 ರಂದು ಧಾರವಾಡ ಜಿಲ್ಲೆಯ ಗದಗಿನಲ್ಲಿ ಜನಿಸಿದರು. ಬಿ.ಎ., ಎಲ್‍ಎಲ್.ಬಿ. ಪದವೀಧರರಾಗಿ ಅವರು ಅಲ್ಲಿಯೇ ವಕೀಲಿ ವೃತ್ತಿಯನ್ನು ಕೈಕೊಂಡರು.

ನಾಟಕ ಇವರ ಮುಖ್ಯ ಆಕರ್ಷಣೆ. ಕನ್ನಡ ರಂಗಭೂಮಿಯ ಪುನರುಜ್ಜೀವನಕ್ಕಾಗಿ ಶಾಂತಕವಿಗಳು ಆರಂಭಿಸಿದ್ದ ಕಾರ್ಯವನ್ನು ಮುಂದುವರಿಸಿದರು. ಸುಶಿಕ್ಷಿತ ಕಲಾವಿದರ ನೆರವಿನಿಂದ ಹೊಸಹೊಸ ನಾಟಕಗಳನ್ನು ರಂಗಭೂಮಿಯ ಮೇಲೆ ತಂದರು. ಸಂಗೀತ, ವೇಷಭೂಷಣ, ರಂಗಸಜ್ಜಿಕೆ ಗಳಿಗೆ ಸಂಬಂಧಿಸಿದಂತೆ ಹಲವು ಬಗೆಯ ಸುಧಾರಣೆಗಳನ್ನು ಮಾಡಿದರು. ಇವರು ಒಟ್ಟು ಹದಿಮೂರು ನಾಟಕಗಳನ್ನು ರಚಿಸಿದ್ದಾರಾದರೂ ಅವುಗಳಲ್ಲಿ ಸ್ತ್ರೀಧರ್ಮರಹಸ್ಯ, ಶಿಕ್ಷಣಸಂಭ್ರಮ, ಪತಿತೋದ್ಧಾರ–ಎಂಬ ಮೂರು ಸಾಮಾಜಿಕ ನಾಟಕಗಳು ಮಾತ್ರ ಪ್ರಕಟವಾಗಿವೆ. ಆಂಗ್ಲ ಶಿಕ್ಷಣ, ಸ್ತ್ರೀಸ್ವಾತಂತ್ರ್ಯ ಮೊದಲಾದ ಸಮಸ್ಯೆಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಿರುವ ಈ ನಾಟಕಗಳು ಕನ್ನಡ ರಂಗಭೂಮಿಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಇವರ ಪತಿತೋದ್ಧಾರ ನಾಟಕಕ್ಕೆ 1954ರಲ್ಲಿ ಮುಂಬಯಿ ಸರ್ಕಾರದ ಬಹುಮಾನ ಲಭಿಸಿದೆ. **(ವಿ.ಎಸ್.)**

**ಹುರುಳಿ ಭೀಮರಾವ್:** 1889–1970. ಪತ್ರಿಕೋದ್ಯಮಿ ಹಾಗೂ ಸಾಹಿತಿ. ಶಿವಮೊಗ್ಗ ಜಿಲ್ಲೆಯ ಹುರುಳಿ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶಾಮರಾಯ, ತಾಯಿ ಭಿಷ್ಟಮ್ಮ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಉಡುಪಿಯಲ್ಲೂ ಮಾಧ್ಯಮಿಕ ಶಿಕ್ಷಣ ಕೆಲವು ಕಾಲ ತೀರ್ಥಹಳ್ಳಿಯಲ್ಲೂ ಅನಂತರ ಉಡುಪಿ ಕ್ರಿಶ್ಚನ್ ಹೈಸ್ಕೂಲಿನಲ್ಲೂ ನಡೆಯಿತು. ಮೆಟ್ರಿಕ್ಯುಲೇಷನ್ ವರೆಗೆ ವಿದ್ಯಾಭ್ಯಾಸ ಮುಂದುವರಿಸಿದ ಇವರು ಕೆಲಕಾಲ ಉಡುಪಿಯ ಸಂಸ್ಕೃತ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ ಕೆಲಕಾಲ ಕಲ್ಲಿಕೋಟೆಯ ಕಾಲೇಜೊಂದರಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿದರು. ಕಲ್ಲಿಕೋಟೆಯಲ್ಲಿ ಇರುವಾಗಲೇ ನೆಡುಂಗಾಡಿ ಬ್ಯಾಂಕ್‍ನಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿಂದ ಮಂಗಳೂರಿಗೆ ವರ್ಗವಾಗಿ ಬಂದರು. ಕೆಲಕಾಲಾನಂತರ ಆ ಬ್ಯಾಂಕ್ ನಿಂತು ಹೋಯಿತು. ಆಗ ಇವರು ಪತ್ರಿಕೋದ್ಯಮ ರಂಗಕ್ಕೆ ಪ್ರವೇಶಿಸಿದರು.



(ಕೆ.ಪಿ.)

ವಿದ್ಯಾರ್ಥಿದೆಸೆಯಿಂದಲೇ ಲೇಖನ ವ್ಯವಸಾಯದಲ್ಲಿ ತೊಡಗಿದ ರಾಯರು ತಮ್ಮ ಪೂರ್ಣವೇಳೆಯನ್ನು ಪತ್ರಿಕೋದ್ಯಮಕ್ಕೆ, ಸಾಹಿತ್ಯ ಸೇವೆಗೆ ಮೀಸಲಿಟ್ಟರು. ಇವರ ಅನೇಕ ಲೇಖನಗಳು ಶ್ರೀಕೃಷ್ಣಸೂಕ್ತಿ, ಕಂಠೀರವ, ಸ್ವದೇಶಾಭಿಮಾನಿ, ಸಾಧ್ವಿ, ತಿಲಕಸಂದೇಶ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 1919ರಲ್ಲಿ ಕಂಠೀರವ ಪತ್ರಿಕೆ ಪ್ರಕಟವಾಗತೊಡಗಿದಾಗ ಅದರಲ್ಲಿ ಹಂಗಾಮಿ ಸಂಪಾದಕರಾಗಿದ್ದ ಇವರು 1932ರ ವೇಳೆಗೆ ಆ ಪತ್ರಿಕೆಯ ಪೂರ್ಣಾವಧಿಯ ಸಂಪಾದಕರಾಗಿ 1967ರಲ್ಲಿ ಅದು ನಿಂತು ಹೋಗುವವರೆಗೆ ಸುಮಾರು 35 ವರ್ಷಗಳ ಕಾಲ ಕಂಠೀರವದ ಏಳಿಗೆಗಾಗಿ ದುಡಿದರು. ಇವರು ಸಂಪಾದಕರಾಗಿದ್ದಾಗ ಬರೆಯುತ್ತಿದ್ದ ಸಂಪಾದಕೀಯ ಬರೆಹಗಳು, ಗುಂಡನ ಗೆಜೆಟ್ ಕಾಲಂಗಳು ಪ್ರಖ್ಯಾತವಾಗಿದ್ದವು; ನಿಶ್ಚಿತ ಬರೆವಣಿಗೆಗೆ, ದಿಟ್ಟ ನಿಲುವಿಗೆ ಸಾಕ್ಷಿಯಾಗಿದ್ದವು. ಗುಂಡನ ಗೆಜೆಟ್ ವ್ಯಂಗ್ಯ ಹಾಗೂ ವಿಡಂಬನ ಶೈಲಿಗೆ ಹೆಸರಾಗಿತ್ತು. ಕಂಠೀರವ ಪತ್ರಿಕೆಯನ್ನು ಒಂದು ಉತ್ತಮ ವಾರಪತ್ರಿಕೆಯಾಗಿ ಬೆಳೆಸಿ ಪೋಷಿಸುವಲ್ಲಿ ರಾಯರು ವಹಿಸಿದ ಪಾತ್ರ ಮಹತ್ವದ್ದು.

ಭೀಮರಾಯರು ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. 1913ರಲ್ಲಿ ಪ್ರಕಟವಾದ ತಾರಾ ಎಂಬ ಐತಿಹಾಸಿಕ ಕಾದಂಬರಿ ಇವರ ಪ್ರಥಮ ಕೃತಿ. ಪಾಪ ಪುಣ್ಯ (ಅನುವಾದಿತ ಕಾದಂಬರಿ, 1923), ರಜಿಯಾ ಬೇಗಂ (1944), ಹಾಸನ ಟೋಪಿ (ನೀಳ್ಗತೆ, 1932), ಪಾಪೋಸಿನ ಪಜೀತಿ, ಗುಬ್ಬಿ ಪಾಯಸ, ಗಡ್ಡದ ಅಜ್ಜಯ್ಯ (ಮೂರು ಮಕ್ಕಳ ಕಥೆಗಳು, 1935), ಮುರುಕು ದಂಬೂಕು (1947), ಆಧುನಿಕ ಭಾರತ (ಮೂರು ನಾಟಕಗಳು, 1949), ಸ್ವಲ್ಪ ನಗಬಾರದೆ? (ತುಣುಕು ಹಾಸ್ಯ)–ಇವು ಇವರ ಇತರ ಕೃತಿಗಳು. ಮುರುಕು ದಂಬೂಕು ಮತ್ತು ಹಾಸನ ಟೋಪಿ (ಅಥವಾ ಹಳೆಯ ಮೆಟ್ರಿಕ್) ಕ್ರಮವಾಗಿ ಟಾಮ್ ಬ್ರೌನ್ಸ್ ಸ್ಕೂಲ್ ಡೇಸ್, ರಿಪ್‍ವಾನ್ ವಿಂಕಲ್ ಎಂಬ ಕೃತಿಗಳನ್ನು ಆಧರಿಸಿ ಬರೆದ ಪುಸ್ತಕಗಳು. ಇವುಗಳ ಭಾಷೆ ಹಾಗೂ ಶೈಲಿ ಸರಳವಾಗಿದ್ದು ಓದುಗನನ್ನು ಸೆರೆಹಿಡಿಯುತ್ತದೆ. ಆಂಗ್ಲ ಕಥೆಯ ವಸ್ತುವನ್ನು ನಮ್ಮ ನೆಲಕ್ಕೆ ಅಳವಡಿಸಿಕೊಂಡು ಆ ಕೃತಿಗಳ ಸಾರವನ್ನು ಕನ್ನಡಕ್ಕೆ ಭಟ್ಟಿ ಇಳಿಸುವಲ್ಲಿ, ವಾಚನಯೋಗ್ಯವಾಗಿಸುವಲ್ಲಿ ಭೀಮರಾಯರು ಯಶಸ್ವಿಯಾಗಿದ್ದಾರೆ. ಇವರ ಗದ್ಯ ಬರೆವಣಿಗೆಯಲ್ಲಿ ಒಂದು ಹದವಿದೆ; ಪಾಕವಿದೆ. ಅದು ಓದುಗನನ್ನು ಸೆರೆಹಿಡಿಯುತ್ತದೆ. 1960ರಲ್ಲಿ ಮಣಿಪಾಲದಲ್ಲಿ ನಡೆದ 42ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ದಲ್ಲಿ ಇವರು ಕನ್ನಡ ಗದ್ಯಸಾಹಿತ್ಯವನ್ನು ಕುರಿತು ಮಾಡಿದ ಭಾಷಣ ವಿಚಾರಪರಿಪ್ಲುತವಾದುದು. ಯಕ್ಷಗಾನ, ನಾಟಕಾಭಿನಯಗಳಲ್ಲಿಯೂ ಇವರಿಗೆ ಅಪಾರ ಆಸಕ್ತಿಯಿತ್ತು.

ಮುದ್ದಣನನ್ನು ಸನಿಹದಿಂದ ಬಲ್ಲ ಭೀಮರಾಯರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಂದಳಿಕೆ ಲಕ್ಷ್ಮೀನಾರಾಯಣಯ್ಯನೇ ಮುದ್ದಣನೇ ಎಂಬ ವಾದ ಎದ್ದಾಗ ಈ ಎರಡೂ ಏಕವ್ಯಕ್ತಿಯ ಹೆಸರೆಂದೂ ಅದ್ಭುತ ರಾಮಾಯಣ, ಶ್ರೀರಾಮ ಪಟ್ಟಾಭಿಷೇಕ, ಶ್ರೀರಾಮಾಶ್ವಮೇಧ ಈ ಕೃತಿಗಳ ಕರ್ತೃ ಮುದ್ದಣನೇ ಎಂದೂ ಸಾಬೀತುಗೊಳಿಸುವಲ್ಲಿ ಇವರು ನೆರವಾದರು. ಕವಿ ಮುದ್ದಣನನ್ನು ಕುರಿತಂತೆ ಇವರ ಕೆಲವು ಲೇಖನಗಳು ಪ್ರಕಟವಾಗಿವೆ.

ಭೀಮರಾಯರು 1970ರ ಆಗಸ್ಟ್ 4ರಂದು ನಿಧನಹೊಂದಿದರು.

(ಕೆ.ವಿ.;*)

**ಹುಲಗೂರು:** ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲ್ಲೂಕಿನ ಒಂದು ಗ್ರಾಮ ಹಾಗೂ ಮುಸಲ್ಮಾನರ ಪವಿತ್ರ ಯಾತ್ರಾಸ್ಥಳ. ಶಿಗ್ಗಾಂವಿಯ ವಾಯವ್ಯಕ್ಕೆ 14 ಕಿಮೀ ದೂರದಲ್ಲೂ ಪುಣೆ–ಬೆಂಗಳೂರು ದಕ್ಷಿಣ–ಮಧ್ಯ ರೈಲ್ವೆಯ ಗುಡಿಗೇರಿ ನಿಲ್ದಾಣದಿಂದ 9 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 809.

ಈ ಗ್ರಾಮದ ಹಳೆಯ ಹೆಸರು ಪುಲಗನೂರು. ಇಲ್ಲಿ ಹನ್ನೊಂದು ಶಾಸನಗಳು ದೊರಕಿವೆ. 970ರ ಶಾಸನವೊಂದರಲ್ಲಿ ಗುತ್ತಿಯ ಗಂಗ ಪುಲಿಗೆರೆ 200ನ್ನು ಆಳುವಾಗ ಆತನ ಹೆಂಡತಿ ಅಂಕಬ್ಬರಸಿಯಳಿಂದ ಪುಲ್ಲುಂಗೂರಬ್ಬೆ ದೇವತೆಗೆ ಭೂಮಿ ಮತ್ತು ಸುಂಕದಾನ ಕೊಟ್ಟ ಬಗೆಗೆ ಉಲ್ಲೇಖವಿದೆ. ಈ ಪ್ರದೇಶ ರಾಷ್ಟ್ರಕೂಟ, ಚಾಳುಕ್ಯ, ಕಳಚುರಿ, ಸೇವುಣ ಮೊದಲಾದ ಅರಸು ಮನೆತನಗಳ ಆಳಿಕೆಗೆ ಒಳಪಟ್ಟಿತ್ತೆಂದು ಶಾಸನಗಳ ಆಧಾರದಿಂದ ತಿಳಿಯುತ್ತದೆ.

ಗ್ರಾಮದ ಪಶ್ಚಿಮಕ್ಕೆ ಮುಕ್ಕಾಲು ಕಿಮೀ ಅಂತರದಲ್ಲಿ ನಾಲ್ಕು ಗೋರಿಗಳಿವೆ. ಇವು ಸುಪ್ರಸಿದ್ಧ ಮುಸ್ಲಿಂ ಸಂತ ಹಜರತ್ ಶಹಾ ಖಾದ್ರಿ ಮನೆತನಕ್ಕೆ ಸೇರಿದವು, 1800ರ ಸುಮಾರಿಗೆ ಸವಣೂನಲ್ಲಿ ನವಾಬ್ ಅಬ್ದುಲ್ ಕರೀಂಖಾನ್ ಆಳುತ್ತಿರುವಾಗ ಆತನ ಅಧೀನಕ್ಕೊಳಪಟ್ಟ ಬಂಕಾಪುರದಲ್ಲಿ ಹಜರತ್ ಶಹಾ ಖಾದ್ರಿ ಎಂಬ ಮುಸ್ಲಿಂ ಸಂತನಿದ್ದ. ನವಾಬ ಈ ಸಂತನ ಶಿಷ್ಯಕೋಟಿಗೆ ಸೇರಿದ ಓರ್ವ ಹೆಣ್ಣುಮಗಳಿಗೆ ಅಪಮಾನ ಮಾಡಲು ಹಜರತ್ ಶಹಾ ಆಗ ನವಾಬನಿಗೆ ಶಾಪವಿತ್ತು ಹುಲಗೂರಿಗೆ ಬಂದು ನೆಲಸಿದ. ಅಂದಿನಿಂದ ಹಜರತ್ ಶಹಾ ಖಾದ್ರಿ ಮನೆತನ ಇಲ್ಲಿ ಪ್ರಸಿದ್ಧವಾಯಿತು. ಈ ಸ್ಥಳ ದರ್ಗಾ ಎಂದೂ ಹೆಸರಾಗಿದೆ. ಎಲ್ಲ ಧರ್ಮದವರೂ ದರ್ಗಾಕ್ಕೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಪ್ರತಿವರ್ಷ ಈ ಸಂತನ ಸ್ಮರಣಾರ್ಥ ಫೆಬ್ರವರಿಯ ಸುಮಾರಿಗೆ ಉರುಸ್ ವೈಭವದಿಂದ ಜರುಗುತ್ತದೆ. ಬೆಳಗಾಂವಿ, ಧಾರವಾಡ ಜಿಲ್ಲೆಗಳಿಂದ ಜನ ಬಂದು ಈ ಉರುಸ್‌ನಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿ ಸಿದ್ಧಲಿಂಗೇಶ್ವರ ದೇವಾಲಯವೂ ಇದೆ. ಇದೇ ಸಮಯಕ್ಕೆ ಇಲ್ಲಿಗೆ 43 ಕಿಮೀ ದೂರದಲ್ಲಿರುವ ಬಳ್ಳಾರಿ ಜಿಲ್ಲೆಯ ಮೈಲಾರದಿಂದಲೂ ಭಕ್ತಾದಿಗಳು ಬರುತ್ತಾರೆ. ಇದರಿಂದಾಗಿ ಈ ಗ್ರಾಮ ಗ್ರಾಮಾಂತರ ಪ್ರದೇಶದ ವಾಣಿಜ್ಯ ಕೇಂದ್ರವಾಗಿ ಬೆಳೆಯಲು ಸಾಧ್ಯವಾಗಿದೆ. ಇಲ್ಲಿ ಪ್ರತಿ ರವಿವಾರ ಸಂತೆಯಾಗುತ್ತದೆ. ಈ ಊರಿನಲ್ಲಿ ಆರೋಗ್ಯ ಕೇಂದ್ರ, ಪ್ರಾಥಮಿಕ ಶಾಲೆಗಳು, ಉರ್ದು ಶಾಲೆ, ಅಂಚೆ, ತಂತಿ, ವಿದ್ಯುತ್ ಸೌಲಭ್ಯ ಇದೆ. ಇತ್ತೀಚೆಗೆ ದರ್ಗಾದಲ್ಲಿಯೇ ಹಜರತ್ ಖಾದ್ರಿ ಸಂತನ ಹೆಸರಿನಲ್ಲಿ ಪ್ರೌಢಶಾಲೆ ಪ್ರಾರಂಭವಾಗಿದೆ. ಹುಲಗೂರಿನ ಪೂರ್ವಕ್ಕೆ ಶಿಶುನಾಳದಲ್ಲಿ ಶ್ರೇಷ್ಠ ತತ್ತ್ವಪದಗಳನ್ನು ರಚಿಸಿ ಹೆಸರಾದ ಶಿಶುನಾಳ ಶರೀಫರ ಗದ್ದುಗೆಯಿದೆ. ತಮ್ಮ ಗುರುಗಳೆಂದು ಸ್ವೀಕರಿಸಿ ಖಾದ್ರಿಯವರ ಭೇಟಿಗೆ ಶರೀಫರು ಈ ಊರಿಗೆ ಆಗಾಗ ಬಂದು ಹೋಗುತ್ತಿದ್ದರಂತೆ. ಅವರ ತತ್ತ್ವದ ಪದಗಳಲ್ಲಿ ಹುಲಗೂರಿನ ಉಲ್ಲೇಖವಿದೆ. ಈ ಊರಿಗೆ ಸುಮಾರು 6 ಕಿಮೀ ಅಂತರದಲ್ಲಿ ಪ್ರಸಿದ್ಧ ಕಾರಡಗಿ ವೀರಭದ್ರ ದೇವಸ್ಥಾನವಿದೆ. ಹುಲಗೂರಿಗೆ ಹುಬ್ಬಳ್ಳಿ, ಶಿಗ್ಗಾಂವಿಗಳಿಂದ ನೇರ ಬಸ್ ಸೌಕರ್ಯವಿದೆ.

(ಎಸ್.ಎಸ್.ಬಿ.)

**ಹುಲಗೂರು ಕೃಷ್ಣಾಚಾರ್ಯ:** 1891–1951. ಸಂಗೀತ ವಿದ್ವಾಂಸರು. 1891ರಲ್ಲಿ ಹುಬ್ಬಳ್ಳಿಯಲ್ಲಿ ಜನಿಸಿದರು. ಇವರ ತಂದೆ ಸಂಗೀತ ವಿದ್ವಾಂಸರಾದ ವೆಂಕಣ್ಣಾಚಾರ್ಯ. ಮೆಟ್ರಿಕ್ಯುಲೇಶನ್ ತೇರ್ಗಡೆಯಾದ ಅನಂತರ ಕೃಷ್ಣಾಚಾರ್ಯರು ಆಗಿನ ಮೈಸೂರು ಸಂಸ್ಥಾನದ ರೈಲ್ವೆಯಲ್ಲಿ ಡ್ರಾಫ್ಟ್ಸ್‌ಮನ್ ಆಗಿ ಸೇವೆ ಸಲ್ಲಿಸಿದರು.

ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಇವರಿಗೆ ಪಾಂಡಿತ್ಯವಿತ್ತು. ಮೊದಲಿನಿಂದಲೂ ಸಂಗೀತ ಕಲೆಯ ಬಗ್ಗೆ ಅಭಿರುಚಿ ಇದ್ದುದರಿಂದ ಇವರು ಸಂಗೀತಶಾಸ್ತ್ರ ಮತ್ತು ವಾದ್ಯಗಳನ್ನು ಕುರಿತು ಆಳ ಅಧ್ಯಯನಕ್ಕೆ ತೊಡಗಿದರು. ಕರ್ಣಾಟಕ ಸಂಗೀತಶಾಸ್ತ್ರವಿಮರ್ಶಾ ಎಂಬ ಕನ್ನಡ ಗ್ರಂಥವನ್ನೂ ಶ್ರುತಿಸಿದ್ಧಾಂತ ಎಂಬ ಶ್ರುತಿವಿಚಾರವನ್ನು ಕುರಿತಾದ ಸಂಸ್ಕೃತ ಗ್ರಂಥವನ್ನೂ ಇವರು ರಚಿಸಿದರು. ಸಂಗೀತಶಾಸ್ತ್ರವನ್ನು ಕುರಿತಂತೆ ಹಲವು ಲೇಖನಗಳೂ ಪ್ರಕಟವಾಗಿವೆ. ಆಧುನಿಕ ಕಾಲದಲ್ಲಿ ದುರ್ಲಭವಾದ, ಹೊಸ ರೀತಿಯ ವೀಣೆಗಳಾದ ಕಿನ್ನರಿವೀಣಾ ಮತ್ತು ವಿಶ್ವವೀಣಾ ಎಂಬ ವಾದ್ಯಗಳನ್ನು ರೂಪಿಸಿ ಅವುಗಳನ್ನು ನುಡಿಸುವ ವಿಧಾನವನ್ನು ಪ್ರಚಲಿತಗೊಳಿಸಿದವರೂ ಇವರೇ. ಕಿನ್ನರಿ ಕೃಷ್ಣಾಚಾರ್ಯರೆಂದು ಇವರು ಪ್ರಸಿದ್ಧರಾದರು. ಇವರಲ್ಲಿ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಅಮೂಲ್ಯವಾದ ಪುಸ್ತಕ ಭಂಡಾರವಿದ್ದಿತು. ಹುಬ್ಬಳ್ಳಿಯಲ್ಲಿ ಭಾರತ ಸಂಗೀತಶಾಲಾ ಎಂಬ ಸಂಗೀತ ಪಾಠಶಾಲೆಯನ್ನು ಸ್ಥಾಪಿಸಿ ನಡೆಸುತ್ತಿದ್ದರು. ಮೈಸೂರಿನ ರಾಜಾಸ್ಥಾನದ ಗೌರವ ಮತ್ತು ಸನ್ಮಾನಗಳನ್ನು ಪಡೆದಿದ್ದ ಇವರು 1951ರಲ್ಲಿ ಹುಬ್ಬಳ್ಳಿಯಲ್ಲಿ ನಿಧನರಾದರು.

(ವಿ.ಎಸ್.ಎಸ್.)

**ಹುಲಿಕಲ್ಲು:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಒಂದು ಗ್ರಾಮ. ತುಮಕೂರಿಗೆ ಆಗ್ನೇಯದಲ್ಲಿ 29 ಕಿಮೀ ದೂರದಲ್ಲಿರುವ ಈ ಗ್ರಾಮ ಹುಲಿಕಲ್ಲು ರಾಮದೇವರ ಬೆಟ್ಟಕ್ಕೆ ಹೊಂದಿಕೊಂಡಂತಿರುವ ಎತ್ತರದ ದಿಬ್ಬದ ಮೇಲಿದೆ. ಜನಸಂಖ್ಯೆ 2,375. ಸು. 1310ರಲ್ಲಿ ಈ ಗ್ರಾಮ ಹೊಯ್ಸಳದೊರೆ ಮುಮ್ಮಡಿ ಬಲ್ಲಾಳನಿಂದ ಸ್ಥಾಪಿತವಾಯಿತೆನ್ನುವರು. ಗುರುಚಿತ್ತನೆಂಬ ಸನ್ಯಾಸಿ ಹತ್ತಿರದ ರಾಮಲಿಂಗಬೆಟ್ಟದ ಬಳಿ ಇದ್ದನೆಂದೂ ಒಂದು ದಿನ ಇವರ ಆಶ್ರಮಕ್ಕೆ ಸೇರಿದ ಎತ್ತೊಂದು ಹುಲಿಯನ್ನು ಹೆದರಿಸಿ ಓಡಿಸಿತೆಂದೂ ವಿಷಯ ತಿಳಿದ ದೊರೆ ಇದೊಂದು ವೀರಭೂಮಿಯೆಂದು ತಿಳಿದು ಬೆಟ್ಟದ ಮೇಲೊಂದು ಕೋಟೆ ಕಟ್ಟಿಸಿದನೆಂದೂ ಇದನ್ನು 'ಹುಲಿ–ಕೊಲ್ಲು' ಎಂದು ಹೆಸರಿಟ್ಟನೆನ್ನುವರು. ಮುಂದೆ ಈ ಪ್ರದೇಶ ಕೊರಟಗೆರೆಯ ಬೈಚೆಗೌಡನ ಆಡಳಿತಕ್ಕೆ ಸೇರಿ ಇವರ ವಂಶಸ್ಥರು ಮೈಸೂರು ಅರಸರ ಆಶ್ರಯದಲ್ಲಿ ಇದನ್ನು ಆಳಿಕೊಂಡುಬಂದರು. ಟಿಪ್ಪು ಸುಲ್ತಾನ ಪ್ರಾಬಲ್ಯಕ್ಕೆ ಬಂದಾಗ ಈ ಪ್ರದೇಶವನ್ನು ತನ್ನ ವಶಮಾಡಿಕೊಂಡು ಮೈಸೂರು ರಾಜ್ಯಾಡಳಿತಕ್ಕೆ ಸೇರಿಸಿದ. ಆಗಿನ ಕೋಟೆ ಕೊತ್ತಲ ಪಳೆಯುಳಿಕೆ ಈಗಲೂ ಕಂಡುಬರುತ್ತವೆ. ಇವುಗಳಲ್ಲಿ ಪಾಳೇಗಾರರ ಕಲ್ಲಿನ ಮನೆಯ ಉಳಿಕೆ, ಅನೇಕ ದೇವಾಲಯಗಳ ಉಳಿಕೆಗಳು ಇವೆ. ಜನಾರ್ಧನ ದೇವಾಲಯದಲ್ಲಿ ಹೊಯ್ಸಳರ ಕಾಲದ್ದೆನ್ನುವ ಚತುರ್ಭುಜ ಮೂರ್ತಿಯಿದೆ. ಮಂಡಿಯಮ್ಮ, ಕೊಲ್ಲಾಪುರದಮ್ಮ, ಸು. 300 ವರ್ಷಗಳ ಹಿಂದಿನ ವೀರಭದ್ರ ಮತ್ತು ಸಂಗಮೇಶ್ವರ ದೇವಾಲಯಗಳಿವೆ. ಇಲ್ಲಿರುವ ಸರ್ವೇಶ್ವರ ದೇವಾಲಯ ಗಂಗರ ಕಾಲದ ಶಿಲ್ಪಕೃತಿಗಳ ಲಕ್ಷಣದಿಂದ ಕೂಡಿದೆ. ಸಪ್ತಮಾತೃಕೆಯರ ವಿಗ್ರಹವಿದೆ, ಜೊತೆಗೆ ಬಾಗಿಲದ್ವಾರದ ಅಕ್ಕಪಕ್ಕಗಳಲ್ಲಿ ಇಬ್ಬರು ನರ್ತಕಿಯರ ವಿಗ್ರಹಗಳಿವೆ. ವಿಜಯನಗರ

ಕಾಲದೆನ್ನುವ ಲಕ್ಷಣಗಳುಳ್ಳ ಗುರುಚಿತ್ತಾರಾಧ್ಯರ ಗದ್ದುಗೆಯಿದ್ದು ಅದರ ಮುಂದೆ ಒಂದು ವೀರಗಲ್ಲು ಇದೆ. ಹುಲಿಕಲ್ಲಿನಿಂದ 3 ಕಿಮೀ ದೂರದಲ್ಲಿರುವ ರಾಮದೇವರ ಬೆಟ್ಟದಲ್ಲಿ 'ಗುರುಚಿತ್ತ ಒಡೆಯ'ನೆಂಬ ಉಲ್ಲೇಖ ದೊರೆತಿದ್ದು ಇದೂ ಗುರುಚಿತ್ತಾರಾಧ್ಯ ಎರಡೂ ಒಂದೇ ಇರಬೇಕೆಂಬ ಚಿಂತನೆಯಿದೆ. ವಿರುಪಾಪುರ ಕಂದಾಯ ಗ್ರಾಮಕ್ಕೆ ಈ ಬೆಟ್ಟ ಸೇರಿದೆ. ಇದರ ಮೇಲೆ ವಿಜಯನಗರ ಕಾಲದಲ್ಲಿ ನಿರ್ಮಿಸಿರಬಹುದಾದ ವಿಶಾಲ ದೇವಾಲಯದ ಹೊರಬಾಗಿಲು ರಾಯ ಗೋಪುರದಿಂದ ಕೂಡಿದೆ. ಮೂಲದೇವಾಲಯ ಗಂಗರ ಕಾಲದಲ್ಲಿ ನಿರ್ಮಿಸಿದ್ದೆಂದು ತಿಳಿದುಬರುತ್ತದೆ. ಹುಲಿಕಲ್ಲು ರಾಮನಾಥ ದೇವಾಲಯಕ್ಕೆ ಹೊಯ್ಸಳರ ಕಾಲದ ದತ್ತಿ, ದಾನ ಕೊಟ್ಟ ಅನೇಕ ಶಿಲಾಶಾಸನಗಳು ಇಲ್ಲಿವೆ.

ಈ ದೇವಾಲಯವನ್ನು ಸುಮಾರು ಒಂದು ಮೀಟರ್ ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಗರ್ಭಗೃಹವು ಚತುರಶ್ರವಾಗಿದ್ದು ಕದಂಬ ನಾಗರ ಶಿಖರವನ್ನು ಹೊಂದಿದೆ. ಪೂಜೆಗೊಳ್ಳುತ್ತಿರುವ ಲಿಂಗದ ಶಿಲೆ ಹದಗೊಳಿಸದ ಸಹಜಸ್ಥಿತಿಯ ಪ್ರಾಕೃತಿಕ ಶಿಲೆಯಾಗಿದೆ. ಇದನ್ನು ಮಳಲೇಶ್ವರ ಎಂದು ಹೇಳುವುದರಿಂದ ಕಣಶಿಲಾದಿಂಡೆಂದು ಹೇಳಬಹುದು. ನವರಂಗ ಹೊಯ್ಸಳರ ಕಾಲದ್ದೆಂದು ತೋರುತ್ತದೆ. ಇಲ್ಲಿನ ಕಂಬಗಳಲ್ಲಿ ಕೆಲವು ವೃತ್ತಾಕಾರದವಾಗಿದ್ದರೆ ಮತ್ತೆ ಕೆಲವು ಹಲವು ಕೋನಗಳಿಂದ ಕೂಡಿದ ಬಹುಭುಜ ಸ್ತಂಭಗಳಾಗಿವೆ. ಗಂಗರ ಕಾಲದ ದೇವಾಲಯ ಹೊಯ್ಸಳರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ ಎಂದು ಹೇಳಬಹುದು. ಹೊರಮಂಟಪ ಕಂಬಗಳ ಮೇಲೆ ಸುಂದರ ಉಬ್ಬು ಚಿತ್ರಗಳಿವೆ. ಕಾರ್ತಿಕ ಮಾಸದ ಸೋಮವಾರಗಳಲ್ಲಿ ಇಲ್ಲಿ ವಿಶೇಷ ಉತ್ಸವಗಳು ಜರುಗುತ್ತವೆ. ಇಲ್ಲಿಂದ ಸುಮಾರು 12 ಕಿಮೀ ಅಂತರದಲ್ಲಿ ಶಿವಗಂಗೆಯ ಬೆಟ್ಟವಿದೆ. ಶಿವಗಂಗೆಯನ್ನು ದಕ್ಷಿಣ ಕಾಶಿ ಎಂದೂ ರಾಮನಾಥೇಶ್ವರ ಬೆಟ್ಟವನ್ನು ಉತ್ತರದ ರಾಮೇಶ್ವರ ಎಂದೂ ಹೇಳುವುದು ಇಲ್ಲಿನ ಲೋಕೋಕ್ತಿ.

(ಎಸ್.ಜಿಎ.)

ದೇವಸ್ಥಾನದ ಹೊರಭಿತ್ತಿಯ ಮೇಲೆ ಹೊಯ್ಸಳರ ಕಾಲದ ಲಿಪಿಯ ಶಾಸನವಿದ್ದು ಅದು ಗುರುಚಿತ್ತ ಒಡೆಯನ ಪುತ್ರ ಗಂಗಿಒಡೆಯ ಎಂಬವನಿಗೆ ಸ್ಥಾನಿಕ ಬಾಚಜೀಯನ ಪುತ್ರ ಗುರುಪ ಎಂಬವನು ಇತ್ತ ದಾನವನ್ನು ದಾಖಲಿಸಿದೆ. ಬೆಟ್ಟಕ್ಕೇರುವ ದಾರಿಯಲ್ಲಿ ಇರುವ ಶಾಸನವೊಂದು ಮುಮ್ಮಡಿ ವೀರ ಬಲ್ಲಾಳ ದೊರೆಯು ಹುಲಿಕಲ್ಲು ರಾಮನಾಥ ದೇವರಿಗೆ ದತ್ತಿಯನ್ನಿತ್ತುದನ್ನು ದಾಖಲಿಸಿದೆ.

ಬೆಟ್ಟಕ್ಕೆ ದಕ್ಷಿಣದಲ್ಲಿ ವಿರುಪಾಪುರವಿದೆ. ಇಳಿಜಾರಿನಲ್ಲಿ ಸಿಡಿಲುಗಲ್ಲು ರುದ್ರನ ದೇವಾಲಯವಿದೆ. ಇಲ್ಲಿ 1.25 ಮೀ ಎತ್ತರದ ವೀರಭದ್ರನ ಮೂರ್ತಿ ಇದೆ. ಈ ಬೆಟ್ಟದ ಕೆಳಗೆ ಬೂದಿತಿಟ್ಟುಗಳು ಇದ್ದವೆಂದೂ ಇದೊಂದು ಪ್ರಾಗೈತಿಹಾಸಿಕ ನಿವೇಶನವೆಂದೂ ಗುರುತಿಸುತ್ತಾರೆ.

**ಹುಲಿಕೆರೆ:** ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೂಕಿನ ಒಂದು ಗ್ರಾಮ. ಮಂಡ್ಯದ ವಾಯವ್ಯಕ್ಕೆ 18 ಕಿಮೀ ದೂರದಲ್ಲಿ ಮಂಡ್ಯ-ಪಾಂಡವಪುರಗಳ ನಡುವೆ ಸಿಗುವ ಬ್ಯಾಡರಹಳ್ಳಿ ರೈಲ್ವೆ ನಿಲ್ದಾಣದಿಂದ ಸು. 8 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 3,040.

ಈ ಸ್ಥಳಕ್ಕೆ ಪ್ರಾಮುಖ್ಯ ಬಂದದ್ದು ಕಾವೇರಿ ನದಿಗೆ ಕನ್ನಂಬಾಡಿಯ ಬಳಿ ಕಟ್ಟೆ ಹಾಕಿ ಕೃಷ್ಣರಾಜಸಾಗರದ ಜಲಾಶಯದ ನಿರ್ಮಾಣವಾಗಿ, ಅದರಿಂದ ಇರ್ವಿನ್ ನಾಲಾ (ಈಗ ವಿಶ್ವೇಶ್ವರಯ್ಯ ನಾಲೆ) ಎಡದಂಡೆಯ ಮೇಲ್ಮಟ್ಟದ ಕಾಲುವೆಯನ್ನು ತೋಡಿದ್ದರಿಂದ. ಕಟ್ಟೆಯ ಬಳಿ ನದಿಯ ಸರಾಸರಿ ನೆಲಮಟ್ಟದಿಂದ 18.5 ಮೀ ಎತ್ತರದಲ್ಲಿ ಇಡಲಾಗಿರುವ ತೂಬುಗಳಿಂದ ಪ್ರಾರಂಭವಾಗುವ ಈ ನಾಲೆ ಸು. 40 ಕಿಮೀ ಉದ್ದ ಹಾದುಬರುವಲ್ಲಿ ಲೋಕಪಾವನಿ ಉಪನದಿಯನ್ನು ಎತ್ತರದ ಮೇಲ್ಗಾಲುವೆಯಿಂದ ದಾಟಿದ ಅನಂತರ ಸ್ವಲ್ಪ ದೂರದಲ್ಲಿಯೇ ಲೋಕಪಾವನಿ ಹಾಗೂ ಶಿಂಷಾ ಉಪಜಲಾನಯನಗಳನ್ನು ಪ್ರತ್ಯೇಕಿಸುವ ಬೋರೆಯನ್ನು ಸೀಳಿಕೊಂಡು ಮುಂದುವರಿಯಬೇಕಾಗುತ್ತದೆ. ಕಾವೇರಿ-ಲೋಕಪಾವನಿ ಸಂಗಮದ ಬಳಿ ಕರಿಘಟ್ಟದಿಂದ ಪ್ರಾರಂಭವಾಗುವ ಈ ತಿಟ್ಟಿಗೆ ಕರಿಘಟ್ಟ ಶ್ರೇಣಿ ಎಂದೇ ಹೆಸರು. ಹುಲಿಕೆರೆಯ ಹತ್ತಿರ ಬಂಡೆಯಲ್ಲಿ ಅಗೆದ ನಾಲೆಯ ಆಳ 18 ಮೀಗಿಂತ ಹೆಚ್ಚಾಗಿ, ತೆರೆದ ನಾಲೆ ದುಬಾರಿಯೆನಿಸಿದಾಗ ಮುಂದೆ ಅದನ್ನು ಒಂದು ಸುರಂಗದಲ್ಲಿ ಕೊಂಡೊಯ್ಯಲಾಗಿದೆ. ಇದಕ್ಕೆ ಹುಲಿಕೆರೆ ಸುರಂಗವೆಂದೇ ಹೆಸರು.

2,800 ಮೀ ಉದ್ದವಿರುವ ಈ ಸುರಂಗ 3.75 ಮೀ ಅಗಲವೂ 4.5 ಮೀ ಎತ್ತರವೂ ಇದ್ದು ಆಯಾಕಾರವಾಗಿ ಮೇಲೆ ಕಮಾನಿನಂತಿದಿದೆ. ಕೆಳಗಿನ ಮೂಲೆಗಳನ್ನು ಗಾರೆ ಕೆಲಸದಿಂದ ದುಂಡಾಗಿಸಿದೆ. ಸರೇಬಣ ನೇರವಾಗಿದ್ದು ಇದನ್ನು ತೋಡುವಾಗ ಸುರಂಗಮಾರ್ಗದ ನಡುವೆ ಮೂರು ಕಡೆ ನೆಟ್ಟಗಿನ ಬಾವಿ ಕೊಳವೆಗಳನ್ನೂ ಒಂದು ಇಳಿಜಾರು ಕೊಳವೆಯನ್ನೂ ತೆಗೆಯಲಾಗಿದೆ. ಸುರಂಗವನ್ನು ತೋಡುವಾಗ ಸರೇಬಣವನ್ನು ಖಚಿತಗೊಳಿಸಲು ತೋಡಿದ ಕಲ್ಲುಮಣ್ಣನ್ನು ಹೊರಕ್ಕೆ ಎತ್ತಿಹಾಕಲು ಇವು ಉಪಯೋಗಿಸಲ್ಪಟ್ಟಿದ್ದರೆ, ಈಗ ನಡುವಿನ ಇಳಿಜಾರು ಕೊಳವೆ ಕುಡಿಯುವ ನೀರು ಸರಬರಾಜು ಮಾಡುವ ಪಂಪು ಹಾಗೂ ಪೈಪುಗಳಿಗೆ ಸ್ಥಳಾವಕಾಶ ನೀಡಿರುವುದಲ್ಲದೆ, ಮೆಟ್ಟಲು ದೀಪಗಳಿಂದ ಸುರಂಗದ ಪರೀಕ್ಷಣಕ್ಕೂ ಅನುಕೂಲವಾಗಿದೆ. ನೆಲದಾಳದಲ್ಲಿನ ಈ ಸುರಂಗ ತೋಡುವಿಕೆಯಿಂದ ಈ ಸ್ಥಳದ ಕುಡಿಯುವ ನೀರಿನ ಬಾವಿಗಳು ಬಸಿದು ಬರಿದಾದ್ದರಿಂದ ಆಗಲೇ ಈ ಸೌಕರ್ಯವನ್ನೊದಗಿಸಲಾಯಿತು. ನಾಲೆಯಿಂದಲೇ ಏತ್ತು ನೀರಾವರಿಯ ವಿಶೇಷ ಸವಲತ್ತನ್ನೂ ಈ ಸ್ಥಳಕ್ಕೆ ನೀಡಲಾಗಿದೆ. 1,000 ಮೀಗೆ 2.23 ಮೀ.ನಂತೆ ತಳದ ವಾಟ ನೀಡಿರುವ ಈ ಸುರಂಗದಲ್ಲಿ ನೀರು ಹರಿವಿನ ವೇಗ ಘಂಟೆಗೆ 13.6 ಕಿಮೀ (12.38 ಎಫ್‌ಪಿಎಸ್) ಇದ್ದು, ಪ್ರತಿ ಸೆಕೆಂಡಿಗೆ 60 ಘಮೀ (ಕ್ಯೂಮೆಕ್ಸ್; 2,135 ಕ್ಯೂಸೆಕ್ಸ್) ನೀರನ್ನು ಇದು ಸಾಗಿಸಬಲ್ಲದಾಗಿದೆ. 1928ರ ಮಧ್ಯಭಾಗದಲ್ಲಿ ಪ್ರಾರಂಭವಾದ ಸುರಂಗದ ಕೆಲಸ 1931ರಲ್ಲಿ ಪೂರ್ತಿಯಾಯಿತು. ಆಗ ಇದಕ್ಕೆ ತಗುಲಿದ ವೆಚ್ಚ ಸು.20 ಲಕ್ಷ ರೂಪಾಯಿಗಳು. ಎರಡೂ ತುದಿಗಳಲ್ಲಿನ ಆಳದಲ್ಲಿನ ತೆರೆದ ನಾಲೆಯೂ ಸೇರಿದರೆ 46 ಲಕ್ಷ. ಇಂಥ ದೊಡ್ಡ ಸಾಹಸ ಈ ಉಪಖಂಡದಲ್ಲಿಯೇ ಆಗ ಪ್ರಪ್ರಥಮ ಎನ್ನಲಾಗಿದೆ.

ಕಾವೇರಿ ನದಿಯಿಂದ ಬಹಳ ಹಿಂದಿನಿಂದಲೂ ಹಲವಾರು ಅಣೆ-ಕಾಲುವೆಗಳಿಂದ ನೀರಾವರಿಗೆ ನೀರು ಪಡೆದಿದ್ದರೂ ಈ ಕಾಲುವೆಗಳೆಲ್ಲ ನದೀಪಾತ್ರದ ಮಗ್ಗುಲಲ್ಲಿಯೇ ಸ್ವಲ್ಪ ಪ್ರದೇಶವನ್ನು ಮಾತ್ರ ನೀರಾವರಿಗೆ ತರುತ್ತಿದ್ದವು. ವಿಶ್ವೇಶ್ವರಯ್ಯ ನಾಲೆ ಈ ಹುಲಿಕೆರೆ ಸುರಂಗದಿಂದಾಗಿ ನದೀಪಾತ್ರದಿಂದ ಅತಿ ದೂರದಲ್ಲಿ ಉಪಜಲಾನಯನಗಳ ವಿಭಾಜಕ ಶ್ರೇಣಿಯನ್ನು ಭೇದಿಸಿಕೊಂಡು ಶಿಂಷಾ ಜಲಾನಯನವನ್ನು ಪ್ರವೇಶಿಸಿದ್ದರಿಂದ, ಮುಂದೆ ಶಾಖೋಪಶಾಖೆಗಳಾಗಿ 88,000 ಹೆಕ್ಟೇರ್ ಪ್ರದೇಶಕ್ಕೆ ನೀರೊದಗಿಸಲು ಸಾಧ್ಯವಾಗಿದೆ.

ಯೋಜನೆಯ ಸಮಯದಲ್ಲಿ ಕಲ್ಪಿಸಿದ್ದುದಕ್ಕಿಂತಲೂ ಹೆಚ್ಚಿನ ಪ್ರದೇಶ ಈಗ ನೀರಾವರಿಯಾಗುತ್ತಿದ್ದು, ಆಗ ರೂಪಿಸಿದ್ದ ಬೆಳೆ ನಿಯಂತ್ರಣ ಈಗ ಸಡಿಲಗೊಂಡು ವಿಶ್ವೇಶ್ವರಯ್ಯ ನಾಲಾ ಬಯಲಿನ ತುದಿಗಳಲ್ಲಿನ ನೀರಿನ ಕೊರತೆಗೆ ಈ ಸುರಂಗವೇ ಮಿತಿಯೊಡ್ಡುತ್ತಿರುವುದಾಗಿ ಭಾವಿಸಲಾಗಿದೆ. ಅಲ್ಲದೆ ನದಿಯಿಂದ ಹಿಂದೆ ಬಳಸಲು ಯೋಜಿಸಿದ್ದುದಕ್ಕಿಂತಲೂ ಹೆಚ್ಚು ಪ್ರಮಾಣದ ನೀರನ್ನು ಈಗ ಅಥವಾ ಮುಂದೆ ಬಳಸಿಕೊಳ್ಳಲು ಸಾಧ್ಯವಾಗಿ, ನಾಲೆಯನ್ನು ಇನ್ನೂ ಮುಂದುವರಿಸುವ ಸಂದರ್ಭದಲ್ಲಿ ಈ ಸುರಂಗವನ್ನು ದೊಡ್ಡದು ಮಾಡುವುದು ಅಥವಾ ಸುರಂಗದ ಒಳಸುತ್ತಿನ ಬಂಡೆಗಲ್ಲಿನ

ತರಕುಗಳನ್ನು ತೆಗೆದು ನಯಗೊಳಿಸುವುದು ಅಥವಾ ಬಳಿಯಲ್ಲಿಯೇ ಬೇರೆಯ ಸಮಾನಾಂತರ ಸುರಂಗ ತೋಡುವುದು ಮುಂತಾದ ಯೋಜನೆಗಳು ಭವಿಷ್ಯತ್ತಿಗಾಗಿ ಕಾದಿವೆ. (ಕೆ.ವಿ.ಎಸ್‌ಯು.)

**ಹುಲಿಮನೆ ಸೀತಾರಾಮಶಾಸ್ತ್ರಿ:** – 1985. ಪ್ರಸಿದ್ಧ ರಂಗಭೂಮಿ ನಟರು. ರಂಗಭೂಮಿಯಲ್ಲಿ ಟಿಪ್ಪುಸುಲ್ತಾನ್ ಎಂದೇ ಹೆಸರಾಗಿದ್ದವರು. ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಹುಲಿಮನೆ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಅನಂತಯ್ಯ ಹೆಗಡೆ, ತಾಯಿ ಮಂಜಮ್ಮ. ಸೀತಾರಾಮಶಾಸ್ತ್ರಿಗಳ ಮೂಲ ಹೆಸರು ಸೀತಾರಾಮ ಹೆಗಡೆ. ಇವರಿಗೆ ಬಾಲ್ಯದಿಂದಲೂ ಯಕ್ಷಗಾನ ಕ್ಷೇತ್ರದಲ್ಲಿ ಅಪಾರ ಒಲವು. ದನ ಕಾಯಲು ಕಾಡಿಗೆ ಹೋಗುವ ಸಂದರ್ಭಗಳಲ್ಲೆಲ್ಲ ಹೊದ್ದ ಕಂಬಳಿಯಿಂದಲೇ ಪರದೆ ರಚಿಸಿ ಜೊತೆಯ ಬಾಲಕರೊಂದಿಗೆ ತಮಗೆ ಬಂದಂತೆ ಯಕ್ಷಗಾನವಾಡುವುದು ಇವರ ಹವ್ಯಾಸವಾಗಿತ್ತು. ಶಾಲೆಯ ದಿನಗಳಿಂದಲೂ ಓದಿಗೆ ಗೈರುಹಾಜರಾಗಿ ನಾಟಕ ನೋಡಲು ಓಡಿಹೋಗುವುದು ಇವರ ಮತ್ತೊಂದು ಗೀಳು. ಸುಳಿಬೀಡಿನ ನಾರಾಯಣಭಟ್ಟರಿಂದ ಸ್ಫೂರ್ತಿ ಪಡೆದು ಮನೆಯವರ ಕಣ್ಣುತಪ್ಪಿಸಿ ಬೆಂಗಳೂರಿಗೆ ಬಂದು ಕರ್ಪೂರ ಶ್ರೀನಿವಾಸರಾಯರ ಆಶ್ರಯ ಪಡೆದು ಸಂಸ್ಕೃತ ವ್ಯಾಸಂಗ ಮಾಡಿ ಶಾಸ್ತ್ರಿ ಪದವಿಯನ್ನು ಗಳಿಸಿದರು. ಅಂದಿನಿಂದ ಹೆಗಡೆ ಎಂಬ ಅಭಿದಾನ ಹೋಗಿ ಶಾಸ್ತ್ರಿಗಳಾದರು.

ನಾಟಕ ವೀಕ್ಷಣೆಯಲ್ಲಿ ಅತ್ಯಾಸಕ್ತಿ ಹೊಂದಿದ್ದ ಇವರು ವರದಾಚಾರ್ಯರ ಮೂಲಕ ಅನೇಕ ನಾಟಕ ಕಂಪನಿಗಳ ಪರಿಚಯ ಮಾಡಿಕೊಂಡರು. ಒಮ್ಮೆ ಬೆಂಗಳೂರಿಗೆ ಬಂದ ಗರೂಡ ಸದಾಶಿವರಾಯರ ಕಂಪನಿಗೆ ಬಹಳ ಹತ್ತಿರದವರಾಗಿ ಗರೂಡರ ನಾಟಕಗಳ ಬಗೆಗೆ ಕಟುವಾದ ವಿಮರ್ಶೆ ಬರೆಯುತ್ತಿದ್ದರು. ಹೀಗೆ ವಿಮರ್ಶೆ ಬರೆಯುವಷ್ಟು ಸುಲಭವಲ್ಲ ಅಭಿನಯ ಎಂಬ ಗರೂಡರ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಿದ ಇವರು ಗರೂಡರ ನಾಟಕ ವಿಷವೃಕ್ಷದಲ್ಲಿ ಪುಟ್ಟ ಪಾತ್ರವನ್ನು ಮಾಡುವ ಮೂಲಕ ರಂಗಪ್ರವೇಶ ಮಾಡಿ ಮುಂದೆ ಅಭಿನಯವನ್ನೇ ಪ್ರಧಾನ ವೃತ್ತಿಯನ್ನಾಗಿಸಿಕೊಂಡರು. ಕೆಲವರ್ಷಗಳು ಅಭಿನಯದಲ್ಲಿ ಪಳಗಿದ ಅನಂತರ ಹಮ್ಮಿಗಿ ನೀಲಕಂಠಪ್ಪ, ಜಗನ್ನಾಥರಾಯರಂತಹ ನುರಿತ ಕಲಾವಿದರನ್ನೊಳಗೊಂಡಂತೆ ಗುರುಸಮರ್ಥ ಎಂಬ ನಾಟಕ ಮಂಡಳಿಯನ್ನು ಹುಟ್ಟುಹಾಕಿದರು(1929). 1933ರ ಹೊತ್ತಿಗೆ ಜಯಕರ್ನಾಟಕ ಎಂಬ ನಾಟಕ ಕಂಪನಿ ತೆರೆಯುವಷ್ಟು ಬೆಳೆದ ಇವರು ಈ ನಾಟಕ ಕಂಪನಿಯ ಮೂಲಕ ಕರ್ನಾಟಕದಾದ್ಯಂತ ಸಂಚರಿಸಿ ಪನ್ನಾದಾಸಿ, ಎಚ್ಚಮನಾಯಕ, ಸಂಪೂರ್ಣ ರಾಮಾಯಣ, ವರದಕ್ಷಿಣೆ, ಸಂದೇಹ. ಸಾಮ್ರಾಜ್ಯ,. ಲಂಕಾದಹನ,. ಟಿಪ್ಪೂಸುಲ್ತಾನ, ಸತ್ಯವಾನ ಸಾವಿತ್ರಿ ಮೊದಲಾದ ಸಾಕಷ್ಟು ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಿ ಅಪಾರ ಜನಮೆಚ್ಚುಗೆ ಗಳಿಸಿದರು. ನಾಟಕಗಳ ಪ್ರದರ್ಶನದೊಂದಿಗೆ ಆ ನಾಟಕಗಳಲ್ಲಿ ತಾವು ನಿರ್ವಹಿಸುತ್ತಿದ್ದ ಪಾತ್ರಗಳಲ್ಲೂ ಸಮರ್ಥವಾಗಿ ಅಭಿನಯಿಸುತ್ತಿದ್ದುದು ಇವರಿಗೆ ಹೆಚ್ಚು ಯಶಸ್ಸು ತಂದಿತು.

ಇವರು ನಾಟಕಗಳನ್ನೂ ಬರೆದಿದ್ದಾರೆ. ಟಿಪ್ಪು, ವರದಕ್ಷಿಣೆ, ಸಂದೇಹ ಸಾಮ್ರಾಜ್ಯ(ಅನುವಾದ), ಪುತ್ರಾಪೇಕ್ಷೆ, ನಾಟ್ಯಾಚಾರ್ಯ, ಮಾಯಾವಿ, ನಡುದಾರಿಯಲ್ಲಿ ಮೊದಲಾದವು ಇವರು ಬರೆದಿರುವ ಕೆಲವು ನಾಟಕಗಳು. ಇವುಗಳಲ್ಲಿ ಪುತ್ರಾಪೇಕ್ಷೆ, ನಾಟ್ಯಾಚಾರ್ಯ ಎಂಬ ನಾಟಕಗಳು ಮಾತ್ರ ಪ್ರಕಟಗೊಂಡಿವೆ.

ರಾಯಚೂರಿನಲ್ಲಿ ಒಮ್ಮೆ ರಜಾಕಾರರ ದಂಗೆಯ ಸಂದರ್ಭದಲ್ಲಿ ಇವರು ತಮ್ಮ ನಾಟಕ ಕಂಪನಿಯ ಬಾಗಿಲು ಮುಚ್ಚಬೇಕಾದ ಪರಿಸ್ಥಿತಿಯೊದಗಿ ನಷ್ಟಕ್ಕೊಳಗಾಗಿ ತಾವೇ ಬೇರೆಯವರ ಆಶ್ರಯ ಪಡೆದು ಬದುಕಬೇಕಾದ ಸನ್ನಿವೇಶವೊದಗಿತು.

ಇವರಿಗೆ ಕರ್ನಾಟಕ ಸಂಗೀತ ನಾಟಕ ಅಕಾಡೆಮಿ(1965) , ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಇವರು 1985 ಮೇ 16ರಂದು ನಿಧನಹೊಂದಿದರು. (ಎಸ್.ಎಂ.ಕೆ.)

**ಹುಲಿಯೂರುದುರ್ಗ:** ತುಮಕೂರು ಜಿಲ್ಲೆ ಕುಣಿಗಲು ತಾಲ್ಲೂಕಿನಲ್ಲಿ ಕುಣಿಗಲು ದಕ್ಷಿಣಕ್ಕೆ 24 ಕಿಮೀ ದೂರದಲ್ಲಿರುವ ಗ್ರಾಮ; ಹೋಬಳಿ ಕೇಂದ್ರ. ಇದು 1873ರ ವರೆಗೂ ಇದೇ ಹೆಸರಿನ ತಾಲ್ಲೂಕು ಕೇಂದ್ರವಾಗಿತ್ತು.

ಮೊದಲು ಈ ಸ್ಥಳ ಅರಣ್ಯಪ್ರದೇಶದಿಂದ ಸುತ್ತುವರಿದಿದ್ದು ಹುಲಿಗಳು ಹೆಚ್ಚಾಗಿದ್ದುದರಿಂದ ಈ ಊರಿಗೆ ಹುಲಿಯೂರುದುರ್ಗ ಎಂಬ ಹೆಸರು ಬಂತೆಂದು ಪ್ರತೀತಿ. ಊರ ಸನಿಹದಲ್ಲಿ ಬೆಟ್ಟವಿದೆ. ಇದು ಸಮುದ್ರ ಮಟ್ಟದಿಂದ 845 ಮೀ ಎತ್ತರವಿದೆ. ಇದನ್ನೂ ಹುಲಿಯೂರು ದುರ್ಗವೆಂದು ಕರೆಯಲಾಗುತ್ತದೆ. ಈ ಊರನ್ನೂ ಬೆಟ್ಟದ ಮೇಲಿರುವ ಕೋಟೆಯನ್ನೂ ಕಟ್ಟಿಸಿದವನು ಮಾಗಡಿ ಕೆಂಪೇಗೌಡ. ಕೋಟೆಯ ಒಳಗೆ ನೀರಿನ ಚಿಲುಮೆಗಳು, ಪಾಳು ಮನೆಗಳು, ಮದ್ದುಗುಂಡುಗಳ ಉಗ್ರಾಣ, ಕಣಜ ಮುಂತಾದ ಅವಶೇಷಗಳಿವೆ. ಬೆಟ್ಟದ ಹತ್ತಿರ ಗೋಪಾಲಕೃಷ್ಣನ ದೇವಾಲಯವಿದೆ; ನವರಂಗದಲ್ಲಿ ಅಂದವಾಗಿ ಕೆತ್ತಿರುವ ಕಣಶಿಲೆಯ ಕಂಬಗಳಿವೆ. ಈ ಬೆಟ್ಟದ ಪಕ್ಕದಲ್ಲಿರುವ ಹೇಮಗಿರಿಯ ಶಿಖರದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಪೂರ್ವದ ಇಳಿಜಾರು ಭಾಗದಲ್ಲಿ ವರದರಾಜನ ದೇವಾಲಯವಿದ್ದು, ಇಲ್ಲಿಯ ಪೂಜಾವಿಗ್ರಹ ಗುಂಡಾದ ಕಲ್ಲಾಗಿದ್ದು, ಇದನ್ನು ಹೇಮಗಿರಿಯಪ್ಪ ಎಂದು ಕರೆಯಲಾಗುತ್ತದೆ. ದಕ್ಷಿಣದ ಇಳಿಜಾರು ಪ್ರದೇಶದಲ್ಲಿ ಭೈರವ ದೇವಾಲಯವಿದೆ. ಈ ಬೆಟ್ಟ ಹುಲಿಯೂರುದುರ್ಗಕ್ಕಿಂತ ಉನ್ನತವಾಗಿದ್ದರೂ ಇಲ್ಲಿ ಕೋಟೆಗಳಾವುವೂ ಇಲ್ಲ. (ಕೆ.ಆರ್.ಆರ್.;ಎಸ್.ಜಿ.)

**ಹುಲ್ಲೆಕೆರೆ:** ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಒಂದು ಗ್ರಾಮ. ಅರಸೀಕೆರೆಗೆ ಆಗ್ನೇಯದಲ್ಲಿ ಹಾಸನ–ತಿಪಟೂರು ಮಾರ್ಗದಲ್ಲಿ ತಿಪಟೂರಿಗೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 1,177. ಇದೊಂದು ಸಾಮಾನ್ಯ ಗ್ರಾಮವಾದರೂ ಇಲ್ಲಿರುವ ಪುರಾತನ ದೇವಾಲಯಗಳಿಂದ ಪ್ರಸಿದ್ಧಿ ಪಡೆದಿದೆ. ಇಲ್ಲಿ ಹೊಯ್ಸಳ ಶೈಲಿಯ ಚನ್ನಕೇಶವ ದೇವಾಲಯವಿದೆ. ಈ ದೇವಾಲಯದ ಶಾಸನದ ಪ್ರಕಾರ ಇದನ್ನು 1163ರಲ್ಲಿ ಹೊಯ್ಸಳ ರಾಜ ಒಂದನೆಯ ನರಸಿಂಹ ಕಟ್ಟಿಸಿದ್ದೆಂದು ತಿಳಿದುಬರುವುದು. ದೇವಾಲಯದ ಒಳಗೆ ಗೋಪುರದ ಭಾಗಗಳೆಲ್ಲ ಅದರಲ್ಲೂ ಮಧ್ಯದ್ದು, ಉತ್ತಮ ಕೆತ್ತನೆಯಿಂದ ಕೂಡಿದೆ. ಇಲ್ಲಿನ ಮುಖಮಂಟಪವೂ ಸುಂದರ ಕೆತ್ತನೆ ಕೆಲಸದಿಂದ ಅಲಂಕೃತವಾಗಿದೆ. ಸುಂದರವಾಗಿ ಕೆತ್ತಿರುವ ವಿಷ್ಣುಮೂರ್ತಿಗಳನ್ನೂ ಸಣ್ಣ ಗೋಪುರ ಮತ್ತು ಗೋಡೆ ಕಂಬಗಳನ್ನೂ ಕಾಣಬಹುದು. ಗ್ರಾಮದಲ್ಲಿ ಸಪ್ತಮಾತೃಕೆಯರ, ಈಶ್ವರ ಮತ್ತು ಆಂಜನೇಯ ದೇವಾಲಯಗಳಿವೆ. ಈ ಗ್ರಾಮದ ದೊಡ್ಡಕೆರೆಯ ದಡದಲ್ಲಿ ಇರುವ ಈಶ್ವರ ದೇವಾಲಯದ ಹೆಚ್ಚು ಭಾಗ ಮುಚ್ಚಿಹೋಗಿದೆ. ಈ ದೇವಾಲಯದಲ್ಲಿ ಈಶ್ವರ ಲಿಂಗ, ಗಣಪತಿ, ಭೈರವ, ವೀರಭದ್ರರ ಸುಂದರ ಮೂರ್ತಿಗಳಿವೆ. (ಎಂ.ಎಲ್.ಎಸ್.)

**ಹುಳಿಯಾರು:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಂದು ಗ್ರಾಮ ಹಾಗೂ ಹೋಬಳಿ ಕೇಂದ್ರ. ಚಿಕ್ಕನಾಯಕನಹಳ್ಳಿಯಿಂದ ಉತ್ತರಕ್ಕೆ 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 12,267. ಈ ಗ್ರಾಮ 1886 ರವರೆಗೆ ಬೂದಿಹಾಳ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಹುಳಿಏರು ಎಂಬುದು ಇದರ ಪ್ರಾಚೀನ ಹೆಸರು. ಇದೊಂದು ಅಗ್ರಹಾರವಾಗಿತ್ತೆಂದು ಚಾಳುಕ್ಯರ ಶಾಸನಗಳು ಹಾಗೂ ಇತರ ಮೂಲಗಳಿಂದ ತಿಳಿದುಬರುತ್ತದೆ. 16ನೆಯ ಶತಮಾನದಲ್ಲಿ ಹಾಗಲವಾಡಿಯ ನಾಯಕರೂ ತರುವಾಯ ಮುಸ್ಲಿಮರೂ ಆಳಿದ ಈ ಊರು ಮುಂದೆ ಹೈದರ್ ಅಲಿಯ ಕಾಲಕ್ಕೆ ಅವನ ಸಾಮ್ರಾಜ್ಯದಲ್ಲಿ ವಿಲೀನವಾಯಿತು.

ಇಲ್ಲಿ ರಂಗನಾಥ ಮತ್ತು ಮಲ್ಲೇಶ್ವರ ಎಂಬ ದೇವಾಲಯಗಳಿವೆ. ರಂಗನಾಥ ದೇವಾಲಯ ಹೊಯ್ಸಳ ಶೈಲಿಯಲ್ಲಿದೆ. ಗರ್ಭಗೃಹವೊಂದನ್ನು ಳಿದು ದೇವಾಲಯದ ಇತರ ಭಾಗಗಳು ನವೀಕೃತಗೊಂಡಿವೆ. ದೇವಾಲಯ ದಲ್ಲಿರುವ ಮೂಲ ವಿಗ್ರಹ ಸುಮಾರು 5 ಅಡಿ ಎತ್ತರವಿದೆ. ಅನಂತಶಯನ ದಲ್ಲಿ ಒರಗಿರುವ ಶ್ರೀರಂಗನಾಥನ ನಾಭಿಯಲ್ಲಿ ಬ್ರಹ್ಮ, ಶಿರದಲ್ಲಿ ಶ್ರೀದೇವಿ, ಪಾದದಲ್ಲಿ ಭೂದೇವಿಯ ಚಿತ್ರಣವಿರುವ ಈ ಮೂರ್ತಿ ಸುಂದರವಾಗಿದೆ.

ರಂಗನಾಥ ದೇವಾಲಯಕ್ಕೆ ಹೊಂದಿಕೊಂಡಂತಿರುವ ಗಣಪತಿ ಗುಡಿ ಸಹ ಇದೇ ಕಾಲದ್ದು. ಇದರಲ್ಲಿರುವ ಗಣಪತಿ ವಿಗ್ರಹ 5 ಅಡಿ ಎತ್ತರದ ರಮ್ಯಕಲಾಕೃತಿ. ಮಲ್ಲೇಶ್ವರ ದೇವಾಲಯ ಕೊನೆಯ ಚಾಳುಕ್ಯರ ಕಾಲದ್ದಿದ್ದು ಚಿಕ್ಕದಾದರೂ ಸುಂದರವಾಗಿದೆ. ಈ ದೇವಾಲಯದ ನವರಂಗದ ಒಳಮಾಳಿಗೆ ಸುಂದರವಾದ ಪುಷ್ಪಗಳ ಕೆತ್ತನೆಯಿಂದ ಅಲಂಕೃತವಾಗಿದೆ. ಭೀಮೇಶ್ವರ ಎಂಬ ಹೆಸರಿನ ದೇವಾಲಯದ ಉಲ್ಲೇಖ ಇಲ್ಲಿನ ಶಾಸನವೊಂದರಿಂದ ತಿಳಿದುಬರುತ್ತದೆ. ಆದರೆ ಈ ದೇವಾಲಯ ಇಂದು ಉಳಿದಿಲ್ಲ.

ಈ ಊರಿನಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಮಠಕ್ಕೆ ಸೇರಿದ ವೀರಶೈವ ವಿರಕ್ತರ ಮಠವೊಂದಿದ್ದು ಆ ಮಠದ ಹೆಸರು ಶಾಸನದಲ್ಲಿ ಜ್ವಲಂತ್ಕಂಠ ಮಹಾಂತಪ್ಪ ಮಠ ಎಂದಿದೆ. (ಎಂ.ಆರ್.ಪಿ.)

**ಹೂಗಾರ, ಎಚ್.ಎನ್.:** 1932– . ಪ್ರಸಿದ್ಧ ನಾಟಕಕಾರರು, ನಿರ್ದೇಶಕರು ಹಾಗೂ ನಟರು. 1932 ಮಾರ್ಚ್ 30ರಂದು ಗದಗಿನಲ್ಲಿ ಜನಿಸಿದರು. ಇವರ ಬಾಲ್ಯದ ಹೆಸರು ಹುಚ್ಚಪ್ಪ. ಇವರ ತಂದೆ ನಾಗಪ್ಪ, ತಾತ ಅಂದಾನಪ್ಪ. ಅಜ್ಜ ಮತ್ತು ತಂದೆ ಕರಡೆವಾದನ ಹಾಗೂ ಕರಡೆಮಜಲು ಜನಪದ ಕಲೆಗಳಲ್ಲಿ ನಿಷ್ಣಾತರಾಗಿದ್ದರು. ಇದು ಹೂಗಾರರ ಮೇಲೆ ಗಾಢ ಪ್ರಭಾವ ಬೀರಿತು. ಶಾಲೆಯ ದಿನಗಳಿಂದಲೇ ಏಕಪಾತ್ರಾಭಿನಯ, ನಾಟಕಾಭಿನಯಗಳಲ್ಲಿ ಭಾಗವಹಿಸಿ ಗುರುಗಳ ಮೆಚ್ಚುಗೆ ಗಳಿಸಿದ್ದರು. ಹೂ ಪತ್ರೆಗಳನ್ನು ಮನೆಮನೆಗೆ ಹಂಚುವುದು ಇವರ ಕುಟುಂಬದ ಕಾಯಕ. ಸಣ್ಣ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಕುಟುಂಬದ ಕಾಯಕವನ್ನು ಮುಂದುವರಿಸುವ ಜವಾಬ್ದಾರಿಗೆ ಸಿಲುಕಿ ಕೊಂಡರು. ಹೀಗಿರುವಲ್ಲಿ ಸೂಕ್ಷ್ಮಗ್ರಾಹಿಯಾಗಿದ್ದ ಇವರು ಕುತೂಹಲ ದಿಂದ ಕುಟುಂಬಗಳ ಆಗುಹೋಗುಗಳನ್ನು ಗಮನಿಸುತ್ತಿದ್ದರು. ಬಾಲ್ಯದ ಇಂಥ ಅನುಭವಗಳು ಅನಂತರದ ಕಾಲದಲ್ಲಿ ಇವರ ನಾಟಕ ರಚನೆಗೆ ಸ್ಫೂರ್ತಿ ನೀಡಿದವು. ಇವರ ಬಹುತೇಕ ನಾಟಕಗಳ ವಸ್ತು ಕೌಟುಂಬಿಕ ಚಿತ್ರಗಳು, ನಿಕಟವರ್ತಿಗಳು, ಸಮಾಜದ ಸಮಸ್ಯೆಗಳೇ ಆಗುವಂತಾಯಿತು. ಇವರು ಪ್ರಾಥಮಿಕ ಶಾಲೆಯ ಹಂತದಲ್ಲಿದ್ದಾಗ ಇವರ ಗುರುಗಳಾಗಿದ್ದ ಜಾಡಗೌಡರು ರಚಿಸುತ್ತಿದ್ದ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರು. ಇವರ ನಾಟಕಾಭಿರುಚಿಗೆ ಇದು ಇನ್ನೊಂದು ಪ್ರೇರಣೆಯಾಯಿತು.

ಇವರು 60ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. 1950ರಲ್ಲಿ ರಚನೆಗೊಂಡ ಭಕ್ತಿಜ್ಯೋತಿ ಎಂಬ ನಾಟಕ ಮೈಲಾರಲಿಂಗ ಕ್ಷೇತ್ರದ ಪರಮಭಕ್ತೆಯಾಗಿದ್ದ ನೀಲಮ್ಮ ಎಂಬುವರು ಇವರಿಗೆ ಬಾಲ್ಯದಲ್ಲಿ ತೋರಿದ ಪ್ರೀತಿ, ವಾತ್ಸಲ್ಯ, ಆದರಗಳ ಹಿನ್ನೆಲೆಯಿಂದ ರಚನೆಗೊಂಡದ್ದು. ಇದು ಪ್ರದರ್ಶನಗೊಂಡಾಗ ನಲವಡಿ ಶ್ರೀಕಂಠಶಾಸ್ತ್ರಿಗಳೂ ಸೇರಿದಂತೆ ಅಪಾರ ಜನಮೆಚ್ಚುಗೆ ಗಳಿಸಿತು. ಇದರ ಪರಿಣಾಮವಾಗಿ ಅಣ್ಣಿಗೇರಿಯ ಸಮಾಜವಿಕಾಸ ನಾಟ್ಯಸಂಘ ತಮ್ಮ ಕಂಪೆನಿಗೂ ಸುಂದರನಾಟಕಗಳನ್ನು ಬರೆದುಕೊಡುವಂತೆ ಇವರಿಗೆ ಆಹ್ವಾನ ನೀಡಿತು. ಇದರ ಅಂಗವಾಗಿ ದಸರಾ ಎಂಬ ನಾಟಕವನ್ನು ರಚಿಸಿದರು. ಇದು ವೃತ್ತಿರಂಗಭೂಮಿ ಕಲಾವಿದರು ಅಭಿನಯಿಸಿದ ಹೂಗಾರರ ಮೊದಲ ನಾಟಕ. ಈ ನಾಟಕವನ್ನು ಮೆಚ್ಚಿಕೊಂಡ ಚಿತ್ತರಗಿ ಗಂಗಾಧರಶಾಸ್ತ್ರಿಗಳು ತಮ್ಮ ಕಂಪನಿಗೂ ನಾಟಕ ರಚಿಸಿಕೊಡಬೇಕಾಗಿ ಇವರನ್ನು ಕೋರಿದರು. ಅವರಿಗೆ ದೀಪಾವಳಿ ಎಂಬ ನಾಟಕವನ್ನು ರಚಿಸಿದರು. ಹೀಗೆ ಕಂಪನಿ ನಾಟಕಕಾರರಾಗಿ ಪ್ರಸಿದ್ಧರಾದರು. 1970ರಲ್ಲಿ ಬಸವೇಶ್ವರ ನಾಟ್ಯಸಂಘವನ್ನು ಆರಂಭಿಸಿ ಸು. 30 ವರ್ಷಗಳ ಕಾಲ ಯಶಸ್ವಿಯಾಗಿ ಕೆಲಸ ನಿರ್ವಹಿಸಿದರು. ನಾಟಕಗಳನ್ನು ಬರೆದು, ನಿರ್ದೇಶಿಸಿ, ಅಭಿನಯಿಸಿದರು. ಇವರು ರಚಿಸಿದ ತಾಳ ತಪ್ಪಿದ ಬಾಳು ಎಂಬ ನಾಟಕ, ಪಟ್ಟಣಕ್ಕೆ ಬಂದ ಪತ್ನಿಯರು ಎಂಬ ಚಲನಚಿತ್ರವಾಯಿತು. ಇವರು ಅದರಲ್ಲಿ ಬ್ಯಾಂಕ್ ಮ್ಯಾನೇಜರ್ ಪಾತ್ರದಲ್ಲಿ ನಟಿಸಿದ್ದರು. ಗುಣ ನೋಡಿ ಹೆಣ್ಣು ಕೊಡು ಎಂಬ ಚಿತ್ರದಲ್ಲಿ ಹಾಸ್ಯನಟರಾಗಿ ಕಾರ್ಮಿಕ ಕಳ್ಳನಲ್ಲ ಎಂಬ ಚಿತ್ರದಲ್ಲಿ ಮಾರವಾಡಿಯಾಗಿ, ಗಾನಯೋಗಿ ಪಂಚಾಕ್ಷರಿಯಲ್ಲಿ ನಾಟಕ ಸಂಘದ ಮ್ಯಾನೇಜರ್ ಆಗಿ ನಟಿಸಿದ್ದಾರೆ. ಕಾರಂತ, ಬೇಂದ್ರೆ, ಅ.ನ.ಕೃ, ಕುವೆಂಪು, ಬೀಚಿ ಮುಂತಾದ ಗಣ್ಯರ ಸಾಹಿತ್ಯಕ ಒಡನಾಟದಿಂದ ಸಾಕಷ್ಟು ಬೆಳೆದ ಇವರು ಬಿ.ಆರ್.ಪಂತುಲು ಅವರ ಕಿತ್ತೂರು ಚೆನ್ನಮ್ಮ ಚಿತ್ರಕ್ಕೆ ಸಂಭಾಷಣೆಯನ್ನು ಬರೆದಿದ್ದಾರೆ.

ಬಹುಮುಖ ಪ್ರತಿಭೆಯ ಇವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ರಾಜ್ಯೋತ್ಸವ ಪ್ರಶಸ್ತಿ (1980), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1985), ಪಂಡಿತ ಪುಟ್ಟರಾಜ ಗವಾಯಿ ಪ್ರಶಸ್ತಿ (1996), ಗುಬ್ಬಿವೀರಣ್ಣ ಪ್ರಶಸ್ತಿ ಮುಂತಾದವನ್ನು ಹೆಸರಿಸಬಹುದು. ಕರ್ನಾಟಕ ನಾಟಕ ಅಕಾಡೆಮಿ ಇವರ ಬದುಕು ಸಾಧನೆಗಳನ್ನು ಕುರಿತು ಎಚ್.ಎನ್.ಹೂಗಾರ ಎಂಬ ಗ್ರಂಥವೊಂದನ್ನು ಪ್ರಕಟಿಸಿದೆ (1999). (ಕೆ.ಪಿ.ಜಿ.)

**ಹೂಲಿ:** ಬೆಳಗಾಂವಿ ಜಿಲ್ಲೆ ಸವದತ್ತಿ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಜನಸಂಖ್ಯೆ 6,835. ಹಿಂದೆ ಇದೊಂದು ಅಗ್ರಹಾರ ಮತ್ತು ಜೈನ ಕೇಂದ್ರ ಆಗಿತ್ತೆಂದು ತಿಳಿದುಬರುತ್ತದೆ. ಇಲ್ಲಿ ಅನೇಕ ದೇವಾಲಯ ಗಳಿವೆ. 1181ರ ಪಂಚಲಿಂಗ ದೇವಾಲಯದ ಒಂದು ದಾಖಲೆಯಲ್ಲಿ ಈ ಊರಿಗೆ ಪೂವಳ್ಳಿ, ಪೂಲಿಗ್ರಾಮ, ಪೂಲಿಪುರ, ಪೂಲಿ, ಅಗ್ರಹಾರ, ಮಹಾಗ್ರಹಾರ, ಚೂಡಾಮಣಿ ಪೂಲಿ ಇತ್ಯಾದಿ ಹೆಸರುಗಳ ಉಲ್ಲೇಖವಿದೆ. ಪ್ರತಿ ನೂರು ಜನರ ಕಳಸವಲ್ಲಿಗೇರಿ, ಶಿವಯ್ಯಗೇರಿ ಇತ್ಯಾದಿ ಕೇರಿಗಳಿದ್ದು ಇಲ್ಲಿ ಒಂದು ಸಾವಿರ ಜನ ವಿದ್ವಾಂಸರು ನೆಲೆಸಿದ್ದರೆಂದೂ ತಿಳಿದು ಬರುತ್ತದೆ. ಬಾದಾಮಿ ಚಳುಕ್ಯರ ಸೇಂದ್ರಕ ರವಿಶಕ್ತಿ, ಮಂಗಲೇಶ ಇವರು ಕಿರುವತ್ತಕೆರೆ ಗ್ರಾಮದಲ್ಲಿ ಶಾಂತಿನಾಥ ದೇವಾಲಯವನ್ನು ನಿರ್ಮಿಸಿದ ರೆಂಬುದು ಇಲ್ಲಿ ದೊರೆತ ತಾಮ್ರಪಟಗಳಿಂದ ತಿಳಿದುಬರುತ್ತದೆ. ಇಲ್ಲಿಯ ಚಿಕ್ಕನಂಜೇಶನೆಂಬ ಕವಿ ರಾಘವಾಂಕನನ್ನೂ ಪೂವಲ್ಲಿಯನ್ನೂ ಉಲ್ಲೇಖಿಸಿದ್ದಾನೆ.

ಹೂಲಿ ಕಾಳಾಮುಖ ಪಂಥದ ಕೇಂದ್ರವಾಗಿತ್ತು. ಮದನೇಶ್ವರ ದೇವಾಲಯದಲ್ಲಿ ದೊರೆತ ದಾಖಲೆಗಳು ಕಾಳಾಮುಖರ ಗುರು ಪರಂಪರೆ ಯನ್ನು ತಿಳಿಸುತ್ತ ಪುಲಿದೇವ ಇಲ್ಲಿ ಈ ಪಂಥವನ್ನು ಪ್ರಾರಂಭಿಸಿದ ನೆಂದು, ಆತ ವ್ಯಾಕರಣ, ತರ್ಕ ಮತ್ತು ಶಾಸ್ತ್ರಗಳಲ್ಲಿ ಪಾರಂಗತನಾಗಿದ್ದ ನೆಂದು ತಿಳಿಸುತ್ತವೆ. ಇಲ್ಲಿಯ ದೊಡ್ಡದಾದ ಪಂಚಲಿಂಗೇಶ್ವರ ದೇವಾಲಯ ಗಮನವನ್ನು ಸೆಳೆಯುವಂತಿದೆ. 1181ರಲ್ಲಿ ಬಿಜ್ಜಳನ ಮಗನಾದ ಆಹವಮಲ್ಲದೇವ ಈ ದೇವಾಲಯವನ್ನು ಕಟ್ಟಿಸಿದ್ದು, ತಿಗುಳೇಶ್ವರ ದೇವಾಲಯಕ್ಕೆ ದತ್ತಿಗಳನ್ನು ಬಿಟ್ಟ ಬಗ್ಗೆ ಮತ್ತು ಪುರಭವನವನ್ನು ಜೀರ್ಣೋದ್ಧಾರ ಮಾಡಿದ ಬಗ್ಗೆ ಇಲ್ಲಿನ ನಾಲ್ಕು ಶಾಸನಗಳಿಂದ ತಿಳಿದುಬರುತ್ತದೆ. ತಿಗುಳೇಶ್ವರ ದೇವಾಲಯ ತ್ರಿಕೂಟಾಚಲವಾಗಿದ್ದು, ಹೊರಪೌಳಿಯಲ್ಲಿ ದೊಡ್ಡ ಮುಖಮಂಟಪವಿದೆ. ಮುಖ್ಯದೇವಾಲಯದ ಎರಡು ಬದಿಗಳಲ್ಲೂ ಎರಡು ಗರ್ಭಗೃಹಗಳಿವೆ. ಈ ದೇವಾಲಯ ಮೂಲತಃ ಜೈನ ಬಸದಿ ಯಾಗಿದ್ದುದಕ್ಕೆ ಕುರುಹುಗಳು ದೊರೆಯುತ್ತವೆ. ಹೊರ ಮುಖಮಂಟಪದಲ್ಲಿ ಎರಡು ಕನ್ನಡ ಶಾಸನಗಳಿವೆ. ಗರ್ಭಗೃಹದ ಮೇಲಿನ ಶಿಖರಗಳು ಕದಂಬನಾಗರ ಶೈಲಿಯಲ್ಲಿವೆ.

ಈ ಊರಿನಲ್ಲಿ ಅಂಧಕೇಶ್ವರ, ತಾರಕೇಶ್ವರ, ಬನಶಂಕರಿ, ಮದನೇಶ್ವರ, ದಕ್ಷಿಣಕಾಶಿ ವಿಶ್ವೇಶ್ವರ, ರಾಮೇಶ್ವರ, ನಾರಾಯಣ, ವೀರಭದ್ರ, ಕಲ್ಮೇಶ್ವರ, ಕೆರೆ ಸಿದ್ದೇಶ್ವರ ಮತ್ತು ಅಗಸ್ತ್ಯೇಶ್ವರ ದೇವಾಲಯಗಳಿವೆ. ನಾಗರಬಾವಿಯ ಹತ್ತಿರವಿರುವ ಅಂಧಕೇಶ್ವರ ದೇವಾಲಯವು ತರುವಾಯದ ಚಾಳುಕ್ಯರ ಕಾಲದ ದ್ವಿಕೂಟಾಚಲವಾಗಿದೆ. ಇಲ್ಲಿ ನಾಲ್ಕು ಶಾಸನಗಳಿದ್ದು ಒಂದು ಚಾಳುಕ್ಯ ತ್ರಿಭುವನ ಮಲ್ಲನ, ಇನ್ನೊಂದು ಕಳಚುರಿ ತ್ರಿಭುವನ ಮಲ್ಲನ ಮತ್ತು ಇನ್ನೆರಡು ಚಾಳುಕ್ಯ ಸೋಮೇಶ್ವರನ ಕಾಲಕ್ಕೆ ಸೇರಿದವುಗಳಾಗಿವೆ. ಈ ದೇವಾಲಯದ ಹಿಂಭಾಗದಲ್ಲಿ ತಾರಕೇಶ್ವರ ದೇವಾಲಯವಿದೆ. ಇಲ್ಲಿಯ ಮೂರು ವೀರಗಲ್ಲುಗಳಿದ್ದು ಒಂದು 907 ರಷ್ಟು ಪ್ರಾಚೀನವಾದುದು. ಒಂದು ವೀರಗಲ್ಲು ಚಾಳುಕ್ಯ ತೈಲಪನ ಕಾಲದ ಮಹಾಮಂಡಳೇಶ್ವರ ಶೋಭನರಸನ ಅಥವಾ ಶೋಭನಯ್ಯನ ವಿಷಯ ಪ್ರಸ್ತಾಪಿಸುತ್ತದೆ. ಇವನು ಆದಿ ಹೊಯ್ಸಳ ರಾಜರಲ್ಲಿ ಸಂಧಿವಿಗ್ರಹಿಯಾಗಿದ್ದುದು ಚಿಕ್ಕಮಗಳೂರುಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕೆಸವೊಳಲು ಶಾಸನದಿಂದ ದೃಢಪಟ್ಟಿದೆ. ಇನ್ನೂ ಸ್ವಲ್ಪ ಆಚೆ ವಿಜಯನಗರ ಕಾಲದ ವಿಗ್ರಹವನ್ನುಳ್ಳ ಬನಶಂಕರಿ ದೇವಾಲಯವಿದೆ. ಮದನೇಶ್ವರ ದೇವಾಲಯ (ಕರಿಗುಡಿ) ಮುಖಮಂಟಪ, ನವರಂಗ, ಅರ್ಧಮಂಟಪ ಮತ್ತು ಗರ್ಭಗೃಹಗಳನ್ನೊಳ ಗೊಂಡಿದೆ. ಇಲ್ಲಿನ ಕೆರೆಯ ದಂಡೆಯಲ್ಲಿರುವ ದಕ್ಷಿಣ ಕಾಶಿ ವಿಶ್ವೇಶ್ವರ ದೇವಾಲಯ ತರುವಾಯದ ಚಾಳುಕ್ಯರ ಕಾಲಕ್ಕೆ ಸೇರಿದ್ದು. ಕೆರೆ ದಂಡೆಯ ಪೂರ್ವಕ್ಕೆ ಅಗಸ್ತ್ಯೇಶ್ವರ ಗುಡಿ ಇದ್ದು ಇಲ್ಲಿ ದೇವದೇವತೆಗಳ ಮೂರ್ತಿಗ ಳನ್ನು ಕಂಡರಿಸಲಾಗಿದೆ. ಸಮೀಪದ ವೀರಭದ್ರ ದೇವಾಲಯದಲ್ಲಿ ಹನ್ನೊಂದನೆಯ ಶತಮಾನದ ಮೂರು ಶಾಸನಗಳಿವೆ. ಈ ಸ್ಥಳದಲ್ಲಿ ಆರು ವೀರಶೈವ ಮಠಗಳಿವೆ. ಮೂರು ಪುಣ್ಯ ತೀರ್ಥಗಳಿವೆ. ಈ ಊರಿನಲ್ಲಿ 1674ರಲ್ಲಿ ಶಿವಾಜಿ ಕೋಟೆ ಕಟ್ಟಿಸಿದನೆಂದು ಹೇಳಲಾಗಿದೆ. (ಎಂ.ಬಿ.ಎಚ್.)

**ಹೆಗಡೆ, ಎಲ್.ಆರ್.**: 1923– . ಕನ್ನಡದ ಹಿರಿಯ ಜಾನಪದ ವಿದ್ವಾಂಸರಲ್ಲೊಬ್ಬರು. ಲಕ್ಷ್ಮೀನಾರಾಯಣ ರಾಮಕೃಷ್ಣ ಹೆಗಡೆ ಇವರ ಪೂರ್ಣ ಹೆಸರು. ಉತ್ತರ ಕನ್ನಡ ಜಿಲ್ಲೆ ಕುಮಟ ತಾಲ್ಲೂಕಿನ ಹೊಲನ ಗದ್ದೆ ಇವರ ಸ್ಥಳ. 1923 ಜನವರಿ 2ರಂದು ಜನಿಸಿದರು. ರಂ.ಶ್ರೀ. ಮುಗಳಿ, ವಿ.ಕೃ. ಗೋಕಾಕರಂತಹ ಹಿರಿಯ ವಿದ್ವಾಂಸರ ಶಿಷ್ಯರಾಗಿ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಓದಿ ಪದವಿ ಪಡೆದರು. ಅನಂತರ ಬಿ.ಎ. ಮುಗಿಸಿ ಕೆಲಕಾಲ ಪ್ರೌಢಶಾಲೆಯ ಅಧ್ಯಾಪಕರಾಗಿದ್ದರು. 1950ರಲ್ಲಿ ಪುಣೆ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದು ಕುಮಟದ ಕೆನರಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ 27 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿ ಸಿದ್ಧಾಪುರದಲ್ಲಿ ನೆಲೆಸಿದ್ದಾರೆ. ಇವರು ಕುಮಾರ ವ್ಯಾಸನ ಪಾತ್ರಸೃಷ್ಟಿ ಎಂಬ ವಿಷಯ ಕುರಿತು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ದೊರೆತಿದೆ.

ಇವರಿಗೆ ಜನಪದ ಸಾಹಿತ್ಯದ ಒಲವು ಮೂಡಿ ಪ್ರಾಥಮಿಕ ಶಾಲೆಯಲ್ಲಿ ಓದುವಾಗಲೇ ಸಂಗ್ರಹ ಕಾರ್ಯ ಪ್ರಾರಂಭಿಸಿದ್ದರು. ಅನಂತರ ಕಾಲೇಜಿನಲ್ಲಿ ಉಪನ್ಯಾಸಕರಾದ ಮೇಲೆ ವೈಜ್ಞಾನಿಕವಾದ ರೀತಿಯಲ್ಲಿ ಸಂಗ್ರಹಕಾರ್ಯ ಮುಂದುವರಿಸಿದರು. ಏಕಾಂಗಿಯಾಗಿ ಉತ್ತರ ಕನ್ನಡ ಜಿಲ್ಲೆಯ ದುರ್ಗಮ ವಾದ ಹಳ್ಳಿಗಳಲ್ಲಿ ತಿರುಗಾಡಿ ಕ್ಷೇತ್ರಕಾರ್ಯ ನಡೆಸಿ ಜನಪದಗೀತೆ, ಕಥನಗೀತೆ, ಕಲೆ, ಗಾದೆ, ಒಗಟುಗಳನ್ನು ಸಂಗ್ರಹಿಸಿದರು. ತಿಮ್ಮಕ್ಕನ ಪದಗಳು, ಪರಮೇಶ್ವರಿಯ ಪದಗಳು– ಇವು ಇವರ ಗಮನಾರ್ಹ ಕೃತಿಗಳು. ಜಾನಪದದ ವಿವಿಧ ಶಿಸ್ತುಗಳನ್ನು ಕುರಿತು ಆಳವಾದ ಅಧ್ಯಯನ ಮಾಡಿ 70 ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಜನಪದ ಜನವೈದ್ಯ– ಪಶುವೈದ್ಯಕ್ಕೆ ಸಂಬಂಧಿಸಿದ ಅಪಾರ ಮಾಹಿತಿಗಳನ್ನು ಕಲೆಹಾಕಿ ಪ್ರಕಟಿಸಿದ್ದು ಇವರ ಇನ್ನೊಂದು ದೊಡ್ಡ ಕೊಡುಗೆ. ಹಾಲಕ್ಕಿ, ಗೊಂಡ, ಮುಕ್ರಿ, ಅಗೇರ, ಕೊಮಾರಪಂತ, ಸಿದ್ದಿ, ನಾಮಧಾರಿ, ಹವ್ಯಕ ಮುಂತಾದ ಹಲವು ಉಪಸಂಸ್ಕೃತಿಗಳಲ್ಲಿ ಪ್ರಚಲಿತವಿರುವ ಆಚರಣೆ, ನಂಬಿಕೆ, ಸಂಪ್ರದಾಯ, ಆರಾಧನೆ, ಹಬ್ಬ–ಹರಿದಿನ ಮುಂತಾದವುಗಳ ಅಧ್ಯಯನ ಹಾಗೂ ಆ ಸಂದರ್ಭಗಳಲ್ಲಿ ಬಳಕೆಯಾಗುವ ಹಾಡುಗಳನ್ನು ಇವರು ಸಂಗ್ರಹಿಸಿ ಪ್ರಕಟಿಸಿದ್ದಾರೆ.



ಇವರು ಸೃಜನಶೀಲ ಲೇಖಕರೂ ವಿಮರ್ಶಕರೂ ಆಗಿದ್ದಾರೆ. ಕವಿತೆ, ಕತೆ, ನಾಟಕ, ವಿಮರ್ಶೆ, ಅನುವಾದ, ಲೇಖನ ಮುಂತಾದವುಗಳನ್ನು ಬರೆದಿದ್ದಾರೆ. ಹೋಮಿಯೋ ಪತಿ ಪದ್ಧತಿಯ ವೈದ್ಯರೂ ಹೌದು. ಹೋಮಿಯೋಪತಿ ಕುರಿತು ಇವರು ಬರೆದಿರುವ ಗ್ರಂಥ ಪ್ರಶಂಸೆ–ಪುರಸ್ಕಾರ ಗಳಿಗೆ ಪಾತ್ರವಾಗಿದೆ. ಜಾನ ಪದ ಕ್ಷೇತ್ರದ ಕೊಡುಗೆಗಾಗಿ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಶಿರಸಿಯ ಧರ್ಮ ಸಮ್ಮೇಳನದಲ್ಲಿ ಜನಪದ ಸಾಹಿತ್ಯ ರತ್ನ ಎಂಬ ಬಿರುದು ಹಾಗೂ ಚಿನ್ನದ ಪದಕದ ಪುರಸ್ಕಾರ, ಗೌರೀಶ ಕಾಯ್ಕಿಣಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ (2001) ದೊರಕಿವೆ. ಇವರ ಎರಡು ಕೃತಿಗಳಿಗೆ ಜಾನಪದ ಅಕಾಡೆಮಿ ಪುಸ್ತಕ ಬಹುಮಾನ ದೊರೆತಿದೆ. ಉಡುಪಿಯ ರಂಗಕಲೆಗಳ ಅಧ್ಯಯನ ಕೇಂದ್ರ ಜನಪದ ಕಲಾ ವಿಭೂಷಣ ಎಂಬ ಬಿರುದು ನೀಡಿ ಸನ್ಮಾನಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಇವರ ಜಾನಪದ ಮತ್ತು ಗಿರಿಜನರ ಕಲೆಗಳು ಎಂಬ ಕೃತಿಯನ್ನು ಪ್ರಕಟಿಸಿದೆ. ಇವರ ಅಪ್ರಕಟಿತ ಸಾಹಿತ್ಯ ರಾಶಿಯು ವಿಪುಲವಾಗಿದ್ದು ಪ್ರಕಟವಾಗಬೇಕಿದೆ. ಇವರು ಸಂಗ್ರಹಿಸಿದ ಕೆಲವು ಜನಪದ ಕತೆಗಳು ರಷ್ಯನ್, ಜರ್ಮನ್, ಇಂಗ್ಲಿಷ್ ಮುಂತಾದ ಭಾಷೆಗಳಿಗೂ ಅನುವಾದಗೊಂಡಿವೆ. ಇವರು ಜಾನಪದ ಅಕಾಡೆಮಿಯ ಸದಸ್ಯರೂ ಜಾನಪದ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. (ಆರ್.ಪಿ.ಎಚ್.)

**ಹೆಗ್ಗಡೆ, ಕೆ.ಎಸ್.**: 1909– . ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು; ಲೋಕಸಭೆಯ ಅಧ್ಯಕ್ಷರು(1977–80).

ಇವರು 1909 ಜೂನ್ 11ರಂದು ದಕ್ಷಿಣ ಕನ್ನಡ ಜಿಲ್ಲೆಯ ಕವೂರಿನಲ್ಲಿ ಜನಿಸಿದರು. ತಂದೆ ಸುಬ್ಬಯ್ಯ. ಹೆಗಡೆಯವರ ಉನ್ನತ ಶಿಕ್ಷಣ ಮದರಾಸಿನಲ್ಲಿ ನಡೆಯಿತು. ಅಲ್ಲಿ ಇವರು ಎಂ.ಎ.,ಬಿ.ಎಲ್. ಪದವಿಗಳನ್ನು ಪಡೆದರು. 1935ರಲ್ಲಿ ವಕೀಲವೃತ್ತಿ ಆರಂಭಿಸಿದರು. ದೆಹಲಿಯಲ್ಲಿ ವಕೀಲವೃತ್ತಿ ಹಿಡಿದ ಇವರಿಗೆ ಇತರ ಅವಕಾಶಗಳೂ ತೆರೆದುಕೊಂಡವು. 1947ರಿಂದ ಸರ್ಕಾರಿ ಪ್ಲೀಡರ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1952ರಲ್ಲಿ ದೆಹಲಿಯ ಸಂಸತ್ ಸದಸ್ಯರಾಗಿ ಚುನಾಯಿತರಾದರು. ಆಗ ಇವರು ವಕೀಲ ವೃತ್ತಿಯೊಂದಿಗೆ ಸಂಸದೀಯ ರಾಗಿಯೂ ವಿವಿಧ ಕಾರ್ಯಭಾರ ನಿರ್ವಹಿಸಿದರು. ಸಾರ್ವಜನಿಕ ಲೆಕ್ಕಪತ್ರ ಸಮಿತಿ, ರೈಲ್ವೆ ಭ್ರಷ್ಟಾಚಾರ ವಿಚಾರಣಾ ಸಮಿತಿ ಮುಂತಾದವುಗಳಲ್ಲಿ ಸೇವೆಸಲ್ಲಿಸಿ ತಮ್ಮ ಪ್ರಬುದ್ಧ ಕಾನೂನು ಜ್ಞಾನವನ್ನು ಧಾರೆ ಎರೆದರು. ಇವರು ವಿಶ್ವಸಂಸ್ಥೆಯ ಸಾಮಾನ್ಯ ಮಹಾಸಭೆಗೆ ಭಾರತದ ಒಬ್ಬ ಪರ್ಯಾಯ ಸದಸ್ಯರಾಗಿ ನಿಯುಕ್ತರಾಗಿದ್ದರು (1954).

1957ರಲ್ಲಿ ಕರ್ನಾಟಕದ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಕವಾಗುವ ಮೂಲಕ ನ್ಯಾಯಾಂಗ ಸೇವೆಗೆ ಪ್ರವೇಶಿಸಿದರು. 1966ರ ವರೆಗೂ ಈ ಹುದ್ದೆಯನ್ನು ನಿರ್ವಹಿಸಿ ಯಶಸ್ವಿ ನ್ಯಾಯಮೂರ್ತಿ ಎನಿಸಿಕೊಂಡರು. ಇವರ ಅರ್ಹತೆ ಇವರಿಗೆ ದೆಹಲಿಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸ್ಥಾನವನ್ನು ಅಲಂಕರಿಸಲು ನೆರವಾಯಿತು (1966–67). ಅನಂತರ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಕಗೊಂಡರು.

ನ್ಯಾಯಕ್ಷೇತ್ರದಲ್ಲಿ ನುರಿತ ನ್ಯಾಯವಾದಿಯಾಗಿ ಮತ್ತು ನ್ಯಾಯಮೂರ್ತಿಯಾಗಿ ಅಪಾರ ಅನುಭವ ಗಳಿಸಿದ ಇವರು ಸೇವಾ ಜ್ಯೇಷ್ಠತೆಯಿದ್ದರೂ ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿಯಾಗಿ ನೇಮಕವಾಗುವ ಅವಕಾಶ ಕೈತಪ್ಪಿತು. ಆಗ ಇವರು ತಮ್ಮ ಸ್ಥಾನವನ್ನು ತೆರವುಗೊಳಿಸಿ ತತ್ತ್ವಬದ್ಧರೆಂಬ ಕೀರ್ತಿಗೆ ಭಾಜನರಾದರು. ಈ ಸನ್ನಿವೇಶದಲ್ಲಿ 1977ರಲ್ಲಿ ಲೋಕಸಭೆಗೆ ಜನಸಂಘದ ವತಿಯಿಂದ ಬೆಂಗಳೂರು ಕ್ಷೇತ್ರದಿಂದ ಸ್ಪರ್ಧಿಸಿದರು. ಇವರ ಎದುರಾಳಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ನವರು. ತುರ್ತುಪರಿಸ್ಥಿತಿಯ ಘೋಷಣೆಯಿಂದ ಅಸಮಾಧಾನಗೊಂಡಿದ್ದ ಬೆಂಗಳೂರಿನ ವಿದ್ಯಾವಂತ ಮತದಾರವರ್ಗ ಹೆಗ್ಗಡೆಯವರನ್ನು ಲೋಕಸಭೆಗೆ ಚುನಾಯಿಸುವ ಮೂಲಕ ತಕ್ಕ ಪ್ರತಿಭಟನೆ ತೋರಿಸಿತು. ಎತ್ತರದ ನಿಲುವಿನ, ಗಂಭೀರ ವ್ಯಕ್ತಿತ್ವದ, ತೂಕದ ಮಾತಿನ ಹೆಗ್ಗಡೆಯವರನ್ನು ಲೋಕಸಭೆಯ ಅಧ್ಯಕ್ಷ ಸ್ಥಾನಕ್ಕೆ ಆರಿಸಲಾಯಿತು. ಈ ಸ್ಥಾನವನ್ನು ಇವರು 1977 ಜುಲೈ 21ರಿಂದ 1980 ಜನವರಿ 21ರ ವರೆಗೂ ಅಲಂಕರಿಸಿದ್ದರು. ಇವರು ತಮ್ಮ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿ ಸಂಸದೀಯ ನಡವಳಿಕೆಗೆ ಮಾದರಿ ಹಾಕಿಕೊಟ್ಟರು. ರಾಷ್ಟ್ರಪತಿಯ ಸ್ಥಾನಕ್ಕೂ ಇವರ ಹೆಸರು ಪ್ರಸ್ತಾಪವಾದದ್ದು ಇವರ ವ್ಯಕ್ತಿತ್ವದ ಘನತೆಗೆ ಸಾಕ್ಷಿಯಾಗಿದೆ.

**(ಡಿ.ಎಸ್.ಜೆ.)**

**ಹೆಗ್ಗಡದೇವನಕೋಟೆ:** ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಜಿಲ್ಲೆಯ ದಕ್ಷಿಣಕ್ಕಿರುವ ಈ ತಾಲ್ಲೂಕನ್ನು ಉತ್ತರದಲ್ಲಿ ಹುಣಸೂರು, ಈಶಾನ್ಯದಲ್ಲಿ ಮೈಸೂರು ಪೂರ್ವದಲ್ಲಿ ನಂಜನಗೂಡು, ಆಗ್ನೇಯದಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕುಗಳೂ ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕೂ ಮತ್ತು ಕೇರಳ ರಾಜ್ಯವೂ ಸುತ್ತುವರಿದಿವೆ. ಹಂಪಾಪುರ, ಹೆಗ್ಗಡದೇವನಕೋಟೆ, ಸರಗೂರು, ಕಂದಲಿಕೆ ಮತ್ತು ಅಂತರಸಂತೆ ಹೋಬಳಿಗಳು. ಎರಡು ಪಟ್ಟಣಗಳೂ 281 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 1,606.3 ಚ.ಕಿಮೀ. ಜನಸಂಖ್ಯೆ 2,45,930. ಇದರಲ್ಲಿ 2,33,885 ಮಂದಿ ಗ್ರಾಮವಾಸಿಗಳು, 12,045 ಮಂದಿ ಪಟ್ಟಣವಾಸಿಗಳು.

ಈ ತಾಲ್ಲೂಕಿನಲ್ಲಿ ಪಶ್ಚಿಮಘಟ್ಟ ಶ್ರೇಣಿಯಿದ್ದು ತಾಲ್ಲೂಕಿನ ಪೂರ್ವ ಭಾಗವೆಲ್ಲ ಈ ಘಟ್ಟಶ್ರೇಣಿಯ ನೆರಳಿನಲ್ಲಿದೆ ಎನ್ನಬಹುದು. ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಅರಣ್ಯಗಳಿವೆ. ರಕ್ಷಿತ ಅರಣ್ಯ ಪ್ರದೇಶಗಳಿದ್ದು ಆನೆ, ಹುಲಿ, ಕಾಡುಕೋಣ, ಜಿಂಕೆ ಮುಂತಾದ ಕಾಡುಪ್ರಾಣಿಗಳೂ ಬೆಲೆಬಾಳುವ ಮರಗಳೂ ಈ ಕಾಡಿನಲ್ಲಿವೆ. ಬೆಟ್ಟಗುಡ್ಡಗಳಿಂದ ಕೂಡಿದ ಈ ತಾಲ್ಲೂಕಿನ ಮುಖ್ಯನದಿ ಕಪಿಲಾ. ಈ ನದಿ ತಾಲ್ಲೂಕಿನ ನೈಋತ್ಯದಲ್ಲಿ ಮೊದಲು ಕೇರಳ ರಾಜ್ಯವನ್ನು ಬೇರ್ಪಡಿಸುವ ಗಡಿಯಾಗಿ ಸ್ವಲ್ಪ ದೂರ ಹರಿದು ಅನಂತರ ಬೇಗೂರು ಅರಣ್ಯ ಪ್ರದೇಶದ ಪಶ್ಚಿಮದಲ್ಲಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮುಂದೆ ಮೇಲುಕೋಟೆ ಗ್ರಾಮದವರೆಗೂ ಉತ್ತರಾಭಿಮುಖವಾಗಿ ಹರಿಯುವುದು. ಅಲ್ಲಿ ಬರಲಹೊಳೆಯನ್ನು ಕೂಡಿಕೊಂಡು ಕನಕನಹಳ್ಳಿವರೆಗೂ ಪೂರ್ವಾಭಿಮುಖವಾಗಿ ಪ್ರವಹಿಸುವುದು. ಅಲ್ಲಿಂದ ಉತ್ತರಕ್ಕೆ ಏರಿ ಹೊನ್ನೂರು ಕುಪ್ಪೆಯಿಂದ ದಕ್ಷಿಣಾಭಿಮುಖವಾಗಿ ಮತ್ತೆ ಉತ್ತರಾಭಿಮುಖವಾಗಿ ತಿರುಗಿ ಜಿಯರ ಗ್ರಾಮದವರೆಗೆ ಹರಿದು ಅಲ್ಲಿಂದ ಅಂಕುಡೊಂಕುಗಳೊಡನೆ ಸರಗೂರುವರೆಗೆ ಹರಿಯುವುದು. ಮತ್ತೆ ಹೆಗ್ಗಡದೇವನಕೋಟೆ ಹೋಬಳಿಯ ಮಟಕೆರೆ ವರೆಗೂ ಉತ್ತರಾಭಿಮುಖವಾಗಿ ಹರಿದು ಅನಂತರ ಪೂರ್ವಾಭಿಮುಖವಾಗಿ ನಂಜನಗೂಡು ತಾಲ್ಲೂಕನ್ನು ಪ್ರವೇಶಿಸುವುದು. ಇಲ್ಲಿ ನದಿ ನಂಜನಗೂಡು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ಗಡಿಯಾಗಿ ಸ್ವಲ್ಪದೂರ ಹರಿಯುವುದು. ಮಟಕೆರೆ ಬಳಿ ಕಪಿಲಾ ನದಿಗೆ ಸೇರುವ ತಾರಕಾ ನದಿ ತಾಲ್ಲೂಕಿನ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುವುದು. ಇವಲ್ಲದೆ ತಾಲ್ಲೂಕಿನಲ್ಲಿ ನುಗುಹೊಳೆ, ಹೆಬ್ಬಳ್ಳ, ಮಾವಿನಹಳ್ಳ, ಬರಲಹೊಳೆ, ಸುತನಳ್ಳ, ಸಾರ್ತಿಹೊಳೆ ಮುಂತಾದವು ಇವೆ. ಇವುಗಳಲ್ಲಿ ಸುತನಳ್ಳ, ಬರಲಹೊಳೆ, ವಡ್ಡಳ್ಳಿಹೊಳೆ ನೇರವಾಗಿ ಕಪಿಲಾನದಿಯನ್ನು ಸೇರಿದರೆ ಉಳಿದವುಗಳನ್ನು ನುಗು ಮತ್ತು ತಾರಕಾ ಕೂಡಿಸಿಕೊಂಡು ಕಪಿಲಾ ನದಿಯನ್ನು ಸೇರುವುವು. ತಾಲ್ಲೂಕಿನ ನೀರಾವರಿ ಯೋಜನೆಗಳಲ್ಲಿ ನುಗು ಜಲಾಶಯ ಒಂದು. ಬೀರವಾಳದ ಬಳಿ 2,020′ ಉದ್ದ 134′ ಎತ್ತರದ ಕಲ್ಲುಗಾರೆಯ ಕಟ್ಟೆಯನ್ನು ನುಗು ಹೊಳೆಗೆ ಅಡ್ಡಲಾಗಿ ಕಟ್ಟಿ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಹಾಗೆ ಇಲ್ಲಿನ ಹೆಬ್ಬಳ್ಳಕ್ಕೆ 2,830′ ಉದ್ದ 64′ ಎತ್ತರದ ಹೆಬ್ಬಳ್ಳಕಟ್ಟೆ ಕಟ್ಟಿದೆ. ಈ ತಾಲ್ಲೂಕಿನ ದೊಡ್ಡದಾದ ಕಪಿಲಾ ಯೋಜನೆ ಪ್ರಕಾರ ಈ ತಾಲ್ಲೂಕಿನ ಬಿದರಹಳ್ಳಿ ಬಳಿ ಕಪಿಲಾ ನದಿಗೆ 8,965′ ಉದ್ದ 90′ ಎತ್ತರ ಇರುವ ಕಟ್ಟೆ ಕಟ್ಟಲಾಗಿದ್ದು ಇದರಿಂದ ಮೈಸೂರು–ಮಂಡ್ಯ ಜಿಲ್ಲಾ ನೀರಾವರಿಗೆ ಅನುಕೂಲವಾಗಿದೆ. ಇದೇ ರೀತಿ ತಾರಕಾ ಯೋಜನೆಯಂತೆ ತಾರಕಾ ನದಿಗೆ 3,850′ ಉದ್ದ 100′ ಎತ್ತರದ ಕಲ್ಲುಗಾರೆಯ ಕಟ್ಟೆ ಕಟ್ಟಲಾಗಿದೆ. ತಂಪಾದ ಹವೆಯುಳ್ಳ

ಮಾದೇಶ್ವರ ದೇವಾಲಯ, ಮಾದಾಪುರ, ಹೆಗ್ಗಡದೇವನಕೋಟೆ

ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 904 ಮಿಮೀ. ವಾಸ್ತವಿಕವಾಗಿ 1049.7 ಮಿಮಿ ಮಳೆ ಆಗಿದೆ (2000).

ತಾಲ್ಲೂಕಿನಲ್ಲಿ ಮರಳು ಮಿಶ್ರಿತ ಕೆಂಪುಮಣ್ಣು ಪ್ರದೇಶ ಹೆಚ್ಚು. ನಾನಾ ಜಲ ಮೂಲಗಳಿಂದ ಒಟ್ಟು ನೀರಾವರಿಯಾದ ಪ್ರದೇಶ 10,127 ಹೆ.ಗಳು. ಬಿತ್ತನೆಯಾದ ಒಟ್ಟು ಪ್ರದೇಶ 75,195 ಹೆ.ಗಳು (2000). ರಾಗಿ, ಬತ್ತ, ನೆಲಗಡಲೆ, ಜೋಳ, ತಂಬಾಕು, ಹತ್ತಿ, ಮೆಣಸಿನಕಾಯಿ, ದ್ವಿದಳಧಾನ್ಯ ಗಳನ್ನೂ ಬೆಳೆಯುತ್ತಾರೆ. ಇತ್ತೀಚೆಗೆ ನೀರಾವರಿ ಪ್ರದೇಶ ಹೆಚ್ಚುತ್ತಿದ್ದು ಇತರ ಬೆಳೆಗಳನ್ನೂ ಬೆಳೆಯುತ್ತಿದ್ದಾರೆ. ಅರಣ್ಯೋತ್ಪಾದನೆ ಅವಲಂಬಿತ ಕೆಲವು ಗೃಹ ಕೈಗಾರಿಕೆಗಳಿವೆ. ಪಶುಪಾಲನೆ, ಮತ್ಸ್ಯೋದ್ಯಮ ಪ್ರಗತಿಯಲ್ಲಿವೆ. ಕೃಷಿ ತರಬೇತಿ ಶಾಲೆ, ಪ್ರೌಢಶಾಲೆ ಮತ್ತು ಜೂನಿಯರ್ ಕಾಲೇಜುಗಳಿವೆ. ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಹೆದ್ದಾರಿಗಳಿವೆ. ತಾಲ್ಲೂಕಿನ ಮತ್ತು ಅದರ ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ.

ಹೆಗ್ಗಡದೇವನಕೋಟೆಯ ದಕ್ಷಿಣದಲ್ಲಿ, ಸರಗೂರಿನ ಪಶ್ಚಿಮಕ್ಕೆ 11 ಕಿಮೀ ದೂರದಲ್ಲಿರುವ ಕಿತ್ತೂರು ಕಪಿಲಾ ನದಿಯ ಬಲದಂಡೆಯ ಮೇಲಿದೆ. ಇದು ಪುನ್ನಾಡ ದೊರೆಗಳ ರಾಜಧಾನಿಯಾಗಿತ್ತೆಂದೂ ಇಲ್ಲಿಯ ದೊರೆ ಸ್ಕಂದವರ್ಮನ ಮಗಳನ್ನು ಗಂಗದೊರೆ ಅವಿನೀತ ಮದುವೆಯಾದನೆಂದೂ ತಿಳಿದುಬರುವುದು. ಇಲ್ಲಿನ ಹನ್ನೊಂದನೆಯ ಶತಮಾನದ ಒಂದು ಶಾಸನ ದಲ್ಲಿ ಇದನ್ನು ರಾಜವಾಸಸ್ಥಾನ, ಕೀರ್ತಿಪುರ ಪಟ್ಟಣ ಎಂದು ಮುಂತಾಗಿ ಕರೆಯಲಾಗಿದೆ. ಸರಗೂರಿನ ನೈಋತ್ಯಕ್ಕೆ 11 ಕಿಮೀ ದೂರದಲ್ಲಿ ಕಪಿಲಾ ನದಿಯ ಬಲದಂಡೆಯ ಮೇಲಿರುವ ಮಳಲಿ ಗ್ರಾಮದಲ್ಲಿ ಎರಡು ಜೈನ ಬಸದಿಗಳಿವೆ. ತಾಲ್ಲೂಕಿನ ಪಶ್ಚಿಮದ ಎಲ್ಲೆಯಲ್ಲಿ ವ್ಯಾಪಿಸಿರುವ ಕಾಕನ ಕೋಟೆ ಕಾಡು ಖೆಡ್ಡ **(ನೋಡಿ)** ಕಾರ್ಯಕ್ರಮಕ್ಕೆ ಹೆಸರಾದದ್ದು.

ಹೆಗ್ಗಡದೇವನಕೋಟೆ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಮೈಸೂರಿಗೆ ನೈಋತ್ಯದಲ್ಲಿ 52 ಕಿಮೀ ದೂರದಲ್ಲಿದೆ. ಜನಸಂಖ್ಯೆ 12,045. ಅರಣ್ಯೋತ್ಪನ್ನ ವಸ್ತುಗಳಿಗೆ ಸಂಬಂಧಿಸಿದ ಗೃಹ ಕೈಗಾರಿಕೆಗಳಿರುವ ಈ ಪಟ್ಟಣ ತಾರಕಾ ನದಿಯ ಎಡದಂಡೆಯ ಮೇಲಿದೆ. ಪಟ್ಟಣದಲ್ಲಿ ಎಲ್ಲ ನಾಗರಿಕ ಸೌಲಭ್ಯಗಳಿವೆ. ಜೂನಿಯರ್ ಕಾಲೇಜು ಇದೆ. ಮೈಸೂರು–ಮಾನಂದವಾಡಿ ರಸ್ತೆ, ಹುಣಸೂರು–ಬೇಗೂರು ರಸ್ತೆಗಳು ಈ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುತ್ತವೆ. ಇವುಗಳ ಜೊತೆಗೆ ನೆರೆಹೊರೆಯ ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ. ಪಟ್ಟಣ ಪೌರಸಭಾ ಆಡಳಿತಕ್ಕೆ ಸೇರಿದೆ. **(ಡಿ.ಸಿ.ಜಿ.;ಪಿ.ಜಿ.)**

**ಹೆಗ್ಗಡೆಗಳು:** ವಿಜಯನಗರ ಹಾಗೂ ಅನಂತರದ ಕಾಲದಲ್ಲಿ ತುಳು ನಾಡಿನ ಹಲವೆಡೆ ಸಣ್ಣಪುಟ್ಟ ರಾಜ್ಯಗಳನ್ನು ಆಳುತ್ತಿದ್ದವರು.

ಹೆಗ್ಗಡೆಗಳು ಸಾಲೆ ಬಳಿಗೆ (ವಂಶ) ಸೇರಿದವರು, ಹನುಮಧ್ವಜಾಂಕಿತರು, ಶೈವ, ವೈಷ್ಣವ ಮತಗಳನ್ನು ಸಮಾನದೃಷ್ಟಿಯಿಂದ ಪೋಷಿಸಿದವರು. ಇವರ ಕುಲದೇವತೆ ಹಾಗೂ ಅಧಿದೇವತೆ ವಿಟ್ಲದ ಪಂಚಲಿಂಗೇಶ್ವರ. ಅಳಿಯಸಂತಾನ ಪದ್ಧತಿಯನ್ನು ಇವರು ಅನುಸರಿಸುತ್ತಿದ್ದರು.

ಈ ವಂಶದ ಉಗಮದ ಬಗ್ಗೆ ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಡೊಂಬ ಎಂಬುದು ಕದಂಬ ಎಂಬ ಶಬ್ದದಿಂದ ಬಂದಿರಬೇಕೆಂದೂ ಕಡಬ ಇವರ ಮೂಲ ಸ್ಥಳವಾಗಿದ್ದು ಅನಂತರ ವಿಟ್ಲಕ್ಕೆ (ವಿಟ್ಲ, ಇಷ್ಟಕಾಪುರದ ತದ್ಭವ) ತಮ್ಮ ಕೇಂದ್ರವನ್ನು ವರ್ಗಾಯಿಸಿಕೊಂಡಿರಬೇಕೆಂದೂ ಒಂದು ಅಭಿಪ್ರಾಯ ವಿದೆ. ವಿಟ್ಲದಿಂದ ಆಳುತ್ತಿದ್ದ ಡೊಂಬ ಹೆಗ್ಗಡೆಗಳ ಬಗ್ಗೆ ಹೆಚ್ಚು ವಿವರಗಳು ತಿಳಿಯುವುದಿಲ್ಲ. ಹಲವು ಶತಮಾನಗಳ ಕಾಲ ಇವರು ಸ್ವತಂತ್ರ ಅರಸರಾಗಿ ರಾಜ್ಯವಾಳಿದರೆಂಬುದು ಸಾಂಪ್ರದಾಯಿಕ ಹೇಳಿಕೆ. ಇವರ ರಾಜ್ಯ ಮುಡ್ನೂರು, ವಿಟ್ಲ, ಪಡ್ನೂರು, ಬಾಯಾರು, ಚಿಪ್ಪಾರು, ಕೆಳನಾಡು ಮುಂತಾದ ಹತ್ತೊಂಬತ್ತು ಮಾಗಣೆಗಳನ್ನೊಳಗೊಂಡಿತ್ತು. 1436ರಲ್ಲಿ ಇವರ ಮೊದಲ ಶಾಸನ ಕಾಣಸಿಗುತ್ತದೆ. ಕುಂಚಣ್ಣಶೇಖ ಡೊಂಬ ಹೆಗ್ಗಡೆಯ ಮಗ ವಿಯೆಣಸ್ವಾಮಿಯ ಅಳಿಯನಾದ ಮುಂಡಿಸಿದ್ದಶೇಖನ ಪ್ರಸ್ತಾಪ ಇದರಲ್ಲಿದೆ. 1571ರ ಶಾಸನವೊಂದರಲ್ಲಿ ಕುನ್ನಿದೇವರಸನಾದ ಡೊಂಬಹೆಗ್ಗಡೆಯ ಉಲ್ಲೇಖವಿದೆ.

ಇಕ್ಕೇರಿಯ ಅರಸ ವೆಂಕಟಪ್ಪನಾಯಕನೊಂದಿಗೆ 1608ರಲ್ಲಿ ಹೆಗ್ಗಡೆ ಯೊಬ್ಬ ಶಾಂತಿಯೊಪ್ಪಂದ ಮಾಡಿಕೊಂಡ. ಆದರೆ ಅವನ ಮಗ ವೀರಭದ್ರ ನಾಯಕನ ಕಾಲದಲ್ಲಿ ದಂಗೆ ಎದ್ದ ತುಳುನಾಡಿನ ಅರಸರ ಪೈಕಿ ವಿಟ್ಲದ ಹೆಗ್ಗಡೆಯೂ ಸೇರಿಕೊಂಡ. ಕಪ್ಪವನ್ನು ಸರಿಯಾಗಿ ಪಾವತಿ ಮಾಡದ ಹೆಗ್ಗಡೆಯೊಬ್ಬನನ್ನು ಸಂಕೋಲೆ ಸಮೇತ ಇಕ್ಕೇರಿಯ ಅರಮನೆಗೆ ಕೊಂಡೊಯ್ದ ವಿಚಾರ 1719ರ ಶಾಸನವೊಂದರಲ್ಲಿ ಹೇಳಿದೆ. ಈ ಕಾಲದಲ್ಲಿ ನಿರ್ವಾಣಶೆಟ್ಟಿ ಎಂಬ ಪ್ರಜೆಯೊಬ್ಬ ಹೆಗ್ಗಡೆಗೆ ಆರ್ಥಿಕ ಸಹಾಯ ನೀಡಿ ಆಪತ್ತಿನಿಂದ ಅವನನ್ನು ಪಾರುಮಾಡಿದ. 1727 ಮತ್ತು 1734ರ ಶಾಸನಗಳಲ್ಲಿ ಪಾರ್ಥಂಪಾಡಿ ನರಸಿಂಹರಸ, ಅವನ ಅಳಿಯ ನಂದಪ್ಪರಸ, ನರಸಿಂಹ ಕೃಷ್ಣಪ್ಪರಸ ಹಾಗೂ ಕಿನ್ಯಣ್ಣಕಾವ ಹೆಗ್ಗಡೆ ಮುಂತಾದ ಹೆಗ್ಗಡೆ ಅಧಿಪರು ಉಕ್ತರಾಗಿದ್ದಾರೆ. ಇದರಿಂದ ಪಾರ್ಥಂಪಾಡಿ ಇವರ ಇನ್ನೊಂದು ಕೇಂದ್ರ ವಾಗಿತ್ತೆಂಬ ಅಂಶ ವಿದಿತವಾಗುತ್ತದೆ. 1744ರ ಶಾಸನದಲ್ಲಿ ಪಾಂಡ್ಯಪ್ಪರಸನ ಉಲ್ಲೇಖವಿದೆ.

ಇಕ್ಕೇರಿ ಅರಸರ ಅಧೀನದಲ್ಲಿದ್ದ ಹೆಗ್ಗಡೆಗಳ ಅಧಿಕಾರ ಹೈದರ್ ಅಲಿಯ ದಿಗ್ವಿಜಯ ಕಾಲದಲ್ಲಿ ತಪ್ಪಿಹೋಯಿತು. ಆದರೆ ಇಸ್ಲಾಂ ಮತಕ್ಕೆ ಸೇರಿಕೊಳ್ಳಲು ಹೆಗ್ಗಡೆ ಅಧಿಪ ಮರಿಯಪ್ಪರಸ ಒಪ್ಪಿಕೊಂಡಾಗ ಅವನ ರಾಜ್ಯವನ್ನು ಹಿಂದಿರುಗಿಸಲಾಯಿತು. 1765ರಲ್ಲಿ ತನಗೆ ಸಲ್ಲಬೇಕಾದ ಕಪ್ಪದ ಮೊತ್ತವನ್ನು ಹೈದರ್ ಅಲಿ ಹೆಚ್ಚಿಸಿದಾಗ 1768ರಲ್ಲಿ ಇವರ ನಡುವೆ ಭಿನ್ನಾಭಿಪ್ರಾಯ ತಲೆದೋರಿತು. ಅಚ್ಯುತ ಹೆಗ್ಗಡೆ ಪದಚ್ಯುತನಾಗಿ ವಿಟ್ಲದಿಂದ ಓಡಿಹೋಗಿ ಬ್ರಿಟಿಷರ ಆಶ್ರಯ ಪಡೆದ. ಮಾಹೆಯಾನ ನೂರು ರೂಪಾಯಿಗಳ ವಿಶ್ರಾಂತಿ ವೇತನ ಪಡೆಯುತ್ತ ತೆಲ್ಲಿಚೇರಿಯಲ್ಲಿ ಆತ ಇರಬೇಕಾಯಿತು. 1768 ಮತ್ತು 1780ರಲ್ಲಿ ಸಂಭವಿಸಿದ ಮೈಸೂರು–ಬ್ರಿಟಿಷ್ ಕದನಗಳಲ್ಲಿ ಅಚ್ಯುತ ಹೆಗ್ಗಡೆ ಬ್ರಿಟಿಷರ ಪರ ಹೋರಾಡಿದ. ಆದರೆ ಅವನನ್ನು ಟಿಪ್ಪು ಕೈಸೆರೆಹಿಡಿದು ತಲೆ ಕಡಿಸಿದ. ವಿಟ್ಲದ ಅರಮನೆ ಬೆಂಕಿಗೆ ತುತ್ತಾಯಿತು. ಅಚ್ಯುತ ಹೆಗ್ಗಡೆಯ ವಂಶಸ್ಥರು ಬ್ರಿಟಿಷರ ರಕ್ಷಣೆಯಲ್ಲಿ ತೆಲ್ಲಿಚೇರಿಯಲ್ಲಿ ಉಳಿದು, ಬ್ರಿಟಿಷರ ಪರ ಹೋರಾಡಿದರು.

ಬ್ರಿಟಿಷ್–ಮೈಸೂರು ಹೋರಾಟದ ಸಮಯದಲ್ಲಿ ಹೆಗ್ಗಡೆಗೆ ಮಂಜೇಶ್ವರದ ದೇವಾಲಯದಿಂದ ಸಲ್ಲುತ್ತಿದ್ದ ಕಾಣಿಕೆ ನಿಂತುಹೋಯಿತು. ಸಿಟ್ಟಿಗೆದ್ದ ಹೆಗ್ಗಡೆ ಮಂಜೇಶ್ವರ ದೇವಾಲಯವನ್ನೇ ಕೊಳ್ಳೆಹೊಡೆದ. ಹಾನಿಗೆ ತುತ್ತಾದ ಸ್ಥಳೀಯ ಜನರು ಕ್ಯಾಪ್ಟನ್ ಥಾಮಸ್ ಮನ್ರೋಗೆ ದೂರಿತ್ತರು. ಬ್ರಿಟಿಷರು ಈ ಹೆಗ್ಗಡೆಯನ್ನು ಬಂಡುಕೋರನೆಂದು ತೀರ್ಮಾನಿಸಿದರು (ಡೊಂಬ ಎಂಬ ಶಬ್ದ ಡೊಂಬಿ ಎಂದಾಗಿ ಈ ಮನೆತನವನ್ನು ಬಂಡುಕೋರ ಮನೆತನವೆಂದು ಅರ್ಥೈಸಲು ಅವಕಾಶ ಕಲ್ಪಿಸಿತು).

ಕೊಯಮತ್ತೂರಿನ ಸುಬ್ಬರಾವ್ ವಿಟ್ಲದ ಹೆಗ್ಗಡೆಯೊಂದಿಗೆ ಸೇರಿ ಉಪ್ಪಿನಂಗಡಿ ದೇವಾಲಯವನ್ನಾಕ್ರಮಿಸಿದ. ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಕಡಬದ ತಹಶೀಲದಾರ ತಲೆತಪ್ಪಿಸಿಕೊಂಡ. ಸುಬ್ಬರಾವ್ ಮುಂದೆ ಸಾಗಿ ಬಂಟ್ವಾಳವನ್ನು ಲೂಟಿ ಹೊಡೆದು ಪುತ್ತೂರನ್ನು ತಲುಪಿದ. ಈ ಸಮಯದಲ್ಲಿ ಮನ್ರೋ ಧರ್ಮಸ್ಥಳದ ಕುಮರ ಹೆಗ್ಗಡೆಯ ನೇತೃತ್ವ ದಲ್ಲಿ ತುಕಡಿಯೊಂದನ್ನು ಸಿದ್ಧಪಡಿಸಿದ್ದ. ಸುಬ್ಬರಾವ್ ಪರಾಜಿತನಾದ. ಇತ್ತ ವಿಟ್ಲದ ಹೆಗ್ಗಡೆಯನ್ನು ತಹಶೀಲದಾರ ಸೋಲಿಸಿ ಅವನ ವಂಶದ

ಒಂಬತ್ತು ಜನರನ್ನು ಕೈಸೆರೆಹಿಡಿದ. ಇಬ್ಬರನ್ನು ಗಲ್ಲಿಗೇರಿಸಲಾಯಿತು. ಉಳಿದವರನ್ನು ತೆಲ್ಲಿಚೇರಿಯಲ್ಲಿ ಬಂಧನದಲ್ಲಿ ಇಡಲಾಯಿತು. ವೃದ್ಧಾಪ್ಯ ಕಾಲದಲ್ಲಿ ರಾಮವರ್ಮನನ್ನು ಹಾಗೂ ಅವನ ಅಳಿಯ ನರಸಿಂಹರಾಜನನ್ನು ವಿಟ್ಲಕ್ಕೆ ವರ್ಗಾಯಿಸಲಾಯಿತು. ಇವರ ರಾಜ್ಯ ಬ್ರಿಟಿಷರ ಅಧೀನವಾಯಿತು. 1856–57ರಲ್ಲಿ ಇಮ್ಮಡಿ ನರಸಿಂಹರಾಜ ಮತ್ತು 1896ರಲ್ಲಿ ಅವನ ಸೋದರಿ ದೊಡ್ಡಮ್ಮ ಅರಸಿ ಮರಣ ಹೊಂದಿದರು. ಈಗಲೂ ಇವರ ವಂಶದವರು ವಿಟ್ಲದಲ್ಲಿ ನೆಲಸಿದ್ದಾರೆ.

ಕಾಪು ಎಂಬಲ್ಲಿಂದ ಮರ್ದಹೆಗ್ಗಡೆ ಅಥವಾ ಮದ್ದಹೆಗ್ಗಡೆ ಎಂಬುವರು ಸಾಮಂತರಾಗಿ ಆಳುತ್ತಿದ್ದರು. ಇವರ ಆಡಳಿತದ ಆರಂಭದ ಕಾಲವನ್ನು ನಿರ್ಧರಿಸಲು ಸಾಧ್ಯವಾಗಿಲ್ಲ. 1475ರ ಶಾಸನದಲ್ಲಿ ಮರ್ದಹೆಗ್ಗಡೆಯೊಬ್ಬನ ಉಲ್ಲೇಖವಿದೆ. 1500ರ ಇನ್ನೊಂದು ಶಾಸನ ತಿರುಮಲರಸ ಅಥವಾ ಮದ್ದಹೆಗ್ಗಡೆಯನ್ನು ಹೆಸರಿಸುತ್ತದೆ. ಈ ಹೆಗ್ಗಡೆಗಳು ಯೆಲ್ಲೂರು, ಯೇಳಿಂಜೆಗಳ ಹೆಗ್ಗಡೆ ಹಾಗೂ ಚೌಟರಸರೊಂದಿಗೆ ಮಾಡಿಕೊಂಡ ರಾಜಕೀಯ ಶಾಂತಿ ಒಪ್ಪಂದ ಶಾಸನಗಳಲ್ಲಿ ಕಾಣಸಿಗುತ್ತದೆ. 1541ರಲ್ಲಿ ಗಣಪಣ ಸಾವಂತ ಅಥವಾ ಮದ್ದಹೆಗಡೆ ಆಳುತ್ತಿದ್ದ; 1558ರಲ್ಲೂ ಈತನಿದ್ದ. ಇವರ ರಾಜ್ಯದ ವ್ಯಾಪ್ತಿಯ ಬಗ್ಗೆ ತಿಳಿಯದು. ಆದರೆ ಇವರ ರಾಜ್ಯ ಸಪ್ತ ಗ್ರಾಮಗಳನ್ನೊಳಗೊಂಡಿತ್ತೆಂಬ ಪ್ರತೀತಿ ಇದೆ.

ಮಾರಮ್ಮ ಹೆಗ್ಗಡೆಗಳು ಉಡುಪಿ ತಾಲ್ಲೂಕಿನ ಯೇರುವಾಳ ಎಂಬಲ್ಲಿಂದ ಆಳುತ್ತಿದ್ದರು. ಇವರ ರಾಜ್ಯ ಎರಡೇ ಗ್ರಾಮಗಳನ್ನೊಳಗೊಂಡಿತ್ತೆಂದು ತಿಳಿದುಬರುತ್ತದೆ. ತಿರುಮಲರಸನಾದ ಮಾದಂಬ (ಮಾರಮ್ಮ) ಹೆಗ್ಗಡೆ ಈ ವಂಶದ ಒಬ್ಬ ಅಧಿಪ.

ಯೆಲ್ಲೂರಿನ ಅಧಿಪರನ್ನು ಕುಂದಹೆಗ್ಗಡೆಗಳೆಂದು ಕರೆಯಲಾಗುತ್ತಿತ್ತು. 15ನೆಯ ಶತಮಾನದಲ್ಲೇ ಈ ವಂಶದ ಅಧಿಪನ ಉಲ್ಲೇಖವಿದೆ. ವಿಶ್ವನಾಥ ಇವರ ಕುಲದೇವತೆ. ಉಡುಪಿ ತಾಲ್ಲೂಕಿನ ಕೆಲ ಪ್ರದೇಶದಲ್ಲಿ ಆಳುತ್ತಿದ್ದ ಇವರು ಕೆಲವು ಶಾಂತಿ ಒಪ್ಪಂದಗಳಲ್ಲಿ ಸಾಕ್ಷಿಗಳಾಗಿ ಉಲ್ಲೇಖಗೊಂಡಿದ್ದಾರೆ. ನಂದಳಿಕೆಯ ಅಧಿಪರನ್ನು ಕಿನ್ಯಕ ಪೆರ್ಗ್ಗಡೆ ಎಂದು ಕರೆಯಲಾಗುತ್ತಿತ್ತು.

ಕಾರ್ಕಳ ತಾಲ್ಲೂಕಿನ ಮುದರಾಡಿಯಲ್ಲಿ ವಿಜಯನಗರ ಕಾಲದಲ್ಲಿ ಸಾವಂತರೆಂದು ಪರಿಚಿತರಾದ ಹೆಗ್ಗಡೆಗಳ ಆಳಿಕೆ ಇತ್ತು. ಇವರು ಪುತ್ತಿಗೆಯ ಚೌಟರಸರ ಬಂಧುಗಳು. ಅಣ್ಣಾ ಸಾವಂತ ಹೆಗ್ಗಡೆ ಮೂಡಬಿದರೆಯ ತ್ರಿಭುವನತಿಲಕಚೂಡಾಮಣಿ ಚೈತ್ಯಾಲಯಕ್ಕೆ 1461ರಲ್ಲಿ ದಾನವಿತ್ತ ಸಂಗತಿ ತಿಳಿದುಬರುತ್ತದೆ. (ಎಚ್.ಎಂ.ಎನ್.ಆರ್.)

**ಹೆಗ್ಗೆರೆ:** ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಒಂದು ಗ್ರಾಮ. ಜೈನರ ಯಾತ್ರಾಸ್ಥಳ. ಹೊಸದುರ್ಗ–ಹುಳಿಯಾರು ಮಾರ್ಗದಲ್ಲಿ ಹೊಸದುರ್ಗದ ಆಗ್ನೇಯಕ್ಕೆ 29 ಕಿಮೀ ದೂರದಲ್ಲಿ ತಾಲ್ಲೂಕಿನ ದಕ್ಷಿಣದ ಅಂಚಿನಲ್ಲಿದೆ. ಜನಸಂಖ್ಯೆ 835.

ಈ ಗ್ರಾಮದಲ್ಲಿ ಹೊಯ್ಸಳರ ಕಾಲದ ಸುಂದರ ದೇವಾಲಯಗಳೂ ಒಂದು ಜೈನ ಬಸದಿಯೂ ಇದೆ. ಇಲ್ಲಿರುವ ಮೂರು ದೇವಾಲಯಗಳಲ್ಲಿ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿರುವ ಕಲ್ಲೇಶ್ವರ ದೇವಾಲಯ ದೊಡ್ಡದು. ದಕ್ಷಿಣಾಭಿಮುಖವಾಗಿರುವ ಈ ದೇವಾಲಯದ ಶಿವಲಿಂಗ ಪೂರ್ವಾಭಿಮುಖವಾಗಿದೆ. ಪೂರ್ವದ ಗೋಡೆಯಲ್ಲಿ ಲಿಂಗದರ್ಶನಕ್ಕಾಗಿ ಎರಡು ರಂಧ್ರಗಳಿವೆ. ಸುಂದರವಾದ ಸರಸ್ವತಿ ಮತ್ತು ನಾಗವಿಗ್ರಹಗಳಿವೆ. ಮಹಿಷಾಸುರಮರ್ದಿನಿ ಮತ್ತು ವಿಷ್ಣುವಿನ ಪೀಠಗಳಿವೆ. ಸರಸ್ವತಿ ವಿಗ್ರಹದಲ್ಲಿ ಒಂದು ಶಾಸನವಿದೆ. ಅದರ ಕಾಲ ಸು. 1232. ಗಳಗೇಶ್ವರ ದೇವಾಲಯ ಉಳಿದವಕ್ಕಿಂತ ಪ್ರಾಚೀನ. ಇಲ್ಲಿನ ಸುಕನಾಸಿಯಲ್ಲಿ ಸುಂದರವಾಗಿ ಕೆತ್ತಿರುವ ವಿಗ್ರಹಗಳಿವೆ. ರಾಮಾಯಣದ ದೃಶ್ಯಗಳು, ದಶಾವತಾರ ಹಾಗೂ ಅಷ್ಟದಿಕ್ಪಾಲಕರ ಚಿತ್ರಣವಿದೆ. ಪಾರ್ಶ್ವನಾಥ ಬಸದಿ ಹೊಯ್ಸಳರ ಶ್ರೇಷ್ಠ ವಾಸ್ತುಶಿಲ್ಪಗಳಲ್ಲಿ ಒಂದು. ಕಪ್ಪುಶಿಲೆಯಿಂದ ನಿರ್ಮಿಸಿದ ಗರ್ಭಗೃಹ, ಸುಕನಾಸಿ, ನವರಂಗಗಳನ್ನು ಹೊಂದಿರುವ ಈ ಮಾದರಿಯ ಬಸದಿ ಕರ್ನಾಟಕದಲ್ಲಿ ಇದೊಂದೇ. ಅತ್ಯಂತ ಸುಂದರವಾಗಿ ಕೆತ್ತಲಾಗಿರುವ ಕಮಲಪೀಠದ ಮೇಲಿನ ಮೂಲ ಜಿನಮೂರ್ತಿ ಈಗ ಇಲ್ಲ. ಅದರ ಜಾಗದಲ್ಲಿ ಅನಂತನಾಥನ ವಿಗ್ರಹವಿದೆ. (ಎಂ.ಆರ್.ಪಿ.)

**ಹೆಜಮಾಡಿ:** ಉಡುಪಿ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ಮಂಗಳೂರು–ಉಡುಪಿ ಹೆದ್ದಾರಿಯಲ್ಲಿ ಮಂಗಳೂರಿನ ಉತ್ತರಕ್ಕೆ ಸು.34 ಕಿಮೀ ದೂರದಲ್ಲಿದೆ. ಜನಸಂಖ್ಯೆ 8,192. ಸಿರಿಗಳ ಆರಾಧನೆಯ ಪಿರಿಯ ಮಾಡರ ಕಾರಣದಿಂದ ಪೆಜಮಾಡಿ ಹೆಜಮಾಡಿಯಾಯಿತೆಂದೂ ಹೆಜ್ಜೆಹೆಜ್ಜೆಗೆ ಶಾಂಭವಿ ನದಿ ಹಿಂದೆ ಸರಿದು ಆದ ಗ್ರಾಮವಾದುದರಿಂದ ಹೆಜಮಾಡಿ ಎಂಬ ಹೆಸರಾಯಿತೆಂದೂ ಐತಿಹ್ಯ. ಉತ್ತರದಲ್ಲಿ ನಡುಸಾಲು (ಪಡುಬಿದರೆ) ಗ್ರಾಮ, ಪೂರ್ವದಲ್ಲಿ ಫಲಿಮಾರು ಗ್ರಾಮ ಹಾಗೂ ಶಾಂಭವಿ ಹೊಳೆ, ದಕ್ಷಿಣದಲ್ಲಿ ಶಾಂಭವಿ ಹೊಳೆ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಇವು ಈ ಗ್ರಾಮದ ಗಡಿಗಳು. ಈ ಗ್ರಾಮಕ್ಕೆ ಸೇರಿದಂತೆ ಸನಿಹದಲ್ಲೆ ಶಾಂಭವಿ ಹೊಳೆ ಹರಿಯುತ್ತದೆ. ಮರಳು ಮತ್ತು ಮರಳು ಮಿಶ್ರಿತ ಮಿದುಮಣ್ಣಿನಿಂದ ತುಂಬಿದ ಇಲ್ಲಿಯ ಸಮತಟ್ಟಾದ ನೆಲಕ್ಕೊಂದು ಸಹಜ ಸರಳ ಆಕರ್ಷಣೆಯಿದೆ. ಹೆಜಮಾಡಿಕೋಡಿ ಎಂದಿರುವ ಕಡಲ್ಕರೆ ಸುಮಾರು 5 ಕಿಮೀ ಉದ್ದವಿದೆ. ಶಾಂಭವಿ ಹೊಳೆಯ ಉತ್ತರದ ಭಾಗದ ಗುಂಡಿ ಮೊದಲಿಗೆ ಸುಮಾರು ನಲವತ್ತು ವರ್ಷಗಳ ಹಿಂದೆ ಹಡಗುಗಳ ತಂಗುದಾಣವಾಗಿದ್ದು ಮೂಲ್ಕಿ ಬಂದರಿನ ಸರಕು ಸಾಗಣೆಯ ಕೇಂದ್ರವಾಗಿತ್ತು. ವಾಹನಗಳ ಸೌಲಭ್ಯ ದೊರೆಯುವ ಮುನ್ನ ಉಡುಪಿಗೆ ಹೋಗುವವರು ದಕ್ಷಿಣದಲ್ಲಿ ಪಾವಂಜೆ (ನಂದಿನಿ) ಹೊಳೆಯಂಚಿನ ಸಸಿಹಿತ್ಲು ಎಂಬಲ್ಲಿಂದ ದೋಣಿಯಲ್ಲಿ ಕುಳಿತು ಗುಂಡಿಯವರೆಗೆ ನದೀಯಾನ ಮಾಡಿ, ಅನಂತರ ಕಾಲ್ನಡಿಗೆಯಲ್ಲಿ ಮುಂದುವರಿಯುತ್ತಿದ್ದರು. ಶಾಂಭವಿ ಮತ್ತು ನಂದಿನಿ ಹೊಳೆಗಳೆರಡೂ ಸೇರಿ ಚಿತ್ರಾಪುರ ಸಮೀಪದಲ್ಲಿ ಅಳಿವೆ ಮೂಲಕ ಸಮುದ್ರವನ್ನು ಕೂಡುತ್ತವೆ. ಕೆಲವು ವರ್ಷಗಳಿಂದ ಈ ಅಳಿವೆ ಉತ್ತರದ ಹೆಜಮಾಡಿ ಕೋಡಿಯತ್ತ ಸರಿಯುತ್ತಬರುತ್ತಿದೆ. ಉತ್ತರದ ಕಣ್ಣಂಗಾರು (ಕಣ್ಣನ ಊರು ಎಂಬುದರಿಂದ ಆ ಹೆಸರಾಯಿತೆಂದು ಹೇಳುವರು), ಕೋಟೆಗುಡ್ಡೆ, ಬಸದಿಪಡ್ಪು, ಆಲಡೆ ಸ್ಥಳ, ಕೋಡಿ, ಕೊತ್ತಾಣಿ ಕುದುರು, ಗುಂಡಿ–ಇವು ಹೆಜಮಾಡಿಯ ಒಳ ವಿಭಾಗಗಳು.

ಇಲ್ಲಿಯ ಶ್ರೀಲಕ್ಷ್ಮೀ ಜನಾರ್ದನ ಮತ್ತು ಹಳೆಯ ಶಂಭುನಾಥ ಹಾಗೂ ಈಗಿನ ಮಹಾಲಿಂಗೇಶ್ವರ ದೇವಾಲಯ, ಅಬ್ಬಗ ದಾರದ ದೈವ, ವೈದರ್ಕಳ ಗರಡಿ ಮತ್ತು ಕೋರ್ದಬಬ್ಬು ದೈವ, ಜುಮಾದಿ (ಧೂಮಾವತಿ), ಜಾರಂದಾಯ ಬಬ್ಬಯ ದೈವಗಳು– ಇವುಗಳನ್ನು ಕುರಿತಂತೆ ಹಲವು ಸ್ವಾರಸ್ಯಕರ ಐತಿಹ್ಯಗಳು ಬೆಳೆದುಬಂದಿವೆ. ಈ ಐತಿಹ್ಯಗಳಲ್ಲಿ ಜೈನರು ಹೆಜಮಾಡಿ ಗ್ರಾಮವನ್ನು ತ್ಯಜಿಸಿ ಪಡುಬಿದರೆಯಲ್ಲಿ ಹೋಗಿ ನೆಲಸಬೇಕಾಗಿ ಬಂದುದು, ನಂದಳಿಕೆಯ ಸಿರಿಗಳು ಹಾಗೂ ಕೋಟಿ ಚೆನ್ನಯ್ಯ ಇವರು ಇಲ್ಲಿ ಬೀಡುಬಿಟ್ಟ ಸನ್ನಿವೇಶ ಮೊದಲಾದ ವಿಷಯಗಳು ಅಡಕವಾಗಿವೆ. ಈ ಊರಿನಲ್ಲಿ ಐದು ಭೂತಗಳಿಗೆ ಏಳು ದಿನಗಳ ಕೋಲ (ಪೂಜಾವಿಧಿ) ನಡೆಯುವುದು ಒಂದು ವೈಶಿಷ್ಟ್ಯ. ಹೆಜಮಾಡಿ ಬೆಳೆಯುತ್ತಿರುವ ಗ್ರಾಮಕೇಂದ್ರ. ಬತ್ತ, ತೆಂಗು ಇಲ್ಲಿಯ ಮುಖ್ಯ ಬೆಳೆಗಳು. ಮತ್ಸ್ಯೋದ್ಯಮ ಇಲ್ಲಿನ ಇನ್ನೊಂದು ಮುಖ್ಯ ಕಸಬು. ಇಲ್ಲಿ ಮಂಜುಗೆಡ್ಡೆ ತಯಾರಿಸುವ ಒಂದು ಕಾರ್ಖಾನೆ ಇದೆ. ಹಿಂದೆ ಇಲ್ಲಿ ತೆಂಗಿನ ನಾರಿನ ಕೈಗಾರಿಕೆಯೂ ನಡೆಯುತ್ತಿತ್ತು. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳ ಜೊತೆಗೆ ಒಂದು ಜೂನಿಯರ್ ಕಾಲೇಜು ಇದೆ. ಹೆಜಮಾಡಿಯ ಸಮುದ್ರತೀರದ ಹೊಯಿಗೆ (ಮರಳು) ಗಾಜು ತಯಾರಿಕೆಯ ಉಪಯೋಗಕ್ಕಾಗಿ ರಫ್ತಾಗುತ್ತದೆ. (ಎಂ.ವಿ.)

**ಹೆಡತಲೆ:** ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನಲ್ಲಿರುವ ಗ್ರಾಮ. ಕಸಬೆಯಿಂದ 11 ಕಿಮೀ ದೂರದಲ್ಲಿದೆ. ಜನಸಂಖ್ಯೆ 5,791.

ಇಲ್ಲಿರುವ ಲಕ್ಷ್ಮೀಕಾಂತ ದೇವಾಲಯ ಕಗ್ಗಲ್ಲಿನಲ್ಲಿ ಕಟ್ಟಿದ, ಹೊಯ್ಸಳ ಶೈಲಿಯ ತ್ರಿಕೂಟಾಚಲ. ಪೂರ್ವಾಭಿಮುಖವಾಗಿರುವ ಈ ದೇವಾಲಯದಲ್ಲಿ ಮೂರು ಗರ್ಭಗೃಹಗಳು, ಒಂದೊಂದು ನವರಂಗ, ಮಂಟಪ ಹಾಗೂ ಮುಖಮಂಟಪಗಳಿವೆ. ಮಧ್ಯದ ಗರ್ಭಗೃಹಕ್ಕೆ ಮಾತ್ರ ಸುಕನಾಸಿ ಹಾಗೂ ಗೋಪುರಗಳಿವೆ. ಮಧ್ಯದಲ್ಲಿ ನಂಬಿನಾರಾಯಣನ ರೂಪದ ಲಕ್ಷ್ಮೀಕಾಂತ, ಉತ್ತರದಲ್ಲಿ ಲಕ್ಷ್ಮೀನರಸಿಂಹ ಮತ್ತು ದಕ್ಷಿಣದ ಗರ್ಭಗುಡಿಯಲ್ಲಿ ವೇಣುಗೋಪಾಲ ಮೂರ್ತಿಗಳಿವೆ. ನವರಂಗದ ಸ್ತಂಭಗಳು ಸೊಗಸಾಗಿವೆ. ಸುಮಾರು ಒಂದು ಅಡಿ ಆಳದ ಭುವನೇಶ್ವರಿಗಳಲ್ಲಿ ಇಳಿಬಿದ್ದಂತೆ ಕಮಲದ ಮೊಗ್ಗನ್ನು ಚಿತ್ರಿಸಿದೆ. ಮಧ್ಯದ ಭುವನೇಶ್ವರಿ ಮೂರು ಅಡಿ ಆಳವಾಗಿದ್ದು, ಸುಂದರವಾಗಿದೆ, ಮುಖಮಂಟಪ ಇಪ್ಪತ್ನಾಲ್ಕು ಸ್ತಂಭಗಳಿಂದ ಕೂಡಿದೆ. ಮಧ್ಯದ ನಾಲ್ಕು ಸ್ತಂಭಗಳು ಗಮನ ಸೆಳೆಯುತ್ತವೆ. ಇಲ್ಲೂ ಸುಮಾರು ಮೂರು ಅಡಿ ಆಳದ ಹನ್ನೊಂದು ಭುವನೇಶ್ವರಿಗಳಿವೆ. ಸುತ್ತಲೂ ಪ್ರಾಕಾರವಿದೆ. ಪೂರ್ವ, ಪಶ್ಚಿಮ ಮತ್ತು ದಕ್ಷಿಣಗಳಲ್ಲಿ ದ್ವಾರಗಳಿವೆ. ಉತ್ತರ ಭಾಗದಿಂದ ಪ್ರಭುವೊಬ್ಬ ತನ್ನ ಹದಿನಾರು ಜನ ಅಳಿಯಂದಿರು ಇಲ್ಲಿ ಆಸೀನರಾಗಿದ್ದುದನ್ನು ನೋಡುತ್ತಿದ್ದನಂತೆ. ಆದ್ದರಿಂದ ಇಲ್ಲಿನ ಚಾವಡಿಯನ್ನು ಹದಿನಾರು ಮುಖದ ಚಾವಡಿ ಎಂದು ಕರೆಯುತ್ತಾರೆ. ಈ ದೇವಾಲಯ 1292ಕ್ಕಿಂತ ಮೊದಲೇ ಇತ್ತೆನ್ನಲು ಶಾಸನಾಧಾರಗಳಿವೆ. ಹೊಯ್ಸಳ ದೇವಾಲಯವೊಂದು ಸಂಪೂರ್ಣವಾಗಿ ಕಗ್ಗಲ್ಲಿನಲ್ಲಿ ನಿರ್ಮಿತವಾಗಿರುವುದೊಂದು ವೈಶಿಷ್ಟ್ಯ.

ಗುಂಡ್ಲುಹೊಳೆಯ (ಕೌಂಡಿಣ್ಯ) ತೀರದಲ್ಲಿರುವ ನಾಗೇಶ್ವರ ದೇವಾಲಯವೂ ಕಗ್ಗಲಿನಲ್ಲಿರುವ ಹೊಯ್ಸಳ ರಚನೆ. ಗರ್ಭಗೃಹ, ಸುಕನಾಸಿ, ನವರಂಗಗಳಿಂದ ಕೂಡಿದ ಈ ದೇವಾಲಯಕ್ಕೆ ಮುಖಮಂಟಪ ಹಾಗೂ ಮಂಟಪಗಳನ್ನು ಅನಂತರ ಕಾಲದಲ್ಲಿ ಸೇರಿಸಿದಂತೆ ತೋರುತ್ತದೆ. ನವರಂಗದ ಭುವನೇಶ್ವರಿಗಳು ಲಕ್ಷ್ಮೀಕಾಂತ ದೇವಾಲಯದ ನವರಂಗದ ಭುವನೇಶ್ವರಿಗಳನ್ನೇ ಹೋಲುತ್ತವೆ. ಈ ದೇವಾಲಯ ಈಗ ಶಿಥಿಲಾವಸ್ಥೆಯಲ್ಲಿದೆ.

ಗ್ರಾಮದ ಬಳಿಯ ಹೊಲವೊಂದರಲ್ಲಿ ಸುಮಾರು ನಾಲ್ಕಡಿ ಎತ್ತರದ ಒಂದು ಸುಂದರ ವಿಷ್ಣುಮೂರ್ತಿ ಇದೆ. (ಎಚ್.ಎಂ.ಎನ್.ಆರ್.)

**ಹೆಬ್ಬಳ್ಳಿ:** ಧಾರವಾಡ ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ಬ್ಯಾಹಟ್ಟಿ–ಧಾರವಾಡ ಮಾರ್ಗದಲ್ಲಿ ಹುಬ್ಬಳ್ಳಿ–ಧಾರವಾಡಕ್ಕೆ 14 ಕಿಮೀ ದೂರದಲ್ಲೂ ಅಮರಗೋಳ ರೈಲು ನಿಲ್ದಾಣಕ್ಕೆ ಸುಮಾರು 8 ಕಿಮೀ ದೂರದಲ್ಲೂ ಇದೆ. ಜನಸಂಖ್ಯೆ 11,506.

ಸುತ್ತಲ ಹಳ್ಳಿಗಳಿಗೆ ವ್ಯಾಪಾರ ಕೇಂದ್ರವಾಗಿರುವ ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರ ಮಾಧ್ಯಮಿಕ ಶಾಲೆ, ವಿದ್ಯುತ್ತು, ಅಂಚೆ, ತಂತಿ ಇವುಗಳ ಸೌಲಭ್ಯಗಳಿವೆ. ಈ ಊರಿನಲ್ಲಿ ಒಂದು ಶಿಥಿಲ ಕೋಟೆಯಿದೆ. ಊರಿನ ದಕ್ಷಿಣದಲ್ಲಿ ಸುಮಾರು 57′ ಉದ್ದವಿರುವ, ಜೈನ ವಾಸ್ತುಶೈಲಿಯಲ್ಲಿ ಕಟ್ಟಿರುವ ಶಂಭುಲಿಂಗ ದೇವಾಲಯವಿದೆ. ಇಲ್ಲಿ ಪಾಳುಬಿದ್ದಿರುವ ಚಂಗಲವ್ವದೇವಿ ದೇವಾಲಯ ಇದೆ. ಈ ಗ್ರಾಮದಲ್ಲಿ ಸೇವುಣರ ಕಾಲದ ಎರಡು ಶಾಸನಗಳಿದ್ದು ಇದರಲ್ಲಿ ಒಂದು ಸೇವುಣ ದೊರೆ ಕನ್ನರನ ಕಾಲದ್ದಾಗಿದ್ದು ಈ ಗ್ರಾಮ ವ್ಯಾಪಾರ ಕೇಂದ್ರವಾಗಿತ್ತೆಂಬ ಅಂಶವನ್ನು ಸೂಚಿಸುತ್ತದೆ. (ಎನ್.ಎಸ್.ವಿ.;ಎಚ್.ವಿ.ಎಸ್.)

**ಹೆಬ್ಬಾರ, ಕೆ.ಕೆ.:** 1912–96. ಅಂತಾರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದರು. ಕಟ್ಟಿಂಗೇರಿ ಕೃಷ್ಣ ಹೆಬ್ಬಾರ ಎಂಬುದು ಇವರ ಪೂರ್ಣ ಹೆಸರು. ಉಡುಪಿಗೆ ಸಮೀಪದ ಕಟ್ಟಿಂಗೇರಿಯಲ್ಲಿ 1912ರಲ್ಲಿ ಜನಿಸಿದರು. ಆರಂಭದ ಶಿಕ್ಷಣವನ್ನು ಉಡುಪಿ ಹಾಗೂ ಮೈಸೂರುಗಳಲ್ಲಿ ಪಡೆದರು. ತಮ್ಮ 14ನೆಯ ವಯಸ್ಸಿನಲ್ಲಿಯೇ ಹೊಟ್ಟೆಪಾಡಿಗಾಗಿ ಹಳ್ಳಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಜೀವನ ಪ್ರಾರಂಭಿಸಿದರು. ಚಿತ್ರಗಳ ಮೂಲಕವೇ ಮಕ್ಕಳಿಗೆ ಪಾಠ ಹೇಳುತ್ತಿದ್ದ ಇವರ ಪ್ರತಿಭೆಯನ್ನು ಕಂಡ ಅದೇ ಶಾಲೆಯ ವ್ಯವಸ್ಥಾಪಕರಾಗಿದ್ದ ಒಬ್ಬ ಜರ್ಮನ್ ಮಿಶನರಿ ಇವರನ್ನು ಕಲಾ ಜೀವನದಲ್ಲಿ ದೂಡಿದರು. ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟ ಹೆಬ್ಬಾರ ಅವರು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯನ್ನು ಸೇರಿಕೊಂಡರು. ಕೆಲ ಕಾಲಾನಂತರ ಈ ಸಂಸ್ಥೆಯನ್ನು ತೊರೆದು ಮುಂಬಯಿಯ ಛಾಯಾಚಿತ್ರ ಗೃಹವೊಂದರಲ್ಲಿ ಕೆಲಸ ಮಾಡುತ್ತ



ಜಿ.ಎಸ್.ದಂಡಾವತಿಮಠ ಅವರ ನೂತನ ಕಲಾಮಂದಿರದಲ್ಲಿ ಕಲೆಯ ಅಧ್ಯಯನಕ್ಕಾಗಿ ಸೇರಿದರು. 1938ರಲ್ಲಿ ಜೆ.ಜೆ. ಕಲಾಶಾಲೆಯಿಂದ ರೇಖಾಚಿತ್ರ ಮತ್ತು ವರ್ಣಚಿತ್ರ ಕಲೆಗಳಲ್ಲಿ ಡಿಪ್ಲೊಮಾ ಪಡೆದು ಅದೇ ಸಂಸ್ಥೆಯಲ್ಲಿ 1939–40 ಹಾಗೂ 1943–47 ರವರೆಗೆ ಅಧ್ಯಾಪಕರಾಗಿ ಕೆಲಸ ಮಾಡಿದರು. 1949ರಲ್ಲಿ ಅಧ್ಯಯನ ಪ್ರವಾಸಕ್ಕಾಗಿ ಯುರೋಪಿಗೆ ಹೋದರು. 1949–50ರಲ್ಲಿ ಪ್ಯಾರಿಸಿನಲ್ಲಿ ಚಿತ್ರಕಲೆಯ ವಿಶೇಷ ಅಧ್ಯಯನ ಮಾಡಿದರು. ಈ ಅವಧಿಯಲ್ಲಿಯೇ ಲಂಡನ್, ಬರ್ನ್ ಮತ್ತು ಪ್ಯಾರಿಸ್ ನಗರಗಳಲ್ಲಿ ತಮ್ಮ ಚಿತ್ರಗಳ ಪ್ರದರ್ಶನಗಳನ್ನು ಏರ್ಪಡಿಸಿದರು. 1953ರಲ್ಲಿ ಕಲಾಪ್ರದರ್ಶನದ ಜೊತೆಗೆ ಕಳುಹಿಸಲಾಗಿದ್ದ ಕಲಾವಿದರ ನಿಯೋಗದ ಸದಸ್ಯರಾಗಿ ರಷ್ಯ, ಪೋಲೆಂಡ್ ಹಾಗೂ ಪಶ್ಚಿಮ ಜರ್ಮನಿಗಳಿಗೆ ಭೇಟಿಕೊಟ್ಟರು. ಇವರ ಚಿತ್ರಗಳ ಏಕವ್ಯಕ್ತಿ ಪ್ರದರ್ಶನಗಳು ಭಾರತದ ಪ್ರಮುಖ ನಗರಗಳಲ್ಲೇ ಅಲ್ಲದೆ ಹೊರದೇಶಗಳಲ್ಲಿ ನ್ಯೂಯಾರ್ಕ್, ಬರ್ಲಿನ್, ಬಾಸೆಲ್, ಸಿಡ್ನಿ, ಅಡಿಲೇಡ್ ಮೊದಲಾದ ಪ್ರಮುಖ ನಗರಗಳಲ್ಲಿ ನಡೆದಿವೆ. ಈ ಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಎಲ್ಲೆಡೆ ಮುಕ್ತಪ್ರಶಂಸೆಗೆ ಪಾತ್ರವಾಗಿವೆ.

ಹೆಬ್ಬಾರರು ಸಾಂಪ್ರದಾಯಿಕ ರೀತಿಯಲ್ಲಿಯೇ ತರಬೇತಿ ಪಡೆದವರಾದರೂ ಯಾವುದೇ ಒಂದು ಪಂಥಕ್ಕೆ ತೆಕ್ಕೆಬಿದ್ದವರಲ್ಲ. ಪಾಶ್ಚಾತ್ಯ ಕಲೆಯಿಂದ ಪ್ರಭಾವಿತರಾಗಿದ್ದರೂ ಭಾರತೀಯ ಪುರಾತನ ಚಿತ್ರ ಸಂಪ್ರದಾಯಕ್ಕೆ ಮನಸೋತ ಇವರು ಅದಕ್ಕೊಂದು ಹೊಸ ಮುಖ ಕೊಟ್ಟರು; ಮೆರುಗು ನೀಡಿದರು. ಇವರ ಕಲೆ ಜೀವನಕ್ಕೆ ಹೆಚ್ಚು ಸಮೀಪವಾಗಿದೆ. ಸಾಮಾನ್ಯರ ಜೀವನದ ಸೌಂದರ್ಯವನ್ನು ಹೆಬ್ಬಾರರು ತಮ್ಮ ಕುಂಚದಿಂದ ಅಮರವಾಗಿಸಿದ್ದಾರೆ. ವರ್ಣವಿನ್ಯಾಸ, ನೆಳಲು–ಬೆಳಕುಗಳ ತಾರತಮ್ಯ ಇವುಗಳಲ್ಲಿ ಇವರ ಚಿತ್ರಗಳು ತಮ್ಮದೇ ಆದ ವಿಶಿಷ್ಟ ಮುದ್ರೆಯನ್ನು ಹೊತ್ತುನಿಂತಿವೆ. ಇವರ ಚಿತ್ರಕೃತಿಗಳಲ್ಲಿ ಬ್ಯಾಲೆ ನೃತ್ಯಕಾರರು, ಲೇಜಿಮ್ ಆಟದವರು, ರಷ್ಯದ ಕುಣಿಯುವ ಹುಡುಗಿ, ನಾಗಮಂಡಲದ ನೃತ್ಯಕಾರರು, ಪ್ರೀತಿ, ಉತ್ಸವದ ಕುಣಿತ, ಪಂಡಿತರು, ಮಹಾಬಲೇಶ್ವರ ಸಂತೆ, ರಂಗಪಂಚಮಿ, ತೋಳ ಕಾದಾಟ, ದನಗಳ ಮಾರುಕಟ್ಟೆ, ಅರುಣೋದಯ, ವಿನಾಶ, ಶರದ್ ಪೂರ್ಣಿಮಾ ಮುಂತಾದವು ಉತ್ಕೃಷ್ಟ ರಚನೆಗಳೆಂದು ಖ್ಯಾತಿ ಗಳಿಸಿವೆ.

ಕಲೆ ಕುರಿತು ಹೆಬ್ಬಾರರು ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ ಪತ್ರಿಕೆಯಲ್ಲಿ ಇವರ ಅನೇಕ ಕೃತಿಗಳು ಪ್ರಕಟವಾಗಿವೆ. ಸರ್ಕಾರಿ ಹಾಗೂ ಸರ್ಕಾರೇತರ ಪ್ರಸಿದ್ಧ ಪ್ರಕಾಶನ ಸಂಸ್ಥೆಗಳು ಇವರ ಚಿತ್ರಗಳ ಪ್ರತಿಕೃತಿಗಳನ್ನೊಳಗೊಂಡ ಪರಿಚಯಾತ್ಮಕ ಗ್ರಂಥಗಳನ್ನು ಪ್ರಕಟಿಸಿವೆ.

ಹೆಬ್ಬಾರರಿಗೆ ಅನೇಕ ಗೌರವಗಳೂ ಪ್ರಶಸ್ತಿಗಳೂ ಲಭಿಸಿವೆ. 1939ರಲ್ಲಿ ಕಲ್ಕತ್ತ ಕಲಾ ಅಕಾಡೆಮಿ ಇವರಿಗೆ ಚಿನ್ನದ ಪದಕ ನೀಡಿ ಗೌರವಿಸಿತು. 1948ರಲ್ಲಿ ಭಾರತ ಸರ್ಕಾರದ ಪಾರಿತೋಷಕ ಲಭಿಸಿತು. 1956, 1957, 1958ರಲ್ಲಿ ಸತತವಾಗಿ ಮೂರು ಬಾರಿ ಇವರಿಗೆ ಕೇಂದ್ರ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿ ಲಭಿಸಿತು. 1961ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. 1954ರಲ್ಲಿ ಲಲಿತ ಕಲಾ ಅಕಾಡೆಮಿ ಇವರನ್ನು ಗಣ್ಯ ಕಲಾವಿದ ಸದಸ್ಯರನ್ನಾಗಿ ಆರಿಸಿತ್ತು. 1975ರಲ್ಲಿ ಜರ್ಮನಿ ಪ್ರಜಾತಂತ್ರ ಗಣರಾಜ್ಯ ತನ್ನ ಕಲಾ ಅಕಾಡೆಮಿಯಲ್ಲಿ ಇವರನ್ನು ಸದಸ್ಯರನ್ನಾಗಿ ಆಯ್ಕೆಮಾಡಿತು. 1976ರಲ್ಲಿ ಕೇಂದ್ರ ಲಲಿತ ಕಲಾ ಅಕಾಡೆಮಿ ಇವರನ್ನು ಫೆಲೋ ಆಗಿ ಆಯ್ಕೆಮಾಡಿತು. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾಗಿದ್ದರು. 1976ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ.

ತಮ್ಮದೇ ಆದ ಅಚ್ಚುಕಟ್ಟಾದ ಒಂದು ಕಲಾಭವನವನ್ನು ಮುಂಬಯಿಯಲ್ಲಿ ಸ್ಥಾಪಿಸಿಕೊಂಡು ನೆಲೆಸಿದ್ದ ಇವರು 1996 ಮಾರ್ಚ್ 29ರಂದು ನಿಧನರಾದರು. (ಆರ್.ಜಿ.ಆರ್.)

**ಹೆಬ್ಬಾಲೆ:** ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ. ಗೋಣಿ ಮತ್ತು ತಿತ್ತಿಮತ್ತಿಗಳ ನಡುವೆ ಗೋಣಿಕೊಪ್ಪಲಿನಿಂದ 6 ಕಿಮೀ ದೂರದಲ್ಲಿದೆ. ಜನಸಂಖ್ಯೆ 4,185.

ಕೊಡಗು ಜಿಲ್ಲೆಯ ಬತ್ತದ ಬೆಳೆಯ ಗ್ರಾಮಗಳಲ್ಲಿ ಹೆಬ್ಬಾಲೆಗೊಂದು ವಿಶಿಷ್ಟ ಸ್ಥಾನವಿದೆ. ಇಲ್ಲಿ ಪುರಸಭೆ ಇದೆ. ಇಲ್ಲಿಂದ ನಾಗರಹೊಳೆ ವನ್ಯಮೃಗ ಸಂರಕ್ಷಣ ಕೇಂದ್ರಕ್ಕೆ ನೇರಮಾರ್ಗಾನುಕೂಲತೆ ಇದೆ. ಲಕ್ಷ್ಮಣತೀರ್ಥ ನದೀತೀರದ ವನ ಪ್ರದೇಶದಲ್ಲಿರುವ ಹೆಬ್ಬಾಳ ಗಜಪೋಷಣ ಕೇಂದ್ರ ಪ್ರವಾಸಿಗಳ ಪ್ರೇಕ್ಷಣೀಯ ಸ್ಥಳ. (ಎಂ.ವಿ.)

**ಹೆಬ್ಬೂರು:** ತುಮಕೂರು ಜಿಲ್ಲೆಯ ಅದೇ ತಾಲ್ಲೂಕಿನ ಒಂದು ಗ್ರಾಮ. ತುಮಕೂರಿನ ದಕ್ಷಿಣಕ್ಕೆ 24 ಕಿಮೀ ದೂರದಲ್ಲಿದೆ. ಜನಸಂಖ್ಯೆ 5,951.

ಮೊದಲಿಗೆ ಇದರ ಹೆಸರು ಹೆಬ್ಬುಲಿ. ಒಮ್ಮೆ ಹುಲಿಯೊಂದು ಎತ್ತಿನ ಮೇಲೆ ಬಿದ್ದಾಗ ಆ ಎತ್ತು ಹುಲಿಯನ್ನು ಅಟ್ಟಿಸಿಕೊಂಡು ಹೋಗಿ ಕೊಂದು ಹಾಕಿದ್ದರಿಂದ ಈ ಹೆಸರಾಯಿತಂತೆ. ಆ ಘಟನೆಯ ಜ್ಞಾಪಕಾರ್ಥವಾಗಿ ವಿಜಯನಗರದ ಅರಸರ ಅನುಮತಿ ಪಡೆದು ಅಲ್ಲಿ ಕೋಟೆಯನ್ನು ಕಟ್ಟಲಾಯಿತು ಎಂದು ಸ್ಥಳ ಪ್ರತೀತಿ. ವಿಜಯನಗರದ ಅವನತಿಯ ಅನಂತರ ಮಾಗಡಿಯ ಕೆಂಪೇಗೌಡ, ಚಿಕ್ಕನಾಯಕನಹಳ್ಳಿಯ ನಾಯಕ, ಮೈಸೂರು ಚಿಕ್ಕದೇವರಾಜ ಒಡೆಯರು, ಮುಗಲರು ಮತ್ತು ಮರಾಠರು ಇವರ ವಶದಲ್ಲಿತ್ತು.

ಇಲ್ಲಿ 1719ರಲ್ಲಿ ಕಟ್ಟಿದ ಒಂದು ಬೃಹತ್ ಕೆರೆ, 16–18ನೆಯ ಶತಮಾನದ ಕೆಲವು ದೇವಾಲಯಗಳು ಮತ್ತು ಕೋದಂಡಾಶ್ರಮ ಎಂಬ ಶೃಂಗೇರಿ ಮಠದ ಒಂದು ಶಾಖೆ ಇವೆ. (ಎಚ್.ವಿ.ಎಸ್.)

**ಹೆಮ್ಮಿಗೆ:** ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕಿನ ಒಂದು ಗ್ರಾಮ. ಕಸಬೆಯ ಪೂರ್ವಕ್ಕೆ 11 ಕಿಮೀ ದೂರದಲ್ಲಿ ಕಾವೇರಿಯ ಬಲದಂಡೆಯ ಮೇಲಿದೆ. ಇದು ಶಿಲಾಯುಗ ಸಂಸ್ಕೃತಿಯ ಒಂದು ನಿವೇಶನ. ಜನಸಂಖ್ಯೆ 3,884.

ಈ ಗ್ರಾಮಕ್ಕೆ ಬಹುಪ್ರಾಚೀನವಾದ ಇತಿಹಾಸವಿದೆ. ತಲಕಾಡಿಗೆ ನದಿ ದಾಟಿಹೋಗಲು ಮುಖ್ಯವಾದ ಹಾಯ್ಗಡದ ಬಳಿಯೇ ಬೆಳೆದ ಈ ಊರಿನಲ್ಲಿ ಫಲವತ್ತಾದ ಭೂಮಿ, ಕಾವೇರಿಯ ನಿರಂತರವಾದ ನೀರಿನ ಅನುಕೂಲವಿದ್ದು, ಚರಿತ್ರಪೂರ್ವಕಾಲದಿಂದಲೂ ಇಲ್ಲಿ ಜನವಸತಿ ಇದ್ದುದು ಕಂಡುಬಂದಿದೆ. ಗಂಗರ ಶಾಸನಗಳಲ್ಲಿ ಇದನ್ನು ಪೆಮೊಗೆ ಎಂದಿದ್ದರೆ ಮುಂದೆ ವಿಜಯನಗರ ಮತ್ತು ಅನಂತರದ ಕಾಲಗಳಲ್ಲಿ ಹೆಮ್ಮುಗೆ, ಹೆಮ್ಮುಗರೆ ಎಂದೂ ಕರೆದಿದೆ. ಪ್ರಮುಖವಾದ ಹಾಯ್ಗಡಕ್ಕೆ ಹೊಂದಿಕೊಂಡು ಈ ಊರು ಇದ್ದುದರಿಂದ ಇದನ್ನು ಹೆಮ್ಮೊಗೆ ಎಂದರೆ ಹಿರಿಯ ಮೊಗೆ ಅಥವಾ ಹಾಯ್ಗಡ ಎಂಬ ಅರ್ಥದಲ್ಲಿ ಕರೆದಿರಬಹುದು. ಗಂಗರ ಕಾಲದ ಊರು ಹಾಯ್ಗಡಕ್ಕೆ ಹೊಂದಿಕೊಂಡಂತೆ ಇದ್ದುದು ಅಲ್ಲಿ ದೊರೆತ ಆ ಕಾಲದ ಅವಶೇಷಗಳು, ಗಂಗ ವಾಸ್ತುಶಿಲ್ಪ ರೀತಿಗೆ ಸೇರಿದ ಸೂರ್ಯನ ವಿಗ್ರಹ, ಕಂಬಗಳು ಮೊದಲಾದವುಗಳಿಂದ ಸ್ಪಷ್ಟಪಡುತ್ತದೆ. ಚೋಳರು ಈ ಪ್ರದೇಶವನ್ನಾಕ್ರಮಿಸಿ ತಲಕಾಡಿನಲ್ಲಿ ಅವರ ಅಧಿಕಾರಿ ಆಡಳಿತ ವಹಿಸಿಕೊಂಡ ಮೇಲೆ ಇಲ್ಲಿನ ವರದರಾಜಸ್ವಾಮಿ ದೇವಾಲಯದ ನಿರ್ಮಾಣವಾಗಿ ಅದರ ಮುಂದಿನ ಊರು ಬೆಳೆದಿರಬೇಕು. ಚೋಳರ ಕಾಲಕ್ಕೆ ಸೇರಿದ್ದಿರಬಹುದಾದ ತೋರಣಗಲ್ಲಿನ ಶಿಲ್ಪವೂ ಇಲ್ಲಿ ದೊರೆತಿದೆ. ವರದರಾಜಸ್ವಾಮಿ ದೇವಾಲಯ ಮಾತ್ರ ಮುಂದೆ ವಿಜಯನಗರದ ಕಾಲದಲ್ಲಿ ಪುನರ್ನಿರ್ಮಾಣವಾದಂತೆ ತೋರುತ್ತದೆ. ಬಹುಶಃ ಹೊಯ್ಸಳ ವಿಷ್ಣುವರ್ಧನ ತಲಕಾಡಿನ ಮೇಲೆ ದಂಡೆತ್ತಿ ಬಂದು ಚೋಳರನ್ನು ಓಡಿಸಿದಾಗ ಇಲ್ಲಿ ನಡೆದ ತುಮುಲ ಯುದ್ಧದಲ್ಲಿ ಈ ಊರು ನಾಶವಾಗಿರಬೇಕು. ಮುಂದೆ ವಿಜಯನಗರದ ಇಮ್ಮಡಿ ಹರಿಹರನ ಕಾಲದಲ್ಲಿ, 1397ರಲ್ಲಿ ಹೆಮ್ಮುಗೆಯನ್ನು ಅಗ್ರಹಾರವನ್ನಾಗಿ ಮಾಡಿ ಹರಿಹರರಾಜೇಂದ್ರಪುರವೆಂದು ಹೆಸರಿಟ್ಟರು. ಸುಮಾರು ಇದೇ ಕಾಲದಲ್ಲಿ ತಲಕಾಡಿನಲ್ಲಿ ಅಧಿಕಾರಿಯಾಗಿದ್ದ ಮಾಧವ ಮಂತ್ರಿಯು ಹಾಯ್ಗಡಕ್ಕೆ ಹೊಂದಿದಂತೆ ಕಾವೇರಿ ನದಿಗೆ ಒಂದು ಅಡ್ಡಕಟ್ಟೆ ಹಾಕಿಸಿದ. ಇದು ಈಗಲೂ ಮಾಧವಮಂತ್ರಿ ಅಣೆಕಟ್ಟು ಎಂದು ಪ್ರಸಿದ್ಧವಾಗಿದೆ. ಈ ಕಾಲದಲ್ಲಿ ಅದನ್ನು ಹೆಮ್ಮುಗೆ ಹೊಸಹಳ್ಳಿ ಎಂದು ಕರೆದಿರುವುದು ಈ ಊರನ್ನು ಹೊಸದಾಗಿ ನಿರ್ಮಿಸಿದುದನ್ನು ಸೂಚಿಸುತ್ತದೆ. 1526ರಲ್ಲಿ ಕೃಷ್ಣದೇವರಾಯ ಇದೇ ಹೆಮ್ಮುಗೆಯನ್ನು ಮತ್ತೆ ದತ್ತಿಯಾಗಿ ಬಿಟ್ಟ. ಈಗ ಉಳಿದು ಬಂದಿರುವ ವರದರಾಜಸ್ವಾಮಿ ದೇವಾಲಯ ಎತ್ತರವಾದ ಜಗತಿಯ ಮೇಲೆ ಕಟ್ಟಿರುವ ವಿಜಯನಗರದ ಕಾಲದ ಸರಳವಾದ ಗುಡಿ. ಮೂಲವಿಗ್ರಹ ಮಾತ್ರ ಚೋಳರ ಕಾಲದ ಸುಂದರವಾದ ಮೂರ್ತಿ. ಇದಲ್ಲದೆ ಊರಿನಲ್ಲಿ ಕೆಲವು ವೀರಗಲ್ಲುಗಳೂ ಇವೆ.

ಚಾರಿತ್ರಿಕ ಕಾಲದಲ್ಲಿ ಈ ಊರಿನ ಬೆಳೆವಣಿಗೆ ಇಷ್ಟಾದರೆ ಚರಿತ್ರಪೂರ್ವ ಕಾಲದಲ್ಲಿಯೇ ಇಲ್ಲಿ ಹೆಚ್ಚಿನ ಜನವಸತಿ ಇದ್ದುದು ಇಲ್ಲಿ 1964ರಲ್ಲಿ ಪುರಾತತ್ತ್ವ ಇಲಾಖೆ ನಡೆಸಿದ ಉತ್ಖನನಗಳಿಂದ ವ್ಯಕ್ತವಾಗಿದೆ. ಇಲ್ಲಿ ಊರಿನ ಮುಂದೆ ಮತ್ತು ಮಾಧವಮಂತ್ರಿ ಅಣೆಕಟ್ಟಿನ ಬಳಿ ಈಗ ನೀರು ಸುತ್ತುವರಿದು ದ್ವೀಪವಾಗಿರುವ ಆದಿಯನ ತಿಟ್ಟು ಎಂಬ ದಿಬ್ಬದಲ್ಲಿ–ಹೀಗೆ ಎರಡು ಕಡೆ ನಡೆದ ಉತ್ಖನನಗಳಲ್ಲಿ ಎರಡು ಬೇರೆ ಬೇರೆ ಕಾಲಗಳಿಗೆ ಸೇರಿದ ಬೇರೆ ಬೇರೆ ಸಂಸ್ಕೃತಿಗಳು ಇಲ್ಲಿ ಬೆಳೆದು ಬಂದುದು ಪ್ರಕಟವಾಯಿತು. ಮೊದಲನೆಯದು ನವಶಿಲಾ–ತಾಮ್ರ ಶಿಲಾಯುಗಕ್ಕೆ ಸೇರಿದುದು. ಮುಖ್ಯವಾಗಿ ಆದಿಯನ ತಿಟ್ಟು ಪ್ರದೇಶದಲ್ಲಿ ಇದರ ಬೆಳೆವಣಿಗೆಯನ್ನು ಗುರುತಿಸಬಹುದು. ಇಲ್ಲಿ ದೊರೆತ ಮಡಕೆಗಳು ಕೈಯಿಂದ ಮಾಡಿದುವು. ಕೆಲವು ವೇಳೆ ಅವಕ್ಕೆ ತೆಳುಬಣ್ಣ ಲೇಪಿಸಿ ಉಜ್ಜಿ ಹೊಳಪು ಬರಿಸಿರುವುದುಂಟು. ಹಾಗಾಗಿ ಬೂದು, ಮಾಸಲು,

ಕೆಂಪು ಅಥವಾ ಕಂದುಬಣ್ಣಗಳಲ್ಲಿ ಅವು ಕಂಡುಬರುತ್ತದೆ. ಇವುಗಳಲ್ಲಿ ಸಾಮಾನ್ಯವಾಗಿ ಕಂಡು ಬರುವುವೆಂದರೆ ಗುಂಡಾದ, ದೊಡ್ಡ ಬಾಯುಳ್ಳ, ಅಗಲವಾಗಿ ಹೊರಮುಖವಾಗಿ ಎದ್ದಿರುವ ಕಂಠಗಳನ್ನುಳ್ಳ ಮಡಕೆಗಳು, ಗುಂಡು ತಳವುಳ್ಳ, ಕಂಠವಿಲ್ಲದ ಆದರೆ ನಾಲಗೆಯಂತೆ ಚಾಚಿರುವ ಮೂತಿಯಿರುವ ಬೋಗುಣಿಗಳು, ಬಟ್ಟಲುಗಳು. ಇವುಗಳೊಂದಿಗೆ ತಿರುಮಕೂಡಲು ನರಸೀಪುರದಲ್ಲಿ ಕಂಡುಬಂದಿರುವ ವಿಶಿಷ್ಟವಾದ ತಲೆಯಾಸರೆಯ ಮೃತ್ಪೀಠಗಳೂ ದೊರೆತಿವೆ. ಕಲ್ಲಿನ ವಸ್ತುಗಳಲ್ಲಿ ನವಶಿಲಾಯುಗಕ್ಕೆ ಸೇರಿದ ಉಜ್ಜಿ ಚೂಪು ಮಾಡಿದ ಅಥವಾ ಕುಕ್ಕಿ ಆಕಾರ ಬರಿಸಿದ ಕಲ್ಕೊಡಲಿಗಳು. ಅವುಗಳ ಜೊತೆಯಲ್ಲಿಯೇ ಶಲ್ಕೋದ್ಯಮಕ್ಕೆ ಸೇರಿದ ಮೂಲ ಶಿಲೆ, ಅದರಿಂದ ಚಕ್ಕೆ ಎಬ್ಬಿಸಿದ ಕಿರುಶಲ್ಯಾಯುಧಗಳೂ ದೊರೆತಿರುವುದು ಇಲ್ಲಿನ ವಿಶೇಷ. ಈ ಶಲ್ಕ ಶಿಲಾಯುಧಗಳು ತೀರ ಕಿರುಪ್ರಮಾಣದವು. 1–2 ಸೆಮೀಗಳಿಗಿಂತ ಹೆಚ್ಚು ಉದ್ದವಾಗಿಲ್ಲ. ಅಷ್ಟೇನೂ ಕ್ರಮಬದ್ಧವಾಗಿ ಚಕ್ಕೆ ಎಬ್ಬಿಸಿದವೂ ಅಲ್ಲ, ಮೂಲಶಿಲೆಯು ಶುದ್ಧವಾದುದೂ ಅಲ್ಲ. ಆದ್ದರಿಂದ ಇವುಗಳನ್ನು ಪ್ರಸಿದ್ಧವಾದ ಬ್ರಹ್ಮಗಿರಿ, ಪಿಕ್ಲಿಹಾಳು, ಮಸ್ಕಿ ಮೊದಲಾದ ಕಡೆ ದೊರೆತ ಶಲ್ಕ ಶಿಲಾಯುಧಗಳೊಡನೆ ಹೋಲಿಸಲಾಗದು. ಬಹುಶಃ ನವಶಿಲಾಯುಗಕ್ಕೆ ಮುಂಚಿನ ಕಾಲಕ್ಕೆ ಸೇರಿದ್ದ ಶಲ್ಕೋದ್ಯಮ ಈ ನವಶಿಲಾ–ತಾಮ್ರಶಿಲಾಯುಗದ ಕಾಲದಲ್ಲಿ ಇಲ್ಲಿ ಮುಂದುವರಿದುದನ್ನು ಇದು ಸೂಚಿಸುತ್ತದೆ. ಆದಿಯನ ತಿಟ್ಟನಲ್ಲಲ್ಲದೆ ಊರ ಮುಂದಿನ ನಿವೇಶನದಲ್ಲಿಯೂ ಅತ್ಯಂತ ಕೆಳಗಿನ ಸ್ತರಕ್ಕೆ ಸೇರಿದ ಸ್ವಾಭಾವಿಕ ಭೂಪದರದ ಮೇಲೆಯೇ ಇಟ್ಟಂತಿದ್ದ ನವಶಿಲಾ–ತಾಮ್ರಶಿಲಾಯುಗಕ್ಕೆ ಸೇರಿದ ಮಡಕೆಗಳು, ಬೋಗುಣಿಗಳು, ತಲೆಯಾಸರೆಯ ಮೃತ್ಪೀಠ, ಮುಖನಾಳವುಳ್ಳ ಗಿಂಡಿ ಗುಂಪುಗುಂಪಾಗಿದ್ದುದು ಕಂಡುಬಂದಿದೆ. ಆದರೆ ಅಲ್ಲಿ ಜನ ಹೆಚ್ಚು ಕಾಲ ವಾಸಮಾಡಿದ ಕುರುಹುಗಳೇನೂ ಉಳಿದಿಲ್ಲ. ಬಹುಶಃ ಜನ ಇಲ್ಲಿ ವಾಸಕ್ಕೆ ಆರಂಭಿಸಿದ ಸ್ವಲ್ಪಕಾಲದಲ್ಲಿಯೇ ಪ್ರವಾಹ ಬಂದು ಅವರು ತಮ್ಮ ವಸತಿಯನ್ನು ಬದಲಾಯಿಸಿರಬಹುದು. ಅಥವಾ ಪೂರ್ಣರೂಪದ ಮಡಕೆಗಳು ಗುಂಪುಗುಂಪಾಗಿ ದೊರೆತಿರುವುದನ್ನು ನೋಡಿದರೆ ಇಲ್ಲಿ ಯಾವುದಾದರೂ ಧಾರ್ಮಿಕ ವಿಧಿಯನ್ನು ನೆರವೇರಿಸಿದ್ದಿರಬಹುದೆನಿಸುತ್ತದೆ.

ಇದಾದ ಅನಂತರ ಈ ನಿವೇಶನದಲ್ಲಿ ವಸತಿಹೀನ ಸ್ತರಗಳಿದ್ದು ಮೇಲಿನ ಎರಡು ಸ್ತರಗಳಲ್ಲಿ ಮಾತ್ರ ಪ್ರಸಕ್ತಶಕದ ಆರಂಭಕಾಲದ್ದು ಎನ್ನಬಹುದಾದ ವಸ್ತುಗಳು ದೊರೆತಿವೆ. ಇವುಗಳಲ್ಲಿ ಕೆಂಪು ಕಪ್ಪು ಹೊಳಪಿನ ಮಡಕೆಗಳು, ಅಂಥ ಮಡಕೆಗಳ ಮೇಲೆ ಬಿಳಿಯ ಬಣ್ಣದಿಂದ ಅಲೆಯಲೆಯಾಗಿ,; ಚುಕ್ಕೆಗಳ ಸಾಲುಗಳಾಗಿ ಇತರ ರೀತಿಯಲ್ಲಿ ಬಿಡಿಸಿರುವ ಚಿತ್ರಗಳು, ಶಂಖದ, ಗಾಜಿನ ಬಳೆಗಳು, ಕಲ್ಲಿನ ಮಣಿಗಳು, ಕದಿರಿನ ತೂಕಗಳು, ಕಬ್ಬಿಣದ ಪದಾರ್ಥಗಳು ದೊರೆತಿದ್ದು ಚಂದ್ರವಳ್ಳಿ, ಬ್ರಹ್ಮಗಿರಿ, ಮಸ್ಕಿ ಮೊದಲಾದ ಕಡೆ ದೊರೆತ ಇಂಥ ವಸ್ತುಗಳನ್ನು ಹೋಲುತ್ತವೆ. ಆದರೆ ಇಲ್ಲಿ ಅವು ಅಷ್ಟು ವ್ಯಾಪಕವಾಗಿ ಹರಡಿಲ್ಲ.

ಹೆಮ್ಮಿಗೆಯಲ್ಲಿ ನಡೆದ ಉತ್ಖನನಗಳಿಂದ ಕಾವೇರಿ ಜಲಾನಯನದ ಮೇಲ್ಭಾಗ ಬೆಳೆದು ಬಂದ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಚ್ಚಿನ ಬೆಳಕು ಬಿದ್ದಿದೆ. ತಿರುಮಕೂಡಲು ನರಸೀಪುರದ ಉತ್ಖನನಗಳಲ್ಲಿ ಅಸ್ಪಷ್ಟವಾಗಿ ಸೂಚಿತವಾಗಿದ್ದ ಕೆಲವು ಸಾಂಸ್ಕೃತಿಕ ಮಜಲುಗಳು ಇಲ್ಲಿ ಸ್ಪಷ್ಟಗೊಂಡಿವೆ. (ಎಂ.ಎಚ್.)

**ಹೆಮ್ಮಿಗೆ ದೇಶಿಕಾಚಾರ್ಯ:** 1902–66. ಪ್ರಸಿದ್ಧ ವಿದ್ವಾಂಸರು. ಹುಟ್ಟಿದ್ದು ಚಾಮರಾಜನಗರ ತಾಲ್ಲೂಕಿನ ಹೆಮ್ಮಿಗೆಯಲ್ಲಿ. ಮೊದಲಿಗೆ ತಂದೆ ಹೆಮ್ಮಿಗೆ ವೇದಾಂತ ಕೃಷ್ಣಮಾಚಾರ್ಯರಲ್ಲಿ, ಅನಂತರ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಹಿಂದಿನ ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲೂ ಕನ್ನಡ ಪಂಡಿತ ಪರೀಕ್ಷೆಯಲ್ಲೂ ರಾಜ್ಯಕ್ಕೆ ಮೊದಲ ಶ್ರೇಣಿಯಲ್ಲಿ ತೇರ್ಗಡೆಯಾದರು. ವೈದಿಕ ಮನೆತನಕ್ಕೆ ಸೇರಿದ ಇವರಿಗೆ ಸಂಸ್ಕೃತ ವ್ಯಾಸಂಗ ಪರಂಪರಾಗತವಾಗಿ ಬಂದಿತ್ತಾಗಿ ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿ ಅಸಾಧಾರಣ ಪಾಂಡಿತ್ಯವನ್ನೂ ಸಂಪಾದಿಸಿಕೊಂಡರು. ಜೊತೆಗೆ ಇಂಗ್ಲಿಷನ್ನು ಅಭ್ಯಸಿಸಿ ಅದರಲ್ಲೂ ಪರಿಣತಿಯನ್ನು ಪಡೆದುಕೊಂಡರು. ಮನೆಮಾತು ತಮಿಳು. ವಿದ್ಯಾ ಇಲಾಖೆಗೆ ಸೇರಿ ಅಕ್ಕಿಹೆಬ್ಬಾಳು, ತಲಕಾಡು, ಕುದೇರು ಮಾಧ್ಯಮಿಕ ಶಾಲೆಗಳಲ್ಲಿ ಉಪಾಧ್ಯಾಯರಾಗಿ ಕೊನೆಗೆ ಮುಖ್ಯೋಪಾಧ್ಯಾಯರಾಗಿ ಅನಂತರ ಕೋಲಾರದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾದರು. ಉಪಾಧ್ಯಾಯ ವೃತ್ತಿಯ ಜೊತೆಗೆ ಇವರು ರಾಮಾಯಣ–ಭಾರತ ಮೊದಲಾದುವುಗಳ ಪಾರಾಯಣವನ್ನೂ ನಡೆಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡ ಕನ್ನಡ–ಕನ್ನಡ ನಿಘಂಟಿನ ಕೆಲಸಕ್ಕೆ ಇವರಿಂದ ಹೆಚ್ಚಿನ ನೆರವು ಒದಗಿತು.

ದೇಶಿಕಾಚಾರ್ಯರು ಉತ್ತಮ ಕವಿಗಳು. ಪ್ರಾಚೀನ ಕವಿಕೃತಿಗಳಂತೆ ಕಾವ್ಯವನ್ನು ರಚಿಸಬಲ್ಲ ಸಾಮರ್ಥ್ಯವನ್ನು ಗಳಿಸಿದ್ದರು. ವರದ ಕರಕಮಲಸ್ತವಂ ಎಂಬ ಪುಟ್ಟ ಚಂಪೂಕೃತಿ ಇವರ ಪಾಂಡಿತ್ಯಕ್ಕೆ ನಿದರ್ಶನವಾಗಿದೆ. ಇವರು ಸಂಸ್ಕೃತದಲ್ಲೂ ಕವಿತೆಗಳನ್ನು ರಚಿಸಿದ್ದುಂಟು. ಹಲವಾರು ಸ್ವಾಗತಪದ್ಯಗಳನ್ನೂ ಆಶುಕವಿತೆಗಳನ್ನೂ ಕನ್ನಡ–ಸಂಸ್ಕೃತಗಳೆರಡರಲ್ಲೂ ಇವರು ಬರೆದಿದ್ದಾರೆ. ಅಲ್ಲದೆ ಅಲ(ಹಂ) ಕೃತಿಯ ಮೋಸ, ಕವಿರತ್ನ ಮೊದಲಾದ ಕೆಲವು ಸಂಶೋಧನ ಮತ್ತು ವಿಮರ್ಶನ ಲೇಖನಗಳನ್ನೂ ಬರೆದಿದ್ದಾರೆ. ಇವರು ಉತ್ತಮ ವಾಗ್ಮಿಗಳೂ ವಿಮರ್ಶಕರೂ ಆಗಿದ್ದರು. ಆಯುರ್ವೇದವನ್ನೂ ಸ್ವಲ್ಪಮಟ್ಟಿಗೆ ಇವರು ಬಲ್ಲವರಾಗಿದ್ದರು.

ಇವರು 1966 ಡಿಸೆಂಬರ್ 10ರಂದು ನಿಧನರಾದರು. (ಎನ್.ಬಿ.)

**ಹೆಸರುಘಟ್ಟ:** ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕಿನ ನಗರೀಕರಣ ಹೊಂದುತ್ತಿರುವ ಊರು.

ಡೆನ್ಮಾರ್ಕ್ ಸರ್ಕಾರದ ಸಹಕಾರ ಹಾಗೂ ಸಹಭಾಗಿತ್ವದಿಂದ ಒಂದು ಬೃಹತ್ ಪ್ರಮಾಣದ ಪಶುಸಂಗೋಪನಾ ಯೋಜನೆಯು ಇಲ್ಲಿ 1964ರಲ್ಲಿ ಪ್ರಾರಂಭವಾಯಿತು. ಇಲ್ಲಿ ಉತ್ಕೃಷ್ಟ ತಳಿಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಕೇಂದ್ರೀಯ ಕೋಳಿ ಸಾಕಣೆ ಕೇಂದ್ರವೊಂದನ್ನು 1948 ರಲ್ಲಿ ಸ್ಥಾಪಿಸಲಾಯಿತು. ಇಲ್ಲಿ ಮಿಚಿಕ್ಸ್ ಜಾತಿಯ ಕೋಳಿಗಳನ್ನು ರೈತರಿಗೆ ಒದಗಿಸಲಾಗುತ್ತಿದೆ. ಈ ಕೋಳಿಗಳ ವಿಶಿಷ್ಟತೆಯೆಂದರೆ, ಇವು ಹೆಚ್ಚು ಕಾಲಾವಧಿಯವರೆಗೆ ಮೊಟ್ಟೆಗಳನ್ನು ಇಡುವುದು ಹಾಗೂ ದೀರ್ಘಕಾಲ ಬದುಕುಳಿಯುವುದು.

ಇಲ್ಲಿಯ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಸುಮಾರು $2^1/_2$ ಅಡಿ ಎತ್ತರವಿರುವ ದೇವರ ವಿಗ್ರಹವಿದೆ. ಇದನ್ನು ದೂರ್ವಾಸ ಮುನಿ ಪೂಜಿಸುತ್ತಿದ್ದನೆಂದು ಪ್ರತೀತಿ. ದೇವಾಲಯದ ಹೊರಭಾಗ ವಿಜಯನಗರದ ಅಚ್ಯುತರಾಯ ಕಟ್ಟಿಸಿದ್ದು. ಇಲ್ಲಿಗೆ ಸಮೀಪದ ಕೆರೆಯಿಂದ ಬೆಂಗಳೂರು ನಗರಕ್ಕೆ ನೀರು ಸರಬರಾಜಾಗುತ್ತದೆ. (ಪಿ.ಬಿ.)

**ಹೆಳವನಕಟ್ಟೆ ಗಿರಿಯಮ್ಮ:** ಸು. 1750. ಕವಯಿತ್ರಿ. ಚಂದ್ರಹಾಸನ ಕಥೆ, ಉದ್ದಾಲೀಕನ ಕಥೆ, ಸೀತಾಕಲ್ಯಾಣ ಎಂಬ ಸಾಂಗತ್ಯಕೃತಿಗಳನ್ನೂ ಕೆಲವು ಹಾಡುಗಳನ್ನೂ ಬರೆದಿದ್ದಾಳೆ. ಭಾಗವತ, ರಾಮಾಯಣ, ಗಜೇಂದ್ರ ಮೋಕ್ಷ ಮೊದಲಾದ ಗ್ರಂಥಗಳನ್ನೂ ಈಕೆ ಬರೆದಿರುವಂತೆ ಕಂಡುಬರುತ್ತದೆ. ಹರಿಹರದ ಬಳಿ ಇರುವ ರಾಣೆಬೆನ್ನೂರು ಇವಳ ಜನ್ಮಸ್ಥಳ. ಈಕೆಯ ತಂದೆ ಭಿಷ್ಟಪ್ಪ. ಮಲೆಬೆನ್ನೂರಿನ ಶಾನುಭೋಗ ಕೃಷ್ಣಪ್ಪನ ಮಗ ತಿಪ್ಪರಸನೊಂದಿಗೆ ಈಕೆಯ ವಿವಾಹವಾಗಿತ್ತು. ಇವಳಿಗೆ ಬಾಲ್ಯದಿಂದಲೂ ದೇವರಲ್ಲಿ ವಿಶೇಷ ಭಕ್ತಿ. ಹೆಳವನಕಟ್ಟೆ ರಂಗನಾಥ ಈಕೆಯ ಆರಾಧ್ಯದೈವ. ಈ ದೈವದ ಅಂಕಿತದಲ್ಲೇ ತನ್ನ ಕೃತಿಗಳನ್ನು ಬರೆದಿರುವುದರಿಂದ

ಇವಳಿಗೆ ಹೆಳವನಕಟ್ಟೆ ಗಿರಿಯಮ್ಮ ಎಂಬ ಹೆಸರು ಬಂತು. ಈಕೆಗೆ ಶ್ರೀಮತ್ಪರಮಹಂಸಾರೂಢೆ, ನಿತ್ಯನಿರ್ಮಲ ಪರಮಾನಂದಹೃದಯೆ ಎಂಬ ವಿಶೇಷಣಗಳು ಇದ್ದಂತೆ ತಿಳಿದುಬರುತ್ತದೆ.

ಚಂದ್ರಹಾಸನ ಕಥೆ ಸಾಂಗತ್ಯದಲ್ಲಿದೆ. ಇದರಲ್ಲಿ 5 ಸಂಧಿಗಳೂ 422 ಪದ್ಯಗಳೂ ಇವೆ ಎಂದು ಕವಿಚರಿತಕಾರರು ಹೇಳುತ್ತಾರೆ. ಆದರೆ ಅಚ್ಚಾಗಿರುವ ಕೃತಿಯಲ್ಲಿ 4 ಸಂಧಿಗಳೂ 455 ಪದ್ಯಗಳೂ ಇವೆ. ಗಿರಿಯಮ್ಮ ತನ್ನ ಕಾವ್ಯಕ್ಕೆ ಮೂಲ ಯಾವುದೆಂಬುದನ್ನು ಸುರಪುರವಾಸ ಲಕ್ಷ್ಮಿಯ ಕಾಂತ ಭಕ್ತರ್ಗೆ ಒರೆದಂಥ ಜೈಮಿನಿಯೊಳಗೆ ಪರಮಭಕ್ತ ಚಂದ್ರಹಾಸನ ಕಥೆಯನು ಚರಿತೆಯ ಮಾಡಿ ವರ್ಣಿಸುವೆ ಎಂಬ ಪದ್ಯದಲ್ಲಿ ಹೇಳಿ ಕೊಂಡಿದ್ದಾಳೆ.

ಉದ್ದಾಳೀಕನ ಕಥೆಯಲ್ಲಿ 447 ಪದ್ಯಗಳಿವೆ. ಈ ಕಾವ್ಯದಲ್ಲಿ ಋಷಿಕುಮಾರನಾದ ಉದ್ದಾಳೀಕನ ಕಥೆಯನ್ನು ಹೇಳಿದೆ. ಒಣ್ಯೋಳು ಚೆಲ್ಲಿದ ಆಣಿಮುತ್ತಾರಿಸಿ ನೂಲಿಗೆ ಪೋಣಿಸಿದಂತೆ ಯೋಗಿಗಳರಸುದ್ದಾಳೀಕನ ಕಥೆಯನು ಹೇಳುವೆ ಚರಿತೆಯ ಮಾಡಿ ಎಂದು ಕಾವ್ಯದ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾಳೆ.

ಸೀತಾಕಲ್ಯಾಣದಲ್ಲಿ 87 ಹಾಡುಗಳಿವೆ. ಪ್ರತಿಯೊಂದು ಹಾಡೂ ಜಯಾ ಜಯಾ ಎಂದು ಮುಗಿಯುತ್ತದೆ.

ಗಿರಿಯಮ್ಮ ಹಲವಾರು ಪವಾಡಗಳನ್ನು ಮೆರೆದಂತೆ ಪ್ರತೀತಿಯಿದೆ. ಈಕೆ ತನ್ನ ಕೊನೆಯ ದಿನಗಳಲ್ಲಿ ಮೈಲಾರ, ಕೊಕ್ಕನೂರು, ಗೋಕರ್ಣ, ದಿಳ್ಳಂಗಿರಿ, ದಾಗಿನಕಟ್ಟೆ ಮುಂತಾದ ಕಡೆ ಯಾತ್ರೆ ಮಾಡಿ ಕೊನೆಗೆ ಕಮ್ಮಾರಗಟ್ಟೆಗೆ ಹೋಗಿ, ಅಲ್ಲಿ ಮಾರುತಿ ದೇವಸ್ಥಾನವನ್ನೂ ತುಂಗಭದ್ರಾ ನದಿಗೆ ಸೋಪಾನವನ್ನೂ ಕಟ್ಟಿಸಿದ ಮೇಲೆ ತುಂಗಭದ್ರೆಯ ಪೂರ್ಣ ಪ್ರವಾಹದಲ್ಲಿ ಐಕ್ಯವಾದಳಂತೆ. ಈಕೆಯ ಪುಣ್ಯತಿಥಿಯಂದು (ಶ್ರಾವಣ ಶುದ್ಧ ಪಂಚಮಿ) ಈಕೆ ಸ್ಥಾಪಿಸಿರುವ ಮಾರುತಿಗೆ ರಥೋತ್ಸವ ನಡೆಯುತ್ತದೆ.

(ಎಸ್.ಬಿ.)

**ಹೇಮಾದ್ರಿ:** ಸೇವುಣ ದೊರೆ ಮಹಾದೇವನ (1260–1271) ಮುಖ್ಯ ಕಾರ್ಯದರ್ಶಿ ಮತ್ತು ಆಸ್ಥಾನ ವಿದ್ವಾಂಸ. ಇವನು ವತ್ಸಗೋತ್ರದ ಬ್ರಾಹ್ಮಣ. ಇವನ ತಾತ ವಾಸುದೇವ, ತಂದೆ ಕಾಮದೇವ.

ಪಾಂಡಿತ್ಯಕ್ಕೆ ಪ್ರಸಿದ್ಧನಾಗಿದ್ದ ಹೇಮಾದ್ರಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ವ್ರಾತಖಂಡ ಇವನ ಪ್ರಥಮ ಕೃತಿ. ಚತುರ್ವರ್ಣಚಿಂತಾಮಣಿ, ಕಾಲನಿರ್ಣಯ, ತಿಥಿನಿರ್ಣಯ, ಪರ್ಜನ್ಯ ಪ್ರಯೋಗ, ದಾನವಾಕ್ಯಾವಳಿ, ಆಯುರ್ವೇದ ರಸಾಯನ ಮೊದಲಾದವು ಇವನಿಂದ ರಚಿತವಾದ ಇತರ ಗ್ರಂಥಗಳು. ವ್ರಾತಖುಂಡದಲ್ಲಿ ಸೇವುಣರ ಪ್ರಾರಂಭದ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ಘಟನೆಗಳನ್ನೂ ತನ್ನ ಪೋಷಕನಾದ ಮಹಾದೇವನ ಯುದ್ಧ ವಿಜಯಗಳನ್ನೂ ವರ್ಣಿಸಿದ್ದಾನೆ. ಮಹಾದೇವ ಗುಜರಾತಿನ ವಾಘೇಲರನ್ನೂ ಮಾಳವದ ಪರಮಾರರನ್ನೂ ತೆಲಂಗಾಣದ ಕಾಕತೀಯರನ್ನೂ ಸೋಲಿಸಿದುದಾಗಿ ಇವನ ವರ್ಣನೆಯಿಂದ ತಿಳಿದುಬರುತ್ತದೆ.

ಹೇಮಾದ್ರಿಯ ಗ್ರಂಥಗಳಲ್ಲಿ ಚತುರ್ವರ್ಣಚಿಂತಾಮಣಿ ಅತ್ಯಂತ ಪ್ರಸಿದ್ಧವಾದುದು. ಈ ಗ್ರಂಥ ಮತೀಯ ನಿಯಮಗಳಿಗೆ ಸಂಬಂಧಿಸಿದ ವ್ರತಖಂಡ, ದಾನಖಂಡ, ತೀರ್ಥಖಂಡ, ಮೋಕ್ಷಖಂಡ ಮತ್ತು ಪರಿಶಿಷ್ಟಖಂಡ ಎಂಬ ಭಾಗಗಳಿಂದ ಕೂಡಿದೆ. ಹೇಮಾದ್ರಿ ಮರಾಠಿ ಭಾಷೆಯಲ್ಲಿ ಮೋಡಿ ಲಿಪಿಯನ್ನು ಆಚರಣೆಗೆ ತಂದ. ಹೇಮದ್ ಪಂತ್ ಎಂಬ ಶೈಲಿಯ ಅನೇಕ ದೇವಾಲಯಗಳನ್ನು ಈತ ನಿರ್ಮಿಸಿದನೆಂದೂ ಇವನಿಗೆ ಹೇಮದ್ ಪಂತ್ ಎಂಬ ಹೆಸರೂ ಪ್ರಚಲಿತವಿತ್ತೆಂದೂ ತಿಳಿದುಬರುತ್ತದೆ. (ಜಿ.ಆರ್.ಆರ್.)

**ಹೇಮಾವತಿ:** ಕಾವೇರಿ ನದಿಯ ಒಂದು ಉಪನದಿ. ಇದನ್ನು ಎಣ್ಣೆಹೊಳೆ ಎಂದೂ ಕರೆಯುತ್ತಾರೆ. ಈ ನದಿ ಚಿಕ್ಕಮಗಳೂರಿನ ಮೂಡಿಗೆರೆ ತಾಲ್ಲೂಕಿನಲ್ಲಿ ಮೇಲ್‌ಬಂಗಾಡಿಯ ಜಾವಳಿಯ ಬಳಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿಯುವುದು. ಇದರ ಉಗಮಸ್ಥಾನವನ್ನು ಪವಿತ್ರಸ್ಥಳವೆಂದು ಭಾವಿಸಲಾಗಿದೆ. ಸೋಮಾವತಿ ಹೊಳೆ, ದೊಡ್ಡಹಳ್ಳ, ಕಪಿಲಾ ಮೊದಲಾದ ತೊರೆಗಳನ್ನು ಕೂಡಿಕೊಂಡು ಹಾಸನ ಜಿಲ್ಲೆಯನ್ನು ಪ್ರವೇಶಿಸುವ ಮುನ್ನ ಸ್ವಲ್ಪ ದೂರ ಸಕಲೇಶಪುರ ತಾಲ್ಲೂಕಿನ ಗಡಿಯಾಗಿ ಹರಿದು ಬೇಲೂರು ತಾಲ್ಲೂಕನ್ನು ಬೇರ್ಪಡಿಸುವುದು. ಅನಂತರ ಸಕಲೇಶಪುರ ತಾಲ್ಲೂಕನ್ನು ಸಕಲೇಶಪುರದ ಉತ್ತರಕ್ಕೆ 6 ಕಿಮೀ ದೂರದಲ್ಲಿರುವ ಹೆಣ್ಣಳ್ಳಿಯ ಪೂರ್ವದಲ್ಲಿ ಪ್ರವೇಶಿಸುವುದು. ಸ್ವಲ್ಪ ದೂರ ದಕ್ಷಿಣಾಭಿಮುಖವಾಗಿ ಹರಿದು ಸಕಲೇಶಪುರವನ್ನು ಬಳಸಿಕೊಂಡು ಆಗ್ನೇಯಾಭಿಮುಖವಾಗಿ ಪ್ರವಹಿಸಿ ಪೂರ್ವಾಭಿಮುಖವಾಗಿ ತಿರುಗುವುದು. ಅಲ್ಲಿ ಬೆಣ್ಣೆಹೊಳೆ, ವಾಟೆಹೊಳೆ ಮೊದಲಾದ ತೊರೆಗಳು ಇದರಲ್ಲಿ ಸಂಗಮಿಸುವುವು. ಹಾಗೆ ತಿರುಗಿದಾಗ ಸ್ವಲ್ಪ ದೂರ ಹಾಸನ ಜಿಲ್ಲೆಯ ಗಡಿಯಾಗಿ ಹರಿದು ಕೊಡಗು ಜಿಲ್ಲೆಯನ್ನು ವಿಂಗಡಿಸುವುದು. ಮುಂದೆ ಆಲೂರು, ಹಾಸನ ತಾಲ್ಲೂಕುಗಳ ದಕ್ಷಿಣ ಗಡಿಯಾಗಿ ಹರಿದು ಅರಕಲಗೂಡು ತಾಲ್ಲೂಕನ್ನು ಬೇರ್ಪಡಿಸಿ ಗೊರೂರು ಬಳಿ ಯಗಚಿ ನದಿಯನ್ನು ಕೂಡಿಕೊಂಡು ಹೊಳೆನರಸೀಪುರ ತಾಲ್ಲೂಕಿನ ಮುಖಾಂತರ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸುವುದು. ಕೊಡಗು ಜಿಲ್ಲೆಯ ಗಡಿಯಾಗಿ ಹರಿಯುವಾಗ ಈ ನದಿಗೆ ಐಗೂರು ನದಿ ಮತ್ತು ಕಟ್ಟೆಹಳ್ಳ ದಕ್ಷಿಣದಿಂದ ಸೇರಿಕೊಳ್ಳುತ್ತವೆ. ಮುಂದೆ ನದಿ ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರದ ನೈಋತ್ಯದಲ್ಲಿ ಕಾವೇರಿಯನ್ನು ಸೇರಿಕೊಳ್ಳುವುದು. ಈ ನದಿಯ ಒಟ್ಟು ಹರಿವಿನ ಉದ್ದ ಸು. 258 ಕಿಮೀ ಇದ್ದು ಹಾಸನ ಜಿಲ್ಲೆಯೊಂದರಲ್ಲೇ ಸು. 182 ಕಿಮೀ ದೂರ ಹರಿಯುವುದು. ಈ ನದಿಯ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ. ಹೊಳೆನರಸೀಪುರದಿಂದ 6 ಕಿಮೀ ದೂರದಲ್ಲಿ ಈ ನದಿಗೆ ಕಟ್ಟಿರುವ ಶ್ರೀರಾಮದೇವರ ಕಟ್ಟೆಯಿದೆ. ಈ ಕಟ್ಟೆ ನೂರು ವರ್ಷಕ್ಕೂ ಹಿಂದಿನದೆಂದು ಹೇಳುತ್ತಾರೆ. ಗೊರೂರು ಬಳಿ ಈ ನದಿಗೆ ಒಂದು ಬೃಹತ್ ಜಲಾಶಯ ನಿರ್ಮಿಸಲಾಗಿದೆ. ಇದರಿಂದ ಹಾಸನ, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳ 2.8 ಲಕ್ಷ ಹೆಕ್ಟೇರ್‌ಗಳಿಗೂ ಹೆಚ್ಚು ಜಮೀನಿಗೆ ನೀರೊದಗುವುದೆಂದು ನಿರೀಕ್ಷಿಸಲಾಗಿದೆ. ಹೊಳೆನರಸೀಪುರ ತಾಲ್ಲೂಕನ್ನು ದಾಟಿ ಕೆ.ಆರ್. ಪೇಟೆ ತಾಲ್ಲೂಕನ್ನು ಪ್ರವೇಶಿಸುವ ಹೇಮಾವತಿ ಮಂದಗೆರೆ ಮೂಲಕ ಹರಿದು ಕನ್ನಂಬಾಡಿ ಬಳಿ ಕಾವೇರಿ ನದಿಯನ್ನು ಸಂಗಮಿಸುತ್ತದೆ. ಇಲ್ಲಿ ಕೃಷ್ಣರಾಜಸಾಗರ ಅಣೆಕಟ್ಟೆ ಕಟ್ಟಲಾಗಿದೆ. ತುಂಬು ಪ್ರವಾಹದಲ್ಲಿ ಈ ನದಿಯಲ್ಲಿ ಒಂದು ಲಕ್ಷ ಕ್ಯುಸೆಕ್ಸ್‌ಗೂ ಅಧಿಕ ನೀರು ಹರಿದಿರುವ ದಾಖಲೆ ಇದೆ.

ಈ ನದಿಯ ಹುಟ್ಟನ್ನು ಕುರಿತು ಎರಡು ದಂತಕಥೆಗಳಿವೆ. ಒಂದರ ಪ್ರಕಾರ, ದಕ್ಷನ ಮಗಳು ಹೇಮಾವತಿ. ಒಮ್ಮೆ ದಕ್ಷ ಯಜ್ಞ ಮಾಡಿದಾಗ ಅವನು ಶಿವನನ್ನು ಆಹ್ವಾನಿಸದೆ ಅವಮಾನಪಡಿಸಿದ. ಶಿವನ ಪತ್ನಿ ಹೇಮಾವತಿ ಆ ಅವಹೇಳನವನ್ನು ಸಹಿಸದೆ ಅಗ್ನಿಕುಂಡದಲ್ಲಿ ಹಾರಿದಳು. ಅಗ್ನಿ ಹೇಮಾವತಿಯನ್ನು ಹಿಂದಕ್ಕೆ ಎತ್ತಿ ತಂದಾಗ ಆಕೆ ಸ್ವರ್ಣದಂತೆ ಹೊಳೆಯುತ್ತಿದ್ದಳಂತೆ. ಚಿನ್ನದ ಬಣ್ಣವುಳ್ಳ ಆಕೆ ಹೇಮಾವತಿಯಾದಳು. ಈಶ್ವರನ ಆಜ್ಞೆಯಂತೆ ಲೋಕಕಲ್ಯಾಣಕ್ಕಾಗಿ ಆಕೆ ನದಿಯಾಗಿ ಹರಿದಳು. ಮತ್ತೊಂದು ಕಥೆಯ ಪ್ರಕಾರ ಹಿಂದೆ ಪೊನ್ನಾತನೆಂಬಾತ ಪೊನ್ನಾತಪುರವನ್ನು ಆಳುತ್ತಿದ್ದ (ಈಗ ಆಲೂರು ತಾಲ್ಲೂಕಿನ ಒಂದು ಗ್ರಾಮ). ಆತನಿಗೆ ಹೇಮ ಮತ್ತು ಹೊನ್ನಿ ಎಂಬ ಇಬ್ಬರು ಪತ್ನಿಯರಿದ್ದರು. ಬಹುಕಾಲವಾದರೂ

ಅವರಿಗೆ ಮಕ್ಕಳಾಗದಿರಲು ವೈರಾಗ್ಯ ತಾಳಿ ಸರ್ವವನ್ನೂ ತ್ಯಾಗಮಾಡಿದ. ಈತನ ಪತ್ನಿಯರಲ್ಲಿ ಹೇಮಾವತಿ ನದಿಯಾಗಿ ಹರಿದರೆ, ಹೊನ್ನಿ ರಾಮನಾಥಪುರದಲ್ಲಿ ವಾಹಿನಿ ಪುಷ್ಕರಣಿಯಾದಳೆಂದು ಪ್ರತೀತಿ. ಈ ನದಿ ಸದ್ದುಗದ್ದಲವಿಲ್ಲದೆ ಮೌನವಾಗಿ ಹರಿಯುವುದರಿಂದ ಇದಕ್ಕೆ ಎಣ್ಣೆಹೊಳೆ ಎಂಬ ಹೆಸರು ಬಂದಿದೆ. ಮೂಡಿಗೆರೆ ಪಟ್ಟಣಕ್ಕೆ 10 ಕಿಮೀ ದೂರದಲ್ಲಿರುವ ಕೂಡಿಗೆ ಪವಿತ್ರ ಸ್ಥಳ. ಇಲ್ಲಿ ಕಪಿಲಾ ಹೊಳೆ ಇದರೊಂದಿಗೆ ಸಂಗಮಿಸುತ್ತದೆ. ಈ ಸ್ಥಳದಲ್ಲಿ ಹರಿಜನರು ಜನರ ಸಂಕಷ್ಟಗಳ ಪರಿಹಾರಕ್ಕೆ ಧಾರ್ಮಿಕ ವಿಧಿಗಳನ್ನು ನಡೆಸುವುದು ಆಚರಣೆಯಲ್ಲಿದೆ.
**(ಕೆ.ಬಿ.ಸಿ.)**

**ಹೈದರ್ ಅಲಿ:** 1721–82. ಮೈಸೂರು ಸಂಸ್ಥಾನದ ಪ್ರಖ್ಯಾತ ಸುಲ್ತಾನ. 1721ರಲ್ಲಿ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಹುಟ್ಟಿದ. ಇವನ ತಂದೆ ಫತೆ ಮಹಮ್ಮದನು ಶಿರಾದ ನವಾಬನ ಸೇವೆಯಲ್ಲಿದ್ದ. ತನ್ನ ಬಾಲ್ಯ ಜೀವನವನ್ನು ಹೈದರ್ ಕಾಡಿನಲ್ಲಿ ಅಲೆಯುತ್ತ ಬೇಟೆಯಾಡುತ್ತ ಕಳೆದ. ಅಕ್ಷರ ವಿದ್ಯೆ ಕಲಿಯದೆ ಜೀವನವಿಡೀ ನಿರಕ್ಷರಕುಕ್ಷಿಯಾಗುಳಿದ. ತರುವಾಯ ಇವನು ಮೈಸೂರು ದಳವಾಯಿ ನಂಜರಾಜನ ಸೈನ್ಯದಲ್ಲಿ ಸೇರಿದ. ದೇವನಹಳ್ಳಿ ಮುತ್ತಿಗೆಯ ಸಂದರ್ಭದಲ್ಲಿ ಈತ ತೋರಿಸಿದ ಶೌರ್ಯವನ್ನು ಕಂಡು ಸುಪ್ರೀತನಾದ ದಳವಾಯಿಯ ಪ್ರೋತ್ಸಾಹದಿಂದ ಬಹುಬೇಗ ಉನ್ನತ ಹುದ್ದೆಗೇರಿದ. ಇಂಗ್ಲಿಷರು ಮತ್ತು ಫ್ರೆಂಚರ ನಡುವೆ ನಡೆದ ಕರ್ನಾಟಿಕ್ (ಈಗಿನ ತಮಿಳುನಾಡು ಭಾಗ) ಯುದ್ಧಗಳಲ್ಲಿ ತಿರುಚ್ಚಿರಾಪಳ್ಳಿಯನ್ನು ಪಡೆಯುವ ಆಸೆಯಿಂದ ನಂಜರಾಜನು ಕರ್ನಾಟಕದ ನವಾಬ ಮಹಮ್ಮದ್ ಅಲಿಯನ್ನು ಬೆಂಬಲಿಸಿದ. ಈ ಯುದ್ಧದಲ್ಲಿ ಭಾಗವಹಿಸಲು ಹೈದರ್ ಅಲಿಯ ನೇತೃತ್ವದಲ್ಲಿ ಮೈಸೂರು ಸೈನ್ಯದ ತುಕಡಿಯೊಂದನ್ನು ಕಳುಹಿಸಿದ. ಮಹಮ್ಮದ್ ಅಲಿ ತನ್ನ ಶತ್ರುಗಳನ್ನು ಸೋಲಿಸಲು ಹೈದರ್ ಅವನಿಗೆ ನೆರವಾದ. ಗೆಲುವಿನ ಅನಂತರ ಮಹಮ್ಮದ್ ಅಲಿ ತನ್ನ ಮಾತನ್ನು ಮುರಿದು ತಿರುಚ್ಚಿರಾಪಳ್ಳಿಯನ್ನು ನಂಜರಾಜನಿಗೆ ಒಪ್ಪಿಸಲು ನಿರಾಕರಿಸಿದ. ಇದು ಮೈಸೂರಿನವರು ಫ್ರೆಂಚರ ಕಡೆ ಸೇರಿಕೊಂಡು ಇಂಗ್ಲಿಷರ ವಿರುದ್ಧ ಹೋರಾಡುವಂತೆ ಮಾಡಿತು. ಹೈದರ್ ಈ ಸಂಬಂಧವಾದ ಕಾರ್ಯಾಚರಣೆಗಳಲ್ಲಿ ನಾಲ್ಕು ವರ್ಷಗಳಿಗೂ ಹೆಚ್ಚುಕಾಲ ಪಾಲ್ಗೊಂಡು ಸೈನಿಕ ವಿಷಯಗಳಲ್ಲಿ ಅಪಾರ ಅನುಭವಗಳಿಸಿದ. ಹಾಗೂ ಗಾಡಿಗಟ್ಟಲೆ ಚಿನ್ನ, ತುಪಾಕಿಗಳು, ಮತ್ತಿತರ ಯುದ್ಧ ಸಾಮಗ್ರಿಗಳನ್ನು ಸಾಗಿಸಿಕೊಂಡು ಬಂದ. ಈ ಸಂಪನ್ಮೂಲಗಳನ್ನು ಬಳಸಿಕೊಂಡು ಇವನು 500 ಜನ ಸಿಪಾಯಿಗಳುಳ್ಳ ಸಣ್ಣ ಸೈನ್ಯವೊಂದನ್ನು ಕಟ್ಟಿ, ಅದಕ್ಕೆ ಫ್ರೆಂಚ್ ಮಾದರಿಯಲ್ಲಿ ತರಬೇತು ಕೊಟ್ಟ. ಅದೇ ವೇಳೆಗೆ ಯುದ್ಧದಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಮತ್ತು 20,000 ಸೈನಿಕರನ್ನು ಕಳೆದುಕೊಂಡಿದ್ದ ನಂಜರಾಜ ತನ್ನ ಸೈನ್ಯಕ್ಕೆ ಬಾಕಿಯನ್ನು ಸಹ ಕೊಡುವ ಸ್ಥಿತಿಯಲ್ಲಿರಲಿಲ್ಲ. ಜೊತೆಗೆ ಮೈಸೂರಿನ ಮೇಲೆ ಮರಾಠರು ಮತ್ತು ನಿಜಾಮ–ಇವರು ಪದೇ ಪದೇ ನಡೆಸುತ್ತಿದ್ದ ದಾಳಿಗಳಿಂದ ಅದರ ಸಂಪನ್ಮೂಲಗಳು ಬರಿದಾದವು. ನಂಜರಾಜನ ಅರಮನೆಯ ಮುಂದೆ ಸೈನ್ಯ ಧರಣಿ ಕುಳಿತು, ಅರಮನೆಗೆ ಆಹಾರವಸ್ತುಗಳು ಮತ್ತು ನೀರು ಸರಬರಾಜನ್ನು ತಡೆದಾಗ ಹೈದರ್ ತನಗೆ ಕಂದಾಯ ವಸೂಲು ಮಾಡಿಕೊಂಡು ಸಾಲಕ್ಕೆ ಜಮಾ ತೆಗೆದುಕೊಳ್ಳಲು ಕೆಲವು ತಾಲ್ಲೂಕುಗಳನ್ನು ಬಿಡುವುದಾದರೆ ಸೈನ್ಯದ ಬಾಕಿ ತೀರಿಸಲು ಸಿದ್ಧವೆಂದು ಮುಂದೆ ಬಂದ. ಮೈಸೂರು ರಾಜ್ಯದ ಬಹುತೇಕ ಭಾಗಕ್ಕೆ ಹೈದರ್ ಅಲಿ ವಾಸ್ತವ ಆಡಳಿತಗಾರನಾಗುವವರೆಗೆ ಇಂಥ ಪ್ರಸಂಗಗಳು ಮರುಕಳಿಸುತ್ತಿದ್ದವು. ಇದರಿಂದ ಜಿಗುಪ್ಸೆಗೊಂಡ ನಂಜರಾಜ ತನ್ನ ಸ್ಥಾನವನ್ನು ತೊರೆಯಲು ನಿರ್ಧರಿಸಿದ. ಆಗ ಹೈದರ್ ಮೈಸೂರಿನ ದಳವಾಯಿಯಾದ. ಆಡಳಿತದಲ್ಲಿ ತನಗೆ ಸಹಾಯ ಮಾಡಲು ಖಂಡೇರಾಯನನ್ನು ಕಾರ್ಯದರ್ಶಿಯಾಗಿ ನೇಮಿಸಿಕೊಂಡ.

ಅಧಿಕಾರವನ್ನು ಪುನಃ ಪಡೆಯಲು ರಾಜಮನೆತನ ಕೊನೆಯ ಪ್ರಯತ್ನವಾಗಿ ಸಂಚು ನಡೆಸಿತು. ಅದರಲ್ಲಿ ಖಂಡೇರಾಯ ಕೇಂದ್ರವ್ಯಕ್ತಿಯಾಗಿದ್ದ. 1760ರ ಆಗಸ್ಟ್‌ನಲ್ಲಿ ನಡೆದ ಮರಾಠರ ದಾಳಿಯ ಸಂದರ್ಭವನ್ನು ಉಪಯೋಗಿಸಿಕೊಂಡು ಹೈದರನನ್ನು ಪದಚ್ಯುತಗೊಳಿಸುವುದೇ ಈ ಸಂಚಿನ ಹಂಚಿಕೆಯಾಗಿತ್ತು. ಆಗ ಹೈದರನ ಪಡೆಗಳು ಪಾಂಡಿಚೇರಿಯಲ್ಲಿರಲಿಲ್ಲ. ಖಂಡೇರಾಯನೇ ಸ್ವತಃ ನೇತೃತ್ವ ವಹಿಸಿ ದಾಳಿ ನಡೆಸಿದ. ಈ ಸಂದರ್ಭದಲ್ಲಿ ಹೈದರ್ ಓಡಿಹೋಗಿ ತಲೆತಪ್ಪಿಸಿಕೊಳ್ಳಬೇಕಾಯಿತು. ಇವನು ಒಂದು ವರ್ಷಕ್ಕೂ ಹೆಚ್ಚುಕಾಲ ಕಾಡುಮೇಡುಗಳಲ್ಲಿ ಅಲೆದಾಡಬೇಕಾಗಿಬಂದರೂ ತನ್ನ ಸಂಘಟನಾಚಾತುರ್ಯ, ವಿವೇಕಯುತ ಮುತ್ಸದ್ದಿತನ, ದೃಢನಿರ್ಧಾರ ಮತ್ತು ದಣಿವರಿಯದ ದುಡಿಮೆಯಿಂದಾಗಿ ತನ್ನ ಅಧಿಕಾರ ಸ್ಥಾನವನ್ನು ಪುನಃ ಪಡೆದ. ಅಲ್ಲಿಂದ ಮುಂದೆ ಇವನು ಮೈಸೂರು ರಾಜ್ಯದ ಅನಿರ್ಬಂಧಿತ ಅಧಿಪತಿಯಾದ.

ಹೈದರ್ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ಮೇಲೆ ರಾಜ್ಯದ ಸರಹದ್ದುಗಳನ್ನು ವಿಸ್ತರಿಸುವತ್ತ ಗಮನ ಹರಿಸಿದ. 1761ರಲ್ಲಿ ಇವನು ಆದೋನಿಯ ಬಸಲತ್ ಜಂಗ್‌ನೊಡನೆ ಕೂಡಿಕೊಂಡು ಶಿರಾವನ್ನು ವಶಪಡಿಸಿಕೊಂಡ. ತರುವಾಯ ಬಸಲತ್ ಜಂಗನಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಶಿರಾವನ್ನು ಪಡೆದ. ದಕ್ಷಿಣದಲ್ಲಿ ಸಮಗ್ರ ಮುಗಲ್ ಪ್ರಾಂತ್ಯದ ರಾಜಧಾನಿಯಾದ ಶಿರಾ ವಶವಾದ ಕೂಡಲೆ ಅದರ ಸುತ್ತಮುತ್ತಲ ವಿಸ್ತಾರ ಪ್ರದೇಶವನ್ನು ಹೈದರ್ ತನ್ನ ರಾಜ್ಯಕ್ಕೆ ಸೇರಿಸಿಕೊಂಡ ಬಹುಬೇಗ ಹೊಸಕೋಟೆ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಪೆನುಕೊಂಡೆ, ಮಡಕಶಿರಾ, ನಂದಿದುರ್ಗ ಮತ್ತು ಹರಪನಹಳ್ಳಿಗಳನ್ನು ಹಿಡಿದ. ಚಿತ್ರದುರ್ಗವನ್ನು ಜಯಿಸುವಲ್ಲಿ ಸ್ವಲ್ಪಮಟ್ಟಿನ ತೊಂದರೆ ಎದುರಿಸಿದರೂ ಕೊನೆಗೆ ವಶಪಡಿಸಿಕೊಂಡ. ಆದರೆ ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಸಮೃದ್ಧವಾಗಿದ್ದ ಮತ್ತು ಪಶ್ಚಿಮತೀರದವರೆಗೂ ಹಬ್ಬಿದ್ದ ವಿಸ್ತಾರ ಪ್ರದೇಶವನ್ನು ಹೊಂದಿದ್ದಂಥ ಬಿದನೂರನ್ನು ಗೆದ್ದಿದ್ದು ಈ ಕಾಲದಲ್ಲಿ ಇವನು ಗಳಿಸಿದ ವಿಜಯಗಳಲ್ಲೆಲ್ಲ ಅತಿಮುಖ್ಯವಾದುದು. ಬಿದನೂರು ರಾಜಮನೆತನದಲ್ಲಿ ಉಂಟಾಗಿದ್ದ ಅಂತಃಕಲಹ, ಅವರ ವಿಷಯಗಳಲ್ಲಿ ಪ್ರವೇಶಿಸಲು ಹೈದರನಿಗೆ ಒಳ್ಳೆಯ ಅವಕಾಶ ಕಲ್ಪಿಸಿತು. ಇವನು ಬಿದನೂರನ್ನು ತಲುಪಿದಾಗ ಕೋಟೆಯನ್ನು ರಕ್ಷಿಸುತ್ತಿದ್ದ ರಾಣಿ ವೀರಮ್ಮಾಜಿ ಬಳ್ಳಾರಿದುರ್ಗಕ್ಕೆ ಪಲಾಯನ ಮಾಡಿದಳು. ಆಗ ಈ ಸ್ಥಳವನ್ನು ಹೆಚ್ಚು ಕಷ್ಟವಿಲ್ಲದೆ ವಶಪಡಿಸಿಕೊಳ್ಳಲಾಯಿತು. ಹೈದರ್ ಅಲಿಗೆ ಅಲ್ಲಿ ಅಪಾರ ಐಶ್ವರ್ಯ ಸಿಕ್ಕಿತು. ಹೊನ್ನಾವರದಿಂದ ಮಂಗಳೂರಿನವರೆಗಿನ ಪಶ್ಚಿಮ ತೀರಪ್ರದೇಶ ಇವನ ಸ್ವಾಧೀನವಾಯಿತು. ಇವನು ಸುಂಡವನ್ನು ಸಹ ವಶಪಡಿಸಿಕೊಂಡು ತಾನು ಅಧಿಕಾರಕ್ಕೆ ಬಂದ ಮೂರು ವರ್ಷಗಳೊಳಗೆ ರಾಜ್ಯವನ್ನು ಗೋವಾದವರೆಗೆ ವಿಸ್ತರಿಸಿದ.

ಮೈಸೂರು ರಾಜ್ಯದ ಈ ಶೀಘ್ರ ವಿಸ್ತರಣೆಯನ್ನು ಕಂಡು ನೆರೆಹೊರೆಯವರಾದ ಮರಾಠರು, ನಿಜಾಮ ಮತ್ತು ಇಂಗ್ಲಿಷರು ಅಸೂಯೆಗೊಂಡರು. ಮೂರನೆಯ ಪಾಣಿಪಟ್ ಯುದ್ಧದ ಸೋಲಿನ ಅನಂತರ ಮರಾಠರು ಒಂದನೆಯ ಮಾಧವರಾವ್‌ನ ಸಮರ್ಥ ನಾಯಕತ್ವದಲ್ಲಿ ತಮ್ಮ ಪ್ರಾಬಲ್ಯವನ್ನು ಮರಳಿ ಗಳಿಸುತ್ತಿದ್ದರು. ಅವರು ಉತ್ತರದಲ್ಲಿ ಆದ ನಷ್ಟವನ್ನು ತುಂಬಿಕೊಳ್ಳಲು ಮೈಸೂರು ಪ್ರದೇಶದ ಮೇಲೆ ಮತ್ತೆ ಮತ್ತೆ ದಾಳಿ ಎಸಗತೊಡಗಿದರು. ಆದ್ದರಿಂದ 1762–78ರವರೆಗೆ ಮರಾಠರ ದಾಳಿಗಳ ವಿರುದ್ಧ ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳುವುದೇ ಹೈದರನ ಪ್ರಧಾನ ಕಾರ್ಯನೀತಿಯಾಗಿದ್ದಿತು. 1764ರ ಮೊದಲ ಭಾಗದಲ್ಲಿ ಮಾಧವರಾಯನು ಮೈಸೂರಿನ ಮೇಲೆ ದಾಳಿ ಮಾಡಿ ಸುಮಾರು ಒಂದು ವರ್ಷ ಕಾಲ ಕಾರ್ಯಾಚರಣೆ ನಡೆಸಿದ. ಹೈದರ್ ಅಲಿ ಮಾಧವರಾಯನಿಗೆ ಸಮಬಲನಾಗಿಲ್ಲದಿದ್ದುದರಿಂದ ಇವನು ನೇರ ಯುದ್ಧಕ್ಕಿಳಿಯದೆ ಮರಾಠರನ್ನು ರಾತ್ರಿದಾಳಿಗಳಿಂದ ಚಕಿತಗೊಳಿಸುವ, ಅವರ ಅಗತ್ಯ ಸಾಮಗ್ರಿಗಳ ಮತ್ತು ಆಹಾರ

ವಸ್ತುಗಳ ಪೂರೈಕೆಯನ್ನು ಕಡಿದುಹಾಕುವ ಹಾಗೂ ಶಾಂತಿಯುತ ಸಂಧಾನಗಳಿಗಾಗಿ ಯುಕ್ತ ಅವಕಾಶ ಕಲ್ಪಿಸಿಕೊಳ್ಳುವ ತಂತ್ರವನ್ನು ಅನುಸರಿಸಿದ. ಕೊನೆಗೆ 28 ಲಕ್ಷ ರೂಪಾಯಿಗಳ ಕಪ್ಪ ಕೊಡುವ ಮತ್ತು ಸರಹದ್ದು ಪ್ರದೇಶದ ಕೆಲವು ಸಣ್ಣ ಕೋಟೆಗಳನ್ನು ಬಿಟ್ಟುಕೊಡುವ ಮೂಲಕ ಮಾಧವರಾವ್‍ನನ್ನು ಸಂತುಷ್ಟಗೊಳಿಸಿದ. ಮರಾಠರೊಡನೆ ಶಾಂತಿ ಒಪ್ಪಂದ ಮಾಡಿಕೊಂಡು ಹೈದರ್ ಮಲಬಾರಿನ ದಿಗ್ವಿಜಯ ಕೈಗೊಂಡ. ಇವನು ಬಿದನೂರು ರಾಜ್ಯವನ್ನು ಗೆದ್ದದ್ದು ಮಲಬಾರನ್ನು ಸ್ವಾಧೀನಪಡಿಸಿಕೊಳ್ಳಲು ಅನುಕೂಲವಾಯಿತು. ಇವನು ಈ ವೇಳೆಗಾಗಲೇ ಅಗತ್ಯವಾಗಿದ್ದ ನೌಕಾಪಡೆಯನ್ನು ರಚಿಸಿಕೊಂಡಿದ್ದರಿಂದ ಇಂಗ್ಲಿಷರು ಮತ್ತು ಪೋರ್ಚುಗೀಸರಿಂದ ತನ್ನ ತೀರಪ್ರದೇಶಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಾಯಿತು. 1765ರ ಹೊತ್ತಿಗೆ ಇವನ ಬಳಿ 30 ಯುದ್ಧ ನೌಕೆಗಳು ಮತ್ತು ದೊಡ್ಡ ಸಂಖ್ಯೆಯಲ್ಲಿ ಸಾಗಣೆ ನೌಕೆಗಳಿದ್ದುವು. ಇವನ ನೌಕೆಗಳನ್ನು ನೋಡಿಕೊಳ್ಳಲು ಮಾಪಿಳ್ಳೆಗಳ ಉತ್ತಮ ನಾವಿಕ ತಂಡ ದೊರೆತಿತ್ತು. ಅನಂತರ ಡಚ್ಚರ ನೆರವಿನಿಂದ 20–40 ಫಿರಂಗಿಗಳನ್ನು ಸಾಗಿಸುವ ಮುಕ್ಕೂವೆಯ ಹಡಗುಗಳು ಮತ್ತು ಇತರ ಅನೇಕ ಸಣ್ಣ ಹಡಗುಗಳಿಂದ ಹೈದರ್ ತನ್ನ ನೌಕಾಪಡೆಯನ್ನು ಬಲಗೊಳಿಸಿದ. ಇದು ಅನೇಕ ಯುದ್ಧಾಕಾಂಕ್ಷಿ ನಾಯರ್ ಅಧಿಪತಿಗಳನ್ನು ಸದೆಬಡಿದು ಮಲಬಾರನ್ನು ವಶಪಡಿಸಿಕೊಳ್ಳಲು ಬಹುಮುಖ್ಯ ಸಾಧನವಾಗಿ ಪರಿಣಮಿಸಿತು. ಕೊಳತ್ತಿರಿ ರಾಜನು ತನ್ನ ಶತ್ರುಗಳ ವಿರುದ್ಧ ಹೈದರನ ಸಹಾಯವನ್ನು ಕೋರಿದ. ಈ ನೆಪವನ್ನು ಮುಂದೆಮಾಡಿಕೊಂಡ ಹೈದರ್ ಅಲಿ 40,000 ಸೈನ್ಯದೊಂದಿಗೆ ಮಲಬಾರನ್ನು ಪ್ರವೇಶಿಸಿ 1766ರ ಮಾರ್ಚ್ ಹೊತ್ತಿಗೆ ತಿರುವಾಂಕೂರು ರಾಜ್ಯವನ್ನುಳಿದು ಮಂಗಳೂರಿನಿಂದ ಕೊಚಿನ್‍ವರೆಗೆ ಸಮಗ್ರ ಮಲಬಾರನ್ನು ಸ್ವಾಧೀನಪಡಿಸಿಕೊಂಡ. ಹೈದರ್ ಆ ರಾಜ್ಯದ ಮೇಲೆಯೂ ದಂಡೆತ್ತಿ ಹೋಗಬಹುದಿತ್ತು. ಆದರೆ ಒಂದನೆಯ ಮೈಸೂರು ಯುದ್ಧಕ್ಕೆ ಕಾರಣವಾದ ಹೊಸ ಘಟನೆಗಳು ಇವನ ರಾಜ್ಯದ ಉತ್ತರದ ಗಡಿಗಳಲ್ಲಿ ಸಂಭವಿಸಿದ್ದರಿಂದ ಇವನು ಈ ವಿಜಯವನ್ನು ಮುಂದುವರಿಸಲಾಗಲಿಲ್ಲ.

ಹೈದರ್: ಚಿತ್ರಕಲಾಕೃತಿ

ಮರಾಠರು ಮಾತ್ರವಲ್ಲದೆ ಇಂಗ್ಲಿಷರೂ ಇವನ ಮುಖ್ಯ ಶತ್ರುಗಳಾಗಿದ್ದರು. ಅವರು ಕೂಡ ಇವನ ರಾಜ್ಯ ವಿಸ್ತರಣೆಯಿಂದ ಅಸಮಾಧಾನಗೊಂಡು ಇವನನ್ನು ನಾಶಪಡಿಸಲು ಯಾವುದಾದರೂ ಅವಕಾಶವನ್ನು ಬಳಸಿಕೊಳ್ಳಲು ಕಾಯುತ್ತಿದ್ದರು. ಈ ಬೆಳವಣಿಗೆ ಹೈದರ್ ಅಲಿಯ ವಿರುದ್ಧ ಇಂಗ್ಲಿಷರು, ಮರಾಠರು ಮತ್ತು ನಿಜಾಮ–ಇವರೆಲ್ಲ ಪ್ರಬಲ ಒಕ್ಕೂಟ ರಚಿಸಲು ಕಾರಣವಾಯಿತು. 1764ರಲ್ಲಿ ನಡೆದ ಬಕ್ಸಾರ್ ಯುದ್ಧದ ತರುವಾಯ ಕ್ಲೈವನು ಮುಗಲ್ ಸಾಮ್ರಾಟ ಷಾ ಆಲಂನಿಂದ ಬಂಗಾಲ, ಬಿಹಾರ ಮತ್ತು ಒರಿಸ್ಸಗಳ ದಿವಾನಿಯನ್ನಲ್ಲದೆ ಉತ್ತರ ಸರ್ಕಾರಗಳ ಐದು ಕಿರುಪ್ರದೇಶಗಳನ್ನು ಪಡೆದಿದ್ದ. ಈ ಸರ್ಕಾರಗಳು ನಿಜಾಮನಿಗೆ ಸೇರಿದ್ದವು. ಇಂಗ್ಲಿಷರಿಗೆ ಅವನ್ನು ಒಪ್ಪಿಸುವ ಕಾಲ ಬಂದಾಗ ಅವನು ಇಂಗ್ಲಿಷರನ್ನು ಸಮುದ್ರಕ್ಕೆ ಎಸೆಯುವುದಾಗಿ ಹೇಳುವಷ್ಟರ ಮಟ್ಟಿಗೆ ಕೋಪಗೊಂಡಿದ್ದ. ಆದರೆ ಇಂಗ್ಲಿಷರಿಗೆ ನಿಜಾಮನ ಮನಸ್ಸು ಮತ್ತು ಶಕ್ತಿ ತಿಳಿದಿದ್ದರಿಂದ ಅವರು ಬೇಗ ಅವನ ಮನವೊಲಿಸಿ ಮಿತ್ರನನ್ನಾಗಿ ಮಾಡಿಕೊಂಡರು. ನಿಜಾಮನಿಗೆ ಯಾವ ರೀತಿಯಲ್ಲೂ ಉಪಯೋಗಕ್ಕೆ ಬರದಿದ್ದ ಕಿರುಪ್ರದೇಶಗಳಿಗೆ ಬದಲಾಗಿ ಇಡೀ ಮೈಸೂರು ರಾಜ್ಯವನ್ನು ಜಯಿಸಿಕೊಡುವ ಆಶಾಭಾವನೆಯನ್ನು ಅವನಲ್ಲಿ ಹುಟ್ಟಿಸಿ ಅವನನ್ನು ಸೆಳೆದುಕೊಂಡಿದ್ದರು. ನಿಜಾಮನ ಬಳಿಗೆ ನಿಯೋಗ ಕಳುಹಿಸಿದ್ದ ಜನರಲ್ ಕೈಲಾರ್ಡ್‍ನು ಅವನ ಬೆಂಬಲ ಗಳಿಸುವಲ್ಲಿ ಚಾಣಾಕ್ಷತೆಯಿಂದ ಸಫಲನಾದ. ಇದರಿಂದ ಹೈದರನ ವಿರುದ್ಧ ಇಂಗ್ಲಿಷ್ ಮತ್ತು ನಿಜಾಮರ ಮೈತ್ರಿಕೂಟ ಬಹುಬೇಗ ರಚಿತವಾಯಿತು. ಈ ಇಬ್ಬರ ಮೈತ್ರಿಕೂಟ ಸಾಲದೆಂಬಂತೆ ಪ್ರತಿವರ್ಷವೂ ಸಾಮಾನ್ಯವಾಗಿ ನಡೆಯುತ್ತಿದ್ದ ಮರಾಠ ದಾಳಿಯ ಸಂದರ್ಭದಲ್ಲೇ ತಾವೂ ದಾಳಿ ನಡೆಸಲು ಸಮಯ ಕಾದರು. ಹೀಗೆ ಹೈದರ್ ಅಲಿಯ ವಿರುದ್ಧ ದಕ್ಷಿಣ ಭಾರತದ ಎಲ್ಲ ಮೂರೂ ಮುಖ್ಯ ರಾಜ್ಯಗಳ ಸಂಯುಕ್ತ ವ್ಯೂಹ ರಚನೆಗೊಂಡಿತು.

ಹೈದರ್ ಅಲಿಯನ್ನು ಹೀಗೆ ಏಕಾಂಗಿಯಾಗಿ ಮಾಡಿದರೂ ಇವನು ತನ್ನ ಚಾಣಾಕ್ಷತನದಿಂದ ಈ ಶತ್ರುಕೂಟವನ್ನು ಭೇದಿಸುವಲ್ಲಿ ಕೊನೆಗೂ ಯಶಸ್ವಿಯಾದ. ಮರಾಠರು ಉತ್ತರದಿಂದ ದಾಳಿ ಮಾಡಿದ ಕಾಲದಲ್ಲೇ ಇಂಗ್ಲಿಷರು ಮತ್ತು ನಿಜಾಮನೂ ಮೈಸೂರಿನ ವಿರುದ್ಧ ದೊಡ್ಡ ಸೈನ್ಯದೊಡನೆ ದಂಡೆತ್ತಿ ಬಂದರು. ಈ ಒಕ್ಕೂಟವನ್ನು ಮುರಿಯುವುದೇ ಹೈದರ್ ಮಾಡಬೇಕಾದ ಮುಖ್ಯ ಕಾರ್ಯವಾಗಿದ್ದಿತು. ಹೈದರನು ಮಾಧವರಾವ್‍ನೊಡನೆ ಒಪ್ಪಂದಕ್ಕೆ ಬಂದು ಅವನಿಗೆ ಕೆಲವು ಕೋಟೆಗಳನ್ನು ಮತ್ತು ಕೆಲವು ಲಕ್ಷ ರೂಪಾಯಿಗಳನ್ನು ನೀಡಿದ. ಇನ್ನು ನಿಜಾಮ ಮತ್ತು ಇಂಗ್ಲಿಷರು ಉಳಿದುಕೊಂಡರು. ಅವರಿಬ್ಬರಲ್ಲಿ ಭೇದಭಾವ ಬರುವಂತೆ ಮಾಡಲು ತನ್ನೆಲ್ಲ ಬುದ್ಧಿವಂತಿಕೆಯನ್ನು ಉಪಯೋಗಿಸಿದ ಭಾರತೀಯ ರಾಜ್ಯಗಳೆಲ್ಲ ವಿದೇಶೀಯರ ವಿರುದ್ಧ ಒಂದಾಗಬೇಕೆಂದು ಮುಂದಿಟ್ಟ ಇವನ ಸೂತ್ರ ಫಲಪ್ರದವಾಯಿತು. ಇದರಿಂದ ನಿಜಾಮ ಇದ್ದಕ್ಕಿದ್ದಂತೆಯೇ ಮಿತ್ರನಾದ. ಇಂಗ್ಲಿಷರು ತಮ್ಮ ಮಿತ್ರರೆಲ್ಲ ಶತ್ರುಪಕ್ಷ ಸೇರಿದ್ದನ್ನು ಕಂಡು ಅಚ್ಚರಿಗೊಂಡರು. ಈ ರೀತಿ ಮೊದಲ ಮೈಸೂರು ಯುದ್ಧ ಬಹು ವಿಲಕ್ಷಣ ಸ್ಥಿತಿಯಲ್ಲಿ ಪ್ರಾರಂಭವಾಯಿತು.

1767ರ ಆಗಸ್ಟ್‍ನಲ್ಲಿ ಹೈದರನು ನಿಜಾಮನೊಂದಿಗೆ ಕರ್ನಾಟಿಕ್ ಪ್ರದೇಶದ ಮೇಲೆ ದಾಳಿ ಮಾಡಿದ. ಸೆಪ್ಟೆಂಬರ್ 2ರಂದು ನಡೆದ ನಿರ್ಣಾಯಕ ಯುದ್ಧದಲ್ಲಿ ಇಂಗ್ಲಿಷ್ ಸೇನಾಪತಿ ಕರ್ನಲ್ ಸ್ಮಿತ್ ಹೈದರನಿಗೆ ಭಾರಿ ಪೆಟ್ಟುಕೊಟ್ಟ. ತರುವಾಯ ಹೈದರ್ ತನ್ನ ಯುದ್ಧತಂತ್ರವನ್ನು ಬದಲಾಯಿಸಿಕೊಂಡು ವಾಣಿಯಂಬಾಡಿ, ತಿರುವತ್ತೂರು ಮತ್ತು ಅಂಬೂರುಗಳನ್ನು ಹಿಡಿದ. ನಿಜಾಮ ಈ ಕಾರ್ಯಾಚರಣೆಗಳಲ್ಲಿ ಎಷ್ಟು ಘಾಸಿಗೊಂಡನೆಂದರೆ ಇಂಗ್ಲಿಷರೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಂಡು ಮಿತ್ರಕೂಟದಿಂದ ಹಿಂದೆ ಸರಿದ. ಇಂಗ್ಲಿಷರು ಮತ್ತು ಹೈದರನ ನಡುವೆ ಸುಮಾರು ಎರಡು ವರ್ಷಗಳ ಕಾಲ ನೇರ ಯುದ್ಧ ನಡೆಯಿತು. 1769 ಮಾರ್ಚ್ 28ರಂದು ಹೈದರ್ ಇದ್ದಕ್ಕಿದ್ದಂತೆ ಮದರಾಸಿನಲ್ಲಿ ಕಾಣಿಸಿಕೊಂಡ. ಇದು ಇಂಗ್ಲಿಷರನ್ನು ತಬ್ಬಿಬ್ಬುಗೊಳಿಸಿದ್ದಲ್ಲದೆ ಅವರು ಹೈದರನಿಗೆ ಶರಣಾಗದೆ ಅನ್ಯಮಾರ್ಗವೇ ಇರಲಿಲ್ಲ. ಅನೇಕ ವಿಧದಲ್ಲಿ ಪ್ರಾಮುಖ್ಯವಾದ ಇತಿಹಾಸಪ್ರಸಿದ್ಧ ಮದರಾಸು ಒಪ್ಪಂದವನ್ನು ಹೈದರ್ ಹೇಳಿ ಬರೆಸಿದ. ಇದು ಭಾರತೀಯ ರಾಜನೊಬ್ಬ ಇಂಗ್ಲಿಷರ ಮೇಲೆ ಸಾಧಿಸಿದ ಮೊದಲ ವಿಜಯವಾಗಿತ್ತು. ಈ ಯುದ್ಧದಿಂದ ಇಂಗ್ಲಿಷರು ಅಜೇಯರೆಂಬ ಪ್ರತೀತಿಯನ್ನು ಸಂಪೂರ್ಣವಾಗಿ ತೊಡೆದುಹಾಕಲಾಯಿತು. ಇಂಗ್ಲಿಷರು ಈ ಯುದ್ಧದಲ್ಲಿ ಆದ ಸರ್ವತೋಮುಖ ಹಾನಿಯನ್ನು ಅವರು ಭಾರತದ ನೆಲದಲ್ಲಿ ಎಂದೂ ಅನುಭವಿಸಿರಲಿಲ್ಲ. ಅವರು ಆರ್ಥಿಕ, ಸೈನಿಕ, ರಾಜಕೀಯ ಮತ್ತು ನೈತಿಕ ಹಾನಿಗಳೊಳಗಾಗಿ

ದ್ದರು. ಮೈಸೂರಿನ ಮೇಲೆ ಮರಾಠರು ದಾಳಿ ಎಸಗಿದ ಸಂದರ್ಭದಲ್ಲಿ ಅವನ ನೆರವಿಗೆ ಹೋಗುವುದು ಒಳಗೊಂಡಂತೆ ಇಂಗ್ಲಿಷರು ಹೈದರನ ಎಲ್ಲ ಷರತ್ತುಗಳಿಗೂ ಒಪ್ಪಿಕೊಂಡಿದ್ದರು.

ಹೈದರ್ ಅಲಿ ಇಂಗ್ಲಿಷರನ್ನು ಸೋಲಿಸಿದ್ದರಿಂದ ಇವನ ಘನತೆ ಬಹುವಾಗಿ ಹೆಚ್ಚಿತು. 1770 ಜನವರಿಯಲ್ಲಿ ಮರಾಠರು ಇವನ ರಾಜ್ಯದ ಮೇಲೆ ದಾಳಿ ಮಾಡಿದಾಗ ಇವನು ಇಂಗ್ಲಿಷ್ ಪಡೆಗಳನ್ನು ಕಳುಹಿಸುವಂತೆ ಇಂಗ್ಲಿಷರನ್ನು ಕೇಳಿದ. ಇಂಗ್ಲಿಷರು ಇದನ್ನು ನಿರಾಕರಿಸಿದರು. ತಮ್ಮ ಷರತ್ತನ್ನು ಉಲ್ಲಂಘಿಸಿದಾಗ ಅವರು ಭಾರಿ ಬೆಲೆ ತೆರಬೇಕಾಯಿತು. ಮುಂದೆ 1799ರಲ್ಲಿ ವೆಲ್ಲೆಸ್ಲಿ ಟಿಪ್ಪುವನ್ನು ನಾಶಪಡಿಸುವವರೆಗೂ ಮುಂದಿನ ಮೂವತ್ತು ವರ್ಷಗಳವರೆಗೆ ಮೈಸೂರು ಇಂಗ್ಲಿಷರ ಶಾಶ್ವತ ಶತ್ರುವಾಯಿತು. ಮೈಸೂರಿನ ಮೇಲೆ ಮಾಧವರಾವ್ ನಡೆಸಿದ ಕೊನೆಯ ಯುದ್ಧ ತೀವ್ರ ಸ್ವರೂಪದ್ದಾಗಿದ್ದು ಇಂಗ್ಲಿಷರ ಬಗ್ಗೆ ಹೈದರ್ ಕೋಪೋದ್ರಿಕ್ತನಾದ. ಮಾಧವರಾಯ ಈ ಯುದ್ಧ ನಡೆದ ಅನತಿಕಾಲದಲ್ಲಿ ನಿಧನನಾದುದರಿಂದ ಮರಾಠರು ಒಳ ಜಗಳದಲ್ಲಿ ತೊಡಗಿದರು. ಇದು ಹೈದರನಿಗೆ ಅನುಕೂಲ ಕಲ್ಪಿಸಿದ್ದಲ್ಲದೆ ಮರಾಠರ ಕೆಲವು ಪ್ರದೇಶಗಳನ್ನೂ ಇವನು ವಶಪಡಿಸಿಕೊಂಡ. ಗುತ್ತಿ, ನರಗುಂದಗಳು ಸೇರಿದಂತೆ ಕೃಷ್ಣಾನದಿಯವರೆಗೂ ಇವನು ರಾಜ್ಯ ವಿಸ್ತರಿಸಿದ. ಕೊಡಗನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ.

1776ರಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ನಡುವೆ ಯುದ್ಧ ಘೋಷಣೆಯಾದಾಗ ಇದು ಹೈದರನಿಗೆ 1770ರ ಒಪ್ಪಂದ ಮುರಿದಿದ್ದಕ್ಕಾಗಿ ಇಂಗ್ಲಿಷರ ಮೇಲೆ ಹಗೆ ಸಾಧಿಸಲು ಸದವಕಾಶ ಕಲ್ಪಿಸಿಕೊಟ್ಟಿತು. ಜೊತೆಗೆ ಎಲ್ಲ ಭಾರತೀಯ ರಾಜರುಗಳು ಇಂಗ್ಲಿಷರನ್ನು ದ್ವೇಷಿಸುತ್ತಿದ್ದರು. ಮರಾಠರು ತಮ್ಮ ಆಂತರಿಕ ವಿಷಯಗಳಲ್ಲಿ ಇಂಗ್ಲಿಷರನ್ನು ದ್ವೇಷಿಸುತ್ತಿದ್ದರು. ಮರಾಠರು ತಮ್ಮ ಆಂತರಿಕ ವಿಷಯಗಳಲ್ಲಿ ಇಂಗ್ಲಿಷರು ಕೈಹಾಕುವುದರಿಂದ ಅಸಮಾಧಾನಗೊಂಡಿದ್ದರೆ, ನಿಜಾಮನು ಗುಂಟೂರನ್ನು ಮದರಾಸು ಸರ್ಕಾರ ಕೇಳುತ್ತಿದ್ದುದರಿಂದ ಕ್ರುದ್ಧನಾಗಿದ್ದ. ತಾನು ಸೈನಿಕ ವಸ್ತುಗಳನ್ನು ಪಡೆಯುತ್ತಿದ್ದ ಫ್ರೆಂಚರ ಮಾಹೆ ಕೋಟೆಯನ್ನು ಇಂಗ್ಲಿಷರು ಮುತ್ತಿದ್ದು, ಗುಂಟೂರಿನ ತನ್ನ ಪ್ರದೇಶದ ಮೂಲಕ ಅಪ್ಪಣೆ ಇಲ್ಲದೆ ಹಾದುಹೋಗಿದ್ದು, ಮಲಬಾರಿನಲ್ಲಿ ತನ್ನ ವಿರುದ್ಧ ನಾಯರನ್ನು ಬೆಂಬಲಿಸಿ ತಂಟೆ ಮಾಡುತ್ತಿದ್ದುದ್ದು ಮೊದಲಾದ ಘಟನೆಗಳು ಹೈದರನ ಸಹನೆಯನ್ನು ಕೆಡಿಸಿದ್ದವು. ಈ ಘಟನೆಗಳು 1780ರಲ್ಲಿ ಇಂಗ್ಲಿಷರ ವಿರುದ್ಧ ಭಾರತೀಯ ಮೈತ್ರಿಕೂಟವನ್ನು ರಚಿಸುವಂಥ ವಿಶಿಷ್ಟ ಪರಿಸ್ಥಿತಿ ನಿರ್ಮಿತವಾಗಲು ಕಾರಣವಾದವು. ಈ ಮೈತ್ರಿಕೂಟ ರಚನೆಯಲ್ಲಿ ಹೈದರ್ ಮಹತ್ತ್ವದ ಪಾತ್ರ ವಹಿಸಿದ. ಈ ಮಿತ್ರಕೂಟದವರ ಒಪ್ಪಂದದ ಪ್ರಕಾರ ಹೈದರ್ ಮದರಾಸು ಪ್ರೆಸಿಡೆನ್ಸಿಯ ಮೇಲೆ ಬೃಹತ್ ದಾಳಿ ನಡೆಸಿ, ಅಲ್ಲಿಂದ ಇಂಗ್ಲಿಷರನ್ನು ಮೂಲೋತ್ಪಾಟನ ಮಾಡಬೇಕಾಗಿತ್ತು. ನಾನಾ ಫಡ್ನವಿಸ್, ಸಿಂಧ್ಯ,ಗಾಯಕ್‌ವಾಡ್ ಮತ್ತು ಹೊಯ್ಸಳರನ್ನೊಳಗೊಂಡ ಮರಾಠ ಕೂಟದವರು ಮುಂಬಯಿಯನ್ನು ಮುತ್ತಬೇಕಾಗಿತ್ತು; ಮುದಾಜಿ ಭೋಂಸೆ ಬಂಗಾಲಕ್ಕೆ ದಾಳಿ ಇಡಬೇಕಾಗಿತ್ತು; ನಿಜಾಮನು ಉತ್ತರದ ಸರ್ಕಾರಗಳಿಂದ ಇಂಗ್ಲಿಷರನ್ನು ತೊಡೆದುಹಾಕಬೇಕಿತ್ತು. ಸಮಾನ ಉದ್ದೇಶಕ್ಕಾಗಿ ಇಷ್ಟೊಂದು ಭಾರತೀಯ ರಾಜರುಗಳು ಒಗ್ಗೂಡಿದ್ದು ಮತ್ತು ಅಷ್ಟು ದೀರ್ಘಕಾಲ ಒಂದಾಗಿ ನಿಂತದ್ದು ಇತಿಹಾಸದಲ್ಲಿ ಅದೇ ಪ್ರಥಮ.

ಈ ಒಪ್ಪಂದಕ್ಕೆ ನಿಷ್ಠನಾಗಿದ್ದ ಹೈದರ್ ಒಂದು ಲಕ್ಷಕ್ಕೂ ಹೆಚ್ಚು ಸೈನ್ಯ ಸಂಗ್ರಹಿಸಿ ಕರ್ನಾಟಿಕ್ ಮೇಲೆ ಉಗ್ರದಾಳಿ ನಡೆಸಿದ. ಇಂಗ್ಲಿಷರನ್ನು ಇವನು ಹಲವೆಡೆಗಳಲ್ಲಿ ಸೋಲಿಸಿದ. ಕರ್ನಲ್ ಬ್ಯಾಲಿಯ ಪಡೆಯನ್ನು ಸಂಪೂರ್ಣ ನಾಶಗೊಳಿಸಿ ಅವನನ್ನು ಸೆರೆಹಿಡಿಯಲಾಯಿತು. ದೆಹಲಿಯ ಷಾ ಆಲಂ, ಔದ್‌ನ ಷಿಯ-ಉದ್-ದೌಲ ಮತ್ತು ಬಂಗಾಲದ ಮೀರ್ ಖಾಸಿಂ ಇವರ ಪ್ರಬಲ ಕೂಟವನ್ನು ಸೋಲಿಸಿದ ಬಕ್ಸಾರ್ ಯುದ್ಧವೀರ ಜನರಲ್ ಹೆಕ್ಟರ್ ಮನ್ರೋ ಹೈದರನನ್ನು ಎದುರಿಸಲಾರದೆ ಫಿರಂಗಿಗಳನ್ನು ಮತ್ತು ಕೋವಿಗಳನ್ನು ಕಾಂಜೀವರಂ ಕೆರೆಗೆ ಎಸೆದು ಪ್ರಾಣರಕ್ಷಣೆಗಾಗಿ ಪಲಾಯನ ಮಾಡಿದ. ಮದರಾಸು ಕೌನ್ಸಿಲ್‌ನ ಸದಸ್ಯರು ದೋಣಿಗಳಲ್ಲಿ ಆಶ್ರಯ ಪಡೆಯುವಷ್ಟರ ಮಟ್ಟಿಗೆ ಭಯಬೀತರಾಗಿದ್ದರು. ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸನು ವೈಟ್‌ಹಿಲ್‌ನ ನೇತೃತ್ವದ ಮದರಾಸು ಸರ್ಕಾರವನ್ನು ರದ್ದುಪಡಿಸಿ ಮದರಾಸಿನಲ್ಲಿ ಅಳಿದುಳಿದಿದ್ದ ಇಂಗ್ಲಿಷರ ಅಸ್ತಿತ್ವವನ್ನು ಉಳಿಸಲು ಯುದ್ಧವೀರ ಸರ್ ಐರ್‌ಕೂಟನನ್ನು ಕಳುಹಿಸಬೇಕಾಯಿತು. ಹೀಗೆ ಹೈದರ್ ಎರಡನೆಯ ಮೈಸೂರು ಯುದ್ಧವನ್ನು ಯಶಸ್ವಿಯಾಗಿ ನಿರ್ವಹಿಸಿದ.

ಆದರೆ ಮಹಾ ಒಕ್ಕೂಟದ ಇತರ ಭಾಗಿಗಳ ಸಾಧನೆ ಸಪ್ಪೆಯಾಗಿತ್ತು. ನಿಜಾಮನು ಉದ್ದುದ್ದ ಮಾತನಾಡಿದರೂ ಹೈದರಾಬಾದಿನಿಂದ ಒಬ್ಬ ಸೈನಿಕನನ್ನೂ ಕಳುಹಿಸಲಿಲ್ಲ. ಇತ್ತ ಹೇಸ್ಟಿಂಗ್ಸ್ ಗುಂಟೂರನ್ನು ತೆಗೆದುಕೊಳ್ಳುವುದಿಲ್ಲವೆಂದು ಒಂದು ಪತ್ರವನ್ನು ತನಗೆ ಬರೆದದ್ದೇ ನಿಜಾಮನಿಗೆ ಸಂತೃಪ್ತಿ ತಂದಿತ್ತು. ಇದೇ ರೀತಿ ಗವರ್ನರ್ ಜನರಲ್ಲನು ನಾಗಪುರದ ಮುದಾಜಿಗೆ ಅವನ ಮಗ ಚಿಮನ್‌ಜಿಯನ್ನು ಮರಾಠ ಪಡೆಗಳ ಸೇನಾಪತಿಯಾಗಿ ಮಾಡಲು ನೇರವಾಗುವುದಾಗಿ ನೀಡಿದ ಭರವಸೆಯಿಂದ ಅವನು ಬಂಗಾಲದ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಪಶ್ಚಿಮ ಭಾರತದಲ್ಲಿ ಮರಾಠ ಸರದಾರರಿಗೆ ಇಂಗ್ಲಿಷರು ಕೊಟ್ಟ ಕೆಲವು ಹೊಡೆತಗಳಿಂದಾಗಿ ಮಹದಾಜಿ ಸಿಂಧ್ಯನು ಇಂಗ್ಲಿಷರೊಂದಿಗೆ ಸಾಲ್ಬಾಯಿ ಒಪ್ಪಂದ ಮಾಡಿಕೊಂಡ. ಹೋಳ್ಕರನು ಇಂದೂರು ಸಿಂಧ್ಯನ ರಾಜಧಾನಿ ಗ್ವಾಲಿಯರ್ ಸೇರಿದಂತೆ ಮರಾಠರು ಗಣನೀಯ ಪ್ರದೇಶವನ್ನು ಕಳೆದುಕೊಂಡರು. ಈ ಸಂದರ್ಭದಲ್ಲಿ ಹೈದರ್ ಅಲಿಯೊಬ್ಬನೇ ಇಂಗ್ಲಿಷರಿಗೆ ಸರಿಯಾದ ಪಾಠ ಕಲಿಸಿದವ. ಇವನು ಕರ್ನಾಟಕ ಪ್ರದೇಶವನ್ನು ಬಿಟ್ಟುಕೊಡದೆ ಆರ್ಕಾಟನ್ನು ಮುಖ್ಯ ಕೇಂದ್ರವಾಗಿ ಮಾಡಿಕೊಂಡ. ಆದರೆ ದುರದೃಷ್ಟವಶಾತ್ ವಿಧಿ ಇವನನ್ನು ಹೆಚ್ಚು ಕಾಲ ಬಾಳಲು ಬಿಡಲಿಲ್ಲ. ಹೈದರ್ 1782 ಡಿಸೆಂಬರ್ 16ರಂದು ಯುದ್ಧ ನಿರತನಾಗಿದ್ದಾಗಲೇ ಕಾಯಿಲೆಯಿಂದ ಮರಣಹೊಂದಿದ. ಇವನ ಪರಾಕ್ರಮಿಯಾದ ಮಗ ಟಿಪ್ಪು ಈ ಯುದ್ಧವನ್ನು ಮುಂದುವರಿಸಿ 1784ರಲ್ಲಿ ಯಶಸ್ವಿಯಾಗಿ ಕೊನೆಗೊಳಿಸಿದ.

ಹೈದರ್ ಅಲಿ ಇತಿಹಾಸದ ಗಮನಾರ್ಹ ವ್ಯಕ್ತಿಗಳಲ್ಲೊಬ್ಬ. ಇವನ ದೂರದೃಷ್ಟಿ, ಚಾಣಾಕ್ಷತನ, ಧೈರ್ಯ ಮತ್ತು ಸೈನ್ಯಸಂಘಟನಾ ಸಾಮರ್ಥ್ಯಗಳು ದಕ್ಷಿಣ ಭಾರತದಲ್ಲಿ ವಿದೇಶೀಯರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳದಂತೆ ಮಾಡಿದ್ದವು. ಇವನು ಆಡಳಿತದಲ್ಲಿ ನ್ಯಾಯಪರನೂ ಉದಾರಿಯೂ ಸಹನಾಮಯಿಯೂ ಆಗಿದ್ದ. ಇವನ ಸಮರ್ಥ ಆಳಿಕೆಯಲ್ಲಿ ಇಡೀ ಕರ್ನಾಟಕ ಒಗ್ಗೂಡಿ ದಕ್ಷ ಮತ್ತು ದೃಢ ಸರ್ಕಾರ ಪಡೆದಿತ್ತು. (ಬಿ.ಎಸ್.ಎ.)

**ನಾಣ್ಯಗಳು:** ಹೈದರ್ ಅಲಿ 1761ರಲ್ಲಿ ಅಧಿಕಾರವನ್ನು ವಹಿಸಿಕೊಂಡಾಗ ಮೈಸೂರಿನಲ್ಲಿ ಮುಗಲ್ ಮತ್ತು ವಿಜಯನಗರದ ನಾಣ್ಯಗಳು ಹೆಚ್ಚು ಪ್ರಸಿದ್ಧಿ ಹೊಂದಿದ್ದು ಜನಾನುರಾಗಿಯಾಗಿದ್ದವು. ಅದರಲ್ಲಿಯೂ ವಿಜಯನಗರದ ನಾಣ್ಯಗಳು ಹೆಚ್ಚು ಬಳಕೆಯಲ್ಲಿದ್ದವು. ಇದನ್ನು ಗಮನಿಸಿದ ಹೈದರ್ ತನ್ನ ನಾಣ್ಯಗಳಲ್ಲಿ ಹೊಸ ಬದಲಾವಣೆಗಳನ್ನು ವಿಶೇಷವಾಗಿ ಮಾಡದೆ ವಿಜಯನಗರದ ಮತ್ತು ಮುಗಲ್ ರೀತಿಯ ನಾಣ್ಯಗಳ ಪರಂಪರೆಯನ್ನೇ ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಮುಂದುವರಿಸಿದ. ಈತ ನಾಣ್ಯಗಳ ವಿಷಯದಲ್ಲಿ ಅಷ್ಟೊಂದು ಆಸಕ್ತಿಯನ್ನು ತೋರಿಸಿದನೆಂದು ಹೇಳಲೂ ಆಗುವುದಿಲ್ಲ. ಇವನ ಮಗ ಟಿಪ್ಪುಸುಲ್ತಾನನ ನಾಣ್ಯಗಳು ನಾಣ್ಯಶಾಸ್ತ್ರಜ್ಞನನ್ನು ಅಚ್ಚರಿಗೊಳಿಸುವಷ್ಟು ಸುಂದರವೂ ವೈವಿಧ್ಯಪೂರ್ಣವೂ ಆಗಿವೆ. ಆದರೆ ಹೈದರನ ನಾಣ್ಯಗಳಲ್ಲಿ ಆ ಕಲಾವಂತಿಕೆಯಾಗಲೀ ವೈವಿಧ್ಯತೆಯಾಗಲೀ ಕಾಣಬರುವುದಿಲ್ಲ.

1763ರಲ್ಲಿ ಹೈದರ್ ಅಲಿ ಬಿದನೂರನ್ನು ತನ್ನ ವಶಮಾಡಿಕೊಂಡ ಮೇಲೆ, ಅಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿದ. ಈ ಟಂಕಸಾಲೆಯಿಂದ ಬಹಾದುರಿ ಹಣವೆಂಬ ಚಿನ್ನದ ನಾಣ್ಯಗಳನ್ನು ಮುದ್ರಿಸಿದ. ಇವು ವಿಜಯನಗರದ ಸದಾಶಿವರಾಯನ ನಾಣ್ಯಗಳಂತೆಯೇ ಇವೆ. ಇವುಗಳ ಮುಮ್ಮುಖದಲ್ಲಿ ಶಿವ–ಪಾರ್ವತಿಯರ ಚಿತ್ರವೂ ಹಿಮ್ಮುಖದಲ್ಲಿ ಬಿಂದುಗಳ ವೃತ್ತದಲ್ಲಿ ಪರ್ಷಿಯನ್ ಲಿಪಿಯಲ್ಲಿ 'ಹ' ಎಂಬ ಅಕ್ಷರವೂ ಇದೆ. ಈ ರೀತಿಯ ನಾಣ್ಯಗಳನ್ನು ಬೆಂಗಳೂರು ಟಂಕಸಾಲೆಯಿಂದಲೂ ಮುದ್ರಿಸಿದ. ಇವು ದೊಡ್ಡತಲೆ ಬೆಂಗಳೂರಿ ಎಂದೂ ಪ್ರಸಿದ್ಧವಾಗಿವೆ. ಇವು ಪಗೋಡ ನಾಣ್ಯಗಳ ನಮೂನೆಗೆ ಸೇರಿದವು.

ಇವನ ಅರ್ಧವರಹ ಚಿನ್ನದ ನಾಣ್ಯಗಳು ಕೃಷ್ಣದೇವರಾಯನ ದುರ್ಗೀ ಪಗೋಡದಂತೆ ಇವೆ. ಇವು ಅಷ್ಟಾಗಿ ದೊರಕಿಲ್ಲ. ಹೈದರ್ ಅಲಿ ಗುತ್ತಿಯ ಟಂಕಸಾಲೆಯಲ್ಲಿ ಮುದ್ರಿಸಿದ ಪಗೋಡಗಳು ವಿಶೇಷವಾಗಿ ಮುಗಲ್ ಪಗೋಡಗಳನ್ನೇ ಹೋಲುತ್ತವೆ. ಇವುಗಳ ಜೊತೆಗೆ ಈತ ಫಣಂ ಎಂಬ ನಮೂನೆಯ ಚಿನ್ನದ ನಾಣ್ಯಗಳನ್ನೂ ಮುದ್ರಿಸಿದ. ಇವೂ ಪಗೋಡ ನಾಣ್ಯಗಳಂತೆಯೇ ಇವೆ. ಆದರೆ ಇವುಗಳಲ್ಲಿ ಕೆಲವು ಫಣಂ ಮತ್ತು ಅರ್ಧಫಣಂ ನಾಣ್ಯಗಳಲ್ಲಿ ಒಂದು ಮುಖದಲ್ಲಿ 'ಹೆ' ಎಂಬ ಅಕ್ಷರವೂ ಮತ್ತೊಂದು ಮುಖದಲ್ಲಿ ಹಿಜಿರ ಕಾಲವೂ ನಮೂದಿತವಾಗಿವೆ. ಅರ್ಧಪಗೋಡ ನಮೂನೆಯ ನಾಣ್ಯಗಳಲ್ಲಿ ಕುಳಿತಿರುವ ವಿಷ್ಣುವಿನ ಚಿತ್ರವಿದೆ. ಈ ನಮೂನೆಯ ನಾಣ್ಯಗಳು ವಿಶೇಷವಾಗಿ ದೊರಕಿಲ್ಲ. ಇದೇ ನಮೂನೆಯ ಪಗೋಡಗಳನ್ನೂ ಹೈದರ್ ಅಚ್ಚುಹಾಕಿಸಿರಬೇಕೆಂದು ಖ್ಯಾತ ನಾಣ್ಯಶಾಸ್ತ್ರಜ್ಞ ಹೆಂಡರ್‌ಸನ್ ಊಹಿಸಿದ್ದರೂ ಅಂಥವು ಇದುವರೆಗೂ ದೊರಕಿಲ್ಲ.

ಹೈದರ್ ಬೆಳ್ಳಿಯ ನಾಣ್ಯಗಳನ್ನು ಅಚ್ಚುಹಾಕಿಸಿದನೇ ಇಲ್ಲವೇ ಎಂಬುದು ಖಚಿತವಾಗಿ ತಿಳಿದು ಬಂದಿಲ್ಲ. ಆದರೆ ಇವನ ತಾಮ್ರದ ನಾಣ್ಯಗಳು ವಿಶೇಷವಾಗಿ ದೊರಕಿವೆ. ಇವನ ತಾಮ್ರದ ನಾಣ್ಯ ಪೈಸಾದಲ್ಲಿ ಮುಮ್ಮುಖದಲ್ಲಿ ಆನೆಯ ಚಿತ್ರವೂ ಹಿಮ್ಮುಖದಲ್ಲಿ ಕಾಲ ಮತ್ತು ಟಂಕಸಾಲೆಯ ಹೆಸರೂ ಬರೆಯಲ್ಪಟ್ಟಿವೆ. ಇವು ವಿಶೇಷವಾಗಿ ಶ್ರೀರಂಗಪಟ್ಟಣ ಮತ್ತು ಬಳ್ಳಾರಿಗಳಲ್ಲಿ ಅಚ್ಚಾದವು. ಇನ್ನು ಕೆಲವು ಪೈಸಾಗಳಲ್ಲಿ ಕನ್ನಡ ಮತ್ತು ಅರಾಬಿಕ್ ಸಂಖ್ಯೆಗಳೂ ಹಿಂಭಾಗದಲ್ಲಿ 'ಹೆ' ಎಂಬ ಅಕ್ಷರವೂ ಇವೆ. ಇವೂ ಬಳ್ಳಾರಿ ಮತ್ತು ಶ್ರೀರಂಗಪಟ್ಟಣಗಳಲ್ಲಿ ಮುದ್ರಿತವಾದವುಗಳು. ಇವುಗಳಲ್ಲಿರುವ ಸಂಖ್ಯೆಗಳು ಏನನ್ನು ಸೂಚಿಸುತ್ತವೆ ಎಂಬುದು ಇನ್ನೂ ವಿವಾದಾಸ್ಪದವಾಗಿಯೇ ಉಳಿದಿದೆ. ಹುಲಿ ಮತ್ತು ಕೊಡಲಿಯ ಚಿತ್ರವಿರುವ ತಾಮ್ರದ ಪೈಸಾಗಳನ್ನು ಹೈದರನ ನಾಣ್ಯಗಳೆಂದು ಕೆಲವರು ಭಾವಿಸಿದ್ದರೂ ಅದನ್ನು ಖಚಿತವಾಗಿ ಹೇಳುವಂತಿಲ್ಲವೆಂದು ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ನಾಣ್ಯಗಳನ್ನು ವಿಶೇಷವಾಗಿ ಅಭ್ಯಾಸ ಮಾಡಿರುವ ಹೆಂಡರ್‌ಸನ್ ಎಂಬ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. (ಎ.ವಿ.ಎನ್.)

**ಹೈನುಗಾರಿಕೆ:** ಕೃಷಿ ಪ್ರಧಾನವಾದ ಭಾರತದಲ್ಲಿ ಎಲ್ಲೆಡೆಯಲ್ಲಿ ಇರುವಂತೆಯೇ ಕರ್ನಾಟಕದಲ್ಲೂ ಹೈನುಗಾರಿಕೆ ಆಕರ್ಷಕ ಹಾಗೂ ಪ್ರಮುಖ ಉದ್ಯಮಗಳಲ್ಲೊಂದಾಗಿದೆ. ಹಾಲಿನ ಉತ್ಪಾದನೆ ಮತ್ತು ಮಾರಾಟ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಒಂದು ಉಪಕಸಬೆಂದು ಪರಿಗಣಿತವಾಗಿದೆ.

ಮೊದಮೊದಲು ಹಾಲಿನ ಉತ್ಪಾದನೆಗೆ ಹಸುಗಳಿಗಿಂತಲೂ ಎಮ್ಮೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟದ್ದರಿಂದ ಹೈನುಗಾರಿಕೆಯಲ್ಲಿ ಪ್ರಗತಿ ಕಂಡುಬರಲಿಲ್ಲ. ಸ್ಥಳೀಯ ತಳಿಗಳಾದ ಸಿಂಧಿ, ಸಾಹಿವಾಲ್ ಮುಂತಾದವುಗಳೊಂದಿಗೆ ನಾಟಿ ಹಸುಗಳನ್ನು ಸಂಕರಗೊಳಿಸಿ ಉತ್ತಮಗೊಳಿಸಲು ಪ್ರಯತ್ನಿಸಲಾಯಿತು. ತಳಿ ಅಭಿವೃದ್ಧಿ ಪ್ರಗತಿಯಾದಂತೆಲ್ಲ ಹಾಲಿನ ಉತ್ಪಾದನೆಯೂ ಹೆಚ್ಚಾಯಿತು. ಆದರೆ ದೇಶೀಯ ತಳಿಗಳಿಗಿಂತ ವಿದೇಶಿ ತಳಿಗಳಲ್ಲಿ ಕಂಡು ಬಂದ ತ್ವರಿತ ಫಲಿತಾಂಶ ಗಮನ ಸೆಳೆಯಿತು. ತಳಿ ಅಭಿವೃದ್ಧಿಯ ಮೂಲ ಧ್ಯೇಯ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುದು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತದಲ್ಲಿ ಈ ಉದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಹಸುಗಳ ಅಭಿವೃದ್ಧಿ ಹಾಗೂ ಹೈನುಗಾರಿಕೆಯ ಯಶಸ್ಸಿಗೆ ಕಾರಣವಾದ ಅಂಶಗಳು ಈ ರೀತಿ ಇವೆ:

ಒಂದು ಶತಮಾನಕ್ಕಿಂತಲೂ ಹಿಂದೆ ಯುರೋಪಿನಿಂದ ಬಂದು ನೆಲಸಿದ ಪ್ಲಾಂಟರುಗಳು ಸ್ಥಳೀಯ ಹಸುಗಳ ಅಭಿವೃದ್ಧಿಗೆ ಯುರೋಪಿನ ಡೈರಿ ಹೋರಿಗಳನ್ನು ಉಪಯೋಗಿಸಿದರು.

ಯುದ್ಧಕಾಲದಲ್ಲಿ ನಿರ್ಮಿತವಾದ ಮಿಲಿಟರಿ ಡೈರಿ ಫಾರಮ್ ಚಿಕ್ಕ ವಯಸ್ಸಿನ ಹಾಲ್‌ಸ್ಟೈನ್ ಗಂಡುಕರುಗಳ ಮಾರಾಟವನ್ನು ಆರಂಭಿಸಿತ್ತು. ಸ್ಥಳೀಯ ತಳಿ ಅಭಿವೃದ್ಧಿಗಾರರು ಈ ಕರುಗಳನ್ನು ಕೊಂಡು ಚೆನ್ನಾಗಿ ಬೆಳೆಸಿ ಅಡ್ಡತಳಿ ಕಾರ್ಯಕ್ಕೆ ಬಳಸಿದರು. ಈಗಲೂ ಏರ್‌ಶೈರ್ ಮತ್ತು ಹಾಲ್‌ಸ್ಟೈನ್ ಸಂಮಿಶ್ರಣ ಹಸುಗಳನ್ನು ನೋಡಬಹುದು.

ರಾಷ್ಟ್ರೀಯ ಸಂಶೋಧನ ಸಂಸ್ಥೆಯ ಸಹಕಾರದಿಂದ ಮಿಶ್ರತಳಿ ಉತ್ಪಾದನೆಯಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸಿದೆ. ಮೈಸೂರರಸರು ಮಿಶ್ರತಳಿ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟರು. 1910ರ ಹೊತ್ತಿಗೆ ಸಂಸ್ಥಾನದಲ್ಲಿ ಪ್ರತ್ಯೇಕ ಪಶುಸಂಗೋಪನಾ ಇಲಾಖೆ ಕಾರ್ಯಾರಂಭ ಮಾಡಿತ್ತು. ಹೈನುಗಾರಿಕೆಯನ್ನು ಉತ್ತಮವಾಗಿ ನಿರ್ವಹಿಸಿದರೆ ಮಿಶ್ರತಳಿ ಹಸುವಿನಿಂದ ಒಂದು ಸೂಲಿನಲ್ಲಿ ಸಾವಿರ ಲೀಟರ್ ಹಾಲು ಉತ್ಪಾದನೆ ಸಾಧ್ಯ.

1945ರಲ್ಲಿ ಬೆಂಗಳೂರಿನ ರಾಷ್ಟ್ರೀಯ ಹೈನುಗಾರಿಕೆ ಸಂಶೋಧನ ಸಂಸ್ಥೆಯಲ್ಲಿ ಕೃತಕ ಗರ್ಭಧಾರಣ ಕೇಂದ್ರವನ್ನು ಸ್ಥಾಪಿಸಲಾಯಿತು. ಇದರ ಜೊತೆಗೆ ಕರ್ನಾಟಕದ ಪಶುಸಂಶೋಧನಾ ವಿಭಾಗದ ಸಹಕಾರವೂ ಸೇರಿ ಕೃತಕ ಗರ್ಭಧಾರಣ ವಿಧಾನ ರೈತರ ಗಮನ ಸೆಳೆಯಿತು.

ಬೆಂಗಳೂರು ಡೈರಿ ಸಂಸ್ಥೆ 1965ರಲ್ಲಿ ಸ್ಥಾಪಿತವಾದಾಗ ಹೈನುಗಾರಿಕೆ ಉದ್ಯಮದಲ್ಲಿ ಪ್ರಮುಖ ಹೆಜ್ಜೆ ಇಟ್ಟಂತಾಯಿತು. ಇದರಿಂದ ಬೆಂಗಳೂರಿನ ನಾಗರಿಕರಿಗೆ ವ್ಯವಸ್ಥಿತ ರೀತಿಯಲ್ಲಿ ಹಾಲು ಸರಬರಾಜು ಮಾಡಲು ಸಾಧ್ಯವಾಯಿತು. ಜೊತೆಯಲ್ಲೇ ತ್ವರಿತ ಪಶು ಅಭಿವೃದ್ಧಿ ಯೋಜನೆ ಸಹ ಆರಂಭವಾಗಿ ಬೆಂಗಳೂರು ಡೈರಿಗೆ ಹೆಚ್ಚಿನ ಸಹಕಾರ ಸಿಕ್ಕಿತು. ಕರ್ನಾಟಕದಲ್ಲಿ ಮೊದಲ ಬಾರಿಗೆ ವೀರ್ಯ ಬ್ಯಾಂಕ್ ಅಸ್ತಿತ್ವಕ್ಕೆ ಬಂದದ್ದು ಈ ಯೋಜನೆಯಿಂದಲೇ. ಹಾಲ್‌ಸ್ಟೈನ್, ಫ್ರೀಸನ್, ಜೆರ್ಸಿ ಮತ್ತು ರೆಡ್‌ಡೇನ್ ಹಸುಗಳ ಅಭಿವೃದ್ಧಿಗೆ ವೀರ್ಯ ಬ್ಯಾಂಕ್ ನೀಡಿರುವ ಸಹಕಾರ ಅಪಾರವಾದದ್ದು. ಇದರಿಂದ ಪ್ರತಿ ಜಿಲ್ಲೆ, ತಾಲ್ಲೂಕು, ಹಳ್ಳಿಗಳಲ್ಲೂ ಕೃತಕ ಗರ್ಭಧಾರಣೆ ವಿಧಾನ ಅನುಸರಿಸುವುದು ಸಾಧ್ಯವಾಯಿತು. ಮಿಶ್ರತಳಿಗಳನ್ನು ಪಡೆಯಲು ರೈತರೂ ಹೆಚ್ಚಿನ ಆಸಕ್ತಿ ವಹಿಸುವಂತಾಯಿತು. ಉತ್ಪಾದನೆಯಾದ ಹಾಲನ್ನು ಬೆಂಗಳೂರು ಡೈರಿಯೇ ಕೊಳ್ಳತೊಡಗಿತು. ಹಾಲನ್ನು ಶೇಖರಿಸುವ ಸಹಕಾರ ಸಂಘಸಂಸ್ಥೆಗಳ ಸ್ಥಾಪನೆಯಾಯಿತು. ಇವುಗಳಿಂದ ರೈತರಿಗೆ ಅಗತ್ಯವಾದ ಮಾರ್ಗದರ್ಶನ ದೊರೆಯುತ್ತದೆ.

1973ರ ವೇಳೆಗೆ ಕರ್ನಾಟಕದಲ್ಲಿ ಒಟ್ಟು 10 ಡೈರಿಗಳು ಸ್ಥಾಪನೆಯಾಗಿ ದಿನದ ಹಾಲಿನ ಸಂಗ್ರಹ 1.67 ಲಕ್ಷ ಲೀಟರಿಗೆ ಏರಿತು. ಈಗ ಕರ್ನಾಟಕದಲ್ಲಿ ಹನ್ನೊಂದು ಲಕ್ಷಕ್ಕೂ ಹೆಚ್ಚು ಮಿಶ್ರತಳಿ ಹಸುಗಳಿವೆ ಎಂದು ಒಂದು ಅಂದಾಜು.

**ಮಿಶ್ರತಳಿಗಳಿಂದಾಗುವ ಅನುಕೂಲಗಳು:** ಸ್ಥಳೀಯ ತಳಿ ಹಾಗೂ ವಿದೇಶಿ ತಳಿಗಳಿಂದ ಪಡೆದ ಮಿಶ್ರತಳಿಗಳ ಉತ್ತಮ ಅಂಶಗಳು ಈ ರೀತಿ ಇವೆ:

1. ಹಸುವಿಗೆ ಕಡಿಮೆ ವಯಸ್ಸಾದಾಗಲೆ ಮೊದಲ ಕರು ಪಡೆಯುವುದು.

2. ಈ ತಳಿಗಳ ದೇಹದಾರ್ಢ್ಯ ಉತ್ತಮವಾಗಿರುವುದರಿಂದ ಪ್ರತಿ ಸೂಲಿನಲ್ಲೂ ಅಧಿಕ ಹಾಲು ಸಿಗುತ್ತದೆ. ಇದರಿಂದ ಇವುಗಳ ಸಾಕಣೆಯ ಆರ್ಥಿಕ ಹೊರೆ ಹೆಚ್ಚಾಗಿರುವುದಿಲ್ಲ.

3. ಮಿಶ್ರತಳಿಗಳು ನಮ್ಮ ಪರಿಸರ ಹಾಗೂ ಹವೆಗೆ ಬಹುಬೇಗನೆ ಹೊಂದಿಕೊಳ್ಳುವುವು.

4. ಉತ್ತಮ ಹೋರಿಗಳನ್ನು ವ್ಯವಸಾಯಕ್ಕೆ ಹಾಗೂ ತಳಿ ಅಭಿವೃದ್ಧಿಗೆ ಬಳಸಬಹುದು. ಮಿಶ್ರತಳಿ ಗಂಡು ಕರುಗಳು ಸುಲಭ ಬೆಲೆಗೆ ದೊರೆಯುವುದರಿಂದ ಸಣ್ಣಪುಟ್ಟ ರೈತರಿಗೆ ವ್ಯವಸಾಯಕ್ಕೆ ಅನುಕೂಲವಾಗುತ್ತದೆ.

5. ವಂಶಾವಳಿ ಹೆಚ್ಚಿದಂತೆ ಹಾಲಿನ ಉತ್ಪಾದನೆ ಸಹ 3–4 ಪಟ್ಟು ಹೆಚ್ಚುತ್ತದೆ.

6. ಮಿಶ್ರತಳಿ ಹೆಣ್ಣುಕರುಗಳು (ಮಣಕ) ಬೇಗನೆ ಬೆದೆಗೆ ಬರುವುದರಿಂದ ಅವಕ್ಕೆ ಸುಮಾರು ಒಂದೂವರೆ ವರ್ಷ ವಯಸ್ಸಿನಲ್ಲೆ ಗರ್ಭಧಾರಣೆ ಮಾಡಿಸಲು ಸಾಧ್ಯ. ಕೆಲವು ಕರುಗಳು ಇನ್ನೂ ಬೇಗನೆ ಬೆದೆಗೆ ಬರುವುದುಂಟು. ಅಲ್ಲದೆ ಮಿಶ್ರತಳಿಗಳ ಬೆದೆ ಲಕ್ಷಣಗಳು ಸ್ಪಷ್ಟವಾಗಿರುವುದು. ಅಂತೆಯೇ ಇವುಗಳ ಋತುಚಕ್ರವೂ ನಿಯತಕಾಲಿಕವಾಗಿರುವುದು.

7. ಮಿಶ್ರತಳಿ ಹಸುಗಳಲ್ಲಿ ಹೆಚ್ಚು ಕಾಲ ಹಾಲು ಕರೆಯಲು ಸಾಧ್ಯವಿರುವುದರಿಂದ ಹಸು ಗಬ್ಬವಾಗಿರುವಾಗ ಹಾಲು ಕರೆಯದಿರುವ ಅವಧಿಯನ್ನು ತಗ್ಗಿಸಬಹುದು. ಅಲ್ಲದೆ ಪ್ರತಿ ಕರುವಿನ ಜನನದ ಮಧ್ಯಂತರದ ಅವಧಿಯನ್ನು ಸಹ ಕಡಿಮೆ ಮಾಡಬಹುದು.

8. ಮಿಶ್ರತಳಿಗಳ ಸ್ವಭಾವ ಸೌಮ್ಯ, ನಿಯಂತ್ರಣ ಸುಲಭ.

**ಹೈನುಗಾರಿಕೆ ಅಭಿವೃದ್ಧಿಗೆ ಸಹಕರಿಸುತ್ತಿರುವ ಸಂಸ್ಥೆಗಳು:** ಕರ್ನಾಟಕದ ಹಲವು ಸಂಸ್ಥೆಗಳು ಹೈನುಗಾರಿಕೆ ಅಭಿವೃದ್ಧಿಗೆ ಸಹಕಾರ ನೀಡುತ್ತಿವೆ.

ರಾಷ್ಟ್ರೀಯ ಹೈನುಗಾರಿಕೆ ಸಂಶೋಧನ ಸಂಸ್ಥೆ: ಈ ಸಂಸ್ಥೆ 1923ರಲ್ಲಿ ಸ್ಥಾಪನೆಯಾಯಿತು. 1965ರಲ್ಲಿ ದಕ್ಷಿಣ ಭಾರತದ ಮುಖ್ಯ ಕೇಂದ್ರವಾಗಿ ಕೃತಕ ಗರ್ಭಧಾರಣೆ ವಿಧಾನವನ್ನು ಜಾರಿಗೆ ತಂದಿತು.

ಇಂಡೋ–ಡೇನಿಷ್ ಯೋಜನೆ, ಹೆಸರಘಟ್ಟ: 1964ರಲ್ಲಿ ಈ ಸಂಸ್ಥೆ ಸ್ಥಾಪನೆಯಾಯಿತು. ಈಗ ಮುನಿರಾಬಾದ, ಕೊಡಿಗೆ ಮತ್ತು ಧಾರವಾಡದಲ್ಲಿ ಇದರ ಶಾಖೆಗಳಿವೆ. ಹೆಸರಘಟ್ಟ ಮತ್ತು ಮುನಿರಾಬಾದುಗಳಲ್ಲಿ ರೆಡ್‌ಡೇನ್ ತಳಿಗಳೂ ಧಾರವಡದಲ್ಲಿ ಜೆರ್ಸಿ ತಳಿಗಳೂ ಇವೆ. ರೈತರ ತರಬೇತಿ, ಪಶುಸಂಗೋಪನೆಯಲ್ಲಿ ನೂತನ ವೈಜ್ಞಾನಿಕ ವಿಧಾನಗಳು, ಉತ್ತಮ ಪಶು ಆಹಾರ ತಯಾರಿಕೆ, ಶುದ್ಧ ತಳಿ ಹಸುಗಳ ಅಭಿವೃದ್ಧಿ, ಸುತ್ತಮುತ್ತಲ ಹಳ್ಳಿಗಳಿಗೆ ವೀರ್ಯ ಹಂಚಿಕೆ ಮುಂತಾದ ಕಾರ್ಯಕ್ರಮಗಳನ್ನು ಈ ಸಂಸ್ಥೆ ನಡೆಸಿಕೊಂಡು ಬರುತ್ತಿದೆ.

ಬೆಂಗಳೂರು ಡೈರಿ (ಮದರ್ ಡೈರಿ): 1965ರಲ್ಲಿ ಸ್ಥಾಪನೆಯಾದ ಈ ಸಂಸ್ಥೆ ಮೊದಲಿಗೆ ದಿನಕ್ಕೆ 50,000 ಲೀಟರ್ ಹಾಲು ಸಂಗ್ರಹಿಸುವ ಯೋಜನೆ ಹಾಕಿಕೊಂಡಿತು. ಇಂದು ಇದರ ಉತ್ಪಾದನೆ 5 ಲಕ್ಷ ಲೀಟರುಗಳಿಗೇರಿರುವ ಸಂಭವವಿದೆ. ಜೊತೆಗೆ ಕ್ಷೀರೋತ್ಪಾದನೆ ಅನೇಕ ಸಿಹಿ ವಿಶೇಷಗಳನ್ನು, ಹಾಲಿನ ವಿಶೇಷಗಳನ್ನು ಬಿಡುಗಡೆಮಾಡಿದೆ. ಇಡೀ ಭಾರತದಲ್ಲಿ ಕ್ಷೀರೋದ್ಯಮದಲ್ಲಿ ಕರ್ನಾಟಕ ಕೂಡ ಮುಂಚೂಣಿಯ ರಾಜ್ಯಗಳಲ್ಲೊಂದಾಗಿದೆ.

ಭಾರತೀಯ ಪಶುವೈದ್ಯ ಸಂಶೋಧನ ಸಂಸ್ಥೆಯ ಸ್ಥಳೀಯ ಉಪವಿಭಾಗ, ಬೆಂಗಳೂರು: ಇದು 1972ರಲ್ಲಿ ಸ್ಥಾಪಿತವಾಯಿತು. ಕಾಲು ಬಾಯಿರೋಗದ ಲಸಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸುವುದು ಇದರ ಮುಖ್ಯ ಕಾರ್ಯಕ್ರಮ.

ಘನೀಕೃತ ವೀರ್ಯ ಬ್ಯಾಂಕ್ : 1970ರಲ್ಲಿ ಹೆಸರಘಟ್ಟದಲ್ಲಿ ಭಾರತ ಸರ್ಕಾರದ ಕೃಷಿ ಇಲಾಖೆ ಈ ಸಂಸ್ಥೆಯನ್ನು ಆರಂಭಿಸಿತು. ಪೂರ್ಣ ಕೆಲಸ ಆರಂಭವಾದದ್ದು 1973–74ರಲ್ಲಿ. ಈ ಸಂಸ್ಥೆಯ ಮೂಲ ಉದ್ದೇಶ ದನಗಳ ವೀರ್ಯವನ್ನು ಘನೀಕರಿಸಿ ಅನಂತರ ಬೇಕಾದಾಗ ಉಪಯೋಗಿಸುವುದು.

ಎಮ್ಮೆಗಳನ್ನು ಕುರಿತ ಸಂಶೋಧನ ಯೋಜನೆ: ಧಾರವಾಡದಲ್ಲಿ ಆರಂಭವಾದ ಈ ಸಂಸ್ಥೆಯ ಮುಖ್ಯ ಉದ್ದೇಶ ಎಮ್ಮೆಗಳ ತಳಿಗಳನ್ನು ಅಭಿವೃದ್ಧಿಗೊಳಿಸುವುದು. ಕರ್ನಾಟಕದ ಎಮ್ಮೆಗಳು ಕಡಿಮೆ ಹಾಲನ್ನು ಕೊಟ್ಟರೂ ನಾಟಿ ಹಸುಗಳಿಗಿಂತ ಉತ್ತಮ. ಭಾರತೀಯ ಕೃಷಿ ಸಂಶೋಧನ ಕೌನ್ಸಿಲ್ ಈ ಸಂಸ್ಥೆಗೆ ಸಹಕಾರ ಕೊಡುತ್ತಿದೆ. 1970ರಲ್ಲಿ ಕೃಷಿ ವಿಶ್ವವಿದ್ಯಾಲಯದ ಧಾರವಾಡದ ವಿಭಾಗದಲ್ಲಿ ಇದರ ಒಂದು ಕೇಂದ್ರವನ್ನು ತೆರೆಯಲಾಯಿತು, ಇದು ಸುತ್ತುಮುತ್ತಲ ಹಳ್ಳಿಗಳಿಗೆ ವೀರ್ಯವನ್ನು ಸರಬರಾಜು ಮಾಡುತ್ತದೆ.

ರಾಜ್ಯದ ಪಶುಸಂಗೋಪನ ಇಲಾಖೆ: ಕರ್ನಾಟಕದಲ್ಲಿ ಈ ಇಲಾಖೆಯ 7 ಪಶುಪಾಲನ ಕೇಂದ್ರಗಳುಂಟು. ವೀರ್ಯ ಉತ್ಪಾದನೆಗೆ ಬೇಕಾದ ಬೀಜದ ಹೋರಿಗಳನ್ನು ಇಲ್ಲಿ ಸಾಕಲಾಗಿದೆ. ಕೃತಕ ಗರ್ಭಧಾರಣೆಗೆ ಬೇಕಾಗುವ ವೀರ್ಯವನ್ನು ಸಹ ಇವುಗಳಿಂದ ಪಡೆಯಬಹುದು. ಹೆಸರಘಟ್ಟದಲ್ಲಿ ಹಾಲ್‌ಸ್ಟೈನ್ ಹಸುಗಳೂ ಇವೆ. ಇಲಾಖೆಯಲ್ಲಿ ಒಟ್ಟು 31 ಹೋರಿ ಕೇಂದ್ರಗಳಿವೆ. ಕೃತಕ ಗರ್ಭಧಾರಣೆಯನ್ನು ನಡೆಸುವ 800 ಕೇಂದ್ರಗಳಿಗೆ ವೀರ್ಯ ಸರಬರಾಜಾಗುತ್ತಿದೆ. ಇಷ್ಟಲ್ಲದೆ ರಾಜ್ಯದಲ್ಲಿ 2 ತ್ವರಿತ ಪಶು ಅಭಿವೃದ್ಧಿ ಯೋಜನೆಗಳು ಹಾಗೂ 30 ಗ್ರಾಮ ತಳಿ ಅಭಿವೃದ್ಧಿ ಯೋಜನೆಗಳು ಉಂಟು. ಹೋರಿಗಳ ವಂಶಾವಳಿಗೆ ಬೆಲೆ ಕಟ್ಟಲು ಮತ್ತು ಘನೀಕೃತ ವೀರ್ಯ ತಯಾರಿಸಲು ಬೆಂಗಳೂರಿನ ಹೆಬ್ಬಾಳದಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಲಾಗಿದೆ.

ಹಾಲ್‌ಸ್ಟೈನ್ ಫ್ರೀಸನ್ ಫಾರಮ್: ಹೆಸರಘಟ್ಟದಲ್ಲಿ ಭಾರತ ಸರ್ಕಾರದಿಂದ ಈ ಫಾರಮ್ಮನ್ನು ಸ್ಥಾಪಿಸಲಾಗಿದೆ. ಒಳ್ಳೆಯ ಗುಣಮಟ್ಟದ ಹೋರಿಗಳ ಉತ್ಪಾದನೆಯೇ ಇದರ ಮುಖ್ಯ ಕಾರ್ಯಕ್ರಮ.

ಕರ್ನಾಟಕ ಡೈರಿ ಅಭಿವೃದ್ಧಿ ಕಾರ್ಪೊರೇಷನ್: 1973ರಲ್ಲಿ ವಿಶ್ವಬ್ಯಾಂಕಿನ ಆಯೋಗವೊಂದು ಕರ್ನಾಟಕ್ಕೆ ಭೇಟಿ ಕೊಟ್ಟಾಗ ಇಲ್ಲಿಯ ಮಿಶ್ರ ಹಸುಗಳ ಹಾಲು ಉತ್ಪಾದನೆ ಹಾಗೂ ಅವುಗಳ ಉತ್ತಮ ನಿರ್ವಹಣೆಯನ್ನು ಮೆಚ್ಚಿಕೊಂಡುದರಿಂದ ಈ ಬಗ್ಗೆ ವಿಶ್ವಬ್ಯಾಂಕ್ ಆಸಕ್ತಿ ವಹಿಸುವಂತೆ ಆಯಿತು. ವಿಶ್ವಬ್ಯಾಂಕಿನ ನೆರವಿನಿಂದ ಕರ್ನಾಟಕದ ಡೈರಿ ಅಭಿವೃದ್ಧಿ ಯೋಜನೆ 8 ಜಿಲ್ಲೆಗಳನ್ನು ಆರಿಸಿಕೊಂಡು ಅಲ್ಲಿಯ ಹಳ್ಳಿಗಳಲ್ಲಿ ಹಾಲಿನ ಸಂಗ್ರಹ, ಸಂಸ್ಕರಣ ಹಾಗೂ ಮಾರಾಟಕ್ಕೆ ಬೇಕಾದ ವ್ಯವಸ್ಥೆ ಮಾಡಲಾಯಿತು. ಕೃತಕ ಗರ್ಭಧಾರಣೆ ಹಾಗೂ ಪಶು ಆರೋಗ್ಯಕ್ಕೆ ಬೇಕಾದ ತಾಂತ್ರಿಕ ನೆರವನ್ನೂ ವಿಶ್ವಬ್ಯಾಂಕ್ ನೀಡಿದೆ. ಹಲವಾರು ಹಳ್ಳಿಗಳ ಹಾಲು ಉತ್ಪಾದಕರು ಸೇರಿ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡಿದ್ದು ರೈತ ಕುಟುಂಬಗಳು ಈ ಸಂಘಗಳಿಂದ ಅನುಕೂಲತೆಗಳನ್ನು ಪಡೆದುಕೊಳ್ಳುತ್ತಿವೆ.

**ಯಶಸ್ವಿ ಪಶುಸಂಗೋಪನೆಗೆ ಅಗತ್ಯವಾದ ಅಂಶಗಳು :** ಉತ್ತಮ ತಳಿಗಳ ಪೂರೈಕೆಯೊಂದೇ ಅಲ್ಲದೆ ಉತ್ತಮ ಆಹಾರ ನೀಡಿಕೆ ಹಸುಗಳ ಆರೋಗ್ಯ, ತಜ್ಞರ ಸಲಹೆ, ಸಲಕರಣೆ ಮುಂತಾದವೂ ಯಶಸ್ವಿ ಪಶುಸಂಗೋಪನೆಗೆ ಬಹು ಮುಖ್ಯ.

ಉತ್ತಮ ಆಹಾರ ನೀಡಿಕೆ: ಉತ್ತಮ ಆಹಾರ ಪೂರೈಕೆಯಿಂದ ಹಾಲಿನ ಉತ್ಪಾದನೆಯನ್ನು ಸೇ. 50–100 ರಷ್ಟು ಹೆಚ್ಚಿಸಬಹುದು, ಹಸುರು ಹುಲ್ಲನ್ನು ಬೆಳೆಯುವುದು ಮತ್ತು ಸಾಕಷ್ಟು ಪ್ರಮಾಣದಲ್ಲಿ ಹಸುಗಳಿಗೆ ಕೊಡುವುದು ಮುಖ್ಯ. ಕರ್ನಾಟಕದಲ್ಲಿ ಹುಲ್ಲಿಗಾಗಿ ಬಳಸಿರುವ ಭಾಗ ಸೇ. 3 ಅಷ್ಟೆ (ಭಾರತದಲ್ಲಿ ಸೇ. 4). ಆದರೆ ಇಂಗ್ಲೆಂಡಿನಲ್ಲಿ ನೆಲದ ಸೇ. 50 ಮತ್ತು ಅಮೆರಿಕದಲ್ಲಿ ಸೇ. 60 ಭಾಗದಲ್ಲಿ ಮೇವನ್ನು ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಸಾಕಷ್ಟು ಮೇವನ್ನು ಬೆಳೆಯಬೇಕಾದರೆ ಅನುಸರಿಸ

ಬೇಕಾದ ವಿಧಾನಗಳೆಂದರೆ ಉತ್ತಮ ಇಳುವರಿ ಕೊಡುವ ಹುಲ್ಲನ್ನು ಆಯ್ಕೆ ಮಾಡುವುದು. ಉದಾಹರಣೆಗೆ ಎನ್.ಬಿ.–21 ಹುಲ್ಲನ್ನು ಹೆಕ್ಟೇರಿಗೆ 200 ಟನ್ ಬೆಳೆಯಬಹುದು. ಇದು ಬಹುವಾರ್ಷಿಕ ಬೆಳೆಯಾದ್ದರಿಂದ ಇದನ್ನು 4–5 ವರ್ಷಗಳವರೆಗೂ ಕಟಾವು ಮಾಡಬಹುದು. ಈ ಹುಲ್ಲನ್ನು ತೆಂಗು, ಪರಂಗಿ, ಸಪೋಟ, ಸೀಬೆ ತೋಟಗಳಲ್ಲೂ ಬೆಳೆಸಬಹುದು.

ನೀರು ನಿಂತಿರುವ ಜಾಗ ಮತ್ತು ಕ್ಷಾರ ಹೆಚ್ಚಿರುವ ಭೂಮಿಯಲ್ಲಿ ಪ್ಯಾರ ಹುಲ್ಲನ್ನು ಬೆಳೆಯಬಹುದು. ಮಳೆಗಾಲದ ಪ್ರಾರಂಭದಲ್ಲಿ ಮುಸುಕಿನ ಜೋಳ ಅಥವಾ ಜೋಳದ ಬೆಳೆಯನ್ನು ಮೇವಿಗಾಗಿ ಬೆಳೆದರೆ 80–90 ದಿನಗಳಲ್ಲಿ 50–60 ಟನ್ ಬೆಳೆಯನ್ನು ಪಡೆಯಬಹುದು. ಈ ಮೇವನ್ನು ಕತ್ತರಿಸಿ ಗುಂಡಿಗಳಲ್ಲಿ ಶೇಖರಿಸಿಟ್ಟು ಬೇಸಗೆಯಲ್ಲಿ ರಸಮೇವಾಗಿ ಉಪಯೋಗಿಸಬಹುದು.

ಹತ್ತಿ ಬೆಳೆಯುವ ಜಮೀನಿನಲ್ಲಿ ಸಹ ಅಲ್ಪಾವಧಿಯಲ್ಲಿ ಹಸರುಹುಲ್ಲನ್ನು ಬೆಳೆಯಲು ಸಾಧ್ಯ. ಹೆಕ್ಟೇರಿಗೆ 20–25 ಟನ್ ಜೋಳದ ದಂಟನ್ನು ಬೆಳೆಯಬಹುದು.

ನೀರನ್ನು ತಡೆಯಲು ಕಾಲುವೆ, ಕಟ್ಟೆ ಕಟ್ಟುವುದರಿಂದ ಸೇ. 2–3 ಭಾಗ ಜಮೀನು ನಿರುಪಯುಕ್ತವಾಗುತ್ತದೆ. ಇಂತಹ ಜಾಗಗಳಲ್ಲೂ ಪಶುಮೇವನ್ನು ಬೆಳೆಯಬಹುದು. ಎನ್.ಬಿ.–21, ರೋಡ್ಸ್ ಮುಂತಾದ ಗಿನಿ ಹುಲ್ಲು ಮತ್ತು ದ್ವಿದಳ ಸಸ್ಯಗಳಾದ ಸೆಂಟ್ರೋಸೀಮ, ಕ್ಯಾಲಪಗೋನಿಯಮ್, ಒರಾಟ್ರೋ ಬೆಳೆಗಳನ್ನು ಬೆಳೆಯಬಹುದು.

ಹೆಚ್ಚು ನೀರಾವರಿಯಿರುವ ಕಡೆ ಲೂಸರ್ನ್ ಸೊಪ್ಪಿನ ಬೆಳೆ ಲಾಭದಾಯಕ. ಈ ಬೆಳೆಯನ್ನು ವರ್ಷದಲ್ಲಿ ಸುಮಾರು 10 ಸಲ ಕಟಾವು ಮಾಡಬಹುದಾಗಿದ್ದು ವರ್ಷಕ್ಕೆ 80–90 ಟನ್ ಬೆಳೆ ಸಾಧ್ಯ. ಇದರಲ್ಲಿ ಸುಮಾರು ಸೇ. 16–17 ರಷ್ಟು ಪ್ರೋಟೀನ್ ಉಂಟು.

ಈಗಿರುವ ಹುಲ್ಲುಗಾವಲುಗಳು ಬಹಳ ಕ್ಷೀಣಸ್ಥಿತಿಯಲ್ಲಿವೆ. ಇಂಥಲ್ಲಿ ಉತ್ತಮ ಹುಲ್ಲಿನ ಬೀಜ ಮತ್ತು ಗೊಬ್ಬರ ಉಪಯೋಗಿಸಿ ಒಳ್ಳೆಯ ಹುಲ್ಲನ್ನು ಬೆಳೆಯಬಹುದು.

ಬೆಟ್ಟ, ಗುಡ್ಡ, ಅರಣ್ಯಗಳಲ್ಲಿ ಸ್ವಾಭಾವಿಕವಾಗಿಯೇ ಬೇಕಾದಷ್ಟು ಹುಲ್ಲು ಬೆಳೆಯುತ್ತದೆ. ಕಾಲಕಾಲಕ್ಕೆ ಅದನ್ನು ಕತ್ತರಿಸಿ ಸೈಲೇಜ್ ಗುಂಡಿಗಳಲ್ಲಿಟ್ಟು ಬೇಕಾದಾಗ ಉಪಯೋಗಿಸಬಹುದು. ಮಲೆನಾಡಿನಲ್ಲಿ ಕಾಡುಹುಲ್ಲನ್ನು ವರ್ಷಕ್ಕೆ ಕೇವಲ ಒಂದು ಸಲ ಕತ್ತರಿಸಲಾಗುತ್ತಿದೆ. ಆದರೆ 3–4 ಸಲ ಕತ್ತರಿಸುವುದು ಸಾಧ್ಯವೆಂದು ಕಂಡುಬಂದಿದೆ.

ಒಣಹುಲ್ಲಿನ ಉಪಯೋಗ ಸಹ ಮುಖ್ಯವಾದದ್ದು. ಜೋಳ ಅಥವಾ ಮೆಕ್ಕೆ ಜೋಳದ ಕಡ್ಡಿಯನ್ನು ಸಣ್ಣ ಸಣ್ಣ ಚೂರಾಗಿ ಕತ್ತರಿಸಿ ಬಳಸುವುದು ಲಾಭದಾಯಕ. ಕಾಕಂಬಿ ಮಿಶ್ರಿತ ಯೂರಿಯ ಹಾಕಿ ಒಣಹುಲ್ಲಿನ ಸಾರವನ್ನು ಹೆಚ್ಚಿಸಬಹುದು.

ಹಾಲಿನ ಉತ್ಪಾದನೆಯ ಹೆಚ್ಚಳಕ್ಕೆ ಸತ್ತ್ವಪೂರ್ಣ ಆಹಾರ ನೀಡಿಕೆಯೂ ಅತ್ಯಗತ್ಯ. ಪಶು ಆಹಾರವನ್ನು ಹುಲ್ಲು, ಹಿಂಡಿ, ಬೂಸ, ನೀರು ಎಂದು ವಿಭಾಗಿಸಬಹುದು. ಜೋಳ, ಎಣ್ಣೆಬೀಜಗಳ ಹಿಂಡಿ, ಅಕ್ಕಿಯ ಪಾಲಿಷ್, ಗೋದಿ ಹೊಟ್ಟು, ಒಡೆದ ಬೇಳೆಗಳು, ಕಡಲೆ ಹೊಟ್ಟು– ಇವು ಪಶು ಆಹಾರದ ಸತ್ತ್ವವನ್ನು ಹೆಚ್ಚಿಸುತ್ತವೆ. ಇದಲ್ಲದೆ ಪ್ರೋಟೀನ್, ಖನಿಜಗಳು, ವಿಟಮಿನ್‌ಗಳನ್ನು ಕೊಡುವುದೂ ಅಷ್ಟೇ ಮುಖ್ಯ. ಆಹಾರದ ಗುಣಮಟ್ಟಕ್ಕೆ ಸಾಕಷ್ಟು ಗಮನ ಕೊಟ್ಟು ಕರ್ನಾಟಕದಲ್ಲಿ ಇಂದು ಲಕ್ಷಾಂತರ ಟನ್ ಉತ್ಕೃಷ್ಟ ದರ್ಜೆಯ ಪಶು ಆಹಾರವನ್ನು ತಯಾರಿಸಲಾಗುತ್ತಿದೆ.

ಹಸುಗಳ ಆರೋಗ್ಯ ಪಾಲನೆ: ಕರ್ನಾಟಕದಲ್ಲಿ ಪಶುಗಳ ಆರೋಗ್ಯಕ್ಕೆ ಸಂಬಂಧಿಸಿದಂತೆ ವ್ಯಾಪಕ ಸಂಸ್ಥೆಗಳಿವೆ. ರಾಜ್ಯದ ಪಶುಸಂಗೋಪನ ಇಲಾಖೆ ಈ ವಿಷಯದಲ್ಲಿ ಹೆಚ್ಚಿನ ಗಮನ ಕೊಟ್ಟಿದೆ. ಶೀಘ್ರವಾಗಿ ಹರಡುವ ಕಾಯಿಲೆಗಳ ನಿವಾರಣೆಗೆ ಬಳಸುವ ಲಸಿಕೆ ತಯಾರಿಕಾ ಘಟಕ ಕರ್ನಾಟಕದಲ್ಲಿದೆ.

ಕರ್ನಾಟಕ ಡೈರಿ ಅಭಿವೃದ್ಧಿ ಕಾರ್ಪೊರೇಷನ್ ಸ್ಥಾಪನೆಯಾದ ಅನಂತರ ಸಂಚಾರಿ ಆಸ್ಪತ್ರೆಯ ಸೌಲಭ್ಯ ಸಹ ದೊರೆತಿದೆ. ಕಾಯಿಲೆಗಳನ್ನು ಸ್ಪಷ್ಟವಾಗಿ ಗುರುತಿಸಿ ಔಷಧಿ ನೀಡುವ ಸಲುವಾಗಿ ಮೈಸೂರು, ಬೆಂಗಳೂರು, ಹಾಸನಗಳಲ್ಲಿ ಪ್ರಯೋಗಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಘಟಕಗಳಿಗೂ ಕೃಷಿ ವಿಶ್ವವಿದ್ಯಾಲಯದ ಪಶುವೈದ್ಯ ಕಾಲೇಜಿಗೂ ನಿಕಟ ಸಂಪರ್ಕವುಂಟು. ಅಲ್ಲದೆ ವಿಶ್ವವಿದ್ಯಾಲಯದ ವಿಸ್ತರಣ ವಿಭಾಗ ಸಹ ಆಗಾಗ್ಗೆ ರೈತರಿಗೆ ದನಗಳ ಕಾಯಿಲೆಗಳ ಬಗ್ಗೆ, ಕ್ರಿಮಿಕೀಟ ನಿವಾರಣೆಯ ಬಗ್ಗೆ ತಿಳುವಳಿಕೆ ಕೊಡುತ್ತದೆ.

ಹೈನುಗಾರಿಕೆ ಅಭಿವೃದ್ಧಿಯಲ್ಲಿ ತಜ್ಞರ ಪಾತ್ರ: ಹಾಲಿನ ಉತ್ಪಾದನೆ, ಸಂಗ್ರಹಣೆ, ಸಂಸ್ಕರಣೆ, ಸಾಗಣೆ, ಆರ್ಥಿಕ ವ್ಯವಸ್ಥೆ–ಇವಕ್ಕೆಲ್ಲ ತಜ್ಞರ ಸಲಹೆ ಆವಶ್ಯಕ.

ರಾಷ್ಟ್ರೀಯ ಡೈರಿ ಸಂಶೋಧನ ಸಂಸ್ಥೆ ಡಿಪ್ಲೊಮ, ಪದವಿ ಹಾಗೂ ಸ್ನಾತಕೋತ್ತರ ತರಗತಿಗಳನ್ನು ನಡೆಸುತ್ತಿದೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಪ್ರತ್ಯೇಕ ಡೈರಿ ವಿಜ್ಞಾನ ಕಾಲೇಜನ್ನು ಪ್ರಾರಂಭಿಸಿದೆ. 1976–77ರಲ್ಲಿ ಎಂ.ಎಸ್ಸಿ. (ಡೈರಿ ವಿಜ್ಞಾನ), ಡೈರಿ ಟೆಕ್ನಾಲಜಿ, ಡೈರಿ ಮೈಕ್ರೋಬಯಾಲಜಿ, ಡೈರಿ ಕೆಮಿಸ್ಟ್ರಿ ಮುಂತಾದ ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಿದೆ. ಇದಕ್ಕೆ ರಾಷ್ಟ್ರೀಯ ಡೈರಿ ಸಂಶೋಧನ ಸಂಸ್ಥೆಯ ನೆರವೂ ಇದೆ. ವಿಸ್ತರಣ ವಿಭಾಗದ ಚಟುವಟಿಕೆಗಳಿಗೆ ಕೃಷಿ ವಿಶ್ವವಿದ್ಯಾಲಯ, ರಾಷ್ಟ್ರೀಯ ಡೈರಿ ಸಂಶೋಧನ ಸಂಸ್ಥೆ, ಪಶುಸಂಗೋಪನ ಇಲಾಖೆ, ತ್ವರಿತ ಪಶು ಅಭಿವೃದ್ಧಿ ಯೋಜನೆ, ರೆಡ್‌ಡೇನ್ ಯೋಜನೆಗಳು ತಮ್ಮ ಸಹಕಾರ ನೀಡುತ್ತಿವೆ.

ಹೈನುಗಾರಿಕೆಗೆ ಬೇಕಾದ ಸಲಕರಣೆಗಳ ತಯಾರಿಕೆ: ಹಾಲಿನ ಸಂಗ್ರಹ, ಸಂಸ್ಕರಣಕ್ಕೆ ಬೇಕಾಗುವ ಉಪಕರಣಗಳನ್ನೂ ಘನೀಕೃತ ವೀರ್ಯ ಬಳಕೆಗೆ ಬೇಕಾಗುವ ಸಲಕರಣೆಗಳನ್ನೂ ಭಾರತ ತಯಾರಿಸುತ್ತಿದೆ. ದ್ರವೀಕೃತ ಸಾರಜನಕ ತಯಾರಿಸಲು ದೊಡ್ಡ ಘಟಕಗಳೇ ಇವೆ. ಸಂಶೋಧನೆ, ತರಬೇತಿ ಮುಂತಾದವುಗಳಿಗೆ ಬೇಕಾಗುವ ಪ್ರಯೋಗಶಾಲೆ ಉಪಕರಣಗಳನ್ನು ಸಹ ಭಾರತದಲ್ಲಿ ತಯಾರಿಸಲಾಗುತ್ತಿದೆ.

ಹಾಲಿನ ಉತ್ಪನ್ನಗಳು: ಭಾರತದಲ್ಲಿ ಹಾಲಿನ ಉತ್ಪನ್ನಗಳು ಅನೇಕ. ಸೇ. 40–45 ರಷ್ಟು ಹಾಲನ್ನು ಹಾಗೇ ಕುಡಿಯಲು ಉಪಯೋಗಿಸಲಾಗುತ್ತದೆ. ಸೇಕಡಾ 30ರಷ್ಟನ್ನು ತುಪ್ಪ ತಯಾರಿಸಲು, ಸೇ. 6–7 ಬೆಣ್ಣೆಗೆ, ಸೇ. 7–8 ಭಾಗ ಮೊಸರಿಗೆ, ಸೇ. 5 ಭಾಗ ಖೋವಕ್ಕಾಗಿ ಬಳಕೆಯಾಗುತ್ತಿದೆ. ಉಳಿದ ಹಾಲನ್ನು ಹಾಲಿನ ಪುಡಿ, ಐಸ್‌ಕ್ರೀಮ್ ತಯಾರಿಕೆಗೆ ಬಳಸಲಾಗುತ್ತಿದೆ. ಹಾಲಿನ ಮಾರಾಟಕ್ಕೆ ವ್ಯವಸ್ಥಿತ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

ಹಾಲಿನ ಕೈಗಾರಿಕೆ ಹಾಗೂ ಜನಾರೋಗ್ಯ: ಜನರ ಆರೋಗ್ಯಕ್ಕೂ ಹೈನುಗಾರಿಕೆ ಉದ್ಯಮಕ್ಕೂ ನಿಕಟ ಸಂಬಂಧವುಂಟು. ಜನಸಾಮಾನ್ಯರ ಆರೋಗ್ಯ ರಕ್ಷಣೆಯಲ್ಲಿ ಹಾಲಿನ ಪಾತ್ರ ಮುಖ್ಯವಾದದ್ದು. ಆದ್ದರಿಂದ ಹಾಲನ್ನು ಕ್ರಿಮಿಕೀಟಗಳಿಂದ ಮುಕ್ತಗೊಳಿಸಿ ಆರೋಗ್ಯಕರ ರೀತಿಯಲ್ಲಿ ಸರಬರಾಜು ಮಾಡುವುದು ಡೈರಿಯ ಮುಖ್ಯ ಉದ್ದೇಶ. ಹಾಲಿನ ಗುಣಮಟ್ಟವನ್ನು ಕಾಪಾಡಬೇಕಾದರೆ ಅನೇಕ ಸಂಸ್ಕರಣ ವಿಧಾನಗಳನ್ನು ಅನುಸರಿಸಬೇಕು.

ಹಾಲಿನ ರುಚಿ, ಬಣ್ಣಗಳು ಹಸು ಅಥವಾ ಎಮ್ಮೆಯ ತಳಿ, ಆರೋಗ್ಯ, ಆಹಾರ ಮುಂತಾದುವನ್ನು ಅವಲಂಬಿಸುತ್ತವೆ. ಹಸು ಅಥವಾ ಎಮ್ಮೆಗೆ

ಕಾಯಿಲೆಯಾದರೆ ಹಾಲಿನ ಗುಣಮಟ್ಟ ವ್ಯತ್ಯಾಸವಾಗುತ್ತದೆ. ಹಾಲಿನಲ್ಲಿ ಕ್ರಿಮಿಗಳಿದ್ದರೆ ಆರೋಗ್ಯದ ದೃಷ್ಟಿಯಿಂದ ಸೇವನೆಗೆ ಅರ್ಹವಲ್ಲ. ಕ್ರಿಮಿಗಳು ಬಹು ಬೇಗನೆ ವೃದ್ಧಿಯಾಗಿ ಬೆಳೆಯುತ್ತವೆ. ಹಾಲಿನ ರುಚಿ, ಪರಿಮಳದಲ್ಲಿ ವ್ಯತ್ಯಾಸವಾಗುತ್ತದೆ. ಅಶುದ್ಧ ಹಾಲಿನಿಂದ ಅನೇಕ ಕಾಯಿಲೆಗಳು ಮನುಷ್ಯನಿಗೆ ಹರಡುತ್ತವೆ. ಉದಾಹರಣೆಗೆ ಸರಿಯಾಗಿ ಸಂಸ್ಕರಿಸದ ಹಾಲಿನಿಂದ ಕ್ಷಯ, ಗಂಟಲುಬೇನೆ, ವಿಷಮಶೀತ ಜ್ವರ, ರಕ್ತಭೇದಿ, ಕರಳುಬೇನೆ ಮುಂತಾದವು ಹರಡುತ್ತವೆ. ಸಾಮಾನ್ಯವಾಗಿ ವಿಷಕ್ರಿಮಿಗಳು ಹಾಲು, ಹಾಲಿನ ಪಾತ್ರೆ, ಹಾಲನ್ನು ಹಂಚುವವರು, ನೀರು, ನೊಣ ಇವುಗಳಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತವೆ. ಜನರ ಆರೋಗ್ಯದ ದೃಷ್ಟಿಯಿಂದ ಪ್ಯಾಶ್ಚರೀಕರಣಗೊಳಿಸಿದ ಹಾಲನ್ನು ಉಪಯೋಗಿಸುವುದು ಉತ್ತಮ.

(ಟಿ.ಎನ್.ಎಸ್‌ಐ.;ಎಚ್.ಕೆ.ಆರ್.ಆರ್.;ಬಿ.ಪಿ.ಎಚ್.;ಟಿ.ಜಿ.ಎಸ್.)

**ಹೊಂಗನೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಒಂದು ಐತಿಹಾಸಿಕ ಗ್ರಾಮ. ಚನ್ನಪಟ್ಟಣದಿಂದ 6 ಕಿಮೀ ದೂರದಲ್ಲಿರುವ ಈ ಗ್ರಾಮ ಗಂಗ, ಚೋಳ, ಹೊಯ್ಸಳ ಮತ್ತು ವಿಜಯನಗರ ರಾಜರ ಕಾಲದಲ್ಲಿ ಒಂದು ಪ್ರಮುಖ ಸ್ಥಳವಾಗಿತ್ತೆಂದು ತಿಳಿದುಬರುತ್ತದೆ. ಪ್ರಾಚೀನ ಅಗ್ರಹಾರವಾಗಿದ್ದ ಇಲ್ಲಿ ಗಂಗ, ಚೋಳ ಹಾಗೂ ಹೊಯ್ಸಳ ದೇವಾಲಯಗಳಿವೆ. ಇವು ಭಗ್ನಾವಸ್ಥೆಯಲ್ಲಿದ್ದು ಅಲ್ಪಸ್ವಲ್ಪ ಜೀರ್ಣೋದ್ಧಾರವನ್ನು ಕಂಡಿವೆ. ಗೋಪಾಲಕೃಷ್ಣ ಮತ್ತು ಈಶ್ವರ ದೇವಾಲಯಗಳು ಉತ್ತಮಸ್ಥಿತಿಯಲ್ಲಿದ್ದು ನಾಗಸ್ವಾಮಿ, ಕೋಡಿಭೈರವ, ಲಕ್ಷ್ಮೀ, ಕೊಳದಮ್ಮ, ಮಾರಮ್ಮ ದೇವಾಲಯಗಳು ಭಗ್ನಾವಸ್ಥೆಯಲ್ಲಿವೆ.

ನಾಗಸ್ವಾಮಿ ದೇವಾಲಯು ಪ್ರಾಯಶಃ ಗಂಗರ ಕಾಲದಲ್ಲಿ ನಿರ್ಮಾಣವಾದಂತೆ ತೋರುತ್ತದೆ. ಕೋಡಿ ಭೈರವೇಶ್ವರ ದೇವಾಲಯ ಒಂದು ಸರಳ ದ್ರಾವಿಡ ದೇವಾಲಯ. ಇದರ ಗರ್ಭಗೃಹದಲ್ಲಿ ಭೈರವನ ಕುಳಿತ ಭಂಗಿಯ ಶಿಲ್ಪವಿದೆ. ಈ ಶಿಲ್ಪ ಹೊಯ್ಸಳ ಶೈಲಿಯಲ್ಲಿದೆ. ಜೀರ್ಣೋದ್ಧಾರವಾಗಿರುವ ಲಕ್ಷ್ಮೀ ದೇವಾಲಯದಲ್ಲಿ ಸುಂದರವಾದ, ಕುಳಿತ ಭಂಗಿಯಲ್ಲಿರುವ ಲಕ್ಷ್ಮೀ ವಿಗ್ರಹವಿದೆ. ದೇವಾಲಯದ ಹೊರಗೆ ಗಂಗರ ಕಾಲದ ಸೂರ್ಯಶಿಲ್ಪವೊಂದಿದೆ. ಊರಿನ ಕೆರೆಯ ಹತ್ತಿರದಲ್ಲಿರುವ ಕೊಳದಮ್ಮ ದೇವಾಲಯ ಶಿಥಿಲವಾಗಿದ್ದು ಅದರ ಒಳಭಾಗದಲ್ಲಿ ಸರಸ್ವತಿ, ಬ್ರಾಹ್ಮೀ, ದುರ್ಗೆಯ ಶಿಲ್ಪಗಳಿದ್ದು ಇದು ಪ್ರಾಯಶಃ ಸಪ್ತಮಾತೃಕೆ ದೇವಾಲಯವಾಗಿರಬಹುದು.

ಇಲ್ಲಿನ ಗೋಪಾಲಕೃಷ್ಣ ದೇವಾಲಯ ಸುಸ್ಥಿತಿಯಲ್ಲಿದ್ದು ವಿಶಾಲ ಪ್ರಾಕಾರವನ್ನೂ ಗರ್ಭಗೃಹ, ಸುಕನಾಸಿ, ನವರಂಗಗಳನ್ನೂ ಹೊಂದಿದ್ದು ನವರಂಗದಲ್ಲಿ ಗಂಗ–ಚೋಳ ಶೈಲಿಯ ಕಂಬಗಳಿವೆ. ವೇಣುಗೋಪಾಲ ಮೂರ್ತಿ ಗರ್ಭಗೃಹದಲ್ಲಿದೆ. ನವರಂಗದಲ್ಲಿ ವಿಷ್ಣುವಿನ ಕುಳಿತ ಭಂಗಿಯ ಶಿಲ್ಪ ಮತ್ತು ಆಳ್ವಾರರ ಶಿಲ್ಪಗಳು ಇವೆ. ಇದೇ ಪ್ರಾಕಾರದಲ್ಲಿರುವ ಚಿಕ್ಕ ಆಲಯದಲ್ಲಿ ಲಕ್ಷ್ಮಿಯ ಶಿಲ್ಪವಿದೆ. ಈ ಆಲಯದ ಕಂಬದ ಮೇಲೆ ರಾಜೇಂದ್ರಚೋಳನ 1018ರ ಶಾಸನವೊಂದಿದೆ. ಮಾರಮ್ಮನ ದೇವಾಲಯದ ಬಳಿ ಹೊಯ್ಸಳ ಒಂದನೆಯ ನರಸಿಂಹನ ಶಾಸನವಿದೆ (ಸು.1100).

ಈಶ್ವರ ದೇವಾಲಯ ಇಲ್ಲಿನ ಮತ್ತೊಂದು ಪ್ರಮುಖ ದೇವಾಲಯ. ಇದನ್ನು ಹೊನ್ನಾಳೇಶ್ವರ ಎಂದು ಕರೆಯುವರು. ಇದು ಚೋಳರ ಕಾಲದ ನಿರ್ಮಿತಿ. ಇದು ಏಕಕೂಟ ದೇವಾಲಯವಾಗಿದ್ದು ದ್ರಾವಿಡ ಶೈಲಿಯಲ್ಲಿದೆ. ಮುಖಮಂಟಪ, ನವರಂಗ, ಸುಕನಾಸಿ, ಗರ್ಭಗೃಹಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಚೌಕಾಕಾರದ ಪಾಣಿಪೀಠದ ಮೇಲೆ ಗಂಗರ ಕಾಲದ, ಒಂದು ಅಡಿ ಎತ್ತರದ ಶಿವಲಿಂಗವಿದೆ. ಮುಖಮಂಟಪದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕ ಮತ್ತು ಗಂಧರ್ವ ಶಿಲ್ಪಗಳ ಉಬ್ಬುಗೆತ್ತನೆ ಇದೆ. ನವರಂಗದ ಭುವನೇಶ್ವರಿ ಒಂಬತ್ತು ಅಂಕಣಗಳಿಂದ ಕೂಡಿದ್ದು ಮಧ್ಯದಲ್ಲಿ ನಟರಾಜನ ಉಬ್ಬುಶಿಲ್ಪವಿದೆ. ಉಳಿದ ಎಂಟು ಅಂಕಣಗಳಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ನವರಂಗದ ಕಂಬಗಳು ಆಕರ್ಷಕವಾಗಿವೆ.

(ಆರ್.ಎಚ್.ಕೆ.)

**ಹೊಗೆಸೊಪ್ಪು:** ಕರ್ನಾಟಕದ ಹಣದ ಬೆಳೆಗಳಲ್ಲಿ ಮುಖ್ಯವಾದುದು. ಇದರಲ್ಲಿ ಮೂರು ಬಗೆ ಇದೆ– 1.ಅಗಿಯುವ ಹೊಗೆಸೊಪ್ಪು 2.ಬೀಡಿ ಹೊಗೆಸೊಪ್ಪು 3.ವರ್ಜೀನಿಯ ಹೊಗೆಸೊಪ್ಪು. ಅಗಿಯುವ ಮತ್ತು ಬೀಡಿ ಹೊಗೆಸೊಪ್ಪನ್ನು ಕ್ರಮವಾಗಿ ಚಿತ್ರದುರ್ಗ, ತುಮಕೂರು, ಬೆಳಗಾಂವಿ, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ವರ್ಜೀನಿಯ ಹೊಗೆಸೊಪ್ಪನ್ನು ಅರೆಮಲೆನಾಡು ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ವರ್ಜೀನಿಯ ಹೊಗೆಸೊಪ್ಪನ್ನು 40,000ಕ್ಕೂ ಹೆಚ್ಚು ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುವುದು. ಈ ಪ್ರದೇಶಗಳಲ್ಲಿ ಬೆಳೆದ ಹೊಗೆಸೊಪ್ಪಿನ ಗುಣ ರೊಡೀಶಿಯದ ಹೊಗೆಸೊಪ್ಪಿನ ಗುಣಕ್ಕೆ ಸರಿಸಮಾನವಾಗಿದೆ. ಹೊರದೇಶಗಳಿಗೆ ರಫ್ತು ಮಾಡುವ ಒಳ್ಳೆಯ ಗುಣ ವರ್ಜೀನಿಯ ಹೊಗೆಸೊಪ್ಪಿಗೆ ಇದೆ.

ವರ್ಜೀನಿಯ ಹೊಗೆಸೊಪ್ಪಿನ ಬಿತ್ತನೆಯನ್ನು ಅರೆಮಲೆನಾಡು ಪ್ರದೇಶದಲ್ಲಿ ಮೇ 15ರಿಂದ ಜೂನ್ 15ರವರೆಗೆ ಇತರ ಪ್ರದೇಶಗಳಲ್ಲಿ ಏಪ್ರಿಲ್ 15ರಿಂದ ಮೇ 15ರ ವರೆಗೆ ಆರಂಭಿಸಲಾಗುತ್ತದೆ. ಇದು 150–170 ದಿವಸಗಳ ಅವಧಿಯ ಬೆಳೆ. ಒಂದು ಹೆಕ್ಟೇರಿಗೆ 10–15 ಗ್ರಾಮ್ ಬಿತ್ತನೆ ಬೀಜ ಸಾಕಾಗುತ್ತದೆ. 6–7 ವಾರದ ಸಸಿಗಳನ್ನು 60 ಸೆಮೀ ಅಂತರದಲ್ಲಿ ನಾಟಿ ಮಾಡಲಾಗುವುದು. ನಾಟಿಗೆ ಮುಂಚೆ ನೀರು ಹಾಯಿಸಿ, ಹದ ನೋಡಿಕೊಂಡು ಅನಂತರ ನೀರು ಕೊಡುವುದಿದೆ. ಸಾಲಿನ ಮಧ್ಯೆ ಕುಂಟೆ ಬಳಸಿ ಕಳೆ ತೆಗೆಯುವುದಿದೆಯಾದರೂ ಮಣ್ಣನ್ನು ಆಳವಾಗಿ ಕೆದಕುವುದಿಲ್ಲ. ನಾಟಿ ಮಾಡಿದ 15–20 ದಿವಸಗಳ ಅನಂತರ ಗಿಡದ ತಳಭಾಗದಲ್ಲಿರುವ ಮಣ್ಣು ಹಿಡಿದುಕೊಂಡಿರುವ ಎಲೆಗಳನ್ನು ತೆಗೆದುಹಾಕಲಾಗುತ್ತದೆ. ಇದರಿಂದ ಎಲೆಚುಕ್ಕೆ ರೋಗ ಕಡಿಮೆಯಾಗುತ್ತದೆ. ಗಿಡಗಳು 100–120 ಸೆಂಮೀ ಎತ್ತರ ಬೆಳೆದಾಗ ತುದಿ ಮುರಿಯಲಾಗುತ್ತದೆ. ಈ ಸಮಯದಲ್ಲಿ ಗಿಡದಲ್ಲಿ 18–22 ಎಲೆಗಳು ಇರುವುವು. ತುದಿ ಮುರಿಯುವುದರಿಂದ ಎಲೆಗಳು ಚೆನ್ನಾಗಿ ಹರಡಿ, ಬೆಳೆಯ ತೂಕ ಹೆಚ್ಚಾಗುವುದಲ್ಲದೆ ಹಾಳಾಗುವ ಎಲೆಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಪಕ್ಕದಲ್ಲಿ ಬರುವ ಕವಲುಗಳನ್ನು ಆಗಿಂದಾಗ್ಗೆ ತೆಗೆದು ಹಾಕುವುದೂ ಉಂಟು.

ಎಲೆಗಳು ಬಲಿತು ತಿಳಿಹಸುರು ಬಣ್ಣಕ್ಕೆ ತಿರುಗಿದಾಗ ಕೊಯಿಲು ಮಾಡಲಾಗುವುದು. ಸಾಮಾನ್ಯವಾಗಿ ಗಿಡದ ಕೆಳಭಾಗದಿಂದ ಎಲೆ ಕೊಯ್ಯಲು ಪ್ರಾರಂಭ ಮಾಡಿ ಪ್ರತಿವಾರ 2 ರಿಂದ 4 ಎಲೆಯಂತೆ ಒಟ್ಟು 6–7 ವಾರಗಳಲ್ಲಿ ಮುಗಿಸಲಾಗುತ್ತದೆ.

ಕೊಯಿಲು ಮಾಡಿದ ಎಲೆಗಳನ್ನು ಆರಿಸಿ 135 ಸೆಂಮೀ ಉದ್ದದ ಬಿದಿರಿನ ಕೋಲಿಗೆ ಒಂದು ಎಲೆಯ ಹಿಂಭಾಗಕ್ಕೆ ಮತ್ತೊಂದು ಎಲೆಯ ಹಿಂಭಾಗ ಬರುವಂತೆ ಜೋಡಿಸಿ ದಾರದಿಂದ ಕಟ್ಟಿ ಹದ ಮಾಡುವ ಮನೆಗಳಲ್ಲಿ (ಬ್ಯಾರನ್) ಎಲೆಗಳನ್ನು ಮೇಲಿನ ಅಂತಸ್ತಿನಲ್ಲಿ ಕಟ್ಟಲಾಗುವುದು. ಹೆಚ್ಚು ಬಲಿತ ಎಲೆಗಳನ್ನು ಕೆಳ ಅಂತಸ್ತಿನಲ್ಲೂ ಸುಮಾರಾಗಿ ಬಲಿತ ಎಲೆಗಳನ್ನು ಮಧ್ಯ ಅಂತಸ್ತಿನಲ್ಲೂ ಜೋಡಿಸಿ ಬ್ಯಾರನ್ ತುಂಬಿದ ಅನಂತರ ಹೊಗೆ ಕೊಟ್ಟು ಹದ ಮಾಡಲಾಗುತ್ತದೆ. ಹದ ಮಾಡುವ ಮುಖ್ಯ ಹಂತಗಳಾದ ಹಳದಿಯಾಗುವ ಹಂತ, ಬಣ್ಣ ಬರುವ ಹಂತ, ಎಲೆ ಒಣಗುವ ಹಂತ ಮತ್ತು ಎಲೆಯ ದಂಟು ಒಣಗುವ ಹಂತಗಳಿಗನುಸಾರವಾಗಿ ಉಷ್ಣಾಂಶವನ್ನು ಒದಗಿಸಲಾಗುವುದು. ಕೊನೆಯ ಹಂತದಲ್ಲಿ

ಎಲ್ಲ ದಂಟುಗಳು ಒಣಗುವವರೆಗೂ ಉಷ್ಣತೆ $160^0$ ಫ್ಯಾ.ಗಿಂತ ಕಡಿಮೆಯಾಗ ದಂತೆ ನೋಡಿಕೊಳ್ಳಲಾಗುವುದು. ಹೀಗಾದರೆ ಹೊಗೆಸೊಪ್ಪಿನ ಗುಣಮಟ್ಟ ಕಡಿಮೆಯಾಗುತ್ತದೆ. ಒಂದು ಹೆಕ್ಟೇರ್ ಬೆಳೆ ಹದ ಮಾಡಲು 7 $^1/_2$ ಟನ್ ಸೌದೆ ಅಥವಾ 3 $^3/_4$ ಟನ್ ಕಲ್ಲಿದ್ದಲು ಬೇಕು. ಹದ ಮಾಡಿದ ಅನಂತರ ತೇವ ಸೇರಿಕೊಳ್ಳದಂತೆ, ಶಾಖದಿಂದ ಹಾಳಾಗದಂತೆ ಸೊಪ್ಪನ್ನು ಸಂಗ್ರಹಿಸಿಡಲಾಗುವುದು. ಅನಂತರ ದರ್ಜೆಗನುಗುಣವಾಗಿ ಹೊಗೆಸೊಪ್ಪನ್ನು ವಿಂಗಡಿಸಿ ಮಾರುಕಟ್ಟೆಗೆ ಕಳಿಸಲಾಗುವುದು. ಒಂದು ಹೆಕ್ಟೇರಿಗೆ ಸರಾಸರಿ 750–1,000 ಕೆಜಿ ಹದ ಮಾಡಿದ ಹೊಗೆಸೊಪ್ಪನ್ನು ಪಡೆಯುವುದಿದೆ.

ಅಗಿಯುವ ಮತ್ತು ಬೀಡಿ ಹೊಗೆಸೊಪ್ಪನ್ನು ಜುಲೈ–ಆಗಸ್ಟ್ ತಿಂಗಳುಗಳಲ್ಲಿ ಸಸಿಮಡಿಗಳಲ್ಲಿ ಬೆಳೆಸಿ ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳಲ್ಲಿ ಪೈರು ನಾಟಿ ಮಾಡಿ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಕೊಯಿಲು ಮಾಡಲಾಗುತ್ತದೆ. ನಾಟಿಗೆ ಸಿದ್ಧವಾದ 6–8 ವಾರದ ಸಸಿಗಳನ್ನು ತಳಿಗಳಿಗನುಸಾರವಾಗಿ ಶಿಫಾರಸು ಮಾಡಿದ ಅಂತರಗಳಲ್ಲಿ ನಾಟಿ ಮಾಡಲಾಗುವುದು. ಹದ ನೋಡಿಕೊಂಡು ನಾಟಿ ಮಾಡಿದ 20 ದಿನಗಳವರೆಗೆ ಪ್ರತಿದಿನ ಲಘುವಾಗಿಯೂ ಅನಂತರ 5–6 ದಿವಸಗಳಿಗೊಮ್ಮೆಯೂ ನೀರು ಹಾಯಿಸುವುದಲ್ಲದೆ ತಪ್ಪದೆ ಪ್ರತಿವಾರ ಕಳೆ ತೆಗೆದು ಹಾಕುತ್ತಿದ್ದು ಆರೈಕೆ ಮಾಡಲಾಗುತ್ತದೆ.

ಅಗಿಯುವ ಹೊಗೆಸೊಪ್ಪನ್ನು ನಾಟಿ ಮಾಡಿದ 50 ದಿವಸಗಳ ಅನಂತರ ಸುಳಿ ಮುರಿದು ಪಕ್ಕದಲ್ಲಿ ಬರುವ ಕವಲುಗಳನ್ನು ತೆಗೆದು ಹಾಕಲಾಗುತ್ತದೆ. ಪ್ರತಿಗಿಡದಲ್ಲೂ 8–12 ಎಲೆಗಳನ್ನು ಮಾತ್ರ ಉಳಿಸಲಾಗುತ್ತದೆ. ಎಲೆಗಳು ಸುಕ್ಕಾಗಲು ಪ್ರಾರಂಭವಾದಾಗ ಅವು ಕೊಯ್ಲಿಗೆ ಸಿದ್ಧವೆಂದು ಅರ್ಥ. ಗಿಡ ಪೂರ್ತಿ ಕತ್ತರಿಸಿ ರಾತ್ರಿ ಹೊಲದಲ್ಲಿಯೇ ಬಿಡಲಾಗುತ್ತದೆ. ಪ್ರತಿ 2–8 ದಿವಸಗಳಿಗೊಮ್ಮೆ ಅವನ್ನು ತಿರುವಿ ಹಾಕುತ್ತಿದ್ದು ಅವು ಪೂರ್ತಿ ಒಣಗಿದ ಮೇಲೆ ನೀರು ಚಿಮುಕಿಸಿ ಮರುದಿನ ಗಿಡಗಳ ಬುಡದ ಭಾಗ ಹೊರಗಡೆ ಕಾಣುವಂತೆ ಗುಂಡಾಗಿ ಜೋಡಿಸಿ ಚಾಪೆ ಹೊದ್ದಿಸಲಾಗುತ್ತದೆ. ಒಂದೆರಡು ದಿನಗಳ ಅನಂತರ ಎಲೆಗಳನ್ನು ಕಾಂಡದಿಂದ ಬೇರ್ಪಡಿಸಿ 24–30 ಎಲೆಗಳ ಪಿಂಡಿಗಳಾಗಿ ಕಟ್ಟಿ ಗುಡ್ಡೆ ಹಾಕಿ ಜೋಡಿಸಿ ಮೇಲೆ ಚಾಪೆ ಹೊದಿಸುವುದಿದೆ. 3–4 ದಿವಸಗಳಿಗೊಮ್ಮೆ ಮೇಲಿನ ಪಿಂಡಿಗಳನ್ನು ಕೆಳಭಾಗಕ್ಕೂ ಕೆಳಗಿನವುಗಳನ್ನು ಮೇಲಕ್ಕೂ ಕದಲಿಸಲಾಗುತ್ತದೆ. ಹೀಗೆ 4–6 ಬಾರಿ ಮಾಡಿದ ತರುವಾಯ ಎಲೆಗಳನ್ನು ಬೇರ್ಪಡಿಸಿ ಮತ್ತೆ ಅದೇ ರೀತಿ ಹದ ಮಾಡಲಾಗುತ್ತದೆ. ಪೂರ್ತಿ ಹದವಾದ ಎಲೆಯ ಬಣ್ಣ ಅಚ್ಚ ಕಂದು. ಇದಕ್ಕೆ ಒಂದು ವಿಧದ ಸುವಾಸನೆಯೂ ಇರುತ್ತದೆ. ಒಂದು ಹೆಕ್ಟೇರಿಗೆ 1,250–2,000 ಕೆಜಿ ಇಳುವರಿ ಬರುತ್ತದೆ.

ಬೀಡಿ ಹೊಗೆಸೊಪ್ಪನ್ನು ನಾಟಿ ಮಾಡಿದ ತರುವಾಯ 3–4 ಬಾರಿ ಕಳೆ ತೆಗೆದು ಸುಳಿ ಹಾಗೂ ಕವಲುಗಳನ್ನು ತೆಗೆಯುವ ಕಾರ್ಯವನ್ನು ಅಗಿಯುವ ಹೊಗೆ ಸೊಪ್ಪಿಗೆ ಮಾಡುವಂತೆಯೇ ಮಾಡಲಾಗುತ್ತದೆ. ಹೆಚ್ಚಿನ ಎಲೆಗಳು ಸುಕ್ಕುಗೊಂಡು ಹಳದಿ ಬಣ್ಣಕ್ಕೆ ತಿರುಗುವುದನ್ನು ಗಮನಿಸಿ ಕೊಯಿಲು ಮಾಡಲಾಗುತ್ತದೆ. ಕೊಯ್ಲಿನ ಸಮಯ ಹವಾಗುಣ ಹಿತಕರವಾಗಿರುವಾಗ, ಸಾಮಾನ್ಯವಾಗಿ ಬೆಳಗಿನ ಸಮಯದಲ್ಲಿ ಕೊಯಿಲು ಮಾಡಿದ ಗಿಡಗಳನ್ನು 6 ದಿನಗಳ ಕಾಲ ಬಿಸಿಲಿನಲ್ಲಿ ತಲೆಕೆಳಗಾಗಿ ಇಟ್ಟು, 7ನೆಯ ದಿನ ಎಲೆಗಳನ್ನು ಮಧ್ಯನಾಳ ಇರುವಂತೆಯೇ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ. 2 ರಿಂದ 3 ವಾರಗಳ ಅನಂತರ ಎಲೆಯ ಮಧ್ಯನಾಳ ಒಣಗಿದ ಅನಂತರ ಸರಿಯಾದ ರೀತಿಯಲ್ಲಿ ಸಂಗ್ರಹಿಸಿಡಲಾಗುತ್ತದೆ. ಒಂದು ಹೆಕ್ಟೇರಿಗೆ 750–1,000 ಕೆಜಿ ಇಳುವರಿ ದೊರೆಯುತ್ತದೆ.

ವರ್ಜೀನಿಯ ಹೊಗೆಸೊಪ್ಪಿನಲ್ಲಿ ಪ್ರದೇಶಗಳಿಗನುಸಾರವಾಗಿ ವರ್ಜೀನಿಯ ಗೋಲ್ಡಾ, ಕಂಟ್‌ಸೇಗ– 51, ಎನ್.ಸಿ.– 95, ಎಚ್.ಆರ್. 32–7, ಎಚ್.ಆರ್. 62–3 ಮತ್ತು 62–12, ಸಿ.ಟಿ.ಆರ್.ಐ. ಸ್ಪೆಷಲ್, ಸಿ.ಎಮ್.ಆರ್.ಆರ್., ವಿ.ಎಫ್.ಸಿ. ಸ್ಪೆಷಲ್ ಮತ್ತು ಶಂಬೂನ್ ತಳಿಗಳು ಬೇಸಾಯದಲ್ಲಿದೆ.

ಅಗಿಯುವ ಹೊಗೆಸೊಪ್ಪಿನಲ್ಲಿ ಬಾಳೆಪಟ್ಟೆ, ಆನೆಕಿವಿ, ಕತ್ತಾಲಿಪಟ್ಟೆ, ನಾಗರಹೆಡೆ, ಗುತ್ತಿ ಗಿಡ ಮತ್ತು ಜೋವಾರಿ–ಇವು ಮುಖ್ಯವಾದ ತಳಿಗಳು. ಚಾಟಿಕುಡಿ, ಆನೆಕಿವಿ, ಎಸ್–20 ಮತ್ತು ಕುಂಕುಮಾತ್ರಿ ತಳಿಗಳು ಬೀಡಿ ಹೊಗೆಸೊಪ್ಪಿನಲ್ಲಿ ಮುಖ್ಯವಾದುವು. ಕರ್ನಾಟಕದ ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಈ ಬೆಳೆಯನ್ನು ಅಧಿಕವಾಗಿ ಬೆಳೆಯಲಾಗುತ್ತದೆ. ಇತ್ತೀಚೆಗೆ ಧೂಮಪಾನ ಆರೋಗ್ಯಕ್ಕೆ ಹಾನಿಕರವೆಂಬ ತಿಳಿವಳಿಕೆ ಜನರಲ್ಲಿ ಉಂಟಾಗಿದ್ದು ಹೊಗೆಸೊಪ್ಪಿನ ಬಳಕೆ ಸ್ಥಳೀಯವಾಗಿ ಇಳಿಮುಖವಾಗಿದೆ. ಆದರೆ ವಿದೇಶಗಳಿಗೆ ಇದು ರಫ್ತಾಗುವುದರಿಂದ ಇದರ ಬೇಡಿಕೆ ಮತ್ತು ಸಾಗುವಳಿ ಮುಂದುವರಿದಿದೆ. (ಕೆ.ಆರ್.ಜಿ.)

**ಹೊನ್ನಕಂಬಳಿ ಅರಸರು:** 14–16ನೆಯ ಶತಮಾನಗಳಲ್ಲಿ ಉಡುಪಿ ಜಿಲ್ಲೆಯ ಈಗಿನ ಕುಂದಾಪುರ ತಾಲ್ಲೂಕಿನ ಕೆಲಭಾಗವನ್ನು ಆಳುತ್ತಿದ್ದ ಒಂದು ಮಾಂಡಲಿಕ ಮನೆತನ. ಹೊನ್ನೆಯಹಳ್ಳಿ ಇವರ ಮೂಲಸ್ಥಳವಾಗಿದ್ದಿರಬೇಕು. ಕಂಬಳಿ ಎಂಬ ಉಪನಾಮವನ್ನು ಈಗಲೂ ಜೈನ ಹಾಗೂ ಬಂಟ ಜನಾಂಗದವರು ಧರಿಸುತ್ತಾರೆ.

ಹೊನ್ನಕಂಬಳಿ ಅರಸರ ಆಳಿಕೆಯನ್ನು ಉಲ್ಲೇಖಿಸುವ ಕೆಲವು ಶಾಸನಗಳು ದೊರೆತಿವೆ. ಕುಂದಾಪುರ ತಾಲ್ಲೂಕಿನ ಕೊಲ್ಲೂರು, ಹೊಸಂಗಡಿ, ಬಗ್ಗವಾಡಿ, ಮುನಿನಾಡು, ಆರುನಾಡು, ಕದರಿ, ಕಬ್ಬುನಾಡುಸೀಮೆ ಇವರ ಆಡಳಿತಕ್ಕೊಳಪಟ್ಟಿದ್ದವು. ಹೊಸಂಗಡಿ ಇವರ ರಾಜಧಾನಿಯಾಗಿತ್ತು. 16ನೆಯ ಶತಮಾನದ ಹೊತ್ತಿಗೆ ಶಿವಮೊಗ್ಗ ಜಿಲ್ಲೆಯ ಕೆಲವು ಗ್ರಾಮಗಳು ಇವರ ಆಳಿಕೆಗೆ ಸೇರಿದ್ದವು. ಹೊನ್ನೆಯ ಕಂಬಳಿ ಒಡೆಯ ಅಥವಾ ಅಮ್ಮಿದೇವಿ ಅಮ್ಮ, ಬಂಕೆಯರಸ, ವೆಂಕಟಸಾವಂತ, ಪಂಡರಿದೇವ, ಹೊನ್ನೆಯಕಂಬಳಿ ಒಡೆಯ ಸಂಕರದೇವಿ ಅಮ್ಮ ಮುಂತಾದ ಕೆಲವು ಅರಸರ ಹೆಸರುಗಳು ದೊರೆಯುತ್ತವೆಯಾದರೂ ಸುಸಂಬದ್ಧ ರಾಜಕೀಯ ಇತಿಹಾಸವನ್ನು ನಿರೂಪಿಸಲು ಆಧಾರಗಳು ಸಾಲದು. ಈ ಅರಸರು ಕೊಲ್ಲೂರು ಮೂಕಾಂಬಿಕೆಯ ಭಕ್ತರು. ಅಲ್ಲಿನ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಪೂಜಾದಿ ಸೇವೆಗಳಿಗೆ ಭೂಮಿಕಾಣಿಕೆಗಳನ್ನು ದಾನ ನೀಡಿದ್ದಾರೆ. ಹಾಗೆಯೇ ಹಟ್ಟಿಯಂಗಡಿಯ ಲೋಕನಾಥ ದೇವಾಲಯಕ್ಕೂ ದತ್ತಿಬಿಟ್ಟಿದ್ದಾರೆ. ಇವರಲ್ಲಿ ಅಳಿಯಸಂತಾನ ಪದ್ಧತಿ ಆಚರಣೆಯಲ್ಲಿತ್ತೆಂದು ತೋರುತ್ತದೆ.

ವಿಜಯನಗರದ ಆಳಿಕೆ ಕೊನೆಗೊಂಡು ಕೆಳದಿ ಅರಸರು ಪ್ರಬಲರಾದಾಗ ತುಳುನಾಡೂ ಇವರ ಅಂಕೆಗೆ ಒಳಪಟ್ಟಿತು. ಆಗ ಹೊನ್ನಕಂಬಳಿ ಅರಸರಿಗೆ ಸೇರಿದ್ದ ಪ್ರದೇಶಗಳೆಲ್ಲ ಕೆಳದಿ ರಾಜ್ಯಕ್ಕೆ ಸೇರಿದವು. (ಎಚ್.ಎಂ.ಎನ್.ಆರ್.)

**ಹೊನ್ನಪ್ಪ:** 1973– . ಹೆಸರಾಂತ ಕಬಡಿ ಕ್ರೀಡಾಪಟು. ಅರ್ಜುನ ಪ್ರಶಸ್ತಿ ಪುರಸ್ಕೃತರು. ಇವರು 1973 ಮೇ 14ರಂದು ಬೆಂಗಳೂರಿನಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಚೆನ್ನತಿಮ್ಮಯ್ಯನವರು ಬ್ಯಾಂಕ್ ಅಧಿಕಾರಿಯಾಗಿದ್ದರು. ತಂದೆಯವರ ಪ್ರೋತ್ಸಾಹದಿಂದಾಗಿ ಇವರು ಕ್ರೀಡಾಸಕ್ತಿಯನ್ನು ಬೆಳೆಸಿಕೊಂಡರು. ಪ್ರಾರಂಭದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಬೆಂಗಳೂರಿನ ಆನಂದ್ ಸೋಶಿಯಲ್ ಎಜುಕೇಶನ್ ಸೊಸೈಟಿಯಲ್ಲಿ ಪಡೆದರು. ಅನಂತರ ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ಪದವಿ ಗಳಿಸಿದರು. ಬಾಲ್ಯದಿಂದಲೂ ಉತ್ತಮ ಕಬಡಿ ಆಟಗಾರರಾಗಿ ರೂಪುಗೊಂಡ ಇವರು 17ನೆಯ ವಯಸ್ಸಿನಲ್ಲಿಯೇ ರಾಷ್ಟ್ರೀಯ ಆಟಗಾರರಾಗಿ ಆಯ್ಕೆಯಾದರು. ಅನಂತರ 1995ರಿಂದ ಸುದೀರ್ಘ

ವಾಗಿ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುತ್ತ ಬಂದರು. ಕರ್ನಾಟಕ ವನ್ನು ಪ್ರತಿನಿಧಿಸಿ 3 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ಸತತವಾಗಿ 11 ಬಾರಿ (1990–2002) ಹಿರಿಯರ ರಾಷ್ಟ್ರೀಯ ಕಬಡಿ ಚಾಂಪಯನ್‌ಷಿಪ್‌ನಲ್ಲಿ ಭಾಗಬಹಿಸಿರುವ ಇವರು 5 ಬಾರಿ ಚಿನ್ನ, 4 ಬಾರಿ ಬೆಳ್ಳಿ, 3 ಕಂಚಿನ ಪದಕಗಳನ್ನು ಪಡೆದರು. ಇವರು 6 ಬಾರಿ ಅಂತಾರ್‍ರಾಷ್ಟ್ರೀಯ ಕಬಡಿ ಪಂದ್ಯಾಟದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಹಲವಾರು ಬಾರಿ ಭಾರತ ತಂಡದ ನಾಯಕರಾಗಿ ಭಾರತಕ್ಕೆ ಸಾಫ್ ಗೇಮ್ ಹಾಗೂ ಏಷ್ಯನ್ ಗೇಮ್ಸ್‌ಗಳ ಮೂಲಕ 7 ಚಿನ್ನದ ಪದಕಗಳನ್ನು ತಂದುಕೊಟ್ಟಿದ್ದಾರೆ. ಸತತವಾಗಿ 1995–98ರ ಸಾಫ್ ಗೇಮ್‌ಗಳಲ್ಲಿ ಅತ್ಯುತ್ತಮ ಸಾಧನೆ ತೋರಿದರು. ಇವರ ಕ್ರೀಡಾ ಸಾಧನೆಗಾಗಿ ಕರ್ನಾಟಕ ಸರ್ಕಾರ 2001ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಇವರಿಗೆ 1997ರಲ್ಲಿ ಏಕಲವ್ಯ ಪ್ರಶಸ್ತಿ, 1999ರಲ್ಲಿ ಕೆಂಪೇಗೌಡ ಪ್ರಶಸ್ತಿ ದೊರೆತಿವೆ. ಭಾರತ ಸರ್ಕಾರ 2000ದಲ್ಲಿ ಅರ್ಜುನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ತಮ್ಮ ಬಿಡುವಿನ ವೇಳೆಯನ್ನು ಕಬಡಿ ಆಟದ ಬೆಳವಣಿಗೆಗೆ ಮುಡುಪಾಗಿಟ್ಟಿದ್ದಾರೆ. ಅಣ್ಣ ಗೋವಿಂದರಾಜು ಸಹ ಉತ್ತಮ ಕಬಡಿ ಆಟಗಾರರಾಗಿದ್ದರು.

ಈಗ ಇವರು ಬೆಂಗಳೂರಿನ ವಿಜಯಾಬ್ಯಾಂಕ್‌ನಲ್ಲಿ ಸಹಾಯಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತಿದ್ದಾರೆ. **(ಎಸ್.ಆರ್.ಯು.)**

**ಹೊನ್ನಪ್ಪ ಭಾಗವತರ್, ಸಿ.**: 1916–92. ಪ್ರಸಿದ್ಧ ಸಂಗೀತಗಾರ, ವಾಗ್ಗೇಯಕಾರ, ನಾಟಕಕಾರ, ಚಿತ್ರನಟ ಮತ್ತು ನಿರ್ಮಾಪಕರು. ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಚೌಡಸಂದ್ರ ದಲ್ಲಿ 1916 ಜನವರಿ 15 ರಂದು ಜನಿಸಿದರು. ತಂದೆ ಚಿಕ್ಕಲಿಂಗಪ್ಪ, ತಾಯಿ ಕಲ್ಲಮ್ಮ. ಚಿಕ್ಕವಯಸ್ಸಿನಲ್ಲಿ ಯಕ್ಷಗಾನ, ಭಜನೆ, ನಾಟಕ ಮತ್ತು ಚಲನಚಿತ್ರ, ಹಳ್ಳಿಯ ಜನಪದ ಕಲೆಗಳಲ್ಲಿ ಭಾಗವಹಿಸುತ್ತಿದ್ದರು. ಹೀಗೆಯೇ ಶಾಲೆಗೆ ಹೋಗುತ್ತಿದ್ದಾಗ ಭಜನೆ, ಸಂಗೀತಗಳನ್ನು, ತಬಲಾ ಮುಂತಾದ ವಾದ್ಯ ನುಡಿಸುವುದನ್ನು ಕಲಿತುಕೊಂಡರು. ಇವರ ಮಧುರ ಸ್ವರ, ಸಂಗೀತ ಮತ್ತು ವ್ಯಕ್ತಿತ್ವವನ್ನು ಮೆಚ್ಚಿದ ಕನ್ನಡ ನಾಟಕರಂಗದ ಪಿತಾಮಹರೆಂದು ಪ್ರಸಿದ್ಧರಾದ ಗುಬ್ಬಿ ವೀರಣ್ಣನವರು ತಮ್ಮ ನಾಟಕ ಕಂಪನಿಯಲ್ಲಿ ಸೇವೆಸಲ್ಲಿಸು ವಂತೆ ಇವರನ್ನು ಕೇಳಿಕೊಂಡರು. ಅಲ್ಲಿಯ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಲ್ಲಿ ನಾಯಕ ನಟನಾಗಿ ಬಹಳ ಜನಪ್ರಿಯತೆಯನ್ನು ಗಳಿಸಿದರು. ಅನಂತರ ಹೊರರಾಜ್ಯದವರು ಸಹ ಇವರ ಪ್ರತಿಭೆಯನ್ನು ಮೆಚ್ಚಿ ಹೊಗಳಿ ಪ್ರೋತ್ಸಾಹಿಸಿದರು. ಹೀಗೆ ಇವರ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚು ಜನಾಕರ್ಷಣೆಯನ್ನು ಪಡೆದವು.

ಇವರ ನಿಜವಾದ ಪ್ರತಿಭೆ ಬೆಳಕಿಗೆ ಬಂದು ಅತ್ಯುನ್ನತ ಸ್ಥಾನಕ್ಕೇರಿದ್ದು ತಮಿಳುನಾಡಿನ ಸೇಲಂನ ಸೇಲಂ ಸಂಗೀತ ಅಭಿಮಾನಿಗಳ ಸಂಘದವರು ಏರ್ಪಡಿಸಿದ್ದ ಸಂಗೀತ ಕಚೇರಿಯಲ್ಲಿ. ಇದು ಇವರ ಜೀವನದಲ್ಲಿ ಮರೆಯಲಾರದ ತಿರುವು. ಅಲ್ಲದೆ ಇದೇ ಅಭಿಮಾನಿಗಳು ಭವ್ಯ ಸ್ವಾಗತ ಸಮಾರಂಭ ಏರ್ಪಡಿಸಿ ಬೆಂಗಳೂರಿನ ಹೊನ್ನಪ್ಪ ಭಾಗವತರ್ ಎಂದು ಅಭಿದಾನ ಮಾಡಿದರು. ಆ ಸಮಯದಲ್ಲಿ ಇಂಥ ಅನೇಕ ಸಂಗೀತ ಕಚೇರಿ ಗಳನ್ನು ಇವರು ನೀಡಿದರು. ಕೂಡಲೆ ಇವರನ್ನು ಸೇಲಂನ ಶಂಕರ್ ಫಿಲಂಸ್‌ನವರು ಅಂಬಿಕಾಪತಿ ಎಂಬ ತಮಿಳು ಚಿತ್ರದಲ್ಲಿ ಅಭಿನಯಿಸಲು ಕರೆಕೊಟ್ಟರು. ಈ ಚಿತ್ರದಲ್ಲಿ ಅಭಿನಯಿಸಿದ್ದರಿಂದ ಚಿತ್ರರಂಗದಲ್ಲಿ ಹೆಚ್ಚು ಜನಪ್ರಿಯತೆ ಬಂದಿತಲ್ಲದೆ ಇವರ ಪ್ರತಿಭೆಗೆ ಕಳಶವಿಟ್ಟಂತಾಯಿತು.

ಅನಂತರ ಅನೇಕ ತಮಿಳು ಚಿತ್ರಗಳಲ್ಲಿ ಅಭಿನಯಿಸಿದರು. ಮುರುಗನ್, ಕೃಷ್ಣಕುಮಾರ, ಸತಿಸುಕನ್ಯಾ, ಭಕ್ತತಿಲಕ, ದೇವಕನ್ಯೆ, ಪ್ರಭಾವತಿ, ರಾಜರಾಜೇಶ್ವರಿ, ಕುಂಡಲಕೇಶಿ, ಅರುಂಧತಿ, ಭರ್ಮ್ರಾರಾಣಿ, ವಾಲ್ಮೀಕಿ, ಗೋಕುಲದಾಸಿ, ಭಕ್ತಜನ, ದೇವಮನೋಹರಿ, ಗುಣಸಾಗರಿ–ಅಲ್ಲದೆ ಇನ್ನೂ ಅನೇಕ ಚಿತ್ರಗಳಲ್ಲಿ ಅಭಿನಯಿಸಿದರು. 1940ರಲ್ಲಿ ಗುಬ್ಬಿವೀರಣ್ಣ ಅವರು ತಯಾರಿಸಿದ ಸುಭದ್ರಾ ಕನ್ನಡ ಚಿತ್ರದಲ್ಲಿ ನಾಯಕ ನಟನಾಗಿ ಅಭಿನಯಿಸಿದ್ದರು. ಆಗಲೇ ಈ ಚಿತ್ರ ಕರ್ನಾಟಕದಲ್ಲಿ ನೂರುದಿನ ಪ್ರದರ್ಶನ ಗೊಂಡು ಇವರಿಗೆ ಕೀರ್ತಿ ಗೌರವವನ್ನು ತಂದುಕೊಟ್ಟಿತು. 1947ರಲ್ಲಿ ಇವರೇ ಸ್ವತಃ ತಯಾರಿಸಿದ ಭಕ್ತಕುಂಬಾರ ರಾಜ್ಯಾದ್ಯಂತ ನೂರಾರು ದಿನಗಳು ಪ್ರದರ್ಶನಗೊಂಡು ಮತ್ತಷ್ಟು ಜನಪ್ರಿಯತೆಯನ್ನು ಹೆಚ್ಚಿಸಿತು.

ಕನ್ನಡದ ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ, ಜಗಜ್ಯೋತಿ ಬಸವೇಶ್ವರ, ಮಹಾಕವಿ ಕಾಳಿದಾಸ, ಪಂಚರತ್ನ ಇತ್ಯಾದಿ ಚಿತ್ರಗಳಲ್ಲೂ ಅಭಿನಯಿಸಿದ್ದಾರೆ. ಮಹಾಕವಿ ಕಾಳಿದಾಸ, ಪಂಚರತ್ನ ಈ ಎರಡು ಚಿತ್ರಗಳು ಇವರು ತಯಾರಿಸಿ ದವು. ಮಹಾಕವಿ ಕಾಳಿದಾಸ(1955) ಮತ್ತು ಜಗಜ್ಯೋತಿ ಬಸವೇಶ್ವರ

(1959) ರಾಷ್ಟ್ರೀಯ ಪ್ರಶಸ್ತಿಗಳಿಸಿವೆ. ಭಕ್ತಕುಂಬಾರ, ಮಹಾಕವಿ ಕಾಳಿದಾಸ ಮತ್ತು ಪಂಚರತ್ನ ಚಿತ್ರಗಳಿಗೆ ಇವರೇ ಸಂಗೀತ ಸಂಯೋಜಿಸಿದ್ದಾರೆ. 1958–59ರಲ್ಲಿ ಎಜವುಕ್ಕಂ ತೊಕ್ಕಿಲುಕ್ಕಂ ವಂದಾನ್ಯೆ ಸೈವಂ ಎಂಬ ತಮಿಳು ಚಿತ್ರ ತಯಾರಿಸಿ ಅದರಲ್ಲಿ ಸಾಕಷ್ಟು ನಷ್ಟ ಅನುಭವಿಸಿದರು. ಸಂಗೀತವೇ ನನ್ನದೈವ ಎಂದು ಭಾವಿಸುತ್ತ ಇವರು ಸಂಗೀತ ಕಚೇರಿ ಗಳನ್ನು ನಡೆಸುತ್ತ ಕೃತಿ ರಚನೆಗೆ ತೊಡಗಿದರು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಇವರು ಸುಮಾರು ಮುನ್ನೂರು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಆಯ್ದ ನೂರೊಂದು ಕನ್ನಡದ ಕೃತಿಗಳನ್ನು ಓಂಕಾರನಾದ ಸುಧಾ ಎಂಬ ಹೆಸರಿನಲ್ಲಿ ಪ್ರಕಟಗೊಳಿಸಲಾಗಿದೆ. ಇವರು ಹಲವಾರು ಹೊಸ ಕಲಾವಿದರನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ಅವರಲ್ಲಿ ಬಿ.ಸರೋಜಾದೇವಿ, ಪಂಡರಿಬಾಯಿ ಮುಖ್ಯರು. ಅನಂತರ ತಮಿಳು–ತೆಲುಗು ಚಿತ್ರರಂಗದಲ್ಲೂ ಖ್ಯಾತಿ ಪಡೆದರು. ಕೆ.ಆರ್. ಸೀತಾರಾಮಶೆಟ್ಟಿ ಅವರನ್ನು ಕನ್ನಡಿಗರಿಗೆ ನಿರ್ದೇಶಕರನ್ನಾಗಿ ಪರಿಚಯಿಸಿದರು. ಛಾಯಾಗ್ರಾಹಕ ಎ.ಎನ್.ಪರಮೇಶ್ವರ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದರು. 1961ರಲ್ಲಿ ಉಮಾಮಹೇಶ್ವರ ಸಂಗೀತ ನಾಟಕ ಮಂಡಲಿ ಎಂಬ ತಮ್ಮದೇ ಆದ ಹೊಸ ನಾಟಕ ಕಂಪನಿಯೊಂದನ್ನು ಪ್ರಾರಂಭಿಸಿ 1964ರವರೆಗೆ ಹಲವಾರು ನಾಟಕಗಳನ್ನು ರಾಜ್ಯಾದ್ಯಂತ ಪ್ರದರ್ಶಿಸಿದರು. ಕೊನೆಗೆ ಹಣದ ಮುಗ್ಗಟ್ಟಿನಿಂದಾಗಿ ಕಲಾವಿದರನ್ನು ಸಂಭಾಳಿಸುವುದು ಕಷ್ಟಕರವಾಗಿ ಕಂಪನಿಯನ್ನೇ ವಿಸರ್ಜಿಸಿದರು.

ಸಂಗೀತ, ರಂಗಭೂಮಿ ಮತ್ತು ಚಿತ್ರರಂಗದಲ್ಲಿಯ ಇವರ ಸೇವೆಯನ್ನು ಮೆಚ್ಚಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನ ನೀಡಿವೆ. 1956ರಲ್ಲಿ ತಯಾರಾದ ಕನ್ನಡ ಚಿತ್ರಗಳಲ್ಲಿಯ ನಟನೆಗೆ ಉತ್ತಮನಟರೆಂದು ಮದರಾಸು ಸಿನಿಮಾ ಅಭಿಮಾನಿಗಳ ಸಂಘ ಇವರನ್ನು ಆಯ್ಕೆ ಮಾಡಿತ್ತು. ಆಂಧ್ರ ಪ್ರದೇಶದ ಶ್ರೀಶೈಲ ಮಠದ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಅವರು ನೀಡಿದ ನಟಾಚಾರ್ಯ ಎಂಬ ಬಿರುದು (1960), ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯ ಅನಂತ ಸೇವಾಶ್ರಮದ ಶ್ರೀರಾಘವೇಂದ್ರ ಸ್ವಾಮಿಯವರು ಬಂಗಾರದ ಪದಕದೊಂದಿಗೆ ನೀಡಿದ ಗಾನಾಭಿನಯ

ಚಂದ್ರ ಎಂಬ ಬಿರುದು (1962), ಬೆಂಗಳೂರಿನ ಕನ್ನಡಾಭಿಮಾನಿಗಳು ನೀಡಿದ ಬಂಗಾರದ ತೋಡ(1974), ಕರ್ನಾಟಕ ಸಂಗೀತ ಅಕಾಡೆಮಿ ನೀಡಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಬಹುಮಾನ(1972), ಶೃಂಗೇರಿ ಮಠದ ಶ್ರೀ ಅಭಿನವ ವಿದ್ಯಾತೀರ್ಥ ಜಗದ್ಗುರುಗಳು ಬಂಗಾರದ ಪದಕ ದೊಂದಿಗೆ ನೀಡಿದ ಗಾಯಕ ಶಿಖಾಮಣಿ ಎಂಬ ಬಿರುದು (1976) ಮುಖ್ಯವಾದುವು. ಕರ್ನಾಟಕ ಗಾನಕಲಾಪರಿಷತ್ತಿನ ಆರನೆಯ ಸಂಗೀತಗಾರರ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಇವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಗಾನಕಲಾ ಭೂಷಣ ಎಂಬ ಬಿರುದಿನೊಂದಿಗೆ ಬಂಗಾರದ ಪದಕ ನೀಡಿ ಗೌರವಿಸಲಾಗಿದೆ (1976). ಮೈಸೂರು ಸಂಸ್ಥಾನದ ವಿದ್ವಾಂಸರು ಗಾನಕಲಾ ಗಂಧರ್ವ ಎಂಬ ಬಿರುದನ್ನು ನೀಡಿ ಸನ್ಮಾನಿಸಿದ್ದಾರೆ(1978). ಇವಲ್ಲದೆ ಇವರು ಕರ್ನಾಟಕ ಫಿಲಂ ಅಡ್ವೈಸರಿ ಬೋರ್ಡಿನ ಸದಸ್ಯರಾಗಿಯೂ 1939 ರಿಂದ ಆಕಾಶವಾಣಿ ಯಲ್ಲಿ ಕರ್ನಾಟಕ ಸಂಗೀತದ ಹಾಡುಗಾರರಾಗಿಯೂ ಹಲವಾರು ಕಾರ್ಯಕ್ರಮ ಗಳ ಚಾಲನೆಗೆ ಕಾರಣರಾಗಿದ್ದರು. ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಯ ಸಂಗೀತ ಪರೀಕ್ಷೆಯ ಬೋರ್ಡಿನ ಅಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಸದಾನಂದ (1979) ಇವರು ನಿರ್ಮಿಸಿದ ಕೊನೆಯ ಚಿತ್ರ. ಇವರು 1992ರಲ್ಲಿ ನಿಧನರಾದರು. **(ಜಿ.ಆರ್.ಟಿ.)**

**ಹೊನ್ನಪ್ಪ ಹೆಸರಘಟ್ಟ:** 19ನೆಯ ಶತಮಾನದ ಕನ್ನಡ ವಿದ್ವಾಂಸರು. ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿಕೊಂಡಿದ್ದ ಇವರು ಆಗಿನ ಮೈಸೂರು ಸಂಸ್ಥಾನದ ಶಿಕ್ಷಣ ಇಲಾಖೆಯಲ್ಲಿ ಸೇವೆಸಲ್ಲಿಸಿದರು. ಬೆಂಗಳೂರು ಜಿಲ್ಲೆ ಉಪ್ಪಾರಹಳ್ಳಿಯ ಶಾಲೆಯಲ್ಲಿ ಉಪಾಧ್ಯಾಯರಾಗಿ (1885) ಅನಂತರ ತ್ಯಾಮಗೊಂಡ್ಲು ಕನ್ನಡ ಶಾಲೆಯ ಮುಖ್ಯೋಪಾಧ್ಯಾಯರಾಗಿ (1890) ಕೆಲಸಮಾಡಿದರು.

ಇವರು ಕೆಲವು ಪ್ರಾಚೀನ ಕನ್ನಡ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ತೋಂಟದಾರ್ಯನ ಕರ್ನಾಟಕ ಶಬ್ದಮಂಜರಿಯನ್ನು ಟೀಕಾಸಹಿತ ಪರಿಷ್ಕರಿಸಿದ್ದಾರೆ(1884). ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿಗೆ ವಿಬುಧ ಚಂದ್ರಚಕೋರ ಚಂದ್ರಿಕೆ ಎಂಬ ಟೀಕೆ ಬರೆದಿದ್ದಾರೆ(1885). ಹರಿಹರನ ಗಿರಿಜಾಕಲ್ಯಾಣವನ್ನು ಮೊತ್ತಮೊದಲಿಗೆ ಸಂಪಾದಿಸಿ ಪ್ರಕಟಿಸಿದ(1886) ಕೀರ್ತಿ ಇವರದು. ಷಡಕ್ಷರ ಕವಿಯ ರಾಜಶೇಖರ ವಿಳಾಸವನ್ನು ವಿಸ್ತಾರವಾದ ಪೀಠಿಕೆ, ಟೀಕೆ, ಟಿಪ್ಪಣಿಗಳೊಂದಿಗೆ ಸಂಪಾದಿಸಿ ಪ್ರಕಟಿಸಿದ್ದಾರೆ(1890). ರಾಮಸ್ವಾಮಿಶಾಸ್ತ್ರಿ ಎಂಬ ವಿದ್ವಾಂಸರೊಂದಿಗೆ ಇವರು ಸಿದ್ಧಪಡಿಸಿದ ಕರ್ನಾಟಕ ಕಲ್ಪದ್ರುಮಂ(1885) ಎಂಬ ನಿಘಂಟು ಭಾಷಾಭ್ಯಾಸಿಗಳಿಗೆ ಉಪಯುಕ್ತಗ್ರಂಥ. ಇವರು ರಚಿಸಿರುವ ವ್ಯಾಕರಣ ಸಂಗ್ರಹ(1890) ಎಂಬ ಕೃತಿ ವ್ಯಾಕರಣದಲ್ಲಿ ಇವರಿಗಿದ್ದ ಪಾಂಡಿತ್ಯಕ್ಕೆ ದ್ಯೋತಕವಾಗಿದೆ. **(ಬಿ.ಎಸ್.)**

**ಹೊನ್ನಾಪುರಮಠ, ಗದಿಗೆಯ್ಯ ಹುಚ್ಚಯ್ಯ:** 1870–1933. ಉತ್ತರ ಕರ್ನಾಟಕ ಪ್ರದೇಶದಲ್ಲಿ ನಾಡುನುಡಿಗಳ ಜಾಗೃತಿಗಾಗಿ ಶ್ರಮಿಸಿದವರು, ಸಮಾಜಸೇವಕರು, ಪತ್ರಿಕೋದ್ಯಮಿ ಮತ್ತು ಲೇಖಕರು. ಧಾರವಾಡದವರಾದ ಇವರು ಅಲ್ಲಿಯೇ ಶಿಕ್ಷಣ ಪಡೆದು ವಕೀಲ ವೃತ್ತಿಯನ್ನೂ ಜೊತೆಗೆ ಸಾರ್ವಜನಿಕ ಸೇವೆಯನ್ನೂ ನಡೆಸಿದರು. ಧಾರವಾಡ ಜಿಲ್ಲಾ ಮಂಡಳಿ ಮತ್ತು ನಗರ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅಖಿಲ ಭಾರತ ವೀರಶೈವ ಮಹಾ ಸಭೆಯ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಇವರು ಆ ಸಂಸ್ಥೆಯ ಕಾರ್ಯದರ್ಶಿಗಳಾಗಿಯೂ (1908) ಸ್ವಲ್ಪಕಾಲ ಕೆಲಸ ಮಾಡಿದರು. ಇವರು ವಾಗ್ದೇವಿ ಎಂಬ ಮಾಸಪತ್ರಿಕೆಯನ್ನು ಆರಂಭಿಸಿ ಸ್ವಲ್ಪ ಕಾಲ ನಡೆಸಿದರು. ಲೇಖಕರೂ ಆಗಿದ್ದ ಇವರು ಅದ್ಭುತಪ್ರೇಮ, ಅಲ್ಲಾವುದ್ದೀನ ಮತ್ತು ಒಂದು ಸೋಜಿಗದ ಕಥೆ ಎಂಬ ಕಥೆಗಳನ್ನು, ಚೆಲ್ಲಾಳಚರಿತ್ರೆ, ಪ್ರಹ್ಲಾದಚರಿತ್ರೆ, ಸಾವಿತ್ರಿಚರಿತ್ರೆ ಎಂಬ ಜೀವನಚರಿತ್ರೆಗಳನ್ನೂ ಬಾಲಭಾಗವತ, ಬಾಲಭಾರತ, ಬಾಲರಾಮಾಯಣ ಎಂಬ ನಾಟಕಗಳನ್ನು ಬರೆದಿದ್ದಾರೆ. ಇವರು 1933 ಜನವರಿ 7 ರಂದು ನಿಧನರಾದರು. *

**ಹೊನ್ನಾವರ:** ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರಕ್ಕೆ ಕುಮಟ, ದಕ್ಷಿಣಕ್ಕೆ ಭಟ್ಕಳ ತಾಲ್ಲೂಕುಗಳೂ ಪೂರ್ವದಲ್ಲಿ ಸಿದ್ದಾಪುರ ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕುಗಳೂ ಪಶ್ಚಿಮಕ್ಕೆ ಅರಬ್ಬೀ ಸಮುದ್ರ ಸುತ್ತುವರಿದಿವೆ. ಮಂಕಿ, ಮಾವಿನಕುರ್ವೆ, ಹೊನ್ನಾವರ ಹೋಬಳಿಗಳು. 93 ಗ್ರಾಮಗಳಿರುವ ಈ ತಾಲ್ಲೂಕಿನ ವಿಸ್ತೀರ್ಣ 744 ಚ.ಕಿಮೀ. ಜನಸಂಖ್ಯೆ 1,60,299. ಇದರಲ್ಲಿ 1,42,475 ಮಂದಿ ಗ್ರಾಮಸ್ಥರು, 17,824 ಮಂದಿ ಪಟ್ಟಣಿಗರಿದ್ದಾರೆ.

ಕರಾವಳಿ ತೀರದ ಈ ತಾಲ್ಲೂಕಿನ ಉತ್ತರ ಭಾಗದಲ್ಲಿ ಪ್ರಾರಂಭವಾಗುವ ಜಂಬುಮಣ್ಣಿನ ಮೈದಾನ ಪ್ರದೇಶ ದಕ್ಷಿಣದಲ್ಲಿ ಮಂಕಿವರೆಗೂ ಪಶ್ಚಿಮಕ್ಕೆ ಹೊನ್ನಾವರದವರೆಗೂ ಹರಡಿದ್ದು ಅಲ್ಲಿಂದ ಮುಂದೆ ಪಶ್ಚಿಮಕ್ಕೆ ಹೋದಂತೆ ತೀರದಲ್ಲಿ ಮರಳು ಮಿಶ್ರಿತ ಭೂಮಿ ಮತ್ತು ಮರಳುಭೂಮಿಯನ್ನು ಕಾಣಬಹುದು. ಬೆಟ್ಟಗುಡ್ಡ ಪ್ರದೇಶಗಳಲ್ಲಿ ಕೆಂಪುಮಣ್ಣಿನ ಭೂಮಿ ಇದೆ. ತಾಲ್ಲೂಕಿನಲ್ಲಿ ಹರಿಯುವ ನದಿಗಳಲ್ಲಿ ಶರಾವತಿ **(ನೋಡಿ)** ಪ್ರಮುಖವಾದದ್ದು. ಇದು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ತಾಲ್ಲೂಕಿನ ಮಧ್ಯದಲ್ಲಿ ಹರಿದು ಹೊನ್ನಾವರದ ದಕ್ಷಿಣಕ್ಕೆ ಅರಬ್ಬೀ ಸಮುದ್ರ ಸೇರುತ್ತದೆ. ಕಲಕಟ್ಟೆ, ತುಳುಸಾನಿ, ದೊಡ್ಡಮನೆ ಮೊದಲಾದ ಸಣ್ಣಪುಟ್ಟ ಹೊಳೆಗಳೂ ಅನೇಕ ಝರಿಗಳೂ ಈ ತಾಲ್ಲೂಕಿನಲ್ಲಿವೆ. ಸಾಕಷ್ಟು ಮಳೆ ಬೀಳುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 3,550 ಮಿಮೀ. ಬತ್ತ, ಕಬ್ಬು ಮುಖ್ಯ ಬೆಳೆಗಳು. ಅಡಕೆ, ತೆಂಗು, ಮೆಣಸು ಮುಖ್ಯ ತೋಟದ ಬೆಳೆಗಳು. ಸಮುದ್ರತೀರ ಮತ್ತು ನದೀ ದಡಗಳಲ್ಲಿ ತೆಂಗು ಮತ್ತು ಅಡಕೆ ಮರಗಳನ್ನು, ಕಣಿವೆಗಳಲ್ಲಿ ತೆಂಗು, ಬಾಳೆ, ಮೆಣಸು ಬೆಳೆಗಳನ್ನೂ ಹೆಚ್ಚಾಗಿ ಕಾಣಬಹುದು. ಗೋಡಂಬಿ, ಮಾವು ಮತ್ತು ಅಲ್ಪ ಪ್ರಮಾಣದಲ್ಲಿ ನೆಲಗಡಲೆ ಬೆಳೆಯೂ ಈ ತಾಲ್ಲೂಕಿನಲ್ಲಿದೆ.

ಬೆಂಗಳೂರು–ಹೊನ್ನಾವರ, ಮುಂಬಯಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಗಳು ಈ ತಾಲ್ಲೂಕಿನಲ್ಲಿ ಹಾದು ಹೋಗುತ್ತವೆ. ಜೊತೆಗೆ ಸುತ್ತಲ ಪಟ್ಟಣಗಳಿಗೆ ಉತ್ತಮ ಮಾರ್ಗ ಸಂಪರ್ಕವಿದೆ. ಹೊನ್ನಾವರದಲ್ಲಿ ಬಂದರು ಇದ್ದು ಜಲಮಾರ್ಗ ಸೌಲಭ್ಯವುಂಟು. ಇದನ್ನು ಉತ್ತಮಪಡಿಸಲು ಪ್ರಯತ್ನಗಳಾಗುತ್ತಿವೆ. ಕೆಲವು ಹೆಂಚಿನ ಕಾರ್ಖಾನೆಗಳನ್ನು ಬಿಟ್ಟರೆ ತಾಲ್ಲೂಕಿನಲ್ಲಿ ಭಾರಿ ಕೈಗಾರಿಕೆಗಳಾವುವೂ ಇಲ್ಲ. ಮತ್ಸ್ಯೋದ್ಯಮ ಇಲ್ಲಿನ ಮುಖ್ಯ ಕಸಬುಗಳಲ್ಲೊಂದು. ಇತ್ತೀಚೆಗೆ ಆಧುನಿಕ ರೀತಿಯಲ್ಲಿ ಅದರ ಅಭಿವೃದ್ಧಿಯಾಗುತ್ತಿದೆ; ತಾಲ್ಲೂಕಿನಲ್ಲಿ ಮೀನುಗಾರರ ತರಬೇತಿ ಕೇಂದ್ರವಿದೆ.

ತಾಲ್ಲೂಕಿನಲ್ಲಿ ನ್ಯಾಯಾಲಯಗಳೂ ಸರ್ಕಾರಿ ಆಡಳಿತ ಕಚೇರಿಗಳೂ ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುಚ್ಛಕ್ತಿ ಸೌಲಭ್ಯಗಳೂ ಇವೆ. ಶಾಲಾ ಕಾಲೇಜುಗಳೂ ಆರೋಗ್ಯ ಕೇಂದ್ರ ಮುಂತಾದವೂ ಇದ್ದು ಜನರಿಗೆ ಆಧುನಿಕ ಸೌಲಭ್ಯಗಳು ಲಭ್ಯವಿದೆ.

ಯಕ್ಷಗಾನ ಈ ತಾಲ್ಲೂಕಿನ ಒಂದು ವಿಶಿಷ್ಟ ಕಲೆ. ಈ ಕಲೆಗೆ ತಾಲ್ಲೂಕಿನ ಕೊಡುಗೆ ವಿಶಿಷ್ಟವಾದುದು. ರಾಷ್ಟ್ರಪ್ರಶಸ್ತಿ ವಿಜೇತ ಕೆರೆಮನೆ ಶಿವರಾಮ ಹೆಗಡೆ, ರಾಜ್ಯಪ್ರಶಸ್ತಿ ವಿಜೇತ ಮೂಡ್ಕಣಿ ನಾರಾಯಣ ಹೆಗಡೆ, ಕರ್ಕಿ ಪರಮಯ್ಯ ಹಾಸ್ಯಗಾರ ಮೊದಲಾದವರು ಇಲ್ಲಿಯವರು. ಇಡಗುಂಜಿ

ಮಹಾಗಣಪತಿ ಪ್ರಾಸಾದಿತ ಯಕ್ಷಗಾನ ಮಂಡಳಿ, ಕೆರೆಮನೆ, ಶ್ರೀ ಹಾಸ್ಯಗಾರ ಮಂಡಳಿ ಕರ್ಕಿ ಮುಂತಾದ ಕಲಾ ಮಂಡಳಿಗಳಿವೆ. ಹೊನ್ನಾವರದ ಗುಡಿಕಾರರ ಗಂಧದ ಹಾಗೂ ದಂತದ ಕುಸುರಿ ಕೆಲಸ ಪ್ರಸಿದ್ಧವಾದುದು.

ಈ ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಹೊನ್ನಾವರದಿಂದ ಸು. 3 ಕಿಮೀ ದೂರದಲ್ಲಿರುವ ರಾಮತೀರ್ಥ ಪ್ರಸಿದ್ಧವಾದುದು. ಇಲ್ಲಿನ ಝರಿನೀರು ಖನಿಜಗುಣಗಳುಳ್ಳದ್ದೆಂದೂ ಈ ತೀರ್ಥದಲ್ಲಿ ಸ್ನಾನ ಮಾಡಿದರೆ ಚರ್ಮವ್ಯಾಧಿಗಳೂ ಹುಚ್ಚೂ ಗುಣವಾಗುವುವೆಂದೂ ಪ್ರತೀತಿ. ಇಲ್ಲಿ ಶ್ರೀರಾಮಲಿಂಗೇಶ್ವರ, ದತ್ತಾತ್ರೇಯರ ಮೂರ್ತಿಗಳಿರುವ ಒಂದು ದೇವಾಲಯವಿದೆ. ಹೊನ್ನಾವರದಿಂದ ಸುಮಾರು 5 ಕಿಮೀ ದೂರದಲ್ಲಿ ಸಮುದ್ರಮಧ್ಯದಲ್ಲಿರುವ ನಡುಗಡ್ಡೆಯ ಸುತ್ತಲೂ ಕೋಟೆಯಿದ್ದು ಅಲ್ಲಲ್ಲಿ ಗೋಪುರಗಳ ಮೇಲೆ ತೋಪುಗಳನ್ನಿಡಲಾಗಿರುವ, ಬಿದನೂರಿನ ಶಿವಪ್ಪನಾಯಕ ಕಟ್ಟಿಸಿದೆಂದು ಹೇಳುವ ಬಸವರಾಜ ದುರ್ಗವಿದೆ. ಸಹ್ಯಪರ್ವತದ ಶಿಖರದ ಮೇಲೆ ಹೊನ್ನಾವರದಿಂದ ಸು. 13 ಕಿಮೀ ದೂರದಲ್ಲಿ ಕರಿಕಾನನ ಪರಮೇಶ್ವರೀ ದೇವಾಲಯವಿದೆ. ಜಗತ್ಕಂಟಕರಾದ ಮಲ್ಲಾಸುರ-ಭಂಗಾಸುರ ರೆಂಬ ರಾಕ್ಷಸರನ್ನು ನಾಶ ಮಾಡಿದ ದೇವಿಯು ಭಕ್ತರ ಪ್ರಾರ್ಥನೆಯ ಮೇರೆಗೆ ಇಲ್ಲಿ ನೆಲೆಸಿದ್ದಾಳೆಂದು ಪ್ರತೀತಿ. ಇದರ ಸುತ್ತಲೂ 5–6 ಕಿಮೀ ಅರಣ್ಯ ಪ್ರದೇಶವಿದೆ. ಪ್ರತಿ ಶುಕ್ರವಾರ ಮತ್ತು ಮಂಗಳವಾರ ಹಲವಾರು ಭಕ್ತರು ಆಗಮಿಸುತ್ತಾರೆ. ಹೊನ್ನಾವರದಿಂದ ಪೂರ್ವಕ್ಕೆ 10 ಕಿಮೀ ದೂರದಲ್ಲಿರುವ ಇಡಗುಂಜಿಯ **(ನೋಡಿ)** ಎರಡು ಕೈ ಗಣಪತಿ ಪ್ರಸಿದ್ಧ. ಹೊನ್ನಾವರದಿಂದ 29 ಕಿಮೀ ದೂರದಲ್ಲಿರುವ ಗುಂಡಬಾಳೆಯು ಹನುಮಂತ ದೇವಾಲಯದಿಂದ ಪ್ರಖ್ಯಾತವಾಗಿದೆ. ಇಲ್ಲಿ ಜೈನ ಗುಡಿಗೋಪುರಗಳೂ ಇವೆ. ರಾವಣ ನಿರ್ಮಿತವೆಂದು ಐತಿಹ್ಯವುಳ್ಳ ಮುರ್ಡೇಶ್ವರ, ಧಾರೇಶ್ವರ, ಗುಣವಂತೇಶ್ವರಗಳು ಹೊನ್ನಾವರದಿಂದ 16 ಕಿಮೀ ಅಂತರದೊಳಗೆ ಇವೆ. ಪ್ರಸಿದ್ಧ ಐತಿಹಾಸಿಕ ಸ್ಥಳವಾದ ಗೇರುಸೊಪ್ಪೆ **(ನೋಡಿ)** ಈ ತಾಲ್ಲೂಕಿನಲ್ಲಿ ಹೊನ್ನಾವರದ ಪೂರ್ವಕ್ಕೆ ಸು.29 ಕಿಮೀ ದೂರದಲ್ಲಿದೆ. ಹೊನ್ನಾವರದ ಉತ್ತರಕ್ಕೆ ಸುಮಾರು 8 ಕಿಮೀ ದೂರದಲ್ಲಿರುವ ಹಳದೀಪುರದಲ್ಲಿ ಅನೇಕ ದೇವಾಲಯಗಳಿವೆ.

ಧನ್ವಂತ್ರಿ ಮಹಾವಿಷ್ಣು, ಯಲಗುಪ್ಪ

ಹೊನ್ನಾವರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಮುಖ್ಯ ಪಟ್ಟಣ. ಶರಾವತಿ ನದಿ ಮುಖಜ ಭೂಮಿಯಲ್ಲಿರುವ ಈ ಪಟ್ಟಣ ಸಮುದ್ರತೀರದಿಂದ 1 ಕಿಮೀ ದೂರದಲ್ಲಿದೆ. ನದಿಯ ಉತ್ತರ ದಂಡೆಯ ಮೇಲೆ ಹರಡಿರುವ ಈ ಊರಿನ ಜನಸಂಖ್ಯೆ 17,824.

ಹೊನ್ನಾವರದ ಪೂರ್ವಕ್ಕಿರುವ ಆರೊಳ್ಳಿ, ಮುಗ್ವಾ, ಮುಂಡಗೋಡ, ಹೊಸಾಕುಳಿ, ಸಾಲೋಡ ಪಂಚಗ್ರಾಮಗಳು ಅಡಕೆ–ತೆಂಗಿನ ತೋಟಗಳ ತವರಾಗಿವೆ. ಇಲ್ಲಿಯ ಶರಾವತಿ–ಬಡಗಣು ಸಮಗಮದಲ್ಲಿ ಒಂದು ಸುಂದರ ಸರೋವರ ನಿರ್ಮಿತವಾಗಿದ್ದು, ಅಲ್ಲಿ ಸಹಜಸುಂದರವಾಗಿ ತೆಂಗಿನ ತೋಟಗಳಿಂದಾವೃತವಾದ ಐದು ನಡುಗಡ್ಡೆಗಳು ಇವೆ.

ಹೊನ್ನಾವರ ಪಟ್ಟಣ ಅಟ್ಟಳಿಕೆಯಂತಹ ಭೂಮಿಯ ಮೇಲೆ ಹಬ್ಬಿಕೊಂಡಿದೆ. ಮೊದಲನೆಯ ಹಂತ ಶರಾವತಿ ನದಿಯ ಗುಂಟ ಪೂರ್ವ–ಪಶ್ಚಿಮವಾಗಿ ಹಬ್ಬಿದ್ದು ಇದಕ್ಕೆ ಕೆಳಗಿನ ಪಾಳ್ಯ ಎಂದು ಕರೆಯಲಾಗುವುದು. ಇಲ್ಲಿ ಅಡಕೆ–ತೆಂಗಿನ ತೋಟಗಳು, ರೋಮನ್ ಕೆಥೊಲಿಕರ ಸಾನ್–ಸಾಲ್ವಾಡೋ ಚರ್ಚ್, ಬಂದರ ವಾಡಾ, ಪಶ್ಚಿಮ ಕರಾವಳಿಯ ಹೆದ್ದಾರಿಗೆ ಒಂದು ಮೈಲಿ ಉದ್ದವಾಗಿ ನಿರ್ಮಿಸಿದ ಶರಾವತಿ ಸೇತುವೆ ಮುಂತಾದವುಗಳಿವೆ. ಇದು ಸುಮಾರು 3ಕಿಮೀ ದೂರದ ಕರ್ಕಿಯವರೆಗೂ ಹಬ್ಬಿದೆ. ಈ ಭಾಗದಲ್ಲಿ ದುರ್ಗದ ಕೇರಿ, ಲಕ್ಷ್ಮೀ ನಾರಾಯಣನ ಗುಡಿ, ಹನುಮಾನ್ ಮಂದಿರ, ವಿಠೋಬ–ರುಖುಮಾಯಿ ಗುಡಿ, ರಾಮೇಶ್ವರ ದೇವಾಲಯಗಳು, ಸೇಂಟ್ ಥಾಮಸ್ ಹೈಯರ್ ಸೆಕೆಂಡರಿ ಶಾಲೆ ಮುಂತಾದವುಗಳಿವೆ. ಎರಡನೆಯ ಹಂತ ಸ್ವಲ್ಪ ಎತ್ತರದ್ದಾಗಿದ್ದು, ಈ ಭಾಗದಲ್ಲಿ ವೆಂಕಟರಮಣ ದೇವಾಲಯುವಿದೆ. ಇಲ್ಲಿ ಪ್ರತಿವರ್ಷ ಶ್ರೀರಾಮನವಮಿಯಂದು ಜಾತ್ರೆಯಾಗುತ್ತದೆ. ಇದಲ್ಲದೆ ಶಾರದಾಂಬಾ ದೇವಸ್ಥಾನ, ಹನುಮಂತನ ಎರಡು ಮಂದಿರಗಳು, ಹತ್ತು ಜನರ ಮಠ, ಕಿರುಕುಳ ವ್ಯಾಪಾರದ ಪೇಟೆ, ಮಸೀದಿ, ಪ್ರವಾಸಿಮಂದಿರ ಮತ್ತು ದೀಪಸ್ತಂಭಗಳು ಇಲ್ಲಿವೆ. ನಗರದ ಮೂರನೆಯ ಹಂತ ಪೂರ್ವಕ್ಕೆ ಉನ್ನತ ಪ್ರದೇಶದಲ್ಲಿದ್ದು ಆ ಭಾಗವನ್ನು ಪ್ರಭಾತ ನಗರವೆಂದು ಕರೆಯುತ್ತಾರೆ. ಬೆಂಗಳೂರು–ಹೊನ್ನಾವರ ಹೆದ್ದಾರಿ ಇಲ್ಲಿ ಹಾದುಹೋಗಿದ್ದು ಈ ಭಾಗದಲ್ಲಿ ಕಲಾವಿಜ್ಞಾನ ಕಾಲೇಜು, ಕಾನ್ವೆಂಟ್, ಕರ್ನಲ್ ಹಿಲ್ ಮುಂತಾದವುಗಳಿವೆ.

ಹೊನ್ನಾವರದಲ್ಲಿ ನೈಸರ್ಗಿಕ ಬಂದರು ಇದ್ದು ವಸ್ತುಸಾಗಾಣಿಕೆಗೆ ಭೂ–ಜಲಮಾರ್ಗಗಳ ಅನುಕೂಲತೆಯಿದೆ. ಬೆಂಗಳೂರು–ಹೊನ್ನಾವರ ಮಾರ್ಗ, ಮುಂಬಯಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಗಳು ಇಲ್ಲೇ ಹಾದುಹೋಗಿವೆ. ಹೊನ್ನಾವರದಿಂದ ಒಂದೂವರೆ ಕಿಮೀ ದೂರದ ಕಾಸರಗೋಡಿನಲ್ಲಿ ಎರಡು ಹಾಗೂ ಮಾವಿನ ಕುರ್ವೆಯಲ್ಲಿ ಒಂದು ಹೆಂಚಿನ ಕಾರ್ಖಾನೆಗಳಿವೆ. ಇಲ್ಲಿಯ ಶ್ರೀಗಂಧ ಹಾಗೂ ದಂತದ ಕೆತ್ತನೆಗೆ ಭಾರೀ ಬೇಡಿಕೆಯಿದೆ. ಸುತ್ತಲೂ ವನಸಿರಿ ಹೇರಳವಾಗಿರುವುದರಿಂದ ನಾಲ್ಕು ಕಟ್ಟಿಗೆ ಕೊರೆಯುವ ಮಿಲ್ಲುಗಳಿವೆ. ಒಂದು ಬೆಲ್ಲದ ಕಾರ್ಖಾನೆಯಿದೆ. ಪ್ರತಿ ಶನಿವಾರ ಸಂತೆ ನಡೆಯುತ್ತದೆ. ಇಲ್ಲಿ ಕೆಲವು ಸರ್ಕಾರಿ ಕಚೇರಿಗಳೂ ಬ್ಯಾಂಕುಗಳೂ ಮತ್ತು ಇತರೆ ನಾಗರಿಕ ಸೌಲಭ್ಯಗಳಿವೆ. ಪಟ್ಟಣ ಪೌರಾಡಳಿತಕ್ಕೆ ಸೇರಿದೆ. ಇಲ್ಲಿ ಒಂದು ಮೀನುಗಾರಿಕೆಯ ಶಾಲೆ ಹಾಗೂ ತರಬೇತಿ ಕೇಂದ್ರವಿದೆ. ಈ ಪಟ್ಟಣದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿದ್ದು ಪ್ರಥಮದರ್ಜೆ ಕಲಾವಿಜ್ಞಾನ ಕಾಲೇಜೂ ಇದೆ.

ಹೊನ್ನಾವರದ ಬಂದರು 15ನೆಯ ಶತಮಾನದಲ್ಲೇ ಪ್ರಖ್ಯಾತ ಬಂದರಾಗಿತ್ತು. 16ನೆಯ ಶತಮಾನದಲ್ಲಿ ಇಲ್ಲಿ ಪೋರ್ಚುಗೀಸ್ ಹಾಗೂ ಇಂಗ್ಲಿಷರ ವ್ಯಾಪಾರೀ ಸಂಸ್ಥೆಗಳಿದ್ದುವು. 1444ರಲ್ಲಿ ಪರ್ಷಿಯನ್ ರಾಯಭಾರಿ ಅಬ್ದುಲ್ ರಜಾಕ್ ಈ ಬಂದರಿನ ಮುಖಾಂತರವೇ ವಿಜಯನಗರಕ್ಕೆ ಪ್ರಯಾಣ ಮಾಡಿದ್ದ. 1503ರಲ್ಲಿ ವಾಸ್ಕೋಡಗಾಮಾನಿಂದ, 1785ರಲ್ಲಿ ಟಿಪ್ಪು ಸುಲ್ತಾನನಿಂದ ಹೊನ್ನಾವರ ನಾಶ ಮಾಡಲ್ಪಟ್ಟರೂ ಮತ್ತೆ ಉಳಿದು ಬೆಳೆದು ಬಂದಿದೆ. ಬಂದರನ್ನು ಅಭಿವೃದ್ಧಿಗೊಳಿಸುವ ಯೋಜನೆ ನಡೆದಿದೆ.

ಈ ಊರನ್ನು ಡಚ್ಚರು ಒನೊರ ಎಂದರೆ, ಹೆಮಿಲ್ಟನ್ ಒನಾರ ಎಂದೂ ಆಲ್ಬುಕರ್ಕ್‌ನು ಹೊನೋರ ಎಂದೂ ಕರೆದಿದ್ದಾರೆ. 1381ರ ಶಿಲಾಲೇಖವೊಂದರಲ್ಲಿ ಹೊನ್ನಾಉರಾ ಎಂದಿದೆ. ಸು. 800ರಲ್ಲಿ ಈ ಸ್ಥಳವನ್ನಾಳಿದ ಹೊನ್ನಮ್ಮನ ಹೆಸರಿನಿಂದ ಈ ಸ್ಥಳಕ್ಕೆ ಹೊನ್ನಾವರ ಎಂಬ ಹೆಸರು ಬಂತೆಂದು ಪ್ರತೀತಿ.

ಹೊನ್ನಾವರ 150–600ರ ವರೆಗೆ ಬನವಾಸಿಯ ಕದಂಬರ ಆಳಿಕೆಯಲ್ಲಿತ್ತು. ಆಮೇಲೆ ಚಳುಕ್ಯರ, ರಾಷ್ಟ್ರಕೂಟರ ಅಧಿಪತ್ಯಕ್ಕೆ ಸೇರಿತು. ವಿಜಯನಗರ ಸಾಮ್ರಾಜ್ಯ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಅಲ್ಲಿಯ ಅರಸರು ಹೊನ್ನಾವರ ಬಂದರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಈ ಬಂದರಿನಿಂದಲೇ ಪಶ್ಚಿಮ ಏಷ್ಯದಿಂದ ಕುದುರೆಗಳನ್ನು ತರಿಸಿಕೊಳ್ಳುತ್ತಿದ್ದರು. ರಕ್ಕಸತಂಗಡಿಯ ಯುದ್ಧದಲ್ಲಿ ವಿಜಯನಗರ ಪತನವಾದ ಬಳಿಕ ಹೊನ್ನಾವರ ಬಿದನೂರಿನ ನಾಯಕರ ಆಡಳಿತಕ್ಕೆ ಸೇರಿತು. ಇಲ್ಲಿಯ ವೆಂಕಟರಮಣ ದೇವಾಲಯಕ್ಕೆ ಉಂಬಳಿಕೊಟ್ಟ ಕೆಳದಿ ಶಿವಪ್ಪನಾಯಕನ ಮಗ ಭದ್ರಪ್ಪನಾಯಕನ 1663ರ ಶಾಸನ ದೇವಾಲಯದಲ್ಲಿದೆ. 18ನೆಯ ಶತಮಾನದಲ್ಲಿ ಹೈದರ್ ಅಲಿಯ ಕೈಸೇರಿದ ಈ ಪಟ್ಟಣ ನಾಲ್ಕು ದಶಕಗಳ ಕಾಲ ಮೈಸೂರಿನ ಆಡಳಿತದಲ್ಲಿದ್ದು ಟಿಪ್ಪುವಿನ ಮರಣಾನಂತರ ಬ್ರಿಟಿಷರ ವಶವಾಯಿತು. ಬ್ರಿಟಿಷರು ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯನ್ನು ಮದರಾಸು ಪ್ರಾಂತ್ಯಕ್ಕೆ ಸೇರಿಸಿದಾಗ ಹೊನ್ನಾವರ ಉತ್ತರ ಕನ್ನಡ ಜಿಲ್ಲೆಯ ಕೇಂದ್ರವಾಗಿತ್ತು. ಈಗ ಕಾರವಾರ ಜಿಲ್ಲಾ ಕೇಂದ್ರ. (ವಿ.ಎನ್.ಬಿ.)

**ಹೊನ್ನಾಳಿ:** ಸ್ವಾತಂತ್ರ್ಯ ಸುವರ್ಣ ಮಹೋತ್ಸವ ದಿನವಾದ 1997ರ ಆಗಸ್ಟ್ 15ರಂದು ಅಸ್ತಿತ್ವಕ್ಕೆ ಬಂದ ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಹೊನ್ನಾಳಿ ಹಿಂದೆ ಶಿವಮೊಗ್ಗ ಜಿಲ್ಲೆಗೆ ಸೇರಿತ್ತು. ಈ ತಾಲ್ಲೂಕನ್ನು ಪೂರ್ವದಲ್ಲಿ ಚನ್ನಗಿರಿ, ದಕ್ಷಿಣದಲ್ಲಿ ಶಿವಮೊಗ್ಗ ಮತ್ತು ಭದ್ರಾವತಿ, ಪಶ್ಚಿಮದಲ್ಲಿ ಶಿಕಾರಿಪುರ ಉತ್ತರದಲ್ಲಿ ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳು ಸುತ್ತುವರಿದಿವೆ. ಗೋವಿನಕೋವಿ, ಸಾಸವೆಹಳ್ಳಿ, ಹೊನ್ನಾಳಿ ಮತ್ತು ಬೆಳಗುತ್ತಿ ಹೋಬಳಿಗಳು. ಗೋವಿನಕೋವಿ ಮತ್ತು ಸಾಸವೆಹಳ್ಳಿ ಹೋಬಳಿಗಳನ್ನು ಪ್ರಥಮ ಮತ್ತು ದ್ವಿತೀಯ ಭಾಗಗಳಾಗಿ ವಿಂಗಡಿಸಿದೆ. ಶಿವಮೊಗ್ಗ ಜಿಲ್ಲಾ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ ಎರಡು ಪಟ್ಟಣಗಳೂ 166 ಗ್ರಾಮಗಳೂ ಇವೆ. ತಾಲ್ಲೂಕಿನ ವಿಸ್ತೀರ್ಣ 856.7 ಚ.ಕಿಮೀ. ಜನಸಂಖ್ಯೆ 2,22,592. ಇದರಲ್ಲಿ 2,07,024 ಮಂದಿ ಗ್ರಾಮವಾಸಿಗಳು, 15,568 ಮಂದಿ ಪಟ್ಟಣಿಗರು.

ಈ ತಾಲ್ಲೂಕು ಜಿಲ್ಲೆಯ ಬಯಲು ಪ್ರದೇಶಕ್ಕೆ ಸೇರಿದ್ದರೂ ಸಣ್ಣಪುಟ್ಟ ಗುಡ್ಡಗಳನ್ನು ಈ ತಾಲ್ಲೂಕಿನಲ್ಲಿ ಕಾಣಬಹುದು. ತಾಲ್ಲೂಕಿನಲ್ಲಿ ದಕ್ಷಿಣ ದಿಂದ ಉತ್ತರಕ್ಕೆ ಹಬ್ಬಿರುವ ಬೆಟ್ಟಶ್ರೇಣಿಯಲ್ಲಿರುವ ಕಲ್ವರಂಗನ ಗಿರಿ 1,031 ಮೀ ಎತ್ತರವಿದ್ದು ಶಿವಮೊಗ್ಗ ಜಿಲ್ಲೆಯ ಒಳಭಾಗದ ಎತ್ತರದ ಶಿಖರವೆನಿಸಿದೆ. ತುಂಗಭದ್ರಾ ತಾಲ್ಲೂಕಿನ ಮುಖ್ಯನದಿ. ತಾಲ್ಲೂಕಿನ ದಕ್ಷಿಣದಲ್ಲಿ ಮಳಲಿ ಗ್ರಾಮದ ಪೂರ್ವದಲ್ಲಿ ತಾಲ್ಲೂಕನ್ನು ಪ್ರವೇಶಿಸುವುದು. ಸ್ವಲ್ಪ ದೂರ ಆಯವ್ಯಾಭಿಮುಖವಾಗಿ ಹರಿದು ಅನಂತರ ಆಗ್ನೇಯಾಭಿ ಮುಖವಾಗಿ ಮುಂದೆ ಪಶ್ಚಿಮಾಭಿಮುಖವಾಗಿ ಹರಿಯುವುದು. ಅನಂತರ ಉತ್ತರಾಭಿಮುಖವಾಗಿ ಹರಿದು ಸ್ವಲ್ಪ ದೂರ ಪೂರ್ವಕ್ಕೆ ತಿರುಗಿ ಮುಂದೆ ಹೊನ್ನಾಳಿ ಕಡೆಗೆ ಅದನ್ನು ದಾಟಿಕೊಂಡು ಮುಂದೆ ಉತ್ತರಾಭಿಮುಖವಾಗಿ ಹರಿಯುವುದು. ನದಿ ಉತ್ತರದಲ್ಲಿ ಸ್ವಲ್ಪದೂರ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕನ್ನು ವಿಂಗಡಿಸಿ ಹೊನ್ನಾಳಿ ತಾಲ್ಲೂಕಿನ ಗಡಿಯಾಗಿ ಹರಿಯುವುದು. ತಾಲ್ಲೂಕಿನಲ್ಲಿ ಈ ನದಿಯ ಎಡಬಲದಲ್ಲಿ ಇದನ್ನೇ ಕೂಡಿಕೊಳ್ಳುವ ಅನೇಕ ಸಣ್ಣ ತೊರೆಗಳುಂಟು.

ಈ ತಾಲ್ಲೂಕಿನಲ್ಲಿ ಬಳಪದ ಕಲ್ಲು, ಸುಣ್ಣಕಲ್ಲು ದೊರೆಯುವುದು. ಇಲ್ಲಿ ದೊರೆಯುವ ಬೆಣಚುಕಲ್ಲಿಗೆ ಹೊನ್ನಾಳಿ ಬೆಣಚುಕಲ್ಲು ಎಂದೇ ಹೆಸರು. ತಾಲ್ಲೂಕಿನಲ್ಲಿ ಜೇಡಿ, ಮರಳುಮಿಶ್ರಿತ ಜೇಡಿ, ಮರಳುಮಿಶ್ರಿತ ಕೆಂಪು ಮಣ್ಣು ಮತ್ತು ಮಧ್ಯಮ ಕಪ್ಪಿನ ಹತ್ತಿ ಬೆಳೆಯ ಮಣ್ಣು ಪ್ರದೇಶಗಳಿವೆ. ಹುಲ್ಲುಗಾವಲುಗಳಿಂದಲೂ ಕುರುಚಲು ಕಾಡುಗಳಿಂದಲೂ ಕೂಡಿರುವ ಈ ತಾಲ್ಲೂಕಿನ ಹವೆ ಸಹ್ಯವಾದದ್ದು. ವಾರ್ಷಿಕ ಸರಾಸರಿ ಮಳೆ 714.84 ಮಿಮೀ.

ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಅನುಕೂಲವಾಗಿ 108 ಕೆರೆಗಳೂ 240ಕ್ಕೂ ಹೆಚ್ಚು ಬಾವಿಗಳೂ ಇದ್ದವು. ನಾಲಾ ನೀರಿನಿಂದ ಈ ತಾಲ್ಲೂಕಿನ 8,903 ಹೆಕ್ಟೇರ್‌ಗಳ ಪ್ರದೇಶ ನೀರಾವರಿಯಾಗಿತ್ತು. ತಾಲ್ಲೂಕಿನಲ್ಲಿ 9,388 ಹೆಕ್ಟೇರ್ ಅರಣ್ಯಪ್ರದೇಶವೂ 11,186 ಹೆಕ್ಟೇರ್ ಖಾಯಂ ಹುಲ್ಲುಗಾವಲು ಪ್ರದೇಶವೂ ಇದ್ದು 48,596 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. ಈ ತಾಲ್ಲೂಕಿನ 10,401 ಹೆಕ್ಟೇರ್‌ಗಳಲ್ಲಿ ಬತ್ತವನ್ನೂ ಜಿಲ್ಲೆಗೇ ಮೊದಲಾಗಿ 3,107 ಹೆಕ್ಟೇರ್‌ಗಳಲ್ಲಿ ನೆಲಗಡಲೆಯನ್ನೂ 174 ಹೆಕ್ಟೇರ್‌ಗಳಲ್ಲಿ ಕಬ್ಬನ್ನೂ ಜಿಲ್ಲೆಗೇ ಎರಡನೆಯದಾಗಿ 1,024 ಹೆಕ್ಟೇರ್‌ಗಳಲ್ಲಿ ಹತ್ತಿಯನ್ನೂ 7,545 ಹೆಕ್ಟೇರ್‌ಗಳಲ್ಲಿ ರಾಗಿಯನ್ನೂ ಹಾಗೇ ಜಿಲ್ಲೆಗೇ ಎರಡನೆಯದಾಗಿ ಜೋಳವನ್ನೂ ಹಿಂದಿನ ವರ್ಷಗಳಲ್ಲಿ ಬೆಳೆಯಲಾಗಿತ್ತು. ಇವುಗಳ ಜೊತೆಗೆ ದ್ವಿದಳ ಧಾನ್ಯಗಳು, ಹೊಗೆಸೊಪ್ಪು, ತೆಂಗು, ವಿವಿಧ ತರಕಾರಿ ಮತ್ತು ಫಲಗಳನ್ನೂ ಬೆಳೆಯಲಾಗುತ್ತದೆ. ಇಲ್ಲಿರುವ ತೋಟಗಾರಿಕೆ ಇಲಾಖೆ ತಾಲ್ಲೂಕಿನ ತೋಟದ ಬೆಳೆಗಳ ಅಭಿವೃದ್ಧಿಗೆ ಸಹಾಯಕವಾಗಿದೆ. ಪಶುಪಾಲನೆಯಿದ್ದು ಅವುಗಳ ಅಭಿವೃದ್ಧಿ ಮತ್ತು ರಕ್ಷಣೆಗೆ ಪಶುವೈದ್ಯಾಲಯಗಳಿವೆ. ನದಿ, ತೊರೆ, ಕೆರೆಗಳಲ್ಲಿ ಸಾಕಷ್ಟು ಮೀನು ಸಿಗುವುದರಿಂದ ಮತ್ಸ್ಯೋದ್ಯಮ ಅಭಿವೃದ್ಧಿಯಾಗುತ್ತಿದೆ.

ಈ ತಾಲ್ಲೂಕಿನಲ್ಲಿ ಚಿನ್ನ ಸ್ವಲ್ಪಮಟ್ಟಿಗೆ ಸಿಗುವುದು. ಹೊನ್ನಾಳಿಯ ಚಿನ್ನದಗಣಿ ಪ್ರದೇಶ ಕುದುರೆಕೊಂಡು–ಪಲವನಹಳ್ಳಿಗಳನ್ನೊಳಗೊಂಡಿದೆ. ಈ ಪ್ರದೇಶದಲ್ಲಿ ಚಿನ್ನ ತೆಗೆಯುವ ಕೆಲಸ ನಡೆದು ಲಾಭದಾಯಕವಲ್ಲ ವೆಂದು ಕೈಬಿಡಲಾಗಿದೆ. ಕೈಗಾರಿಕೆಯಲ್ಲೂ ಈ ತಾಲ್ಲೂಕು ಸಾಕಷ್ಟು ಮುಂದುವರಿದಿದೆಯೆನ್ನಬಹುದು. ಹೊನ್ನಾಳಿಯಲ್ಲಿ 66 ಅಕ್ಕಿ ಮತ್ತು ಎಣ್ಣೆ ಗಿರಣಿಗಳಿದ್ದವು. ಕೈಮಗ್ಗದ ಬಟ್ಟೆಗೆ ಈ ತಾಲ್ಲೂಕು ಹಿಂದಿನಿಂದಲೂ ಹೆಸರಾಗಿದ್ದು ಈಗ ಜಿಲ್ಲೆಗೆ ಮೊದಲನೆಯದಾಗಿ ಕೈಮಗ್ಗದ ಹತ್ತಿ ಬಟ್ಟೆ ಇಲ್ಲಿ ತಯಾರಾಗುತ್ತದೆ. ಈ ತಾಲ್ಲೂಕಿನಲ್ಲಿ ನೂರಾರು ಕೈಮಗ್ಗದ ಘಟಕಗಳಿವೆ. ಸುಣ್ಣ ತಯಾರಿಕೆಯಲ್ಲೂ ಈ ತಾಲ್ಲೂಕು ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಮೀರಿಸಿದೆ. ಬಿದಿರು ಕೈಗಾರಿಕೆಯಲ್ಲಿ ಜಿಲ್ಲೆಗೇ ಎರಡನೆಯದಾಗಿದೆ. ಮರಗೆಲಸ, ಚಾಪೆ ತಯಾರಿಕೆಗೂ ಈ ತಾಲ್ಲೂಕು ಪ್ರಸಿದ್ಧ. ಕೃಷಿ ಉಪಕರಣಗಳ, ಚರ್ಮವಸ್ತುಗಳ ತಯಾರಿಕೆಯುಂಟು. ಮಣ್ಣಿನ ವಸ್ತುಗಳ ತಯಾರಿಕೆಯಲ್ಲಿ ಪ್ರಥಮ ಸ್ಥಾನ ಈ ತಾಲ್ಲೂಕಿನದು. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು ತಾಲ್ಲೂಕಿನ ಕೈಗಾರಿಕೆ, ವ್ಯಾಪಾರ–ವಾಣಿಜ್ಯಗಳ ಅಭಿವೃದ್ಧಿಗೆ ಸಹಕಾರಿಯಾಗಿವೆ.

ತಾಲ್ಲೂಕಿನಲ್ಲಿ ಸರ್ವ ನಾಗರಿಕ ಸೌಲಭ್ಯಗಳಿವೆ. ಶಿವಮೊಗ್ಗ–ಹೊನ್ನಾಳಿ–ಹರಿಹರ, ರಾಜ್ಯ ಹೆದ್ದಾರಿಯಿದ್ದು ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳಿಂದ ಸುತ್ತಲ ಗ್ರಾಮ ಮತ್ತು ಪಟ್ಟಣಗಳಿಗೆ ಉತ್ತಮ ಸಂಪರ್ಕವಿದೆ.

ಹೊನ್ನಾಳಿಯ ಉತ್ತರಕ್ಕೆ 5ಕಿಮೀ ದೂರದಲ್ಲಿರುವ ಬಳ್ಳೇಶ್ವರ ತುಂಗಭದ್ರಾ ನದಿಯ ಎಡದಂಡೆಯ ಮೇಲಿದೆ. ಈ ಗ್ರಾಮದ ಬಳ್ಳಲಿಂಗೇಶ್ವರ ಎಂಬ ಈಶ್ವರ ದೇವಾಲಯ ಹೊಯ್ಸಳ ರಚನೆಗೆ ಸೇರಿದ್ದು. ಇಲ್ಲಿ ಪಾರ್ಶ್ವನಾಥ ಜೈನ ಬಸದಿಯೊಂದಿದೆ. ಹೊನ್ನಾಳಿಯ ನೈಋತ್ಯಕ್ಕೆ 23 ಕಿಮೀ ದೂರದಲ್ಲಿ ರುವ ಬೆಳಗುತ್ತಿ **(ನೋಡಿ)** ಹೋಬಳಿ ಕೇಂದ್ರ. ಇಲ್ಲಿ ಸಿದ್ದೇಶ್ವರ, ಚನ್ನಕೇಶವ ದೇವಾಲಯಗಳಿವೆ. ಹೊನ್ನಾಳಿಗೆ ಒಂದು ಕಿಮೀ ದೂರದಲ್ಲಿರುವ ಹಿರೇಮಠ ಗ್ರಾಮ ನ್ಯಾಮತಿ ಮತ್ತು ಶಿಕಾರಿಪುರ ರಸ್ತೆಯಲ್ಲಿದೆ. ಇಲ್ಲಿ ಪ್ರಸಿದ್ಧ ಚನ್ನಪ್ಪಸ್ವಾಮಿ ಮಠವಿದೆ. ಹೊನ್ನಾಳಿಯ ಆಗ್ನೇಯಕ್ಕೆ 6 ಕಿಮೀ

ದೂರದಲ್ಲಿರುವ ಕಮ್ಮಾರಗಟ್ಟೆ ಗ್ರಾಮ ತುಂಗಭದ್ರಾ ನದಿಯ ಬಲದಂಡೆಯ ಮೇಲಿದೆ. ಪರಶುರಾಮ ದಿಗ್ವಿಜಯದ ಅನಂತರ ತನ್ನ ರಕ್ತಸಿಕ್ತ ಕೊಡಲಿಯನ್ನು ಇಲ್ಲಿ ತೊಳೆದನೆಂದೂ ಈ ಊರಿಗೆ ಕರ್ಮಹಾರ ಕ್ಷೇತ್ರವೆಂದು ಹೆಸರಿತ್ತೆಂದೂ ಹೇಳುವರು. ಪ್ರಸಿದ್ಧ ಶಿವಭಕ್ತೆ ಹೆಳವನಕಟ್ಟೆ ಗಿರಿಯಮ್ಮ ತನ್ನ ಕೊನೆಗಾಲವನ್ನು ಇಲ್ಲಿ ಕಳೆದಳೆಂದೂ ಆಕೆ ಸತ್ತ ಬಂಡಹೊಳೆ ಎಂಬಲ್ಲಿ ಪ್ರತಿವರ್ಷ ಕಾರ್ತಿಕೋತ್ಸವ ಜರುಗುತ್ತದೆ. ಇಲ್ಲಿನ ನದಿಯ ದಂಡೆ ಮೇಲಿರುವ ಆಂಜನೇಯ ದೇವಾಲಯ ಬಹಳ ಪ್ರಸಿದ್ಧ. ಹೊನ್ನಾಳಿಯ ನೈಋತ್ಯದಲ್ಲಿ ಸುಮಾರು 22 ಕಿಮೀ ದೂರದಲ್ಲಿರುವ ಕುದುರೆಕೊಂಡ ನ್ಯಾಮತಿಯ ನೈಋತ್ಯದಲ್ಲಿ ಸು. 6 ಕಿಮೀ ದೂರದಲ್ಲಿದೆ. ಕುದುರೆಕೊಂಡ ಬೆಟ್ಟದ ತಪ್ಪಲಲ್ಲಿರುವ ಈ ಗ್ರಾಮದ ಬಳಿ ಹಿಂದೆ ಚಿನ್ನ ತೆಗೆಯುವ ಪ್ರಯತ್ನ ನಡೆದಿತ್ತು. ಹೊನ್ನಾಳಿಯ ಆಗ್ನೇಯಕ್ಕೆ 10 ಕಿಮೀ ದೂರದಲ್ಲಿರುವ ಕುರುವ ಗ್ರಾಮ ತುಂಗಭದ್ರಾನದಿಯ ಎಡದಂಡೆಯ ಮೇಲಿದೆ. ಈ ಗ್ರಾಮದ ಬಳಿ ಇರುವ ಕುರುವದ ಗಡ್ಡೆ ದ್ವೀಪ ತುಂಗಭದ್ರಾ ನದಿಯಿಂದ ಸುತ್ತುವರಿದಿದೆ. ಈ ದ್ವೀಪದಲ್ಲಿ ರಾಮೇಶ್ವರ ದೇವಾಲಯವಿದೆ. ಈ ದೇವಾಲಯದ ದಕ್ಷಿಣ ದ್ವಾರದ ಎದುರು ಒಂದು ದೊಡ್ಡ ಕಲ್ಲಿನ ದೀಪಸ್ತಂಭವಿದೆ. ಚಾಳುಕ್ಯರ ಕಾಲದ ಈ ದೇವಾಲಯದಲ್ಲಿ ಚಾಳುಕ್ಯರ, ಹೊಯ್ಸಳ, ಸೇವುಣ, ವಿಜಯನಗರದ ದೊರೆಗಳ ಶಾಸನಗಳಿವೆ. ಪ್ರತಿವರ್ಷ ಮಾರ್ಚ್–ಏಪ್ರಿಲ್ ಮತ್ತು ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲಿ ವರ್ಷಕ್ಕೆ ಎರಡು ಸಾರಿ ಇಲ್ಲಿ ಜಾತ್ರೆ ನಡೆಯುವುದು. ಹೊನ್ನಾಳಿಯ ನೈಋತ್ಯಕ್ಕೆ 13 ಕಿಮೀ ದೂರದಲ್ಲಿರುವ ನ್ಯಾಮತಿ **(ನೋಡಿ)** ಒಂದು ಪಟ್ಟಣ ಮತ್ತು ವ್ಯಾಪಾರ ಕೇಂದ್ರ.

ಹೊನ್ನಾಳಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಶಿವಮೊಗ್ಗದ ಈಶಾನ್ಯದಲ್ಲಿ 39 ಕಿಮೀ ದೂರದಲ್ಲಿ ಮತ್ತು ದಾವಣಗೆರೆಯ ನೈಋತ್ಯದಲ್ಲಿ ತುಂಗಭದ್ರಾ ನದಿಯ ಎಡದಂಡೆಯ ಮೇಲಿದೆ. ಜನಸಂಖ್ಯೆ 15,568.

ಭಾಸ್ಕರಕ್ಷೇತ್ರವೆಂದು ಪುರಾಣ ಪ್ರಸಿದ್ಧವಾದ ಈ ಪಟ್ಟಣಕ್ಕೆ ಬಿದಿರಿ ಎಂದೂ ಹೊನ್ನಹಳ್ಳಿಯೆಂದೂ ಹೆಸರಿತ್ತೆಂದು ತಿಳಿದುಬರುವುದು. ಇಂದು ಸುತ್ತಲ ಗ್ರಾಮಗಳಲ್ಲಿ ವ್ಯಾಪಾರ ಕೇಂದ್ರವಾಗಿರುವ ಈ ಪಟ್ಟಣದಲ್ಲಿ ವಿದ್ಯುತ್, ಅಂಚೆ, ದೂರವಾಣಿ, ಆಸ್ಪತ್ರೆ, ಔಷಧಾಲಯಗಳು ಮತ್ತು ಪ್ರೌಢಶಾಲೆ ಮುಂತಾದವುಗಳ ಸೌಲಭ್ಯವಿದೆ. ಶಿವಮೊಗ್ಗ–ಹರಿಹರ ರಾಜ್ಯ ಹೆದ್ದಾರಿ ಈ ಪಟ್ಟಣದ ಮೂಲಕ ತುಂಗಭದ್ರಾ ನದಿಯನ್ನು ದಾಟಿಹೋಗಿದೆ. ಪಟ್ಟಣದಿಂದ ಸುತ್ತಲ ಗ್ರಾಮಗಳಿಗೆ ಮತ್ತು ಪಟ್ಟಣಗಳಿಗೆ ರಸ್ತೆ ಸಂಪರ್ಕವುಂಟು.

ರಾಣಿ ಹೊಯ್ಸಳದೇವಿ ಮಲ್ಲಿಕಾರ್ಜುನನಿಗೆ ಇಲ್ಲೊಂದು ಶಿಲಾದೇಗುಲ ಕಟ್ಟಿ ಅದನ್ನು ಮಲ್ಲಿಕೇಶ್ವರ ತೀರ್ಥ ಎಂದು ಕರೆದಿದ್ದಳೆಂದು ಇಲ್ಲಿನ ಶಿಲಾಶಾಸನದಿಂದ ತಿಳಿದುಬರುತ್ತದೆ. ತುಂಗಭದ್ರಾ ನದಿಯ ಸೇತುವೆ ಬಳಿ ಸಂತ ಶ್ರೀನಿವಾಸತೀರ್ಥರ ಸಮಾಧಿಯಿದೆ. ರಾಘವೇಂದ್ರ ಸ್ವಾಮಿಗಳ ಬೃಂದಾವನವಿದೆ. ತುಂಗಭದ್ರಾನದಿಯ ಎಡದಂಡೆ ಹತ್ತಿರವಿರುವ ಹಳೆಯ ಪಟ್ಟಣದಲ್ಲಿ ಸುತ್ತಲೂ ಕಂದಕವಿರುವ ಹಳೆಕೋಟೆಯಿದೆ. ಪಟ್ಟಣ ಪುರಸಭಾಡಳಿತಕ್ಕೆ ಸೇರಿದೆ.

*

**ಹೊಯಿಸಳ:** 1893–1959. ಮಕ್ಕಳ ಸಾಹಿತ್ಯ ರಚನೆಯಲ್ಲಿ ಹೆಸರುಗೊಂಡಿದ್ದ ಲೇಖಕರು. ಅರಗ ಲಕ್ಷ್ಮಣರಾವ್ ಇವರ ಹೆಸರು. ಹೊಯಿಸಳ ಇವರ ಕಾವ್ಯನಾಮ. ಹುಟ್ಟಿದ್ದು ನರಸಿಂಹರಾಜಪುರ ತಾಲ್ಲೂಕು ಅರಗ ಗ್ರಾಮದಲ್ಲಿ. ತಂದೆ ಸುಬ್ಬಣ್ಣ ಮದನಪಲ್ಲಿ ಕಾಲೇಜಿನಲ್ಲಿ ಓದಿ ಬಿ.ಎ. ಪದವಿಯನ್ನು ಪಡೆದ ಇವರಿಗೆ ಅಲ್ಲಿ ಅನಿಬೆಸೆಂಟ್, ಸಿ.ಎಫ್. ಆಂಡ್ರೂಸ್ ಮತ್ತು ಕಸಿನ್ಸ್ ದಂಪತಿಗಳ ನಿಕಟ ಪರಿಚಯವಾಯಿತು. ಇವರು 1919ರಲ್ಲಿ ಶಾಂತಿ ನಿಕೇತನಕ್ಕೆ ಹೋಗಿ ಸುಮಾರು ಎರಡು ವರ್ಷ ಕಾಲವಿದ್ದರು. ಶಾಂತಿನಿಕೇತನದ ವಾಸ ಇವರ ಬದುಕಿನ ಮೇಲೆ ಬಹುದೊಡ್ಡ ಪರಿಣಾಮವನ್ನುಂಟುಮಾಡಿತು. 1922ರಲ್ಲಿ ಮೈಸೂರು ವಿದ್ಯಾಭ್ಯಾಸ ಇಲಾಖೆಯನ್ನು ಸೇರಿ ಪ್ರೌಢಶಾಲಾ ಉಪಾಧ್ಯಾಯರಾಗಿ ನೇಮಕಗೊಂಡು, ರಾಜ್ಯದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡಿ ನಿವೃತ್ತರಾದರು. ಅನಂತರ ಬೆಂಗಳೂರು

ಆಕಾಶವಾಣಿಯ ಮಕ್ಕಳ ಕಾರ್ಯಕ್ರಮದ ನಿರ್ವಾಹಕರಾಗಿ ಕೆಲಸ ಮಾಡಿದ ಇವರು ಪ್ರಜಾವಾಣಿ ಪತ್ರಿಕೆಯ ಮಕ್ಕಳ ವಿಭಾಗದ ಅಣ್ಣಾಜಿಂಯಾಗಿಯೂ ಕೆಲಕಾಲವಿದ್ದರು. ಮಕ್ಕಳಿಗಾಗಿಯೇ ಇವರು ಕನಕ ಎಂಬ ಪತ್ರಿಕೆಯನ್ನು ಆರಂಭಿಸಿ ಸ್ವಲ್ಪಕಾಲ ನಡೆಸಿದ್ದುಂಟು.

ಹೊಯಿಸಳರು ಮಕ್ಕಳಿಗಾಗಿ ಕವನಗಳನ್ನೂ ನಾಟಕಗಳನ್ನೂ ಕಥೆಗಳನ್ನೂ ದೊಡ್ಡ ಪ್ರಮಾಣದಲ್ಲಿ ರಚಿಸಿದ್ದಾರೆ. ಇವರ ಮೊದಲ ಬರೆಹಗಳು ಮಕ್ಕಳ ಪುಸ್ತಕ ಎಂಬ ಪತ್ರಿಕೆಯಲ್ಲಿ ಬೆಳಕು ಕಂಡವು. ಇವರ ಮೊದಲನೆಯ ಪುಸ್ತಕ ತಿರಂಗ ಮುರುಗ ಎಂಬುದು ಗದ್ಯ–ಪದ್ಯ ಸಂಕಲನ. ಇವರು ಬರೆದಿರುವ ಸಂತಮ್ಮಣ್ಣ ಎಂಬ ಒಬ್ಬ ತುಂಟ ಬಾಲವಿದ್ಯಾರ್ಥಿಯ ಚಿತ್ರ ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಇವರಿಗೆ ಹಿರಿಯ ಸ್ಥಾನವನ್ನು ಗಳಿಸಿಕೊಟ್ಟಿತು. ಇವರು ಮಕ್ಕಳಿಗಾಗಿ ಬರೆದಿರುವ ಕಥೆಗಳ ಹರವೂ ವಿಸ್ತಾರವಾದುದು. ಪ್ರಪಂಚದ ಅತಿ ಹಳೆಯ ಕಥೆಯಾದ ಅನ್ಬು–ಬಾಟದಿಂದ ಹಿಡಿದು ನಾಲ್ವಡಿ ಕೃಷ್ಣರಾಜ ಒಡೆಯರನ್ನು ಕುರಿತ ನೋವು ಎಂಬ ಕಥೆಯವರೆಗೂ ಇವರ ಕಥೆಗಳ ವ್ಯಾಪ್ತಿ ಇದೆ. ಇವರ ಕೆಲವು ಮುಖ್ಯ ಕಥೆಗಳ ಸಂಗ್ರಹಗಳಿವು; ಹೂವಿನ ಹಾಸಿಗೆ, ಪುಟ್ಟರಸು, ಪಠಾಕ್ಷಿ, ಅನ್ಬು–ಬಾಟ, ಅದಕ್ಕೆ ಆ ಹೆಸರು. ಆನೆ ಇರುವೆ, ಗಂಟೆಗೋಪುರ, ಖೈದಿಗಳ ಕಷ್ಟ, ಪುಟ್ಟು ತಮ್ಮ ಯಾರು? ಪೋರಿ, ಬದುಕುವ ಮಂತ್ರ, ನಿಶ್ಚಲಹಾಸ, ಅಭ್ಯಂಕು, ವೀರಕುಮಾರ, ಮಸೀದಿಯನ್ನು ಎಲ್ಲಿ ಕಟ್ಟಿದರು, ಶುಭಾಂಗ, ಬೋರ ನೆಟ್ಟ ಮೂಲಂಗಿ, ರಾಜನ ಬುದ್ಧಿವಂತಿಕೆ. ಇವರು ಮಕ್ಕಳಿಗಾಗಿ ಬರೆದಿರುವ ಕೆಲವು ಮುಖ್ಯ ಪದ್ಯ ಸಂಗ್ರಹಗಳಿವು; ಮಗುವಿನ ಕೂಗು, ಚಂದು ಮಾಮ, ಕೋಲು ಕುದುರೆ, ಕೋಗಿಲೆ, ಮಗು, ಪ್ರಸಾದ, ಕುಳ್ಳ ಸುಳ್ಳ, ವಾತಾಪಿ, ಚಂದ್ರಹಾಸ, ಅಗಲಿನ ಮಗಳು, ಮಳ್ಳ, ಇವು ನಾಟಕಗಳು.

ಇವರು ದೊಡ್ಡವರಿಗಾಗಿಯೂ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ. ಅಂಥವುಗಳಲ್ಲಿ ಕಂಚಿನ ಕನ್ನಡಿ, ದಿನಾರಿ, ಕಂಕಣ, ಹಾಡಿನ ಚಿಲುಮೆ, ಗೆಲವು ಗುರಾಣಿ ಪರಿಷತ್ತಿನ ಲಾವಣಿ ಮುಖ್ಯವಾದುವು. ರವೀಂದ್ರನಾಥ ಠಾಕೂರರ ವಸಂತ, ಜವಾಹರಲಾಲ್ ನೆಹರೂ ಅವರ ಮಗಳಿಗೆ ತಂದೆಯ ಓಲೆಗಳು – ಈ ಪುಸ್ತಕಗಳನ್ನು ಇವರು ಕನ್ನಡಕ್ಕೆ ತಂದಿದ್ದಾರೆ.

(ಕೆ.ಸಿ.)

**ಹೊಯ್ಸಳ ವಂಶ:** 10ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಮಧ್ಯಭಾಗದವರೆಗೆ, ವಿಶೇಷವಾಗಿ ದಕ್ಷಿಣ ಕರ್ನಾಟಕ ಮತ್ತು ಸುತ್ತಲಿನ ಭಾಗಗಳನ್ನು ಆಳಿದ ರಾಜಮನೆತನ. ಈ ವಂಶದ

ಅರಸರ ರಾಜಧಾನಿ ಮೊದಲು ಶಶಕಪುರ ಅಥವಾ ಸೊಸೆವೂರು, (ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ಅಂಗಡಿ) ಅನಂತರ ಬೇಲೂರು ಮತ್ತು ದೋರಸಮುದ್ರ (ಹಾಸನ ಜಿಲ್ಲೆ). ಮಲೆನಾಡಿನ ಒಂದು ಚಿಕ್ಕ ಪಾಳೆಯಪಟ್ಟಾಗಿ ಆರಂಭವಾಗಿ, ತತ್ಕಾಲೀನ ಅಸ್ತವ್ಯಸ್ತ ರಾಜಕೀಯ ಪರಿಸ್ಥಿತಿಯ ಲಾಭಪಡೆದು, ಮೊದಲು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ನೆಲೆಗೊಂಡು, ಮುಂದೆ ಶೌರ್ಯ ಹಾಗೂ ಸ್ವಸಾಮರ್ಥ್ಯ ದಿಂದ ರಾಜ್ಯ ವಿಸ್ತಾರ ಮಾಡಿ, ಸ್ವತಂತ್ರರಾಗಿ, ಸುಸಂದರ್ಭದಲ್ಲಿ ತಮ್ಮ ಪ್ರಭಾವವನ್ನು ತಮಿಳುನಾಡಿಗೂ ವಿಸ್ತರಿಸಿ, ನಾಡಿನ ಆರ್ಥಿಕ ಸಾಂಸ್ಕೃತಿಕ ರಂಗಗಳಲ್ಲಿ ಉನ್ನತ ಸಾಧನೆಗಳಿಗೆ ಪ್ರೋತ್ಸಾಹ ನೀಡಿ, ಸುಮಾರು ಮೂರು ಶತಮಾನ ಗಳಿಗೂ ಹೆಚ್ಚು ಕಾಲ ವೈಭವೋಪೇತವಾಗಿ ಮೆರೆದ ಈ ರಾಜವಂಶದ ಇತಿಹಾಸ ಕರ್ನಾಟಕ ಇತಿಹಾಸದ ಒಂದು ಮುಖ್ಯ ಅಧ್ಯಾಯ.

ಶಿಲ್ಪದಲ್ಲಿ ಹೊಯ್ಸಳ ವಂಶದ ಲಾಂಛನ, ಹಳೇಬೀಡು

**ರಾಜಕೀಯ ಇತಿಹಾಸ:** ಹೊಯ್ಸಳರು ಯಾದವ ವಂಶದವರೆಂದೂ ಇವರ ಆದ್ಯನಾದ ಸಳ ಎಂಬುವನು ತನ್ನ ಗುರುವಾದ ಜೈನಯತಿ ಸುದತ್ತಾಚಾರ್ಯನೊಡನೆ ಶಶಕಪುರದ ಬಳಿಯ ವಾಸಂತಿಕಾ ದೇವಾಲಯ ದಲ್ಲಿ ದೇವತೆಯ ಅರ್ಚನೆಯಲ್ಲಿ ತೊಡಗಿದ್ದಾಗ ಒಂದು ದಿನ ಹುಲಿ ಯೊಂದು ಅವರತ್ತ ಜಿಗಿದು ಬಂದಿತೆಂದೂ ಜೈನ ಮುನಿಗಳು ತನ್ನ ಕೈಯಲ್ಲಿದ್ದ ಕೋಲನ್ನು ಸಳನ ಕೈಗಿತ್ತು 'ಪೊಯ್ ಸಳ' ಎಂದು ಅಪ್ಪಣೆ ಮಾಡಿದನೆಂದೂ ಸಳನು ಧೈರ್ಯದಿಂದ ಹುಲಿಯನ್ನು ಕೊಂದ ನೆಂದೂ ಇದರಿಂದ ಸುಪ್ರೀತನಾದ ಮುನಿಯು ತನ್ನ ಶಿಷ್ಯನು ರಾಜನಾಗು ವಂತೆ ದೇವತೆಯಿಂದ ವರ ಪಡೆದು ಸಳನನ್ನು ಹರಸಿದನೆಂದೂ ಆದ್ದರಿಂದಲೇ ಅವನ ವಂಶಕ್ಕೆ ಪೊಯ್ಸಳ ಎಂದು ಹೆಸರಾಯಿತೆಂದೂ ಹೊಯ್ಸಳರ ಶಾಸನಗಳು ತಿಳಿಸುತ್ತವೆ. ಆದರೆ ಈ ಕಥೆಗಳೆಲ್ಲ ಅನೇಕ ಮೂಲ ವ್ಯತ್ಯಾಸಗಳೊಡನೆ ಕೇವಲ 12 ಮತ್ತು ಅನಂತರದ ಶತಮಾನಗ ಳಲ್ಲಷ್ಟೇ ಕಂಡುಬರುವುದರಿಂದ ಇವೆಲ್ಲ ಹೊಯ್ಸಳರು ರಾಜ್ಯ ಸಾಧಿಸಿದ ಮೇಲೆ ಆ ವಂಶದ ಹೆಸರನ್ನು ವಿವರಿಸಲು ಹುಟ್ಟಿಕೊಂಡ ಕಟ್ಟುಕಥೆ ಗಳೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದ್ಯನೆಂದು ಹೇಳುವ ಸಳ ಐತಿಹಾಸಿಕ ವ್ಯಕ್ತಿ ಎಂಬುದು ಸಹ ಅನುಮಾನಾಸ್ಪದ (ನೋಡಿ: ಸಳ). ಆದರೆ ಹೊಯ್ಸಳರು ಮೊದಲಿಗೆ ರಾಜ್ಯ ಸ್ಥಾಪನೆ ಮಾಡಿದ ಈಗಿನ ಅಂಗಡಿ ಗ್ರಾಮವು ದಟ್ಟಡವಿಯಿಂದ ಕೂಡಿದ್ದು ಒಬ್ಬ ಯುವಕ ಹುಲಿಯನ್ನು ಎದುರಿಸಿ ಕೊಂದಿರುವುದು ಅಸಂಭವವಲ್ಲ. ಇಂತಹ ಪ್ರಕರಣ ಬೇಲೂರುನಾಯಕರ ಕಾಲದಲ್ಲೂ ಈ ಮಲೆನಾಡಿನಲ್ಲಿ ನಡೆದಿದ್ದು ಹುಲಿ ಕೊಂದವನು ರಾಜನ ಪ್ರಶಂಸೆಗೆ ಪಾತ್ರನಾದುದು ಆ ಕಾಲದ ಶಾಸನವೊಂದರಿಂದ ತಿಳಿದುಬರುತ್ತದೆ.

ಹೊಯ್ಸಳರ ಶಾಸನಗಳಲ್ಲಿ ಆದ್ಯ ಸಳನಿಗೂ ಅಂಗಡಿಯ ವಾಸಂತಿಕಾ ದೇವಿಗೂ ಸಂಬಂಧವನ್ನು ಹೇಳಿರುವುದರಿಂದ ಮತ್ತು ಅತಿ ಪ್ರಾಚೀನ ಶಾಸನಗಳೆಲ್ಲ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲೇ ದೊರೆಯುವುದ ರಿಂದ ಇವರು ಮೂಲತಃ ಮಲೆನಾಡಿನವರು ಎಂದು ಸುಲಭವಾಗಿ ಊಹಿಸಬಹುದು. ಮೊದ ಮೊದಲು ಅಲ್ಲಿದ್ದ ಇತರ ತುಂಡು ರಾಜರ ಮೇಲೆ ವಿಜಯ ಗಳಿಸಿ ಇವರು ಪ್ರಸಿದ್ಧಿಗೆ ಬಂದಿರಬೇಕೆಂದು ಮಲೆವರ ಮಾರಿ, ಮಲೆಪರೊಳ್ ಗಂಡ ಮುಂತಾದ ಇವರ ಬಿರುದುಗಳು ತೋರಿಸುತ್ತವೆ. ಇತ್ತೀಚಿನ ಚಿಕ್ಕಮಗಳೂರು ಪಟ್ಟಣದ ಸಮೀಪದ ಉಪ್ಪವಳ್ಳಿ ಅಥವಾ ಉಪ್ಪಳ್ಳಿಯಲ್ಲಿ ದೊರೆತ ಶಾಸನವನ್ನು ಶಾಸನತಜ್ಞ ಎಚ್.ಎಂ. ನಾಗರಾಜರಾವ್‌ರವರು ಪ್ರಚುರಪಡಿಸಿದ್ದಾರೆ. ಈ ಶಾಸನವನ್ನು 1136ರಲ್ಲಿ ವಿಷ್ಣುವರ್ಧನನ ಕಾಲದಲ್ಲಿ ಹಾಕಿಸಿದ್ದರೂ ಅದರಲ್ಲಿ 1083ರಲ್ಲಿ ಎರಡನೆಯ ವಿನಯಾದಿತ್ಯನ ಕಾಲದಲ್ಲಿ ಹಾಕಿಸಿದ್ದ ಶಾಸನದ ಮೂಲ ಪಾಠದ ಭಾಗವೂ ಇದೆ. ಇದು ಇದುವರೆಗೆ ತಿಳಿಯದಿದ್ದ ಹೊಯ್ಸಳ ರಾಜರ ಸ್ಪಷ್ಟ ಚಿತ್ರಣ ನೀಡುತ್ತದೆ. ಆ ಪ್ರಕಾರ ಮಾರಪೊಯ್ಸಳ ದೇವ, ಉಪ್ಪಿಡಿಪೊಯ್ಸಳ ಎರೆಯಂಗ ಪೊಯ್ಸಳ, ತಳಕಾಡುಪೊಯ್ಸಳ, ಉದಯಾ ದಿತ್ಯ, ಕುಂಟ ವಿನಯಾದಿತ್ಯ, ನೃಪಕಾಮ ಹಿರಿಯ ಪೊಯ್ಸಳದೇವ– ಇವರು ವಿನಯಾದಿತ್ಯನಿಗಿಂತ ಮೊದಲು ಆಳಿದ ರಾಜರು. ಮೂಡಿಗೆರೆ ತಾಲ್ಲೂಕಿನ ಕೆಸವೊಳಲು ಗ್ರಾಮದಲ್ಲಿ ಒಂದು ಹೊಸ ಶಾಸನ ದೊರೆತಿದ್ದು ಅದನ್ನು ಡಿ.ಎಸ್. ಜಯಪ್ಪಗೌಡ ಪ್ರಚುರಪಡಿಸಿದ್ದು ಎಪಿಗ್ರಾಫಿಯ ಕರ್ನಾಟಿಕದ ಹನ್ನೊಂದನೆಯ ಸಂಪುಟದಲ್ಲಿ ಬೆಳಕು ಕಂಡಿದೆ. ಇದರಲ್ಲಿ ಚಾಳುಕ್ಯರ ನಾಲ್ಕನೆಯ ವಿಕ್ರಮಾದಿತ್ಯನ ಮಗ ಶೋಭನರಸ ಅಥವಾ ಶೋಭನಯ್ಯ ಸೊಸೆವೂರ ಅಂದರೆ ಈಗಿನ ಅಂಗಡಿ ಗ್ರಾಮದಲ್ಲಿ ಆಳುತ್ತಿದ್ದ ಹೊಯ್ಸಳರಲ್ಲಿ ಸಂಧಿ ವಿಗ್ರಹಿಯಾಗಿದ್ದದ್ದು ತಿಳಿದುಬರುತ್ತದೆ. ಚಾಳುಕ್ಯ ಎರಡನೆಯ ತೈಲಪನು 973ರಲ್ಲಿ ರಾಷ್ಟ್ರಕೂಟರನ್ನು ಸೋಲಿಸಿ ಸಾಮ್ರಾಜ್ಯ ಸ್ಥಾಪಿಸಿದಾಗ ಆತನಿಗೆ ಚೋಳರ ವಿರುದ್ಧ ಹೊಯ್ಸಳರ ಬೆಂಬಲ ಬೇಕಾಗಿತ್ತು. ಅವನು ಸಹೋದರ ಶೋಭನರಸನನ್ನು ಹೊಯ್ಸಳ ರಾಜ್ಯಕ್ಕೆ ರಾಜತಾಂತ್ರಿಕ ಪ್ರತಿನಿಧಿಯಾಗಿ ಕಳುಹಿಸಿದ್ದ ಈ ಶೋಭನರಸ 980ರ ದಶಕದಲ್ಲಿ ಬನವಾಸಿ ಪ್ರಾಂತದಲ್ಲಿ ಮಹಾಮಂಡಲೇಶ್ವರನಾಗಿದ್ದದ್ದು ಶಾಸನಗಳಿಂದ ತಿಳಿದುಬರು ತ್ತದೆ. ಇದರಿಂದಲೂ ಹೊಯ್ಸಳರು ಹತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ದೃಢವಾಗಿ ಮಲೆನಾಡಿನ ಈ ಭಾಗದಲ್ಲಿ ಚಿಕ್ಕ ರಾಜ್ಯದ ಅಧಿಪತಿಗಳಾಗಿದ್ದದ್ದು ಸ್ಪಷ್ಟಪಡುತ್ತದೆ. ಸು.978ರಲ್ಲಿ ರಚಿತವಾದ ಚಾವುಂಡರಾಯ ಪುರಾಣದಲ್ಲಿ ಪ್ರಬಲನಾಗಿದ್ದ ಹೊಯ್ಸಳ ರಾಜನ ಕೂಟವನ್ನು ಮಾರಸಿಂಹನು ಸೋಲಿಸಿದ ಬಗ್ಗೆ ಪ್ರಸ್ತಾಪವಿದೆ. ಇದು ಈ ದೃಷ್ಟಿಗೆ ಸಮರ್ಥನೆ ಒದಗಿಸುತ್ತದೆ.

ಇತಿಹಾಸಕಾರರು 1006ರ ತಿರುಮಕೂಡಲುನರಸೀಪುರ ತಾಲ್ಲೂಕಿನ ಕಲಿಯೂರು ಶಾಸನದ ಆಧಾರದ ಮೇಲೆ ಹತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಹೊಯ್ಸಳರು ಆಗತಾನೇ ಚೋಳರ ದಾಳಿಯಿಂದ ಕಣ್ಮರೆಯಾಗಿದ್ದ ತಲಕಾಡಿನ ಗಂಗರ ಸಾಮ್ರಾಜ್ಯದ ಒಂದು ಭಾಗದಲ್ಲಿ ತಲೆ ಎತ್ತಿದರೆಂದು ಭಾವಿಸಿದ್ದರು. ಆದರೆ ಪೂರ್ವೋಕ್ತ ಶಾಸನಗಳಲ್ಲದೆ ಮೂಡಿಗೆರೆ ತಾಲ್ಲೂಕಿನ ಅಂಗಡಿ ಮತ್ತು ಉಗ್ಗೇಹಳ್ಳಿಗಳಲ್ಲಿ ದೊರೆತಿರುವ ಶಾಸನಗಳು ಹಾಗೂ ಬೇಲೂರು ತಾಲ್ಲೂಕಿನ ತೊಳಲು ಗ್ರಾಮದ ಒಂದು ವೀರಗಲ್ಲು ಹೊಯ್ಸಳ ಮಾರೆಯ, ಮಾರನೃಪತಿ ಮತ್ತು ಕಾಮಪೊಯ್ಸಳರ ಬಗ್ಗೆ ಮಾಹಿತಿ ನೀಡುತ್ತವೆ. ಈ ಎಲ್ಲ ಹೆಸರುಗಳು ಒಂದೇ ವ್ಯಕ್ತಿಯದೋ ಅಲ್ಲವೋ ಎಂಬ ಬಗ್ಗೆ ಹೆಚ್ಚಿನ ಪರಿಶೀಲನೆಯ ಅಗತ್ಯವಿದೆ. ಚಿಕ್ಕಮಗಳೂರು ತಾಲ್ಲೂಕು (34) ಉಪ್ಪವಳ್ಳಿಯ ಒಂದನೆಯ ವಿನಯಾದಿತ್ಯನ ಶಾಸನ 1012ಕ್ಕೆ ಸೇರಿದ್ದು. ಆದರೆ ಒಂದನೆಯ

ವಿನಯಾದಿತ್ಯ ಇರಲೇ ಇಲ್ಲ ಎಂಬ ಕಲ್ಪನೆಯ ಮೇರೆಗೆ ಶಾಸನತಜ್ಞರು ಈ ಶಾಸನದ ಕಾಲವನ್ನು ಅರವತ್ತು ವರ್ಷ ಮುಂದೂಡಿ ನಿರ್ಧರಿಸಿದ್ದರು. ಈಗ ಬೆಳಕಿಗೆ ಬಂದಿರುವ ಆಧಾರಗಳ ಮೇಲೆ ಒಂದನೆಯ ವಿನಯಾದಿತ್ಯ ಇದ್ದ ಬಗ್ಗೆ ಸ್ಪಷ್ಟಪಡುತ್ತದೆ ಹಾಗೂ ಹೊಯ್ಸಳರಲ್ಲಿ ಅನೇಕ ಪ್ರಾರಂಭದ ಅರಸರು ಆಳಿದ್ದಾರೆ ಎಂದು ತಿಳಿದುಬರುತ್ತದೆ. ಗಂಗರ ಸಮಕಾಲೀನನಾಗಿ ಆಳಿದ ಕಾಮವೊಯ್ಸಳನು ರಾಜಮಲ್ಲ ಪೆರ್ಮಾಡಿ ಎಂದು ಬಿರುದು ಧರಿಸಿದ್ದಾನೆ. ರಕ್ಕಸಗಂಗ ಎಂಬ ಬಿರುದೂ ಈ ವಂಶದ ರಾಜರು ಧರಿಸಿದ್ದು ತಿಳಿದುಬಂದಿದೆ. ಇದರಿಂದ ಹೊಯ್ಸಳ ಮನೆತನ ಪ್ರಾರಂಭದ ಅರಸರು ತಲಕಾಡಿನ ಗಂಗ ಮನೆತನದೊಂದಿಗೆ ನಿಕಟ ಸಂಬಂಧ ಹೊಂದಿದ್ದುದು ಸ್ಪಷ್ಟವಿದೆ.

ಕಲಿಯೂರು ಕದನ ಹೊಯ್ಸಳರ ಇತಿಹಾಸದಲ್ಲಿ ಮೈಲಿಗಲ್ಲಾಯಿತು. ಅವರು ಆಗತಾನೇ (1004) ಗಂಗವಾಡಿಯ ಮೇಲೆ ಆಧಿಪತ್ಯ ಸ್ಥಾಪಿಸಿದ್ದ ಚೋಳರನ್ನು ಎದುರಿಸಿದರು. ಹೊಯ್ಸಳ ರಾಜನ ನೇತೃತ್ವದಲ್ಲಿ ನಡೆದ ಈ ಯುದ್ಧದಲ್ಲಿ ದಕ್ಷಿಣ ಕರ್ನಾಟಕದ ಅನೇಕ ತುಂಡರಸರು ಪಾಲ್ಗೊಂಡಿದ್ದರು. ಇದರಿಂದಾಗಿ ಯದ್ಧದಲ್ಲಿ ಈ ಮೈತ್ರಿಕೂಟ ಸೋತರೂ ಚೋಳರ ವಿಸ್ತರಣಾ ಆಕಾಂಕ್ಷೆಗೆ ದೊಡ್ಡ ಪೆಟ್ಟು ಬಿದ್ದಿತು. ಚಾಳುಕ್ಯರಿಗೆ ಸಾಮ್ರಾಜ್ಯ ಭದ್ರಪಡಿಸಲು ಇದು ಪ್ರೋತ್ಸಾಹದಾಯಕವಾಯಿತು. ನೃಪಕಾಮ ಹೊಯ್ಸಳರ ಪ್ರಥಮ ಪ್ರಮುಖ ದೊರೆ ಎನಿಸಿದ. ಅವನ ಕಾಲವನ್ನು ಸು. 1020 ರಿಂದ 1045 ಎಂದು ನಿರ್ಧರಿಸಲಾಗಿದೆ. ಹಾಸನ ಜಿಲ್ಲೆ ಮತ್ತು ಸುತ್ತಲ ಪ್ರದೇಶಗಳು ಮಾತ್ರ ಅವನ ಆಳ್ವಿಕೆಗೆ ಒಳಪಟ್ಟಿರಬೇಕೆಂದು ಅವನ ಶಾಸನಗಳ ಸೀಮಿತ ವ್ಯಾಪ್ತಿಯಿಂದ ತಿಳಿಯಬಹುದು. ಆದರೆ ತನ್ನ ಕಿರುರಾಜ್ಯಕಾಲದಲ್ಲಿ ಚೋಳಾಶ್ರಿತರಾದ ಕೊಂಗಾಳ್ವರನ್ನು ಎದುರಿಸಿದ್ದಲ್ಲದೆ (1022, 1026) ಯಾವುದೋ ಸಂದರ್ಭದಲ್ಲಿ ಬನವಾಸಿಯ ಮೇಲೆ ನಡೆದ (1027) ದಾಳಿಯನ್ನು ಎದುರಿಸಲು ಅಲ್ಲಿಯ ಅರಸರಿಗೆ ಸಹಾಯ ಮಾಡಿದ **(ನೋಡಿ: ನೃಪಕಾಮ)**. ಅಂದರೆ ಈ ಕಾಲದಲ್ಲಿ ಹೊಯ್ಸಳರ ಪ್ರಭಾವ ಏರುಗತಿಯಲ್ಲಿದ್ದಿತೆಂದು ಊಹಿಸಲು ಅವಕಾಶವಿದೆ.

ಮುಂದಿನ ದೊರೆ ಎರಡನೆಯ ವಿನಯಾದಿತ್ಯನಿಗೂ (ಸು.1045–98) ನೃಪಕಾಮನಿಗೂ ಸಂಬಂಧವೇನೆಂದು ಸ್ಪಷ್ಟವಾಗಿಲ್ಲ. ಆದರೆ ಅನಂತರದ ಕೆಲವು ಶಾಸನಗಳ ಆಧಾರದಿಂದ ಇವರು ತಂದೆ–ಮಕ್ಕಳಿರಬೇಕೆಂದು ಊಹಿಸುವಸಾಧ್ಯತೆ ಇದೆ. ಹೊಯ್ಸಳ ವಿನಯಾದಿತ್ಯನನ್ನೇ ವಂಶಾದ್ಯನಾಗಿ ವಿವರಿಸುತ್ತವೆಯಾದ್ದರಿಂದ ಪ್ರಾಯಶಃ ಇವನ ಕಾಲದಲ್ಲಿ ಹೊಯ್ಸಳ ರಾಜ್ಯ, ನೃಪಕಾಮನ ಪಾಳೆಯಗಾರಿಕೆ ಸ್ಥಿತಿಯನ್ನು ಮೀರಿ, ಮೊದಲಿಗೆ ಸ್ಪಷ್ಟ ರಾಜಕೀಯ ಶಕ್ತಿಯಾಗಿ ರೂಪುಗೊಂಡಿರಬೇಕು. ಎರಡನೆಯ ವಿನಯಾದಿತ್ಯನ ಆಳಿಕೆ ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೂ ಮೀರಿ ಸುತ್ತಣ ತುಮಕೂರು ಮತ್ತು ಮೈಸೂರು ಜಿಲ್ಲೆಗಳ ಭಾಗಗಳಿಗೂ ಹಬ್ಬಿದ್ದಿತು. ಒಂದು ಶಾಸನದ ಪ್ರಕಾರ ವಿನಯಾದಿತ್ಯನ ಕಾಲದಲ್ಲಿ ಹೊಯ್ಸಳ ರಾಜ್ಯಕ್ಕೆ ಕೊಂಕಣ, ಆಳ್ವಖೇಡ, ವೈನಾಡು ಮತ್ತು ತಲಕಾಡು ಗಡಿಪ್ರದೇಶಗಳಾಗಿದ್ದುವು. ಆಗಿನ ದಕ್ಷಿಣ ಭಾರತದ ಪ್ರಭಾವೀ ರಾಜಕೀಯ ಶಕ್ತಿಗಳಾಗಿದ್ದ ಚಾಳುಕ್ಯ ಮತ್ತು ಚೋಳರ ರಾಜ್ಯಗಳ ನಡುವೆ ಇವನು ಆಳಬೇಕಾದ್ದರಿಂದ ಈತ ತನ್ನ ನಡೆಯಲ್ಲಿ ಬಹಳ ಜಾಗರೂಕತೆಯನ್ನು ವಹಿಸಬೇಕಾಗಿತ್ತು. ಹಳೆಯ ಗಂಗವಾಡಿಯ ಭಾಗಗಳನ್ನು ಇವನು ಆಳುತ್ತಿದ್ದುದರಿಂದ ಸ್ಥಳೀಯರೊಡನೆ ಇವನ ಸಂಬಂಧ ನಿಕಟವಾಗಿದ್ದು ಚೋಳರೊಡನೆ ಸ್ನೇಹ ಬೆಳೆಸುವ ಸಾಧ್ಯತೆಯೇ ಇರಲಿಲ್ಲವಾಗಿ, ತನ್ನ ಅಧಿಕಾರ ಭದ್ರತೆಗಾಗಿ ಚಾಳುಕ್ಯರೊಡನೆ ರಕ್ತಸಂಬಂಧ ಮತ್ತು ರಾಜಕೀಯ ಬಾಂಧವ್ಯವನ್ನು ಬೆಳೆಸಿ, ಹೊಯ್ಸಳರ ಮೂಲೋದ್ದೇಶವಾದ ಚೋಳೋತ್ಪಾಟನೆಗಾಗಿ ಶಕ್ತಿ ಸಂಚಯ ಮಾಡಿಕೊಳ್ಳಲಾರಂಭಿಸಿದ. ಉದ್ದಿಶ್ಯ ಸ್ಪಷ್ಟವಾಗಿದ್ದರೂ ಇನ್ನೂ ತಾನಿದ್ದ ಅಬಲ ಸ್ಥಿತಿಯಲ್ಲಿ ಚೋಳರ ಮೇಲೆ ಬೀಳುವುದು ಅಪಾಯಕರವೆಂದು ವಿನಯಾದಿತ್ಯ ಅರಿತಿರಬೇಕು. ಇವನ ಅರ್ಧ ಶತಮಾನಕ್ಕೆ ಹೆಚ್ಚಿನ ಆಳಿಕೆಯಲ್ಲಿಯೂ ಅವರೊಡನೆ ನೇರವಾಗಿ ಸೆಣಸಿಲ್ಲದಿರುವುದಕ್ಕೆ ಇದೇ ಕಾರಣ. ಆದರೆ ಚಾಳುಕ್ಯ 2ನೆಯ ಸೋಮೇಶ್ವರ ಮತ್ತು 6ನೆಯ ವಿಕ್ರಮಾದಿತ್ಯರೊಡನೆ ಉತ್ತಮ ಬಾಂಧವ್ಯವನ್ನು ಸಾಧಿಸಿಕೊಂಡು ತನ್ನ ಮಗ ಎರೆಯಂಗನನ್ನೂ ಮೊಮ್ಮಕ್ಕಳಾದ ಒಂದನೆಯ ಬಲ್ಲಾಳ, ವಿಷ್ಣುವರ್ಧನರನ್ನೂ ಚಾಳುಕ್ಯರ ದಂಡೆಯಾತ್ರೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿ, ಮೇಲ್ಮಟ್ಟದ ರಾಜಕೀಯ ಮತ್ತು ಯುದ್ಧತಂತ್ರಗಳಲ್ಲಿ ಅವರನ್ನು ನಿಷ್ಣಾತರಾಗುವಂತೆ ಮಾಡಿದ್ದಲ್ಲದೆ ಚಾಳುಕ್ಯರ ಬೆಂಬಲವನ್ನೂ ಗಳಿಸಿಕೊಂಡ. ಈ ರಾಜಕೀಯ ಮುತ್ಸದ್ದಿತನ ಮುಂದೆ ಹಲವೇ ವರ್ಷಗಳಲ್ಲಿ ಫಲನೀಡಿತು. ಚೋಳರ ಉಚ್ಚಾಟನೆ, ಹೊಯ್ಸಳರ ಬೃಹತ್ ಸಾಮ್ರಾಜ್ಯ ಸ್ಥಾಪನೆ ನೆರವೇರಿತು. ವಿನಯಾದಿತ್ಯನ ಅನಂತರ ಪಟ್ಟಕ್ಕೆ ಬಂದ ಅವನ ಮಗ ಎರೆಯಂಗನ ಆಳಿಕೆಯ ಕಾಲ (ಸು.1098–1100) ಗಮನಾರ್ಹವಾದುದೇನಲ್ಲ. ಈ ಕಾಲಕ್ಕಾಗಲೇ ಇವನ ಮಕ್ಕಳಾದ ಒಂದನೆಯ ಬಲ್ಲಾಳ, ವಿಷ್ಣುವರ್ಧನರು ರಾಜಕೀಯ ಕ್ಷೇತ್ರದಲ್ಲಿ ಸಮರ್ಥರಾಗಿದ್ದರು **(ನೋಡಿ: ಎರೆಯಂಗ)**.

ಒಂದನೆಯ ಬಲ್ಲಾಳನ (ಸು. 1100–1108) ಕಾಲದಲ್ಲಿ ಹೊಯ್ಸಳ ಇತಿಹಾಸದಲ್ಲಿ ಒಂದು ಮುಖ್ಯ ತಿರುವು ಕಂಡುಬರುತ್ತದೆ. ಈ ಹಿಂದಿನ ದೊರೆಗಳಂತೆ ಈತನೂ ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿ ಚಾಳುಕ್ಯ ಸಾಮಂತತ್ವವನ್ನು ಒಪ್ಪಿಕೊಂಡಿದ್ದರೂ ಪ್ರಾಯಶಃ ಚಾಳುಕ್ಯ ವಿಕ್ರಮಾದಿತ್ಯನ ತಪ್ಪು ನಡೆಯಿಂದಾಗಿ ಅವನ ಮಿತ್ರ ಸಾಮಂತ ಹೊಯ್ಸಳರ ಮೇಲೆಗಿ ಬಂದು ಚಾಳುಕ್ಯ–ಹೊಯ್ಸಳ ಸಂಬಂಧವನ್ನು ಕಲಕಿದ. ಈ ಸಂದರ್ಭದಲ್ಲಿ ಶೌರ್ಯದಿಂದ ಹೋರಾಡಿ ವಿಜಯಿಗಳಾದ ಬಲ್ಲಾಳ–ವಿಷ್ಣುವರ್ಧನರಲ್ಲಿ ಹೊಸ ಧೈರ್ಯ, ಹುಮ್ಮಸ್ಸು ಬೆಳೆದುಬಂದು ಸುತ್ತಣ ಚೆಂಗಾಳ್ವ, ಆಳುಪ ರಾಜ್ಯಗಳನ್ನೇ ಅಲ್ಲದೆ ಚಾಳುಕ್ಯರ ಸಾಮಂತರಾದ ಉಚ್ಚಂಗಿಯ ಪಾಂಡ್ಯರ ಮೇಲೂ ಜಯಗಳಿಸಿದರು. ಇದು ಮಂಡಲೇಶ್ವರರಾಗಿದ್ದ ಹೊಯ್ಸಳರು ಸ್ವತಂತ್ರ ರಾಜ್ಯವನ್ನು ಸಾಧಿಸುವತ್ತ ಇಟ್ಟ ಮೊದಲ ಹೆಜ್ಜೆ ಎಂದು ಗುರುತಿಸಬಹುದು **(ನೋಡಿ: ಬಲ್ಲಾಳ I)**.

ವಿಷ್ಣುವರ್ಧನನ 34 ವರ್ಷಗಳ ಆಳಿಕೆ (ಸು. 1108–1142) ಹೊಯ್ಸಳ ಇತಿಹಾಸದಲ್ಲಿ ಮಹತ್ವಪೂರಿತವಾದುದು. ಚಿಕ್ಕ ಹೊಯ್ಸಳ ರಾಜ್ಯ ಸಾಮ್ರಾಜ್ಯ ಪದವನ್ನು ರೂಢಿಸಿಕೊಂಡಿದ್ದು ಈ ಕಾಲದಲ್ಲಿ. ವಿಷ್ಣುವರ್ಧನ ತಾನು ಪಟ್ಟವೇರುವ ಮೊದಲೇ ತಂದೆ ಎರೆಯಂಗ ಮತ್ತು ಅಣ್ಣ ಬಲ್ಲಾಳರ ಕಾಲದಲ್ಲಿ ಯುದ್ಧ ಮತ್ತು ರಾಜ್ಯಾಡಳಿತದಲ್ಲಿ ಭಾಗಿಯಾಗಿದ್ದು ಅಪಾರ ಅನುಭವವನ್ನು ಸಾಧಿಸಿದ್ದ. ಇದರ ಪೂರ್ಣ ಉಪಯೋಗವನ್ನು ಪಡೆದುಕೊಂಡು, ಆ ಪ್ರದೇಶದ ಶೂರ ಯೋಧರನ್ನು ಕಲೆಹಾಕಿ, ಗಂಗವಾಡಿಯನ್ನು ಪರಕೀಯ ಆಳ್ವಿಕೆಯಿಂದ ಮುಕ್ತಗೊಳಿಸಿ, ಹೊಯ್ಸಳ ರಾಜ್ಯವನ್ನು ಚಾಳುಕ್ಯಾಧೀನತ್ವದಿಂದ ಪಾರುಮಾಡುವ ಎರಡು ಗುರಿಗಳನ್ನಿಟ್ಟುಕೊಂಡು ಕಾರ್ಯಾರಂಭ ಮಾಡಿದ. ಚೋಳರೂ ಚಾಳುಕ್ಯರೂ ಪ್ರಬಲ ಸಾಮ್ರಾಟರಾದ್ದರಿಂದ ಅವರನ್ನು ಮೊದಲು ಎದುರಿಸುವುದು ಆತ್ಮಘಾತಕವಾದೀತೆಂದು ಭಾವಿಸಿ, ತನ್ನ ರಾಜ್ಯಾಡಳಿತದ ಆರಂಭದಲ್ಲಿ ಮೊದಲಿಗೆ ರಾಜ್ಯದ ಸುತ್ತಲಿದ್ದ ಚಿಕ್ಕಪುಟ್ಟ ತುಂಡರಸರನ್ನು ಮೆಟ್ಟಿ ತನ್ನ ಸೈನ್ಯಬಲ ಹಾಗೂ ಕೋಶವನ್ನು ವೃದ್ಧಿಸಿಕೊಂಡ. ಈ ಕಾರ್ಯಾಚರಣೆಯಲ್ಲಿ ಚೆಂಗಾಳ್ವ, ಕೊಂಗಾಳ್ವರೂ ಆಳುಪರೂ ಪ್ರಾಯಶಃ ಉಚ್ಚಂಗಿಯ ಪಾಂಡ್ಯರೂ ಪೆಟ್ಟು ತಿಂದರು. ಇವರುಗಳ ಮೇಲೆ ಗಳಿಸಿದ ಜಯ ವಿಷ್ಣುವರ್ಧನನಿಗೆ ಹೆಚ್ಚು ಕೆಚ್ಚನ್ನು ಒದಗಿಸಿತು. ಕುಲೋತ್ತುಂಗ ಚೋಳನು ವೆಂಗಿಯ ರಾಜಕೀಯದಲ್ಲಿ ಮಗ್ನನಾಗಿದ್ದ ಸುಸಂದರ್ಭವನ್ನು ಉಪಯೋಗಿಸಿಕೊಂಡು ತಲಕಾಡಿನ

ಮೇಲೆ ದಾಳಿ ಮಾಡಿ (1116) ಅಲ್ಲಿದ್ದ ಆದಿಯಮನೆಂಬ ಚೋಳಪ್ರತಿನಿಧಿಯನ್ನೂ ಇನ್ನಿತರ ಚೋಳಾಧಿಕಾರಿಗಳನ್ನೂ ಓಡಿಸಿ ತಲಕಾಡನ್ನು ವಶಪಡಿಸಿಕೊಂಡದ್ದೇ ಅಲ್ಲದೆ, ಅದೇ ಭರದಲ್ಲಿ ಅವರುಗಳನ್ನು ಅಟ್ಟಿಸಿಕೊಂಡು ಘಟ್ಟದ ಮೇಲೆ ಈಗಿನ ಕೋಲಾರ, ಬೆಂಗಳೂರು ಜಿಲ್ಲೆಯ ಪ್ರದೇಶಗಳು ಹಾಗೂ ಘಟ್ಟದ ಕೆಳಗಿನ ಕೊಯಮತ್ತೂರು, ಸೇಲಂ, ಧರ್ಮಪುರಿ, ಉತ್ತರ ಆರ್ಕಾಟು ಜಿಲ್ಲೆಗಳ ಭಾಗಗಳ ಮೇಲೂ ದಾಳಿ ಮಾಡಿ, ಪ್ರಾಯಶಃ ಕಾಂಚೀಪುರದವರೆಗೂ ಮುನ್ನಡೆದ. ಇದೇ ಹುರುಪಿನಲ್ಲೇ ಉಚ್ಚಂಗಿಯ ಪಾಂಡ್ಯರನ್ನೂ ಸೋಲಿಸಿದ. ಒಂದು ಚಿಕ್ಕ ಅಧೀನ ರಾಜ್ಯದ ಚಿಕ್ಕ ಅರಸೊಬ್ಬನು ಬೃಹತ್ ಚೋಳ ಸಾಮ್ರಾಟನ ಮೇಲೆ ಜಯ ಗಳಿಸಿದುದು ನಿಜಕ್ಕೂ ಮಹತ್ತ್ವದ ಸಂಗತಿ. ಈ ಎಲ್ಲ ಸಾಧನೆಗಳಿಂದ 1117ರ ಒಂದು ಶಾಸನ ವಿವರಿಸುವಂತೆ ದಕ್ಷಿಣದಲ್ಲಿ ಚೇರಮನ ಮಲೆ, ಕೊಂಗು ವಿಷಯದಿಂದ ಹಿಡಿದು (ನೀಲಗಿರಿ, ಕೊಯಮುತ್ತೂರು ಭಾಗಗಳು) ಉತ್ತರದಲ್ಲಿ ಸಾವಿಮಲೆಯ (ಬಳ್ಳಾರಿ ಜಿಲ್ಲೆ ಸಂಡೂರು) ವರೆಗೂ ಪೂರ್ವದಲ್ಲಿ ಸಂಗಲಿಘಟ್ಟದಿಂದ (ಕೋಲಾರ ಜಿಲ್ಲೆ ಮುಳಬಾಗಲು ಬಳಿಯ ನಂಗಲಿ) ಪಶ್ಚಿಮದಲ್ಲಿ ಬಾರಕನೂರು ಘಟ್ಟದ (ಸಹ್ಯಾದ್ರಿಯ ಪಶ್ಚಿಮ ಅಂಚು) ವರೆಗೂ ಹೊಯ್ಸಳ ರಾಜ್ಯ ವಿಸ್ತೃತವಾಯಿತು. ಹಿಂದೆ ಗಂಗರ ಅನೂಚಾನ ಆಧಿಪತ್ಯಕ್ಕೊಳಪಟ್ಟಿದ್ದ ರಾಜ್ಯವೆಲ್ಲ, ವಿಷ್ಣುವರ್ಧನನ ಏಕಚ್ಛತ್ರದಡಿಗೆ ಬಂದು, ಹೊಯ್ಸಳರು ಗಂಗವಾಡಿ 96000ದ ನಾಯಕರೆಂಬ ಹೇಳಿಕೆಯೂ ಇವನ ವೀರಗಂಗನೆಂಬ ಬಿರುದೂ ಸಫಲವಾದುವು. ಚಾಳುಕ್ಯ 6ನೆಯ ವಿಕ್ರಮಾದಿತ್ಯ ಮೊದಲಿಗೆ ತನ್ನ ಸಾಮಂತರಾಗಿದ್ದ ಈ ಹೊಯ್ಸಳರ ಏಳ್ಗೆಯನ್ನು ಗಮನಿಸುತ್ತಲೇ ಬಂದಿದ್ದ. ಅವನು ತನ್ನ ರಾಜ್ಯದ ದಕ್ಷಿಣದಲ್ಲಿ ಪ್ರಬಲವಾಗುತ್ತಿದ್ದುದಲ್ಲದೆ ಹಿಂದೆ ಉಂಟಾದ ಚಾಳುಕ್ಯ–ಹೊಯ್ಸಳ ವಿರಸದಿಂದ ಹೆಚ್ಚು ಕಡಿಮೆ ಸ್ವತಂತ್ರರಂತೆಯೇ ವರ್ತಿಸುತ್ತ, ನಿಷ್ಠಾವಂತ ಚಾಳುಕ್ಯ ಸಾಮಂತರಾಗಿದ್ದ ಉಚ್ಚಂಗಿಯ ಪಾಂಡ್ಯರ ಮೇಲೂ ಹೊಯ್ಸಳರ ದಾಳಿ ನಡೆದದ್ದನ್ನು ಸಹಿಸಲಿಲ್ಲ. 1118ರಲ್ಲಿ ವಿಷ್ಣುವರ್ಧನನ್ನು ಬಗ್ಗಿಸಲು ಬೃಹತ್ ಸೈನ್ಯವೊಂದನ್ನು ಕಳುಹಿಸಿದಾಗ ಹೊಯ್ಸಳ ದಂಡನಾಯಕರು ಶೌರ್ಯದಿಂದ ಎದುರಿಸಿ ಚಾಳುಕ್ಯ ಬಲವನ್ನು ಹಿಮ್ಮೆಟ್ಟಿಸಿದರು. ಚಾಳುಕ್ಯ ಶೃಂಖಲೆ ಮುರಿಯಿತು. ಹೊಯ್ಸಳ ಸಾರ್ವಭೌಮತ್ವ ಸಿದ್ಧವಾಯಿತು. ಮುಂದಿನ ವರ್ಷಗಳಲ್ಲಿ ವಿಷ್ಣುವರ್ಧನ ತಾನು ಗಳಿಸಿದ ನಾಡಿನ ಸುವ್ಯವಸ್ಥೆಗೆ ಗಮನ ಕೊಟ್ಟುದಲ್ಲದೆ ಅವಕಾಶ ಒದಗಿದಾಗ ಚಾಳುಕ್ಯ ರಾಜ್ಯದ ಒಳಕ್ಕೂ ತನ್ನ ಆಧಿಪತ್ಯವನ್ನು ವಿಸ್ತರಿಸಲು ಯತ್ನಿಸಿದ. ಈ ಕೆಲಸ ಸುಲಭ ಸಾಧ್ಯವಾಗಿರಲಿಲ್ಲ. ಆತ ಪ್ರತಿ ಹೆಜ್ಜೆಯಲ್ಲೂ ಚಾಳುಕ್ಯರು ಮತ್ತು ಅವರ ನಿಷ್ಠ ಸಾಮಂತರೊಡನೆ ಸತತ ಹೋರಾಟ ನಡೆಸಬೇಕಾಯಿತು. 6ನೆಯ ವಿಕ್ರಮಾದಿತ್ಯನ ಅನಂತರ ಬಂದ ಭೂಲೋಕಮಲ್ಲ ಅಷ್ಟೇನೂ ಶಕ್ತನಾಗಿರಲಿಲ್ಲವಾಗಿ ಅವನ ರಾಜ್ಯದಲ್ಲೇ ಸ್ವಹಿತ ಸಾಧಕರು ಬೆಳೆದಿದ್ದು, ಸ್ವಲ್ಪಮಟ್ಟಿಗೆ ವಿಷಮ ಪರಿಸ್ಥಿತಿಯೂ ಇದ್ದಿತಾದ್ದರಿಂದ ವಿಷ್ಣವರ್ಧನ ಹಲವು ಸಂದರ್ಭಗಳಲ್ಲಿ ಹಾನುಗಲ್ಲಿನ ಕದಂಬರು ಮುಂತಾದವರನ್ನು ಸೋಲಿಸಿ ಕೃಷ್ಣಾ ನದಿಯವರೆಗೂ ಮುನ್ನಡೆದನಲ್ಲದೆ ತನ್ನ ಆಳಿಕೆಯ ಕೊನೆಯ ಘಟ್ಟದಲ್ಲಿ ಬೆಳ್ವೊಲ ಪ್ರಾಂತವನ್ನೆಲ್ಲ ಆಕ್ರಮಿಸಿ, ಬಂಕಾಪುರವನ್ನು ನೆಲೆವೀಡಾಗಿ ಮಾಡಿಕೊಂಡ. ಪ್ರಾಯಶಃ ಈ ಕಾಲದಲ್ಲಿ ದಕ್ಷಿಣದಲ್ಲಿದ್ದ ಚೋಳರೂ ಬಲಗುಂದಿದ್ದು ಅತ್ತ ಕಡೆಯಿಂದ ಆಕ್ರಮಣ ಭಯವೂ ಇಲ್ಲದ್ದು, ಉತ್ತರದಲ್ಲಿ ಹೊಯ್ಸಳ ರಾಜ್ಯದ ವಿಸ್ತರಣೆಗೆ ಕಾರಣವಾಗಿರಬೇಕು. ವಿಷ್ಣುವರ್ಧನನ ಶೌರ್ಯ, ರಾಜಕೀಯ ಮುತ್ಸದ್ದಿತನ, ಇವನ ದಂಡನಾಯುಕರು ಮತ್ತು ಸಾಮಂತರ ಅಚಲ ನಿಷ್ಠೆ–ಇವುಗಳಿಂದ ಹೊಯ್ಸಳರು ದಕ್ಷಿಣ ಭಾರತದ ರಾಜಕೀಯದ–ಚೋಳ–ಚಾಳುಕ್ಯರ ಜೊತೆಗೆ–ಇನ್ನೊಂದು ಮುಖ್ಯ ಬಲವಾಗಿ ನೆಲೆಗೊಂಡರು.

ವಿಷ್ಣುವರ್ಧನನಿಗೆ ಕುಮಾರ ಬಲ್ಲಾಳ ಮತ್ತು ನರಸಿಂಹರಲ್ಲದೆ ವಿಜಯನಾರಾಯಣನೆಂಬ ಮಗನೂ ಇದ್ದನೆಂದು ಉಪ್ಪವಳ್ಳಿ ಶಾಸನದಿಂದ ತಿಳಿದುಬರುತ್ತದೆ. ವಿಷ್ಣುವರ್ಧನನ ಮರಣಾನಂತರ ಪಟ್ಟಕ್ಕೆ ಬಂದ ಅವನ ಮಗ ಒಂದನೆಯ ನರಸಿಂಹ (1142–73) ಇನ್ನೂ ಬಾಲಕನಾಗಿದ್ದುದರಿಂದಲೂ ಪ್ರಾಪ್ತವಯಸ್ಕನಾದ ಮೇಲೂ ಸ್ವಭಾವತಃ ಅಶಕ್ತನೂ ಸುಖಲೋಲುಪನೂ ಆಗಿದ್ದುದರಿಂದಲೂ ಚಾಳುಕ್ಯ ಜಗದೇಕಮಲ್ಲ ಮತ್ತು ಹಿಂದೆ ವಿಷ್ಣುವರ್ಧನನಿಂದ ಪೆಟ್ಟು ತಿಂದಿದ್ದ ಚಾಳುಕ್ಯ ಸಾಮಂತರು, ಹರಿಹರದಿಂದ ಉತ್ತರಕ್ಕಿದ್ದ ಹೊಯ್ಸಳರ ಗಳಿಕೆಯನ್ನೆಲ್ಲ ಕಬಳಿಸಿದರು. ಪೂರ್ವದಲ್ಲಿ ಚೋಳರೂ ಈಗಿನ ಕೋಲಾರ ಜಿಲ್ಲೆಯ ಸ್ವಲ್ಪ ಭಾಗವನ್ನು ಆಕ್ರಮಿಸಿದರು. ದಕ್ಷಿಣದಲ್ಲಿ ಚೆಂಗಾಳ್ವರು ಸಂದರ್ಭದ ಲಾಭ ಪಡೆಯಲು ಪ್ರಯತ್ನಿಸಿದರೂ ಅದು ಸಫಲವಾಗಲಿಲ್ಲವಾದರೂ ನರಸಿಂಹನ ಕಾಲದಲ್ಲಿ ತಂದೆಯ ಬಾಹುಬಲದಿಂದ ವೃದ್ಧಿಸಿದ್ದ ಹೊಯ್ಸಳ ರಾಜ್ಯ ಸಂಕುಚಿತವಾಯಿತು. ನರಸಿಂಹ ಚಾಳುಕ್ಯ ಸಾರ್ವಭೌಮತ್ವವನ್ನೂ ಒಪ್ಪಬೇಕಾಯಿತು. ಪ್ರಾಯಶಃ ಈ ವಿಷಮ ಸ್ಥಿತಿಯಲ್ಲಿ ಹೊಯ್ಸಳ ರಾಜ್ಯ ಛಿದ್ರವಾಗದಿದ್ದುದು ಕೆಲವು ನಿಷ್ಠಾವಂತ ಹೊಯ್ಸಳ ದಂಡನಾಯಕರಿಂದಾಗಿ ಎನ್ನಬಹುದು. ಅಲ್ಲದೆ ಇವನ ಆಳಿಕೆಯ ಉತ್ತರಾರ್ಧದಲ್ಲಿ ಮಗನಾದ ಎರಡನೆಯ ಬಲ್ಲಾಳ ಆಡಳಿತದಲ್ಲಿ ಪಾಲ್ಗೊಂಡಿದ್ದೂ ಕಾರಣವಾಗಿರಬಹುದು. ಶಕ್ತನಾದ ಬಲ್ಲಾಳ ತಂದೆಯ ನಿರ್ಬಲ ಆಡಳಿತವನ್ನು ಸಹಿಸದೆ ದಂಗೆಯೆದ್ದು 1173ರಲ್ಲಿ ತಾನೇ ಸಿಂಹಾಸನವನ್ನೇರಿದ.

ಎರಡನೆಯ ಬಲ್ಲಾಳ (1173–1220) ತನ್ನ ತಾತನಾದ ವಿಷ್ಣುವರ್ಧನನ ಗುರಿಯಾಗಿದ್ದ ಸಾಮ್ರಾಜ್ಯ ಸ್ಥಾಪನೆಯನ್ನು ಸಾಧಿಸುವ ಸಂಕಲ್ಪ ಮಾಡಿದ. ಅಧಿಕಾರಕ್ಕೆ ಬಂದ ಕೂಡಲೇ ರಾಜ್ಯದಲ್ಲಿ ತಲೆದೋರಿದ್ದ ಅರಾಜಕತೆಯನ್ನು ಹೋಗಲಾಡಿಸಿ ವಿಸ್ತರಣಾ ಕಾರ್ಯದಲ್ಲಿ ತೊಡಗಿದ. ವಿಷ್ಣುವರ್ಧನನ ಕಾಲದಲ್ಲಿ ಸಾಮಂತನಾಗಿ, ನರಸಿಂಹನ ಕಾಲದಲ್ಲಿ ಸ್ವತಂತ್ರನಾದ ಚೆಂಗಾಳ್ವ ರಾಜನನ್ನು ಹತ್ತಿಕ್ಕಿ (1173), 1177ರಲ್ಲಿ ಉಚ್ಚಂಗಿಯನ್ನು ಮುತ್ತಿ ಪಾಂಡ್ಯ ಕಾಮದೇವನನ್ನು ಸೋಲಿಸಿದ. ಅನಂತರ ಕಳಚುರಿಗಳ ಮೇಲೆ ಯುದ್ಧ ಮಾಡಿ ತುಂಗಭದ್ರಾ ನದಿಯ ಪ್ರದೇಶಗಳನ್ನು ವಶಪಡಿಸಿಕೊಮಡ. ಅದೇ ಸಮಯದಲ್ಲಿ ಸಿಂಧ ರಾಜನನ್ನೂ ಸಾಂತರರನ್ನೂ ಹಾನುಗಲ್ಲಿನ ಕದಂಬರನ್ನೂ ತುಳು ರಾಜನನ್ನೂ ಸೋಲಿಸಿದ. ಈ ವೇಳೆಗೆ ಚಾಳುಕ್ಯರ ಸಾಮಂತ ಪಕ್ಷವನ್ನು ವಹಿಸಿದ್ದ ಉಚ್ಚಂಗಿ ಕಾಮದೇವ ಪಾಂಡ್ಯನ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ (1187).

ಸೋಮೇಶ್ವರನು ಪುನಃ ಚಾಳುಕ್ಯರ ಅಧಿಕಾರವನ್ನು ಸ್ಥಾಪಿಸಿದರೂ ಕುಂತಳ ಸಾಮ್ರಾಜ್ಯದ ಅವನತಿಯ ಕುರುಹುಗಳು ಕಾಣಬಂದದ್ದರಿಂದ ವೀರಬಲ್ಲಾಳ 1189ರಲ್ಲಿ ಕಲ್ಯಾಣಿಯವರೆಗೂ ದಂಡೆತ್ತಿ ಹೋಗಿ ಸೋಮೇಶ್ವರನ ಪ್ರಧಾನ ದಂಡನಾಯಕನಾದ ಬ್ರಹ್ಮದಂಡೇಶನನ್ನು ಸೋಲಿಸಿ ಚಾಳುಕ್ಯ ಸಾಮ್ರಾಜ್ಯದ ದಕ್ಷಿಣ ಭಾಗದ ಮೇಲೆ ತನ್ನ ಆಳಿಕೆಯನ್ನು ಸ್ಥಾಪಿಸಿ ಕರ್ನಾಟಕ ಚಕ್ರವರ್ತಿಯೆಂಬ ಬಿರುದನ್ನು ಧರಿಸಿದ. ಅನಂತರ ಕುಂತಳ ಸಾಮ್ರಾಜ್ಯದ ಒಡೆತನಕ್ಕಾಗಿ ದೇವಗಿರಿಯ ಸೇವುಣರಿಗೂ ಹೊಯ್ಸಳರಿಗೂ ಯುದ್ಧಗಳು ಪ್ರಾರಂಭವಾದವು. ಸೇವುಣ ರಾಜನಾದ ಭಿಲ್ಲಮ ದಕ್ಷಿಣಕ್ಕೆ ಮುನ್ನುಗ್ಗಿದಾಗ ಬಲ್ಲಾಳನು ಅವನನ್ನು ಸೊರಟೂರಿನ ಬಳಿಯಲ್ಲಿ ಎದುರಿಸಿ ಓಡಿಸಿದ (1190). ಸುತ್ತಲಿನ ಯಲಬುರ್ಗಿಯ ಸಿಂದರೇ ಮೊದಲಾದ ಕಿರುದೊರೆಗಳನ್ನು ಜಯಿಸಿ ಹೊಯ್ಸಳ ರಾಜ್ಯವನ್ನು ಉತ್ತರದಲ್ಲಿ ಮಲಪ್ರಭಾ, ಕೃಷ್ಣಾನದಿಗಳವರೆಗೂ ವಿಸ್ತರಿಸಿದ. ತನ್ನ ಸಾಮ್ರಾಟ ಪದವಿಯ ಕುರುಹಾಗಿ 1192ರಲ್ಲಿ ತನ್ನ ಹೆಸರಿನಲ್ಲಿ ಶಕವೊಂದನ್ನು ಸ್ಥಾಪಿಸಿದ. 1173–92 ಬಲ್ಲಾಳನ ಆಳಿಕೆಯಲ್ಲಿ ನಿರಂತರ ಅಭಿವೃದ್ಧಿಯ ಕಾಲ. ಈ ಕಾಲದಲ್ಲಿ ಉತ್ತರ ಕರ್ನಾಟಕದ ರಾಜಕೀಯ ಶಕ್ತಿಗಳಾಗಿದ್ದ

ಕಳಚುರಿಗಳು ಮತ್ತು ಚಾಳುಕ್ಯರು ಇತಿಹಾಸದಿಂದ ಮರೆಯಾದರಷ್ಟೆ. ಇದರಿಂದ ಅಲ್ಲಿ ಉದ್ಭವವಾದ ರಾಜಕೀಯ ಶೂನ್ಯತೆಯನ್ನು ಬಲ್ಲಾಳ ಚಾಕಚಕ್ಯತೆಯಿಂದ ತನಗೆ ಲಾಭದಾಯಕವಾಗಿ ಮಾಡಿಕೊಂಡ. ಆದರೆ ಈ ಅನಂತರದಲ್ಲಿ ಬಲ್ಲಾಳನ ಮುನ್ನಡೆ ಕುಂಠಿತವಾಯಿತು. ಮೊದಲಿಗೆ ಉತ್ತರ ಕರ್ನಾಟಕದ ಅನೇಕ ಚಿಕ್ಕ ರಾಜಮನೆತನಗಳೂ ಬಲ್ಲಾಳನಂತೆಯೇ ತತ್ಕಾಲದ ಸಾರ್ವಭೌಮಶೂನ್ಯತೆಯನ್ನು ಗಮನದಲ್ಲಿಟ್ಟು ಸ್ವಲಾಭ ನಿರತವಾಗಿದ್ದವು. ಹೊಸದಾಗಿ ಆ ಪ್ರದೇಶದಲ್ಲಿ ಕಾಲಿಟ್ಟಿದ್ದ ಬಲ್ಲಾಳನ ಸಾರ್ವಭೌಮತ್ವವನ್ನು ಸಹಿಸಲು ಒಪ್ಪಲಿಲ್ಲ. ಸಾಧ್ಯವಾದಷ್ಟುಮಟ್ಟಿಗೆ ಸ್ವತಂತ್ರ ರಾಜರಾಗಿರಲು ಅಲ್ಲಿನ ಅರಸರು ಪ್ರಯತ್ನಿಸುತ್ತಿದ್ದರು. ಅಲ್ಲದೆ ದೇವಗಿರಿಯಲ್ಲಿ ಸಂಘಣ ಕ್ರಮೇಣ ಬಲಯುತನಾಗುತ್ತಿದ್ದ. ಬೆಳ್ವೊಲ, ಬನವಾಸಿ ಪ್ರಾಂತ್ಯದಲ್ಲಿದ್ದ ಕೆಲವು ಚಿಕ್ಕ ರಾಜಮನೆತನಗಳಿಗೆ ಸಹಾಯ ಮಾಡುವ ನೆವದಲ್ಲಿ ದಕ್ಷಿಣ ದಂಡಯಾತ್ರೆಯನ್ನು ಕೈಕೊಂಡ. ಬೆಳ್ವೊಲ-ಬನವಾಸಿ ಪ್ರಾಂತ್ಯದ ಆಧಿಪತ್ಯಕ್ಕಾಗಿ ದಖನ್ನಿನ ಎರಡು ಬಲಿಷ್ಠ ರಾಜರು ಪರಸ್ಪರ ವಿರುದ್ಧವಾಗಿ ನಿಂತರು. ಬಲ್ಲಾಳನಿಗೆ ಈ ಪರಿಸ್ಥಿತಿ ಅನುಕೂಲಕರ ವಾಗಿರಲಿಲ್ಲವಾಗಿ ತಾನು ಗಳಿಸಿದ ಉತ್ತರ ಕರ್ನಾಟಕದ ಭಾಗಗಳನ್ನು ಉಳಿಸಿಕೊಳ್ಳುವುದೇ ಪ್ರಯಾಸವಾಯಿತು. 1212 ರವರೆಗೆ ಆ ನೆಲವನ್ನೆಲ್ಲ ಹಿಡಿತದಲ್ಲಿಟ್ಟುಕೊಂಡಿದ್ದರೂ ಮುಂದೆ 1215ರ ಹೊತ್ತಿಗೆ ಸಿಂಘಣನ ಪ್ರಾಬಲ್ಯದಿಂದ ಬಲ್ಲಾಳ ತುಂಗಭದ್ರೆಯ ಉತ್ತರದ ಭಾಗವನ್ನೆಲ್ಲ ಕಳೆದು ಕೊಂಡ. ಆದರೆ ಹೊಯ್ಸಳ ರಾಜ್ಯ ಭದ್ರವಾದ ಬುನಾದಿಯ ಮೇಲೆ ನಿಂತಿತ್ತು. ಸಿಂಘಣನಂಥ ಶೂರನ ಪ್ರಯತ್ನಗಳು, ಅದರ ಹೊರ ಎಲ್ಲೆಯ ನ್ನಷ್ಟೇ ಮುಟ್ಟಲು ಸಾಧ್ಯವಾಯಿತು.

ಈ ವೇಳೆಗೆ ಶಕ್ತಯುತವಾಗಿ ಬೆಳೆದಿದ್ದ ಹೊಯ್ಸಳ ರಾಜ್ಯಕ್ಕೆ ಹೊಸ ವಿಸ್ತರಣ ಅವಕಾಶಗಳು ಬೆಳೆದು ಬಂದುವು. ಈ ಹಿಂದೆಯೇ ರಕ್ತಸಂಬಂಧ ವನ್ನು ಬೆಳೆಸಿದ್ದ ಚೋಳರೊಡನೆ ರಾಜಕೀಯ ಸಂಬಂಧವನ್ನು ಬೆಳೆಸಲಾ ಯಿತು. ಮೂರನೆಯ ಕುಲೋತ್ತುಂಗ ಚೋಳ ತನ್ನ ಸಾಮಂತರಾದ ಪಾಂಡ್ಯರಿಂದ ಪರಾಜಿತನಾದಾಗ, ತನ್ನ ದುಃಸ್ಥಿತಿಯಲ್ಲಿ ಬಲ್ಲಾಳನ ಸಹಾಯ ವನ್ನು ಯಾಚಿಸಿದ. ಬಲ್ಲಾಳ ತನ್ನ ಕುಮಾರ ಎರಡನೆಯ ನರಸಿಂಹನ ನೇತೃತ್ವದಲ್ಲಿ ಹೊಯ್ಸಳ ಸೈನ್ಯವನ್ನು ಕುಲೋತ್ತುಂಗನ ಸಹಾಯಕ್ಕೆ ಕಳುಹಿಸಿದ. ನರಸಿಂಹನು ರಾಜರಾಜನ ಶತ್ರುಗಳನ್ನು ಸೋಲಿಸಿ ಅವನನ್ನು ಚೋಳ ಸಿಂಹಾಸನದ ಮೇಲೆ ಕೂರಿಸಿದ. ಇದರಿಂದ ತಮಿಳುನಾಡಿನ ರಾಜಕೀಯದಲ್ಲಿ ಹೊಯ್ಸಳರ ಕೈವಾಡದ ನಾಂದಿಯಾಯಿತು. ಬಲ್ಲಾಳನು ಪಾಂಡ್ಯರಾಜ ಗಜಕೇಸರಿ, ಚೋಳರಾಜ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದುಗಳನ್ನು ಧರಿಸಿದ.

ಇಮ್ಮಡಿ ವೀರಬಲ್ಲಾಳ (1173-1220) ಹೊಯ್ಸಳ ಸಂತತಿಯ ಸಾಮ್ರಾಟ ರಲ್ಲೆಲ್ಲ ಅತ್ಯಂತ ಪರಾಕ್ರಮಿ. ನರಸಿಂಹನ ಕಾಲದಲ್ಲಿ ಮುದುರಿಹೋಗಿದ್ದ ಹೊಯ್ಸಳ ರಾಜ್ಯವನ್ನು ತನ್ನ ಬಾಹುಬಲಸಾಮರ್ಥ್ಯ ಹಾಗೂ ದೂರದೃಷ್ಟಿ ಯಿಂದ ವಿಸ್ತರಿಸಿ, ದಕ್ಷಿಣ ಭಾರತದ ರಾಜಕೀಯದಲ್ಲಿ ಹೊಯ್ಸಳ ವಂಶವನ್ನು ಒಂದು ಮುಖ್ಯ ಶಕ್ತಿಯಾಗಿ ರೂಪಿಸಿದ ಕೀರ್ತಿ ಈತನದು.

ಇವನ ಮಗ ಎರಡನೆಯ ನರಸಿಂಹನ (1220-35) ಕಾಲದಲ್ಲಿ ಈ ಹಿಂದೆ ಬಲ್ಲಾಳ ಸ್ಥಾಪಿಸಿದ್ದ ಸಾಮ್ರಾಜ್ಯ ಭದ್ರಪಟ್ಟುದಲ್ಲದೆ ಅಂದು ತಮಿಳುನಾಡಿನಲ್ಲಿ ಆಳುತ್ತಿದ್ದ ಚೋಳರು ಬಹಳ ಬಲಹೀನರಾಗಿ, ಪಾಂಡ್ಯರೇ ಮೊದಲಾದವರಿಂದ ಪೀಡಿತರಾಗಿದ್ದು, ಹಲವು ಸಂದರ್ಭಗ ಳಲ್ಲಿ ರಾಜ್ಯವನ್ನೂ ಕಳೆದುಕೊಂಡಿದ್ದರು. ಬಲ್ಲಾಳನ ಕಾಲದಿಂದಲೂ ಬೆಳೆದುಬಂದಿದ್ದ ಚೋಳ-ಹೊಯ್ಸಳ ರಕ್ತಸಂಬಂಧ ಮತ್ತು ತತ್ಕಾಲೀನ ತಮಿಳುನಾಡಿನ ಅಸ್ತವ್ಯಸ್ತ ಸ್ಥಿತಿಯನ್ನು ಚಾಕಚಕ್ಯತೆಯಿಂದ ಬಳಸಿಕೊಂಡ ನರಸಿಂಹ, ಹಲವು ಬಾರಿ ತಮಿಳುನಾಡಿಗೆ ನುಗ್ಗಿ ಚೋಳವೈರಿಗಳನ್ನು ಸದೆಬಡಿದು ಚೋಳರಿಗೆ ರಾಜ್ಯ ದಕ್ಕಿಸಿಕೊಟ್ಟ. ಚೋಳರು ಕೃತಜ್ಞತೆಯಿಂದ, ಪ್ರಾಯಶಃ ನರಸಿಂಹನ ರಾಜಕೀಯ ಚಾತುರ್ಯದಿಂದಲೂ ಇರಬಹುದು, ತಮಿಳುನಾಡಿನ ಕೊಯಮುತ್ತೂರು, ತಿರುಚ್ಚಿರಾಪಳ್ಳಿ ಜಿಲ್ಲೆಯ ಹಲವು ಭಾಗಗಳನ್ನು ಹೊಯ್ಸಳರಿಗೆ ವಹಿಸಿಕೊಟ್ಟರು. ಇದರಿಂದಾಗಿ ನರಸಿಂಹನ ಕಾಲದಲ್ಲಿ ಹೊಯ್ಸಳ ರಾಜ್ಯ ತಮಿಳುನಾಡಿಗೂ ವಿಸ್ತರಿಸಿತು. ಇತ್ತ ರಾಜ್ಯ ವಿಸ್ತರಣೆಯಾದರೂ ಉತ್ತರದಲ್ಲಿ ಸೇವುಣರ ದಾಳಿಗಳು ಮುಂದುವರಿಯು ತ್ತಲೇ ಇದ್ದುವು. ಆದರೂ ರಾಜ್ಯದ ಉತ್ತರ ದಕ್ಷಿಣದ ಎರಡು ಕಡೆಗಳಲ್ಲೂ ಸೈನ್ಯಾಚರಣೆಯಲ್ಲಿ ನಿರತನಾಗಿ ಹೊಯ್ಸಳ ರಾಜ್ಯವನ್ನು ಗಟ್ಟಿಯಾಗಿ ಉಳಿಸಿದ್ದಲ್ಲದೆ ದಕ್ಷಿಣದಲ್ಲಿ ವಿಸ್ತರಿಸಿದ್ದು ಎರಡನೆಯ ನರಸಿಂಹನ ಮುಖ್ಯ ಸಾಧನೆ. ಈ ಕಾಲದಿಂದ ಹೊಯ್ಸಳ ಪ್ರಭಾವ ತಮಿಳುನಾಡಿನಲ್ಲಿ ಭದ್ರವಾಗಿ ನೆಲೆಯೂರಿದ್ದೂ ಗಮನಾರ್ಹ ಅಂಶ.

ನರಸಿಂಹನ ಮಗ ಸೋಮೇಶ್ವರ (1235-53) ತತ್ಕಾಲೀನ ರಾಜಕೀಯ ದಲ್ಲಿ ಹೇಳಿಕೊಳ್ಳುವ ಚಾಕಚಕ್ಯತೆಯನ್ನೇನೂ ತೋರಿಸಲಿಲ್ಲ. ಇವನು ಹೆಚ್ಚಾಗಿ ತಮಿಳುನಾಡಿನಲ್ಲೇ ಇರುತ್ತಿದ್ದುದರಿಂದ ಹೊಯ್ಸಳ ರಾಜ್ಯದ ಉತ್ತರದಲ್ಲಿ ಸೇವುಣರು ಸಾಕಷ್ಟು ಬಲಸಂವರ್ಧನೆ ಮಾಡಿಕೊಂಡಂತೆ ತೋರುತ್ತದೆ. ಆದರೆ ಹೊಯ್ಸಳ ರಾಜ್ಯಕ್ಕೇನೂ ಹೆಚ್ಚು ಧಕ್ಕೆಯಾಗಲಿಲ್ಲ. ಲಾಭವಂತೂ ಸಾಧ್ಯವೇ ಇರಲಿಲ್ಲ. ತಮಿಳುನಾಡಿನಲ್ಲಿ ಅಂದಿನ ರಾಜಕೀಯ ಸಮತೋಲ ಅಸ್ತವ್ಯಸ್ತವಾದ್ದರಿಂದ ಹಲವು ಯುದ್ಧಗಳಲ್ಲಿ ಈತ ಭಾಗವಹಿಸ ಬೇಕಾಯಿತು. ಇವನು ಚೋಳರೊಡನೆಯೇ ಅಲ್ಲದೆ ಅವರ ವೈರಿಗಳಾಗಿದ್ದ ಪಾಂಡ್ಯರೊಡನೆಯೂ ರಕ್ತಸಂಬಂಧ ಬೆಳೆಸಿದ್ದ; ಈ ಎರಡು ವಂಶದವರ ಶಾಸನಗಳೂ ಸೋಮೇಶ್ವರನನ್ನು 'ಮಾವ' ಎಂದು ಹೆಸರಿಸುತ್ತೆ. ಆದರೆ ಇದನ್ನೇ ಲಾಭ ಮಾಡಿಕೊಂಡ ಸೋಮೇಶ್ವರ, ಇಬ್ಬರಲ್ಲಿ ಯುದ್ಧವಾದಾಗ ಯಾವ ಒಂದು ಕಡೆಗೂ ಒಲವು ತೋರಿಸದೆ, ಇಬ್ಬರನ್ನೂ ನಿಗ್ರಹಿಸಿ ಹೊಯ್ಸಳ ಪ್ರಭಾವವನ್ನು ಸುಮಾರು ತಮಿಳುನಾಡಿನಲ್ಲೆಲ್ಲ ಹರಡಿ, ಆ ದೇಶದ ಪ್ರಬಲಶಕ್ತಿಯಾದದ್ದು ಇವನ ಮುಖ್ಯ ಸಾಧನೆ. ಈ ಕಾಲದಲ್ಲಿ ಹೊಯ್ಸಳ ರಾಜ್ಯ ಬಹು ವಿಸ್ತಾರವಾಗಿದ್ದುದರಿಂದಲೂ ಇವನ ಮಕ್ಕಳಾದ 3ನೆಯ ನರಸಿಂಹ ಮತ್ತು ರಾಮನಾಥರಲ್ಲಿ ಸಾಮರಸ್ಯವಿಲ್ಲದ್ದರಿಂದಲೂ ಸೋಮೇಶ್ವರ ತನ್ನ ಆಳಿಕೆಯ ಕಡೆಯ ಭಾಗದಲ್ಲಿ ರಾಜ್ಯವನ್ನು ಇಬ್ಭಾಗ ಮಾಡಿ ಹಂಚಿದ.

ಹೊಯ್ಸಳ ರಾಜ್ಯದ ಕರ್ನಾಟಕ ಭಾಗವನ್ನು ಆಳುತ್ತಿದ್ದ 3ನೆಯ ನರಸಿಂಹನ (1253-92) ಕಾಲದಲ್ಲಿ ಇವನಿಗೂ ಇವನ ಮಲತಮ್ಮನಾದ ವೀರ ರಾಮನಾಥನಿಗೂ ನಡೆದ ದಾಯಾದಿ ಕಲಹಗಳಷ್ಟೇ ಪ್ರಮುಖವಾಗಿ ಕಂಡುಬರುತ್ತವೆ. ಹಲವು ಬಾರಿ ಸೇವುಣ ರಾಮಚಂದ್ರ ಮತ್ತು ಮಹಾದೇವ ಹೊಯ್ಸಳ ರಾಜ್ಯವನ್ನು ಕಬಳಿಸಲು ಪ್ರಯತ್ನಿಸಿದರಾದರೂ ಅದನ್ನು ಸಾಧಿಸಲು ಅವಕಾಶ ಕೊಡದಿದ್ದುದಷ್ಟೇ ಈ ನರಸಿಂಹನ ಸಾಧನೆ.

ಅತ್ತ ವಿಕ್ರಮಪುರದಿಂದ ಹೊಯ್ಸಳ ರಾಜ್ಯದ ತಮಿಳು ಭಾಗಗಳನ್ನು ಆಳುತ್ತಿದ್ದ ವೀರರಾಮನಾಥನಾದರೋ (1253-95) ತನ್ನ ಆಳಿಕೆಯ ಪ್ರಾರಂಭದಲ್ಲೇ ಮಧುರೆಯ ಜಟಾವರ್ಮನ್ ಸುಂದರಪಾಂಡ್ಯನಿಂದ ಪರಾಜಿತನಾಗಿ ತನ್ನ ರಾಜ್ಯದ ಹೆಚ್ಚು ಪ್ರದೇಶಗಳನ್ನು ಕಳೆದುಕೊಂಡು ಹೊಸೂರು ಬಳಿಯ ಕುಂದಾಣಿಯನ್ನು ರಾಜಧಾನಿಯಾಗಿ ಮಾಡಿಕೊಂಡು ತನ್ನ ಸಹೋದರ ನರಸಿಂಹನಿಗೆ ಸೇರಿದ ಪ್ರದೇಶಗಳನ್ನು ಅನೇಕ ವೇಳೆ ಮುತ್ತುವುದಷ್ಟೇ ಅವನ ಜೀವನಪರ್ಯಂತ ನಡೆಸಿದ ಕೆಲಸ. ರಾಮನಾಥ ಮತ್ತು ನರಸಿಂಹರ ಕಾಲದಲ್ಲಿ ಹೊಯ್ಸಳರು ತಮಿಳುನಾಡಿನ ಮೇಲೆ ಹೊಂದಿದ್ದ ಪ್ರಭುತ್ವಕ್ಕೆ ಚ್ಯುತಿ ಬಂದಿತು.

3ನೆಯ ನರಸಿಂಹನ ಮಗ ಮೂರನೆಯ ಬಲ್ಲಾಳನ (1292-1343) ಆಳಿಕೆಯ ಮೊದಲೆರಡು ದಶಕಗಳು ಆಶಾದಾಯಕವಾಗಿದ್ದವು. ಈತ

ಪಟ್ಟಕ್ಕೆ ಬಂದ ಕೂಡಲೇ ದಾಯಾದಿ ಕಲಹದಿಂದ ಅಧೋಗತಿಗೆ ಇಳಿದಿದ್ದ ರಾಜ್ಯವನ್ನು ಸುಭದ್ರಸ್ಥಿತಿಗೆ ತರಲು ಯತ್ನಿಸಿದ. 1301ರ ವೇಳೆಗೆ ರಾಮನಾಥನ ಆಡಳಿತದಲ್ಲಿ ಇದ್ದ ಪ್ರದೇಶಗಳನ್ನು ಪೂರ್ಣವಾಗಿ ವಶಪಡಿಸಿಕೊಂಡು ಹೋಳಾಗಿದ್ದ ರಾಜ್ಯವನ್ನು ಒಂದುಗೂಡಿಸಿದ. 1302ರ ಹೊತ್ತಿಗೆ ಸೇವುಣರ ಮೇಲೂ ಯುದ್ಧ ಹೂಡಿ ರಾಜ್ಯದ ಉತ್ತರದ ಗಡಿಯನ್ನು ಭದ್ರಪಡಿಸಿ, ಹೊಯ್ಸಳ ರಾಜ್ಯದ ಹಿಂದಿನ ಪ್ರಭಾವೀಸ್ಥಿತಿಯನ್ನು ಸಾಧಿಸಿದ. ಆದರೆ ಬಲ್ಲಾಳನ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಸಂದಿಗ್ಧ ಕಾಲ. ಅತ್ತ ಉತ್ತರ ಭಾರತದಲ್ಲಿ ಮುಸಲ್ಮಾನ ಅರಸರು ಪ್ರಬಲರಾಗಿ ದಕ್ಷಿಣ ಭಾರತದ ಮೇಲೂ ಕಣ್ಣು ಹಾಯಿಸುವ ಸ್ಥಿತಿಗೇರಿದ್ದರು.

ವಿಷ್ಣುವರ್ಧನ-ಲೋಹದ ವಿಗ್ರಹ, ಬೇಲೂರು

1310ರ ವೇಳೆಗೆ ಅಲಾಉದ್ದೀನ್‌ನ ಅಪ್ಪಣೆಯ ಮೇರೆಗೆ ಅವನ ದಂಡನಾಯಕನಾದ ಮಲ್ಲಿಕ್ ಕಾಫೂರ್ ದೇವಗಿರಿಯ ಸೇವುಣರನ್ನು ಸೋಲಿಸಿ ಕರ್ನಾಟಕ ಮತ್ತು ತಮಿಳುನಾಡುಗಳನ್ನು ಜಯಿಸಿ ಅಪರಿಮಿತ ಐಶ್ವರ್ಯವನ್ನು ದೋಚುವುದಕ್ಕಾಗಿ ದೋರಸಮುದ್ರದತ್ತ ಮುಂದುವರಿದ. ಇವನು ಹೊಯ್ಸಳ ರಾಜ್ಯದ ಗಡಿಗಳನ್ನು ಪ್ರವೇಶಿಸುತ್ತಿದ್ದ ಸಮಯದಲ್ಲಿ ಬಲ್ಲಾಳ ತಮಿಳುನಾಡಿನಲ್ಲಿ ತನ್ನ ಪ್ರಭಾವ ಸ್ಥಾಪಿಸುವ ಯತ್ನದಲ್ಲಿದ್ದ. ಹಲವು ಭಾಗಗಳು ಶತ್ರುಗಳ ದಾಳಿಗೆ ಸಿಕ್ಕಿ ಪಾಳುಬಿದ್ದವು. ಬಲ್ಲಾಳ ಈ ವಿಷಮ ಪರಿಸ್ಥಿತಿಯಿಂದ ಪಾರಾಗಲು ಕಾಫೂರನಿಗೆ ವಿಶೇಷ ಐಶ್ವರ್ಯ ವನ್ನು ನೀಡಿ ಒಪ್ಪಂದ ಮಾಡಿಕೊಂಡ. ಮಹಮ್ಮದೀಯ ದಾಳಿ ಕೇವಲ ಆಕಸ್ಮಿಕವೆಂದು ಭಾವಿಸಿದ್ದ ಬಲ್ಲಾಳ ಪುನಃ ಹಳೆಯ ರಾಜಕೀಯ ಅಂತರ್ಯುದ್ಧಗಳಲ್ಲಿ ತೊಡಗಿದ. ತಮಿಳುನಾಡಿನಲ್ಲಿ ಪಾಂಡ್ಯವಂಶದ ಈರ್ವರು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾಗ, ಒಬ್ಬನಿಗೆ ಬೆಂಬಲ ನೀಡಿ ಅವನಿಗೆ ರಾಜ್ಯ ದಕ್ಕಿಸಿಕೊಟ್ಟು, ಈ ಸಂದರ್ಭದಲ್ಲಿ ತಿರುವಣ್ಣಾಮಲೈ ಮತ್ತು ಸುತ್ತಲಿನ ಪ್ರದೇಶಗಳನ್ನು ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡ. ಆದರೆ ಮಹಮ್ಮದೀಯರ ಉತ್ಕರ್ಷವನ್ನು ಗಮನಿಸಿ ದಕ್ಷಿಣ ಭಾರತದ ತಮ್ಮ ಆಳಿಕೆಯನ್ನು ಭದ್ರಪಡಿಸಿಕೊಳ್ಳಲು ಒಟ್ಟುಗೂಡಿ ಸತತ ಪ್ರಯತ್ನ ವನ್ನು ನಡೆಸಬೇಕಾಗಿದ್ದ ಈ ಕಾಲದಲ್ಲಿ ಅಂತರ್ಯುದ್ಧದಲ್ಲಿ ತೊಡಗಿ ಎಲ್ಲರೂ ಬಲಹೀನರಾಗುತ್ತಿದ್ದುದು ಮುಂದಿನ ರಾಜಕೀಯ ದುರಂತಕ್ಕೆ ದಾರಿಯಾಯಿತು. 1325ರಲ್ಲಿ ಪುನಃ ಉತ್ತರದಿಂದ ಉಪದ್ರವವು ತಲೆದೋರಿತು. ಆ ವೇಳೆಗೆ ದೆಹಲಿಯ ಸಾಮ್ರಾಟನಾಗಿದ್ದ ಮಹಮ್ಮದ್ ಬಿನ್ ತುಗಲಕ್ ದಖನ್ ಪ್ರಸ್ಥಭೂಮಿಯವರೆಗೂ ರಾಜ್ಯ ವಿಸ್ತರಿಸಿದ್ದ. ತನ್ನ ವಿರುದ್ಧ ದಂಗೆಯೆದ್ದ ಬಹಾಉದ್ದೀನನನ್ನು ಸೆರೆಹಿಡಿಯಲು ಮಹಮ್ಮದ್ ಬಿನ್ ತುಗಲಕ್ ಕಳುಹಿಸಿದ ಸೈನ್ಯದಿಂದ ಓರಂಗಲ್ ಮತ್ತು ಕಂಪಿಲಿಯ ರಾಜಮನೆತನಗಳು ನಿರ್ನಾಮವಾದವು. ಬಹಾಉದ್ದೀನನನ್ನು ಮಹಮ್ಮದ್ ಬಿನ್ ತುಗಲಕನ ಸೈನ್ಯಕ್ಕೆ ಒಪ್ಪಿಸಿ ವೀರಬಲ್ಲಾಳ ಮಹಮದೀಯರ ಆಕ್ರಮಣದಿಂದ ತನ್ನ ರಾಜ್ಯವನ್ನು ಪಾರುಮಾಡಿದ.

**ಹೊಯ್ಸಳರ ವಂಶಾವಳಿ:**

- ಸಳ
  - ಮಾರ- (ನೃಪಕಾಮ)
    - ಉಪ್ಪಿಡಿವೊಯ್ಸಳ
      - ಎರೆಯಂಗ
      - ತಳಕಾಡುವೊಯ್ಸಳ
        - ಉದಯಾದಿತ್ಯ
        - ಕುಂಟವಿನಯಾದಿತ್ಯ/ವಿನಯಾದಿತ್ಯI (1006-20)
  - ನೃಪಕಾಮII (ಸು. 1000-45)
    - ವಿನಯಾದಿತ್ಯII (ಸು. 1045-98)
      - ಎರೆಯಂಗ (ಸು. 1098-1100)
        - ಬಲ್ಲಾಳ I (ಸು.1100-1108)
        - ವಿಷ್ಣುವರ್ಧನ (ಸು.1108-42)
          - ಬಲ್ಲಾಳದೇವ
          - ನರಸಿಂಹ I (1142-73)
            - ಬಲ್ಲಾಳ II (1173-1220)
              - ನರಸಿಂಹ II (1220-35)
                - ಸೋಮೇಶ್ವರ (1235- ಸು. 53)
                  - ನರಸಿಂಹ III (ಸು. 1253-92)
                    - ಬಲ್ಲಾಳ III (1292-1343)
                      - ವಿರೂಪಾಕ್ಷ ಬಲ್ಲಾಳ IV (1343-ಸು. 46)
                  - ರಾಮನಾಥ (ಸು.1253-95)
          - ವಿಜಯನಾರಾಯಣ
        - ಉದಯಾದಿತ್ಯII

ಅನಂತರ ಬಲ್ಲಾಳ ಮಹಮ್ಮದೀಯ ರಾಜ್ಯಗಳ ನಿಜಶಕ್ತಿಯನ್ನು ಅರಿತಂತೆ ತೋರುತ್ತದೆ. ಅನಂತರ ತನ್ನ ರಾಜ್ಯದ ಗಡಿಗಳಲ್ಲಿ ಉಪರಾಜಧಾನಿ

ಗಳನ್ನು ಸ್ಥಾಪಿಸಿ ರಕ್ಷಣೆಗಾಗಿ ಸೈನ್ಯದ ತುಕಡಿಗಳನ್ನು ನೇಮಿಸಿದ. ಇವನು ಶಕ್ತಿಯುತನಾಗಿ ಪಶ್ಚಿಮ-ಪೂರ್ವ ಸಮುದ್ರ ಪರ್ಯಂತದ ರಾಜ್ಯವನ್ನು ಅನುಭವಿಸುತ್ತಿದ್ದರೂ ಉತ್ತರದಲ್ಲಿ ದೇವಗಿರಿಯಲ್ಲೂ ದಕ್ಷಿಣದಲ್ಲಿ ಮಧುರೆಯಲ್ಲೂ ಮುಸಲ್ಮಾನ ರಾಜ್ಯಗಳು ನೆಲೆಗೊಂಡಿದ್ದುವು. ಮುಂದೆ ದೊಡ್ಡ ಸಾಮ್ರಾಜ್ಯ ಸ್ಥಾಪನೆಗೆ ರಾಜಧಾನಿಯಾದ ವಿಜಯನಗರ ಅಥವಾ ಹಂಪೆಯಲ್ಲೂ ತನ್ನ ಬಲವನ್ನು ಸ್ಥಾಪಿಸಿದ. ಬಲ್ಲಾಳ ಉತ್ತರದಿಂದ ಬಂದ ಈ ಹೊಸ ರಾಜಕೀಯ ಶಕ್ತಿಯನ್ನು ಎದುರಿಸಲು ಇಲ್ಲಿ ಉಳಿದಿದ್ದ ಏಕೈಕ ರಾಜನಾಗಿದ್ದ. ಆದರೆ ಕಾಲಕ್ಕೆ ತಕ್ಕ ಹೊಸ ರಾಜನೀತಿಯನ್ನು ರೂಪಿಸಿಕೊಳ್ಳುವ ಇವನ ಕ್ರಮ ಬಹು ತಡವಾಗಿ ಹುಟ್ಟಿತು.

ಬಲ್ಲಾಳ ಅಪರಿಮಿತ ಸೈನ್ಯದೊಡನೆ 1342ರಲ್ಲಿ ತಮಿಳುನಾಡಿಗೆ ಹೋದ. ಕೊಪ್ಪಂ ಕಣ್ಣಾನೂರಿನ ಬಳಿಯಲ್ಲಿ ಮಧುರೆಯ ಸುಲ್ತಾನನ ಸೈನ್ಯಕ್ಕೂ ಹೊಯ್ಸಳ ಸೈನ್ಯಕ್ಕೂ ಕದನ ನಡೆದು ಮಹಮ್ಮದೀಯ ಸೈನ್ಯವು ಸೋಲನ್ನು ಅನುಭವಿಸಿದರೂ ಶತ್ರುಗಳ ಕುತಂತ್ರದಿಂದ ಬಲ್ಲಾಳ ಅವರ ಸೆರೆಯಾದ, ಕೊನೆಗೆ ಬಲಿಯಾದ (1343).

ಹೊಯ್ಸಳ ಸಾಮ್ರಾಜ್ಯ ಅಸ್ತಂಗತವಾಯಿತು. ಇವನ ಮಗ ವಿರೂಪಾಕ್ಷ ಪಟ್ಟವೇರಿದರೂ ತನ್ನ ನಿರ್ಬಲತೆಯಿಂದಾಗಿ ಕೆಲವೇ ವರ್ಷಗಳಲ್ಲಿ ರಾಜಕೀಯದಿಂದ ಕಣ್ಮರೆಯಾದ. ಆದರೆ ಮೂರನೆಯ ಬಲ್ಲಾಳ ತನ್ನ ಆಳಿಕೆಯ ಕೊನೆಯ ಭಾಗದಲ್ಲಿ ದಕ್ಷಿಣದಲ್ಲಿ ಹಿಂದು ರಾಜ್ಯವನ್ನು ಸ್ಥಾಪಿಸಲು ಹೊಂದಿದ್ದ ಉದ್ದೇಶದ ಬೀಜ ಬಲವಾಗಿ ಬೇರೂರಿದ್ದು 1336ರಲ್ಲಿ ಹುಟ್ಟಿದ ವಿಜಯನಗರ ಸಾಮ್ರಾಜ್ಯದಲ್ಲಿ ಫಲ ನೀಡಿತು.

**ಆಡಳಿತ ವ್ಯವಸ್ಥೆ :** ಪ್ರಾರಂಭದ ಹೊಯ್ಸಳ ಪ್ರಭುಗಳು ತಲಕಾಡಿನ ಗಂಗರ ಮತ್ತು ಕಲ್ಯಾಣ ಚಾಳುಕ್ಯರ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ಮುಂದೆ ರಾಜ್ಯ ವಿಸ್ತಾರವಾಗಿ, ಆಡಳಿತದ ಭಾರ ಹೆಚ್ಚಾಗುತ್ತಿದ್ದಂತೆ ಆಯಾ ಸಂದರ್ಭಕ್ಕೆ ಅನುಕೂಲವಾಗುವಂತೆ, ಮೂಲ ವ್ಯವಸ್ಥೆಗೆ ಭಂಗ ಬರದ ರೀತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿಕೊಂಡಿದ್ದೂ ಉಂಟು.

ರಾಜ್ಯಾಡಳಿತ ಮೂರು ಮಟ್ಟಗಳಲ್ಲಿ ನಡೆಯುತ್ತಿದ್ದಿತು. ಎಲ್ಲಕ್ಕೂ ಉನ್ನತ ಘಟ್ಟದಲ್ಲಿ ಇಡೀ ರಾಜ್ಯದ ಮೇಲೆ ಅಧಿಕಾರವನ್ನು ಚಲಾಯಿಸುತ್ತಿದ್ದವನು ಚಕ್ರವರ್ತಿ. ಈ ರಾಜ್ಯ ಅನೇಕ ಸಣ್ಣ ವಿಭಾಗಗಳಾಗಿ ವಿಂಗಡಿತವಾಗಿದ್ದು, ಅವುಗಳ ಮೇಲೆ ರಾಜನ ಸಂಬಂಧಿಗಳೋ ದಂಡನಾಯಕರೋ ಅಥವಾ ಸಾಮಂತ ರಾಜವಂಶದವರೋ ಅಧಿಕಾರ ನಡೆಸುತ್ತಿದ್ದರು. ಈ ಪ್ರಾಂತ್ಯಗಳಲ್ಲಿದ್ದ ಗ್ರಾಮಗಳಲ್ಲಿ ಒಂದೊಂದಕ್ಕೂ ಪ್ರತ್ಯೇಕವಾದ ಸ್ಥಳೀಯ ಆಡಳಿತ ಸಂಸ್ಥೆಗಳಿರುತ್ತಿದ್ದುವು.

ರಾಜ ಆಡಳಿತದ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದ. ರಾಜತ್ವವು ವಂಶಪಾರಂಪರ್ಯವಾಗಿತ್ತು. ಹಿರಿಯ ಮಗ ಉತ್ತರಾಧಿಕಾರಿಯಾಗುತ್ತಿದ್ದ. ಮಂತ್ರಿಗಳನ್ನೂ ಸೇನಾಧಿಕಾರಿಗಳನ್ನೂ ಆಡಳಿತ ಯಂತ್ರದ ಇತರ ಉಚ್ಚ ಅಧಿಕಾರಿಗಳನ್ನೂ ಆರಿಸುವುದು ರಾಜನ ಕರ್ತವ್ಯವಾಗಿತ್ತು. ರಾಜನು ಸರ್ವೋಚ್ಚ ಸೇನಾನಿಯೂ ನ್ಯಾಯಾಧಿಪತಿಯೂ ಆಗಿರುತ್ತಿದ್ದ. ಆದರೆ ಸ್ವೇಚ್ಛಾಧಿಕಾರಿ ಆಗಿರುತ್ತಿರಲಿಲ್ಲ. ಪರಂಪರಾನುಗತವಾದ ಪದ್ಧತಿಗಳು, ಧರ್ಮ, ಮಂತ್ರಿ ಪರಿಷತ್ತು ಮತ್ತು ಇತರ ಅಂಗವ್ಯವಸ್ಥೆಗಳು ರಾಜನ ಸ್ವೇಚ್ಛಾಧಿಕಾರಕ್ಕೆ ಇದ್ದ ತಡೆಗಳಾಗಿದ್ದವು. ಹೊಯ್ಸಳ ರಾಜರು ಧರ್ಮಶಾಸ್ತ್ರಕ್ಕನುಗುಣವಾಗಿ ಆಡಳಿತ ನಡೆಸುವುದು ತಮ್ಮ ಕರ್ತವ್ಯವೆಂದು ನಂಬಿದ್ದರು. ಅನೇಕಾನೇಕ ಶಾಸನಗಳಲ್ಲಿ ಮನು, ಯಾಜ್ಞವಲ್ಕ್ಯ, ಕೌಟಿಲ್ಯ ಮೊದಲಾದ ರಾಜನೀತಿಕರ್ತೃಗಳನ್ನು ಸ್ಮರಿಸಲಾಗಿದೆ. ರಾಜ್ಯವು ಸಪ್ತಾಂಗಗಳಿಂದ ಕೂಡಿದುದೆಂಬ ನಂಬಿಕೆಯಿತ್ತು. ದುಷ್ಟಶಿಕ್ಷಣ, ಶಿಷ್ಟರಕ್ಷಣ ರಾಜನ ಪ್ರಮುಖ ಕರ್ತವ್ಯವೆಂಬ ನಂಬಿಕೆ ಇತ್ತು. ರಾಜನು ಆಗಾಗ ರಾಜ್ಯದಲ್ಲಿ ಸಂಚರಿಸಿ ಪ್ರಜೆಗಳ ಕುಂದುಕೊರತೆಗಳನ್ನು ನಿವಾರಿಸುವುದಲ್ಲದೆ ಗ್ರಾಮ ಮುಂತಾದ ರಾಜ್ಯದ ಉಪಾಂಗಗಳಲ್ಲಿ ಉದ್ಭವಿಸಿದ್ದ ಸಮಸ್ಯೆಗಳನ್ನೂ ಪರಿಹರಿಸುತ್ತಿದ್ದ; ಕೆರೆಕಾಲುವೆಗಳನ್ನು ಕಟ್ಟಿಸಿ ಅಗ್ರಹಾರಗಳನ್ನು ಸ್ಥಾಪಿಸಿ ವ್ಯವಸಾಯ, ವ್ಯಾಪಾರ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದ್ದ. ಹೊಯ್ಸಳ ರಾಜರು ಯುದ್ಧಗಳಲ್ಲಿ ಸ್ವತಃ ಸೈನ್ಯವನ್ನು ನಡೆಸಿ ಪರಾಕ್ರಮದಿಂದ ಹೋರಾಡಿ ಸೈನಿಕರಿಗೆ ಸ್ಫೂರ್ತಿ ನೀಡುತ್ತಿದ್ದರು. ವೀರಯೋಧರನ್ನು ಸನ್ಮಾನಿಸುತ್ತಿದ್ದರು.

ಹೊಯ್ಸಳರ ಆಡಳಿತ ವ್ಯವಸ್ಥೆಯಲ್ಲಿ ರಾಣಿಯರು ಜವಾಬ್ದಾರಿಯುತವಾದ ಪಾತ್ರವನ್ನು ವಹಿಸುತ್ತಿದ್ದರು. ಪಟ್ಟಮಹಿಷಿ ಮತ್ತು ಇತರ ರಾಣಿಯರು ವಿಷ್ಣುವರ್ಧನನ ಆಳಿಕೆಯ ಪ್ರಾರಂಭದಿಂದ ಹೊಯ್ಸಳ ಸಂತತಿಯ ಕೊನೆಯವರೆಗೂ ಆಡಳಿತದಲ್ಲಿ ಪಾಲ್ಗೊಂಡಿದ್ದ ಸಾಕಷ್ಟು ನಿದರ್ಶನಗಳು ಶಾಸನಗಳಿಂದ ತಿಳಿದುಬರುತ್ತವೆ.

ಉತ್ತರಾಧಿಕಾರಿಯಾಗಲಿದ್ದ ಹಿರಿಯ ಮಗನಿಗೆ ಬಾಲ್ಯದಲ್ಲಿಯೇ ಅಥವಾ ಹುಟ್ಟಿದಂದಿನಿಂದಲೇ ಯುವರಾಜ್ಯಾಭಿಷೇಕ ಮಾಡುವುದು ಹೊಯ್ಸಳ ಸಂತತಿಯಲ್ಲಿ ಆಚರಣೆಯಲ್ಲಿತ್ತು. ಯುವರಾಜನಿಗೆ ಯೋಗ್ಯ ಶಿಕ್ಷಣದ ವ್ಯವಸ್ಥೆ ಮಾಡಲಾಗುತ್ತಿತ್ತು. ಪ್ರಾಪ್ತವಯಸ್ಕನಾದ ಕೂಡಲೇ ಅವನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸುತ್ತಿದ್ದರು. ಅವನು ಯುದ್ಧಗಳಲ್ಲಿ ಭಾಗವಹಿಸಬೇಕಾಗಿತ್ತು. ಈ ಪದ್ಧತಿಯಿಂದ ಮುಂದೆ ರಾಜನಾಗುವ ಹೊತ್ತಿಗೆ ಆಡಳಿತ ಮತ್ತು ಯುದ್ಧ ವಿದ್ಯೆಯಲ್ಲಿ ಹೆಚ್ಚು ಪರಿಶ್ರಮ ಪಡೆಯಲು ಅನುಕೂಲವಾಗಿದ್ದುದಲ್ಲದೆ ಸಿಂಹಾಸನಕ್ಕಾಗಿ ಅಂತರ್ಯುದ್ಧಗಳು ನಡೆಯದಂತೆ ಏರ್ಪಾಡುಗಳನ್ನು ಕಲ್ಪಿಸಿದಂತಾಗುತಿತ್ತು.

ರಾಜ್ಯದ ಮುಖ್ಯ ಸಮಸ್ಯೆಗಳನ್ನೂ ನ್ಯಾಯ ತೀರ್ಮಾನಕ್ಕೆ ಸಂಬಂಧಿಸಿದ ಕ್ಲಿಷ್ಟ ಸಮಸ್ಯೆಗಳನ್ನೂ ಮಂತ್ರಾಲೋಚನೆ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಗುತ್ತಿತ್ತು. ಹೊಯ್ಸಳರ ಮಂತ್ರಿಪರಿಷತ್ತಿಗೆ ಪಂಚ ಪ್ರಧಾನ ಸಮಿತಿ ಎಂಬ ಹೆಸರಿದ್ದಿತು. ಅಮಾತ್ಯ, ಮಹಾಸಂಧಿವಿಗ್ರಹಿ, ಶ್ರೀಕರಣಾಧಿಕಾರಿ, ಮುಖ್ಯ ದಂಡನಾಯಕ ಮತ್ತು ಹಿರಿಯರ ಭಾಂಡಾರಿ ಹುದ್ದೆಯಲ್ಲಿದ್ದ ಸಚಿವರು ಪಂಚ ಪ್ರಧಾನ ಸಮಿತಿಯ ಸದಸ್ಯರಾಗಿರುತ್ತಿದ್ದರು. ಕಾಲಕ್ರಮೇಣ ರಾಜ್ಯವು ಸಾಮ್ರಾಜ್ಯವಾಗಿ ಮಾರ್ಪಟ್ಟು ಹೆಚ್ಚು ಸಂಖ್ಯೆಯಲ್ಲಿ ಸಚಿವರನ್ನೂ ದಂಡನಾಯಕರನ್ನೂ ನೇಮಿಸಿಕೊಳ್ಳಲಾಗುತ್ತಿತ್ತು. ದಕ್ಷತೆ, ಪ್ರಾಮಾಣಿಕತೆ, ನಿಷ್ಠೆ ಮತ್ತು ಇತರ ಸದ್ಗುಣಗಳು ಸಚಿವ ಪದವಿಯ ಮುಖ್ಯ ಅರ್ಹತೆಗಳಾಗಿದ್ದವು. ಹೊಯ್ಸಳ ಅರಸರ ಕಾಲದಲ್ಲಿ ಸಚಿವ ಮತ್ತು ದಂಡನಾಯಕರಾಗಿದ್ದ ಅನೇಕ ವ್ಯಕ್ತಿಗಳು ವಿದ್ಯಾವಿನಯಸಂಪನ್ನರೂ ದೂರದೃಷ್ಟಿಯುಳ್ಳವರೂ ದಕ್ಷ ಯೋಧರೂ ಮತ್ತು ಆಡಳಿತಗಾರರೂ ಆಗಿದ್ದರು. ಇವರಲ್ಲದೆ, ಅನೇಕ ಆಡಳಿತಾಂಗಗಳಿಗಾಗಿ ಹೆಗ್ಗಡೆ, ಮಹಾಪಸಾಯತ, ಸಂಧಿವಿಗ್ರಹಿ, ಸೇನಬೋವ, ಸೈನ್ಯ ವಿಭಾಗಗಳಿಗೆ ದಂಡನಾಯಕ, ಸೇನಾಪತಿ, ಸಾಹಣೆ, ಮಾವಂತರೂ ರಾಜನ ಸ್ವಂತ ಕಾವಲಿಗೆ ಗರುಡರೂ ಇರುತ್ತಿದ್ದರು. ಕೇಂದ್ರ ಸರ್ಕಾರದ ಪ್ರತಿನಿಧಿಗಳಾಗಿ ವಿವಿಧ ಪ್ರಾಂತಗಳಿಗೆ ಮಂಡಲೇಶ್ವರರು ಮತ್ತು ಮಹಾಮಂಡಲೇಶ್ವರರನ್ನು ನೇಮಿಸಲಾಗುತ್ತಿತ್ತು.

ಅರಮನೆ ಅಧಿಕಾರಿಗಳು, ಸೈನ್ಯ, ಜನೋಪಕಾರೀ ಕೆಲಸಗಳು ಮುಂತಾದ ರಾಜ್ಯದ ವೆಚ್ಚಕ್ಕಾಗಿ ಭೂಕಂದಾಯ, ರಾಜನ ಸ್ವಂತ ಭೂ ಆಸ್ತಿಯಿಂದ ಬರುವ ಉತ್ಪನ್ನ, ನಿಧಿನಿಕ್ಷೇಪಗಳು, ಚಿನ್ನ ಕಬ್ಬಿಣದ ಗಣಿಗಳು, ಹಲವು ರೀತಿಯ ಸುಂಕಗಳು, ವೃತ್ತಿ ತೆರಿಗೆಗಳು, ಕಪ್ಪಕಾಣಿಕೆಗಳು, ಜುಲ್ಮಾನೆಗಳು ಇವು ಮುಖ್ಯ ಆದಾಯಮೂಲಗಳಾಗಿದ್ದವು.

ರಾಜ್ಯವನ್ನು ನಾಡುಗಳಾಗಿ ವಿಂಗಡಿಸಲಾಗಿತ್ತು. ಮೈಸೆನಾಡು, ಕಬ್ಬಾಹುನಾಡು, ತಳಿಗೆನಾಡು ಮುಂತಾದ ನಾಡುಗಳ ಹೆಸರುಗಳನ್ನು ಶಾಸನಗಳಲ್ಲಿ

ಉಲ್ಲೇಖಿಸಲಾಗಿದೆ. ಸಚಿವ ಮತ್ತು ದಂಡನಾಯಕರನ್ನೂ ರಾಜಕುಮಾರರನ್ನೂ ರಾಣಿಯರನ್ನೂ ನಾಡುಗಳ ಅಥವಾ ನಾಡುಕೂಟಗಳ ಮೇಲ್ವಿಚಾರಣೆಗೆ ನೇಮಿಸಲಾಗುತ್ತಿತ್ತು. ನಾಡ ಗೌಡ ಮತ್ತು ನಾಡ ಹೆಗ್ಗಡೆ ಎಂಬ ಅಧಿಕಾರಿಗಳು ಈ ನಾಡುಗಳ ಉಪವಿಭಾಗಗಳಲ್ಲಿರುತ್ತಿದ್ದರು.

ಪ್ರಧಾನಿ, ಹೆಗ್ಗಡೆ, ಸೇನಾಪತಿ, ದಂಡನಾಯಕ ಮುಂತಾದವರನ್ನು ಒಳಗೊಂಡಿದ್ದ ವ್ಯವಸ್ಥೆ ಮತ್ತು ಆಚರಣೆಯಲ್ಲಿ ರಾಜನ ಚಿಕ್ಕ ಪ್ರತಿಬಿಂಬ ದಂತೆ ಇರುತ್ತಿದ್ದರು. ರಾಜ ಸರ್ವೋಚ್ಚನಾಗಿದ್ದರೆ ಇವರು ಅವನ ಅಧೀನ ರೆಂಬುದಷ್ಟೇ ವ್ಯತ್ಯಾಸ. ಇವರಿಗೂ ಸ್ವಂತ ಭೂ ಆಸ್ತಿಗಳಲ್ಲದೆ, ಹಲವು ವಿಶಿಷ್ಟ ಕಂದಾಯ ಸುಂಕಗಳು ಆದಾಯ ಮೂಲಗಳಾಗಿದ್ದುವು. ದೊಡ್ಡ ದೊಡ್ಡ ಪಟ್ಟಣಗಳ ಆಡಳಿತಕ್ಕಾಗಿ ಪುರಸಭೆಗಳಿದ್ದವು. ದೋರಸಮುದ್ರ, ಅರಸೀಕೆರೆ, ಶ್ರವಣ ಬೆಳುಗೊಳ, ಬಳ್ಳಿಗಾಮೆ ಮೊದಲಾದ ಪಟ್ಟಣ ಸಭೆಗಳ ಹಾಗೂ ಆಡಳಿತ ಮುಖ್ಯರ ಹೆಸರುಗಳು ಶಾಸನಗಳಲ್ಲಿ ದೊರೆಯುತ್ತವೆ. ಉದಾಹರಣೆಗೆ ವಿಷ್ಣುವರ್ಧನನ ಕಾಲದಲ್ಲಿ ಹೊಯ್ಸಳ ಸೆಟ್ಟಿ ಎಂಬುವನು ದೋರಸಮುದ್ರದ ಆಡಳಿತ ಸಭೆಯ ಮುಖ್ಯನಾಗಿದ್ದ. ವೀರಬಲ್ಲಾಳನ ಕಾಲದಲ್ಲಿ ಮೇಚಿಸೆಟ್ಟಿ ಎಂಬುವನು ಬಳ್ಳಿಗಾಮೆಯ ಪಟ್ಟಣ ಸಭೆಯ ಅಧ್ಯಕ್ಷನಾಗಿದ್ದ. ಗ್ರಾಮಗಳಲ್ಲಿ ಗವುಂಡ (ಗೌಡ) ಅಥವಾ ಹೆಗ್ಗಡೆ ಮುಖ್ಯಾಧಿಕಾರಿಯಾಗಿರುತ್ತಿದ್ದ. ಅವನ ಸಹಾಯಕ್ಕೆ ಲೆಕ್ಕ ಪತ್ರಗಳ ನ್ನಿಡಲು ಕರಣಿಕನಿರುತ್ತಿದ್ದ. ತಳವಾರ ಹುದ್ದೆಯೂ ಆಗಿನ ಕಾಲದಲ್ಲಿದ್ದು ದಾಗಿ ಬಳ್ಳಿಗಾಮೆಯ ಶಾಸನವೊಂದರಿಂದ ತಿಳಿದುಬರುತ್ತದೆ. ಗ್ರಾಮಗಳ ಅಭ್ಯುದಯಕ್ಕಾಗಿ ಗ್ರಾಮಸಭೆ ಅಥವಾ ಪಂಚಾಯಿತಿ ಸಭೆ ಇದ್ದಿತು. ದೇವಾಲಯಗಳು, ಗೋಮಾಳ, ಸಾರ್ವಜನಿಕ ರಸ್ತೆಗಳು, ಕೆರೆಗಳು ಮುಂತಾದವುಗಳ ಮೇಲ್ವಿಚಾರಣೆಯನ್ನು ಗ್ರಾಮಸಭೆಗಳು ನೋಡಿಕೊಳ್ಳುತ್ತಿ ದ್ದವು. ಅಗ್ರಹಾರಗಳ ಆಡಳಿತಕ್ಕೆ ಮಹಾಜನ ಸಭೆ ಇರುತ್ತಿತ್ತು. ಅನೇಕ ವೃತ್ತಿಗಳ ಮೇಲಿನ ಸುಂಕಗಳು, ಗ್ರಾಮದಲ್ಲಿ ನಡೆಯುವ ವ್ಯಾಪಾರದ ಮೇಲೆ ಸುಂಕ, ಜಾನುವಾರುಗಳು ಮತ್ತು ಇತರ ಬಾಬುಗಳ ಮೇಲಿನ ಸುಂಕಗಳಿಂದ ಗ್ರಾಮ-ನಗರಾಡಳಿತಗಳು ನಡೆಯುತ್ತಿದ್ದುವು. (ಜಿ.ಆರ್.ಆರ್.)

**ಆರ್ಥಿಕ-ಸಾಮಾಜಿಕ ಸ್ಥಿತಿ:** ಈ ಕಾಲದಲ್ಲಿ ರಾಜ್ಯ ಸುಭಿಕ್ಷವಾಗಿದ್ದಿತು. ರಾಜ್ಯದ ಆದಾಯದ ಹೆಚ್ಚಿನ ಪಾಲು ಕೃಷಿ, ವ್ಯಾಪಾರ ಕ್ಷೇತ್ರಗಳಿಂದ ಸಲ್ಲುತ್ತಿತ್ತು. ಪ್ರಜೆಗಳು ತೆರಬೇಕಾಗಿದ್ದ ತೆರಿಗೆಗಳು ಹಲವಿದ್ದವು. ಭೂಕಂದಾಯ, ವ್ಯಾಪಾರ ಸಂಬಂಧದ ತೆರಿಗೆಗಳ ಜೊತೆಗೆ ವೃತ್ತಿ ತೆರಿಗೆ, ಜಾತಿ ತೆರಿಗೆ, ಸಾಮಾಜಿಕ ಸಮಾರಂಭಗಳ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆ ಮುಂತಾದವೂ ಇದ್ದವು. ಗದ್ಯಾಣ, ಹಣ, ಹಾಗ, ಅಡ್ಡ, ಬೇಳೆ ಮುಂತಾದ ವಿವಿಧ ಮೌಲ್ಯದ ನಾಣ್ಯಗಳು ಚಲಾವಣೆಯಲ್ಲಿ ಇದ್ದವು. ಖಂಡುಗ, ಸಲಗೆ, ಕೊಳಗ, ಕಂಬ, ಬಳ್ಳ, ಮಾನ ಮುಂತಾದವು ಅಳತೆಯ ಮಾನಗಳು. ನಿಯತವಾಗಿ ಭೂಮಾಪನೆ ನಡೆಯುತ್ತಿತ್ತು. ಭೂ ವಿವಾದ ಉಂಟಾದಾಗ ಹೊಸದಾಗಿ ಭೂಮಾಪನೆ ನಡೆಯುತ್ತಿತ್ತು.

ರಾಜ್ಯದಲ್ಲಿ ಧಾರ್ಮಿಕ ಸಹಿಷ್ಣುತೆ ನೆಲಸಿತ್ತು. ಸರ್ವಧರ್ಮಗಳಿಗೂ ಸಮಾನ ಪೋಷಣೆ ಪ್ರೋತ್ಸಾಹ ದೊರೆಯಿತು. ವಿಭಿನ್ನ ಧರ್ಮಗಳಿಗೆ ಸೇರಿದವರು ವಿವಾಹವಾಗಿ ಸಹಬಾಳ್ವೆ ನಡೆಸಿದ ದೃಷ್ಟಾಂತ ಈ ಕಾಲದಲ್ಲಿ ಕಾಣಸಿಗುತ್ತದೆ. ಚಂದ್ರಮೌಳಿ ಎಂಬ ಅಧಿಕಾರಿ ಶೈವ, ಆದರೆ ಇವನ ಪತ್ನಿ ಅಚ್ಚಿಯಕ್ಕ ಜೈನಧರ್ಮಾವಲಂಬಿ. ಬ್ರಾಹ್ಮಣರಿಗೆ, ಜೈನಗುರುಗಳಿಗೆ, ಶ್ರೀವೈಷ್ಣವ ಆಚಾರ್ಯರಿಗೆ ಪೂಜ್ಯಸ್ಥಾನವಿತ್ತು. ತಮಿಳು ವಿದ್ವಾಂಸರು ಹೊಯ್ಸಳನಾಡಿಗೆ ಬಂದು ವೈಷ್ಣವಧರ್ಮಪ್ರಸಾರದಲ್ಲಿ ನಿರತರಾದರು. ಆಗಾಗ ಧಾರ್ಮಿಕ ವಿಷಯಗಳಲ್ಲಿ ಚರ್ಚಾಸಭೆಗಳು ನಡೆಯುತ್ತಿದ್ದವು. ಅರಸರ ಬಿರುದುಗಳಲ್ಲಿ ಚತುಸ್ಸಮಯಸಮುದ್ಧರಣ ಎಂಬುದೂ ಒಂದು.

ದಾನಧರ್ಮ ಕಾರ್ಯಗಳು ನಡೆಯುತ್ತಿದ್ದವು. ದೇವಾಲಯ ಬಸದಿ ಗಳನ್ನು ಮತ್ತು ಕೆರೆಕಟ್ಟೆಗಳನ್ನು ಕಟ್ಟಿಸುವುದು ಹಾಗೂ ಜೀರ್ಣೋದ್ಧಾರ ಮಾಡಿಸುವುದು, ದೇವತಾಪೂಜೆ ನೈವೇದ್ಯಾದಿ ಸೇವೆಗಳಿಗೆ ಭೂದಾನ, ಧನದಾನ ನೀಡುವುದು ಪುಣ್ಯಕಾರ್ಯಗಳೆನಿಸಿದ್ದವು. ಕಾಡನ್ನು ಕಡಿದು ಊರು, ಕೆರೆಗಳನ್ನು ನಿರ್ಮಿಸಿದ ನಿದರ್ಶನಗಳುಂಟು, ವೇದಾಧ್ಯಯನ, ಲಲಿತಕಲೆಗಳಿಗೆ ಪ್ರೋತ್ಸಾಹ ದೊರೆಯಿತು. ರಾಜನೂ ಅಧಿಕಾರಿಗಳೂ ವ್ಯಾಪಾರಿಗಳೂ ಖಾಸಗಿ ವ್ಯಕ್ತಿಗಳೂ ಧರ್ಮಕಾರ್ಯನಿರತರಾಗಿದ್ದನ್ನು ಈ ಕಾಲದಲ್ಲಿ ಕಾಣುತ್ತೇವೆ.

ಅಧಿಕಾರಿಗಳೂ ಪ್ರಜೆಗಳೂ ಅರಸನಿಗೆ ನಿಷ್ಠರಾಗಿದ್ದರು. ಅರಸನಿಗಾಗಿ ರಾಜ್ಯಕ್ಕಾಗಿ ತಮ್ಮ ಪ್ರಾಣವನ್ನು ಬಲಿಗೊಡಲು ಸಾಮಾನ್ಯ ಪ್ರಜೆಯೂ ಹಿಂಜರಿಯುತ್ತಿರಲಿಲ್ಲ. ಆತ್ಮಬಲಿಯ ಹಲವು ಪ್ರಕಾರಗಳು ಈ ಕಾಲದಲ್ಲಿ ಪ್ರಚಲಿತವಿದ್ದವು. ಗರುಡ ಪದ್ಧತಿ ವಿಶೇಷ ಗಮನಾರ್ಹ. ಯುದ್ಧದಲ್ಲಿ ಮೃತರಾದವರ, ಗರುಡರಾಗಿದ್ದವರ ಕುಟುಂಬಗಳಿಗೆ ದಾನ ನೀಡಲಾಗು ತ್ತಿತ್ತು. ಸತಿಪದ್ಧತಿ ಜಾರಿಯಲ್ಲಿತ್ತು. ರಾಜ್ಯದ ಅನೇಕ ಭಾಗಗಳಲ್ಲಿ ಗೋಗ್ರಹಣ ಪದೇ ಪದೇ ನಡೆಯುತ್ತಿದ್ದವು. ತುರುಗಳ್ಳರು ಅಕ್ಕಪಕ್ಕದ ಊರಿನವರಾಗಿರಬಹುದು. ಇಲ್ಲವೆ ಇತರರಾಗಿರಬಹುದು, ಊರ ರಕ್ಷಣೆಗೆ ಗೋರಕ್ಷಣೆಗೆ ನಿಂತು ಹೋರಾಡಿ ಮರಣಹೊಂದಿದ ವೀರನ ಕುಟುಂಬಗಳಿಗೆ ಭೂಮಿಯನ್ನು ಹಣವನ್ನು ದಾನ ನೀಡಿದ್ದನ್ನು ಕಾಣುತ್ತೇವೆ. ಆಗಾಗ ಗಡಿವಿವಾದಗಳ ಸಂಬಂಧದಲ್ಲಿ ಹೋರಾಟಗಳು ನಡೆಯುತ್ತಿದ್ದವು.

ವ್ಯಾಪಾರ ಚಟುವಟಿಕೆ ಚುರುಕಾಗಿತ್ತು. ವರ್ತಕರು ಅನೇಕ ದಾನಧರ್ಮ ಕಾರ್ಯಗಳನ್ನು ನಡೆಸಿಕೊಡುತ್ತಿದ್ದರು. ಸಂತೆಗಳು ನಡೆಯುತ್ತಿದ್ದವು. ಬಟ್ಟೆ, ಶ್ರೀಗಂಧ, ಅಡಕೆ, ಮಾವು, ಮಸಾಲೆ, ಏಲಕ್ಕಿ ಮತ್ತು ವನ್ಯಪದಾರ್ಥ ಗಳನ್ನು ರಫ್ತು ಮಾಡಲಾಗುತ್ತಿತ್ತು. ಕುದುರೆ, ಆನೆ, ಮುತ್ತು, ಹತ್ತಿ, ಉಪ್ಪು, ಬಂಗಾರ ಮತ್ತು ಬೆಳ್ಳಿ ಮುಂತಾದವುಗಳನ್ನು ಆಮದು ಮಾಡಿಕೊಳ್ಳ ಲಾಗುತ್ತಿತ್ತು. ಸಾಮಗ್ರಿ ಸಾಗಣೆಗೆ ಪ್ರಾಣಿಗಳೇ ಮುಖ್ಯ ಸಾಧನ. ಅಯ್ಯಾವೊಳೆ ಐನೂರ್ವರು ಈ ಕಾಲದ ಒಂದು ಪ್ರಮುಖ ವಾಣಿಜ್ಯ ಸಂಘವಾಗಿದ್ದಿತು.

ಸ್ತ್ರೀಯರಿಗೆ ಲಲಿತಕಲೆ ಮುಂತಾದ ಕೆಲವು ರಂಗಗಳಲ್ಲಿ ವಿಶೇಷ ಪ್ರೋತ್ಸಾಹಗಳಿದ್ದವು. ವಿಷ್ಣುವರ್ಧನನ ಪತ್ನಿ ಶಾಂತಲೆ ಸಂಗೀತನಾಟ್ಯ ಸರಸ್ವತಿ ಎಂದು ಖ್ಯಾತಳಾಗಿದ್ದಳು. ಕೆಲವು ಸ್ತ್ರೀ ಅಧಿಕಾರಿಗಳೂ ಇದ್ದರು. ದಾನ ನೀಡುವಲ್ಲಿ ಯಜಮಾನನಿಗೆ ಪತ್ನೀಪುತ್ರರ ಅನುಮತಿ ಅಗತ್ಯ ವಿತ್ತೆಂದು ತೋರುತ್ತದೆ. ಸ್ತ್ರೀಯರ ವೇಷ ಭೂಷಣಗಳು ಸರಳವಾಗಿದ್ದವು. ಅಂಗರಾಗಕ್ಕೆ ಸ್ತ್ರೀಯರು ವಿಶೇಷ ಮಹತ್ತ್ವ ಕೊಡುತ್ತಿದ್ದರು. ದೇವದಾಸಿ ಪದ್ಧತಿ ಅಸ್ತಿತ್ವದಲ್ಲಿತ್ತು.

ಸೋಮನಾಥಪುರ, ಬೆಳ್ಳೂರು, ಸರ್ವಜ್ಞಪುರ, ಕೆಲ್ಲಂಗೆರೆ ಮುಂತಾದವು ಈ ಕಾಲದ ಕೆಲವು ವಿದ್ಯಾಕೇಂದ್ರಗಳು. ದೇವಾಲಯಗಳು ಚಿಕ್ಕ ಸಾಮಾಜಿಕ ಕೇಂದ್ರಗಳಾಗಿ ಜನರಿಗೆ ಮಾರ್ಗದರ್ಶಕವಾಗಿದ್ದವು. ಅಗ್ರಹಾರಗಳು ವೇದಪಾರಂಗತ ಬ್ರಾಹ್ಮಣರ ವಾಸಸ್ಥಾನಗಳಾಗಿದ್ದವು. ಚೋಳರ ಹಾಗೆ ಹೊಯ್ಸಳರು ಕೆಲವು ಅಗ್ರಹಾರಗಳನ್ನು ಚತುರ್ವೇದಿಮಂಗಲಗಳೆಂದು ಕರೆದರು. ಉದಾಹರಣೆಗೆ ಮದ್ದೂರು ನಾರಸಿಂಹಚತುರ್ವೇದಿಮಂಗಲವಾಗಿ ದ್ದಿತು; ನಾಗಮಂಗಲ ವೀರ ಬಲ್ಲಾಳ ಭಟ್ಟರತ್ನಾಕರನೆನಿಸಿತ್ತು.

(ಎಚ್.ಎಂ.ಎನ್.ಆರ್.)

**ವಾಸ್ತು ಶಿಲ್ಪ:** ಮಧ್ಯಕಾಲೀನ ಭಾರತೀಯ ವಾಸ್ತು-ಶಿಲ್ಪ ಕ್ಷೇತ್ರದಲ್ಲಿ 11ರಿಂದ 13ನೆಯ ಶತಮಾನದ ಕೊನೆಯವರೆಗೆ ಅಸ್ತಿತ್ವದಲ್ಲಿದ್ದ ಹೊಯ್ಸಳ ಶೈಲಿ ನೋಡುಗರ ಮನಸ್ಸನ್ನು ಸೆರೆಹಿಡಿದಿಡುವ, ಮರೆಯಲಾಗದಂಥ ದೃಶ್ಯಗಳನ್ನು ನಿರ್ಮಿಸುವ ತನ್ನ ಗುಣಗಳಿಂದ ಒಂದು ವಿಶಿಷ್ಟ ಸ್ಥಾನವನ್ನು

ಗಳಿಸಿಕೊಂಡಿದೆ. ಆ ಕಾಲಕ್ಕೂ ಮೊದಲಿನ ಭುವನೇಶ್ವರದ ರಾಜರಾಣಿ ಮಂದಿರದ ಅದ್ಭುತ ರಮ್ಯತೆ, ಖಜುರಾಹೊದಲ್ಲಿರುವ ಕಂದಾರಿಯ ಮಹಾದೇವ ಮಂದಿರದಲ್ಲಿ ಕಾಣುವ ಅಂತಃಸ್ಸತ್ವ, ಎಲ್ಲೋರದ ಕೈಲಾಸ ದೇವಾಲಯದ ಭವ್ಯತೆ-ಇವೆಲ್ಲ ಗುಣಗಳನ್ನು ಸಮನ್ವಯಗೊಳಿಸಿಕೊಂಡಿರುವುದರೊಂದಿಗೆ ವಾಸ್ತು ಮತ್ತು ಮೂರ್ತಿಶಿಲ್ಪ ವಿಧಾನಗಳ ಸುಗಮ ಸಮ್ಮಿಳನ ಇಲ್ಲಿದೆ.

ಮೂರ್ತಿಶಿಲ್ಪ ಕಲಾಕೃತಿಗಳು, ಹಳೇಬೀಡು

ಹೊಯ್ಸಳ ಕಟ್ಟಡಗಳನ್ನು ಔತ್ತರೇಯ-ದಾಕ್ಷಿಣಾತ್ಯ ಶೈಲಿಗಳ ಮಧ್ಯವರ್ತಿ ಎಂದು ಹೇಳಲಾಗಿದ್ದರೂ ಔತ್ತರೇಯ ಶೈಲಿಯ ಲಕ್ಷಣಗಳು ವಿರಳವಾಗಿವೆ. ಅದರ ವಾಸ್ತು ಅಲಂಕರಣ ವಿಧಾನದಲ್ಲೂ ಶಿಖರದ ಕೆಲವಂಶಗಳಲ್ಲೂ ಕೆಲವು ಔತ್ತರೇಯ ಲಕ್ಷಣಗಳು ಕಂಡುಬರುತ್ತವೆ. ಆದರೆ ಹೊಯ್ಸಳ ರಾಜ್ಯದ ಪರಿಸರದಲ್ಲಿ ರೂಢಿಯಲ್ಲಿದ್ದ ದಾಕ್ಷಿಣಾತ್ಯ ಶೈಲಿಯ ಪ್ರಭಾವ ಹೆಚ್ಚು ಸ್ಪಷ್ಟವಾಗಿದೆ. ಹೊಯ್ಸಳ ರೂವಾರಿಗಳು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಔತ್ತರೇಯ-ದಾಕ್ಷಿಣಾತ್ಯ ವಾಸ್ತುಶೈಲಿಗಳ ಪ್ರಮುಖ ಲಕ್ಷಣಗಳನ್ನು ತಮ್ಮ ಕಾಲದ ನಿರ್ಮಾಣಗಳಲ್ಲಿ ಅಳವಡಿಸಿಕೊಂಡರೂ ಅವಕ್ಕೆ ತಮ್ಮ ಪ್ರತಿಭಾಶಕ್ತಿಯ ದ್ಯೋತಕವಾಗಿ ಹೊಸ ರೂಪವನ್ನು ಕೊಟ್ಟು ಶೈಲಿಯ ಸೊಬಗನ್ನು ದ್ವಿಗುಣಗೊಳಿಸಿದ್ದಾರೆ. ಹೊಯ್ಸಳ ಶೈಲಿ ಇತರ ಶೈಲಿಗಳ ಪ್ರಧಾನ ಲಕ್ಷಣಗಳ ಹೊರ ರೂಪದ ಒಗ್ಗೂಡಿಕೆಗೆ ಸೀಮಿತವಾಗಿ ನಿಲ್ಲದೆ ಅವುಗಳ ಸಮಗ್ರ ಸಂಯೋಜನೆಯನ್ನು ಸಾಧಿಸುವುದರೊಂದಿಗೆ ಕೆಲವು ಹೊಸ ವಿಶಿಷ್ಟ ಅಂಶಗಳನ್ನೂ ಸೃಷ್ಟಿಸಿತು.

ಹೊಯ್ಸಳ ಶೈಲಿಯ ಉಗಮಕ್ಕೆ ದಕ್ಷಿಣ ಭಾರತದ ಚೋಳ-ಪಾಂಡ್ಯ ವಾಸ್ತುಶೈಲಿಯೂ ದಖನ್ನಿನ ಕಲ್ಯಾಣ ಚಾಳುಕ್ಯ ಶೈಲಿಯೂ ಮೈಸೂರು ಪ್ರದೇಶದಲ್ಲೇ ಬಳಕೆಯಲ್ಲಿದ್ದ ಗಂಗ ನೊಳಂಬ ಕಟ್ಟಡಗಳೂ ಸ್ಫೂರ್ತಿಯನ್ನೊದಗಿಸಿದವು. ಹೊಯ್ಸಳ ವಾಸ್ತುಶಿಲ್ಪಿಗಳು ಇವುಗಳಲ್ಲಿ ಯಾವೊಂದು ಪದ್ಧತಿಯ ಅನುಕರಣೆ ಮಾಡುವುದರಿಂದಲೂ ತೃಪ್ತರಾಗಲಿಲ್ಲ; ಅವೆಲ್ಲವುಗಳ ಅಂಶಗಳನ್ನು ಅಳವಡಿಸಿಕೊಂಡರೂ ಅಪೂರ್ವ ಪ್ರಯೋಗಪರರಾಗಿ ಹೊಸ ಪದ್ಧತಿಯೊಂದರ ಸೃಷ್ಟಿಯತ್ತ ದಿಟ್ಟ ಹೆಜ್ಜೆಯನ್ನಿಟ್ಟರು. ಅವರ ವಿಶಿಷ್ಟ ಗುಣಗಳೆಂದರೆ ಸರಳತೆಯನ್ನು ತಿರಸ್ಕರಿಸಿದುದು. ಅನುಕರಣೆಯ ಮಾರ್ಗವನ್ನುತ್ಯಜಿಸಿದುದು; ಮತ್ತು ಅಲಂಕರಣಶೀಲ ಸೂಕ್ಷ್ಮ ಕೆತ್ತನೆಗಳನ್ನು ಸೃಷ್ಟಿಸುವ ಮೂಲಕ ಇತರ ಶೈಲಿಗಳಲ್ಲಿ ರೂಢಿಯಲ್ಲಿದ್ದ ಸುಂದರ ವಾಸ್ತುರೂಪಗಳನ್ನು ಭವ್ಯಕಲಾ ಭಂಡಾರಗಳಾಗಿ ಪರಿವರ್ತಿಸಿದುದು.

ಇಲ್ಲಿ ಪ್ರಸ್ತಾಪಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಅನೇಕ ಕಲಾ ಇತಿಹಾಸಕಾರರು ಉತ್ತರಕಾಲೀನ ಚಾಳುಕ್ಯ ಮತ್ತು ಹೊಯ್ಸಳ ಶೈಲಿಗಳನ್ನು ಅವಿಭಾಜ್ಯವೆಂದು ಪರಿಗಣಿಸಿರುವುದು. ಫರ್ಗ್ಯೂಸನ್, ವಿನ್ಸೆಂಟ್ ಸ್ಮಿತ್ ಅಂಥವರಲ್ಲಿ ಪ್ರಮುಖರು. ಪರ್ಸಿ ಬ್ರೌನ್ ಸಹ ಈ ದೃಷ್ಟಿಯಿಂದ ಹೊರತಾದವರಲ್ಲ. ಚಾಳುಕ್ಯ ಶೈಲಿ ಅವರ ಸಾಮಂತರಾಗಿದ್ದ ಹೊಯ್ಸಳ ದೊರೆಗಳ ಆಶ್ರಯದಲ್ಲಿ ಪರಿಪಕ್ವತೆಯನ್ನು ಸಾಧಿಸಿತೆಂದು ಅವರು ಹೇಳಿದ್ದಾರೆ. ಮುಂದುವರಿದು, ಈ ಶೈಲಿ ಈಗಿನ ಬಾಗಲಕೋಟೆ ಜಿಲ್ಲೆಯ ಬಾದಾಮಿ, ಐಹೊಳೆ, ಪಟ್ಟದ ಕಲ್ಲುಗಳಲ್ಲಿ ಉಗಮವಾಯಿತೆಂದೂ ಸುದೀರ್ಘ ವಿಕಾಸದ ಕೊನೆಯ ನಿದರ್ಶನಗಳನ್ನು ಹೊಯ್ಸಳ ರಾಜ್ಯದಲ್ಲಿ 12-13ನೆಯ ಶತಮಾನಗಳಲ್ಲಿ ಕಾಣಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯ ಒಂದು ಸೀಮಿತ ಘಟ್ಟದವರೆಗೂ ನಿಜವಾದರೂ ಹೊಯ್ಸಳ ಶೈಲಿಯಲ್ಲಿ ಕೆಲವಾರು ಮೂಲಭೂತ ಹೊಸ ಅಂಶಗಳು ಬಳಕೆಗೆ ಬಂದು ಅದನ್ನು ಒಂದು ಪ್ರತ್ಯೇಕ ಶೈಲಿಯೆಂದು ಪರಿಗಣಿಸಲು ಸಾಧಕಗಳಾಗಿವೆ.

ಮೊದಲಿಗೆ ಚಾಳುಕ್ಯ ಸಾಮಂತರಾಗಿದ್ದ ಹೊಯ್ಸಳರು 12ನೆಯ ಶತಮಾನದ ಪೂರ್ವಾರ್ಧದಲ್ಲಿ ಸ್ವತಂತ್ರರಾದ ಅನಂತರ ಚಾಳುಕ್ಯ ಸಾಮ್ರಾಜ್ಯದ ಸಾಂಸ್ಕೃತಿಕ ಸಂಸ್ಥೆಗಳಿಗೆ ಉತ್ತರಾಧಿಕಾರಿಗಳಾಗಿ ಆ ಸಂಸ್ಕೃತಿ ಪರಂಪರೆಯನ್ನು ಸ್ವೀಕರಿಸಿದರು. ಅದರ ಫಲವಾಗಿ ಚಾಳುಕ್ಯ-ಹೊಯ್ಸಳ ವಾಸ್ತುಶೈಲಿಗಳಲ್ಲಿ ಹಲವಾರು ಸಾಮ್ಯಗಳು ಎದ್ದುಕಾಣುತ್ತವೆ. ಎರಡು ಶೈಲಿಯ ದೇವಾಲಯಗಳ ಬಾಗಿಲುವಾಡಗಳನ್ನು ಸುಂದರ ಕೆತ್ತನೆಗಳಿಂದ ಅಲಂಕರಿಸಲಾಗಿರುತ್ತದೆ. ಹೂಬಳ್ಳಿಗಳು, ಲತಾಗುಲ್ಮಗಳು, ಅವುಗಳ ಮಧ್ಯೆ ಸೂಕ್ಷ್ಮ ಪ್ರಾಣಿಪಕ್ಷಿಗಳು, ವಿರಳವಾಗಿ ದೇವಗಣ-ಮಾನವಗಣದ ಕೆತ್ತನೆಗಳು-ಇವುಗಳಿಂದಲೂ ಜ್ಯಾಮಿತೀಯ ವಿನ್ಯಾಸಗಳಿಂದಲೂ ಈ ಅಲಂಕರಣಗಳನ್ನು ಮಾಡಲಾಗಿರುತ್ತದೆ. ಎರಡು ಶೈಲಿಯ ದೇವಾಲಯಗಳಲ್ಲೂ ಕಡೆತ ಯಂತ್ರದ (ಲೇತ್) ಮೇಲೆ ತಯಾರಿಸಿದ ವೈವಿಧ್ಯಪೂರ್ಣ ಕಂಬಗಳನ್ನು ಬಳಸಲಾಗಿದೆ. ದೇವಾಲಯದ ಒಳಭಾಗಕ್ಕೆ ಸಾಕಷ್ಟು ಗಾಳಿ ಬೆಳಕುಗಳನ್ನು ಪೂರೈಸುವ ಸಲುವಾಗಿ ಮುಖಮಂಟಪದ ಗೋಡೆಗಳ ಮೇಲ್ಭಾಗದಲ್ಲಿ ಉಪಯೋಗಿಸಿರುವ ಕಲ್ಲಿನ ಜಾಲಂಧ್ರಗಳನ್ನು ಇವೆರಡು ಶೈಲಿಗಳ ಕಟ್ಟಡಗಳಲ್ಲೂ ಕಾಣಬಹುದು. ಆದರೆ ಈ ಸಾಮ್ಯಗಳೊಂದಿಗೆ ಹಲವಾರು ವೈಶಿಷ್ಟ್ಯಪೂರ್ಣ ಆವಿಷ್ಕರಣಗಳನ್ನು ಹೊಯ್ಸಳ ಕಟ್ಟಡಗಳಲ್ಲಿ ಕಾಣಬಹುದಾಗಿದೆ ಮತ್ತು ಆ ಶೈಲಿಗೆ ಅವು ಪ್ರತ್ಯೇಕ ಅಸ್ತಿತ್ವವನ್ನು ನೀಡುತ್ತವೆ. ಈ ದೇವಾಲಯಗಳ ವಿವಿಧ ವಾಸ್ತು ಲಕ್ಷಣಗಳ ವಿಶ್ಲೇಷಣಾತ್ಮಕ ಅಧ್ಯಯನದಿಂದ ಈ ಪ್ರಾದೇಶಿಕ ಶೈಲಿಯ ನಿರೂಪಣೆಯಲ್ಲಿ ಕಂಡುಬರುವ ಅಮಿತ ಉತ್ಸಾಹ ಮತ್ತು ನೆರೆಹೊರೆಯ ವಾಸ್ತುಶೈಲಿಯ ಅಂಶಗಳ ಸಮ್ಮಿಲನ, ಅದರ ಫಲವಾಗಿ ಹೊಯ್ಸಳ ಶೈಲಿಯಲ್ಲಿ ಕಂಡುಬರುವ ಆವಿಷ್ಕಾರಗಳನ್ನು ಗುರುತಿಸಬಹುದಾಗಿದೆ. ಈ ನವಶೈಲಿಯಲ್ಲಿ ಪರಿಸರದ ಪ್ರಭಾವಗಳು ಪ್ರತಿಬಿಂಬಿಸುತ್ತಿದ್ದರೂ ಈ ಶೈಲಿ ಹೊಯ್ಸಳ ಶಿಲ್ಪಿಗಳ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಹೊಸ ಶೈಲಿಯ ನಿರ್ಮಾಣದತ್ತ ಕಾಣುವ ಮೊದಲ ದಿಟ್ಟ ಹೆಜ್ಜೆ ಕಟ್ಟಡ ನಿರ್ಮಾಣಕ್ಕೆ ಅವರು ಬಳಸಿದ ಕಲ್ಲು. ದಕ್ಷಿಣ ಭಾರತದಲ್ಲೂ ಮೈಸೂರು ಪ್ರಾಂತದಲ್ಲೂ ಆವರೆಗೂ ಕಣಶಿಲೆಯನ್ನು (ಗ್ರ್ಯಾನೈಟ್) ಕಟ್ಟಗಳಿಗೆ ಬಳಸಲಾಗುತ್ತಿತ್ತು. ಕಣಶಿಲೆ ಬಹಳ ಪೆಡಸಾಗಿರುವುದರಿಂದ ಅದರ ದೊಡ್ಡ ಪ್ರಮಾಣದ ಶಿಲೆಗಳನ್ನು ಬಳಸಿ ಬೃಹತ್ಪ್ರಮಾಣದ ಕಟ್ಟಡಗಳನ್ನು ಕಟ್ಟಬಹುದಾಗಿತ್ತು. ಈ ರೀತಿಯ ದೇವಾಲಯಗಳು ಚೋಳ-ಪಾಂಡ್ಯ ಶೈಲಿಗಳಲ್ಲಿ ಕಾಣಬರುತ್ತವೆ. ಪಲ್ಲವ-ಚೋಳ-ಪಾಂಡ್ಯ ದೇವಾಲಯಗಳ ಶಿಲ್ಪಗಳು ಒಟ್ಟಾರೆ ಮೋಹಕವಾಗಿದ್ದರೂ ಕಣಶಿಲೆಯ ಪೆಡಸುತನದಿಂದ ಸೂಕ್ಷ್ಮವಾದ ಕುಸುರಿ ಕೆತ್ತನೆಗಳನ್ನು ಕಾಣಲಾಗುವುದಿಲ್ಲ. ಕೆಲವು ಪ್ರಾದೇಶಿಕ ವ್ಯತ್ಯಾಸಗಳನ್ನು ಬಿಟ್ಟರೆ ಗಂಗ-ನೊಳಂಬ ಕಟ್ಟಡಗಳು ಕಣಶಿಲೆಯಲ್ಲಿ ನಿರ್ಮಿತವಾದವು. ಆದುದರಿಂದ ಸೂಕ್ಷ್ಮ ಕೆತ್ತನೆಗಳಿಗೆ ಅವಕಾಶವಿರಲಿಲ್ಲ. ಮೊದಲ ಚಾಳುಕ್ಯ ಶೈಲಿಯ

ಮಂದಿರಗಳು ಚಾಳುಕ್ಯರ ಪ್ರದೇಶದಲ್ಲಿ ವಿಪುಲವಾಗಿ ದೊರಕುವ, ಕಣಶಿಲೆಗಿಂತ ಮೃದುವಾದ ಕೆಂಪು ಮರಳ್ಗಲ್ಲಿನಲ್ಲೂ ಅನಂತರವು ಒಂದು ರೀತಿಯ ಕಪ್ಪು ಶಿಲೆಯಲ್ಲೂ ನಿರ್ಮಿತವಾಗಿವೆ. ಕಲ್ಲಿನ ಮೃದುತ್ವದ ಕಾರಣದಿಂದ ದ್ರಾವಿಡ ರೀತಿಯ ಬೃಹತ್ಪ್ರಮಾಣದ ಕಟ್ಟಡಗಳನ್ನು ಇವುಗಳಲ್ಲಿ ಕಟ್ಟುವುದು ಸಾಧ್ಯವಿರಲಿಲ್ಲವಾದರೂ ದಕ್ಷಿಣದ ದೇವಾಲಯಗಳಿಗಿಂತಲೂ ಸೂಕ್ಷ್ಮವೂ ಮನೋಜ್ಞವೂ ಆದ ಕೆತ್ತನೆಯ ಕೆಲಸ ಸಾಧ್ಯವಾಯಿತು. ಹೊಯ್ಸಳ ಶಿಲ್ಪಿಗಳು ತಮ್ಮ ಪ್ರದೇಶದಲ್ಲಿ ದೊರಕುತ್ತಿದ್ದ ನಸುಹಸಿರು ಅಥವಾ ಕಪ್ಪು-ನೀಲಿ ಛಾಯೆಯುಳ್ಳ ಬಳಪದ ಕಲ್ಲನ್ನು ತಮ್ಮ ಕಟ್ಟಡಗಳಿಗೆ ಉಪಯೋಗಿಸಲಾರಂಭಿಸಿದರು. ಈ ಕಲ್ಲಿನ ವೈಶಿಷ್ಟ್ಯವೆಂದರೆ ಹೊಸದಾಗಿ ಗಣಿಯಿಂದ ಕತ್ತರಿಸಿ ತೆಗೆದಾಗ ಅದು ಬಹಳ ಮೃದುವಾಗಿದ್ದು ಬಿಸಿಲು ಗಾಳಿಗಳ ಪ್ರಭಾವದಿಂದ ಕ್ರಮೇಣ ತನ್ನೊಳಗಿನ ತೇವವನ್ನು ಕಳೆದುಕೊಂಡು ಗಟ್ಟಿಯಾಗುತ್ತದೆ ಮತ್ತು ಬಹಳ ಸೂಕ್ಷ್ಮಕಣಗಳನ್ನೊಳಗೊಂಡಿದ್ದು ಹೆಚ್ಚು ಸಾಂದ್ರವಾಗಿರುತ್ತದೆ. ಆದುದರಿಂದ ಆ ಕಲ್ಲಿನಲ್ಲಿ ಬಹಳ ನಯವಾದ ಹಾಗೂ ಸೂಕ್ಷ್ಮವಾದ ಕೆತ್ತನೆಗಳನ್ನು ಮಾಡುವುದು ಸಾಧ್ಯ. ಈ ಮೃದು ಮಾಧ್ಯಮದ ಪೂರ್ಣ ಉಪಯೋಗ ಪಡೆದುಕೊಂಡ ವಾಸ್ತುಶಿಲ್ಪಿಗಳು ಕೇವಲ ಕಲ್ಲಿನ ಕೆಲಸಗಾರರಂತೆ ತಮ್ಮ ಕಟ್ಟಡಗಳನ್ನು ನಿರ್ಮಿಸಲಿಲ್ಲ. ಶ್ರೀಗಂಧದ ಮತ್ತು ದಂತದ ಕೆತ್ತನೆಗಾರರ ನಯಗಾರಿಕೆಯನ್ನೂ ಚಿನ್ನದ ಕೆಲಸಗಾರರ ಸೂಕ್ಷ್ಮ ಕುಸುರಿ ಕೆಲಸದ ಕೌಶಲವನ್ನೂ ಚಿತ್ರಗಾರರ ಭಾವನಿರೂಪಣಾ ಚಾತುರ್ಯವನ್ನೂ ತಮ್ಮ ಕಟ್ಟಡಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಹೊಯ್ಸಳ ಶೈಲಿಯ ಕಟ್ಟಡ ನಿರ್ಮಾಣದಲ್ಲಿ ವಾಸ್ತುಶಿಲ್ಪಿಯ ಕೈಚಳಕಕ್ಕಿಂತಲೂ ಮೂರ್ತಿಶಿಲ್ಪಿಯ ಅನುಪಮ ಕಲಾವಂತಿಕೆ ಕಾಣಬರುತ್ತದೆ.

ಹೊಯ್ಸಳ ವಾಸ್ತುಶೈಲಿಯ ವಿಶಿಷ್ಟ ಲಕ್ಷಣಗಳನ್ನು ಈ ದೇವಾಲಯಗಳಲ್ಲಿ ಕಂಡುಬರುವ ನಕ್ಷತ್ರಾಕಾರದ ತಲವಿನ್ಯಾಸ, ಜಗತಿ, ಭಿತ್ತಿ ಅಲಂಕರಣ, ಶಿಖರ ಮತ್ತು ಕಂಬಗಳ ರೂಪಗಳಿಂದ ಗುರುತಿಸಬಹುದಾಗಿದೆ.

ನಕ್ಷತ್ರಾಕಾರದ ತಲವಿನ್ಯಾಸ: ಹೊಯ್ಸಳ ದೇವಾಲಯ ವಿಮಾನಗಳ ತಲವಿನ್ಯಾಸ ಮುಂಚಾಚುವ ಮತ್ತು ಹಿನ್ಸರಿಯುವ ಕೋನಗಳಿಂದ ಒಡಗೂಡಿದ ಗೋಡೆಯ ಹೊರಭಾಗದಿಂದ ಕೂಡಿರುತ್ತದೆ. ಒಂದೇ ಕೇಂದ್ರವುಳ್ಳ ಸಮಚೌಕೋನಗಳನ್ನು ಒಂದು ಅಕ್ಷದ ಮೇಲೆ ಸುತ್ತುವುದರಿಂದ ಬೇರೆ ಬೇರೆ ದಿಕ್ಕುಗಳಿಗೆ ಸರಿಹೊಂದುವಂತೆ ಉಂಟಾಗುವ ಕೋನಗಳು ಈ ನಕ್ಷತ್ರಾಕಾರದ ಬಾಹುಗಳಾಗಿರುತ್ತವೆ. ಈ ರೀತಿಯ ಜೋಡಣೆಯಿಂದ 8,12, 16 ಮುಂತಾಗಿ ಎಷ್ಟು ಕೋನಗಳನ್ನು ಬೇಕಾದರೂ ನಿರ್ಮಿಸಿಕೊಳ್ಳಬಹುದು. ನಕ್ಷತ್ರಾಕಾರದ ಈ ತಲವಿನ್ಯಾಸವನ್ನು ಜಗತಿ ಅಥವಾ ಉಪಪೀಠದಿಂದ ವಿಮಾನದ ತುದಿಯಲ್ಲಿರುವ ಶಿಖರದ ಮೇಲಿನ ಕಲಶದವರೆಗೂ ಕೊಂಡೊಯ್ಯಲಾಗಿರುತ್ತದೆ. ಆದುದರಿಂದ ಹೊಯ್ಸಳ ಮಂದಿರಗಳ ನಕ್ಷತ್ರಾಕಾರದ ವಿನ್ಯಾಸವನ್ನು ಅಷ್ಟಭದ್ರ ವಿನ್ಯಾಸವೆಂದು ಕರೆಯಲಾಗಿದೆ.

ಜಗತಿ ಅಥವಾ ಉಪಪೀಠ: ಎರಡನೆಯದಾಗಿ ಹೊಯ್ಸಳ ದೇವಾಲಯಗಳನ್ನು ಸಾಮಾನ್ಯವಾಗಿ ಭೂಮಟ್ಟದಿಂದ ಸು. 5 ಅಡಿ ಎತ್ತರದ, ದೇವಾಲಯದ ಪ್ರಮಾಣಕ್ಕಿಂತಲೂ ಹೆಚ್ಚು ವಿಸ್ತಾರವಾದ ಜಗತಿಯ ಮೇಲೆ ನಿರ್ಮಿಸಲಾಗಿರುತ್ತದೆ. ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಿದ ಮೃದುವಾದ ಬಳಪದ ಕಲ್ಲಿನಲ್ಲಿ ಎತ್ತರವಾದ ಗೋಡೆಗಳನ್ನು ನಿರ್ಮಿಸಲಾಗುತ್ತಿರಲಿಲ್ಲ. ಆದುದರಿಂದ ಹೊಯ್ಸಳ ಗುಡಿಗಳೂ ಅವುಗಳ ಶಿಖರಗಳೂ ಮಟ್ಟಸವಾಗಿರುತ್ತಿದ್ದವು. ಈ ಗಿಡ್ಡಾದ ಮಂದಿರಗಳಿಗೆ ಭವ್ಯತೆಯನ್ನೂ ಎತ್ತರದ ಭಾವನೆಯನ್ನೂ ಒದಗಿಸಲು ಈ ಜಗತಿಗಳು ಸಹಾಯಕವಾಗುತ್ತಿದ್ದುವು. ಹೊಯ್ಸಳ ಗುಡಿಗಳ ಒಳಭಾಗದಲ್ಲಿ ಪ್ರದಕ್ಷಿಣ ಮಾರ್ಗವಿರುತ್ತಿರಲಿಲ್ಲ. ಗುಡಿಗೆ ಬಂದ ಭಕ್ತರು ಗೋಡೆಗಳ ಹೊರಮೈಯ ಮೇಲೆ ರೂಪಿಸಲಾಗಿದ್ದ ಅಪೂರ್ವ ಸೌಂದರ್ಯಯುತ ದೇವದೇವಿಯರ ಪ್ರತಿಮೆಗಳನ್ನೂ ಪೌರಾಣಿಕ ಘಟನೆಗಳನ್ನೂ ನೋಡಿ ಸವಿಯುತ್ತ ದೇವಾಲಯದ ಸುತ್ತ ಪ್ರದಕ್ಷಿಣೆ ಮಾಡಲು ದೇವಾಲಯದ ಉದ್ದಗಲಗಳಿಗಿಂತಲೂ ವಿಶಾಲವಾಗಿದ್ದ ಈ ಜಗತಿ ಅವಕಾಶ ಮಾಡಿಕೊಡುತ್ತಿತ್ತು. ಜಗತಿ ಸಹ ಅದರ ಮೇಲಿನ ರೀತಿಯಲ್ಲಿ ನಕ್ಷತ್ರಾಕಾರದಲ್ಲಿ ಇರುತ್ತಿತ್ತು. ಜಗತಿಯ ಒಂದೊಂದು ಕೋನದಲ್ಲೂ ಸಿಂಹ, ಆನೆ ಮುಂತಾದ ಪ್ರಾಣಿಗಳು ಜಗತಿಯ ಕೋನಗಳನ್ನು ಎತ್ತಿಹಿಡಿದಿರುವಂತೆ ನಿರೂಪಿಸಲಾಗಿರುತ್ತದೆ.

ಭಿತ್ತಿ ಅಲಂಕರಣ: ನಕ್ಷತ್ರಾಕಾರದ ಜಗತಿ ಮತ್ತು ಗೋಡೆಗಳು ದೇವಾಲಯಕ್ಕೆ ಎತ್ತರದ ಭಾವನೆಯನ್ನು ಒದಗಿಸದಿದ್ದರೂ ಗೋಡೆಗಳ ಕೆಳಗಿನ ಅರ್ಧವನ್ನು ಒಂದರ ಮೇಲೊಂದರಂತೆ ಪೇರಿಸಿದ ಆರೆಂಟು ಸಮತಟ್ಟಾದ ಪಟ್ಟಿಕೆಗಳನ್ನಾಗಿ ವಿಭಾಗಿಸಿರುವುದರಿಂದಲೂ ಶಿಖರದಲ್ಲೂ ಇದೇ ರೀತಿಯ ಸಮತಲದ ಅಂತಸ್ತುಗಳಿರುವುದರಿಂದಲೂ ದೇವಾಲಯಕ್ಕೆ ಎತ್ತರದ ಭಾವನೆಯನ್ನು ಕೊಡುತ್ತವೆ. ವಿಮಾನ ಭಾಗದ ಗೋಡೆಯನ್ನು ಮೂರು ಭಾಗಗಳನ್ನಾಗಿಯೂ ಮಂಟಪದ ಗೋಡೆಗಳನ್ನು ಎರಡು ಭಾಗಗಳನ್ನಾಗಿಯೂ ವಿಂಗಡಿಸಿರುತ್ತಾರೆ. ವಿಮಾನ ಮತ್ತು ಮಂಟಪ, ಅಂದರೆ ಒಟ್ಟು ದೇವಾಲಯದ ಸುತ್ತಲೂ ಗೋಡೆಯ ಕೆಳಭಾಗದಲ್ಲಿ ಮುಂಚಾಚಿದ ಪಟ್ಟಿಕೆಗಳ ಮೇಲೆ ಆನೆ, ಕುದುರೆ ಸವಾರರು, ಲತಾತೋರಣ, ಸಿಂಹಮುಖ, ಮತ್ತೆ ಲತಾತೋರಣಗಳು, ಅದರ ಮೇಲೆ ಕಣ್ಣಿನ ಎತ್ತರದಲ್ಲಿರುವ ಪಟ್ಟಿಕೆಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮತ್ತಿತರ ಪೌರಾಣಿಕ ಕಥೆಗಳು ಮತ್ತು ವಿರಳವಾಗಿಯಾದರೂ ಕೆಲವು ಸಾಮಾಜಿಕ ಮತ್ತು ಧಾರ್ಮಿಕ ಜೀವನಗಳನ್ನು ನಿರೂಪಿಸುವ ಮಾನವರ ಚಿತ್ರಗಳನ್ನೂ ಬಿಡಿಸಲಾಗಿರುತ್ತದೆ. ಅವಕ್ಕೂ ಮೇಲಿನ ಪಟ್ಟಿಕೆಗಳಲ್ಲಿ ಯಾಳಿ ಅಥವಾ ಮಕರಗಳು ಮತ್ತು ಎಲ್ಲಕ್ಕೂ ಮೇಲಿನ ಸಾಲುಗಳಲ್ಲಿ ಹಂಸಗಳ ಚಿತ್ರಣವಿರುತ್ತವೆ. ಎಲ್ಲ ದೇವಾಲಯಗಳಲ್ಲೂ ಈ ಚಿತ್ರಪಟ್ಟಿಕೆಗಳು ಇದೇ ಅನುಕ್ರಮದಲ್ಲಿರುವುದಿಲ್ಲ. ಆದರೆ ಚಿತ್ರಪಟ್ಟಿಕೆಗಳು ಸಾಮಾನ್ಯವಾಗಿ ಎಲ್ಲ ಮುಖ್ಯ ದೇವಾಲಯಗಳಲ್ಲೂ ಇರುತ್ತವೆ.

ಮುಂಭಾಗದ ಮಂಟಪದ ಗೋಡೆಗಳಲ್ಲಿ ಈ ಚಿತ್ರಪಟ್ಟಿಕೆಗಳ ಮೇಲಣ ಭಾಗದಲ್ಲಿ ವಿಶಾಲವಾದ ಅಂಕಣ ಚಿತ್ರಫಲಕಗಳೋ ಜಾಲಂಧ್ರಗಳೋ ಇರುತ್ತವೆ. ಕಲ್ಲುಚಪ್ಪಡಿಗಳಲ್ಲಿ ಮಾಡಿದ ಈ ಜಾಲಂಧ್ರಗಳ ಮೇಲೂ ಹೊಯ್ಸಳ ಶಿಲ್ಪಿಗಳು ಹಲವು ರೀತಿಯ ನಕ್ಷೆಗಳನ್ನು-ಹೂವುಗಳು, ಬಳ್ಳಿಗಳು, ಜ್ಯಾಮಿತೀಯ ವಿನ್ಯಾಸಗಳನ್ನು-ಬಿಡಿಸಿ ಜಾಲಂಧ್ರಗಳ ಸೌಂದರ್ಯವನ್ನು ಹೆಚ್ಚಿಸಿರುತ್ತಾರೆ. ಅಂಕಣ ಚಿತ್ರಫಲಕಗಳ ಮೇಲೆ ರಾಜರ ದರ್ಬಾರು, ಪೌರಾಣಿಕ ಘಟನೆಗಳ ನಿರೂಪಣೆ, ಶಿವ, ವಿಷ್ಣು ಮುಂತಾದ ಅಧಿದೇವತೆಗಳ ಮತ್ತು ಅವರ ಪರಿವಾರ ದೇವತೆಗಳ ಚಿತ್ರಣಗಳನ್ನು ಕೆತ್ತಿ ಅವುಗಳ ಅಲಂಕರಣದೊಂದಿಗೆ ಭಕ್ತ ಜನರಿಗೆ ಉಪಯುಕ್ತವಾದ ಧಾರ್ಮಿಕ ಪರಿಸರವನ್ನು ನಿರ್ಮಿಸಿರುತ್ತಾರೆ. ವಿಮಾನದ ಹೊರಗೋಡೆಗಳ ಮೇಲೆ ಕೆಳಭಾಗದಲ್ಲಿ ಮಂಟಪದ ಗೋಡೆಗಳ ಮೇಲಿರುವಂತೆ ಅಡ್ಡ ಚಿತ್ರಪಟ್ಟಿಕೆಗಳಿರುತ್ತವೆ. ಅವುಗಳ ಮೇಲೆ ತಮ್ಮ ಶಿಲ್ಪರಚನಾಚಾತುರ್ಯಕ್ಕೆ ಸಾಕ್ಷಿಗಳಾದ ದೇವದೇವತೆಗಳ ದೊಡ್ಡ ಪ್ರಮಾಣದ-2 ರಿಂದ 3 ಅಡಿಗಳೆತ್ತರದ- ವಿಗ್ರಹಗಳನ್ನು ಕಡೆಯಲಾಗಿರುತ್ತದೆ. ಒಂದೊಂದು ಗುಂಪಿನ ವಿಗ್ರಹಗಳಿಗೂ ಪ್ರತ್ಯೇಕವಾದ ಗೂಡು ಅಥವಾ ಫಲಕಗಳೂ ಪ್ರಭಾವಳಿ ಆಕಾರದ ಲತಾತೋರಣಗಳೂ ಇರುತ್ತವೆ. ಕೆಲವು ಬಾರಿ ಈ ದೇವದೇವಿಯರು, ಪೌರಾಣಿಕ ವ್ಯಕ್ತಿಗಳು ಲತಾಕುಂಜದೊಳಗೆ ಇದ್ದಾರೇನೋ ಎಂಬ ಕಲ್ಪನೆ ಉಂಟಾಗುತ್ತದೆ. ಈ ಒಂದೊಂದು ವಿಗ್ರಹವೂ ಗೋಡೆಯ ಅಂಗವಾಗಿರುವಂತೆ ಭಾಸವಾಗುವ ಬದಲು

ತಮ್ಮದೇ ಆದ ಸಣ್ಣ ಗುಡಿಗಳಲ್ಲಿರುವಂತೆ ತೋರುತ್ತದೆ. ನಕ್ಷತ್ರಾಕಾರದ ಹಿಂದೆ-ಮುಂದೆ ಸರಿದಂತಿರುವ ಗೋಡೆಯ ವಿನ್ಯಾಸದಿಂದ ಕೆಲವು ವಿಗ್ರಹಗಳ ಮೇಲೆ ಹೆಚ್ಚಿನ ಬೆಳಕೂ ಮತ್ತೆ ಕೆಲವು ವಿಗ್ರಹಗಳ ಮೇಲೆ ನೆರಳೂ ಬೀಳುತ್ತದೆ. ಈ ನೆರಳು-ಬೆಳಕುಗಳ ಪ್ರಭಾವ ವಿಗ್ರಹಗಳ ಸರಸ-ಸೌಮ್ಯ ಅಥವಾ ರುದ್ರ-ಬೀಭತ್ಸ ಭಾವಗಳ ಮೇಲೆ ಆಗುವಂತೆ ಅವುಗಳ ಸ್ಥಳನಿರ್ದೇಶನ ಮಾಡಿರುವುದು ಶಿಲ್ಪಿಗಳ ಕಲ್ಪನಾಶಕ್ತಿಗೆ ಸಾಕ್ಷ್ಯಗಳಾಗಿವೆ. ಮೂರನೆಯ ಮತ್ತು ಎಲ್ಲಕ್ಕೂ ಮೇಲಿನ ವಿಭಾಗದಲ್ಲಿ ಅರೆಗಂಬ, ಕಲಶ ಮತ್ತು ಶಿಖರಗಳ ವಿನ್ಯಾಸಗಳನ್ನು ಕೆತ್ತಲಾಗುತ್ತದೆ. ದ್ರಾವಿಡ ಗುಡಿಗಳ ಹೊರಗೋಡೆಗಳ ಮೇಲಿರುವ ಈ ಅರೆಗಂಬ-ಗೂಡುಗಳು ಆ ಗುಡಿಗಳ ವಾಸ್ತುವಿನ್ಯಾಸದಲ್ಲಿ ಪ್ರಮುಖ ಲಕ್ಷಣಗಳಾಗಿವೆ; ಹೊಯ್ಸಳ ಗುಡಿಗಳಲ್ಲಿ ಅವು ಸೂರಿನ ಕೆಳಗೆ ಮಟ್ಟಸವಾಗಿದ್ದು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡಿವೆ. ಭಿತ್ತಿಯ ಮೇಲಿನ ಚಿಕ್ಕ ಚಿಕ್ಕ ಅಲಂಕರಣ ಶಿಖರಗಳ ವಿನ್ಯಾಸಗಳಲ್ಲಿ ಹೊಯ್ಸಳ ಶೈಲಿಯ ಶಿಖರ ಪ್ರಭೇದಗಳನ್ನೆಲ್ಲ ಕಾಣಬಹುದು.

ವಿಮಾನದ ಮೇಲಿನ ಶಿಖರಗಳು: ಹೊಯ್ಸಳ ದೇವಾಲಯಗಳಲ್ಲಿ ಎದ್ದು ಕಾಣುವ ವಿಭಾಗವೆಂದರೆ ಶಿಖರ. ದೇವಾಲಯ ನಿರ್ಮಾಣಕ್ಕೆ ಉಪಯೋಗಿಸಿದ ಮೃದುವಾದ ಕಲ್ಲು ಮತ್ತು ಅದರಿಂದ ಉಂಟಾದ ಅಭದ್ರತೆಯ ಫಲವಾಗಿ ಬಹುಮಟ್ಟಿನ ದೇವಾಲಯಗಳಲ್ಲಿ ಶಿಖರಗಳು ಕಣ್ಮರೆಯಾಗಿ ಹೋಗಿವೆ. ದೊಡ್ಡಗದ್ದವಳ್ಳಿ, ಸೋಮನಾಥಪುರ, ಭದ್ರಾವತಿ, ನುಗ್ಗೇಹಳ್ಳಿ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳ ಮೇಲೆ ಉಳಿದು ಬಂದಿರುವ ಶಿಖರಗಳಿಂದಲೂ ಹೊರಗೋಡೆಗಳ ಮೇಲಿನ ಚಿತ್ರಪಟ್ಟಿಕೆಗಳಲ್ಲಿ ಕೆತ್ತಲಾದ ಶಿಖರಗಳ ಅವಗಾಹನೆಯಿಂದಲೂ ಈ ಶಿಖರಗಳ ಆಕಾರ-ವಿನ್ಯಾಸಗಳನ್ನು ಅಭ್ಯಸಿಸಬಹುದಾಗಿದೆ. ವಿಮಾನದ ಕೆಳಭಾಗದ ಗೋಡೆಗಳಿಂದ ಶಿಖರಭಾಗವನ್ನು ಅಗಲವಾದ ಸೂರುಗಳಿಂದ ಪ್ರತ್ಯೇಕಿಸಿದರೂ ನಕ್ಷತ್ರಾಕಾರದ ವಿನ್ಯಾಸವನ್ನು ಶಿಖರಾಗ್ರದವರೆಗೂ ಕೊಂಡೊಯ್ಯಲಾಗಿರುತ್ತದೆ. ಶಿಖರದ ಊರ್ಧ್ವತ್ವದ ಭಾವನೆಯನ್ನು ಸಮತಟ್ಟಾದ ಅಂತಸ್ತುಗಳು ಸ್ವಲ್ಪಮಟ್ಟಿಗೆ ಕಡಿಮೆ ಮಾಡುತ್ತವೆ. ಕ್ರಮೇಣ ಸಣ್ಣದಾಗುತ್ತಿರುವ ಈ ಅಂತಸ್ತುಗಳು ಶಿಖರದ ಮನೋಜ್ಞ ಸೌಂದರ್ಯವನ್ನು ಹೆಚ್ಚಿಸುತ್ತವೆ. ಶಿಖರದ ತುದಿಯಲ್ಲಿ ಛತ್ರಾಕಾರದ ಕಲಶವಿರುತ್ತದೆ. ಶಿಖರದ ಮೇಲಿರುವ ಉದ್ದ ಮತ್ತು ಅಡ್ಡಪಟ್ಟಿಕೆಗಳ ಮೇಲೆ ವೈವಿಧ್ಯಮಯವಾದ ಸೂಕ್ಷ್ಮ ಪ್ರಮಾಣದ ಗುಡಿಗಳನ್ನೂ ಗೂಡುಗಳನ್ನೂ ಕೆತ್ತಲಾಗಿರುತ್ತದೆ. ಶಿಖರದ ಈ ಅಡ್ಡ ಪಟ್ಟಿಕೆಗಳು ಮುಂಚಾಚಿಕೊಂಡು ತಮ್ಮ ಕೆಳಗಿನ ಮತ್ತು ಮೇಲಣ ಪಟ್ಟಿಕೆಗಳಿಂದ ತುಸು ಅಂತರಗಳನ್ನು ಹೊಂದಿರುವುದರಿಂದ ಪ್ರತಿಯೊಂದೂ ಪ್ರತ್ಯೇಕವಾಗಿರುವಂತೆ ಭಾವಿಸುತ್ತವೆ. ಒಟ್ಟಿನಲ್ಲಿ ಈ ರೀತಿಯ ಶಿಖರಗಳು ಮಟ್ಟಸವಾಗಿರುವುದರಿಂದ ಎದ್ದುಕಾಣುವುದಿಲ್ಲವಾದರೂ ಅವುಗಳ ಮೇಲಿನ ಕೆತ್ತನೆಗಳ ಭವ್ಯತೆಯಿಂದ ನೋಡುಗರ ಗಮನವನ್ನು ತಮ್ಮಲ್ಲಿ ಹಿಡಿದಿಡುವ ಶಕ್ತಿಯನ್ನು ಪಡೆದಿರುತ್ತವೆ. ಶಿಖರದ ಮೆಟ್ಟಿಲು ಮೆಟ್ಟಿಲಾದ ಅಂತಸ್ತುಗಳ ಮೇಲೆ ಸಿಂಹಮುಖಗಳು, ಲತೆಗಳು ಮತ್ತು ದೇವತಾವಿಗ್ರಹಗಳನ್ನು ಸುಂದರವಾಗಿ ಕೆತ್ತಿರಲಾಗುತ್ತದೆ. ಛತ್ರಾಕಾರದ ಕಲಶದ ಕಲ್ಲಿನ ಮೇಲೆ ಅಮೃತಕಲಶ, ಶಲಾಕೆ ಮತ್ತು ಪ್ರಾಸಾದ ಪುರುಷ ಮೂರ್ತಿಗಳನ್ನು ಕಡೆದಿರುತ್ತಾರೆ. ಸುಕನಾಸಿಯ ಛಾವಣಿಯ ಮೇಲಕ್ಕೆ ಪಸರಿಸಿರುವ ಶಿಖರದ ಮುಂಚಾಚಿನ ಮೇಲೆ ಹೊಯ್ಸಳ ಲಾಂಛನವಾದ ಸಳ ಹುಲಿಯನ್ನು ಕೊಲ್ಲುತ್ತಿರುವುದನ್ನು ನಿರೂಪಿಸುವ ಶಿಲ್ಪವಿರುತ್ತದೆ. ಕಟ್ಟಡಕ್ಕೆ ಉಪಯೋಗಿಸುವ ಮೃದು ಕಲ್ಲಿನ ಗೋಡೆಗಳು ದ್ರಾವಿಡ ರೀತಿಯ ಬೃಹತ್ ಶಿಖರಗಳ ಭಾರವನ್ನು ಹೊರಲು ಅಸಮರ್ಥವಾಗಿದ್ದುದರಿಂದ ಸಣ್ಣವಾದರೂ ಸುಂದರ ಕೆತ್ತನೆಗಳಿಂದ ಅಲಂಕೃತವಾದ ಈ ಶಿಖರಗಳು ಇಡೀ ದೇವಾಲಯ ಭಾಗದಲ್ಲಿ ಕಲಾದೃಷ್ಟಿಯಿಂದ ಗಮನಾರ್ಹ ಅಂಗಗಳಾಗಿರುತ್ತವೆ.

ಕಂಬಗಳು: ಹೊಯ್ಸಳ ದೇವಾಲಯಗಳ ಕಂಬಗಳು ಸಹ ವಿಶಿಷ್ಟವಾದವು. ಅವು ಸಾಮಾನ್ಯವಾಗಿ ದ್ರಾವಿಡ ರೀತಿಯ ಕಂಬಗಳ ಮತ್ತು ಚೌಕೋನ ಆಕಾರದ ಬೋದಿಗೆಗಳ ಅನುಕರಣೆಯಾಗಿದ್ದರೂ ಚಾಳುಕ್ಯ ದೇವಾಲಯಗಳ ಕಂಬಗಳ ಪ್ರಭಾವಕ್ಕೊಳಗಾಗಿ ಕಡೆತ ಯಂತ್ರದ ಮೇಲೆ ತಿರುಗಿಸಲಾಗಿರುವುದರಿಂದ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಹೊಯ್ಸಳ

ವೀಣಾಪಾಣಿ ಮದನಿಕೆ, ಚನ್ನಕೇಶವ ದೇವಾಲಯ, ಬೇಲೂರು

ಕಾಲದ ಶಿಲ್ಪಿಗಳು ಬಳಪದ ಕಲ್ಲಿನಲ್ಲಿ ಮೊದಲಿಗೆ ದಿಮ್ಮಿಗಳನ್ನು ಬೇಕಾದ ಆಕಾರ-ಪ್ರಮಾಣಗಳಿಗೆ ಕಡೆದು ಅನಂತರ ಚಕ್ರಗಳ ಮೇಲೆ ದಿಮ್ಮಿಗಳನ್ನು ನೆಟ್ಟಗೆ ನಿಲ್ಲಿಸಿ ತಿರುಗಿಸುತ್ತ ಉಕ್ಕಿನ ಉಳಿಗಳ ಸಹಾಯದಿಂದ ದಿಮ್ಮಿಗಳ ಮೇಲೆ ಉಂಗುರಾಕಾರದ ಮತ್ತು ಇತರ ವಿನ್ಯಾಸಗಳನ್ನು ಬಿಡಿಸುತ್ತಿದ್ದರು. ಒಂದೇ ಕಲ್ಲಿನ ಈ ಕಂಬಗಳ ತಳಭಾಗ ಚದರವಾಗೂ ಮಧ್ಯಭಾಗ ಬುಡಮೇಲು ಮಾಡಿದ ಘಂಟೆ ಅಥವಾ ಕಮಲದ ಆಕಾರದಲ್ಲೂ ಅಗ್ರಭಾಗ ಗ್ರೀವದ ಮೇಲೆ ಚಕ್ರಾಕಾರದಲ್ಲೂ ಇರುತ್ತವೆ. ಕೆಲವು ವೇಳೆ ಈ ಅಗ್ರಭಾಗದ ಚಕ್ರ ಎರಡೆರಡು ಬಾರಿ ಇದ್ದು ಅವುಗಳ ನಡುವೆ ಕಮಲದ ಆಕಾರದ ಒಂದು ಅಂಗವಿರುತ್ತದೆ. ಅದರ ಮೇಲೆ ವಿವಿಧ ಅಲಂಕರಣಗಳುಳ್ಳ ಚೌಕನಾದ ಬೋದಿಗೆಗಳು ಛಾವಣಿಯ ಮೂಲಗಳಿಗೆ ಆಧಾರವಾಗಿರುತ್ತವೆ. ನವರಂಗದ ಕಂಬಗಳ ಮತ್ತು ಹೊರಗೋಡೆಯ ಅರೆಗಂಬಗಳ ಮೇಲೆ ಈ ಬೋದಿಗೆ ಮತ್ತು ದೂಲಗಳ ನಡುವೆ ಮುಂಬಾಗಿದಂತೆ ನಿಲ್ಲಿಸಲಾದ

ಸಾಲಭಂಜಿಕಾ ಅಥವಾ ಮದನಿಕಾ ವಿಗ್ರಹಗಳೂ ಇರುವುದುಂಟು. ಈ ಕಂಬಗಳ ಮೇಲ್ಭಾಗದಲ್ಲಿ ವಿವಿಧ ಸುಂದರ ಕೆತ್ತನೆಗಳನ್ನು ಮಾಡಲಾಗಿರುತ್ತದೆ. ಸಾಮಾನ್ಯವಾಗಿ ಒಂದು ದೇವಾಲಯದೊಳಗಿನ ಕಂಬಗಳು ಅವುಗಳ ಅಲಂಕರಣ ವೈವಿಧ್ಯದಿಂದ ಒಂದರಂತೆ ಮತ್ತೊಂದು ಇರುವುದಿಲ್ಲ. ನವರಂಗದ ನಾಲ್ಕು ಕಂಬಗಳಲ್ಲಿ ಶಿಲ್ಪಿಗಳು ತಮ್ಮ ಚಾತುರ್ಯದ ಪರಮಾವಧಿಯನ್ನು ಪ್ರದರ್ಶಿಸುತ್ತಾರೆ ಎಂದರೆ ಉತ್ಪ್ರೇಕ್ಷೆಯೇನಲ್ಲ. ಸಾಮಾನ್ಯವಾಗಿ ಕಂಬದ ಇಡೀ ಮೇಲ್ಮೈ ಕೆತ್ತನೆಗಳಿಂದ ತುಂಬಿದ್ದರೂ ಎಲ್ಲಿಯಾದರೂ ಅಲ್ಪಸ್ವಲ್ಪ ಬಿಡಿಸ್ಥಳವಿದ್ದುದೇ ಆದರೆ ಆ ಭಾಗಕ್ಕೆ ಕೊಟ್ಟಿರುವ ಹೊಳಪಿನಿಂದ ಕನ್ನಡಿಯ ಬೆಳಕು ಪ್ರತಿಫಲಿಸುತ್ತದೆ. ಕೆಲವು ಕಂಬಗಳ ಮಧ್ಯಭಾಗವನ್ನು ಹೊಳಪು ಮಾಡುವುದಕ್ಕಾಗಿಯೇ ಕೆತ್ತನೆಗಳಿಲ್ಲದೆ ತೆರವಾಗಿ ಬಿಟ್ಟಿರುತ್ತಾರೆ.

ಮೇಲೆ ಹೇಳಿದ ಲಕ್ಷಣಗಳಲ್ಲಿ ಕೆಲವನ್ನು ಉತ್ತರ ಕರ್ನಾಟಕ ಪ್ರದೇಶದ ಆದಿಕಾಲದ ಬಾದಾಮಿ ಚಳುಕ್ಯರ ಕೆಲವು ದೇವಾಲಯಗಳಲ್ಲೂ ಸೇವುಣರ ಕಾಲದ ಕೆಲವು ಹೇಮಾದ್ರಿಪಂಥದ ಗುಡಿಗಳಲ್ಲೂ ಬಿಡಿಬಿಡಿಯಾಗಿ ಕಾಣಬಹುದಾಗಿದ್ದು ಹೊಯ್ಸಳ ವಾಸ್ತುಶಿಲ್ಪಗಳು ಈ ಲಕ್ಷಣಗಳನ್ನು ಹೊಸದಾಗಿ ಕಂಡುಹಿಡಿದರೆಂದು ಹೇಳಲು ಸಾಧ್ಯವಿಲ್ಲ. ಆದರೆ ಮೇಲಿನ ಎಲ್ಲ ಅಂಶಗಳನ್ನು ಮೃದುವಾದ ಬಳಪದ ಕಲ್ಲಿನಲ್ಲಿ ನಿರ್ಮಿಸಿದ ತಮ್ಮ ದೇವಾಲಯಗಳಲ್ಲಿ ಸಮನ್ವಯಗೊಳಿಸಿ ಅಳವಡಿಸಿಕೊಂಡಿರುವುದಲ್ಲದೆ ಈ ಅಂಶಗಳಿಗೆ ತಮ್ಮ ನೈಪುಣ್ಯದಿಂದ ಹೊಸರೂಪ ಕೊಟ್ಟಿರುವುದು ಅವರ ರಚನಾಕೌಶಲಕ್ಕೆ ಉತ್ತಮ ನಿದರ್ಶನ. ಡೊಂಕುಡೊಂಕಾದ ಗೋಡೆಗಳ ವಿನ್ಯಾಸದಿಂದ ದೊರಕಿದ ಹೆಚ್ಚು ಪ್ರದೇಶದ ಪ್ರತಿಯೊಂದು ಅಂಗುಲವನ್ನೂ ತಮ್ಮ ಅಮೋಘ ಕೆತ್ತನೆಗಳಿಗೆ ಉಪಯೋಗಿಸಿಕೊಂಡು ದೇವಾಲಯವನ್ನು ಒಂದು ವಾಸ್ತು ನಿರ್ಮಾಣವೆನ್ನುವುದಕ್ಕಿಂತಲೂ ಕಲೆಯ ಪ್ರದರ್ಶನಾಲಯವೆಂಬಂತೆ ಮಾಡಿರುವುದೇ ಹೊಯ್ಸಳ ಶಿಲ್ಪಿಗಳ ಅನುಪಮ ಕಾಣಿಕೆ ಎಂದು ಹೇಳಬಹುದು. ಬೇಲೂರು, ಹಳೇಬೀಡು ದೇವಾಲಯಗಳ ಬಾಗಿಲುಗಳ ಮೇಲಿನ ಮಕರ ತೋರಣಗಳಲ್ಲಿ ಕಾಣುವ ಸೂಕ್ಷ್ಮತರವಾದ ಕೆತ್ತನೆ ಅಕ್ಕಸಾಲಿಗರ ಕುಸುರಿ ಕೆಲಸವನ್ನೂ ಮೀರಿಸುವಂಥದು. ಬೇಲೂರು ದೇವಾಲಯದ ಕೆಲವು ಕಂಬಗಳ ಮೇಲಿನ ಸೂಕ್ಷ್ಮ ಕೆತ್ತನೆಗಳು ರೂವಾರಿಗಳ ಕಲಾಪ್ರೌಢಿಮೆಯ ಅಪೂರ್ವ ನಿದರ್ಶನಗಳು. ಶಿಲಾಬಾಲಿಕೆಯರೆಂದು ಪ್ರಸಿದ್ಧವಾಗಿರುವ ಸಾಲಭಂಜಿಕೆಗಳು–ಅದರಲ್ಲೂ ಬೇಲೂರಿನ ಚೆನ್ನಕೇಶವ ದೇವಾಲಯದ ನವರಂಗದ ಕಂಬಗಳ ಮೇಲಿರುವ ನಾಲ್ಕು ವಿಗ್ರಹಗಳು ಹೊಯ್ಸಳ ಶಿಲ್ಪಿಗಳನ್ನು ಅಮರಕೀರ್ತಿಭಾಜರನ್ನಾಗಿಸಿವೆ.

ಹೊಯ್ಸಳ ಶೈಲಿಯ ಪರಿಪಕ್ವ ಗುಡಿಗಳಲ್ಲಿ ವಿಮಾನ, ಸುಕನಾಸಿ, ನವರಂಗ ಮತ್ತು ಮುಖಮಂಟಪಗಳು ಮುಖ್ಯ ಭಾಗಗಳಾಗಿರುತ್ತವೆ. ಇವಿಷ್ಟು ಭೂಮಟ್ಟದಿಂದ ಸು. 5 ಅಡಿ ಎತ್ತರದ ಮತ್ತು ದೇವಾಲಯದ ವಿಸ್ತೀರ್ಣಕ್ಕಿಂತ ವಿಶಾಲವಾದ ಜಗತಿಯ ಮೇಲೆ ಇರುತ್ತವೆ. ಗರ್ಭಗುಡಿ ಅಥವಾ ವಿಮಾನ ನಕ್ಷತ್ರಾಕಾರದ ತಲವಿನ್ಯಾಸದ ಮೇಲೆ ಚತುರಸ್ರವಾಗಿರುತ್ತದೆ. ಅದರ ಮಧ್ಯದಲ್ಲಿರುವ ಪಿಂಡಿಕೆಯ ಮೇಲೆ ಪ್ರಭಾವಳಿ, ಲತಾತೋರಣ ಮತ್ತು ಕೀರ್ತಿಮುಖಗಳಿಂದೊಡಗೂಡಿದ ಮೂಲವಿಗ್ರಹವಿರುತ್ತದೆ. ಅಭಿಷೇಕಜಲ ಎಡಭಾಗದಿಂದ ಹರಿದು ಹೋಗಿ ಹೊರ ಅಂಗಳದಲ್ಲಿರುವ ತೀರ್ಥದ ಹೊಂಡವನ್ನು ಸೇರಲು ಸೂಕ್ತವಾದ ವ್ಯವಸ್ಥೆ ಮಾಡಲಾಗಿರುತ್ತದೆ. ಹೊಯ್ಸಳ ದೇವಾಲಯಗಳಲ್ಲಿ ಒಂದು, ಎರಡು, ಮೂರು, ನಾಲ್ಕು ಅಥವಾ ಐದು ಗರ್ಭಗುಡಿಗಳಿರುವುದುಂಟು. ಅನುಕ್ರಮವಾಗಿ ಅವನ್ನು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟ ಮಂದಿರಗಳೆಂದು ಕರೆಯಲಾಗುತ್ತದೆ. ಪ್ರತಿಯೊಂದು ಗರ್ಭಗುಡಿಗೂ ಪ್ರತ್ಯೇಕ ಸುಕನಾಸಿ ಇರುತ್ತದೆ. ಏಕಕೂಟ ಮತ್ತು ತ್ರಿಕೂಟ ಗುಡಿಗಳಲ್ಲಿ ಒಂದೇ ನವರಂಗದೊಡನೆ ಸುಕನಾಸಿಗಳು ಸೇರುತ್ತವೆ. ಕೆಲವು ದ್ವಿಕೂಟಾಚಲಗಳಲ್ಲಿ ಪ್ರತ್ಯೇಕ ನವರಂಗ ಭುವನೇಶ್ವರಿಗಳು ಇರುತ್ತವೆ. ಚತುಷ್ಕೂಟ ಮತ್ತು ಪಂಚಕೂಟ ಮಂದಿರಗಳಲ್ಲಿ ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚು ನವರಂಗಗಳಿರುತ್ತವೆ.

ಸುಕನಾಸಿ ಗರ್ಭಗುಡಿಗೂ ರಂಗಮಂಟಪಕ್ಕೂ ನಡುವೆ ಉತ್ಸವ ವಿಗ್ರಹಗಳನ್ನಿಡಲು ಉಪಯೋಗಿಸುವ ಸ್ಥಾನ, ಅದರ ದ್ವಾರಬಂಧದ ಮೇಲೆ ಗಜಲಕ್ಷ್ಮಿ ಅಥವಾ ಬೇರೆ ವಿಗ್ರಹಗಳು, ಪಕ್ಕಗಳಲ್ಲಿ ದ್ವಾರಪಾಲಕರು, ಲತಾಪಟ್ಟಿಕೆಗಳು ಇರುತ್ತವೆ. ಅದರ ಮುಂದಿನ ಭಾಗವೇ ನವರಂಗ. ನವರಂಗದ ಮಧ್ಯಭಾಗದ ನಾಲ್ಕು ಕಂಬಗಳು ಭಾವಣಿಯ ಭುವನೇಶ್ವರಿಗೆ ಆಧಾರಗಳಾಗಿರುತ್ತವೆ. ಭುವನೇಶ್ವರಿಯ ಎಂಟು ಮೂಲೆಗಳಲ್ಲಿ ದಿಕ್ಪಾಲಕರ ಮೂರ್ತಿಗಳಿರುತ್ತವೆ. ಮಧ್ಯ ಅಂಕಣದ ಭಾವಣಿ ಮಗುಚಿಹಾಕಿದ ಕಮಲದಾಕಾರದಲ್ಲಿರುತ್ತದೆ. ಅದರ ದಳಗಳ ಮೇಲೆ ಸಂದರ್ಭೋಚಿತವಾದ ದೇವತಾಮೂರ್ತಿಗಳ ಪೌರಾಣಿಕ ಘಟನೆಗಳ ಕೆತ್ತನೆಗಳಿರುತ್ತವೆ. ಪುಷ್ಪದ ಕೇಸರ ನೇತಾಡುತ್ತಿರುವ ತುಂಡು ಕಂಬವನ್ನು ಹೋಲುತ್ತಿದ್ದು ಅದರ ತುದಿಯಲ್ಲಿ ನರಸಿಂಹ, ನಟರಾಜ ಮುಂತಾದ ಮೂರ್ತಿಗಳನ್ನು ಕೆತ್ತಲಾಗಿರುತ್ತದೆ. ನವರಂಗ ಪ್ರಧಾನ ದೇವತಾಪೂಜಾಕಾಲದಲ್ಲಿ ಸಂಗೀತ, ನೃತ್ಯ ಮುಂತಾದ ಕಲಾಸೇವೆಗಾಗಿ ಉಪಯೋಗಿಸುತ್ತಿದ್ದ ಸ್ಥಳ. ಅಂತೆಯೇ ಶಿಲ್ಪಿ ಅದರ ಮೇಲಿನ ಭುವನೇಶ್ವರಿಯ ಕೆತ್ತನೆಯಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸುವ ಪ್ರಯತ್ನ ನಡೆಸಿರುತ್ತಾನೆ. ಈ ದೃಷ್ಟಿಯಲ್ಲಿ ನೋಡಿದರೆ ಬೇಲೂರಿನ ಚೆನ್ನಕೇಶವ ಗುಡಿಯ ಭುವನೇಶ್ವರಿಯ ಸೊಬಗು ಅನುಪಮವಾದುದು. ಅದರ ಮುಂಭಾಗದ ಮಂಟಪ ಕೆಲವೆಡೆ ಮೊದಲಿಗೆ ತೆರೆದಿರುತ್ತಿದ್ದಿತು. ಕಾಲಕ್ರಮದಲ್ಲಿ ಅಲ್ಲೂ ಸಹ ಭಾವಣಿಯವರೆಗೂ ಗೋಡೆಗಳನ್ನು ನಿರ್ಮಿಸಿದುದರಿಂದ ದೇವಾಲಯದ ಒಳಭಾಗಕ್ಕೆ ಗಾಳಿ ಬೆಳಕುಗಳ ಆವಶ್ಯಕತೆಯನ್ನು ಪೂರೈಸುವ ಸಲುವಾಗಿ ಗೋಡೆಯ ಮೇಲರ್ಧಭಾಗದಲ್ಲಿ ಚಿತ್ರರಂಜಿತವಾದ ಜಾಲಂಧ್ರಗಳನ್ನು ಸೇರಿಸುವ ಪರಿಪಾಠ ಕಾಣುತ್ತದೆ. ಭಕ್ತಾದಿಗಳು ದೇವರಸೇವೆ ಮತ್ತು ದರ್ಶನ ಮಾಡಲು ಈ ಮಂಟಪದಲ್ಲಿ ಕೂಡುತ್ತಿದ್ದರು. ಕೆಲವು ಹೊಯ್ಸಳ ದೇವಾಲಯಗಳಲ್ಲಿ ಎರಡೆರಡು ಭಾವಣಿಗಳಿರುತ್ತಿದ್ದು ಅವುಗಳ ನಡುವಣ ಅಂತಸ್ತಿನಲ್ಲಿ ದೇವಾಲಯದ ಬೆಲೆಬಾಳುವ ವಸ್ತುಗಳನ್ನು ಶೇಖರಿಸಿಡಲಾಗುತ್ತಿತ್ತು.

ದೇವಾಲಯದ ಹೊರಗಿನ ಪ್ರಾಂಗಣದಲ್ಲಿ ಬಲಿಪೀಠ, ಗರುಡ ಅಥವಾ ನಂದಿಪೀಠ, ಧ್ವಜಸ್ತಂಭ ಮುಂತಾದ ಮೂಲವಿಗ್ರಹದ ನೇರ ನೋಟಕ್ಕೆ ಬೀಳುವಂತೆ ಇರುತ್ತವೆ. ದೇವಾಲಯಗಳ ವಿಸ್ತಾರ ಹೆಚ್ಚುತ್ತ ಹೋದಂತೆ ಪ್ರಾಂಗಣದಲ್ಲಿ ದೇವಿ, ಪರಿವಾರ ದೇವತೆಗಳು, ಸಪ್ತಮಾತೃಕೆಯರು, ನವಗ್ರಹಗಳು ಮೊದಲಾದವರಿಗೆ ಗುಡಿಗಳನ್ನೂ ಹೊರಪ್ರಾಕಾರದ ಗೋಡೆಗಳಿಗೆ ಹೊಂದಿಕೊಂಡಿರುವ ಕಂಬಗಳಿಂದ ಕೂಡಿದ ಕೈಸಾಲೆಯ ಹಿಂಬದಿಯಲ್ಲಿ ಯಾಗಶಾಲೆ, ಪಾಠಶಾಲೆ, ಉತ್ಸವ ವಾಹನಗಳ ಮಂಟಪ; ಮುಂತಾದುವನ್ನೂ ಪ್ರಾಂಗಣದ ಒಂದೆಡೆ ಕಲ್ಯಾಣಮಂಟಪ, ಈಶಾನ್ಯ ಮೂಲೆಯಲ್ಲಿ ಕಲ್ಯಾಣಿ ಅಥವಾ ದೇವಾಲಯದ ಕೊಳಗಳನ್ನು ನಿರ್ಮಿಸುವ ಪರಿಪಾಠ ರೂಢಿಗೆ ಬಂತು.

ಈ ಎಲ್ಲ ವಿಷಯಗಳಿಂದ ತಿಳಿದು ಬರುವಂತೆ ಹೊಯ್ಸಳ ದೇವಾಲಯಗಳು ದ್ರಾವಿಡ ಶೈಲಿಯ ತಳಹದಿಯ ಮೇಲೆ ಆಧಾರಿತವಾಗಿದ್ದರೂ ಹೊಯ್ಸಳ ವಾಸ್ತುಶಿಲ್ಪಿಗಳ ಸೃಜನಾತ್ಮಕ ಕೈಗಳಲ್ಲಿ ಅವು ತಮ್ಮದೇ ಆದ ವೈಶಿಷ್ಟ್ಯಗಳನ್ನು ಪಡೆದುಕೊಂಡವು. ದ್ರಾವಿಡ ವಾಸ್ತುಲಕ್ಷಣಗಳನ್ನು ತಮ್ಮ ಭಾವನೆಗಳಿಗೆ ಸರಿಹೊಂದುವಂತೆ ಮಾರ್ಪಡಿಸಿಕೊಂಡು ಈ ಶಿಲ್ಪಿಗಳು ಕಟ್ಟಡ ನಿರ್ಮಾಣ ಮಾಡಿದ್ದಾರೆ. ಈ ಭಾವನೆಗಳು ಮತ್ತು ತತ್ಫಲವಾದ ಮಾರ್ಪಾಡುಗಳು ವಾಸ್ತುಶಿಲ್ಪಿಯ ದೃಷ್ಟಿಕೋನಕ್ಕೆ ಸರಿಹೊಂದುವುಗ

ಳಾಗಿಲ್ಲದೆ ಕಲಾಕಾರನ ದೃಷ್ಟಿಕೋನಕ್ಕೆ ಸರಿಹೊಂದುವಂಥವು. ಪರ್ಸಿ ಬ್ರೌನರ ಮಾತುಗಳಲ್ಲಿ ಹೇಳುವುದಾದರೆ ಹೊಯ್ಸಳ ದೇವಾಲಯಗಳು ವಾಸ್ತು ನಿರ್ಮಾಣಗಳೆನ್ನುವುದಕ್ಕಿಂತ ಪ್ರಯೋಗಾತ್ಮಕ ಕಲಾಮಂದಿರಗಳಾಗಿವೆ. ದೇವಾಲಯದ ಹೊರಗೋಡೆಗಳ ಮೇಲಿನ ವಿಗ್ರಹಗಳು ಒಂದೊಂದೂ ತಮ್ಮದೇ ಆದ ಪ್ರತ್ಯೇಕ ಸನ್ನಿವೇಶವನ್ನು ಪ್ರತಿನಿಧಿಸುತ್ತವೆ. ಅವು ದಂತದ ಕೆಲಸಗಾರರು ನಿರ್ಮಿಸುವ ದೇವತಾಮೂರ್ತಿಗಳ ಪ್ರತ್ಯೇಕ ಸಂಪುಟಗಳನ್ನು ಕಲ್ಲಿನಲ್ಲಿ ದೊಡ್ಡ ಆಕಾರದಲ್ಲಿ ಪುನರಾವರ್ತನೆ ಮಾಡಿದಂತೆ ಭಾಸವಾಗುತ್ತವೆ. ಗೋಡೆಗಳ ಮೇಲೆ ಅಲಂಕರಣಕ್ಕಾಗಿ ಕೆತ್ತಿದ ಜೋತಾಡುತ್ತಿರುವ ಸರಪಳಿಗಳು; ಸೂರುಗಳ ತಳಭಾಗದಲ್ಲಿ ತಿರುಪುಮೊಳೆ-ತಿರುಪುಗಟ್ಟಿಗಳನ್ನು ಹೋಲುವ ಕೆತ್ತನೆಗಳು ಇವೆಲ್ಲ ಲೋಹಗಾರಿಕೆಯ ಕೆಲಸವನ್ನು ಹೋಲುತ್ತವೆ. ಪ್ರತಿಮೆಗಳ ದೇಹದ ಅಡಿಯಿಂದ ಮುಡಿಯವರೆಗೂ ತೋರಿಸಿರುವ ಆಭರಣಗಳ ವೈವಿಧ್ಯ, ನಯಗಾರಿಕೆ, ಚಿನ್ನದ ಕುಸುರಿ ಕೆಲಸವನ್ನು ಪ್ರತಿನಿಧಿಸುತ್ತದೆ. ಒಟ್ಟಿನಲ್ಲಿ ಕಲಾಭಿಮಾನಿದೇವಿ ಸರಸ್ವತಿಯ ನೆಚ್ಚಿನ ಪುತ್ರರಾದ ದಿವ್ಯಶಿಲ್ಪಿಗಳ ಹಾರ್ದಿಕ ನಿರ್ಮಾಣಗಳಾದ ಈ ದೇವಮಂದಿರಗಳು ಮೂರ್ತಿಶಿಲ್ಪಿಗಳ ವಾಸ್ತುನಿರ್ಮಾಣವೇ ಹೊರತು ವಾಸ್ತುಶಿಲ್ಪಿಗಳಿಂದ ನಿರ್ಮಿತವಾದ ಕಟ್ಟಡಗಳಲ್ಲ.

ಹೊಯ್ಸಳ ಶೈಲಿ ಎಂದು ಕರೆಯಬಹುದಾದ ಈ ಎಲ್ಲಾ ವೈಶಿಷ್ಟ್ಯಗಳನ್ನೂ ಉಳ್ಳ ಸು. 60 ದೇವಾಲಯಗಳು ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಉಳಿದುಬಂದಿವೆ. ಇವುಗಳಲ್ಲಿ ಅತಿಪ್ರಾಚೀನವಾದುದು ಬೇಲೂರಿನ ಚೆನ್ನಕೇಶವ ದೇವಾಲಯವೇ (1117). ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಾಲಯದಲ್ಲಿಯೂ (ಸು.1113) ಈ ಶೈಲಿಯ ಉಗಮದ ಸೂಚನೆಗಳು ಕಂಡುಬರುತ್ತವೆ. ಆದರೆ ಪೂರ್ಣ ರೂಪಣೆ ಇಲ್ಲ. ಹಳೇಬೀಡು, ಸೋಮನಾಥಪುರ, ಬಸರಾಳು, ನಾಗಮಂಗಲ, ಅರಸೀಕೆರೆ, ಹರಿಹರ, ನಂದಿತಾವರೆ, ಅರಳಗುಪ್ಪೆ, ರಾಮನಾಥಪುರ, ಮರಲೆ, ಬೆಳ್ಳೂರು, ನಾಗಲಾಪುರ, ನೊಣವಿನಕೆರೆ, ವಿಘ್ನಸಂತೆ, ನುಗ್ಗೇಹಳ್ಳಿ, ಹೊಸಹೊಳಲು, ಹಾರ್‍ನಹಳ್ಳಿ, ಹುಲ್ಲೇಕೆರೆ, ಜಾವಗಲ್ಲು, ಬೆಳವಾಡಿ, ತುರುವೇಕೆರೆ, ಭದ್ರಾವತಿ, ಜಿನನಾಥಪುರ ಮೊದಲಾದೆಡೆಗಳಲ್ಲಿ ಕಟ್ಟಿದ ಈ ವಿಶಿಷ್ಟ ಹೊಯ್ಸಳ ಶೈಲಿಯ ದೇವಾಲಯಗಳು **(ವಿವರಣೆಗಳಿಗೆ ಆಯಾ ಸ್ಥಳಗಳ ಶೀರ್ಷಿಕೆಗಳನ್ನು ನೋಡಿ)** ಬೆಳಕಿಗೆ ಬಂದಿವೆ. ಬೇಲೂರಿನಲ್ಲಿ ಸ್ಪಷ್ಟವಾಗಿ ರೂಪಿತವಾದ ಈ ಶೈಲಿ ಸುಮಾರು ಎರಡು ಶತಮಾನಗಳವರೆಗೆ ಮುಂದುವರಿಯಿತು. ತುಮಕೂರು ಜಿಲ್ಲೆಯ ವಿಘ್ನಸಂತೆಯಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯ (1286) ಪ್ರಾಯಶಃ ಈ ಶೈಲಿಯಲ್ಲಿ ರಚಿತವಾದ ಕೊನೆಯ ಕಟ್ಟಡ.

ಈ ಹೊಯ್ಸಳಶೈಲಿಯ ಪೂರ್ಣ ಅಭಿವ್ಯಕ್ತಿ ಇರದೆ ಹಳೆಯ ಚಾಳುಕ್ಯ ಹಾಗೂ ದಾಕ್ಷಿಣಾತ್ಯ ಶೈಲಿಯಲ್ಲಿ ಕಟ್ಟಿದ ಹೊಯ್ಸಳರ ಕಾಲದ ಅನೇಕ ದೇವಾಲಯಗಳೂ ಬೆಳಕಿಗೆ ಬಂದಿವೆ. ಜಗತಿ, ನಕ್ಷತ್ರಾಕಾರದ ತಳವಿನ್ಯಾಸ ಮುಂತಾದವು ಇಲ್ಲದೆ ಆಯಾಕಾರದ ತಳವಿನ್ಯಾಸದೊಡನೆ ಅಲ್ಲಲ್ಲಿ ಹಿನ್‌ಸರಿತ, ಮುನ್‌ಸರಿತವಷ್ಟನ್ನೇ ಹೊಂದಿದ್ದು, ಹೆಚ್ಚಿನ ಮಟ್ಟಿಗೆ ಅರೆಗಂಬಗಳು ಹಾಗೂ ಕುಡ್ಯ ಅಲಂಕರಣದ ಭಿತ್ತಿಗಳಿರುವ ದೇವಾಲಯಗಳು ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ವಿಶೇಷವಾಗಿಯೂ ಹಾಸನ, ತುಮಕೂರು, ಚಿಕ್ಕಮಗಳೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅಪರೂಪವಾಗಿಯೂ ಕಾಣಬರುತ್ತವೆ. ಇವುಗಳಲ್ಲೂ ಹೆಚ್ಚಿನವು ಬಳಪದ ಕಲ್ಲಿನಲ್ಲೇ ರಚಿತವಾಗಿದ್ದರೂ ಹೊಯ್ಸಳ ಶೈಲಿಯಲ್ಲಿನ ಶಿಲಾ ಅಲಂಕರಣ, ಶಿಲ್ಪಸಂಪತ್ತು ಇವುಗಳಲ್ಲಿ ಇರುವುದಿಲ್ಲ. ಆದರೆ ಕೆಲವು ದೇವಾಲಯಗಳಲ್ಲಿ ಹೊಯ್ಸಳ ಶೈಲಿಯ ಒಂದೆರಡು ಅಂಶಗಳು ಅಲ್ಲಲ್ಲಿ ಕಾಣಿಸಿಕೊಳ್ಳುವುದು ಅಪರೂಪವೇನಲ್ಲ. ಈ ಹೊಯ್ಸಳ-ಚಾಳುಕ್ಯ ಮಿಶ್ರ ಶೈಲಿಗೆ ಆನೆಕೊಂಡ, ಅಗ್ರಹಾರ ಬೆಳಗುಲಿ, ಅಘಲಯ, ಶಾಂತಿಗ್ರಾಮ, ಗೋವಿಂದನಹಳ್ಳಿ, ಅಮೃತಾಪುರದ ದೇವಾಲಯಗಳು ಹಾಗೂ ಹಳೇಬೀಡಿನ ಪಾರ್ಶ್ವನಾಥ ಬಸದಿ, ಬೆಳಗಾಂವಿಯ ಕೇದಾರೇಶ್ವರ ದೇವಾಲಯ ಮೊದಲಾದವುಗಳನ್ನು ಉದಾಹರಿಸಬಹುದು.

ಹಿಂದೆ ಚೋಳರಾಜ್ಯದ ಒಳಗಿದ್ದು ಅನಂತರ ಹೊಯ್ಸಳರ ವಶಕ್ಕೆ ಬಂದ ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳ ಭಾಗಗಳಲ್ಲಿ ಹಳೆಯ ದ್ರಾವಿಡ ಸಂಪ್ರದಾಯದ ಮುಂದುವರಿಕೆಯೂ ಕಂಡುಬರುತ್ತವೆ. ಇವುಗಳಲ್ಲಿ ಗ್ರ್ಯಾನೈಟ್ ಕಲ್ಲಿನಲ್ಲಿ ಕಟ್ಟಿದಂಥ ದೇವಾಲಯಗಳೂ ಅನೇಕವಿವೆ. ಜಗತಿಯಾಗಲೀ ಭಿತ್ತಿಯ ಮೇಲೆ ವಿಶಿಷ್ಟ ಶಿಲ್ಪಾಲಂಕರಣವಾಗಲೀ ಇವುಗಳಲ್ಲಿ ಇರುವುದಿಲ್ಲ. ತಲಕಾಡಿನ ಕೀರ್ತಿನಾರಾಯಣ, ಬೆಳಗೊಳದ ಜನಾರ್ದನ, ಕಂಬದಹಳ್ಳಿಯ ಒಂದೆರಡು ಬಸದಿಗಳು, ಶ್ರವಣಬೆಳಗೊಳದ ಬೆಟ್ಟಗಳ ಮೇಲಿರುವ ಹಲವು ಬಸದಿಗಳು, ರಾಘವಾಪುರ, ಮಾರೆಹಳ್ಳಿ ಮೊದಲಾದೆಡೆಯ ದೇವಾಲಯಗಳು ದ್ರಾವಿಡ ಸಂಪ್ರದಾಯದಲ್ಲಿ ಕಟ್ಟಿದ ಹೊಯ್ಸಳರ ಕಾಲದ ದೇವಾಲಯಗಳು.

ಒಟ್ಟಿನಲ್ಲಿ ಹೊಯ್ಸಳ ಸಾಮ್ರಾಜ್ಯದ ಸುಮಾರು ಎರಡೂವರೆ ಶತಮಾನದ ಅಸ್ತಿತ್ವದ ಅವಧಿಯಲ್ಲಿ ಕಟ್ಟಿದ 150ಕ್ಕೂ ಹೆಚ್ಚಿನ ದೇವಾಲಯಗಳು ಈಗ ಉಳಿದಿರುವುವಲ್ಲದೆ ಇನ್ನೂ ಅನೇಕ ದೇವಾಲಯಗಳು ಆ ಕಾಲದಲ್ಲಿ ಕಟ್ಟಲಾಗಿದ್ದುವು ಎಂಬುದಕ್ಕೆ ಶಾಸನಾಧಾರಗಳು ದೊರಕುತ್ತವೆ. ಈ ಅಸಂಖ್ಯಾತ ದೇಗುಲಗಳ ಸೃಷ್ಟಿಗೆ ಆ ಕಾಲದಲ್ಲಿದ್ದ ಶಾಂತ ಸಮೃದ್ಧ ಸ್ಥಿತಿ ಮತ್ತು ಧರ್ಮಶ್ರದ್ಧೆ ಮುಖ್ಯ ಕಾರಣ. ರಾಜರುಗಳೇ ಅಲ್ಲದೆ, ರಾಜವಂಶದ ಇತರರು, ಸಾಮಂತರು, ವಣಿಕರು, ವಣಿಕ್ ಸಂಘಗಳು, ವೃತ್ತಿ ಸಂಘಗಳು ಹಾಗೂ ಸಾಮಾನ್ಯರು ದೇವಾಲಯಗಳನ್ನು ಕಟ್ಟಿಸಿರುವರಲ್ಲದೆ, ಅವುಗಳ ಜೀರ್ಣೋದ್ಧಾರ ಮತ್ತು ಪೂಜಾದಿಗಳಿಗೂ ದತ್ತಿಗಳನ್ನು ನೀಡಿದ್ದಾರೆ. ಹೊಯ್ಸಳ ದೇವಾಲಯಗಳಲ್ಲಿ ಹೆಚ್ಚಿನವು ಶೈವ ಮತ್ತು ವೈಷ್ಣವ ಪಂಥಕ್ಕೆ ಸೇರಿದವು. ಇವಲ್ಲದೆ ಹಲವಾರು ಜೈನಬಸದಿಗಳೂ ಈ ಕಾಲದಲ್ಲಿ ಹುಟ್ಟಿದುವು.

ಹೊಯ್ಸಳರ ಕಾಲದ ಶಿಲ್ಪಗಳು ವಾಸ್ತುಕೃತಿಗಳಿಗೆ ಹೊಂದಿಕೊಂಡಂತೆ ಅವುಗಳ ಅಲಂಕರಣಾರ್ಥವಾಗಿಯೇ ಮಾಡಿದವುಗಳಾಗಿವೆ. ದೇವಾಲಯದ ಬಹುತೇಕ ಭಾಗಗಳನ್ನು ಶಿಲ್ಪಗಳಿಂದ ತುಂಬುವ ಈ ಕಾಲದ ವೈಶಿಷ್ಟ್ಯದಿಂದಾಗಿ ಹೆಚ್ಚಿನ ಶಿಲ್ಪಗಳು ಉಬ್ಬುಶಿಲ್ಪಗಳೂ ಧಾರ್ಮಿಕ ರೀತಿಯವೂ ಆಗಿರುತ್ತವೆ. ಹೊರಭಿತ್ತಿಗಳಲ್ಲಿರುವ ದೇವಶಿಲ್ಪಗಳು ಸಾಮಾನ್ಯವಾಗಿ ಪುರಾಣಗಳಲ್ಲಿ ಉಕ್ತವಾಗಿರುವ ಶೈವ ಅಥವಾ ವೈಷ್ಣವ ಮೂರ್ತಿಗಳು ಅಥವಾ ಹಲವು ಕಥೆಗಳ ನಿರೂಪಣೆಗಳು. ಅಪರೂಪವಾಗಿ ಪಂಚತಂತ್ರ ಮುಂತಾದೆಡೆಗಳಿಂದ ಆಯ್ದ ಕಥೆಗಳನ್ನೂ ಶಿಲ್ಪಿಸುವುದುಂಟು. ಹಿಂದು ದೇವಾಲಯಗಳಲ್ಲಿ ದೇವಶಿಲ್ಪಗಳ ಅಳವಡಿಕೆ ಹೆಚ್ಚು. ಆದರೆ ಜೈನದೇವಾಲಯಗಳಲ್ಲಿ ಅದು ಅಷ್ಟಾಗಿ ಕಾಣುವುದಿಲ್ಲ. ಗರ್ಭಗುಡಿಯಲ್ಲಿ ಸ್ಥಾಪಿತವಾಗುವ ಮೂರ್ತಿಗಳು ಪೂರ್ಣಶಿಲ್ಪಗಳಾದರೂ ಪ್ರಭಾವಳಿಯ ಹಿನ್ನೆಲೆಯನ್ನು ಒದಗಿಸಿ ಇವನ್ನೂ ಹೆಚ್ಚು ಕಡಿಮೆ ಉಬ್ಬುಶಿಲ್ಪಗಳಂತೆಯೇ ರೂಪಿಸುವುದು ರೂಢಿ. ಹೊಯ್ಸಳ ಕಾಲದ ಶಿಲ್ಪಗಳಲ್ಲಿ ಕಂಡುಬರುವ ಒಂದು ಮುಖ್ಯ ಅಂಶ ಅಲಂಕರಣಕ್ಕೆ ಹೆಚ್ಚಿನ ಗಮನ. ಶಿಲ್ಪಗಳಲ್ಲಿ ಆಭರಣಗಳು, ಉಡುಗೆಗಳು ಇತ್ಯಾದಿಗಳನ್ನು ಬಹಳ ನವುರಾಗಿ, ವಿವರವಾಗಿ, ಬಹುವಾಗಿ ಅಳವಡಿಸುವ ಪ್ರವೃತ್ತಿಯಿಂದಾಗಿ ಶಿಲ್ಪಗಳ ಅಂಗಾಂಗ ನಿರೂಪಣೆಯಲ್ಲಿ ಸಹಜತೆಯಾಗಲೀ, ವಿವಿಧ ಭಾವ ಪ್ರಕಟಣೆಯಾಗಲೀ ಕಂಡುಬರುವುದಿಲ್ಲ. ಇವುಗಳನ್ನು ಕಲಾಸಿದ್ಧಿಗಳೆನ್ನುವುದಕ್ಕಿಂತಲೂ ಉತ್ತಮ ಕಸಬುದಾರರ ನಿರೂಪಣೆಗಳೆನ್ನಬಹುದೆಂದು ಒಬ್ಬ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಮಾತುಗಳು ವಿಶೇಷವಾಗಿ ದೇವ, ಮಾನವ

ಶಿಲ್ಪಗಳಿಗೇ ಅನ್ವಯಿಸುತ್ತವೆ. ಹೊಯ್ಸಳ ಶಿಲ್ಪಿಗಳು ರಚಿಸಿರುವ ಪ್ರಾಣಿ, ಲತೆ ಮುಂತಾದ ಶಿಲ್ಪಗಳಾದರೋ ಬಹು ಸ್ವಾಭಾವಿಕವಾಗಿ, ಸಮಂಜಸವಾಗಿ ಹಲವು ಬಾರಿ ಶಕ್ತಿಯುತವಾಗಿ ನಿರೂಪಿತವಾಗಿರುತ್ತವೆ. ಹೊಯ್ಸಳ ಶಿಲ್ಪಸೃಷ್ಟಿಯ ಮೋಡಿ ಬೆರಗುಗೊಳಿಸುವಂಥದು. ಒಂದೊಂದೇ ಶಿಲ್ಪಗಳಲ್ಲಿರುವ ಕುಸುರಿಕೆಲಸ, ವೈವಿಧ್ಯಮಯ ವಿನ್ಯಾಸಗಳು ಹಾಗೂ ಒಟ್ಟಾಗಿ ದೇವಾಲಯಗಳ ಮೇಲೆ ವ್ಯವಸ್ಥಿತ ರೀತಿಯಲ್ಲಿ ಜೋಡಣೆಗೊಂಡಾಗ ಅವು ನೋಡುಗನ ಮೇಲೆ ಮರೆಯಲಾಗದ ಪ್ರಭಾವ ಉಂಟುಮಾಡುತ್ತವೆ.

ಕಲಾನಿರ್ಮಾಣಗಳಲ್ಲಿ ಅಮೋಘವೂ ಬಹಳ ಸುಂದರವೂ ಆದ ಶಿಲಾಬಾಲಿಕೆಯರೆಂಬ ಅಭಿಧಾನದಿಂದ ಜಗತ್ಪ್ರಸಿದ್ಧವಾದ, ಕಲಾ ಇತಿಹಾಸಕಾರರಿಂದ ಅನುಪಮ ಕೃತಿಗಳೆಂದು ಹೊಗಳಿಸಿಕೊಂಡ ಸಾಲಭಂಜಿಕೆ ಅಥವಾ ಮದನಿಕೆಯರ ವಿಗ್ರಹಗಳು ಯಾವುದೇ ಕಾಲದ, ಯಾವುದೇ ದೇಶದ ಶಿಲ್ಪಗಳ ಜೊತೆಯಲ್ಲಿಟ್ಟರೂ ಸ್ವಂತಿಕೆಯನ್ನೂ ಅಮರತ್ವವನ್ನೂ ಸಂಪಾದಿಸಿಕೊಳ್ಳಬಲ್ಲವು. ಕಂಬಗಳ ಅಗ್ರಭಾಗದಲ್ಲಿ ಬೋದಿಗೆ ಮತ್ತು ಭಾವಣಿಗಳ ನಡುವೆ ಅಡ್ಡದೂಲಗಳಿಗೆ ಆಧಾರವಾಗಿರುವಂತೆ ಮುಂಬಾಗಿ ನಿಲ್ಲುವಂತೆ ಜೋಡಿಸಿರುವ ಈ ಮೂರ್ತಿಗಳ ನಿರೂಪಣೆಯಲ್ಲಿ ಕೇವಲ ಕೆತ್ತನೆಯ ಚಾತುರ್ಯ ಮಾತ್ರವಲ್ಲ, ಭೂಮಟ್ಟದಿಂದ 10–15 ಅಡಿಗಳೆತ್ತರದಲ್ಲಿ ಸು. $30^0$ ಕೋನದಲ್ಲಿ ಮುಂಬಾಗಿನಿಂತ ಪ್ರತಿಮೆಗಳು ಕೆಳಗೆ ನಿಂತ ನೋಟಕರ ದೃಷ್ಟಿಕೋನಗಳಿಂದ ತಮ್ಮ ಅಂಗಾಂಗಗಳ ಪ್ರಮಾಣವನ್ನು ನೈಜವಾಗಿ ಕಾಣುವಂತೆ ಪ್ರದರ್ಶಿಸುತ್ತಿರುವ ಹಾಗೆ ಶಿಲ್ಪಿ ಅವನ್ನು ರೂಪಿಸಿದ್ದಾನೆ. ಅನೇಕ ರೀತಿಯ ಆಭರಣಗಳನ್ನು ದೇಹಾದ್ಯಂತ ಧರಿಸಿಕೊಂಡು ಅರೆಬೆತ್ತಲೆಯಾದ ಈ ಸ್ತ್ರೀವಿಗ್ರಹಗಳಲ್ಲಿ ಆಭರಣಗಳ ಹಿಂದಿನಿಂದ ಯೌವನಭರಿತ ಪ್ರೌಢತರುಣಿಯರ ಸೌಂದರ್ಯದ ಹೊನಲು ಹೊರನುಗ್ಗಿ ಹರಿಯುತ್ತಿರುವಂತೆ ಕಾಣುತ್ತದೆ. ಸುಮಾರು ಒಂದು ನೂರು ಹೊಯ್ಸಳ ದೇವಾಲಯಗಳ ಪೈಕಿ ಕೇವಲ 8–10 ಗುಡಿಗಳಲ್ಲಿ ಮಾತ್ರ ಈ ಮದನಿಕೆಯರನ್ನು ಕಡೆದಿದ್ದಂತೆ ಕಾಣಬರುತ್ತದೆ. ಬಳ್ಳಿಗಾಮೆಯ ತ್ರಿಪುರಾಂತಕೇಶ್ವರ, ನಾಗಲಾಪುರದ ಚೆನ್ನಕೇಶವ ಮಂದಿರಗಳಲ್ಲಿ ಮೊದಲಿಗೆ ಮದನಿಕಾ ವಿಗ್ರಹಗಳಿದ್ದರೂ ಈಗ ಕಣ್ಮರೆಯಾಗಿವೆ. ಉಂಡಿಗನಹಾಳದ ಚಾಮುಂಡೇಶ್ವರಿ, ಮರಲೆಯ ಕೇಶವ, ಹಳೇಬೀಡಿನ ಹೊಯ್ಸಳೇಶ್ವರ, ಕಿಕ್ಕೇರಿಯ ಬ್ರಹ್ಮೇಶ್ವರ ಮಂದಿರಗಳಲ್ಲಿ ಕೆಲವು ವಿಗ್ರಹಗಳು ಇನ್ನೂ ಉಳಿದುಬಂದಿವೆ. ಆದರೆ ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಮೊದಲು ಇದ್ದಿರಬಹುದಾದ 44ರಲ್ಲಿ 42 ಅಪೂರ್ವ ಸೌಂದರ್ಯನಿಧಿಗಳಾದ ಶಿಲಾಬಾಲಿಕೆಯರು ಇನ್ನೂ ಉಳಿದುಬಂದಿರುವುದು ಮಹತ್ವದ ಸಂಗತಿ.

ಮದನಿಕಾವಿಗ್ರಹಗಳು ಸಾಮಾನ್ಯವಾಗಿ ಸ್ತ್ರೀ ವಿಗ್ರಹಗಳು. ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಒಬ್ಬ ವೇಣುಲೋಲ ಮತ್ತು ಇಬ್ಬರೂ ಮೃದಂಗ ವಾದಕರ ವಿಗ್ರಹಗಳು ಮಾತ್ರ ಪುರುಷರಂತೆ ಕಂಡುಬಂದರೂ ಅವು ಸಹ ಪುರುಷ ವೇಷಧಾರಿ ಸ್ತ್ರೀಮೂರ್ತಿಗಳೇ ಇರಬೇಕೆಂದೆನಿಸುತ್ತದೆ. ನವರಂಗದ ಕಂಬದ ಮೇಲಿನ ಒಂದು ಮೂರ್ತಿ ಕಿರೀಟ ಧರಿಸಿದ್ದರೂ ಹೊರವಲಯದ ಮೂರ್ತಿಗಳಲ್ಲಿ ವೇಣುಗಾಯಕ ಕೃಷ್ಣನಿರಬಹುದೆಂದು ಸೂಚಿಸಲಾಗಿದ್ದರೂ ಕಪಾಲಪಙ್ತಿ ಭೂಷಿತವಾದ ಕಿರೀಟ ಧರಿಸಿ ಎಡಗೈಯಲ್ಲಿ ಕಪಾಲದಂಡ ಹಿಡಿದ ಮೂರ್ತಿಯನ್ನು ಭೈರವಿಯೆಂದು ಗುರುತಿಸಿದ್ದರೂ ವೀಣಾಪುಸ್ತಕಪಾಣಿಯನ್ನು ವಿದ್ಯಾಕಲಾಭೂಮಿಯ ಸರಸ್ವತಿಯಿರಬಹುದೆಂದೂಹಿಸಿದ್ದರೂ ಎಲ್ಲ ವಿಗ್ರಹಗಳು ಕೆಲಬಾರಿ ದೇವತಾರೂಪ ಧರಿಸಿರುವ ನೃತ್ಯಸಂಗೀತಮಗ್ನರಾದ ಮಾನಿನಿಯರೆಂಬುದು ವಿದ್ವಾಂಸರ ಅಭಿಪ್ರಾಯ. ಶಿಲ್ಪಿ ತನ್ನ ವಾಸ್ತುಕಾರ್ಯದಲ್ಲಿ ಕಂಬಗಳ ಭಾಗವಾಗಿ ಭಾವಣಿಗೆ ಆಧಾರವೆಂಬ ನೆವದಿಂದ ಈ ಭುವನಮೋಹಕ ಸುಂದರಿಯವರ ಪ್ರತಿಮೆಗಳನ್ನು ಕಡೆಯುವುದರ ಮೂಲಕ ತನ್ನ ಉನ್ನತ ಕೈಚಳಕದ ಪ್ರದರ್ಶನಕ್ಕೆ ಒಂದು ಸದವಕಾಶ ಪಡೆದುಕೊಂಡಿದ್ದಾನೆ. ಅತಿಭಂಗ–ತ್ರಿಭಂಗ ಮುದ್ರೆಗಳಲ್ಲಿ ಹಲವಿಧ ವ್ಯಾಪಾರಗಳಲ್ಲಿ ನಿರತರಾಗಿರುವ ಮದನಿಕೆಯರು, ಫಲಕಗಳ ಕೆಳಭಾಗದಲ್ಲಿ ಮದನಿಕೆಯರ ವಿವಿಧ ಚಟುವಟಿಕೆಗಳಲ್ಲಿ ಸಹಾಯ ನೀಡುತ್ತಿರುವ ಸಣ್ಣ ಪ್ರಮಾಣದಲ್ಲಿ ಕಡೆಯಲಾದ ಪರಿಚಾರಕವರ್ಗ, ಮದನಿಕೆಯರ ತಲೆಯ ಮೇಲೆ ಕಮಾನಿನಂತೆ, ಲತಾತೋರಣಗಳಂತೆ, ಅವರ ದೈವೀನಟನೆಗೆ ಪೂರಕವಾಗಿ ಪ್ರಭಾವಳಿಯಂತೆ ಕಾಣುವ ವೃಕ್ಷಶಾಖೆಗಳು– ಹೀಗೆ ಈ ಚಾಚುವಿಗ್ರಹ ಫಲಕಗಳ ಭಾಗಗಳನ್ನು ವಿಶ್ಲೇಷಿಸಬಹುದಾಗಿದೆ.

ಈ ವಿಗ್ರಹಗಳ ಭಾವಗಳನ್ನು ವಿಶ್ಲೇಷಿಸುವಾಗ ನವರಸಗಳ ನಿರೂಪಣೆಯನ್ನು ಅವುಗಳಲ್ಲಿ ಕಂಡವರಿದ್ದಾರೆ. ಒಂದೊಂದು ಫಲಕದಲ್ಲೂ ಒಂದಕ್ಕಿಂತ ಹೆಚ್ಚು ರಸಗಳ ನಿರೂಪಣೆ ಕಂಡುಬಂದರೂ ಶೃಂಗಾರರಸ ಪ್ರಧಾನವಾಗಿರುತ್ತದೆ. ಸನ್ನಿವೇಶ, ವಿಶಿಷ್ಟಭಾವನಿರೂಪಣೆಗೆ ಹೊಂದುವಂತೆ ಶಿಲ್ಪಿಗಳು ವಿಗ್ರಹಗಳನ್ನು ಮುಮ್ಮುಖವಾಗಿಯೋ ಪಾರ್ಶ್ವನೋಟಕವಾಗಿಯೋ ದೇಹದ ಕೆಳಭಾಗ ಮುಮ್ಮುಖವಾಗೂ ಮೇಲ್ಭಾಗ ಪಾರ್ಶ್ವನೋಟಕವಾಗಿಯೂ ತೋರಿಸಿರುವುದರಿಂದ ಪ್ರತಿಮೆಗಳು ಸಹಜವಾಗಿವೆ ಮತ್ತು ದೇವತಾಮೂರ್ತಿ ನಿರೂಪಣೆಯಲ್ಲಿರುವ ಪೆಡಸು ಕಂಡು ಬರುವುದಿಲ್ಲ. **(ಬಿ.ಕೆ.ಜಿ.)**

**ಸಾಹಿತ್ಯ ಮತ್ತು ಲಲಿತಕಲೆ:** ಸಾಮಾಜಿಕ ನೆಮ್ಮದಿ ನೆಲೆಯೂರಿದ್ದ ಹೊಯ್ಸಳ ಯುಗ ಸಾಹಿತ್ಯ, ಕಲೆ ಇವುಗಳ ಸಂವರ್ಧನೆಯ ಕಾಲ. ಹೊಯ್ಸಳ ಅರಸರು ಬೇರೆ ಸಂತತಿಯ ಕೆಲವು ರಾಜರು ಹೇಳಿಕೊಂಡಿರುವಂತೆ ತಾವೇ ಗ್ರಂಥ ರಚನೆಗೆ ಕೈಹಾಕದಿದ್ದರೂ ಕವಿಗಳಿಗೂ ದಾರ್ಶನಿಕರಿಗೂ ವಿಶೇಷ ಪ್ರೋತ್ಸಾಹ ನೀಡಿದರು. ಇವರ ಕಾಲದಲ್ಲಿ ಧರ್ಮ, ದರ್ಶನ, ಪುರಾಣ, ಗಣಿತ, ವೈದ್ಯ, ವ್ಯಾಕರಣ ಮೊದಲಾದ ಶಾಸ್ತ್ರಗ್ರಂಥಗಳಲ್ಲದೆ ಹಲವು ಕಾವ್ಯಗಳೂ ಚಂಪೂ, ರಗಳೆ, ಷಟ್ಪದಿ, ನಾಟಕ, ದ್ವಿಪದಿ, ವಚನ ಮೊದಲಾದ ಪ್ರಕಾರಗಳಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಭಾಷೆಗಳಲ್ಲಿ ರಚಿತವಾದವು. ಹೊಯ್ಸಳರ ಕಾಲದಲ್ಲಿ ರಚಿತವಾದ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಗ್ರಂಥಗಳು ತತ್ಕಾಲೀನ ಸಾಮಾಜಿಕ ಸ್ಥಿತಿಗತಿಗಳು, ನಂಬಿಕೆ ಮತ್ತು ನಡವಳಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುತ್ತವೆ.

ರಾಮಚಂದ್ರಚರಿತ ಪುರಾಣದ (ಪಂಪರಾಮಾಯಣ) ಕರ್ತೃವಾದ ನಾಗಚಂದ್ರ ಹೊಯ್ಸಳ ಅರಸನಾದ ಒಂದನೆಯ ಬಲ್ಲಾಳ ಅಥವಾ ವಿಷ್ಣುವರ್ಧನನ ಆಸ್ಥಾನದಲ್ಲಿದ್ದನೆಂದು ತಿಳಿದುಬಂದಿದೆ. ಈತ ಕಲ್ಯಾಣ ಚಾಳುಕ್ಯ ಇಮ್ಮಡಿ ಸೋಮೇಶ್ವರನ ಆಸ್ಥಾನದಲ್ಲಿದ್ದಿರಬೇಕೆಂದೂ ಒಂದು ಅಭಿಪ್ರಾಯ ಇದೆ. ನಾಗಚಂದ್ರ ತನ್ನನ್ನು (ಗ್ರಂಥ: ಕಂತಿಹಂಪನ ಸಮಸ್ಯೆಗಳು) ಅಭಿನವಪಂಪನೆಂದು ಕರೆದುಕೊಂಡಿದ್ದಾನೆ. ಕಂತಿಯೆಂಬ ಕವಯಿತ್ರಿಯೊಬ್ಬಳಿದ್ದಳೆಂದೂ ಅವಳು ನಾಗಚಂದ್ರನ ಸಮಕಾಲೀನಳಾಗಿದ್ದಿರಬೇಕೆಂದೂ ಸಹ ಒಂದು ಪ್ರತೀತಿ ಇದೆ.

ಹರಿಹರ ಮತ್ತು ರಾಘವಾಂಕ ಒಂದನೆಯ ನರಸಿಂಹನ (1142–73) ಸಮಕಾಲೀನರಾಗಿದ್ದಿರಬೇಕೆಂದು ಊಹೆ.

ಇಮ್ಮಡಿ ವೀರಬಲ್ಲಾಳನ ಕಾಲದ ಸುಪ್ರಸಿದ್ಧ ಕವಿಗಳು ಅನೇಕ ಗ್ರಂಥಗಳನ್ನು ರಚಿಸಿದರು. ಯಶೋಧರಚರಿತೆ ಮತ್ತು ಅನಂತನಾಥಪುರಾಣ ಎಂಬ ಪ್ರಸಿದ್ಧ ಗ್ರಂಥಗಳನ್ನು ರಚಿಸಿದ ಜನ್ನ ಇವನ ಆಸ್ಥಾನಕವಿ. ವೀರಬಲ್ಲಾಳ ಇವನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಿದ. ಇವನ ಕಾಲದಲ್ಲಿ ಕೆರೆಯಪದ್ಮರಸ ದೀಕ್ಷಾಬೋಧೆಯನ್ನೂ ನೇಮಿಚಂದ್ರನು ನೇಮಿನಾಥ ಪುರಾಣವನ್ನೂ ಆಚಣ್ಣ ಎಂಬುವನು ವರ್ಧಮಾನ

ಪುರಾಣವನ್ನೂ ರಚಿಸಿದರು. ಮತ್ತೊಬ್ಬ ಪ್ರಸಿದ್ಧ ವಿದ್ವಾಂಸನೂ ಕವಿಯೂ ಆದ ರಾಜಾದಿತ್ಯ ಕ್ಷೇತ್ರಗಣಿತ, ವ್ಯವಹಾರಗಣಿತ ಮತ್ತು ಲೀಲಾವತಿ ಎಂಬ ಗ್ರಂಥಗಳನ್ನು ರಚಿಸಿದ. ಕನ್ನಡದಲ್ಲಿ ಮೊಟ್ಟಮೊದಲನೆಯ ಬ್ರಾಹ್ಮಣ ಕವಿಯೆಂದು ಪ್ರಖ್ಯಾತನಾಗಿರುವ ಜಗನ್ನಾಥವಿಜಯ ಕಾವ್ಯದ ಕರ್ತೃ ರುದ್ರಭಟ್ಟನ ಪೋಷಕ ವೀರಬಲ್ಲಾಳನ ಸಚಿವ ಚಂದ್ರಮೌಳಿ, ಕಬ್ಬಿಗರ ಕಾವ ಗ್ರಂಥದ ಕರ್ತೃವಾದ ಆಂಡಯ್ಯ ಬಲ್ಲಾಳನ ಸಮಕಾಲೀನ. ಅಲ್ಲದೆ ವೀರ ಬಲ್ಲಾಳನ ಸಚಿವರಾದ ಬೂಚಿರಾಜ ಮತ್ತು ಚಂದ್ರಮೌಳಿ ಇವರು ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಗದ್ಯಪದ್ಯಗಳನ್ನು ರಚಿಸಿದ ರೆಂದು ತಿಳಿದುಬರುತ್ತದೆ. ಅರಸೀಕೆರೆ ತಾಲ್ಲೂಕಿನ ಅನೇಕ ಶಾಸನಗಳನ್ನು ಉತ್ಕೃಷ್ಟ ಭಾಷೆಯಲ್ಲಿ ರಚಿಸಿರುವ ತ್ರಿವಿಕ್ರಮಪಂಡಿತ ಉದ್ದಾಮಕವಿ ಯಾಗಿದ್ದನೆಂದು ತಿಳಿಯುತ್ತದೆ. ಆದರೆ ಇವನು ರಚಿಸಿದ ಗ್ರಂಥಗಳು ಇದುವರೆಗೂ ದೊರೆತಿಲ್ಲ.

ನರಸಿಂಹನ ಅಮಾತ್ಯ ಪೋಲಾಳ್ವದಂಡನಾಯಕ ಹರಿಚರಿತ ಎಂಬ ಗ್ರಂಥವನ್ನು ರಚಿಸಿದನು. ಸೋಮನಾಥ ಮತ್ತು ಚಿದಾನಂದರು ಈ ಕಾಲದ ಇತರ ಮುಖ್ಯರು. ಜನ್ನನ ಸಹೋದರಿಯ ಗಂಡನಾದ ಮಲ್ಲಿಕಾರ್ಜುನ ಸೂಕ್ತಿಸುಧಾರ್ಣವ (ಕನ್ನಡದ ಮೊದಲ ಸಂಕಲನ ಗ್ರಂಥ) ಎಂಬ ಗ್ರಂಥವನ್ನು ರಚಿಸಿದ. ಮಲ್ಲಿಕಾರ್ಜುನನ ಸುತನಾದ ಕೇಶಿರಾಜ ಸುಪ್ರಸಿದ್ಧ ಶಬ್ದಮಣಿದರ್ಪಣದ ಕರ್ತೃ.

ಹೊಯ್ಸಳರ ಕಾಲದಲ್ಲಿ ಸಂಸ್ಕೃತ ಭಾಷೆಯಲ್ಲೂ ಅನೇಕ ಗ್ರಂಥಗಳು ರಚನೆಯಾದವು. ರಾಮಾನುಜಾಚಾರ್ಯ ಮತ್ತು ಅವರ ಅನುಯಾಯಿಗಳಿಂದ ವೈಷ್ಣವ ಪಂಥವನ್ನು ಪ್ರತಿಪಾದಿಸುವ ಗ್ರಂಥಗಳು ರಚಿಸಲ್ಪಟ್ಟವು. ತಲೆಮಾರುಗಳ ಪರ್ಯಂತ ಹೊಯ್ಸಳ ಆಸ್ಥಾನದಲ್ಲಿದ್ದು ವಿದ್ಯಾಚಕ್ರವರ್ತಿ ಗಳೆಂದು ಪ್ರಸಿದ್ಧರಾಗಿದ್ದ ಮನೆತನದ ಕವಿಗಳೇನಕರು ಸಂಸ್ಕೃತದಲ್ಲಿ ಗ್ರಂಥಗಳನ್ನು ರಚಿಸಿದರು. ಎರಡನೆಯ ವೀರಬಲ್ಲಾಳನ ಸಮಕಾಲೀನನಾಗಿದ್ದ ಒಂದನೆಯ ವಿದ್ಯಾಚಕ್ರವರ್ತಿ ಅನೇಕ ಶಾಸನಗಳನ್ನು ರಚಿಸಿರುವನು. ಒಂದನೆಯ ವಿದ್ಯಾಚಕ್ರವರ್ತಿಯ ಮಗನಾದ ವೈದ್ಯನಾಥ ಎರಡನೆಯ ನರಸಿಂಹನ ಆಸ್ಥಾನದಲ್ಲಿದ್ದ. ವೈದ್ಯನಾಥನ ಮಗನಾದ ಎರಡನೆಯ ವಿದ್ಯಾಚಕ್ರವರ್ತಿ ಎರಡನೆಯ ನರಸಿಂಹ ಮತ್ತು ಸೋಮೇಶ್ವರನ ಸಮಕಾಲೀನನಾಗಿದ್ದು ಗದ್ಯಕರ್ಣಾಮೃತ ಎಂಬ ಗ್ರಂಥವನ್ನು ರಚಿಸಿದ. ಎರಡನೆಯ ವಿದ್ಯಾಚಕ್ರವರ್ತಿಯ ಮೊಮ್ಮಗನಾದ ಮೂರನೆಯ ವಿದ್ಯಾಚಕ್ರವರ್ತಿ ರುಕ್ಮಿಣಿ ಕಲ್ಯಾಣ ಎಂಬ ಕಾವ್ಯವನ್ನು ರಚಿಸಿದ.

ಸಾಹಿತ್ಯರಂಗದಲ್ಲಿ ಹೊಯ್ಸಳರ ಕಾಲವು ವೈಭವಯುತವಾಗಿದ್ದಂತೆ ಚಿತ್ರಕಲೆ, ಸಂಗೀತ ಮತ್ತು ನೃತ್ಯಗಳಲ್ಲೂ ಅವರ ಕಾಲದ ಸಂಸ್ಕೃತಿ ಅಭಿವ್ಯಕ್ತವಾಗಿದೆ. ಲಲಿತಕಲೆಗೆ ಸಂಬಂಧಿಸಿದಂತೆ ಹೊಯ್ಸಳರ ಕಾಲದ ಹೆಚ್ಚು ಮಾಹಿತಿ ದೊರೆಯುವುದಿಲ್ಲ. ಶಿಲ್ಪಕಲೆ ಮತ್ತು ಶಾಸನಗಳಿಂದ ದೊರೆಯುವ ಆಧಾರಗಳು ಹೊಯ್ಸಳರ ಕಾಲದ ಲಲಿತಕಲೆಯ ಬೆಳವಣಿಗೆಯನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿವೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಸುಂದರ ದೇವಮಂದಿರಗಳು ವಿವಿಧ ಭಂಗಿಯ ನೃತ್ಯ ಮತ್ತು ಸೂಕ್ಷ್ಮ ಕೆತ್ತನೆಯ ಶಿಲ್ಪಗಳಿಂದಲಂಕೃತವಾಗಿವೆ. ಅನೇಕ ಶಿಲ್ಪಾಕೃತಿಗಳು ವೀಣೆ, ಕೋಲು, ತಾಳ, ಮದ್ದಲೆ ಮತ್ತು ಇತರ ತಂತೀವಾದ್ಯಗಳ ಸಹಿತವಾಗಿ ಕೆತ್ತಲ್ಪಟ್ಟಿವೆ. ಹೊಯ್ಸಳರ ಕಾಲದಲ್ಲಿ ಜನರು ಸಂಗೀತ ಮತ್ತು ನೃತ್ಯದಲ್ಲಿ ಹೊಂದಿದ್ದ ಅಭಿರುಚಿಯನ್ನು ಗುರುತಿಸಿ ಕೊಳ್ಳಲು ಶಿಲ್ಪಕಲೆ ಹೆಚ್ಚುಮಟ್ಟಿಗೆ ಸಹಕಾರಿಯಾಗುತ್ತದೆ. ಹೊಯ್ಸಳರ ಕಾಲದ ಚಿತ್ರಕಲೆಗೆ ಸಂಬಂಧಿಸಿದಂತೆ ನಮಗೆ ಹೆಚ್ಚು ಮಾಹಿತಿ ದೊರೆಯುವು ದಿಲ್ಲ. ಆದರೆ ಬಣ್ಣದ ತಯಾರಿಕೆ ಮತ್ತು ಚಿತ್ರಲೇಪನದಲ್ಲಿ ನುರಿತ ಕಲಾವಿದರಿದ್ದರು. ಬಣ್ಣಬಣ್ಣದ ಬಟ್ಟೆಯ ತಯಾರಿಕೆಯನ್ನೇ ಕಸಬನ್ನಾಗಿ ಹೊಂದಿದ್ದ ಜನರು ಸಲ್ಲಿಸಬೇಕಾಗಿದ್ದ ಬಣ್ಣಿಗೆ ಎಂಬ ತೆರಿಗೆಯನ್ನು ಕುರಿತು ಹಲವು ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ಹಲವು ದೇವಾಲಯಗಳಲ್ಲಿ ಭಿತ್ತಿಚಿತ್ರಗಳಿದ್ದುವೆಂದು ತಿಳಿದುಬರುತ್ತದೆ. ಬೇಲೂರು ಮತ್ತು ಹಳೇಬೀಡಿನ ದೇವಾಲಯಗಳ ಶಿಲ್ಪಗಳು ಬಣ್ಣಗಳಿಂದ ಅಲಂಕೃತವಾಗಿದ್ದವೆಂದೂ ಈ ದೇವಾಲಯಗಳ ಬಣ್ಣದ ಮೆರುಗನ್ನು ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸಲು ಮೇಣದ ಬಟ್ಟೆಯನ್ನು ಉಪಯೋಗಿಸಲಾಗುತ್ತಿತ್ತೆಂದೂ ಹಳೇಬೀಡಿನ ಪುರಾತನ ಚರಿತೆಯಿಂದ ತಿಳಿದುಬರುತ್ತದೆ. ಅನೇಕ ಕವಿಗಳು ಚಿತ್ರಕಲೆಯಲ್ಲಿ ಪರಿಣತರಾದ ಕಲಾವಿದರ ಹೆಸರುಗಳನ್ನು ಸ್ಮರಿಸಿರುವರು. ರಾಜಧಾನಿ ಮತ್ತು ಇತರ ಮುಖ್ಯ ಪಟ್ಟಣಗಳಲ್ಲೂ ದೇವಾಲಯಗಳಲ್ಲೂ ನೃತ್ಯಕ್ಕಾಗಿಯೇ ಸಜ್ಜಾದ ಹಜಾರಗಳಿದ್ದು ಅವುಗಳ ಗೋಡೆಗಳು ಬಣ್ಣಗಳಿಂದ ಬಿಡಿಸಿದ್ದ ನೃತ್ಯಭಂಗಿಯ ಚಿತ್ರಕಲೆಗಳಿಂದ ಕೂಡಿದ್ದವೆಂದು ತಿಳಿದುಬರುತ್ತದೆ.

ಸಂಗೀತ ಮತ್ತು ನೃತ್ಯಗಳು ಹೆಚ್ಚು ಜನಪ್ರಿಯವಾಗಿದ್ದವು. ಬೇಲೂರು, ಹಳೇಬೀಡು ಮತ್ತು ಸೋಮನಾಥಪುರ ದೇವಾಲಯದಲ್ಲಿ ಕೆತ್ತಿರುವ ನೃತ್ಯಕಲಾಶಿಲ್ಪಗಳು ರಸ, ರಾಗ ಮತ್ತು ವಿವಿಧ ಭಂಗಿಗಳಲ್ಲಿ ವಿರಾಜಿಸುತ್ತಿವೆ. ರಾಜಾಸ್ಥಾನಗಳು ಮತ್ತು ದೇವಾಲಯಗಳಲ್ಲಿ ಸರ್ವೇಸಾಮಾನ್ಯವಾಗಿ ನೃತ್ಯಕಲೆಯ ಏರ್ಪಾಟಿರುತ್ತಿತ್ತು. ಸಂಗೀತ ಮತ್ತು ನೃತ್ಯ ಧಾರ್ಮಿಕ ಜೀವನ ಮತ್ತು ಭಕ್ತಿಭಾವದ ಅಂಗವಾಗಿದ್ದುದರಿಂದ ಮುಖ್ಯ ದೇವಾಲಯ ಗಳಲ್ಲಿ ನರ್ತನಕ್ಕೆ ವ್ಯವಸ್ಥೆ ಮಾಡಿ ನರ್ತಕಿಯರ ಜೀವನಕ್ಕಾಗಿ ಭೂಮಿಯನ್ನು ಸರ್ವಮಾನ್ಯವಾಗಿ ನೀಡಲಾಗುತ್ತಿತ್ತು. ಮುಖ್ಯ ಪಟ್ಟಣಗಳಲ್ಲಿ ನೃತ್ಯಕ್ಕೇ ಮೀಸಲಾದ ದೊಡ್ಡ ಕಟ್ಟಡಗಳೂ ಸಹ ಇದ್ದವು. ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಪಟ್ಟಣಶೆಟ್ಟಿಯಾಗಿದ್ದ ನಾಗದೇವ ಎಂಬುವನು ಶ್ರವಣಬೆಳಗೊಳ ದಲ್ಲಿ ದೊಡ್ಡ ನೃತ್ಯಕಲಾಮಂದಿರವನ್ನು ಕಟ್ಟಿಸಿದನೆಂದು ಒಂದು ಶಾಸನದಿಂದ ತಿಳಿದುಬರುತ್ತದೆ.

ಹೊಯ್ಸಳ ರಾಜರು ಸಂಗೀತ ಮತ್ತು ನೃತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ವಿಷ್ಣುವರ್ಧನನ ಪಟ್ಟದ ರಾಣಿಯಾದ ಶಾಂತಲೆ ಸಂಗೀತ ಮತ್ತು ನೃತ್ಯದಲ್ಲಿ ವಿಶೇಷ ಅಭಿರುಚಿ ಮತ್ತು ಪರಿಣತೆಯನ್ನು ಪಡೆದಿದ್ದ ಳೆಂದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಶಾಂತಲದೇವಿಯನ್ನು ನಾಟ್ಯ ಸರಸ್ವತಿ ಎಂದು ಸಂಬೋಧಿಸಲಾಗಿದೆ. ಇಮ್ಮಡಿ ವೀರಬಲ್ಲಾಳ ಸಂಗೀತ ಮತ್ತು ನೃತ್ಯದಲ್ಲಿ ವಿಶೇಷ ಅಭಿರುಚಿ ಹೊಂದಿದ್ದು ಕಲಾವಿದರಿಗೆ ಪ್ರೋತ್ಸಾಹ ನೀಡಿದ. ಅವನಿಗೆ ಸಂಗೀತಪ್ರಸಂಗಭಂಗಿಸಂಗೀತ ಚತುರಭರತ ಎಂಬ ಬಿರುದಿದ್ದಿತು. ಬಲ್ಲಾಳನ ರಾಣಿಯರಲ್ಲೊಬ್ಬಳಾದ ಬಮ್ಮಲದೇವಿ ಸಂಗೀತ ಮತ್ತು ನೃತ್ಯದಲ್ಲಿ ವಿಶೇಷ ಪರಿಣತಿ ಪಡೆದಿದ್ದು ಗೀತವಾದ್ಯ ನೃತ್ಯ ಸೂತ್ರಧಾರೆ ಎಂಬ ಬಿರುದನ್ನು ಪಡೆದಿದ್ದಳು. ಬಲ್ಲಾಳನ ಸಚಿವರಾದ ಚಂದ್ರಮೌಳಿ, ಕೇಶಿರಾಜ, ಅಮಿತಯ್ಯ ಮೊದಲಾದವರು ಸಂಗೀತ ಮತ್ತು ನಾಟಕಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಸಂಗೀತ ಮತ್ತು ನೃತ್ಯಗಳಂತೆ ನಾಟಕ ಕಲೆಯಲ್ಲಿಯೂ ಜನರಿಗೆ ಅಭಿರುಚಿಯಿತ್ತೆಂದು ತಿಳಿದುಬರುತ್ತದೆ. ಕನ್ನಡ ನಾಡಿನಲ್ಲಿ ಇಂದಿಗೂ ಜನಜನಿತವಾಗಿರುವ ಕರಿಬಂಟ ಕಾಳಗ ಬಯಲಾಟ ಹೊಯ್ಸಳ ರಾಜನೊಬ್ಬನಿಗೆ ಸಂಬಂಧಿಸಿದುದೆಂದು ಹುಲ್ಲೂರುಶ್ರೀನಿವಾಸ ಜೋಯಿಸರು ಪ್ರತಿಪಾದಿಸಿರುವರು. ಪ್ರಹಸನ ಮತ್ತು ಪ್ರವಚನಗಳನ್ನು ಕುರಿತಾದ ಉಲ್ಲೇಖಗಳು ಅನೇಕ ಶಾಸನಗಳಲ್ಲಿ ದೊರೆತಾಗ್ಯೂ ಪೂರ್ಣ ವಿವರಗಳು ಲಭ್ಯವಾಗಿಲ್ಲ. ಹೊಯ್ಸಳರ ಕಾಲದಲ್ಲಿ ಸಂಗೀತ ನೃತ್ಯ ನಾಟಕಗಳು ಹೆಚ್ಚು ಜನಪ್ರಿಯವಾಗಿದ್ದು ರಾಜರ ಮತ್ತು ಸಾರ್ವಜನಿಕರ ಪ್ರೋತ್ಸಾಹದಿಂದ ಪುರೋಭಿವೃದ್ಧಿಗೊಂಡಿದ್ದವು. (ಜಿ.ಆರ್.ಆರ್.)

**ನಾಣ್ಯಗಳು:** ಹೊಯ್ಸಳರ ರಾಜ್ಯ ಸಮೃದ್ಧವಾಗಿದ್ದುದರಿಂದ ಇವರ ಆಳಿಕೆಯಲ್ಲಿ ನಾಣ್ಯಗಳ ಚಲಾವಣೆ ತಕ್ಕಷ್ಟು ಹೆಚ್ಚಾಗಿಯೇ ಇದ್ದಿರಬೇಕು. ದಾನದತ್ತಿ ಬಿಡುವಾಗ ಭೂಮಿಯ ಹುಟ್ಟುವಳಿಯನ್ನು ನಾಣ್ಯಗಳಲ್ಲಿ ಸೂಚಿಸುತ್ತಿದ್ದುದಕ್ಕೆ ಶಾಸನಗಳಲ್ಲಿ ಹೇರಳವಾದ ಉಲ್ಲೇಖಗಳಿವೆ. ದೇವಾಲಯಗಳಲ್ಲಿ ಪೂಜೆಪುನಸ್ಕಾರಗಳಿಗಾಗಿ ನಾಣ್ಯಗಳನ್ನು ದತ್ತಿಯಾಗಿ ಕೊಡುತ್ತಿದ್ದು ಅದರ ಬಡ್ಡಿಯಿಂದ ಕೈಂಕರ್ಯಗಳನ್ನು ನಡೆಸುತ್ತಿದ್ದುದನ್ನು ಬೇಲೂರಿನ ಚೆನ್ನಕೇಶವ ದೇವಾಲಯ ಮತ್ತು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯಗಳ ಗೋಡೆಗಳ ಮೇಲಿನ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ ಮುಖ್ಯವಾಗಿ ಗದ್ಯಾಣ, ಪಣ ಎಂಬ ಎರಡು ನಾಣ್ಯಗಳ ಹೆಸರು ಕಂಡುಬರುತ್ತದೆ. ಇವುಗಳಲ್ಲಿ ಗದ್ಯಾಣವೇ ದೊಡ್ಡ ನಾಣ್ಯವಾಗಿದ್ದು ಪಣ ಅದರ 1/10 ರಷ್ಟಿತ್ತೆಂಬುದು ಶಾಸನಗಳಿಂದ ಸೂಚಿತವಾಗುತ್ತದೆ. ಗದ್ಯಾಣವು ಚಿನ್ನದ ನಾಣ್ಯವಾಗಿದ್ದು ಎಷ್ಟೋ ವೇಳೆ ಅದನ್ನು ಹೊನ್ನು ಎಂಬ ಪದದಿಂದಲೇ ವ್ಯವಹರಿಸಲಾಗಿದೆ. ಈ ಎರಡು ಹೆಸರುಗಳಲ್ಲದೆ ಶಾಸನಗಳಲ್ಲಿ ಅಡ್ಡ, ಹಾಗ, ಬೇಳೆ, ವೀಸ, ಕಾಣಿ ಎಂಬ ಪದಗಳು ನಾಣ್ಯದ ಅನೇಕ ಭಾಗಗಳನ್ನು ಸೂಚಿಸಲು ಬಂದಿವೆ. ಇವು ಅವುಗಳ ಹೆಸರೇ ಸೂಚಿಸುವಂತೆ ಪಣದ 1/2, 1/4, 1/8, 1/16, 1/64 ಎಂಬುದನ್ನು ಸೂಚಿಸುವುದಿದ್ದು ಈ ಬೇರೆ ಬೇರೆ ಪ್ರಮಾಣದ ನಾಣ್ಯಗಳು ಚಲಾವಣೆಯಲ್ಲಿದ್ದುವೇ ಎಂಬುದು ತಿಳಿದುಬಂದಿಲ್ಲ.

ಈಗ ಖಚಿತವಾಗಿ ಹೊಯ್ಸಳರ ಕಾಲದ್ದೆಂದು ಹೇಳಬಹುದಾದ ನಾಣ್ಯಗಳು ಉಳಿದುಬಂದಿರುವುದು ತೀರ ಕಡಿಮೆ. ಇವುಗಳ ಪರಿಶೀಲನೆಯಿಂದ ಒಂದು ವಿಶೇಷ ಸಂಗತಿ ವ್ಯಕ್ತವಾಗುತ್ತದೆ. ಚಾಳುಕ್ಯರ ಸಾಮಂತರಾಗಿ ಅನಂತರ ಸ್ವತಂತ್ರರಾಗಿ ಹೊಯ್ಸಳರು ರಾಜ್ಯವಾಳಲು ಉಪಕ್ರಮಿಸಿದರೂ ನಾಣ್ಯಪದ್ಧತಿಯಲ್ಲಿ ಅವರನ್ನು ಅನುಸರಿಸಿದಂತೆ ತೋರುವುದಿಲ್ಲ. ಚಾಳುಕ್ಯರ ನಾಣ್ಯಗಳು 58 ಗ್ರೇನ್ ತೂಕವಿದ್ದರೆ ಹೊಯ್ಸಳರ ನಾಣ್ಯಗಳು 63 ಗ್ರೇನ್ ತೂಗುತ್ತವೆ. ಚೋಳರ ನಾಣ್ಯಗಳೂ ಇದೇ ರೀತಿ 63 ಗ್ರೇನ್ ತೂಗುವುದರಿಂದ ತೂಕದ ಮಟ್ಟಿಗೆ ಹೊಯ್ಸಳರು ಚೋಳರ ನಾಣ್ಯಗಳನ್ನನುಸರಿಸಿದರು. ಚಾಳುಕ್ಯರ ಕಡಿಮೆ ತೂಕದ ನಾಣ್ಯಗಳೂ ಹೊಯ್ಸಳ ನಾಡಿನಲ್ಲಿ ಚಲಾವಣೆಯಲ್ಲಿದ್ದಿರಬೇಕೆನ್ನುವುದಕ್ಕೆ ಶಾಸನಗಳಲ್ಲಿ ಸೂಚನೆ ಇದೆ. ಬೇಲೂರಿನ ಶಾಸನವೊಂದರಲ್ಲಿ 65 ಗದ್ಯಾಣಗಳಿಗೆ ಬಂದ ರೊಕ್ಕ 54 ಗದ್ಯಾಣ ಎಂದು ಹೇಳಿದೆ. ಇಲ್ಲಿ ಮೊದಲನೆಯದು ಚಾಳುಕ್ಯ ನಾಡಿನ ಗದ್ಯಾಣಗಳಾಗಿದ್ದು ಅವಕ್ಕೆ ಪ್ರತಿಯಾಗಿ ಹೊಯ್ಸಳ ಗದ್ಯಾಣಗಳನ್ನು ಪಡೆಯಲಾಯಿತು ಎಂಬ ಅಭಿಪ್ರಾಯವಿರಬಹುದು. ಹೀಗೆಯೇ ಶಾಸನಗಳಲ್ಲಿ ಅಪರೂಪವಾಗಿ ತಿಳಿಸಿರುವ ಲೊಕ್ಕಿ ಗದ್ಯಾಣ ಚಾಳುಕ್ಯರ ನಾಣ್ಯವಾಗಿರಬಹುದು.

ಹೊಯ್ಸಳರ ನಾಣ್ಯಗಳಿಗೆ ಎರಡು ಕಡೆಯೂ ಬೇರೆ ಬೇರೆ ಮುದ್ರೆಯೊತ್ತಿರುತ್ತಿತ್ತು. ಒಂದು ಕಡೆ ಮೂರ್ತಿಯ ಗುರುತೂ ಮತ್ತೊಂದು ಕಡೆ ಅಂಕನವೂ ಇದ್ದು ಇಂಥ ಪದ್ಧತಿಯನ್ನು ಹೊಯ್ಸಳರು ಹೊಸದಾಗಿ ಆರಂಭಿಸಿದಂತೆ ತೋರುತ್ತದೆ. ಈಗ ದೊರೆತಿರುವ ನಾಣ್ಯಗಳಲ್ಲಿ ಒಂದರ ಮೇಲೆ ಮುಂಭಾಗದಲ್ಲಿ ಮುಂದಿನ ಕಾಲೊಂದನ್ನು ಎತ್ತಿ ನಿಂತಿರುವ ಸಿಂಹ, ಅದರ ಮೇಲೆ ಅದೇ ರೀತಿಯ ಮತ್ತೊಂದು ಸಿಂಹ, ಅದರ ಎರಡು ಕಡೆಯೂ ಚಂದ್ರಸೂರ್ಯರು, ದೊಡ್ಡ ಸಿಂಹದ ಎದುರಿಗೆ ಒಂದು ದಂಡವೂ ಇದೆ. ಹಿಂಭಾಗದಲ್ಲಿ ಶ್ರೀತಳಕಾಡುಗೊಣ್ಡ ಎಂಬ ಅಂಕನ ಮೂರು ಸಾಲಿನಲ್ಲಿ ಕನ್ನಡ ಅಕ್ಷರದಲ್ಲಿದೆ. ಇಲ್ಲಿ ದೊಡ್ಡ ಸಿಂಹ ಮತ್ತು ದಂಡ ಹೊಯ್ಸಳರು ಲಾಂಛನವಾಗಿ ಸ್ವೀಕರಿಸಿದ ಹುಲಿ ಮತ್ತು ಬೆತ್ತವಾಗಿರಬೇಕು. ಶಾರ್ದೂಲ ಲಾಂಛನವು ಸಿಂದದ ಪಟದಲ್ಲಿ ಹೊನ್ನಿನಲ್ಲಿ ಸಲೆನಿಲೆಸಂದುದು ಎಂದು ಶಾಸನವೊಂದು ತಿಳಿಸುತ್ತದೆ. ಮೇಲಿನ ಚಿಕ್ಕ ಸಿಂಹ ದುರ್ಗಿಯನ್ನು ಪ್ರತಿನಿಧಿಸುವ, ಆ ದೇವತೆಯ ವಾಹನವಾಗಿರಬಹುದು, ತಳಕಾಡುಗೊಣ್ಡ ಎಂಬುದು ವಿಷ್ಣುವರ್ಧನ ತಲಕಾಡನ್ನು ಗೆದ್ದ ಅನಂತರ ಇಟ್ಟುಕೊಂಡ ಬಿರುದಾದ್ದರಿಂದ ಈ ನಾಣ್ಯ ವಿಷ್ಣುವರ್ಧನನದಾಗಿರಬೇಕು. ಇದೇ ರೀತಿ ಮತ್ತೊಂದು ನಾಣ್ಯದ ಮೇಲೆ ಮುಂಭಾಗದಲ್ಲಿ ಅದೇ ಸಿಂಹಗಳ ಲಾಂಛನವಿದ್ದರೂ ಅದು ಸ್ಪಷ್ಟವಾಗಿಲ್ಲದೆ ಸಾಂಕೇತಿಕವಾಗಿದೆ. ಹಿಂಭಾಗದಲ್ಲಿ ವಿಷ್ಣುವರ್ಧನನ ಮತ್ತೊಂದು ಬಿರುದಾದ ನೊಳಂಬವಾಡಿಗೊಣ್ಡ ಎಂಬ ಮೂರು ಸಾಲಿನ ಅಂಕನವಿರುವುದರಿಂದ ಇದೂ ವಿಷ್ಣುವರ್ಧನನದೇ ಆಗಿರಬೇಕು. ಮೂರನೆಯ ಬಗೆಯ ನಾಣ್ಯಗಳ ಮುಂಭಾಗದಲ್ಲಿ ಶಂಖಚಕ್ರಗಳನ್ನು ಹಿಡಿದ, ಸಿಂಹವಾಹನೆಯಾದ ದುರ್ಗಾ ಮತ್ತು ಹಿಂಭಾಗದಲ್ಲಿ ಶ್ರೀ ಪ್ರತಾಪನಾರಸಿಂಹ ಎಂಬ ಅಂಕನ ಇವೆ. ಇದು ಬಹುಶಃ ಒಂದನೆಯ ನರಸಿಂಹನ ಕಾಲದ್ದಾಗಿರಬಹುದು. ಉಳಿದಂತೆ ಬೇರೆ ರಾಜರ ಅಂಕನಗಳುಳ್ಳ ನಾಣ್ಯಗಳು ದೊರೆತಿಲ್ಲ. ಇವು ಸು. 63 ಗ್ರೇನ್ ತೂಕವುಳ್ಳವಾಗಿದ್ದು ಶಾಸನಗಳಲ್ಲಿ ತಿಳಿಸಿರುವ ಗದ್ಯಾಣಗಳಾಗಿರಬೇಕು. ಸು. ಇದರ 1/10 ಭಾಗದಷ್ಟು ತೂಕವುಳ್ಳ ಚಿಕ್ಕ ಚಿನ್ನದ ನಾಣ್ಯಗಳು ಕೆಲವು ದೊರೆತಿದ್ದು ಒಂದು ಕಡೆ ಸಿಂಹದ ಸಾಂಕೇತಿಕ ಚಿಹ್ನೆಯೂ ಮತ್ತೊಂದೆಡೆ ವರಾಹದ ಸಾಂಕೇತಿಕ ಚಿಹ್ನೆಯೂ ಇದ್ದು ಸಿಂಹದ ಆಕೃತಿ ಇರುವೆಡೆ ವೀರರೇಖೆಯಂತೆ ಚಿಹ್ನೆಯೊಂದಿರುವುದರಿಂದ ಅಂಥ ನಾಣ್ಯಗಳನ್ನು ವೀರರಾಯಿಪಣಗಳೆಂದು ಕರೆಯಲಾಗುತ್ತದೆ. ಇವು ಮೂರನೆಯ ವೀರಬಲ್ಲಾಳನ ನಾಣ್ಯಗಳಿರಬಹುದೆಂದು ಎಂ.ಎಚ್. ಕೃಷ್ಣ ಅವರು ಅಭಿಪ್ರಾಯಪಡುತ್ತಾರೆ. ಆದರೂ ಅವುಗಳನ್ನು ಹೊಯ್ಸಳರ ಕಾಲದ್ದೆಂದು ನಿಖರವಾಗಿ ಹೇಳಲು ಖಚಿತ ಆಧಾರಗಳು ಸಾಲದಾಗಿವೆ.

**ಶಾಸನಗಳು:** ಹೊಯ್ಸಳರ ಆಳಿಕೆಯ ಕಾಲ ಶಾಸನಗಳ ರಚನೆಯ ಸಮೃದ್ಧಿಯ ಕಾಲ. ಕರ್ನಾಟಕದ ಶಾಸನಗಳ ರಚನೆಯಲ್ಲಿ ಈ ಕಾಲವನ್ನು ಸುವರ್ಣಯುಗವೆನ್ನಬಹುದು. ಶಾಸನಗಳ ರಚನೆಯ ಕಲೆಗಾರಿಕೆಯಲ್ಲಾಗಲಿ, ಲಿಪಿಯ ಸೌಂದರ್ಯದಲ್ಲಾಗಲಿ, ಭಾಷೆ ಹಾಗೂ ಸಾಹಿತ್ಯದ ಸಮೃದ್ಧಿಯಲ್ಲಾಗಲಿ ಹೊಯ್ಸಳ ಶಾಸನಗಳನ್ನು ಸರಿತೂಗುವ ಶಾಸನಗಳು ಅಪರೂಪ. ಐತಿಹಾಸಿಕ ಮಹತ್ತ್ವದ ದೃಷ್ಟಿಯಿಂದಲೂ ಈ ಶಾಸನಗಳನ್ನು ಕಡೆಗಣಿಸುವಂತಿಲ್ಲ. ಹೊಯ್ಸಳರು ಆಳಿದ ಸು. 300 ವರ್ಷಗಳ ಅವಧಿಯಲ್ಲಿ 2,000ಕ್ಕೂ ಮೀರಿ ಶಾಸನಗಳು ಹುಟ್ಟಿಕೊಂಡಿವೆ. ವಿಷ್ಣುವರ್ಧನನ ಕಾಲಕ್ಕೆ ಮುನ್ನ ಶಾಸನಗಳನ್ನು ಹಾಕಿಸುವಲ್ಲಿ ಅಷ್ಟು ಸಮೃದ್ಧಿಯಾಗಲಿ ವೈವಿಧ್ಯತೆಯಾಗಲಿ ಕಂಡುಬರುವುದಿಲ್ಲ. ಶಾಸನಗಳು ಕಗ್ಗಲ್ಲಿನ ಮೇಲೋ ಒರಟುಕಲ್ಲಿನ ಮೇಲೋ ದಪ್ಪ ಅಕ್ಷರಗಳಲ್ಲಿದ್ದು ವಿವರಗಳು ಬಹು ಕಡಿಮೆ ಇರುತ್ತಿದ್ದವು. ವಿಷ್ಣುವರ್ಧನನ ಕಾಲದಲ್ಲಿ ಶಾಸನಗಳ ರಚನೆಯಲ್ಲಿ ಒಂದು ಸಿದ್ಧರೂಪವನ್ನು ಕೊಡಲು, ವೈವಿಧ್ಯವನ್ನು ತರಲು ಪ್ರಯತ್ನಿಸಿದ್ದಂತೆ ತೋರುತ್ತದೆ.

ಹೊಯ್ಸಳರ ಶಾಸನಗಳಲ್ಲಿ ಕಂಡುಬರುವ ಒಂದು ವೈಲಕ್ಷಣ್ಯವೆಂದರೆ ಅವರು ಶಾಸನಗಳನ್ನು ಹಾಕಿಸುವಲ್ಲಿ ಒಂದು ಕಡೆ ಚೋಳರನ್ನು ಅನುಕರಿಸಿದ್ದರೆ ಮತ್ತೊಂದು ಕಡೆ ಚಾಳುಕ್ಯರ ಮೇಲ್ಪಂಕ್ತಿಯನ್ನು ಅನುಸರಿಸಿರುವುದು. ಚೋಳರು ಆಕ್ರಮಿಸಿದ್ದ ಗಂಗವಾಡಿಯ ಭಾಗವಾಗಿದ್ದ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಭಾಗಗಳನ್ನು ಹಿಂದಕ್ಕೆ ಪಡೆದ ಮೇಲೆ ಬಹುಕಾಲ ಆ ಭಾಗಗಳಲ್ಲಿ ಹೊಯ್ಸಳರೂ ತಮಿಳಿನಲ್ಲಿಯೇ ಶಾಸನಗಳನ್ನು ಹಾಕಿಸಿದರು. ಅಷ್ಟೇ ಅಲ್ಲ, ಚೋಳರಂತೆ ಇವರೂ ದೇವಾಲಯದ ತಳಪಾದಿ ಕಲ್ಲುಗಳು, ಗೋಡೆಗಳು, ಕಂಬಗಳನ್ನೇ ಶಾಸನ ಹಾಕಿಸಲು ಬಳಸಿದರು. ಚೋಳರನ್ನು ಓಡಿಸಿ ತಲಕಾಡನ್ನು ಗೆದ್ದುಕೊಂಡು, ಅಲ್ಲಿ ವಿಷ್ಣುವರ್ಧನ ಕಟ್ಟಿಸಿದ ಕೀರ್ತಿನಾರಾಯಣಸ್ವಾಮಿ ದೇವಾಲಯದ ತಳಪಾದಿಯ ಮೇಲೆ ಈ ವಿಷಯವನ್ನು ತಿಳಿಸುವ ಮತ್ತು ದತ್ತಿ ಕೊಟ್ಟುದನ್ನು ತಿಳಿಸುವ ಹಲವಾರು ಶಾಸನಗಳಿರುವುದು ತಮಿಳಿನಲ್ಲಿಯೇ.

ಇಂಥ ನೂರಾರು ಶಾಸನಗಳನ್ನು ಅಗರದ ರಾಮೇಶ್ವರ, ನರಸಿಂಹ, ದುರ್ಗಾ ದೇವಾಲಯಗಳ ಮೇಲೆ, ಮಾರೆಹಳ್ಳಿ ನರಸಿಂಹ ದೇವಾಲಯದ ಮೇಲೆ, ಬೆಳಗೊಳದ ಜನಾರ್ದನಸ್ವಾಮಿ ದೇವಾಲಯದ ತಳಪಾದಿಯ ಮೇಲೆ, ತೊಣ್ಣೂರಿನ ನಾರಾಯಣ, ಗೋಪಾಲಕೃಷ್ಣ, ನರಸಿಂಹಸ್ವಾಮಿ ದೇವಾಲಯಗಳಲ್ಲಿ ನೋಡಬಹುದು. ಅಪರೂಪವಾಗಿ ಹಳೇಬೀಡಿನ ಪಕ್ಕದಲ್ಲಿಯೇ ಇರುವ ನರಸೀಪುರದ ನರಸಿಂಹಸ್ವಾಮಿ ದೇವಾಲಯದ ಗೋಡೆಯ ಮೇಲೆ ತಮಿಳು ಶಾಸನಗಳಿವೆ. ಇವು ಸಾಮಾನ್ಯವಾಗಿ ವಸ್ತುನಿಷ್ಠವಾದ ಕಿರುಗದ್ಯ ಶಾಸನಗಳು. ಕನ್ನಡ ಶಾಸನಗಳಿಗೆ ಹೋಲಿಸಿದರೆ ಇಂಥ ಶಾಸನಗಳ ಸಂಖ್ಯೆ ಬಹು ಕಡಿಮೆ ಎನ್ನಬಹುದು, ಹೊಯ್ಸಳರ ಒಟ್ಟು ಶಾಸನಗಳಲ್ಲಿ ಈ ತಮಿಳು ಶಾಸನಗಳ ಸಂಖ್ಯೆ ಬಹು ಕಡಿಮೆ.

ಹೊಯ್ಸಳರು ಹೇರಳವಾಗಿ ಹಾಕಿಸಿರುವ ಕನ್ನಡ ಶಾಸನಗಳು ಪ್ರಸಿದ್ಧವಾದುವು. ಸೊಸೆವೂರಿನ ಆಸುಪಾಸಿನಲ್ಲಿ ದೊರೆತಿರುವ ಇವರ ಮೊದಮೊದಲ ಶಾಸನಗಳು ಪ್ರತ್ಯೇಕ ಮೈಲಿಗಲ್ಲುಗಳಾಕಾರದ ಶಿಲಾ ಹಲಗೆಯ ಮೇಲೆ ರಚಿಸಿದವುಗಳಾಗಿವೆ. ಮುಂದೆ ದೇವಾಲಯದ ಗೋಡೆಗಳ ಮೇಲೆ ಶಾಸನಗಳನ್ನು ಹಾಕಿಸುವ ಪದ್ಧತಿಯನ್ನನುಸರಿಸಿದರೂ ಶಾಸನಗಳನ್ನು ಕಂಡರಿಸುವುದಕ್ಕಾಗಿಯೇ ಬೇರೆಯಾಗಿ ಶಿಲಾಫಲಕಗಳನ್ನು ಸಿದ್ಧಪಡಿಸುವ ಪದ್ಧತಿ ಸಾಮಾನ್ಯವಾಯಿತು. ವಿಷ್ಣುವರ್ಧನ ಬೇಲೂರಿನಲ್ಲಿ ವಿಜಯನಾರಾಯಣಸ್ವಾಮಿ ದೇವಾಲಯವನ್ನು ಕಟ್ಟಿಸಿದಾಗ ಅದರ ವಿವರಗಳನ್ನು ತಿಳಿಸುವ ದೀರ್ಘವಾದ ಶಾಸನವನ್ನು ಆ ದೇವಾಲಯದೊಳಗಿನ ಗೋಡೆಯ ಮೇಲೆ ಹಾಕಿಸಿದ್ದಾನೆ. ಹಾಗೆಯೇ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಒಳಗೋಡೆಯ ಮೇಲೆ ಹದಿನಾರು ದತ್ತಿ ಶಾಸನಗಳಿವೆ. ಶಾಂತಿಗ್ರಾಮದ ನರಸಿಂಹ ದೇವಾಲಯದ ಮುಂಭಾಗದ ಗೋಡೆಯ ತುಂಬ ಕಂಡರಿಸಿರುವ ಶಾಸನಗಳನ್ನೂ ನಿಟ್ಟೂರಿನ ಜೈನಬಸದಿಯ ಮುಂಭಾಗದ ಗೋಡೆಯ ಮೇಲೆ ಆ ಬಸದಿಯನ್ನು ಕಟ್ಟಿಸಿದ ವಿವರಗಳನ್ನು ತಿಳಿಸುವ ಶಾಸನವನ್ನೂ ನೋಡಬಹುದು. ಗೋಡೆಗಳನ್ನೂ ಶಿಲ್ಪಗಳಿಂದ ತುಂಬಿಸುತ್ತಿದ್ದುದರಿಂದ ಮತ್ತು ಕಾರ್ನೀಸುಗಳೂ ಅಲಂಕರಣಗಳಿಂದ ಕೂಡಿರುತ್ತಿದ್ದುದರಿಂದ ಅವುಗಳ ಮೇಲೆ ಶಾಸನ ಹಾಕಿಸುವ ಪದ್ಧತಿ ಕೈಬಿಟ್ಟು ಹೋಗಿರಬೇಕು. ಇದರ ಬದಲು ಕೆಲವು ವೇಳೆ ಕಂಬದ ಬುಡದ ಮುಖಗಳ ಮೇಲೋ, ಅಡ್ಡತೊಲೆಗಳ ಮೇಲೋ ದತ್ತಿಶಾಸನಗಳಿರುವುದುಂಟು, ನರಸೀಪುರದ ನರಸಿಂಹ ದೇವಾಲಯ, ಹೆಗ್ಗೆರೆಯ ಜೈನಬಸದಿ, ಹಿರೇನಲ್ಲೂರಿನ ಈಶ್ವರ ದೇವಾಲಯ, ಬಗ್ಗವಳ್ಳಿಯ ನರಸಿಂಹ ದೇವಾಲಯಗಳ ಮುಖಮಂಟಪ ಅಥವಾ ನವರಂಗದ ತೊಲೆಗಳ ಮೇಲೆ ಈ ರೀತಿಯ ಶಾಸನಗಳಿವೆ. ಆದರೆ ಇವರ ಶಾಸನಗಳಲ್ಲಿ ಮುಖ್ಯವಾದುವೂ ವಿಶಿಷ್ಟವಾದುವೂ ಎಂದರೆ ದೇವಾಲಯ, ಬಸದಿಗಳ ಮುಂದೆ ಬೇರೆಯಾಗಿ ನಿಲ್ಲಿಸಿರುವ ಶಾಸನ ಕಲ್ಲುಗಳು, ಈ ಕಾಲದಲ್ಲಿ ಇಂಥ ಶಾಸನ ಲೇಖನವೂ ಒಂದು ಕಲೆಯಾಗಿ ಬೆಳೆಯಿತು. ಸುಂದರವಾದ ಕಲ್ಲಿನ ಹಲಗೆ, ಅದರ ಮೇಲ್ಭಾಗ ಕಮಾನಾಗಿದ್ದು ಅದಕ್ಕೆ ಬಳ್ಳಿಸುರುಳಿಯ ಅಂಚು; ಆ ಕಮಾನಿನ ಕೆಳಗೆ ಆಯಾ ದೇವಾಲಯ, ಬಸದಿಗಳಿಗೆ ಸಂಬಂಧಿಸಿದಂತೆ ದೇವತಾಮೂರ್ತಿಗಳು–ಶಿವದೇವಾಲಯವಾದರೆ ಲಿಂಗ, ನಂದಿ, ಪೂಜಾರಿ ಭಕ್ತಮೂರ್ತಿಗಳು; ವಿಷ್ಣುದೇವಾಲಯವಾದರೆ ಆ ದೇವಾಲಯದ ಮೂಲಮೂರ್ತಿಗಳಾದ ಕೇಶವ ಅಥವಾ ನರಸಿಂಹ ಅಥವಾ ವೇಣುಗೋಪಾಲ, ಬಸದಿಯಾದರೆ ಮುಕ್ಕೊಡೆಯ ಕೆಳಗೆ ಜಿನಮೂರ್ತಿ–ಅಲ್ಲಿಂದ ಕೆಳಗೆ ಮಟ್ಟಸವಾಗಿ ನುಣುಪಾಗಿ ಮಾಡಿರುವ ಕಲ್ಲಿನ ಮೇಲೆ ಗುಂಡಾಗಿ ಒಂದೇ ಪ್ರಮಾಣದಲ್ಲಿ ಅಂದವಾಗಿ ಕೊರೆದಿರುವ ಪಂಕ್ತಿಗಳು, ಅದರಲ್ಲಿಯೂ ಮೊದಲ ಮತ್ತು ಕಡೆಯ ಸಾಲುಗಳಲ್ಲಿ ತಲೆಕಟ್ಟನ್ನೋ ಒತ್ತಕ್ಷರವನ್ನೋ ದೀರ್ಘವನ್ನೊ ಬಳ್ಳಿಸುರುಳಿಯಂತೆ, ಎಲೆಯಂತೆ, ಹಕ್ಕಿಯಂತೆ, ಗರಿಯಂತೆ ಬೆಳೆಸಿರುವಲ್ಲಿ ಬರೆದವನ ಅಥವಾ ಕೊರೆದವನ ಕಲೆಗಾರಿಕೆಯ ಸೊಗಸು ಎದ್ದು ಕಾಣುತ್ತದೆ. ಸೋಮನಾಥಪುರದ ಕೇಶವ ದೇವಾಲಯದ, ಪಂಚಲಿಂಗ ದೇವಾಲಯದ ಶಾಸನಗಳು, ಶ್ರವಣಬೆಳಗೊಳದ ಅಕ್ಕನ ಬಸದಿಯ ಶಾಸನ, ತಿಪ್ಪೂರಿನ ಗಂಗರಾಜನ ಶಾಸನ, ಗೋವಿಂದನಹಳ್ಳಿ, ಕೆರೆಸಂತೆ, ವರಾಹನಾಥ ಕಲ್ಲಹಳ್ಳಿಯ ಶಾಸನಗಳು ಈ ಮೊದಲಾದುವು ಇಂಥ ಸುಂದರವಾದ ಅಭಿವ್ಯಕ್ತಿಗೆ ಮಾದರಿಗಳು.

ದೇವಾಲಯದ ಗೋಡೆಗಳ ಮೇಲೆ ಕಂಡರಿಸಿರುವ ಮೂರ್ತಿಗಳ ಪೀಠಗಳ ಮೇಲೆ ಅವುಗಳ ಹೆಸರನ್ನೋ ಅಥವಾ ಕಂಡರಿಸಿದ ರೂವಾರಿಯ ಹೆಸರನ್ನೋ ತಿಳಿಸುವ–ತ್ರಿವಿಕ್ರಮ, ಸಂಕ್ರಂದನ, ಅಚ್ಯುತ ಅಥವಾ ಮಲ್ಲಿತಂಮ, ಮಸಣ, ಮಾಬ, ಮಾಣಿಬಲಕಿ ಇತ್ಯಾದಿ–ಒಂದೇ ಪದದ ಪೀಠಶಾಸನಗಳಿಂದಾರಂಭಿಸಿ, ಮೇಲೆ ಹೇಳಿದ ಶಾಸನಗಳನ್ನು ಕಂಡರಿಸಲೆಂದೇ ತಯಾರಿಸಿದ ಸುಂದರವಾದ ಶಿಲಾಫಲಕಗಳ ಮೇಲಿನ ವಿಸ್ತಾರವಾದ ದೇವತಾಸ್ತುತಿ, ರಾಜಮನೆತನದ ಪೀಳಿಗೆಯ ವರ್ಣನೆ, ರಾಜನ ವಿಸ್ತಾರವಾದ ಹೆಗ್ಗಳಿಕೆ, ಅವನ ಕೈಕೆಳಗಿನ ಸಾಮಂತ ಅಥವಾ ಅಧಿಕಾರಿಯ ಹೆಗ್ಗಳಿಕೆ, ಅವನ ವಂಶ, ಅವನು ನಿರ್ಮಿಸಿದ ದೇವಾಲಯ, ಬಿಟ್ಟ ದತ್ತಿ ಹಾಗೂ ಅವುಗಳ ವರ್ಣನೆ, ದತ್ತಿ ಪಡೆದವರ ವಂಶಾವಳಿ, ಕೊನೆಯಲ್ಲಿ ಶಪನ ಮುಂತಾದ ಹತ್ತಾರು ವಿವರಗಳನ್ನೊಳಗೊಂಡ ದೀರ್ಘವಾದ ಶಾಸನಗಳವರೆಗೂ ವಿಷಯ ವ್ಯಾಪ್ತಿಯುಂಟು. ಹೊಯ್ಸಳ ರಾಜರಂತೆ ಅವರ ಪ್ರಧಾನಿಗಳು, ದಂಡನಾಯಕರು, ಇತರ ಅಧಿಕಾರಿಗಳು ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ದತ್ತಿಬಿಟ್ಟ ಶಾಸನಗಳು ಹೀಗೆ ವಿಸ್ತಾರವಾಗಿರುತ್ತವೆ. ಗಂಗರಾಜ, ಪುಣಿಸ, ಹುಳ್ಳ, ಚಂದ್ರಮೌಳಿ, ಬೂಚಿರಾಜ, ಗೋವಿಂದ, ಪೋಲಾಳ್ವ, ಸೋಮನಾಥ ಮೊದಲಾದವರು ಹಾಕಿಸಿರುವ ಇಂಥ ಶಾಸನಗಳಲ್ಲಿ ವಿವರಗಳನ್ನು ಗದ್ಯಪದ್ಯಾತ್ಮಕವಾಗಿ ಚಂಪೂ ಶೈಲಿಯಲ್ಲಿ ಕೊಡುವುದು ಪದ್ಧತಿ. ಅಂದವಾದ ಕಲ್ಲಿನ ಕಂಡರಣೆ, ಸುಂದರವಾದ ಲಿಪಿಗಳಿರುವಂತೆ ಉತ್ತಮ ಸಾಹಿತ್ಯ ಲಕ್ಷಣಗಳನ್ನೂ ಈ ಶಾಸನಗಳಲ್ಲಿ ಕಾಣಬಹುದು. ಚಿದಾನಂದ ಬುಧ, ಜನ್ನ ಮೊದಲಾದ ಪ್ರಸಿದ್ಧ ಕವಿಗಳೂ ಇಂಥ ಶಾಸನಗಳನ್ನು ರಚಿಸಿದ್ದಾರೆ. ರಾಜರ ಪೀಳಿಗೆಯನ್ನು ಕೊಡುವಲ್ಲಿ, ಅವರ ಗುಣಗಾನ ಮಾಡುವಲ್ಲಿ ಒಂದೇ ಬಗೆಯ ಪದ್ಯಗಳನ್ನು ಹಲವಾರು ಶಾಸನಗಳಲ್ಲಿ ಕಾಣಬಹುದು. ಬಹುಶಃ ಆಸ್ಥಾನದಲ್ಲಿದ್ದ ಪಂಡಿತರಿಂದ ರಾಜವಂಶ ಪ್ರಶಸ್ತಿಯನ್ನು ಬರೆಸಿಟ್ಟಿದ್ದು ಹೊಸ ಹೊಸ ಶಾಸನಗಳನ್ನು ರಚಿಸುವಾಗ ಆ ಪ್ರಶಸ್ತಿಯಿಂದ ಕೆಲ ಪದ್ಯಗಳನ್ನು ಆಯ್ದುಕೊಳ್ಳುತ್ತಿದ್ದರೆಂದು ತೋರುತ್ತದೆ. ಧರ್ಮಕಾರ್ಯಗಳನ್ನು, ಪುಣ್ಯಕಾರ್ಯಗಳನ್ನು, ದಾನದತ್ತಿಗಳನ್ನು ಉಲ್ಲೇಖಿಸುವುದೇ ಈ ಶಾಸನಗಳ ಉದ್ದೇಶವಾದರೂ ಅವುಗಳಲ್ಲಿ ಆಯಾ ಕಾಲದಲ್ಲಿ ಆಳುತ್ತಿದ್ದ ರಾಜನ ವಂಶ ಮತ್ತು ಪ್ರಶಸ್ತಿಗಳನ್ನು ಕೊಡುವ ಪದ್ಧತಿ ಇದ್ದುದರಿಂದ ಸ್ವಾಭಾವಿಕವಾಗಿ ಐತಿಹಾಸಿಕ ವಿಷಯಗಳು ಇವುಗಳಲ್ಲಿ ತುಂಬಿರುತ್ತವೆ. ಅನೇಕ ಶಾಸನಗಳು ಆ ಕಾಲದ ಜನಜೀವನ, ಸಾಮಾಜಿಕ ಆರ್ಥಿಕ ಸ್ಥಿತಿ, ಸಾಂಸ್ಕೃತಿಕ ಬೆಳವಣಿಗೆ, ಮತಗಳಲ್ಲಿನ ಸೌಹಾರ್ದ ಮೊದಲಾದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ.

ಹೊಯ್ಸಳರ ಕಾಲದ ತಾಮ್ರಶಾಸನಗಳ ಸಂಖ್ಯೆ ಬಹು ಕಡಿಮೆ. ಅಲ್ಲಿಯವರೆಗೆ ಈ ಭಾಗದಲ್ಲಿ ಹಾಕಿಸುತ್ತಿದ್ದ ತಾಮ್ರಶಾಸನಗಳ ಮಾದರಿಯನ್ನು ಕೈಬಿಟ್ಟು ಹೊಯ್ಸಳರು ಚೋಳರನ್ನು ಅನುಸರಿಸಿ ತಾಮ್ರದ ಹಲಗೆಗಳನ್ನು ದಪ್ಪನಾಗಿಯೂ ಅಗಲವಾಗಿಯೂ ಇರುವಂತೆ ಮಾಡಿದರು. ಮೂರರಿಂದ ಏಳರವರೆಗೆ ಈ ಹಲಗೆಗಳಿದ್ದು ದಪ್ಪನಾದ ಬಳೆಗೆ ಅವುಗಳನ್ನು ಸೇರಿಸಿರುತ್ತಿತ್ತು. ಈ ಬಳೆಗೆ ಹುಲಿಯ ಗುರುತಿನ ಮುದ್ರೆ ಹಾಕಿಸುತ್ತಿದ್ದರು. ಓಲೆಯ ಗರಿಯಂತೆ ಅಡ್ಡಡ್ಡಲಾಗಿರುತ್ತಿದ್ದ ತಾಮ್ರಶಾಸನಗಳು ಈಗ ಉದ್ದುದ್ದವಾಗಿದ್ದು ಮೇಲ್ಭಾಗದಲ್ಲಿ ಉಂಗುರ ಮುದ್ರೆಗಳು

ಸೇರಿದುವು. ಶಿಲಾಶಾಸನಗಳಂತೆ ಅಕ್ಷರಗಳನ್ನು ಅತಿ ಗುಂಡಾಗಿ ಕೊರೆದು ಮೇಲಿನ ಮತ್ತು ಕೆಳಗಿನ ಸಾಲುಗಳ ಅಕ್ಷರಗಳಿಗೆ ಬಗೆಬಗೆಯ ಅಲಂಕರಣ ಮಾಡಿರುವುದುಂಟು. ಇವುಗಳಲ್ಲಿ ಮಾದರಿಯಾದುದು ಬೇಲೂರಿನ ಚೆನ್ನಕೇಶವ ದೇವಾಲಯದ ಬಗೆಗೆ ವಿವರಗಳನ್ನು ಕೊಡುವ ತಾಮ್ರಶಾಸನ. ಹೊಯ್ಸಳರ ಕಾಲದ ತಾಮ್ರಶಾಸನಗಳೇ ಕರ್ನಾಟಕದ ತಾಮ್ರಶಾಸನಗಳಲ್ಲೆಲ್ಲ ಹೆಚ್ಚು ವಿಸ್ತಾರವಾದುವೂ ತೂಕವುಳ್ಳವೂ ಆಗಿವೆ. ಇವರು ಮೊದಮೊದಲಿನ ಶಾಸನಗಳಲ್ಲಿ ಕನ್ನಡ ಹಾಗೂ ಸಂಸ್ಕೃತ– ಈ ಎರಡೂ ಭಾಷೆ ಹಾಗೂ ಲಿಪಿಯನ್ನು ಬಳಸಿದ್ದುಂಟು. ಅನಂತರದ ತಾಮ್ರಶಾಸನಗಳು ನಾಗರಿಲಿಪಿಯಲ್ಲಿದ್ದು ಸಂಸ್ಕೃತದಲ್ಲಿಯೇ ಇವೆ.

ಈ ಕಾಲದಲ್ಲಿ ವೀರಗಲ್ಲುಗಳೂ ಹೇರಳವಾಗಿ ದೊರೆತಿವೆ. ಗಂಗರ ಕಾಲದ ವೀರಗಲ್ಲುಗಳಿಗಿಂತ ಭಿನ್ನವಾಗಿರುವ ಈ ವೀರಗಲ್ಲುಗಳಲ್ಲಿ ಗೊತ್ತಾದ ಒಂದು ಆಕಾರ ಬಳಕೆಗೆ ಬಂದಿದೆ. ಆದರೆ ಇಲ್ಲಿನ ಶಿಲ್ಪಗಳಲ್ಲಿ ಗಂಗರ ವೀರಗಲ್ಲುಗಳ ಮೇಲೆ ಕಾಣುವ ಕೆಚ್ಚು ಕಸುವು ಅಷ್ಟಾಗಿ ಕಂಡುಬರುವುದಿಲ್ಲ.

ಹೊಯ್ಸಳರ ಕಾಲಕ್ಕೇ ವಿಶಿಷ್ಟವಾದ ಕೆಲವು ಶಾಸನಗಳುಂಟು. ಈ ರಾಜರಿಗೆ ನಿಷ್ಠರಾಗಿದ್ದ ಲೆಂಕರು ತಮ್ಮ ರಾಜ ಕಾಲವಾದಲ್ಲಿ ತಾವೂ ಉಳಿಯುವುದಿಲ್ಲವೆಂಬ ಪ್ರತಿಜ್ಞೆ ಮಾಡಿ ಅದೇ ರೀತಿ ಪ್ರಾಣ ಬಿಟ್ಟ ಉದಾಹರಣೆಗಳಿವೆ. ಇಂಥವರನ್ನು ಗರುಡರೆಂದು ಶಾಸನಗಳು ಕರೆದಿವೆ. ಇಂಥ ಗರುಡರ ನೆನಪಿಗಾಗಿ ಹಾಕಿಸಿದ ಶಾಸನಗಳನ್ನು ಸಾಮಾನ್ಯವಾಗಿ ಅದಕ್ಕೇ ಮೀಸಲಾದ ಕಂಬಗಳ ಬುಡದ ಮುಖಗಳ ಮೇಲೆ ಕಂಡರಿಸಿ ದೇವಾಲಯಗಳ ಬಳಿ ನಿಲ್ಲಿಸಿರುತ್ತಾರೆ. ಇವುಗಳನ್ನು ಗರುಡಗಂಬಗಳೆಂದು ಕರೆಯಬಹುದು. ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ಮುಂದೆ ನಿಂತಿರುವ ಮೂರು ಕಂಬಗಳ ಮೇಲಿನ ಶಾಸನಗಳು ಹೊಯ್ಸಳ ರಾಜರಿಗೆ ಗರುಡರಾದ ಲೆಂಕರ ಒಂದು ಪೀಳಿಗೆಯನ್ನೇ ಕೊಡುತ್ತವೆ. ಈ ಕಂಬಗಳ ಮೇಲೆ ಆನೆಯನ್ನೇರಿದ ವೀರ ತನ್ನ ಹೆಂಡತಿ ಮತ್ತು ಹಿಂಬಾಲಕರೊಂದಿಗಿದ್ದು ಗರುಡನೊಡನೆ ಹೋರುತ್ತಿರುವ ಶಿಲ್ಪವಿದೆ. ಅತ್ಯಂತ ಪ್ರಸಿದ್ಧವಾದ ಗರುಡಶಾಸನವೆಂದರೆ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಆವರಣದಲ್ಲಿರುವ, ಕುವರಲಕ್ಷ್ಮನು ಇಮ್ಮಡಿ ಬಲ್ಲಾಳನಿಗೆ ಗರುಡನಾದುದನ್ನು ತಿಳಿಸುವ ಸ್ತಂಭಶಾಸನ. ಅವನೊಂದಿಗೆ ಅವನ ಸಾವಿರ ಜನ ಭಟರೂ ಅವರ ಹೆಂಡಿರೂ ಪ್ರಾಣ ತೆತ್ತುದನ್ನು ಇದು ವರ್ಣಿಸುತ್ತದೆ. ಕಂಬದ ಸುತ್ತಲೂ ಇರುವ ಶಿಲ್ಪ ಅವರು ಆತ್ಮಾರ್ಪಣೆ ಮಾಡಿಕೊಂಡ ಬೇರೆ ಬೇರೆ ರೀತಿಯನ್ನು ಚಿತ್ರಿಸುತ್ತದೆ. ಅದೇ ದೇವಾಲಯದಲ್ಲಿ ತೊಲೆಯೊಂದಕ್ಕೆ ಊರೆಯಾಗಿ ಕೊಟ್ಟಿರುವ ಪ್ರೌಢರಾಯನ ಕಂಬವೂ ಇಂಥ ಒಬ್ಬ ಗರುಡನ ನೆನಪಿಗೆ ಹಾಕಿಸಿರುವ ಶಾಸನವೇ. ಒಂದನೆಯ ನರಸಿಂಹನ ಆಸ್ಥಾನದಲ್ಲಿ ಗಮಕಿಗಳು ವರ್ಣಿಸಿದ ಬಾವನ್ನವೀರರ ವೀರಾಲಾಪನವನ್ನು ಕೇಳಿದ ರವಳಬೋವನೆಂಬ ವೀರನು ಅಲ್ಲಿಯೇ ಆತ್ಮಾರ್ಪಣೆ ಮಾಡಿ ವೀರವನ್ನು ಮೆರೆದುದನ್ನು ವರ್ಣಿಸುವ ಈ ಅಪರೂಪದ ರೋಮಾಂಚಕರ ಶಾಸನಗಳನ್ನು ಕಣ್ಣಾರೆ ಕಂಡು ವರ್ಣಿಸಿದವನು ಮಾಧವ ವಿಬುಧ. ಕಲೆ, ಲಿಪಿ, ಭಾಷೆ, ಸಾಹಿತ್ಯ, ಸಮೃದ್ಧಿ, ವೈವಿಧ್ಯ– ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಹೊಯ್ಸಳರ ಶಾಸನಗಳು ಕರ್ನಾಟಕ ಶಾಸನಸಂಪತ್ತಿಗೆ ಮೆರುಗನ್ನು ನೀಡಿವೆ ಎನ್ನಬಹುದು. **(ಎಂ.ಎಚ್.)**

**ಹೊರನಾಡು:** ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಒಂದು ಧಾರ್ಮಿಕ ಕ್ಷೇತ್ರ ಹಾಗೂ ಪ್ರವಾಸಿ ತಾಣ. ಚಿಕ್ಕಮಗಳೂರಿನ ಪಶ್ಚಿಮಕ್ಕೆ ಮೂಡಿಗೆರೆಯ ವಾಯವ್ಯದಲ್ಲಿ, ಕಳಸದ ಉತ್ತರದಲ್ಲಿ ಕಳಸಕ್ಕೆ 8 ಕಿಮೀ ದೂರದಲ್ಲಿದೆ. ಈ ಸ್ಥಳ ಬೋಗುಣಿಯಾಕಾರದಲ್ಲಿ ಸುತ್ತಲೂ ಹಸುರಿನಿಂದ ಕೂಡಿದ ಬೆಟ್ಟಗಳು ವಿವಿಧ ಸಸ್ಯ ಸಂಪತ್ತಿನಿಂದ ಕೂಡಿದ್ದು ನಯನಮನೋಹರವಾಗಿವೆ. ಇವುಗಳ ಮಧ್ಯದಲ್ಲಿ ಪ್ರಸಿದ್ಧ ಅನ್ನಪೂರ್ಣೇಶ್ವರಿ ದೇವಾಲಯವಿದೆ. ಈ ಕ್ಷೇತ್ರಕ್ಕೆ ಸೇರಿದಂತೆ ಭದ್ರಾನದಿ ಹರಿಯುತ್ತದೆ. ದೇವಿ ವಿಗ್ರಹದ ಪ್ರಭಾವಳಿ ಆದಿಶೇಷನನ್ನೂ ಹೊಂದಿದ್ದು ಈ ಹೊಸ ಮೂರ್ತಿಯನ್ನು ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ಎಂದು ಕರೆಯಲಾಗಿದೆ. ದೇವಸ್ಥಾನದ ಗೋಡೆಗಳ ಮೇಲೆ ವೇದ, ಉಪನಿಷತ್ತುಗಳ ಸೂಕ್ತಿಗಳನ್ನು ಬರೆಯಿಸಲಾಗಿದೆ. ದೇವಾಲಯ ಬಲು ಹಿಂದೆ ಜೈನರ ಆಳಿಕೆಗೆ ಒಳಪಟ್ಟಿತ್ತು ಎಂಬ ವಾದವೂ ಇದೆ. ಪ್ರತಿವರ್ಷದ ಮಾರ್ಚ್ ತಿಂಗಳ ಕೊನೆಯಲ್ಲಿ ಇಲ್ಲಿ ಒಂದುದಿನದ ಜಾತ್ರೆ ನಡೆಯುತ್ತದೆ. ಧರ್ಮಸ್ಥಳದ ಮಾದರಿಯಲ್ಲಿ ಈ ಕ್ಷೇತ್ರವನ್ನೂ ಅಭಿವೃದ್ಧಿಗೊಳಿಸಲಾಗುತ್ತಿದೆ. 17ನೆಯ ಶತಮಾನದ ಶಿಲಾಶಾಸನ, ತಾಮ್ರಶಾಸನಗಳು ಇಲ್ಲಿ ದೊರಕಿವೆ. ಬೇಲೂರಿನ ವೆಂಕಟಾದ್ರಿನಾಯಕ ಅನ್ನಪೂರ್ಣೇಶ್ವರಿ ಸೇವೆಗಾಗಿ ಕೊಟ್ಟ ದಾನಗಳ, ಉಂಬಳಿಗಳ ವಿವರ ಇವುಗಳಲ್ಲಿದೆ. ಈ ಕ್ಷೇತ್ರ ಅತಿಥಿಗಳು ಹಾಗೂ ಯಾತ್ರಿಕರ ಸತ್ಕಾರಕ್ಕೂ ಪ್ರಸಿದ್ಧ. ಇದು ಸಾಹಿತ್ಯ ಮತ್ತು ಸಂಸ್ಕೃತಿಯ ಕೇಂದ್ರವೂ ಆಗಿದ್ದು 2002ರಲ್ಲಿ ಚಿಕ್ಕಮಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನ ಇಲ್ಲಿ ನಡೆಯಿತು. ಈ ದೇವಾಲಯದ ಆಡಳಿತ ಮಂಡಳಿ ಹಿಂದೆ ಆಯಾ ವರ್ಷದ ಪಂಚಾಂಗವನ್ನು ಮುದ್ರಣ ರೂಪದಲ್ಲಿ ಪ್ರಕಟಿಸಿ ಮಲೆನಾಡಿನ ಎಲ್ಲ ಮನೆಗಳಿಗೂ ಹಂಚಿ ಪಡಿ ಪಡೆಯುತ್ತಿತ್ತು. ಈಗ ಈ ವ್ಯವಸ್ಥೆ ನಿಂತುಹೋಗಿದೆ.

ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ ಸುಮಾರು ಒಂದೂವರೆ ಕಿಮೀ ದೂರದಲ್ಲಿನ ದಿಣ್ಣೆಯೊಂದರ ಮೇಲೆ ಪ್ರಾಚೀನ ಜೈನ ಬಸದಿ ಇದೆ. ಕಾಡಿನ ನಡುವೆ ಪ್ರಶಾಂತ ಪರಿಸರದಲ್ಲಿರುವ ಬಸದಿ ಇದು. ಇಲ್ಲಿನ ಪ್ರಕೃತಿ ಸೌಂದರ್ಯ ಅವರ್ಣನೀಯ. **(ಎಚ್.ಪಿ.ವಿ.)**

**ಹೊಸಂಗಡಿ:** ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕುಂದಾಪುರದ ಪೂರ್ವಕ್ಕೆ 42 ಕಿಮೀ ದೂರದಲ್ಲಿರುವ ಗ್ರಾಮ. ಜನಸಂಖ್ಯೆ 4,972.

ಹಿಂದೆ ಇದು ಹೊನ್ನೆಯ ಕಂಬಳಿ (ಹೊನ್ನಕಂಬಳಿ) ಎಂಬ ಜೈನವಂಶದ ಪಾಳೆಯಗಾರರ ರಾಜಧಾನಿಯಾಗಿತ್ತು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಏಳು ನಾಡುಗಳನ್ನು ಮತ್ತು ಘಟ್ಟದ ಮೇಲಿನ ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳನ್ನು ಆಳಿದರೆಂದು ತಿಳಿದುಬರುತ್ತದೆ. ಇಲ್ಲಿ ಒಂದು ಕೋಟೆ ಇತ್ತು. ವಿಜಯನಗರದ ಅರಸರ ಕಾಲದ ತರುವಾಯ ಈ ಭಾಗ ಕೆಳದಿನಾಯಕರ ವಶಕ್ಕೆ ಬಂತು. ಇಲ್ಲಿಯ ಕೋಟೆಯನ್ನು ಕೆಳದಿ ವೆಂಟಪ್ಪನಾಯಕ ದುರಸ್ತುಗೊಳಿಸಿದನಲ್ಲದೆ ಅಲ್ಲಿ ಸೈನ್ಯವನ್ನಿಟ್ಟ. ಈಗ ಇಲ್ಲಿ ಹಳೆಯ ಕೋಟೆಯ ಅವಶೇಷಗಳಿವೆ. ಹೈದರ್‌ಅಲಿಯ ಕಾಲದಲ್ಲಿ ಈ ಸ್ಥಳ ಹೈದರ್‌ಗಡವೆಂದು ಹೆಸರಾಯಿತು. ಜನರಲ್ ಮ್ಯಾಥ್ಯೂಸ್ ಎಂಬ ಬ್ರಿಟಿಷ್ ಸೇನಾಧಿಪತಿ ಮುಂಬಯಿಯಿಂದ ಸಣ್ಣ ಸೇನೆಯೊಂದಿಗೆ ಕುಂದಾಪುರದಲ್ಲಿ ಇಳಿದು ಅಲ್ಲಿದ್ದ ಟಿಪ್ಪುವಿನ ಸೇನೆಯನ್ನು ಗೆದ್ದು, ಅಲ್ಲಿಂದ ಮುಂದುವರಿದು ಹೊಸಂಗಡಿ ಕೋಟೆಯನ್ನು ಹಿಡಿದ. ಹೈದರ್‌ಗಡ ಕೋಟೆ ಈಗಲೂ ಅಷ್ಟೇನೂ ಜೀರ್ಣವಾಗದೆ ಸುಸ್ಥಿತಿಯಲ್ಲಿದೆ. ಈ ಕೋಟೆಯ ಪೂರ್ವಕ್ಕೆ ಇರುವ ಕೆರೆಯನ್ನು ನೀರಾವರಿಗೆ ಬಳಸಲಾಗಿದೆ. ಕೆರೆಯ ಪೂರ್ವಕ್ಕೆ ಅನೇಕ ಹಳೆಯ ಬಾವಿಗಳು ಮತ್ತು ಮನೆಗಳ ನೆಲಕಟ್ಟುಗಳಿವೆ. ಇಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ಅನೇಕ ಶಿಲಾಶಾಸನಗಳಿವೆ. ಇಲ್ಲಿ ಶಾಂತೇಶ್ವರ, ವೆಂಕಟರಮಣ ಮತ್ತು ವಿಠಲ ದೇವಾಲಯಗಳಿವೆ.

ಈ ಗ್ರಾಮದ ಆಗ್ನೇಯ ಭಾಗದಲ್ಲಿ ವರಾಹಿ ನದಿ ಹರಿಯುತ್ತದೆ. ಕುಂದಾಪುರ–ಹೊಸನಗರ ಸಂಪರ್ಕಿಸುವ ರಸ್ತೆ ಈ ಗ್ರಾಮದ ಮೂಲಕ ಹಾದುಹೋಗುತ್ತದೆ. **(ಎಂ.ವಿ.)**

**ಹೊಸಕೋಟೆ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ದೇವನಹಳ್ಳಿ ಮತ್ತು ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕುಗಳೂ ಪಶ್ಚಿಮದಲ್ಲಿ ಬೆಂಗಳೂರು ನಗರ ಜಿಲ್ಲೆಯ ಉತ್ತರ ಮತ್ತು ಬೆಂಗಳೂರು ದಕ್ಷಿಣದ ತಾಲ್ಲೂಕುಗಳೂ ದಕ್ಷಿಣದಲ್ಲಿ ಆನೇಕಲ್ಲು ತಾಲ್ಲೂಕು ಮತ್ತು ತಮಿಳುನಾಡು ರಾಜ್ಯವೂ ಪೂರ್ವದಲ್ಲಿ ಕೋಲಾರ ಜಿಲ್ಲೆಯ ಮಾಲೂರು ಮತ್ತು ಕೋಲಾರ ತಾಲ್ಲೂಕುಗಳೂ ಸುತ್ತುವರಿದಿವೆ. 356 ಗ್ರಾಮಗಳಿರುವ ತಾಲ್ಲೂಕಿನ ವಿಸ್ತೀರ್ಣ 666.9 ಚ.ಕಿಮೀ. ಜನಸಂಖ್ಯೆ 2,22,430. ಇದರಲ್ಲಿ 1,86,198 ಮಂದಿ ಗ್ರಾಮಸ್ಥರು, 36,323 ಮಂದಿ ಪಟ್ಟಣಿಗರು.

ಜಿಲ್ಲೆಯ ಪೂರ್ವದಂಚಿನಲ್ಲಿರುವ ಈ ತಾಲ್ಲೂಕು ಸಾಮಾನ್ಯ ಏರುತಗ್ಗುಗಳಿಂದ ಕೂಡಿದೆ. ದಕ್ಷಿಣ ಪಿನಾಕಿನಿ ಈ ತಾಲ್ಲೂಕಿನ ಮುಖ್ಯನದಿ. ಉತ್ತರದಲ್ಲಿ ಸ್ವಲ್ಪ ದೂರ ತಾಲ್ಲೂಕಿನ ಗಡಿಯಾಗಿ ಹರಿದು ತಾಲ್ಲೂಕನ್ನು ಪ್ರವೇಶಿಸುತ್ತಲೇ ಹೊಸಕೋಟೆಯ ದೊಡ್ಡಕೆರೆಗೆ ನೀರೊದಗಿಸಿ ಮುಂದೆ ದಕ್ಷಿಣಾಭಿಮುಖವಾಗಿ ಹರಿಯುವುದು. ತಾಲ್ಲೂಕಿನಲ್ಲಿ ವ್ಯವಸಾಯ ಯೋಗ್ಯವಾದ ಅನೇಕ ಕೆರೆ ಮತ್ತು ಬಾವಿಗಳಿವೆ. ತಂಪಾದ ಹವೆ ಇದ್ದು ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 849.50 ಮಿಮೀ.

ಈ ತಾಲ್ಲೂಕಿನ ಕೆಲವೆಡೆ ಜಂಬುಮಣ್ಣಿನ ಪ್ರದೇಶವಿದೆ. ಇನ್ನು ಕೆಲವೆಡೆ ಇಟ್ಟಿಗೆ, ಹೆಂಚು ತಯಾರಿಸುವಂಥ ಮಣ್ಣು ಇರುವ ಪ್ರದೇಶಗಳಿವೆ. ತಾಲ್ಲೂಕಿನ ನದಿ ದಂಡೆ ಪ್ರದೇಶ ಮತ್ತು ನಂದಗುಡಿಯ ಸುತ್ತಲ ಪ್ರದೇಶ ಮತ್ತು ಪೂರ್ವಭಾಗ ವ್ಯವಸಾಯ ಯೋಗ್ಯವಾಗಿದೆ. ಬೆಂಗಳೂರು ರಸ್ತೆ ಮತ್ತು ನಂದಗುಡಿಯ ದಕ್ಷಿಣ ಭಾಗ ಪ್ರದೇಶವೆಲ್ಲ ಶಿಲೆಗಳಿಂದ ಕೂಡಿದ್ದು ವ್ಯವಸಾಯಯೋಗ್ಯವಾಗಿಲ್ಲ. ನೀರಾವರಿ ಪ್ರದೇಶಗಳಲ್ಲಿರಾಗಿ, ಬತ್ತ, ದ್ವಿದಳ ಧಾನ್ಯಗಳನ್ನೂ ತರಕಾರಿ ಹಣ್ಣುಗಳನ್ನೂ ಬೆಳೆಯುವರು. ಉಳಿದೆಡೆ ಆಲೂಗೆಡ್ಡೆ ಮುಂತಾದ ಬೆಳೆ ತೆಗೆಯುವರು. ಈ ಭಾಗದಲ್ಲಿ ಹೆಚ್ಚಾಗಿ ದ್ರಾಕ್ಷಿ ಬೆಳೆಯುತ್ತಾರೆ. ವ್ಯವಸಾಯದ ಜೊತೆ ಪಶುಪಾಲನೆಯುಂಟು.

ತಾಲ್ಲೂಕಿನಲ್ಲಿ ರೇಷ್ಮೆ ನೂಲು ತಯಾರಿಕೆಯುಂಟು. ಬೀಡಿ, ಇಟ್ಟಿಗೆ, ಹೆಂಚು ತಯಾರಿಕೆ ಮತ್ತು ಇತರ ಗ್ರಾಮೋದ್ಯೋಗಗಳಿವೆ. ತಾಲ್ಲೂಕಿನಿಂದ ಹೆಚ್ಚಾಗಿ ಹೊರಹೋಗುವ ಇತರ ಪದಾರ್ಥಗಳೆಂದರೆ ದ್ರಾಕ್ಷಿ, ಆಲೂಗೆಡ್ಡೆ ಮತ್ತು ತರಕಾರಿಗಳು. ತಾಲ್ಲೂಕಿನ ಕೈಗಾರಿಕೆಗಳಿಗೆ ಮತ್ತು ವ್ಯವಸಾಯೋದ್ಯಮಗಳಿಗೆ ಆರ್ಥಿಕ ಸಹಾಯ ನೀಡುವ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿವೆ. ಆಸ್ಪತ್ರೆ, ಆರೋಗ್ಯ ಕೇಂದ್ರ, ವಿವಿಧ ದರ್ಜೆಯ ಶಾಲೆ ಮುಂತಾದವುಗಳಿವೆ. ತಾಲ್ಲೂಕಿನಲ್ಲಿ ಬೆಂಗಳೂರು-ಕೋಲಾರ ರಾಷ್ಟ್ರೀಯ ಹೆದ್ದಾರಿಯೂ ಬೆಂಗಳೂರು-ಹೊಸಕೋಟೆ-ಚಿಂತಾಮಣಿ ರಾಜ್ಯ ಹೆದ್ದಾರಿಯೂ ಹಾದುಹೋಗಿದ್ದು ಹೊಸಕೋಟೆ-ಮಾಲೂರು, ಹೊಸಕೋಟೆ-ದೇವನಹಳ್ಳಿ ಮುಂತಾದ ಮಾರ್ಗಗಳ ಜೊತೆಗೆ ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ಉತ್ತಮ ಮಾರ್ಗಸಂಪರ್ಕಗಳಿವೆ. ಬೆಂಗಳೂರು-ಮದ್ರಾಸು ಬ್ರಾಡ್‌ಗೇಜ್ ರೈಲುಮಾರ್ಗ ಈ ತಾಲ್ಲೂಕಿನಲ್ಲಿ ಹಾದುಹೋಗಿದೆ. ತಾಲ್ಲೂಕಿನ ರೈಲು ಮತ್ತು ರಸ್ತೆ ಮಾರ್ಗಗಳು ಇಲ್ಲಿನ ವ್ಯಾಪಾರ, ವಾಣಿಜ್ಯಾಭಿವೃದ್ಧಿಗೆ ಸಹಾಯಕವಾಗಿವೆ.

ಹೊಸಕೋಟೆಯ ಈಶಾನ್ಯಕ್ಕೆ 6 ಕಿಮೀ ದೂರದಲ್ಲಿರುವ ದಾಸರಹಳ್ಳಿಯಲ್ಲಿ ಚನ್ನರಾಯ ದೇವಾಲಯವಿದೆ. ಈ ದೇವಾಲಯದ ಬಳಿ ಒಂದು ತೆರೆದ ಮಂಟಪವಿದ್ದು ಇದರ ನಾಲ್ಕು ಪ್ರವೇಶದ್ವಾರಗಳಲ್ಲೂ ದ್ವಾರಪಾಲಕರಿದ್ದಾರೆ. ಈ ಮಂಟಪವನ್ನು ಉತ್ತಲ ಕಂಬವೆಂದು ಕರೆಯುವರು. ಹೊಸಕೋಟೆಯ ಉತ್ತರಕ್ಕೆ 8 ಕಿಮೀ ದೂರದಲ್ಲಿರುವ ಹಸಿಗಲ ಗ್ರಾಮದಲ್ಲಿ ಚೋಳರ ಕಾಲದ ಸೋಮೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ಸುಂದರವಾದ ಮತ್ತು ವಿಚಿತ್ರ ಕೆತ್ತನೆಗಳಿವೆ. ಉದಾಹರಣೆಗೆ, ಸರ್ಪದ ತಲೆಯಿರುವ ನವಿಲೊಂದು ನವಿಲುತಲೆಯಿರುವ ಸರ್ಪವೊಂದನ್ನು ಎದುರಿಸುತ್ತ ನಿಂತಿರುವ ಒಂದು ಕೆತ್ತನೆಯಿದೆ. ಹೊಸಕೋಟೆಯ ಈಶಾನ್ಯಕ್ಕೆ ಹೊಸಕೋಟೆ-ಚಿಂತಾಮಣಿ ಮಾರ್ಗಮಧ್ಯದಲ್ಲಿರುವ ಹಿಂಡಿಗನಾಳು ಗ್ರಾಮದಲ್ಲಿ ತ್ರಿಕೂಟಾಚಲ ರಾಮದೇವಾಲಯವಿದೆ. ಗ್ರಾಮದ ಉತ್ತರದಲ್ಲಿ ಒಂದು ಮಾಸ್ತಿಕಲ್ಲಿದೆ. ಹೊಸಕೋಟೆಯ ಈಶಾನ್ಯಕ್ಕೆ 21 ಕಿಮೀ ದೂರದಲ್ಲಿರುವ ಬನಹಳ್ಳಿ ಹೊಸಕೋಟೆ-ಚಿಂತಾಮಣಿ ಮಾರ್ಗದಲ್ಲಿದೆ. ಈ ಗ್ರಾಮದಲ್ಲಿ ಸಪ್ತಮಾತೃಕೆಯರು, ಗಣಪತಿ, ಕುಳಿತಿರುವ ದಕ್ಷಿಣಾಮೂರ್ತಿ ಮುಂತಾದ ವಿಗ್ರಹಗಳಿರುವ ಒಂದು ಹಳೆಯ ದೇವಾಲಯವೂ ಒಂದು ನೊಳಂಬ ಶಾಸನವೂ ಇವೆ. ಹೊಸಕೋಟೆಯ ಈಶಾನ್ಯದಲ್ಲಿ ತಾಲ್ಲೂಕು ಅಂಚಿನಲ್ಲಿರುವ ಮತ್ತೊಂದು ಬನಹಳ್ಳಿ ನಿರ್ವಸಿತ ಗ್ರಾಮ. ಹೊಸಕೋಟೆಯ ಈಶಾನ್ಯಕ್ಕೆ 18 ಕಿಮೀ ದೂರವಿರುವ ಕೊಂಡ್ರಹಳ್ಳಿಯಲ್ಲಿ ಚೋಳರ ಕಾಲದ್ದಿರಬಹುದೆನ್ನುವ ಧರ್ಮೇಶ್ವರ ದೇವಾಲಯವಿದೆ. ಇಲ್ಲಿನ ಈಶ್ವರ ಲಿಂಗವನ್ನು ಧರ್ಮರಾಯ ಸ್ಥಾಪಿಸಿದ್ದೆಂದು ಹೇಳುವರು. ಚೋಳದೊರೆ ರಾಜಮಹೇಂದ್ರನ ಒಂದು ಶಾಸನವಿದೆ. ಹೊಸಕೋಟೆಯ ಆಗ್ನೇಯಕ್ಕೆ ತಾಲ್ಲೂಕಿನ ಅಂಚಿನಲ್ಲಿರುವ ಖಾಜಿ ಹೊಸಹಳ್ಳಿಯಲ್ಲಿ ಸು.7ನೆಯ ಶತಮಾನದ ಶಾಸನವಿದ್ದು ವಿನಯಾದಿತ್ಯ ಎಂಬುವನ ಆಳಿಕೆ ಕುರಿತು ಮಾಹಿತಿ ನೀಡಿದೆ. ನಿಜಗುಣ ಸುಜ್ಞಾನಮೂರ್ತಿಯ ಗದ್ದುಗೆಯಿರುವ ಒಂದು ಮಠವಿದೆ. 1494ನೆಯ ಒಂದು ತಾಮ್ರ ಶಾಸನ ಈ ಮಠದಲ್ಲಿದೆ. ಹೊಸಕೋಟೆಗೆ ಆಗ್ನೇಯದಲ್ಲಿ 10 ಕಿಮೀ ದೂರದಲ್ಲಿರುವ ವಗತ ಗ್ರಾಮದಲ್ಲಿ ದ್ರಾವಿಡಶೈಲಿಯ ಹಳೆಯ ವರದರಾಜ ದೇವಾಲಯವಿದೆ. ಇಲ್ಲಿನ ಚೌಡೇಶ್ವರಿ ದೇವಾಲಯದ ಮುಂಭಾಗದ ತೋರಣಗಂಬದಲ್ಲಿ ರಾಜೇಂದ್ರಚೋಳನ (1020) ಒಂದು ಶಾಸನವಿದೆ. ಹಿಂದೆ ಈ ಗ್ರಾಮಕ್ಕೆ ವರದರಾಜ ಚತುರ್ವೇದಿಮಂಗಲಂ ಎಂದು ತಮಿಳಿನಲ್ಲೂ ಭಾಗೀರಥಿಪುರ ಅನಂತರ ಯೋಗವತಪುರಿ ಅಥವಾ ಯೋಗಪುರಿ ಎಂಬ ಹೆಸರಿತ್ತೆಂದೂ ತಿಳಿದುಬರುವುದು. ಹೊಸಕೋಟೆಯ ಈಶಾನ್ಯಕ್ಕೆ ತಾಲ್ಲೂಕಿನ ಅಂಚಿನಲ್ಲಿರುವ ಹೊಸಹಳ್ಳಿಯಲ್ಲಿ ಎರಡು ಮಾಸ್ತಿಕಲ್ಲುಗಳಿವೆ. ಪತಿಪತ್ನಿಯಿರುವ ಒಂದರಲ್ಲಿ ಪತಿ ಒಂದು ಕೈಯಲ್ಲಿ ಕತ್ತಿ ಇನ್ನೊಂದರಲ್ಲಿ ಕಠಾರಿ ಹಿಡಿದುಕೊಂಡಿದ್ದಾರೆ. ಪತ್ನಿ ಬಲಗೈಯಲ್ಲಿ ಗಿಂಡಿಯನ್ನೂ ಎಡಗೈಯಲ್ಲಿ ಕನ್ನಡಿಯಂತೆ ಕಾಣುವ ಒಂದು ವಸ್ತುವನ್ನೂ ಹಿಡಿದಿದ್ದಾಳೆ. ಎರಡನೆಯ ಮಾಸ್ತಿಕಲ್ಲಿನಲ್ಲಿ ಎರಡು ಭಾಗವಿದ್ದು ಕೆಳಭಾಗದಲ್ಲಿ ಇಬ್ಬರು ಕಠಾರಿ ಹಿಡಿದು ಹೋರಾಡುತ್ತಿರುವ ಚಿತ್ರವನ್ನೂ ಮೇಲುಭಾಗದಲ್ಲಿ ವಿಷ್ಣುವಿಗ್ರಹದ ಮುಂದೆ ಪತಿಪತ್ನಿಯರಿಬ್ಬರೂ ಕೈಜೋಡಿಸಿ ನಿಂತಿರುವ ಚಿತ್ರವನ್ನೂ ಕಾಣಬಹುದು.

ಹೊಸಕೋಟೆ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬೆಂಗಳೂರಿನ ಪೂರ್ವಕ್ಕೆ ಬೆಂಗಳೂರು-ಕೋಲಾರ ಹೆದ್ದಾರಿಯಲ್ಲಿ ಬೆಂಗಳೂರಿಗೆ 26 ಕಿಮೀ ದೂರದಲ್ಲಿದೆ. ಪಟ್ಟಣದಲ್ಲಿ 18,861 ಪುರುಷರು, 17,472 ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 36,323.

ಪಟ್ಟಣವನ್ನು ಪಶ್ಚಿಮ ಮತ್ತು ಉತ್ತರದಲ್ಲಿ ದಕ್ಷಿಣಪಿನಾಕಿನಿಯಿಂದಾದ ದೊಡ್ಡಕೆರೆ ಬಳಸಿದೆ. ಪಟ್ಟಣ ಬೆಂಗಳೂರಿಗೆ ಹತ್ತಿರದಲ್ಲಿದ್ದು ಸುತ್ತಲ ಗ್ರಾಮಗಳಿಗೆ ವ್ಯಾಪಾರ ಕೇಂದ್ರವಾಗಿದೆ. ಪಟ್ಟಣದಲ್ಲಿ ಸರ್ವವಿಧ ನಾಗರಿಕ ಸೌಲಭ್ಯಗಳಿವೆ. ಹೊಸಕೋಟೆಯು ಹತ್ತಿರದ ಬೆಂಗಳೂರು ನಗರದ ಬೆಳವಣಿಗೆಯ ಪ್ರಭಾವಕ್ಕೊಳಗಾಗಿದ್ದು ದಿನೇದಿನೇ ಈ ಪಟ್ಟಣ ಬೆಳೆಯುತ್ತಿದೆ. ತಾಲ್ಲೂಕಿನ ಇತರ ಭಾಗಗಳೂ ನಗರೀಕರಣಕ್ಕೊಳಗಾಗುತ್ತಿವೆ.

ಇಲ್ಲಿನ ಕೋಟೆಯನ್ನು (ಹೊಸಕೋಟೆ) 1595ರಲ್ಲಿ ಸುಗಟೂರಿನ ಪ್ರಭು ತಮ್ಮೇಗೌಡ ಕಟ್ಟಿಸಿದನೆಂದು ಹೇಳುವರು. ಈತ 1632ರ ವರೆಗೂ ಆಳಿದ. ಮುಂದೆ ಬಿಜಾಪುರದ ವಶವಾಗಿ ಶಹಾಜಿಗೆ ಜಹಗೀರಾಗಿ

ಕೊಡಲಾಯಿತು. 1663ರಲ್ಲಿ ಮುಗಲರ ವಶವಾಗಿ ಶಿರಾ ಪ್ರಾಂತ್ಯಕ್ಕೆ ಸೇರಿತು. 1756ರಲ್ಲಿ ಹೊಸಕೋಟೆ ಮೈಸೂರಿಗೆ ಸೇರಿತು. ಆದರೆ ಮತ್ತೆ ಮರಾಠರ ವಶವಾಯಿತು. ಅಂತಿಮವಾಗಿ 1761ರಲ್ಲಿ ಹೈದರ್ ಅಲಿ ಹೊಸಕೋಟೆಯನ್ನು ಮೈಸೂರಿಗೆ ಸೇರಿಸಿದ. ಪಟ್ಟಣದಲ್ಲಿ ಅವಿಮುಕ್ತೇಶ್ವರ, ವಿಠಲೇಶ್ವರ ದೇವಾಲಯಗಳೂ ಎರಡು ಆಂಜನೇಯ ಗುಡಿಗಳೂ ಇವೆ. ಅವಿಮುಕ್ತೇಶ್ವರ ದೇವಾಲಯದ ಬಳಿ ಆಕರ್ಷಕ ಶಿಲ್ಪವುಳ್ಳ ದೊಡ್ಡ ದೀಪಸ್ತಂಭವಿದೆ. ಈ ಪಟ್ಟಣದಲ್ಲಿ ಪ್ರತಿವರ್ಷ ಜರುಗುವ ಅಮೃತೇಶ್ವರ ರಥೋತ್ಸವ ಮತ್ತು ಧರ್ಮರಾಯನ ಕರಗ ಬಹು ಪ್ರಸಿದ್ಧವಾದವು. (ಎ.ಕೆ.)

**ಹೊಸದುರ್ಗ:** ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರದಲ್ಲಿ ಹೊಳಲ್ಕೆರೆ, ಪೂರ್ವದಲ್ಲಿ ಹಿರಿಯೂರು ತಾಲ್ಲೂಕುಗಳೂ ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕಡೂರು ತಾಲ್ಲೂಕುಗಳೂ ದಕ್ಷಿಣದಲ್ಲಿ ಸ್ವಲ್ಪಭಾಗ ಕಡೂರು ತಾಲ್ಲೂಕೂ ಹೆಚ್ಚಾಗಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕೂ ಸುತ್ತುವರಿದಿವೆ. ಮಾಡದಕೆರೆ, ಶ್ರೀರಾಂಪುರ, ಹೊಸದುರ್ಗ, ಮತ್ತೋಡು ಹೋಬಳಿಗಳು. ಒಟ್ಟು 225 ಗ್ರಾಮಗಳಿವೆ. ತಾಲ್ಲೂಕಿನ ವಿಸ್ತೀರ್ಣ 1,372.3 ಚ.ಕಿಮೀ. ಜನಸಂಖ್ಯೆ 2,19,445. ಇದರಲ್ಲಿ 1,96,965 ಮಂದಿ ಗ್ರಾಮಸ್ಥರೂ 22,480 ಮಂದಿ ಪಟ್ಟಣಿಗರಿದ್ದಾರೆ.

ಹೊಸದುರ್ಗ ಬೆಟ್ಟಗುಡ್ಡಗಳ ಪ್ರದೇಶವೆನ್ನಬಹುದು. ಪೂರ್ವಘಟ್ಟ ಶ್ರೇಣಿಗೆ ಸೇರಿದ ಪಶ್ಚಿಮ ಶ್ರೇಣಿ ಹೊಸದುರ್ಗದಿಂದ ದಾವಣಗೆರೆ ತಾಲ್ಲೂಕಿನ ಮಾಯಕೊಂಡದ ಮುಖಾಂತರ ಅಣಜಿವರೆಗೂ ಹಬ್ಬಿದೆ. ಇವುಗಳಲ್ಲಿ ಈ ತಾಲ್ಲೂಕಿಗೆ ಸಂಬಂಧಿಸಿದಂತೆ ನೀರಗುಡ್ಡ ಬೆಟ್ಟಶ್ರೇಣಿ, ಕೋಟೆಕಲ್ಲು ಗುಡ್ಡ, ದೊಡ್ಡರಸಿಗುಡ್ಡ, ತಿರುಮಲದೇವರ ಗುಡ್ಡ ಮತ್ತು ಹಾಲರಾಮೇಶ್ವರ ಗುಡ್ಡ ಮುಖ್ಯವಾದವು. ಹಾಲರಾಮೇಶ್ವರ ಗುಡ್ಡ (1,181 ಮೀ) ಈ ಜಿಲ್ಲೆಗೇ ಎತ್ತರದ ಬೆಟ್ಟ. ಈ ತಾಲ್ಲೂಕಿನ ಬೂದಿಹಾಳು, ಗಂಜಿಗೆರೆ ಬಳಿ ಕಲ್ನಾರು, ಮಾರಿಕಣಿವೆ, ಮಾಡದಕೆರೆ, ಕಂಚಿಪುರ ಈ ಪ್ರದೇಶಗಳಲ್ಲಿ ಸ್ಫಟಿಕ ಜಾತಿಯ ಸುಣ್ಣಕಲ್ಲಿನ ಪದರಗಳಿವೆ. ಈ ತಾಲ್ಲೂಕಿನಲ್ಲಿ ಉತ್ತಮವಾದ ಕಬ್ಬಿಣದ ಅದಿರು ದೊರೆಯುತ್ತದೆ. ತಾಲ್ಲೂಕಿನ ಕೆಲವೆಡೆ ವಿವಿಧ ಬಣ್ಣದ ಸುದ್ದೆ ಮಣ್ಣುಗಳುಂಟು. ಈ ತಾಲ್ಲೂಕಿನ ಬೂದಿಮರಡಿಯಲ್ಲಿ ಹಿಂದೆ ಚಿನ್ನ ತೆಗೆದ ಸೂಚನೆಗಳಿವೆ.

ಈ ತಾಲ್ಲೂಕಿನಲ್ಲಿ ಕಾರಾಚಿ ಮರಗಳ ಕಾಡುಂಟು. ಈ ಅರಣ್ಯ ಪ್ರದೇಶ ವೇದಾವತಿ ನದಿ ಕಮರಿಯ ಉದ್ದಕ್ಕೂ ಸದಾ ಹಸುರಾಗಿ ಬೆಳೆದುಕೊಂಡಿದೆ. ಉಳಿದ ಕಡೆಗಳಲ್ಲಿ ಸಾಮಾನ್ಯವಾಗಿ ಹಿಪ್ಪೆ, ಮಾವು, ಹುಣಿಸೆ, ಜಾಲಿ ಮುಂತಾದ ಮರಗಳು ಬೆಳೆಯುತ್ತವೆ. ಜೊತೆಗೆ ಉತ್ತಮ ಹುಲ್ಲುಗಾವಲುಗಳಿವೆ.

ವೇದಾವತಿ ತಾಲ್ಲೂಕಿನ ಮುಖ್ಯ ನದಿ. ತಾಲ್ಲೂಕಿನ ನೈಋತ್ಯದಲ್ಲಿ ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಹರಿಯುವುದು. ಹಿರಿಯೂರಿನ ವಾಣಿವಿಲಾಸಪುರದ ಬಳಿ ಈ ನದಿಗೆ ಅಡ್ಡಕಟ್ಟೆ ಕಟ್ಟಿ ವಾಣಿವಿಲಾಸ ಸಾಗರ ನಿರ್ಮಿಸಲಾಗಿದೆ. ಜಲಾಶಯದ ಹಿನ್ನೀರು ಈ ತಾಲ್ಲೂಕಿನ ಪ್ರದೇಶದಲ್ಲಿ ಹರಡಿದೆ. ಹಿತಕರ ಹವಾಗುಣವಿದೆ. ವಾರ್ಷಿಕ ಸರಾಸರಿ ಮಳೆ 511.98 ಮಿಮೀ. ಜೋಳ, ರಾಗಿ, ಬತ್ತ, ತೊಗರಿ, ಮೆಣಸಿನಕಾಯಿ, ತೆಂಗು ಮತ್ತು ಹತ್ತಿಯನ್ನು ಬೆಳೆಯುತ್ತಾರೆ. ಪಶುಪಾಲನೆಯೂ ಇದೆ. ತಾಲ್ಲೂಕು ಮತ್ತು ಗ್ರಾಮಮಟ್ಟದ ಪಶುವೈದ್ಯಾಲಯಗಳಿವೆ. ದೊಡ್ಡ ಜಲಾಶಯವಿದ್ದು ಮತ್ಸ್ಯೋದ್ಯಮವಿದೆ.

ತಾಲ್ಲೂಕಿನಲ್ಲಿ ಕೈಮಗ್ಗದ ಬಟ್ಟೆ ತಯಾರಿಕೆ ಹೆಚ್ಚು. ತೆಂಗುನಾರಿನ ಮತ್ತು ಕೆಲವು ಗ್ರಾಮಕೈಗಾರಿಕೆಗಳೂ ಇವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ವಿದ್ಯುತ್ತು, ಅಂಚೆ, ತಂತಿ, ದೂರವಾಣಿ, ಆಸ್ಪತ್ರೆ, ಪ್ರೌಢಶಾಲೆ ಮೊದಲಾದವುಗಳ ಸೌಲಭ್ಯವಿದೆ. ಜಿಲ್ಲಾ ಹೆದ್ದಾರಿಗಳಿದ್ದು ತಾಲ್ಲೂಕಿನ ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ. ಬೆಂಗಳೂರು–ಹುಬ್ಬಳ್ಳಿ ರೈಲುಮಾರ್ಗ ಈ ತಾಲ್ಲೂಕಿನ ಪಶ್ಚಿಮದಲ್ಲಿ ತಾಲ್ಲೂಕನ್ನು ಮುಟ್ಟಿ ಹೋಗಿದ್ದು ಹೊಸದುರ್ಗದ ವಾಯುವ್ಯಕ್ಕೆ 19 ಕಿಮೀ ದೂರದಲ್ಲಿ ಹೊಸದುರ್ಗ–ರಸ್ತೆ ರೈಲು ನಿಲ್ದಾಣವಿದೆ.

ಹೊಸದುರ್ಗದ ಪೂರ್ವಕ್ಕೆ 20 ಕಿಮೀ ದೂರದಲ್ಲಿ ವೇದಾವತಿ ನದಿಯ ಬಲದಂಡೆಯ ಮೇಲೆ ಮತ್ತೋಡು ಗ್ರಾಮವಿದೆ. ಇದು ಹಿಂದೆ ಗಾಜಿನ ಬಳೆಗಳ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಗಿರಿಯಪ್ಪನಾಯಕ ನೆಂಬುವನು ಸ್ಥಾಪಿಸಿದ ಪಾಳೆಗಾರ ವಂಶದವರು ಇಲ್ಲಿ ಆಳಿದರು. ಈ ಸಂತತಿಯ ದೊಡ್ಡಣ್ಣನಾಯಕ ಈ ಊರಿನ ಕೋಟೆ ಕಟ್ಟಿಸಿದನೆಂದೂ ವೀರಶೈವ ಧರ್ಮಾವಲಂಬಿಯಾದನೆಂದೂ ತಿಳಿದುಬರುವುದು. ಮುಂದೆ ಈ ವಂಶದ ಹಾಲಪ್ಪರಾಜನೆಂಬ ನಾಯಕ ಈ ಊರಲ್ಲಿ 1707ರಲ್ಲಿ ಮುರುಘರಾಜ ಸ್ವಾಮಿಗಳಿಗೆ ಒಂದು ಮಠ ಕಟ್ಟಿಸಿಕೊಟ್ಟನೆಂದೂ ಜೊತೆಗೆ ಒಂದು ಅಗ್ರಹಾರ ಮತ್ತು ಕೆರೆಯನ್ನು ನಿರ್ಮಾಣ ಮಾಡಿದನೆಂದೂ ತಿಳಿದುಬರುತ್ತದೆ. ಹೊಸದುರ್ಗದ ಪಶ್ಚಿಮಕ್ಕೆ 13 ಕಿಮೀ ದೂರದಲ್ಲಿರುವ ನೀರ್ಗುಂದ ಹಿಂದೆ ಜೈನರ ರಾಜಧಾನಿಯಾಗಿತ್ತೆಂದು ರಾಜಪರಮೇಶ್ವರ ರಾಯನೆಂಬುವನ ಮಗ ನೀಲಶೇಖರ ಈ ಊರನ್ನು ಪ್ರ.ಶ.ಪೂ. 160ರಲ್ಲಿ ಸ್ಥಾಪಿಸಿ ಇದಕ್ಕೆ ನೀಲಾವತಿ ಪಟ್ಟಣವೆಂದು ಹೆಸರಿಟ್ಟದ್ದನೆಂದೂ ತಿಳಿದು ಬರುವುದು. ಹೊಸದುರ್ಗದ ಆಗ್ನೇಯಕ್ಕೆ 26 ಕಿಮೀ ದೂರದಲ್ಲಿರುವ ಶ್ರೀರಾಂಪುರವನ್ನು ಹಿಂದೆ ಬೂದಿಹಾಳವೆಂದು ಕರೆಯುತ್ತಿದ್ದರು. ಇಲ್ಲಿ 15ನೆಯ ಶತಮಾನದಲ್ಲಿ ಕಟ್ಟಿದ ಕೋಟೆಯಿದೆ.

ಹೊಸದುರ್ಗ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಚಿತ್ರದುರ್ಗಕ್ಕೆ ನೈಋತ್ಯದಲ್ಲಿ 64 ಕಿಮೀ ದೂರದಲ್ಲಿದೆ. ಜನಸಂಖ್ಯೆ 22,480. ಈ ಪಟ್ಟಣದಲ್ಲಿ ನಾಗರಿಕ ಸೌಲಭ್ಯಗಳಿದ್ದು ಇದೊಂದು ಮುಖ್ಯ ವ್ಯಾಪಾರ ಕೇಂದ್ರವಾಗಿದೆ. ಇಲ್ಲಿಂದ ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ. ಹೊಸದುರ್ಗ ರಸ್ತೆ ರೈಲುನಿಲ್ದಾಣ ಈ ಪಟ್ಟಣಕ್ಕೆ 19 ಕಿಮೀ ದೂರದಲ್ಲಿದೆ.

ಬಾಗೂರಿನಲ್ಲಿದ್ದ ಮುಸಲ್ಮಾನರಿಂದ ಅಪಾಯವಾಗದಂತೆ ರಕ್ಷಣೆಗಾಗಿ ಚಿತ್ರದುರ್ಗದ ಪಾಳೆಯಗಾರ ಚಿಕ್ಕಣ್ಣನಾಯಕ 1676ರಲ್ಲಿ ಇಲ್ಲೊಂದು ಕೋಟೆ ಕಟ್ಟಿಸಿದನೆಂದೂ 1708ರಲ್ಲಿ ಬಾಗೂರಿನಿಂದ ಬಂದ ಒಬ್ಬ ಜಂಗಮ ಇಲ್ಲಿನ ಬೆಟ್ಟದ ಪಾದದ ಬಳಿ ಪಾಳೆಯಗಾರರ ಸಹಾಯದಿಂದ ಪೇಟೆ ಕಟ್ಟಿ ಜನ ವಾಸಿಸುವಂತೆ ಮಾಡಿದನೆಂದೂ ಹೇಳುವರು. ಬಹುಶಃ ಇಲ್ಲಿ ಹೊಸದಾಗಿ ಕೋಟೆ ಕಟ್ಟಿಸಿದ್ದರಿಂದ ಇದಕ್ಕೆ ಹೊಸದುರ್ಗ ಎಂದು ಹೆಸರು ಬಂದಿರಬೇಕು. ಸ್ವಲ್ಪ ಕಾಲ ಇದು ಹೈದರ್ ಅಲಿ ಮತ್ತು ಮರಾಠರ ಆಳ್ವಿಕೆಗೆ ಸೇರಿದ್ದು ಅನಂತರ ಮೈಸೂರು ರಾಜ್ಯಕ್ಕೆ ಸೇರಿಹೋಯಿತು. (*;ಎಚ್.ಆರ್.ಆರ್.ಬಿ.)

**ಹೊಸನಗರ:** ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ವಾಯುವ್ಯ ಮತ್ತು ಉತ್ತರದಲ್ಲಿ ಸಾಗರ ತಾಲ್ಲೂಕೂ ಈಶಾನ್ಯ ಪೂರ್ವದಲ್ಲಿ ಶಿವಮೊಗ್ಗ, ದಕ್ಷಿಣದಲ್ಲಿ ತೀರ್ಥಹಳ್ಳಿ ತಾಲ್ಲೂಕೂ ಪಶ್ಚಿಮದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕೂ ಸುತ್ತುವರಿದಿವೆ. ನಗರ, ಹೊಸನಗರ, ಹುಮಚ ಹಾಗೂ ಕೆರೆಹಳ್ಳಿ ಹೋಬಳಿಗಳು. ಒಂದು ಪಟ್ಟಣ ಮತ್ತು 209 ಗ್ರಾಮಗಳಿವೆ. ಇದು ಜಿಲ್ಲೆಯ ಎರಡನೆಯ ದೊಡ್ಡ ತಾಲ್ಲೂಕು. ವಿಸ್ತೀರ್ಣ 1,423.3 ಚ.ಕಿಮೀ. ಜನಸಂಖ್ಯೆ 1,15,019.

ಈ ತಾಲ್ಲೂಕು ಜಿಲ್ಲೆಯ ಮಲೆನಾಡು ಪ್ರದೇಶಕ್ಕೆ ಸೇರಿದ್ದು ಪೂರ್ವದ ಕಡೆಗೆ ಇಳಿಜಾರಾಗಿದೆ. ಈ ತಾಲ್ಲೂಕಿನ ಮೂರು ಕಡೆಯೂ ಪಶ್ಚಿಮಘಟ್ಟ ಸುತ್ತುವರಿದಿದ್ದು ಹುಲಿಕಲ್ಲು ಮತ್ತು ಕೊಲ್ಲೂರು ಕಣಿವೆಗಳಿವೆ. ಈ ಕಣಿವೆಗಳ ಮುಖಾಂತರ ಉಡುಪಿ ಜಿಲ್ಲೆಗೆ ಪ್ರವೇಶ. ಈ ತಾಲ್ಲೂಕಿನಲ್ಲಿ ನಿಸರ್ಗಸೌಂದರ್ಯ ಮನೋಹರವಾಗಿದ್ದು ಸಹ್ಯಾದ್ರಿ ಬೆಟ್ಟಗಳ ಸಾಲು, ದಟ್ಟ ಅರಣ್ಯ ಮತ್ತು ಆಳವಾದ ಕಣಿವೆಗಳಿಂದ ಕೂಡಿದೆ. ಈ ತಾಲ್ಲೂಕಿನ ನೈಋತ್ಯಕ್ಕಿರುವ ಕೊಡಚಾದ್ರಿ 1,343 ಮೀ ಎತ್ತರವಿದೆ. ಹುಮಚದ ಬಳಿ 864.41 ಮೀ ಎತ್ತರವಿರುವ ಅಗಸ್ತ್ಯಪರ್ವತವಿದೆ. ಇವಲ್ಲದೆ ಕೆಲವು ಸಣ್ಣಪುಟ್ಟಗುಡ್ಡಗಳು ಈ ತಾಲ್ಲೂಕಿನಲ್ಲಿವೆ. ಶರಾವತಿ **(ನೋಡಿ)** ತಾಲ್ಲೂಕಿನ ಮುಖ್ಯ ನದಿ. ತೀರ್ಥಹಳ್ಳಿ ತಾಲ್ಲೂಕಿನಿಂದ ಹರಿದು ಬರುವ ಈ ನದಿ ತಾಲ್ಲೂಕಿನಲ್ಲಿ ವಾಯವ್ಯಾಭಿಮುಖವಾಗಿ ಹರಿಯುವುದು. ಈ ನದಿಯ ಲಿಂಗನಮಕ್ಕಿ ಜಲಾಶಯದ ಹಿನ್ನೀರು ಈ ತಾಲ್ಲೂಕಿನ ವಾಯವ್ಯ ಭಾಗದಲ್ಲಿ ಹರಡಿ ನಗರ ಮತ್ತು ಹೊಸನಗರದವರೆಗೂ ಚಾಚಿಕೊಂಡಿದೆ. ಇದಲ್ಲದೆ ಹುಮಚದ ಅಗಸ್ತ್ಯಪರ್ವತದಲ್ಲಿ ಹುಟ್ಟುವ ಕುಮುದ್ವತಿ ಈ ತಾಲ್ಲೂಕಿನ ಪೂರ್ವದಲ್ಲಿ ಸ್ವಲ್ಪ ದೂರ ಹರಿದು ಶಿವಮೊಗ್ಗ ತಾಲ್ಲೂಕನ್ನು ಪ್ರವೇಶಿಸುವುದು. ಹರಿದ್ರಾವತಿ, ಸರ್ಮಣಾವತಿ, ವರಾಹಿ ಮುಂತಾದ ಸಣ್ಣ ನದಿತೊರೆಗಳು ಈ ತಾಲ್ಲೂಕಿನಲ್ಲಿ ಹರಿಯುತ್ತವೆ. ತಂಪಾದ ಹವಾಗುಣವಿರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 2,786.94 ಮಿಮೀ. ಜಿಲ್ಲೆಯ ಹೆಚ್ಚು ಮಳೆ ಬೀಳುವ ತಾಲ್ಲೂಕುಗಳಲ್ಲಿ ಇದು ಎರಡನೆಯದು. ಮಲೆನಾಡು ಪ್ರದೇಶಕ್ಕೆ ಸೇರಿದ ಈ ತಾಲ್ಲೂಕಿನಲ್ಲಿ ಸಾಕಷ್ಟು ಮಳೆ ಬೀಳುವುದರಿಂದದಟ್ಟ ಕಾಡುಗಳಿದ್ದು ಸು. 25,437 ಹೆಕ್ಟೇರ್ ಅರಣ್ಯಪ್ರದೇಶವಿದೆ. 65,790 ಹೆಕ್ಟೇರ್‌ಗಳ ಖಾಯಂ ಹುಲ್ಲುಗಾವಲೂ ಇತ್ತು. ಈ ತಾಲ್ಲೂಕಿನ ದಟ್ಟ ಅರಣ್ಯ ಪ್ರದೇಶದಲ್ಲಿ ಧೂಪ, ಬಲ್ಲಗಿ, ಹೆಬ್ಬಲಸು, ಸುರಹೊನ್ನೆ, ಕೀರಲಬೋಗಿ, ನಾಗಸಂಪಿಗೆ, ಹಲಸು, ಮಾವು, ಗುಳಮಾವು, ಸಂಪಿಗೆ, ಮದ್ದಲೆ, ಹೈಗಾ, ಕರಿಮರ, ಹೊಲೆಮತ್ತಿ ಮುಂತಾದ ಬೆಲೆಬಾಳುವ ಮರಗಳು ಬೆಳೆಯುತ್ತವೆ. ಆನೆ, ಕಾಡುಕೋಣ, ಜಿಂಕೆಗಳು, ಹುಲಿ, ಚಿರತೆ, ಕರಡಿ ಮುಂತಾದ ನಾನಾ ಬಗೆಯ ಕಾಡು ಪ್ರಾಣಿಗಳನ್ನೂ ಪಕ್ಷಿಗಳನ್ನೂ ವಿವಿಧ ಬಗೆಯ ಹಾವುಗಳನ್ನೂ ಇಲ್ಲಿನ ದಟ್ಟ ಅರಣ್ಯಗಳಲ್ಲಿ ಕಾಣಬಹುದು.

ತಾಲ್ಲೂಕಿನಲ್ಲಿ ಮರಳುಮಿಶ್ರಿತ ಕೆಂಪುಜೇಡಿಮಣ್ಣಿನ ಭೂಮಿಯಿದೆ. ಸು. 1182 ಕೆರೆಗಳೂ 67 ಬಾವಿಗಳೂ ಇದ್ದು ಅವುಗಳ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇವುಗಳ ಜೊತೆಗೆ ಸ್ವಾಭಾವಿಕ ಊಟೆಗಳಿದ್ದು ಅವುಗಳಿಗೆ ಸಣ್ಣ ಕಟ್ಟೆಗಳನ್ನು ಕಟ್ಟಿ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳುವರು. ಬತ್ತ, ರಾಗಿ, ಕಬ್ಬು, ನೆಲಗಡಲೆ, ಕೆಲವು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ತೋಟಗಳಲ್ಲಿ ಮುಖ್ಯವಾಗಿ ಅಡಕೆ, ತೆಂಗು, ಗೋಡಂಬಿ, ವಿವಿಧ ಫಲ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆಯುಂಟು. ಪಶುಗಳ ಅಭಿವೃದ್ಧಿ ಮತ್ತು ರಕ್ಷಣೆಗೆ ಪಶುವೈದ್ಯಾಲಯಗಳಿವೆ. ನದಿ, ತೊರೆಗಳು ಲಿಂಗನಮಕ್ಕಿ ಜಲಾಶಯದ ವಿಶಾಲಭಾಗ ಈ ತಾಲ್ಲೂಕಿನಲ್ಲಿದ್ದು ಮತ್ಸ್ಯೋದ್ಯಮದ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳಿವೆ.

ಇತ್ತೀಚಿನ ಸಂಶೋಧನೆಯಿಂದಾಗಿ ಈ ತಾಲ್ಲೂಕಿನ ಕೆಲವು ಕಡೆ ಉತ್ತಮವಾದ ಕಬ್ಬಿಣದ ಅದಿರು ನಿಕ್ಷೇಪವಿರುವುದು ಪತ್ತೆಯಾಗಿದೆ. ಇದರ ಉತ್ಪಾದನಾ ಕಾರ್ಯ ಪ್ರಾರಂಭವಾದರೆ ತಾಲ್ಲೂಕಿನ ಕೈಗಾರಿಕಾ ಸ್ವರೂಪವೇ ಬದಲಾಗಬಹುದು. ಬಟ್ಟೆಗಳಿಗೆ ಬಣ್ಣ ಕೊಡುವ ವರ್ಣದ್ರವ್ಯ ತಯಾರಿಕಾ ಕಾರ್ಖಾನೆಯೊಂದಿದೆ. ದಟ್ಟ ಅರಣ್ಯಗಳಿಂದ ಕೂಡಿದ ಈ ತಾಲ್ಲೂಕು ಬಿದಿರಿನ ಕೈಗಾರಿಕೆಯಲ್ಲಿ ಜಿಲ್ಲೆಗೇ ಮೊದಲಾಗಿದೆ. ಮರಗೆಲಸವೂ ಇಲ್ಲಿನ ಒಂದು ಮುಖ್ಯ ಕೈಗಾರಿಕೆಯಾಗಿದೆ. ಇದರ ಜೊತೆಗೆ ಅರಣ್ಯಾವಲಂಬಿತ ಸಣ್ಣಪುಟ್ಟ ಕೈಗಾರಿಕೆಗಳಿವೆ. ನಾಗರಿಕ ಸೌಲಭ್ಯಗಳೆಲ್ಲವೂ ಇಲ್ಲಿವೆ. ತಾಲ್ಲೂಕಿನ ಈಶಾನ್ಯದಲ್ಲಿ ಸ್ವಲ್ಪದೂರ ಶಿವಮೊಗ್ಗ–ಸಾಗರ ರೈಲುಮಾರ್ಗ ಹಾದುಹೋಗಿದೆ. ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳೂ ತಾಲ್ಲೂಕು ರಸ್ತೆಗಳೂ ಇದ್ದು ಸುತ್ತಲ ಗ್ರಾಮ ಮತ್ತು ಪಟ್ಟಣಗಳಿಗೆ ಮಾರ್ಗಸಂಪರ್ಕವಿದೆ.

ಈ ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಹುಮಚ **(ನೋಡಿ)** ಹೊಸನಗರಕ್ಕೆ ಆಗ್ನೇಯದಲ್ಲಿ 19 ಕಿಮೀ ದೂರದಲ್ಲಿದೆ. ಇದೊಂದು ಪ್ರಸಿದ್ಧ ಜೈನ ಯಾತ್ರಾಸ್ಥಳ. ಹೊಸನಗರದಿಂದ ದಕ್ಷಿಣಕ್ಕೆ 18 ಕಿಮೀ ದೂರದಲ್ಲಿರುವ ನಗರ **(ನೋಡಿ)** ಕೆಳದಿ ನಾಯಕರ ಕಾಲದಲ್ಲಿ ರಾಜಧಾನಿಯಾಗಿತ್ತು. ಹೊಸನಗರದ ನೈಋತ್ಯಕ್ಕೆ 27 ಕಿಮೀ ದೂರದಲ್ಲಿರುವ ನಿಡುಗೋಡು ದಟ್ಟ ಅರಣ್ಯ ಮಧ್ಯದಲ್ಲಿದೆ. ಇದರ ಸಮೀಪದಲ್ಲಿ ಆಗುಂಬೆ ಘಟ್ಟವಿದ್ದು ಅಲ್ಲಿಂದ ಸೂರ್ಯಾಸ್ತ ಸೊಬಗನ್ನು ಸವಿಯಬಹುದು. ನಿಡುಗೋಡು ಸಮೀಪದಲ್ಲಿ ವರಾಹಿ ನದಿಯ ಕುಂಚಿಕಲ್ಲು ಜಲಪಾತವಿದೆ. ಲಕ್ಷ್ಮೀನರಸಿಂಹ, ಚಂಡಿಕಾಂಬಾ ಗುಡಿಗಳಿವೆ. ಹೊಸನಗರದ ಪೂರ್ವಕ್ಕೆ ಸು. 20 ಕಿಮೀ ದೂರದಲ್ಲಿರುವ ಅಗಸ್ತ್ಯಪರ್ವತ ಪ್ರಕೃತಿ ಸೌಂದರ್ಯದ ಒಂದು ತಾಣ. ಇದು ಹರಿದ್ರಾವತಿ, ಕುಮುದ್ವತಿ, ಕುಶವತಿ ನದಿಗಳ ಉಗಮಸ್ಥಾನವಾಗಿದ್ದು ದಟ್ಟವಾದ ಅರಣ್ಯದಿಂದ ತುಂಬಿದೆ. ಹೊಸನಗರದ ದಕ್ಷಿಣಕ್ಕೆ 6 ಕಿಮೀ ಅಂತರದಲ್ಲಿರುವ ರಾಮಚಂದ್ರಪುರದಲ್ಲಿ ಸ್ಮಾರ್ತ ಹವ್ಯಕರ ಮಠವಿದೆ. ಇಲ್ಲಿ ಒಂದು ಸುಂದರ ದಂತದ ಸಿಂಹಾಸನವಿದೆ.

ಹೊಸನಗರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಶಿವಮೊಗ್ಗದ ಪಶ್ಚಿಮಕ್ಕೆ 72 ಕಿಮೀ ದೂರದಲ್ಲಿದೆ. ಕುಂದಾಪುರ–ಸಾಗರ ಮತ್ತು ಕುಂಸಿ–ಕೊಡಚಾದ್ರಿ ಮಾರ್ಗಮಧ್ಯದಲ್ಲಿದೆ. ಹೊಸನಗರದ ಈಶಾನ್ಯಕ್ಕೆ 30 ಕಿಮೀ ದೂರದಲ್ಲಿರುವ ಅರಸಲು ರೈಲು ನಿಲ್ದಾಣವೇ ಈ ಪಟ್ಟಣಕ್ಕೆ ಹತ್ತಿರವಿರುವ ರೈಲು ಸಂಪರ್ಕ. ಪಟ್ಟಣದ ಜನಸಂಖ್ಯೆ 5,043.

ಪಟ್ಟಣ ತಾಲ್ಲೂಕಿನ ಮುಖ್ಯ ವ್ಯಾಪಾರಕೇಂದ್ರ. ಈ ಪಟ್ಟಣದಿಂದ ಬತ್ತ, ಅಡಕೆ ಹೆಚ್ಚಾಗಿ ಹೊರಹೋಗುವ ವಸ್ತುಗಳು, ಅಂಚೆ, ತಂತಿ, ದೂರವಾಣಿ, ಆರೋಗ್ಯಕೇಂದ್ರ, ಔಷಧಾಲಯಗಳು, ಪ್ರೌಢಶಾಲೆ ಮತ್ತು ಒಂದು ಜೂನಿಯರ್ ಕಾಲೇಜು ಮುಂತಾದವುಗಳ ಮತ್ತು ವಿದ್ಯುತ್ತಿನ ಸೌಲಭ್ಯಗಳಿವೆ. ಈ ಪಟ್ಟಣ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನ ಹತ್ತಿರವಿದೆ. ಇಲ್ಲಿಂದ ಸುತ್ತಲ ಪಟ್ಟಣ ಮತ್ತು ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ. ಪಟ್ಟಣದಲ್ಲಿ ಲಿಂಗನಮಕ್ಕಿ ಜಲಾಶಯದಲ್ಲಿ ಮುಳುಗಿಹೋದ ಕೆಳದಿ ನಾಯಕರು ಕಟ್ಟಿಸಿದ್ದ ವೀರಭದ್ರಪುರ ಗ್ರಾಮದ ವೀರಭದ್ರ ದೇವಾಲಯದ ಭಾಗಗಳನ್ನೇ ತಂದು ಕಟ್ಟಿರುವ ಈಶ್ವರ ದೇವಾಲಯವಿದೆ.

**(ಎಚ್.ಆರ್.ಆರ್.ಬಿ.)**

**ಹೊಸಪೇಟೆ:** ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕಿನ ಪ್ರದೇಶ ಎರಡು ಭಾಗಗಳಲ್ಲಿ ಸೇರಿದೆ. ಹೆಚ್ಚು ವಿಶಾಲವಾಗಿರುವ ಈ ತಾಲ್ಲೂಕು ಪ್ರದೇಶವನ್ನು ಈಶಾನ್ಯದಲ್ಲಿ ಸಿರಗುಪ್ಪ, ಪೂರ್ವದಲ್ಲಿ ಬಳ್ಳಾರಿ, ದಕ್ಷಿಣದಲ್ಲಿ ಸಂಡೂರು ತಾಲ್ಲೂಕುಗಳೂ ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ, ವಾಯವ್ಯ ಮತ್ತು ಉತ್ತರದಲ್ಲಿ ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳೂ ಸುತ್ತುವರಿದಿವೆ. ಈ ಪ್ರದೇಶದ ನೈಋತ್ಯಕ್ಕಿರುವ ಹೊಸಪೇಟೆ ತಾಲ್ಲೂಕಿನ ಮತ್ತೊಂದು ಭಾಗವನ್ನು ಅದರ ಪೂರ್ವದಲ್ಲಿ ಸಂಡೂರು, ದಕ್ಷಿಣದಲ್ಲಿ ಕೂಡ್ಲಿಗಿ, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು ಸುತ್ತುವರಿದಿವೆ. ಕಮಲಾಪುರ, ಮರಿಯಮ್ಮನಹಳ್ಳಿ, ಹೊಸಪೇಟೆ ಮತ್ತು ಕಂಪ್ಲಿ

ಹೋಬಳಿಗಳು. ಒಟ್ಟು 74 ಗ್ರಾಮಗಳಿವೆ. ವಿಸ್ತೀರ್ಣ 894.8 ಚ.ಕಿಮೀ. ಜನಸಂಖ್ಯೆ 3,74,949. ಇದರಲ್ಲಿ 1,53,499 ಮಂದಿ ಗ್ರಾಮಸ್ಥರು, 2,21,450 ಮಂದಿ ಪಟ್ಟಣಿಗರು.

ತಾಲ್ಲೂಕಿನಲ್ಲಿ ಸಣ್ಣ ಬೆಟ್ಟಗುಡ್ಡಗಳಿವೆ. ಇವುಗಳಲ್ಲಿ ಕಂಪ್ಲಿ ಬೆಟ್ಟಸಾಲಿನ ತಿಮ್ಮಾಪುರ ಬೆಟ್ಟ (2,133') ಹೆಚ್ಚು ಎತ್ತರವಾದದ್ದು. ತುಂಗಭದ್ರಾ **(ನೋಡಿ)** ಈ ತಾಲ್ಲೂಕಿನ ಮುಖ್ಯನದಿ. ತಾಲ್ಲೂಕಿನ ಉತ್ತರದ ಗಡಿಯಾಗಿ ಈಶಾನ್ಯಾಭಿಮುಖವಾಗಿ ಹರಿಯುವ ಈ ನದಿ ರಾಯಚೂರಿನ ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳಿಂದ ಇದನ್ನು ವಿಂಗಡಿಸಿದೆ. ಈ ನದಿಯ ಬಲದಂಡೆ ಉದ್ದಕ್ಕೂ ಇರುವ ಪ್ರದೇಶ ಈ ತಾಲ್ಲೂಕಿಗೆ ಸೇರಿದೆ. ಜೊತೆಗೆ ತುಂಗಭದ್ರಾ ಜಲಾಶಯದ ಕಾಲುವೆಗಳ ಜಾಲ ಈ ತಾಲ್ಲೂಕಿನಲ್ಲಿ ಹರಡಿದ್ದು ವ್ಯವಸಾಯಕ್ಕೆ ಹೆಚ್ಚು ಅನುಕೂಲವಿದೆ. ತಾಲ್ಲೂಕಿನಲ್ಲಿ ಸು. 27,864 ಹೆಕ್ಟೇರ್ ಮೀಸಲು ಅರಣ್ಯಪ್ರದೇಶವಿತ್ತು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 684.83 ಮಿಮೀ.

ಈ ತಾಲ್ಲೂಕಿನಲ್ಲಿರುವ ಕಪ್ಪುಜೇಡಿ, ಕೆಂಪುಜೇಡಿ ಮತ್ತು ಮರಳು ಮಿಶ್ರಿತ ಭೂಪ್ರದೇಶ ತುಂಗಭದ್ರಾ ನಾಲಾ ನೀರಿನ ಆಶ್ರಯ ಪಡೆದಿವೆ. ಜೊತೆಗೆ ತಾಲ್ಲೂಕಿನಲ್ಲಿ ದಣ್ಣಾಯಕನ ಕೆರೆ, ಕಮಲಾಪುರ ಕೆರೆ ಮುಂತಾದ ಕೆರೆಗಳೂ ಬಾವಿಗಳೂ ಇವೆ. ನೀರಾವರಿಗಾಗಿಯೇ ಕಟ್ಟಿದ ಸಣ್ಣ ಒಡ್ಡುಗಳೂ ಕಟ್ಟೆಗಳೂ ತಾಲ್ಲೂಕಿನಲ್ಲಿವೆ. ಜೋಳ, ಬತ್ತ, ಕಬ್ಬು, ಸೇಂಗಾ, ಹತ್ತಿ ಮುಂತಾದವನ್ನು ಬೆಳೆಯುತ್ತಾರೆ. ಪಶುಪಾಲನೆ ಮತ್ತು ಮತ್ಸ್ಯೋದ್ಯಮಗಳೆರಡೂ ಇದ್ದು ಅವುಗಳ ಬೆಳವಣಿಗೆಗೆ ಆಯಾ ವಿಭಾಗಗಳು ಶ್ರಮಿಸುತ್ತಿವೆ. ಕಂಪ್ಲಿಯಲ್ಲಿ ಒಂದು ವ್ಯವಸಾಯ ತರಬೇತಿ ಶಾಲೆ ಇದೆ.

ಕೈಗಾರಿಕೆಯಲ್ಲೂ ಈ ತಾಲ್ಲೂಕು ಪ್ರಗತಿಪರವಾಗಿದೆ. ಈ ತಾಲ್ಲೂಕಿನಲ್ಲಿ ಮ್ಯಾಂಗನೀಸ್ ಮತ್ತು ಸೀಸದ ಅದಿರು ಸಿಕ್ಕುತ್ತದೆ. ಕಬ್ಬು ಹೆಚ್ಚು ಬೆಳೆಯುವ ಈ ಪ್ರದೇಶದಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿವೆ. ಈ ತಾಲ್ಲೂಕಿನ ಕಂಪ್ಲಿ ಸಕ್ಕರೆ ಕಾರ್ಖಾನೆ ರಾಜ್ಯದಲ್ಲೇ ಪ್ರಥಮವಾಗಿ ಸಹಕಾರಿ ವ್ಯವಸ್ಥೆಯಿಂದ ಸ್ಥಾಪನೆಯಾದದ್ದು. ತಾಲ್ಲೂಕಿನಲ್ಲಿ ಸ್ಪಿರಿಟ್ ಮತ್ತು ಪಾನೀಯಗಳನ್ನು ತಯಾರಿಸುವ ಕಾರ್ಖಾನೆಯಿದೆ. ತುಂಗಭದ್ರಾ ಉಕ್ಕಿನ ಉತ್ಪನ್ನಗಳ ಕಾರ್ಯಾಗಾರವಿದೆ, ಎರಡು ರಾಸಾಯನಿಕ ಉದ್ಯಮಗಳಿವೆ. ಈ ತಾಲ್ಲೂಕಿನ ಕೈಗಾರಿಕೆಗಳಿಗೆ ಸಾಕಷ್ಟು ವಿದ್ಯುತ್ ಸರಬರಾಜಿದೆ. ಆರ್ಥಿಕ ಸಹಕಾರ ನೀಡಲು ಅನೇಕ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಅಂಚೆ, ತಂತಿ, ದೂರವಾಣಿ, ಆಸ್ಪತ್ರೆ, ಶಾಲಾ ಕಾಲೇಜುಗಳ ಸೌಲಭ್ಯವಿದೆ. ತಾಲ್ಲೂಕಿನಲ್ಲಿ ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳು ಸುತ್ತಲ ಊರು ಪಟ್ಟಣಗಳಿಗೆ ಸಂಪರ್ಕ ಕಲ್ಪಿಸಿವೆ. ಬೆಂಗಳೂರು-ಬಳ್ಳಾರಿ-ಹೊಸಪೇಟೆ-ಗದಗ-ಹುಬ್ಬಳ್ಳಿ, ಹೊಸಪೇಟೆ-ಕೊಟ್ಟೂರು ರೈಲುಮಾರ್ಗವಿದ್ದು ಈ ತಾಲ್ಲೂಕಿನ ಕೈಗಾರಿಕಾಭಿವೃದ್ಧಿಗೆ ಸಹಾಯಕವಾಗಿದೆ. ಹೊಸಪೇಟೆಯ ಪಶ್ಚಿಮಕ್ಕೆ ಸು. 2 ಕಿಮೀ ದೂರದಲ್ಲಿರುವ ಅಮರಾವತಿಯಲ್ಲಿ ತುಂಗಭದ್ರಾ ಯೋಜನೆಯ ಅನೇಕ ಸರ್ಕಾರಿ ಕಚೇರಿಗಳಿವೆ. ನಗರ ಪುರಸಭಾಡಳಿತಕ್ಕೆ ಸೇರಿದ್ದು ಕ್ರಮೇಣ ವಿಸ್ತರಿಸುತ್ತಿದೆ. ಹೊಸಪೇಟೆಯ ಈಶಾನ್ಯಕ್ಕೆ 2 ಕಿಮೀ ದೂರದಲ್ಲಿರುವ ಅನಂತಶಯನ ಗುಡಿ, ಗ್ರಾಮದಲ್ಲಿ ಮಾಧ್ಯಮಿಕ ಶಾಲೆಯೊಂದಿದೆ. ಇಲ್ಲಿ ಹಳೆಯ ದೇವಾಲಯವಿದ್ದು ಇದರಲ್ಲಿ ಸ್ಥಾಪಿಸಲು ಕೆತ್ತಿಸಿದಂಥ ಅನಂತಶಯನ ವಿಗ್ರಹವನ್ನು ಹೊಳಲು ಗ್ರಾಮದಿಂದ ಇಲ್ಲಿಗೆ ತರಲಾಗದೆ ಅದೇ ಗ್ರಾಮದಲ್ಲಿ ಉಳಿದುಕೊಂಡಿದೆ. ಹೊಸಪೇಟೆಗೆ ಈಶಾನ್ಯದಲ್ಲಿ 13 ಕಿಮೀ ದೂರದಲ್ಲಿರುವ ಹಂಪೆ **(ನೋಡಿ)** ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಪ್ರಸಿದ್ಧ ಐತಿಹಾಸಿಕ ಸ್ಥಳ. ಇಲ್ಲಿ ಅನೇಕ ದೇವಾಲಯಗಳಿವೆ. ಹೊಸಪೇಟೆಯ ಈಶಾನ್ಯಕ್ಕೆ 11 ಕಿಮೀ ದೂರದಲ್ಲಿರುವ ಕಮಲಾಪುರ ಹಿಂದೆ ಆನೆಗೊಂದಿ ರಾಜರ ವಾಸಸ್ಥಾನವಾಗಿತ್ತು. ಇಲ್ಲಿ ಒಂದು ಹಳೆಯ ಕೋಟೆಯಿದೆ. ಹೊಸಪೇಟೆಯ ಈಶಾನ್ಯಕ್ಕೆ 32 ಕಿಮೀ ದೂರದಲ್ಲಿರುವ ಕಂಪ್ಲಿ **(ನೋಡಿ)** ಒಂದು ಇತಿಹಾಸ ಪ್ರಸಿದ್ಧ ಸ್ಥಳ. ಹೊಸಪೇಟೆಯ ದಕ್ಷಿಣಕ್ಕೆ 29 ಕಿಮೀ ದೂರದಲ್ಲಿರುವ ತಿಮ್ಮಲಾಪುರದಲ್ಲಿ ಹಳೆಯ ಕೋಟೆ ಅವಶೇಷವಿದೆ. ಇಲ್ಲಿ 1539ರಲ್ಲಿ ಕಟ್ಟಿದ ಗೋಪಾಲಕೃಷ್ಣ ದೇವಾಲಯವಿದೆ. ಮತ್ತೊಂದು ದೇವಾಲಯದಲ್ಲಿ ಮೂರು ಮೂರ್ತಿಗಳೂ ಒಂದು ಲಿಂಗವೂ ಇವೆ. ಇಲ್ಲಿನ ವೀರಭದ್ರ ದೇವಾಲಯ ಪಾಳುಬಿದ್ದಿದೆ.


ವಿಜಯ ವಿಠ್ಠಲ ದೇವಾಲಯ ಸಂಕೀರ್ಣ

ಹೊಸಪೇಟೆ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಬಳ್ಳಾರಿಯ ವಾಯವ್ಯಕ್ಕೆ 65 ಕಿಮೀ ದೂರದಲ್ಲಿದೆ. ಈ ನಗರದಲ್ಲಿ 83,430 ಗಂಡಸರು, 79,854 ಮಂದಿ ಮಹಿಳೆಯರೂ ಇದ್ದು ಒಟ್ಟು ಜನಸಂಖ್ಯೆ 1,63,284. ಇದು ತಾಲ್ಲೂಕಿನ ಮುಖ್ಯ ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮತ್ತು ಶಿಕ್ಷಣ ಕೇಂದ್ರ. ಕೈಗಾರಿಕಾ ನಗರವಾದ ಹೊಸಪೇಟೆಯ ವಿಸ್ತರಣೆ ಯೋಜನಾಬದ್ಧವಾಗಿದೆ. ಇಲ್ಲಿ ಸಕ್ಕರೆ ಕಾರ್ಖಾನೆ, ತುಂಗಭದ್ರಾ ಉಕ್ಕು ಉಪಕರಣಗಳ ಕಾರ್ಖಾನೆ ಇವೆ. ಗಣಿ ಉದ್ಯಮಿಗಳ ಮತ್ತು ಮಾಲೀಕರ ಸಂಘವೂ ಹೊಸಪೇಟೆ ವಾಣಿಜ್ಯ ಮಂಡಳಿಯೂ ಇವೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳ ಜೊತೆಗೆ ವಿಜಯನಗರ ಕಾಲೇಜು ಇದ್ದು ಶಿಕ್ಷಣಕ್ಕೆ ಉತ್ತಮ ಅವಕಾಶವಿದೆ. ಈ ಪಟ್ಟಣಕ್ಕೆ 1935ರಿಂದಲೇ ವಿದ್ಯುತ್ ಸೌಕರ್ಯವಿದೆ. ಸುತ್ತಲ ಐತಿಹಾಸಿಕ ಸ್ಥಳಗಳನ್ನು ನೋಡಲು ಬರುವ ಪ್ರವಾಸಿಗರು ಹೊಸಪೇಟೆಯನ್ನು ಕೇಂದ್ರವನ್ನಾಗಿ ಮಾಡಿಕೊಳ್ಳುವುದುಂಟು. ಇದೊಂದು ಪ್ರಮುಖ ರೈಲುನಿಲ್ದಾಣ. ಉತ್ತಮ ಮಾರ್ಗಗಳಿವೆ. ಇದರ ಹತ್ತಿರದ ತುಂಗಭದ್ರಾ ಅಣೆಕಟ್ಟಿನಿಂದ 12 ಕಿಮೀ ದೂರದಲ್ಲಿ ವಿಮಾನ ನಿಲ್ದಾಣವಿದೆ.

ವಿಜಯನಗರದ ಕೃಷ್ಣದೇವರಾಯ ತನ್ನ ಹೆಂಡತಿ ನಾಗಲದೇವಿಯ ನೆನಪಿಗಾಗಿ ಈ ನಗರವನ್ನು 1509 ಮತ್ತು 1520ರ ಮಧ್ಯದಲ್ಲಿ ಕಟ್ಟಿ ನಾಗಲಾಪುರವೆಂದು ಹೆಸರಿಟ್ಟ. ಅವನು ಹೆಚ್ಚು ವೇಳೆಯನ್ನು ಇಲ್ಲಿ ಕಳೆಯುತ್ತಿದ್ದ. ಗೋವ ಮತ್ತು ಪಶ್ಚಿಮದ ಕಡೆಯಿಂದ ಬರುತ್ತಿದ್ದ ಪ್ರವಾಸಿಗಳೂ ವ್ಯಾಪಾರಿಗಳೂ ಈ ನಗರದ ಮೂಲಕವೇ ವಿಜಯನಗರವನ್ನು ಪ್ರವೇಶಿಸಬೇಕಾಗಿತ್ತು.ಕಮಲಾಪುರ ಆಗ ವಿಜಯನಗರದ ಪಶ್ಚಿಮದ ಹೆಬ್ಬಾಗಿಲಿನಂತಿತ್ತು. ಟಿಪ್ಪುಸುಲ್ತಾನ್ ನೇಮಿಸಿದ ಸುಬೇದಾರ್ ಗಫೂರ್‌ಖಾನ್ 1785-86ರಲ್ಲಿ ಇಲ್ಲಿ ಒಂದು ಮಸೀದಿಯನ್ನೂ ಬಾವಿಯನ್ನೂ ಕಟ್ಟಿಸಿದ. ಆ ಬಾವಿಯನ್ನು ಈಗಲೂ ಸುಬೇದಾರ್ ಬಾವಿ ಎಂದು ಕರೆಯುತ್ತಾರೆ.

1934ರಲ್ಲಿ ಹೊಸಪೇಟೆಗೆ ಗಾಂಧೀಜಿ ಭೇಟಿ ನೀಡಿ ಭಾಷಣ ಮಾಡಿದ್ದರು.

*

**ಹೊಸಹೊಳಲು:** ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಹಳ್ಳಿ. ಕೃಷ್ಣರಾಜಪೇಟೆಯ ಪೂರ್ವಕ್ಕೆ 2 ಕಿಮೀ ದೂರದಲ್ಲಿದೆ. ಜನಸಂಖ್ಯೆ 730.

ಹೊಯ್ಸಳರ ಕಾಲದಲ್ಲಿ ಇದೊಂದು ಅಗ್ರಹಾರವಾಗಿತ್ತು. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿಯೇ ಒಂದು ಜೈನ ಬಸದಿ ಇದ್ದುದು 1118ರ ಒಂದು ಶಾಸನದಿಂದ ವ್ಯಕ್ತವಾಗುತ್ತದೆ. ಮುಂದೆ 13ನೆಯ ಶತಮಾನದಲ್ಲಿ ಇದನ್ನು ಅಗ್ರಹಾರವನ್ನಾಗಿ ಪರಿವರ್ತಿಸಿರಬೇಕು. ಆ ಶತಮಾನಕ್ಕೆ ಸೇರಿದ ಊರ ಮಧ್ಯದ ಲಕ್ಷ್ಮೀನಾರಾಯಣ ದೇವಸ್ಥಾನ, ಈಶಾನ್ಯ ಮೂಲೆಯಲ್ಲಿನ ಹರಿಹರೇಶ್ವರ ದೇವಾಲಯಗಳಿದ್ದು ಊರನ್ನು ಸುತ್ತುವರಿದ ಆ ಕಾಲದ



ಲಕ್ಷ್ಮೀನಾರಾಯಣ ದೇವಾಲಯ

ಕೋಟೆಯೂ ಉಳಿದು ಬಂದಿದೆ. ಗುಂಡುಕಲ್ಲುಗಳಿಂದ ನಿರ್ಮಿತವಾದ ಈ ಕೋಟೆಗೆ ಏಳು ಬಾಗಿಲುಗಳಿದ್ದುದಾಗಿ ತಿಳಿದುಬರುತ್ತದೆ. ವಿಜಯನಗರದ ಕಾಲದಲ್ಲಿ ಈ ಕೋಟೆಯನ್ನು ದುರಸ್ತು ಮಾಡಿದಂತೆ ತೋರುತ್ತದೆ. ಹರಿಹರೇಶ್ವರ ದೇವಾಲಯ ಈಗ ಪೂರ್ತಿಯಾಗಿ ಪಾಳುಬಿದ್ದಿದೆ. ಇಲ್ಲಿನ ಹರಿಹರೇಶ್ವರ ಮೂರ್ತಿ ಒಂದು ಸುಂದರವಾದ ವಿಗ್ರಹ. ಕೋಟೆಯ ಉತ್ತರದ್ವಾರದ ಬಳಿ 17ನೆಯ ಶತಮಾನದಲ್ಲಿ ಕಟ್ಟಿದ ವೀರಾಂಜನೇಯನ ಗುಡಿಯೊಂದಿದ್ದು ಅದರ ಎದುರಿನಲ್ಲಿ ಸು. 10 ಮೀ ಎತ್ತರವಾದ ಗರುಡಗಂಬವೊಂದು ನಿಂತಿದೆ. ಈ ಆಂಜನೇಯನ ಉತ್ಸವದ ಅಂಗವಾಗಿ ಪ್ರತಿವರ್ಷವೂ ಏಪ್ರಿಲ್ ತಿಂಗಳಿನಲ್ಲಿ ರಂಗದ ಹಬ್ಬ ಎಂಬ ಒಂದು ಜಾತ್ರೆ ನಡೆಯುತ್ತದೆ. ಹಲವು ಬಗೆಯ ವೇಷ ತೊಟ್ಟು ರಾತ್ರಿಯೆಲ್ಲ ಹಾಡಿ ಕುಣಿದು ಓಕಳಿ ಎರಚಾಡುವುದು ಈ ಜಾತ್ರೆಯ ವಿಶೇಷ.

ಈಗ ಈ ಊರು ಇಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯದಿಂದ ಪ್ರಸಿದ್ಧವಾಗಿದೆ. ಈ ದೇವಾಲಯ ನುಗ್ಗೇಹಳ್ಳಿ, ಸೋಮನಾಥಪುರ, ಜಾವಗಲ್ಲು, ಹಿರೇನಲ್ಲೂರು, ಅರಳಗುಪ್ಪೆ ಮೊದಲಾದ ಕಡೆ ಇರುವ ಹೊಯ್ಸಳ ದೇವಾಲಯಗಳಂತೆ ವಿಸ್ತೃತವಾಗಿ ಶಿಲ್ಪಾಲಂಕರಣಗಳಿಂದ ಕೂಡಿದ ದೇವಾಲಯ. ಈ ದೇವಾಲಯವನ್ನು ಕಟ್ಟಿಸಿದುದರ ಬಗೆಗೆ ವಿವರಗಳು ಉಳಿದು ಬಂದಿಲ್ಲವಾದರೂ ಕಟ್ಟಡದ ರಚನೆ, ಶಿಲ್ಪಗಳ ಮಾಟ ಮುಂತಾದುವುಗಳಿಂದ ಇದೂ ನುಗ್ಗೇಹಳ್ಳಿ, ಜಾವಗಲ್ಲು ಅಥವಾ ಅರಳುಗುಪ್ಪೆಯ ಹೊಯ್ಸಳ ದೇವಾಲಯಗಳ ಕಾಲಕ್ಕೆ ಸೇರಿದುದೆಂದು ಹೇಳಬಹುದು; ಇದರ ಕಾಲವೂ ಸು. 13ನೆಯ ಶತಮಾನದ ಮಧ್ಯಭಾಗ. ಇಷ್ಟು ಸುಂದರವಾದ ದೇವಾಲಯವನ್ನು ಕಟ್ಟಿಸಿದವರ ವಿವರಗಳನ್ನು ತಿಳಿಸುವ ಶಾಸನವಾಗಲಿ, ಕಡೆಗೆ ಅದರ ಮೇಲಿನ ಶಿಲ್ಪಗಳನ್ನು ಕಂಡರಿಸಿದ ಶಿಲ್ಪಿಗಳ ಹೆಸರುಗಳಾಗಲಿ ಇಲ್ಲದಿರುವುದು ಆಶ್ಚರ್ಯವೇ. ಹಂಸದ ಸಾಲುಗಳಿರುವಲ್ಲಿ ಒಂದು ಕಡೆ ಬಸವ ಎಂಬ ಒಂದು ಹೆಸರು ಕೆತ್ತಿದ್ದು, ಅದು ಒಬ್ಬ ರೂವಾರಿಯ ಹೆಸರಿರಬಹುದು. ಎತ್ತರವಾದ ಜಗತಿಯ ಮೇಲಿರುವ ಈ ದೇವಾಲಯ ತ್ರಿಕೂಟಾಚಲದ ವಿನ್ಯಾಸದಲ್ಲಿದೆ. ನಡುವೆ ನವರಂಗ, ಮೂರು ಕಡೆ ಮೂರು ಗರ್ಭಗೃಹಗಳು, ಮುಂದುಗಡೆ ಮುಂಚಾಚಿದ ಒಂದಂಕಣದ ಮುಖಭದ್ರ ಇವೆ. ನಡುವಿನ ಮುಖ್ಯ ಗರ್ಭಗೃಹಕ್ಕೆ ಮಾತ್ರ ಮುಂದೆ ಸುಕನಾಸಿಯೂ ಮೇಲೆ 5 ಅಂತಸ್ತಿನ ಶಿಖರವೂ ಇವೆ. ಈ ಗರ್ಭಗೃಹದ ಹೊರಗೋಡೆಗಳಲ್ಲಿ ಮಾತ್ರ ಮೂರು ಕಡೆಯೂ ದೊಡ್ಡವಾದ ಅರೆಮಂಟಪಗಳೂ ಅವುಗಳ ಮೇಲೆ ಅರೆಗೋಪುರಗಳೂ ಇವೆ. ಗರ್ಭಗೃಹಗಳ ವಿನ್ಯಾಸ ಚೌಕಾಕಾರವಾದರೂ ಹೊರಗೋಡೆಗಳು ಮೆಟ್ಟಲುಮೆಟ್ಟಲಾಗಿ ಮುಂದೆ ಚಾಚಿದ್ದು ಕಚ್ಚುಕಚ್ಚಾದ ಮುಖಗಳನ್ನು ಹೊಂದಿವೆ. ವಿಸ್ತೃತಾಲಂಕರಣವುಳ್ಳ ಹೊಯ್ಸಳ ದೇವಾಲಯಗಳಂತೆ ಇಲ್ಲಿಯೂ ಹೊರಗೋಡೆಗಳ ತಳಭಾಗದಲ್ಲಿ ಆರೇಳು ಅಡ್ಡಪಟ್ಟಿಕೆಗಳಲ್ಲಿ ಆನೆ, ಕುದುರೆ, ಬಳ್ಳಿಸುರುಳಿ, ಪೌರಾಣಿಕ ಕಥಾಶಿಲ್ಪ, ಮಕರ, ಹಂಸ ಮೊದಲಾದ ಸಾಲುಗಳೂ ಮೇಲೆ ದೊಡ್ಡಗಾತ್ರದ ಹಲವು ಭಂಗಿಗಳಲ್ಲಿರುವ ದೇವಾನುದೇವತೆಗಳೂ ನೃತ್ಯ, ಗೀತ, ವಾದ್ಯಾಲಂಕರಣಗಳಲ್ಲಿ ನಿರತರಾಗಿರುವ ಸ್ತ್ರೀಪುರುಷರೂ ಲತಾವಿತಾನಗಳ ಕೆಳಗೆ ಶಿಲ್ಪಿತವಾಗಿದ್ದಾರೆ. ಅವುಗಳ ಮೇಲೆ ಒಂದು ಅಲಂಕೃತ ಕಾರ್ನಿಸೂ ಅರೆಗಂಬಗಳ ಮೇಲಿನ ಅರೆಗೋಪುರಗಳೂ ಸುಂದರವಾದ ಲೋವೆ ಮತ್ತು ಅತಿ ನವಿರಾಗಿ ಕಂಡರಿಸಿರುವ ಕೈಪಿಡಿ ಇವೆ. ಕಥನ ಶಿಲ್ಪಗಳಲ್ಲಿ ರಾಮಾಯಣ, ಭಾರತ, ಭಾಗವತ, ನರಸಿಂಹಾವತಾರ ಕಥೆಗಳಿದ್ದರೆ ದೊಡ್ಡ ಮೂರ್ತಿಗಳಲ್ಲಿ ಯೋಗಮಾಧವ, ಧನ್ವಂತರಿ, ನೃತ್ಯಸರಸ್ವತಿ, ಕಾಳಿಂಗ ಮರ್ದನ, ಪರವಾಸುದೇವ ಮುಂತಾದವು ಗಮನ ಸೆಳೆಯುತ್ತವೆ. ನವರಂಗದ ತಿರುಗಣೆಯಲ್ಲಿ ಕಡೆದ ಕಂಬಗಳ ಮೇಲೆ ನವುರಾಗಿ ಬಿಡಿಸಿರುವ ಕೀರ್ತಿಮುಖ, ಮುತ್ತಿನ ಹಾರಗಳು, ಬಳ್ಳಿಸುರುಳಿಗಳೂ ಚಾವಣಿಯ ಭುವನೇಶ್ವರಿಗಳಲ್ಲಿನ ವಿವಿಧಾಕೃತಿಯ ಕಂಡರಣೆಗಳೂ ಆಕರ್ಷಕವಾಗಿವೆ. ಮಧ್ಯದ ಗರ್ಭಗುಡಿಯಲ್ಲಿ ಲಕ್ಷ್ಮೀನಾರಾಯಣನ ಮೂರ್ತಿಯೂ ಬಲಗಡೆಯ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹನ ಮೂರ್ತಿಯೂ ಇದ್ದರೆ ಎಡಗಡೆಯದು ಈಗ ಬರಿದಾಗಿದೆ. ಅಲ್ಲಿ ಮೂಲದಲ್ಲಿ ವೇಣುಗೋಪಾಲನ ಮೂರ್ತಿ ಇತ್ತೆಂಬುದು, ಅದರ ಬಾಗಿಲ ಮೇಲಿನ ಮೂರ್ತಿಶಿಲ್ಪದಿಂದ ಸ್ಪಷ್ಟಪಡುತ್ತದೆ. ಈಗ ಅಲ್ಲಿ ಲೋಹದ ಸುಂದರವಾದ ಉತ್ಸವಮೂರ್ತಿಯ ವಿಗ್ರಹವಿದೆ. ಈ ದೇವಾಲಯದ ಮೂಲಮೂರ್ತಿಗಳೂ ಗೋಡೆಯ ಮೇಲಿನ ಮೂರ್ತಿಗಳೂ ಅಲಂಕರಣಶಿಲ್ಪಗಳೂ ನವಿರಾಗಿ ಕಂಡರಣೆ ಗೊಂಡಿದ್ದು ಆಕರ್ಷಕವಾಗಿವೆ.

ಈ ಊರು ನೇಯ್ಗೆಗೂ ಹೆಸರಾಗಿದ್ದು ಇಲ್ಲಿ ತಯಾರಾಗುವ ಪಂಚೆಗಳು, ವಲ್ಲಿಗಳು ಪ್ರಸಿದ್ಧವಾಗಿವೆ. **(ಎಂ.ಎಚ್.)**

**ಹೊಳಲ್ಕೆರೆ:** ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ದಾವಣಗೆರೆ ಉಪವಿಭಾಗಕ್ಕೆ ಸೇರಿದ ಈ ತಾಲ್ಲೂಕನ್ನು ಉತ್ತರದಲ್ಲಿ ದಾವಣಗೆರೆ ಮತ್ತು ಚಿತ್ರದುರ್ಗ ತಾಲ್ಲೂಕುಗಳೂ ಪೂರ್ವದಲ್ಲಿ ಹಿರಿಯೂರು, ದಕ್ಷಿಣದಲ್ಲಿ ಹೊಸದುರ್ಗ, ನೈಋತ್ಯದಲ್ಲಿ ಚಿಕ್ಕಮಗಳೂರಿನ ತರೀಕೆರೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕೂ ಸುತ್ತುವರಿದಿವೆ. ತಾಳ್ಯ, ರಾಮಗಿರಿ, ಹೊಳಲ್ಕೆರೆ, ಭರಮನಾಯ್ಕನ ದುರ್ಗ ಹೋಬಳಿಗಳು. ಒಟ್ಟು 201 ಗ್ರಾಮಗಳಿವೆ. ತಾಲ್ಲೂಕು ವಿಸ್ತೀರ್ಣ 1,097.4 ಚ.ಕಿಮೀ. ಜನಸಂಖ್ಯೆ 1,97,767. ಇದರಲ್ಲಿ 1,83,193 ಮಂದಿ ಗ್ರಾಮವಾಸಿಗಳೂ 14,574 ಮಂದಿ ಪಟ್ಟಣವಾಸಿಗಳೂ ಇದ್ದಾರೆ.

ತಾಲ್ಲೂಕಿನಲ್ಲಿ ದಕ್ಷಿಣದಿಂದ ಉತ್ತರದ ಅರಸನಘಟ್ಟದವರೆಗೆ ಬೆಟ್ಟಶ್ರೇಣಿಯೊಂದು ಹಾದುಹೋಗಿದ್ದು ಅದರ ಒಂದು ಕವಲು ಪಶ್ಚಿಮದಲ್ಲಿ ರಾಮಗಿರಿ ದುರ್ಗದವರೆಗೂ ಚಾಚಿಕೊಂಡಿದೆ. ಇದಲ್ಲದೆ ಕೂಡು, ರಾಮಗಿರಿ ಮತ್ತು ಗುಂಡೇರಿಗಳಲ್ಲಿ ಸಣ್ಣ ಬೆಟ್ಟಗಳಿವೆ. ಇವುಗಳಲ್ಲಿ ದೇವರಗುಡ್ಡ ಅರಣ್ಯದ ದೊಡ್ಡಹೊಟ್ಟೆರಂಗಪ್ಪನಗುಡ್ಡ ಮತ್ತು ಜಾನಕಲ್ಲಿನ ವಡೇರಗುಡ್ಡ

ಮುಖ್ಯವಾದವು. ಸ್ಯಾಗಲಹಳ್ಳ ಈ ಬೆಟ್ಟಗಳ ಮಧ್ಯೆ ಹುಟ್ಟಿ ತುಂಗಭದ್ರಾ ನದಿಯನ್ನು ಸೇರುವುದು. ಶಿವಗಂಗೆ ಬೆಟ್ಟಗಳಲ್ಲಿ ಬಾಕ್ಸೈಟ್ ಅದಿರು, ಕುಡಿನೀರು ಕಟ್ಟೆ ಬಳಿ ವರ್ಮಿಕುಲೇಟ್, ಲೋಕದೊಳಿನ ಬಳಿ ಬಳಪದ ಕಲ್ಲು ಸಿಗುವುದು ಮತ್ತು ತಾಲ್ಲೂಕಿನಲ್ಲಿ ಕ್ಯಾನೈಟ್, ಕಬ್ಬಿಣದ ಅದಿರಿನ ಹರವುಗಳು ಕಂಡುಬಂದಿವೆ. ತಾಲ್ಲೂಕಿನಲ್ಲಿ 8,916 ಹೆಕ್ಟೇರ್ ಸಾಮಾನ್ಯ ಅರಣ್ಯ ಪ್ರದೇಶವಿದೆ. ಈ ಪ್ರದೇಶದಲ್ಲಿ ಜಿಂಕೆಗಳು ಕಂಡುಬರುತ್ತವೆ. ಬೇಸಗೆಯ ತಾಪ ಹೆಚ್ಚಿದ್ದು ಚಳಿಗಾಲ ಹಿತಕರವಾಗಿರುವ ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 640.16 ಮಿಮೀ. ಈ ತಾಲ್ಲೂಕಿನ ಮುತ್ತುಗದೂರು ಕೆರೆ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದು. ವ್ಯವಸಾಯಕ್ಕೆ ಅನುಕೂಲವಾದ ಅನೇಕ ನೀರಾವರಿ ಬಾವಿಗಳಿವೆ. ತಾಲ್ಲೂಕಿನಲ್ಲಿ ಹೆಚ್ಚು ಕಪ್ಪುಮಣ್ಣಿನ ಪ್ರದೇಶದ ಜೊತೆಗೆ ಕೆಂಪುಮಣ್ಣು ಮಿಶ್ರಿತ ಕಪ್ಪುಭೂಮಿ ಇದೆ. ಒಟ್ಟಿನಲ್ಲಿ ಫಲವತ್ತಾದ ಭೂಮಿಯಿದ್ದು ನೀರಾವರಿ ಸಹಾಯದಿಂದ ಬತ್ತ, ಜೋಳ, ರಾಗಿ, ತೊಗರಿ, ಇತರ ದ್ವಿದಳ ಧಾನ್ಯಗಳನ್ನೂ ಹತ್ತಿಯನ್ನೂ ಬೆಳೆಯುತ್ತಾರೆ. ವ್ಯವಸಾಯದ ಜೊತೆಗೇ ಪಶುಪಾಲನೆಯುಂಟು. ತಾಲ್ಲೂಕು ಮತ್ತು ಗ್ರಾಮ ಮಟ್ಟದ ಪಶುವೈದ್ಯಾಲಯಗಳಿವೆ.

ತಾಲ್ಲೂಕಿನಲ್ಲಿ ಮ್ಯಾಂಗನೀಸ್ ಗಣಿ ಉದ್ಯಮ ಮತ್ತು ಕೆಲವು ಗ್ರಾಮೋದ್ಯೋಗಗಳಿವೆ. ತಾಲ್ಲೂಕಿನಲ್ಲಿ ಚನ್ನಗಿರಿ– ಚಿತ್ರದುರ್ಗ ರಾಜ್ಯ ಹೆದ್ದಾರಿಯ ಜೊತೆಗೆ ಹೊಸದುರ್ಗ–ದಾವಣಗೆರೆ ಜಿಲ್ಲಾ ಹೆದ್ದಾರಿ ಹಾದುಹೋಗಿದೆ. ಸುತ್ತಲ ಗ್ರಾಮ ಮತ್ತು ಪಟ್ಟಣಗಳಿಗೆ ಮಾರ್ಗಸಂಪರ್ಕಗಳಿವೆ. ಬೆಂಗಳೂರು–ಧಾರವಾಡ ಮತ್ತು ಚಿತ್ರದುರ್ಗ ರೈಲು ಮಾರ್ಗವಿದ್ದು ತಾಲ್ಲೂಕಿನ ಅಭಿವೃದ್ಧಿಗೆ ನೆರವಾಗಿದೆ.

ಹೊಳಲ್ಕೆರೆಯ ವಾಯವ್ಯಕ್ಕೆ 11 ಕಿಮೀ ದೂರದಲ್ಲಿರುವ ಚಿಕ್ಕಜಾಜೂರು ಬೆಂಗಳೂರು–ಧಾರವಾಡ ರೈಲುಮಾರ್ಗದ ಒಂದು ಮುಖ್ಯ ರೈಲುನಿಲ್ದಾಣ. ಚಿತ್ರದುರ್ಗಕ್ಕೆ ಇಲ್ಲಿಂದಲೇ ರೈಲು ಸಂಪರ್ಕವಿದೆ. ಚಿಕ್ಕಜಾಜೂರಿನ ಈಶಾನ್ಯಕ್ಕೆ ಸು. 12 ಕಿಮೀ ದೂರದಲ್ಲಿ ಚಿತ್ರದುರ್ಗದ ಪಾಳೆಯಗಾರರಲ್ಲಿ ಒಬ್ಬನಾದ ಭರಮಪ್ಪನಾಯಕ ಕಟ್ಟಿಸಿದ್ದೆಂದು ಹೇಳುವ ಭೀಮಸಮುದ್ರ ಎಂಬ ದೊಡ್ಡಕೆರೆ ಇದೆ. ಹೊಳಲ್ಕೆರೆಯ ಪಶ್ಚಿಮಕ್ಕೆ 10 ಕಿಮೀ ದೂರದಲ್ಲಿರುವ ಮಲ್ಲಾಡಿಹಳ್ಳಿಯಲ್ಲಿರುವ ಅನಾಥ ಸೇವಾಶ್ರಮ ಹೆಸರಾದದ್ದು.

ಹೊಳಲ್ಕೆರೆ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಶಿವಮೊಗ್ಗ–ಚಿತ್ರದುರ್ಗ ಹೆದ್ದಾರಿಯಲ್ಲಿ ಚಿತ್ರದುರ್ಗಕ್ಕೆ ನೈಋತ್ಯದಲ್ಲಿ 32 ಕಿಮೀ ದೂರದಲ್ಲಿದೆ. ಹೊಳಲ್ಕೆರೆ ಪಟ್ಟಣದಲ್ಲಿ 7,593 ಮಂದಿ ಪುರುಷರು, 6,978 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 14,574. ಪಟ್ಟಣದ ಪಶ್ಚಿಮಕ್ಕೆ 5 ಕಿಮೀ ದೂರದಲ್ಲಿ ಹೊಳಲ್ಕೆರೆಯ ರೈಲು ನಿಲ್ದಾಣವಿದೆ. ಈ ಪಟ್ಟಣ ಅಡಕೆ, ರಾಗಿ, ಜೋಳ ಮುಂತಾದವುಗಳ ವ್ಯಾಪಾರ ಕೇಂದ್ರ. ವಿದ್ಯುತ್ತು, ಪ್ರೌಢಶಾಲೆ, ಆಸ್ಪತ್ರೆ, ಅಂಚೆ, ತಂತಿ, ದೂರವಾಣಿ ಮುಂತಾದವುಗಳ ಸೌಲಭ್ಯವನ್ನು ಹೊಂದಿದೆ. ರಾಜ್ಯ ಹೆದ್ದಾರಿಯಲ್ಲಿದ್ದು ಸುತ್ತಲ ಗ್ರಾಮಗಳಿಗೆ ಇದೊಂದು ಮುಖ್ಯ ವ್ಯಾಪಾರ ಸ್ಥಳವಾಗಿದೆ. ಪಟ್ಟಣ ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ.

ಹತ್ತನೆಯ ಶತಮಾನದಲ್ಲಿ ಈ ಊರು ಪೊಳಲಕೆರೆ ಎಂಬ ಹೆಸರಿನಲ್ಲಿ ಪ್ರಸಿದ್ಧ ಜೈನಕ್ಷೇತ್ರವಾಗಿತ್ತು. ಈ ಊರನ್ನು ಹದಿನಾಲ್ಕನೆಯ ಶತಮಾನದಲ್ಲಿ ಬೋಯನಾಯಕನೆಂಬುವನು ಕಟ್ಟಿಸಿದ. ಕಾಲಾನಂತರದಲ್ಲಿ ಇದನ್ನು ಬಸವಾಪಟ್ಟಣದ ಪಾಳೆಯಗಾರರು ವಶಪಡಿಸಿಕೊಂಡರು. ಇದನ್ನು 1475ರಲ್ಲಿ ಚಿತ್ರದುರ್ಗದ ಪಾಳೆಯಗಾರ ತಿಮ್ಮಣ್ಣನಾಯಕ ವಿಜಯನಗರದ ದೊರೆಗಳಿಂದ ಪಡೆದ. ಹೈದರ್ ಅಲಿ ಇದನ್ನು ಗೆದ್ದುಕೊಳ್ಳುವವರೆಗೆ ಈ ಊರು ಚಿತ್ರದುರ್ಗದವರ ವಶದಲ್ಲಿಯೇ ಇತ್ತು. ಮರಾಠ ದಂಡಯಾತ್ರೆಯ ಕಾಲದಲ್ಲಿ ಈ ಊರು ಅವರ ದುರಾಕ್ರಮಣಕ್ಕೆ ಸಿಕ್ಕಿತ್ತು. ಇಲ್ಲಿರುವ ಬಯಲು ಗಣಪತಿ ವಿಗ್ರಹ 9' ಎತ್ತರವಾಗಿದ್ದು ನೋಡಲು ಸುಂದರವಾಗಿದೆ.

(ಎಸ್.ಕೆ.ಜಿ.)

**ಹೊಳೆನರಸೀಪುರ:** ಹಾಸನ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಈ ತಾಲ್ಲೂಕನ್ನು ಉತ್ತರ ದಲ್ಲಿ ಹಾಸನ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳೂ ಪಶ್ಚಿಮದಲ್ಲಿ ಅರಕಲಗೂಡು, ದಕ್ಷಿಣದಲ್ಲಿ ಮೈಸೂರು ಜಿಲ್ಲೆಯ ಕೃಷ್ಣರಾಜನಗರ ಮತ್ತು ಪೂರ್ವದಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕುಗಳೂ ಸುತ್ತುವರಿದಿವೆ. ಹಳ್ಳಿ ಮೈಸೂರು, ಹೊಳೆನರಸೀಪುರ ಮತ್ತು ಹಳೆಕೋಟೆ ಹೋಬಳಿಗಳು. 249 ಗ್ರಾಮಗಳೂ ಒಂದು ಪಟ್ಟಣವೂ ಇರುವ ಈ ತಾಲ್ಲೂಕಿನ ವಿಸ್ತೀರ್ಣ 604.4 ಚ.ಕಿಮೀ. ಜನಸಂಖ್ಯೆ 1,75,244. ಇದರಲ್ಲಿ 1,48,220 ಮಂದಿ ಗ್ರಾಮೀಣರು, 27,024 ಮಂದಿ ಪಟ್ಟಣವಾಸಿಗಳಿದ್ದಾರೆ.

ಕೆಲವು ಸಾಮಾನ್ಯ ಬೆಟ್ಟಶ್ರೇಣಿ ಹೊಳೆನರಸೀಪುರವನ್ನು ಹಾದು ಹಾಸನ ಮತ್ತು ಚನ್ನರಾಯಪಟ್ಟಣದ ಕಡೆಗೆ ಸಾಗಿದೆ. ಇವುಗಳಲ್ಲಿ 1,006ಮೀ ಎತ್ತರವಿರುವ ಮಲ್ಲಪ್ಪನ ಬೆಟ್ಟ ಈ ತಾಲ್ಲೂಕಿನ ಬೆಟ್ಟಗಳಲ್ಲಿ ಮುಖ್ಯವಾದದ್ದು. ಈ ತಾಲ್ಲೂಕಿನ ಹೊಳೆನರಸೀಪುರದ ಪೂರ್ವಕ್ಕೂ ದಕ್ಷಿಣಕ್ಕೂ ಹರಡಿರುವ ಪದರುಶಿಲಾಸ್ತೋಮ ಅತ್ಯಂತ ಪುರಾತನವಾದುದು. ಇಲ್ಲಿನ ಶಿಲೆಗಳು ಮೂರು ಸಾವಿರ ಮಿಲಿಯ ವರ್ಷಗಳಿಗೂ ಹಳೆಯದೆಂದು ಗುರುತಿಸಲಾಗಿದೆ. ಈ ಶಿಲೆಗಳಲ್ಲಿ ಅನೇಕ ಬಗೆಯ ಉಪಯುಕ್ತ ಖನಿಜಗಳು ಕಂಡುಬಂದಿವೆ. ಹೊಳೆನರಸೀಪುರದ ಸುತ್ತ 16 ಕಿಮೀ ದೂರದೊಳಗೆ ಇರುವ ಎಣ್ಣೆಹೊಳೆರಂಗಿನ ಬೆಟ್ಟ, ಕಬ್ಬೂರು, ಎಡೆಗೊಂಡನಹಳ್ಳಿ, ತಿರುಮಲಪುರ, ಮಂಗಳಾಪುರ–ಈ ಸುತ್ತಲಿನಲ್ಲಿ ಕಲ್ನಾರಿನ ಗಣಿಗಳಿವೆ. ಕಲ್ನಾರನ್ನು ಶುದ್ಧಿ ಮಾಡಿ ಅದರಿಂದ ಸಿಮೆಂಟು–ಕಲ್ನಾರು ಸೇರಿರುವ ಹಲಗೆಗಳನ್ನು ಮಾಡಬಹುದು. ಸಾಣೆಕಾಗದ, ಸಾಣೆಕಲ್ಲು ಮಾಡಲು ಯೋಗ್ಯವಾದ ಕುರಂದ ಕಲ್ಲು ಗಾರ್ನೆಟ್ ಮತ್ತು ಸ್ಟಾರೋಲೈಟ್ ಖನಿಜಗಳು ಹೊಳೆನರಸೀಪುರದ ಸುತ್ತ ದೊರೆಯುತ್ತವೆ. ಪಿಂಗಾಣಿ ವಸ್ತು ತಯಾರಿಕೆಗೆ ಬೇಕಾಗುವ ಫೆಲ್ಸ್‌ಪಾರ್ ಖನಿಜ ಹೊಳೆನರಸೀಪುರದಿಂದ ಅರಕಲಗೂಡಿಗೆ ಹೋಗುವ ದಾರಿಯಲ್ಲಿ ವಿಶೇಷವಾಗಿ ದೊರೆಯುತ್ತದೆ. ದೊಡ್ಡಕಾಡನೂರು ಮತ್ತು ಕಬ್ಬೂರಿನ ಬಳಿ ಕಾಗೆ ಬಂಗಾರಕ್ಕಾಗಿ ತೋಡಿದ ಗಣಿಗಳಿವೆ. ಈ ಗಣಿಗಳಲ್ಲಿ ಉಪಯುಕ್ತವಾದ ಬೆರಿಲ್ ಖನಿಜವೂ ದೊರೆಯುತ್ತದೆ.

ಈ ತಾಲ್ಲೂಕಿನ ಮುಖ್ಯ ನದಿ ಹೇಮಾವತಿ. ಇದು ತಾಲ್ಲೂಕಿನ ವಾಯುವ್ಯದಲ್ಲಿರುವ ಹನುಮನಹಳ್ಳಿಯ ದಕ್ಷಿಣದಲ್ಲಿ ತಾಲ್ಲೂಕನ್ನು ಪ್ರವೇಶಿಸುವುದು. ಮುಂದೆ ಸ್ವಲ್ಪ ದೂರ ಪೂರ್ವಾಭಿಮುಖ ಹರಿದು ಅನಂತರ ಹೊಳೆನರಸೀಪುರದವರೆಗೂ ಆಗ್ನೇಯಾಭಿಮುಖವಾಗಿ ಹರಿಯುವುದು. ಅಲ್ಲಿಂದ ನದಿ ಉತ್ತರಾಭಿಮುಖವಾಗಿ ಸ್ವಲ್ಪ ದೂರ ಹರಿದು ಮತ್ತೆ ಸ್ವಲ್ಪ ದಕ್ಷಿಣಕ್ಕೆ ಬಾಗಿ ಮುಂದೆ ಈಶಾನ್ಯಾಭಿಮುಖವಾಗಿ ತಾಲ್ಲೂಕಿನ ಉತ್ತರದ ಗಡಿಯವರೆಗೂ ಹರಿದು ಉಳಿವಾಲ ಗ್ರಾಮದ ಬಳಿ ದಕ್ಷಿಣಾಭಿಮುಖವಾಗಿ ಕೋಡಿಹಳ್ಳಿಯವರೆಗೆ ತಾಲ್ಲೂಕು ಗಡಿಯಾಗಿ ಹರಿದು ಮುಂದೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕನ್ನು ಪ್ರವೇಶಿಸುವುದು. ಈ ನದಿಗೆ ಹೊಳೆನರಸೀಪುರದ ವಾಯವ್ಯಕ್ಕೆ ಸು. 6 ಕಿಮೀ ದೂರದಲ್ಲಿ ಶ್ರೀರಾಮದೇವರಕಟ್ಟೆ ಎಂಬ ಅಣೆಕಟ್ಟು ಇದೆ. ಈ ಅಣೆಕಟ್ಟು ನೂರು ವರ್ಷಗಳಿಗಿಂತಲೂ ಹಿಂದಿನದೆಂದು ತಿಳಿದುಬರುತ್ತದೆ. ಇಡೀ ಜಿಲ್ಲೆಯ ನೀರಾವರಿ ಪ್ರದೇಶದಲ್ಲಿ 1/3 ಭಾಗ ಈ ಕಟ್ಟೆಯ ಕಾಲುವೆ ನೀರಿನ ಆಶ್ರಯಕ್ಕೆ ಸೇರಿದೆ. ಹೇಮಾವತಿ ಯೋಜನೆಯಿಂದ ಈ ತಾಲ್ಲೂಕು ಹೆಚ್ಚಿನ ನೀರಾವರಿ ಸೌಕರ್ಯವನ್ನು ಪಡೆಯಲಿದೆ. ಈ ತಾಲ್ಲೂಕಿನಲ್ಲಿ ಸು. 17 ದೊಡ್ಡ ಕೆರೆಗಳೂ 277 ಚಿಕ್ಕ ಕೆರೆಗಳೂ 228 ಬಾವಿಗಳೂ

ಇದ್ದು ವ್ಯವಸಾಯೋಪಯೋಗಿಯಾಗಿವೆ ಎಂದು ತಿಳಿದುಬರುವುದು. ತಾಲ್ಲೂಕಿನ ವ್ಯವಸಾಯಕ್ಕೆ ಸಾಕಷ್ಟು ಹೆಚ್ಚು ನೀರನ್ನೊದಗಿಸುವ ಕಾರ್ಯಗಳು ನಡೆಯುತ್ತಿವೆ. ಅವುಗಳಲ್ಲಿ ಹಳೆಕೋಟೆ ಹೋಬಳಿಗೆ ಸೇರಿದ್ದು ಹೊಳೆನರಸೀಪುರಕ್ಕೆ ಉತ್ತರದಲ್ಲಿ 13 ಕಿಮೀ ದೂರದಲ್ಲಿರುವ ಚಕ್ಕೇನ ಹಳ್ಳಿ ಕೆರೆ. ಇವಲ್ಲದೆ ನಾಗರ್ತಿ ಮತ್ತು ಕಾಮಸಮುದ್ರ ನೀರೆತ್ತುವ ಯೋಜನೆಗಳಿಂದಲೂ ಸಾಕಷ್ಟು ನೀರನ್ನೊದಗಿಸಿಕೊಳ್ಳಲಾಗುತ್ತಿದೆ. ಈ ತಾಲ್ಲೂಕಿನ ಹವೆ ಹಿತಕರ. ವಾರ್ಷಿಕ ಸರಾಸರಿ ಮಳೆ 670.15 ಮಿಮೀ.

ತಾಲ್ಲೂಕಿನಲ್ಲಿ ಮರಳುಮಿಶ್ರಿತ ಕೆಂಪುಮಣ್ಣಿನ ಭೂಮಿ ಮತ್ತು ಕೆಂಪುಮಿಶ್ರಿತ ಕಪ್ಪುಮಣ್ಣಿನ ಭೂಮಿ ಹೆಚ್ಚಾಗಿ ಕಂಡುಬರುವುದು. ಇಲ್ಲಿನ ಮುಖ್ಯಬೆಳೆ ಬತ್ತ, ರಾಗಿ, ಸೇಂಗಾ, ದ್ವಿದಳ ಧಾನ್ಯಗಳು. ಇವುಗಳ ಜೊತೆಗೆ ಜೋಳ, ಆಲೂಗೆಡ್ಡೆ, ಕಬ್ಬು, ಅಡಕೆ, ತೆಂಗು ಇವುಗಳನ್ನು ಬೆಳೆಯುತ್ತಾರೆ. ತಾಲ್ಲೂಕಿನಲ್ಲಿ ತೋಟ ಅಭಿವೃದ್ಧಿ ಕ್ಷೇತ್ರ ಒಂದಿದ್ದು ತೆಂಗು, ಅಡಕೆ, ಪರಂಗಿ, ಗೇರು, ಸೀಬೆ ಮತ್ತು ವಿವಿಧ ತರಕಾರಿಗಳ ಅಭಿವೃದ್ಧಿಗೆ ಸಹಾಯಕವಾಗಿ ಕೆಲಸ ಮಾಡುತ್ತಿದೆ. ನದಿ, ಕೆರೆಗಳಿದ್ದು ತಾಲ್ಲೂಕಿನಲ್ಲಿ ಮತ್ಸ್ಯೋದ್ಯಮ ಪ್ರಗತಿದಾಯಕವಾಗಿದೆ.

ತಾಲ್ಲೂಕಿನಲ್ಲಿ ಇರುವ ದೊಡ್ಡ ಕೈಗಾರಿಕೆಯೆಂದರೆ ಕಲ್ನಾರು ವಸ್ತುಗಳ ತಯಾರಿಕಾ ಕಾರ್ಖಾನೆ. ಇದು ಬಿಟ್ಟು ತಾಲ್ಲೂಕಿನಲ್ಲಿ ಹಿಂದಿನಿಂದ ಬಂದಿರುವ ಮುಖ್ಯ ಕೈಗಾರಿಕೆಗಳಲ್ಲಿ ಗೋಣಿಚೀಲಗಳ ತಯಾರಿಕೆ, ಹತ್ತಿ, ಉಣ್ಣೇನೇಯ್ಗೆ ಮತ್ತು ಕಂಬಳಿಗಳ ತಯಾರಿಕೆಗಳನ್ನು ಹೆಸರಿಸಬಹುದು. ಬೆಂಕಿಕಡ್ಡಿಪೆಟ್ಟಿಗೆ ತಯಾರಿಕೆ, ಮರದ ವಸ್ತುಗಳ ತಯಾರಿಕೆ ಮುಂತಾದವು ಗಳಿವೆ. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿವೆ. ಆಸ್ಪತ್ರೆ, ಔಷಧಾಲಯ, ಪ್ರೌಢಶಾಲೆಗಳು, ಅಂಚೆ, ತಂತಿ, ದೂರವಾಣಿ ಮತ್ತು ವಿದ್ಯುತ್ ಮುಂತಾದ ವುಗಳ ಸೌಲಭ್ಯಗಳಿವೆ. ಮೈಸೂರು-ಹಾಸನ, ಚನ್ನರಾಯಪಟ್ಟಣ-ಹಾಸನ ರಾಜ್ಯ ಹೆದ್ದಾರಿಗಳ ಜೊತೆಗೆ ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳಿದ್ದು ಸುತ್ತಲ ಪಟ್ಟಣ, ಗ್ರಾಮಗಳಿಗೆ ತಾಲ್ಲೂಕಿನಲ್ಲಿ ಉತ್ತಮ ಮಾರ್ಗಸಂಪರ್ಕ ಗಳಿವೆ. ಮೈಸೂರು-ಹಾಸನ-ಅರಸೀಕೆರೆ ರೈಲುಮಾರ್ಗ ಈ ತಾಲ್ಲೂಕಿನಲ್ಲಿ ಹಾದುಹೋಗಿದ್ದು ತಾಲ್ಲೂಕಿನ ವ್ಯಾಪಾರಾಭಿವೃದ್ಧಿಗೆ ಸಹಾಯಕವಾಗಿದೆ.

ಹೊಳೆನರಸೀಪುರದ ಈಶಾನ್ಯಕ್ಕೆ 13 ಕಿಮೀ ದೂರದಲ್ಲಿರುವ ದೊಡ್ಡಕುಂಟೆ ಗ್ರಾಮ ಹಿಂದೆ ಒಂದು ಪಾಳೆಯಪಟ್ಟಾಗಿತ್ತು. ಆಗಿನ ಕೋಟೆ ಅವಶೇಷವನ್ನು ಈಗಲೂ ನೋಡಬಹುದು. ಇದರ ಹತ್ತಿರದಲ್ಲಿ ನಾರಾಯಣ ಅಣೆಕಟ್ಟನ್ನು ಹೆಬ್ಬಳ್ಳಕ್ಕೆ ಕಟ್ಟಿದೆ. ಹೊಳೆನರಸೀಪುರದ ದಕ್ಷಿಣಕ್ಕೆ 16 ಕಿಮೀ ದೂರದಲ್ಲಿರುವ ಹಳ್ಳಿ ಮೈಸೂರು ಹೋಬಳಿ ಕೇಂದ್ರ. ಹಾಸನ-ಮೈಸೂರು ರಸ್ತೆಯಲ್ಲಿರುವ ಈ ಗ್ರಾಮ ಹಿಂದೆ ಒಬ್ಬ ಸ್ಥಳೀಯ ರಾಜನ ಮುಖ್ಯಪಟ್ಟಣವಾಗಿತ್ತೆಂದು ತಿಳಿದುಬರುವುದು. ಇಲ್ಲಿ ಗಂಗದೊರೆ ಮಾರಸಿಂಹನ (963-74) ಕಾಲದ್ದೆನ್ನುವ ಒಂದು ವೀರಗಲ್ಲಿದೆ. ಹೊಳೆನರಸೀಪುರಕ್ಕೆ ಉತ್ತರದಲ್ಲಿ 10 ಕಿಮೀ ದೂರದಲ್ಲಿರುವ ಹರಿಹರಪುರದಲ್ಲಿ ಹೊಯ್ಸಳರ ಕಾಲದ, ಚಿಕ್ಕದಾದರೂ ಸುಂದರವಾದ ಹರಿಹರೇಶ್ವರ ದೇವಾಲಯವಿದೆ. ತ್ರಿಕೂಟಾಚಲ ಮಾದರಿಯ ಈ ದೇವಾಲಯ ಪೂರ್ವಕ್ಕೆ ಮುಖಮಾಡಿದ್ದು ಗರ್ಭಗೃಹ, ಸುಕನಾಸಿ ಮತ್ತು ನವರಂಗ ದಿಂದ ಕೂಡಿದೆ. ಸುಕನಾಸಿಯ ಎರಡೂ ಕಡೆಯಲ್ಲಿ ರತಿ-ಮನ್ಮಥರ ಮೂರ್ತಿಗಳನ್ನು ಕೆತ್ತಲಾಗಿದೆ. ಈ ದೇವಾಲಯದ ಮುಖ್ಯ ಮೂರ್ತಿಗಳು ಹರಿಹರ, ಸರಸ್ವತಿ ಮತ್ತು ಅನಂತಪದ್ಮನಾಭ ಎಂದು ಹೇಳುವರು. ಆದರೆ ಮೂರ್ತಿಗಳು ದೇವಾಲಯದಲ್ಲಿ ಕಂಡುಬರುತ್ತಿಲ್ಲ.

ಹೊಳೆನರಸೀಪುರ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. ಮೈಸೂರು-ಹಾಸನ ಮಾರ್ಗಮಧ್ಯದಲ್ಲಿ ಹಾಸನಕ್ಕೆ ಆಗ್ನೇಯದಲ್ಲಿ 33 ಕಿಮೀ ದೂರದಲ್ಲಿದೆ. ಪಟ್ಟಣದಲ್ಲಿ 13,701 ಮಂದಿ ಗಂಡಸರು, 13,317 ಮಂದಿ ಮಹಿಳೆಯರಿದ್ದು ಒಟ್ಟು ಜನಸಂಖ್ಯೆ 27,024.

ಹೇಮಾವತಿ ನದಿಯ ಬಲದಂಡೆ ಮೇಲಿರುವ ಈ ಪಟ್ಟಣ ಸುತ್ತಲ ಗ್ರಾಮಗಳಿಗೆ ಮುಖ್ಯ ಕೇಂದ್ರ. ಕಲ್ನಾರು ಕಾರ್ಖಾನೆಯೊಂದು ಪಟ್ಟಣಕ್ಕೆ ಹತ್ತಿರದಲ್ಲೇ ಇದೆ. ಕೆಲವೊಂದು ಗೃಹಕೈಗಾರಿಕೆಗಳೂ ಇಲ್ಲಿವೆ. ಈ ಪಟ್ಟಣ ಮೈಸೂರು-ಹಾಸನ-ಅರಸೀಕೆರೆ ರೈಲುಮಾರ್ಗದ ಒಂದು ಮುಖ್ಯ ರೈಲುನಿಲ್ದಾಣ, ಪಟ್ಟಣ ಪುರಸಭಾ ಆಡಳಿತಕ್ಕೆ ಒಳಪಟ್ಟಿದೆ.

ಹೊಳೆನರಸೀಪುರದ ಕೋಟೆಯನ್ನು 1168ರಲ್ಲಿ ನರಸಿಂಹನಾಯಕ ನೆಂಬುವನು ಕಟ್ಟಿದ. ಅವನ ವಂಶದವರ ಅಧೀನದಲ್ಲಿದ್ದ ಹೊಳೆನರಸೀಪುರ 1667ರಲ್ಲಿ ಮೈಸೂರಿನ ದೊಡ್ಡದೇವರಾಜ ಒಡೆಯರ ಕೈಸೇರಿತು. ಪಟ್ಟಣ ದಲ್ಲಿ ಲಕ್ಷ್ಮೀನರಸಿಂಹ ದೇವಾಲಯವಿದೆ. ಇದರ ಒಳನವರಂಗ,ಗರ್ಭಗೃಹ ಮತ್ತು ಅಲ್ಲಿರುವ ಪ್ರತಿಮೆಗಳು ಹೊಯ್ಸಳ ಶೈಲಿಯಲ್ಲಿವೆ. ಗ್ರ್ಯಾನೈಟ್ ಶಿಲೆಗಳನ್ನು ಉಪಯೋಗಿಸಲಾಗಿರುವುದರಿಂದ ದೇವಾಲಯದ ಈ ಭಾಗಗಳನ್ನು 14ನೆಯ ಶತಮಾನದಲ್ಲಿ ಕಟ್ಟಿರಬಹುದೆಂಬ ಅಭಿಪ್ರಾಯವಿದೆ. ದೇವಾಲಯದ ಹೊರನವರಂಗ ಹಾಗೂ ದ್ವಾರಪಾಲಕರ ವಿಗ್ರಹಗಳು ವಿಜಯನಗರ ಅರಸರ ಆಳಿಕೆಯ ಕಾಲಕ್ಕೂ ಮಹಾದ್ವಾರ ಹಾಗೂ ಮೂರು ಗೋಪುರಗಳೇ ಮೊದಲಾದುವು ಪಾಳೆಯಗಾರರ ಕಾಲಕ್ಕೂ ಸೇರಿದವೆನ್ನುವರು. ಸ್ವಾಮಿ ಸಚ್ಚಿದಾನಂದ ಸರಸ್ವತಿಗಳು ಬೆಂಗಳೂರಿನಲ್ಲಿ 1920ರಲ್ಲಿ ಸ್ಥಾಪಿಸಿದ ಅಧ್ಯಾತ್ಮ ಪ್ರಕಾಶನ ಕಾರ್ಯಾಲಯ 1935ರಿಂದ ಹೊಳೆನರಸೀಪುರದಲ್ಲಿ ಕೆಲಸ ಮಾಡುತ್ತಿದೆ. (*;ಎಚ್.ಜಿ.)

**ಹೊಳೆನರಸೀಪುರ ಪಾಳೆಯಗಾರರು:** ಬೇಲೂರಿನ ನಾಯಕ ರಿಂದ ಪ್ರತ್ಯೇಕಗೊಂಡ ಮನೆತನವೊಂದು ಹೊಳೇನರಸೀಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಸ್ವಲ್ಪಕಾಲ ಹೊಳೆನರಸೀಪುರದ ಸುತ್ತಮುತ್ತಲಿನ ಪ್ರದೇಶವನ್ನು ಆಳಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಬೇಲೂರಿನ ನಾಯಕರ ಗೋತ್ರ, ಸೂತ್ರ, ಶಾಖೆ ಮತ್ತು ಬಿರುದುಗಳನ್ನೇ ಇವರು ಹೊಂದಿದ್ದಾರೆ. ಇವರು ಆಳಿದ ಕಾಲ 16-17ನೆಯ ಶತಮಾನ ಗಳು. ವಿಜಯನಗರದ ಕೃಷ್ಣದೇವರಾಯನಿಂದ ಇವರಿಗೆ ಉಂಬಳಿಯಾಗಿ ಈ ಪ್ರದೇಶವು ಪ್ರಾಪ್ತವಾಗಿತ್ತು. ಈ ಪಾಳೆಯಗಾರರ ವಂಶಾವಳಿ ಹೀಗಿದೆ:

- ಬಯ್ಯಪ್ಪನಾಯಕ
  - ಕೃಷ್ಣಪ್ಪನಾಯಕ
    - ವೆಂಕಟಾದ್ರಿನಾಯಕ (ಚಿಕ್ಕನಾಯಕ?)
      - ಲಕ್ಷ್ಮಪ್ಪ ನಾಯಕ (1591-1614)
        - ರಂಗಪ್ಪನಾಯಕ I (1651)
          - ನರಸಿಂಹನಾಯಕ I (1654-57)
            - ರಂಗಪ್ಪನಾಯಕ II (1655)
        - ನರಸಿಂಹನಾಯಕ II (1658-65)
      - ಪತ್ನಿ (ಚನ್ನಾಂಬಿಕಾ)
      - ವಿರೂಪನಾಯಕ (1629)
      - ತಿರುಮಲಯ್ಯ
    - ಪತ್ನಿ (ಪದ್ಮಾಂಬಿಕಾ)
    - ಲಕ್ಷ್ಮಪ್ಪನಾಯಕ

ಈ ಅಧಿಪರು ಮಾಡಿದ ಕೆಲವು ದಾನಗಳನ್ನು ಶಾಸನಗಳು ಉಲ್ಲೇಖಿಸು ತ್ತವೆ. ಬೇಲೂರು ನಾಯಕರಿಂದ ಇವರು ಯಾವ ಹಂತದಲ್ಲಿ ಬೇರ್ಪಟ್ಟು

ಸ್ವತಂತ್ರರಾದರೆಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ **(ನೋಡಿ: ಬೇಲೂರು ಪಾಳೆಯಗಾರರು).** **(ಎಚ್.ಎಂ.ಎನ್.ಆರ್.)**

**ಹೋದಿಗೆರೆ:** ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಒಂದು ಗ್ರಾಮ. ಚನ್ನಗಿರಿಯ ಪೂರ್ವಕ್ಕೆ 9 ಕಿಮೀ ದೂರದಲ್ಲಿರುವ ಇದನ್ನು ಹೊದಿಗೆರೆ ಎಂದೂ ಕರೆಯುವುದಿದೆ. ಜನಸಂಖ್ಯೆ 2,872. ಇಲ್ಲಿ ಸು. 17ನೆಯ ಶತಮಾನಕ್ಕೆ ಸೇರಿದ ಭವಾನಿ ದೇವಾಲಯ, ರಾಚಿರಂ ಬಾವಿ ಇವೆ. ಮರಾಠಿ ಇತಿಹಾಸದ ಪ್ರಕಾರ 1664 ಜನವರಿ 23ರಂದು ಶಿವಾಜಿಯ ತಂದೆ ಶಹಾಜಿ ಇಲ್ಲಿ ಮರಣಹೊಂದಿದನೆಂದು ತಿಳಿದುಬರುತ್ತದೆ. ಅವನ ಗೋರಿ ಇಲ್ಲಿದೆ. ಈ ಗೋರಿಯ ಮೇಲೆ ಒಂದು ಶಾಸನವಿದ್ದು ಶ್ರೀ ಶಹಾಜಿ ರಾಜನ ಸಮಾಧಿ ಎಂದು ಕನ್ನಡದಲ್ಲಿ ಬರೆಯಲಾಗಿದೆ. **(ಎಚ್.ಎಂ.ಎನ್.)**

**ಹೋಳಿ:** ವಸಂತಋತುವಿನ ಹಬ್ಬಗಳಲ್ಲಿ ಒಂದು. ಹೋಳಿಯನ್ನು ಕುರಿತು ಹೋಳಿಹುಣ್ಣಿಮೆ, ಕಾಮನ ಹಬ್ಬ, ಹೋಳಿಕ ಹಬ್ಬ, ಹೋಳಿಸಿಗ್ಮ, ಹೋಳಿಹಳಬು, ಬಣ್ಣದ ಆಟ (ನೀರಿನಲ್ಲಿ ಬಣ್ಣ ತುಂಬಿ ಎರಚಾಡುವುದು) ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಕರ್ನಾಟಕವೂ ಸೇರಿದಂತೆ ಭಾರತಾದ್ಯಂತ ಸ್ತ್ರೀ ಪುರುಷರು ಜಾತಿ, ಮತ, ಪಂಥ–ಭೇದ ಮರೆತು ಉತ್ಸಾಹ, ಸಂಭ್ರಮ, ಸಡಗರದಿಂದ ,ಈ ಹಬ್ಬವನ್ನು ಆಚರಿಸುವುದು ರೂಢಿಯಲ್ಲಿದೆ. ಹೋಳಿಹಬ್ಬದ ಆಚರಣೆ 'ದುಷ್ಟಶಿಕ್ಷೆ–ಶಿಷ್ಟರಕ್ಷೆ'ಯ ಜೊತೆಗೆ ಮಾನವ ತನ್ನ ಹಳೆಯ ನೋವುಗಳನ್ನು ಮರೆತು ಹೊಸತನಕ್ಕೆ ಕಾಲಿಡುವುದರ ಸಂಕಲ್ಪದ ಕುರುಹಾಗಿದೆ.

ಹೋಳಿ ಹಬ್ಬ ಕೆಲವೆಡೆ ಹದಿನೈದರಿಂದ ಇಪ್ಪತ್ತು ದಿನಗಳವರೆಗೆ ಆಡುವ ಮನರಂಜನೆಯ ಆಟವಾದರೆ, ಇನ್ನು ಕೆಲವು ಕಡೆ ಎರಡು ದಿನದ ಆಟವಾಗಿದೆ. ಈ ಉತ್ಸವ ಹುಣ್ಣಿಮೆಯಿಂದ ಪ್ರಾರಂಭವಾದರೆ ರಂಗಪಂಚಮಿಯವರೆಗೆ ನಡೆಯುತ್ತದೆ. ಬಹುಪಾಲು ಗ್ರಾಮಗಳಲ್ಲಿ ಕಾಮನಕಟ್ಟೆಗಳಿರುತ್ತವೆ. ಕಾಮ ಬಲು ಚೆಲುವನೆಂಬ(ಮಾರ) ನಂಬಿಕೆ ಜನಪದರಲ್ಲಿ ಇಂದಿಗೂ ಬೇರೂರಿದೆ. ಈ ಕಾರಣದಿಂದಲೇ ಗಂಡು ಮಕ್ಕಳ ಚೆಲುವನ್ನು ಕಾಮನಿಗೆ ಹೋಲಿಸಲಾಗಿದೆ. 'ಧರೆಯೊಳೀ ಹೋಳಿ ಪದಗಳನು ಪೇಳುವೆನು ಹರನಿಂದ ಮಡಿದ ಕಾಮಣ್ಣ' ಎಂದು ಶಿವನ ಹಣೆಗಣ್ಣಿನಿಂದ ಸುಟ್ಟುಹೋದ ಕಾಮಣ್ಣನ ಕಥೆಯನ್ನು 'ಶಿವಪುರಾಣ' ತಿಳಿಸುತ್ತದೆ. ಅಲ್ಲದೆ ಸ್ಕಾಂದ ಪುರಾಣ, ಕಾಳಿದಾಸನ ಕುಮಾರಸಂಭವ, ಹರಿಹರನ ಗಿರಿಜಾಕಲ್ಯಾಣ, ವಚನ ಸಾಹಿತ್ಯ, ದಾಸ ಸಾಹಿತ್ಯಗಳಲ್ಲಿಯೂ ಹೋಳಿಹಬ್ಬದ ಬಗ್ಗೆ ಸಾಕಷ್ಟು ಮಾಹಿತಿ ದೊರಕುತ್ತದೆ.

ಉತ್ತರ ಭಾರತದಲ್ಲಿ ಪ್ರಚಲಿತವಿರುವ ಈ ಹಬ್ಬದ ಪ್ರಸಿದ್ಧಕಥೆಯ ತುಣುಕೊಂದು ಹೀಗಿದೆ: ರಾಕ್ಷಸದೊರೆಯಾದ ಹಿರಣ್ಯಕಶಿಪು ಹಾಗೂ ದೇವತೆಗಳ ನಡುವೆ ನಡೆದ ಸಮರದಲ್ಲಿ ಹಿರಣ್ಯಕಶಿಪು ಜಯಶಾಲಿಯಾಗುತ್ತಾನೆ. ಅಂದಿನಿಂದಲೇ ಗರ್ವಿಯಾದ ದೊರೆ, ತನ್ನನ್ನು ಹೊರತುಪಡಿಸಿ ಬೇರಾವ ದೇವರುಗಳನ್ನೂ ಮುಂದೆ ಪೂಜಿಸಬಾರದೆಂದೂ ಹಾಗೊಂದು ವೇಳೆ ಯಾರಾದರೂ ನಿಯಮ ಮೀರಿ ಪೂಜಿಸಿದ್ದೇ ಆದಲ್ಲಿ ಅಂಥವರಿಗೆ ಶಿಕ್ಷೆ ನೀಡುವುದಾಗಿಯೂ ಆಜ್ಞೆ ಹೊರಡಿಸಿದ. ಆತನ ಮಗ ಪ್ರಹ್ಲಾದ ಪರಮ ದೈವಭಕ್ತನಾದ್ದರಿಂದ ತಂದೆಯ ಅಜ್ಞೆ ಮೀರಿ ಹರಿಯನ್ನು ಪೂಜಿಸತೊಡಗಿದ. ಇದನ್ನರಿತ ಹಿರಣ್ಯಕಶಿಪು ಮಗನಿಗೆ ಘೋರ ಶಿಕ್ಷೆ ವಿಧಿಸಿದ. ಇದರಿಂದ ಏನೂ ಪ್ರಯೋಜನ ಆಗಲಿಲ್ಲ. ಆಗ ಆತ ತನ್ನ ತಂಗಿಯಾದ ಹೋಲಿಕಳ (ಈಕೆ ದುಷ್ಟರನ್ನು ಬೆಂಕಿಯಿಂದ ಸುಡುವ ಶಕ್ತಿ ಪಡೆದಿದ್ದಳು) ಬಳಿಗೆ ಬಂದು ತನ್ನ ಮಗನಾದ ಪ್ರಹ್ಲಾದನನ್ನು ಸುಟ್ಟು ಹಾಕಬೇಕೆಂದು ಮೊರೆಯಿಟ್ಟ. ಹೋಲಿಕಳು ಪ್ರಹ್ಲಾದನನ್ನು ಸುಡಲು ತನ್ನ ತೊಡೆಯ ಮೇಲೆ ಕೂರಿಸಿಕೊಂಡಾಗ, ತಾನೇ ಸುಟ್ಟು ಬೂದಿಯಾದಳು. ಈ ಘಟನೆಯೇ ಹೋಳಿಯ ಆಚರಣೆಗೆ ಮೂಲ ಪ್ರೇರಣೆಯಾದರೂ ಇದೇ ಮಾದರಿಯನ್ನು ಹೋಲುವ ಮತ್ತೊಂದು ಕಥೆ ಭಿನ್ನ ಸ್ವರೂಪದಲ್ಲಿದೆ. ತಾರಕಾಸುರನ ಉಪಟಳ ತಾಳದ ದೇವತೆಗಳು ಆತನ ಸಂಹಾರಕ್ಕೆ ಸರ್ವಪ್ರಯತ್ನ ನಡೆಸಿದರು. ಋಷಿಮುನಿಗಳು ತಾರಕಾಸುರನ ಸಾವು ಶಿವನ ಮಗನಿಂದ ಸಾಧ್ಯವೆಂದು ತಿಳಿಸಿದಾಗ ದೇವಾದಿದೇವತೆಗಳೆಲ್ಲ ಶಿವನಿಗೆ ಮದುವೆ ಮಾಡುವ ಸಂಭ್ರಮದಲ್ಲಿ ತೊಡಗಿಕೊಂಡರು. ಈ ಮಹತ್ಕಾರ್ಯ ಕಾಮನಿಂದ ಮಾತ್ರ ಸಾಧ್ಯವೆಂದು ನಿರ್ಣಯಿಸಿದರು. ಆತನ ಮೇಲೆ ಗುರುತರ ಜವಾಬ್ದಾರಿಯನ್ನು ಹೊರಿಸಿದರು. ಅನಂತರ ಗಿರಿಜೆ ಪೂಜೆ ಮಾಡುತ್ತಿದ್ದಾಗ ತಪೋಮಗ್ನನಾದ ಶಿವನ ಮೇಲೆ ಕಾಮ ಪುಷ್ಪಬಾಣ ಪ್ರಯೋಗ ಮಾಡುತ್ತಾನೆ. ಕಾಮೋಪಟಳದಿಂದ ಕಣ್ದೆರೆದ ಶಿವ, ತನ್ನ ಉರಿಗಣ್ಣನ್ನು ತೆರೆದು ಕಾಮನನ್ನು ಭಸ್ಮ ಮಾಡುತ್ತಾನೆ. ಅದೇ ಸಮಯ ಶೋಕತಪ್ತಳಾದ ರತಿಯ ಬೇಗುದಿಯಿಂದ ಮನಕರಗಿದ ಪಾರ್ವತಿ ಶಿವನನ್ನು ಕಾಡಿಬೇಡಿ ರತಿಗೆ ಪತಿಭಿಕ್ಷೆ ನೀಡಲು ಕೋರುತ್ತಾಳೆ. ಕಾಮನು ಅನಂಗನಾಗಿ ಬದುಕಲಿ ಎಂದು ಶಿವ ಆಶೀರ್ವದಿಸುತ್ತಾನೆ. ಕಾಮನ ಮರುಹುಟ್ಟಿನ ಸಂಕೇತವೇ ಈ ಹೋಳಿ. ಈ ಪ್ರಸಂಗಗಳು ಭಾರತೀಯ ಪುರಾಣ ಐತಿಹ್ಯಗಳಲ್ಲಿ ವಿಭಿನ್ನವಾಗಿ ಕಾಣಸಿಗುತ್ತವೆ.

ಹೋಳಿ ಹಬ್ಬ ವಸಂತಾಗಮನದ ಸಂಕೇತ. ಆಗ ಪ್ರಕೃತಿಯ ಗಿಡ, ಮರ ಬಳ್ಳಿ ಚಿಗುರಿ, ಹೂಬಿಟ್ಟು ಇಡೀ ನಿಸರ್ಗವೇ ಚೈತನ್ಯದಿಂದ ಕೂಡಿರುತ್ತದೆ. ಆ ಸಂದರ್ಭದಲ್ಲಿ ಊರಿನ ತರುಣರು ವಯಸ್ಸಾದ ವೃದ್ಧರೂ ಬಲುಹುರುಪಿನಿಂದ ಹೋಳಿ ಆಚರಿಸಲು ಮನೆಯಿಂದ ಹೊರಬೀಳುವರು. ಹುಣ್ಣಿಮೆಯ ದಿವಸ ಕಾಮನ ಸುಂದರವಾದ ಪ್ರತಿಮೆ ಮಾಡಿ ಆ ಪ್ರತಿಮೆಗೆ ಅಲಂಕರಣ ಮಾಡಿ, ಸಿಂಗರಿಸಿ ಊರಿನ ಕಾಮನ ಕಟ್ಟೆಯ ಮುಂದಿನ ಚಪ್ಪರದ ಅಂಗಳದಲ್ಲಿ ಕಾಮನ ಪ್ರತಿಮೆ ಕೂರಿಸುವರು. ಅನಂತರ ಊರಿನ ಸುತ್ತ ತಮಟೆ ಡೋಲಿನ ವಾದ್ಯಗಳ ಅಬ್ಬರದೊಂದಿಗೆ ಕುಣಿದು ಕುಪ್ಪಳಿಸಿ ಮನೆ ಮನೆಯಿಂದ ಸೌದೆ, ಬೆರಣಿ, ಬಿದಿರು, ಹಳೆಯ ಮರದ ಸಾಮಾನುಗಳು ಇತ್ಯಾದಿ ವಸ್ತುಗಳನ್ನು ಸಂಗ್ರಹಿಸುವುದುಂಟು. ಈ ಸಂದರ್ಭ ಕುರಿತ ಜನಪದ ತ್ರಿಪದಿಯೊಂದು ಹೀಗಿದೆ:

ಕಾಮಣ್ಣ ಸತ್ತಾನಂತ ಭೀಮಣ್ಣ ಗೋಳಾಡ್ತಾನೆ.
ಮನೆಗ್ಯೆದ್ಯೆದು ಸೌದೆ ಕೊಡ್ರವ್ವೋ ! ಕಾಮಣ್ಣನಿಗೆ
ಚೆಂದಾಗಿ ಕಿಚ್ಚಹಾಯ್ಸೋಣ–

ಹೀಗೆ ಹಾಡಿನ ಮೂಲಕ ಆಡಿ ಕುಣಿದು ಕುಪ್ಪಳಿಸಿ, ಸಂಗ್ರಹಿಸಿದ ಸೌದೆ–ಬೆರಣಿಗಳನ್ನು ಚಪ್ಪರ ಹಾಕಿದ ಕಾಮನ ಕಟ್ಟೆಯ ಮುಂದಿರಿಸಿ ಅದರ ಮೇಲೆ ಕಾಮನನ್ನು ಕೂರಿಸಿ ಹರಿಜನರ ಮನೆಯಲ್ಲಿ ಸಿದ್ಧಪಡಿಸಿದ ರತಿಪ್ರತಿಮೆ ಹಾಗೂ ಅವರ ಮನೆಯಿಂದಲೇ ಬೆಂಕಿಯನ್ನೂ ಕದ್ದು ತಂದು ರತಿಕಾಮರನ್ನು ಅಶ್ಲೀಲ ಬೈಗುಳಗಳಿಂದ, ಹಾಡುಗಳೊಂದಿಗೆ ನಿಂದಿಸಿ, ವಾದ್ಯದೊಂದಿಗೆ ಕುಣಿದು ಸುಡುವರು. ಮರುದಿನ ಕಾಮನನ್ನು ಸುಟ್ಟ ಬೂದಿಯನ್ನು ರೈತರು ತಮ್ಮ ಜಮೀನಿನಲ್ಲಿ ಚೆಲ್ಲಿ, ಬಿತ್ತುವ ಬೀಜಗಳೊಂದಿಗೆ ಬೆರಸಿ ಉಳುಮೆ ಮಾಡುವರು. ಈ ಆಚರಣೆಯಿಂದ ಮಳೆ ಬಿದ್ದು ಸಮೃದ್ಧ ಫಲ ದೊರೆಯುತ್ತದೆಂಬ ನಂಬಿಕೆ ರೈತರಲ್ಲಿದೆ. ಸುಟ್ಟಕಾಮಣ್ಣನ ಬೂದಿಯನ್ನು ವಿವಿಧ ಬಣ್ಣದ ಪುಡಿಯೊಂದಿಗೆ ಬೆರಸಿ ಆತ್ಮೀಯ ಸ್ನೇಹಿತರಿಗೆ, ನೆರೆಹೊರೆಯವರಿಗೆ ಮುಖ, ಮೈ, ಕೈ, ಬಟ್ಟೆಗಳಿಗೆ ಸಂತೋಷ–ಸಡಗರದಿಂದ ಬಳಿದು ಸಿಹಿ ಹಂಚಿ ಸಂಭ್ರಮಿಸುವರು. ಇನ್ನೂ ಕೆಲವೆಡೆ ಈ ಬಣ್ಣದ ಪುಡಿಗಳನ್ನು ನೀರಿನ ತಪ್ಪಲೆಯಲ್ಲಿ ಬೆರಸಿ ಸ್ನೇಹಿತರ ತಲೆಯ ಮೇಲೆ ಸುರಿದು ಸಂತೋಷ ಹಂಚಿಕೊಳ್ಳುವುದಿದೆ. ವಿವಿಧ ಬಣ್ಣದ ನೀರನ್ನು ಬಿದಿರಿನ ಬೊಂಬು ಅಥವಾ ಬಾಟಲಿಗಳಲ್ಲಿ, ಪಿಚಕಾರಿಯಲ್ಲಿ ತುಂಬಿಸಿ ಓಕುಳಿಯಾಡುವುದೂ ಇದೆ. ಈ ರೀತಿಯ ಮನರಂಜನೆಯ ಆಟಮುಗಿದ ಅನಂತರ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಗಳಲ್ಲಿ ಸ್ನಾನಮಾಡಿ ಹೋಳಿ ಹಬ್ಬದ ಪ್ರಯುಕ್ತ ಸಿದ್ಧಪಡಿಸಿದ ವಿವಿಧ ಭಕ್ಷ್ಯಭೋಜ್ಯಗಳ ಔತಣಕೂಟದಲ್ಲಿ ಪಾಲ್ಗೊಂಡು ಹಬ್ಬದ ಸಂತೋಷವನ್ನು ಸಾಮೂಹಿಕವಾಗಿ ಹಂಚಿಕೊಳ್ಳುವರು. **(ಪಿ.ಜಿಬಿ.)**

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಕನ್ನಡ ಭಾಷಾಭಿವೃದ್ಧಿ ಯೋಜನೆ-06

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ – 1

# ಶಿಕ್ಷಣ

ಪ್ರಧಾನ ಸಂಪಾದಕರು
ಡಾ. ಎಸ್. ಲಕ್ಷ್ಮಿ

ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು-570 006

2012

Digitised by Bharatavani, CIIL

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ – 1

# ಶಿಕ್ಷಣ



Digitised by Bharatavani, CIIL

iE:/KSOU Education/ Vol. 3/ Book2

**SHIKSHANASHASTHRA VISHAYA VISHVAKOSHA :** First Volume of the Series of Shikshanashasthra Vishaya Vishvakosha comprising articles on different aspects of Education.

Chief Editor
**Dr. N. Lakshmi,**
Chairperson, Department of Studies and Research in Education,
KSOU, Manasagangotri, Mysore-570 006.

Editors
**Prof. B. N. Manjunathaiah**
**Prof. C.G. Venkataramana Shetty**
**Prof. S. Shreekanta Swamy**
**Prof. K. R. Nagarathna**

Published by
**The Registrar**
KSOU, Manasagangotri, Mysore-570 006.

© Karnataka State Open University

First Edition : 2012

Pages : xxxviii + 976 = 1014

Price : ₹ 1000

Copies : 1000

Printed by
**Raja Printers**
No. 59, 4th Cross, Lalbagh Road,
K.S. Garden, Bangalore–560 027

ಪ್ರಧಾನ ಸಂಪಾದಕರು
**ಡಾ. ಎನ್. ಲಕ್ಷ್ಮಿ**
ಅಧ್ಯಕ್ಷರು,
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮಾನಸಗಂಗೋತ್ರಿ, ಮೈಸೂರು – 570 006

ಸಂಪಾದಕರು
**ಪ್ರೊ. ಬಿ. ಎನ್. ಮಂಜುನಾಥಯ್ಯ**
**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ**
**ಪ್ರೊ. ಎಸ್. ಶ್ರೀಕಂಠಸ್ವಾಮಿ**
**ಪ್ರೊ. ಕೆ. ಆರ್. ನಾಗರತ್ನ**

ಪ್ರಕಾಶಕರು
**ಕುಲಸಚಿವರು**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು – 570 006

© ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮೊದಲ ಮುದ್ರಣ : 2012

ಪುಟಗಳು : xxxviii + 976 = 1014

**ಬೆಲೆ : ರೂ. ₹ 1000**

ಪ್ರತಿಗಳು : 1000

ಅಕ್ಷರ ಸಂಯೋಜನೆ ಹಾಗೂ ಮುದ್ರಣ
**ಮೆ|| ರಾಜಾ ಪ್ರಿಂಟರ್ಸ್**
**ನಂ. 59, 4ನೇ ಕ್ರಾಸ್, ಲಾಲ್‌ಬಾಗ್,**
**ಕೆ. ಎಸ್. ಗಾರ್ಡನ್, ಬೆಂಗಳೂರು–560 027**



Digitised by Bharatavani, CIIL

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ – 1

# ಶಿಕ್ಷಣ

ಪ್ರಧಾನ ಸಂಪಾದಕರು
ಡಾ. ಎನ್. ಲಕ್ಷ್ಮಿ

ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು – 570 006

2012



Digitised by Bharatavani, CIIL

Digitised by Bharatavani, CIIL

ಪ್ರಧಾನ ಸಂಪಾದಕರು

**ಡಾ. ಎನ್. ಲಕ್ಷ್ಮಿ**

ಸಲಹಾ ಸಮಿತಿ

**ಪ್ರೊ. ಸಿ. ಶೇಷಾದ್ರಿ**

**ಪ್ರೊ. ಎಂ. ಎಸ್. ತಳವಾರ್**

**ಪ್ರೊ. ಟಿ. ಪದ್ಮಿನಿ**

**ಡಾ. ಎ. ಶಶಿಕಲ**

ಸಂಪಾದಕ ಮಂಡಳಿ

**ಪ್ರೊ. ಬಿ. ಎನ್. ಮಂಜುನಾಥಯ್ಯ**

**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ**

**ಪ್ರೊ. ಎಸ್. ಶ್ರೀಕಂಠಸ್ವಾಮಿ**

**ಪ್ರೊ. ಕೆ. ಆರ್. ನಾಗರತ್ನ**

ಸಂಯೋಜಕರು

**ಡಾ. ಎ. ರಂಗಸ್ವಾಮಿ**

ಕನ್ನಡ ಭಾಷಾಭಿವೃದ್ಧಿ ಯೋಜನೆಗಳು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಆರ್ಥಿಕ ನೆರವು :**

**ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆಗೆ ಕರ್ನಾಟಕ ಸರ್ಕಾರ ನೀಡಿದ ಧನ ಸಹಾಯ**

ಯೋಜನಾ ಸಹಾಯಕರು

**ಶ್ರೀ ಎ. ಎಲ್. ಚಿದಾನಂದ**



Digitised by Bharatavani, CIIL

Digitised by Bharatavani, CIIL

# ಕುಲಪತಿಗಳ ಹಾರೈಕೆಯ ನುಡಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮೈಸೂರಿನಲ್ಲಿ ಜೂನ್ 1996 ರಲ್ಲಿ ಸ್ಥಾಪನೆ ಆದಾಗಿನಿಂದ "ಎಲ್ಲರಿಗೂ ಎಲ್ಲೆಡೆ ಶಿಕ್ಷಣ" ಎನ್ನುವ ತನ್ನ ಧ್ಯೇಯ ವಾಕ್ಯಕ್ಕೆ ಬದ್ಧವಾಗಿ ಕರ್ನಾಟಕದ ಮೂಲೆ ಮೂಲೆಗೆ ಅದರಲ್ಲೂ ಸುದೂರ ಗ್ರಾಮೀಣ ಪ್ರದೇಶಗಳಿಗೆ ಉನ್ನತ ಶಿಕ್ಷಣವನ್ನು ಪಡೆಯುವ ಅವಕಾಶವನ್ನು ತೆರೆದಿಟ್ಟಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪನೆ ಆದಾಗಿನಿಂದ ವರ್ಷದಿಂದ ವರ್ಷಕ್ಕೆ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತ ಕರ್ನಾಟಕದ ಆಚೆಗೂ ತನ್ನ ಅಧ್ಯಯನ ಕೇಂದ್ರಗಳ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ನೋಂದಣಿ ಮಾಡಿಕೊಳ್ಳುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ವರ್ಷ ವರ್ಷವೂ ಹೆಚ್ಚುತ್ತಿರುವುದು ಈ ವಿಶ್ವವಿದ್ಯಾನಿಲಯದ ಜನಪ್ರಿಯತೆ ಮತ್ತು ಪ್ರಸಿದ್ಧಿಯ ದ್ಯೋತಕವಾಗಿದೆ. ಅದರಲ್ಲಿ ಪ್ರಸ್ತುತ ವರ್ಷದಲ್ಲಿ 3.5 ಲಕ್ಷ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುವುದು ಸಂತಸದ ವಿಷಯ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಶೈಕ್ಷಣಿಕ ಕಾರ್ಯಕ್ರಮಗಳಲ್ಲದೆ ವಿಶ್ವವಿದ್ಯಾನಿಲಯಗಳ ಇತರ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆ, ಪ್ರಾಯೋಜನೆಗಳು, ಪುಸ್ತಕ ಪ್ರಕಟಣೆ, ಸಮ್ಮೇಳನ, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ನಡೆಸುತ್ತಾ ಬಂದಿದೆ.

ಭಾರತ ಸರ್ಕಾರ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನವನ್ನು ನೀಡಿದ ನಂತರ ಕರ್ನಾಟಕ ಘನ ಸರ್ಕಾರ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ವಿಶೇಷ ಅನುದಾನ ನೀಡುವ ಕಾರ್ಯವನ್ನು ಕೈಗೊಂಡಿದೆ. ಈ ದಿಶೆಯಲ್ಲಿ ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೂ 2 ಕೋಟಿ ರೂ.ಗಳ ಅನುದಾನವನ್ನು ಮಂಜೂರು ಮಾಡಿ 1 ಕೋಟಿ ರೂ.ಗಳ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿದೆ. ಈ ಅನುದಾನದ ಹಣವನ್ನು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಪ್ರೋತ್ಸಾಹಿಸುವಂತಹ ಪುಸ್ತಕ ಪ್ರಕಟಣೆ, ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ಸಂಶೋಧನ ಅಧ್ಯಯನಗಳು ಮುಂತಾದ ಕಾರ್ಯಗಳಿಗೆ ವಿನಿಯೋಗಿಸಬೇಕೆಂಬುದು ಘನ ಸರ್ಕಾರದ ಉದ್ದೇಶವಾಗಿದೆ.

ಈ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಈಗಾಗಲೇ ಕಾರ್ಯಪ್ರವೃತ್ತವಾಗಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಈ ದಿಶೆಯಲ್ಲಿ ವಿಶ್ವವಿದ್ಯಾನಿಲಯದ ಕೆಲವು ವಿಭಾಗಗಳು ಇಂತಹ ಪ್ರಾಯೋಜನೆಗಳಿಗೆ ಪ್ರಸ್ತಾವನೆ ಸಲ್ಲಿಸಿ ಅವುಗಳನ್ನು ಕಾರ್ಯಗತಗೊಳಿಸುವುದರಲ್ಲಿ ತೊಡಗಿವೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಕನ್ನಡ ಭಾಷೆ ಬೆಳವಣಿಗೆಗೆ ಸಂಬಂಧಿಸಿದಂತೆ 2 ಪ್ರಾಯೋಜನೆಗಳನ್ನು ಕೈಗೊಳ್ಳಲಾಗಿದೆ. "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ವನ್ನು ಕನ್ನಡದಲ್ಲಿ ಪ್ರಕಟಿಸುವ ಯೋಜನೆ ಮತ್ತು "ಬಿ.ಎಡ್. ವಿಶೇಷ ಶಿಕ್ಷಣದ ವಿದ್ಯಾರ್ಥಿಗಳಿಗೆ ಪಠ್ಯಗಳನ್ನು ಸಿ.ಡಿ. ಮೂಲಕ ಒದಗಿಸುವ ಯೋಜನೆ" ಈ ಎರಡು ಯೋಜನೆಗಳನ್ನು ವಿಭಾಗದ ಮುಖ್ಯಸ್ಥರಾದ ಡಾ. ಎನ್. ಲಕ್ಷ್ಮಿಯವರು ಕೈಗೊಂಡಿದ್ದಾರೆ. ಈಗಾಗಲೇ ಸಿ.ಡಿ. ಯೋಜನೆ ಮುಕ್ತಾಯವಾಗಿದ್ದು ಬಿಡುಗಡೆಗೆ ಸಿದ್ಧವಾಗಿದೆ ಎಂದು ಹೇಳಲು ಹರ್ಷಿತನಾಗಿದ್ದೇನೆ.

ಶಿಕ್ಷಣಶಾಸ್ತ್ರದ ವಿಷಯ ವಿಶ್ವಕೋಶವನ್ನು 1000 ಪುಟಗಳ 2 ಸಂಪುಟಗಳಲ್ಲಿ ಹೊರತರುವ ಯೋಜನೆ ವಿಶ್ವವಿದ್ಯಾನಿಲಯದ ಮಹತ್ವಪೂರ್ಣ ಸಾಧನೆಗಳಲ್ಲಿ ಒಂದಾಗಿದೆ. ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣಶಾಸ್ತ್ರದ ಬಿ.ಎಡ್. ಮತ್ತು ಎಂ.ಎಡ್. ಕಾರ್ಯಕ್ರಮಗಳ ವಿದ್ಯಾರ್ಥಿಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇಂಗ್ಲಿಷ್‌ನಲ್ಲಿ ಶಿಕ್ಷಣಶಾಸ್ತ್ರದ ಬಗ್ಗೆ ಸಾಕಷ್ಟು ಗ್ರಂಥಗಳಿವೆ. ಆದರೆ ಶಿಕ್ಷಣಶಾಸ್ತ್ರದ ಕನ್ನಡ



Digitised by Bharatavani, CIIL

ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಇನ್ನೂ ಲಭ್ಯವಿಲ್ಲ. ಸ್ನಾತಕೋತ್ತರ ಮತ್ತು ಸಂಶೋಧನ ಮಟ್ಟದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯವಾದ ಅಧ್ಯಯನ ಸಾಮಗ್ರಿ ಈಗ ಲಭ್ಯವಿರುವ ಪುಸ್ತಕಗಳಲ್ಲಿ ದೊರೆಯುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಈ ಕೊರತೆಯನ್ನು ನಿವಾರಿಸುವಲ್ಲಿ ಶಿಕ್ಷಣಶಾಸ್ತ್ರದ ವಿಷಯ ವಿಶ್ವಕೋಶ ಸಹಾಯ ನೀಡುವುದಲ್ಲದೆ ಶಿಕ್ಷಣದಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಒಂದು ಉತ್ತಮ ಆಕರ ಗ್ರಂಥವಾಗುತ್ತದೆ ಎನ್ನುವ ವಿಶ್ವಾಸ ನನಗಿದೆ.

ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ ನಿಘಂಟುವಿನ ರೂಪದಲ್ಲಿರುವ ಕೆಲವು ಗ್ರಂಥಗಳು ಈಗಾಗಲೇ ಪ್ರಕಟವಾಗಿವೆ. ಪ್ರೊ. ಎನ್. ಎಸ್. ವೀರಪ್ಪ ರವರ ಶಿಕ್ಷಣಶಾಸ್ತ್ರ ನಿಘಂಟು ಇದಕ್ಕೆ ಒಂದು ಉದಾಹರಣೆ. ಆದರೆ ಇಂತಹ ಗ್ರಂಥಗಳಲ್ಲಿ ಶಿಕ್ಷಣಶಾಸ್ತ್ರದ ಪರಿಕಲ್ಪನೆಗಳ ಸಂಕ್ಷಿಪ್ತ ವಿವರಣೆ ದೊರೆಯುತ್ತದೆಯೇ ಹೊರತು ಶಿಕ್ಷಣಶಾಸ್ತ್ರ ವಿಚಾರಗಳ ಬಗ್ಗೆ ವಿವರವಾದ ಲೇಖನಗಳು ನಮಗೆ ಸಿಗುವುದಿಲ್ಲ. ಈಗ ವಿಶ್ವವಿದ್ಯಾನಿಲಯ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಎರಡು ಸಂಪುಟಗಳು ಶಿಕ್ಷಣಶಾಸ್ತ್ರದ ಬಗ್ಗೆ ಸುಮಾರು 700 ಲೇಖನಗಳನ್ನು ಒಳಗೊಂಡಿದ್ದು ಶಿಕ್ಷಣಶಾಸ್ತ್ರದ ಎಲ್ಲ ಕ್ಷೇತ್ರಗಳಿಗೂ ಸಂಬಂಧಿಸಿದ ವಿಚಾರಗಳನ್ನು ಒಳಗೊಳ್ಳಲಿದೆ. ಇಂತಹ ಬೃಹತ್ ಕಾರ್ಯವು ಬಹುಶಃ ನಮ್ಮ ರಾಜ್ಯದಲ್ಲಿ ಇದೇ ಮೊದಲನೆಯದಾಗಿದೆ. ಇಂಗ್ಲಿಷ್‌ನ್ನು ಹೊರತುಪಡಿಸಿ ಭಾರತದ ಬೇರೆ ಭಾಷೆಗಳಲ್ಲಿ ಇಂತಹ ಪ್ರಯತ್ನ ನಡೆದಿರುವುದು ಇದುವರೆಗೆ ನನ್ನ ಗಮನಕ್ಕೆ ಬಂದಿಲ್ಲ. ಈ ದೃಷ್ಟಿಯಿಂದ 2 ಸಂಪುಟಗಳು ಶಿಕ್ಷಣ ಕ್ಷೇತ್ರಕ್ಕೆ ಕರ್ನಾಟಕ ರಾಜ್ಯ ಮುಕ್ತ ಮುಕ್ತವಿಶ್ವವಿದ್ಯಾನಿಲಯದ ಅಪೂರ್ವ ಕೊಡುಗೆಯಾಗುವುದರಲ್ಲಿ ಸಂದೇಹವಿಲ್ಲ. ವಿಶ್ವಕೋಶದ ಈ ಎರಡು ಸಂಪುಟಗಳಿಗೆ ಶಿಕ್ಷಣಶಾಸ್ತ್ರದ ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವ ಶಿಕ್ಷಣ ತಜ್ಞರು, ಬೇರೆ ಕ್ಷೇತ್ರಗಳಲ್ಲಿನ ಅನುಭವಿ ಪ್ರಾಧ್ಯಾಪಕರು, ಮನೋವೈದ್ಯರು, ಆಡಳಿತಗಾರರು, ಇತಿಹಾಸ ತಜ್ಞರು ಮುಂತಾದ ವಿವಿಧ ಕ್ಷೇತ್ರಗಳ ವಿದ್ವಾಂಸರಿಂದ ಲೇಖನಗಳನ್ನು ಬರೆಸಲಾಗಿದೆ. ಆದ್ದರಿಂದ ಈ ಸಂಪುಟಗಳಲ್ಲಿರುವ ಲೇಖನಗಳ ಗುಣಮಟ್ಟ ಉತ್ತಮವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ.

ಈ ಸಂಪುಟಗಳನ್ನು ಹೊರತರಲು ಉದಾರ ಧನ ಸಹಾಯ ನೀಡಿದ ಕರ್ನಾಟಕ ಘನ ಸರ್ಕಾರಕ್ಕೆ ಮೊದಲು ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಅಂದಿನ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕನ್ನಡಕ್ಕೆ ದೊರೆತ ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಸಂದರ್ಭವನ್ನು ವಿಶೇಷವಾಗಿ ಆಚರಿಸಲು ಎಲ್ಲ ವಿಶ್ವವಿದ್ಯಾನಿಲಯಗಳಿಗೂ ಎರಡೆರಡು ಕೋಟಿ ಅನುದಾನದಲ್ಲಿ ಮೊದಲ ಕಂತಾಗಿ ನೀಡಿದ ಒಂದು ಕೋಟಿ ಅನುದಾನದಲ್ಲಿ “ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ” ಯೋಜನೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಮ್ಮಿಕೊಂಡಿತು. ಅದನ್ನೇ ಹಾಲಿ ಮುಖ್ಯಮಂತ್ರಿಯವರಾದ ಶ್ರೀ. ಡಿ.ವಿ. ಸದಾನಂದ ಗೌಡ ಅವರು ಮುಂದುವರೆಸಿಕೊಂಡು ಬಂದಿರುತ್ತಾರೆ. ಇದಕ್ಕಾಗಿ ಕರ್ನಾಟಕ ಸರ್ಕಾರಕ್ಕೂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ಆಭಾರಿಯಾಗಿದ್ದೇನೆ ಹಾಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರು ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣದ ಬಗ್ಗೆ ವಿಶೇಷವಾದ ಪ್ರೀತಿಯುಳ್ಳವರು; ಅವುಗಳ ಅಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರು. ಈ ಸಂಪುಟಗಳು ಹೊರಬರುವಲ್ಲಿ ಅವರು ಹೆಚ್ಚಿನ ಕಾಳಜಿ ತೋರಿದ್ದಾರೆ. ಅವರನ್ನು ಕೂಡ ಈ ಸಂದರ್ಭದಲ್ಲಿ ಗೌರವದಿಂದ ನೆನೆಯುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿ ಶ್ರೀ ಬಸವರಾಜ ಅವರ ಸಹಕಾರವನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ. ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರು ಸ್ವತಃ ಲೇಖಕರೂ, ಭಾಷಾಭಿಮಾನಿಗಳೂ, ಸಂಸ್ಕೃತಪ್ರಿಯರೂ, ಶಿಕ್ಷಣ ತಜ್ಞರೂ ಆಗಿದ್ದು ಕನ್ನಡದ ಕೆಲಸಗಳಿಗೆ ಉದಾರವಾಗಿ ಸ್ಪಂದಿಸುತ್ತ ಬಂದಿದ್ದಾರೆ. ಈ ಯೋಜನೆಯ ಯಶಸ್ಸಿನ ಹಿಂದೆ ಅವರ ಪಾತ್ರ ಮಿಗಿಲಾಗಿದೆ. ಅವರ ಸಹಕಾರವನ್ನು ವಿಶೇಷವಾಗಿ ಸ್ಮರಿಸುತ್ತೇನೆ.



Digitised by Bharatavani, CIIL

ಪ್ರಸ್ತುತ ಯೋಜನೆಯು ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿದ ಧನ ಸಹಾಯದಿಂದ ಇದು ಮುನ್ನಡೆಯನ್ನು ಪಡೆಯಿತು. ಇದಕ್ಕೆ ಮೊದಲು ಚಾಲನೆ ಕೊಟ್ಟವರು ಹಿಂದಿನ ಕುಲಪತಿ ಪ್ರೊ. ಬಿ. ಎ. ವಿವೇಕ ರೈ ಅವರು. ಅವರ ಅವಧಿಯಲ್ಲಿ ಚಾಲನೆ ಪಡೆದ ಈ ಒಂದು ಬೃಹದ್ ಯೋಜನೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮೂಲಕವೇ ಆರಂಭಗೊಂಡಿತು. ಇದಕ್ಕಾಗಿ ಪ್ರೊ. ಬಿ. ಎ. ವಿವೇಕ ರೈ ಅವರನ್ನು ವಿಶೇಷವಾಗಿ ಅಭಿನಂದಿಸುತ್ತೇನೆ. ಇಂತಹ ಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಹಾಗೂ ಹೊಣೆಗಾರಿಕೆ ಬೀಳುವುದು ಸಂಪಾದಕ ಮಂಡಳಿಯ ಮೇಲೆ. ವಿಷಯಗಳ ಪಟ್ಟಿ ತಯಾರಿಕೆ, ಸೂಕ್ತ ಲೇಖಕರ ಆಯ್ಕೆ, ಬಂದ ಲೇಖನಗಳ ಸಂಪಾದನೆ ಹಾಗೂ ಪರಿಷ್ಕರಣೆ ಒಂದೇ, ಎರಡೇ! ಒಟ್ಟಿನಲ್ಲಿ ಇಡೀ ಕೃತಿ ಅಂದವಾಗಿ ಹೊರಬರಲು ಅಗತ್ಯವಾದ ಎಲ್ಲ ಕ್ರಮಗಳನ್ನು ಸಂಪಾದಕ ಮಂಡಳಿ ಕೈಗೊಳ್ಳಬೇಕಾಗುತ್ತದೆ. ಬೃಹದ್ ಸಂಪುಟಗಳ ಸಂಪಾದನ ಕಾರ್ಯದ ಕಷ್ಟ – ಸುಖ, ನೋವು – ನಲಿವುಗಳ ನಡುವೆ ಈ ಸಂಪುಟಗಳನ್ನು ಅಚ್ಚುಕಟ್ಟಾಗಿ ಹೊರ ತಂದಿದ್ದಾರೆ. ಮೊದಲ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಎನ್. ಲಕ್ಷ್ಮಿಯವರು, ಸಂಪಾದಕ ಮಂಡಳಿ ಸದಸ್ಯರಾದ ಪ್ರೊ. ಬಿ.ಎನ್. ಮಂಜುನಾಥಯ್ಯ, ಪ್ರೊ. ಸಿ.ಜಿ. ವೆಂಕಟರಮಣ ಶೆಟ್ಟಿ, ಪ್ರೊ. ಶ್ರೀಕಂಠಸ್ವಾಮಿ ಹಾಗೂ ಪ್ರೊ. ಕೆ.ಆರ್. ನಾಗರತ್ನ ಅವರು ಕಾರ್ಯ ನಿರ್ವಹಿಸಿದ್ದಾರೆ. ಈ ಸಂಪುಟದ ಸಂಪಾದನ ಕಾರ್ಯದ ಜೊತೆಗೆ, ಹೆಚ್ಚಿನ ಹೊರೆಹೊತ್ತು ಅವುಗಳ ಮೇಲ್ವಿಚಾರಣೆಯನ್ನೂ ಡಾ. ಎನ್. ಲಕ್ಷ್ಮಿ ಅವರು ನೋಡಿಕೊಂಡಿದ್ದಾರೆ. ಸಲಹಾ ಮಂಡಳಿ ಸದಸ್ಯರಾದ ಪ್ರೊ. ಸಿ. ಶೇಷಾದ್ರಿ, ಪ್ರಾದೇಶಿಕ ಕಾಲೇಜಿನ ನಿವೃತ್ತ ಪ್ರಾಂಶುಪಾಲರು, ಮೈಸೂರು, ಡಾ. ಎಂ. ಎಸ್. ತಳವಾರ್, ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾನಿಲಯ, ಡಾ. ಟಿ. ಪದ್ಮಿನಿ, ನಿವೃತ್ತ ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಡಾ. ಎ. ಶಶಿಕಲ, ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು, ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ವಿಶ್ವವಿದ್ಯಾನಿಲಯ ಇವರು ವಿಶ್ವಕೋಶ ರೂಪುಗೊಳ್ಳುವುದಕ್ಕೆ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ಇವರೆಲ್ಲರ ಶ್ರಮ, ದುಡಿಮೆ, ಆಸಕ್ತಿ ಕೇವಲ ಔಪಚಾರಿಕ ಮಾತುಗಳಿಂದ ಬೆಲೆ ಕಟ್ಟುವಂತಹದಲ್ಲ. ಇದು ಕೇವಲ ಮೂರು – ನಾಲ್ಕು ಜನರಿಂದ ಆಗುವಂತಹ ಕೆಲಸವಲ್ಲ ಎಂಬ ಅರಿವು ನನಗಿದೆ. ಅತಿ ಹೆಚ್ಚಿನ ಜವಾಬ್ದಾರಿ ಹಾಗೂ ಭಾರವಿದ್ದರೂ ಅವರ್‍ಯಾರೂ ಎಂದೂ ಅದನ್ನು ವ್ಯಕ್ತಪಡಿಸಲಿಲ್ಲ. ಕನ್ನಡ ನಾಡು, ನುಡಿ, ಸಂಸ್ಕೃತಿ, ಶಿಕ್ಷಣ, ಸಾಮಾಜಿಕ, ಆರ್ಥಿಕ, ಮನೋವೈಜ್ಞಾನಿಕ, ತಾತ್ವಿಕ, ಆಡಳಿತದ ಬಗೆಗಿನ ಪ್ರೀತಿ, ಅಭಿಮಾನ, ಅವರಿಂದ ಈ ಕೆಲಸವನ್ನು ಮಾಡಿಸಿದೆ. ಇದಕ್ಕಾಗಿ ವೈಯಕ್ತಿಕವಾಗಿ ಹಾಗೂ ವಿಶ್ವವಿದ್ಯಾನಿಲಯದ ಪರವಾಗಿ ಇವರೆಲ್ಲರಿಗೂ ಧನ್ಯವಾದಗಳೊಂದಿಗೆ ಅಭಿನಂದನೆಗಳನ್ನೂ ಸಲ್ಲಿಸುತ್ತೇನೆ. ಕರ್ನಾಟಕದ ಶಿಕ್ಷಣಶಾಸ್ತ್ರದ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಎಲ್ಲ ಶಿಕ್ಷಣಾಸಕ್ತರು ಸಂಶೋಧಕರು ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಪ್ರಯೋಜನವನ್ನು ಪಡೆಯಲಿ ಎಂದು ಹಾರೈಸುತ್ತೇನೆ.

**ಪ್ರೊ. ಕೆ.ಎಸ್. ರಂಗಪ್ಪ**
ಕುಲಪತಿ



Digitised by Bharatavani, CIIL

Digitised by Bharatavani, CIIL

# ಪ್ರಧಾನ ಸಂಪಾದಕರ ನುಡಿ

ಶಿಕ್ಷಣವು ಮಾನವ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಬಹು ಮುಖ್ಯವಾದುದು. ಮನುಷ್ಯನನ್ನು ಜೈವಿಕ ಸ್ಥಿತಿಯಿಂದ ದೈವಿಕ ಸ್ಥಿತಿಯ ಮಟ್ಟಕ್ಕೆ ಏರಲು ಅದು ಸಹಾಯ ಮಾಡುತ್ತದೆ. ಈ ದಿಶೆಯಲ್ಲಿ ವ್ಯಕ್ತಿಯ ವರ್ತನೆಯನ್ನು ರೂಪಿಸುತ್ತದೆ. ವ್ಯಕ್ತಿ ಒಂದು ಸಮಾಜದ ಸದಸ್ಯನಾಗಿ, ಒಂದು ದೇಶದ ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ಬೇಕಾದ ವರ್ತನ ವಿನ್ಯಾಸಗಳನ್ನು, ಜ್ಞಾನವನ್ನು, ಅಭಿರುಚಿ ಆಸಕ್ತಿಗಳನ್ನು, ಮನೋಭಾವ ಮತ್ತು ಸವಾಲುಗಳನ್ನು, ಬೌದ್ಧಿಕ, ಸತ್ವಾತ್ಮಕ ಕೌಶಲಗಳನ್ನು ವಿಕಾಸಗೊಳಿಸುವುದೇ ಶಿಕ್ಷಣ. ಆದ್ದರಿಂದಲೇ ಶಿಕ್ಷಣವು ಕೇವಲ ಮಾಹಿತಿ ತಿಳಿಸುವುದಾಗಿರದೆ, ಈ ಎಲ್ಲಾ ಅಂಶಗಳೂ ವ್ಯಕ್ತಿತ್ವದಲ್ಲಿ ವಿಕಾಸಗೊಳ್ಳುವಂತೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಯಾವುದೇ ಸಮಾಜವು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತದೆ. ನಾಗರಿಕತೆಯ ಆರಂಭದಲ್ಲಿ ಶಿಕ್ಷಣವನ್ನು ನೀಡುವುದು ತಂದೆ–ತಾಯಿಯ ಕರ್ತವ್ಯವಾಗಿತ್ತು. ನಂತರ ಸಮಾಜವು ಈ ಜವಾಬ್ದಾರಿಯನ್ನು ವಹಿಸಿಕೊಂಡು 'ಶಾಲೆ' ಎಂಬ ಸಂಸ್ಥೆಯನ್ನು ಇದಕ್ಕಾಗಿ ರೂಪಿಸಿತು. ಮಾನವಸಮಾಜದ ಅನುಭವ, ಜ್ಞಾನ ವಿಸ್ತಾರಗೊಂಡಂತೆ ಶಿಕ್ಷಣದ ಪರಿಕಲ್ಪನೆ, ವ್ಯಾಖ್ಯಾನಗಳೂ ವಿಸ್ತಾರಗೊಳ್ಳುತ್ತ ಹೋದವು. ಶಿಕ್ಷಣ ಒಂದು ಜ್ಞಾನ ಶಾಖೆಯಾಗಿ ರೂಪುಗೊಂಡು 'ಶಿಕ್ಷಣ ಶಾಸ್ತ್ರ'ವಾಗಿ ಪ್ರತ್ಯೇಕ ಅಸ್ತಿತ್ವ ಪಡೆಯಿತು. ಈ ಶಿಕ್ಷಣಶಾಸ್ತ್ರದಲ್ಲಿ ತತ್ವಗಳು, ಸಿದ್ಧಾಂತಗಳು ಹೆಚ್ಚುತ್ತಾ ಹೋದಂತೆ, ಅವುಗಳಿಗೆ ಸಂಬಂಧಿಸಿದ ಗ್ರಂಥಗಳು ಪ್ರಕಟಗೊಳ್ಳತೊಡಗಿದವು. ಶಿಕ್ಷಣಶಾಸ್ತ್ರದ ವ್ಯವಸ್ಥಿತ ಅಧ್ಯಯನಕ್ಕೆ ಸಂಬಂಧಿತ ಲೇಖನಗಳ, ಗ್ರಂಥಗಳ, ಆಕರ ಗ್ರಂಥಗಳ, ನಿಘಂಟುಗಳ ಅವಶ್ಯಕತೆ ಹೆಚ್ಚುತ್ತಾ ಹೋದಂತೆ ಅಂತಹ ಲೇಖನಗಳೂ, ಗ್ರಂಥಗಳೂ ಪ್ರಕಟಗೊಳ್ಳತೊಡಗಿದವು. ಅಂತಹ ಅತಿ ಪ್ರಮುಖವಾದ ಗ್ರಂಥಗಳಲ್ಲಿ **'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'** ಒಂದಾಗಿದೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ ಮೇಲೆ ಕರ್ನಾಟಕ ಘನ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಉದಾರವಾಗಿ ಧನ ಸಹಾಯ ನೀಡಿದರು. ಈ ಅನುದಾನದಿಂದ ಕನ್ನಡ ಭಾಷೆಯ ಬೆಳವಣಿಗೆಗೆ ವಿವಿಧ ರೀತಿಯ ಪ್ರಾಯೋಜನೆಗಳನ್ನು ವಿಶ್ವವಿದ್ಯಾನಿಲಯ ಕೈಗೊಳ್ಳಬೇಕೆಂಬುದು ಘನ ಸರ್ಕಾರದ ಆಶಯ. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯಕ್ಕೂ ಎರಡು ಕೋಟಿ ರೂ.ಗಳ ಅನುದಾನವನ್ನು ಘೋಷಿಸಿತು. ಆಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸನ್ಮಾನ್ಯ ಪ್ರೊ. ಬಿ.ಎ. ವಿವೇಕ ರೈರವರು ಅಧಿಕಾರದಲ್ಲಿದ್ದರು. ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಜ್ಞಾನಾಕಾಂಕ್ಷಿ ಸಾರ್ವಜನಿಕರಿಗೆ ಉಪಯೋಗವಾಗುವ ಪ್ರಾಯೋಜನೆಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳು ಎಲ್ಲಾ ವಿಭಾಗದವರಿಗೂ ಸೂಚನೆ ನೀಡಿದರು. ಈ ಸೂಚನೆಯ ಮೇರೆಗೆ ನಾವು ಶಿಕ್ಷಣಶಾಸ್ತ್ರ ವಿಭಾಗದವರು ಮತ್ತು ಕೆಲವು ಅನುಭವಿ ನಿವೃತ್ತ ಅಧ್ಯಾಪಕರೊಂದಿಗೆ 2009ರಲ್ಲಿ ಸಭೆ ನಡೆಸಿ, ಯಾವ ರೀತಿಯ ಪ್ರಾಯೋಜನೆಗಳನ್ನು ಕೈಗೊಳ್ಳಬಹುದು ಎನ್ನುವ ಬಗ್ಗೆ ಚರ್ಚೆ ನಡೆಸಿ, ಎರಡು ಪ್ರಾಯೋಜನೆಗಳನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿದೆವು. ಇವುಗಳಲ್ಲಿ ಒಂದು ಪ್ರಾಯೋಜನೆ 'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'ವನ್ನು ಸಮಗ್ರ ಮಾಹಿತಿಗಳನ್ನೊಳಗೊಂಡಂತೆ ಬೃಹತ್ತಾದ ಎರಡು ಸಂಪುಟಗಳಲ್ಲಿ ಸಿದ್ಧಪಡಿಸುವುದಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಾ ಬಂದಿದೆ. ಈ ಪ್ರವೃತ್ತಿ ನಮ್ಮ ವಿಭಾಗದ ಬಿ.ಎ., ಎಂ.ಎ. ಮತ್ತು ಬಿ.ಎಡ್. ಹಾಗೂ ವಿಶೇಷ ಶಿಕ್ಷಣ ಕಾರ್ಯಕ್ರಮಗಳಿಗೂ ಅನ್ವಯಿಸುತ್ತದೆ. ಉನ್ನತ ಶಿಕ್ಷಣದ ಮಟ್ಟದಲ್ಲಿ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ರಚಿತವಾದ ಗ್ರಂಥಗಳ, ವರದಿಗಳ ವಿವಿಧ ರೀತಿಯ ಆಕರಗ್ರಂಥಗಳ ಅವಶ್ಯಕತೆಯಿದೆ. ಕನ್ನಡದಲ್ಲಿ ಇದುವರೆಗೆ ಶಿಕ್ಷಣಶಾಸ್ತ್ರದ ಬಗ್ಗೆ ಅನೇಕ ಗ್ರಂಥಗಳು ಲಭ್ಯವಿದ್ದರೂ ಇವು ಹೆಚ್ಚಾಗಿ ಬಿ.ಎಡ್. ಮತ್ತು ಡಿ.ಎಡ್.



Digitised by Bharatavani, CIIL

ಕಾರ್ಯಕ್ರಮಗಳಿಗೆ ಸಂಬಂಧಿಸಿವೆ. ಎಂ.ಎಡ್. ಮತ್ತು ಸಂಶೋಧನಾ ಮಟ್ಟದ ವಿದ್ಯಾರ್ಥಿಗಳಿಗೆ ಬೇಕಾಗುವ ಪ್ರಬುದ್ಧಮಟ್ಟದ ವಿಷಯಗಳನ್ನು ಒಳಗೊಂಡ ಗ್ರಂಥಗಳ ಸಂಖ್ಯೆ ತೃಪ್ತಿಕರವಾಗಿಲ್ಲ. ಈ ದಿಶೆಯಲ್ಲಿ ಇಂಗ್ಲಿಷ್‌ನಿಂದ ಅನುವಾದಿತವಾದ ಕೆಲವು ಗ್ರಂಥಗಳು, ಡಾ. ಎನ್. ಎಸ್. ವೀರಪ್ಪನವರ ಶಿಕ್ಷಣಶಾಸ್ತ್ರ ನಿಘಂಟು ಮುಂತಾದವು ಲಭ್ಯವಿದ್ದರೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಒಂದೇ ಗ್ರಂಥದಲ್ಲಿ ಶಿಕ್ಷಣಶಾಸ್ತ್ರದ ವಿವಿಧ ಶಾಖೆಗಳಿಗೆ ಸಂಬಂಧಿಸಿದಂತೆ ಉಪಯುಕ್ತ ಜ್ಞಾನವನ್ನು ಒದಗಿಸುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಅಗತ್ಯವಿದೆ ಎಂದು ತೀರ್ಮಾನಿಸಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು.

ಇದುವರೆಗೆ ಕನ್ನಡದಲ್ಲಿ ಶಿಕ್ಷಣಶಾಸ್ತ್ರದ ಬಗ್ಗೆ ವಿಷಯ ವಿಶ್ವಕೋಶ ಮಾದರಿಯ ಗ್ರಂಥಗಳು ಪ್ರಕಟವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಶಿಕ್ಷಣಶಾಸ್ತ್ರದ ವಿಷಯ ವಿಶ್ವಕೋಶವನ್ನು ಸಿದ್ಧಪಡಿಸುವುದು ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಕಾರ್ಯವಾಗುವುದಲ್ಲದೆ, ಅದು ನಮ್ಮ ವಿಶ್ವವಿದ್ಯಾನಿಲಯವು ಸಮಾಜಕ್ಕೆ ನೀಡಿದ ಒಂದು ಉತ್ತಮ ಕೊಡುಗೆಯಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇಂತಹ ಅವಕಾಶವನ್ನು ದೊರಕಿಸಿಕೊಟ್ಟುದಕ್ಕಾಗಿ ಅಂದಿನ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರನ್ನು ವಿಶೇಷವಾಗಿ ಅಭಿನಂದಿಸುತ್ತೇನೆ.

ಪ್ರಸ್ತುತ ಕುಲಪತಿಗಳಾಗಿರುವ ಪ್ರೊ. ಕೆ.ಎಸ್. ರಂಗಪ್ಪ ಅವರು ಈ ಯೋಜನಾ ಕಾರ್ಯದಲ್ಲಿ ನಮಗೆ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡುತ್ತ ಬಂದಿದ್ದಾರೆ. ಅವರು ಎಂತಹುದೇ ಪರಿಸ್ಥಿತಿ ಎದುರಾದಾಗಲೂ ಧೈರ್ಯ ತುಂಬಿ, ಮುಂದೆ ಅಡಿಯಿಡಲು ಉತ್ಸಾಹ ತುಂಬಿದ್ದಾರೆ. ಹಣಕಾಸಿನ ನೆರವು ನೀಡುವಲ್ಲಿ ಅಥವಾ ಇತರೆ ಸೌಲಭ್ಯಗಳನ್ನು ಒದಗಿಸುವಲ್ಲಿ ಔದಾರ್ಯ ತೋರಿದ್ದಾರೆ. ಯಾವುದೇ ಸಭೆಯಲ್ಲಿ ಭಾಗವಹಿಸಿದಾಗಲೂ ಅವರು ತಮ್ಮ ಮಾತಿನ ಮಧ್ಯೆ ಅತ್ಯಂತ ಹೆಮ್ಮೆಯಿಂದ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ ಪ್ರಕಟಣೆಯ ಬಗ್ಗೆ ಮಾತನಾಡುತ್ತಾ ಬಂದಿದ್ದಾರೆ. ಪ್ರೊ. ಕೆ.ಎಸ್. ರಂಗಪ್ಪ ಅವರು ವಿಜ್ಞಾನಕ್ಷೇತ್ರದ ಹಿನ್ನೆಲೆಯುಳ್ಳವರಾದರೂ ಶಿಕ್ಷಣಶಾಸ್ತ್ರದ ಬಗ್ಗೆ ಆಸಕ್ತಿ, ಸಾಮಾಜಿಕ ಸಂಸ್ಕೃತಿಯ ಬಗ್ಗೆ ಅವರಿಗಿರುವ ಕಾಳಜಿ ಅವರ ಸಂಸ್ಕೃತಿ ಪ್ರೀತಿಗೆ ಸಾಕ್ಷಿಯಾಗಿದೆ. ಅನುದಾನದ ಹಣವನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳುವ ದಿಶೆಯಲ್ಲಿ ಅವರ ಸಲಹೆ ಮತ್ತು ಮಾರ್ಗದರ್ಶನ ಮನನೀಯವಾದದ್ದು. ಶೀಘ್ರವೂ, ಖಚಿತವೂ, ದಕ್ಷವೂ ಪಾರದರ್ಶಕವೂ ಆದ ಅವರ ಆಡಳಿತಾತ್ಮಕ ನಿರ್ಧಾರಗಳು ಈ ಯೋಜನೆಯ ಅನುಷ್ಠಾನಕ್ಕೆ ಸ್ಫೂರ್ತಿದಾಯಕವಾಗಿವೆ. ಈ ಎಲ್ಲ ಕಾರಣಗಳಿಗಾಗಿ ಮಾನ್ಯ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಂದಿನ ಕುಲಸಚಿವರಾದ ಶ್ರೀ ಕೆ.ಆರ್. ಜಯಪ್ರಕಾಶ್‌ರಾವ್‌ರವರು ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವುದಲ್ಲದೆ, ಕನ್ನಡ ಭಾಷಾಭಿವೃದ್ಧಿ ಯೋಜನೆಯ 'ಪ್ರಗತಿ ಪರಿಶೀಲನಾ ಸಭೆ'ಗಳಲ್ಲಿ ಹಾಜರಿದ್ದು ಸೂಕ್ತ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ವಿಶ್ವವಿದ್ಯಾನಿಲಯದ ಪ್ರಸ್ತುತ ಕುಲಸಚಿವರಾದ ಪ್ರೊ. ಬಿ.ಎಸ್. ವಿಶ್ವನಾಥ್‌ರವರು ಕೂಡ ಆಡಳಿತಾತ್ಮಕವಾಗಿ ಎಲ್ಲಾ ರೀತಿಯ ಸಹಕಾರ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಈ ಯೋಜನೆ ಪೂರ್ಣಗೊಳ್ಳಲು ಧನಾತ್ಮಕ ಸಹಕಾರ ನೀಡಿರುವ ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಆಗಿನ ಶೈಕ್ಷಣಿಕ ಡೀನ್‌ರಾದ ಪ್ರೊ. ಜಗದೀಶ, ಪ್ರಸ್ತುತ ಶೈಕ್ಷಣಿಕ ಡೀನ್‌ರಾದ ಪ್ರೊ. ಎಸ್.ಎನ್. ವಿಕ್ರಂ ರಾಜೇ ಅರಸ್‌ರವರಿಗೂ; ಅಂದಿನ ಹಣಕಾಸು ಅಧಿಕಾರಿಯಾದ ಶ್ರೀಮತಿ. ಜಿ. ನಾಗಮಣಿ, ಪ್ರಸ್ತುತ ಹಣಕಾಸು ಅಧಿಕಾರಿಯಾಗಿರುವ ಶ್ರೀಮತಿ. ಪ್ರೊ. ಜಹಾನಾರ ಬೇಗಂರವರಿಗೂ ಹಾಗೂ ಕುಲಪತಿಗಳ ಆಪ್ತಕಾರ್ಯದರ್ಶಿಯವರಾದ ಪ್ರೊ. ಬಿ.ಕೆ. ಜಗದೀಶ ಅವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ ಈ ರೂಪದಲ್ಲಿ ಹೊರಬರಲು ಕಾರಣರಾದವರು ಹಲವು ಮಹನೀಯರು. ಈ ಯೋಜನೆಯ ಚಾಲನೆಗೆ ಮುಖ್ಯ ಕಾರಣರಾದ ಕರ್ನಾಟಕದ ಅಂದಿನ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೂ ಹಾಗೂ ಈ ಯೋಜನೆಯ ಮುನ್ನಡೆಗೆ ಕಾಳಜಿಪೂರ್ಣ ಪ್ರೋತ್ಸಾಹ ನೀಡುತ್ತಿರುವ ಹಾಲಿ



Digitised by Bharatavani, CIIL

ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ವಿ. ಸದಾನಂದಗೌಡ ಅವರಿಗೂ ವಿಶೇಷ ಧನ್ಯವಾದಗಳು. ಒಟ್ಟಾರೆಯಾಗಿ ಕರ್ನಾಟಕ ಸರ್ಕಾರಕ್ಕೂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ವಿಶೇಷವಾಗಿ ಆಭಾರಿಯಾಗಿದ್ದೇನೆ ಹಾಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರು ಕನ್ನಡ ನಾಡು, ನುಡಿ, ಸಾಹಿತ್ಯಗಳ ಬಗ್ಗೆ ವಿಶೇಷವಾದ ಪ್ರೀತಿಯುಳ್ಳವರು; ಅವುಗಳ ಅಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರು. ಈ ವಿಶ್ವಕೋಶ ಹೊರಬರುವಲ್ಲಿ ಅವರು ಹೆಚ್ಚಿನ ಕಾಳಜಿ ತೋರಿದ್ದಾರೆ. ಅವರನ್ನು ಕೂಡ ಈ ಸಂದರ್ಭದಲ್ಲಿ ಗೌರವದಿಂದ ನೆನೆಯುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಶ್ರೀ ಬಸವರಾಜ್ ಅವರಿಗೂ ನನ್ನ ಕೃತಜ್ಞತೆಗಳು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರು ಸ್ವತಃ ಲೇಖಕರೂ, ಭಾಷಾಭಿಮಾನಿಗಳೂ, ಸಂಸ್ಕೃತಿಪ್ರಿಯರೂ ಆಗಿದ್ದು ಕನ್ನಡದ ಕೆಲಸಗಳಿಗೆ ಉದಾರವಾಗಿ ಸ್ಪಂದಿಸುತ್ತ ಬಂದಿದ್ದಾರೆ. ಈ ಯೋಜನೆಯ ಯಶಸ್ಸಿನ ಹಿಂದೆ ಅವರ ಪಾತ್ರ ಮಿಗಿಲಾಗಿದೆ. ಅವರ ಸಹಕಾರವನ್ನು ವಿಶೇಷವಾಗಿ ಸ್ಮರಿಸುತ್ತೇನೆ.

ಇಂತಹ ಬೃಹತ್ ಕಾರ್ಯ ಸುಲಲಿತವಾಗಿ ಸಾಗಲು ಸಲಹೆ ಅತಿ ಮುಖ್ಯವಾದದು. ಪ್ರಸ್ತುತ ವಿಶ್ವಕೋಶಕ್ಕೆ ಬೇಕಾದ ಅತಿ ಅಮೂಲ್ಯ ಸೂಕ್ತ ಸಲಹೆ, ಸೂಚನೆಗಳನ್ನು ಈ ವಿಶ್ವಕೋಶದ 'ಸಲಹಾ ಸಮಿತಿ' ಸದಸ್ಯರುಗಳು ನೀಡಿದ್ದಾರೆ. ಎರಡರಿಂದ ಮೂರು ತಿಂಗಳಿಗೊಮ್ಮೆ ಸಲಹಾ ಸಮಿತಿ ಸಭೆಯನ್ನು ಕರೆದು ಸದಸ್ಯರು ನೀಡಿದ ಸಲಹೆ ಸೂಚನೆ, ಮಾರ್ಗದರ್ಶನ, ಅಭಿಪ್ರಾಯಗಳನ್ನು ಸಂಗ್ರಹಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಸಲಹಾ ಸಮಿತಿ ಸದಸ್ಯರಾದ ಮೈಸೂರಿನ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯದ ಶಿಕ್ಷಣಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಸಿ. ಶೇಷಾದ್ರಿ, ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಎಸ್. ತಳವಾರ್, ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಟಿ. ಪದ್ಮಿನಿ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಸೇಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಎ. ಶಶಿಕಲ ಇವರೆಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇಂತಹ ಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಹಾಗೂ ಹೊಣೆಗಾರಿಕೆ ಬೀಳುವುದು 'ಸಂಪಾದಕ ಮಂಡಳಿ'ಯ ಮೇಲೆ. ವಿಷಯಗಳ ಪಟ್ಟಿ ತಯಾರಿಕೆ, ಸೂಕ್ತ ಲೇಖಕರ ಆಯ್ಕೆ, ಬಂದ ಲೇಖನಗಳ ಪರಿಷ್ಕರಣೆ ಮುಂತಾಗಿ ಒಟ್ಟಿನಲ್ಲಿ ಇಡೀ ವಿಶ್ವಕೋಶ ವಿದ್ವತ್ಪೂರ್ಣವಾಗಿಯೂ, ಸರಳವಾಗಿಯೂ ಇರುವಂತೆ ಅಗತ್ಯವಾದ ಎಲ್ಲ ಕ್ರಮಗಳನ್ನು ಸಂಪಾದಕ ಮಂಡಳಿ ಕೈಗೊಳ್ಳಬೇಕಾಗುತ್ತದೆ. ವಿಶ್ವಕೋಶದ ಲೇಖನಗಳನ್ನು ಪರಿಷ್ಕರಿಸುವ ಸಂಪಾದನ ಕಾರ್ಯ ಬಹಳ ಮುಖ್ಯವಾದ, ಜವಾಬ್ದಾರಿಯುತವಾದ, ಕಷ್ಟಕರವಾದ ಕೆಲಸ. ಸಂಪಾದಕ ಮಂಡಳಿಯಲ್ಲಿ ನಾಲ್ಕು ಸದಸ್ಯರಿದ್ದು, ಇವರು ದೀರ್ಘ ಅನುಭವ ಪಡೆದ, ಪ್ರಭಾವಿ ಅಧ್ಯಾಪಕರೆಂದು ಹೆಸರು ಪಡೆದು ಶಿಕ್ಷಣ ತಜ್ಞರಾಗಿರುವುದು ನಮ್ಮ ಸೌಭಾಗ್ಯ. ಇವರು ಅತ್ಯಂತ ಆಸ್ಥೆಯಿಂದ, ಕಾಳಜಿಯಿಂದ ಲೇಖನಗಳ ಪರಿಷ್ಕಾರ ಮಾಡಿದ್ದಾರೆ. ಇದರಿಂದಾಗಿ ಈ ಸಂಪುಟದಲ್ಲಿ ಲೇಖನಗಳ ಗುಣಮಟ್ಟ ವೃದ್ಧಿಸಿದೆ ಎಂಬ ವಿಶ್ವಾಸ ನನಗಿದೆ. ಇವರೆಲ್ಲರ ಶ್ರಮ, ದುಡಿಮೆ, ಆಸಕ್ತಿ ಕೇವಲ ಔಪಚಾರಿಕ ಮಾತುಗಳಿಂದ ಬೆಲೆ ಕಟ್ಟುವಂತಹುದಲ್ಲ. ಆದ್ದರಿಂದ ಸಂಪಾದಕ ಮಂಡಳಿ ಸದಸ್ಯರಾದ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಬಿ.ಎನ್. ಮಂಜುನಾಥಯ್ಯ, ಮೈಸೂರಿನ ಕಾಗಿನೆಲೆ ಬಿ.ಎಡ್. ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಸಿ.ಜಿ. ವೆಂಕಟರಮಣ ಶೆಟ್ಟಿ, ಬೆಂಗಳೂರಿನ ಆರ್.ವಿ. ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ, ಪ್ರಸ್ತುತ ಕ್ರೈಸ್ಟ್ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಸಲಹೆಗಾರರಾಗಿರುವ ಪ್ರೊ. ಎಸ್. ಶ್ರೀಕಂಠಸ್ವಾಮಿ ಮತ್ತು ಮೈಸೂರಿನ ಸೇಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಕೆ.ಆರ್. ನಾಗರತ್ನ ಇವರುಗಳಿಗೆ ನಾನು ಹೃದಯ ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನಮ್ಮ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಈ ಯೋಜನೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿದ್ದಾರೆ. ಅಷ್ಟೇ ಸಹಕಾರವನ್ನೂ ನೀಡಿದ್ದಾರೆ. ಇಡೀ ಆಡಳಿತ ಸಿಬ್ಬಂದಿಯವರು ವಿವಿಧ ರೀತಿಯಲ್ಲಿ ನೆರವಾಗಿದ್ದಾರೆ.



Digitised by Bharatavani, CIIL

ಸರ್ಕಾರಿ ಕಛೇರಿಗಳು, ಪತ್ರಿಕಾಮಾಧ್ಯಮದ ಮಿತ್ರರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಈ ಕಾರ್ಯದಲ್ಲಿ ನೆರವಾಗಿದ್ದಾರೆ. ಅವರೆಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ವಿಶ್ವಕೋಶವು ಶಿಕ್ಷಣಶಾಸ್ತ್ರದ ಎಲ್ಲಾ ಶಾಖೆಗಳ ಜ್ಞಾನಾಂಶಗಳು, ಪರಿಕಲ್ಪನೆಗಳು, ಮತ್ತು ಸಾಮಾನ್ಯೀಕರಣಗಳನ್ನು ಒಳಗೊಂಡಂತೆ ಸಾಕಷ್ಟು ವಿಸ್ತೃತ ಮಾಹಿತಿಯನ್ನು ಒಳಗೊಂಡಿರಬೇಕೆಂದು ಆಶಿಸಿ, ಕರ್ನಾಟಕದಾದ್ಯಂತ ಅನುಭವಿ ಅಧ್ಯಾಪಕ ಶಿಕ್ಷಕರು ಮತ್ತು ಅಧ್ಯಾಪಕರನ್ನು ಹಾಗೂ ಶಿಕ್ಷಣಶಾಸ್ತ್ರಕ್ಕೆ ಸಂಬಂಧಪಟ್ಟ ಮನೋವಿಜ್ಞಾನ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ವಿಷಯಗಳಲ್ಲಿಯೂ ಪರಿಣಿತರನ್ನು ಗುರುತಿಸಿ ಅವರಿಗೆ ಲೇಖನ ಬರೆಯಲು ಕೋರಿ, ಅವರನ್ನು ಆಹ್ವಾನಿಸಿ ವಿಶ್ವಕೋಶಕ್ಕೆ ಲೇಖನ ಬರೆಯುವ ಸಂಬಂಧ ಒಂದು ಕಾರ್ಯಾಗಾರವನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 25 ನವೆಂಬರ್ 2009ರಂದು ಏರ್ಪಡಿಸಲಾಯಿತು. ಈ ಕಾರ್ಯಾಗಾರದಲ್ಲಿ ಅನುಭವಿ ಲೇಖಕರಾದ ಪ್ರೊ. ಲಿಂಗದೇವರು ಹಳೇಮನೆ ಅವರು ವಿಶ್ವಕೋಶದ ಲೇಖನಗಳ ಸ್ವರೂಪ, ಲಕ್ಷಣ, ವ್ಯಾಪ್ತಿ ಮೊದಲಾದವುಗಳ ಬಗ್ಗೆ ಸವಿವರವಾಗಿ ತಿಳಿಸಿದರು. ದಿವಂಗತ ಲಿಂಗದೇವರು ಹಳೇಮನೆ ಅವರನ್ನು ನಾನು ವಿಶೇಷವಾಗಿ ಸ್ಮರಿಸುತ್ತೇನೆ.

ಒಂದು ವಿಶ್ವಕೋಶದ ರಚನೆಯಲ್ಲಿ ಅದಕ್ಕೆ ಲೇಖನಗಳನ್ನು ಬರೆಯುವ ಲೇಖಕರ ಪಾತ್ರ ಅತೀ ಮುಖ್ಯವಾದದ್ದು. ಈ ಮೊದಲನೆಯ ಸಂಪುಟಕ್ಕೆ ಮತ್ತು ಮುಂದೆ ಬರಲಿರುವ ಎರಡನೆಯ ಸಂಪುಟಕ್ಕೆ ರಾಜ್ಯದಾದ್ಯಂತ ಇರುವ ತಜ್ಞ ಲೇಖಕರು ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ಈ ಲೇಖಕ ವೃಂದದಲ್ಲಿ ಶಿಕ್ಷಣ ಕ್ಷೇತ್ರದವರೇ ಆದ ಬಹುತೇಕ ಶಿಕ್ಷಣತಜ್ಞರು ಸೇರಿದ್ದಾರೆ. ಅಲ್ಲದೇ ಮನೋವಿಜ್ಞಾನ, ತತ್ತ್ವಶಾಸ್ತ್ರ, ಪರಿಸರ ವಿಜ್ಞಾನ, ಪಶು ವಿಜ್ಞಾನ, ವೈದ್ಯಕೀಯ, ಸಾಮಾಜಿಕ ಮನೋವಿಜ್ಞಾನ, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರದಂತಹ ಶಿಕ್ಷಣಕ್ಕೆ ಸಂಬಂಧವಿರುವ ಜ್ಞಾನಕ್ಷೇತ್ರಗಳಲ್ಲಿನ ಲೇಖಕರೂ ಸೇರಿದ್ದಾರೆ. ಇವರೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣತಿಯನ್ನು ಹೊಂದಿದ ತಜ್ಞರಾಗಿದ್ದು ದೀರ್ಘಕಾಲ ಅನುಭವ ಪಡೆದವರಾಗಿದ್ದಾರೆ. ಎಲ್ಲರೂ ಉತ್ತಮ ಗುಣಮಟ್ಟದ ಲೇಖನಗಳನ್ನು ಒದಗಿಸಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ನಾನು ಕೃತಜ್ಞಳಾಗಿದ್ದೇನೆ.

ನಮ್ಮ ವಿಭಾಗದ ಅಧ್ಯಾಪಕರು ಈ ಯೋಜನೆಯ ಯಶಸ್ಸಿಗೆ ಸಲಹೆ–ಸಹಕಾರ–ಪ್ರೋತ್ಸಾಹವನ್ನು ನಿರಂತರವಾಗಿ ನೀಡುತ್ತಾ ಬಂದಿದ್ದಾರೆ. ಇವರೆಲ್ಲರಿಗೂ ನನ್ನ ಪ್ರೀತಿಯ ಧನ್ಯವಾದಗಳು. ಹಾಗೆಯೇ ನಮ್ಮ ವಿಶ್ವವಿದ್ಯಾನಿಲಯದ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗಳ ಸಂಯೋಜಕರಾದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎ. ರಂಗಸ್ವಾಮಿ ಅವರಿಗೂ ಹಾಗೂ ಆತ್ಮೀಯರಾದ ಕನ್ನಡ ಪ್ರಾಧ್ಯಾಪಕರಾದ ಡಾ. ಡಿ.ಟಿ. ಬಸವರಾಜ್ ಅವರಿಗೂ ವಿಶೇಷ ಕೃತಜ್ಞತೆಗಳು. ಈ ಪ್ರಾಯೋಜನೆಯ 'ಯೋಜನಾ ಸಹಾಯಕ'ರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎ.ಎಲ್. ಚಿದಾನಂದರವರು ತಮ್ಮ ಕೆಲಸವನ್ನು ಬಹಳ ಶ್ರದ್ಧೆಯಿಂದ ವ್ಯವಸ್ಥಿತ ರೀತಿಯಲ್ಲಿ ಮಾಡಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಪ್ರಸ್ತುತ ವಿಶ್ವಕೋಶಕ್ಕೆ ಅಗತ್ಯವಾಗಿ ಬೇಕಾದಂತಹ ಛಾಯಾಚಿತ್ರಗಳು ಹಾಗೂ ಗ್ರಾಫಿಕ್ಸ್‌ಗಳನ್ನು ಶ್ರೀ ಬಿ.ಎಂ. ಚಂದ್ರಶೇಖರ್‌ರವರು ಒದಗಿಸಿಕೊಟ್ಟಿದ್ದಾರೆ ಜೊತೆಗೆ ಕೆಲವು ಲೇಖನಗಳ ಅನುವಾದವನ್ನು ತೃಪ್ತಿಕರವಾಗಿ ಮಾಡಿಕೊಟ್ಟಿದ್ದಾರೆ. ಇವರಿಗೂ ಸಹ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಸಂಪುಟದ ಕರಡು ಪರಿಶೀಲನಾ ಕಾರ್ಯವನ್ನು ಶ್ರೀಮತಿ ಕಮಲಮ್ಮನವರು ನಿರ್ವಹಿಸಿರುತ್ತಾರೆ. ಇದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ನಮ್ಮ ವಿಭಾಗದಲ್ಲಿ ಸಂಶೋಧನೆ ನಡೆಸುತ್ತಿರುವ ಸಂಶೋಧನಾ ವಿದ್ಯಾರ್ಥಿಗಳಿಗೂ ಕೃತಜ್ಞತೆಗಳು. ಬೆಂಗಳೂರಿನ ಮೇ॥ ರಾಜಾ ಪ್ರಿಂಟರ್ಸ್ ಮಾಲೀಕರಾದ ಶ್ರೀ. ಗಣಪತಿಯವರು ಈ ಸಂಪುಟವನ್ನು ಬಹಳ ಅಂದವಾಗಿ ಸಕಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞಳಾಗಿದ್ದೇನೆ. ಇಂತಹ ಬೃಹತ್ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ನಮ್ರ ಕೃತಜ್ಞತೆಗಳು.

**ಡಾ. ಎನ್. ಲಕ್ಷ್ಮಿ**
ಪ್ರಧಾನ ಸಂಪಾದಕರು



Digitised by Bharatavani, CIIL

# ಸಂಪಾದಕ ಮಂಡಳಿಯ ನುಡಿ

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಿಸಲು ನಮ್ಮನ್ನು ಆಹ್ವಾನಿಸಿದ ವಿಷಯವನ್ನು ಶಿಕ್ಷಣಶಾಸ್ತ್ರ ವಿಭಾಗದ ಅಧ್ಯಕ್ಷೆ ಡಾ॥ ಲಕ್ಷ್ಮಿಯವರಿಂದ ಬಂದ ಪತ್ರದ ಮೂಲಕ ತಿಳಿದಾಗ ನಾವು ಆ ಆಹ್ವಾನವನ್ನು ಸಂತೋಷದಿಂದ ಒಪ್ಪಿಕೊಂಡೆವು. ಇದಕ್ಕಾಗಿ ನಾವು 2009ರಲ್ಲಿ ಕುಲಪತಿಗಳಾಗಿದ್ದ ಮಾನ್ಯ ಪ್ರೊ॥ ಬಿ.ಎ. ವಿವೇಕ ರೈಯವರಿಗೆ ಆಭಾರಿಗಳಾಗಿದ್ದೇವೆ. ಅದೇ ಸಮಯದಲ್ಲಿ ನಮಗೆ ಸ್ವಲ್ಪ ಆತಂಕದ ಅನುಭವವೂ ಆಯಿತು. ಏಕೆಂದರೆ ಎರಡು ಸಾವಿರ ಪುಟಗಳ ವಿಶ್ವಕೋಶದ ಲೇಖನಗಳನ್ನು ಸಂಪಾದನೆ ಮಾಡುವುದು ಬಹಳ ಕಷ್ಟಸಾಧ್ಯವಾದುದೆಂಬುದು ನಮ್ಮ ಗಮನಕ್ಕೆ ಬಂದಿತು. ವಿಶ್ವಕೋಶದ ಲೇಖನಗಳ ಸ್ವರೂಪವೇ ಬೇರೆ ರೀತಿಯಾದದ್ದು. ಸೀಮಿತ ಪುಟಗಳಲ್ಲಿ ವಿಷಯ ಶೀರ್ಷಿಕೆಗೆ ಸಂಬಂಧಿಸಿದ ಮುಖ್ಯ ಮಾಹಿತಿಗಳನ್ನೂ, ಅಂಕಿ–ಅಂಶಗಳನ್ನೂ ಸಾಧ್ಯವಾದಷ್ಟು ಪೂರ್ಣ ಪ್ರಮಾಣದಲ್ಲಿ ಲೇಖನವು ಒಳಗೊಂಡಿರಬೇಕಾಗುತ್ತದೆ. ಲೇಖನಗಳ ಬರಹ ಸಾಮಾನ್ಯ ಓದುಗಾರನೂ ಅರ್ಥಮಾಡಿಕೊಳ್ಳುವಂತೆ ವಿಷಯವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿರುವವರಿಗೂ ಬೋಧಗಮ್ಯವಾಗಿರಬೇಕು. ಅಂದರೆ ಬರಹ ತೀರಾ ಪಾರಿಭಾಷಿಕ ಸ್ವರೂಪದ್ದೂ ಆಗಿರಬಾರದು, ತೀರಾ ಜಾಳು ಜಾಳದದ್ದೂ ಆಗಿರಬಾರದು. ಇದರ ಜೊತೆಗೆ ಲೇಖನದ ಭಾಷಾ ಶೈಲಿ ಸುಲಭವಾಗಿ ಓದಿಸಿಕೊಂಡು ಹೋಗುವಂತಿರಬೇಕು. ಲೇಖನಗಳ ಮಾಹಿತಿ, ಅಂಕಿ–ಅಂಶಗಳು ನಿಖರವಾಗಿದ್ದು, ಇತ್ತೀಚಿನ ಅಂಶಗಳನ್ನೂ ಒಳಗೊಂಡಿರಬೇಕು. ಮುಖ್ಯವಾಗಿ ಲೇಖನದ ವಿಷಯವಸ್ತು ಶೀರ್ಷಿಕೆಗೆ ನೇರವಾಗಿ ಸಂಬಂಧಿಸಿದ್ದೂ, ಮುಖ್ಯ ತಥ್ಯಾಂಶಗಳು, ತರ್ಕ/ನಿಯಮಗಳು/ಗ್ರಹಿಕೆಗಳು ಮತ್ತು ಅಂಕಿ–ಅಂಶಗಳನ್ನು ಮಾತ್ರ ಒಳಗೊಂಡಿರಬೇಕು. ಅನಾವಶ್ಯಕ ವಿವರಗಳನ್ನೂ, ಭೂಮಿಕೆಗಳನ್ನೂ, ಪುನರಾವರ್ತನೆಗಳನ್ನು ಲೇಖನ ಒಳಗೊಂಡಿರಬಾರದು.

ಇಷ್ಟೆಲ್ಲ ವಿಷಯಗಳು ತಿಳಿದಿದ್ದ ನಮಗೆ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶವನ್ನು ನಾವು ಸಮರ್ಥವಾಗಿ ಸಂಪಾದನೆ ಮಾಡಬಲ್ಲೆವೆ ಎಂಬ ಅಳುಕು ಕ್ಷಣಕಾಲ ನಮಗೆ ಉಂಟಾಯಿತೆನ್ನುವುದು ಸತ್ಯ. ಆದರೆ ಆ ಭಾವನೆ ತಾತ್ಕಾಲಿಕವಾಗಿತ್ತು.. ಈ ಸವಾಲನ್ನು ನಾವು ಎದುರಿಸಬಲ್ಲೆವು ಎನ್ನುವ ಆತ್ಮವಿಶ್ವಾಸ, ಛಲ ನಾವು ಈ ಆಹ್ವಾನವನ್ನು ಸ್ವೀಕರಿಸಲು ಪ್ರೇರಕವಾದುವು.ಇದರ ಜೊತೆಗೆ ಮತ್ತೊಂದು ಅಂಶವೂ ನಮಗೆ ಹೆಚ್ಚಿನ ಪ್ರೇರಣೆ ನೀಡಿತು. ಯಾವುದೇ ವಿಷಯ ಶಾಖೆಯಲ್ಲಿ ವಿಶ್ವಕೋಶ ಆ ಶಾಖೆಗೆ ಸಂಬಂಧಿಸಿದ ಜ್ಞಾನಾಂಶಗಳನ್ನು ಸಂಗ್ರಹರೂಪದಲ್ಲಿ ಒಂದೇ ಕಡೆ ಒದಗಿಸುವುದರಿಂದ ಅದು ಒಂದು ಉತ್ತಮ ಆಕರ ಗ್ರಂಥವಾಗುತ್ತದೆ. ಅದು ಆ ವಿಷಯದ ಶಿಕ್ಷಕರು, ವಿದ್ಯಾರ್ಥಿಗಳಿಗೆ ಅಲ್ಲದೆ ಅದರಲ್ಲಿ ಆಸಕ್ತಿಯಿರುವ ಸಾಮಾನ್ಯ ಓದುಗರಿಗೆ ಜ್ಞಾನದ ಸ್ರೋತ್ರವಾಗುತ್ತದೆ. ಹೀಗಾಗಿ ವಿಶ್ವಕೋಶಗಳು ತಮ್ಮದೇ ಆದ ಮಹತ್ವವನ್ನು ಪಡೆದಿವೆ. ಅಂಥ ವಿಶ್ವಕೋಶದ ರಚನೆಯಲ್ಲಿ ಪಾಲ್ಗೊಳ್ಳುವ ಅವಕಾಶ ನಮಗೆ ದೊರೆತುದು ನಮ್ಮ ಸೌಭಾಗ್ಯ. ಆದ್ದರಿಂದ ನಾವು ಈ ಅವಕಾಶವನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ.

ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶವನ್ನು ಕನ್ನಡದಲ್ಲಿ ಸಿದ್ಧಪಡಿಸುವ ಈ ಯೋಜನೆ ನಿಜಕ್ಕೂ ಶ್ಲಾಘನೀಯವಾದ ಪ್ರಯತ್ನವಾಗಿದೆ. ಇತ್ತೀಚೆಗೆ ಉನ್ನತ ಶಿಕ್ಷಣ ಮಟ್ಟಗಳಲ್ಲಿ (ಸ್ನಾತಕ, ಸ್ನಾತಕೋತ್ತರ/ಸಂಶೋಧನೆ) ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಈ ವಿದ್ಯಾರ್ಥಿಗಳಿಗೆ ಆಯಾ ವಿಷಯ ಕ್ಷೇತ್ರದಲ್ಲಿ ಮೇಲ್ಮಟ್ಟದ, ವಿಸ್ತೃತ ಮಾಹಿತಿಯನ್ನೊಳಗೊಂಡ ಉದ್ಗ್ರಂಥಗಳ, ಆಕರ ಗ್ರಂಥಗಳ ಅವಶ್ಯಕತೆ ಇರುತ್ತದೆ. ಇತ್ತೀಚೆಗೆ ಈ ದಿಶೆಯಲ್ಲಿ ಅನೇಕ ಗ್ರಂಥಗಳು ಕನ್ನಡದಲ್ಲಿ ಪ್ರಕಟಗೊಂಡಿವೆ. ಕೆಲವು ಗ್ರಂಥಗಳು ಇಂಗ್ಲಿಷಿನಿಂದ ಅನುವಾದಗೊಂಡಿವೆ. ಶಿಕ್ಷಣಶಾಸ್ತ್ರ ವಿಷಯದಲ್ಲೂ ಕನ್ನಡದಲ್ಲಿ ಅನೇಕ ಪಠ್ಯಪುಸ್ತಕಗಳು ಪ್ರಕಟಗೊಂಡಿವೆ. ಮೈಸೂರು ವಿಶ್ವವಿದ್ಯಾನಿಲಯವು ಶಿಕ್ಷಣಶಾಸ್ತ್ರ, ಮನೋವಿಜ್ಞಾನ ಮತ್ತು ಸಮಾಜವಿಜ್ಞಾನದ ಹಲವು ಉತ್ತಮ ಇಂಗ್ಲಿಷ್ ಗ್ರಂಥಗಳ ಕನ್ನಡ ಅನುವಾದವನ್ನೂ,



Digitised by Bharatavani, CIIL

ಡಾ॥ ಎನ್. ಎಸ್. ವೀರಪ್ಪನವರು ರಚಿಸಿರುವ ಶಿಕ್ಷಣಶಾಸ್ತ್ರ ನಿಘಂಟನ್ನು ಪ್ರಕಟಿಸಿದೆ. ಇತರ ಪ್ರಕಟಣೆಗಳಲ್ಲಿ ಬಹುತೇಕ ಪುಸ್ತಕಗಳು ಬಿ.ಎಡ್., ಡಿ.ಎಡ್. ಪಠ್ಯಕ್ರಮಕ್ಕೆ ಸಂಬಂಧಿಸಿದ್ದು ಸೀಮಿತ ವಿಷಯ ವ್ಯಾಪ್ತಿಯನ್ನು ಹೊಂದಿವೆ. ಸ್ನಾತಕ ಮಟ್ಟದ ಪಠ್ಯಕ್ರಮಕ್ಕೆ, ಸಂಶೋಧನೆ ಮಟ್ಟಕ್ಕೆ ಉಪಯುಕ್ತವೆನಿಸುವ ಕೆಲವು ಗ್ರಂಥಗಳು ಬಂದಿವೆಯಾದರೂ ಅವುಗಳ ಸಂಖ್ಯೆ ಹೆಚ್ಚಾಗಿಲ್ಲ. ವೀರಪ್ಪನವರ ಗ್ರಂಥ, ಎ.ಎಸ್. ಧರಣೇಂದ್ರಯ್ಯನವರ ಮನೋವಿಜ್ಞಾನ ನಿಘಂಟು ಕೇವಲ ನಿಘಂಟುಗಳಾಗಿದ್ದು, ವಿವರವಾದ ಲೇಖನಗಳನ್ನು ಒಳಗೊಂಡಿಲ್ಲ. ಹೀಗಾಗಿ ನಿಜವಾದ ಅರ್ಥದಲ್ಲಿ ವಿಶ್ವಕೋಶವೆನಿಸುವ ವ್ಯಾಪ್ತಿಯನ್ನು ಪಡೆದ ಗ್ರಂಥ ಶಿಕ್ಷಣಶಾಸ್ತ್ರದಲ್ಲಿ ಅದರಲ್ಲೂ ಕನ್ನಡದಲ್ಲಿ ಪ್ರಕಟವಾಗಿರುವುದು ನಮ್ಮ ಗಮನಕ್ಕಂತೂ ಬಂದಿಲ್ಲ.

ಈ ಹಿನ್ನಲೆಯಲ್ಲಿ ಕರ್ನಾಟಕ ಘನ ಸರ್ಕಾರದವರು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಒದಗಿಸಿರುವ ಅನುದಾನದ ಅಡಿಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶವನ್ನು ಎರಡು ಸಂಪುಟಗಳಲ್ಲಿ ಸಿದ್ಧಪಡಿಸುವ ಪ್ರಾಯೋಜನೆಯನ್ನು ರೂಪಿಸಿದುದು ಪ್ರಶಂಸನೀಯ ಕಾರ್ಯವಾಗಿದೆ. ಈ ಸಂಪುಟಗಳು ಶಿಕ್ಷಣಶಾಸ್ತ್ರ ಕ್ಷೇತ್ರಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಹತ್ವಪೂರ್ಣ ಕೊಡುಗೆಗಳಾಗುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

ಗ್ರಂಥ ಸಂಪಾದನೆ ಕಾರ್ಯವನ್ನು ಒಪ್ಪಿಕೊಂಡು ಲೇಖಕರಿಗೆ ಮಾರ್ಗದರ್ಶನ ನೀಡುವ ಕಾರ್ಯಾಗಾರದಲ್ಲಿ ನಾವೂ ಪಾಲ್ಗೊಂಡೆವು. ನಂತರ ಶಿಕ್ಷಣಶಾಸ್ತ್ರ ಕ್ಷೇತ್ರದಲ್ಲಿ 22 ವಿಭಾಗಗಳನ್ನು ಗುರುತಿಸಿಕೊಂಡೆವು. ಇದಾದ ನಂತರ ಪ್ರತಿಯೊಂದು ವಿಭಾಗದಲ್ಲೂ ಸೇರಿಸಬೇಕಾದ ವಿಷಯಗಳ, ಪರಿಕಲ್ಪನೆಗಳ, ಸಿದ್ಧಾಂತಗಳ, ಗ್ರಹಿಕೆಗಳ, ಶೀರ್ಷಿಕೆಗಳ ಪಟ್ಟಿಮಾಡುವ ಕೆಲಸವನ್ನು ಕೈಗೊಂಡೆವು. ಈ ಕಾರ್ಯದಲ್ಲಿ ಸಲಹಾ ಮಂಡಳಿ ಸದಸ್ಯರು, ಶಿಕ್ಷಣಶಾಸ್ತ್ರ ವಿಭಾಗದ ಅಧ್ಯಾಪಕರು ನಮಗೆ ನೆರವು ನೀಡಿದ್ದಾರೆ. ಸುಮಾರು 750 ಶೀರ್ಷಿಕೆಗಳನ್ನು ಪಟ್ಟಿಮಾಡಲಾಯಿತು. ನಂತರ ಸಲಹಾ ಮಂಡಳಿ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಭೆಯಲ್ಲಿ ಈ ಪಟ್ಟಿಯನ್ನು ಕೂಲಂಕುಶವಾಗಿ ಪರಿಷ್ಕಾರ ಮಾಡಲಾಯಿತು. ಇದೇ ಸಭೆಯಲ್ಲಿ ಲೇಖಕರಿಗೆ ಲೇಖನ ಬರೆಯಲು ನೀಡಬೇಕಾದ ಸೂಚನೆಗಳನ್ನು ಅಂತಿಮಗೊಳಿಸಲಾಯಿತು. ಲೇಖನ ಒಳಗೊಳ್ಳಬೇಕಾದ ವಿಷಯಾಂಶಗಳ ರೂಪುರೇಖೆಯನ್ನು ಪತ್ರದಲ್ಲಿ ಸೇರಿಸಬೇಕೆಂದು ತೀರ್ಮಾನಿಸಲಾಯಿತು.

ಲೇಖನಗಳು ಬರಲು ಆರಂಭವಾದ ನಂತರ ನಾವು ಮತ್ತೊಮ್ಮೆ ಸಭೆ ಸೇರಿ ಲೇಖನಗಳನ್ನು ಪರಿಷ್ಕಾರ/ ಸಂಪಾದನೆ ಮಾಡುವಾಗ ಅನುಸರಿಸಬೇಕಾದ ಕೆಲವು ಕ್ರಮಗಳನ್ನು ಕುರಿತು ಚರ್ಚಿಸಿ ಈ ಕೆಳಗಿನ ಕ್ರಮಗಳನ್ನು ಒಪ್ಪಿಕೊಂಡೆವು.

- ಅನಾವಶ್ಯಕ ಮುನ್ನುಡಿ, ವಿವರಗಳು, ಆಲಂಕಾರಿಕ ಹೇಳಿಕೆಗಳು, ವಿವಾದಾತ್ಮಕ/ಸಂದೇಹಾಸ್ಪದ ಹೇಳಿಕೆಗಳು ಅಂಕಿ-ಅಂಶಗಳನ್ನು ತೆಗೆಯಬೇಕು.

- ನೇರವಾಗಿ ಲೇಖನದ ಶೀರ್ಷಿಕೆಗೆ ಸಂಬಂಧಿಸಿದ ವಿಷಯಾಂಶಗಳನ್ನು ಮಾತ್ರ ಉಳಿಸಿಕೊಳ್ಳಬೇಕು. ವಿಷಯಾಂಶಗಳ ಕೊರತೆ ಸ್ವಲ್ಪ ಮಟ್ಟಿಗೆ ಇದ್ದರೆ ಅದನ್ನು ನಾವೇ ಬರೆಯಬೇಕು.

- ಲೇಖನಗಳು ಇಂಗ್ಲಿಷಿನಲ್ಲಿದ್ದರೆ ಅವುಗಳನ್ನು ಅನುವಾದಿಸಲು ಕ್ರಮ ತೆಗೆದುಕೊಳ್ಳಬೇಕು.

- ಪಾರಿಭಾಷಿಕ ಪದಗಳನ್ನು ಲೇಖನದ ಆರಂಭದಲ್ಲಿ ಒಮ್ಮೆ ಕನ್ನಡ ಪದದ ಜೊತೆಗೆ ಇಂಗ್ಲಿಷಿನಲ್ಲಿಯೂ ಕೊಡಬೇಕು.

- ಕನ್ನಡದ ಪಾರಿಭಾಷಿಕ ಶಬ್ದಗಳ ವಿಚಾರದಲ್ಲಿ ಈಗಾಗಲೇ ಹೆಚ್ಚು ಪ್ರಚಲಿತವಾಗಿರುವ, ಅನೇಕ ಲೇಖಕರು ಈಗಾಗಲೇ ಉಪಯೋಗಿಸಿರುವ ಪದಗಳನ್ನು ಉಪಯೋಗಿಸಬೇಕು. ತೀರಾ ಸಂಸ್ಕೃತಭೂಯಿಷ್ಠವಾದ ಕಠಿಣವೆನಿಸುವ, ವಿರಳವಾಗಿ ಬಳಕೆಯಲ್ಲಿರುವ ಪದಗಳನ್ನು ಉಪಯೋಗಿಸಬಾರದು.



Digitised by Bharatavani, CIIL

- ಒಂದೇ ಪರಿಕಲ್ಪನೆಗೆ ಎರಡು ಪದಗಳು ಸಮಾನ ರೂಪದಲ್ಲಿ ಬಳಕೆಯಲ್ಲಿದ್ದರೆ (ಉದಾ: ಚಲಕ–ಚರಾಂಶ; ಪ್ರತಿದರ್ಶ–ನಮೂನೆ; ಅಭಿವೃತ್ತಿ–ಮನೋಭಾವ; ಅಭಿರುಚಿ–ಆಸಕ್ತಿ ಇತ್ಯಾದಿ) ಲೇಖನದ ಆರಂಭದಲ್ಲಿ ಒಮ್ಮೆ ಈ ಎರಡೂ ಪದಗಳನ್ನು (ಒಂದನ್ನು ಬ್ರ್ಯಾಕೆಟ್‌ನಲ್ಲಿ) ಉಪಯೋಗಿಸಬೇಕು.

- ತೀರಾ ತಾಂತ್ರಿಕ ಸ್ವರೂಪದ ಪದಗಳನ್ನು (ಉದಾ: ಕಂಪ್ಯೂಟರ್, ಪಾಡ್‌ಕಾಸ್ಟಿಂಗ್, ಸ್ಪ್ರೆಡ್ ಷೀಟ್, ಮೈಕ್ರೋಸಾಫ್ಟ್ ಇತ್ಯಾದಿ) ಹಾಗೆಯೇ ಉಪಯೋಗಿಸಬೇಕು.

- ಉದ್ಧರಣಗಳನ್ನು ಇಂಗ್ಲಿಷಿನಲ್ಲಿ ಬರೆದಿದ್ದರೆ ಅವುಗಳ ಸರಳ ಕನ್ನಡಾನುವಾದವನ್ನು ಕೊಡಬೇಕು.

- ಲೇಖನಗಳಿಗೆ ಅಗತ್ಯವಾದ ವ್ಯಕ್ತಿಗಳ ಭಾವಚಿತ್ರ, ನಕ್ಷೆಗಳು, ಮಾದರಿಗಳ ರೂಪುರೇಖೆ ಮುಂತಾದವುಗಳನ್ನು ಸಾಧ್ಯವಾದಷ್ಟು ಕೊಡಬೇಕು. ಲೇಖಕರೇ ಇವುಗಳನ್ನು ಕಳುಹಿಸಿದ್ದರೆ ಅವುಗಳ ಸೂಕ್ತತೆಯನ್ನು ನೋಡಬೇಕು.

- ಶೀರ್ಷಿಕೆಗೆ ಸಂಬಂಧವೇ ಇರದ ವಿಷಯವಸ್ತುವನ್ನು ಒಳಗೊಂಡಿದ್ದರೆ, ಬರಹದ ಶೈಲಿ, ಭಾಷೆ ಇತ್ಯಾದಿಗಳಲ್ಲಿ ಬಹಳಷ್ಟು ಮಿತಿಗಳಿದ್ದರೆ ಅಂಥ ಲೇಖನಗಳನ್ನು ತಿರಸ್ಕರಿಸಬೇಕು. ಈ ಅಂಶಗಳು ಮಿತಿಯಲ್ಲಿದ್ದರೆ ಸಂಪಾದಕರೇ ಅವುಗಳನ್ನು ಸರಿಪಡಿಸಬೇಕು.

- ನವದೆಹಲಿಯ NCERT ಯವರು ಇಂಗ್ಲಿಷಿನಲ್ಲಿ Encyclopedia of Indian Education ಎಂಬ ಎರಡು ಸಂಪುಟಗಳನ್ನು ಪ್ರಕಟಿಸಿದ್ದಾರೆ. ಈ ಸಂಪುಟಗಳ ಲೇಖನಗಳನ್ನು ನಾವು ನೋಡಿದಾಗ ಅದರಲ್ಲಿ ನಾವು ಸಿದ್ಧಪಡಿಸಲಿರುವ ವಿಶ್ವಕೋಶಕ್ಕೆ ಉಪಯುಕ್ತವಾಗಿರುವ ಅನೇಕ ಲೇಖನಗಳಿರುವುದು ನಮ್ಮ ಗಮನಕ್ಕೆ ಬಂದಿತು. NCERT ಯಿಂದ ಅನುಮತಿ ಪಡೆದು ಅಂಥ ಸುಮಾರು 90 ಲೇಖನಗಳನ್ನು ಆಯ್ಕೆ ಮಾಡಿ ಅವುಗಳನ್ನು ಕನ್ನಡಕ್ಕೆ ಅನುವಾದಿಸಿಕೊಳ್ಳಬಹುದೆಂಬ ಸಲಹೆಯನ್ನು ನಾವು ಕುಲಪತಿಗಳಿಗೆ ತಿಳಿಸಿದಾಗ ಅವರು ಅದನ್ನು ಒಪ್ಪಿಕೊಂಡು NCERT ನಿರ್ದೇಶಕರಿಗೆ ಪತ್ರ ಬರೆದು ಅವರ ಅನುಮತಿಯನ್ನು ಪಡೆದುಕೊಂಡರು. ಈ ಲೇಖನಗಳನ್ನು ಅನುವಾದಕರಿಂದ ಅನುವಾದ ಮಾಡಿಸಲಾಗಿದೆ. ಈ ಲೇಖನಗಳನ್ನು ಎರಡನೇ ಸಂಪುಟದಲ್ಲಿ ಸೇರಿಸಲಾಗುತ್ತದೆ.

- ಶೈಕ್ಷಣಿಕ ಸಂಸ್ಥೆಗಳಿಗೆ ಸಂಬಂಧಿಸಿದ ಲೇಖನಗಳಲ್ಲಿ ಸಂಸ್ಥೆಯ ಆರಂಭದಲ್ಲಿದ್ದವರ ಹೆಸರನ್ನು ಮಾತ್ರ ಸೂಚಿಸಬೇಕು.

ಲೇಖನಗಳನ್ನು ಸಂಪಾದನೆ ಮಾಡುವಾಗ ನಾವು ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಲೇಖನಗಳನ್ನು ಪರಿಷ್ಕರಿಸಿದ್ದೇವೆ. ಈ ಕಾರ್ಯ ನಮಗೆ ಮಿಶ್ರ ಅನುಭವಗಳನ್ನು ಕೊಟ್ಟಿದೆ. ಕೆಲವು ಲೇಖನಗಳು ಅತ್ಯುತ್ತಮ ಮಟ್ಟದಲ್ಲಿದ್ದು ನಮಗೆ ಸಂತೋಷವನ್ನು ಕೊಟ್ಟಿವೆ. ಇಂಥ ಲೇಖನಗಳ ಲೇಖಕರೂ ವಾಚಕ ವರ್ಗಕ್ಕೆ ಪರಿಚಿತರಾಗಿದ್ದು, ಇವು ಸಂಪುಟದ ಮೌಲ್ಯವನ್ನು ಹೆಚ್ಚಿಸಿವೆ. ಕೆಲವರು ಕನ್ನಡದಲ್ಲಿ ಬರೆಯುವುದು ಕಷ್ಟ. ಆದ್ದರಿಂದ ಇಂಗ್ಲಿಷಿನಲ್ಲಿ ಬರೆದಿದ್ದೇವೆ ಎಂದಾಗ ನಮಗೆ ಬೇಸರವಾದುದಲ್ಲದೆ, ಅನುವಾದದ ಅತಿರಿಕ್ತ ಕೆಲಸವೂ ಎದುರಾಯಿತು. ವಿಷಯಾಂಶಗಳ ರೂಪು–ರೇಖೆ ಸೂಚಿಸಿದ್ದರೂ ಕೆಲವು ಲೇಖನಗಳು ಅನಾವಶ್ಯಕ ಅಂಶಗಳನ್ನು ಒಳಗೊಂಡಿದ್ದು ತೆಗೆದು ಹಾಕಬೇಕಾಯಿತು. ಇನ್ನೂ ಕೆಲವು ಲೇಖನಗಳು ಅವಶ್ಯಕತೆಗಿಂತ ದೀರ್ಘವಾಗಿದ್ದು ಅವುಗಳನ್ನು ಸೂಕ್ತ ಗಾತ್ರಕ್ಕೆ ಇಳಿಸಬೇಕಾಯಿತು. ಹೆಚ್ಚು ಲೇಖಕರು ಚಿತ್ರ, ನಕ್ಷೆ ಮುಂತಾದವುಗಳನ್ನು ಕಳುಹಿಸಲಿಲ್ಲ. ಅವುಗಳ ವ್ಯವಸ್ಥೆಯನ್ನು ನಾವೇ ಮಾಡಬೇಕಾಯಿತು. ಕೆಲವು ಲೇಖನಗಳಲ್ಲಿ ಬರಹದ ಶೈಲಿ, ವಾಕ್ಯಬಂಧ, ಭಾಷಾ ಶುದ್ಧತೆ ತೃಪ್ತಿಕರವಾಗಿರಲಿಲ್ಲ. ಅವುಗಳನ್ನು ಸರಿಪಡಿಸಿಕೊಳ್ಳಬೇಕಾಯಿತು. ಅಲ್ಲಲ್ಲಿ ಮಾಹಿತಿಗಳು ದೋಷಪೂರ್ಣವೆನ್ನಿಸಿದವು. ಅವುಗಳನ್ನು ನಿಖರಗೊಳಿಸಬೇಕಾಯಿತು. ಕೆಲವು ಲೇಖನಗಳು ತೀರಾ ಅತೃಪ್ತಿಕರವಾಗಿದ್ದು ಅವುಗಳನ್ನು ತಿರಸ್ಕರಿಸಬೇಕಾದ ಅನಿವಾರ್ಯತೆ ಉಂಟಾಯಿತು. ಲೇಖನಗಳನ್ನು ಸಕಾಲದಲ್ಲಿ ಸಲ್ಲಿಸದೇ ಹೋದದು, ಸಾಕಷ್ಟು ಸಮಯದ ನಂತರ ಬರೆಯಲು ಸಾಧ್ಯವಾಗುವುದಿಲ್ಲವೆಂದು ಕೆಲವು ಲೇಖಕರು ತಿಳಿಸಿದುದು ನಮಗೆ ತೊಂದರೆಯನ್ನು ಉಂಟು ಮಾಡಿದುವು. ಒಟ್ಟಿನಲ್ಲಿ



Digitised by Bharatavani, CIIL

ಬಹುತೇಕ ಲೇಖನಗಳು ತೃಪ್ತಿದಾಯಕ ಮಟ್ಟದಲ್ಲಿದ್ದವು ಎಂದು ನಮಗನ್ನಿಸಿದೆ. ಪರಿಪೂರ್ಣತೆ ಎನ್ನುವುದು ಸಾಧ್ಯವಿಲ್ಲವಾದರೂ ಲೇಖನಗಳ ಮಟ್ಟ ಆ ದಿಶೆಯಲ್ಲಿದೆ ಎನ್ನಬಹುದು. ಈ ವಿಶ್ವಕೋಶದ ಮಹತ್ವಪೂರ್ಣ ಕಾರ್ಯದಲ್ಲಿ ಸಂಪಾದಕ ಮಂಡಳಿಯ ನಾವು ನಾಲ್ವರು ಸದಸ್ಯರೂ ಒಮ್ಮತದಿಂದ ಕಾರ್ಯನಿರ್ವಹಿಸಿದ್ದೇವೆ. ನಮ್ಮ ನಮ್ಮಲ್ಲಿ ದೀರ್ಘಕಾಲದ ಪರಸ್ಪರ ಪರಿಚಯ, ಮೈತ್ರಿ ಇದ್ದುದರಿಂದ ನಾವು ಪರಸ್ಪರ ಅರ್ಥ ಮಾಡಿಕೊಂಡು ಕಾರ್ಯ ನಿರ್ವಹಿಸಲು ಸಾಧ್ಯವಾಗಿದೆ. ನಾವು ಈ ಕಾರ್ಯಕ್ಕಾಗಿ ವಿಶ್ವವಿದ್ಯಾನಿಲಯದಿಂದ ಪೂರ್ಣಕಾಲಿಕವಾಗಿ ನೇಮಕವಾಗಿರಲಿಲ್ಲ. ಆದರೂ ನಾವು ಅಗತ್ಯವಿದ್ದಾಗಲೆಲ್ಲಾ ವಿಭಾಗಕ್ಕೆ ಬಂದು ಮತ್ತು ನಮ್ಮ ಮನೆಗಳಲ್ಲಿ ಕುಳಿತು ಈ ಕಾರ್ಯವನ್ನು ಆಸಕ್ತಿ ವಹಿಸಿ, ಶ್ರಮವಹಿಸಿ ಕೈಗೊಂಡಿದ್ದೇವೆ. ವಿಶ್ವವಿದ್ಯಾನಿಲಯದ ಈ ಗ್ರಂಥ ಉತ್ತಮ ಮಟ್ಟದಲ್ಲಿ ಹೊರಬರಬೇಕೆಂಬುದೇ ನಮ್ಮ ಉದ್ದೇಶವಾಗಿತ್ತು. ಈ ಕಾರ್ಯ ನಮಗೆ ತೃಪ್ತಿ ಮತ್ತು ಸಂತೋಷವನ್ನು ನೀಡಿದೆ. ನಮ್ಮ ದೀರ್ಘಕಾಲದ ಅನುಭವಗಳನ್ನು ಕಾರ್ಯರೂಪಕ್ಕೆ ತರಲು ನಮಗೆ ಅವಕಾಶ ಒದಗಿಸಿದೆ ಎಂಬುದು ನಮ್ಮ ಭಾವನೆ.

ನಮ್ಮ ಸಂಪಾದನ ಕಾರ್ಯ ಪರಿಪೂರ್ಣವಾಗಿದೆ ಎಂದು ನಮಗನ್ನಿಸುವುದಿಲ್ಲ. ಈ ಸಂಪುಟವನ್ನು ಪೂರ್ಣಗೊಳಿಸುವಲ್ಲಿ ಕೆಲವು ಮಿತಿಗಳು ಉಳಿದುಕೊಂಡಿವೆ. ಇದರಲ್ಲಿ ತೌಲನಿಕ ಶಿಕ್ಷಣ ವ್ಯವಸ್ಥೆಗಳ ಬಗ್ಗೆ ಲೇಖನಗಳನ್ನು ಸೇರಿಸಲಾಗಲಿಲ್ಲ. ಸಮಯದ ಒತ್ತಡದಿಂದಾಗಿ ಅಕಾರಾದಿಯನ್ನು ಒಂದನೇ ಸಂಪುಟದ ಲೇಖನಗಳಿಗೆ ಮಾತ್ರ ಕೊಡಬೇಕಾಯಿತು. ಎಷ್ಟೇ ಎಚ್ಚರವಹಿಸಿದರೂ ಕೆಲವು ಮುದ್ರಣ ದೋಷಗಳು ಉಳಿದುಕೊಂಡಿರುವ ಸಾಧ್ಯತೆಯಿದೆ. ಕೆಲವು ಅಂಕಿ–ಅಂಶಗಳು, ನಿರ್ದಿಷ್ಟ ಹೆಸರುಗಳಲ್ಲಿ ಸಂಪುಟ ಹೊರಬರುವ ವೇಳೆಗೆ ಸ್ವಲ್ಪ ವ್ಯತ್ಯಾಸ ಉಂಟಾಗುವ ಸಾಧ್ಯತೆ ಇದೆ. ಪಾರಿಭಾಷಿಕ ಪದಗಳನ್ನು ನಮ್ಮ ತಿಳಿವಿಗೆ ಒಳಪಟ್ಟಂತೆ ಬಳಸಿದ್ದೇವೆ. ಇವುಗಳಲ್ಲಿ ಮಿತಿ ಕಂಡುಬರಬಹುದು. ಪ್ರತಿ ಲೇಖನದ ಕೊನೆಯಲ್ಲಿ ಆಧಾರ ಗ್ರಂಥಗಳನ್ನು ನಮೂದಿಸಲಾಗಲಿಲ್ಲ. ಗ್ರಂಥದ ಕೊನೆಯಲ್ಲಿ ವಿಷಯಸೂಚಿ(Index) ಕೊಡಲು ಸಾಧ್ಯವಾಗಲಿಲ್ಲ. ಇವುಗಳಲ್ಲಿ ಮಿತಿ ಕಂಡುಬರಬಹುದು. ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಆಯಾ ಲೇಖಕರದೇ ಆಗಿರುತ್ತವೆ. ಇದಕ್ಕೆ ವಿಶ್ವವಿದ್ಯಾನಿಲಯ ಜವಾಬ್ದಾರಿಯಾಗಿರುವುದಿಲ್ಲ. ಮಾನ್ಯ ಓದುಗರು ಈ ಮಿತಿಗಳನ್ನು ಕಡೆಗಣಿಸುವ ಉದಾರತೆ ತೋರಿಸುವರೆಂಬ ವಿಶ್ವಾಸ ನಮಗಿದೆ.

ಈ ಮಹತ್ವದ ಕಾರ್ಯವನ್ನು ನಿರ್ವಹಿಸಲು ನಮಗೆ ಅವಕಾಶ ನೀಡಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಿಂದಿನ ಕುಲಪತಿಗಳಾದ ಸನ್ಮಾನ್ಯ ಪ್ರೊ॥ ವಿವೇಕ ರೈಯವರಿಗೂ, ಈಗ ಕುಲಪತಿಗಳಾಗಿರುವ ಸನ್ಮಾನ್ಯ ಪ್ರೊ॥ ಕೆ.ಎಸ್. ರಂಗಪ್ಪನವರಿಗೂ ನಾವು ಕೃತಜ್ಞರಾಗಿದ್ದೇವೆ. ಸಂಪಾದನ ಕಾರ್ಯದುದ್ದಕ್ಕೂ ಸಲಹಾ ಮಂಡಳಿಯ ನಾಲ್ವರು ಸದಸ್ಯರು ನಮಗೆ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ ಸಹಕರಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಕೃತಜ್ಞತೆಗಳು. ಈ ಸಂಪುಟಕ್ಕೆ ಉತ್ತಮ ಲೇಖನಗಳನ್ನು ಬರೆದಿರುವ ಲೇಖಕರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಶಿಕ್ಷಣಶಾಸ್ತ್ರ ವಿಭಾಗದ ಅಧ್ಯಾಪಕರೆಲ್ಲರೂ ನಮ್ಮ ಕಾರ್ಯದಲ್ಲಿ ವಿವಿಧ ರೀತಿಗಳಲ್ಲಿ ಸಹಾಯ ಮಾಡಿದ್ದಾರೆ. ಅವರಿಗೆ ನಾವು ಆಭಾರಿಯಾಗಿದ್ದೇವೆ. ಈ ಪ್ರಾಯೋಜನೆಯ ಮುಖ್ಯ ಸಂಪಾದಕರಾಗಿ ಶಿಕ್ಷಣ ವಿಭಾಗದ ಅಧ್ಯಕ್ಷೆ ಡಾ॥ ಎನ್. ಲಕ್ಷ್ಮಿ ಇದುವರೆವಿಗೂ ತಮ್ಮ ಸಹಕಾರ ಸೂಚನೆಗಳನ್ನು ನೀಡುತ್ತಾ ನಮ್ಮನ್ನು ಪ್ರೋತ್ಸಾಹಿಸಿದ್ದಾರೆ. ಅವರಿಗೆ ನಮ್ಮ ಹೃದಯ ಪೂರ್ವಕ ಧನ್ಯವಾದಗಳು. ಪ್ರಾಯೋಜನೆಯ ಸಹಾಯಕರಾದ ಉತ್ಸಾಹಿ, ಕಾರ್ಯತತ್ಪರ ಯುವಕ ಶ್ರೀ ಎ. ಎಲ್. ಚಿದಾನಂದ ರವರು ಲೇಖನಗಳನ್ನು ವ್ಯವಸ್ಥಿತವಾಗಿ ಇಡುವ, ಅವುಗಳ ಬಗ್ಗೆ ಮಾಹಿತಿ ನೀಡುವ, ಲೇಖಕರನ್ನು ಸಂಪರ್ಕಿಸುವ ಕೆಲಸಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿದ್ದಾರೆ. ಅವರಿಗೂ ನಮ್ಮ ಧನ್ಯವಾದಗಳು.

**ಸಂಪಾದಕ ಮಂಡಳಿ ಸದಸ್ಯರು**



Digitised by Bharatavani, CIIL

**H.R. BHARDWAJ**
Governor of Karnataka

**RAJ BHAVAN**
**BANGALORE**

# MESSAGE

I am happy to note that 'KARNATAKA STATE OPEN UNIVERSITY, Mysore' is releasing ''Encyclopedia of Education'' in Kannada, during August 2011.

I am delighted to know that 'University' has taken painstaking effort to bring out the first volume and this will consist of nearly 225 articles on various aspects of education written by experts in the respective field. These articles will be a valuable source for students, teachers, teacher educators, administrators and researchers in the field of education. It will be a unique contribution to kannada literary world. The University is doing yeoman service for the development of Kannada Language.

I congratulate the Vice-Chancellor, Professors, Faculties and Students who are all involved in this voluminous task.

My best wishes on the occasion.

**(H.R. Bhardwaj)**



Digitised by Bharatavani, CIIL

Digitised by Bharatavani, CIIL

**ಡಿ.ವಿ. ಸದಾನಂದ ಗೌಡ**
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

ವಿಧಾನ ಸೌಧ
ಬೆಂಗಳೂರು–560 001

# ಶುಭ ಹಾರೈಕೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ "ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶ"ವನ್ನು ಬಿಡುಗಡೆ ಮಾಡುತ್ತಿರುವುದು ಅತ್ಯಂತ ಸಂತಸದ ಸಂಗತಿ.

ಅಭಿಜಾತ ಭಾಷೆಯಾದ ಕನ್ನಡ ಭಾಷೆಯ ಸಮಗ್ರ ವಿಕಾಸಕ್ಕಾಗಿ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಯಡಿ ನಮ್ಮ ಸರ್ಕಾರ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಗಳ ಪ್ರತ್ಯೇಕ ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂಗಳನ್ನು ಬಿಡುಗಡೆ ಮಾಡಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶವನ್ನು ರೂಪಿಸಿ ಬಿಡುಗಡೆ ಮಾಡುತ್ತಿರುವುದು ಶ್ಲಾಘನೀಯ. ಈ ಕೃತಿ ಉಪಯುಕ್ತ ಮಾಹಿತಿಯನ್ನು ಒಳಗೊಂಡು ಆಕರ್ಷಕವಾಗಿ ಹೊರಬರಲಿ ಎಂದು ಹಾರೈಸುತ್ತೇನೆ.

**(ಡಿ.ವಿ. ಸದಾನಂದ ಗೌಡ)**



Digitised by Bharatavani, CIIL

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

ವಿಧಾನ ಸೌಧ
ಬೆಂಗಳೂರು–560 001

# ಸಂದೇಶ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ **"ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶ"**ದ ಮೊದಲ ಸಂಪುಟವನ್ನು ಹೊರತರುತ್ತಿರುವುದು ಸಂತಸದ ಸಂಗತಿ.

ಅಭಿಜಾತ ಭಾಷೆಯೆಂಬ ಮನ್ನಣೆ ಪಡೆದಿರುವ ಕನ್ನಡ ಭಾಷೆಯ ಸರ್ವಾಂಗೀಣ ಪ್ರಗತಿಗಾಗಿ ನಮ್ಮ ಸರ್ಕಾರವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮಂಜೂರು ಮಾಡಿರುವ ಒಂದು ಕೋಟಿ ರೂ.ಗಳ ಸದ್ವಿನಿಯೋಗದ ನಿಟ್ಟಿನಲ್ಲಿ ಈ ಬೃಹತ್ ವಿಶ್ವಕೋಶ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ. ಶಿಕ್ಷಣ ಕ್ಷೇತ್ರದ ಎಲ್ಲಾ ಆಯಾಮಗಳ ಬಗ್ಗೆ ಪರಿಣಿತರ ಲೇಖನಗಳನ್ನು ಒಳಗೊಂಡಿರುವ ಈ ವಿಶ್ವಕೋಶವು ಆಕರ್ಷಕವಾಗಿ ಮೂಡಿಬಂದು, ಓದುಗರಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸಲಿ ಎಂದು ಹಾರೈಸುತ್ತೇನೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ವಿಶ್ವಕೋಶಕ್ಕೆ ಶುಭ ಹಾರೈಕೆಗಳು.

**(ಬಿ.ಎಸ್. ಯಡಿಯೂರಪ್ಪ)**



Digitised by Bharatavani, CIIL

**ಡಾ॥ ವಿ.ಎಸ್. ಆಚಾರ್ಯ**
ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ
ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ ಸಚಿವರು

ದೂರವಾಣಿ : ಕಛೇರಿ : 22252536, 22033450
ಕಛೇರಿ : 22371150
ಕೊಠಡಿ ಸಂಖ್ಯೆ : 315, 3ನೇ ಮಹಡಿ
ವಿಧಾನ ಸೌಧ, ಬೆಂಗಳೂರು–560 001

# ಸಂದೇಶ

ಶಿಕ್ಷಣ ಶಾಸ್ತ್ರ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಪ್ರಶಿಕ್ಷಕರಿಗೆ, ಆಡಳಿತಗಾರರಿಗೆ, ಸಂಶೋಧಕರಿಗೆ ಹಾಗೂ ಶಿಕ್ಷಣಶಾಸ್ತ್ರದಲ್ಲಿ ಆಸಕ್ತಿ ಇರುವ ಎಲ್ಲಾ ಜನ ಸಾಮಾನ್ಯರಿಗೆ ಆಕರ ಗ್ರಂಥವಾಗಿ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಮೊದಲ ಸಂಪುಟವನ್ನು ಹೊರತರುತ್ತಿರುವುದು ಸಂತೋಷದ ವಿಷಯ.

ಈ ಸಂಚಿಕೆಯನ್ನು ಹೊರತರುವಲ್ಲಿ ಶ್ರಮಿಸಿದ ಕಾಲೇಜಿನ ಪ್ರಾಂಶುಪಾಲರಿಗೂ, ಸಿಬ್ಬಂದಿ ವರ್ಗದವರಿಗೂ ಹಾಗೂ ಲೇಖನಗಳನ್ನು ಬರೆದುಕೊಟ್ಟಿರುವವರಿಗೂ ಈ ಸುಸಂದರ್ಭದಲ್ಲಿ ಶುಭ ಕೋರುತ್ತಾ ವಿಶ್ವಕೋಶವು ಸುಂದರವಾಗಿ ಮೂಡಿಬಂದು ಜನರಿಗೆ ಉಪಯುಕ್ತವಾಗಲೆಂದು ಆಶಿಸುತ್ತೇನೆ.

**(ಡಾ. ವಿ.ಎಸ್. ಆಚಾರ್ಯ)**



Digitised by Bharatavani, CIIL

**ವಿಶ್ವೇಶ್ವರ ಹೆಗಡೆ ಕಾಗೇರಿ**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹಾಗೂ
ಉತ್ತರ ಕನ್ನಡ ಜಿಲ್ಲೆ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ

ದೂರವಾಣಿ : ಕಛೇರಿ : 22258489, 22033405
330, 3ನೇ ಮಹಡಿ ವಿಧಾನ ಸೌಧ,
ಬೆಂಗಳೂರು–560 001

# ಸಂದೇಶ

ಮನುಷ್ಯನ ಬೌದ್ಧಿಕ, ಸಾಮಾಜಿಕ ವಿಕಸನಕ್ಕೆ ಶಿಕ್ಷಣವು ಮಹತ್ತರ ಪಾತ್ರವಹಿಸುತ್ತ ಬಂದಿದೆ. ಇವನ ಸಂವಹನಕ್ಕೆ ಭಾಷೆ ಒಂದು ಮೂಲ ಅಸ್ತ್ರ. ಕನ್ನಡ ಭಾಷೆಯು ಒಂದು ಸುಂದರ ಭಾಷೆ. ಇದು ಅನಾದಿ ಕಾಲದಿಂದಲೂ ಹಂತಹಂತವಾಗಿ ಪರಿಪಕ್ವತೆಯನ್ನು ಪಡೆಯುತ್ತಾ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶಿಕ್ಷಣ ಶಾಸ್ತ್ರ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಪ್ರಶಿಕ್ಷಕರಿಗೆ, ಆಡಳಿತಗಾರರಿಗೆ, ಸಂಶೋಧಕರಿಗೆ ಹಾಗೂ ಶಿಕ್ಷಣಶಾಸ್ತ್ರದಲ್ಲಿ ಆಸಕ್ತಿ ಇರುವ ಎಲ್ಲಾ ಜನ ಸಾಮಾನ್ಯರಿಗೆ ಉಪಯೋಗವಾಗುವ ಸದುದ್ದೇಶದಿಂದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಆಯ್ದ ಲೇಖನಗಳನ್ನು ಆಯಾಯ ಕ್ಷೇತ್ರಗಳ ಪರಿಣಿತರಿಂದ ಬರೆಯಿಸಿ, ಪರಿಷ್ಕರಿಸಿ ಕನ್ನಡ ಸಾರಸ್ವತ ಲೋಕಕ್ಕೆ ವಿಶೇಷ ಮತ್ತು ಅಪೂರ್ವ ಮಾಹಿತಿಗಳನ್ನು ಒಳಗೊಂಡಂತೆ 'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ' ನಾಮಾಕಿತದಲ್ಲಿ ಎರಡು ಸಂಪುಟಗಳನ್ನು ಹೊರತಂದು ಕನ್ನಡ ಭಾಷಾ ಅಭಿವೃದ್ಧಿಗೆ ವಿಶಿಷ್ಟ ಕಾಣಿಕೆ ಕೊಟ್ಟಿರುವುದು ನಿಜಕ್ಕೂ ಸಂತೋಷ ತಂದಿದೆ.

ಇದಕ್ಕಾಗಿ ಶ್ರಮಿಸಿದ ಪ್ರತಿ ಹಂತದ ಪರಿಣಿತರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಈ ಮಹತ್ವ ಪೂರ್ಣ ಕೃತಿ ಸರ್ವ ಆಕಾಂಕ್ಷಿಗಳಿಗೂ ಚಿರಕಾಲ ಉತ್ತಮ ಸೇವೆಯನ್ನು ಕೊಡುವಂತಾಗಲೆಂದು ಹಾರೈಸುತ್ತೇನೆ.

**(ವಿಶ್ವೇಶ್ವರ ಹೆಗಡೆ ಕಾಗೇರಿ)**



Digitised by Bharatavani, CIIL

**ಗೋವಿಂದ ಎಂ. ಕಾರಜೋಳ**
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ
ಸಚಿವರು ಹಾಗೂ ಬಾಗಲಕೋಟೆ
ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ

ದೂರವಾಣಿ ಸಂಖ್ಯೆ : 22033167
ದೂರವಾಣಿ ಫ್ಯಾಕ್ಸ್ : 22253578
ಕೊಠಡಿ ಸಂಖ್ಯೆ : 339, 3ನೇ ಮಹಡಿ
ವಿಧಾನ ಸೌಧ, ಬೆಂಗಳೂರು–560 001

# ಶುಭ ಸಂದೇಶ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗವು ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶವನ್ನು ರೂಪಿಸುವ ಬೃಹತ್ ಕಾರ್ಯ ಕೈಗೊಂಡಿದ್ದು, ಇದನ್ನು ಎರಡು ಸಂಪುಟಗಳಲ್ಲಿ ಹೊರತರಲು ಕಾರ್ಯೋನ್ಮುಖರಾಗಿದ್ದು, ಸುಮಾರು ಒಂದು ವರ್ಷ ಕಾಲದ ಪರಿಶ್ರಮದ ಫಲವಾಗಿ ಮೊದಲ ಸಂಪುಟವನ್ನು 2012ನೇ ಮೇ/ಜೂನ್ ಮಾಹೆಯಲ್ಲಿ ಪ್ರಕಟಿಸಲು ನಿರ್ಧರಿಸಿರುವುದು ಸಂತೋಷದ ವಿಷಯವಾಗಿದೆ. ಪ್ರಸ್ತುತ 1200ಕ್ಕಿಂತ ಅಧಿಕ ಪುಟಗಳ ಈ ಪ್ರಥಮ ಸಂಪುಟದಲ್ಲಿ 362 ಲೇಖನಗಳಿದ್ದು, ಇವು ಶಿಕ್ಷಣ ಶಾಸ್ತ್ರ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಪ್ರಶಿಕ್ಷಕರಿಗೆ, ಆಡಳಿತಗಾರರಿಗೆ, ಸಂಶೋಧಕರಿಗೆ ಹಾಗೂ ಶಿಕ್ಷಣ ಶಾಸ್ತ್ರದಲ್ಲಿ ಆಸಕ್ತಿ ಇರುವ ಎಲ್ಲ ಜನ ಸಾಮಾನ್ಯರಿಗೆ ಆಕರ ಗ್ರಂಥವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಕನ್ನಡ ಸಾರಸ್ವತ ಲೋಕಕ್ಕೆ ವಿಶೇಷವಾಗಿ ಶಿಕ್ಷಣಕ್ಷೇತ್ರಕ್ಕೆ ಇದು ಒಂದು ಅಪೂರ್ವ ಕೊಡುಗೆ ಎಂದು ನನ್ನ ಅನಿಸಿಕೆ. ಈ ಮೂಲಕ ಈ ವಿಶ್ವವಿದ್ಯಾನಿಲಯವು ಕನ್ನಡ ಭಾಷಾ ಅಭಿವೃದ್ಧಿಗೆ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ನೀಡಿದೆ ಎಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಹೊರತರಲಿರುವ ವಿಶ್ವಕೋಶವು ಸುಂದರವಾಗಿ ಮೂಡಿಬರಲೆಂದು ಶುಭವನ್ನು ಹಾರೈಸುತ್ತೇನೆ.

**(ಗೋವಿಂದ ಎಂ ಕಾರಜೋಳ)**



Digitised by Bharatavani, CIIL

**ಶ್ರೀ ಮನು ಬಳಿಗಾರ್**
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು.

# ಸಂದೇಶ

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸುದೀರ್ಘ ಇತಿಹಾಸವಿದೆ. ಭಾರತೀಯ ಭಾಷೆಗಳಲ್ಲಿ ಕನ್ನಡ ಭಾಷೆ ತನ್ನದೇ ಆದ ವಿಶಿಷ್ಠ ಸ್ಥಾನ ಪಡೆದುಕೊಂಡಿದೆ. ಇದುವರೆಗೆ ಎಂಟು ಸಲ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಕನ್ನಡ ಬರಹಗಾರರಿಗೆ ದೊರೆತಿರುವುದು ಕನ್ನಡ ಭಾಷೆ ಮತ್ತು ಸಾಹಿತ್ಯದ ಹಿರಿಮೆಗೆ ಸಾಕ್ಷಿಯಾಗಿದೆ. ದೀರ್ಘ ಹೋರಾಟದ ಫಲವಾಗಿ ಕನ್ನಡ ಭಾಷೆಗೂ ಭಾರತ ಸರ್ಕಾರ ಶಾಸ್ತ್ರೀಯ Classical ಭಾಷೆಯ ಸ್ಥಾನಮಾನ ನೀಡಿರುವುದು ಕನ್ನಡಿರಿಗೆ ಹರ್ಷವನ್ನುಂಟುಮಾಡಿದೆ. ಈ ಶುಭ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಉದಾರವಾದ ಧನ ಸಹಾಯ ನೀಡಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವೂ 2 ಕೋಟಿ ರೂ.ಗಳ ಅನುದಾನ ಪಡೆದಿದೆ.

ಈ ಅನುದಾನದ ಸಹಾಯದಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕನ್ನಡ ಭಾಷಾಭಿವೃದ್ಧಿಗೆ ಪ್ರೋತ್ಸಾಹಕವಾದ ಅನೇಕ ಕಾರ್ಯಕ್ರಮಗಳನ್ನು/ಯೋಜನೆಗಳನ್ನು ಆರಂಭಿಸಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಈ ದಿಶೆಯಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಎರಡು ಸಂಪುಟಗಳಲ್ಲಿ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶವನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸುವ ಯೋಜನೆಯನ್ನು ಕೈಗೊಂಡಿದೆ.

ಉನ್ನತ ಶಿಕ್ಷಣ ಮಟ್ಟದಲ್ಲಿ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಇತ್ತೀಚಿನ ದಶಕಗಳಲ್ಲಿ ಕ್ರಮೇಣ ಹೆಚ್ಚುತ್ತಲೇ ಇದೆ. ಈ ಪ್ರವೃತ್ತಿ ಬಿ.ಎಡ್. ಮತ್ತು ಎಂ.ಎಡ್. ಅಧ್ಯಯನಗಳಿಗೂ ಅನ್ವಯಿಸುತ್ತದೆ. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಬಯಸುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲೇ ಪುಸ್ತಕಗಳು, ವಿಶ್ವಕೋಶದಂಥ ಆಕರ ಗ್ರಂಥಗಳು ಹೆಚ್ಚು ಹೆಚ್ಚಾಗಿ ಲಭ್ಯವಾಗಬೇಕು. ಈ ನಿಟ್ಟಿನಲ್ಲಿ ಶಿಕ್ಷಣಶಾಸ್ತ್ರ ವಿಭಾಗ ಕೈಗೊಂಡಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಯೋಜನೆ ಪ್ರಶಂಸನೀಯ ಕಾರ್ಯವಾಗಿದೆ.

ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಅನೇಕ ಪಠ್ಯ ಪುಸ್ತಕಗಳು ಪ್ರಕಟವಾಗಿವೆ. ಡಾ. ಎನ್.ಎಸ್. ವೀರಪ್ಪನವರು ರಚಿಸಿದ ಶಿಕ್ಷಣಶಾಸ್ತ್ರ ನಿಘಂಟು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಈ ಹಿಂದೆ ಪ್ರಕಟಗೊಂಡಿದೆ. ಆದರೆ ಶಿಕ್ಷಣಶಾಸ್ತ್ರದ ವಿಷಯ ವಿಶ್ವಕೋಶ ಲಭ್ಯವಿರಲಿಲ್ಲ. ಈ ಕೊರತೆಯನ್ನು ಈಗ ಹೊರಬರಲಿರುವ ಶಿಕ್ಷಣಶಾಸ್ತ್ರ ವಿಶ್ವಕೋಶ ನಿವಾರಿಸುತ್ತದೆ.

ಪ್ರಸ್ತಾವಿತ ವಿಶ್ವಕೋಶ ಸುಮಾರು 1000 ಪುಟಗಳ ಎರಡು ಸಂಪುಟಗಳಲ್ಲಿ ಹೊರಬರಲಿದೆ. ಈ ಸಂಪುಟಗಳಲ್ಲಿ ಶಿಕ್ಷಣಶಾಸ್ತ್ರದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ನೂರಾರು ಲೇಖನಗಳು ಸೇರಿವೆ. ಈ ಯೋಜನೆಯ ಮೊದಲನೆ ಸಂಪುಟ ಇದೀಗ ಪ್ರಕಟಗೊಳ್ಳುತ್ತಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಈ ಸಂಪುಟಗಳು ಡಿ.ಎಡ್; ಬಿ.ಎಡ್. ಮತ್ತು ಎಂ.ಎಡ್. ವಿದ್ಯಾರ್ಥಿಗಳಿಗೆ ಹಾಗೂ ಎಲ್ಲಾ ಶಿಕ್ಷಣಾಸಕ್ತರಿಗೆ ಅತ್ಯಂತ ಉಪಯುಕ್ತ ಆಕರಗಳಾಗುತ್ತವೆ ಎಂದು ನನಗೆ ವಿಶ್ವಾಸವಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದ ಈ ಯೋಜನೆಯ ಮೊದಲ ಸಂಪುಟ ಪ್ರಕಟಗೊಳ್ಳುತ್ತಿರುವ ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳನ್ನು, ಶಿಕ್ಷಣಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಎನ್. ಲಕ್ಷ್ಮಿ ರವರನ್ನು ಮತ್ತು ಸಂಪಾದಕ ಮಂಡಳಿ ಸದಸ್ಯರನ್ನು ಅಭಿನಂದಿಸುತ್ತಾ ಈ ಯೋಜನೆಗೆ ಶುಭ ಹಾರೈಸುತ್ತೇನೆ.

ವಂದನೆಗಳೊಡನೆ,

**(ಮನು ಬಳಿಗಾರ್)**



Digitised by Bharatavani, CIIL

**ಶ್ರೀ ಬಸವರಾಜು**
ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

# ಸಂದೇಶ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೊಶ"ವನ್ನು ಹೊರತರುತ್ತಿರುವುದು ಸಂತೋಷದ ಸಂಗತಿಯಾಗಿರುತ್ತದೆ. ಈ ಗ್ರಂಥವು ಶಿಕ್ಷಣಶಾಸ್ತ್ರ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಪ್ರಶಿಕ್ಷಕರಿಗೆ, ಆಡಳಿತಗಾರರಿಗೆ, ಸಂಶೋಧಕರಿಗೆ ಹಾಗೂ ಭಾಷೆಯ ಬಗ್ಗೆ ಅಭಿಮಾನವುಳ್ಳ ಎಲ್ಲರಿಗೂ ಒಂದು ಆಕರ ಗ್ರಂಥವಾಗುವುದೆಂದು ಭರವಸೆ ಇದೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಬೆಳವಣಿಗೆಗೆ ಅಗತ್ಯವಾದ ಎಲ್ಲಾ ವಿಭಾಗಗಳ ಪರಿಪೂರ್ಣ ಬೆಳವಣಿಗೆಯಾಗಬೇಕಾದುದು ಅವಶ್ಯಕವಾಗಿದೆ. ಇಂತಹ ಸಂದರ್ಭದಲ್ಲಿ ಈ ಕೃತಿ ಬಿಡುಗಡೆಯಾಗುತ್ತಿರುವುದು ಸಂತಸದ ವಿಷಯ. ಈ ಕಾರ್ಯದಲ್ಲಿ ಭಾಗಿಯಾದ ಎಲ್ಲರಿಗೂ ಶುಭವಾಗಲೆಂದು ಹಾರೈಸುತ್ತೇನೆ.

**(ಬಸವರಾಜು)**



Digitised by Bharatavani, CIIL

Digitised by Bharatavani, CIIL

# ಪರಿವಿಡಿ

1. ಅಂಗವಿಕಲತೆಯ ವ್ಯಾಪ್ತಿ ಹಾಗೂ ಪರಿಣಾಮಗಳು ..... 1
2. ಅಂತರ್ಜಾಲ ..... 3
3. ಅಂತರರಾಷ್ಟ್ರೀಯ ಪ್ರಜ್ಞೆಯ ಶಿಕ್ಷಣ ..... 4
4. ಅಂತರ್ ಶಿಸ್ತಿನ ಉಪಕ್ರಮ ಮತ್ತು ಶಿಕ್ಷಣ ..... 5
5. ಅಂತಃಸ್ರಾವ ಗ್ರಂಥಿಗಳ ವ್ಯೂಹ ..... 7
6. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ ..... 11
7. ಅಖಿಲ ಭಾರತ ಸಂಶೋಧನಾ ಸಂಸ್ಥೆಗಳು ..... 11
8. ಅತೀಂದ್ರಿಯ ಅನುಭವಗಳು ..... 20
9. ಅಧ್ಯಾತ್ಮಿಕ ಬುದ್ಧಿಶಕ್ತಿ ..... 21
10. ಅಧ್ಯಾಪಕರ ಶಿಕ್ಷಣ ..... 24
11. ಅಧ್ಯಾಪಕರ ಶಿಕ್ಷಣದ ಉನ್ನತ ಸಂಸ್ಥೆಗಳು ..... 28
12. ಅನುದಾನ ಪದ್ಧತಿ ..... 33
13. ಅನುವಂಶೀಯತೆ ತಂತ್ರಗಳು ..... 35
14. ಅನುದೇಶ ..... 40
15. ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳು ..... 41
16. ಅನುವಂಶೀಯತೆ ಮತ್ತು ಪರಿಸರವಾದ ..... 45
17. ಅಪಸಮಾಯೋಜನೆ – ಅರ್ಥ, ಮೂಲಗಳು ..... 48
18. ಅಪಸ್ಮಾರ (ಎಪಿಲೆಪ್ಸಿ) ..... 49
19. ಅಪೂರ್ಣ ಸಾಧಕರ ಶಿಕ್ಷಣ ..... 51
20. ಅಭಿವೃತ್ತಿಗಳು/ಮನೋಭಾವಗಳು ..... 54
21. ಅಭ್ಯಾಸ ಬೋಧನೆ ..... 59
22. ಅರಬಿಂದೊ ಘೋಷ್ ..... 63
23. ಅವಧಾನ ..... 67
24. ಅವಲಂಬನ ಸಿದ್ಧಾಂತ ..... 69
25. ಅವಲೋಕನ ವಿಧಾನ ..... 71
26. ಆಂತರಿಕ ಮೌಲ್ಯಮಾಪನ ..... 74
27. ಆಧುನೀಕರಣ ಮತ್ತು ಶಿಕ್ಷಣ ..... 76
28. ಆನ್‌ಲೈನ್ ಪರೀಕ್ಷಾ ವ್ಯವಸ್ಥೆ ..... 79
29. ಆಲೋಚನೆ ಮತ್ತು ತಾರ್ಕಿಕತೆ ..... 80
30. ಆಲ್‌ಫ್ರೆಡ್ ನಾರ್ತ್ ವೈಟ್‌ಹೆಡ್ ..... 82
31. ಇತಿಹಾಸ ಮತ್ತು ಪೌರನೀತಿ ಬೋಧನೆ ..... 86
32. ಇಸ್ಲಾಂ ಕಾಲದ ಶಿಕ್ಷಣ ..... 90
33. ಈಶ್ವರಚಂದ್ರ ವಿದ್ಯಾಸಾಗರ ..... 92
34. ಉದಾರ ಶಿಕ್ಷಣ ..... 94



Digitised by Bharatavani, CIIL

35. ಉನ್ನತ ಪ್ರೌಢಶಾಲೆ/ಪದವಿ ಪೂರ್ವ ಶಿಕ್ಷಣ ವ್ಯವಸ್ಥೆ ... 97
36. ಏಕೋಪಾಧ್ಯಾಯ ಶಾಲೆಗಳು ... 100
37. ಓದುವ ಅಭ್ಯಾಸಗಳು ... 101
38. ಓದುವ ಮೂಲೆ ... 105
39. ಕಂಪ್ಯೂಟರ್‌ಗಳು ... 108
40. ಕರ್ನಾಟಕದಲ್ಲಿ ಅಧ್ಯಾಪಕ ಶಿಕ್ಷಣದ ವ್ಯವಸ್ಥೆ ... 110
41. ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಬೆಳವಣಿಗೆ ... 112
42. ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣ ವ್ಯವಸ್ಥೆ : ಪ್ರಸ್ಥುತ ಸ್ಥಿತಿ ... 115
43. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ವ್ಯವಸ್ಥೆ ... 118
44. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ ... 119
45. ಕರ್ನಾಟಕದಲ್ಲಿ ದೈಹಿಕ ಶಿಕ್ಷಣ ... 120
46. ಕರ್ನಾಟಕದಲ್ಲಿ ದೈಹಿಕ ಶಿಕ್ಷಣದ ಬೆಳವಣಿಗೆ ... 124
47. ಕರ್ನಾಟಕದಲ್ಲಿ ನಾಟಕ ಶಿಕ್ಷಣ (ರಂಗ ಶಿಕ್ಷಣ) ... 128
48. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ ... 129
49. ಕರ್ನಾಟಕದಲ್ಲಿ ಪ್ರೌಢ ಶಿಕ್ಷಣ ವ್ಯವಸ್ಥೆ ... 132
50. ಕರ್ನಾಟಕದಲ್ಲಿ ಪ್ರೌಢಶಾಲಾ ಶಿಕ್ಷಣದ ಬೆಳವಣಿಗೆ ... 136
51. ಕರ್ನಾಟಕದಲ್ಲಿ ಲಲಿತ ಕಲೆಗಳ ಶಿಕ್ಷಣದ ವ್ಯವಸ್ಥೆ ... 138
52. ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ... 140
53. ಕರ್ನಾಟಕದಲ್ಲಿ ವೈದ್ಯ ಶಿಕ್ಷಣ – ಪ್ರಸ್ತುತ ಸ್ಥಿತಿ ... 145
54. ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣದ ಬೆಳವಣಿಗೆ ... 148
55. ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು ... 157
56. ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ ... 160
57. ಕರ್ನಾಟಕದಲ್ಲಿ ಹಿಂದಿ ಶಿಕ್ಷಣ ... 163
58. ಕಲಿಕೆ ಮತ್ತು ಸ್ವವಿಕಾಸ ... 169
59. ಕಲಿಕೆಯ ಕನಿಷ್ಠ ಮಟ್ಟಗಳು ... 170
60. ಕೃತಕ ಬುದ್ಧಿಶಕ್ತಿ ... 172
61. ಕಾರ್ಯಾಗಾರಗಳು ... 173
62. ಕಿಶೋರರ ಶಿಕ್ಷಣ ... 174
63. ಕ್ರಿಯಾ ಸಂಶೋಧನೆ ... 176
64. ಕ್ವಿಜ಼್‌ಗಳು ... 180
65. ಕುಟುಂಬ ಮತ್ತು ಶಿಕ್ಷಣ ... 181
66. ಕೂಟ ವಿಶ್ಲೇಷಣೆ ... 183
67. ಕೇಂದ್ರೀಯ ಪ್ರವೃತ್ತಿ ಮಾಪಕಗಳು ... 185
68. ಕೇಂದ್ರೀಯ ವಿಶ್ವವಿದ್ಯಾನಿಲಯಗಳು ... 189
69. ಕ್ಷೇತ್ರ ಅಧ್ಯಯನ ... 191
70. ಗಣಿತಶಾಸ್ತ್ರ ಬೋಧನೆ ... 192
71. ಗುಂಪು ವರ್ತನೆಯ ಮನೋವಿಜ್ಞಾನ ಮತ್ತು ಶಿಕ್ಷಣ ... 195



Digitised by Bharatavani, CIIL

72. ಗೃಹ ಅರ್ಥಶಾಸ್ತ್ರ ... 198
73. ಗ್ರಂಥಾಲಯದ ಬಳಕೆಯ ಶಿಕ್ಷಣ ... 200
74. ಜನನ ಪೂರ್ವ ಅವಧಿ ... 201
75. ಜನಪದ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು ... 202
76. ಜನಸಂಖ್ಯಾ ಶಿಕ್ಷಣ ... 204
77. ಜಾಕೀರ್ ಹುಸೇನ್ ... 208
78. ಜ್ಞಾನ ನಿರ್ವಹಣೆ ... 210
79. ಜಾಗತೀಕರಣ ಮತ್ತು ಶಿಕ್ಷಣ ... 211
80. ಜಾತ್ಯತೀತತೆ ಮತ್ತು ಶಿಕ್ಷಣ ... 214
81. ಜಾನ್‌ಏಮಸ್ ಕೊಮೆನಿಅಸ್ ... 214
82. ಜಾನ್ ಡ್ಯೂಯಿ ... 216
83. ಜಾನ್ ಹೆನ್ರಿಚ್ ಪೆಸ್ಟಾಲಝಿ ... 219
84. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡಯಟ್ಸ್) ... 221
85. ಜೀನ್ ಜೇಕ್ವಿಸ್ ರೂಸೋ ... 227
86. ಜೀವ ಪರಿಸರ ವಿಜ್ಞಾನ ... 231
87. ಜೀವ ವಿಜ್ಞಾನಗಳ ಬೋಧನೆ ... 236
88. ಟೆಲಿ ಕಾನ್ಫರೆನ್ಸ್ ... 241
89. ಟ್ಯುಟೋರಿಯಲ್ ವ್ಯವಸ್ಥೆ ... 243
90. ತಂಡ ಬೋಧನೆ ... 248
91. ತಂತ್ರಜ್ಞಾನದ ಹಿನ್ನೆಲೆ ... 250
92. ತಪಶೀಲು ಪಟ್ಟಿಗಳು ... 253
93. ತಾರುಣ್ಯ (ಕೌಮಾರ್ಯ) ... 254
94. ತೆರೆದ ಪುಸ್ತಕ ಪರೀಕ್ಷೆಗಳು ... 256
95. ದರ್ಜಾಮಾಪನ ... 258
96. ದತ್ತಾಂಶಗಳ ಆಲೇಖೀಕರಣ ... 261
97. ದೃಕ್-ಶ್ರವಣ ಶಿಕ್ಷಣ ... 264
98. ದೈಹಿಕ ಶಿಕ್ಷಣ ವ್ಯವಸ್ಥೆ ... 267
99. ದೈಹಿಕ ಸವಾಲುಳ್ಳ ಮಕ್ಕಳ ಶಿಕ್ಷಣ ... 272
100. ದೂರದರ್ಶನ ... 275
101. ದೂರವಾಣಿ ಸಮಾಲೋಚನೆ ... 276
102. ದೂರ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು ... 277
103. ದೂರ ಶಿಕ್ಷಣದಲ್ಲಿ ಆನ್‌ಲೈನ್ ಕಾರ್ಯಕ್ರಮಗಳು ... 279
104. ದೂರ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ ... 281
105. ದೂರ ಶಿಕ್ಷಣದಲ್ಲಿ ಶೈಕ್ಷಣಿಕ ಸಮಾಲೋಚನೆ ... 284
106. ದೃಷ್ಟಾಂತ ದಾಖಲೆ ... 285
107. ದ್ವಂದ್ವಗಳು ... 286
108. ಧ್ಯಾನ ಮತ್ತು ಅರಿವಿನ ಮೇಲ್ಮಟ್ಟಗಳು ... 288



Digitised by Bharatavani, CIIL

109. ಧಾರ್ಮಿಕ ಶಿಕ್ಷಣ ..... 290
110. ದ್ವಿಭಾಷಾ ಶಿಕ್ಷಣ ..... 292
111. ನಗರೀಕರಣ ಮತ್ತು ಶಿಕ್ಷಣ ..... 294
112. ನವೋದಯ ಶಾಲೆಗಳು ..... 297
113. ನಾಗರಿಕತೆ ಮತ್ತು ಶಿಕ್ಷಣ ..... 298
114. ನಾಯಕತ್ವ – ಅರ್ಥ, ಕಾರ್ಯಗಳು ..... 299
115. ನಾಯಕತ್ವ ಪರಿಣಾಮಕಾರಿತ್ವ ..... 300
116. ನಾಯಕತ್ವದ ಶೈಲಿಗಳು ..... 302
117. ನಿರ್ಣಯಿಸುವಿಕೆ ..... 304
118. ನಿಧಾನ ಕಲಿಕಾರ್ಥಿಗಳ ಶಿಕ್ಷಣ ..... 307
119. ನಿಯೋಜಿತ ಕಾರ್ಯಗಳು ..... 309
120. ನಿರುದ್ಯೋಗ ಸಮಸ್ಯೆ ..... 313
121. ನೈದಾನಿಕ ಪರೀಕ್ಷೆಗಳು ..... 315
122. ಪಠ್ಯಕ್ರಮ – ಅರ್ಥ, ಅಂಗಗಳು ..... 317
123. ಪಠ್ಯಕ್ರಮಕ್ಕೆ ವ್ಯವಸ್ಥಾ ಉಪಕ್ರಮ ..... 319
124. ಪಠ್ಯಕ್ರಮದ ಮೌಲ್ಯಮಾಪನ ..... 323
125. ಪದವಿ ಪೂರ್ವ ಶಿಕ್ಷಣ ..... 327
126. ಪದವಿ ಪೂರ್ವ ಶಿಕ್ಷಣ ಮಂಡಳಿ ..... 330
127. ಪರ ಸಂಸ್ಕೃತೀಕರಣ ..... 333
128. ಪರಿಕಲ್ಪನಾ ನಕ್ಷೆ ..... 335
129. ಪರಿಸರ ಶಿಕ್ಷಣ ..... 337
130. ಪರಿಹಾರಾತ್ಮಕ ಬೋಧನೆ ..... 339
131. ಪರಿಗಣಿತ (ಡೀಮ್ಡ್) ವಿಶ್ವವಿದ್ಯಾನಿಲಯಗಳು–ಕರ್ನಾಟಕ ..... 342
132. ಪರ್ಯಾಯ ಶಿಕ್ಷಣ ..... 344
133. ಪರೀಕ್ಷೆಗಳ ಮಾನಕೀಕರಣ ..... 345
134. ಪಾಠ ವೀಕ್ಷಣೆ ..... 348
135. ಪಾಶ್ಚಿಮಾತ್ಯೀಕರಣ ಮತ್ತು ಶಿಕ್ಷಣ ..... 351
136. ಪಾಶ್ಚಾತ್ಯ ಶಿಕ್ಷಣ ಚಿಂತಕರು ಮತ್ತು ಶಿಕ್ಷಣ ..... 353
137. ಪೂರ್ವಗ್ರಹಗಳು ..... 357
138. ಪ್ರತಿಭಾವಂತ ಮಕ್ಕಳ ಶಿಕ್ಷಣ ..... 360
139. ಪ್ರತಿಭಾ ಪಲಾಯನ ..... 362
140. ಪ್ರತಿದರ್ಶಚಯನ ..... 364
141. ಪ್ರತ್ಯಕ್ಷಾನುಭವ ..... 368
142. ಪ್ರಾತ್ಯಕ್ಷಿಕೆ ಪಾಠಗಳು ..... 371
143. ಪ್ರವೇಶ ಪರೀಕ್ಷೆಗಳು ..... 372
144. ಪ್ರಶ್ನೆ ಪತ್ರಿಕೆಗಳ ರಚನೆ ..... 373
145. ಪ್ರಾಚೀನ ಸಾಂಪ್ರದಾಯಿಕ ಕಥೆಗಳಲ್ಲಿ ಶಿಕ್ಷಣ ..... 374



Digitised by Bharatavani, CIIL

146. ಪುನಶ್ಚೇತನ ಕಾರ್ಯಕ್ರಮಗಳು ..... 381
147. ಪೂರ್ವಗ್ರಹ ಮತ್ತು ಶಿಕ್ಷಣ ..... 383
148. ಪೌರತ್ವಕ್ಕಾಗಿ ಶಿಕ್ಷಣ ..... 385
149 ಪೌರತ್ವ ಶಿಕ್ಷಣ ಶಿಬಿರ ..... 386
150. ಪ್ಲೇಟೋ ..... 387
151. ಬದಲಾವಣೆಗಳ ನಿರ್ವಹಣೆ ..... 389
152. ಬಂಡವಾಳಶಾಹಿತ್ವ ..... 393
153. ಬಹುವರ್ಗ ಬೋಧನೆ ..... 394
154. ಬಹು-ಸಂಸ್ಕೃತಿಯ ಶಿಕ್ಷಣ ..... 397
155. ಬಾಲಕಿಯರ ಶಿಕ್ಷಣ ..... 398
156. ಬಾಲ್ಯಾವಸ್ಥೆಯಲ್ಲಿ ದೈಹಿಕ ಮತ್ತು ಗತ್ಯಾತ್ಮಕ ವಿಕಾಸ ..... 400
157. ಬಾಲ್ಯಾವಸ್ಥೆ ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸ ..... 401
158. ಬಾಲ್ಯಾವಸ್ಥೆ ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ ..... 403
159. ಬ್ರಿಟಿಷರ ಕಾಲದ ಶಿಕ್ಷಣ ..... 405
160. ಬುದ್ಧಿಶಕ್ತಿ ಮಾಪನ ..... 409
161. ಬುದ್ಧಿಶಕ್ತಿ ಸಿದ್ಧಾಂತಗಳು ..... 414
162. ಬೆಳವಣಿಗೆ ಮತ್ತು ವಿಕಾಸ ..... 419
163. ಬೋಧನಾ ತಂತ್ರಗಳು ..... 422
164. ಬೋಧನಾ ಪ್ರಭಾವಶೀಲತೆ ..... 423
165. ಬೋಧನಾ ಶೈಲಿ ..... 427
166. ಬೋಧನಾ ಸೂತ್ರಗಳು ..... 428
167. ಬೋಧನೆಗೆ ಯೋಜನೆ ..... 433
168. ಬೋಧನೆಯ ಪರಿಕಲ್ಪನೆ ..... 437
169. ಬೋಧನೆಯ ವ್ಯಕ್ತೀಕರಣ ..... 441
170. ಬೋಧನೆಯಲ್ಲಿ ಗ್ರಂಥಾಲಯಗಳ ಪಾತ್ರ ..... 445
171. ಬೋಧನೋದ್ದೇಶಗಳ ವರ್ಗೀಕರಣ ..... 446
172. ಬೋಧನೋದ್ದೇಶಗಳು-ಸಂವೇಗಾತ್ಮಕ ವಲಯ ..... 450
173. ಬೋಧನೋದ್ದೇಶಗಳು-ಸಂಜ್ಞಾನಾತ್ಮಕ ವಲಯ ..... 454
174. ಭಾರತದ ಮುಕ್ತ ವಿಶ್ವವಿದ್ಯಾನಿಲಯಗಳು ..... 458
175. ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆ ..... 461
176. ಭಾರತೀಯ ತತ್ವಶಾಸ್ತ್ರದಲ್ಲಿ ಕೆಲವು ಶೈಕ್ಷಣಿಕ ಪರಿಕಲ್ಪನೆಗಳು ..... 464
177. ಭಾರತದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ ..... 468
178. ಭಾರತದಲ್ಲಿ ಮಾಧ್ಯಮ ಶಿಕ್ಷಣದ ಬೆಳವಣಿಗೆ ..... 471
179. ಭಾರತದಲ್ಲಿ ಲಲಿತ (ಪ್ರದರ್ಶಕ) ಕಲೆಗಳ ಶಿಕ್ಷಣದ ಬೆಳವಣಿಗೆ ..... 476
180. ಭಾರತದಲ್ಲಿ ಸೈನಿಕ ಶಾಲೆಗಳು ..... 477
181. ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಮಿಶನರಿಗಳ ಕೊಡುಗೆ ..... 479
182. ಭಾರತೀಯ ಭಾಷಾ ವಿಶ್ವವಿದ್ಯಾನಿಲಯಗಳು ..... 484



Digitised by Bharatavani, CIIL

183. ಭಾರತೀಯ ಮೌಲ್ಯ ವ್ಯವಸ್ಥೆ ..... 489
184. ಭಾಷಾ ಆರ್ಜನೆ–ನೋಮ್ ಚೋಮ್‌ಸ್ಕಿಯ ವಿಚಾರಗಳು ..... 492
185. ಭಾಷಿತ ಕಲಿವಿನ ಪರಿಸರ ..... 494
186. ಭೂಗೋಳ ಶಾಸ್ತ್ರದ ಬೋಧನೆ ..... 495
187. ಬೇಸಿಗೆ ಶಿಬಿರಗಳು ..... 500
188. ಮಂಡಳಿ ಚರ್ಚೆ ..... 502
189. ಮನೋಪ್ರಚೋದಕ ಔಷಧಿಗಳು ..... 503
190. ಮನೋರೋಗಗಳು ..... 510
191. ಮನೋವಿಜ್ಞಾನದ ಅಧ್ಯಯನದ ವಿಧಾನಗಳು ..... 516
192. ಮನೋವಿಜ್ಞಾನದ ಪಂಥಗಳು ..... 521
193. ಮನೋವಿಜ್ಞಾನ–ಪರಿಭಾಷೆ, ವಿಕಾಸ ಪಥ, ವ್ಯಾಪ್ತಿ ..... 528
194. ಮನೋವಿಜ್ಞಾನದ ಶಾಖೆಗಳು ..... 532
195. ಮರಿಯಾ ಮಾಂಟೆಸ್ಸೊರಿ ..... 535
196. ಮಹಾತ್ಮಾ ಗಾಂಧೀಜಿ ..... 539
197. ಮಾದಕ ದ್ರವ್ಯ ವ್ಯಸನ ಮತ್ತು ಶಿಕ್ಷಣ ..... 541
198. ಮಾನವ ಹಕ್ಕುಗಳು ಮತ್ತು ಶಿಕ್ಷಣ ..... 543
199. ಮಾನಸಿಕ ಸ್ವಾಸ್ಥ್ಯ ..... 547
200. ಮಾನವ ಬಂಡವಾಳ ಮತ್ತು ಮಾನವ ಸಂಪನ್ಮೂಲ ವಿಕಾಸ ..... 549
201. ಮಾನವ ಸಂಬಂಧಗಳು ..... 551
202. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ..... 553
203. ಮಾಹಿತಿಯ ಸೂಪರ್ ಹೆದ್ದಾರಿ ..... 555
204. ಮಿದುಳು ನಕ್ಷೆ ..... 557
205. ಮೆದುಳಿನ ಪಾರ್ಶ್ವತೆ – ಶೈಕ್ಷಣಿಕ ನಿಹಿತಾರ್ಥಗಳು ..... 560
206. ಮೆದುಳಿನ ಪಾರ್ಶ್ವವಾಯು (Cerebral Palsy) ..... 563
207. ಮೇಲ್ವಿಚಾರಿತ ಅಧ್ಯಯನ ..... 567
208. ಮೈಸೂರು ಒಡೆಯರ್ ದೊರೆಗಳ ಆಳ್ವಿಕೆಯಲ್ಲಿ ಶಿಕ್ಷಣ ..... 570
209. ಮೌಖಿಕ ಪರೀಕ್ಷೆ ..... 572
210. ಮೌಲ್ಯಮಾಪನ – ಅರ್ಥ, ಉದ್ದೇಶಗಳು ..... 573
211. ಮೌಲ್ಯಮಾಪನದ ಕಾರ್ಯಗಳು ..... 575
212. ಮೌಲ್ಯಮಾಪನದ ವಿಧಗಳು ..... 577
213. ಮೌಲ್ಯಮೀಮಾಂಸೆ ಮತ್ತು ಶಿಕ್ಷಣ ..... 578
214. ಮೌಲ್ಯ ಶಿಕ್ಷಣ ..... 580
215. ಮೃತ್ಯು ಶಿಕ್ಷಣ ..... 580
216. ಯೋಗ ಚಿಕಿತ್ಸೆ ..... 584
217. ಯೋಗ ಮತ್ತು ಶಿಕ್ಷಣ ..... 587
218. ಯೋಜಿತ ಬೋಧನಾ ಸಾಮಗ್ರಿಗಳ ಮೌಲ್ಯಮಾಪನ ..... 591
219. ರಕ್ಷಣಾ ತಂತ್ರಗಳು ..... 599



Digitised by Bharatavani, CIIL

220. ರವೀಂದ್ರನಾಥ ಟ್ಯಾಗೂರ್ ... 602
221. ರಾಚನಿಕವಾದ ಮತ್ತು ಶಿಕ್ಷಣ ... 604
222. ರಾಜ್ಯ ಸಂಪನ್ಮೂಲ ಕೇಂದ್ರ – ಕರ್ನಾಟಕ ... 610
223. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ ... 613
224. ರಾಧಾಕೃಷ್ಣನ್ ಎಸ್. ... 615
225. ರಾಷ್ಟ್ರೀಯ ಅಧ್ಯಾಪಕ ಪ್ರಶಿಕ್ಷಣ ಪರಿಷತ್ತು ... 617
226. ರಾಷ್ಟ್ರೀಯ ಪಠ್ಯಕ್ರಮ ... 620
227. ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ... 621
228. ರಾಷ್ಟ್ರೀಯ ಮನಃಸ್ವಾಸ್ಥ್ಯ ಮತ್ತು ನರವಿಜ್ಞಾನ ಸಂಸ್ಥೆ (NIMHANS), ಬೆಂಗಳೂರು ... 623
229. ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಮಾಪನ ಪರಿಷತ್ತು (NAAC) ... 624
230. ರಾಷ್ಟ್ರೀಯ ಸೇವಾ ಯೋಜನೆ ... 626
231. ರಾಷ್ಟ್ರೀಯ ಸ್ವಯಂ ಸೇವಕ ಸಂಘ ... 626
232. ರೂಢಕಲ್ಪನೆಗಳು ... 628
233. ರೇಡಿಯೋ ... 629
234. ಲಿಂಗ ಶಿಕ್ಷಣ ... 632
235. ಲಿಖಿತ ಪರೀಕ್ಷೆ ... 636
236. ವರ್ಗ ವ್ಯವಸ್ಥೆ ಮತ್ತು ಶಿಕ್ಷಣ ... 642
237. ವಸ್ತುನಿಷ್ಠ ಪರೀಕ್ಷಾಂಶಗಳು ... 643
238. ವೃದ್ಧಾಪ್ಯ ... 645
239. ವೈಗಾಸ್ಕಿಯವರ ಸಾಮಾಜಿಕ-ಸಾಂಸ್ಕೃತಿಕ ಸಿದ್ಧಾಂತ ... 650
240. ವ್ಯವಸ್ಥಾ ಉಪಕ್ರಮ – ಶಿಕ್ಷಣದಲ್ಲಿ ... 651
241. ವಿಕಾಸಾತ್ಮಕ ಕಾರ್ಯಗಳು ... 656
242. ವಿಚಾರ ಗೋಷ್ಠಿ ... 659
243. ವಿಚಾರ ಸಂಕಿರಣ ... 661
244. ವಿಮರ್ಶಾತ್ಮಕ ಬೋಧನೆ ... 664
245. ವಿದ್ಯಾರ್ಥಿ ಸಕ್ರಿಯತೆ ... 666
246. ವಿದ್ಯುನ್ಮಾನ ಅಂಚೆ (ಇ-ಮೇಲ್) ... 670
247. ವಿಶೇಷ ಅಗತ್ಯವಿರುವ (ಸವಾಲುಳ್ಳ) ಮಕ್ಕಳಿಗೆ ವರ್ತನಾ ಚಿಕಿತ್ಸೆ ... 672
248. ವಿಶೇಷ ಶಿಕ್ಷಣ ಮತ್ತು ಪ್ರಶಿಕ್ಷಣ ಕಾರ್ಯಕ್ರಮಗಳು ... 673
249. ವಿಶೇಷ ಶಿಕ್ಷಣದಲ್ಲಿ ಸರ್ಕಾರಗಳ ಪಾತ್ರ ... 677
250. ವಿಶ್ವವಿದ್ಯಾನಿಲಯ ಅನುದಾನ ಆಯೋಗ ... 679
251. ವಿಶ್ವವಿದ್ಯಾನಿಲಯಗಳು – ಕರ್ನಾಟಕದ ... 680
252. ವಿಷಯ ಕೊಠಡಿಗಳು ... 686
253. ವಿಷಯ ವಸ್ತು ವಿಶ್ಲೇಷಣೆ ... 688
254. ವಿಸ್ಮರಣೆಯ(ಮರೆವು) ಸ್ವರೂಪ ... 691
255. ವಿಜ್ಞಾನ ಬೋಧನೆಯಲ್ಲಿ ಪ್ರಯೋಗಾಲಯಗಳ ಪಾತ್ರ ... 694
256. ವೇದಕಾಲೀನ ಶಿಕ್ಷಣ ... 695



Digitised by Bharatavani, CIIL

257. ವೇದಾಂತ ದರ್ಶನ ಮತ್ತು ಶಿಕ್ಷಣ ... 697
258. ಶ್ರವಣ ಸವಾಲುಳ್ಳ ಮಕ್ಕಳ ಶಿಕ್ಷಣ ... 699
259. ಶಾಲೆ ಒಂದು ಸಾಮಾಜಿಕ ಸಂಸ್ಥೆಯಾಗಿ ... 703
260. ಶ್ರೇಣೀಕರಣ ವ್ಯವಸ್ಥೆ ... 704
261. ಶಿಕ್ಷಕ ನಿರ್ಮಿತ ಪರೀಕ್ಷೆಗಳು ... 706
262. ಶಿಕ್ಷಣದ ಅವಕಾಶಗಳ ಸಮಾನೀಕರಣ ... 709
263. ಶಿಕ್ಷಣದಲ್ಲಿ ಪಾಡ್‌ಕ್ಯಾಸ್ಟಿಂಗ್ ... 714
264. ಶಿಕ್ಷಣದ ವಿವಿಧ ಹಂತಗಳಲ್ಲಿ ಶೈಕ್ಷಣಿಕ ಆಡಳಿತ ... 715
265. ಶಿಕ್ಷಣ ಮತ್ತು ಆರ್ಥಿಕ ಗುಣಮಟ್ಟ ... 717
266. ಶಿಕ್ಷಣ ಮತ್ತು ಬಂಡವಾಳ ಹೂಡಿಕೆ ... 718
267. ಶಿಕ್ಷಣದ ಪ್ರತಿಫಲದ ಲೆಕ್ಕಾಚಾರ ... 720
268. ಶಿಕ್ಷಣದ ವೆಚ್ಚಗಳು ... 722
269. ಶಿಕ್ಷಣದಲ್ಲಿ ಕಂಪ್ಯೂಟರ್ ... 723
270. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ... 725
271. ಶಿಸ್ತಿನ ಪರಿಕಲ್ಪನೆ ... 731
272. ಶಿಕ್ಷಣದ ಅರ್ಥಶಾಸ್ತ್ರೀಯ ಪರಿಕಲ್ಪನೆಗಳು ... 734
273. ಶಿಕ್ಷಣದಲ್ಲಿ ಮೇಲ್ವಿಚಾರಣೆ ಮತ್ತು ತನಿಖೆ ... 736
274. ಶಿಕ್ಷಣದಲ್ಲಿ ವೆಚ್ಚ – ಪ್ರತಿಫಲ ವಿಶ್ಲೇಷಣೆ ... 738
275. ಶಿಕ್ಷಣದಲ್ಲಿ ಸಂಪನ್ಮೂಲಗಳ ಕ್ರೋಢೀಕರಣ ... 740
276. ಶೈಶವಾವಸ್ಥೆ–ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸ ... 742
277. ಶೈಕ್ಷಣಿಕ ಅರ್ಥಶಾಸ್ತ್ರ – ಸ್ವರೂಪ ಮತ್ತು ವ್ಯಾಪ್ತಿ ... 746
278. ಶೈಕ್ಷಣಿಕ ಅಳತೆ ... 748
279. ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆ ... 750
280. ಶೈಕ್ಷಣಿಕ ಉದ್ದೇಶಗಳ ಪರಿಷ್ಕೃತ ಮಾದರಿಗಳು ... 753
281. ಶೈಕ್ಷಣಿಕ ಕ್ರಿಯಾಶೀಲತೆ ... 759
282. ಶೈಕ್ಷಣಿಕ ತತ್ವಶಾಸ್ತ್ರ ... 760
283. ಶೈಕ್ಷಣಿಕ ದೂರದರ್ಶನ ... 763
284. ಶೈಕ್ಷಣಿಕ ಪ್ರವಾಸ ... 766
285. ಶೈಕ್ಷಣಿಕ ಮನೋವಿಜ್ಞಾನದ ಅರ್ಥ ಮತ್ತು ವ್ಯಾಪ್ತಿ ... 767
286. ಶೈಕ್ಷಣಿಕ ಮೇಲ್ವಿಚಾರಣೆ ... 768
287. ಶೈಕ್ಷಣಿಕ ಯೋಜನೆ ... 771
288. ಶೈಕ್ಷಣಿಕ ರೇಡಿಯೋ ... 772
289. ಶೈಕ್ಷಣಿಕ ವೀಡಿಯೋಗಳು ... 776
290. ಶೈಕ್ಷಣಿಕ ಸಮಾನಾವಕಾಶದ ಪರಿಕಲ್ಪನೆ ... 779
291. ಶೈಕ್ಷಣಿಕ ಸಂಶೋಧನೆಯ ಸ್ವರೂಪ ... 781
292. ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು ... 783
293. ಸಮಾಯೋಜಿತ ವ್ಯಕ್ತಿತ್ವ ... 785
294. ಸರತಿ ವ್ಯವಸ್ಥೆ ... 787



Digitised by Bharatavani, CIIL

295. ಸಹಕಾರಾತ್ಮಕ ಬೋಧನೆ ... 787
296. ಸಂಪನ್ಮೂಲ ಕೇಂದ್ರಗಳು ... 791
297. ಸಂಪ್ರದಾಯರಹಿತ ಶಿಕ್ಷಣದ ಉದ್ದೇಶಗಳು ಮತ್ತು ವ್ಯಾಪ್ತಿ ... 794
298. ಸಂಬಂಧ ಅಭಿವೃದ್ಧಿ ತಂತ್ರಗಳು ... 796
299. ಸಂವೇಗಾತ್ಮಕ ಬುದ್ಧಿಶಕ್ತಿ ... 799
300. ಸಂವೇದನೆ ... 804
301. ಸಂವೇದನಾಂಗಗಳು ... 805
302. ಸಂಶೋಧನಾ ಸಮಸ್ಯೆಯ ಆಯ್ಕೆ ... 807
303. ಸಂಶೋಧನಾ ವರದಿ ತಯಾರಿಕೆ ... 810
304. ಸಂಸ್ಕೃತಿ ಮತ್ತು ಶಿಕ್ಷಣ ... 812
305. ಸಂಸ್ಕೃತೀಕರಣ ಮತ್ತು ಶಿಕ್ಷಣ ... 816
306. ಸಂಸ್ಕೃತಿಯ ವರ್ಗಾವಣೆ ಮತ್ತು ಶಿಕ್ಷಣ ... 818
307. ಸಂಸ್ಕೃತಿಯ ಹಿಂಬೀಳುವಿಕೆ ಮತ್ತು ಶಿಕ್ಷಣ ... 820
308. ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತಗಳು ... 823
309. ಸಮಾಜಮಿತಿ ತಂತ್ರ ... 829
310. ಸಮಾಜವಾದ ಮತ್ತು ಶಿಕ್ಷಣ ... 831
311. ಸಮಾಜಶಾಸ್ತ್ರ ಮತ್ತು ಶಿಕ್ಷಣ ... 832
312. ಸಮಾಯೋಜನೆ – ಅರ್ಥ, ಪ್ರಕ್ರಿಯೆ ... 834
313. ಸಮಾಯೋಜನೆ ಮತ್ತು ಧ್ಯಾನ ... 835
314. ಸಮುದಾಯ ಮತ್ತು ಶಿಕ್ಷಣ ... 837
315. ಸಮೂಹ ಗತಿಶಾಸ್ತ್ರ ... 839
316. ಸಮೂಹ ಘರ್ಷಣೆಗಳ ಪರಿಹಾರ ... 842
317. ಸಮೂಹ ಸಂಘರ್ಷ ಮತ್ತು ಶಿಕ್ಷಣ ... 845
318. ಸರ್ವ ಶಿಕ್ಷಣ ಅಭಿಯಾನ (ಎಸ್.ಎಸ್.ಎ.) ... 847
319. ಸರ್ವಜ್ಞನ ವಚನಗಳಲ್ಲಿ ಶೈಕ್ಷಣಿಕ ಚಿಂತನೆಗಳು ... 849
320. ಸವಾಲುಳ್ಳ ಮಕ್ಕಳ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ ... 850
321. ಸವಾಲುಗಳುಳ್ಳ (ವಿಶೇಷ ಅಗತ್ಯವುಳ್ಳ) ಮಕ್ಕಳಿಗೆ ವೃತ್ತಿ ಶಿಕ್ಷಣ ... 852
322. ಸರ್ವೋದಯ ಆಂದೋಲನ ಮತ್ತು ಶಿಕ್ಷಣ ... 853
323. ಸೃಜನಶೀಲತೆ ಮತ್ತು ಮಾನವ ಸಂಬಂಧಗಳು ... 856
324. ಸೃಜನಶೀಲ ಮಕ್ಕಳ ಲಕ್ಷಣಗಳು ... 857
325. ಸಾಮಾಜಿಕ ಸಕ್ರಿಯತೆ ... 859
326. ಸಾಧನಾ ಅಭಿಪ್ರೇರಣೆ ... 863
327. ಸ್ಕೌಟ್ಸ್ ಮತ್ತು ಗೈಡ್ಸ್ ... 865
328. ಸ್ವತಂತ್ರ ಭಾರತದಲ್ಲಿ ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳ ಪಾತ್ರ ... 866
329. ಸ್ಪರ್ಧಾತ್ಮಕ ಪರೀಕ್ಷೆಗಳು ... 870
330. ಸ್ಮರಣೆಯ ಮಾದರಿಗಳು ... 870
331. ಸ್ಮರಣೆಯ ಸ್ವರೂಪ ... 872



Digitised by Bharatavani, CIIL

332. ಸ್ವನಿರ್ದೇಶಿತ ಕಲಿಕೆ ........ 874
333. ಸ್ವಮೌಲ್ಯಮಾಪನ ........ 876
334. ಸ್ವ-ಸಂಸ್ಕೃತೀಕರಣ ........ 878
335. ಸ್ವಯಂ-ನಿರ್ವಹಣಾ ತಂತ್ರಗಳು ........ 880
336. ಸಾಂಖ್ಯದರ್ಶನ ಮತ್ತು ಶಿಕ್ಷಣ ........ 881
337. ಸಾಂಸ್ಕೃತಿಕ ಕಟ್ಟಳೆಗಳು ಮತ್ತು ಶಿಕ್ಷಣ ........ 884
338. ಸಾಂಸ್ಥಿಕ ಯೋಜನೆ ........ 890
339. ಸಾಧನಾ ಪರೀಕ್ಷೆಗಳು ........ 893
340. ಸಾಮಾಜಿಕ ಅಂತರ್‌ಕ್ರಿಯೆ ಮತ್ತು ಶಿಕ್ಷಣ ........ 897
341. ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ ........ 900
342. ಸಾಮಾಜಿಕ ಚಲನೆ ಮತ್ತು ಶಿಕ್ಷಣ ........ 901
343. ಸಾಮಾಜಿಕ ನಿಯಂತ್ರಣ ಮತ್ತು ಶಿಕ್ಷಣ ........ 903
344. ಸಾಮಾಜಿಕ ನ್ಯಾಯ ಮತ್ತು ಶಿಕ್ಷಣ ........ 905
345. ಸಾಮಾಜಿಕ ಬದಲಾವಣೆ ಮತ್ತು ಶಿಕ್ಷಣ ........ 907
346. ಸಾಮಾಜಿಕ ವ್ಯವಸ್ಥೆ ಮತ್ತು ಶಿಕ್ಷಣ ........ 913
347. ಸಾಮಾಜಿಕ ಸಮೂಹ ........ 916
348. ಸಾಮಾಜಿಕ ಸ್ತರೀಕರಣ ಮತ್ತು ಶಿಕ್ಷಣ ........ 918
349. ಸಾಮಾಜೀಕರಣ ಮತ್ತು ಶಿಕ್ಷಣ ........ 920
350. ಸಾರ್ವಜನಿಕ ಶಿಕ್ಷಣ ಇಲಾಖೆ ........ 921
351. ಸಾಹಿತ್ಯ ಬೋಧನೆ ........ 925
352. ಸ್ವಾಮಿ ವಿವೇಕಾನಂದ ........ 928
353. ಸ್ವಾಯತ್ತ ಕಾಲೇಜುಗಳು ........ 933
354. ಸ್ಥಿತ ಪ್ರಜ್ಞತ್ವದ ಪರಿಕಲ್ಪನೆ ........ 935
355. ಸ್ತ್ರೀವಾದ ಮತ್ತು ಶಿಕ್ಷಣ ........ 936
356. ಸೆಬಾಟಿಕ್ ರಜೆ ........ 940
357. ಸೆಮಿಸ್ಟರ್ ವ್ಯವಸ್ಥೆ ........ 941
358. ಸೆಂಟಿಮೆಂಟ್ ಅಥವಾ ರಸಭಾವ ........ 943
359. ಸೇವಾದಳ ........ 944
360. ಸೂಕ್ಷ್ಮ (ಅಣು) ಬೋಧನೆ ........ 945
361. ಹರ್ಬಾರ್ಟನ ಪಂಚಸೋಪಾನಗಳು ........ 949
362. ಹೋಲೋಗ್ರಫಿ ........ 951
363. ಪ್ರಧಾನ ಸಂಪಾದಕರ ಕಿರು ಪರಿಚಯ ........ 953
364. ಸಲಹಾ ಸಮಿತಿ ಸದಸ್ಯರ ಕಿರು ಪರಿಚಯ ........ 954
365. ಸಂಪಾದಕ ಮಂಡಳಿ ಸದಸ್ಯರ ಕಿರು ಪರಿಚಯ ........ 955
366. ಯೋಜನಾ ಸಹಾಯಕರ ಕಿರು ಪರಿಚಯ ........ 956
367. ಲೇಖಕರ ಕಿರು ಪರಿಚಯ ........ 956




Digitised by Bharatavani, CIIL

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

# ಶಿಕ್ಷಣ

## ಅ

### ಅಂಗವಿಕಲತೆಯ ವ್ಯಾಪ್ತಿ ಹಾಗೂ ಪರಿಣಾಮಗಳು

ಭಾರತದಲ್ಲಿ ಅಂಗವಿಕಲತೆಯು ತಂದೊಡ್ಡಿರುವ ಸವಾಲುಗಳು ಅಪರಿಮಿತವಾಗಿವೆ ಮತ್ತು ಅದರ ಸಂಪೂರ್ಣ ಚಿತ್ರಣ ಪಡೆಯುವುದು ಕಷ್ಟವಾಗಿದೆ. 1947ರ ನಂತರ ನಿಯುಮಿತ ಅಭಿವೃದ್ಧಿಯನ್ನು ಕಾಣಬಹುದಾಗಿದೆ. ಭಾರತದಲ್ಲಿ ಒಟ್ಟು 32 ಅಂಧರಿಗಾಗಿ ಶಾಲೆಗಳು, 30 ಶ್ರವಣದೋಷ ಉಳ್ಳವರಿಗಾಗಿ ಶಾಲೆಗಳು ಮತ್ತು 3 ಮಾನಸಿಕ ಅಸ್ವಸ್ಥ ಮಕ್ಕಳಿಗಾಗಿ ಶಾಲೆಗಳಿದ್ದವು. ಈಗ ಸುಮಾರು 2,500 ವಿಶೇಷ ಶಾಲೆಗಳಿವೆ. ರಾಷ್ಟ್ರೀಯ ಅಂಕಿಅಂಶಗಳ ಪ್ರಕಾರ:

- 102 ಕೋಟಿ ಜನಸಂಖ್ಯೆಯಲ್ಲಿ ಸುಮಾರು 5% ಅಂಗವಿಕಲರಿದ್ದಾರೆ (2% ಶಾರೀರಿಕ ಮತ್ತು 3% ಮಾನಸಿಕ ಅಂಗವಿಕಲರು).
- 5 ಮಿಲಿಯನ್ ಜನರು ಅಸಮರ್ಥರು.
- ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರು ಈ ಸಮಸ್ಯೆಯನ್ನು ಬಹಳವಾಗಿ ಎದುರಿಸುತ್ತಿದ್ದಾರೆ. ಯೂನಿಸೆಫ್ ಅಂಕಿಅಂಶಗಳಂತೆ 0 ಯಿಂದ 14 ವರ್ಷದೊಳಗಿನ 300 ಮಿಲಿಯನ್ ಮಕ್ಕಳು ಅಂಗವಿಕಲರಿದ್ದಾರೆ. ಅಂದರೆ ಒಟ್ಟಾರೆ ಭಾರತದಲ್ಲಿ 6 ರಿಂದ 30 ಮಿಲಿಯನ್ ಅಂಗವಿಕಲ ಮಕ್ಕಳಿದ್ದಾರೆ.

**ಅಂಗವಿಕಲತೆಯ ವ್ಯಾಖ್ಯಾನ:** ಅಂಗವಿಕಲತೆಯ ವಿವಿಧ ಆಯಾಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ನಿರ್ದಿಷ್ಟ ವ್ಯಾಖ್ಯಾನವನ್ನು ಕೊಡುವುದು ಕಷ್ಟ. ಅನೇಕಾನೇಕ ಅಂಗವಿಕಲತೆಗಳು ಮತ್ತು ಅದಕ್ಕೆ ನಿರ್ದಿಷ್ಟ ಕಾರಣಗಳೂ ಇವೆ. ಕೆಲವು ಮಕ್ಕಳು ಹುಟ್ಟುತ್ತಲೇ ಅಂಗವಿಕಲತೆ ಹೊಂದಿರುತ್ತಾರೆ. ಮತ್ತೆ ಕೆಲವರು ಮುಂದಿನ ಜೀವಿತಾವಧಿಯಲ್ಲಿ ಅಂಗವಿಕಲರಾಗಬಹುದು. ಅದರಲ್ಲಿ ಕೆಲವು ಅಂಗವಿಕಲತೆಗಳು ಶಾಶ್ವತವಾಗಿ ಉಳಿಯುವಂತಹವು ಮತ್ತು ಕೆಲವು ವೈದ್ಯಕೀಯ ಸೌಲಭ್ಯದಿಂದ ಗುಣವಾಗುವಂತಹವು. ಕೆಲವು ಅಂಗವಿಕಲತೆಗಳು ದೇಹದ ಒಳಗಿದ್ದು ಹೊರಪ್ರಪಂಚಕ್ಕೆ ಕಾಣದೆಯೇ ಹೋಗಬಹುದು. (ಉದಾಹರಣೆಗೆ ರಕ್ತಸ್ರಾವ ರೋಗ ಹೀಮೊಫೀಲಿಯ.) ಆದ್ದರಿಂದ ಅಂಗವಿಕಲತೆಯ ವ್ಯಾಖ್ಯಾನವು ಕಾಲದಿಂದ ಕಾಲಕ್ಕೆ ಬದಲಾಗಬಹುದು. ಕೆಲವು ಅಂಗವಿಕಲತೆಯು ಕಡಿಮೆ ಮಟ್ಟದಲ್ಲಿದ್ದು ನಿತ್ಯಜೀವನದ ಕಾರ್ಯಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳಲು ಸಮರ್ಥರಿದ್ದು ಮತ್ತೆ ಕೆಲವರು ಜೀವನ ಪೂರ್ತಿ ಮತ್ತೊಬ್ಬರ ಸಹಾಯಕ್ಕಾಗಿ ಕಾಯಬೇಕಾಗುತ್ತದೆ. ಅಷ್ಟೇ ಅಲ್ಲದೆ ವ್ಯಕ್ತಿ, ಸಂಪ್ರದಾಯ, ಸಾಮಾಜಿಕ, ಆರ್ಥಿಕತೆ, ಪರಿಸರ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ವ್ಯಾಖ್ಯಾನಿಸಬೇಕಿದೆ.

ಹೆಲೆಂಡರ್ ಸರಳವಾದ ಒಂದು ವ್ಯಾಖ್ಯಾನವನ್ನು ಹೀಗೆ ಕೊಟ್ಟಿದ್ದಾರೆ. – 'ವ್ಯಕ್ತಿಯು ತನ್ನ ಕಾಣುವಿಕೆಯಲ್ಲಿ ಮತ್ತು ವರ್ತನೆಯಲ್ಲಿ ವಿಭಿನ್ನತೆಯನ್ನು ಹೊಂದಿದ್ದರೆ ಅವರನ್ನು ಅಂಗವಿಕಲರು' ಎನ್ನಬಹುದು. ಕೆಲವು ಸಂದರ್ಭಗಳಲ್ಲಿ ಅಸಮರ್ಥ ವ್ಯಕ್ತಿಗಳು ಕಾರ್ಯಚಟುವಟಿಕೆಯಲ್ಲಿ ಹಿಂದುಳಿದಿರುತ್ತಾರೆ. ಕಾರ್ಯಾತ್ಮಕ ಅಂಗವಿಕಲತೆಯು ದೈಹಿಕ ಅಸಾಮರ್ಥ್ಯವನ್ನು, ಕ್ರಿಯಾಸಂಬಂಧಿ ಅಂಗವಿಕಲತೆಯು ವ್ಯಕ್ತಿಯ ಅಸಾಮರ್ಥ್ಯತೆಯನ್ನು ಸೂಚಿಸುತ್ತದೆ.

ವರ್ಲ್ಡ್ ಹೆಲ್ತ್ ಆರ್ಗನೈಜೇಷನ್ (WHO) ಪ್ರಪಂಚದ ಎಲ್ಲ ಸ್ಥಳಗಳಿಗೂ ಹೊಂದಿಕೊಳ್ಳುವಂತೆ 2001ರಲ್ಲಿ ಅಂಗವಿಕಲತೆಯ ವರ್ಗೀಕರಣದ ಒಂದು ಪಟ್ಟಿಯನ್ನು ಬಿಡುಗಡೆ ಮಾಡಿ ಅದಕ್ಕೆ ICIDH-2 ವರದಿಯ ಪ್ರಕಾರ ಔಪಚಾರಿಕವಾಗಿ ಹೀಗೆ ಶೀರ್ಷಿಕೆ ಕೊಡಲಾಗಿದೆ: ``International Classification of Functioning and Disability'' ಅಥವಾ ICF ಎಂದು. ಈ ಪದ್ಧತಿಯಂತೆ ಅಸ್ತವ್ಯಸ್ತತೆ,

Digitised by Bharatavani, CIIL

ಅಸಾಮರ್ಥ್ಯ ಮತ್ತು ಅಂಗವಿಕಲತೆ ಈ ಮೂರೂ ಪರಿಕಲ್ಪನೆಗಳನ್ನು ಎರಡು ಗುಂಪಿನಡಿ ತರಲಾಯಿತು. "ಶಾರೀರಿಕ ಕಾರ್ಯಗಳು ಮತ್ತು ರಚನೆ" (ಅಸ್ವಸ್ಥತೆ ಎಂಬ ಮಾರ್ಪಾಡು), "ಕ್ರಿಯೆ ಮತ್ತು ಪಾಲ್ಗೊಳ್ಳುವಿಕೆ" (ಅಂಗವಿಕಲತೆ ಎಂಬ ಮಾರ್ಪಾಡು)– ಈ ಮಾರ್ಪಾಡುಗಳನ್ನು ಹೆಚ್ಚು ಹೆಚ್ಚು ಧನಾತ್ಮಕ ಮನೋಭಾವ ಉಂಟುಮಾಡಲು ಮಾಡಲಾಗಿದೆ. ಮೊದಲಿನ "ಅಸಾಮರ್ಥ್ಯ" ಎಂಬ ಪರಿಕಲ್ಪನೆಯನ್ನು ಈಗ ಶಾರೀರಿಕ ಕ್ರಿಯೆಗಳಿಗೆ ಮಾತ್ರ ಸಂಬಂಧಿಸಿದ್ದು ವೈಯಕ್ತಿಕ ಹಾಗೂ ಸಾಮಾಜಿಕ ಸ್ತರಗಳಲ್ಲಿ ಮಾತ್ರ ನೋಡಲಾಗುತ್ತದೆ. ಈಗಿನ ಹೊಸ ವ್ಯವಸ್ಥೆಯು "ಪಾರಿಸರಿಕ ಪ್ರಭಾವ", "ಶಾರೀರಿಕ ಪ್ರಕೃತಿ", "ಸಾಮಾಜಿಕ ವ್ಯವಸ್ಥೆ" ಮತ್ತು "ವ್ಯಕ್ತಿಯ ಗುಣಗಳು" ಈ ಎಲ್ಲ ಅಂಶಗಳನ್ನು ಒಳಗೊಂಡಂತೆ ತನ್ನ ವ್ಯಾಖ್ಯಾನವನ್ನು ಮಾಡಿದೆ.

**ಅಂಗವಿಕಲತೆಯ ವಿಧಗಳು:** ಅಂಗವಿಕಲತೆಯನ್ನು ಒಂದು ಸಾಮಾನ್ಯ ಗುಂಪಿನೊಂದಿಗೆ ವರ್ಗೀಕರಿಸಲು ಸಾಧ್ಯವಿಲ್ಲ. ಬೇಡಿಕೆ ಮತ್ತು ಅಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡಂತೆ ವಿಭಾಗಿಸಬಹುದಾಗಿದೆ.

1. **ಭೌತಿಕ ಮತ್ತು ಸಂವಹನ ಅಸಾಮರ್ಥ್ಯ:** ದೃಷ್ಟಿದೋಷ, ಭೌತಿಕ ಚಲನವಲನ, ಸಂವಹನ ಕೌಶಲತೆ, ಸಹಜವಾದ ಸ್ನಾಯು ಕ್ರಿಯೆಗಳ ವಿಫಲತೆ ಈ ವಿಭಾಗದಲ್ಲಿ ಬರಬಹುದು. ಇವು ಕೆಲವೊಮ್ಮೆ ಹುಟ್ಟಿನಿಂದಲೂ ಕೆಲವೊಮ್ಮೆ ಅಪಘಾತ, ತೀವ್ರ ಆರೋಗ್ಯದ ಏರುಪೇರಿನಿಂದಲೂ ಬರಬಹುದು. ದೃಷ್ಟಿದೋಷವು ಪೂರ್ತಿ ಕುರುಡುತನ ಅಥವಾ ಮಂದದೃಷ್ಟಿಯನ್ನು ಹೊಂದಿರುತ್ತದೆ. ಸ್ಪೈನಲ್ ಕಾರ್ಡ್‌ನ ವಿಫಲತೆಯಿಂದಾಗಿ ಸ್ನಾಯುಗಳು ಸಂಪೂರ್ಣ ನಿಯಂತ್ರಣವನ್ನು ಕಳೆದುಕೊಳ್ಳಬಹುದು. ಇತ್ತೀಚಿನ ಯುವಜನರಲ್ಲಿ ಹೆಚ್ಚಾಗಿ ಕಂಡುಬರುವ ಒಂದು ಅಂಗವಿಕಲತೆ ಎಂದರೆ Cerebral Palsy (CP) ಇದು ಐಚ್ಛಿಕಸ್ನಾಯು ಚಲನೆಯನ್ನೇ ಇಲ್ಲದಂತೆ ಮಾಡುತ್ತದೆ. ಮಾತಿನ ತೊಂದರೆ, ಶ್ರವಣ–ದೃಷ್ಟಿ ದೋಷ ಮುಂತಾದವು ಕಾಣಿಸಿಕೊಳ್ಳಬಹುದು.

- **ದೃಷ್ಟಿದೋಷ:** *ಸಂಪೂರ್ಣ* ದೃಷ್ಟಿಯ ವಿಫಲತೆ– ವ್ಯಕ್ತಿಯು ಈ ಕೆಳಕಂಡ ಸ್ಥಿತಿಗಳನ್ನು ಹೊಂದಬಹುದು. ಸಂಪೂರ್ಣ ಕಾಣದಿರುವಿಕೆ, ದೃಷ್ಟಿಯ ಸಾಮರ್ಥ್ಯ (Acuity) ಚಿಕಿತ್ಸೆಯ ನಂತರವೂ 6/60 ಅಥವಾ 20/200 ತಲುಪದಿರುವುದು, ಕಾಣುವ ವ್ಯಾಪ್ತಿ ತೀರ ಕಡಿಮೆ, $20^o$ ಒಳಗಿನ ವ್ಯಾಪ್ತಿಪ್ರದೇಶ.

- **ಮಂದದೃಷ್ಟಿ:** ಚಿಕಿತ್ಸೆಯ ನಂತರವೂ ದೃಷ್ಟಿಯ ಸಾಮರ್ಥ್ಯವು ತೀರ ಕೆಳಮಟ್ಟದಲ್ಲಿದ್ದು ಮತ್ತೊಬ್ಬರ ಸಹಾಯವನ್ನು ಅಪೇಕ್ಷಿಸುತ್ತದೆ.

- **ಶ್ರವಣದೋಷ:** ಶಬ್ದಗ್ರಹಣವೇ ಇಲ್ಲದೆ ಮಾತಿನ ಸಾಮರ್ಥ್ಯವನ್ನೂ ಕಳೆದುಕೊಳ್ಳಬಹುದು. 60 ಡೆಸಿಬಲ್ (decibles) ಗಿಂತ ಕಡಿಮೆ ಮಟ್ಟದ ಶಬ್ದದ ತರಂಗವನ್ನು ಗ್ರಹಿಸಲಾಗುತ್ತದೆ. ಇದರಿಂದ ಎರಡೂ ಕಿವಿಯೂ ಕೇಳುವ ಸಾಮರ್ಥ್ಯವನ್ನೇ ಹೊಂದಿರುವುದಿಲ್ಲ.

- **ಸ್ನಾಯುಗಳ ಅಸಾಮರ್ಥ್ಯ:** ಮೂಳೆ, ಕೀಲುಗಳು, ಸ್ನಾಯುಗಳ ವಿಫಲತೆಯು ಚಲನೆಯಲ್ಲಿ ಕುಂಟಿತವನ್ನು ತರುತ್ತದೆ. CP ಮತ್ತು ಆಟಿಸಂ ಇದರ ಪರಿಣಾಮಗಳು. ಇದರ ಇತರ ದುಷ್ಪರಿಣಾಮಗಳೆಂದರೆ ಅಂಗ ವಿಚ್ಛೇದನೆ, ಬೆನ್ನುಮೂಳೆ, ತಲೆ, ಮೃದು ಅಂಗಾಂಶಗಳಿಗೆ ಪೆಟ್ಟುಗಳು, ಮೂಳೆ ಮುರಿತ, ಮಾಂಸಖಂಡಗಳ ನಶಿಸುವಿಕೆ ಇತ್ಯಾದಿ. ಇದರೊಂದಿಗೆ ಮೂಳೆಗಳ ಅಸಮರ್ಥತೆ, ಸೆರೆಬ್ರಲ್ ಪಾಲ್ಸಿ (ಮೆದುಳಿನ ಪಾರ್ಶ್ವವಾಯು), ಎರ್ಬ್ಸ್‌ಪಾಲ್ಸಿ, ಬ್ರಾಂಕೈಲ್ ಪ್ಲೆಕ್ಸಸ್ ಪಾಲ್ಸಿ ಅಥವಾ ಷೋಲ್ಡರ್ ಸಿಸ್ಟೋಸಿಯ, ಆಟಿಸಂ (Orthopedic disability, Cerebral Palsy, Erb's Palsy, Brachial Plexus Palsy or Shoulder Systocia, Autism) ಮುಂತಾದ ದುಷ್ಪರಿಣಾಮಗಳನ್ನು ಹೊಂದಬಹುದು.

- **ಕುಷ್ಠರೋಗ:** ಈ ಖಾಯಿಲೆಯ ವ್ಯಕ್ತಿಗಳು ಚಿಕಿತ್ಸೆಯಿಂದ ಮುಕ್ತವಾಗಬಹುದಾದರೂ ಕೆಲವು ದೌರ್ಬಲ್ಯಗಳಾದ ಕೈ ಮತ್ತು ಕಾಲಿನ ಸ್ವಾಧೀನತೆ ಇಲ್ಲದಿರುವಿಕೆ, ಕಣ್ಣಿನ ಚಲನೆಯಲ್ಲಿ ಅಸಾಮರ್ಥ್ಯತೆ ಮುಂತಾದವನ್ನು ಹೊಂದಿರುತ್ತಾರೆ.

**2. ಮಾನಸಿಕ ದೌರ್ಬಲ್ಯ ಮತ್ತು ಬುದ್ಧಿಮಾಂದ್ಯತೆ**

- **ಮಾನಸಿಕ ದೌರ್ಬಲ್ಯ:** ಮೆದುಳಿನ ರಾಸಾಯನಿಕ ಸ್ರಾವಗಳ ಏರುಪೇರಿನಿಂದಾಗಿ ಸ್ಕಿಜೋಫ್ರೇನಿಯಾ, ಆತಂಕ, ಹತಾಶೆ ಮುಂತಾದ ದೌರ್ಬಲ್ಯಗಳು ಕಾಣಿಸಿಕೊಳ್ಳಬಹುದು. ಸುಮಾರು 15 ರಿಂದ 25 ವಯಸ್ಸಿನವರಲ್ಲಿ ಈ ದೌರ್ಬಲ್ಯವು ಕಾಣಿಸಿಕೊಂಡು ಪ್ರಕೃತಿಯಿಂದ ಬರುವ ವಿಷಯವನ್ನು ಗ್ರಹಿಸದೆ ಹೋಗಬಹುದು. ಇದರಿಂದ ಅವರ ಕೌಟುಂಬಿಕ, ಆರ್ಥಿಕ, ಔದ್ಯೋಗಿಕ, ನಿತ್ಯದ ಜೀವನಕ್ರಿಯೆಗಳು ಕುಂಟಿತವಾಗಬಹುದು. ಆದರೆ ಇವರ ಬುದ್ಧಿಮಟ್ಟವು ಸರಿಯಾಗಿ ಕಾರ್ಯನಿರ್ವಹಿಸುವುದರಿಂದ ಚಿಕಿತ್ಸೆ, ಪುನರ್ವಸತಿ ತರಬೇತಿಗಳನ್ನು ಹೊಂದಿ ಸಾಮಾನ್ಯಜೀವನವನ್ನು ನಡೆಸಬಹುದಾಗಿದೆ.

- **ಬುದ್ಧಿಮಾಂದ್ಯತೆ:** 'ಯಾವುದೇ ವ್ಯಕ್ತಿ ಶಾರೀರಿಕ/ ಮಾನಸಿಕ ನಿಯಂತ್ರಣವಿಲ್ಲದೆ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳದೆ ಸಾಮಾಜಿಕ, ಔದ್ಯೋಗಿಕ ಅಗತ್ಯಗಳನ್ನು ಪೂರೈಸಲು ಅಸಮರ್ಥನಿದ್ದರೆ ಬುದ್ಧಿಮಾಂದ್ಯರು ಎಂದು ಕರೆಯಬಹುದಾಗಿದೆ'. ಗರ್ಭಾವಸ್ಥೆಯಲ್ಲಿರುವಾಗಲೇ ಮೆದುಳಿನ ಸರಿಯಾದ ಬೆಳವಣಿಗೆ ಇಲ್ಲದೆ ಬುದ್ಧಿಮಾಂದ್ಯತೆ ಬರಬಹುದು. ಕಲಿಕೆ, ನಿಶ್ಚಿತಜ್ಞಾನವಿಲ್ಲದೆ ಹೋಗಬಹುದು. ತೀವ್ರ ಅಪಘಾತ, ವಿಷಾಹಾರ, ತೀವ್ರ ಅನಾರೋಗ್ಯ ಹುಟ್ಟಿನಿಂದಲೇ ಈ ದೌರ್ಬಲ್ಯ ಬರಬಹುದು. ಮತ್ತೊಬ್ಬರ ನಿರಂತರ ಸಹಾಯ ಇಂತಹವರಿಗೆ ಅವಶ್ಯಕವಾಗಿದೆ. ಸ್ನಾಯುಗಳ ನಿರ್ದಿಷ್ಟ ತರಬೇತಿಯಿಂದ ಮಾಡಬಹುದಾದ ಕೆಲವು ಸಣ್ಣಪುಟ್ಟ ಕಾರ್ಯಗಳನ್ನು ಇವರಿಂದ ಮಾಡಿಸಬಹುದಾಗಿದೆ. ಇದೇ ಸಮಾಜಕ್ಕೆ ಇವರಿಂದ ದೊಡ್ಡ ಕಾಣಿಕೆ.

ಇದರ ನಾಲ್ಕು ಮುಖ್ಯ ವಿಭಾಗಗಳೆಂದರೆ: ಸಾಧಾರಣ ಮಾಂದ್ಯತೆ ಐ.ಕ್ಯೂ.: 50–70 ಮಧ್ಯಮ ಮಾಂದ್ಯತೆ ಐ.ಕ್ಯೂ.: 35–49 ತೀವ್ರ ಮಾಂದ್ಯತೆ ಐ.ಕ್ಯೂ.: 20–34 ಸಂಪೂರ್ಣ ಮಾಂದ್ಯತೆ ಐ.ಕ್ಯೂ.: 20ಕ್ಕಿಂತ ಕೆಳಮಟ್ಟ.

3. **ಕಲಿಕಾ ಅಸಾಮರ್ಥ್ಯ:** ಕಲಿಕೆ, ಅರ್ಥಗ್ರಹಣ, ಬರವಣಿಗೆ, ಮಾತುಗಾರಿಕೆ ಮುಂತಾದ ಸಾಮಾನ್ಯ ಮಾನಸಿಕ ಕ್ರಿಯೆಗಳ ಅಸಾಮರ್ಥ್ಯವೇ ಕಲಿಕಾ ಅಸಾಮರ್ಥ್ಯ. ಇದು ಭಾಷಾ ಬೆಳವಣಿಗೆ ಹಾಗೂ ಸಾಮಾಜಿಕ ಸಂವಹನ ಕುಶಲತೆ ಕುಂಟಿತಗೊಳ್ಳುವಂತೆ ಮಾಡುತ್ತದೆ. ಇದರಲ್ಲೂ ಅನೇಕ ಹಂತಗಳಿದ್ದು ಆಯಾ ಪ್ರಮಾಣದ ದೋಷವನ್ನು ಅವರ ಕಲಿಕೆಯಲ್ಲೂ ಕಾಣಬಹುದಾಗಿದೆ. ಉದಾಹರಣೆಗೆ, ಸರಾಸರಿ ಬುದ್ಧಿಮಟ್ಟ ಉಳ್ಳವರಾದರೆ ಸಣ್ಣ ಪ್ರಮಾಣದ ಓದಿನಲ್ಲಿ ಹಿಂದುಳಿಯುವಿಕೆ, ಅಕ್ಷರಗಳ ತಪ್ಪುವಿಕೆ, ಅಂಕಗಣಿತದಲ್ಲಿ ಹಿಂದುಳಿಯುವಿಕೆ, ನಿಧಾನವಾದ ವಾಕ್ಯಜೋಡಣೆ ಇತ್ಯಾದಿಗಳನ್ನು ಕಾಣಬಹುದು. ಹೀಗೆ ಆಯಾ ಹಂತದಲ್ಲಿ ಕೆಲವು ದುಷ್ಪರಿಣಾಮಗಳನ್ನು ಕಾಣಬಹುದು. ಮುಖ್ಯವಾಗಿ ಗುರುತಿಸಬಹುದಾದ ಕೆಲವು ಕಲಿಕಾ ಅಸಾಮರ್ಥ್ಯಗಳೆಂದರೆ: ಡಿಸ್‌ಲೆಕ್ಸಿಯಾ (ಓದಿನ ತೊಂದರೆ), ಡಿಸ್‌ಗ್ರಾಫಿಯ (ಬರವಣಿಗೆ ತೊಂದರೆ) ಡಿಸ್‌ಕ್ಯಾಲಿಕ್ಯುಲಿಯ (ಲೆಕ್ಕಾಚಾರದ ತೊಂದರೆ), ಅತಿ ಚಟುವಟಿಕೆ ಹಾಗೂ

Digitised by Bharatavani, CIIL

ಅವಧಾನ ಕೊರತೆ (Dyslexia, Dysgraphia, Dyscalculia, Attention Deficit and Hyperactivity Disorder (ADHD).

4. **ವಿವಿಧ ದೌರ್ಬಲ್ಯಗಳು :** ಹಿಂದೆ ತಿಳಿಸಿದ ಎಲ್ಲ ದೌರ್ಬಲ್ಯಗಳು ಒಬ್ಬನೇ ವ್ಯಕ್ತಿಯಲ್ಲಿ ಕಂಡುಬರಬಹುದು ಎಂದು ಗುರುತಿಸಲಾಗಿದೆ. (Equal Opportunities, Protection of Rights and Full Participation - Act 1995)

5. **ವೈದ್ಯಕೀಯ ಅಸಾಮರ್ಥ್ಯ :** ವ್ಯಕ್ತಿಯು ಕೆಲವು ದೌರ್ಬಲ್ಯಗಳನ್ನು ಹೊಂದಿದ್ದರೂ ವೈದ್ಯಕೀಯ ಚಿಕಿತ್ಸೆಯಿಂದ ಸಾಮಾನ್ಯ ಜೀವನ ನಡೆಸಲು ಸಾಧ್ಯವಾಗಬಹುದು. ಆದರೆ ಇಂತಹ ಸೌಲಭ್ಯಗಳೂ ಸಿಗದ ಸ್ಥಿತಿಯನ್ನು ವೈದ್ಯಕೀಯ ಅಸಾಮರ್ಥ್ಯ ಎನ್ನಬಹುದಾಗಿದೆ. ಹಂತ ಹಂತವಾದ ಚಿಕಿತ್ಸೆಯಿಂದ ಸಹಜ ಜೀವನ ನಡೆಸುವಂತೆ ಮಾಡಬಹುದಾಗಿದೆ. ಚಿಕಿತ್ಸೆಯಿಂದಲೂ ಸರಿಪಡಿಸಲಾಗದ ಕೆಲವು ವೈದ್ಯಕೀಯ ಅಸಾಮರ್ಥ್ಯಗಳೆಂದರೆ– ಸ್ವಯಂ ರೋಗ ನಿರೋಧ ಕೊರತೆ ರೋಗ, ಎಪಿಲೆಪ್ಸಿ (ಮೂರ್ಛೆರೋಗ), ಕ್ಯಾನ್ಸರ್, ಸಿಸ್ಟಿಕ್ ಫೈಬ್ರೋಸಿಸ್, ಮಾಂಸಖಂಡಗಳ ನಶಿಸುವಿಕೆ, ಮಾದಕ ಔಷಧಗಳ, ಮದ್ಯಸಾರದ ದುರುಪಯೋಗ.

**ಅಂಗವಿಕಲತೆಯ ಬಗ್ಗೆ ಸಮಾಜದ ದೃಷ್ಟಿ:** ಅಂಗವಿಕಲತೆಯ ಬಗ್ಗೆ ಅಜ್ಞಾನ, ತಪ್ಪು ಕಲ್ಪನೆಗಳಿಂದಾಗಿ ಒಂದು ರೀತಿಯ ಮಡಿವಂತಿಕೆ ಉಂಟಾಗಿದೆ. ಕಾನೂನು ರೀತ್ಯ ಇದಕ್ಕೆ ಉತ್ತಮ ಉಪಾಯವನ್ನು ಹುಡುಕಬಹುದಾಗಿದೆ. ಅಂಗವಿಕಲರೂ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಮುಂತಾದ ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆ ಸಲ್ಲಿಸಬಹುದು ಎಂಬುದನ್ನು ಕಾನೂನುಬದ್ಧಗೊಳಿಸಿ ಪೂರಕ ವ್ಯವಸ್ಥೆಯನ್ನು ಕಲ್ಪಿಸಬೇಕಿದೆ. ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯವು ಗುರುತಿಸುವಂತೆ 'ಸಾಮಾಜಿಕ ವ್ಯವಸ್ಥೆ' ಎಂಬ ಮಾದರಿಯಂತೆ ಸಮಾಜ ಮತ್ತು ಅಂಗವಿಕಲರ ನಡುವಿನ ಗೋಡೆಯನ್ನು ಕಿತ್ತುಹಾಕಲು ಅವರ ಸಮಸ್ಯೆ ದೊಡ್ಡ ಪ್ರಮಾಣದ್ದಲ್ಲ ಎಂಬ ಜ್ಞಾನವನ್ನು ಕೊಡುವುದಾಗಿದೆ. ಅವರು ಗುರುತಿಸಿದ ಮೂರು ಮುಖ್ಯ ತಡೆಗಳೆಂದರೆ: ವಾತಾವರಣ (ಸಂವಹನ, ಭಾಷಾ ಬೆಳವಣಿಗೆ), ದೃಷ್ಟಿಕೋನ (ಪರಿಕಲ್ಪನೆ, ಭೇದಭಾವ), ಸಂಘಟನೆ (ಅವೈಜ್ಞಾನಿಕ ಸಂಪ್ರದಾಯಗಳು). ಈ ಎಲ್ಲ ತಡೆಗಳನ್ನು ನಿವಾರಿಸಿದಲ್ಲಿ ಅಂಗವಿಕಲರು ಸಮಾಜದಲ್ಲಿ ಉತ್ತಮ ಜೀವನ ನಡೆಸಬಹುದಾಗಿದೆ.

ಮತ್ತೊಂದು ಪ್ರಮುಖ ತೊಂದರೆ ವೈದ್ಯಕೀಯ ಸೌಲಭ್ಯ. ಅಂಗವಿಕಲತೆಯು ಶಾರೀರಿಕ/ ಮಾನಸಿಕ ದೌರ್ಬಲ್ಯ. ಇದು ವ್ಯಕ್ತಿಯ ದೋಷ. ಚಿಕಿತ್ಸೆಯಿಂದ ಸರಿಪಡಿಸಲು ಸಾಧ್ಯವಿಲ್ಲ. ಅವರಿಂದ ಏನೂ ಪ್ರಯೋಜನವಿಲ್ಲ ಬದಲಾಗಿ ಮತ್ತೊಬ್ಬರ ಅವಲಂಬನೆ ಅನಿವಾರ್ಯ ಎಂಬ ಅವೈಜ್ಞಾನಿಕ ನಂಬಿಕೆಗಳನ್ನು ಹೊಂದಿರುವುದು. ಇವುಗಳಿಂದ ಹೊರಬಂದರೆ ಎಲ್ಲರೂ ಉತ್ತಮ ಸಮಾಜ ನಿರ್ಮಾಣದೆಡೆಗೆ ಸಾಗಬಹುದಾಗಿದೆ.

–ಇ.ರಾವ್

## ಅಂತರ್ಜಾಲ

ಅಂತರ್ಜಾಲ ಅತಿಕಡಿಮೆ ಅವಧಿಯಲ್ಲಿ ಪ್ರಪಂಚದ ಸಾವಿರಾರು ಗಣಕಯಂತ್ರಗಳ ನಡುವಿನ ಒಂದು ಸಂಪರ್ಕ ಸೇತು. ಅನೇಕ ಜಾಲಗಳ ಅಂತರ್ ಸಂಪರ್ಕದಿಂದ ರೂಪುಗೊಂಡ ಮಹಾಜಾಲ ಇದಾಗಿದೆ. ಇದರಿಂದ ಜನರಿಗೆ ಮಾಹಿತಿಯ ವರ್ಗಾವಣೆಯಾಗುತ್ತದೆ. ಇದೊಂದು ಬಹುಮಾಧ್ಯಮಗಳ ವರ್ಗಾವಣೆಯ ಮೂಲವೂ ಕೂಡ. ಅಂತರ್ಜಾಲದ ವಿಸ್ತೃತ ರೂಪ ಅಂತಾರಾಷ್ಟ್ರೀಯ ಜಾಲ ಕಾರ್ಯ. ಇದನ್ನೇ ಜಾಲ, ಬಲೆ, ಮಾಹಿತಿಪ್ರಪಂಚ, ಅಣುವಿದ್ಯುತ್ ಸಾಮ್ರಾಜ್ಯವೆಂದೂ ಕರೆಯಬಹುದಾಗಿದೆ. ಅಂತರ್ಜಾಲದ ಪರಿಕಲ್ಪನೆ ಬಳಕೆಗೆ ಬಂದಿದ್ದು 1980ರಲ್ಲಿ. ಸುಮಾರು 10 ವರ್ಷಗಳಲ್ಲಿ ಇದರ ವ್ಯಾಪ್ತಿ 2 ಲಕ್ಷ ಗಣಕಗಳನ್ನು ಒಳಪಡಿಸಿತು. 1992ರಲ್ಲಿ 5 ಪಟ್ಟು ಅಧಿಕವಾಯಿತು.

ಈ ಅಂತರ್ಜಾಲದ ಪ್ರಾರಂಭದ ವ್ಯವಸ್ಥೆ 'ಅರ್ಪಾನೆಟ್' (ARPANET) (ಅಡ್ವಾನ್ಸ್‌ಡ್ ರೀಸರ್ಚ್ ಪ್ರಾಜೆಕ್ಟ್ ಏಜೆನ್ಸಿ ನೆಟ್‌ವರ್ಕ್). ಗಣಕಯಂತ್ರವೊಂದರಲ್ಲಿ ಸಂಗ್ರಹಿಸಲ್ಪಟ್ಟ ವಿಷಯಗಳನ್ನು ದೂರದ ಸ್ಥಳಗಳಲ್ಲಿಯೂ ಉಪಯೋಗಿಸಲು ಅನುಕೂಲವಾಗುವ ಮಾರ್ಗವಿದು. ಪ್ರಾರಂಭದಲ್ಲಿ ನಾಲ್ಕು ಇದ್ದದ್ದು, 1972ರ ಸುಮಾರಿಗೆ 50 ಗಣಕಯಂತ್ರಕ್ಕೆ ವರ್ಗಾಯಿಸಲು ಸಾಧ್ಯವಾಯಿತು. ಯುನೈಟೆಡ್ ಕಿಂಗ್‌ಡಂನ ಐದು ವಿಶ್ವವಿದ್ಯಾನಿಲಯಗಳಲ್ಲಿ ಈ ಕಾರ್ಯ ಜರುಗಿತು. ಮುಂದೆ ಅಮೆರಿಕಾದಲ್ಲಿ ನ್ಯಾಶನಲ್ ಸೈನ್ಸ್ ಫೌಂಡೇಶನ್, ಎನ್.ಎಸ್.ಎಫ್. ನೆಟ್ ಅಮೆರಿಕಾ ಸೇನೆಯು ಮಿತ ನೆಟ್ ಮೊದಲಾಗಿ ರೂಪುಗೊಂಡವು. ಪ್ರಪಂಚದಾದ್ಯಂತ ಹಬ್ಬಿಕೊಂಡ ಈ ಜಾಲಗಳನ್ನು ವೈಡ್ ಏರಿಯಾ ನೆಟ್‌ವರ್ಕ್ ಎನ್ನಲಾಯಿತು. ಮುಂದೆ ಇದೇ ಜಾಲ 'ಅಂತರ್‌ಜಾಲ' ಎನಿಸಿತು.

ಅಂತರ್ಜಾಲ ಪ್ರಾರಂಭದಲ್ಲಿ ವಿದ್ಯುನ್ಮಾನ ಅಂಚೆ, ವಿಚಾರ ಜಾಲ, ಕಡತಗಳ ವರ್ಗಾವಣೆಯಂಥ ಉಪಯೋಗಕ್ಕೆ ಸಿದ್ಧವಾಯಿತು. ಶೈಕ್ಷಣಿಕ, ವೈಜ್ಞಾನಿಕ ಕೈಗಾರಿಕಾ ಕ್ಷೇತ್ರಗಳಲ್ಲಿ ಮಾತ್ರ ಬಳಕೆಯಾಯಿತು. ಮುಂದಿನ ದಿನಗಳಲ್ಲಿ ಬಳಕೆಗೆ ಬಂದ ವಿಶ್ವವ್ಯಾಪಿ ಜಾಲ–ಅಂತರ್ಜಾಲಕ್ಕೆ ಹೊಸದಿಕ್ಕನ್ನು ಸೂಚಿಸಿತು. ಇದರ ರೂಪುರೇಶೆಗೈದವನು ಟಿಮ್ ಬರ್ನ್‌ಸ್ಲೀ ಎಂಬ ವಿಜ್ಞಾನಿ. ಅಮೆರಿಕಾದ ನ್ಯಾಶನಲ್ ಸೆಂಟರ್ ಫಾರ್ ಸೂಪರ್ ಕಂಪ್ಯೂಟಿಂಗ್ ಎಪ್ಲಿಕೇಶನ್‌ನಲ್ಲಿ ಅಧ್ಯಯನಶೀಲ ಮಾರ್ಕ್ಸ್ ಆಂಡ್ರಿಸನ್, ಎರಿಕ್‌ಬೀನಾ 1993ರಲ್ಲಿ 'ಮೊಪಾಯಿಕ್' ಎಂಬ ಬ್ರೌಸರ್ ತಂತ್ರಾಂಶವನ್ನು ಜಾರಿಗೆ ತಂದರು. ಪಠ್ಯದೊಂದಿಗೆ ಚಿತ್ರಗಳನ್ನು ಸೇರಿಸಿದ ತಂತ್ರಾಂಶ ವಿಶ್ವವ್ಯಾಪಿ ಜಾಲಕ್ಕೆ ಹೊಸತನ ನೀಡಿತು. ಮುಂದೆ ಮಾರ್ಕ್ ಆಂಡ್ರಿಸನ್ ನೆಟ್‌ಸ್ಕೇಪ್ ಕಮ್ಯೂನಿಕೇಶನ್ಸ್ ಕಾರ್ಪೋರೇಶನ್ ಸಂಸ್ಥೆ ಸ್ಥಾಪಿಸಿದ. ಅದು ಸೃಷ್ಟಿಸಿದ ನೆಟ್‌ಸ್ಕೇಪ್ ನೇವಿಗೇಟರ್ ಎಂಬ ಬ್ರೌಸರ್ ತಂತ್ರಾಂಶ ವಿಶ್ವವ್ಯಾಪಿ ಜಾಲದ ಜನಪ್ರಿಯತೆಯು ವಿಶ್ವದಾದ್ಯಂತ ಕೋಟ್ಯಾಂತರ ಬಳಕೆದಾರರನ್ನು ಒಗ್ಗೂಡಿಸಿತು. 1994ರಲ್ಲಿ ಸ್ಥಾಪನೆಗೊಂಡ W3c ವರ್ಲ್ಡ್ ವೈಡ್ ವೆಬ್ ಕನ್ಸಾರ್ಷಿಯಂ ವಿಶ್ವವ್ಯಾಪಿ ಜಾಲದ ಸಂಘಟನೆ ರಚನೆ ಹಾಗೂ ಕಾರ್ಯಾಚರಣೆಗಳ ಕುರಿತ ಮಾನದಂಡಗಳನ್ನು ತೀರ್ಮಾನಿಸುತ್ತದೆ. ಇದರ ಮೇಲ್ವಿಚಾರಣೆಯನ್ನು ಐ.ಎನ್.ಆರ್.ಐ.ಎ. (ಫ್ರಾನ್ಸ್) ಮೆಸಾಚುಯೆಟ್ಸ್ ಇನ್‌ಸ್ಟ್ಯೂಟ್ ಆಫ್ ಟೆಕ್ನಾಲಜಿ (ಅಮೆರಿಕಾ) ನಿರ್ವಹಿಸುತ್ತವೆ.

ವೆಬ್‌ಪೇಜ್‌ಗಳು ಪಠ್ಯ, ಚಿತ್ರ, ಧ್ವನಿ, ವೀಡಿಯೋಗಳಲ್ಲಿ ಯಾವುದಾದರೂ ಒಂದಕ್ಕಿಂತ ಹೆಚ್ಚಿನ ಅಂಶಗಳನ್ನು ಒಳಗೊಂಡಿರುತ್ತವೆ. ಹಲವು ವೆಬ್‌ಪೇಜ್‌ಗಳ ಗುಂಪನ್ನು ವೆಬ್ ಸೈಟ್ (ಜಾಲತಾಣ) ಎನ್ನುವರು. ಇದನ್ನು ಗುರುತಿಸುವುದು ಯುನಿಫಾರ್ಮ್ ರಿಸೋರ್ಸ್ ಲೋಕೇಟರ್ (ಯು.ಆರ್.ಎಲ್.) ಮೂಲಕ. ಪ್ರತಿಯೊಂದು ಜಾಲಕ್ಕೂ ವಿಶಿಷ್ಟವಾದ ಯು.ಆರ್.ಎಲ್. ಇದೆ. ಇದು ಜಾಲತಾಣದ ವಿಳಾಸಕ್ಕೆ ಸಮಾನುವರ್ತಿಯಾಗಿದೆ. ಯು.ಆರ್.ಎಲ್.ನ ಮುಂದಿನ ಭಾಗ ಡಬ್ಲ್ಯು.ಡಬ್ಲ್ಯು.ಡಬ್ಲ್ಯು. ಇದು ಜಾಲತಾಣದ ಹೆಸರನ್ನು ಸೂಚಿಸುತ್ತದೆ. (ಯಾಹೂ, ಗೂಗಲ್). ಯು.ಆರ್.ಎಲ್.ನ ಭಾಗಗಳನ್ನು ಪ್ರತ್ಯೇಕಿಸಲು '.' (ಡಾಟ್) ಬಳಕೆಯಾಗುತ್ತದೆ. ಯು.ಆರ್.ಎಲ್.ನ ಕೊನೆಯ ಭಾಗ. ಕಾಮ್, ನೆಟ್, ಓರ್ಗ್, ಟಿ.ವಿ. ಮೊದಲಾದುವು. ಇದು ಜಾಲತಾಣ ಯಾವ ಗುಂಪಿಗೆ ಸೇರಿದೆ ಎನ್ನುವುದನ್ನು ಸೂಚಿಸುತ್ತದೆ. ಉದಾ: ಕಾಮ್ (ವಾಣಿಜ್ಯ), ಟಿ.ವಿ. (ದೂರದರ್ಶನ ಸಂಸ್ಥೆ). ಯು.ಆರ್.ಎಲ್.ನಲ್ಲಿ

Digitised by Bharatavani, CIIL

ಜಾಲತಾಣದ ದೇಶದ ಪರಿಚಯವೂ ಆಗುತ್ತದೆ. ಉದಾ: ಇನ್ (ಇಂಡಿಯಾ) ಎಯು (ಆಸ್ಟ್ರೇಲಿಯಾ).

ವಿಶ್ವವ್ಯಾಪಿ ಜಾಲದಲ್ಲಿರುವ ಜಾಲತಾಣಗಳನ್ನು ಗುರುತಿಸಲು ಬ್ರೌಸರ್ (ವೀಕ್ಷಕ ತಂತ್ರಾಂಶಗಳು) ಅಗತ್ಯ. ಟಿ.ಸಿ.ಪಿ. / ಐ.ಪಿ. (ಟ್ರಾನ್ಸ್‌ಮಿಷನ್ ಕಂಟ್ರೋಲ್ ಪ್ರೊಟೋಕಾಲ್ / ಇಂಟರ್‌ನೆಟ್ ಪ್ರೊಟೋಕಾಲ್),ಗಳು ಮಾಹಿತಿ ಸಂವಹನದ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿವೆ.

ಅಂತರ್ಜಾಲ ಸಂಪರ್ಕಗಳಲ್ಲಿ ವಿವಿಧ ರೀತಿಗಳಲ್ಲಿ ದೂರವಾಣಿ ಬಳಸಿ ಕೆಲಸ ಮಾಡುವ ವ್ಯವಸ್ಥೆ 'ಡಯಲ್ ಅಪ್ ಸಂಪರ್ಕ'. ಇದು ಜಂಗಮವಾಣಿ (ಮೊಬೈಲ್) ಮೂಲಕವೂ ಸಾಧ್ಯ. ಇಲ್ಲಿ ಅಂತರ್ಜಾಲದ ಸಂಪರ್ಕ ಸಾಧಿಸಲು ಅಗತ್ಯವಾದ ಸಾಧನ ಮೋಡೆಮ್. ಈ ಸಂಪರ್ಕ ಒದಗಿಸುವ ಸಂಸ್ಥೆಗೆ ಇಂಟರ್‌ನೆಟ್ ಸರ್ವಿಸ್ ಪ್ರೊವೈಡರ್ (ಐ.ಎಸ್.ಪಿ) ಎನ್ನುವರು. ಉದಾ: ಏರ್‌ಟೆಲ್, ಬಿಎಸ್‌ಎನ್.ಎಲ್. ಇಂಥ ಸಂಪರ್ಕವನ್ನು ಉಪಗ್ರಹ ಸಂಕೇತಗಳ ಮೂಲಕ ಏರ್ಪಡಿಸಿಕೊಳ್ಳಲಾಗುತ್ತದೆ. ವಿದ್ಯುನ್ಮಾನ ಅಂಚೆ (ಇ-ಮೇಲ್) ಅಂತರ್ಜಾಲದ ಇನ್ನೊಂದು ಉಪಯುಕ್ತ ಕಾರ್ಯ. ಟಾಮ್ಲಿನ್ ಸನ್‌ನನ್ನು 'ಇ-ಮೇಲ್ ಪಿತಾಮಹ' ಎನ್ನಲಾಗುತ್ತದೆ. ಇ-ಮೇಲ್ ವಿಳಾಸಗಳಲ್ಲಿ '@' ಚಿಹ್ನೆಯ ಉಪಯೋಗದ ಪ್ರಾರಂಭವನ್ನು ಮಾಡಿಸಿದವನೂ ಇವನೇ. ಇದು 70ರ ದಶಕದಲ್ಲಿ ಆರಂಭವಾಗಿತ್ತು. ಇದು ಜನಪ್ರಿಯಗೊಂಡಿದ್ದು 1995-96ರ ಸುಮಾರಿಗೆ. ಸಬೀರ್ ಭಾಟಿಯಾ ಹಾಗೂ ಜಾಕ್‌ಸ್ಮಿತ್‌ರವರು ರೂಪಿಸಿದ ಹಾಟ್‌ಮೇಲ್ ವ್ಯವಸ್ಥೆ ಜನಸಾಮಾನ್ಯರಿಗೆ ಇ-ಮೇಲ್ ಬಳಕೆ ಸುಲಭವಾಯಿತು. ಇದರ ಸೇವೆ ಒದಗಿಸುವ ತಾಣಗಳು ರೆಡಿಫ್, ಯಾಹೂ. ಇ-ಮೇಲ್‌ನಿಂದ ವ್ಯವಹಾರವು ಬರಹರೂಪದಲ್ಲಿರುತ್ತದೆ. ಮನಸ್ಸಿನ ಭಾವನೆಗಳನ್ನೂ ಕೆಲವು ಸಂಕೇತಗಳ ಮೂಲಕ ತಿಳಿಸಬಹುದಾಗಿದೆ- :) ಸಂತೋಷ್ :1 ಅಸಮಾಧಾನ, :@ ಕೋಪ. ಇದನ್ನು 'ಎಮೋಟೈಕಸ್' ಎನ್ನುವರು. ಕನ್ನಡದಲ್ಲಿಯೂ 'ಬರಹ' ತಂತ್ರಾಂಶದ ಆಧಾರದಲ್ಲಿ ವಿದ್ಯುನ್ಮಾನ ಅಂಚೆಗಳನ್ನು ಕಳಿಸಬಹುದಾಗಿದೆ. ಇದರ ರೂವಾರಿ ಶೇಷಾದ್ರಿವಾಸ ಚಂದ್ರಶೇಖರನ್.

ಇ-ವ್ಯಾಪಾರ ಅಂತರ್ಜಾಲದ ಇನ್ನೊಂದು ರೀತಿ. ಗೃಹಸಾಮಗ್ರಿಗಳನ್ನು, ಸಂಚಾರ ಸಾಧನಗಳನ್ನು, ಚೀಟಿಗಳನ್ನು ಇರುವ ಸ್ಥಳದಲ್ಲಿಯೇ ಪಡೆಯಲು ಒಂದು ಸುಲಭ ಮಾಧ್ಯಮ. ಇದಕ್ಕೆ ವ್ಯಕ್ತಿಯೊಬ್ಬನಲ್ಲಿ ಕ್ರೆಡಿಟ್‌ಕಾರ್ಡ್ ಇರಬೇಕು. ಇಲ್ಲಿ ವ್ಯಾಪಾರಿ ಗ್ರಾಹಕನ ನಡುವೆ ನೇರ ಸಂಪರ್ಕವಿರುವುದಿಲ್ಲ. ಹೀಗಾಗಿ ಮಾರಾಟಗಾರನ ವಿಶ್ವಾಸಾರ್ಹತೆ, ವಸ್ತುಗಳ ಗುಣಮಟ್ಟದ ಬಗ್ಗೆ ಎಚ್ಚರಿಕೆ ಅಗತ್ಯ.

ಅಂತರ್ಜಾಲದ ವೇಗದೊಂದಿಗೆ ವಿಶ್ವವ್ಯಾಪಿ ಜಾಲವೂ (www) ಸಾಗಿದೆ. ಇದರ ಮೊದಲ ಹಂತ 2.0. ಇದನ್ನು 2004ರಲ್ಲಿ ಗುರುತಿಸಿದ ಸಂಸ್ಥೆ- 'ಓ' ರೀಲಿ ಮೀಡಿಯಾ. ವಿಶ್ವವ್ಯಾಪಿ ಜಾಲದ ಉಪಯೋಗ ಸರಳವಾಗಲಿ ಎನ್ನುವುದು ಇದರ ಪ್ರಮುಖ ಉದ್ದೇಶ. ಇದಕ್ಕಾಗಿ ಸಂಪರ್ಕಿಸಬೇಕಾದ ಕನ್ನಡ ಆವೃತ್ತಿಯ ವಿಳಾಸ: http://kn.wikipidia.org/ ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಅಂತರ್ಜಾಲ ವಿಜ್ಞಾನ ಪ್ರಪಂಚಕ್ಕೆ ಒಂದು ಅದ್ಭುತ ಕೊಡುಗೆ ನೀಡಿದೆ. ಮಾಹಿತಿ ತಂತ್ರಜ್ಞಾನಕ್ಕೆ ಇದು ಸವಾಲೆಸೆದಿದೆ. ಲಿಪಿರಂಗದಲ್ಲಿ ಮುಂದೇನು?

–ವ.ಉ.ಕಾ.

## ಅಂತರರಾಷ್ಟ್ರೀಯ ಪ್ರಜ್ಞೆಯ ಶಿಕ್ಷಣ

"ಅಂತಾರಾಷ್ಟ್ರೀಯ ಪ್ರಜ್ಞೆ" ಇದು ಒಂದು ವಿಶಾಲ ಮನೋಭಾವನೆ. ರಾಷ್ಟ್ರೀಯ ಭಾವೈಕ್ಯತೆಯ ಜೊತೆಗೆ ಮಕ್ಕಳಲ್ಲಿ ಹಾಗೂ ವಯಸ್ಕರಲ್ಲಿ ಪ್ರಪಂಚದ ನಾಗರಿಕನೂ ಆಗಿರುವೆನು ಎಂಬ ಮನವರಿಕೆ ಅತ್ಯಗತ್ಯ. ನಮ್ಮ ದೇಶ ಸಂಸ್ಕೃತಿಗಳು ನಮಗೆ ಶ್ರೇಷ್ಠ ಅಂತೆಯೇ ಇತರ ದೇಶಗಳವರಿಗೆ ಅವರ ದೇಶ, ಸಂಸ್ಕೃತಿಗಳೇ ಶ್ರೇಷ್ಠ. ಜಗತ್ತಿನ ಜನರೆಲ್ಲಾ ಪರಸ್ಪರರನ್ನು ಗೌರವಿಸಬೇಕು. ಎಲ್ಲಾ ಧರ್ಮಗಳೂ ಹೇಳುವುದು ಒಂದೇ ಅಂತಿಮ ಸತ್ಯವನ್ನು. ಆ ಸತ್ಯದ ಸಾಕ್ಷಾತ್ಕಾರಕ್ಕಾಗಿ ಎಲ್ಲಾ ಧರ್ಮಗಳು ವಿವಿಧ ಮಾರ್ಗಗಳನ್ನು ಸೂಚಿಸುತ್ತವೆ; ಅನುಸರಿಸುತ್ತವೆ. ನಮ್ಮಲ್ಲಿ ರಾಮಾಯಣ, ಮಹಾಭಾರತಗಳಂತಹ ಮಹಾನ್ ಗ್ರಂಥಗಳೂ, ಕಾವ್ಯಗಳೂ ಇರುವಂತೆಯೇ ಇತರ ದೇಶಗಳಲ್ಲೂ ಅವರದೇ ಆದ ಮಹಾನ್ ಕೃತಿಗಳು ಇವೆ ಎಂಬ ಅರಿವು ಮಕ್ಕಳಲ್ಲಿ ಮೂಡದೇ ಇರುವುದರಿಂದಲೇ ಅನೇಕ ವೇಳೆ ಸ್ವಾಭಿಮಾನವು ದುರಭಿಮಾನವಾಗಿ ವಿನಾಶಕರ ಜಾಗತಿಕ ಯುದ್ಧಗಳು ಸಂಭವಿಸಲು ಕಾರಣವಾಯಿತು. ನಮ್ಮ ರಾಷ್ಟ್ರದಂತೆ, ಇನ್ನೂ ಅನೇಕ ರಾಷ್ಟ್ರಗಳು ತಮ್ಮದೇ ಆದ ಸಾಮಾಜಿಕ ಬುನಾದಿಯ ಮೇಲೆ ನಿಂತಿದ್ದು ಅವುಗಳೂ ನಮ್ಮ ರಾಷ್ಟ್ರದಂತೆಯೇ ಶ್ರೇಷ್ಠ ಎಂಬ ಭಾವನೆ ಎಲ್ಲರಲ್ಲಿ ಮೂಡುವವರೆಗೂ ವಿಶ್ವಭ್ರಾತೃತ್ವ ಉದಯಿಸಲು ಅಸಾಧ್ಯ. ಯುದ್ಧ, ಅಭದ್ರತೆ, ಭಯೋತ್ಪಾದನೆ, ರಕ್ತಪಾತ, ದ್ವೇಷ, ಅಸೂಯೆ ಮೊದಲಾದುವುಗಳಿಂದ ಇಂದು ಪ್ರಪಂಚವೇ ತಲ್ಲಣಗೊಂಡಿದೆ. ಪ್ರಪಂಚವು ವಿನಾಶದ ಅಂಚಿನೆಡೆಗೆ ಶರವೇಗದಿಂದ ಸಾಗುತ್ತಿದೆ, ಮತ್ತು ಇದನ್ನು ತಡೆಗಟ್ಟುವ ಮನೋಭಾವನೆಯನ್ನು ಪ್ರತಿಯೊಬ್ಬ ನಾಗರಿಕನೂ ಹೊಂದುವ ಶಕ್ತಿಯನ್ನು ಪಡೆಯುವ ಶಿಕ್ಷಣವನ್ನು ಅಂತರರಾಷ್ಟ್ರೀಯ ಪ್ರಜ್ಞೆಯ ಶಿಕ್ಷಣ ಎಂದು ಕರೆಯಬಹುದು "ವಸುಧೈವ ಕುಟುಂಬಕಮ್" (ವಿಶ್ವವೇ ಒಂದು ಕುಟುಂಬ) ಎಂದ ಉಕ್ತಿಯೂ ನಮ್ಮ ಹಿರಿಯರ ಉದಾತ್ತ ಹಾಗೂ ವಿಶಾಲ ಮನೋಭಾವನೆಯನ್ನು ಅಭಿವ್ಯಕ್ತಗೊಳಿಸುವುದೇ ಅಂತರರಾಷ್ಟ್ರೀಯ ಪ್ರಜ್ಞೆಯ ಶಿಕ್ಷಣ ಎನ್ನಬಹುದು. ಹೆಚ್.ಸಿ. ವಾಲ್ಟೇರ್‌ನ ಪ್ರಕಾರ – "ವಿಶ್ವಮಾನವ ವರ್ತನೆಯನ್ನು ಕುರಿತು ದೇಶ, ಕಾಲ, ಸನ್ನಿವೇಶಗಳ ಬಾಧ್ಯತೆಯಿಲ್ಲದೆ ಅವಲೋಕಿಸಿ ಒಬ್ಬರನ್ನೊಬ್ಬರು ಅರ್ಥೈಸಿಕೊಳ್ಳಲು ಪ್ರಯತ್ನಿಸುವುದೇ ಅಂತಾರಾಷ್ಟ್ರೀಯ ಪ್ರಜ್ಞೆ. ಡಾ. ಹೆಚ್.ವಿ. ಲಾವಿನ್ಸರು – "ಒಬ್ಬರನ್ನೊಬ್ಬರು ಅರಿತು ಜನಾಂಗದ ವಿಭಿನ್ನತೆಯನ್ನು ಮರೆತು ಸಂಕುಚಿತತೆಯಿಂದ ದೂರ ನಿಂತು ವಿಶ್ವದ ಮಾನವರೆಲ್ಲಾ ಒಂದೇ ಎಂಬ ಭಾವನೆಯನ್ನು ಬೆಳೆಸಿಕೊಳ್ಳುವುದೇ ಅಂತಾರಾಷ್ಟ್ರೀಯತೆ" ಎಂದು ವ್ಯಾಖ್ಯಾನಿಸಿರುವರು.

ಅಂತಾರಾಷ್ಟ್ರೀಯ ಪ್ರಜ್ಞೆಯ ಪ್ರಮುಖ ಗುರಿಗಳನ್ನು ಈ ರೀತಿಯಲ್ಲಿ ಪಟ್ಟಿಮಾಡಬಹುದು: ಇತರರ ಕಲ್ಯಾಣದಲ್ಲಿ ತನ್ನ ಕಲ್ಯಾಣವನ್ನು ಕಾಣುವ ಅಭಿಲಾಷೆ ಬೆಳೆಸುವುದು, ಅಂತಾರಾಷ್ಟ್ರೀಯ ಭಾಷೆಗಳಿಗೆ ವಿಶೇಷ ಪ್ರಾಶಸ್ತ್ಯ ನೀಡುವುದು, ಮಾನವ ಧರ್ಮ ಹಾಗೂ ಸಂಸ್ಕೃತಿಯ ಬಗ್ಗೆ ಹೆಚ್ಚು ಒತ್ತು ಕೊಡುವುದು. ವಿಶ್ವಕುಟುಂಬದಲ್ಲಿ ಸರ್ವ ಮಾನವರೂ ಶ್ರೇಷ್ಠ ಎಂಬ ಭಾವನೆ ಬೆಳೆಸುವುದು, ವಿಶ್ವದಲ್ಲಿನ ಎಲ್ಲಾ ರಾಷ್ಟ್ರಗಳ ಸಂಸ್ಕೃತಿಗಳನ್ನು ಗೌರವಿಸುವುದು, ಯುದ್ಧಗಳಿಂದ ಉಂಟಾಗುವ ಪರಿಣಾಮಗಳ ನೈಜ ಚಿತ್ರಣವನ್ನು ಮೂಡಿಸುವುದು, ಜಾಗತಿಕ ಶಾಂತಿಯ ಮಹತ್ವವನ್ನು ಎಲ್ಲ ಜನತೆಗೂ ಅರಿವು ಮಾಡಿಕೊಡುವುದು, ವಿಶ್ವಸಂಸ್ಥೆ (ಯು.ಎನ್.ಓ) ಕೈಗೊಳ್ಳುವ ಚಟುವಟಿಕೆಗಳ ಬಗ್ಗೆ ಮಕ್ಕಳಲ್ಲಿ ಹಾಗೂ ವಯಸ್ಕರಲ್ಲಿ ಅರಿವು ಮೂಡಿಸುವುದು, ವಿಶೇಷವಾಗಿ ವಿಶ್ವಸಂಸ್ಥೆಯ ಅಂಗವಾದ ಯುನಿಸೆಫ್‌ನ ಚಟುವಟಿಕೆಗಳ ಅರಿವನ್ನು ಪರಿಣಾಮಕಾರಿಯಾಗಿ ಮೂಡಿಸುವುದು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ನೀಡಲು ಹೆಚ್ಚು ಹೆಚ್ಚು ವಿದ್ಯಾರ್ಥಿಗಳನ್ನು ಹಾಗೂ ಪ್ರಾಜ್ಞರನ್ನು ವಿನಿಮಯ ಮಾಡಿಕೊಳ್ಳುವುದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಸಮ್ಮೇಳನಗಳನ್ನು ನಡೆಸುವುದು. ಸಾಂಸ್ಕೃತಿಕ ಹಾಗೂ ಸೈದ್ಧಾಂತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ವ್ಯಕ್ತಿಗಳು ಸ್ಥಳೀಯ ಸಂಕುಚಿತ ಮನೋಭಾವನೆಯಿಂದ ಹೊರಬರುವಂತೆ ಮಾಡುವುದು.

Digitised by Bharatavani, CIIL

ಶಿಕ್ಷಕ ಅಂತಾರಾಷ್ಟ್ರೀಯ ಸಮಸ್ಯೆಗಳು ಹಾಗೂ ಪರಿಸರದ ಅರಿವನ್ನು ಹೊಂದಿರಬೇಕು. ಅಂತಾರಾಷ್ಟ್ರೀಯ ಮನೋಭಾವನೆಯನ್ನು ಶಿಕ್ಷಕ ಹೊಂದಿದ್ದು ವಿದ್ಯಾರ್ಥಿಗಳಲ್ಲಿ ಅದನ್ನೇ ಪ್ರಚೋದಿಸುವ ಕೌಶಲ್ಯವನ್ನು ಅವನು/ ಅವಳು ರೂಢಿಸಿಕೊಂಡಿರಬೇಕು. ಶಿಕ್ಷಕನು ಕೇವಲ ಸ್ವದೇಶಾಭಿಮಾನಿಯಾಗಿರದೆ ಇತರ ರಾಷ್ಟ್ರಗಳ ಬಗ್ಗೆ ಗೌರವ ಹೊಂದಿರಬೇಕು. ಸಹಬಾಳ್ವೆ, ಸಹಕಾರ, ಉದಾತ್ತಭಾವನೆ ಮುಂತಾದ ಸದ್ಗುಣಗಳು ಬೆಳೆಯುವಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ವಿಶ್ವಸಂಸ್ಥೆ ಹಾಗೂ ಅದರ ಅಂಗಗಳ ಪರಿಚಯ, ಜವಾಬ್ದಾರಿ, ಉದ್ದೇಶ ಹಾಗೂ ಕಾರ್ಯಕ್ರಮಗಳ ಬಗ್ಗೆ ಆಳವಾಗಿ ಅಭ್ಯಾಸಮಾಡಿ ವಿದ್ಯಾರ್ಥಿಗಳಿಗೆ ಅದರ ಅರಿವನ್ನು ಮೂಡಿಸುವುದು. ಅಂತಾರಾಷ್ಟ್ರೀಯ ದಿನಾಚರಣೆಗಳನ್ನು ಅರ್ಥಪೂರ್ಣವಾಗಿ ಆಚರಿಸಿ, ಅದರ ಪ್ರಭಾವ ಮಕ್ಕಳ ಮೇಲೆ ಬೀರುವಂತಿರಬೇಕು.

**ಪ್ರೇರಕ ಹಾಗೂ ಪೋಷಕ ಕಾರ್ಯಗಳು:** ಮಕ್ಕಳನ್ನು ಹಾಗೂ ಯುವಕರನ್ನು ನೈಸರ್ಗಿಕ ಅನಾಹುತಗಳ ಸಂದರ್ಭಗಳಲ್ಲಿ (ಪ್ರವಾಹ, ಸುನಾಮಿ ಇತ್ಯಾದಿ) ಪ್ರೇರೇಪಿಸಿ ಸಹಾಯಹಸ್ತ ನೀಡುವ ಕಾರ್ಯಚಟುವಟಿಕೆ. ದೊಡ್ಡ ದೊಡ್ಡ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ (WHO) ಪಾತ್ರದ ಅರಿವು ಮೂಡಿಸುವುದು. ಎಲ್ಲಾ ದೇಶಗಳ ಮಕ್ಕಳ ಆರೋಗ್ಯದ ಕಡೆ ಗಮನಹರಿಸುತ್ತಿರುವುದು. ಸಾಂಸ್ಕೃತಿಕ ಕಾರ್ಯಕ್ರಮಗಳ ವಿನಿಮಯಕ್ಕೆ ಆಸ್ಪದ ಮಾಡಿಕೊಡುವುದು. ಪ್ರಪಂಚದ ವಿವಿಧ ರಾಷ್ಟ್ರಗಳ ಭಾಷಾ ಅಧ್ಯಯನಕ್ಕೆ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ವ್ಯವಸ್ಥೆಗೊಳಿಸುವುದು. ವಿವಿಧ ಅಂತಾರಾಷ್ಟ್ರೀಯ ದಿನಾಚರಣೆಗಳನ್ನು ಅರ್ಥಪೂರ್ಣವಾಗಿ ಆಚರಿಸುವುದು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರ ಜೀವನ ಚರಿತ್ರೆ ಹಾಗೂ ಸಾಧನೆಗಳನ್ನು ಪ್ರಚುರಪಡಿಸುವುದು. ನೋಬೆಲ್ ಪಾರಿತೋಷಕಗಳ ಮಹತ್ವವನ್ನು ಸಮಾಜಕ್ಕೆ ತಿಳಿಯಪಡಿಸುವುದು. ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ಮಕ್ಕಳನ್ನು ಹಾಗೂ ಯುವಕರನ್ನು ಆಹ್ವಾನಿಸುವುದು. ವಿವಿಧ ಕ್ರೀಡಾ ಚಟುವಟಿಕೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರೋತ್ಸಾಹಿಸಿ ಮಕ್ಕಳಿಗೆ ಪ್ರೇರೇಪಿಸುವುದು. ವಿಶ್ವದ ವಿವಿಧ ವಿಶ್ವವಿದ್ಯಾನಿಲಯಗಳು ಉನ್ನತ ಶಿಕ್ಷಣದಲ್ಲಿ ಮಕ್ಕಳಿಗೆ ಪ್ರೋತ್ಸಾಹ ನೀಡಿ ಆಹ್ವಾನಿಸುವುದು. ಎಲ್ಲಾ ರಾಷ್ಟ್ರಗಳ ಇತಿಹಾಸ ಹಾಗೂ ಅಭಿವೃದ್ಧಿ ಅಧ್ಯಯನಕ್ಕೆ ಪ್ರೋತ್ಸಾಹಿಸುವುದು. ಎಲೆಕ್ಟ್ರಾನಿಕ್ ಮೀಡಿಯಾಗಳಾದ ದೂರದರ್ಶನ ಮುಂತಾದವುಗಳು ಪ್ರಪಂಚದ ಎಲ್ಲಾ ಸಮಾಜದ ಜನಜೀವನವನ್ನು ಪ್ರತಿ ಮನೆಗೂ ಪರಿಣಾಮಕಾರಿಯಾಗಿ ತಲುಪಿಸುವ ಕಾರ್ಯ ಮಾಡುವುದು. ಜನರ ಮೇಲೆ ಹೆಚ್ಚು ಪ್ರಭಾವ ಬೀರುವ ಅಂತಾರಾಷ್ಟ್ರೀಯ ಚಲನಚಿತ್ರಗಳ ಪ್ರದರ್ಶನ ನಡೆಸುವುದು. ವಿಶ್ವಶಾಂತಿಗಾಗಿ ಎಲ್ಲಾ ರಾಷ್ಟ್ರಗಳನ್ನು ಒಗ್ಗೂಡಿಸಲು ಪ್ರೇರೇಪಿಸುವುದು. ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಅಂತಾರಾಷ್ಟ್ರೀಯ ಪ್ರಜ್ಞೆ ಹೆಚ್ಚಲು ಸಹಕಾರಿಯಾಗಬಲ್ಲದು.

–ಜಿ.ಎಂ.ಸೋ.

## ಅಂತರ್ ಶಿಸ್ತಿನ ಉಪಕ್ರಮ ಮತ್ತು ಶಿಕ್ಷಣ

ಪಠ್ಯಕ್ರಮ ವಿನ್ಯಾಸದಲ್ಲಿ ಅನೇಕ ವಿಧದ ಉಪಕ್ರಮಗಳಿವೆ. ಪಠ್ಯಕ್ರಮವು ತನ್ನ ಗುರಿ ಮತ್ತು ಉದ್ದೇಶಕ್ಕೆ ತಕ್ಕಂತೆ, ಶಿಕ್ಷಕ ಕೇಂದ್ರಿತವಾಗಿಯೋ, ವಿಷಯ ಕೇಂದ್ರಿತವಾಗಿಯೋ ಅಥವಾ ಶಿಶು ಕೇಂದ್ರಿತವಾಗಿಯೋ ರೂಪುಗೊಳ್ಳಬಹುದು. ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿ ಕೇಂದ್ರಿತ ಪಠ್ಯಕ್ರಮವು ಜಾರಿಯಲ್ಲಿದೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿರುವ ಉಪಕ್ರಮವೆಂದರೆ ಅಂತರ್‌ಶಿಸ್ತಿನ ಉಪಕ್ರಮ.

ಅಂತರ್‌ಶಿಸ್ತಿನ ಉಪಕ್ರಮ ಎಂಬುದು ಒಂದು ತಾಂತ್ರಿಕ ಪದವಾಗಿದ್ದು, ಶಿಕ್ಷಣ ರಂಗದಲ್ಲಿನ ಒಂದು ವಿನೂತನವಾದ ಪ್ರಕ್ರಿಯೆಯನ್ನು ಸೂಚಿಸುತ್ತದೆ. ವಿಸ್ತಾರ ಹಿನ್ನೆಲೆಯುಳ್ಳ ಜ್ಞಾನ ಮತ್ತು ಕೌಶಲಗಳ ಸಂಶ್ಲೇಷಣೆಯನ್ನು ಅಂತರ್‌ಶಿಸ್ತಿನ ಉಪಕ್ರಮವು ವ್ಯಕ್ತಪಡಿಸುವುದು. ಸಾಮಾನ್ಯವಾಗಿ ಇಂತಹ ಪ್ರಕ್ರಿಯೆಯು ಉದ್ಭವವಾಗುವುದು ಒಂದು ವಿಶೇಷ ಸಂದರ್ಭದಲ್ಲಿ, ಇದು ಹೇಗೆಂದರೆ, ಒಂದು ವಿಷಯವು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದಾಗ, ಮತ್ತು ಇತರ ಸಹಸಂಬಂಧಿ ವಿಷಯಗಳಲ್ಲಿಯೂ ತನ್ನ ಅಸ್ತಿತ್ವವನ್ನು ಪಡೆದುಕೊಂಡಿದ್ದಾಗ ಕೇವಲ ಒಂದೇ ವಿಷಯವನ್ನಾಗಿ ಅದನ್ನು ವ್ಯಕ್ತಪಡಿಸಲು ಪ್ರಯತ್ನಿಸಿದರೆ ಅದು ಅಪೂರ್ಣವಾಗಿ ತೋರಿಬರುವುದು. ಇಂತಹ ಸಂದರ್ಭದಲ್ಲಿ ಆ ವಿಷಯವನ್ನು ಅಂತರ್‌ಶಿಸ್ತಿನ ಉಪಕ್ರಮದಲ್ಲಿ ವ್ಯಕ್ತಪಡಿಸಿದ್ದೇ ಆದರೆ, ಅದರ ವಿಶಾಲವ್ಯಾಪ್ತಿಗೆ ನ್ಯಾಯ ದೊರಕಿಸಿದಂತಾಗುವುದು. ಆದ್ದರಿಂದ ಅಂತರ್‌ಶಿಸ್ತಿನ ಉಪಕ್ರಮದಲ್ಲಿ ವಿವಿಧ ಶಾಸ್ತ್ರಗಳ ಸಂಪ್ರದಾಯ ಬದ್ಧ ಸೀಮೆಯನ್ನು ದಾಟಿ, ಅವುಗಳ ನಡುವೆ ಅಂತರ್ ಸಂಬಂಧವನ್ನು ಸೃಷ್ಟಿಸಿ ಒಂದು ಹೊಸ ಆಯಾಮದಿಂದ ಕೂಡಿದ ವಿಷಯವನ್ನು ರೂಪಿಸುವ ಕ್ರಿಯೆಯು ನಡೆಯುವುದು. ಶಿಕ್ಷಣಶಾಸ್ತ್ರದಲ್ಲಿ ಸಹಜವಾಗಿಯೇ ಅಂತರ್‌ಶಿಸ್ತಿನ ಉಪಕ್ರಮವನ್ನು ಕಾಣಬಹುದಾಗಿದೆ. ಅಂದರೆ ಶಿಕ್ಷಣ ಶಾಸ್ತ್ರದಲ್ಲಿ ಮನೋವಿಜ್ಞಾನ, ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ, ತತ್ವಶಾಸ್ತ್ರ, ಇತ್ಯಾದಿಗಳು, ಅಂತರ್ ಸಂಬಂಧವನ್ನು ಹೊಂದಿದ್ದು ಇಡೀ ಶಿಕ್ಷಣಶಾಸ್ತ್ರದ ಅವಿಭಾಜ್ಯ ಅಂಗಗಳಾಗಿವೆ. ಇವುಗಳನ್ನು ಹೊರತುಪಡಿಸಿದ್ದೇ, ಆದರೆ ಶಿಕ್ಷಣಶಾಸ್ತ್ರಕ್ಕೆ ತನ್ನದೇ ಆದ ಒಂದು ಅಸ್ತಿತ್ವವೇ ಇರುವುದಿಲ್ಲ. ಆದ್ದರಿಂದಲೇ "ಅಂತರ್‌ಶಿಸ್ತು" ಎಂಬ ಗುಣವಾಚಕವು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಬಳಸಲ್ಪಡುವ ಪದವಾಗಿದೆ. ಅದರಲ್ಲೂ ಶಿಕ್ಷಣಶಾಸ್ತ್ರದಲ್ಲಿ ಜರುಗುವ ಸಂಶೋಧನೆಗಳು ಮುಖ್ಯವಾಗಿ ಅಂತರ್‌ಶಿಸ್ತಿನ ಉಪಕ್ರಮವನ್ನೇ ಅನುಸರಿಸುವುವು. ಇಂತಹ ಸಂಶೋಧನೆಗಳಲ್ಲಿ, ಆಯ್ದು ಒಂದು ಸಮಸ್ಯೆಯ ಪರಿಹಾರಕ್ಕಾಗಿ ಅಥವಾ ಸಂಶೋಧನಾ ಉದ್ದೇಶದ ಸಾಧನೆಗಾಗಿ, ಅನೇಕ ಅನ್ಯಶಾಸ್ತ್ರಗಳ ಉಪಯೋಗವನ್ನು, ಬೇರೆ ಬೇರೆಯಾಗಿಯೂ ಮತ್ತು ಕ್ರೋಡೀಕರಿಸಿಯೂ ಬಳಸಿಕೊಳ್ಳಲಾಗುವುದು. ಉದಾಹರಣೆಗೆ, ಪರಿಸರ ಅಧ್ಯಯನ ಎಂಬ ವಿಷಯಕ್ಕೆ, ಜೀವಶಾಸ್ತ್ರ, ರಸಾಯನ ಶಾಸ್ತ್ರ, ಭೌತಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಇತ್ಯಾದಿ – ಇವುಗಳು ಅವಿಭಾಜ್ಯ ಅಂಗಗಳಾಗುತ್ತವೆ. ಹೀಗೆ ಪ್ರಭಾವ ಬೀರುವುದರಿಂದಲೇ ಪರಿಸರ ಅಧ್ಯಯನವು ಹೆಚ್ಚು ಪರಿಣಾಮಕಾರಿಯಾಗಿಯೂ, ನ್ಯಾಯಯುತವಾಗಿಯೂ ರೂಪುಗೊಳ್ಳುವುದು. ಅಷ್ಟೇ ಅಲ್ಲದೆ, ಅಂತರ್‌ಶಾಸ್ತ್ರೀಯವಾಗಿ ಬಳಸಲೇಬೇಕಾದ ಯಾವುದಾದರೂ ಒಂದು ಶಾಸ್ತ್ರವನ್ನು ಕೈಬಿಟ್ಟಿದ್ದೇ ಆದರೆ, ಅದೇ ಪರಿಸರ ಅಧ್ಯಯನವು ಅಪೂರ್ಣವಾಗಿ ರೂಪುಗೊಳ್ಳುವುದು ಎಂಬುದು ಅಷ್ಟೇ ಸತ್ಯ.

**ಅಂತರ್‌ಶಿಸ್ತಿನ ಉಪಕ್ರಮದ ಹಿನ್ನೆಲೆ :–** 20ನೇ ಶತಮಾನದಿಂದಲೇ ಈ ಒಂದು ಉಪಕ್ರಮವು ಸಾರ್ವತ್ರಿಕವಾಗಿ ಕಾಣಿಸಿಕೊಂಡಿತು ಎಂಬುದು ನಿಜವಾದರೂ ಇದರ ಐತಿಹಾಸಿಕ ಹಿನ್ನೆಲೆ ಅದಕ್ಕಿಂತಲೂ ಹಿಂದಿನ ಕಾಲಕ್ಕೆ ನಮ್ಮನ್ನು ಕರೆದುಕೊಂಡು ಹೋಗುವುದು. ಅದೇಂದರೆ, ಗ್ರೀಕರ ತತ್ವಶಾಸ್ತ್ರ, ಜೂಲಿಥಾಮ್‌ಸನ್‌ಕ್ಲೇನ್ ಅವರು ಪ್ರಮಾಣೀಕರಿಸಿರುವಂತೆ "ಆಧುನಿಕ ವ್ಯಾಖ್ಯಾನಗಳಲ್ಲಿನ ಪರಿಕಲ್ಪನೆಗಳ ಮೂಲವು ಸಾಮಾನ್ಯ ಜ್ಞಾನ, ಸಂಶ್ಲೇಷಣೆ ಮತ್ತು ಒಟ್ಟುಗೂಡಿಸಲ್ಪಟ್ಟ ಏಕೀಕರಣಗೊಂಡ ವಿಜ್ಞಾನವೇ ಆಗಿದೆ."

- ಗೈಲ್ಸ್ ಗನ್ಸ್‌ರವರು ಹೇಳುವಂತೆ, ಗ್ರೀಕ್ ಇತಿಹಾಸಕಾರರು ಮತ್ತು ನಾಟಕಕಾರರು ತಾವು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯು ಸಂಪೂರ್ಣವಾಗಿ ಸರಿಯಾಗಿರಬೇಕೆಂಬ ಕಾರಣಕ್ಕಾಗಿ ಜ್ಞಾನದ ವಿವಿಧ

Digitised by Bharatavani, CIIL

ಶಾಖೆಗಳಿಂದ (ಉದಾಹರಣೆಗೆ, ವೈದ್ಯಕೀಯ ಅಥವಾ ತತ್ವಶಾಸ್ತ್ರ, ಇತ್ಯಾದಿ) ಹಲವಾರು ಅಂಶಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.

ಸುಮಾರು 1980ರ ಕಾಲದಲ್ಲಿ ಇಂತಹ ಒಂದು ಪ್ರಯತ್ನವು ಸ್ಪಷ್ಟವಾಗಿ ಸಂಜ್ಞಾನ ಮನೋವಿಜ್ಞಾನ (Cognitive Psychology) ಮತ್ತು ಮಾನವಿಕ ಅಂಶಗಳ ನಡುವೆ ನಡೆದಿತ್ತು. ಮುಖ್ಯವಾಗಿ ಯು.ಎಸ್.ಎ. ಮತ್ತು ಯುರೋಪು, ರಾಷ್ಟ್ರಗಳಲ್ಲಿ ಇಂತಹ ಅಂತರ್‌ಶಿಸ್ತಿನ ಉಪಕ್ರಮವು ಕಂಡುಬಂದಿತು. ಆದರೆ ಭಾರತದಲ್ಲಿ ಇದಕ್ಕೂ ಪುರಾತನಕಾಲದಲ್ಲಿ ಇಂತಹ ಪ್ರಯತ್ನಗಳು ನಡೆದಿರುವುದಕ್ಕೆ ಪುರಾವೆಗಳಿವೆ. ಉದಾಹರಣೆಗೆ, ಶಿಕ್ಷಣಶಾಸ್ತ್ರವೇ ಇದಕ್ಕೆ ಅತ್ಯಂತ ಸೂಕ್ತವಾದ ದಾಖಲೆ. ಶಿಕ್ಷಣ ಕ್ಷೇತ್ರದಲ್ಲಿ ಅಂತರ್‌ಶಿಸ್ತಿನ ಉಪಕ್ರಮವೇ ಅಲ್ಲದೆ ಬಹುಶಿಸ್ತಿನ ಉಪಕ್ರಮವೂ (Multi Discriplinary Approach) ಬಳಕೆಯಲ್ಲಿತ್ತು.

**ಅಂತರ್‌ಶಿಸ್ತಿನ ಉಪಕ್ರಮ – ಪ್ರಸ್ತುತ ಚಿತ್ರಣ :** ಸಾಂಪ್ರದಾಯಿಕ ಶಾಖೆಗಳಲ್ಲಿ ಒಮ್ಮೊಮ್ಮೆ ಅನುಭವಕ್ಕೆ ಬರುವ ಅಪೂರ್ಣತೆಯಿಂದ, ಸಹಸಂಬಂಧ ಹೊಂದಿರುವ ಹಲವಾರು ಸಾಂಪ್ರದಾಯಿಕ ಶಾಸ್ತ್ರಗಳ ಸಹಭಾಗಿತ್ವದ ಬದ್ಧತೆಯಿಂದ ಕ್ರೋಡೀಕರಣಗೊಂಡು ವ್ಯಕ್ತವಾದಾಗ, ಒಂದು ಹೊಸ ಜ್ಞಾನಶಾಖೆಯಾಗಿ ಕಂಡುಬರುವುದು. ಇಂತಹ ಒಂದು ಪ್ರಕ್ರಿಯೆಯೇ ಅಂತರ್‌ಶಿಸ್ತಿನ ಉಪಕ್ರಮವೆಂದಾಗುವುದು. ಉದಾಹರಣೆಗೆ, ಮಾನವ ಶಾಸ್ತ್ರ (Anthropology) ಮತ್ತು ಸಮಾಜಶಾಸ್ತ್ರಗಳು (Sociology) ಸರಿಸುಮಾರು 20ನೇ ಶತಮಾನದ ಕೊನೆಯವರೆಗೂ ತಂತ್ರಜ್ಞಾನದ ಸಾಮಾಜಿಕ ವಿಶ್ಲೇಷಣೆಯೆಡೆಗೆ ಗಮನವೀಯಲೇ ಇಲ್ಲ. ಇದರ ಪರಿಣಾಮವಾಗಿ, ಅನೇಕ ಸಮಾಜಶಾಸ್ತ್ರದ ವಿಜ್ಞಾನಿಗಳು, ತಂತ್ರಜ್ಞಾನದಲ್ಲಿನ ತಮ್ಮ ಆಸಕ್ತಿಯನ್ನು ಪೂರೈಸಿಕೊಳ್ಳುವುದಕ್ಕಾಗಿ, "ವಿಜ್ಞಾನ ಮತ್ತು ತಂತ್ರಜ್ಞಾನ" ಎಂಬ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರಾರಂಭಿಸಿದರು. ಇಂತಹ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಬಂದಂತಹ ತಜ್ಞರು ವೈವಿಧ್ಯಮಯವಾದ ಶಾಸ್ತ್ರಗಳಿಗೆ ಸೇರಿದವರಾಗಿದ್ದರು. ಕೇವಲ ತಂತ್ರಜ್ಞಾನ ವಿಭಾಗದಿಂದಲೇ ಅಲ್ಲದೆ ನ್ಯಾನೋ ತಂತ್ರಜ್ಞಾನ (Nano technology) ಕ್ಷೇತ್ರದಿಂದಲೂ ಆಗಮಿಸಿದ್ದರು. ಹೀಗೆ ನಡೆದ ಕಾರ್ಯಕ್ರಮದ ಕೆಲವು ಉದಾಹರಣೆಗಳು ಈ ಕೆಳಕಂಡಂತಿವೆ.

1. "ಕಣ–ಮಾಹಿತಿ – ಸಂಸ್ಕರಣ" (Quantum Information Processing) ಎಂಬುದು ಕಣ ಭೌತಶಾಸ್ತ್ರ (Quantum Physics) ಮತ್ತು ಕಂಪ್ಯೂಟರ್ ವಿಜ್ಞಾನ (Computer Science) ಎಂಬ ಎರಡು ಶಾಸ್ತ್ರಗಳ ಸಂಕಲನವಾಗಿತ್ತು.

2. ಜೈವಿಕ ಮಾಹಿತಿ ತಂತ್ರಜ್ಞಾನ (Bio information) ಎಂಬುದು ಅಣುಜೀವಶಾಸ್ತ್ರ (Molecular science) ಮತ್ತು ಕಂಪ್ಯೂಟರ್ ವಿಜ್ಞಾನದ (Computer science) ನಡುವೆ ಸಹ ಸಂಬಂಧ ಹೊಂದಿರುವ ಒಂದು ಅಂತರ್‌ಶಿಸ್ತು.

ಅನೇಕ ಸ್ನಾತಕೋತ್ತರ ಮತ್ತು ಉನ್ನತ ಶಿಕ್ಷಣ ಕೇಂದ್ರಗಳು ಅಂತರ್‌ಶಿಸ್ತುಗಳಲ್ಲಿ ಅಧಿಕೃತವಾದ ಪದವಿ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿವೆ. ನಾರ್ಫೋಕ್‌ನಲ್ಲಿರುವ ನಾರ್ಫೋಕ್ ಸ್ಟೇಟ್ ವಿಶ್ವವಿದ್ಯಾನಿಲಯವು ಇದಕ್ಕೊಂದು ಉದಾಹರಣೆ.

1998ರಿಂದ ಇತ್ತೀಚೆಗೆ, ಅಂತರ್‌ಶಿಸ್ತಿನ ಅಧ್ಯಯನಗಳಲ್ಲಿ, ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. ಉದಾಹರಣೆಗೆ, ಅಮೆರಿಕಾ ಸಂಸ್ಥಾನದ ವಿಶ್ವವಿದ್ಯಾನಿಲಯಗಳಲ್ಲಿ, 1973ರಲ್ಲಿ ಇಂತಹ ಪದವೀಧರರ ಸಂಖ್ಯೆ 7,000ವಿದ್ದಿತು. ಆದರೆ 2005ರ ಹೊತ್ತಿಗೆ ಇಂತಹ ಪದವೀಧರರ ಸಂಖ್ಯೆ 30,000ಕ್ಕೆ ಏರಿತು. (ರಾಷ್ಟ್ರೀಯ ಕೇಂದ್ರ ಶೈಕ್ಷಣಿಕ ಸಂಖ್ಯಾಶಾಸ್ತ್ರ National Center of Educational Statistics - NESC

ಅಂತಾರಾಷ್ಟ್ರೀಯ ಮಟ್ಟದಲ್ಲಿ ಶೈಕ್ಷಣಿಕ ಮುಖಂಡತ್ವ ವಹಿಸಿರುವ ಅನೇಕ ಸಂಘ ಸಂಸ್ಥೆಗಳ ವತಿಯಿಂದ ಉದಾಹರಣೆಗೆ, ವಿಜ್ಞಾನದ ವಿಕಾಸಕ್ಕಾಗಿ ಇರುವ ಅಮೆರಿಕನ್ನಡ ಸಂಘದ ಮುಖ್ಯ ಆಡಳಿತ ಮಂಡಳಿಯು, ಪ್ರಸ್ತುತ 21ನೆಯ ಶತಮಾನದ ಸಮಸ್ಯೆಗಳ ಪರಿಹಾರಕ್ಕೆ ಅಂತರ್‌ಶಿಸ್ತಿನ ಉಪಕ್ರಮವನ್ನೇ ಅನುಮೋದಿಸಿದೆ.

ಐಐಟಿ ಬಾಂಬೆ (Indian Institute of Technology - Bombay) ಕೈಗಾರಿಕಾ ವಿನ್ಯಾಸ ಕೇಂದ್ರದ ಮೂಲಕ (Industrial Design Centre IDC) ಕೊಡಮಾಡುತ್ತಿರುವ ಮಾನವಿಕಶಾಸ್ತ್ರದ, ಸಮಾಜಶಾಸ್ತ್ರದ ಮತ್ತು ನಿರ್ವಹಣ ಕ್ಷೇತ್ರದ (Management) ಪದವಿಗಳು, ಅಂತರ್‌ಶಿಸ್ತಿನ ವಿನ್ಯಾಸವನ್ನು ಹೊಂದಿದೆ. ಇಲ್ಲಿನ ಸ್ನಾತಕೋತ್ತರ ಪದವಿಗೆ ಬರುವ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ, ಕಲೆ ಮತ್ತು ವಾಸ್ತು ಶಿಲ್ಪ ಹೀಗೆ ವಿಭಿನ್ನ ಪದವಿಗಳನ್ನು ಪಡೆದುಕೊಂಡವರಾಗಿರುತ್ತಾರೆ. ಇದರಿಂದಾಗಿ ತರಗತಿಯ ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಪರಸ್ಪರರಿಂದ ತರಹೇವಾರಿ ವಿಚಾರಗಳನ್ನು ಕಲಿತುಕೊಳ್ಳುತ್ತಾರೆ. 2000ದಿಂದ ಇತ್ತೀಚಿನ IDCಯು ಮಾನವ ಕಂಪ್ಯೂಟರ್ – ಅಂತರ್‌ಕ್ರಿಯೆ ವಿನ್ಯಾಸದ ಒಂದು ಪದವಿಯನ್ನು ನೀಡುತ್ತಿದೆ. (Human Computer - Interaction - Design Course). ಇಲ್ಲಿ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು, ತಾಂತ್ರಿಕ ಶಿಕ್ಷಣ, ಯಂತ್ರ ವಿನ್ಯಾಸ, ನಿರ್ವಾಹಕ ಪದವಿ, ಇತ್ಯಾದಿ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿದವರಾಗಿರುತ್ತಾರೆ. ಇಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗಿರುವ ನಿಯೋಜಿತ ಕಾರ್ಯಗಳು ಮುಖ್ಯವಾಗಿ ಅಂತರ್‌ಶಿಸ್ತಿನ ವಿನ್ಯಾಸವನ್ನೇ ಹೊಂದಿರುತ್ತವೆ. ಈ ರೀತಿಯ ಪದವಿಗಳು ಹೆಚ್ಚು ಜನಪ್ರಿಯವಾಗಿವೆ.

**ಅಂತರ್‌ಶಿಸ್ತಿನ ಉಪಕ್ರಮವನ್ನು ಪ್ರತಿನಿಧಿಸುವ ಚಿತ್ರ :** (ಅಂತರ್ ಶಿಸ್ತಿನ ಮಾದರಿ : ಆಯ್ದ ಶಾಖೆ : ಪರಿಸರ ಅಧ್ಯಯನ)




(ಕೃಪೆ : UNESCO - UNEP - IEEP - Environmental Education Series-14, "Interdisciplinary Approaches in Environmental Education" - 1985)

Digitised by Bharatavani, CIIL

## ಅಂತರ್‌ಶಿಸ್ತಿನ ಉಪಕ್ರಮ – ಒಂದು ವಿಮರ್ಶಾತ್ಮಕ ಅವಲೋಕನ

- ಅಂತರ್‌ಶಿಸ್ತಿನ ಉಪಕ್ರಮವೆಂಬುದು ಒಂದು ನಿನೂತನ ಪ್ರಯತ್ನ. ಇದರಲ್ಲಿ ಭಾಗವಹಿಸುವ ವೃತ್ತಿಪರರು, ತಮ್ಮ ಸಾಂಪ್ರದಾಯಿಕ ಶಾಸ್ತ್ರದ ಧೋರಣೆಯನ್ನು ಮಾರ್ಪಡಿಸಿಕೊಂಡು ಈ ಪ್ರಯತ್ನದಲ್ಲಿ ತೊಡಗಬೇಕಾದುದು ಅನಿವಾರ್ಯ. ಉದಾಹರಣೆಗೆ, ವಿಜ್ಞಾನ ವಿಷಯಗಳಲ್ಲಿ ಕಂಡುಬರುವಷ್ಟು ಕರಾರುವಾಕ್ಕುತನವೂ, ಖಚಿತತೆಯೂ, ಮತ್ತು ಸಮಾಜ ವಿಜ್ಞಾನಗಳಲ್ಲಿ ಕಂಡುಬರುವಂತಹ ಕಲೆ ಮತ್ತು ಲಾಲಿತ್ಯವು ಅದರದರ ಕ್ಷೇತ್ರದಲ್ಲಿ ಅದ್ವಿತೀಯವೇ ಸರಿ. ಆದರೆ ಅಂತರ್‌ಶಿಸ್ತಿನ ವಿಷಯಗಳಲ್ಲಿ ಇವೆರಡೂ ಲಕ್ಷಣಗಳು ಮಿಳಿತವಾಗಿ ಕಂಡುಬರುತ್ತವೆ. ಆದ್ದರಿಂದ ಇದರಲ್ಲಿ ಶುದ್ಧ ವಿಜ್ಞಾನದ ಲಕ್ಷಣಗಳನ್ನಾಗಲೀ ಅಥವಾ ಕಲಾ ಲಕ್ಷಣಗಳನ್ನಾಗಲೀ ಪ್ರತ್ಯೇಕವಾಗಿ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಇದರಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳು ತಮ್ಮ ತಮ್ಮ ವಿಷಯದ ಲಕ್ಷಣಗಳಿಗೇ ಅಂಟಿಕೊಂಡಿದ್ದರೆ ಇಂತಹ ವಿನ್ಯಾಸವು, ಉಪಕ್ರಮವು ವಿಫಲವಾಗುತ್ತದೆ.

- ಅಂತರ್‌ಶಿಸ್ತಿನ ಉಪಕ್ರಮವನ್ನು ಜಾರಿಗೊಳಿಸುವ ಕಾರ್ಯಕ್ರಮಗಳಿಗೆ ಸಾಕಷ್ಟು ಸ್ವಾಯತ್ತತೆಯನ್ನು ನೀಡಬೇಕಾಗುತ್ತದೆ. ಏಕೆಂದರೆ, ಇಲ್ಲಿ ಜವಾಬ್ದಾರಿಗಳನ್ನು ಸಹಭಾಗಿತ್ವದಲ್ಲಿ ವಹಿಸಲಾಗುವುದು. ಅಂತಹ ಸಮಯದಲ್ಲಿ ಪ್ರತಿಯೊಂದು ಶಾಸ್ತ್ರದ ಪ್ರಾತಿನಿಧ್ಯಕ್ಕೂ ಸಮಾನವಾದ ಅವಕಾಶ ಮತ್ತು ಸ್ವಾತಂತ್ರ್ಯವಿರಬೇಕು. ಇಲ್ಲದೇ ಹೋದಲ್ಲಿ ಇಂತಹ ಕಾರ್ಯಕ್ರಮಗಳ ಯಶಸ್ಸು ಕಷ್ಟಸಾಧ್ಯವಾಗುವುದು. ಹಾಗೆಯೇ ಇಂತಹ ಉಪಕ್ರಮದಲ್ಲಿ ನಡೆಸಲಾಗುವ ಸಂಶೋಧನೆಗಳ ಪ್ರಕಟಣೆಗಳು ಅಷ್ಟು ಸುಲಭವಾಗಿ ಹೊರಬರಲಾರವು.

- ಇನ್ನೊಂದು ದೃಷ್ಟಿ ಕೋನದ ಪ್ರಕಾರ, ಸಾಂಪ್ರದಾಯಿಕ ಶಾಖೆಗಳಲ್ಲಿ ಕಂಡು ಬರುವ ಒಂದು ರೀತಿಯ ಕೂಪಮಂಡೂಕತನವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಅಂತರ್‌ಶಿಸ್ತುಗಳು ಇನ್ನಿಲ್ಲದಂತೆ ಸಹಾಯ ಮಾಡುತ್ತವೆ. ಆದರೆ ಇಂತಹ ಶಾಖೆಗಳು ವಿವಿಧ ಕ್ಷೇತ್ರಗಳ ವಿಶೇಷ ತಜ್ಞರುಗಳಿಂದ ಕೂಡಿದ್ದು ಅವರ ಮೇಲಿನ ಅವಲಂಬನವನ್ನು ಇವು ನಿರಂತರವಾಗಿ ಕಾಪಾಡಿಕೊಳ್ಳಬೇಕಾಗುತ್ತದೆ. ಅವರಿಲ್ಲದೇ ಹೋದಾಗ, ಅಂತರ್‌ಶಿಸ್ತಿನಲ್ಲಿರುವವರ ಯಾವುದೇ ಶೈಕ್ಷಣಿಕ ಕಾರ್ಯಕ್ರಮಗಳು ಮುಂದುವರಿಯಲಾರವು. ಹಾಗೆಯೇ, ಅಂತರ್‌ಶಿಸ್ತಿನ ಉಪಕ್ರಮದಲ್ಲಿ ಜರುಗುವ ಸಂಶೋಧನೆಗಳು ಮತ್ತು ಸಮಸ್ಯಾ ಪರಿಹಾರಗಳು ಸಾಂಪ್ರದಾಯಿಕ ಶಾಸ್ತ್ರಗಳಿಗೂ ಮರುಕೊಡುಗೆಯನ್ನು ನೀಡುತ್ತವೆ. ಆದ್ದರಿಂದ ಸಾಂಪ್ರದಾಯಿಕ ಶಾಸ್ತ್ರಗಳು ಅಂತರ್‌ಶಿಸ್ತಿನ ಉಪಕ್ರಮದಲ್ಲಿ ಭಾಗವಹಿಸಿದುದರ ಫಲವಾಗಿ ತಾವೂ ವಿಕಾಸಹೊಂದುತ್ತವೆ. ಎಂಬುದೂ ನಿಜವೇ. ಆದ್ದರಿಂದ ಇಂತಹ ಒಂದು ವ್ಯವಸ್ಥೆಯಿಂದ ಅಂತರ್‌ಶಿಸ್ತುಗಳು ಮತ್ತು ಶುದ್ಧ ಶಿಸ್ತುಗಳು–ಎರಡೂ ಪರಸ್ಪರ ಪೂರಕವಾದ ವಿಕಾಸಹೊಂದುತ್ತಾ ಅಭಿವೃದ್ಧಿಯನ್ನು ಹೊಂದಬಲ್ಲವು.

- ಮೇಲೆ ಹೇಳಿದ ಹಲವಾರು ಅಡೆತಡೆಗಳ ಕಾರಣದಿಂದಾಗಿ, ಅನೇಕ ಅಂತರ್‌ಶಿಸ್ತುಗಳು ಕೊನೆಗೆ ತಮ್ಮದೇ ಆದ ಒಂದು 'ಶುದ್ಧಶಾಖೆಗಳಾಗಲು ಉಪಕ್ರಮಿಸಿದುವು. ಉದಾಹರಣೆಗೆ, ನರವಿಜ್ಞಾನ; ಸೈಬರ್‌ಟಿಕ್ಸ್; ಜೀವ ರಸಾಯನಶಾಸ್ತ್ರ; ಮತ್ತು ಜೀವ – ವೈದ್ಯಕೀಯ ತಂತ್ರಜ್ಞಾನ ಇವುಗಳನ್ನು ಅಂತರ್‌ಶಿಸ್ತುಗಳೆಂದು ಗುರುತಿಸಲಾಗಿದೆ.

- ಬಹಳ ಮುಖ್ಯವಾದ ಒಂದು ಆಕ್ಷೇಪಣೆಯೆಂದರೆ, ಇದು ಅಂತರ್‌ಶಿಸ್ತಿನ ಪರ ಮತ್ತು ವಿರೋಧಗಳಿಬ್ಬರ ಮಾತೂ ಹೌದು; ಅದೆಂದರೆ, ಸಂಶ್ಲೇಷಣೆಯ ಕೊರತೆ. ಅಂದರೆ, ವಿದ್ಯಾರ್ಥಿಗಳಿಗೆ ನೀಡಲಾಗುವ ವಿವಿಧ ಶಾಸ್ತ್ರೀಯ ವಿಚಾರಗಳೂ ಪರಸ್ಪರ ಒಂದರೊಳಗೊಂದು ಬೆರೆತುಕೊಳ್ಳದೆ ಬಿಡಿಬಿಡಿಯಾಗಿ ಹಾಗೇ ಉಳಿಯುವುವು. ಇದಕ್ಕಾಗಿ ಸೂಕ್ತವಾದ ಮಾರ್ಗದರ್ಶನದ ಅಗತ್ಯವಿದೆ. ಪರಸ್ಪರ ಶಾಸ್ತ್ರಗಳಲ್ಲಿ ಕಂಡುಬರುವ ವಿರೋಧಾಭಾಸದಂತಹ ವಿಚಾರಗಳು ಅಥವಾ ಒಂದರೊಳಗೊಂದು ಸಮನ್ವಯವಾಗಲಾರದಂತಹ ವಿಚಾರಗಳು ಬಂದಾಗ ಅವುಗಳನ್ನು ಹೇಗೆ ನಿಭಾಯಿಸಬೇಕು ಎಂಬುದರ ಕಡೆಗೆ ಯುಕ್ತ ಮಾರ್ಗದರ್ಶನವು ಲಭ್ಯವಾಗಬೇಕು. ಇಲ್ಲದೇ ಹೋದರೆ ಇದೊಂದು ಅವಾಸ್ತವ ಪ್ರಯತ್ನವಷ್ಟೇ ಆದೀತು. ಇಷ್ಟಾದರೂ, ಹೀಗೆ ಅಭ್ಯಾಸಮಾಡುವುದರಿಂದ, ವಿವಿಧ ಶಾಸ್ತ್ರಗಳಿಂದ ದೊರಕುವ ವಿಚಾರಗಳ ಚಿಂತನ, ಮಂಥನ, ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಮೌಲ್ಯಮಾಪನಗಳನ್ನು ಮಾಡಬಹುದಾಗಿದೆ. ಹಾಗಾದಾಗ ತೆಗೆದುಕೊಳ್ಳುವ ತೀರ್ಮಾನಗಳು ಯೋಗ್ಯವಾಗಿಯೂ ಸಮರ್ಥನೀಯವೂ ಆಗಿರುತ್ತವೆ. ಅಂಥ ಸಮಾಜ ನಾಗರಿಕ ಸಮಾಜವೆನಿಸಿ ಕೊಳ್ಳುತ್ತದೆ. ಅಲ್ಲಿನ ನಾಗರಿಕರು ವಿವೇಕಿಗಳಾಗಿ ಕಂಡುಬರುತ್ತಾರೆ.

–ಸಿ.ಎನ್.ಸು.

## ಅಂತಃಸ್ರಾವ ಗ್ರಂಥಿಗಳ ವ್ಯೂಹ

ಪ್ರಾಣಿಗಳಲ್ಲಿ ವಿವಿಧ ಶಾರೀರಿಕ ಕ್ರಿಯೆಗಳ ನಿಯಂತ್ರಣ ಮತ್ತು ಸಹಕಾರವು ನರವ್ಯೂಹದಿಂದ ಮಾತ್ರವಲ್ಲದೆ ಅಂತಃಸ್ರಾವ ಗ್ರಂಥಿಗಳ ವ್ಯೂಹದಿಂದಲೂ ನಡೆಯುತ್ತದೆ.




**ಅಂತಃಸ್ರಾವ ಗ್ರಂಥಿಗಳ ವ್ಯೂಹ**

ನೀವು ಈಗಾಗಲೇ ಕೆಲವು ಗ್ರಂಥಿಗಳ ಬಗ್ಗೆ ತಿಳಿದುಕೊಂಡಿದ್ದೀರಿ, ಲಾಲಾರಸ, ಜಠರರಸ, ಮೇದೋಜೀರಕರಸ ಮತ್ತು ಪಿತ್ತರಸ ಉತ್ಪತ್ತಿಯಾಗುವ ವಿಷಯ ತಿಳಿದಿದೆ.

ಯಾವ ಅಂಗದ ಜೀವಕೋಶಗಳು ಸ್ರಾವ ಕಾರ್ಯಕ್ಕಾಗಿ ವೈಶಿಷ್ಟ್ಯತೆಯನ್ನು ಪಡೆದಿವೆಯೋ ಆ ಅಂಗವನ್ನು ಗ್ರಂಥಿ ಎನ್ನುವರು ಅಥವಾ ಕೆಲವು ವೇಳೆ ಒಂದೇ ಜೀವಕೋಶವನ್ನು ಗ್ರಂಥಿ ಎನ್ನುವರು. ಮಾನವನ ಶರೀರದಲ್ಲಿ ಎರಡು ವಿಧದ ಗ್ರಂಥಿಗಳಿವೆ. ಅವೇ ನಳಿಕಾ ಗ್ರಂಥಿಗಳು ಮತ್ತು ನಿರ್ನಾಳ ಗ್ರಂಥಿಗಳು. ನಳಿಕಾ ಗ್ರಂಥಿಗಳು ತಮ್ಮಲ್ಲಿ

Digitised by Bharatavani, CIIL

ಉತ್ಪಾದನೆಯಾಗುವ ರಸವನ್ನು ನಾಳದ ಮೂಲಕ ವಿವಿಧ ಅಂಗಗಳಿಗೆ ತಲುಪಿಸುತ್ತವೆ. ಉದಾ: ಲಾಲಾಗ್ರಂಥಿಗಳು ಮತ್ತು ಮೇದೋಜೀರಕ ಗ್ರಂಥಿಗಳು. ಇವುಗಳನ್ನು ಬಹಿಃಸ್ರಾವ ಗ್ರಂಥಿಗಳು ಎಂದು ಹೇಳುತ್ತಾರೆ. ನಿರ್ನಾಳ ಗ್ರಂಥಿಗಳು ತಮ್ಮ ಸ್ರಾವವನ್ನು ನೇರವಾಗಿ ರಕ್ತಕ್ಕೆ ಹರಿಯ ಬಿಡುತ್ತವೆ. ಆದ್ದರಿಂದ ಇವನ್ನು ಅಂತಃಸ್ರಾವ ಗ್ರಂಥಿಗಳೆಂದು ಕರೆಯುವರು. ನಿರ್ನಾಳ ಗ್ರಂಥಿಗಳು ಸ್ರವಿಸುವ ರಾಸಾಯನಿಕ ವಸ್ತುಗಳಿಗೆ ಹಾರ್ಮೋನುಗಳು (ಚೋದನಿಗಳು) ಎಂದು ಹೆಸರು. ರಕ್ತದ ಮೂಲಕ ಇವು ಇತರ ಅಂಗಗಳನ್ನು ತಲುಪಿ ಅವುಗಳ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ ಮತ್ತು ಈ ಚಟುವಟಿಕೆಗಳ ಹೊಂದಾಣಿಕೆಯನ್ನುಂಟು ಮಾಡುತ್ತವೆ. ಈ ರೀತಿ ನಿಯಂತ್ರಣಕ್ಕೊಳಗಾದ ಅಂಗಗಳೇ ಹಾರ್ಮೋನ್‌ಗಳ ಗುರಿ ಅಂಗಗಳು. ಹಾರ್ಮೋನ್‌ಗಳು ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಪ್ರಚೋದನೆಯನ್ನು ಒಯ್ಯುವುದರಿಂದ ಇವುಗಳನ್ನು ರಸದೂತಗಳು (Chemical Messangers) ಎಂದು ಕರೆಯುವುದುಂಟು.

ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಚೋದನಿಗಳನ್ನು ಪ್ರೋಟೀನ್‌ಗಳು ಅಥವಾ ಅಮೈನೋ ಆಮ್ಲಗಳು ಅಥವಾ ಸ್ಟೀರಾಯಿಡ್‌ಗಳು ಎಂದು ವರ್ಗೀಕರಿಸಲಾಗಿದೆ. ಅತ್ಯಂತ ಕಡಿಮೆ ಪ್ರಮಾಣ ಮತ್ತು ಸಾಂದ್ರತೆಗಳಲ್ಲಿಯೂ ಇವು ಪರಿಣಾಮಕಾರಿಗಳಾಗಿವೆ.

ಹಾರ್ಮೋನ್‌ಗಳು ಮಿತಿಮೀರಿ ಸ್ರವಿಸಲ್ಪಟ್ಟಾಗ ಗುರಿ ಅಂಗಗಳಲ್ಲಿ ಹೆಚ್ಚಿನ ಚಟುವಟಿಕೆಯೂ, ಸಾಕಾದಷ್ಟು ಸ್ರವಿಕೆಯಾಗದಿದ್ದಲ್ಲಿ ಗುರಿ ಅಂಗಗಳಲ್ಲಿ ಕುಂದಿದ ಚಟುವಟಿಕೆಯೂ ಕಂಡು ಬರುತ್ತದೆ. ಅವಶ್ಯಕತೆಗಿಂತ ಹೆಚ್ಚು ಹಾರ್ಮೋನ್‌ಗಳು ಉತ್ಪತ್ತಿಯಾದಾಗ ಅದಕ್ಕೆ ಅತಿಕಾರ್ಯ (Hyper Function) ಸ್ಥಿತಿ ಎಂದು, ಸ್ರಾವ ಕಡಿಮೆಯಾದರೆ ನ್ಯೂನ ಸ್ರಾವ (Hypo Function) ಸ್ಥಿತಿ ಎಂದು ಹೇಳುತ್ತಾರೆ. ಈ ಎರಡು ಸ್ಥಿತಿಗಳಲ್ಲೂ ಗುರಿ ಅಂಗಗಳ ಕಾರ್ಯಗಳು ಏರುಪೇರಾಗುತ್ತವೆ.

ಅಂತಃಸ್ರಾವಕ ಗ್ರಂಥಿಗಳ ರಚನೆ, ಕಾರ್ಯಗಳು, ಹಾರ್ಮೋನ್‌ಗಳ ಪ್ರಭಾವಗಳು ಹಾಗೂ ಕೊರತೆ ಅಥವಾ ಹೆಚ್ಚಿನ ಸ್ರವಿಕೆಯಿಂದ ಉಂಟಾಗುವ ರೋಗಗಳ ಅಧ್ಯಯನ ಮಾಡುವ ಶಾಸ್ತ್ರವೇ ಅಂತಃಸ್ರಾವ ಗ್ರಂಥಿ ಶಾಸ್ತ್ರ (ಎಂಡೊಕ್ರೈನಾಕಲಜಿ). ಒಳ ಸುರಿಕೆ ಶಾಸ್ತ್ರ ಈ ಶಾಸ್ತ್ರದ ಪರ್ಯಾಯನಾಮ. ತೆಮಡಿಕ (ಪಿಟ್ಯುಟರಿ), ಗುರಾಣಿಕ (ಥೈರಾಯ್ಡ್), ಲೆಂಗರಹೆನ್ಸನ ಪುಟ್ಟ ದ್ವೀಪಗಳು, ಅಡ್ರಿನಲ್, ಬದಿಗುರಾಣಿಕ (ಪ್ಯಾರಾಥೈರಾಯ್ಡ್), ಪೀನಿಯಲ್ ಗ್ರಂಥಿ, ಅಂಡಾಶಯ (ಓವರಿ), ವೃಷಣ (ಟೆಸ್ಟಿಸ್), ಕಡೆಯ ಎರಡನ್ನೂ ಒಟ್ಟಾಗಿ ಲೈಂಗಿಕ ಗ್ರಂಥಿಗಳೆನ್ನುತ್ತಾರೆ. ಇವು ಮಾನವ ದೇಹದಲ್ಲಿರುವ ಮುಖ್ಯ ಅಂತಃಸ್ರಾವ ಗ್ರಂಥಿಗಳು. ಜೊಲ್ಲು ಹಾಗೂ ಕಣ್ಣೀರು ಗ್ರಂಥಿಗಳು, ಈಲಿ, ಮಾಂಸಲಿ ಗ್ರಂಥಿಗಳು ರಸಗಳನ್ನು ನಾಳಗಳ ಮೂಲಕ ಸುರಿಸುವುದರಿಂದ ಅವು ಬಹಿರ್ ಸ್ರಾವಕ ಗ್ರಂಥಿಗಳು, ಒಳಸುರಿಕೆ ಗ್ರಂಥಿಗಳು ರಸಗಳನ್ನು ನೇರವಾಗಿ ರಕ್ತದೊಳಕ್ಕೆ ಸುರಿಸುತ್ತವೆ. ಇವು ಉತ್ಪತ್ತಿ ಮಾಡುವ ರಾಸಾಯನಿಕಗಳೇ ಹಾರ್ಮೋನುಗಳು. ದೂರದ ಅಂಗಾಂಶ ಕೋಶಗಳ ಮೇಲೆ ಪ್ರಭಾವ ತೋರುವುದರಿಂದ ಇವನ್ನು ರಾಸಾಯನಿಕ ದೂತಗಳು ಎನ್ನಲಾಗಿದೆ. ಇವು ರಕ್ತದಲ್ಲಿ ಸ್ವಲ್ಪ ಪ್ರಮಾಣದಲ್ಲಿದ್ದು ಹಲವಾರು ಅಂಗಗಳ ಇಲ್ಲವೇ ಇಡೀ ದೇಹದ ಮೇಲೆ ಪ್ರಭಾವ ಬೀರುವುವು. ಹಾರ್ಮೋನ್‌ಗಳ ಕ್ರಿಯೆಗಳು ದೇಹದೊಳಗಿನ ಆವರಣವನ್ನು ಸಮಸ್ಥಿತಿಯಲ್ಲಿ ಇರಿಸುವುದರಲ್ಲಿ ಮುಖ್ಯ ಪಾತ್ರವಹಿಸುತ್ತವೆ.

**ಪಿಟ್ಯೂಟರಿ ಗ್ರಂಥಿಗಳು:** ತೆಮಡಿಕ (ಪಿಟ್ಯುಟರಿ) ಒಂದು ಚಿಕ್ಕ ಗ್ರಂಥಿ. ಇದರ ಗಾತ್ರ ಬಟಾಣಿ ಕಾಳಿನಷ್ಟು. ಇದು ಮಿದುಳಿನ ಬುಡ ಭಾಗದಲ್ಲಿ ಹೂತುಕೊಂಡಿದೆ. ಇದು ಅನೇಕ ಹಾರ್ಮೋನುಗಳನ್ನು ಸ್ರವಿಸುತ್ತದೆ. ಇವುಗಳಲ್ಲಿ ಕೆಲವು ಹಾರ್ಮೋನುಗಳು ಇತರೇ ನಿರ್ನಾಳ ಗ್ರಂಥಿಗಳ ಕಾರ್ಯಗಳನ್ನು ನಿಯಂತ್ರಿಸುತ್ತವೆ. ಪಿಟ್ಯೂಟರಿಯನ್ನು ಹಿಂಭಾಗದ ಹಾಲೆ ಮತ್ತು ಮುಂಭಾಗದ ಹಾಲೆ ಎಂದು ಎರಡು ಭಾಗ ಮಾಡಲಾಗಿದೆ. ಇವುಗಳನ್ನು ಗ್ರಂಥಿಯ ಮುಂದಣ, ಹಿಂದಣ ಹಾಲೆಗಳು (ಲೋಬ್ಸ್) ಎನ್ನುತ್ತಾರೆ.




**ಪಿಟ್ಯೂಟರಿ ಗ್ರಂಥಿ**

ಈ ಕೆಳಗೆ ತಿಳಿಸಿರುವ ಕಾರ್ಯಗಳ ಮೇಲೆ ಪಿಟ್ಯೂಟರಿ ಗ್ರಂಥಿಯು ಪ್ರಭಾವ ಬೀರುತ್ತದೆ.

1. ದೇಹದ ಬೆಳವಣಿಗೆಯ ಮೇಲೆ ಪ್ರಭಾವವನ್ನು ಬೀರುತ್ತದೆ.
2. ಥೈರಾಯಿಡ್ ಗ್ರಂಥಿಯಿಂದ ಹಾರ್ಮೋನು (ಥೈರಾಕ್ಸಿನ್) ಉತ್ಪತ್ತಿ.
3. ಅಡ್ರಿನಲ್ ಗ್ರಂಥಿಯ ಚಟುವಟಿಕೆ
4. ಸ್ತನಗಳಿಂದ ಹಾಲಿನ ಉತ್ಪತ್ತಿ.
5. ಮೂತ್ರಜನಕಾಂಗಗಳಿಂದ ನೀರಿನ ವಿಸರ್ಜನೆ.
6. ಗರ್ಭಕೋಶದ ಸ್ನಾಯುಗಳ ಸಂಕೋಚನೆ.
7. ಅಂಡಾಶಯ ಮತ್ತು ವೃಷಣಗಳ ಅಭಿವೃದ್ಧಿ.

ಪ್ರಾಯಕ್ಕೆ ಮುಂಚಿತವಾಗಿ ಪಿಟ್ಯೂಟರಿಯ ಬೆಳವಣಿಗೆಯ ಹಾರ್ಮೋನು ಮಿತಿಮೀರಿ ಉತ್ಪತ್ತಿಯಾದರೆ ವ್ಯಕ್ತಿಯು ದೈತ್ಯಗಾತ್ರಕ್ಕೆ ಬೆಳೆಯುತ್ತಾನೆ. ಈ ಸ್ಥಿತಿಗೆ ದೈತ್ಯತೆ ಎನ್ನುವರು. ಪ್ರಾಯಕ್ಕೆ ಮುಂಚೆ ಅಗತ್ಯಕ್ಕಿಂತ ಕಡಿಮೆ ಉತ್ಪತ್ತಿಯಾದರೆ ವ್ಯಕ್ತಿಯು ಕುಳ್ಳನಾಗುತ್ತಾನೆ. ಇದನ್ನು ಕುಬ್ಜತೆ ಎನ್ನುವರು.

ಪ್ರೌಢರಲ್ಲಿ ಈ ಹಾರ್ಮೋನಿನ ಅತಿಯಾದ ಚಟುವಟಿಕೆಯಿಂದ ಅಕ್ರೊಮೆಗಾಲಿ ಎಂಬ ರೋಗ ಉಂಟಾಗುತ್ತದೆ. ಈ ರೋಗದ ಮುಖ್ಯ ಲಕ್ಷಣವೆಂದರೆ ದವಡೆ, ಮೂಗು, ಕೈ ಮತ್ತು ಕಾಲುಗಳ ಮೂಳೆಗಳ ಪ್ರಮಾಣ ತಪ್ಪಿದ ಬೆಳವಣಿಗೆ.

**ಗುರಾಣಿಕ (ಥೈರಾಯಿಡ್)** : ಥೈರಾಯಿಡ್ ಗ್ರಂಥಿಯ ಒಂದೊಂದು ಜೊತೆ ಕುತ್ತಿಗೆಯಲ್ಲಿ ಶ್ವಾಸನಾಳದ ಅಕ್ಕ ಪಕ್ಕದಲ್ಲಿ ಗಂಟಲಿನ ಕೆಳಗೆ ಇದೆ. ಈ ಗ್ರಂಥಿಯು ಥೈರಾಕ್ಸಿನ್ ಎಂಬ ಹಾರ್ಮೋನನ್ನು ಸ್ರವಿಸುತ್ತದೆ. ಇದು ಅಯೋಡಿನ್‌ನಿಂದ ಕೂಡಿತ ಅಮೈನೋ ಆಮ್ಲವಾಗಿದೆ. ಥೈರಾಕ್ಸಿನ್ ದೇಹದಲ್ಲಿ ನಡೆಯುವ ಚಯಾಪಚಯ (Metabolism) ಕ್ರಿಯೆಯ ವೇಗವನ್ನು ಹೆಚ್ಚಿಸುತ್ತದೆ ಮತ್ತು ಆಹಾರ ಉತ್ಕರ್ಷಣೆಯ ಪ್ರಮಾಣವನ್ನು ನಿಯಂತ್ರಿಸುತ್ತದೆ. ಆದ್ದರಿಂದ ಸ್ವಾಭಾವಿಕವಾದ ದೇಹದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಈ ಹಾರ್ಮೋನು ಅವಶ್ಯಕ. ಇದು ವ್ಯಕ್ತಿಯ ಬೆಳವಣಿಗೆ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುವುದರಿಂದ ಇದನ್ನು

Digitised by Bharatavani, CIIL

'ವ್ಯಕ್ತಿತ್ವದ ಹಾರ್ಮೋನು' ಎಂದು ಕರೆಯಲಾಗುತ್ತದೆ. ಕೊರಳಲ್ಲಿ ಗೋಮಾಳೆಯ ಕೆಳಗಡೆ, ಶ್ವಾಸನಾಳದ ಎರಡು ಕಡೆಯೂ ಈ ಗ್ರಂಥಿ ಇದೆ. ಇದಕ್ಕೆ ರಕ್ತದ ಸರಬರಾಜು ಹೆಚ್ಚು. ಇದರ ನಡುಭಾಗ ಸಣ್ಣಗಿದ್ದು ಪಕ್ಕಗಳು ರೆಕ್ಕೆಯಾಕಾರದಲ್ಲಿರುವುವು.




**ಥೈರಾಯಿಡ್ ಗ್ರಂಥಿ**

ಸಾಮಾನ್ಯವಾಗಿ ಇದರ ನಾಲ್ಕೂ ಗ್ರಂಥಿಗಳೂ ಶ್ವಾಸನಾಳದ ಹಿಂಬದಿಯಲ್ಲೋ ಬದಿಯಲ್ಲೋ ಹುದುಗಿರುತ್ತವೆ. ಇವು ಗುಲಗಂಜೀ ಗಾತ್ರಕ್ಕಿರುತ್ತವೆ.

ಥೈರಾಯಿಡ್ ಗ್ರಂಥಿಯಲ್ಲಿ ದೋಷ ಉಂಟಾದರೆ ಥೈರಾಕ್ಸಿನ್ ಅಗತ್ಯಕ್ಕಿಂತ ಕಡಿಮೆ ಉತ್ಪತ್ತಿಯಾಗಬಹುದು ಅಥವಾ ಹೆಚ್ಚು ಉತ್ಪತ್ತಿಯಾಗಬಹುದು. ಈ ವೈಪರೀತ್ಯಗಳನ್ನು ಕ್ರಮವಾಗಿ ಹೈಪೋಥೈರಾಯಿಡಿಸಮ್ ಮತ್ತು ಹೈಪರ್‌ಥೈರಾಯಿಡಿಸಮ್ ಎಂದು ಹೇಳುತ್ತಾರೆ.

**ಹೈಪೋಥೈರಾಯಿಡಿಸಮ್ :** ದೇಹದ ಸುಧಾರಣಾ ಅವಶ್ಯಕತೆಗಳಿಗೆ ಸಾಕಾಗುವಷ್ಟು ಥೈರಾಕ್ಸಿನ್ ಉತ್ಪತ್ತಿ ಮಾಡಲು ಅಸಮರ್ಥವಾಗಿರುವ ಥೈರಾಯಿಡ್ ಗ್ರಂಥಿ ಸ್ಥಿತಿಯೇ ಹೈಪೋಥೈರಾಯಿಡಿಸಮ್. ಈ ಅಸಮರ್ಥತೆಯಿಂದ ಈ ಕೆಳಗಿನ ತೊಂದರೆಗಳುಂಟಾಗುತ್ತದೆ.

**ಸರಳ ಗಾಯಿಟರ್ :** ಥೈರಾಯಿಡ್ ಗ್ರಂಥಿಯ ಬೆಳವಣಿಗೆಯು ಸಹಜವಾಗಿರದಿದ್ದರೆ ಅದು ವಿಸ್ತಾರಗೊಂಡು ಕತ್ತಿನಲ್ಲಿ ಊತ ಉಂಟಾಗುತ್ತದೆ. ಇದೇ ಗಾಯಿಟರ್ ರೋಗ. ದೇಹಕ್ಕೆ ಅಗತ್ಯವಾಗುವ ಪ್ರಮಾಣದಲ್ಲಿ ಥೈರಾಕ್ಸಿನ್ನನ್ನು ಉತ್ಪಾದಿಸಲು ಥೈರಾಯಿಡ್ ಗ್ರಂಥಿಯು ಹೀಗೆ ಊದಿಕೊಳ್ಳುವುದು. ನೀರು ಮತ್ತು ಆಹಾರದೊಡನೆ ಅಯೋಡಿನ್ ಅಂಶ ಸೇವಿಸುವುದರಿಂದ ಗಾಯಿಟರನ್ನು ವಾಸಿ ಮಾಡಬಹುದು. ಮಣ್ಣಿನಲ್ಲಿ ಮತ್ತು ನೀರಿನಲ್ಲಿ ಸಾಕಾದಷ್ಟು ಅಯೋಡಿನ್ ಅಂಶ ಇಲ್ಲದ ಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಗಾಯಿಟರ್ ಹೆಚ್ಚಾಗಿ ಕಂಡುಬರುತ್ತದೆ. ಕೆಲವು ಪ್ರದೇಶಗಳಿಗೆ ಮಾತ್ರ ಈ ರೋಗವು ಸೀಮಿತವಾಗಿರುವುದರಿಂದ ಇದನ್ನು ಸ್ಥಾನಿಕ ವ್ಯಾಧಿ ಎನ್ನುವರು. ಸಮುದ್ರದ ತೀರದಲ್ಲಿ ಅಯೋಡಿನ್ ಪ್ರಮಾಣದ ಕೊರತೆ ಇರುವುದಿಲ್ಲವಾದ್ದರಿಂದ ಅಲ್ಲಿ ವಾಸಿಸುವ ಜನರಿಗೆ ಗಾಯಿಟರ್ ರೋಗವಿರುವುದಿಲ್ಲ.

**ಮಿಕ್ಸೆಡಿಮಾ :** ಪ್ರೌಢಾವಸ್ಥೆಯಲ್ಲಿ ಥೈರಾಯಿಡ್ ಗ್ರಂಥಿಯ ಕಾರ್ಯ ಕ್ಷೀಣವಾಗುವುದರಿಂದ ಈ ಪರಿಸ್ಥಿತಿಯುಂಟಾಗುತ್ತದೆ. ಈ ಕಾರಣದಿಂದಾಗಿ ವ್ಯಕ್ತಿಯ ಬೆಳವಣಿಗೆ ಕುಂಠಿತವಾಗುತ್ತದೆ. ಇದರ ಲಕ್ಷಣಗಳೆಂದರೆ ದೈಹಿಕ ಮತ್ತು ಮಾನಸಿಕ ಶಕ್ತಿ ಕುಂದುವಿಕೆ, ದೇಹದ ತೂಕ ಹೆಚ್ಚಾಗುವಿಕೆ, ಚರ್ಮ ದಪ್ಪವಾಗುವಿಕೆ, ಕಡಿಮೆಯಾದ ಹೃದಯ ಬಡಿತ ಮತ್ತು ತಗ್ಗಿದ ನೆಗಡಿ ನಿರೋಧಿಸುವ ಶಕ್ತಿ, ಇಂತಹ ವ್ಯಕ್ತಿಗೆ ಸೂಕ್ತ ಪ್ರಮಾಣದಲ್ಲಿ ಥೈರಾಕ್ಸಿನ್ನನ್ನು ಕೊಟ್ಟು ಈ ಪರಿಸ್ಥಿತಿಯನ್ನು ನಿಯಂತ್ರಿಸಬಹುದು.

**ಕ್ರಿಟಿನಿಸಮ್ :** ನವಜಾತ ಶಿಶುವಿನಲ್ಲಿ ಥೈರಾಕ್ಸಿನ್ ಉತ್ಪಾದನೆಯು ಕಡಿಮೆಯಾಗಿದ್ದು ಇದಕ್ಕೆ ಚಿಕಿತ್ಸೆ ನೀಡದಿದ್ದಲ್ಲಿ ಕ್ರಿಟಿನಿಸಮ್ ರೋಗ ಉಂಟಾಗುತ್ತದೆ. ಬೆಳವಣಿಗೆಯು ಕುಂಠಿತವಾಗಿ ಮಾನಸಿಕ ಅಭಿವೃದ್ಧಿಯು ಬಹಳ ವಿಳಂಬವಾಗುತ್ತದೆ. ಈ ರೋಗದ ಇತರ ಲಕ್ಷಣಗಳೆಂದರೆ ಬಾಗಿರುವ ಕಾಲುಗಳು, ದೋಷಪೂರಿತ ಹಲ್ಲುಗಳು, ನಾಲಿಗೆಯು ವಿಸ್ತರಿಸಿ ಹೊರ ಚಾಚಿರುವುದು ಮತ್ತು ಚರ್ಮವು ಒರಟಾಗಿ ತೊಗಲಿನಂತಿರುವುದು. ಸಕಾಲಿಕ ವೈದ್ಯಕೀಯ ಚಿಕಿತ್ಸೆಯಿಂದ ಈ ರೋಗವನ್ನು ವಾಸಿ ಮಾಡಬಹುದು.

**ಹೈಪರ್ ಥೈರಾಯಿಡಿಸಮ್ :** ಥೈರಾಯಿಡ್ ಗ್ರಂಥಿಯ ವಿಸ್ತರಣೆಯಿಂದ ಅಥವಾ ಅದರ ಕಾರ್ಯಾತಿರೇಕದಿಂದ ಈ ಪರಿಸ್ಥಿತಿ ಉಂಟಾಗುತ್ತದೆ. ಈ ಸ್ಥಿತಿಯಲ್ಲಿ ಅಗತ್ಯವಾದ ಪ್ರಮಾಣಕ್ಕಿಂತಲೂ ಅಧಿಕವಾಗಿ ಥೈರಾಕ್ಸಿನ್ ಉತ್ಪತ್ತಿಯಾಗುತ್ತದೆ. ಇದರಿಂದ ಚಯಾಪಚಯ ಕ್ರಿಯೆಯ ವೇಗವು ಹೆಚ್ಚಾಗಿ ಶಾಖೋತ್ಪಾದನೆಯೂ ಹೆಚ್ಚುತ್ತದೆ. ಈ ಪರಿಸ್ಥಿತಿಯ ಇತರ ಚಿಹ್ನೆಗಳೆಂದರೆ ಕಣ್ಣುಗುಡ್ಡೆಗಳು ಮುಂದೆ ಚಾಚುವುದು, ರಕ್ತ ಒತ್ತಡದ ಏರಿಕೆ, ಮಾನಸಿಕ ಒತ್ತಡ, ಉದ್ರೇಕಗೊಳ್ಳುವ ಸ್ವಭಾವ, ವಿಪರೀತ ಬೆವರುವಿಕೆ, ದೇಹದ ತೂಕ ನಷ್ಟ ಮತ್ತು ಆಯಾಸ ಇದನ್ನು ತಪ್ಪಿಸಲು ಸಕಾಲದಲ್ಲಿ ಚಿಕಿತ್ಸೆ ಅವಶ್ಯಕವಾಗಿರುತ್ತದೆ.

**ಪ್ಯಾರಾಥೈರಾಯಿಡ್ ಗ್ರಂಥಿಗಳು**

ನಾಲ್ಕು ಪ್ಯಾರಾಥೈರಾಯಿಡ್ ಗ್ರಂಥಿಗಳು ಥೈರಾಯಿಡ್ ಗ್ರಂಥಿಯ ಅಂಗಾಂಶದಲ್ಲಿ ಹುದುಗಿಕೊಂಡಿವೆ. ಈ ಸಣ್ಣ ಗ್ರಂಥಿಗಳು ಪ್ಯಾರಾಥಾರ್ಮೋನ್ ಎಂಬ ಹಾರ್ಮೋನನ್ನು ಉತ್ಪಾದಿಸುತ್ತವೆ. ಈ ಹಾರ್ಮೋನ್ ರಕ್ತ ಪ್ರವಾಹದಲ್ಲಿರುವ ಕ್ಯಾಲ್ಸಿಯಂ ಪ್ರಮಾಣವನ್ನು ನಿಯಂತ್ರಿಸುತ್ತದೆ.




**ಪ್ಯಾರಾ ಥೈರಾಯಿಡ್ ಗ್ರಂಥಿಗಳು**

ಸ್ನಾಯುಗಳ ವಿಕಾಸಕ್ಕೆ ಈ ಲವಣಗಳು ಸಾಧಾರಣ ಪ್ರಮಾಣದಲ್ಲಿ ಅವಶ್ಯಕ. ಈ ಲವಣಗಳ ಕೊರತೆಯುಂಟಾದರೆ ನೋವಿನಿಂದ ಕೂಡಿದ ಸ್ನಾಯು ಸೆಳೆತ ಕಂಡುಬರುತ್ತದೆ. ಪ್ಯಾರಾಥಾರ್ಮೋನ್ ಹೆಚ್ಚಿನ

Digitised by Bharatavani, CIIL

ಪ್ರಮಾಣದಲ್ಲಿ ಉತ್ಪತ್ತಿಯಾದರೆ ಮೂಳೆಗಳಲ್ಲಿನ ಕ್ಯಾಲ್ಸಿಯಂ ಕಡಿಮೆಯಾಗಿ ಅವು ಮೃದುವಾಗುತ್ತವೆ.

**ಅಡ್ರಿನಲ್ ಗ್ರಂಥಿಗಳು**

ಪ್ರತಿ ಮೂತ್ರಜನಕಾಂಗದ ಮೇಲೆ ತ್ರಿಕೋನಾಕಾರದ ಟೋಪಿಯಂತೆ ಒಂದು ಅಡ್ರಿನಲ್ ಗ್ರಂಥಿಯಿದೆ. ಈ ಗ್ರಂಥಿಗಳಿಗೆ ಸುಪ್ರಾರೀನಲ್ ಗ್ರಂಥಿಗಳೆಂದೂ ಹೆಸರಿದೆ. ಪ್ರತಿ ಅಡ್ರಿನಲ್ ಗ್ರಂಥಿಯಲ್ಲೂ ಹೊರಭಾಗದ ತೊಗಟೆ ಮತ್ತು ಒಳಭಾಗದ ಮೆಡುಲ್ಲಾವನ್ನು ಕಾಣಬಹುದು. ಈ ಎರಡು ಭಾಗಗಳು ಪ್ರತ್ಯೇಕವಾಗಿ ಹಾರ್ಮೋನುಗಳನ್ನು ಸ್ರವಿಸುತ್ತವೆ.




**ಅಡ್ರಿನಲ್ ಗ್ರಂಥಿಗಳು**

ತೊಗಟೆಯು ಸ್ರವಿಸುವ ಅನೇಕ ಹಾರ್ಮೋನುಗಳಲ್ಲಿ ಒಂದು ಕಾರ್ಟಿಸೋನ್, ಇದು ಚಯಾಪಚಯ ಕ್ರಿಯೆಯ ವೇಗವನ್ನು ಹಾಗೂ ರಕ್ತದಲ್ಲಿರುವ ಲವಣಗಳ ಸಾಂದ್ರತೆಯನ್ನು ನಿಯಂತ್ರಿಸುತ್ತದೆ.

ಅಡ್ರಿನಲ್ ಮೆಡುಲ್ಲಾ ಮೂರು ಹಾರ್ಮೋನ್‌ಗಳನ್ನು ಸ್ರವಿಸುತ್ತದೆ– ಅಡ್ರಿನಲಿನ್, ನಾರ್ ಅಡ್ರಿನಲಿನ್ ಮತ್ತು ಡೋಪಮಿನ್. ಇವುಗಳಲ್ಲಿ ಅಡ್ರಿನಲಿನ್ ಮುಖ್ಯವಾದುದು. ಇದು ರಕ್ತದಲ್ಲಿ ಕನಿಷ್ಠ ಪ್ರಮಾಣದಲ್ಲಿರುತ್ತದೆ. ಭಯ, ಕೋಪ ಅಥವಾ ಇತರ ಯಾವುದೇ ಸಂವೇಗಗಳ ಒತ್ತಡ ಪರಿಸ್ಥಿತಿಗಳಲ್ಲಿ ಅಡ್ರಿನಲಿನ್ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಹೃದಯ ಬಡಿತ, ಉಸಿರಾಟದ ವೇಗ ಮುಂತಾದ ನಾನಾ ಘಟನೆಗಳ ಹೊಂದಾಣಿಕೆಯನ್ನು ಏರ್ಪಡಿಸಿ ದೇಹವು ತುರ್ತು ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗುವಂತೆ ಮಾಡುವುದರಿಂದ ಈ ಹಾರ್ಮೋನನ್ನು ತುರ್ತು ಪರಿಸ್ಥಿತಿಯ ಹಾರ್ಮೋನ್ (Emergency Hormone) ಎಂದು ಕರೆಯುವರು.

**ಲ್ಯಾಂಗರ್ ಹಾನ್ಸ್‌ನ ಕಿರುದ್ವೀಪಗಳು**

ಮೇದೋಜೀರಕ ಗ್ರಂಥಿಯು ಮಿಶ್ರಗ್ರಂಥಿಯಾಗಿದೆ. ಇದರ ಒಂದು ಭಾಗ ನಾಳಸಹಿತ ಗ್ರಂಥಿಯಾಗಿದ್ದರೆ, ಇನ್ನೊಂದು ಭಾಗ ನಿರ್ನಾಳ ಗ್ರಂಥಿಯಂತೆ ಕೆಲಸ ನಿರ್ವಹಿಸುತ್ತದೆ.




**ಮೇದೋಜೀರಕ ಗ್ರಂಥಿ**

ಮೇದೋಜೀರಕ ಗ್ರಂಥಿಯ ಅಂತಃಸ್ರಾವಕ ಕೋಶಗಳನ್ನು ಲ್ಯಾಂಗರ್‌ಹಾನ್ಸ್‌ನ ಕಿರುದ್ವೀಪಗಳು ಎನ್ನುವರು. ಇವು ಇನ್‌ಸುಲಿನ್ ಮತ್ತು ಗ್ಲುಕನ್ ಎಂಬ ಎರಡು ಹಾರ್ಮೋನ್‌ಗಳನ್ನು ಸ್ರವಿಸುತ್ತದೆ. ಇನ್‌ಸುಲಿನ್ ಗ್ಲೂಕೋಸನ್ನು ಗ್ಲೈಕೋಜನ್ ಆಗಿ ಪರಿವರ್ತಿಸಲು ಸಹಾಯ ಮಾಡುತ್ತದೆ. ಇದರಿಂದ ಯಕೃತ್ ಮತ್ತು ಸ್ನಾಯುಗಳಲ್ಲಿ ಗ್ಲೈಕೋಜನ್ ರೂಪದಲ್ಲಿ ಗ್ಲೂಕೋಸ್ ಅನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ರಕ್ತದಲ್ಲಿ ಗ್ಲೂಕೋಸ್‌ನ ಪ್ರಮಾಣ ಹೆಚ್ಚಾದಾಗ ಅಂದರೆ ಜೀರ್ಣಿಸಿದ ಆಹಾರ ರಕ್ತಗತವಾದಾಗ ಇನ್‌ಸುಲಿನ್ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಸಾಕಷ್ಟು ಪ್ರಮಾಣದಲ್ಲಿ ಇನ್‌ಸುಲಿನ್ ಉತ್ಪತ್ತಿಯಾಗದಿದ್ದರೆ ರಕ್ತದಲ್ಲಿ ಗ್ಲೂಕೋಸ್‌ನ ಪ್ರಮಾಣ ಹೆಚ್ಚಿ ಕೊನೆಗೆ ಮೂತ್ರದ ಮೂಲಕ ವಿಸರ್ಜಿಸಲ್ಪಡುತ್ತದೆ. ಈ ದೋಷವನ್ನು ಸಿಹಿ ಮೂತ್ರರೋಗ ಅಥವಾ ಮಧುಮೇಹ ಅಥವಾ ಡಯಾಬಿಟಿಸ್ ಮೆಲ್ಲಿಟಸ್ ಎನ್ನುವರು. ಈ ರೋಗವನ್ನು ಮೂತ್ರ ಪರೀಕ್ಷೆಯಿಂದ ಕಂಡು ಹಿಡಿಯುವರು. ಪದೇ ಪದೇ ಮೂತ್ರ ವಿಸರ್ಜನೆ ಮತ್ತು ಬಾಯಾರಿಕೆ ಡಯಾಬಿಟಿಸ್ ರೋಗದ ಇತರ ಎರಡು ಚಿಹ್ನೆಗಳು. ನಿಗದಿತ ಪ್ರಮಾಣದಲ್ಲಿ ಇನ್‌ಸುಲಿನ್ ನೀಡುವುದರಿಂದ ಈ ರೋಗವನ್ನು ಹತೋಟಿಗೆ ತರಬಹುದು.

**ಲೈಂಗಿಕ ಗ್ರಂಥಿಗಳು**

ಲೈಂಗಿಕ ಗ್ರಂಥಿಗಳಾದ ವೃಷಣಗಳು ಮತ್ತು ಅಂಡಾಶಯಗಳು ಲಿಂಗಾಣುಗಳ ಉತ್ಪತ್ತಿಯ ಜೊತೆಗೆ ಲೈಂಗಿಕ ಹಾರ್ಮೋನುಗಳನ್ನು ಸ್ರವಿಸುತ್ತವೆ.

ವೃಷಣಗಳ ಆಂಡ್ರೋಜನ್‌ಗಳು ಎಂಬ ಪುರುಷ ಸಂಬಂಧಿ ಹಾರ್ಮೋನುಗಳನ್ನು ಉತ್ಪತ್ತಿ ಮಾಡುತ್ತವೆ. ಇವುಗಳಲ್ಲಿ ಟೆಸ್ಟೋಸ್ಟೀರಾನ್ ಎಂಬುದು ಬಹು ಸಾಮಾನ್ಯವಾದ ಹಾರ್ಮೋನು. ಪ್ರಾಯಕ್ಕೆ ಬರುವಾಗ ಹುಡುಗನ ಧ್ವನಿ ಒಡೆಯುವುದು ನಂತರ ಆಳವಾಗುವುದು, ಗಡ್ಡ ಮೀಸೆಗಳು ಬೆಳೆಯುವುದು ಮತ್ತು ದೇಹದ ಮೇಲೆ ಕೂದಲು ಹೆಚ್ಚಾಗುವುದು ಮುಂತಾದ ಗಂಡಸಿನ ಲಕ್ಷಣಗಳ ಬೆಳವಣಿಗೆಗೆ ಈ ಹಾರ್ಮೋನು ಕಾರಣವಾಗಿದೆ. ಈ ಹಾರ್ಮೋನಿನ ಕೊರತೆಯಿಂದ ಲೈಂಗಿಕ ಬೆಳವಣಿಗೆ ಕಡಿಮೆಯಾಗಿ ಗಂಡಸುತನದ ಲಕ್ಷಣಗಳು ಕೆಳಮಟ್ಟದಲ್ಲಿರುತ್ತವೆ. ಇಂತಹವರಿಗೆ ಹಾರ್ಮೋನ್ ಚಿಕಿತ್ಸೆ ನೀಡಿ ಸರಿಪಡಿಸಬಹುದು. ವೃಷಣಗಳು ಸಂತಾನೋತ್ಪತ್ತಿಗೆ ಬೇಕಾದ ರೇತಸ್ಸುಗಳನ್ನು (Sperms) ಉತ್ಪತ್ತಿ ಮಾಡುತ್ತವೆ.




**ವೃಷಣಗಳು**




**ಅಂಡಾಶಯ**

ಅಂಡಾಶಯಗಳ ಈಸ್ಟ್ರೋಜನ್‌ಗಳು ಎಂಬ ಸ್ತ್ರೀ ಸಂಬಂಧಿ ಹಾರ್ಮೋನ್‌ಗಳನ್ನು ಉತ್ಪತ್ತಿ ಮಾಡುತ್ತವೆ. ಇವುಗಳಲ್ಲಿ ಈಸ್ಟ್ರಡಯಾಲ್ ಎಂಬುದು ಹೆಣ್ಣಿನ ಲಕ್ಷಣಗಳ ಬೆಳವಣಿಗೆಗೆ ಕಾರಣವಾಗಿದೆ. ಅಲ್ಲದೆ ವಯಸ್ಕಳಾದ ಹೆಂಗಸಿನ ಸಂತಾನೋತ್ಪತ್ತಿ ಚಕ್ರದಲ್ಲಿ ಮುಖ್ಯ

Digitised by Bharatavani, CIIL

ಪಾತ್ರವಹಿಸುತ್ತದೆ. ಗರ್ಭಕೋಶದ ಒಳಗೋಡೆಯು ಗರ್ಭಾಂಕುರವಾದ ಅಂಡಾಣುವನ್ನು ಸ್ವೀಕರಿಸಲು ಸಿದ್ಧವಾಗುವಂತೆ ಈ ಹಾರ್ಮೋನುಗಳು ಪ್ರಚೋದಿಸುತ್ತವೆ. ಅಂಡಾಶಯದಲ್ಲಿ ಹಳದಿ ಬಣ್ಣದ ಕಾರ್ಪಸ್ ಲೂಟಿಯಂ ಎಂಬ ಸಣ್ಣ ರಚನೆ ಉತ್ಪತ್ತಿಯಗುತ್ತದೆ. ಈ ರಚನೆಯಿಂದ ಪ್ರೊಜೆಸ್ಟಿರಾನ್ ಎಂಬ ಹಾರ್ಮೋನ್ ಉತ್ಪತ್ತಿಯಾಗುತ್ತದೆ. ಈ ಹಾರ್ಮೋನ್‌ನ ಪ್ರಚೋದನೆಯಿಂದ ಗರ್ಭಕೋಶದಲ್ಲಿ ಗರ್ಭಧಾರಣೆಗೆ ಅಗತ್ಯವಾದ ವಿವಿಧ ಬದಲಾವಣೆಗಳು ಉಂಟಾಗುತ್ತದೆ. ಈಸ್ಟ್ರೋಜನ್‌ಗಳ ಕೊರತೆಯಿಂದ ಬಂಜೆತನ ಬರಬಹುದು. ಅಂಡಾಶಯಗಳು ಸಂತಾನೋತ್ಪತ್ತಿಗೆ ಬೇಕಾದ ಅಂಡಗಳನ್ನು (Ovum) ಉತ್ಪತ್ತಿ ಮಾಡುತ್ತವೆ.

–ಅ.ಸಿ.

## ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ

ನಮ್ಮ ದೇಶದ ಸಮಗ್ರ ಶಿಕ್ಷಣ ವ್ಯವಸ್ಥೆಯಲ್ಲಿ ತಾಂತ್ರಿಕಶಿಕ್ಷಣ ಬಹುಪಾಲನ್ನು ಹೊಂದಿದೆಯಲ್ಲದೆ ದೇಶದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವನ್ನು ವಹಿಸಿದೆ. ನಮ್ಮ ದೇಶದಲ್ಲಿ ತಾಂತ್ರಿಕ ಶಿಕ್ಷಣವನ್ನು ಬೇರೆ ಬೇರೆ ಹಂತಗಳಲ್ಲಿ ನೀಡಲಾಗುತ್ತಿದೆ– ಕಸುಬುದಾರಿಕೆ, ಡಿಪ್ಲೊಮಾ, ಸ್ನಾತಕ, ಸ್ನಾತಕೋತ್ತರ ಹಾಗೂ ವಿಶೇಷ ಕ್ಷೇತ್ರಗಳಲ್ಲಿ ಸಂಶೋಧನೆ ಇತ್ಯಾದಿ.

ವಿಧಿವತ್ತಾದ ತಾಂತ್ರಿಕ ಶಿಕ್ಷಣ ನಮ್ಮ ದೇಶದಲ್ಲಿ ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿಯೇ ಆರಂಭವಾಯಿತೆಂದು ಹೇಳಬಹುದು. ದೇಶದಲ್ಲಿ ತಾಂತ್ರಿಕಶಿಕ್ಷಣಕ್ಕೆ ಬೇಕಾಗಿರುವ ಸೌಲಭ್ಯಗಳನ್ನು ಕುರಿತ ಸರ್ವೇಕ್ಷಣೆಯನ್ನು ಕೈಗೊಳ್ಳಲು ಹಾಗೂ ವ್ಯವಸ್ಥಿತ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ನವೆಂಬರ್ 1945ರಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ (All India Council for Technical Education-AICTE) ಎಂಬ ರಾಷ್ಟ್ರೀಯ ಮಟ್ಟದ ಸಲಹಾಸಮಿತಿಯನ್ನು ಸ್ಥಾಪಿಸಲಾಯಿತು. 1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ 1987ರಲ್ಲಿ ಎ.ಐ.ಸಿ.ಟಿ.ಇ.ಗೆ ಶಾಸನಬದ್ಧ ಸ್ಥಾನಮಾನಗಳನ್ನು ಕೊಡಲಾಯಿತು. ಯೋಜನೆ, ಸೂತ್ರೀಕರಣ ಮತ್ತು ಮಾನಕ (Standards)ಗಳನ್ನು ಕಲ್ಪಿಸುವುದು, ಮಾನ್ಯತೆಯ ಮೂಲಕ ಗುಣಮಟ್ಟದ ಸ್ಥಾಪನೆ, ಮುಖ್ಯ ಕ್ಷೇತ್ರಗಳಲ್ಲಿ ನಿಧಿಸಹಾಯ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನೆ, ಸುಸಂಘಟಿತ ಮತ್ತು ಸಮಗ್ರ ಬೆಳವಣಿಗೆ, ದೇಶದಲ್ಲಿ ತಾಂತ್ರಿಕಶಿಕ್ಷಣದ ನಿರ್ವಹಣೆ ಮುಂತಾದ ಕಾರ್ಯಗಳನ್ನು ನಿರ್ವಹಿಸಲು ಎ.ಐ.ಸಿ.ಟಿ.ಇ.ಗೆ ಸಾಂವಿಧಾನಿಕ ಹಕ್ಕನ್ನು ನೀಡಲಾಗಿದೆ. 1987ರ ಎ.ಐ.ಸಿ.ಟಿ.ಇ. ಕಾಯ್ದೆಯಲ್ಲಿ ಸಮಿತಿಯ ಸ್ಥಾಪನೆಯ ಉದ್ದೇಶವನ್ನು ಈ ರೀತಿ ಹೇಳಿದೆ: "ದೇಶದಲ್ಲಿ ತಾಂತ್ರಿಕ ಶಿಕ್ಷಣ ವ್ಯವಸ್ಥೆಯ ಸೂಕ್ತಯೋಜನೆ ಮತ್ತು ಸುಸಂಘಟಿತ ಬೆಳವಣಿಗೆ, ಯೋಜಿತ ಪರಿಮಾಣಾತ್ಮಕ ಬೆಳವಣಿಗೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅಂತಹ ಶಿಕ್ಷಣದ ಗುಣಾತ್ಮಕ ಅಭಿವೃದ್ಧಿಗೆ ಪ್ರೋತ್ಸಾಹನೆ, ತಾಂತ್ರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸೂಕ್ತ ಮಾನದಂಡಗಳನ್ನು ರೂಪಿಸುವುದು ಈ ಉದ್ದೇಶಗಳ ಈಡೇರಿಕೆಗಾಗಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿಯನ್ನು ಸ್ಥಾಪಿಸಲಾಗುತ್ತಿದೆ."

ತಂತ್ರಜ್ಞಾನದಲ್ಲಿ ತರಬೇತಿ ಮತ್ತು ಸಂಶೋಧನೆ, ವಾಸ್ತುಶಿಲ್ಪ, ನಗರನಿರ್ಮಾಣ ನಿರ್ವಹಣೆ (ಮ್ಯಾನೇಜ್‌ಮೆಂಟ್), ಪ್ರಾಯೋಗಿಕ ಕಲೆ ಮತ್ತು ಕುಶಲತೆ, ಹೋಟೆಲ್ ಮ್ಯಾನೇಜ್‌ಮೆಂಟ್, ಫಾರ್ಮಸಿ, ಕೇಟರಿಂಗ್ ಟೆಕ್ನಾಲಜಿ ಇವೆಲ್ಲವೂ ಈ ಸಮಿತಿಯ ವ್ಯಾಪ್ತಿಯಲ್ಲಿ ಬರುತ್ತವೆ. 1987ರ ಎ.ಐ.ಸಿ.ಟಿ.ಇ. ಕಾಯ್ದೆಯ ಅನ್ವಯ ಮೊದಲ ಐದು ವರ್ಷಗಳು ಅಂದರೆ 1988ರಿಂದ 1993ರ ವರೆಗೆ ಸಮಿತಿಯ ಅಧ್ಯಕ್ಷತೆಯನ್ನು ಮಾನವ ಸಂಪನ್ಮೂಲ ಖಾತೆಯ ಸಚಿವರೇ ವಹಿಸಿದ್ದರು. ನಂತರ ಜುಲೈ 2, 1993ರಲ್ಲಿ ಪೂರ್ಣಪ್ರಮಾಣದಲ್ಲಿ ಮತ್ತೊಬ್ಬ ಅಧ್ಯಕ್ಷರನ್ನು ಆಯ್ಕೆ ಮಾಡಲಾಯಿತು ಹಾಗೂ ಮಾರ್ಚ್ 1994ರಲ್ಲಿ ಸಮಿತಿಯನ್ನು ಪುನರ್‌ರಚಿಸಿ ಆ ಸಮಿತಿಯ ಅವಧಿಯನ್ನು ಮೂರು ವರ್ಷಗಳಿಗೆ ನಿಗದಿಪಡಿಸಲಾಯಿತು. ಸಮಿತಿಯು ಪ್ರಧಾನಕಾರ್ಯಾಲಯು ನವದೆಹಲಿಯಲ್ಲಿದೆ. ಅಖಿಲಭಾರತ ತಾಂತ್ರಿಕ ಶಿಕ್ಷಣ ಸಮಿತಿಯು ಎಂಟು ವಿಭಾಗಗಳನ್ನು ಹೊಂದಿದೆ. ಅವು ಯಾವುವೆಂದರೆ ಆಡಳಿತ ವಿಭಾಗ, ಶೈಕ್ಷಣಿಕ ವಿಭಾಗ, ಇಂಜಿನಿಯರಿಂಗ್ ಹಾಗೂ ತಂತ್ರಜ್ಞಾನ ವಿಭಾಗ, ಹಣಕಾಸು ವಿಭಾಗ, ಮ್ಯಾನೇಜ್‌ಮೆಂಟ್ ಮತ್ತು ತಂತ್ರಜ್ಞಾನ ವಿಭಾಗ ಯೋಜನೆ ಹಾಗೂ ಸಂಘಟನಾ ವಿಭಾಗ, ಗುಣಮಟ್ಟ ಆಶ್ವಾಸನಾ (Quality Assurance) ವಿಭಾಗ, ಸಂಶೋಧನೆ ಮತ್ತು ಸಾಂಘಿಕ ಅಭಿವೃದ್ಧಿ ವಿಭಾಗ. ಪ್ರತಿಯೊಂದು ವಿಭಾಗಕ್ಕೂ ಒಬ್ಬ ಅಧ್ಯಕ್ಷನಿದ್ದು ಅವನೇ ಅದರ ಸಲಹೆಗಾರನೂ ಆಗಿರುತ್ತಾನೆ. ಈತನಿಗೆ ಸಹಾಯಕನಾಗಿ ತಾಂತ್ರಿಕ ಅಧಿಕಾರಿಗಳು ಮತ್ತು ಇನ್ನಿತರ ಸಿಬ್ಬಂದಿಗಳು ಇರುತ್ತಾರೆ. ಸಮಿತಿಯ ಈ ಸಿಬ್ಬಂದಿಗಳನ್ನು ವಿವಿಧ ಸರ್ಕಾರಿ ಇಲಾಖೆಗಳು, ಯು.ಜಿ.ಸಿ. ಶೈಕ್ಷಣಿಕ ಸಂಸ್ಥೆಗಳು ಮುಂತಾದುವುಗಳಿಂದ ನಿಯೋಜಿಸಲಾಗುತ್ತದೆ ಇಲ್ಲವೇ ಕರಾರಿನ ಮೇಲೆ ನೇಮಿಸಲಾಗುತ್ತದೆ.

2004ರಲ್ಲಿ ದೇಶದಲ್ಲಿ ಎ.ಐ.ಸಿ.ಟಿ.ಇ.ಯಿಂದ ಅನುಮತಿ ಪಡೆದ 1,346 ಇಂಜಿನಿಯರಿಂಗ್ ಕಾಲೇಜುಗಳಿದ್ದರೆ 2008ರಲ್ಲಿ ಅವುಗಳ ಸಂಖ್ಯೆ 2388ಕ್ಕೆ ಏರಿತು. 2008ರಲ್ಲಿ ಸಮಿತಿಯಿಂದ ಅನುಮತಿ ಪಡೆದ 1231 ಮ್ಯಾನೇಜ್‌ಮೆಂಟ್ ಕಾಲೇಜುಗಳು ಇದ್ದವು. ಇದಲ್ಲದೆ 1001 ಫಾರ್ಮಸಿ ಕಾಲೇಜುಗಳು, 86 ಹೋಟೆಲ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳು, 11 ಪ್ರಾಯೋಗಿಕ ಕಲೆ ಮತ್ತು ಕರಕುಶಲ ಸಂಸ್ಥೆಗಳು ಎ.ಐ.ಸಿ.ಟಿ.ಇ.ಯಿಂದ ಮಾನ್ಯತೆಯನ್ನು ಪಡೆದಿವೆ. ಮುಂಬರುವ ವರ್ಷಗಳಲ್ಲಿ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಸಂಖ್ಯೆ ಹೆಚ್ಚುವ ಸಾಧ್ಯತೆಯಿದೆ.

ಕೇಂದ್ರ ಶಿಕ್ಷಣ ಸಚಿವರು 2009ರಲ್ಲಿ ಎ.ಐ.ಟಿ.ಸಿ.ಇ. ಮತ್ತು ಯು.ಜಿ.ಸಿ.ಗಳನ್ನು ರದ್ದುಗೊಳಿಸಿ ಇವಕ್ಕೆ ಬದಲಾಗಿ ಉನ್ನತ ಶಿಕ್ಷಣದ ನಿಯಂತ್ರಣಕ್ಕೆ ರಾಷ್ಟ್ರಮಟ್ಟದ ನಿಯಂತ್ರಣಾಂಗವೊಂದನ್ನು ಸ್ಥಾಪಿಸಬೇಕೆಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಎ.ಐ.ಸಿ.ಟಿ.ಇ. ಯು.ಜಿ.ಸಿ. ಎನ್.ಸಿ.ಟಿ.ಇ. (ಅಧ್ಯಾಪಕ ಶಿಕ್ಷಣಕ್ಕೆ) ಐ.ಎಂ.ಸಿ. (ವೈದ್ಯಕೀಯ ಶಿಕ್ಷಣಕ್ಕೆ)ಗಳ ಕಾರ್ಯ ವೈಖರಿಯಲ್ಲಿ ಕೆಲವು ಲೋಪದೋಷಗಳು ಕಂಡುಬಂದಿರುವುದೇ ಈ ಅಭಿಪ್ರಾಯಕ್ಕೆ ಕಾರಣವಾಗಿದೆ.

–ಬಿ.ಎಂ.ಚಂ.

## ಅಖಿಲ ಭಾರತ ಸಂಶೋಧನಾ ಸಂಸ್ಥೆಗಳು

ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ, ತಂತ್ರಜ್ಞಾನ, ವಿಜ್ಞಾನ, ಸಮಾಜವಿಜ್ಞಾನ, ವೈದ್ಯಕೀಯ, ರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ನಮ್ಮ ದೇಶದಲ್ಲಿ ಹಲವಾರು ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಅಂತಹ ಕೆಲವು ಪ್ರಮುಖ ಸಂಶೋಧನಾ ಸಂಸ್ಥೆಗಳ ವಿವರ ಈ ಕೆಳಗಿನಂತಿದೆ.

**ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ನ್ಯಾಷನಲ್ ಕೌನ್ಸಿಲ್ ಫಾರ್ ಎಜುಕೇಷನಲ್ ರಿಸರ್ಚ್ ಆ್ಯಂಡ್ ಟ್ರೈನಿಂಗ್–NCERT, ನವದೆಹಲಿ):** ಭಾರತ ಸರ್ಕಾರ 1961ರಲ್ಲಿ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತನ್ನು ರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪಿಸಿತು. ಇದೊಂದು ಸ್ವಾಯತ್ತ ಸಂಸ್ಥೆ. ಕೇಂದ್ರ ಹಾಗೂ

Digitised by Bharatavani, CIIL

ರಾಜ್ಯ ಸರ್ಕಾರಗಳ ಶಿಕ್ಷಣ ನೀತಿಗಳನ್ನು ಕಾರ್ಯಗತಗೊಳಿಸಲು ಈ ಸಂಸ್ಥೆ ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡುತ್ತದೆ.

ಶಾಲಾಶಿಕ್ಷಣ ಹಾಗೂ ಶಿಕ್ಷಕರ ಸಿದ್ಧತೆ (teacher preparation)ಗಳಲ್ಲಿ ಗುಣಾತ್ಮಕ ಬದಲಾವಣೆಗೆ ಇದು ಪ್ರಾಮುಖ್ಯವನ್ನು ನೀಡುತ್ತದೆ. ಈ ಪರಿಷತ್ ನವದೆಹಲಿಯಲ್ಲಿದೆ. ದೇಶದ ಕೆಲವೆಡೆ ಇದರ ಪ್ರಾಂತೀಯ ಕೇಂದ್ರಗಳಿವೆ. ಬೆಂಗಳೂರಿನಲ್ಲೂ ಇದರ ಪ್ರಾಂತೀಯ ಕೇಂದ್ರವಿದೆ.

ಪ್ರಾರಂಭದಲ್ಲಿ ಶೈಕ್ಷಣಿಕ ಸಂಶೋಧನೆ, ಮಾದರಿ ಪಠ್ಯಪುಸ್ತಕಗಳ ಸಿದ್ಧತೆ, ಶಿಕ್ಷಕರಿಗೆ ಸೇವಾಪೂರ್ವ ಹಾಗೂ ಸೇವಾಕಾಲದಲ್ಲಿ ತರಬೇತಿಯನ್ನು ನೀಡುವುದು, ರಾಜ್ಯಶಿಕ್ಷಣ ವಿಭಾಗಗಳು, ವಿಶ್ವವಿದ್ಯಾನಿಲಯಗಳು, ಸರ್ಕಾರೇತರ ಸಂಸ್ಥೆಗಳೊಡನೆ ಸಂಪರ್ಕವನ್ನಿಟ್ಟುಕೊಂಡು ವಿಚಾರವಿನಿಮಯ ಮಾಡುವುದು – ಇವು ಸಂಸ್ಥೆಯ ಶಿಕ್ಷಣದಲ್ಲಿ ನವೀನತೆಯನ್ನು ತರುವುದು ಹಾಗೂ ಶಾಲಾಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರುವುದು – ಇವು ಸಂಸ್ಥೆಯ ಮಾರ್ಗದರ್ಶಕ ತತ್ವಗಳಾದವು. ಇದುವರೆಗೆ ಸಂಸ್ಥೆಯು ಶಾಲಾ ಶಿಕ್ಷಣವನ್ನು ಉತ್ತಮಗೊಳಿಸಲು ಹಲವು ಕಾರ್ಯಕ್ರಮಗಳನ್ನು ಪೂರೈಸಿವೆ. ಬಾಲ್ಯಶಿಕ್ಷಣ, ಸರ್ವಶಿಕ್ಷಣ ಅಭಿಯಾನ, ಪಠ್ಯಪುಸ್ತಕಗಳ ಸಿದ್ಧತೆ, ರಾಷ್ಟ್ರೀಯ ಪ್ರತಿಭಾ ಶೋಧವೆಂಬ ಯೋಜನೆ, ಶಾಲಾ ಸರ್ವೇಕ್ಷಣೆ, ಶಿಕ್ಷಣಕ್ಕೆ ಸಂಬಂಧಿಸಿದ ನಿಯತಕಾಲಿಕೆಗಳ ಪ್ರಕಟಣೆ – ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ವಿಜ್ಞಾನ ಶಿಕ್ಷಣ ಕುರಿತ ಪ್ರಾಯೋಜನೆಗಳು, ಪರಿಸರಶಿಕ್ಷಣ ಹಾಗೂ ಪೋಷಣ ಶಿಕ್ಷಣ (Nutrition Education) ಇವು ಶಾಲಾಶಿಕ್ಷಣದ ವಿವಿಧ ಆಯಾಮಗಳ ಮೇಲೆ ಅರ್ಥಪೂರ್ಣ ಪ್ರಭಾವವನ್ನು ಬೀರಿವೆ.

ಪರಿಷತ್ತಿನಲ್ಲಿ ಹಲವಾರು ವಿಭಾಗಗಳಿವೆ, ಅವು ಈ ಕೆಳಗಿನಂತಿವೆ: ಪ್ರಾಥಮಿಕ ಶಿಕ್ಷಣ ವಿಭಾಗ, ಅಧ್ಯಾಪಕ ಶಿಕ್ಷಣ ಮತ್ತು ವಿಸ್ತರಣಾ ವಿಭಾಗ, ಭಾಷಾವಿಭಾಗ, ವಿಜ್ಞಾನ ಮತ್ತು ಗಣಿತ ವಿಭಾಗ, ಶೈಕ್ಷಣಿಕ ಸರ್ವೇಕ್ಷಣೆ ಮತ್ತು ಮಾಹಿತಿ ಸಂಸ್ಕರಣಾ ವಿಭಾಗ, ಶೈಕ್ಷಣಿಕ ಸಂಶೋಧನೆ ಮತ್ತು ನೀತಿ ರೂಪಣಾ (Policy Perspective) ವಿಭಾಗ, ಸಮಾಜವಿಜ್ಞಾನ ಮತ್ತು ಮಾನವಿಕ ಶಿಕ್ಷಣ ವಿಭಾಗ, ಕಲೆ ಮತ್ತು ರಸಾಭಿಜ್ಞತ ಶಿಕ್ಷಣ ವಿಭಾಗ, ಶೈಕ್ಷಣಿಕ ಮನೋವಿಜ್ಞಾನ ಮತ್ತು ಶೈಕ್ಷಣಿಕ ಮೂಲಾಧಾರಗಳ ವಿಭಾಗ (Foundations of Education), ವಿಶೇಷ ಅಗತ್ಯವುಳ್ಳ ಸಮೂಹಗಳ ಶಿಕ್ಷಣ ವಿಭಾಗ, ಕಂಪ್ಯೂಟರ್ ಶಿಕ್ಷಣ ಮತ್ತು ತಾಂತ್ರಿಕ ಸೌಲಭ್ಯ ವಿಭಾಗ, ಸಾರ್ವಜನಿಕ ವಿಭಾಗ, ಮಹಿಳಾ ಅಧ್ಯಯನ ವಿಭಾಗ ಇತ್ಯಾದಿ.

ಸಂಸ್ಥೆಯ ಅಂಗಭೂತ ಘಟಕಗಳು ದೇಶದ ವಿವಿಧ ಸ್ಥಳಗಳಲ್ಲಿ ಹರಡಿವೆ. ಅವುಗಳನ್ನು ಪ್ರಾದೇಶಿಕ ಶಿಕ್ಷಣ ಸಂಸ್ಥೆ (ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್) ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಅಜ್ಮೀರ್, ಭೂಪಾಲ್, ಭುವನೇಶ್ವರ, ಶಿಲ್ಲಾಂಗ್ ಮತ್ತು ಮೈಸೂರು ಈ ಪ್ರದೇಶಗಳಲ್ಲಿ ಈ ಘಟಕಗಳು ಕೆಲಸಮಾಡುತ್ತಿವೆ. ಇವಲ್ಲದೆ ಶೈಕ್ಷಣಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ್ದಂತೆ ಕೇಂದ್ರೀಯ ಸಂಸ್ಥೆಯೊಂದು ಸಹ ಕೆಲಸ ಮಾಡುತ್ತಿದೆ. 1984ರಲ್ಲಿ ಸ್ಥಾಪಿತಗೊಂಡ ಈ ಅಂಗ ಸಂಸ್ಥೆಯ ಉದ್ದೇಶವೆಂದರೆ ರೇಡಿಯೋ, ದೂರದರ್ಶನ ಉಪಗ್ರಹ ಸಂಪರ್ಕ, ಸೈಬರ್ ಮಾಧ್ಯಮ ಇವೇ ಮುಂತಾದ ಮಾಧ್ಯಮಗಳನ್ನು ಶೈಕ್ಷಣಿಕ ಮಾಧ್ಯಮಗಳನ್ನಾಗಿ ಉಪಯೋಗಿಸುವುದನ್ನು ಪ್ರೋತ್ಸಾಹಿಸುವುದು.

ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿಸುವುದು ಶಾಲಾಮಟ್ಟದಲ್ಲಿ ಶೈಕ್ಷಣಿಕ ಪ್ರಕ್ರಿಯೆಯ ಗುಣಾತ್ಮಕತೆಯನ್ನು ಸುಧಾರಿಸುವುದು ಈ ಅಂಗ ಸಂಸ್ಥೆಯ ಮತ್ತೊಂದು ಧ್ಯೇಯವಾಗಿದೆ. ಶಾಲಾಮಟ್ಟದಲ್ಲಿ ಶೈಕ್ಷಣಿಕ ಸಮತೆಯನ್ನು ಕಾಪಾಡುವ ಉದ್ದೇಶವನ್ನು ಸಂಸ್ಥೆಯು ಹೊಂದಿದೆ.

**ಭಾರತೀಯ ಐತಿಹಾಸಿಕ ಸಂಶೋಧನಾ ಸಮಿತಿ (ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್–ICHR, ನವದೆಹಲಿ):** 1972ರಲ್ಲಿ ಸೊಸೈಟಿಸ್ ರಿಜಿಸ್ಟ್ರೇಷನ್ ಕಾನೂನಿನಡಿ ಪ್ರಾರಂಭವಾದ ಈ ಸಂಸ್ಥೆ ಉನ್ನತ ಶಿಕ್ಷಣ ವಿಭಾಗ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯಗಳಿಂದ ಧನಸಹಾಯವನ್ನು ಪಡೆಯುತ್ತದೆ. ಈ ಸಮಿತಿಯ ಉದ್ದೇಶಗಳು ಇಂತಿವೆ:

- ಇತಿಹಾಸಕಾರರನ್ನು ಹತ್ತಿರ ತಂದು ಅವರ ನಡುವೆ ವಿಚಾರ ವಿನಿಮಯಕ್ಕೆ ಒಂದು ನೆಲೆಯನ್ನು ಒದಗಿಸುವುದು.
- ವೈಜ್ಞಾನಿಕವಾಗಿ ಇತಿಹಾಸವನ್ನು ಬರೆಯುವುದು ಹಾಗೂ ಇತಿಹಾಸವನ್ನು ತರ್ಕಬದ್ಧವಾಗಿ ಪ್ರಸ್ತುತಗೊಳಿಸುವುದು ಮತ್ತು ವ್ಯಾಖ್ಯಾನಿಸುವುದು.
- ಇದುವರೆಗೆ ಸಾಕಷ್ಟು ಗಮನವನ್ನು ಕೊಡದಿರುವ ಇತಿಹಾಸದ ಕ್ಷೇತ್ರಗಳಿಗೆ ಒತ್ತು ನೀಡಿ ಸಂಶೋಧನೆಯನ್ನು ಪ್ರೋತ್ಸಾಹಿಸುವುದು, ತ್ವರಿತಗೊಳಿಸುವುದು ಮತ್ತು ಸಮನ್ವಯಗೊಳಿಸುವುದು.
- ಇತಿಹಾಸದ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನಾ ಪ್ರಯತ್ನವನ್ನು ಸಮನಾಗಿರುವಂತೆ ಸಂಘಟಿಸಿ ಪ್ರೋತ್ಸಾಹಿಸುವುದು.
- ಸಂಬಂಧಪಟ್ಟ ಸಮಸ್ತರಿಂದಲೂ ಐತಿಹಾಸಿಕ ಸಂಶೋಧನೆಗೆ ಮಾನ್ಯತೆ ಮತ್ತು ಬೆಂಬಲವನ್ನು ಗಳಿಸುವುದು ಹಾಗೂ ಫಲಿತಾಂಶಗಳನ್ನು ವಿತರಿಸುವುದು.

ತನ್ನ ಉದ್ದೇಶಗಳಿಗೆ ಅನುಗುಣವಾಗಿ ಈ ಸಮಿತಿ ವಿದ್ಯಾಸಂಸ್ಥೆಗಳ, ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ, ಹಿರಿಯ ಪಂಡಿತರಿಗೆ ಆರ್ಥಿಕ ನೆರವನ್ನು ನೀಡುತ್ತದೆ. ಅಲ್ಲದೆ, ವಿಚಾರಸಂಕಿರಣಗಳು, ಉಪನ್ಯಾಸಗಳು, ನಿಯತಕಾಲಿಕೆಗಳ ಪ್ರಕಟಣೆ, ಕಾರ್ಯಾಗಾರಗಳು ಮುಂತಾದುವುಗಳನ್ನು ಏರ್ಪಡಿಸುವುದು ಸಮಿತಿಯ ಕಾರ್ಯಗಳಲ್ಲಿ ಸೇರಿದೆ. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ "ಭಾರತೀಯ ಐತಿಹಾಸಿಕ ಪುನರ್ವಿಮರ್ಶೆ" ಎಂಬ ದ್ವೈವಾರ್ಷಿಕ ನಿಯತಕಾಲಿಕೆ ಸಮಿತಿಯಿಂದ ಪ್ರಕಟವಾಗುತ್ತಿದೆ. ಬಹುದೊಡ್ಡ ಪುಸ್ತಕಾಲಯದ ಜೊತೆಗೆ ದಾಖಲೆ ಸಂಗ್ರಹಣ ಕೇಂದ್ರವೊಂದು ಸಹ ಸಮಿತಿಯ ಅಂಗವಾಗಿದೆಯಾದ್ದರಿಂದ ಪಂಡಿತರು, ಸಂಶೋಧಕರು ಇದರ ಸದುಪಯೋಗವನ್ನು ಪಡೆಯುತ್ತಿದ್ದಾರೆ. ಗೌಹಾತಿ ಮತ್ತು ಬೆಂಗಳೂರಿನಲ್ಲಿ ಸಮಿತಿಯ ಪ್ರಾದೇಶಿಕ ಕೇಂದ್ರಗಳು ಕಾರ್ಯನಿರತವಾಗಿವೆ. ಈ ಪರಿಷತ್ತಿನ ಕೇಂದ್ರ ಸ್ಥಾನ ನವದೆಹಲಿಯಲ್ಲಿದೆ.

**ಟಾಟಾ ಸಮಾಜವಿಜ್ಞಾನ ಸಂಸ್ಥೆ (ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್–TSSI, ಮುಂಬಯಿ):** ಟಾಟಾ ಸಮಾಜವಿಜ್ಞಾನ ಸಂಸ್ಥೆ 1936ರಲ್ಲಿ "ಸರ್ ದೋರಬ್ಜಿ ಟಾಟಾ ಗ್ರ್ಯಾಜುಯೇಟ್ ಸ್ಕೂಲ್ ಆಫ್ ಸೋಷಿಯಲ್ ವರ್ಕ್" ಎಂಬ ಹೆಸರಿನಲ್ಲಿ ಮುಂಬೈನಲ್ಲಿ ಆರಂಭಗೊಂಡಿತು. ಶೈಕ್ಷಣಿಕ ಶ್ರೇಷ್ಠತೆಯ ಮುಖಾಂತರ ಸಾಮಾಜಿಕ ಕಲ್ಯಾಣವನ್ನು ಸಾಧಿಸುವ ಗುರಿಯನ್ನಿಟ್ಟುಕೊಂಡು ಪುರೋಗಾಮಿ ಪ್ರಯತ್ನವನ್ನು ಕೈಗೊಂಡ ಭಾರತದ ಮೊದಲ ಶಿಕ್ಷಣ ಸಂಸ್ಥೆ ಇದಾಗಿದೆ.

Digitised by Bharatavani, CIIL

ಸರ್‌ದೋರಬ್ಜಿ ಟಾಟಾಟ್ರಸ್ಟ್‌ನ ಶ್ರಮದಿಂದ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ಭಾರತದಲ್ಲಿ ಸಮಾಜಕಾರ್ಯ ಶಿಕ್ಷಣ ಹಾಗೂ ಸಂಶೋಧನೆಯ ಬೆಳವಣಿಗೆಗೆ ಸೂಕ್ತ ಮಾರ್ಗದರ್ಶನವನ್ನು ನೀಡಿದೆ.

1944ರಲ್ಲಿ ಈ ಸಂಸ್ಥೆಗೆ ಈಗಿನ ಟಾಟಾ ಸಮಾಜವಿಜ್ಞಾನ ಸಂಸ್ಥೆ ಎಂಬ ಹೆಸರನ್ನು ಕೊಡಲಾಯಿತು. 1964ರಲ್ಲಿ ವಿಶ್ವವಿದ್ಯಾನಿಲಯ ಅನುದಾನ ಆಯೋಗ ಈ ಸಂಸ್ಥೆಯನ್ನು ಮಾನ್ಯತೆ ಪಡೆದ ಡೀಮ್ಡ್ ವಿಶ್ವವಿದ್ಯಾಲಯವೆಂದು ಪರಿಗಣಿಸಿತು. ಅಂದಿನಿಂದ ಸಂಸ್ಥೆಯು ತನ್ನ ಕಾರ್ಯಕ್ಷೇತ್ರವನ್ನು ವೈವಿಧ್ಯಮಯ ಶೈಕ್ಷಣಿಕ ಕಾರ್ಯಕ್ರಮ ಹಾಗೂ ಮೂಲಭೂತ ಸೌಲಭ್ಯ (Infrastructure)ಗಳ ರೂಪದಲ್ಲಿ ವಿಸ್ತರಿಸುತ್ತಾ ಬಂದಿದೆ.

ಆರಂಭಕಾಲದಿಂದಲೂ ಸಂಸ್ಥೆಯು ಕೇವಲ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯದಂತೆ ಮಾತ್ರ ಕಾರ್ಯಪ್ರವೃತ್ತವಾಗದೆ ತನ್ನ ವಿವಿಧ ಕಾರ್ಯಕ್ರಮಗಳಿಂದ ಊರ್ಜಿತವೂ, ಉಚಿತವೂ ಮತ್ತು ಸಹಯೋಗಿತ್ವವುಳ್ಳ ಬೆಳವಣಿಗೆಗೆ ಉತ್ತೇಜನವನ್ನು ನೀಡುತ್ತಿದೆ. ಸಮಾಜಕಲ್ಯಾಣ ಹಾಗೂ ಸಾಮಾಜಿಕ ನ್ಯಾಯಗಳಿಗೆ ಪ್ರೋತ್ಸಾಹವನ್ನು ಸಹ ಸಂಸ್ಥೆಯು ನೀಡುತ್ತಿದೆ. ಇದುವರೆಗೂ, ಸಂಸ್ಥೆಯು ನಗರ, ಗ್ರಾಮಗಳ ನಿರಂತರ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಕೋಮುಸೌಹಾರ್ದ, ಮಾನವ ಹಕ್ಕುಗಳು, ಕೈಗಾರಿಕಾ ಸಂಬಂಧ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನೀತಿರಚನೆ, ಯೋಜನೆ, ಕಾರ್ಯನೀತಿ ಹಾಗೂ ಮಾನವ ಸಂಪನ್ಮೂಲ ವಿಕಾಸಗಳಲ್ಲಿ ಗಮನಾರ್ಹ ಕೊಡುಗೆಯನ್ನು ನೀಡಿದೆ. ಎಲ್ಲ ಸಂದರ್ಭಗಳಲ್ಲೂ, ಅಸಂಘಟಿತ ಕಾರ್ಮಿಕವರ್ಗ, ಮಹಿಳೆಯರು, ಮಕ್ಕಳು, ದಲಿತರು, ಗಿರಿಜನರು ಮುಂತಾದ ಸಮಾಜದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ವರ್ಗಗಳಿಗೆ ಸಂಸ್ಥೆ ಹೆಚ್ಚು ಒತ್ತನ್ನು ಕೊಟ್ಟಿದೆ.

ಸಾಮಾಜಿಕ ಬದ್ಧತೆಯುಳ್ಳ ಹಾಗೂ ವಿವಿಧ ಸಾಮಾಜಿಕ ಅಗತ್ಯಗಳಿಗೆ ಸ್ಪಂದಿಸುವ ಶಕ್ತಿಯುಳ್ಳ ಈ ಸಂಸ್ಥೆ ಭಾರತ ಸರ್ಕಾರ, ವಿವಿಧ ರಾಜ್ಯಸರ್ಕಾರಗಳ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಮಾನ್ಯತೆಯನ್ನು ಪಡೆದಿದೆ.

ಸಂಸ್ಥೆಯು ತನ್ನ ಧ್ಯೇಯದರ್ಶನ (Vision)ವನ್ನು ಹೀಗೆ ಸಾರುತ್ತದೆ: "ಜ್ಞಾನವಿಕಾಸ ಮತ್ತು ಅದರ ಪ್ರಾಯೋಗಿಕತೆಯ ಮುಖಾಂತರ ಸತತವಾಗಿ ಬದಲಾಗುತ್ತಿರುವ ಸಾಮಾಜಿಕ ವಾಸ್ತವಿಕತೆಗಳಿಗೆ ಸ್ಪಂದಿಸುವುದು ಹಾಗೂ ಉನ್ನತ ಶಿಕ್ಷಣದಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದು. ಗೌರವ, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಮಾನವಹಕ್ಕುಗಳು ಎಲ್ಲರಿಗೂ ದೊರಕುವಂತೆ ಮಾಡುವುದು. ಈ ಉದ್ದೇಶವನ್ನು ಈಡೇರಿಸಲು ಜನಕೇಂದ್ರಿತ ಹಾಗೂ ಮಾನವ ಪರಿಸರ ವಿಜ್ಞಾನಕ್ಕನುಗುಣವಾಗಿ ಊರ್ಜಿತವಾಗಬಲ್ಲ ಸಮಾಜವನ್ನು ನಿರ್ಮಿಸುವುದು, ತನ್ನ ಸಮಸ್ತ ಯತ್ನಗಳಲ್ಲೂ ಸಮಾಜದ ನಿಮ್ನವರ್ಗಗಳಿಗೆ ಮಹತ್ವವನ್ನು ಕೊಡುವುದು ಈ ಸಂಸ್ಥೆಯ ಧ್ಯೇಯವಾಗಿದೆ."

ಈ ಧ್ಯೇಯ ದರ್ಶನದಿಂದ ಹೊರಹೊಮ್ಮಿರುವ ಸಂಸ್ಥೆಯ ಕೆಲವು ಮುಖ್ಯ ಮಾರ್ಗದರ್ಶಕ ತತ್ವಗಳು ಇಂತಿವೆ:

- ವಿಚಾರ ಸ್ವಾತಂತ್ರ್ಯ ಹಾಗೂ ಸಾಂಸ್ಕೃತಿಕ, ವೈಚಾರಿಕ ಮತ್ತು ಬೌದ್ಧಿಕ ವೈವಿಧ್ಯತೆಗಳನ್ನು ಮನ್ನಿಸಿ ಗೌರವಿಸುವುದು.
- ಎಲ್ಲರಿಗೂ ಸಮಾನ ಅವಕಾಶ ಜಾತಿ, ಕುಲ, ವರ್ಗ, ಲಿಂಗ, ಧರ್ಮ ಇವುಗಳನ್ನು ಆಧರಿಸಿದ ಯಾವುದೇ ರೀತಿಯ ಭೇದಭಾವವನ್ನು ಹೋಗಲಾಡಿಸುವುದು.
- ಸಮಸ್ತ ಕಾರ್ಯಗಳಲ್ಲೂ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ತರುವುದು.

ಆಡಳಿತ ಮಂಡಳಿಯು ಸಂಸ್ಥೆಯ ಉನ್ನತ ಅಧಿಕಾರವುಳ್ಳ ಅಂಗವಾಗಿದೆ. 15 ಸದಸ್ಯರನ್ನುಳ್ಳ ಈ ಮಂಡಳಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರ, ಮುಂಬೈ ವಿಶ್ವವಿದ್ಯಾನಿಲಯ, ಯುಜಿಸಿ ಮತ್ತು ಸಂಸ್ಥೆಯ ಅಧ್ಯಾಪಕ ಸಿಬ್ಬಂದಿಗಳಿಂದ ಆಯ್ದ ಸದಸ್ಯರನ್ನು ಹೊಂದಿದೆ. ಸ್ನಾತಕೋತ್ತರ ಶಿಕ್ಷಣ ಸರ್ಟಿಫಿಕೇಟ್ ಕೋರ್ಸುಗಳನ್ನು, ಡಿಪ್ಲೋಮಾ ಮಟ್ಟದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಈ ಸಂಸ್ಥೆ ನಡೆಸುತ್ತಿದೆ.

**ಕೇಂದ್ರೀಯ ಭಾರತೀಯ ಭಾಷಾ ಸಂಸ್ಥೆ (ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್–CIIL), ಮೈಸೂರು:** ಭಾರತೀಯ ಭಾಷೆಗಳ ಅಧ್ಯಯನಕ್ಕೆಂದೇ ಮೀಸಲಾಗಿರುವ ಈ ಸಂಸ್ಥೆ ಮೈಸೂರಿನಲ್ಲಿ ಜುಲೈ 17, 1969ರಂದು ಸ್ಥಾಪಿತಗೊಂಡಿತು. ಭಾರತೀಯ ಭಾಷೆಗಳ ಸಂಯೋಜಿತ ಬೆಳವಣಿಗೆ, ವೈಜ್ಞಾನಿಕವಾದ ಅಧ್ಯಯನದ ಮುಖಾಂತರ ಭಾರತೀಯ ಭಾಷೆಗಳ ಮೂಲಭೂತ ಏಕತೆಯನ್ನು ಹೊರತರುವುದು, ಅಂತರ್‌ಶಾಸ್ತ್ರೀಯ ಸಂಶೋಧನೆಯನ್ನು ಪ್ರೋತ್ಸಾಹಿಸುವುದು, ಭಾಷೆಗಳನ್ನು ಶ್ರೀಮಂತಗೊಳಿಸುವುದು ಈ ಕಾರ್ಯೋದ್ದೇಶಗಳನ್ನು ನೆರವೇರಿಸಿ ತನ್ಮೂಲಕ ಭಾರತೀಯರ ನಡುವೆ ಭಾವನಾತ್ಮಕ ಏಕತೆಗೆ ಈ ಸಂಸ್ಥೆಯು ಸಹಾಯ ಮಾಡುತ್ತಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಭಾಷೆಗೆ ಸಂಬಂಧಿಸಿದಂತೆ ಸೂಕ್ತ ಸಲಹೆಗಳನ್ನು ನೀಡುವುದರ ಜೊತೆಗೆ ವಿಷಯ ಮತ್ತು ವ್ಯಾಕರಣಕ್ಕೆ ಸಂಬಂಧಪಟ್ಟ ಭಾಷಾ ಪ್ರಯೋಗ ಸಂಗ್ರಹವನ್ನು ನಿರ್ಮಿಸಿ ಭಾರತೀಯ ಭಾಷೆಗಳ ಬೆಳವಣಿಗೆಗೆ ಈ ಸಂಸ್ಥೆ ನೆರವು ನೀಡುತ್ತಿದೆ. ಅಲ್ಪ ಪ್ರಾಮುಖ್ಯತೆಯುಳ್ಳ ಭಾಷೆಗಳು ಹಾಗೂ ಅಲ್ಪಸಂಖ್ಯಾತ ಮತ್ತು ಗುಡ್ಡಗಾಡು ಜನರ ಭಾಷೆಗಳನ್ನು ರಕ್ಷಿಸುವುದು ಮತ್ತು ದಾಖಲಿಸುವುದು ಈ ಸಂಸ್ಥೆಯ ಉದ್ದೇಶಗಳಲ್ಲಿ ಒಂದಾಗಿದೆ. ಇಪ್ಪತ್ತು ಭಾರತೀಯ ಭಾಷೆಗಳನ್ನು ಬೋಧಿಸಿ ಭಾಷಾವಾರು ಸಾಮರಸ್ಯವನ್ನು ಉತ್ತೇಜಿಸುತ್ತದೆ. ವಿವಿಧ ಭಾರತೀಯ ಭಾಷೆಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಕಟಣೆಗಳು ಸಂಸ್ಥೆಯಿಂದ ಹೊರಬಿದ್ದಿವೆ.

ದೇಶದ ವಿವಿಧ ಭಾಷೆಗಳ ಬೋಧನೆಯ ಸಲುವಾಗಿ ಹಲವಾರು ಬೋಧನಾ ಸಾಮಗ್ರಿಗಳನ್ನು ಸಿದ್ಧಪಡಿಸಲು ಅಗತ್ಯವಾದ ಕಂಪ್ಯೂಟರ್ ಆಧಾರಿತ ಸಾಫ್ಟ್‌ವೇರ್‌ಗಳ ತಯಾರಿಕೆಯ ಜವಾಬ್ದಾರಿಯನ್ನು ಸಂಸ್ಥೆಯು ಹೊತ್ತಿದೆ. ಏಕಕಾಲದಲ್ಲಿ ಭಾರತೀಯ ಭಾಷೆಗಳನ್ನು ಭಾಷಾಂತರಿಸಲು ಬೇಕಾದ ತಂತ್ರಗಳನ್ನು ಆವಿಷ್ಕರಿಸುವುದಲ್ಲದೇ ಎಲೆಕ್ಟ್ರಾನಿಕ್ ಶಬ್ದಕೋಶವನ್ನು ಸಹ ತಯಾರಿಸುವ ಗುರಿಯನ್ನು ಸಂಸ್ಥೆಯು ಹೊಂದಿದೆ. ಸಂಸ್ಥೆಯ ಏಳು ಪ್ರಾದೇಶಿಕ ಕೇಂದ್ರಗಳು ದೇಶದ ವಿವಿಧ ಭಾಷಾವಾರು ಪ್ರಾಂತ್ಯಗಳಲ್ಲಿ ಕಾರ್ಯೋನ್ಮುಖವಾಗಿದ್ದು ಭಾಷೆಯ ಮೂಲಕ ದೇಶದ ಏಕತೆಯನ್ನು ಕಾಪಾಡಲು ಶ್ರಮಿಸುತ್ತಿದೆ.

ವಿವಿಧ ರೀತಿಯ ಶಬ್ದಕೋಶಗಳನ್ನು ಸಿದ್ಧಪಡಿಸುವಲ್ಲಿ ಸಂಸ್ಥೆಯು ಗಮನವನ್ನೀಯುತ್ತಿದೆ. (ಬಹುಭಾಷಾ, ಏಕಭಾಷಾ ಶಬ್ದಕೋಶಗಳು) ಭುವನೇಶ್ವರ್ (ಪೂರ್ವ) ಪಟಿಯಾಲ (ಉತ್ತರ) ಮೈಸೂರು (ದಕ್ಷಿಣ) ಪುಣೆ (ಪಶ್ಚಿಮ) ಈ ನಾಲ್ಕು ಕಡೆಗಳಲ್ಲಿ ಪ್ರಾದೇಶಿಕ ಕೇಂದ್ರಗಳು ಕೆಲಸಮಾಡುತ್ತಿವೆ. ಲಕ್ನೋ ಮತ್ತು ಸೋಲನ್‌ಗಳಲ್ಲಿ ಉರ್ದು ಬೋಧನಾ ಹಾಗೂ ಸಂಶೋಧನಾ ಕೇಂದ್ರಗಳಿವೆ. ಇವಲ್ಲದೆ ಈಶಾನ್ಯದಲ್ಲಿ ಗೌಹಾಟಿಯಲ್ಲಿ ಒಂದು ಪ್ರಾದೇಶಿಕ ಕೇಂದ್ರವಿದೆ.

**ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್–CFTRI), ಮೈಸೂರು:** ಬಂಗಾಳದ 1943ರ ಭೀಕರ ಕ್ಷಾಮ ಹಾಗೂ ಎರಡನೇ ಮಹಾಯುದ್ಧದ ದುಷ್ಪ್ರಭಾವಗಳು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಮಿತಿ

Digitised by Bharatavani, CIIL

(ಸಿ.ಎಫ್.ಟಿ.ಆರ್.ಐ) ಮತ್ತು ಫುಡ್ ಇಂಡಸ್ಟ್ರೀಸ್ ಪೇನಲ್‌ಗಳು ಆಹಾರ ತಂತ್ರಜ್ಞಾನದ ಬಗ್ಗೆ ಸಂಶೋಧನೆಯನ್ನು ನಡೆಸಲು ಒಂದು ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಆಲೋಚಿಸುವಂತೆ ಮಾಡಿತು. ಸಿ.ಎಫ್.ಟಿ.ಆರ್.ಐ.ನ ಅಂಗ ಸಂಶೋಧನಾ ಸಂಸ್ಥೆಯಾಗಿ ಇದನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ ನಂತರ ಅಂದಿನ ಮೈಸೂರು ಮಹಾರಾಜರು ಚೆಲುವಾಂಬ ಕಟ್ಟಡವನ್ನು ಈ ಉದ್ದೇಶಕ್ಕಾಗಿ ಕೊಡಲು ಮುಂದೆ ಬಂದರು. ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಸ್ವತಃ ಮೈಸೂರಿಗೆ ಆಗಮಿಸಿ ಡಿಸೆಂಬರ್ 1948ರಂದು ಅದನ್ನು ಸಂಸ್ಥೆಗಾಗಿ ಸ್ವೀಕರಿಸಿದರು. 1949 ಜುಲೈ ಅಂತ್ಯದಲ್ಲಿ ಒಂದು ಪ್ರಯೋಗಶಾಲೆ, ಪುಸ್ತಕಾಲಯ ಪ್ರಾಣಿನಿಲಯಗಳು ಆರಂಭಗೊಂಡು ಸಂಸ್ಥೆಗೆ ಬುನಾದಿಯಾಗಿ ನಿಂತವು. ನಂತರ, ಅಕ್ಟೋಬರ್ 21, 1950ರಂದು ಅಂದಿನ ಕೇಂದ್ರ ಗೃಹಮಂತ್ರಿ ಸಿ. ರಾಜಗೋಪಾಲಾಚಾರಿ ಸಂಸ್ಥೆಯ ಉದ್ಘಾಟನೆಯನ್ನು ನೆರವೇರಿಸಿಕೊಟ್ಟರು. ಡಾ. ವಿ. ಸುಬ್ರಹ್ಮಣ್ಯನ್ ಸಂಸ್ಥೆಯ ಪ್ರಥಮ ನಿರ್ದೇಶಕರಾದರು. ಹೀಗೆ, ಸಿ.ಎಫ್.ಟಿ.ಆರ್.ಐ. ಸಂಸ್ಥೆಯು ಸಿ.ಎಫ್.ಟಿ.ಆರ್.ಐ.ನ ಅಂಗಸಂಸ್ಥೆಯಾಗಿ ಹಾಗೂ ಇದರ ಮೂರನೇ ರಾಷ್ಟ್ರೀಯ ಪ್ರಯೋಗಾಲಯವಾಗಿ ಕಾರ್ಯಪ್ರವೃತ್ತವಾಯಿತು.

**ಸಿ.ಎಫ್.ಟಿ.ಆರ್.ಐ., ಮೈಸೂರು**

ಆರಂಭದ ದಿನಗಳಲ್ಲಿ ಸಂಸ್ಥೆಯು ಭಾರತದ ವಿಭಜನೆ ಹಾಗೂ ಬರ್ಮಾದ ಬೇರ್ಪಡೆಯಿಂದೊದಗಿದ ಆಹಾರ ಸಂಕಷ್ಟವನ್ನು ಪರಿಹರಿಸಲು ಆಹಾರ ಸಂರಕ್ಷಣೆ, ಹೆಚ್ಚಿನ ಆಹಾರ ಉತ್ಪಾದನೆ, ಆಹಾರ ಪೌಷ್ಟಿಕತೆಯ ವರ್ಧನೆ ಮುಂತಾದ ಕ್ಷೇತ್ರಗಳಿಗೆ ತನ್ನ ಗಮನವನ್ನು ಹರಿಸಿತು. ಮೊದಲಿನ ವರ್ಷಗಳಲ್ಲಾದ ಮುಖ್ಯ ಪ್ರಗತಿಯೆಂದರೆ ಎಮ್ಮೆಯ ಹಾಲಿನಿಂದ ಶಿಶು ಆಹಾರವನ್ನು ತಯಾರಿಸಿದ್ದು. ಈ ಪ್ರಗತಿ ಭಾರತವನ್ನು ಶಿಶು ಆಹಾರವನ್ನು ಉತ್ಪಾದಿಸುತ್ತಿದ್ದ ಪಾಶ್ಚಾತ್ಯ ದೇಶಗಳ ಸಾಲಿನಲ್ಲಿ ನಿಲ್ಲಿಸಿತು. ಇದರಿಂದ ಭಾರತದ ಕ್ಷೀರೋದ್ಯಮ ಅದ್ಭುತ ಎತ್ತರಕ್ಕೇರಿತು. (ಕೇರಳದ ಕುರಿಯನ್‌ರವರ ಪ್ರೋತ್ಸಾಹ ಸಹಕಾರದ ಆಧಾರದಿಂದ ಶಿಶು ಆಹಾರ ಸಂಸ್ಥೆಯ ತಂತ್ರಜ್ಞಾನವನ್ನಾಧರಿಸಿ ರೂಪುಗೊಂಡ "ಅಮುಲ್" ನಾಲ್ಕು ದಶಕಗಳಿಂದ ಮನೆಮಾತಾಗಿದೆ) ಈ ತಂತ್ರಜ್ಞಾನ ದೇಶಕ್ಕೆ ಶಿಶುಆಹಾರದ ಆಮದನ್ನು ತಪ್ಪಿಸಿದ್ದರಿಂದ ಕೋಟ್ಯಂತರ ರೂಪಾಯಿ ಉಳಿತಾಯವಾಗಿದೆ.

ಸಸ್ಯಗಳಿಂದ ತೆಗೆದ ಪ್ರೋಟೀನುಗಳು ಕಡಿಮೆ ಬೆಲೆಯುಳ್ಳದ್ದಾದರೂ ಅವುಗಳು ಹೆಚ್ಚು ಸತ್ವವನ್ನು ಹೊಂದಿದ್ದು ಈ ಆವಿಷ್ಕಾರವು ಸಂಸ್ಥೆಯ ಚರಿತ್ರೆಯಲ್ಲಿ ಮೈಲಿಗಲ್ಲಿನಂತಿದೆ. ಅದೇ ರೀತಿ, ಆಹಾರ ಸಂರಕ್ಷಣೆಯಲ್ಲೂ ಹಲವು ಆವಿಷ್ಕಾರಗಳು ಸಂಸ್ಥೆಯಿಂದ ನಡೆದಿವೆ. ಹಲವು ದಶಕಗಳ ಮೂಲಕ ನಡೆದು ಬಂದ ಸಂಸ್ಥೆ ದೇಶೀಯ ಆಹಾರ ಉದ್ಯಮಗಳ ವಿಕಾಸಕ್ಕೆ ನೆರವು ನೀಡಿದ ಹತ್ತು ಹಲವು ತಂತ್ರಜ್ಞಾನಗಳನ್ನು ಬೆಳಕಿಗೆ ತಂದಿದೆ.

–ಸಂಸ್ಥೆಯ ಗಮನ ನೀಡುತ್ತಿರುವ ಕ್ಷೇತ್ರಗಳು ಕೆಳಗಿನಂತಿವೆ:

- ದುಬಾರಿಯಲ್ಲದ ತಂತ್ರಜ್ಞಾನದ ಬೆಳವಣಿಗೆ
- ದೇಶೀಯ ಕಚ್ಚಾ ವಸ್ತುಗಳ ಬಳಕೆ
- ಸಂಯೋಜಿತ ಸಂಸ್ಕರಣೆಗೆ ಒತ್ತು ನೀಡುವ ಜೈವಿಕ ಸ್ನೇಹಿ ತಂತ್ರಜ್ಞಾನ
- ಸಮಸ್ತರಿಗೂ ಅಗತ್ಯವಾದ ಆಹಾರ ಸುರಕ್ಷೆ, ಆರೋಗ್ಯ ಮತ್ತು ಪೌಷ್ಟಿಕತೆ – ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಉನ್ನತ ಮಟ್ಟದ ಸಂಪೂರ್ಣ ತಂತ್ರಜ್ಞಾನದ ಆವಿಷ್ಕಾರ

ಸಂಸ್ಥೆಯು ಅನೇಕ ಸಂಶೋಧನಾ ವಿಭಾಗಗಳನ್ನು ಹೊಂದಿದೆ. ಕೆಲವು ಮುಖ್ಯ ವಿಭಾಗಗಳೆಂದರೆ ಜೈವರಸಾಯನಶಾಸ್ತ್ರ ಮತ್ತು ಪೌಷ್ಟಿಕತೆ, ಆಹಾರತಂತ್ರಜ್ಞಾನ, ಆಹಾರ ಪ್ಯಾಕಿಂಗ್ ವಿಭಾಗ, ಫಲ ಮತ್ತು ತರಕಾರಿ ತಂತ್ರಜ್ಞಾನ, ಧಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಆಹಾರ ಸೂಕ್ಷ್ಮಜೀವ ವಿಜ್ಞಾನ, ಮೇದಸ್ಸು ವಿಜ್ಞಾನ ಮತ್ತು ಸಾಂಪ್ರದಾಯಿಕ ಆಹಾರ ಇತ್ಯಾದಿ.

ಸಿ.ಎಫ್.ಟಿ.ಆರ್.ಐ. ನಿಯಮಾವಳಿಗೆ ಅನುಗುಣವಾಗಿ ಆಡಳಿತವನ್ನು ನಡೆಸುವ ಸಮಿತಿಯೊಂದು ಸಿ.ಎಫ್.ಟಿ.ಆರ್.ಐ. ಸಂಸ್ಥೆಯ ಕಾರ್ಯಭಾರವನ್ನು ನಿರ್ವಹಿಸಿದೆ. ಆಡಳಿತ ಸಮಿತಿಯ ಅವಧಿ ಮೂರು ವರ್ಷಗಳು. ನಿರ್ದೇಶಕರು ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ವಿವಿಧ ವಯೋಮಾನದ ವಿಜ್ಞಾನಿಗಳು, ನಿರ್ದೇಶಕರ ಮಟ್ಟದ ವಿಜ್ಞಾನಿಗಳು, ಹಣಕಾಸು ವಿಭಾಗದ ಮುಖ್ಯಸ್ಥರು ಸಮಿತಿಯಲ್ಲಿರುತ್ತಾರೆ.

ಸಂಸ್ಥೆಯು ಆಹಾರ ವಿಜ್ಞಾನದಲ್ಲಿ ನಿಜಕ್ಕೂ ಅಮೋಘವಾದ ಪ್ರಗತಿಯನ್ನು ಸಾಧಿಸುವಲ್ಲಿ ಸಫಲವಾಗಿದೆ. ಆಹಾರ ವಿಜ್ಞಾನದ ಎಲ್ಲ ಮುಖಗಳಲ್ಲೂ ಈ ಸಂಸ್ಥೆ ಸಂಶೋಧನಾ ನಿರತವಾಗಿದೆ.

**ಭಾರತೀಯ ಕೃಷಿ ಸಂಶೋಧನಾ ಪರಿಷತ್ತು** (ಇಂಡಿಯನ್ ಕೌನ್ಸಿಲ್ **ಆಫ್ ಅಗ್ರಿಕಲ್ಚರಲ್ ರಿಸರ್ಚ್ ICAR), ನವದೆಹಲಿ:** ಕೃಷಿ ಮಂತ್ರಾಲಯದಡಿಯಲ್ಲಿ ಬರುವ ಈ ಸಂಸ್ಥೆ ನವದೆಹಲಿಯಲ್ಲಿದೆ. ಇದೊಂದು ಸ್ವಾಯತ್ತ ಸಂಸ್ಥೆ. ಇದು 16 ಜುಲೈ 1929ರಲ್ಲಿ ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ಎಂಬ ಹೆಸರಿನಲ್ಲಿ ಆರಂಭಗೊಂಡಿತು.

ಕೃಷಿ ಶಿಕ್ಷಣ ಮತ್ತು ಕೃಷಿ ಸಂಶೋಧನೆಗಳನ್ನು ನಿರ್ವಹಿಸುವ ದೇಶದ ಉಚ್ಚತಮ ಅಂಗವಾಗಿರುವ ಈ ಸಮಿತಿಯು ತೋಟಗಾರಿಕೆ ಮೀನುಗಾರಿಕೆ ಮತ್ತು ಪ್ರಾಣಿ ವಿಜ್ಞಾನಗಳ ಕ್ಷೇತ್ರಗಳನ್ನು ತನ್ನ ಸಂಶೋಧನಾ ಪರಿಧಿಯಲ್ಲಿಟ್ಟುಕೊಂಡಿದೆ. 90ಕ್ಕೂ ಹೆಚ್ಚು ಡಿ.ಸಿ.ಎ.ಆರ್. ಸಂಸ್ಥೆಗಳನ್ನು 45 ಕೃಷಿ ವಿಶ್ವವಿದ್ಯಾಲಯಗಳನ್ನು ಹೊಂದಿರುವ ಭಾರತ ಪ್ರಪಂಚದ ಬಹುದೊಡ್ಡ ರಾಷ್ಟ್ರೀಯ ಕೃಷಿ ವ್ಯವಸ್ಥೆಯನ್ನು ಹೊಂದಿರುವ ದೇಶವೆಂಬ ಹೆಮ್ಮೆಗೆ ಪಾತ್ರವಾಗಿದೆ.

ತನ್ನ ಸಂಶೋಧನೆ ಮತ್ತು ತಂತ್ರಜ್ಞಾನ ವಿಕಾಸದ ಮೂಲಕ ಹಸಿರುಕ್ರಾಂತಿಯನ್ನುಂಟುಮಾಡುವಲ್ಲಿ ಸಂಸ್ಥೆ ಅಗ್ರ ಪಾತ್ರವನ್ನು ವಹಿಸಿತಲ್ಲದೆ ಭಾರತದಲ್ಲಿ ಅನಂತರ ಆದ ಕೃಷಿ ಅಭಿವೃದ್ಧಿಗೆ ಕಾರಣೀಭೂತವಾಯಿತು. ಪರಿಷತ್ತಿನ ಸಂಶೋಧನೆಗಳು ರಾಷ್ಟ್ರೀಯ ಆಹಾರ ಮತ್ತು ಪೌಷ್ಟಿಕತೆಯ ಸುರಕ್ಷೆಯ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿದೆ. ಆಹಾರಧಾನ್ಯಗಳ ಉತ್ಪಾದನೆ 4 ಪಟ್ಟು, ತೋಟಗಾರಿಕೆ ಉತ್ಪನ್ನ 6 ಪಟ್ಟು, ಮೀನುಗಾರಿಕೆ

Digitised by Bharatavani, CIIL

ಉತ್ಪನ್ನ 9 ಪಟ್ಟು, ಹಾಲು ಉತ್ಪಾದನೆ 6 ಪಟ್ಟು, ಮೊಟ್ಟೆ 27 ಪಟ್ಟು ಹೆಚ್ಚಿರುವುದು 1950–51ರಿಂದ ಪರಿಷತ್ತು ಮಾಡಿರುವ ಸಾಧನೆಯಾಗಿದೆ. ಉನ್ನತ ಕೃಷಿ ಶಿಕ್ಷಣ ಕ್ಷೇತ್ರದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರುವಲ್ಲಿ ಈ ಪರಿಷತ್ತು ಮುಖ್ಯಪಾತ್ರವನ್ನು ವಹಿಸಿದೆ.

ಪರಿಷತ್ತಿನ ಮುಖ್ಯ ಧ್ಯೇಯೋದ್ದೇಶಗಳು ಹೀಗಿವೆ: ಕೃಷಿ, ಕೃಷಿ ಅರಣ್ಯ (Agro forestry) ಪಶುಸಂಗೋಪನೆ, ಮೀನುಗಾರಿಕೆ, ಗೃಹವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಶಿಕ್ಷಣ, ಸಂಶೋಧನೆ ಹಾಗೂ ಪ್ರಯೋಗಗಳನ್ನು ಯೋಜಿಸುವುದು, ಪ್ರೋತ್ಸಾಹಿಸುವುದು ಹಾಗೂ ಸಂಯೋಜಿಸುವುದು. ಇದಲ್ಲದೆ ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಹರಡಲು ಪ್ರಕಟಣೆಗಳನ್ನು ಹೊರತರುವುದು, ಸಲಹೆಗಳನ್ನು ಕೋರಿಬಂದವರಿಗೆ ಈ ಕ್ಷೇತ್ರಗಳಲ್ಲಿ ಸಮಾಲೋಚನೆಯನ್ನೀಯುವುದು, ಪರಿಷತ್ತಿನ ಕಾರ್ಯೋದ್ದೇಶಗಳಾಗಿವೆ. ಕೌನ್ಸಿಲ್ ಆಫ್ ಸೋಷಿಯಲ್ ಸೈನ್ಸ್ ರಿಸರ್ಚ್, ಸಿ.ಎಸ್.ಡಿ.ಆರ್. ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್ ಮುಂತಾದ ಸಂಸ್ಥೆಗಳ ಹಾಗೂ ವಿಶ್ವವಿದ್ಯಾಲಯಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡು ಕೃಷಿ ಮುಂತಾದ ಗ್ರಾಮಾಭಿವೃದ್ಧಿಗೆ ಸಂಬಂಧಿಸಿದ ಕ್ಷೇತ್ರಗಳಿಗೆ ಗಮನವನ್ನೀಯುವುದು, ಪರಿಷತ್ತಿನ ಮತ್ತೊಂದು ಧ್ಯೇಯ. ಒಟ್ಟಿನಲ್ಲಿ ಸಮಾಜದ ಉದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪರಿಷತ್ತು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯಗಳಲ್ಲಿನ ಕೃಷಿ ವಿಷಯಕ ಸ್ನಾತಕಪದವಿಗೆ ಶೇ. 15ರಷ್ಟು ಸೀಟುಗಳಿಗೆ ಪರಿಷತ್ತು ಪ್ರವೇಶ ಪರೀಕ್ಷೆಯನ್ನು ನಡೆಸುತ್ತದೆ. ಭಾರತ ಸರ್ಕಾರದ ಕೃಷಿ ಮಂತ್ರಾಲಯದಡಿಯಲ್ಲಿ ಬರುವ ಈ ಪರಿಷತ್ತಿಗೆ ಡೈರೆಕ್ಟರ್ ಜನರಲ್ ನೇಮಕಗೊಂಡಿರುತ್ತಾರೆ. ಪರಿಷತ್ತಿನ ನಿಯಂತ್ರಣ ಮಂಡಳಿಗೆ ಡೈರೆಕ್ಟರ್ ಜನರಲ್ ಮುಖ್ಯಸ್ಥರಾಗಿರುತ್ತಾರೆ.

1957ರಲ್ಲಿ ಪ್ರಥಮ ಬಾರಿಗೆ ಪರಿಷತ್ತು ಜೋಳದ ಮೇಲೆ ಅಖಿಲ ಭಾರತ ಮಟ್ಟದಲ್ಲಿ ಸಂಶೋಧನಾ ಪ್ರಾಜೆಕ್ಟೊಂದನ್ನು ಸಂಘಟಿಸಿತು. 1958ರಲ್ಲಿ ಪರಿಷತ್ತಿಗೆ ಮಾನ್ಯತೆ ಪಡೆದ (ಡೀಮ್ಡ್) ವಿಶ್ವವಿದ್ಯಾಲಯದ ಸ್ಥಾನಮಾನ ಲಭ್ಯವಾಯಿತು. ನಂತರ ಪರಿಷತ್ತು ಮೊದಲ ಕೃಷಿ ವಿದ್ಯಾಲಯದ ಸ್ಥಾಪನೆಯನ್ನು ಕೈಗೊಂಡು ಹಲವು ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಬುನಾದಿಯನ್ನು ಹಾಕಿತು. 1998ರಲ್ಲಿ ರಾಷ್ಟ್ರೀಯ ಕೃಷಿ ತಂತ್ರಜ್ಞಾನ ಪ್ರಾಯೋಜನೆಯನ್ನೂ 2005ರಲ್ಲಿ ರಾಷ್ಟ್ರೀಯ ಕೃಷಿ ಅನ್ವೇಷಣಾ ಪ್ರಾಯೋಜನೆಯನ್ನೂ ಪರಿಷತ್ತು ಆರಂಭಿಸಿತು. 2006ರಲ್ಲಿ ಬರ್ಡ್‌ಫ್ಲೂ ಕಾಯಿಲೆಗೆ ಚುಚ್ಚುಮದ್ದನ್ನು ಕಂಡುಹಿಡಿಯಲಾಯಿತು. ದೇಶದಲ್ಲಿ 569 ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಿರುವುದು ಇದರ ಮತ್ತೊಂದು ಸಾಧನೆ. ಕೇರಳದ ಕಣ್ಣೂರಿನಲ್ಲಿರುವ ಕೃಷಿ ವಿಜ್ಞಾನ ಕೇಂದ್ರ, ಕೃಷಿ ಕ್ಷೇತ್ರದಲ್ಲಿ ಅಸಾಧಾರಣ ಮುನ್ನಡೆಯನ್ನು ಸಾಧಿಸಲು ನೆರವಾಗಿರುವಂಥ ಹೊಸ ಅನ್ವೇಷಣೆಗಳನ್ನು ಇದು ಕೈಗೊಂಡಿದೆ. ಇಷ್ಟೇ ಅಲ್ಲದೆ ಇದರ ಅಸಂಖ್ಯ ಅಂಗಗಳು ಪರಿಷತ್ತಿನ ಧ್ಯೇಯಗಳನ್ನು ಸಾಧಿಸಲು ಕಾರ್ಯನಿರತವಾಗಿವೆ. ಹಲವಾರು ಪಾರಿತೋಷಕಗಳು ಪರಿಷತ್ತಿನ ಪಾಲಿಗೆ ಬಂದಿರುವುದನ್ನು ಕಂಡಾಗ ಅದರ ಸಾಧನೆಗಳ ಅರಿವು ನಮಗಾಗುತ್ತದೆ. ನವದೆಹಲಿಯಲ್ಲಿ ಪರಿಷತ್ತಿನ ಪ್ರಧಾನ ಕಾರ್ಯಾಲಯವಿದೆ.

**ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಫೆನ್ಸ್ ರಿಸರ್ಚ್ ಆ್ಯಂಡ್ ಡೆವೆಲಪ್‌ಮೆಂಟ್ ಆರ್ಗನೈಸೇಷನ್ DRDO), ನವದೆಹಲಿ:** ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ರಕ್ಷಣಾ ಮಂತ್ರಾಲಯದಡಿಯಲ್ಲಿ ಬರುವ ಸಂಶೋಧನಾ ಸಂಸ್ಥೆ. ಭಾರತೀಯ ಸೇನೆಯ ತಾಂತ್ರಿಕ ಅಭಿವೃದ್ಧಿ ಸಂಸ್ಥೆಗಳು ಹಾಗೂ ತಾಂತ್ರಿಕ ಅಭಿವೃದ್ಧಿ ಮತ್ತು ಉತ್ಪಾದನಾ ನಿರ್ದೇಶನಾಲಯಗಳನ್ನು ರಕ್ಷಣಾ ವಿಜ್ಞಾನ ಸಂಸ್ಥೆಯೊಡನೆ ಸಂಯೋಜಿಸಿ 1958ರಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಪ್ರಾರಂಭದಲ್ಲಿ ಕೇವಲ ಹತ್ತು ಸಂಸ್ಥಾಪನೆಗಳು ಇದ್ದು ವರ್ಷಗಳು ಕಳೆದಂತೆ ಇದು ಸಂಶೋಧನೆ, ಪ್ರಯೋಗಾಲಯಗಳ ಸಂಖ್ಯೆ, ಸಾಧನೆ, ಸ್ಥಾನಮಾನಗಳ ರೂಪದಲ್ಲಿ ಬಹುಮುಖ ಸಂಸ್ಥೆಯಾಗಿ ಬೆಳೆದಿದೆ.

ಸಂಸ್ಥೆಯ ಕಾರ್ಯೋದ್ದೇಶಗಳು ನಮ್ಮ ದೇಶದ ರಕ್ಷಣೆಯನ್ನು ಆದಷ್ಟು ಸುಭದ್ರವಾಗಿಸಲು ಸಹಕಾರಿಯಾಗಿವೆ. "ವಿಶ್ವಮಟ್ಟದ ವಿಜ್ಞಾನ ಹಾಗೂ ತಂತ್ರಜ್ಞಾನದ ಬುನಾದಿಯನ್ನು ಹಾಕಿ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸಿ ನಮ್ಮ ರಕ್ಷಣಾ ಸೇವೆಯನ್ನು ಪರಿಣಾಮಕಾರಿಯನ್ನಾಗಿಸುವುದು." ಇದು ಡಿ.ಆರ್.ಡಿ.ಓ.ನ ಧ್ಯೇಯ ದರ್ಶನವಾಗಿದೆ. ಇನ್ನು ತನ್ನ ಕಾರ್ಯವೈಖರಿಯನ್ನು ಸಂಸ್ಥೆಯು ಹೀಗೆ ಘೋಷಿಸುತ್ತದೆ. "ಅತ್ಯಾಧುನಿಕ ಸಂವೇದಿಗಳು, ಶಸ್ತ್ರಾಸ್ತ್ರ ವ್ಯವಸ್ಥೆ ಹಾಗೂ ಸಂಬಂಧಿತ ಉಪಕರಣಗಳ ವಿನ್ಯಾಸ, ವಿಕಾಸ ಮತ್ತು ಉತ್ಪಾದನೆ ಸೈನ್ಯದ ಕದನ ಪ್ರಭಾವವನ್ನು (Combat effectiveness) ಹೆಚ್ಚಿಸಲು ತಾಂತ್ರಿಕ ಪರಿಹಾರವನ್ನು ಕೊಡುವುದು ಹಾಗೂ ಸೇನೆಯ ಯೋಗಕ್ಷೇಮವನ್ನು ಕಾಪಾಡುವುದು. ಗುಣಾತ್ಮಕ ಕಟಿಬದ್ಧ ಮಾನವಸಂಪನ್ಮೂಲಗಳನ್ನು ಮತ್ತು ಮೂಲ ಸೌಲಭ್ಯ ವ್ಯವಸ್ಥೆಯನ್ನು ವಿಕಾಸಗೊಳಿಸುವುದು ಹಾಗೂ ಬಲಯುತ ದೇಶೀಯ ತಂತ್ರಜ್ಞಾನದ ಬುನಾದಿಯನ್ನು ಕಟ್ಟುವುದು.

ಸಂಸ್ಥೆಯ ವಿವಿಧ ತಂತ್ರಜ್ಞಾನ ಕ್ಷೇತ್ರಗಳು ಹಲವು. ವೈಮಾನಿಕ ತಂತ್ರಜ್ಞಾನ, ಶಸ್ತ್ರಾಸ್ತ್ರ, ಕದನ ತಂತ್ರಜ್ಞಾನ, ವಿದ್ಯುನ್ಮಾನ, ಜೈವಿಕ ವಿಜ್ಞಾನ, ಉಪಕರಣಗಳು, ಕ್ಷಿಪಣಿತಂತ್ರಜ್ಞಾನ, ಜಲಸೇನಾವ್ಯವಸ್ಥೆ ಇವು ಸಂಸ್ಥೆಯು ಗಮನ ನೀಡುವ ಕ್ಷೇತ್ರಗಳಾಗಿವೆ.

ನಮ್ಮ ರಾಜ್ಯದಲ್ಲಿರುವ ಡಿ.ಆರ್.ಡಿ.ಓ. ಸಂಸ್ಥೆಯ ಅಡಿಯಲ್ಲಿ ಬರುವ ಸಂಸ್ಥೆಗಳು ತಮ್ಮ ಸಾಧನೆಗಳಿಂದಾಗಿ ಪ್ರಾಮುಖ್ಯತೆಯನ್ನು ಪಡೆದಿವೆ. ಏರೋನಾಟಿಕಲ್ ಡೆವೆಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (ADE), ಸೆಂಟರ್ ಫಾರ್ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಆ್ಯಂಡ್ ರೊಬಾಟಿಕ್ಸ್ (CAIR), ಡಿಫೆನ್ಸ್ ಎಲೆಕ್ಟ್ರಾನಿಕ್ಸ್ ರಿಸರ್ಚ್ ಲ್ಯಾಬೋರೇಟರಿ (DERL), ಡಿಫೆನ್ಸ್ ಏವಿಯಾನಿಕ್ಸ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್ (DARE), ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್ (GTRE) ಮುಂತಾದ ಹಲವು ಸಂಸ್ಥೆಗಳು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿವೆ. ಮೈಸೂರಿನಲ್ಲಿ ಭಾರತೀಯ ಸೇನೆಗೆ ನೀಡಲಾಗುವ ಆಹಾರಕ್ಕೆ ಸಂಬಂಧಿಸಿದಂತೆ ಸಂಶೋಧನೆಯನ್ನು ಕೈಗೊಳ್ಳಲು ಡಿಫೆನ್ಸ್ ಫುಡ್ ರಿಸರ್ಚ್ ಲ್ಯಾಬೋರೇಟರಿ ಎಂಬ ಪ್ರಯೋಗಾಲಯವಿದೆ. ದೇಶದ ವಿವಿಧ ರಾಜ್ಯಗಳಲ್ಲಿ ಇದರ ಅಂಗ ಸಂಸ್ಥೆಗಳು, ಪ್ರಯೋಗಾಲಯಗಳು ಹರಡಿಕೊಂಡಿವೆ.

ಡಿ.ಆರ್.ಡಿ.ಓ. ಸಂಸ್ಥೆಯು ಸಂಶೋಧನೆಗೆ ಮಾತ್ರ ತನ್ನನ್ನು ಸೀಮಿತಗೊಳಿಸದೆ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕೈಗಾರಿಕೆಗಳು ಇನ್ನಿತರ ಸಂಶೋಧನಾ ಕೇಂದ್ರಗಳೊಡನೆ ಸಂಪರ್ಕವನ್ನಿಟ್ಟುಕೊಂಡು ಪ್ರತಿಭೆಯನ್ನು ಗುರುತಿಸಿ ಬೆಳೆಸುವಲ್ಲಿ ಆಸಕ್ತಿವಹಿಸಿದೆ. ತನ್ನ ಸಂಸ್ಥೆ ಹಾಗೂ ಪ್ರಯೋಗಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸಂಶೋಧನೆಯನ್ನು ಕೈಗೊಳ್ಳಲು ಎಲ್ಲ ಸಹಕಾರಗಳನ್ನು ನೀಡಲು ಡಿ.ಆರ್.ಡಿ.ಓ. ಸಿದ್ಧವಾಗಿದೆ. ಸಂಶೋಧನೆಗಳಿಗೆ ಹಾಗೂ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದ ಪ್ರಕಟಣೆ ಸಹ ಸಂಸ್ಥೆಯ ಜವಾಬ್ದಾರಿಗಳಲ್ಲಿ ಒಂದಾಗಿದೆ.

ಸಂಸ್ಥೆಯು ಒಟ್ಟು 30,000 ಸಿಬ್ಬಂದಿಗಳನ್ನು ಹೊಂದಿದೆ. ಅದರಲ್ಲಿ 7000ದಷ್ಟು ವಿಜ್ಞಾನಿಗಳು ಸೇರಿದ್ದಾರೆ. ಸಂಸ್ಥೆಯ ಮುಖ್ಯ ಕಾರ್ಯಾಲಯ ನವದೆಹಲಿಯಲ್ಲಿದೆ.

Digitised by Bharatavani, CIIL

**ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್ ISRO), ಬೆಂಗಳೂರು:** ಭಾರತದ ಬಾಹ್ಯಾಕಾಶ ಕಾರ್ಯಕ್ರಮಗಳ ಪಿತಾಮಹನೆಂದು ಪರಿಗಣಿತರಾದ ಡಾ॥ ವಿಕ್ರಮ್ ಸಾರಾಭಾಯಿಯವರ ದೂರದೃಷ್ಟಿಯಿಂದ ಭಾರತವು ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಕ್ಕೆ ಕಾಲಿಟ್ಟಿತು. ತಿರುವನಂತಪುರದ ಬಳಿ ಇರುವ "ತುಂಬಾ" ಎಂಬ ಸ್ಥಳದಲ್ಲಿ ಬಾಹ್ಯಾಕಾಶ ಕಾರ್ಯಕ್ರಮ ಆರಂಭವಾಯಿತು. 1960ರ ದಶಕದಲ್ಲಿ ಆರಂಭಗೊಂಡ ಯತ್ನಗಳ ಫಲವಾಗಿ 1969ರಲ್ಲಿ ಭಾರತ ಸರ್ಕಾರದ ನೇತೃತ್ವದಲ್ಲಿ ಇಂದಿನ ರೂಪದಲ್ಲಿರುವ ಸಂಸ್ಥೆಯು ಸ್ಥಾಪನೆಗೊಂಡಿತು. ಪ್ರಪಂಚದ ಶ್ರೇಷ್ಠ ಬಾಹ್ಯಾಕಾಶ ಸಂಸ್ಥೆಗಳಲ್ಲಿ ಇದು ಒಂದಾಗಿದೆ. ಇದಕ್ಕೂ ಮುಂಚೆ ಸಿ.ವಿ.ರಾಮನ್, ಮೇಘನಾದಸಹರಂಥ ಶ್ರೇಷ್ಠವಿಜ್ಞಾನಿಗಳು ಬಾಹ್ಯಾಕಾಶ ವಿಜ್ಞಾನಕ್ಕೆ ಅಳವಡಿಸಿಕೊಳ್ಳಬಲ್ಲಂಥ ವೈಜ್ಞಾನಿಕ ತತ್ವಗಳನ್ನು ಕಂಡುಹಿಡಿದಿದ್ದರು. ಆದರೆ 1945ರಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಎಂಬ ಸಂಸ್ಥೆ ಹೋಮಿಬಾಬಾ ಅವರ ಪ್ರಯತ್ನದಿಂದ ಸ್ಥಾಪನೆಯಾದಾಗ ಬಾಹ್ಯಾಕಾಶ ಕ್ಷೇತ್ರದಲ್ಲಿ ಪ್ರಾರಂಭಿಕ ಚಟುವಟಿಕೆಗಳು ಕಂಡುಬಂದವು. ಕ್ರಮೇಣ ಭಾರತದ ಸಂಬಂಧಗಳು ಅಂದಿನ ಸೋವಿಯತ್ ಯೂನಿಯನ್ನಿನೊಡನೆ ಬೆಳೆದಾಗ ಅವರ ಸಹಕಾರದೊಡನೆ ಶೀಘ್ರ ಮುನ್ನಡೆಗಳನ್ನು ಇಸ್ರೋ ಸಾಧಿಸುವಲ್ಲಿ ಯಶಸ್ವಿಯಾಯಿತು.

ಇಸ್ರೋ ಸಂಸ್ಥೆಯು ಬಾಹ್ಯಾಕಾಶ ತಂತ್ರಜ್ಞಾನವನ್ನು ವಿಕಸನಗೊಳಿಸಿ ದೇಶದ ವಿವಿಧ ಉದ್ದೇಶಗಳಿಗಾಗಿ ಅದನ್ನು ಉಪಯೋಗಿಸುವ ಉದ್ದೇಶವನ್ನು ಹೊಂದಿದೆ. ದೂರಸಂಪರ್ಕ, ದೂರದರ್ಶನ, ಪವನಶಾಸ್ತ್ರ (Meteorology), ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆ ಮುಂತಾದ ಕ್ಷೇತ್ರಗಳಲ್ಲಿ ಅಗತ್ಯವಾದ ಉಪಗ್ರಹಗಳನ್ನು ತಯಾರಿಸಿ ಹಾರಿಬಿಡುವ ಕ್ಷಮತೆಯನ್ನು ಇಸ್ರೋ ಸಂಸ್ಥೆಯು ಹೊಂದಿದೆ. ಇನ್‌ಸಾಟ್ (INSAT) ಮತ್ತು ಐ.ಆರ್.ಎಸ್. (IRS) ಎಂಬ ಎರಡು ಮುಖ್ಯ ಬಾಹ್ಯಾಕಾಶ ತಂತ್ರಜ್ಞಾನವನ್ನು ವಿನ್ಯಾಸಗೊಳಿಸಿ ಉಪಯೋಗಿಸಲಾಗುತ್ತಿದೆ. IRS ತಂತ್ರಜ್ಞಾನವನ್ನು ವಿಶೇಷವಾಗಿ ಪ್ರಾಕೃತಿಕ ಸಂಪನ್ಮೂಲಗಳನ್ನು ನಿರ್ವಹಣೆಗೆಂದೇ ರೂಪಿಸಲಾಗಿದೆ. INSAT ತಂತ್ರಜ್ಞಾನವನ್ನು ದೂರಸಂಪರ್ಕ, ದೂರದರ್ಶನ ಮುಂತಾದ ಉದ್ದೇಶಗಳಿಗೆ ಉಪಯೋಗಿಸಲಾಗಿದೆ. ಪೋಲಾರ್ ಸೆಟಿಲೈಟ್ ಲಾಂಚ್ ವೆಹಿಕಲ್ (PSLV) ಉಪಕರಣವು IRS ತೆರನ ಉಪಗ್ರಹವನ್ನು ಹಾರಿಬಿಡಲು ಹಾಗೂ ಜಿಯೋಸ್ಟೇಷನರಿ ಸೆಟಿಲೈಟ್ ಲಾಂಚ್ ವೆಹಿಕಲ್ (GSLV) ಉಪಕರಣವು INSAT ತೆರನ ಉಪಗ್ರಹವನ್ನು ಹಾರಿಬಿಡಲು ರೂಪಿಸಲಾಗಿದೆ.

ಇಸ್ರೋ ಸಂಸ್ಥೆಯ ಹಲವಾರು ಕೇಂದ್ರಗಳು ರಾಷ್ಟ್ರದ ವಿವಿಧ ಸ್ಥಳಗಳಲ್ಲಿ ಕಾರ್ಯೋನ್ಮುಖವಾಗಿವೆ. ಕರ್ನಾಟಕದ ಬೆಂಗಳೂರಿನಲ್ಲಿ ಇಸ್ರೋ ಸೆಟಿಲೈಟ್ ಸೆಂಟರ್ (ISAC), ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ ಸೆಂಟರ್ (LPSC), ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ ಆ್ಯಂಡ್ ಕಮ್ಯಾಂಡ್ ನೆಟ್‌ವರ್ಕ್ (ISTRAC), ಲ್ಯಾಬೋರೇಟರಿ ಫಾರ್ ಎಲೆಕ್ಟ್ರೊ-ಆಪ್ಟಿಕ್ ಸಿಸ್ಟಂ (LEOS) ಈ ಸಂಸ್ಥೆಗಳು ಸ್ಥಾಪಿತಗೊಂಡಿವೆ. ಹಾಸನದಲ್ಲಿ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ (MCF) ಸ್ಥಾಪಿತವಾಗಿದೆ. ದೇಶದ ಇನ್ನಿತರ ರಾಜ್ಯಗಳಲ್ಲೂ ಇಸ್ರೋ ಕೇಂದ್ರಗಳು ಅಸ್ತಿತ್ವದಲ್ಲಿವೆ.

ದೇಶದ ಮೊದಲ ಮಾನವರಹಿತ ಚಂದ್ರಯಾನ ("ಚಂದ್ರಯಾನ1")ದ ಸಫಲತೆಯ ಹಿನ್ನೆಲೆಯಲ್ಲಿ ಮುಂದಿನ ದಶಕದಲ್ಲಿ ಇನ್ನೂ ಹಲವು 'ಚಂದ್ರಯಾನ' ಕಾರ್ಯಕ್ರಮಗಳನ್ನು ಸಂಸ್ಥೆಯು ಹಮ್ಮಿಕೊಂಡಿದೆ. 2020ರ ವೇಳೆಗೆ ಮಾನವಸಹಿತ ಚಂದ್ರಯಾನದ ಯೋಜನೆಯೂ ಇದೆ. ಹೊಸ ಪೀಳಿಗೆಯ ಭೂ ಉಪಗ್ರಹಗಳನ್ನು ಹಾರಿಬಿಡುವ ಯೋಜನೆಗಳನ್ನು ಇಸ್ರೋ ಹಾಕಿಕೊಂಡಿದೆ. ಹೊರ ರಾಷ್ಟ್ರಗಳೊಡನೆ ಒಡಂಬಡಿಕೆ (MOU)ಗಳಿಗೆ ಸಂಸ್ಥೆಯು ಸಹಿ ಹಾಕಿದೆ.

ಇಸ್ರೋ ತನ್ನ ಬಾಹ್ಯಾಕಾಶ ಕಾರ್ಯಕ್ರಮಗಳಿಂದ ರಾಷ್ಟ್ರವನ್ನು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದುವರಿದ ರಾಷ್ಟ್ರಗಳೊಡನೆ ಸಮನಾಗಿ ನಿಲ್ಲಿಸಿದೆ. ಅಷ್ಟೇ ಅಲ್ಲದೆ ಅದರ ಕಾರ್ಯಕ್ರಮಗಳಿಂದ ದೇಶದ ಪ್ರಜೆಗಳು ವಿವಿಧ ರೀತಿಯಲ್ಲಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಬಾಹ್ಯಾಕಾಶ ಮಂತ್ರಾಲಯದಡಿಯಲ್ಲಿ ಬರುವ ಇಸ್ರೋವಿಗೆ ಛೇರ್‌ಮನ್ (ಅಧ್ಯಕ್ಷರು) ಒಬ್ಬರನ್ನು ನೇಮಕ ಮಾಡಲಾಗುತ್ತದೆ. ಹಲವಾರು ವಿಜ್ಞಾನಿಗಳ ಸಹಪ್ರಯತ್ನದಿಂದ ಇಸ್ರೋ ಮುನ್ನಡೆಯನ್ನು ಸಾಧಿಸುತ್ತಿದೆ.

**ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿಟಿಕಲ್ ಎಜುಕೇಷನ್ ಆ್ಯಂಡ್ ರಿಚರ್ಸ್ (NIPER), ಮೊಹಾಲಿ (ಪಂಜಾಬ್):** ಪಂಜಾಬ್‌ರಾಜ್ಯದ ಮೊಹಾಲಿ ಎಂಬಲ್ಲಿ ಸ್ಥಾಪಿತವಾಗಿರುವ ಈ ಸಂಸ್ಥೆ ರಾಷ್ಟ್ರದ ಪ್ರಥಮ ರಾಷ್ಟ್ರೀಯ ಮಟ್ಟದ ಔಷಧ ವಿಜ್ಞಾನಕ್ಕೆ ಮೀಸಲಾಗಿರುವ ಸಂಸ್ಥೆ. ಭಾರತ ಸರ್ಕಾರ ಇದನ್ನು "ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆ" ಎಂದು ಘೋಷಿಸಿದೆ. ಇದೊಂದು ಸ್ವಾಯತ್ತ ಸಂಸ್ಥೆಯಾಗಿದ್ದು ರಾಸಾಯನಿಕ ಹಾಗೂ ರಸಗೊಬ್ಬರ ಖಾತೆಯ ಔಷಧ ವಿಭಾಗದ ನಿಯಂತ್ರಣದಲ್ಲಿದೆ.

ಈ ಸಂಸ್ಥೆ ಔಷಧ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ನಡೆಸುತ್ತದೆಯಲ್ಲದೆ, GATE ಪರೀಕ್ಷೆಯಲ್ಲಿ ಸಫಲರಾದವರಿಗೂ ಪ್ರವೇಶದ ಅವಕಾಶ ನೀಡುತ್ತದೆ. ಸಂಶೋಧನೆಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿ ಪ್ರೋತ್ಸಾಹವನ್ನೀಯುತ್ತದೆ. ಇತ್ತೀಚೆಗೆ ಇನ್ನೂ ನಾಲ್ಕು ಎನ್.ಐ.ಪಿ.ಇ.ಆರ್. (NIPER)ಗಳು ಅಹಮದಾಬಾದ್, ಹಾಜಿಪುರ, ಹೈದರಾಬಾದ್, ಕೊಲ್ಕೊತ್ತಗಳಲ್ಲಿ ಸ್ಥಾಪಿತಗೊಂಡಿವೆ.

ಔಷಧ ಶಾಸ್ತ್ರ ಉದ್ಯಮಕ್ಕೆ ಹಾಗೂ ವೃತ್ತಿಗೆ ಬೇಕಾದ ಭಾವಿ ಅಧ್ಯಾಪಕರು, ಸಂಶೋಧಕರು ಹಾಗೂ ವ್ಯವಸ್ಥಾಪಕರನ್ನು ತಯಾರು ಮಾಡುವುದರ ಮುಖಾಂತರ ಔಷಧ ಶಾಸ್ತ್ರ ಶಿಕ್ಷಣ ಹಾಗೂ ಸಂಶೋಧನೆಯ ಸ್ವಾಸ್ಥ್ಯವನ್ನು ಹೆಚ್ಚಿಸುವುದು, ನಿರಂತರ ಶಿಕ್ಷಣ ಕಾರ್ಯಕ್ರಮಗಳನ್ನು ಔಷಧ ಕೈಗಾರಿಕೆಗಳ ಹಾಗೂ ಇತರ ಸಂಶೋಧನಾ ಮತ್ತು ಶೈಕ್ಷಣಿಕ ಸಂಸ್ಥೆಗಳ ಅಗತ್ಯಗಳನ್ನು ಪೂರೈಸಲು ಔಷಧ ಶಾಸ್ತ್ರ ಹಾಗೂ ಔಷಧದ ಉಪಯೋಗ ಹಾಗೂ ದುರುಪಯೋಗದ ಸಾಮಾಜಿಕ ಮುಖಗಳನ್ನು ಅಧ್ಯಯನ ಮಾಡುವುದು, ಇತ್ಯಾದಿ ಉದ್ದೇಶಗಳನ್ನಿಟ್ಟುಕೊಂಡು ಸಂಸ್ಥೆಯು ಕಾರ್ಯೋನ್ಮುಖವಾಗಿದೆ.

**ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನಾ ಪರಿಷತ್ತು (ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರಿಸರ್ಚ್ CSIR) ನವದೆಹಲಿ:** ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನಾ ಪರಿಷತ್ತನ್ನು 1942ರಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯ ಸಲುವಾಗಿ ಸ್ಥಾಪಿಸಲಾಯಿತು. ಇದೊಂದು ಸ್ವಾಯತ್ತ ಸಂಸ್ಥೆಯಾಗಿದ್ದು ಪ್ರಧಾನಮಂತ್ರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಮಹಾನಿರ್ದೇಶಕರೊಬ್ಬರು ಪರಿಷತ್ತಿನ ಕಾರ್ಯಭಾರವನ್ನು ನೋಡಿಕೊಳ್ಳಲು ನೇಮಕಗೊಂಡಿರುತ್ತಾರೆ. "ಆರ್ಥಿಕ ಪರಿಸರೀಯ ಮತ್ತು ಸಾಮಾಜಿಕ ಲಾಭಗಳನ್ನು ಪೂರ್ಣರೀತಿಯಲ್ಲಿ ಭಾರತದ ಪ್ರಜೆಗಳಿಗೆ ತಲುಪಿಸುವಂತಹ ವೈಜ್ಞಾನಿಕ, ಔದ್ಯೋಗಿಕ

Digitised by Bharatavani, CIIL

ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುವುದು" ಇದು ಸಂಸ್ಥೆಯ ಧ್ಯೇಯವಾಕ್ಯವಾಗಿದೆ.

ದೇಶದ ಅತಿದೊಡ್ಡ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯಾದ ಇದು ಸುಮಾರು 39 ಪ್ರಯೋಗಾಲಯಗಳನ್ನು 50 ಕ್ಷೇತ್ರ ಠಾಣೆ (Field station) ಗಳನ್ನು ತನ್ನ ನಿಯಂತ್ರಣದಲ್ಲಿ ಹೊಂದಿದೆ. ಉದಾಹರಣೆಗೆ ಮೈಸೂರಿನ ಸಿ.ಎಫ್.ಟಿ.ಆರ್.ಐ., ಸಿ.ಎಸ್.ಡಿ.ಆರ್.ನ ಅಡಿಯಲ್ಲಿ ಬರುವ ಪ್ರಯೋಗಾಲಯ, ಹೀಗೆ ದೇಶದ ವಿವಿಧೆಡೆಗಳಲ್ಲಿ ಇಂತಹ ಸಂಶೋಧನಾ ಪ್ರಯೋಗಾಲಯಗಳು ಹರಡಿವೆ. ವಿಜ್ಞಾನದ ಬೇರೆ ಬೇರೆ ಕ್ಷೇತ್ರಗಳು ಅಂದರೆ ಜೈವಿಕ, ರಾಸಾಯನಿಕ, ತಾಂತ್ರಿಕ, ಭೌತಿಕ ಮಾಹಿತಿ ಮುಂತಾದ ವಿಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಸಿ.ಎಸ್.ಡಿ.ಆರ್.ನ ಪ್ರಯೋಗಾಲಯಗಳಿವೆ. ಮಾನವ ಸಂಪನ್ಮೂಲಕ್ಕೆ ಸಂಬಂಧಿಸಿದಂತೆಯೂ ಇದರ ಅಂಗ ಸಂಸ್ಥೆಗಳಿವೆ. ಬೆಂಗಳೂರಿನ ನ್ಯಾಷನಲ್ ಏರೋಸ್ಪೇಸ್ ಲಿಮಿಟೆಡ್ (NAL) ಆಕಾಶಯಾನ ವಿಜ್ಞಾನ ಕ್ಷೇತ್ರದಲ್ಲಿ ಮಹತ್ವಪೂರ್ಣ ಸಂಶೋಧನೆಗಳನ್ನು ನಡೆಸುತ್ತಿರುವ ಮತ್ತೊಂದು ಸಿ.ಎಸ್.ಐ.ಆರ್.ನ ಪ್ರಯೋಗಾಲಯ.

ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನಾ ಪಥದಲ್ಲಿ ಸಂಚರಿಸುತ್ತಾ ಹೊರ ದೇಶಗಳೊಡನೆ ಕರಾರುಗಳಿಗೆ ಸಹಿಮಾಡಿ ತನ್ನ ಸಂಶೋಧನಾ ಕ್ಷೇತ್ರವನ್ನು ವಿಸ್ತರಿಸುವಲ್ಲಿ, ವಿಕಾಸಗೊಳಿಸುವಲ್ಲಿ ಪರಿಷತ್ತು ಉದ್ಯುಕ್ತವಾಗಿದೆ. ಇದರ ಸಂಪನ್ಮೂಲದ ಅಡಿಪಾಯ, ಮೂಲಸಾಮರ್ಥ್ಯ ಬಹುಶಃ ವಿಜ್ಞಾನದ ಸಮಸ್ತ ಕ್ಷೇತ್ರಗಳಲ್ಲೂ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಈ ಪರಿಷತ್ತಿನ ಕೇಂದ್ರ ಕಛೇರಿ ನವದೆಹಲಿಯಲ್ಲಿದೆ.

**ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಹಾಗೂ ಆಡಳಿತ ವಿಶ್ವವಿದ್ಯಾನಿಲಯ (ನ್ಯಾಷನಲ್ ಯೂನಿವರ್ಸಿಟಿ ಆಫ್ ಎಜುಕೇಷನಲ್ ಪ್ಲಾನಿಂಗ್ ಆಂಡ್ ರಿಸರ್ಚ್ NUEPA), ನವದೆಹಲಿ:** ದಕ್ಷಿಣ ಏಷ್ಯಾದಲ್ಲಿ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವುದಕ್ಕಾಗಿ 1960–61ರ ವೇಳೆಯಲ್ಲಿ ಯುನೆಸ್ಕೊ ಭಾರತದಲ್ಲಿ ಶೈಕ್ಷಣಿಕ ಯೋಜಕರು ಹಾಗೂ ಆಡಳಿತಗಾರರಿಗೆಂದು ಒಂದು ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಿತು. ನಂತರ 1965 ಇದು "ಏಷ್ಯಾ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆ" ಎಂಬ ಹೆಸರನ್ನು ಪಡೆಯಿತು. ನಾಲ್ಕು ವರ್ಷಗಳ ನಂತರ ಈ ಸಂಸ್ಥೆಯನ್ನು ಭಾರತ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು "ಶೈಕ್ಷಣಿಕ ಯೋಜಕರ ಹಾಗೂ ಆಡಳಿತಗಾರರ ರಾಷ್ಟ್ರೀಯ ಸಿಬ್ಬಂದಿ ಕಾಲೇಜು" ಎಂದು ಪುನರ್ನಾಮಕರಣ ಮಾಡಿತು. ಸಾಮರ್ಥ್ಯ ನಿರ್ಮಾಣ, ಸಂಶೋಧನೆ ಮತ್ತು ಸರ್ಕಾರಗಳಿಗೆ ವೃತ್ತಿಪರ ನೆರವು ಮುಂತಾದ ಕಾರ್ಯಗಳಿಂದಾಗಿ ಸಂಸ್ಥೆಯ ಜವಾಬ್ದಾರಿಗಳು ಹೆಚ್ಚಿತಾದ್ದರಿಂದ 1979ರಲ್ಲಿ ಪುನಃ "ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಹಾಗೂ ಆಡಳಿತ ಸಂಸ್ಥೆ" ಎಂದು ಹೆಸರಿಸಲಾಯಿತು. ಸಂಸ್ಥೆಯ ಹಲವು ದಶಕಗಳ ಪುರೋಗಾಮಿ ಕಾರ್ಯಗಳ ಹಾಗೂ ಇನ್ನಿತರ ಸಾಧನೆಗಳನ್ನು ಕಂಡು ಭಾರತ ಸರ್ಕಾರ ಈ ಸಂಸ್ಥೆಗೆ ಆಗಸ್ಟ್ 2006ರಲ್ಲಿ "ಡೀಮ್ಡ್" ವಿಶ್ವವಿದ್ಯಾಲಯದ ಸ್ಥಾನಮಾನಗಳನ್ನು ನೀಡಿತು. ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆಯಡಿ ಬರುವ ಈ ಸಂಸ್ಥೆ ಭಾರತದಲ್ಲಷ್ಟೇ ಅಲ್ಲದೆ ದಕ್ಷಿಣ ಏಷ್ಯಾದಲ್ಲೇ ಶೈಕ್ಷಣಿಕ ಕ್ಷೇತ್ರದಲ್ಲಿ ಆಡಳಿತಾತ್ಮಕ ಹಾಗೂ ಯೋಜನಾತ್ಮಕ ಸಂಶೋಧನೆಗಳನ್ನು ಕೈಗೊಳ್ಳುವಲ್ಲಿ ಅಗ್ರಸ್ಥಾನವನ್ನು ವಹಿಸಿದೆ.

ಸಂಸ್ಥೆಯ ಕೆಲವು ಮುಖ್ಯ ಉದ್ದೇಶಗಳು ಇಂತಿವೆ: ಶಿಕ್ಷಣ ಸಂಸ್ಥೆಗಳು ಹಾಗೂ ಇನ್ನಿತರ ಸಂಸ್ಥೆಗಳಿಗೆ ಶೈಕ್ಷಣಿಕ ಹಾಗೂ ವೃತ್ತಿಪರ ಮಾರ್ಗದರ್ಶನವನ್ನು ನೀಡುವುದು. ಎಂ.ಫಿಲ್., ಪಿಎಚ್.ಡಿ. ಮುಂತಾದ ಪದವಿಗಳನ್ನು ಶೈಕ್ಷಣಿಕ ಯೋಜನೆ, ಶೈಕ್ಷಣಿಕ ಆಡಳಿತ ಹಾಗೂ ಅದರ ಅರ್ಥವ್ಯವಸ್ಥೆ, ಶಾಲಾ ಶಿಕ್ಷಣ, ಉನ್ನತಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ನೀಡುವುದು. ಸಂಶೋಧನೆ, ತರಬೇತಿ ಮುಂತಾದುವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪ್ರಚುರಪಡಿಸುವುದು, ಪುಸ್ತಕಗಳು ಹಾಗೂ ನಿಯತಕಾಲಿಕೆಗಳ ಪ್ರಕಟಣೆ, ತರಬೇತಿ ಶಿಬಿರ, ಕಾರ್ಯಾಗಾರ, ವಿಚಾರಸಂಕಿರಣ ಮುಂತಾದುವುಗಳನ್ನು ಏರ್ಪಡಿಸುವುದು, ವಿದ್ಯಾರ್ಥಿವೇತನಗಳನ್ನು ಹಾಗೂ ಪುರಸ್ಕಾರಗಳನ್ನು ನೀಡಿ ಶಿಕ್ಷಣ ಕ್ಷೇತ್ರವನ್ನು ಬೆಂಬಲಿಸುವುದು, ಶಿಕ್ಷಣದ ಪ್ರಗತಿಗೆ ಸಂಬಂಧಪಟ್ಟಂತೆ ಅಂಕಿ–ಅಂಶಗಳ ಸಮೀಕ್ಷೆ ನಡೆಸುವುದು.

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಸಂಸ್ಥೆಯ ಸಮಿತಿಗೆ ಮುಖ್ಯಸ್ಥರಾಗಿದ್ದು ಇವರ ಕೆಳಗೆ ಕುಲಪತಿಗಳಿರುತ್ತಾರೆ. ಇವರು ವ್ಯವಸ್ಥಾಪಕ ಮಂಡಳಿಗೆ ಮುಖ್ಯಸ್ಥರಾಗಿದ್ದು ಇವರ ನಿಯಂತ್ರಣದಲ್ಲಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಕಾರ್ಯೋನ್ಮುಖರಾಗುತ್ತಾರೆ.

ಶೈಕ್ಷಣಿಕ ಯೋಜನೆ ಹಾಗೂ ಆಡಳಿತ, ಶೈಕ್ಷಣಿಕ ನೀತಿ, ಶಾಲಾ ಮತ್ತು ಅನೌಪಚಾರಿಕ ಶಿಕ್ಷಣ, ಉನ್ನತ ಹಾಗೂ ವೃತ್ತಿ ಶಿಕ್ಷಣ, ಶೈಕ್ಷಣಿಕ ಹಣಕಾಸು ವ್ಯವಸ್ಥೆ, ತೌಲನಿಕ ಶಿಕ್ಷಣ ಹಾಗೂ ಅಂತಾರಾಷ್ಟ್ರೀಯ ಸಹಕಾರ, ಅಂತರ್ಗತ (inclusive) ಶಿಕ್ಷಣ, ಶೈಕ್ಷಣಿಕ ವ್ಯವಸ್ಥಾಪನ ಮಾಹಿತಿ ವ್ಯವಸ್ಥೆ, ಶಿಕ್ಷಣದ ಮೂಲಾಧಾರಗಳು, ಈ ವಿಷಯಗಳಿಗೆ ಸಂಬಂಧಿಸಿದ ವಿಭಾಗಗಳನ್ನು ನಾವು ಈ ವಿಶ್ವವಿದ್ಯಾಲಯದಲ್ಲಿ ಕಾಣಬಹುದು.

ವಿಶ್ವವಿದ್ಯಾಲಯವು ದೊಡ್ಡ ಗ್ರಂಥಾಲಯವನ್ನು ಹೊಂದಿದ್ದು ಈ ಗ್ರಂಥಾಲಯ ಸುಮಾರು 53,500ಕ್ಕೂ ಹೆಚ್ಚು ಶಿಕ್ಷಣಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಹೊಂದಿದೆ. ಇದಲ್ಲದೆ ಸಿ.ಡಿ., ವೀಡಿಯೋ ಕ್ಯಾಸೆಟ್, ಮೈಕ್ರೋಫಿಲ್ಮ್, ಆಡಿಯೋ ಕ್ಯಾಸೆಟ್‌ಗಳ ರೂಪದಲ್ಲೂ ಮಾಹಿತಿ ಸಂಗ್ರಹವಿದೆ. 250ಕ್ಕೂ ಹೆಚ್ಚು ಶೈಕ್ಷಣಿಕ ನಿಯತಕಾಲಿಕೆಗಳನ್ನು ಗ್ರಂಥಾಲಯವು ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಒದಗಿಸುತ್ತದೆ. ಈ ಸಂಸ್ಥೆ ನವದೆಹಲಿಯ ಶ್ರೀ ಅರಬಿಂದೋ ಮಾರ್ಗ ರಸ್ತೆಯಲ್ಲಿದೆ.

**ಭಾರತೀಯ ಆಯುರ್ವಿಜ್ಞಾನ ಸಂಶೋಧನಾ ಪರಿಷತ್ತು (ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ICMR), ನವದೆಹಲಿ:** ಭಾರತೀಯ ಆಯುರ್ವಿಜ್ಞಾನ ಸಂಶೋಧನಾ ಪರಿಷತ್ತು ಇದರ ಮೂಲ ರೂಪದಲ್ಲಿ ಭಾರತೀಯ ಸಂಶೋಧನಾ ನಿಧಿ ಸಂಸ್ಥೆ ಎಂಬ ಹೆಸರಿನಲ್ಲಿ 1911ರಲ್ಲಿ ಸ್ಥಾಪಿತವಾಯಿತು. ಪ್ರಪಂಚದ ಅತಿ ಹಳೆಯ ವೈದ್ಯಕೀಯ ಸಂಶೋಧನಾ ಸಂಸ್ಥೆಗಳಲ್ಲಿ ಒಂದು ಎಂಬ ಹಿರಿಮೆಗೆ ಇದು ಪಾತ್ರವಾಗಿದೆ. ವೈದ್ಯಕೀಯ ಸಂಶೋಧನೆಗೆ ಒತ್ತನ್ನು ಕೊಡಲು ಸ್ಥಾಪಿತವಾದ ಈ ಸಂಸ್ಥೆ ಸ್ವಾತಂತ್ರ್ಯಾನಂತರ ಹಲವು ಸಾಂಘಿಕ ಬದಲಾವಣೆಗಳನ್ನು ಹೊಂದಿತಲ್ಲದೆ ಅದರ ಚಟುವಟಿಕೆಗಳಲ್ಲೂ ಬದಲಾವಣೆಗಳಾಯಿತು. ಪರಿಣಾಮವಾಗಿ 1949ರಲ್ಲಿ ಇದಕ್ಕೆ ಈಗಿರುವ ಹೆಸರನ್ನು ನೀಡಲಾಯಿತು. ಇಂದು ಅದರ ಕಾರ್ಯಕ್ಷೇತ್ರ ಬಹು ವಿಸ್ತಾರಗೊಂಡಿದೆ. ಪರಿಷತ್ತು ಭಾರತ ಸರ್ಕಾರದ ವೈದ್ಯಕೀಯ ಸಂಶೋಧನಾ ವಿಭಾಗ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಮಂತ್ರಾಲಯದಡಿ ಬರುತ್ತದೆ.

ಸಾಂಕ್ರಾಮಿಕ ರೋಗ ತಡೆಗಟ್ಟುವುದು, ಶಿಶುಆರೋಗ್ಯ, ಪೌಷ್ಠಿಕಾಂಶ ಕೊರತೆ ನಿವಾರಣೆ, ಪರಿಣಾಮಕಾರಿಯಾಗಿ ಆರೋಗ್ಯ ಸೌಲಭ್ಯವನ್ನು ಒದಗಿಸುವುದು, ಪರಿಸರ ಹಾಗೂ ವೃತ್ತಿ ಸ್ಥಳದ ಕಾರಣದಿಂದಾಗುವ ರೋಗಗಳ ನಿವಾರಣೆ ಮುಂತಾದ ರಾಷ್ಟ್ರೀಯ ಆರೋಗ್ಯ ಆದ್ಯತೆಗಳು ಪರಿಷತ್ತಿನ ಗುರಿಯಾಗಿವೆ. ಕ್ಯಾನ್ಸರ್, ಹೃದ್ರೋಗ, ಅಂಧತ್ವ, ಮಧುಮೇಹ ಹಾಗೂ ಇನ್ನಿತರ ರಕ್ತ ಸಂಬಂಧಿ ಖಾಯಿಲೆಗಳು ಮುಂತಾದವುಗಳಿಗೂ ಪರಿಷತ್ತು ಗಮನವನ್ನೀಯುತ್ತಿದೆ. ಮಾನಸಿಕ ಆರೋಗ್ಯ ಮತ್ತು ಔಷಧ

Digitised by Bharatavani, CIIL

ಸಂಶೋಧನಾ ಕ್ಷೇತ್ರಗಳು ಪರಿಷತ್ತಿನ ಸಂಶೋಧನಾ ಪರಿಧಿಯಲ್ಲಿವೆ. ಈ ಎಲ್ಲ ಪ್ರಯತ್ನಗಳು ಸಾರ್ವಜನಿಕರ ಸ್ವಾಸ್ಥ್ಯವನ್ನು ಉತ್ತಮಗೊಳಿಸುವಲ್ಲಿ ಕೇಂದ್ರೀಕೃತವಾಗಿದೆ.

ಪರಿಷತ್ತಿನ ಆಡಳಿತಮಂಡಳಿಗೆ ಕೇಂದ್ರ ಆರೋಗ್ಯ ಸಚಿವರು ಅಧ್ಯಕ್ಷರಾಗಿರುತ್ತಾರೆ. ವೈಜ್ಞಾನಿಕ ಸಲಹಾ ಮಂಡಳಿಯೊಂದು ವಿಜ್ಞಾನ ಮತ್ತು ತಂತ್ರಜ್ಞಾನಗಳ ವಿಷಯಗಳಲ್ಲಿ ಪರಿಷತ್ತಿಗೆ ಸಲಹೆಗಳನ್ನೀಯುತ್ತದೆ. ಪರಿಷತ್ತಿನಲ್ಲಿ ನಡೆಯುವ ಸಂಶೋಧನೆಗಳ ಜತೆಗೆ ಬೇರೆಡೆಯೂ ಸಂಶೋಧನೆಗಳನ್ನು ನಡೆಸಲಾಗುತ್ತದೆ. ಪರಿಷತ್ತಿನ 29 ಕೇಂದ್ರಗಳಲ್ಲಿ ಸಂಶೋಧನಾ ಕಾರ್ಯಗಳು ನಡೆಯುತ್ತಲಿದೆ. ವೈದ್ಯಕೀಯ ಕಾಲೇಜುಗಳು ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿ ಸಂಶೋಧನೆಯನ್ನು ಪರಿಷತ್ತು ಉತ್ತೇಜಿಸುತ್ತಲಿದೆ.

ಸಂಶೋಧನಾ ಕಾರ್ಯದ ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸಲು ಸಂಶೋಧನಾ ವಿದ್ಯಾರ್ಥಿ ವೇತನವನ್ನು ಕೊಡುವ ವ್ಯವಸ್ಥೆಯನ್ನು ಸಹ ಪರಿಷತ್ತು ಹೊಂದಿದೆ.

ತರಬೇತಿ ಶಿಬಿರಗಳು, ಕಾರ್ಯಾಗಾರಗಳು ಪರಿಷತ್ತಿನ ಅಂಗಸಂಸ್ಥೆಗಳಲ್ಲಿ ಹಾಗೂ ಮುಖ್ಯ ಕಾರ್ಯಾಲಯದಲ್ಲಿ ನಡೆಯುತ್ತಲಿರುತ್ತವೆ. ನಿವೃತ್ತಿ ಹೊಂದಿದ ವೈದ್ಯಕೀಯ ವಿಜ್ಞಾನಿಗಳಿಗೆ ಹಾಗೂ ಅಧ್ಯಾಪಕರಿಗೆ "ಎಮಿರಿಟಸ್ ಸೈಂಟಿಸ್ಟ್" ಎಂಬ ಹುದ್ದೆಯನ್ನು ನೀಡಿ ಸಂಶೋಧನೆಯನ್ನು ಮುಂದುವರೆಸಲು ಸಂಸ್ಥೆ ಸಹಕರಿಸುತ್ತದೆ.

ಸಾಂಪ್ರದಾಯಿಕ ವೈದ್ಯಕೀಯ ಕ್ಷೇತ್ರದಲ್ಲೂ ಕೆಲವು ಸಂಶೋಧನೆಗಳನ್ನು ಪರಿಷತ್ತು ಪೂರೈಸಿದೆ. ವೈದ್ಯಕೀಯ ಮಾಹಿತಿ ಮತ್ತು ಸಂಪರ್ಕಕ್ಕೂ ಆದ್ಯತೆಯನ್ನು ನೀಡಲಾಗುತ್ತಿದೆ. ಹೊಸ ಕಾಯಿಲೆಗಳೂ ಮತ್ತು ಹಾಲಿ ಇರುವ ಕಾಯಿಲೆಗಳ ಹೊಸ ಆಯಾಮಗಳಿಗೂ ಪರಿಷತ್ತು ಗಮನವನ್ನೀಯುತ್ತಿದೆ. ಇದರ ಮುಖ್ಯ ಕಾರ್ಯಾಲಯ ನವದೆಹಲಿಯಲ್ಲಿದೆ.

**ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ (ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ TIFR), ಮುಂಬಯಿ:** ಭಾರತ ಸರ್ಕಾರದ ಅಣುಶಕ್ತಿ ಮಂತ್ರಾಲಯದಡಿ ಕೆಲಸಮಾಡುವ ಈ ಸ್ವಾಯತ್ತ ಸಂಸ್ಥೆಯನ್ನು ಜೂನ್ 1945ರಲ್ಲಿ ಶ್ರೀಯುತ ದೋರಬ್ಜಿ ಟಾಟ್ ಟ್ರಸ್ಟ್‌ನ ಸಹಕಾರದಿಂದ ಹೋಮಿ ಜಹಂಗೀರ್ ಭಾಭಾರವರು ಸ್ಥಾಪಿಸಿದರು. ಪ್ರಾರಂಭದಲ್ಲಿ ಇದು ಬೆಂಗಳೂರಿನಲ್ಲಿ ಶುರುವಾದರೂ ನಂತರದ ವರ್ಷಗಳಲ್ಲಿ ಮುಂಬಯಿಗೆ ಸ್ಥಳಾಂತರಗೊಂಡಿತು. ಮುಂಬೈ ವಿಶ್ವವಿದ್ಯಾನಿಲಯಕ್ಕೆ ಸೇರಿದಂತೆ ಕೆಲಸ ಮಾಡುತ್ತಿದ್ದು ಜೂನ್ 2002ರಲ್ಲಿ "ಪರಿಗಣಿತ ವಿಶ್ವವಿದ್ಯಾಲಯದ" (Deemed University) ಸ್ಥಾನಮಾನಗಳನ್ನು ಗಳಿಸಿತು. ಪುಣೆ ಹಾಗೂ ಬೆಂಗಳೂರುಗಳಲ್ಲಿ ಇದರ ಶಾಖೆಗಳಿದ್ದು ಸಂಶೋಧನಾ ಸೌಲಭ್ಯಗಳನ್ನು ದೇಶದ ವಿವಿದೆಡೆಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ.

ಭೌತಶಾಸ್ತ್ರ, ರಸಾಯನಶಾಸ್ತ್ರ ಮುಂತಾದ ಪ್ರಾಕೃತಿಕ ವಿಜ್ಞಾನಗಳು (Natural Sciences) ಗಣಿತಶಾಸ್ತ್ರ, ಕಂಪ್ಯೂಟರ್ ವಿಜ್ಞಾನದ ತಾತ್ವಿಕ ಶಾಖೆ ಇವುಗಳನ್ನು ಕುರಿತ ಅಧ್ಯಯನ ಮತ್ತು ಸಂಶೋಧನೆ ಈ ಸಂಸ್ಥೆಯ ಮುಖ್ಯ ಗುರಿಗಳಾಗಿವೆ.

ಶ್ರೇಷ್ಠ ಸಂಶೋಧನಾ ಸೌಲಭ್ಯಗಳನ್ನು ಈ ಸಂಸ್ಥೆಯಲ್ಲಿ ಕಾಣಬಹುದಾಗಿದೆ. ಲೀನಿಯರ್ ಪಾರ್ಟಿಕಲ್ ಆಕ್ಸಿಲರೇಟರ್, ಪೆಲೆಟ್ರಾನ್‌ನಂತಹ ಅಣುವಿಜ್ಞಾನಕ್ಕೆ ಸಂಬಂಧಿಸಿದ ದುಬಾರಿ ಸೌಲಭ್ಯಗಳಲ್ಲದೆ ಸಂಕೀರ್ಣ ಅಣುಗಳ ಅಧ್ಯಯನಕ್ಕೆ ಅಗತ್ಯವಾದ ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೊನೆನ್ಸ್ ಸೌಲಭ್ಯಗಳು ಸಂಸ್ಥೆಯಲ್ಲಿ ಲಭ್ಯವಿದೆ. ಪುಣೆಯ ನಾರಾಯಣಗಾಂವ್ ಎಂಬಲ್ಲಿ ವಿಶ್ವದಲ್ಲೇ ಅತಿದೊಡ್ಡದಾದ ಮೀಟರ್‌ವೇವ್ ರೇಡಿಯೋ ದೂರದರ್ಶಕವನ್ನು ಸ್ಥಾಪಿಸಲಾಗಿದೆ. ಹೀಗೆ ಅಣುವಿಜ್ಞಾನಕ್ಕೆ ಸಂಬಂಧಿಸಿದಂತೆ ಶ್ರೇಷ್ಠ ಸೌಲಭ್ಯಗಳನ್ನು ಹೊಂದಿರುವ ಸಂಸ್ಥೆ ಇದಾಗಿದೆ. ವೈಜ್ಞಾನಿಕ ಮಾಹಿತಿ ಸಂಪನ್ಮೂಲ ಕೇಂದ್ರವು ವಿಜ್ಞಾನಿಗಳಿಗೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುತ್ತದೆ.

1956ರಲ್ಲಿ ಸಂಸ್ಥೆಯು ಕಂಪ್ಯೂಟರನ್ನು ತಯಾರಿಸಿ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಕಂಪ್ಯೂಟರನ್ನು ವಿನ್ಯಾಸಗೊಳಿಸಿ ತಯಾರಿಸಿದ ದೇಶೀಯ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

**ಭಾರತೀಯ ತಾತ್ವಿಕ ಸಂಶೋಧನಾ ಪರಿಷತ್ತು (ಇಂಡಿಯನ್ ಕೌನ್ಸಿಲ್ ಆಫ್ ಫಿಲಸಾಫಿಕಲ್ ರಿಸರ್ಚ್ ICPR), ನವದೆಹಲಿ:** ಭಾರತೀಯ ತತ್ವಶಾಸ್ತ್ರ ಸಂಪ್ರದಾಯದ ಮುಂಚಿನ ಮಹಿಮೆಯನ್ನು ಹೊರಗೆಡಹಲು ಮತ್ತು ನವೀನ ಚಿಂತನೆಗಳನ್ನು ಪೋಷಿಸಿ ಪ್ರೋತ್ಸಾಹಿಸಲು 1977ರಲ್ಲಿ ಭಾರತ ಸರ್ಕಾರದ ಶಿಕ್ಷಣ ಖಾತೆಯು ಈ ಪರಿಷತ್ತನ್ನು ದೆಹಲಿಯಲ್ಲಿ ಸ್ಥಾಪಿಸಿತು. ತತ್ವಶಾಸ್ತ್ರವು ನಮ್ಮ ದೇಶದಲ್ಲಿ ವಿಶೇಷ ಸ್ಥಾನವನ್ನು ಹೊಂದಿದ್ದು ಸಾವಿರಾರು ವರ್ಷಗಳಿಂದ ಭಾರತೀಯ ಜನಮಾನಸದಲ್ಲಿ ವಿಶೇಷವಾಗಿ ಮನೆಮಾಡಿದೆ. ಅಷ್ಟೇ ಅಲ್ಲದೆ ನಿತ್ಯಜೀವನಕ್ಕೆ ಅಳವಡಿಸಿಕೊಳ್ಳುವಂತಹುದು ಆಗಿದೆ. ಈ ಎಲ್ಲಾ ಕಾರಣಗಳಿಂದ ಸರ್ಕಾರವು ಇದರ ಸ್ಥಾಪನೆಗೆ ಮುಂದಾಯಿತು. ಪರಿಷತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಅನುದಾನಿತವಾಗಿದೆ.

ಪರಿಷತ್ತಿನ ಕೆಲವು ಮುಖ್ಯ ಉದ್ದೇಶಗಳು ಹೀಗಿವೆ:

- ತತ್ವಶಾಸ್ತ್ರ ಸಂಶೋಧನೆಯಲ್ಲಿ ಶ್ರೇಷ್ಠತೆ, ಕ್ರಿಯಾಶೀಲತೆ ಹಾಗೂ ನವೀನತೆಯನ್ನು ತರುವುದು.
- ದೇಶೀಯ ಅಂತರ್‌ಶಾಸ್ತ್ರ ಸಂಶೋಧನೆ (Inter-disciplinary Research) ಹಾಗೂ ಅಂತರ್‌ಸಾಂಸ್ಕೃತಿಕ (Cross-cultural) ಅಧ್ಯಯನಗಳನ್ನು ಪ್ರೋತ್ಸಾಹಿಸುವುದು.
- ಪ್ರತಿಭಾಶಾಲಿ ವಿದ್ಯಾರ್ಥಿಗಳು ತತ್ವಶಾಸ್ತ್ರ ಬೋಧನೆಯೆಡೆಗೆ ಬರುವಂತೆ ಮಾಡಲು ತತ್ವಶಾಸ್ತ್ರ ಬೋಧನೆಯನ್ನು ಪ್ರೋತ್ಸಾಹಿಸುವುದು.
- ತತ್ವಶಾಸ್ತ್ರ ಸಂಶೋಧನೆಗೆ ಸಂಬಂಧಿಸಿದ ಪ್ರಾಯೋಜನೆಗಳು ಹಾಗೂ ಕಾರ್ಯಕ್ರಮಗಳಿಗೆ ಸಹಕಾರ ನೀಡುವುದು.
- ತತ್ವಶಾಸ್ತ್ರ ಸಂಶೋಧನೆಯಲ್ಲಿ ತೊಡಗಿರುವ ಸಂಸ್ಥೆಗಳಿಗೆ ಧನ ಸಹಾಯ ಒದಗಿಸುವುದು.
- ತತ್ವಶಾಸ್ತ್ರ ಸಂಶೋಧನೆಗೆ ಸಂಬಂಧಿಸಿದ ನಿಯತಕಾಲಿಕೆಗಳು, ಪತ್ರಿಕೆಗಳು ಹಾಗೂ ಇನ್ನಿತರ ಪ್ರಕಟಣೆಗಳಿಗೆ ಅನುದಾನ ನೀಡುವುದು.
- ತತ್ವಶಾಸ್ತ್ರ ಸಂಶೋಧನೆ, ಬೋಧನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರಕ್ಕೆ ಸಲಹೆ ನೀಡುವುದು.

ಪರಿಷತ್ತಿನಿಂದ ತತ್ವಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಜೊತೆಗೆ ನಿಯತಕಾಲಿಕೆಯು ಸಹ ಪರಿಷತ್ತಿನಿಂದ ಪ್ರಕಟಗೊಳ್ಳುತ್ತಿದೆ. ವಿದ್ಯಾರ್ಥಿವೇತನವನ್ನು ಕೊಡುವುದು, ಕಾರ್ಯಾಗಾರಗಳು, ನಿಯತಕಾಲದ ಉಪನ್ಯಾಸಗಳು, ರಾಷ್ಟ್ರೀಯ ಉಪನ್ಯಾಸಗಳು, ಪ್ರಾಯೋಜನೆಗಳು, ರಿಫ್ರೆಷರ್‌ಕೋರ್ಸ್‌ಗಳು, ಸೆಮಿನಾರ್‌ಗಳು, ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು ಇತ್ಯಾದಿಗಳು ಪರಿಷತ್ತಿನ ಶೈಕ್ಷಣಿಕ ಚಟುವಟಿಕೆಗಳಾಗಿವೆ. ಧರ್ಮವು ಭಾರತೀಯರಿಗೆ

Digitised by Bharatavani, CIIL

ರಕ್ತಗತವಾಗಿ ಬಂದಿರುವುದರಿಂದ ಧರ್ಮದ ತಾತ್ವಿಕ ಭಾಗವಾದ ತತ್ವಶಾಸ್ತ್ರಕ್ಕೆ ಮೀಸಲಾಗಿರುವ ಈ ಸಂಸ್ಥೆಯ ಅಸ್ತಿತ್ವದಿಂದ ಸರ್ಕಾರವು ತನ್ನ ಕರ್ತವ್ಯವನ್ನು ಪಾಲಿಸಿದಂತೆ ಆಗಿದೆ.

**ಪ್ರಾಚ್ಯ ಸಂಶೋಧನಾ ಸಂಸ್ಥೆ (ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್), ಮೈಸೂರು:** ಸಂಸ್ಕೃತ ಹಾಗೂ ಕನ್ನಡ ಭಾಷೆಗಳ ಪುರಾತನ ಕರಡು ಪ್ರತಿಗಳ ಸಂಗ್ರಹ, ಸಂಪಾದನೆ, ಪ್ರದರ್ಶನ ಮತ್ತು ಪ್ರಕಾಶನ– ಈ ಉದ್ದೇಶವನ್ನು ಹೊಂದಿರುವ ಪ್ರಾಚ್ಯ ಸಂಶೋಧನಾ ಸಂಸ್ಥೆ. ಮೈಸೂರಿನಲ್ಲಿ ಸ್ಥಿತವಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದ ನೇತೃತ್ವದಲ್ಲಿ ಕೆಲಸ ಮಾಡುತ್ತಿದೆ. ಮೈಸೂರು ಮಹಾರಾಜರಾಗಿದ್ದ ಚಾಮರಾಜ ಒಡೆಯರ್‌ರವರು 1891ರಲ್ಲಿ ಇದನ್ನು ಪ್ರಾಚ್ಯ ಗ್ರಂಥಾಲಯವೆಂಬ ಹೆಸರಿನಲ್ಲಿ ಪ್ರಾರಂಭಿಸಿದರು. 1887ರಲ್ಲಿ ವಿಕ್ಟೋರಿಯ ರಾಣಿಯ ಸಿಂಹಾಸನಾರೋಹಣದ ಸಂದರ್ಭದಲ್ಲಿ ನಿರ್ಮಿಸಲಾದ ಶತಮಾನೋತ್ಸವ ಭವನ (ಜೂಬ್ಲಿ ಹಾಲ್)ದಲ್ಲಿ ಇದನ್ನು ಆರಂಭಿಸಲಾಯಿತು. 1916ರವರೆಗೆ ಇದು ಸಾರ್ವಜನಿಕ ಶಿಕ್ಷಣ ಇಲಾಖೆಯಡಿಯಲ್ಲಿದ್ದು ನಂತರ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಸೇರಿತು. ಇದನ್ನು 1943ರಲ್ಲಿ ಪ್ರಾಚ್ಯ ಸಂಶೋಧನಾ ಸಂಸ್ಥೆ ಎಂದು ಪುನರ್ನಾಮಕರಣ ಮಾಡಲಾಯಿತು.

ಇದುವರೆಗೆ ಸಂಸ್ಥೆ ಸುಮಾರು ಇನ್ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತಂದಿದೆ. "ಎನ್ಸೈಕ್ಲೋಪೀಡಿಯ ಆಫ್ ರಿಲಿಜನ್ ಆ್ಯಂಡ್ ಎಥಿಕ್ಸ್" ರಾಮಾಯಣ, ಮಹಾಭಾರತಗಳ ಕೆಲವು ಅಮೂಲ್ಯ ಪರಿಷ್ಕರಣಗಳು ಹಾಗೂ ಇನ್ನೂ ಹಲವು ಅಮೂಲ್ಯ ಪುರಾತನ ಗ್ರಂಥಗಳು ಇಲ್ಲಿ ಸಂಗ್ರಹಿತವಾಗಿವೆ. ತಾಳೆಗರಿಯಲ್ಲಿ ಬರೆದಿರುವ ಕೌಟಿಲ್ಯನ ಅರ್ಥಶಾಸ್ತ್ರ ಸಹ ಇಲ್ಲಿ ನಮಗೆ ಲಭ್ಯವಿದೆ. ಕ್ರಿ.ಪೂ. 4ನೇ ಶತಮಾನದಲ್ಲಿ ಬರೆದಿರುವ ಈ ಗ್ರಂಥವನ್ನು ಪ್ರಸಿದ್ಧ ವಿದ್ವಾಂಸರೂ, ಸಂಶೋಧಕರೂ ಆದ ಡಾ॥ ಆರ್. ಶಾಮಾಶಾಸ್ತ್ರಿಗಳು ಪರಿಷ್ಕೃತಗೊಳಿಸಿ ಪ್ರಕಟಿಸಿದರು. ಇದರಿಂದ ಸಂಸ್ಥೆಗೆ ಅಂತಾರಾಷ್ಟ್ರೀಯ ಖ್ಯಾತಿ ಲಭಿಸಿತು. ಎ.ಆರ್. ಕೃಷ್ಣಶಾಸ್ತ್ರಿಗಳು ಸಹ ಈ ಸಂಸ್ಥೆಯಲ್ಲಿ ಹಲವು ಸಂಶೋಧನೆಗಳನ್ನು ಕೈಗೊಂಡರು. ಸಂಸ್ಥೆಯು 33,000 ತಾಳೇಗರಿ ಗ್ರಂಥಗಳನ್ನು ಹೊಂದಿದೆ. ಈ ಪುರಾತನ ಕೃತಿಗಳ ಸಂರಕ್ಷಣೆಯನ್ನು ಆಧುನಿಕ ವಿಧಾನಗಳಿಂದ ಮಾಡಲಾಗುತ್ತಿದೆ. ತಾಳೆಗರಿಯ ಮೂಲ ಕರಡುಪ್ರತಿಗಳು ಆಸಕ್ತ ಸಂಶೋಧಕರಿಗೆ ಸಂಸ್ಥೆಯಲ್ಲಿ ಲಭ್ಯವಿದೆ.

**ಭಂಡಾರ್‌ಕರ್ ಪ್ರಾಚ್ಯ ಸಂಶೋಧನಾ ಸಂಸ್ಥೆ (ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) ಪುಣೆ:** ಭಾರತದಲ್ಲಿ ಪ್ರಾಚ್ಯ ಸಂಶೋಧನೆಯ ಕ್ಷೇತ್ರದಲ್ಲಿ ಕೆಲಸ ಮಾಡಿದವರಲ್ಲಿ ಮೊದಲಿಗರಾದ ರಾಮಕೃಷ್ಣ ಗೋಪಾಲ ಭಂಡಾರ್‌ಕರ್ ಅವರ ಕಾರ್ಯ ಹಾಗೂ ಹೆಸರಿನ ಸ್ಮರಣಾರ್ಥವಾಗಿ ಜುಲೈ 6, 1917ರಲ್ಲಿ ಭಂಡಾರ್‌ಕರ್ ಪ್ರಾಚ್ಯ ಸಂಶೋಧನಾ ಸಂಸ್ಥೆಯನ್ನು ಪುಣೆಯಲ್ಲಿ ಸ್ಥಾಪಿಸಲಾಯಿತು. ಸಾರ್ವಜನಿಕ ಸಂಸ್ಥೆಯಾಗಿರುವ ಇದಕ್ಕೆ ಮಹಾರಾಷ್ಟ್ರ ಸರ್ಕಾರದಿಂದ ವಾರ್ಷಿಕ ಅನುದಾನ ಲಭ್ಯವಾಗುತ್ತಿದೆ. ನಿರ್ದಿಷ್ಟ ಪ್ರಾಯೋಜನೆಗಳನ್ನು ಕೈಗೊಳ್ಳಲು ಭಾರತಸರ್ಕಾರ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದಿಂದಲೂ ಅನುದಾನವನ್ನು ನೀಡಲಾಗುತ್ತಿದೆ.

ದೇಶೀಯ ವಿದ್ವತ್ತು, ಸಂಸ್ಕೃತಿ (Indigenious lore) ಗಳ ಅಧ್ಯಯನವಾದ ಪ್ರಾಚ್ಯವಿಜ್ಞಾನ (Orientology) ಕ್ಷೇತ್ರದಲ್ಲಿ ತನ್ನ ಸಂಶೋಧನಾ ಚಟುವಟಿಕೆಗಳನ್ನು ನಡೆಸುತ್ತಿದೆ. ಪೌರ್ವಾತ್ಯ ದೇಶಗಳಲ್ಲಿ, ಅದರಲ್ಲೂ ಭಾರತದಲ್ಲಿ, ಸಾವಿರಾರು ವರ್ಷಗಳಿಂದ ನಮ್ಮ ಪೂರ್ವಜರು ಸಂಪಾದಿಸಿದ್ದ ಜ್ಞಾನವನ್ನು ಕುರಿತ ಅರಿವನ್ನು ವಿಶ್ವಕ್ಕೆ ನೀಡುವ ಉದ್ದೇಶವನ್ನು ಈ ಸಂಸ್ಥೆ ಹೊಂದಿದೆ.

ಈ ಸಂಸ್ಥೆ ಪುರಾತನ ಸಂಸ್ಕೃತ ಹಾಗೂ ಪಾಳಿ ಭಾಷೆಯಲ್ಲಿರುವ ಕರಡು ಪ್ರತಿಗಳ ಸಂಗ್ರಹಕ್ಕೆ ಹೆಸರುವಾಸಿಯಾಗಿದೆ. ತೊಂಬತ್ತು ವರ್ಷಗಳ ಅವಧಿಯಲ್ಲಿ 1,25,000 ಪುಸ್ತಕಗಳು ಮತ್ತು 28,000ಕ್ಕೂ ಹೆಚ್ಚು ಕರಡು ಪ್ರತಿಗಳ ಸಂಗ್ರಹಿಸಿ ಅವುಗಳ ರಕ್ಷಣೆಯ ಜವಾಬ್ದಾರಿಯನ್ನು ಈ ಸಂಸ್ಥೆ ವಹಿಸಿಕೊಂಡಿದೆ. ಪ್ರಾಚ್ಯ ವಿಜ್ಞಾನದ ಎಲ್ಲಾ ಆಯಾಮಗಳಿಗೆ ಸಂಬಂಧಿಸಿದ ಗ್ರಂಥಗಳು ಇಲ್ಲಿ ದೊರಕುತ್ತವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಂಸ್ಕೃತ, ಪ್ರಾಕೃತ, ಭಾರತ ಪ್ರಾಂತೀಯ ಭಾಷೆಗಳು, ಐರೋಪ್ಯ ಭಾಷೆಗಳು ಮೊದಲಾದ ಹತ್ತು ಹಲವು ಭಾಷೆಗಳ ಅಗಣ್ಯ ಕರಡುಪ್ರತಿಗಳ ಸಂಗ್ರಹ ಇಲ್ಲಿ ದೊರಕುತ್ತದೆ.

ಅತ್ಯಾಧುನಿಕ ಹಾಗೂ ಶ್ರೇಷ್ಠ ಗುಣಮಟ್ಟದ ಪ್ರಾಚ್ಯ ಗ್ರಂಥಾಲಯದ ಸೌಲಭ್ಯವನ್ನು ಆಸಕ್ತ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಒದಗಿಸಿಕೊಡುವ ಗುರಿಯನ್ನು ಈ ಸಂಸ್ಥೆ ಹೊಂದಿದೆ. ಸ್ನಾತಕೋತ್ತರ ಪದವಿ ತರಗತಿಗಳನ್ನು ನಡೆಸುವುದು, ಉಪನ್ಯಾಸಗಳನ್ನು ಏರ್ಪಡಿಸುವುದು, ಗ್ರಂಥಗಳನ್ನು ಪ್ರಕಟಿಸುವುದು ಇತ್ಯಾದಿ. ಚಟುವಟಿಕೆಗಳ ಮೂಲಕ ಅರ್ಹ ವಿದ್ಯಾರ್ಥಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಶೋಧನೆಯನ್ನು ಕೈಗೊಳ್ಳುವಂತೆ ಮಾಡುವ ಗುರಿಯನ್ನು ಸಹ ಹೊಂದಿದೆ.

ಪ್ರಾಚ್ಯ ವಿಜ್ಞಾನದ ವಿದ್ಯಾರ್ಥಿಗಳಿಗೆ ಸಹಕರಿಸುವುದು, ಪ್ರಾಚ್ಯ ಸಂಶೋಧನೆಯ ಗುಣಮಟ್ಟವನ್ನು ಹೆಚ್ಚಿಸುವುದು ಮುಂಬರುವ ಪೀಳಿಗೆಗಳ ಉಪಯೋಗ ಹಾಗೂ ಅರಿವಿಗಾಗಿ ಪುರಾತನ ಪ್ರಾಚ್ಯ ಜ್ಞಾನವನ್ನು ಸಂರಕ್ಷಿಸುವುದು – ಈ ಮೂರು ಉದ್ದೇಶ ಪಾಲನೆ ಸಂಸ್ಥೆಯ ಜೀವಿತೋದ್ದೇಶವಾಗಿದೆ.

ಮಹಾಭಾರತದ ಪರಿಷ್ಕೃತ ಮುದ್ರಣವನ್ನು ಹೊರತರುವ ದೀರ್ಘಾವಧಿ ಯೋಜನೆಯೊಂದನ್ನು 1919ರಲ್ಲಿ ಪ್ರಾರಂಭಿಸಿ ಸುಮಾರು 1,259 ಕರಡು ಪ್ರತಿಗಳನ್ನು ವಿಶದವಾಗಿ ಪರಿಶೀಲಿಸಿ 1966ರಲ್ಲಿ 19 ಸಂಪುಟಗಳಲ್ಲಿ ಈ ಮಹಾಕಾವ್ಯವನ್ನು ಪ್ರಕಟಿಸಿತು. ಇದಲ್ಲದೆ ಮಹಾಭಾರತದ ಖಿಲಭಾಗವೆಂದು ಹೇಳಲಾಗುವ ಹರಿವಂಶದ ಪರಿಷ್ಕೃತ ಸಂಪುಟವನ್ನು ಸಂಸ್ಥೆ ಪ್ರಕಟಿಸಿದೆ

**ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (ಐ.ಐ.ಎಸ್‌ಸಿ):** ಹತ್ತೊಂಬತ್ತನೇ ಶತಮಾನದ ಅಂತ್ಯ ಭಾಗದಲ್ಲಿ ಕೈಗಾರಿಕೋದ್ಯಮಿ ಜೆಮ್‌ಷೆಡ್‌ಜಿ ಟಾಟಾರವರು ಒಂದು ಸಂಶೋಧನಾ ಸಂಸ್ಥೆಯನ್ನು ಭಾರತದಲ್ಲಿ ಸ್ಥಾಪಿಸಬೇಕೆಂದುಕೊಂಡರು. ಇದರ ಫಲವಾಗಿ ಟಾಟಾ ಸಂಶೋಧನಾ ಸಂಸ್ಥೆ ಬೆಂಗಳೂರಿನಲ್ಲಿ 1909, ಮೆ 27ರಂದು ಸ್ಥಾಪಿತಗೊಂಡಿತು. ಸಂಶೋಧನೆ ಮತ್ತು ಉನ್ನತ ಶಿಕ್ಷಣವನ್ನು ಗುರಿಯಾಗಿಟ್ಟುಕೊಂಡು ಸಂಸ್ಥೆ ಕಾರ್ಯೋನ್ಮುಖವಾಯಿತು. ಸಂಸ್ಥೆಯ ಪ್ರಥಮ ನಿರ್ದೇಶಕ ಎಂ.ಡಬ್ಲ್ಯು. ಟ್ರಾವರ್ಸ್ (1909–1914) ನಂತರದ ಇಬ್ಬರು ನಿರ್ದೇಶಕರು ವಿ.ಜಿ. ಬೌರ್ನ್ ಮತ್ತು ಎಂ.ಒ. ಫಾರೆಸ್ಟರ್, ನೊಬೆಲ್ ಪ್ರಶಸ್ತಿ ವಿಜೇತ ಸಿ.ವಿ. ರಾಮನ್ ಸಂಸ್ಥೆಯ ನಾಲ್ಕನೇ ನಿರ್ದೇಶಕರಾಗಿ (1933–1937) ಕಾರ್ಯ ನಿರ್ವಹಿಸಿದರು.

ಈ ಸಂಶೋಧನಾ ಸಂಸ್ಥೆಯು ಸುಮಾರು 400 ಎಕರೆಯಷ್ಟು ವಿಶಾಲವಾದ ಪ್ರದೇಶದಲ್ಲಿ ನೆಲೆಗೊಂಡಿದೆ. ಸಾಮಾನ್ಯ ಹಾಗೂ ಪ್ರಾಯೋಗಿಕ ರಸಾಯನಶಾಸ್ತ್ರ ಮತ್ತು ಎಲೆಕ್ಟ್ರೋಟೆಕ್ನಾಲಜಿ– ಈ ಎರಡು ವಿಭಾಗಗಳೊಂದಿಗೆ ಪ್ರಾರಂಭವಾದ ಸಂಸ್ಥೆ ಇಂದು ನಲ್ವತ್ತಕ್ಕೂ ಹೆಚ್ಚು ವಿಭಾಗಗಳನ್ನು ಹೊಂದಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ಶಾಖೆಗಳಲ್ಲಿ ಸಂಶೋಧನೆಯನ್ನು ಇಲ್ಲಿ ಕೈಗೊಳ್ಳಲಾಗುತ್ತದೆ. ಭೂ ಹಾಗೂ ಪರಿಸರ ವಿಜ್ಞಾನ, ಜೈವಿಕ ವಿಜ್ಞಾನ ಈ ಕ್ಷೇತ್ರಗಳಲ್ಲೂ ಸಂಶೋಧನೆ

Digitised by Bharatavani, CIIL

ನಡೆಯುತ್ತದೆ. ಪದವಿ ಹಾಗೂ ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ. ಪದವಿಗಳನ್ನು ಸಂಸ್ಥೆಯು ನೀಡುತ್ತದೆ. 1956ರಲ್ಲಿ ಈ ಸಂಸ್ಥೆಯು ಪರಿಗಣಿತ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಪಡೆಯಿತು.

ಸಿ.ಎನ್.ಆರ್. ರಾವ್, ಜಿ. ಪದ್ಮನಾಭನ್, ಎಸ್. ಭಗವಂತಂ, ಎಸ್. ಧವನ್ ಮುಂತಾದ ಪ್ರಖ್ಯಾತ ವಿಜ್ಞಾನಿಗಳು ಈ ಸಂಸ್ಥೆಯನ್ನು ಮುನ್ನಡೆಸಿ ಇಂದು ಈ ಸಂಸ್ಥೆ ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆ ಎಂದೆನಿಸಿಕೊಳ್ಳಲು ಕಾರಣರಾಗಿದ್ದಾರೆ.

1970ರಲ್ಲಿ ಸಂಸ್ಥೆಯಲ್ಲಿ ಸ್ಥಾಪಿತವಾದ ಕಂಪ್ಯೂಟರ್ ಕೇಂದ್ರ 1990ರಲ್ಲಿ ಸೂಪರ್ ಕಂಪ್ಯೂಟರ್ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರವಾಗಿ ಪರಿವರ್ತಿತಗೊಂಡಿತು. ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆ ಅಗತ್ಯವಿರುವ ಉನ್ನತ ಮಟ್ಟದ ಕಂಪ್ಯೂಟರ್ ತಂತ್ರಜ್ಞಾನ ಸೌಲಭ್ಯವನ್ನು ಈ ಕೇಂದ್ರ ಒದಗಿಸಿಕೊಡುತ್ತದೆ.

ಈ ಸಂಶೋಧನಾ ಸಂಸ್ಥೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳೊಡನೆ ಜೊತೆಗೂಡಿ ಕೆಲಸಮಾಡುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಹೆಚ್ಚಿನ ಲಾಭವಾಗುತ್ತದೆಯಲ್ಲದೆ ಜ್ಞಾನದ ವಿನಿಮಯವೂ ಸಾಧ್ಯವಾಗುತ್ತದೆ. ಇಲ್ಲಿನ ಕೆಲವು ಪ್ರಮುಖ ಹಳೆಯ ವಿದ್ಯಾರ್ಥಿಗಳ ಹೆಸರುಗಳು ಹೀಗಿವೆ– ಸಿ.ಎನ್.ಆರ್. ರಾವ್, ಸತೀಶ್ ಧವನ್, ಪಿ.ಕೆ. ಕೇಲ್‌ಕರ್, ಸಿ.ಆರ್. ಸುಬ್ರಮಣಿಯನ್, ಸುಧಾಮೂರ್ತಿ (ಟಾಟಾ ಮೋಟಾರ್ಸ್ ಕಂಪೆನಿಯ ಪ್ರಥಮ ಮಹಿಳಾ ತಂತ್ರಜ್ಞೆ), ಜಿ.ಎನ್. ರಾಮಚಂದ್ರನ್ ಮುಂತಾದವರು.

ಈ ಸಂಸ್ಥೆಗೆ ಪ್ರವೇಶ ಪಡೆಯಬೇಕಾದರೆ ಗೇಟ್ (GATE) ಪರೀಕ್ಷೆ (ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಪರೀಕ್ಷೆ) ಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಸಂಸ್ಥೆಗೆ ಪ್ರವೇಶ ಪಡೆಯಲು ತೀವ್ರ ಸ್ಪರ್ಧೆಯನ್ನು ವಿದ್ಯಾರ್ಥಿಗಳಲ್ಲಿ ಕಾಣಬಹುದಾಗಿದೆ. ವಿಶ್ವಮಟ್ಟದಲ್ಲಿ ಈ ಸಂಸ್ಥೆ ಉತ್ತಮ ರ್‍ಯಾಂಕಿಂಗ್ ಪಡೆದಿರುವುದಲ್ಲದೆ, ರಾಷ್ಟ್ರಮಟ್ಟದಲ್ಲಿ ಪ್ರಥಮ ರ್‍ಯಾಂಕಿಂಗ್ ಪಡೆದಿದೆ.

–ಬಿ.ಎಂ.ಚಂ.

## ಅತೀಂದ್ರಿಯ ಅನುಭವಗಳು

ಪರಾಮನೋವಿಜ್ಞಾನ (Parapsychology) ಮನೋವಿಜ್ಞಾನದ ಒಂದು ಪ್ರಮುಖ ಶಾಖೆಯಾಗಿದೆ. ಈ ಶಾಖೆಯ ಅಧ್ಯಯನ ವಿಷಯ ಅಸಾಮಾನ್ಯ ಘಟನೆಗಳು (non-normal events) ಅಥವಾ ಅಸಂಗತ/ನಿಯಮ ವಿರುದ್ಧ ಘಟನೆಗಳು (anomalous events). ಇಂತಹ ಘಟನೆಗಳ ಅನುಭವದಲ್ಲಿ ನಮ್ಮ ಜ್ಞಾನೇಂದ್ರಿಯಗಳ ಅಥವಾ ಕರ್ಮೇಂದ್ರಿಯಗಳ ನೇರ ಪಾತ್ರ ಇರುವುದಿಲ್ಲವಾದ ಕಾರಣ ಈ ಘಟನೆಗಳನ್ನು 'ಅತೀಂದ್ರಿಯ' (ಇಂದ್ರಿಯಾತೀತ) ಎಂದು ಕರೆಯಲಾಗಿದೆ. ಇಂತಹ ಘಟನೆಗಳು ಸರ್ವೇಸಾಮಾನ್ಯವಾಗಿ ಮನುಷ್ಯರೆಲ್ಲರೂ ನಂಬಿರುವಂತಹ, ವ್ಯವಹರಿಸುವಂತಹ, ದೇಶ–ಕಾಲದ ಮಿತಿ (space-time limitation)ಯನ್ನು ಮೀರುವುದರಿಂದ ನಿಯಮ ವಿರುದ್ಧ, ಅಸಂಗತ ಎಂದೆನಿಸಿಕೊಳ್ಳುತ್ತವೆ. ಈ ರೀತಿಯ ಘಟನೆಗಳ ಉಲ್ಲೇಖ ಜಗತ್ತಿನಾದ್ಯಂತ, ಬಹುಪ್ರಾಚೀನ ಕಾಲದಿಂದ, ಎಲ್ಲ ಸಮಾಜ ಸಂಸ್ಕೃತಿಗಳಲ್ಲೂ ಕಂಡುಬಂದಿದೆ. ನಮ್ಮ ಭಾರತದಲ್ಲಂತೂ ಇಂತಹ ಘಟನೆಗಳ ಉಲ್ಲೇಖ ಹೇರಳವಾಗಿದ್ದು, ಋಷಿ, ಮುನಿಗಳು, ಯೋಗಿಗಳು, ಈ ರೀತಿಯ ಘಟನೆಗಳ ಮೇಲೆ ನಿಯಂತ್ರಣ ಸಾಧಿಸಬಲ್ಲವರಾಗಿದ್ದರು ಎಂದು ಕೇಳಿದ್ದೇವೆ ಮತ್ತು ಓದಿದ್ದೇವೆ. ಪತಂಜಲಿ ಮಹರ್ಷಿಯ 'ಯೋಗಸೂತ್ರ'ದಲ್ಲಿ 'ವಿಭೂತಿಪಾದ' ಎಂಬ ಪರಿಚ್ಛೇದದಲ್ಲಿ ಅಣಿಮಾದಿ ಅಷ್ಟ ಸಿದ್ಧಿಗಳ ವರ್ಣನೆ ಇದೆ. **ಅಣಿಮಾ, ಮಹಿಮಾ ಚೈವ ಗರಿಮಾ, ಲಘಿಮಾತಥಾ। ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವಂ ಚಾಷ್ಟಸಿದ್ಧಯಃ॥** ಅಣಿಮಾ–ಅಣುವಿನಂತೆ ಸಣ್ಣಗಾಗುವುದು, ಮಹಿಮ–ದೊಡ್ಡದಾಗುವುದು, ಗರಿಮಾ–ಭಾರವಾಗುವುದು, ಲಘಿಮಾ–ಹಗುರವಾಗುವುದು, ಪ್ರಾಕಾಮ್ಯ–ಬಯಸಿದ್ದನ್ನು ಪಡೆಯುವುದು, ಈಶತ್ವ–ದಿವ್ಯರೂಪ ಪಡೆಯುವುದು, ವಶಿತ್ವಂ–ವಶಪಡಿಸಿಕೊಳ್ಳುವುದು. ಕಳೆದ ಎರಡು ವರ್ಷದಿಂದ 'ತರಂಗ' ಎಂಬ ವಾರ ಪತ್ರಿಕೆಯಲ್ಲಿ 'ಅತೀಂದ್ರಿಯ ಲೋಕದಲ್ಲಿ' ಎಂಬ ಶೀರ್ಷಿಕೆಯಡಿ ಬಹಳ ಜನರು ಇಂತಹ ಘಟನೆಗಳ ಬಗ್ಗೆ ತಮ್ಮ ಅನುಭವಗಳನ್ನು ಮತ್ತು ಅನಿಸಿಕೆಗಳನ್ನು ಲೇಖನ ರೂಪದಲ್ಲಿ ದಾಖಲಿಸಿದ್ದರು. ಇನ್ನೂ ದಾಖಲಿಸುತ್ತಿದ್ದಾರೆ.

### ಅಸಾಮಾನ್ಯ, ಅಸಂಗತ ಘಟನೆಗಳು

ಈ ರೀತಿಯಾದ ಘಟನೆಗಳು ಎಲ್ಲಾ ಜನಾಂಗದವರಲ್ಲೂ, ಎಲ್ಲಾ ದೇಶದವರಲ್ಲೂ, ಜಾತಿ, ಲಿಂಗ, ವಯಸ್ಸು ಮುಂತಾದ ಭೇದಗಳಿಲ್ಲದೆ ಯಾವ ವ್ಯಕ್ತಿಯಲ್ಲಿ ಬೇಕಾದರೂ ಉಂಟಾಗಬಹುದು. ಅದು ಸರ್ವೇ ಸಾಮಾನ್ಯವಾಗಿ ಉಂಟಾಗುವುದಿಲ್ಲ ಎಂಬ ಕಾರಣದಿಂದಲೇ ಅದು ಅಸಾಮಾನ್ಯ. ಇಂತಹ ಘಟನೆಗಳನ್ನು ಅರ್ಥೈಸುವ ದೃಷ್ಟಿಯಿಂದ ಅವುಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯ ಗುಂಪಿನಲ್ಲಿ ಮನೋಸಂಪರ್ಕ ಅಥವಾ ಅನ್ಯಮನಃಸ್ಪರ್ಶ (Telepathy), ಮುನ್ನರಿವು (Precognition), ಅತೀಂದ್ರಿಯ ದೃಷ್ಟಿ (Clainoyance), ಮನೋಮಿತಿ (Psychometry) ಮತ್ತು ಮನೋಚಾಲನೆ (Psychokinesis) ಈ ಅನುಭವ/ಘಟನೆಗಳನ್ನು ಸೇರಿಸಬಹುದು. ಮನೋಸಂಪರ್ಕವೆಂದರೆ ಇನ್ನೊಬ್ಬರ ಮನಸ್ಸಿನ ಆಲೋಚನೆಗಳು, ಭಾವನೆಗಳು ವ್ಯಕ್ತಿಯೊಬ್ಬನಿಗೆ 'ಕನ್ನಡಿಯೊಳಗಿನ ವಸ್ತುವಿನಂತೆ' ಸ್ಪಷ್ಟವಾಗಿ ಮನಸ್ಸಿಗೆ ಗೋಚರವಾಗುವುದು. ಮುನ್ನರಿವು ಎಂದರೆ ಮುಂದೆ ನಡೆಯಬಹುದಾದ ಘಟನೆಯ ಬಗ್ಗೆ ಮನಸ್ಸಿಗೆ ಸೂಚನೆ ಸಿಗುವಂತಹುದು. ಅತೀಂದ್ರಿಯ ದೃಷ್ಟಿ ಎಂದರೆ, ವ್ಯಕ್ತಿ ತಾನಿರುವ ಜಾಗದಿಂದ ಹೊರತಾದ ಜಾಗದಲ್ಲಿ ನಡೆಯುವ ಆಗುಹೋಗುಗಳನ್ನು ಯಾವುದೇ ಇಂದ್ರಿಯ ಮಾಧ್ಯಮದ ಸಹಾಯವಿಲ್ಲದೆ ಗ್ರಹಿಸುವುದು (ಮಹಾಭಾರತದಲ್ಲಿ ಸಂಜಯ ಧೃತರಾಷ್ಟ್ರನಿಗೆ ಕುರು ಕ್ಷೇತ್ರದಲ್ಲಿ ನಡೆದ ಘಟನೆಗಳನ್ನು ಅರಮನೆಯಲ್ಲಿ ಕುಳಿತೇ ವಿವರಿಸಿದಂತೆ) ಮನೋಮಿತಿಯೆಂದರೆ ವ್ಯಕ್ತಿಯೊಬ್ಬರಿಗೆ ಸೇರಿದ ಯಾವುದಾದರೂ ವಸ್ತುವನ್ನು ತನ್ನ ಕೈಯಲ್ಲಿ ಹಿಡಿದು ಆ ವಸ್ತುವಿನ ಒಡೆಯನ ಬಗ್ಗೆ ಮಾಹಿತಿ ನೀಡುವುದು (ಶಿವರಾಮ ಕಾರಂತರ 'ಮೂಕಜ್ಜಿಯ ಕನಸಿನಲ್ಲಿ' ಬರತಕ್ಕ ಘಟನೆಗಳು). ಮನೋಚಲನೆಯೆಂದರೆ ಒಂದು ವಸ್ತುವನ್ನು ಬರೀ ಮನೋಬಲದಿಂದ, ಬೇರೆ ಯಾವುದೇ ಸಹಾಯವಿಲ್ಲದೆ, ಚಲಿಸುವುದು, ತಿರುಗಿಸುವುದು, ಬಗ್ಗಿಸುವುದು, ತಿರುಚುವುದು ಇತ್ಯಾದಿ. ಈ ಅನುಭವಗಳು ಸಾಧಾರಣವಾಗಿ ಅಲ್ಲೊಬ್ಬ–ಇಲ್ಲೊಬ್ಬ ವ್ಯಕ್ತಿಯಲ್ಲಿ ಸಹಜವಾಗಿ ಕಾಣಿಸಿಕೊಳ್ಳುತ್ತವೆ. ಆದರೆ ಆ ಅನುಭವಗಳನ್ನು ವ್ಯಕ್ತಿಯ ನಿಯಂತ್ರಣಕ್ಕೆ ತಂದುಕೊಂಡು ಮತ್ತೆ ಮತ್ತೆ ಉಂಟಾಗುವಂತೆ ಮಾಡುವುದು ಬಹು ಕಠಿಣ. ಆದ್ದರಿಂದ ಅವುಗಳ ಬಗ್ಗೆ ನಿಯತವಾದಂತಹ ವೈಜ್ಞಾನಿಕ ಪ್ರಯೋಗ ನಡೆಸುವುದು ಕಷ್ಟ.

ಮೊದಲನೆಯ ಗುಂಪಿನ ಅನುಭವ ಸಾಧಾರಣವಾಗಿ ಎಚ್ಚರದ ಸ್ಥಿತಿಯಲ್ಲೇ ಉಂಟಾಗುತ್ತದೆ. ಆದರೆ "ಮುನ್ನರಿವು" ಕನಸಿನ ರೂಪದಲ್ಲಿ ಹೆಚ್ಚಾಗಿ ಉಂಟಾಗುತ್ತದೆ. ಹೆಂಗಸರು ಮತ್ತು ಆಪ್ತರು ಇಂತಹ ಕನಸುಗಳನ್ನು ಕಾಣುತ್ತಾರೆ. ಸಾಕಷ್ಟು ಸಂಖ್ಯೆಯ ಅಧ್ಯಯನಗಳು ಇಂತಹ ಕನಸುಗಳ ಪ್ರಮುಖ ವಿಷಯ ಸಾವು, ಅಪಘಾತ ಮತ್ತು ಕೆಡುಕುಗಳ ಬಗೆಗೆ ಇರುತ್ತವೆ

Digitised by Bharatavani, CIIL

ಎಂದು ಸೂಚಿಸಿವೆ. ಹಾಗೆಂದರೆ ಶುಭವಾದದ್ದು ಇರುವುದೇ ಇಲ್ಲ ಎಂದೇನೂ ಅಲ್ಲ. ಈ ಗುಂಪಿನ ಅನುಭವಗಳನ್ನು ಪಡೆದ ವ್ಯಕ್ತಿಗಳಿಗೆ ಅವು ಸೋಜಿಗವೆನಿಸಿ, ಮನೋವೈದ್ಯರನ್ನೋ, ಮನೋವಿಜ್ಞಾನಿಯನ್ನೋ (ಈ ಲೇಖಕನನ್ನೂ) ಭೇಟಿ ಮಾಡಿ ಅವುಗಳ ಸತ್ಯಾಸತ್ಯತೆಯ ಬಗ್ಗೆ ಚರ್ಚಿಸುವುದುಂಟು. ಕೆಲವರು ಇವು ಸತ್ಯವೇ, ಸಾಧ್ಯವೇ ಎಂದು ಕೇಳಿದ್ದಾರೆ. ಸ್ವಾನುಭವ ಇಲ್ಲದಿದ್ದಾಗ ಅದನ್ನು ಅಲ್ಲಗಳೆಯಲೂ ಸಾಧ್ಯವಿಲ್ಲ, ಖಚಿತಪಡಿಸಲೂ ಸಾಧ್ಯವಿಲ್ಲ, ಅಧ್ಯಯನಗಳ ಆಧಾರದ ಮೇಲೆ ಉತ್ತರ ನೀಡಬೇಕಾಗುತ್ತದೆ.

ಎರಡನೆಯ ಗುಂಪಿನಲ್ಲಿ ದೇಹಾತೀತ ಅನುಭವ (Out-of-Body Experience-OBE), ಸಾವಿನ ಅಂಚಿನ ಅನುಭವ (Near Death Experience), ಪ್ರೇತಾತ್ಮಗಳ ಅನುಭವ, ದೈವೀಶಕ್ತಿಗಳ ಅನುಭವ, ಪುನರ್ಜನ್ಮದ ನೆನಪುಗಳು ಇತ್ಯಾದಿಗಳನ್ನು ಸೇರಿಸಬಹುದು. ಈ ಅನುಭವಗಳು ಜೀವಿಯು ದೇಹದಿಂದ ಭಿನ್ನ ಎಂಬ ನಂಬುಗೆಗೆ ಪುಷ್ಟಿಯನ್ನು ನೀಡುವಂತಹವು. ಹುಟ್ಟು–ಸಾವಿನ ನಿಗೂಢತೆಗೆ ಸಂಬಂಧಪಟ್ಟವು. ಮೊದಲನೆಯ ಗುಂಪಿನ ಅನುಭವಗಳಿಗಿಂತ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡುವಂತಹವು. ಭೂತ–ವರ್ತಮಾನ, ಭವಿಷ್ಯತ್ ಕಾಲ ಗಣನೆಯನ್ನೇ ಬುಡಸಮೇತ ಅಲ್ಲಾಡಿಸುವಂತಹವು. ಆದ್ದರಿಂದ ಇಂತಹ ಅನುಭವಗಳನ್ನು ಅಧ್ಯಯನ ಮಾಡಲೋಸುಗವೇ ಮೊಟ್ಟಮೊದಲ ಪ್ರಯತ್ನಗಳು 19ನೇ ಶತಮಾನದಲ್ಲಿ ಪ್ರಾರಂಭವಾದುವು.

ಇವುಗಳಲ್ಲದೇ ಇನ್ನೂ ವಿಚಿತ್ರ, ವಿಸ್ಮಯ ಎನ್ನುವ ಎಷ್ಟೋ ಸಾಧ್ಯತೆಗಳನ್ನು ಪತಂಜಲಿ ಮಹರ್ಷಿ ಯೋಗಸೂತ್ರದ ಅಣಿಮಾ, ಗರಿಮಾ, ಲಘಿಮಾ ಇತ್ಯಾದಿ ಅಷ್ಟಸಿದ್ಧಿಗಳಾಗಿ ವಿಂಗಡಿಸಿದ್ದಾರೆ. ಅಂತಹ ಘಟನೆಗಳನ್ನು ಗೌರವಾನ್ವಿತ ಗಾಂಧಿವಾದಿ ಬೆಳಗೆರೆ ಕೃಷ್ಣ ಶಾಸ್ತ್ರಿಗಳು ತಾವು ಶ್ರೀ ಮುಕುಂದೂರುಸ್ವಾಮಿಗಳ ಸಹಯೋಗದಲ್ಲಿ ಅನುಭವಿಸಿದ್ದನ್ನು 'ಯೇಗ್ದಾಗೆಲ್ಲಾ ಐತೆ' ಎಂದು ಕಿರುಹೊತ್ತಿಗೆಯಲ್ಲಿ ದಾಖಲಿಸಿದ್ದಾರೆ. ಸ್ವಾಮಿ ರಾಮ ಅವರ 'ಹಿಮಾಲಯದ ಮಹಾತ್ಮರ ಸಾನಿಧ್ಯದಲ್ಲಿ' ಮತ್ತು ಯೋಗಾನಂದರ 'ಯೋಗಿಯ ಆತ್ಮಕತೆ' ಎಂಬ ಗ್ರಂಥಗಳಲ್ಲೂ ಇಂಥ ಅನೇಕ ಅಸಾಮಾನ್ಯ ಘಟನೆಗಳ ವಿವರ ದೊರೆಯುತ್ತದೆ.

### ಘಟನೆಗಳ ಅಧ್ಯಯನ

ಅಸಾಮಾನ್ಯ, ಅಸಂಗತ ಘಟನೆಗಳ ಅಧ್ಯಯನ 19ನೇ ಶತಮಾನದಿಂದ ಪ್ರಾರಂಭವಾಯಿತು. ಈ ಅಧ್ಯಯನದಲ್ಲಿ ನೊಬೆಲ್ ಪಾರಿತೋಷಕ ಪಡೆದಂತಹ ಭೌತ ವಿಜ್ಞಾನಿಗಳು (ಉದಾ: ಲಾರ್ಡ್‌ರೈಲಿ) ಶರೀರ ವಿಜ್ಞಾನಿಗಳು (ಉದಾ: ಚಾರ್ಲ್‌ರಿಚೆಟ್) ದಾರ್ಶನಿಕರು ಮತ್ತು ಇತರ ಪ್ರಮುಖ ಚಿಂತಕರೂ ಭಾಗವಹಿಸಿದ್ದರೆಂಬುದು ಗಮನಾರ್ಹ 1882ರಲ್ಲಿ ಲಂಡನ್‌ನಲ್ಲಿ "Psychnical Research Society" ಎಂಬ ಸಂಸ್ಥೆ ಅಸ್ಥಿತ್ವಕ್ಕೆ ಬಂದಿತು. ಹೆನ್ರಿ ಸಿಡ್ಜ್‌ವಿಕ್ (1838–1900). ಸರ್ ವಿಲಿಯಂ ಎಫ್ ಬ್ಯಾರೆಟ್ (1844–1925) ಮತ್ತು ಎಫ್ ಡಬ್ಲ್ಯೂ ಹೆಚ್. ಮೇಯರ್ಸ್ (1843–1901) ಈ ಸಂಸ್ಥೆಯ ಸಂಸ್ಥಾಪಕರಲ್ಲಿ ಮುಖ್ಯರಾದವರು. 1885ರಲ್ಲಿ ಅಮೇರಿಕಾ ದೇಶದ ಬಾಸ್ಟನ್‌ನಗರದಲ್ಲಿ "American Society for Psychial Research" (ASPR) ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಹಾರ್ವರ್ಡ್ ವಿಶ್ವವಿದ್ಯಾನಿಲಯದ ದಾರ್ಶನಿಕ ಹಾಗೂ ಮನೋವಿಜ್ಞಾನಿ ವಿಲಿಯಮ್ ಜೇಮ್ಸ್ ಸೇರಿದಂತೆ ಹಲವಾರು ಜನಪ್ರಿಯ ಗಣ್ಯ ವ್ಯಕ್ತಿಗಳು ಈ ಅಧ್ಯಯನಗಳಲ್ಲಿ ಭಾಗವಹಿಸಿದ್ದರು. ಅಂದಿನಿಂದ ಕಳೆದ 128 ವರ್ಷಗಳಲ್ಲಿ ಪರಾಮನೋವಿಜ್ಞಾನ (Para Psychology) ಪ್ರಪಂಚದಾದ್ಯಂತ ಹರಡಿದ್ದು ಭಾರತದಲ್ಲಿ ಕೂಡ ಈ ದಿಸೆಯಲ್ಲಿ ಅಧ್ಯಯನಗಳು ನಡೆದಿವೆ. ಮುಖ್ಯವಾಗಿ, ಆಂಧ್ರಪ್ರದೇಶದ ಆಂಧ್ರ ವಿಶ್ವವಿದ್ಯಾನಿಲಯ, ವಿಶಾಖ ಪಟ್ಟಣದಲ್ಲಿ ಮನೋವಿಜ್ಞಾನ ಮತ್ತು ಪರಾಮನೋವಿಜ್ಞಾನ ಶಾಖೆಯು ಪ್ರೊ. ಕೆ. ರಾಮಕೃಷ್ಣರಾಯರ ನೇತೃತ್ವದಲ್ಲಿ ಸ್ಥಾಪಿತವಾಗಿ ಕೆಲಕಾಲ ಈ ದಿಶೆಯಲ್ಲಿ ಕಾರ್ಯಪ್ರವತ್ತವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ವಿಷಯದ ಅಧ್ಯಯನ ಕುಂಠಿತವಾಗಿದೆ. 1960ರಲ್ಲಿ ವೈಜ್ಞಾನಿಕ ಮುನ್ನಡೆಗೆ ಮೀಸಲಾದ ಅಮೇರಿಕಾ ಸಂಘವು (American Association for the Advancement of Science) ಅಮೇರಿಕಾ ಪರಾಮಾನೋವೈಜ್ಞಾನಿಕ ಸಂಘವನ್ನು ತನ್ನ ಅಂಗಸಂಸ್ಥೆಯೆಂದು ಅಂಗೀಕರಿಸಿತು. ಮೇಲೆ ತಿಳಿಸಿದ ನಾನಾ ರೀತಿಯ ಅಸಾಮಾನ್ಯ, ಅಸಂಗತ ಘಟನೆಗಳನ್ನು ಒಟ್ಟಾಗಿ Psi Phenomena (ಸೈ ಘಟನೆಗಳು) ಎಂದು ಈಗ ಕರೆಯಲಾಗಿವೆ. ಈ ಘಟನೆಗಳ ಬಗ್ಗೆ ಹೆಚ್ಚು, ಹೆಚ್ಚು ಸಂಶೋಧನೆಗಳು ನಡೆಯುತ್ತಿವೆ.

### ಅಸಾಮಾನ್ಯ, ಅಸಂಗತ, ಘಟನೆಗಳ ಬಗ್ಗೆ ಭಾರತೀಯ ದೃಷ್ಟಿಕೋನ

ಭಾರತ ಋಷಿ, ಮುನಿ, ಯೋಗಿಗಳ ದೇಶವೆಂದೇ ಪ್ರಖ್ಯಾತವಾಗಿದೆ. ಭಾರತೀಯ ದರ್ಶನಗಳಲ್ಲಿ ಜೀವ ಜಗತ್ತು ಮತ್ತು ಈಶ್ವರ ಈ ಮೂರರ ಕುರಿತು ನಾನಾ ದೃಷ್ಟಿಕೋನಗಳಿದ್ದು ಇವು ಪಾಶ್ಚಿಮಾತ್ಯ ದರ್ಶನ ಶಾಸ್ತ್ರಕ್ಕಿಂತ ಭಿನ್ನವಾಗಿವೆ. ಆದರೆ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನಮ್ಮ ಪರಂಪರೆಯಲ್ಲಿ ಎಲ್ಲ ಮತ, ಧರ್ಮಗಳ ಪ್ರವರ್ತಕರೂ, ಸಾಧುಗಳು, ಯೋಗಿಗಳೂ, ಅತೀಂದ್ರಿಯ, ಅತಿಮಾನುಷ, ಎಂದು ಕರೆಯುವ ಶಕ್ತಿಗಳನ್ನು ಹೊಂದಿದ್ದು ಅದರ ಸಾಧ್ಯತೆಯನ್ನು ದೃಢೀಕರಿಸಿದ್ದಾರೆ. ಆದರೆ ಅವರ್ಯಾರೂ ಅವುಗಳಿಗೆ ವಿಶೇಷ ಮಹತ್ವವನ್ನು ನೀಡಿಲ್ಲ. ಅದಕ್ಕೆ ಬದಲಾಗಿ ಅಂತಹ ಘಟನೆಗಳು, ಶಕ್ತಿಗಳೂ ಮತ್ತು ಅನುಭವಗಳು ಮನುಷ್ಯ ಜೀವನದ ಪರಮಗುರಿಯಾದ ಆತ್ಮಸಾಕ್ಷಾತ್ಕಾರ, ದೈವಸಾಕ್ಷಾತ್ಕಾರ ಜೀವನ್ಮುಕ್ತಿಗೆ ಅಡ್ಡಿಯುಂಟು ಮಾಡುತ್ತವೆ ಎಂದು ಎಚ್ಚರಿಸಿದ್ದಾರೆ. ಆ ಎಲ್ಲ ಮಹಾತ್ಮರ ಪ್ರಕಾರ ಎಂತಹ ವಿಚಿತ್ರ, ವಿಸ್ಮಯ, ಅಸಂಗತ, ಅಸಾಮಾನ್ಯ, ಅತಿಮಾನುಷ ಎಂದೆಲ್ಲಾ ಅನಿಸಿದರೂ ಆ ಎಲ್ಲ ಅನುಭವಗಳೂ ಮನಸ್ಸಿನ ಸ್ತರದಲ್ಲೇ ನಡೆಯುವುದರಿಂದ ಮನಸ್ಸನ್ನೂ ಮೀರಿ ಹೋಗಿ ಇನ್ನೊಂದೇ ಹಂತ/ಗುರಿಯನ್ನು ತಲುಪಲು ಸಹಾಯ ಮಾಡುವುದಿಲ್ಲ. ಆದ್ದರಿಂದ ಆ ಅನುಭವಗಳನ್ನು ಅರಸುವುದು ಇನ್ನಿತರ ಪ್ರಾಪಂಚಿಕ ಸುಖ, ಭೋಗಗಳನ್ನು ಅರಸುವಷ್ಟೇ ಮಿತಿಯುಳ್ಳದ್ದಾಗಿದೆ.

–ಕಿ.ಕು.

## ಅಧ್ಯಾತ್ಮಿಕ ಬುದ್ಧಿಶಕ್ತಿ

ಅಧ್ಯಾತ್ಮಿಕತೆ ಮತ್ತು ಅಥವಾ ಧಾರ್ಮಿಕತೆಗೆ ಸಂಬಂಧಿಸಿದ ಗ್ರಹಿಕೆ ಅಂತರ್ಬೋಧೆ, ತಿಳಿವು ಮುಂತಾದವುಗಳನ್ನು ಒಳಗೊಂಡ ಪ್ರವೃತ್ತಿಗಳ ಗುಂಪಿಗೆ ಅಧ್ಯಾತ್ಮಿಕ ಬುದ್ಧಿಶಕ್ತಿ ಎನ್ನುತ್ತಾರೆ. ಅಧ್ಯಾತ್ಮಿಕ ಬುದ್ಧಿಶಕ್ತಿಯ ಪರಿಕಲ್ಪನೆಯನ್ನು ಡಾನಸೋಹರ್ ಎಂಬಾಕೆ 1997ರಲ್ಲಿ ತನ್ನ ಒಂದು ಪುಸ್ತಕದಲ್ಲಿ ಪ್ರಕಟಿಸಿದರು. ನಂತರ ಇವರು ಇಯಾನ್ ಮಾರ್ಷಲ್ ಜೊತೆಗೂಡಿ 'ಎಸ್.ಕ್ಯೂ: ಅಂತಿಮ ಬುದ್ಧಿಶಕ್ತಿ (S.Q. Ultimate Intelligence) ಎಂಬ ಪುಸ್ತಕವನ್ನು ಪ್ರಕಟಿಸಿದರು. ನಂತರ "ಅಧ್ಯಾತ್ಮಿಕ ಬಂಡವಾಳ" ವೆಂಬ ಮತ್ತೊಂದು ಪರಿಕಲ್ಪನೆಯನ್ನು ನೀಡಿ ಅಧ್ಯಾತ್ಮಿಕ ಸೂಚ್ಯಂಕ (Spiritual Quotient-SQ) ಅಧ್ಯಾತ್ಮಿಕ ಬಂಡವಾಳ (Spiritual Capital-SC) ಹಾಗೂ ಪೋಷಕತ್ವ (Sustainability) ಗಳ ನಡುವೆ ಇರುವ ಸಂಬಂಧವನ್ನು ಪ್ರತಿಪಾದಿಸಿದರು. ಜೀವನದ ಆಳವಾದ ಅರ್ಥಗಳು, ಮೌಲ್ಯಗಳು, ಮೂಲ ಉದ್ದೇಶಗಳು ಇವುಗಳಿಂದ ನಮ್ಮ ಬಾಳಿನ ಆಳವಾದ ಮುಖಗಳನ್ನು ಪುಷ್ಟೀಕರಿಸಲು ದೊರಕುವ

Digitised by Bharatavani, CIIL

ಸಂಪತ್ತನ್ನು 'ಅಧ್ಯಾತ್ಮಿಕ ಬಂಡವಾಳ' ಎನ್ನುವರು. 'ಅಧ್ಯಾತ್ಮಿಕ ಬಂಡವಾಳ'ವನ್ನು ಹೊಂದಿರುವ ವ್ಯಕ್ತಿ ಸಂಸ್ಥೆ ಅಥವಾ ಸಮಾಜ ತನ್ನನ್ನು ತಾನು ಪೋಷಿಸಿಕೊಳ್ಳುವಲ್ಲಿ (Sustain) ಸಮರ್ಥವಾಗಿರುವುವು. ಕಾರಣ ವಿಶಾಲ ಮನೋಭಾವ ಮೌಲ್ಯಾಧಾರಿತ ದೃಷ್ಟಿಕೋನ, ಇತರರ ಬಗ್ಗೆ ಕಳಕಳಿ ಕರುಣೆ ತಮ್ಮ ಆಳವಾದ ನಿಲುವುಗಳಂತೆ ನಡೆಯುವ ಸಾಮರ್ಥ್ಯ ಇತ್ಯಾದಿಗಳು ಅಂಥ ವ್ಯಕ್ತಿಯಲ್ಲಿ ಸಮಾಜದಲ್ಲಿ ಇರುತ್ತವೆ.

'ಅಧ್ಯಾತ್ಮಿಕ' ವೆಂಬ ಪದಬಳಕೆ ಇಲ್ಲಿ ಸಂಘಟಿತ ಧರ್ಮದೊಡನೆ ಸಂಬಂಧವನ್ನು ಸೂಚಿಸಲೇಬೇಕು ಎಂಬ ನಿರ್ಬಂಧವಿಲ್ಲ. ಒಬ್ಬ ವ್ಯಕ್ತಿಯ ಅಧ್ಯಾತ್ಮಿಕ ಸೂಚ್ಯಾಂಕ ಜಾಸ್ತಿಯಿದ್ದರೂ ಆತ ಯಾವುದೇ ವಿಧದ ಧಾರ್ಮಿಕ ನಂಬಿಕೆಯನ್ನು ಹೊಂದಿಲ್ಲದಿರಬಹುದು. ಹಾಗೆಯೇ ಓರ್ವನು ಕಟ್ಟಾಧಾರ್ಮಿಕ ವ್ಯಕ್ತಿಯಾಗಿದ್ದು ಅಲ್ಪ ಅಧ್ಯಾತ್ಮಿಕ ಸೂಚ್ಯಂಕವನ್ನು ಹೊಂದಿರಬಹುದು. ಸೋಹರ್/ಮಾರ್ಷಲ್ಲರ ಪ್ರಕಾರ 'ಅಧ್ಯಾತ್ಮಿಕ' ಎಂಬ ಪದ ಒಂದು ವ್ಯವಸ್ಥೆಗೆ ಪುಷ್ಟಿಯನ್ನೀಯುವುದು ಯಾವುದೋ ಅದು ಎಂಬ ಅರ್ಥವನ್ನು ಸೂಚಿಸುತ್ತದೆ.

ಅಧ್ಯಾತ್ಮಿಕ ಬುದ್ಧಿಶಕ್ತಿಯೆಂದರೆ ನಮ್ಮ ಜೀವನದ ಆಳವಾದ ಅರ್ಥಗಳು ಉದ್ದೇಶಗಳು ಹಾಗೂ ಉನ್ನತ ಪ್ರೇರಣೆಗಳಂತೆ ನಡೆಯುವ ಬುದ್ಧಿಶಕ್ತಿ, ಮಾನವನನ್ನು ಸಂಪೂರ್ಣನನ್ನಾಗಿಸುವುದು ಸತ್ಯ ನಿಷ್ಠನನ್ನಾಗಿಸುವುದು ಈ ಬುದ್ಧಿಶಕ್ತಿಯೆ. ಈ ಬುದ್ಧಿಶಕ್ತಿಯಿಂದಲೇ ಮೂಲಭೂತ ಪ್ರಶ್ನೆಗಳನ್ನು ಕೇಳಿ ಅದಕ್ಕೆ ನಾವೇ ಉತ್ತರವನ್ನು ಕಂಡುಕೊಳ್ಳುವುದು.

ಸೋಹರ್ ಮತ್ತು ಮಾರ್ಷಲ್ ಅಧ್ಯಾತ್ಮಿಕ ಬುದ್ಧಿಶಕ್ತಿಯ ಹನ್ನೆರಡು ಲಕ್ಷಣಗಳನ್ನು ಗುರುತಿಸಿದ್ದಾರೆ. ಅವು ಹೀಗಿವೆ :

**ಆತ್ಮ ಪ್ರಜ್ಞೆ** (Self-awareness)–ತಾನು ನಂಬಿದ್ದನ್ನು ಮಹತ್ವ ನೀಡುವುದನ್ನು ಹಾಗೂ ತಾನು ಯಾವುದರಿಂದ ಪ್ರೇರಿತನಾಗುವೆನೆಂಬುದನ್ನು ತಿಳಿಯುವುದು.

**ಸಹಜತೆ** : ತತ್ಕಾಲದಲ್ಲಿ ಬದುಕುವುದು ಹಾಗೂ ಪ್ರತಿಕ್ರಿಯಿಸುವುದು.

**ದರ್ಶನ ಹಾಗೂ ಮೌಲ್ಯಗಳಂತೆ ನಡೆಯುವುದು** :– ಆಳವಾದ ನಂಬಿಕೆಗಳು ಹಾಗೂ ತತ್ವಗಳಂತೆ ನಡೆಯುವುದು, ಅವುಗಳಂತೆ ಬಾಳುವುದು.

**ಸಮಗ್ರತಾ ವಾದ** : ವಿಶಾಲವಾದ ಸಂಬಂಧಗಳು, ಸಂಪರ್ಕಗಳು ಮತ್ತು ಆದರ್ಶಗಳನ್ನು ಕಾಣುವುದು; ಎಲ್ಲರೂ ನಮ್ಮವರೇ ಎಂದು ಭಾವಿಸುವುದು.

**ಕರುಣೆ** : ಸಹಾನುಭೂತಿ ಪರರ ಭಾವನೆಗೆ ಸ್ಪಂದಿಸುವ ಗುಣ (Having the quality fuling with).

**ವೈವಿಧ್ಯತೆಯ ಗೌರವಾದರ** : ಇತರರ ದೃಷ್ಟಿಕೋನ, ಸ್ವಭಾವಗಳಲ್ಲಿ ವ್ಯತ್ಯಾಸಗಳಿದ್ದರೂ ಅವರನ್ನು ಗೌರವಾದರಿಂದ ಕಾಣುವುದು.

**ಕ್ಷೇತ್ರ ಸ್ವಾತಂತ್ರ್ಯ** : ವಿರುದ್ಧ ಧೋರಣೆಯುಳ್ಳವರನ್ನು ತನ್ನದೇ ಆದ ಧೋರಣೆಗಳನ್ನಿಟ್ಟುಕೊಂಡು ಎದುರಿಸುವ ಸಾಮರ್ಥ್ಯ.

**ನಮ್ರತೆ** : ಒಂದು ದೊಡ್ಡ ನಾಟಕದ ಪಾತ್ರಧಾರಿಯೆಂದು ವಿಶ್ವದಲ್ಲಿ ತನ್ನ ನಿಜವಾದ ಸ್ಥಾನವೊಂದಿದೆಯೆಂದೂ ಭಾವಿಸುವುದು.

**"ಏಕೆ" : ಎಂಬ ಮೂಲಭೂತ ಪ್ರಶ್ನೆಯನ್ನು ಕೇಳುವ ಪ್ರವೃತ್ತಿ**– ವಿಷಯಗಳನ್ನು ಆಮೂಲಾಗ್ರವಾಗಿ ಅರಿಯಲು ಅವುಗಳ ಮೂಲಕ್ಕೆ ಇಳಿಯುವುದು.

**ಪುನರ್ ರಚಿಸುವ ಸಾಮರ್ಥ್ಯ** : ಒಂದು ಪರಿಸ್ಥಿತಿ ಅಥವಾ ತೊಡಕಿನಿಂದ ದೂರಸರಿದು ವಿಶಾಲ ದೃಷ್ಟಿಕೋನದಿಂದ ನೋಡುವುದು.

**ಪ್ರತಿಕೂಲತೆಯ ಸಕಾರಾತ್ಮಕ ಉಪಯೋಗ** : ತಪ್ಪುಗಳು ಸೋಲುಗಳು ಮತ್ತು ನೋವುಗಳಿಂದ ಪಾಠವನ್ನು ಕಲಿತು ವಿಕಸನಗೊಳ್ಳುವುದು.

**ಕರ್ತವ್ಯ ಪ್ರಜ್ಞೆ**(Sense of vocation) : ಸೇವೆಗೈಯ್ಯುವ ಪ್ರತಿಯಾಗಿ ನೀಡುವ ಮನೋಭಾವ.

ಸೋಹರ್ ಮತ್ತು ಮಾರ್ಷಲ್‌ರಲ್ಲದೆ. ಇನ್ನೂ ಹಲವರು ಅಧ್ಯಾತ್ಮಿಕ ಬುದ್ಧಿಶಕ್ತಿಗೆ ಪರಿಭಾಷೆಯನ್ನು ಕೊಟ್ಟು ಅದರ ಪ್ರಮುಖ ಲಕ್ಷಣಗಳನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ರಾಬರ್ಟ್ ಎಮ್ಮನ್ಸ್ (2000), ಟೋನಿ ಬುಸನ್ (2001), ಕ್ಯಾಥ್ಲೀನ್ ನೊಬಲ್ (2000/2001), ಫ್ರಾನ್ಸಿಸ್ ವಾನ್ (2002) ಸಿಂಡಿ ವಿಗ್ಗಲ್ಸ್‌ವರ್ಥ್ (2004/2008), ಡೇವಿಡ್ ಬಿ.ಕಿಂಗ್(2007), ವಿಲಿಯಂ ಫ್ರಾಂಕ್ ಡಿಡ್ರಿಚ್ –ಇವರುಗಳು ಈ ಪರಿಕಲ್ಪನೆಯನ್ನು ಪರಿಭಾಷಿಸಿ ವಿವರಿಸಿದ್ದಾರೆ.

ರಾಬರ್ಟ್ಸ್ ಎಮ್ಮನ್ಸ್‌ನ ಪರಿಭಾಷೆ ಹೀಗಿದೆ : "ದಿನನಿತ್ಯದ ತೊಡಕುಗಳ ನಿವಾರಣೆ ಹಾಗೂ ಧ್ಯೇಯ ಸಿದ್ಧಿಗಳನ್ನು ಸರಾಗಗೊಳಿಸಲು ಅಧ್ಯಾತ್ಮಿಕ ವಿಷಯಗಳನ್ನು ಅನುಕೂಲಕರವಾಗಿ ಬಳಸಿಕೊಳ್ಳುವುದಕ್ಕೆ ಅಧ್ಯಾತ್ಮಿಕ ಬುದ್ಧಿಶಕ್ತಿ ಎನ್ನುವರು. ಈತ ಅಧ್ಯಾತ್ಮಿಕ ಬುದ್ಧಿಶಕ್ತಿಯ ಐದು ಘಟಕಗಳನ್ನು ಪ್ರಸ್ತಾಪಿಸಿದ್ದಾನೆ.

- ಶಾರೀರಿಕ ಮತ್ತು ಭೌತಿಕವಾದುದನ್ನು ಅತಿಕ್ರಮಿಸುವ ಸಾಮರ್ಥ್ಯ
- ಉನ್ನತ ಪ್ರಜ್ಞಾ ಸ್ಥಿತಿಗಳನ್ನು ಅನುಭವಿಸುವ ಸಾಮರ್ಥ್ಯ
- ದೈನಂದಿನ ಅನುಭವಗಳನ್ನು ಪವಿತ್ರಗೊಳಿಸುವ ಸಾಮರ್ಥ್ಯ
- ತೊಡಕುಗಳನ್ನು ಬಿಡಿಸಲು ಅಧ್ಯಾತ್ಮಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ
- ಸದಾಚಾರಿಯಾಗಿರುವ ಸಾಮರ್ಥ್ಯ

ಸಿಂಗ್. ಜಿ (2008) ಮತ್ತೊಂದು ಪರಿಭಾಷೆಯನ್ನು ನೀಡಿದ್ದಾರೆ. "ಅಧ್ಯಾತ್ಮಿಕ ತಥ್ಯವನ್ನು ಅರ್ಥಮಾಡಿಕೊಳ್ಳುವ ಹಾಗೂ ಚಿಂತಿಸುವ ಸಾಮರ್ಥ್ಯಕ್ಕೆ ಹಾಗೂ ಅಧ್ಯಾತ್ಮಿಕ ವಿಚಾರಧಾರೆಯಿಂದ ದೈನಂದಿನ ವರ್ತನೆಯನ್ನು ನಿಯಂತ್ರಿಸುವುದಕ್ಕೆ ಅಧ್ಯಾತ್ಮಿಕ ಬುದ್ಧಿಶಕ್ತಿಯೆಂದು ಹೇಳಬಹುದು."

ಟೋನಿ ಬುಸನ್ (2001) ತಮ್ಮ "ದಿ ಪವರ್ ಆಫ್ ಸ್ಪಿರಿಚುಯಲ್ ಇಂಟೆಲಿಜೆನ್ಸ್" ಎಂಬ ಪುಸ್ತಕದಲ್ಲಿ "ಪ್ರಪಂಚದ ಹಾಗೂ ಅದರಲ್ಲಿ ನಿಮ್ಮ ಸ್ಥಾನದ ಅರಿವು" ಎಂದು ಅಧ್ಯಾತ್ಮಿಕ ಬುದ್ಧಿಶಕ್ತಿಯನ್ನು ಪರಿಭಾಷಿಸಿದ್ದಾರೆ. ಕ್ಯಾಥ್ಲೀನ್ ನೊಬಲ್ ಎಮ್ಮನ್ಸ್‌ರವರ ಪರಿಭಾಷೆಯನ್ನು ಅಂಗೀಕರಿಸಿ, ಈ ಬುದ್ಧಶಕ್ತಿಯು ಸ್ವಾಭಾವಿಕವಾಗಿ ಬರುವಂಥದ್ದು ಎಂದು ಅಭಿಪ್ರಾಯಪಟ್ಟಿದ್ದಾರೆ. ಇವರು ಎಮ್ಮನ್ಸ್‌ರವರು ಕೊಟ್ಟಿರುವ ಘಟಕಗಳ ಜೊತೆಗೆ ಇನ್ನೆರಡನ್ನು ಪ್ರಸ್ತಾಪಿಸಿದ್ದಾರೆ.

ತಿಳಿದೋ ತಿಳಿಯದೆಯೋ ಕ್ಷಣಕ್ಷಣವೂ ನಾವು ಒಡನಾಟದಲ್ಲಿರುವ ವಿಶಾಲವೂ, ಬಹುಮುಖ (multidimensional) ವುಳ್ಳದ್ದೂ ಆದ ಸತ್ಯದಲ್ಲಿ ಈ ಭೌತಿಕ ಸತ್ಯವು ಹುದುಗಿಕೊಂಡಿದೆ ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸುವುದು. ಸಾರ್ವತ್ರಿಕವಾಗಿಯೂ,

Digitised by Bharatavani, CIIL

ತನಗಾಗಿಯೂ ಮಾನಸಿಕ ಸ್ವಾಸ್ಥ್ಯವನ್ನು ಪ್ರಜ್ಞಾಪೂರ್ವಕವಾಗಿ ಬಯಸುವುದು.

ಫ್ರಾನ್ಸಿಸ್ ವಾನ್ ತಮ್ಮದೇ ಆದ ಕೆಲವು ವಿಚಾರಗಳನ್ನು ಮಂಡಿಸಿದ್ದಾರೆ. "ಮನಸ್ಸು ಮತ್ತು ಆತ್ಮಗಳ ಆಂತರಿಕ ಜೀವನ ಹಾಗೂ ಪ್ರಪಂಚದಲ್ಲಿನ ಭೌತಿಕ ಜೀವನಕ್ಕೆ ಆಂತರಿಕ ಜೀವನದ ಸಂಬಂಧ – ಇವುಗಳನ್ನು ಕುರಿತ ವಿವೇಚನೆಯೇ ಅಧ್ಯಾತ್ಮಿಕ ಬುದ್ಧಿಶಕ್ತಿ". ಅಸ್ತಿತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಗಂಭೀರವಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹಾಗೂ ಪ್ರಜ್ಞೆಯ ಉನ್ನತ ಸ್ತರಗಳನ್ನು ಕುರಿತ ಅಂತರ್ದೃಷ್ಟಿ ಇದು ವಾನ್‌ರವರ ಅಧ್ಯಾತ್ಮಿಕ ಬುದ್ಧಿಶಕ್ತಿಯ ಪರಿಭಾಷೆ ಜಡವಸ್ತು, ಜೀವನ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ಆಳವಾದ ಅರಿವಾಗಿ ಪ್ರಜ್ಞೆಯು ವಿಕಸಿಸುತ್ತಾ ಹೋದಂತೆ ಅಧ್ಯಾತ್ಮಿಕ ಬುದ್ಧಿಶಕ್ತಿಯು ಹೊರಹೊಮ್ಮುತ್ತದೆ. ಇರುವಿಕೆಯ ಆಧಾರವೇ ಆತ್ಮ (Spirit) ವೆಂಬ ತಿಳಿವನ್ನು ಅಥವಾ ಆತ್ಮವೇ ವಿಕಾಸದ ಕ್ರಿಯಾತ್ಮಕ ಜೀವಶಕ್ತಿಯೆಂಬ ತಿಳಿವನ್ನು ಸಹ ಅಧ್ಯಾತ್ಮಿಕ ಬುದ್ಧಿವಂತಿಕೆ ನಿರ್ದೇಶಿಸುತ್ತದೆ. ಮಾನಸಿಕ ಸಾಮರ್ಥ್ಯಕ್ಕಿಂತ ಹೆಚ್ಚಿನದನ್ನು ಈ ಬುದ್ಧಿಶಕ್ತಿಯು ಸೂಚಿಸುತ್ತದೆ. ವ್ಯಕ್ತಿತ್ವವನ್ನು "ವ್ಯಕ್ತಿತ್ವವನ್ನು ಮೀರಿದುದಕ್ಕೆ" ಸಂಬಂಧಿಸುವುದು ಮತ್ತು ತನ್ನನ್ನು ಆತ್ಮ (Spirit) ದೊಡನೆ ಸಂಬಂಧಿಸುವುದು ಈ ಅಧ್ಯಾತ್ಮಿಕ ಬುದ್ಧಿಶಕ್ತಿ. ಈ ಬುದ್ಧಿಶಕ್ತಿಯನ್ನು ಅಭ್ಯಾಸದಿಂದ ಬೆಳೆಸಿಕೊಳ್ಳಬಹುದಲ್ಲದೆ ಇದು ವ್ಯಕ್ತಿಗೆ ಸತ್ಯಮಿಥ್ಯಗಳ ವಿವೇಚನೆಯಲ್ಲಿ ಸಹಾಯ ಮಾಡಬಲ್ಲದು. ಸಂಸ್ಕೃತಿಯಲ್ಲಿ ಈ ಬುದ್ಧಿಶಕ್ತಿಯನ್ನು ಪ್ರೇಮ ಅರಿವು ಮತ್ತು ಸೇವೆಯ ಮೂಲಕ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ.

ಸಿಂಡಿ ವಿಗ್ಗಲ್ಸ್‌ವರ್ಥ್‌ರವರು "ಬಾಹ್ಯ ಪರಿಸ್ಥಿತಿಗಳನ್ನು ಪರಿಗಣಿಸದೆ ಆಂತರಿಕ ಹಾಗೂ ಬಾಹ್ಯ ಶಾಂತಿಯನ್ನು ಕಾಪಾಡಿಕೊಂಡು ವಿವೇಕ ಹಾಗೂ ಕಾರುಣ್ಯದಿಂದೊಡಗೂಡಿ ವ್ಯವಹರಿಸುವ ಸಾಮರ್ಥ್ಯವನ್ನೇ ಅಧ್ಯಾತ್ಮಿಕ ಬುದ್ಧಿಶಕ್ತಿ" ಎಂದಿದ್ದಾರೆ. ಅಧ್ಯಾತ್ಮಿಕ ಸೂಚ್ಯಾಂಕ (Spiritual Quotient)ವು ಒಳಗೊಳ್ಳುವ ಸಾಮರ್ಥ್ಯಗಳನ್ನು 21 ಕೌಶಲಗಳನ್ನಾಗಿ ವಿಭಜಿಸಿ ಡೇನಿಯಲ್ ಗೋಲ್‌ಮನ್ನರ ಸಂವೇದನಾತ್ಮಕ ಬುದ್ಧಿಶಕ್ತಿಯ ಮಾದರಿಯಂತೆ ನಾಲ್ಕು ಖಂಡ(four Quadrant)ಗಳಲ್ಲಿ ವ್ಯವಸ್ಥಿತಗೊಳಿಸಲಾಗಿದೆ. ಆ ನಾಲ್ಕು ಖಂಡಗಳು ಹೀಗಿವೆ :

1. ಮೇಲ್ಮಟ್ಟದ ಸ್ವಯಂಪ್ರಜ್ಞೆ (Higher self) 'ಅಹಂ' ಎಂಬ ಪ್ರಜ್ಞೆ (Ego self awareness)
2. ವಿಶ್ವಪ್ರಜ್ಞೆ (Universal Consciousness)
3. ಮೇಲ್ಮಟ್ಟದ ಸ್ವಯಂಪ್ರಜ್ಞೆ / 'ಅಹಂ' ಮೇಲಿನ ಸ್ವಯಂ ನಿಯಂತ್ರಣ (Ego Self Martery)
4. ಅಧ್ಯಾತ್ಮಿಕ ಸಾನ್ನಿಧ್ಯ (Spiritual Presence) ಸಾಮಾಜಿಕ ಪ್ರಭುತ್ವ ವಿಗ್ಗಲ್ಸ್‌ವರ್ಥ್‌ರವರ ಅಧ್ಯಾತ್ಮಿಕ ಸೂಚ್ಯಂಕ ಮಾದರಿಯನ್ನು ಸಂಸ್ಥೆಯ ವಾತಾವರಣದಲ್ಲಿ ಸಫಲತಾಪೂರ್ವಕವಾಗಿ ಬಳಸಲಾಗಿದೆ.

ಡೇವಿಡ್ ಬಿ. ಕಿಂಗ್ ಅಧ್ಯಾತ್ಮಿಕ ಬುದ್ಧಿಶಕ್ತಿಯನ್ನೂ ಹೀಗೆ ಪರಿಭಾಷಿಸಿದ್ದಾರೆ: ವಾಸ್ತವಿಕತೆ (Reality)ಯ ಅಭೌತಿಕ (Non-Material) ಹಾಗೂ ಅತೀತ ಆಯಾಮಗಳನ್ನು ಆಧರಿಸಿದ ಹೊಂದಿಕೊಳ್ಳಬಲ್ಲ (adaptive) ಮಾನಸಿಕ ಸಾಮರ್ಥ್ಯಗಳ ಗುಂಪಿಗೆ ಅಧ್ಯಾತ್ಮಿಕ ಬುದ್ಧಿಶಕ್ತಿ ಎನ್ನುವರು. ಅಂತರಾಳದಲ್ಲಿನ ಅಸ್ತಿತ್ವದ ಮನನ ಅರ್ಥವೃದ್ಧಿ, ಅತೀತ ಸ್ವಯಂ (Transcendent self)ನ ಗ್ರಹಿಕೆ ಮತ್ತು ಅಧ್ಯಾತ್ಮಿಕ ಸ್ಥಿತಿಗಳ ಮೇಲೆ ಪ್ರಭುತ್ವ ಇವೇ ಮುಂತಾದ ಪರಿಣಾಮಗಳಲ್ಲಿ ಕೊನೆಗೊಳ್ಳುವ ವ್ಯಕ್ತಿತ್ವದ ಅಭೌತಿಕ ಮತ್ತು ಅತೀತ ಮುಖಗಳ ತಿಳಿವು ಸಂಯೋಜನೆ ಹಾಗೂ ಅನುಕೂಲಕರ ಪ್ರಯೋಗಕ್ಕೆ ನೆರವಾಗುವ ಮಾನಸಿಕ ಸಾಮರ್ಥ್ಯಗಳನ್ನು ವಿಶೇಷವಾಗಿ ಮೇಲಿನ ಪರಿಭಾಷೆ ಪರಿಗಣಿಸುತ್ತದೆ. ಅಧ್ಯಾತ್ಮಿಕ ಬುದ್ಧಿಶಕ್ತಿಯ ನಾಲ್ಕು ಮೂಲಭೂತ ಸಾಮರ್ಥ್ಯಗಳನ್ನು ಕಿಂಗ್ ಹೀಗೆ ಪ್ರಸ್ತಾಪಿಸುತ್ತಾರೆ–

**ವಿವೇಚನಾತ್ಮಕ ಅಸ್ತಿತ್ವವಾದಿ ಚಿಂತನೆ** : ಅಸ್ತಿತ್ವ, ಸತ್ಯ, ವಿಶ್ವ, ಕಾಲದೇಶ ಹಾಗೂ ಇತರ ಅಸ್ತಿತ್ವವಾದಿ/ತಾತ್ವಿಕ ವಿಷಯಗಳನ್ನು ಕುರಿತು ವಿವೇಚನಾತ್ಮಕವಾಗಿ ಮನನ ಮಾಡುವ ಸಾಮರ್ಥ್ಯ, ತನ್ನ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ಇತರ ಅಸ್ತಿತ್ವವಾದಿಯಲ್ಲದ ವಿಷಯಗಳನ್ನು ಚಿಂತಿಸುವ ಸಾಮರ್ಥ್ಯ.

**ವ್ಯಕ್ತಿಗತವಾಗಿ ಅರ್ಥವನ್ನು ಕಂಡುಕೊಳ್ಳುವುದು** : ಬಾಳಿನ ಉದ್ದೇಶವನ್ನು ಸೃಷ್ಟಿಸಿ ಸಾಧಿಸುವ ಸಾಮರ್ಥ್ಯವು ಸೇರಿದಂತೆ ಸಕಲ ದೈಹಿಕ, ಮಾನಸಿಕ ಅನುಭವಗಳಿಂದ ವ್ಯಕ್ತಿಗತವಾಗಿ ಅರ್ಥವನ್ನು ಉದ್ದೇಶವನ್ನು ಹುಡುಕಿತೆಗೆಯುವ ಸಾಮರ್ಥ್ಯ.

**ಅತೀತ ಪ್ರಜ್ಞೆ** : ಸಾಧಾರಣ ಪ್ರಜ್ಞೆಯ ಸ್ಥಿತಿಗಳನ್ನು ತನ್ನ ಇತರರ ಮತ್ತು ಭೌತಿಕ ಪ್ರಪಂಚದ ಅತೀತ ಆಯಾಮಗಳನ್ನು ಗುರುತಿಸುವ ಸಾಮರ್ಥ್ಯ. ಇದರ ಜತೆಗೆ ತನಗೂ ಭೌತಿಕವಾದುದಕ್ಕೂ ಈ ಆಯಾಮಗಳ ಸಂಬಂಧವನ್ನು ಗುರುತಿಸುವ ಸಾಮರ್ಥ್ಯ.

**ಪ್ರಜ್ಞಾಸ್ಥಿತಿಯ ವಿಸ್ತಾರ** :– ಪ್ರಜ್ಞೆಯ ಉಚ್ಚ ಸ್ಥಿತಿಗಳಲ್ಲಿ ಒಳಹೊಕ್ಕಿ ಹೊರಬರುವ ಸಾಮರ್ಥ್ಯ (ಉದಾಹರಣೆಗೆ, ಶುದ್ಧ ಪ್ರಜ್ಞೆ, ವಿಶ್ವಪ್ರಜ್ಞೆ) ಅಲ್ಲದೆ ಇನ್ನಿತರ ಅತೀತ ಸ್ಥಿತಿಗಳಲ್ಲಿ ಇಚ್ಛಾಪೂರ್ವಕವಾಗಿ ಒಳಹೊಕ್ಕು ಹೊರಬರುವ ಶಕ್ತಿ (ಧ್ಯಾನ, ಪ್ರಾರ್ಥನೆ ಇತ್ಯಾದಿಗಳಲ್ಲಿ ಇದ್ದಹಾಗೆ).

ವಿಲಿಯಂ ಫ್ರಾಂಕ್ ಡ್ರೀಡ್ರಿಚ್ ಇತ್ತೀಚೆಗೆ ಅಧ್ಯಾತ್ಮಿಕ ಬುದ್ಧಿಶಕ್ತಿಯನ್ನು ಮತ್ತೊಂದು ಬಗೆಯಲ್ಲಿ ವಿವರಿಸಿದ್ದಾರೆ. "ಅಹಂ ಮತ್ತು ಪರಮಾತ್ಮ (Spirit)ದ ನಡುವಿನ ಆಯ್ಕೆ" ಎಂಬ ಈ ಪರಿಭಾಷೆ ಇಂಗ್ಲಿಷಿನ "ಸ್ಪೀರಿಚುಯಸ್" (Spirituous) ಅಂದರೆ ಪ್ರಾಣ ಮತ್ತು ಬುದ್ಧಿ ಇಂಟೆಲಿಜೆನ್ಸ್ (Intelligence) ಅಂದರೆ ಈ ಎರಡರ ನಡುವಿನ ಆಯ್ಕೆ ಎಂಬ ಅರ್ಥದಿಂದ ಬಂದುದಾಗಿದೆ. ಅಧ್ಯಾತ್ಮಿಕ ಬುದ್ಧಿಶಕ್ತಿಯ ಮೂರು ಪ್ರಮುಖ ಮುಖಗಳಿವೆ.

ಅಹಂಕಾರದೊಡನೆ ತಾದಾತ್ಮ್ಯವನ್ನು ಹೊಂದದೆ ಮೇಲ್ಮಟ್ಟದ ಸ್ವಯಂಪ್ರಜ್ಞೆ ಅಥವಾ ಪರಮಾತ್ಮದೊಡನೆ ತಾದಾತ್ಮ್ಯವನ್ನು ಹೊಂದುವುದು. ದೈನಂದಿನ ಸಂಕಷ್ಟಗಳು ನಮ್ಮ ವೃತ್ತಿ, ಜಾತಿ, ನಮ್ಮ ಗತಕಾಲದ ಅನುಭವಗಳ ಕಡೆಗೆ ನಮ್ಮ ದೇಹದೊಡನೆಯು ತಾದಾತ್ಮ್ಯವನ್ನು ಹೊಂದದೆ ಇರುವುದು.

**ಕಾರ್ಯ** : ಕಾರಣವೆಂಬ ಸಾರ್ವತ್ರಿಕ ನಿಯಮವನ್ನು ಅರ್ಥಮಾಡಿಕೊಳ್ಳುವುದು. ಅಧ್ಯಾತ್ಮಿಕವಾಗಿ ನಮ್ಮ ಎಲ್ಲಾ ಪರಿಸ್ಥಿತಿಗಳಿಗೆ ನಾವೇ ಉತ್ತರದಾಯಿಗಳಾಗುವುದು. ಮತ್ತೊಬ್ಬರನ್ನು ಅಥವಾ ಪರಿಸ್ಥಿತಿಗಳನ್ನು ನಮ್ಮ ಸಂಕಷ್ಟಗಳಿಗೆ ಟೀಕೆ ಮಾಡದಿರುವುದು ಎಂದು ಇದರ ಅರ್ಥ.

**ನಿಸ್ಸಂಗತೆ** : ಅಧ್ಯಾತ್ಮಿಕ ಜೀವಿಗಳಿಗೆ, ಫಲಿತಾಂಶಗಳಿಗೆ, ರೂಪಗಳಿಗೆ ಅಥವಾ ಅನುಭವಗಳಿಗೆ ಅಂಟಿಕೊಳ್ಳದಿರುವುದು. ಅಧ್ಯಾತ್ಮಿಕ ತಾದಾತ್ಮ್ಯತೆಯಿಂದಾಗಿ ನಮ್ಮ ಯೋಗಕ್ಷೇಮವು ನಮ್ಮೊಳಗಿನಿಂದಲೇ ಸ್ಫುರಿಸುವುದು.

**ಅಧ್ಯಾತ್ಮಿಕ ಬುದ್ಧಿಶಕ್ತಿಯ ಮಾಪನ** : ಅಧ್ಯಾತ್ಮಿಕ ಬುದ್ಧಿಶಕ್ತಿಯ ಮಾಪನವನ್ನು ಕುರಿತು ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಸಾಂಪ್ರದಾಯಿಕ

Digitised by Bharatavani, CIIL

ವಿಧಾನಗಳಿಂದ ಇದನ್ನು ಅಳೆಯಲಾಗದೆಂಬ ಅಭಿಪ್ರಾಯವೊಂದಿದ್ದರೆ ಇತರ ಹಲವು ಮಾನಸಿಕ ಸಾಮರ್ಥ್ಯಗಳಂತೆ (Psychological constructs) ಇದರ ಸ್ವಲ್ಪಮಟ್ಟಿನ ಮಾಪನ ಸಾಧ್ಯವೆಂಬ ಅಭಿಪ್ರಾಯವೂ ಇದೆ. ಸಿಂಧುತ್ವೀಕರಿಸಿದ (Validated) ಪ್ರಶ್ನೋತ್ತರೀಯ ಮೂಲಕ 21 ಕೌಶಲಗಳನ್ನು ಅಳೆಯುವ ಸಾಮರ್ಥ್ಯ – ಆಧಾರಿತ (Competency based) ಪ್ರಥಮ ಅಧ್ಯಾತ್ಮಿಕ ಬುದ್ಧಿಶಕ್ತಿ ಮಾಪನ ಸಾಧನವನ್ನು ಸಿಂಡಿ ವಿಗ್ಗಲ್ಸ್ ವರ್ತ್‌ರವರು ಸಿದ್ಧಪಡಿಸಿದ್ದಾರೆ. ಈ ಸಾಧನದ ವಿಶ್ವಸನೀಯತೆಯನ್ನು ಕಂಡುಹಿಡಿಯಲು ಹಲವು ಅಂಕಿ–ಅಂಶಗಳನ್ನು ವಿಶ್ಲೇಷಣೆಗಳನ್ನು ಮಾಡಲಾಗಿದೆ.

ಡೇವಿಡ್ ಬಿ.ಕಿಂಗ್‌ರವರು ಅಧ್ಯಾತ್ಮಿಕ ಬುದ್ಧಿಶಕ್ತಿಯ ಸ್ವಯಂ–ವರದಿಯೊಂದನ್ನು ಸದ್ಯದಲ್ಲಿ ಸಿದ್ಧಪಡಿಸುತ್ತಿದ್ದಾರೆ. ಇದಕ್ಕೆ "ಅಧ್ಯಾತ್ಮಿಕ ಬುದ್ಧಿಶಕ್ತಿ ಸ್ವಯಂ ವರದಿ ಸೂಚಿ" (Spiritual Intelligence Self Report Inventory -SISRI) ಎಂದು ಹೆಸರು.

ಅಧ್ಯಾತ್ಮಿಕ ಬುದ್ಧಿಶಕ್ತಿಯ ವೈವಿಧ್ಯಮಯ ಪರಿಭಾಷೆ ಹಾಗೂ ಮಾದರಿಗಳಿಂದಾಗಿ ಈ ಬುದ್ಧಿಶಕ್ತಿಯ ಹಲವು ಸೂಚಕ ಮತ್ತು ಮಾಪಕಗಳನ್ನು ಮಂಡಿಸಲಾಗಿದೆ.

ಅಧ್ಯಾತ್ಮಿಕ ಬುದ್ಧಿಶಕ್ತಿಯು ಪರಿಕಲ್ಪನೆಯನ್ನು ಕೆಲವರು ಅವೈಜ್ಞಾನಿಕವೆಂದು ಪರಿಗಣಿಸುತ್ತಾರೆ. ಈ ಪರಿಕಲ್ಪನೆಯ ಸತ್ಯಾಸತ್ಯತೆಗೆ ಇದನ್ನು ಸುನಿಶ್ಚಿತ ಮಾನದಂಡಗಳನ್ನಾಧರಿಸಿದ ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಬೇಕು. ಆದರೆ ಸುನಿಶ್ಚಿತ ಮಾನದಂಡಗಳ ಕೊರತೆಯಿಂದ ಈ ವಿಚಾರ ಅವೈಜ್ಞಾನಿಕವೆಂಬ ವಾದವನ್ನು ಕೆಲವರು ಮಂಡಿಸುತ್ತಾರೆ.

ಈ ಪರಿಕಲ್ಪನೆಗೆ ಪಾಶ್ಚಾತ್ಯರು ಯಾವುದೇ ವಿಧದ ವಿವರಣೆ ಅಥವಾ ಪರಿಭಾಷೆಗಳನ್ನು ನೀಡಿದರೂ ಭಾರತೀಯರಿಗೆ ಇದು ಹೊಸದೇನಲ್ಲ. ಐದು ಸಾವಿರ ವರ್ಷಗಳ ಹಿಂದೆಯೇ ನಮ್ಮ ಋಷಿಗಳು ನಮ್ಮ ಆಂತರ್ಯದಲ್ಲಿ ಅಡಗಿರುವ ಸರ್ವವ್ಯಾಪಿ ಚೇತನದ ಮತ್ತು ಪರಮ ಸತ್ಯದ ಬಗ್ಗೆ ತಿಳಿಸಿದ್ದಾರೆ. ಈ ಪರಮ ಸತ್ಯವನ್ನು ಅರಿತುಕೊಂಡು ಸ್ವಸ್ವರೂಪ ಜ್ಞಾನ ಪಡೆಯುವ ಪ್ರವೃತ್ತಿ ಅಥವಾ ಪ್ರೇರಣೆ ಎಲ್ಲರಲ್ಲಿಯೂ ಸುಪ್ತವಾಗಿ ಇರುತ್ತದೆ ಎನ್ನುವುದು ಭಾರತೀಯ ನಿಲುವು. ಈ ಪ್ರೇರಣೆಯನ್ನೇ ಅಧ್ಯಾತ್ಮಿಕ ಬುದ್ಧಿಶಕ್ತಿ ಎನ್ನಬಹುದು. ಈ ಪರಿಕಲ್ಪನೆಯನ್ನು ಪಾಶ್ಚಾತ್ಯರು ಒಂದು ವ್ಯವಸ್ಥಿತ ರೀತಿಯಲ್ಲಿ ಪ್ರಸ್ತುತ ಪಡಿಸುವ ಪ್ರಯತ್ನ ಮಾಡಿದ್ದಾರಲ್ಲದೆ ಇದನ್ನು ಸಂಖ್ಯಾತ್ಮಕವಾಗಿ ಅಳೆಯುವ ಪ್ರಯತ್ನವನ್ನು ಕೈಗೊಂಡಿದ್ದಾರಷ್ಟೇ ಎಂದು ಹೇಳಬಹುದು.

–ಬಿ.ಎಂ. ಚಂ

## ಅಧ್ಯಾಪಕರ ಶಿಕ್ಷಣ

**ಅಧ್ಯಾಪಕರ ಶಿಕ್ಷಣ ಐತಿಹಾಸಿಕ ಹಿನ್ನೆಲೆ :** ಕ್ರಿ.ಶ. 18ನೆಯ ಶತಮಾನದ ಕೊನೆಯಲ್ಲಿ ಪ್ರಥಮ ಬಾರಿಗೆ ಪ್ರಾರಂಭವಾದ ಶಿಕ್ಷಕರ ತರಬೇತಿಯು ಬೆಲ್ ಲ್ಯಾಂಕ್‌ಸ್ಟ್ರಿಯನ್ ಕಾಯ್ದೆ ಮೇರೆಗೆ ಶೈಕ್ಷಣಿಕ ವ್ಯವಸ್ಥೆಯಿಂದ ಬೇರೆಯಾಗಿ ಬೆಳೆಯಿತು. ಈ ವ್ಯವಸ್ಥೆಯ ಅಡಿಯಲ್ಲಿ ಹಳೆಯ ವಿದ್ಯಾರ್ಥಿಗಳಿಗೆ ಹೊಸ ವಿದ್ಯಾರ್ಥಿಗಳಿಗೆ ಕಲಿಸಲು ತರಬೇತಿಯನ್ನು ನೀಡಲಾಯಿತು. ಅಧ್ಯಾಪಕರಿಗೆ ವಿಶೇಷವಾದ ತರಬೇತಿಯನ್ನು ಕೊಡುವಲ್ಲಿ ಡ್ಯಾನಿಶ್ ಮಿಶನರಿಗಳ ಪ್ರಯತ್ನ ಮೊದಲನೆಯದು. ತದನಂತರ 19ನೆಯ ಶತಮಾನದಲ್ಲಿ ಹಲವಾರು ಸ್ವಲ್ಪಮಟ್ಟಿನ ಪ್ರಯತ್ನಗಳನ್ನು ಕಂಡಿತು. ಕ್ರಿ.ಶ. 1819ರಲ್ಲಿ ಕಲ್ಕತ್ತೆಯ ಶಾಲಾ ಸಮಾಜವು ಸ್ಥಳೀಯ ಶಾಲೆಗಳಲ್ಲಿ ಮೂಲ ಶಿಕ್ಷಣ ಕೊಡಲು ಶಿಕ್ಷಕರಿಗೆ ತರಬೇತಿಯನ್ನು ಪ್ರಾರಂಭಿಸಿತು.

ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ತರಬೇತಿಯ ಅವಶ್ಯಕತೆಯನ್ನು ಮನಗಂಡು ಅಂದಿನ ಮದ್ರಾಸ್ ಗೌವರ್ನರ್ ಸರ್ ಥಾಮಸ್ ಮನ್ರೋ ಮಾರ್ಚ್ 10, 1826ರ ತನ್ನ ಗೊತ್ತುವಳಿಯಲ್ಲಿ ಶಿಕ್ಷಕರ ಶಿಕ್ಷಣ ಸಂಸ್ಥೆಯ ಸ್ಥಾಪನೆಗೆ ಶಿಫಾರಸ್ಸು ಮಾಡಿದರು. ಈ ಸಂಸ್ಥೆಯ ಗುರಿಯು ವೃತ್ತಿಪರವಾಗಿರದೆ ಶೈಕ್ಷಣಿಕವಾಗಿತ್ತು.

1854ರ ವುಡ್ಸ್ ವರದಿಯು ಶಿಕ್ಷಕರ ತರಬೇತಿಗೆ ಒತ್ತಾಯಪಡಿಸಿತು. ಮತ್ತು 1856ರಲ್ಲಿ ಮದ್ರಾಸಿನಲ್ಲಿ ಪ್ರಥಮ ಸರಕಾರಿ ತರಬೇತಿ ಕಾಲೇಜು ಸ್ಥಾಪನೆಯಾಯಿತು. ನಂತರ ಈ ಕಾಲೇಜು ಶಿಕ್ಷಕರ ಕಾಲೇಜು ಆಗಿ ಪರಿವರ್ತನೆಯಾಯಿತು. ಮುಂದೆ 1882ರಲ್ಲಿ ಹಂಟರ ಆಯೋಗವು ತನ್ನ ವರದಿಯನ್ನು ನೀಡಿದಾಗ ದೇಶದಲ್ಲಿ ಎರಡು ಕಾಲೇಜು, 106 ಸಾಮಾನ್ಯ ಶಾಲೆಗಳು, 20ನೆಯ ಶತಮಾನದ ಪ್ರಾರಂಭದಲ್ಲಿ ಆರು ತರಬೇತಿ ಕಾಲೇಜುಗಳು, 50 ಮಾಧ್ಯಮಿಕ ಶಿಕ್ಷಕರ ಶಾಲೆಗಳು ಮತ್ತು 54 ಪ್ರಾಥಮಿಕ ಶಿಕ್ಷಕರ ಶಾಲೆಗಳು ಇದ್ದವು. ಪ್ರಥಮ ದರ್ಜೆಯ ಸಂಸ್ಥೆಗಳಲ್ಲಿ ತರಬೇತಿಯ ಅವಧಿಯು ಸಾಮಾನ್ಯವಾಗಿ ಒಂದು ವರ್ಷ ಮತ್ತು ಕೆಳ ದರ್ಜೆಯ ಸಂಸ್ಥೆಗಳಲ್ಲಿ ಈ ಅವಧಿಯು ಒಂದು ವರ್ಷದಿಂದ ಮೂರು ವರ್ಷದವರೆಗೆ ನಿಗದಿಯಾಗಿತ್ತು. ಪಠ್ಯಕ್ರಮವು ಕೂಡಾ ಜೀವನ ಸದ್ಬಳಕೆಯ ವೈವಿಧ್ಯತೆಯಲ್ಲಿ ತಯಾರಿಸಲ್ಪಟ್ಟಿತು. ಕೆಲವು ಸಂಸ್ಥೆಗಳು ವೃತ್ತಿಪರ ತರಬೇತಿ ಮಾತ್ರ ನೀಡಿದರೆ, ಬೇರೆ ಸಂಸ್ಥೆಗಳು ಪಠ್ಯಕ್ರಮ ಮತ್ತು ವೃತ್ತಿಪರ ವಿಷಯುಗಳನ್ನು ಕಲಿಸಿದವು.

ಕ್ರಿ.ಶ. 1907ರ ವೇಳೆಗೆ ಬಾಂಬೆ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ಎಲ್ಲ ವಿಶ್ವವಿದ್ಯಾನಿಲಯಗಳು ಶಿಕ್ಷಕರ ಪದವಿಯನ್ನು ನೀಡಲು ಪ್ರಾರಂಭಿಸಿದವು. 1913ರ ಭಾರತ ಸರಕಾರದ ಗೊತ್ತುವಳಿಯು ತರಬೇತಿ ಸೌಲಭ್ಯಗಳ ಕೊರತೆಯ ಕಡೆಗೆ ಗಮನಹರಿಸಿ ಯಾವುದೇ ಶಿಕ್ಷಕ ಶಿಕ್ಷಣ ಪದವಿಯನ್ನು ಪಡೆಯದೇ ಬೋಧನೆಯಲ್ಲಿ ತೊಡಗುವಂತಿಲ್ಲ ಎಂದು ಒತ್ತಾಯ ಮಾಡಿತು. ಮುಂದೆ 1917ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ನೇಮಕವಾದ ವಿಶ್ವವಿದ್ಯಾಲಯ ಆಯೋಗವು ಶೈಕ್ಷಣಿಕ ಸಂಶೋಧನೆಯನ್ನು ಕೈಗೆತ್ತಿಕೊಳ್ಳುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ವಿಭಾಗ ಸ್ಥಾಪನೆಗೆ ಶಿಫಾರಸ್ಸು ಮಾಡಿತು. ಮುಂದುವರಿದು ಈ ವಿಶ್ವವಿದ್ಯಾಲಯ ಆಯೋಗವು ಶಿಕ್ಷಣ ವ್ಯವಸ್ಥೆ ಸ್ನಾತಕೋತ್ತರ ಪದವಿಯನ್ನು ಒಳಗೊಳ್ಳಬೇಕೆಂದು ಶಿಫಾರಸ್ಸು ಮಾಡಿತು.

ಕ್ರಿ.ಶ. 1936ರಲ್ಲಿ ಪ್ರಥಮ ಬಾರಿಗೆ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಯು ಪ್ರಾರಂಭವಾಯಿತು. 1950ರಲ್ಲಿ ತರಬೇತಿ ಕಾಲೇಜುಗಳ ಪ್ರಾಚಾರ್ಯರ ಪ್ರಥಮ ಸಮ್ಮೇಳನವು ಗುಜರಾತ ರಾಜ್ಯದ ಬರೋಡಾದಲ್ಲಿ ನಡೆಯಿತು. 1951ರಲ್ಲಿ ಪ್ರಥಮ ಬಾರಿಗೆ ಮೈಸೂರು ಶಿಕ್ಷಕರ ತರಬೇತಿ ಕಾಲೇಜಿನಲ್ಲಿ ಆರು ವಾರಗಳ ಬೇಸಿಗೆ ತರಬೇತಿ ಶಿಬಿರವನ್ನು ಉಪನ್ಯಾಸಕರಿಗೆ ಏರ್ಪಡಿಸಲಾಗಿತ್ತು. ಮುಂದುವರಿದ ಶಿಕ್ಷಣದ ಮೇಲೆ ವಿಚಾರ ಸಂಕಿರಣವು 1954ರಲ್ಲಿ ಹೈದರಾಬಾದಿನಲ್ಲಿ ನಡೆಯಿತು. ನಂತರದಲ್ಲಿ ಮಾಧ್ಯಮಿಕ ತರಬೇತಿ ಕಾಲೇಜುಗಳಲ್ಲಿ ಮುಂದುವರೆದ ಶಿಕ್ಷಣದ ವಿಭಾಗ ಪ್ರಾರಂಭವಾದವು. ಮುಂದೆ 1960ರಲ್ಲಿ ನಡೆದ 'ಪ್ರಾಥಮಿಕ ಶಿಕ್ಷಕರ ಶಿಕ್ಷಣ' ಎಂಬ ರಾಷ್ಟ್ರೀಯ ವಿಚಾರ ಸಂಕಿರಣವು ಮುಂಬರುವ 10 ವರ್ಷಗಳಲ್ಲಿ ಎಲ್ಲ ಪ್ರಾಥಮಿಕ ಶಿಕ್ಷಕರಿಗೆ ತರಬೇತಿ ನೀಡಲು ರಾಜ್ಯ ಸರಕಾರಗಳಿಗೆ ಗುಣಮಟ್ಟದ ತರಬೇತಿ ನೀಡಲು ಕಾಲ ನೀಡಿತು. 1963ರಲ್ಲಿ ನಡೆದ ಪ್ರಾಥಮಿಕ ಶಾಲಾ ಶಿಕ್ಷಕರ ಗುಂಪು ಕಾರ್ಯಾಗಾರವು ಬೇಸಿಗೆ ತರಬೇತಿ ಶಿಬಿರಗಳ ಮೂಲಕ ತರಬೇತಿ ಮತ್ತು ತರಬೇತಿ ಪಡೆದಿರದ ಶಿಕ್ಷಕರ ನಡುವಿನ ಬೃಹತ್ ಅಂತರವನ್ನು ತೊಡೆದು ಹಾಕಲು ಶಿಫಾರಸ್ಸು ಮಾಡಿತು. ಆಯಾ ರಾಜ್ಯಗಳ ಶಿಕ್ಷಣ ತರಬೇತಿ ಸಂಸ್ಥೆಗಳು ಪ್ರಾಥಮಿಕ, ಮಾಧ್ಯಮಿಕ ಮತ್ತು ಶಿಕ್ಷಣ ನಿರೀಕ್ಷಕರ ತರಬೇತಿಯ ಮೇಲೆ ಗಮನ

Digitised by Bharatavani, CIIL

ಕೇಂದ್ರೀಕರಿಸಲು, ತರಬೇತಿಯ ಉತ್ಕೃಷ್ಟತೆಯನ್ನು ಕಾಯ್ದುಕೊಳ್ಳಲು ಶಿಫಾರಸ್ಸು ಮಾಡಿತು. ನಂತರದಲ್ಲಿ ನವದೆಹಲಿಯಲ್ಲಿ ಪ್ರಾರಂಭಿಸಿದ NCERT ಮತ್ತು ನಾಲ್ಕು ಪ್ರಾದೇಶಿಕ ಶಿಕ್ಷಣ ಕಾಲೇಜುಗಳು ಭಾರತದ ಶಿಕ್ಷಣ ವ್ಯವಸ್ಥೆಯ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಿ ವಿಜ್ಞಾನ, ವಾಣಿಜ್ಯ, ತಂತ್ರಜ್ಞಾನ, ಕೃಷಿ ಮತ್ತು ಇಂಗ್ಲಿಷ್ ವಿಷಯಗಳ ಪ್ರಬುದ್ಧತೆಯನ್ನು ಹೆಚ್ಚಿಸಲು ಕಾರಣೀಭೂತವಾಗಿವೆ.

1964ರಲ್ಲಿ ಮಾಧ್ಯಮಿಕ ಶಿಕ್ಷಕರ ಶಿಕ್ಷಣ ಗುಂಪು ಅಧ್ಯಯನವು ರಾಷ್ಟ್ರ ಮತ್ತು ರಾಜ್ಯಮಟ್ಟದ ಶಿಕ್ಷಣ ಸಂಸ್ಥೆಗಳನ್ನು ತರಬೇತಿಯ ಉದ್ದೇಶಕ್ಕಾಗಿ ಆರಂಭಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದೆ.

1964–66ರ ಡಿ.ಎಸ್.ಕೊಠಾರಿ ಶಿಕ್ಷಣ ಆಯೋಗವು ಶಿಕ್ಷಕರ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಈ ಕೆಳಕಂಡ ಸಂಸ್ಥೆಗಳಿಂದ ಬೇರ್ಪಡಿಸಬೇಕೆಂಬ ನಿಲುವನ್ನು ವ್ಯಾಖ್ಯಾನಿಸಿದೆ.

ಅ. ವಿಶ್ವವಿದ್ಯಾಲಯದ ಇತರೇ ಅಂಗ ಸಂಸ್ಥೆಗಳಿಂದ

ಆ. ರಾಜ್ಯ ಶಿಕ್ಷಣ ಇಲಾಖೆಯಿಂದ

ಕ. ಇತರೇ ಶಿಕ್ಷಕ ಶಿಕ್ಷಣ ಸಂಸ್ಥೆಗಳಿಂದ

ಇದು ಶಿಕ್ಷಣದ ಒಂದು ಪ್ರತ್ಯೇಕವಾದ ಮತ್ತು ಅಂತರ್ ವಿಭಾಗಗಳನ್ನು ಹೊಂದಿದ ವ್ಯವಸ್ಥೆಯಾಗಿ ಅಭಿವೃದ್ಧಿ ಹೊಂದುತ್ತದೆಂದು ತಿಳಿಸಿದೆ.

**ಅಧ್ಯಾಪಕರ ಶಿಕ್ಷಣದ ಅರ್ಥ:** ಶಿಕ್ಷಣ ವೃತ್ತಿಯನ್ನು ಅನುಸರಿಸುವವರಿಗೆ ಅಥವಾ ಶಿಕ್ಷಣ ಕಾರ್ಯಕ್ಕೆ ಸಿದ್ಧವಾಗತಕ್ಕವರಿಗೆ ಅಗತ್ಯ ಸಿದ್ಧತೆಯನ್ನು ದೊರಕಿಸುವ ಹೊಣೆಗಾರಿಕೆಯನ್ನು ಹೊತ್ತಿರುವ ಅಧ್ಯಾಪಕರ ವೃತ್ತಿ ಶಿಕ್ಷಣದ ಸಂಸ್ಥೆಗಳು ಅಧಿಕೃತವಾಗಿ ರೂಪಿಸಿರುವ ಚಟುವಟಿಕೆ, ಜ್ಞಾನ ಅನುಭವಗಳ ಕಾರ್ಯಕ್ರಮ.

**ವ್ಯಾಖ್ಯೆಗಳು : ಗೂಡ್ಸ್ ಶಿಕ್ಷಣ ನಿಘಂಟಿನ ಪ್ರಕಾರ:** ವ್ಯಕ್ತಿಯನ್ನು ಶೈಕ್ಷಣಿಕ ವೃತ್ತಿಯಲ್ಲಿನ ಹೊಣೆಯನ್ನು ಹೊತ್ತುಕೊಳ್ಳುವ ಸದಸ್ಯನನ್ನಾಗಿ ಮಾಡಲು ಅಥವಾ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಅರ್ಹತೆಯನ್ನು ಪಡೆಯಲು ಸಹಾಯ ಮಾಡುವುದಕ್ಕಾಗಿ ಇರುವಂತಹ ಎಲ್ಲ ರೀತಿಯ ಔಪಚಾರಿಕ ಮತ್ತು ಅನೌಪಚಾರಿಕ ಚಟುವಟಿಕೆಗಳು ಮತ್ತು ಅನುಭವಗಳನ್ನು ಶಿಕ್ಷಕರ ಶಿಕ್ಷಣ ಒಳಗೊಂಡಿರುತ್ತದೆ.

**ಶಿಕ್ಷಣಶಾಸ್ತ್ರದ ನಿಘಂಟಿನ ಪ್ರಕಾರ:** ಶಿಕ್ಷಕರ ಶಿಕ್ಷಣವೆಂದರೆ ಶಿಕ್ಷಣ ವೃತ್ತಿಯ ಹೊಣೆಗಾರಿಕೆಯನ್ನು ನಿರ್ವಹಿಸಲು ಅಥವಾ ಒಂದು ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕನಾಗಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ನೆರವಾಗುವಂತೆ ವ್ಯಕ್ತಿಗೆ ದೊರಕುವ ಔಪಚಾರಿಕ ಮತ್ತು ಅನೌಪಚಾರಿಕ ಅನುಭವ, ಜ್ಞಾನ ಮತ್ತು ಕೌಶಲ.

**ಅಧ್ಯಾಪಕರ ಶಿಕ್ಷಣ ಸ್ವರೂಪ :** ಅಭಿವೃದ್ಧಿ ಹೊಂದಿದ ಮತ್ತು ಹಿಂದುಳಿದ ಎಲ್ಲ ದೇಶಗಳಲ್ಲಿಯೂ ಶಿಕ್ಷಣವು ಏಕಮೇವ ಜೀವನಾವಶ್ಯಕ ಅಂಶ. ಯಾವುದೇ ದೇಶವು ತನ್ನ ದೀರ್ಘಕಾಲಿಕ ಗುರಿಗಳ ಈಡೇರಿಕೆಯ ಕನಸನ್ನು ನನಸಾಗಿಸಲು ಸಶಕ್ತ ಶಿಕ್ಷಣ ರಹದಾರಿಯ ಹೊರತಾಗಿ ಬೇರೆ ದಾರಿ ಕಾಣಲಾರದು. ಶಿಕ್ಷಣವು ತತ್ವಜ್ಞಾನಿಗಳ, ರಾಜಕಾರಣಿಗಳ ಮತ್ತು ಅರ್ಥಶಾಸ್ತ್ರಜ್ಞರ ಸಾಮೂಹಿಕ ಹೊಂದಾಣಿಕೆಯಾದರೂ ಅದು ಮುಖ್ಯವಾಗಿ ಕೌಶಲ್ಯಾಧಾರಿತ ಸಂಪನ್ಮೂಲ ಶಿಕ್ಷಕನ ಮೇಲೆ ನಿಂತಿದೆ. ಶಿಕ್ಷಣದ ಸುಧಾರಿತ ಗುರಿಯು ಶಿಕ್ಷಕನನ್ನು ಸುತ್ತುವರಿದಿದೆ. ರಾಷ್ಟ್ರದ ಅಭಿವೃದ್ಧಿಯು ದಕ್ಷ ಮತ್ತು ಅರ್ಪಣಾ ಮನೋಭಾವದ ಶಿಕ್ಷಕನಿಂದ ಸಾಧ್ಯ. ರಾಷ್ಟ್ರದ ಏಳ್ಗೆಯ ಸಲುವಾಗಿ ಯಾವುದೇ ಅಡೆತಡೆಗಳನ್ನು ಮೆಟ್ಟಿನಿಲ್ಲುವ ಸಾಮರ್ಥ್ಯ ದಕ್ಷ ಮತ್ತು ಸಮರ್ಥ ಶಿಕ್ಷಕನಲ್ಲಿದೆ.

"ಪ್ರತಿಯೊಂದು ಪ್ರಗತಿಯು ಶಿಕ್ಷಣವನ್ನು ಅವಲಂಬಿಸಿದೆ. ಅಂತಹ ಶಿಕ್ಷಣ ಗುಣಮಟ್ಟದ ಶಿಕ್ಷಕರನ್ನವಲಂಬಿಸಿದೆ" ಈ ಮೇಲಿನ ವಾಕ್ಯವು ಶಿಕ್ಷಕರ ಜವಾಬ್ದಾರಿಯನ್ನು ಮತ್ತು ಪ್ರಾಮುಖ್ಯತೆಯನ್ನು ಶಿಕ್ಷಣದ ರಾಷ್ಟ್ರೀಯ ಗುರಿಯಲ್ಲಿ ಸಾದರಪಡಿಸುತ್ತದೆ.

ಶಿಕ್ಷಕರ ಶಿಕ್ಷಣದ ಅತ್ಯಂತ ಪ್ರಮುಖ ಅಂಶವೆಂದರೆ ಶಿಕ್ಷಕರನ್ನು ಜ್ಞಾನ, ಕೌಶಲ್ಯ ಮತ್ತು ತಂತ್ರಗಳ ತರಬೇತಿ ಪರಿಣಿತರನ್ನಾಗಿ ಮಾಡಿ ವಿದ್ಯಾರ್ಥಿಗಳ ಅರ್ಥೈಸಿಕೊಳ್ಳುವಿಕೆಯ ಮಟ್ಟಕ್ಕಿಳಿದು ಬೋಧಿಸುವ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಸೃಷ್ಟಿಸುವುದಾಗಿದೆ. ಅಷ್ಟೇ ಅಲ್ಲದೆ ಶಿಕ್ಷಕರು ಸ್ವಪ್ರಯತ್ನವಾದಿಗಳಾಗಿ ತಮ್ಮ ಆಂತರ್ಯವನ್ನರಿಯುವ ಸದ್ಗುಣ ಸಂಪನ್ನರಾಗಬೇಕಿದೆ. ಬದಲಾದ ಪರಿಸ್ಥಿತಿಗಳಲ್ಲಿ ಶಿಕ್ಷಣ ಮತ್ತು ಶಿಕ್ಷಕರ ಕಾರ್ಯ, ಜವಾಬ್ದಾರಿ ಮತ್ತು ಪ್ರಾಮುಖ್ಯತೆಗಳು ವ್ಯತ್ಯಾಸ ಹೊಂದಿದ್ದರೂ ಸಹ ಅವರ ಬೋಧನೆಯ ಅವಶ್ಯಕತೆ, ಶಿಕ್ಷಣ ಮತ್ತು ತಂತ್ರಗಳ ಮಾರ್ಪಾಡು ನೋಡಬಹುದೇ ಹೊರತು ತರಬೇತಿ ಮತ್ತು ಶಿಕ್ಷಣದ ಉಪೇಕ್ಷತೆಯನ್ನು ಕಾಣಲಾಗುವುದಿಲ್ಲ.

**ಅಧ್ಯಾಪಕರ ವೃತ್ತಿಶಿಕ್ಷಣದ ಅಗತ್ಯತೆ:** ನೇರವಾಗಿ ಅಧ್ಯಾಪಕರ ಯೋಗ್ಯತೆ, ಶಕ್ತಿ ಸಾಮರ್ಥ್ಯಗಳ ವಿಕಾಸಕ್ಕೆ ಸಂಬಂಧಿಸಿದಂತೆ ಶಿಕ್ಷಕರ ವೃತ್ತಿಶಿಕ್ಷಣದ ಕಾರ್ಯಕ್ರಮದ ಅಗತ್ಯತೆಯಿದೆ.

1. ಅಧ್ಯಾಪಕರು ತಾನು ಬೋಧಿಸಬೇಕಾದ ವಿಷಯ ವಸ್ತುವಿನ ಅಂಶಗಳ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಸಂಪೂರ್ಣ ಜ್ಞಾನ ಹೊಂದಿರಬೇಕು.
2. ಶಿಕ್ಷಣಶಾಸ್ತ್ರದ ತತ್ವಗಳು, ಮಕ್ಕಳ ಮನೋವಿಜ್ಞಾನದ ಜ್ಞಾನ ಮತ್ತು ತರಗತಿ ವ್ಯವಸ್ಥೆಗಳ ಜ್ಞಾನ ಅವರಿಗೆ ಇರಬೇಕು.
3. ಜಾಣ್ಮೆಯ ಮಟ್ಟದಲ್ಲಿ ಜ್ಞಾನವನ್ನು ಸಂಪರ್ಕಿಸುವ ಯೋಗ್ಯತೆ ಹೊಂದಿರಬೇಕು.
4. ಅಸಂಖ್ಯಾತ ಬೋಧನಾ ಸಾಧನಗಳ ಹಂಚಿಕೆ ಮತ್ತು ಉಪಯೋಗದ ಯೋಗ್ಯತೆ ಇರಬೇಕು.
5. ಬೋಧನಾ ಸಾಮಗ್ರಿಗಳ ಮತ್ತು ದೃಕ್–ಶ್ರವಣ ಸಾಧನಗಳ ಬೆಳವಣಿಗೆ ಮತ್ತು ಉಪಯೋಗದ ಸಾಮರ್ಥ್ಯ ಹೊಂದಿರಬೇಕು.
6. ಪಾಠ ವಿಷಯ ಕ್ರಮಣಿಕೆಯ ಮತ್ತು ಸಂಘಟನೆಯ ಸಾಮರ್ಥ್ಯವಿರಬೇಕು.
7. ವಿದ್ಯಾರ್ಥಿಗಳಿಗೆ ವೈಯಕ್ತಿಕ ಅಗತ್ಯತೆಗಳು ಮತ್ತು ಅದಕ್ಕನುಗುಣವಾಗಿ ಬೋಧನಾ ವಿಧಾನಗಳನ್ನು ಅಳವಡಿಸುವ ಸಾಮರ್ಥ್ಯವಿರಬೇಕು.
8. ವಿದ್ಯಾರ್ಥಿಗಳ ಪ್ರಗತಿಯನ್ನು ವಿವಿಧ ಪದ್ಧತಿಗಳಿಂದ ಪರೀಕ್ಷಿಸುವ ಮತ್ತು ಮೌಲ್ಯಮಾಪನ ಮಾಡುವ ಯೋಗ್ಯತೆ ಪಡೆದಿರಬೇಕು.
9. ಶಾಲೆಯ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯನ್ನು ಸಂಘಟಿಸುವ, ಮೇಲ್ವಿಚಾರಣೆ ನಡೆಸುವ ಯೋಗ್ಯತೆ ಇರಬೇಕು.
10. ಶಾಲೆಯ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಪರಿಣಾಮಕಾರಿಯಾಗಿ ಸಹಾಯ ಮಾಡುವ ಸಾಮರ್ಥ್ಯ ಹೊಂದಿರಬೇಕು.

Digitised by Bharatavani, CIIL

**ಯೋಗ್ಯ ಶಿಕ್ಷಕನಿಗೆ ಬೇಕಾಗುವ ಸಿದ್ಧತೆಗಳು**

1. ಶಿಕ್ಷಕನ ವೈಯಕ್ತಿಕ ಸಿದ್ಧತೆ : ರೂಪ, ಮಾನವೀಯತೆ, ಬಿಚ್ಚು ಮನಸ್ಸು, ಕಾರ್ಯಾರಂಭ, ಶಕ್ತಿ, ಶುದ್ಧೀಕರಣ ಇತ್ಯಾದಿ.

2. ವೃತ್ತಿಪರ ಸಿದ್ಧತೆ : ಕಲಿಯುವವನ ಮನೋವಿಜ್ಞಾನದ ಗುರಿಗಳು, ವಿಷಯಾನುಕ್ರಮಣಿಕೆ, ಶಿಕ್ಷಣ ಪದ್ಧತಿಗಳು ಮತ್ತು ಬೋಧನೆಯಲ್ಲಿ ಕೌಶಲ್ಯ ಇತ್ಯಾದಿ.

3. ಶಾರೀರಿಕ ಸಿದ್ಧತೆ : ಉತ್ತಮ ಆರೋಗ್ಯ, ದೈಹಿಕ ತೊಂದರೆಗಳಿಂದ ಸ್ವತಂತ್ರತೆ, ಜೀವನಶಕ್ತಿ ಇತ್ಯಾದಿ.

4. ಮಾನಸಿಕ ಸಿದ್ಧತೆ : ಬುದ್ಧಿಶಕ್ತಿ, ಮಾನಸಿಕ ಜಾಗೃತಿ, ನಿರ್ಣಯ, ಸಾಮಾನ್ಯ ಪ್ರಜ್ಞೆ ಇತ್ಯಾದಿ.

5. ಸಂವೇದನಾತ್ಮಕ ಸಿದ್ಧತೆ : ಸ್ವಯಂ ನಿಯಂತ್ರಣ, ತಾಳ್ಮೆ, ಪೂರ್ವಗ್ರಹ ಪೀಡಿತ ಮನೋಭಾವದಿಂದ ಮುಕ್ತರಾಗಿರುವುದು.

6. ಸಾಮಾಜಿಕ ಹೊಂದಾಣಿಕೆ : ಸಾಮಾಜಿಕ ವ್ಯವಸ್ಥೆಯ ಜ್ಞಾನ, ಬೇರೆಯವರೊಂದಿಗೆ ಹೊಂದಿಕೊಳ್ಳುವ ಯೋಗ್ಯತೆ, ಒಳ್ಳೆಯ ನೈತಿಕ ನಡವಳಿಕೆ ಇತ್ಯಾದಿ.

ಈ ಎಲ್ಲ ಅರ್ಹತೆಗಳು ಶಿಕ್ಷಕನಾದವನಲ್ಲಿ ಕಂಡುಬರುತ್ತವೆ. ಈ ಎಲ್ಲ ಗುಣಗಳನ್ನು ಸತತ ತರಬೇತಿ ಕಾರ್ಯಕ್ರಮದ ಮೂಲಕ ಬೆಳವಣಿಗೆ ಮಾಡಬಹುದಾಗಿದೆ. ಆದ್ದರಿಂದ ಶಿಕ್ಷಕರ ಶಿಕ್ಷಣದ ಅವಶ್ಯಕತೆಯು ತೀವ್ರವಾಗಿದೆ.

**ಅಧ್ಯಾಪಕರ ಶಿಕ್ಷಣದ ಉದ್ದೇಶಗಳು :** ಶಿಕ್ಷಣದ ಗುರಿಯ ಸಾಫಲ್ಯತೆಯ ಕೇಂದ್ರವ್ಯಕ್ತಿಯಾಗಿ ಶಿಕ್ಷಕನ ಪಾತ್ರ ಅವನ ಗುಣಮಟ್ಟವನ್ನಾಧರಿಸಿದೆ. ಶಿಕ್ಷಕರ ಶಿಕ್ಷಣ ಕಾರ್ಯಕ್ರಮದ ಅತೀ ಮುಖ್ಯ ಅಂಶವೆಂದರೆ ಗುಣಮಟ್ಟ. ಅನೇಕ ವೇಳೆ ಶಿಕ್ಷಕರ ತರಬೇತಿ ಕಾರ್ಯಕ್ರಮದಲ್ಲಿ ಗುಣಮಟ್ಟದ ಕೊರತೆ ಮತ್ತು ಅಲಭ್ಯತೆ ತಲೆದೋರಿದೆ. ಇಡೀ ಕಾರ್ಯಕ್ರಮವು ಹಣ ಮತ್ತು ಸಮಯದ ದೃಷ್ಟಿಯಲ್ಲಿ ಮಾತ್ರ ಅನುಪಯುಕ್ತವಾಗಿದೆ. ಶಿಕ್ಷಣ ವ್ಯವಸ್ಥೆಯ ಗುಣಮಟ್ಟವನ್ನೇ ಕಳೆಗುಂದಿಸುವ ಆತಂಕಕಾರಿ ಅಂಶವಾಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಗಳನ್ನು ತಡೆಗಟ್ಟುವುದು ಇಂದಿನ ಅತ್ಯಾವಶ್ಯಕ ಕಳಕಳಿಯಾಗಿವೆ.

ಯಾವುದೇ ರೀತಿಯ ಶಿಕ್ಷಣ ಬೇಕಾದರೆ ಅದಕ್ಕೆ ಕೆಲವೊಂದು ಉದ್ದೇಶಗಳಿರುವಂತೆ ಶಿಕ್ಷಕರ ಶಿಕ್ಷಣಕ್ಕೂ ಕೆಲವೊಂದು ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ.

1. ವಿಷಯದ ಜ್ಞಾನ : ಶಿಕ್ಷಕನು ಬೋಧಿಸಬೇಕಾದ ವಿಷಯ ಸಂಗತಿಗಳ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಜ್ಞಾನದ ಮೂಲಕ ಶಿಕ್ಷಣ ನೀಡುವುದು.

2. ಮಗುವಿನ ಮನೋವಿಜ್ಞಾನದ ಜ್ಞಾನ : ಮಗುವಿನ ಬೆಳವಣಿಗೆಯ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಸಮರ್ಥವಾಗುವುದಕ್ಕೆ ಮಗುವಿನ ಮನೋವಿಜ್ಞಾನದ ಜ್ಞಾನವನ್ನು ನೀಡುವುದು.

3. ಶಿಕ್ಷಣಶಾಸ್ತ್ರದ ತತ್ವಗಳ ಜ್ಞಾನ : ಕಲಿಕೆ ಮತ್ತು ಬೋಧನಾ ಪ್ರಕ್ರಿಯೆಯುನ್ನು, ತತ್ವಗಳನ್ನು ಮತ್ತು ತಂತ್ರಗಳನ್ನು ಅರ್ಥಮಾಡಿಕೊಳ್ಳಲು ಯೋಗ್ಯವಾಗುವಂತೆ ಶಿಕ್ಷಣಶಾಸ್ತ್ರದ ತತ್ವಗಳ ಜ್ಞಾನವನ್ನು ನೀಡುವುದು.

4. ಶಿಕ್ಷಣದ ಗುರಿಗಳ ಜ್ಞಾನ : ಶಿಕ್ಷಕರಿಗೆ ಶಿಕ್ಷಣದ ಗುರಿಗಳು ಮತ್ತು ಉದ್ದೇಶಗಳನ್ನು ತಿಳಿಯುವಂತೆ ಮಾಡುವುದು.

5. ಬೋಧನಾ ಸಾಮಗ್ರಿಗಳ ಬಳಕೆಯ ಸಾಮರ್ಥ್ಯದ ಬೆಳವಣಿಗೆ : ಅಸಂಖ್ಯಾತ ಬೋಧನಾ ಸಾಮಗ್ರಿಗಳು ಮತ್ತು ದೃಕ್–ಶ್ರವಣೋಪಕರಣಗಳ ಹಂಚಿಕೆ ಮತ್ತು ಅವುಗಳ ಉಪಯೋಗಕ್ಕೆ ಅಗತ್ಯವಾದ ಯೋಗ್ಯತೆಯನ್ನು ಅಥವಾ ಕುಶಲತೆಯನ್ನು ಬಳಸಬೇಕಾಗಿದೆ.

6. ಹೊಂದಾಣಿಕೆ ಪ್ರಕ್ರಿಯೆಗಳ ಜ್ಞಾನ : ಮಗುವಿನ ಸಮಸ್ಯೆಗಳನ್ನು ಅರಿತುಕೊಂಡು ಅವನು ಸರಿಯಾಗಿ ಹೊಂದಿಕೊಳ್ಳುವಂತೆ ಮಾಡಲು ಶಿಕ್ಷಕನನ್ನು ಸಮರ್ಥನನ್ನಾಗಿಸಲು ಹೊಂದಾಣಿಕೆ ಪ್ರಕ್ರಿಯೆಯ ಜ್ಞಾನವನ್ನು ನೀಡುವುದು.

7. ಪಠ್ಯೇತರ ಚಟುವಟಿಕೆಗಳ ಸಂಘಟನೆ : ಶಾಲೆಗಳ ಪಠ್ಯೇತರ ಚಟುವಟಿಕೆಗಳ ಸಂಘಟನೆ ಮತ್ತು ಮೇಲ್ವಿಚಾರಣೆಯ ಸಂಬಂಧವಾಗಿ ಶಿಕ್ಷಕರ ಯೋಗ್ಯತೆಯನ್ನು ಬೆಳಸುವುದು.

8. ಪಾಠ ಯೋಜನೆ : ಶಿಕ್ಷಕರಿಗೆ ಹೇಗೆ ಪರಿಣಾಮಕಾರಿಯಾಗಿ ಪಾಠಗಳನ್ನು ಯೋಜಿಸಬೇಕು ಮತ್ತು ಹೇಗೆ ಮಕ್ಕಳ ಬುದ್ಧಿಮಟ್ಟಕ್ಕೆ ತಕ್ಕಂತೆ ಜ್ಞಾನವನ್ನು ನೀಡಬೇಕು ಎಂಬುದರ ಬಗ್ಗೆ ತಿಳಿಸುವುದು. ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯತೆಗಳನ್ನು ಗಮನಿಸಿ ತನ್ನ ಬೋಧನೆಯನ್ನು ಹೊಂದಾಣಿಕೆ ಮಾಡಿಕೊಳ್ಳಲು ತರಬೇತಿ ನೀಡುವುದು.

9. ಮೌಲ್ಯಮಾಪನ ಪದ್ಧತಿಗಳ ಜ್ಞಾನ : ವಿದ್ಯಾರ್ಥಿಗಳ ಮಟ್ಟವನ್ನು ಅಳೆಯುವುದಕ್ಕಾಗಿ ಮತ್ತು ಅವರ ಸಾಧನೆಯನ್ನು ಮೌಲ್ಯಮಾಪನ ಮಾಡುವುದಕ್ಕಾಗಿ, ಶಿಕ್ಷಕರಿಗೆ ಮೌಲ್ಯಮಾಪನ ಪದ್ಧತಿಗಳ ಜ್ಞಾನವನ್ನು ನೀಡುವುದು.

10. ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಸಹಾಯಕವಾಗುವುದು: ಮಾರ್ಗದರ್ಶನವನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ಮಾಡಬೇಕಾಗಿದೆ. ಶಿಕ್ಷಕರ ಶಿಕ್ಷಣದ ಕಾಲಕ್ಕೆ ಶಾಲಾ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಶಿಕ್ಷಕರು ಪರಿಣಾಮಕಾರಿಯಾಗಿ ಸಹಾಯ ಮಾಡಲು ಅವರಿಗೆ ತರಬೇತಿ ನೀಡುವುದು.

**ಅಧ್ಯಾಪಕರ ಶಿಕ್ಷಣದಲ್ಲಿ ಸುಧಾರಣೆಗಳು:** ಶಿಕ್ಷಣ ಕ್ಷೇತ್ರದ ಸಾಫಲ್ಯತೆಯು ಉತ್ಕೃಷ್ಟ ಶಿಕ್ಷಕರನ್ನವಲಂಬಿಸಿದೆ. ಯಾವುದೇ ಶಿಕ್ಷಣದ ಉತ್ಕೃಷ್ಟತೆಯು ಶಿಕ್ಷಕರ ಆಯ್ಕೆ ಮತ್ತು ಅವರಿಗೆ ನೀಡುವ ತರಬೇತಿಯ ಮಾದರಿಯನ್ನು ಬಿಂಬಿಸುತ್ತಿರುತ್ತದೆ. ಒಂದು ವೇಳೆ ನಾವು ಉತ್ಕೃಷ್ಟ ಮತ್ತು ಗುಣಮಟ್ಟದ ಶಿಕ್ಷಕರನ್ನು ನಿರೀಕ್ಷಿಸಿದ್ದೇ ಆದಲ್ಲಿ ಅವರಿಗೆ ನೀಡುವ ತರಬೇತಿಯನ್ನು ಉನ್ನತ ಗುಣಮಟ್ಟಕ್ಕೇರಿಸಬೇಕು. 1964–66ರ ಕೊಠಾರಿ ಆಯೋಗವು ಇದೇ ಅಂಶವನ್ನು ಒತ್ತಿ ಹೇಳುತ್ತ ಶಿಕ್ಷಕರ ತರಬೇತಿಯ ತೀವ್ರ ಅವಶ್ಯಕತೆಯನ್ನು ಮತ್ತು ಶಿಕ್ಷಕ ವೃತ್ತಿಗೆ ಅಭ್ಯರ್ಥಿಗಳನ್ನು ಆಕರ್ಷಿಸಲು ತೆಗೆದುಕೊಳ್ಳಬೇಕಾಗಿರುವ ಮಾರ್ಗಗಳ ಬಗ್ಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದೆ. ಶಿಕ್ಷಕರ ವೃತ್ತಿಗೆ ಸೆಳೆಯಲು ವೇತನದ ಹೆಚ್ಚಳವನ್ನು ಅವರ ಆಯ್ಕೆಗೆ ಕ್ರಮಬದ್ಧ ಸಾಮರ್ಥ್ಯಾಧಾರಿತ ಮಾರ್ಗವನ್ನು ಅನುಸರಿಸಲು ಶಿಫಾರಸ್ಸು ಮಾಡಿದೆ. ಆದರೆ ಪ್ರಸ್ತುತ ಶಿಕ್ಷಕ ವೃತ್ತಿ ತೆಗೆದುಕೊಳ್ಳಲು ಇಚ್ಛಿಸುವ ವಿದ್ಯಾರ್ಥಿ ಶಿಕ್ಷಕರ ತರಬೇತಿಗೆ ಆಯ್ಕೆಯಾಗಲು ಆತ ಪರೀಕ್ಷೆಯಲ್ಲಿ ತೆಗೆದುಕೊಂಡ ಅಂಕಗಳನ್ನಷ್ಟೇ ಪರಿಗಣಿಸುತ್ತಿರುವುದು ವಿಪರ್ಯಾಸವೇ ಸರಿ.

Digitised by Bharatavani, CIIL

ಶಿಕ್ಷಕ ತರಬೇತಿಯನ್ನು ಅಭಿವೃದ್ಧಿಪಡಿಸಲು ಖಾಸಗಿಯವರ ನೇತೃತ್ವದಲ್ಲಿರುವ ತರಬೇತಿ ಸಂಸ್ಥೆಗಳನ್ನು ಸರ್ಕಾರಿ ಸ್ವಾಮ್ಯಕ್ಕೆ ತರುವುದು ಅಪೇಕ್ಷಿತ ಮತ್ತು ಪ್ರಥಮ ಆದ್ಯತೆಯ ಕ್ರಮಗಳಲ್ಲೊಂದಾಗಿದೆ. ಶಿಕ್ಷಣದ ಸಾರ್ವತ್ರೀಕರಣಗೊಳ್ಳುತ್ತಿರುವ ಈ ಕಾಲದಲ್ಲಿ ಶಿಕ್ಷಕ ತರಬೇತಿ ಕೇಂದ್ರಗಳನ್ನು ರಾಷ್ಟ್ರೀಕರಣ ಮಾಡುವ ಪ್ರಕ್ರಿಯೆ ಮಾದರಿಯ ಕ್ರಮವಾಗಿದೆ. ಶಿಕ್ಷಕ ತರಬೇತಿಯನ್ನು ಸುಧಾರಿಸಲು ಮತ್ತು ಪ್ರಗತಿಯನ್ನು ಜಾರಿಗೆ ತರಲು ರಾಷ್ಟ್ರದುದ್ದಗಲಕ್ಕೂ ಒಂದೇ ರೀತಿಯ ತರಬೇತಿ ಕ್ರಮವನ್ನು ಜಾರಿಗೊಳಿಸಬೇಕು. ಈ ರೀತಿಯ ಏಕೀಕೃತ ಶಿಕ್ಷಕ ತರಬೇತಿ ಮಾದರಿಯು ತರಬೇತಿಯಲ್ಲಿರುವ ದೋಷಗಳನ್ನು, ಪ್ರಾದೇಶಿಕ ಅಸಮಾನತೆ, ಸಂಕುಚಿತ ಪ್ರವೃತ್ತಿ, ಆಚರಣಾ ಪದ್ಧತಿಗಳಲ್ಲಿನ ದೋಷಗಳನ್ನು ನಿವಾರಿಸಿ, ತರಬೇತಿಯ ಸುಧಾರಿತ, ವಸ್ತುನಿಷ್ಠ ಸುಲಲಿತ ವ್ಯವಸ್ಥೆಗೆ ಅಡಿಪಾಯವಾಗುತ್ತದೆ. ಇದಲ್ಲದೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶಿಕ್ಷಕರ ಸ್ಥಾನಮಾನಗಳನ್ನು ಹೆಚ್ಚಿಸಿ ಶಿಕ್ಷಣದ ಮುಂದುವರಿಕೆಗೆ ಪ್ರಯತ್ನಿಸಬೇಕು. ಪೂರ್ವಪ್ರಾಥಮಿಕ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಶಿಕ್ಷಣ ಮತ್ತು ತರಬೇತಿಯನ್ನು ಸುಧಾರಿಸಬೇಕಾಗಿದೆ. ಸೇವಾಪೂರ್ವ ಮತ್ತು ಸೇವಾ ನಂತರದ ಶಿಕ್ಷಕ ತರಬೇತಿಯನ್ನು ವ್ಯವಸ್ಥಿತ ಮತ್ತು ಪರಿಣಾಮಕಾರಿ ವಿನ್ಯಾಸದೊಂದಿಗೆ ಸಂಘಟಿಸಿ ಕ್ರಮಬದ್ಧವಾಗಿ ಮತ್ತು ಫಲದಾಯಕತ್ವದ ಹಿನ್ನೆಲೆಯಲ್ಲಿ ಅನುಷ್ಠಾನಗೊಳಿಸಿ ಶಿಕ್ಷಕರ ಗುಣಮಟ್ಟವನ್ನು ಕಾಯ್ದುಕೊಂಡು ಮುಂದಿನ ಕಾರ್ಯಯೋಜನೆಗಳಿಗೆ ಬದ್ಧರಾಗಬೇಕಿದೆ.

**ಅಧ್ಯಾಪಕರ ಶಿಕ್ಷಣದ ಪ್ರಕಾರಗಳು**

1. ಪೂರ್ವಪ್ರಾಥಮಿಕ ಶಿಕ್ಷಕರ ಪ್ರಶಿಕ್ಷಣ
2. ಪ್ರಾಥಮಿಕ ಶಿಕ್ಷಕರ ಪ್ರಶಿಕ್ಷಣ
3. ಮಾಧ್ಯಮಿಕ ಶಾಲೆಯ ಶಿಕ್ಷಕರ ಪ್ರಶಿಕ್ಷಣ (ಶಿಕ್ಷಣ ಮಹಾವಿದ್ಯಾಲಯಗಳಲ್ಲಿ)
4. ಸ್ನಾತಕೋತ್ತರ ಶಿಕ್ಷಕರ ಪ್ರಶಿಕ್ಷಣ (ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗ)
5. ವಿಶೇಷ ವಿಷಯಗಳ ಪ್ರಶಿಕ್ಷಣ (ಭಾಷಾ ಶಿಕ್ಷಕ, ದೈಹಿಕ ಶಿಕ್ಷಕರು, ಸಂಗೀತ, ಕಲೆ, ನೃತ್ಯ, ಕಸಬುಗಳು, ಗೃಹವಿಜ್ಞಾನ)
6. ಶೈಕ್ಷಣಿಕ ಸಿಬ್ಬಂದಿ ಮಹಾವಿದ್ಯಾಲಯಗಳು (ವಿಶ್ವವಿದ್ಯಾಲಯದಲ್ಲಿ U.G.C. ಯಿಂದ ನಡೆಸುವ ಸಂಸ್ಥೆ).

**ಅಧ್ಯಾಪಕರ ಶಿಕ್ಷಣವನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ.**

1) **ಸೇವಾ ಪೂರ್ವದ ಶಿಕ್ಷಣ (Pre service) :** ಬೋಧಕ ಸೇವೆಗೆ ಸೇರುವ ಪೂರ್ವದ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿ ತರಬೇತಿ ಸೇವಾಪೂರ್ವ ಶಿಕ್ಷಣದ ವ್ಯಾಪ್ತಿಗೆ ಒಳಪಟ್ಟಿದೆ.

2) **ಸೇವಾವಧಿ ಶಿಕ್ಷಣ (In service) :** ಸಾಮಾನ್ಯ ಹಾಗೂ ವೃತ್ತಿಶಿಕ್ಷಣದ ನಂತರ ನಿರ್ದಿಷ್ಟ ಸೇವೆಗೆ ಸೇರಿದ ನಂತರ ಪಡೆಯುವ ಶಿಕ್ಷಣ. ಯಾವುದೇ ಕಾಲದಲ್ಲಿ ಪಡೆದ ವೃತ್ತಿಯ ಜ್ಞಾನವು ಎಲ್ಲ ಕಾಲಕ್ಕೂ ಸೂಕ್ತವಾಗಿರುವುದಿಲ್ಲ. ಬದಲಾದ ಸಮಾಜದ ಅಗತ್ಯತೆಗೆ ಅನುಗುಣವಾಗಿ ನೂತನ ರೀತಿಯ ಪಠ್ಯವಿಷಯ ಬೋಧನಾ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಶಿಕ್ಷಕನಿಗೆ ತರಬೇತಿ ಕೊಡಲಿರುವ ವ್ಯವಸ್ಥೆಯೇ ಸೇವಾವಧಿ ಶಿಕ್ಷಣ.

ಶಿಕ್ಷಣ ತರಬೇತಿ ಸಂಸ್ಥೆಯೊಂದರ ನೈಜ ಜವಾಬ್ದಾರಿಯೆಂದರೆ ಶಿಕ್ಷಕ ವಿದ್ಯಾರ್ಥಿಗಳನ್ನು ಶಾಲೆಯಲ್ಲಿನ ನೈಜ ಸನ್ನಿವೇಶವನ್ನು ಅರಿಯಲು ಅನುವು ಮಾಡಿಕೊಡುವುದಾಗಿದೆ. ಈ ಉದ್ದೇಶದ ಈಡೇರಿಕೆಗಾಗಿ ಬಿ.ಎಡ್. ಪ್ರಶಿಕ್ಷಣಾರ್ಥಿಗಳನ್ನು ಮುಖ್ಯೋಪಾಧ್ಯಾಯರು ಮತ್ತು ಅನುಭವಿಕ ಶಿಕ್ಷಕರ ಮಧ್ಯೆ ಶಾಲಾವಾತಾವರಣದಲ್ಲಿ ಕುಳ್ಳಿರಿಸಿ ತಾವು ಒಬ್ಬ ಶಿಕ್ಷಕರೆಂದು ಭಾವಿಸಲು ಹೇಳಿ ಶಾಲಾ ವಾತಾವರಣದ ಮತ್ತು ದೈನಂದಿನ ವ್ಯವಹಾರಗಳ ನಡುವೆ ತಲೆದೋರುವ ಸಮಸ್ಯೆಗಳನ್ನು ಚರ್ಚಿಸಿ ಅರ್ಥೈಸಿಕೊಳ್ಳುವಂತೆ ಮಾಡಬೇಕು.

**3) ಸ್ಥಾನಬದ್ಧ ಬೋಧನೆ ವ್ಯವಸ್ಥೆ (Internship System):** ಡಿ.ಎಡ್. ವಿದ್ಯಾರ್ಥಿಗಳಿಗಿದ್ದಂತೆ ಸ್ಥಾನಬದ್ಧ ಬೋಧನಾ ವ್ಯವಸ್ಥೆ ಬಿ.ಎಡ್. ವಿದ್ಯಾರ್ಥಿಗಳಿಗೂ ಉಪಯುಕ್ತವಾದದ್ದು. ಆದಾಗ್ಯೂ ಅದಕ್ಕೆ ತಗಲುವ ವೆಚ್ಚವು ದುಬಾರಿ. ಅದರ ಅನುಷ್ಠಾನದಿಂದ ಲಭ್ಯವಾಗಲಿರುವ ಅನುಭವಕ್ಕೆ ಹೋಲಿಸಿದರೆ ಕಡಿಮೇ ಸರಿ. ಈ ಯಶಸ್ವಿ ವ್ಯವಸ್ಥೆಯ ಅನುಷ್ಠಾನಕ್ಕೆ ಎರಡು ತಿಂಗಳಕಾಲ ಪ್ರೌಢಶಾಲೆಗಳಿಗೆ ಪೂರ್ಣವಾಗಿ ನಿಯುಕ್ತಿಗೊಳಿಸುವ ಅವಶ್ಯಕತೆಯಿದೆ. ಈ ಕಾರ್ಯಕ್ರಮಕ್ಕೆ ಶಾಲಾ ಮುಖ್ಯೋಪಾಧ್ಯಾಯರ ಮತ್ತು ಶಿಕ್ಷಕರ ಸಹಕಾರ ಬೇಕಿದೆ. ಈ ನಿಟ್ಟಿನಲ್ಲಿ ಒಂದು ಶೈಕ್ಷಣಿಕ ವರ್ಷದ ಕಾರ್ಯಕ್ರಮಗಳ ರೂಪರೇಷೆಗಳ ವಿನ್ಯಾಸಕ್ಕಾಗಿ ಶಾಲಾ ಮುಖ್ಯಸ್ಥರು ಮತ್ತು ತರಬೇತಿ ಸಂಸ್ಥೆಗಳ ಮುಖ್ಯಸ್ಥರ ನಡುವೆ ಒಂದು ಸುದೀರ್ಘ, ಸೌಹಾರ್ದಯುತ, ಅರ್ಥವತ್ತಾದ ಚರ್ಚೆ ಕಾರ್ಯಕ್ರಮದ ಆಯೋಜನೆಗೆ ಮುಂಚಿತವಾಗಿ ನಡೆಯಬೇಕು. ತರಬೇತಿಗಾಗಿ 15 ರಿಂದ 20 ಕಿಲೋಮೀಟರ್ ಒಳಗಿನ ಶಾಲೆಗಳಿಗೆ ಶಿಕ್ಷಕ ವಿದ್ಯಾರ್ಥಿಗಳನ್ನು ಕಳುಹಿಸಿಕೊಡತಕ್ಕದ್ದು. ವಿದ್ಯಾರ್ಥಿಗಳು ತಮ್ಮ Internshipನ ಅವಧಿಯೊಳಗೆ ತಾವು ಆಯ್ಕೆ ಮಾಡಿಕೊಂಡ ವಿಶೇಷ ವಿಷಯದ ಮೇಲೆ ಶಾಲಾ ಪ್ರಾಯೋಗಿಕ ವಾತಾವರಣ ಮತ್ತು ಸ್ಥಿತಿ–ಗತಿಯ ಹಿನ್ನೆಲೆಯಲ್ಲಿ ನಿಯೋಜಿತ ಕಾರ್ಯವನ್ನು ಪೂರೈಸಬೇಕು. ಈ ಅವಧಿಯಲ್ಲಿಯೇ ವಿದ್ಯಾರ್ಥಿಗಳು ನೈಜ ಕಾರ್ಯಾನುಭವವನ್ನು ಪಡೆಯಲು ಶಾಲಾಸ್ಥಾವರ, ವಿದ್ಯಾರ್ಥಿಗಳ ವರ್ತನೆಯನ್ನು ತಿಳಿಯಲು ವ್ಯಕ್ತಿ ಅಧ್ಯಯನ, ಮನೋಸಾಮಾಜಿಕ ಶಾಲಾ ವಾತಾವರಣವನ್ನರಿಯಲು ಮನೋವಿಜ್ಞಾನದ ಹಲವು ನಿಯೋಜಿತ ಕಾರ್ಯಗಳನ್ನು ಪೂರೈಸಿ ತಮ್ಮ ಜ್ಞಾನವನ್ನು ಶ್ರೀಮಂತಗೊಳಿಸಿಕೊಳ್ಳಬೇಕು.

**ಸೆಮಿಸ್ಟರ್ ವ್ಯವಸ್ಥೆ :** ಇತ್ತೀಚಿನ ವರ್ಷಗಳಲ್ಲಿ ಬಹಳಷ್ಟು ದೇಶಗಳಲ್ಲಿ ಸೆಮಿಸ್ಟರ್ ಮತ್ತು ಟ್ರೈಮಿಸ್ಟರ್ ವ್ಯವಸ್ಥೆಗಳನ್ನು ಜಾರಿಗೆ ತರುತ್ತಿರುವ ನವನಾವೀನ್ಯ ವ್ಯವಸ್ಥೆಯು ಬಳಕೆಯಲ್ಲಿದೆ. ಇದರಿಂದ ಶ್ರಮವಿಭಜನೆಯ ತತ್ವ, ಸಮಯಾಧಾರಿತ ಬಿಡಿ ವ್ಯವಸ್ಥೆ ಅನುಷ್ಠಾನಗೊಳ್ಳುತ್ತಿದೆ. ಶಿಕ್ಷಕ ವಿದ್ಯಾರ್ಥಿಗಳಿಗೆ ವರ್ಷವಿಡೀ ಕಲಿಯುವ ಹೊರೆ ಕಡಿಮೆಯಾಗಿ ಕಲಿಯಬೇಕಾದ ವಿಷಯವನ್ನು ಹೆಚ್ಚು ವ್ಯವಸ್ಥಿತವಾಗಿಯೂ, ಕ್ರಮಬದ್ಧವಾಗಿಯೂ, ನಿಯಮಿತವಾಗಿಯೂ ಕಲಿಯಲು ಸಹಾಯಕವಾಗಿದೆ. ಆದರೆ ಪರೀಕ್ಷೆಗಳು ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಹೊರೆಯಾಗಿ ಪರಿಣಮಿಸಿವೆ. ತಮ್ಮ ನೈಜ ಕಲಿಕೆಯನ್ನು ನಿರ್ದಿಷ್ಟ ಚೌಕಟ್ಟಿನ ಎಲ್ಲೆಯಲ್ಲಿ ಹೊರಹಾಕಬಹುದಾಗಿದೆ. ಈ ವ್ಯವಸ್ಥೆಯ ಆದರ್ಶ ಮತ್ತು ಅನುಸರಣೀಯ ಗುಣ ಇದರ ಅನುಷ್ಠಾನಕ್ಕೆ ನೆರವಾಗಿದೆ.

**ಅಧ್ಯಾಪಕ ಶಿಕ್ಷಣದ ಪರೀಕ್ಷೆ ಮತ್ತು ಮೌಲ್ಯಮಾಪನ :** ನಮ್ಮ ಮೌಲ್ಯಮಾಪನ ಪದ್ಧತಿಯಲ್ಲಿ ಆಮೂಲಾಗ್ರ ಪ್ರಗತಿ ಆಗಬೇಕಿದೆ. ನೈಜ ತರಗತಿಯಲ್ಲಿ ಯಾವೆಲ್ಲಾ ವಿಷಯ, ಬೋಧನಾ ಪದ್ಧತಿ ಮತ್ತು ಕೌಶಲಗಳು ಬಳಕೆಯಾಗಲಿವೆಯೋ, ಆ ಅಂಶಗಳಲ್ಲಿ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಪರಿಣಿತಿಯನ್ನು ಹೊಂದಿದ್ದಾರೆ ಎಂಬುದನ್ನು ಒರೆಗೆ ಹಚ್ಚಿ ನೋಡಬೇಕಿದೆ. ನಮ್ಮ ಮೌಲ್ಯಮಾಪನ ಪದ್ಧತಿಯು ಪ್ರತಿಹಂತದಲ್ಲಿಯೂ ವಿದ್ಯಾರ್ಥಿಗಳನ್ನು ವಿಮರ್ಶಿಸುವುದಾಗಿದೆ. ಪ್ರಸ್ತುತ ಪರೀಕ್ಷಾ ಪದ್ಧತಿ ಅಭ್ಯರ್ಥಿಯ ಭಾವಾಭಿವ್ಯಕ್ತತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಯಾವ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಸಮಸ್ಯೆಯೊಂದರ ಪರಿಹಾರಕ್ಕೆ ವಿವರಣಾತ್ಮಕ ಮತ್ತು ತೃಪ್ತಿದಾಯಕ ಉತ್ತರವನ್ನು

Digitised by Bharatavani, CIIL

ಬರವಣಿಗೆಯಲ್ಲಿ ಮಂಡಿಸುತ್ತಾನೋ ಅದೇ ಅಭ್ಯರ್ಥಿ ಗುಂಪು ಚರ್ಚೆಯಲ್ಲಿ ಅದೇ ವಿಷಯಗಳನ್ನು ಪ್ರಸ್ತುತಪಡಿಸಲು ಅಸಮರ್ಥನಾಗಿರಬಹುದು. ಪ್ರಜಾಪ್ರಭುತ್ವದಲ್ಲಿ ನೀಡಲಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಶಿಕ್ಷಕರು ನೈಜವಾಗಿ ಸದುಪಯೋಗಪಡಿಸಿಕೊಂಡ ಶಿಕ್ಷಣ ವ್ಯವಸ್ಥೆಗೆ ಪ್ರಜಾಸತ್ತಾತ್ಮಕ ಮೌಲ್ಯಾಧಾರಿತ ಶ್ರೇಯಸ್ಸನ್ನು ನೀಡಬೇಕಿದೆ. ಏಕೆಂದರೆ ಶಿಕ್ಷಣ ವೃತ್ತಿ ಬರವಣಿಗೆಯ ಸಾಫಲ್ಯತೆಗಿಂತ ಅಭಿವ್ಯಕ್ತಿಯ ಸಾಫಲ್ಯತೆಯನ್ನು ಅವಲಂಬಿಸಿದೆ ಎಂದು ಶಿಕ್ಷಕರು ಮನಗಾಣಬೇಕಿದೆ.

ಶಿಕ್ಷಕ ವಿದ್ಯಾರ್ಥಿಗಳಿಗೆ ಕೊಡುವ ತರಬೇತಿಯು ಶಾಲಾವರ್ಗಕ್ಕೆ ಮಾತ್ರ ಅನ್ವಯವಾಗದೇ ಆತನ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸುವಂತಿರಬೇಕು. ಸಮಾಜದ ಎಲ್ಲ ಕ್ಷೇತ್ರಗಳಿಗೂ ಅನ್ಯೋನ್ಯ ರೀತಿಯಲ್ಲಿ ಹೊಂದಾಣಿಕೆಯಾಗಿ ಸಮಾಜ ಸುಧಾರಣೆ ಮತ್ತು ಪ್ರಗತಿಗೆ ವ್ಯಕ್ತಿತ್ವಗಳು ರೂಪುಗೊಳ್ಳಬೇಕು. ಗಾಂಧೀಜಿಯವರು ರೂಪಿಸಿದ ಮೂಲಶಿಕ್ಷಣ ಹೇಗೆ ಕರ, ಉರ ಮತ್ತು ಶಿರಗಳಿಗೆ ಅನ್ವಯವಾಗುತ್ತದೆಯೋ ಅದೇ ರೀತಿ ಶಿಕ್ಷಕ ವಿದ್ಯಾರ್ಥಿಗಳಿಗೆ ನೀಡುವ ತರಬೇತಿ ಹೆಚ್ಚು ಪ್ರಾಯೋಗಿಕವಾಗಿರಬೇಕು. ತರಬೇತಿ ಕೇಂದ್ರದಲ್ಲಿ ನಿರಂತರವಾಗಿ ದೈಹಿಕ, ಮಾನಸಿಕ, ಭಾವನಾತ್ಮಕ ಕಾರ್ಯಾನುಭವಗಳನ್ನು ಯೋಜಿಸಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಕಾರ್ಯಗೌರವ, ಶ್ರದ್ಧೆ, ಸಹಕಾರ ಗುಣಗಳು ವೃದ್ಧಿಯಾಗುತ್ತವೆ.

ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಸಮಾಜೋಪಯೋಗಿ ಉತ್ಪಾದಕ ಕಾರ್ಯಗಳ ಆಯೋಜನೆಯು ಶಿಕ್ಷಕ ವಿದ್ಯಾರ್ಥಿಗಳಲ್ಲಿ ಕಾರ್ಯ ಪೂರೈಸುವ ಪ್ರೇರಣೆ, ಸಹಕಾರಯುತ ಜೀವನ ಮೌಲ್ಯಗಳು, ಹೊಂದಾಣಿಕೆಯ ಪ್ರತಿಫಲಗಳು, ಅರ್ಪಣಾ ಮನೋಭಾವನೆಯಿಂದ ಕಾರ್ಯತತ್ಪರರಾಗುವ ಎಲ್ಲ ಆದರ್ಶ ಅಂಶಗಳನ್ನು ಬೆಳೆಸಿ ವಿಶ್ವಗುರು ಬಸವಣ್ಣನವರ "ಕಾಯಕವೇ ಕೈಲಾಸ" ಎಂಬ ನಾಣ್ಣುಡಿಯ ಪ್ರಾತ್ಯಕ್ಷಿಕೆಯನ್ನೊದಗಿಸುತ್ತದೆ. ಈ ರೀತಿಯ ಸ್ಫೂರ್ತಿದಾಯಕ, ಶ್ರಮಾಧಾರಿತ ಮೌಲ್ಯಯುತ ಕಾರ್ಯಕ್ರಮಗಳು ಶಿಕ್ಷಕ ತರಬೇತಿಯ ಉತ್ಕೃಷ್ಟತೆಯ ಗುಣಮಟ್ಟವನ್ನು ವೃದ್ಧಿಸಿ ದೇಶದ ಪ್ರಗತಿಯಲ್ಲಿ ಶಿಕ್ಷಣಕ್ಷೇತ್ರವು ವಹಿಸುವ ನಿರ್ಣಾಯಕ ಅಂಶವನ್ನು ಸಾಬೀತುಪಡಿಸುತ್ತದೆ.

–ಎಸ್.ಸು.ಸ.

## ಅಧ್ಯಾಪಕರ ಶಿಕ್ಷಣದ ಉನ್ನತ ಸಂಸ್ಥೆಗಳು

ಶಿಕ್ಷಕರ ಶಿಕ್ಷಣ ಇಂದು ಮಹತ್ವದ್ದಾಗಿದೆ. ಶಿಕ್ಷಕರ ಶಿಕ್ಷಣದ ದಕ್ಷತೆಯನ್ನು ಹೆಚ್ಚಿಸುವಲ್ಲಿ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು ಹಾಗೂ ಶಿಕ್ಷಣದಲ್ಲಿ ಮುಂದುವರೆದ ಅಧ್ಯಯನ ಸಂಸ್ಥೆಗಳು ಆರಂಭವಾಗಿವೆ.

**ಅ. ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು:**

1. ಮಾಧ್ಯಮಿಕ (ಸೆಕೆಂಡರಿ) ಶಾಲಾ ಶಿಕ್ಷಕರ ತಯಾರಿಗಾಗಿ ಸೇವಾ ಪೂರ್ವ ಶಿಕ್ಷಕರ ಪ್ರಶಿಕ್ಷಣವನ್ನು ಸಂಘಟಿಸುವದು.
2. ವಿಷಯ ಬೋಧನೆಗೆ ಸಂಬಂಧಿಸಿದ (3–4 ವಾರಗಳ ಅವಧಿ) ಮತ್ತು ಚಿಕ್ಕದಾದ ಶೈಕ್ಷಣಿಕ ವಿಷಯ (3ರಿಂದ 10 ದಿನಗಳ ಅವಧಿಯ)ದ ಬಗ್ಗೆ ಸೇವಾನಿರತ ಮಾಧ್ಯಮಿಕ ಶಾಲಾ ಶಿಕ್ಷಕರ ಸೇವಾನಿರತ ಶಿಕ್ಷಣವನ್ನು ಸಂಘಟಿಸುವದು. ಪ್ರತಿ 5 ವರುಷಗಳಲ್ಲಿ ಪ್ರತಿಯೊಬ್ಬ ಶಿಕ್ಷಕರು ಕೊನೆಯ ಪಕ್ಷ ಒಂದು ವಿಷಯದ ತರಬೇತಿಯನ್ನು ಪಡೆಯಲಿ ಎಂಬ ದೃಷ್ಟಿಕೋನದೊಂದಿಗೆ, ಪ್ರತ್ಯೇಕವಾಗಿ ಚಿಕ್ಕ ಅವಧಿಯ ತರಬೇತಿಗಳು ಸೇರಿವೆ.
3. ಮಾಧ್ಯಮಿಕ ಶಾಲೆಗಳಿಗೆ ಶಾಲಾ ಸಂಕೀರ್ಣಗಳಿಗೆ ಮತ್ತು ವೈಯಕ್ತಿಕವಾಗಿ ಶಿಕ್ಷಕರಿಗೆ ಸಂಪನ್ಮೂಲ ಆಧಾರಿತ ಸೇವೆಗಳು ಮತ್ತು ವಿಸ್ತೃತ ಸೇವೆಗಳನ್ನು ಒದಗಿಸುವದು.
4. ಶಾಲಾ ಶಿಕ್ಷಣದಲ್ಲಿ ಪ್ರಯೋಗಗಳನ್ನು ಮತ್ತು ನವೀನತೆಯನ್ನು ಉತ್ತೇಜಿಸುವದು.
5. ಶೈಕ್ಷಣಿಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ಉತ್ತೇಜನ ಕೊಡುವದು ಮತ್ತು ತರಬೇತಿಯನ್ನು ಒದಗಿಸುವದು. ಉದಾ: ಮೌಲ್ಯ ಆಧಾರಿತ ಶಿಕ್ಷಣ, ಕಾರ್ಯಾನುಭವ, ಪರಿಸರ ಶಿಕ್ಷಣ, ಜನಸಂಖ್ಯಾ ಶಿಕ್ಷಣ, ಶೈಕ್ಷಣಿಕ ತಂತ್ರಜ್ಞಾನ, ಗಣಕಯಂತ್ರ ಅಕ್ಷರ ಜ್ಞಾನ, ವೃತ್ತಿಪರ ಮತ್ತು ವಿಜ್ಞಾನ ಶಿಕ್ಷಣ ಇವೇ ಆಧುನಿಕ ಕ್ಷೇತ್ರಗಳು.
6. ವೃತ್ತಿ ಸಂಸ್ಥೆಗಳಿಗೆ ಬಲವನ್ನು ಒದಗಿಸುವದು.
7. ಶಿಕ್ಷಕರ ತಯಾರಿ ಕಾರ್ಯಕ್ರಮಗಳಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಪ್ರೋತ್ಸಾಹಿಸುವದು.

**ಬ. ಶಿಕ್ಷಣದಲ್ಲಿ ಮುಂದುವರೆದ ಅಧ್ಯಯನ ಸಂಸ್ಥೆಗಳು:**

ಈ ಮೇಲಿನ ಕಾರ್ಯಗಳಿಗೆ ಹೆಚ್ಚುವರಿಯಾಗಿ, ಈ ಸಂಸ್ಥೆಗಳು ಕೆಳಗಿನ ಕಾರ್ಯಗಳನ್ನು ನೆರವೇರಿಸುತ್ತವೆ.

1. ಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಣದ ಕಾರ್ಯಕ್ರಮಗಳನ್ನು ನಿರ್ವಹಿಸಿ ಅದರ ಮುಖಾಂತರ ಪ್ರಾಥಮಿಕ ಶಾಲಾ ಶಿಕ್ಷಕರ ವಿದ್ಯಾಲಯಗಳ ಶಿಕ್ಷಕರುಗಳನ್ನು ತಯಾರುಗೊಳಿಸುವದು.
2. ಶಿಕ್ಷಣದಲ್ಲಿ ಎಂ.ಎಡ್., ಎಂಫಿಲ್., ಮತ್ತು ಪಿಎಚ್.ಡಿ. ಮುಂತಾದ ಕಾರ್ಯಕ್ರಮಗಳ ಮುಖಾಂತರ ಶಿಕ್ಷಣ ಮಹಾವಿದ್ಯಾಲಯಗಳ ಪ್ರಶಿಕ್ಷಕರನ್ನು ತಯಾರುಗೊಳಿಸುವದು, ಶಿಕ್ಷಣದಲ್ಲಿ ಸಂಶೋಧನಾ ಕಾರ್ಯಕರ್ತರನ್ನು ತಯಾರುಗೊಳಿಸುವದು. ಮಾಧ್ಯಮಿಕ ಶಾಲಾ ಶಿಕ್ಷಕರ 4 ವರುಷಗಳ ಸಮಗ್ರ ವಿಷಯದ ಪಠ್ಯವನ್ನು ಕೆಲವು ಶಿಕ್ಷಣದಲ್ಲಿ ಮುಂದುವರಿದ ಅಧ್ಯಯನ ಕೇಂದ್ರಗಳು ಪ್ರಾರಂಭಗೊಳಿಸಬಹುದು.
3. ಸೇವಾ ನಿರತ ತರಬೇತಿ:
    1. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ತರಬೇತುದಾರರಿಗೆ
    2. ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರುಗಳಿಗೆ
    3. ಮಾಧ್ಯಮಿಕ ಶಾಲಾ ಮೇಲ್ವಿಚಾರಣೆಯೊಂದಿಗೆ ಭಾಗಿಗಳಾದ ವ್ಯಕ್ತಿಗಳಿಗೆ
4. ಶಿಕ್ಷಕರ ಶಿಕ್ಷಣದ ಮಾರ್ಗದರ್ಶನ ಕಾರ್ಯಕ್ರಮಗಳನ್ನು ಸಂಘಟಿಸುವದು.
5. ಶಿಕ್ಷಣದಲ್ಲಿ ಮುಂದುವರಿದ ಹಂತದ ಮೂಲ ಮತ್ತು ಅನ್ವಯ ಸಂಶೋಧನೆಗಳನ್ನು ನಿರ್ವಹಿಸುವದು. ಅವುಗಳಲ್ಲಿಯೂ ಪ್ರಮುಖವಾಗಿ ಅಂತರ ವಿಷಯಗಳ ಸ್ವಭಾವ. ಉದಾ: ಶೈಕ್ಷಣಿಕ ಸಮಾಜಶಾಸ್ತ್ರ ಮತ್ತು ಆರ್ಥಿಕ ಅಭಿವೃದ್ಧಿ, ಶೈಕ್ಷಣಿಕ ಮನೋವಿಜ್ಞಾನ ಇತ್ಯಾದಿ.
6. ತಂತ್ರಾಂಶ ಸಾಮಗ್ರಿಗಳ ತಯಾರಿಕೆಯ ತರಬೇತಿ ಕಾರ್ಯಕ್ರಮಗಳನ್ನು ನೆರವೇರಿಸುವದು ಮತ್ತು ಶೈಕ್ಷಣಿಕ ತಂತ್ರಜ್ಞಾನದ ಉಪಯೋಗ.
7. ಸೇವಾನಿರತ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಸಂಘಟಿಸಿದ ನಂತರ ಸ್ಥಿರತೆಯನ್ನು ಪಡೆಯುತ್ತವೆ. ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ

Digitised by Bharatavani, CIIL

ಕೇಂದ್ರವು ತನ್ನ ಸಾಮರ್ಥ್ಯಕ್ಕನುಗುಣವಾಗಿ ಬೇಡಿಕೆಗನುಗುಣವಾಗಿ ದೀರ್ಘಾವಧಿಯ ಮತ್ತು ಯೋಗ್ಯ ಕ್ಷೇತ್ರಗಳಲ್ಲಿ ವಿಶೇಷವಾದ ಅಧ್ಯಯನ/ವಿಷಯಗಳನ್ನು ಸಂಘಟಿಸಬಹುದು.

8. ತರಬೇತಿ ಸಂಸ್ಥೆಗಳಿಗೆ ಶೈಕ್ಷಣಿಕ ಬೆಂಬಲವನ್ನು ಒದಗಿಸುವ ಮತ್ತು ಶಿಕ್ಷಣ ಮಹಾವಿದ್ಯಾಲಯಗಳಿಗೆ ಸಂಪನ್ಮೂಲ ಬಲವನ್ನು ಒದಗಿಸುವುದು.

9. ಬೋಧನಾ ಸಾಮಗ್ರಿಗಳ ಅಭಿವೃದ್ಧಿಯಲ್ಲಿಯೂ ಸಹ ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಕೇಂದ್ರಗಳನ್ನು ತೊಡಗಿಸಿಕೊಳ್ಳ ಬಹುದಾಗಿದೆ.

   1. ಘಟಕ ಯೋಜನೆಗಳು ಅಥವಾ ವಿಷಯ ಸಂಪದೀಕರಣಗಳ ಬೋಧನೆ ಸಾಮಗ್ರಿಗಳು.
   2. ಪ್ರಶ್ನೆ ಭಂಡಾರಗಳು.
   3. ಶಿಕ್ಷಕರ ಕೈಪಿಡಿಗಳು, ವಿದ್ಯಾರ್ಥಿ ಕಾರ್ಯ ಪುಸ್ತಕಗಳು ಇತ್ಯಾದಿ.
   4. ಆಕರ ಪುಸ್ತಕಗಳು ಮತ್ತು ಸಂಪನ್ಮೂಲ ಸಾಮಗ್ರಿಗಳು.
   5. ನವೀನತೆಯ ಕಾರ್ಯಕ್ರಮಗಳು ಮತ್ತು ರೂಢಿ ಮತ್ತು ಪ್ರಾಯೋಗಿಕ ಯೋಜನೆಗಳು.
   6. ಸ್ವಯಂ ಕಲಿಕೆ ಮತ್ತು ಬೋಧನೆಯ ಕಂತೆಗಳು.
   7. ಬೋಧನೆಯ ಸಾಧನೆಗಳು ಮತ್ತು ಸಲಕರಣೆ.

**ಕ. ಅಧ್ಯಯನ ಕೇಂದ್ರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ ವಿಶಾಲ ಕ್ಷೇತ್ರಗಳ ಶೈಕ್ಷಣಿಕ ಜವಾಬ್ದಾರಿ:**

ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಅಧ್ಯಯನ ಕೇಂದ್ರಗಳು ಈ ಕೆಳಗಿನ ಕ್ಷೇತ್ರಗಳ ಶೈಕ್ಷಣಿಕ ಜವಾಬ್ದಾರಿಯನ್ನು ಹೊತ್ತುಕೊಂಡಿವೆ.

**ಅ. ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು:**

**1. ಶೈಕ್ಷಣಿಕ ಅಡಿಪಾಯಗಳು:**

ಈ ಕ್ಷೇತ್ರವು ಬೋಧನಾ ಕಾರ್ಯದೊಂದಿಗೆ ಸಂಬಂಧಿಸಿದೆ. ಶಿಕ್ಷಣದ ಅನೇಕ ವಿಷಯಗಳ ಅಡಿಪಾಯದೊಂದಿಗೆ ಜೋಡಿಸಿಕೊಂಡಿರುತ್ತದೆ. ಇದು ಶಿಕ್ಷಕರ ತಯಾರಿಯ ವೃತ್ತಿಯ ವಿಷಯಕ್ಕೆ ಸಮಂಜಸವಾಗಿರುತ್ತದೆ.

**2. ಬೋಧನಾ ವಿಜ್ಞಾನ ಮತ್ತು ವಿಧಾನಗಳು:**

ಇದು ಶಾಲೆಯಲ್ಲಿ ಬೋಧಿಸಲು ಅನೇಕ ವಿಷಯಗಳ ಬೋಧನಾ ವಿಧಾನಗಳ ಅಭಿವೃದ್ಧಿಯೊಂದಿಗೆ ಜೋಡಿಸಲ್ಪಟ್ಟಿದೆ. ಈ ಕ್ಷೇತ್ರವು ಬೋಧನಾ ಕಾರ್ಯ ಕುರಿತು ಚಿಂತಿಸುವದಾಗಿದೆ. ಇದು ಪ್ರಜ್ಞಾಪೂರ್ವಕವಾಗಿ ವಿಷಯ ಮತ್ತು ಬೋಧನಾ ವಿಜ್ಞಾನವನ್ನು ಮಾದರಿಗಳ ಅಭಿವೃದ್ಧಿಯೊಂದಿಗೆ ಒಗ್ಗೂಡಿಸುವದಾಗಿದೆ. ತರಬೇತಿ ಹೊಂದುತ್ತಿರುವವರಿಗೆ ಸಂತೃಪ್ತದಾಯಕ ರೂಢಿ ಬೋಧನೆಯನ್ನು ಸಂಘಟಿಸಲಾಗುವದು. ಪ್ರಯೋಗಾಲಯ ಪದ್ಧತಿಗಳನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಸಂರಕ್ಷಿಸಲಾಗುವುದು.

**3. ಶೈಕ್ಷಣಿಕ ತಂತ್ರಜ್ಞಾನ ಮತ್ತು ಮಾಧ್ಯಮ ಸಂಪನ್ಮೂಲ:**

ಬೋಧನಾ ವಿಜ್ಞಾನ ಮತ್ತು ವಿಧಾನಗಳ ಕ್ಷೇತ್ರಕ್ಕೆ ಅವಶ್ಯಕ ದೃಕ್ ಶ್ರವಣ ಮಾಧ್ಯಮಗಳ ಬಲವನ್ನು ನೀಡಿ ಅವುಗಳನ್ನು ಅಭಿವೃದ್ಧಿಪಡಿಸುವದು. ಇದು ಕಡಿಮೆ ಖರ್ಚಿನ ಅಥವಾ ಬೆಲೆಯ ಬೋಧನಾ ಸಾಮಗ್ರಿಗಳ ಮತ್ತು ಇತರೆ ದೃಕ್ ಶ್ರವಣ ಸಾಮಗ್ರಿ ಅಭಿವೃದ್ಧಿಯೊಂದಿಗೆ ಚಿಂತನೆ ಮಾಡುತ್ತದೆ.

**4. ಸೇವಾನಿರತ ಶಿಕ್ಷಣ ಮತ್ತು ವಿಸ್ತರಣ ಕಾರ್ಯಕ್ರಮಗಳು:**

ಇದು ಈ ಸಂಸ್ಥೆಗಳ ಪ್ರಮುಖ ಜವಾಬ್ದಾರಿಯಾಗಿದೆ. ಅಗತ್ಯತೆಗಳ ಮೂಲ ಆಧರಿಸಿ ಮತ್ತು ಶಿಕ್ಷಣ ಆಡಳಿತದೊಂದಿಗೆ ಪರ್ಯಾಲೋಚನೆ ಮಾಡಿ, ಸೇವಾನಿರತ ಶಿಕ್ಷಕರ ತರಬೇತಿಗೆ ಕ್ಷೇತ್ರಗಳನ್ನು ಗುರುತುಪಡಿಸಿಕೊಳ್ಳಲಾಗುವದು ಮತ್ತು ಕಾರ್ಯಕ್ರಮಗಳನ್ನು ನೆರವೇರಿಸಲಾಗುವದು.

**5. ವಿಶೇಷ ಕಾರ್ಯಕ್ರಮಗಳು:**

ವಿಶೇಷ ಕಾರ್ಯಕ್ರಮಗಳ ಅಡಿಯಲ್ಲಿ ವಿಜ್ಞಾನ ಶಿಕ್ಷಣ, ವೃತ್ತಿ ಶಿಕ್ಷಣ, ಪರಿಸರ ಶಿಕ್ಷಣ, ಕಾರ್ಯಾನುಭವ ಶಿಕ್ಷಣ, ಜನಸಂಖ್ಯಾ ಶಿಕ್ಷಣ, ಭಾಷಾಬೋಧನಾ ಇತ್ಯಾದಿಗಳೆಲ್ಲವನ್ನೂ ಒಳಗೊಂಡಿದೆ. ರಾ.ಶಿ. ನೀತಿಯ (ರಾಷ್ಟ್ರೀಯ ಶಿಕ್ಷಣ ನೀತಿ 86) ಹೊಸ ಕಾರ್ಯಕ್ರಮಗಳ ಪೂರ್ವೋತ್ತರಗಳ ಜಾರಿಯ ಭಾಗವಾಗಿ ಈ ಸಂಸ್ಥೆಗಳು ಕೆಳಗಿನ ಪಾತ್ರಗಳನ್ನು ನಿರ್ವಹಿಸಬೇಕಾಗಿದೆ.

   1. ತಾಂತ್ರಿಕ ವರ್ಗ ಮತ್ತು ಶಿಕ್ಷಕರಿಗಾಗಿ ವಿಶೇಷ ತರಬೇತಿ.
   2. ಸಾಮಗ್ರಿಗಳ ಮತ್ತು ವಿಧಾನಗಳ ಅಭಿವೃದ್ಧಿ.
   3. ಸಾಮಾನ್ಯ ಸಂಪನ್ಮೂಲಗಳ ಬಲವನ್ನು ಒದಗಿಸುವದು.
   4. ಸಾಂಪ್ರದಾಯಿಕ ಮೌಲ್ಯಮಾಪನ.
   5. ಮೇಲ್ವಿಚಾರಣೆಯ ಸುಧಾರಣೆಗಳು ಮತ್ತು
   6. ಶಿಕ್ಷಕರಿಗಾಗಿ ಮತ್ತು ಶಾಲಾ ಮುಖ್ಯಸ್ಥರಿಗಾಗಿ ಮೌಲ್ಯಮಾಪನಾ ಕೌಶಲ್ಯಗಳು.
   6. ಕಂಪ್ಯೂಟರ್ ಶಿಕ್ಷಣ ಮತ್ತು ಸೇವೆಗಳು:

ಪ್ರತಿಯೊಂದು ಶಿಕ್ಷಣ ಮಹಾ ವಿದ್ಯಾಲಯವು ತಾನು ಇರುವ ಜಿಲ್ಲೆಗೆ ಗಣಕಯಂತ್ರದ ಕೇಂದ್ರವಾಗಿರುತ್ತದೆ. ಇದು ಸಂಪನ್ಮೂಲ ಕೇಂದ್ರವಾಗಿಯೂ ಸಹ ಕಾರ್ಯ ನಿರ್ವಹಿಸಬಹುದು. ಈ ಘಟಕವು ಪ್ರಾರಂಭದಲ್ಲಿ ಅವಶ್ಯಕ ತರಬೇತಿಯನ್ನು ಮತ್ತು ಸಂಪನ್ಮೂಲ ಬೆಂಬಲವನ್ನು ಒದಗಿಸಿಕೊಡುತ್ತದೆ. ಸಮಯ ಗತಿಸಿದಂತೆ ಕೆಲವು ದಿನಮಾನಗಳ ನಂತರ ಇದು ಯೋಜನೆಗಳನ್ನು ಮತ್ತು ಗಣಕಯಂತ್ರ ಆಧಾರಿತ ಕಲಿಕೆಯ ನಿರ್ವಹಣೆಯನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯವನ್ನು ಒದಗಿಸುತ್ತದೆ ಮತ್ತು ಇತರೆ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಬೋಧನಾ ಕಲಿಕೆಯ ಪ್ರಕ್ರಿಯೆಯೊಂದಿಗೆ ಇದು ಸಕ್ರಿಯವಾಗಿ ವ್ಯವಹರಿಸುತ್ತದೆ.

- **ಮುಂದುವರಿದ ಅಧ್ಯಯನ ಸಂಸ್ಥೆಗಳು:**

ಈ ಮೇಲೆ ಸೂಚಿಸಿದ ಶಿಕ್ಷಣ ಮಹಾವಿದ್ಯಾಲಯಗಳ ಕ್ಷೇತ್ರೀಯ ಜವಾಬ್ದಾರಿಯನ್ನು ಈ ಸಂಸ್ಥೆಗಳು ಸಹ ಹೊಂದಿವೆ. ಹೆಚ್ಚುವರಿಯಾಗಿ ನಿರ್ದಿಷ್ಟ ಕ್ಷೇತ್ರಗಳ ಸಂಭವನೀಯಗಳಾವುವೆಂದರೆ– 1. ಪ್ರಾಥಮಿಕ ಶಿಕ್ಷಣ 2. ಪ್ರಾಥಮಿಕ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣ. 3. ವಿಶೇಷ ಶಿಕ್ಷಣ 4. ಯೋಜನೆ ಮತ್ತು ನಿರ್ವಹಣೆ ಮುಂದುವರಿದ ಶಿಕ್ಷಣ ಮತ್ತು ಶಿಕ್ಷಣ ಹಣಕಾಸು ಇವುಗಳಿಗೆ ಅಭಿಪ್ರಾಯ ಕೊಡುವ ಸಂಶೋಧನೆಯ ವಿಕಾಸನಾಶಕ್ತಿ ಮತ್ತು ಕೆಲವು ಕ್ಷೇತ್ರಗಳಲ್ಲಿ ವಿಶೇಷ ಪರಿಣಿತಿಯನ್ನು ಅಭಿವೃದ್ಧಿಪಡಿಸುವದರತ್ತ ಕೇಂದ್ರೀಕೃತಗೊಳಿಸಬಹುದಾಗಿದೆ. ಸೇವಾಪೂರ್ವ ಕಾರ್ಯಕ್ರಮಗಳ ಕ್ಷೇತ್ರಗಳಲ್ಲಿ, ಈ ಸಂಸ್ಥೆಗಳು ವಿಶೇಷವಾದ ಅವಧಾನವನ್ನು

Digitised by Bharatavani, CIIL

ಕೊಡುತ್ತವೆ. ಅವುಗಳಲ್ಲಿಯೂ ಪ್ರಮುಖವಾಗಿ ಶಿಕ್ಷಕರಿಗೆ +2 ಹಂತದ ತರಬೇತಿಯಾಗಿದೆ.

ಮೇಲೆ ತಿಳಿಸಲಾದ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಮುಂದುವರಿಕೆ ಅಧ್ಯಯನ ಸಂಸ್ಥೆಗಳು ಸಲಹಾತ್ಮಕವಾಗಿವೆ. ತಾವು ಸೇವೆ ಮಾಡಬೇಕಾದ ಭೌಗೋಳಿಕ ಕ್ಷೇತ್ರದ ವಿಶೇಷ ಅಗತ್ಯತೆಗಳು ಮತ್ತು ಬೇಡಿಕೆಗಳಿಗನುಗುಣವಾಗಿ ನಿರ್ದಿಷ್ಟ ಶೈಕ್ಷಣಿಕ ಕ್ಷೇತ್ರವನ್ನು ಜವಾಬ್ದಾರಿಯನ್ನು ಗುರುತಿಸಿಕೊಳ್ಳುತ್ತವೆ.

**(ಡ) ಶಿಕ್ಷಣ ಮಹಾವಿದ್ಯಾಲಯಗಳ ಮತ್ತು ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಸಂಸ್ಥೆಗಳ ಮಾನದಂಡಗಳು:**

ಈ ಸಂಸ್ಥೆಗಳಿಗೆ ನಿರ್ದಿಷ್ಟ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಈ ಮಾನದಂಡಗಳು– ಸಂಪೂರ್ಣ ಸಿಬ್ಬಂದಿ ಮತ್ತು ಭೌತಿಕ ಸೌಲಭ್ಯಗಳು. ಕ್ಷೇತ್ರ ಪ್ರಕಾರ ಸಲಹಾತ್ಮಕ ಸಿಬ್ಬಂದಿ ನಮೂನೆ. ಒಂದು ವರುಷದ ಅವಧಿಯಲ್ಲಿ ಸಂಪೂರ್ಣವಾಗಿ ಮೇಲ್ದರ್ಜೆಗೇರಿಸಿದ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ/ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಸಂಸ್ಥೆಯು ಸಂಘಟಿಸಬಹುದಾದ ಕಾರ್ಯಕ್ರಮಗಳು ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ಸಂಸ್ಥೆಗಳನ್ನು ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳನ್ನಾಗಿ / ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಸಂಸ್ಥೆಗಳನ್ನಾಗಿ ಮೇಲ್ದರ್ಜೆಗೇರಿಸಲು ವಿವಿಧ ಅಂಶಗಳ ಕೇಂದ್ರದ ಸಹಾಯದ ನಮೂನೆಗೆ ಸಂಬಂಧಿಸಿವೆ.

ಈ ಮಾನದಂಡಗಳ ಪ್ರಕಾರ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ / ಮು.ಶಿ.ಅ. ಸಂಸ್ಥೆಗಳಿಗಾಗಿ ಇವುಗಳು ಸಾಮಾನ್ಯ ಗಾತ್ರದ ಜಿಲ್ಲೆಗಳಿಗೆ ಸೇವೆ ಮಾಡಬಹುದಾಗಿದೆ.

(ಢ) ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಮತ್ತು ಶಿಕ್ಷಣದ ಮುಂದುವರೆದ ಅಧ್ಯಯನ ಸಂಸ್ಥೆಗಳಿಗೆ ಶೈಕ್ಷಣಿಕ ಭರಿತಗಳು:

1. ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ / ಶಿಕ್ಷಣದ ಮುಂದುವರೆದ ಅಧ್ಯಯನ ಸಂಸ್ಥೆಯಲ್ಲಿ ಜರುಗುವ ಎಲ್ಲ ವಿವಿಧ ಪ್ರಕಾರಗಳ ವಿಷಯವನ್ನು ತಯಾರುಗೊಳಿಸುವದು / ಬಿ.ಇಡಿ. ಇತ್ಯಾದಿಗಳ ವಿಷಯ ವಸ್ತುಗಳನ್ನು ವಿಶ್ವವಿದ್ಯಾಲಯಗಳು ರೂಪಿಸುತ್ತವೆ.

2. ಪ್ರಾರಂಭಿಕ ನವಜ್ಞಾನ ವಿಕಾಸಕ್ಕಾಗಿ ಕೆಲವು ಪ್ರಮುಖ ವಿಷಯ ಭಾಗಗಳ ಸದಸ್ಯರಿಗಾಗಿ ಉದಾ: ಪ್ರಾಚಾರ್ಯರು ಮತ್ತು ಸೇವಾ ನಿರತ ಶಿಕ್ಷಣವನ್ನು ನೋಡಿಕೊಳ್ಳುತ್ತಿರುವ, ಶೈಕ್ಷಣಿಕ ತಂತ್ರಜ್ಞಾನ, ಯೋಜನೆ ಮತ್ತು ನಿರ್ವಹಣೆ ಇತ್ಯಾದಿ. ರಾಜ್ಯ ಸರಕಾರಗಳು / ಕೇಂದ್ರಾಡಳಿತ ಪ್ರದೇಶಗಳು ಏಕಕಾಲಕ್ಕೆ ಯೋಜನೆಗಳ ಗುಂಪನ್ನೇ ತಯಾರಿಸುವದು ಅತ್ಯಂತ ಮಹತ್ವದ್ದಾಗಿದೆ. ಇದ್ದರಿಂದ ಈ ಯೋಜನೆಗಳನ್ನೂ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ / ಶಿಕ್ಷಣದ ಮುಂದುವರೆದ ಅಧ್ಯಯನ ಸಂಸ್ಥೆಗಳು ಮಂಜೂರಾಗುತ್ತಿದ್ದಂತೆಯೇ ಇವುಗಳನ್ನು ಸಿದ್ಧ ಹಸ್ತವಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ರಾಷ್ಟ್ರಮಟ್ಟದಲ್ಲಿ ಮಾದರಿ ಪ್ಯಾಕೇಜ್‌ಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ಎಲ್ಲ ರಾಜ್ಯ ಸರಕಾರಗಳಿಗೆ / ಕೇಂದ್ರಾಡಳಿತ ಪ್ರದೇಶಗಳಿಗೆ ಎಷ್ಟು ಸಾಧ್ಯವಿದೆಯೋ ಅಷ್ಟು ಬೇಗನೆ ಪ್ರಚಾರ ಮಾಡುವುದು. ಈಚೆಗಿನ ಮಾದರಿ ಯೋಜನೆಯು ಉತ್ತಮವಾದ ಆದೇಶಗಳಿಂದ ಕೂಡಿದ್ದು ಅದರೊಂದಿಗೆ ಮುಂದುವರಿಯುವದು. ತಮ್ಮ ಯೋಜನೆಯನ್ನು ಅಭಿವೃದ್ಧಿಪಡಿಸುವದರೊಂದಿಗೆ ಮತ್ತು ಅಗತ್ಯತೆಯ ವ್ಯಾಪ್ತಿಯನ್ನು ತಮ್ಮಲ್ಲಿ ಬದಲಾವಣೆ ಮಾಡಿಕೊಳ್ಳುವದು. ಇದು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಿಂದ ಯೋಜನೆ ಕಂತೆಗಳು ತಲುಪುತ್ತಿದ್ದಂತೆಯೇ ಪ್ರಾರಂಭಗೊಳ್ಳಬೇಕು.

**(ದ) ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ / ಶಿಕ್ಷಣದ ಮುಂದುವರೆದ ಅಧ್ಯಯನ ಸಂಸ್ಥೆಯ ಯೋಜನೆಗಳಿಗಾಗಿ ಕೇಂದ್ರ ಸಹಾಯದ ನಮೂನೆ:**

ಅನುಬಂಧ 5ರಲ್ಲಿ ವಿವರಿಸಿರುವಂತೆ ಕೇಂದ್ರ ಸರಕಾರದ 7ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉಳಿದಿರುವ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಮತ್ತು ಆಯ್.ಎ.ಎಸ್. ಇವುಗಳಲ್ಲಿ ಅನೇಕ ಅಂಶಗಳ ಉಂಟಾಗುವ ಆವರ್ತಕ (ರಿಕರಿಂಗ್) ಮತ್ತು ಪದೇ ಪದೇ ಉಂಟಾಗದ (ನಾನ್ ರಿಕರಿಂಗ್) ಖರ್ಚಿನ ಸಾರಾಂಶವು ಈ ಕೆಳಗಿನಂತಿರಬೇಕು.

ಅ. ಆವರ್ತಕ ಖರ್ಚು ಪ್ರತಿ ವರ್ಷಕ್ಕೆ

**ಕೋಷ್ಟಕ 4.01**

| ಅ.ನಂ. | ವಿವರಗಳು | ಸಿ.ಟಿ.ಈ | ಆಯ್.ಎ.ಎಸ್.ಈ. |
|---|---|---|---|
| 1 | ಹೊಸ ಹುದ್ದೆಗಳು ಮತ್ತು ಮೇಲ್ದರ್ಜೆಗೇರಿಸಿದ ಹುದ್ದೆಗಳು | 2.70 | 06.70 |
| 2 | ಸೇವಾನಿರತ ಮತ್ತು ವಿಸ್ತೃತ ಯೋಜನೆಗಳು | 2.75 | 03.75 |
| 3 | ಸಂಶೋಧನೆಯ ಯೋಜನೆಗಳು | 0.80 | 02.00 |
| | ಒಟ್ಟು ಮೊತ್ತ ರೂ. (ಲಕ್ಷಗಳಲ್ಲಿ) | 6.25 | 12.95 |

ಬ. ಪದೆ ಪದೆ ಉಂಟಾಗುವ ಖರ್ಚುಗಳು

**ಕೋಷ್ಟಕ 4.02**

| ಅ.ನಂ. | ವಿವರಗಳು | ಸಿ.ಟಿ.ಈ | ಆಯ್.ಎ.ಎಸ್.ಈ. |
|---|---|---|---|
| 1 | ಪೀಠೋಪಕರಣ, ಸಲಕರಣೆಗಳು ಮತ್ತು ಗ್ರಂಥಾಲಯ ಪುಸ್ತಕಗಳು | 10–00 | 15–00 |
| 2 | ಕಟ್ಟಡಗಳು | 38–00 | 45–00 |
| | ಅ) ಸಂಸ್ಥೆಯ ಕಟ್ಟಡ | 8–00 | 10–00 |
| | ಬ) ವಸತಿ ನಿಲಯ (150 ಜನ ವಿದ್ಯಾರ್ಥಿಗಳಿಗೆ) | 23–00 | 25–00 |
| | ಕ) ಸಿಬ್ಬಂದಿ ವಸತಿ ಗೃಹಗಳು | 7–00 | 10–00 |
| | ಒಟ್ಟು ಮೊತ್ತ ರೂ. (ಲಕ್ಷಗಳಲ್ಲಿ) | 48–00 | 60–00 |

ಅನುಬಂಧ 5 ರಲ್ಲಿ ಮೇಲಿನ ಅಂಶಗಳ ಖರ್ಚಿನ ವಿವರಗಳನ್ನು ಕೊಡಲಾಗಿದೆ.

ಹುದ್ದೆಗಳ ಮೇಲಿನ ವೇತನ ಶ್ರೇಣಿಯ ವಿವರಗಳನ್ನು, ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರಗಳು ನಿಶ್ಚಯಿಸಬೇಕು.

- ವಿಶ್ವವಿದ್ಯಾಲಯಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವದು

Digitised by Bharatavani, CIIL

**(ಧ) ಕೆಲವು ವಿಷಯಾಂಶಗಳು:**

**ಅ) ಪಠ್ಯಕ್ರಮ:**

ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯ ಪ್ರಕಾರ ಮಾಧ್ಯಮಿಕ ಶಾಲಾ ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಹೊಸ ಪಠ್ಯಕ್ರಮವನ್ನು ಅನುಸರಿಸಬೇಕಾಗುವುದು. ನೀತಿಯಲ್ಲಿ ಆಲೋಚಿಸಲಾದ ವಿಚಾರಗಳನ್ನು ಸೇರಿಸುವದಕ್ಕೆ ಒತ್ತು ನೀಡಲಾಗಿದೆ. ಶಿಕ್ಷಕರ ಶಿಕ್ಷಣ ಕ್ಷೇತ್ರದ ಮೇಲೆ ಪರಸ್ಪರ ಸ್ಥಾನ ಸೇರ್ಪಡೆಯು ಕೆಲವು ಕ್ಷೇತ್ರಗಳು– ಎಲ್ಲರಿಗಾಗಿ ಶಿಕ್ಷಣ, ಸಮಾನತೆಗಾಗಿ ಶಿಕ್ಷಣ, ರಾಷ್ಟ್ರೀಯ ಪಠ್ಯಕ್ರಮದ ಇಚ್ಛಿತ ವಿಷಯಗಳು, ವಿದ್ಯಾರ್ಥಿ ಕೇಂದ್ರೀಕೃತ ಶಿಕ್ಷಣ, ಮೌಲ್ಯ ಶಿಕ್ಷಣ, ಶೈಕ್ಷಣಿಕ ತಂತ್ರಜ್ಞಾನ ಇತ್ಯಾದಿ. ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯು ಶಿಕ್ಷಕರ ಶಿಕ್ಷಣದ ಪಠ್ಯಕ್ರಮವನ್ನು ಪರಿಷ್ಕರಿಸುವದು ಈ ಒಲವುಗಳ ಪ್ರತಿಬಂಧದ ಆಧಾರದ ಮೇಲೆಯೇ ಅವಲಂಬಿಸಿದೆ. ಮೇಲ್ದರ್ಜೆಗೇರಿಸಿದ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಸಂಸ್ಥೆಗಳು ಇವುಗಳಿಗೆ ವಿಶೇಷ ಅವಧಾನವನ್ನು ಕೊಡಬೇಕಾಗುತ್ತದೆ. ಪಠ್ಯಕ್ರಮಕ್ಕೆ ಆಂತರಿಕವಾಗಿಯೇ ನಿರ್ಮಿತ ನಮನೀಯತೆಯನ್ನು ಒಳಗೊಂಡಿರಬೇಕು ಮತ್ತು ಇದರಿಂದ ಹೊಸ ಹೊಸ ವಿಧಾನಗಳಿಗೆ ಹೊಂದಾಣಿಕೆಗಳಿಗೆ ವ್ಯಾಪ್ತಿಗಳನ್ನು ಒದಗಿಸಬೇಕು. ಇದು ಸ್ಥಾನಿಕ ಅಗತ್ಯತೆಗಳಿಗೆ ಮತ್ತು ಸಂಸ್ಥೆಯ ಮಟ್ಟಕ್ಕೆ ಇರಬೇಕು.

**ಬ) ಅವಧಿ ಮತ್ತು ತರಬೇತಿಗಾಗಿ ಪ್ರವೇಶ ಸಂಖ್ಯೆ ನಿರ್ಣಯಿಸುವಿಕೆ:**

ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಮತ್ತು ಶಿಕ್ಷಣದಲ್ಲಿ ಮುಂದುವರೆದ ಅಧ್ಯಯನ ಸಂಸ್ಥೆಗಳಲ್ಲಿ ಪ್ರಸ್ತಾಪಿಸುವ ಬಿ.ಎಡ್. ತರಬೇತಿಯ ಅವಧಿಯು ಒಂದು ವರುಷದಾಗಿದ್ದು ಎರಡು ಸೆಮಿಸ್ಟರ್ ಅವಧಿಗಳನ್ನು ಒಳಗೊಂಡಿದೆ. ಪ್ರತಿಯೊಂದು ಸೆಮಿಸ್ಟರ್ ಕನಿಷ್ಠ ಪಕ್ಷ 120 ದಿನಗಳಷ್ಟು ಕಾರ್ಯ ನಿರ್ವಹಿಸಿರಬೇಕು. ಸಂಸ್ಥೆಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಆಧರಿಸಿ ವಿದ್ಯಾರ್ಥಿಗಳನ್ನು ತರಬೇತಿಗೆ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಪಡೆದಿರುತ್ತದೆ. ಕೆಲವು ಆಯ್.ಎ.ಎಸ್. ಈ ಸಂಸ್ಥೆಗಳು 4 ವರುಷಗಳ ಸಂಯುಕ್ತ ಕಾರ್ಯಕ್ರಮಗಳನ್ನು ಪ್ರಾರಂಭಿಸಬಹುದು.

**ಕ) ಆಯ್ಕೆಯ ವಿಧಾನ:**

ವೈಜ್ಞಾನಿಕ ಆಯ್ಕೆಯ ವಿಧಾನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಸೇವಾ ಪೂರ್ವ ಶಿಕ್ಷಕರ ತರಬೇತಿಗೆ ಆಯ್ದುಕೊಳ್ಳಬೇಕು. ಇದು ಸಾಮಾನ್ಯ ಸಾಮರ್ಥ್ಯ, ಸಾಮಾನ್ಯ ಜ್ಞಾನ, ಭಾಷಾ ಸಾಮರ್ಥ್ಯ ಮತ್ತು ಬೋಧನಾ ಅಭಿಕ್ಷಮತೆಗಳ ಪರೀಕ್ಷೆಗಳನ್ನು ಒಳಗೊಂಡಿರಬೇಕು. ಈ ಪರೀಕ್ಷೆಗಳನ್ನು ವೈಯಕ್ತಿಕ ಸಂದರ್ಶನ ಮತ್ತು ಗುಂಪು ಚರ್ಚೆಯನ್ನು ಸಹ ಒಳಗೊಂಡಿರಬೇಕು. ಇದು ಅಭ್ಯರ್ಥಿಗಳಲ್ಲಿಯ ಅವರ ಉದ್ದೇಶ ಗಾಂಭೀರ್ಯತೆಯನ್ನು ಗ್ರಹಿಸುವಂತಿರಬೇಕು, ವೃತ್ತಿಗೆ ಅಗತ್ಯವಾದ ಸೂಕ್ಷ್ಮತೆ, ಶಾಲಾ ವಿಷಯಗಳ ಪಠ್ಯದ ಜ್ಞಾನ, ಸಾಮಾನ್ಯ ಸೂಕ್ಷ್ಮತೆ ಮತ್ತು ಜಾಗರೂಕತೆ, ಮಾತನಾಡುವಲ್ಲಿ ಸ್ಪಷ್ಟತೆ, ಸಂವಹನ ಕೌಶಲ್ಯ ಮತ್ತು ಉತ್ತಮ ಶಿಕ್ಷಕರ ಲಕ್ಷಣಗಳು.

ಅಭ್ಯರ್ಥಿಗಳ ಆಯ್ಕೆಗಾಗಿ ರಾಜ್ಯ ಮಟ್ಟದಲ್ಲಿ ಒಂದು ಅರ್ಹ ಸಂಸ್ಥೆಯು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವುದು.

ಆಯ್ಕೆಯ ವಿಧಾನಗಳನ್ನು ನಿರ್ವಹಿಸುವಾಗ ಗುಡ್ಡಗಾಡು ಪ್ರದೇಶ, ಆದಿವಾಸಿ ಕ್ಷೇತ್ರಗಳಂತಹ ವಿಶೇಷ ಕ್ಷೇತ್ರದ ಬೇಡಿಕೆಗಳನ್ನು ಇತ್ಯಾದಿ ಗಮನದಲ್ಲಿರಿಸಿಕೊಂಡಿರಬೇಕು. ಅದರಂತೆಯೆ ಹೆಣ್ಣು ಮಕ್ಕಳಿಗೂ ಆಯ್ಕೆಯ ವಿಧಾನಗಳಲ್ಲಿ ಆದ್ಯತೆಯನ್ನು ಕೊಟ್ಟಿರಬೇಕು. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ನೀಡುವ ಸಾಮಾನ್ಯ ಮೀಸಲಾತಿಯನ್ನು ಹೊರತುಪಡಿಸಿ ಇತರೆ ವಿಷಯಗಳಿಗೆ ಸಮಾನ ಆದ್ಯತೆಯನ್ನು ನೀಡಬೇಕು.

**ಡ) ಮೌಲ್ಯಮಾಪನ:**

ಸೇವಾ ಪೂರ್ವ ತರಬೇತಿಗಳಲ್ಲಿ ಪ್ರಶಿಕ್ಷಣಾರ್ಥಿಗಳ ಮೌಲ್ಯಮಾಪನವು ಸಾಮಾನ್ಯವಾಗಿ ಹೆಚ್ಚಿನ ರೀತಿಯಲ್ಲಿ ಆಂತರಿಕವಾಗಿರಬೇಕು. ಅದು ಲಿಖಿತರೂಪದಲ್ಲಿ ದತ್ತ ಕಾರ್ಯಗಳನ್ನು ಆಧಾರವಿರಿಸಿಕೊಂಡಿರಬೇಕು. ಆವರ್ತಿಕ ಪರೀಕ್ಷಣಗಳು ಮೌಖಿಕ ಚರ್ಚೆಗಳು, ರಸ ಪ್ರಶ್ನಾವಳಿ ಮತ್ತು ತಜ್ಞರ ಸಭೆಗಳನ್ನೊಳಗೊಂಡಿರಬೇಕು. ಆಂತರಿಕ ಪರೀಕ್ಷಣಗಳು ಪ್ರಮುಖವಾಗಿ ವಸ್ತುನಿಷ್ಠ ಮತ್ತು ಚಿಕ್ಕ ಉತ್ತರ ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರಬೇಕು. ಸೆಮಿಸ್ಟರ್ ಪದ್ಧತಿಯ ಮತ್ತು ಬಾಹ್ಯ ಮೌಲ್ಯಮಾಪನವು (ಪರೀಕ್ಷೆಗಳು) ವಿಶ್ವವಿದ್ಯಾಲಯದಿಂದ ನಿರ್ವಹಿಸಲ್ಪಟ್ಟು ಸಿದ್ಧಾಂತ ಪತ್ರಿಕೆಗಳ ಮುಖಾಂತರ ಜ್ಞಾನದ ಮಟ್ಟವನ್ನು ಮೌಲ್ಯ ಮಾಡುವದು.

ಮೇಲಿನ ಎಲ್ಲ ನಾಲ್ಕು ವಿಚಾರ ವಸ್ತುಗಳ ಒಳಗೆ (ಅ) ಮತ್ತು (ಬ) ಇವು ಪರ್ಯಾಯವಾಗಿ ವಿಶ್ವವಿದ್ಯಾಲಯದ ಕಟ್ಟುಪಾಡಿಗೆ ಒಳಗೊಂಡಿದ್ದು, (ಕ) ಮತ್ತು (ಡ) ಇವು ವಿಶ್ವವಿದ್ಯಾಲಯ ಮತ್ತು ರಾಜ್ಯ ಸರಕಾರದ ಪರಿಮಿತಿಗೊಳಪಟ್ಟಿವೆ. ಮೇಲಿನ ಮಾರ್ಗದಲ್ಲಿ ರಾಜ್ಯ ಸರಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೂಕ್ತಕ್ರಮಗಳನ್ನು ಕೈಗೊಳ್ಳುವುದನ್ನು ಅಪೇಕ್ಷಿಸಲಾಗುತ್ತದೆ. ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು (NCTE) ಈ ಆಡಳಿತ ವ್ಯವಸ್ಥೆಗಳೊಂದಿಗೆ ಮತ್ತು ವಿಶ್ವವಿದ್ಯಾಲಯಗಳೊಂದಿಗೆ ಈ ಅಂಶಗಳ ಬಗ್ಗೆ ನಿಗಾವಹಿಸುತ್ತದೆ.

**(ಜ) ಸೇವಾನಿರತ ಕಾರ್ಯಕ್ರಮಗಳನ್ನು ಸಂಘಟಿಸುವದು:**

ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಶಿಕ್ಷಣದಲ್ಲಿ ಮುಂದುವರಿದ ಅಧ್ಯಯನ ಸಂಸ್ಥೆಗಳು, ಈ ಕೆಳಗಿನ ಮಾದರಿಯಲ್ಲಿಯೇ ಪ್ರಮುಖವಾಗಿ ಗಣನೀಯ ಸಂಖ್ಯೆಯಲ್ಲಿ ಸೇವಾವಧಿ ಕಾರ್ಯಕ್ರಮಗಳನ್ನು ಸಂಘಟಿಸಲು ಅಪೇಕ್ಷಿಸಲಾಗಿದೆ.

1. ವಿಷಯು ಚಿಂತನ / ಆಧಾರಿತ ಕೋರ್ಸುಗಳು ಅವುಗಳಲ್ಲಿಯೂ ಶಾಲೆಯ ವಿಷಯಗಳು ಪ್ರಮುಖವಾಗಿ ವಿಷಯ ವಿಧಾನಗಳ ವ್ಯಾಪ್ತಿಗೆ ಒಳಪಟ್ಟಿರಬೇಕು ಮತ್ತು ಅದು 3 ರಿಂದ 4 ವಾರಗಳ ಅವಧಿಯದಾಗಿರಬೇಕು. ಮತ್ತು

2. 3 ರಿಂದ 10 ದಿನ ಅವಧಿಯ ಕಿರಿದಾದ ನಿರ್ದಿಷ್ಟ ಕೋರ್ಸುಗಳ ಪ್ರಬಂಧದ ವಿಷಯವಾಗಿರಬೇಕು. 4000 ಮಾಧ್ಯಮಿಕ ಶಾಲಾ ಶಿಕ್ಷಕರ ಜನಸಂಖ್ಯೆಯನ್ನು ಒಳಗೊಂಡಿರುವ ಸಾಮಾನ್ಯ ಸ್ಥಿತಿಯ / ಗಾತ್ರದ ಎರಡು ಜಿಲ್ಲೆಗಳಿಗೆ ಈ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಅಥವಾ ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಸಂಸ್ಥೆಗಳ ಸೇವೆಯನ್ನು ಅಪೇಕ್ಷಿಸಲಾಗಿದೆ. 5 ವರುಷಗಳ ಅವಧಿಯಲ್ಲಿ ಒಮ್ಮೆಯಾದರೂ ಪ್ರತಿಯೊಬ್ಬ ಮಾಧ್ಯಮಿಕ ಶಾಲಾ ಶಿಕ್ಷಕ ವಿಷಯ ಆಧಾರಿತ ಸೇವಾ ನಿರತ ತರಬೇತಿ ಕಾರ್ಯಕ್ರಮಗಳಲ್ಲಿ ಒಳಗೊಳ್ಳಬೇಕು ಎಂಬುದೇ ಈ ಉದ್ದೇಶವಾಗಿದೆ. ಪ್ರತಿ ವರ್ಷ ಸುಮಾರು 800 ಶಿಕ್ಷಕರು ತರಬೇತಿಯನ್ನು ಹೊಂದಬೇಕು ಎಂಬುದು ಬೇಡಿಕೆಯಾಗಿದೆ. ಪ್ರತಿ ವರ್ಷ ಸುಮಾರು 16 ಇಂತಹ ಕೋರ್ಸುಗಳನ್ನು ನಿರ್ವಹಿಸಲು ಈ ಸಂಸ್ಥೆಗಳು ಸಮರ್ಥವಾಗಿರಬೇಕು. ಒಂದೇ ಅವಧಿಯಲ್ಲಿ ಈ ಸಂಖ್ಯೆಯಲ್ಲಿ ಅಂದಾಜು 40–80 ಸೇವಾನಿರತ ಅಭ್ಯರ್ಥಿಗಳು ಭಾಗವಹಿಸುವಂತೆ ಇರಬೇಕು. ಹೇಗಿದ್ದರೂ ಜನವರಿಯಿಂದ ಎಪ್ರಿಲ್ ತಿಂಗಳು ದೀರ್ಘಾವಧಿಯವರೆಗೆ ಶಿಕ್ಷಕರಿಗೆ ತಮ್ಮ ಕಾರ್ಯಗಳಿಂದ ದೂರ ಇರುವದು ಅಸಾಧ್ಯವಾದರೂ, ಈ ರೀತಿಯ ಅಧ್ಯಯನ

Digitised by Bharatavani, CIIL

ತರಬೇತಿಯನ್ನು ಬೇಸಿಗೆಯ ಅಥವಾ ಶರತ್ಕಾಲ ರಜೆ ಅವಧಿಯಲ್ಲಿ ಕೇಂದ್ರೀಕರಿಸಿಕೊಳ್ಳುವರು ಮತ್ತು ಜುಲೈನಿಂದ ಡಿಸೆಂಬರ್ ತಿಂಗಳೂ ಸೂಕ್ತ. ಹೆಚ್ಚಾಗಿ ಶಾಲೆಯ ಸಾಮಾನ್ಯ ವಿಷಯಗಳನ್ನು ಈ ಕೆಳಗಿನ ನಾಲ್ಕು ವಿಶಾಲ ಗುಂಪುಗಳಲ್ಲಿ ವರ್ಗೀಕರಿಸಬಹುದಾಗಿದೆ.

1. ಕಲೆ:
   1. ಭಾಷೆಗಳು
   2. ಸಾಮಾಜಿಕ ವಿಜ್ಞಾನಗಳು ಮತ್ತು ಮನುಕುಲ ಕಥೆಗಳು.
2. ಗಣಿತ ಮತ್ತು ವಿಜ್ಞಾನ
3. ವಾಣಿಜ್ಯ
4. ಗೃಹ ವಿಜ್ಞಾನ

ಯಾವುದೇ ಕೊಟ್ಟ ಅವಧಿಯಲ್ಲಿ ಸಾಧ್ಯವಾದಷ್ಟು ಸೇವಾವಧಿ ಕಾರ್ಯಕ್ರಮಗಳು ಜರುಗಬೇಕಾದರೆ ಎರಡು ಬೇರೆ ಬೇರೆ ಗುಂಪಿನಿಂದ ಎರಡು ವಿಷಯಗಳನ್ನು ಆಯ್ದುಕೊಳ್ಳಬಹುದು. ಇದರಿಂದ ಮಿತವಾದ ಸಿಬ್ಬಂದಿಯ ಒಂದು ಗುಂಪು ಹೆಚ್ಚು ಒತ್ತಡಕ್ಕೊಳಗಾಗಲಿಕ್ಕಿಲ್ಲ. ಏಕೆಂದರೆ ನಿರಂತರ ತರಬೇತಿಯು ಅದೇ ಗುಂಪಿಗೆ ಸೇರಿದುದಾಗಿರುವದಿಲ್ಲ.

ಜನವರಿಯಿಂದ ಏಪ್ರಿಲ್ ತಿಂಗಳ ಅವಧಿಯನ್ನು ಶಾಲಾ ಶಿಕ್ಷಕರು ತರಬೇತಿಯುಲ್ಲಿ ಅಳವಡಿಸಿದಂತೆ ಎಚ್ಚರಿಕೆಯಿಂದ ಉಪಯೋಗಿಸಿಕೊಳ್ಳಬೇಕು. ಈ ಕಾರ್ಯಕ್ರಮಗಳು ಸಂಶೋಧನೆ, ಸಮುದಾಯ ಮತ್ತು ಸಮಾಜ ಶಿಕ್ಷಣ ಮತ್ತು ನಿರ್ವಹಣೆ ಮುಂತಾದವುಗಳಿಗೆ ಸಂಬಂಧಿಸಿದುದಾಗಿರಬೇಕು.

ಈ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ / ಶಿಕ್ಷಣದಲ್ಲಿ ಮುಂದುವರಿದ ಅಧ್ಯಯನ ಸಂಸ್ಥೆಯು ಸೇವೆ ಮಾಡಬೇಕಾದ ಜಿಲ್ಲೆಯಲ್ಲಿ 4000 ಶಿಕ್ಷಕರಿಗೆ ವಾರ್ಷಿಕವಾಗಿ 800 ಶಿಕ್ಷಕರಂತೆ ವಿಷಯ ಚಿಂತನ ಸೇವಾವಧಿ ಕಾರ್ಯಕ್ರಮಗಳನ್ನು ನಿರ್ವಹಿಸಬಹುದು. ಇಲ್ಲವಾದಲ್ಲಿ ಅದು 600–650 ಜನ ಶಿಕ್ಷಕರಿಗೆ ಪ್ರತಿ ವರುಷದಲ್ಲಿ ಸೇವಾವಧಿ ತರಬೇತಿಯನ್ನು ಕೊಡಲು ಸಾಧ್ಯವಾಗುತ್ತಿದ್ದರೆ ಇನ್ನುಳಿದ 150–200 ಜನ ಶಿಕ್ಷಕರಿಗೆ ತರಬೇತಿಯನ್ನು ಈ ಸಂಸ್ಥೆಗಳಲ್ಲಿ ನೀಡಲು ಸಾಧ್ಯವಾಗಲಿಕ್ಕಿಲ್ಲ. ಇಂತಹ ಸ್ಥಿತಿಗಳಲ್ಲಿ ಇತರೆ ಯೋಗ್ಯ ಸಂಸ್ಥೆಗಳಲ್ಲಿ ವಿಕೇಂದ್ರೀಕರಿಸಿದ ಮಾದರಿಯಲ್ಲಿ ತರಬೇತಿಯನ್ನು ನಿರ್ವಹಿಸುವದು. ಹೇಗಿದ್ದರೂ ಈ ರೀತಿಯ ತರಬೇತಿಗಾಗಿ ಈ ಸಂಸ್ಥೆಗಳು ತಮ್ಮ ಸಂಪನ್ಮೂಲ ವ್ಯಕ್ತಿಗಳನ್ನು ಭಾಗವಹಿಸಲು ನಿಯೋಜನೆಗೊಳಿಸುವುವು ಎರವಲು ನೀಡುವುವು.

ಶಿಕ್ಷಕರು ಶಿಕ್ಷಣದ ಯೋಜನೆಯಲ್ಲಿ ಪ್ರೌಢ ಶಾಲಾ ಶಿಕ್ಷಕರ ಸೇವಾನಿರತ ತರಬೇತಿಗಾಗಿ ಕೇವಲ ಆಲೋಚಿಸುವದಲ್ಲ ಮತ್ತು ವಿಜ್ಞಾನ ಶಿಕ್ಷಣದ ಸುಧಾರಣೆಗಾಗಿ ಯೋಜನೆಗಳನ್ನೂ ಸಹ ಹಾಕಿಕೊಳ್ಳುವದಾಗಿದೆ. ಕಂಪ್ಯೂಟರ್‌ನ ಭಾಷೆ ಮತ್ತು ಶಾಲಾ ಅಧ್ಯಯನದಲ್ಲಿ ಅದರ ಬಗ್ಗೆ ತರಬೇತಿ ಯೋಜಿಸಿಕೊಳ್ಳುವದಾಗಿದೆ. ಈ ಯೋಜನೆಗಾಗಿ ಮಾಧ್ಯಮಿಕ ಶಾಲಾ ಶಿಕ್ಷಕರ ಸೇವಾನಿರತ ತರಬೇತಿ ಸಂಘಟನೆಗಾಗಿ ಲಭ್ಯವಾಗಬಲ್ಲ ಕೆಲವು ಆರ್ಥಿಕ ರೂಪರೇಷೆಗಳು ಸಹ ಲಭ್ಯವಾಗಿರುತ್ತವೆ. ಈ ರೀತಿಯ ವಿಷಯ ತರಬೇತಿಗಳನ್ನು ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾಧ್ಯವಾದಷ್ಟು ಏರ್ಪಡಿಸುವದು. ಅನೇಕ ಯೋಜನೆಗಳಲ್ಲಿಯ ಸೇವಾನಿರತ ಪ್ರೌಢ ಶಾಲಾ ಶಿಕ್ಷಕರ ತರಬೇತಿಗಾಗಿ ಲಭ್ಯವಾಗಿರುವ ಸಂಪನ್ಮೂಲಗಳನ್ನು ಒಟ್ಟಾಗಿ ಹಂಚಿಕೊಳ್ಳತಕ್ಕದ್ದಲ್ಲ ಮತ್ತು ಪ್ರತಿ ಮಾಧ್ಯಮಿಕ ಶಾಲಾ ಶಿಕ್ಷಕರ ಪ್ರತಿ ಐದು ವರುಷಗಳಲ್ಲಿ ಕನಿಷ್ಠ ಪಕ್ಷ ಒಂದು ಶಾಲಾ ವಿಷಯದಲ್ಲಿ ಸೇವಾನಿರತ ತರಬೇತಿಯನ್ನು ಹೊಂದಬೇಕೆನ್ನುವ ಮಹತ್ತರ ಉದ್ದೇಶವನ್ನು ಸಾಧ್ಯವಾದಷ್ಟು ಸಾಧಿಸುವದಾಗಿದೆ.

ರಾಜ್ಯ ಸರಕಾರಗಳು / ಕೇಂದ್ರಾಡಳಿತ ಪ್ರದೇಶಗಳು ಜಿಲ್ಲಾ ಮತ್ತು ವಿಭಾಗೀಯ ಹಂತದಲ್ಲಿ ತಮ್ಮ ಶಿಕ್ಷಣ ಇಲಾಖೆಯನ್ನು ಸಾಕಾಗುವಷ್ಟು ವ್ಯವಸ್ಥೆಗೊಳಿಸಬೇಕು ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿಯ (DIET) ಸಿಬ್ಬಂದಿ ವರ್ಗದವರು ಈ ಯೋಜನೆಯಲ್ಲಿರುವ ಮಾದರಿಯ ಅನುರೂಪವಾಗಿ ಆಲೋಚಿಸಿರುವಂತೆ ಪ್ರೌಢ ಶಾಲಾ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸೇವಾನಿರತ ತರಬೇತಿಯನ್ನು ವ್ಯವಸ್ಥಿತವಾಗಿ ಪ್ರಾಯೋಜಿಸಿರುತ್ತಾರೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಈ ಉದ್ದೇಶಕ್ಕಾಗಿ ಜಿಲ್ಲೆ ಮತ್ತು ವಿಭಾಗೀಯ ಹಂತದಲ್ಲಿರುವ ಎಲ್ಲ ಶಿಕ್ಷಕರಿಗೂ ಸೇವಾನಿರತ ಶಿಕ್ಷಣವನ್ನು ನೀಡಲು ಮತ್ತು ಮೇಲುಸ್ತುವಾರಿ ನೋಡಿಕೊಳ್ಳಲು ಪ್ರತ್ಯೇಕವಾಗಿಯೇ ಕೋಶ ಕೇಂದ್ರೀಯ ಸಿಬ್ಬಂದಿಯನ್ನು ಮೀಸಲಾಗಿಡುವದು ಉತ್ತಮವಾದುದಾಗಿದೆ.

ಈ ಕೋಶವು ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತದೆ:

1. ಪ್ರತಿಯೊಬ್ಬ ಶಿಕ್ಷಕರು ವ್ಯಾಪ್ತಿಗೊಳಗಾಗುವ ರೀತಿಯಲ್ಲಿ ಸೇವಾ ನಿರತ ಶಿಕ್ಷಕರ ಶಿಕ್ಷಣಕ್ಕಾಗಿ ವ್ಯವಸ್ಥಿತವಾಗಿ ಪ್ರಾಯೋಜನೆಗೊಳಿಸುವದು ಮತ್ತು ಇನ್ನು ಕೆಲವು ಶಿಕ್ಷಕರನ್ನು ಸಂಪೂರ್ಣವಾಗಿ ಬಿಟ್ಟು ಬಿಡುವದು ಮತ್ತು ಇನ್ನು ಕೆಲವು ಶಿಕ್ಷಕರಿಗೆ ಪದೆ ಪದೆ ವ್ಯಾಪ್ತಿಗೊಳಪಡಿಸುವದು ಆಗದಂತೆ ಎಚ್ಚರಿಕೆ ವಹಿಸಬೇಕು.
2. ಪ್ರತಿಯೊಬ್ಬ ಶಿಕ್ಷಕರ ಸೇವಾನಿರತ ಶಿಕ್ಷಣದ ಚಿತ್ರಣ ಮತ್ತು ಶೈಕ್ಷಣಿಕ ಅರ್ಹತೆಯನ್ನು, ದತ್ತಾಂಶಗಳನ್ನು ಇತ್ತೀಚಿನವರೆಗೂ ಕಾಪಾಡುವದು.
3. ಪ್ರಾಯೋಜನೆಗೊಳಪಡಿಸಿದ ಶಿಕ್ಷಕರು ಸೇವಾವಧಿ ತರಬೇತಿಯಿಂದ ಉದ್ದೇಶಪೂರ್ವಕವಾಗಿಯೇ ತಪ್ಪಿಸಿಕೊಂಡಲ್ಲಿ ಅಂತಹ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳುವದು. ಈ ರೀತಿಯಿಂದ ಅಂತಹ ಪ್ರವೃತ್ತಿಯನ್ನು ನಿಗ್ರಹಿಸಬಹುದಾಗಿದೆ. ಹತೋಟಿಯಲ್ಲಿಡಬಹುದಾಗಿದೆ.
4. ಸೇವಾವಧಿ ಶಿಕ್ಷಣ ಕಾರ್ಯಕ್ರಮಗಳ ವಿಷಯದಲ್ಲಿ ಸಂಬಂಧಿಸಿದಂತೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮತ್ತು ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಸಂಸ್ಥೆಗಳು ಗಾಢವಾದ ಸಲಿಗೆಯ ಸಮನ್ವಯತೆಯನ್ನು ಕಾಪಾಡಿಕೊಂಡಿರಬೇಕು.

**(ತ) ಸಂಶೋಧನೆ**

ಶಿಕ್ಷಣದಲ್ಲಿ ಮುಂದುವರಿದ ಅಧ್ಯಯನ ಸಂಸ್ಥೆಯು ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳೊಂದಿಗೆ ಸಂಶೋಧನೆಯತ್ತ ಬಲವಾದ ಒಲವನ್ನು ಹೊಂದಿರಬೇಕು ಮತ್ತು ಅದರೊಂದಿಗೆ ನಿಶ್ಚಯ ಮಾಡಿಕೊಂಡಿರಬೇಕು. ಸಂಶೋಧನೆಗಾಗಿರುವ ಹಂಚಿಕೆಯು ಮೊತ್ತ (ಶಿಕ್ಷಣ ಮಹಾವಿದ್ಯಾಲಯಗಳಿಗೆ 0.80 ಲಕ್ಷ, ಶಿಕ್ಷಣದಲ್ಲಿ ಮುಂದುವರಿಕೆ ಅಧ್ಯಯನ ಸಂಸ್ಥೆಗಳಿಗೆ 2.00 ಲಕ್ಷ) ಈ ಸಂಸ್ಥೆಗಳು ಪ್ರಮುಖವಾಗಿ (ಆಯ್.ಎ.ಎಸ್.ಇ.) ಕೆಲವು ನಿರ್ದಿಷ್ಟ ಸಂಶೋಧನೆಗಾಗಿ ಹೆಚ್ಚುವರಿ ಹಣಕ್ಕಾಗಿ ಅಹವಾಲನ್ನು ಮಾಡಬಹುದು. ಇದು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ವಿಶ್ವವಿದ್ಯಾಲಯ ಧನ ಸಹಾಯ ಆಯೋಗ, ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ರಾಜ್ಯ ಸರಕಾರಗಳು, ಭಾರತೀಯ ಸಮಾಜ ಸಂಶೋಧನೆ ಸಂಸ್ಥೆಗಳಿಗೆ ಕೆಲವು ನಿರ್ದಿಷ್ಟ ಸಂಶೋಧನೆಯ ಯೋಜನೆಗಳನ್ನು ಒಪ್ಪಿಸಬಹುದಾಗಿದೆ.

Digitised by Bharatavani, CIIL

ಈ ಮೇಲಿನ ಆರ್ಥಿಕ ಮುನ್ನೇರ್ಪಾಡು ಮೊತ್ತದೊಂದಿಗೆ ಸಂಶೋಧನೆಯ ಯೋಜನೆಗಳನ್ನು ಸಂಶೋಧನೆ ಸಮಿತಿಯ ಅನುಮತಿಯೊಂದಿಗೆ ಕೈಗೆತ್ತಿಕೊಳ್ಳಬಹುದು ಮತ್ತು ಸಂಬಂಧಿಸಿದ ವಿಶೇಷ ಕ್ಷೇತ್ರಗಳನ್ನು ಸೇರ್ಪಡಿಸಿಕೊಳ್ಳುವದಾಗಿದೆ.

ಈ ಸಂಶೋಧನಾ ಸಮಿತಿಯು ಕೈಗೊಂಡ ಸಂಶೋಧನೆಯ ಯೋಜನೆಗಳನ್ನು ಮತ್ತು ಕೈಗೊಳ್ಳಲಿಚ್ಚಿಸಿರುವ, ಪ್ರಸ್ತಾಪಿಸಿದ ಸಂಶೋಧನೆಗಳನ್ನು ಈ ಸಂಸ್ಥೆಗಳೊಂದಿಗೆ ಇತರೆ ಹಣಕಾಸು ಮೂಲಗಳ ಲಭ್ಯತೆ ಮತ್ತು ತಮಗೆ ಯೋಗ್ಯವೆನಿಸಿದ ಸಂಶೋಧನೆಗಳಿಗೆ ತಮ್ಮ ಸಲಹೆಗಳನ್ನು ಯೋಜನೆಗೆ ವಿನ್ಯಾಸಕ್ಕೆ ಮತ್ತು ನಿರ್ವಹಣೆ ಬಗ್ಗೆಯೂ ಮಾರ್ಗದರ್ಶನ ನೀಡಬಹುದಾಗಿದೆ.

**(ನ) ಸಂಬಂಧಗಳು (Linkages):**

ಪ್ರತಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಮತ್ತು ಮುಂದುವರಿಕೆ ಶಿಕ್ಷಣ ಅಧ್ಯಯನ ಸಂಸ್ಥೆ ಇತರೆ ಸಂಸ್ಥೆಗಳೊಂದಿಗೆ ಮಧ್ಯವರ್ತಿಗಳೊಂದಿಗೆ ಉತ್ತಮವಾದ ಯೋಗ್ಯವಾದ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದನ್ನು ಬಯಸಲಾಗುತ್ತದೆ. ಇದು ಕೆಲವು ಕ್ಷೇತ್ರದ ಕಾರ್ಯಗಳಿಗೆ ಸೀಮಿತವಾಗಿದೆ. (ಉದಾ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, (NCERT). ಯೋಜನೆ ಮತ್ತು ಆಡಳಿತ ಸಂಸ್ಥೆ, ವಿಶ್ವವಿದ್ಯಾಲಯದ ಶಿಕ್ಷಣ ಇಲಾಖೆಗಳು, ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ವಯಸ್ಕರ ಶಿಕ್ಷಣದ ರಾಜ್ಯ ಸಂಪನ್ಮೂಲ ಕೇಂದ್ರ, ಪ್ರಾಂತೀಯ ಶಿಕ್ಷಣ ಮಹಾವಿದ್ಯಾಲಯಗಳು ಇತ್ಯಾದಿ)

–ನ. ಹೊ.

## ಅನುದಾನ ಪದ್ಧತಿ

ಯಾವುದೇ ಶಿಕ್ಷಣ ಸಂಸ್ಥೆ ಶ್ರೇಷ್ಠಮಟ್ಟದ ಶಿಕ್ಷಣ ನೀಡಬೇಕಿದ್ದಲ್ಲಿ ಯೋಗ್ಯ ಹಣಕಾಸಿನ ವ್ಯವಸ್ಥೆ ಇರಬೇಕಾಗುತ್ತದೆ. ಇದಕ್ಕಾಗಿ ರಾಜ್ಯ/ ಕೇಂದ್ರ ಸರಕಾರದವರು ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗೆ, ಹಣಕಾಸಿನ ನೆರವು ನೀಡುತ್ತಾರೆ. ಈ ವ್ಯವಸ್ಥೆಗೆ ಅನುದಾನ ವ್ಯವಸ್ಥೆ (Grant-in-Aid, System) ಎಂದು ಹೆಸರು.

ನಮ್ಮ ರಾಷ್ಟ್ರದ ಸಂವಿಧಾನದ ಪ್ರಕಾರ ಶಿಕ್ಷಣವು ಪ್ರತಿಯೊಬ್ಬರ ಹಕ್ಕು. ಅಲ್ಲದೆ ಆಯಾ ರಾಜ್ಯಗಳು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಉಚಿತ ಹಾಗೂ ಕಡ್ಡಾಯವಾಗಿ ನೀಡಬೇಕು. ಇದಕ್ಕಾಗಿ ಶಿಕ್ಷಣ ಸಂಸ್ಥೆಗಳು ಮುಂದೆ ಬಂದರೆ ಯೋಗ್ಯ ಹಣಕಾಸಿನ ನೆರವು (ಅನುದಾನ) ನೀಡಲು ಸರ್ಕಾರಗಳು ಬದ್ಧವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಮೊಟ್ಟಮೊದಲಬಾರಿಗೆ ಹಣಕಾಸಿನ ನೆರವನ್ನು 1833ರ ಚಾರ್ಟರ್‌ನಲ್ಲಿ ಭಾರತದಲ್ಲಿ ಶಿಕ್ಷಣಕ್ಕಾಗಿ ಒಂದು ಲಕ್ಷ ಪೌಂಡ್‌ಗಳನ್ನು ಧನಸಹಾಯ ನೀಡಲು ಒಪ್ಪಿಗೆ ನೀಡಿತು. ನಂತರ 1835ರ ಮೆಕಾಲೆ ಅವರ ವರದಿ ಸಹ ಶಿಕ್ಷಣ ಪ್ರಸಾರಕ್ಕೆ ಇಂತಿಷ್ಟು ನಿಶ್ಚಿತ ಮೊತ್ತದ ಹಣ ಮೀಸಲಿರಿಸಬೇಕು ಎಂದು ಹೇಳಿತು. ಆದರೆ ಅನುದಾನ ಪದ್ಧತಿ (Grant-in-Aid) ಎಂಬ ಪದವು ವುಡ್‌ರ ವರದಿ 1854ರ ಮೂಲಕ ಮೊಟ್ಟಮೊದಲಬಾರಿಗೆ ಜಾರಿಯಲ್ಲಿ ಬಂದಿತು. ವುಡ್‌ರವರು ತಮ್ಮ ವರದಿಯಲ್ಲಿ ಭಾರತದಲ್ಲಿಯ ಶಿಕ್ಷಣ ಸಂಸ್ಥೆಗಳಿಗೆ ಯೋಗ್ಯ ಧನಸಹಾಯ–ಶಿಕ್ಷಕರ ಸಂಬಳ, ಶಾಲಾ ಅಭಿವೃದ್ಧಿಗಾಗಿ ಹಣಕಾಸಿನ ನಿಯಮಿತ ಅನುದಾನ ನೀಡುವುದು ಅವಶ್ಯಕವಾಗಿದೆ, ಆದ್ದರಿಂದ ಕೂಡಲೇ ನೀಡಬೇಕು ಎಂದು ತಿಳಿಸಿ ಹಣಕಾಸು ವಿಭಾಗ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಎಷ್ಟು ಅನುದಾನ ನೀಡಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರವನ್ನು ನೀಡಿತು. ಇದರಂತೆ ಶಿಕ್ಷಕರ/ ಶಿಕ್ಷಕೇತರ ಸಿಬ್ಬಂದಿಗಳ ಸಂಬಳವನ್ನು ನಿಗದಿಪಡಿಸಿ ಪ್ರತಿ ತಿಂಗಳು ನೀಡುವಂತೆ ವ್ಯವಸ್ಥೆ ಮಾಡಲಾಯಿತು. ಅಂದಿನಿಂದ ಇಂದಿನವರೆಗೆ ಅವ್ಯಾಹತವಾಗಿ ಅನುದಾನ ಪಡೆದ ವಿದ್ಯಾ ಸಂಸ್ಥೆಗಳು ನಿಯಮಿತವಾಗಿ ಅನುದಾನ ಸಂಹಿತೆಗೆ ಒಳಪಟ್ಟು ಹಣಕಾಸಿನ ನೆರವು ಪಡೆಯುತ್ತಿವೆ. ಇದರಿಂದ ಅನುದಾನಿತ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚಶಿಕ್ಷಣ ಸಂಸ್ಥೆಗಳು ಇಂದು ಭಾರತದ ಎಲ್ಲೆಡೆಗೆ ಕಾರ್ಯ ನಿರ್ವಹಿಸುತ್ತಿವೆ.

**ಅನುದಾನ ಸಂಹಿತೆ (Grant in Aid Rules)**

1854 ರಿಂದ ಜಾರಿಯಲ್ಲಿ ಬಂದ ಅನುದಾನ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ತಕ್ಕಂತೆ ಅನೇಕ ಬದಲಾವಣೆಗಳನ್ನು ಮಾಡುತ್ತ ಬಂದಿದ್ದಾರೆ. 1882ರಲ್ಲಿ ಹುಟರ್ ಆಯೋಗದವರು "ಪರೀಕ್ಷೆ ಫಲಿತಾಂಶಕ್ಕೆ ತಕ್ಕಂತೆ ಅನುದಾನ" ಎಂಬ ನಿಯಮವನ್ನು ಸೇರ್ಪಡೆ ಮಾಡಿದರು. ಇದರಿಂದ ಸಾಮಾನ್ಯ ಪರೀಕ್ಷೆ ಫಲಿತಾಂಶ ಚೆನ್ನಾಗಿದ್ದಲ್ಲಿ ಹೆಚ್ಚಿನ ಅನುದಾನ ದೊರೆಯುತ್ತಿತ್ತು ಆದರೆ ಫಲಿತಾಂಶ ಕಡಿಮೆ ಆದ ಸಂಸ್ಥೆಗಳಿಗೆ ಅನುದಾನ ಕಡಿಮೆ ಅಥವಾ ನಿಲ್ಲಿಸುವ ಕ್ರಮದಿಂದ ಬಹಳ ಗೊಂದಲದ ಪರಿಸ್ಥಿತಿ ನಿರ್ಮಾಣವಾಯಿತು. ನಂತರ 1913ರ ಭಾರತ ಸರಕಾರದ ಪರಿಪತ್ರ ವಿದ್ಯಾಸಂಸ್ಥೆಗಳಲ್ಲಿಯ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಅನುಪಾತವನ್ನು ಪರಿಶೀಲಿಸಿ ಅನುದಾನವನ್ನು ನೀಡಲು ಸೂಚಿಸಿತು. ನಂತರ 1925ರಲ್ಲಿ ಬ್ರಿಟಿಷ್ ಸರ್ಕಾರವು ಶಿಕ್ಷಕರ ಸಂಬಳ ನಿಗದಿಪಡಿಸಲು ಒಂದು ಆಯೋಗ ರಚಿಸಿ ಅದರ ಶಿಫಾರಸ್ಸಿನಂತೆ ಅನುದಾನವನ್ನು ನಿಗದಿಪಡಿಸಲಾಯಿತು. ಅಂದಿನಿಂದ ಅನುದಾನ ಸಂಹಿತೆಯಲ್ಲಿ 'ಶಿಕ್ಷಕರ ವೇತನ ಅನುದಾನ' ಎಂಬ ಪರಿಚ್ಛೇದವನ್ನು ಸೇರಿಸಲಾಯಿತು. ಆದಾಗ್ಯೂ ಬ್ರಿಟಿಷರ ಪ್ರತಿನಿಧಿಗಳು ನಡೆಸುತ್ತಿರುವ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡುವ, ಭಾರತೀಯರು ನಡೆಸುವ ಶಾಲೆಗಳಿಗೆ ಕಡಿಮೆ ಅನುದಾನ ನೀಡುವ ತಾರತಮ್ಯ ಕ್ರಮ ನೆಲೆ ಊರಿತ್ತು. 1935ರಲ್ಲಿ ಡಾ. ಝಾಕಿರ್ ಹುಸೇನ್ ಸಮಿತಿ ತನ್ನ "ಮೂಲಶಿಕ್ಷಣ" ವರದಿಯಲ್ಲಿ ಶಿಕ್ಷಕರ ಸಂಬಳದ ಬಗ್ಗೆ ಅತ್ಯಂತ ಉತ್ತಮವಾದ ಶಿಫಾರಸ್ಸನ್ನು ಮಾಡಿತು. ಆದರೆ ಬ್ರಿಟಿಷ್ ಸರಕಾರ ಅದನ್ನು ಒಪ್ಪಿಕೊಳ್ಳಲಿಲ್ಲ. ದೇಶದಲ್ಲಿ ಸ್ವಾತಂತ್ರ್ಯ ಆಂದೋಲನ ಪ್ರಾರಂಭವಾಗಿ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿತು. 1944ರ ಸಾರ್ಜಂಟ್ ಆಯೋಗವು ಅನುದಾನ ಸಂಹಿತೆಗೆ ಒಂದು ನಿಶ್ಚಿತ ರೂಪವನ್ನು ಕೊಟ್ಟಿತು. ಅದರಂತೆ ಭಾರತೀಯರಿಂದ ನಡೆಸಲ್ಪಡುವ ಶಾಲೆಗಳಿಗೂ ಉತ್ತಮ ರೀತಿಯಲ್ಲಿ ಅನುದಾನ ದೊರೆಯುವಂತಾಯಿತು. 1947ರಲ್ಲಿ ಭಾರತ ಸ್ವಾತಂತ್ರ್ಯ ಹೊಂದಿತು. ನಮ್ಮ ದೇಶದ ಸಂವಿಧಾನ ಮತ್ತು ಅನೇಕ ಸಂಘಸಂಸ್ಥೆಗಳು ಶಿಕ್ಷಣ ಪ್ರಸಾರಕ್ಕಾಗಿ ಮುಂದೆ ಬಂದವು. ಜೊತೆಗೆ ಹಣ ಸಂಪಾದನೆಗಾಗಿ ವಿದ್ಯಾಸಂಸ್ಥೆಗಳು ತಲೆ ಎತ್ತತೊಡಗಿದವು. ಸರಕಾರದ ಹಿಡಿತವಿಲ್ಲದೆ ನಾಯಿಕೊಡೆಗಳಂತೆ ಶಿಕ್ಷಣಸಂಸ್ಥೆಗಳು ಆರಂಭವಾಗತೊಡಗಿದವು. ಹೀಗೆ ಅನುದಾನ ಪಡೆಯುವುದಕ್ಕಾಗಿಯೇ ದೊಡ್ಡ ಸಂಖ್ಯೆಯಲ್ಲಿ ವಿದ್ಯಾಸಂಸ್ಥೆಗಳು ಸ್ಥಾಪಿತವಾಗತೊಡಗಿದವು. ಇದರಿಂದ ಎಲ್ಲ ಹಂತಗಳ ಶಿಕ್ಷಣದ ಗುಣಮಟ್ಟ ಕುಸಿಯತೊಡಗಿತು. ಇದಕ್ಕಾಗಿ ಭಾರತ ಸರ್ಕಾರ ಮತ್ತು ರಾಜ್ಯ ಸರಕಾರಗಳು ಹೊಸ ಅನುದಾನ ಸಂಹಿತೆಯನ್ನು ಜಾರಿಯಲ್ಲಿ ತಂದವು. ಈ ಅನುದಾನ ಸಂಹಿತೆಯಲ್ಲಿ ಹಲವಾರು ಪ್ರಜಾಸತ್ತಾತ್ಮಕ ರೂಪುರೇಷೆಗಳನ್ನು ಹಾಕಲಾಯಿತು. ಸರಕಾರಗಳು ತಮ್ಮ ತಮ್ಮ ಸರಕಾರಿ ಗೆಜೆಟ್‌ಗಳಲ್ಲಿ ಅನುದಾನ–ಸಂಹಿತೆಗಳನ್ನು ಪ್ರಕಟಿಸಿದವು. ಅದರಲ್ಲಿ ಮುಖ್ಯವಾದ ಕೆಲ ಅಂಶಗಳನ್ನು ಗಮನಿಸಬಹುದು.

1. ಭಾರತದ ಕೇಂದ್ರ ಸರಕಾರ/ರಾಜ್ಯ ಸರಕಾರಗಳ ನಿಯಮಗಳಿಗೆ ಒಳಪಟ್ಟು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬೇಕು ಮತ್ತು ಅವುಗಳಿಗೆ ಅನುಮೋದನೆ ಪಡೆಯಬೇಕು.

Digitised by Bharatavani, CIIL

2. ಶಿಕ್ಷಣ ಸಂಸ್ಥೆಗಳು ಕರಾರು ಪತ್ರ ನೀಡಿ ನಿಯಮಬದ್ಧವಾದ ಆಡಳಿತ ಮತ್ತು ಶಿಕ್ಷಣ ನೀಡುವ ಭರವಸೆ ನೀಡಬೇಕು.
3. ಧರ್ಮನಿರಪೇಕ್ಷ ದೇಶದ ಏಕತೆ, ಅಖಂಡತೆಯನ್ನು ಕಾಪಾಡಿ ಎಲ್ಲ ಮಕ್ಕಳಿಗೆ ಅವಕಾಶ, ಶಿಕ್ಷಕರ ನೇಮಕಾತಿಯಲ್ಲಿ ಸಂವಿಧಾನ ಬದ್ಧವಾದ ನಿಯಮ ಅನುಸರಿಸಬೇಕು.
4 ಶಾಲೆಗಳು/ವಿದ್ಯಾಸಂಸ್ಥೆಗಳು ಅಗತ್ಯವಾದ ಕನಿಷ್ಠ ಅನುಕೂಲತೆಗಳನ್ನು ಹೊಂದಿರಬೇಕು ಮತ್ತು ಉತ್ತಮ ಪರಿಸರ ಹೊಂದಿರಬೇಕು.
5. ಕನಿಷ್ಠ ಸಂಖ್ಯೆಯ ವಿದ್ಯಾರ್ಥಿಗಳ ದಾಖಲಾತಿ ಮತ್ತು ಪರೀಕ್ಷಾ ಫಲಿತಾಂಶ ನೀಡಬೇಕು.
6. ನಿಯಮಿತ ಪ್ರಮಾಣದಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಅನುಪಾತವನ್ನು ಅನುಸರಿಸಬೇಕು.
7. ನಿಯಮಿತ ತಪಾಸಣೆ, ಮೇಲ್ವಿಚಾರಣೆ, ಲೆಕ್ಕಪತ್ರಗಳ ಅನುಸರಣೆ ಇವುಗಳನ್ನು ಪಾಲಿಸಬೇಕು. ವಾರ್ಷಿಕ ಅಥಾವೆ ಪತ್ರಿಕೆ (ಖರ್ಚು ವೆಚ್ಚ ಪತ್ರ) ಅಥವಾ ಬಜೆಟ್ ಒಪ್ಪಿಸಬೇಕು.
8. ಸಾಮಾನ್ಯ ಪರೀಕ್ಷೆಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ನಡೆಸಿ ಉತ್ತಮ ಫಲಿತಾಂಶ ಬರುವಂತೆ ಮಾಡುವುದು.
9. ಆಡಳಿತ ಮಂಡಳಿಯವರು ನಿಶ್ಚಿತ ಶಾಲಾ ಅಭಿವೃದ್ಧಿ, ಶಿಕ್ಷಕರ ಕಲ್ಯಾಣ, ವಿದ್ಯಾರ್ಥಿಗಳ ಯೋಗ್ಯ ಬೇಡಿಕೆಗಳನ್ನು, ಪಾಲಕರ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
10. ಶಿಕ್ಷಕರ ನೇಮಕಕ್ಕೆ ಸಂಬಂಧಿಸಿದಂತೆ ಸರಕಾರದ ನಿಯಮಗಳನ್ನು ಪಾಲಿಸಬೇಕು. ಶಿಕ್ಷಕರನ್ನು ಅರ್ಹತೆಯ ಮೇಲೆ ನೇಮಿಸಿಕೊಂಡು ಸರಕಾರದ ಅನುಮೋದನೆ ಪಡೆಯಬೇಕು.
11. ನಿಯಮಿತವಾಗಿ ಪಾಲಕರ ಸಭೆ, ಆಡಳಿತ ಮಂಡಳಿ ಸಭೆ, ಶಾಲಾ ಸುಧಾರಣೆ ಸಭೆ ನಡೆಸಿ ಅವುಗಳ ಸಲಹೆ ಸೂಚನೆಗಳನ್ನು ಪಾಲಿಸಬೇಕು.
12. ವಿದ್ಯಾರ್ಥಿಗಳಿಂದ/ಪಾಲಕರಿಂದ ಯಾವುದೇ ಅನಧಿಕೃತ ಶುಲ್ಕ ವಸೂಲು ಮಾಡಬಾರದು. ಕೇವಲ ಸರಕಾರ ಸೂಚಿಸಿದ ಶುಲ್ಕ ಮಾತ್ರ ತೆಗೆದುಕೊಳ್ಳಬೇಕು.
13. ಶಾಲೆ/ಸಂಸ್ಥೆ ಯಾವುದೇ ರಾಜಕಿಯ ಚಟುವಟಿಕೆಯಲ್ಲಿ ತೊಡಗಿರಬಾರದು ಮತ್ತು ಅವ್ಯವಹಾರ ಅಲ್ಲದೆ ವಿದ್ಯಾರ್ಥಿಗಳ ಜೀವಕ್ಕೆ ಅಪಾಯ ತರುವಂತೆ ಮಾಡಕೂಡದು.
14. ಪ್ರತಿಯೊಬ್ಬ ಅನುದಾನಿತ ಶಿಕ್ಷಕನಿಗೆ ಚೆಕ್ ಮೂಲಕ ವೇತನ ನೀಡಿ ಅವನಿಗೆ ಎಲ್ಲ ಸೌಲಭ್ಯಗಳನ್ನು ನೀಡುವುದು. ಕಾಲಕಾಲಕ್ಕೆ ಮುಂಬಡ್ತಿ ನೀಡುವುದು.
15. ಆಡಳಿತ ಮಂಡಳಿಯವರು ಶಿಕ್ಷಕ/ಸಿಬ್ಬಂದಿಗಳಿಗೆ ಯಾವುದೇ ರೀತಿಯ ಒತ್ತಡ, ಹಿಂಸೆ ನೀಡಬಾರದು.
16. ಶಿಕ್ಷಕರು ತಮ್ಮ ಬೋಧನಾ ಕೌಶಲ್ಯವನ್ನು ನಿಯಮಿತವಾಗಿ ಹೆಚ್ಚಿಸಿಕೊಂಡು ಪರಿಣಾಮಕಾರಿ ಬೋಧನೆ ಮಾಡುವುದು ಹಾಗೂ ಶಿಕ್ಷಕರಿಗೆ ತರಬೇತಿ ಕಡ್ಡಾಯವಾಗಿರುತ್ತದೆ.
17. ಸ್ವಂತ ಕಟ್ಟಡ ಹೊಂದಿರಬೇಕು. ಸಂಪನ್ಮೂಲಗಳ ಕ್ರೋಢೀಕರಣ, ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯಬೇಕು.
18. ಸರಕಾರದ ಯೋಜನೆಗಳನ್ನು ಜಾರಿಗೊಳಿಸಬೇಕು. ಅಧಿಕಾರಿಗಳ ಯೋಗ್ಯ ಸಲಹೆಗಳನ್ನೂ ಅನುಷ್ಠಾನಗೊಳಿಸಬೇಕು.

**ಅನುದಾನ ನಿಲ್ಲಿಸುವಿಕೆ**

ವಿದ್ಯಾಸಂಸ್ಥೆಗಳು ಸರಕಾರದ ನಿಯಮಗಳನ್ನು ಉಲ್ಲಂಘಿಸಿದರೆ ಅನುದಾನವನ್ನು ನಿಲ್ಲಿಸುವ ಹಕ್ಕನ್ನು ಸರ್ಕಾರ ಹೊಂದಿರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳು:

1. ವಿದ್ಯಾಸಂಸ್ಥೆಗಳು, ಧರ್ಮನಿರಪೇಕ್ಷತೆ, ಜಾತ್ಯತೀತ ಭಾವನೆ ತೋರಿಸದೆ ಪಕ್ಷಪಾತದಿಂದ ವಿದ್ಯಾರ್ಥಿ ಸೇರ್ಪಡೆ, ಶಿಕ್ಷಕರ ನಿಯಮ ಉಲ್ಲಂಘನೆ ಮಾಡಿದರೆ, ಆಡಳಿತ ಮಂಡಳಿ ಬಿಗಿ ಹಿಡಿತ ಮುಂತಾದವುಗಳನ್ನು ತೋರಿದರೆ ಅನುದಾನ ನಿಲ್ಲಿಸಬಹುದಾಗಿದೆ.
2. ವಿದ್ಯಾ ಸಂಸ್ಥೆಗಳು ರಾಜಕೀಯ ಚಟುವಟಿಕೆ, ವಿದ್ಯಾರ್ಥಿಗಳಿಂದ ದುರ್ಬಳಕೆ ಶಿಕ್ಷಕರಿಗೆ ಸರಿಯಾಗಿ ಸಂಬಳ ನೀಡದಿರುವಿಕೆ, ಶಿಕ್ಷಕರಿಗೆ ಅತಿಯಾದ ಕಿರುಕುಳ ನೀಡುವುದು, ಹಣ ನೀಡುವಂತೆ ಒತ್ತಾಯಿಸುವುದು.
3. ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಿಮೆಯಾಗುವುದು, ಶಿಕ್ಷಕರ ಕೊರತೆ, ಪರೀಕ್ಷೆ ಫಲಿತಾಂಶ ತೀರಾ ಕಡಿಮೆಯಾಗುವುದು, ಅನುಕೂಲತೆಗಳ ಕೊರತೆ, ಸ್ವಂತ ಕಟ್ಟಡ ಇಲ್ಲದಿರುವುದು.
4. ವಾರ್ಷಿಕ ಲೆಕ್ಕ ಪತ್ರ ನೀಡದಿರುವುದು, ವಿದ್ಯಾರ್ಥಿ/ ಪೋಷಕರಿಂದ ಅನಧಿಕೃತ ದೇಣಿಗೆ ಸಂಗ್ರಹಣೆ, ಶುಲ್ಕ ಸಂಗ್ರಹಣೆ, ಪ್ರವೇಶ ನಿಯಮ ಉಲ್ಲಂಘನೆ, ತಪಾಸಣೆಯಲ್ಲಿ ತೀವ್ರ ದೋಷ ಕಂಡುಬಂದಲ್ಲಿ ಅನುದಾನ ನಿಲ್ಲಿಸಬಹುದಾಗಿದೆ.
5. ಶಿಕ್ಷಕರು/ ಮುಖ್ಯಸ್ಥರು ವಿದ್ಯಾರ್ಥಿಗಳ ಜೀವಕ್ಕೆ ಕುತ್ತು ಉಂಟಾಗುವಂತಹ ಚಟುವಟಿಕೆಗಳನ್ನು ದೇಶದ್ರೋಹ ಚಟುವಟಿಕೆಗಳನ್ನು ನಡೆಸಿದರೆ ಅನುದಾನ ನಿಲ್ಲಿಸಬಹುದಾಗಿದೆ.
6. ಸರಕಾರಿ ನಿಯಮಗಳ ಉಲ್ಲಂಘನೆ, ನಿಯಮಿತ ಅವಧಿಯಲ್ಲಿ ಶಾಲೆ ನಡೆಯದಿರುವಿಕೆ ಶಿಕ್ಷಕರ ಸತತ ಗೈರುಹಾಜರಿ, ಅನಧಿಕೃತವಾಗಿ ಗೈರುಹಾಜರಾಗುತ್ತಿದ್ದರೆ ಅನುದಾನ ನಿಲ್ಲಿಸಬಹುದು.

ಅನುದಾನ ವ್ಯವಸ್ಥೆಯ ದೃಷ್ಟಿಯಿಂದ ಶಾಲೆಗಳನ್ನು ಮೂರು ರೀತಿಯ ಶಾಲೆಗಳನ್ನಾಗಿ ವಿಂಗಡಿಸಬಹುದು.

1. **ಸರಕಾರಿ ಶಾಲೆಗಳು:** ಸಂಸ್ಥೆಗಳು ಇವುಗಳಲ್ಲಿ ಶಿಕ್ಷಕರ ಸಂಬಳ, ಸಂಸ್ಥೆ ನಿರ್ವಹಣೆ ನೇರವಾಗಿ ಸರಕಾರ (ರಾಜ್ಯ/ಕೇಂದ್ರ)ವೇ ವಹಿಸಿಕೊಂಡಿರುತ್ತವೆ. ಉದಾಹರಣೆಗೆ, ರಾಜ್ಯ ಸರಕಾರ–ಪ್ರಾಥಮಿಕ/ ಮಾಧ್ಯಮಿಕ ಸರಕಾರಿ ಶಾಲೆಗಳು ಕೇಂದ್ರ ಸರಕಾರದ ಕೇಂದ್ರೀಯ ಶಾಲೆ, ಸಂಸ್ಥೆಗಳು ಇವುಗಳ ಸಂಪೂರ್ಣ ವೆಚ್ಚವನ್ನು ಸರ್ಕಾರ ಭರಿಸುತ್ತದೆ. ಇವು ಅನುದಾನ ಪದ್ಧತಿ ಸೇರುವುದಿಲ್ಲ.
2. **ಅನುದಾನಿತ ಶಾಲೆಗಳು/ಸಂಸ್ಥೆಗಳು:** ಸರಕಾರದಿಂದ ಮನ್ನಣೆ ಪಡೆದು ಶಿಕ್ಷಕರ ಸಂಬಳ, ನಿರ್ವಹಣಾ ಖರ್ಚು, ಅಭಿವೃದ್ಧಿ ಹಣ ಮುಂತಾದವುಗಳನ್ನು ಸರಕಾರದಿಂದ ಪಡೆದು ನಡೆಯುತ್ತಿರುವ ಶಾಲೆಗಳು. ಇಂಥ ಸಂಸ್ಥೆಗಳಿಗೆ ಸರಕಾರದಿಂದ ಕೆಲವು ನಿಬಂಧನೆಗಳಿಗೆ ಒಳಪಟ್ಟು ಅನುದಾನದ ರೂಪದಲ್ಲಿ ಹಣಕಾಸಿನ ಸಹಾಯ ದೊರಕುತ್ತದೆ.
3. **ಅನುದಾನರಹಿತ ಶಾಲೆಗಳು/ಸಂಸ್ಥೆಗಳು:** ಸರಕಾರದಿಂದ ಮನ್ನಣೆ ಪಡೆದು ಅದರ ಯಾವುದೇ ರೀತಿಯ ಹಣಕಾಸಿನ ಸಹಾಯವಿಲ್ಲದೆ

Digitised by Bharatavani, CIIL

ತಮ್ಮದೇ ಆದ ಹಣಕಾಸಿನ ಮೂಲಗಳಿಂದ ನಡೆಯುತ್ತಿರುವ ಶಾಲೆಗಳು/ಸಂಸ್ಥೆಗಳು. ಇಂಥ ಖಾಸಗಿ ಶಾಲೆಗಳು ಸರ್ಕಾರದಿಂದ ಅನುದಾನ ಪಡೆಯುವವರೆಗೆ ಅನುದಾನ ವ್ಯವಸ್ಥೆಯ ವ್ಯಾಪ್ತಿಗೆ ಬರುವುದಿಲ್ಲ.

–ಆರ್.ಟಿ.ಜ

## ಅನುವಂಶೀಯತೆ ತಂತ್ರಗಳು

ಜೀವವಿಕಾಸ ಲೇಮಾರ್ಕ್, ಡಾರ್ವಿನ್ ಮುಂತಾದ ಜೀವ ವಿಜ್ಞಾನಿಗಳು ಜೀವ ವಿಕಾಸವನ್ನು ಪಳೆಯುಳಿಕೆಗಳ (Fossils) ಸಾಕ್ಷ್ಯಗಳ ಸಹಾಯದಿಂದ ನಿರೂಪಿಸಿದ್ದಾರೆ ಎಂಬುದು ಲೇಮಾರ್ಕ್ ಮತ್ತು ಡಾರ್ವಿನ್‌ನ ವಿಕಾಸವಾದಗಳ ಮೂಲಕ ತಿಳಿಯುತ್ತದೆ.

ಡಾರ್ವಿನ್ ಮಂಡಿಸಿದ ವಿಕಾಸವಾದವನ್ನು ಜೀವ ವಿಜ್ಞಾನದ ಶಾಖೆಗಳಾದ ತಳಿ ಶಾಸ್ತ್ರ, ಅಣು ಜೀವಶಾಸ್ತ್ರ, ಪರಿಸರ ಶಾಸ್ತ್ರ, ಪ್ರಾಗ್ಜೀವಿ ಶಾಸ್ತ್ರ ಮುಂತಾದವುಗಳಿಂದ ಪಡೆದ ಮಾಹಿತಿಯ ಆಧಾರದ ಮೇಲೆ ಪುನರ್ ನಿರೂಪಿಸಲಾಗಿದೆ.

ಪ್ರಕೃತಿಯ ಆಯ್ಕೆಯ ಪ್ರಕ್ರಿಯೆಗೆ ಒಳಪಟ್ಟು ಹೊಸ ಜೀವಿಗಳು ಉತ್ಪತ್ತಿಯಾಗುವ ಜೀವವಿಕಾಸ ಕ್ರಿಯೆಯನ್ನು ಪ್ರತಿಪಾದಿಸುವ ವಾದವನ್ನು "ನವ ಡಾರ್ವಿನ್ ವಾದ" ಎಂದು ಕರೆಯಲಾಗಿದೆ. ಕೆಲವೊಮ್ಮೆ ಉತ್ಪರಿವರ್ತನೆ (Mutations) ಯಿಂದಾದ ಬದಲಾವಣೆಗಳು ಅನುವಂಶೀಯವಾಗಿ ಮುಂದಿನ ಪೀಳಿಗೆಗೆ ಸಾಗಿ ಬಂದಾಗ ಒಂದು ಹೊಸ ಜೀವ ಪ್ರಭೇದವು ಉಂಟಾಗುತ್ತದೆ. ಇದೇ ಜೀವವಿಕಾಸದ ಮೂಲ ತತ್ವ.

ವರ್ಣತಂತುಗಳ ರಚನೆ ಮತ್ತು ಡಿ.ಎನ್.ಎ. ಅಣುಗಳು ಸ್ವಪ್ರತೀಕರಣ ಹೊಂದಿ ಜೀವಿಯ ಗುಣಲಕ್ಷಣಗಳು ಅನುವಂಶೀಯವಾಗಿ ಸಾಗಬಲ್ಲವು. ಈ ಪ್ರಕ್ರಿಯೆಯು ಅನುವಂಶೀಯತೆಯ ಮೂಲಮಂತ್ರವಾಗಿದೆ. ಕೆಲವು ವೇಳೆ ಸ್ವಪ್ರತೀಕರಣದ ಪ್ರಕ್ರಿಯೆಯಲ್ಲಿ ಉತ್ಪರಿವರ್ತನೆಯಿಂದಾಗಿ ಏರುಪೇರಾಗುವುದು ಉಂಟು.

ಈ ರೀತಿಯ ಉತ್ಪರಿವರ್ತನೆ ಎರಡು ವಿಧಗಳಾಗಿವೆ.

1. ವರ್ಣತಂತು ಉತ್ಪರಿವರ್ತನೆ.
2. ಜೀನ್ (ವಂಶವಾಹಿ) ಉತ್ಪರಿವರ್ತನೆ.

ಹೀಗೆ ಅನುವಂಶೀಯ ಲಕ್ಷಣಗಳನ್ನು ಸಾಗಿಸುವ ವರ್ಣತಂತುಗಳಲ್ಲಿ ಮತ್ತು ಜೀನ್‌ಗಳಲ್ಲಿ ಆಗುವ ಉತ್ಪರಿವರ್ತನೆಗಳಿಂದಾಗಿ ಜೀವಿಯ ಮುಂದಿನ ಪೀಳಿಗೆಯ ಲಕ್ಷಣಗಳಲ್ಲಿ ಮಾರ್ಪಾಡು ಉಂಟಾಗುತ್ತದೆ. ಹೀಗೆ ನೂತನ ಲಕ್ಷಣಗಳನ್ನು ಪಡೆದ ಜೀವಿಗಳು ತಮ್ಮ ಜನಕರನ್ನು ಪೂರ್ಣವಾಗಿ ಹೋಲುವುದಿಲ್ಲ. ಇವು ಪ್ರಕೃತಿಯ ಆಯ್ಕೆಯಲ್ಲಿ ಬದುಕಿ ಉಳಿದಾಗ ನೂತನ ಲಕ್ಷಣಗಳನ್ನು ತಮ್ಮ ಮುಂದಿನ ಪೀಳಿಗೆಗೆ ಸಾಗಿಸುತ್ತವೆ. ಇದರಿಂದ ಹೊಸ ಪ್ರಭೇದಗಳು ಉತ್ಪತ್ತಿಯಾಗುತ್ತವೆ.

ಜೀವಿಗಳು ತಮ್ಮ ಬಹಳಷ್ಟು ಗುಣಲಕ್ಷಣಗಳನ್ನು ವಂಶಪಾರಂಪರ್ಯವಾಗಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತವೆ.

ಆನೆಯಿಂದ ಆನೆಯ ಮರಿ, ಕೋಳಿಯಿಂದ ಕೋಳಿಯ ಮರಿ, ಮಾವಿನ ಬೀಜದಿಂದ ಮಾವಿನ ಮರ ಉತ್ಪತ್ತಿ ಆಗುವುದು ಎಂದು ಎಲ್ಲರಿಗೂ ತಿಳಿದಿರುವ ವಿಚಾರ.

ಒಂದು ಕುಟುಂಬದಲ್ಲಿರುವ ಮಕ್ಕಳಲ್ಲಿ ಪರಸ್ಪರ ಹೋಲಿಕೆಗಳಿದ್ದರೂ ಸಹ ಅವರು ಸಂಪೂರ್ಣವಾಗಿ ಒಬ್ಬರಂತೆ ಇನ್ನೊಬ್ಬರಿರುವುದಿಲ್ಲ. ತಳಿ ಶಾಸ್ತ್ರವು (Genetics) ಜೀವಿಗಳಲ್ಲಿರುವ ಸಾದೃಶ್ಯತೆ ಮತ್ತು ವ್ಯತ್ಯಾಸಗಳನ್ನು ವಿವರಿಸುತ್ತದೆ. ಅನುವಂಶೀಯತೆಯು ತಂದೆ ತಾಯಿಗಳು ಮತ್ತು ಮಕ್ಕಳಿಗಿರುವ ಸಾದೃಶ್ಯತೆಗೆ ಕಾರಣವಾದ ಅಂಶಗಳ ಬಗ್ಗೆ ವಿವರಿಸಿದರೆ, ವಿಭಿನ್ನತೆ ಜೀವಿಗಳ ನಡುವೆ ಇರುವ ವ್ಯತ್ಯಾಸಗಳನ್ನು ಸಂಬಂಧಿಸಿದ ಅಂಶಗಳನ್ನು ವಿವರಿಸುತ್ತದೆ. ಹೊಸ ಜೀವಿಗಳನ್ನು ಉತ್ಪತ್ತಿ ಮಾಡುವಲ್ಲಿ ಅನುವಂಶೀಯ, ವಿಭಿನ್ನತೆ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಆಸ್ಟ್ರಿಯಾ ದೇಶದ ಗ್ರೆಗೋರ್ ಜೋಹಾನ್ ಮೆಂಡಲರು (1822–1884) ತಳಿಶಾಸ್ತ್ರದ ಅಧ್ಯಯನಕ್ಕೆ ಒಂದು ಸ್ಥಿರವಾದ ಅಡಿಗಲ್ಲನ್ನು ಹಾಕಿದ್ದಾರೆ. ಅವರಿಗೆ ಕೋಶ ವಿಭಜನೆ (ಮಿಯಾಸಿಸ್) ವರ್ಣತಂತು ಮತ್ತು ವಂಶವಾಹಿಗಳ (ಜೀನುಗಳ) ಬಗ್ಗೆ ಮಾಹಿತಿ ಇಲ್ಲದಿದ್ದರೂ ಬಟಾಣಿ ಸಸ್ಯಗಳ ಮೇಲೆ ವೈಜ್ಞಾನಿಕವಾದ ಪ್ರಯೋಗಗಳನ್ನು ನಡೆಸಿ ತಳಿಶಾಸ್ತ್ರದ ಕೆಲವು ಪರಿಕಲ್ಪನೆಗಳನ್ನು ಮತ್ತು ನಿಯಮಗಳನ್ನು ರೂಪಿಸಿದ್ದಾರೆ.

**ಏಕತಳೀಕರಣದ ಮೇಲೆ ಮೆಂಡಲರು ನಡೆಸಿದ ಪ್ರಯೋಗಗಳು:** ಒಂದು ಲಕ್ಷಣಕ್ಕೆ ಸಂಬಂಧಿಸಿದಂತೆ ವಿಭಿನ್ನವಾದ ಎರಡು ರೂಪಗಳನ್ನು ತೋರಿಸುವ ಸಸ್ಯಗಳನ್ನು ಅಡ್ಡಹಾಯಿಸುವುದನ್ನು ಏಕತಳೀಕರಣ ಎನ್ನುತ್ತಾರೆ. ಬಟಾಣಿ ಸಸ್ಯಗಳು ಸ್ವಕೀಯ ಪರಾಗಸ್ಪರ್ಶ ಹೊಂದುವ ಸಸ್ಯಗಳು ಮೆಂಡಲ್ ಶುದ್ಧ ತಳಿಗಳು ದೊರೆಯುವವರೆಗೂ ಹಲವಾರು ತಲೆಮಾರುಗಳನ್ನು ಬೆಳೆಸಿದರು. ನಂತರ ಎತ್ತರವಾಗಿ ಮತ್ತು ಗಿಡ್ಡವಾಗಿ ಬೆಳೆಯುವ ಅಡ್ಡ ಹಾಯಿಸಿ ಪ್ರಯೋಗಗಳನ್ನು ನಡೆಸಿದರು.




**ದ್ವಿತಳೀಕರಣದ ಮೇಲೆ ಮೆಂಡಲರು ನಡೆಸಿದ ಪ್ರಯೋಗಗಳು ಅಥವಾ ದ್ವಿತಳೀಕರಣ** :– ಎರಡು ಲಕ್ಷಣಗಳಿಗೆ ಸಂಬಂಧಿಸಿದಂತೆ ವಿಭಿನ್ನವಾದ ಎರಡು ರೂಪಗಳನ್ನು ತೋರಿಸುವ ಸಸ್ಯಗಳನ್ನು ಅಡ್ಡ ಹಾಯಿಸುವುದನ್ನು ದ್ವಿತಳೀಕರಣ ಎನ್ನುತ್ತಾರೆ. ಈ ಪ್ರಯೋಗದಲ್ಲಿ ಮೆಂಡಲ್ ದುಂಡನೆಯ ಹಳದಿ ಬೀಜಗಳನ್ನು ಹೊಂದಿರುವ ಸಸ್ಯ ಮತ್ತು ಸುಕ್ಕಾದ ಹಸಿರು ಬೀಜಗಳನ್ನು ಹೊಂದಿರುವ ಶುದ್ಧ ಸಸ್ಯಗಳನ್ನು ಪಡೆದರು.

ತಮ್ಮ ಪ್ರಯೋಗಗಳ ಫಲಿತಾಂಶಗಳ ಆಧಾರದ ಮೇಲೆ ಮೆಂಡಲ್ ಮುಖ್ಯವಾದ ಎರಡು ನಿಯಮಗಳನ್ನು ರೂಪಿಸಿದರು.

1. ಪ್ರತ್ಯೇಕತೆಯ ನಿಯಮ.
2. ಸ್ವತಂತ್ರ ವಿನ್ಯಾಸದ ನಿಯಮ

Digitised by Bharatavani, CIIL




ಮುಂದೆ ಮೆಂಡಲರು ಪ್ರಯೋಗಗಳ ಸ್ಪಷ್ಟವಾದ ವಿಶ್ಲೇಷಣೆಗಾಗಿ ಈ ಕೆಳಕಂಡ ನಿಯಮಗಳನ್ನು ರೂಪಿಸಿದರು.

1. **ಘಟಕ ಗುಣದ ನಿಯಮ :** ಗುಣಗಳು ಘಟಕಗಳಂತೆ ವರ್ತಿಸುತ್ತವೆ ಮತ್ತು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಾಗಿಸಲ್ಪಡುತ್ತವೆ. ಈ ಘಟಕಗಳು ಗುಣಗಳ ಅಭಿವ್ಯಕ್ತಿಗೆ ಕಾರಣವಾಗಿರುತ್ತವೆ.

2. **ಪ್ರಾಬಲ್ಯದ ನಿಯಮ:** ಒಂದು ಗುಣ ಎರಡು ವಿಧವಾದ ವಂಶವಾಹಿಗಳಿಂದ (ಜೀನು) ನಿಯಂತ್ರಿಸಲ್ಪಡುತ್ತದೆ. ಅವುಗಳಲ್ಲಿ ಒಂದು ಪ್ರಬಲವಾಗಿದ್ದರೆ ಮತ್ತೊಂದು ದುರ್ಬಲವಾಗಿದ್ದು ದೋಷಯುಕ್ತ ಲಕ್ಷಣವನ್ನು ಮರೆಮಾಚುತ್ತದೆ.

3. **ಪ್ರತ್ಯೇಕತೆಯ ನಿಯಮ :** ಲಿಂಗಾಣುಗಳು ಉತ್ಪತ್ತಿಯಾಗುವಾಗ ಭಿನ್ನಗುಣಗಳು ಪ್ರತ್ಯೇಕವಾಗುತ್ತವೆ. ಅಂದರೆ ಒಂದು ಲಿಂಗಾಣು ಗುಣದ ಒಂದು ಅಂಶವನ್ನು ಮಾತ್ರ ಸಾಗಿಸುತ್ತದೆ.

4. **ಸ್ವತಂತ್ರ ವಿಂಗಡಣೆಯ ನಿಯಮ :** ಎರಡು ಜೀವಿಗಳು ಒಂದಕ್ಕಿಂತ ಹೆಚ್ಚು ಗುಣಗಳನ್ನು ಹೊಂದಿದ್ದರೆ ಪ್ರತಿ ಜೊತೆ ಗುಣವೂ ಇತರ ಗುಣಗಳಿಂದ ಸಂಪೂರ್ಣ ಸ್ವತಂತ್ರವಾಗಿ ಅನುವಂಶೀಯವಾಗುತ್ತದೆ.

**ಪ್ರಜನನ (ಜೀವೋತ್ಪತ್ತಿ):** ಇದು ಜೀವಿಗಳ ಪ್ರಾಥಮಿಕ ಗುಣ. ಪ್ರಜನನದಿಂದ ಪ್ರಾಣಿಗಳು, ಸಸ್ಯಗಳು ಹಾಗೂ ಇತರ ಜೀವಾಣುಗಳು ಭೂಮಿಯ ಮೇಲೆ ಇನ್ನೂ ಅಸ್ತಿತ್ವದಲ್ಲಿವೆ. ಜೀವಿಗಳು ನಿರ್ಜೀವಿಗಳಿಗಿಂತ ಭಿನ್ನವಾಗಿರುವುದಕ್ಕೆ ಪ್ರಜನನ ಕಾರಣ. ನಿರ್ಜೀವಿಗಳಲ್ಲಿ ಪ್ರಜನನ ಕ್ರಿಯೆ ಇಲ್ಲ. ಪ್ರಜನನ ಕ್ರಿಯೆಯಿಂದ ಉದ್ಭವವಾಗುವ ಸಂತಾನಗಳು ಜನಿಸುವಾಗ ಚಿಕ್ಕವಾಗಿದ್ದರೂ, ನಂತರ ಬೆಳೆದು ಪ್ರೌಢ ಜೀವಿಯಾಗಿ ಪಿತೃಗಳ ಆಕಾರವನ್ನೇ ತಳೆಯುತ್ತವೆ.

ಸಾಮಾನ್ಯ ಜೀವನಚಕ್ರವನ್ನು ಹೊಂದಿರುವ ಪ್ರಾಣಿಗಳಲ್ಲಿ ಗಂಡು ಮತ್ತು ಹೆಣ್ಣು ಲಿಂಗಗಳಿವೆ. ಇವು ನಿರ್ದಿಷ್ಟ ವಯೋಮಾನವನ್ನು ತಲುಪಿದಾಗ ಪ್ರಬುದ್ಧವಾಗುತ್ತವೆ. ಹೀಗೆ ಪ್ರಬುದ್ಧತೆಯನ್ನು ಪಡೆದಾಗ ಮಾತ್ರ ಇವು ಪ್ರಜನನವನ್ನು ಆರಂಭಿಸುತ್ತವೆ, ಕೆಲವು ಪ್ರಾಣಿಗಳಲ್ಲಿ ಲಿಂಗಭೇದವಿದೆ, ಅಂದರೆ, ಯಾವುದೇ ಪ್ರಾಣಿ ಗಂಡಾಗಿರಬಹುದು ಅಥವಾ ಹೆಣ್ಣಾಗಿರಬಹುದು. ಇವು ದ್ವಿಲಿಂಗಿಗಳು (ಬೈಸೆಕ್ಸುಯಲ್). ಕೆಲವು ಪ್ರಾಣಿಗಳಲ್ಲಿ ಎರಡು ಲಿಂಗಗಳು ಒಂದೇ ಪ್ರಾಣಿಯಲ್ಲೇ ಇರುತ್ತವೆ. ಇವಕ್ಕೆ ಏಕಲಿಂಗಿಗಳೆಂದು (ಯೂನಿಸೆಕ್ಸುಯಲ್) ಹೆಸರು. ಗಂಡು, ಹೆಣ್ಣು ಗುಂಪುಗಳಲ್ಲಿ ಪ್ರಜನನಾಂಗಗಳ ಮುಖ್ಯ ಭಾಗ ವೃಷಣ ಮತ್ತು ಅಂಡಾಶಯ. ಇವನ್ನು ಪ್ರಜನನ ಗ್ರಂಥಿಗಳು ಎನ್ನುವರು (ನೋಡಿ ಅಂತಃಸ್ರಾವ ಗ್ರಂಥಿಗಳು). ವೃಷಣದಿಂದ ವೀರ್ಯಾಣುಗಳು ಅಥವಾ ಶೀತಸ್ಸುಗಳು (Sperms) ಮತ್ತು ಅಂಡಾಶಯದಿಂದ ಅಂಡಾಣುಗಳು (Ovum) ಉತ್ಪತ್ತಿಯಾಗುತ್ತವೆ. ವೀರ್ಯಾಣು ಮತ್ತು ಅಂಡಾಣುಗಳ ಮೂಲಕ ಪಿತೃಗಳಿಂದ ಅವುಗಳ ಸಂತಾನಕ್ಕೆ ಅನುವಂಶೀಯ ಗುಣಗಳು ಬರುತ್ತವೆ. ವೀರ್ಯಾಣು ಮತ್ತು ಅಂಡಾಣುಗಳು ಸಂಯೋಗಗೊಂಡು ಯುಗ್ಮಜ (ಜೈಗೋಟ್) ಉದ್ಭವಿಸುತ್ತದೆ. ಇದು ವೇಗವಾಗಿ ಹಲವು ಮಾರ್ಪಾಡುಗಳನ್ನು ಹೊಂದುತ್ತ, ಹಲವು ಬಾರಿ ವಿಭಾಗವಾಗಿ ಕೊನೆಗೆ ಕೋಶಗಳು ಟೊಳ್ಳು ಚೆಂಡಿನಂತಾಗುತ್ತವೆ. ಈ ಹಂತಕ್ಕೆ ಬ್ಲಾಸ್ಟುಲ ಎಂದು ಹೆಸರು. ಈ ಬೆಳವಣಿಗೆ ತಾಯಿಯ ಗರ್ಭಾಶಯದಲ್ಲಿ ಅಥವಾ ತಾಯಿಯ ಶರೀರದ ಹೊರಗೆ ನಡೆಯಬಹುದು. ತಾಯಿಯ ಶರೀರದೊಳಗೆ ನಡೆಯುವ ಬೆಳವಣಿಗೆಯಲ್ಲಿ ಬ್ಲಾಸ್ಟುಲ ಗರ್ಭಾಶಯಕ್ಕೆ (ಯೂಟೆರಸ್) ಬರುತ್ತದೆ. ಮುಂದಿನ ಬೆಳವಣಿಗೆ ಗರ್ಭಾಶಯದಲ್ಲಿ ನಡೆಯುತ್ತದೆ. ಸ್ತನಿಗಳಲ್ಲಿ (Mammals) ಜರುಗುವ ಈ ಹಂತಕ್ಕೆ ಗರ್ಭಧಾರಣೆ (ಇಂಪ್ಲಾಂಟೇಷನ್) ಎಂದು ಹೆಸರು. ಮುಂದಿನ ಹಂತ ಗ್ಯಾಸ್ಟ್ರುಲೀಕರಣ, ಈ ಹಂತದಲ್ಲಿ ಒಂದು ಪದರದ ಬ್ಲಾಸ್ಟುಲ, ಎರಡು ಪದರಗಳುಳ್ಳ ಕೋಶಗಳ ಚೆಂಡಿನಂತಾಗುತ್ತದೆ. ನಂತರ ಮೂರು ಪದರಗಳು ರೂಪಗೊಳ್ಳುವುವು. ಈ ಹಂತದೊಡನೆ ಗ್ಯಾಸ್ಟ್ರುಲೀಕರಣ ಮುಕ್ತಾಯವಾಗುತ್ತದೆ. ನಂತರ ವಿವಿಧ ಅಂಗಾಂಶಗಳು, ಅಂಗಗಳ ಮೂಲ ರೂಪುಗಳು, ಅಂಗವ್ಯೂಹಗಳು ರೂಪಗೊಳ್ಳುತ್ತವೆ. ಸಂಪೂರ್ಣ ಬೆಳವಣಿಗೆ ಹೊಂದಿದ ತರುವಾಯ ಶಿಶು ತಾಯಿಯ ಗರ್ಭದಿಂದ ಹೊರಬೀಳುತ್ತದೆ. ಸಾಮಾನ್ಯವಾಗಿ ಒಂಬತ್ತು ತಿಂಗಳು ಅಥವಾ 270 ದಿನಗಳು ಬೆಳೆದ ಶಿಶು ಜನಿಸುತ್ತದೆ. ಗರ್ಭಪೂರ್ವ ಅವಧಿಯ ಸಮಯದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಕೆಲವು ಮಕ್ಕಳು ಬೆಳವಣಿಗೆ ಪೂರ್ಣಗೊಳ್ಳುವುದಕ್ಕೆ ಮುಂಚೆ ಕೆಲವಾರು ಕಾರಣಗಳಿಂದ ಜನಿಸಬಹುದು. ಇಂತಹ ಅಶಕ್ತ ಶಿಶುಗಳನ್ನು ಸಂರಕ್ಷಣೆಯಲ್ಲಿ ಕೆಲಕಾಲ ಇಡಬೇಕಾಗುತ್ತದೆ.

**ಮನುಷ್ಯರಲ್ಲಿ ಪ್ರಜನನ :** ಮನುಷ್ಯರಲ್ಲಿ ಪ್ರಜನನ ಲೈಂಗಿಕ ವಿಧಾನದಿಂದ ಜರುಗುತ್ತದೆ ಗರ್ಭಾವಸ್ಥೆ ಅವಧಿಯಲ್ಲಿ ಜೀವಿಗಳಲ್ಲಿ ವ್ಯತ್ಯಾಸವಿದೆ. ಗಂಡು, ಹೆಣ್ಣುಗಳ ನಡುವೆ ಅನೇಕ ದೈಹಿಕ ವ್ಯತ್ಯಾಸಗಳಿವೆ. ಲೈಂಗಿಕ ವ್ಯತ್ಯಾಸಗಳಲ್ಲಿ ಕೆಲವು ಭ್ರೂಣದ ಬೆಳವಣಿಗೆ ಕಾಲದಲ್ಲಿ ದೇಹದ ಒಳಗೂ ಹಾಗೂ ಕೆಲವು ಹೊರ ಲಕ್ಷಣಗಳಾಗಿ ಮೂಡಿ, ಹುಟ್ಟು ವ್ಯತ್ಯಾಸಗಳಾಗಿ ವ್ಯಕ್ತವಾಗುತ್ತವೆ. ಇವು ಪ್ರಾಥಮಿಕ ಲೈಂಗಿಕ ಲಕ್ಷಣಗಳು, ಮಿಕ್ಕವು ವ್ಯಕ್ತಿ ಪ್ರಾಯಕ್ಕೆ ಬಂದು, ಸಂತಾನೋತ್ಪಾದಕ ಸಾಮರ್ಥ್ಯ ಗಳಿಸುವ ವೇಳೆಯಲ್ಲಿ ವ್ಯಕ್ತವಾಗುತ್ತವೆ, ಬೆಳವಣಿಗೆ ಹಠಾತ್ತನೇ ಹೆಚ್ಚಿ, ಕಿಶೋರಾವಸ್ಥೆ ಕಳೆದು ಯೌವನ ಪ್ರಾಪ್ತವಾಗುವ ಮತ್ತು ಯುವಕ ಯುವತಿಯರ ನಡುವೆ ಸ್ಪಷ್ಟವಾದ ವ್ಯತ್ಯಾಸಗಳು ಕಂಡುಬರುವ ಈ ವಿದ್ಯಮಾನಕ್ಕೆ ಪ್ರಬುದ್ಧತೆ (ಪ್ಯೂಬರ್ಟಿ) ಎಂದು ಹೆಸರು ಇದರ ಅವಧಿ ಒಂದೆರಡು ವರ್ಷಗಳು. ಈ ಅವಧಿಯಲ್ಲಿ ಕಾಣುವ ವಿಶೇಷ ಲಕ್ಷಣಗಳಿಗೆ ಆನುಷಂಗಿಕ ಲೈಂಗಿಕ ಲಕ್ಷಣಗಳೆಂದು ಹೆಸರು.

ಯುವಕ ಪ್ರಬುದ್ಧನಾದ ಬಳಿಕ ಅವನ ಪ್ರಧಾನ ಪ್ರಜನನಾಂಗಗಳಾದ ಎರಡು ವೃಷಣಗಳಿಂದ ವೀರ್ಯಾಣು (ರೇತಸ್ಸು) ಕೋಶಗಳು ಉತ್ಪತ್ತಿಯಾಗುತ್ತದೆ. ಇವು 40–45 ವರ್ಷಗಳ ತನಕ ನಿರಂತರವಾಗಿ ಉತ್ಪತ್ತಿಯಾಗುತ್ತವೆ. ಹಾಗೆಯೇ ಯುವತಿಯ ಪ್ರಧಾನ ಜನನಾಂಗಗಳಾದ ಎರಡು ಅಂಡಾಶಯಗಳಲ್ಲಿ ಒಂದರಿಂದ ಹೆಚ್ಚು ಕಡಿಮೆ ಕ್ಲುಪ್ತವಾಗಿ ನಾಲ್ಕು ವಾರಗಳಿಗೆ ಒಮ್ಮೆ, ಒಂದು ಅಂಡಾಣು ಉತ್ಪತ್ತಿಯಾಗುತ್ತದೆ. ಇವು 45–50 ವರ್ಷ ವಯಸ್ಸಾಗುವ ತನಕ ಉತ್ಪತ್ತಿಯಾಗುತ್ತವೆ. ಸಂಭೋಗಕ್ರಿಯೆಯಿಂದ ಪುರುಷನ ವೀರ್ಯಾಣುಗಳು ಸ್ತ್ರೀಯ ಪ್ರಜನನ ಮಾರ್ಗವನ್ನು ಸೇರಿ ಮುಂದೆ ಅಂಡಾಣುವನ್ನು ಸಂಧಿಸುತ್ತವೆ. ಒಂದು

Digitised by Bharatavani, CIIL

ವೀರ್ಯಾಣು ಮಾತ್ರ ಅಂಡಾಣುವನ್ನು ಸೇರುತ್ತದೆ. ಇದನ್ನು ಗರ್ಭಧಾರಣ ಕ್ರಿಯೆ ( ಫರ್ಟಿಲೈಸೇಷನ್) ಎನ್ನುವರು. ಅಂಡಾಣು ವೀರ್ಯಾಣು ಸಂಯೋಗದಿಂದ ಫಲಿಸುವ ಏಕ ಕೋಶವೇ ಯುಗ್ಮಜ ಅಥವಾ ಭ್ರೂಣಾಣು. ತಾಯಿಯ ಗರ್ಭಾಶಯದಲ್ಲಿ ಭ್ರೂಣ 40 ವಾರಗಳ ಕಾಲ ಬೆಳೆದು ಶಿಶುವಾಗಿ ರೂಪಗೊಂಡು ಅನಂತರ ಜನಿಸುತ್ತದೆ.




### ಕೋಶಕೇಂದ್ರ

ಜೀವಕೋಶಗಳಲ್ಲಿ ಅತ್ಯಂತ ಪ್ರಮುಖವಾದುದು ಕೋಶ ಕೇಂದ್ರ ಅಥವಾ ನ್ಯೂಕ್ಲಿಯಸ್. ಕೋಶಕೇಂದ್ರವು ಜೀವಿಗಳ ಸಂತಾನೋತ್ಪತ್ತಿ ಹಾಗೂ ಜೀವಕೋಶಗಳ ವಿಭಜನೆ ಕಾರ್ಯಗಳನ್ನು ನಿಯಂತ್ರಿಸುತ್ತದೆ.

ಕೋಶಕೇಂದ್ರವು ಸಾಮಾನ್ಯವಾಗಿ ಕೋಶದ ಮಧ್ಯಭಾಗದಲ್ಲಿರುತ್ತದೆ. ಈ ಕಣ ಒಂದು ಜೋಡಿ ಪೊರೆಯಿಂದ ಆವೃತ್ತವಾಗಿರುತ್ತದೆ. ಈ ಪೊರೆಗೆ ಕೋಶ ಕೇಂದ್ರ ಪೊರೆ ಅಥವಾ ನ್ಯೂಕ್ಲಿಯಾರ್ ಮೆಂಬ್ರೇನ್ ಎಂದು ಹೆಸರು. ಇದು ಕೋಶಕೇಂದ್ರದ ಒಳಗಿನ ಅಂಶಗಳನ್ನು ಹೊರಗಿನ ಕೋಶರಸದಿಂದ ಬೇರ್ಪಡಿಸುವುದು. ಇದರ ಹೊರ ಪದರ ಕೆಲವೆಡೆಗಳಲ್ಲಿ ಒಳಜೀವರಸ ಜಾಲದೊಡನೆ ಸೇರಿಕೊಂಡಿರುತ್ತದೆ. ಈ ಪೊರೆಯಲ್ಲಿ ಸಣ್ಣ ರಂಧ್ರಗಳಿದ್ದು, ಅವುಗಳ ಮೂಲಕ ಕೋಶಕೇಂದ್ರದ ಒಳಗೂ ಹೊರಗೂ ರಾಸಾಯನಿಕ ವಸ್ತುಗಳ ಸಾಗಾಣಿಕೆ ನಿಯಂತ್ರಿತಗೊಳ್ಳುತ್ತದೆ.

ಕೋಶಕೇಂದ್ರದ ಒಳಗೆ ಲೋಳೆಯಂತಿರುವ ವಸ್ತುವಿಗೆ ಕೋಶಕೇಂದ್ರದ ರಸ ಎಂದು ಹೆಸರು. ಇದು ಪ್ರೋಟೀನ್ ಮತ್ತು ನ್ಯೂಕ್ಲಿಕ್ ಆಮ್ಲಗಳಿಂದ ರಚಿತವಾಗಿದೆ. ಇದಕ್ಕೆ ನ್ಯೂಕ್ಲಿಯೋಪ್ಲಾಸಮ್ ಅಥವಾ ಕ್ಯಾರಿಯೋಪ್ಲಾಸಮ್ ಎಂದೂ ಸಹ ಹೆಸರಿದೆ. ಕೋಶಕೇಂದ್ರದಲ್ಲಿರುವ ದಾರದಂತಹ (ಜಾಲರೂಪಿ) ರಚನೆಗಳಿಗೆ ವರ್ಣಗ್ರಾಹಕ ಜಾಲ ಅಥವಾ ಕ್ರೋಮ್ಯಾಟಿಕ್ ಎಂದು ಹೆಸರು.

ವರ್ಣಗ್ರಾಹಕ ಜಾಲ ಕೋಶ ವಿಭಜನೆಯ ಕಾಲದಲ್ಲಿ ವರ್ಣತಂತು ಅಥವಾ ಕ್ರೋಮೋಸೋಮ್‌ಗಳಾಗಿ ಪರಿವರ್ತನೆಗೊಳ್ಳುವುದು. ಈ ವರ್ಣತಂತುಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಆ ಜೀವಿಯ ಗುಣಲಕ್ಷಣಗಳನ್ನು ಸಾಗಿಸುವ ಮಾಧ್ಯಮಗಳಾಗಿವೆ.

ಕೋಶಕೇಂದ್ರದಲ್ಲಿ ಒಂದು ಸಣ್ಣಗೋಲಾಕಾರದ ರಚನೆ ಕಾಣುವುದು. ಇದಕ್ಕೆ ಕಿರುಕೋಶಕೇಂದ್ರ ಎಂದು ಹೆಸರು. ಇದು ಪೊರೆಯನ್ನು ಹೊಂದಿರುವುದಿಲ್ಲ. ಇದು ಕೋಶಕ್ಕೆ ಅಗತ್ಯವಿರುವ ಪ್ರೋಟೀನುಗಳ ಉತ್ಪಾದನೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

ವರ್ಣತಂತುಗಳ ಸೂಕ್ಷ್ಮ ರಚನೆಯನ್ನು ವೀಕ್ಷಿಸಿದಾಗ, ಅವು ಸುರುಳಿಯಾಗಿರುವ ಉದ್ದನೆಯ ತಂತುಗಳಾಗಿ ಕಾಣಿಸುತ್ತವೆ. ಅವುಗಳು ಪ್ರೋಟೀನ್ ಮತ್ತು ಡಿ.ಎನ್.ಎ. ಗಳಿಂದ ಮಾಡಲ್ಪಟ್ಟಿರುತ್ತದೆ.




### ವರ್ಣತಂತು ಮತ್ತು ಡಿ.ಎನ್.ಎ.

ವರ್ಣತಂತುಗಳ ಸಂಖ್ಯೆ ಪ್ರತಿಯೊಂದು ಜೀವ ಪ್ರಭೇದಕ್ಕೂ ನಿರ್ದಿಷ್ಟವಾಗಿರುತ್ತದೆ. ಉದಾಹರಣೆಗೆ, ಮಾನವನ ದೇಹದ ಎಲ್ಲ ಜೀವಕೋಶಗಳಲ್ಲಿ 46 ಅಥವಾ 23 ಜೊತೆ ವರ್ಣತಂತುಗಳಿವೆ. ಡ್ರಾಸೋಫಿಲ ಮೆಲನೋಗ್ಯಾಸ್ಟರ್ ಒಂದು ಜಾತಿಯ ಹಣ್ಣು ಕೀಟದ ಜೀವಕೋಶಗಳಲ್ಲಿ 8 ವರ್ಣತಂತುಗಳಿವೆ. ಕಾಯಕೋಶಗಳಲ್ಲಿ ವರ್ಣತಂತುಗಳು ಜೋಡಿಯಾಗಿರುತ್ತದೆ. ಈ ಜೋಡಿ ವರ್ಣತಂತುಗಳಿಗೆ ಸಮರೂಪಿ ವರ್ಣತಂತುಗಳು ಎಂದು ಹೆಸರು. ಒಂದು ಜೊತೆ ಸಮರೂಪಿ ವರ್ಣತಂತುಗಳಲ್ಲಿ ಒಂದು ವರ್ಣತಂತುವು ಎರಡು ಸಮಾನಾಂತರ ಎಳೆಗಳಿಂದ ಕೂಡಿರುತ್ತದೆ. ಈ ಎಳೆಗಳಿಗೆ ಕ್ರೋಮಾಟಿಡ್‌ಗಳು ಎಂದು ಹೆಸರು. ಈ ಎರಡು ಕ್ರೋಮಾಟಿಡ್‌ಗಳು ಸೆಂಟ್ರೋಮಿಯರ್ ಎಂಬ ಒಂದು ಬಿಂದುವಿನಿಂದ ಬಂಧಿಸಲಾಗಿರುತ್ತವೆ. ಪ್ರತಿಯೊಂದು ವರ್ಣತಂತುವಿನಲ್ಲೂ ಡಿ.ಎನ್.ಎ. ಎಂಬ ರಾಸಾಯನಿಕ ಅಣುವಿರುತ್ತದೆ. ಡಿ.ಎನ್.ಎ. ಅಣುವು ಜೀನ್‌ಗಳೆಂಬ ಅನುವಂಶೀಯ ಘಟಕಗಳಿಂದ ಕೂಡಿರುತ್ತದೆ. ಒಂದು ವರ್ಣತಂತುವಿನಲ್ಲಿ ಲಕ್ಷೋಪಲಕ್ಷ ಜೀನ್‌ಗಳು ಇರುತ್ತವೆ. ಜೀವಿಯ ಪ್ರತಿಯೊಂದು ಗುಣಲಕ್ಷಣವನ್ನು ಈ ಜೀನ್‌ಗಳು ನಿಯಂತ್ರಿಸುತ್ತವೆ. ಉದಾಹರಣೆಗೆ, ಮಾನವರಲ್ಲಿ ನೀಲಿಕಣ್ಣು, ಹಸಿರು ಕಣ್ಣು, ಗುಂಗುರು ಕೂದಲು, ಚರ್ಮದ ಬಣ್ಣ ದೇಹದ ಎತ್ತರ ಮುಂತಾದ ಅನೇಕಾನೇಕ ಜೈವಿಕ ಲಕ್ಷಣಗಳನ್ನು ಜೀನ್‌ಗಳು ನಿಯಂತ್ರಿಸುತ್ತವೆ.

ಡಿ.ಎನ್.ಎ. ಅಣುವಿನ ರಚನೆ ಒಂದು ಸುರುಳಿ ಸುತ್ತಿಕೊಂಡಿರುವ ಏಣಿಯಂತಿರುತ್ತದೆ. ಈ ಏಣಿಯಂಥ ರಚನೆಗೆ 'ಡಬ್ಬಲ್ ಹೆಲಿಕ್ಸ್ ಅಥವಾ ದ್ವಿಸುರುಳಿ ಎಂದು ಹೆಸರು. ಈ ಏಣಿಯ ಎರಡು ಕಂಬಗಳು ನ್ಯೂಕ್ಲಿಯೋಟೈಡ್‌ಗಳು ಎಂಬ ಸಣ್ಣ ಘಟಕಗಳಿಂದ ಮಾಡಲ್ಪಟ್ಟಿವೆ.

Digitised by Bharatavani, CIIL

ವರ್ಣತಂತುಗಳಲ್ಲಿ ನಾಲ್ಕು ಬಗೆಯ ಸೈಟ್ರೋಜನ್ ಕ್ಷಾರಗಳು ಕಂಡು ಬರುತ್ತವೆ. ಅವು ಯಾವುವೆಂದರೆ, ಅಡಿನೈನ್, ಥೈಮೀನ್, ಗ್ವಾನಿನ್ ಮತ್ತು ಸೈಟೋಸಿನ್. ಇವುಗಳನ್ನು ಕ್ರಮವಾಗಿ ಎ.ಟಿ.ಜಿ.ಸಿ. ಎಂದು ಸೂಚಿಸಲಾಗುತ್ತದೆ.

ಎಲ್ಲಾ ಅನುವಂಶೀಯ ಮಾಹಿತಿಗಳನ್ನು ಡಿ.ಎನ್.ಎ. ಹೊಂದಿದ್ದು ಇವುಗಳನ್ನು ವಂಶಪಾರಂಪರ್ಯವಾಗಿ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುತ್ತದೆ.

ಡಿ.ಎನ್.ಎ. ಅಣುವಿನ ಮತ್ತೊಂದು ವಿಶೇಷತೆ ಎಂದರೆ, ಕೋಶ ವಿಭಜನೆಯ ಸಮಯದಲ್ಲಿ ತನ್ನನ್ನು ತಾನೇ ನಕಲುಗೊಳಿಸಿಕೊಂಡು ಎರಡು ಪ್ರತಿರೂಪಗಳಾಗುವುದು. ಇದಕ್ಕೆ ಡಿ.ಎನ್.ಎ. ಸ್ವಪ್ರತೀಕರಣ ಅಥವಾ ರೆಪ್ಲಿಕೇಷನ್ ಎಂದು ಹೆಸರು.

**ಕೋಶ ವಿಭಜನೆ**

ಒಂದು ಜೀವಕೋಶ ಪ್ರೌಢಾವಸ್ಥೆಗೆ ತಲುಪಿದಾಗ ವಿಭಜನೆ ಹೊಂದಿ ಎರಡು ಮರಿ ಕೋಶಗಳಾಗುವ ಕ್ರಿಯೆಗೆ ಕೋಶವಿಭಜನೆ ಎಂದು ಹೆಸರು. ಬಹುಕೋಶೀಯ ಜೀವಿಗಳಲ್ಲಿ ಮೈಟಾಸಿಸ್ ಹಾಗೂ ಮಿಯಾಸಿಸ್ ಎಂಬ ಎರಡು ಬಗೆಯ ಕೋಶವಿಭಜನೆಯನ್ನು ಗುರುತಿಸಬಹುದು.

ಎಲ್ಲಾ ಜೀವಿಗಳ ಕಾಯಕೋಶಗಳಲ್ಲಿ (Somatic Cell) ಸಾಮಾನ್ಯವಾಗಿ ಕಂಡು ಬರುವ ಕೋಶವಿಭಜನೆಗೆ ಮೈಟಾಸಿಸ್ ಅಥವಾ ಕಾಯಕೋಶ ವಿಭಜನೆ ಎಂದು ಹೆಸರು.

ಒಂದು ಜೀವಕೋಶವು ವಿಭಜನೆ ಹೊಂದಿ ಎರಡು ಮರಿಕೋಶಗಳು ಜನನವಾದಾಗ ಪ್ರತಿ ಮರಿಕೋಶವು ತಾಯಿ ಕೋಶದಲ್ಲಿದ್ದಷ್ಟೇ ಸಂಖ್ಯೆಯ ವರ್ಣತಂತುಗಳನ್ನು ಪಡೆಯುತ್ತದೆಯಾದ್ದರಿಂದ ಇದಕ್ಕೆ ಸಮವಿಭಜಕ ಕೋಶವಿಭಜನೆ ಎಂಬ ಹೆಸರೂ ಇದೆ. ಇದರಿಂದ ಒಂದು ಪ್ರಭೇದದ ಎಲ್ಲಾ ಜೀವಿಗಳಲ್ಲಿ ವರ್ಣತಂತುಗಳ ಸಂಖ್ಯೆ ನಿರ್ದಿಷ್ಟವಾಗಿ ಉಳಿಯುತ್ತದೆ.




ಜೀವಕೋಶವು ಮೈಟಾಸಿಸ್ ವಿಭಜನೆ ನಡೆಯುವ ಮೊದಲು ಹಾಗೂ ನಡೆಯುವಾಗ ಅನೇಕ ಚಟುವಟಿಕೆಗಳು ಉಂಟಾಗುತ್ತವೆ. ಅವುಗಳನ್ನು ಎರಡು ಪ್ರಮುಖ ಹಂತಗಳಾಗಿ ವಿಂಗಡಿಸಲಾಗಿದೆ.

1. **ಕೋಶಕೇಂದ್ರ ವಿಭಜನೆ (ಕ್ಯಾರಿಯೋಕೈನೆಸಿಸ್)**
2. **ಕೋಶರಸ ವಿಭಜನೆ (ಸೈಟೋಕೈನೆಸಿಸ್)**

ಮೈಟಾಸಿಸ್ ವಿಭಜನೆ ಪ್ರಾರಂಭವಾಗುವ ಮೊದಲು ಕೋಶವು ಕೆಲವು ಸಿದ್ಧತೆಗಳನ್ನು ಮಾಡಿಕೊಳ್ಳುವುದು. ಈ ಹಂತವನ್ನು ಸಿದ್ಧತಾಹಂತ ಅಥವಾ ಇಂಟರ್‌ಫೇಸ್ ಎಂದು ಕರೆಯಲಾಗಿದೆ.




**ಮಿಯಾಸಿಸ್**

ಸಿದ್ಧತಾ ಹಂತದಲ್ಲಿ ಎಲ್ಲ ವರ್ಣತಂತುಗಳಲ್ಲಿರುವ ಡಿ.ಎನ್.ಎ. ಅಣುವು ಸ್ವಪ್ರತೀಕರಣಗೊಳ್ಳುವುದು. ಇದು ಮುಂದಿನ ಪೀಳಿಗೆಯ ಜೀವಕೋಶಗಳಲ್ಲಿ ಅನುವಂಶಿಕ ವಸ್ತು ಸಮನಾಗಿ ವಿತರಣೆ ಹೊಂದಲು ಸಹಾಯಕ.

**ಕೋಶಕೇಂದ್ರ ವಿಭಜನೆ (ಮಿಯಾಸಿಸ್)**

ಕೋಶ ವಿಭಜನೆ ಪ್ರಾರಂಭವಾದೊಡನೆ ಕೋಶದಲ್ಲಿ ನಡೆಯುವ ಪ್ರಮುಖ ಬದಲಾವಣೆಗಳನ್ನು ಪ್ರೋಫೇಸ್, ಮೆಟಫೇಸ್, ಅನಫೇಸ್ ಮತ್ತು ಟಿಲೋಫೇಸ್ ಎಂಬ ನಾಲ್ಕು ಹಂತಗಳಾಗಿ ಗುರ್ತಿಸಲಾಗಿದೆ.

ಲೈಂಗಿಕ ರೀತಿಯ ಪ್ರಜನನ ಕ್ರಿಯೆಯಲ್ಲಿ ಹೆಣ್ಣು ಮತ್ತು ಗಂಡು ಪ್ರಜನನ ಕೋಶಗಳು ಸೇರಿ ಯುಗ್ಮಜ ಅಥವಾ ಭ್ರೂಣ ಎನ್ನುವ ಒಂದು ಕೋಶವಾಗುವುದು. ಈ ಕೋಶದಲ್ಲಿ ವರ್ಣತಂತುಗಳು ದ್ವಿಗುಣಿತ ಸಂಖ್ಯೆಯಲ್ಲಿರುತ್ತದೆ.

ಪ್ರಜನನ ಕೋಶಗಳಲ್ಲಿ ಲಿಂಗಾಣುಗಳನ್ನು ಉತ್ಪತ್ತಿ ಮಾಡುವಾಗ ವರ್ಣತಂತುಗಳ ಸಂಖ್ಯೆಯನ್ನು ಅರ್ಧಕ್ಕೆ ಇಳಿಸಲು ನಡೆಯುವ

Digitised by Bharatavani, CIIL

ವಿಭಜನೆಯೇ ಮಿಯಾಸಿಸ್. ಈ ಸಂಖ್ಯೆಯನ್ನು ಏಕಗುಣಿತ ಸಂಖ್ಯೆ (ಹ್ಯಾಪ್ಲಾಯ್ಡ್) ಎನ್ನುವರು. ಇದನ್ನು 'N' ಎಂದು ಸೂಚಿಸಲಾಗುವುದು. ಆದ್ದರಿಂದ ಮಿಯಾಸಿಸ್‌ಗೆ ಸಂಖ್ಯಾಕ್ಷೀಣ ವಿಭಜನೆ ಎಂದು ಹೆಸರು. ಪ್ರಜನನ ಕೋಶಗಳಲ್ಲಿ ದ್ವಿಗುಣಿತ ಸಂಖ್ಯೆಯನ್ನು ಏಕಗುಣಿತ ಸಂಖ್ಯೆಗೆ ಇಳಿಸಿದಾಗ ಯುಗ್ಮಜ ದ್ವಿಗುಣಿತ ಸಂಖ್ಯೆಯ ವರ್ಣತಂತುಗಳನ್ನು ಪುನಃ ಪಡೆಯುವುದು. ಹೀಗಾಗಿ ಒಂದು ಪ್ರಭೇದದ ಜೀವಿಗಳಲ್ಲಿ ವರ್ಣತಂತುಗಳ ನಿರ್ದಿಷ್ಟ ಸಂಖ್ಯೆ ಯಥಾಪ್ರಕಾರ ಮುಂದುವರಿಯುವುದು.

ಮಿಯಾಸಿಸ್ ಎರಡು ವಿಭಜನೆಗಳನ್ನೊಳಗೊಂಡಿರುವುದು. ಮೊದಲನೆಯ ವಿಭಜನೆಯನ್ನು ಮಿಯಾಸಿಸ್ I ಮತ್ತು ಎರಡನೆಯ ವಿಭಜನೆಯನ್ನು ಮಿಯಾಸಿಸ್ II ಎಂದು ಕರೆಯಲಾಗಿದೆ. ಮಿಯಾಸಿಸ್ I ರಲ್ಲಿ ವರ್ಣತಂತುಗಳ ದ್ವಿಗುಣಿತ ಸಂಖ್ಯೆ ಏಕಗುಣಿತ ಸಂಖ್ಯೆಯಾಗಿ ಪರಿವರ್ತನೆಗೊಳ್ಳುವುದು. ಅಂದರೆ 2N ಸಂಖ್ಯೆ N ಆಗುವುದು. ಮಿಯಾಸಿಸ್ 1ನೇ ವಿಭಜನೆಯು ಕೊನೆಗೊಳ್ಳುತ್ತಿದ್ದಂತೆ ಮಿಯಾಸಿಸ್ IIನೇ ವಿಭಜನೆ ಪ್ರಾರಂಭವಾಗುವುದು. ಮೈಟಾಸಿಸ್‌ನಲ್ಲಿರುವಂತೆ ಮಿಯಾಸಿಸ್ I ರಲ್ಲಿಯೂ ಕೋಶಕೇಂದ್ರ ವಿಭಜನೆ ಹಾಗೂ ಕೋಶರಸ ವಿಭಜನೆ ಎಂಬ ಎರಡು ಹಂತಗಳಿವೆ.

**ಅವಳಿಗಳು** : ಒಂದೇ ತಾಯಿಯ ಗರ್ಭದಿಂದ ಜೊತೆಯಾಗಿ ಜನಿಸಿದ ಜೋಡಿ ಅಥವಾ ಹೆಣ್ಣು ಮಕ್ಕಳು ಒಂದೇ ಗರ್ಭದಲ್ಲಿ ಬೆಳೆದು ಜನನವಾಗುವ ಸಾಧ್ಯತೆ ಇದೆ. ಇಂತಹ ಮಕ್ಕಳನ್ನು ಅವಳಿಗಳು ಅಥವಾ ದ್ವಿವಳರು ಅಥವಾ ಯಮಳರು (Twins) ಎನ್ನುತ್ತಾರೆ.



ಅವಳಿಗಳಲ್ಲಿ ಎರಡು ವಿಧ. ಅನುರೂಪ ಅವಳಿಗಳು (ಹೋಮೋಜೈಗೋಟಿಕ್‌ಟ್ವಿನ್ಸ್) ಮತ್ತು ಭಿನ್ನರೂಪ ಅವಳಿಗಳು (ಹೆಟಿರೋಜೈಗೋಟಿಕ್ ಟ್ವಿನ್ಸ್). ಅನುರೂಪ ಅವಳಿಗಳ ರೂಪ ಅನುವಂಶೀಯತೆ ರೀತಿಯಲ್ಲಿ ಒಂದೇ ರೀತಿಯಲ್ಲಿರುತ್ತದೆ. ಅಲ್ಲದೇ ಇವೆರಡೂ ಒಂದೇ ಲಿಂಗದವುಗಳಾಗಿರುತ್ತದೆ. ಅನುರೂಪ ಅವಳಿಗಳು ಯಾವಾಗಲೂ ಸಮ ಸಂಖ್ಯೆಯಲ್ಲಿರುತ್ತವೆ.

ಭಿನ್ನರೂಪ ಅವಳಿಗಳು, ಹುಟ್ಟಿನಿಂದಲೇ ಭಿನ್ನ ಗುಣಗಳನ್ನು ಪಡೆದಿರುತ್ತವೆ. ಅಣ್ಣ, ತಮ್ಮ ಅಥವಾ ಅಕ್ಕ ತಂಗಿ ಅಥವಾ ಅಣ್ಣ ತಂಗಿಯಲ್ಲಿ ಸಾಮಾನ್ಯವಾಗಿ ಕಾಣ ಬರುವ ಭೇದಗಳು ಭಿನ್ನರೂಪಿಗಳಲ್ಲಿವೆ. ಇಂಥ ಅವಳಿಗಳು ಏಕಕಾಲದಲ್ಲಿ ಒಂದೇ ತಾಯಿಯ ಉದರದಲ್ಲಿ ಜನ್ಮ ತಾಳುವುದರಿಂದ ಅಂಥ ಅವಳಿಗಳನ್ನು ಸಹೋದರ ಅವಳಿಗಳು ಎಂದು ಹೇಳುತ್ತಾರೆ. ಈ ಮಕ್ಕಳು ಸಮಸಂಖ್ಯೆಯಲ್ಲಿ ಇರಬೇಕಾಗಿಲ್ಲ ಮತ್ತು ಏಕಲಿಂಗದವರಾಗಬೇಕಾಗಿಲ್ಲ.



ಅನುರೂಪ ಮತ್ತು ಭಿನ್ನರೂಪದ ಅವಳಿಗಳೇ ಅಲ್ಲದೆ ವಿರೂಪ ಅವಳಿಗಳೂ ಜನಿಸುತ್ತವೆ. ಇವುಗಳನ್ನು ಟೆರಟಲಾಜಿಕಲ್ ಟ್ವಿನ್ಸ್ ಎಂದೂ, ಸಯಮೀಸ್ ಅವಳಿಗಳು ಎಂದೂ ಕರೆಯುತ್ತಾರೆ. ಇಂತಹ ಅವಳಿಗಳು ಒಂದಕ್ಕೊಂದು ಅಂಟಿಕೊಂಡಿರುತ್ತವೆ. ಸಿಯಾಂ ದೇಶದಲ್ಲಿ ಜನಿಸಿದ ಇಂಥ ಅವಳಿಗಳ ಬಗ್ಗೆ ಪ್ರಥಮವಾಗಿ ಪ್ರಚಾರವಾಗಿದ್ದುದರಿಂದ ಈ ಹೆಸರು ಬಂದಿದೆ. ಇತ್ತೀಚೆಗೆ ಇಂತಹ ಅವಳಿಗಳನ್ನು ಶಸ್ತ್ರ ಚಿಕಿತ್ಸೆಯ ಸಹಾಯದಿಂದ ಪ್ರತ್ಯೇಕಿಸುವ ತಂತ್ರಗಳನ್ನು ವಿಕಾಸಗೊಳಿಸಿದ್ದಾರೆ.

ತಳಿ ಗುಣದಲ್ಲಿ ಯಥಾವತ್ತಾಗಿ ಇರುವ ಡಿ.ಎನ್.ಎ., ಕೋಶ ಅಥವಾ ಜೀವಿಗಳ ಉತ್ಪಾದನೆ, ತದ್ರೂಪಿಗಳ ಸೃಷ್ಟಿಯ ಸಾಧ್ಯವಾಗಿದೆ. ತದ್ರೂಪಿ ಪದದ ಪರ್ಯಾಯ ಪದ ಕ್ಲೋನಿಂಗ್ (Cloning) ಎಂಬ ಇಂಗ್ಲಿಷ್ ಪದದ ಮೂಲಕ ಕ್ಲೋನ್ ಎಂಬ ಗ್ರೀಕ್ ಪದ. ಗ್ರೀಕ್‌ನಲ್ಲಿ ಕ್ಲೋನ್ ಎಂದರೆ ಸಸ್ಯದ ಟೊಂಗೆ (ಟ್ವಿಗ್) ಎಂದು ಅರ್ಥ. ಅಂದರೆ ಸಸ್ಯದ ಟೊಂಗೆಯೊಂದನ್ನು ಅಥವಾ ಕಾಂಡವನ್ನು ಕತ್ತರಿಸಿ ಅದರಿಂದ ಅಂತಹುದೇ ಮತ್ತೊಂದು ಸಸ್ಯವನ್ನು ಅಭಿವೃದ್ಧಿಪಡಿಸುವುದು ಎಂದು ಅರ್ಥ.

**ಸಂತಾನೋತ್ಪತ್ತಿ ಕ್ಲೋನಿಂಗ್ (ರಿಪ್ರೊಡಕ್ಟಿವ್ ಕ್ಲೋನಿಂಗ್)** : ಈ ಬಗೆಯ ಕ್ಲೋನಿಂಗ್ ತಂತ್ರವನ್ನು ಆಯ್ಕೆ ಮಾಡಿದಂತಹ ನ್ಯೂಕ್ಲಿಯರ್ ಡಿ.ಎನ್.ಎ.ಯನ್ನು ಹೊಂದಿರುವ ಸಜೀವ ಅಥವಾ ಹಿಂದೊಮ್ಮೆ ಇದ್ದ ಜೀವಿಯ ತದ್ರೂಪಿಯನ್ನು ಪಡೆಯಲು ಬಳಸುತ್ತಾರೆ.

ಇಂಗ್ಲೆಂಡಿನ ಎಡಿನ್‌ಬರೋದ ರೊಸಾಲಿನ್ ಸಂಶೋಧನಾ ಸಂಸ್ಥೆಯ ಬ್ರಿಟಿಷ್ ಸಂಶೋಧಕ ಅಯಾನ್ ವಿಲ್‌ಮಟ್ ಅವರ ನೇತೃತ್ವದ ತಂಡ ಬೆಳೆದ ಹೆಣ್ಣು ಕುರಿಯ ಸ್ತನಕೋಶದಿಂದ ಕೋಶ ಕೇಂದ್ರವನ್ನು ಬೇರ್ಪಡಿಸಿ, ಅದನ್ನು ಮತ್ತೊಂದು ಕುರಿಯ ಫಲಿತಗೊಳ್ಳದ ಅಂಡಾಣುವಿಗೆ ಸೇರಿಸಿದರು. ಈ ಅಂಡಾಣುವಿನಿಂದ ಕೋಶ ಕೇಂದ್ರವನ್ನು ಮೊದಲೇ ಬೇರ್ಪಡಿಸಲಾಗಿತ್ತು. ಸ್ತನಕೋಶದ ಕೋಶ ಕೇಂದ್ರವನ್ನು ಸೇರಿಸಿದ ಮೇಲೆ ಒಂದು ಸಣ್ಣ ವಿದ್ಯುತ್ ಆಘಾತವನ್ನು ನೀಡುವುದರ ಮೂಲಕ ಅಂಡಾಣುವಿನಲ್ಲಿ ಕೋಶ ವಿಭಜನೆಯನ್ನು ಪ್ರಚೋದಿಸಿ, ಕೃಷಿ ಮಾಡಲಾಯಿತು. ಕೋಶವಿಭಜನೆ ಮುಂದುವರಿದು ಭ್ರೂಣವಾಯಿತು. ಈ ಭ್ರೂಣವನ್ನು ಮತ್ತೊಂದು ಹೆಣ್ಣುಕುರಿಯ ಗರ್ಭಕೋಶಕ್ಕೆ ಸೇರಿಸಿದಾಗ ಅದು ಅಲ್ಲಿ ಬೆಳೆದು, ಕುರಿಮರಿಯಾಗಿ ಜನ್ಮವೆತ್ತಿತು. ಹೀಗೆ ತಂದೆಯಿಲ್ಲದೆಯೇ ಜನಿಸಿದ ಕುರಿಯ ಮರಿ "ಡಾಲಿ"ಯೇ (ತದ್ರೂಪಿಯ ಹೆಸರು), ಸ್ತನಕೋಶವನ್ನು ನೀಡಿದ್ದ ಕುರಿಯ ಪ್ರಪ್ರಥಮ ಕ್ಲೋನ್ ಅಥವಾ ತದ್ರೂಪಿ.

Digitised by Bharatavani, CIIL



"ಡಾಲಿ"

ಡಾಲಿಯ ಜನನ ಜೈವಿಕ ತಂತ್ರಜ್ಞಾನದಲ್ಲಿ ಹೊಸ ಬೆಳವಣಿಗೆ. ಈ ಪ್ರಯೋಗದಿಂದ ದೇಹದ ಯಾವುದೇ ಒಂದು ಜೀವಕೋಶದಿಂದ ಸಂಪೂರ್ಣ ಜೀವಿಯನ್ನು ಪಡೆಯಬಹುದು ಎಂಬುದು ದೃಢೀಕರಿಸಲ್ಪಟ್ಟಿತು.

**ಚಿಕಿತ್ಸಾ ಕ್ಲೋನ್, ಚಿಕಿತ್ಸಾ ತದ್ರೂಪಿ ಅಥವಾ ಭ್ರೂಣ ತದ್ರೂಪಿ :** 'ಡಾಲಿ'ಯಂಥ ಅಥವಾ ಇತರೇ ಪ್ರಾಣಿಗಳ ತದ್ರೂಪಿಗಳು ಪಶುಸಂಗೋಪನೆಯಲ್ಲಿ ನಿರ್ದಿಷ್ಟ ತಳಿಗುಣಗಳುಳ್ಳ ಸಂತಾನ ಸೃಷ್ಟಿಗೆ ಅನುಕೂಲವಾಗಿವೆ. ಚಿಕಿತ್ಸಾ ತದ್ರೂಪಿ ಇದಕ್ಕಿಂತ ಭಿನ್ನವಾದದ್ದು. ಮಾನವ ಭ್ರೂಣವನ್ನು ಬಳಸಿ ಕ್ಲೋನ್ ಸೃಷ್ಟಿಸಲು ಪ್ರಯತ್ನಿಸಲಾಗುತ್ತಿದೆ. ಇದರ ಗುರಿ ಮಾನವ ತದ್ರೂಪಿಯನ್ನು ಸೃಷ್ಟಿಸುವುದಲ್ಲ, ವಿವಿಧ ಅಂಗಗಳ ರೋಗ ಚಿಕಿತ್ಸೆಗಾಗಿ ಅಂಗಾಂಶಗಳನ್ನು (Tissues) ಸೃಷ್ಟಿಸಲು ಬೇಕಾಗುವ ಆದಿ ಕೋಶ ಅಥವಾ ಕಾಂಡ ಕೋಶಗಳನ್ನು ಪಡೆಯುವುದು ಇದರ ಗುರಿ.

**ಕ್ಲೋನಿಂಗ್ ತಂತ್ರಜ್ಞಾನದ ಪ್ರಯೋಜನ :** ಸಂತಾನೋತ್ಪತ್ತಿ ಕ್ಲೋನಿಂಗ್ (ರಿಪ್ರೊಡಕ್ಟಿವ್ ಕ್ಲೋನಿಗ್) ತಂತ್ರವನ್ನು ವಿಶೇಷ ಗುಣವುಳ್ಳ ಪ್ರಾಣಿಗಳನ್ನು ಪಡೆಯಲು ಬಳಸಬಹುದು. ಉದಾ : ಔಷಧೀಯ ಗುಣವುಳ್ಳ ಇಲ್ಲವೇ ಚೋದನಿ (ಹಾರ್ಮೋನ್ಸ್)ಗಳನ್ನು ಒಳಗೊಂಡ ಹಾಲು, ಮಾಂಸ, ಮೊಟ್ಟೆಗಳನ್ನು ಉತ್ಪಾದಿಸುವ ಜೀವಿಗಳನ್ನು ಪಡೆಯಬಹುದು. ಇದೇ ರೀತಿ ಚಿಕಿತ್ಸಾ ವಿಜ್ಞಾನದಲ್ಲಿ ಪ್ರಯೋಗಕ್ಕೆ ಬೇಕಾಗುವ ನಿರ್ದಿಷ್ಟ ಗುಣಗಳುಳ್ಳ ಜೀವಿಗಳನ್ನು ಸೃಷ್ಟಿಸಬಹುದು. ಅಳಿವಿನ ಅಂಚಿನಲ್ಲಿರುವ ಪ್ರಾಣಿಗಳನ್ನು ಸೃಷ್ಟಿಸಲು ಬಳಸಬಹುದು, 2001ರಲ್ಲಿ ಇಟಲಿಯ ವಿಜ್ಞಾನಿಗಳು ಅಳಿವಿನಂಚಿನಲ್ಲಿರುವ ಅಲ್ಲಿಯ ಕಾಡು ಕುರಿಯ (ಮೌಫಾನ್) ಕ್ಲೋನ್ ಸೃಷ್ಟಿಸಿರುವುದಾಗಿ ಘೋಷಿಸಿದರು. ಇದೇ ರೀತಿ ಆಫ್ರಿಕಾದ ಬೊಂಗೋ ಜಿಂಕೆ (ಬೊಂಗೊ ಆಚಿಟಿಲೋಪ್), ಸುಮಾತ್ರಾದ ಹುಲಿ, ಚೈನಾದ ದೈತ್ಯ ಪಾಂಡಾ (ಜೈಯಂಟ್ ಪಾಂಡ) ದ ತದ್ರೂಪಿಗಳ (ಕ್ಲೋನ್) ಸೃಷ್ಟಿಗೆ ಪ್ರಯತ್ನಗಳು ಸಾಗಿವೆ.

–ಅ.ಸಿ.

## ಅನುದೇಶ

ಬೋಧನೆಯೆಂಬುದು ಶಿಕ್ಷಣ ಪ್ರಕ್ರಿಯೆಯಲ್ಲಿ ಒಂದು ಮಹತ್ವದ ಭಾಗವಾಗಿದೆ. ಇದು ಯಾವುದಾದರೂ ಒಂದು ಚಟುವಟಿಕೆಯನ್ನು ಒಳಗೊಂಡಿಲ್ಲದೆ ಹಲವಾರು ಚಟುವಟಿಕೆಗಳನ್ನು ಒಳಗೊಂಡಿದೆ. ಆದ್ದರಿಂದ ಬೋಧನೆಯು ಕೇವಲ ಕೆಲವು ವಿಷಯಗಳ ವರ್ಗಾವಣೆಯಲ್ಲ. ಅದು ಒಂದು ರೀತಿಯ ಅನುದೇಶ (ನಿರ್ದೇಶನ), ಮಾರ್ಗದರ್ಶನ ಹಾಗೂ ಮಾರ್ಗಸೂಚಿ ನೀಡುವುದಾಗಿದೆ.

ಅನುದೇಶವೆಂದರೆ ಜ್ಞಾನದ ಸ್ವೀಕಾರ ಮತ್ತು ಅನ್ವಯಮಾಡಿಕೊಳ್ಳುವುದಕ್ಕೆ ಸಲಹೆ, ಸೂಚನೆಗಳನ್ನು ಒದಗಿಸುವ ಪ್ರಕ್ರಿಯೆ. ಉತ್ತಮ ಜ್ಞಾನಾರ್ಜನೆಯುಂಟಾಗ ಬೇಕಾದರೆ ಆ ಜ್ಞಾನವು ಜೀವನಕ್ಕೆ ಉಪಯುಕ್ತವಾದ ಮಾಹಿತಿಗಳನ್ನೊಳಗೊಂಡಿರಬೇಕು. ವಿದ್ಯಾರ್ಥಿಗಳು ತಮ್ಮ ನಿತ್ಯ ಜೀವನದಲ್ಲಿ ಜ್ಞಾನವನ್ನು ಅಳವಡಿಸಿಕೊಳ್ಳು ವಂತಿರಬೇಕು. ಇಂತಹ ಜ್ಞಾನಾರ್ಜನೆ ಮಕ್ಕಳು ಸ್ವತಂತ್ರವಾಗಿ ಸ್ವಂತ ನಿರ್ಧಾರಗಳನ್ನು ಕೈಗೊಂಡು ವಿಶ್ಲೇಷಣೆ ಮಾಡುವ ಗುಣಗಳನ್ನು ಬೆಳೆಸುವಂತಿರಬೇಕು. ಈ ರೀತಿ ಜ್ಞಾನವನ್ನು ಕೌಶಲಗಳನ್ನು ಕಲಿತುಕೊಳ್ಳಲು ಅನುದೇಶ ಸಹಾಯ ನೀಡುತ್ತದೆ.

### ಅನುದೇಶ ಮತ್ತು ಬೋಧನೆ

ಅನುದೇಶ ಮತ್ತು ಬೋಧನೆ ಶಿಕ್ಷಣ ಪ್ರಕ್ರಿಯೆಯಲ್ಲಿ ಪರಸ್ಪರ ಪೂರಕ ಸಂಬಂಧವನ್ನು ಹೊಂದಿವೆ. ಬೋಧನೆಯು ಅನುದೇಶಕ್ಕಿಂತ ಉನ್ನತವಾದುದು ಮತ್ತು ವ್ಯಾಪಕವಾದುದು. ಬೋಧನೆಯು ಉಪಯುಕ್ತ ವಿಧಾನಗಳ ಮೂಲಕ ಜ್ಞಾನ ಸಂಪಾದನೆಗೆ ಮಾತ್ರ ಸೀಮಿತವಾಗಿದೆ. ಅನುದೇಶವು ವಿದ್ಯಾರ್ಥಿಗೆ ಜ್ಞಾನ ಸಂಪಾದನೆಗೆ ಸೂಕ್ತವಾದ ಪರಿಸರವನ್ನು ಒದಗಿಸುವುದಾಗಿದೆ ಮತ್ತು ಸೂಚನೆಗಳನ್ನು ನೀಡುವುದಾಗಿದೆ. ಇಲ್ಲಿಯೂ ಜ್ಞಾನಾರ್ಜನೆಗೆ ಪ್ರಮುಖ ಪಾತ್ರವಿರುತ್ತದೆಯಾದರೂ ಬೋಧನೆಯು ಹೆಚ್ಚಿನ ಜ್ಞಾನವನ್ನು ನೀಡುವ ಕ್ರಮವಾಗಿದೆ.

ಅನುದೇಶವು ಕಲಿಕಾ ಕೌಶಲಗಳನ್ನು ಬೆಳೆಸುವ ಗುರಿಯನ್ನು ಹೊಂದಿದ್ದು, ಜ್ಞಾನಾರ್ಜನೆಯ ತಂತ್ರಗಳಿಗೆ ಪ್ರಮುಖ ಮಹತ್ವ ನೀಡುತ್ತದೆ. ಇದು ಕೆಲವು ಕಲಿಕೆಯ ವಿಧಾನಗಳಾದ ಅನುಸರಣೆ ಮತ್ತು ತರಬೇತಿಯನ್ನು ಒಳಗೊಂಡಿದೆ. ಕಲಿಕೆ ಉಂಟಾಗಬೇಕಾದರೆ ಕೆಲವು ಆಂತರಿಕ ಅಂಶಗಳು ಅತ್ಯಗತ್ಯವಾಗಿದ್ದು ಕಲಿಕಾರ್ಥಿಯಲ್ಲಿ ಯಾವ ಯಾವ ಮೂಲಭೂತ ಸಾಮರ್ಥ್ಯಗಳಿರುತ್ತವೆಂಬುದನ್ನು ನಾವು ಖಚಿತವಾಗಿ ತಿಳಿದುಕೊಂಡಿರ ಬೇಕಾಗುತ್ತದೆ. ಮತ್ತು ಕಲಿಕೆಗೆ ಪ್ರೋತ್ಸಾಹ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕಲಿಕಾರ್ಥಿಯು ಅಗತ್ಯವಾದ ಸಿದ್ಧತೆ ಮಾಡಿಕೊಂಡಿರ ಬೇಕಾಗುತ್ತದೆ. ಇವುಗಳು ಕಲಿಕೆಗೆ ಅವಶ್ಯಕವಾದ ಆಂತರಿಕ ಸಂದರ್ಭಗಳಾಗಿವೆ. ಇವುಗಳೇ ಕಲಿಕೆಗೆ ಪೂರ್ವಾಗತ್ಯಗಳು. ಆ ನಂತರದಲ್ಲಿ ಶಿಕ್ಷಕರು ಕಲಿಕೆಗೆ ಅಗತ್ಯವಾದ ಬಾಹ್ಯ ಪ್ರೇರಣೆ ಸನ್ನಿವೇಶಗಳನ್ನು ಒದಗಿಸಬೇಕು. ಗ್ಯಾನೆರವರು ಕಲಿಕೆಯ ಸನ್ನಿವೇಶಗಳಲ್ಲಿ ಬಾಹ್ಯ ಘಟಕಗಳ ನಿಯಂತ್ರಣವೇ ಅನುದೇಶವಾಗಿದೆ ಎಂದಿದ್ದಾರೆ. ನಮ್ಮ ಶಾಲೆ, ಕಾಲೇಜುಗಳ ಮುಖ್ಯ ಗುರಿ ಇದೇ ಆಗಿದೆ. ಪ್ರಜ್ಞಾಪೂರ್ವಕ ಮತ್ತು ಉದ್ದೇಶ ಪೂರ್ವಕ ಶೈಕ್ಷಣಿಕ ಯೋಜನೆ ಸಾಧುವಾಗಲು ಇದೊಂದು ಅತ್ಯುತ್ತಮ ಸಾಧನವಾಗಿದೆ. ಈ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಮನೋವೈಜ್ಞಾನಿಕ,

Digitised by Bharatavani, CIIL

ಮನೋಭಾವದ ಬೆಳವಣಿಗೆ ಮಾಡಲು ಯೋಜಿಸಿರುವ ಕಲಿಕೆಯೇ ಅನುದೇಶವಾಗಿದೆ.

ಅನುದೇಶದಲ್ಲಿ ಶಾಬ್ದಿಕ ಸಂವಹನ ಅತ್ಯಂತ ಅವಶ್ಯಕವಾದುದಾಗಿದೆ. ವಿದ್ಯಾರ್ಥಿಗೆ ಏನು ಗೊತ್ತಿದೆ ಮತ್ತು ಅವನು ಏನನ್ನು ಸಾಧಿಸಬಲ್ಲ ಎಂಬುದರ ಮಾಹಿತಿ ಪಡೆಯಬೇಕು. ಅವಧಾನ ಮತ್ತು ಕ್ರಿಯೆಯನ್ನು ಶಾಬ್ದಿಕ ಅನುದೇಶದಲ್ಲಿ ಸೂಕ್ತವಾಗಿ ನಿರ್ದೇಶಿಸಬೇಕು. ಅನುದೇಶದ ಅಂತಿಮ ಫಲಿತಾಂಶವು ವಿದ್ಯಾರ್ಥಿ ಪಡೆದ ಜ್ಞಾನದಲ್ಲಿ ಮತ್ತು ನಂತರದ ಸಾಮಾನ್ಯೀಕರಣದಲ್ಲಿ ಪರ್ಯಾವಸಾನವಾಗಬೇಕು. ಅಂದರೆ ವಿದ್ಯಾರ್ಥಿಯು ತನ್ನ ಜ್ಞಾನವನ್ನು ಹೊಸ ಸನ್ನಿವೇಶ ಮತ್ತು ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವಾಗಬೇಕು.

ಅನುದೇಶದ ಪ್ರಮುಖ ಗುರಿ ತಾರ್ಕಿಕ ಬೆಳವಣಿಗೆಯಾದ್ದರಿಂದ ಇದನ್ನು ಎರಡು ಹಂತದಲ್ಲಿ ಸಾಧಿಸಬಹುದಾಗಿದೆ. ಅವುಗಳೆಂದರೆ ಸ್ಮೃತಿಯ ಹಂತ ಮತ್ತು ವೈಚಾರಿಕತೆಯ ಹಂತ. ಈ ಬೌದ್ಧಿಕ ಸಾಮರ್ಥ್ಯಗಳು ವಿದ್ಯಾರ್ಥಿಗಳಲ್ಲಿ ವಿಕಸಿಸುವಂತೆ ಅನುಭವಗಳನ್ನು ರೂಪಿಸಬೇಕು. ಅನ್ವಯ ಮತ್ತು ವಿವರಣೆಗೆ ಅಂಕಿ ಅಂಶಗಳು ಅಗತ್ಯವಾಗಿವೆ. ಈ ಅಂಕಿ ಅಂಶಗಳ ಪುನರ್ ನಿರ್ದೇಶನಗವನ್ನೇ ನಾವು ಸ್ಮರಿಸುವಿಕೆ ಎಂದು ಕರೆಯುತ್ತೇವೆ. ಈ ಪ್ರಕ್ರಿಯೆಗೆ ಜಾಣ್ಮೆ ಮತ್ತು ಕೌಶಲಗಳು ಅತ್ಯಂತ ಅವಶ್ಯಕವಾಗಿವೆ. ವಾಸ್ತವಾಂಶಗಳು ಅರಿವಿಗೆ ಅಡಿಗಲ್ಲಾಗಬೇಕು. ಅಂದರೆ ವಿದ್ಯಾರ್ಥಿಗಳು ಅಂಕಿ–ಅಂಶಗಳನ್ನು ತಮ್ಮ ಸ್ಮೃತಿಯಲ್ಲಿ ಉಳಿಸಿಕೊಂಡು ಸಮಸ್ಯೆಗಳ ಪರಿಹಾರಕ್ಕೆ ಅನ್ವಯಿಸಬೇಕು.

ಅನುದೇಶವು ಮಕ್ಕಳಲ್ಲಿ ಚಿಂತನಾ ಸಾಮರ್ಥ್ಯವನ್ನು ಬೆಳೆಸಬೇಕು. ಇದಕ್ಕೆ ಮಾಹಿತಿಗಳ ಅಗತ್ಯವಿದೆ. ಚಿಂತನಾ ಸಾಮರ್ಥ್ಯವು ನಮ್ಮ ವರ್ತನೆಯನ್ನು ನಮ್ಯಗೊಳಿಸಬೇಕು ಮತ್ತು ಸಾಮಾಜಿಕ ಹೊಂದಾಣಿಕೆಗೆ ಅಣಿಗೊಳಿಸಬೇಕು.

**ಅನುದೇಶದ ಉದ್ದೇಶಗಳು:**

ಕಲಿಯುವವನಿಗೆ ನೀಡುವ ಅನುದೇಶವು ಈ ಕೆಳಕಂಡ ಉದ್ದೇಶಗಳನ್ನೊಳಗೊಂಡಿದೆ.

1. **ಜ್ಞಾನದ ಸ್ವೀಕಾರ ಮತ್ತು ಅನ್ವಯ:** ಅನುದೇಶವು ಆಲೋಚನೆಯನ್ನುಂಟು ಮಾಡುವಂತಿದ್ದು ಕಲಿಯುವವನಲ್ಲಿ ಜ್ಞಾನವನ್ನು ಬೆಳೆಸಬೇಕು. ಜ್ಞಾನಾರ್ಜನೆ ಜೀವನದಲ್ಲಿ ಉಪಯುಕ್ತವಾದ ಮಾಹಿತಿಯನ್ನೊಳಗೊಂಡಿರಬೇಕು. ಹಾಗೂ ವಿದ್ಯಾರ್ಥಿಗಳು ತಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವಂತಿರಬೇಕು. ಇಂತಹ ಜ್ಞಾನಾರ್ಜನೆ ಮಕ್ಕಳು ಸ್ವತಂತ್ರವಾಗಿ ಸ್ವಂತ ನಿರ್ಧಾರಗಳನ್ನು ತೆಗೆದುಕೊಂಡು ವಿಶ್ಲೇಷಣೆ ಮಾಡುವ ಗುಣಗಳನ್ನು ಬೆಳೆಸುವಂತಿರಬೇಕು.

- ಆಲೋಚನೆ ಮಾಡುವಂತಿರಬೇಕು.
- ವಿವೇಚನೆ ಮತ್ತು ವಿಶ್ಲೇಷಣೆ ಮಾಡುವಂತಿರಬೇಕು.
- ಕಾರ್ಯ ಕಾರಣ ನಿರ್ಧಾರ ಮಾಡುವಂತಿರಬೇಕು.

2. **ಕೌಶಲಗಳು:** ಅನುದೇಶವು ಮಕ್ಕಳಲ್ಲಿ ಕೌಶಲಗಳನ್ನು ಬೆಳೆಸಬೇಕು. ಮಕ್ಕಳ ಭೌತಿಕ ಮತ್ತು ಮಾನಸಿಕ ಬೆಳವಣಿಗೆಗೆ ಕೌಶಲಗಳು ಆಧಾರವಾಗುತ್ತವೆ. ಕರಕೌಶಲ ಬರವಣಿಗೆ, ಕೌಶಲಗಳಿಗೆ ಬರವಣಿಗೆ ಕೌಶಲವು ಓದುವ ಕೌಶಲಗಳನ್ನು ಬೆಳೆಸಬೇಕು. ಜೊತೆಗೆ ವೀಕ್ಷಣಾ ಕೌಶಲಗಳನ್ನು ಬೆಳೆಸಬೇಕು. ಇವುಗಳಿಗೆ ಅವಕಾಶ ಕಲ್ಪಿಸಿಕೊಡಬೇಕು.

3. **ಅಭಿವೃತ್ತಿಗಳು:** ಅನುದೇಶವು ಮಕ್ಕಳಲ್ಲಿ ಉತ್ತಮ ಅಭಿವೃತ್ತಿಗಳನ್ನು ಬೆಳೆಸುವುದಾಗಿದೆ. ಇವು ಅಪೇಕ್ಷಣೀಯವಾದವುಗಳಾಗಿರಬೇಕು. ವಾಸ್ತವ, ಉತ್ತಮ ಕಲ್ಪನೆಗಳು, ವಾಸ್ತವ ಮತ್ತು ಉತ್ತಮ ಅಂಶಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದು, ಉತ್ತಮ ಹವ್ಯಾಸಗಳನ್ನು ಬೆಳೆಸುವುದು, ಆದರ್ಶ ನೀತಿ, ನಡತೆಗಳನ್ನು ರೂಪಿಸುವುದು ಮತ್ತು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತಿರಬೇಕು.

ಈ ಮೇಲ್ಕಂಡ ಅಂಶಗಳನ್ನು ಮಕ್ಕಳಲ್ಲಿ ಬೆಳೆಸುವುದು ಅನುದೇಶದ ಮುಖ್ಯ ಉದ್ದೇಶವಾಗಿದೆ. ಇದನ್ನು ಬೆಳೆಸಲು ಉತ್ತಮ ವ್ಯವಸ್ಥೆ ಮತ್ತು ಸಹಕಾರ ಅತ್ಯಂತ ಅವಶ್ಯಕವಾಗಿದೆ. ಬೋಧನೆ ಮತ್ತು ಅನುದೇಶಗಳು ಪರಸ್ಪರ ಸಂಬಂಧವನ್ನು ಹೊಂದಿದ್ದರೂ ವ್ಯತ್ಯಾಸಗಳನ್ನು ಹೊಂದಿವೆ.

| ಬೋಧನೆ | ಅನುದೇಶ |
|---|---|
| 1 ಇದು ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆ ಮುಖಾಮುಖಿಯಾಗಿ ನಡೆಯುವ ಸಂವಹನವಾಗಿದೆ. | 1. ಇಲ್ಲಿ ಬೋಧನೆ ನೇರವಾಗಿಲ್ಲದೆ ರೇಡಿಯೋ, ಟೆಲಿವಿಷನ್, ಕಂಪ್ಯೂಟರ್, ಪ್ರೋಗ್ರಾಮ್ ಮೆಟೀರಿಯಲ್ ಮುಂತಾದವುಗಳ ಮೂಲಕವೂ ನೀಡಬಹುದಾಗಿದೆ. |
| 2. ಇದು ಜ್ಞಾನ ಸಂಪಾದನೆಗೆ ಮತ್ತು ಅರ್ಥೈಸಿಕೊಳ್ಳುವುದಕ್ಕೆ ಹಾಗೂ ಉದ್ದೇಶಗಳ ಈಡೇರಿಕೆಗಾಗಿ ನೀಡುವುದಾಗಿದೆ. | 2. ಇದು ವ್ಯವಸ್ಥೆ, ಪ್ರಕ್ರಿಯೆ ಅಥವಾ ವಸ್ತುವಿನ ಬಗ್ಗೆ ಅರ್ಥ ಮಾಡಿಕೊಳ್ಳುವ ಜ್ಞಾನವನ್ನು ಬೆಳೆಸುತ್ತದೆ. |
| 3. ಇದು ಹೆಚ್ಚಾಗಿ ಜ್ಞಾನವನ್ನು ಪಡೆಯುವ ಮತ್ತು ಅರ್ಥೈಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿದೆ. | 3. ಇದು ಜ್ಞಾನಾತ್ಮಕ ಮತ್ತು ಭಾವನಾತ್ಮಕ ವಲಯವನ್ನು ನಿರ್ಲಕ್ಷಿಸುತ್ತದೆ. |

ಹೀಗೆ ಹಲವಾರು ವ್ಯತ್ಯಾಸಗಳನ್ನು ಹೊಂದಿದ್ದರೂ ಬೋಧನೆ ಮತ್ತು ಅನುದೇಶ ವಿಭಿನ್ನವಾಗಿಲ್ಲದೆ, ಬೋಧನೆಯ ಒಂದು ಅಂಗವಾಗಿ ಅನುದೇಶವನ್ನು ಪರಿಗಣಿಸಲಾಗುತ್ತದೆ. ಒಬ್ಬ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಬೋಧನೆ ಮತ್ತು ಅನುದೇಶ ಎರಡೂ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ.

–ಜಿ. ಶೀ

## ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳು

ಆಧುನಿಕ ಯುಗದಲ್ಲಿ ವಿಜ್ಞಾನಲೋಕವು ಶಿಕ್ಷಣಕ್ಕಾಗಿ ಒದಗಿಸಿದ ಹಲವಾರು ಉಪಯುಕ್ತ ಸಾಧನಗಳಲ್ಲಿ ಬಾನುಲಿಯೂ ಒಂದಾಗಿದೆ. ಬಾನುಲಿ ಎಂದರೆ ಒಬ್ಬನ ಧ್ವನಿಯನ್ನು ಏಕಕಾಲಕ್ಕೆ ದೂರದ ಅಂತರದ ಆತಂಕವಿಲ್ಲದೇ ಅನೇಕರು ಅವರವರ ಮನೆಯಲ್ಲಿಯೇ ಕೇಳುವಂತೆ ಮಾಡುವ ಸಾಧನವೇ ಬಾನುಲಿಯಾಗಿದೆ. ಜನತೆಯ ಭಿನ್ನ ರೂಪದ ಆಸೆ, ಅಭಿರುಚಿಗಳಿಗೆ ಮತ್ತು ಅಗತ್ಯಗಳಿಗೆ ಅನುಗುಣವಾದ ಕಾರ್ಯಕ್ರಮಗಳನ್ನು ಬಾನುಲಿಯು ಒದಗಿಸುತ್ತದೆ.

ಶಿಕ್ಷಣ ಸಂಸ್ಥೆಗಳಲ್ಲಿ ಬಾನುಲಿಗೆ ಇಂದು ಮಹತ್ವದ ಸ್ಥಾನವು ದೊರಕಿದೆ. ಬಾನುಲಿ ಪ್ರಸಾರ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳ

Digitised by Bharatavani, CIIL

ಒಂದು ಅಂಗವಾಗಿರದೆ ವಿಷಯ ಜ್ಞಾನವನ್ನು ಹೆಚ್ಚಿಸುವ ಒಂದು ಸಾಧನವೂ ಆಗಿದೆ. ಬಾನುಲಿಯು ಮನೋರಂಜನಾ ಸಾಧನವೆನಿಸಿದರೂ ಅದನ್ನು ಇತ್ತೀಚೆಗೆ ಕಲಿಕೆಯ ಸಾಧನವನ್ನಾಗಿ ಬಳಸಿಕೊಳ್ಳುವುದು ರೂಢಿಗೆ ಬಂದಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಆಶಯದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆ ಒಂದು ಪ್ರಮುಖ ಉದ್ದೇಶವಾಗಿದೆ. ಶಿಕ್ಷಣದ ಗುಣಮಟ್ಟ ಉತ್ತಮಪಡಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಅನನ್ಯ. ಅದರಲ್ಲೂ ರೇಡಿಯೋ ಸಹಸ್ರಾರು ಜನರನ್ನು ಏಕಕಾಲದಲ್ಲಿ ಅತ್ಯಂತ ಸುಲಭವಾಗಿ ತಲುಪುವ ಮಾಧ್ಯಮವಾಗಿದೆ. ತರಗತಿಯಲ್ಲಿ ಕಲಿಕೆ ಮತ್ತು ಬೋಧನಾ-ಪ್ರಕ್ರಿಯೆಯಲ್ಲಿನ ಏಕತಾನತೆಯನ್ನು ಹೋಗಲಾಡಿಸಿ, ಶಿಕ್ಷಣವನ್ನು ಹೆಚ್ಚು ಅರ್ಥಪೂರ್ಣವಾಗಿಸಲು ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಶಿಕ್ಷಣ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ. ಈ ಪ್ರಯತ್ನ ಪ್ರಾಥಮಿಕ ಶಿಕ್ಷಣ ಗುಣಮಟ್ಟ ಸುಧಾರಣೆಯಲ್ಲಿ 'ಎಜುಕೇಷನ್ ಡೆವಲಪ್‌ಮೆಂಟ್ ಸೆಂಟರ್' (ಶಿಕ್ಷಣ ವಿಕಾಸ ಕೇಂದ್ರ) ಇಟ್ಟ ಒಂದು ಹೆಜ್ಜೆಯಾಗಿದೆ.

ರೇಡಿಯೋ ಪಾಠಗಳು ಮೊದಲಿನಿಂದಲೂ ಪ್ರಸಾರವಾಗುತ್ತಾ ಬಂದಿದ್ದರೂ ಹೆಚ್ಚು ಮಹತ್ವ ಪೂರ್ಣವಾಗಿ ಅವುಗಳನ್ನು ಬಳಸಿದ್ದು ಸರ್ವಶಿಕ್ಷಣದ ಅಭಿಯಾನದಡಿಯಲ್ಲಿ (SSA) ಮೂಡಿಬಂದ 'ಕೇಳಿ-ಕಲಿ' ಕಾರ್ಯಕ್ರಮದ ನಂತರ. 'ಕೇಳಿಕಲಿ' ಬಾನುಲಿ ಕಾರ್ಯಕ್ರಮವನ್ನು ಮೊದಲು 2000-01ರ ಶೈಕ್ಷಣಿಕ ವರ್ಷದಲ್ಲಿ ಆಕಾಶವಾಣಿಯ ಗುಲ್ಬರ್ಗಾ ಮತ್ತು ರಾಯಚೂರು ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಶಾಲೆಗಳ 3ನೇ ತರಗತಿ ಮಕ್ಕಳಿಗಾಗಿ ಪ್ರಸಾರ ಮಾಡಲಾಯಿತು. ಅದರೆ ಮರುವರ್ಷ ಅಂದರೆ 2001-02ರ ಶೈಕ್ಷಣಿಕ ವರ್ಷದಲ್ಲಿ ಉತ್ತರ ಕರ್ನಾಟಕದ 11 ಡಿ.ಪಿ.ಇ.ಪಿ ಜಿಲ್ಲೆಗಳ 3 ಮತ್ತು 4ನೇ ತರಗತಿಯ ಮಕ್ಕಳಿಗೆ ಬಾನುಲಿ ಪಾಠಗಳನ್ನು ತಲುಪಿಸಲಾಯಿತು. ನಂತರ ಕಾರ್ಯಕ್ರಮದಲ್ಲಿ ಈ ಎಲ್ಲಾ ಜಿಲ್ಲೆಗಳ 3, 4 ಮತ್ತು 5ನೇ ತರಗತಿಯ ಎಲ್ಲಾ ಮಕ್ಕಳಿಗೆ ಬಾನುಲಿ ಪಾಠಗಳ ಪ್ರಯೋಜನ ಲಭ್ಯವಾಯಿತು. 2005-06ನೇ ಸಾಲಿನಿಂದ ಕೇಳಿ-ಕಲಿ ಬಾನುಲಿ ಪಾಠಗಳನ್ನು ಕರ್ನಾಟಕದ 3, 4, 5, ಮತ್ತು 6ನೆಯ ತರಗತಿಯ ಎಲ್ಲಾ ಮಕ್ಕಳಿಗೆ ವಿವಿಧ ಹೆಸರಿನ ಕಾರ್ಯಕ್ರಮಗಳ ರೂಪದಲ್ಲಿ ಆಕಾಶವಾಣಿಯು ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ.

ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳ ಮಹತ್ವದ ರೇಡಿಯೋ ಪ್ರಸಾರವು ಇತರ ಮಾಧ್ಯಮಗಳಿಗಿಂತ ಉತ್ತಮವಾದುದಾಗಿದ್ದು ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಪ್ರತಿಯೊಬ್ಬರಿಗೂ ಅಂದರೆ ಪ್ರತಿಯೊಂದು ಶಾಲೆಗೂ ಒದಗಿಸುವ ಪ್ರಮುಖ ಸಾಧನವಾಗಿದ್ದು ಏಕಾತ್ಮಕ ರೀತಿಯ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವ ಪ್ರಮುಖ ಸಾಧನವಾಗಿದೆ. ಈ ನಿಟ್ಟಿನಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ಮಹತ್ವವನ್ನು ಈ ಕೆಳಕಂಡಂತೆ ವಿವರಿಸಬಹುದು.

1. ರೇಡಿಯೋ ಮೂಲಕ ಕಡಿಮೆ ಖರ್ಚಿನಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯ.
2. ಅನುಭವಿ ಶಿಕ್ಷಕರು, ತಜ್ಞರುಗಳ ಸಹಾಯ, ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪಾಠಗಳನ್ನು ನೇರವಾಗಿ ವಿದ್ಯಾರ್ಥಿಗಳಿಗೆ ತಲುಪಿಸಬಹುದು.
3. ರೇಡಿಯೋ ಮೂಲಕ ಶೀಘ್ರವಾಗಿ ಪಾಠಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಏಕಕಾಲದಲ್ಲಿ ತಲುಪಿಸಬಹುದು.
4. ಮಕ್ಕಳಲ್ಲಿ ಕಲ್ಪನಾಶಕ್ತಿಯನ್ನು ಹೆಚ್ಚಿಸಬಹುದು.
5. ಶೈಕ್ಷಣಿಕ ಸಮಸ್ಯೆಗಳ ಚರ್ಚೆಗೆ ವೇದಿಕೆಯನ್ನು ಒದಗಿಸಿ ಪರಿಹಾರವನ್ನು ಕಂಡುಕೊಳ್ಳಲು ಸಹಾಯ ಮಾಡಬಹುದು.
6. ಸಮೂಹ ಬೋಧನೆಗೆ ಈ ತಂತ್ರ ಸೂಕ್ತ ಮಾಧ್ಯಮವಾಗಿದೆ.

### ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮದ ಉದ್ದೇಶಗಳು

ಶಿಕ್ಷಣ ಕ್ಷೇತ್ರದಲ್ಲಾದ ಮಹತ್ತರ ಕ್ರಾಂತಿಯಿಂದ ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ತೀವ್ರತರವಾದ ಬದಲಾವಣೆ ತಂದು ಕಲಿಕೆಯಲ್ಲಿ ಅನ್ಯೋನ್ಯ ಕ್ರಿಯಾತ್ಮಕತೆಯನ್ನು ಅಳವಡಿಸುವ ಸಲುವಾಗಿ ಆಯ್ಕೆ ಮಾಡಿಕೊಂಡ ಈ ಬಾನುಲಿ ರೇಡಿಯೋ ಕಾರ್ಯಕ್ರಮವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

1. ಶಿಕ್ಷಕರಿಗೆ ಬೋಧನಾ-ಕಲಿಕಾ ಪ್ರಕ್ರಿಯೆಗಳ ಬಗ್ಗೆ ಮಾರ್ಗದರ್ಶನ ನೀಡುವುದು.
2. ಸಂಪನ್ಮೂಲ ವ್ಯಕ್ತಿಗಳಿಂದ ಬಾನುಲಿ ಪಾಠ ಮಾಡಿಸುವುದು.
3. ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವುದರಲ್ಲಿ ಪ್ರಭಾವ ಬೀರುವುದು.
4. ಶಾಲೆಯನ್ನು ಆಕರ್ಷಣೀಯ ಕೇಂದ್ರವನ್ನಾಗಿ ಮಾಡುವುದು.
5. ಮಕ್ಕಳ ಕಲಿಕೆಯನ್ನು ವೇಗಗೊಳಿಸುವುದು ಮತ್ತು ಗುಣಮಟ್ಟದ ಕಲಿಕೆಯನ್ನುಂಟು ಮಾಡುವುದು.
6. ಬೋಧನಾ ವಿಧಾನಗಳಲ್ಲಿ ಬದಲಾವಣೆಯನ್ನುಂಟು ಮಾಡುವುದು

ಹೀಗೆ ಹಲವಾರು ಉದ್ದೇಶಗಳ ಆಧಾರದ ಮೇಲೆ ಹಲವಾರು ತಜ್ಞರ ಮತ್ತು ಸಂಪನ್ಮೂಲ ವ್ಯಕ್ತಿಗಳ ಪರಿಶ್ರಮದ ಫಲವಾಗಿ ಈ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳು ಜಾರಿಗೆ ಬಂದವು.

ಶಿಕ್ಷಣಕ್ಕಾಗಿ ಮೂಡಿಬರುವ ರೇಡಿಯೋ ಕಾರ್ಯಕ್ರಮಗಳೆಂದರೆ ಬಾನ್ದನಿ, ಕೇಳಿ-ಕಲಿ, ಚುಕ್ಕಿ-ಚಿನ್ನ, ಚಿನ್ನರ-ಚುಕ್ಕಿ, ಚುಕ್ಕಿ-ಚಂದ್ರಮ ಇತ್ಯಾದಿ.

### ಕೇಳಿ-ಕಲಿ ಕಾರ್ಯಕ್ರಮ

ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರುವ ದೃಷ್ಟಿಕೋನದಿಂದ ಸುಲಭವಾಗಿ ಲಭ್ಯವಿರುವ ಜನಪ್ರಿಯ ಮಾಧ್ಯಮಗಳನ್ನು ಶೈಕ್ಷಣಿಕ ಚಟುವಟಿಕೆಯಲ್ಲಿ ಕ್ರಿಯಾತ್ಮಕವಾಗಿ ಸೃಜನಾತ್ಮಕವಾಗಿ ಬಳಸಿಕೊಳ್ಳುವ ಪ್ರಯತ್ನ ಇದಾಗಿದೆ.

ಅಂತಹ ಶಿಕ್ಷಣ ನೀಡುವುದರಲ್ಲಿ ಬಹುಮುಖ್ಯ ಪಾತ್ರವಾದುದು 'ಕೇಳಿ ಕಲಿ' ಕಾರ್ಯಕ್ರಮವಾಗಿದೆ. ಇದು ಕರ್ನಾಟಕ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಪ್ರಯೋಗಾತ್ಮಕವಾದ ಮತ್ತು ಅಮೂಲ್ಯವಾದ ಹೊಸ ಹೆಜ್ಜೆಯಾಗಿದ್ದು ಪ್ರತಿದಿನ ಅಥವಾ ವಾರದಲ್ಲಿ ನಾಲ್ಕುದಿನ ಕಡ್ಡಾಯವಾಗಿ ಬಾನುಲಿಯಿಂದ ಪ್ರಸಾರವಾಗುತ್ತಿರುವ ಕಾರ್ಯಕ್ರಮ.

ಕರ್ನಾಟಕದ ಎಲ್ಲಾ ಬಾನುಲಿ ಕೇಂದ್ರಗಳಿಂದ ಈ ಕಾರ್ಯಕ್ರಮ ಬಿತ್ತರವಾಗುತ್ತಿದೆ. ಕೇಳಿ-ಕಲಿ ಕಾರ್ಯಕ್ರಮಗಳು ಐದನೇ ತರಗತಿಯಿಂದ 10ನೇ ತರಗತಿಯವರೆಗೆ ನಿಗದಿಪಡಿಸಿದ ಪಠ್ಯ ವಿಷಯಗಳಿಗೆ ಅನುಗುಣವಾಗಿರುತ್ತವೆ. ನಿಗದಿತ ಸಮಯದಲ್ಲಿ ಕರ್ನಾಟಕದ ಮೂಲೆ ಮೂಲೆಗಳಲ್ಲಿರುವ ಎಲ್ಲಾ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ, ಪೋಷಕರಿಗೆ ವಿಷಯಗಳನ್ನು ಮನದಟ್ಟು ಮಾಡುವ ಪರಿಣಾಮಕಾರಿಯಾದ ಶಿಕ್ಷಣ ನೀಡುವ ಶ್ರವ್ಯ ಮಾಧ್ಯಮವೇ ಕೇಳಿ ಕಲಿ ಕಾರ್ಯಕ್ರಮವಾಗಿದೆ.

Digitised by Bharatavani, CIIL

ಶಿಕ್ಷಣದ ಗುಣಮಟ್ಟ ಹೆಚ್ಚಿಸುವುದು, ಗ್ರಹಣ ಶಕ್ತಿ ಹೆಚ್ಚಿಸುವುದು, ಕಲಿಕಾ ಕಾರ್ಯಕ್ರಮದ ಉದ್ದೇಶವಾಗಿದೆ. ಎಜುಸ್ಯಾಟ್ ನಿಖರವಾಗಿ ಶಿಕ್ಷಣ ನೀಡುವುದಕ್ಕೋಸ್ಕರ ತಯಾರುಮಾಡಿ ಪ್ರಸಾರ ಮಾಡುವ ಶಿಕ್ಷಣದ ಉಪಗ್ರಹವಾಗಿದೆ. ಎಜುಸ್ಯಾಟ್ ಕಾರ್ಯಕ್ರಮದ ಉದ್ದೇಶ ದೇಶದ ಎಲ್ಲಾ ಭಾಗಗಳಿಗೂ ಡಿ.ಟಿ.ಎಸ್. ತಂತ್ರಜ್ಞಾನದ ಮುಖಾಂತರ ವಿಚಾರ ವಿನಿಮಯ ಮತ್ತು ಸಂಪರ್ಕವನ್ನೊಳಗೊಂಡ ಶೈಕ್ಷಣಿಕ ಪ್ರಸಾರ ಮತ್ತು ಸೇವೆಯನ್ನು ಒದಗಿಸುವುದಾಗಿದೆ. ಎಜ್ಯುಸ್ಯಾಟ್ ಉಪಗ್ರಹವನ್ನು ಸೆಪ್ಟೆಂಬರ್ 20, 2004 ರಂದು ಸತೀಶ್ ಧವನ್ ಅಂತರಿಕ್ಷ ಕೇಂದ್ರದಿಂದ ಜಿ.ಎಸ್.ಎಲ್.ವಿ. ಉಡಾವಣಾ ವಾಹಕದ ಮೂಲಕ ಭೂ ಸ್ಥಿರ ವರ್ಗಾವಣೆ ಕಕ್ಷೆಗೆ ಯಶಸ್ವಿಯಾಗಿ ಹಾರಿ ಬಿಡಲಾಯಿತು.

**ಕೇಳಿ–ಕಲಿ ಕಾರ್ಯಕ್ರಮದಿಂದಾಗುವ ಪ್ರಯೋಜನಗಳು**

1. ಮಕ್ಕಳಲ್ಲಿ ಆಲಿಸುವ ಸಾಮರ್ಥ್ಯ ಹೆಚ್ಚಿಸುವುದು.
2. ಆಕರ್ಷಕವಾದ ರಾಗ, ಲಯ, ತಾಳಗಳ ಜೊತೆ ಕಥೆ, ಕವನಗಳನ್ನು ತಿಳಿಸುವುದರಿಂದ ಮಕ್ಕಳ ಆಸಕ್ತಿ ಅಭಿವೃದ್ಧಿಪಡಿಸುವುದು.
3. ಮಕ್ಕಳಲ್ಲಿ ಜ್ಞಾನಾರ್ಜನೆ ಮತ್ತು ಭಾಷಾಭಿಮಾನದೊಂದಿಗೆ ಶಬ್ದಭಂಡಾರವನ್ನು ಹೆಚ್ಚಿಸುವುದು.
4. ಮಕ್ಕಳಲ್ಲಿ ಸ್ಮರಣಶಕ್ತಿ ಮತ್ತು ಪ್ರಶ್ನಿಸುವ ಸಾಮರ್ಥ್ಯ ಹೆಚ್ಚಿಸುವುದು.
5. ಮಕ್ಕಳಿಗೆ ವಿಷಯವನ್ನು ಸ್ಪಷ್ಟಪಡಿಸುವುದು.
6. ಮಕ್ಕಳಲ್ಲಿ ಸೃಜನಶೀಲತೆ ಬೆಳೆಯಲು ಸಹಾಯ ಮಾಡುವುದು.

ಕೇಳಿ–ಕಲಿ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ಕೇಳಿಸುವಾಗ ಶಿಕ್ಷಕರು ಕೆಲವೊಂದು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಕಲಿಸಬೇಕಾಗುತ್ತದೆ. ಏಕೆಂದರೆ ಕಾರ್ಯಕ್ರಮ ಪ್ರಸಾರವಾಗುವ ಸಮಯ ಮತ್ತು ಅದರ ಬಗ್ಗೆ ಜ್ಞಾನವಿದ್ದು ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವ ಜವಾಬ್ದಾರಿ ಅಲ್ಲಿನ ತರಗತಿ ಶಿಕ್ಷಕನಿಗೆ ಸೇರಿದ್ದಾಗಿದೆ. ಆದ್ದರಿಂದ ಶಿಕ್ಷಕರು ರೇಡಿಯೋ ಪಾಠ ಕೇಳಿಸುವ ಸಂದರ್ಭದಲ್ಲಿ ಈ ಕೆಳಕಂಡ ಮುನ್ನೆಚ್ಚರಿಕೆ ವಹಿಸಬೇಕು.

1. ಪ್ರಸಾರಕ್ಕೆ ಮೊದಲು ಮತ್ತು ನಂತರ ಮಕ್ಕಳನ್ನು 'V'(ವಿ) ಆಕಾರದಲ್ಲಿ ಕೂರಿಸಬೇಕು.
2. ವಿದ್ಯಾರ್ಥಿಗಳನ್ನು ಶಾಂತ ರೀತಿಯಲ್ಲಿರಿಸಬೇಕು.
3. ವಿದ್ಯಾರ್ಥಿಗಳ ಗಮನವನ್ನು ಬಾನುಲಿ ಪಾಠದ ಕಡೆಗೆ ಕೇಂದ್ರೀಕರಿಸಬೇಕು.
4. ಪ್ರಸಾರಕ್ಕೆ ಅಡಚಣೆಯಾಗದ ರೀತಿಯಲ್ಲಿ ಮಕ್ಕಳನ್ನು ನೋಡಿಕೊಳ್ಳಬೇಕು.
5. ಪ್ರಸಾರದ ವಿಷಯವನ್ನು ಪೂರ್ವಭಾವಿಯಾಗಿ ಮಕ್ಕಳಿಗೆ ತಿಳಿಸಿರಬೇಕು.
6. ಪ್ರಸಾರಕ್ಕೆ ಪೂರ್ವದಲ್ಲಿ ಮಕ್ಕಳಿಗೆ ಪಾಠದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿರಬೇಕು.
7. ಪ್ರಸಾರೋತ್ತರ ಚಟುವಟಿಕೆ ಮಾಡಿಸಬೇಕು.
8. ಪ್ರಸಾರದ ನಂತರ ಸರಳ ಪ್ರಶ್ನೆಗಳ ಮೂಲಕ ಮಕ್ಕಳಿಂದ ಉತ್ತರ ಪಡೆಯಬೇಕು.
10. ಕಾರ್ಯಕ್ರಮದ ನಂತರ ಶಿಕ್ಷಕರು, ಮಕ್ಕಳು, ಬಿ.ಆರ್.ಸಿ, ಸಿ.ಆರ್.ಸಿ ಸಂಯೋಜಕರು, ಶಿಕ್ಷಣ ಸಂಯೋಜಕರು, ಶಿಕ್ಷಣಾಧಿಕಾರಿಗಳು, ಕಾರ್ಯಕ್ರಮದ ಬಗ್ಗೆ ಆಕಾಶವಾಣಿ ಕೇಂದ್ರಕ್ಕೆ ಅಭಿಪ್ರಾಯ ತಿಳಿಸಬೇಕು. ಹಾಗೂ ಸಿ.ಆರ್.ಸಿ ಸಭೆಗಳಲ್ಲಿ ಚರ್ಚಿಸಿ ಮಾಹಿತಿಯನ್ನು ನೀಡಬೇಕು.

**ಚುಕ್ಕಿ–ಚಿನ್ನ ಮತ್ತು ಚಿನ್ನರ–ಚುಕ್ಕಿ ಕಾರ್ಯಕ್ರಮಗಳು**

ಕೇಳಿ ಕಲಿ ಕಾರ್ಯಕ್ರಮಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಎಜುಕೇಶನ್ ಡೆವಲಪ್‌ಮೆಂಟ್ ಸೆಂಟರ್ (ಇ.ಡಿ.ಸಿ) 4ನೇ ಮತ್ತು 5ನೇ ತರಗತಿಗಳಿಗೆ, ಬಹುವರ್ಗ ತರಗತಿಗಳಿಗೆ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಶಿಕ್ಷಣ ಕಾರ್ಯಕ್ರಮ 'ಚುಕ್ಕಿ–ಚಿನ್ನ' ಸರಣಿಯನ್ನು ತಯಾರಿಸಿ ಜಾರಿಗೆ ತಂದಿದೆ. ಈ ಸರಣಿಯ ಕಾರ್ಯಕ್ರಮಗಳನ್ನು 2004–05ನೇ ಸಾಲಿನಲ್ಲಿ ಕರ್ನಾಟಕದ ಚಾಮರಾಜನಗರ ಜಿಲ್ಲೆ, ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕು ಮತ್ತು ಬೆಂಗಳೂರಿನಲ್ಲಿ ಮಹಾನಗರ ಪಾಲಿಕೆ ಶಾಲೆಗಳು ಹಾಗೂ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದೊದಿಗೆ ನಡೆಸಲಾಗುತ್ತಿರುವ ಕಂಪ್ಯೂಟರ್ ಆಧಾರಿತ ಕಲಿಕಾ ಕೇಂದ್ರಗಳಿರುವ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಚುಕ್ಕಿ–ಚಿನ್ನ–1 ಸರಣಿಯನ್ನು ಪ್ರಸಾರ ಮಾಡಲಾಯಿತು.

ವಿದ್ಯಾರ್ಥಿಗಳಿಂದ ಹಾಗೂ ಶಿಕ್ಷಕರಿಂದ ಈ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಶಿಕ್ಷಣ ಕಾರ್ಯಕ್ರಮದ ಉಪಯುಕ್ತತೆಯ ಬಗ್ಗೆ ಉತ್ತಮ ಪ್ರತಿಕ್ರಿಯೆ ದೊರೆತ ಹಿನ್ನೆಲೆಯಲ್ಲಿ 2005–06ನೇ ಸಾಲಿನಿಂದ ಕರ್ನಾಟಕ ರಾಜ್ಯಾದ್ಯಂತ ಪ್ರಸಾರ ಮಾಡಲು ಸರ್ಕಾರವು ತೀರ್ಮಾನಿಸಿತು. 2006–07ನೆ ಸಾಲಿನಿಂದ ನಾಲ್ಕು ಮತ್ತು ಐದನೇ ಬಹುವರ್ಗ ತರಗತಿಗಳಿಗೆ ಎಜುಕೇಷನ್ ಡೆವಲಪ್‌ಮೆಂಟ್ ವತಿಯಿಂದ ಗಣಿತ, ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಒಟ್ಟು 84 ಕಾರ್ಯಕ್ರಮಗಳನ್ನು ಮತ್ತು D.S.E.R.T. ವತಿಯಿಂದ ನಾಲ್ಕನೇ ತರಗತಿ ಕನ್ನಡ ಮತ್ತು ಐದನೇ ತರಗತಿಗೆ ಕನ್ನಡ ಮತ್ತು ಇಂಗ್ಲಿಷ್ ಸೇರಿ ಒಟ್ಟು 40 ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ.

ಚುಕ್ಕಿ ಚಿನ್ನ ಕಾರ್ಯಕ್ರಮದ ಯಶಸ್ಸನ್ನು ಗಮನಿಸಿದ ಶಿಕ್ಷಣ ಇಲಾಖೆಯು 2005–06ನೇ ಶೈಕ್ಷಣಿಕ ವರ್ಷದಿಂದ ಒಂದರಿಂದ ಮೂರನೇ ತರಗತಿಗಳಿಗೆ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಶಿಕ್ಷಣ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಎಜುಕೇಶನ್ ಡೆವಲಪ್‌ಮೆಂಟ್ ಸೆಂಟರ್ ವತಿಯಿಂದ ಕನ್ನಡ, ಗಣಿತ, ಪರಿಸರ ಅಧ್ಯಯನ ವಿಷಯಗಳಲ್ಲಿ ಒಂದು ಮತ್ತು 3ನೇ ಬಹುವರ್ಗ ತರಗತಿಗಳಿಗೆ ಚಿನ್ನರ–ಚುಕ್ಕಿ ಸರಣಿಗಳನ್ನು ಕಲಿಕೆಯ ಗುಣಮಟ್ಟ ಮತ್ತು ಶಿಕ್ಷಕರ ಬೋಧನಾ ವಿಧಾನವನ್ನು ಉತ್ತಮಪಡಿಸುವ ದೃಷ್ಟಿಯಿಂದ ಆರಂಭಿಸಿದೆ.

ವಿದ್ಯಾರ್ಥಿಗಳಲ್ಲಿ ಆಲಿಸುವ ಕೌಶಲ್ಯವನ್ನು ಬೆಳೆಸುವುದರ ಜೊತೆಗೆ ತರಗತಿಯಲ್ಲಿ ವಿದ್ಯಾರ್ಥಿಗಳು ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುವಾಗುವಂತೆ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳನ್ನು ರೂಪಿಸಿರುವರು. ಈ ಸರಣಿ ಶಿಕ್ಷಣ ಕಾರ್ಯಕ್ರಮಗಳು ಶಿಕ್ಷಕರಿಗೆ ತರಬೇತಿ ಸಾಧನ ಕೂಡ ಆಗಿವೆ. ಗುಣಮಟ್ಟ ಸುಧಾರಣೆಯಲ್ಲಿ ಇಲಾಖೆಯು ಹಮ್ಮಿಕೊಂಡಿರುವ ಚಟುವಟಿಕೆ ಆಧಾರಿತ ಬೋಧನೆಗೆ ಪೂರಕವಾಗಿ ಈ ಕಾರ್ಯಕ್ರಮ ಸರಣಿ ರೂಪಿತವಾಗಿದೆ.

**ಚುಕ್ಕಿ–ಚಿನ್ನ ಹಾಗೂ ಚಿನ್ನರ–ಚುಕ್ಕಿ ಕಾರ್ಯಕ್ರಮಗಳ ಉದ್ದೇಶ**

ಚುಕ್ಕಿಚಿನ್ನ ಮತ್ತು ಚಿನ್ನರ–ಚುಕ್ಕಿ ಕಾರ್ಯಕ್ರಮಗಳು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನ್ಯೋನ್ಯ–ಕ್ರಿಯಾತ್ಮಕ ಕಲಿಕೆಯ ಮೂಲಕ

Digitised by Bharatavani, CIIL

ಚಟುವಟಿಕೆಗಳ ಮಾರ್ಗದರ್ಶನ ನೀಡುತ್ತವೆ. ಈ ಸರಣಿಗಳಲ್ಲಿನ ಕಾರ್ಯಕ್ರಮಗಳು ಕನ್ನಡ ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನದಲ್ಲಿ ಪಠ್ಯವಸ್ತುವಿನ ಕ್ಲಿಷ್ಟಕರವಾದ ಪರಿಕಲ್ಪನೆಗಳನ್ನು ಚರ್ಚಿಸುತ್ತವೆ.

ಸಾಂಪ್ರದಾಯಿಕ ಕ್ರಮದಲ್ಲಿ ರೂಢಿಯಲ್ಲಿದ್ದ ಶಿಕ್ಷಕ ಕೇಂದ್ರಿತ ವಿಧಾನದ ಬದಲಿಗೆ ಚುಕ್ಕಿ-ಚಿನ್ನ ಮತ್ತು ಚಿನ್ನರ-ಚುಕ್ಕಿ ಕಾರ್ಯಕ್ರಮಗಳು ಅನ್ಯೋನ್ಯ ಕ್ರಿಯಾತ್ಮಕ ಚಟುವಟಿಕೆ ಆಧಾರಿತ ವಿದ್ಯಾರ್ಥಿ ಕೇಂದ್ರಿತ ಕ್ರಮವನ್ನು ಉತ್ತೇಜಿಸುತ್ತವೆ. ಈ ಬೋಧನಾ ವಿಧಾನದಲ್ಲಿ ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಸ್ವತಃ ಮಾಡುವುದರ ಮೂಲಕ ಅಂದರೆ ಅನುಭವಿಸಿ ಈ ಕಾರ್ಯಕ್ರಮಗಳ ಮೂಲಕ ಕಲಿಯಲು ತರಗತಿಯಲ್ಲಿ ವಿದ್ಯಾರ್ಥಿ ಕೇಂದ್ರಿತ ಚಟುವಟಿಕೆಗಳನ್ನು ಸಂಘಟಿಸುವ ಮಾರ್ಗೋಪಾಯಗಳನ್ನು ಶಿಕ್ಷಕರು ತಿಳಿಯುತ್ತಾರೆ.

ಚುಕ್ಕಿ-ಚಿನ್ನ ಹಾಗೂ ಚಿನ್ನರ-ಚುಕ್ಕಿ ಕಾರ್ಯಕ್ರಮ ಸರಣಿಗಳ ಇನ್ನೊಂದು ಗುರಿಯೆಂದರೆ ತರಗತಿಯಲ್ಲಿ ಕಲಿಕಾ ಸಾಧನಗಳನ್ನು ರಚಿಸುವ ಮತ್ತು ಬಳಕೆ ಮಾಡುವ ವಿಧಾನಗಳನ್ನು ರೂಪಿಸಿಕೊಳ್ಳಲು ಶಿಕ್ಷಕರಿಗೆ ಸಹಾಯ ಮಾಡುವುದು. ಕಾರ್ಯಶೀಲ ಅನುಭವದಿಂದ ರೂಪಿಸುವ ಶೈಕ್ಷಣಿಕ ಸಾಧನಗಳು ವಿದ್ಯಾರ್ಥಿಗಳ ಕಲಿಕೆಯ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ವಿದ್ಯಾರ್ಥಿಗಳಿಗೆ ಕಲಿಕೆಯು ಸಂತಸದಾಯಕವಾಗಿ, ಅನುಭವ ಶೀಲವಾಗಿ, ಸ್ವಂತ ಆವಿಷ್ಕಾರದ ಮೂಲಕ ಕಲಿಯಲು ಈ ಶೈಕ್ಷಣಿಕ ಸಾಧನಗಳು ನೆರವಾಗುತ್ತವೆ. ಅತ್ಯಂತ ಪರಿಣಾಮಕಾರಿಯಾದ ಕಲಿಕೆಯ ಸಾಧನಗಳನ್ನು ಸ್ಥಳೀಯ ಪರಿಸರದಿಂದ ಸಂಗ್ರಹಿಸಬಹುದು ಅಥವಾ ತಯಾರು ಮಾಡಿಕೊಳ್ಳಬಹುದು. ಈ ಸರಣಿಯು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಧನಗಳ 'ಕಿಟ್'ಗಳನ್ನು ತಯಾರಿಸಿಕೊಳ್ಳಲು ಪ್ರೋತ್ಸಾಹ, ಸಲಹೆ ನೀಡುತ್ತದೆ.

ಚುಕ್ಕಿ-ಚಿನ್ನ ಚಿನ್ನರ-ಚುಕ್ಕಿ ಕಾರ್ಯಕ್ರಮ ಸರಣಿಗಳ ಮತ್ತೊಂದು ಗುರಿಯೆಂದರೆ ವಿದ್ಯಾರ್ಥಿಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದು.

ಈ ಮೇಲಿನ ಉದ್ದೇಶಗಳ ಈಡೇರಿಕೆಗಾಗಿ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳನ್ನು ಶಿಕ್ಷಕರು ತರಗತಿಯಲ್ಲಿ ಸರಿಯಾಗಿ ಅನುಷ್ಠಾನಗೊಳಿಸಿದಲ್ಲಿ ಕಲಿಕೆಯು ತರಗತಿಯ ಎಲ್ಲಾ ವಿದ್ಯಾರ್ಥಿಗಳಲ್ಲಿ ಚೆನ್ನಾಗಿ ಆಗುತ್ತದೆ.

ಚುಕ್ಕಿ-ಚಿನ್ನ ಮತ್ತು ಚಿನ್ನರ-ಚುಕ್ಕಿ ಕಾರ್ಯಕ್ರಮಗಳಲ್ಲಿ ಶಿಕ್ಷಕರು ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಈ ಕಾರ್ಯಕ್ರಮಗಳಲ್ಲಿ ಬಳಸಿರುವ ಚಟುವಟಿಕೆಗಳನ್ನು ಶಿಕ್ಷಕರೇ ತರಗತಿಯಲ್ಲಿ ಆಯೋಜಿಸಬೇಕು. ಒಂದು ಸಾಮರ್ಥ್ಯವನ್ನು ಬೆಳೆಸಲು ವಿದ್ಯಾರ್ಥಿಗಳನ್ನೇ ಚಟುವಟಿಕೆಯಲ್ಲಿ ತೊಡಗಿಸಿ ಹಾಗೂ ಸ್ಥಳೀಯವಾಗಿ ಲಭ್ಯವಾಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಚಟುವಟಿಕೆಗಳನ್ನು ಹೇಗೆ ರೂಪಿಸಬಹುದು ಎನ್ನುವುದನ್ನು ನಿದರ್ಶನದೊಂದಿಗೆ ಈ ಸರಣಿಗಳ ಮೂಲಕ ಪರಿಚಯಿಸಲಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಅನ್ಯೋನ್ಯ ಕ್ರಿಯಾತ್ಮಕತೆಗೆ ಅವಕಾಶ ಕಲ್ಪಿಸಿ ಎಲ್ಲಾ ಚಟುವಟಿಕೆಗಳನ್ನು ಯೋಜಿಸಬೇಕು. ಅಲ್ಲದೆ ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಾದ ಸಾಮಗ್ರಿಗಳನ್ನು ಒದಗಿಸಬೇಕು. ಈ ಕಾರ್ಯಕ್ರಮದಲ್ಲಿ ತರಗತಿಯ ಶಿಕ್ಷಕ ಸಕ್ರಿಯವಾಗಿ ಪಾಲ್ಗೊಳ್ಳದಿದ್ದರೆ ಕಾರ್ಯಕ್ರಮ ಸಫಲವಾಗದು.

**ಕಾರ್ಯಕ್ರಮದ ಪ್ರಸಾರದ ಮೊದಲು ಶಿಕ್ಷಕರು ಅನುಸರಿಸಬೇಕಾದ ಹಂತಗಳು.**

ಚುಕ್ಕಿ-ಚಿನ್ನ ಮತ್ತು ಚಿನ್ನರ-ಚುಕ್ಕಿ ಕಾರ್ಯಕ್ರಮಗಳು ಪ್ರಸಾರವಾಗುವುದಕ್ಕೆ ಮುಂಚಿತವಾಗಿ ಶಿಕ್ಷಕರು ಈ ಕೆಳಕಂಡಂತಹ ಕ್ರಮಗಳನ್ನು ಅನುಸರಿಸಬೇಕು.

1. ನಿರ್ದಿಷ್ಟ ಕಾರ್ಯಕ್ರಮ ಮಾಹಿತಿ ವಿಭಾಗದ ಅಂದಿನ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸೂಚನೆಗಳನ್ನು ಓದಿಕೊಳ್ಳುವುದು.
2. ಕಾರ್ಯಕ್ರಮದ ಕಲಿಕಾ ಉದ್ದೇಶಗಳನ್ನು ಓದಿ ಮನನ ಮಾಡಿಕೊಳ್ಳುವುದು.
3. ಸೂಚನೆಯಲ್ಲಿರುವಂತೆ ಆ ಕಾರ್ಯಕ್ರಮಕ್ಕೆ ಬೇಕಾದ ವಸ್ತುಗಳೆಲ್ಲವನ್ನು ಸಂಗ್ರಹಿಸಿಟ್ಟುಕೊಳ್ಳುವುದು.
4. ಪ್ರತಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಹಾಡನ್ನು ಆಯಾ ದಿನ ಪ್ರಸಾರಕ್ಕೆ ಮೊದಲೇ ದೊಡ್ಡ ಹಾಳೆಯಲ್ಲಿ ಅಥವಾ ಕಪ್ಪು ಹಲಗೆಯ ಒಂದು ಭಾಗದಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸಬೇಕು. ಕಾರ್ಯಕ್ರಮದಲ್ಲಿ ಹಾಡಿನ ಪ್ರಸಾರ ಆಗುವಾಗ ವಿದ್ಯಾರ್ಥಿಗಳು ಹಾಡನ್ನು ಓದಿಕೊಂಡು ಹಾಡಲು ಸುಲಭವಾಗುತ್ತದೆ.
5. ಸೂಚನೆಯಂತೆ ಗುಂಪುಗಳ ರಚನೆ ಮತ್ತು ಚಟುವಟಿಕೆಯನ್ನು ಶೀಘ್ರವಾಗಿ ನಡೆಸಲು ಸಿದ್ಧವಾಗಿರುವುದು.
6. ವಿದ್ಯುತ್ ಪೂರೈಕೆ ನಿಂತು ಹೋದರೆ ರೇಡಿಯೋಗೆ ಅಗತ್ಯವಾದ ಹೆಚ್ಚುವರಿ ಬ್ಯಾಟರಿ ಸೆಲ್ ಇಟ್ಟುಕೊಳ್ಳಬೇಕು.
7. ತರಗತಿಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಸರಿಯಾಗಿ ಕೇಳಿಸುವಂತಹ ಸ್ಥಳದಲ್ಲಿ ರೇಡಿಯೋವನ್ನು ಇಡಬೇಕು.
8. ಕಾರ್ಯಕ್ರಮಕ್ಕೆ ಐದು ನಿಮಿಷ ಮೊದಲು ರೇಡಿಯೋ ಆನ್‌ಮಾಡಿ ಟ್ಯೂನ್ ಮಾಡಿಟ್ಟುಕೊಳ್ಳಬೇಕು.
9. ಎಲ್ಲಾ ವಿದ್ಯಾರ್ಥಿಗಳಿಗೂ ಸ್ಪಷ್ಟವಾಗಿ ಕೇಳಿಸುವಷ್ಟು ದೊಡ್ಡದಾಗಿ ರೇಡಿಯೋ ವಾಲ್ಯೂಂ ಹೊಂದಿಸಿಕೊಳ್ಳಬೇಕು.
10. ಎಲ್ಲಾ ವಿದ್ಯಾರ್ಥಿಗಳೂ ರೇಡಿಯೋ ಕಾರ್ಯಕ್ರಮವನ್ನು ಗಮನವಿಟ್ಟು ಕೇಳುವಂತೆ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕು.

**ಪ್ರಸಾರದ ಸಮಯದಲ್ಲಿ ವಹಿಸಬೇಕಾದ ಕಾಳಜಿ**

ಚುಕ್ಕಿ-ಚಿನ್ನ ಹಾಗೂ ಚಿನ್ನರ-ಚುಕ್ಕಿ ಕಾರ್ಯಕ್ರಮಗಳು ಪ್ರಸಾರವಾಗುತ್ತಿರುವ ಸಂದರ್ಭದಲ್ಲಿ ತರಗತಿ ಶಿಕ್ಷಕರು ಈ ಕೆಳಕಂಡಂತಹ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸಬೇಕಾಗುತ್ತದೆ.

1. ರೇಡಿಯೋ ಶಿಕ್ಷಕಿ ಹೇಳುವ ಸೂಚನೆಗಳನ್ನು ಗಮನವಿಟ್ಟು ಕೇಳುವುದು.
2. ವಿದ್ಯಾರ್ಥಿಗಳ ಗಮನ ರೇಡಿಯೋ ಕಾರ್ಯಕ್ರಮದ ಕಡೆಯಿರುವಂತೆ ನೋಡಿಕೊಳ್ಳುವುದು.
3. ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿ ಹಾಗೂ ಆಸಕ್ತಿಯಿಂದ ಭಾಗವಹಿಸುವಂತೆ ನೋಡಿಕೊಳ್ಳಬೇಕು.
4. ಎಲ್ಲಾ ವಿದ್ಯಾರ್ಥಿಗಳೂ ಚಟುವಟಿಕೆಯಲ್ಲಿ ಸಮಾನವಾಗಿ ಭಾಗವಹಿಸುವಂತೆ ನೋಡಿಕೊಳ್ಳಬೇಕು.

Digitised by Bharatavani, CIIL

5. ರೇಡಿಯೋ ಪಾತ್ರಗಳು ಮಾತಾಡುತ್ತಿರುವಾಗ ಶಿಕ್ಷಕರು ಮಾತನಾಡಬಾರದು.
6. ಹಾಡುಗಳನ್ನು ಹೇಳುವಾಗ ವಿದ್ಯಾರ್ಥಿಗಳ ಜೊತೆ ದನಿಗೂಡಿಸಿ ಅಭಿನಯ ಪೂರ್ವಕವಾಗಿ ಹಾಡಲು ಮಾರ್ಗದರ್ಶನ ನೀಡಬೇಕು.

ನಿಗದಿತ ಸಮಯದಲ್ಲಿ ಶಿಕ್ಷಕರು ಚಟುವಟಿಕೆ ಪೂರ್ಣಗೊಳಿಸಲಾಗದಿದ್ದರೆ ಚಿಂತಿಸುವಂತಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಮುಗಿಸಲು ಪ್ರಯತ್ನಿಸಬೇಕು. ಕಾರ್ಯಕ್ರಮದ ನಂತರ ಬಿಡುವಿನ ವೇಳೆಯಲ್ಲಿ ಮತ್ತೆ ಚಟುವಟಿಕೆಗಳನ್ನು ಮಾಡಿಸಬೇಕು.

### ಪ್ರಸಾರದ ನಂತರ ಶಿಕ್ಷಕ ಮಾಡಬೇಕಾದ ಕೆಲಸಗಳು

1. ವಿದ್ಯಾರ್ಥಿಗಳು ಮಾಡಿದ ಚಟುವಟಿಕೆಯನ್ನು ಕಾರ್ಯಕ್ರಮ ಪ್ರಸಾರದ ನಂತರವೂ ಮುಂದುವರೆಸುವುದು.
2. ಕಾರ್ಯಕ್ರಮ ಪ್ರಸಾರದಲ್ಲಿ ತಿಳಿಸಿದಂತೆ ನಿರ್ದಿಷ್ಟ ಕಾರ್ಯಕ್ರಮ ಮಾಹಿತಿ ವಿಭಾಗದಲ್ಲಿ ಸೂಚಿಸಿದಂತೆ ಪ್ರಸಾರದ ನಂತರದ ಚಟುವಟಿಕೆ ಮಾಡಿಸಬೇಕು.
3. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಏನು ಕಲಿತಿದ್ದಾರೆಂಬುದನ್ನು ಮೌಲ್ಯಮಾಪನ ಮಾಡಬೇಕು.
4. ಮುಂದಿನ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಮಾಡಬೇಕಾದ ತಯಾರಿ ಮತ್ತು ತರಬೇಕಾದ ವಸ್ತುಗಳ ಬಗ್ಗೆ ಸೂಚನೆ ನೀಡಬೇಕು.
5. ಕಾರ್ಯಕ್ರಮ ಆಲಿಸಿದ ನಂತರ ಶಿಕ್ಷಕರು ಹೊಸ ಹೊಸ ಯೋಜನೆಗಳನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಬೇಕು.

ಈ ಮೇಲಿನ ಎಲ್ಲಾ ಜವಾಬ್ದಾರಿಗಳನ್ನು ಶಿಕ್ಷಕರು ಸ್ವಯಂ ಪ್ರೇರಿತರಾಗಿ ಆಸಕ್ತಿಯಿಂದ ಸಕ್ರಿಯವಾಗಿ ಕಾರ್ಯಗತಗೊಳಿಸಿದಾಗ ಮಾತ್ರ ಈ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳ ಸರಣಿ ಯಶಸ್ವಿಯಾಗುತ್ತದೆ.

ಅನ್ವೇಷಣೆಯೇ ಕಲಿಕೆಗೆ ಪ್ರೇರಕ ಎಂಬುದು ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮದ ಧ್ಯೇಯವಾಗಿದ್ದು, ವಿದ್ಯಾರ್ಥಿಗಳೇ ಸ್ವತಹ ಪ್ರಯೋಗಮಾಡಿ, ವಿಶ್ಲೇಷಿಸಿ ಅರ್ಥಮಾಡಿಕೊಳ್ಳಬೇಕು. ಎಲ್ಲ ಶಿಕ್ಷಕರು 75% ರಷ್ಟು ಸಮಯವನ್ನು ಬೋಧನೆಗೆ ಮೀಸಲಿಟ್ಟಿದ್ದರೆ ಅದು ಈಗ 25% ಕ್ಕೆ ಇಳಿದು ಉಳಿದ ಸಮಯದಲ್ಲಿ ವಿದ್ಯಾರ್ಥಿಗಳೊಡನೆ ಚಟುವಟಿಕೆಯಲ್ಲಿ ಭಾಗವಹಿಸಿ ಕಲಿಕೆಯನ್ನು ಉತ್ತಮಪಡಿಸಲು ಅವಕಾಶವಿದೆ. ಸಾಂಪ್ರದಾಯಿಕ ವಿಧಾನಗಳಲ್ಲಿ ವಿದ್ಯಾರ್ಥಿಗಳು ಕೇವಲ ಕೇಳುಗರಾಗಿ ಅಥವಾ ಪಾಠ ಕೇಳಿದ ನಂತರ ಪ್ರಶ್ನೆಗಳಿಗೆ ಉತ್ತರಿಸುವ ಪಾತ್ರ ವಹಿಸುತ್ತಿದ್ದರು.

ಕ್ರಿಯಾತ್ಮಕ ಕಲಿಕೆಯಲ್ಲಿ ಶಿಕ್ಷಕರು ಬೋಧನೆ ಮಾಡುವುದರಲ್ಲಿ ಮಾತ್ರ ನಿರತರಾಗಿರದೆ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಚಟುವಟಿಕೆಗಳನ್ನು ರೂಪಿಸಿ, ವ್ಯವಸ್ಥೆಗೊಳಿಸಬೇಕು. ತತ್ಪರಿಣಾಮವಾಗಿ ವಿದ್ಯಾರ್ಥಿಗಳು ಹೆಚ್ಚು ಸಮಯವನ್ನು ಶಿಕ್ಷಕರ ಪಾಠ ಕೇಳುವ ಅಥವಾ ಅವರು ಮಾಡಿತೋರಿಸುವ ಪ್ರಯೋಗಗಳನ್ನು ನೋಡುವ ಬದಲಾಗಿ ತಾವೇ ಚಟುವಟಿಕೆಗಳಲ್ಲಿ ಭಾಗವಹಿಸಿ ಇಲ್ಲವೇ ಪ್ರಯೋಗಮಾಡಿ ಕಲಿಯುತ್ತಾರೆ.

–ಜಿ.ಶೀ



## ಅನುವಂಶೀಯತೆ ಮತ್ತು ಪರಿಸರವಾದ

ಜೀವ ಜಗತ್ತಿನ ನಮ್ಮ ಮಾನವ ಸಂಕುಲವನ್ನು ನಾವೇ ಗಮನಿಸಿಕೊಂಡಾಗ ನಾವು ಒಬ್ಬರಿದ್ದಂತೆ ಒಬ್ಬರಿಲ್ಲದಿರುವುದು: ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳಲ್ಲಿ ಏಕರೂಪತೆ ಇಲ್ಲದೆ ಯಾವುದಾದರೊಂದು ಮಟ್ಟದ ವ್ಯತ್ಯಾಸವನ್ನು ಗಮನಿಸಬಹುದು. ಮಕ್ಕಳು ದೈಹಿಕ ಮತ್ತು ಮಾನಸಿಕ ಗುಣಗಳಲ್ಲಿ ಅಜ್ಜ, ಅಜ್ಜಿ, ತಂದೆ ತಾಯಿಯರನ್ನು ಹೋಲುತ್ತಾರೆ. ತಂದೆ ತಾಯಿ ಎತ್ತರವಾಗಿದ್ದರೆ ಮಕ್ಕಳು ಎತ್ತರವಾಗಿ ಬೆಳೆಯುವುದು, ಜಾಣರ ಮಕ್ಕಳು ಜಾಣರಾಗಿಯೇ ಬೆಳೆಯುವುದು, ಪೂರ್ವಜರ ವೃತ್ತಿ ಧರ್ಮದಲ್ಲಿ ಕೆಲವರು ಆಸಕ್ತಿ ಬೆಳೆಸಿಕೊಂಡು ಅದನ್ನು ರೂಢಿ ಮಾಡಿಕೊಳ್ಳುವುದು. ಅಪವಾದವೆಂಬಂತೆ ಕೊಳಚೆ ಪ್ರದೇಶದಲ್ಲಿ ಬೆಳೆದ ಮಕ್ಕಳೂ ಯಾವುದಾದರೂ ಒಂದು ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಂಡು ಅಗಾಧ ಸಾಧನೆ ಮಾಡಿರುತ್ತಾರೆ. ಸಮಾಜ ಸುಧಾರಕರ ಹಿನ್ನೆಲೆಯ ಮಕ್ಕಳೂ ಸಮಾಜಘಾತುಕ ಶಕ್ತಿಯಾಗಿ ರೂಪುಗೊಂಡು ಸಮಾಜದ ಬೆಳವಣಿಗೆಯ ಅಸ್ತವ್ಯಸ್ತತೆಗೆ ಕಾರಣರಾಗಿರುವ ಉದಾಹರಣೆಗಳೂ ಇವೆ. ಇಲ್ಲಿ ನಾವು ಗಮನಿಸಬಹುದಾದದ್ದು ತಂದೆ ತಾಯಿಯರ (ಪೂರ್ವಜರ) ಗುಣವಿಶೇಷತೆಗಳು ಮಕ್ಕಳಲ್ಲಿಯೂ ಕಾಣಬಹುದು. ವ್ಯಕ್ತಿಗಳ ಈ ವ್ಯಕ್ತಿತ್ವದಲ್ಲಿ ಕಾಣಬರುವ ವ್ಯತ್ಯಾಸಗಳಿಗೆ ಎರಡು ಮುಖ್ಯ ಕಾರಣಗಳೆಂದರೆ ಅನುವಂಶೀಯತೆ ಮತ್ತು ಪರಿಸರ.

ವ್ಯಕ್ತಿಯ ಮತ್ತು ಸಮೂಹಗಳ ಸ್ವಭಾವ ಲಕ್ಷಣಗಳು ಎರಡು ಪ್ರಮುಖ ಶಕ್ತಿಗಳಾದ ಅನುವಂಶೀಯತೆ ಮತ್ತು ಪರಿಸರಗಳ ಸಂಯೋಜಿತ ಫಲವಾಗಿದೆ. ಅನುವಂಶೀಯತೆಯನ್ನು ಹುಟ್ಟುಗುಣ ಮತ್ತು ಪರಿಸರವನ್ನು ಪೋಷಣೆ ಎನ್ನಬಹುದು. ವ್ಯಕ್ತಿತ್ವವನ್ನು ನಿರ್ಧರಿಸುವಲ್ಲಿ ಯಾವುದು ಹೆಚ್ಚು ಪ್ರಭಾವ ಬೀರುತ್ತದೆ ಎಂಬುದು ಬಿಡಿಸಲಾಗದ ಕಗ್ಗಂಟಾಗಿದೆ. ಈ ವಿಷಯವಾಗಿ ಮನಃಶಾಸ್ತ್ರಜ್ಞರು, ಜೀವಶಾಸ್ತ್ರಜ್ಞರು ಚಿಂತನಕಾರರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಅನುವಂಶೀಯತೆ ಮತ್ತು ಪರಿಸರ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಸಮನಾಗಿ ಪ್ರಭಾವ ಬೀರುತ್ತವೆಯೇ? ಪರಿಸರದ ಪ್ರಭಾವ ಹೆಚ್ಚೋ? ಅನುವಂಶೀಯತೆಯ ಪ್ರಭಾವ ಹೆಚ್ಚೋ? ಎಂಬುದಕ್ಕೆ ಉತ್ತರವಾಗಿ ಅನುವಂಶೀಯತೆ ಮತ್ತು ಪರಿಸರದ ನಡುವಿನ ಚರ್ಚೆ ಬೆಳಕು ಚೆಲ್ಲಬಹುದು.

### ವಂಶವೃಕ್ಷದ ಇತಿಹಾಸದ ಅಧ್ಯಯನ

- **ಫ್ರಾನ್ಸಿಸ್ ಗಾಲ್ಟನ್ (1822–2911)** – ಇವರು ಮಾನವನ ಸ್ವಭಾವ ಮತ್ತು ವಂಶಪಾರಂಪರ್ಯವಾಗಿ ಬರುವ ಅನುವಂಶೀಯ ಗುಣಗಳ ವಿಸ್ತಾರದ ಬಗ್ಗೆ ಮೊಟ್ಟಮೊದಲು ಅಧ್ಯಯನ ಮಾಡಿದ ಮನೋವಿಜ್ಞಾನಿ. ಗಾಲ್ಟನ್ ಇಂಗ್ಲೆಂಡ್‌ನ ಅಸಾಧಾರಣ ಪ್ರತಿಭೆಯುಳ್ಳ ಪ್ರಖ್ಯಾತ ವಿಜ್ಞಾನಿಗಳ ಬಗ್ಗೆ ಅಧ್ಯಯನ ನಡೆಸಿದರು. ಈ ಪ್ರತಿಭಾಶಾಲಿ ವ್ಯಕ್ತಿಗಳ ವಂಶದಲ್ಲಿ ಈಗಾಗಲೇ ಒಬ್ಬರು ಸಂಬಂಧಿಕರು ಬುದ್ಧಿವಂತರಿದ್ದರು. ಅದೇ ರೀತಿ ಬುದ್ಧಿವಂತ ಸಂಬಂಧಿಕರಿಂದ ಸಂಬಂಧ ದೂರವಾದಂತೆಲ್ಲಾ ಆ ವಂಶದಲ್ಲಿ ಬುದ್ಧಿವಂತರು ಕಡಿಮೆಯಾಗುತ್ತಾ ಬಂದರು. ಅಸಾಧಾರಣ ಬುದ್ಧಿಶಕ್ತಿಯುಳ್ಳ 997 ಬ್ರಿಟಿಷ್ ಪುರುಷರನ್ನು ಅಧ್ಯಯನ ಮಾಡಿದಾಗ ಅವರಲ್ಲಿ 332 ಜನ ವೈಶಿಷ್ಟ್ಯಪೂರ್ಣ ವ್ಯಕ್ತಿಗಳಿದ್ದರು. 997 ಸಾಧಾರಣ ಜನರ ಇನ್ನೊಂದು ಅಧ್ಯಯನದಲ್ಲಿ ಒಬ್ಬರು ಮಾತ್ರ ಪ್ರತಿಭಾಶಾಲಿ ವ್ಯಕ್ತಿಯಿದ್ದರು. ಈ ಅಧ್ಯಯನವು ಅಸಾಧಾರಣ ಬುದ್ಧಿಶಕ್ತಿಯು ಅನುವಂಶೀಯವಾಗಿ ಮುಂದುವರೆಯುತ್ತದೆ ಎಂಬುದಕ್ಕೆ ಸಾಕ್ಷ್ಯ ನೀಡುತ್ತದೆ.

Digitised by Bharatavani, CIIL

- **ಎಚ್ ಎಚ್ ಗಡ್ಡಾರ್ಡ್** – ಇವರು 1914ರಲ್ಲಿ ಕೆಲ್ಲಿಕಾಕ್ ಕುಟುಂಬದ 5 ಪೀಳಿಗೆಗಳನ್ನು ಅಧ್ಯಯನ ಮಾಡಿದರು. ಈ ಕುಟುಂಬದ ಮುಖ್ಯಸ್ಥ ಮಾರ್ಟಿನ್ ಕೆಲ್ಲಿಕಾಕ್ (ಕಾಲ್ಪನಿಕ ಹೆಸರು) ಅಮೇರಿಕನ್ ಕ್ರಾಂತಿಯಲ್ಲಿ ಒಬ್ಬ ಸೈನಿಕನಾಗಿದ್ದು, ಈತನಿಗೆ ಮೊದಲು ಮದ್ಯದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ದುರ್ಬಲ ಮನಸ್ಕ ಹೆಣ್ಣಿನ ಸಂಪರ್ಕವಾಗಿ, ವ್ಯಭಿಚಾರದಿಂದ ಒಬ್ಬ ಮಗ ಹುಟ್ಟಿದನು. ಇವನು ದುರ್ಬಲ ಮನುಷ್ಯನು, ಮಾನಸಿಕ ನ್ಯೂನತೆ ಉಳ್ಳವನು ಆಗಿದ್ದನು. ಇವನ ವಂಶದಲ್ಲಿ ಹುಟ್ಟಿದ 480 ಸಂತತಿಯಲ್ಲಿ 143 ಮಂದಿ ದುರ್ಬಲ ಮನಸ್ಕರು. 291 ಮಂದಿ ನ್ಯೂನತೆಯ ಅಂಚಿನಲ್ಲಿ ಇದ್ದವರು, 46 ಮಂದಿ ಸಾಮಾನ್ಯ ಬುದ್ಧಿ ಶಕ್ತಿಯುಳ್ಳವರು ಇದ್ದರು. ಅಮೇರಿಕ ಕ್ರಾಂತಿಯ ನಂತರ ಕೆಲ್ಲಿಕಾಕ್ ಉತ್ತಮ ವಂಶದವಳನ್ನು ವಿವಾಹವಾದಾಗ ಇವರಲ್ಲಿ ಹುಟ್ಟಿದ ಮಗನ ಸಂತತಿಯ 496 ವ್ಯಕ್ತಿಗಳ ಚರಿತ್ರೆಯನ್ನು ಅಭ್ಯಸಿಸಿದಾಗ ಎಲ್ಲರೂ ಮಾನಸಿಕವಾಗಿ ಮತ್ತು ನೈತಿಕವಾಗಿ ದೃಢವಾಗಿದ್ದರು. ಕೆಲವರು ಅಸಾಧಾರಣ ಬುದ್ಧಿಶಕ್ತಿಯುಳ್ಳವರಾಗಿದ್ದರು. ಈ ಗುಂಪಿನಲ್ಲಿ ಪ್ರಾಧ್ಯಾಪಕರು, ವೈದ್ಯರು, ನ್ಯಾಯವಾದಿಗಳು, ಮಂತ್ರಿಗಳು ಇದ್ದರು. ಹೀಗೆ ಕೆಲ್ಲಿಕಾಕ್‌ನ ಎರಡು ಕುಟುಂಬದ ಸದಸ್ಯರು ಭಿನ್ನರಾಗಿದ್ದರು.

- ಈ ಅಧ್ಯಯನವು ಬುದ್ಧಿವಂತ ಮತ್ತು ಸಾಮಾನ್ಯ ಬುದ್ಧಿಶಕ್ತಿಗಿಂತ ಕಡಿಮೆ ಇರುವ ವಂಶದ ಸದಸ್ಯರ ವರ್ತನೆಯ ಮೇಲೆ ನಡೆಸಿದ್ದಾಗಿದ್ದು, ವಂಶವೃಕ್ಷದ ಈ ಅಧ್ಯಯನಗಳಿಂದ ಮಾನಸಿಕ ದೃಢತೆ, ನೈತಿಕತೆ, ಶ್ರೇಷ್ಠತೆ ಮತ್ತು ಬುದ್ಧಿಶಕ್ತಿ ಪೀಳಿಗೆಯಿಂದ ಪೀಳಿಗೆಗೆ ವಂಶ ಪಾರಂಪರ್ಯವಾಗಿ ಬರುತ್ತದೆ ಎಂಬುದನ್ನು ಸಮರ್ಥಿಸುತ್ತದೆ.

- **ಕಾರ್ಲ್ ಪಿಯರ್‌ಸನ್** – ಇವರು ಸಹೋದರ ಸಂಬಂಧವಿರುವ ಗಾಲ್ಟನ್, ಡಾರ್ವಿನ್ ಮತ್ತು ಬೆಜ್‌ವುಡ್ ಕುಟುಂಬದ ಅಧ್ಯಯನ ಮಾಡಿದರು. ಈ ಕುಟುಂಬದ 5 ಪೀಳಿಗೆಯ ಸದಸ್ಯರು ಇಂಗ್ಲೆಂಡ್‌ನ 'ರಾಯಲ್ ಸೊಸೈಟಿ'ಯಲ್ಲಿ ಉನ್ನತ ಹುದ್ದೆಯ ಸ್ಥಾನದಲ್ಲಿದ್ದರು. ಈ ಅಧ್ಯಯನದ ಫಲಿತಾಂಶವೂ ಅನುವಂಶೀಯತೆ ಪರವಾಗಿದ್ದಿತು.

- **ರಿಚರ್ಡ್ ಎಲ್ ಡಗ್ಡೇಲ್** – 1874ರಲ್ಲಿ ಜ್ಯೂಕ್ ಕುಟುಂಬದ 709 ಸದಸ್ಯರನ್ನು ಅಧ್ಯಯನ ಮಾಡಿದರು. ಇವರ ಅಧ್ಯಯನದಂತೆ ಜ್ಯೂಕ್ ಕುಟುಂಬದವರಲ್ಲಿ 310 ಜನರು ಅನಾಥರು, 440 ಜನರು ದೀರ್ಘಕಾಲದ ರೋಗದಿಂದ ಬಳಲುತ್ತಿದ್ದವರು, 130 ಜನರು ಕೊಲೆಗಡುಕರು ಆಗಿದ್ದು ಮತ್ತು 20 ಜನರು ಮಾತ್ರ ಸಣ್ಣ ಉದ್ಯೋಗದಿಂದ ನೈತಿಕವಾಗಿ ಬಾಳಲು ಸಾಧ್ಯವಾಗಿತ್ತು. ಡಗ್ಡೇಲ್ ಅನುವಂಶೀಯತೆ ಮತ್ತು ಪರಿಸರದ ಪರಸ್ಪರ ಪ್ರಭಾವಗಳನ್ನು ಚರ್ಚಿಸುತ್ತಾ, ಈ ಕುಟುಂಬದ ಸದಸ್ಯರ ಅಪರಾಧಿತನಕ್ಕೆ ಕುಟುಂಬದ ಬಡತನದ ಪರಿಸರ ಪ್ರಭಾವವೇ ಪ್ರಮುಖ ಕಾರಣ. ಪರಿಸರವು ಕೆಲವು ಅಪರಾಧಿತನದ ಅಭ್ಯಾಸಗಳನ್ನು ಬೆಳೆಸಲು ಕಾರಣವಾಗಿದ್ದು, ಇದು ಅನುವಂಶೀಯವಾಗಿ ಮುಂದುವರೆಯುತ್ತದೆ ಎಂದು ವಾದಿಸಿದರು. ಈ ಅಧ್ಯಯನವನ್ನು **ಅರ್ಥರ್ ಎಚ್ ಇಸ್ಟಾಬ್ರೂಕ್** 1915ರಲ್ಲಿ ಮುಂದುವರೆಸಿ, ಜ್ಯೂಕ್ ಕುಟುಂಬದ ಒಟ್ಟು 2820 ಸದಸ್ಯರ ಅಧ್ಯಯನ ಮಾಡಿ ಹಿಂದಿನ ಅಧ್ಯಯನದ ವರದಿಯಲ್ಲಿದ್ದಂತೆ ಎಲ್ಲರೂ ದುರ್ಬಲ ಮನಸ್ಕರಾಗಿದ್ದು, ಅಪ್ರಾಮಾಣಿಕತೆ, ಮೃಗಗಳ್ಳತನ ಹಾಗೂ ಸ್ವೇಚ್ಛಾ ವೃತ್ತಿಯಿಂದ ಇದ್ದರೆಂದು ವರದಿ ಮಾಡಿದರು. ಡಗ್ಡೇಲ್‌ರ ಪರಿಸರದ ಪ್ರಭಾವ ಅನುವಂಶೀಯವಾಗಿ ಬಂದಿದೆ ಎನ್ನುವ ವಾದವನ್ನು ಅಲ್ಲಗಳೆಯುತ್ತಾ ಈ ಅಪರಾಧಿತನದ ಗುಣಗಳಿಗೆ ಅನುವಂಶೀಯತೆಯ ಪ್ರಭಾವವೇ ಹೆಚ್ಚು ಎಂದೂ, ಪರಿಸರದ ಬದಲಾವಣೆಯ ಪ್ರಭಾವ ಅಲ್ಲ ಎಂದೂ ತಮ್ಮ ಚರ್ಚೆಯನ್ನು ಸಮರ್ಥಿಸಿದರು.

- ಹೊಮಿನಿ ಕುಟುಂಬದಲ್ಲಿ ದುರ್ಬಲ ಮನಸ್ಕಳಾದ ವ್ಯಭಿಚಾರಿ ತಾಯಿ ಮತ್ತು ಅಂಗವಿಕಲ ತಂದೆಯ 7 ಮಕ್ಕಳು ಕೂಡ ಅಪರಾಧಿಗಳು, ವ್ಯಭಿಚಾರಿಗಳಾಗಿದ್ದರು. ಇವರಲ್ಲಿ 5 ಮಂದಿ ದುರ್ಬಲ ಮನಸ್ಕರಾಗಿದ್ದರು ಎಂದು **ಮ್ಯಾಕ್ ಪಿಯರ್‌ಸನ್ ಅಧ್ಯಯನ ತಿಳಿಸುತ್ತದೆ.**

**ಬುದ್ಧಿಶಕ್ತಿ ಸೂಚ್ಯಾಂಕದ ಸಹಸಂಬಂಧ ಗುಣಾಂಕದ ವಿಧಾನದ ಅಧ್ಯಯನ** ಸಮರೂಪ ಅವಳಿಗಳು ಮತ್ತು ಭ್ರಾತೃ ಅವಳಿಗಳ ಮೇಲೆ ಅಧ್ಯಯನ ನಡೆಸಿ ವಿಕಸನದ ಮೇಲೆ ಅನುವಂಶೀಯತೆ ಮತ್ತು ಪರಿಸರದ ನಡುವಿನ ಪ್ರಭಾವದ ಚರ್ಚೆಗೆ ಇನ್ನಷ್ಟು ಬೆಳಕು ಚೆಲ್ಲಲಾಗಿದೆ.

1. **ಎಚ್.ಎನ್. ನ್ಯೂಮನ್** ಮತ್ತಿತರರು 1937ರಲ್ಲಿ ಭ್ರಾತೃ ಅವಳಿಗಳು ಮತ್ತು ಸಮರೂಪ ಅವಳಿಗಳನ್ನು ಒಟ್ಟಿಗೆ ಮತ್ತು ಪ್ರತ್ಯೇಕವಾಗಿ ಬೆಳೆಸಿ, ವಿಕಾಸಾತ್ಮಕ ವಿಧಾನದಲ್ಲಿ ಅಧ್ಯಯನ ಮಾಡಿ, ಅಂತಿಮ ವೀಕ್ಷಣೆಗಳನ್ನು ಅಭ್ಯಸಿಸಿ ಅವರ ದೈಹಿಕ ಬೆಳವಣಿಗೆ ಮತ್ತು ಬುದ್ಧಿಶಕ್ತಿಯನ್ನು ಬುದ್ಧಿ ಸೂಚ್ಯಾಂಕದ (ಬೀನೆ ಸೂಚ್ಯಾಂಕದಲ್ಲಿ) ಪಟ್ಟಿ ಮಾಡಿ ಪ್ರತಿಯೊಂದು ದತ್ತಾಂಶವನ್ನು ವಿಶ್ಲೇಷಿಸಿ ಹೋಲಿಕೆ ಮಾಡಿದರು.

| ವ್ಯತ್ಯಾಸಗಳು | ಭ್ರಾತೃ ಅವಳಿಗಳು | ಸಮರೂಪ ಅವಳಿಗಳು | |
|---|---|---|---|
| ಯಾವ ಗುಣದಲ್ಲಿ | | ಒಂದೇ ಪರಿಸರದಲ್ಲಿ ಬೆಳೆಸಿದಾಗ | ಭಿನ್ನ ಪರಿಸರದಲ್ಲಿ ಬೆಳೆಸಿದಾಗ |
| ಎತ್ತರ | 4.4 ಸೆಂ. ಮೀ. | 1.7 ಸೆಂ.ಮೀ. | 1.8 ಸೆಂ.ಮೀ. |
| ತೂಕ | 10.0 ಪೌಂ | 4.1 ಪೌಂ | 9.9 ಪೌಂ |
| ಬೀನೆ – ಐ ಕ್ಯೂ | 9.9 | 5.9 | 8.2 |

ಈ ಅಂಕಿ ಅಂಶಗಳು ಅನುವಂಶೀಯತೆ ಮತ್ತು ಪರಿಸರದ ಪ್ರಭಾವಗಳನ್ನು ತುಲನೆ ಮಾಡಲು ಸಹಾಯ ಮಾಡುತ್ತವೆ; ಅನುವಂಶೀಯತೆ ಒಂದೇ ಆಗಿರುವುದರಿಂದ ಸಮರೂಪ ಅವಳಿಗಳು ಭ್ರಾತೃ ಅವಳಿಗಳಿಗಿಂತ ಒಬ್ಬರನ್ನೊಬ್ಬರು ಹೆಚ್ಚು ಹೋಲುತ್ತಾರೆ. ಪರಿಸರದ ಅಮೂರ್ತ ಘಟಕಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯ ಆಗದಿರುವುದರಿಂದ ಸಮರೂಪ ಅವಳಿಗಳನ್ನು ಒಂದೇ ಪರಿಸರದಲ್ಲಿ ಬೆಳೆಸಿದರೂ ಕೂಡ ಅವರ ನಡುವೆ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಪರಿಸರವು ಅನುವಂಶೀಯತೆಯ ಮಿತಿಯ ಒಳಗೆ ಸ್ವಲ್ಪ ಪ್ರಭಾವವನ್ನು ಬೀರುತ್ತದೆ. ಸಮರೂಪ ಅವಳಿಗಳನ್ನು ಭಿನ್ನ ಪರಿಸರದಲ್ಲಿ ಬೆಳೆಸಿದಾಗ ದೊರೆತ ಫಲಿತಾಂಶ ಈ ತೀರ್ಮಾನವನ್ನು ಪುಷ್ಟೀಕರಿಸುತ್ತದೆ. ಆದ್ದರಿಂದ

Digitised by Bharatavani, CIIL

ಪರಿಸರದ ಪ್ರಭಾವವನ್ನೇ ಆಗಲೀ ಅನುವಂಶೀಯತೆಯ ಪ್ರಭಾವವನ್ನೇ ಆಗಲಿ ನಿಖರವಾಗಿ ನಿರ್ಧರಿಸಲು ಸಾಧ್ಯವಿಲ್ಲ.

2. **ಫೀನ್ ಗೋಲ್ಡ್** ಏಕರೂಪದ ಮತ್ತು ಬೇರೆ ಬೇರೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ವ್ಯಾಸಂಗ ಮಾಡಿದ ವಯಸ್ಕ ಸಮರೂಪ ಅವಳಿಗಳ ಮೇಲೆ ಅಧ್ಯಯನ ಮಾಡಿದರು. ಈ ಅಧ್ಯಯನದಿಂದ ಉತ್ತಮ ಶಿಕ್ಷಣ ಮತ್ತು ತರಬೇತಿಯ ಪರಿಸರವು ಬುದ್ಧಿಶಕ್ತಿ, ಸಾಮರ್ಥ್ಯ ಮತ್ತು ಮೌಖಿಕ ಸಾಮರ್ಥ್ಯದ ಕಾರ್ಯ ನಿರ್ವಹಣೆಯಲ್ಲಿ ಉತ್ತಮ ಪ್ರಗತಿ ಹೊಂದಬಹುದು ಎಂದು ತಿಳಿದು ಬಂದಿತು. ಆದರೆ ಬುದ್ಧಿಶಕ್ತಿ ಮತ್ತು ಇತರ ಕೌಶಲಗಳ ಕಾರ್ಯ ನಿರ್ವಹಣೆಯಲ್ಲಿ ಮಹತ್ವದ ಬದಲಾವಣೆಯಾಗಬೇಕಾದರೆ ಅನುಕೂಲಿಸುವ ಶೈಕ್ಷಣಿಕ ವ್ಯವಸ್ಥೆ ಮತ್ತು ತರಬೇತಿಗಳು ಉನ್ನತ ಮಟ್ಟದ್ದಾಗಿರಬೇಕು ಎಂಬುದನ್ನು ಈ ಅಧ್ಯಯನ ಖಚಿತಪಡಿಸುತ್ತದೆ.

### "ಸಾಕುಮಕ್ಕಳ ಮನೆ" ಕುರಿತಾಗಿ ಮಾಡಿದ ಅಧ್ಯಯನ

1. **ಬರ್ಕ್ಸ್** 1928ರಲ್ಲಿ **ಸ್ಯಾನ್ ಫೋರ್ಡ್ ವಿಶ್ವವಿದ್ಯಾನಿಲಯ**ದಲ್ಲಿ ದತ್ತು ತೆಗೆದುಕೊಂಡ ಮಕ್ಕಳು ಮತ್ತು ಅವರ ಸಾಕು ತಂದೆ–ತಾಯಿಯರನ್ನು ಹಾಗೂ ಬೇರೆ ಮಕ್ಕಳು ಮತ್ತು ಆ ಮಕ್ಕಳ ಸ್ವಂತ ತಂದೆ–ತಾಯಿಯರ ನಡುವಿನ ಸಂಬಂಧದ ಹೋಲಿಕೆ ಅಧ್ಯಯನ ಮಾಡಿದರು. ಮೂರು ತಿಂಗಳಿಗೆ ದತ್ತು ತೆಗೆದುಕೊಂಡ 214 ಮಕ್ಕಳು ಮತ್ತು ಬೇರೆ 105 ಮಕ್ಕಳು ಮತ್ತು ಅವರ ಜೀವಂತ ತಂದೆ–ತಾಯಿಯರ ಗುಂಪನ್ನು ಅಧ್ಯಯನ ಮಾಡಿ, ಬುದ್ಧಿಶಕ್ತಿ ಸೂಚ್ಯಾಂಕದ ಸಹಸಂಬಂಧ ಗುಣಾಂಶದ ತುಲನೆ ಮಾಡಿದರು. ಸ್ವಂತ ತಂದೆ–ತಾಯಿಯರೊಂದಿಗೆ ಬೆಳೆಯುವ ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕದ ಸಹಸಂಬಂಧ ಗುಣಾಂಶವು ದತ್ತು ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕದ ಸಹಸಂಬಂಧ ಗುಣಾಂಕಕ್ಕಿಂತ ಹೆಚ್ಚಾಗಿರುತ್ತದೆ ಎಂದು ಸಮರ್ಥಿಸಿದರು.

2. **ಲೇಹಿ** 1935ರಲ್ಲಿ **ಮಿನಸೋಟ ವಿಶ್ವವಿದ್ಯಾನಿಲಯ**ದಲ್ಲಿ 6 ತಿಂಗಳಿಗಿಂತ ಮೊದಲೇ ದತ್ತು ತೆಗೆದುಕೊಂಡ 194 ಮಕ್ಕಳು ಮತ್ತು ತಮ್ಮ ಸ್ವಂತ ತಂದೆ–ತಾಯಿಯರೊಂದಿಗಿದ್ದ 19 ಮಕ್ಕಳ ಅಧ್ಯಯನ ಮಾಡಿದರು. ಈ ಅಧ್ಯಯನದಿಂದ ಸ್ವಂತ ತಂದೆ ತಾಯಿಯರೊಂದಿಗೆ ಬೆಳೆಯುವ ಮಕ್ಕಳು ದತ್ತು ಮಕ್ಕಳಿಗಿಂತ ಹೆಚ್ಚು ಬುದ್ಧಿಶಕ್ತಿಯುಳ್ಳವರಾಗಿರುತ್ತಾರೆ ಎಂದು ಸಮರ್ಥಿಸಿದರು.

3. **ಸ್ಕೋಡಕ್ ಮತ್ತು ಸ್ಕೀಲ್ಸ್** 1949ರಲ್ಲಿ **ಐಓವಾ ವಿಶ್ವವಿದ್ಯಾನಿಲಯ**ದಲ್ಲಿ 6 ತಿಂಗಳಿಗಿಂತ ಮೊದಲೇ ದತ್ತು ತೆಗೆದುಕೊಂಡ ಮಕ್ಕಳ ಅಧ್ಯಯನ ಮಾಡಿದರು ಮತ್ತು ಜೀವಂತ ತಂದೆ–ತಾಯಿಯರೊಂದಿಗೆ ಇರುವ ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕದ ಸಹಸಂಬಂಧವು ದತ್ತುಮಕ್ಕಳು ಮತ್ತು ಅವರ ಸಾಕು ತಂದೆ–ತಾಯಿಯರಿಗಿಂತ ಹೆಚ್ಚಾಗಿರುತ್ತದೆ ಎಂದು ಸಮರ್ಥಿಸಿದರು.

### ಪ್ರಾಣಿ ಪ್ರಯೋಗಗಳು

- **ಟ್ರಯಾನ್ ಮತ್ತು ಹೆರಾನ್** ಎಂಬುವವರು ಆಯ್ದ ತಳಿಗಳ ವಂಶಾಭಿವೃದ್ಧಿ ವಿಧಾನದಿಂದ ದಿಗ್ಭ್ರಮೆ ಹಿಡಿಸುವ ಅವ್ಯವಸ್ಥಿತ ದಾರಿಗಳ ವ್ಯೂಹದಲ್ಲಿ ಹೆಚ್ಚುಕಮ್ಮಿಯಾಗಿ ಸರಿಯಾಗಿ ಓಡುವ ಸಾಮರ್ಥ್ಯ ಇರುವ ಇಲಿಗಳನ್ನು ಪ್ರತ್ಯೇಕಿಸಿದರು.

- **ಟೈರಾನ್** ಎಂಬಾತ ಡ್ರಾಸೋಫಿಲಾ ಮೆಲ್ಯಾಂಗ್ಯಾಸ್ಟರ್ ಎಂಬ ಕೀಟದ ಜಿಯೋಟ್ಯಾಕ್ಸಿಸ್ ಮತ್ತು ಫೋಟೋಟ್ಯಾಕ್ಸಿಸ್ ತಳಿಗಳನ್ನು ಪ್ರತ್ಯೇಕಿಸಿ, ಮೂರು ನಿರ್ದಿಷ್ಟ ವರ್ಣತಂತುಗಳು ಈ ಗುಣಗಳ ನಿರ್ಧಾರಕಗಳೆಂದು ಸಾಧಿಸಿದನು.

- **ಹಾಲ್** ಎಂಬಾತ ಅತಿ ಪ್ರಕಾಶಕ್ಕೆ ಇಲಿಗಳನ್ನು ಇರಿಸಿದಾಗ ಅವುಗಳಲ್ಲಿ ಭಾವೋದ್ವೇಗಕ್ಕೆ ಒಳಗಾಗುವ ಮತ್ತು ಒಳಗಾಗದ ಇಲಿಗಳ ತಳಿಗಳನ್ನು ಪ್ರತ್ಯೇಕಿಸಿದನು.

ಈ ಎಲ್ಲ ಪ್ರಾಣಿ ಪ್ರಯೋಗಗಳು ಕೆಲವು ನಿರ್ದಿಷ್ಟ ಲಕ್ಷಣಗಳಿಗೆ ಅನುವಂಶೀಯತೆ ಕಾರಣ ಎಂದು ಸೂಚಿಸುತ್ತವೆ. ಆದರೆ ಅಭ್ಯಸಿಸಲಾದ ಲಕ್ಷಣಗಳು ಪರಿಸರದ ಪ್ರಭಾವಕ್ಕೆ ಎಷ್ಟು ಒಳಗಾಗುತ್ತವೆ ಎಂಬುದರ ಕಡೆಗೆ ಗಮನಹರಿಸಿಲ್ಲ.

### ಇತರ ಅಧ್ಯಯನಗಳು

- **ಕೆಲ್ಲಾಗ್ ಮತ್ತು ಕೆಲ್ಲಾಗ್** ಅನುವಂಶೀಯ ಮತ್ತು ಪರಿಸರದ ಪ್ರಭಾವ ಅಧ್ಯಯನ ಮಾಡಲು ತಮ್ಮ **ಮಗ ಡೊನಾಲ್ಡ್** ಮತ್ತು ಒಂದು **ಚಿಂಪಾಂಜಿ ಗ್ವಾ** ಇವರಿಬ್ಬರ ಮೇಲೆ ಸಂಶೋಧನೆ ಮಾಡಿದರು. ಮಗ ಡೊನಾಲ್ಡ್ 10 ತಿಂಗಳು ಮತ್ತು ಚಿಂಪಾಂಜಿ ಗ್ವಾ ಏಳೂವರೆ ತಿಂಗಳಿದ್ದಾಗ ತಮ್ಮ ಸಂಶೋಧನೆ ಪ್ರಾರಂಭಿಸಿದರು. ಇಬ್ಬರನ್ನು ಒಂದೇ ವಾತಾವರಣದಲ್ಲಿ ಏಕರೂಪದ ಅನುಕೂಲತೆಗಳನ್ನು ಒದಗಿಸಿ ಬೆಳೆಸುವಾಗ ಅವರ ನಡೆವಳಿಕೆಯನ್ನು ಕ್ರಮಬದ್ಧವಾಗಿ ಅಭ್ಯಾಸ ಮಾಡಿದರು. ಪ್ರಾರಂಭದ ಗತಿ ವಿಕಾಸ, ಬೆಳವಣಿಗೆಯಲ್ಲಿ ಹಾರುವ, ಓಡುವ, ಮೇಲೆ ಹತ್ತುವ ಕೌಶಲದಲ್ಲಿ ಗ್ವಾ ಚಿಂಪಾಂಜಿಯು ತಮ್ಮ ಮಗ ಡೊನಾಲ್ಡ್‌ಗಿಂತ ಮುಂದೆ ಹೋಗಿರುವುದನ್ನು ಗಮನಿಸಿದರು. ಚಿಂಪಾಂಜಿ ಗ್ವಾ ನಡೆಯುವ, ಚಮಚದಿಂದ ತಿನ್ನುವ ಮತ್ತು ಲೋಟದಿಂದ ಕುಡಿಯುವ ಸಾಮಾಜಿಕ ಅಭ್ಯಾಸಗಳನ್ನು ಕಲಿಯಿತು. 95 ಶಬ್ದಗಳನ್ನೂ ಕಲಿಯಿತು. ಮಗ ಡೊನಾಲ್ಡ್ ದೈಹಿಕ ದಾರ್ಢ್ಯದಲ್ಲಿ ಗ್ವಾಗಿಂತ ಹಿಂದುಳಿದು ಉಳಿದೆಲ್ಲದರಲ್ಲೂ ಗ್ವಾ ಚಿಂಪಾಂಜಿಗೆ ಸರಿಸಮವಾಗಿರುವ ವಿಕಾಸ ಕಂಡುಬಂದಿತು. ಈ ಅಧ್ಯಯನವು ಉತ್ತಮ ಪರಿಸರವನ್ನು ಒದಗಿಸಿದರೂ ಅನುವಂಶೀಯತೆಯು ಬೆಳವಣಿಗೆಗೆ ಮಿತಿಯನ್ನು ಹಾಕುತ್ತದೆ ಎಂದು ಸಮರ್ಥಿಸುತ್ತದೆ.

- **ಗಾರ್ಡನ್** ಕಾಲುವೆ ಜನಾಂಗದ ಮಕ್ಕಳ ಸರಾಸರಿ ಬುದ್ಧಿ ಶಕ್ತಿ ಸೂಚ್ಯಾಂಕ 69.6 ಮತ್ತು ಜಿಪ್ಸಿ ಜನಾಂಗದ ಮಕ್ಕಳ ಸರಾಸರಿ ಬುದ್ಧಿಶಕ್ತಿ ಸೂಚ್ಯಾಂಕ 73.5 ಎಂದು ಸಮೀಕ್ಷೆಯಿಂದ ತಿಳಿಸಿದರು. ಈ ಎರಡು ಜನಾಂಗಗಳ ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕಗಳ ನಡುವಿನ ವ್ಯತ್ಯಾಸಕ್ಕೆ ಪರಿಸರದ ಶ್ರೀಮಂತಿಕೆಯ ವ್ಯತ್ಯಾಸವೇ ಕಾರಣ ಎಂದು ಹೇಳಲಾಗಿದೆ. ಈ ಅಧ್ಯಯನದಲ್ಲಿ ಅನುವಂಶೀಯತೆಯ ಪ್ರಭಾವವನ್ನು ಕಡೆಗಣಿಸಲಾಗಿದೆ.

- **ಮಿಡ್ನಾಪುರ ತೋಳದ ಮಕ್ಕಳು** ಬಾಲ್ಯದಲ್ಲಿಯೇ ತೋಳಗಳಿಂದ ಕರೆದೊಯ್ಯಲ್ಪಟ್ಟ ರಾಮು ಮತ್ತು ಅಮಲಾ ಸಹೋದರ ಮಕ್ಕಳ ಬಗ್ಗೆ ಬಿಹಾರದ ಧರ್ಮ ಪ್ರಚಾರಕ ಮಿಷನರಿ ಅಧ್ಯಯನ ನಡೆಸಿತು. ಈ ಮಕ್ಕಳು ತೋಳಗಳೊಂದಿಗೆ ಇದ್ದು ಬೆಳೆಯುತ್ತಿದ್ದಾಗ, 4 ಕಾಲುಗಳ ಮೇಲೆ ನಡೆಯುತ್ತಾ, ಹಸಿಮಾಂಸವನ್ನು ಆಹಾರವಾಗಿ ತಿನ್ನುತ್ತಾ, ತೋಳಗಳಂತೆ ಕಿರುಚುತ್ತಿದ್ದರು. ಕಾಡಿನಿಂದ ಅವರನ್ನು ಮರಳಿ ತಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲು ಪ್ರಾರಂಭಿಸಿದಾಗ ಒಂದು ಮಗು ಸತ್ತು ಹೋಯಿತು. ಇನ್ನೊಂದು ಮಗುವಿಗೆ ಹೆಚ್ಚಿನ ತರಬೇತಿ ನೀಡಿ ಬೆಳೆಸಿದಾಗ ಕಷ್ಟಪಟ್ಟು ಪ್ರಾಥಮಿಕ ಅವಶ್ಯಕತೆಗಳನ್ನು ಕಲಿಯಿತು. ಈ ಅಧ್ಯಯನವು ಅನುವಂಶೀಯತೆಗಿಂತ ಪರಿಸರ ಹೆಚ್ಚು ಪ್ರಭಾವಶಾಲಿ, ವ್ಯಕ್ತಿತ್ವ ಬೆಳವಣಿಗೆಯ ಮೇಲೆ ಪರಿಸರದ ಪ್ರಾಮುಖ್ಯತೆ ಅವಶ್ಯಕ ಎಂಬ ಅಂಶದ ಮೇಲೆ ಬೆಳಕು ಚೆಲ್ಲುತ್ತದೆ.

Digitised by Bharatavani, CIIL

• **ಗ್ರೆಗರ್ ಜೋಹಾನ್ ಮೆಂಡಲ್** ಅನುವಂಶೀಯ ಲಕ್ಷಣಗಳನ್ನು ಒಂದೇ ತಂದೆ ತಾಯಿಯ ಮಕ್ಕಳಲ್ಲಿ ಕಾಣುವ ವ್ಯತ್ಯಾಸವನ್ನು ಮೆಂಡಲ್ ವಿವರಿಸಿದ್ದಾರೆ. ಅನುವಂಶೀಯಗುಣಗಳನ್ನು ಪ್ರಬಲ ಮತ್ತು ದುರ್ಬಲ (ಹಿಂಜರಿಯುವ)ಗುಣಗಳು ಎಂದು ವರ್ಗೀಕರಿಸಲು ಸಾಧ್ಯ. ಒಂದು ಜೀವಿಯಲ್ಲಿ ದುರ್ಬಲ ಗುಣವು ಪ್ರಬಲ ಗುಣದೊಂದಿಗೆ ಸ್ಪರ್ಧಿಸಲಾರದೆ, ಪ್ರಬಲ ಗುಣವು ಮುಂದಿನ ಪೀಳಿಗೆಯಲ್ಲಿ ಉಳಿದು ಬರುತ್ತದೆ. ಆಯ್ದ ತಳಿಗಳ ವಂಶಾಭಿವೃದ್ಧಿ ವಿಧಾನದಿಂದ ಈ ಲಕ್ಷಣಗಳು ಪ್ರಕಟವಾಗುವುದನ್ನು ನಿಯಂತ್ರಿಸಲು ಸಾಧ್ಯ. ತಂದೆ ತಾಯಿಯರಲ್ಲಿ ಇಲ್ಲದ ಗುಣಗಳನ್ನು ಅನುವಂಶೀಯವಾಗಿ ಪ್ರಸರಿಸಲು ಸಾಧ್ಯವಿಲ್ಲ ಮತ್ತು ಮಿಶ್ರ ತಳಿಯ ಸಂತತಿಗಳು ಕ್ರಮೇಣ ಮೂಲ ತಳಿಗಳಾಗಿ ಪ್ರತ್ಯೇಕಗೊಳ್ಳುತ್ತವೆ ಎಂಬುದನ್ನು ಆಯ್ದ ಬಟಾಣಿ ಸಸ್ಯಗಳ ಮೇಲೆ ಮಿಶ್ರತಳಿ ಪ್ರಯೋಗವನ್ನು ನಡೆಸಿ ತಮ್ಮ ವಾದಕ್ಕೆ ಪುಷ್ಠಿಯನ್ನು ಒದಗಿಸಿದರು.

• ಅನೇಕ ಅಧ್ಯಯನಗಳು ಮಕ್ಕಳ ಬೌದ್ಧಿಕ, ಸಂವೇಗಾತ್ಮಕ ನ್ಯೂನತೆಗಳಿಗೆ ಅನಾಥ ಆಶ್ರಮದ ಬರಡು ಪರಿಸರ ಕಾರಣವಾಗುತ್ತದೆ ಎಂದು ತೋರಿಸಿವೆ. ಶಿಶುವಿಹಾರಗಳು ಇಂತಹ ಮಕ್ಕಳ ಬೌದ್ಧಿಕ ಮಟ್ಟವನ್ನು ಸುಧಾರಿಸುತ್ತವೆ ಎಂದೂ ಕಂಡು ಬಂದಿದೆ. ಪರಿಸರವಾದಿಗಳ ವಾದಕ್ಕೆ ಈ ಅಧ್ಯಯನಗಳು ಪುಷ್ಟಿ ನೀಡುತ್ತವೆ.

**ಶ್ರೇಷ್ಠ ವ್ಯಕ್ತಿಗಳ ಜೀವನ ಚರಿತ್ರೆಯ ಅಧ್ಯಯನ**

ಶ್ರೇಷ್ಠ ವ್ಯಕ್ತಿಗಳು ಬಾಲ್ಯದಿಂದಲೇ ಪ್ರತಿಭಾನ್ವಿತರಾಗಿರುತ್ತಾರೆ.

• ಗೋತೆ ಬಾಲ್ಯದಲ್ಲಿಯೇ ಜರ್ಮನ್, ಫ್ರೆಂಚ್, ಲ್ಯಾಟಿನ್ ಮತ್ತು ಹೀಬ್ರೂ ಭಾಷೆಗಳಲ್ಲಿ ಹೆಚ್ಚಿನ ಪಾಂಡಿತ್ಯ ಪಡೆದಿದ್ದರು. ಪಿಯಾನೋ ವಾದನ ಮತ್ತು ಕೊಳಲು ನುಡಿಸುವುದನ್ನು ಬಲ್ಲವರಾಗಿದ್ದು, ಯುರೋಪ್ ದೇಶಗಳ ಇತಿಹಾಸವನ್ನು ಸಂಪೂರ್ಣವಾಗಿ ಬಲ್ಲವರಾಗಿದ್ದರು.

• ಸರ್ ಫ್ರಾನ್ಸಿಸ್ ಗಾಲ್ಟನ್ ಎರಡೂವರೆ ವರ್ಷದವರಿದ್ದಾಗಲೇ ಓದಬಲ್ಲವರಾಗಿದ್ದರು.

• ಸರ್ ಐಸಾಕ್ ನ್ಯೂಟನ್ ಬಾಲ್ಯದಲ್ಲಿ ನೀರಿನ ಗಡಿಯಾರ, ಗಾಳಿಯಂತ್ರ ಮೊದಲಾದ ಯಂತ್ರಗಳನ್ನು ಕಂಡುಹಿಡಿದಿದ್ದರು.

• ಸರ್ ವಾಲ್ಟರ್ ಸ್ಕಾಟ್ ಮತ್ತು ಜಾನ್ ಸ್ಟುವರ್ಟ್ ಅದ್ಭುತ ಪ್ರತಿಭೆಯ ಮಕ್ಕಳಾಗಿದ್ದರು.

• ಭಾರತದ ಶ್ರೇಷ್ಠ ದಾರ್ಶನಿಕರಾದ ಶಂಕರಾಚಾರ್ಯರು ತಮ್ಮ ಬಾಲ್ಯಾವಸ್ಥೆಯಲ್ಲಿಯೇ ಸಂಸ್ಕೃತ ಭಾಷೆಯಲ್ಲಿ ಪರಿಪೂರ್ಣ ಪಾಂಡಿತ್ಯ ಹೊಂದಿದ್ದರಲ್ಲದೆ, ವೇದಾಂತ ಗ್ರಂಥಗಳಿಗೆ ಭಾಷ್ಯವನ್ನು ಬರೆದಿದ್ದರು.

• ಭಾರತದ ಮಹಾಮೇಧಾವಿಗಳಾದ ಸ್ವಾಮಿ ರಾಮತೀರ್ಥರು, ಲಾಲಾ ಹರದಯಾಳರು, ಶ್ರೇಷ್ಠ ಗಣಿತಜ್ಞ ರಾಮಾನುಜಂ, ಸ್ವಾಮಿ ವಿವೇಕಾನಂದರು ಮೊದಲಾದವರು ಬಾಲ್ಯ ಜೀವನದಲ್ಲಿಯೇ ಪ್ರತಿಭಾವಂತರಾಗಿದ್ದರು.

ಶ್ರೇಷ್ಠ ವ್ಯಕ್ತಿಗಳ ಜೀವನ ಚರಿತ್ರೆಗಳ ಅಧ್ಯಯನವು ಅವರ ವಂಶ ಮತ್ತು ಬೆಳೆದ ಪರಿಸರದ ಪ್ರಭಾವ ಎರಡನ್ನೂ ಪ್ರತಿಬಿಂಬಿಸುತ್ತವೆ.

**ಮೇಲಿನ ಅಧ್ಯಯನಗಳನ್ನು ಆಧರಿಸಿ ಬೆಳವಣಿಗೆ ಮತ್ತು ವಿಕಾಸದ ಮೇಲೆ ಅನುವಂಶೀಯತೆ ಮತ್ತು ಪರಿಸರದ ಪ್ರಭಾವದ ಬಗ್ಗೆ ಕೆಲವು ತೀರ್ಮಾನ ಕೈಗೊಳ್ಳಬಹುದು.**

• ಅನುವಂಶೀಯತೆ ಮತ್ತು ಪರಿಸರದ ಪ್ರಭಾವಗಳ ನಡುವೆ ನಿಖರವಾದ ಸೀಮಾರೇಖೆಯನ್ನು ಎಳೆಯಲು ಸಾಧ್ಯವಿಲ್ಲ. ಮಾನವರಲ್ಲಿ ಕಂಡುಬರುವ ಲಕ್ಷಣಗಳನ್ನೇ ಆಗಲಿ ವರ್ತನೆಗಳನ್ನೇ ಆಗಲಿ ಅವು ಅನುವಂಶೀಯ ಅಥವಾ ಗಳಿಸಿದ ಲಕ್ಷಣಗಳು ಎಂದು ನಿರ್ದಿಷ್ಟ ಗುಂಪುಗಳಲ್ಲಿ ವರ್ಗೀಕರಿಸಲು ಸಾಧ್ಯವಿಲ್ಲ.

• ಅನುವಂಶೀಯತೆ ಮತ್ತು ಪರಿಸರದ ಅನ್ಯೋನ್ಯ ಕ್ರಿಯೆಯ ಫಲಿತವೇ ವಿಕಾಸದ ಪ್ರರೂಪ. ಒಂದು ಜೀವಿಯ ಬೆಳವಣಿಗೆಯ ಕಾಲದಲ್ಲಿ ಅನುವಂಶೀಯತೆ ಪ್ರಕಟವಾಗಲು ಪರಿಸರ ಅಗತ್ಯ. ಹಾಗೆಯೇ ಪರಿಸರದ ಪ್ರಭಾವ ವಿಕಾಸ ಹೊಂದಲು ಅನುವಂಶಿಕ ವಸ್ತುಗಳು ಅಗತ್ಯ.

• ಒಂದು ನಿರ್ದಿಷ್ಟ ಪರಿಸರ ವಿಭಿನ್ನ ಅನುವಂಶಿಕ ವಸ್ತುಗಳ ಮೇಲೆ ವಿಭಿನ್ನ ಪ್ರಭಾವ ಬೀರುತ್ತದೆ. ಒಂದು ನಿರ್ದಿಷ್ಟ ಅನುವಂಶಿಕ ವಸ್ತು ವಿಭಿನ್ನ ಪರಿಸರಗಳಲ್ಲಿ ಒಂದೊಂದು ವಿಧವಾಗಿ ಪ್ರಕಟಗೊಳ್ಳುತ್ತದೆ. ಆದ್ದರಿಂದ ವಿವಿಧ ವ್ಯಕ್ತಿಗಳ ವಿಕಾಸ ಪ್ರರೂಪಗಳಲ್ಲಿ ಕಂಡುಬರುವ ಸಮತೆಗೆ ಸಮಾನ ಪರಿಸರ ಕಾರಣ ಎಂದಾಗಲಿ, ಸಮಾನ ಅನುವಂಶೀಯತೆ ಕಾರಣ ಎಂದಾಗಲಿ ಹೇಳುವಂತಿಲ್ಲ.

• ವ್ಯಕ್ತಿಯ ವಿಕಾಸದ ವೇಗ ಮತ್ತು ವಿಕಾಸದ ಗರಿಷ್ಠ ಮಿತಿಯನ್ನು ಅನುವಂಶೀಯತೆ ನಿರ್ಧರಿಸುತ್ತದೆ. ಈ ಮಿತಿಯನ್ನು ವ್ಯಕ್ತಿ ತಲುಪುತ್ತಾನೋ ಇಲ್ಲವೋ ಎಂಬುದು ಅವನ ಪರಿಸರವನ್ನು ಅವಲಂಬಿಸಿರುತ್ತದೆ.

• ದೈಹಿಕ ಲಕ್ಷಣಗಳ ಬೆಳವಣಿಗೆ ಮತ್ತು ಬುದ್ಧಿಶಕ್ತಿಯ ವಿಕಾಸ ಇವೆರಡನ್ನು ನಿರ್ಧರಿಸುವಲ್ಲಿ ಅನುವಂಶೀಯತೆ ಪ್ರಮುಖ ಪಾತ್ರ ವಹಿಸುತ್ತದೆ.

– ಎನ್.ಗೀ.

## ಅಪಸಮಾಯೋಜನೆ–ಅರ್ಥ, ಮೂಲಗಳು

ಅಪಸಮಾಯೋಜನೆಯು ಮಾನವ ವರ್ತನೆಯ ಸಂಕೀರ್ಣ ಸಮಸ್ಯೆಯಾಗಿದೆ. ವ್ಯಕ್ತಿ ತನ್ನೊಂದಿಗೆ ಮತ್ತು ತನ್ನ ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ವಿಫಲತೆ ಹೊಂದುವುದಕ್ಕೆ ಅಪಸಮಾಯೋಜನೆ ಎನ್ನುತ್ತಾರೆ. ವ್ಯಕ್ತಿಯು ತನ್ನ ಆಸೆ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಪ್ರಯತ್ನದಲ್ಲಿ ತಡೆಗಳು ಎದುರಾಗಬಹುದು ಅಥವಾ ಸೋಲುಂಟಾಗಬಹುದು. ಈ ರೀತಿ ಉಂಟಾದ ವೈಫಲ್ಯಗಳಿಂದ ವ್ಯಕ್ತಿಯಲ್ಲಿ ಉದ್ವೇಗ, ಆಶಾಭಂಗ, ಮಾನಸಿಕ ದ್ವಂದ್ವಗಳು ಮತ್ತು ಒತ್ತಡಗಳು ಉಂಟಾಗುತ್ತವೆ. ಇದರಿಂದ ವ್ಯಕ್ತಿಯು ಅಸಮರ್ಪಕ, ಸುಸಂಗತವಲ್ಲದ, ಸಮನ್ವಯತೆ ಇಲ್ಲದ ವರ್ತನೆಗಳನ್ನು ಪ್ರಕಟಿಸುತ್ತಾನೆ. ವ್ಯಕ್ತಿ ಸ್ವತಃ ತನಗೆ, ಸಮಾಜಕ್ಕೆ ಅಥವಾ ಅವೆರಡಕ್ಕೂ ಅಹಿತಕರವಾಗಿದೆ ಎನ್ನುವ ರೀತಿಯಲ್ಲಿ ನಡೆದುಕೊಳ್ಳುವ ಸ್ಥಿತಿಯನ್ನು 'ಅಪಸಮಾಯೋಜನೆ' ಎನ್ನಬಹುದು. ವ್ಯಕ್ತಿಯು ಅಪಸಮಾಯೋಜನೆಯನ್ನು ಅನೇಕ ವಿಧದಲ್ಲಿ ಪ್ರಕಟಿಸುತ್ತಾನೆ.

ಮಕ್ಕಳು ತಂದೆ ತಾಯಿಯ ಪ್ರೀತಿ, ವಾತ್ಸಲ್ಯವನ್ನು ಬಯಸುತ್ತಿರುತ್ತಾರೆ ಮತ್ತು ಅದಕ್ಕೆ ಅಡ್ಡಿಯುಂಟು ಮಾಡುವವರನ್ನು ದ್ವೇಷಿಸುತ್ತಾರೆ. ಮಕ್ಕಳು ಈ ಅಡ್ಡಿಯನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಪ್ರಯತ್ನ ವಿಫಲವಾದರೆ ಮತ್ತು ಅತೃಪ್ತಿ ಉಂಟಾದರೆ ಮಗುವಿನಲ್ಲಿ ಅಪಸಮಾಯೋಜನೆ ಉಂಟಾಗುತ್ತದೆ ಎಂದು ಸಿಗ್ಮಂಡ್ ಫ್ರಾಯ್ಡ್‌ನು ಹೇಳಿದ್ದಾನೆ.

ಇನ್ನೊಬ್ಬ ಪ್ರಸಿದ್ಧ ಮನೋವಿಜ್ಞಾನಿಯಾದ ಆಲ್‌ಫ್ರೆಡ್ ಆ್ಯಡ್ಲರ್ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಯಾವುದಾದರೊಂದು ದೋಷ, ಕೊರತೆ ಇದ್ದೇ ಇರುತ್ತದೆ. ವ್ಯಕ್ತಿ ತನ್ನ ಕೊರತೆಯನ್ನು ಕೀಳರಿಮೆಯನ್ನು ತುಂಬಿಕೊಳ್ಳಲು, ಶ್ರೇಷ್ಠನೆನಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಪ್ರಯತ್ನವನ್ನು ಮೇಲರಿಮೆ (Superiority)ಗಾಗಿ ಪ್ರಯತ್ನಿಸುವಿಕೆ ಎಂದಿದ್ದಾನೆ. ಈ

Digitised by Bharatavani, CIIL

ಪ್ರಯತ್ನದಲ್ಲಿ ವಿಫಲನಾದರೆ ಹತಾಶೆ, ಅತೃಪ್ತಿಯಿಂದ ಅಪಸಮಾಯೋಜನೆ ಉಂಟಾಗುತ್ತದೆ.

**ಅಪಸಮಾಯೋಜನೆಯ ಮೂಲಗಳು:** ಅಪಸಮಾಯೋಜನೆಗೆ ಪ್ರಧಾನ ಮೂಲಗಳು ಉದ್ವೇಗ, ಆಶಾಭಂಗ, ಮಾನಸಿಕ ದ್ವಂದ್ವಗಳು ಮತ್ತು ಒತ್ತಡಗಳಾಗಿವೆ. ವ್ಯಕ್ತಿಯಲ್ಲಿ ಅಪಸಮಾಯೋಜನೆ ಉಂಟಾಗಲು ಅನೇಕ ಕಾರಣಗಳಿವೆ. ಅವುಗಳು ಜೈವಿಕ ಅಂಶಗಳು, ಬುದ್ಧಿ ಮಾಂದ್ಯತೆ, ಬುದ್ಧಿ ಭ್ರಮಣೆ, ಅಲ್ಲದೆ ತೀವ್ರ ಸಮಾಯೋಜನ ಸಮಸ್ಯೆಯಿಂದ ಬಳಲುವ ಪೋಷಕರ ಮಕ್ಕಳು ಅನುವಂಶೀಯವಾಗಿ ಅಪಸಮಾಯೋಜಿತ ವರ್ತನೆಗಳ ಪ್ರವೃತ್ತಿಯನ್ನು ಪಡೆದಿರಬಹುದು. ಈ ಸಾಧ್ಯತೆ ಕೆಲವು ಮಾನಸಿಕ ಸಮಸ್ಯೆಗಳಿಗೆ ಮಾತ್ರ ಅನ್ವಯಿಸುತ್ತದೆ.

**ಸಾಮಾಜಿಕ ಅಂಶಗಳು:** ಬಡತನ, ಸಾಮಾಜಿಕ ಸ್ಥಿತಿಗಳು, ಶಾಲಾ ಸನ್ನಿವೇಶಗಳು ಅಪಸಮಾಯೋಜನೆಗೆ ಕಾರಣವಾಗಬಹುದು. ಬಡತನವಿರುವ ಬಹಳಷ್ಟು ಮನೆಗಳಲ್ಲಿ ಪಾಲಕರಿಗೆ ಮಕ್ಕಳಿಗೆ ಅತ್ಯಗತ್ಯವಾಗಿ ಪೂರೈಸಲೇಬೇಕಾದ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಮೂಲ ಅಗತ್ಯಗಳಿಗೆ ಸಂಬಂಧಿಸಿದಂತೆ ಉಂಟಾಗುವ ಆಶಾಭಂಗವು ಅಪಸಮಾಯೋಜನೆಗೆ ದಾರಿಮಾಡಿಕೊಡುತ್ತದೆ. ಸಮಾಜದಲ್ಲಿರುವ ಧಾರ್ಮಿಕ ನಂಬಿಕೆಗಳು, ವರ್ಣಭೇದಗಳು, ಉದ್ಯೋಗದಲ್ಲಿ ಅಭದ್ರತೆ, ವಲಸೆ ಹೋಗುವುದು ಇತ್ಯಾದಿಗಳು ವ್ಯಕ್ತಿಗಳಲ್ಲಿ ಅಪಸಮಾಯೋಜಿತ ವರ್ತನೆಗಳಿಗೆ ಕಾರಣವಾಗಬಹುದು. ಶಾಲಾ ಅಂಶಗಳಿಗೆ ಸಂಬಂಧಿಸಿದಂತೆ ಅಸಮರ್ಪಕ ಆಡಳಿತ ವಿಧಾನ, ಭೌತಿಕ ಅನುಕೂಲಗಳ ಅಭಾವ, ತರಗತಿಯ ಅಹಿತಕರ ವಾತಾವರಣ, ಅತಿ ಶಿಸ್ತಿನ ಕ್ರಮ, ಶಿಕ್ಷಕರ ಅರ್ಥವಾಗದ ಬೋಧನೆ, ಶಿಕ್ಷಕ–ವಿದ್ಯಾರ್ಥಿಗಳ ನಡುವಿನ ಅಹಿತಕರ ಸಂಬಂಧ ಇವುಗಳು ಮಕ್ಕಳಲ್ಲಿ ಅಪಸಮಾಯೋಜನೆ ಉಂಟಾಗಲು ಕಾರಣವಾಗಬಹುದು.

**ಕೌಟುಂಬಿಕ ಅಂಶಗಳು:** ಕುಟುಂಬದಲ್ಲಿನ ವಾತಾವರಣ, ಭಗ್ನ ಕುಟುಂಬ, ಪೋಷಕರ ಮನೋಧೋರಣೆ ವ್ಯಕ್ತಿಗಳಲ್ಲಿ ಅಪಸಮಾಯೋಜನೆಗೆ ಕಾರಣವಾಗುತ್ತವೆ. ಪಾಲಕರ ನಡುವೆ ಜಗಳ, ಘರ್ಷಣೆಗಳು, ಪಾಲಕರಿಂದ ಮಕ್ಕಳ ಸಾಮರ್ಥ್ಯಕ್ಕೆ ಮೀರಿದ ಸಾಧನೆಯ ಅಪೇಕ್ಷೆ. ಪ್ರೀತಿ, ವಾತ್ಸಲ್ಯದ ಕೊರತೆ ಮಕ್ಕಳ ಅಪಸಮಾಯೋಜಿತ ವರ್ತನೆಗೆ ಕಾರಣವಾಗಬಹುದು. ಅಪಸಮಾಯೋಜನೆಯ ಸಮಸ್ಯೆಗಳು ಭಗ್ನ ಕುಟುಂಬಗಳಲ್ಲಿ ಹೆಚ್ಚಾಗಿರುವುದು ಕಂಡುಬಂದಿವೆ. ಪಾಲಕರ ಸಾವು, ವಿಚ್ಛೇದನ ಇಂಥ ಮನೆಗಳಿಂದ ಬರುವ ಮಕ್ಕಳು ಹೆಚ್ಚು ಸುಭದ್ರ ಸ್ಥಿತಿಯಲ್ಲಿರುವ ಮನೆಯಿಂದ ಬರುವ ಮಕ್ಕಳಿಗಿಂತ ಹೆಚ್ಚಿನ ಅಪಸಮಾಯೋಜನೆಯನ್ನು ಹೊಂದಿರುತ್ತಾರೆ ಎಂಬುದನ್ನು ಸಂಶೋಧನಾ ಅಧ್ಯಯನಗಳು ದೃಢಪಡಿಸಿವೆ. ಸಾಮಾನ್ಯವಾಗಿ ಇಂಥ ಮನೆಗಳಿಂದ ಬರುವ ಮಕ್ಕಳು ಸಂವೇಗಾತ್ಮಕವಾಗಿ ಅಸ್ಥಿರತೆಗೆ ಒಳಗಾಗಿರುವುದು ಕಂಡುಬಂದಿದೆ. ಪೋಷಕರ ಮನೋಧೋರಣೆಗೆ ಸಂಬಂಧಿಸಿದಂತೆ ಅತಿ ರಕ್ಷಣೆ, ಅತಿಯಾದ ನಿರ್ಬಂಧತೆ, ಅತಿಯಾದ ಸ್ವಾತಂತ್ರ್ಯ ನೀಡುವುದು, ನಿಯಂತ್ರಣವಿಲ್ಲದಿರುವಿಕೆ, ಶಿಕ್ಷೆ, ಅತಿಯಾದ ಶಿಸ್ತು, ಅನಪೇಕ್ಷಿತ ಬೇಡಿಕೆಗಳನ್ನು ಇಡುವುದು ಇತ್ಯಾದಿಗಳು ಕೂಡ ಮಕ್ಕಳಲ್ಲಿ ಅಪಸಮಾಯೋಜಿತ ವರ್ತನೆಗಳಿಗೆ ಕಾರಣವಾಗುತ್ತವೆ.

**ವೈಯಕ್ತಿಕ ಅಂಶಗಳು:** ದೈಹಿಕ ರೂಪಕ್ಕೆ ಸಂಬಂಧಿಸಿದಂತೆ ಕುರೂಪ, ದೈಹಿಕ ನ್ಯೂನತೆ ಮತ್ತು ಇತರ ವೈಯಕ್ತಿಕ ಕೊರತೆಗಳು ವ್ಯಕ್ತಿಗಳಲ್ಲಿ ನಿರಂತರವಾಗಿ ಆತಂಕವನ್ನು ಉಂಟುಮಾಡಬಹುದು. ವ್ಯಕ್ತಿಯ ಸಾಮರ್ಥ್ಯ ಮತ್ತು ಯೋಗ್ಯತೆಗೆ ಮೀರಿದ ಆಸೆ, ಆಕಾಂಕ್ಷೆಗಳು ಆ ವ್ಯಕ್ತಿಯಲ್ಲಿ ಆಶಾಭಂಗವನ್ನು ಉಂಟುಮಾಡಬಹುದು. ಇವು ವ್ಯಕ್ತಿಯಲ್ಲಿ ಅಪಸಮಾಯೋಜನೆಗೆ ಕಾರಣವಾಗುತ್ತವೆ. ಬಗೆಹರಿಸಲಾಗದ ಸಂವೇಗಾತ್ಮಕ ಸಮಸ್ಯೆಗಳು, ಸುಪ್ತಚೇತನದಲ್ಲಿ ಹುದುಗಿರುವ ಮನೋಗ್ರಂಥಿಗಳು (ಸಂವೇಗಾತ್ಮಕ ಸಮಸ್ಯೆಗಳು) ಅಪಸಮಾಯೋಜನೆಗೆ ಕಾರಣವಾಗುತ್ತವೆ.

–ಎಸ್.ಪಿ.ಎಸ್.

## ಅಪಸ್ಮಾರ (ಎಪಿಲೆಪ್ಸಿ)

ಅಪಸ್ಮಾರ ಅಥವಾ ಎಪಿಲೆಪ್ಸಿ ಮಾನಸಿಕ ರೋಗ ಸ್ಥಿತಿಗಳಲ್ಲಿ ಅತ್ಯಂತ ದೀರ್ಘ ಇತಿಹಾಸ ಹೊಂದಿದೆ. ಮೂರ್ಛೆ ಹೋಗುವುದು ಈ ರೋಗದ ಪ್ರಮುಖ ಲಕ್ಷಣವಾಗಿರುವುದರಿಂದ ಇದನ್ನು ಮೂರ್ಛೆರೋಗ ಅಥವಾ ಮಲೆರೋಗ (ಮಲೆಯುವುದು ಎಂದರೆ ಓಲಾಡುವುದು ಎಂದರ್ಥ) ಎಂದೂ ಹೆಸರಿಸುತ್ತಾರೆ. ಈ ಸ್ಥಿತಿಯಲ್ಲಿ ಇತರ ರೋಗಗಳಲ್ಲಿ ಕಂಡು ಬರುವ ಯಾವ ಲಕ್ಷಣಗಳು ಇಲ್ಲದಿದ್ದರೂ ಮತ್ತು ಇದು ದೀರ್ಘಕಾಲ ತೊಂದರೆ ಕೊಡುವ ರೋಗವಲ್ಲವಾದರೂ ದುರದೃಷ್ಟವಶಾತ್ ಇದು ಸಾಮಾಜಿಕವಾಗಿ ಕಳಂಕಕ್ಕೆ ಒಳಗಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಸಾರ್ವಜನಿಕ ಶಿಕ್ಷಣದಿಂದಾಗಿ ಈ ಕಳಂಕ ನಿವಾರಣೆಯಾಗಿದ್ದರೂ ಭಾರತದಲ್ಲಿ ಅದು ಇನ್ನೂ ಹಾಗೆಯೇ ಉಳಿದಿದೆ. ಇದರಿಂದಾಗಿ ಜನರು ಈ ಸ್ಥಿತಿಯನ್ನು ಗೌಪ್ಯವಾಗಿಡಲು ಪ್ರಯತ್ನಿಸುತ್ತಾರೆ. ಹಾಗಾಗಿ ಭಾರತದಲ್ಲಿ ಅಪಸ್ಮಾರ ಪೀಡಿತರ ಬಗ್ಗೆ ನಿಖರವಾದ ಅಂಕಿ ಅಂಶಗಳು ದೊರಕುವುದು ಕಷ್ಟ.

ಆಯುರ್ವೇದ ಶಾಸ್ತ್ರದಲ್ಲಿ ಅಪಸ್ಮಾರ ರೋಗದ ಬಗ್ಗೆ ವರ್ಣನೆ ಸಿಗುತ್ತದೆ. ಚರಕ, ಶುಷ್ರುಕ ಮತ್ತು ವಾಗ್ಭಟ್ಟ ವರ್ಣಿಸಿರುವ ಅಪಸ್ಮಾರ ಪೀಡಿತರ ಲಕ್ಷಣಗಳು ಆಧುನಿಕ ವೈದ್ಯ ವಿಜ್ಞಾನದಲ್ಲಿ ವರ್ಣಿಸಿರುವ ಲಕ್ಷಣಗಳಂತೆಯೇ ಇವೆ. ಅಪಸ್ಮಾರ ಉಂಟಾದಾಗ ಇದ್ದಕ್ಕಿದ್ದಂತೆ ಬೀಳುವುದು, ಕೈ, ಕಾಲು, ದೇಹ ಅಲ್ಲಾಡುವುದು, ಪ್ರಜ್ಞಾಶೂನ್ಯರಾಗುವುದು, ಕಣ್ಣುಗುಡ್ಡೆಗಳು ಜೋರಾಗಿ ತಿರುಗುವುದು. ಹಲ್ಲು ಕಚ್ಚುವುದು, ಬಾಯಿಯಿಂದ ನೊರೆನೊರೆಯಾಗಿ ಜೊಲ್ಲು ಬರುವುದು. ಈ ಲಕ್ಷಣಗಳನ್ನು ಆಯುರ್ವೇದ ಗ್ರಂಥಗಳಲ್ಲಿ ವರ್ಣಿಸಲಾಗಿದೆ. ಈ ರೋಗಕ್ಕೆ ಅನೇಕ ಚಿಕಿತ್ಸಾ ಕ್ರಮಗಳನ್ನು ಹೇಳಿದೆ.

ಐತಿಹಾಸಿಕವಾಗಿ ಅನೇಕ ಪ್ರಸಿದ್ಧ ವ್ಯಕ್ತಿಗಳು ಅಪಸ್ಮಾರ ಪೀಡಿತರಾಗಿದ್ದರ ದಾಖಲೆಗಳಿವೆ. ಅಲಗ್ಸ್ಯಾಂಡರ್, ಜೂಲಿಯಸ್ ಸೀಜರ್ ಮತ್ತು ನೆಪೋಲಿಯನ್ ಅಪಸ್ಮಾರ ಪೀಡಿತರಾಗಿದ್ದರೆನ್ನಲಾಗಿದೆ. ಆಧುನಿಕ ಸಮಯದಲ್ಲೂ ಅನೇಕ ಪ್ರಸಿದ್ಧ ವ್ಯಕ್ತಿಗಳು ಈ ರೋಗದಿಂದ ಪೀಡಿತರಾಗಿರುವ ದಾಖಲೆಗಳಿವೆ. ಮೊದಲು ಇದನ್ನು 'ಪವಿತ್ರ ರೋಗ' ಎಂದು ಪರಿಗಣಿಸುತ್ತಿದ್ದರು. ಯಾವುದೋ ದೈವಿಕ ಮೂಲದಿಂದ ಈ ಸ್ಥಿತಿ ಉಂಟಾಗುತ್ತದೆ ಎಂದು ತಿಳಿಯಲಾಗಿತ್ತು. ನಂತರದಲ್ಲಿ ಇದು ಕೆಟ್ಟ ಪಿಶಾಚಿಗಳಿಂದ ಆಗುತ್ತದೆ ಎಂದು ನಂಬಲಾಯಿತು. ಆದರೆ ಆಧುನಿಕ ಕಾಲದಲ್ಲಿ ಮೆದುಳಿನ ಬಗ್ಗೆ ತಿಳುವಳಿಕೆ ಮೂಡಿದಂತೆ ಅಪಸ್ಮಾರದ ವಾಸ್ತವ ಸ್ವರೂಪ ಬೆಳಕಿಗೆ ಬಂದಿತು. ಮೆದುಳಿನ ವಿದ್ಯುತ್ ಚಟುವಟಿಕೆಗಳನ್ನು ದಾಖಲು ಮಾಡಿಕೊಳ್ಳುವ ಮೆದುಳಿನ ವಿದ್ಯುನ್ಮಾಪನ ಯಂತ್ರ (Electro Enclaphlo Grameeg) ಯ ಆವಿಷ್ಕಾರವಾದ ನಂತರ ಅಪಸ್ಮಾರದ ಸ್ವರೂಪವನ್ನು ಅಧ್ಯಯನ ಮಾಡುವುದು ಸುಲಭವಾಯಿತು.

**ಅಪಸ್ಮಾರದ ವಿಧಗಳು:** ಅಮೆರಿಕಾದ ಕೋಲ್ಬ್ (1977) ಎಂಬುವನು ಈ ರೋಗವನ್ನು ಅಧ್ಯಯನ ಮಾಡಿ ಪ್ರತಿ 200 ಮಂದಿಗೆ ಒಬ್ಬರು ಈ ರೋಗ ಪೀಡಿತರಿದ್ದಾರೆ ಎಂದೂ ಸ್ತ್ರೀಯರಿಗಿಂತ ಪುರುಷರಲ್ಲಿ ಈ ರೋಗ ಸ್ವಲ್ಪ ಹೆಚ್ಚಿನ ಜನರಲ್ಲಿ ಕಂಡುಬರುತ್ತದೆ ಎಂದೂ ವರದಿ ಮಾಡಿದ್ದಾನೆ. ಇವನು ಅಪಸ್ಮಾರವನ್ನು ಸ್ಥೂಲವಾಗಿ ಎರಡು ವಿಧಗಳಾಗಿ

Digitised by Bharatavani, CIIL

ವಿಂಗಡಿಸಿದ್ದಾನೆ. ಲಕ್ಷಣಾತ್ಮಕ ಅಥವಾ ಆರ್ಜಿತ ಅಪಸ್ಮಾರ (Symptomatic or accured epilepsy) ಮತ್ತು ಸ್ವಯಂಜನ್ಯ ಅಪಸ್ಮಾರ (Idiopathic Epilepsy). ಮೊದಲನೇ ವಿಧದ ಅಪಸ್ಮಾರ ತಿಳಿದಿರುವ ಯಾವುದೇ ಕಾರಣದಿಂದ ಮೆದುಳಿಗೆ ಆಘಾತ ಉಂಟಾದುದರ ಪರಿಣಾಮ ಉಂಟಾಗಿ ಮೆದುಳಿನ ಕ್ರಿಯೆಗಳಲ್ಲಿ ಏರುಪೇರಾಗುವುದರಿಂದ ಉಂಟಾಗುತ್ತದೆ. ನ್ಯೂರೊಸಿಫ್ಲಿಸ್, ತೀವ್ರ ಮದ್ಯಪಾನ, ಮಾದಕ ಔಷಧ ಸೇವನೆಯಿಂದ ಉಂಟಾಗುವ ಉನ್ಮಾದ, ಮೆದುಳಿನಲ್ಲಿ ಉಂಟಾಗುವ ಗೆಡ್ಡೆ (ಟ್ಯೂಮರ್) ಮುಂತಾದವುಗಳಿಂದ ಈ ರೀತಿ ಅಪಸ್ಮಾರ ಉಂಟಾಗುತ್ತದೆ. ಎರಡನೇ ವಿಧದ ಅಪಸ್ಮಾರಕ್ಕೆ ಯಾವುದೇ ನಿರ್ದಿಷ್ಟ ಕಾರಣ ಇರುವುದಿಲ್ಲ. ಈ ಸ್ಥಿತಿ ಬೆಳವಣಿಗೆ ಅವಧಿಯಲ್ಲೇ ಆರಂಭದಲ್ಲಿಯೇ ಕಂಡುಬರುತ್ತದೆ. ಈ ಎರಡೂ ಸ್ಥಿತಿಗಳಲ್ಲಿ ಉಂಟಾಗುವ ಮೂರ್ಛೆ ಸ್ಥಿತಿಗಳಲ್ಲಿ ವ್ಯತ್ಯಾಸವಿದೆ. ಮೊದಲನೇ ವಿಧದಲ್ಲಿ ಮೂರ್ಛೆ ಅದಕ್ಕೆ ಕಾರಣವಾಗಿ ರೋಗಸ್ಥಿತಿ ಜೊತೆಗೆ ಕಾಣಿಸಿಕೊಳ್ಳುತ್ತದೆ. ಎರಡನೇ ವಿಧದಲ್ಲಿ ಮೂರ್ಛೆ ಯಾವಾಗ ಬೇಕಾದರೂ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಮೆದುಳಿನ ವಿದ್ಯುತ್ ಚಟುವಟಿಕೆಗಳಲ್ಲಿ ಏರುಪೇರಾದಾಗ ದೇಹಕ್ಕೆ ಉಂಟಾಗುವ ಒಂದು ಅಸಾಮಾನ್ಯ ಸ್ಥಿತಿಯೇ ಅಪಸ್ಮಾರ, ಮೆದುಳಿನಲ್ಲಿ ನಿರಂತರವಾಗಿ ವಿದ್ಯುತ್ ಪ್ರವಾಹ ಹರಿಯುತ್ತಿರುತ್ತದೆ. ಅದು ಏರುಪೇರಾದಾಗ ಮೆದುಳಿನಲ್ಲಿ ಕಂಪನ ಉಂಟಾಗುತ್ತದೆ. ಅದರಿಂದ ದೈಹಿಕ ಪ್ರಜ್ಞಾಹೀನತೆ, ಕೈ ಕಾಲುಗಳಲ್ಲಿ ಸೆಳೆತ ಕಾಣಿಸಿಕೊಳ್ಳುತ್ತದೆ. ಈ ಸ್ಥಿತಿ 2–3 ನಿಮಿಷಗಳು ಇಲ್ಲವೇ 20–30 ನಿಮಿಷಗಳವರೆಗೂ ವಿಸ್ತರಿಸುವ ಸಾಧ್ಯತೆ ಇದೆ. ಅಪಸ್ಮಾರದ ಸರಳ ವಿಧದಲ್ಲಿ ಬಾಯಿ, ಮುಖ, ಕಣ್ಣು ರೆಪ್ಪೆಗಳಲ್ಲಿ ಸೆಳೆತ ಕಾಣಿಸಿಕೊಳ್ಳುತ್ತದೆ. ತೀವ್ರತರನಾದ ಅಪಸ್ಮಾರದಲ್ಲಿ ಕೈ ಕಾಲುಗಳ ಜೋರಾದ ಬಡಿತ, ನಾಲಿಗೆ ಕಚ್ಚುವುದು, ಸ್ಮೃತಿ ತಪ್ಪುವುದು, ಬಾಯಿಯಲ್ಲಿ ನೊರೆಬರುವುದು ಇವೇ ಮುಂತಾದ ಲಕ್ಷಣಗಳು ಗೋಚರಿಸುತ್ತವೆ. ಇದು ಒಂದೇ ತೊಂದರೆಯಾಗಿ ಕಾಣಿಸಿಕೊಳ್ಳಬಹುದು ಇಲ್ಲವೇ ಮೆದುಳಿನ ಪಾರ್ಶ್ವವಾಯು ಅಥವಾ ಬುದ್ಧಿಮಾಂದ್ಯತೆಯ ಜೊತೆಯಲ್ಲಿ ಬರಬಹುದು. ಮೆದುಳಿನ ವಿದ್ಯುತ್ ಕಂಪನದಿಂದಾಗಿ ಸ್ನಾಯುಗಳು ಇದ್ದಕ್ಕಿದ್ದಂತೆಯೇ ಸಂಕುಚಿತಗೊಳ್ಳುವುದರಿಂದ ಅಂಗಾಂಗಗಳ ಅನಿಯತ ಚಲನೆ ಉಂಟಾಗುತ್ತದೆ. ಸೆಳೆತದ ಪ್ರಭಾವ ಮತ್ತು ತೀವ್ರತೆ ಮೆದುಳಿನ ಯಾವ ಕೋಶದಲ್ಲಿ ವಿದ್ಯುತ್ ಪ್ರವಾಹ ಸೋರಿಕೆಯಾಯಿತು ಮತ್ತು ಅದು ಮೆದುಳನ್ನು ಎಷ್ಟರಮಟ್ಟಿಗೆ ಆವರಿಸಿತು ಎಂಬುದನ್ನು ಅವಲಂಬಿಸಿರುತ್ತವೆ.

ಅಪಸ್ಮಾರದ ಮೂರ್ಛಾ ಸ್ಥಿತಿಗಳು ಅಥವಾ ಸೆಳೆತಗಳು (Convulsions or Seisures) ಹಲವಾರು ರೀತಿಯಲ್ಲಿ ಮತ್ತು ವಿವಿಧ ತೀವ್ರತೆಯ ಮಟ್ಟದಲ್ಲಿ ಕಾಣಿಸಿಕೊಳ್ಳುತ್ತದೆ. ಹೆಚ್ಚಾಗಿ ಕಂಡುಬರುವ ಮೂರು ವಿಧಗಳು ಈ ಕೆಳಗಿನಂತಿವೆ.

1. **ಟೋನಿಕ್–ಕ್ಲೋನಿಕ್ ಸಿಜ಼ರ್ (ಗ್ರಾಂಡ್‌ಮಾಲ್)** ಈ ವಿಧದಲ್ಲಿ ಪ್ರಜ್ಞೆ ತಪ್ಪುವುದಕ್ಕೆ ಮುನ್ಸೂಚನೆಯಾಗಿ ಒಳದನಿಯೊಂದು ಕೆಲವು ವೇಳೆ ವಿವಿಧ ವಾಸನೆ, ರುಚಿ, ಬೆಳಕುಗಳು ಕಾಣಿಸಿಕೊಳ್ಳುವಂತೆ ಆಗುತ್ತದೆ. ಇದ್ದಕ್ಕಿದ್ದಂತೆಯೇ ಮಗು ಪ್ರಜ್ಞೆ ತಪ್ಪುತ್ತದೆ. ಸ್ನಾಯುಗಳು ಬಿಗಿದುಕೊಳ್ಳುತ್ತದೆ. ಒಂದರ ನಂತರ ಒಂದರಂತೆ ಸ್ನಾಯುಗಳು ಬಿಗಿದುಕೊಂಡು ಸಡಿಲಗೊಳ್ಳುತ್ತವೆ. ಉಸಿರಾಟ ಭಾರವಾಗುತ್ತಾ ಹೋಗುತ್ತದೆ. ಮಲ ಮೂತ್ರದ ಹತೋಟಿ ತಪ್ಪುತ್ತದೆ. ಬಾಯಿಯಲ್ಲಿ ನೊರೆ ಬರುತ್ತದೆ. ಎರಡರಿಂದ ಮೂರು ನಿಮಿಷಗಳು ಈ ಸ್ಥಿತಿಯಲ್ಲಿದ್ದು ಮಗು ಎಚ್ಚರಗೊಳ್ಳುತ್ತದೆ. ವಿಪರೀತ ಸುಸ್ತಿನಿಂದ ವಿಶ್ರಾಂತಿ ಬಯಸುತ್ತದೆ.

2. **ಆಬ್ಸೆನ್ಸ್ ಸೀಜ಼ರ್ (ಪೆಟಿಟ್ ಮಾಲ್)** – ಈ ವಿಧದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಮಗು ಪ್ರಜ್ಞೆ ತಪ್ಪುತ್ತದೆ. ಮಗುವಿನ ದೃಷ್ಟಿ ಗುರಿ ಇಲ್ಲದೆ ಶೂನ್ಯವನ್ನು ದಿಟ್ಟಿಸುತ್ತಿರುತ್ತದೆ. ಕೆಲವು ಮಕ್ಕಳಲ್ಲಿ ದಿನವೊಂದಕ್ಕೆ ಹಲವಾರು ಬಾರಿ ಈ ಆಘಾತ ಉಂಟಾಗುತ್ತಿರುತ್ತದೆ. ಕ್ಷಣಿಕವಾದ್ದರಿಂದ ಹಿರಿಯರ ಗಮನಕ್ಕೆ ಇದು ಬರದೇ ಇರಬಹುದು. ತಿಳುವಳಿಕೆಯ ಅಭಾವದಿಂದ ಸಾಮಾನ್ಯವಾಗಿ ಈ ರೀತಿಯ ತೊಂದರೆ ಅನುಭವಿಸುವ ಮಕ್ಕಳನ್ನು ಅಪಾರ್ಥ ಮಾಡಿಕೊಳ್ಳುವ ಸಂಭವವೇ ಹೆಚ್ಚು. ಗಮನವಿಟ್ಟು ಕೆಲಸ ಮಾಡುತ್ತಿಲ್ಲ ಎಂಬ ಅಪವಾದ ಇವರಿಗೆ ಸರ್ವೇ ಸಾಮಾನ್ಯ.

3. **ಕಾಂಪ್ಲೆಕ್ಸ್ ಪಾರ್ಷಿಯಲ್ ಸಿಜ಼ರ್ (ಸೈಕೋಮೋಟಾರ್):** ಈ ವಿಧದಲ್ಲಿ ಮಕ್ಕಳು ಪ್ರಜ್ಞೆ ಕಳೆದುಕೊಳ್ಳುವುದಿಲ್ಲ. ಆದರೆ ವಿಚಿತ್ರವಾದ ತೊಡಕುಗಳನ್ನು ದೈಹಿಕ, ಮಾನಸಿಕ ಮಟ್ಟದಲ್ಲಿ ಅನುಭವಿಸುತ್ತಾರೆ. ಈ ಅಸ್ವಸ್ಥತೆ ಇಂದ್ರಿಯಾನುಭವಗಳಾದ ನೋಡುವುದು, ಕೇಳುವುದು ಮತ್ತು ರುಚಿಯನ್ನು ಅನುಭವಿಸುವಲ್ಲಿ ಕಂಡಬರುತ್ತದೆ. ಕೆಲವರು ವಿಶಿಷ್ಟ ದೈಹಿಕ ಚಲನೆಯನ್ನು ತೋರ್ಪಡಿಸುತ್ತಾರೆ ಮತ್ತೆ ಕೆಲವರು ಕುಳಿತಲ್ಲೇ ಈ ವೈಪರೀತ್ಯವನ್ನು ಅನುಭವಿಸುತ್ತಾರೆ. ವಿಶೇಷವೆಂದರೆ ಮಕ್ಕಳ ಈ ವಿಚಿತ್ರ ವರ್ತನೆಯ ಸೂಕ್ಷ್ಮ ಅವರಿಗೆ ಅರಿವಾಗಿರುವುದಿಲ್ಲ.

**ಕಾರಣಗಳು:** ಮಕ್ಕಳಲ್ಲಿ ಅಪಸ್ಮಾರ ಬರಲು ಹಲವಾರು ಕಾರಣಗಳಿವೆ. ವಂಶಪಾರಂಪರ್ಯವಾಗಿ ಈ ತೊಂದರೆ ಕಾಣಿಸಿಕೊಳ್ಳಬಹುದು. ಇತರ ರೀತಿಯ ನ್ಯೂನತೆಗಳಾದ ಮೆದುಳಿನ ಪಾರ್ಶ್ವವಾಯು ಹಾಗೂ ಬುದ್ಧಿಮಾಂದ್ಯತೆ ಮಗುವಿನಲ್ಲಿದ್ದರೂ ಅದರಿಂದಾಗಿ ಅಪಸ್ಮಾರ ಬರುವ ಸಾಧ್ಯತೆ ಇದೆ. ಜೊತೆಗೆ ಮೆದುಳಿನ ನರಕೋಶಗಳಿಗೆ ಹಾನಿಯುಂಟುಮಾಡಬಹುದಾದ ಮೆದುಳಿನಲ್ಲಿ ಗೆಡ್ಡೆ ಬೆಳೆಯುವುದು, ಮೆದುಳಿಗೆ ಆಮ್ಲಜನಕದ ಸರಬರಾಜಿನಲ್ಲಿ ವ್ಯತ್ಯಯವಾಗುವುದು, ರಕ್ತದಲ್ಲಿ ಸಕ್ಕರೆ ಅಂಶ ತೀರಾ ಕಡಿಮೆಯಾಗಿ ಅದು ಮೆದುಳಿಗೆ ಸರಬರಾಜಾಗುವುದು, ಮೆದುಳಿಗೆ ಸೋಂಕು ತಗಲುವುದು ಹಾಗೂ ಮೆದುಳಿಗೆ ತಗಲುವ ಪೆಟ್ಟಿನಿಂದಲೂ ಈ ತೊಂದರೆ ಕಾಣಿಸಿಕೊಳ್ಳಬಹುದು. ಕೆಲವೊಮ್ಮೆ ಒಂದು ಬಾರಿ ಈ ಆಘಾತ ಉಂಟಾದರೆ ಮೆದುಳಿನ ಇತರ ಕೋಶಗಳಿಗೂ ಆಘಾತದ ಪರಿಣಾಮ ಪಸರಿಸಿ ಮತ್ತೆ ಮತ್ತೆ ಆಘಾತ ಉಂಟಾಗುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಒಂದು ಮಗುವಿಗೆ ಈ ತೊಂದರೆ ಇದೇ ಕಾರಣಕ್ಕೆ ಬಂದಿತೆಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ.

ಅಪಸ್ಮಾರದಿಂದ ಬಳಲುವ ಮಕ್ಕಳ ನಿರ್ವಹಣೆ: ಕಾರಣಗಳ ನಿರ್ದಿಷ್ಟ ಅರಿವು ಇಲ್ಲದಿದ್ದರೂ ಈ ತೊಂದರೆಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ಲಭ್ಯ. ಗುಣಪಡಿಸಲಾಗದಿದ್ದರೂ ಸಂಪೂರ್ಣ ಹತೋಟಿ ಸಾಧ್ಯ.

1. **ವೈದ್ಯಕೀಯ ಚಿಕಿತ್ಸೆ:** ಅಪಸ್ಮಾರವನ್ನು ಪೂರ್ತಿಯಾಗಿ ಹತೋಟಿಯಲ್ಲಿಡಲು ಪ್ರತಿಬಂಧಕ ಮಾತ್ರೆಗಳು ಇವೆ. ತಜ್ಞ ವೈದ್ಯರ ಸಲಹೆಯ ಮೇರೆಗೆ ಈ ಮಾತ್ರೆಗಳನ್ನು ನಿರಂತರವಾಗಿ ತೆಗೆದುಕೊಳ್ಳಬೇಕು. ಮಾತ್ರೆಯ ವ್ಯತಿರಿಕ್ತ ಪರಿಣಾಮಗಳನ್ನು ಸೂಕ್ಷ್ಮವಾಗಿ ಗಮನಿಸಿ, ವೈದ್ಯರಿಗೆ ಮಾಹಿತಿ ಕೊಟ್ಟು ತೆಗೆದುಕೊಳ್ಳಬೇಕಾದ ಮಾತ್ರೆಯ ಪ್ರಮಾಣವನ್ನು ನಿಗದಿಪಡಿಸಿಕೊಳ್ಳಬೇಕು.

2. **ಶೈಕ್ಷಣಿಕ ನಿರ್ವಹಣೆ:** ವೈದ್ಯಕೀಯ ಕ್ಷೇತ್ರದಲ್ಲಿ ಇತ್ತೀಚೆಗೆ ಆಗಿರುವ ಬೆಳವಣಿಗೆಯಿಂದಾಗಿ ಅಪಸ್ಮಾರ ಮಕ್ಕಳಲ್ಲಿ ಕಂಡುಬರುವುದು ಅಪರೂಪ. ಆದಾಗ್ಯೂ ಈ ಮಕ್ಕಳ ಶೈಕ್ಷಣಿಕ ನಿರ್ವಹಣೆಯ ಮಾಹಿತಿ ಇರುವುದು ಶಿಕ್ಷಕರಿಗೆ ಸಹಾಯಕ.

Digitised by Bharatavani, CIIL

• ಅಪಸ್ಮಾರದಿಂದ ಬಳಲುವ ಮಕ್ಕಳನ್ನು ತರಗತಿಯ ಎಲ್ಲಾ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳಬೇಕು.

• ಶಾಲೆಯ / ತರಗತಿಯ ಎಲ್ಲಾ ಮಕ್ಕಳಿಗೂ ಈ ತೊಂದರೆಯ ಬಗ್ಗೆ ತಿಳುವಳಿಕೆ ಕೊಡಬೇಕು. ಮೂಢನಂಬಿಕೆಗಳಿದ್ದರೆ ವೈಜ್ಞಾನಿಕ ಕಾರಣಗಳನ್ನು ನೀಡಿ ಅವನ್ನು ಹೋಗಲಾಡಿಸಬೇಕು.

• ಮಗುವಿನ ಕಲಿಕೆಗೆ ಏನಾದರೂ ಹೆಚ್ಚಿನ ಮಾರ್ಗದರ್ಶನ ಬೇಕಿದ್ದರೆ ತಪ್ಪದೆ ಅದನ್ನು ನೀಡಬೇಕು.

• ಮಗುವಿನಲ್ಲಿ ಏನಾದರೂ ವಿಶೇಷ ಸಾಮರ್ಥ್ಯವಿದ್ದರೆ ಅದನ್ನು ಪ್ರೋತ್ಸಾಹಿಸಿ ಕೀಳರಿಮೆಯಿಂದ ಹೊರಬರಲು ಸಹಕರಿಸಬೇಕು.

• ಪಠ್ಯಕ್ರಮದಲ್ಲಿ ಮಾರ್ಪಾಡಿನ ಅಗತ್ಯವಿಲ್ಲ. ಆದರೆ ಶಾಲೆಯ ತರಗತಿಯ ಮಾನಸಿಕ ಸಂವೇಗಾತ್ಮಕ ಪರಿಸರದಲ್ಲಿ ಮಾರ್ಪಾಟು ಅಗತ್ಯ. ಶಿಕ್ಷಕರು ಈ ಮಕ್ಕಳನ್ನು ಸಂಪೂರ್ಣವಾಗಿ ಸ್ವೀಕರಿಸಿ ಅವರೂ ಎಲ್ಲರಂತೆಯೇ ಎಂಬ ವಾತಾವರಣವನ್ನು ನಿರ್ಮಿಸಬೇಕು.

• ಸಮಯೋಚಿತ ಮಾರ್ಪಾಡು ಹಾಗೂ ಹೊಂದಾಣಿಕೆಯ ಮೂಲಕ ಈ ಮಕ್ಕಳು ಮುಖ್ಯವಾಹಿನಿಯಲ್ಲಿ ಮುಂದುವರಿಯುವಂತೆ ನೋಡಿಕೊಳ್ಳಬೇಕು. ಅವಕಾಶ ಕಲ್ಪಿಸಿಕೊಡುವುದು ಮುಖ್ಯ.

• ಮಗುವಿನ ಪರಿಸ್ಥಿತಿಯ ಬಗ್ಗೆ ಕರುಣೆ ಅನುಕಂಪ ಎಂದಿಗೂ ಸಲ್ಲದು.

3. **ಎಚ್ಚರಿಕೆ ಕ್ರಮಗಳು:** ಅಪಸ್ಮಾರದ ಆಘಾತ ಕಂಡು ಬಂದಾಗ ಶಿಕ್ಷಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕ್ರಮಗಳನ್ನು "ಎಪಿಲೆಪ್ಸಿ ಫೌಂಡೇಷನ್ ಆಫ್ ಅಮೆರಿಕಾ"ದವರು ಉಲ್ಲೇಖಿಸಿದ್ದಾರೆ. ಆ ಕ್ರಮಗಳನ್ನು ಇಲ್ಲಿ ನೀಡಲಾಗಿದೆ.

1. ಶಾಂತಚಿತ್ತರಾಗಿ ಶಿಕ್ಷಕರು ಪ್ರತಿಕ್ರಿಯಿಸುವ ರೀತಿಯಲ್ಲೇ ಮಕ್ಕಳು ಪ್ರತಿಕ್ರಿಯಿಸುತ್ತಾರೆ. ಆದ್ದರಿಂದ ಗೊಂದಲ, ಗಲಾಟೆ ತಗ್ಗಿಸಲು ಶಿಕ್ಷಕರು ಶಾಂತಚಿತ್ತರಾಗಿರುವುದು ಒಳಿತು.
2. ಒಮ್ಮೆ ಪ್ರಾರಂಭವಾದರೆ ಅ ಆಘಾತ ತನ್ನದೇ ಗತಿಯನ್ನು ಅನುಸರಿಸಿ ನಿಲ್ಲುತ್ತದೆ. ಮಧ್ಯದಲ್ಲಿ ಅದನ್ನು ತಡೆಯಲು ಸಾಧ್ಯವಿಲ್ಲ. ಆದ್ದರಿಂದ ಮಗುವಿನ ಅನಿಯತ ಚಲನೆಯನ್ನು ನಿರ್ಬಂಧಿಸದೆ, ಸುತ್ತಲಿರುವ ಅಡಚಣೆಗಳಿಂದ ಮಗು ಹಾನಿಮಾಡಿಕೊಳ್ಳದಂತೆ ಅದನ್ನು ನಿವಾರಿಸಿ ತಾಳ್ಮೆಯಿಂದ ಕಾಯಬೇಕು.
3. ಮಗುವಿನ ಸುತ್ತಮುತ್ತ ಏನಾದರೂ ಹರಿತವಾದ ವಸ್ತುವಿದ್ದರೆ ಅದನ್ನು ಸರಿಸಿ, ಮಗುವಿನ ಹಠಾತ್ ಚಲನೆಯಿಂದ ಕೈಕಾಲಿಗೆ ಪೆಟ್ಟಾಗುವುದನ್ನು ತಡೆಯಬೇಕು.
4. ಹಲ್ಲಿನ ಮಧ್ಯೆ ಏನನ್ನೂ ಇಡಲು ಪ್ರಯತ್ನಿಸಬಾರದು
5. ಉಡುಪು ಬಿಗಿಯಾಗಿದ್ದರೆ ಸಡಿಲಿಸಿ ಮುಖವನ್ನು ಪಕ್ಕಕ್ಕೆ ತಿರುಗಿಸಿ ಬಾಯಿಯಿಂದ ಮೂಗಿನಿಂದ ನೊರೆ ಬರುತ್ತಿದ್ದರೆ ಒರೆಸಿ ಇದರಿಂದ ಉಸಿರಾಟ ಸರಾಗವಾಗುತ್ತದೆ.
6. ಪ್ರಜ್ಞೆ, ತಿಳಿದು ಎದ್ದಾಗ ಮಗುವಿಗೆ ವಿಶ್ರಾಂತಿ ಕೊಡಬೇಕು.
7. ಪೋಷಕರನ್ನು ಸಂಪರ್ಕಿಸಿ ವಿಷಯ ತಿಳಿಸಬೇಕು.

**4. ಮಕ್ಕಳಲ್ಲಿ ಅಪಸ್ಮಾರದ ತೀವ್ರತೆಯನ್ನು ನಿಯಂತ್ರಿಸಲು ಕೆಲವು ಸಲಹೆಗಳು**

• ಅಪಸ್ಮಾರದ ವಿಧ ಯಾವುದೇ ಆದರೂ ಅದು ನಿಧಾನವಾಗಿ ಮಗುವಿನ ಬೆಳೆಯುವ ಮೆದುಳಿಗೆ ಹಾನಿಯುಂಟು ಮಾಡುತ್ತದೆ. ಆದ್ದರಿಂದ ಮೊದಲ ಆಘಾತ ಕಂಡ ತಕ್ಷಣ ವೈದ್ಯರಿಗೆ ತೋರಿಸಿ ಮುಂಬರುವ ಆಘಾತಗಳನ್ನು ಹತೋಟಿಯಲ್ಲಿಡಬೇಕು.

• ಅಪಸ್ಮಾರ ಪ್ರತಿಬಂಧಕ ಮಾತ್ರೆಯನ್ನು ತಪ್ಪದೇ ನೀಡಬೇಕು. ಯಾವುದೇ ಕಾರಣಕ್ಕೂ ಉದಾಸೀನತೆ ಇಲ್ಲಿ ಸಲ್ಲದು.

• ಮಗು ಬೆಳೆದಂತೆಯೇ ದೇಹದ ತೂಕಕ್ಕೆ ಔಷಧಿಯ ಪ್ರಮಾಣವನ್ನು ಹೊಂದಿಸಿಕೊಳ್ಳಬೇಕು. ಈ ಕಾರಣಕ್ಕಾಗಿ ವೈದ್ಯಕೀಯ ತಪಾಸಣೆಗೆ ಪದೇ ಪದೇ ಹೋಗಬೇಕು.

• ಅಪಸ್ಮಾರ ಪ್ರತಿಬಂಧಕ ಮಾತ್ರೆ ನೀಡುವ ಸಮಯದಲ್ಲಿ ಸಮತೋಲಿತ ಆಹಾರ ಮತ್ತು ವಿಶ್ರಾಂತಿ ಅವಶ್ಯಕ. ಮಗುವಿಗೂ ಇದರ ಬಗ್ಗೆ ಮಾಹಿತಿ ಇರುವುದು ಒಳಿತು.

• ರಕ್ತದಲ್ಲಿ ಕೆಂಪು ರಕ್ತಕಣ ಕಡಿಮೆಯಾದರೆ ಔಷಧಿ ನಿರೀಕ್ಷಿತ ಪರಿಣಾಮ ಬೀರುವುದಿಲ್ಲ. ಆದ್ದರಿಂದ ರಕ್ತಪರೀಕ್ಷೆ ಆಗಾಗ್ಗೆ ಮಾಡಿಸಬೇಕಾಗುತ್ತದೆ ಕಬ್ಬಿಣಾಂಶ ಅಧಿಕವಿರುವ ಆಹಾರ ಸೇವನೆ ಕಟ್ಟುನಿಟ್ಟಾಗಿ ಪಾಲಿಸಬೇಕು.

–ಐ.ಪಿ.ಗೌ.

## ಅಪೂರ್ಣ ಸಾಧಕರ ಶಿಕ್ಷಣ

ಒಂದು ರೀತಿಯಲ್ಲಿ ಎಲ್ಲರೂ ಅಪೂರ್ಣ ಸಾಧಕರೇ ಆಗಿರುತ್ತಾರೆ. ಎಲ್ಲರೂ ಸಮಗ್ರ ಮೆದುಳಿನ ಸಾಮರ್ಥ್ಯದಲ್ಲಿ ಶೇಕಡಾವಾರು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸುತ್ತೇವೆ ಎಂಬುದನ್ನು ಸಂಶೋಧನಾ ಅಧ್ಯಯನಗಳು ತಿಳಿಸಿವೆ. ನಾವು ಮಾಡುವ ಕಾರ್ಯಗಳನ್ನು ನಾವು ಇನ್ನಷ್ಟು ಉತ್ತಮಗೊಳಿಸಬಹುದಿತ್ತು ಎಂಬುದನ್ನು ಬಹಳಷ್ಟು ಮಟ್ಟಿಗೆ ಎಲ್ಲರೂ ಒಪ್ಪುತ್ತಾರೆ. ಶಾಲಾ ಕಾರ್ಯಗಳಲ್ಲಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ 'ಉತ್ತಮಗೊಳಿಸಲು ನಿಮ್ಮಿಂದ ಸಾಧ್ಯವಿದೆ' ಎನ್ನುವ ಟಿಪ್ಪಣಿಯನ್ನು ನೋಡುತ್ತೇವೆ.

ಅಪೂರ್ಣ ಸಾಧಕರು ಸಾಕಷ್ಟು ಸಾಮರ್ಥ್ಯವನ್ನು ಪಡೆದಿದ್ದು, ಆದರೆ ಸಾಮರ್ಥ್ಯಕ್ಕೆ ಅನುಗುಣವಾಗಿ ಅಭಿವ್ಯಕ್ತಪಡಿಸುವುದಿಲ್ಲ. ಎಲ್ಲಾ ಸಾಮಾಜಿಕ, ಆರ್ಥಿಕ ಸಾಮರ್ಥ್ಯಗಳ ಶ್ರೇಣಿಯಲ್ಲಿ ಅಪೂರ್ಣ ಸಾಧಕರನ್ನು ಕಾಣುತ್ತೇವೆ. ಶಿಕ್ಷಕರು, ಪೋಷಕರು ಸಾಮಾನ್ಯವಾಗಿ ಇವರನ್ನು ಸೋಮಾರಿಗಳು, ಮನೋಧೋರಣೆಯ ಸಮಸ್ಯೆಗಳನ್ನು ಪಡೆದಿದ್ದಾರೆ ಎನ್ನುತ್ತಾರೆ. ಶಾಲೆ ಮತ್ತು ಕುಟುಂಬದಲ್ಲಿ ಸಮಸ್ಯೆಗಳಿಗೆ ಈಡಾಗುವ ಸಾಧ್ಯತೆ ಇದೆ. ಯಾರೂ ಈ ಸಮಸ್ಯೆಯನ್ನು ವಿಶೇಷವಾಗಿ ಗಮನಿಸುವುದಿಲ್ಲ.

ಸಾಮರ್ಥ್ಯದ ಮಟ್ಟಕ್ಕೆ ಅನುಗುಣವಾಗಿ ಸಾಧನೆ ತೋರದವರಿಗೆ ಅಪೂರ್ಣ ಸಾಧಕರು ಎಂದು ಕರೆಯುವರು. ನಿರೀಕ್ಷಿತ ಸಾಧನೆಗಿಂತ ಕಡಿಮೆ ಸಾಧಿಸುವವರೇ ಅಪೂರ್ಣ ಸಾಧಕರು. ಬುದ್ಧಿಶಕ್ತಿ ಪರೀಕ್ಷೆಗಳು ಸೂಚಿಸಿದ್ದಕ್ಕಿಂತ ಕಡಿಮೆ ಸಾಧಿಸುವ ಮಕ್ಕಳನ್ನು ಅಪೂರ್ಣ ಸಾಧಕ ಮಕ್ಕಳು ಎಂದು ಕರೆಯುವರು. ಒಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಸಾಮರ್ಥ್ಯ ಅವನ ಮಾನಸಿಕ ಸಾಮರ್ಥ್ಯಕ್ಕಿಂತ ಗಣನೀಯವಾಗಿ ಕಡಿಮೆ ಶ್ರೇಣಿಯಲ್ಲಿದ್ದರೆ ಅವನನ್ನು ಅಪೂರ್ಣ ಸಾಧಕ ಎನ್ನಬಹುದು.

ಅಪೂರ್ಣ ಸಾಧಕರನ್ನು ಪೂರ್ಣ ಸಾಧಕರನ್ನಾಗಿಸುವುದು ಅತಿ ಮುಖ್ಯ ಹಾಗೂ ಹೆಚ್ಚಿನ ಕ್ಲಿಷ್ಟತೆಯನ್ನು ಹೊಂದಿರುವ ವಿಷಯವಾಗಿದೆ. ವಿದ್ಯಾರ್ಥಿಗಳ ಅಪೂರ್ಣ ಸಾಧನೆಗೆ ಕೇವಲ ಆ ವಿದ್ಯಾರ್ಥಿಗಳೇ ಕಾರಣವಾಗಿರುವುದಿಲ್ಲ. ಬದಲಾಗಿ ಅವರು ತಮ್ಮ ಕುಟುಂಬ, ಶಾಲೆ ಹಾಗೂ ಸಮಾಜದೊಂದಿಗೆ ಹೊಂದಿರುವ ಸಂಬಂಧವೂ ಕೂಡ ಕಾರಣವಾಗಿರುತ್ತದೆ. ಶಿಕ್ಷಣದ ಮೂಲಕ ಅಪೂರ್ಣ ಸಾಧಕರ ಸಾಧನೆಯು

Digitised by Bharatavani, CIIL

ಅತಿ ಕ್ಲಿಷ್ಟಕರವಾಗಿದ್ದು, ಇದಕ್ಕೆ ಕುಟುಂಬ, ಶಾಲೆ ಹಾಗೂ ಸಮಾಜದ ಭಾಗವಹಿಸುವಿಕೆಯು ಹೆಚ್ಚಿನ ಮಹತ್ವ ಹೊಂದಿದೆ. ಈ ಕುಟುಂಬ ಶಾಲೆ ಹಾಗೂ ಸಮಾಜದ ಪಾತ್ರವನ್ನು ಅರ್ಥಮಾಡಿಕೊಂಡಿದ್ದರೆ ಅಲ್ಪ ಸಾಧಕರಿಗೆ ಕಲಿಯಲು ಸಹಾಯ ಹಾಗೂ ಪರಿಹಾರಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ, ಮನೋವೈಜ್ಞಾನಿಕ ಸಹಾಯವನ್ನು ಒದಗಿಸುವುದರ ಮೂಲಕ ಪರಿಣಾಮಕಾರಿಯಾಗಿ ಶಿಕ್ಷಣವನ್ನು ನೀಡಬಹುದಾಗಿದೆ.

ಯಾವುದೇ ಒಂದು ಸಂಘಟನೆ ಅಥವಾ ಗುಂಪಿನಲ್ಲಿ ಹಿಂಬೀಳಿಕೆಯನ್ನು ಕಾಣಬಹುದು. "ಅಪೂರ್ಣ ಸಾಧಕರು" ಎಂಬುದು ಶಿಕ್ಷಣದ ಒಂದು ಮುಖ್ಯ ವಿಷಯವಾಗಿದ್ದು, ಇದು ಶಿಕ್ಷಣ ಮತ್ತು ಬೋಧನೆಯ ಗುಣಮಟ್ಟವನ್ನು ಸುಧಾರಿಸಲು ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣವನ್ನು ನೀಡಲು ಅಡ್ಡಿಯಾಗಿದೆ. ಅನೇಕ ಅನುಭವಿಗಳು, ಶಿಕ್ಷಣತಜ್ಞರು, ಬೋಧಕರು ಈ ವಿಷಯದ ಮೇಲೆ ಸಮಗ್ರವಾದ ಮತ್ತು ಆಳವಾದ ಅಧ್ಯಯನಮಾಡಿ ಅಪೂರ್ಣ ಸಾಧಕರ ಶಿಕ್ಷಣದ ವಿವಿಧ ಕ್ರಮಗಳನ್ನು ತಿಳಿಸಿರುತ್ತಾರೆ. ಆದರೆ ಅಪೂರ್ಣ ಸಾಧಕರ ಶಿಕ್ಷಣವನ್ನು ಸುಧಾರಿಸಬೇಕಾದರೆ ಅವರ ಇಂದಿನ ಸಾಧನೆಯನ್ನು, ಮನೋವೈಜ್ಞಾನಿಕ ಗುಣಲಕ್ಷಣಗಳನ್ನು ಹಿಂಬೀಳಿಕೆಗೆ ಕಾರಣಗಳನ್ನು ಅಲ್ಲದೇ ಅವುಗಳಿಗೆ ಸಂಬಂಧಿಸಿದಂತೆ ಪರಿಹಾರಾತ್ಮಕ ಅಂಶಗಳನ್ನು ಆಳವಾದ ವಿಶ್ಲೇಷಣೆಗೆ ಒಳಪಡಿಸುವುದು ಅವಶ್ಯಕವಾಗಿದೆ.

ಸಾಮಾನ್ಯವಾಗಿ ಅಪೂರ್ಣ ಸಾಧಕರು ಕಲಿಕೆಯಲ್ಲಿ ಕ್ಲಿಷ್ಟತೆಯನ್ನು ಅನುಭವಿಸುವರು. ಕಲಿಕೆಯಲ್ಲಿನ ಕ್ಲಿಷ್ಟತೆ ಎಂದರೆ; ಕಲಿಕೆಯ ವಿಧಾನ, ಕಲಿಕಾ ಪ್ರೇರಕ, ಇಚ್ಛೆ ಹಾಗೂ ಕಲಿಕೆ ಬಗ್ಗೆ ಮನೋಧೋರಣೆಯಲ್ಲಿ ದೋಷಗಳ ಮೂಲಕ ಇವರ ಶೈಕ್ಷಣಿಕ ಸಾಧನೆಯು ಕಡಮೆಯಾಗುವುದು. ಸಾಮಾನ್ಯವಾಗಿ ಈ ರೀತಿಯ ವಿದ್ಯಾರ್ಥಿಗಳು ಸಾಮಾನ್ಯ ಮಟ್ಟದ ಅಥವಾ ಹೆಚ್ಚಿನ ಬುದ್ಧಿಶಕ್ತಿಯನ್ನು ಹೊಂದಿರುವರು. ಆದರೆ ಇತರ ವಿದ್ಯಾರ್ಥಿಗಳಿಗಿಂತ ಈ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಸಾಧನೆಯ ಪ್ರಮಾಣ ಕಡಿಮೆಯಾಗಿರುವುದು. ಈ ವಿದ್ಯಾರ್ಥಿಗಳು ಶಾಲಾ ಕಲಿಕೆಗೆ ಬೇಕಾದ ಮೂಲಭೂತ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಫಲತೆಯನ್ನು ಹೊಂದುವರು. ಕೆಲವು ವಿದ್ಯಾರ್ಥಿಗಳಲ್ಲಿ ಉತ್ತಮ ಕಲಿಕಾ ಪ್ರೇರಣೆಗಳು ಹಾಗೂ ಗುರಿಗಳಿಲ್ಲದೆ, ತಮ್ಮ ಜೀವನದ ಗುರಿಯನ್ನು ಗುರುತಿಸುವುದು ಸಾಧ್ಯವಾಗುವುದಿಲ್ಲ. ಇವರಲ್ಲಿ ಜ್ಞಾನ ಸಂಪಾದನೆಯ ದಾಹ, ಕುತೂಹಲ, ಕಲಿಕೆಯಲ್ಲಿ ಆಸಕ್ತಿ, ಉತ್ತಮ ಕಲಿಕೆಯ ಪ್ರೇರಣೆಗಳು ಇರುವುದಿಲ್ಲ. ಸಾಮಾನ್ಯವಾಗಿ ಉತ್ತಮ ಕಲಿಕ ಹವ್ಯಾಸಗಳ ಕೊರತೆ ಇವರಲ್ಲಿ ಕಂಡುಬರುವುದು, ಕೆಲವರು ಪರೀಕ್ಷಾ ದೃಷ್ಟಿಗಾಗಿ ಹಾಗೂ ಪೋಷಕರ ಮತ್ತು ಶಿಕ್ಷಕರ ಹೆದರಿಕೆಗೆ ಕಲಿಯುವ ಮನೋಭಾವ ಹೊಂದಿದವರಾಗಿರುತ್ತಾರೆ.

**ಅಪೂರ್ಣ ಸಾಧನೆಗೆ ಕಾರಣಗಳು :** ವಿದ್ಯಾರ್ಥಿಗಳ ಮನೋವೈಜ್ಞಾನಿಕ ವಿಕಾಸದ ಬೆಳವಣಿಗೆಯಲ್ಲಿನ ಅನುಭವಗಳು, ಕಲಿಕೆ ಮತ್ತು ಆಂತರಿಕ ಬಾಹ್ಯ ಪರಿಸರ, ಪೋಷಕರ ಶಿಕ್ಷಣದ ಮಟ್ಟ, ಅಂತರ್ ವೈಯಕ್ತಿಕ ಸಂಬಂಧಗಳು ಮುಂತಾದವುಗಳೆಲ್ಲವೂ ವಿದ್ಯಾರ್ಥಿಗಳ ಬೆಳವಣಿಗೆಯ ಮೇಲೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರಭಾವವನ್ನು ಬೀರುವವು. ವಸ್ತುನಿಷ್ಠವಾಗಿ ಹೇಳುವುದಾದರೆ, ಒಂದೇ ರೀತಿಯ ಕಲಿಕಾ ಮತ್ತು ಜೈವಿಕ/ಭೌತಿಕ ಪರಿಸರ ಇದ್ದರೂ ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ.

ವಿದ್ಯಾರ್ಥಿಗಳ ಅಪೂರ್ಣ ಸಾಧನೆಗೆ ಕಾರಣಗಳನ್ನು ವಿಶ್ಲೇಷಿಸಿದಾಗ, ವ್ಯಕ್ತಿ ಕೇಂದ್ರಿತ ಹಾಗೂ ವಿದ್ಯಾರ್ಥಿಗಳ ಅಭಿಕ್ಷಮತೆಯ ಆಧಾರದ ಮೇಲೆ ಮಾಡುವ ಬೋಧನೆ ಅಲ್ಪ ಸಾಧಕರ ಸಮಸ್ಯೆಯ ಪರಿಹಾರಕ್ಕೆ ಸಹಾಯ ಮಾಡುವುದು ಎಂದು ತಿಳಿದುಬರುತ್ತದೆ.

ಈ ಕೆಳಗೆ ತಿಳಿಸಿದ 4 ಅಂಶಗಳು ವಿದ್ಯಾರ್ಥಿಗಳ ಅಪೂರ್ಣ ಸಾಧನೆಗೆ ಕಾರಣಗಳಾಗಿವೆ.

1. **ವಿದ್ಯಾರ್ಥಿಯ ವೈಯಕ್ತಿಕ ಕಾರಣಗಳು:** ವಿದ್ಯಾರ್ಥಿಯ ವೈಯಕ್ತಿಕ ಪರಿಸ್ಥಿತಿ ತಾನು ಇತರ ವಿದ್ಯಾರ್ಥಿಗಳಿಗಿಂತ ಭಿನ್ನ ಎಂದು ತಿಳಿಯುವುದರಲ್ಲಿ ಪಾತ್ರ ವಹಿಸುತ್ತದೆ. ಕೆಲವು ವಿದ್ಯಾರ್ಥಿಗಳು ದೈಹಿಕ ನ್ಯೂನತೆಯನ್ನು ಹೊಂದಿದ್ದರೆ, ಇನ್ನೂ ಕೆಲವರು ಮನೋವೈಜ್ಞಾನಿಕ ಸಮಸ್ಯೆಗಳಿಗೆ ಒಳಪಟ್ಟಿರುತ್ತಾರೆ. ಜೊತೆಗೆ ಮನೋವೈಜ್ಞಾನಿಕವಾಗಿ ಅಭದ್ರ ಕಲಿಕಾ ಸನ್ನಿವೇಶಗಳು ಹಾಗೂ ಪರಿಸರಗಳನ್ನು ಒದಗಿಸಿದಾಗ ಅವರ ಬೆಳವಣಿಗೆಗೆ ಇವು ಅತಿ ಹೆಚ್ಚಿನ ಪ್ರಮಾಣದಲ್ಲಿ ಅಡ್ಡಿಪಡಿಸುವುವು. ಈ ಸನ್ನಿವೇಶದಲ್ಲಿ ಕೆಲವು ವಿದ್ಯಾರ್ಥಿಗಳು ಕೀಳುತನ ಅನುಭವಿಸಿದರೆ, ಇನ್ನು ಕೆಲವರು ತಮ್ಮ ಪರಿಸರದೊಂದಿಗೆ ಉತ್ತಮ ಹೊಂದಾಣಿಕೆಯನ್ನು ಮಾಡಿಕೊಳ್ಳದೆ ಸಂಕುಚಿತ ಹಾಗೂ ಅತೃಪ್ತ ಮನೋಭಾವನೆಯನ್ನು ತಾಳುವರು. ಹೀಗೆ ಕೆಲವು ವಿದ್ಯಾರ್ಥಿಗಳಲ್ಲಿ ಋಣಾತ್ಮಕ ಮನೋಭಾವ ಹಾಗೂ ಋಣಾತ್ಮಕ ಆಲೋಚನೆಗಳು ಬೇರೂರುವುವು. ಕೆಲವು ವಿದ್ಯಾರ್ಥಿಗಳು ಅತಿ ಹೆಚ್ಚು ಆಟದ ಕಡೆಗೆ ತಮ್ಮನ್ನು ತಾವು ತೊಡಗಿಸಿಕೊಂಡರೆ, ಕೆಲವರು ಸ್ವಯಂ ನಿಯಂತ್ರಣ ಕಳೆದುಕೊಳ್ಳುವರು.

2. **ಕೌಟುಂಬಿಕ ಕಾರಣಗಳು:** ಪೋಷಕರೇ ಮಕ್ಕಳ ಮೊದಲ ಗುರುಗಳಾಗಿರುವರು. ಹೀಗಾಗಿ ಪೋಷಕರ ವರ್ತನೆಯು ವಿದ್ಯಾರ್ಥಿಗಳ ವರ್ತನೆ ಮತ್ತು ಬೆಳವಣಿಗೆಯಲ್ಲಿ ಅಗಾಧವಾದ ಪ್ರಭಾವವನ್ನು ಬೀರುವುದು. ಕೆಲವು ಪೋಷಕರು ಮಕ್ಕಳೆದುರು ಆದರ್ಶಯುತ ಪಾತ್ರವನ್ನು ನಿರ್ವಹಿಸುವುದಿಲ್ಲ. ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೂರ ಸರಿದು, ಸಮಾಧಾನಯುತ ಮನಸ್ಸನ್ನು ತೋರಿಸದೆ, ವಿದ್ಯಾರ್ಥಿಗಳಿಗೆ ಸೂಕ್ತ ವಿಧಾನದಲ್ಲಿ ಶಿಕ್ಷಣವನ್ನು ದೊರಕಿಸಿಕೊಡುವುದಿಲ್ಲ. ಇದರಿಂದಾಗಿ ಈ ಮಕ್ಕಳಲ್ಲಿ ಮನೋವೈಜ್ಞಾನಿಕವಾಗಿ ಹಿಂಬೀಳಿಕೆಯನ್ನು ಕಾಣಬಹುದು. ಕೆಲವು ಪೋಷಕರು ತಮ್ಮ ಹೆಚ್ಚಿನ ಕೆಲಸದ ಹೊರೆಯ ಕಾರಣದಿಂದಾಗಿ ಮಕ್ಕಳೊಂದಿಗೆ ಸೂಕ್ತ ಸಂವಹನ ಹೊಂದಿರದೆ ಕೇವಲ ಆರ್ಥಿಕ ಸಹಾಯವನ್ನಷ್ಟೇ ನೀಡಿ, ಯಾವುದೇ ರೀತಿಯಾಗಿ ಮಕ್ಕಳ ಶೈಕ್ಷಣಿಕ ಸಾಧನೆಯ ಮೇಲ್ವಿಚಾರಣೆ ಮಾಡುವುದಿಲ್ಲ. ಇದರಿಂದಾಗಿ ಮಕ್ಕಳ ಪೋಷಕರ ನಡುವೆ ಸರಿಯಾದ ಹೊಂದಾಣಿಕೆ ಏರ್ಪಡದೆ, ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ಇಲ್ಲದಂತಾಗುತ್ತದೆ.

3. **ಶಾಲಾ ಕಾರಣಗಳು:** ಮಕ್ಕಳ ಅಪೂರ್ಣ ಸಾಧನೆಗೆ ವೈಯಕ್ತಿಕ ಅಂಶಗಳು ಮತ್ತು ಕೌಟುಂಬಿಕ ಅಂಶಗಳು ಅಂತರ್ ಸಂಬಂಧವನ್ನು ಹೊಂದಿವೆ. ಶಾಲೆಯಲ್ಲಿನ ಶಿಕ್ಷಣ ಹಾಗೂ ನಿರ್ವಹಣಾ ಅಂಶಗಳೂ ಇದಕ್ಕೆ ಕಾರಣವಾಗಿವೆ ಎಂಬುದನ್ನು ಮರೆಯುವಂತಿಲ್ಲ. ಸೂಕ್ತ ಮಾರ್ಗದರ್ಶನ ಹಾಗೂ ಸಂಬಂಧಗಳ ಕೊರತೆಯಿಂದ ವಿದ್ಯಾರ್ಥಿಗಳಲ್ಲಿ ಅನೇಕ ರೀತಿಯ ಸಮಸ್ಯೆಗಳು ಉದ್ಭವಗೊಂಡು, ವಿದ್ಯಾರ್ಥಿಗಳು ತಪ್ಪು ಮಾಡುವ ಸಾಧ್ಯತೆ ಇರುವುದು. ಹಲವಾರು ಬಾರಿ ಈ ಪರಿಸ್ಥಿತಿಗೆ ಎದುರಾದಾಗ ವಿದ್ಯಾರ್ಥಿಗಳು ಪೂರ್ಣ ಸಾಧನೆ ಮಾಡುವುದಿಲ್ಲ. ಸೂಕ್ತ ಮಾರ್ಗದರ್ಶನವಿಲ್ಲದ, ಸರಳವಾದ ಹಾಗೂ ಅಪೂರ್ಣ ಬೋಧನಾ ವಿಧಾನಗಳಿಂದ ಬೋಧಿಸಿದಾಗ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದೆ ಬೀಳುವರು.

4. **ಸಾಮಾಜಿಕ ಕಾರಣಗಳು :** ಇಂದಿನ ಸಮಾಜದ ಬದಲಾಗುತ್ತಿರುವ ರೂಪವನ್ನು ನೋಡಿದಾಗ ಅದು ಮೋಸದಿಂದ ಕೂಡಿದ,

Digitised by Bharatavani, CIIL

ವ್ಯಾಪಾರಿ ಮನೋಧೋರಣೆಯನ್ನು ಹೊಂದಿದ, ಕಳ್ಳತನ – ಮೋಸ ಮಾಡುವವರನ್ನು ಸೃಷ್ಟಿಸುತ್ತಿದೆ. ಅಲ್ಲದೆ ಸಮಾಜದ ಎಲ್ಲೆಡೆಯೂ ಮೌಲ್ಯವನ್ನು ಕಳೆದುಕೊಂಡು, ಕೇವಲ ಲಾಭಕ್ಕಾಗಿ ಇತರರನ್ನು ಶೋಷಿಸುವ ಜನರನ್ನು ಕಾಣಬಹುದು. ಇಂತಹ ವಾತಾವರಣದಲ್ಲಿ ವಿದ್ಯಾರ್ಥಿಗಳು ಬದುಕಬೇಕಾಗಿರುವುದರಿಂದ ಉತ್ತಮ ಸಾಮರ್ಥ್ಯವನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮನ್ನಣೆ ಸಿಗದೆ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯ ಮತ್ತು ದಕ್ಷತೆಗಳನ್ನು ನಿರ್ಲಕ್ಷಿಸುವುದು ಈ ಕಾರಣದಿಂದಾಗಿ ವಿದ್ಯಾರ್ಥಿಗಳು ತಮ್ಮಲ್ಲಿ ಉತ್ತಮ ಜೀವನದ ತತ್ವಗಳನ್ನು ಬೆಳೆಸಿಕೊಳ್ಳುವುದಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಸಮಾಜದ ಕೆಟ್ಟ ಜನರೊಂದಿಗೆ ಒಂದಾಗಿ ಹೆಚ್ಚಿನ ಲಾಭ ಪಡೆಯಬೇಕೆಂಬ ಉದ್ದೇಶದಿಂದ ಪೂರ್ಣ ಮನಸ್ಸಿನಿಂದ ಆಸಕ್ತಿಯಿಂದ ಕಲಿತುಕೊಳ್ಳದೆ ಅಪೂರ್ಣವಾದ ಸಾಧಕರಾಗುವ ಸಾಧ್ಯತೆ ಹೆಚ್ಚು.

**ಅಪೂರ್ಣ ಸಾಧಕರ ಶಿಕ್ಷಣಕ್ಕೆ ತೆಗೆದುಕೊಳ್ಳಬಹುದಾದ ಮೂಲಭೂತ ಕ್ರಮಗಳು:** ಅಪೂರ್ಣ ಸಾಧಕರಿಗೆ ಸೂಕ್ತ ಶಿಕ್ಷಣವನ್ನು ಒದಗಿಸಿ, ಅವರನ್ನು ಪೂರ್ಣ ಸಾಧಕರನ್ನಾಗಿಸುವುದು ಸಂಕೀರ್ಣವಾದ ಮತ್ತು ಕ್ಲಿಷ್ಟತೆಯ ಕಾರ್ಯವಾಗಿದೆ. ಪರಿಣಿತರ ಪ್ರಕಾರ ಅಪೂರ್ಣ ಸಾಧಕರ ಶಿಕ್ಷಣಕ್ಕೆ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ:

**1. ಶಾಲೆ, ಕುಟುಂಬ ಹಾಗೂ ಸಮಾಜದ ಶಕ್ತಿಗಳ ಕೇಂದ್ರೀಕರಣ:** ಶಿಕ್ಷಣವನ್ನು ನೀಡುವ ಶಾಲೆಯಷ್ಟೇ ಅಲ್ಲದೇ, ಕುಟುಂಬ ಹಾಗೂ ಸಮಾಜಗಳೂ ವಿದ್ಯಾರ್ಥಿಗಳ ಮೇಲೆ ಪ್ರಭಾವವನ್ನು ಬೀರುವುವು. ಈಗಿನ ಶಿಕ್ಷಣದಲ್ಲಿ, ಅದೂ ವಿಶೇಷವಾಗಿ ಅಪೂರ್ಣ ಸಾಧಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಾಲೆಯ ಶಿಕ್ಷಣ ಮತ್ತು ಪರಿಹಾರಾತ್ಮಕ ಶಿಕ್ಷಣ ಇವುಗಳ ಐಕ್ಯತೆಯು ಸಾಧ್ಯವಾಗುತ್ತಿಲ್ಲ. ಶಾಲೆಯಲ್ಲಿ ಮುಂಗಡವಾಗಿ ವಿದ್ಯಾರ್ಥಿಗಳಿಗೆ ಧನಾತ್ಮಕ ಶಿಕ್ಷಣ ಮತ್ತು ನೀತಿ ಹೇಳಲಾಗುತ್ತಿದ್ದರೂ ಸಮಾಜದಲ್ಲಿನ ಅಹಿತಕರವಾದ ಅಂಶಗಳು ವಿದ್ಯಾಥಿಗಳ ಮೇಲೆ ಋಣಾತ್ಮಕವಾದ ಪ್ರಭಾವವನ್ನು ಬೀರುವುವು. ಹೀಗಾಗಿ ಶಾಲೆ, ಸಮಾಜ ಮತ್ತು ಕುಟುಂಬಗಳ ಶಕ್ತಿಗಳ ಕೇಂದ್ರೀಕರಣವು ಅಪೂರ್ಣ ಸಾಧಕರ ಶಿಕ್ಷಣದಲ್ಲಿ ಮಹತ್ವಪೂರ್ಣ ಪಾತ್ರ ವಹಿಸುವುವು. ಶಾಲೆಯು ಪೋಷಕರೊಂದಿಗೆ ಸಂವಹನ ನಡೆಸಿ, ವಿದ್ಯಾರ್ಥಿಗಳ ಸಾಧನೆಯ ಕುರಿತು ನಿಯಮಿತವಾಗಿ ಮಾಹಿತಿಯನ್ನು ನೀಡುವುದು ಒಳಿತು. ಶಿಕ್ಷಕರು ವಿದ್ಯಾರ್ಥಿಗಳ ಮನೆಗೆ ಭೇಟಿ ಕೊಡುವುದರ ಮೂಲಕ ಅಲ್ಲಿನ ಜೀವನ ಮತ್ತು ಪೋಷಕರ ಆಲೋಚನೆಗಳನ್ನು ತಿಳಿಯುವುದು ಅಥವಾ ಪತ್ರದ ಮುಖಾಂತರ ಇಲ್ಲವೇ ದೂರವಾಣಿಯ ಮುಖಾಂತರ ಸಂಪರ್ಕಿಸಿ, ಪೋಷಕರೊಂದಿಗೆ ಸಂವಹನವನ್ನು ನಡೆಸಿ, ವಿದ್ಯಾರ್ಥಿಗಳು ಶಾಲೆಗೆ ತಡವಾಗಿ ಬರುವುದು ಅಥವಾ ಗೈರು ಹಾಜರಾಗುವುದನ್ನು ತಿಳಿಸುವುದು ಸೂಕ್ತ. ಅಲ್ಲದೆ ಪೋಷಕರೂ ತಮ್ಮ ಮನೆಯ ಮೂಲ ಪರಿಸ್ಥಿತಿಗಳನ್ನು ಶಿಕ್ಷಕರಿಗೆ ತಿಳಿಸಬೇಕು. ಇದರಿಂದ ಅಪೂರ್ಣ ಸಾಧಕರ ಶಿಕ್ಷಣಕ್ಕೆ ಒಂದು ಪರಿಣಾಮಕಾರಿ ಮಾರ್ಗವನ್ನು ಕಂಡುಹಿಡಿಯಬಹುದಾಗಿದೆ. ಇದರ ಜೊತೆಗೆ ಸಾಮಾಜಿಕ ಶೈಕ್ಷಣಿಕ ಸಂಪನ್ಮೂಲಗಳಾದ ವಸ್ತು ಸಂಗ್ರಹಾಲಯ, ವಿಜ್ಞಾನ ಸಂಗ್ರಹಾಲಯಗಳು, ದೇಶಭಕ್ತಿ ಶಿಕ್ಷಣ ಮುಂತಾದವುಗಳನ್ನು ಅಪೂರ್ಣ ಸಾಧಕರ ಶಿಕ್ಷಣದಲ್ಲಿ ಬಳಸಿಕೊಳ್ಳಬಹುದು. ಅಲ್ಲದೇ, ಹಲವಾರು ವ್ಯಕ್ತಿಗಳ ಆದರ್ಶಯುತ ಸಾಧನೆಗಳನ್ನು ಅನೇಕ ತಿಳಿಸಿಕೊಡುವ ಮೂಲಕ ಅಪೂರ್ಣ ಸಾಧಕರಲ್ಲಿ ಶೈಕ್ಷಣಿಕ ಪ್ರಜ್ಞೆ ಮತ್ತು ಸಾಧನಾ ಮನೋಭಾವವನ್ನು ಹೆಚ್ಚಿಸಬಹುದು.

**2. ಅಪೂರ್ಣ ಸಾಧಕರ ಶಿಕ್ಷಣಕ್ಕಾಗಿ ಸಲಹೆ ಮತ್ತು ಮಾರ್ಗದರ್ಶನಕ್ಕೆ ಹೆಚ್ಚಿನ ಒತ್ತು ನೀಡುವುದು :** ಸಲಹೆ ಮತ್ತು ಶಿಕ್ಷಣಕ್ಕೆ ಒತ್ತು ನೀಡುವುದು. ಎಂಬುದಕ್ಕೆ ಎರಡು ಅರ್ಥಗಳನ್ನು ಕಲ್ಪಿಸಬಹುದಾಗಿದೆ. ಮೊದಲನೆಯದಾಗಿ, ಅತಿ ಹೆಚ್ಚಿನ ಹಿಂಬೀಳಿಕೆ ಕಂಡು ಬರುವ ವಿದ್ಯಾರ್ಥಿಗಳನ್ನು ಆಯ್ದು ಅವರಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುವುದು ಹಾಗೂ ಎರಡನೆಯದಾಗಿ, ಅಪೂರ್ಣ ಸಾಧಕರ ಹಿಂಬೀಳಿಕೆಯ ಪ್ರಮುಖ ಕಾರಣಗಳನ್ನು ವಿಶ್ಲೇಷಿಸಿ ಅವುಗಳನ್ನು ನಿವಾರಿಸಲು ಪ್ರಯತ್ನಿಸುವುದು.

ಅಪೂರ್ಣ ಸಾಧಕರಲ್ಲಿಯೂ ವ್ಯಕ್ತಿ ವ್ಯತ್ಯಾಸಗಳಿವೆ. ಕೆಲವರು ಶೈಕ್ಷಣಿಕ ಸಾಧನೆಯಲ್ಲಿ ಹಿಂದುಳಿದರೆ, ಕೆಲವರು ನೈತಿಕ ಆಲೋಚನೆಯಲ್ಲಿ ಮತ್ತು ಕೆಲವರು ಮನೋವೈಜ್ಞಾನಿಕ ಗುಣಮಟ್ಟದಲ್ಲಿ ಹಿಂದುಳಿದವರಾಗಿರುತ್ತಾರೆ. ಅನೇಕ ಶೈಕ್ಷಣಿಕ ಪರಿಣಿತರ ಪ್ರಕಾರ "ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೊರಸೆಳೆಯುವುದರ ಮೂಲಕ ಅವರು ತಮ್ಮಲ್ಲಿಯ ನ್ಯೂನತೆಯನ್ನು ಕಡಿಮೆಗೊಳಿಸಿಕೊಳ್ಳುವಂತೆ ಮಾಡುವುದು ಅವಶ್ಯಕವಾಗಿದೆ. ಅಪೂರ್ಣ ಸಾಧಕರ ವಿಭಿನ್ನ ಗುಣಲಕ್ಷಣಗಳನ್ನು ಅರಿತು. ಅವರ ಅಭಿಕ್ಷಮತೆಗೆ ಅನುಗುಣವಾಗಿ ಶಿಕ್ಷಕರು ಬೋಧನೆಯನ್ನು ನೀಡಬೇಕಾಗುತ್ತದೆ. ಜೀವನದ ಗುಣಮಟ್ಟ ಹಾಗೂ ವರ್ತನೆಯಲ್ಲಿನ ದೋಷಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಉತ್ತಮ ಜೀವನದ ತಾತ್ವಿಕತೆಯನ್ನು, ಉತ್ತಮ ಮೌಲ್ಯಗಳನ್ನು, ಶಿಸ್ತಿನ ಅರಿವನ್ನು, ಸಾಮಾಜಿಕ ನೈತಿಕ ಪರಿಕಲ್ಪನೆ, ಸ್ವಯಂ ಶಿಸ್ತು ಹಾಗೂ ಸ್ವಯಂ ನಿರ್ವಹಣೆಯಂತಹ ಮಹತ್ತರವಾದ ಅಂಶಗಳನ್ನು ರೂಢಿಸಿಕೊಳ್ಳುವಂತೆ ಮಾಡುವುದು ಶಿಕ್ಷಕರ ಕರ್ತವ್ಯವಾಗಿದೆ. ಶೈಕ್ಷಣಿಕವಾಗಿ ಅಪೂರ್ಣಸಾಧನೆ ಕಂಡುಬರುವ ವಿದ್ಯಾರ್ಥಿಗಳಲ್ಲಿ ಕಲಿಕೆಯ ಬಗ್ಗೆ ಧನಾತ್ಮಕ ಮನೋಧೋರಣೆಯನ್ನು ಬೆಳೆಸುವುದು. ಕಲಿಕೆಯಲ್ಲಿ ಆಸಕ್ತಿ ಹೊಂದುವಂತೆ ಉತ್ತಮ ಕಲಿಕೆಯ ಸನ್ನಿವೇಶಗಳನ್ನು ಒದಗಿಸುವುದರ ಮೂಲಕ ಅವರ ಶಾಲಾ ಸಾಧನೆಯನ್ನು ಹೆಚ್ಚಿಸಬಹುದಾಗಿದೆ. ಮನೋವೈಜ್ಞಾನಿಕವಾಗಿ ಉತ್ತಮ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಪಡೆಯಬೇಕಾದರೆ, ಅವರಲ್ಲಿ ಆತ್ಮವಿಶ್ವಾಸ ಧನಾತ್ಮಕ ಮತ್ತು ಸ್ವಯಂ ಅರಿವನ್ನು ಬೆಳೆಸಿಕೊಳ್ಳುವುದು, ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಿಕೊಂಡು ಈ ತೊಂದರೆಗಳಿಂದ ಹೊರ ಬರುವಂತೆ ನಿರ್ವಹಣಾ ಕೌಶಲಗಳನ್ನು ಬೆಳೆಸಬೇಕು.

**3. ಅಪೂರ್ಣ ಸಾಧಕರ ಶಿಕ್ಷಣಕ್ಕೆ "ಮುಂದುವರೆಯಲು ಪ್ರೇರಣೆ" ನೀಡುವುದು ಶಕ್ತಿಯುತವಾದ ಸಾಧನವಾಗಿದೆ :** ಉನ್ನತ ಸಾಧಕರಂತೆ ಅಪೂರ್ಣ ಸಾಧಕರಲ್ಲಿಯೂ ಮುಂದುವರೆಯುವ ಮಹತ್ತರ ಪ್ರೇರಣೆಯು ಅವರ ಹೃದಯದೊಳಗೆ ಹುದುಗಿರುವುದು. ಆದ್ದರಿಂದ ನ್ಯಾಯಯುತವಾದ ಹಾಗೂ ಮುಂದುವರೆಯಲು ಪ್ರೇರಣೆಯನ್ನು ನೀಡುವಂತಹ ಉದಾಹರಣೆಗಳನ್ನು ಒದಗಿಸುವುದರಿಂದ ಅಪೂರ್ಣ ಸಾಧಕರು ಸಾಧಿಸಲು ಪ್ರೇರಿತರಾಗುವರು.

ಮೊದಲಿಗೆ ಶಿಕ್ಷಕರು ತರಗತಿಯಲ್ಲಿ ಉತ್ತಮ ವಾತಾವರಣವನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿರಬೇಕು. ನಂತರ ತಾವು ಏನನ್ನು ಸಾಧಿಸಬೇಕೆಂಬುದನ್ನು ನಿರ್ಧರಿಸಿ, ಸ್ಪರ್ಧಾಮನೋಭಾವವಿರುವ ಮಾದರಿ ತರಗತಿಯನ್ನು ಸೃಷ್ಟಿಸಬೇಕು. ವಿದ್ಯಾರ್ಥಿಗಳಲ್ಲಿ ಉತ್ತಮ ನಾಗರಿಕ ವರ್ತನೆಗಳನ್ನು ಹಾಗೂ ಮೌಲ್ಯಗಳನ್ನು ಬೆಳೆಸುವಲ್ಲಿ ಗಮನಹರಿಸುವುದು ಸೂಕ್ತ. ವಿದ್ಯಾರ್ಥಿಗಳಲ್ಲಿ ತರಗತಿ ಸಮೂಹಕ್ಕೆ ಸಂಬಂಧಿಸಿದಂತೆ ಗೌರವ ಮನೋಭಾವನೆ ಹಾಗೂ ಘನತೆಯ ಮನೋಭಾವನೆಯನ್ನು ಬೆಳೆಸುವುದೂ ಅವಶ್ಯಕವಾಗಿರುತ್ತದೆ. ಅಪೂರ್ಣ ಸಾಧಕರನ್ನು ತರಗತಿಯಲ್ಲಿ ತಾರತಮ್ಯವಿಲ್ಲದೆ ನೋಡಿಕೊಳ್ಳಬೇಕು ಹಾಗೂ ಇವರಲ್ಲಿನ ಅಹಿತಕರ ನಡವಳಿಕೆ ಮತ್ತು ದಬ್ಬಾಳಿಕೆಯ ಪ್ರವೃತ್ತಿಗಳನ್ನು ಕಡಿಮೆಗೊಳಿಸಲು ಪ್ರಯತ್ನಿಸಬೇಕು. ಆರೋಗ್ಯಕರ ತರಗತಿಯ ವಾತಾವರಣವು ಅಪೂರ್ಣ

Digitised by Bharatavani, CIIL

ಸಾಧಕರಲ್ಲಿ ಧನಾತ್ಮಕ ಮನೋಭಾವ ಬೆಳೆಸುವುದಲ್ಲದೆ, ಮನಸ್ಸಿನ ವಿಕಾಸವೂ ಆಗುವಂತೆ ಮಾಡುವುದು, ಹಾಗೆಯೇ ಇಂಥ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆ ಮಾಡಲು ಪ್ರೇರಣೆಯನ್ನು ನೀಡಿ, ಸ್ಪರ್ಧಾ ಮನೋಭಾವನೆಯನ್ನು ಬೆಳೆಸುವುದು.

ಮುಂದುವರಿಯಲು ಪ್ರೇರಣೆ ನೀಡುವ ಉದಾಹರಣೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರಿಂದ ಅಪೂರ್ಣ ಸಾಧಕರಲ್ಲಿ ಸರಿ ಮತ್ತು ತಪ್ಪುಗಳ ಪರಿಕಲ್ಪನೆ ಬೆಳೆಯುವುದು ಹಾಗೂ ಒಂದು ಗುರಿ ಇಟ್ಟುಕೊಂಡು ಕಲಿಯುವ ಮನೋಭಾವ, ತಮ್ಮನ್ನು ತಾವು ಸ್ವಯಂ ಪ್ರೇರಣೆಗೆ ಒಳಪಡಿಸುವ ಮತ್ತು ತಮ್ಮ ಕಲಿಕೆಯನ್ನು ತಾವೇ ಸುಧಾರಿಸಿಕೊಳ್ಳುವ ಅವಕಾಶ ಒದಗಿಬರುವುದು.

ಕೆಲವು ಅಪೂರ್ಣ ಸಾಧಕರೂ ಉನ್ನತ ಸಾಧನೆಯನ್ನು ಮಾಡಿದ ಉದಾಹರಣೆಗಳನ್ನು ನೀಡುವುದು ಉತ್ತಮ. ಇಂಥ ಉದಾಹರಣೆಗಳಿಂದ ವಿದ್ಯಾರ್ಥಿಗಳಿಗೆ ಅವರಲ್ಲಿರುವ ಅವಗುಣಗಳ ಬಗ್ಗೆ ಅರಿವು, ಸೂಕ್ತ ವರ್ತನೆಯ ಅಗತ್ಯತೆ ಮತ್ತು ಸುಧಾರಣಾ ಮಾರ್ಗವನ್ನು ತಾವೇ ಹುಡುಕಿಕೊಳ್ಳುವಂತೆ ಅಭಿಪ್ರೇರಣೆ ದೊರೆಯುತ್ತದೆ.

ಅವರ ಮಾನಸಿಕ ಸ್ವಭಾವವನ್ನು ಸುಧಾರಿಸಬೇಕು. ಮುಖ್ಯವಾಗಿ ಪರೀಕ್ಷೆ ಮತ್ತು ಪರಿಶೀಲನೆಯ ಮೂಲಕ ಅಪೂರ್ಣ ಸಾಧಕರ ಮಾನಸಿಕ ಸಾಮರ್ಥ್ಯವನ್ನು ಹಾಗೂ ಅವರ ಮಾನಸಿಕ ಸ್ಥಿತಿಗತಿಯನ್ನು ಕಂಡುಕೊಂಡು ಅವರ ಪರಿವರ್ತನೆಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕು. ಅಪೂರ್ಣ ಸಾಧಕರಿಗೆ ಅವರ ಬಗೆಗಿನ ಋಣಾತ್ಮಕ ಮನೋಭಾವ ಹಾಗೂ ಅತಿಯಾದ ಮಾನಸಿಕ ಒತ್ತಡಗಳಿಂದ ಮುಕ್ತಿ ನೀಡಬೇಕು.

ಅಪೂರ್ಣ ಸಾಧಕರಿಗೆ ಪೂರ್ಣ ಮಾರ್ಗದರ್ಶನ ದೊರೆತರೆ ಉತ್ತಮ ಸಾಧಕರಾಗುವರು. ವಿದ್ಯಾರ್ಥಿಗಳ ಗರಿಷ್ಠ ಬೌದ್ಧಿಕ-ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು ಶಿಕ್ಷಕರ, ಪೋಷಕರ, ಆಡಳಿತಾಧಿಕಾರಿಗಳ ಮತ್ತು ಸಮಾಜದ ಕರ್ತವ್ಯವಾಗಿದೆ. ಅಪೂರ್ಣ ಸಾಧಕರ ಭಾವನಾತ್ಮಕ, ಬೌದ್ಧಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಡಿಸಲು ಬೇರೆ ಮಕ್ಕಳಂತೆ ಅವರಿಗೂ ಸಹ ಶಾಲೆ, ಸಮಾಜ ಮತ್ತು ಕುಟುಂಬದಲ್ಲಿ ಪ್ರೀತಿ, ವಾತ್ಸಲ್ಯಗಳ ಅಗತ್ಯತೆಯಿದೆ. ಅವರ ಅಗತ್ಯತೆಗಳನ್ನು ಪ್ರಾರಂಭದಲ್ಲಿಯೇ ಸಂತೃಪ್ತಿಗೊಳಿಸದೇ ಹೋದರೆ, ಅವರ ಸಾಧನೆಯಲ್ಲಿ ಹಿಂಬೀಳಿಕೆಯು ಹೆಚ್ಚಾಗುವುದು.

**4. ಸಹಾಯ ನೀಡುವ ವ್ಯವಸ್ಥೆಯು ಅಪೂರ್ಣ ಸಾಧಕರ ಶಿಕ್ಷಣವನ್ನು ಸುಧಾರಿಸುವ ಸೂಕ್ತ ಕ್ರಮವಾಗಿದೆ:** ಪ್ರತಿಯೊಬ್ಬರೂ ನಿಯಮಗಳನ್ನು, ನಿಯಂತ್ರಣ ಮತ್ತು ವರ್ತನಾ ತತ್ವಗಳನ್ನು ಪಾಲಿಸಬೇಕಾಗುತ್ತದೆ. ಸಾಂಸ್ಥಿಕ ರಚನೆಯು ಅಪೂರ್ಣ ಸಾಧಕರ ಶಿಕ್ಷಣದಲ್ಲಿ ಮೂಲಭೂತ ಪಾತ್ರ ವಹಿಸುತ್ತದೆ. ಮೊದಲನೆಯದಾಗಿ, ಅಪೂರ್ಣ ಸಾಧಕರ ಶಿಕ್ಷಣಕ್ಕಾಗಿ ಒಪ್ಪಂದ ರೀತಿಯ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸಬೇಕು. ನಂತರ ಅಪೂರ್ಣ ಸಾಧಕರ ಶಿಕ್ಷಣದ ಗುರಿಗಳ ಪಟ್ಟಿಯನ್ನು ತಿಳಿದುಕೊಳ್ಳಬೇಕು. ವಿದ್ಯಾರ್ಥಿಗಳ ಮನೋವೈಜ್ಞಾನಿಕ ಮತ್ತು ವರ್ತನಾ ಸ್ವಭಾವಗಳ ಮೇಲೆ ಕಾರ್ಯಕ್ರಮ ರೂಪಿಸಿ ಅವರ ಅಭಿರುಚಿಗೆ ಅನುಗುಣವಾಗಿ ಬೋಧಿಸಬೇಕು. ಸಂವಹನದ ಮೂಲಕ ಅಪೂರ್ಣ ಸಾಧಕರನ್ನು ತಿಳಿದುಕೊಳ್ಳಬೇಕು. ಎಂದರೆ ಅವರ ವಿಚಾರ ಮತ್ತು ಮನೋವೈಜ್ಞಾನಿಕ ಸ್ಥಿತಿಗತಿಗಳನ್ನು ಆಳವಾಗಿ ಗ್ರಹಿಸುವುದರೊಂದಿಗೆ ಅವರು ವಾಸ್ತವಿಕ ಸಮಸ್ಯೆಗಳನ್ನು ತಮ್ಮಷ್ಟಕ್ಕೆ ತಾವೇ ಗ್ರಹಿಸಿಕೊಳ್ಳುವಂತೆ ಸಹಾಯ ಮಾಡಬೇಕು. ಅಲ್ಲದೆ ನಿರಂತರವಾಗಿ ವಿಚಾರ ವಿನಿಮಯವನ್ನು ಶಿಕ್ಷಕರು ಅಪೂರ್ಣ ಸಾಧಕರಿಗೆ ಏರ್ಪಡಿಸಬೇಕು. ಪ್ರತಿಯೊಂದು ಶಾಲೆಯ ಅಥವಾ ವಿಭಾಗವು ಶಿಕ್ಷಣದಲ್ಲಿ ಅನ್ವೇಷಣೆ ಹಾಗೂ ಅಪೂರ್ಣ ಸಾಧಕರ ಪರಿವರ್ತನೆಯನ್ನು ತೀವ್ರ ಗತಿಯಲ್ಲಿ ಸಾಧಿಸಲು ಪ್ರಯತ್ನಿಸಬೇಕು. ಶಿಕ್ಷಣದ ಬಗೆಗಿನ ಅವರ ಅನಿಸಿಕೆ ಅಥವಾ ಭಾವನೆಗಳನ್ನು ರಚಿಸುವಲ್ಲಿ ಸಹಾಯಕವಾಗಬೇಕು.

**5. ಅಪೂರ್ಣ ಸಾಧಕರಲ್ಲಿ ಶಕ್ತಿಯುತ ಮಾನಸಿಕ ಸ್ಥೈರ್ಯ ಮೂಡಿಸುವುದು:** ವಿದ್ಯಾರ್ಥಿಗಳಲ್ಲಿ ಶಕ್ತಿಯುತ ಮಾನಸಿಕ ಸ್ಥೈರ್ಯ ಬೆಳೆಸಬೇಕು ಹಾಗೂ ಆರೋಗ್ಯಯುತ ಶಿಕ್ಷಣ ನೀಡಬೇಕು. ಹೊಸ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶಿಕ್ಷಣ ಕಾರ್ಯತಂತ್ರದ ಅಳವಡಿಕೆ ಮುಖ್ಯ. ಅಪೂರ್ಣ ಸಾಧಕರ ಪರಿವರ್ತನೆಯಲ್ಲಿ ಮಾನಸಿಕ ಸ್ಥೈರ್ಯ ಹಾಗೂ ಆರೋಗ್ಯಯುತ ಶಿಕ್ಷಣ ಅತಿ ಮಹತ್ವಪೂರ್ಣ ಪಾತ್ರ ವಹಿಸುತ್ತದೆ. ಅಪೂರ್ಣ ಸಾಧಕರ ಬಾಹ್ಯ ವರ್ತನೆಗಳು ಅವರ ಮಾನಸಿಕ ಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ಅಧಿಕ ಮಾನಸಿಕ ಒತ್ತಡಗಳನ್ನು ಕೊಡುವಂತಹ ಸನ್ನಿವೇಶಗಳು ಅಪೂರ್ಣ ಸಾಧಕರಿಗೆ ಅಡ್ಡಿ ಉಂಟು ಮಾಡುವುದರಿಂದ ಅವರಲ್ಲಿ ಮಾನಸಿಕ ಸ್ಥೈರ್ಯ ತುಂಬುವ ಕೆಲಸ ಆಗಬೇಕು.

–ಶಿ.ಕ.

## ಅಭಿವೃತ್ತಿಗಳು/ಮನೋಭಾವಗಳು

ಮಾನವನ ವರ್ತನೆ ಹಲವಾರು ಲಕ್ಷಣಗಳನ್ನೊಳಗೊಂಡಿರುತ್ತದೆ. ಅವುಗಳಲ್ಲಿ ಒಂದು ಪ್ರಮುಖವಾದ ಲಕ್ಷಣ ಅಭಿವೃತ್ತಿ (ಮನೋಭಾವ). ಪ್ರತಿಯೊಬ್ಬ ವ್ಯಕ್ತಿಯ ವರ್ತನೆಯೂ ಅವನ ಪರಿಸರದಲ್ಲಿ ಕಂಡು ಬರುವ ವಸ್ತು, ವ್ಯಕ್ತಿ ಅಥವಾ ವಿಚಾರಗಳ ಬಗ್ಗೆ ಅವನು ಹೊಂದಿರುವ ಅಭಿವೃತ್ತಿ (ಮನೋಭಾವದ) ಮೇಲೆ ಅವಲಂಬಿಸಿರುತ್ತದೆ. ಮಗುವಿನ ವ್ಯಕ್ತಿತ್ವ ಮತ್ತು ವಿಕಾಸ ಬಹುಮಟ್ಟಿಗೆ ಅವನು ಹೊಂದಿರುವ ಮನೋಧೋರಣೆಗಳ ಸ್ವರೂಪದಿಂದ ಪ್ರಭಾವಿತವಾಗುತ್ತವೆ. ಒಂದು ವಿಷಯದ ಕಲಿಕೆ, ಹವ್ಯಾಸಗಳು, ಆಸಕ್ತಿಗಳು ಹಾಗೂ ಇತರೆ ಮಾನಸಿಕ ಪ್ರವೃತ್ತಿಗಳನ್ನು ರೂಢಿಸಿಕೊಳ್ಳುವಿಕೆಯಲ್ಲಿ ಅವನು ಹೊಂದಿರುವ ಮನೋಧೋರಣೆಗಳಿಂದ ಪ್ರಭಾವಿತವಾಗುತ್ತವೆ. ಅಭಿವೃತ್ತಿ ಪದಕ್ಕೆ ಮನೋಭಾವ, ಮನೋಧೋರಣೆ ಎಂಬ ಪರ್ಯಾಯ ಪದಗಳಿವೆ.

ಮನೋಭಾವಗಳು ಒಬ್ಬ ವ್ಯಕ್ತಿಯು ಯಾವುದೇ ಸಾಮಾಜಿಕ ಸನ್ನಿವೇಶದಲ್ಲಿ ಇತರರ ಬಗ್ಗೆ ಹೇಗೆ ಆಲೋಚಿಸುತ್ತಾನೆ, ಭಾವಿಸುತ್ತಾನೆ ಮತ್ತು ಪ್ರತಿಕ್ರಿಯಿಸುತ್ತಾನೆ ಎಂಬುದನ್ನು ಸೂಚಿಸುತ್ತವೆ. ಪ್ರತಿಯೊಬ್ಬನು ಇತರ ವ್ಯಕ್ತಿಗಳು, ವಸ್ತುಗಳು, ವಿಚಾರಗಳ ಬಗ್ಗೆ ಹಾಗೂ ಸಂಸ್ಥೆಗಳ ಬಗ್ಗೆ ತನ್ನದೇ ಆದ ಮನೋಭಾವ ಹೊಂದಿರುತ್ತಾನೆ. ತರಗತಿಯಲ್ಲಿರುವ ಆತ್ಮೀಯ ಸ್ನೇಹಿತನ ಬಗ್ಗೆ ಒಬ್ಬನ ಧೋರಣೆ ಧನಾತ್ಮಕವಾಗಿದ್ದರೆ, ತರಗತಿಯಲ್ಲಿ ಸುಳ್ಳು ಹೇಳುವವನ ಬಗ್ಗೆ ಧೋರಣೆ ಋಣಾತ್ಮಕವಾಗಿರುತ್ತದೆ. ಮನೋಭಾವಗಳು ನಮ್ಮ ದಿನನಿತ್ಯದ ವರ್ತನೆಯ ಮೇಲೆ ಪ್ರಭಾವ ಬೀರುತ್ತವೆ. ನಮಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ನಾವು ನಮ್ಮದೇ ಆದ ಮನೋಧೋರಣೆ ಹೊಂದಿರುತ್ತೇವೆ.

### ಅಭಿವೃತ್ತಿಯ ಅರ್ಥ

ಒಬ್ಬ ವ್ಯಕ್ತಿ ಅಥವಾ ಒಂದು ವಸ್ತು ಅಥವಾ ಸನ್ನಿವೇಶದ ಬಗ್ಗೆ ಇನ್ನೊಬ್ಬ ಹೊಂದಿರುವ ಮಾನಸಿಕ ಸ್ಥಿತಿಯನ್ನು ಅಥವಾ ಭಾವನೆಯನ್ನು ಮನೋಭಾವ ಅಥವಾ ಅಭಿವೃತ್ತಿ ಎಂದು ಕರೆಯುತ್ತಾರೆ.

ಅಭಿವೃತ್ತಿ ಎಂದರೆ ಸಂವೇಗಾತ್ಮಕ ಭಾವನೆಯಿಂದ ಕೂಡಿದ ನಂಬಿಕೆಗಳು, ಪೂರ್ವಗ್ರಹಗಳು, ಮುನ್ನೊಲವುಗಳು, ಮೆಚ್ಚುಗೆಗಳು ಮತ್ತು ಮನಸ್ಸಿನ ಪೂರ್ವಸಿದ್ಧ ಸ್ಥಿತಿಗಳು ಎಂಬ ವಿವಿಧ ವ್ಯಾಖ್ಯಾನಗಳಿವೆ.

Digitised by Bharatavani, CIIL

"ನಿರ್ದಿಷ್ಟ ವಸ್ತುಗಳಿಗೆ ವ್ಯಕ್ತಿಯು ತೋರುವ ಅನುಕ್ರಿಯೆಯ ಮೇಲೆ ನಿರ್ದೇಶಕ ಅಥವಾ ಚಲನಶೀಲ ಪ್ರಭಾವ ಬೀರುವ ಅನುಭವಗಳಿಂದ ಸಂಘಟಿಸಲ್ಪಟ್ಟ ಮಾನಸಿಕ ಮತ್ತು ನರಮಂಡಲದ ಸಿದ್ಧ ಸ್ಥಿತಿಯೇ ಅಭಿವೃತ್ತಿ."

–ಜಿ. ಡಬ್ಲ್ಯೂ ಆಲ್‌ಪೋರ್ಟ್

"ಸಂಬಂಧಿತ ಉದ್ದೀಪನಗಳಿಗೆ ಪೂರ್ವ ನಿರ್ಧಾರಿತವಾದ ರೀತಿಯಲ್ಲಿ ಅನುಕ್ರಿಯೆ ತೋರುವಂತೆ ಮಾಡುವ ಮನಸ್ಸಿನ ಪೂರ್ವ ಸಿದ್ಧಸ್ಥಿತಿಯೇ ಅಭಿವೃತ್ತಿ."

–ವಿಟ್ಟೇಕಾರ್

"ನಿರ್ದಿಷ್ಟ ಸನ್ನಿವೇಶಗಳು, ವ್ಯಕ್ತಿಗಳು, ವಸ್ತುಗಳು ಇಂಥವುಗಳ ಉದ್ದೀಪನೆಗೆ ನಿರ್ದಿಷ್ಟ ಅನುಕ್ರಿಯೆ ತೋರುವಂತೆ ಮಾಡುವ ಮನಸ್ಸಿನ ಪೂರ್ವಸಿದ್ಧ ಸ್ಥಿತಿಯೇ ಅಭಿವೃತ್ತಿ.

–ಫ್ರಾಂಕ್ ಎಸ್. ಫ್ರೀಮನ್

ಅಭಿವೃತ್ತಿ ಎರಡು ಪ್ರಮುಖ ಲಕ್ಷಣಗಳನ್ನೊಳಗೊಂಡಿವೆ.

1. ಅವು ಸಾಪೇಕ್ಷವಾಗಿ ಸ್ಥಿರವಾಗಿರುತ್ತವೆ.

ತಾತ್ಕಾಲಿಕ ಮನಸ್ಥಿತಿಗಳನ್ನು ಅಭಿವೃತ್ತಿಗಳೆಂದು ಪರಿಗಣಿಸಲಾಗದು. ಉದಾ: ಮನೆಗೆ ತಡವಾಗಿ ಬಂದಾಗ ತಾಯಿ ಸಿಟ್ಟಾಗಬಹುದು. ಇದನ್ನು ಅವಳ ಅಭಿವೃತ್ತಿಗಳೆಂದು ಪರಿಗಣಿಸಲಾಗದು.

ಬಹಳ ಕಾಲದವರೆಗೆ ವ್ಯಕ್ತಿ ಹೊಂದಿರುವ ಆಲೋಚನೆಗಳು, ಭಾವನೆಗಳು ಹಾಗೂ ಕ್ರಿಯೆಗಳು ಒಟ್ಟಾಗಿ ಮನೋಭಾವ ರೂಪುಗೊಳ್ಳುತ್ತದೆ.

2. ಅಭಿವೃತ್ತಿಗಳು ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿರುತ್ತವೆ. ವ್ಯಕ್ತಿ ಎದುರಿಸುವ ಸಾಮಾಜಿಕ ಸನ್ನಿವೇಶಗಳು ಹಾಗೂ ಸಾಮಾಜಿಕ ಅಂತರ್ ಕ್ರಿಯೆಯ ಮೇಲೆ ಅವಲಂಬಿಸಿರುತ್ತವೆ.

**ಅಭಿವೃತ್ತಿಗಳ ಕಾರ್ಯಗಳು**

ಅಭಿವೃತ್ತಿಗಳು ಪ್ರಮುಖವಾಗಿ ನಾಲ್ಕು ಕಾರ್ಯಗಳನ್ನು ನಿರ್ವಹಿಸುತ್ತವೆ.

1. ಸಾಮಾಜಿಕ ಗುಂಪುಗಳ ವರ್ತನೆಯನ್ನು ನಿರ್ಧರಿಸುವಲ್ಲಿ ಮನೋಭಾವಗಳು ಮೂಲವಾಗಿರುತ್ತವೆ.

   ಉದಾ: ಪರಿಸರ ಸಂರಕ್ಷಣೆಯ ಬಗ್ಗೆ ಜನರು ಹೊಂದಿರುವ ಮನೋಭಾವವೇ ಅವರನ್ನು ಒಂದುಗೂಡಿಸಿ ಒಂದು ಸಂಘ ರಚಿಸಿಕೊಳ್ಳಲು ನೆರವಾಗುತ್ತದೆ.
2. ಮನೋಭಾವ ವ್ಯಕ್ತಿಗೆ ತನ್ನ ಅನನ್ಯತೆ ಸ್ಥಾಪಿಸಲು ನೆರವಾಗುತ್ತವೆ. ನಾವು ನಮ್ಮ ಬಗ್ಗೆ ಹೇಗೆ ಆಲೋಚಿಸುತ್ತೇವೆ ಎಂಬುದು ನಾವು ಹೊಂದಿರುವ ಮನೋಭಾವಗಳಿಂದ ರೂಪಿತವಾಗುತ್ತದೆ.
3. ಮನೋಭಾವಗಳು ನಮ್ಮ ಆಲೋಚನೆಗಳು ಹಾಗೂ ವರ್ತನೆಗಳನ್ನು ನಿರ್ದೇಶಿಸುತ್ತವೆ.
4. ಸಮಾಜದ ವರ್ತನೆಯಲ್ಲಿ ಮನೋಭಾವಗಳು ಪ್ರಮುಕ ಪಾತ್ರವಹಿಸುತ್ತವೆ.

   ಉದಾ: ಸಮಾಜದ ಜನರಲ್ಲಿ ಇತರೆ ಧರ್ಮಗಳ ಬಗ್ಗೆ ಧನಾತ್ಮಕ ಮನೋಭಾವವಿದ್ದರೆ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಂಡುಬರುತ್ತದೆ. ಒಂದು ವೇಳೆ ಜನರಲ್ಲಿ ಇತರೆ ಧರ್ಮಗಳ ಬಗ್ಗೆ ಋಣಾತ್ಮಕ ಧೋರಣೆಗಳಿದ್ದರೆ ಸಮುದಾಯಗಳ ಮಧ್ಯೆ ಘರ್ಷಣೆಗೆ ಅವಕಾಶ ನೀಡುತ್ತವೆ ಮತ್ತು ಮತೀಯ ಸೌಹಾರ್ದತೆಯನ್ನು ಕದಡುತ್ತವೆ.

**ಅಭಿವೃತ್ತಿಯ ಘಟಕಾಂಶಗಳು**

ಅಭಿವೃತ್ತಿ ಪ್ರಮುಖವಾಗಿ ಮೂರು ಘಟಕಾಂಶಗಳನ್ನೊಳಗೊಂಡಿದೆ. ಜ್ಞಾನಾತ್ಮಕ, ಭಾವನಾತ್ಮಕ ಮತ್ತು ವರ್ತನಾತ್ಮಕ (ಕ್ರಿಯಾತ್ಮಕ) ಅಂಶಗಳು.

ಉದಾ: ಒಬ್ಬ ವ್ಯಕ್ತಿ ಒಂದು ರಾಜಕೀಯ ಪಕ್ಷದ ಬಗ್ಗೆ ಹೊಂದಿರುವ ಜ್ಞಾನ ಅವನ ಅಭಿವೃತ್ತಿಯ ಜ್ಞಾನಾತ್ಮಕ ಅಂಶವನ್ನು ಸೂಚಿಸಿದರೆ, ಆ ರಾಜಕೀಯ ಪಕ್ಷದ ಬಗ್ಗೆ ಅವನು ಹೊಂದಿರುವ ತೃಪ್ತಿಕರ ಅಥವಾ ಅತೃಪ್ತಿಕರ ಭಾವನೆ, ಆ ಪಕ್ಷವನ್ನು ಇಷ್ಟಪಡುವುದು ಅಥವಾ ಇಷ್ಟಪಡದೆ ಇರುವುದು ಭಾವನಾತ್ಮಕ ಅಂಶವನ್ನು ಸೂಚಿಸುತ್ತದೆ. ನಂತರ ಆ ವ್ಯಕ್ತಿ ಇತರರ ಎದುರಿಗೆ ತಾನು ಇಷ್ಟಪಡುವ ಪಕ್ಷವನ್ನು ಸಮರ್ಥಿಸಿಕೊಳ್ಳುವುದು, ಸಹಾಯ ಮಾಡುವುದು ಅಥವಾ ಬೆಂಬಲಿಸುವುದು ವರ್ತನಾತ್ಮಕ (ಕ್ರಿಯಾತ್ಮಕ) ಅಂಶವನ್ನು ಸೂಚಿಸುತ್ತದೆ.

**ಅಭಿವೃತ್ತಿಯ ಆಯಾಮಗಳು**

ಅಭಿವೃತ್ತಿ ಪ್ರಮುಖವಾಗಿ ನಾಲ್ಕು ಆಯಾಮಗಳನ್ನೊಳಗೊಂಡಿದೆ. ಅವುಗಳೆಂದರೆ ತೀವ್ರತೆ, ದಿಕ್ಕು, ವ್ಯಾಪಕತೆ ಮತ್ತು ಅವಧಿ.

**ತೀವ್ರತೆ:** ವ್ಯಕ್ತಿಯ ವರ್ತನೆಯನ್ನು ಅಭಿವೃತ್ತಿ ಎಷ್ಟರಮಟ್ಟಿಗೆ ಪ್ರೇರೇಪಿಸುತ್ತದೆ ಎಂಬುದನ್ನು ಸೂಚಿಸುವುದೇ ಅಭಿವೃತ್ತಿಯ ತೀವ್ರತೆ. ಅನುಕ್ರಿಯೆಗಳನ್ನು ಪ್ರತಿಬಂಧಿಸುವ ತಡೆಗಳ ಸ್ವರೂಪವನ್ನು ವೀಕ್ಷಿಸಿ ಅಭಿವೃತ್ತಿಯ ತೀವ್ರತೆಯನ್ನು ನಿರ್ಧರಿಸಬಹುದು. ದುರ್ಬಲ ಅಭಿವೃತ್ತಿಗಳಿಂದ ಪ್ರೇರಿತವಾದ ಅನುಕ್ರಿಯೆಗಳನ್ನು ದುರ್ಬಲ ತಡೆಗಳು ಪ್ರತಿಬಂಧಿಸುತ್ತವೆ. ಆದರೆ ಪ್ರಬಲವಾದ ಅಭಿವೃತ್ತಿಗಳಿಂದ ಪ್ರೇರಿತವಾದ ಅನುಕ್ರಿಯೆಗಳು ಪ್ರಬಲ ತಡೆ ಇದ್ದರೂ ಪ್ರಕಟವಾಗುತ್ತವೆ.

ಉದಾ: ಅಧಿಕಾರಿ ವರ್ಗದ ಬಗ್ಗೆ ತೀವ್ರ ಋಣಾತ್ಮಕ ಅಭಿವೃತ್ತಿ ಹೊಂದಿರುವ ವ್ಯಕ್ತಿ ನೇರವಾಗಿ ತನ್ನ ಸಿಟ್ಟನ್ನು ಅವರ ಮೇಲೆ ತೀರಿಸಿಕೊಳ್ಳಲು ಸಾಧ್ಯವಾಗದಿರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಅವರ ಬಗ್ಗೆ ಕೆಟ್ಟ ಹೇಳಿಕೆ ಬರೆಯುವುದು ಅಥವಾ ಅವರ ಆಸ್ತಿ ಹಾಳು ಮಾಡುವ ಮೂಲಕ ಪರೋಕ್ಷವಾಗಿ ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತಾನೆ.

**ದಿಕ್ಕು:** ಅಭಿವೃತ್ತಿಗಳು ಧನಾತ್ಮಕವಾಗಿರಬಹುದು, ಋಣಾತ್ಮಕವಾಗಿರಬಹುದು ಅಥವಾ ತಟಸ್ಥವಾಗಿರಬಹುದು. ಅಭಿವೃತ್ತಿ ಆಕರ್ಷಿತವಾಗುವ ವರ್ತನೆಯಲ್ಲಿ ಪ್ರಕಟವಾದರೆ ಅದನ್ನು ಧನಾತ್ಮಕವೆಂತಲೂ, ಹಿಂದೆ ಸರಿಯುವ ವರ್ತನೆಯಲ್ಲಿ ಪ್ರಕಟವಾದರೆ ಋಣಾತ್ಮಕವೆಂತಲೂ, ಯಾವ ದಿಕ್ಕಿನಲ್ಲಿಯೂ ಅವನು ಪ್ರೇರೇಪಿತನಾಗದಿದ್ದರೆ ಅದನ್ನು ತಟಸ್ಥಧೋರಣೆಯೆಂದೂ ಕರೆಯುವರು.

ಉದಾ: ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸ್ನೇಹಿತನ ಬಗ್ಗೆ ಧನಾತ್ಮಕ ಅಭಿವೃತ್ತಿ ಹೊಂದಿದ್ದರೆ, ವೈರಿಯ ಬಗ್ಗೆ ಋಣಾತ್ಮಕ ಅಭಿವೃತ್ತಿ ಮತ್ತು ಅಪರಿಚಿತನ ಬಗ್ಗೆ ತಟಸ್ಥ ಹೊಂದಿರಬಹುದು.

**ವ್ಯಾಪಕತೆ:** ಕೆಲವು ಅಭಿವೃತ್ತಿಗಳು ವ್ಯಕ್ತಿಯ ಎಲ್ಲಾ ವರ್ತನೆಗಳ ಮೇಲೆ ಪ್ರಭಾವ ಬೀರುತ್ತವೆ. ಇದನ್ನು ಕೆಲವು ನಿರ್ದಿಷ್ಟ ವರ್ತನೆಗಳ ಮೇಲೆ ಪ್ರಭಾವ ಬೀರುತ್ತವೆ.

ಉದಾ: ಒಬ್ಬ ವಿದ್ಯಾರ್ಥಿ ಶಾಲೆಯಲ್ಲಿ ಶಿಸ್ತಿನ ಬಗ್ಗೆ ರೂಢಿಸಿಕೊಂಡ ಮನೋಭಾವ ಅವನ ಜೀವನದ ವಿವಿಧ ಹಂತದಲ್ಲಿ ಅವನ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ.

Digitised by Bharatavani, CIIL

**ಅವಧಿ:** ಅಭಿವೃತ್ತಿ ವ್ಯಕ್ತಿಯಲ್ಲಿ ಎಷ್ಟು ಕಾಲ ನೆಲೆಸಿರುತ್ತವೆ ಎಂಬುದು ಅವಧಿ ಆಯಾಮದ ಸೂಚಿ, ಅಭಿವೃತ್ತಿಗಳ ಅವಧಿ ಅವುಗಳ ತೀವ್ರತೆಯ ಮೇಲೆ ಅವಲಂಬಿಸಿರುತ್ತದೆ. ಹೆಚ್ಚು ತೀವ್ರತೆ ಹೊಂದಿರುವ ಅಭಿವೃತ್ತಿಗಳು ಹೆಚ್ಚು ಕಾಲ ನೆಲೆಸಿರುತ್ತವೆ ಮತ್ತು ಕಡಿಮೆ ತೀವ್ರತೆ ಹೊಂದಿರುವ ಅಭಿವೃತ್ತಿಗಳು ಹೆಚ್ಚು ಕಾಲ ನೆಲೆಗೊಳ್ಳುವುದಿಲ್ಲ. ಯಾವ ಅಭಿವೃತ್ತಿಗಳು ಅನುಭವಗಳಿಂದ ಪುನರ್ಬಲಗೊಳ್ಳುವುದಿಲ್ಲವೋ ಅವು ಬೇಗನೇ ಬದಲಾಗುತ್ತವೆ.

ಉದಾ: ಪೋಷಕರೊಡನೆ ಜಗಳ ಮಾಡಿದರೂ ಸಹ ಆ ಮನೋಭಾವ ಬಹಳ ಕಾಲ ನಿಲ್ಲುವುದಿಲ್ಲ ಆದರೆ ವೈರಿಗಳ ಬಗ್ಗೆ ಹೊಂದಿರುವ ಋಣಾತ್ಮಕ ಮನೋಭಾವ ಹೆಚ್ಚು ಕಾಲ ನೆಲೆಸಿರುತ್ತದೆ.

**ಅಭಿವೃತ್ತಿಗಳು ರೂಪುಗೊಳ್ಳುವಿಕೆ**

ನಾವು ಹುಟ್ಟುತ್ತಲೇ ಅಭಿವೃತ್ತಿಗಳನ್ನು ಹೊಂದಿರುವುದಿಲ್ಲ. ಒಂದು ಚಿಕ್ಕ ಮಗು ಧರ್ಮದ ಬಗ್ಗೆ ಯಾವ ಭಾವವನ್ನೂ ಹೊಂದಿರುವುದಿಲ್ಲ. ಹಿರಿಯರು ತಡೆಯದಿದ್ದರೆ ಮಗು ಬೇರೆ ಧರ್ಮದ ಮಗುವಿನ ಜತೆ ಆಡಬಲ್ಲದು. ಕ್ರಮೇಣ ಬೆಳೆದಂತೆ ಹಿರಿಯರ ಮಾರ್ಗದರ್ಶನದಿಂದ/ಪ್ರಭಾವದಿಂದ ಬೇರೆ ಧರ್ಮದ ಬಗ್ಗೆ ಮನೋಭಾವ ಬೆಳೆಸಿಕೊಳ್ಳುತ್ತದೆ ಮತ್ತು ಅದರಿಂದ ದೂರವಿರಲು ಬಯಸುತ್ತದೆ. ನಾವು ಯಾವುದರ ಪ್ರಭಾವಕ್ಕೆ ಒಳಗಾಗುವುದಿಲ್ಲವೋ ಅದರ ಬಗ್ಗೆ ನಾವು ಯಾವ ಮನೋಭಾವವನ್ನು ಹೊಂದಿರುವುದಿಲ್ಲ. ಯಾವುದೇ ವಸ್ತು/ವ್ಯಕ್ತಿಯ ಪ್ರಭಾವಕ್ಕೆ ಒಳಗಾದಾಗ ಧನಾತ್ಮಕ ಅಥವಾ ಋಣಾತ್ಮಕ ಭಾವನೆ ಬೆಳೆಸಿಕೊಳ್ಳುತ್ತೇವೆ. ಮನೋಭಾವಗಳನ್ನು ರೂಪಿಸಿಕೊಳ್ಳುವಲ್ಲಿ ಹಲವಾರು ಅಂಶಗಳು ಪ್ರಭಾವ ಬೀರುತ್ತವೆ.

ಅಭಿವೃತ್ತಿಗಳನ್ನು ವಿವಿಧ ರೀತಿಯ ಕಲಿಕೆಗಳ ಮೂಲಕ ರೂಢಿಸಿಕೊಳ್ಳುತ್ತೇವೆ. ಅಭಿವೃತ್ತಿಗಳು ರೂಪುಗೊಳ್ಳುವ ಮೂರು ರೀತಿಯ ಪ್ರಕ್ರಿಯೆಗಳೆಂದರೆ:

1. **ಅಭಿಜಾತ ಅನುಬಂಧನ**–ಯಾವುದೇ ಒಂದು ವರ್ತನೆ ನಿರ್ದಿಷ್ಟ ಉದ್ದೀಪನದೊಡನೆ ಪದೇ ಪದೇ ಸಹಸಂಬಂಧ ಹೊಂದಿದರೆ, ಅದರಿಂದ ಧನಾತ್ಮಕ ಅಥವಾ ಋಣಾತ್ಮಕ ಅನುಭವ ಪಡೆದಾಗ ಅದು ಧನಾತ್ಮಕ ಅಥವಾ ಋಣಾತ್ಮಕ ಧೋರಣೆಗೆ ಕಾರಣವಾಗುತ್ತದೆ.

ಉದಾ: ನೀವು ಪ್ರತಿಬಾರಿ ಪಂದ್ಯದಲ್ಲಿ ಗೆದ್ದಾಗ ಒಬ್ಬ ವ್ಯಕ್ತಿ ಅಲ್ಲಿ ಕಂಡುಬಂದರೆ ನೀವು ಅವನ ಬಗ್ಗೆ ಧನಾತ್ಮಕ ಭಾವನೆ ಬೆಳೆಸಿಕೊಳ್ಳುತ್ತೀರಿ. ಕ್ರಿಕೆಟ್ ಆಟಗಾರರು ಯಾವ ಬ್ಯಾಟ್‌ನಿಂದ ಹೆಚ್ಚು ರನ್ ಗಳಿಸಲು ಸಾಧ್ಯವಾಗುತ್ತದೆಯೋ ಅದರ ಬಗ್ಗೆ ಧನಾತ್ಮಕ ಭಾವನೆ ಬೆಳೆಸಿಕೊಳ್ಳುತ್ತಾರೆ.

2. **ಕ್ರಿಯಾಜನ್ಯ ಅನುಬಂಧನ:** ಪೋಷಕರು, ಶಿಕ್ಷಕರು ಅಥವಾ ಸ್ನೇಹಿತರು ಕ್ರಮಬದ್ಧವಾಗಿ ನೀಡುವ ಪುನರ್ಬಲನಗಳಿಂದ ಮನೋಭಾವಗಳು ರೂಪುಗೊಳ್ಳುತ್ತವೆ. ಪುನರ್ಬಲನ ಮತ್ತು ಶಿಕ್ಷೆಗಳನ್ನು ಕ್ರಮಬದ್ಧವಾಗಿ ನಿಯಂತ್ರಿಸುವ ಮೂಲಕ ಮಕ್ಕಳಲ್ಲಿ ಮನೋಭಾವಗಳನ್ನು ರೂಪಿಸಬಹುದು. ಹೊಗಳಿಕೆ, ಪ್ರೀತಿ, ಪ್ರೋತ್ಸಾಹ, ಬಹುಮಾನ, ಉದ್ಯೋಗ, ಸ್ಥಾನಮಾನಗಳು ಮುಂತಾದ ಪುನರ್ಬಲನಗಳನ್ನು ಬೆಳೆಸಿಕೊಂಡು ಮನೋಭಾವಗಳನ್ನು ಬೆಳೆಸಬಹುದು.

3. **ವೀಕ್ಷಣಾಕಲಿಕೆ:** ಇತರರ ವರ್ತನೆಗಳನ್ನು ವೀಕ್ಷಿಸುವುದರಿಂದ ಹಲವಾರು ಮನೋಭಾವಗಳು ರೂಪುಗೊಳ್ಳುತ್ತವೆ. ಮಕ್ಕಳು ಸಾಮಾನ್ಯವಾಗಿ ಪೋಷಕರು ಹಾಗೂ ಇತರೆ ಕುಟುಂಬದ ಸದಸ್ಯರನ್ನು ವೀಕ್ಷಿಸುವ ಮೂಲಕ ಹಲವಾರು ಮನೋಭಾವಗಳನ್ನು ಬೆಳೆಸಿಕೊಳ್ಳುತ್ತಾರೆ.

**ಅಭಿವೃತ್ತಿ ರೂಪುಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು**

ನಮ್ಮ ಸಾಮಾಜಿಕ ಪರಿಸರದಲ್ಲಿ ಅಭಿವೃತ್ತಿಗಳು ರೂಪುಗೊಳ್ಳುತ್ತವೆ. ಪರಿಸರದ ವಿವಿಧ ಅಂಶಗಳು ಅವುಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಅವುಗಳೆಂದರೆ,

**ಕುಟುಂಬ:** ಮಕ್ಕಳ ಮನೋಭಾವಗಳ ಬೆಳವಣಿಗೆಗಳ ಮೇಲೆ ಹೆಚ್ಚಿನ ಪ್ರಭಾವ ಬೀರುವವರು ಪೋಷಕರು. ಮಕ್ಕಳು ಸಾಮಾಜಿಕ ಪ್ರಪಂಚಕ್ಕೆ ಪರಿಚಿತರಾಗುವುದೇ ಪೋಷಕರು ಮತ್ತು ಕುಟುಂಬದ ಇತರೆ ಸದಸ್ಯರ ಮೂಲಕ. ವ್ಯಕ್ತಿಗಳು ಹಾಗೂ ಸ್ಥಳಗಳ ಪ್ರಾಥಮಿಕ ಜ್ಞಾನವನ್ನು ಪಡೆಯುವುದು ಪೋಷಕರಿಂದಲೇ, ಕೆಲವೊಮ್ಮೆ ಮಾತ್ರ ವೀಕ್ಷಣೆಗಳಿಂದ ರೂಢಿಸಿಕೊಳ್ಳಬಹುದು. ಚಿಕ್ಕಮಕ್ಕಳು ಹೆಚ್ಚಿನ ವಿಷಯಗಳನ್ನು ಮನೆಯಲ್ಲಿನ ಹಿರಿಯರ ವರ್ತನೆಗಳನ್ನು ವೀಕ್ಷಿಸುವ ಮೂಲಕ ಕಲಿಯುತ್ತಾರೆ. ಇತರೆ ಮಕ್ಕಳು ಒಳ್ಳೆಯವರು ಅಥವಾ ಕೆಟ್ಟವರು ಎಂಬುದನ್ನು ಮಗು ನಿರ್ಧರಿಸುವುದು ತಂದೆ ತಾಯಿಗಳು ನೀಡಿದ ನಿರ್ಣಾಯಕ ಅಂಶಗಳನ್ನಾಧರಿಸಿ, ಸಾಮಾಜಿಕ ಮತ್ತು ಧಾರ್ಮಿಕ ಮನೋಭಾವಗಳು ರೂಪುಗೊಳ್ಳುವುದು ಪೋಷಕರು ನೀಡಿದ ನಿರ್ಣಾಯಕ ಅಂಶಗಳಿಂದ, ಮಗುವಿಗೆ ಪ್ರಾಥಮಿಕ ಅಂಶಗಳು ದೊರೆಯುವುದೇ ಕುಟುಂಬದಿಂದ, ಹೊರಗಿನ ಪ್ರಪಂಚದ ಬಗ್ಗೆ ಹಲವಾರು ಅಂಶಗಳನ್ನು ಮಗು ಮನೆಯಲ್ಲಿನ ಹಿರಿಯರು (ಅಜ್ಜ–ಅಜ್ಜಿ) ಹೇಳುವ ಕಥೆಗಳಿಂದ ಕಲಿಯುತ್ತಾರೆ.

**ಸಾಮಾಜಿಕ ಗುಂಪುಗಳು**

ಮಕ್ಕಳು ಬೆಳೆದಂತೆ ಅವರ ಜೀವನದ ಮೇಲೆ ಹಲವಾರು ರೀತಿಯ ಪ್ರಭಾವಗಳನ್ನು ಕಾಣುತ್ತೇವೆ. ಜನ ಹಲವಾರು ವ್ಯಕ್ತಿಗಳು ಮತ್ತು ವಸ್ತುಗಳ ಬಗ್ಗೆ ತಮ್ಮದೇ ಅಭಿಪ್ರಾಯ ಮೂಡಿಸಿಕೊಳ್ಳುತ್ತಾರೆ. ಮಕ್ಕಳು ಬೆಳೆದಂತೆ ಶಿಕ್ಷಕರು, ಸಹಪಾಠಿಗಳು, ಮಾರಾಟಗಾರರು ಹಾಗೂ ವಿವಿಧ ಉದ್ಯೋಗ ಮಾಡುವವರ ಸಂಪರ್ಕಕ್ಕೆ ಬರುತ್ತಾರೆ. ಈ ಗುಂಪುಗಳು ಮಕ್ಕಳ ಮೇಲೆ ಪ್ರಭಾವ ಬೀರುವ ಸಾಮಾಜಿಕ ಗುಂಪುಗಳಾಗಿರುತ್ತವೆ. ಮಕ್ಕಳು ಇಂತಹ ಗುಂಪುಗಳಿಂದ ಹೆಚ್ಚಿನ ವಿಷಯಗಳನ್ನು ಕಲಿಯುತ್ತಾರೆ. ಇವರಿಂದ ವಿವಿಧ ವೃತ್ತಿಗಳು, ಸಾಮಾಜಿಕ ಹಾಗೂ ಧಾರ್ಮಿಕ ಗುಂಪುಗಳು, ದಿನಬಳಕೆಯ ವಸ್ತುಗಳು, ರಾಷ್ಟ್ರೀಯ ನಾಯಕರು ಮುಂತಾದ ವಿಷಯಗಳ ಬಗ್ಗೆ ಮನೋಭಾವಗಳನ್ನು ರೂಪಿಸಿಕೊಳ್ಳುತ್ತಾರೆ. ಇವರ ಪ್ರಭಾವಕ್ಕೆ ಬಂದ ಸಾಮಾಜಿಕ ಗುಂಪು ಒಂದು ವೇಳೆ ಒಂದು ಧಾರ್ಮಿಕ ಗುಂಪಿನ ಬಗ್ಗೆ ಧನಾತ್ಮಕ ಅಥವಾ ಋಣಾತ್ಮಕ ಭಾವನೆ ಹೊಂದಿದ್ದರೆ ಮಗು ಸಹ ಅದೇ ರೀತಿಯ ಮನೋಭಾವ ಬೆಳೆಸಿಕೊಳ್ಳುತ್ತದೆ.

**ನೇರ ವೈಯಕ್ತಿಕ ಅನುಭವಗಳು:** ನಮ್ಮ ಕೆಲವು ಮನೋಭಾವಗಳು ನಾವು ಪಡೆಯುವ ನೇರ ಅನುಭವಗಳನ್ನು ಅವಲಂಬಿಸಿರುತ್ತವೆ. ಉದಾ: ಪೋಲಿಸರ ಬಗ್ಗೆ ಮಕ್ಕಳ ಮನೋಭಾವ ಹೇಗೆ ರೂಪುಗೊಳ್ಳುತ್ತದೆ? ನಮಗೆ ಇಂತಹ ವ್ಯಕ್ತಿಯ ಪರಿಚಯವಾಗಿ ಅವನು ಪ್ರೀತಿ–ವಿಶ್ವಾಸದಿಂದ ನಡೆದುಕೊಂಡಾಗ, ಅವನ ಧೈರ್ಯ–ಸಾಹಸಗಳ ಬಗ್ಗೆ ಕೇಳಿ ತಿಳಿದುಕೊಂಡಾಗ ನಮಗೆ ಅವನ ಬಗ್ಗೆ ಸಕಾರಾತ್ಮಕ ಭಾವನೆ ಮೂಡುತ್ತದೆ. ಒಂದು ವೇಳೆ ಇದೇ ವ್ಯಕ್ತಿ ನಾವು ತಪ್ಪು ಮಾಡಿದಾಗ ನಮ್ಮನ್ನು ಶಿಕ್ಷಿಸಿದರೆ ಅವನ ಬಗ್ಗೆ ನಕಾರಾತ್ಮಕ ಭಾವನೆ ಮೂಡುತ್ತದೆ.

ಉದಾ: ರಾಮಕೃಷ್ಣ ಪರಮಹಂಸರ ಪ್ರಭಾವಕ್ಕೆ ಬಂದ ನರೇಂದ್ರನ ಜೀವನವೇ ಬದಲಾಯಿತು. ಜೀವನ ಮತ್ತು ವ್ಯಕ್ತಿಗಳ ಬಗ್ಗೆ ಮನೋಭಾವಗಳನ್ನು ಬದಲಾಯಿಸಿಕೊಂಡರು. ದೈವಶಕ್ತಿಯಲ್ಲಿ ನಂಬಿಕೆಯುಳ್ಳವರಾಗಿ ಸ್ವಾಮಿ ವಿವೇಕಾನಂದ ಎನಿಸಿಕೊಂಡರು.

Digitised by Bharatavani, CIIL

ಬಡತನದಲಿಯೇ ಹುಟ್ಟಿ ಜೀವನದಲ್ಲಿ ಹಲವಾರು ಕಹಿ ಅನುಭವಗಳನ್ನು ಪಡೆದ ವ್ಯಕ್ತಿಯ ಮನೋಭಾವ ಸಮಾಜದ ವ್ಯಕ್ತಿಗಳ ಬಗ್ಗೆ ಧನಾತ್ಮಕವಾಗಿರುವುದಿಲ್ಲ.

**ಮಾಧ್ಯಮಗಳ ಪ್ರಭಾವ:** ಪ್ರಸ್ತುತ ಸಮೂಹ ಮಾಧ್ಯಮಗಳು ಮಕ್ಕಳಲ್ಲಿ ವಿವಿಧ ರೀತಿಯ ಮನೋಭಾವಗಳು, ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಾಧ್ಯಮಿಕ ಹಾಗೂ ಪ್ರೌಢಶಾಲಾ ಹಂತದ ಮಕ್ಕಳು ದೂರದರ್ಶನ ಮಾಧ್ಯಮದಿಂದ ಹೆಚ್ಚು ಪ್ರಭಾವಿತರಾಗಿದ್ದಾರೆ. ಸಮೂಹ ಮಾಧ್ಯಮಗಳೇ ಮಾಹಿತಿ ಪಡೆಯುವ ಮೂಲಮಾರ್ಗ ಎಂದು ಭಾವಿಸಿರುತ್ತಾರೆ. ಆದ್ದರಿಂದ ದೂರದರ್ಶನದಲ್ಲಿ ಬರುವ ಹೆಚ್ಚಿನ ಮಾಹಿತಿಯನ್ನು ನಂಬುತ್ತಾರೆ ಮತ್ತು ಅದರಲ್ಲಿ ಬರುವ ವಾಣಿಜ್ಯ ಪ್ರಕಟಣೆಗಳಿಂದ ಪ್ರಭಾವಿತರಾಗುತ್ತಾರೆ. ಅಂತಹ ವಸ್ತುಗಳನ್ನು ಕೊಳ್ಳಲು ಬಯಸುತ್ತಾರೆ. ಕೆಲವೊಮ್ಮೆ ಮಾತ್ರ ಇಂತವುಗಳ ಬಗ್ಗೆ ಪ್ರಶ್ನಿಸುವ ಧೋರಣೆ ಕಂಡುಬರುತ್ತದೆ. ಇಂದು ಸಮೂಹ ಮಾಧ್ಯಮಗಳು ಮಕ್ಕಳಲ್ಲಿ ಹೆಚ್ಚಿನ ಮನೋಭಾವಗಳು ರೂಪುಗೊಳ್ಳಲು ಕಾರಣವಾಗಿವೆ.

**ಅಭಿವೃತ್ತಿಗಳ ಸ್ಥಿರತೆ**

ಒಂದು ಸಾರಿ ರೂಪುಗೊಂಡಂತಹ ಅಭಿವೃತ್ತಿಗಳು ವ್ಯಕ್ತಿಯಲ್ಲಿ ಸಾಮಾನ್ಯವಾಗಿ ಉಳಿಸಿಕೊಳ್ಳುತ್ತದೆ. ಮನೋಭಾವಗಳ ಸ್ಥಿರತೆ ಹಲವಾರು ರೀತಿಯಲ್ಲಿ ಆಗುತ್ತದೆ.

1. ತಾವು ಹೊಸದಾಗಿ ಪಡೆಯುವ ಮಾಹಿತಿ, ತಾವು ಈಗಾಗಲೇ ಹೊಂದಿರುವ ಮನೋಭಾವಕ್ಕೆ ವಿರುದ್ಧವಾಗಿದ್ದಲ್ಲಿ ವ್ಯಕ್ತಿ ಅದನ್ನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಅಂತಹ ಮಾಹಿತಿಯನ್ನು ಕಡೆಗಣಿಸಲು ಪ್ರಯತ್ನಿಸುತ್ತಾನೆ.

2. ವ್ಯಕ್ತಿ ಒಂದು ಗುಂಪಿನ ಸದಸ್ಯನಾಗಿದ್ದಾಗ ಆ ಗುಂಪಿನ ಮನೋಭಾವಗಳಿಗೆ ಬದ್ಧನಾಗಿರಲು ಪ್ರಯತ್ನಿಸುತ್ತಾನೆ. ಹೊಸದಾದ ಮಾಹಿತಿ ಭಿನ್ನವಾಗಿದ್ದರೂ ಸಹ ಅದನ್ನು ಒಪ್ಪಿಕೊಳ್ಳದೇ ಗುಂಪಿನ ಕಾರ್ಯನಿರ್ವಹಣೆಗೆ ಸೂಕ್ತವಾದಂತಹ ಧೋರಣೆಯನ್ನೇ ಪಾಲಿಸಲು ಬಯಸುತ್ತಾನೆ.

3. ನಿರ್ದಿಷ್ಟ ಮನೋಭಾವಗಳನ್ನು ಕಾಪಾಡಿಕೊಳ್ಳುವುದು ಕೆಲವೊಮ್ಮೆ ವ್ಯಕ್ತಿಗೆ ಲಾಭಕರವಾಗಿರುತ್ತದೆ. ಉದಾ; ಒಬ್ಬ ವ್ಯಕ್ತಿ ನಮ್ಮ ಗುರಿಸಾಧನೆಗೆ ಸಹಾಯಕವಾಗಿದ್ದಲ್ಲಿ, ಅವನ ಬಗ್ಗೆ ಋಣಾತ್ಮಕ ಅಂಶಗಳು ತಿಳಿದುಬಂದರೂ ಸಹ ಅದನ್ನು ಕಡೆಗಣಿಸಿ ಅವನ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತೇವೆ ಮತ್ತು ಅವನ ಬಗ್ಗೆ ಹೊಂದಿರುವ ಮನೋಭಾವವನ್ನು ಮುಂದುವರೆಸುತ್ತೇವೆ.

4. ನಾವು ಒಂದು ಬಾರಿ ತೀರ್ಮಾನ ಕೈಗೊಂಡ ಮೇಲೆ ಅದನ್ನು ಬದಲಾಯಿಸುವುದು ತುಂಬಾ ಕಷ್ಟ. ಉದಾ: ಒಬ್ಬ ವ್ಯಕ್ತಿ ಮೀಸಲಾತಿ ನೀತಿ ವಿರುದ್ಧ ಪ್ರತಿಭಟನೆಯಲ್ಲಿ ಪಾಲ್ಗೊಂಡ ನಂತರ ಅವನು ಅದರ ಬಗ್ಗೆ ಧನಾತ್ಮಕ ಧೋರಣೆ ತಾಳಲಾರ. ಒಂದು ವೇಳೆ ಆ ವ್ಯಕ್ತಿ ತನ್ನ ಧೋರಣೆ ಬದಲಾಯಿಸಿಕೊಂಡರೆ ಅದನ್ನು ಸಮರ್ಥಿಸಿಕೊಳ್ಳುವುದು ಅವನಿಗೆ ಕಷ್ಟವಾಗುತ್ತದೆ.

5. ಮನೋಭಾವಗಳು ನಮ್ಮ ಅನನ್ಯತೆಯನ್ನು ರೂಪಿಸುತ್ತವೆ. ಪ್ರತಿಯೊಬ್ಬ ವ್ಯಕ್ತಿಯ ಮನೋಭಾವಗಳು ಅವನು ಜನರು, ವಸ್ತುಗಳು, ಘಟನೆಗಳು ಮುಂತಾದವುಗಳ ಬಗ್ಗೆ ಹೊಂದಿರುವ ಅನುಭವಗಳಿಂದ ನಿರ್ಧರಿಸಲ್ಪಡುತ್ತದೆ.

**ಮನೋಭಾವಗಳ ಅಳತೆ**

ನಿರ್ದಿಷ್ಟ ವಿಷಯಗಳ ಬಗ್ಗೆ ವ್ಯಕ್ತಿಗಳ ಮನೋಭಾವಗಳನ್ನು ಅಳೆಯಲು ಹಲವಾರು ತಂತ್ರಗಳನ್ನು ಬಳಸಲಾಗುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

**ಮನೋಭಾವ ಪ್ರಶ್ನಾವಳಿ:** ಇದು ಮನೋಧೋರಣೆಗಳನ್ನು ಅಳೆಯಲು ಸಾಮಾನ್ಯವಾಗಿ ಹೆಚ್ಚು ಬಳಸುವ ತಂತ್ರವಾಗಿದೆ. ಸಂಶೋಧಕರು ಪ್ರಶ್ನಾವಳಿಯನ್ನು ನೀಡುತ್ತಾರೆ ಅಥವಾ ಸರಣಿ ಪ್ರಶ್ನೆಗಳನ್ನು ಕೇಳುತ್ತಾರೆ. ಈ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಪರೀಕ್ಷಾರ್ಥಿ ತನ್ನ ಮನೋಧೋರಣೆಯನ್ನು ಸೂಚಿಸುತ್ತಾನೆ. ಈ ಪ್ರಶ್ನೆಗಳು ನಿರ್ಬಂಧಿತ ಅಥವಾ ಮುಕ್ತ ಉತ್ತರದ ಪ್ರಶ್ನೆಗಳಾಗಿರಬಹುದು. ಸಾಮಾನ್ಯವಾಗಿ ಮನೋಭಾವಗಳನ್ನು ಅಳೆಯುವಾಗ ನಿರ್ಬಂಧಿತ ಉತ್ತರದ ಪ್ರಶ್ನೆಗಳನ್ನು ಬಳಸಲಾಗುತ್ತದೆ. ಉದಾ: ಒಂದು ರಾಜ್ಯದ ಮುಖ್ಯಮಂತ್ರಿಯಾಗಲು ಮಹಿಳೆಯರು ಅರ್ಹರೆ? ಎಂದು ಕೇಳಿದಾಗ ಪರೀಕ್ಷಾರ್ಥಿ ಹೌದು/ಇಲ್ಲ/ಹೇಳಲಾರೆ ಎಂಬ ಆಯ್ಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಬೇಕಾಗುತ್ತದೆ.

**ದರ್ಜಾಮಾಪನಿಗಳು:** ಈ ಮಾಪನಿಗಳಲ್ಲಿ ಉತ್ತರಿಸುವ ವ್ಯಕ್ತಿ ಹೇಳಿಕೆಗಳಿಗೆ ಯಾವ ಪ್ರಮಾಣದಲ್ಲಿ ಒಪ್ಪುತ್ತಾನೆ ಅಥವಾ ಒಪ್ಪುವುದಿಲ್ಲ ಎಂಬುದನ್ನು ಸೂಚಿಸುತ್ತಾನೆ. ಇವುಗಳಲ್ಲಿ ಹೆಚ್ಚಾಗಿ ಬಳಸುವ ಮಾಪನಿ ಲೀಕರ್ಟ್ ಮಾದರಿಯ ಮಾಪನಿಯಾಗಿದೆ. ಈ ಮಾದರಿಯ ಮಾಪನಿಯನ್ನು ರೆನ್ಸಿಸ್ ಲೀಕರ್ಟ್‌ರವರು 1932ರಲ್ಲಿ ಅಭಿವೃದ್ಧಿಪಡಿಸಿರುತ್ತಾರೆ.

ಲೀಕರ್ಟ್ ಮಾದರಿಯ ದರ್ಜಾ ಮಾಪನಿಗಳಲ್ಲಿ ವ್ಯಕ್ತಿ ಹೇಳಿಕೆಗಳಿಗೆ ತನ್ನ ಸಮ್ಮತಿ ಅಥವಾ ಅಸಮ್ಮತಿಯನ್ನು 5 ದರ್ಜೆಗಳಲ್ಲಿ ಸೂಚಿಸಬೇಕಾಗುತ್ತದೆ.

ಉದಾ: ನನ್ನ ದೃಷ್ಟಿಯಲ್ಲಿ ಮಕ್ಕಳನ್ನು ಶಿಕ್ಷಿಸಬಾರದು.

| ಬಲವಾಗಿ ಒಪ್ಪುವುದಿಲ್ಲ | ಒಪ್ಪುವುದಿಲ್ಲ | ತಟಸ್ಥವಾಗಿರುತ್ತೇನೆ |
|---|---|---|
| 1 | 2 | 3 |
| ಒಪ್ಪುತ್ತೇನೆ ಬಲವಾಗಿ | ಒಪ್ಪುತ್ತೇನೆ | |
| 4 | 5 | |

ಲೀಕರ್ಟ್ ತಂತ್ರವನ್ನು ಕ್ರೋಢೀಕೃತ ದರ್ಜಾ ಮಾಪನ ಎನ್ನುವರು. ಏಕೆಂದರೆ ಮಾಪನದಲ್ಲಿರುವ ಎಲ್ಲಾ ಪರೀಕ್ಷಾಂಶಗಳಿಂದ ಪಡೆದ ಅಂಕಗಳನ್ನು ಕೂಡಿಸಿ ವ್ಯಕ್ತಿಯ ಮನೋಭಾವಯನ್ನು ನಿರ್ಧರಿಸಲಾಗುವುದು. ಉದಾ: ರೆಮ್ಮರ್ಸ್ ಮನೋಧೋರಣೆಯ ಮಾನದಂಡ, ವೈಜ್ಞಾನಿಕ ಮನೋಭಾವದ ಮಾಪಕ, ಶಿಕ್ಷಕ ಮನೋಧೋರಣಾ ಮಾಪನಿ, ಇತ್ಯಾದಿ.

ಇನ್ನೊಂದು ಮಾದರಿಯ ಮಾಪಕಗಳೆಂದರೆ ಥರ್ಸ್ಟನ್‌ರವರ ಮನೋಭಾವ ಮಾಪನಿಗಳು. ಈ ಮಾದರಿಯನ್ನು ಲೂಯಿಸ್ ಥರ್ಸ್ಟನ್‌ರವರು 1928ರಲ್ಲಿ ರೂಪಿಸಿರುತ್ತಾರೆ. ಥರ್ಸ್ಟನ್‌ರವರ ಪ್ರತಿಯೊಂದು ಹೇಳಿಕೆಗೂ ನಿರ್ಣಾಯಕರು ನೀಡುವ ಅಂಕಗಳ ವಿತರಣೆಯ ಮಧ್ಯಮಾಂಕವನ್ನು (Median) ಆ ಹೇಳಿಕೆಯ ಮಾಪನ ಮೌಲ್ಯವಾಗಿ ತೆಗೆದುಕೊಳ್ಳಲಾಗುತ್ತದೆ. ನಂತರ ಧನಾತ್ಮಕತೆಯಿಂದ ಋಣಾತ್ಮಕತೆಯವರೆಗಿನ ಆಯಾಮದಲ್ಲಿ ಸಮಾನ ಅಂತರ ಬರುವಂತೆ ಹೇಳಿಕೆಗಳನ್ನು ಆಯ್ಕೆಮಾಡಿ ಅಂತಿಮ ಮಾಪನಿ ಸಿದ್ಧಪಡಿಸುತ್ತಾರೆ.

Digitised by Bharatavani, CIIL

ಮನೋಭಾವ ಮಾಪನಿಯಲ್ಲಿರುವ ಹೇಳಿಕೆಗಳಿಗೆ ವಿವಿಧ ನಿರ್ಣಾಯಕರು ಮೌಲ್ಯಾಂಕಗಳನ್ನು ನೀಡುತ್ತಾರೆ. ಈ ಮಾಪನದಲ್ಲಿ ವ್ಯಕ್ತಿ ಗುರುತಿಸುವ ಹೇಳಿಕೆಗಳ ಒಟ್ಟು ಮಾಪನ ಮೌಲ್ಯದಿಂದ ವ್ಯಕ್ತಿಯ ಮನೋಭಾವವನ್ನು ಅಳತೆ ಮಾಡಲಾಗುತ್ತದೆ. ಥರ್ಸ್ಟನ್ನನ ವಿಧಾನಕ್ಕೆ ಸಮಾನ ಅಂತರ ವಿಧಾನ ಎಂದು ಹೆಸರು.

ಶಿಕ್ಷಣಕ್ಷೇತ್ರದಲ್ಲಿ ವಿವಿಧ ವಿಷಯಗಳ ಬಗ್ಗೆ ಮನೋಧೋರಣೆಗಳನ್ನು ಅಳೆಯಲು ಸಾಮಾನ್ಯವಾಗಿ ಲೀಕರ್ಟ್ ಮಾದರಿಯ ಮನೋಧೋರಣಾ ಮಾಪಕಗಳನ್ನು ಬಳಸಲಾಗುತ್ತಿದೆ.

**ಅಭಿವೃತ್ತಿಗಳ ಬದಲಾವಣೆ**

ಒಂದು ಸಾರಿ ರೂಪಿತಗೊಂಡ ಅಭಿವೃತ್ತಿಗಳು ಬದಲಾಗುವುದು ಕಷ್ಟ. ಆದರೂ ಸಹ ವ್ಯಕ್ತಿಯ ಜೀವನದಲ್ಲಿ ಹಲವಾರು ಬಾರಿ ಅವುಗಳು ಬದಲಾಗುವುದನ್ನು ಕಾಣುತ್ತೇವೆ. ಈ ಅಭಿವೃತ್ತಿಗಳು ವ್ಯಕ್ತಿಯಲ್ಲಿ ಇದ್ದಕ್ಕಿದ್ದಹಾಗೆ ಅಥವಾ ನಾಟಕೀಯ ರೂಪದಲ್ಲಿ ಬದಲಾಗುವುದಿಲ್ಲ. ಕ್ರಮೇಣವಾಗಿ ಬದಲಾವಣೆ ನಮಗೆ ಗೋಚರಿಸದ ರೀತಿಯಲ್ಲಿ ಕಂಡುಬರುತ್ತದೆ.

ಉದಾ: ಜಾಹೀರಾತುದಾರರು ವಿವಿಧ ವಸ್ತುಗಳ ಬಗ್ಗೆ ನಮ್ಮ ಅಭಿವೃತ್ತಿಗಳು ಬದಲಿಸಲು ಪ್ರಯತ್ನಿಸುತ್ತಾರೆ. ಕೆಲವು ವಿಷಯಗಳು/ವಸ್ತುಗಳ ಬಗ್ಗೆ ನಮ್ಮ ಮನೋಭಾವ ಬದಲಾಗುವುದಿಲ್ಲ ಆದರೆ ಕೆಲವು ವಸ್ತುಗಳ ಬಗ್ಗೆ ಬದಲಾಗಿರುವುದು ಕಂಡುಬರುತ್ತದೆ.

ನಮ್ಮ ಕುಟುಂಬ, ಸ್ನೇಹಿತರು, ವಿಶ್ವಾಸಿಗಳು ಮತ್ತು ಹಿರಿಯರು ನಮಗೆ ಯಾವುದು ಉತ್ತಮ ಮತ್ತು ಯಾವ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತಲೇ ಇರುತ್ತಾರೆ. ದಿನನಿತ್ಯ ದೂರದರ್ಶನ, ದಿನಪತ್ರಿಕೆಗಳು, ರಸ್ತೆಯಲ್ಲಿನ ಜಾಹೀರಾತು ಫಲಕಗಳಲ್ಲಿ ಲಕ್ಷಾಂತರ ಜಾಹೀರಾತುಗಳನ್ನು ಕಾಣುತ್ತೇವೆ. ಇವರು ತಮ್ಮ ಕಂಪನಿಯ ವಸ್ತುಗಳನ್ನು ಕೊಳ್ಳುವಂತೆ ಜನರನ್ನು ಪುಸಲಾಯಿಸುತ್ತಾರೆ. ರಾಜಕೀಯ ಪಕ್ಷಗಳು ಜನರ ಮನೋಭಾವವನ್ನು ತಮ್ಮ ಪಕ್ಷದ ಕಡೆಗೆ ಬದಲಾಯಿಸಲು ಪ್ರಯತ್ನಿಸುತ್ತಾರೆ. ಜನರ ಮನೋಭಾವಗಳನ್ನು ಬದಲಾಯಿಸಲು ದಿನನಿತ್ಯ ಹೊಸ ಹೊಸ ವಿಧಾನಗಳು ರೂಪುಗೊಳ್ಳುವುದನ್ನು ಮತ್ತು ಬಳಕೆಯಾಗುವುದನ್ನು ಕಾಣುತ್ತೇವೆ. ಮನೋಭಾವಗಳು ಧನಾತ್ಮಕ ಅಥವಾ ಋಣಾತ್ಮಕ ದಿಕ್ಕಿನಲ್ಲಿ ಬದಲಾವಣೆಯಾಗಬಹುದು, ಮನೋಭಾವಗಳ ಬದಲಾವಣೆ ಅನುರೂಪವಾಗಿರಬಹುದು (Congruent) ಅಥವಾ ಅನುರೂಪವಾಗಿಲ್ಲದಿರಬಹುದು (Incongruent) ಈಗಾಗಲೇ ವ್ಯಕ್ತಿ ಹೊಂದಿರುವ ಮನೋಭಾವದ ದಿಕ್ಕಿನಲ್ಲಿಯೇ ಮನೋಭಾವ ಬದಲಾದರೆ ಅದನ್ನು ಅನುರೂಪ ಬದಲಾವಣೆ ಎಂತಲೂ, ವಿರುದ್ಧ ದಿಕ್ಕಿನಲ್ಲಿ ಬದಲಾದರೆ ಅದನ್ನು ಅನುರೂಪವಲ್ಲದ ಬದಲಾವಣೆ ಎನ್ನುವರು. ಸಾಮಾನ್ಯವಾಗಿ ವಿರುದ್ಧ ದಿಕ್ಕಿನಲ್ಲಿ ಬದಲಾವಣೆಗೊಳ್ಳುವುದು ಕಠಿಣ. ಎರಡು ಪ್ರಮುಖ ಅಂಶಗಳು ಮನೋಭಾವಗಳ ಬದಲಾವಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಅವುಗಳೆಂದರೆ 1) ಮನೋಭಾವದ ಲಕ್ಷಣಗಳು ಮತ್ತು 2) ಸಂವಹನ ಕಾರಕಗಳು.

**ಮನೋಭಾವದ ಲಕ್ಷಣಗಳು:**

ಮನೋಭಾವದ ಈ ಕೆಳಕಂಡ ಲಕ್ಷಣಗಳು ಮನೋಭಾವಗಳ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

1) **ಮನೋಭಾವದ ಬಲ:** ಯಾವುದೇ ಒಂದು ವಿಷಯದ ಬಗ್ಗೆ ನೀವು ಬಲವಾದ ಧೋರಣೆ ಹೊಂದಿದ್ದರೆ ಅದು ಸುಲಭವಾಗಿ ಬದಲಾಗುವುದಿಲ್ಲ. ಉದಾ: ಒಂದು ಧರ್ಮದ ಬಗ್ಗೆ ನೀವು ಬಲವಾದ ಮನೋಭಾವ ಹೊಂದಿದ್ದರೆ ಇನ್ನೊಂದು ಧರ್ಮದ ಬಗ್ಗೆ ಹೆಚ್ಚಿನ ಗಮನ ಹರಿಸುವುದಿಲ್ಲ ಮತ್ತು ಆ ಕಡೆಗೆ ಮನೋಭಾವ ಬದಲಾಯಿಸಿಕೊಳ್ಳಲು ಇಚ್ಛಿಸುವುದಿಲ್ಲ.

2) **ಸಂಕೀರ್ಣತೆ:** ಒಬ್ಬ ವ್ಯಕ್ತಿ ಹೊಂದಿರುವ ಮನೋಭಾವ ಬಹುಕಾರಕಗಳಿಂದ ರೂಪುಗೊಂಡಿರುತ್ತದೆ. ಉದಾ: ಪೋಷಕರ ಬಗ್ಗೆ ನಾವು ಹೊಂದಿರುವ ಮನೋಭಾವ ನಾವು ಒಂದು ಸೋಪ್‌ನ ಬಗ್ಗೆ ಹೊಂದಿರುವ ಮನೋಭಾವಕ್ಕಿಂತ ತುಂಬಾ ಸಂಕೀರ್ಣವಾದುದು. ಆದ್ದರಿಂದ ಪೋಷಕರ ಬಗ್ಗೆ ಇರುವ ಮನೋಭಾವ ಅಷ್ಟು ಸುಲಭವಾಗಿ ಬದಲಾಗುವುದಿಲ್ಲ.

3) **ಪ್ರಾಮುಖ್ಯ:** ಸ್ನೇಹಿತರೊಂದಿಗಿನ ನಮ್ಮ ಸಂಬಂಧ ಅಥವಾ ಜೀವನದ ಗುರಿಗಳು ನಮ್ಮ ಮನೋಭಾವಗಳಿಗೆ ಸಂಬಂಧಿಸಿದ್ದರೆ, ಇಂತಹ ಮನೋಭಾವಗಳು ಹೆಚ್ಚು ಸ್ಥಿರವಾಗಿರುತ್ತವೆ. ಏಕೆಂದರೆ ಇಂತಹ ಮನೋಭಾವಗಳ ಬದಲಾವಣೆ ನಮ್ಮ ಜೀನವದ ಹಲವಾರು ಅಂಶಗಳ ಬದಲಾವಣೆಗೆ ಕಾರಣವಾಗುತ್ತವೆ.

4) **ಅಂತರ್-ಸಂಬಂಧ:** ನಾವು ಹೊಂದಿರುವ ಹಲವಾರು ಮನೋಭಾವಗಳು ಪರಸ್ಪರ ಸಂಬಂಧ ಹೊಂದಿದ್ದು, ಸಮತೋಲನ ಸ್ಥಿತಿಯಲ್ಲಿದ್ದರೆ ಅಂತಹ ಮನೋಭಾವಗಳು ಪರಸ್ಪರ ಪುನರ್ಬಲನಗೊಳ್ಳುತ್ತವೆ. ಆದ್ದರಿಂದ ಇಂತಹ ಮನೋಭಾವಗಳು ಸುಲಭವಾಗಿ ಬದಲಾಗುವುದಿಲ್ಲ.

5) **ಕ್ರಿಯಾತ್ಮಕತೆ:** ವ್ಯಕ್ತಿ ಹೊಂದಿರುವ ಮನೋಧೋರಣೆ ಅವನ ನಿರ್ದಿಷ್ಟ ಕಾರ್ಯಸಾಧನೆಯಲ್ಲಿ ನೆರವಾಗಿದ್ದಲ್ಲಿ ಅಂತಹ ಧೋರಣೆಯನ್ನು ವ್ಯಕ್ತಿ ಬದಲಾಯಿಸಿಕೊಳ್ಳಲು ಇಚ್ಛಿಸುವುದಿಲ್ಲ. ಉದಾ: ಒಂದು ಸಂಘದ ಸದಸ್ಯನಾಗಿರುವುದು ನಿಮಗೆ ಸಮಾಜದಲ್ಲಿ ಘನತೆಯನ್ನು ತಂದುಕೊಡುವಂತಿದ್ದರೆ ನೀವು ಆ ಸಂಘದ ಬಗ್ಗೆ ಧನಾತ್ಮಕ ಮನೋಭಾವನೆ ಮುಂದುವರೆಸುತ್ತೀರಿ.

**ಸಂವಹನ ರೀತಿ:** ಮನೋಭಾವಗಳನ್ನು ಬದಲಾಯಿಸುವಲ್ಲಿ ನಾವು ವಿಷಯಗಳನ್ನು ಇತರರಿಗೆ ಹೇಗೆ ತಲುಪಿಸುತ್ತೇವೆ ಹಾಗೂ ಅವರ ಮನ ಒಲೈಸುತ್ತೇವೆ ಎಂಬುದು ವ್ಯಕ್ತಿಯ ಸಂವಹನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

ಮನೋಭಾವಗಳನ್ನು ಬದಲಾಯಿಸಲು ಇಚ್ಛಿಸಿದಾಗ ನೀವು ನೀಡಬಹುದಾದ ಮಾಹಿತಿಯ ಮೂಲ ವಿಶ್ವಸನೀಯವಾಗಿರಬೇಕು. ವಿಶ್ವಸನೀಯ ಮೂಲದಿಂದ ಪಡೆದಂತಹ ಮಾಹಿತಿಯನ್ನು ಪರಿಣಿತ ವ್ಯಕ್ತಿ ತಿಳಿಸಿದಾಗ ಅದು ಪರಿಣಾಮಕಾರಿಯಾಗಿರುತ್ತದೆ. ಪರಿಣಿತ ಅಥವಾ ವಿಶ್ವಸನೀಯ ವ್ಯಕ್ತಿ ಮನ ಒಲೈಸುವ ಸಾಮರ್ಥ್ಯ ಹೊಂದಿರುತ್ತಾನೆ. ಮಾಹಿತಿ ನೀಡುವ ವ್ಯಕ್ತಿ ಆಕರ್ಷಣೀಯ ವ್ಯಕ್ತಿತ್ವ ಹೊಂದಿರಬೇಕು ಹಾಗೂ ಉತ್ತಮ ಭಾಷೆಯನ್ನು ಬಳಸಬೇಕು. ಉದಾ: ದೂರದರ್ಶನದಲ್ಲಿ ನಿಮ್ಮ ಮೆಚ್ಚಿನ ನಟ ಅಥವಾ ಕ್ರಿಕೆಟ್ ಆಟಗಾರ ನೀಡುವ ಜಾಹೀರಾತು ನಿಮ್ಮ ಗಮನವನ್ನು ಹೆಚ್ಚು ಸೆಳೆಯುತ್ತದೆ.

ವಿದ್ಯಾರ್ಥಿಗಳಲ್ಲಿ ಕೆಲವು ಮನೋಭಾವಗಳನ್ನು ಬದಲಾಯಿಸ ಬೇಕಾದಾಗ ಮುಖಾ-ಮುಖಿ ಸಂವಹನ ಹೆಚ್ಚು ಪರಿಣಾಮಕಾರಿ ಯಾಗಿರುತ್ತದೆ. ಮುಖಾ-ಮುಖಿ ಸಂವಹನದಲ್ಲಿ ವಿದ್ಯಾರ್ಥಿಗಳ ಮನ ಒಲೈಸುವುದು ಸುಲಭವಾಗುತ್ತದೆ. ಗುಂಪು ದೊಡ್ಡದಾಗಿದ್ದಲ್ಲಿ ಮುದ್ರಣ ಹಾಗೂ ದೃಶ್ಯ ಮಾಧ್ಯಮದ ಮೂಲಕ ಅವರ ಮನೋಭಾವಗಳನ್ನು ಬದಲಾಯಿಸಲು ಪ್ರಯತ್ನಿಸಬಹುದು.

–ಹೆಚ್.ವಿ.ವಾ.

Digitised by Bharatavani, CIIL

## ಅಭ್ಯಾಸ ಬೋಧನೆ

ಶಿಕ್ಷಣದ ಯಶಸ್ಸು ಅವಲಂಬಿತವಾಗಿರುವುದು ಬೇರೆಲ್ಲ ಸೌಲಭ್ಯ ಸಲಕರಣೆಗಳಿಗಿಂತ ಬೋಧಕರ ಪರಿಣತಿಯ ಮೇಲೆ. ಬೋಧಕರ ಪ್ರಾವೀಣ್ಯತೆಯು ಅವರು ಪಡೆದ ಪ್ರಶಿಕ್ಷಣವನ್ನು ಅವಲಂಬಿಸಿದೆ. ಇದು ಅಲ್ಲಿ ಹಮ್ಮಿಕೊಳ್ಳುವ ಅಭ್ಯಾಸ ಬೋಧನೆ (Practice Teaching) ಕಾರ್ಯಕ್ರಮವನ್ನವಲಂಬಿಸಿದೆ.

**ಅಭ್ಯಾಸ ಬೋಧನೆಯ ಪರ್ಯಾಯ ಪದಗಳು:** ಪ್ರಶಿಕ್ಷಣದ ಈ ಪ್ರಮುಖ ಕಾರ್ಯಕ್ರಮಕ್ಕೆ ಒಂದೊಂದು ಪ್ರಾಂತ್ಯ ಮತ್ತು ಒಂದೊಂದು ಹಂತದಲ್ಲಿ ಒಂದೊಂದು ಪದ ಚಾಲ್ತಿಯಲ್ಲಿದ್ದು ಸಾಧಾರಣವಾಗಿ ಹೆಚ್ಚು ಬಳಕೆಯ ಪದಗಳೆಂದರೆ ಅಭ್ಯಾಸ ಬೋಧನೆ. ಬೋಧನಾಭ್ಯಾಸ, ಅಭ್ಯಾಸಾರ್ಥ ಬೋಧನೆ, ವಿದ್ಯಾರ್ಥಿ ಬೋಧನೆ, ನಿರ್ದೇಶಿತ ಬೋಧನೆ, ಸೈದ್ಧಾಂತಿಕ ಪರೀಕ್ಷಣ ಕಾರ್ಯಕ್ರಮ, ರೂಢ ಬೋಧನೆ ಇತ್ಯಾದಿ.

**ಅಭ್ಯಾಸ ಬೋಧನೆಯ ಅರ್ಥ:** 1. ನಿಯೋಜಿತ ಶಾಲೆ ಅಥವಾ ಶಾಲೆಗಳಲ್ಲಿ ಶಾಲಾ ಶಿಕ್ಷಕರು ಅಥವಾ ಪ್ರಶಿಕ್ಷಕರ ಸಮಕ್ಷಮದಲ್ಲಿ ಪ್ರಶಿಕ್ಷಣಾರ್ಥಿಯು ಮಾಡುವ ಬೋಧನೆಯ ಅಭ್ಯಾಸವನ್ನು ಅಭ್ಯಾಸ ಬೋಧನೆ ಎನ್ನಲಾಗುತ್ತದೆ.

ಪರಿಣಾಮಕಾರಿ ಮತ್ತು ಸಮರ್ಥ ಬೋಧನೆಗೆ ಪೂರಕವಾದ ಅನುಭವಗಳನ್ನೊದಗಿಸುವ ಕಲಿಕಾ ಪ್ರಕ್ರಿಯೆಯೇ ಅಭ್ಯಾಸ ಬೋಧನೆ. ವೃತ್ತಿ ಬೆಳವಣಿಗೆಗೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಕುರಿತು ಪ್ರಶಿಕ್ಷಣಾರ್ಥಿಯು ಪಡೆಯುವ ಪ್ರತ್ಯಕ್ಷ ಮಾರ್ಗದರ್ಶನಾನುಭವವೇ ಬೋಧನಾಭ್ಯಾಸ.

ಬೋಧನೆಯ ಮತ್ತು ಅಭ್ಯಾಸ ಬೋಧನೆಯ ಪರಿಕಲ್ಪನೆಯನ್ನು ಕೆಳಗಿನ ವ್ಯತ್ಯಾಸಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಅರ್ಥೈಸಿಕೊಳ್ಳಬಹುದಾಗಿದೆ.

| | ಬೋಧನೆ | ಅಭ್ಯಾಸ ಬೋಧನೆ |
|---|---|---|
| ಯಾರು | ಶಾಲಾ ಶಿಕ್ಷಕರು | ಪ್ರಶಿಕ್ಷಣಾರ್ಥಿಗಳು |
| ಎಲ್ಲಿ | ಶಾಲೆಯಲ್ಲಿ | ಶಾಲೆ / ಶಾಲೆಗಳಲ್ಲಿ |
| ಸಮಯ | ವರ್ಷಪೂರ್ತಿ/ಸೇವಾವಧಿ ಪೂರ್ತಿ | ನಿಯೋಜಿತ ಪರಿಮಿತ ಸಮಯ |
| ಜವಾಬ್ದಾರಿ | ಪತ್ಯದ ಎಲ್ಲ ವಿಷಯ ಬೋಧನೆ | ಸೀಮಿತ ನಿಗದಿತ ವಿಷಯ ಬೋಧನೆ |
| ಆದ್ಯತೆ | ವಿಷಯ ಬೋಧನೆ | ಕೌಶಲ, ಸಾಮರ್ಥ್ಯ ಕರಗತ |
| ಮೇಲ್ವಿಚಾರಣೆ | ಸ್ವತಂತ್ರ ಅಥವಾ ಮೇಲಧಿಕಾರಿಗಳು | ಶಾಲಾ ಶಿಕ್ಷಕರು / ಪ್ರಶಿಕ್ಷಕರ ಮಾರ್ಗದರ್ಶನ |

**ಅಭ್ಯಾಸ ಬೋಧನೆಯ ಉದ್ದೇಶಗಳು:** ವೈದ್ಯಕೀಯ ಶಿಕ್ಷಣ ಮುಗಿಸಿದ ವ್ಯಕ್ತಿಯು ವೃತ್ತಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ಮುನ್ನ ಹಿರಿಯ ಅನುಭವಿ ವೈದ್ಯರ ನೇತೃತ್ವದಲ್ಲಿ 'ಹೌಸ್ ಸರ್ಜನ್' ಆಗಿ ಪ್ರಾಯೋಗಿಕ ಅನುಭವ ಪಡೆಯುವಂತೆ, ಕಾನೂನು ಪದವೀಧರ ಅಭ್ಯರ್ಥಿಯು ಅಧಿಕೃತವಾಗಿ ವಕೀಲ ವೃತ್ತಿ ಪ್ರವೇಶಿಸುವ ಮುನ್ನ ಆ ಕ್ಷೇತ್ರದಲ್ಲಿ ನುರಿತ ನಿಷ್ಣಾತ ವಕೀಲರಿಗೆ ಸಹಾಯಕನಾಗಿ ಕೆಲಸ ಮಾಡುವ ಮುಖೇನ ಅದರ ಒಳಹೊರಗುಗಳನ್ನು ಅರಿಯುವಂತೆ ಪ್ರಶಿಕ್ಷಣಾರ್ಥಿಯು ತನ್ನ ಪದವಿ ಪಡೆಯುವ ಒಂದು ಭಾಗವಾಗಿ ನಿಯೋಜಿತ ಶಾಲೆಗಳಲ್ಲಿ ಮಕ್ಕಳಿಗೆ ಹಿರಿಯ ಶಿಕ್ಷಕರ ಅಥವಾ ತನ್ನ ಕಾಲೇಜು ಬೋಧಕರ ಮೇಲ್ವಿಚಾರಣೆಯಲ್ಲಿ ಬೋಧನೆ ಮಾಡುವ ಮೂಲಕ ಬೋಧನಾ ಕೌಶಲಗಳನ್ನು ಕರಗತ ಮಾಡಿಕೊಳ್ಳುವ ಮಾರ್ಗದಲ್ಲಿ ಹೆಜ್ಜೆಯಿಡುತ್ತಾನೆ.

**ಈ ಕಾರ್ಯಕ್ರಮದ ಉದ್ದೇಶಗಳು ಇಂತಿವೆ:**

1. ಕಾಲೇಜಿನಲ್ಲಿ ತಾನು ಕಲಿತ ಕಲಿಕೆ ಮತ್ತು ಶಾಲಾ ಅನುಭವಗಳಿಗಿರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ಅರಿತು ಅದಕ್ಕೆ ಕಾರಣಗಳನ್ನು ಹುಡುಕುವ ಪ್ರಯತ್ನ ಮಾಡುವುದು.
2. ಬೋಧನೆಯ ಅಂತರ್ಗತ ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳುವುದು.
3. ಶಾಲೆಯ ಮಕ್ಕಳ ಗುಣಗಳು, ಸ್ವಭಾವ, ನಡತೆ, ಶೈಕ್ಷಣಿಕ ಮಟ್ಟವನ್ನು ಅರಿತುಕೊಂಡು ವಿಭಿನ್ನ ವಿದ್ಯಾರ್ಥಿಗಳ ವೈವಿಧ್ಯಮಯತೆಗೆ ಕಾರಣವಾಗಿರಬಹುದಾದ ಅನುವಂಶೀಯ ಮತ್ತು ಪರಿಸರ ಕಾರಣಗಳನ್ನು ಗೊತ್ತುಮಾಡಿಕೊಳ್ಳುವುದು.
4. ವಿಷಯ ಪರಿಣತಿ, ಭಾಷಾ ಪ್ರಭುತ್ವ ಮುಂತಾದ ಶಿಕ್ಷಕ ವೃತ್ತಿಯ ದಕ್ಷತೆಗಳು, ಕೌಶಲಗಳ ಮೇಲೆ ಸ್ವಾಮ್ಯತ್ವ ಸಾಧಿಸುವುದು.
5. ಮಕ್ಕಳ ಮತ್ತು ಶಾಲೆಯ ವಿಭಿನ್ನ ಸಮಸ್ಯೆಗಳು, ಸ್ವರೂಪ, ವ್ಯಾಪ್ತಿಯ ಅರಿವನ್ನು ಹೊಂದುವುದು.
6. ಮನೋವೈಜ್ಞಾನಿಕ ಪರೀಕ್ಷಣಗಳು, ಅವುಗಳನ್ನು ಉಪಯೋಗಿಸುವ ವಿಧಿ ವಿಧಾನಗಳು, ನಮೂನೆಗಳ ಸೈದ್ಧಾಂತಿಕ ಅರಿವಿನ ಜೊತೆಗೆ ಅವುಗಳ ಅನುಷ್ಠಾನದಲ್ಲಿ ಎದುರಾಗಬಹುದಾದ ತೊಡಕುಗಳನ್ನು ತಿಳಿದು ಪರಿಹಾರದ ಬಗ್ಗೆ ಚಿಂತನೆ ಮಾಡುವುದು.
7. ಮಕ್ಕಳ ವೈವಿಧ್ಯಮಯ ನಿರೀಕ್ಷೆಗಳು, ಅಪೇಕ್ಷೆಗಳು, ಸವಾಲುಗಳು ಹಕ್ಕೊತ್ತಾಯಗಳ ಹರವಿನ ಅರಿವನ್ನು ಹೊಂದುವುದು.
8. ಬೋಧಕ ವೃತ್ತಿ ಪ್ರವೇಶಿಸುವವರಲ್ಲಿರಬೇಕಾದ ನೀತಿ ಸಂಹಿತೆಗಳು, ಸಕಾರಾತ್ಮಕ ಅರಿವು, ನಿಲುವುಗಳನ್ನು ಬೆಳೆಸಿಕೊಳ್ಳುವುದು.
9. ಶಾಲಾ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವುದು ಹಾಗೂ ಅಲ್ಲಿಯ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಕುತೂಹಲವನ್ನುಂಟು ಮಾಡಿಕೊಳ್ಳುವುದು.
10. ಪರಿಣಾಮಕಾರಿ ಬೋಧನೆ ಮತ್ತು ವಿದ್ಯಾರ್ಥಿಗಳ ಸಮರ್ಥ ನಿರ್ವಹಣೆಗೆ ಸಂಬಂಧಿಸಿದ ಕೌಶಲಗಳನ್ನು ಬೆಳೆಸಿಕೊಂಡು ಶೈಕ್ಷಣಿಕ ದಕ್ಷತೆ ಹೊಂದುವುದು.
11. ಪ್ರಶಿಕ್ಷಣ ಕಾಲೇಜುಗಳಲ್ಲಿ ಕಲಿತ ಸೈದ್ಧಾಂತಿಕ ತತ್ವ (ನಿಯಮ)ಗಳನ್ನು ಪ್ರಾಯೋಗಿಕವಾಗಿ ಒರೆಹಚ್ಚುವುದು.

Digitised by Bharatavani, CIIL

12. ಪ್ರಶಿಕ್ಷಣಾರ್ಥಿಗಳಲ್ಲಿ ಸೃಜನಶೀಲತೆಯನ್ನು ಹೆಚ್ಚಿಸುವುದು.

13. ತನ್ನ ಸಹಪಾಠಿಗಳು, ಶಾಲಾ ಶಿಕ್ಷಕರ ಬೋಧನೆಯ ಕ್ರಮವನ್ನು ವೀಕ್ಷಿಸಿ ತನ್ಮೂಲಕ ತನ್ನ ಬೋಧನಾ ಶೈಲಿಯನ್ನು ಸುಧಾರಿಸಿಕೊಳ್ಳುವುದು.

**ಪ್ರಶಿಕ್ಷಣದ ವಿವಿಧ ಹಂತಗಳಲ್ಲಿ ಅಭ್ಯಾಸ ಬೋಧನೆ**

ಅಭ್ಯಾಸ ಬೋಧನೆಯು ಪ್ರಶಿಕ್ಷಣದ ಎಲ್ಲ ಹಂತಗಳಲ್ಲಿ ಅಗತ್ಯವಾಗಿದ್ದು, ಅತ್ಯಂತ ಪ್ರಧಾನ ಕಾರ್ಯಕ್ರಮವಾಗಿರುವುದಾದರೂ ಹೆಚ್ಚು ಜನಪ್ರಿಯವಾಗಿರುವುದು ಡಿ.ಎಡ್. ಹಂತ ಮತ್ತು ಬಿ.ಎಡ್. ಹಂತಗಳಲ್ಲಿ.

**ಡಿ.ಎಡ್. ಹಂತದಲ್ಲಿ ಅಭ್ಯಾಸ ಬೋಧನೆ:** ಎರಡು ವರ್ಷಗಳ ಡಿ.ಎಡ್. ಅವಧಿಯಲ್ಲಿ ಮತ್ತು/ಅಥವಾ ನಂತರದ ಮೂರರಿಂದ ಆರುತಿಂಗಳ ಅವಧಿಯವರೆಗೆ ಪ್ರಶಿಕ್ಷಣಾರ್ಥಿಯು ಪ್ರಾಥಮಿಕ ಶಾಲೆಗಳಲ್ಲಿ ತನ್ನ ಈ ಕಾರ್ಯಕ್ರಮವನ್ನು ಮುಗಿಸಬೇಕು. ಅಲ್ಲಿ ಬೋಧಿಸಬೇಕಾಗಿರುವ ಪಾಠಗಳ ಸಂಖ್ಯೆ, ಶಾಲೆಯಲ್ಲಿರಬೇಕಾದ ದಿನಗಳ ಸಂಖ್ಯೆಯಲ್ಲಿ ಸ್ವಲ್ಪಮಟ್ಟಿಗೆ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗಬಹುದಾದರೂ ಈ ಕ್ಷೇತ್ರದ ಉಚ್ಚಸಂಸ್ಥೆಯಾದ ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ತು (NCTE) ಕನಿಷ್ಠ ನಲವತ್ತು ದಿನಗಳ ಅವಧಿಯವರೆಗೆ ಪ್ರಶಿಕ್ಷಣಾರ್ಥಿಯು ಶಾಲೆಯಲ್ಲಿದ್ದು ಬೋಧನಾನುಭವ ಪಡೆಯಬೇಕೆಂದು ಸೂಚಿಸಿದೆ.

**ಬಿ.ಎಡ್. ಹಂತದ ಅಭ್ಯಾಸ ಬೋಧನೆ:** ಸೂಕ್ಷ್ಮ / ಅಣು ಬೋಧನೆ (Micro-teaching) ಯಿಂದ ಆರಂಭವಾಗಿ ಹಂತದ ಬೋಧನೆ, ವಿಸ್ತರಿತ ಬೋಧನೆ, ಖಂಡ (block) ಬೋಧನೆಯಿಂದ ಮುಂದುವರಿದು ಸ್ಥಾನಬದ್ಧ ಅಂತಿಮಪಾಠ ಬೋಧನೆಯಿಂದ ಈ ಅಭ್ಯಾಸ ಬೋಧನೆಯು ಮುಕ್ತಾಯವಾಗುತ್ತದೆ. ಒಂದು ಶೈಕ್ಷಣಿಕ ವರ್ಷದ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಯು 30 ರಿಂದ 40 ಪಾಠಗಳನ್ನು ಕೊಡಬೇಕೆಂದು ಎನ್‌ಸಿಟಿಇ ನಿಗದಿಪಡಿಸಿದೆ. ಅದರ ವಿವರಗಳು ಇಂತಿವೆ.

| | | |
|---|---|---|
| 1. | ಶಾಲೆಯಲ್ಲಿನ ಅಭ್ಯಾಸ ಬೋಧನೆ ಪಾಠ ಯೋಜನೆ ಸಹಿತ + ಸ್ಥಾನಬದ್ಧ ಬೋಧನೆ (Internship) | ಒಂದು ಐಚ್ಛಿಕ ವಿಷಯದಲ್ಲಿ 15ರಂತೆ ಎರಡೂ ವಿಷಯಗಳು ಕೂಡಿ ಕನಿಷ್ಠ 30 ಪಾಠಗಳು. |
| 2. | ಕೃತಕ ಪರಿಸರದ ಪಾಠಯೋಜನೆ ಮತ್ತು ಬೋಧನೆ | ಒಂದು ಐಚ್ಛಿಕ ವಿಷಯದಲ್ಲಿ 5 ಪಾಠಗಳಂತೆ ಎರಡು ವಿಷಯಗಳಿಂದ 10 ಪಾಠಗಳು. |
| 3. | ಸಹಪಾಠಿಗಳ ಪಾಠ ವೀಕ್ಷಣೆ | ಒಂದು ವಿಷಯದಲ್ಲಿ 5ರಂತೆ ಎರಡೂ ಸೇರಿ 10 ಪಾಠಗಳು. |

ಸೂಕ್ಷ್ಮ ಬೋಧನೆಯನ್ನು ಪ್ರಶಿಕ್ಷಣಾರ್ಥಿಗಳು ಕಾಲೇಜಿನಲ್ಲಿ ಮಾಡುತ್ತಾರಾದರೂ ಉಳಿದೆಲ್ಲ ಪಾಠಗಳನ್ನು ತಾವು ಆಯ್ದುಕೊಂಡ ಎರಡು ಐಚ್ಛಿಕ ವಿಷಯಗಳಿಗನುಸಾರವಾಗಿ ಕಾಲೇಜಿನಿಂದ ನಿಗದಿತ ಸೆಕೆಂಡರಿ ಶಾಲೆಯಲ್ಲಿ ಮಾಡಿ ಮುಗಿಸುತ್ತಾರೆ.

**ಎಂ.ಎಡ್. ಹಂತದಲ್ಲಿ ಅಭ್ಯಾಸ ಬೋಧನೆ:** ಪ್ರಶಿಕ್ಷಣ ಕ್ಷೇತ್ರದ ಸ್ನಾತಕೋತ್ತರ ಪದವಿಯಲ್ಲಿ ಇತ್ತೀಚಿನ ದಿನಗಳವರೆಗೆ ಅಭ್ಯಾಸ ಬೋಧನೆ ಕಾರ್ಯಕ್ರಮವು ರೂಢಿಯಲ್ಲಿರಲಿಲ್ಲ. ಆದರೆ ಅಭ್ಯಾಸ ಬೋಧನೆಯ ಪ್ರಾಮುಖ್ಯವನ್ನು ಮನಗಂಡ ಕೆಲವು ವಿಶ್ವವಿದ್ಯಾನಿಲಯಗಳು ಅದನ್ನು ಇತ್ತೀಚೆಗೆ ಜಾರಿಗೆ ತಂದಿವೆಯಾದರೂ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅದನ್ನು ಇನ್ನೂ ಅನುಷ್ಠಾನಗೊಳಿಸಬೇಕಾಗಿದೆ.

**ಎನ್‌ಸಿಟಿಇ ಈ ಸಂಬಂಧ ನೀಡಿರುವ ಸಲಹೆ ಇಂತಿದೆ**

1. ಬಿ.ಎಡ್. ಅಥವಾ ಡಿ.ಎಡ್. ವಿದ್ಯಾರ್ಥಿಗಳು ಬೋಧಿಸಿದ ಪಾಠಗಳನ್ನು ಎಂ.ಎಡ್. ವಿದ್ಯಾರ್ಥಿಗಳು ವೀಕ್ಷಿಸಬೇಕು.

2. ಬಿ.ಎಡ್. ಅಥವಾ ಡಿ.ಎಡ್. ಕಾಲೇಜುಗಳಲ್ಲಿ ಎಂ.ಎಡ್. ಪ್ರಶಿಕ್ಷಣಾರ್ಥಿಗಳು 5 ಅಭ್ಯಾಸ ಪಾಠಗಳನ್ನು ಬೋಧಿಸಬೇಕು. ಮೇಲಿನ ಮೂರು ಹಂತಗಳಲ್ಲಿ ಪಾಠಗಳು ಎಂದು ಹೇಳುವಾಗ, ಅಧ್ಯಾಯಗಳಲ್ಲ ಬದಲಿಗೆ ಅಷ್ಟು ಅವಧಿಗಳು ಎಂದರ್ಥ ಮಾಡಿಕೊಳ್ಳಬೇಕು.

**ಅಭ್ಯಾಸ ಬೋಧನೆಯ ರೂಪಗಳು:** ನಿಗದಿಪಡಿಸಿದ ಸಂಖ್ಯೆಯ ಪಾಠಗಳನ್ನು ಬೋಧಿಸಿ ಮುಗಿಸಲು ಒಂದು ರಾಜ್ಯದ ಕೆಲವು ಶಿಕ್ಷಣ ಸಂಸ್ಥೆಗಳು ಒಂದು ನಮೂನೆಯನ್ನು ಬಳಸಿದರೆ ಮತ್ತೆ ಕೆಲವು ಸಂಸ್ಥೆಗಳು ಎರಡು ಮೂರು ನಮೂನೆಗಳನ್ನು ಬಳಸುತ್ತಿವೆ. ಹಾಗೆ ರೂಢಿಯಲ್ಲಿರುವ ನಮೂನೆಗಳನ್ನು ಮುಂದೆ ವಿವರಿಸಿದೆ.

**1. ವಿಸ್ತರಿತ ಅಭ್ಯಾಸ ಬೋಧನೆ (Spread-Over Practice Teaching):** ಇದನ್ನು ವಿಸ್ತರಣ, ಪ್ರಸರಣ, ಹರಹು, ಅಭ್ಯಾಸ ಬೋಧನೆ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಬಹುತೇಕ ವಿಶ್ವವಿದ್ಯಾನಿಲಯಗಳ ಬಹುತೇಕ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಈ ಪದ್ಧತಿ ಚಾಲ್ತಿಯಲ್ಲಿದೆ. ಇಲ್ಲಿ ಪ್ರಶಿಕ್ಷಣಾರ್ಥಿಗಳನ್ನು ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ, ವರ್ಗಗಳ ಸಂಖ್ಯೆ, ಮಾಧ್ಯಮ ಮುಂತಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಿಯೋಜಿಸಲಾಗುತ್ತದೆ. ಮೊದಲನೆಯ ಅಥವಾ ಎರಡನೆಯ / ಪೂರ್ವಾರ್ಧ ಅಥವಾ ಉತ್ತರಾರ್ಧ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಗಳು ನಿಯೋಜಿತ ಶಾಲೆಗಳಿಗೆ ಹೋಗಿ ತಮ್ಮ ಬೋಧನೆಯನ್ನು ಮಾಡುತ್ತಾರೆ. ಉಳಿದರ್ಧ ಸಮಯ ಕಾಲೇಜಿನಲ್ಲಿ ಪಾಠ ಪ್ರವಚನಗಳು (ಸೈದ್ಧಾಂತಿಕ) ಯಥಾ ರೀತಿಯಲ್ಲಿ ನಡೆಯುತ್ತದೆ.

ಪ್ರಶಿಕ್ಷಣಾರ್ಥಿಗಳು ದಿನನಿತ್ಯ ಕಾಲೇಜಿಗೆ ಹೋಗಿ ತಮ್ಮ ಅನುಭವಗಳನ್ನು ಸಂಬಂಧಿಸಿದವರಲ್ಲಿ ವಿನಿಮಯ ಮಾಡಿಕೊಳ್ಳಲು, ಪಾಠ ಯೋಜನೆಯ ಅನುಮೋದನೆಯನ್ನು ಸಂಬಂಧಿಸಿದ ಪ್ರಶಿಕ್ಷಕರಿಂದ ಪಡೆಯಲು, ತಮ್ಮ ಸಹಪಾಠಿಗಳಿಂದ ಅಥವಾ ಮಾರ್ಗದರ್ಶಕರಿಂದ ಅಗತ್ಯವಾದ, ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲು, ಅಭ್ಯಾಸಾರ್ಥ ಬೋಧನೆಯಲ್ಲಿ ತಮಗೆದುರಾದ ಎಡರು ತೊಡರುಗಳನ್ನು ನಿವಾರಿಸಿಕೊಳ್ಳಲು, ಕಾಲೇಜಿನಲ್ಲಿರುವ ಗ್ರಂಥಾಲಯ, ಪ್ರಯೋಗಾಲಯದ ಸೌಲಭ್ಯಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು, ಸೈದ್ಧಾಂತಿಕ ವಿಷಯದ ಸಂಪರ್ಕವನ್ನು ನಿರಂತರವಾಗಿರಿಸಿಕೊಳ್ಳಲು ಹಾಗೂ ಶಾಲೆಗಳಲ್ಲಿ ಪ್ರಶಿಕ್ಷಣಾರ್ಥಿಗಳಿಂದ ಮಕ್ಕಳಿಗೆ ಆಗಬಹುದಾದ ಏಕತಾನತೆಯಿಂದ ದೂರವಾಗಲು ಈ ಪದ್ಧತಿಯನ್ನು ಬಳಸಿಕೊಳ್ಳಲಾಗುತ್ತದೆ.

ಈ ಪದ್ಧತಿ ಏಕಕಾಲದಲ್ಲಿ ಎರಡು ಕುದುರೆಗಳ ಮೇಲೆ ಸವಾರಿ ಮಾಡಿದಂತಾಗುತ್ತದೆ. ಯಾವ ಒಂದು ಚಟುವಟಿಕೆ ಬಗ್ಗೆಯೂ ಪ್ರಶಿಕ್ಷಣಾರ್ಥಿಗಳು ಸಂಪೂರ್ಣವಾಗಿ ತಮ್ಮ ಗಮನಹರಿಸಲಾಗುವುದಿಲ್ಲ ಎಂಬ ಕೆಲವು ಒಪ್ಪಬಹುದಾದ ಟೀಕೆ ಟಿಪ್ಪಣಿಗಳು ಇವೆಯಾದರೂ ಈ ಪದ್ಧತಿಯ ಕೆಲವಾರು ಅನುಕೂಲತೆಗಳಿಂದಾಗಿ ಇದನ್ನು ಮುಂದುವರಿಸಲಾಗಿದೆ.

Digitised by Bharatavani, CIIL

**2. ಅಣುಕು ಅಭ್ಯಾಸ ಬೋಧನೆ / ಸಖ ಅಭ್ಯಾಸ ಬೋಧನೆ (Simulated/Peer Practice Teaching):** ತನ್ನ ಸಹಪಾಠಿಗಳನ್ನು ಶಾಲಾ ಮಕ್ಕಳಂತೆ ಪರಿಭಾವಿಸಿಕೊಂಡು ವಾಸ್ತವವಾಗಿ ಶಾಲೆಯಲ್ಲಿ ಬೋಧಿಸಿದಂತೆಯೇ ಬೋಧಿಸುವ ಪದ್ಧತಿಯನ್ನು ಅಣುಕು ಅಭ್ಯಾಸ ಬೋಧನೆ ಎನ್ನಲಾಗುತ್ತದೆ. ಸಹಪಾಠಿಗಳಿಗೇ ಬೋಧನೆ ಮಾಡಿ ಅಭ್ಯಾಸ ಮಾಡುವುದರಿಂದ ಈ ವಿಧಾನಕ್ಕೆ ಸಖ ಅಭ್ಯಾಸ ಬೋಧನೆ ಎಂದೂ ಹೇಳುತ್ತಾರೆ.

ಶಾಲೆಗಳಿಗೆ ಹೋಗಿ ಅಲ್ಲಿನ ದೈನಂದಿನ ಚಟುವಟಿಕೆಗಳು, ವೇಳಾಪತ್ರಿಕೆ, ಮಾಸಿಕ ಯೋಜನೆ ಇತ್ಯಾದಿಗಳಿಗೆ ಕಿರಿಕಿರಿಯನ್ನುಂಟು ಮಾಡುವ ಪ್ರಸಂಗ ಇದರಿಂದ ತಪ್ಪುತ್ತದೆ. ಪ್ರಶಿಕ್ಷಣ ಕಾಲೇಜುಗಳು ಮತ್ತು ಶಾಲೆಗಳ ಮಧ್ಯೆ ಆತ್ಮೀಯ ಸಂಬಂಧಿ ಸಹಕಾರ ಇರಬೇಕೆಂದು ಅನೇಕ ಶಿಕ್ಷಣ ತಜ್ಞರು, ಸಮಿತಿ ಆಯೋಗಗಳು ಹೇಳಿವೆಯಾದರೂ, ವಾಸ್ತವವಾಗಿ ಪ್ರಶಿಕ್ಷಣಾರ್ಥಿಗಳನ್ನು ಶಾಲೆಗಳು ತುಂಬು ಹೃದಯದಿಂದ ಸ್ವಾಗತಿಸುವುದಿಲ್ಲ. ಆಡಳಿತಾತ್ಮಕ ಸಮಸ್ಯೆಗಳನ್ನು ಮುಂದೊಡ್ಡಿ ಶಾಲೆಗಳವರು ಪ್ರಶಿಕ್ಷಣಾರ್ಥಿಗಳಿಗೆ ಅವಕಾಶವನ್ನು ನಿರಾಕರಿಸುತ್ತಾರೆ. ಇದರಿಂದ ಕಾಲೇಜುಗಳಿಗೆ ಆಗಬಹುದಾದ ತೊಂದರೆ, ಹಿಂಸೆಯನ್ನು ಈ ಪದ್ಧತಿಯಿಂದ ತಪ್ಪಿಸಬಹುದಾಗಿದೆ.

ಹೇಗೆ ಮಾಡಿದರೂ ವಾಸ್ತವತೆಯ ಪರಿಸರವನ್ನು ಕೃತಕದಲ್ಲಿ ತರಲಾಗುವುದಿಲ್ಲ. ವಿದ್ಯಾರ್ಥಿಗಳು ಮಕ್ಕಳಂತೆ ನಟಿಸಲಾಗುವುದಿಲ್ಲ. ಒಂದು ವೇಳೆ ನಟನೆ ಮಾಡಿದರೂ ಬಹಳ ಕಾಲ ಅದೇ ಗತಿಯನ್ನು ಉಳಿಸಿಕೊಳ್ಳಲಾಗುವುದಿಲ್ಲ. ಇದು ಸತ್ಯಸಂಗತಿ. ಆದರೂ ಅನಿವಾರ್ಯವಾಗಿ ಈ ಪದ್ಧತಿಯನ್ನು ಕೆಲವು ಕಾಲೇಜುಗಳವರು ಕೆಲವು ಪಾಠಗಳಿಗೆ ಸಂಬಂಧಿಸಿದಂತೆ ಅನುಸರಿಸುತ್ತಿರುವುದು ಕಂಡುಬರುತ್ತದೆ.

ಸೂಕ್ಷ್ಮ (ಅಣು) ಬೋಧನೆ ತರಬೇತಿಯಲ್ಲಿ ಈ ಕ್ರಮ ಉತ್ತಮವೆನ್ನಿಸುತ್ತದೆ. ವಿದ್ಯಾರ್ಥಿ ಆಂತಕದ ಅನುಭವವಿಲ್ಲದೆ ಬೋಧಿಸಲು ಈ ಕ್ರಮದಲ್ಲಿ ಸಾಧ್ಯ

**3. ಖಂಡ ಅಭ್ಯಾಸ ಬೋಧನೆ (Phased Practice Teaching):** ವಿಸ್ತರಿತ ಅಭ್ಯಾಸ ಬೋಧನೆಯಲ್ಲಿ ದಿನದ ಯಾವುದಾದರೂ ಒಂದು ಶಾಲಾ ಸಮಯದಲ್ಲಿ ಅಭ್ಯಾಸ ಬೋಧನೆ ನಡೆದರೆ, ಇಲ್ಲಿ ಇಡೀ ದಿನ ಪ್ರಶಿಕ್ಷಣಾರ್ಥಿಗಳು ಮತ್ತು ಮೇಲ್ವಿಚಾರಕರು ಶಾಲೆಯಲ್ಲಿ ಬೋಧನೆ/ವೀಕ್ಷಣೆಯಲ್ಲಿ ನಿರತರಾಗಿರುತ್ತಾರೆ. ಶಾಲೆಯ ಎಲ್ಲ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ತಮ್ಮ ಕಾರ್ಯವ್ಯಾಪ್ತಿಯನ್ನು ಬೋಧನೆಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಬೋಧಕೇತರ ಶೈಕ್ಷಣಿಕ ಚಟುವಟಿಕೆಗಳಿಗೆ ವಿಸ್ತರಿಸಿಕೊಳ್ಳುತ್ತಾರೆ.

ಪ್ರಶಿಕ್ಷಣಾರ್ಥಿಯು ಮುಂದೆ ಶಿಕ್ಷಕನಾದಾಗ ಮಾಡಬೇಕಾದ ಬಹುತೇಕ ಎಲ್ಲಾ ಕೆಲಸಕಾರ್ಯಗಳ ತರಬೇತಿ, ಅನುಭವ ಒದಗುತ್ತದೆ.

- ವೇಳಾಪತ್ರಿಕೆ ರಚನೆ, ತತ್ವಗಳು, ರೂಪಗಳು.
- ತರಗತಿಯಲ್ಲಿ ಮತ್ತು ಶಾಲೆಯಲ್ಲಿ ಶಿಸ್ತು ಕಾಯ್ದುಕೊಳ್ಳುವ ಬಗೆ
- ಮುಖ್ಯ ಶಿಕ್ಷಕರು-ಸಹ ಶಿಕ್ಷಕರು, ವಿದ್ಯಾರ್ಥಿಗಳ ಮಧ್ಯೆ ಸುಮಧುರ ಬಂಧುತ್ವವನ್ನು ಕಾಯ್ದುಕೊಳ್ಳುವ ಕ್ರಮ.
- ಶಾಲೆಯ ವಿವಿಧ ದಾಖಲಾತಿಗಳು ಮತ್ತು ಅವುಗಳ ರೂಪ, ಪ್ರಾಮುಖ್ಯತೆ ವಿಧಾನದ ಅರಿವು.
- ಕಿರುಪರೀಕ್ಷಣಗಳನ್ನು ಮಕ್ಕಳಿಗೆ ನಡೆಸುವ ರೀತಿ-ಇವುಗಳಲ್ಲಿ ವಿದ್ಯಾರ್ಥಿ ನೇರವಾಗಿ ಪಾಲ್ಗೊಳ್ಳುತ್ತಾನೆ.

ಹೀಗೆ ಶಾಲೆಯ ಎಲ್ಲ ದೈನಂದಿನ ಕೆಲಸಕಾರ್ಯಗಳ ಸಮಗ್ರ ಮಾಹಿತಿ ಅನುಭವ ಪಡೆಯಲು ಈ ಕಾರ್ಯಕ್ರಮ ನೆರವಾಗುತ್ತದೆ.

ಶಾಲಾ ಸಿಬ್ಬಂದಿ ವರ್ಗ ಕಾರಣಾಂತರಗಳಿಂದ ಸಹಕರಿಸದಿದ್ದರೆ ಶಾಲೆಯಲ್ಲಿರಬೇಕಾದ ಸೌಲಭ್ಯಗಳು ಪೂರ್ಣ ಪ್ರಮಾಣದಲ್ಲಿ ಮತ್ತು ಸೂಕ್ತವಾಗಿರದಿದ್ದರೆ ಒಟ್ಟಿನಲ್ಲಿ ಹೇಳುವುದಾದರೆ ಶಾಲೆಯ ಪರಿಸರವು ಆರೋಗ್ಯಕರವಾಗಿಯೂ ಆಹ್ಲಾದಕರವಾಗಿಯೂ ಇಲ್ಲದಿದ್ದರೆ ತೊಂದರೆಗಳು ಅಡೆತಡೆಗಳು, ಮಿತಿಗಳಿದ್ದರೆ ವೃತ್ತಿಗೆ ಪ್ರವೇಶಿಸುವ ಪೂರ್ವದಲ್ಲಿ ಪ್ರಶಿಕ್ಷಣಾರ್ಥಿಯು ವೃತ್ತಿಯ ಬಗ್ಗೆ ನಿರಾಸಕ್ತಿ ಬೆಳೆಸಿಕೊಳ್ಳುವ ಸಾಧ್ಯತೆಯಿದೆ.

ಒಂದು ಶಾಲೆಯಲ್ಲಿ ಒಬ್ಬಿಬ್ಬರು ಪ್ರಶಿಕ್ಷಣಾರ್ಥಿಗಳಾದರೆ ಪರವಾಗಿಲ್ಲ. ಅದಕ್ಕಿಂತ ಹೆಚ್ಚು ಆದರೆ ಶಾಲೆಯ ಆಡಳಿತ ಮತ್ತು ಇತರೇ ಕೆಲಸ ಕಾರ್ಯಗಳು ವ್ಯತ್ಯಯಗೊಳ್ಳುವ ಸಾಧ್ಯತೆಯಿದೆ. ಅಲ್ಲದೆ ಪ್ರಶಿಕ್ಷಣಾರ್ಥಿಗಳಿಗೆ ಅವಶ್ಯಕವಾದ ಅಥವಾ ಅಪೇಕ್ಷಿಸುವ ಮಟ್ಟದಲ್ಲಿ ಭೌತಿಕ ಸೌಲಭ್ಯಗಳನ್ನು ಎಲ್ಲಾ ಶಾಲೆಗಳು ಒದಗಿಸಬೇಕು.

**5. ಸ್ಥಾನಬದ್ಧ ಅಭ್ಯಾಸ ಬೋಧನೆ (Internship Practice Teaching):** ತಾಂತ್ರಿಕ ಮತ್ತು ವೃತ್ತಿ ಶಿಕ್ಷಣದಲ್ಲಿ ನಿಕಟಪೂರ್ವ ತರಬೇತಿಯು ಅನಿವಾರ್ಯವಾದ ಮತ್ತು ಅತ್ಯವಶ್ಯವಾದ ಕಾರ್ಯಕ್ರಮ. ಈ ಹಿಂದೆ ವಿವರಿಸಿದ ಖಂಡ ಅಭ್ಯಾಸ ಬೋಧನೆಯ ವಿಸ್ತೃತರೂಪವೇ ನಿಕಟಪೂರ್ವ ಅಭ್ಯಾಸ ಬೋಧನೆ. ತತ್ವಗಳು, ಸ್ವರೂಪ, ಉದ್ದೇಶಗಳು ಮಹತ್ವಕ್ಕೆ ಸಂಬಂಧಿಸಿದಂತೆ ಖಂಡ ಅಭ್ಯಾಸ ಬೋಧನೆಗೂ ಇದಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ.

ಸೇವಾಪೂರ್ವ ವೃತ್ತಿ ಶಿಕ್ಷಣ ಮತ್ತು ಬೋಧನಾ ವೃತ್ತಿಗಳೆರಡನ್ನು ಬೆಸೆಯುವ ಸೇತುವೇ ಸ್ಥಾನಬದ್ಧ ಅಭ್ಯಾಸ ಬೋಧನೆ. ಅರ್ಥಾತ್ ಮೊದಲದರ ಅಂತ್ಯ ಮತ್ತು ಎರಡನೆಯದರ ಆರಂಭಗಳ ಕೊಂಡಿ ಇದು.

ಇದರ ಅವಧಿ ಮೂರರಿಂದ ಆರು ತಿಂಗಳುಗಳವರೆಗಿರುತ್ತದೆ. ಕೆಲವು ಕೋರ್ಸುಗಳಿಗೆ ಸಂಬಂಧಿಸಿದಂತೆ ಕೆಲವು ದಿನ ಅಥವಾ ತಿಂಗಳು ಮಾತ್ರ ಇದ್ದರೆ, ಮತ್ತೆ ಕೆಲವು ಕೋರ್ಸುಗಳಿಗೆ ಸಂಬಂಧಿಸಿದಂತೆ ಹಲವು ದಿನ, ತಿಂಗಳುಗಳಿರುತ್ತದೆ.

ನಿಗದಿಪಡಿಸಿದ ಪಾಠ ವಿಷಯಗಳ ಜೊತೆಗೆ ಈ ಕಾರ್ಯಕ್ರಮದಡಿಯಲ್ಲಿ ಪ್ರಶಿಕ್ಷಣಾರ್ಥಿಯು ಕೈಗೊಳ್ಳುವ ಇನ್ನಿತರೇ ಕೆಲಸಗಳು ಇಂತಿವೆ.

- ಶಾಲೆಯ ದಿನನಿತ್ಯದ ಎಲ್ಲ ಕೆಲಸಗಳಲ್ಲಿ (ಬೋಧನೆ, ಯೋಜನೆ, ಶಿಕ್ಷಕ ಸಭೆ ಹಾಜರಾತಿ ಇತ್ಯಾದಿ) ಪಾಲ್ಗೊಳ್ಳುವುದು.
- ಕ್ರಿಯಾಸಂಶೋಧನೆ ಕಾರ್ಯ ಕೈಗೊಳ್ಳುವುದು.
- ವೃತ್ತಿಪರ ನಡತೆಯ ಪ್ರದರ್ಶನ, ವೃತ್ತಿ ಬದ್ಧತೆಯ ವರ್ತನೆ, ಧನಾತ್ಮಕ ಕಲಿಕೆಯ ಪರಿಸರ ನಿರ್ಮಾಣ ಆಸಕ್ತಿ, ಕ್ರಿಯಾಪರತೆ, ವಿನಯಶೀಲತೆ ಪ್ರದರ್ಶನ. ಇಲ್ಲಿ ಶಾಲೆಯು ಪ್ರಶಿಕ್ಷಣಾರ್ಥಿಗಳಿಂದ ಅನೇಕ ನಿರೀಕ್ಷಣೆಗಳನ್ನಿರಿಸಿಕೊಂಡಿದ್ದು ಪ್ರತಿಯೊಬ್ಬ ಅಭ್ಯರ್ಥಿಯೂ ಅವುಗಳನ್ನು ಪೂರೈಸುವುದು ತನ್ನ ಮತ್ತು ಶಾಲೆಯ ಆರೋಗ್ಯಕರ ಬೆಳವಣಿಗೆಗೆ ಅವಶ್ಯವಾಗಿದೆ.

ಈ ಅವಧಿಯಲ್ಲಿ ಪ್ರಶಿಕ್ಷಣಾರ್ಥಿ ಶಾಲೆಯ ಮೇಲ್ವಿಚಾರಕರು ನೀಡಿದ ನವೀನ ರಚನಾತ್ಮಕ ಸೃಜನಶೀಲ ಸಲಹೆಗಳನ್ನು ಸ್ವೀಕರಿಸಿ ಅವುಗಳನ್ನು ಅನುಷ್ಠಾನಗೊಳಿಸಬೇಕು.

Digitised by Bharatavani, CIIL

ಪ್ರಶಿಕ್ಷಣಾರ್ಥಿಗಳು ಈ ಕಾರ್ಯಕ್ರಮದ ಮುಖೇನ ಹೆಚ್ಚು ಸಮಯ ಶಾಲೆಯಲ್ಲಿರುವುದರಿಂದ, ಮಕ್ಕಳಿಗೆ ಹೆಚ್ಚು ಸಮೀಪವಾಗಿರುವುದರಿಂದ ಅವರ ವೈವಿಧ್ಯಮಯ ಭಾವನೆಗಳು, ನಿರೀಕ್ಷೆಗಳು, ಸವಾಲುಗಳು, ಹಕ್ಕೊತ್ತಾಯಗಳನ್ನು ಅರಿಯುವ ಅವಕಾಶ ಸಿಗುವುದಲ್ಲದೆ ಬೋಧನಾ ವೃತ್ತಿಗೆ ಅಗತ್ಯವಾದ ಸಕಾರಾತ್ಮಕ ಅನುಭವವನ್ನು ಹೊಂದಬಹುದು.

ಬೋಧನಾ ಕೌಶಲಗಳ ತರಬೇತಿಗೆ ಅಭ್ಯಾಸ ಬೋಧನೆಯ ಯಾವುದೇ ಕ್ರಮವನ್ನು ಅನುಸರಿಸಿದರೂ, ಪ್ರಶಿಕ್ಷಣಾರ್ಥಿ ಬೋಧಿಸುವ ಪಾಠಗಳನ್ನು ಶೈಕ್ಷಣಿಕ ಮೇಲ್ವಿಚಾರಕರು (Academic Supervisor) ವೀಕ್ಷಣೆ ಮಾಡಿ ಬೋಧನೆಯ ಇತಿಮಿತಿಗಳನ್ನು ಉತ್ತಮ ಅಂಶಗಳನ್ನು ವ್ಯವಸ್ಥಿತವಾಗಿ ದಾಖಲು ಮಾಡಿಕೊಂಡು ಬೋಧನೆಯ ನಂತರ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕ ಸಲಹೆಗಳನ್ನು ನೀಡುವುದು ಆವಶ್ಯಕ. ಹಾಗೆಯೇ ಪ್ರಶಿಕ್ಷಣಾರ್ಥಿಯ ಬೋಧನಾ ಕೌಶಲದ ಮೌಲ್ಯಮಾಪನವನ್ನು ಮಾಡಬೇಕು. ಶಿಕ್ಷಣ ಸಂಸ್ಥೆಯ ಅಧ್ಯಾಪಕರಾಗಲಿ ಅಥವಾ ಶಾಲೆಯ ಹಿರಿಯ ಅನುಭವಿ ಶಿಕ್ಷಕರಾಗಲಿ ಬೋಧನೆಯ ಮೇಲ್ವಿಚಾರಣೆ ಮಾಡಬಹುದು. ಮೇಲ್ವಿಚಾರಣೆ ಮಾಡುವಾಗ ಒಬ್ಬ ಪ್ರಶಿಕ್ಷಣಾರ್ಥಿಯ ಪಾಠವನ್ನು ಪೂರ್ತಿಯಾಗಿಯಾಗಲಿ ಅಥವಾ ಪ್ರಶಿಕ್ಷಣಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದಾಗ ಆಂಶಿಕವಾಗಿಯಾಗಲಿ ವೀಕ್ಷಣೆ ಮಾಡಬಹುದು. ಪಾಠವನ್ನು ಇಡಿಯಾಗಿ ವೀಕ್ಷಿಸಿ ಮಾರ್ಗದರ್ಶನ ನೀಡುವುದು ಉತ್ತಮ. ಸಲಹೆಯನ್ನು ವ್ಯಕ್ತಿಗತವಾಗಿ ನೀಡಬೇಕು.

ಶೈಕ್ಷಣಿಕ ತಾಂತ್ರಿಕ ಸಲಕರಣೆಗಳು (ವೀಡಿಯೋ ದಾಖಲೆ, ಚಲನಚಿತ್ರ ದಾಖಲೆ) ಲಭ್ಯವಿದ್ದಾಗ ಪ್ರಶಿಕ್ಷಣಾರ್ಥಿಗಳ ಬೋಧನೆಯನ್ನು ದಾಖಲು ಮಾಡಿಕೊಂಡು ನಂತರ ಅದನ್ನು 'ರೀಪ್ಲೇ' ಮಾಡಿ ಮಾರ್ಗದರ್ಶನ ನೀಡಬಹುದು.

**ಅಣು ಬೋಧನೆ:** ಸೂಕ್ಷ್ಮಬೋಧನೆ, ಮಿಡಿಬೋಧನೆ ಎಂಬ ಹೆಸರುಗಳಿಂದ ಪರಿಚಿತವಾಗಿರುವ ಅಣುಬೋಧನೆಯು ಶಾಲೆಗಳಲ್ಲಿ ಪ್ರಶಿಕ್ಷಣಾರ್ಥಿಯು ಮಾಡುವ ಅಭ್ಯಾಸ ಬೋಧನೆಗಿಂತ ಮುಂಚಿತವಾದ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು. ಇದನ್ನು ಒಂದರ್ಥದಲ್ಲಿ ಅಭ್ಯಾಸ ಬೋಧನೆಯ ಸಿದ್ಧತಾ ಕಾರ್ಯಕ್ರಮ ಎಂದು ಕರೆಯಬಹುದಾಗಿದೆ.

ಕಡಿಮೆ ಸಮಯದಲ್ಲಿ (6 ನಿಮಿಷ) ಕಡಿಮೆ ವಿದ್ಯಾರ್ಥಿಗಳಿಗೆ (10–12) ಕಡಿಮೆ ವಿಷಯವನ್ನಾಧರಿಸಿ (ಒಂದು ಪರಿಕಲ್ಪನೆ, ಕಡಿಮೆ ಕೌಶಲಗಳನ್ನೊಳಗೊಂಡ ಬೋಧನೆಯನ್ನು ಅಣುಬೋಧನೆ ಎಂದು ಕರೆಯಲಾಗುತ್ತದೆ.

ಇದು ಕೌಶಲ ಪ್ರಧಾನ ಬೋಧನೆ. ಒಂದಾದ ನಂತರ ಒಂದರಂತೆ ಕೌಶಲಗಳ ಪರಿಣತಿಯನ್ನು ಸಾಧಿಸುತ್ತಾ ಹೋದ ಪ್ರಶಿಕ್ಷಣಾರ್ಥಿಯು ಅನೇಕ ಕೌಶಲಗಳ ಮೇಲೆ ಪ್ರಭುತ್ವವನ್ನು ಹೊಂದಿ ನಂತರದಲ್ಲಿ ಅವೆಲ್ಲವನ್ನು ಮೇಳೈಸಲು ಪ್ರಯತ್ನಿಸುತ್ತಾನೆ.

ಇದರ ಒಟ್ಟು ಅವಧಿಯು 36 ನಿಮಿಷಗಳಾಗಿದ್ದು ಅದನ್ನು ಹೀಗೆ ವಿಭಜಿಸಲಾಗಿದೆ.

ಬೋಧನೆ–6 ನಿಮಿಷಗಳು, ಪುಷ್ಟೀಕರಣ–6 ನಿಮಿಷಗಳು, ಪುನರ್ಯೋಜನೆ–12 ನಿಮಿಷಗಳು, ಪುನರ್ಬೋಧನೆ–6 ನಿಮಿಷಗಳು, ಪುನಃ ಪುಷ್ಟೀಕರಣ–6 ನಿಮಿಷಗಳು ಇದನ್ನು ಒಂದು ಬೋಧನಾ ಚಕ್ರ (Teaching Cycle) ಎಂದು ಪರಿಗಣಿಸಲಾಗಿದೆ.

ಅಣು ಬೋಧನೆ ತರಬೇತಿಗೆ ಅಣುಕು ಅಭ್ಯಾಸ ಬೋಧನೆ (Simulated Practice Teaching) ಕ್ರಮವನ್ನು ಅನುಸರಿಸುತ್ತಾರೆ.

**ಅಭ್ಯಾಸ ಬೋಧನೆಯ ನಿರ್ಣಾಯಕಗಳು:** ಬೋಧನೆಯು ಕಲೆಯೂ ಹೌದು ಕೌಶಲವೂ ಹೌದು. ಅಂತೆಯೇ ವ್ಯಕ್ತಿನಿಷ್ಠವೂ ಹೌದು ವಸ್ತುನಿಷ್ಠವೂ ಹೌದು. ಬೋಧಿಸುವ ಪ್ರಶಿಕ್ಷಣಾರ್ಥಿಗೆ ಮತ್ತು ವೀಕ್ಷಿಸುವ ವೀಕ್ಷಕರಿಗೆ ಉತ್ತಮ ಬೋಧನೆಯ ನಿರ್ಣಾಯಕಗಳು ಯಾವುದೆಂಬುದರ ಖಚಿತ ಮಾಹಿತಿ ತಿಳಿದಿರಬೇಕು. ಅದಿಲ್ಲದಿದ್ದರೆ ಪ್ರಗತಿ ಸಾಧ್ಯವಾಗುವುದಿಲ್ಲ.

ಉತ್ತಮ ಬೋಧನೆಯು ಬೋಧಿಸುವ ಶಿಕ್ಷಕ, ವೀಕ್ಷಿಸುವ ವೀಕ್ಷಕ, ಬೋಧನಾ ವಸ್ತು, ಸಮಯ, ಸಂದರ್ಭ, ಸಲಕರಣೆ, ಸಾಮಗ್ರಿಗಳು ಮೊದಲಾದವುಗಳ ಪ್ರಮಾಣ ಮತ್ತು ಗುಣಮಟ್ಟವನ್ನು ಅವಲಂಬಿಸಿವೆಯಾದರೂ ಅರ್ಥಾತ್ ಅದು ಸಾಂದರ್ಭಿಕ ಮತ್ತು ವ್ಯಕ್ತಿನಿಷ್ಠವಾದರೂ ಅದರ ವಸ್ತುನಿಷ್ಠತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಗಮನದಲ್ಲಿಡಬೇಕಾದ ಅಂಶಗಳ ಅಂಕೆ ಅತೀತವಾದರೂ ಕೆಲವನ್ನು ಪರಿಣತರ ಅಭಿಪ್ರಾಯದ ಮೇರೆಗೆ ಇಲ್ಲಿ ಪಟ್ಟಿಮಾಡಲಾಗಿದೆ.

1. **ವಸ್ತು:** ಪ್ರಶಿಕ್ಷಣಾರ್ಥಿಗೆ ತಾನು ಬೋಧಿಸಬೇಕಾದ ವಿಷಯದ ಆಳ ಮತ್ತು ಹರವು ಹೆಚ್ಚಿದಂತೆ ತನ್ನ ಬೋಧನೆ ಪರಿಣಾಮಕಾರಿಯಾಗುತ್ತದೆ. ಸಾಧ್ಯವಿರುವ ಎಲ್ಲ ಸಂಪನ್ಮೂಲಗಳಿಂದ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ, ತಾರ್ಕಿಕವಾಗಿ ಜೋಡಿಸಿ ಜೀರ್ಣಿಸಿಕೊಂಡು ಮಕ್ಕಳಿಗೆ ಬೇಕಾದಷ್ಟನ್ನು ಆಕರ್ಷಣೀಯ ರೀತಿಯಲ್ಲಿ ಸಾದರಪಡಿಸಬೇಕು. ಜ್ಞಾನ ಹೆಚ್ಚಳ, ಮಾಹಿತಿ ಸಂಗ್ರಹ, ವಿಷಯ ಕ್ರೋಡೀಕರಣವು ಬೋಧನೆ–ಕಲಿಕೆಯ ಆಧಾರಸ್ತಂಭ.

2. **ಧ್ವನಿ ಮತ್ತು ವೇಗ:** ಮುಖ ಮನಸ್ಸಿನ ಕನ್ನಡಿ. ಅಂತೆಯೇ ಶಿಕ್ಷಣ ಕ್ಷೇತ್ರಕ್ಕೆ ಬಂದಾಗ ಧ್ವನಿಯು ಶಿಕ್ಷಕನ ವ್ಯಕ್ತಿತ್ವದ ಕನ್ನಡಿ. ಶಿಕ್ಷಕರಿಗೆ ಕಂಠ ಮತ್ತು ಸೊಂಟ ಗಟ್ಟಿಯಾಗಿರಬೇಕೆಂಬುದು ಹಳೆಯ ಮಾತು. ಅರ್ಥಾತ್ ಅವರ ಧ್ವನಿಯು ವಿದ್ಯಾರ್ಥಿಗಳ ಸಂಖ್ಯೆ ಮತ್ತು ತರಗತಿಯ ಗಾತ್ರಕ್ಕನುಗುಣವಾಗಿರಬೇಕು. ಜೊತೆಗೆ ಧ್ವನಿಯಲ್ಲಿ ಆತ್ಮವಿಶ್ವಾಸ, ವಿಷಯ ಮತ್ತು ಭಾಷೆಯ ಪ್ರಭುತ್ವ ಪ್ರಕಟಿತವಾಗಬೇಕು.

3. **ಶಿಸ್ತು:** ಬೋಧನೆ ಮತ್ತು ಕಲಿಕೆಯಲ್ಲಿ ಕ್ರಮಬದ್ಧತೆ, ಶಾಲೆಯಲ್ಲಿ ಸಮಯಪಾಲನೆ ಮುಂತಾದವುಗಳು ಶಿಸ್ತಿನ ಪ್ರತೀಕಗಳು. ಮಕ್ಕಳ ನಿಶ್ಶಬ್ಧತೆ, ಮೌನ ಅಥವಾ ಶಾಂತಚಿತ್ತತೆ, ನಿಷ್ಕ್ರಿಯ ಶ್ರವಣ ಶಿಸ್ತಿನ ಪ್ರತೀಕವಲ್ಲ. ಬದಲಿಗೆ ಕಲಿಕೆಯಲ್ಲಿ ಸಕ್ರಿಯ, ಸೃಜನಶೀಲ ಪಾಲ್ಗೊಳ್ಳುವಿಕೆ ಇರಬೇಕು. ಅದಕ್ಕೆ ಬೋಧಕರು ಹೆಚ್ಚು ಅವಕಾಶ ಕಲ್ಪಿಸಿಕೊಡಬೇಕು.

4. **ಶಿಕ್ಷಕರ ವ್ಯಕ್ತಿತ್ವ:** ಶಿಕ್ಷಕರಿದ್ದಂತೆ ವಿದ್ಯಾರ್ಥಿಗಳು ರೂಪುಗೊಳ್ಳುತ್ತಾರೆ. ಜ್ಞಾನಾತ್ಮಕ, ಕ್ರಿಯಾತ್ಮಕ ಮತ್ತು ಭಾವಾತ್ಮಕ ನೆಲೆಯಲ್ಲಿ ಪ್ರಶಿಕ್ಷಣಾರ್ಥಿಯು ಸರಿಯಾದ ಸಿದ್ಧತೆ ಹೊಂದಿರಬೇಕು. ವಿದ್ಯಾರ್ಥಿಗಳೊಡನೆ ಆತ್ಮೀಯ ಸಂಬಂಧ, ವಿಷಯ ಮತ್ತು ಭಾಷೆಯ ಮೇಲೆ ಹಿಡಿತ, ಅನುಕರಣೀಯ ಉಡುಗೆ ತೊಡುಗೆ, ವೈಚಾರಿಕ ಚಿಂತನೆ, ನಿರಂತರ ಅಧ್ಯಯನಶೀಲತೆ, ಸಭ್ಯತೆ, ಸಾಮಾಜಿಕ ಹಿತಾಸಕ್ತಿ, ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಕಳಕಳಿ, ಸಂವಹನ ಇವುಗಳ ಬಗ್ಗೆ ಆಸಕ್ತಿ ವಹಿಸಬೇಕು.

5. **ಮಕ್ಕಳ ಪಾಲ್ಗೊಳ್ಳುವಿಕೆ:** ಶಿಕ್ಷಕ ಕೇಂದ್ರಿತವಾಗಿದ್ದ ಶಿಕ್ಷಣವು ನಂತರದಲ್ಲಿ ವಿಷಯ ಕೇಂದ್ರಿತವಾಗಿ ಈಗ ವಿದ್ಯಾರ್ಥಿ ಕೇಂದ್ರಿತವಾಗಿರುವುದು ಸರ್ವವಿದಿತವಾದುದು. ಆದುದರಿಂದ ತರಗತಿಯಲ್ಲಿ ಕಲಿಕೆಯು ನೀರಸ ಆಲಿಸುವಿಕೆಯಲ್ಲಿ ಮುಕ್ತಾಯವಾಗದೆ ಸರಸ ಪಾಲ್ಗೊಳ್ಳುವಿಕೆಗೆ ಹಾದಿಯಾಗಬೇಕು.

6. **ಪ್ರಶ್ನೆಗಳು:** ಪ್ರಶಿಕ್ಷಣಾರ್ಥಿಯು ತನ್ನ ಬೋಧನಾ ಪ್ರಕ್ರಿಯೆಯಲ್ಲಿ ಪ್ರಶ್ನೆಗಳನ್ನು ವಿಪುಲವಾಗಿ ಕೇಳಬೇಕು. ಜೊತೆಗೆ ಮಕ್ಕಳು ಪ್ರಶ್ನಿಸಲು ಹೇರಳ ಅವಕಾಶವೀಯಬೇಕು.

Digitised by Bharatavani, CIIL

ಕೇಳುವ ಪ್ರಶ್ನೆಗಳು ಕೆಲವು ಲಕ್ಷಣಗಳನ್ನು ಪ್ರತಿಬಿಂಬಿಸಬೇಕು. ಅವು ಸರಳ, ಸುಲಭ, ನೇರವಾಗಿರಬೇಕು. ಪಾಠ ಮುಂದುವರಿದಂತೆ ಅವು ಜಟಿಲ, ಕ್ಲಿಷ್ಟ, ಅಪ್ರತ್ಯಕ್ಷ ರೂಪ ತಳೆಯಬೇಕು. ಪ್ರಶ್ನೆಗಳು ಚಿಂತನಶೀಲತೆ, ವೈಚಾರಿಕತೆಯನ್ನು ಬೆಳೆಸುವಂತಿರಬೇಕು.

ಪ್ರಶ್ನೆಗಳನ್ನು ಕೇಳದವರು ಕಲಿಯಲಾರರು ಎಂಬ ಅನುಭವದ ಮಾತು ಇದೆ. ಹೆಚ್ಚು ಮಾಹಿತಿಗಾಗಿ, ಸಂದೇಹ ನಿವಾರಣೆಗಾಗಿ ಕಲಿಕೆಯನ್ನು ದೃಢೀಕರಿಸಿಕೊಳ್ಳುವುದಕ್ಕಾಗಿ, ಸಂವಾದಕ್ಕಾಗಿ ಪರಸ್ಪರ ಪ್ರಶ್ನೆ ಕಾರ್ಯಕ್ರಮವು ಇಮ್ಮುಖ ಬೋಧನೆಯ ಅವಿಭಾಜ್ಯ ಅಂಗವಾಗಬೇಕು.

7. **ಕಲಿಕೆಯ ಉಪಕರಣಗಳ ಬಳಕೆ:** ಮಾಡಿ ಕಲಿ, ನೋಡಿ ಕಲಿ, ಓದಿ ಕಲಿ, ಕೇಳಿ ಕಲಿ ಇವುಗಳು ಅವರೋಹಣ ಕ್ರಮದಲ್ಲಿರಬೇಕು, ಎಲ್ಲಿ ಮಾಡಿ ಕಲಿಯಲು ಆಸ್ಪದವಿಲ್ಲವೋ, ಅಲ್ಲಿ ನೋಡಿ ಕಲಿ ಜಾರಿಗೆ ಬರಬೇಕು. ಇದು ಸಾಧ್ಯವಾಗುವುದು ಹೇರಳವಾಗಿ ಕಲಿಕೆಯ ಉಪಕರಣಗಳನ್ನು ಬಳಸಿದಾಗ. ನೂರು ನುಡಿಗಳನ್ನು ಒಂದು ಚಿತ್ರ ಧ್ವನಿಸುತ್ತದೆ ಎಂಬುದು ಗೊತ್ತಿರಬೇಕು.

ತಾಂತ್ರಿಕ ಬೆಳವಣಿಗೆಯ ಈ ದಿನಗಳಲ್ಲಂತೂ 'ಕೇಳಿ ಕಲಿ' ಕ್ರಮದ ಮಹತ್ವ ಕಡಿಮೆಯಾಗಿದೆ.

ಇವುಗಳಲ್ಲದೆ ಸಮಯ ನಿರ್ವಹಣೆ, ಸಂವಹನ, ಮಕ್ಕಳ ಬಗೆಗೆ ಧನಾತ್ಮಕ ಭಾವನೆ, ಆರೋಗ್ಯಕರ ಕಲಿಕಾ ಪರಿಸರ ನಿರ್ಮಾಣ ಕೌಶಲ, ವಿಮರ್ಶಾತ್ಮಕ ತಾರ್ಕಿಕ ಚಿಂತನೆ ಮುಂತಾದವು ಸಹ ಉತ್ತಮ ನಿರ್ಣಾಯಕಗಳಾಗಿವೆ. (ನೋಡಿ–'ಸೂಕ್ಷ್ಮ ಬೋಧನೆ')

–ಲೋಕೇ

## ಅರಬಿಂದೊ ಘೋಷ್

ಶ್ರೀ ಅರವಿಂದರು ಜನಿಸಿದ ಕಾಲದಲ್ಲಿ ಹಾಗೂ ನಂತರದ ಸುಮಾರು ಮೂವತ್ತೈದು ವರ್ಷಗಳಲ್ಲಿ ಭಾರತದ ರಾಜಕೀಯ ಪರಿಸ್ಥಿತಿಯ ಸಂಕ್ಷಿಪ್ತ ಅರಿವು ಅವಶ್ಯಕ. ಅರವಿಂದರ ಜನನಕ್ಕೆ ಹದಿನೈದು ವರ್ಷಗಳ ಮುಂಚೆ (1857) ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮ ನಡೆದದ್ದು. ಅದನ್ನು ಸದೆಬಡೆಯಲು ಆಂಗ್ಲರು, ತಮ್ಮದೇ ಆದ ಉಗ್ರ ಕ್ರಮಗಳನ್ನು ಕೈಗೊಂಡಿದ್ದರು. ಸಮಗ್ರ ಭಾರತ ನಿಸ್ಸತ್ವವೂ, ನಿರ್ಬಲವೂ ಆಗಿತ್ತು. ತಮ್ಮನ್ನು ವಿರೋಧಿಸಿದ ರಾಜರುಗಳನ್ನು ಮಟ್ಟಹಾಕಿ ತಮ್ಮ ಅನುಕೂಲಕ್ಕೆ ತಕ್ಕಂತೆ ವರ್ತಿಸುವವರನ್ನು ಪುರಸ್ಕರಿಸಿದರು. 1885ರಲ್ಲಿ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂತು (ಅರವಿಂದರು ಇಂಗ್ಲೆಂಡಿನಿಂದ ಭಾರತಕ್ಕೆ ಹಿಂತಿರುಗಿದ ಕೇವಲ ಆರು ವರ್ಷಗಳ ಮುನ್ನ). ಬ್ರಿಟಿಷ್ ಆಳ್ವಿಕೆಯ ವಿರುದ್ಧ ಜನಾಭಿಪ್ರಾಯ ಆಗ ಪ್ರಚಲಿತವಾಗಿದ್ದ ಪತ್ರಿಕೆಗಳ ಮೂಲಕ ವ್ಯಕ್ತವಾಗುತ್ತಿತ್ತು. 1885ಕ್ಕೂ ಮುಂಚೆ ಆಗಿನ ಕಲ್ಕತ್ತ ಮುಂಬಯಿ ಹಾಗೂ ಮದ್ರಾಸ್ ಪ್ರಾಂತ್ಯಗಳಲ್ಲಿ ಕ್ರಿಯಾಶೀಲವಾಗಿದ್ದ ಬೇರೆ ಬೇರೆ ಸಂಸ್ಥೆಗಳಿದ್ದವು. ಜನಾಭಿಪ್ರಾಯ ಈ ಸಂಸ್ಥೆಗಳ ಮೂಲಕ ಮಂದರೀತಿಯಲ್ಲಿ ವ್ಯಕ್ತವಾಗುತ್ತಿತ್ತು. ಈ ಸಂಸ್ಥೆಗಳಲ್ಲಿ ಕಾರ್ಯ ಕೈಗೊಂಡಿದ್ದ ದೇಶಾಭಿಮಾನಿ ವ್ಯಕ್ತಿಗಳು ರಾಷ್ಟ್ರಮಟ್ಟದಲ್ಲಿ ಜಾತ್ಯತೀತವೂ ವರ್ಗಾತೀತವೂ ಆದ ಒಂದು ಸಂಘದ ಆವಶ್ಯಕತೆಯಿದೆಯೆಂದು ಮನಗಂಡು 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಸ್ತಿತ್ವಕ್ಕೆ ಬರಲು ಕಾರಣರಾದರು. ಆದರೆ ಕಾಂಗ್ರೆಸ್ಸಿನ ಮಂದಗತಿಯ ಚಟುವಟಿಕೆ, ಅಹವಾಲುಗಳನ್ನು ಸಲ್ಲಿಸುವುದು, ನಿಷ್ಫಲ ಮಂಡನೆಗಳನ್ನು ಮಂಡಿಸುವುದು. ಇವೇ ಮೊದಲಾದ ಕಾರ್ಯವೈಖರಿ ದೇಶದ ಯುವ ಜನಾಂಗಕ್ಕೆ ತೃಪ್ತಿದಾಯಕವಾಗಲಿಲ್ಲ. ಪರಿಣಾಮವಾಗಿ ದೇಶದಲ್ಲಿ ಆತುರದ ಉಗ್ರಗಾಮಿ ಚಟುವಟಿಕೆಗಳು ಕ್ರಮೇಣ ಆರಂಭವಾದವು. ಹೀಗೆ, ಆ ಸಮಯದಲ್ಲಿ ಹಿಂಸೆಯ ಮೂಲಕ ದೇಶಪ್ರೇಮ ವ್ಯಕ್ತವಾಗುತ್ತಿರಲಿಲ್ಲವಾದರೂ ಪರಕೀಯ ಆಳ್ವಿಕೆ ಮತ್ತು ಅದರ ಎಲ್ಲ ದುಷ್ಪರಿಣಾಮಗಳಿಂದ ಅಸಮಾಧಾನಗೊಂಡ ಪೀಳಿಗೆಯ ಉದ್ಭವವಂತೂ ಖಂಡಿತವಾಗಿಯೂ ಮೊದಲುಗೊಂಡಿತು. ಯುವಪೀಳಿಗೆ ಫಲಕಾರಿಯಾಗುವ ಕಾರ್ಯಗಳಲ್ಲಿ ಆಸಕ್ತವಾಗಿತ್ತು. ಕಾಂಗ್ರೆಸ್ಸಿನ ಮಂದಗಾಮಿ ರೀತಿಗಳಲ್ಲಿ ಆಸಕ್ತಿತೋರದ ಉದಯೋನ್ಮುಖ ಯುವ ಪೀಳಿಗೆಗೆ ಶ್ರೀ ಅರವಿಂದರು ಸೇರಿದವರಾಗಿದ್ದರು. ಅರವಿಂದರು ಜನಿಸಿದ ಬಂಗಾಳ ಪ್ರಾಂತ್ಯ ರಾಜಾರಾಮ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ್, ಶ್ರೀ ರಾಮಕೃಷ್ಣಪರಮಹಂಸರು, ವಿವೇಕಾನಂದ, ಬಂಕಿಮಚಂದ್ರ ಚಟರ್ಜಿ ಮುಂತಾದವರ ಪ್ರಭಾವಕ್ಕೆ ಒಳಗಾಗಿತ್ತು. ಬ್ರಹ್ಮ ಸಮಾಜದ ದೇವೇಂದ್ರನಾಥ ಠಾಕೂರ್, ಕೇಶಬ್‌ಚಂದ್ರಸೇನ್ ಹಾಗೂ ಇನ್ನಿತರರು ನವಧಾರ್ಮಿಕ ಆಂದೋಳನವನ್ನು ಹುಟ್ಟುಹಾಕಿದ್ದರು. ಆದಾಗ್ಯೂ ರಾಮಕೃಷ್ಣ ಹಾಗೂ ವಿವೇಕಾನಂದರ ಪ್ರಭಾವವೇ ಎಲ್ಲೆಡೆಯೂ ಎದ್ದುಕಾಣುತ್ತಿತ್ತು. ಇಂತಹ ಒಂದು ರಾಜಕೀಯ, ಧಾರ್ಮಿಕ ವಾತಾವರಣವುಳ್ಳ ಬಂಗಾಳದ ಕಲ್ಕತ್ತದಲ್ಲಿ ಆಗಸ್ಟ್ 15 1872ರಂದು ಅರಬಿಂದರ ಜನನವಾಯಿತು.



ಅರಬಿಂದೊ ಘೋಷ್

ತಂದೆ ಕೃಷ್ಣಧನ ಘೋಷ್, ತಾಯಿ ಸ್ವರ್ಣಲತಾದೇವಿ. ಅರವಿಂದರಿಗೆ ಇಬ್ಬರು ಅಣ್ಣಂದಿರು. ಬಿನಯ್‌ಭೂಷಣ್ ಮತ್ತು ಮನಮೋಹನ್. ತಮ್ಮ ಬರೀಂದ್ರ. ಸಹೋದರಿ ಸರೋಜಿನಿ. ಆಂಗ್ಲರ ರೀತಿನೀತಿಗಳನ್ನು ಅನುಸರಿಸುತ್ತಿದ್ದ ಕೃಷ್ಣಧನ ಘೋಷ್ ಅರವಿಂದರನ್ನು ಲಂಡನ್ನಿನ ಸೇಂಟ್‌ಪಾಲ್ ಶಾಲೆಗೆ ಸೇರಿಸಿದರು. ಆಗ ಅರವಿಂದರಿಗೆ ಕೇವಲ ಏಳು ವರ್ಷ ವಯಸ್ಸು. ಅವರು ಭಾರತಕ್ಕೆ ಹಿಂತಿರುಗಿದ್ದು ತಮ್ಮ ಇಪ್ಪತ್ತೊಂದನೇ ವಯಸ್ಸಿನಲ್ಲಿ. ಆ ಸಮಯಕ್ಕೆ ಲಂಡನ್ ಮತ್ತು ಕೇಂಬ್ರಿಡ್ಜ್‌ಗಳಲ್ಲಿ ವ್ಯಾಸಂಗವನ್ನು ಪೂರ್ತಿಗೊಳಿಸಿ ಗ್ರೀಕ್, ಲ್ಯಾಟಿನ್, ಫ್ರೆಂಚ್ ಜರ್ಮನ್, ಇಟಾಲಿಯನ್ ಭಾಷೆಗಳಲ್ಲಿ ಪ್ರಭುತ್ವವನ್ನು ಸಹ ಹೊಂದಿದ್ದರು. 1890ರಲ್ಲಿ ಭಾರತಕ್ಕೆ ಬರುವ ಮುನ್ನ ಅವರು ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಕುದುರೆ ಸವಾರಿ ಪರೀಕ್ಷೆಗೆ ಬೇಕೆಂತಲೇ ಲಂಡನ್ನಿನಲ್ಲಿ ಗೈರುಹಾಜರಾಗಿ, ಸಿವಿಲ್‌ಸರ್ವಿಸ್ ಹುದ್ದೆಗೆ ಅನರ್ಹರಾದರು. ಆಗ ಲಂಡನ್ನಿನಲ್ಲಿದ್ದ ಬರೋಡ ಮಹಾರಾಜರು ಅರವಿಂದರನ್ನು ನೋಡಿ ತಮ್ಮ ರಾಜ್ಯದಲ್ಲಿ ಹುದ್ದೆಯನ್ನು ಕೊಟ್ಟರು. 1893ರಲ್ಲಿ ಭಾರತಕ್ಕೆ ಹಿಂತಿರುಗಿ ಬರೋಡ ರಾಜ್ಯದ ರೆವಿನ್ಯೂ ಖಾತೆಯಲ್ಲಿ ಕೆಲಸಮಾಡಿದರು. ನಂತರ ಮಹಾರಾಜರ ಸೆಕ್ರೆಟರಿಯಾಗಿ ಕಾರ್ಯನಿರ್ವಹಿಸಿ ಬರೋಡ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿಯೂ ಪ್ರಿನ್ಸಿಪಾಲರಾಗಿಯೂ ಕೆಲಸ ನಿರ್ವಹಿಸಿದರು. 1893 ರಿಂದ 1906ರ ವರೆಗಿನ ಬರೋಡಾದಲ್ಲಿನ ಈ ಹದಿಮೂರು ವರ್ಷಗಳು ಅವರ ಆತ್ಮಸಂಸ್ಕರಣ ಮತ್ತು ಸಾಹಿತ್ಯ ಚಟುವಟಿಕೆಯ ಅವಧಿಯಾಗಿತ್ತು. ಸಂಸ್ಕೃತ ಮತ್ತು ಇನ್ನಿತರ ಭಾರತೀಯ ಭಾಷೆಗಳನ್ನು ಅಭ್ಯಸಿಸಿ ಭಾರತೀಯ ಸಂಸ್ಕೃತಿ ಹಾಗೂ ಹಿಂದೂ ಧರ್ಮದ ಸತ್ವವನ್ನು ಅರಗಿಸಿಕೊಂಡು ತಮ್ಮ ಭಾವೀ ಕಾರ್ಯಕ್ಕೆ ಬುನಾದಿಯನ್ನು ಹಾಕಿದರು. 1905ರ ಬಂಗಾಳ ವಿಭಜನೆ ಅವರನ್ನು ಬರೋಡ ಸೇವೆಯನ್ನು ಬಿಟ್ಟು ಬಹಿರಂಗವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿತು. 1906ರಲ್ಲಿ ಬರೋಡಾವನ್ನು ಬಿಟ್ಟು ಕಲ್ಕತ್ತೆಯಲ್ಲಿ ಹೊಸದಾಗಿ ಸ್ಥಾಪಿಸಿದ ಬೆಂಗಾಲ್ ನ್ಯಾಷನಲ್ ಕಾಲೇಜ್‌ನ ಪ್ರಾಂಶುಪಾಲ ಹುದ್ದೆಯನ್ನು

Digitised by Bharatavani, CIIL

ಸ್ವೀಕರಿಸಿದರು. ಇದೇ ಸಮಯದಲ್ಲಿ ಆಗತಾನೇ ಪ್ರಾರಂಭವಾಗಿದ್ದ ನ್ಯಾಷನಲಿಸ್ಟ್ ಪಕ್ಷದ ಸದಸ್ಯರಾಗಿ ಅದರ ಮುಖ್ಯ ನೇತಾರರಾದರು. ಮಂದಗಾಮಿಗಳ ಗುರಿಯಾದ ಸ್ಥಾನೀಯ ಸ್ವಆಳ್ವಿಕೆಗೆ (Colonial Self Government) ತದ್ವಿರುದ್ಧವಾಗಿ ಸ್ವರಾಜ್ಯವೇ ಈ ಪಕ್ಷದ ಗುರಿಯಾಗಿತ್ತು. ಸ್ವದೇಶಿ ಕೈಗಾರಿಕೆಗಳು, ರಾಷ್ಟ್ರೀಯ ಶಾಲಾಕಾಲೇಜುಗಳು, ಸ್ವರಕ್ಷಣಾರ್ಥವಾಗಿ ನಮ್ಮದೇ ಆದ ಸಂಸ್ಥೆಗಳ ಸಂಘಟನೆ ಮುಂತಾದುವುಗಳ ಮೂಲಕ ಸ್ವರಾಜ್ಯವನ್ನು ಪಡೆಯುವುದು ಈ ಪಕ್ಷದ ಗುರಿಯಾಗಿತ್ತು. ಬಿಪಿನ್ ಚಂದ್ರಪಾಲ್, ತಿಲಕ್, ಶ್ರೀ ಅರಬಿಂದೊ ಇವರುಗಳ ಈ ಕಾರ್ಯಕ್ಕೆ ದೇಶ ಇನ್ನೂ ಸಿದ್ಧವಿರಲಿಲ್ಲ. ದುರದೃಷ್ಟವಶಾತ್ ಬಂಗಾಳದಲ್ಲಿ ನಡೆದ ಹಿಂಸಾತ್ಮಕ ಘಟನೆಗಳಿಂದಾಗಿ ಇವರ ಯೋಜನೆಗಳೆಲ್ಲಾ ಬುಡಮೇಲಾದವು. ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನವೊಂದನ್ನು ಕಾರಣವಾಗಿಟ್ಟುಕೊಂಡು ಆಂಗ್ಲಸರ್ಕಾರ ಅರವಿಂದರ ಮೇಲೆ ರಾಜದ್ರೋಹದ ಆರೋಪವನ್ನು ಹೊರಿಸಿತು. ಆದರೆ ಈ ಆರೋಪದಿಂದ ಅವರು ಬಿಡುಗಡೆಗೊಂಡರು. 1908ರಲ್ಲಿ ಆಲಿಪುರ್ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಅರವಿಂದರು ಹಾಗೂ ಅವರ ತಮ್ಮ ಬರೀಂದ್ರರನ್ನು ಆರೋಪಿಗಳೆಂದೆಣಿಸಿ ಅರವಿಂದರನ್ನು ಆರೋಪಿ ಖೈದಿಯಾಗಿ ಆಲಿಪುರ್ ಜೈಲಿನಲ್ಲಿ ಒಂದು ವರ್ಷ ಬಂಧನದಲ್ಲಿಡಲಾಯಿತು. ಚಿತ್ತರಂಜನ್ ದಾಸ್‌ರವರ ಪ್ರತಿಭಾಪೂರ್ಣ ವಾದದಿಂದ ಅರವಿಂದರು ಆರೋಪದಿಂದ ಮುಕ್ತರಾದರು.

ಆಲಿಪುರ್ ಜೈಲಿನ ಒಂದು ವರ್ಷದ ಬಂಧನದ ಅವಧಿ ಅರವಿಂದರ ಜೀವನದಲ್ಲಿ ಅತಿ ಮಹತ್ವಪೂರ್ಣವುಳ್ಳದ್ದು. ಈ ಅವಧಿಯಲ್ಲಿ ಅವರು ಧ್ಯಾನ ಸಾಧನೆಯಲ್ಲಿ ತೊಡಗಿದರು. ಇದರಿಂದ ಅವರಿಗೆ ಉಂಟಾದ ಗಹನವಾದ ಆಧ್ಯಾತ್ಮಿಕ ಅನುಭವದಿಂದ ಅವರ ಜೀವನದ ಪಥವೇ ಬದಲುಗೊಂಡಿತು. ಪರಮಾತ್ಮನ ಚೇತನ ಎಲ್ಲೆಡೆಯೂ ವ್ಯಾಪಿಸಿರುವ ಪ್ರತ್ಯಕ್ಷ ಅನುಭವ ಅವರಿಗಾಯಿತು. ಜೈಲಿನ ಗೋಡೆಗಳಲ್ಲಿ, ಸರಪಳಿಯಿಂದ ಬಂಧಿತರಾದ ಖೈದಿಗಳಲ್ಲಿ, ಜೈಲಿನ ಸರಳುಗಳಲ್ಲಿ, ಅಂಗಣದ ಮರಗಳಲ್ಲಿ ನ್ಯಾಯಾಲಯದಲ್ಲಿನ ನ್ಯಾಯಾಧೀಶನ ಜಾಗದಲ್ಲಿ– ಹೀಗೆ ಎಲ್ಲೆಡೆಯೂ ಆ ಭಗವಂತನ ಚೇತನವೊಂದೇ ವ್ಯಾಪ್ತವಾಗಿರುವುದು ಅವರಿಗೆ ಗೋಚರಿಸಿತು. ಬಂಧಮುಕ್ತರಾದ ನಂತರ ಸಂಪೂರ್ಣ ಬೇರೊಂದು ವಿಧದ ಕಾರ್ಯಕ್ಕಾಗಿ ಸಿದ್ಧರಾಗುತ್ತಿರುವರೆಂದೂ ನಂತರ ಆ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದೂ ಅಂತರ್ವಾಣಿಯೊಂದು ಹೇಳಿತು. ಈ ಅಂತರ್ವಾಣಿಯ ಆದೇಶದಂತೆ 1910ರಲ್ಲಿ ಅರವಿಂದರು ಸಾರ್ವಜನಿಕ ಜೀವನಕ್ಕೆ ವಿದಾಯ ಹೇಳಿ ಪಾಂಡಿಚೇರಿಯಲ್ಲಿ ಜೀವನದ ಅಂತ್ಯದವರೆಗೂ ನೆಲೆಸಿದರು. ಪಾಂಡಿಚೇರಿಯಲ್ಲಿ ಅವರು ತಮ್ಮ ದೀರ್ಘ ಅಧ್ಯಾತ್ಮ ಸಾಧನೆಯಲ್ಲಿ ತೊಡಗಿದರು. ಪರಿಸ್ಥಿತಿಗಳು ಅನುಕೂಲಕರವಾದ ಪಕ್ಷದಲ್ಲಿ ಪುನಃ ರಾಜಕೀಯ ಕ್ಷೇತ್ರಕ್ಕೆ ಹಿಂತಿರುಗುವ ಉದ್ದೇಶವನ್ನಿಟ್ಟುಕೊಂಡು ಬಂಗಾಳವನ್ನು ಬಿಟ್ಟು ಹೊರಟಿದ್ದರೂ ಶೀಘ್ರದಲ್ಲೇ ಅವರಿಗೆ ತಾವು ಕೈಗೆತ್ತಿಕೊಂಡ ಅಧ್ಯಾತ್ಮ ಕಾರ್ಯದ ವಿಸ್ತಾರದ ಅರಿವಾಯಿತು. ಅದನ್ನು ಸಾಧಿಸಲು ತಮ್ಮೆಲ್ಲಾ ಶಕ್ತಿಗಳನ್ನು ಕೇಂದ್ರೀಕರಿಸುವುದು. ಅವಶ್ಯವಾದದ್ದರಿಂದ ರಾಜಕೀಯ ಕ್ಷೇತ್ರದೊಡನೆ ತಮ್ಮ ಸಂಬಂಧವನ್ನು ಸಮಾಪ್ತಿಗೊಳಿಸಿದರು. ನಾಲ್ಕು ವರ್ಷಗಳ ಏಕಾಂತ ಯೋಗ ಸಾಧನೆಯ ನಂತರ 1914ರಲ್ಲಿ 'ಆರ್ಯ' ಎಂಬ ಅಧ್ಯಾತ್ಮಿಕ ಪತ್ರಿಕೆಯನ್ನು ಹೊರಡಿಸಿದರು. ಅರವಿಂದರ ಬಹುಮುಖ್ಯ ಕೃತಿಗಳಾದ "ದಿ ಲೈಫ್ ಡಿವೈನ್" "ದಿ ಸಿಂಥೆಸಿಸ್ ಆಫ್ ಯೋಗ" ಗೀತಾ ಪ್ರಬಂಧಗಳ "ಈಶೋಪನಿಷತ್ತು" 'ಆರ್ಯ' ಪತ್ರಿಕೆಯಲ್ಲಿ ಪ್ರಕಟಗೊಂಡವು. ಸುಮಾರು ಏಳು ವರ್ಷಗಳು ಆರ್ಯ ಪತ್ರಿಕೆ ಜೀವಂತವಾಗಿದ್ದು 1921ರಲ್ಲಿ ಅದರ ಪ್ರಕಟಣೆ ನಿಂತುಹೋಯಿತು. 1926ರಲ್ಲಿ ಅರವಿಂದರು ಯೋಗ ಹಾಗೂ ಧ್ಯಾನದಲ್ಲಿ ಮತ್ತಷ್ಟು ಆಳವಾಗಿ ಮುಳುಗಲು ಏಕಾಂತವನ್ನು ಬಯಸಿದರು. ಆ ದಿನದಿಂದ ಜೀವಿತದ ಕೊನೆಯವರೆಗೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಆದರೆ ಅವರ ಅನುಯಾಯಿಗಳಿಗೆ ನಿಯಮಿತ ಕಾಲದಲ್ಲಿ ದರ್ಶನವಿತ್ತು ಅವರ ಅಧ್ಯಾತ್ಮಿಕ ಮುನ್ನಡೆಗೆ ಪತ್ರಗಳ ಮೂಲಕ ಮಾರ್ಗದರ್ಶನವನ್ನೀಯುತ್ತಿದ್ದರು.

ಅರವಿಂದರ ಉಪದೇಶಗಳು ಅವರ ತತ್ವದರ್ಶನ ಮತ್ತು ಯೋಗಗಳನ್ನೊಳಗೊಂಡಿದೆ. ತತ್ವದ ಭಾಗ ಅವರ ಸಿದ್ಧಾಂತವನ್ನೊಳಗೊಂಡಿದ್ದು ಯೋಗದ ಭಾಗ ಅದರ ಅಭ್ಯಾಸವನ್ನೊಳಗೊಂಡಿದೆ. ಅವರ ಮೂರು ಪ್ರಮುಖ ಕೃತಿಗಳಾದ 'ದಿ ಲೈಫ್ ಡಿವೈನ್', 'ದಿ ಸಿಂಥೆಸಿಸ್ ಆಫ್ ಯೋಗ' ಮತ್ತು 'ಸಾವಿತ್ರಿ' ಇವುಗಳಲ್ಲಿ ಅವರ ಸಿದ್ಧಾಂತವನ್ನು ಕಾಣಬಹುದು. ಅವರ ಉಪದೇಶಗಳ ಮೂಲಾಧಾರ ಉಪನಿಷತ್ತುಗಳು ಮತ್ತು ಭಗವದ್ಗೀತೆ. ಉಪದೇಶಗಳೆಲ್ಲಾ ಅವರಿಗುಂಟಾದ ಅಧ್ಯಾತ್ಮಿಕ ಅನುಭವಗಳ ಮುದ್ರೆಯನ್ನೂ ಸಹ ಒಳಗೊಂಡಿವೆ. ಅರವಿಂದರ ಸಿದ್ಧಾಂತವನ್ನು ನಾವು ಪೂರ್ಣಯೋಗ (ಇಂಟಿಗ್ರಲ್ ಯೋಗ) ಅಥವಾ 'ಸುಪ್ರಾಮೆಂಟಲ್ ಯೋಗ' ಎಂದು ಕರೆಯಬಹುದು. ಪೂರ್ಣಯೋಗದಲ್ಲಿ ಸಾಧಕ ಭಗವಂತನ ಬಳಿ ಸಾರಲು ಅವನ ದರ್ಶನವನ್ನು ಹೊಂದಲು ತನ್ನೆಲ್ಲಾ ಶಕ್ತಿಗಳನ್ನು ಬಳಸಿಕೊಳ್ಳುತ್ತಾನೆ. ಇನ್ನಿತರ ಯೋಗ ಮಾರ್ಗಗಳಲ್ಲಿ, ಉದಾಹರಣೆಗೆ ಭಕ್ತಿಯೋಗದಲ್ಲಿ ಸಾಧಕ ತನ್ನ ಭಾವನಾತ್ಮಕ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಾನೆ. ಕರ್ಮಯೋಗಿಯಾದಲ್ಲಿ ತನ್ನ ಕ್ರಿಯಾ ಶಕ್ತಿಯನ್ನು ಬಳಸಿಕೊಳ್ಳುತ್ತಾನೆ. ಆದರೆ ಪೂರ್ಣಯೋಗದಲ್ಲಿ ಸಾಧಕನು ತನ್ನೆಲ್ಲಾ ಅಂದರೆ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳನ್ನು ಉಪಯೋಗಿಸಿಕೊಂಡು ದಿವ್ಯತೆಯನ್ನು ಹೊಂದುತ್ತಾನೆ. ಮತ್ತೊಂದು ಅಂಶವೆಂದರೆ ಪೂರ್ಣಯೋಗದಲ್ಲಿ ಸಾಧಕ ದಿವ್ಯತೆಯ ಎಲ್ಲ ಮುಖಗಳಲ್ಲೂ, ಪ್ರಜ್ಞೆಯ ಎಲ್ಲ ಸ್ತರಗಳಲ್ಲೂ ಐಕ್ಯತೆಯನ್ನು ಸಾಧಿಸುವ ಗುರಿಯನ್ನು ಹೊಂದಿರುತ್ತಾನೆ.

**ಶಿಕ್ಷಣದ ಕ್ಷೇತ್ರಕ್ಕೆ ಶ್ರೀ ಅರವಿಂದರ ಕೊಡುಗೆ :** ಶ್ರೀ ಅರವಿಂದರನ್ನು ಆಧುನಿಕ ದ್ರಷ್ಟಾರ ಮತ್ತು ವೇದಗಳ ಅಂತರಾರ್ಥದ ಅರಿವನ್ನು ಹೊಂದಿರುವ ವಿದ್ವಾಂಸರೆಂದು ಪರಿಗಣಿಸಲಾಗಿದೆ. ಕಲ್ಕತ್ತೆಯ ಮೊದಲನೆಯ ರಾಷ್ಟ್ರಮಟ್ಟದ ಶಿಕ್ಷಣಶಾಸ್ತ್ರ ಕಾಲೇಜಿನ ಪ್ರಾಂಶುಪಾಲರಾಗಿದ್ದ ಅರವಿಂದರು ಶಿಕ್ಷಣವನ್ನು ಕುರಿತು ವ್ಯಾಪಕವಾಗಿ ಬರೆದಿದ್ದಾರೆ. "ಸಮಗ್ರ ಶಿಕ್ಷಣ"ವನ್ನು ಕುರಿತು ಅವರು ಹೊಂದಿರುವ ನಿಲುವೇ ಒಂದು ಅದ್ವಿತೀಯ ಪರಿಕಲ್ಪನೆ. ಅವರ ಕೃತಿಗಳು. ದೈಹಿಕ, ಮಾನಸಿಕ ಹಾಗೂ ಆತ್ಮ ಶಿಕ್ಷಣದ ಬಗ್ಗೆ ಬೆಳಕು ಬೀರುತ್ತವೆ. ಅಷ್ಟೇ ಅಲ್ಲದೆ ಈ ಮೂರನ್ನು ಸಮಗ್ರವಾಗಿ ಆತ್ಮಗತ ಮಾಡಿಕೊಳ್ಳುವುದನ್ನು ಸಹ ಹೇಳುತ್ತವೆ. ಶಿಕ್ಷಣದ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಮುಖಗಳನ್ನು ಕುರಿತು ಸಹ ಅರವಿಂದರು ವಿವರಿಸಿದ್ದಾರೆ. ಅವರ ಶೈಕ್ಷಣಿಕ ವಿಚಾರಗಳನ್ನು ಅರವಿಂದೋ ಆಶ್ರಮದ ಶೈಕ್ಷಣಿಕ ಯೋಜನೆಗಳಲ್ಲಿ ಮತ್ತು ಅರೋವಿಲ್ಲೆ ಹಾಗೂ ದೇಶದ ಇನ್ನಿತರ ಶಾಲೆಗಳಲ್ಲಿ ಪ್ರಯೋಗಿಸಲಾಗಿದೆ. ಅರವಿಂದರು ಶಿಕ್ಷಣದ ಮೂರು ಮೂಲಭೂತ ತತ್ವಗಳನ್ನು ಹೇಳಿದ್ದಾರೆ.

"ಬೋಧನೆಯ ಮೊದಲನೆಯ ತತ್ವವೆಂದರೆ ಏನನ್ನೂ ಬೋಧಿಸಲಾಗದು" ಎಂಬ ಅರವಿಂದರ ಹೇಳಿಕೆ ಶಿಕ್ಷಣದ ಹಲವು ಸಿದ್ಧಾಂತಗಳನ್ನು ಹಾಗೂ ಸಮಗ್ರ ಶಿಕ್ಷಣದ ಕಲ್ಪನೆಗೆ ಬಹಳ ಹತ್ತಿರವಿರುವ ಹೊಸ ರೂಪದ ಬೋಧನಶಾಸ್ತ್ರವನ್ನು ಒಳಗೊಳ್ಳುತ್ತದೆ. ಇದು ಬೋಧನೆಗಿಂತ ಕಲಿಕೆಗೆ ಹೆಚ್ಚಿನ ಒತ್ತು ನೀಡುತ್ತದೆಯಲ್ಲದೆ ಕಲಿಕೆಯನ್ನು ಸ್ವಯಂ–ಆರಂಭಗೊಳ್ಳುವ (Self Starting) ಸ್ವಯಂ ಮುಂದುವರೆಯುವ (Self - Propelling) ಪ್ರಕ್ರಿಯೆಯನ್ನಾಗಿ ಮಾಡುತ್ತದೆ. ಅಧ್ಯಾಪಕನು

Digitised by Bharatavani, CIIL

ಕೇವಲ ಮಾಹಿತಿ ನೀಡುವ ವ್ಯಕ್ತಿ ಮಾತ್ರವಲ್ಲದೆ ಕಲಿಕಾರ್ಥಿಯ ಕಲಿಕಾ ಪ್ರಕ್ರಿಯೆಯನ್ನು ಸುಗಮಗೊಳಿಸಿ ಮಾರ್ಗದರ್ಶಿಯ ಪಾತ್ರವನ್ನು ವಹಿಸುವ ವ್ಯಕ್ತಿಯೂ ಹೌದು ಎಂಬ ಅಂಶ ಈ ಹೇಳಿಕೆಯಿಂದ ವ್ಯಕ್ತವಾಗುತ್ತದೆ.

ಮತ್ತೊಂದು ತತ್ವವೆಂದರೆ "ಮನಸ್ಸಿನ ಬೆಳವಣಿಗೆಯಲ್ಲಿಯೇ ಅದನ್ನು ನಿಯಂತ್ರಿಸಬೇಕು" (Mind has to be consulted in its growth). ಅರವಿಂದರ ಪ್ರಕಾರ ಪೋಷಕರು ಮತ್ತು ಶಿಕ್ಷಕರು ತಮ್ಮ ಇಚ್ಛೆಯಂತೆ ಮಗುವನ್ನು ರೂಪಿಸಲು ಕೈಗೊಳ್ಳುವ ಪ್ರಯತ್ನ ಅಮಾನುಷ ಹಾಗೂ ಅರಿವಿಲ್ಲದ ಅಂಧವಿಶ್ವಾಸ. ಪ್ರಕೃತಿಯ ಸ್ವಧರ್ಮವನ್ನು ತ್ಯಜಿಸುವಂತೆ ಮಾಡುವುದು ಅದಕ್ಕೆ ಶಾಶ್ವತ ಧಕ್ಕೆಯನ್ನು ತರುವುದಲ್ಲದೆ ಅದರ ಬೆಳವಣಿಗೆಯನ್ನು ಕುಂಠಿತಗೊಳಿಸಿ ಅದರ ಪೂರ್ಣತೆಯನ್ನು ವಿಕೃತಗೊಳಿಸುತ್ತದೆ. ಕಲಿಕಾರ್ಥಿಯ ಇಂತಹುದೇ ಗುಣ, ಸಾಮರ್ಥ್ಯ, ವಿಚಾರ, ಋಜುತ್ವ ಮುಂತಾದುವುಗಳನ್ನು ಬೆಳೆಸಿಕೊಳ್ಳಬೇಕೆಂದು ಅಥವಾ ಆತನ ಪೂರ್ವನಿಶ್ಚಿತ ಜೀವನ ಪಥ (Career) ದಲ್ಲಿ ನಡೆಯಲು ಸಿದ್ಧನಾಗಬೇಕೆಂದು ಪೋಷಕರು ಅಥವಾ ಬೋಧಕರು ಮುಂಚಿತವಾಗಿಯೇ ಕೈಗೊಳ್ಳುವ ವ್ಯವಸ್ಥೆ ಖಂಡಿತವಾಗಿ ಬಹಳ ದೋಷಪೂರಿತ.

ಅರವಿಂದರ ಇನ್ನೊಂದು ತತ್ವವೆಂದರೆ "ನಾವು ಹತ್ತಿರದಿಂದ ಕಾರ್ಯ ಆರಂಭಗೊಳಿಸಿ ದೂರಕ್ಕೆ ಸಮೀಪಿಸಬೇಕು, ಯಾವುದಿದೆಯೋ ಅದರಿಂದ ಏನಾಗುವುದೋ ಅದನ್ನು ಹೊಂದಬೇಕು" ಎಂಬುದು. ನೇರ ಅನುಭವದಿಂದ ಶಿಕ್ಷಣ ಪ್ರಾರಂಭಗೊಂಡು, ಅಮೂರ್ತವೂ ಹಾಗೂ ಅನುಭವಕ್ಕೆ ಅಗ್ರಾಹ್ಯವೂ ಆದದ್ದನ್ನು ಅನುಭವದ ಪರಿಧಿಗೆ ತರಬೇಕು. ವ್ಯಕ್ತಿಗತ ಅನುಭವದಿಂದ ವಿಶಾಲವೂ ತೀವ್ರತರವೂ ಆದ ಉನ್ನತ ಅನುಭವದೆಡೆಗಿರುವ ಬೆಳವಣಿಗೆಯೇ ಜ್ಞಾನ ಎಂದು ಅರವಿಂದರು ಅಭಿಪ್ರಾಯಪಡುತ್ತಾರೆ. ಮೇಲೆ ಹೇಳಿದ ಶಿಕ್ಷಣದ ಮೂರು ಪ್ರಮುಖ ತತ್ವಗಳ ಜೊತೆಗೆ ಅರವಿಂದರು ಇನ್ನೂ ಕೆಲವು ಮಾರ್ಗದರ್ಶನ ಸೂತ್ರ (Guidelines)ಗಳನ್ನು ನೀಡಿದ್ದಾರೆ. ಬೋಧಕನ ಸಾಧನಗಳನ್ನು (instrument) ಕುರಿತು ಹೇಳುವಾಗ ಅವರು ಹೀಗೆ ಬರೆಯುತ್ತಾರೆ.

"ಬೋಧನೆ, ಉದಾಹರಣೆ ಪ್ರಭಾವ– ಇವುಗಳು ಗುರುವಿನ ಮೂರು ಉಪಕರಣಗಳು". ಅರವಿಂದರ ಪ್ರಕಾರ ನಿಜವಾದ ಶಿಕ್ಷಕ ತನ್ನದೇ ಆದ ವಿಚಾರಗಳನ್ನು, ಎಲ್ಲವನ್ನೂ ಸ್ವೀಕರಿಸುವ ಕಲಿಕಾರ್ಥಿಯ ಮನಸ್ಸಿನ ಮೇಲೆ ಹೇರಲು ಇಷ್ಟಪಡುವುದಿಲ್ಲ. ಬದಲಾಗಿ ಆಂತರ್ಯದ ದಿವ್ಯತೆಯ ಆಶ್ರಯದಲ್ಲಿ ಬೆಳೆಯುವಂತಹ ಉತ್ಪನ್ನಕಾರಿ ವಿಚಾರಗಳನ್ನು ಮಾತ್ರ ಬೋಧಿಸುತ್ತಾನೆ. ಕೇವಲ ಬೋಧನೆಗಿಂತ ಕಲಿಕಾರ್ಥಿಯಲ್ಲಿ ಜಾಗೃತಿ ಮೂಡಿಸುವಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾನೆ. ಅಲ್ಲದೆ ಸಹಜ ಪ್ರಕ್ರಿಯೆ (Natural process) ಮತ್ತು ಮುಕ್ತ ವಿಕಾಸಗಳ ಮೂಲಕ ಕಲಿಕಾರ್ಥಿಯಲ್ಲಿರುವ ಮಾನಸಿಕ ಸಾಮರ್ಥ್ಯಗಳನ್ನು ಹಾಗೂ ಅನುಭವಗಳನ್ನು ಅಭಿವೃದ್ಧಿಗೊಳಿಸುವ ಕಡೆಗೆ ನಿಜವಾದ ಶಿಕ್ಷಕ ಗಮನವೀಯತ್ತಾನೆ. ಯಾವುದೇ ಕ್ರಮ ಅಥವಾ ವಿಧಾನವನ್ನು ಶಿಕ್ಷಕ ಸಹಾಯಕ ಉಪಕರಣದಂತೆ ವಿದ್ಯಾರ್ಥಿಗೆ ನೀಡಬೇಕೇ ಹೊರತು. ಒಂದು ವಿಧಿರೂಪದ ಸೂತ್ರದಂತೆ ಅಥವಾ ಸ್ಥಿರವಾದ ನಿಯತಕ್ರಮದಂತೆ ಆತನ ಮೇಲೆ ಹೇರಬಾರದು.

ಉದಾಹರಣೆ ಕೇವಲ ಬೋಧನೆಗಿಂತ ಹೆಚ್ಚು ಪರಿಣಾಮಕಾರಿ. ಉದಾಹರಣೆ ಎಂದರೆ ಬಾಹ್ಯ ಚಟುವಟಿಕೆಗಳ ಉದಾಹರಣೆಯಲ್ಲ ಬದಲಾಗಿ ಜೀವನದ ಆಂತರಿಕ ಪ್ರೇರಣೆ, ಆಂತರಿಕ ಚಟುವಟಿಕೆ ಹಾಗೂ ಆಂತರಿಕ ಸ್ಥಿತಿಗಳ ಉದಾಹರಣೆ. ಇವುಗಳಿಂದ ಶಿಕ್ಷಕನು ವಿದ್ಯಾರ್ಥಿಗಳಿಗೆ ಬೋಧಿಸಬೇಕು.

ಕಡೆಯದಾಗಿ, ಉದಾಹರಣೆಗಿಂತ ಪ್ರಭಾವ (influence) ಇನ್ನೂ ಹೆಚ್ಚು ಪರಿಣಾಮಕಾರಿ. ಶಿಕ್ಷಕನ ಅಂತಃಶಕ್ತಿ ಅಥವಾ ವಿದ್ಯಾರ್ಥಿಯೊಡನೆ ಇರುವ ಸಂಪರ್ಕ. ಶಿಕ್ಷಕನ ಮತ್ತು ವಿದ್ಯಾರ್ಥಿಯ ಅಂತರಂಗದ ನಿಕಟತೆ ಇವುಗಳಿಂದ ಪ್ರಭಾವವು ಹೊಮ್ಮುತ್ತದೆ. ಶಿಕ್ಷಕನು ತಾನು ಸ್ವತಃ ಏನಾಗಿದ್ದಾನೋ, ಏನೆಲ್ಲಾ ಹೊಂದಿದ್ದಾನೋ ಅದೆಲ್ಲವನ್ನು ಈ ಪ್ರಭಾವದ ಮೂಲಕ ವಿದ್ಯಾರ್ಥಿಯಲ್ಲಿ ತುಂಬುತ್ತಾನೆ. ಒಳ್ಳೆಯ ಶಿಕ್ಷಕ ಸ್ವತಃ ಸತತವಾಗಿ ವಿದ್ಯಾರ್ಥಿಯಾಗಿರುತ್ತಾನಲ್ಲದೆ ಆತನು ಮಕ್ಕಳಿಗೆ ಮಾರ್ಗದರ್ಶಿಯಂತಿರುವ ಮಗುವಿನಂತೆ, ಮತ್ತೊಂದು ದೀಪವನ್ನು ಹೊತ್ತಿಸುವ ದೀಪದಂತಿರುತ್ತಾನೆ.

**ಸಮಗ್ರ ಶಿಕ್ಷಣ:** ಅರವಿಂದರ ಸಮಗ್ರ ಶಿಕ್ಷಣದ ಕಲ್ಪನೆ ಭಾರತೀಯ ಯೋಗ ವಿಜ್ಞಾನದ ಮೇಲೆ ಆಧಾರಿತವಾಗಿದ್ದು ವ್ಯಕ್ತಿಯ ಸಂಪೂರ್ಣ ಹಾಗೂ ಸಮಗ್ರ ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡಿದೆ. ವ್ಯಾಪಕ ಅರ್ಥದಲ್ಲಿ, ಜೀವನವನ್ನೆದುರಿಸಲು ನಮ್ಮನ್ನು ಸಿದ್ಧಗೊಳಿಸುವುದು ಶಿಕ್ಷಣದ ಗುರಿಯಾಗಿರಬೇಕು ಎಂಬುದು ಅರವಿಂದರ ಅಭಿಪ್ರಾಯ. ಪ್ರಪಂಚಕ್ಕೆ ಸಮರ್ಪಿಸಲು ವ್ಯಕ್ತಿಯು ಹೊಂದಿರುವ ಅತ್ಯುತ್ತಮವೂ, ಮನೋಜ್ಞವೂ ಅದ್ವಿತೀಯವೂ ಆದದ್ದನ್ನು ವಿಕಾಸಗೊಳಿಸಲು ಶಿಕ್ಷಣವು ಸಹಾಯಕವಾಗಬೇಕು. ಅರವಿಂದರು ಒಂದೆಡೆ ಹೀಗೆ ಹೇಳಿದ್ದಾರೆ "ತಮ್ಮ ದಿವ್ಯ ಸ್ವಭಾವವನ್ನು ವ್ಯಕ್ತಗೊಳಿಸಲು ಸಿದ್ಧವಾಗಿರುವ ಪ್ರಾಮಾಣಿಕರೂ ಋಜುಸ್ವಭಾವದವರೂ ಆದ ಮನುಷ್ಯ ಜೀವಿಗಳಾಗಿ ವಿಕಸಿಸುವಲ್ಲಿ ಮಕ್ಕಳಿಗೆ ಶಿಕ್ಷಣವು ಸಹಾಯಕಾರಿಯಾಗಿರಬೇಕು."

ಅರವಿಂದರ ಸಮಗ್ರ ಶಿಕ್ಷಣದ ಬಗೆಗೆ ತಿಳಿಯಬೇಕಾದರೆ ಸ್ವಲ್ಪ ಮಟ್ಟಿಗೆ ಸಮಗ್ರ ಯೋಗದ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಸಮಗ್ರ ಯೋಗ ಅಥವಾ ಪೂರ್ಣಯೋಗವು ಜ್ಞಾನ, ಕರ್ಮ ಹಾಗೂ ಭಕ್ತಿ – ಈ ಮೂರು ಯೋಗಗಳ ಸಮನ್ವಯ. ಎಲ್ಲರಿಗೂ ತಿಳಿದಿರುವಂತೆ "ಯೋಗ" ಎಂದರೆ ಸೇರುವಿಕೆ, ಒಂದಾಗುವಿಕೆ. ನಮ್ಮ ಅಸ್ತಿತ್ವದ ಮೂಲದಲ್ಲಿ ಒಂದಾಗುವಿಕೆ. ಈ ಗುರಿಯನ್ನು ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗ, ರಾಜಯೋಗ ಮುಂತಾದ ಮಾರ್ಗಗಳಿಂದ ತಲುಪಬಹುದು. ಅರವಿಂದರ ಪ್ರಕಾರ ಇವುಗಳ ಸಮನ್ವಯ ರೂಪವಾದ ಸಮಗ್ರಯೋಗವು ನಮಗೆ ಈ ಎಲ್ಲಾ ಯೋಗಗಳಿಗಿಂತ ಅತಿ ಸಹಜ ದೃಷ್ಟಿಕೋನದಲ್ಲಿ ಯೋಗದ ಅರ್ಥವನ್ನು ನಮ್ಮ ಮುಂದಿಡುತ್ತದೆ. ಯೋಗ ಹಾಗೂ ಜೀವನದ ಸರಿಯಾದ ಅರ್ಥದಲ್ಲಿ ಸಮಸ್ತ ಜೀವನವು ಅರಿತೋ ಅರಿಯದೆಯೋ ಯೋಗವೇ ಆಗಿದೆ. ಅಂದರೆ ನಮ್ಮಲ್ಲಿ ಹುದುಗಿರುವ ಸಾಮರ್ಥ್ಯಗಳನ್ನು ವ್ಯಕ್ತಗೊಳಿಸಿ ಮತ್ತು ಮಾನವ ವ್ಯಕ್ತಿತ್ವವನ್ನು ಅಲೌಕಿಕ ವಿಶ್ವದ ಅಸ್ತಿತ್ವದಲ್ಲಿ ಒಂದಾಗಿಸುವ ಮೂಲಕ ಸ್ವ–ಸಂಪೂರ್ಣತೆಯತ್ತ (Self perfection) ನಡೆಯಲು ನಾವು ಕೈಗೊಳ್ಳುವ ಕ್ರಮಬದ್ಧ ಪ್ರಯತ್ನವೇ ಯೋಗ. ಯೋಗವು ಸಮಗ್ರವಾಗಬೇಕಾದರೆ ಒಂದೇ ಪರಮಶಕ್ತಿಯ ಸಾಂತ ಹಾಗೂ ಅನಂತ ಈ ಎರಡೂ ಮುಖಗಳನ್ನು ಇದರಿಂದ ಕಾಣಲು ಸಾಧ್ಯವಾಗಬೇಕು.

ಸಮಗ್ರ ಶಿಕ್ಷಣ ಮೇಲೆ ಹೇಳಿದ ಅರವಿಂದರ ಸಮಗ್ರಯೋಗಕ್ಕೆ ಅನುಸಾರವಾಗಿ ಇರುವುದು ನಮಗೆ ಕಂಡುಬರುತ್ತದೆ. ಜ್ಞಾನ ಹಾಗೂ ಸತ್ಯವನ್ನು ಅರಿಯುವ ದಾಹ, ಪೂರ್ಣತೆಯನ್ನು ಪಡೆಯುವ ಉತ್ಕಟೇಚ್ಛೆ ಮತ್ತು ಅಂತರ್ಗತ ಸದ್ಗುಣಗಳ ವಿಕಸನಗಳಲ್ಲಿ ಸಮಗ್ರ ಶಿಕ್ಷಣ ಹಾಗೂ ಸಮಗ್ರ ಯೋಗ –ಈ ಎರಡೂ ರೀತಿಗಳು ಪಥ ಪ್ರದರ್ಶಕವಾಗಿವೆ. ಮನುಷ್ಯನ ಸಮಗ್ರ ಯೋಗವು ಆತ್ಮಜ್ಞಾನದೆಡೆಗೆ ಒಯ್ಯುವುದರ ಜತೆಗೆ ಸ್ಥೂಲವಾಗಿ ಮನುಷ್ಯನ ಭೌತಿಕ, ಜೈವಿಕ ಮತ್ತು ಮಾನಸಿಕ ಮುಖಗಳನ್ನು ದೈಹಿಕ ಉಪಕರಣಗಳಾಗಿ ಪರಿವರ್ತಿಸುತ್ತದೆ. ಅದೇ ರೀತಿ ಸಮಗ್ರ

Digitised by Bharatavani, CIIL

ಶಿಕ್ಷಣವು ಮಕ್ಕಳಲ್ಲಿರುವ ಬಹುಮುಖ ಸಾಮರ್ಥ್ಯಗಳ ಸೃಷ್ಟಿಶೀಲ ಪೋಷಣೆಯ ಮೂಲಕ ಉನ್ನತ ಪ್ರಜ್ಞೆಯ ವಾಹಕಗಳನ್ನಾಗಿ ಪರಿವರ್ತಿಸುತ್ತದೆ.

ಸಮಗ್ರ ಶಿಕ್ಷಣವು ಮಾನವನನ್ನು ದೇಹ ಹಾಗೂ ಜೀವ–ಇವೆರಡರ ಅಸ್ಪಷ್ಟ ಸಂಯೋಗವೆಂದು ಪರಿಗಣಿಸುವುದಿಲ್ಲ. ಬದಲಾಗಿ ಮಾನವನನ್ನು ನಾಲ್ಕು ಪ್ರತ್ಯೇಕ ಮುಖಗಳಾದ ಭೌತಿಕ, ಜೈವಿಕ, ಮಾನಸಿಕ, ಆತ್ಮಿಕ ಎಂಬ ಈ ನಾಲ್ಕು ಪ್ರತ್ಯೇಕ ಮೂಲಗಳಿಂದ ಕೂಡಿದ ವ್ಯಕ್ತಿತ್ವ ಎಂದು ಪರಿಗಣಿಸುತ್ತದೆ. ಆದರ್ಶ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಯ ಈ ಮೇಲೆ ಹೇಳಿದ ನಾಲ್ಕು ಮುಖಗಳು ಸಾಧ್ಯವಾದಷ್ಟು ಮಟ್ಟಿಗೆ ವಿಕಾಸ ಹೊಂದುವುದಕ್ಕೆ ಹಾದಿಗಳನ್ನು ತೆರೆಯಬೇಕು. ಸರಿಯಾದ ಪರಿಸರದಲ್ಲಿ ಆತನ ಅಂತರಾತ್ಮವು ಆತನ ಅಂತರ್‌ಚೈತನ್ಯವು, ವ್ಯಕ್ತಿತ್ವದ ಇತರ ಮುಖಗಳನ್ನು ಅಂಕೆಯಲ್ಲಿಡಲು ಸಾಧ್ಯವಾಗುತ್ತದೆ. ಇದರಿಂದ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಸಾಮರಸ್ಯವನ್ನು ತರಲು ಸಾಧ್ಯ.

ಪ್ರತಿಯೊಂದು ಮಗು ಅಪೂರ್ವ, ಅದ್ವಿತೀಯ (Unique). ನಾವು ಕಾಣುವಂತೆ ಸೃಷ್ಟಿಯಲ್ಲಿ ವಿವಿಧತೆ ಮತ್ತು ಬಾಹುಳ್ಯ ಸಹಜ. ಆದ್ದರಿಂದ ವಿದ್ಯಾರ್ಥಿಗಳನ್ನು ಒಂದು ಗುಂಪನ್ನಾಗಿ ಮಾಡಿ ನಮ್ಮದೇ ಯಾಂತ್ರಿಕ ಅಳತೆಗೋಲನ್ನು ಇಡೀ ಗುಂಪಿಗೆ ಅನ್ವಯಿಸುವುದು ದೋಷಕರ, ಪ್ರತಿಯೊಬ್ಬನೂ ಸಾಧ್ಯತೆಗಳನ್ನು, ಹುದುಗಿದ ಸಾಮರ್ಥ್ಯಗಳನ್ನು, ಪ್ರತಿಭೆಗಳನ್ನು ಹೊಂದಿರುವನು. ಈ ಹುದುಗಿರುವ ಗುಣಗಳು ಅರಳಬೇಕಾದರೆ ತಕ್ಕುದಾದ ಪರಿಸರ ಹಾಗೂ ಅವಕಾಶಗಳನ್ನು ಒದಗಿಸಬೇಕು.

**ಅಧ್ಯಾತ್ಮಶಿಕ್ಷಣದ ಪರಿಕಲ್ಪನೆ :** ಅಧ್ಯಾತ್ಮ ಮತ್ತು ಧಾರ್ಮಿಕತೆ ಈ ಎರಡೂ ಪದಗಳ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ ಅಧ್ಯಾತ್ಮಿಕತೆಯನ್ನು ಧರ್ಮ ಹಾಗೂ ಧಾರ್ಮಿಕತೆ ಎಂದು ಅರ್ಥಮಾಡಿಕೊಳ್ಳುವುದುಂಟು. ಅಲ್ಲದೆ, ಅಧ್ಯಾತ್ಮ ಎಂದರೆ ಭೌತಿಕತೆಗೆ ವಿರುದ್ಧವಾದದ್ದು, ವಾಸ್ತವಿಕತೆಗೆ ವಿರುದ್ಧವಾದದ್ದು ಎಂದು ಅರ್ಥಮಾಡುವುದುಂಟು. ಈ ಅರ್ಥದಿಂದ ಅಧ್ಯಾತ್ಮ ಎಂದೊಡನೆ ಜನರಲ್ಲಿ ಪಾರಲೌಕಿಕತೆ, ವಿರಕ್ತಿ, ತಪಶ್ಚರ್ಯ ಮುಂತಾದವುಗಳ ಕಲ್ಪನೆ ಮೂಡುತ್ತದೆ. ಇದರ ಬಗ್ಗೆ ಅರವಿಂದರ ದೃಷ್ಟಿಕೋನವನ್ನು ನೋಡೋಣ.

ಅರವಿಂದರ ಪ್ರಕಾರ ಧಾರ್ಮಿಕತೆಗೆ ಎರಡು ಮುಖಗಳಿವೆ– ನಿಜವಾದ ಧರ್ಮ, ಮತ್ತೊಂದು ಧರ್ಮಾತಿರೇಕ. ಬುದ್ಧಿಗೆ ಅತೀತವಾದ ಭಾವಾತ್ಮಕ ಹಾಗೂ ವ್ಯಾವಹಾರಿಕ ಸತ್ತೆಗೂ ಆಚೆಯಿರುವ ಮತ್ತು ನೈತಿಕತೆಗೂ ಅತೀತವಾದ ಇರವಿನಲ್ಲಿ ಬದುಕಲು ಕಲಿಸುವ ಧರ್ಮವೇ ನಿಜವಾದ ಧರ್ಮ, ಅದೇ ಅಧ್ಯಾತ್ಮಿಕ ಧರ್ಮ. (Spiritual Religion) ಅಷ್ಟೇ ಅಲ್ಲ, ಉನ್ನತ ಜ್ಯೋತಿಯ ಹಾಗೂ ಚೈತನ್ಯದ ಶಕ್ತಿಯ ಸಹಾಯದಿಂದ ಕೆಳಗಿನ ಸತ್ತೆಗಳನ್ನು ಹತೋಟಿಯಲ್ಲಿಡಲು ಅಧ್ಯಾತ್ಮಿಕ ಧರ್ಮದಿಂದ ಸಾಧ್ಯ. ಇದಕ್ಕೆ ವಿರುದ್ಧವಾಗಿ ಧಾರ್ಮಿಕತೆಯಲ್ಲಿ ಬೌದ್ಧಿಕ ಸಿದ್ಧಾಂತ, ಆಚರಣೆಗಳು, ಕೆಲವು ಕಟ್ಟುನಿಟ್ಟಿನ ನೈತಿಕ ಸೂತ್ರಗಳು ಮುಂತಾದವುಗಳಿಗೆ ಒತ್ತನ್ನು ನೀಡಲಾಗುತ್ತದೆ. ಅರವಿಂದರು ಇವೆಲ್ಲವೂ ಅಪ್ರಯೋಜಕವೆಂದು ಪರಿಗಣಿಸುವುದಿಲ್ಲ. ಆದರೆ ಇವುಗಳಿಗೆ ತಮ್ಮದೇ ಆದ ಪರಿಮಿತಿಗಳಿವೆ. ಆದಾಗ್ಯೂ ಮಾನವನ ಕೆಳಗಿನ ಸತ್ತೆಗಳನ್ನು ಉದಾತ್ತೀಕರಿಸಲು ಇವು ಅವಶ್ಯಕ. ಆದರೆ ಧಾರ್ಮಿಕತೆ ಎಂದಿಗೂ ಸಾರಭೂತವಾದುದಲ್ಲ. ಅರವಿಂದರ ಪ್ರಕಾರ ಪ್ರಕೃತಿಯ ರಹಸ್ಯಗಳನ್ನು ಭೇದಿಸಿ ಅದರ ಶಕ್ತಿಗಳನ್ನು ತನ್ನ ಮುನ್ನಡೆಗಾಗಿ ಉಪಯೋಗಿಸುತ್ತಿರುವ ಮಾನವನಿಗೆ ಪ್ರಕೃತಿಯ ರಹಸ್ಯಗಳು ತಿಳಿದು ಬರುವುದಷ್ಟೇ ಅಲ್ಲದೆ ತನ್ನಲ್ಲಿರುವ ಅನಂತ ಸಾಮರ್ಥ್ಯದ ಅರಿವು ಸಹ ಉಂಟಾಗುತ್ತದೆ. ಆದ್ದರಿಂದ ತನ್ನನ್ನು ಕುರಿತು ಜ್ಞಾನದ ವಿಕಾಸ ಮತ್ತು ಪ್ರಕೃತಿಯನ್ನು ಕುರಿತ ಜ್ಞಾನದ ಬೆಳವಣಿಗೆ ಇವೆರಡೂ ಆತನ ಅಧ್ಯಾತ್ಮ ಅನ್ವೇಷಣೆಗೆ ವಿರೋಧವಿಲ್ಲ.

ಮತ್ತೊಂದು ಅಂಶವೆಂದರೆ ಜಡವೆಂದು ನಾವು ಕರೆಯುವ ವಸ್ತು ಅಂತರ್ಗತವಾದ ಸುಪ್ತಸ್ಥಿತಿಯಲ್ಲಿರುವ ಪ್ರಜ್ಞೆ ಅಥವಾ ಚೈತನ್ಯ. ನಮ್ಮ ಅಜ್ಞಾನದಿಂದಾಗಿ ಜಡ ಹಾಗೂ ಚೈತನ್ಯವನ್ನು ಬೇರೆ ಎಂದು ಪರಿಗಣಿಸುತ್ತೇವೆ.

ಅಧ್ಯಾತ್ಮ ಶಿಕ್ಷಣ ವ್ಯಕ್ತಿಗೆ ಸಹಜವಾಗಿಯೇ ಜಡ ಮತ್ತು ಚೈತನ್ಯವನ್ನು ಹೊಸ ಬೆಳಕಿನಲ್ಲಿ ಕಾಣಲು ನೆರವಾಗುತ್ತದೆ. ಭೌತಿಕ ಜೀವನ ಒಡ್ಡುವ ತೊಡಕುಗಳನ್ನು ಕಡೆಗಣಿಸದೆ ಅಥವಾ ಅಧ್ಯಾತ್ಮವನ್ನು ಪಲಾಯನವಾದದ ಪಾಠವೆಂಬಂತೆ ಕಾಣದೆ ಜಡ ಮತ್ತು ಚೈತನ್ಯದ ನಡುವಿನ ಸಂಬಂಧವನ್ನು ಅರಿಯಲು ಬೋಧಿಸುವುದೇ ನಿಜವಾದ ಅಧ್ಯಾತ್ಮಶಿಕ್ಷಣ. ಹೆಚ್ಚಿನ ಶ್ರದ್ಧೆಯಿಂದೊಡಗೂಡಿ ಸಮಗ್ರ ದೃಷ್ಟಿಕೋನದಿಂದ ಜೀವನವನ್ನೆದುರಿಸಲು ವಿದ್ಯಾರ್ಥಿಯನ್ನು ಸಿದ್ಧಗೊಳಿಸುವುದು ಅಧ್ಯಾತ್ಮ ಶಿಕ್ಷಣದ ಗುರಿ. ಜೀವನದ ತೊಡಕುಗಳನ್ನು ಕೇವಲ ಅದರ ಬಾಹ್ಯಲಕ್ಷಣಗಳಿಂದ ಮಾತ್ರ ಗುರುತಿಸದೆ ಅವುಗಳ ಆಳಕ್ಕಿಳಿದು ಅವುಗಳ ಹಿಂದಿರುವ ಶಕ್ತಿಗಳನ್ನು ಕಾಣಲು ಅಧ್ಯಾತ್ಮ ಶಿಕ್ಷಣದಿಂದ ಮಾತ್ರ ಸಾಧ್ಯ. ಇದರಿಂದಾಗಿ ವ್ಯಕ್ತಿಯು ಜೀವನವು ತಂದೊಡ್ಡುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಅಧ್ಯಾತ್ಮಿಕವಾಗಿ ವಿಕಾಸಗೊಳ್ಳಲು ಸಾಧ್ಯವಾಗುತ್ತದೆ.

ಒಂದೆಡೆ ಅರವಿಂದರು "ಸಮಸ್ತ ಜೀವನ, ಯೋಗವೇ ಆಗಿದೆ" ಎಂದು ಹೇಳಿ ಯೋಗದ ಪರಿಕಲ್ಪನೆಗೆ ಮೂಲಭೂತವಾದ ವಿಶಾಲ ಅರ್ಥವನ್ನು ನೀಡಿದ್ದಾರೆ. ಇದನ್ನೇ ಶಿಕ್ಷಣಕ್ಕೂ ಅನ್ವಯಿಸಬಹುದು. ಈ ಸಮಸ್ತ ಜೀವನವನ್ನು ಶಿಕ್ಷಣವೆಂಬಂತೆ ಕಾಣಲು ಸಾಧ್ಯ. ಅರವಿಂದರ ಶಿಷ್ಯೆಯಾದ ಮದರ್ (ಪೂರ್ವನಾಮ ಮಿರಾ ರಿಚರ್ಡ್ಸ್) ಅವರು ಸಮಗ್ರ ಶಿಕ್ಷಣ ಮತ್ತು ಅಧ್ಯಾತ್ಮ ಶಿಕ್ಷಣದ ಬಗೆಗೆ ಸಾಕಷ್ಟು ಆಸಕ್ತಿ ವಹಿಸಿ ಅವುಗಳ ಸರಿಯಾದ ಅರ್ಥವನ್ನು ತಿಳಿಸಿದ್ದಾರೆ. ಅವರ ಪ್ರಕಾರ ಭಾರತ ತನ್ನಲ್ಲಿ ಅಪಾರ ಅಧ್ಯಾತ್ಮಿಕ ಜ್ಞಾನವನ್ನು ಹೊಂದಿತ್ತು, ಈಗಲೂ ಹೊಂದಿದೆ. ಆದರೆ ಅದರ ಭೌತಿಕ ಜ್ಞಾನ ಪರಿಮಿತ. ಪಾಶ್ಚಾತ್ಯ ದೇಶಗಳು ಅಪಾರ ಭೌತಿಕ ಜ್ಞಾನವನ್ನು ಹೊಂದಿವೆಯಾದರೂ ಅಧ್ಯಾತ್ಮಜ್ಞಾನದಲ್ಲಿ ಹಿಂದುಳಿದಿವೆ. ಆದ್ದರಿಂದ ಸಂಪೂರ್ಣ ವಿಕಸಿತವಾದ ಜಡದ ಮೇಲೆ ಚೈತನ್ಯದ ಅಂಕುಶವನ್ನಿಡುವ ಕಲೆಯನ್ನು ಸಮಗ್ರ ಶಿಕ್ಷಣದಿಂದ ಕಲಿಯಬಹುದು.

ಶ್ರೀ ಅರವಿಂದರ ಸಮಗ್ರಯೋಗ ಮತ್ತು ಸಮಗ್ರ ಶಿಕ್ಷಣದ ಆಳವಾದ ಅಧ್ಯಯನವನ್ನು ಕೈಗೊಂಡಾಗ ನಮಗೆ ಕೆಲವು ಮುಖ್ಯ ಅಂಶಗಳು ಕಂಡುಬರುತ್ತವೆ.

1. ನಿಜವಾದ ಶಿಕ್ಷಣ ಎಂದರೆ ವಿದ್ಯಾರ್ಥಿಯ ಸರ್ವತೋಮುಖ ವಿಕಾಸ– ಅಂದರೆ ಭೌತಿಕ, ಮಾನಸಿಕ, ಜೈವಿಕ, ಅಧ್ಯಾತ್ಮಿಕ ಸ್ತರಗಳ ವಿಕಾಸ.

2. ನಿಜವಾದ ಶಿಕ್ಷಣದ ಗುರಿ ಅಂತಿಮವಾಗಿ ನಮ್ಮಲ್ಲಿರುವ ದಿವ್ಯತೆಯನ್ನು ಕಂಡುಕೊಂಡು ಅದರ ಬೆಳಕಿನಲ್ಲಿ ಜಡಾತ್ಮಕವಾದ ಭೌತಿಕ, ಮಾನಸಿಕ, ಜೈವಿಕ ಸ್ತರಗಳ ಕ್ರಿಯೆಗಳನ್ನು ವಿಕಸಿಸುವುದೇ ಆಗಿದೆ.

3. ಜ್ಞಾನದ ಏಕತೆ ಮತ್ತು ಅದರ ಅರ್ಥದ ಅನ್ವೇಷಣೆ.

– ಬಿ.ಎಂ.ಚಂ.

Digitised by Bharatavani, CIIL

## ಅವಧಾನ

ಮಾನವನ ಮನಸ್ಸು ಚಂಚಲವಾದದ್ದು. ಹಲವಾರು ಸಮಯಗಳಲ್ಲಿ ಅದನ್ನು ಕೇಂದ್ರೀಕರಣಗೊಳಿಸಬೇಕಾಗುತ್ತದೆ. ಹೀಗೆ ಒಂದು ವಿಷಯದ ಬಗ್ಗೆ ಅಥವಾ ಪ್ರಸಂಗದ ಬಗ್ಗೆ ವ್ಯಕ್ತಿಯ ಮನೋಗತಿಯನ್ನು ವಿಷಯದ ಕಡೆಗೆ ಸಂಪೂರ್ಣವಾಗಿ ಕೇಂದ್ರೀಕರಣಗೊಳಿಸುವ ಕ್ರಿಯೆಗೆ ಅವಧಾನ ಎನ್ನುವರು. ಇಂಗ್ಲಿಷಿನಲ್ಲಿ ಇದಕ್ಕೆ "Attention" ಎನ್ನುವರು. ಅಂದರೆ ಮನಸ್ಸನ್ನು ಕೇಂದ್ರೀಕರಣಗೊಳಿಸುವುದು ಎಂದರ್ಥ.

ಕಲಿಯುವವನ ಗಮನ ಕಲಿಯುವ ವಸ್ತುವಿನ ಮೇಲೆ ಕೇಂದ್ರೀಕೃತವಾದರೆ ಕಲಿಕೆ ಸಿದ್ಧಿಸುತ್ತದೆ. ಹೀಗೆ ಗಮನಿಸುವಿಕೆಯನ್ನು ಅವಧಾನ ಎನ್ನುತ್ತೇವೆ. ನಮ್ಮ ಸುತ್ತಮುತ್ತಲಿನ ಅಸಂಖ್ಯಾತ ಪ್ರಚೋದನೆಗಳು ಪ್ರತಿ ಕ್ಷಣದಲ್ಲೂ ನಮ್ಮ ಜ್ಞಾನೇಂದ್ರಿಯಗಳ ಮೂಲಕ ಮಾಹಿತಿಗಳನ್ನು ಮೆದುಳಿಗೆ ಕಳುಹಿಸುತ್ತವೆ. ಆದರೆ ಅವೆಲ್ಲಾ ನಮ್ಮ ಗಮನಕ್ಕೆ ಬರುವುದಿಲ್ಲ. ಹೀಗೆ ಅಸಂಖ್ಯಾತ ಪ್ರಚೋದನೆಗಳಲ್ಲಿ ಕೆಲವನ್ನು ಮಾತ್ರ ನಮ್ಮ ಗಮನಕ್ಕೆ ಬರುವಂತೆ ಮಾಡುವ ಮನಸ್ಸಿನ ಸ್ಥಿತಿಯನ್ನು ಅವಧಾನ ಎನ್ನುತ್ತೇವೆ. ಉದಾಹರಣೆಗೆ : ಶಾಲೆಯ ಗಂಟೆ ಬಾರಿಸಿದಾಗ ವಿದ್ಯಾರ್ಥಿಗಳು ಪ್ರಾರ್ಥನೆಗೆ ಒಂದು ಕಡೆ ಸೇರುತ್ತಾರೆ. ನಂತರ ಅವರು ಅಲ್ಲಲ್ಲಿ ಮಾತನಾಡುವುದು, ಅಕ್ಕ ಪಕ್ಕ ನೋಡುವುದು ಇತ್ಯಾದಿ ಕ್ರಿಯೆಗಳಲ್ಲಿ ತೊಡಗುತ್ತಾರೆ. ತತ್‌ಕ್ಷಣದಲ್ಲಿ ದೈಹಿಕ ಶಿಕ್ಷಕರು (P.T. Teacher) "ಸಾವಧಾನ್" ಎಂದ ತಕ್ಷಣ ವಿದ್ಯಾರ್ಥಿಗಳು ಮೇಲಿನ ಕ್ರಿಯೆಗಳನ್ನು ತ್ಯಜಿಸಿ ದೈಹಿಕ ಶಿಕ್ಷಕರ ಕಡೆ ತಮ್ಮ ಗಮನಹರಿಸುತ್ತಾರೆ. ಈ ರೀತಿ ಗಮನಿಸುವಿಕೆಯನ್ನು ಅವಧಾನ ಎನ್ನುತ್ತೇವೆ.

ಬಗೆಬಗೆಯ ವಸ್ತುಗಳನ್ನು ನೋಡಿದಾಗ ಯಾವುದಾದರೂ ಒಂದು ವಸ್ತುವಿನಲ್ಲಿ ನಮ್ಮ ಪ್ರಜ್ಞೆಯನ್ನು ಕೇಂದ್ರೀಕರಿಸುವುದೇ ಅವಧಾನ. ಅವಧಾನ ಗ್ರಹಿಕೆಗೆ ಅಗತ್ಯವಾದ ಪೂರ್ವಸಿದ್ಧತಾಸ್ಥಿತಿ. ಅಂದರೆ ವ್ಯಕ್ತಿ ಕೆಲವು ಪ್ರಚೋದನೆಗಳಿಂದ ಪ್ರಚೋದಿಸಲ್ಪಡಲು ಮಾನಸಿಕವಾಗಿ ದೈಹಿಕವಾಗಿ ಸಿದ್ಧನಾಗಿರುವ ಸ್ಥಿತಿಯಾಗಿದೆ.

**ವ್ಯಾಖ್ಯೆ:** ಡಮ್‌ವಿಲ್ಲೆ (1938) ರವರ ಪ್ರಕಾರ "ಅವಧಾನವೆಂದರೆ ಒಂದು ವಸ್ತುವಿನ ಮೇಲೆ ಪ್ರಜ್ಞೆಯನ್ನು ಕೇಂದ್ರೀಕರಿಸುವುದು. ಎಲ್ಲ ಸೃಜನಾತ್ಮಕ ಚಟುವಟಿಕೆಗಳಲ್ಲಿಯೂ ಇದು ಅವಶ್ಯಕವಾದ ಅಂಶ."

ಜೆ.ಆರ್. ರಾಸ್ (1915) ರವರ ಪ್ರಕಾರ: "ನಮ್ಮ ಮನಸ್ಸಿನ ಎದುರಿಗೆ ವಸ್ತುವಿನ ಸ್ಪಷ್ಟ ಚಿತ್ರವನ್ನು ದೊರಕಿಸುವುದೇ ಅವಧಾನ."

ಶರ್ಮಾ ಆರ್.ಎನ್. (1967) ರವರ ಪ್ರಕಾರ: "ನಮ್ಮ ಪರಿಸರದಲ್ಲಿ ಅಸಂಖ್ಯಾತ ಪ್ರಚೋದನೆಗಳಿವೆ. ನಮ್ಮ ಅಭಿರುಚಿಗಳಿಗೆ ಅನುಗುಣವಾಗಿ ಯಾವುದಾದರೂ ಒಂದನ್ನು ಕಡ್ಡಾಯಗೊಳಿಸುವ ಮನಸ್ಸಿನ ಸ್ಥಿತಿಗೆ ಅವಧಾನ ಎನ್ನುತ್ತೇವೆ."

**ಅವಧಾನದ ಸ್ಥಿತಿ:** ಅವಧಾನವು ನಿರ್ದಿಷ್ಟ ವಸ್ತುವಿನ ಮೇಲೆ ಕೇಂದ್ರೀಕೃತವಾದಾಗ ವ್ಯಕ್ತಿ ಒಂದು ವಿಶಿಷ್ಟ ಶಾರೀರಿಕ, ಮಾನಸಿಕ ಉನ್ಮುಖ ಸ್ಥಿತಿಯಲ್ಲಿರುತ್ತಾನೆ. ಅವನ ಜ್ಞಾನೇಂದ್ರಿಯಗಳು ಆ ವಸ್ತುವಿನ ಕಡೆಗೆ ನಿರ್ದೇಶಿಸಲ್ಪಡುತ್ತವೆ. ರಕ್ತನಾಳಗಳು ಹಿಗ್ಗುತ್ತವೆ, ಮೆದುಳಿನ ವಿದ್ಯುತ್ ತರಂಗಗಳು ಬದಲಾಗುತ್ತವೆ, ಸ್ನಾಯುಗಳು ಬಿಗಿಯುತ್ತವೆ, ಹೃದಯದ ಬಡಿತ, ಉಸಿರಾಟದ ದರ ಕೂಡ ಬದಲಾಗುತ್ತದೆ. ಪ್ರಚೋದಿಸಲ್ಪಡಲು ಶರೀರವನ್ನು ಸಿದ್ಧಪಡಿಸುವುದು ಮತ್ತು ಚುರುಕಾಗಿ ಅನುಕ್ರಿಯೆ ತೋರಲು ವ್ಯಕ್ತಿಯನ್ನು ಸಿದ್ಧಪಡಿಸುವುದು ಈ ಬದಲಾವಣೆಗಳ ಉದ್ದೇಶ. ಈ ಮನೋಸನ್ನಾಹ ಗ್ರಹಿಕೆಗೆ ಅಗತ್ಯವಾದ ಸಿದ್ಧತೆ.

**ಅವಧಾನದ ಉದ್ದೇಶ:** ವಸ್ತುವಿಷಯ, ಸನ್ನಿವೇಶ, ಶಬ್ದ, ವಾಸನೆ, ರುಚಿ, ಸ್ಪರ್ಶ ಮುಂತಾದವುಗಳನ್ನು ಸ್ಪಷ್ಟವಾಗಿ ಪರಿಚಯಮಾಡಿ ಕೊಡುವುದು ಅವಧಾನದ ಉದ್ದೇಶ. ಇದಕ್ಕೆ ಏಕಾಗ್ರಚಿತ್ತ ಅತ್ಯವಶ್ಯಕ. ಉದಾಹರಣೆಗೆ, ಒಂದು ಟಾರ್ಚಿನ ಬೆಳಕನ್ನು ವಿಶಾಲವಾದ ಪ್ರದೇಶದತ್ತ ಹರಿಸಿದರೆ ಬೆಳಕು ಹರಡಿಹೋಗಿ ಅಲ್ಲಿರುವ ಯಾವ ವಸ್ತುವೂ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಬದಲಾಗಿ ಬೆಳಕನ್ನು ಒಂದು ನಿರ್ದಿಷ್ಟ ಪ್ರದೇಶದತ್ತ ಹರಿಬಿಟ್ಟರೆ ಅಲ್ಲಿರುವ ವಸ್ತುಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಆದ್ದರಿಂದ ಏಕಕಾಲದಲ್ಲಿ ಅನೇಕ ವಸ್ತುಗಳ ಕಡೆಗೆ ಗಮನಕೊಟ್ಟರೆ ಅವಧಾನ ಚದುರಿಹೋಗಿ ಅದರ ಶಕ್ತಿಗುಂದಿ ವಸ್ತುಗಳ ಬಿಂಬ ಮನಸ್ಸಿನಲ್ಲಿ ಪರಿಣಾಮಕಾರಿಯಾಗಿ ಮೂಡುವುದಿಲ್ಲ ಅದನ್ನು ಒಂದೇ ಅಂಶದ ಕಡೆಗೆ ಕೇಂದ್ರೀಕರಿಸಿದರೆ ಅದರ ಬಿಂಬ ಸ್ಪಷ್ಟವಾಗಿ ಮನಸ್ಸಿನಲ್ಲಿ ಮೂಡುತ್ತದೆ.

### ಅವಧಾನದ ಲಕ್ಷಣಗಳು

1. ಅವಧಾನವು ಅಸ್ಥಿರವಾದುದು. ಅಂದರೆ ಯಾವುದೇ ಒಂದು ವಸ್ತುವಿನ ಮೇಲೆ ಹೆಚ್ಚಿನ ಕಾಲದವರೆಗೆ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಿಲ್ಲ.
2. ವ್ಯಕ್ತಿಗಳು ಹೊಸ ವಸ್ತುವಿನ ಮೇಲೆ ಅವಧಾನವನ್ನು ಕೇಂದ್ರೀಕರಿಸುತ್ತಾರೆ.
3. ವ್ಯಕ್ತಿಗಳು ಸುಂದರವಾದ ಮತ್ತು ಬಣ್ಣದ ವಸ್ತುಗಳ ಮೇಲೆ ಮನಸ್ಸನ್ನು ಕೇಂದ್ರೀಕರಿಸುತ್ತಾರೆ.
4. ವ್ಯಕ್ತಿಗಳು ಏಕಕಾಲದಲ್ಲಿ ಎಲ್ಲ ವಸ್ತುಗಳ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಿಲ್ಲ.
5. ಅವಧಾನವು ಉದ್ದೇಶವುಳ್ಳದ್ದು. ಒಂದು ನಿರ್ದಿಷ್ಟ ಉದ್ದೇಶದಿಂದ ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸುತ್ತೇವೆ.

### ಅವಧಾನದ ವಿಧಗಳು




**I. ಅನೈಚ್ಛಿಕ ಅವಧಾನ/ಅಸಂಕಲ್ಪಿತ ಅವಧಾನ:** ಇದನ್ನು ಅಸಂಕಲ್ಪಿತ ಅವಧಾನವೆಂತಲೂ ಕರೆಯುತ್ತೇವೆ. ವ್ಯಕ್ತಿಗಳು ಯಾವುದೇ ಒಂದು ವಸ್ತುವಿನ ಮೇಲೆ ಸಹಜವಾಗಿ ಮನಸ್ಸನ್ನು ಕೇಂದ್ರೀಕರಿಸುವುದಕ್ಕೆ ಅನೈಚ್ಛಿಕ ಅವಧಾನವೆಂದು ಕರೆಯುತ್ತೇವೆ.

ಉದಾ: ತಾಯಿ ಮಗುವನ್ನು ಕಂಡಾಗ

ಮಗು ಬೊಂಬೆಯನ್ನು ಕಂಡಾಗ

ವಿದ್ಯಾರ್ಥಿಗಳು ಪಾಠ ಕೇಳುತ್ತಾ ಕುಳಿತಾಗ, ತಕ್ಷಣಕ್ಕೆ ಪ್ರಿನ್ಸಿಪಾಲರು ತರಗತಿಯಲ್ಲಿ ಬಂದರೆ ನಮ್ಮ ಗಮನ ಆ ಕಡೆ ಹೋಗುವುದು.

ಓದುತ್ತಿರುವಾಗ ಅಕಸ್ಮಾತ್ ಹೊರಗಿನ ಕರ್ಕಶ ಶಬ್ದ ಅಥವಾ ಮನೋಹರ ಸಂಗೀತ ಲಹರಿ ನಮ್ಮನ್ನು ಸೆಳೆಯುತ್ತದೆ.

**ಅನೈಚ್ಛಿಕ ಅವಧಾನದಲ್ಲಿ 2 ವಿಧಗಳು ಉಂಟಾಗಬಹುದು:**

1. ಒತ್ತಾಯಪೂರ್ವಕವಾಗಿ ಅವಧಾನ ನೀಡುವುದು ಮತ್ತು

Digitised by Bharatavani, CIIL

ಪ್ರಚೋದನೆಗಳಲ್ಲಿ ಉಂಟಾಗುವ ಬದಲಾವಣೆಗೆ ಸ್ವಯಂಪ್ರೇರಿತರಾಗಿ ಅವಧಾನ ನೀಡುವುದು.

1. **ಒತ್ತಾಯಪೂರ್ವಕ ಅವಧಾನ:** ವ್ಯಕ್ತಿಗಳನ್ನು ಒತ್ತಾಯಪೂರ್ವಕವಾಗಿ ಒಂದು ಕಡೆಗೆ ಗಮನ ಕೇಂದ್ರೀಕರಿಸುವಂತೆ ಮಾಡುವುದು ಒತ್ತಾಯಪೂರ್ವಕ ಅವಧಾನ. ಮಗು ಆಟವಾಡಲು ತೋರಿಸಿದ ಅವಧಾನವನ್ನು ಅವರ ತಾಯಿ ಲೆಕ್ಕ ಮಾಡಲು ತಿಳಿಸಿದಾಗ ಆಟವಾಡಲು ಇದ್ದ ಸಹಜ ಅವಧಾನವನ್ನು ಒತ್ತಾಯಪೂರ್ವಕವಾಗಿ ಮನಸ್ಸನ್ನು ಲೆಕ್ಕದ ಕಡೆ ಕೇಂದ್ರೀಕರಿಸುತ್ತಾನೆ. ಇದು ಒತ್ತಾಯಪೂರ್ವಕ ಅವಧಾನ.

2. **ಸ್ವಯಂಪ್ರೇರಿತ ಅವಧಾನ:** ಪರಿಸರದಲ್ಲಿ ಉಂಟಾಗುವ ಪ್ರಚೋದನೆಗಳ ತತ್‍ಕ್ಷಣದ ಬದಲಾವಣೆಯಿಂದಾಗಿ ಸ್ವಯಂಪ್ರೇರಿತವಾಗಿ ಅದರ ಕಡೆ ಗಮನಹರಿಸುವುದು ಸ್ವಯಂಪ್ರೇರಿತ ಅವಧಾನವೆನ್ನಿಸುತ್ತದೆ.

**II. ಐಚ್ಛಿಕ ಅವಧಾನ:** ವ್ಯಕ್ತಿಗಳಲ್ಲಿ ಯಾವುದೇ ಒಂದು ವಸ್ತುವಿನ ಮೇಲೆ ಇಚ್ಛೆ ಪಟ್ಟು ಮನಸ್ಸನ್ನು ಕೇಂದ್ರೀಕರಿಸುವುದಕ್ಕೆ ಐಚ್ಛಿಕ ಅವಧಾನ ಎನ್ನುತ್ತೇವೆ. ಇದು ವ್ಯಕ್ತಿಗಳ ಉದ್ದೇಶ, ಆಸಕ್ತಿ, ಪ್ರೇರಣೆ ಮತ್ತು ಸ್ವಇಚ್ಛೆಗಳನ್ನು ಅವಲಂಬಿಸಿರುತ್ತದೆ. ಇದರಲ್ಲಿ ಸ್ಪಷ್ಟ ಅವಧಾನ, ಸೂಚಿತ ಅವಧಾನ ಎಂದು ಎರಡು ವಿಧಗಳಿವೆ.

1. **ಸ್ಪಷ್ಟ ಅವಧಾನ:** ವ್ಯಕ್ತಿಗಳು ಯಾವುದೇ ಒಂದು ಕಾರ್ಯವನ್ನು ಕೈಗೊಂಡಾಗ ತೋರುವ ಸ್ಪಷ್ಟ ಮತ್ತು ದೃಢ ನಿರ್ಧಾರಿತ ಅವಧಾನವನ್ನು ಸ್ಪಷ್ಟ ಅವಧಾನ ಎನ್ನುತ್ತೇವೆ. ಪರೀಕ್ಷೆಗೆ ಓದುವಾಗ, ಪರೀಕ್ಷೆಯಲ್ಲಿ ಉತ್ತರಿಸುವಾಗ ವಿದ್ಯಾರ್ಥಿಗಳು ಸ್ಪಷ್ಟರೂಪದಲ್ಲಿ ನಿರ್ದಿಷ್ಟ ವಿಷಯ (ಪ್ರಶ್ನೆ)ಗಳ ಕಡೆಗೆ ಗಮನ ಕೇಂದ್ರೀಕರಿಸಬೇಕಾಗುತ್ತದೆ.

2. **ಸೂಚಿತ ಅವಧಾನ:** ಈ ಅವಧಾನವು ವ್ಯಕ್ತಿಗಳು ಹೊರಗಣ ಸೂಚನೆಯಂತೆ ಒಂದು ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಪ್ರಭಾವ ಬೀರುತ್ತದೆ. ಉಪಾಧ್ಯಾಯರು ಸೂಚಿಸಿದ ಪ್ರಚೋದನೆಗಳಿಗೆ ಅವಧಾನ ನೀಡುತ್ತಾರೆ.

ಅವಧಾನವನ್ನು ಅನೇಕ ಅಂಶಗಳು ನಿರ್ಧರಿಸುತ್ತವೆ. ಈ ಅಂಶಗಳನ್ನು ಬಾಹ್ಯ ಮತ್ತು ಆಂತರಿಕ ಅಂಶಗಳೆಂದೂ, ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಅಂಶಗಳೆಂದೂ ವಿಂಗಡಿಸಬಹುದು. ಬಾಹ್ಯ ಅಥವಾ ವಸ್ತುನಿಷ್ಠ ಅಂಶಗಳು ಪ್ರಚೋದನೆಗಳಿಗೆ ಸಂಬಂಧಿಸಿವೆ. ಪ್ರಚೋದನೆಗಳ ನಾವೀನ್ಯತೆ, ಪ್ರಬಲತೆ, ತತ್‍ಕ್ಷಣದಲ್ಲಿ ಉಂಟಾಗುವ ಬದಲಾವಣೆ, ಗಾತ್ರ, ಬಣ್ಣ, ವಾಸನೆ, ಧ್ವನಿ ಪುನರಾವರ್ತನೆ ಮುಂತಾದ ವ್ಯತ್ಯಾಸದಂಥ ಪ್ರಚೋದನೆ ಲಕ್ಷಣಗಳು ಬಾಹ್ಯ ನಿರ್ಧಾರಕಗಳಾಗುತ್ತವೆ. ಆಂತರಿಕ ಅಥವಾ ವ್ಯಕ್ತಿನಿಷ್ಠ ಅಂಶಗಳು ಅವಧಾನ ನೀಡುವ ವ್ಯಕ್ತಿಯ ಆಂತರಿಕ ಮನಃಸ್ಥಿತಿಗೆ ಸಂಬಂಧಿಸಿವೆ. ಉದ್ದೇಶ, ಆಸಕ್ತಿ, ಅಗತ್ಯತೆಯ ಪ್ರಬಲತೆ, ಪ್ರೇರಣೆ ಆಂತರಿಕ ನಿರ್ಧಾರಕಗಳೆನಿಸುತ್ತವೆ. ಬಾಹ್ಯ ನಿರ್ಧಾರಕಗಳು ವ್ಯಕ್ತಿಯ ಅವಧಾನ ಸೆಳೆಯಲು ಸಹಾಯವಾಗುತ್ತವೆ. ಅವಧಾನದ ಪ್ರಬಲತೆ, ಅವಧಿ ಆಂತರಿಕ ನಿರ್ಧಾರಕಗಳನ್ನು ಅವಲಂಬಿಸಿವೆ.

ಏಕಕಾಲದಲ್ಲಿ ಅವಧಾನವನ್ನು ಬೇರೆ ಬೇರೆ ಪ್ರಚೋದನ ಪರಿಸ್ಥಿತಿಗಳಿಗೆ ಅಥವಾ ಕಾರ್ಯಗಳಿಗೆ ಸಮನಾಗಿ ಹಂಚಲು ಸಾಧ್ಯವೇ ಎನ್ನುವುದು ಒಂದು ವಿವಾದಾಂಶವಾಗಿದೆ. ಚಕ್ರವರ್ತಿ ನೆಪೋಲಿಯನ್ನನು ತನ್ನ ಅವಧಾನವನ್ನು ಸಮನಾಗಿ ಬೇರೆ ಬೇರೆ ಕಾರ್ಯಗಳಿಗೆ ಏಕಕಾಲದಲ್ಲಿ ಹಂಚಬಲ್ಲವನಾಗಿದ್ದ ಎಂದು ಹೇಳಲಾಗುತ್ತದೆ. ಪ್ರಯೋಗಗಳಿಂದ ಇದು ಸಂಪೂರ್ಣವಾಗಿ ಸಾಧ್ಯವಾಗುವುದಿಲ್ಲ ಎಂದು ಕಂಡುಬಂದಿದೆ. ಆದರೆ ವಾಸ್ತವಾಂಶ ಬೇರೆಯೇ ಇದೆ. ಎರಡು ಕಾರ್ಯಗಳಲ್ಲಿ ಒಂದು ಯಾಂತ್ರಿಕ ರೂಪದ್ದಾಗಿದ್ದರೆ ಅವಧಾನ ವಿಭಜನೆ ಸಾಧ್ಯವಾಗುತ್ತದೆ. ಉದಾಹರಣೆಗೆ, ಸೈಕಲ್ ತುಳಿಯುತ್ತ ಚರ್ಚಿಸಲು ಸಾಧ್ಯ. ಆದರೆ ಎರಡು ಕಾರ್ಯಗಳು ಹೊಸದಾಗಿದ್ದು, ಮಾನಸಿಕ ಸ್ವರೂಪದವುಗಳಾದರೆ ಅವಧಾನ ವಿಭಜನೆ ಸಾಧ್ಯವಾಗುವುದಿಲ್ಲ. ಆಗ ಅವಧಾನವನ್ನು ಒಂದು ಕಾರ್ಯದಿಂದ ಮತ್ತೊಂದು ಕಾರ್ಯಕ್ಕೆ ತಾತ್ಕಾಲಿಕವಾಗಿ ಬದಲಾಯಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದಲ್ಲಿ ಕಾರ್ಯದಲ್ಲಿ ವಿಳಂಬ ದೋಷಗಳು ಉಂಟಾಗುತ್ತವೆ. ಹೀಗೆ ಅವಧಾನವನ್ನು ಬದಲಾಯಿಸಿಕೊಳ್ಳುವುದಕ್ಕೆ ಅವಧಾನಪಲ್ಲಟ ಎಂದು ಹೆಸರು.

ಅವಧಾನ ಪಲ್ಲಟ ಬಾಹ್ಯ ಅಂಶಗಳಿಂದ ಉಂಟಾಗುತ್ತದೆ. ನಾವು ಒಂದು ಕಾರ್ಯದ ಕಡೆಗೆ ಗಮನ ನೀಡಿದಾಗ ಹೊರಗಡೆ ಪ್ರಚೋದನ ಪರಿಸ್ಥಿತಿಯಲ್ಲಿ ಉಂಟಾಗುವ ಅನಿರೀಕ್ಷಿತ ಬದಲಾವಣೆ (ಜೋರಾದ ಶಬ್ದ, ಪ್ರಖರ ಬೆಳಕು ಇತ್ಯಾದಿ) ನಾವು ಅವಧಾನ ಪಲ್ಲಟಗೊಳಿಸುವಂತೆ ಮಾಡುತ್ತದೆ. ಇದೇ ರೀತಿ ಆಂತರಿಕ, ವ್ಯಕ್ತಿಗತ ಅಂಶಗಳಿಂದಲೂ ಅವಧಾನ ಪಲ್ಲಟಗೊಳ್ಳುತ್ತದೆ. ವ್ಯಕ್ತಿಯಲ್ಲಿ ಮಾನಸಿಕ ಆತಂಕ ಉಂಟಾದರೆ, ಆಸಕ್ತಿ ಕಡಿಮೆಯಾದರೆ, ಬೇರೆ ಪ್ರೇರಣೆಗಳು ಪ್ರಬಲವಾದರೆ, ಕಾರ್ಯದಲ್ಲಿ ಕಠಿಣತೆ ಎದುರಾದರೆ ವ್ಯಕ್ತಿಯ ಅವಧಾನ ಪಲ್ಲಟಗೊಳ್ಳುತ್ತದೆ.

ಅವಧಾನ, ಆಸಕ್ತಿ (ಅಭಿರುಚಿ) ಮತ್ತು ಪ್ರಯತ್ನಗಳ ನಡುವೆ ಸಂಬಂಧವಿದೆ. ಆಸಕ್ತಿ ಹೆಚ್ಚಾಗಿದ್ದರೆ ಅವಧಾನ ನೀಡುವುದು ಸುಲಭವಾಗುತ್ತದೆ. ನಮಗೆ ಆಸಕ್ತಿ ಇರುವ ಕಾರ್ಯಗಳ ಪ್ರಚೋದನೆಗಳ ಕಡೆಗೆ ನಮ್ಮ ಅವಧಾನ ಸಹಜವಾಗಿಯೇ ಕೇಂದ್ರೀಕೃತವಾಗುತ್ತದೆ. ಆಸಕ್ತಿಯಿಲ್ಲದಿದ್ದಲ್ಲಿ ಗಮನ ಕೇಂದ್ರೀಕರಿಸುವುದು ಕಷ್ಟವಾಗುತ್ತದೆ. ಪ್ರಯತ್ನಪೂರ್ವಕವಾಗಿ ಅವಧಾನ ಕೇಂದ್ರೀಕರಿಸುವುದು ಸ್ವಲ್ಪ ಕಷ್ಟವೆನಿಸಿದರೂ ಅದು ಸಾಧ್ಯವಾಗುತ್ತದೆ. ವ್ಯಕ್ತಿಯಲ್ಲಿ ದೃಢ ನಿರ್ಧಾರವಿದ್ದಲ್ಲಿ ಪ್ರೇರಣೆ ಪ್ರಬಲವಾಗಿದ್ದಲ್ಲಿ, ಉದ್ದೇಶ ಮಹತ್ವಪೂರ್ಣವಾಗಿದ್ದಲ್ಲಿ ಪ್ರಯತ್ನಪೂರ್ವಕವಾಗಿ ಅವಧಾನ ಕೇಂದ್ರೀಕರಿಸುವುದು ಸಾಧ್ಯವಾಗುತ್ತದೆ.

ಏಕಕಾಲದಲ್ಲಿ ನಾವು ಎಷ್ಟು ಪ್ರಚೋದನೆಗಳಿಗೆ ಅವಧಾನ ನೀಡಬಹುದು ಎನ್ನುವುದನ್ನು ಪ್ರಾಯೋಗಿಕವಾಗಿ ನಿರ್ಧರಿಸಲಾಗಿದೆ. ಇದಕ್ಕೆ 'ಅವಧಾನ ವ್ಯಾಪ್ತಿ' (Span of Attention) ಎಂದು ಕರೆದಿದ್ದಾರೆ. ಪ್ರಯೋಗಗಳಿಂದ ನಾವು ಏಕಕಾಲದಲ್ಲಿ 7 ಪ್ರಚೋದನ ಘಟಕಗಳನ್ನು ಗಮನಿಸಲು ಸಾಧ್ಯವಿದೆ ಎಂದು ಕಂಡು ಬಂದಿದೆ. ಘಟಕಗಳು ಏಳಕ್ಕಿಂತ ಹೆಚ್ಚಾದರೆ ಕೆಲವು ನಮ್ಮ ಅವಧಾನ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಪ್ರಚೋದನ ಘಟಕಗಳು ಅರ್ಥಪೂರ್ಣವಾಗಿದ್ದರೆ (ಅರ್ಥಪೂರ್ಣ ಪದಗಳು, ಪರಿಚಿತ ಸಂಖ್ಯಾ ಸಮೂಹಗಳು) ಮತ್ತು ಅವುಗಳನ್ನು ಅರ್ಥಪೂರ್ಣವಾಗಿ ವರ್ಗೀಕರಿಸಿಕೊಂಡರೆ ಏಳಕ್ಕಿಂತ ಹೆಚ್ಚು ಪ್ರಚೋದನೆಗಳನ್ನು ಅವಧಾನ ವ್ಯಾಪ್ತಿಯಲ್ಲಿ ತರಲು ಸಾಧ್ಯವಾಗುತ್ತದೆ.

ನಮ್ಮಲ್ಲಿ ಏಕಕಾಲದಲ್ಲಿ ಉಂಟಾಗುವ ಅರಿವಿನ (ಸಂಜ್ಞಾನ) ವ್ಯಾಪ್ತಿಗೂ, ಅವಧಾನಕ್ಕೂ ಸಂಬಂಧವಿದೆ. ಪರಿಸರದ ಕಡೆಗೆ ಒಮ್ಮೆ ದೃಷ್ಟಿಹಾಯಿಸಿದಾಗ ಅನೇಕ ಪ್ರಚೋದನೆಗಳು ನಮ್ಮ ಒಂದು ಸಂಜ್ಞಾನ (ಅರಿವಿನ) ಕ್ರಿಯೆಯಲ್ಲಿ ಬರುತ್ತವೆ. ಅವುಗಳಲ್ಲಿ ಕೆಲವು ಮಾತ್ರ ಅರಿವಿನ ವ್ಯಾಪ್ತಿಯ ಕೇಂದ್ರದಲ್ಲಿ ಬರುತ್ತವೆ. ಇವುಗಳ ಮೇಲೆ ನಾವು ಅವಧಾನ ಕೇಂದ್ರೀಕರಿಸುತ್ತೇವೆ. ಉಳಿದ ಪ್ರಚೋದನೆಗಳು ಅರಿವಿನ ಪರಿಧಿಯ ಅಂಚಿನಲ್ಲಿದ್ದು ಪೂರ್ಣವಾಗಿ ನಮ್ಮ ಅವಧಾನಕ್ಕೆ ಬರದೆ ಹೊರಗುಳಿದಿರುತ್ತವೆ. ಅವುಗಳನ್ನು ನಾವು ಅಸ್ಪಷ್ಟವಾಗಿ ನೋಡಿರುತ್ತೇವೆ. ಇನ್ನುಳಿದ ಅಸಂಖ್ಯಾತ ಪ್ರಚೋದನೆಗಳು ನಮ್ಮ ಅರಿವಿನ ವ್ಯಾಪ್ತಿಯ ಹೊರಗೇ ಉಳಿಯುತ್ತವೆ.

–ಹೂ.ಗಾ.

Digitised by Bharatavani, CIIL

## ಅವಲಂಬನ ಸಿದ್ಧಾಂತ

ಅವಲಂಬನ ಸಿದ್ಧಾಂತ (Dependent Theory) ಎಂಬುದು ಸಮಾಜವಿಜ್ಞಾನದ ಸಿದ್ಧಾಂತಗಳಲ್ಲಿ ಒಂದು. ಸುತ್ತಲಿರುವ ಬಡ ಹಾಗೂ ಪ್ರಗತಿ ಹೊಂದದಿರುವ ರಾಷ್ಟ್ರಗಳ ಪರಿಧಿಯಿಂದ ಕೇಂದ್ರದ ಶ್ರೀಮಂತ ರಾಷ್ಟ್ರಗಳಿಗೆ ಸಂಪನ್ಮೂಲ ಹರಿದುಬರುತ್ತದೆ. ಬಡರಾಷ್ಟ್ರಗಳ ಕಾರಣದಿಂದಾಗಿ ಶ್ರೀಮಂತ ರಾಷ್ಟ್ರಗಳು ಮತ್ತೂ ಶ್ರೀಮಂತವಾಗುತ್ತವೆ. ಇದರಿಂದಾಗಿ ಒಟ್ಟು ಜಾಗತಿಕ ವ್ಯವಸ್ಥೆಯಲ್ಲಿ ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳನ್ನು ಶಕ್ತಿಹೀನವಾಗಿಸುತ್ತವೆ ಎಂಬುದು ಈ ಸಿದ್ಧಾಂತದ ವಿಚಾರಧಾರೆ.

ಈ ಸಿದ್ಧಾಂತವು ಸುಮಾರು 1960ರ ವೇಳೆಗೆ ಹುಟ್ಟಿಕೊಂಡಿತು. ಎಲ್ಲ ಸಮಾಜಗಳೂ ಸಮಾನ ಹಂತಗಳಲ್ಲಿ ಬೆಳವಣಿಗೆ ಹೊಂದುತ್ತವೆ ಎಂಬ ವಾದಕ್ಕೆ ಪ್ರತಿಕ್ರಿಯೆಯಾಗಿ ಮೂಡಿಬಂದ ವಾದವಿದು. ಹಿಂದಿನ ವಾದದ ಪ್ರಕಾರ ಇಂದು ಪ್ರಗತಿ ಹೊಂದಿಲ್ಲದ ರಾಷ್ಟ್ರಗಳು ಹಿಂದೊಂದು ದಿನ ಇಂದಿನ ಪ್ರಗತಿ ಹೊಂದಿದ ರಾಷ್ಟ್ರಗಳ ಮಟ್ಟದಲ್ಲೇ ಇದ್ದವು. ಇಂದು ಪ್ರಗತಿ ಹೊಂದಿಲ್ಲದ ರಾಷ್ಟ್ರಗಳನ್ನು ಪ್ರಗತಿಪಥದಲ್ಲಿ ತರಬೇಕಾದರೆ ಎಲ್ಲ ಪ್ರಗತಿ ಹೊಂದಿದ ರಾಷ್ಟ್ರಗಳು ಒಳಗಾದ ಪ್ರಕ್ರಿಯೆಗೆ ಬಂಡವಾಳ ಹೂಡಿಕೆ, ತಂತ್ರಜ್ಞಾನ ವರ್ಗಾವಣೆ, ಜಾಗತಿಕ ಮಾರುಕಟ್ಟೆಯಲ್ಲಿ ಭಾಗವಹಿಸುವಿಕೆ– ಈ ರಾಷ್ಟ್ರಗಳನ್ನೂ ಒಳಗುಮಾಡಬೇಕು. ಈ ವಾದವನ್ನು ಅವಲಂಬನ ಸಿದ್ಧಾಂತವು ತಳ್ಳಿಹಾಕುತ್ತದೆ. ಅವಲಂಬನ ಸಿದ್ಧಾಂತದ ಪ್ರಕಾರ ಪ್ರಗತಿ ಹೊಂದಿದ ರಾಷ್ಟ್ರಗಳು ಪ್ರಗತಿಹೊಂದದ ರಾಷ್ಟ್ರಗಳ ಪ್ರಾಚೀನ ರೂಪ ಮಾತ್ರವಲ್ಲ, ಅವುಗಳಿಗೆ ಅನನ್ಯವಾದ ರಚನೆಗಳೂ ಲಕ್ಷಣಗಳೂ ಇವೆ. ಎಲ್ಲಕ್ಕಿಂತ ಮುಖ್ಯವಾಗಿ ಜಾಗತಿಕ ಮಾರುಕಟ್ಟೆಯ ಆರ್ಥಿಕತೆಯಲ್ಲಿ ಈ ದೇಶಗಳು ಸಡಿಲವಾದ ಹಾಗೂ ಬಲಹೀನವಾದ ರಾಷ್ಟ್ರಗಳಾಗಿವೆ. ಆದರೆ ಇಂದು ಪ್ರಗತಿ ಹೊಂದಿರುವ ರಾಷ್ಟ್ರಗಳು ಎಂದೂ ಇಂದಿನ ಪ್ರಗತಿ ಹೊಂದದ ರಾಷ್ಟ್ರಗಳನ್ನು ಹೋಲುವ ಸ್ಥಿತಿಯಲ್ಲಿರಲಿಲ್ಲ. ಆ ರಾಷ್ಟ್ರಗಳು ಅವುಗಳಿಗಿಂತ ಶಕ್ತಿಯುತವಾದ ರಾಷ್ಟ್ರ/ರಾಷ್ಟ್ರಗಳ ಅಧೀನದಲ್ಲಿದ್ದುದೇ ಇಲ್ಲ. ಇದಲ್ಲದೆ ಮುಕ್ತಮಾರುಕಟ್ಟೆಯ ಪರ ವಾದಿಸುವ ಅರ್ಥಶಾಸ್ತ್ರಜ್ಞರಿಗೆ ಭಿನ್ನವಾದ ವಾದವನ್ನು ಅವಲಂಬನ ಸಿದ್ಧಾಂತ ಮಂಡಿಸುತ್ತದೆ. ಪ್ರಗತಿ ಹೊಂದದ ರಾಷ್ಟ್ರಗಳು ಅವುಗಳದ್ದೇ ಆದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಲುವಾಗಿ ಬಾಹ್ಯ ಒತ್ತಡಗಳಿಂದ ದೂರವಿರುವ, ತಮ್ಮದೇ ಆದ ಮಾರ್ಗಗಳನ್ನು ಕಂಡುಕೊಳ್ಳಬೇಕಾಯಿತು. ಈ ನಿಟ್ಟಿನಲ್ಲಿ ಅವು ಜಾಗತಿಕ ಮಾರುಕಟ್ಟೆಯ ಜೊತೆಗಿನ ತಮ್ಮ ಸಂಬಂಧಗಳನ್ನು ಸಡಿಲಿಸಿಕೊಳ್ಳಬೇಕಾಯಿತು.

ರಾಷ್ಟ್ರರಾಷ್ಟ್ರಗಳ ನಡುವೆ ಮಾತನಾಡುವಾಗ ಉಳ್ಳ ರಾಷ್ಟ್ರಗಳು ಇಲ್ಲದ ರಾಷ್ಟ್ರಗಳ ಮೇಲೆ ಮಾಡುವ ದಬ್ಬಾಳಿಕೆ ಮತ್ತು ಉಳ್ಳ ದೇಶಗಳು ಆಂತರಿಕವಾಗಿಯೂ ಇಲ್ಲದವರ ಮೇಲೆ ಮಾಡುವ ದಬ್ಬಾಳಿಕೆಯ ಪರಿಣಾಮವಾಗಿ ಪ್ರಪಂಚದಲ್ಲಿ ಪ್ರಸ್ತುತ ಸ್ಥಿತಿ ಉಂಟಾಗಿದೆ ಎಂಬುದು ಅವಲಂಬನ ಸಿದ್ಧಾಂತದ ವಾದ. ಇದು ಹೊಸ ಆಲೋಚನೆ ಅಥವಾ ಅಭಿಪ್ರಾಯವೇನೂ ಅಲ್ಲ. ಅನೇಕ ಅಂಶಗಳ ಅಧ್ಯಯನದಿಂದ ದೃಢಪಡುವಂತೆ ಅಧಿಕಾರ ಮಾಡುವವರು ಮತ್ತು ಅಧೀನರು ಇವರ ನಡುವಿನ ಅಂತರವನ್ನು, ದೃಢಪಡಿಸುವ ಇಂದಿನ ಸನ್ನಿವೇಶವನ್ನು ಅರ್ಥೈಸುವ ಒಂದು ವಿವರಣಾತ್ಮಕ ಮಾದರಿಯಷ್ಟೇ ಇದು.

ಈ ಸಿದ್ಧಾಂತವನ್ನು ವಿವರಿಸುವ ಮೂಲ ಪರಿಕಲ್ಪನೆಗಳೆಂದರೆ– ಕೇಂದ್ರೀಯ (Central) ಮತ್ತು ಪರಿಧಿಯ (peripheral), ಯಾಜಮಾನ್ಯ (Hegemony) ಹಾಗೂ ಪುನರುತ್ಪಾದನೆ (reproduction). ಈ ಪರಿಕಲ್ಪನೆಗಳನ್ನು ಜಗತ್ತು ಇಂದು ಇರಬೇಕಾದ, ಇರುವ ರೀತಿಯಲ್ಲಿ ವಿವರಿಸಲು ಬಳಸಲಾಗಿದೆ. ಶ್ರೀಮಂತ ರಾಷ್ಟ್ರಗಳ ಕೇಂದ್ರದಿಂದ ಪರಿಧಿಯ ಬಡರಾಷ್ಟ್ರಗಳ ಮೇಲಿನ ಏಕಪಕ್ಷೀಯ ಅಧಿಕಾರ ಚಲಾವಣೆ, ಪರಾಧೀನ ರಾಷ್ಟ್ರಗಳ ಮೇಲಿನ ದೌರ್ಜನ್ಯ, ಅಧಿಕಾರಶಾಹಿ ಕೇಂದ್ರದ ಮೌಲ್ಯಗಳನ್ನು ಪರಾಧೀನ ರಾಷ್ಟ್ರಗಳ ಮೇಲಿನ ದಬ್ಬಾಳಿಕೆಯ ಮೂಲಕ ವ್ಯವಸ್ಥಿತವಾಗಿ ಅವುಗಳನ್ನು ಪುನರ್–ಸೃಷ್ಟಿಸುವ ಪ್ರಕ್ರಿಯೆ– ಇವುಗಳು ಈ ಸಿದ್ಧಾಂತ ಮುಂದಿಡುವ ಅಂಶಗಳು.

ಶಾಲೆ ಅಥವಾ ಯಾವುದೇ ಶೈಕ್ಷಣಿಕ ಸಂಸ್ಥೆಗೂ ಅವಲಂಬನ ಸಿದ್ಧಾಂತಕ್ಕೂ ಇರುವ ಸಂಬಂಧವೇನು ಎಂಬುದು ಗಮನಿಸಬೇಕಾದ ಪ್ರಶ್ನೆ. ಅವಲಂಬನ ಸಿದ್ಧಾಂತವಾದಿಗಳ ಪ್ರಕಾರ ಹಿಂದುಳಿದ ರಾಷ್ಟ್ರಗಳಲ್ಲಿ ಶಿಕ್ಷಣಸಂಸ್ಥೆಗಳು ಒಟ್ಟು ಜಾಗತಿಕ ಸನ್ನಿವೇಶದಲ್ಲಿ ಹೆಚ್ಚು ಪ್ರಬಲವಾದ ರಾಷ್ಟ್ರಗಳು ಮೌಲ್ಯಗಳು, ಮನೋಭಾವಗಳು ಮತ್ತು ಕೌಶಲಗಳನ್ನು ಪುನರ್–ಸೃಷ್ಟಿಸುವ ಅಥವಾ ಮುಂದುವರಿಸುವ ಕಾಯಕವನ್ನು ಕೈಗೊಂಡಿರುತ್ತವೆ. ಮುಂದುವರಿದ ರಾಷ್ಟ್ರಗಳಿಗೆ ಪೂರಕವಾದ ಭಾವನೆಗಳನ್ನು ಈ ಬಡರಾಷ್ಟ್ರಗಳ ಶಾಲೆಗಳು ಬಿತ್ತುತ್ತವೆ. ಇತಿಹಾಸದಲ್ಲಿ ಮೊದಲಿಗೆ ಅತ್ಯಂತ ಸೈದ್ಧಾಂತಿಕ ನೆಲೆಯಲ್ಲಿ ಮೊದಲುಗೊಂಡ ಕಾರ್ಯಗಳು ಬಹಳ ಬೇಗನೆ ವಸಾಹತೀಕರಣದೆಡೆಗೆ ಬದಲಾದುದನ್ನು ನಾವೆಲ್ಲರೂ ಕಂಡಿದ್ದೇವೆ. ಇಂದಿನ ಸನ್ನಿವೇಶದಲ್ಲಿ ಲೌಕಿಕ ವಸಾಹತೀಕರಣವು ಮಾಯವಾಗಿ ಹೆಚ್ಚು ನಾಜೂಕಾದ (sophisticated), ಆದರೆ ಕಪಟದ, ಬುದ್ಧಿಭಾವಗಳ ವಸಾಹತೀಕರಣ ಕಾಣಬರುತ್ತಿದೆ. ವಿಶ್ವವಿದ್ಯಾನಿಲಯಗಳು, ಉದಾರಿಗಳು ಹುಟ್ಟುಹಾಕುವ ಸಂಸ್ಥೆಗಳು, ಬಹುಮುಖಿ ಮತ್ತು ರಾಷ್ಟ್ರೀಯ ವಿಕಾಸಾತ್ಮಕ ನಿಯೋಗಗಳು, ಪುಸ್ತಕ ಪ್ರಕಾಶಕರು, ಸಮೂಹ ಮಾಧ್ಯಮ ಸಂಸ್ಥೆಗಳು, ಕೈಗಾರಿಕಾ ಸಮಾಜದ ಬಹುಮಟ್ಟಿನ ಉಪಕರಣಗಳು (ಮೋಟಾರು ವಾಹನಗಳಿಂದ ಹಿಡಿದು ಬಾಲ್ ಪಾಯಿಂಟ್ ಪೆನ್ನುಗಳವರೆಗೆ) ಎಲ್ಲವನ್ನೂ ಶೋಷಣೆಯ ಸಾಧನಗಳಾಗಿ ಇಂದು ಗಮನಿಸಬಹುದು. ಶೋಷಿತರು ಅವರಿಗೆ ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ದೈಹಿಕ ದಬ್ಬಾಳಿಕೆಯ ಬದಲಿಗೆ ಒಂದು ರೀತಿಯ ಮಾನಸಿಕ ದಬ್ಬಾಳಿಕೆಯನ್ನು ಅನುಭವಿಸುತ್ತಿದ್ದಾರೆ. ಪ್ರತಿ ದೇಶದಲ್ಲೂ ಗುರುತಿಸಲು ಸಾಧ್ಯವಾಗುವ ರೀತಿಯಲ್ಲಿ ಶೋಷಿಸುವ ಅಥವಾ ದಬ್ಬಾಳಿಕೆ ನಡೆಸುವ ಕೇಂದ್ರ ಘಟಕವಿರುತ್ತದೆ. ಇದು ಪ್ರಬಲ ವರ್ಗವೋ ಜಾತಿಯೋ ಆಗಿರಬಹುದು. ಈ ವರ್ಗ ಆಧಾರಿತ ಸಮುದಾಯಗಳು ಸ್ತರೀಕರಣದ ಮತ್ತು ನಿರ್ದಿಷ್ಟ ಮೌಲ್ಯಗಳ (ಸ್ವಾರ್ಥಪರವಾದ) ವ್ಯವಸ್ಥೆಯನ್ನು ಶಾಲೆಗಳು ಹುಟ್ಟುಹಾಕುತ್ತಿರಬೇಕು ಎಂದು ಬಯಸುತ್ತಿರುತ್ತವೆ. ಇದು ಆಯಾ ಪ್ರದೇಶದ ಯಾಜಮಾನ್ಯ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಿರುತ್ತದೆ. ಈ ದಿಶೆಯಲ್ಲಿ ಅಧಿಕಾರಶಾಹಿ ವರ್ಗಕ್ಕೆ ಅಗತ್ಯವಾದ ನಿರ್ದಿಷ್ಟವಾದ ಜ್ಞಾನವು ಅತ್ಯಂತ ಬೆಲೆಯುಳ್ಳದ್ದು ಅಥವಾ ಅಪೇಕ್ಷಣೀಯವಾದುದು ಎಂಬ ಮುದ್ರೆಯನ್ನು ಒತ್ತಿಸಿಕೊಂಡು ಶಿಕ್ಷಣ ಸಂಸ್ಥೆಗಳಲ್ಲಿ ಮುಂದುವರಿಯುತ್ತಿರುತ್ತದೆ. ಈ ಜ್ಞಾನ ಅಥವಾ ಅರಿವನ್ನು ಪಡೆದುಕೊಂಡ ವ್ಯಕ್ತಿಗೆ ಸ್ಥಾನಮಾನಗಳೂ ದೊರೆಯುತ್ತಿರುತ್ತದೆ. ಉಳಿದ ಯಾವುದೇ ಜ್ಞಾನ ಉಪೇಕ್ಷೆಗೆ ಒಳಗಾಗುತ್ತದೆ ಇಲ್ಲವೇ ಅದನ್ನು ಕಾಣದಂತೆ ಒತ್ತಿ ಹಿಡಿದಿಡಲಾಗುತ್ತದೆ. ಈ ಭಾವನಾತ್ಮಕ ಮತ್ತು ಆಲೋಚನಾತ್ಮಕ ನಿಯಂತ್ರಣವನ್ನು ಅನೇಕ ದೇಶಗಳಲ್ಲಿ ಆಂತರಿಕವಾಗಿಯೂ ಸಾಧಿಸಲಾಗಿರುತ್ತದೆ. ತಮ್ಮನ್ನು ದಾಸ್ಯದಲ್ಲಿಡುವುದಕ್ಕಾಗಿಯೇ ರೂಪಿಸಲಾದ ವಿಚಾರಗಳು ಹಾಗೂ ಮೌಲ್ಯಗಳ ಪ್ರಪಂಚದಲ್ಲಿ ತಾವು ಬದುಕುತ್ತಿದ್ದೇವೆ ಎಂಬ ಅರಿವಿಲ್ಲದೆಯೇ ಜನರು ಅಂತಹ ಸಮಾಜದಲ್ಲಿ ಬದುಕುತ್ತಿರುತ್ತಾರೆ. 'ಬುದ್ಧಿಯ ದಾಸ್ಯ'ವನ್ನು ಹುಟ್ಟುಹಾಕುವಲ್ಲಿ, ಬೆಳೆಸುವಲ್ಲಿ, ಶಾಲೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂಬ ಅರಿವೂ ಅವರಿಗಿರುವುದಿಲ್ಲ ಎಂಬುದು ಅವಲಂಬನ ಸಿದ್ಧಾಂತ ಮುಂದಿಡುವ ಪ್ರಮುಖ ಅಂಶಗಳಲ್ಲಿ ಒಂದು. ದಾಸ್ಯದ ಸಂಕೋಲೆಯಲ್ಲಿ

Digitised by Bharatavani, CIIL

ಬಂಧಿತರಾಗಿದ್ದರೂ ತಾವು ಮುಕ್ತವಾಗಿದ್ದೇವೆ ಎಂದು ನಂಬುವವರನ್ನು ಮೋಸಗೊಳಿಸುವ ಚತುರತೆಯೇ ಈ ವ್ಯವಸ್ಥೆಯ ಯಶಸ್ಸಿಗೆ ಕಾರಣ.

ಜಾಗತಿಕ ಸನ್ನಿವೇಶದಲ್ಲಿ ಪರಿಧಿಯ ರಾಷ್ಟ್ರಗಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಮುಖವಾದ ಆರೋಪವಿದೆ. ಅದೆಂದರೆ ಮಕ್ಕಳಿಗೆ ಶಿಕ್ಷಣದ ಮೂಲಕ, ವರ್ಗಾಯಿಸುವ ಉದ್ದೇಶದಿಂದ ಸೂಕ್ಷ್ಮವಾಗಿ ಆಯ್ಕೆಮಾಡಿ ಸಂಘಟಿಸಲಾಗಿರುವ ವಿಷಯ ಅಥವಾ ಜ್ಞಾನ (ಸಾಂಸ್ಕೃತಿಕ ಬಂಡವಾಳ)ವನ್ನು ಕುರಿತದ್ದು. ಕೇಂದ್ರದಲ್ಲಿರುವ ವ್ಯವಸ್ಥೆಯ ಪಠ್ಯಕ್ರಮವನ್ನು ಅದೇ ಕೇಂದ್ರೀಯ ವ್ಯವಸ್ಥೆಯು ಪರಿಧಿಯ ದೇಶಗಳು ಸ್ಥಳೀಯವಾಗಿ ಹಾನಿಗೊಳಗಾಗುವಷ್ಟರಮಟ್ಟಿಗೆ ನಕಲು ಮಾಡುವಂತೆ ಬಲಾತ್ಕಾರ ಮಾಡುತ್ತವೆ. ಭಾರತ ವಸಾಹತೀಕರಣದಿಂದ ಮುಕ್ತವಾದ ಮೇಲೂ ಇಂದು ಅಗತ್ಯವಿರುವ ಜ್ಞಾನಕ್ಕೂ ಕಲಿಸುತ್ತಿರುವ ಜ್ಞಾನಕ್ಕೂ ನಡುವೆ ಅಂತರವಿದ್ದೇ ಇದೆ. ಉದಾಹರಣೆಗೆ, ಅತಿ ಸಂಕೀರ್ಣವಾದ ಶೈಕ್ಷಣಿಕ ಸಾಮಗ್ರಿಗಳ ಮೇಲಿನ ಮೋಹ ಹೆಚ್ಚಾದ ಕಾರಣದಿಂದಾಗಿ ಪ್ರಮುಖವಾದ, ವ್ಯವಸಾಯಕ್ಕೆ ಅಳವಡಿಸಬಹುದಾದ ವಿಜ್ಞಾನದ ವಿಷಯಗಳು, ಸಣ್ಣ ಪ್ರಮಾಣದ ಹೈನುಗಾರಿಕೆ, ಗೃಹಕೃತ್ಯ ನಿರ್ವಹಣೆ ಹಾಗೂ ಸ್ವಾಸ್ಥ್ಯ ಇತ್ಯಾದಿ ವಿಷಯಗಳು ಮೂಲೆಗುಂಪಾಗಿವೆ. ಹಿಂದಿನ ವಸಾಹತುನಾಯಕರ ಭಾಷೆಯೇ ಬೋಧನೆ, ಸಂವಹನದ ಹಾಗೂ ಆಡಳಿತದ ಭಾಷೆಯಾಗಿ ಮೆರೆಯುತ್ತಿದೆ. ಇದು ಅಸಮರ್ಪಕ ಮಾತ್ರವಲ್ಲ; ಕೇಂದ್ರ ಮತ್ತು ಪರಿಧಿಯ ರಾಷ್ಟ್ರಗಳಲ್ಲಿ ಹಿಂದೊಂದು ಕಾಲದ ಯಾಜಮಾನ್ಯದ ಪರಿಣಾಮವಾಗಿ ಪರಿಧಿಯ ರಾಷ್ಟ್ರದಲ್ಲಿ ಕೇಂದ್ರದ ವ್ಯವಸ್ಥೆಯನ್ನು ಮುಂದುವರಿಸಬೇಕಾದ ಒತ್ತಡವನ್ನೂ ಇದು ಸೃಷ್ಟಿಸಿದೆ.

ಹೀಗೆ ಅವಲಂಬನ ಸಿದ್ಧಾಂತ ಒಂದು ರೀತಿಯಲ್ಲಿ ಪುನರುತ್ಪಾದನಾ ಸಿದ್ಧಾಂತದ ನೆರಳಿನಲ್ಲೇ ಮುಂದುವರಿಯುತ್ತದೆ. ಈ ಪುನರುತ್ಪಾದನಾ ಸಿದ್ಧಾಂತವೂ ಹೊಸ ಸಾಮಾಜಿಕ ಚಿಂತನೆಗಳ ಅರಿವಿನ ಒಂದು ಭಾಗವಾಗಿಯೇ ಹುಟ್ಟಿಕೊಂಡುದು. ಇದರ ಪ್ರಕಾರ, ಜ್ಞಾನದ ರಚನೆ ಹಾಗೂ ವಿಷಯಗಳು, ಆಸ್ತಿ, ಅಧಿಕಾರ ಹಾಗೂ ಸವಲತ್ತುಗಳ ರೂಪಗಳು ಎಂದೇ ಗುರುತಿಸಲ್ಪಡುವಂತಹವು. ಹೆಚ್ಚು ಶಕ್ತಿಯುತವಾದ, ಆದರೆ ಮಾನವನಿರ್ಮಿತವಾದ ಜ್ಞಾನವನ್ನು-ಕೈಗಾರಿಕಾ ರಾಜ್ಯಗಳ ವೈಜ್ಞಾನಿಕ ಜ್ಞಾನ – ಸೃಷ್ಟಿಸಿಕೊಂಡಿರುವ ಸಮಾಜಗಳು ಅದೇ ಜ್ಞಾನವನ್ನು ಕಡಿಮೆ ಶಕ್ತಿಯುತವಾದ ರಾಜ್ಯಗಳ ಮೇಲೆ ಹೇರುತ್ತವೆ. ಆ ಮೂಲಕ ಅವರಲ್ಲಿ ಕೀಳರಿಮೆಯನ್ನು ಹುಟ್ಟಿಸಿ ತಮ್ಮ ಪ್ರತಿಷ್ಠೆಯನ್ನು ಮೆರೆಯುತ್ತವೆ. ಅಲ್ಲದೆ ಜ್ಞಾನವಿಕಾಸಕ್ಕೆ ಅನುವುಮಾಡಿಕೊಂಡು ತಾವು ಉತ್ಪಾದಿಸಿದ ಸರಕುಗಳಿಗೆ ಒಳ್ಳೆಯ ಮಾರುಕಟ್ಟೆಯನ್ನು ಗಿಟ್ಟಿಸಿಕೊಳ್ಳುತ್ತವೆ. ಇದೇ ಪುನರುತ್ಪಾದನೆಯ ಪ್ರಕ್ರಿಯೆ. ಕಾಲದೇಶಗಳಲ್ಲಿ ಅಧಿಕ ಶಕ್ತಿಯುಳ್ಳ ಒಂದು ಗುಂಪು ಕಡಿಮೆ ಶಕ್ತಿಯುಳ್ಳ ಮತ್ತೊಂದು ಗುಂಪಿನ ಮೇಲೆ ತೋರಿಸುವ ಯಾಜಮಾನ್ಯದ ಪ್ರಕ್ರಿಯೆಯೇ ಇದು ಎಂದು ಹೇಳಬಹುದು.

ಶಿಕ್ಷಣದಲ್ಲಿ ಆರ್ಥಿಕ ಬೆಳವಣಿಗೆಯ ಸಮಸ್ಯೆಗಳನ್ನು ವಿವರಿಸಲು ಹುಟ್ಟಿಕೊಂಡ ಸಿದ್ಧಾಂತ ಅತ್ಯಂತ ಶಕ್ತಿಯುತವಾದುದು. ನವ ಮಾರ್ಕ್ಸ್‌ವಾದಿಗಳು ಪ್ರತಿಪಾದಿಸಿದ ಘರ್ಷಣಾ ಸಿದ್ಧಾಂತ, ಸಾಮಾಜಿಕ ಸಂಸ್ಥೆಗಳ ಕ್ರಿಯಾಶೀಲತೆಯ ಅಧ್ಯಯನಗಳು ಹಾಗೂ ಮನೋವೈಜ್ಞಾನಿಕ ಸ್ಥಿತೀಕರಣ ಸಿದ್ಧಾಂತ ಇವೆಲ್ಲ ಒಂದೇ ರೀತಿಯ ಆಲೋಚನೆಗಳನ್ನು ಮುಂದಿಟ್ಟಿವೆ. ಒಂದು ವರ್ಗ ಅಥವಾ ರಾಷ್ಟ್ರವು ವರ್ಗಾಧಾರದ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಮೇಲೆ ಅಧಿಕಾರವರ್ಗದ ಚಿಂತನೆಗಳನ್ನು ಬಲಾತ್ಕಾರವಾಗಿ ಹೇರುತ್ತದೆ. ಶಾಲೆ ಎಂಬುದು ಅಧಿಕಾರದಲ್ಲಿರುವ ವರ್ಗವು ಪ್ರಸ್ತುತ ಸನ್ನಿವೇಶವನ್ನು ಇರುವಂತೆಯೇ ಉಳಿಸಿಕೊಳ್ಳಲು ಅಧೀನ ವರ್ಗಗಳ ಮೇಲೆ ತಮ್ಮ (ಸ್ವಾರ್ಥದ ಉದ್ದೇಶವುಳ್ಳ) ಮೌಲ್ಯಗಳನ್ನು ಹೇರುವ ಒಂದು ಸಾಧನ. ಇದು ರಾಷ್ಟ್ರಗಳ ಒಳಗೆ (ಎಲ್ಲಿ ಶಿಕ್ಷಣವು ಆಂತರಿಕ ವಸಾಹತೀಕರಣದೊಂದಿಗೆ ಸಮಾನವಾಗಿದೆಯೋ ಅಲ್ಲಿ) ಅತ್ಯಂತ ನಾಟಕೀಯವಾಗಿ ಕಾಣಬರುತ್ತದೆ. ಇದೇ ಆಲೋಚನೆಗಳು ಮುಂದುವರಿದಿರುವುದೂ ಉಂಟು. ಕೆಲವು ಚಿಂತಕರ ಪ್ರಕಾರ ಶೋಷಿತರು ಶೋಷಕರಾಗಿ ಬದಲಾಗುವುದೂ ಉಂಟು. ಏಕೆಂದರೆ ಎಲ್ಲರಿಗೂ 'ದಣಿ'ಯಾಗುವ ಆಸೆ. ಈ ಚಿಂತಕರ ಪ್ರಕಾರ ನಿಜವಾದ ಅಥವಾ ಮುಕ್ತಸ್ವಾತಂತ್ರ್ಯ ಹಾಗೂ ವೈಯಕ್ತಿಕ ಸ್ವಾಯತ್ತತೆಯ ಸಾಧ್ಯತೆಗಳು ಒಟ್ಟು ಜಾಗತಿಕ ಸನ್ನಿವೇಶದಲ್ಲಿ ವಿರಳ. ಮತ್ತೆ ಕೆಲವು ಚಿಂತಕರ ಪ್ರಕಾರ ಶಾಲೆಗಳು ಚಾಲ್ತಿಯಲ್ಲಿರುವ ಅಧಿಕಾರದ ರಚನೆಗನುಗುಣವಾಗಿ ಯುವಕರನ್ನು ಒಂದು ಶಿಸ್ತಿಗೆ ಒಳಪಡಿಸುತ್ತವೆ. ಇದನ್ನು ಸಾಮಾನ್ಯವಾಗಿ ಗ್ರೇಡ್ ಕೊಡುವಿಕೆ, ಸ್ಪರ್ಧೆಗಳು, ಕ್ಷುಲ್ಲಕ ಬಹುಮಾನಗಳು ಮತ್ತು ಅಷ್ಟೇನೂ ಗುರುತರವಲ್ಲದ ಶಿಕ್ಷೆ ಇತ್ಯಾದಿಗಳಿಂದ ಸಾಧಿಸಲಾಗುತ್ತದೆ. ಸಹಜವಾದ ಸ್ವೋಪಜ್ಞತೆ ಮತ್ತು ಸೃಜನಶೀಲತೆಗಳನ್ನು ಹಾಳುಮಾಡುವುದರ ಮೂಲಕ ಶಿಕ್ಷಣವ್ಯವಸ್ಥೆಯು ಮಕ್ಕಳನ್ನು/ವಿದ್ಯಾರ್ಥಿಗಳನ್ನು ಅಮಾನವೀಯಗೊಳಿಸುತ್ತವೆ. ಅವಲಂಬನ ಸಿದ್ಧಾಂತದ ಪ್ರಮುಖ ಅಂಶಗಳನ್ನು ಕೆಳಕಂಡಂತೆ ಸಂಗ್ರಹಿಸಬಹುದು:

ಅವಲಂಬನ ಸಿದ್ಧಾಂತ ಎಂಬುದು ಅಧಿಕಾರದ ಏಕಮುಖ ಅನ್ವಯದಿಂದಾಗಿ ಬಡರಾಷ್ಟ್ರಗಳು ಹೇಗೆ ವಂಚನೆಗೊಳಗಾಗಿ ಅಧಿಕಾರಶಾಹಿಗಳ ಬಲಿಪಶುಗಳಾಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯಮಾಡಿಕೊಡುವ ವಸ್ತುನಿಷ್ಠವಾದ ಮತ್ತು ಜಾಗತಿಕವಾಗಿ ಅನ್ವಯವಾಗುವ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಶೈಕ್ಷಣಿಕ ರಚನೆಗಳು ಮತ್ತು ಶೈಕ್ಷಣಿಕ ವಿಷಯಗಳನ್ನು ಅಧಿಕಾರಕೇಂದ್ರ ರಾಷ್ಟ್ರಗಳು ಪರಿಧೀಯ ರಾಷ್ಟ್ರಗಳ ಮೇಲೆ ಆಲೋಚನಾ ನಿಯಂತ್ರಣವನ್ನುಂಟುಮಾಡಲು ಬಳಸುವ ಸಾಧನಗಳು ಎಂದು ಪರಿಗಣಿಸಲಾಗುತ್ತದೆ. ಜೊತೆಗೆ ಈ ಶೈಕ್ಷಣಿಕ ವ್ಯವಸ್ಥೆಗಳು ಕೇಂದ್ರರಾಷ್ಟ್ರಗಳ ಅಸ್ತಿತ್ವ ಹಾಗೂ ಮುಂದುವರಿಕೆಗೆ ಅಗತ್ಯವಾದ ವ್ಯವಸ್ಥೆಯನ್ನು ಅತ್ಯಂತ ನಾಜೂಕಾದ ರೀತಿಯಲ್ಲಿ ಹುಟ್ಟುಹಾಕುವ ಮತ್ತು ಮುಂದುವರಿಸುವ ಕೆಲಸವನ್ನು ಮಾಡುತ್ತವೆ ಎಂದು ಅಭಿಪ್ರಾಯಪಡುತ್ತವೆ. ಅಧಿಕಾರಶಾಹಿ ರಾಷ್ಟ್ರಗಳು ಹೇರುವ ಆಲೋಚನಾ ನಿಯಂತ್ರಣದ ಪ್ರಕ್ರಿಯೆ ಎಷ್ಟು ಪ್ರಭಾವಶಾಲಿಯಾಗಿರುತ್ತದೆಂದರೆ, ಹೆತ್ತವರಿಗಾಗಲೀ ಪ್ರಜೆಗಳಿಗಾಗಲೀ ಅವರ ಮಕ್ಕಳಿಗೆ ಅಥವಾ ವಿದ್ಯಾರ್ಥಿಗಳಿಗೆ ಉತ್ತಮವಾದ ಶಿಕ್ಷಣ ಯಾವುದು ಎಂಬುದನ್ನು ನಿರ್ಧರಿಸಲೂ ಆಗದಷ್ಟು ಮಟ್ಟಿಗೆ ಅವರನ್ನು ಮೋಡಿಗೊಳಿಸಿರುತ್ತದೆ. ವಿನಾಶಕಾರಿ ಅಧಿಕಾರಶಾಹಿ ಆಲೋಚನಾ ಯಾಜಮಾನ್ಯವು ಜನಗಳಿಗೆ ಸ್ವತಂತ್ರವಾದ ಆಯ್ಕೆಗಳನ್ನು ಮಾಡಲು ಅವಕಾಶವನ್ನೇ ಮಾಡಿಕೊಡುವುದಿಲ್ಲ.

ಪ್ರಸ್ತುತ ಪರಿಸ್ಥಿತಿಯಲ್ಲಿ ಯಾವುದೇ ಶೈಕ್ಷಣಿಕ ಪುನಾರಚನೆ ಅಥವಾ ಶಿಕ್ಷಣ, ಅದು ಈಗಿರುವ ಪರಿಸ್ಥಿತಿಯಲ್ಲಿ ಉತ್ತಮ ಬೆಳವಣಿಗೆಗೆ ಅನುವು ಮಾಡಿಕೊಡುವುದು ಸಾಧ್ಯವೇ ಇಲ್ಲ. ಇದು ಸಾಧ್ಯವಾಗಬೇಕಾದರೆ ಯಾಜಮಾನ್ಯದ ಶಕ್ತಿ ಧ್ವಂಸಕಾರಿಯಾಗಿ ಛಿದ್ರವಾಗಬೇಕು.

ಇಂದಿನ ಪರಿಸ್ಥಿತಿಯಲ್ಲಿ ಪರಿಧಿಯ ರಾಷ್ಟ್ರಗಳು ವಂಚನೆಗೊಳಗಾದ 'ಒಳ್ಳೆಯಜನ'ರನ್ನು ಪ್ರತಿನಿಧಿಸುತ್ತದೆ. ಅಧಿಕಾರ ಕೇಂದ್ರದ ರಾಜ್ಯಗಳು ವಂಚಿಸುವ 'ಕೆಟ್ಟ ಜನ'ರನ್ನು ಪ್ರತಿನಿಧಿಸುತ್ತವೆ. ಈ ಶೋಷಣೆಯನ್ನು ಕೇಂದ್ರರಾಜ್ಯಗಳು ಆಧುನೀಕರಣ ಎಂದು ಕರೆದುಕೊಳ್ಳುತ್ತವೆಯಾದರೂ ಅದು ಮುಂದುವರಿದ ಪರಾವಲಂಬನೆಯ ಮತ್ತೊಂದು ರೂಪ. ಒಂದು ರಾಷ್ಟ್ರದ ಅವಲಂಬನೆಯ ಮಟ್ಟ ಹೆಚ್ಚಿದಷ್ಟೂ ಆ ರಾಷ್ಟ್ರದಲ್ಲಿ ಪರಿಣಾಮಕಾರಿ ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಸಮಸ್ಯೆಗಳು ಹೆಚ್ಚುತ್ತವೆ.

Digitised by Bharatavani, CIIL

ಕೇಂದ್ರ ಹಾಗೂ ಪರಿಧೀಯ ಪರಿಕಲ್ಪನೆಗಳನ್ನು ವಿಶ್ವವಿದ್ಯಾನಿಲಯಗಳಿಗೆ ಅದರಲ್ಲೂ ನಿರ್ದಿಷ್ಟವಾಗಿ ತೃತೀಯ ಜಾಗತಿಕ ಮಟ್ಟದಲ್ಲಿ ಉನ್ನತಶಿಕ್ಷಣದ ಸಮಸ್ಯೆಗಳಿಗೆ ಅನ್ವಯಿಸಿದಾಗ, ಅದು ಅಸಮಾನತೆಯನ್ನು, ಸಾಂಸ್ಥಿಕ ಮತ್ತು ಶೈಕ್ಷಣಿಕ ಶ್ರೇಣಿಗಳನ್ನು, ಸಂಕೀರ್ಣವಾದ ಇಂದಿನ ಜಗತ್ತಿನಲ್ಲಿ ಶೈಕ್ಷಣಿಕ ಸಂಸ್ಥೆಗಳ ವಿಭಿನ್ನ ಪಾತ್ರಗಳನ್ನು ಕುರಿತಂತೆ ಮಾಡುವ ಆಲೋಚನೆಯಾಗಿರುತ್ತದೆ. ಒಂದು ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ತೃತೀಯ ಜಗತ್ತಿನ ವಿಶ್ವವಿದ್ಯಾನಿಲಯಗಳು ಪರಿಧೀಯ ಹಂತದಲ್ಲಿ ಕಾರ್ಯವೆಸಗುತ್ತವೆಯಾದರೂ ಅವುಗಳದ್ದೇ ಆದ ಸಮುದಾಯದಲ್ಲಿ ಅವು ಕೇಂದ್ರೀಯ ಸಂಸ್ಥೆಗಳಾಗಿ ಕಾರ್ಯವೆಸಗುತ್ತವೆ.

ಶಿಕ್ಷಣಕ್ಕೆ ಈ ಪರಿಕಲ್ಪನೆಯ ನಿಹಿತಾರ್ಥಗಳು ಅತಿ ಮುಖ್ಯವಾಗುತ್ತವೆ. ಶಿಕ್ಷಣವು ತನ್ನ ಪರಿಸ್ಥಿತಿಯನ್ನು ಗಮನಿಸಿಕೊಳ್ಳಬೇಕು. ಶಿಕ್ಷಣತಜ್ಞರು, ಶಿಕ್ಷಣಕ್ಷೇತ್ರದಲ್ಲಿ ಕೆಲಸಮಾಡುವವರು ಈ ವ್ಯವಸ್ಥೆಯ ಅನನುಕೂಲಗಳನ್ನು ಗಮನಿಸಿಕೊಳ್ಳಬೇಕು. ಅಧ್ಯಾಪಕರು ತಾವು ಎಂತಹ ಶಿಕ್ಷಣವನ್ನು ಕೊಡುತ್ತಿದ್ದೇವೆ ಎಂಬುದನ್ನು ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು.

–ಎ.ಶ

–ಜಾಸ್ಮಿನ್

## ಅವಲೋಕನ ವಿಧಾನ

ಅವಲೋಕನ ಎನ್ನುವ ಪದವನ್ನು ಸಾಮಾನ್ಯವಾಗಿ 'ನೋಡುವುದು' ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಆದರೆ ನಾವು ನೋಡುವುದನ್ನೆಲ್ಲಾ ಅವಲೋಕಿಸುವುದಿಲ್ಲ. ಅವಲೋಕನ ಎಂದರೆ "ವ್ಯವಸ್ಥಿತವಾದ ವೀಕ್ಷಣೆ." ಗಮನವಿಟ್ಟು ನೋಡುವುದು ಅಥವಾ ಉದ್ದೇಶಪೂರ್ವಕವಾದ ಅಥವಾ ಲಕ್ಷ್ಯವಿಟ್ಟು ಗಮನಿಸುವ ಕ್ರಿಯೆ ಎಂದರ್ಥ. ಅವಲೋಕಿಸುವಾಗ ಅದರ ಹಿಂದೆ ನಿರ್ದಿಷ್ಟವಾದ, ನಿಖರವಾದ ಗುರಿಯಿರುತ್ತದೆ. ಸಮಾಜ ವಿಜ್ಞಾನಿಗಳಿಗೆ ಅವಲೋಕನ ಅವಶ್ಯ ಮಾಹಿತಿ ಸಂಗ್ರಹಣಾ ತಂತ್ರವಷ್ಟೇ ಅಲ್ಲ. ಅನಿವಾರ್ಯವೂ ಹೌದು. ಸೂಕ್ಷ್ಮ ಅವಲೋಕನದಲ್ಲಿ ತೊಡಗಲು ಯಾವ ವ್ಯಕ್ತಿಯೇ ಆಗಲಿ ತಮಗೆ ತಾವೇ ತರಬೇತಿಯನ್ನು ನೀಡಿಕೊಳ್ಳಬೇಕು. ಸಮರ್ಥ ಅವಲೋಕನಾಕಾರರಿಗೆ ಹೆಚ್ಚಿನ ವಿಷಯಗಳು ತಿಳಿದಿರುತ್ತವೆ. ಅವಲೋಕನವನ್ನು ವ್ಯಾಪಕವಾಗಿ ಬಳಸುವ ಸಮಾಜಶಾಸ್ತ್ರಜ್ಞರು ತಾವು ಸಾಮಾಜಿಕ ನಡವಳಿಕೆಯನ್ನು ಅಧ್ಯಯನ ವಿಷಯವನ್ನಾಗಿ ಹೊಂದಿರುವವರು ಎಂಬುದನ್ನು ಸುಲಭವಾಗಿ ಮರೆಯಲಾರರು.

ಈ ವಿಧಾನದ ಯಶಸ್ಸು ವ್ಯಕ್ತಿಯ ಅವಲೋಕನ ಶಕ್ತಿ, ಅವರ ಧ್ಯೇಯೋದ್ದೇಶಗಳು, ಜ್ಞಾನಾರ್ಜನೆಯ ಹಂಬಲ, ಆಸಕ್ತಿಯ ಮಟ್ಟ ಇಷ್ಟಾನಿಷ್ಟಗಳು ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಅವರ ಗ್ರಾಹ್ಯ ಶಕ್ತಿಯನ್ನು ಅವಲಂಬಿಸಿದೆ. ಅಂದರೆ ಬಹುಮಟ್ಟಿಗೆ ಓರ್ವ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಸ್ಥಿತಿಗಳನ್ನು ಅವಲಂಬಿಸಿದೆ. ಏಕೆಂದರೆ ಒಂದೇ ಸಾಮಾಜಿಕ ಸನ್ನಿವೇಶವನ್ನು ಇರ್ವರು ಅವಲೋಕನಕಾರರು ಭಿನ್ನ-ಭಿನ್ನವಾದ ರೀತಿಗಳಲ್ಲಿ ಅರ್ಥೈಸುವ ಸಾಧ್ಯತೆಯಿದೆ. ಹಾಗಾಗಿ ಅವಲೋಕನಕಾರರ ಮನಸ್ಥಿತಿ ಅಡ್ಡಿ ಆತಂಕಗಳಿಂದ ದೂರವಾಗಿ ವಿಷಯದ ಮೇಲೆ ಮನಸ್ಸನ್ನು ಕೇಂದ್ರೀಕರಿಸಬಲ್ಲಂಥ ಶಕ್ತಿ ಸಮರ್ಪಕವಾಗಿರಬೇಕು.

ಸಾಮಾಜಿಕ ಸಂಶೋಧನೆಯಲ್ಲಿ ಅವಲೋಕನ ವಿಧಾನದಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ,

1. ಸಹಭಾಗಿ ಅವಲೋಕನ
2. ಅಸಹಭಾಗಿ ಅವಲೋಕನ

**ಸಹಭಾಗಿ ಅವಲೋಕನ:** ಸಹಭಾಗಿ ಅವಲೋಕನ ವಿಧಾನದಲ್ಲಿ ಎರಡು ಕ್ರಿಯೆಗಳು ಏಕಕಾಲದಲ್ಲಿ ನಡೆಯುತ್ತವೆ. ಅವುಗಳೆಂದರೆ, ಸಹಭಾಗಿತ್ವ ಮತ್ತು ಅವಲೋಕನ. ಅಧ್ಯಯನಕ್ಕೆ ಒಳಪಟ್ಟ ಒಂದು ಸಾಮಾಜಿಕ ಸನ್ನಿವೇಶದಲ್ಲಿ ಸಂಶೋಧಕರು ಸ್ವತಃ ಭಾಗಿಗಳಾಗಿ ಆ ಸನ್ನಿವೇಶವನ್ನು ಕುರಿತಂತೆ ಮಾಹಿತಿಯನ್ನು ಸಂಗ್ರಹಿಸುವ ವಿಧಾನಕ್ಕೆ ಸಹಭಾಗಿ ಅವಲೋಕನವೆಂದು ಹೆಸರು.

ಸಹಭಾಗಿ ಅವಲೋಕನವನ್ನು ಎರಡು ಬಗೆಗಳಲ್ಲಿ ಕೈಗೊಳ್ಳಬಹುದು. ಅವುಗಳೆಂದರೆ ರಹಸ್ಯ ಸಹಭಾಗಿ ಅವಲೋಕನ ಮತ್ತು ಮುಕ್ತ ಸಹಭಾಗಿ ಅವಲೋಕನ.

ರಹಸ್ಯ ಸಹಭಾಗಿ ಅವಲೋಕನ ಪದ್ಧತಿಯೆಂದರೆ ಸಂಶೋಧಕಿ ತಾನು ಅಧ್ಯಯನ ಮಾಡುವ ಗುಂಪಿನ ಸದಸ್ಯರಿಗೆ ತನ್ನ ಪರಿಚಯವನ್ನಾಗಲಿ ಉದ್ದೇಶವನ್ನಾಗಲಿ ಬಹಿರಂಗಪಡಿಸದೆ ಆ ಗುಂಪಿನ ಸದಸ್ಯಳಂತೆ ಪ್ರವೇಶ ಪಡೆದು ಎಲ್ಲ ಸಂದರ್ಭಗಳಲ್ಲಿ ಗುಂಪಿನ ಸದಸ್ಯಳಂತೆ ನಡೆದುಕೊಳ್ಳಬೇಕಾಗುತ್ತದೆ. ಅವಲೋಕನೆಗೆ ಒಳಪಟ್ಟ ಗುಂಪಿನ ಸದಸ್ಯರಿಗೆ ತಮ್ಮ ಗುಂಪನ್ನು ಪ್ರವೇಶಿಸಿರುವ ಆಗಂತುಕರ ಪರಿವೆಯೇ ಇಲ್ಲದಿರುವಾಗ ಅವರ ವರ್ತನೆ ಅಸಹಜವಾಗಿರುವುದಿಲ್ಲ. ಅದೇ ತಮ್ಮನ್ನು ಬೇರೊಬ್ಬರು ಅವಲೋಕಿಸುತ್ತಿದ್ದಾರೆ ಎಂದು ಗುಂಪಿನ ಸದಸ್ಯರಿಗೆ ಅರಿವಾದಾಗ ಅವರು ಅಸಹಜ ರೀತಿಯಲ್ಲಿ ವರ್ತಿಸಬಹುದು ಅಥವಾ ಮಾನವ ಸಹಜ ಸಂಕೋಚಕ್ಕೆ ಒಳಗಾಗಿ ತಮ್ಮ ನಿಜವಾದ ವ್ಯಕ್ತಿತ್ವವನ್ನು ಸಂಶೋಧಕರಿಂದ ಮರೆಮಾಚಬಹುದು. ಇಂತಹ ಸಂದರ್ಭಗಳಲ್ಲಿ ರಹಸ್ಯ ಸಹಭಾಗಿ ಅವಲೋಕನ ಅತ್ಯಂತ ನೈಜವೂ ನಂಬಲಾರ್ಹವೂ ಆದ ಮಾಹಿತಿಯನ್ನು ಪಡೆಯಲು ಅನುವು ಮಾಡಿಕೊಡುತ್ತದೆ.

ರಹಸ್ಯ ಸಹಭಾಗಿ ಅವಲೋಕನ ಬಹು ಸೂಕ್ಷ್ಮವಾದ ಮಾಹಿತಿ ಸಂಗ್ರಹಣ ವಿಧಾನವಾಗಿದ್ದರೂ ಎಲ್ಲ ಸಂದರ್ಭಗಳಲ್ಲೂ ಅದರ ಬಳಕೆ ಸಾಧ್ಯವಾಗಲಾರದು. ಏಕೆಂದರೆ ಸದಾಕಾಲ ಸಂಶೋಧಕರು ತಮ್ಮ ಪರಿಚಯವನ್ನು ಮರೆಮಾಚುವುದರ ಬಗ್ಗೆಯೇ ಚಿಂತಿಸುತ್ತಾ ಮಾಹಿತಿಯನ್ನು ಸಂಗ್ರಹಿಸುವುದಕ್ಕಿಂತ ಎಲ್ಲಿ ತಮ್ಮ ಗುರುತು ಇತರರಿಗೆ ತಿಳಿಯುತ್ತದೆಯೋ ಎಂಬ ಚಿಂತೆಯಲ್ಲೇ ಹೆಚ್ಚು ಶ್ರಮಪಡಬಹುದು. ನಿರ್ಭಯವಾದ ಮುಕ್ತ ವಾತಾವರಣದಲ್ಲಿ ಕೆಲಸ ನಿರ್ವಹಿಸಿದಾಗ ಕೈಗೊಂಡ ಕಾರ್ಯ ಫಲಪ್ರದವಾಗಿರುತ್ತದೆ.

ಸಹಭಾಗಿ ಅಥವಾ ಮುಕ್ತ ಅವಲೋಕನ ವಿಧಾನವನ್ನು ಮಾಹಿತಿ ಸಂಗ್ರಹಣಾ ಸಾಧನವನ್ನಾಗಿ ಬಳಸುವ ಸಂಶೋಧಕರು ಪ್ರತಿಯೊಂದು ಸನ್ನಿವೇಶದಲ್ಲೂ ಪೂರ್ಣ ಸಹಭಾಗಿಗಳಾಗಬೇಕೆಂಬ ನಿಯಮವೇನೂ ಇಲ್ಲ. ತಾವು ಅವಲೋಕಿಸುತ್ತಿರುವ ಪರಿಸ್ಥಿತಿಗೆ ತಕ್ಕಂತೆ ತಮ್ಮ ಪಾತ್ರಗಳನ್ನು ಸಂಶೋಧಕರು ಬದಲಾಯಿಸಿಕೊಳ್ಳಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅವಲೋಕನಕಾರರು ಆ ಸನ್ನಿವೇಶದಲ್ಲಿ ಭಾಗವಹಿಸದೆ ಪ್ರಯೋಗ ಕೊಠಡಿಯೊಂದರಲ್ಲಿ ಕುಳಿತು ಪರದೆಯ ಹಿಂದಿನಿಂದ ಒಂದು ಸನ್ನಿವೇಶವನ್ನು ಅವಲೋಕಿಸಬಹುದು ಅಥವಾ ಅವಲೋಕಿಸುವಂತಹ ಸನ್ನಿವೇಶದಲ್ಲೇ ಉದ್ಯೋಗವನ್ನು ಪಡೆದು ತಾನೂ ಪೂರ್ಣ ಸ್ವರೂಪದಲ್ಲಿ ಉದ್ಯೋಗಿಯಂತೆಯೇ ಉದ್ಯೋಗಿಯ ಎಲ್ಲಾ ಅನುಭವಗಳನ್ನು ಸ್ವತಃ ಅನುಭವಿಸುವುದರ ಮೂಲಕ ಅನುಭವ ಪಡೆಯಬಹುದು.

ಆದರೆ ಈ ಅನುಭವ ಪಡೆಯುವುದಕ್ಕೆ ಸಂಶೋಧಕರು ತಮ್ಮ ತಮ್ಮ ಕ್ಷೇತ್ರಕಾರ್ಯದ ಪ್ರಾರಂಭಿಕ ದಿನಗಳನ್ನು ತಮ್ಮ ಅಧ್ಯಯನ ಕ್ಷೇತ್ರದ ಜನಜೀವನ, ಭಾಷೆ, ಸಂಸ್ಕೃತಿ ಮುಂತಾದವುಗಳ ಸೂಕ್ಷ್ಮ

Digitised by Bharatavani, CIIL

ಪರಿಚಯವನ್ನು ಪಡೆಯಬೇಕಾದ್ದು ಅವಶ್ಯ. ಸಂಶೋಧಕರು ಅಧ್ಯಯನ ಕ್ಷೇತ್ರದಲ್ಲಿ ವಾಸವಾಗಿರುವ ಎಲ್ಲರೊಡನೆಯೂ ವಿಶ್ವಾಸದ ಸಂಬಂಧವನ್ನು ಬೆಳೆಸಿಕೊಳ್ಳಲು ಯತ್ನಿಸಿ ಅವರ ಒಲವನ್ನು ಗಳಿಸಿಕೊಳ್ಳುವುದು ಸಂಶೋಧನೆಯ ಯಶಸ್ಸಿನ ದೃಷ್ಟಿಯಿಂದ ಬಹುಮುಖ್ಯ. ಸಂಶೋಧಕರ ಯಶಸ್ಸು ಎಷ್ಟರಮಟ್ಟಿಗೆ ತಮ್ಮ ಪ್ರಾಮಾಣಿಕತೆ ಮತ್ತು ಅವಲೋಕನದ ಸದುದ್ದೇಶಗಳನ್ನು ಮಾಹಿತಿ ನೀಡುವವರಿಗೆ ಮನವರಿಕೆ ಮಾಡಿಕೊಡುವರು ಎಂಬುದರ ಮೇಲೆ ನಿಂತಿದೆ. ಸಹಭಾಗಿ ಅವಲೋಕನದಲ್ಲಿ ಸಂಶೋಧಕರು ತಾಳ್ಮೆ ಕಳೆದುಕೊಳ್ಳದೆ ಏಕಾಗ್ರತೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಏಕೆಂದರೆ ಸಮುದಾಯದ ಸದಸ್ಯರು ಅನೇಕವೇಳೆ ಸಂಶೋಧಕರನ್ನು ಸಂಶಯದಿಂದ ನೋಡಬಹುದು, ವೈಯಕ್ತಿಕ ಪ್ರಶ್ನೆಗಳಿಂದ ಬೇಸರ ಬರಿಸಬಹುದು. ಮಾಹಿತಿ ನೀಡಲಿರುವವರ ಕುತೂಹಲವನ್ನು ತಣಿಸಿ ಅವರಿಗೆ ಸಂಶೋಧಕರ ಮೇಲೆ ನಂಬಿಕೆ, ಭರವಸೆ ಬರುವಂತೆ ಮಾಡುವುದು ಸಹಭಾಗಿ ಅವಲೋಕನಾಕಾರರ ಮೊದಲನೆಯ ಆದ್ಯತೆ.

ಸಮುದಾಯ ಮತ್ತು ಸಂಶೋಧಕರ ನಡುವಣ ಅಂತರ ಕಡಿಮೆಯಾಗಬೇಕಾದರೆ ಸಮುದಾಯದ ಜನಜೀವನದಲ್ಲಿ ಸಹಭಾಗಿ ಅವಲೋಕನಕಾರರು ಸಕ್ರಿಯವಾಗಿ ಭಾಗವಹಿಸಬೇಕಾದ್ದು ಅತಿ ಅವಶ್ಯ. ಆದುದರಿಂದ ಸಂಶೋಧಕರು ಮಾಹಿತಿ ಸಂಗ್ರಹಿಸುವಾಗ ಕೆಲವು ಅಂಶಗಳಿಗೆ ಆದ್ಯತೆ ಕೊಡಬೇಕು. ಅವುಗಳೆಂದರೆ ಅವಲೋಕನಾಕಾರರ ವಾಸಸ್ಥಳ, ಸಮುದಾಯ ಜೀವನದಲ್ಲಿ ಸಹಭಾಗಿತ್ವ, ಯಾವುದೇ ಒಂದು ಜಾತಿ ಅಥವಾ ಸಮುದಾಯಕ್ಕೆ ವಿಶೇಷ ಒಲವು ತೋರಿಸದೆ ಎಲ್ಲ ವರ್ಗಗಳ ಜನರೊಡನೆ ಬೆರೆಯುವುದು ಮೊದಲಾದವುಗಳನ್ನು ನೋಡಿಕೊಳ್ಳಬೇಕು. ತಾನು ಅವರಿಗಿಂತ ಹೆಚ್ಚು ತಿಳಿದವನು, ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲುವರ್ಗದವನು ಎಂಬ ಭಾವನೆ ಬೆಳೆಯದಂತೆ ನೋಡಿಕೊಳ್ಳಬೇಕು. ಹುಸಿ ಪ್ರತಿಷ್ಠೆ ತೋರಿಸದೆ ಸಹಜ, ನೈಜ, ವಿಶ್ವಾಸಪೂರ್ಣ ಸಂಬಂಧವನ್ನು ಇಟ್ಟುಕೊಳ್ಳಬೇಕು.

**ಸಹಭಾಗಿ ಅವಲೋಕನ ವಿಧಾನದ ಅನುಕೂಲಗಳು:** ಸಹಭಾಗಿ ಅವಲೋಕನ ವಿಧಾನದಲ್ಲಿ ಸ್ವತಃ ತಾವೇ ಭಾಗಿಯಾಗುವುದರಿಂದ ಅತ್ಯಂತ ಸೂಕ್ಷ್ಮ ಸಂಗತಿಗಳು, ಸಹಜವಾಗಿ ನಂಬಲರ್ಹವೂ ಆದ ಮಾಹಿತಿಯನ್ನು ಸಂಗ್ರಹಿಸುವುದು ಸುಲಭ. ಸಹಭಾಗಿತ್ವ ಮತ್ತು ಅವಲೋಕನ ಎಂಬ ಎರಡು ಕ್ರಿಯೆಗಳು ಸಹಭಾಗಿ ಅವಲೋಕನದಲ್ಲಿ ಏಕಕಾಲದಲ್ಲಿ ನಡೆಯುವುದರಿಂದ ಇಲ್ಲಿ ಸಿಗುವ ಮಾಹಿತಿಯ ಪ್ರಮಾಣವೂ ಹೆಚ್ಚು, ಆಳವೂ ಹೆಚ್ಚು, ವಿಶ್ವಾಸಾರ್ಹತೆಯೂ ಹೆಚ್ಚು.

**ಸಹಭಾಗಿ ಅವಲೋಕನ ವಿಧಾನದ ಅನುಕೂಲಗಳು:** ಈ ವಿಧಾನದಲ್ಲಿ ಎಷ್ಟೇ ಅನುಕೂಲಗಳಿದ್ದರೂ ಅಷ್ಟೇ ತೊಂದರೆಗಳೂ ಇವೆ. ಸಂಪೂರ್ಣ ಸಹಭಾಗಿತ್ವದಿಂದ ಅವಲೋಕನಕಾರರ ವಸ್ತುನಿಷ್ಠೆಗೆ ಭಂಗ ಬರುವ ಸಾಧ್ಯತೆಗಳುಂಟು. ಸದಾಕಾಲವೂ ತನ್ನ ಅಧ್ಯಯನ ಗುಂಪಿನೊಡನೆಯೇ ಕಾಲ ಕಳೆಯುತ್ತಲಿರುವುದರಿಂದ ತನ್ನ ಪೂರ್ವ ನಿಯೋಜಿತ ಗುರಿಗಳನ್ನು ಪುಷ್ಟೀಕರಿಸುವಂಥ ಮಾಹಿತಿಯನ್ನು ಮಾತ್ರ ಗುರುತಿಸಿ ದಾಖಲಿಸಿ ತಮ್ಮ ಉದ್ದೇಶಗಳಿಗೆ ವಿರೋಧ ದಿಕ್ಕಿನಲ್ಲಿ ಚಲಿಸುವ ಸಂಗತಿಗಳನ್ನು ಸಹಭಾಗಿ ಅವಲೋಕನಕಾರರು ಅಲಕ್ಷಿಸುವ ಸಾಧ್ಯತೆಯನ್ನು ತಳ್ಳಿಹಾಕುವ ಹಾಗಿಲ್ಲ. ಅತೀ ಸ್ನೇಹ, ಅತೀ ಭಾವುಕತೆ, ಅತೀ ವೈರತ್ವ, ಇವೆಲ್ಲವೂ ವೈಜ್ಞಾನಿಕ ದೃಷ್ಟಿಕೋನಕ್ಕೆ ವಿರೋಧವಾದಂಥ ಧೋರಣೆಗಳಾಗಿದ್ದು ಸಹಭಾಗಿ ಅವಲೋಕನ ವಿಧಾನದಲ್ಲಿ ಯಾವುದನ್ನು ಬೆಳೆಸಿಕೊಂಡರೂ ಮಾಹಿತಿ ಸಂಗ್ರಹ ನಿಷ್ಪಕ್ಷಪಾತವಾಗಿರುವುದಿಲ್ಲ. ಸಹಭಾಗಿ ಅವಲೋಕನ ವಿಧಾನವನ್ನು ಕೆಲವು ಸಾಮಾಜಿಕ ಸನ್ನಿವೇಶಗಳಲ್ಲಿ ಬಳಸಿಕೊಳ್ಳಲು ಸಾಧ್ಯವಿಲ್ಲ. ಉದಾಹರಣೆಗೆ, ಅಪರಾಧಿ ತಂಡವೊಂದರ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಲು ಕೌಟುಂಬಿಕ ಜೀವನದ ಎಲ್ಲಾ ಮುಖಗಳನ್ನು ಸಹಭಾಗಿ ಅವಲೋಕನವನ್ನು ಬಳಸಿ ಅಧ್ಯಯನ ಮಾಡಲು ಅಸಾಧ್ಯ.

**ಅಸಹಭಾಗಿ ಅವಲೋಕನ:** ಅವಲೋಕನ ಪದ್ಧತಿಯ ಎರಡನೇ ವಿಧವೇ ಅಸಹಭಾಗಿ ಅವಲೋಕನ. ಒಂದು ಸನ್ನಿವೇಶದಲ್ಲಿ ಭಾಗವಹಿಸದೆ ಆ ಸನ್ನಿವೇಶವನ್ನು ಅವಲೋಕಿಸಿ ಮಾಹಿತಿಯನ್ನು ಸಂಗ್ರಹಿಸುವ ವಿಧಾನಕ್ಕೆ ಅಸಹಭಾಗಿ ಅವಲೋಕನ ಎನ್ನುವರು. ಸಂಪೂರ್ಣ ಸಹಭಾಗಿತ್ವ ಹೇಗೆ ಎಲ್ಲ ಸಂದರ್ಭಗಳಲ್ಲೂ ಸಮರ್ಪಕವಾದ ಮಾಹಿತಿ ಸಂಗ್ರಹಣ ವಿಧಾನವಲ್ಲವೋ ಹಾಗೆಯೇ ಸಂಪೂರ್ಣ ಅಸಹಭಾಗಿತ್ವವೂ ಕೂಡ ಎಲ್ಲ ಸಂದರ್ಭಗಳಲ್ಲೂ ಉಚಿತವಲ್ಲ. ಸಂಪೂರ್ಣ ಅಸಹಭಾಗಿತ್ವದಿಂದ ಅವಲೋಕಿಸುವವರು ಹಾಗೂ ಅವಲೋಕನೆಗೆ ಒಳಪಡುವವರು ಈರ್ವರಿಗೂ ಮುಜುಗರವುಂಟಾಗುತ್ತದೆ. ಅಪರಿಚಿತ ವ್ಯಕ್ತಿಯಿಂದ ಅವಲೋಕಿಸಲ್ಪಡುತ್ತಿದ್ದೇನೆ ಎಂಬ ಅರಿವು ಮೂಡಿದಾಕ್ಷಣ ಅವಲೋಕಿತರು ಅಸಹಜವಾಗಿ ವರ್ತಿಸಬಹುದು. ಯಾವುದೇ ಒಂದು ಸನ್ನಿವೇಶದಲ್ಲಿ ಅವಲೋಕನಕಾರರೂ ಮೂಕ ಪ್ರೇಕ್ಷಕರಂತೆ ನಿಂತಿರಲು ಅಥವಾ ಕುಳಿತಿರಲು ಹೇಗೆ ತಾನೇ ಸಾಧ್ಯ?

ಅವಲೋಕನ ಪದ್ಧತಿ ಅರ್ಥಪೂರ್ಣವಾದ ಮಾಹಿತಿಯನ್ನು ನೀಡಬೇಕಾದರೆ ಸಂಶೋಧಕರು ಅಸಹಭಾಗಿತ್ವದ ತತ್ವವನ್ನು ಅಳವಡಿಸಿಕೊಳ್ಳುವುದು ಅತ್ಯಂತ ಸೂಕ್ತ. ಬಹುತೇಕ ಸಾಮಾಜಿಕ ಸನ್ನಿವೇಶಗಳು ಅರೆಸಹಭಾಗಿತ್ವ ಪದ್ಧತಿಗೆ ಒಳಪಡುತ್ತವೆ. ಹೆಸರೇ ಸೂಚಿಸುವಂತೆ ಅರೆಸಹಭಾಗಿತ್ವ ಎಂದರೆ ಎಲ್ಲೆಲ್ಲಿ ಸಾಧ್ಯವೋ ಹಾಗೂ ಔಚಿತ್ಯವೋ ಅಲ್ಲೆಲ್ಲಾ ಸಂಶೋಧಕರು ಸಹಭಾಗಿಗಳಾಗಬಹುದು ಮತ್ತು ಯಾವ ಸನ್ನಿವೇಶಗಳಲ್ಲಿ ಹೊರಗಿನಿಂದ ಅವಲೋಕಿಸಿದರೆ ಸೂಕ್ತ ಎನಿಸುತ್ತದೆಯೋ ಅಂತಹ ಸನ್ನಿವೇಶಗಳಲ್ಲಿ ಕೇವಲ ಅವಲೋಕನಾಕಾರರಾಗಿ ಕಾರ್ಯನಿರ್ವಹಿಸಬಹುದು. ಸನ್ನಿವೇಶದ ಸಂದರ್ಭ ಹಾಗೂ ಅವಶ್ಯಕತೆಗಳಿಗೆ ತಕ್ಕಂತೆ ಸಂಶೋಧಕರು ತಮ್ಮ ಪಾತ್ರ ಬದಲಾವಣೆ ಮಾಡಿಕೊಳ್ಳುವುದು ಉಚಿತ. ಉದಾಹರಣೆಗೆ, ಸಮುದಾಯಕ ಭೋಜನದ ಒಂದು ಸಂದರ್ಭವನ್ನು ತೆಗೆದುಕೊಳ್ಳೋಣ. ಎಲ್ಲ ಸದಸ್ಯರು ಸಹಪಂಕ್ತಿ ಭೋಜನವನ್ನು ಮಾಡುವಾಗ ಸಂಶೋಧಕರೂ ಈ ಭೋಜನದಲ್ಲಿ ಪಾಲ್ಗೊಳ್ಳುವುದರಿಂದ ಆ ಸಮುದಾಯದ ಆಹಾರ ಸೇವನೆಗೆ ಸಂಬಂಧಿಸಿದ ಆಚರಣೆಗಳು, ನಿಷೇಧಗಳು, ಬಳಸುವ ಆಹಾರ ಸಾಮಗ್ರಿಗಳು, ಅವುಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ಪರಂಪರೆ ಹೀಗೆ ಆಹಾರವನ್ನು ಕುರಿತಂತೆ ಬಹು ಅಮೂಲ್ಯವೆನಿಸಬಹುದಾದ ಮಾಹಿತಿಯನ್ನು ಪಡೆಯಬಹುದು. ಆದರೆ ಇತರರು ಊಟ ಮಾಡುವುದನ್ನು ನಿಂತು ನೋಡುವುದರಿಂದ ವೈಯಕ್ತಿಕ ಅನುಭವಗಳನ್ನು ಪಡೆಯುವ ಅವಕಾಶ ತಪ್ಪಿಹೋಗುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಕಲಹವೊಂದು ನಡೆಯುತ್ತಿದ್ದ ಪಕ್ಷದಲ್ಲಿ ಸಂಶೋಧಕರು ಸಹಭಾಗಿಗಳಾಗುವುದು ಸೂಕ್ತವಲ್ಲ. ಏಕೆಂದರೆ ಯಾರ ಪರ ಅಥವಾ ವಿರೋಧವಾದ ಪಕ್ಷವನ್ನು ವಹಿಸುವುದಾಗಲೀ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಾಗಲೀ ಸಂಶೋಧನಾ ನ್ಯಾಯದ ದೃಷ್ಟಿಯಿಂದ ಸೂಕ್ತವಾದ ನಡವಳಿಕೆಯಲ್ಲ. ಇಂತಹ ಸಂದರ್ಭಗಳಲ್ಲಿ ಅಸಹಭಾಗಿಯಾಗಿರುವುದೇ ಮೇಲು.

ಸಹಭಾಗಿತ್ವ ಮತ್ತು ಅವಲೋಕನ ಇವೆರಡೂ ವಿಧಾನಗಳನ್ನು ಸಮಯ ಹಾಗೂ ಸಂದರ್ಭೋಚಿತವಾಗಿ ಬಳಸುವುದರಿಂದ ಸಮುದಾಯದ ಸ್ನೇಹ ಮತ್ತು ಸಹಕಾರಗಳನ್ನು ಸುಲಭವಾಗಿ

Digitised by Bharatavani, CIIL

ಗಳಿಸಬಹುದು. ಸಂಶೋಧಕರಿಗೆ ಪ್ರಾರಂಭಿಕ ಹಂತಗಳಲ್ಲಿ ಸಮುದಾಯದ ಅಂಗೀಕಾರ ದೊರೆಯುವುದು ಕಷ್ಟವೆನಿಸಿದರೂ ಒಮ್ಮೆ ಸಮುದಾಯದ ಸದಸ್ಯರಿಗೆ ಸಂಶೋಧಕರ ಅಧ್ಯಯನದ ಉದ್ದೇಶಗಳು, ಅವರ ಪ್ರಾಮಾಣಿಕತೆ ಹಾಗೂ ಅವರು ಮಾಹಿತಿಯ ಸದುಪಯೋಗ ಮಾಡಿಕೊಳ್ಳುತ್ತಾರೆ ಎಂಬುದು ಮನವರಿಕೆಯಾದಾಗ ಅವರಿಗೆ ಸಮುದಾಯದ ಸ್ವೀಕೃತಿ ಸುಲಭದಲ್ಲಿ ದೊರೆಯುತ್ತದೆ. ಆದುದರಿಂದ ಸಂಶೋಧನಾ ಪ್ರಕ್ರಿಯೆ ಪೂರ್ಣರೂಪದಲ್ಲಿ ಪ್ರಾರಂಭವಾಗುವ ಮೊದಲೇ ಸಂಶೋಧಕರು ಸಮುದಾಯದ ವಿಶ್ವಾಸ ಹಾಗೂ ನಂಬಿಕೆಗಳನ್ನು ಪಡೆಯುವುದರತ್ತ ಗಮನಹರಿಸಿದಾಗ ಭಾಗಶಃ ಅರೆಸಹಭಾಗಿ ಅವಲೋಕನ ವಿಧಾನವೇ ಯಶಸ್ವಿ ಮಾಹಿತಿ ಸಂಗ್ರಹಣಾ ತಂತ್ರವಾಗಿ ಕಾರ್ಯನಿರ್ವಹಿಸುವುದರಲ್ಲಿ ಸಂದೇಹವಿಲ್ಲ.

**ನಿಯಂತ್ರಿತ ಅವಲೋಕನ:** ಸಾಮಾಜಿಕ ಸಂಶೋಧನೆ ವಿಜ್ಞಾನದ ಹಾದಿಯಲ್ಲಿ ಮುಂದುವರೆಯುತ್ತಾ ಹೋದ ಹಾಗೆಲ್ಲಾ ಸಾಮಾಜಿಕ ಸಂಶೋಧಕರು ಮಾಹಿತಿಯ ಸಂಗ್ರಹಣೆಗಾಗಿ ಉಪಯೋಗಿಸುವ ತಂತ್ರಗಳ ನಿಖರತೆಯೂ ಹೆಚ್ಚಾಗುತ್ತಾ ಹೋಗಬೇಕಾದದ್ದು ಅನಿವಾರ್ಯ. ವೈಜ್ಞಾನಿಕ ಮನೋಭಾವವನ್ನು ಸಮಾಜದ ಅಧ್ಯಯನಕಾರರು ಬೆಳೆಸಿಕೊಳ್ಳಬೇಕಾದರೆ ಅವರು ಪ್ರಮಾಣಬದ್ಧವಾದ ತಂತ್ರಗಳನ್ನು ತಮ್ಮ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಬೇಕಾದದ್ದು ಅತ್ಯಾವಶ್ಯ. ಅನಿಯಂತ್ರಿತ ಅವಲೋಕನದ ವಿಧಾನವನ್ನು ಬಳಸುವ ಸಂಶೋಧಕರು ಯಾವುದೇ ಬಗೆಯ ನಿಯಂತ್ರಣಗಳಿಗೆ ಒಳಪಟ್ಟಿರುವುದಿಲ್ಲ. ಅವಲೋಕನದ ಸಮಯದಲ್ಲಿ ದಾಖಲಿಸಲಾದ ಮಾಹಿತಿಯ ಸತ್ಯಾಸತ್ಯತೆಯನ್ನು ಪರೀಕ್ಷೆಗೆ ಒಳಪಡಿಸುವಂತಹ ವ್ಯವಸ್ಥೆ ಇಲ್ಲದಿದ್ದಲ್ಲಿ ಅವಲೋಕನಕಾರರು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಹಿತಿಯನ್ನು ತಿರುಚಬಹುದಾದ ಸಾಧ್ಯತೆಯಿದೆ. ಅವಲೋಕನ ವಿಧಾನದ ಯಶಸ್ವಿ ಅಥವಾ ಅಯಶಸ್ವಿ ಬಳಕೆ ಇಂದ್ರಿಯಗಳ ಗ್ರಹಣಶಕ್ತಿಯನ್ನೇ ಅವಲಂಬಿಸಿದೆ. 'ಪ್ರತ್ಯಕ್ಷವೇ ಪ್ರಮಾಣ' ಎಂಬ ಅಭಿಪ್ರಾಯ ಸರ್ವಸಮ್ಮತವಾದರೂ ತಮ್ಮ ಅವಲೋಕನೆಗೆ ಒಳಪಡುವ ಎಲ್ಲ ಸನ್ನಿವೇಶಗಳನ್ನು ಸಂಪೂರ್ಣವಾಗಿ ಸಮರ್ಪಕವಾಗಿ ಗ್ರಹಿಸಿ, ಮನಸ್ಸಿನ ಪುಟಗಳ ಮೇಲೆ ಅಚ್ಚೊತ್ತುವ ಶಕ್ತಿ ಎಲ್ಲ ಸಂದರ್ಭಗಳಲ್ಲೂ ಅವಲೋಕನಕಾರರಿಗೆ ಇರುವುದು ಅಸಂಭವ. ಅವಲೋಕಿಸುವ ಹಾಗೂ ದಾಖಲಿಸುವ ಎರಡು ಕ್ರಿಯೆಗಳೂ ಏಕಕಾಲದಲ್ಲಿ ನಡೆಯದೇ ಹೋದಾಗ ಮುಖ್ಯವೆನಿಸುವ ಮಾಹಿತಿ ತಪ್ಪಿಹೋಗಬಹುದಷ್ಟೇ ಅಲ್ಲ, ಅಸತ್ಯವೂ, ಅನುಚಿತವೂ ಆದ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯವೂ ದೊರೆಯಬಹುದು. ಈ ಎಲ್ಲ ಕೊರತೆಗಳನ್ನು ನಿವಾರಿಸುವುದಕ್ಕೆ ನಿಯಂತ್ರಿತ ಅವಲೋಕನ ವಿಧಾನದಿಂದ ಮಾತ್ರ ಸಾಧ್ಯ.

ಅವಲೋಕನ ಕ್ರಿಯೆಯನ್ನು ಒಂದು ಯೋಜಿತ ಹಾಗೂ ವ್ಯವಸ್ಥಿತವಾದ ರೀತಿಯಲ್ಲಿ ಕೈಗೊಳ್ಳುವ ಕ್ರಮಕ್ಕೆ ನಿಯಂತ್ರಿತ ಅವಲೋಕನ ಎಂದು ಹೆಸರು. ನಿಯಂತ್ರಿತ ಅವಲೋಕನ ಎಂದರೆ ಅವಲೋಕಿತರನ್ನು ನಿಯಂತ್ರಣಕ್ಕೆ ಒಳಪಡಿಸುವುದು ಎಂಬರ್ಥವಲ್ಲ. ಅವಲೋಕನಕ್ಕೆ ಒಳಪಟ್ಟ ವ್ಯಕ್ತಿಗಳ ಮೇಲೆ ನಿರ್ಬಂಧ ಹೇರಿದರೆ ಅವರ ವರ್ತನೆಯು ಸಹಜತೆಯಿಂದ ದೂರವಾಗುತ್ತದೆ. ಆದ್ದರಿಂದ ನಿಯಂತ್ರಿತ ಅವಲೋಕನ ವಿಧಾನದಲ್ಲಿ ಅವಲೋಕನಕಾರರು ತಮ್ಮನ್ನು ತಾವೇ ಹಲವು ನಿರ್ಬಂಧಗಳಿಗೆ ಒಳಪಡಿಸಿಕೊಳ್ಳುತ್ತಾರೆ. ಅವಲೋಕಿಸಿದ ಸನ್ನಿವೇಶಗಳನ್ನು ಆ ಕೂಡಲೇ ದಾಖಲು ಮಾಡಿಕೊಳ್ಳುವುದು, ಕ್ಯಾಮರಾದ ನೆರವಿನಿಂದ ಛಾಯಾಚಿತ್ರಗಳನ್ನು ತೆಗೆಯುವುದು, ಸಂದರ್ಶನಗಳನ್ನು ಅಥವಾ ಅನೌಪಚಾರಿಕವಾಗಿ ನಡೆದ ಮಾತುಕತೆ ಮತ್ತು ವಿಚಾರ ವಿನಿಮಯಗಳನ್ನು ಕ್ಯಾಸೆಟ್‌ಗಳಲ್ಲಿ ಧ್ವನಿ ಮುದ್ರಿಸಿಕೊಳ್ಳುವುದು ಹಾಗೂ ವೀಡಿಯೋ ಕ್ಯಾಮರಾದಲ್ಲಿ ದೃಶ್ಯಗಳನ್ನು ಸಂಭಾಷಣೆಗಳನ್ನು ಅಥವಾ ಅವಲೋಕನಾವಧಿಯಲ್ಲಿ ನಡೆಯುವ ಎಲ್ಲ ಪ್ರಮುಖ ಘಟನೆಗಳನ್ನು ಸೆರೆಹಿಡಿಯುವುದು. ಇವೇ ಮುಂತಾದ ಕ್ರಮಗಳನ್ನು ಅಳವಡಿಸಿಕೊಂಡಲ್ಲಿ ಅವಲೋಕನ ಒಂದು ಕ್ರಮಬದ್ಧವಾದ ರೀತಿಯಲ್ಲಿ ಸಾಗುತ್ತದೆ. ದೃಶ್ಯ ಹಾಗೂ ಶ್ರವಣ ಮಾಧ್ಯಮಗಳ ಕ್ಷೇತ್ರಗಳಲ್ಲಿ ಇಂದು ಮಹತ್ತರವಾದ ಬೆಳವಣಿಗೆಗಳುಂಟಾಗಿದ್ದು ಅವುಗಳ ಪೂರ್ಣ ಪ್ರಯೋಜನವನ್ನು ಅವಲೋಕನಕಾರರು ಪಡೆಯಬೇಕಾಗಿದೆ. ನಿಯಂತ್ರಿತ ಅವಲೋಕನಾ ಕ್ರಮದ ಬಳಕೆಯಿಂದ ಘಟನಾವಳಿಗಳನ್ನು ನೈಜ ಸ್ವರೂಪದಲ್ಲಿ ದಾಖಲಿಸಲು ಸಾಧ್ಯವಾಗುತ್ತದೆ. ಈ ಬಗೆಯ ದಾಖಲಾತಿ ಸಂಗ್ರಹಿಸಿದ ಮಾಹಿತಿಗೆ ಒಂದು ಬಗೆಯ ಪುಷ್ಟೀಕರಣ ನೀಡುವುದಷ್ಟೇ ಅಲ್ಲ, ಮಾಹಿತಿಯನ್ನು ತನ್ನ ಪೂರ್ವ ಕಲ್ಪಿತ ಅಭಿಪ್ರಾಯಗಳಿಗೆ ಸರಿಹೊಂದುವಂತಹ ರೀತಿಯಲ್ಲಿ ತಿರುಚುವ ಪ್ರಲೋಭನೆಗಳಿಗೆ ಸಂಶೋಧಕರು ಒಳಗಾಗದಂತೆಯೂ ತಡೆಯುವುದು. ಸಂಶೋಧನಾ ಮಾಹಿತಿಯನ್ನು ಪ್ರಸ್ತುತಪಡಿಸುವಾಗ ಛಾಯಾಚಿತ್ರಗಳು, ಧ್ವನಿಮುದ್ರಿಸಿದ ಸಂಭಾಷಣೆಗಳು ಮುಂತಾದ ಪುರಾವೆಗಳನ್ನು ನೀಡುವುದರಿಂದ ಆ ಮಾಹಿತಿಗೆ ಹೆಚ್ಚಿನ ಮೆರಗು ಹಾಗೂ ವಿಶ್ವಾಸಾರ್ಹತೆ ದೊರೆಯುವುದು.

**ಅವಲೋಕನ ವಿಧಾನದ ಅನುಕೂಲಗಳು:** ಮಾನವರ ನಡವಳಿಕೆಯನ್ನು ಅತ್ಯಂತ ನೈಜವು ನೇರವು ಆದ ರೀತಿಯಲ್ಲಿ ಸೆರೆಹಿಡಿಯಲು ಅವಲೋಕನದ ವಿಧಾನದಲ್ಲಿ ಅವಕಾಶವಿರುವುದೇ ಅವಲೋಕನದ ಅತ್ಯಂತ ಪ್ರಮುಖ ಗುಣ. ವಿವಿಧ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಗಳ ನಡವಳಿಕೆಯನ್ನು ಕುರಿತಂತೆ ನೇರವೂ, ನಿಖರವೂ ಆದ ಮಾಹಿತಿಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುವ ವಿಧಾನ ಅವಲೋಕನ ವಿಧಾನ ಮಾತ್ರ.

ಅನೇಕ ಸಂದರ್ಭಗಳಲ್ಲಿ ಪ್ರಶ್ನಾವಳಿ ಮತ್ತು ಸಂದರ್ಶನ ವಿಧಾನಗಳಿಂದ ಸಂಗ್ರಹಿಸಿದ ಮಾಹಿತಿಯ ಸತ್ಯಾಸತ್ಯತೆಯನ್ನು ಪರೀಕ್ಷೆಗೆ ಒಳಪಡಿಸಲು ಅವಲೋಕನ ವಿಧಾನ ಸಂಶೋಧಕರಿಗೆ ಸಹಾಯಕಾರಿಯಾಗುತ್ತದೆ.

ಸಂದರ್ಶನ, ಪ್ರಶ್ನಾವಳಿ ಅಥವಾ ಅನುಸೂಚಿಗಳನ್ನು ಬಳಸಿ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗದಂತಹ ಸಾಮಾಜಿಕ ಪರಿಸ್ಥಿತಿಗಳಲ್ಲೂ ಅವಲೋಕನ ವಿಧಾನ ವಿಷಯ ಸಂಗ್ರಹಣೆಯ ಅತ್ಯಮೂಲ್ಯ ಮತ್ತು ಏಕೈಕ ಸಾಧನವಾಗಿದೆ.

ಸಾಮಾಜಿಕ ಸಂಶೋಧನೆಯ ಮಾಹಿತಿ ಮೂಲವಾದ ವ್ಯಕ್ತಿಗಳಿಂದ ನಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಪಟ್ಟಾಗ ಅವಲೋಕನವೊಂದೇ ಸಂಶೋಧಕರ ನೆರವಿಗೆ ಬರುವಂತಹ ಸಾಧನ.

**ಅವಲೋಕನ ವಿಧಾನದ ಅನನುಕೂಲಗಳು:** ಅವಲೋಕನ ವಿಧಾನವನ್ನು ಸಮರ್ಪಕವಾದ ರೀತಿಯಲ್ಲಿ ಬಳಸದಿದ್ದಾಗ ಅನೇಕ ಸಮಸ್ಯೆಗಳು ತಲೆದೋರುತ್ತವೆ. ಹಾಗೆಯೇ ಎಲ್ಲ ಬಗೆಯ ಅಧ್ಯಯನಗಳಲ್ಲೂ ಅವಲೋಕನ ವಿಧಾನವನ್ನು ಬಳಸಲು ಅವಕಾಶವಿರುವುದಿಲ್ಲ.

ಅತ್ಯಂತ ಕಡಿಮೆ ಸಮಯದಲ್ಲಿ ಫಲಿತಾಂಶಗಳನ್ನು ಪಡೆಯಲಿಚ್ಛಿಸುವ ಸಂಶೋಧನೆಗಳಲ್ಲಿ ಅವಲೋಕನ ಬಳಕೆ ಸಾಧ್ಯವಾಗಲಾರದು.

ಸಂಶೋಧಕರಿಗೆ ಕಾಲಾವಕಾಶ ಮತ್ತು ಆರ್ಥಿಕ ಬೆಂಬಲ ಹೆಚ್ಚಾಗಿದ್ದರೆ ಮಾತ್ರ ಅವಲೋಕನ ವಿಧಾನ ಬಳಕೆ ಸಾಧ್ಯ.

Digitised by Bharatavani, CIIL

ಎಲ್ಲ ಸಾಮಾಜಿಕ ಸನ್ನಿವೇಶಗಳೂ ಅವಲೋಕನದ ಪರಿಮಿತಿಗೆ ಒಳಪಡುವುದಿಲ್ಲ. ಒಂದು ಸಾಮಾಜಿಕ ಸಂಸ್ಥೆಯನ್ನಾಗಲಿ, ಸಮಸ್ಯೆಯನ್ನಾಗಲಿ ಅರ್ಥಮಾಡಿಕೊಳ್ಳಬೇಕಾದರೆ ಅವುಗಳಿಗೆ ಸಂಬಂಧಿಸಿದ ಅನೇಕ ಘಟನೆಗಳನ್ನು, ಆಗು ಹೋಗುಗಳನ್ನು ನೈಜವಾದ ಪರಿಸ್ಥಿತಿಯಲ್ಲೇ ಅಧ್ಯಯನ ಮಾಡಬೇಕು. ಅಂತಹ ಅನೇಕ ಘಟನೆಗಳ ಅವಲೋಕನ ಸಾಧ್ಯವಾಗದೇ ಹೋಗಬಹುದು.

ಯಾವುದೇ ಒಂದು ಪರಿಕಲ್ಪನೆಯನ್ನು ಎಲ್ಲ ಸಂಶೋಧಕರು ಏಕರೀತಿಯಲ್ಲಿ ಅರ್ಥೈಸಲಾರರು. ಉದಾ: ಸುಖೀಕುಟುಂಬ, ದುಃಖೀ ಕುಟುಂಬ ಮುಂತಾದ ಸಾಪೇಕ್ಷಿತ ಪರಿಕಲ್ಪನೆಗಳು ಬೇರೆ ಬೇರೆ ಸಂಶೋಧನಾಕಾರರಿಗೆ ಬೇರೆ ಬೇರೆ ಅರ್ಥವನ್ನು ನೀಡಬಹುದು. ಅವರವರ ಗ್ರಹಿಕೆಗಳಿಗೆ ತಕ್ಕಂತೆ ಸಂಶೋಧನಕಾರರು ಸನ್ನಿವೇಶವನ್ನು ಅರ್ಥೈಸಿ ವಿಶ್ಲೇಷಿಸುತ್ತಾರೆ. ಈ ಕಾರಣದಿಂದ ಅವಲೋಕನ ವಿಧಾನದಿಂದ ಏಕಪ್ರಕಾರದ ಮಾಹಿತಿಯ ಗಳಿಕೆ ಕಷ್ಟಸಾಧ್ಯ.

ಕೆಲವು ವೇಳೆ ಅವಲೋಕಿಸುವ ವ್ಯಕ್ತಿ ಇಂದ್ರಿಯಗಳ ಸಾಮರ್ಥ್ಯದ ಮಿತಿಯಿಂದಾಗಿ ಘಟನೆಯ ಕೆಲವು ಅಂಶಗಳನ್ನು ಅವಲೋಕಿಸದೆ ಬಿಡಬಹುದು ಅಥವಾ ತಪ್ಪಾಗಿ ಅವಲೋಕಿಸಿ ದಾಖಲಿಸಬಹುದು. ಇದು ಅನಾವಲೋಕನದ ದೋಷವೆನಿಸುತ್ತದೆ. ಘಟನೆಯನ್ನು ಕ್ಯಾಮರಾ, ವೀಡಿಯೋ ಕ್ಯಾಮರ ಮೂಲಕ ದಾಖಲಿಸುವುದರಿಂದ. ಹೆಚ್ಚು ಮಂದಿ ಅವಲೋಕಿಸುವುದರಿಂದ ಈ ದೋಷ ಪರಿಹರಿಸಬಹುದು. ಮತ್ತೊಂದು ಮಿತಿ ಘಟನೆಯನ್ನು ತಪ್ಪಾಗಿ ವ್ಯಾಖ್ಯಾನಿಸುವುದು; ಅಥವಾ ಅರ್ಥೈಸುವುದು. ಅವಲೋಕಿಸುವ ವ್ಯಕ್ತಿ ಪೂರ್ವನಿಲುವುಗಳಿಂದ ಅಥವಾ ತಪ್ಪುಗ್ರಹಿಕೆಗಳಿಂದಾಗಿ ಪ್ರೇರಿತವಾದಾಗ ಈ ದೋಷ ಉಂಟಾಗುತ್ತದೆ. ಅವಲೋಕಿಸುವ ವ್ಯಕ್ತಿಗಳಿಗೆ ವಸ್ತುನಿಷ್ಠ ವೀಕ್ಷಣೆ ಬಗ್ಗೆ ತರಬೇತಿ ನೀಡುವುದರಿಂದ ಈ ದೋಷ ನಿವಾರಿಸಬಹುದು.

ಮಿತಿಗಳೇನೇ ಇರಲಿ ಅವಲೋಕನ ವಿಧಾನ ಮಾಹಿತಿ ಸಂಗ್ರಹಣೆಯ ಅತ್ಯಂತ ಅಮೂಲ್ಯ ತಂತ್ರಗಳಲ್ಲಿ ಒಂದು ಎನ್ನುವುದರಲ್ಲಿ ಸಂದೇಹವಿಲ್ಲ. ಸೂಕ್ಷ್ಮ ಅವಲೋಕನಾ ಶಕ್ತಿಯನ್ನು ಬೆಳಸಿಕೊಳ್ಳದಿದ್ದರೆ ಯಾವುದೇ ಸಾಮಾಜಿಕ ಸಂಶೋಧನೆ ಸಫಲವಾಗಲು ಸಾಧ್ಯವೇ ಇಲ್ಲ. ಮತ್ಯಾವ ವಿಧಾನದಿಂದಲೂ ಅರಿಯಲಾಗದ ಅಥವಾ ಊಹಿಸಲಾಗದ ಅನೇಕ ಸಾಮಾಜಿಕ ಸಂಗತಿಗಳು ನಮಗೆ ಅವಲೋಕನ ವಿಧಾನದಿಂದ ಮಾತ್ರ ದೊರೆಯುತ್ತವೆ. ಅನುಭವದಿಂದ ಅರ್ಥವನ್ನು ಗ್ರಹಿಸಲು ಮಾನವನ ವರ್ತನೆಯನ್ನು ಅವಲೋಕಿಸುವುದೇ ಮೊದಲ ಸಂಶೋಧನಾ ಉಪಕರಣ. ಅವಲೋಕನ ವಿಧಾನವನ್ನು ಬಳಸಿಕೊಳ್ಳದ ಸಾಮಾಜಿಕ ಸಂಶೋಧನೆ ಅಪೂರ್ಣ ಹಾಗೂ ಅಪಕ್ವವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

–ಮೇ.ರೋ

# ಆ

## ಆಂತರಿಕ ಮೌಲ್ಯಮಾಪನ

ಮೌಲ್ಯಮಾಪನಕ್ಕೆ ಆಂಗ್ಲ ಭಾಷೆಯಲ್ಲಿ **Evaluation** ಎಂದು ಹೇಳಲಾಗುವುದು. ವಿಷಯವನ್ನು ಸಂಗ್ರಹಿಸಿದ ನಂತರ ವ್ಯವಸ್ಥಿತವಾಗಿ ಬೆಲೆ ನಿರ್ಧರಿಸುವ ಹಂತಗಳನ್ನು ಮೌಲ್ಯಮಾಪನ ಎನ್ನುತ್ತೇವೆ.

ಮೌಲ್ಯಮಾಪನವು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹಾಕಿಕೊಂಡಂತಹ ಶಿಕ್ಷಣದ ಉದ್ದೇಶಗಳು ಎಷ್ಟರಮಟ್ಟಿಗೆ ಸಾಧಿಸಿವೆ ಎಂಬುದನ್ನು ತಿಳಿಸುವುದಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಮೌಲ್ಯಮಾಪನವು ಶಿಕ್ಷಣ, ವಿದ್ಯಾರ್ಥಿಗಳ ಹಾಗೂ ಸಂಸ್ಥೆಗಳ ಹಲವಾರು ಗುಣಧರ್ಮಗಳನ್ನು ನಿರಂತರವಾಗಿ ಮೌಲ್ಯನಿಷ್ಕರ್ಷೆ ಮಾಡುವ ನೂತನ ವಿಧಾನವಾಗಿದೆ.

ಮೌಲ್ಯಮಾಪನವು ಹೆಚ್ಚಿನ ಕಲಿಕೆಗೆ ಪ್ರೇರಕವಾಗಿದೆ. ಕಲಿಕೆ ಪ್ರಕ್ರಿಯೆಯ ಸಫಲತೆ ಹಾಗೂ ವಿಫಲತೆ ತಿಳಿಯಬೇಕಾದರೆ ಮೌಲ್ಯಮಾಪನಕ್ಕೆ ನಾವು ಒಳಗೊಳ್ಳಲೇಬೇಕು. ಮೌಲ್ಯಮಾಪನವು ತನ್ನದೇ ಆದ ಸಾಧನ ಹಾಗೂ ತಂತ್ರಗಳ ಸಹಾಯದಿಂದ ಏನನ್ನು ಅಳೆಯಬೇಕಾಗಿದೆ ಎಂಬುದನ್ನು ಅಳೆದು ನಮ್ಮ ಸ್ಥಾನವನ್ನು ಸೂಚಿಸುವುದರೊಂದಿಗೆ ಪ್ರಗತಿಗೆ ದಾರಿಯಾಗುವುದು.

ಮೌಲ್ಯಮಾಪನದಷ್ಟೇ ಮಹತ್ವವನ್ನು ಪಡೆದ ಮೌಲ್ಯಮಾಪನದ ಇನ್ನೊಂದು ಮಗ್ಗಲು ಆಂತರಿಕ ಮೌಲ್ಯಮಾಪನ **(Internal Assessment)**. ಆಂತರಿಕ ಮೌಲ್ಯಮಾಪನವು ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಯ ಸರ್ವತೋಮುಖ ಏಳ್ಗೆಯ ಉದ್ದೇಶದಿಂದ ನಿರಂತರವಾಗಿ ನಡೆಯುವ ಒಂದು ಪ್ರಕ್ರಿಯೆ ಎನಿಸಿದೆ. ಆದ್ದರಿಂದಲೇ **Internal Assessment is a continuous process** ಎಂದು ಹೇಳಲಾಗುತ್ತಿದೆ. ಇದನ್ನೇ ಸಂಕ್ಷಿಪ್ತದಲ್ಲಿ **IA** ಎಂದು ಹೇಳುತ್ತಿದ್ದೇವೆ. ಆಂತರಿಕ ಮೌಲ್ಯಮಾಪನವು ಇತ್ತೀಚಿನ ದಿನಗಳಲ್ಲಿ ಎಲ್ಲ ವಿಷಯಗಳಲ್ಲಿ ತನ್ನ ಬಾಹುಗಳನ್ನು ಚಾಚಿದೆ. ಆದ್ದರಿಂದಲೇ ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ತಂತ್ರಜ್ಞಾನ, ವೈದ್ಯಕೀಯ, ಗಣಕಶಾಸ್ತ್ರ, ಕೃಷಿ, ಗ್ರಂಥಾಲಯ, ವ್ಯವಹಾರಶಾಸ್ತ್ರ ಮುಂತಾದ ಕ್ಷೇತ್ರಗಳಿಗೆ ಆಂತರಿಕ ಮೌಲ್ಯಮಾಪನವು ದಾಂಗುಡಿಯನ್ನಿಟ್ಟಿದೆ.

**ಅರ್ಥ:** ಆಂತರಿಕ ಮೌಲ್ಯಮಾಪನವು ವಿದ್ಯಾರ್ಥಿಯಲ್ಲಿ ಅಡಗಿರುವ ಸಾಮರ್ಥ್ಯವನ್ನು ಮೌಲ್ಯಮಾಪನ ತಂತ್ರಗಳ ಮೂಲಕ ಅಳೆದು, ಆಗಿರುವ ಕೊರತೆ ಅಥವಾ ತಪ್ಪುಗಳಿಗೆ ಪರಿಹಾರ ಅಥವಾ ಮಾರ್ಗದರ್ಶನ ನೀಡಿ ಮತ್ತೆ ಅದೇ ದೋಷ ಉಂಟಾಗದಂತೆ ಯಶಸ್ಸಿನತ್ತ ಮುಖ ಮಾಡುವುದಾಗಿದೆ.

- ಆಂತರಿಕ ಮೌಲ್ಯಮಾಪನವು ವಿದ್ಯಾರ್ಥಿಯ ಮನಸ್ಸಿನಲ್ಲಿಯ ಸಾಮರ್ಥ್ಯ, ದೈಹಿಕ ಬಲಿಷ್ಠತೆ, ಭಾವನಾತ್ಮಕ ಸಂಬಂಧವನ್ನು ತಕ್ಷಣವೇ ಗುರುತಿಸಿ, ಕೊರತೆಗಳಿಗೆ ಪರಿಹಾರ ನೀಡುವುದಾಗಿದೆ.

- **Internal Assessment is a part of valuation aimed at continuous progress of an individual.** ಮಗುವಿನ ಸಮಗ್ರ ವ್ಯಕ್ತಿತ್ವ ವಿಕಾಸವನ್ನು ಅಳೆದು ನೋಡುವ ನೂತನ ವಿಧಾನವೇ ಆಂತರಿಕ ಮೌಲ್ಯಮಾಪನ. ಶಿಕ್ಷಣದ ಉದ್ದೇಶಗಳು ಹಾಗೂ ಗುರಿಗಳು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೆ ಎಂಬುದನ್ನು ಹತ್ತಿರದಿಂದ ನಿರ್ಧರಿಸುವುದೇ ಆಂತರಿಕ ಮೌಲ್ಯಮಾಪನ.

- ಕಲಿಸುವಿಕೆ ಮತ್ತು ಕಲಿಯುವಿಕೆಯ ಪರಿಣಾಮಾತ್ಮಕ ಹಾಗೂ ಗುಣಾತ್ಮಕ ಮೌಲ್ಯ ನಿರ್ಧಾರಣೆಯನ್ನು ಮಾರ್ಗದರ್ಶನದೊಂದಿಗೆ ಮಾಡುವುದೇ ಆಂತರಿಕ ಮೌಲ್ಯಮಾಪನ.

Digitised by Bharatavani, CIIL

**ಆಂತರಿಕ ಮೌಲ್ಯಮಾಪನದ ಉದ್ದೇಶಗಳು:** ಆಂತರಿಕ ಮೌಲ್ಯಮಾಪನವು ಶೈಕ್ಷಣಿಕ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಶಿಕ್ಷಣ ಕ್ಷೇತ್ರದ ಯಶಸ್ಸು ಆಂತರಿಕ ಮೌಲ್ಯಮಾಪನದ ಮೇಲೆ ಅವಲಂಬಿತವಾಗಿದೆ. ಆಂತರಿಕ ಮೌಲ್ಯಮಾಪನದಿಂದ ವಿದ್ಯಾರ್ಥಿಯ ಜ್ಞಾನ, ಕೌಶಲ್ಯದ ಮೌಲ್ಯ ನಿರ್ಧಾರವಾಗುತ್ತದೆ.

ಆಂತರಿಕ ಮೌಲ್ಯಮಾಪನದ ಉದ್ದೇಶಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

- ಪಠ್ಯಕ್ರಮದತ್ತ ಮಕ್ಕಳನ್ನು ಕೊಂಡೊಯ್ಯಲು
- ಮಕ್ಕಳನ್ನು ಸಾಮರ್ಥ್ಯಗಳಿಗೆ ತಕ್ಕಂತೆ ವಿಂಗಡಿಸಲು
- ಮಕ್ಕಳಲ್ಲಿ ದೋಷ ಗುರುತಿಸಿ ತಕ್ಷಣದ ಪರಿಹಾರಕ್ಕೆ ಮಾರ್ಗದರ್ಶನ ಹಾಗೂ ಸಲಹೆ ನೀಡಲು
- ಬೋಧನಾ ವಿಧಾನಗಳನ್ನು ಸುಧಾರಿಸಲು
- ಬೋಧನೆಯ ಮಟ್ಟವನ್ನು ಅರಿತು, ಅವಶ್ಯವಿದ್ದ ತಿಳುವಳಿಕೆ ನೀಡಲು
- ವಿದ್ಯಾರ್ಥಿಯ ಬಗ್ಗೆ ನಿರ್ದಿಷ್ಟ ಮಾಹಿತಿ ಪಡೆದು ಪೋಷಕರಿಗೆ ವರದಿ ಮಾಡಲು
- ಶಾಲೆ ಯೋಜನೆ, ಶಾಲಾ ಪ್ರಗತಿಯ ಬಗ್ಗೆ ಮೇಲ್ವಿಚಾರಕರಿಗೆ ವರದಿ ಒದಗಿಸಲು
- ಒಂದು ವಿಷಯ ಅಥವಾ ಚಟುವಟಿಕೆಯಲ್ಲಿ ಸಾಧನೆಯನ್ನು ಗುರುತಿಸುವುದು.

ಹೀಗೆ ಅನೇಕ ಉದ್ದೇಶಗಳನ್ನು ಹೊಂದಿರುವ ಆಂತರಿಕ ಮೌಲ್ಯಮಾಪನ ಒಂದು ಪ್ರಗತಿದಾಯಕವಾದ ಪರಿಕಲ್ಪನೆಯಾಗಿದೆ.

**ಆಂತರಿಕ ಮೌಲ್ಯಮಾಪನದ ಸ್ವರೂಪ**

- ಆಂತರಿಕ ಮೌಲ್ಯಮಾಪನವು ಒಂದು ನಿರಂತರ ಪ್ರಕ್ರಿಯೆಯಾಗಿದೆ.
- ಆಂತರಿಕ ಮೌಲ್ಯಮಾಪನವು ಹೆಚ್ಚಿನ, ತೀವ್ರ ಅಧ್ಯಯನಕ್ಕೆ ಪ್ರೇರಣೆಯಾಗಿರುತ್ತದೆ.
- ಆಂತರಿಕ ಮೌಲ್ಯಮಾಪನವು ಕ್ರಿಯಾಶೀಲ ಕ್ರಿಯೆಯಾಗಿರುತ್ತದೆ.
- ಶಿಕ್ಷಣದ ಉದ್ದೇಶ, ಪಠ್ಯವಸ್ತು, ಕಲಿಕಾ ಚಟುವಟಿಕೆ ಮತ್ತು ಸಾಧನಗಳು ಈ ಅಂಶಗಳನ್ನು ಹೊಂದಿದ ಕಾರ್ಯವಿಧಾನವಾಗಿರುತ್ತದೆ.
- ವಿದ್ಯಾರ್ಥಿಯ ಸತತ ಪ್ರಯತ್ನ, ಬದಲಾವಣೆ, ಅಭಿವೃದ್ಧಿ ಹಾಗೂ ಅವಕಾಶದ ಸದುಪಯೋಗವನ್ನು ತೋರಿಸುವ ಚಿತ್ರಣವಾಗಿರುತ್ತದೆ.
- ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಣೆ ಮಾಡಿ ನಿರ್ಧಾರ ತೆಗೆದುಕೊಳ್ಳಲು ಸಹಾಯಕವಾಗಿದೆ.

**ಆಂತರಿಕ ಮೌಲ್ಯಮಾಪನದ ವಿಧಾನಗಳು:** ಆಂತರಿಕ ಮೌಲ್ಯಮಾಪನವನ್ನು ವಿಷಯಾತ್ಮಕ (Theory) ಮತ್ತು ಪ್ರಯೋಗಾತ್ಮಕ (Practium) ಎಂದು ವಿಂಗಡಿಸಲಾಗುತ್ತದೆ. ಅಲ್ಲದೇ ವರ್ಷವಿಡೀ ಜರುಗುವ ಕಲಿಕಾ ಪ್ರಕ್ರಿಯೆಯನ್ನು ಎರಡು ಅಥವಾ ಮೂರು ಭಾಗಗಳಾಗಿ ವಿಂಗಡಿಸಿ ಆಂತರಿಕ ಮೌಲ್ಯಮಾಪನದ ಪ್ರಕ್ರಿಯೆಗೆ ವಿದ್ಯಾರ್ಥಿಯನ್ನು ಒಳಪಡಿಸಲಾಗುತ್ತದೆ. (ತ್ರೈಮಾಸಿಕ / ಷಾಣ್ಮಾಸಿಕ)

ಪ್ರತಿಯೊಂದು ಭಾಗದಲ್ಲಿ ಪ್ರತಿ ವಿಷಯಕ್ಕೆ ಸರಿಯಾಗಿ ಪರೀಕ್ಷೆ (Test), ಮೌಖಿಕ ಪರೀಕ್ಷೆ (Oral Test), ದತ್ತ ಕಾರ್ಯ, ಪ್ರಾಯೋಗಿಕ (Practicals), ಭಾಗವಹಿಸುವಿಕೆ (Participation), ಹಾಜರಾತಿಗಳ (Attendance) ಮೂಲಕ ಆಂತರಿಕ ಮೌಲ್ಯಮಾಪನವನ್ನು ನಡೆಸಲಾಗುವುದು. ಅವಶ್ಯವಿದ್ದಾಗ ಮಾರ್ಗದರ್ಶಕರು ಅಥವಾ ಸಲಹೆಗಾರರು ವಿದ್ಯಾರ್ಥಿಯ ತಿದ್ದುಪಡಿಗೆ ದಾರಿ ತೋರುವರು. ಅಲ್ಲದೇ ವಿವಿಧ ಹಂತಗಳ ಸಾಧನೆಯನ್ನು ಅಂತಿಮ ಸಾಧನೆಯೊಂದಿಗೆ ಸೇರಿಸಿ ವಾರ್ಷಿಕ ಶೈಕ್ಷಣಿಕ ಮಟ್ಟವನ್ನು ನಿರ್ಧರಿಸುವರು. ಆಂತರಿಕ ಮೌಲ್ಯಮಾಪನದಿಂದಾಗಿ ವಿದ್ಯಾರ್ಥಿಯಲ್ಲಿ ನಿಯಮಪಾಲನೆಯೊಂದಿಗೆ ಸತತ ಪ್ರಯತ್ನದ ಸದ್ಗುಣವು ಬೆಳೆಯುವುದು.

ಮೇಲಿನ ವಿವರ ವಿವಿಧ ವಿಷಯ ಕೋರ್ಸುಗಳಿಗೆ ಅನ್ವಯವಾದರೆ ಶಿಕ್ಷಣ ಪದವಿಗೆ (B.Ed.,) ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳಿಗೆ ಆಂತರಿಕ ಮೌಲ್ಯಮಾಪನವನ್ನು ನಡೆಸಲಾಗುವುದು:

ಪಾಠ ಬೋಧನೆ (Practice teaching), ವಿಮರ್ಶಾಪಾಠ (Criticism Lesson), ಪಾಠಗಳ ಅವಲೋಕನ (Observation of Lessons), ಪಾಠೋಪಕರಣ (Teaching Aid), ಘಟಕಯೋಜನೆ ಹಾಗೂ ಘಟಕ ಪರೀಕ್ಷೆ (Unit Plan and Unit Test), ಸಂಪನ್ಮೂಲ ಘಟಕ (Resource Unit), ಪರೀಕ್ಷಾ ಸಾಮಗ್ರಿಗಳು (Test Materials), ಅಣುಬೋಧನೆ (Micro Teaching) ಮತ್ತು ಪ್ರಾಯೋಗಿಕ ಪಾಠಗಳು (Practical Lessons).

ಶಿಕ್ಷಣ ಪದವಿಗೆ ಸಂಬಂಧಿಸಿದಂತೆ ವಿಶೇಷವಾಗಿ 100 ಗುಣಗಳ ಒಂದು ಪತ್ರಿಕೆಯಲ್ಲಿ (20+80)ರ ರೀತಿಯಲ್ಲಿ ವಿಂಗಡಣೆ ಇದ್ದು 20 ಆಂತರಿಕ ಮೌಲ್ಯಮಾಪನ ಮತ್ತು 80 ವಿಶ್ವವಿದ್ಯಾನಿಲಯದ ಮೌಲ್ಯಮಾಪನವಾಗಿರುತ್ತದೆ. 20 ಗುಣಗಳು ಆಂತರಿಕ ಪರೀಕ್ಷಕರಿಂದ ಮೌಲ್ಯಮಾಪನ ಮಾಡಲ್ಪಟ್ಟರೆ, 80 ಗುಣಗಳು ಬಾಹ್ಯ ಮೌಲ್ಯಮಾಪಕರಿಂದ ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು. ಉದಾ: ಒಂದು ವಿಶ್ವವಿದ್ಯಾಲಯದ ಬಿ.ಎಡ್. ಪದವಿಗೆ 1000 ಗುಣಗಳನ್ನು ನಿಗದಿ ಮಾಡಿದ್ದರೆ ಇದರಲ್ಲಿ 200 ಗುಣಗಳು ಆಂತರಿಕ ಮೌಲ್ಯಮಾಪನಕ್ಕೆ 200 ಗುಣಗಳು ಪ್ರಾಯೋಗಿಕ ಪರೀಕ್ಷೆಯ ಮೌಲ್ಯಮಾಪನಕ್ಕೆ ಹಾಗೂ 600 ಗುಣಗಳು ಬಾಹ್ಯ ಪರೀಕ್ಷೆಯ ಮೌಲ್ಯಮಾಪನಕ್ಕೆ ಇರಿಸಲಾಗುತ್ತದೆ.

ಶಿಕ್ಷಣ ಪದವಿಯ ವಿದ್ಯಾರ್ಥಿಗಳನ್ನು ಇನ್ನಷ್ಟು ಆಳವಾಗಿ ಆಂತರಿಕ ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿದ್ದಲ್ಲಿ, ವಿದ್ಯಾರ್ಥಿ ತಯಾರಿಸಿದ/ಬರೆದ 1. ಬೋಧನೋಪಕರಣ (Teaching-Aid) 2. ಸಂಪನ್ಮೂಲ ಘಟಕ (Resource Unit), ಕಾರ್ಯಪುಸ್ತಕ (Work Book), ಬೋಧನಾ ಸಂಚಿ (Instructional Kit), ಕ್ರಿಯಾ ಸಂಶೋಧನೆ (Action Research) ಗಳನ್ನು ತಯಾರಿಸಲು ಹೇಳಲಾಗುವುದು.

ಶಿಕ್ಷಣ ಪದವಿಯ (ಬಿ.ಎಡ್., ವಿದ್ಯಾರ್ಥಿ ತಯಾರಿಸಿದ ದತ್ತ ಕಾರ್ಯವನ್ನು ಶಿಕ್ಷಣ ತಜ್ಞರು/ಶಿಕ್ಷಕರು ಪರೀಕ್ಷಿಸಿ ಗುಣ ನೀಡುವರು. ಇದನ್ನೇ ಬಿ.ಎಡ್., ಆಂತರಿಕ ಮೌಲ್ಯಮಾಪನ ಎನ್ನುತ್ತೇವೆ.) ಶಿಕ್ಷಕರು ನೀಡಿದ ಗುಣಗಳ ಸಮರ್ಪಕತೆಯನ್ನು ಪರೀಕ್ಷಿಸಲು ವಿಶ್ವವಿದ್ಯಾಲಯ ಮಟ್ಟದಲ್ಲಿ ಸಮನ್ವಯ ಸಮಿತಿ (Coordination Committee) ಇರುತ್ತದೆ. ಆ ಸಮಿತಿಯಲ್ಲಿ ಶಿಕ್ಷಣ ವಿಭಾಗದ ಮುಖ್ಯಸ್ಥರು, ಹಿರಿಯ ಪ್ರಾಚಾರ್ಯರು (2 ಜನ), ಒಬ್ಬರು ಹೊರಗಿನ ವಿಶ್ವವಿದ್ಯಾಲಯದ ಪ್ರಾಚಾರ್ಯರು ಹಾಗೂ ಅದೇ ಮಹಾವಿದ್ಯಾಲಯದ ಪ್ರಾಚಾರ್ಯರು ಇದ್ದು, ವಿದ್ಯಾರ್ಥಿಗಳು ಸಲ್ಲಿಸಿದ ದತ್ತ ಕಾರ್ಯವನ್ನು ಪರೀಕ್ಷಿಸಿ, ಅವಶ್ಯವಿದ್ದಲ್ಲಿ ಮೌಖಿಕ ಸಂದರ್ಶನವನ್ನು ಏರ್ಪಡಿಸಿ ಮಹಾವಿದ್ಯಾಲಯಕ್ಕೆ

Digitised by Bharatavani, CIIL

ಸರಾಸರಿ (Mean) ಹಾಗೂ (SD) ಮಾನಕ ವಿಚಲನೆ ನೀಡಲಾಗುವುದು. ಸಮನ್ವಯ ಸಮಿತಿಯ ಮಾರ್ಗದರ್ಶನದಂತೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಆಂತರಿಕ ಮೌಲ್ಯಮಾಪನ (IA Marks)ದ ಗುಣಗಳನ್ನು ನೀಡುವುದರೊಂದಿಗೆ ಆಂತರಿಕ ಮೌಲ್ಯಮಾಪನದ ಪ್ರಕ್ರಿಯೆ ನಡೆಸಲಾಗುತ್ತದೆ.

**ಆಂತರಿಕ ಮೌಲ್ಯಮಾಪನದ ಗುಣಗಳು**

- ಆಂತರಿಕ ಮೌಲ್ಯಮಾಪನವು ವಿದ್ಯಾರ್ಥಿಯ ಅಧ್ಯಯನದ ಗುಣಮಟ್ಟವನ್ನು ಹೆಚ್ಚಿಸುವುದು.
- ಆಂತರಿಕ ಮೌಲ್ಯಮಾಪನದಿಂದಾಗಿ ವಿದ್ಯಾರ್ಥಿ ಹಾಗೂ ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುವರು.
- ವಿದ್ಯಾರ್ಥಿಗಳು ತಮ್ಮ ತಪ್ಪನ್ನು ತಿದ್ದಿಕೊಂಡು ಇನ್ನಷ್ಟು ಸಾಧನೆಗೈಯಲು ಸಹಾಯಕವಾಗುವುದು.
- ಸಮನ್ವಯ ಸಮಿತಿಯ ಭೇಟಿ ಇರುವುದರಿಂದ ಆಂತರಿಕ ಮೌಲ್ಯಮಾಪನದ ಗುಣಗಳನ್ನು ನೀಡುವಾಗ ಶಿಕ್ಷಕರು ಸಹ ಎಚ್ಚರಿಕೆಯಿಂದ ಇರಲು ಬಯಸುವರು.
- ಆಂತರಿಕ ಮೌಲ್ಯಮಾಪನದ ನಂತರ ವಿದ್ಯಾರ್ಥಿಗಳಿಗೆ ಪತ್ರಿಕೆಯನ್ನು ನೀಡುವುದರಿಂದ ಎಲ್ಲವೂ ಪಾರದರ್ಶಕವಾಗಿರುವುದು.
- ಆಂತರಿಕ ಮೌಲ್ಯಮಾಪನದ ನಂತರ ವಿದ್ಯಾರ್ಥಿಗಳಿಗೆ ಪತ್ರಿಕೆಯನ್ನು ನೀಡುವುದರಿಂದಾಗಿ ಬಿ.ಎಡ್., ಕೋರ್ಸಿನಲ್ಲಿ ಅನಾರೋಗ್ಯಕರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುವುದು.
- ಪ್ರತಿಯೊಬ್ಬ ವಿದ್ಯಾರ್ಥಿಗೆ ತನ್ನ ಸಾಧನೆಯ ಬಗ್ಗೆ ತೃಪ್ತಿ ಇರುವುದು.
- ಆಂತರಿಕ ಮೌಲ್ಯಮಾಪನದಿಂದಾಗಿ ವಿದ್ಯಾರ್ಥಿಗಳು ಶಿಕ್ಷಕರ ಮೇಲೆ ಆಪಾದನೆ ಮಾಡುವುದು ತಪ್ಪುವುದು.

**ಆಂತರಿಕ ಮೌಲ್ಯಮಾಪನದ ಮಿತಿಗಳು**

- ವಿದ್ಯಾರ್ಥಿಗಳು ಶಿಕ್ಷಕರನ್ನು ಆಕರ್ಷಿಸಲು ಮೇಲಿಂದ ಮೇಲೆ ಭೇಟಿ ಮಾಡುವುದು.
- ಆಂತರಿಕ ಮೌಲ್ಯಮಾಪನದ ಹೆದರಿಕೆಯಿಂದಾಗಿ ವಿದ್ಯಾರ್ಥಿಗಳು ಕೃತಕ ಅಧ್ಯಯನದ ನಾಟಕ ಮಾಡುವರು.
- ವಿದ್ಯಾರ್ಥಿಗಳು ಜ್ಞಾನ ಸಂಪಾದನೆಗಿಂತ ಕೊಟ್ಟಂತಹ ಕಾರ್ಯವನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತಲೇ ಇರುವರು.
- ವಿದ್ಯಾರ್ಥಿಗಳು ಕಾರ್ಯಭಾರದಿಂದಾಗಿ ಥಿಯರಿ ಅಭ್ಯಾಸವನ್ನು ಕಡಿಮೆಗೊಳಿಸಿ ದತ್ತಕಾರ್ಯವನ್ನೇ ಪ್ರಧಾನವನ್ನಾಗಿ ಭಾವಿಸಬಹುದು.
- ಆಂತರಿಕ ಮೌಲ್ಯಮಾಪನ ಮಾಡುವಾಗ ಶಿಕ್ಷಕರು ಸಾಕಷ್ಟು ಗಮನಹರಿಸದೇ ನಿಯಮಮಾತ್ರಕ್ಕೆ ಮೌಲ್ಯಮಾಪನ ಮಾಡಿ ಮುಗಿಸಬಹುದು.

**ಆಂತರಿಕ ಮೌಲ್ಯಮಾಪನದ ಸಮಸ್ಯೆಗಳು:** ಆಂತರಿಕ ಮೌಲ್ಯಮಾಪನವು ಕೆಲವು ಸಮಸ್ಯೆಗಳನ್ನು ಹೊಂದಿದ್ದು ಅವು ಈ ಕೆಳಗಿನಂತಿವೆ:

- ಆಂತರಿಕ ಮೌಲ್ಯಮಾಪನದಿಂದಾಗಿ ಮಹಾವಿದ್ಯಾಲಯಗಳು, ಶಿಕ್ಷಕರು, ವಿದ್ಯಾರ್ಥಿಗಳನ್ನು ಶೋಷಿಸುವುದಕ್ಕೆ ಅವಕಾಶವಿದೆ.
- ಆಂತರಿಕ ಮೌಲ್ಯಮಾಪನದಿಂದಾಗಿ ಶಿಕ್ಷಕರು ಹೇಳಿದ್ದೇ ವಿದ್ಯಾರ್ಥಿಗಳಿಗೆ ವೇದವಾಕ್ಯವಾಗಿ ಪರಿಣಮಿಸುತ್ತದೆ. ಶಿಕ್ಷಕರ ಮಾರ್ಗದರ್ಶನದಂತೆಯೇ ಎಲ್ಲವೂ ಜರುಗುವುದು. ವಿದ್ಯಾರ್ಥಿಗಳ ಸ್ವಂತ ವಿಚಾರಕ್ಕೆ ಅತ್ಯಂತ ಕಡಿಮೆ ಪ್ರಾಧಾನ್ಯತೆ ಇರುವುದು.

ಆಂತರಿಕ ಮೌಲ್ಯಮಾಪನವು ಮೌಲ್ಯಮಾಪನದ ಒಂದು ಅವಿಭಾಜ್ಯ ಭಾಗವಾಗಿದ್ದು, ಉತ್ತಮ ಶಿಕ್ಷಕವೃಂದ ಹಾಗೂ ಸತತ ಕಾರ್ಯನಿರತ ವಿದ್ಯಾರ್ಥಿ ಸಮೂಹಕ್ಕೆ ಒಳ್ಳೆಯ ಫಲಿತಾಂಶವನ್ನು ನೀಡುವುದಾಗಿದೆ. ಈ ಪದ್ಧತಿಯಿಂದ ವಿದ್ಯಾರ್ಥಿಗಳಲ್ಲಿ ಕಾರ್ಯಕ್ಷಮತೆಯ ಗುಣ ವೃದ್ಧಿಯಾಗುವುದು. ಅಲ್ಲದೇ ಮಹಾವಿದ್ಯಾಲಯದ ಶ್ರೇಯಸ್ಸು ಅದರ ಕಾರ್ಯದ ಗುಣಮಟ್ಟದ ಮೇಲೆ ಅಳೆಯಲ್ಪಡುವುದು.

–ಜ.ಗು.ರೊ

## ಆಧುನೀಕರಣ ಮತ್ತು ಶಿಕ್ಷಣ

ಆಧುನೀಕರಣವು ಮೂಲಭೂತವಾಗಿ ಸಾಮಾಜಿಕ ಪರಿವರ್ತನೆ ಪ್ರಕ್ರಿಯೆಗೆ ಸಂಬಂಧಪಟ್ಟ ಪರಿಕಲ್ಪನೆಯಾಗಿದೆ. ಪರಿವರ್ತನೆ ಪ್ರಕೃತಿಯ ಒಂದು ನಿಯಮ. ವಿಶ್ವದ ಎಲ್ಲವೂ ಬದಲಾಗುತ್ತದೆ. ಇದು ಪರಸ್ಪರ ಒಡನಾಟದಲ್ಲಿ ತೊಡಗಿರುವ ವ್ಯಕ್ತಿಗಳಿಂದ ಕೂಡಿದ ಎಲ್ಲ ಮಾನವ ಸಮಾಜಗಳಿಗೂ ಅನ್ವಯಿಸುತ್ತದೆ. ಸಮಾಜ ಪ್ರಾಚೀನವಾಗಿರಬಹುದು ಅಥವಾ ಆಧುನಿಕವಾಗಿರಬಹುದು, ಎಲ್ಲ ಪ್ರಕಾರಗಳಲ್ಲೂ ಪರಿವರ್ತನೆ ಉಂಟಾಗುತ್ತದೆ. ಸಮಾಜ ಶಾಸ್ತ್ರಜ್ಞರು ಸಾಮಾಜಿಕ ಪರಿವರ್ತನೆಯ ದಿಸೆಯನ್ನು ಕಂಡುಕೊಳ್ಳಲು ಹೆಚ್ಚು ಆಸಕ್ತಿ ತೋರಿಸುತ್ತಾರೆ. ಸಾಮಾಜಿಕ ಪರಿವರ್ತನೆಯ ಒಂದು ಪರಿಕಲ್ಪನೆಯಾಗಿ ಆಧುನೀಕರಣ ಪ್ರಕ್ರಿಯೆಗೆ ಹೆಚ್ಚಿನ ಮಹತ್ವವಿದೆ. ಸಮಾಜದ ವಿವಿಧ ಮುಖಗಳಲ್ಲಿ ಉಂಟಾಗುವ ಬದಲಾವಣೆಯ ಸಂಕೀರ್ಣ ಸ್ವರೂಪವನ್ನು ಸೂಚಿಸಲು 'ಆಧುನೀಕರಣ' ಪರಿಕಲ್ಪನೆಯನ್ನು ಬಳಸಲಾಗುತ್ತದೆ.

**ಆಧುನೀಕರಣದ ಅರ್ಥ:** 'ಆಧುನೀಕರಣ'ದ ಪದ ಪಾಶ್ಚಿಮಾತ್ಯ ಸಮಾಜಗಳಲ್ಲಿ ಮುಖ್ಯವಾಗಿ ಐರೋಪ್ಯ ರಾಷ್ಟ್ರಗಳಲ್ಲಿ ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನಗಳ ಅವಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉಂಟಾದ ಪ್ರಗತಿಯಿಂದಾಗಿ ಸಂಭವಿಸುತ್ತಿದ್ದ ಪರಿವರ್ತನೆಗಳನ್ನು ತಿಳಿಸಲು ವ್ಯಾಪಕವಾದ ಅರ್ಥದಲ್ಲಿ ಬಳಸಲ್ಪಡುತ್ತಿರುವ ಪದವಾಗಿದೆ. ಆದರೆ ಇದನ್ನು ಬಳಸುವವರ ಉದ್ದೇಶ, ದೃಷ್ಟಿಕೋನ ಮತ್ತು ತಿಳುವಳಿಕೆಯಲ್ಲಿ ವೈವಿಧ್ಯತೆ ಇರುವುದರಿಂದ ಈ ಪದದ ಅರ್ಥದಲ್ಲಿ ಒಂದು ಬಗೆಯ ಗೊಂದಲ ಕಂಡುಬರುತ್ತದೆ.

ಆಧುನೀಕರಣ ಪದವನ್ನು ಪ್ರಥಮವಾಗಿ ಡೇನಿಯಲ್ ಲರ್ನರ್ ಎಂಬ ಮಾನವ ಶಾಸ್ತ್ರಜ್ಞರು ಬಳಸಿದ್ದಾರೆ. ಪಾಶ್ಚಿಮಾತ್ಯ ದೇಶಗಳ ಪ್ರಭಾವ ವಲಯಕ್ಕೆ ಸಿಲುಕಿರುವುದರ ಪರಿಣಾಮವಾಗಿ ಪಶ್ಚಿಮೇತರ ದೇಶಗಳಲ್ಲಿ ಸಂಭವಿಸಿದ ಸಾಮಾಜಿಕ–ಸಾಂಸ್ಕೃತಿಕ ಪರಿವರ್ತನೆಗಳನ್ನು ಸೂಚಿಸಲು "ಪಾಶ್ಚಾತ್ಯೀಕರಣ" ಮತ್ತು "ಆಧುನೀಕರಣ" ಈ ಎರಡು ಪರಿಕಲ್ಪನೆಗಳನ್ನು ಬಳಸುವ ಪರಿಪಾಠವಿದ್ದರೂ ಡೇನಿಯಲ್ ಲರ್ನರ್‌ರವರ ಪ್ರಕಾರ ಇವುಗಳ ಪೈಕಿ ಆಧುನೀಕರಣದ ಪರಿಕಲ್ಪನೆಯೇ ಪಾಶ್ಚಾತ್ಯದೇಶಗಳಲ್ಲಿ ಉಂಟಾದ ವೈಜ್ಞಾನಿಕ ಪ್ರಗತಿಯಿಂದಾಗಿ ಇತರ ರಾಷ್ಟ್ರಗಳ ಸಮಾಜಗಳ ಮೇಲೆ ಉಂಟಾದ ಪ್ರಭಾವವನ್ನು ಸೂಚಿಸಲು ಹೆಚ್ಚು ಸೂಕ್ತವಾದುದಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಾದ ಮುನ್ನಡೆ ಅಥವಾ ಪ್ರಗತಿಯನ್ನು ಕೆಲವರು ಆಧುನೀಕರಣ ಎಂದು ಭಾವಿಸುತ್ತಾರೆ.

Digitised by Bharatavani, CIIL

ಸಮಾಜಶಾಸ್ತ್ರಜ್ಞರು ನಿರ್ಧರಿಸುವಂತೆ ಆಧುನೀಕರಣವು ಸಮಾಜಗಳಲ್ಲಿನ ಲಕ್ಷಣಗಳನ್ನು ವ್ಯತ್ಯಾಸ ಮಾಡುವಂತಹ ಒಂದು ಪ್ರಕ್ರಿಯೆಯಾಗಿದೆ. ಆಧುನೀಕರಣವು ಆರ್ಥಿಕ, ಔದ್ಯೋಗಿಕ, ಸಾಮಾಜಿಕ, ತಾಂತ್ರಿಕ ಹಾಗೂ ವೈಜ್ಞಾನಿಕ ಪ್ರಗತಿಯ ಅಂಶಗಳನ್ನು ಹೊಂದಿದ್ದು ತಾಂತ್ರಿಕ ವಿಧಾನ, ಔದ್ಯೋಗಿಕ ಮಟ್ಟ ಹಾಗೂ ಸಾಮಾಜಿಕ ವ್ಯವಸ್ಥೆಗಳಲ್ಲಿ ಅಗತ್ಯ ಬದಲಾವಣೆ ತರುವ ಪ್ರಕ್ರಿಯೆಯಾಗಿದೆ. ಆಧುನೀಕರಣವು ಸಾಂಪ್ರದಾಯಿಕ ಸಮಾಜವನ್ನು ತಾಂತ್ರಿಕ ಮತ್ತು ನಾಗರಿಕ ಸಮಾಜವನ್ನಾಗಿ ಪರಿವರ್ತಿಸುವುದು. ಇದು ಮೂಢನಂಬಿಕೆ ಮತ್ತು ಡಂಭಾಚಾರದ ಸಂಪ್ರದಾಯಗಳಿಗೆ ವಿರುದ್ಧವಾಗಿದ್ದು, ಸಾಮಾಜಿಕ ಬದಲಾವಣೆಯನ್ನು ಮಂದಗತಿಯಿಂದ ತೀವ್ರಗತಿಗೆ ಪ್ರಚೋದಿಸುವ ಪ್ರಕ್ರಿಯೆಯಾಗಿದೆ. ಆಧುನೀಕರಣದ ಪರಿಣಾಮದಿಂದಾಗಿ ಬಹುತೇಕ ಸಾಮಾಜಿಕ ಸಂಸ್ಥೆಗಳು, ಸಂಘ ಸಂಸ್ಥೆಗಳು ತೀವ್ರತರವಾದ ಬದಲಾವಣೆಯನ್ನು ಹೊಂದಿವೆ. ಈ ಬದಲಾವಣೆಗಳು ಮಾನವನು ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ತನ್ನ ಪರಿಸರದ ಬಗ್ಗೆ ನಿಯಂತ್ರಣವನ್ನು ಹೊಂದಲು ಮತ್ತು ವೈಜ್ಞಾನಿಕವಾದ ಬದಲಾವಣೆಗಳನ್ನು ತರಲು, ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳಲು ಕಾರಣವಾಗಿವೆ.

ಆಧುನೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ತಜ್ಞರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಡೇನಿಯಲ್ ಲರ್ನರ್‌ರವರ ಪ್ರಕಾರ "ಆಧುನೀಕರಣವು ವೈಚಾರಿಕತೆ, ವೈಜ್ಞಾನಿಕತೆ, ಮಾನವನ ಹಿತಸಾಧನ ಮತ್ತು ವಸ್ತು ಪ್ರಾಧಾನ್ಯ ದೃಷ್ಟಿಯನ್ನೊಳಗೊಂಡ ಜೀವನ ಕ್ರಮವನ್ನು ಪ್ರತಿಬಿಂಬಿಸುವ ಕಲ್ಪನೆ". ಎಮ್.ಜೆ. ಲೆವಿರವರು ಉತ್ಪಾದನಾ ಕ್ಷೇತ್ರಗಳಲ್ಲಿ ಪ್ರಯತ್ನಗಳ ಪರಿಣಾಮವನ್ನು ಗಣನೀಯವಾಗಿ ಹೆಚ್ಚಿಸಲು ಅಜೈವಿಕ ಶಕ್ತಿಯ ಮೂಲಗಳ ಹಾಗೂ ಉಪಕರಣಗಳ ಬಳಕೆ ಮಾಡುವುದನ್ನು ಆಧುನೀಕರಣ ಪ್ರಕ್ರಿಯೆ ಒಳಗೊಂಡಿದೆ" ಎಂದಿದ್ದಾರೆ. ಐಸನ್ ಸ್ಟಾಂಡ್‌ರವರ ಪ್ರಕಾರ "ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಗಳ ಬೆಳವಣಿಗೆಗೆ ಪೂರಕವಾದ ಪರಿವರ್ತನಾ ಪ್ರಕ್ರಿಯೆಯೇ ಆಧುನೀಕರಣ."

ಆಧುನೀಕರಣದ ಪರಿಕಲ್ಪನೆಯು ವಿಶಾಲ ವ್ಯಾಪ್ತಿಯನ್ನು ಹೊಂದಿದೆ. ಅದು ಯಾವುದೇ ಒಂದು ದೇಶ ಅಥವಾ ಸಾಮಾಜಿಕ ಸಮೂಹಕ್ಕೆ ಸೀಮಿತವಾಗದೆ ಇಡೀ ಮಾನವ ಜನಾಂಗಕ್ಕೆ ಸಂಬಂಧಿಸಿದ್ದಾಗಿದೆ. ಆಧುನೀಕರಣ ಪ್ರಕ್ರಿಯೆಯಿಂದಾಗಿ ಮುಖ್ಯವಾಗಿ ಸಾಮಾಜಿಕ ಸಂಸ್ಥೆಗಳ ಸಂರಚನೆಯಲ್ಲಿ ಬದಲಾವಣೆಗಳಾಗುತ್ತವೆ. ಇದರಿಂದಾಗಿ ಹೊಸ ಹೊಸ ಉದ್ದೇಶಗಳು ಕಾರ್ಯಗಳು ಉದ್ಭವವಾಗುತ್ತವೆ. ನಿರ್ವಹಣೆಗೆ ಬೇಕಾದ ಜ್ಞಾನಾಂಶಗಳು, ಕೌಶಲಗಳು, ಮನೋಭಾವಗಳು ಬದಲಾದ ದೃಷ್ಟಿಕೋನ ಬೇಕಾಗುತ್ತದೆ. ಆಧುನೀಕರಣಕ್ಕೆ ಹೊಂದಿಕೊಳ್ಳಲು ಸೂಕ್ತ ತರಬೇತಿ ಶಿಕ್ಷಣದ ಅವಶ್ಯಕತೆ ಇದೆ.

### ಆಧುನೀಕರಣದ ಲಕ್ಷಣಗಳು

ಆಧುನೀಕರಣದ ಲಕ್ಷಣಗಳನ್ನು ಈ ರೀತಿ ಪಟ್ಟಿ ಮಾಡಬಹುದು.

ಅನುಭೂತಿ, ಚಲನಶೀಲ ವ್ಯಕ್ತಿತ್ವ, ಭಾಗವಹಿಸುವಿಕೆ, ಆಸಕ್ತಿ ವಹಿಸುವುದು, ಸಂಸ್ಥೀಕೃತ ರಾಜಕೀಯ ಸ್ಪರ್ಧೆ, ಸಾಧನೆ ನಿರ್ದೇಶಕತೆ, ವೈಚಾರಿಕ ಗುರಿ–ಸಾಧನಗಳಾಧಾರಿತ ಲೆಕ್ಕಾಚಾರ, ಪರಿವರ್ತನೆಯ ಸಾಧ್ಯತೆ ಮತ್ತು ಅದರ ಬಗೆಗಿನ ಒಲವು, ದೀರ್ಘಾವಧಿ ಸಮಯದಲ್ಲಿ ಹೆಚ್ಚಿನ ಸಂತೃಪ್ತಿ ಪಡೆದುಕೊಳ್ಳಲು ತತ್‌ಕ್ಷಣದ ಮತ್ತು ತಾತ್ಕಾಲಿಕ ಸಂತೃಪ್ತಿಗಳನ್ನು ಮುಂದೂಡುವುದು, ವೈಜ್ಞಾನಿಕ ಮನೋಧರ್ಮ, ತರ್ಕ ಮತ್ತು ವೈಚಾರಿಕತೆ, ಧರ್ಮ ನಿರಪೇಕ್ಷತೆ, ಮನೋಭಾವನೆಗಳು ಮತ್ತು ಮೌಲ್ಯಗಳಲ್ಲಿ ಬದಲಾವಣೆ, ಹೊಸ ಕಾರ್ಯಶೀಲ ಸಂಸ್ಥೆಗಳ ಸೃಷ್ಟಿ, ಮಾನವ ಸಂಪನ್ಮೂಲಗಳ ಮೇಲೆ ಬಂಡವಾಳ ಹೂಡುವಿಕೆ, ಬೆಳವಣಿಗೆ ಆಧಾರಿತ ಯೋಜನೆ, ಬಂಧುತ್ವ, ಜಾತಿ, ಧರ್ಮ, ಪ್ರಾಂತೀಯತೆ ಅಥವಾ ಭಾಷಾಧಾರಿತ ಹಿತಾಸಕ್ತಿಗಳಿಗೆ ವಿರುದ್ಧವಾಗಿ ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ಮತ್ತು ಮುಕ್ತ ಸಮಾಜ

### ಆಧುನೀಕರಣದ ಅಳತೆಗೋಲುಗಳು

ಆಧುನೀಕರಣದ ಅಳತೆಗೋಲುಗಳನ್ನು ಈ ರೀತಿ ಪಟ್ಟಿ ಮಾಡಬಹುದು. ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಿಕೆ, ಭಾವನೆ ಅಥವಾ ವಿಚಾರಗಳ ಧರ್ಮನಿರಪೇಕ್ಷತೆ ಅಥವಾ ಜಾತ್ಯತೀತತೆ, ಸಾಮಾಜಿಕ ಶಿಕ್ಷಣದ ಪ್ರಸರಣ, ಆರೋಪಿತ ಸ್ಥಾನಮಾನದಿಂದ ಸಾಧಿತ ಸ್ಥಾನಮಾನಕ್ಕೆ ರೂಪಾಂತರ, ಜೀವನದ ಭೌತಿಕ ಮಟ್ಟಗಳಲ್ಲಿನ ಹೆಚ್ಚಳ, ಹೆಚ್ಚಿನ ಮಟ್ಟದ ನಗರೀಕರಣ, ಅಧಿಕ ಮಟ್ಟದ ಅಕ್ಷರತೆ, ರಾಷ್ಟ್ರೀಯ ಉತ್ಪಾದನೆಯಲ್ಲಿನ ತಲಾವಾರು ಹೆಚ್ಚಳ, ಸಮೂಹ ಮಾಧ್ಯಮದ ಮುಕ್ತ ಪ್ರಸರಣ ಮತ್ತು ಜೀವಿತಾವಧಿಯಲ್ಲಿ ಹೆಚ್ಚಳ.

### ಆಧುನೀಕರಣದ ಮೇಲೆ ಪ್ರಭಾವಬೀರುವ ಅಂಶಗಳು

ಆಧುನೀಕರಣದ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ.

ಅ. **ಕೈಗಾರಿಕೀಕರಣ:** ಕೈಗಾರಿಕೆಗಳಿಂದ ಜೀವನಕ್ಕೆ ಉಪಯುಕ್ತವಾದ ವಸ್ತುಗಳನ್ನು, ಹೆಚ್ಚು ಬಾಳಿಕೆ ಬರುವಂತಹ ವೈವಿಧ್ಯಪೂರ್ಣ ವಸ್ತುಗಳ ಉತ್ಪಾದನೆಯನ್ನು ಅತ್ಯಧಿಕ ಪ್ರಮಾಣದಲ್ಲಿ ಮಾಡಬಹುದು. ಒಬ್ಬ ವ್ಯಕ್ತಿ ಒಂದು ದಿನದಲ್ಲಿ ಉತ್ಪಾದಿಸುವಷ್ಟು ವಸ್ತುಗಳನ್ನು ಕೆಲವೇ ನಿಮಿಷಗಳಲ್ಲಿ ಉತ್ಪಾದಿಸುವ ಸಾಮರ್ಥ್ಯ ಯಂತ್ರಗಳಿಗಿದೆ. ಬೃಹತ್ ಕೈಗಾರಿಕೆಗಳ ಸ್ಥಾಪನೆ ಆಧುನೀಕರಣದ ಹೆಗ್ಗುರುತು.

ಆ. **ನಗರೀಕರಣ:** ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದ ನಗರಗಳಲ್ಲಿ ಜನದಟ್ಟನೆಯು ಹೆಚ್ಚಾಗುತ್ತದೆ. ಕೈಗಾರಿಕೀಕರಣದಿಂದಾಗಿ ನಗರಗಳು ಬೆಳೆಯುತ್ತಾ ಹೋಗಿ ನಗರೀಕರಣ ಹೆಚ್ಚುತ್ತದೆ. ನಗರವಾಸಿಗಳಲ್ಲಿ ಉಪಭೋಕ್ತತೆ ಹೆಚ್ಚುತ್ತದೆ. ಪರಿಣಾಮವಾಗಿ ಗೃಹ ಉಪಯೋಗಿ ವಸ್ತುಗಳು, ಉಡುಪು, ವಸತಿ ಆಚರಣೆಗಳಲ್ಲಿ ಆಧುನೀಕರಣ ಕಂಡುಬರುತ್ತದೆ.

ಇ. **ವೈಜ್ಞಾನಿಕ ಮತ್ತು ತಾಂತ್ರಿಕ ಮುನ್ನಡೆ:** ವೈಜ್ಞಾನಿಕ ಮತ್ತು ತಾಂತ್ರಿಕ ಮುನ್ನಡೆಯಿಂದ ವ್ಯಕ್ತಿಗಳ ಭಾವ, ಬುದ್ಧಿ, ವಿಚಾರಗಳು ಮತ್ತು ಆಲೋಚನೆಗಳು ಬದಲಾಗುವುದರಿಂದ ಹೊಸ ಅಭಿರುಚಿ, ಚಿಂತನೆಗಳು ಉಂಟಾಗಿ ಆಧುನೀಕರಣ ಹೊಂದಲು ಸಾಧ್ಯವಾಗುತ್ತದೆ.

ಈ. **ಸಂಪರ್ಕ ಮತ್ತು ಸಾರಿಗೆ ವ್ಯವಸ್ಥೆ:** ಇಂದು ಸಂಪರ್ಕ ಮತ್ತು ಸಾರಿಗೆ ವ್ಯವಸ್ಥೆಯಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ರಸ್ತೆ ಹಾಗೂ ರೈಲ್ವೇ ಸಾರಿಗೆ, ವಿಮಾನಯಾನ ಮತ್ತು ಜಲಯಾನಗಳ ಅಭಿವೃದ್ಧಿಯಿಂದಾಗಿ ಎಲ್ಲ ಪಂಗಡಗಳ ಮತ್ತು ವರ್ಗಗಳ ಜನರು ಒಟ್ಟಿಗೆ ಪ್ರಯಾಣ ಮಾಡುವುದು ತೀರಾ ಸಾಮಾನ್ಯವಾಗಿದೆ. ಸಂಪರ್ಕ ಸಾಧನಗಳು ಜನರ 'ಮಾನಸಿಕ ಚಲನೆ'ಗೆ ಕಾರಣವಾಗಿವೆ. ಈ ಮಾನಸಿಕ ಚಲನೆಯು ಆಧುನೀಕರಣದ ಒಂದು ಮುಖ್ಯಾಂಶವಾಗಿರುವ 'ವಿಶ್ವ ಸಂಸ್ಕೃತಿ'ಯ ಪ್ರಜ್ಞೆ ಮೂಡಲು ಸಹಕಾರಿಯಾಗಿದೆ.

Digitised by Bharatavani, CIIL

ಉ. **ಸಾರ್ವತ್ರಿಕ ಶಿಕ್ಷಣ:** ದೇಶದ ಪ್ರತಿಯೊಂದು ಮಗುವಿಗೂ ಶಿಕ್ಷಣ ಕೊಡುವುದರಿಂದ ಹಳೆ ಮೌಲ್ಯಗಳನ್ನು ಕಳೆದು ಹೊಸ ಮೌಲ್ಯಗಳನ್ನು, ಅಭಿರುಚಿಗಳನ್ನು ವಿಚಾರಗಳನ್ನು ರೂಢಿಸಿಕೊಳ್ಳುವ ಮೂಲಕ ಆಧುನೀಕರಣ ಹೊಂದಬಹುದು. ಆಧುನಿಕ ಶಿಕ್ಷಣವು ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ ಮುಂತಾದ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ.

ಊ. **ಪ್ರಜಾಸತ್ತಾತ್ಮಕ ಶಿಕ್ಷಣ:** ಪ್ರತಿಯೊಬ್ಬ ವ್ಯಕ್ತಿ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಾನೆ. ಅದರ ಜೊತೆಗೆ ಹಕ್ಕು ಮತ್ತು ಕರ್ತವ್ಯಗಳಿವೆ ಎನ್ನುವುದನ್ನು ಕಲಿಸುವುದೇ ಪ್ರಜಾಸತ್ತಾತ್ಮಕ ಶಿಕ್ಷಣ. ಪ್ರಜಾಪ್ರಭುತ್ವದ ತತ್ವಗಳ ನೆಲೆಯಲ್ಲಿ ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳಿರುತ್ತವೆ. ವೈಯಕ್ತಿಕ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳು ಮತ್ತು ವೈಚಾರಿಕತೆ ಆಧುನೀಕರಣಕ್ಕೆ ಕಾರಣವಾಗುತ್ತವೆ.

**ಆಧುನೀಕರಣ ಮತ್ತು ಶಿಕ್ಷಣ:** ಆಧುನೀಕರಣ ಪ್ರಕ್ರಿಯೆಯಲ್ಲಿ ಶಿಕ್ಷಣ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಶಿಕ್ಷಣ ಮತ್ತು ಆಧುನೀಕರಣಗಳು ಒಂದಕ್ಕೊಂದು ನಿಕಟವಾಗಿ ಸಂಬಂಧಿಸಿವೆ. ಶಿಕ್ಷಣ ಆಧುನೀಕರಣದ ಪರಿಣಾಮಕಾರಿ ಸಾಧನವಾಗಿದೆ. ರಾಷ್ಟ್ರ ಆಧುನೀಕರಣಗೊಳ್ಳಬೇಕಾದರೆ ಶಿಕ್ಷಣದ ಪ್ರಸಾರ ಬಹುಮುಖ್ಯ. ಶಿಕ್ಷಣದ ಫಲವಾಗಿ ವ್ಯಕ್ತಿಗಳು ಹೆಚ್ಚು ಪ್ರಬುದ್ಧರಾಗುತ್ತಾರೆ. ತತ್ಪರಿಣಾಮವಾಗಿ ಅಪೇಕ್ಷಿತ ಜ್ಞಾನ, ಅಭಿರುಚಿ, ಆಸಕ್ತಿ, ಕೌಶಲಗಳು ಬೆಳೆಯುತ್ತವೆ. ಹೆಚ್ಚಿನ ಆಹಾರ ಉತ್ಪಾದನೆ, ಕೈಗಾರಿಕಾ ಸ್ಥಾಪನೆ, ವಿಜ್ಞಾನ ತಂತ್ರಜ್ಞಾನಗಳ ಉಪಯುಕ್ತ ಅಳವಡಿಕೆ, ಅಂತರರಾಷ್ಟ್ರೀಯ ವ್ಯಾಪಾರ ವಾಣಿಜ್ಯ ಸಶಕ್ತ ಭಾಗವಹಿಸುವಿಕೆ, ಸಮರ್ಪಕ ರೀತಿಯಲ್ಲಿ ಹಕ್ಕುಬಾಧ್ಯತೆಗಳ ಪ್ರಜ್ಞೆ, ಕರ್ತವ್ಯನಿಷ್ಠೆ, ಪ್ರಾವೀಣ್ಯತೆ, ಕಾರ್ಯಕೌಶಲ, ಆಡಳಿತ ದಕ್ಷತೆ, ಸಮರ್ಪಣ ಮನೋಭಾವ, ವೈಯಕ್ತಿಕ ಹಾಗೂ ಸಾಮೂಹಿಕ ಪ್ರಗತಿ ಏರ್ಪಡುತ್ತದೆ. ಜನರ ದೃಷ್ಟಿಕೋನ ಬದಲಾಗುತ್ತದೆ. ಉತ್ತಮ ಶಿಕ್ಷಣದಿಂದ ಸಾಹಿತ್ಯ, ವಿಜ್ಞಾನ, ದರ್ಶನ ಕಲೆಗಳು ಸುಧಾರಿಸಲ್ಪಟ್ಟು ನೂತನ ಆಯಾಮಗಳು ಏರ್ಪಡುತ್ತವೆ. ವಿಜ್ಞಾನ ತಂತ್ರಜ್ಞಾನಗಳ ಹಾಗೂ ಸಾಮಾಜಿಕ ಸಾಂಸ್ಕೃತಿಕ ಪರಂಪರೆಯ ಸಮರಸ ಮೌಲ್ಯಾಧಾರಿತ ಶಿಕ್ಷಣ ಕ್ರಮಕ್ಕೆ ಅವಕಾಶವಾಗುತ್ತದೆ. ಸಂಪನ್ಮೂಲಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಉದ್ಯೋಗಾವಕಾಶ ಏರ್ಪಡುತ್ತದೆ. ಜನರು ಸಾಂಪ್ರದಾಯಕತೆ ಹಾಗೂ ಸಂಕುಚಿತ ದೃಷ್ಟಿಯನ್ನು ವಿಶಾಲ ದೃಷ್ಟಿಕೋನದಿಂದ ಆಲೋಚಿಸಿ ಕಾರ್ಯೋನ್ಮುಖರಾಗಲು ಸಹಾಯಕವಾಗುತ್ತದೆ. ಉತ್ತಮ ಪ್ರಯೋಗ, ಸಂಶೋಧನೆ ನವೀನತೆಗೆ ಸಹಾಯವಾಗುತ್ತದೆ. ಇದರಿಂದ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಬಹುದು. ಶಿಕ್ಷಣದಿಂದ ಮಾನವ ಸಂಪನ್ಮೂಲಗಳ ಅಭಿವೃದ್ಧಿಯಾಗುತ್ತದೆ. ಹೀಗಾಗಿ ಶಿಕ್ಷಣ ರಾಷ್ಟ್ರೀಯ ಜೀವನದ ವಿವಿಧ ಕ್ಷೇತ್ರಗಳಾದ ಆರ್ಥಿಕ, ಕೈಗಾರಿಕೆ, ತಾಂತ್ರಿಕ ಹಾಗೂ ಸಾಮಾಜಿಕ ಕ್ಷೇತ್ರಗಳ ಆಧುನೀಕರಣದ ಬಾಗಿಲು ತೆಗೆಯುವ ಬೀಗದ ಕೈ ಆಗಿರುತ್ತದೆ.

ಕೊಠಾರಿ ಆಯೋಗವು ಶಿಕ್ಷಣದ ಗುರಿಯಲ್ಲಿ ಉತ್ಪಾದನೆಗೆ ಮತ್ತು ಆಧುನೀಕರಣಕ್ಕೆ ಮಹತ್ವ ನೀಡಿದೆ. ಉತ್ಪಾದನೆಯನ್ನು ಹೆಚ್ಚಿಸಲು ವೈಜ್ಞಾನಿಕ ತಾಂತ್ರಿಕ ಮತ್ತು ಕೈಗಾರಿಕೆಯ ಅಂಶಗಳನ್ನು ಬಳಸಲು ಒತ್ತಾಯಿಸಿದೆ. ಇದು ಆಧುನೀಕರಣದಿಂದ ಪರೋಕ್ಷವಾಗಿ ಸಾಮಾಜಿಕ ಬದಲಾವಣೆಯನ್ನು ಉಂಟು ಮಾಡುತ್ತದೆ ಎಂದು ಈ ಆಯೋಗ ಹೇಳಿದೆ. ಕಡಿಮೆ ಆದಾಯ ಹಾಗೂ ಅನಕ್ಷರಸ್ಥರನ್ನು ಅಧಿಕವಾಗಿ ಹೊಂದಿರುವ ಭಾರತದ ಪರಿಸ್ಥಿತಿಯಿಂದಾಗಿ ಜನಸಂಖ್ಯೆ ಅಧಿಕವಾಗಿ ವೃದ್ಧಿಸುತ್ತಿದೆ. ಆದ್ದರಿಂದ ಪ್ರಗತಿ ಅಥವಾ ಆಧುನೀಕರಣ ಸುಲಭವಾಗಿಲ್ಲ. ಶಿಕ್ಷಣದಿಂದ ಮಾತ್ರ ಬೇಕಾದ ಆಧುನೀಕರಣವನ್ನೂ ತರಲು ಸಾಧ್ಯ ಎಂದು ಆಯೋಗದ ಅಭಿಪ್ರಾಯವಾಗಿದೆ.

ಪ್ರಪಂಚದಲ್ಲಿ ಮುಂದುವರಿಯದ ಶೇ. 66ರಷ್ಟು ದೇಶಗಳು ಸಂಪ್ರದಾಯಬದ್ಧ ವರ್ತನೆ ಮತ್ತು ಅವೈಜ್ಞಾನಿಕ ಚಟುವಟಿಕೆ ಹೊಂದಿರುವ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವುವು. ಈ ದೇಶಗಳ ಮೂಢ ನಂಬಿಕೆ ಮತ್ತು ಅಂಧಶ್ರದ್ಧೆ ದೂರವಾದಾಗ ಮಾತ್ರ ಸಾಮಾಜಿಕ ಬದಲಾವಣೆಗಳುಂಟಾಗಿ ಆ ದೇಶಗಳು ಮುಂದುವರಿದಂತಹ ದೇಶಗಳೊಂದಿಗೆ ಸರಿಸಮಾನವಾಗಿ ನಿಲ್ಲಲು ಮತ್ತು ಆರ್ಥಿಕ ಭದ್ರತೆ ಹೊಂದಲು ಸಾಧ್ಯ. ಇಂತಹ ಪ್ರಗತಿ ತಾಂತ್ರಿಕವಾಗಿ ಮನಶ್ಚೇತನ ಹೊಂದಿದಾಗ ಮತ್ತು ವೈಜ್ಞಾನಿಕ ಅಂಶಗಳನ್ನು ಅಳವಡಿಸಿಕೊಂಡಾಗ ಮಾತ್ರ ಸಾಧ್ಯ.

**ಆಧುನೀಕರಿಸುವ ಬಗೆ :** ಅ. ಆಧುನೀಕರಿಸಲು ಶಿಕ್ಷಣವೇ ಮುಖ್ಯ ಮಾರ್ಗ. ಅದಕ್ಕಾಗಿ ಶಿಕ್ಷಣದ ಎಲ್ಲ ಮಟ್ಟಗಳಲ್ಲಿಯೂ ವಿಜ್ಞಾನ ಬೋಧನೆಗೆ ಪ್ರಾಶಸ್ತ್ಯ ನೀಡಬೇಕು. ಮಕ್ಕಳಿಗೆ ವಿಜ್ಞಾನದ ಸಂಶೋಧನೆ, ಪ್ರಗತಿ, ವಿಜ್ಞಾನಿಗಳ ಪರಿಚಯ, ವೈಜ್ಞಾನಿಕಾಂಶಗಳ ಜ್ಞಾನಪ್ರಸಾರವಾಗಬೇಕು. ವಿಜ್ಞಾನ ತಾಂತ್ರಿಕ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳಿಗೆ ಪ್ರೋತ್ಸಾಹಿಸಲು ಭಾಷಣ, ಬಾನುಲಿ ಕಾರ್ಯಕ್ರಮ, ಸ್ಪರ್ಧೆಗಳು ಹಳ್ಳಿಯಿಂದ ನಗರ ಮಟ್ಟದವರೆಗೂ ಏರ್ಪಡಬೇಕು. ಆ. ವಿಜ್ಞಾನದ ಲಾಭ ಸಾಮಾನ್ಯ ಜನರಿಗೂ ಸಿಗುವಂತಾಗಬೇಕು. ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಪ್ರೋತ್ಸಾಹಿಸಬೇಕು. ಇ. ಪ್ರಯೋಗಮತಿಗಳಿಗೆ, ಹೊಸ ವಿಧಾನಗಳನ್ನು ಅಳವಡಿಸುವವರಿಗೆ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಬೇಕು. ಈ. ಮಕ್ಕಳಿಗೆ ಅವರು ದೊಡ್ಡವರಾದ ಮೇಲೆ ಕೈಗೊಳ್ಳಬಹುದಾದ ವೃತ್ತಿಗಳ ಬಗ್ಗೆ ಮಾರ್ಗದರ್ಶನವನ್ನು ಶಾಲಾ ಕಾಲೇಜುಗಳಲ್ಲಿಯೇ ನೀಡಬೇಕು.ಉ. ಮಕ್ಕಳು ಶಿಕ್ಷಕರು ಮತ್ತು ಸಮಾಜದ ಸದಸ್ಯರೊಡನೆ ಸಂಪರ್ಕ ಪಡೆದು ವಿಷಯ ಗ್ರಹಿಸಲು ಉತ್ತೇಜನ ನೀಡಬೇಕು. ಊ. ಮಕ್ಕಳು ಸಾಮಾಜಿಕ ಮೌಲ್ಯಗಳು, ಕುಟುಂಬದ ಮತ್ತು ಸಾಮಾಜಿಕ ಸಂಘಸಂಸ್ಥೆಗಳ ಮಹತ್ವವನ್ನು ತಿಳಿಯುವಂತೆ ಮಾಡಬೇಕು. ಊ. ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಬೇಕು.

ಆಧುನೀಕರಣದಲ್ಲಿ ಶಿಕ್ಷಕರ ಪಾತ್ರ ಬಹು ಮಹತ್ವಪೂರ್ಣವಾದದ್ದು. ಶಿಕ್ಷಕರು ಮೊದಲು ಆಧುನೀಕರಣದ ಪೋಷಣೆಗೆ ಬೇಕಾದ ಅರ್ಹ ಗುಣಗಳನ್ನು ಹೊಂದಿರಬೇಕು. ಶಿಕ್ಷಕರು ಜ್ಞಾನದ ಆಗರವಾಗಿದ್ದರೆ ಮಾತ್ರ ತಮ್ಮ ಜ್ಞಾನಸುಧೆಯಿಂದ ಮಕ್ಕಳನ್ನು ತಣಿಸಬಹುದು. ಶಿಕ್ಷಕರು ಎಲ್ಲ ಸಂಪ್ರದಾಯ ಕಟ್ಟಳೆಗಳಿಂದ, ಪೂರ್ವಗ್ರಹಪೀಡನಗಳಿಂದ ದೂರವಿದ್ದು, ಮಾನವೀಯ ಸ್ವಭಾವದ ಸದ್ಗುಣಿಯಾಗಿದ್ದು, ತಾಂತ್ರಿಕ, ವೈಜ್ಞಾನಿಕ ತತ್ವಗಳನ್ನು ಸ್ವಾಗತಿಸಿ, ಪುರಸ್ಕರಿಸಿ, ಅಳವಡಿಸಿ, ಅನ್ವಯಿಸಿ ಮಕ್ಕಳಲ್ಲಿ ಉತ್ತಮ ಮನೋಭಾವ ಮೌಲ್ಯಗಳು ಮನೆಮಾಡುವಂತೆ ಮಾಡಬೇಕು. ಹಿಂಸಾತ್ಮಕ ಘಟನೆಗಳಿಂದ ದೂರವಿರುವಂತೆ ಮಾಡಿ ರಚನಾತ್ಮಕ ನೈಜದೃಷ್ಟಿಯನ್ನು ಮಕ್ಕಳಲ್ಲಿ ಉಂಟುಮಾಡಬೇಕು. ಮಕ್ಕಳಲ್ಲಿ ಆಧುನೀಕರಣದ ಮಹತ್ವವನ್ನು ಮನದಟ್ಟು ಮಾಡಬೇಕು.

ಆಧುನೀಕರಣದ ಪ್ರಭಾವದಿಂದಾಗಿ, ವಿಜ್ಞಾನ ಮತ್ತು ತಂತ್ರಜ್ಞಾನದ ಅದ್ಭುತ ಪ್ರಗತಿಯಿಂದಾಗಿ ನಮ್ಮ ಜೀವನದಲ್ಲಿ ಸಾಕಷ್ಟು ಪ್ರಗತಿ, ಸೌಕರ್ಯಗಳು ಕಂಡುಬರುತ್ತವೆ. ದೇಶ ದೇಶಗಳ ನಡುವೆ ಅಂತರ ಕಡಿಮೆಯಾಗುತ್ತಿದೆ. ವಿಜ್ಞಾನ ಜನರ ಮೂಢನಂಬಿಕೆಗಳನ್ನು ಕಡಿಮೆ ಮಾಡಿದೆ. ಜನರ ಜ್ಞಾನ ಕೂಡ ವಿಸ್ತೃತವಾಗಿದೆ. ಆದರೂ ವಿಜ್ಞಾನದ ಈ ಸೌಲಭ್ಯ ಅನೇಕರಿಗೆ ಲಭ್ಯವಾಗಿಲ್ಲ. ವಿಜ್ಞಾನದ ಪ್ರಗತಿಯಿಂದ ಕೆಲವು ಸಮಸ್ಯೆಗಳು ಮೂಡಿವೆ. ಉದಾಹರಣೆಗೆ, ಕೈಗಾರಿಕೆಗಳಿಂದ ಆಗಿರುವ ಪರಿಸರ ಮಾಲಿನ್ಯ. ಅಣುಶಕ್ತಿಗಳಿಂದ ಜನರ ಭೀತಿ ಹೆಚ್ಚಿದೆ. ಇದನ್ನು

Digitised by Bharatavani, CIIL

ನಿವಾರಿಸಲು ಶಿಕ್ಷಣ ಪ್ರಧಾನ ಪಾತ್ರವಹಿಸಿ ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ನಿಯಂತ್ರಣದ ಸಾಧನವಾಗಬೇಕು.

–ಆರ್.ನಾ.ಕು

## ಆನ್‌ಲೈನ್ ಪರೀಕ್ಷಾ ವ್ಯವಸ್ಥೆ

ಅನೇಕ ವರ್ಷಗಳಿಂದ ಶಾಲಾ–ಕಾಲೇಜು ಹಂತಗಳಲ್ಲಿ ನಡೆಸಲಾಗುತ್ತಿರುವ ಪರೀಕ್ಷೆಗಳು, ವಿಶ್ವವಿದ್ಯಾನಿಲಯ/ ಇತರ ಪರೀಕ್ಷಾ ಮಂಡಳಿಗಳ ಮೂಲಕ ಜಾರಿಯಲ್ಲಿರುವ ಪಬ್ಲಿಕ್ ಪರೀಕ್ಷಾ ಪದ್ಧತಿ– ಇವುಗಳು ಸಂಬಂಧಪಟ್ಟವರೆಲ್ಲರ ಕೋಪಕ್ಕೆ ಗುರಿಯಾಗಿವೆ. ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆಗಳು/ ಸುಧಾರಣೆಗಳು ಆದಷ್ಟೂ ಶೀಘ್ರವಾಗಿ ಕಾರ್ಯರೂಪಕ್ಕೆ ಬರಬೇಕೆಂಬುದು ಎಲ್ಲರ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯ ವೈಶಿಷ್ಟ್ಯಗಳು, ದೋಷ (ಪರಿಮಿತಿ)ಗಳ ಕಡೆ ಇಲ್ಲಿ ಗಮನಹರಿಸಲಾಗಿದೆ.

ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯಲ್ಲಿ ಪ್ರಶ್ನೆಪತ್ರಿಕೆಗಳನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಿ, ಪರಿಷ್ಕರಿಸಿ, ಸಂರಕ್ಷಿಸಿ, ಪರೀಕ್ಷಾ ಕೇಂದ್ರಗಳಿಗೆ ರವಾನಿಸಿ ವೇಳಾಪಟ್ಟಿಗನುಗುಣವಾಗಿ ನಿಗದಿತ ಸ್ಥಳಗಳಲ್ಲಿ ನಿಗದಿಪಡಿಸಿದ ವೇಳೆಯಲ್ಲಿ ವಿದ್ಯಾರ್ಥಿಗಳ ಪರೀಕ್ಷೆ ಬರೆಯುವ ವ್ಯವಸ್ಥೆ ಜಾರಿಯಲ್ಲಿದೆ. ನಂತರದಲ್ಲಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಕೇಂದ್ರಗಳಿಗೆ ಸಾಗಿಸಿ, ಮಾಪನಮಾಡಿಸಿ, ಫಲಿತಾಂಶ ಪ್ರಕಟಿಸುವ ಕಾರ್ಯ ನಡೆಯುತ್ತದೆ. ಈ ಪದ್ಧತಿಯ ದೋಷ ಮತ್ತು ಇತಿಮಿತಿಗಳು ಹೀಗಿವೆ:

ಈ ಪರೀಕ್ಷಾ ಪದ್ಧತಿಯಲ್ಲಿ ಪ್ರತಿಯೊಂದು ಹಂತ ಪೂರ್ಣಗೊಳಿಸಲು ಹೆಚ್ಚಿನ ಶ್ರಮ, ಸಂಪನ್ಮೂಲ, ಆರ್ಥಿಕ ವೆಚ್ಚ, ಹೆಚ್ಚಿನ ಕಾಲಾವಕಾಶ ಬೇಕಾಗುತ್ತವೆ.

ಎಲ್ಲ ವಿದ್ಯಾರ್ಥಿಗಳು ತಮ್ಮ ಆಯ್ಕೆಯ / ತಾವಿರುವ ಸ್ಥಳದಲ್ಲಿ ಪರೀಕ್ಷೆ ಬರೆಯಲು ಸಾಧ್ಯವಿಲ್ಲ.

ಪರೀಕ್ಷಾ ಪದ್ಧತಿಯ ಎಲ್ಲ ಹಂತಗಳಲ್ಲೂ ವಿವಿಧ ರೀತಿಯ ಅವ್ಯವಹಾರಗಳು ನಡೆಯುವ ಸಾಧ್ಯತೆಗಳು ಇವೆ.

ಪ್ರಶ್ನೆ ಪತ್ರಿಕೆಗಳ ಗುಣಮಟ್ಟ ಪ್ರಶ್ನಾರ್ಹ.

ಮೌಲ್ಯಮಾಪನ ಹಂತದಲ್ಲಿ ಪಾರದರ್ಶಕತೆ, ವಿಶ್ವಸನೀಯತೆ, ವಸ್ತುನಿಷ್ಠತೆಯ ಕೊರತೆ ಕಂಡುಬರುತ್ತದೆ.

ಎಲ್ಲ ಪ್ರಕ್ರಿಯೆಗಳು ಹೆಚ್ಚು ಕಡಿಮೆ ಸ್ವಯಂಚಾಲಿತವಲ್ಲದ (mannual/ non-automatic) ಕ್ರಮದಲ್ಲೇ ನಡೆಯುತ್ತವೆ. ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯಲ್ಲಿನ ಈ ರೀತಿಯ ದೋಷ ಮತ್ತು ಪರಿಮಿತಿಗಳ ಹಿನ್ನೆಲೆಯಲ್ಲಿ, ಪರೀಕ್ಷಾ ಸುಧಾರಣೆ ದಿಕ್ಕಿನಲ್ಲಿ, ಪರ್ಯಾಯ ವ್ಯವಸ್ಥೆಯಾಗಿ, ತ್ವರಿತಗತಿಯಲ್ಲಿ ಬಳಕೆಗೆ ಬರುತ್ತಿರುವ ಹಾಗೂ ಕಂಪ್ಯೂಟರ್ ತಂತ್ರಜ್ಞಾನದ ವೈಶಿಷ್ಟ್ಯಗಳೆಲ್ಲವನ್ನೂ ಬಳಸಿಕೊಳ್ಳುವ ಸಾಧ್ಯತೆ ಹೊಂದಿರುವ ಇಂಟರ್‌ನೆಟ್ ಬೆಂಬಲಿತ ಪರೀಕ್ಷಾ ಪದ್ಧತಿಯೆಂದರೆ ಆನ್‌ಲೈನ್ ಪರೀಕ್ಷಾ ಪದ್ಧತಿ/ ವ್ಯವಸ್ಥೆ ಎನ್ನಬಹುದು.

**ಆನ್‌ಲೈನ್ ಪರೀಕ್ಷಾ ವ್ಯವಸ್ಥೆಯ ವೈಶಿಷ್ಟ್ಯಗಳು**

**(ಉಪಯೋಗಿಸುವವನು) ಹೊಂದಿರಬೇಕಾದ ಅಗತ್ಯ ಅಂಶಗಳು**

- ಇಂಟರ್‌ನೆಟ್ ಸಂಪರ್ಕ ಹೊಂದಿರುವ ಕಂಪ್ಯೂಟರ್ ವ್ಯವಸ್ಥೆ.
- ಅಂತರ್ಜಾಲದೊಡನೆ ವ್ಯವಹರಿಸಲು ಬೇಕಾಗುವ, ಕಂಪ್ಯೂಟರ್‌ಗೆ ಅಳವಡಿಸಿರುವ ಒಂದು ವೆಬ್ ಬ್ರೌಸರ್.
- ಅಂತರ್ಜಾಲ ಸೇವೆ ಒದಗಿಸುವ ಸಂಸ್ಥೆ (ISP).
- ನಿಲುಗಡೆರಹಿತ ವಿದ್ಯುತ್ ಪೂರೈಕೆ ವ್ಯವಸ್ಥೆ (UPS).

**ಪ್ರಶ್ನೆಪತ್ರಿಕೆ ಸಂಬಂಧಿತ ಅಂಶಗಳು**

- ಅಗತ್ಯ ಪ್ರಶ್ನೆಗಳ ಸಂಗ್ರಹ ಹೊಂದಿರುವ ಪ್ರಶ್ನೆ ಬ್ಯಾಂಕ್ ಲಭ್ಯತೆ.
- ವಿವಿಧ ಕ್ಲಿಷ್ಟತೆಯ ಮಟ್ಟ ಹೊಂದಿರುವ ವಿವಿಧ ಮಾದರಿ ಪ್ರಶ್ನೆಗಳ ಲಭ್ಯತೆ.
- ತಯಾರಿಸಲ್ಪಡಬೇಕಾದ ಪ್ರಶ್ನೆಪತ್ರಿಕೆ ಸಮತೋಲಿತವಾಗಿರುವಂತೆ ನೋಡಿಕೊಳ್ಳಬಹುದಾಗಿದೆ.
- ಬೇಕಾದ ಅವಧಿಯ ಪ್ರಶ್ನೆಪತ್ರಿಕೆ ತಯಾರಿಸಲು ಸಾಧ್ಯ.
- ಸಮಾನ ಗುಣಮಟ್ಟದ, ಸಮಾನ ಕ್ಲಿಷ್ಟತೆ ಹೊಂದಿರುವ ಅನೇಕ ಪ್ರಶ್ನೆಪತ್ರಿಕೆ ಸೆಟ್‌ಗಳನ್ನು ರೂಪಿಸಲು ಸಾಧ್ಯ.
- ಒಂದೇ ಪ್ರಶ್ನೆಪತ್ರಿಕೆಯಲ್ಲಿ ಅಡಕವಾಗಿರುವ ಪ್ರಶ್ನೆಗಳ ಕ್ರಮಾನುಗತ ಜೋಡಣೆಯನ್ನು ಬದಲಾಯಿಸಿ ಬೇರೆ ಬೇರೆ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಒದಗಿಸಲು (ಹಂಚಲು) ಸಾಧ್ಯ.
- ಬಹು ಅಂಶ ಆಯ್ಕೆ ಮಾದರಿ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಪರ್ಯಾಯ ಉತ್ತರಗಳ (distractors) ಕ್ರಮಾನುಗತ ಜೋಡಣೆ ಬದಲಾಯಿಸಬಹುದಾಗಿದೆ.
- ವಿದ್ಯಾರ್ಥಿಗಳ ಅಗತ್ಯಕ್ಕನುಗುಣವಾಗಿ, ಪ್ರಶ್ನೆಪತ್ರಿಕೆ ಒಳಗೊಂಡಿರುವ ಪ್ರಶ್ನೆಸಂಖ್ಯೆ, ಸಮಯಾವಕಾಶ ಇವುಗಳನ್ನು ನಿರ್ಧರಿಸಬಹುದಾಗಿದೆ.
- ಪ್ರಶ್ನೆಪತ್ರಿಕೆಯಲ್ಲಿ ವಸ್ತುನಿಷ್ಠ ಮಾದರಿ ಪ್ರಶ್ನೆಗಳ ಜೊತೆಗೆ ವಿವರಣಾತ್ಮಕ (descriptive) ಪ್ರಶ್ನೆಗಳನ್ನು ಸೇರಿಸಿಕೊಳ್ಳಬಹುದಾಗಿದೆ.
- ಪ್ರಶ್ನೆ ಪತ್ರಿಕೆಯ ಚಿತ್ರಗಳು, ಗ್ರಾಫ್‌ಗಳು, ವೀಡಿಯೋ ಹಾಗೂ ಇನ್ನಿತರ ದೃಶ್ಯ ಹಾಗೂ ಶ್ರವಣರೂಪದ ಪ್ರಶ್ನೆಗಳನ್ನು ಒಳಗೊಂಡಿರಬಹುದಾಗಿದೆ.
- ಅಭ್ಯಾಸಕ್ಕೋಸ್ಕರ ಪ್ರಶ್ನೆ ಪತ್ರಿಕೆ ಒದಗಿಸುವ ಸೌಲಭ್ಯ ಒದಗಿಸಬಹುದು.
- ಬಳಸಿಕೊಳ್ಳಲಾದ ಪರೀಕ್ಷಾ ಪತ್ರಿಕೆ/ ಪ್ರಶ್ನೆಗಳನ್ನು ಕೈಬಿಡಬಹುದು, ಪುನಃ ಬಳಸಬಹುದು, ಮಾರ್ಪಾಡು ಮಾಡಿಕೊಳ್ಳಬಹುದು, ಪರಿಷ್ಕರಿಸಬಹುದು.

**ಪರೀಕ್ಷಾ ನಿರ್ವಹಣೆಗೆ ಸಂಬಂಧಿತ ಅಂಶಗಳು**

- ದೂರದ ಸ್ಥಳಗಳಲ್ಲಿರುವ ವಿದ್ಯಾರ್ಥಿಗಳು ತಮಗೆ ಅನುಕೂಲವಾದ ಸ್ಥಳಗಳಲ್ಲಿ ಅನುಕೂಲವಾದ ಸಮಯದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.
- ವಿದ್ಯಾರ್ಥಿಯು ಉತ್ತರ ಬರೆಯಲು ನಿಗದಿತ ಸಮಯವನ್ನು ಗೊತ್ತುಪಡಿಸಲಾಗುತ್ತದೆ. ಸಮಯ ಮುಗಿಯುವ 5–10 ನಿಮಿಷ ಮೊದಲು ಮುನ್ಸೂಚನೆ ಕೊಡಬಹುದಾಗಿದೆ.

Digitised by Bharatavani, CIIL

- ನಿಗದಿತ ಸಮಯ ಮುಗಿದ ನಂತರ ಉತ್ತರಿಸುವ ಪ್ರಕ್ರಿಯೆ ಸ್ವಯಂಚಾಲಿತವಾಗಿ ತಡೆಯಲ್ಪಡುತ್ತದೆ.
- ಉತ್ತರಿಸುವ ಪ್ರಕ್ರಿಯೆಯ ಜೊತೆ ಜೊತೆಯಲ್ಲಿಯೇ ಸ್ವಯಂಚಾಲಿತ ಅಥವಾ ಮ್ಯಾನ್ಯುಯಲ್ ಕ್ರಮದಿಂದ ಮಾಪನ ಕಾರ್ಯವನ್ನು ಕೈಗೊಳ್ಳಬಹುದಾಗಿದೆ.
- ಉತ್ತರಿಸುವ ಕಾರ್ಯವನ್ನು ಪೂರ್ತಿಗೊಳಿಸಿ, ಅಗತ್ಯ ಸೂಚನೆ ಒದಗಿಸಿದ ಸ್ವಲ್ಪ ಸಮಯದಲ್ಲೇ ಪರೀಕ್ಷಾ ಫಲಿತಾಂಶ ಒದಗಿಸಬಹುದಾಗಿದೆ.
- ಪರೀಕ್ಷೆಯ ಫಲಿತಾಂಶವನ್ನು ಇ-ಮೆಯಿಲ್ ಅಡ್ರೆಸ್ಸಿಗೆ ರವಾನಿಸುವ ಅಥವಾ ವೆಬ್‌ಸೈಟ್ ಮೂಲಕ ತಿಳಿಯಪಡಿಸುವ ಸೌಕರ್ಯವನ್ನೂ ಒದಗಿಸಬಹುದಾಗಿದೆ.
- ಅಭ್ಯರ್ಥಿಗಳು ಉತ್ತರಿಸುವ ಹಾಗೂ ಹಿಮ್ಮಾಹಿತಿ ಪಡೆಯುವ ವಿಧಾನವನ್ನು (costomise) ರೂಢಿಗತಗೊಳಿಸಬಹುದಾಗಿದೆ.

**ಗೋಪ್ಯತೆಗೆ ಸಂಬಂಧಿಸಿದ ಅಂಶಗಳು**

- ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸಿಕೊಂಡು ಪಾರದರ್ಶಕತೆಯನ್ನು ಕಾಪಾಡಿಕೊಂಡು ಬರುವುದರ ಜೊತೆಗೆ ಸಂಶಯಕ್ಕೆ ಎಡೆಮಾಡಿಕೊಡದ ರೀತಿಯಲ್ಲಿ ಪರೀಕ್ಷಾ ಕ್ರಮಗಳನ್ನು ನಿರ್ವಹಿಸಬಹುದಾಗಿದೆ.
- ಪರೀಕ್ಷಾ ವ್ಯವಸ್ಥೆ ಮೇಲ್ವಿಚಾರಕ ಹಾಗೂ ಅಭ್ಯರ್ಥಿ ಇವರುಗಳಿಗೆ ಗೋಪ್ಯವಾದ (Password) ಗೋಪ್ಯಪದ ನೀಡುವುದರ ಮೂಲಕ ಪರೀಕ್ಷಾ ವ್ಯವಸ್ಥೆಯ ವಿಶ್ವಾಸಾರ್ಹತೆ ಮತ್ತು ದೃಢೀಕರಣ ಕಾಪಾಡಬಹುದಾಗಿದೆ.
- ಸಂಗ್ರಹಿಸಲ್ಪಟ್ಟ ದತ್ತಾಂಶಗಳು ನಾಶವಾಗದಂತೆ ಮಾಹಿತಿ/ದತ್ತಾಂಶಗಳ ಬ್ಯಾಕ್ ಅಫ್ ವ್ಯವಸ್ಥೆಗೆ ಅವಕಾಶವಿದೆ.

**ವಿದ್ಯಾರ್ಥಿ ಸಾಧನೆ ವಿಶ್ಲೇಷಣೆಗೆ ಸಂಬಂಧಿಸಿದ ಅಂಶಗಳು**

- ಪ್ರತಿಯೊಬ್ಬ ವಿದ್ಯಾರ್ಥಿಯ ಸಾಧನೆಯನ್ನು ವಿಶ್ಲೇಷಣೆ ಮಾಡುವ ಸೌಲಭ್ಯ.
- ಗುಂಪಿನ ಸಾಧನೆಯನ್ನು ವಿದ್ಯಾರ್ಥಿಯ ವೈಯಕ್ತಿಕ ಸಾಧನೆಯ ಜೊತೆ ಹೋಲಿಸುವ ಅವಕಾಶ ಸಾಧ್ಯ.
- ವಿದ್ಯಾರ್ಥಿ ಫಲಿತಾಂಶದ ಒಟ್ಟಾರೆ ವಿಶ್ಲೇಷಣೆ ಹಾಗೂ ವರದಿ ಸಾಧ್ಯ.

**ಇತರ ವೈಶಿಷ್ಟ್ಯಗಳು**

- ಆನ್‌ಲೈನ್ ಪರೀಕ್ಷಾ ಸಂಬಂಧಿತ ಎಲ್ಲಾ ಪ್ರಕ್ರಿಯೆಗಳು, ಪರೀಕ್ಷಕ ನೇರ ಹಸ್ತಕ್ಷೇಪಕ್ಕೆ ಒಳಪಡದೆ ಸ್ವಯಂಚಾಲಿತವಾಗಿ ನಡೆಯುತ್ತವೆ.
- ಈ ರೀತಿಯ ಪದ್ಧತಿಯು ಕೈಬರಹ ಸಂಬಂಧಿತ ಅಂಶಗಳಿಂದ ದೋಷಮುಕ್ತವಾಗಿದೆ ಎಂದು ಹೇಳಬಹುದು.
- ಸಾಂಪ್ರದಾಯಿಕ ಪರೀಕ್ಷೆಗಳಿಗೆ ಹೋಲಿಸಿದಾಗ ಆನ್‌ಲೈನ್ ಪರೀಕ್ಷೆಗಳ ನಿರ್ವಹಣೆ ದುಬಾರಿಯೇನಲ್ಲ.
- ಈ ರೀತಿಯ ಪರೀಕ್ಷಾ ವ್ಯವಸ್ಥೆಯು ಎಲ್ಲಾ ರೀತಿಯ ಶಿಕ್ಷಣ ಸಂಸ್ಥೆಗಳ ಅಗತ್ಯವನ್ನು ಪೂರೈಸುತ್ತದೆ.
- ಈ ವ್ಯವಸ್ಥೆಯು ಪಾರದರ್ಶಕತೆಯನ್ನು ಕಾಪಾಡಿಕೊಂಡು ಬರುವುದರ ಮೂಲಕ ದಕ್ಷತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.
- ಆನ್‌ಲೈನ್ ಪರೀಕ್ಷೆಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿ, ಯಶಸ್ವಿಯಾಗಿ ನಿರ್ವಹಿಸಲು ವಿಶಿಷ್ಟ ತಂತ್ರಾಂಶಗಳು ಲಭ್ಯ ಇವೆ.
- ಸಂಬಂಧಪಟ್ಟ ವಿದ್ಯಾರ್ಥಿಗಳ ವಿವರಗಳು, ದಾಖಲೆಗಳು, ಪ್ರಶ್ನೆಪತ್ರಿಕೆಗಳು, ಅಂಕಪಟ್ಟಿ ತಯಾರಿಕೆ ಇವುಗಳನ್ನು ದಕ್ಷತೆಯಿಂದ ಹಾಗೂ ಸುಲಭವಾಗಿ ನಿರ್ವಹಿಸಲು ಲಭ್ಯವಿರುವ ತಂತ್ರಾಂಶಗಳು ಸಹಾಯ ಮಾಡುತ್ತವೆ.

–ಎ.ಶ್ರೀ

## ಆಲೋಚನೆ ಮತ್ತು ತಾರ್ಕಿಕತೆ

ಸಾಮಾನ್ಯವಾಗಿ ಆಲೋಚನೆ ಎನ್ನುವ ಪದ ಅನೇಕ ವಿಭಿನ್ನ ಮನೋವೈಜ್ಞಾನಿಕ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. "ಮಳೆ ಬರಬಹುದು ಎಂದು ಆಲೋಚಿಸುತ್ತಿದ್ದೇನೆ. ಆದರೆ ಭರವಸೆಯಿಲ್ಲ" ಎನ್ನುವಲ್ಲಿ ಆಲೋಚನೆ ಎನ್ನುವ ಪದ ಒಂದು ಅರೆನಂಬಿಕೆಗೆ ಸಮಾನಾರ್ಥಕ ಪದವಾಗಿ ನಿಂತರೆ, "ನಾನದನ್ನು ಆಲೋಚನೆ ಮಾಡದೇ ಮಾಡಿದೆ"ಎನ್ನುವಲ್ಲಿ ಅವಧಾನವಿಲ್ಲದಿರುವಿಕೆಯನ್ನು ಸೂಚಿಸುತ್ತದೆ. "ಆ ಘಟನೆ ನನ್ನ ತಾಯಿಯನ್ನು ಕುರಿತು ಆಲೋಚಿಸುವಂತೆ ಮಾಡಿತು" ಎನ್ನುವಲ್ಲಿ ಆಲೋಚನೆ ಎನ್ನುವ ಪದ ತತ್ಕ್ಷಣದ ಪರಿಸರದಲ್ಲಿಲ್ಲದ ಆದರೆ ಪ್ರಜ್ಞೆಯಲ್ಲಿರುವ ವಿಷಯವನ್ನು ಕುರಿತು ತಿಳಿಸುತ್ತದೆ.

ಹೀಗೆ ಆಲೋಚನೆ ಎನ್ನುವ ಪದದ ವ್ಯಾಪ್ತಿ ಬಹಳ ಸರಳವಾದ ಸ್ಮರಿಸುವಿಕೆಯಿಂದ ಪ್ರಾರಂಭಿಸಿ ವೈಜ್ಞಾನಿಕ ಸಂಶೋಧನೆಗಳಲ್ಲಿರುವ ಅಥವಾ ಸೃಜನಶೀಲ ಪ್ರಕ್ರಿಯೆಗಳಲ್ಲಿರುವ ಅತ್ಯಂತ ಸಂಕೀರ್ಣವಾದ ಕ್ರಿಯೆಯ ವರೆಗೆ ಹರಡಿಕೊಂಡಿದೆ. ಆದರೆ ಯಾವ ಅರ್ಥಗಳಲ್ಲಿ ಬಳಸಿದಾಗಲೂ ಅದು ಸಂಕೇತಗಳ ವ್ಯವಹಾರವನ್ನು ಒಳಗೊಂಡಿರುತ್ತದೆ. ಆಲೋಚನೆ ಸಂಕೇತಗಳನ್ನು ಮಧ್ಯವರ್ತಿಯಾಗಿ ಹೊಂದಿರುವ ಒಂದು ಮಾನಸಿಕ ಪ್ರಕ್ರಿಯೆ.

ಅನುಭವಗಳಿಂದ ನಮ್ಮ ಮನಸ್ಸಿನಲ್ಲಿ ಬಿಂಬಗಳು ಮೂಡಿರುತ್ತವೆ. ಈ ಬಿಂಬಗಳು ಸಂಕೇತಗಳು ಅಥವಾ ಪ್ರತಿಮೆಗಳಿಗೆ ನಾವು ಮನೋಬಿಂಬಗಳೆಂದು ಕರೆಯುತ್ತೇವೆ. ಈ ಬಿಂಬಗಳನ್ನು ಪುನರ್ವ್ಯವಸ್ಥೆಗೊಳಿಸುವುದೇ ಆಲೋಚನಾ ಪ್ರಕ್ರಿಯೆ ಎಂದು ಕರೆಸಿಕೊಳ್ಳುತ್ತದೆ. ಅಲ್ಪ ಮತ್ತು ದೀರ್ಘಕಾಲಿಕ ಸ್ಮೃತಿಯಲ್ಲಿರುವ ಬಿಂಬಗಳನ್ನು ಹುಡುಕಿ ಹೊರತೆಗೆದು ಅವುಗಳಲ್ಲಿ ಪರಸ್ಪರ ಸಂಬಂಧಿಸಿ ಪುನರ್ವ್ಯವಸ್ಥೆ ಮಾಡುವುದರ ಮೂಲಕ ನಮ್ಮ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತೇವೆ. ಹೀಗೆ ಸ್ಮರಣೆ ಎನ್ನುವ ಸರಳ ವರ್ತನೆಯಿಂದ ಪ್ರಾರಂಭಿಸಿ ಸಮಸ್ಯಾಪರಿಹಾರ ಎನ್ನುವ ಕ್ಲಿಷ್ಟ ವರ್ತನೆಯವರೆಗೂ ಆಲೋಚನೆ, ಮನೋಬಿಂಬಗಳ – ಸಂಕೇತಗಳ ಬಳಕೆಯನ್ನು ಆಧರಿಸುತ್ತಿರುತ್ತದೆ. ಮನಸ್ಸಿನಲ್ಲಿ ಹುದುಗಿ ಕುಳಿತ ಮಾಹಿತಿಗಳನ್ನು ಹೊರತೆಗೆಯುವುದು, ಅವುಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸುವುದು, ತರ್ಕಕ್ಕೆ ಸಿಲುಕಿಸಿ ಅವುಗಳ ಮೌಲ್ಯಮಾಪನ ಮಾಡುವುದು ಎಲ್ಲವೂ ಸಂಜ್ಞಾನಾತ್ಮಕ ಕಾರ್ಯಗಳೇ ಆಗಿ ಬೆಂಜಮಿನ್.ಎಸ್.ಬ್ಲೂಮರ ಜ್ಞಾನದಿಂದ ಆರಂಭಿಸಿ ತಿಳಿವಳಿಕೆ, ಅನ್ವಯ, ವಿಶ್ಲೇಷಣೆ, ಸಂಶ್ಲೇಷಣೆ, ಮೌಲ್ಯಮಾಪನ ಎನ್ನುವ ಎಲ್ಲ ಮಾನವೀಯ ವರ್ತನೆಗಳೂ ಆಲೋಚನೆ ಎನ್ನುವ ಪರಿಕಲ್ಪನೆಯ ವ್ಯಾಪ್ತಿಗೆ ಸೇರಿಬಿಡುತ್ತವೆ.

Digitised by Bharatavani, CIIL

ಆಲೋಚನೆಗೆ ಬೇಕಾದ, ಮನಸ್ಸು ಹಿಡಿದಿಡುವ ಮಾಹಿತಿಯನ್ನು ವಿವಿಧ ವರ್ಗಗಳಾಗಿ ವಿಂಗಡಿಸಬಹುದು. ಪರಿಕಲ್ಪನೆ, ನಿಯಮ, ಮನೋಮಾದರಿ (schema), ಪದಗಳು ಮತ್ತು ಪರಿಚಿತ ಘಟನೆಗಳ ಸಾರಾಂಶಗಳು, (abstracts), ಮಾನಸಿಕ ಚಿತ್ರಗಳು ಎನ್ನುವುದು ಶಿಕ್ಷಣದಲ್ಲಿ ನಾವು ಮಾಡಿಕೊಂಡಿರುವ ವರ್ಗೀಕರಣ. ಮಾಹಿತಿಗಳಲ್ಲಿರುವ ಸಾಮಾನ್ಯ ಸಂಗತಿಗಳನ್ನು ಗಮನಿಸಿದ ಮನಸ್ಸು ಆ ಮಾಹಿತಿಗಳನ್ನು ಒಟ್ಟುಗೂಡಿಸಿ ಪ್ರತ್ಯಯ (ಪರಿಕಲ್ಪನೆ)ವೊಂದನ್ನು ಮೂಡಿಸಿಕೊಳ್ಳುತ್ತದೆ. ಇದು ಅನೇಕ ಸಂಗತಿಗಳ ಸಾರಾಂಶವಾಗಿದ್ದು ಇದು ಮನಸ್ಸಿನಲ್ಲಿ ಸಾರವಾಗಿ ಉಳಿದುಕೊಳ್ಳುತ್ತದೆ. ಈ ಸಾರಾಂಶ ಅಥವಾ ಕೇಂದ್ರೀಯ ಕಲ್ಪನೆಯನ್ನೇ ಪರಿಕಲ್ಪನೆ ಎಂದು ಕರೆದಿದ್ದು ಇದನ್ನು ಶಿಕ್ಷಣದಲ್ಲಿ ಮೂಲ ಘಟಕವನ್ನಾಗಿ ಗ್ರಹಿಸಲಾಗಿದೆ. ಉದಾಹರಣೆಗೆ, ಕಾಗೆ, ಗುಬ್ಬಿ, ಪಾರಿವಾಳ, ಗಿಳಿ, ಮೈನಾ ಇವುಗಳಲ್ಲಿ ಅನೇಕ ವ್ಯತ್ಯಾಸಗಳಿದ್ದರೂ ಅವುಗಳನ್ನು ಹಕ್ಕಿಗಳೆಂದೇ ಗುರುತಿಸುತ್ತೇವೆ. ಗುಲಾಬಿ, ದಾಸವಾಳ, ಸೇವಂತಿಗೆ, ಜಾಜಿ, ಮಲ್ಲಿಗೆ, ಇವುಗಳಲ್ಲಿ ಭಿನ್ನತೆಗಳಿದ್ದರೂ ಅವುಗಳನ್ನು ಹೂವುಗಳು ಎನ್ನುವ ಗುಂಪಿಗೆ ಸೇರಿಸುತ್ತೇವೆ. ಬೇರೆ ಬೇರೆ ಪರಿಕಲ್ಪನೆಗಳಿಗೆ ಇರುವ ಸಂಬಂಧಗಳನ್ನು ನಿಯಮಗಳು ಸ್ಪಷ್ಟಪಡಿಸುತ್ತವೆ. ಉಷ್ಣತೆ ಸ್ಥಿರವಾಗಿದ್ದಾಗ, ಒತ್ತಡವು ಗಾತ್ರಕ್ಕೆ ವಿಲೋಮಾನುಪಾತದಲ್ಲಿರುತ್ತದೆ ಎನ್ನುವುದು ಒಂದು ನಿಯಮ. ಇಲ್ಲಿ ಈ ನಿಯಮ ಒತ್ತಡ, ಗಾತ್ರ, ಮತ್ತು ಉಷ್ಣತೆ ಎನ್ನುವ ಪರಿಕಲ್ಪನೆಗಳ ನಡುವೆ ಇರುವ ಸಂಬಂಧವನ್ನು ಸ್ಥಾಪಿಸುತ್ತದೆ. ಆಂಗ್ಲ ಭಾಷೆಯಲ್ಲಿ ಪ್ರಥಮ ಪುರುಷ ಏಕವಚನ ಪ್ರಯೋಗದಲ್ಲಿ ಕ್ರಿಯಾ ಪದವು 'S' ಅಕ್ಷರವನ್ನೂ ಸೇರಿಸಿಕೊಳ್ಳುತ್ತದೆ ಎನ್ನುವುದು ನಿಯಮ. (Run-Runs). ಇದು ಪುರುಷ ವಚನ ಮತ್ತು ಕ್ರಿಯಾಪದರೂಪಗಳ ನಡುವೆ ಸಂಬಂಧ ಸ್ಥಾಪಿಸುತ್ತದೆ.

ವಸ್ತುಗಳು ಹೇಗೆ ಕೆಲಸ ಮಾಡಬಹುದು ಎಂದು ಆಲೋಚಿಸುವುದು ಒಂದು ಮನೋಮಾದರಿ. ಗಡಿಯಾರದ ಕೆಲಸದ ಹಿಂದೆ ಅನೇಕ ನಿಯಮಗಳಿರುತ್ತವೆ. ಗಡಿಯಾರ ಕೆಲಸ ಮಾಡುವುದು ಈ ನಿಯಮಗಳ ಆಧಾರದ ಮೇಲೆ. ಗಣಕ ಯಂತ್ರದ ಕೆಲಸದ ಹಿಂದೆಯೂ ಅನೇಕ ನಿಯಮಗಳಿದ್ದು ಆ ನಿಯಮಗಳ ನಡುವೆ ಸಂಬಂಧ ಗುರುತಿಸಿದಾಗ ಮಾತ್ರ ಮನೋಮಾದರಿಗಳು ಸಿದ್ಧವಾಗುತ್ತವೆ.

ಮನುಷ್ಯನ ಆಲೋಚನೆಗಳು ಸಾಮಾನ್ಯವಾಗಿ ಪದ ಮತ್ತು ವಾಕ್ಯಗಳ ರೂಪದಲ್ಲಿರುತ್ತವೆ. ಭಾಷಾ ಶಾಸ್ತ್ರಜ್ಞ ಚೋಮ್‌ಸ್ಕಿ ಮಾನವರಲ್ಲಿ ಭಾಷಾ ಗ್ರಹಣ ರಚನೆ ಇದ್ದು ಮಕ್ಕಳು ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯವಮಾಡುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆಲೋಚನೆಗಳು ಮತ್ತು ನಾವು ಬಳಸುವ ಭಾಷಾ ಸಾಮರ್ಥ್ಯಕ್ಕೆ ತೀರಾ ಹತ್ತಿರದ ಸಂಬಂಧವಿದೆ. ಕೆಲ ವಿಜ್ಞಾನಿಗಳು ಭಾಷೆ ನಮ್ಮ ಆಲೋಚನೆಯನ್ನು ರೂಪಿಸುತ್ತವೆ ಎಂದು ತಿಳಿಸುತ್ತಾರೆ. ಭಾಷೆ ಮಾನವ ಬಳಸುವ ಸಂಕೇತಗಳಲ್ಲಿ ಅತ್ಯುತ್ತಮವಾದದ್ದು.

ಪರಿಚಿತ ಘಟನೆಗಳು ನಮ್ಮ ಮನಸ್ಸಿನಲ್ಲಿ ಸಂಕ್ಷಿಪ್ತ ರೂಪದಲ್ಲಿ ಅಚ್ಚೊತ್ತಿದ್ದು ಅವು ಆಲೋಚಿಸುವಾಗ ಪುನರ್ಬಳಸಲ್ಪಡುತ್ತವೆ.

ನಮ್ಮ ಅನುಭವದಲ್ಲಿರುವ ದೃಶ್ಯಾವಳಿಗಳು ಕೂಡಾ ನಮ್ಮ ಮನಸ್ಸಿನಲ್ಲಿ ಚಿತ್ರಗಳ ರೂಪದಲ್ಲಿ ಸಂಗ್ರಹವಾಗಿರುತ್ತವೆ ಮತ್ತು ಪುನರ್ಬಳಕೆಗೆ ಒದಗುತ್ತವೆ.

ಕಾರ್ಯ–ಕಾರಣ ಸಂಬಂಧಗಳನ್ನು ಆಧರಿಸಿ ಮಾಡುವ ಚಿಂತನೆಯನ್ನು ನಾವು ತರ್ಕಬದ್ಧ ಚಿಂತನೆ ಎಂದು ಕರೆಯುತ್ತೇವೆ. ವಿಜ್ಞಾನದಲ್ಲಿ ನಾವು ಇಂತಹ ತರ್ಕಬದ್ಧ ಚಿಂತನೆ ಕಾಣುತ್ತೇವೆ. ಇಡೀ ಗಣಿತ ಶಾಸ್ತ್ರವೇ ತರ್ಕಬದ್ಧ ಚಿಂತನೆಗೆ ಉದಾಹರಣೆಯಾಗಿದೆ.

ಹಲವು ಬಾರಿ ತರ್ಕಿಸು ಎನ್ನುವ ಪದವನ್ನು ಆಲೋಚಿಸು ಎನ್ನುವ ಪದದ ಸಮಾನಾರ್ಥಕ ಪದವಾಗಿ ಬಳಸುವುದಿದೆ. ಎಲ್ಲಾ ಆಲೋಚನೆಗಳೂ ತಾರ್ಕಿಕವಾಗಿರಬೇಕಾದದ್ದಿಲ್ಲ. ಕೆಲವೊಮ್ಮೆ ಒಳನೋಟದಲ್ಲಿ ತಟ್ಟನೆ ದೊರೆಯುವ ಆಲೋಚನೆಗಳು ಸಮಸ್ಯೆಗೆ ಪರಿಹಾರ ಒದಗಿಸಿವೆ. ಸೃಜನ ಶೀಲ ಚಿಂತನೆಯಲ್ಲಿ ಕಲ್ಪನೆಗಳು–ಊಹೆಗಳು ದೊಡ್ಡ ಪಾತ್ರ ವಹಿಸುತ್ತವೆ. ತೌಲನಿಕ ಚಿಂತನೆಯಲ್ಲಿ ಕಾರಣಗಳ ಗೋಜಲು ಇರುವುದಿಲ್ಲ. ಹಾಗಾಗಿ ಚಿಂತನೆಯೆಲ್ಲವೂ ತಾರ್ಕಿಕ ಎಂದು ಹೇಳಲು ಬರುವುದಿಲ್ಲ. ಆಲೋಚನೆಗಳನ್ನು, ತೌಲನಿಕ ಚಿಂತನೆ, ಕಲ್ಪನಾತ್ಮಕ ಚಿಂತನೆ, ತಾರ್ಕಿಕ ಚಿಂತನೆ ಎಂದು ವರ್ಗೀಕರಿಸಬಹುದು. ತಾರ್ಕಿಕ ಚಿಂತನೆ ಹೆಚ್ಚು ವಸ್ತು ನಿಷ್ಠವಾಗಿದ್ದು ಪೂರ್ವಾನುಭವಗಳಿಂದ ಬಂದಂತಹ ಕಾರ್ಯ–ಕಾರಣ ಸಂಬಂಧಗಳಿಗೆ ನಿಷ್ಠವಾಗಿರುತ್ತದೆ. ಮತ್ತು ಅವುಗಳನ್ನು ಒರೆ ಹಚ್ಚಬಹುದು. ತಾರ್ಕಿಕ ಚಿಂತನೆಯನ್ನು ವಿಶ್ಲೇಷಣಾತ್ಮಕ ಮತ್ತು ಸಂಶ್ಲೇಷಣಾತ್ಮಕ ಎಂದು ವಿಭಾಗಿಸಬಹುದು.

ಇರುವ ವ್ಯವಸ್ಥೆಯನ್ನು ವಿಭಜಿಸಿ ಆಲೋಚಿಸುವುದನ್ನು ವಿಶ್ಲೇಷಣೆ ಎಂದೂ, ಭಾಗಗಳನ್ನು ಕೂಡಿಸಿ ಆಲೋಚಿಸುವುದನ್ನು ಸಂಶ್ಲೇಷಣೆ ಎಂದೂ ಕರೆಯಬಹುದು. ಆಲೋಚನೆಗಳನ್ನು ನೇರ, ಅನುಗಮನಶೀಲ ಮತ್ತು ನಿಗಮನಶೀಲ ಎಂದು ವಿಭಜಿಸಬಹುದು. ಒಂದು ಮಾಹಿತಿಯಿಂದ ಮತ್ತೊಂದು ಮಾಹಿತಿಗೆ ಇರುವ ಸಂಬಂಧ ಗುರುತಿಸಿ ನೇರ ವರ್ಗಾವಣೆ ಮಾಡುವ ಚಿಂತನೆಗೆ ನೇರ ಚಿಂತನೆ ಎಂದು ಹೆಸರು. ಇದು ಪೂರ್ವ ಬಾಲ್ಯದಲ್ಲಿ ಸಹಜವಾಗಿರುತ್ತದೆ. ಅನೇಕ ಮಾಹಿತಿಗಳಲ್ಲಿರುವ ಸಾಮ್ಯ ಗುರುತಿಸಿ ಅವುಗಳ ಸಾರಾಂಶ ಸಂಗ್ರಹಿಸಿ ಮನೋರಚನೆಯೊಂದನ್ನು ಸೃಷ್ಟಿಸಿಕೊಳ್ಳುವ ಕ್ರಮವನ್ನು ಅನುಗಮನ ಶೀಲ ಚಿಂತನೆ (Inductive Reasoning) ಎಂದು ಕರೆಯುತ್ತೇವೆ. 'ಅ' ನಶ್ವರ, 'ಆ' ನಶ್ವರ, 'ಇ' ನಶ್ವರ 'ಈ' ನಶ್ವರ........ ಅ, ಆ, ಇ, ಈ ಇವರೆಲ್ಲರೂ ಮನುಷ್ಯರು. ಆದ್ದರಿಂದ ಮಾನವರು ನಶ್ವರರು ಎನ್ನುವ ಗ್ರೀಕ್ ತತ್ವಶಾಸ್ತ್ರದ ಉದಾಹರಣೆ ನಿರ್ದಿಷ್ಟ ಸಂಗತಿಗಳಿಂದ ಸಾಮಾನ್ಯೀಕರಣದತ್ತ ಸಾಗುವ ಅನುಗಮನಶೀಲ ಚಿಂತನೆಗೆ ಉದಾಹರಣೆಯಾಗುತ್ತದೆ.

ಮಾನವರು ನಶ್ವರರು. 'ಜ' ಒಬ್ಬ ಮಾನವ. ಆದ್ದರಿಂದ 'ಜ' ಕೂಡಾ ನಶ್ವರನಾಗಿರಬೇಕು ಎಂದು ಸಾಮಾನ್ಯೀಕರಣದಿಂದ ಸಂಗತಿಗೆ ಬರುವ ತರ್ಕವನ್ನು ನಿಗಮನಶೀಲ ಚಿಂತನೆ (Deductive Reasoning) ಎಂದು ಕರೆಯುತ್ತೇವೆ.

ಆಲೋಚನೆಗಳನ್ನು ಮೂರ್ತ ಮತ್ತು ಅಮೂರ್ತ ಎಂದೂ ವರ್ಗೀಕರಿಸಲಾಗಿದೆ. ಸ್ಪಷ್ಟ ಪ್ರತಿಮೆಗಳಿದ್ದು ಮಾಡಲಾಗುವ ಚಿಂತನೆಗಳನ್ನು ಮೂರ್ತ ಎಂದೂ ಪ್ರತಿಮೆಗಳಿಲ್ಲದೇ ಸಂಕೇತಗಳ ಸೂತ್ರಗಳಿಂದ ಮಾಡುವ ಚಿಂತನೆಯನ್ನು ಅಮೂರ್ತ ಎಂದೂ ಕರೆಯುತ್ತೇವೆ. ಮೂರ್ತ ಚಿಂತನೆಗಳು ಸರಳವಾಗಿದ್ದು ಅಮೂರ್ತ ಚಿಂತನೆಗಳು ಕ್ಲಿಷ್ಟವಾಗಿರುತ್ತವೆ. ಆಲೋಚನೆಗಳು ಮತ್ತು ತಾರ್ಕಿಕ ಚಿಂತನೆಯ ಕಲ್ಪನೆ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖವಾಗಿದೆ.

1. ಆಲೋಚನಾಶಕ್ತಿಯನ್ನು ಬೆಳೆಸುವುದೇ ಶಿಕ್ಷಣದ ಪ್ರಮುಖ ಉದ್ದೇಶವಾಗಿದೆ.
2. ವಿಜ್ಞಾನ, ಗಣಿತಗಳು ಪ್ರಮುಖವಾಗಿ ತಾರ್ಕಿಕ ಚಿಂತನೆಯನ್ನೂ, ಸಮಾಜ ವಿಜ್ಞಾನ ತೌಲನಿಕ ಚಿಂತನೆಯನ್ನೂ, ಕಲೆ ಮತ್ತು ಸಾಹಿತ್ಯಗಳು ಕಲ್ಪನಾಶೀಲ ಚಿಂತನೆಯನ್ನೂ ಬೆಳೆಸುವುದನ್ನು ಕಾಣುತ್ತೇವೆ. ವಿವಿಧ ವಿಷಯಗಳನ್ನು ಕಲಿಸುವಾಗ ಯಾವ ತರಹದ ಚಿಂತನೆ ಬೆಳೆಸಬೇಕು ಎನ್ನುವುದನ್ನು ಶಿಕ್ಷಕರು ಅರಿತಿರಬೇಕು.

Digitised by Bharatavani, CIIL

3. ಪಿಯಾಜೆಯವರು ತಮ್ಮ ಸಿದ್ಧಾಂತದಲ್ಲಿ ಚಿಂತನೆ ಬೇರೆ ಬೇರೆ ವಯೋವಧಿಗಳಲ್ಲಿ ಹೇಗೆ ಬೆಳೆಯುವುದು ಎಂದು ತಿಳಿಸಿದ್ದಾರೆ. ಪಠ್ಯವಸ್ತು ಮತ್ತು ಕ್ರಮ ನಿರ್ಧಾರ ಮಾಡುವಾಗ ಈ ಚಿಂತನೆ ಬಹಳ ಅಗತ್ಯ.
4. ಜೆರೋಂ.ಎಸ್.ಬ್ರೂನರ್ ಅವರು ತಮ್ಮ ಅಧ್ಯಯನಗಳ ಮೂಲಕ ಚಿಂತನೆ ಹೇಗೆ ಶೋಧ (ಅನ್ವೇಷಣೆ) ಕಲಿಕೆಯಲ್ಲಿ ಮುಖ್ಯವಾಗುತ್ತದೆ. ಎಂದು ತಿಳಿಸಿದ್ದಾರೆ. ಉಪನ್ಯಾಸಗಳ ಮೂಲಕ ಮಾಡುವ ಪ್ರತಿಬೋಧನೆಯನ್ನು ವಿರೋಧಿಸಿ ಬರಿಯ ಶಾಬ್ದಿಕ ಕಲಿಕೆಯು ಸರಿಯಾದದ್ದಲ್ಲ ಎಂದು ಪ್ರತಿಪಾದಿಸಿದ್ದಾರೆ. ಆಲೋಚನೆಯ ಬಗೆಗಿನ ಇವರ ವಿಚಾರಗಳು ಶಿಕ್ಷಣದಲ್ಲಿ ಹೊಸ ಮಾರ್ಗಗಳಿಗೆ ಕಾರಣವಾಗಿವೆ.
5. ಶಾಬ್ದಿಕ ಕಲಿಕೆಯಲ್ಲೂ ಚಿಂತನೆಗೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಡೆವಿಡ್ ಆಸ್ಯುಬೆಲ್‌ರವರು ತಿಳಿಸಿಕೊಟ್ಟ ಅನುಕ್ರಮಣಿಕೆ, ಮುನ್ಸಂಘಟಕಗಳ ಕಲ್ಪನೆ ಇಲ್ಲಿ ಮಹತ್ವ ಪಡೆಯುತ್ತದೆ.

–ಎ.ಜಿ.ಗೋ.ಕೊ.

## ಆಲ್ಫ್ರೆಡ್ ನಾರ್ತ್ ವೈಟ್‌ಹೆಡ್

ಆಲ್ಫ್ರೆಡ್ ನಾರ್ತ್ ವೈಟ್‌ಹೆಡ್ ಇಂಗ್ಲೆಂಡಿನ ಕೆಂಟ್‌ಗೆ ಸೇರಿದ ಥಾನೆಟ್ ದ್ವೀಪದ ರ್‍ಯಾಂಸ್‌ಗೇಟ್ ಎಂಬಲ್ಲಿ 1861 ಫೆಬ್ರವರಿ 15ರಂದು ಜನಿಸಿದನು. ವೈಟ್‌ಹೆಡ್‌ನ ತಾತ ಥಾಮಸ್ ವೈಟ್‌ಹೆಡ್ ಸ್ವಪ್ರಯತ್ನದಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡ ವ್ಯಕ್ತಿ. ಅವನು 'ಚಾಥಾಮ್ ಹೌಸ್ ಅಕಾಡೆಮಿ' ಎಂಬ ಬಾಲಕರ ಶಾಲೆಯನ್ನು ತೆರೆದು ಯಶಸ್ವಿಯಾಗಿ ನಡೆಸಿದನು. ತಂದೆ ಆಲ್ಫ್ರೆಡ್ ವೈಟ್‌ಹೆಡ್ ಇಂಗ್ಲೆಂಡ್‌ನ ಸುಧಾರಿತ ಧರ್ಮದ ಪಾದ್ರಿಯಾಗಿದ್ದು ನಂತರದಲ್ಲಿ ಆ ಶಾಲೆಯ ಮುಖ್ಯಸ್ಥನಾಗಿದ್ದನು. ಮುಂದೆ ಥಾನೆಟ್ (Thanet)ನ ಸೇಂಟ್ ಪೀಟರ್ಸ್‌ನಲ್ಲಿ ಪಾದ್ರಿಯಾದನು. ವೈಟ್‌ಹೆಡ್‌ನ ತಾಯಿ ಒಬ್ಬ ಮಿಲಿಟರಿ ದರ್ಜಿಯ ಮಗಳು. ಅವರ ಕಿರಿಯ ಮಗ ಆಲ್ಫ್ರೆಡ್‌ನಾರ್ತ್ ವೈಟ್‌ಹೆಡ್. ಶಾಲೆಗೆ ಹೋಗಲಾಗಲೀ ಅಥವಾ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲಾಗಲೀ ಅವನಿಗೆ ಶಕ್ತಿ ಸಾಲದೆಂದು ತೀರ್ಮಾನಿಸಿ ಅವನ ತಂದೆ ಅವನ 14ನೇ ವಯಸ್ಸಿನವರೆಗೂ ಅವನಿಗೆ ಮನೆಯಲ್ಲೇ ಪಾಠ ಹೇಳಿದನು. ಅನಂತರ ಇಂಗ್ಲೆಂಡ್‌ನಲ್ಲಿಯೇ ಅತ್ಯುತ್ತಮ ಶಾಲೆಗಳಲ್ಲಿ ಒಂದಾದ ಡಾರ್‌ಸೆಟ್‌ನ ಷರ್‌ಬೋರನ್ ಶಾಲೆ (Sherborne)ಗೆ ಅವನನ್ನು ಕಳುಹಿಸಲಾಯಿತು. ಶ್ರೇಷ್ಠ ಮಾದರಿಯ ಶಿಕ್ಷಣವನ್ನು ಪಡೆದ ವೈಟ್‌ಹೆಡ್ ಗಣಿತದ ಬಗ್ಗೆ ವಿಶೇಷವಾದ ಬುದ್ಧಿಮತ್ತೆಯನ್ನು ಪ್ರದರ್ಶಿಸಿದನು. ವಿಪರೀತ ರಕ್ಷಣಾತ್ಮಕವಾಗಿ ತನ್ನ ಬಾಲ್ಯಜೀವನವನ್ನು ಕಳೆದಿದ್ದರೂ ಅವನು ಸ್ವಾಭಾವಿಕವಾಗಿಯೇ ತನ್ನನ್ನು ತಾನೇ ನಾಯಕನನ್ನಾಗಿ ತೋರಿಸಿಕೊಂಡನು. ಅವನ ಅಂತಿಮ ಶಾಲಾವರ್ಷದಲ್ಲಿ ಅವನು ಪ್ರಮುಖ ಹಿರೇಮಣಿಯಾಗಿದ್ದು ತರಗತಿ ಕೊಠಡಿಯ ಹೊರಗೆ ಎಲ್ಲ ರೀತಿಯ ಶಿಸ್ತಿಗೂ ಜವಾಬ್ದಾರನಾಗಿದ್ದನು. ಮತ್ತು ಕ್ರೀಡೆಗಳ ನಾಯಕನಾಗಿ (ಕ್ಯಾಪ್ಟನ್) ಅತ್ಯಂತ ಯಶಸ್ವಿಯಾದನು.

ವೈಟ್‌ಹೆಡ್

1880ರಲ್ಲಿ ವೈಟ್‌ಹೆಡ್ ವಿದ್ಯಾರ್ಥಿವೇತನವನ್ನು ಪಡೆದು ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜನ್ನು ಪ್ರವೇಶಿಸಿದನು. ಅವನು ಕೇವಲ ಗಣಿತದ ಉಪನ್ಯಾಸಗಳಿಗೆ ಮಾತ್ರ ಹಾಜರಾಗುತ್ತಿದ್ದನು. ಸಾಹಿತ್ಯ, ಮತಧರ್ಮ, ತತ್ವಶಾಸ್ತ್ರ ಮತ್ತು ರಾಜ್ಯಶಾಸ್ತ್ರದ ಬಗೆಗಿನ ಅವನ ಆಸಕ್ತಿಗಳು, ಸಂಭಾಷಣೆಗಳಷ್ಟರಿಂದಲೇ ಪುಷ್ಟಿಗೊಂಡವು. ಹಾಗಿದ್ದರೂ, 'ಅಪೋಸ್ಟಲ್ಸ್' (Apostles) ಎಂದು ಹೆಸರಾದ ಗಣ್ಯ ವ್ಯಕ್ತಿಗಳ ಚರ್ಚಾ ಸಂಘಕ್ಕೆ ಅವನು ಆಯ್ಕೆಯಾಗುವುದು ಮೇ 1884ರವರೆಗೂ ಸಾಧ್ಯವಾಗಿರಲಿಲ್ಲ. 1883–84ರ ಗಣಿತದ ಟ್ರೈಪೋಸ್ (Mathematical Tripos) ಆನರ್ಸ್ ಪರೀಕ್ಷೆಯಲ್ಲಿ ಉತ್ತಮವಾಗಿ ಉತ್ತರಿಸಿದ ವೈಟ್‌ಹೆಡ್, ಟ್ರಿನಿಟಿ ಸದಸ್ಯ ವೇತನವನ್ನು ಗಳಿಸಿದನು ಮತ್ತು ಕಾಲೇಜಿನ ಗಣಿತ ವಿಭಾಗದ (ಉಪನ್ಯಾಸಕ) ಸಿಬ್ಬಂದಿವರ್ಗಕ್ಕೆ ನೇಮಕಗೊಂಡನು. ಜೇಮ್ಸ್‌ಕ್ಲರ್ಕ್ ಮ್ಯಾಕ್ಸ್‌ವೆಲ್‌ನ (Theory of Electricity and Magnetism) ವಿದ್ಯುತ್ ಮತ್ತು ಅಯಸ್ಕಾಂತೀಯ ಸಿದ್ಧಾಂತದ (ಅವನ ಸದಸ್ಯವೇತನ ಪ್ರಬಂಧದ ವಿಷಯ) ಬಗೆಗಿನ ಅವನ ಆಸಕ್ತಿಯು ಗಣಿತದ ಸಂಕೇತಪದ್ಧತಿ ಮತ್ತು ಕಲ್ಪನೆಗಳ ಪರಾಮರ್ಶೆಯ ಕಡೆಗೆ ವಿಸ್ತೃತಗೊಂಡಿತು. ಆಧುನಿಕ ಬೀಜಗಣಿತ (Algebra) ದಲ್ಲಿನ ಮೂಲ ಪರಿಶೋಧನೆಗಳಿಂದ ಉತ್ತೇಜನಗೊಂಡು ಅವನು ಸಾಮಾನ್ಯ ಬೀಜಗಣಿತಕ್ಕೆ ಸಂಬಂಧಿಸಿದಂತೆ ಸಾಂಕೇತಿಕ ತರ್ಕಸರಣಿಯ ಪದ್ಧತಿಗಳ ವಿವರವಾದ ತುಲನಾತ್ಮಕ ಅಧ್ಯಯನವನ್ನು ಮನಸ್ಸಿನಲ್ಲಿ ರೂಪಿಸಿಕೊಂಡನು. ಹಾಗಿದ್ದರೂ, ಅವನು ಇವೆಲಿನ್ ವಿಲೌಗ್ಬಿವೇಡ್ (Evelyn Willoughby Wade) ಳನ್ನು ಮದುವೆಯಾದ ನಂತರದ ಒಂದು ತಿಂಗಳು ಅಂದರೆ 1891ರ ಜನವರಿಯವರೆಗೂ ತನ್ನ ವೈಶ್ವಿಕ ಬೀಜಗಣಿತದ ಮೇಲಿನ ಪ್ರಕರಣ ಗ್ರಂಥ–Treatise on Universal Algebraವನ್ನು ಬರೆಯಲು ಪ್ರಾರಂಭಿಸಲೇ ಇಲ್ಲ. ಫ್ರಾನ್ಸ್‌ನಲ್ಲಿ ಹುಟ್ಟಿದ್ದ ಆತನ ಪತ್ನಿ ಬಡತನಕ್ಕೆ ತುತ್ತಾಗಿದ್ದ ಕುಲೀನವಂಶದ ಮಗಳು ಮತ್ತು ಧಾರ್ಮಿಕ ಸಮಾಜದ ಮಠದಲ್ಲಿ ಶಿಕ್ಷಣ ಪಡೆದವಳು. ಒಳ್ಳೆಯ ನಾಟಕ ಪ್ರವೃತ್ತಿಯ, ವಾಸ್ತವವಾಗಿದ್ದ ಮತ್ತು ಅಸಾಧಾರಣವಾದ ಸೌಂದರ್ಯಾಸ್ವಾದನೆಯ ಸಂವೇದನೆಯಿಂದ ಕೂಡಿದ ಹೆಂಗಸಾಗಿದ್ದ ಅವಳು ವೈಟ್‌ಹೆಡ್‌ನ ಜೀವನವನ್ನು ಯಥೇಚ್ಛವಾಗಿ ಸಮೃದ್ಧಗೊಳಿಸಿದಳು.

ಮತಧರ್ಮದಲ್ಲಿನ ವೈಟ್‌ಹೆಡ್‌ನ ದೀರ್ಘಾವಧಿಯ ಆಸಕ್ತಿಯು ಅವನ ಮದುವೆಗೆ ಸ್ವಲ್ಪ ಮುಂಚೆ ಒಂದು ಹೊಸ ತಿರುವನ್ನು ತೆಗೆದುಕೊಂಡಿದ್ದಿತು. ಅವನ ಹಿನ್ನೆಲೆಯು ಇಂಗ್ಲೆಂಡ್‌ನ ಚರ್ಚ್‌ಗೆ ದೃಢವಾಗಿ ಬಂಧಿತವಾಗಿತ್ತು. ಅವನ ತಂದೆ ಮತ್ತು ಮಾವಂದಿರು ಚರ್ಚಿನಿಂದ ದೀಕ್ಷೆ ಪಡೆದಿದ್ದರು. ಆದ್ದರಿಂದಲೇ ಅವನ ಸಹೋದರ ಹೆನ್ರಿ ಮದ್ರಾಸ್‌ನ ಬಿಷಪ್ ಆಗುವವನಿದ್ದನು. ಆದರೆ ವೈಟ್‌ಹೆಡ್‌ನು ಕಾರ್ಡಿನಲ್ ನ್ಯೂಮನ್‌ನ ಪ್ರಭಾವಕ್ಕೊಳಗಾಗಿ ರೋಮನ್ ಕ್ಯಾಥೋಲಿಕ್ ಚರ್ಚ್‌ನ ಸಿದ್ಧಾಂತಗಳನ್ನು ಪರಿಶೀಲಿಸಲಾರಂಭಿಸಿದನು. ಸುಮಾರು ಎಂಟು ವರ್ಷಗಳ ಕಾಲ ಅವನು ದೈವಜ್ಞಾನ (Theology)ದ ಬಗ್ಗೆ ವಿಪುಲವಾಗಿ ಅಧ್ಯಯನ ಮಾಡಿದನು. ಅನಂತರ ಅವನು ತನ್ನ ದೈವಜ್ಞಾನದ ಪುಸ್ತಕ ಭಂಡಾರವನ್ನು ಮಾರಿದನು ಮತ್ತು ಮತಧರ್ಮವನ್ನು ತ್ಯಜಿಸಿದನು. ಈ ನಾಸ್ತಿಕ ಸಿದ್ಧಾಂತವು ಪ್ರಥಮ ಪ್ರಪಂಚ ಯುದ್ಧದಿಂದಾಚೆಗೆ ಉಳಿಯಲಿಲ್ಲ. ಆದರೆ ವೈಟ್‌ಹೆಡ್ ಮಾತ್ರ ಪುನಃ ಎಂದೆಂದೂ ಯಾವುದೇ ಚರ್ಚ್‌ನ ಸದಸ್ಯನಾಗಿರಲಿಲ್ಲ.

ವೈಟ್‌ಹೆಡ್ 1898ರಿಂದ 1903ರ ವರೆಗೂ ತನ್ನ ವೈಶ್ವಿಕ ಬೀಜಗಣಿತದ (Universal Algebra) ಎರಡನೇ ಹೊತ್ತಿಗೆಯ ಕೆಲಸವನ್ನು ಮಾಡುತ್ತಿರುವಾಗಲೇ ಅದನ್ನು ಬಿಟ್ಟನು. ಏಕೆಂದರೆ ಅವನು ಬರ್ಟ್ರಂಡ್ ರಸೆಲ್‌ನೊಂದಿಗೆ ಅದಕ್ಕೆ ಸಂಬಂಧಪಟ್ಟಂತೆ ವ್ಯಾಪಕ ಶೋಧನೆಯಲ್ಲಿ ನಿರತನಾಗಿದ್ದನು. ಅವನು ಟ್ರಿನಿಟಿ ಕಾಲೇಜಿನಲ್ಲಿ ಪ್ರವೇಶ

Digitised by Bharatavani, CIIL

ವಿದ್ಯಾರ್ಥಿವೇತನಕ್ಕಾಗಿ ತರುಣ ರಸೆಲ್‌ನನ್ನು ಪರೀಕ್ಷಿಸಿದಾಗ ಅವನ ಪ್ರತಿಭೆಯನ್ನು ಗುರ್ತಿಸಿದನು. 1890ರಲ್ಲಿ ರಸೆಲ್ ಅಲ್ಲಿ ಗಣಿತವನ್ನು ಅಭ್ಯಸಿಸುವ ಹೊಸಬನಾಗಿದ್ದನು, ಮತ್ತು ಅವನ ಶಿಕ್ಷಕರಲ್ಲಿ ವ್ಹೈಟ್‌ಹೆಡ್ ಒಬ್ಬನಾಗಿದ್ದನು. ಕ್ರಮೇಣ ಅವರಿಬ್ಬರೂ ಆಪ್ತಸ್ನೇಹಿತರಾದರು. 1900ರ ಜುಲೈನಲ್ಲಿ ಅವರು ಪ್ಯಾರಿಸ್‌ನಲ್ಲಿ ನಡೆದ ತತ್ವಶಾಸ್ತ್ರದ ಪ್ರಥಮ ಅಂತರರಾಷ್ಟ್ರೀಯ ಪ್ರತಿನಿಧಿ ಸಭೆಗೆ ಹೋದರು. ಅಲ್ಲಿ ಅಂಕಗಣಿತದ ಮೂಲತತ್ತ್ವಗಳನ್ನು ವಿಶದೀಕರಿಸಲು ಗಣಿತಶಾಸ್ತ್ರಜ್ಞ ಗಿಸುಪೆ ಪೆಯಾನೊ (Guiseppe Peano) ಬಳಸಿದ್ದ ಸಾಂಕೇತಿಕ ತರ್ಕದ ನಿಷ್ಕೃಷ್ಟತೆಯು ಅವರ ಮೇಲೆ ಪ್ರಭಾವ ಬೀರಿತು. ರಸೆಲ್ ತಕ್ಷಣವೇ ಪೆಯಾನೋನ ಅಂಕಕರಣ (Notation) ವನ್ನು ಕರಗತಮಾಡಿಕೊಂಡನು ಮತ್ತು ತನ್ನ ವಿಧಾನಗಳನ್ನು ವಿಸ್ತರಿಸಿದನು. 1900ರ ಕೊನೆಯ ವೇಳೆಗೆ ಅವನು ತನ್ನ ಪ್ರತಿಭಾಪೂರ್ಣವಾದ 'ಪ್ರಿನ್ಸಿಪಲ್ಸ್ ಆಫ್ ಮ್ಯಾಥೆಮ್ಯಾಟಿಕ್ಸ್' (1903) ಮೊದಲನೇ ಕರಡು ಪ್ರತಿಯನ್ನು ಬರೆದಿದ್ದನು. ಎಲ್ಲ ಶುದ್ಧಗಣಿತವೂ ಒಂದು ಪರಿಷ್ಕರಣೆಗೊಂಡ ಸಾಂಪ್ರದಾಯಿಕ ತರ್ಕದಿಂದ ಪರಿಣಮಿಸುತ್ತದೆ. ಇವೆರಡರಲ್ಲಿ ತರ್ಕವು ಆಧಾರಭೂತವಾದ ಮಾನಸಿಕ ಶಿಕ್ಷಣ (Fundamental Discipline) ವಾಗಿರುತ್ತದೆಂಬ ಅದರ ಪ್ರಧಾನ ಪ್ರತಿಪಾದನೆಯನ್ನು ವ್ಹೈಟ್‌ಹೆಡ್ ಒಪ್ಪಿಕೊಂಡಿದ್ದನು. 1901ರ ವೇಳೆಗೆ ರಸೆಲ್ 'ಪ್ರಿನ್ಸಿಪಲ್ಸ್'ನ ಎರಡನೇ ಸಂಪುಟಕ್ಕೆ ವ್ಹೈಟ್‌ಹೆಡ್‌ನ ಸಹಯೋಗವನ್ನು ಪಡೆದುಕೊಂಡಿದ್ದನು, ಏಕೆಂದರೆ ಈ ಪ್ರಬಂಧವು ಕಟ್ಟುನಿಟ್ಟಾದ ಸಾಂಕೇತಿಕ ವಿವೇಚನಾ ಶಕ್ತಿಯಿಂದ ನಿರ್ವಿವಾದವಾಗಿ ಸ್ಥಾಪಿಸಲ್ಪಡಬೇಕಾಗಿದ್ದಿತು. ಕೆಲಸವು ಅಗಾಧವಾದುದಾಗಿ ಪರಿಣಮಿಸಿತು. ಅವರ ಕೃತಿಯನ್ನು ರಸೆಲ್ ಪುಸ್ತಕದಿಂದ ಬೇರೆಯಾಗಿ ಸ್ವತಂತ್ರ ಕೃತಿಯಾಗಿ ಮಾಡಬೇಕಾಗಿದ್ದಿತು. ಅವರು ಅದನ್ನು 'ಪ್ರಿನ್ಸಿಪಿಯ ಮ್ಯಾಥೆಮಾಟಿಕ' ಎಂದು ಕರೆದರು. ಆ ಯೋಜನೆಯು 1910 ರವರೆಗೂ ಅವರನ್ನು ಕಾರ್ಯಮಗ್ನರನ್ನಾಗಿಸಿತು. ಆಗಲೇ ಅದರ ಮೂರು ಸಂಪುಟಗಳಲ್ಲಿ ಮೊದಲನೆಯದನ್ನು ಪ್ರಕಟಿಸಲಾಯಿತು. ಅಧಿಕೃತ (Official) ಮೂಲ ಪಾಠ (Text) ವನ್ನು ಒಂದು ಅಂಕಕರಣ (ಸಂಕೇತ Notation) ದಲ್ಲಿ ಬರೆಯಲಾಗಿದ್ದಿತು. ಅದರ ಬಹುಭಾಗವು ಪೆಯಾನೋನಿಂದ ತೆಗೆದುಕೊಳ್ಳಲ್ಪಟ್ಟಿತು ಅಥವಾ ವ್ಹೈಟ್‌ಹೆಡ್‌ನಿಂದ ಸಂಶೋಧಿಸಲ್ಪಟ್ಟಿದ್ದಿತು. ಸ್ಪಷ್ಟವಾಗಿ ಹೇಳುವುದಾದರೆ, ತತ್ವಶಾಸ್ತ್ರೀಯ ಸಮಸ್ಯೆಗಳನ್ನು ಗಮನಾರ್ಹವಾಗಿ ತಾರ್ಕಿಕ ವಿಧಾನಗಳ ವಿಚಾರಸರಣಿಯನ್ನು ರೂಪಿಸುವುದನ್ನು ಹೆಡ್ ರಸೆಲ್‌ಗೆ ವಹಿಸಿದನು. ರಸೆಲ್ ಆದರೋ, ಬೋಧನೆಯ ಕರ್ತವ್ಯಗಳಿಲ್ಲದ್ದರಿಂದ, ವಾಸ್ತವವಾಗಿ ಪುಸ್ತಕದ ಅತ್ಯಂತ ಹೆಚ್ಚಿನ ಭಾಗವನ್ನು ತಾನೇ ಬರೆದನು. ಆದರೆ ಸಹಯೋಗವು ಕೊನೆಯವರೆಗೂ ಇದ್ದದ್ದರಿಂದ ರಸೆಲ್ ತನ್ನ ಯಶಸ್ಸಿನ ಸಮಪಾಲನ್ನು ವ್ಹೈಟ್‌ಹೆಡ್‌ಗೆ ನೀಡಿದನು.

**ಲಂಡನ್‌ನಲ್ಲಿ ವೃತ್ತಿಜೀವನ:** 1903ರಲ್ಲಿ ಟ್ರಿನಿಟಿ ಕಾಲೇಜು ವ್ಹೈಟ್‌ಹೆಡ್‌ಗೆ ಹಿರಿಯ ಉಪನ್ಯಾಸಕ ಹುದ್ದೆಯನ್ನು ಕೊಟ್ಟಿದ್ದಿತು. ಗಣಿತ ವಿಭಾಗದ ಮುಖ್ಯಸ್ಥನನ್ನಾಗಿ ಮಾಡಿತು ಮತ್ತು ಕಾಲೇಜಿನ ಕಾಯಿದೆಗಳು ನಿಗದಿಗೊಳಿಸಿದ್ದ ಗರಿಷ್ಠ 25 ವರ್ಷಗಳಿಗೂ ಮೀರಿ ಅವನ ಶಿಕ್ಷಕ ವೃತ್ತಿ ಮುಂದುವರಿಯಲು ಒಪ್ಪಿಗೆ ಕೊಟ್ಟಿದ್ದಿತು. ಹಾಗಿದ್ದರೂ ವ್ಹೈಟ್‌ಹೆಡ್‌ನ ಭವಿಷ್ಯವು ಅನಿಶ್ಚಿತವಾಗಿದ್ದಿತು: ಒಬ್ಬ ವ್ಯಕ್ತಿಯನ್ನು ಪ್ರಮುಖ ಗಣಿತಶಾಸ್ತ್ರಜ್ಞನೆಂದು ಗಣನೆಗೆ ತೆಗೆದುಕೊಳ್ಳಲು ಕಾರಣವಾಗಬಲ್ಲಂತಹ ಸಂಶೋಧನೆಗಳನ್ನು ಅವನು ಮಾಡಿರಲಿಲ್ಲ. ಅವನ ಆಸಕ್ತಿಯು ಯಾವಾಗಲೂ ತತ್ವಶಾಸ್ತ್ರ ಸಂಬಂಧಿತವಾಗಿದ್ದು ಗಣಿತದ ಲಕ್ಷಣವನ್ನು ಅದರ ವಿಶಾಲತಮವಾದ ಸ್ವರೂಪಗಳಲ್ಲಿ ಗ್ರಹಿಸುವುದರತ್ತಲೂ ಮತ್ತು ಹೊಸ ಪ್ರಮೇಯಗಳನ್ನು ಕಂಡುಹಿಡಿಯುವುದರ ಕಡೆಗೆ ಅದರ ಕಲ್ಪನೆಗಳನ್ನು ವ್ಯವಸ್ಥೆಗೊಳಿಸುವುದರತ್ತಲೂ ಕೇಂದ್ರೀಕೃತವಾಗಿದ್ದಿತು. ಹಾಗಾಗಿ, ಅವನ ಟ್ರಿನಿಟಿ ಉಪನ್ಯಾಸಕ ಹುದ್ದೆಯ ಅವಧಿ ಮುಗಿದಾಗ ಅವನಿಗೆ ಗಣಿತದಲ್ಲಿ ಕೇಂಬ್ರಿಡ್ಜ್ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಳ್ಳುವ ಸಾಧ್ಯತೆಯಿರಲಿಲ್ಲ. ಅವನು ಆ ಅವಧಿ ಕೊನೆಗೊಳ್ಳುವವರೆಗೂ ಕಾಯಲಿಲ್ಲ. ಅವನಿಗಾಗಿ ಅಲ್ಲಿ ಯಾವುದೇ ಹುದ್ದೆಯನ್ನು ಕಾದಿರಿಸಿರಲಿಲ್ಲವಾದರೂ ಅವನು 1910ರಲ್ಲಿ ಲಂಡನ್ನಿಗೆ ಹೋದನು. ಹಾಗಿದ್ದರೂ ಟ್ರಿನಿಟಿಯಲ್ಲಿ ಅವನ ಸೇವೆಯು ಅವನನ್ನು ಜೀವಿತಾವಧಿಯವರೆಗೂ ಫೆಲೋ (ವಿದ್ಯಾರ್ಥಿವೇತನ ಪಡೆಯುವಂಥ) ಆಗುವಂತೆ ಮಾಡಿತು. ಅವನಿಗೆ ಸಿಗುತ್ತಿದ್ದ ಡಿವಿಡೆಂಡ್ ಅವನ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ, ಆದರೆ ಇವೆಲಿನ್ ವ್ಹೈಟ್‌ಹೆಡ್ ಅವನ ಸಾಹಸೋದ್ಯೋಗವನ್ನು ಪ್ರೋತ್ಸಾಹಿಸಿದಳು.

ಲಂಡನ್‌ನಲ್ಲಿನ ಮೊದಲನೇ ವರ್ಷದಲ್ಲಿಯೇ ವಿಶಾಲ ವ್ಯಾಪ್ತಿಯ ಓದುಗರಿಗಾಗಿ ವ್ಹೈಟ್‌ಹೆಡ್ ತನ್ನ ಪುಸ್ತಕಗಳಲ್ಲಿ ಮೊದಲನೆಯದಾದ An Introduction to Mathematics (1911) ಬರೆದನು. ಅದು ಇಂದಿಗೂ ಕೂಡ ಗಣಿತದ ಅತ್ಯುತ್ತಮ ಪುಸ್ತಕಗಳಲ್ಲಿ ಒಂದಾಗಿದೆ. 1911ರಲ್ಲಿ ಅವನು ವಿಶ್ವವಿದ್ಯಾಲಯ ಕಾಲೇಜ್ (ಲಂಡನ್)ನ ಬೋಧಕ ವರ್ಗಕ್ಕೆ ನೇಮಿಸಲ್ಪಟ್ಟನು ಮತ್ತು 1914ರಲ್ಲಿ ಇಂಪೀರಿಯಲ್ ಕಾಲೇಜ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿಯಲ್ಲಿ ಅಪ್ಲೈಡ್ ಮ್ಯಾಥೆಮ್ಯಾಟಿಕ್ಸ್‌ನ (ಅನ್ವಯಿಕ ಗಣಿತಶಾಸ್ತ್ರ) ಪ್ರಾಧ್ಯಾಪಕನಾದನು.

ಲಂಡನ್‌ನಲ್ಲಿ ಆಂಗ್ಲ ಜನತೆಗೆ ಕೊಡಲಾಗುತ್ತಿದ್ದ ಶಿಕ್ಷಣವನ್ನು ವ್ಹೈಟ್‌ಹೆಡ್ ಗಮನಿಸಿದನು. ಅವನದೇ ಆದ ಶಿಕ್ಷಣಕ್ರಮವು ಯಾವಾಗಲೂ ಅವನ ಶಿಷ್ಯರಲ್ಲಿ ಹುದುಗಿದ್ದ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಹೊರತೆಗೆಯುತ್ತಿತ್ತು. ಹೆಚ್ಚಾಗಿ ನೆಲೆಗಾಣದ ಅಭ್ಯಾಸಗಳ ಅಸಂಬದ್ಧ ಶ್ರೇಣಿಯಾಗಿ ಗಣಿತವನ್ನು ಬೋಧಿಸಲಾಗುತ್ತಿದ್ದುದನ್ನು ನೋಡಿದ ವ್ಹೈಟ್‌ಹೆಡ್ ಗಣಿತ ಶಿಕ್ಷಣವನ್ನು ಕುರಿತು ಸಾಂದರ್ಭಿಕವಾಗಿ ಭಾಷಣಗಳನ್ನು ಮಾಡುತ್ತಿದ್ದನು.

ಸಾಹಿತ್ಯವನ್ನು ಅದರ ಸಂತೋಷಾನುಭವವಾಗದಂತೆ ಬೋಧಿಸುತ್ತಿದ್ದುದು, ಪಠ್ಯಕ್ರಮಗಳು ಸಣ್ಣ ಸಣ್ಣ ಭಾಗಗಳಾಗಿದ್ದುದು ಮತ್ತು ಬಾಹ್ಯಪರೀಕ್ಷಕರು ಒಡ್ಡುತ್ತಿದ್ದ ಏಕರೂಪ ಪರೀಕ್ಷಾ ಪದ್ಧತಿ ಶಿಕ್ಷಕರಿಗೆ ಕೈಕೋಳ ಹಾಕಿದಂತಿದ್ದುದು – ಈ ಎಲ್ಲವನ್ನೂ ವ್ಹೈಟ್‌ಹೆಡ್ ಗಮನಿಸಿದನು. 1916ರಲ್ಲಿ ಗಣಿತ ಸಂಘದ ಅಧ್ಯಕ್ಷನಾಗಿ, "ಶಿಕ್ಷಣದ ಗುರಿಗಳು: ಸುಧಾರಣೆಗಾಗಿ ಮನವಿ" ಎಂಬ ವಿಷಯದ ಮೇಲೆ ಗಮನಾರ್ಹವಾದ ಭಾಷಣ ಮಾಡಿದನು. ಶಿಕ್ಷಣದ ಉದ್ದೇಶವು ವಿದ್ಯಾರ್ಥಿಗಳಿಗೆ ಜ್ಞಾನವನ್ನು ತುರುಕುವುದಷ್ಟೇ ಅಲ್ಲ, ಅವರ ಆತ್ಮವಿಕಾಸಕ್ಕೆ ಮಾರ್ಗದರ್ಶನ ಮಾಡುವುದೆಂದು ಯುವಜನತೆಯ ಪೋಷಕರಿಗೆ ವ್ಹೈಟ್‌ಹೆಡ್ ನೆನಪು ಮಾಡಿಕೊಟ್ಟನು. "ಸಂಸ್ಕೃತಿಯೆಂದರೆ ಯೋಚನಾಲಹರಿಯ ಚಟುವಟಿಕೆ ಮತ್ತು ಸೌಂದರ್ಯ ಮತ್ತು ದಯಾರ್ದ್ರ ಭಾವನೆಗಳನ್ನು ತೀವ್ರವಾಗಿ ಗ್ರಹಿಸಬಲ್ಲ ಶಕ್ತಿ. ಕೇವಲ ಮಾಹಿತಿಯ ತುಣುಕುಗಳಿಗೂ ಅದಕ್ಕೂ ಸಂಬಂಧವಿಲ್ಲ" ಎಂದು ವ್ಹೈಟ್‌ಹೆಡ್ ಹೇಳುತ್ತಿದ್ದನು. ಅಸಮಾನ ಸ್ಪಷ್ಟತೆ, ಚೈತನ್ಯ ಮತ್ತು ವಾಸ್ತವತೆ ಮತ್ತು ವಿಶೇಷ ಶಿಕ್ಷಣದೊಡನೆ ಸಾಮಾನ್ಯ ಶಿಕ್ಷಣದ ಹೊಂದಾಣಿಕೆಯ ಗುಣಗಳಿಂದ ವ್ಹೈಟ್‌ಹೆಡ್‌ನ ಭಾಷಣವು ಅತ್ಯಮೂಲ್ಯವೆಂದೆನಿಸಿತು. ಅದನ್ನು ಹಿಂಬಾಲಿಸಿ, ಸ್ವಾತಂತ್ರ್ಯ ಮತ್ತು ಶಿಸ್ತಿನ ಲಯಬದ್ಧತೆಯಂತಹ

Digitised by Bharatavani, CIIL

ವಿಷಯಗಳ ಮೇಲಿನ ಒಳನೋಟವುಳ್ಳ ಅನೇಕ ಪ್ರಬಂಧಗಳು ಬಂದವು. ಶಿಕ್ಷಣಕ್ಕೆ ಸಂಬಂಧಿಸಿದ ವೈಟ್‌ಹೆಡ್‌ನ ಪ್ರಬಂಧಗಳು ಆಂಗ್ಲ ಶಿಕ್ಷಣ ಪದ್ಧತಿಯ ಮೇಲೆ ಅಲ್ಪ ಪ್ರಮಾಣದ ಪರಿಣಾಮವನ್ನುಂಟು ಮಾಡಿದರೂ ಅವು ಗ್ರೇಟ್ ಬ್ರಿಟನ್, ಯುನೈಟೆಡ್ ಸ್ಟೇಟ್ಸ್ ಮತ್ತು ಇತರೆಡೆಗಳಲ್ಲಿ ಅನೇಕ ಶಿಕ್ಷಕರಿಗೆ ಸ್ಫೂರ್ತಿದಾಯಕವಾಗಿದ್ದವು.

ಶಿಕ್ಷಕರ ತರಬೇತಿಗಾಗಿದ್ದ ಇಂಗ್ಲೆಂಡ್‌ನ ಪ್ರಮುಖ ಸಂಸ್ಥೆಗಳಲ್ಲಿ ಒಂದಾದ ಲಂಡನ್‌ನ ಗೋಲ್ಡ್‌ಸ್ಮಿತ್ ಕಾಲೇಜಿನ ಆಡಳಿತ ಮಂಡಳಿಗೆ ವೈಟ್‌ಹೆಡ್ 1919ರಿಂದ 1924ರ ವರೆಗೂ ಅಧ್ಯಕ್ಷನಾಗಿದ್ದನು. ಅವನು ಲಂಡನ್‌ನ ಹಲವಾರು ಪಾಲಿಟೆಕ್ನಿಕ್ ಶಾಲೆಗಳಿಗೆ ಗವರ್ನರ್ ಆಗಿಯೂ ಸೇವೆ ಸಲ್ಲಿಸಿದನು. ಲಂಡನ್ ವಿಶ್ವವಿದ್ಯಾನಿಲಯದಲ್ಲಿ (University of London) ಅವನು ಒಬ್ಬ ಸೆನೆಟ್ ಸದಸ್ಯನಾದನು, ಅಕೆಡೆಮಿಕ್ ಕೌನ್ಸಿಲ್ ಅಧ್ಯಕ್ಷನಾದನು ಮತ್ತು ವಿಜ್ಞಾನ ನಿಕಾಯದ (Faculty of Science) ಡೀನ್ ಆಗಿದ್ದನು. ಅವನ ಚುರುಕುಬುದ್ಧಿ, ವ್ಯವಹಾರ ಜ್ಞಾನ ಮತ್ತು ಸದ್ಭಾವನೆಗಳು ಸಮಿತಿ ಸದಸ್ಯನಾದ ಅವನನ್ನು ಬಹಳವಾಗಿ ಬೇಡಿಕೆಯಲ್ಲಿರುವಂತಹ ಸ್ಥಾನದಲ್ಲಿಟ್ಟಿದ್ದುವು.

ವೈಟ್‌ಹೆಡ್ ಶಾಂತ ಸ್ವಭಾವದವನು. ಆದರೆ ಶಾಂತಿವಾದಿಯಾಗಿರಲಿಲ್ಲ (ಯುದ್ಧವಿರೋಧಿಯಾಗಿರಲಿಲ್ಲ); ಪ್ರಥಮ ವಿಶ್ವ ಯುದ್ಧವು ಭೀಕರವಾದದ್ದೆಂದೂ ಆದರೂ ಯುದ್ಧದಲ್ಲಿ ಇಂಗ್ಲೆಂಡ್‌ನ ಪಾತ್ರ ಅಗತ್ಯವೆಂದೂ ಭಾವಿಸಿದ್ದನು. ಅವನ ಹಿರಿಯ ಮಗ ನಾರ್ತ್ ಎಂಬುವನು ಯುದ್ಧ ನಡೆಯುತ್ತಿರುವವರೆಗೂ ಹೋರಾಡಿದನು. ಅವನ ಮಗಳು ಜೆಸ್ಸಿ ವಿದೇಶಾಂಗ ಕಚೇರಿಯಲ್ಲಿ ಕೆಲಸ ಮಾಡಿದಳು. 1918ರಲ್ಲಿ ಅವನ ಕಿರಿಯ ಮಗ ಎರಿಕ್ ಯುದ್ಧದಲ್ಲಿ ಹೋರಾಡುತ್ತಿದ್ದಾಗ ಕೊಲ್ಲಲ್ಪಟ್ಟನು. ಅದಾದ ನಂತರ ಅಪರಿಮಿತ ಪ್ರಯತ್ನದಿಂದಾಗಿ ಮಾತ್ರ ವೈಟ್‌ಹೆಡ್ ಕೆಲಸ ಮುಂದುವರಿಸುತ್ತಾ ಹೋಗಲು ಸಾಧ್ಯವಾಯಿತು. ವೈಟ್‌ಹೆಡ್‌ಗೆ ರಸೆಲ್‌ನ (ಯುದ್ಧವಿರೋಧಿ ನೀತಿಯು) ಶಾಂತಿ ಪ್ರಿಯತೆಯು ಸರಳತೆಯ ಸೋಗಾಗಿದ್ದಿತು. ಆದರೂ ವೈಟ್‌ಹೆಡ್ ಅವನನ್ನು ಸೆರೆಮನೆಯಲ್ಲಿ ಭೇಟಿ ಮಾಡಿದನು, ಅವನ ಗೆಳೆಯನಾಗಿ ಉಳಿದನು. ಆ ವರ್ಷಗಳ ಅವಧಿಯಲ್ಲಿ ವೈಟ್‌ಹೆಡ್ ಭೌತಶಾಸ್ತ್ರಕ್ಕೆ ತತ್ವಶಾಸ್ತ್ರೀಯ ಆಧಾರತತ್ವಗಳನ್ನು ರಚಿಸುತ್ತಿದ್ದನು.

ಇಂದ್ರಿಯ ಗ್ರಾಹ್ಯವಾದ ಮೂಲಗಳು ಮತ್ತು ಸಂಬಂಧಗಳಿಂದ, ರೇಖಾಗಣಿತದಲ್ಲಿ ಬಿಂದುಗಳಿರುವಂತೆ ಪರಸ್ಪರ ಸಂಬಂಧವಿರುವ ಪದಾರ್ಥಗಳನ್ನು (entities) ಅವನು ತಾರ್ಕಿಕವಾಗಿ ರಚಿಸಿದನು. ಅವಕಾಶ (space), ಕಾಲ ಮತ್ತು ಚಲನೆಗೆ ಸಂಬಂಧಿಸಿದ (ಭಾವರೂಪಗಳು) ಕಲ್ಪನೆಗಳನ್ನು ಆಲ್ಬರ್ಟ್ ಐನ್‌ಸ್ಟೀನ್ ಪರಿಷ್ಕರಿಸಿದ್ದುದರಿಂದ ಅದು ಅವನ ಕೆಲಸದ ಪ್ರಾರಂಭ ಮಾತ್ರವಾಗಿದ್ದಿತು. ಈ ಮೂರು ಭಾವರೂಪಗಳು (concepts) ಬಾಹ್ಯಪ್ರಪಂಚದ ಬಗ್ಗೆ ಜನರ ಗ್ರಹಿಕೆಯ ಸಾಮಾನ್ಯ ಲಕ್ಷಣದ ಮೇಲೆ ಆಧಾರಿತವಾಗಿರಬೇಕೆಂದು ವೈಟ್‌ಹೆಡ್‌ನಿಗೆ ಮನದಟ್ಟಾಗಿದ್ದಿತು. 1919ರಲ್ಲಿ ಅವನು ತನ್ನ 'ಪ್ರಾಕೃತಿಕ ಜ್ಞಾನದ ಮೂಲತತ್ತ್ವಗಳನ್ನು ಕುರಿತ ವಿಚಾರಣೆ' (Enquiry Concerning the Principles of Natural Knowledge) ಎಂಬ ಪುಸ್ತಕವನ್ನು ಪ್ರಕಟಿಸಿದನು; ಅದು ಶೋಧನಾತ್ಮಕವೂ ಮತ್ತು ರಚನಾತ್ಮಕವೂ ಆಗಿದ್ದಿತು. ಆದರೆ ಅದು ಭೌತವಿಜ್ಞಾನಿಗಳ ಮೇಲೆ ಪ್ರಭಾವ ಬೀರಲಾರದಷ್ಟು ತತ್ವಶಾಸ್ತ್ರೀಯವಾಗಿಯೂ ಮತ್ತು ಕ್ಲಿಷ್ಟಕರವಾಗಿಯೂ ಇದ್ದಿತು.

ವೈಜ್ಞಾನಿಕ ಜ್ಞಾನವನ್ನು ಶೀಘ್ರಗತಿಯಲ್ಲಿ ಗ್ರಹಿಸುವ ಪರಿಯ ಮೂಲತತ್ವದ ಬಗೆಗೆ ತತ್ವಶಾಸ್ತ್ರಜ್ಞರೊಡನೆ ವೈಟ್‌ಹೆಡ್‌ನು 1915ರಲ್ಲಿ ಚರ್ಚೆಗಳನ್ನು ಪ್ರಾರಂಭಿಸಿದ್ದನು. ಅವನು ತನ್ನ ಚಿಂತನೆಯನ್ನು ಗಣಿತಶಾಸ್ತ್ರವಲ್ಲದ 'ಪ್ರಕೃತಿಯ ಭಾವರೂಪ' (The Concept of Nature 1920) ಎಂಬ ಪುಸ್ತಕದೊಂದಿಗೆ ಬೆಂಬತ್ತಿದನು. ಅವಲೋಕಿಸುವ ಮನಸ್ಸುಗಳಿಗೆ ಪ್ರಕೃತಿಯ ಸಂಬಂಧದ ಬಗೆಗಿನ ಉದಾತ್ತ ಧ್ಯೇಯ ನಿಷ್ಠೆಯ ನೋಟಗಳನ್ನು ಅವನು ತಿರಸ್ಕರಿಸಿದನಾದರೂ, ಅವನು ರಸೆಲ್ ಮತ್ತು ಜಿ.ಇ. ಮೂರ್ ನಾಯಕತ್ವದ ಗುಂಪಿಗೆ ಸೇರಿದ ವಾಸ್ತವವಾದಿಯೂ ಆಗಿರಲಿಲ್ಲ. ಅದನ್ನು ಸಮರ್ಥಿಸುವುದರಲ್ಲಿ ಘಟನೆಗಳು ಪ್ರಕೃತಿಯ ಮೂಲ ಘಟಕಗಳಾಗಿವೆ ಮತ್ತು ಮುಂದುವರಿಕೆ ಅಥವಾ ಸೃಜನಾತ್ಮಕ ಮುನ್ನಡೆಯೆಂಬುದೇ ಅದರ ಅತ್ಯಂತ ಮಹತ್ವದ ಮೂಲಭೂತ ಲಕ್ಷಣವಾಗಿದೆ ಎಂದು ವಾದಿಸಿದನು. ಈ ವಿಚಾರಗಳು ಅವನ ಮುಂದಿನ ಆಧ್ಯಾತ್ಮವಿದ್ಯೆಯನ್ನು ಮುನ್ಸೂಚನೆಯಾಗಿಸಿದ ತತ್ವಗಳು. ವೈಟ್‌ಹೆಡ್‌ನು ಹೆನ್ರಿಬರ್ಗ್‌ಸನ್‌ನ ಬದಲಾವಣೆಯ ಜೈವಯಾಂತ್ರಿಕ ವಾದವಿರೋಧ ತತ್ವಜ್ಞಾನದಿಂದ ಸ್ವಲ್ಪಮಟ್ಟಿಗೆ ಪ್ರಭಾವಿತನಾಗಿದ್ದನು. ಆದರೂ ಅವನು ಸ್ವಲ್ಪ ಮಟ್ಟಿಗೆ ಪ್ಲೇಟೋನ ರೀತಿಯ ತತ್ವಶಾಸ್ತ್ರಜ್ಞನಾಗಿದ್ದನು; ಘಟನೆಗಳ ನಿರ್ದಿಷ್ಟ ಗುಣಲಕ್ಷಣಗಳು ಕಾಲಾತೀತವಾದ ಅಸ್ತಿತ್ವಗಳ (entities) ಪ್ರವೇಶದಿಂದಾದುವೆಂಬುದನ್ನೂ ಅವನು ಕಂಡುಕೊಂಡನು.

**ಸಂಯುಕ್ತ ಸಂಸ್ಥಾನಗಳಲ್ಲಿ ವೃತ್ತಿಜೀವನ:** 1920ನೇ ದಶಕದ ಆರಂಭದ ಸಮಯಕ್ಕೆ ವೈಟ್‌ಹೆಡ್ ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಅತ್ಯಂತ ಪ್ರಮುಖ ವಿಜ್ಞಾನ ತತ್ವಜ್ಞಾನಿಯಾಗಿದ್ದುದು ಸ್ಪಷ್ಟವಾಗಿತ್ತು. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಹಿತಚಿಂತಕನಾದ ಇತಿಹಾಸ ವಿದ್ವಾಂಸ ಹೆನ್ರಿ ಓಸ್ಬರ್ನ್ ಟೇಲರ್ ಅವನ ವೇತನಕ್ಕಾಗಿ ಹಣವನ್ನು ವಾಗ್ದಾನ ಮಾಡಿದಾಗ, 1924ರ ಆರಂಭದಲ್ಲಿ ವೈಟ್‌ಹೆಡ್‌ಗೆ ತತ್ವಶಾಸ್ತ್ರ ಪ್ರಾಧ್ಯಾಪಕ ಹುದ್ದೆಯನ್ನು 5 ವರ್ಷಗಳ ಅವಧಿಗೆ ಹಾರ್ವರ್ಡ್ ನೀಡಿತು. ಆಗ ಅವನಿಗೆ 63 ವರ್ಷ ವಯಸ್ಸಾಗಿದ್ದು, ಇಂಪೀರಿಯಲ್ ಕಾಲೇಜ್‌ನಲ್ಲಿ ಹೆಚ್ಚೆಂದರೆ ಇನ್ನು ಎರಡು ವರ್ಷಗಳ ಸೇವಾವಧಿಯಿದ್ದಿತು. ತತ್ವಶಾಸ್ತ್ರವನ್ನು ಬೋಧಿಸುವ ವಿಷಯವು ಅವನ ಮನಸ್ಸಿಗೆ ಹಿಡಿಸಿತ್ತು. ಅವನ ಪತ್ನಿಯೂ ಕೂಡ ಹೃತ್ಪೂರ್ವಕವಾಗಿ ಈ ಬೆಳವಣಿಗೆಗೆ ಒಪ್ಪಿಗೆ ಕೊಟ್ಟಳು. ತಾನು ಒಬ್ಬ ವಿಜ್ಞಾನ ತತ್ವಶಾಸ್ತ್ರಜ್ಞನನಿಗಿಂತಲೂ ಹೆಚ್ಚಿನದನ್ನು ಪಡೆದುಕೊಂಡಿರುವುದು ಹಾರ್ವರ್ಡ್ ಅನತಿ ಕಾಲದಲ್ಲೇ ಕಂಡುಕೊಂಡಿತು. ಗಾಟ್‌ಫ್ರೀಡ್ ಲಿಬ್ನಿಜ್ ಮತ್ತು ಜಾರ್ಜ್ ಹೆಗೆಲ್‌ರ ಔನ್ನತ್ಯಕ್ಕೆ ಹೋಲಿಸಬಹುದಾದ ಒಬ್ಬ ಆಧ್ಯಾತ್ಮ ವಿದ್ಯಾಸಂಪನ್ನನನ್ನು ಅದು ವೈಟ್‌ಹೆಡ್‌ನ ರೂಪದಲ್ಲಿ ಪಡೆದುಕೊಂಡಿತು.

1925ರ ಆರಂಭದಲ್ಲಿ ವೈಟ್‌ಹೆಡ್ ಬೋಸ್ಟನ್‌ನಲ್ಲಿ ಎಂಟು ಉಪನ್ಯಾಸಗಳ ಒಂದು ಕಾರ್ಯಕ್ರಮವನ್ನು ಕೊಟ್ಟನು. ಅದೇ ವರ್ಷದಲ್ಲಿ (ಅವನು ಮೊದಲು ಮೊದಲಾಗಿ ದೇವರ ಬಗ್ಗೆ ಬರೆದದ್ದೂ ಸೇರಿದಂತೆ) ಆ ಉಪನ್ಯಾಸಗಳು 'ವಿಜ್ಞಾನ ಮತ್ತು ಆಧುನಿಕ ಜಗತ್ತು' (Science and the Modern World) ಎಂಬ ಪುಸ್ತಕ ರೂಪದಲ್ಲಿ ಪ್ರಕಟವಾದುವು. ಚಲನಶೀಲ ದ್ರವ್ಯ, ಅಥವಾ ಪರಿಶುದ್ಧ ಭೌತಶಕ್ತಿಯ ಒಂದು ಹೊನಲನ್ನು ಬಿಟ್ಟು ಪ್ರಕೃತಿಯು ಬೇರೇನನ್ನೂ ಒಳಗೊಂಡಿಲ್ಲವೆಂಬ ಅವನ ದೃಷ್ಟಿಯ ವೈಜ್ಞಾನಿಕ ದ್ರವ್ಯ ವಾಸ್ತವತಾ ವಾದ (Scientific Materialism)ದ ಉದಯ, ವಿಜಯ ಮತ್ತು ಪರಿಣಾಮಗಳು ಅವನ ಧ್ಯಾನವನ್ನು ದೀರ್ಘಕಾಲ ಆವರಿಸಿದ್ದುದನ್ನು ಅವನು ನಾಟಕೀಯವಾಗಿ ಅದರಲ್ಲಿ

Digitised by Bharatavani, CIIL

ವಿವರಿಸಿದನು. ಪ್ರಕೃತಿಯ ವಾಸ್ತವಿಕ ಸತ್ಯಸ್ಥಿತಿಯನ್ನು ಗಣಿತ ಶಾಸ್ತ್ರಕ್ಕೆ ಸಂಬಂಧಿಸಿದ ಭೌತಶಾಸ್ತ್ರದ ಅಮೂರ್ತ ಪದ್ಧತಿಯೆಂದು ತಪ್ಪುಗ್ರಹಿಕೆ ಮಾಡಿರುವುದಾಗಿ ದ್ರವ್ಯವಾಸ್ತವತಾ ವಾದವನ್ನು ಅವನು ಖಂಡಿಸಿದನು. ಅಂತಹ ಅಮೂರ್ತ ಕಲ್ಪನೆಗಳೊಂದಿಗೆ ವೈಟ್‌ಹೆಡ್‌ನ ಮನಸ್ಸು ಚೆನ್ನಾಗಿ ಹೊಂದಿಕೊಂಡಿದ್ದಿತು. ಅವನು ಅವುಗಳನ್ನು ವಾಸ್ತವವಾಗಿ ಕಂಡುಹಿಡಿದದ್ದೆಂದು ಪರಿಗಣಿಸುತ್ತಿದ್ದನೇ ಹೊರತು ಬೌದ್ಧಿಕ ಸಂಶೋಧನೆಗಳೆಂದಲ್ಲ.

ಈ ಪುಸ್ತಕದ ಮಹತ್ವ ತಕ್ಷಣವೇ ಗುರ್ತಿಸಲ್ಪಟ್ಟಿತು. ಬಹುಶಃ ಬಹಳಷ್ಟು ಓದುಗರ ಮನಸ್ಸನ್ನು ತಟ್ಟಿದ್ದೇನೆಂದರೆ ವೈಟ್‌ಹೆಡ್‌ನು ತನ್ನ ಮೆಚ್ಚುಗೆಯ ಕವಿಗಳಾದ ವಿಲಿಯಂ ವರ್ಡ್ಸ್‌ವರ್ತ್ ಮತ್ತು ಪರ್ಸಿ ಬಿಷೆ (Bysshe) ಷೆಲ್ಲಿ ಅವರಿಗೆ ಪ್ರಕೃತಿಯನ್ನು ಮೌಲ್ಯಗಳಿಂದ ಹೊರತು ಪಡಿಸುವುದರ ವಿರುದ್ಧವಾಗಿ ಮಾಡಿಕೊಂಡ ಮನವಿ.

1926ರಲ್ಲಿ 'ಅಭಿವೃದ್ಧಿ ಹೊಂದುತ್ತಿರುವ ಮತಧರ್ಮ' (Religion in the Making) ಎಂಬ ಸಂಕ್ಷಿಪ್ತ ಪುಸ್ತಕ ಕಾಣಿಸಿಕೊಂಡಿತು. ಅದರಲ್ಲಿ, ಮಾನವತ್ವದ ಏಕಾಂತತೆಯಲ್ಲಿ ತನ್ನ ಅತ್ಯಂತ ಗೂಢವಾದ ಮಟ್ಟವನ್ನು ಮುಟ್ಟುವುದೇ ಮತಧರ್ಮವೆಂದು ವೈಟ್‌ಹೆಡ್ ಅರ್ಥೈಸಿದನು.

1927ರ ಜನವರಿಯಲ್ಲಿ 10 ಗಿಲ್‌ಫರ್ಡ್ ಉಪನ್ಯಾಸಗಳ ಒಂದು ಕಾರ್ಯಕ್ರಮವನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಕೊಡಲು ಎಡಿನ್ ಬರ್ಗ್ ವಿಶ್ವವಿದ್ಯಾನಿಲಯ ಅವನನ್ನು ಆಹ್ವಾನಿಸಿತು. ಇದಕ್ಕಾಗಿ, ವೈಟ್‌ಹೆಡ್‌ನು, 'ಜೀವಿಯ ತತ್ವಶಾಸ್ತ್ರ' (The Philosophy of Organism) (ಅವನು ತನ್ನ ಆಧ್ಯಾತ್ಮವಿದ್ಯೆ ಅಥವಾ ವೇದಾಂತ ವಿದ್ಯೆಯನ್ನು ಕರೆಯುತ್ತಿದ್ದಂತೆ)ದ ಸಂಕೀರ್ಣವಾದ ತಾಂತ್ರಿಕ ಸಂರಚನೆಯ ವಿನ್ಯಾಸದ ಬಗ್ಗೆ ಬರೆದನು ಮತ್ತು ಯುರೋಪಿನ ಕೆಲವು ಮಹಾನ್ ತತ್ವಶಾಸ್ತ್ರಜ್ಞರೊಡನೆ ತನಗಿದ್ದ ಏಕಾಭಿಪ್ರಾಯಗಳು ಮತ್ತು ಅಭಿಪ್ರಾಯಭೇದಗಳನ್ನು ಕುರಿತು ಚರ್ಚಿಸಿದನು. ಡೇವಿಡ್ ಹ್ಯೂಮನ್ ವಿಚಾರಗಳಿಗೆ ವಿರುದ್ಧವಾಗಿ ಯಥೋಚಿತವಾದ ತತ್ವಶಾಸ್ತ್ರೀಯ ವಿಚಾರಸರಣಿಯು ಆಚರಣೆಯ ಮೇಲೆ ರೂಪ ತಳೆಯಬೇಕು ಮತ್ತು ಅದಕ್ಕೆ ಅನುಬಂಧವಾಗಿರಕೂಡದೆಂದು ಒತ್ತಿ ಹೇಳುವುದು ವೈಟ್‌ಹೆಡ್‌ನ ವೈಶಿಷ್ಟ್ಯವಾಗಿದ್ದಿತು.

1928ರ ಜೂನ್‌ನಲ್ಲಿ ಉಪನ್ಯಾಸಗಳನ್ನು ನೀಡುವ ಸಮಯದಲ್ಲಿ ವೈಟ್‌ಹೆಡ್ ತನ್ನ ವಿಚಾರಗಳನ್ನು ಹೊಸದಾದ ಮತ್ತು ಕ್ಲಿಷ್ಟವಾದ ಪದಪ್ರಯೋಗದ ಮೂಲಕ ಮಂಡಿಸಿದಾಗ ಅವನ ಶ್ರೋತೃಗಳು ಕ್ಷಿಪ್ರಗತಿಯಲ್ಲಿ ಮಾಯವಾದರು, ಆದರೆ ಉಪನ್ಯಾಸಗಳ ಪ್ರಕಟಣೆಯು 25 ಅಧ್ಯಾಯಗಳಿಗೆ ವಿಸ್ತರಿಸಿತು. ಪಾಶ್ಚಾತ್ಯ ಪರಾಭೌತಶಾಸ್ತ್ರಕ್ಕೆ (Metaphysics) 'ಕಾರ್ಯವಿಧಾನ ಮತ್ತು ವಾಸ್ತವತೆ' (Process and Reality 1929) ಎಂಬ ಗ್ರಂಥ ಅತ್ಯಂತ ಮಹತ್ವದ ಪುಸ್ತಕಗಳಲ್ಲೊಂದಾಯಿತು.

ಅಸ್ತಿತ್ವವನ್ನು ಅರಿಯುವ ಸಾಧ್ಯತೆಯಲ್ಲಿ ವೈಟ್‌ಹೆಡ್‌ಗೆ ಒಂದು ಅಚಲವಾದ ವಿಶ್ವಾಸವಿದ್ದಿತು. ತನ್ನ ಪುಸ್ತಕಗಳಲ್ಲಿ ಮಾಡಿರುವಂತೆ ತನ್ನ ಹಾರ್ವರ್ಡ್ ಉಪನ್ಯಾಸಗಳಲ್ಲೂ ಸಹ ವೈಟ್‌ಹೆಡ್‌ನು ಒಂದು ವಿಚಾರವನ್ನು ಅಳವಡಿಸಿಕೊಳ್ಳುವ ಅವಕಾಶವನ್ನು ಅನ್ವೇಷಿಸುವುದನ್ನೂ ಹಾಗೂ ವಿಚಾರಗಳು ಉಪದೇಶ ಪರಂಪರೆಯಲ್ಲಿ ವಿರುದ್ಧವಾಗಿದ್ದಾಗ್ಯೂ ಪರಸ್ಪರ ಪೂರಕವಾಗಿ ಹೇಗೆ ಇರಬಲ್ಲವು ಎಂಬುದನ್ನು ತನ್ನ ಸ್ವಂತ ವಿಚಾರಗಳಿಂದ ಕಂಡುಕೊಂಡಿದ್ದುದನ್ನು ತೋರಿಸಲು ಬಹಳವಾಗಿ ಇಚ್ಛಿಸಿದನು. ಅವನ ಉಪನ್ಯಾಸಗಳನ್ನು ಕೇಳುವುದು ಒಂದು ಅಪೂರ್ವ ಅನುಭವವೆಂದು ಅರಿತು ಬಹಳಷ್ಟು ವಿದ್ಯಾರ್ಥಿಗಳು ಅವನ ಉಪನ್ಯಾಸಗಳಿಗೆ ಹಾಜರಾಗುವುದಿತ್ತು. 1937ರವರೆಗೂ ಹಾರ್ವರ್ಡ್ ಅವನಿಗೆ ನಿವೃತ್ತಿಯನ್ನು ನೀಡಲಿಲ್ಲ.

ಸಂಯುಕ್ತ ಸಂಸ್ಥಾನಗಳಲ್ಲಿ ಕಳೆದ ತನ್ನ ಮೊದಲ ಕೆಲವು ವರ್ಷಗಳಲ್ಲಿ ವೈಟ್‌ಹೆಡ್‌ನು ಓರ್ವ ಉಪನ್ಯಾಸಕನಾಗಿ ಅನೇಕ ಪೌರ್ವಾತ್ಯ ಮತ್ತು ಮಧ್ಯ ಪಾಶ್ಚಿಮಾತ್ಯ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿದನು. ಅಮೆರಿಕನ್ನರನ್ನು ಅವನು ಪ್ರೀತಿಸುತ್ತಿದ್ದರೂ ಸಹ, ತಾನು ಮಾತ್ರ ಯಾವಾಗಲೂ ಬಹುತೇಕ ಓರ್ವ ಇಂಗ್ಲಿಷ್ ಮನುಷ್ಯನಾಗಿಯೇ ಉಳಿದನು. 1903ರ ತನಕವೂ 'ಫೆಲೋ ಆಫ್ ದಿ ರಾಯಲ್ ಸೊಸೈಟಿ' ಆಗಿದ್ದ ಅವನು 1931ರಲ್ಲಿ ಬ್ರಿಟಿಷ್ ಅಕಾಡೆಮಿಗೆ ಆಯ್ಕೆಯಾದ. 1945ರಲ್ಲಿ ಅವನು 'ಆರ್ಡರ್ ಆಫ್ ಮೆರಿಟ್'ನ್ನು ಪಡೆದ. ಅವನ ನಿಧನಾನಂತರ ಅವನ ದೇಹವನ್ನು ದಹನ ಮಾಡಲಾಯಿತು. ಪ್ರೇತಸಂಸ್ಕಾರವಿರಲಿಲ್ಲ. ಅವನ ಇಚ್ಛೆಯಂತೆ ಅವನ ಪತ್ನಿಯು ಅವನ ಅಪ್ರಕಟಿತ ಬರಹಗಳನ್ನೂ, ಪತ್ರಗಳನ್ನೂ ನಾಶಮಾಡಿದಳು.

ಪ್ರತಿಯೊಂದು ವೈಚಾರಿಕ ಕ್ಷೇತ್ರದಲ್ಲಿಯೂ ಅವನ ಅಭಿಮಾನಿಗಳು ನಾಯಕರಾಗಿದ್ದರೂ ಸಹ ವೈಟ್‌ಹೆಡ್‌ನು ಯಾವ ಅನುಯಾಯಿಗಳನ್ನೂ ಹೊಂದಿರಲಿಲ್ಲ. ಅವನ ಶೈಕ್ಷಣಿಕ ಹಾಗೂ ದಾರ್ಶನಿಕ ಕೃತಿಗಳು ಅನೇಕ ಭಾಷೆಗಳಿಗೆ ಅನುವಾದಗೊಂಡವು. ಅವನ 'ಆಧ್ಯಾತ್ಮ ವಿದ್ಯೆ'ಯನ್ನು ಸಂಯುಕ್ತ ಸಂಸ್ಥಾನದ ಸರಿಸುಮಾರು ಎಲ್ಲೆಡೆಯಲ್ಲಿಯೂ ತೀವ್ರವಾಗಿ ಅಧ್ಯಯನ ಮಾಡಲಾಗಿದ್ದಿತು. ವೈಟ್‌ಹೆಡ್‌ನ "ಪರಮಾರ್ಥ ವಿದ್ಯೆಯ ಪ್ರಕ್ರಿಯೆ" ಎಂದು ಈಗ ಯಾವುದನ್ನು ಕರೆಯಲಾಗುತ್ತಿದೆಯೋ, ಅದೇ ಅವನ ಪದ್ಧತಿಯ ಅತ್ಯಂತ ಪರಿಣಾಮಕಾರಿ ಭಾಗ. ಇದು ಭಾಗಶಃ ಅಮೆರಿಕಾದ ತತ್ವಶಾಸ್ತ್ರಜ್ಞ ಚಾರ್ಲ್ಸ್ ಹಾರ್ಟ್‌ಶ್ರೋನ್‌ನ ಪ್ರಭಾವದಿಂದಾಗಿ ಆಗಿರುವಂಥದು.

ವೈಟ್‌ಹೆಡ್‌ನ ಸಹಾಯಪರತೆಯು ಅವನನ್ನು ಎಲ್ಲರೂ ಪ್ರೀತಿಸುವಂತೆ ಮಾಡಿದ್ದಿತು. ಅವನ ಕಾರುಣ್ಯವು ಪರಿಪೂರ್ಣವಾಗಿದ್ದರೂ ಸಹ ಅವನು ಗಟ್ಟಿ ಮನಸ್ಸಿನವನಾಗಿದ್ದನು. ಅವನೆಂದೂ ವಿವಾದಶೀಲ ನಾಗಿರಲಿಲ್ಲ. ಚತುರನಾಗಿದ್ದ, ಧರ್ಮಬುದ್ಧಿಯುಳ್ಳವನೂ ಶಾಂತಸ್ವಭಾವದ (ನಿಶ್ಚಲಬುದ್ಧಿಯ) ಮೊಂಡನೂ ಆಗಿದ್ದ. ಅವನು ವಾಸ್ತವವಾದಿಯಾದ ಸಮತೂಕದ ಚಿತ್ತವುಳ್ಳವನಾಗಿದ್ದ. ಅವನಲ್ಲಿ ದ್ವೇಷರಹಿತವಾದ ಮೊನಚಾದ ವ್ಯಂಗ್ಯ (fine irony) ಇದ್ದಿತು. ವೈಟ್‌ಹೆಡ್‌ನು ಅಂತಃಸ್ಫೂರ್ತಿ, ಬೌದ್ಧಿಕಶಕ್ತಿ ಹಾಗೂ ವಿವೇಕ ಗಟ್ಟಿತನದಿಂದೊಡಗೂಡಿದ ಒಳ್ಳೆಯತನದಂಥ ಅಪೂರ್ವ ಗುಣಗಳ ಸಂಗಮವಾಗಿದ್ದ. ವೈಟ್‌ಹೆಡ್ 1947 ಡಿಸೆಂಬರ್ 30ರಂದು ಇಂಗ್ಲೆಂಡಿನ ಕೇಂಬ್ರಿಡ್ಜ್ ಮಾಸ್ ಎಂಬಲ್ಲಿ ತನ್ನ 86ನೇ ವಯಸ್ಸಿನಲ್ಲಿ ನಿಧನನಾದ.

– ಬಿ.ಎನ್.ಬಾ.

Digitised by Bharatavani, CIIL

# ಇ

## ಇತಿಹಾಸ ಮತ್ತು ಪೌರನೀತಿ ಬೋಧನೆ

ಆಂಗ್ಲ ಭಾಷೆಯ 'History' ಎಂಬ ಪದವು ಗ್ರೀಕ್ ಮೂಲ ಶಬ್ದ 'Historia' ಎಂಬುದರಿಂದ ಬಳಕೆಗೆ ಬಂದಿದೆ. ಇದರ ಅರ್ಥ ವಿಚಾರಣೆ, ಅನ್ವೇಷಣೆ, ಪ್ರಶ್ನಿಸುವಿಕೆ, ಸಂಗ್ರಹಿಸುವಿಕೆ ಎಂದಾಗುತ್ತದೆ. ಕನ್ನಡ ಶಬ್ದ ಇತಿಹಾಸವು ಸಂಸ್ಕೃತದ ಇತಿ+ಹ+ಆಸ ಎಂಬುದರಿಂದ ರೂಪಾಂತರಗೊಂಡು ಅದರ ಅರ್ಥ ಘಟನೆಗಳು ಹೀಗೆ ಇದ್ದವು, ಹೀಗೆ ನಡೆಯಿತಂತೆ ಎಂಬುದಾಗಿರುತ್ತದೆ. ಕಾರ್ಲೈಲ್ ಎಂಬ ಇತಿಹಾಸಜ್ಞ 'ಇತಿಹಾಸ ಅಗಣಿತ ಜೀವನ ಚರಿತ್ರೆಯ ಸಾರಸಂಗ್ರಹ ಎಂದರೆ, ಕಾರ್ಲ್ ಮಾರ್ಕ್ಸ್‌ರವರು 'ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವೇ ಇತಿಹಾಸ' ಎಂದಿದ್ದಾರೆ. ಹೆಚ್. ಲೂನ್ ಎಂಬ ತಜ್ಞನ ರೀತಿ 'ಮಾನವ ಕುಲದ ಕತೆಯೇ ಇತಿಹಾಸ'. ಗ್ರೀಸ್‌ನ ಹೆರೊಡಟಸ್‌ನನ್ನು ಇತಿಹಾಸದ ಪಿತಾಮಹ ಎಂದು ಕರೆಯಲಾಗಿದೆ. ಕಾರಣ ಮೊದಲ ಬಾರಿಗೆ ಇತಿಹಾಸದ ರಚನಾ ಕಾರ್ಯಕ್ಕೆ ತಳಹದಿಯನ್ನು ಹಾಕಿದುದು. ಇತಿಹಾಸದ ವಿಷಯವು ಅತ್ಯಂತ ಪ್ರಾಚೀನ ಕಾಲದಿಂದ ಹಿಡಿದು ನಿನ್ನೆಯವರೆಗಿನ ಘಟನಾವಳಿಗಳಿಂದ ಕೂಡಿರುವುದರಿಂದ ವಿದ್ವತ್ ಪ್ರಪಂಚದಲ್ಲಿ ಉನ್ನತ ಸ್ಥಾನವನ್ನು ಪಡೆದಿದೆ.

ಕನ್ನಡ ಭಾಷೆಯಲ್ಲಿ ಬಳಸುತ್ತಿರುವ ಪೌರನೀತಿ ಎಂಬ ಪದ ಆಂಗ್ಲ ಭಾಷೆಯ 'Civics' ನಿಂದ ಬಂದಿದ್ದು ಇದರ ಮೂಲ ಶಬ್ದ ಲ್ಯಾಟಿನ್ ಭಾಷೆಯ 'Civitas' ಮತ್ತು 'Civis'. ಇದರ ಅರ್ಥ City ಮತ್ತು Citizen ಎಂದು. ಅದರ ಅರ್ಥ 'ಪೌರ'ನೆಂದು, ಈ ಶಾಸ್ತ್ರವನ್ನು ಅಧ್ಯಯನ ಮಾಡುವುದಕ್ಕೆ ಪೌರನೀತಿ ಎಂದಾಗಿದೆ. ಪ್ರಾಚೀನ ಕಾಲದಲ್ಲಿ ಪೌರರು ನಗರಗಳಲ್ಲಿ ವಾಸಿಸುತ್ತಿದ್ದುದರಿಂದ Citizen ಎಂಬ ಪದ ಬಳಕೆಗೆ ಬಂದಿತು. ಪೌರರು ನಗರಗಳಲ್ಲಿ ವಾಸ ಮಾಡುತ್ತಿದ್ದು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಾಮಾಜಿಕ ಜೀವನವನ್ನು ಉತ್ತಮಗೊಳಿಸುವಲ್ಲಿ ಯಶಸ್ವಿಯಾಗಿದ್ದರು. ಆಕ್ಸ್‌ಫರ್ಡ್ ನಿಘಂಟಿನಲ್ಲಿ 'ಪೌರನೀತಿ ಪೌರತ್ವದ ಹಕ್ಕು ಮತ್ತು ಬಾಧ್ಯತೆಗಳ ಸಿದ್ಧಾಂತ' ಎಂದು ಅರ್ಥೈಸಿದ್ದಾರೆ. ಇ.ಎಂ. ವೈಟ್ 'ಪೌರನೀತಿಯು ಪೌರನಿಗೆ ಸಂಬಂಧಿಸಿದ ಗತಕಾಲ, ವರ್ತಮಾನಕಾಲ, ಭವಿಷತ್ ಕಾಲಗಳನ್ನು ಒಳಗೊಂಡಂತೆ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಷಯಕ್ಕೆ ಸಂಬಂಧಿಸಿದುದಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

**ಇತಿಹಾಸ ಮತ್ತು ಪೌರನೀತಿಯ ಸ್ವರೂಪ:** ಇತಿಹಾಸದ ಸ್ವರೂಪವೆಂದರೆ ಇದರ ವೈಶಾಲ್ಯತೆ ಎಷ್ಟು ಅಥವಾ ಇದರ ಅಧ್ಯಯನದ ವ್ಯಾಪ್ತಿಯ ಬಗ್ಗೆ ತಿಳಿಸುವಂತಹದು. ಇತಿಹಾಸದ ಕೇಂದ್ರಬಿಂದು ಮಾನವ. ಪ್ರಾಚೀನ ಕಾಲದಿಂದ ಇಂದಿನವರೆಗಿನ ಮಾನವ ಜೀವನದ ಘಟನೆಗಳು ಹೇಗೆ ಸಾಗಿ ಬಂದಿದೆ ಎಂಬುದರ ಬಗ್ಗೆ ವಿಶದವಾಗಿ ತಿಳಿಸುತ್ತದೆ. ಇತಿಹಾಸವು ವಿವಿಧ ಕಾಲದ ಜನತೆ, ಘಟನೆ, ಬೆಳವಣಿಗೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಪರಿಸರ ಮತ್ತು ಮಾನವನ ಸಂಬಂಧಗಳು ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ವ್ಯಕ್ತಿ ಮತ್ತು ಸಮಾಜದ ವಿಷಯಗಳನ್ನು ತಿಳಿಸುತ್ತದೆ. ಸಮಾಜದಲ್ಲಿನ ವಿವಿಧ ಅಂಶಗಳಾದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಬೌದ್ಧಿಕ ಕ್ಷೇತ್ರದಲ್ಲಿನ ಮಾನವನ ಚಟುವಟಿಕೆಗಳ ಬಗೆಗೆ ಅರಿವು ಉಂಟುಮಾಡುತ್ತದೆ. ಇತಿಹಾಸದ ವೈಶಿಷ್ಟ್ಯವೆಂದರೆ ನಿರಂತರತೆ ಮತ್ತು ಸುಸಂಬಂಧತೆಯ ಬಗ್ಗೆ ತಿಳುವಳಿಕೆ ಹೆಚ್ಚಿಸುವುದು. ಅಂದರೆ ಕಾರ್ಯಕಾರಣಗಳ ಸ್ಪಷ್ಟ ಚಿತ್ರಣವನ್ನು ವಿವರಣೆಯನ್ನು ಆಧಾರಗಳಿಂದ ಸಂಶೋಧನೆಗಳ ಬೆಳಕಿನಲ್ಲಿ ಪ್ರಸ್ತುತ ಪಡಿಸುತ್ತದೆ. ಇತಿಹಾಸವು ಗತಕಾಲದ ಘಟನೆಗಳು ಮತ್ತು ವರ್ತಮಾನಕಾಲದ ಹಾಗೂ ಭವಿಷ್ಯತ್ ಕಾಲದ ಘಟನೆಗಳಿಗೆ ಯಾವ ರೀತಿ ಅಡಿಪಾಯಗಳಾಗಿವೆ ಎಂಬುದನ್ನು ವಿವರಿಸುತ್ತದೆ. ಆದುದರಿಂದ ಶಾಲಾ ಹಂತದಲ್ಲಿ ಇತಿಹಾಸ ವಿಷಯದ ಬೋಧನೆಯು ಪ್ರಾಮುಖ್ಯತೆಯನ್ನು ಪಡೆದಿದೆ.

ಪೌರನೀತಿಯ ಸ್ವರೂಪದ ಬಗ್ಗೆ ತಿಳಿವಳಿಕೆ ನೀಡುವುದಾದರೆ, ಮಾನವ ಜೀವನದ ವಿವಿಧ ಪೌರ ಅಂಶಗಳಿಗೆ ಸಂಬಂಧಿಸಿದಂತೆ, ವ್ಯಕ್ತಿಯ ಪೌರಜೀವನದ ಮೇಲೆ ಪರಿಣಾಮವನ್ನು ಬೀರಬಲ್ಲ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ, ಹಕ್ಕು ಮತ್ತು ಕರ್ತವ್ಯಗಳ ವಿಚಾರ, ಸರ್ಕಾರದ ಆಗು–ಹೋಗುಗಳ ವಿವರ, ದಕ್ಷ ಸರ್ಕಾರದ ಬಗ್ಗೆ, ವಿವಿಧ ರಾಷ್ಟ್ರದ ಆಡಳಿತ ಚಟುವಟಿಕೆಗಳ ಬಗ್ಗೆ, ಜನರು ದೇಶದ ವ್ಯವಹಾರಗಳಲ್ಲಿ ವಹಿಸಬೇಕಾದ ಜವಾಬ್ದಾರಿಗಳ ಬಗೆಗೆ ಸಾಮಾಜಿಕ ತೊಡಕುಗಳನ್ನು ಹೋಗಲಾಡಿಸಿ, ಉತ್ತಮ ಮಾನವೀಯ ಪೌರರ ಬೆಳವಣಿಗೆಯ ಅಗತ್ಯಗಳ ವಿಚಾರಗಳು, ಪೌರನ ವೈಜ್ಞಾನಿಕ ಬೆಳವಣಿಗೆ, ರಾಜಕೀಯ ಹಾಗೂ ಸಾಮಾಜಿಕ ಪ್ರಶ್ನೆಯ ವಿಚಾರಗಳೆಲ್ಲವೂ ಪೌರನೀತಿಯ ಸ್ವರೂಪಕ್ಕೆ ಸಂಬಂಧಿಸಿದ ವಿಚಾರಗಳಾಗಿದ್ದು ಇವುಗಳನ್ನು ತರಗತಿಯ ಮಕ್ಕಳಿಗೆ ಬೋಧನೆಯ ಮುಖಾಂತರ ಸ್ಪಷ್ಟಪಡಿಸಬೇಕಾಗುತ್ತದೆ.

**ಇತಿಹಾಸ ಮತ್ತು ಪೌರನೀತಿಯ ವಿಷಯವಸ್ತು:** ಇತಿಹಾಸ ಮತ್ತು ಪೌರನೀತಿಯ ಅಧ್ಯಯನದ ವಿಷಯ ವಸ್ತು ಅತ್ಯಂತ ಸಂಕೀರ್ಣವಾದುದು. ಇದರ ವ್ಯಾಪ್ತಿ ಅಥವಾ ಅಧ್ಯಯನದ ಮೇರೆಗಳನ್ನು ನಿರ್ಧರಿಸುವುದು ಕಷ್ಟ. ಅತ್ಯಂತ ಆಸಕ್ತಿ ವಹಿಸಿ ಅಧ್ಯಯನ ಮಾಡಿ, ವೈಜ್ಞಾನಿಕವಾಗಿ ವಿಚಾರವಮಾಡಿ ಸುಸಂಬದ್ಧವಾಗಿ ವಿಶದೀಕರಿಸಿದರೆ ಎಲ್ಲೆಯನ್ನು ನಿರ್ಧರಿಸಬಹುದು.

ಅಧ್ಯಯನದ ದೃಷ್ಟಿಯಿಂದ ಇತಿಹಾಸವನ್ನು ಮೂಲಾಧಾರಗಳು, ಭೌಗೋಳಿಕ ಲಕ್ಷಣಗಳು, ಭಾರತದ ನಾಗರಿಕತೆಗಳು, ವೇದಗಳ ಕಾಲದ ಇತಿಹಾಸ, ಹೊಸಮತಗಳ ಉದಯ, ವಿದೇಶೀಯರ ದಾಳಿ, ಮೌರ್ಯ ಮತ್ತು ಗುಪ್ತ ಸಾಮ್ರಾಜ್ಯ, ಕುಶಾನರು, ಹರ್ಷವರ್ಧನ, ಶಾತವಾಹನರು, ಚಾಲುಕ್ಯರು, ಪಲ್ಲವರು, ಚೋಳರು, ಹೊಯ್ಸಳರು, ಭಾರತಕ್ಕೆ ಯುರೋಪಿಯನ್ನರ ಆಗಮನ, ಭಾರತದಲ್ಲಿ ಆಂಗ್ಲರ ಆಡಳಿತ, ಸ್ವಾತಂತ್ರ್ಯ ಚಳುವಳಿಯ ಹೋರಾಟ, ಸ್ವಾತಂತ್ರ್ಯಾ ನಂತರದ ಭಾರತದ ಇತಿಹಾಸ, ಭಾರತದ ಪ್ರಸಿದ್ಧ ವ್ಯಕ್ತಿಗಳು ಎಂದು ಭಾರತದ ಇತಿಹಾಸದ ವಿಷಯ ವಸ್ತುವನ್ನು ಪಟ್ಟಿ ಮಾಡಬಹುದು.

ಪ್ರಪಂಚದ ಇತಿಹಾಸದ ಬಗ್ಗೆ ತಿಳಿಯುವುದಾದರೆ ನಾಗರಿಕತೆಗಳು, ವಿವಿಧ ಮತ ಧರ್ಮಗಳು, ಹೊಸ ಹೊಸ ಪ್ರದೇಶಗಳ ಅನ್ವೇಷಣೆ, ಕೈಗಾರಿಕಾ ಕ್ರಾಂತಿ, ಪುನರುಜ್ಜೀವನ ಮೊದಲ ಮತ್ತು ದ್ವಿತೀಯ ಮಹಾಯುದ್ಧಗಳು, ವಿಶ್ವಸಂಸ್ಥೆ, ಶೀತಲ ಸಮರ, ಇತ್ತೀಚಿನ ದಿನಗಳ ಇತಿಹಾಸ ಎಂದು ವಿಶ್ವದ ಇತಿಹಾಸದ ಅಧ್ಯಯನಕ್ಕೆ ಚೌಕಟ್ಟು ನೀಡಬಹುದು.

Digitised by Bharatavani, CIIL

ಪೌರನೀತಿಯ ವಿಷಯ ವಸ್ತುಗಳಾದ ಪೌರನಾಗಿ ಮಾನವ, ಪ್ರಜಾಪ್ರಭುತ್ವ, ಸಂವಿಧಾನ, ಕೇಂದ್ರ ಮತ್ತು ರಾಜ್ಯ ಸರ್ಕಾರ, ಭಾರತದ ರಕ್ಷಣಾ ವ್ಯವಸ್ಥೆ, ಭಾರತದ ಸವಾಲುಗಳು, ಭಾರತ ಮತ್ತು ಇತರ ರಾಷ್ಟ್ರಗಳ ಸಂಬಂಧ, ಭಾರತದ ವಿದೇಶಿ ನೀತಿ, ವಿಶ್ವದ ಸಮಸ್ಯೆಗಳು, ಸಮಾಜವಾದ, ಅಧ್ಯಕ್ಷೀಯ ಸರ್ಕಾರ, ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಅವುಗಳ ಪ್ರಭಾವ ಹಾಗೂ ಪ್ರಸ್ತುತ ಸ್ಥಿತಿಗತಿಗಳು, ವಿಶ್ವಶಾಂತಿ ಮತ್ತು ಸಹಕಾರ ಮುಂತಾದ ವಿಷಯಗಳು ಅಧ್ಯಯನದ ವ್ಯಾಪ್ತಿಯಲ್ಲಿ ಸೇರಿಸಬಹುದು. ಆದರೆ ಯಾವ ಹಂತದಲ್ಲಿ ಯಾವುದರ ಅಧ್ಯಯನ ಮಾಡಬೇಕೆಂಬುದಕ್ಕೆ ಶಿಕ್ಷಣ ತಜ್ಞರು ಮತ್ತು ಶಿಕ್ಷಣ ಇಲಾಖೆಗಳು ಉತ್ತರಿಸಬೇಕು.

**ಇತಿಹಾಸ ಮತ್ತು ಪೌರನೀತಿ ಬೋಧನೆಯ ಆಧುನಿಕ ಪರಿಕಲ್ಪನೆ ಮತ್ತು ತಂತ್ರಜ್ಞಾನದ ಬಳಕೆ:** ಇತಿಹಾಸವು 20ನೇ ಶತಮಾನದ ನಂತರ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ವಿಮರ್ಶಾತ್ಮಕವಾಗಿ, ವೈಜ್ಞಾನಿಕ ಮತ್ತು ವ್ಯಾಪಕವಾಗಿ ಸಂಶೋಧಿಸಲ್ಪಟ್ಟು ವಿಷಯಗಳು ಹೊರಬರಲಾರಂಭಿಸಿವೆ. ಇತಿಹಾಸದ ವಿಷಯಗಳು ಹಿಂದೆ ನಡೆದ ಘಟನೆಗಳ ಮಹತ್ವಪೂರ್ಣ ಅಧ್ಯಯನದ ವಿಷಯವಾಗಿದೆ. ಇದರಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳನ್ನು ಆಧಾರಗಳ ಸಹಾಯದಿಂದ ವೈಜ್ಞಾನಿಕ ದೃಷ್ಟಿಕೋನಗಳನ್ನು ಅನುಸರಿಸಿ ದಾಖಲೆಗಳನ್ನು ಮಾಡಲಾಗುತ್ತದೆ. ಇತಿಹಾಸದ ವಸ್ತು ವಿಷಯದ ರಚನೆಗಳಲ್ಲಿ ಆಧಾರಗಳ ಜೊತೆಗೆ, ಕಾಲ, ಸಮಯ, ಸ್ಥಳಗಳನ್ನು ಆಧಾರವಾಗಿ ಬಳಸಿಕೊಳ್ಳಲಾಗುತ್ತದೆ. ಈ ರೀತಿ ವಿಷಯಗಳ ವಿಚಾರ ಮಂಥನವಾದಾಗ ಭವಿಷ್ಯದ ಪರಿಣಾಮದ ಅರಿವನ್ನೂ ಸಹ ಮೂಡಿಸಲಾಗುತ್ತದೆ.

ಆಧುನಿಕ ಪರಿಕಲ್ಪನೆಯಂತೆ ಇತಿಹಾಸ ಮತ್ತು ಪೌರನೀತಿಗಳು ಜನತೆ, ಸ್ಥಳ, ಕಾಲ ಮತ್ತು ಆದರ್ಶ ವಿಚಾರಗಳು ಹೇಗಿತ್ತು ಎಂಬ ವಿವರಗಳನ್ನು ನೀಡುತ್ತಿದೆ. ಈ ವಿಚಾರಗಳಲ್ಲಿ ಐತಿಹಾಸಿಕ ವಿಧಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅಂದರೆ ಸಂಗ್ರಹಣ, ವರ್ಗೀಕರಣ, ಪೂರ್ವ ಸಿದ್ಧಾಂತ ಮತ್ತು ಅಂತಿಮ ತೀರ್ಮಾನದ ಹಂತಗಳು ವಿಜ್ಞಾನದ ರೀತಿಯಲ್ಲಿಯೇ ಬರುತ್ತಿರುವುದರಿಂದ ಇತಿಹಾಸ ಮತ್ತು ಪೌರನೀತಿಗಳು ಸಾಮಾಜಿಕ ವಿಜ್ಞಾನವಾಗಿದೆ ಎನ್ನಬಹುದು.

ಇತ್ತೀಚೆಗೆ ಐತಿಹಾಸಿಕ ಸಂಶೋಧನೆಗಳಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಗಣಕಯಂತ್ರ, ಉಪಗ್ರಹ, ಸೂಕ್ಷ್ಮ ರೀತಿಯ ಆಧುನಿಕ ಯಂತ್ರಗಳನ್ನು ಶೋಧನೆಯಲ್ಲಿ ಬಳಸಿಕೊಂಡು ಅದ್ಭುತ ರೀತಿಯ ಹೊಸ ವಿಷಯಗಳನ್ನು ಹೊರತರುತ್ತಿದ್ದಾರೆ. ಉದಾ. ಪಿರಮಿಡ್‌ನ ರಚನೆ, ಬಳಸಿದ ತಂತ್ರಜ್ಞಾನ, ಅಲ್ಲಿರುವ ಮಮ್ಮಿಗಳ ಬಗ್ಗೆ ತೀವ್ರ ರೀತಿಯ ಸಂಶೋಧನೆಗಳು ನಡೆದು ಹೊಸ ಹೊಸ ವಿಚಾರಗಳು ತಿಳಿದುಬರುತ್ತಿದೆ. ಆದುದರಿಂದ ತಂತ್ರಜ್ಞಾನದ ಬಳಕೆ ಇನ್ನೂ ತೀವ್ರವಾಗಬೇಕಾಗಿದೆ. ಇದರಿಂದ ಸತ್ಯವಾದ ಮಾಹಿತಿಗಳು ಹೊರಬಂದು ಇತಿಹಾಸದ ಬಗ್ಗೆ ಎಲ್ಲರೂ ನಂಬುತ್ತಾರೆ.

**ಇತಿಹಾಸ ಮತ್ತು ಪೌರನೀತಿ ಬೋಧನೆಯ ಪ್ರಾಮುಖ್ಯ:** ಇತಿಹಾಸ ಪ್ರಾಮುಖ್ಯತೆಯ ಬಗ್ಗೆ ತಜ್ಞರಾದ ಬೇಕನ್‌ರವರು "ಇತಿಹಾಸವು ಮಾನವರನ್ನು ಬುದ್ಧಿವಂತರನ್ನಾಗಿ ಮಾಡುತ್ತದೆ" ಎಂಬ ಮಾತೇ ಸಾಕೆನಿಸುತ್ತದೆ. ಜ್ಞಾನವನ್ನು ಪಡೆಯಬೇಕೆಂಬುದು ಎಲ್ಲಾ ನಾಗರಿಕತೆಗಳ ಲಕ್ಷಣ. ಇತಿಹಾಸವು ಮಾನವನ ಜೀವನದ ಅನುಭವಗಳ ಗಣಿ ಇದ್ದಹಾಗೆ. ಇತಿಹಾಸದ ಬೋಧನೆಯಿಂದ ಜ್ಞಾನದ ಜೊತೆಗೆ ಮಾನವ ಸಮಾಜದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದಂತೆ ಬೌದ್ಧಿಕ ಭಂಡಾರದ ಪ್ರಯೋಗ ಶಾಲೆ ಎನ್ನಬಹುದು. ಇತಿಹಾಸದ ಬೋಧನೆಯಿಂದ ಮಾನವನ ವಿರೋಚಿತ ಕಾರ್ಯಗಳ ಬಗ್ಗೆ, ಮಹಾನ್ ವ್ಯಕ್ತಿಗಳ ಪರಿಚಯ, ನಮ್ಮ ಪೂರ್ವಿಕರು ಅನುಸರಿಸುತ್ತಿದ್ದ ರೀತಿನೀತಿಗಳು, ಸಹಿಷ್ಣುತಾ ಭಾವನೆಗಳು, ಜನಜೀವನದ ವೈವಿಧ್ಯತೆಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತದೆ. ಇತಿಹಾಸವು ಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್‌ಕಾಲದ ಮಾನವನ ಚಟುವಟಿಕೆಗಳಿಗೆ ಕೊಂಡಿಯಂತೆ ಕಾರ್ಯನಿರ್ವಹಿಸುತ್ತದೆ. ಇತಿಹಾಸದ ಬೋಧನೆಯಿಂದ ರಾಜಕೀಯ ಪ್ರಜ್ಞೆಯುಂಟಾಗಿ ಗತಕಾಲದ ತಪ್ಪುಗಳನ್ನು ತಿದ್ದಿಕೊಂಡು ವಿವೇಕದ ಮಾರ್ಗಗಳನ್ನು ಅನುಸರಿಸುವಂತೆ ಮಾಡುತ್ತದೆ. ಇತಿಹಾಸದ ಬೋಧನೆಯಿಂದ ರಾಷ್ಟ್ರೀಯತೆ, ಅಂತಾರಾಷ್ಟ್ರೀಯತೆ, ಮಾನವೀಯ ಮೌಲ್ಯಗಳ ಬೆಳವಣಿಗೆಯಾಗುವುದರ ಜೊತೆಗೆ ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡುತ್ತದೆ.

ತರಗತಿಗಳಲ್ಲಿ ಪೌರನೀತಿಯ ಬೋಧನೆಯಿಂದ ಸ್ವತಂತ್ರ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರವೃತ್ತಿಯನ್ನು, ಸಮಾಜದ ವ್ಯವಸ್ಥೆಗೆ ಅಗತ್ಯವಿರುವ ಗುಣಗಳಾದ ಸಾಮರಸ್ಯ, ಸನ್ನಡತೆ, ವಿರಾಮವೇಳೆಯ ಸದುಪಯೋಗ, ಪ್ರಾಮಾಣಿಕತೆ, ವಿಜ್ಞಾನದ ಸದ್ಬಳಕೆ ಮುಂತಾದ ಗುಣಗಳನ್ನು ಬೆಳೆಸುತ್ತದೆ. ನಮ್ಮ ಸಂವಿಧಾನ, ಪೌರನ ಹಕ್ಕು ಮತ್ತು ಕರ್ತವ್ಯ, ಸರ್ಕಾರದ ರಚನೆ, ರಚನೆಯಲ್ಲಿ ನಮ್ಮ ಸ್ಥಾನಮಾನ ಮತ್ತು ಜವಾಬ್ದಾರಿಗಳ ಅರಿವನ್ನುಂಟುಮಾಡುತ್ತದೆ. ಇಂದಿನ ಮಕ್ಕಳು ಮುಂದಿನ ಪ್ರಜೆಗಳು ಎಂಬುದಕ್ಕೆ ಬೇಕಾದ ಮೌಲ್ಯಗಳನ್ನು ನಾಯಕತ್ವದ ಗುಣಗಳನ್ನು, ಮತದಾನದ ಪಾವಿತ್ರ್ಯತೆಯನ್ನು, ವಿಶಾಲ ಮನೋಭಾವನೆಗಳನ್ನು ರೂಪಿಸಿಕೊಳ್ಳಲು, ಸಮಯ ಸಂದರ್ಭಕ್ಕನುಗುಣವಾಗಿ ವರ್ತನೆ ಮಾಡುವ ವ್ಯಕ್ತಿತ್ವವನ್ನು ರೂಪಿಸಲು ಪೌರನೀತಿ ಬೋಧನೆಯು ಅಗತ್ಯವಾಗಿದೆ.

**ಇತಿಹಾಸ ಮತ್ತು ಪೌರನೀತಿ ಬೋಧನೆಯ ಉದ್ದೇಶಗಳು:** ತರಗತಿಗಳಲ್ಲಿ ಇತಿಹಾಸ ಬೋಧನೆಯ ಪ್ರಮುಖ ಉದ್ದೇಶಗಳೆಂದರೆ ಐತಿಹಾಸಿಕ ಮನೋಭಾವನೆಗಳನ್ನು ಬೆಳೆಸುವುದು. ರಾಷ್ಟ್ರೀಯತೆ ಮತ್ತು ಅಂತಾರಾಷ್ಟ್ರೀಯತೆಯ ಭಾವನೆಗಳನ್ನು ಬೆಳೆಸುವುದು, ಭಾವೈಕ್ಯತೆಯನ್ನು ಬೆಳೆಸುವುದು, ಮಗುವನ್ನು ಸಾಮಾಜೀಕರಣಗೊಳಿಸುವುದು, ವಿವಿಧ ಸಂಸ್ಕೃತಿಯ ಬಗ್ಗೆ ಪರಿಚಯಿಸಿ ಅದರಲ್ಲಿ ಉತ್ತಮವಾದವುಗಳನ್ನು ಅನುಕರಿಸುವಂತೆ ಮಾಡುವುದು, ನಕ್ಷೆಗಳನ್ನು ರಚಿಸುವ, ಬಿಡಿಸುವ, ಓದುವ ಹಾಗೂ ಕಾಲನಕ್ಷೆ ಹಾಗೂ ಕಾಲರೇಖೆಗಳನ್ನು ತಯಾರಿಸುವ ಕೌಶಲ್ಯಗಳನ್ನು ಬೆಳೆಸುವುದು, ಐತಿಹಾಸಿಕ ವಿಷಯಗಳನ್ನು ವಿಮರ್ಶಿಸುವ, ವಿವೇಚಿಸುವ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯಗಳನ್ನು ಬೆಳೆಸುವುದು, ಘಟನೆಗಳಿಗೆ ಕಾರಣ ಮತ್ತು ಪರಿಣಾಮಗಳ ಸಂಬಂಧಗಳನ್ನು ತಿಳಿಸುವುದು, ವೈಜ್ಞಾನಿಕ ಮನೋಭಾವನೆಗಳನ್ನು ಬೆಳೆಸುವುದು, ಭವಿಷ್ಯದ ಜೀವನ ರೂಪಿಸಲು ಸಹಾಯ ಮಾಡುವುದು ಮುಂತಾದವುಗಳು ಪ್ರಮುಖವಾದವು. ಆದರೆ ಇವುಗಳನ್ನೆಲ್ಲವನ್ನು ಸಾಧಿಸಬೇಕಾದರೆ ಹಲವಾರು ವರ್ಷಗಳು ಬೇಕಾಗುತ್ತದೆ.

ಪೌರನೀತಿ ಬೋಧನೆಯ ಮುಖ್ಯ ಉದ್ದೇಶಗಳನ್ನು ಈ ಮುಂದಿನ ರೀತಿಯಲ್ಲಿ ರೂಪಿಸಿಕೊಳ್ಳಬಹುದು. ಪೌರನೀತಿಯಿಂದ ಪ್ರಜಾಸತ್ತಾತ್ಮಕ ಪೌರತ್ವದ ಬೆಳವಣಿಗೆಯನ್ನು ಮಾಡುವುದು, ಪೌರಪ್ರಜ್ಞೆಯನ್ನು ಬೆಳೆಸುವುದು, ರಾಜಕೀಯ ಜಾಗೃತಿಯನ್ನು ಬೆಳೆಸಿ ಸರ್ಕಾರದಲ್ಲಿ ಭಾಗವಹಿಸುವಂತೆ ಮಾಡುವುದು, ಪೌರನ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಉಂಟು ಮಾಡುವುದು, ರಾಷ್ಟ್ರೀಯ ಐಕ್ಯತೆ ಮತ್ತು ಭಾವೈಕ್ಯತೆಯ ಬೆಳವಣಿಗೆ, ಅಂತಾರಾಷ್ಟ್ರೀಯ ತಿಳುವಳಿಕೆ ಉಂಟುಮಾಡುವುದು, ವಿಶ್ವ ಪೌರತ್ವ ಮತ್ತು ವಿಶ್ವ ಕುಟುಂಬದ ಕಲ್ಪನೆ ಉಂಟುಮಾಡುವುದು, ಸಮಾಜದಲ್ಲಿ ಜವಾಬ್ದಾರಿಯಿಂದ ವರ್ತಿಸುವಂತೆ ಮಾಡುವುದು, ನಾಯಕತ್ವದ

Digitised by Bharatavani, CIIL

ಗುಣಗಳನ್ನು ಬೆಳೆಸುವುದು, ಪ್ರತಿಯೊಂದು ಕಾರ್ಯಗಳನ್ನು ವಿವೇಚನಾ ಶಕ್ತಿಯಿಂದ ನಿರ್ವಹಿಸುವಂತೆ ಮಾಡುವುದು ಇವೇ ಮುಂತಾದ ಉದ್ದೇಶಗಳನ್ನು ರೂಪಿಸಿಕೊಳ್ಳಬಹುದು.

**ಇತಿಹಾಸ ಮತ್ತು ಪೌರನೀತಿ ಬೋಧನೆಯ ಮೌಲ್ಯಗಳು:** ಶಾಲೆಗಳಲ್ಲಿ ಇತಿಹಾಸ ಮತ್ತು ಪೌರನೀತಿಯ ಬೋಧನೆಯಿಂದ ಉಪಯೋಗಗಳೇನು? ಎಂಬ ಪ್ರಶ್ನೆಗೆ ಗುರಿ ಮತ್ತು ಉದ್ದೇಶಗಳು ಉತ್ತರ ನೀಡುತ್ತವೆ. ತರಗತಿಯಲ್ಲಿ ಈ ವಿಷಯದ ಬೋಧನೆಯಿಂದ ಹೊರಹೊಮ್ಮಿದ ಫಲಗಳೇ ಮೌಲ್ಯಗಳು. ಆದುದರಿಂದ ಇತಿಹಾಸ ಮತ್ತು ಪೌರನೀತಿಯ ಬೋಧನೆಯಿಂದ ಈ ಮುಂದಿನ ಫಲಗಳನ್ನು ಪಡೆಯಬಹುದು.

- **ಬೌದ್ಧಿಕ ಮೌಲ್ಯಗಳು:** ಇತಿಹಾಸ ಮತ್ತು ಪೌರನೀತಿಯ ಬೋಧನೆಯಿಂದ ವಿದ್ಯಾರ್ಥಿಗಳಲ್ಲಿ ಜ್ಞಾನಾಭಿವೃದ್ಧಿಯ ವಿಕಾಸದ ಜೊತೆ ವೈಚಾರಿಕತೆ, ಬುದ್ಧಿಶಕ್ತಿಯ ಬೆಳವಣಿಗೆ, ಅಭ್ಯಾಸ ಮಾಡುವ, ವಿಶ್ಲೇಷಣೆ ಮಾಡುವ, ವಿಶದಪಡಿಸುವ, ಚರ್ಚಿಸುವ, ಆಲೋಚಿಸುವ ಮೌಲ್ಯಗಳು ಬೆಳೆದು ಭವಿಷ್ಯ ಜೀವನಕ್ಕೆ ಅನುಕೂಲವಾಗುತ್ತವೆ.

- **ಸಾಂಸ್ಕೃತಿಕ ಮೌಲ್ಯ:** ಇತಿಹಾಸ ಮತ್ತು ಪೌರನೀತಿಯ ಬೋಧನೆಯಿಂದ ವಿದ್ಯಾರ್ಥಿಗಳಲ್ಲಿ ಮಾನವನ ನಾಗರಿಕತೆಯ ಬೆಳವಣಿಗೆ, ಅವನು ಸಮಾಜದ ಬೆಳವಣಿಗೆಗೆ ರೂಪಿಸಿಕೊಂಡ ನೀತಿನಿಯಮಗಳು, ಆಹಾರ ಪದ್ಧತಿ, ಹಬ್ಬಹರಿದಿನಗಳು, ಉಡುಗೆ ತೊಡುಗೆಗಳು, ಆಡಳಿತ ಪದ್ಧತಿ ಮುಂತಾದ ವಿಚಾರಗಳೆಲ್ಲ ತಿಳಿಯುವುದರಿಂದ ಸಾಂಸ್ಕೃತಿಕ ಮೌಲ್ಯಗಳ ಅರಿವು ಉಂಟಾಗುತ್ತದೆ. ಇದೊಂದು ಉತ್ತಮ ಮೌಲ್ಯವಾಗಿದೆ.

- **ನೈತಿಕ ಮೌಲ್ಯ:** ಅನಾದಿ ಕಾಲದಿಂದಲೂ ಮಾನವ ಇತಿಹಾಸದ ಕೇಂದ್ರಬಿಂದು. ಸಮಾಜದ ಸದಸ್ಯ, ರಾಷ್ಟ್ರದ ಆಸ್ತಿಯಾಗಿದ್ದಾನೆ. ಹೀಗಿರುವಾಗ ಅವನ ವ್ಯಕ್ತಿತ್ವದ ವಿಚಾರ ಬಹಳ ಮುಖ್ಯ. ಇದು ಇಡೀ ಸಮಾಜದ ಮೇಲೆ ಪ್ರಭಾವಬೀರುತ್ತದೆ. ಅವನ ನಡವಳಿಕೆ, ಶಿಷ್ಟಾಚಾರ, ಮಾನವೀಯತೆ, ರಾಷ್ಟ್ರಪ್ರೇಮ, ಮುಂತಾದ ಮೌಲ್ಯಗಳನ್ನು ತರಗತಿಯ ಬೋಧನೆಯಲ್ಲಿ ತಿಳಿಸಿ ನೈತಿಕ ಮೌಲ್ಯಗಳ ಬೆಳವಣಿಗೆ ಮಾಡಬಹುದು. ಇದು ಭವಿಷ್ಯದ ದೃಷ್ಟಿಯಿಂದ ಅತ್ಯಗತ್ಯ.

- **ರಾಷ್ಟ್ರೀಯ ಮೌಲ್ಯಗಳು:** ಇತಿಹಾಸ ಮತ್ತು ಪೌರನೀತಿಯಿಂದ ಭವಿಷ್ಯದ ಪ್ರಜೆಗಳಲ್ಲಿ ರಾಷ್ಟ್ರಾಭಿಮಾನ, ದೇಶ ರಕ್ಷಣೆ, ಒತ್ತಡ ಸ್ಥಿತಿ ನಿಭಾಯಿಸುವ ಮೌಲ್ಯಗಳನ್ನು ಬೆಳೆಸಬಹುದು.

- **ಅಂತಾರಾಷ್ಟ್ರೀಯ ಮೌಲ್ಯ:** ರಾಷ್ಟ್ರ ರಾಷ್ಟ್ರಗಳ ಅವಲಂಬನೆ, ಜಗತ್ತಿನಲ್ಲಿ ವಾಸಿಸುವ ಜನರ ಪದ್ಧತಿ, ನಿಯಮ, ಹವ್ಯಾಸ ಜನರ ಸಾಂಸ್ಕೃತಿಕ ಚಟುವಟಿಕೆಗಳ ವಿನಿಮಯ ಮುಂತಾದ ಮೌಲ್ಯಗಳನ್ನು ಇತಿಹಾಸ ಮತ್ತು ಪೌರನೀತಿ ಬೋಧನೆಯಿಂದ ಪಡೆಯಬಹುದು.

**ಇತಿಹಾಸ ಮತ್ತು ಪೌರನೀತಿ ಬೋಧನೆಯ ವಿಧಾನಗಳು:** ಶಿಕ್ಷಕನು ವಿದ್ಯಾರ್ಥಿಗಳ ಕಲಿಕೆಯನ್ನು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಲು ಅನುಸರಿಸುವ ಕ್ರಮವನ್ನು ಬೋಧನಾ ಪದ್ಧತಿ ಮತ್ತು ಬೋಧನಾ ವಿಧಾನ ಎನ್ನುವರು. ಇತಿಹಾಸ ಮತ್ತು ಪೌರನೀತಿಯನ್ನು ತರಗತಿಗಳಲ್ಲಿ ಯಾವ ಪದ್ಧತಿ ಮತ್ತು ವಿಧಾನಗಳಿಂದ ಬೋಧಿಸಬಹುದು ಎಂಬುದನ್ನು ಸಂಕ್ಷಿಪ್ತವಾಗಿ ಮುಂದೆ ವಿವರಿಸಲಾಗಿದೆ.

- **ಕಥಾ ನಿರೂಪಣಾ ಪದ್ಧತಿ:** ಇತಿಹಾಸದಲ್ಲಿ ಬರುವ ವಿಷಯಗಳನ್ನು ಸತ್ಯಕಥೆಗಳು, ಪೌರಾಣಿಕ ಕಥೆಗಳು, ದಂತ ಕಥೆಗಳು ಎಂಬುದಾಗಿ ಕೆಲವನ್ನು ವಿಭಾಗಿಸಿಕೊಳ್ಳಬಹುದು. ಇವುಗಳನ್ನು ತರಗತಿಗಳಿಗನುಗುಣವಾಗಿ, ವಯೋಮಾನಕ್ಕನುಗುಣವಾಗಿ, ಬುದ್ಧಿಶಕ್ತಿಸಾಮರ್ಥ್ಯಕ್ಕನುಗುಣವಾಗಿ, ಸಂದರ್ಭಕ್ಕನುಸಾರವಾಗಿ ಶಿಕ್ಷಕನು ವಿಂಗಡಿಸಿಕೊಂಡು ಆಸಕ್ತಿಯಿಂದ ಬೋಧನೆ ಮಾಡಬಹುದು.

- **ಯೋಜನಾ ಪದ್ಧತಿ:** ಈ ಪದ್ಧತಿಯನ್ನು ಅನುಷ್ಠಾನಕ್ಕೆ ತಂದ ಕೀರ್ತಿ ಕಿಲ್‌ಪ್ಯಾಟ್ರಿಕ್‌ರವರದು. ಶ್ರೇಷ್ಠ ಶಿಕ್ಷಣ ತಜ್ಞರಾದ ಜಾನ್‌ಡ್ಯೂಯಿರವರು ಸಹಾ ಇದನ್ನು ತರಗತಿಯ ಬೋಧನೆಗಳಲ್ಲಿ ಅಳವಡಿಸುವಂತೆ ಮಾಡಿದರು. ಈ ವಿಧಾನದಲ್ಲಿ ವಿಷಯವೊಂದನ್ನು ಆಯ್ಕೆಮಾಡಿಕೊಂಡು ಶಿಕ್ಷಕರ ಮಾರ್ಗದರ್ಶನದಿಂದ, ಎಲ್ಲಾ ರೀತಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ವಿಮರ್ಶಿಸಿ, ವಿಶ್ಲೇಷಿಸಿ ನಂತರ ಮೌಲ್ಯಮಾಪನ ಮಾಡುವುದಾಗಿದೆ. ಇದರ ಮುಖ್ಯ ಲಕ್ಷಣಗಳೆಂದರೆ ವಾಸ್ತವ ಜೀವನಕ್ಕೆ ಸಮೀಪದಲ್ಲಿದ್ದು ಉದ್ದೇಶಪೂರಿತ ಚಟುವಟಿಕೆಯಾಗಿದ್ದು ಸ್ವತಃ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ತಿಳುವಳಿಕೆಯಾಗುವುದರಿಂದ ಉತ್ತಮವಾದ ವಿಧಾನವಾಗಿದೆ. ಇತಿಹಾಸದ ಅಧ್ಯಯನದಲ್ಲಿ ಈ ವಿಧಾನ ಹೆಚ್ಚು ಸಹಕರಿಸುತ್ತದೆ.

- **ಪಠ್ಯಪುಸ್ತಕ ಪದ್ಧತಿ:** ಸ್ವತಃ ಶಿಕ್ಷಣ ಇಲಾಖೆಯೇ ಇತಿಹಾಸ ಮತ್ತು ಪೌರನೀತಿ ವಿಷಯಗಳನ್ನು ತರಗತಿಗಳಿಗನುಗುಣವಾಗಿ ತಜ್ಞರ ಸಹಾಯದಿಂದ ಮುದ್ರಣ ಮಾಡಿಕೊಟ್ಟಿರುವುದರಿಂದ ಶಿಕ್ಷಕ ವಿಷಯವನ್ನು ಪಾಠೋಪಕರಣಗಳ ಸಹಾಯದಿಂದ ತನ್ನ ಸಂವಹನ ಕೌಶಲಕ್ಕನುಗುಣವಾಗಿ ಪ್ರಸ್ತುತಪಡಿಸುವ ವಿಧಾನವಾಗಿದೆ.

- **ಚರ್ಚಾ ವಿಧಾನ:** ಇಂದಿನ ಶಿಕ್ಷಣ ಪದ್ಧತಿಯ ಕಲಿಕಾ ವಿಧಾನ ಸಾಮೂಹಿಕ ಚಿಂತನೆ, ಚರ್ಚೆ, ಅಭಿಪ್ರಾಯ ನೀಡುವುದು, ತೀರ್ಮಾನಕ್ಕೆಗೊಳ್ಳುವಿಕೆ, ಸಂಗ್ರಹಣ ಮಾಡುವಿಕೆಗಳಿಗೆ ಹೆಚ್ಚಿನ ಒತ್ತು ನೀಡಿರುವ ಕಾರಣ ಚರ್ಚೆಗಳ ಮೂಲಕ ಇತಿಹಾಸ ಮತ್ತು ಪೌರನೀತಿಯ ವಿಷಯುಗಳನ್ನು ಕಲಿಯುವುದು ಸೂಕ್ತವೆನಿಸುತ್ತದೆ. ಚರ್ಚೆ ಮಾಡುವುದರಿಂದ ಗ್ರಹಿಕೆ, ಆಲೋಚನೆ, ಸಂವಹನ, ಗುಂಪು ತೀರ್ಮಾನ, ವಿಶ್ಲೇಷಣೆ, ಮೌಲ್ಯಮಾಪನಗಳ ಕಾರ್ಯ ನಡೆಯುತ್ತದೆ. ಈ ಎಲ್ಲಾ ಕಾರ್ಯಗಳಿಗೆ ಶಿಕ್ಷಕರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಇರುತ್ತದೆ.

- **ಮೂಲಾಧಾರ ಪದ್ಧತಿ:** ಇತಿಹಾಸದ ಅಸ್ತಿತ್ವವು ಲಭ್ಯವಿರುವ ಆಧಾರಗಳಿಂದ ನಿಂತಿದೆ. ಸಾಹಿತ್ಯದ ಆಧಾರಗಳಾದ ವೇದಗಳು, ಕಾವ್ಯಗಳು, ಧರ್ಮಶಾಸ್ತ್ರಗಳು, ಪುರಾಣಗಳು, ದೇಶೀಯ ಮತ್ತು ವಿದೇಶೀಯ ಬರವಣಿಗೆಗಳನ್ನು ಬೋಧನೆಯಲ್ಲಿ ಬಳಸಬಹುದು. ಪ್ರಾಕ್ತನ ಆಧಾರಗಳಾದ ಶಾಸನಗಳು, ನಾಣ್ಯಗಳು, ಸ್ಮಾರಕಗಳು ಮುಂತಾದವುಗಳನ್ನು ಇತಿಹಾಸದ ಅಧ್ಯಯನದಲ್ಲಿ ಬಳಸಿಕೊಳ್ಳುವುದು. ಈ ರೀತಿ ಇತಿಹಾಸದ ವಿಷಯಗಳಿರುವ ಆಧಾರಗಳನ್ನು ಶಿಕ್ಷಕರ ಮಾರ್ಗದರ್ಶನದಿಂದ ಅಧ್ಯಯನ ಮಾಡಿ ನೇರವಾಗಿ ವಿಷಯ ತಿಳಿಯುವ ವಿಧಾನವಾಗಿದೆ.

- **ಜೀವನ ವೃತ್ತಾಂತ ವಿಧಾನ:** ಇತಿಹಾಸದಲ್ಲಿ ಬರುವ ಹಲವಾರು ಮಹಾನ್ ವ್ಯಕ್ತಿಗಳು ತಾವೇ ಸ್ವತಃ ತಮ್ಮ ಕಾಲದ ವಿಷಯಗಳನ್ನು ಬರೆದಿಟ್ಟಿದ್ದಾರೆ. ಇವು ಇತಿಹಾಸದಲ್ಲಿ ವಿಫುಲವಾಗಿ ದೊರೆಯುತ್ತವೆ. ಈ ರೀತಿ ಲಭ್ಯವಿರುವ ಸಾಹಿತ್ಯವನ್ನು ಇತಿಹಾಸದ ಬೋಧನೆಯಲ್ಲಿ ಬಳಸಿ ಕಲಿಕೆ ಉಂಟುಮಾಡುವ ಪದ್ಧತಿಯೇ ಜೀವನ ವೃತ್ತಾಂತ ವಿಧಾನ.

- **ವೀಕ್ಷಣಾ ವಿಧಾನ:** ಸಣ್ಣ ಪ್ರಮಾಣದ ಕ್ಷೇತ್ರ ಪ್ರವಾಸಗಳನ್ನು ಇತಿಹಾಸದ ಘಟನಾವಳಿಗಳು ನಡೆದಿರುವ ಸ್ಥಳಗಳಿಗೆ ಭೇಟಿ ನೀಡಿ ತಿಳಿಯುವುದು ಇತಿಹಾಸದ ಬೋಧನೆಯ ವಿಧಾನವಾಗಿದೆ. ಅದೇ ರೀತಿ ಸ್ಥಳೀಯ, ರಾಜ್ಯ, ದೇಶದ ರಾಜಕೀಯ ವಿಷಯಗಳನ್ನು ಚಟುವಟಿಕೆಗಳು ನಡೆಯುವಾಗ ನೋಡಿ ತಿಳಿಯುವುದು ಪೌರನೀತಿ ಬೋಧನಾ ವಿಧಾನಗಳಲ್ಲಿ ಒಂದಾಗಿದೆ.

Digitised by Bharatavani, CIIL

• **ಪ್ರವಾಸ ವಿಧಾನ:** ಐತಿಹಾಸಿಕ ಘಟನೆಗಳು ನಡೆದಿರುವ ತಾಣಗಳು ಇಂದು ಸಹಾ ತಮ್ಮ ಪಳೆಯುಳಿಕೆಗಳನ್ನು ಉಳಿಸಿಕೊಂಡಿರುವ ಕುರುಹುಗಳಿವೆ. ಈ ರೀತಿ ಕುರುಹುಗಳು ಎಲ್ಲಾ ಕಡೆಗಳಲ್ಲಿ ವಿಪುಲವಾಗಿ ದೊರೆಯುತ್ತವೆ. ಶಿಕ್ಷಕರ ಮತ್ತು ಶಾಲೆಯ ಸಹಕಾರದಿಂದ ಇಂತಹ ಸ್ಥಳಗಳನ್ನು ಗುರ್ತಿಸಿ ಮಕ್ಕಳನ್ನು ಒಂದು ದಿನ, 2–3 ದಿನ ಅಥವಾ ದೀರ್ಘಕಾಲದ ಪ್ರವಾಸಗಳ ಮುಖಾಂತರ ಇತಿಹಾಸದ ವಿಷಯಗಳನ್ನು ಪರಿಚಯ ಮಾಡಿಕೊಡುವ ಪದ್ಧತಿಯಾಗಿದೆ. ಇದಕ್ಕೆ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಹಕಾರ ಅತ್ಯಂತ ಅಗತ್ಯ.

• **ಸಮೀಕ್ಷೆ ಅಥವಾ ಸರ್ವೇ ವಿಧಾನ:** ಇತಿಹಾಸದ ಅಥವಾ ಪೌರನೀತಿಗೆ ಸಂಬಂಧಪಟ್ಟಂತಹ ಹಲವಾರು ವಿಷಯಗಳ ಬಗ್ಗೆ ಗುಂಪುಗಳಲ್ಲಿ ಸಮೀಕ್ಷೆ ಅಥವಾ ಸರ್ವೆಗಳಿಂದ ವಿಷಯ ಸಂಗ್ರಹಿಸಿ ವಿಚಾರ ವಿನಿಮಯ ಮಾಡಿ ಅಂತಿಮವಾಗಿ ಮೌಲ್ಯಮಾಪನ ಮಾಡಿ ಒಂದು ತೀರ್ಮಾನಕ್ಕೆ ಬರುವ ವಿಧಾನವೇ ಸಮೀಕ್ಷೆ ಅಥವಾ ಸರ್ವೇ ವಿಧಾನವಾಗಿದೆ. ಇಲ್ಲಿ ಶಿಕ್ಷಕರಿಗಿಂತ ವಿದ್ಯಾರ್ಥಿಗಳ ಪಾತ್ರ ಪ್ರಧಾನವಾಗಿರುತ್ತದೆ. ಶಿಕ್ಷಕರು ಮಾರ್ಗದರ್ಶಕರಾಗಿರುತ್ತಾರೆ.

ಇತಿಹಾಸ ಮತ್ತು ಪೌರನೀತಿ ವಿಷಯಗಳ ಬೋಧನೆಯಲ್ಲಿ ಈ ಮೇಲಿನ ಮಾರ್ಗ ಅಥವಾ ಪದ್ಧತಿ ಅಥವಾ ವಿಧಾನಗಳನ್ನೇ ಹೆಚ್ಚಾಗಿ ಬಳಸಲಾಗುತ್ತಿದೆ. ಈ ಮೇಲಿನ ವಿಧಾನಗಳೇ ಅಲ್ಲದೆ ಉಪನ್ಯಾಸ ಪದ್ಧತಿ, ಪ್ರಶ್ನಾ ಪದ್ಧತಿ, ಗುಂಪು ಪದ್ಧತಿ, ಪ್ರಯೋಗ ಪದ್ಧತಿ, ನಾಟಕ ಪದ್ಧತಿ, ಅನ್ವೇಷಣಾ ಪದ್ಧತಿ, ಕ್ರೀಡಾ ಪದ್ಧತಿ, ಪ್ರಾತ್ಯಕ್ಷಿಕೆ ವಿಧಾನ, ಸಮಸ್ಯಾ ಪರಿಹಾರ ಪದ್ಧತಿ ಮುಂತಾದ ವಿಧಾನಗಳಿವೆ. ಆದರೆ ಈ ಎಲ್ಲಾ ವಿಧಾನಗಳಲ್ಲಿ ಪ್ರೌಢ ಹಂತದ ಇತಿಹಾಸ ಮತ್ತು ಪೌರನೀತಿಯ ವಿಷಯಗಳನ್ನು ಬೋಧನೆ ಮಾಡುವುದು ಸುಲಭ ಸಾಧ್ಯವಿಲ್ಲ. ಇವುಗಳೆಲ್ಲವೂ ಶಿಕ್ಷಕ ಲಭ್ಯವಿರುವ ಸಾಮಗ್ರಿಗಳು, ವಿದ್ಯಾರ್ಥಿಗಳ ಬುದ್ಧಿಶಕ್ತಿ, ಆಸಕ್ತಿ, ಮನೋಧೋರಣೆ, ಉಪಯೋಗ ಮುಂತಾದ ಅಂಶಗಳನ್ನು ಆಧರಿಸಿ ಹಂತ ಹಂತವಾಗಿ ಬಳಸಲ್ಪಡುತ್ತದೆ.

**ಇತಿಹಾಸ ಮತ್ತು ಪೌರನೀತಿ ಬೋಧನೆಯಲ್ಲಿ ಬಳಸುವ ಪಾಠೋಪಕರಣಗಳು:** ವಿದ್ಯಾರ್ಥಿಗಳ ಕಲಿಕೆಯನ್ನು ಆಸಕ್ತಿ ಮತ್ತು ಪರಿಣಾಮಕಾರಿಯನ್ನಾಗಿ ಮಾಡಲು ಬೋಧನಾ ಸಂದರ್ಭದಲ್ಲಿ ಶಿಕ್ಷಕ ಬಳಸಬಹುದಾದ ಸಾಧನಗಳನ್ನು ಪಾಠೋಪಕರಣಗಳು ಎಂದು ಕರೆಯಬಹುದು. ಪಾಠೋಪಕರಣಗಳು ಜ್ಞಾನದ ಸ್ಥಿರತೆಗೆ, ವಿಷಯದ ಸ್ಪಷ್ಟ ಚಿತ್ರಣವನ್ನು ಪಡೆದುಕೊಳ್ಳಲು, ಕಲಿಕಾಸಕ್ತಿಯನ್ನು ಉಳಿಸಿಕೊಳ್ಳಲು, ಉದ್ದೇಶಗಳ ಈಡೇರಿಕೆಗೆ, ಬೋಧನೆಯ ಯಶಸ್ಸಿಗೆ, ಪರಿಣಾಮಕಾರಿಯಾದ ತರಗತಿಯ ನಿರ್ವಹಣೆಗೆ ಅತ್ಯಂತ ಅಗತ್ಯ.

ಇತಿಹಾಸ ಮತ್ತು ಪೌರನೀತಿ ಬೋಧನೆಯಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಬಳಸಬಹುದಾದ ಉಪಕರಣಗಳಲ್ಲಿ ಪಠ್ಯಪುಸ್ತಕಗಳು ಹೆಚ್ಚಿನ ಮಹತ್ವವನ್ನು ಪಡೆದಿದ್ದು ವ್ಯವಸ್ಥಿತ ವಿಷಯದ ಆಯ್ಕೆಗೆ, ಪರಿಣಾಮಕಾರಿ ಬೋಧನೆಗೆ ಸಾಮಾಜಿಕ ಜೀವನದೊಂದಿಗೆ ಗತಕಾಲದ ವಿಷಯಗಳನ್ನು ಸಮನ್ವಯಗೊಳಿಸಲು, ಕಲ್ಪನಾ ಶಕ್ತಿಯನ್ನು ಹೆಚ್ಚಿಸಲು, ಓದುವ ಹವ್ಯಾಸ ಬೆಳೆಸಲು, ಕೆಲವು ಕೌಶಲಗಳ ಬೆಳವಣಿಗೆಗೆ ಹಾಗೂ ಮೌಲ್ಯಮಾಪನಕ್ಕೆ ಸಹಾಯಕವಾಗಿರುವ ಸಾಧನವಾಗಿದೆ.

ನಿಯತಕಾಲಿಕೆಗಳು ಬೋಧನಾ ಕಾರ್ಯದಲ್ಲಿ ಪ್ರಚಲಿತ ಘಟನೆಗಳು, ಕಲೆ, ಸಾಹಿತ್ಯ, ಸಂಗೀತಗಳಲ್ಲದೆ ಆಯಾ ಕಾಲದ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳನ್ನು ತರಗತಿಗಳಲ್ಲಿ ತಿಳಿಸಿಕೊಡಲು ಸಹಾಯ ಮಾಡುತ್ತವೆ. ವಿವಿಧ ರೀತಿಯ ವೃತ್ತಪತ್ರಿಕೆಗಳು ಸ್ಥಳೀಯ ಆಗುಹೋಗುಗಳ ಜೊತೆಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಚಾರಗಳ ಬಗ್ಗೆ ದೈನಂದಿನವಾಗಿ ಇತಿಹಾಸ ಮತ್ತು ಪೌರನೀತಿಗೆ ಸಹಾಯ ಮಾಡುತ್ತದೆ.

ಇದೇ ರೀತಿಯಲ್ಲಿ ಶ್ರವಣೋಪಕರಣಗಳಾದ ರೇಡಿಯೋ, ಟೇಪ್‌ರೆಕಾರ್ಡರ್, ಗ್ರಾಮಾಫೋನ್ ಮುಂತಾದವುಗಳು ಐತಿಹಾಸಿಕ ಮತ್ತು ರಾಜಕೀಯ ವಿಚಾರಗಳನ್ನು ಕೆಲವೊಮ್ಮೆ ಮುದ್ರಿತ ರೂಪದಲ್ಲಿ ಕೆಲವೊಮ್ಮೆ ನೇರ ಪ್ರಸಾರ ಮಾಡುತ್ತಿವೆ. ಇತ್ತೀಚೆಗೆ ಮೂಲೆಗುಂಪಾದ ರೇಡಿಯೋ ಪುನಃ ಮರುಬಳಕೆಯಾಗಿದೆ. ಇತಿಹಾಸ ಮತ್ತು ಪೌರನೀತಿ ಬೋಧನೆಯಲ್ಲಿ ನಾಟಕ, ಭಾಷಣ, ಕತೆ, ಹಾಡು, ಚರ್ಚೆ, ಸಂಗೀತಗಳನ್ನು ಇವುಗಳ ಸಹಾಯದಿಂದ ಆಲಿಸಬಹುದು.

ಇತಿಹಾಸ ಮತ್ತು ಪೌರನೀತಿ ಬೋಧನೆಯಲ್ಲಿ ದೃಕ್ ಉಪಕರಣಗಳ ಬಳಕೆ ಇತರೇ ಎಲ್ಲಾ ಮಾಧ್ಯಮಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಶಿಕ್ಷಕ ಬಳಸಬಹುದು. ದೃಕ್ ಉಪಕರಣಗಳಲ್ಲಿ ಹಲವಾರು ಪ್ರಕಾರಗಳಿದ್ದು ಮುಖ್ಯವಾದವುಗಳೆಂದರೆ ಚಾರ್ಟ್‌ಗಳು, ಚಿತ್ರಗಳು, ನಕಾಶೆಗಳು, ಮಾದರಿಗಳು, ನೈಜವಸ್ತುಗಳು, ಪ್ರಕಟನಾ ಹಲಗೆಗಳು, ಸ್ಲೈಡ್‌ಗಳು, ಸ್ಟ್ರಿಪ್ಸ್‌ಗಳು, ಮುಂತಾದವುಗಳು. ಇವುಗಳ ಬಳಕೆಗಳಿಂದ ಮಗುವಿನ ಆಸಕ್ತಿಯನ್ನು ಹೆಚ್ಚಿಸಿ ಅವನ ಮನೋಧೋರಣೆಯನ್ನು ಬದಲಿಸಲು ಸಾಧ್ಯವಿದೆ. ಇಂದು ಸರ್ಕಾರ/ಶಿಕ್ಷಣ ಇಲಾಖೆಗಳು ಎಲ್ಲಾ ರೀತಿಯ ಸಾಮಗ್ರಿಗಳನ್ನು ನೇರವಾಗಿ ಶಾಲೆಗೆ ಪೂರೈಸುತ್ತಿದೆ. ಆದರೆ ಇವುಗಳ ಉಪಯೋಗ ಮಾತ್ರ ಪರಿಣಾಮಕಾರಿಯಾಗಿಲ್ಲ.

ಈ ಮೇಲಿನವುಗಳಲ್ಲದೆ ದೃಕ್ ಶ್ರವಣೋಪಕರಣಗಳಾದ ದೂರದರ್ಶನ, ಕಂಪ್ಯೂಟರ್, ಚಲನಚಿತ್ರಗಳು, ಸಮೂಹ ಮಾಧ್ಯಮಗಳು, ವೀಡಿಯೋ, ಶಾಲಾ ಪ್ರವಾಸ, ನಾಟಕ, ಪ್ರಾತ್ಯಕ್ಷಿಕೆ, ಪ್ರಯೋಗಗಳು, ಇತಿಹಾಸ ಮತ್ತು ಪೌರನೀತಿಯ ಬೋಧನೆಯನ್ನು ಸಾಕಷ್ಟು ಪ್ರಭಾವಯುತವಾಗಿ ಮಾಡಲು ಸಹಾಯ ಮಾಡುತ್ತಿವೆ.

ಹೀಗೆ ಪೌರನೀತಿ ಮತ್ತು ಇತಿಹಾಸದ ಬೋಧನೆಯಲ್ಲಿ ಈ ಎಲ್ಲಾ ಸಾಧನಗಳನ್ನು ಪರಿಣಾಮವಾಗಿ ಬಳಸಿ ಬೋಧನೆಯನ್ನು ಮಾಡಬಹುದಾಗಿದೆ. ಆದರೆ ಒಂದು ದುರಂತವೆಂದರೆ ಇವುಗಳನ್ನೆಲ್ಲ ಬಳಸಬೇಕಾದ ಶಿಕ್ಷಕ ಎಲ್ಲ ರೀತಿಯಿಂದಲೂ ಸಜ್ಜಾಗದಿರುವುದು ಆಸಕ್ತಿಯಿಂದ ಕಲಿಸಲು ಮುಂದೆ ಬರುತ್ತಿಲ್ಲ.

1986 ಹೊಸ ಶಿಕ್ಷಣ ನೀತಿಯಂತೆ ವಿಜ್ಞಾನ, ಭಾಷೆ, ಗಣಿತಗಳಲ್ಲಿ ಪ್ರಯೋಗಶಾಲೆಗಳಿರುವಂತೆ ಸಮಾಜ ವಿಜ್ಞಾನ ವಿಭಾಗದಲ್ಲಿ ಇತಿಹಾಸ ಮತ್ತು ಪೌರನೀತಿಯ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕೊಠಡಿಯನ್ನು ಸಜ್ಜುಗೊಳಿಸಬೇಕು. ಇಲ್ಲಿ ಐತಿಹಾಸಿಕ ಉಪಕರಣಗಳನ್ನು ಜೋಡಿಸಬೇಕು. ಇದರಿಂದ ಸಮಯದ ಉಳಿತಾಯ, ಪರಿಣಾಮಕಾರಿಯಾದ ಬೋಧನೆ, ವಾತಾವರಣದ ನಿರ್ಮಾಣ, ಕಲ್ಪನಾ ಶಕ್ತಿಗಳ ಬೆಳವಣಿಗೆ, ಪ್ರಾಯೋಗಿಕ ಕಾರ್ಯಗಳ ನಿರ್ವಹಣೆಗಳನ್ನು ಬೋಧನಾ ಅವಧಿಯಲ್ಲಿ ಮಾಡಲು ಅನುಕೂಲವಾಗುತ್ತದೆ.

**ಇತಿಹಾಸ ಮತ್ತು ಪೌರನೀತಿ ಬೋಧನೆಯ ಮೌಲ್ಯಮಾಪನ:** ಮೌಲ್ಯಮಾಪನವು ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯ ಮುಖ್ಯ ಘಟ್ಟ. ಇದು ನಿರಂತರ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಯನ್ನು ವಿವಿಧ ತಂತ್ರ ಮತ್ತು ಸಾಧನೆಗಳ ಮೂಲಕ ಮಾಪನ ಮಾಡುವುದಾಗಿದೆ. ಇತಿಹಾಸ ಮತ್ತು ಪೌರನೀತಿಯ ಉದ್ದೇಶಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ, ಕಲಿಕೆಯ ಅನುಭವ ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ ಎಂಬುದನ್ನು ಅಳೆಯುವ ವಿಧಾನವೇ ಇತಿಹಾಸ ಮತ್ತು ಪೌರನೀತಿಯ ಮೌಲ್ಯಮಾಪನ. ಆಧುನಿಕ ಪರಿಕಲ್ಪನೆಯಂತೆ

Digitised by Bharatavani, CIIL

ಶೈಕ್ಷಣಿಕ ಉದ್ದೇಶಗಳು, ಕಲಿಕೆಯ ಅನುಭವಗಳು ಮತ್ತು ಅವುಗಳನ್ನು ಅಳತೆ ಮಾಡಬಲ್ಲ ತಂತ್ರಗಳು ಮೌಲ್ಯಮಾಪನಕ್ಕೆ ಆಧಾರಗಳಾಗಿರುತ್ತವೆ.

ಮೌಲ್ಯಮಾಪನ ಮಾಡುವುದರಿಂದ ತರಗತಿಯ ಜ್ಞಾನದ ಪ್ರಗತಿ, ಕಲಿಕೆಯ ತೊಂದರೆ ಕಲಿಕೆಯ ನ್ಯೂನತೆಯ ವಿಮರ್ಶೆ ಮಾಡಲು, ವಿದ್ಯಾರ್ಥಿಗಳ ಭವಿಷ್ಯ ನುಡಿಯಲು, ಕೌಶಲಗಳ ಪ್ರಗತಿ ಪರೀಕ್ಷಿಸಲು, ಪೋಷಕರಿಗೆ ವರದಿ ಮಾಡಲು, ಬೋಧನಾ ಪರಿಣಾಮಕತೆಯನ್ನು ಶಿಕ್ಷಕ ತಿಳಿಯಲು, ಬೇರೆ ಬೇರೆ ಮಕ್ಕಳೊಂದಿಗೆ ಹೋಲಿಸಲು ಅತ್ಯಂತ ಅಗತ್ಯವಾಗಿರುತ್ತದೆ.

ಉತ್ತಮ ಮೌಲ್ಯಮಾಪನವು ಸಮಂಜಸತೆ, ವಿಶ್ವಾಸನೀಯತೆ, ವಸ್ತುನಿಷ್ಠತೆ, ವ್ಯಾಪಕತೆ, ಉಪಯೋಗಾರ್ಹತೆ, ಪ್ರಾಯೋಗಿಕತೆಯ ಲಕ್ಷಣವನ್ನು ಹೊಂದಿರಬೇಕು. ಈ ರೀತಿ ಇದ್ದರೆ ಇತಿಹಾಸ ಮತ್ತು ಪೌರನೀತಿಯ ಮೌಲ್ಯಮಾಪನವು ಫಲಪ್ರದವಾಗುತ್ತದೆ.

ಇತಿಹಾಸ ಮತ್ತು ಪೌರನೀತಿಯ ಮೌಲ್ಯಮಾಪನದಲ್ಲಿ ಹಲವಾರು ಸಾಧನ/ತಂತ್ರಗಳನ್ನು ಬಳಸಬಹುದು. ಅವುಗಳಲ್ಲಿ ಪ್ರಮುಖವಾದವುಗಳನ್ನು ಸದ್ಯದ ಪರೀಕ್ಷೆಗಳಲ್ಲಿ ಲಿಖಿತ ಮಾದರಿ ಪ್ರಶ್ನೆಗಳ ಪ್ರಕಾರಗಳನ್ನು ಕೊಡುವುದರ ಮೂಲಕ (ಪ್ರಬಂಧ ಮಾದರಿ, ಸಣ್ಣ ಉತ್ತರ ಮಾದರಿ ಮತ್ತು ವಸ್ತುನಿಷ್ಠ ಮಾದರಿ) ವಿದ್ಯಾರ್ಥಿಗಳ ಗಳಿಕೆಯ ಸಾಮರ್ಥ್ಯವನ್ನು ಮಾಪನ ಮಾಡಿ ಅವುಗಳಿಗೆ ಅಂಕ/ಗ್ರೇಡ್‌ಗಳನ್ನು ನೀಡಲಾಗುತ್ತದೆ. ಇದರ ಜೊತೆಗೆ ಮೌಖಿಕ ಪರೀಕ್ಷೆ, ವೀಕ್ಷಣ ತಃಖ್ತೆ, ಕೌಶಲಗಳ ಪರೀಕ್ಷೆಗಳನ್ನು ನೀಡುವುದರ ಮೂಲಕ ಮೌಲ್ಯಮಾಪನವನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡಬಹುದು.

### ಇತಿಹಾಸ ಮತ್ತು ಪೌರನೀತಿ ಶಿಕ್ಷಕ

ಪ್ರತಿಯೊಬ್ಬ ಇತಿಹಾಸ ಮತ್ತು ಪೌರನೀತಿ ಬೋಧನೆಯ ಶಿಕ್ಷಕನು ತನ್ನದೇ ಆದ ಗುಣ ವಿಶೇಷತೆಗಳನ್ನು ಹೊಂದಿರಬೇಕು. ಇತಿಹಾಸ ಬೋಧಿಸುವ ಶಿಕ್ಷಕನು ವಿಷಯದ ಮೇಲೆ ಸಾಕಷ್ಟು ಪ್ರಭುತ್ವ ಮತ್ತು ಪ್ರಾವೀಣ್ಯತೆಯನ್ನು ಹೊಂದಿರಬೇಕು. ಇತಿಹಾಸ ಬೋಧನೆಯ ವಿವಿಧ ವಿಧಾನಗಳಾದ ಮೂಲಾಧಾರ ವಿಧಾನ. ಜೀವನ ಚರಿತ್ರಾ ವಿಧಾನ ಚರ್ಚಾ ವಿಧಾನ ಸಮೀಕ್ಷಾ ವಿಧಾನ ನಾಟಕ ವಿಧಾನ. ಯೋಜನಾ ವಿಧಾನ ಮುಂತಾದ ವಿಧಾನಗಳ ಬಗ್ಗೆ ಸ್ಪಷ್ಟ ಅರಿವು ಶಿಕ್ಷಕನಿಗೆ ಇರಬೇಕು. ಇದಲ್ಲದೆ ವಿವಿಧ ಬೋಧನಾ ಮಾದರಿಗಳ ಅರಿವು ಇರಬೇಕು. ಇತಿಹಾಸದ ಘಟನೆಗಳಿಗೆ ಸಂಬಂಧಿಸಿದಂತೆ ಪ್ರಚಲಿತ ವಿಷಯಗಳ ಬಗ್ಗೆ ಜ್ಞಾನ ಹೊಂದಿರಬೇಕು. ಶಿಕ್ಷಕ ವೃತ್ತಿಗೆ ಸೇರಿದ ಮೇಲೆ ತನ್ನದೇ ಆದ ನೀತಿ ಸಂಹಿತೆಗಳಿರುತ್ತವೆ. ಅವುಗಳನ್ನು ಇತಿಹಾಸ ಶಿಕ್ಷಕನು ಅರಿತು ಪಾಲಿಸಬೇಕು. ಶಿಕ್ಷಕ ಸ್ವತಃ ಕಲಾಕಾರನಾಗಿರಬೇಕು. ಭೂಪಟಗಳನ್ನು ಬರೆಯುವ, ಕಾಲ ಸೂಚಿ ಪಟಗಳನ್ನು ಬರೆಯುವ ಕೌಶಲ ಹೊಂದಿರಬೇಕು. ಇತಿಹಾಸ ಶಿಕ್ಷಕ ಸದಾ ವಿರಾಮವೇಳೆಗಳಲ್ಲಿ ಪ್ರವಾಸದ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಇದರಿಂದ ನೈಜ ಅನುಭವ ಪಡೆದು ತರಗತಿಯ ಬೋಧನೆಯಲ್ಲಿ ಬಳಸಬಹುದು. ಮಕ್ಕಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಿ ಇತಿಹಾಸದ ವಿಷಯದಲ್ಲಿ ಆಸಕ್ತಿ ಪ್ರೇರೇಪಿಸಬಹುದು.

–ಪಿ.ಎಸ್.ಸು.

## ಇಸ್ಲಾಂ ಕಾಲದ ಶಿಕ್ಷಣ

ಇಸ್ಲಾಂ ಒಂದು ಏಕದೇವೋಪಾಸಕ ಮತಧರ್ಮ ಅಥವಾ ನಂಬಿಕೆ. ಕ್ರಿ.ಶ. 7ನೇ ಶತಮಾನದಲ್ಲಿ ತನ್ನ ಪ್ರಾರಂಭವನ್ನು ಅರೇಬಿಯಾದಲ್ಲಿ ಕಂಡುಕೊಂಡಿತು. ಈ ಧರ್ಮದ ಪ್ರಮುಖ ಕ್ರಿಯೆ ನಮಾಜ್ ಅಥವಾ ಪ್ರಾರ್ಥನೆ. ನಮಾಜ್ ಎಂದರೆ ಇಸ್ಲಾಂನ ಬೋಧನೆಗಳಲ್ಲಿ ಒಂದಾಗುವುದು ಅಥವಾ ಅಧೀನವಾಗುವುದು ಎನ್ನುವ ಅರ್ಥ. ಅಂದರೆ ಒಪ್ಪುವುದು ಅಥವಾ ನಂಬುವುದು. ತನಗೆ ತಾನೇ ಕಟ್ಟುಪಾಡು ಹೇರಿಕೊಂಡು ಆಂತರಿಕವಾಗಿ ಒಪ್ಪಿ ಬೌದ್ಧಿಕವಾಗಿ ತೊಡಗಿಸಿಕೊಂಡು ಬಾಹ್ಯ ಬದುಕಿನಲ್ಲಿ ವ್ಯಕ್ತಪಡಿಸುತ್ತಾ ಬದುಕುವುದು ಎನ್ನುವ ಅರ್ಥ.

ಇಸ್ಲಾಂ ಧರ್ಮ ಶಿಕ್ಷಣಕ್ಕೆ ಒತ್ತು ನೀಡುತ್ತಾ ಬಂದಿದೆ. ಸ್ತ್ರೀ ಪುರುಷರಿಬ್ಬರಿಗೂ ಜ್ಞಾನಾರ್ಜನೆ ಕಡ್ಡಾಯ ಎಂದು ಕುರಾನ್ ವಿವರಿಸುತ್ತದೆ. "ಜ್ಞಾನದ ಒಂದು ತುಣುಕು ನೂರು ಪ್ರಾರ್ಥನೆಗಿಂತ ಅಧಿಕ. ಜ್ಞಾನಿಯು ಬರೆಯುವ ಶಾಯಿಯು ಹುತಾತ್ಮನ ರಕ್ತದಷ್ಟೇ ಅಮೂಲ್ಯವಾದುದು" ಎಂದು ಪೈಗಂಬರರ ಸೂತ್ರಗಳು ವಿವರಿಸುತ್ತವೆ. ಶಿಕ್ಷಣಕ್ಕೆ ಮಹಮದ್ ಹೆಚ್ಚಿನ ಮಾನ್ಯತೆ ಕೊಟ್ಟು ಸೂಕ್ತವಾದ ಯಾವುದೇ ಮಾರ್ಗದಿಂದಲಾದರೂ ಜ್ಞಾನವನ್ನು ಸಂಪಾದಿಸಲು ತನ್ನ ಅನುಯಾಯಿಗಳಿಗೆ ಪ್ರೇರಣೆ ನೀಡಿದರು. ಬದುಕು ಮತ್ತು ಸಾವಿನ ನಂತರದ ಬದುಕಿಗಾಗಿ ಸದ್ಗತಿಯೇ ಅಲ್ಲದೆ ಆತ್ಮ ಶುದ್ಧಿಯೂ ಶಿಕ್ಷಣದ ಮೂಲ ಉದ್ದೇಶವಾಗಿತ್ತು. ಅಂದಿನ ಶಿಕ್ಷಣವು ಧರ್ಮದ ಒಂದು ಅವಿಭಾಜ್ಯ ಅಂಗವಾಗಿತ್ತು. ಧಾರ್ಮಿಕ ಮುಖಂಡರಾಗಿದ್ದ ಉಲೇಮಾಗಳ ಕೈಯಲ್ಲಿ ಶಿಕ್ಷಣ ಬಂದಿಯಾಗಿತ್ತು. ಪೈಗಂಬರ್ ಸೂತ್ರವು ಜ್ಞಾನವು–ಧಾರ್ಮಿಕ ಮತ್ತು ಭೌತಿಕ ಎನ್ನುವ ಎರಡು ವಿಧವೆಂದು ಹೇಳುತ್ತದೆ.

ಎಲ್ಲ ಮುಸ್ಲಿಂ ಸ್ತ್ರೀ–ಪುರುಷರಿಗೂ ಜ್ಞಾನಾರ್ಜನೆಯ ಕರ್ತವ್ಯ ಇದೆ. ತಮ್ಮ ಗಂಡು/ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ತರಬೇತಿಯನ್ನು ಕೊಡುವುದೇ ಒಬ್ಬ ತಂದೆಯು ಕೊಡಬಹುದಾದ ಉತ್ತಮ ಕೊಡುಗೆ. ದೂರದ ಚೀನಾಕ್ಕೆ ಹೋಗಿಯಾದರೂ ಸರಿ ಮುಸ್ಲಿಮರು ಶಿಕ್ಷಣವನ್ನು ಹೊಂದಲೇಬೇಕು. ಇಲ್ಲಿ ಶಿಕ್ಷಣ (ಇಲ್ಮ್) ಎಂದರೆ ಅಂದಿನ ಚೀನಾದಲ್ಲಿ ಬಹಳ ಪ್ರಗತಿಹೊಂದಿದ್ದ ವೈಜ್ಞಾನಿಕ ಅಧ್ಯಯನ. ಇಸ್ಲಾಂ ಧರ್ಮದ ಅಂದಿನ ದಿನಗಳಲ್ಲಿಯೂ ಮುಸ್ಲಿಮರು ಬೌದ್ಧಿಕ ಜ್ಞಾನದ ಅನುಸರಣೆಯನ್ನು ಕಡೆಗಣಿಸಿರಲಿಲ್ಲ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಯಾವುದೇ ಧರ್ಮದಲ್ಲಿ ಜನ ಸಾಂಪ್ರದಾಯಿಕ ಆಚರಣೆಯ ಅರ್ಥ ಪಡೆದು ಸಮಾಜ ಜ್ಞಾನಕ್ಕೆ / ಭೌತಿಕ ಜ್ಞಾನಕ್ಕೆ ಹಿನ್ನಡೆ ಉಂಟಾದಾಗ ಅಂತಹ ಧರ್ಮದಲ್ಲಿ ಮೂಲಭೂತವಾದ ತಲೆ ಎತ್ತಲು ಪ್ರಾರಂಭವಾಗುತ್ತದೆ.

ಶಿಕ್ಷಣದ ಮೂಲಕ ಐಹಿಕ ಜೀವನದಲ್ಲಿ ಉನ್ನತ ಸ್ಥಾನ ದೊರಕಿಸುವ ಜೀವನೋಪಾಯ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶವೂ ಇತ್ತು. ಆಡಳಿತವನ್ನು ಭದ್ರಗೊಳಿಸುವಲ್ಲಿ ನಿಹಿತ ಚತುರರನ್ನು, ಬೆಂಬಲಿಗರನ್ನು ರೂಪಿಸುವುದು ಅವರ ಉದ್ದೇಶವಾಗಿದ್ದಿತು. ಇಂತಹ ಶಿಕ್ಷಣವನ್ನು ಪಡೆದ ವ್ಯಕ್ತಿಗಳು ಉನ್ನತ ಹುದ್ದೆಗಳನ್ನು ಜಾಹಿರಾತುಗಳನ್ನು ಪಡೆದು ಮುಸಲ್ಮಾನರ ಸಮುದಾಯದಲ್ಲಿ ಗೌರವ ಆತಿಥ್ಯಗಳನ್ನು ಪಡೆಯುತ್ತಿದ್ದರು. ಇವುಗಳನ್ನು ಪಡೆಯುವ ಉದ್ದೇಶದಿಂದಲೇ ಅನೇಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು.

### ಶಿಕ್ಷಣದ ಗುರಿಗಳು

1. **ಜ್ಞಾನ ಪ್ರಸಾರ:** ಆ ಧರ್ಮ ಸಂಸ್ಥಾಪಕನಾದ ಮಹಮದ್ ಪೈಗಂಬರ್ ಉಪದೇಶದಂತೆ ಮೋಕ್ಷ ಸಾಧನೆಗೆ ಜ್ಞಾನವು ಅಗತ್ಯವೆನಿಸಿತು. ಅದರ ಸಹಾಯದಿಂದ ವ್ಯಕ್ತಿ ತನ್ನ ಮುಖ್ಯ ಕರ್ತವ್ಯಗಳನ್ನು ಅರಿತು ಒಳ್ಳೆಯದು ಕೆಟ್ಟದ್ದನ್ನು ಕಂಡುಕೊಂಡು ಧರ್ಮ ಆಚರಣೆಗಳನ್ನು ವಿವೇಚಿಸುತ್ತಾ ಜೀವನ ನಡೆಸಲು ನೆರವಾಗುವುದರಿಂದ ಪುರುಷರೆಲ್ಲ ಜ್ಞಾನಾರ್ಜನೆ ಮಾಡುವುದು ಅಗತ್ಯವೆನಿಸಿತು.

2. **ಇಸ್ಲಾಂ ಧರ್ಮದ ಪ್ರಸಾರ:** ಮಹಮ್ಮದೀಯ ವಚನವನ್ನು ಪ್ರಸಾರ ಮಾಡುವುದು ಮತ್ತು ಆ ಪಂಥದ ಕಾರ್ಯವನ್ನು ಪ್ರಸಾರ

Digitised by Bharatavani, CIIL

ಮಾಡುವುದು ಅದರ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿತ್ತು. ಆ ಕಾರ್ಯ ಮಹಮ್ಮದೀಯರ ಒಂದು ಕರ್ತವ್ಯವೆನಿಸಿತ್ತು. ಅದಕ್ಕೆ ಮತ ಪ್ರಚಾರಕರೊಡನೆ ಶಿಕ್ಷಣ ಪ್ರಸಾರ ಕಾರ್ಯವನ್ನು ಸೇರಿಸಿಕೊಳ್ಳಲಾಗಿತ್ತು. ಮಹಮ್ಮದೀಯರಿಗಾಗಿ ಮಸೀದಿಗಳನ್ನು, ಅದಕ್ಕೆ ಸೇರಿದಂತೆ ಮುಕ್ತಾಬ ಮತ್ತು ಮದರಸಾಗಳನ್ನು ಸ್ಥಾಪಿಸಿದರು.

3. **ಇಸ್ಲಾಂ ಸಮಾಜದ ನೀತಿ ನಿಯಮಗಳ ಬೆಳವಣಿಗೆ :** ಇಸ್ಲಾಂ ತತ್ವಗಳನ್ನು ಆಧರಿಸಿ ಮುಸ್ಲಿಂ ನೀತಿಪರ ಪದ್ಧತಿಯನ್ನು ಸಿದ್ಧಗೊಳಿಸುವುದು ಹಾಗೂ ಪ್ರಾಚೀನ ಮುಸ್ಲಿಂ ಕಾನೂನುಗಳನ್ನು ಸಾಮಾಜಿಕ ರೂಢಿಗಳನ್ನು ಹಾಗೂ ವಿಶೇಷವಾದ ರಾಜಕೀಯ ಸಿದ್ಧಾಂತಗಳನ್ನು ರೂಢಿಯಲ್ಲಿ ತರುವದು ಶಿಕ್ಷಣದ ಗುರಿಯಾಗಿತ್ತು.

4. **ಬೌದ್ಧಿಕ ಪ್ರಗತಿ:** ಅವರು ಶಿಕ್ಷಣದ ಮೂಲಕ ಐಹಿಕ ಜೀವನದಲ್ಲಿ ಉನ್ನತ ಸ್ಥಾನವನ್ನು ದೊರಕಿಸುವ ಉದ್ದೇಶವು ಸೇರಿತ್ತು. ಹಾಗೆಯೇ ಶಿಕ್ಷಣ ಪಡೆದವರಿಗೆ ರಾಜಕೀಯ ಗೌರವಗಳು, ಆಕರ್ಷಕ ಸ್ಥಾನಮಾನಗಳು ದೊರಕುತ್ತಿದ್ದುದರಿಂದ ಮುಸ್ಲಿಂರಂತೆ ಕೆಲವು ಹಿಂದೂಗಳು ಮುಕ್ತಾಬ ಮತ್ತು ಮದರಸಾಗಳಲ್ಲಿ ಶಿಕ್ಷಣ ಪಡೆದು ಅದರಲ್ಲಿ ಉನ್ನತ ಸ್ಥಾನ ಗಳಿಸಲು ಯತ್ನಿಸುತ್ತಿದ್ದರು.

5. **ರಾಜಕೀಯ ಸಹಕಾರ:** ಮಹಮದೀಯ ರಾಜರು ತಮ್ಮ ಮುಸ್ಲಿಂ ಧರ್ಮದ ಶಿಕ್ಷಣವನ್ನು ಎಲ್ಲ ರೀತಿಯಲ್ಲೂ ಪ್ರೋತ್ಸಾಹಿಸುವದು ಒಂದು ಧರ್ಮದ ಕರ್ತವ್ಯವೆಂದು ಭಾವಿಸಿ ನಡೆದುಕೊಳ್ಳುತ್ತಿದ್ದರು.

**ಶಿಕ್ಷಣಕ್ಕೆ ಪ್ರವೇಶ:** ಮಗುವಿಗೆ 4 ವರ್ಷ ನಾಲ್ಕು ತಿಂಗಳು, ನಾಲ್ಕು ದಿನಗಳ ನಂತರ ನಡೆಸುವ ಬಿಸ್ಮಿಲ್ಲಾ ಎಂಬ ಧಾರ್ಮಿಕ ಕಾರ್ಯದಿಂದ ಶಾಲಾ ಪ್ರವೇಶದಿಂದ ಶಿಕ್ಷಣದ ಆರಂಭವಾಗುತ್ತಿತ್ತು. ಅಂದು ಉತ್ತಮ ಉಡುಪು ತೊಡಿಸಿ, ಮೇಲ್ವಾಸನದ ಮೇಲೆ ಕೂಡಿಸಿ ಬಂಧುಮಿತ್ರರನ್ನು ಆಹ್ವಾನಿಸಿ, ಅಕ್ಷರಗಳನ್ನು ಖುರಾನ್ ಅನ್ನು ಮಗುವಿನ ಮುಂದಿಟ್ಟು ಖುರಾನಿನ ಭಾಗ ಪಠಿಸಿ ಬಿಸ್ಮಿಲ್ಲಾ ಪದ ಹೇಳಿಸಿ/ಹೇಳಿ ಅಕ್ಷರ ಅಭ್ಯಾಸ ಮಾಡಿಸುತ್ತಿದ್ದರು.

ಇಸ್ಲಾಂ ಶಿಕ್ಷಣ ಪದ್ಧತಿಯಲ್ಲಿ ಎರಡು ಬಗೆಯ ಶಾಲೆಗಳು ಕಂಡುಬರುತ್ತವೆ. ಅವುಗಳೆಂದರೆ ಮಸೀದಿಗಳಿಗೆ ಸೇರಿ ಪ್ರಾಥಮಿಕ ಶಿಕ್ಷಣ ನೀಡುವ ಮಕ್ತಾಬ್, ಉನ್ನತ ಶಿಕ್ಷಣ ನೀಡುವ ಮದ್ರಸಾಗಳು. ಈ ಶಾಲೆಗಳು ರಾಜಾಶ್ರಯದಿಂದಲೂ, ಧನಿಕರ ಸಹಾಯದಿಂದಲೂ ನಡೆಯುತ್ತಿದ್ದವು. ಇವುಗಳ ಜೊತೆ ಹಿಂದಿನಿಂದ ನಡೆದುಬಂದ ಪಾಠಶಾಲೆ ಟೋಲ್‌ಗಳು, ಮಕ್ತಾಬ ಮತ್ತು ಮದರಸಾಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು.

**ಮಕ್ತಾಬ್ :** ಮಕ್ತಾಬ್ ಎನ್ನುವುದು ಅರೇಬಿಕ್ ಪದವಾದ ಕುತುಬ್ ನಿಂದ ಬಂದಿದೆ. ಕುತುಬ್ ಎಂದರೆ ಬರೆಯುವುದನ್ನು ಹೇಳಿ ಕೊಡುವ ಸ್ಥಳವಾಗಿದೆ. ಸಾಮಾನ್ಯ ಜನರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಮಕ್ತಾಬ್‌ಗಳಲ್ಲಿ ಕೊಡುತ್ತಿದ್ದರು. ಅವರಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಓದುವುದು, ಬರೆಯುವುದು ಮತ್ತು ಅಂಕಗಣಿತಗಳನ್ನು ಬೋಧಿಸುವುದು. ಇವು ಸಾಮಾನ್ಯವಾಗಿ ಮಸೀದಿಗಳಿಗೆ, ದರಗಾಗಳಿಗೆ ಹತ್ತಿರ ಇರುತ್ತಿದ್ದವು. ಶ್ರೀಮಂತ ಜನರು ತಮ್ಮ ಮಕ್ಕಳಿಗೆ ತಮ್ಮ ಮನೆಗಳಲ್ಲಿಯೇ ಖಾಸಗಿ ವ್ಯವಸ್ಥೆಯ ಮುಖಾಂತರ ಶಿಕ್ಷಣವನ್ನು ನೀಡುತ್ತಿದ್ದರು.

**ಮಕ್ತಾಬ್‌ನ ಪಠ್ಯಕ್ರಮ:** ಅರಬ್ಬಿ ಮತ್ತು ಪಾರ್ಸಿ ಭಾಷೆಯನ್ನು ಓದುವುದನ್ನು ಬರೆಯುವುದನ್ನು ಕಲಿಸುತ್ತಿದ್ದರು. ಮಕ್ಕಳ ಮನಸ್ಸಿನಲ್ಲಿ ಸಮಾನತಾ ಭಾವನೆಯನ್ನು ಮೂಡಿಸುತ್ತಿದ್ದರು. ಇಸ್ಲಾಂ ತತ್ವಗಳನ್ನು ಬೋಧಿಸುತ್ತಿದ್ದರು. ಅಗತ್ಯವಿದ್ದಾಗ ದೇಶಸೇವೆಗೆ ಸಿದ್ಧರಾಗುವ ಮನೋಭಾವನೆಯನ್ನು ಮಕ್ಕಳಲ್ಲಿ ಉಂಟುಮಾಡುವುದು. ಮಕ್ತಬಾಗಳಲ್ಲಿ ಸಾಮಾನ್ಯರಿಗೂ ರಾಜಕುಮಾರರಿಗೂ ಶಿಕ್ಷಣ ನೀಡಲಾಗುತ್ತಿತ್ತು. ಹಿಂದೂ ಮಕ್ಕಳೂ ಸಹ ಅಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಅಕ್ಷರ ತೋರಿಸಿ ಉಚ್ಚರಿಸಿ ಮೊದಲು ಅಕ್ಷರಾಭ್ಯಾಸ ಮಾಡಿಸಿ ನಂತರ ಖುರಾನಿನ 30ನೆಯ ಅಧ್ಯಾಯವನ್ನು, ದಿನಚರಿ ಪ್ರಾರ್ಥನಾ ಪದ್ಯಗಳನ್ನು, ಅಂತ್ಯ ಕ್ರಿಯೆಯಲ್ಲಿ ಪಠಿಸಬೇಕಾದ ಫಾತಿಹಾ ಗೀತೆಗಳನ್ನು ಕಲಿಸುತ್ತಿದ್ದರು. ಅದರ ಅರ್ಥ ತಿಳಿಯಬೇಕಾಗಿರಲಿಲ್ಲ. ಉಚ್ಚಾರಣೆಗೆ ಸಾಕಷ್ಟು ಗಮನ ಕೊಡುತ್ತಿದ್ದರು. ಅನಂತರ ಬರವಣಿಗೆಯ ಕೆಲಸ ಸಾಗುತ್ತಿತ್ತು. ತದನಂತರ ಗುಲಿಸ್ತಾನ ಮತ್ತು ಬೇಸ್ತಾನ ಕಥೆಗಳ ಮೂಲಕ ನೀತಿಪಾಠಗಳು ನಡೆಯುತ್ತಿದ್ದವು. ಪರ್ಷಿಯನ್ ವ್ಯಾಕರಣ ಕಂಠಪಾಠ ಮಾಡಿಸುತ್ತಿದ್ದರು. ಒಳ್ಳೆಯ ಬರವಣಿಗೆಗಾಗಿ ಹೆಚ್ಚು ಕಾಲ ಬರವಣಿಗೆ ಕೆಲಸ ನಡೆಯುತ್ತಿತ್ತು. ಅದಾದ ಮೇಲೆ ಯೂಸೇಫ್ ಮತ್ತು ಜುಲೇಖ, ಲೈಲಾಮಜ್ನು, ಸಿಕಂದರ್ ಮುಂತಾದವುಗಳ ಪರಿಚಯ ಮಾಡಿಸುತ್ತಿದ್ದರು. ಸರಳ ಅಂಕಗಣಿತ, ಪರಿವರ್ತನ ವಿಧಾನ, ಪತ್ರವ್ಯವಹಾರ, ಅರ್ಜಿ ಬರೆಯುವುದು, ಪಠ್ಯಕ್ರಮದಲ್ಲಿ ಸೇರಿರುತ್ತಿತ್ತು. ವೈಯಕ್ತಿಕ ಗಮನವಿರುತ್ತಿತ್ತು. ಹೀಗೆ ಪ್ರಾಥಮಿಕ ಶಿಕ್ಷಣ ಮುಗಿಯುವುದರೊಳಗೆ ಜೀವನಕ್ಕೆ ಬೇಕಾದ ಅಗತ್ಯ ಅಂಶಗಳನ್ನು ಮಕ್ಕಳು ಕಲಿಯುತ್ತಿದ್ದರು.

**ಮದರಸಾಗಳು:** ಮಕ್ತಾಬ್‌ದಲ್ಲಿಯ ಶಿಕ್ಷಣ ಮುಗಿಸಿದ ನಂತರ ಮಗುವು ಉಚ್ಚ ಶಿಕ್ಷಣಕ್ಕಾಗಿ ಮದರಸಾಕ್ಕೆ ಬರಬೇಕಾಗುತ್ತಿತ್ತು. ಮದರಸಾಗಳನ್ನು ಪೋಷಿಸಿಕೊಂಡು ಬರಲು ರಾಜರು ಜಹಗೀರುಗಳನ್ನು (ಭೂಮಿ ಮತ್ತು ಹಳ್ಳಿಗಳನ್ನು) ಕೊಡುತ್ತಿದ್ದರು. ಮದರಸಾಗಳ ಆಡಳಿತವನ್ನು ನೋಡಿಕೊಳ್ಳಲಿಕ್ಕೆ ಒಬ್ಬ ಪಂಡಿತನನ್ನು ನೇಮಿಸುತ್ತಿದ್ದರು. ರಾಜನು ಮದರಸಾಗಳ ಆಡಳಿತದಲ್ಲಿ ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ವಿದ್ಯಾರ್ಥಿಗಳ ವಸತಿ ಗೃಹಗಳನ್ನು ಮದರಸಾಗಳ ಜೊತೆಗೆ ಕಟ್ಟಿಸುತ್ತಿದ್ದರು. ಅಕ್ಬರನು ಶಿಕ್ಷಣ ಪ್ರಸಾರವು ಉನ್ನತ ಜವಾಬ್ದಾರಿಯೆಂದು ತಿಳಿದಿದ್ದನು. ಉಳಿದ ಅರಸರು ತಮ್ಮ ವೈಯಕ್ತಿಕ ಗೌರವ/ಮುಸ್ಲಿಂ ಧರ್ಮ ಪ್ರಸಾರಕ್ಕಾಗಿ ಆಸಕ್ತಿಯನ್ನು ಹೊಂದಿದ್ದರು.

**ಪಠ್ಯಕ್ರಮ:** ಧಾರ್ಮಿಕ ಶಿಕ್ಷಣದಡಿಯಲ್ಲಿ ಖುರಾನ್ ಗ್ರಂಥವನ್ನೂ ಅದರ ವ್ಯಾಖ್ಯಾನವನ್ನೂ ಆಳವಾಗಿ ಅಧ್ಯಯನ ಮಾಡಲು, ಮಹಮದ್ ಪೈಗಂಬರ್ ಜೀವನಚರಿತ್ರೆ, ಸೂಫಿ ತತ್ವ ತಿಳಿಯಲು ಅವಕಾಶ ಕಲ್ಪಿಸಲಾಗುತ್ತಿತ್ತು. ಶಿಕ್ಷಣಕ್ಕೆ ಸಂಬಂಧಪಟ್ಟ ಅರೇಬಿಕ್ ವ್ಯಾಕರಣ–ಅರೇಬಿಕ್ ಮತ್ತು ಪರ್ಷಿಯನ್ ಸಾಹಿತ್ಯ, ತರ್ಕಶಾಸ್ತ್ರ, ತತ್ವಶಾಸ್ತ್ರ, ಕಾನೂನು, ಇತಿಹಾಸ, ಭೂಗೋಳ, ವ್ಯವಸಾಯ, ವಿಜ್ಞಾನ, ವೈದ್ಯಕೀಯ ಶಾಸ್ತ್ರ, ಯುನಾನಿ ವೈದ್ಯ ಶಿಕ್ಷಣ, ಜ್ಯೋತಿಷ್ಯ, ಗಣಿತ ಮುಂತಾದವುಗಳನ್ನು ಬೋಧಿಸುತ್ತಿದ್ದರು. ಶಿಕ್ಷಣದ ಅವಧಿ ಸಾಮಾನ್ಯವಾಗಿ 10 ರಿಂದ 12 ವರ್ಷಗಳಾಗುತ್ತಿತ್ತು. ಅರೇಬಿಕ್ ಮತ್ತು ಪರ್ಷಿಯನ್ ಭಾಷೆ ಶಿಕ್ಷಣ ಮಾಧ್ಯಮವಾಗಿದ್ದವು. ಇಂತಹ ಶಾಲೆಗಳಲ್ಲಿ ವೈಯಕ್ತಿಕ ಗಮನ ಕೊಡಲಾಗುತ್ತಿತ್ತು. ವಿದ್ಯಾರ್ಥಿಗಳು ತಪ್ಪು ಮಾಡಿದಾಗ ಕ್ರೂರವಾಗಿ ದಂಡಿಸಲಾಗುತ್ತಿತ್ತು.

ಬೋಧನಾ ವಿಧಾನಗಳಲ್ಲಿ ಪ್ರಶ್ನೋತ್ತರ ಮತ್ತು ಉಪನ್ಯಾಸ ಪದ್ಧತಿಗಳು ಇದ್ದವು. ಮದ್ರಸಾಗಳಲ್ಲಿ ವಿಶೇಷವಾಗಿ ಅನುಗಮನ ಪದ್ಧತಿ, ವಿಶ್ಲೇಷಣ ವಿಧಾನಗಳನ್ನು ಅಳವಡಿಸುತ್ತಿದ್ದರು. ದೈಹಿಕ ಶಿಕ್ಷಣದ ಮೂಲಕ ವಿದ್ಯಾರ್ಥಿಗಳ ಅಶಿಸ್ತನ್ನು ನಿಯಂತ್ರಿಸುತ್ತಿದ್ದರು. ಉತ್ತಮ ವಿದ್ಯಾರ್ಥಿಗಳಿಗೆ ಸನ್ನದುಗಳನ್ನು, ಚಿನ್ನದ ಪದಕಗಳನ್ನು ಮೆಚ್ಚುಗೆ ವ್ಯಕ್ತಪಡಿಸಲು ಕೊಡಲಾಗುತ್ತಿತ್ತು. ಖಾಸಗಿ ವ್ಯಾಸಂಗ ಮಾಡಿಕೊಂಡು ಕೆಲವು ಸಂದರ್ಭಗಳಲ್ಲಿ ಮಾತ್ರ ಶಿಕ್ಷಕನ ಸಹಾಯ ಪಡೆಯುವುದು ರೂಢಿಯಲ್ಲಿತ್ತು.

**ಸ್ತ್ರೀ ಶಿಕ್ಷಣ:** ಮುಸಲ್ಮಾನರಲ್ಲಿ ಜಾರಿಯಲ್ಲಿದ್ದ ಘೋಷ ಅಥವಾ ಪರದಾ ಪದ್ಧತಿಯಿಂದಾಗಿ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದರು.

Digitised by Bharatavani, CIIL

ಮಸೀದಿಗಳಿಗೆ ಸೇರಿದ ಮಕ್ತಾಬ್‌ಗಳಲ್ಲಿ ಮಾತ್ರ ಒಟ್ಟಾರೆ ಸೇರಿ ಕೆಲವರು ಓದು, ಬರಹ, ಲೆಕ್ಕಗಳನ್ನು ಕಲಿಯುತ್ತಿದ್ದರೂ ಶ್ರೀಮಂತ ವರ್ಗದವರು, ರಾಜವಂಶದವರು ಓದು, ಬರಹ, ಲೆಕ್ಕಗಳನ್ನು, ಧಾರ್ಮಿಕ ಗ್ರಂಥವನ್ನು, ಗೃಹ ವಿಜ್ಞಾನವನ್ನು, ಸಾಹಿತ್ಯ ಅಧ್ಯಯನವನ್ನು ಖಾಸಗಿಯಾಗಿ ತಮ್ಮ ಮನೆಯಲ್ಲಿಯೇ ಪಡೆಯುತ್ತಿದ್ದರು. ಆದರೆ ಇಂಥವರ ಸಂಖ್ಯೆ ಕಡಿಮೆಯಿರುತ್ತಿತ್ತು. ಮಹಿಳೆಯರ ಸ್ಥಾನಮಾನ ಮನೆಗೆ ಮಾತ್ರ ಸೀಮಿತವೆಂಬ ನಂಬಿಕೆ, ಸ್ತ್ರೀಯರು ಪುರುಷರಿಗಿಂತ ಕಡಿಮೆಯೆಂಬ ತಪ್ಪು ಕಲ್ಪನೆಗಳು, ಮಹಿಳೆಯರಿಗೆ ಶಿಕ್ಷಣವನ್ನು ಕಡೆಗಾಣಿಸಲು ಕಾರಣವಾಗಿದ್ದವು. ಆದರೂ ಆಗಿನ ಕಾಲದ ಕೆಲವು ಸುಶಿಕ್ಷಿತ ಸ್ತ್ರೀಯರ ಹೆಸರನ್ನು ನಮೂದಿಸಬಹುದು. ಅವರಲ್ಲಿ ಬಾಬರ್‌ನ ಮಗಳು ಗುಲ್ಬದನ್ ಬೇಗಂ, ಸುಲ್ತಾನ್ ರಜಿಯಾ, ನೂರ್ ಜಹಾನ್, ಮಮ್ತಾಜ್ ಮತ್ತು ಷಹಜಾನ್ ಮಗಳು ಜಹಾನರ ಮತ್ತು ಔರಂಗಜೇಬನ ಮಗಳು ಜೇಬುನ್ನೀಸಾ ಮುಖ್ಯರು.

**ಲಲಿತ ಕಲೆ:** ಮಹಮದೀಯ ಚಕ್ರವರ್ತಿಗಳು ಕಲಾಪ್ರಿಯರೂ, ರಸಿಕರೂ, ವಿಲಾಸಿಗಳೂ ಆಗಿದ್ದರು. ಆದುದರಿಂದ ಯುದ್ಧ, ಗಲಭೆಗಳು ನಡೆಯುತ್ತಿದ್ದರೂ ಲಲಿತಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟರು. ಸೂಕ್ತ ಶಿಕ್ಷಣದಿಂದಾಗಿ ಅವರ ಸಂಗೀತ, ನೃತ್ಯ, ಚಿತ್ರ ಕಲೆ, ನೆಯ್ಗೆಯ ಕೆಲಸ, ಲೋಹದ ಕೆಲಸ, ಕಟ್ಟಡ ಕೆಲಸಗಳು ಜನರ ಮೆಚ್ಚುಗೆಗೆ ಪಾತ್ರವಾಯಿತು.

**ಸಾಹಿತ್ಯ ರಚನೆ:** ದೆಹಲಿಯ ಅರಸರು ಕಲಾಪ್ರೇಮಿಗಳಾದಂತೆ ಸಾಹಿತ್ಯಾರಾಧಕರೂ ಆಗಿದ್ದರು. ಅಮೀರ್ ಖುಸ್ರು, ಅಲ್ಬರೋನಿ, ಫಿರೋಜ್, ಬಾಬರ್, ಅಬ್ದುಲ್ ಫಜಲ್ ಉದ್ದಾಮ ಪಂಡಿತರು. ಬಾಬರ್ ಸ್ವತಃ ಪಂಡಿತ. ಅಕ್ಬರನ ಕಾಲದಲ್ಲಿ ಅನೇಕ ಸಂಸ್ಕೃತ ಗ್ರಂಥಗಳು ಪಾರ್ಸಿ ಭಾಷೆಗೆ ಭಾಷಾಂತರವಾಗಿವೆ. ಮೊಗಲರ ಕಾಲವನ್ನು ಮಹಮದೀಯ ಸಾಹಿತ್ಯದ ಸುವರ್ಣಯುಗ ಎನ್ನಬಹುದು.

ಆಗ್ರ, ಡೆಲ್ಲಿ, ಜೋದ್‌ಪುರ್, ಬೀದರ್, ಬಿಜಾಪುರ, ಸಯಾಲ್‌ಕೋಟ್, ಬಂಗಾಳ ಮುಂತಾದವು ಮುಸ್ಲಿಮರ ಶಿಕ್ಷಣ ಕೇಂದ್ರಗಳಾಗಿದ್ದವು.

ಮುಸ್ಲಿಂ ಆಡಳಿತದ ಅವಧಿಯಲ್ಲಿ ಭಾರತದಲ್ಲಿ ಶಿಕ್ಷಣ ಪ್ರಸಾರವಾಯಿತು. ಮುಸ್ಲಿಂ ಶಿಕ್ಷಣವು ಕೇವಲ ಜನರ ಬೌದ್ಧಿಕ ಹಸಿವನ್ನು ಹಿಂಗಿಸದೇ ಅವರ ಆರ್ಥಿಕ ಸಮಸ್ಯೆಗಳನ್ನು ಸಹ ಪರಿಹರಿಸಿತು. ಮುಸ್ಲಿಂ ಶಿಕ್ಷಣದ ಪ್ರಮುಖ ಗುರಿಯು ಮುಸ್ಲಿಂ ಧರ್ಮದ ತತ್ವ ಮತ್ತು ಸಿದ್ಧಾಂತಗಳನ್ನು ಪ್ರಸಾರ ಮಾಡುವುದಾಗಿತ್ತು. ಆಡಳಿತ ದೃಷ್ಟಿಯಿಂದ ಅರಸರು ತಮ್ಮ ಧರ್ಮ, ನಾಗರೀಕತೆ ಮತ್ತು ಭಾಷೆಯೊಂದಿಗೆ ಅತಿಯಾದ ಸಂಬಂಧ ಹೊಂದಿದ್ದರು.

–ಮ.ದ

# ಈ

## ಈಶ್ವರ ಚಂದ್ರ ವಿದ್ಯಾಸಾಗರ

'ಈಶ್ವರ ಚಂದ್ರ ವಿದ್ಯಾಸಾಗರ' ಈ ನಾಡಿನ ಪ್ರತಿಯೊರ್ವ ಅಕ್ಷರಸ್ಥ ಮಹಿಳೆಯು ಅತ್ಯಂತ ಕೃತಜ್ಞತೆಯಿಂದ ನೆನೆಯಲೇಬೇಕಾದ ವ್ಯಕ್ತಿ. ಈಶ್ವರ ಚಂದ್ರ ಬಂದೋಪಾಧ್ಯಾಯ ಎಂಬ ನಾಮಧೇಯ ಹೊಂದಿದ್ದ ಈ ಮಹನೀಯರು ತಾವು ಗಳಿಸಿದ ಅಪಾರ ಪಾಂಡಿತ್ಯದಿಂದ 'ವಿದ್ಯಾಸಾಗರ' ಎಂಬ ಬಿರುದನ್ನು ಪಡೆದರು. ಜನತೆ ಇವರನ್ನು ಅಭಿಮಾನದಿಂದ 'ದಯಾಸಾಗರ' 'ಕರುಣಾಸಾಗರ' ಎಂದೂ ಕರೆಯುತ್ತಿದ್ದರು.

ಈಶ್ವರಚಂದ್ರ ವಿದ್ಯಾಸಾಗರ

ತಮ್ಮ ಸಮಕಾಲೀನರಾದ ಎಲ್ಲ ವ್ಯಕ್ತಿಗಳಿಗಿಂತಲೂ ಅತ್ಯಂತ ಎತ್ತರದಲ್ಲಿ ಇದ್ದ ವ್ಯಕ್ತಿ ವಿದ್ಯಾಸಾಗರರು. ತಮ್ಮ ಜೀವಿತಾವಧಿಯಲ್ಲಿ ನಡೆಸಿದ ಅವಿರತ ಹೋರಾಟದಿಂದ ಎಲ್ಲರ ಗೌರವಕ್ಕೆ, ಮೆಚ್ಚುಗೆಗೆ ಪಾತ್ರರಾದರು. ಇಂತಹ ಹೋರಾಟಗಳಲ್ಲಿ ಅವಿಸ್ಮರಣೀಯವಾದುದೆಂದರೆ ಅವರು ಹೆಣ್ಣು ಮಕ್ಕಳ ಹಕ್ಕುಗಳಿಗಾಗಿ ನಡೆಸಿದ ಸಮರ. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಮತ್ತು ವಿಧವಾ ವಿವಾಹಕ್ಕಾಗಿ ಸತತ ಚಳುವಳಿ ನಡೆಸಿದರು. ಬಾಲ್ಯ ವಿವಾಹ ಹಾಗೂ ಬಹುಪತ್ನಿತ್ವದ ವಿರುದ್ಧದ ಹೋರಾಟಗಳ ಜೊತೆಗೆ ಶಿಕ್ಷಣವು ಧರ್ಮ ನಿರಪೇಕ್ಷವಾಗಿ, ವೈಜ್ಞಾನಿಕವಾಗಿ ಲಭಿಸಬೇಕೆಂದು ಬಯಸಿದರು. ಈ ಎಲ್ಲ ಸಾಮಾಜಿಕ ಸಮಸ್ಯೆಗಳ ವಿರುದ್ಧ ಒಂದು ಸಮರವನ್ನೇ ಸಾರಿ ಜನರನ್ನು ಮೌಢ್ಯದಿಂದ, ಅಜ್ಞಾನದಿಂದ, ಧರ್ಮದ ಸಂಕೋಲೆಗಳಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದರು.

ಹತ್ತೊಂಬತ್ತನೇ ಶತಮಾನದಲ್ಲಿ ಭಾರತದಲ್ಲಿ ನವೋದಯದ ಚಿಂತನೆಗಳು ಹರಡಲು ರಾಜಾರಾಮ್ ಮೋಹನ್‌ರಾಯ್ ಕಾರಣರಾದರೂ ಅದರ ಅತ್ಯುತ್ತಮ ಅಭಿವ್ಯಕ್ತಿ ಕಂಡಿದ್ದು ಈಶ್ವರ ಚಂದ್ರ ವಿದ್ಯಾಸಾಗರರಲ್ಲಿ.

ಧರ್ಮದ ಹೆಸರಿನಲ್ಲಿ ಮೌಢ್ಯ ಕಂದಾಚಾರಗಳ ಹೆಸರಿನಲ್ಲಿ ನಡೆಯುತ್ತಿದ್ದ ದೌರ್ಜನ್ಯಗಳು ಮಾನವೀಯತೆಯ ಬೆಳವಣಿಗೆಗೆ ಅಡ್ಡಿಯಾಗಿದ್ದುದರಿಂದ ಈ ಕಂದಾಚಾರಗಳ ವಿರುದ್ಧ ಹಿಂದೂ ಸಮಾಜದ ಒಳಗೆ ಇದ್ದುಕೊಂಡೇ ವಿದ್ಯಾಸಾಗರರು ಹೋರಾಡಿದರು. ಮೇಲುನೋಟಕ್ಕೆ ಒಬ್ಬ ಬ್ರಾಹ್ಮಣ ವಿದ್ವಾಂಸನಂತೆ ಕಂಡರೂ ಅವರು ಹೊಂದಿದ್ದ ಅಪಾರ ಜ್ಞಾನ, ಪಾಂಡಿತ್ಯ, ದೃಢ ಸಂಕಲ್ಪ ಅವರನ್ನು ಒಬ್ಬ ಮಹಾನ್ ಮಾನವತಾವಾದಿಯನ್ನಾಗಿ ರೂಪಿಸಿತು.

ಬಂಗಾಲದ ಮಿಡ್ನಾಪುರ ಜಿಲ್ಲೆಯ ಕುಗ್ರಾಮವಾದ ಬರ್ಸಿಂಘಾದಲ್ಲಿ ಸೆಪ್ಟೆಂಬರ್ 26, 1820ರಂದು ಸನಾತನ ಬ್ರಾಹ್ಮಣ ಕುಟುಂಬದಲ್ಲಿ ಈಶ್ವರಚಂದ್ರರು ಜನಿಸಿದರು. ಬಡ ಕುಟುಂಬದಲ್ಲಿ ಹುಟ್ಟಿದರೂ ತಮ್ಮ ತಾತ–ಮುತ್ತಾತರಿಂದ ಉನ್ನತ ಚಾರಿತ್ರ್ಯ ಹಾಗೂ ದೃಢಸಂಕಲ್ಪವನ್ನು ಪಡೆದುಕೊಂಡಿದ್ದರಿಂದ ಇವರು ನಿರ್ಭಯ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯವಾಯಿತು.

ಬಾಲ್ಯದಿಂದಲೇ ಓದಿನಲ್ಲಿ ಮುಂದಿದ್ದ ಇವರು ಸಂಸ್ಕೃತ ಶಾಲೆಯನ್ನು ಸೇರಿದರು. 12 ವರ್ಷಗಳ ಈ ಅವಧಿಯಲ್ಲಿ ಉತ್ತಮ ಅಂಕಗಳನ್ನು ಪಡೆದುಕೊಂಡರು. ಆಂಗ್ಲ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಪಡೆಯುತ್ತಿದ್ದ

Digitised by Bharatavani, CIIL

ಸಂದರ್ಭದಲ್ಲಿ ಕಾಲೇಜಿನ ಆಡಳಿತ ವರ್ಗವು ಆಂಗ್ಲಭಾಷಾ ಶಿಕ್ಷಣವನ್ನು ರದ್ದುಗೊಳಿಸಬೇಕೆಂದು ತೀರ್ಮಾನ ಕೈಗೊಂಡಿತು. ಇತರ ವಿದ್ಯಾರ್ಥಿಗಳಂತೆ ಇವರೂ ಸಹ ಆಂಗ್ಲ ಭಾಷೆ ಕಲಿಯುವ ಅವಕಾಶದಿಂದ ವಂಚಿತರಾಗುತ್ತಿದ್ದುದರಿಂದ ತಮ್ಮ ಸಹಪಾಠಿಗಳೆಲ್ಲರನ್ನೂ ಸೇರಿಸಿ ಆಡಳಿತ ಮಂಡಳಿಗೆ ಒಂದು ಮನವಿಯನ್ನು ಸಲ್ಲಿಸಿದರು. ಇದರಿಂದ ಕಾಲೇಜಿನಲ್ಲಿ ಆಂಗ್ಲ ಶಿಕ್ಷಣ ಮತ್ತೆ ಜಾರಿಯಾಯಿತು. ಈ ಘಟನೆ ಅವರು ಹುಟ್ಟು ಹೋರಾಟಗಾರರು ಎಂಬುದಕ್ಕೆ ನಿದರ್ಶನವಾಗಿದೆ.

ಇದೇ ಸಂದರ್ಭದಲ್ಲಿ ಮನೆಯಲ್ಲಿ ಬಡತನವಿದ್ದುದರಿಂದ ಅವರು ಉದ್ಯೋಗವನ್ನು ಕೈಗೊಳ್ಳಬೇಕಾಯಿತು. ಅವಿರತ ದುಡಿಮೆಯ ಜೊತೆಗೆ ಓದನ್ನು ಮುಂದುವರೆಸಿದರು. ದೇಹಕ್ಕೆ ಆಯಾಸವಾಗಿದ್ದರೂ ಅವರ ಜ್ಞಾನದ ಹಸಿವು ಬತ್ತಿರಲಿಲ್ಲ. ನಡುರಾತ್ರಿಯವರೆಗೂ ಬೀದಿ ದೀಪದಡಿಯಲ್ಲಿ ಕುಳಿತು ಓದುತ್ತಿದ್ದರು. ಈ ದುಡಿಮೆಯ ಫಲದಿಂದಾಗಿ 1841ರಲ್ಲಿ ಅವರು ಸಂಸ್ಕೃತದ ವಿವಿಧ ವಿಭಾಗಗಳಲ್ಲಿ ಅಧ್ಯಯನ ನಡೆಸಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿ ವಿದ್ವಾಂಸರೆಂಬ ಕೀರ್ತಿಗೂ ಪಾತ್ರರಾದರು.

ಮನುಷ್ಯನು ನೈಜ ಮಾನವನಾಗಬೇಕಾದರೆ ಆತನಿಗೆ ಶಿಕ್ಷಣವು ಅಗತ್ಯವೆಂಬುದನ್ನು ಈಶ್ವರಚಂದ್ರರು ಅರಿತಿದ್ದರು. ಶಿಕ್ಷಣವೆಂಬುದು ಜ್ಞಾನವನ್ನು ನೀಡುವುದರ ಜೊತೆಗೆ, ವಿವೇಚನಾ ಶಕ್ತಿಯನ್ನೂ ಯೋಚನಾ ಲಹರಿಯನ್ನೂ ಪ್ರಚೋದಿಸುತ್ತದೆ ಎಂದು ಬಲವಾಗಿ ನಂಬಿದ್ದರು. ಇಂತಹ ಜ್ಞಾನದಿಂದ ವಂಚಿತರಾದವರಲ್ಲಿ ಮಹಿಳೆಯರು ಮೊದಲಿಗರಾಗಿದ್ದರು. ಶಿಕ್ಷಣದ ಅವಕಾಶಗಳಿಲ್ಲದೆ, ಧಾರ್ಮಿಕ ಅಂಧಶ್ರದ್ಧೆಗಳಿಗೆ ಬಲಿಯಾಗಿದ್ದುದರ ಜೊತೆಗೆ, ಬಾಲ್ಯದಲ್ಲಿ ತಂದೆಯ ರಕ್ಷಣೆ, ಯೌವನದಲ್ಲಿ ಪತಿಯ, ವೃದ್ಧಾಪ್ಯದಲ್ಲಿ ಮಗನ ಆಶ್ರಯದಲ್ಲಿದ್ದರೇನೇ ಮೋಕ್ಷ ಎಂಬ ನಂಬಿಕೆಯಿಂದ ಬಂಧಿತರಾಗಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದರು.

"ಹೆಣ್ಣು ಮಕ್ಕಳು, ಶೂದ್ರರು, ಪಶು ಸಮಾನರಾಗಿದ್ದು, ಅವರನ್ನು ಚಾವಟಿಯ ಮೂಲಕ ಆಳಬೇಕು" ಎಂಬ ನಂಬಿಕೆ ಪ್ರಚಲಿತವಾಗಿದ್ದ ಅಂದಿನ ಕಾಲದಲ್ಲಿ ವಿದ್ಯಾಸಾಗರರು ಮಹಿಳೆಯರು ಅನುಭವಿಸುತ್ತಿದ್ದ ನೋವು ಅಸಹಾಯಕತೆಗಳನ್ನು ಕಂಡು ಮರುಗಿದರು ಹಾಗೂ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಈ ಎಲ್ಲ ಸಮಸ್ಯೆಗಳನ್ನು ಎದುರಿಸುವ ಧೈರ್ಯವನ್ನು ಆಕೆ ಬೆಳೆಸಿಕೊಳ್ಳುತ್ತಾಳೆ ಎಂದು ಮನಗಂಡರು. ಅನೇಕ ಸನಾತನ ಪಂಡಿತರು ಸ್ತ್ರೀ ಶಿಕ್ಷಣಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಿದ್ದ ಸಂದರ್ಭದಲ್ಲಿ ಇವರು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೋರಾಡಿದರು. ಮಹಿಳೆಗೆ ಪುರುಷನಷ್ಟೇ ಶಿಕ್ಷಣ ಪಡೆಯುವ ಹಕ್ಕಿದೆ ಎಂದು ಇವರು ನಡೆಸಿದ ಹೋರಾಟ ಇತಿಹಾಸದ ಪುಟಗಳಲ್ಲಿ ಅವಿಸ್ಮರಣೀಯವಾಗಿದೆ. ಆದ್ದರಿಂದಲೇ ಇವರನ್ನು ಮಹಿಳಾ ಶಿಕ್ಷಣದ ಹರಿಕಾರ ಎನ್ನುತ್ತಾರೆ.

ರಾಜಾ ರಾಧಾಕಾಂತದೇವ 19ನೇ ಶತಮಾನದಲ್ಲಿ ಸ್ಥಾಪಿಸಿದ 'ಮಹಿಳಾ ಸಮಾಜ' ಕಲ್ಕತ್ತಾ ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ದೇಶೀಯರಿಗಾಗಿ ಸ್ತ್ರೀ ಶಿಕ್ಷಣ ಒದಗಿಸಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿತ್ತಾದರೂ ಈ ಚಳುವಳಿಯು ಜನರ ಪ್ರೋತ್ಸಾಹದ ಕೊರತೆಯಿಂದ ಮುಂದುವರೆಯಲು ಸಾಧ್ಯವಾಗಿರಲಿಲ್ಲ. ಇದಾದ 20 ವರ್ಷಗಳ ಬಳಿಕ ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸಿದ್ದು ಮತ್ತೊಬ್ಬ ಆಂಗ್ಲ ಮಹನೀಯ ಡಬ್ಲ್ಯೂ. ಬೆಥ್ಯೂನ್ ಬಾಲಕಿಯರಿಗಾಗಿ ಕಲ್ಕತ್ತಾ ಮಹಿಳಾಶಾಲೆ ಎಂಬ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ಅದರ ಉಸ್ತುವಾರಿ ನೋಡಿಕೊಳ್ಳಲು ವಿದ್ಯಾಸಾಗರರಲ್ಲದೆ ಮತ್ತಿನ್ನಾರೂ ಆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲಾರರು ಎಂದು ಅರಿತು ವಿದ್ಯಾಸಾಗರರಿಗೆ ಈ ಹೊಣೆಗಾರಿಕೆಯನ್ನು ವಹಿಸಿದರು. ತಮಗೂ ಈ ಕಾರ್ಯ ಪ್ರಿಯವಾದುದರಿಂದ ಸಂತೋಷದಿಂದಲೇ ವಿದ್ಯಾಸಾಗರರು ಅದನ್ನು ಒಪ್ಪಿದರು.

ಬೆಥ್ಯೂನ್‌ರ ಮಹಿಳಾ ಶಾಲೆಗೆ ತಮ್ಮ ಹೆಣ್ಣು ಮಕ್ಕಳನ್ನು ಕಳುಹಿಸಲು ಯಾರೂ ಮುಂದೆ ಬರದಿದ್ದಾಗ, ತಮ್ಮ ಸ್ನೇಹಿತರಾದ ಮೋಹನ ತರ್ಕಾಲಂಕಾರರ ಮೂವರು ಹೆಣ್ಣು ಮಕ್ಕಳನ್ನು ಅವರ ಶಾಲೆಗೆ ಕಳುಹಿಸಲು ವಿದ್ಯಾಸಾಗರರು ಪ್ರೇರೇಪಿಸಿದರು. ಈ ಶಾಲೆಗೆ ಪ್ರವೇಶವನ್ನು ಪಡೆದ ಮೊದಲ ಹೆಣ್ಣು ಮಕ್ಕಳು ಇವರಾಗಿದ್ದರು.

ಈ ಸಂಸ್ಥೆಯನ್ನು ಅತ್ಯಂತ ಜಾಗರೂಕತೆಯಿಂದ ನಡೆಸಿಕೊಂಡು ಹೋಗುವುದರ ಜೊತೆಗೆ ಭಾರತೀಯರು ಪುತ್ರರಿಗೆ ಒದಗಿಸುವ ಸಕಲ ಸೌಕರ್ಯಗಳನ್ನು ತಮ್ಮ ಹೆಣ್ಣು ಮಕ್ಕಳಿಗೂ ನೀಡುವುದು ತಂದೆ ತಾಯಿಯರ ಕರ್ತವ್ಯವೆಂದು ಮನದಟ್ಟು ಮಾಡುತ್ತಲಿದ್ದರು. ಜೊತೆಗೆ ಹೆಣ್ಣು ಮಕ್ಕಳು ಮನೆಗಳಿಂದ ಶಾಲೆಗೆ ಹೋಗಿ ಬರಲು ಒಂದು ಕುದುರೆಗಾಡಿಯನ್ನು ಗೊತ್ತು ಮಾಡಿ ಅದರ ಮೇಲೆ "ಪುತ್ರರನ್ನು ಪಾಲಿಸುವಂತೆ ಪುತ್ರಿಯರನ್ನು ಪಾಲಿಸಬೇಕು ಹಾಗೂ ಗಂಡು ಮಕ್ಕಳಿಗೆ ಶಿಕ್ಷಣವನ್ನು ನೀಡುವಂತೆ ಹೆಣ್ಣು ಮಕ್ಕಳಿಗೂ ಒದಗಿಸಿಕೊಡಬೇಕು" ಎಂಬ ನುಡಿಮುತ್ತುಗಳನ್ನು ಬರೆಸಿ ಜನರಲ್ಲಿ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದರು.

ಆದರೆ ಅಂದಿನ ಸಮಾಜದ ಸಂಪ್ರದಾಯವಾದಿಗಳು ಅವರ ಪ್ರಯತ್ನಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಾ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ನಾರೀತ್ವದ ಅಧಃಪತನವಾಗುತ್ತದೆ ಎಂದು ಅಪಪ್ರಚಾರಗೈಯುತ್ತಾ ವಿದ್ಯಾ ಸಾಗರರ ಮೇಲೆ ಇಲ್ಲ ಸಲ್ಲದ ಆಪಾದನೆಗಳನ್ನು ಹೊರಿಸಿ ನಿಂದನೆಗೆ ಗುರಿಪಡಿಸಿ ಅವರ ವ್ಯಕ್ತಿತ್ವಕ್ಕೆ ಕಳಂಕ ತರುವ ಕಾರ್ಯದಲ್ಲಿ ಮಗ್ನರಾಗುವುದರ ಜೊತೆಗೆ ಸಮಾಜದಿಂದ ಬಹಿಷ್ಕಾರಕ್ಕೂ ಒಳಪಡಿಸಿದರು. ಈ ಉಕ್ಕಿನ ಮನುಷ್ಯ ಇದ್ಯಾವುದಕ್ಕೂ ಜಗ್ಗದೆ, ತಮ್ಮ ಪ್ರಯತ್ನವನ್ನು ಮುಂದುವರಿಸುತ್ತಾ ಹೋದರು. ಅವರ ಈ ಸತತ ಪ್ರಯತ್ನದ ಫಲವಾಗಿ ಕಾಲಾಂತರದಲ್ಲಿ ಬೆಥ್ಯೂನ್‌ರ ಈ ಸಂಸ್ಥೆಯು "Government College for Girls" ಎಂಬ ಹೆಗ್ಗಳಿಕೆಗೂ ಪಾತ್ರವಾಯಿತು.

ವಿದ್ಯಾಸಾಗರರು ದಕ್ಷಿಣ ಬಂಗಾಳದ ಶಾಲೆಗಳ ಇನ್‌ಸ್ಪೆಕ್ಟರ್ ಹುದ್ದೆಯನ್ನು ವಹಿಸಿಕೊಂಡಾಗ ಅವರು ಸಾಕಷ್ಟು ಶ್ರಮವಹಿಸಿ ಸ್ತ್ರೀ ಶಿಕ್ಷಣವನ್ನು ಮತ್ತಷ್ಟು ಪ್ರೋತ್ಸಾಹಿಸಿದರು. ತಾವಾಗಿ ಮುತುವರ್ಜಿ ವಹಿಸಿ ನದಿಯಾ, ಮಿಡ್ನಾಪುರ, ಹೂಗ್ಲಿ ಮತ್ತು ಬರದ್ವಾನ ಜಿಲ್ಲೆಗಳಲ್ಲಿ ಅನೇಕ ಶಾಲೆಗಳನ್ನು ಸರ್ಕಾರದ ಧನಸಹಾಯಕ್ಕಾಗಿ ಕಾಯದೆ ತಮ್ಮ ಸ್ವಂತ ಆದಾಯದ ಹಣದಿಂದಲೇ ಆರಂಭಿಸಿದರು.

ಮಹಿಳೆಯರು ಉನ್ನತ ಶಿಕ್ಷಣವನ್ನು ಮುಂದುವರಿಸಲು ಇವರ ಪ್ರೋತ್ಸಾಹವಿತ್ತು. ಕಲ್ಕತ್ತಾ ವಿಶ್ವವಿದ್ಯಾನಿಲಯ ಸ್ಥಾಪಿತವಾಗಿ ಸುಮಾರು ಇಪ್ಪತ್ತು ವರ್ಷಗಳ ಬಳಿಕ ಆ ವಿಶ್ವವಿದ್ಯಾನಿಲಯದ ಬಾಗಿಲು ಹೆಣ್ಣುಮಕ್ಕಳಿಗೂ ತೆರೆಯಿತು. ಇದರ ಲಾಭವನ್ನು ಪಡೆದ ಬಸು ಮನೆತನದ ಇಬ್ಬರು ಸೋದರಿಯರು ಕಾದಂಬಿನೀ ಮತ್ತು ಚಂದ್ರಮುಖಿ, ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ತದನಂತರ ಮುಂದುವರೆದು ಚಂದ್ರಮುಖಿ ಈ ದೇಶದ ಪ್ರಥಮ ಮಹಿಳಾ ವೈದ್ಯರೂ ಆದರು. ಈ ವಿಚಾರವನ್ನು ಅರಿತ ವಿದ್ಯಾಸಾಗರರು ಚಂದ್ರಮುಖೀ ಬಸು ಅವರಿಗೆ ತಮ್ಮ ಹಸ್ತಾಕ್ಷರದಲ್ಲಿ ಪ್ರೀತಿಪೂರ್ವಕವಾಗಿ ಅಭಿನಂದನೆಗಳನ್ನು ಬರೆದು ಕಳುಹಿಸಿದರು. ವಿದ್ಯಾಸಾಗರರ ನಿಧನದ ಬಳಿಕ ಅವರ ಅಭಿಮಾನಿ ಮಹಿಳೆಯರು 'Ladies' Vidyasagar Memorial Committee' ಎಂಬ ಸಮಿತಿಯನ್ನು ರಚಿಸಿಕೊಂಡು ತಮ್ಮ ಅಳಿಲು ಸೇವೆಯನ್ನು ಮುಂದುವರಿಸಿದರು.

ಹೀಗೆ ಮಹಿಳಾ ಶಿಕ್ಷಣಕ್ಕೆ ಭದ್ರ ಬುನಾದಿಯನ್ನು ಒದಗಿಸಿದವರಲ್ಲಿ ವಿದ್ಯಾಸಾಗರರು ಮೊದಲಿಗರು. ಅಂದಿನ ಸಾಮಾಜಿಕ-ಧಾರ್ಮಿಕ

Digitised by Bharatavani, CIIL

ಅನ್ಯಾಯಗಳ ವಿರುದ್ಧ ನಿರಂತರ ಹೋರಾಡಿದ ಈ ಮಹನೀಯರು ಜುಲೈ 29, 1891ರಲ್ಲಿ ನಿಧನರಾದರು. ಆದರೆ ಅವರು ಅಂದು ಮೂಡಿಸಿದ ಬೆಳಕು, ಅವರ ಹೋರಾಟದ ಹಾದಿ, ಹೆಣ್ಣುಮಕ್ಕಳ ಹಕ್ಕುಗಳಿಗಾಗಿ ನಡೆಸಿದ ಸಮರ, ಧಾರ್ಮಿಕ ಶೋಷಣೆಯನ್ನು ವಿರೋಧಿಸಿದ ರೀತಿ, ಅವರನ್ನು ಎತ್ತರದಲ್ಲಿ ಕಾಣುವಂತೆ ಮಾಡಿತು. "ಅವರಿಂದ ಸ್ಫೂರ್ತಿ ಪಡೆಯದವರಿಲ್ಲ" ಎಂದು ಸ್ವತಃ ವಿವೇಕಾನಂದರು ನುಡಿದಿರುವುದರಲ್ಲಿ ಅತಿಶಯೋಕ್ತಿ ಇಲ್ಲ. ಬಂಗಾಲದ ಪ್ರಥಮ ಆಧುನಿಕ ಕವಿ ಮೈಕೇಲ್ ಮಧುಸೂದನ ದತ್ತರು ವಿದ್ಯಾಸಾಗರರನ್ನು "ನಮ್ಮ ನಡುವಿನ ಮೊದಲನೆಯ ಪುರುಷ" ಎಂದು ಬಣ್ಣಿಸಿದ್ದಾರೆ. ಈ ರಾಷ್ಟ್ರದ ಅತ್ಯಂತ ಗೌರವಾನ್ವಿತ ಕವಿ ರವೀಂದ್ರನಾಥ್ ಟ್ಯಾಗೋರರು ವಿದ್ಯಾಸಾಗರರನ್ನು ಕುರಿತು ಹೀಗೆ ಅರ್ಥಗರ್ಭಿತವಾಗಿ ನುಡಿದಿದ್ದಾರೆ: "ಕರುಣೆಯೂ ಅಲ್ಲ, ಪಾಂಡಿತ್ಯವೂ ಅಲ್ಲ, ಅವರ ಗುಣದ ನಿಜವಾದ ನಿಧಿ ಇರುವುದು ಅವರಲ್ಲಿನ ಅಕ್ಷಯ ಮನುಷ್ಯತ್ವದಲ್ಲಿ, ಅಜೇಯ ಪೌರುಷದಲ್ಲಿ".

ಈ ಅಕ್ಷಯ ಮನುಷ್ಯತ್ವವನ್ನು ಹೊಂದಿದ್ದ ಕಾರಣದಿಂದಲೇ ವಿದ್ಯಾಸಾಗರರು ಅಂದಿನ ಸಾಮಾಜಿಕ-ಧಾರ್ಮಿಕ ಅಂಧಶ್ರದ್ಧೆಗಳ ವಿರುದ್ಧ ಹೋರಾಡಿ ಹೆಣ್ಣು ಮಕ್ಕಳ ಸ್ಥಿತಿಗತಿಗಳ ಸುಧಾರಣೆಯನ್ನು 'ಶಿಕ್ಷಣ'ವೆಂಬ ಜ್ಞಾನ ಜ್ಯೋತಿಯ ಮೂಲಕ ತರಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಅವರ ಈ ನಿರಂತರ ಪರಿಶ್ರಮದಿಂದಾಗಿ ಸಮಾಜದಲ್ಲಿ ಅರಿವು ಮೂಡುವುದರ ಜೊತೆಗೆ, ಇಂದು ದೇಶವ್ಯಾಪಿ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಈ ಪ್ರಯತ್ನ ತನ್ನ ಸಾಫಲ್ಯವನ್ನು ಇನ್ನೂ ಕಂಡುಕೊಳ್ಳಬೇಕಿದೆ.

– ಕೆ.ಎಸ್.ಗಿ.

# ಉ

## ಉದಾರ ಶಿಕ್ಷಣ

ಶಿಕ್ಷಣ ಯಾವ ವಿಷಯವನ್ನು ಒಳಗೊಂಡಿರಬೇಕು ಎಂಬುದು ಹಿಂದಿನಿಂದಲೂ ಚರ್ಚಾಸ್ಪದವಾದ ವಿಷಯ. ಇದು ಸಂಕೀರ್ಣವೂ ಕಷ್ಟಕರವೂ ಆದ ಚಿಂತನೆಯೂ ಹೌದು. ಜ್ಞಾನದ ಬೆಳವಣಿಗೆ, ಬದಲಾದ ಸಾಮಾಜಿಕ ಹಾಗೂ ಆರ್ಥಿಕ ಸನ್ನಿವೇಶಗಳು, ಇವುಗಳ ಹಿನ್ನೆಲೆಯಲ್ಲಿ ಶಿಕ್ಷಣಕ್ಕೆ ಒಳಗಾಗಬಹುದಾದ ವಿಷಯಗಳ ಗಾತ್ರ ಅಗಾಧವಾಗಿ ಬೆಳೆದಿದ್ದರೂ ಅದರಲ್ಲಿ ಶಿಕ್ಷಣಕ್ಕೆ ಹೊಂದುವ ವಿಷಯಗಳ ಸಮರ್ಪಕ ಆಯ್ಕೆಗೆ ಪ್ರಯತ್ನ ತುರ್ತಾಗಿ ಆಗಬೇಕಾಗಿದೆ. ಇದಕ್ಕೆ ಪೂರಕವಾದ ಮಾರ್ಗದರ್ಶನ ತತ್ವಗಳು ಅವಶ್ಯಕ. ಈ ನಿಟ್ಟಿನಲ್ಲಿ ಅನೇಕ ಶಿಕ್ಷಣತಜ್ಞರು ಶಿಕ್ಷಣದ ವಿಷಯದ ಆಯ್ಕೆಗಾಗಿ ಸೂಕ್ತ ತತ್ವಗಳನ್ನು ಸ್ವಲ್ಪಮಟ್ಟಿಗಾದರೂ ಸೂಚಿಸಿದ್ದಾರೆ. **ಉದಾರ ಶಿಕ್ಷಣದ (Liberal Education)** ಈ ಪರಿಕಲ್ಪನೆ ಗ್ರೀಕ್ ದೇಶದ ಮೊದಲ ಚಿಂತಕರಿಂದ ಹಿಡಿದು ಇಪ್ಪತ್ತೊಂದನೆಯ ಶತಮಾನದಲ್ಲಿ ಇಂದಿನವರೆಗೂ ಬೆಳೆದುಬಂದಿದೆ.

ಉದಾರ ಶಿಕ್ಷಣ ಎಂಬುದು ಶಿಕ್ಷಣದ ಒಂದು ಬಗೆಯ ತಾತ್ವಿಕ ಚಿಂತನೆ. ವಿಶಾಲವಾದ ಜ್ಞಾನ, ವರ್ಗಾಯಿಸಬಹುದಾದ ಕೌಶಲಗಳು, ನೈತಿಕತೆ ಹಾಗೂ ಪೌರಭಾಗಿತ್ವ ಮುಂತಾದ ಘನ ಮೌಲ್ಯಗಳೊಂದಿಗೆ ಇದು ವ್ಯಕ್ತಿಯನ್ನು ಸಬಲೀಕರಿಸುತ್ತದೆ. ವಿಶೇಷವಾದ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸುವುದು ಇದರ ಲಕ್ಷಣ. ಇದು ಶೈಕ್ಷಣಿಕವಾದ ಔಪಚಾರಿಕ ವ್ಯವಸ್ಥೆ ಎಂಬುದಕ್ಕಿಂತ ಹೆಚ್ಚಾಗಿ ಅಧ್ಯಯನದ ರೀತಿ ಎಂದು ಹೇಳುವುದು ಹೆಚ್ಚು ಸಮಂಜಸ.

ಉದಾರ ಶಿಕ್ಷಣದ ವ್ಯಾಪ್ತಿ ಜಾಗತಿಕವಾದುದು. ಬಹುಜನ ಮುಖಿಯಾದುದು. ವಿವಿಧ ಜ್ಞಾನಶಿಸ್ತುಗಳಿಗೆ ಮತ್ತು ಕಲಿಕಾ ಮಾರ್ಗೋಪಾಯಗಳಿಗೆ ತೆರೆದುಕೊಂಡಿರುವ ಸಾಮಾನ್ಯ ಪಠ್ಯಕ್ರಮವನ್ನೂ ಇದು ಒಳಗೊಳ್ಳುತ್ತದೆ. ಇದರ ಜೊತೆಗೆ ಒಂದು ಶೈಕ್ಷಣಿಕ ಕ್ಷೇತ್ರದಲ್ಲಿ ಆಳವಾದ ಅಧ್ಯಯನಕ್ಕೂ ಅವಕಾಶ ಮಾಡಿಕೊಡುತ್ತದೆ.

ಉದಾರ ಶಿಕ್ಷಣ ಎಂಬುದು ಉದಾರಮನಸ್ಸುಗಳ ಅವಿರತವಾದ ಸಹಸಂಯೋಗದ ಫಲ. ಗರಿಷ್ಠ ಮಟ್ಟದಲ್ಲಿ ನಮ್ರತೆಯ ಬೆಳವಣಿಗೆಗೆ ಕೊಡುವ ತರಬೇತಿ ಇದು. ಈ ತರಬೇತಿ ಮುಖ್ಯವಾಗಿ ನಮ್ರತೆಯ ಬೆಳವಣಿಗೆಗಾಗಿಯೇ ವಿನಹ ದೈನ್ಯತೆಯ ಬೆಳವಣಿಗೆಗೆ ಅಲ್ಲ. ಇದು ಧೈರ್ಯ ಸಾಹಸದ ತರಬೇತಿಯನ್ನೂ ಒಳಗೊಳ್ಳುತ್ತದೆ. ಬುದ್ಧಿಜೀವಿಗಳ ಗಲಭೆ, ಗಲಾಟೆ, ಕೂಗಾಟ, ವಿಚಾರಹೀನತೆ, ಆಡಂಬರದ ಮೆರವಣಿಗೆಯ ಕಳಪೆತನ ಇವೆಲ್ಲವುಗಳಿಂದ ಇದು ಮುಕ್ತಿಯನ್ನು ಬಯಸುತ್ತದೆ. ಈಗಾಗಲೇ ಒಪ್ಪಿಗೆಯಾಗಿರುವ ವಿಚಾರಗಳನ್ನು ಅಭಿಪ್ರಾಯಗಳಾಗಿ ಹಾಗೂ ಸಾಮಾನ್ಯ ಅಭಿಪ್ರಾಯಗಳನ್ನು ವಿಶೇಷವಾದ ವಿಚಾರಗಳಾಗಿ ಅರ್ಥಮಾಡಿಕೊಳ್ಳುವ ಧೈರ್ಯವನ್ನು ಇದು ಅಪೇಕ್ಷಿಸುತ್ತದೆ. ಅಸಭ್ಯತೆಯಿಂದ ಮುಕ್ತಿ ಅಥವಾ ಅದನ್ನು ಮೀರಿದ ಸ್ವಾತಂತ್ರ್ಯವೇ ಉದಾರಶಿಕ್ಷಣ. ಗ್ರೀಕರು ಅಸಭ್ಯತೆಯನ್ನು ವರ್ಣಿಸಲು ಬಹಳ ಅರ್ಥವತ್ತಾದ ಪದವನ್ನು ಬಳಸಿದ್ದಾರೆ. ಅದೆಂದರೆ **'ಅಪೇರೋಕಾಲಿಯಾ' (Apeirokalia)**. ಅಂದರೆ ಸುಂದರವಾದ ವಸ್ತುಗಳನ್ನು ಕುರಿತ ಅನುಭವದ ಕೊರತೆ ಎಂದರ್ಥ. ಇದಕ್ಕೆ ವಿರುದ್ಧವಾಗಿ ಸುಂದರವಾದವುಗಳಲ್ಲಿ ವಿಶೇಷ ಅನುಭವ ಕೊಡುವಂತಹುದು ಉದಾರ ಶಿಕ್ಷಣ.

ಶಿಕ್ಷಣವನ್ನು ಕುರಿತ ಸಾಮಾನ್ಯವಾದ ವಿತರಣೆಯಿಂದ ಪ್ರಾರಂಭಿಸಿ ಉದಾರ ಶಿಕ್ಷಣವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬಹುದು. ಶಿಕ್ಷಣವೆಂಬುದು ಪ್ರಾಯೋಗಿಕವಾದ ಒಂದು ಚಟುವಟಿಕೆ, ಗುರಿಗಳನ್ನು ಸಾಧಿಸಲು ಅಳವಡಿಸುವ ಸಾಧನಗಳನ್ನು ಕುರಿತದ್ದು. ಮಾನವನ ಉತ್ತಮಿಕೆಯನ್ನು ಗುರಿಯಾಗಿ ಉಳ್ಳದ್ದು. ವ್ಯಕ್ತಿಯೊಬ್ಬ ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಏಳಿಗೆ ಹೊಂದಬೇಕು ಎಂದು ಬಯಸುವಂತಹುದು.

ವ್ಯಕ್ತಿಯ ಉತ್ತಮಿಕೆಯ ಸಾಧನೆಗೆ ಶಿಕ್ಷಣದಲ್ಲಿ ಎರಡು ಮಾರ್ಗಗಳಿವೆ. ಒಂದು, ಶಿಕ್ಷಣದಲ್ಲಿ ವ್ಯಕ್ತಿಯ ಅನನ್ಯ ಸಾಮರ್ಥ್ಯ ಅಥವಾ ವಿಶಿಷ್ಟ ಚಟುವಟಿಕೆಗಳ ಬಳಕೆಗೆ ಕುರಿತದ್ದು, ಮತ್ತೊಂದು ವ್ಯಕ್ತಿವ್ಯಕ್ತಿಗಳಲ್ಲಿ ಸಮಾನವಾದ ಸಾಮಾನ್ಯವಾದ ಸಾಮರ್ಥ್ಯ ಹಾಗೂ ಚಟುವಟಿಕೆಗಳ ಬಳಕೆಗೆ ಸಂಬಂಧಿಸಿದುದು. ಸಮಾಜದಲ್ಲಿ ಮೂಲಭೂತವಾದ ಕಾರ್ಯವಿಭಜನೆಯ ಪರಿಕಲ್ಪನೆ ಇದೆ. ವಿವಿಧ ವ್ಯಕ್ತಿಗಳು ವಿಭಿನ್ನ ವೃತ್ತಿಗಳನ್ನು ಕೈಗೊಳ್ಳುವುದುಂಟು. ಈ ಕಾರ್ಯ ವಿಭಜನೆ ಹಾಗೂ ಅದರ ಪರಿಣಾಮವಾದ ಕಾರ್ಯ ವಿಭಿನ್ನತೆ ಈ ಸತ್ಯಗಳ ಜೊತೆಜೊತೆಗೇ ವ್ಯಕ್ತಿಭಿನ್ನತೆ ಎಂಬ ಸರಳವೂ ಸಹಜವೂ ಆದ ಅಂಶವೂ ಇದೆ. ಶಿಕ್ಷಣದ ಒಂದು ಅಭಿಪ್ರಾಯವೆಂದರೆ, ಕ್ರಿಯಾಶೀಲವಾದ ಈ ವ್ಯಕ್ತಿಭಿನ್ನತೆಯನ್ನು ಗಮನಿಸಿ, ವ್ಯಕ್ತಿಯ ಅನನ್ಯತೆಯ ಅಂಶಗಳಿಗನುಗುಣವಾಗಿ ಸಮಾಜದ ಕಾರ್ಯವಿಭಜನೆಯನ್ನು ಹೊಂದಿಸುವುದು. ಆ ಮೂಲಕ ವ್ಯಕ್ತಿಯ ಹಾಗೂ ಸಮಾಜದ ಏಳಿಗೆಗೆ ಅನುವು ಮಾಡಿಕೊಡುವುದು. ಈ

Digitised by Bharatavani, CIIL

ಪ್ರಕ್ರಿಯೆಯಿಂದ ಉತ್ತಮ ಕಸುಬುಗಾರರು, ವೈದ್ಯರು, ಇತ್ಯಾದಿ ಸಮಾಜಕ್ಕೆ ಅಗತ್ಯವಾದ ವ್ಯಕ್ತಿಗಳನ್ನು ತಯಾರುಮಾಡಲು ಸಾಧ್ಯವಾಗುತ್ತವೆ. ಶಿಕ್ಷಣವನ್ನು ಕುರಿತ ಮತ್ತೊಂದು ಅಭಿಪ್ರಾಯ ಇದಕ್ಕಿಂತ ಭಿನ್ನವಾದುದು. ಶಿಕ್ಷಣ ವ್ಯಕ್ತಿಭಿನ್ನತೆಗಿಂತ ಹೆಚ್ಚಾಗಿ ವ್ಯಕ್ತಿಸಮಾನ ಅಂಶಗಳಿಗನುಗುಣವಾಗಿ ಉತ್ತಮಿಕೆಯನ್ನು ಬೆಳೆಸುವುದು. ಈ ಸಿದ್ಧಾಂತದ ಪ್ರಕಾರ, ಎಲ್ಲ ವ್ಯಕ್ತಿಗಳೂ ಮಾಡಬಹುದಾದ ಕೆಲಸಗಳ ಕಡೆಗೆ ಅಥವಾ ಎಲ್ಲ ವ್ಯಕ್ತಿಗಳೂ ಮಾಡಬೇಕಾದ ಕೆಲಸದ ಕಡೆಗೆ ಶಿಕ್ಷಣ ಗಮನಕೊಡಬೇಕು.

ಈ ಸರಳವ್ಯತ್ಯಾಸವು ವಿಶಿಷ್ಟ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣವನ್ನು ಗುರುತಿಸುತ್ತದೆ. ವಿಶಿಷ್ಟ ಶಿಕ್ಷಣವನ್ನು ವೃತ್ತಿ ಶಿಕ್ಷಣದ ಜೊತೆಗೆ ಗುರುತಿಸಬಹುದು. ಬಹಳಮಟ್ಟಿಗೆ ವಿಶಿಷ್ಟ ಶಿಕ್ಷಣ ಕಾರ್ಯವಿಭಜನೆ ಮತ್ತು ಕಾರ್ಯ ವಿಭಿನ್ನತೆಗೆ ಒತ್ತು ಕೊಡುತ್ತದೆ. ಸಾಮಾನ್ಯಶಿಕ್ಷಣವನ್ನು ಉದಾರ ಶಿಕ್ಷಣದೊಂದಿಗೆ ಗುರುತಿಸಲು ಆಧಾರವಿದೆ. ಏಕೆಂದರೆ ಇದು ವ್ಯಕ್ತಿಯನ್ನು ಮಾನವನನ್ನಾಗಿಸುವ ಉದಾರತೆಯ ಕಡೆಗಿನ ತರಬೇತಿ.

ಗುರಿಗಳಿಗೆ ಅನುಗುಣವಾಗಿ ಶಿಕ್ಷಣವನ್ನು ಮತ್ತೊಂದು ರೀತಿಯಲ್ಲಿ ವರ್ಗೀಕರಿಸಬಹುದು. ಅದೆಂದರೆ ಆಂತರಿಕ ಗುರಿ ಮತ್ತು ಬಾಹ್ಯಗುರಿಯುಳ್ಳ ಶಿಕ್ಷಣ. ಆಂತರಿಕ ಗುರಿಯುಳ್ಳ ಶಿಕ್ಷಣದ ಆದರ್ಶಗಳೇ ಬೇರೆ. ಈ ಗುರಿಗಳು ವ್ಯಕ್ತಿಯ ಆಂತರಿಕ ಬೆಳವಣಿಗೆಗೆ ಸಂಬಂಧಿಸಿದವುಗಳು. ವ್ಯಕ್ತಿಯ ಉತ್ತಮಿಕೆ ಹಾಗೂ ಪರಿಪೂರ್ಣತೆಯನ್ನು ಗುರಿಯಾಗಿಟ್ಟುಕೊಂಡಿರುವಂತಹವುಗಳು, ಮಾನವೀಯ ಸಾಮರ್ಥ್ಯಗಳನ್ನು ಬೆಳೆಸುವ ದೃಷ್ಟಿಯುಳ್ಳದ್ದು. ಉತ್ತಮ ಅಭ್ಯಾಸಗಳು ಮಾನವನ ಸ್ವಭಾವವೇ ಆಗುವಂತೆ ಮಾಡಲು ಪ್ರಯತ್ನಿಸುವಂತಹವು. ಹೀಗಲ್ಲದೆ ವ್ಯಕ್ತಿಯ ಗುಣದ ಒತ್ತಾಸೆ ಮುಖ್ಯವಲ್ಲದೆ ಅವನು ಮಾಡುವ ಕಾರ್ಯ, ಕ್ರಿಯೆಗಳ ಉತ್ತಮಿಕೆಯನ್ನು ಇದರ ಫಲವಾಗಿ ಕಾಣುವ ಫಲದ ಉತ್ತಮಿಕೆಯನ್ನು ಗುರಿಯಾಗಿಟ್ಟುಕೊಳ್ಳುವುದು ಬಾಹ್ಯಗುರಿ. ಇದನ್ನು ಸ್ಪಷ್ಟಪಡಿಸಿಕೊಳ್ಳಲು ಒಂದು ಉದಾಹರಣೆ. ಮರಗೆಲಸವನ್ನು ಒಬ್ಬ ವ್ಯಕ್ತಿ ಎರಡು ಕಾರಣಗಳಿಂದ ಕಲಿಯಬಹುದು. ಒಂದು, ಮರದ ವಿವಿಧ ಸಾಮಾನುಗಳನ್ನು ತಯಾರಿಸುವ ಕೌಶಲ ಅಥವಾ ಕಲೆಯನ್ನು ರೂಢಿಸಿಕೊಳ್ಳುವುದಕ್ಕಾಗಿ. ಎರಡು, ಉತ್ತಮ ಸರಕುಗಳನ್ನು ಉತ್ಪಾದಿಸಿ ಮಾರುವುದಕ್ಕಾಗಿ. ಎರಡನೆಯದರಲ್ಲಿ ಕರ್ತೃವಿನ ಕಲಾನೈಪುಣ್ಯತೆ ಮುಖ್ಯವಲ್ಲ, ಗ್ರಾಹಕನ ಅಗತ್ಯವನ್ನು ಅದು ಪೂರೈಸುತ್ತದೆಯೇ ಎಂಬುದು ಮುಖ್ಯ. ಉದಾರ ಶಿಕ್ಷಣ ಮತ್ತು ವೃತ್ತಿಶಿಕ್ಷಣದ ನಡುವಿನ ವ್ಯತ್ಯಾಸವೂ ಇದೇ. ಎರಡೂ ಸನ್ನಿವೇಶಗಳಲ್ಲಿ ಮಾಡುವುದು ಮರಗೆಲಸವೇ ಆದರೂ ಮೊದಲ ಸನ್ನಿವೇಶ ಉದಾರ ಶಿಕ್ಷಣಕ್ಕೆ ಸಂಬಂಧಿಸಿದುದು, ಎರಡನೆಯದು ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದುದು.

ಉದಾರ ಶಿಕ್ಷಣ ಮತ್ತು ವೃತ್ತಿಶಿಕ್ಷಣದ ಈ ವ್ಯತ್ಯಾಸ ನಮ್ಮ ಗಮನವನ್ನು ಮುಖ್ಯ ವಿಷಯದ ಕಡೆಗೆ ಸೆಳೆಯುತ್ತದೆ. ವೃತ್ತಿ ತರಬೇತಿ ಎಂಬುದು ಕಾರ್ಯ ಅಥವಾ ಕೆಲಸಕ್ಕಾಗಿ ಕೊಡುವ ತರಬೇತಿ. ಇದು ಸಾಮಾನ್ಯ ಎಂಬುದಕ್ಕಿಂತ ವಿಶೇಷ ಲಕ್ಷಣಗಳನ್ನುಳ್ಳದ್ದು. ಬಾಹ್ಯವಾದ ಗುರಿಮೂಲವಾದುದು. ಇದು ಕೆಲಸದವರಿಗೆ, ನೌಕರರಿಗೆ, ಕೂಲಿಗಳಿಗೆ ಅಥವಾ ಗುಲಾಮರಿಗೆ ಕೊಡುವ ತರಬೇತಿ. ಗುಲಾಮ, ಕೂಲಿ, ನೌಕರ, ಕೆಲಸಗಾರ, ಉದ್ಯೋಗಿ ಎಂಬೀ ಪದಗಳು ಬೇರೆಯಾದರೂ ಇವರೆಲ್ಲರ ಕೆಲಸದ ಗುರಿ ಒಂದೇ, ಹೊಟ್ಟೆಗಾಗಿ, ಗೇಣು ಅಥವಾ ಭರ್ಜರಿ ಬಟ್ಟೆಗಾಗಿ. ಉದಾರಶಿಕ್ಷಣ ವಿರಾಮಕಾಲದ ಶಿಕ್ಷಣ. ಇದರ ಲಕ್ಷಣವೂ ಸಾಮಾನ್ಯವಾದುದು. ಇದು ಆಂತರಿಕ ತೃಪ್ತಿಗಾಗಿಯೇ ವಿನಾ ಬಾಹ್ಯತೃಪ್ತಿಗಾಗಿ ಅಲ್ಲ.

ಇಲ್ಲಿ ಒಂದು ವಿಷಯ ಬಹಳ ಮುಖ್ಯ. ಉದಾರ ಶಿಕ್ಷಣ ಎಂಬುದು ಉದಾರಕಲೆಗಳ ಶಿಕ್ಷಣ ಮಾತ್ರವಲ್ಲ. ಸಾಮಾನ್ಯವಾಗಿ ಉದಾರ ಶಿಕ್ಷಣವನ್ನು ನಿರ್ದಿಷ್ಟ ವಿಷಯಗಳ ನೈಪುಣ್ಯತೆಗೆ ಸಂಬಂಧಿಸಿದಂತೆ ಬಳಸಲಾಗುತ್ತದೆ. ಉದಾಹರಣೆಗೆ ವ್ಯಾಕರಣ, ನ್ಯಾಯಶಾಸ್ತ್ರ, ಭಾಷಣಕಲೆ, ಗಣಿತ ಶಿಸ್ತುಗಳು ಇತ್ಯಾದಿ. ಉದಾರ ಶಿಕ್ಷಣದ ಸಾಂಪ್ರದಾಯಿಕ ಅರ್ಥವದು. ಇದು ಬುದ್ಧಿ ಬೆಳವಣಿಗೆಯ ಶಿಕ್ಷಣ ಮಾತ್ರವಲ್ಲ. ಮಾನವನ ಉತ್ಕೃಷ್ಟತೆಯ ಆಧಾರದ ಹಿನ್ನೆಲೆಯಲ್ಲಿ ಇದಕ್ಕೆ ಮೂರು ಆಯಾಮಗಳಿವೆ. ಒಂದು ದೈಹಿಕ ತರಬೇತಿ ಅಥವಾ ಅಂಗಸಾಧನೆ. ಪ್ಲೇಟೋವಿನ ಅರ್ಥದಲ್ಲಿ ದೇಹದ ಅಂಗಗಳ ಉತ್ತಮ ಸಮನ್ವಯ ಸಾಧನೆ. ಎರಡು, ನೈತಿಕ ತರಬೇತಿ. ನೈತಿಕ ಪರಿಪೂರ್ಣತೆಯನ್ನು ಬೆಳೆಸುವುದು, ಉತ್ತಮ ನೈತಿಕ ಅಭ್ಯಾಸಗಳನ್ನು ಗುಣಗಳನ್ನು ಬೆಳೆಸುವುದು. ಮೂರು, ಬೌದ್ಧಿಕ ತರಬೇತಿ. ಉತ್ತಮ ಬೌದ್ಧಿಕ ಅಭ್ಯಾಸಗಳು ಹಾಗೂ ಮೌಲ್ಯಗಳನ್ನು ಬೆಳೆಸುವುದು. ವೃತ್ತಿ ತರಬೇತಿಗಿಂತ ಭಿನ್ನವಾಗಿ ಈ ಮೂರೂ ಉದಾರವೇ. ಈ ಮೂರರಲ್ಲೂ ಬುದ್ಧಿಗೆ ಪ್ರಧಾನ ಸ್ಥಾನವಿದೆ. ಎಲ್ಲ ದೈಹಿಕ ಕೌಶಲಗಳೂ ಕಲೆಗಳೇ. ಎಲ್ಲ ನೈತಿಕ ಅಭ್ಯಾಸಗಳಿಗೂ ವಿವೇಕ ಅತ್ಯಗತ್ಯ. ಹಾಗಾಗಿ ನೈತಿಕ ಹಾಗೂ ದೈಹಿಕ ತರಬೇತಿಯನ್ನು ಕುರಿತಂತೆ ಉದಾರ ಶಿಕ್ಷಣ ಗಮನಿಸುತ್ತದೆ.

ಉದಾರ ಶಿಕ್ಷಣದ ಪರಿಕಲ್ಪನೆಯ ಅರ್ಥವನ್ನು ಹೀಗೆಯೇ ಎಂದು ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ ಅದು ಮೂಡಿಬಂದ ಪ್ರಾಚೀನಕಾಲದಿಂದ ಇಂದಿನವರೆಗೆ ಅದರ ಅರ್ಥಛಾಯೆ ವಿವಿಧ ಘಟ್ಟಗಳಲ್ಲಿ ಬದಲಾಗುತ್ತಾ ಬಂದಿದೆ. ಹಾಗಾಗಿ ಉದಾರ ಶಿಕ್ಷಣದ ಪರಿಕಲ್ಪನೆ ಬೆಳೆದು ಬಂದ ಹಾದಿಯನ್ನು ಗುರುತಿಸುವುದಾದರೆ ಉದಾರ ಶಿಕ್ಷಣದ ಪರಿಕಲ್ಪನೆಯ ಸಮಗ್ರ ಚಿತ್ರ ಸಿಗಬಹುದು. ಇದರ ಪ್ರಸ್ತಾಪ ಮೂಲಭೂತವಾಗಿ ನಮಗೆ ಗ್ರೀಕರ ಆಲೋಚನೆಗಳಿಂದ ಕಾಣಸಿಗುತ್ತದೆ. ರಾಜನೀತಿಯನ್ನು ಕುರಿತ **ಅರಿಸ್ಟಾಟಲನ** 8ನೇ ಪುಸ್ತಕದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಅವನ ಪ್ರಕಾರ ಉದಾರ ಶಿಕ್ಷಣ ಎಂಬುದು ಮುಕ್ತ ಮಾನವನ ಶಿಕ್ಷಣ. ಅವನ ಪ್ರಕಾರ ಶಿಕ್ಷಣದ ಮೂಲಕ ಮಕ್ಕಳಿಗೆ ಉಪಯುಕ್ತವಾದ ಅತ್ಯಂತ ಅನಿವಾರ್ಯವಾದ ಅರಿವನ್ನು ಕೊಡಬೇಕು, ಅದಕ್ಕೆ ಅನುಗುಣವಾದ ವಿಷಯಗಳನ್ನು ಬೋಧಿಸಬೇಕು ಎಂಬುದು ನಿಜವಾದರೂ ಉಪಯುಕ್ತವಾದ ಎಲ್ಲ ಜ್ಞಾನವೂ ಶಿಕ್ಷಣಕ್ಕೆ ಸಮರ್ಪಕವಾದುದಲ್ಲ ಎಂಬುದೂ ಸರಳ ಸತ್ಯ. 'ಉದಾರವಾದ' ಹಾಗೂ 'ಉದಾರವಲ್ಲದ' ವಿಷಯಗಳ ನಡುವೆ ವ್ಯತ್ಯಾಸವಿದೆ. ಕಲಿಯುವವನನ್ನು ಯಾಂತ್ರಿಕಗೊಳಿಸದ ಜ್ಞಾನ ಮಾತ್ರ ಶಿಕ್ಷಣವನ್ನು ಪ್ರವೇಶಿಸಬೇಕು ಎಂಬುದು ಅರಿಸ್ಟಾಟಲನ ವಾದ. ಯಾಂತ್ರಿಕವಾದ ವಿಷಯಗಳು ಎಂದರೇನು? ಮುಕ್ತ ಮನಸ್ಸಿನ ದೇಹ, ಆತ್ಮ ಮತ್ತು ಬುದ್ಧಿಯನ್ನು 'ಒಳ್ಳೆಯತನದ' ಅನ್ವಯಕ್ಕೆ ಸಾಧ್ಯಮಾಡಿಕೊಡದ ಎಲ್ಲ ಕಲೆ ಹಾಗೂ ಅಧ್ಯಯನಗಳು ಯಾಂತ್ರಿಕವೇ. ಇವೆಲ್ಲ ಕೂಲಿ ಗಳಿಸುವ ವೃತ್ತಿಗಳು ಹಾಗೂ ಅಧ್ಯಯನಗಳು, ಈ ಯಾಂತ್ರಿಕ ಚಟುವಟಿಕೆಗಳು ಕೆಳಸ್ತರದ ಚಟುವಟಿಕೆಗಳು. ಇವು ಮನಸ್ಸಿಗೆ ಬಿಡುವು ಕೊಡುವುದಿಲ್ಲ. ಅವು ಮನಸ್ಸನ್ನು ಕೆಳಸ್ತರಕ್ಕೆ ನೂಕುತ್ತವೆ. ಮುಕ್ತ ಮನಸ್ಸಿಗೆ ಒಪ್ಪುವ ಅದೆಷ್ಟೋ ಉದಾರಕಲೆಗಳು ಕೂಡ ಒಂದು ಹಂತದವರೆಗೆ ಸಮರ್ಪಕವೆನಿಸಿ ನಂತರ ಅಗತ್ಯವೆನಿಸುವುದಿಲ್ಲ. ಈ ಉದಾರಕಲೆಗಳ ಜೊತೆಗೆ ಯಾವ ಕಾರಣಕ್ಕಾಗಿ ತೊಡಗಿಸಿಕೊಳ್ಳುತ್ತೇವೆ ಎಂಬುದೂ ಪ್ರಮುಖವಾದ ವ್ಯತ್ಯಾಸವನ್ನು ಉಂಟು ಮಾಡುತ್ತದೆ. ಅದು ನಮಗಾಗಿಯೋ, ನಮ್ಮ ಗೆಳೆಯರಿಗಾಗಿಯೋ ಅಥವಾ ಒಟ್ಟು ಉತ್ತಮಿಕೆಯ ಸಾಧನೆಗಾಗಿಯೋ ಎಂಬುದು ಮುಖ್ಯ.

ಶಿಕ್ಷಣದಲ್ಲಿ ಕೆಲವು ವಿಷಯಗಳು ಪ್ರಮುಖವಾಗಿ ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಸೇರ್ಪಡೆಯಾಗಿರಬೇಕು. ಈ ವಿಷಯಗಳ ಅಭ್ಯಾಸ ಬೇರಾವುದೋ ಉದ್ದೇಶಗಳ ಸಾಧನೆಗಾಗಿ ಅಲ್ಲದೆ ಕೇವಲ ಏನನ್ನು ಕಲಿಯುತ್ತೇವೆಯೋ

Digitised by Bharatavani, CIIL

ಆ ಕಲಿಕೆಯ ಕಾರಣಕ್ಕಾಗಿ ಮಾತ್ರವೇ ಆಗಿರಬೇಕು. ಇದೇ ಉದಾರ ಶಿಕ್ಷಣದ ಮೂಲ ಧ್ಯೇಯ. ಉದಾರಶಿಕ್ಷಣಕ್ಕೆ ಮೂಲಭೂತವಾದ ಲಕ್ಷಣಗಳಿವೆ. ಅದು ಯಾಂತ್ರಿಕವಲ್ಲ. ದೈಹಿಕವಾಗಿ ಹಾಗೂ ಬೌದ್ಧಿಕವಾಗಿ ಕೆಲವು ಚಟುವಟಿಕೆಗಳನ್ನು ಯಾಂತ್ರಿಕವಾಗಿ ಮಾಡುವುದಕ್ಕಿಂತಲೂ ಇದು ಮಿಗಿಲಾದುದು. ವ್ಯಕ್ತಿಯ ಉನ್ನತ ಮಟ್ಟದ ಸಾಮರ್ಥ್ಯಗಳನ್ನು, ಕ್ರಿಯಾಶೀಲತೆಯನ್ನು ಆ ಸಾಮರ್ಥ್ಯಗಳ ಅನ್ವಯವನ್ನು ಇದು ಬಯಸುತ್ತದೆ. ಉತ್ತಮವಾದ ಬಾಳನ್ನು ಬಾಳಲು ಈ ಕ್ರಿಯಾಶೀಲತೆ ಅನಿವಾರ್ಯ.

ಯೂರೋಪಿನಲ್ಲಿ **ಪುನರುಜ್ಜೀವನಕಾಲದ (ರೆನೆಸಾನ್ಸ್) ಮಾನವತಾವಾದ** ಹಾಗೂ ಲೌಕಿಕ ಸಾಹಿತ್ಯದ ಅಧ್ಯಯನದ ಪುನಃ ಪ್ರಾರಂಭದೊಂದಿಗೆ ಅರಿಸ್ಟಾಟಲನ ಉದಾರ ಶಿಕ್ಷಣದ ಪರಿಕಲ್ಪನೆ ತಾತ್ಕಾಲಿಕವಾಗಿಯಾದರೂ ಪುನರ್ ಸ್ಥಾಪಿತವಾಯಿತು. ಅದರ ಸಾಧನೆಗೆ ಗತಕಾಲದ ಸಾಹಿತ್ಯದ ಅಧ್ಯಯನವನ್ನು ಸಾಧನವಾಗಿ ಅಳವಡಿಸಿಕೊಂಡರೂ ಈ ಕಾಲದ ಉದಾರ ಶಿಕ್ಷಣದ ಒಟ್ಟು ಕಲ್ಪನೆಯಲ್ಲಿ ಕೆಲವು ಪಲ್ಲಟಗಳಾದವು. ಲೌಕಿಕ ಸಾಹಿತ್ಯದ ಅಧ್ಯಯನವನ್ನು ಉದಾರ ಶಿಕ್ಷಣದ ಪರಿಕಲ್ಪನೆಯೊಂದಿಗೆ ಸಮೀಕರಿಸಿಕೊಳ್ಳಲಾಯಿತು. ಲೌಕಿಕ ಸಾಹಿತ್ಯದ ಬಗೆಗಿನ ಪ್ರಭುತ್ವ ಹಾಗೂ ತತ್ಕಾಲದ ಜ್ಞಾನದ ಬೆಳವಣಿಗೆ, ಅದರಲ್ಲೂ ನಿರ್ದಿಷ್ಟವಾಗಿ ಶೀಘ್ರಗತಿಯಲ್ಲಿ ಬೆಳೆಯುತ್ತಿದ್ದ ವಿಜ್ಞಾನ ಇವುಗಳ ನಡುವೆ ಕಂದಕವೇರ್ಪಟ್ಟಿತು. ಉದಾರ ಶಿಕ್ಷಣವು ಸಂಪೂರ್ಣವಾಗಿ ಸಾಹಿತ್ಯಿಕ ಅಧ್ಯಯನ, ಅದರಲ್ಲೂ ಲೌಕಿಕ ಸಾಹಿತ್ಯದ ಅಧ್ಯಯನ ಎಂಬ ಆ ಕಾಲದ ಕಲ್ಪನೆ ಅರಿಸ್ಟಾಟಲನ ಪರಿಕಲ್ಪನೆಯ ನೀತಿಭ್ರಷ್ಟತೆ ಎಂಬ ಅಪವಾದಕ್ಕೆ ಗುರಿಯಾಯಿತು.

ಹತ್ತೊಂಬತ್ತನೇ ಶತಮಾನದ ಮಧ್ಯಭಾಗದ ನಂತರ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಉದಾರ ಶಿಕ್ಷಣವನ್ನು ಅರಿಸ್ಟಾಟಲನ ಹಾದಿಯ ಉದಾರ ಕಲ್ಪನೆಯತ್ತ ಬೆಳೆಸಬೇಕೆಂಬ ಬಲವಾದ ಅಪೇಕ್ಷೆ ಮೈದಳೆಯಿತು. ಆಧುನಿಕ ಜ್ಞಾನವನ್ನು ಈ ಹಿನ್ನೆಲೆಯಲ್ಲಿ ಪುನಾರಚಿಸಬೇಕು ಎಂಬುದರ ಕಡೆಗೆ ಒಲವು ಬೆಳೆಯಿತು. ಉದಾರ ಶಿಕ್ಷಣವನ್ನು ನಂತರದಲ್ಲಿ ಹೆಚ್ಚು ಜನಪ್ರಿಯಗೊಳಿಸಿದವರಲ್ಲಿ ಈ ಶತಮಾನದ **ಜಾನ್ ಹೆನ್ರಿ** ಮುಖ್ಯನಾದವ. **ಕಾರ್ಡಿನಲ್ ನ್ಯೂಮನ್** ಎಂಬಾತನ ಉದಾರ ಶಿಕ್ಷಣದ ಪರಿಕಲ್ಪನೆ ಅರಿಸ್ಟಾಟಲನ ಪರಿಕಲ್ಪನೆಗೆ ಬಹಳ ಹತ್ತಿರವಾದುದು. ಸರಳವಾಗಿ ಹೇಳುವುದಾದರೆ ಉದಾರ ಶಿಕ್ಷಣ ಎಂಬುದು ಬುದ್ಧಿಯ ಬೆಳವಣಿಗೆ, ಬುದ್ಧಿಯ ಪರಾಕಾಷ್ಠತೆ. ನ್ಯೂಮನ್ ಮತ್ತು **ಮ್ಯಾಥ್ಯೂ ಅರ್ನಾಲ್ಡ್** ಪ್ರಕಾರ ವ್ಯಕ್ತಿಗೆ ಜ್ಞಾನದ ಒಟ್ಟು ಪರಿಧಿ ಮುಖ್ಯವಾದುದು. ಆದರೆ ಮಾನವೀಯ ವಿಜ್ಞಾನದ ಅಭ್ಯಾಸಗಳು ಮತ್ತು ಪ್ರಾಕೃತಿಕ ವಿಜ್ಞಾನಗಳ ತೌಲನಿಕ ಮಹತ್ವವನ್ನು ಹೇಳುವಾಗ ಆರ್ನಾಲ್ಡ್ ಮೊದಲನೆಯದಕ್ಕೇ ಮನಸೋತಿದ್ದಾನೆ. ಜೀವನಾನ್ವಯದಲ್ಲಿ ಒಬ್ಬ ವ್ಯಕ್ತಿಗೆ ಜ್ಞಾನವನ್ನು ಕುರಿತ ಸಹಜವಾದ ಅಭಿಕ್ಷಮತೆಗಳೇನೇ ಇರಬಹುದು, ಶಿಕ್ಷಣದ ಮುಖ್ಯ ಗುರಿ ಬುದ್ಧಿಯನ್ನು ಬೆಳೆಸುವುದೇ ಎಂಬುದು ಆರ್ನಾಲ್ಡನ ಮಾತು. ಆರ್ನಾಲ್ಡನ ಈ ವಾದವನ್ನೇ ಮುಂದೆ ಹಚ್ಚಿನ್ ಮತ್ತು ಇತರರು ಪುಷ್ಟೀಕರಿಸಿದ್ದಾರೆ. ಪ್ರಕೃತಿವಾದಿಗಳ ಪ್ರಕಾರ ಮಾನವನು ಪ್ರಾಕೃತಿಕ ಪ್ರಪಂಚದ ಒಂದು ಘಟಕ. ಪರಿಸರದೊಡನೆ ಸಮನ್ವಯದಿಂದ ಬಾಳುವುದೇ ಮಾನವನು ಮಾಡಬಹುದಾದ ಅತ್ಯಂತ ಒಳ್ಳೆಯ ಕೆಲಸ. ಇಂತಹ ಜೀವನವನ್ನು ಮುಂದಿಡುವುದೇ ಉದಾರ ಶಿಕ್ಷಣ. ಅರಿಸ್ಟಾಟಲನ ಪ್ರಕಾರ ಜ್ಞಾನಸಾಧನೆ ಆಂತರಿಕವಾದುದು. ಇದು ಉತ್ತಮಿಕೆಯನ್ನು ಕಟ್ಟಿಕೊಡುತ್ತದೆ. ಇದರ ಸಾಧನೆಯೇ ಮಾನವನ ಅವಶ್ಯಕವಾದ ವಿವೇಚನಾತ್ಮಕ ಸ್ವಭಾವದ ಸಾಧನೆ. ಅರಿಸ್ಟಾಟಲ್ ಹೀಗೆ ಎರಡು ಅಂಶಗಳನ್ನು ಒಂದುಗೂಡಿಸಿ ಹೇಳಿದರೆ, ಈ ಕಾಲದಲ್ಲಿ ಈ ಮಾತು ವಿಭಜನೆಗೊಂಡಿತು. ಮಾತ್ರವಲ್ಲದೆ ಮೊದಲನೆಯ ವಿಚಾರ ತಿರಸ್ಕೃತಗೊಂಡಿತು ಎಂಬುದನ್ನು ಗಮನಿಸಬಹುದು. ಪ್ರಕೃತಿವಾದದ ಪ್ರಕಾರ ಜ್ಞಾನವು ಒಂದು ಸಾಧನವಾಗಿ ಮಹತ್ವ ಉಳ್ಳದ್ದು. ಇದರಿಂದಾಗಿ ಮಾನವ ಅವನ ಸ್ವಾಭಾವಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು. ಇವುಗಳ ಮೂಲಕ ಒಟ್ಟು ಪ್ರಕೃತಿಯೊಂದಿಗೆ ಸಮರಸವಾದ ಜೀವನ ನಡೆಸುವಂತಾಗಬೇಕು. ವಿವೇಚನೆ ವಿವೇಚನೆಗಾಗಿ ಮಾತ್ರವಲ್ಲ. ಅದರ ಮೌಲ್ಯ ನಿರ್ಧಾರವಾಗುವುದು ಮಾನವನ ಇತರ ಸ್ವಭಾವದ ಸಮಷ್ಟಿ ಮತ್ತು ಪ್ರಾಕೃತಿಕ ಜಗತ್ತಿನಲ್ಲಿ ಅವನ ಸ್ಥಾನ ಇವುಗಳ ಆಧಾರದ ಮೇಲೆ.

ಉದಾರವಾದಿ ಶಿಕ್ಷಣವನ್ನು ಪಡೆದವ ಹೇಗಿರಬೇಕು ಎಂಬ ಅಪೇಕ್ಷೆಯನ್ನು ಹತ್ತೊಂಬತ್ತನೆಯ ಶತಮಾನದ **ಆಲ್ಡ್ಯೂಸ್ ಹಕ್ಸ್‌ಲೇ** ಎಂಬಾತ ಮುಂದಿಟ್ಟಿದ್ದಾನೆ. ಪ್ರೌಢಾವಸ್ಥೆಯಲ್ಲಿ ಉದಾರ ಶಿಕ್ಷಣದ ತರಬೇತಿ ಪಡೆದವ ವಿಶಿಷ್ಟ ವ್ಯಕ್ತಿ. ಆತನ ದೇಹ ಅವನ ಮನಸ್ಸಿನ ಸೇವಕನಾಗಿ ಆಜ್ಞಾಧಾರಕನಾಗಿ ಎಲ್ಲ ಕೆಲಸವನ್ನೂ ಸುಲಭವಾಗಿ ಸಂತೋಷವಾಗಿ ಒಂದು ಯಂತ್ರಕೌಶಲದಷ್ಟು ಅಚ್ಚುಕಟ್ಟಾಗಿ ಮಾಡಲು ಸಮರ್ಥವಾಗಿರುತ್ತದೆ. ಅವನ ಬುದ್ಧಿ ಶುದ್ಧಸ್ಫಟಿಕದಂತೆ. ಜೊತೆಗೆ ನುರಿತದ್ದು. ತರ್ಕಬದ್ಧವಾದುದು. ಇದೊಂದು ಇಂಜಿನಿನಂತೆ. ಇದರ ಎಲ್ಲ ಭಾಗಗಳಲ್ಲೂ ಸಮನಾದ ಶಕ್ತಿ ಇದೆ. ಈ ವ್ಯಕ್ತಿಯಲ್ಲಿ ಸಲೀಲವಾದ ಕಾರ್ಯವ್ಯವಸ್ಥೆ ಇದೆ. ಜೇಡರಬಲೆಯನ್ನು ಹಿಂಡಿಬಿಡಲೂ ಮನಸ್ಸಿನ ಲಂಗರುಗಳನ್ನು ಮೆಟ್ಟಿಹೋಗಲೂ ಇದಕ್ಕೆ ಸಾಧ್ಯವಿದೆ. ಇವನ ಮನ ಪ್ರಕೃತಿಯ ಮೂಲಭೂತ ಸತ್ಯಗಳಿಗೆ ಹಿಡಿದ ಕೈಗನ್ನಡಿ. ಪ್ರಕೃತಿಯ ನಡೆವಳಿಕೆಯ ಅರಿವು ಇವನಿಗೆ ಕರತಲಾಮಲಕ. ದೇಹದಂಡಿಸುವ ಯಾವ ತಪಸ್ಸಿಗೂ ಇವನೇನೂ ಕಡಿಮೆಯಲ್ಲ. ಜೀವತುಂಬಿದ ತೇಜಸ್ವಿ ಈತ. ಮನೋವಿಕಾರಗಳನ್ನು ದೃಢವಾದ ಮನಸ್ಸಂಕಲ್ಪಶಕ್ತಿಯಿಂದ ಜಯಿಸಬಲ್ಲ. ಸೌಂದರ್ಯವನ್ನು ಪ್ರಕೃತಿಯಲ್ಲಾಗಲೀ ಕಲೆಯಲ್ಲಾಗಲೀ ಇನ್ನಾವುದೇ ರೂಪದಲ್ಲಾಗಲೀ ಆಳವಾಗಿ ಪ್ರೀತಿಸಬಲ್ಲ. ನೀಚವಾದುದೆಲ್ಲವನ್ನೂ ದ್ವೇಷಿಸುವವನೀತ. ಇತರರನ್ನು ತನ್ನಂತೆಯೇ ಗೌರವಿಸಬಲ್ಲ. ಇಂತಹವನು ಉದಾರ ಶಿಕ್ಷಣ ಪಡೆದಿದ್ದಾನೆ. ಎಂಬುದು ನನ್ನ ಮತ. ಏಕೆಂದರೆ ಪ್ರಕೃತಿಯೊಂದಿಗಿನ ಸಾಮರಸ್ಯವನ್ನು ಮಾನವನ ಗರಿಷ್ಠ ಮಿತಿಯಲ್ಲಿ ಈತ ಸಾಧಿಸಿದ್ದಾನೆ ಎಂಬುದು ಹಕ್ಸ್‌ಲೇಯ ಮಾತು.

ಮುಂದೆ ಬಂದ **ಜಾನ್ ಡ್ಯೂಯಿ**ಯೂ ಸಾಮಾನ್ಯತೆಯನ್ನೇ ಉದಾರ ಶಿಕ್ಷಣ ಎಂದನಾದರೂ ಈ ಸಾಮಾನ್ಯತೆ 'ಪ್ರಕೃತಿಯೊಂದಿಗಿನ ಮನುಕುಲದ ಹೊಂದಾಣಿಕೆಗಾಗಿ' ಎಂದು ಹೇಳುವಲ್ಲಿ ಇದೇ ಅಭಿಪ್ರಾಯವನ್ನು ಅನುಮೋದಿಸಿದ್ದಾನೆ.

ಇಪ್ಪತ್ತನೇ ಶತಮಾನದಲ್ಲಿ ಉದಾರ ಶಿಕ್ಷಣದ ಪರಿಕಲ್ಪನೆ ಸ್ವಲ್ಪ ಭಿನ್ನವಾಗಿಯೇ ಮೂಡಿಬಂದಿದೆ. ವಿಶಿಷ್ಟ ಸಾಮರ್ಥ್ಯ ಅಥವಾ ಕೌಶಲಗಳ ಬೆಳವಣಿಗೆ ಅಲ್ಲದೆ ವಿವೇಚನೆಯ ಬಳಕೆಗೆ ವಿಶಿಷ್ಟವಾದ ಸಾಮಾನ್ಯ ಸಾಮರ್ಥ್ಯಗಳ ಬೆಳವಣಿಗೆಯನ್ನು ಈ ಕಾಲದ ಉದಾರ ಶಿಕ್ಷಣ ಗುರಿಯಾಗಿರಿಸಿಕೊಂಡಿದೆ. General Education for a Free Society ಎಂಬ 1946 ನೇ ಇಸವಿಯ **ಹಾರ್ವರ್ಡ್ ಸಮಿತಿಯ** ವರದಿ ಬುದ್ಧಿಯ/ಮನಸ್ಸಿನ ಅಂತಹ ಸಾಮರ್ಥ್ಯಗಳ ಹಾಗೂ ಗುಣಗಳ ಪಟ್ಟಿಮಾಡಿದೆ. ಪರಿಣಾಮಕಾರಿಯಾಗಿ ಆಲೋಚನೆ ಮಾಡುವ, ಅಭಿಪ್ರಾಯಗಳನ್ನು ಸಂವಹನ ಮಾಡುವ, ಸಮರ್ಪಕ ನಿರ್ಧಾರಗಳನ್ನು ತೀರ್ಪುಗಳನ್ನು ಕೈಗೊಳ್ಳುವ, ಮೌಲ್ಯಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ಸಾಮರ್ಥ್ಯಗಳನ್ನು ಈ ವರದಿ ಮುಂದಿಟ್ಟಿದೆ. ನಾರ್ವೆನ್ ಸ್ಮಿತ್ ಮುಂತಾದ ಮತ್ತೆ ಕೆಲವರು ಸೃಜನಾತ್ಮಕ ಕಲ್ಪನಾಶಕ್ತಿ ಹಾಗೂ ಪ್ರಾಯೋಗಿಕ ವಿವೇಕ ಇವುಗಳನ್ನು ಉದಾರ ಶಿಕ್ಷಣದ ಘಟಕಗಳಾಗಿ ಸೂಚಿಸಿದ್ದಾರೆ. ಮತ್ತೆ ಕೆಲವರ ಪ್ರಕಾರ ಸಾಹಿತ್ಯಾಧ್ಯಯನಕ್ಕೆ ಸಂಬಂಧಿಸಿದ

Digitised by Bharatavani, CIIL

ಸಾಮರ್ಥ್ಯಗಳು ಮುಖ್ಯವಾದರೆ ಮತ್ತೂ ಕೆಲವರ ಪ್ರಕಾರ ಈ ಸಾಮರ್ಥ್ಯಗಳು ವೈಜ್ಞಾನಿಕ ಸಾಧನೆಗೆ ಸಂಬಂಧಪಟ್ಟವುಗಳಾಗಿವೆ. ಈ ಎಲ್ಲ ಸಾಮರ್ಥ್ಯಗಳೂ ಸಾಮಾನ್ಯವಾದವು. ಅಂದರೆ ಎಲ್ಲರಲ್ಲಿಯೂ ಬೆಳೆಸಲು ಸಾಧ್ಯವಾಗುವಂತಹವು.

ಈ ಉಪಕ್ರಮದಲ್ಲಿ ಕೆಲವು ಗೊಂದಲಗಳಿವೆ. ಇವರ ಪ್ರಕಾರ ಉದಾರಶಿಕ್ಷಣವು ಗಮನಕೊಡಬೇಕಾದ ಸಾಮಾನ್ಯವೂ ವಿವೇಚನಾಶೀಲವೂ ಆದ ಸಾಮರ್ಥ್ಯಗಳಾವುವು ಎಂಬುದು ಸ್ಪಷ್ಟವಾಗುವುದಿಲ್ಲ. ಪರಿಣಾಮಕಾರಿ ಆಲೋಚನೆ ಮತ್ತು ಸೃಜನಶೀಲ ಕಲ್ಪನಾಶಕ್ತಿ ಈ ಸಾಮರ್ಥ್ಯಗಳ ಅನ್ವಯದ ಸ್ವರೂಪ ವಿಜ್ಞಾನ ಹಾಗೂ ಕಾವ್ಯದಲ್ಲಿ ಬೇರೆ ಬೇರೆ. ಈ ಅಂಶವೂ ಗೊಂದಲಕ್ಕೆ ಒಂದು ಕಾರಣ.

ಈಚೆಗೆ ಉದಾರ ಶಿಕ್ಷಣವನ್ನು ಕುರಿತ ಸಮಗ್ರ ಚಿಂತನೆ ಮಾಡುವ ಪ್ರಯತ್ನಗಳು ನಡೆದಿವೆ. ಉದಾರಶಿಕ್ಷಣಕ್ಕೆ ವಿಶಿಷ್ಟವಾದ ಜ್ಞಾನ, ತಿಳಿವಳಿಕೆ ಹಾಗೂ ಸಾಮರ್ಥ್ಯಗಳನ್ನು ಗುರುತಿಸುವ ಕೆಲಸಗಳಾಗಿವೆ. ಇದರಲ್ಲಿ 'ಸರ್ವಾಂಗೀಣ ವಿವೇಚನೆ' ಎಂಬುದು ಬಹಳ ಮುಖ್ಯ. **ಹಿರ್ಸ್ಟ್** (1965) ಎಂಬಾತ ಈ ರೀತಿಯ ಏಳು ಜ್ಞಾನಧಾರೆಗಳನ್ನು ಸೂಚಿಸಿದ್ದಾನೆ. ಗಣಿತ, ಭೌತವಿಜ್ಞಾನ, ಮಾನಸಿಕ ವಿಜ್ಞಾನಗಳು ಮತ್ತು ಇತಿಹಾಸ, ಧರ್ಮ, ಸಾಹಿತ್ಯ ಮತ್ತು ಲಲಿತಕಲೆ, ನೀತಿ ಹಾಗೂ ತತ್ವಶಾಸ್ತ್ರ ಇವು ಆ ಜ್ಞಾನಧಾರೆಗಳು. ಉದಾರ ಶಿಕ್ಷಣದ ಈ ನೀತಿ ಈ ವಿಷಯಗಳ ವಿವರಣೆ ಕೊಡುವುದಕ್ಕಿಂತ ಈ ಚಿಂತನಾ ಪ್ರಕಾರಗಳ ಹಿಡಿತವನ್ನು ಸಾಧಿಸುವತ್ತ ಲಕ್ಷ್ಯ ವಹಿಸುವುದು ಎಂದಾದರೆ ಅದು ಸಾಧುವೂ ಹೌದು, ಸಾಧ್ಯವೂ ಹೌದು.

ಉದಾರ ಶಿಕ್ಷಣದ ಪರಿಕಲ್ಪನೆ ಇಷ್ಟೆಲ್ಲಾ ಮಜಲುಗಳನ್ನು ದಾಟಿ ಬಂದಿದ್ದರೂ ಅರಿಸ್ಟಾಟಲನ ಮೂಲ ಪರಿಕಲ್ಪನೆಯ ಹೊಳಹುಗಳನ್ನು ಒಳಗೊಂಡ ಉದಾರ ಶಿಕ್ಷಣ ಇಂದಿನ ಅಗತ್ಯ. ಶಿಕ್ಷಣದ ಇಂತಹ ವಿಷಯಗಳು ಮಾನವನ ಅನ್ವೇಷಣೆಯ ವಿವೇಚನಾತ್ಮಕ ಸಾಧನೆಗಳನ್ನು ಒಳಗೊಳ್ಳಬೇಕು. ಶಿಕ್ಷಣದ ಒಳಗೆ ಈ ಸಾಧನೆಗಳು ಅವುಗಳ ಸಾಧನೆಗಾಗಿ ಮಾತ್ರವೇ ಎಂಬುದು ಗಮನಾರ್ಹ. ಅಂದರೆ ಅವು ಕೊಡುವ ಜ್ಞಾನ ಮತ್ತು ತಿಳಿವಳಿಕೆಗಾಗಿ. ಅವುಗಳು ಒಳಗೊಳ್ಳುವ ಬೌದ್ಧಿಕ ಗುಣಗಳಿಗಾಗಿ, ಸಾಮರ್ಥ್ಯಗಳಿಗಾಗಿ. ಉಪಯೋಗಕಾರಿತ್ವದ ಆಲೋಚನೆಗಳು ಇದರ ಒಳಗೆ ಬರಬಾರದು.ಅರಿಸ್ಟಾಟಲನೇ ಹೇಳುವಂತೆ ಸಂಕುಚಿತ ಭಾವನೆಗಳನ್ನು ಇವು ತಡೆಗಟ್ಟಬೇಕು. ಈ ಹಿನ್ನೆಲೆಯಲ್ಲಿ ಉದಾರ ಶಿಕ್ಷಣದ ಮಂಡನೆ ವಿವೇಚನೆಯ ಬೆಳವಣಿಗೆಯ ವೇದಿಕೆಯಲ್ಲಿ ಸಜ್ಜಾಗಿ ಸ್ಥಾಪಿತವಾಗಬೇಕು.

– ಎ.ಶ.

## ಉನ್ನತ ಪ್ರೌಢಶಾಲೆ / ಪದವಿ ಪೂರ್ವ ಶಿಕ್ಷಣ ವ್ಯವಸ್ಥೆ

ಹತ್ತು ವರ್ಷಗಳ ಶಾಲಾ ಶಿಕ್ಷಣ ಪ್ರೌಢಶಿಕ್ಷಣವಾದರೆ ಅನಂತರದ ಎರಡು ವರ್ಷಗಳ ಶಿಕ್ಷಣವನ್ನು ಉನ್ನತ ಪ್ರೌಢಶಿಕ್ಷಣ ಅಥವಾ ಪದವಿ ಪೂರ್ವ ಶಿಕ್ಷಣ ಎನ್ನುವರು.

ಕೇಂದ್ರ ಶಿಕ್ಷಣ ವ್ಯವಸ್ಥೆಯಲ್ಲಿ ಉನ್ನತ ಪ್ರೌಢಶಿಕ್ಷಣವು ಎರಡು ವರ್ಷದ ಅವಧಿಯನ್ನು ಹೊಂದಿದೆ. ಈ ಹಂತವನ್ನು ಉನ್ನತ ಪ್ರೌಢಶಿಕ್ಷಣ ಎನ್ನುತ್ತಾರೆ. ಅಲ್ಲಿನ ತರಗತಿಗಳನ್ನು 11 ಮತ್ತು 12ನೇ ತರಗತಿಗಳೆಂದು ಕರೆಯುತ್ತಾರೆ. ಈ ಹಂತದ ಶಿಕ್ಷಣವು ಮಾಧ್ಯಮಿಕ ಶಿಕ್ಷಣ ಕೇಂದ್ರೀಯ ಮಂಡಳಿ (CBSE)ಯ ಪಠ್ಯ ವಸ್ತುವಿಗನುಸಾರವಾಗಿ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತದೆ. ಇದರ ವ್ಯಾಪ್ತಿಗೆ ಈ ಕೆಳಕಂಡ ಶಾಲೆಗಳು ಬರುತ್ತವೆ. ಅವುಗಳೆಂದರೆ,

1. ಪಬ್ಲಿಕ್ ಸ್ಕೂಲ್‌ಗಳು
2. ನವೋದಯ ಶಾಲೆಗಳು
3. ಸೈನಿಕ ಶಾಲೆಗಳು
4. ಕೇಂದ್ರೀಯ ಶಾಲೆಗಳು

ಈ ಶಾಲೆಗಳ ಪಠ್ಯಕ್ರಮವು ರಾಜ್ಯ ಮಟ್ಟದ ಪ್ರೌಢಶಾಲೆಗಳ ಪಠ್ಯವಸ್ತುವಿಗಿಂತ ಭಿನ್ನ ಮತ್ತು ಕಠಿಣವಾಗಿರುತ್ತದೆ. ಈ ಹಂತದ ಪಠ್ಯವಸ್ತುವನ್ನು ರಾಷ್ಟ್ರೀಯ ಶೈಕ್ಷಣಿಕ ಮತ್ತು ಸಂಶೋಧನಾ ತರಬೇತಿ ಮಂಡಳಿ (NCERT)ಯು ರಚಿಸುತ್ತದೆ. ಈ ಹಂತದ ಶಿಕ್ಷಣ ವ್ಯವಸ್ಥೆ, ಪರೀಕ್ಷಾ ವ್ಯವಸ್ಥೆ ಮತ್ತು ಆಡಳಿತ ವ್ಯವಸ್ಥೆಯನ್ನು ಕೇಂದ್ರೀಯ ಶಿಕ್ಷಣ ಸಲಹಾ ಮಂಡಲಿ (CBSE) ಯು ನಿರ್ವಹಿಸುತ್ತದೆ. ಬೋಧನಾ ಮಾಧ್ಯಮವು ಪೂರ್ಣವಾಗಿ ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲಿರುತ್ತದೆ.

1959ಕ್ಕೆ ಮೊದಲು ಪ್ರೌಢಶಾಲಾ ಶಿಕ್ಷಣದ ನಂತರ ಎರಡು ವರ್ಷ ಅವಧಿಯ ಇಂಟರ್‌ಮೀಡಿಯಟ್ ಶಿಕ್ಷಣ ವ್ಯವಸ್ಥೆ ಇದ್ದಿತು. ನಂತರ ಅದನ್ನು ರದ್ದುಪಡಿಸಿ ಒಂದು ವರ್ಷದ ಪ್ರೀ ಯೂನಿವರ್ಸಿಟಿ ಶಿಕ್ಷಣ ಕೋರ್ಸನ್ನು ಪ್ರಾರಂಭಿಸಲಾಯಿತು. ಪ್ರೌಢಶಿಕ್ಷಣಕ್ಕೆ ಒಂದು ವರ್ಷದ ಪ್ರೀ ಯೂನಿವರ್ಸಿಟಿ ಕೋರ್ಸನ್ನು ಸೇರಿಸಿ ಅಂತಹ ಶಾಲೆಗಳನ್ನು ಹೈಯರ್ ಸೆಕೆಂಡರಿ ಶಾಲೆಗಳು ಅಥವಾ ಉನ್ನತ ಪ್ರೌಢಶಾಲೆಗಳೆಂದು ಕರೆಯಬೇಕೆಂಬುದು 1953ರ ಮೊದಲಿಯಾರ್ ಆಯೋಗದ ಸಲಹೆಯಾಗಿತ್ತು. ಎಲ್ಲಿ ಪ್ರೀಯೂನಿವರ್ಸಿಟಿ ಕೋರ್ಸಿನ ಅವಶ್ಯಕತೆ ಇದೆಯೋ ಅಂತಹ ಕಡೆಗಳಲ್ಲಿ ಮಾತ್ರ ಈಗಿರುವ ಪ್ರೌಢಶಾಲೆಗಳನ್ನು ಉನ್ನತ ಪ್ರೌಢಶಾಲೆಗಳನ್ನಾಗಿ ಪರಿವರ್ತಿಸಲು ಸಲಹೆ ಮಾಡಿತು. ಜೊತೆಗೆ ಹಲವು ವಿವಿಧೋದ್ದೇಶ ಪ್ರೌಢಶಾಲೆಗಳನ್ನು ಸ್ಥಾಪಿಸಲು ಸಲಹೆ ಮಾಡಿತು. ವಿದ್ಯಾರ್ಥಿಗಳು ಈ ಹಂತದಲ್ಲಿಯೇ ತಮಗೆ ಸೂಕ್ತ ಎನಿಸುವ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಶಿಕ್ಷಣ ಪೂರೈಸಿದ ನಂತರ ವೃತ್ತಿಗೆ ಸೇರಲು ಅವಕಾಶಮಾಡಿಕೊಟ್ಟಿತು. ಇದರಿಂದ ದೇಶದಾದ್ಯಂತ ಪ್ರೌಢಶಾಲೆಗಳು ವೃತ್ತಿ ಶಿಕ್ಷಣ ನೀಡಲು ಪ್ರಾರಂಭಿಸಿದವು. ಆದರೆ ಶಾಲಾ ಕಟ್ಟಡಗಳ ಶಿಕ್ಷಕರ ಹಾಗೂ ಉಪಕರಣಗಳ ಕೊರತೆಯಿಂದಾಗಿ ಈ ಶಾಲೆಗಳು ನಿರ್ದಿಷ್ಟ ಗುರಿ ಸಾಧಿಸಲು ವಿಫಲವಾದವು.

ಡಾ॥ ಕೊಠಾರಿ ಶಿಕ್ಷಣ ಆಯೋಗದ (1964–66) ಶಿಫಾರಸ್ಸಿನ ಮೇರೆಗೆ ರಾಷ್ಟ್ರಮಟ್ಟದ ಏಕರೂಪದ ಶಿಕ್ಷಣ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ಪ್ರಯತ್ನದಲ್ಲಿ ಕರ್ನಾಟಕದಲ್ಲೂ ಸಹ 10+2+3 ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲಾಯಿತು. ಅದರಂತೆ 10 ವರ್ಷದ ಪ್ರೌಢಶಾಲಾ ಶಿಕ್ಷಣದ ನಂತರ +2 ಶಿಕ್ಷಣ ಹಂತ (ಪಿ.ಯು.ಸಿ.)ವು 1971–72 ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೆ ಬಂದಿತು. ಆಗಲೇ ಪದವಿಪೂರ್ವ ಶಿಕ್ಷಣ ಮಂಡಳಿಯು ಅಸ್ತಿತ್ವಕ್ಕೆ ಬಂದಿತು. ಪ್ರಾರಂಭದಲ್ಲಿ ಪದವಿಪೂರ್ವ ಕಾಲೇಜುಗಳನ್ನು ಕಿರಿಯ ಕಾಲೇಜುಗಳೆಂದು ಕರೆಯುತ್ತಿದ್ದರು. ಕಾಲಕ್ರಮೇಣ ಪದವಿಪೂರ್ವ ಕಾಲೇಜುಗಳೆಂದು ಪರಿವರ್ತನೆ ಮಾಡಲಾಯಿತು. ನಂತರದಲ್ಲಿ ಸ್ವತಂತ್ರವಾಗಿದ್ದ ಪದವಿಪೂರ್ವ ಶಿಕ್ಷಣ ಮಂಡಳಿಯನ್ನು ರದ್ದುಪಡಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ವಿಲೀನ ಗೊಳಿಸಲಾಯಿತು.

ಪದವಿಪೂರ್ವ ಶಿಕ್ಷಣ ಹಂತವನ್ನು ತಮಿಳುನಾಡು ಹಾಗೂ ಉಳಿದ ರಾಜ್ಯದಲ್ಲಿ "ಉನ್ನತ ಪ್ರೌಢಶಿಕ್ಷಣ" ಎಂದೂ ಆಂಧ್ರ ಪ್ರದೇಶದಲ್ಲಿ "ಪ್ರೀ ಡಿಗ್ರಿ ಶಿಕ್ಷಣ" ಎಂದೂ ಕರೆಯುತ್ತಾರೆ.

Digitised by Bharatavani, CIIL

ದೇಶದ ಹಲವು ರಾಜ್ಯಗಳು ಕೊಠಾರಿ ಆಯೋಗದ ಶಿಫಾರಸ್ಸುಗಳನ್ನು ಕಡ್ಡಾಯವಾಗಿ ಪಾಲಿಸುತ್ತಿಲ್ಲ. ಹೀಗಾಗಿ ಎರಡು ವರ್ಷಗಳ ಪಿ.ಯು.ಸಿ. ಶಿಕ್ಷಣದ ಬದಲಿಗೆ 11 ಮತ್ತು 12ನೇ ತರಗತಿಗಳನ್ನು ಉಳಿಸಿಕೊಂಡಿರುವ ಶಾಲೆಗಳನ್ನು ಉನ್ನತ ಪ್ರೌಢಶಾಲೆಗಳೆಂದು ಕರೆಯುವರು.

ಹತ್ತು ವರ್ಷಗಳ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ನಂತರ ಪಡೆಯುವ +2 ಹಂತದ ಶಿಕ್ಷಣವನ್ನು ಪದವಿಪೂರ್ವ ಶಿಕ್ಷಣ ಎನ್ನುವರು. ಪದವಿ ತರಗತಿಯ ಮುನ್ನ ಪಡೆಯುವ ಶಿಕ್ಷಣ ಆಗಿರುವುದರಿಂದ ಇದು ಪದವಿಪೂರ್ವ ಶಿಕ್ಷಣವಾಗಿದೆ.

ಪಿ.ಯು. ಶಿಕ್ಷಣ ಹಂತವು ಪ್ರೌಢಶಾಲಾ ಹಂತದವರೆಗಿನ ಹಾಗೂ ಉನ್ನತ ಶಿಕ್ಷಣ ಹಂತದ ಮಧ್ಯದ ಸೇತುವೆ ಆಗಿದೆ. ವಿದ್ಯಾರ್ಥಿಗಳ ಭವಿಷ್ಯದಲ್ಲಿ +2 ಹಂತ ಮಹತ್ವದ ಘಟ್ಟವಾಗಿದೆ. ಸಾಮಾನ್ಯವಾಗಿ ಪದವಿಪೂರ್ವ ಕಾಲೇಜು ಶಿಕ್ಷಣಕ್ಕೆ ಪ್ರವೇಶ ಪಡೆಯುವ ಮಕ್ಕಳು 16 ಅಥವಾ 17 ವರ್ಷದ ತಾರುಣ್ಯಾವಸ್ಥೆಯ ಹಂತದಲ್ಲಿರುತ್ತಾರೆ.

**ಪದವಿಪೂರ್ವ ಶಿಕ್ಷಣದ ಆಡಳಿತ ವ್ಯವಸ್ಥೆ:** ಕರ್ನಾಟಕದಲ್ಲಿ ಪದವಿ ಪೂರ್ವ ಶಿಕ್ಷಣ ಮಂಡಳಿಯು ಅಸ್ತಿತ್ವಕ್ಕೆ ಬರುವ ಮುನ್ನ ಪಿ.ಯು. ಶಿಕ್ಷಣವು ಕಾಲೇಜು ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿತ್ತು. ಆಗ ಪಿ.ಯು. ಶಿಕ್ಷಣದ ಅವಧಿಯು ಒಂದು ವರ್ಷದ ಅವಧಿ ಆಗಿತ್ತು. ಕೊಠಾರಿ ಆಯೋಗದ ಸಲಹೆಗನುಸಾರವಾಗಿ ಅದನ್ನು ಎರಡು ವರ್ಷದ ಜೂನಿಯರ್ ಕಾಲೇಜುಗಳನ್ನಾಗಿ ಪರಿವರ್ತನೆ ಮಾಡಲಾಯಿತು. ಉನ್ನತ ಪ್ರೌಢಶಾಲೆಯ 11ನೇ ತರಗತಿಗೆ 12ನೇ ತರಗತಿಯನ್ನು ಸೇರಿಸಿಕೊಂಡು ಎರಡು ವರ್ಷದ ಪಿ.ಯು. ತರಗತಿಗಳು ಪ್ರಾರಂಭವಾದವು. ಪಿ.ಯು.ಸಿ. ಶಿಕ್ಷಣದ ಆಡಳಿತಕ್ಕಾಗಿ ಪ್ರತಿರಾಜ್ಯದಲ್ಲಿಯೂ ಪಿ.ಯು. ಸಲಹಾ ಮಂಡಳಿ ರಚನೆಯಾಯಿತು. ಆದರೆ ಅದರ ಆಡಳಿತದ ಬಹು ಭಾಗ ರಾಜ್ಯದ ಶಿಕ್ಷಣ ಇಲಾಖೆಗೆ ಸೇರಿದ್ದು. ಖಾಸಗಿ ಸಂಸ್ಥೆಗಳ ಮೇಲ್ವಿಚಾರಣೆ, ಅನುದಾನ ನೀಡುವಿಕೆ, ಪರೀಕ್ಷೆ, ಪಠ್ಯಕ್ರಮರಚನೆ, ಪಠ್ಯಪುಸ್ತಕಗಳ ನಿಯೋಜನೆ, ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ, ಅಂಕಪಟ್ಟಿ ವಿತರಣೆ ಮುಂತಾದ ಕಾರ್ಯಗಳು ನೂತನವಾಗಿ ಅಸ್ತಿತ್ವಕ್ಕೆ ಬಂದು ಸಲಹಾ ಮಂಡಳಿಗೆ ಸೇರಿದವು ಈ ಸಲಹಾ ಮಂಡಳಿಯ ಸಲಹೆಯಂತೆ ಕಾರ್ಯನಿರ್ವಹಿಸಲು ಒಬ್ಬ IAS ದರ್ಜೆಯ ನಿರ್ದೇಶಕರನ್ನು ನೇಮಿಸಲಾಯಿತು. ಇವರಿಗೆ ಸಹಾಯಕರಾಗಿ ಸಹಾಯಕ ನಿರ್ದೇಶಕರು, ಜಂಟಿನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ ಇರುವುದು. ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು ಇರುವರು. ಪದವಿ ಪೂರ್ವ ಶಿಕ್ಷಣ ಮಂಡಳಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿಲೀನವಾಗಿರುವುದರಿಂದ ಎಲ್ಲರೂ ಸಾರ್ವಜನಿಕ ಶಿಕ್ಷಣ ಆಯುಕ್ತರ (CPI) ಮಾರ್ಗದರ್ಶನ ಮತ್ತು ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುವರು.

**ಉದ್ದೇಶಗಳು**

1. ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಯನ್ನುಂಟು ಮಾಡುವುದು.
2. ನಿರ್ದಿಷ್ಟ ವಿಷಯಗಳಲ್ಲಿ ಉನ್ನತ ಶಿಕ್ಷಣದಲ್ಲಿ ಅಗತ್ಯವಾದ ಜ್ಞಾನವನ್ನು ವಿದ್ಯಾರ್ಥಿಗಳಿಗೆ ನೀಡುವುದು.
3. ಸಾಮಾನ್ಯ ಶಿಕ್ಷಣ ಪಡೆಯಲು ಪದವಿ ಕಾಲೇಜುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಒತ್ತಡವನ್ನು ಕಡಿಮೆ ಮಾಡುವುದಕ್ಕಾಗಿ ಪದವಿಪೂರ್ವ ಶಿಕ್ಷಣ ಹಂತದಿಂದಲೇ ವೃತ್ತಿಪರ ಕೋರ್ಸ್ (JOC) ಗಳಲ್ಲಿ ಶಿಕ್ಷಣ ನೀಡುವುದು.
4. ವಿದ್ಯಾರ್ಥಿಗಳು ತಮಗೆ ಆಸಕ್ತಿ ಇರುವ ಐಚ್ಛಿಕ ಸಂಯೋಜನೆಗಳನ್ನು ಆಯ್ಕೆ ಮಾಡಿಕೊಂಡು, ನಂತರ ಬಿ.ಎ., ಬಿ.ಎಸ್ಸಿ., ಬಿ.ಕಾಂ., ವೈದ್ಯಕೀಯ, ಇಂಜಿನಿಯರಿಂಗ್, ಡೆಂಟಲ್, ಬಿ.ವಿ.ಎಸ್.ಸಿ. ಆಯುರ್ವೇದ, ಬಿ.ಎಸ್ಸಿ, ನರ್ಸಿಂಗ್, ಬಿ.ಎಸ್ಸಿ., ಡಿಗ್ರಿ, ಡಿ.ಇಡಿ, ಇವೇ ಮೊದಲಾದ ವೃತ್ತಿಪರ ಕೋರ್ಸ್‌ಗಳಲ್ಲಿ ಶಿಕ್ಷಣ ಪಡೆಯುವ ಸಾಮರ್ಥ್ಯ ಬೆಳೆಸುವುದು.
5. ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬೆಳೆಸುವುದು.
6. ನಾಗರಿಕತ್ವದ ತರಬೇತಿ ಹಕ್ಕು ಮತ್ತು ಕರ್ತವ್ಯಗಳ ಅರಿವು ಮೂಡಿಸುವುದು.
7. ಶಿಸ್ತು, ಸಹಕಾರ, ಹೊಂದಾಣಿಕೆ, ಸಾಮಾಜಿಕ ಅರಿವು, ತಾಳ್ಮೆ ಮತ್ತು ದೇಶ ಪ್ರೇಮವನ್ನು ಬೆಳೆಸುವುದು.
8. ನಾಯಕತ್ವದ ಗುಣ ಬೆಳೆಸುವುದು.
9. ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ ಪ್ರೋತ್ಸಾಹ ನೀಡುವುದು.
10. ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಶಿಕ್ಷಕರಿಗೆ ಸೇವಾವಧಿ ಶಿಕ್ಷಣವನ್ನು ನೀಡುವುದು.

ಇವೇ ಮೊದಲಾದ ಉದ್ದೇಶಗಳ ಮೂಲಕ ತರುಣರ ಭಾವೀ ಜೀವನಕ್ಕೆ ಭದ್ರ ತಳಹದಿ ಹಾಕುವುದರ ಮೂಲಕ ವಿದ್ಯಾರ್ಥಿಗಳನ್ನು ನಿರ್ದಿಷ್ಟ ಗುರಿಯತ್ತ ಕೊಂಡೊಯ್ಯುವುದು.

ಜೂನಿಯರ್ ಕಾಲೇಜುಗಳು ಅಸ್ತಿತ್ವಕ್ಕೆ ಬಂದಂತೆ ಪ್ರೌಢಶಾಲೆಗಳಲ್ಲಿದ್ದ ಐಚ್ಛಿಕ ವಿಷಯಗಳನ್ನು ತೆಗೆದು ಹಾಕಲಾಯಿತು +2 ಹಂತದಲ್ಲಿ ಮಾತ್ರ ಅದಕ್ಕೆ ಅವಕಾಶ ಕಲ್ಪಿಸಿ ಪ್ರೌಢ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣವನ್ನಾಗಿ ಮಾಡಲಾಯಿತು. ವಿಶ್ವವಿದ್ಯಾಲಯದಿಂದ ಒಂದು ವರ್ಷದ ಶಿಕ್ಷಣವನ್ನು ಬೇರ್ಪಡಿಸಿದ ನಂತರ ಅದು ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣದ ಕಡೆಗೆ ಗಮನ ನೀಡಲು ಅನುಕೂಲವಾಯಿತು ಈ ದಿಶೆಯಲ್ಲಿ ಪದವಿಪೂರ್ವ ಹಂತದಲ್ಲಿ ಶಿಕ್ಷಣ ನೀಡುವಂತಹ ಕಾಲೇಜುಗಳಲ್ಲಿ ಅನೇಕ ಬಗೆಗಳಿವೆ. ಅವುಗಳೆಂದರೆ,

1. ಸರ್ಕಾರಿ ಸ್ವತಂತ್ರ ಪದವಿ-ಪೂರ್ವ ಕಾಲೇಜುಗಳು.
2. ಸರ್ಕಾರಿ ಸಂಯುಕ್ತ ಪದವಿ-ಪೂರ್ವ ಕಾಲೇಜುಗಳು.
3. ಖಾಸಗಿ ಸ್ವತಂತ್ರ ಪದವಿ-ಪೂರ್ವ ಕಾಲೇಜುಗಳು.
4. ಖಾಸಗಿ ಸಂಯುಕ್ತ ಪದವಿ-ಪೂರ್ವ ಕಾಲೇಜುಗಳು.
5. ಅನುದಾನ ರಹಿತ ಮಾನ್ಯತೆ ಪಡೆದ ಪದವಿ-ಪೂರ್ವ ಕಾಲೇಜುಗಳು.

ಈಗಾಗಲೇ ಪದವಿ ಕಾಲೇಜುಗಳೊಂದಿಗೆ ಇದ್ದ ಪದವಿ ಪೂರ್ವ ಕಾಲೇಜುಗಳನ್ನು ಬೇರ್ಪಡಿಸಲಾಗಿದೆ. ಅದೇ ರೀತಿ ಸಂಯುಕ್ತ ಪ್ರೌಢಶಾಲೆಗಳೊಂದಿಗಿರುವ ಪದವಿ ಪೂರ್ವ ಕಾಲೇಜುಗಳನ್ನು ಪ್ರತ್ಯೇಕಗೊಳಿಸುವ ಉದ್ದೇಶ ಸರ್ಕಾರದ ಮುಂದಿದೆ.

ಎಸ್.ಎಸ್.ಎಲ್.ಸಿ. ವರೆಗಿನ ಶಿಕ್ಷಣವು ದಿನನಿತ್ಯದ ಜೀವನಕ್ಕೆ ಅಗತ್ಯವಾದ ಜ್ಞಾನವನ್ನು ನೀಡುವ ಶಿಕ್ಷಣವಾಗಿದೆ. ಆದರೆ ಪದವಿ ಪೂರ್ವ ಹಂತದಲ್ಲಿ ತಮಗೆ ಆಸಕ್ತಿ ಅಭಿರುಚಿ ಇರುವಂತಹ ಐಚ್ಛಿಕ ಸಂಯೋಜನೆಗಳನ್ನು ಆಯ್ಕೆ ಮಾಡಿಕೊಂಡು ವಿಜ್ಞಾನ, ಕಲೆ, ವಾಣಿಜ್ಯ ವಿಭಾಗಗಳಲ್ಲಿ ಹಾಗೂ ವೃತ್ತಿ ಶಿಕ್ಷಣ ಕೋರ್ಸ್ (ಜೆ.ಓ.ಸಿ.) ನಲ್ಲಿ ಅಧ್ಯಯನ ಮುಂದುವರೆಸಬಹುದಾಗಿದೆ. ಜೊತೆಗೆ ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್,

Digitised by Bharatavani, CIIL

ಸಂಖ್ಯಾಶಾಸ್ತ್ರ, ಬೇಸಿಕ್ ಮ್ಯಾಥಮೆಟಿಕ್ಸ್ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗಿದೆ.

**ಪಠ್ಯಕ್ರಮ:** ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಕೊಠಾರಿ ಆಯೋಗವು (1964–66) ಈ ಕೆಳಕಂಡ ಸಲಹೆಗಳನ್ನು ನೀಡಿದೆ.

1. ಪಠ್ಯಕ್ರಮ ಕಾಲಕಾಲಕ್ಕೆ ತಕ್ಕಂತೆ ಸುಧಾರಣೆ ಆಗಬೇಕು.
2. ಸಮಾಜದ ಬದಲಾವಣೆಗಳಿಗನುಗುಣವಾಗಿ ಪಠ್ಯ ಪುಸ್ತಕಗಳು ರಚನೆ ಆಗಬೇಕು.
3. ಪಠ್ಯಕ್ರಮದಲ್ಲಿರುವ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಅಧ್ಯಾಪಕರಿಗೆ ತರಬೇತಿ ನೀಡಬೇಕು.
4. ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಮತ್ತು ರಚನಾತ್ಮಕ ಚಟುವಟಿಕೆಗಳನ್ನು ಬೆಳೆಸುವಂತಹ ಅಂಶಗಳನ್ನು ಪಠ್ಯವಸ್ತು ಒಳಗೊಂಡಿರಬೇಕು.

ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯ ವಸ್ತುವನ್ನು ರಚಿಸಲಾಗುತ್ತಿದೆ. ಪದವಿಪೂರ್ವ ಹಂತದಲ್ಲಿ ವೈವಿಧ್ಯಮಯ ವಿಷಯಗಳಿದ್ದು, ಆ ಎಲ್ಲ ವಿಷಯಗಳಿಗೆ ಪಠ್ಯವಸ್ತುವನ್ನು ರಚಿಸಲು ಪಠ್ಯಪುಸ್ತಕ ಮಂಡಳಿಯನ್ನು ನೇಮಿಸಲಾಗುತ್ತದೆ. ಈ ಮಂಡಳಿಯು ಪಠ್ಯವಸ್ತುವನ್ನು ರಚಿಸುತ್ತದೆ. 5–10 ವರ್ಷಗಳಿಗೊಮ್ಮೆ ಪಠ್ಯವಸ್ತು ಪುನರ್ ರಚನೆ ಆಗುವುದು.

ಪಠ್ಯವಿಷಯವು ಎರಡು ಭಾಗಗಳನ್ನು ಒಳಗೊಂಡಿರುತ್ತದೆ. ಭಾಗ–1ರಲ್ಲಿ ಆಯ್ಕೆಮಾಡಿಕೊಂಡಿರುವ ಯಾವುದಾದರೂ ಎರಡು ಭಾಷಾ ವಿಷಯಗಳಿರುತ್ತವೆ. ಭಾಗ–2ರಲ್ಲಿ ಆಯ್ಕೆಮಾಡಿಕೊಂಡ ಸಂಯೋಜನೆಯಲ್ಲಿ ಯಾವುದಾದರೂ ನಾಲ್ಕು ಐಚ್ಛಿಕ ವಿಷಯಗಳಿರುತ್ತವೆ.

ಮೌಲ್ಯಮಾಪನವು ನಿರಂತರ ಪ್ರಕ್ರಿಯೆ ಆಗಿರುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ತಿಳಿಯಲು ಹಾಗೂ ಶಿಕ್ಷಕರ ಬೋಧನಾ ಸಾಫಲ್ಯವನ್ನು ಅಳೆಯಲು ಪರೀಕ್ಷೆಗಳನ್ನು ಕಾಲಕಾಲಕ್ಕೆ ನಡೆಸಿಕೊಂಡು ಬರಲಾಗುತ್ತದೆ.

ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸವನ್ನುಂಟು ಮಾಡುವುದಕ್ಕಾಗಿ ಅನೇಕ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಕ್ಕೆ ತರುತ್ತಿದೆ. ಆಂತರಿಕ ಪರೀಕ್ಷೆ, ಬಾಹ್ಯಪರೀಕ್ಷೆ ಮತ್ತು ಪ್ರಶ್ನೆಪತ್ರಿಕೆಗಳ ಸುಧಾರಣಾ ಕ್ರಮಗಳನ್ನು ವೈಜ್ಞಾನಿಕ ರೀತಿಯಲ್ಲಿ ಕೈಗೊಳ್ಳುತ್ತಿದೆ.

ವಿದ್ಯಾರ್ಥಿಗಳ ಕಲಿಕೆಯ ಮೌಲ್ಯಮಾಪನ ಮಾಡಲು ಕಿರುಪರೀಕ್ಷೆ, ಅರ್ಧವಾರ್ಷಿಕ ಪರೀಕ್ಷೆ, ಪೂರ್ವ ಸಿದ್ಧತಾ ಪರೀಕ್ಷೆಯನ್ನು ನಡೆಸುತ್ತದೆ. ಕೊನೆಗೆ ವಾರ್ಷಿಕ ಪರೀಕ್ಷೆಯನ್ನು ರಾಜ್ಯಮಟ್ಟದಲ್ಲಿ ನಡೆಸುತ್ತದೆ. ಪ್ರಥಮ ಪಿ.ಯು.ಸಿ. ತರಗತಿಯ ಪರೀಕ್ಷೆಯನ್ನು ಆಯಾ ಜಿಲ್ಲಾಮಟ್ಟದಲ್ಲಿ ನಡೆಸಲಾಗುತ್ತಿತ್ತು. ಆದರೆ ಕಳೆದ ವರ್ಷದಿಂದ ಈ ಪರೀಕ್ಷೆಯನ್ನು ರಾಜ್ಯಮಟ್ಟದಲ್ಲಿ ನಡೆಸಲಾಗುತ್ತಿದೆ. ವಿಜ್ಞಾನ ವಿಷಯಗಳಲ್ಲಿ ವಿದ್ಯಾರ್ಥಿಗಳು ನಡೆಸುವ ಪ್ರಯೋಗಗಳಿಗೆ ಮತ್ತು ಪ್ರಯೋಗಗಳ ದಾಖಲೆಗಳಿಗನುಸಾರವಾಗಿ ಹಾಗೂ ಪಡೆಯುವ ಥಿಯರಿ ಅಂಕಗಳಿಗೆ ಅನುಸಾರವಾಗಿ ವಿದ್ಯಾರ್ಥಿಗಳನ್ನು ಶ್ರೇಣಿ ಮಾಡಲಾಗುತ್ತದೆ.

**ವೃತ್ತಿಶಿಕ್ಷಣ:** ವಿದ್ಯಾರ್ಥಿಗಳು ತಾವು ಪಡೆಯುವ ಶಿಕ್ಷಣದ ಜೊತೆಗೆ ಯಾವುದಾದರೊಂದು ವೃತ್ತಿಯಲ್ಲಿ ಕರಕುಶಲ ಕೌಶಲಗಳೊಂದಿಗೆ ತರಬೇತಿ ಪಡೆದು ಆ ವೃತ್ತಿಯನ್ನು ಸಮರ್ಥವಾಗಿ ನಿರ್ವಹಿಸುವಂತಹ ದಕ್ಷತೆ, ನೈಪುಣ್ಯತೆಯನ್ನು ಬೆಳೆಸಿಕೊಳ್ಳುವುದಕ್ಕೆ ವೃತ್ತಿ ಶಿಕ್ಷಣ ಎನ್ನುವರು.

ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ಕೊಠಾರಿ ಆಯೋಗದ (1964–66) ಶಿಫಾರಸ್ಸಿನ ಮೇರೆಗೆ ಪ್ರೌಢಶಾಲಾ ಹಂತದಿಂದಲೇ ವೃತ್ತಿ ಶಿಕ್ಷಣವನ್ನು ಜಾರಿಗೆ ತರಲು ಒಪ್ಪಿಕೊಂಡಿತು. NCERT ಪ್ರಕಟಿಸಿರುವ "ಎಜುಕೇಷನ್ ಅಂಡ್ ಇಟ್ಸ್ ವೆಕೇಷನಲೈಜೇಷನ್" ಎಂಬ ಗ್ರಂಥದಲ್ಲಿ ವೃತ್ತಿ ಶಿಕ್ಷಣದ ವಿವಿಧ ಕೋರ್ಸ್‌ಗಳನ್ನು ತಿಳಿಸಿದೆ. ಶಿಕ್ಷಣ ಮತ್ತು ಉದ್ಯೋಗದ ನಡುವೆ ಇರುವ ಸಂಬಂಧ ಹಾಗೂ ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ವೃತ್ತಿಪರ ಶಿಕ್ಷಣದ ಅಗತ್ಯತೆಯನ್ನು ತಿಳಿಸುತ್ತದೆ.

ಕರ್ನಾಟಕದಲ್ಲಿ 1977–78 ರಲ್ಲಿ +2 ಹಂತದಲ್ಲಿ ವೃತ್ತಿ ಶಿಕ್ಷಣ ಡಿಪ್ಲೊಮೋ ಕೋರ್ಸ್ (Job Oriented Diploma Course) ಅನ್ನು ಜಾರಿಗೆ ತರಲಾಯಿತು. ಇದರ ಮೇಲ್ವಿಚಾರಣೆಯನ್ನು ಮಾಡಲು ಸರ್ಕಾರ "ವೃತ್ತಿ ಶಿಕ್ಷಣ ನಿರ್ದೇಶನಾಲಯ"ವನ್ನು ಸ್ಥಾಪಿಸಿತು.

ವೃತ್ತಿಶಿಕ್ಷಣದ ಕಡೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಮತ್ತು ತರಗತಿಗಳಲ್ಲಿ ತೇರ್ಗಡೆ ಆಗದವರನ್ನು ವೃತ್ತಿ ಶಿಕ್ಷಣಕ್ಕೆ ಪ್ರವೇಶ ಮಾಡಿಕೊಳ್ಳುತ್ತಿದೆ. ಈ ಹಂತದಲ್ಲಿ ಕಲಿಕೆಯ ಶೇ. 25ರಷ್ಟು ಸಮಯವನ್ನು ಭಾಷಾ ಬೋಧನೆಗೂ ಶೇ. 45ರಷ್ಟು ಸಮಯವನ್ನು ವೃತ್ತಿ ಶಿಕ್ಷಣ ವಿಷಯಗಳ ಬೋಧನೆಗೂ ಮತ್ತು ಉಳಿದ ಶೇ. 30ರಷ್ಟು ಸಮಯವನ್ನು ಪ್ರಾಯೋಗಿಕ ಅನುಭವಕ್ಕೆ ಗೊತ್ತುಪಡಿಸಲಾಗಿದೆ. ವೃತ್ತಿ ಶಿಕ್ಷಣ ಪಡೆದ ನಂತರ ವಿದ್ಯಾರ್ಥಿಗಳು ಪದವಿ ತರಗತಿಯ ಕಲಾ ಅಥವಾ ವಾಣಿಜ್ಯ ವಿಭಾಗದಲ್ಲಿ ಪ್ರವೇಶ ಪಡೆದು ತಮ್ಮ ಶಿಕ್ಷಣವನ್ನು ಮುಂದುವರೆಸಬಹುದು.

**+2 ಹಂತದಲ್ಲಿ ಅನೇಕ ಬಗೆಯ ವೃತ್ತಿ ಕೋರ್ಸ್‌ಗಳಿವೆ. ಉದಾಹರಣೆಗೆ–**

1. ಆಟೋಮೊಬೈಲ್ ಸರ್ವೀಸಿಂಗ್
2. ಟೂ ವೀಲರ್ಸ್ ಸರ್ವೀಸಿಂಗ್
3. ಎಲೆಕ್ಟ್ರಿಕಲ್ ವೈರಿಂಗ್
4. ಪ್ರಿಂಟಿಂಗ್, ಬುಕ್ ಬೈಂಡಿಂಗ್
5. ಕ್ಲಾಥಿಂಗ್ ಅಂಡ್ ಎಂಬ್ರಾಯಿಡರಿ
6. ಟಿ.ವಿ. ರೇಡಿಯೋ ಅಂಡ್ ಸರ್ವೀಸಿಂಗ್
7. ಪೌಲ್ಟ್ರಿಸೈನ್ಸ್
8. ಡೈರಿಯಿಂಗ್
9. ಸಿರಿಕಲ್ಚರ್
10. ಫಿಷರೀಸ್
11. ಹಾರ್ಟಿಕಲ್ಚರ್
12. ಲ್ಯಾಬರೇಟರಿ ಟೆಕ್ನೀಷಿಯನ್
13. ಲ್ಯಾಂಡ್ ಅಂಡ್ ಸಿಟಿ ಸರ್ವೇ
14. ಬ್ಯಾಂಕಿಂಗ್
16. ಅಕೌಂಟೆನ್ಸಿ ಅಂಡ್ ಆಡಿಟಿಂಗ್
17. ಅಕೌಂಟೆನ್ಸಿ ಅಂಡ್ ಟ್ಯಾಕ್ಸೇಷನ್
18. ಅಕೌಂಟೆನ್ಸಿ ಅಂಡ್ ಕಾಸ್ಟಿಂಗ್
19. ಆಫೀಸ್ ಮ್ಯಾನೇಜ್‌ಮೆಂಟ್
20. ಸರ್ವೇಯಿಂಗ್
21. ಸ್ಟೆನೋಗ್ರಾಫಿ

Digitised by Bharatavani, CIIL

22. ಗಾರ್ಮೆಂಟ್ ಮೇಕಿಂಗ್
23. ಕಂಪ್ಯೂಟರ್ ಟೆಕ್ನೀಷಿಯನ್
24. ಲೈಬ್ರರಿ ಅಂಡ್ ಇನ್‌ಫರ್ಮೇಷನ್ ಸೈನ್ಸ್
25. ಪ್ರೀ–ಸ್ಕೂಲ್ ಎಜುಕೇಷನ್
26. ಲೈಬ್ರರಿ ಅಂಡ್ ಇನ್‌ಫಾರ್ಮೇಷನ್ ಸರ್ವೀಸಿಂಗ್
27. ಕಂಪ್ಯೂಟರ್ ಗ್ರಾಫಿಕ್ಸ್
28. ಮಾರ್ಕೆಟಿಂಗ್ ಅಂಡ್ ಸೇಲ್ಸ್‌ಮ್ಯಾನ್‌ಷಿಪ್
29. ಆಡಿಯೋ ವಿಶುಯಲ್
30. ಪೌಲ್ಟ್ರಿಫಾರಮಿಂಗ್

ಇವೇ ಮೊದಲಾದ ವೃತ್ತಿ ಕೋರ್ಸ್‌ಗಳಿವೆ.

–ಕೆ.ಎನ್.ರಾ.

# ಏ

## ಏಕೋಪಾಧ್ಯಾಯ ಶಾಲೆಗಳು

ಆಧುನಿಕ ಶಿಕ್ಷಣ ಕ್ರಮದಲ್ಲಿ ಶಾಲಾಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವುಗಳ ವಸ್ತುಸ್ಥಿತಿ ಅರಿವಾಗುತ್ತದೆ. ವರ್ಷದಿಂದ ವರ್ಷಕ್ಕೆ ಬದಲಾವಣೆಯ ಜೊತೆಯಲ್ಲಿಯೇ ಬೆಳವಣಿಗೆಯನ್ನು ಕಾಣಬಹುದು. ವಿವಿಧ ಯೋಜನೆಗಳನ್ನು ಸೂಕ್ತವಾಗಿ ಅಳವಡಿಸಿಕೊಂಡು ಶಾಲೆಯನ್ನು ಅಭಿವೃದ್ಧಿಪಡಿಸುವ ಶಿಕ್ಷಕ ಸಮುದಾಯವನ್ನು ಕಾಣುತ್ತೇವೆ. ವಿವಿಧ ತರಬೇತಿಗಳಿಂದ ಹೊಸ ಹೊಸ ಬೋಧನಾ ವಿಧಾನಗಳು ಪರಿಚಯವಾಗುತ್ತಿದೆ. ಆದರೆ ಎಲ್ಲ ಶಾಲೆಗಳೂ ಮಾದರಿ ಶಾಲೆಗಳಾಗುವುದಿಲ್ಲ. ಕೆಲವು ಸಮಸ್ಯೆಗಳಿರುವುದು ಸಹಜ. ಶಿಕ್ಷಕರು ರೂಢಿಸಿಕೊಳ್ಳಬೇಕಾದ ಮನೋಧರ್ಮದ ಮೇಲೆ ಒಂದು ಶಾಲೆಯ ವ್ಯವಸ್ಥೆ ಇರುತ್ತದೆ.

ಏಕೋಪಾಧ್ಯಾಯ ಶಾಲೆಗಳಲ್ಲಿ ನಮ್ಮ ಪ್ರಾಚೀನ ಭಾರತದ ಶಿಕ್ಷಣ ಕ್ರಮದ ಒಂದು ವಿಶಿಷ್ಟತೆಯನ್ನು ಕಾಣಬಹುದು. ಏಕೋಪಾಧ್ಯಾಯ ಶಾಲೆಗಳು ಪ್ರಾಚೀನ ಕಾಲದಿಂದಲೂ ನಡೆದು ಬಂದ ಒಂದು ಪದ್ಧತಿ. ಈಗಲೂ ಕೆಲವು ಸಂಸ್ಕೃತ, ಪರ್ಶಿಯನ್ ಹಾಗೂ ಅರೇಬಿಕ್ ಶಿಕ್ಷಕರು ಇದನ್ನು ನಡೆಸುತ್ತಲಿರುವುದನ್ನು ಕಾಣಬಹುದು. ಶ್ರೀ ಜೆ.ಪಿ. ನಾಯಕ್ ಅವರ ಪ್ರಕಾರ ಏಕೋಪಾಧ್ಯಾಯ ಶಾಲೆಗಳು ವೇದಗಳ ಕಾಲದಲ್ಲಿಯೂ ಕಂಡು ಬಂದಿದ್ದವು. ಹಿಂದಿನ ದಿನಗಳಲ್ಲಿ ವಿದ್ಯೆಯನ್ನು ಗುರುಕುಲದಲ್ಲಿ ಗುರುವಿನ ಪೂರ್ಣ ಆಶ್ರಯದಲ್ಲಿಯೇ ನೀಡಲಾಗುತ್ತಿತ್ತು. ತೈತ್ತರೀಯೋಪನಿಷತ್ತಿನ ಪ್ರಕಾರ ಆಚಾರ್ಯ ಅಥವಾ ಗುರು ಮೊದಲು, ನಂತರ ವಿದ್ಯೆ, ಆನಂತರ ಜ್ಞಾನ ಮತ್ತು ಮಾಧ್ಯಮ. ಆಚಾರ್ಯ ಜ್ಞಾನದ ಆರಾಧ್ಯ ದೇವರು. ಪ್ರತಿಯೊಬ್ಬ ಆಚಾರ್ಯರಿಗೂ ಒಂದು ಗುಂಪಿನ ಶಿಷ್ಯ ವೃಂದವಿರುತ್ತಿತ್ತು. ತಕ್ಷಶಿಲಾ ವಿಶ್ವವಿದ್ಯಾನಿಲಯದಲ್ಲಿಯೂ ಅನೇಕ ಆಶ್ರಮಗಳನ್ನು ಏಕ ಶಿಕ್ಷಕರೇ ನಡೆಸುತ್ತಲಿದ್ದರು.

ನಮಗೆ ಸ್ವಾತಂತ್ರ್ಯದೊರೆತು 63 ಸಂವತ್ಸರಗಳು ಗತಿಸಿ ಹೋದರೂ ಶಿಕ್ಷಣದ ಪ್ರಮುಖ ಗುರಿಯಾದ ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆ ಕೇವಲ ಗುರಿಯಾಗಿಯೇ ಉಳಿದಿದೆ. ನಮ್ಮ ಶಿಕ್ಷಣ ವ್ಯವಸ್ಥೆ ಅಸಂಖ್ಯ ಸಮಸ್ಯೆಗಳ ಆಗರವಾಗಿರುವ ಶಿಕ್ಷಣರಂಗ ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣ ಅನೇಕ ಶೈಕ್ಷಣಿಕ ಸಮಸ್ಯೆಗಳ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾಗಿದೆ. ಅಂತಹ ಸಮಸ್ಯೆಗಳಲ್ಲಿ ಕ್ಲಿಷ್ಟಮಯವೆಂದು ಕರೆಯಲ್ಪಡುವ ಏಕೋಪಾಧ್ಯಾಯ ಶಾಲೆಗಳು ಒಂದಾಗಿವೆ.

ಒಂದು ಶಾಲೆಗೆ ಒಬ್ಬನೇ ಶಿಕ್ಷಕನಿರುವ ಶಾಲೆಯ ವ್ಯವಸ್ಥೆಗೆ ಏಕೋಪಾಧ್ಯಾಯ ಶಾಲೆ ಎನ್ನುವರು. ಸಾಮಾನ್ಯವಾಗಿ 1 ರಿಂದ 4 ಅಥವಾ 5ನೇ ತರಗತಿವರೆಗೆ ವರ್ಗಗಳಿರುತ್ತವೆ, ಆದರೆ ಆ ವರ್ಗಗಳಿಗೆ ಶಿಕ್ಷಕ ಒಬ್ಬನೇ. ಶಾಲೆ ತೆರೆದು ಪ್ರಾರ್ಥನೆಯೊಂದಿಗೆ ಆರಂಭವಾಗುವ ಏಕೋಪಾಧ್ಯಾಯ ಶಾಲೆಯ ಕಾರ್ಯಕ್ರಮವು ಕೊನೆಗೆ ಶಾಲೆಗೆ ಬೀಗ ಹಾಕುವವರೆಗಿನ ಕೆಲಸಗಳಿಗೆ ಈತನೇ ಜವಾಬ್ದಾರನಾಗಿರುತ್ತಾನೆ.

ವೇದಗಳ ಕಾಲದಲ್ಲಿ ಪಾಠಶಾಲೆಗಳಲ್ಲಿ ಮತ್ತು ಗುರುಕುಲಗಳಲ್ಲಿ ಗುರುವಿಗೆ ಶಿಷ್ಯನಾಗಿ ವಿದ್ಯಾರ್ಥಿ ವಿದ್ಯೆ ಪಡೆಯುತ್ತಿದ್ದರು. ಇಲ್ಲಿ ಗುರು ಒಬ್ಬನೇ ಆದರೂ ಎಲ್ಲಾ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳ ಬೋಧನೆ ಮಾಡಲಾಗುತ್ತಿತ್ತು.

ತಕ್ಷಶಿಲಾ, ಬನಾರಸಗಳಲ್ಲಿ ದೇಶದ ಮೂಲೆ ಮೂಲೆಗಳಿಂದ ಸಾವಿರಾರು ವಿದ್ಯಾರ್ಥಿಗಳು ಬಂದು ವಿದ್ಯಾರ್ಜನೆ ಗೈಯುತ್ತಿದ್ದರು. ಇಲ್ಲಿಯೂ ಒಂದು ಸಣ್ಣಗುಂಪಿಗೆ ಒಬ್ಬನೇ ಶಿಕ್ಷಕನಿರುತ್ತಿದ್ದ. 18ನೇ ಶತಮಾನದವರೆಗೂ ಪ್ರಾಥಮಿಕ ಶಿಕ್ಷಣ ಸಾಮಾನ್ಯವಾಗಿ ಏಕೋಪಾಧ್ಯಾಯ ಶಾಲೆಗಳಲ್ಲಿ ಮುಂದುವರಿಯುತ್ತಿತ್ತು. 1823 ರಿಂದ 1853ರ ಅವಧಿಯಲ್ಲಿ ಬಾಂಬೆ ಪ್ರಾಂತ್ಯದಲ್ಲಿ ತೆರೆದ ಎಲ್ಲಾ ಶಾಲೆಗಳೂ ಏಕೋಪಾಧ್ಯಾಯ ಶಾಲೆಗಳಾಗಿದ್ದವು. ಮದ್ರಾಸ್‌ನಲ್ಲಿ ಜಿಲ್ಲಾ ಮತ್ತು ತಹಶೀಲ್ದಾರಿ ಶಾಲೆಗಳು ಸಹ ಏಕೋಪಾಧ್ಯಾಯ ಶಾಲೆಗಳಾಗಿದ್ದವು. 1855 ರಿಂದ 1921ರ ಅವಧಿಯಲ್ಲಿ ಈ ಶಾಲೆಗಳ ಪ್ರಗತಿ ಕುಂಠಿತವಾಯಿತು. ಏಕೆಂದರೆ 1854ರ ವುಡ್ ವರದಿಯು ವಿವಿಧ ರಾಜ್ಯಗಳಲ್ಲಿ ಶಿಕ್ಷಣ ಇಲಾಖೆ ತೆರೆಯಲು ಸಲಹೆ ಮಾಡಿತು. ಇದರಿಂದ ಶಿಕ್ಷಣ ವಿಸ್ತರಣೆ ಪಡೆದು ಪಠ್ಯಕ್ರಮ, ತರಗತಿ ನಿರ್ವಹಣೆ, ವೇಳಾಪಟ್ಟಿ ಮುಂತಾದವು ಶೈಕ್ಷಣಿಕ ಕಾರ್ಯಕ್ರಮದಲ್ಲಿ ಒಳಪಟ್ಟವು. ಹೆಚ್ಚು ಮಕ್ಕಳು ಶಾಲೆಗೆ ಬರುವಂತಾಯಿತು. ಇದರಿಂದ ಏಕೋಪಾಧ್ಯಾಯ ಶಾಲೆಗಳು ದ್ವಿಶಿಕ್ಷಕರ ಶಾಲೆಗೆ ಪರಿವರ್ತನೆಗೊಳ್ಳಲು ಪ್ರಾರಂಭವಾಯಿತು.

19ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ಕೂಡಾ ಇದನ್ನು ತೆಗೆದುಹಾಕಲು ಅಥವಾ ಕಡಿಮೆ ಮಾಡಲು ಪ್ರಯತ್ನಿಸಿದರು. 1928ರಲ್ಲಿ ರಾಯಲ್ ಕಮಿಷನ್ ಕೂಡಾ ಏಕೋಪಾಧ್ಯಾಯ ಶಾಲೆಗಳ ಅದಕ್ಷತೆಯನ್ನು ಎತ್ತಿತೋರಿತು. 1929ರ ಹರ್ಟಾಗ್ ಕಮಿಟಿಯು ಕೂಡಾ ಈ ವ್ಯವಸ್ಥೆಯನ್ನು ಟೀಕಿಸಿತು. ಏಕೋಪಾಧ್ಯಾಯ ಶಾಲೆಗಳು ಕೊನೆಗೊಳ್ಳುವ ಸ್ಥಿತಿ ಬರುವಂತಾಯಿತು.

1933ರಲ್ಲಿ ನಿವೃತ್ತ ಶೈಕ್ಷಣಿಕ ಆಯುಕ್ತರನ್ನು ಏಕೋಪಾಧ್ಯಾಯ ಶಾಲೆಯ ವ್ಯವಸ್ಥೆಯನ್ನು ಅಭ್ಯಸಿಸಲು ನೇಮಿಸಲಾಯಿತು. ಅವರು ಕೂಲಂಕಷವಾಗಿ ಅಭ್ಯಾಸ ಮಾಡಿ ಏಕೋಪಾಧ್ಯಾಯ ಶಾಲೆಗಳ ಪ್ರಾರಂಭಕ್ಕೆ ಪ್ರೋತ್ಸಾಹ ನೀಡಬೇಕೆಂದು ತಿಳಿಸಿದರು.

Digitised by Bharatavani, CIIL

ಆರ್. ವಿ. ಪರುಳೇಕರ್ ಅವರು ಏಕೋಪಾಧ್ಯಾಯ ಶಾಲೆಯನ್ನು ಮುಚ್ಚುವ ಬದಲು ಅವುಗಳನ್ನು ಸುಧಾರಿಸಬೇಕೆಂದು ಅಭಿಪ್ರಾಯಪಟ್ಟರು. ಜೆ.ಪಿ. ನಾಯಕ್ ಕೂಡಾ ದೇಶದ ಆರ್ಥಿಕ ದೃಷ್ಟಿಯಿಂದ ಏಕೋಪಾಧ್ಯಾಯ ಶಾಲೆಗಳನ್ನು ಮುಚ್ಚುವ ಬದಲು ಅವುಗಳಲ್ಲಿ ಸುಧಾರಣೆ ತರಬೇಕೆಂದು ಹೇಳಿದರು.

1937ರ ಕಾಂಗ್ರೆಸ್ ಮಂತ್ರಿಮಂಡಳದ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವ ಯೋಜನೆಯು ಸ್ವಾಭಾವಿಕವಾಗಿಯೇ ಏಕೋಪಾಧ್ಯಾಯ ಶಾಲೆಗಳು ದ್ವಿಗುಣವಾಗಲು ಕಾರಣವಾಯಿತು. 1947ರ ನಂತರ ಪ್ರಾಥಮಿಕ ಶಿಕ್ಷಣ ಹೆಚ್ಚು ವಿಸ್ತಾರಗೊಂಡಿತು. ಇದೂ ಕೂಡಾ ಸ್ವಾಭಾವಿಕವಾಗಿಯೇ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿತು. 1950–51ರಿಂದ 1964–65ರ ಅವಧಿಯಲ್ಲಿ ಪ್ರಾರಂಭಗೊಂಡ ಶಾಲೆಗಳಲ್ಲಿ ಶೇ. 50ರಷ್ಟು ಏಕೋಪಾಧ್ಯಾಯ ಶಾಲೆಗಳು ಇದ್ದವು. ಈ ಅವಧಿಯಲ್ಲಿ ಏಕೋಪಾಧ್ಯಾಯ ಶಾಲೆಗಳು ದ್ವಿಗುಣಗೊಂಡವು.

ಸಾಮಾನ್ಯವಾಗಿ ಶಾಲೆಯ ಜನಸಂಖ್ಯೆ ಎಲ್ಲಿ ಕಡಿಮೆ ಇರುತ್ತದೆಯೋ ಅಂತಹ ಪ್ರದೇಶದಲ್ಲಿ ಏಕೋಪಾಧ್ಯಾಯ ಶಾಲೆಗಳನ್ನು ಕಾಣುತ್ತೇವೆ. ಹಾಗಾದರೆ ಹಳ್ಳಿಗಳ ನಾಡಾದ ನಮ್ಮ ಭಾರತ ದೇಶದಲ್ಲಿ ಮಾತ್ರ ಈ ಶಾಲೆಗಳನ್ನು ಕಾಣುತ್ತೇವೆಯೋ ಅಥವಾ ಮುಂದುವರೆದ ದೇಶಗಳಲ್ಲಿಯೂ ಕೂಡಾ ಇಂತಹ ಶಾಲೆಗಳು ಇದ್ದವೋ ಎಂಬುದು ಒಂದು ಸಮಸ್ಯೆ.

ಬರ್ನಿಯರ್ ಎಂಬ ತಜ್ಞರ ಪ್ರಕಾರ 15ನೇ ಶತಮಾನದಲ್ಲಿ ಬನಾರಸ್ ವಿಶ್ವವಿದ್ಯಾನಿಲಯದಲ್ಲಿಯೂ ಕೂಡಾ ಪಾಶ್ಚಿಮಾತ್ಯದೇಶದ ವಿಶ್ವವಿದ್ಯಾನಿಲಯಗಳ ರೀತಿಯ ಕಾಲೇಜ್ ಅಥವಾ ತರಗತಿಗಳಿರಲಿಲ್ಲ. ಪ್ರತಿ ಶಿಕ್ಷಕರ ಮಾರ್ಗದರ್ಶನದಲ್ಲಿ ನಾಲ್ಕು ಅಥವಾ 5 ವಿದ್ಯಾರ್ಥಿಗಳಿರುತ್ತಿದ್ದರು. ಅತಿ ಪ್ರಸಿದ್ಧ ಶಿಕ್ಷಕರಡಿಯಲ್ಲಿ ಹೆಚ್ಚೆಂದರೆ ಹನ್ನೆರಡು ವಿದ್ಯಾರ್ಥಿಗಳಿರುತ್ತಿದ್ದರು. ಏಕೋಪಾಧ್ಯಾಯ ಶಾಲೆಗಳು ಭಾರತದ ಅತಿ ಪ್ರಾಚೀನ ಮಾದರಿಯ ಶಿಕ್ಷಣ. ಈ ರೀತಿಯ ಶಿಕ್ಷಣವು ಶಿಕ್ಷಣ ಕ್ಷೇತ್ರಕ್ಕೆ ಅತಿ ಪ್ರಮುಖ ಕೊಡುಗೆ ಎಂದು ಹೇಳಬಹುದು. ಇದು ಸಮಾಜದ ಅವಶ್ಯಕತೆಗೆಂದು ಪ್ರಾರಂಭಗೊಂಡು ನಮ್ಮ ದೇಶದ ಜ್ಞಾನವೃದ್ಧಿಗೆ ನೆರವಾಯಿತು. ಚಿಕ್ಕ ಗುಂಪಿನ ವಿದ್ಯಾರ್ಥಿಗಳಿಂದ ಕೂಡಿದ ಕಾರಣ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ನೇರ ಹಾಗೂ ಆತ್ಮೀಯ ಸಂಪರ್ಕ ಬೆಳೆಯಲು ಅನುಕೂಲವಾಗುತ್ತಿತ್ತು.

ಇಂತಹ ಶಾಲೆಗಳ ಅನುಕೂಲತೆಗಳು ಹಲವಾರಿವೆ: ಪ್ರಾಥಮಿಕ ಶಾಲೆಗಳನ್ನು ತೆರೆಯಲು ಹಾಗೂ ಪ್ರಾಥಮಿಕ ಶಿಕ್ಷಣದ ನಿಯಮಗಳನ್ನು ತೋರ್ಪಡಿಸಲು ಅನುಕೂಲವಾಯಿತು, ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಸಾರಗಳು ಹತ್ತಿರವಾಗಿ ಎರಡು ಮೂರು ಪೀಳಿಗೆಗಳಿಗೆ ಪರಿಚಯವಿರಲು ಅನುಕೂಲವಾಯಿತು, ಶಿಕ್ಷಕರು ವಿದ್ಯಾರ್ಥಿಗಳ ತೊಂದರೆ ಹಾಗೂ ಪ್ರಗತಿಗಳನ್ನು ಅರಿಯಲು ಸುಲಭವಾಯಿತು, ಶಾಲೆಗಳಲ್ಲಿ ಹಿರೇಮಣಿಗಳು ವಿದ್ಯಾರ್ಥಿಗಳಿಗೆ ಶಿಕ್ಷಕರಷ್ಟೇ ಬೋಧಿಸಲು ಪರಿಣಿತರಾದರು, ಶಿಕ್ಷಣವನ್ನು ಹರಡಲು ಅನುಕೂಲವಾದ ರೀತಿಯಾಯಿತು, ಏಕ ಶಿಕ್ಷಕರಿರುವುದರ ಕಾರಣ ವಿದ್ಯಾರ್ಥಿಗಳ ಉತ್ಪ್ರೇಕ್ಷೆ ಹಾಗೂ ಟೀಕಿಸಲು ಶಿಕ್ಷಕರು ಹೊಣೆಯಾದರು, ಕೆಲಸ ಕಾರ್ಯಗಳಲ್ಲಿ ಆಸಕ್ತಿ ತೋರಿಸದಂತಹ ಶಿಕ್ಷಕರನ್ನು ಏಕೋಪಾಧ್ಯಾಯ ಶಾಲೆಗೆ ಕಳುಹಿಸುತ್ತಿದ್ದದ್ದು ಒಳ್ಳೆಯ ಮಾರ್ಗವಾಯಿತು. ಇಂತಹ ಏಕೋಪಾಧ್ಯಾಯ ಶಾಲೆಗಳಲ್ಲಿ ಕೆಲಸ ನಿರ್ವಹಿಸಿದಂತಹ ಶಿಕ್ಷಕರು ಪ್ರಾಂತೀಯ ಮಾನವ ಸಂಪನ್ಮೂಲಗಳ ಗರಿಷ್ಠ ಉಪಯೋಗವನ್ನು ಪಡೆದು ತಮ್ಮ ಧೈರ್ಯವನ್ನು ಹೆಚ್ಚಿಸಿಕೊಳ್ಳುವುದೇ ಅಲ್ಲದೆ ಅರ್ಪಣಾ ಮನೋಭಾವದಿಂದ ಕೆಲಸ ನಿರ್ವಹಿಸಲು ಪ್ರೇರೇಪಿತರಾದರು.

ಇಂತಹ ಶಾಲೆಗಳಿಗೆ ಕೆಲವು ಮಿತಿಗಳೂ ಇವೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೆ ಇದು ಸಾಧ್ಯವಿಲ್ಲ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹೆಚ್ಚಿನ ವಿಚಾರ ಸಂಗ್ರಹ ಸೌಲಭ್ಯಗಳಿಲ್ಲದ ಕಾರಣ, ಎಲ್ಲಾ ವಿಷಯಗಳ ಏಕ ಶಿಕ್ಷಕರಿಂದಲೇ ಪಡೆಯಲು ಸಾಧ್ಯವಾಗುವುದಿಲ್ಲ, ಇಂದಿನ ಶೈಕ್ಷಣಿಕ ಪರಿಸ್ಥಿತಿಯಲ್ಲಿ ಪಠ್ಯಕ್ರಮ ಅಧಿಕವಾಗಿರುವುದರಿಂದ ಏಕ ಶಿಕ್ಷಕರು ಎಲ್ಲಾ ವಿಷಯಗಳನ್ನೂ ಪೂರ್ಣವಾಗಿ ಬೋಧಿಸಲು ಕಷ್ಟವಾಗುತ್ತದೆ, ಶಿಕ್ಷಕರು ತರಗತಿಗಳನ್ನು ಸ್ವೇಚ್ಛೆಯಿಂದ ಉಪಯೋಗಿಸಿಕೊಂಡು ವೈಯಕ್ತಿಕ ಹಾಗೂ ಸಾಮಾಜಿಕ ತೊಂದರೆಗಳನ್ನು ನಿವಾರಿಸಿಕೊಳ್ಳುವ ಸಾಧ್ಯತೆ ಇದೆ, ಹಿರೇಮಣಿಗಳು ಮುಂಚಿನ ರೀತಿಯ ಸೌಲಭ್ಯವಿಲ್ಲದ ಕಾರಣ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸುವ ಮನೋಭಾವನೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರೆ.

ಏಕೋಪಾಧ್ಯಾಯ ಶಾಲೆಯ ಗುಣಾವಗುಣಗಳನ್ನು ಪರಿಶೀಲಿಸಿದಾಗ ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಭಾವದಿಂದಾಗಿ, ಶಿಕ್ಷಣವು ವಿದ್ಯಾರ್ಥಿ ಕೇಂದ್ರೀಕೃತವಾಗಿರುವುದರಿಂದ ಹಾಗೂ ಸರ್ವಾಂಗೀಣ ಬೆಳವಣಿಗೆಗೆ ಅಡಚಣೆಯಾಗುತ್ತಿರುವುದರಿಂದ ಇದು ವಿಫಲವಾಗುತ್ತಿದೆ. ಆದರೆ ಭಾರತದ ಆರ್ಥಿಕ ಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡಾಗ ಏಕೋಪಾಧ್ಯಾಯ ಶಾಲೆಗಳನ್ನು ಸೂಕ್ತ ಯೋಜನೆಗಳಿಂದ ಸುಧಾರಿಸಲು ಪ್ರಯತ್ನಿಸಬಹುದಾಗಿತ್ತು. ಪ್ರಾಥಮಿಕ ಶಿಕ್ಷಣ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ ಮತ್ತು ಗುಣಮಟ್ಟವನ್ನು ಕಳೆದುಕೊಂಡಿದೆ. ಉಚಿತ ಹಾಗೂ ಸಾರ್ವತ್ರಿಕ ಕಡ್ಡಾಯ ಶಿಕ್ಷಣ ಸಂಪೂರ್ಣವಾಗಿ ಯಶಸ್ವಿಯಾಗಿ ಈಡೇರಿಸಲು ಏಕೋಪಾಧ್ಯಾಯ ಶಾಲೆಗಳನ್ನು ಹೊರತುಪಡಿಸಿ ಹೊಸ ಶಿಕ್ಷಣ ರೀತಿಯನ್ನು ಅಳವಡಿಸಿಕೊಳ್ಳುವುದು. ಅನಿವಾರ್ಯವಾಗಿದೆ.

– ಎಸ್.ಜಿ.

# ಓ

## ಓದುವ ಅಭ್ಯಾಸಗಳು

ಓದು ಒಂದು ಕಾರ್ಯ ಎಂಬುದಕ್ಕಿಂತ ಇದೊಂದು ಆನಂದ ನೀಡುವ ಕ್ರಿಯೆ. ಓದುವ ಎಲ್ಲ ವಿಷಯವೂ ಅತಿ ಆಸಕ್ತಿಯುತವಾಗಿರುತ್ತದೆ ಎಂದು ವಾದಿಸಲು ಸಾಧ್ಯವಿಲ್ಲವಾದರೂ ಅದು ಪ್ರತಿಯೊಬ್ಬರ ಬಯಕೆ. ಈ ಕಾರಣದಿಂದಲೇ ಓದುವುದನ್ನು ಒಂದು ಹರ್ಷದಾಯಕವಾದ, ಜೀವನೋಪಯೋಗಿಯಾದ ಸಾರ್ಥಕವಾದ ರೀತಿಯಲ್ಲಿ ನಮ್ಮದಾಗಿಸಿ ಕೊಳ್ಳಬೇಕು. ಹೀಗೆ ಓದನ್ನು ಪರಿಣಾಮಕಾರಿಯಾಗಿಸಿಕೊಳ್ಳುವುದು ಓದುವ ವ್ಯಕ್ತಿಯ ಮಿತಿಯಲ್ಲೇ ಇರುತ್ತದೆ. ಇದು ಒಂದು ವಿಶಿಷ್ಟ ಕೌಶಲ.

ಇಬ್ಬರು ವ್ಯಕ್ತಿಗಳು ಒಂದೇ ರೀತಿ ಓದುವುದಿಲ್ಲ. ಒಬ್ಬರು ಓದುವ ಕ್ರಮ ಮತ್ತೊಬ್ಬರಿಗೆ ಒಗ್ಗದೇ ಹೋಗಬಹುದು. ಪ್ರತಿಯೊಬ್ಬರ ವ್ಯಕ್ತಿತ್ವವೂ ಅನನ್ಯವಾದುದು. ಹಾಗಾಗಿ ಕೆಲವು ಮಕ್ಕಳಿಗೆ ಓದುವಿಕೆ ಅಥವಾ ಕಲಿಕೆಗೆ ಆಸಕ್ತಿ ಸಹಜವಾಗಿಯೇ ಇರುತ್ತದೆ. ಒಟ್ಟು ಕಲಿಕೆಯ ಪರಿಣಾಮ ವ್ಯಕ್ತಿಗೆ ಇರುವ ಓದುವ ಸಾಮರ್ಥ್ಯದ ಮೇಲೆಯೇ ಅವಲಂಬಿತವಾಗಿರುತ್ತದೆ. ಆದಾಗ್ಯೂ ಎಲ್ಲರಿಗೂ ಸಮಾನವಾದ ಉತ್ತಮ ಪರಿಣಾಮಗಳನ್ನು ಕೊಡಬಹುದಾದ ಕೆಲವು ತಂತ್ರಗಳು ಇವೆ. ಓದುವ ಕೌಶಲಗಳು ಸಡಿಲವಾಗಿದ್ದರೆ ಓದುವಿಕೆ ಕಾಲದ ನಷ್ಟವಷ್ಟೆ. ಇದು ಒಂದು ರೀತಿಯಲ್ಲಿ

Digitised by Bharatavani, CIIL

ವ್ಯಕ್ತಿಗೆ ಜುಗುಪ್ಸೆಯನ್ನು ಉಂಟುಮಾಡುತ್ತದೆ. ಕಾಲ ಅತಿ ಅಮೂಲ್ಯವಾದುದು. ಒಮ್ಮೆ ಕಳೆದುಹೋದ ಕಾಲ ಮರಳಿಬಾರದು. ಹಾಗಾಗಿ ಅಸಮರ್ಪಕ ಓದು ಅನಪೇಕ್ಷಣೀಯ.

ನಮ್ಮ ಓದು ಉತ್ತಮವಾಗಲು, ಉಪಯುಕ್ತವಾಗಲು ಪರಿಣಾಮಕಾರಿ ಅಧ್ಯಯನ ಕೌಶಲಗಳನ್ನು ಅಭ್ಯಾಸಮಾಡಬೇಕು. ಪರಿಣಾಮಕಾರಿ ಓದು ಕೇವಲ ಓದಿದುದನ್ನು ಗ್ರಹಿಸುವುದಕ್ಕಿಂತ ಹೆಚ್ಚಿನದು. ಓದು. ಅರಿವು ಹಾಗೂ ಸಾಮರ್ಥ್ಯಗಳೆರಡನ್ನೂ ಬೆಳೆಸಬೇಕು. ಓದಬೇಕು ಅಂದುಕೊಂಡಮಾತ್ರಕ್ಕೆ ಓದಿ ಆಗುವುದಿಲ್ಲ. ಮನಸ್ಸಿಟ್ಟು ಓದಬೇಕು. ಓದಿದುದರಿಂದ ಉತ್ತಮವಾದುದನ್ನು ಮನಸ್ಸು ಹೀರಿಕೊಳ್ಳಬೇಕು. ಗ್ರಹಿಕೆಯಿಲ್ಲದ ಓದಿನ ಅಭ್ಯಾಸ ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವುದಿಲ್ಲ. ಅದು ಸಮರ್ಪಕವಾದ ಅರ್ಥವತ್ತಾದ ಅಭ್ಯಾಸವಾಗಬೇಕು.

ಓದನ್ನು ವ್ಯವಸ್ಥಿತವಾಗಿ ಯೋಜಿಸಿಕೊಳ್ಳಬೇಕು. ಇದರಿಂದ ಅನೇಕ ಪ್ರಯೋಜನಗಳಿವೆ. ಯೋಜನೆ ಕಾಲವನ್ನು ಉಳಿಸುತ್ತದೆ. ಯೋಜಿಸಿಕೊಳ್ಳದೆ ಓದಿದ ಓದು ಪ್ರಯೋಜನಕ್ಕೆ ಬಾರದು. ಓದನ್ನು ಕುರಿತ ಉತ್ತಮ ಯೋಜನೆ ಜೀವರಕ್ಷಕನಾಗಿಯೂ ಸಹಾಯಕವಾಗುತ್ತದೆ. ಓದಬೇಕು ಎಂದು ಆಲೋಚಿಸುವ ಪ್ರಾರಂಭದಲ್ಲಿಯೇ ಈ ಯೋಜನೆ ಆಗಬೇಕು. ಈ ಯೋಜನೆ ಹೇಗಿರಬೇಕು ಎಂಬುದು ವೈಯಕ್ತಿಕ ಅಗತ್ಯದ ಮೇಲೆ ನಿರ್ಧಾರವಾಗುತ್ತದೆ.

ಯೋಜನೆಯು ವ್ಯಕ್ತಿಯ ಎಲ್ಲ ಅಗತ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ದಿನ, ವಾರ, ತಿಂಗಳು, ಯಾವುದೇ ಇರಲಿ, ಲಭ್ಯವಿರುವ ಕಾಲಾವಧಿ ನಿಶ್ಚಿತವಾದುದ್ದು. ಅದನ್ನು ಬದಲಿಸಲು ಸಾಧ್ಯವಿಲ್ಲ. ಸಿಗುವ ಕಾಲವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಹೇಗೆ ಎಂಬುದು ವ್ಯಕ್ತಿಗೆ ಬಿಟ್ಟಿದ್ದು. ಶಾಲೆಯ ಒಳಗೆ ಹೊರಗೆ ಸಿಗುವ ಬಿಡುವು ವೇಳೆಯನ್ನು ಸರಿಯಾಗಿ ಗುರುತಿಸಿಕೊಂಡು ಓದಲು ಸೂಕ್ತ ಕಾಲವನ್ನು ನಿಗದಿಪಡಿಸಿಕೊಳ್ಳಬೇಕು. ಓದಿನ ವ್ಯಾಪ್ತಿಯನ್ನು ನಿರ್ಧರಿಸಿಕೊಳ್ಳಬೇಕು. ಒಂದು ವಾರಕ್ಕೆ ಮಾಡಿಕೊಂಡ ಈ ಯೋಜನೆಯು ಪ್ರತಿ ದಿನ 24 ಗಂಟೆಗಳಲ್ಲಿ ವ್ಯಕ್ತಿ ಮಾಡಬೇಕಾದ ಎಲ್ಲವನ್ನೂ ಗುರುತಿಸಿಕೊಳ್ಳಬೇಕು. ಅದರಲ್ಲಿ ಯಾವಾಗ ಓದಬೇಕು ಎಂಬುದನ್ನು ವಿಶೇಷವಾಗಿ ಗುರುತಿಸಬೇಕು. ಸಾಮಾಜಿಕ, ಮನೋರಂಜನಾತ್ಮಕ, ವೈಯಕ್ತಿಕ ಇತ್ಯಾದಿ ಇತರ ಎಲ್ಲ ಕೆಲಸಗಳ ಸಮಯವನ್ನು ಇದರಲ್ಲಿ ನಮೂದಿಸಬೇಕು. ಈ ಯೋಜನೆ ಒಟ್ಟು ದಿನದಲ್ಲಿ ಓದಲು ಸಿಗುವ ಕಾಲಾವಕಾಶವನ್ನು ತೋರಿಸುವ ಮಾರ್ಗದರ್ಶಿಯಾಗಿರುತ್ತದೆ. ಸಂದರ್ಭಕ್ಕೆ ತಕ್ಕಂತೆ ಯೋಜನೆಯನ್ನು ಬದಲಿಸಲು ಸಾಧ್ಯವಾಗುವಂತೆ ನಮ್ಯತೆ ಯೋಜನೆಯ ಪ್ರಮುಖ ಅಂಶವಾಗಬೇಕು. ಯೋಜಿಸುವಾಗ ಕಾಲ ನಿರ್ವಹಣೆಗೆ ಗಮನಕೊಡಬೇಕು.

ಯೋಜನೆಗಳನ್ನು ನಮ್ಮ ಅಗತ್ಯಕ್ಕೆ ತಕ್ಕಂತೆ ತಿದ್ದಲು ಹಿಂಜರಿಯಬಾರದು. ಈ ಯೋಜನೆಗಳು ಕರಡುಗಳಷ್ಟೆ. ಅವು ನಾವು ಅಂದುಕೊಂಡಂತೆ ಕೆಲಸ ಮಾಡದಿದ್ದರೆ ನಮ್ಮ ಅಗತ್ಯಕ್ಕೆ ತಕ್ಕಂತೆ ಬದಲಿಸಬೇಕು. ಒಟ್ಟಿನಲ್ಲಿ ಈ ಯೋಜನೆಗಳು ಉತ್ತಮ ಓದಿನ ಅಭ್ಯಾಸವನ್ನು ಬೆಳೆಸಬೇಕಷ್ಟೆ. ಯೋಜನೆ ತಿದ್ದುತ್ತಿದ್ದಂತೆ ಉತ್ತಮ ಯೋಜನೆ ರೂಪಿಸಲು ಅಭ್ಯಾಸವಾಗುತ್ತದೆ.

ಓದುವ ಮೊದಲು ಉದ್ದೇಶಗಳನ್ನು ಗುರುತಿಸಿಕೊಳ್ಳಬೇಕು. ನಿಯೋಜಿತಕಾರ್ಯಕ್ಕಾಗಿ ಓದು, ಪರೀಕ್ಷೆಯಲ್ಲಿ ಬರೆಯಲು ಓದು, ಬಾಯಿಪಾಠ ಒಪ್ಪಿಸಲು ಓದು, ಹೊಸ ವಿಚಾರಗಳನ್ನು ಹುಡುಕುವ ಓದು ಇತ್ಯಾದಿ. ಒಂದೇ ಕಾರ್ಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಸನ್ನಿವೇಶಗಳಲ್ಲಿನ ಓದುವಿಕೆಯ ಉದ್ದೇಶ ಬೇರೆ ಬೇರೆಯಾಗಿರುತ್ತದೆ. ಉದಾಹರಣೆಗೆ, ನಿಯೋಜಿತಕಾರ್ಯವನ್ನು ಮಾಡುವ ಮೊದಲು ಓದುವಾಗ ಅಗತ್ಯವಾದ ವಿಷಯಗಳನ್ನು ಒಟ್ಟುಮಾಡುವುದು ಉದ್ದೇಶವಾದರೆ ನಿಯೋಜಿತ ಕಾರ್ಯ ಪೂರ್ಣವಾದ ಮೇಲೆ ತಯಾರಿಸಿದ ಪ್ರಬಂಧವನ್ನು ಓದುವಾಗ ವಿಷಯಗಳ ಸಂಘಟನೆ ಹೇಗೆ ಮೂಡಿಬಂದಿದೆ ಎಂದು ಗಮನಿಸುವುದು ಉದ್ದೇಶವಾಗಿರುತ್ತದೆ. ತಯಾರಿಸಿದ ಪ್ರಬಂಧವನ್ನು ಓದುವಾಗ ವಿಷಯಗಳ ಸಂಘಟನೆ ಹೇಗೆ ಮೂಡಿಬಂದಿದೆ ಎಂದು ಗಮನಿಸುವುದು ಉದ್ದೇಶವಾಗಿರುತ್ತದೆ.

ಓದುವುದಕ್ಕೆ ಸಂಬಂಧಿಸಿದಂತೆ ಅಲ್ಪಾವಧಿ ಮತ್ತು ದೀರ್ಘಾವಧಿಯ ಗುರಿಗಳನ್ನು ಗುರುತಿಸಿಕೊಳ್ಳಬೇಕು. ಉದಾಹರಣೆಗೆ, ನಾಳೆಯ ಮನೆಗೆಲಸ ಚೆನ್ನಾಗಿ ಮಾಡಿ, ನಾಳೆಯೇ ಇರುವ ಕಿರುಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯುವುದು ಅಲ್ಪಾವಧಿಯ ಗುರಿ. ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿ ಒಳ್ಳೆಯ ಅಂಕಗಳನ್ನು ಪಡೆಯುವುದು ದೀರ್ಘಾವಧಿಯ ಗುರಿ. ಈ ಗುರಿಗಳು ಯಾವಾಗ ಏನು ಮಾಡಬೇಕು ಎಂಬುದನ್ನು ನಿರ್ದೇಶಿಸುವುದರ ಜೊತೆಗೆ ಮಾಡಿಯೇ ತೀರುತ್ತೇನೆ ಎಂಬ ನಿರ್ಧಾರವನ್ನು ಪ್ರತಿಬಿಂಬಿಸಬೇಕು.

ಓದುವ ವಿವಿಧ ಶೈಲಿಗಳಿಗೆ ನಮ್ಮನ್ನು ಒಗ್ಗಿಸಿಕೊಳ್ಳಬೇಕು. ಈ ಶೈಲಿಗಳು ಓದುವ ಉದ್ದೇಶವನ್ನು ಆಧರಿಸಿವೆ. ಈ ರೀತಿಯ ಬೇರೆ ಬೇರೆ ಶೈಲಿಗಳು ಕರಗತವಾದವರನ್ನು ನಮ್ಯ ಓದುಗರು ಎನ್ನಬಹುದು. ಸಾಮಾನ್ಯವಾಗಿ ಮೂರು ರೀತಿಯ ಓದುವ ಶೈಲಿಗಳನ್ನು ತಜ್ಞರು ಗುರುತಿಸುತ್ತಾರೆ. ಗಂಭೀರ ಓದು ಮೊದಲನೆಯದು. ಸಾಮಾನ್ಯವಾಗಿ ಯಾವುದೇ ವಿಷಯದ ಸೂಕ್ಷ್ಮಗ್ರಹಿಕೆಗೆ ಓದುವ ರೀತಿ ಇದು. ಉದಾಹರಣೆಗೆ, ಪರೀಕ್ಷೆಗೆ ಓದುವುದು, ತೇಲಿಸಿ ಓದುವುದು ಎರಡನೆಯ ರೀತಿ. ಓದಿದುದರ ಬಗ್ಗೆ ಒಂದು ಸಾಮಾನ್ಯ ಅರಿವನ್ನು ಪಡೆಯುವುದು ಇದರ ಉದ್ದೇಶ. ಕಡಿಮೆ ಅವಧಿಯಲ್ಲಿ ಹೆಚ್ಚು ವಿಷಯವನ್ನು ಓದುವಾಗ ಓದು ಹೀಗೆ ಸಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸೂಕ್ಷ್ಮ ವಿವರಗಳಿಗೆ ಹೋಗದೆ ಒಟ್ಟು ವಾಕ್ಯವೃಂದ ಏನು ಹೇಳುತ್ತದೆ ಎಂದು ಗಮನಿಸಬೇಕು. ಇಲ್ಲಿ ವಿಷಯ ಗ್ರಹಿಕೆ ಗಂಭೀರ ಓದಿನಷ್ಟು ಗಟ್ಟಿಯಾಗಿರುವುದಿಲ್ಲ. ಹುಡುಕಿ ಓದುವುದು ಮೂರನೆಯ ರೀತಿ. ಓದುವ ಪಠ್ಯದಲ್ಲಿ ಯಾವುದೋ ಪೂರ್ವ ನಿರ್ಧರಿತ ಪದವನ್ನೋ ಹೇಳಿಕೆಯನ್ನೋ ವಿಷಯವನ್ನೋ ಹುಡುಕಿ ತೆಗೆಯುವುದು ಇದರ ಉದ್ದೇಶ. ಹೀಗೆ ಉದ್ದೇಶಕ್ಕನುಗುಣವಾಗಿ ಓದುವ ಶೈಲಿಯನ್ನು ನಿರ್ಧರಿಸಿಕೊಳ್ಳಬೇಕು.

ವಿದ್ಯಾರ್ಥಿಗಳು ಓದಬೇಕಾದ ಕ್ರಮದಲ್ಲಿ ಗಂಭೀರ ಓದು ಬಹಳ ಮುಖ್ಯವಾದುದು. ವಿದ್ಯಾರ್ಥಿಗಳು ಈ ಶೈಲಿಯನ್ನು ವಿಶೇಷವಾಗಿ ಕರಗತಮಾಡಿಕೊಳ್ಳಬೇಕು. ನಿರ್ದಿಷ್ಟವಾದ ಹಂತಗಳ ಅನುಸರಣೆಯಿಂದ ಈ ರೀತಿಯ ಓದಿನಲ್ಲಿ ಪರಿಣತಿ ಸಾಧಿಸಬಹುದು. ಸಮೀಕ್ಷೆ, ಪ್ರಶ್ನೆ, ಓದು, ವಿಮರ್ಶೆ ಇದು ಪರಿಣಾಮಕಾರಿ ಓದು ಸಾಗುವ ವಿನ್ಯಾಸ.

ಓದುವ ಮೊದಲಿಗೆ ಏನು ಓದಹೋಗುತ್ತಿದ್ದೇವೆ ಎಂಬುದು ತಿಳಿದಿರಬೇಕು. ಪ್ರವಾಸ ಹೋಗುವ ಮೊದಲು ನೋಡಿಕೊಳ್ಳುವ ಮಾರ್ಗಸೂಚಿಯಂತೆ ನಾನೇನು ಓದಲು ಹೊರಟಿದ್ದೇನೆ ಎಂದು ಗುರುತಿಸಿಕೊಳ್ಳಬೇಕು. ಇದೇ ಸಮೀಕ್ಷೆ ಪಾಠದ ಅಥವಾ ಘಟಕದ ಒಟ್ಟು ನೋಟವನ್ನು ಪಡೆಯುವ ಹಂತವಿದು. ಒಂದು ಪಾಠವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಏನು ತಿಳಿದಿದ್ದೇನೆ ಎಂಬುದನ್ನು ತಿಳಿದು, ಹೆಚ್ಚಿನದನ್ನು ತಿಳಿಯಲು ಈ ಹಂತ ಅನುವು ಮಾಡಿಕೊಡುತ್ತದೆ. ಈ ರೀತಿ ಸಮಗ್ರನೋಟ ಪಡೆಯಲು ಈ ಪಾಠದ ಶೀರ್ಷಿಕೆ, ಪೀಠಿಕೆ,

Digitised by Bharatavani, CIIL

ಉಪಶೀರ್ಷಿಕೆಗಳು, ಸಾರಾಂಶ ಎಲ್ಲ ಅಂಶಗಳನ್ನೂ ಜೊತೆಗೆ ದೃಶ್ಯ ಸಾಮಗ್ರಿಗಳಾದ ಚಿತ್ರಗಳು, ನಕ್ಷೆಗಳು, ಇತ್ಯಾದಿ ಅಂಶಗಳನ್ನೂ ಪರೀಕ್ಷಿಸಿಕೊಳ್ಳಬೇಕು. ಒಂದು ಪಾಠವನ್ನು ಹೀಗೆ ಗಮನಿಸಿಕೊಳ್ಳುವುದರಿಂದ ಇಡೀ ಪಾಠದ ವಿಷಯ ಗ್ರಹಿಸಲು ಒಂದು ಸೂಕ್ತ ವೇದಿಕೆ ಸಿದ್ಧವಾಗುತ್ತದೆ.

ಎರಡನೇ ಹಂತದಲ್ಲಿ ಆ ವಿಷಯಗಳ ಆಧಾರದ ಮೇಲೆ ಹಾಗೂ ಓದುತ್ತಿರುವವರ ಉದ್ದೇಶಕ್ಕೆ ಅನುಗುಣವಾಗಿ ಸೂಕ್ತ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಉದಾಹರಣೆಗೆ–ಅಯಸ್ಕಾಂತ ಎಂದರೇನು? ಅದರ ಉಪಯೋಗಗಳೇನು? ಅದು ಹೇಗೆ ಬೆಳಕಿಗೆ ಬಂದಿತು? ಇತ್ಯಾದಿ ಪ್ರಶ್ನೆಗಳು ನಿರ್ದಿಷ್ಟ ವಿಷಯಗಳ ಸ್ಪಷ್ಟ ಗ್ರಹಿಕೆಗೂ ಸಹಾಯವಾಗುತ್ತವೆ. ಸಾರಾಂಶ, ಪೀಠಿಕೆ, ಪರಿಸಮಾಪ್ತಿ–ಈ ಭಾಗದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಬೇಡ. ಇದಲ್ಲದೆ ಓದುವ ವಿಷಯವನ್ನು ಕುರಿತಂತೆ ಅಗತ್ಯಕ್ಕೆ ತಕ್ಕಂತೆ ಏನು? ಏಕೆ? ಹೇಗೆ? ಯಾವಾಗ? ಎಲ್ಲಿ? ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಂಡು ಉತ್ತರ ಗುರುತಿಸುತ್ತಿರಬೇಕು. ಈ ರೀತಿಯ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದಾಗ ಓದು ಅರ್ಥವಾಗುತ್ತದೆ. ಏಕೆಂದರೆ ಒಟ್ಟು ಪ್ರಕ್ರಿಯೆ ಮನಸ್ಸಿನ ಮೇಲೆ ಮುದ್ರೆಯೊತ್ತುತ್ತದೆ. ಈ ಪ್ರಶ್ನೆಗಳನ್ನು ಪಠ್ಯಪುಸ್ತಕದ, ಟಿಪ್ಪಣಿ ಪುಸ್ತಕದ ಅಥವಾ ಇತರ ಪುಸ್ತಕದ ಮಾರ್ಜಿನ್‌ನಲ್ಲಿ ಪೆನ್ಸಿಲ್‌ನಿಂದ ಬರೆಯಬಹುದು. ಈ ಪ್ರಶ್ನೆಗಳನ್ನು ಇತರ ಓದುಗರೊಂದಿಗೆ ಹಂಚಿಕೊಳ್ಳಬೇಕು. ಇತರರು ಓದುವಾಗ ಹೇಗೆ ಪ್ರಶ್ನೆ ಕೇಳಿಕೊಳ್ಳುತ್ತಾರೆ ಎಂದು ಕೇಳಿ ತಿಳಿಯಬೇಕು. ಈ ಪ್ರಕ್ರಿಯೆ ಉತ್ತರಗಳನ್ನು ನೆನಪಿಡಲು ಸಾಧ್ಯಮಾಡಿಕೊಡುತ್ತದೆ.

ಈ ಪ್ರಶ್ನೆಗಳ ಆಧಾರದ ಮೇಲೆ ಓದುವುದು ಮೂರನೆಯ ಹಂತ. ಇಲ್ಲಿ ಓದುವುದೆಂದರೆ ಅಕ್ಷರಗಳ ಮೇಲೆ ಕಣ್ಣುಹಾಯಿಸಿ ಅವುಗಳನ್ನು ಗುರುತಿಸುವುದಷ್ಟೇ ಅಲ್ಲ. ಕ್ರಿಯಾತ್ಮಕವಾಗಿ ಓದಬೇಕು. ಹಾಕಿಕೊಂಡ ಪ್ರಶ್ನೆಗಳಿಗೆ ಉತ್ತರ ಸಿಗುವಂತೆ ಗಮನಿಸಿಕೊಳ್ಳಬೇಕು. ದಪ್ಪಕ್ಷರಗಳಲ್ಲಿ ಉದ್ಧರಣಗಳಲ್ಲಿರುವ ವಿಷಯಗಳಿಗೆ ಹೆಚ್ಚು ಗಮನ ಕೊಡಬೇಕು. ಈ ಹಂತದಲ್ಲಿ ಓದುವಾಗ ಕೇವಲ ಪಠ್ಯವನ್ನು ಮಾತ್ರವಲ್ಲದೆ ನಕ್ಷೆಗಳು, ತಾಲಿಕೆಗಳು, ಚಿತ್ರಗಳು ಎಲ್ಲವನ್ನೂ ವಿಶೇಷವಾಗಿ ಗಮನಿಸಿ ಓದಬೇಕು. ಇಂತಹ ಅಂಶಗಳು ಕೆಲವೊಮ್ಮೆ ಪಠ್ಯಕ್ಕಿಂತ ಹೆಚ್ಚು ಶಕ್ತಿಯುತವಾಗಿ ವಿಚಾರಗಳನ್ನು ಮುಟ್ಟಿಸುತ್ತವೆ.

ಓದುತ್ತಿರುವಂತೆಯೇ ಟಿಪ್ಪಣಿ ತೆಗೆದುಕೊಳ್ಳಲು ಕಲಿಯಬೇಕು. ಇದೊಂದು ಕಲೆ. ಇದನ್ನು ಕರಗತಮಾಡಿಕೊಳ್ಳಬೇಕು. ಬಹಳಷ್ಟು ವಿದ್ಯಾರ್ಥಿಗಳು ಇದಕ್ಕೆ ಗಮನಕೊಡುವುದಿಲ್ಲ. ಟಿಪ್ಪಣಿ ತೆಗೆದುಕೊಳ್ಳುವುದು ಹೇಗೆ ಎಂಬುದು ಪ್ರತಿ ಓದುಗನ ಉದ್ದೇಶಕ್ಕೆ ಸಂಬಂಧಿಸಿದುದು. ತೆಗೆದುಕೊಂಡ ಟಿಪ್ಪಣಿಯನ್ನು ತಾರ್ಕಿಕವಾಗಿ ಜೋಡಿಸಿಕೊಳ್ಳಬೇಕು. ನಾವು ತೆಗೆದುಕೊಂಡ ಟಿಪ್ಪಣಿಯನ್ನು ನಾವೇ ಓದಲಾಗದಿದ್ದರೆ ಪ್ರಯೋಜನವಿಲ್ಲ. ಬಿಡಿ ಹಾಳೆಗಳಲ್ಲಿ ಟಿಪ್ಪಣಿ ಬರೆದು ನಂತರ ಅವುಗಳನ್ನು ಉದ್ದೇಶಕ್ಕೆ ತಕ್ಕಂತೆ ಜೋಡಿಸಿಕೊಳ್ಳುವುದು ಒಳ್ಳೆಯದು. ನಂತರ ಈ ಟಿಪ್ಪಣಿಗಳನ್ನು ನೋಟ್ ಪುಸ್ತಕಕ್ಕೆ ವರ್ಗಾಯಿಸಬೇಕು.

ಮುಖ್ಯ ವಿಷಯಗಳನ್ನು ಗಮನಿಸಬೇಕು. ಇದು ಪರಿಣಾಮಕಾರಿ ಓದಿನ ಪ್ರಮುಖ ಅಂಶ. ನಾವು ಗಮನದಲ್ಲಿಟ್ಟಿರುವ ವಿಷಯವನ್ನು ಕುರಿತು ಲೇಖಕ ಏನು ಹೇಳುತ್ತಿದ್ದಾನೆ ಎಂಬುದನ್ನು ಅತ್ಯಂತ ಗಮನದಿಂದ ಕಂಡುಕೊಳ್ಳುತ್ತಿರಬೇಕು. ಸಾಮಾನ್ಯವಾಗಿ ಪ್ರತಿ ವಾಕ್ಯವೃಂದವು ಒಂದು ಪ್ರಮುಖ ವಿಷಯವನ್ನು ಹೇಳುತ್ತದೆ. ಪ್ರತಿ ವಾಕ್ಯವೃಂದದ ಒಟ್ಟು ಸಾರಾಂಶ ಗ್ರಹಿಸುವ ಅಭ್ಯಾಸ ಮಾಡಬೇಕು.

ಇದಾದ ನಂತರ ಪ್ರಮುಖ ವಿವರಗಳನ್ನು ಹೆಕ್ಕಿ ತೆಗೆಯಬೇಕು. ಮೂಲ ವಿಷಯಗಳನ್ನು ಪೋಷಿಸುವ ಅನೇಕ ಉಪವಿಷಯಗಳು ಪಠ್ಯದಲ್ಲಿರುತ್ತವೆ. ಮೂಲವಿಷಯವನ್ನು ಓದುಗನಿಗೆ ಅರ್ಥಮಾಡಿಸಲು ಅಥವಾ ಅದರ ಕುರಿತ ಹೆಚ್ಚಿನ ವಿವರಗಳನ್ನು ಕೊಡಲು ಲೇಖಕ ಪ್ರಯತ್ನಿಸುತ್ತಿರುತ್ತಾನೆ. ಅದನ್ನು ಗುರುತಿಸಿಕೊಳ್ಳಬೇಕು. ಮೂಲವಿಷಯ ಮತ್ತು ಉಪವಿಷಯಗಳ ಸಂಬಂಧ ಹಾಗೂ ಉಪವಿಷಯಗಳ ಆಂತರಿಕ ಸಂಬಂಧ ಇವು ಸ್ಪಷ್ಟವಾದಷ್ಟೂ ಓದುವಿಕೆ ಪರಿಣಾಮಕಾರಿಯಾಗುತ್ತದೆ.

ಮುಖ್ಯಾಂಶಗಳನ್ನು ಬಣ್ಣದ ಸೂಚಿಗಳಿಂದ ಗುರುತಿಸಬೇಕು. ಅಡಿಗೆರೆ ಹಾಕುವುದು ಬೇಡ. ಪಠ್ಯದ ಮುಖ್ಯ ಭಾಗಗಳನ್ನು ಉಜ್ಜುವ ಪೆನ್ನುಗಳಿಂದ ಉಜ್ಜಿ ಗುರುತಿಸುವುದು ಒಳ್ಳೆಯದು. ಮೊದಲನೇ ಓದಿಗೆ ಮುಖ್ಯ ಎನಿಸಿದುದನ್ನು ಉಜ್ಜುವುದು ಬೇಡ. ಓದುವ ಉದ್ದೇಶವನ್ನು ಮನಸ್ಸಿನಲ್ಲಿಟ್ಟು ಎರಡು ಮೂರು ಬಾರಿ ಓದಿದ ನಂತರ ಪ್ರಮುಖವೆನಿಸಿದ ಭಾಗಗಳನ್ನು ಉಜ್ಜಿ ಗುರುತಿಸಬಹುದು.

ಓದು ಪರಿಣಾಮಕಾರಿಯಾಗಬೇಕಾದರೆ ಒಂದು ಹಂತದಲ್ಲಿ ನಿಲ್ಲಿಸಿ ಏನು ಓದಿದೆವು ಎಂಬುದನ್ನು ಮತ್ತೆ ಮತ್ತೆ ಹೇಳಿಕೊಳ್ಳಬೇಕು. ಮುಖ್ಯ ಶೀರ್ಷಿಕೆಗಳು, ಪಠ್ಯ, ಚಿತ್ರಗಳು ನಕ್ಷೆಗಳು ಈ ಪ್ರತಿಯೊಂದೂ ಏನು ಹೇಳುತ್ತಿವೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಓದಿದ ವಿಚಾರಗಳನ್ನು ನಮ್ಮದೇ ಮಾತುಗಳಲ್ಲಿ ಹೇಳಿಕೊಳ್ಳಬೇಕು. ಈ ವಿಷಯಗಳನ್ನು ಈಗಾಗಲೇ ನಾವು ತಿಳಿದಿರುವ ವಿಷಯಗಳೊಂದಿಗೆ ಹೊಂದಿಸಿಕೊಳ್ಳಬೇಕು. ಹೀಗೆ ಮತ್ತೆ ಮತ್ತೆ ಮಾಡುವುದರಿಂದ ವಿಷಯಗಳು ಸ್ಪಷ್ಟವಾಗುವುದಲ್ಲದೆ ಬಹಳಕಾಲ ನೆನಪಿನಲ್ಲಿಡಲು ಸಾಧ್ಯವಾಗುತ್ತದೆ.

ಓದುವಿಕೆಯ ಮುಂದಿನ ಮತ್ತು ಬಹಳ ಪ್ರಮುಖವಾದ ಹಂತ ವಿಮರ್ಶೆ. ನಾವು ಏನು ಓದಬೇಕು ಎಂದು ನಿರ್ಧರಿಸಿದ್ದೆವೋ ಅದನ್ನು ಸಮರ್ಪಕವಾಗಿ ನಮ್ಮ ಅಪೇಕ್ಷೆಗೆ ತಕ್ಕಂತೆ ಓದಿದ್ದೇವೆಯೇ ಎಂದು ಗುರುತಿಸಿಕೊಳ್ಳುವುದೇ ವಿಮರ್ಶೆ. ಇದಕ್ಕಾಗಿ ಪುನಃ ಓದಬೇಕು. ಹೀಗೆ ಓದುವಾಗ ಈಗಾಗಲೇ ಬರೆದುಕೊಂಡ ಟಿಪ್ಪಣಿಯನ್ನು ಪರಿಶೀಲಿಸಬೇಕು. ಅದು ಸಮಗ್ರವಾಗಿದೆಯೇ ಸಮರ್ಪಕವಾಗಿದೆಯೇ ಎಂದು ಗಮನಿಸಬೇಕು. ಬಿಟ್ಟು ಹೋದ ಅಂಶಗಳನ್ನು ಸೇರಿಸಲು, ಸರಿಯಿಲ್ಲದ ಅಂಶಗಳನ್ನು ಸರಿಪಡಿಸಲು ಈ ವಿಮರ್ಶೆ ಸಹಕಾರಿ. ಓದು ಮುಗಿಸಿದ ತಕ್ಷಣವೇ ಈ ವಿಮರ್ಶಾತ್ಮಕ ಓದು ಸಾಗಬೇಕು. ಪರೀಕ್ಷೆಯ ಮೊದಲಿಗೆ ಈ ಕೆಲಸವನ್ನು ಕಾದಿರಿಸುವುದು ಬೇಡ. ಇದು ಓದಿದ ಎಲ್ಲ ಅಂಶಗಳನ್ನೂ ಮನಸ್ಸಿನಲ್ಲಿ ಅಚ್ಚುಕಟ್ಟಾಗಿ ಸಂಯೋಜಿಸಿಕೊಳ್ಳುವ ಪ್ರಕ್ರಿಯೆ.

ಯಾವಾಗ ಓದಬೇಕು ಎಂಬುದು ಅತಿ ಪ್ರಮುಖವಾದ ಅಂಶ. ಇದನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ವಿರಾಮದ ನಂತರ ಮನಸ್ಸು ಪ್ರಫುಲ್ಲವಾಗಿರುವಾಗ ಓದಬೇಕು. ಓದಬೇಕೆಂದು ನಿಗದಿಪಡಿಸಿಕೊಂಡಿರುವಾಗ ಓದಲೇಬೇಕು. ಕೊನೆಗಳಿಗೆಯ ಓದು ಹೆಚ್ಚಿನ ಪ್ರಯೋಜನಕ್ಕೆ ಬರುವುದಿಲ್ಲ. ತರಗತಿ ಕಲಿಕೆಗೆ ಪೂರಕವಾಗಿ ಓದುವಾಗ ಕೆಲವು ಅಂಶಗಳು ಮುಖ್ಯವಾಗುತ್ತವೆ. ತರಗತಿ ಬೋಧನೆಗೆ ಮೊದಲು ಓದುವಾಗ ಕೊಟ್ಟಿರುವ ನಿಯೋಜಿತ ಕಾರ್ಯವನ್ನು ಮುಗಿಸಿಕೊಂಡು ಅರ್ಥವಾಗದಿರುವುದನ್ನು ಗುರುತಿಸಿಕೊಂಡು ಹೋಗಬೇಕು. ಈ ಸಮಯದಲ್ಲಿ ಹಿಂದಿನ ದಿನ ಬೋಧಿಸಿದುದನ್ನು ಅಭ್ಯಾಸಮಾಡಬೇಕು. ಬೋಧನೆಯ ನಂತರ ಓದುವಾಗ ತರಗತಿಯಲ್ಲಿ ತೆಗೆದುಕೊಂಡ ಟಿಪ್ಪಣಿಗಳನ್ನು ವಿಷಯ ಮನಸ್ಸಿನಲ್ಲಿ ಹಸಿರಾಗಿರುವಾಗಲೇ ಪುನರಾವರ್ತಿಸಿ ವಿಮರ್ಶಿಸಿಕೊಳ್ಳಬೇಕು. ಬಾಯಿಪಾಠ ಒಪ್ಪಿಸಬೇಕಾದ ಸಂದರ್ಭದಲ್ಲಿ ತರಗತಿಯ ಮೊದಲಿನ ಕಾಲವನ್ನು ಓದಲು ಮೀಸಲಿಡಬೇಕು. ಈಗಾಗಲೇ ಕಲಿತಿರುವುದನ್ನು ಒಪ್ಪಿಸಬೇಕಾದ ದೃಷ್ಟಿಯಿಂದ ಪುನರಾವರ್ತಿಸಿಕೊಳ್ಳಬೇಕು. ಇಂತಹ ಸಂದರ್ಭಗಳಲ್ಲಿ ಗುಂಪಿನೊಡನೆ ಓದುವುದು ಉತ್ತಮ.

Digitised by Bharatavani, CIIL

ಎಲ್ಲಿ ಓದಬೇಕು ಎಂಬುದು ಮುಂದಿನ ಪ್ರಶ್ನೆ. ಎಲ್ಲಿ ಬೇಕಾದರೂ ಓದಬಹುದು. ಆದರೆ ಕೆಲವು ಸ್ಥಳಗಳು ಇತರ ಸ್ಥಳಗಳಿಗಿಂತ ಓದಲು ಪ್ರಶಸ್ತವಾಗಿರುತ್ತವೆ. ಸಾಮಾನ್ಯವಾಗಿ ನಮ್ಮದೇ ಕೊಠಡಿ ನಮಗೆ ಓದಲು ಒಳ್ಳೆಯದು. ಯಾವುದೇ ಸ್ಥಳವಿರಲಿ, ಅದು ಮನಸ್ಸನ್ನು ವಿಚಲಿತಗೊಳಿಸಬಾರದು. ಗಲಾಟೆ ಇಲ್ಲದ, ಓದುವವರಿಗೆ ಅನುಕೂಲವೆನಿಸುವ ಸ್ಥಳ ಒಳ್ಳೆಯದು. ವಿದ್ಯಾರ್ಥಿಗಳು ದೂರದರ್ಶನದ ಮುಂದೆ ಕುಳಿತು ಓದಿದರೂ ನಮಗೆ ಚೆನ್ನಾಗಿಯೇ ಅರ್ಥವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಅದರಿಂದ ಓದು ಇತರೇ ಸಮರ್ಪಕ ಸ್ಥಳಗಳಲ್ಲಿ ಓದುವುದಕ್ಕಿಂತ ಪರಿಣಾಮಕಾರಿಯಾಗುವುದಿಲ್ಲ ಎಂದು ಸಂಶೋಧನೆಗಳು ತೋರಿಸಿಕೊಟ್ಟಿವೆ.

ಓದಲು ಕುಳಿತುಕೊಳ್ಳುವ ಮೊದಲಿಗೆ ಸ್ವಲ್ಪ ಮಟ್ಟಿನ ಸಿದ್ಧತೆ ಅಗತ್ಯ. ಓದಲು ಆಯ್ಕೆ ಮಾಡಿರುವ ಸ್ಥಳ ಯಾವಾಗಲೂ ಸಿಗುತ್ತದೆಯೇ? ಓದಲು ಬರೆಯಲು ಬೇಕಾದ ಸಲಕರಣೆಗಳು ಸಿದ್ಧವಾಗಿವೆಯೇ? ಓದುವ ಸ್ಥಳದಲ್ಲಿ ಗಾಳಿ ಬೆಳಕಿನ ವ್ಯವಸ್ಥೆ ಚೆನ್ನಾಗಿದೆಯೇ? ಇತ್ಯಾದಿ ವಿಷಯಗಳಿಗೆ ಗಮನಕೊಡಬೇಕು. ಓದುವ ಸ್ಥಳದಲ್ಲಿ ಒಂದು ಕಸದ ಬುಟ್ಟಿ ಇಟ್ಟಿರಬೇಕು. ಅನಗತ್ಯವೆನಿಸಿದ ಹಾಳೆಗಳನ್ನು ಹರಿದು ಸುತ್ತ ಕೊಳಕು ಮಾಡುವುದಾಗಲೀ ಅಥವಾ ಕಾಗದದ ತುಂಡುಗಳನ್ನು ಎಸೆಯಲು ಮಧ್ಯೆ ಎದ್ದು ಹೋಗುವುದಾಗಲೀ ಸಲ್ಲದು.

ಓದುವುದಕ್ಕೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ವಿಶೇಷವಾಗಿ ಗಮನಿಸಿಕೊಳ್ಳಬೇಕು. ಊಟವಾದ 30 ನಿಮಿಷಗಳವರೆಗೆ ಓದುವುದು ಬೇಡ. ಮಲಗುವ 30 ನಿಮಿಷಗಳ ಮೊದಲು ಓದುವುದು ಬೇಡ. ಏನು ಓದಬೇಕು ಎಂಬುದನ್ನು ಆದ್ಯತೆಯ ಮೇರೆಗೆ ಗುರುತಿಸಿಕೊಳ್ಳಬೇಕು. ಅದಕ್ಕೆ ಬದ್ಧರಾಗಿರಬೇಕು. ಒಮ್ಮೆಗೆ 30–40 ನಿಮಿಷಗಳಿಗಿಂತ ಹೆಚ್ಚು ಓದುವುದು ಬೇಡ. 'ಕಡಿಮೆ ಅವಧಿಯ ಓದು–ಮಧ್ಯಂತರ–ಪುನಃ ಓದು' ಈ ವಿನ್ಯಾಸ ಓದುವಿಕೆಯಲ್ಲಿ ಹೆಚ್ಚು ಪರಿಣಾಮಕಾರಿ. ಈ ಅವಧಿ ಏನನ್ನು ಓದುತ್ತಿದ್ದೇವೆ ಎಂಬುದನ್ನು ಅವಲಂಬಿಸಿರುತ್ತದೆ. ಬ್ರೇಕ್ ತೆಗೆದುಕೊಳ್ಳುವಾಗ ಓದಲು ಕುಳಿತ ಸ್ಥಳದಿಂದ ಆಚೀಚೆ ಹೋಗುವುದು, ಓದುತ್ತಿದ್ದ ವಿಷಯವನ್ನು ಬಿಟ್ಟು ಬೇರೆ ವಿಷಯ ಆಲೋಚಿಸುವುದು ಒಳ್ಳೆಯದು. ಇದು ಮಿದುಳಿನ ಶಕ್ತಿಯನ್ನು ಹೆಚ್ಚಿಸಲು ಸಹಕಾರಿ. ಓದುವ ಸಮಯವನ್ನು ಗುರುತಿಸಿಕೊಳ್ಳಬೇಕು, ದಿನವೂ ಒಂದೇ ಸಮಯದಲ್ಲಿ ಓದಿದರೆ ಒಳ್ಳೆಯದು. ಇದು ಒಂದು ಅಭ್ಯಾಸವನ್ನು ಹುಟ್ಟುಹಾಕುತ್ತದೆ. ಯೋಜಿಸಿಕೊಂಡು ಓದುವುದು ಯಾವಾಗಲೂ ಉತ್ತಮ ಓದುವ ಉದ್ದೇಶಗಳನ್ನು ಗುರುತಿಸಿಕೊಳ್ಳಬೇಕು. ಸುಮ್ಮನೆ ಏನೂ ಉದ್ದೇಶವಿಲ್ಲದೆ ಓದುವುದರಿಂದ ಕಾಲದಂಡವಾಗಿ ಹೋಗುತ್ತದೆ. ಯೋಜಿಸಿದ ಸಮಯಕ್ಕೆ ಬದ್ಧವಾಗಿ ಓದಲು ಪ್ರಾರಂಭಿಸಬೇಕು. ಸುಲಭವಾದುದನ್ನು ಓದಲು ಕುಳಿತುಕೊಂಡ ಮೊದಲಲ್ಲಿ ಓದಬೇಕು. ಕಷ್ಟವಾದುದನ್ನು ಅಥವಾ ಇಷ್ಟವಿಲ್ಲದುದನ್ನು ನಂತರ ಓದಬಹುದು. ಆಸಕ್ತಿ ಹೆಚ್ಚಿರುವಾಗ ಕಷ್ಟವಿರುವುದನ್ನು ಓದಬೇಕು. ಆ ಸಂದರ್ಭದಲ್ಲಿ ಗ್ರಹಿಕೆ ತೀವ್ರವಾಗುತ್ತದೆ. ಓದುವಾಗಿನ ಪುನರ್ವಿಮರ್ಶೆ ನಾವು ಸರಿಯಾದ ಜಾಡಿನಲ್ಲಿ ಸಾಗುತ್ತಿದ್ದೇವೆಯೇ ಇಲ್ಲವೇ ಎಂಬುದರ ಮಾಹಿತಿ ಕೊಡುತ್ತದೆ. ಓದಿನ ಸಮಯವನ್ನು ಗೆಳೆಯರಿಗೆ ನಯವಾಗಿ ತಿಳಿಸಬೇಕು. ಆ ಸಮಯದಲ್ಲಿ ಅವರು ಕರೆಮಾಡದಂತೆ ಗಮನವಹಿಸಬೇಕು. ಓದಿನ ಸಮಯದಲ್ಲಿ ಮೊಬೈಲನ್ನು (ಚಲವಾಣಿಯನ್ನು) ತಟಸ್ಥವಾಗಿಡುವುದು ಒಳ್ಳೆಯದು. ಕಷ್ಟವಾದುದನ್ನು ಗೆಳೆಯರ ಜೊತೆ ಕುಳಿತು ಓದುವುದು ಒಳ್ಳೆಯದು.

ಗ್ರಹಿಕೆಯನ್ನು ಹೆಚ್ಚಿಸಬೇಕಾದ ಸಂದರ್ಭದಲ್ಲಿ ಗಟ್ಟಿ ಓದು ಸಲ್ಲದು. ಗಟ್ಟಿಯಾಗಿ ಓದುವಾಗ ತುಟಿಗಳ ಚಲನೆಯ ಕಡೆಗೆ, ಶಾಬ್ದಿಕ ಅಭಿವ್ಯಕ್ತಿಯ ಕಡೆಗೆ ಗಮನಕೊಡಬೇಕಾಗುವುದರಿಂದ ಅವು ಗ್ರಹಿಕೆಗೆ ಅಡ್ಡಿತರುತ್ತವೆ. ಕಡಿಮೆ ಶ್ರಮ ಮತ್ತು ಹೆಚ್ಚಿನ ಗ್ರಹಿಕೆ ಎರಡನ್ನೂ ಮೌನ ಓದಿನಲ್ಲಿ ಸಾಧಿಸಬಹುದು. ಪ್ರಾಥಮಿಕ ಹಂತದಲ್ಲಿ ಮೂಲಭೂತವಾಗಿ ಓದುವ ಕೌಶಲವನ್ನು ಕರಗತ ಮಾಡಿಕೊಳ್ಳಬೇಕಾದಾಗ ಮೌನ ಓದು ಒಳ್ಳೆಯದು.

ಓದುವಾಗ ಗಮನಕೇಂದ್ರೀಕರಿಸುವುದು ಬಹಳ ಮುಖ್ಯ. ಬಹಳಷ್ಟು ಓದುಗರಿಗೆ ಇದು ಕಷ್ಟಕರವಾದ ಕೆಲಸ. ಈ ಸಂದರ್ಭದಲ್ಲಿ ಕೆಲವು ಅಂಶಗಳ ಕಡೆಗೆ ಗಮನವಿಟ್ಟರೆ ಈ ವಿಷಯದಲ್ಲಿ ಜಯಿಸಬಹುದು. ಪ್ರತಿ ಬಾರಿ ಓದುವಾಗಲೂ ಅದರಿಂದ ಏನು ಸಾಧಿಸಬೇಕು ಎಂಬುದನ್ನು ಗಮನದಲ್ಲಿಡಬೇಕು (ಉದಾಹರಣೆಗೆ: ಸಮಭಾಜಕವೃತ್ತದ ಕಾಡುಗಳ ಲಕ್ಷಣಗಳನ್ನು ಈಗ ಕಲಿಯಬೇಕು). ದಿನದ ಯಾವ ಸಮಯ ಓದಲು ಖುಷಿಕೊಡುತ್ತದೆ ಎಂದು ಗುರುತಿಸಿಕೊಳ್ಳಬೇಕು. ಕೆಲವರಿಗೆ ಬೆಳಿಗ್ಗೆ, ಕೆಲವರಿಗೆ ರಾತ್ರಿಯ ವೇಳೆ ಓದಲು ಚೆನ್ನ. ಸಾಮಾನ್ಯವಾಗಿ ಬೆಳಗಿನ ಜಾವ ಓದಲು ಪ್ರಶಸ್ತವಾದ ಸಮಯ ಎಂಬುದು ಅನುಭವಸ್ಥರ ಮಾತು. ಹಸಿದಿರುವಾಗ, ದೇಹ ದಣಿದಿರುವಾಗ ಓದುವುದು ಬೇಡ. ಒಂದು ಬಾರಿಗೆ ಒಂದಕ್ಕಿಂತ ಹೆಚ್ಚು ವಿಷಯಗಳ ಕಡೆ ಗಮನಕೊಡುವುದು ಸಲ್ಲದು. ದೀರ್ಘವಾದ ವಿಷಯಗಳನ್ನು ಓದುವಾಗ ಅದನ್ನು ಚಿಕ್ಕ ಚಿಕ್ಕ ಭಾಗಗಳಾಗಿ ವಿಭಜಿಸಿಕೊಳ್ಳುವುದು ಮೇಲು. ಓದುವಾಗ ಹಗಲುಗನಸು ಕಾಣುತ್ತಾ ಕುಳಿತುಕೊಳ್ಳಬಾರದು. ಓದುವ ಸಂದರ್ಭಗಳಲ್ಲಿ ಮನಸ್ಸನ್ನು ಹರ್ಷದಾಯಕವಾಗಿ ನಿರಾಳವಾಗಿರಿಸಿಕೊಳ್ಳಲು ಪ್ರಯತ್ನಿಸಬೇಕು. ಆತಂಕಕಾರಿ ಓದು ಪರಿಣಾಮಕಾರಿಯಲ್ಲ. ಓದುವ ಮೊದಲು ನಡುವೆ ಕೆಲವು ನಿಮಿಷಗಳ ಧ್ಯಾನ ಗಮನಕೇಂದ್ರೀಕರಣಕ್ಕೆ ಸಹಾಯಮಾಡುತ್ತದೆ ಎಂದು ತಜ್ಞರು ಹೇಳುತ್ತಾರೆ. ಕೆಲವೊಮ್ಮೆ ನಮ್ಮ ಬಗೆಗಿನ ಆಲೋಚನೆಗಳೇ ನಮ್ಮ ಮನಸ್ಸನ್ನು ವಿಚಲಿತಗೊಳಿಸುತ್ತವೆ.

ಓದುವುದನ್ನು ಮುಂದೂಡುವುದು ಸಲ್ಲದು. ಅಪರೂಪವಾಗಿ ಅನಿವಾರ್ಯವಾಗಿ ಕೆಲವೊಮ್ಮೆ ಮುಂದೂಡಬೇಕಾಗುತ್ತದೆ. ಅದು ಸಹಜ. ಆದರೆ ನಿರಂತರ ಮುಂದೂಡುವಿಕೆ ಮನಸ್ಸಿನಲ್ಲಿ ಒಂದು ರೀತಿಯ ಅಪರಾಧಿ ಮನೋಭಾವವನ್ನು ಹುಟ್ಟಿಸುತ್ತದೆ. ಆತಂಕವನ್ನೂ ಹುಟ್ಟಿಸುತ್ತದೆ. ಸಾಧನಾ ಮಟ್ಟವನ್ನು ಕುಂಠಿತಗೊಳಿಸುತ್ತದೆ. ವ್ಯಕ್ತಿಯ ಒಟ್ಟು ಶೈಕ್ಷಣಿಕ ಸಾಧನೆಗೆ ಅಡ್ಡಿ ಬರುತ್ತದೆ.

ಓದುವಿಕೆಯನ್ನು ಮುಂದೂಡಲು ಅನೇಕ ಕಾರಣಗಳಿರುತ್ತವೆ. ಪರಿಪೂರ್ಣತೆಗೆ ಅತಿ ಹೆಚ್ಚು ಗಮನಕೊಡುವವರು ಅದು ಸಾಧ್ಯವಾಗುತ್ತಿಲ್ಲ ಎನಿಸಿದಾಗ, ಕೆಲಸವನ್ನು ಯಶಸ್ವಿಯಾಗಿ ಮಾಡಿ ಮುಗಿಸಲು ಸಾಧ್ಯ ಎಂಬುದರ ಬಗ್ಗೆ ಭರವಸೆ ಕಡಿಮೆಯಾದಾಗ ಓದುವುದರ ಬಗ್ಗೆ ಏನು ಮತ್ತು ಹೇಗೆ ಪ್ರಶ್ನೆಗಳಿರುವಾಗ, ಓದುವ ವಿಷಯ ಕಷ್ಟ ಎನಿಸಿದಾಗ, ಆಸಕ್ತಿ, ಶ್ರದ್ಧೆ ಕಡಿಮೆಯಾಗಿ ಅಭಿಪ್ರೇರಣೆ ಇಲ್ಲದಾಗ, ಗಮನಕೇಂದ್ರೀಕರಣ ಅಸಾಧ್ಯ ಎಂಬ ಭಾವನೆ ಬಂದಾಗ, ಓದು ಸಂತೋಷಕೊಡುತ್ತದೆ ಎಂಬ ನಂಬಿಕೆ ಬಾರದಾಗ, ಇತ್ಯಾದಿ ಅನೇಕ ಸನ್ನಿವೇಶಗಳಲ್ಲಿ ಓದನ್ನು ಮುಂದೂಡುವ ಸಾಧ್ಯತೆಗಳಿವೆ. ಇಂತಹ ಸಂದರ್ಭಗಳಲ್ಲಿ ಪರಿಸ್ಥಿತಿಯ ಹಿಡಿತಕ್ಕೆ ಒಳಗಾಗದೆ ಸ್ವ–ಅಭಿಪ್ರೇರಣೆ, ಆದ್ಯತೀಕರಣ, ಬದ್ಧತೆ, ಕಾರ್ಯತೃಪ್ತಿ, ಕಾರ್ಯವಿಭಜನೆ, ಓದಿನ ನಡುವೆ ವಿರಾಮ, ಅಧ್ಯಾಪಕರ ಮಾರ್ಗದರ್ಶನ, ಸ್ನೇಹಿತರೊಡನೆ ಪರಿಸ್ಥಿತಿ ನಿವೇದನೆ, ವ್ಯವಸ್ಥಿತ ಯೋಜನೆ, ಅಡಚಣೆಗಳ ನಿವಾರಣೆ, ವ್ಯಕ್ತಿಯ ಮಿತಿಯಲ್ಲಿ ಗುರಿನಿರೂಪಣೆ ಇತ್ಯಾದಿ ಮಾರ್ಗೋಪಾಯಗಳಲ್ಲಿ ಯಾವುದು ಸೂಕ್ತವೋ ಅದನ್ನು ಸಮರ್ಪಕವಾಗಿ ಬಳಸಿಕೊಂಡು ಸಮಸ್ಯೆಯಿಂದ ಪಾರಾಗಬಹುದು.

ಓದುವಾಗ ಅನೇಕ ಪರಾಮರ್ಶನ ಸಾಮಗ್ರಿಗಳನ್ನು ಬಳಸುವ ಕೌಶಲವನ್ನೂ ಕರಗತ ಮಾಡಿಕೊಳ್ಳಬೇಕಾಗುತ್ತದೆ. ನಿಘಂಟು ಪದಗಳ ಅರ್ಥ, ವಿವರಣೆ, ಪದಗಳಲ್ಲಿನ ಅಕ್ಷರಗಳ ಜೋಡಣೆ, ಪದಗಳ ಬಳಕೆಯ

Digitised by Bharatavani, CIIL

ರೀತಿ ಇತ್ಯಾದಿ ಅಂಶಗಳನ್ನು ಸ್ಪಷ್ಟೀಕರಿಸುತ್ತದೆ. ನಿಘಂಟು ಬಳಸುವುದು ಒಂದು ಕೌಶಲ. ಸಂಗ್ರಹಾತ್ಮಕ ನಿಘಂಟುಗಳಿಗಿಂತ ವಿವರಣಾತ್ಮಕ ನಿಘಂಟುಗಳು ಉತ್ತಮ. ಕೆಲವು ವೇಳೆ ವಿಶೇಷ ವಿಷಯ ನಿಘಂಟುಗಳು – ರಸಾಯನ ಶಾಸ್ತ್ರ ನಿಘಂಟು, ಭೌತಶಾಸ್ತ್ರ ನಿಘಂಟು ಇತ್ಯಾದಿ – ಹೆಚ್ಚು ಪ್ರಯೋಜನಕ್ಕೆ ಬರುತ್ತವೆ. ಇವಲ್ಲದೆ ಸಮಾನಾರ್ಥಕ ಕೋಶಗಳು, ವಿರುದ್ಧಾರ್ಥಕ ಕೋಶಗಳೂ ಅನೇಕ ರೀತಿಯ ಸ್ಪಷ್ಟೀಕರಣ ನೀಡುತ್ತವೆ. ಇವುಗಳ ಜೊತೆಗೆ ವಿಶ್ವಕೋಶಗಳು – ಸಾಮಾನ್ಯ ವಿಶ್ವಕೋಶಗಳು, ವಿಶೇಷ ವಿಷಯ ವಿಶ್ವಕೋಶಗಳು–ಅಟ್ಲಾಸ್‌ಗಳು ಇವೆಲ್ಲವನ್ನೂ ಅಗತ್ಯ ಸಾಮಗ್ರಿಯಾಗಿ ಪರಿಗಣಿಸಿ ಓದುವಾಗ ಜೊತೆಯಲ್ಲೇ ಇಟ್ಟುಕೊಳ್ಳಬೇಕು.

ಎಲ್ಲದಕ್ಕಿಂತ ಮಿಗಿಲಾಗಿ ಓದುವುದನ್ನು ಕುರಿತು ಇತ್ಯಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಏಕೆಂದರೆ ಮನೋಭಾವ ಎಂಬುದು ಮನಸ್ಸಿನ ಕುಂಚದಂತೆ; ಅದು ಯಾವುದೇ ಸನ್ನಿವೇಶವನ್ನೂ ವರ್ಣಮಯವಾಗಿರಿಸುತ್ತದೆ. ಓದುವ ವಿಷಯದ ಜೊತೆ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು. ಓದಿದುದನ್ನು ನಮ್ಮ ಜೀವನದ ವಿಷಯಗಳೊಂದಿಗೆ ಹೊಂದಿಸಿಕೊಳ್ಳಬೇಕು. ಇದು ಗಮನವೀಯಲು ಪ್ರೋತ್ಸಾಹಿಸುತ್ತದೆ. ಓದು ಉತ್ತಮ ಚಿಂತನಾಕೌಶಲಗಳನ್ನು ಬೆಳೆಸಬೇಕು. ಚಿಂತನಾ ಕೌಶಲಗಳು ಎಲ್ಲರ ಸ್ವತ್ತು. ಉತ್ತಮ ಚಿಂತಕರು ಉತ್ತಮ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಾರೆ. ಪರಿಣಾಮಕಾರಿ ಓದು ವ್ಯಕ್ತಿಯ ವ್ಯಕಿತ್ವವನ್ನೇ ಉಜ್ವಲಗೊಳಿಸುತ್ತದೆ.

–ಎ.ಶ.

## ಓದುವ ಮೂಲೆ

ಓದುವುದು ಜೀವನಪರ್ಯಂತ ಸಾಗುವ ಪ್ರಮುಖ ಚಟುವಟಿಕೆಗಳಲ್ಲೊಂದು. ಚಿಕ್ಕ ಮಕ್ಕಳಿಗೆ ಪುಸ್ತಕಗಳನ್ನು ಓದುವ ಮೊದಲೇ ಪುಸ್ತಕಗಳೊಡನೆ ಸಂಬಂಧ ಏರ್ಪಟ್ಟಿರುತ್ತದೆ. ಮಗುವಿನ ಕೈಯಲ್ಲಿ ಮೊದಲನೆಯ ಪುಸ್ತಕ ಬಂದ ಕೂಡಲೇ ಅಥವಾ ಅಪ್ಪ, ಅಮ್ಮ ಪುಸ್ತಕ ಓದಿ ಮಗುವಿಗೆ ತೋರಿಸಿ ಹೇಳಿಕೊಡುವಾಗಲೇ ಮಗು ಪುಸ್ತಕದ ಜೊತೆ ಸಂಬಂಧ ಬೆಳೆಸಿಕೊಳ್ಳಲು ಪ್ರಾರಂಭ ಮಾಡುತ್ತದೆ. ಓದಿನ ಜೊತೆಗಿನ ಈ ಸಂಬಂಧ ಜೀವನ ಪೂರ್ತಿ ಉಳಿಯುವಂತೆ ಮಾಡುವುದು ಮತ್ತು ಓದಿನ ಪ್ರೀತಿಯನ್ನು ಬೆಳೆಸುವುದೇ 'ಓದುವ ಮೂಲೆಗಳ' ಕಾರ್ಯ.

'ಓದುವ ಮೂಲೆ' (Reading Corner) ಎಂಬ ಪರಿಕಲ್ಪನೆ ಮಕ್ಕಳಿಗೆ ಓದುವ ಹವ್ಯಾಸದ, ಅಭ್ಯಾಸವನ್ನು ಮೊದಲು ಮಾಡುವ ಹಂತಗಳಲ್ಲಿ ಪ್ರಾಯೋಗಿಕವಾಗಿ ವಿಶಿಷ್ಟ ವಾತಾವರಣವನ್ನು ಯೋಜಿಸಿ, ಅನ್ವಯಿಸಿ ಬಳಸುವ ಒಂದು ಸ್ಥಳ. ಮನೆಗಳಲ್ಲಿಯೂ ಇದರ ಪ್ರಯೋಜನ ಬಹುಮುಖವಾದುದು. ಮಕ್ಕಳಲ್ಲಿ ಓದುವ ಪ್ರೀತಿಯನ್ನು, ಪುಸ್ತಕ ಪ್ರೀತಿಯನ್ನು ಬೆಳೆಸಲು ಅನುಸರಿಸುವ ಒಂದು ಮಾರ್ಗೋಪಾಯವಿದು ಎಂದೂ ಹೇಳಬಹುದು. ಇದರ ರಚನೆ ಹಾಗೂ ಬಳಕೆ ಅತ್ಯಂತ ಮಹತ್ವದ ಫಲಗಳನ್ನು ಕೊಡುತ್ತದೆಯಾದರೂ ಇದಕ್ಕೆ ಮೂಲಭೂತವಾಗಿ ಅಧ್ಯಾಪಕರ ಕಾಳಜಿ ಮತ್ತು ಸೃಜನಶೀಲತೆ ಬಹಳ ಮುಖ್ಯ. ಇದು ಪ್ರಮುಖವಾಗಿ ಶಾಲೆ ಮತ್ತು ಮನೆಗಳ ಸನ್ನಿವೇಶಗಳಲ್ಲಿ ಹೆಚ್ಚು ಬಳಕೆಯಲ್ಲಿದೆ.

'ಓದುವ ಮೂಲೆ' ಎಂಬುದು ಓದುವ ಪ್ರೀತಿಯನ್ನು ಬೆಳೆಸುವ ನಿರ್ದಿಷ್ಟ ಉದ್ದೇಶದಿಂದ ತರಗತಿಯ, ಶಾಲೆಯ, ಮನೆಯ, ದೊಡ್ಡ ಗ್ರಂಥಾಲಯದ ಅಥವಾ ಇನ್ನಾವುದೇ ಕಾರ್ಯಸ್ಥಾನದ ಒಂದು ಕಡೆಯಲ್ಲಿ (ಮೂಲೆಯಲ್ಲಿ) ರೂಪಿಸಿದ ಓದಲು ಅನುಕೂಲಕರವಾದ ಒಂದು ವಾತಾವರಣದ ನಿರ್ಮಾಣ ಎಂದು ಹೇಳಬಹುದು. ಇದರಲ್ಲಿ ಭೌತಿಕ ಪರಿಸರದ ನಿರ್ಮಾಣ ಎಷ್ಟು ಮುಖ್ಯವೋ ಮಾನವೀಯವಾದ ಒತ್ತಾಸೆಯೂ ಅಷ್ಟೇ ಮುಖ್ಯ. ಶಾಲೆಯಲ್ಲಿ ಅಧ್ಯಾಪಕರು, ಮನೆಯಲ್ಲಿ ಪೋಷಕರು, ಸಂಸ್ಥೆಗಳಲ್ಲಿ ಗ್ರಂಥಾಲಯ ಸಿಬ್ಬಂದಿ ಓದುವ ಮೂಲೆಯ ಪ್ರಮುಖ ಪಾತ್ರವನ್ನು ವಹಿಸಬೇಕಾಗುತ್ತದೆ.

ಈ ಓದುವ ಮೂಲೆಗಳು ಅನೇಕ ರೀತಿಯಲ್ಲಿ ಮಹತ್ವದ್ದಾಗುತ್ತವೆ. ಮಕ್ಕಳ ಭಾಷಾ ಬೆಳವಣಿಗೆಗೆ ಇದು ಒಳ್ಳೆಯ ಬುನಾದಿಯನ್ನು ಕಟ್ಟುತ್ತವೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧವನ್ನು ಉತ್ತಮವಾಗಿಡುತ್ತವೆ. ಪುಸ್ತಕಗಳ ಬಗೆಗಿನ ಪ್ರೀತಿಯನ್ನು ಮೂಡಿಸುತ್ತವೆ. ವಿರಾಮದ ವೇಳೆಯನ್ನು ಸದುಪಯೋಗಪಡಿಸಿಕೊಳ್ಳಲು ದಾರಿದೀಪವಾಗುತ್ತವೆ. ಸ್ವಕಲಿಕೆಯ ಕೌಶಲಗಳನ್ನು ಬೆಳೆಸುತ್ತವೆ, ಶಿಸ್ತು ಮೂಡಿಸುತ್ತವೆ, ಓದಿದುದನ್ನು ಹಂಚಿಕೊಳ್ಳುವ ಬಯಕೆಯನ್ನು ಈಡೇರಿಸಿಕೊಳ್ಳುವ ಹಿನ್ನೆಲೆಯಲ್ಲಿ ಸಂವಹನಕ್ಕೆ ಉತ್ತಮ ಆಹಾರವನ್ನು ಒದಗಿಸುತ್ತವೆ. ಕುಟುಂಬದಲ್ಲಿ ಪೋಷಕರು ಮತ್ತು ಮಕ್ಕಳ ನಡುವಿನ ಬಾಂಧವ್ಯವನ್ನು ಹೆಚ್ಚಿಸುತ್ತವೆ. ಒಟ್ಟಿನಲ್ಲಿ ಅಪೇಕ್ಷಣೀಯ ರೀತಿಯಲ್ಲಿ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗುತ್ತವೆ.

'ಓದುವ ಮೂಲೆ'ಯನ್ನು ಸಿದ್ಧಪಡಿಸುವಾಗ ಸ್ಥಳದ ಕಡೆಗೆ ಗಮನಕೊಡಬೇಕು. ತರಗತಿಯಲ್ಲಿ ಕಿಟಕಿಯ ಪಕ್ಕದ ಸ್ಥಳ ಹೆಚ್ಚು ಸೂಕ್ತ. ಇಲ್ಲಿ ಕಿಟಕಿಗೆ ಒಂದು ತೆಳುವಾದ ಪರದೆಯನ್ನು ಹಾಕಬೇಕು. ಇದು ತೀಕ್ಷ್ಣವಾದ ಬಿಸಿಲು ಬಾರದಂತೆ ತಡೆಯುತ್ತದೆ. ಮಕ್ಕಳು ಆಟ ಆಡುವ ಸ್ಥಳದ ಕಡೆಗೆ ಇರಬಾರದು. ಬೇರೆ ಮಕ್ಕಳು ಆಟ ಆಡುವಾಗ ಆ ಶಬ್ದ ಅಡಚಣೆಯಾಗಬಾರದು. ದೂರದರ್ಶನವಿರುವ ಸ್ಥಳ ಇರಬಾರದು. ಓದುವ ಮೂಲೆಗೆ ದೂರದರ್ಶನ ಶಬ್ದವಾಗಲೀ, ಬೆಳಕಾಗಲೀ ಅಡಚಣೆಯಾಗಬಾರದು. 'ಓದುವ ಮೂಲೆ' ತರಗತಿಯ ಅತಿ ಪ್ರಮುಖವಾದ ಸ್ಥಳ. ಅದು ಮಹತ್ವದ್ದಾಗುವಂತೆ ಮಾಡಲು ಅನೇಕ ಮಾರ್ಗಗಳಿವೆ. ಇದಕ್ಕೆ ಅಧ್ಯಾಪಕನ ಕ್ರಿಯಾಶೀಲತೆ ಬಹಳ ಮುಖ್ಯ. ಇದಕ್ಕೆ ಅನೇಕ ಸಲಕರಣೆಗಳು ಅವಶ್ಯಕ. ಅವುಗಳನ್ನು ಮೊದಲು ಜೋಡಿಸಿಕೊಳ್ಳಬೇಕು. ಹತ್ತಿತುಂಬಿದ ಮೆತ್ತನೆಯ ಪ್ರಾಣಿಗಳ ಆಕಾರದ ದಿಂಬುಗಳು, ಚಿಕ್ಕ ಚಿಕ್ಕ ಕುರ್ಚಿಗಳು, ದಪ್ಪ ದಪ್ಪ ಬ್ಲಾಂಕೆಟ್‌ಗಳು, ಮಕ್ಕಳಿಗೆಟಕುವ ಕಪಾಟುಗಳು, ಓದುವ ಮೂಲೆಯ ಹೆಸರಿಗೆ ಧ್ಯೇಯಕ್ಕೆ ತಕ್ಕ ಚಿತ್ರಗಳು, ಮಾದರಿಗಳು, ಲ್ಯಾಂಪುಗಳು, ಹೂಕುಂಡಗಳು, ಅಲಂಕಾರಿಕ / ಆಕರ್ಷಕ ಪೀಠೋಪಕರಣಗಳು, ಬೆಂಚುಗಳು / ಮಂಚಗಳು, ಮೆತ್ತನೆಯ ಹಾಸುಗಳು, ನೆಲಲ್ಯಾಂಪುಗಳು, ಇದಲ್ಲದೆ ಕಾರ್ಡ್ ಬೋರ್ಡ್ ಬೇಲಿಗಳು, ಕೃತಕ ಹಣ್ಣು ಹೂಗಳು ಮೆತ್ತನೆಯ ದಿಂಬುಗಳಿಂದ ಅಲಂಕರಿಸಿದ ಕಬ್ಬಿಣದ ಸ್ನಾನದ ತೊಟ್ಟಿಗಳು, ಪ್ರವಾಸಕ್ಕೆ ಕೊಂಡುಹೋಗುವ ಚಿಕ್ಕ ಚಿಕ್ಕ ಮೇಜುಗಳು, ಇವೆಲ್ಲವನ್ನೂ ಓದುವ ಮೂಲೆಯಲ್ಲಿ ಬಳಸಬಹುದು ಅಥವಾ ಒಂದು ದೊಡ್ಡ ಪ್ಲಾಸ್ಟಿಕ್ ಬೇಸಿನ್ನಿನಲ್ಲಿ ಬಟ್ಟೆ ಅಥವಾ ಪ್ಲಾಸ್ಟಿಕ್ ಸುತ್ತಿದ ಹಲವಾರು ಚಿಕ್ಕ ಚಿಕ್ಕ ಆಕರ್ಷಕ ದಿಂಬುಗಳನ್ನಿಟ್ಟು ಮಕ್ಕಳಿಗೆ ಬೇಕಾದ ದಿಂಬುಗಳನ್ನು ಬೇಕಾದ ಸ್ಥಳದಲ್ಲಿ (ನಿಗದಿತ ಸ್ಥಳದ ಒಳಗೆ) ಹಾಕಿಕೊಂಡು ಕುಳಿತು ಓದಲು ಹೇಳಬಹುದು. ಸುತ್ತಲೂ ಭಿತ್ತಿ ಫಲಕಗಳನ್ನಿಟ್ಟು ಉತ್ತಮ ಪುಸ್ತಕಗಳ ಹೆಸರುಗಳನ್ನೋ ಉತ್ತಮ ಬಣ್ಣಬಣ್ಣದ ಚಿತ್ರಗಳನ್ನೋ ಕಲಾಕೃತಿಗಳನ್ನೋ ಅದರಲ್ಲಿ ಪ್ರದರ್ಶಿಸಬಹುದು. ಚಿಕ್ಕ ಚಿಕ್ಕ ಕಪಾಟುಗಳು, ಮಡಚಿಡಬಹುದಾದ ಮುದ್ದು ಪ್ರಾಣಿಗಳ ಗೊಂಬೆಗಳ ಕುರ್ಚಿಗಳು (ಕಪ್ಪೆ ಕುರ್ಚಿಗಳು, ಟೆಡ್ಡಿ ಕುರ್ಚಿಗಳು, ನಾಯಿ ಕುರ್ಚಿಗಳು, ಆನೆ ಸಿಂಹದ ಕುರ್ಚಿಗಳು ಇತ್ಯಾದಿ) ಉತ್ತಮ ಪರಿಸರವನ್ನು ನಿರ್ಮಿಸಲು ಸಹಾಯ ಮಾಡುತ್ತವೆ. ಹೀಗೆ ಅಧ್ಯಾಪಕರ ಕಲ್ಪನೆ ಯೋಜನೆಗೆ ತಕ್ಕ ಉಪಕರಣಗಳನ್ನು ಮೊದಲಿಗೆ ಸಿದ್ಧಪಡಿಸಿಕೊಳ್ಳಬೇಕು.

ಓದುವ ಮೂಲೆಗಳನ್ನು ವಿಧವಿಧವಾಗಿ ಅಲಂಕರಿಸಬಹುದು. ಗ್ರೀಷ್ಮ, ಶರತ್, ವಸಂತ, ಹೇಮಂತ, ಶಿಶಿರ ಇತ್ಯಾದಿ ಋತುಗಳಿಗೆ

Digitised by Bharatavani, CIIL

ಸಂಬಂಧಿಸಿದ ಚಿತ್ರಗಳನ್ನು ಸುತ್ತಲೂ ಹಾಕಿ ಓದಲು ಋತುಗಳ ಪರಿಸರವನ್ನು ನಿರ್ಮಿಸಿಕೊಡಬಹುದು. ಬೇರೆ ಬೇರೆ ಕಾಲದಲ್ಲಿ ಓದಲು ಗುರುತಿಸಿರುವ ಪುಸ್ತಕಗಳನ್ನು ಬೇರೆ ಬೇರೆ ಬಣ್ಣದ ಕಪಾಟುಗಳಲ್ಲಿಟ್ಟು ಪ್ರತಿ ಕಪಾಟಿನ ಪುಸ್ತಕವನ್ನು ಉದ್ದೇಶಿಸಿರುವಂತೆ ಗುರುತಿಸಬಹುದು. ಕೆಂಪು ಬಣ್ಣದ ಕಪಾಟಿನಲ್ಲಿರುವ ಪುಸ್ತಕಗಳು ಗ್ರೀಷ್ಮಋತುವಿನಲ್ಲಿ ಓದಲು, ಹಸಿರು ಬಣ್ಣದ ಕಪಾಟಿನಲ್ಲಿರುವ ಪುಸ್ತಕಗಳು ವಸಂತಋತುವಿನಲ್ಲಿ ಓದಲು, ಹಳದಿ ಬಣ್ಣದ ಕಪಾಟಿನಲ್ಲಿರುವ ಪುಸ್ತಕಗಳು ಹೇಮಂತದಲ್ಲಿ ಓದಲು ಇತ್ಯಾದಿ. ಮೆತ್ತನೆಯ ದಿಂಬಿನ ಕುರ್ಚಿಗಳು, ನೆಲಕ್ಕೆ ಹಾಕಿದ ದೀಪಗಳು ಒಳ್ಳೆಯದು. ಅಥವಾ ಕುಳಿತುಕೊಳ್ಳುವ ಜಾಗಕ್ಕೆ ಸೇರಿದಂತೆ ಗೋಡೆಗೆ ದೀಪವನ್ನು ಹಾಕಬಹುದು. ಮೂಲಭೂತ ಸೌಕರ್ಯಗಳ ಜೊತೆಗೆ ಮೇಲೆ ಹೇಳಿದಂತೆ ಕೆಲವು ಆಲಂಕಾರಿಕ ಅಣಿಗಳು ಬೇಕಾಗುತ್ತವೆ. ಇದು ಓದುವ ಮೂಲೆಗಳನ್ನು ಹೆಚ್ಚು ಆಕರ್ಷಕವಾಗಿಸುವುದು. ಪುಸ್ತಕಗಳನ್ನಿಟ್ಟರೆ ಅವುಗಳ ಹೆಸರುಗಳು ಕಾಣುವಂತೆ ಗೋಡೆಗೆ ಹಾಕಿದ ಉಬ್ಬಿದ ಕಪಾಟುಗಳು ಮಕ್ಕಳು ಪುಸ್ತಕಗಳ ಹೆಸರುಗಳನ್ನು ಓದಿ ಆಯ್ಕೆ ಮಾಡಿಕೊಳ್ಳಲು ಸಹಾಯಕವಾಗುತ್ತವೆ. ಒಳ್ಳೆಯ ಆಲಂಕಾರಿಕ ಗಿಡಗಳು ಬೆಳೆದ ಹೂ ಕುಂಡಗಳೂ ಸ್ಥಳಕ್ಕೆ ಜೀವತುಂಬಿ ಚೆಲುವು ನೀಡುತ್ತವೆ. ಕಪಾಟಿನಲ್ಲಿ ಇಡುವ ಪ್ರತಿ ಪುಸ್ತಕಕ್ಕೂ ಬೈಂಡ್ ಹಾಕಿ ಅದರ ಮೇಲೆ ದುಂಡನೆಯ ಸ್ಟಿಕ್ಕರ್ ಅಂಟಿಸಿ ಮಕ್ಕಳು ಪುಸ್ತಕಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವ ಸಂಕೇತಗಳನ್ನು ಬರೆಯಬಹುದು.

ತರಗತಿ ಅತಿ ಚಿಕ್ಕದಾದರೆ, ಪುಸ್ತಕಗಳನ್ನು ಓದಲು ಅನೌಪಚಾರಿಕವಾಗಿಯೂ ಪ್ರದರ್ಶಿಸಬಹುದು. ಹಲವಾರು ಬಾಸ್ಕೆಟ್‌ಗಳನ್ನಿಟ್ಟು ಒಂದೊಂದು ಬಾಸ್ಕೆಟ್‌ನಲ್ಲಿ ಒಂದೊಂದು ರೀತಿಯ ಅಕ್ಷರಗಳು, ಬಣ್ಣಗಳು, ಹವ್ಯಾಸಗಳು, ಮಕ್ಕಳ ಪದ್ಯಗಳು, ಪ್ರಾಣಿಕತೆಗಳು, ವಿಜ್ಞಾನ, ಕಲೆ, ಹಿರಿಯ ಲೇಖಕರು, ನಮ್ಮ ನಾಯಕರು ಪುಸ್ತಕಗಳನ್ನಿಟ್ಟು ಆಯಾ ಬಾಸ್ಕೆಟ್‌ಗಳಿಗೆ ಆಯಾ ಹೆಸರನ್ನು ಚಿತ್ರಗಳ ಜೊತೆಯಲ್ಲಿ ಅಂಟಿಸಿ ಮಕ್ಕಳಿಗೆ ಪುಸ್ತಕ ಆಯ್ದುಕೊಳ್ಳಲು ಸಹಾಯಮಾಡಬಹುದು. ಮಕ್ಕಳು ಓದಿದ ನಂತರ ಪುಸ್ತಕವನ್ನು ಅದೇ ಬಾಸ್ಕೆಟ್‌ಗಳಲ್ಲಿ ಹಾಕಲು ತರಬೇತಿ ಕೊಡುತ್ತಿರಬೇಕು. ಓದುವ ಮೂಲೆಯನ್ನು ಓದುವ ತೋಟವಾಗಿ ನಿರ್ಮಿಸಬಹುದು. ಹೀಗೆ ಮಾಡಲು ಶಾಲೆಯ ಒಂದು ಮೂಲೆಯಲ್ಲಿ ಒಂದು ಚಿಕ್ಕ ತೋಟವನ್ನು ರಚಿಸಿ ಅದಕ್ಕೆ ಕೃತಕ ಅಲಂಕರಣಗಳಿಂದ ಮರ, ಗಿಡ ಇತ್ಯಾದಿಗಳನ್ನು ಜೋಡಿಸಿ, ತೋಟದ ವಾತಾವರಣವನ್ನು ಸೃಷ್ಟಿಸಬೇಕು. ಮಕ್ಕಳು ಇಲ್ಲಿಗೆ ಪ್ರವೇಶಿಸುವ ದ್ವಾರದಲ್ಲಿ ಇಳಿಬಿಟ್ಟ ಬಳ್ಳಿಯ ಕಮಾನುಗಳನ್ನು ರಚಿಸಿ ಆ ಮೂಲಕ ಮಕ್ಕಳು ಪ್ರವೇಶಿಸುವಂತೆ ಮಾಡಬೇಕು. ಎಲೆಯಾಕಾರದ ಕುರ್ಚಿಗಳು, ಮರದಾಕಾರದ ಕಪಾಟುಗಳು, ಹೂವಿನ ಹಣ್ಣಿನ ಚಿತ್ರವಿರುವ ಮೇಜುಗಳು ಎಲೆಯ ಪೀಠಗಳು ಇತ್ಯಾದಿ ಸಲಕರಣೆಗಳನ್ನು ಸೃಷ್ಟಿಸಬೇಕು. ಹೂವಿನ ಮೇಲೆ ಕುಳಿತ ದುಂಬಿ ಓದುತ್ತಿರುವಂತೆ, ಚಿಟ್ಟೆ ತನ್ನ ಚಿತ್ರವನ್ನು ಪುಸ್ತಕದಲ್ಲಿ ನೋಡಿ ನಗುತ್ತಿರುವಂತೆ ಪುಸ್ತಕದ ಮೇಲೊಂದು ಎರೆಹುಳು ಸಾಲುಗಳ ಮೇಲೆ ಓಡಾಡುವಂತೆ (ಎಲೆಕ್ಟ್ರಾನಿಕ್ ಉಪಕರಣಗಳ ಸಹಾಯದಿಂದ) ರಚನೆಗಳಾಗಬಹುದು. ಪುಟ್ಟ ನಾಯಿಮರಿ ಪುಸ್ತಕವನ್ನು ತೆಗೆದು ಮಕ್ಕಳಿಗೆ ಕೊಡುತ್ತಿರುವ ಚಿತ್ರ. ಒಂದು ಪ್ರಾಣಿ ಮತ್ತೊಂದು ಪ್ರಾಣಿಗೆ ಓದಲು ಹೇಳಿಕೊಡುತ್ತಿರುವ ಚಿತ್ರಗಳನ್ನು ಚಿತ್ರದ ರೂಪದಲ್ಲಾಗಲೀ ಮಾದರಿಯ ರೂಪದಲ್ಲಾಗಲೀ ಕಾಣಿಸಬಹುದು. ಓದುವ ಮೂಲೆಯ ಒಂದು ಭಾಗದಲ್ಲಿ ಒಂದು ಪ್ರಾಣಿಯ ಮೂಲಕ ಪುಸ್ತಕಗಳನ್ನು ರಕ್ಷಿಸುವ ಜೋಪಾನಮಾಡುವ ಓದುವ ರೀತಿಯನ್ನು ಮಕ್ಕಳ ಸ್ವರದಲ್ಲೇ ಮುದ್ದಾಗಿ (ಧ್ವನಿಸುರುಳಿಯ ಮೂಲಕ) ಹೇಳಿಸುತ್ತಿರಬೇಕು. ಆ ಮಾತುಗಳು ಮಕ್ಕಳ ಮನಮುಟ್ಟುವಂತಿರಬೇಕು. ("ಮಕ್ಕಳೇ, ನಿಮಗೆ ಹೇಗೆ ಪುಸ್ತಕಗಳೆಂದರೆ ಇಷ್ಟವೋ ಹಾಗೆಯೇ ನನಗೂ ನಿಮ್ಮನ್ನು ಕಂಡರೆ ಇಷ್ಟ, ಇಷ್ಟ ಮಾತ್ರವಲ್ಲ, ಪಂಚಪ್ರಾಣ–" ಇತ್ಯಾದಿ). ಇದರ ಜೊತೆಗೆ ಮಕ್ಕಳಿಗೆ ತುಂಬಾ ಇಷ್ಟವಾದ ಗೀತೆಗಳು ಅತಿ ಮೆದುವಾಗಿ ಯಾವುದೋ ಮೂಲೆಯಿಂದ ಹಾದುಬರಬೇಕು. ಸುವಾಸನೆ ಬೀರುವ ಹೂಗಳ ಘಮ, ಘಮ ವಾತಾವರಣವಿದ್ದರೆ ಮತ್ತೂ ಒಳ್ಳೆಯದು.

ಓದುವ ಮೂಲೆಯನ್ನು ಬಳಸುವ ರೀತಿಯು ಕಡೆಗೂ ಗಮನಕೊಡಬೇಕು. ಓದುವ ಮೂಲೆಯ ಒಂದು ಭಾಗದಲ್ಲಿ ಒಂದು ದೊಡ್ಡ ನೇತಾಡುವ ಪಾಕೆಟ್ ಜೇಬನ್ನು ಮಾಡಿ ಅದರಲ್ಲಿ ಎಲ್ಲ ಮಕ್ಕಳ ಹೆಸರಲ್ಲಿ ಒಂದು ಲಕೋಟೆಯಂತಿರುವ ಕಾರ್ಡನ್ನು ಇಡಬೇಕು. ಪ್ರತಿ ಪುಸ್ತಕದ ಹಿಂಭಾಗದಲ್ಲಿ ಒಂದು ಜೇಬಿನ ಆಕಾರದ, ಕಾಗದದ ಲಕೋಟೆ ಮಾಡಿ ಅದರಲ್ಲಿ ಆ ಪುಸ್ತಕದ ವಿವರವನ್ನೊಳಗೊಂಡ ಒಂದು ಸೂಚಿ ಕಾರ್ಡನ್ನು ಇಟ್ಟಿರಬೇಕು. ಪ್ರತಿ ವಿದ್ಯಾರ್ಥಿ ಬಂದು ಓದಲು ಒಂದು ಪುಸ್ತಕವನ್ನು ತೆಗೆದುಕೊಂಡಾಗ ಆ ಪುಸ್ತಕದ ಕಾರ್ಡನ್ನು ನೇತಾಡುವ ಪಾಕೆಟ್ ಜೇಬಿನಲ್ಲಿರುವ ಅವನ ಹೆಸರಿನ ಲಕೋಟೆಯಾಕಾರದ ಕಾರ್ಡಿನಲ್ಲಿಡುತ್ತಾನೆ. ಅದನ್ನು ಓದಿ ಪೂರ್ಣಗೊಳಿಸಿದ ಮೇಲೆ ಆ ಪುಸ್ತಕವನ್ನು ಹಿಂತಿರುಗಿಸಿ ಆ ಪುಸ್ತಕದ ಕಾರ್ಡನ್ನು ಅದೇ ಪುಸ್ತಕದ ಕೊನೆ ಪುಟದಲ್ಲಿರುವ ಲಕೋಟೆಯಲ್ಲಿ ಇಟ್ಟು ಹಿಂತಿರುಗುತ್ತಾನೆ. ತಕ್ಷಣವೇ ಆ ಪುಸ್ತಕವನ್ನು ಓದಲೇಬೇಕು ಎನಿಸಿದರೆ ಆ ಪುಸ್ತಕವನ್ನು ಒಂದು ದಿನದವರೆಗೆ ಮನೆಗೆ ಕೊಂಡು ಹೋಗಲು ಕೊಡಬಹುದು.

ವಿದ್ಯಾರ್ಥಿಗಳು ಪುಸ್ತಕಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಎಚ್ಚರವಹಿಸುವಂತೆ ತರಬೇತು ಮಾಡುವುದರ ಜೊತೆಗೆ ಅಧ್ಯಾಪಕರ ಗಮನವೂ ಆ ಕಡೆಗೆ ಇರಬೇಕು. ಆಗ ವಿದ್ಯಾರ್ಥಿಗಳು ಹೆಚ್ಚು ಮುತುವರ್ಜಿ ವಹಿಸುತ್ತಾರೆ. ಮಕ್ಕಳ ಕಾರ್ಡ್‌ಗಳ ಮೂಲಕ ಪೋಷಕರೂ ಈ ಪುಸ್ತಕಗಳನ್ನು ಓದುವ ಅವಕಾಶ ಪಡೆದು ಮಕ್ಕಳಿಗೆ ಓದಿ ಹೇಳಿ ಅಥವಾ ಮಕ್ಕಳಿಂದ ಓದಿಸಿ 'ಓದುವ ಮೂಲೆ'ಗಳ ಉದ್ದೇಶವನ್ನು ಸಾಧಿಸಲು ಸಹಕರಿಸಬಹುದು. ಹೀಗೆ ಓದುವಾಗ ಗಮನಿಸಬೇಕಾದ ಸೂಚನೆಗಳನ್ನು ಮುಂದೆ ಕೊಡಲಾಗಿದೆ.

ಓದುವ ಮೂಲೆಗೆ ಪುಸ್ತಕಗಳನ್ನು ಜಾಗರೂಕತೆಯಿಂದ ಸಂಗ್ರಹಿಸಬೇಕು. ಪುಸ್ತಕಗಳು ಭಿನ್ನ ವಿಷಯಗಳನ್ನೊಳಗೊಂಡಿರಲಿ. ಕತೆಗಳ ಜೊತೆಗೆ ಪದ್ಯಗಳು, ನಿಯಕಾಲಿಕೆಗಳ ಬರಹಗಳು, ಕತೆ ಬಿಟ್ಟಂತೆ ಇತರ ರೀತಿಯ ಬರವಣಿಗೆಗಳ ಪುಸ್ತಕಗಳು ಇರಲಿ. ಸಾರ್ವಜನಿಕ ಗ್ರಂಥಾಲಯದ ಗ್ರಂಥಪಾಲಕರಿಂದ ಮಕ್ಕಳು ಎಂತಹ ಪುಸ್ತಕಗಳನ್ನು ಹೆಚ್ಚು ಇಷ್ಟಪಡುತ್ತಾರೆ ಎಂದು ಒಂದು ಪಟ್ಟಿ ಮಾಡಿಕೊಳ್ಳಬೇಕು. ಅದರಂತೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕು.

ಓದುವ ಮೂಲೆಗೆ ಒಂದು ಧ್ಯೇಯವನ್ನು ಗುರುತಿಸಿಕೊಳ್ಳಬೇಕು. ಇದು ಅತ್ಯಂತ ಆಕರ್ಷಕವಾಗಿರಬೇಕು. ಉದಾಹರಣೆಗೆ, ಸಮುದ್ರತೀರ, ತೋಟ, ಮಳೆಬೀಳುವ ಕಾಡು, ಮನೆ, ಪ್ರಪಂಚದ ಸುತ್ತ, ಋತುಗಳು, ಆಕಾಶ ಇತ್ಯಾದಿ. ಪ್ರತಿ ಓದುವ ಮೂಲೆಗೆ ಒಂದೊಂದು ಹೆಸರಿಡಬೇಕು. 'ಓದುವ ಉದ್ಯಾನ' 'ಚಿಟ್ಟೆಯ ಭಂಡಾರ' 'ಹಕ್ಕಿಗಳ ಚಿಲಿಪಿಲಿ ಗೂಡು' – ಏನೇ ಹೆಸರಾದರೂ ಸರಿಯೇ ಅದು ಮಕ್ಕಳನ್ನು ಆಕರ್ಷಿಸಬೇಕು. ಆ ಹೆಸರಿನ ನಿಷ್ಪತ್ತಿ, ಸಾಧುತ್ವ ಅರ್ಥವಂತಿಕೆ – ಇವುಗಳೆಲ್ಲ ಇಲ್ಲಿ ಮುಖ್ಯವಲ್ಲ. 'ಪಪ್ಪಿಯ ಪುಟ್ಟ ಮನೆ' ಎಂದಾದರೂ ಸರಿಯೇ. ಅದರ ಅರ್ಥವನ್ನು ಮಕ್ಕಳೇ ಗ್ರಹಿಸಿಕೊಳ್ಳುತ್ತಾರೆ ಅಥವಾ ಸರಳವಾಗಿ 'ಮಟಾಣಿಗಳ ಓದುವ ಮನೆ' ಎಂದೋ 'ಮಕ್ಕಳ ಓದುವ ಮಂಟಪ' ಎಂದೋ ಕರೆಯಬಹುದು.

Digitised by Bharatavani, CIIL

'ಓದುವ ಮೂಲೆ'ಯ ಸಿದ್ಧತೆಗೆ ಹಣದ ಕೊರತೆ ಇದ್ದರೆ ಸ್ಥಳೀಯ ದಾನಿಗಳನ್ನು, ಪೋಷಕರನ್ನು ಉದ್ಯಮಿಗಳನ್ನು ಈ ಕಾರಣಕ್ಕಾಗಿ ಹಣ ಕೊಡುವಂತೆ ಕೇಳಿಕೊಳ್ಳಬಹುದು, ಸಾಧ್ಯವಾದಷ್ಟು ಹಳೇ ವಸ್ತುಗಳನ್ನು ಮಾರುವ ಅಂಗಡಿಗಳಿಂದಲೇ ವಸ್ತುಗಳನ್ನು ಕೊಂಡರೆ ಸಾಕು. ಮಕ್ಕಳಿಗೆ ಅಗತ್ಯವಾದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಬರೆದು ಅವುಗಳನ್ನು ಮಾರಿ ಬಂದ ಹಣದಿಂದಲೂ ಈ ಓದುವ ಕೋಣೆಯನ್ನು ಸಿದ್ಧಪಡಿಸಬಹುದು.

ಮಕ್ಕಳು 'ಓದುವ ಮೂಲೆ'ಯಲ್ಲಿ ಕುಳಿತು ಓದುತ್ತಿರುವಾಗ ಅವರು ಏನು ಹೇಗೆ ಓದುತ್ತಿದ್ದಾರೆ ಎಂದು ಅಧ್ಯಾಪಕಿ ಗಮನಿಸಿಕೊಳ್ಳಬೇಕು. ಅಗತ್ಯವಿದ್ದರೆ, ಕಾಲಾವಕಾಶವಿದ್ದರೆ ನಾಲ್ಕಾರು ಮಕ್ಕಳನ್ನು ಒಟ್ಟಿಗೆ ಕೂರಿಸಿ ಓದಿ ಹೇಳಿದರೆ ಮಕ್ಕಳು ಅತ್ಯಂತ ಖುಶಿಪಡುತ್ತಾರೆ. ಮಕ್ಕಳೊಡನೆ ಉತ್ತಮ ನಂಟು ಬೆಳೆಸಿಕೊಳ್ಳಲು ಇದು ಸದವಕಾಶ. ಇದನ್ನು ಮಾಡಲು ಮನೆಯಲ್ಲಿ ಹೆಚ್ಚಿನ ಸಾಧ್ಯತೆಗಳಿವೆ. ಹಾಗಾಗಿ ಮಕ್ಕಳ ಬೆಳವಣಿಗೆಯಲ್ಲಿ ಪುಸ್ತಕಗಳು ಎಷ್ಟು ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಹೆತ್ತವರಿಗೆ ತಿಳಿಸುವುದು ಅಧ್ಯಾಪಕರ ಕರ್ತವ್ಯ. ಇವೆಲ್ಲಕ್ಕೂ ಮುಖ್ಯವಾಗಿ ಬೇಕಾದದ್ದು ಮಕ್ಕಳ ಪುಸ್ತಕಗಳು, ಸಾಕಷ್ಟು ಕಾಲ, ಹಾಗೂ ಅಧ್ಯಾಪಕರಿಗೆ ಮತ್ತು ಹೆತ್ತವರಿಗೆ ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಹುಟ್ಟಿಸುವಲ್ಲಿನ ಶ್ರದ್ಧೆ.

ಮನೆಗಳಲ್ಲಿಯೂ ಓದುವ ಮೂಲೆಯನ್ನು ಸಿದ್ಧಪಡಿಸುವುದು ಮಕ್ಕಳ ಭವಿಷ್ಯದ ದೃಷ್ಟಿಯಿಂದ ಒಂದು ಒಳ್ಳೆಯ ಹೂಡಿಕೆ. ಮನೆಯ ಒಂದು ಸಣ್ಣ ಜಾಗವನ್ನು ಒಂದು ಮನಮೆಚ್ಚುವ ಓದುವ ಮೂಲೆಯಾಗಿ ಸಲೀಸಾಗಿ ಪರಿವರ್ತಿಸಬಹುದು.

ಮಕ್ಕಳು ಪುಸ್ತಕಗಳನ್ನು ಕಂಡುಕೊಂಡಾಗ ಅವರಿಗೆ ಒಂದು ಹೊಸಪ್ರಪಂಚವೇ ತೆರವಾಗುತ್ತದೆ. ಇದು ಅವರ ಇಂದಿನ ಜೀವನಕ್ಕೂ ಭವಿಷ್ಯ ಜೀವನಕ್ಕೂ ನೆರವಾಗುತ್ತದೆ. ರಾಷ್ಟ್ರೀಯ ಮಕ್ಕಳ ಓದುವ ಫೌಂಡೇಶನ್ ಜಾಲತಾಣದ ಪ್ರಕಾರ ಒಂದು ದಿನಕ್ಕೆ ಚಿಕ್ಕ ಮಕ್ಕಳೊಡನೆ 20 ನಿಮಿಷ ಗಟ್ಟಿಯಾಗಿ ಓದುವುದರಿಂದ ಕೌಟುಂಬಿಕ ಬಾಂಧವ್ಯ ಹೆಚ್ಚಾಗುತ್ತದೆ. ಕೇಳುವ ಕೌಶಲ ಮತ್ತು ಭಾಷಾ ಕೌಶಲ ಅಭಿವೃದ್ಧಿಯಾಗುತ್ತದೆ. ಇದು ಮಕ್ಕಳಿಗೆ ಓದುವಿಕೆಗೆ ಒಂದು ಗಟ್ಟಿಯಾದ ಬುನಾದಿಯನ್ನು ಒದಗಿಸಿಕೊಡುತ್ತದೆ. ಮಕ್ಕಳಿಗೆ ಪ್ರತ್ಯೇಕವಾಗಿ ಓದುವುದಕ್ಕಾಗಿಯೇ ಒಂದು ಅಂದಗೊಳಿಸಿದ ಆಕರ್ಷಕವೂ ಆತ್ಮೀಯವೂ ಆದ ಸ್ಥಳವನ್ನು ಒದಗಿಸಿಕೊಡುವುದು ಮಕ್ಕಳ ಓದುವ ಪ್ರೀತಿಯನ್ನು ಬೆಳೆಸುವುದರಲ್ಲಿ ಅತಿ ಪ್ರಮುಖವಾದ ಮಾರ್ಗ. ಅಪ್ಪ ಅಮ್ಮನ ಜೊತೆ ಓದುವ ಈ ಕ್ಷಣಗಳು ಮಕ್ಕಳ ಜೀವನದಲ್ಲಿನ ಅಮೂಲ್ಯ ಕ್ಷಣಗಳು. ಮಕ್ಕಳು ಪೋಷಕರೊಡನೆ ಬೆಳೆಯುವ ಅತಿ ಮುದದ ಕ್ಷಣಗಳೂ ಇವೆ. ಹೀಗೆ ಮಕ್ಕಳೊಡನೆ ಓದುವಾಗ ಪೋಷಕರು ತಮಗೆ ಅರಿವಿಲ್ಲದೆಯೇ ಮಕ್ಕಳಿಗೆ ಪ್ರಯೋಗಶಾಲಾ ಪದ್ಧತಿಯ ಮೂಲಕ ವಿಷಯವನ್ನು ಮತ್ತು ಭಾಷೆಯನ್ನು ಕಲಿಸುತ್ತಿರುತ್ತಾರೆ.

ಮನೆಯಲ್ಲಿ 'ಓದುವ ಮೂಲೆ'ಯನ್ನು ಸಿದ್ಧಪಡಿಸುವುದು ಅಂತಹ ಕಷ್ಟದ ಕೆಲಸವೇನಲ್ಲ. ಮನೆಯಲ್ಲಿ ಮಕ್ಕಳು ಓದುವುದಕ್ಕಿಂತ ಮುಖ್ಯವಾಗಿ ಪೋಷಕರೇ ಓದಿ ಮಕ್ಕಳಿಗೆ ಕೇಳಿಸುವುದು ಉತ್ತಮ ಕ್ರಮ. ಮನೆಯಲ್ಲಿ ಮೆತ್ತನೆಯ ಇಬ್ಬರು ಕುಳಿತುಕೊಳ್ಳಬಹುದಾದ ಒಂದು ಕುರ್ಚಿಯನ್ನು ಗುರುತಿಸಿಕೊಳ್ಳಬೇಕು. ಏಕೆಂದರೆ ಹೀಗೆ ಕೇಳುವಾಗ ಮಕ್ಕಳು ಅಪ್ಪ ಅಮ್ಮನಿಗೆ ಆತುಕೊಂಡು ಕುಳಿತುಕೊಳ್ಳಲು ಇಷ್ಟಪಡುತ್ತಾರೆ. ಸ್ವಲ್ಪ ದೊಡ್ಡ ಮಗುವನ್ನು ಉದ್ದೇಶಿಸಿ ಓದುವುದಾದರೆ ಒಂದು ದೊಡ್ಡ ಕುರ್ಚಿ ಮತ್ತು ಒಂದು ಚಿಕ್ಕ 'ಅಕ್ಕರೆಯ ಕುರ್ಚಿ'ಯನ್ನು ಹಾಕಿಕೊಳ್ಳಬೇಕು. ಕುರ್ಚಿಯ ಬಳಿ ಸಾಕಷ್ಟು ಗಾಳಿ ಬೆಳಕು ಇರುವಂತೆ ನೋಡಿಕೊಳ್ಳಬೇಕು. ಕಣ್ಣಿಗೆ ಹೊಡೆಯದ ಮಂದವಾದ ಓದುಗ ಸ್ನೇಹಿ ದೀಪಗಳನ್ನು ಬಳಸಿ ದೀಪದ ಲ್ಯಾಂಪು, ನಿಮ್ಮ ಕನ್ನಡಕ, ಹೆಚ್ಚುವರಿ ಪುಸ್ತಕಗಳು ಇವುಗಳನ್ನು ಇಡಲು ಒಂದು ಮೇಜನ್ನು ಸಿದ್ಧಗೊಳಿಸಿಕೊಳ್ಳಬೇಕು. ಆ ಮೇಜು ಮಕ್ಕಳು ಅದರ ಮೇಲೆ ಹತ್ತಿ ಕುಳಿತುಕೊಳ್ಳುವಾಗ ಬೀಳದಂತೆ ಗಟ್ಟಿಯಾಗಿದ್ದು ಒಂದು ಕಪ್ ಟೀ ಇಡಲೂ ಸಾಧ್ಯವಾಗುವಂತೆ ಮೇಜು ದೊಡ್ಡದಾಗಿರಬೇಕು. ಚಿಕ್ಕ ಚಿಕ್ಕ ಪುಸ್ತಕದ ಕಪಾಟುಗಳನ್ನು ಕೊಂಡು ಅದನ್ನು ಕುರ್ಚಿಯ ಪಕ್ಕದಲ್ಲೇ ಇಡಬೇಕು. ಈ ಕಪಾಟುಗಳು ಮಕ್ಕಳಿಗೆ ಪುಸ್ತಕಗಳನ್ನು ತೆಗೆದುಕೊಳ್ಳಲು ಎಟುಕುವಂತಿರಬೇಕು. ಒಟ್ಟಿಗೆ ಓದಲು ಮಗುವು ಮೆಚ್ಚುವ ಪುಸ್ತಕವನ್ನು ತೆಗೆದುಕೊಳ್ಳಲು ಈ ವ್ಯವಸ್ಥೆ ಸಹಾಯಕವಾಗುತ್ತದೆ. ಓದುವಾಗ ಪೋಷಕರಿಗೆ ದಣಿವಾಗದಂತೆ ಕಾಲುಗಳನ್ನು ಇಟ್ಟುಕೊಳ್ಳಲು ಒಂದು ಪಾದಮಣೆಯನ್ನು ಇಟ್ಟುಕೊಂಡರೆ ಒಳ್ಳೆಯದು. ಮಗು ದೊಡ್ಡವರಾದಾಗ ಅವರನ್ನು ಮುಂದೆ ಅಲ್ಲಿ ಕೂರಿಸಬಹುದು. ಇದರ ಜೊತೆಗೆ ವೃತ್ತಾಕಾರದ ದೊಡ್ಡ 'ಬೀಜದ ಚೀಲ'ಗಳನ್ನೂ ಬಳಸಬಹುದು ಅಥವಾ ದೊಡ್ಡ ದೊಡ್ಡ ದಿಂಬುಗಳನ್ನು ಬಳಸಬಹುದು. ಓದುವಾಗ ತಿನ್ನುವ ತಿನಿಸುಗಳನ್ನಿಡಲು ಒಂದು ಆಲಂಕಾರಿಕವಾದ ಬುಟ್ಟಿಯನ್ನು ಇಡಬಹುದು. ಬುಕ್ ಮಾರ್ಕ್ ಗಳಿರುವ ಆಲಂಕಾರಿಕ ಬಟ್ಟಲು ಅಥವಾ ಲೋಟ ಇದ್ದರೆ ಪುಸ್ತಕವನ್ನು ಅರ್ಧ ಓದಿದವರು ಅವುಗಳನ್ನು ಬಳಸಬಹುದು. ಮನೆಯಲ್ಲಾದರೆ ಕ್ಯಾಂಡಲ್ ಇಡುವ ದಾನಿಗಳೂ ಅಗತ್ಯಕ್ಕೆ ಬರುತ್ತವೆ. ಮನೆಯಲ್ಲಿನ ಈ ವ್ಯವಸ್ಥೆ ಮಕ್ಕಳಿಗೆ ಮಾತ್ರವಲ್ಲದೆ ಮನೆಯವರೆಲ್ಲರಿಗೂ ಓದಲು ಒಂದು ಆರಾಮದ ವಾತಾವರಣವನ್ನು ಕಲ್ಪಿಸಿಕೊಡುತ್ತದೆ.

ಮೇಲೆ ತಿಳಿಸಿದಂತೆ ಮನೆಯ 'ಓದುವ ಮೂಲೆ'ಯನ್ನು ಬಳಸಿಕೊಳ್ಳುವ ಸಂದರ್ಭದಲ್ಲಿ ಮಕ್ಕಳಿಗೇ ಓದಲು ಬಿಡದೆ ಪೋಷಕರು ಗಟ್ಟಿಯಾಗಿ ಓದುವುದು ಒಂದು ಅತ್ಯಂತ ಪ್ರಯೋಜನಕಾರಿ ಅನುಭವ. ಇದಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳು ತಿಳಿದಿರಬೇಕು. ಮಗುವಿನೊಡನೆ ಇಪ್ಪತ್ತು ನಿಮಿಷಗಳ ಕಾಲದವರೆಗೆ ಓದಬಹುದು. ಮಗುವಿಗೆ ಮಗುವಿನ ಪುಸ್ತಕವನ್ನು ಓದಿ ಹೇಳಲು ಒಂದು ನಿರ್ದಿಷ್ಟ ವಯಸ್ಸಿನವರೆಗೆ ಕಾಯಬೇಕು ಎಂದೇನೂ ಇಲ್ಲ. ಮಗು ಹತ್ತು ವರ್ಷವಾಗುವವರೆಗೆ ಅವನಿಗೆ ಓದಿ ಹೇಳುವ ಅಭ್ಯಾಸ ಬಿಡಬಾರದು.. ಅವರು ಓದಲು ಕಲಿತ ಮೇಲೂ ಬೇರೆಯವರು ಓದಿ ಕೇಳಿಸುವುದರಿಂದ ಅನೇಕ ಪ್ರಯೋಜನಗಳಿವೆ. ಚಿಕ್ಕ ಮಕ್ಕಳಿಗೆ ಶಿಶು ಗೀತೆಗಳು, ಪ್ರಾಸ ಗೀತೆಗಳು, ಸಾಲುಗಳ ಪುನರುಕ್ತಿ ಇಂತಹವುಗಳನ್ನು ಕುರಿತ ಪುಸ್ತಕಗಳು, ಕತೆ ಪುಸ್ತಕಗಳು ಉತ್ತಮ. ಮಕ್ಕಳ ಜೊತೆ ಓದುವ ಅಭ್ಯಾಸವನ್ನು ನಿಯತವಾಗಿ ಪಾಲಿಸಿ, ದಿನವೂ ನಿರ್ದಿಷ್ಟ ಕಾಲಾವಧಿಯಲ್ಲಿ ಓದಿ ಹೇಳಬೇಕು. ಸಾಮಾನ್ಯವಾಗಿ ಅವರು ಮಲಗುವ ಮೊದಲು ಓದಿ ಹೇಳುವುದು ಒಳ್ಳೆಯದು. ಕೇಳುವ ಮಕ್ಕಳು ಒಬ್ಬರಿಗಿಂತ ಹೆಚ್ಚು ಇದ್ದರೆ ಎಲ್ಲರನ್ನೂ ಒಟ್ಟಾಗಿ ಕುಳ್ಳಿರಿಸಿ ಓದುವುದು ಒಳ್ಳೆಯದು. ಒಬ್ಬರು ಕೇಳಿದರೆ ಉಳಿದವರೂ ಆಸಕ್ತಿಯಿಂದ ಕೇಳುತ್ತಾರೆ. ಮಕ್ಕಳಿಗೆ ಓದಿದ ರೀತಿ ಮತ್ತು ವಿಷಯ ಇಷ್ಟವಾಗಿಬಿಟ್ಟರೆ ಪುನಃ ಓದಲು ಕೇಳುತ್ತಾರೆ. 'ಬೇಡ, ಈಗ ತಾನೇ ಓದಿದೆನಲ್ಲ' ಎಂದು ಹೇಳಬಾರದು. ಆಯ್ಕೆ ಮಾಡಿಕೊಳ್ಳುವ ಪುಸ್ತಕಗಳು ಮಕ್ಕಳಿಗೆ ಅತ್ಯಂತ ಆಸಕ್ತಿಯುತವಾದುದಾಗಿರಲಿ, ಅವರ ಬೌದ್ಧಿಕ ಮಟ್ಟಕ್ಕಿಂತ ಸ್ವಲ್ಪ ಮೇಲ್ಮಟ್ಟದ್ದಾಗಿರಲಿ. ಈ ಬಗ್ಗೆ ಅತ್ಯಂತ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಮಕ್ಕಳು ಓದುವುದರಲ್ಲಿ ಆಸಕ್ತಿಯನ್ನೇ ಕಳೆದುಕೊಂಡು ಬಿಡುತ್ತಾರೆ. ಕೆಲವು ಮಕ್ಕಳಿಗೆ ಅವರಿಗೇ ಇಷ್ಟವಾದ ಕೆಲವು ಪಾತ್ರಗಳು, ರಚನೆಗಳು ಇರುತ್ತವೆ. ಅದನ್ನು ಗೊತ್ತುಮಾಡಿಕೊಂಡು ಅಂತಹ ಪುಸ್ತಕಗಳನ್ನೇ ತರಬೇಕು. ಅದೇ ಪಾತ್ರ ಬರುವಂತಹ ಉದ್ದನೆಯ ಕತೆಯ ಪುಸ್ತಕಗಳನ್ನು ಆರಿಸಿಡಬೇಕು. ಒಂದು ಬಾರಿಗೆ ಒಂದು ಅಧ್ಯಾಯ ಓದುವುದು ಒಳ್ಳೆಯದು. ಮಗು ದೊಡ್ಡದಾಗುತ್ತಿದ್ದಂತೆ ಅವನೇ ಓದುತ್ತಿರುವ ಪುಸ್ತಕವನ್ನು ತೆಗೆದುಕೊಂಡು ಒಮ್ಮೆ ಮಗು, ಒಮ್ಮೆ ಪೋಷಕರು–ಹೀಗೆ

Digitised by Bharatavani, CIIL

ಓದುವುದು ಒಳ್ಳೆಯದು. ಪ್ರತಿ ಅಧ್ಯಾಯವನ್ನು ಓದಿದಾಗ ಹಿಂದಿನ ಅಧ್ಯಾಯದಲ್ಲಿ ಏನಾಯಿತೆಂದು ಮಗುವೇ ಹೇಳುವಂತೆ ಹೇಳಬೇಕು. ಮೊದಮೊದಲಿಗೆ ಓದುವಾಗ ಮಗು ಸ್ವಲ್ಪ ಹೊತ್ತು ಮಾತ್ರ ಗಮನ ಕೊಡಲು ಸಾಧ್ಯ. ಅದು ತಿಳಿದಿರಬೇಕು. ಅವರು ಬೆಳೆಯುತ್ತಿದ್ದಂತೆ ಅವರ ಅವಧಾರಣೆಯ ಕಾಲ ಹೆಚ್ಚಾಗುತ್ತದೆ.

ಓದುವ ಮೂಲೆಯನ್ನು ಸಿದ್ಧಪಡಿಸುವುದರಿಂದ ಮನೆಗೆ ಒಂದು ವಿಶಿಷ್ಟ ನೋಟವನ್ನು ಒದಗಿಸಿ ಕೊಡಬಹುದು. ಈ ಸ್ಥಳ ಆಕರ್ಷಣೀಯವಾಗಿರುವುದಲ್ಲದೆ ಜನರನ್ನು ತನ್ನ ಬಳಿಗೆ ಕೂಗಿ ಕರೆಯುತ್ತದೆ. ಕೊಠಡಿಯ ಕ್ರಿಯಾತ್ಮಕತೆಯನ್ನು ಹೆಚ್ಚಿಸುತ್ತದೆ. ಮನೆಯ ಯಾವುದೇ ಮೂಲೆಯಲ್ಲಿ ಯಾವುದೇ ಕುರ್ಚಿಯಲ್ಲಿ ಕುಳಿತು ಓದಬಹುದು ಎಂಬುದು ಹೌದಾದರೂ ಇದು ಓದುವ ಕ್ರಿಯೆಯನ್ನು ಹೆಚ್ಚು ಆನಂದದಾಯಕವಾಗಿಸುತ್ತದೆ.

ಭಾರತದ ಶಾಲೆಗಳಲ್ಲಿ ಈ 'ಓದಿನ ಮೂಲೆ'ಗಳ ಬಗ್ಗೆ ಕಾಳಜಿ ಸಾಲದು. ಇತ್ತೀಚೆಗಂತೂ ಮಕ್ಕಳು ಹಿಂದಿನ ಮಕ್ಕಳು ಓದುತ್ತಿದ್ದಷ್ಟು ಪುಸ್ತಕಗಳನ್ನು ಓದುವುದಿಲ್ಲ. ಭಾರತದ ಈ ಸ್ಥಿತಿಗೆ ಅನೇಕ ಕಾರಣಗಳಿವೆ. ಶಾಲೆಯ ಪುಸ್ತಕವನ್ನೇ ಕೊಡಿಸಿ ಓದಿಸುವ ಸೌಕರ್ಯವಿಲ್ಲದ ಸನ್ನಿವೇಶದಲ್ಲಿ ಮನೆಯವರು ಪುಸ್ತಕಪ್ರೀತಿಗೆ ಕೈ ಹಚ್ಚುವುದು ದೂರದ ಮಾತು. ಇಂತಹ ಸಂದರ್ಭಗಳಲ್ಲಿ ಶಾಲೆಗಳೇ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಇದು ಶಾಲೆಗಳ ಅವಿನಾಭಾವ ಅಂಗವಾಗಿದೆ. ಪ್ರತಿ ತರಗತಿಯ ಶಿಕ್ಷಕರೇ ಈ ಕುರಿತು ಕಾಳಜಿ ವಹಿಸಿ ಇದನ್ನು ಸಿದ್ಧಪಡಿಸುವುದಿದೆ. ಅದಕ್ಕೆ ಬೇಕಾದ ಹಣದ ಸಹಾಯ ಶಾಲೆಗಳಿಂದ ಒದಗುವುದೂ ಇದೆ. ಪೋಷಕರು, ಸ್ಥಳೀಯರಿಂದ ಸಿಗುವುದೂ ಇದೆ, ಶಿಕ್ಷಕರೇ ಸ್ವಂತ ಆಸಕ್ತಿಯಿಂದ ಕಟ್ಟುವುದೂ ಹೌದಾಗಿದೆ.

ಓದುವ ಮೂಲೆಗಳನ್ನು ಶಾಲೆ ಮತ್ತು ಮನೆಗಳಲ್ಲಿ ಮಾತ್ರವಲ್ಲ, ಬ್ಯಾಂಕುಗಳಲ್ಲಿಯೂ, ಕಛೇರಿಗಳಲ್ಲಿಯೂ ಹಾಗೆಯೇ ಇತರ ಎಲ್ಲ ಕಡೆಗಳಲ್ಲೂ ಸ್ಥಾಪಿಸಬಹುದು. ಆಯಾ ಕ್ಷೇತ್ರಗಳಲ್ಲಿ ಕೆಲಸ ಮಾಡುವವರ ವಯಸ್ಸು, ಮಾನಸಿಕ ಸ್ಥಿತಿ, ಆಸಕ್ತಿ, ಅನುಕೂಲಗಳು ಇವುಗಳಿಗನುಗುಣವಾಗಿ ರಚನೆಯಲ್ಲಿ ಬದಲಾವಣೆಗಳಾಗಬೇಕಷ್ಟೇ. ಒಟ್ಟಿನಲ್ಲಿ ಈ ಓದುವ ಮೂಲೆಗಳು ಓಡಿ ಹೋಗಿ ಓದುವಂತೆ ಆಕರ್ಷಿಸಬೇಕು. ಓದುವ ಪ್ರೀತಿಯನ್ನು ಬೆಳೆಸಬೇಕು.

–ಪಿ.ಶ.

–ಉ.ಕಾ.

# ಕ

## ಕಂಪ್ಯೂಟರ್‌ಗಳು

**ಹಿನ್ನೆಲೆ:** ಲಂಡನ್ನಿನ ಚಾರ್ಲ್ಸ್ ಬ್ಯಾಬೇಜ್‌ನನ್ನು (1791–1871) ಆಧುನಿಕ ಕಂಪ್ಯೂಟರ್ ಪರಿಕಲ್ಪನೆಯ ಆದ್ಯಪ್ರವರ್ತಕನೆಂದು ಪರಿಗಣಿಸಲಾಗಿದೆ. ಇವನು ಕಷ್ಟಕರವಾದ ಲೆಕ್ಕಾಚಾರಗಳನ್ನು ನಿಖರವಾಗಿ ಮತ್ತು ವೇಗವಾಗಿ ಮಾಡಲು ಸಾಧ್ಯವಾಗುವ ಯಾಂತ್ರಿಕ ತತ್ವಗಳ ಆಧಾರದ ಮೇಲೆ ಒಂದು ಯಂತ್ರವನ್ನು ರೂಪಿಸಿ ಅದನ್ನು 'ವ್ಯತ್ಯಾಸ ಯಂತ್ರ' (Difference Machine) ಎಂದು ಕರೆದನು. ಮುಂದೆ ವಿದ್ಯುನ್ಮಾನ ನಿಯಮಗಳ ಆವಿಷ್ಕಾರವಾದ ನಂತರ ಆ ನಿಯಮಗಳ ಮೇಲೆ ಕೆಲಸ ಮಾಡುವ ಆಧುನಿಕ ಕಂಪ್ಯೂಟರನ್ನು ರೂಪಿಸಲಾಯಿತು. ಕಂಪ್ಯೂಟರ್‌ಗಳು ಅವುಗಳ ಸ್ವರೂಪ, ಸಾಮರ್ಥ್ಯ, ಕಾರ್ಯನಿರ್ವಹಿಸುವ ವೇಗ, ಸ್ಮರಣೆಯ ಸಾಮರ್ಥ್ಯ ಇವುಗಳಿಗೆ ಅನುಗುಣವಾಗಿ ಅನೇಕ ಮಜಲುಗಳಲ್ಲಿ ವಿಕಾಸಗೊಂಡಿವೆ.

ಚಾರ್ಲ್ಸ್ ಬ್ಯಾಬೇಜ್

**ಅರ್ಥ:** ಆಧುನಿಕ ಕಂಪ್ಯೂಟರ್‌ನ ಅರ್ಥವನ್ನು ಸಮಗ್ರವಾಗಿ ಹೀಗೆ ಹೇಳಬಹುದು. ದತ್ತಾಂಶವನ್ನು ಪಡೆದು ನಿರೂಪಿಸಿದ ಕಾರ್ಯಕ್ರಮಕ್ಕನುಗುಣವಾಗಿ ಅದನ್ನು ಶೀಘ್ರ ಮತ್ತು ನಿಖರವಾಗಿ ಸಂಸ್ಕರಿಸಿ ಅರ್ಥಪೂರ್ಣ ಮಾಹಿತಿ, ಫಲಿತಾಂಶ ಒದಗಿಸುವ ವಿದ್ಯುನ್ಮಾನ ಯಂತ್ರ ವ್ಯವಸ್ಥೆಯು ಕಂಪ್ಯೂಟರ್ ಎನಿಸಿಕೊಳ್ಳುತ್ತದೆ. ಈ ಹೇಳಿಕೆಯ ಪ್ರಕಾರ ಕಂಪ್ಯೂಟರ್ ಶೀಘ್ರವಾಗಿ ಮತ್ತು ನಿಖರವಾಗಿ ಕಾರ್ಯ ನಿರ್ವಹಿಸುವ ಯಂತ್ರ. ಈ ಯಂತ್ರ ವಿದ್ಯುನ್ಮಾನ ಸ್ವರೂಪದ್ದಾಗಿದೆ. ಅಂದರೆ ವಿದ್ಯುನ್ಮಾನ ಭಾಗಗಳನ್ನು ಹೊಂದಿದೆ. ಉದ್ದೇಶಿತ ಕಾರ್ಯನಿರ್ವಹಿಸಲು ಬಳಸುವ ತರ್ಕಬದ್ಧ ನಿರ್ದೇಶನಗಳ ಸಮೂಹವನ್ನು ಕಾರ್ಯಕ್ರಮ ಎನ್ನುತ್ತಾರೆ. ಆಧುನಿಕ ಕಂಪ್ಯೂಟರ್ ಅಂಕಿ–ಅಂಶಗಳ ರೂಪದ ದತ್ತಾಂಶಗಳನ್ನಲ್ಲದೆ ಪಠ್ಯರೂಪದ, ಚಿತ್ರ/ದೃಶ್ಯ ರೂಪದ, ಶಬ್ದರೂಪದ ದತ್ತಾಂಶಗಳನ್ನು ಸ್ವೀಕರಿಸಿ ಸಂಸ್ಕರಿಸುತ್ತದೆ. ಸಂಸ್ಕರಣೆಯು ಕೇವಲ ಸರಳ ರೂಪದ ಲೆಕ್ಕಾಚಾರ ಮಾತ್ರವಲ್ಲದೆ ಅತಿ ಕ್ಲಿಷ್ಟಕರ ಗಣಿತ ಹಾಗೂ ತರ್ಕ ಸಂಬಂಧಿತ ಕಾರ್ಯಗಳನ್ನು ಒಳಗೊಂಡಿದೆ. ದತ್ತಾಂಶ ಸಂಸ್ಕರಿಸುವುದರ ಮೂಲಕ ಕಂಪ್ಯೂಟರ್ ಅಗತ್ಯ ಮಾಹಿತಿ/ ಫಲಿತಾಂಶ ಒದಗಿಸಿಕೊಡುತ್ತದೆ.

**ವೈಶಿಷ್ಟ್ಯಗಳು:** ವಿಭಿನ್ನ ಕಾರ್ಯನಿರ್ವಹಿಸುವ ಅನೇಕ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡಿರುವ ಕಂಪ್ಯೂಟರ್‌ನಂಥ ಮಾನವ ನಿರ್ಮಿತ ಯಂತ್ರ ಮತ್ತೊಂದಿಲ್ಲ ಎಂದು ಹೇಳಬಹುದು. ಶೀಘ್ರ, ನಿಖರ ಕಾರ್ಯ ನಿರ್ವಹಣೆ, ಅಗಾಧ ಸ್ಮರಣ ಶಕ್ತಿ, ಶೇಖರಣಾ ಸಾಮರ್ಥ್ಯ, ವಿಶ್ವಸನೀಯತೆ, ಚತುರತೆ ಮುಂತಾದ ವೈಶಿಷ್ಟ್ಯಗಳನ್ನು ಕಂಪ್ಯೂಟರ್ ಹೊಂದಿದೆ. ಮನುಷ್ಯನನ್ನು ಮೀರಿಸುವ ಇಷ್ಟೆಲ್ಲಾ ವಿಭಿನ್ನ ಸಾಮರ್ಥ್ಯಗಳನ್ನು ಪಡೆದಿದ್ದರೂ ಸಹ ಸ್ವತಂತ್ರ ಆಲೋಚನೆ, ಸ್ವಂತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ, ಬುದ್ಧಿವಂತಿಕೆ ಇವುಗಳನ್ನು ಕಂಪ್ಯೂಟರ್‌ಗಳು ಸದ್ಯಕ್ಕಂತೂ ಹೊಂದಿಲ್ಲ.

**ವರ್ಗೀಕರಣ:** ಸಂಸ್ಕರಿಸಬೇಕಾದ ದತ್ತಾಂಶಗಳ ಸ್ವರೂಪಕ್ಕನು ಗುಣವಾಗಿ ಕಂಪ್ಯೂಟರ್‌ಗಳನ್ನು ಅನಲಾಗ್, ಡಿಜಿಟಲ್ ಮತ್ತು ಹೈಬ್ರಿಡ್ ಕಂಪ್ಯೂಟರ್‌ಗಳೆಂದು ವರ್ಗೀಕರಿಸಲಾಗಿದೆ. ತಂತ್ರಜ್ಞಾನದ ಬಳಕೆ, ಶೇಖರಣಾ ಸಾಮರ್ಥ್ಯ, ಗಾತ್ರ, ಸಂಸ್ಕರಿಸುವ ಶಕ್ತಿ, ಬಳಸಲ್ಪಡುವ ಕಂಪ್ಯೂಟರ್, ಭಾಷೆ, ತಂತ್ರಾಂಶಗಳ ಬಳಕೆ ಇವುಗಳನ್ನು ಆಧರಿಸಿ ಕಂಪ್ಯೂಟರ್‌ಗಳನ್ನು ಮೈಕ್ರೋ, ಮಿನಿ, ಮೇಯ್ನ್ ಫ್ರೇಮ್ ಹಾಗೂ ಸೂಪರ್ ಕಂಪ್ಯೂಟರ್‌ಗಳೆಂದು ವರ್ಗೀಕರಿಸಲಾಗಿದೆ.

**ಕಂಪ್ಯೂಟರ್ ಕಾರ್ಯವ್ಯವಸ್ಥೆ:** ಕಂಪ್ಯೂಟರ್‌ನಲ್ಲಿ ನಿರ್ದಿಷ್ಟ ಕಾರ್ಯನಿರ್ವಹಿಸಲು ಬೇರೆ ಬೇರೆ ಘಟಕಗಳಿವೆ. ಯಾವುದೇ ರೀತಿಯ

Digitised by Bharatavani, CIIL

ಕಂಪ್ಯೂಟರ್ ಮುಖ್ಯವಾಗಿ ನಾಲ್ಕು ಘಟಕಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ ಆಗಮ ಘಟಕ (Input), ಕೇಂದ್ರೀಯ ಸಂಸ್ಕರಣ ಘಟಕ (Central Processing Unit), ಸ್ಮರಣ ಘಟಕ ಮತ್ತು ನಿರ್ಗಮ ಘಟಕ (Out put). ಕೇಂದ್ರೀಯ ಸಂಸ್ಕರಣ ಘಟಕವು ಎರಡು ವಿಭಾಗಗಳನ್ನು ಹೊಂದಿದೆ. ಅವುಗಳೆಂದರೆ ನಿಯಂತ್ರಣ ವಿಭಾಗ ಮತ್ತು ಗಣಿತ – ತರ್ಕ ವಿಭಾಗ. ಈ ನಾಲ್ಕು ಪ್ರಮುಖ ಘಟಕಗಳು ಪರಸ್ಪರ ಅವಲಂಬಿತವಾಗಿವೆ. ಇವುಗಳ ಸಮ್ಮಿಳನದ ಮೂಲಕ ಕಂಪ್ಯೂಟರ್ ಕಾರ್ಯ ನಿರ್ವಹಿಸುತ್ತದೆ.

**ಯಂತ್ರಾಂಶ – ತಂತ್ರಾಂಶ:** ಕಂಪ್ಯೂಟರ್ ವ್ಯವಸ್ಥೆಗೆ ಸೇರಿದ ಎಲ್ಲ ರೀತಿಯ ಭೌತಿಕ/ಯಾಂತ್ರಿಕ ಸಲಕರಣೆ ಮತ್ತು ಸಾಧನಗಳು ಯಂತ್ರಾಂಶವೆಂದು (Hardware) ಕರೆಯಲ್ಪಡುತ್ತವೆ. ಇವುಗಳು ಕಣ್ಣಿಗೆ, ಕಾಣುವ ಸ್ಪರ್ಶಿಸಲು ಸಾಧ್ಯವಾಗುವಂತಹದ್ದಾಗಿವೆ. ಉದಾ: ದರ್ಶಕ (ಮಾನಿಟರ್,) ಬೆರಳಚ್ಚು ಫಲಕ (Key Board), ಮೌಸ್, ಮೊಡೆಮ್ ಸಿ.ಡಿ.ಮದರ್ ಬೋರ್ಡ್, ಹಾರ್ಡ್ ಡಿಸ್ಕ್ ಇತ್ಯಾದಿ. ತಂತ್ರಾಂಶವು (Soft-ware) ಅಭೌತಿಕವಾಗಿರುತ್ತದೆ. ಮುಟ್ಟಿ ನೋಡಲು ಸಾಧ್ಯವಿಲ್ಲ. ಕಂಪ್ಯೂಟರ್‌ನ ನಿರ್ವಹಣೆ ಸಾಧ್ಯವಾಗುವಂತೆ ಮಾಡುವ ಸೂಚನೆ, ನಿರ್ದೇಶನಗಳ ಸಮೂಹಕ್ಕೆ ತಂತ್ರಾಂಶಗಳೆಂದು ಕರೆಯುತ್ತಾರೆ. ಯಂತ್ರಾಂಶ ಮತ್ತು ತಂತ್ರಾಂಶಗಳ ಪರಸ್ಪರ ಹೊಂದಾಣಿಕೆ ಮತ್ತು ಸಂಯೋಜನೆ ಕಂಪ್ಯೂಟರ್ ವ್ಯವಸ್ಥಿತವಾಗಿ ಕಾರ್‍ಯನಿರ್ವಹಿಸಲು ಸಹಾಯಮಾಡುತ್ತದೆ.

**ಕಂಪ್ಯೂಟರ್ ಭಾಷೆಗಳು:** ಕಂಪ್ಯೂಟರ್ ಹಾಗೂ ಬಳಕೆದಾರರ ನಡುವೆ ಸಂಪರ್ಕ ಏರ್ಪಡಿಸಿ ವ್ಯವಹರಿಸಲು ಸಾಧ್ಯವಾಗುವ ವ್ಯವಸ್ಥೆ / ಸಾಧನವೇ ಕಂಪ್ಯೂಟರ್ ಭಾಷೆ ಎನ್ನಿಸಿಕೊಳ್ಳುತ್ತದೆ. ಕಂಪ್ಯೂಟರ್‌ನ ಬೇರೆ ಬೇರೆ ಕಾರ್ಯನಿರ್ವಹಿಸಲು ಬೇರೆ ಬೇರೆ ಕಂಪ್ಯೂಟರ್ ಭಾಷೆಗಳು ಲಭ್ಯವಿವೆ. ಪ್ರತಿಯೊಂದು ಭಾಷೆಯೂ ವಿಶಿಷ್ಟವಾದ ವ್ಯಾಕರಣ, ಪದ ಸಂಪತ್ತು, ವಾಕ್ಯ ರಚನೆಗಳನ್ನು ಹೊಂದಿರುತ್ತದೆ. ಕಂಪ್ಯೂಟರ್ ಭಾಷೆಗಳನ್ನು ನಿಮ್ನ ಮಟ್ಟದ ಭಾಷೆ/ಯಂತ್ರ ಭಾಷೆ ಮತ್ತು ಉನ್ನತ ಮಟ್ಟದ ಭಾಷೆಗಳೆಂದು ವರ್ಗೀಕರಿಸಲಾಗಿದೆ. ನಿಮ್ನ ಮಟ್ಟದ ಭಾಷೆಗಳಿಗೆ ಉದಾಹರಣೆಗಳೆಂದರೆ ಯಂತ್ರಭಾಷೆ, ಜೋಡಣಾ ಭಾಷೆ, ಉನ್ನತ ಭಾಷೆಗಳಿಗೆ ಉದಾಹರಣೆಯೊಂದಿಗೆ ವೈಜ್ಞಾನಿಕ ಭಾಷೆ, ವಾಣಿಜ್ಯ ಭಾಷೆ, ವಿಶಿಷ್ಟ ಉದ್ದೇಶಿತ ಭಾಷೆ (ಉದಾ: ಬೇಸಿಕ್, ಫೋರ್‌ಟ್ರಾನ್, ಪಾಸ್ಕಲ್, ಕೋಬಾಲ್ ಇತ್ಯಾದಿ)

**ಫೈಲ್ ಮತ್ತು ಫೋಲ್ಡರ್ :** ಕಂಪ್ಯೂಟರ್‌ನಲ್ಲಿ ಸಂರಕ್ಷಿಸಿಡ ಬಹುದಾದಂತಹ ಪಠ್ಯ, ಚಿತ್ರ (ದೃಶ್ಯ), ಶಬ್ದ, ವೀಡಿಯೋ ಮಾಹಿತಿ/ ವಿವರಗಳನ್ನು ಒಳಗೊಂಡಿರುವ ಘಟಕವನ್ನು ಫೈಲ್‌ಗಳೆಂದು ಕರೆಯುತ್ತಾರೆ. ಫೈಲ್‌ಗಳ ಸಂಗ್ರಹ/ಸಮೂಹವನ್ನು ಫೋಲ್ಡರ್ ಎನ್ನುತ್ತಾರೆ.

**ಕಾರ್ಯಾಚರಣೆ ವ್ಯವಸ್ಥೆ:** ಕಂಪ್ಯೂಟರ್ ತಂತ್ರಾಂಶಗಳನ್ನು ಎರಡು ಭಾಗಗಳಾಗಿ ವರ್ಗೀಕರಿಸಬಹುದಾಗಿದೆ. ಅವುಗಳೆಂದರೆ, i) ವ್ಯವಸ್ಥೆ ಸಂಬಂಧಿತ ತಂತ್ರಾಂಶಗಳು ii) ಅನ್ವಯ ಸಂಬಂಧಿತ ತಂತ್ರಾಂಶಗಳು. ಕಂಪ್ಯೂಟರ್‌ನ ಆಂತರಿಕ ವ್ಯವಸ್ಥೆಯ ಕಾರ್ಯ ನಿರ್ವಹಿಸಲು ಬಳಸುವ ತಂತ್ರಾಂಶಗಳಲ್ಲಿ ಕಾರ್ಯಾಚರಣೆ ವ್ಯವಸ್ಥೆ ಒಂದಾಗಿದೆ. ಕಂಪ್ಯೂಟರ್‌ನ ಬೇರೆ ಬೇರೆ ಭಾಗಗಳು, ಅವುಗಳ ನಡುವಿನ ವಿನಿಮಯ ಕಾರ್ಯಗಳು, ಅವುಗಳ ನಿಯಂತ್ರಣ, ಅವುಗಳ ಸಮ್ಮೀಳನ ಇವುಗಳೆಲ್ಲವನ್ನು ನಿಭಾಯಿಸುವ ಸೌಲಭ್ಯವೇ ಕಾರ್ಯಾಚರಣೆ ವ್ಯವಸ್ಥೆ ಎಂದು ಕರೆಯಲ್ಪಡುತ್ತದೆ. ಈ ರೀತಿಯ ಕಾರ್ಯಾಚರಣೆ ವ್ಯವಸ್ಥೆಗೆ ಉದಾಹರಣೆಗಳು– ಎಂ. ಎಸ್. ಡಾಸ್, ಎಂ.ಎಸ್. ವಿಂಡೋಸ್ ಇತ್ಯಾದಿ.

**ಕಾರ್ಯಾಚರಣೆ ವ್ಯವಸ್ಥೆಯಾಗಿ ಎಂ.ಎಸ್. ವಿಂಡೋಸ್:** ಬಳಕೆದಾರ ಸುಲಲಿತವಾಗಿ ಕಂಪ್ಯೂಟರ್ ಜೊತೆ ಸಂಪರ್ಕಿಸಿ ಕಾರ್ಯನಿರ್ವಹಿಸುವಂತೆ ಮಾಡುವುದೇ ಇದರ ಉದ್ದೇಶ. ಗ್ರಾಫಿಕಲ್ ಯಾಸರ್ ಇಂಟರ್ ಫೇಸ್ ಎಂಬ ಸೌಲಭ್ಯದ ಮೂಲಕ ಮೌಸ್ ಬಳಸಿಕೊಂಡು ದರ್ಶಕದ (Monitor) ಮೇಲೆ ಮೂಡಿಬರುವ ಸಂಕೇತ / ಐಕನ್‌ಗಳ ಮೇಲೆ ಕ್ಲಿಕ್ ಮಾಡಬೇಕಾಗುತ್ತದೆ. ಆಗ ಸಂಬಂಧಪಟ್ಟ ಆಜ್ಞೆ ಪರಿಪಾಲಿಸಲ್ಪಟ್ಟು ಸಂಬಂಧಿತ ಕಾರ್ಯ ಕಂಪ್ಯೂಟರ್‌ನಿಂದ ನಿರ್ವಹಿಸಲ್ಪಡುತ್ತದೆ. ಟೈಪ್ ಮಾಡಿ ಕಂಪ್ಯೂಟರ್‌ಗೆ ಪತ್ಯರೂಪದ ಆಜ್ಞೆ ಒದಗಿಸುವುದರ ಬದಲಾಗಿ ಈ ಸೌಲಭ್ಯ ಬಳಸಿಕೊಂಡಾಗ ಕಂಪ್ಯೂಟರ್‌ನ ನಿರ್ವಹಣೆ ಸುಗಮಗೊಳಿಸಲ್ಪಡುತ್ತದೆ.

**ಅನ್ವಯ ತಂತ್ರಾಂಶ ಎಂ.ಎಸ್. ಆಫೀಸ್ ಅಪ್ಲಿಕೇಶನ್ ಪ್ರೋಗ್ರಾಂ:** ಬಳಕೆದಾರನ ಪ್ರಯೋಜನಕ್ಕಾಗಿ ರೂಪಿಸಿರುವ ಹಲವಾರು ಪ್ರೋಗ್ರಾಂಗಳನ್ನು ಅನ್ವಯ ತಂತ್ರಾಂಶಗಳೆಂದು ಕರೆಯಲಾಗುತ್ತದೆ. ಕಛೇರಿ, ವಾಣಿಜ್ಯ, ಶಿಕ್ಷಣ ಸಂಸ್ಥೆಗಳ ಕಾರ್ಯಗಳನ್ನು ಸುಗಮ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಎಂ.ಎಸ್. ಕಂಪೆನಿಯವರು ತಂತ್ರಾಂಶಗಳ ಪ್ಯಾಕೇಜ್ ಒಂದನ್ನು ಅಭಿವೃದ್ಧಿಪಡಿಸಿದ್ದಾರೆ. ಇದನ್ನು ಎಂ.ಎಸ್. ಆಫೀಸ್ ಅಪ್ಲಿಕೇಶನ್ ಪ್ರೋಗ್ರಾಂ ಎಂದು ಕರೆಯಲಾಗುತ್ತದೆ. ಇದರಲ್ಲಿರುವ ಪ್ರೋಗ್ರಾಂಗಳೆಂದರೆ i) ಎಂ.ಎಸ್. ವರ್ಡ್ ii) ಎಂಎಸ್. ಎಕ್ಸೆಲ್ iii) ಪವರ್ ಪಾಯಿಂಟ್ ಇವುಗಳ ವೈಶಿಷ್ಟ್ಯಗಳನ್ನು ಇಲ್ಲಿ ಒದಗಿಸಲಾಗಿದೆ.

**ಎಂ.ಎಸ್. ವರ್ಡ್:** ಪತ್ಯ ರೂಪದ ಸಾಮಗ್ರಿಗಳನ್ನು ರಚಿಸುವ, ಪರಿಷ್ಕರಿಸುವ, ಸಂಗ್ರಹಿಸುವ, ಮುದ್ರಿಸುವ ಹಾಗೂ ಇನ್ನಿತರ ಸೌಲಭ್ಯ ಹೊಂದಿರುವ ಕಂಪ್ಯೂಟರ್ ಪ್ರೇರಿತ ತಂತ್ರಾಂಶಗಳನ್ನು ಒಟ್ಟಾಗಿ ವರ್ಡ್ ಪ್ರೊಫೆಸರ್ ಎಂದು ಕರೆಯುತ್ತಾರೆ. ಇದರ ಮೂಲಕ ಪತ್ಯ ಸಿದ್ಧಪಡಿಸುವುದು, ಎಡಿಟ್ ಮತ್ತು ಫಾರ್ಮ್ಯಾಟ್ ಮಾಡುವುದು, ವಿಶೇಷ ರೂಪದ ಚಿತ್ರಗಳು, ಸಿದ್ಧಪಡಿಸಿದ ವಿಶೇಷ ಆಕಾರಗಳು, ವಿಶೇಷ ಅಕ್ಷರ ರೂಪದ ಚಿತ್ರಗಳು, ವಿಶೇಷ ಅಕ್ಷರ ವಿನ್ಯಾಸಗಳು, ಟೇಬಲ್ ಮತ್ತು ನಕ್ಷೆಗಳು ಇವುಗಳ ಸೇರ್ಪಡೆ ಸಾಧ್ಯ. ಎಂ.ಎಸ್. ವರ್ಡ್‌ನ ಮತ್ತೊಂದು ವೈಶಿಷ್ಟ್ಯವೆಂದರೆ ಮೆಯಿಲ್ ಮರ್ಜ್ ಸೌಲಭ್ಯ ಹಾಗೂ ರಚಿಸಿದ ಡಾಕ್ಯುಮೆಂಟ್ ಅನ್ನು ಮುದ್ರಿಸುವ ಅನುಕೂಲತೆ. ಮೆಯಿಲ್ ಮರ್ಜ್ ಎಂದರೆ ಏಕರೂಪದ ಪತ್ರದ ಒಕ್ಕಣೆಯನ್ನು ಸಿದ್ಧಪಡಿಸಿ, ಅದಕ್ಕೆ ಬೇರೆ ಬೇರೆ ವ್ಯಕ್ತಿಯ ವಿಳಾಸ ಹೊಂದಿಸಿ ರವಾನಿಸಲು ಯೋಗ್ಯವಾದ ವ್ಯವಸ್ಥೆ ಹೊಂದಿರುವುದು. ಈ ಎಲ್ಲಾ ವೈಶಿಷ್ಟ್ಯಗಳನ್ನು ಹೊಂದಿರುವ ಜನಪ್ರಿಯ ವರ್ಡ್ ಪ್ರೊಫೆಸರ್ ಎಂದರೆ ಎಂಎಸ್. ವರ್ಡ್.

**ಎಂ.ಎಸ್. ಎಕ್ಸೆಲ್:** ದತ್ತಾಂಶಗಳ ಸೇರ್ಪಡೆ, ಸಂಘಟನೆ, ಲೆಕ್ಕಾಚಾರ, ಗಣನೆ, ವಿಶ್ಲೇಷಣೆ, ನಿಯೋಜಿತ ಸೂತ್ರ ಬಳಸಿಕೊಂಡು ಫಲಿತಾಂಶ ಪಡೆಯುವ ವ್ಯವಸ್ಥೆ ಇವೆಲ್ಲವನ್ನು ಹೊಂದಿರುವ ಕಂಪ್ಯೂಟರ್ ಆಧಾರಿತ ತಂತ್ರಾಂಶಗಳನ್ನು ಒಟ್ಟಾಗಿ ಸ್ಪ್ರೆಡ್‌ಶೀಟ್ ಎಂದು ಕರೆಯುತ್ತಾರೆ. ಸದ್ಯದಲ್ಲಿ ಬಳಸಲಾಗುತ್ತಿರುವ ಜನಪ್ರಿಯ ಸ್ಪ್ರೆಡ್‌ಶೀಟ್ ಎಂದರೆ ಎಂ.ಎಸ್. ಎಕ್ಸೆಲ್. ಇದರ ವಿಶಿಷ್ಟತೆಗಳೆಂದರೆ ದತ್ತಾಂಶ ತುಂಬಿಸುವುದು, ಅಡ್ಡಸಾಲು, ಕಂಬ ಸಾಲುಗಳ ಸೇರ್ಪಡೆ ಹಾಗೂ ತೆಗೆಯುವಿಕೆ, ಫಾರ್ಮ್ಯಾಟ್ ಮಾಡುವುದು, ದತ್ತಾಂಶ ಹಾಗೂ ಮಾಹಿತಿಗಳನ್ನು ಅಪೇಕ್ಷಿಸಿದ ರೀತಿಯಲ್ಲಿ ವಿಂಗಡಿಸಿ ಅಗತ್ಯ ವಿವರ ಒದಗಿಸುವುದು, ಫಿಲ್ಟರ್ ಸೌಲಭ್ಯ, ಸೂತ್ರ ಬಳಸಿಕೊಳ್ಳುವಿಕೆ, ಫಂಕ್ಷನ್‌ಗಳನ್ನು ಬಳಸಿಕೊಳ್ಳುವ ಸೌಲಭ್ಯ, ಆಟೋ ಸಮ್‌ವ್ಯವಸ್ಥೆ, ನಕ್ಷೆ ರಚಿಸುವುದು ಮತ್ತು ಅಳವಡಿಸುವುದು, ವರ್ಕ್‌ಶೀಟ್ ಅನ್ನು ಮುದ್ರಿಸುವುದು ಇತ್ಯಾದಿ.

Digitised by Bharatavani, CIIL

**ಎಂ.ಎಸ್. ಪವರ್‌ಪಾಯಿಂಟ್:** ಮಾಹಿತಿ, ದೃಶ್ಯ, ಧ್ವನಿ ಇವುಗಳನ್ನು ಸಂಘಟಿಸಿ ಪರಿಣಾಮಕಾರಿ ಹಾಗೂ ಆಕರ್ಷಕವಾಗಿ ಪ್ರಸ್ತುತೀಕರಣವನ್ನು ನಿರ್ವಹಿಸುವ ವ್ಯವಸ್ಥೆ ಹೊಂದಿರುವ ಕಂಪ್ಯೂಟರ್ ಆಧಾರಿತ ತಂತ್ರಾಂಶವನ್ನು ಒಟ್ಟಾಗಿ ಪ್ರೆಸೆಂಟೇಶನ್ ಎಂದು ಕರೆಯುತ್ತಾರೆ. ಎಂ.ಎಸ್. ಕಂಪೆನಿಯವರು ತಯಾರಿಸಿರುವ ಈ ಬಗೆಯ ತಂತ್ರಾಂಶವನ್ನು ಎಂ.ಎಸ್. ಪವರ್‌ಪಾಯಿಂಟ್ ಎಂದು ಕರೆಯಲಾಗುತ್ತದೆ. ಇದನ್ನು ಬಳಸಿಕೊಂಡು ಹಂತಹಂತವಾಗಿ ಸ್ಲೈಡ್‌ಗಳ ಮೂಲಕ ಇಚ್ಛಿತ ಪಠ್ಯ, ದೃಶ್ಯ/ಧ್ವನಿರೂಪದ ಅಂಶಗಳನ್ನು ಪ್ರಸ್ತುತಪಡಿಸಬಹುದಾಗಿದೆ. ಈ ತಂತ್ರಾಂಶವು ಸ್ಲೈಡ್ ರಚನೆಯಲ್ಲಿ ವಿವಿಧ ವಿನ್ಯಾಸಗಳ ಬಳಕೆ, ಕ್ರಮಬದ್ಧ ಜೋಡಣೆ, ಆಕೃತಿಗಳನ್ನು ರಚಿಸುವುದು ಮತ್ತು ಸೇರಿಸುವುದು, ವರ್ಡ್ ಆರ್ಟ್ ಮತ್ತು ಸ್ಕ್ಯಾನ್ ಮಾಡಿದ ಚಿತ್ರಗಳನ್ನು ಅಳವಡಿಸುವುದು, ಸ್ಲೈಡ್‌ಗಳ ನಡುವೆ ಟ್ರಾನ್ಸಿಷನ್ ಪರಿಣಾಮ ಒದಗಿಸುವಿಕೆ, ಅನಿಮೇಶನ್ ಪರಿಣಾಮ ಹೊಂದಿಸುವಿಕೆ, ಶೀರ್ಷಕೆ, ಉಪಶೀರ್ಷಿಕೆ – ಇವುಗಳ ಗಾತ್ರ, ಶೈಲಿ, ವಿನ್ಯಾಸ ಬದಲಾವಣೆ ಸಾಧ್ಯತೆ, ಪರಿಣಾಮಕಾರಿ ಸ್ಲೈಡ್‌ಶೋ ಪ್ರಸ್ತುತೀಕರಣ ಮುಂತಾದ ಅನೇಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ.

**ಅಂತರ್ಜಾಲ:** ವಿವಿಧ ಕಂಪ್ಯೂಟರ್‌ಗಳ ನಡುವೆ ಮಾಹಿತಿಯನ್ನು ರವಾನಿಸಲು ಹಂಚಿಕೊಳ್ಳಲು, ರೂಪಿಸಿರುವ ಸಂಪರ್ಕ ವ್ಯವಸ್ಥೆಯನ್ನು ಅಂತರ್ಜಾಲ (Inter Net) ಎನ್ನುತ್ತಾರೆ. ಒಂದು ಮತ್ತೊಂದರ ಜೊತೆ ಸಂಪರ್ಕ ಹೊಂದಿರುವ ಕಂಪ್ಯೂಟರ್‌ಗಳ ಜಾಗತಿಕ ಸಂಗ್ರಹವೇ ಅಂತರ್ಜಾಲ. ಅಂತರ್ಜಾಲದ ಮೂಲಕ ಸಂಪರ್ಕ ಹೊಂದಿರುವ ಲಕ್ಷಾಂತರ ಕಂಪ್ಯೂಟರ್‌ಗಳಲ್ಲಿ ಪ್ರತಿಯೊಂದು ಕಂಪ್ಯೂಟರ್ ಸಹಾ ಇತರ ಕಂಪ್ಯೂಟರ್‌ಗಳ ಜೊತೆ ಸಂವಹನ ನಡೆಸಬಹುದಾಗಿದೆ. ಅಂತರ್ಜಾಲದ ಮೂಲಕ ವಿನಿಮಯ ಮಾಡಿಕೊಳ್ಳಬಹುದಾದ ಮಾಹಿತಿಯು ಪಠ್ಯ, ಶ್ರವಣ (ಆಡಿಯೋ), ದೃಶ್ಯ (ವೀಡಿಯೋ), ಚಿತ್ರ, ಅನಿಮೇಷನ್ ಮುಂತಾದ ರೂಪದಲ್ಲಿರುತ್ತದೆ. ಅಂತರ್ಜಾಲ ಸಂಪರ್ಕ ಪಡೆಯಲು ಅಗತ್ಯವಾದ ಅಂಶಗಳೆಂದರೆ ಕಂಪ್ಯೂಟರ್ ಸಿಸ್ಟಂ, ಮೋಡೆಮ್, ವೆಬ್ ಬ್ರೌಸರ್, ದೂರವಾಣಿ ಸಂಪರ್ಕ ಮತ್ತು ಅಂತರ್ಜಾಲ ಸೇವೆ ಒದಗಿಸುವ ಸಂಸ್ಥೆ. ಅಂತರ್ಜಾಲವು ಹಲವಾರು ಉಪಯೋಗಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಇ–ಮೆಯಿಲ್ ಸಂದೇಶ ಸೌಕರ್ಯ, ಚಾಟ್‌ಸೌಲಭ್ಯ, ವರ್ಲ್ಡ್ ವೈಡ್‌ವೆಬ್ ಸೇವೆ, ಸರ್ಚ್ ಇಂಜಿನ್ ಬಳಕೆ, ಫೈಲ್ ವರ್ಗಾವಣೆ, ಹಣಕಾಸು ವ್ಯವಹಾರ ನಿರ್ವಹಣೆ ಇತ್ಯಾದಿ.

–ಎ.ಶ್ರೀ.

## ಕರ್ನಾಟಕದಲ್ಲಿ ಅಧ್ಯಾಪಕ ಶಿಕ್ಷಣದ ವ್ಯವಸ್ಥೆ

ಅಧ್ಯಾಪಕ ಶಿಕ್ಷಣ ಯಾವ ನಿರ್ದಿಷ್ಟ ಕಾರಣಗಳಿಗಾಗಿ ಅಗತ್ಯವಾಗಿದೆ ಎಂಬುದನ್ನು ಕೆಳಗಿನ ಅಂಶಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

1) ವಿದ್ಯಾರ್ಥಿಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು
2) ಅಧ್ಯಾಪಕರಲ್ಲಿ ಭರವಸೆಯನ್ನು ತುಂಬಲು
3) ಬೋಧನಾ ಪ್ರಕ್ರಿಯೆಯಲ್ಲಿ ಅನುಸರಿಸುವ ವಿವಿಧ ಬೋಧನಾ ವಿಧಾನಗಳ ಅರಿವಿಗಾಗಿ
4) ಬೋಧನಾ ವೃತ್ತಿಯ ಬಗ್ಗೆ ಒಳ್ಳೆಯ ಮನೋಭಾವ ಹೊಂದಲು
5) ಸಮಕಾಲೀನ ಜಗತ್ತು ಮತ್ತು ಶಿಕ್ಷಣದ ವಿಚಾರವಾಗಿ ತಿಳಿಯಲು
6) ಶಾಲಾ ವ್ಯವಸ್ಥೆಯ ಬಗ್ಗೆ ಅನುಭವ ಹೊಂದಲು
7) ಸಾಮಾಜಿಕ ಅಂತರ್‌ದೃಷ್ಟಿ ಹೊಂದಲು
8) ಗುಣಾತ್ಮಕವಾದ ವಿಚಾರಗಳನ್ನು ಉತ್ತಮಪಡಿಸಲು
9) ಪ್ರಜಾಪ್ರಭುತ್ವಕ್ಕೆ ಅಗತ್ಯವಾದ ತರಬೇತಿ ನೀಡಲು
10) ರಾಷ್ಟ್ರೀಯ ಪುನರ್ ನಿರ್ಮಾಣದಲ್ಲಿ ತನ್ನನ್ನು ತೊಡಗಿಸಿಕೊಳ್ಳಲು
11) ಶಿಕ್ಷಣದ ತಾತ್ವಿಕ ಚಿಂತನೆ ಮತ್ತು ಮಕ್ಕಳ ಮನಸ್ಸನ್ನು ಅರಿಯಲು

ಮೇಲ್ಕಾಣಿಸಿದ ಎಲ್ಲ ಅಭಿಪ್ರಾಯ ಮತ್ತು ಆಲೋಚನೆಯ ಹಿನ್ನೆಲೆಯಲ್ಲಿ ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಇರುವ ಅಧ್ಯಾಪಕ ಶಿಕ್ಷಣದ ವ್ಯವಸ್ಥೆಯನ್ನು ವಿವಿಧ ಹಂತದ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಪೂರ್ವ–ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರ ಶಿಕ್ಷಕ ಶಿಕ್ಷಣದವರೆಗೆ ಅದರ ರಚನೆ, ಕಾಲಾವಧಿ, ಪ್ರವೇಶಾತಿ ಮತ್ತು ಅಗತ್ಯವಾದ ಶೈಕ್ಷಣಿಕ ಅರ್ಹತೆಗಳಿಗೆ ಸಂಬಂಧಿಸಿದಂತೆ ಸ್ಥೂಲವಾಗಿ ವಿವರಿಸಲಾಗಿದೆ.

**1) ಪೂರ್ವ–ಪ್ರಾಥಮಿಕ ಅಧ್ಯಾಪಕ ಶಿಕ್ಷಣದ ವ್ಯವಸ್ಥೆ:** ಮಕ್ಕಳ ವಿದ್ಯಾಭ್ಯಾಸದ ಪ್ರಾರಂಭ ನಿಜವಾಗಿ ಮನೆಯ ವಾತಾವರಣದಲ್ಲಿ. ಆದರೆ ಅದರ ನಿರ್ದಿಷ್ಟತೆ ಪೂರ್ವ–ಪ್ರಾಥಮಿಕ ಶಿಕ್ಷಣಕ್ಕೆ ದಾಖಲಾಗುವುದರ ಮೂಲಕ ಅಧಿಕೃತವಾಗಿ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ಕೆಲಸ ಮಾಡುವ ಅಧ್ಯಾಪಕರು ಅತ್ಯಂತ ತಾಳ್ಮೆ ವ್ಯವಧಾನ, ಪ್ರೀತಿ ವಿಶ್ವಾಸಗಳಿಂದ ಕೂಡಿದವರಾಗಿರಬೇಕು. ಅದಕ್ಕಾಗಿ ಅಧ್ಯಾಪಕರನ್ನು ಜಾಗರೂಕತೆಯಿಂದ ತರಬೇತು ಮಾಡಬೇಕು. ಕರ್ನಾಟಕ ರಾಜ್ಯದಲ್ಲಿ ಅಂಗನವಾಡಿ ಶಿಕ್ಷಕಿಯರನ್ನು ತರಬೇತು ಮಾಡಲು ಜಿಲ್ಲೆಗೆ ಒಂದರಂತೆ ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಕೇಂದ್ರವಿದೆ. ಇದರ ಮೂಲಕ ತರಬೇತಿಗೊಂಡು ಅವರವರ ಊರು ಅಥವಾ ಸಮೀಪದ ಹಳ್ಳಿಗಳಲ್ಲಿ ಅಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಾರೆ. ಇಲ್ಲಿ ಪ್ರೌಢ ಶಿಕ್ಷಣ ಮುಗಿಸಿದ ಸ್ಥಳೀಯ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಲಾಗುತ್ತದೆ. ಈ ತರಬೇತಿ ಅವಧಿ ಕೇವಲ ಒಂದು ಮಾಸವಾಗಿರುತ್ತದೆ. ತಾಲ್ಲೂಕು ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಜಿಲ್ಲಾ ಮಟ್ಟದ ತರಬೇತಿಗೆ ಕಳುಹಿಸಿಕೊಡುವ ವ್ಯವಸ್ಥೆ ಇರುತ್ತದೆ. ಬಾಲವಿಹಾರ, ಶಿಶುವಿಹಾರ ಮತ್ತು ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಅಗತ್ಯವಾಗಿರುವ ಅಧ್ಯಾಪಕರನ್ನು ತಯಾರು ಮಾಡಲು ಪ್ರಸ್ತುತ ನರ್ಸರಿ ಅಧ್ಯಾಪಕ ತರಬೇತಿ (ಎನ್.ಎಸ್.ಟಿ) ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಹಿಂದೆ ಇದನ್ನು ಎನ್.ಟಿ.ಟಿ.ಐ. ಅಂದರೆ ನರ್ಸರಿ ಟೀಚರ್ ಟ್ರೈನಿಂಗ್ ಸಂಸ್ಥೆ ಎಂದು ಕರೆಯಲಾಗುತ್ತಿತ್ತು. ಇದರ ತರಬೇತಿ ಅವಧಿ ಒಂದು ವರ್ಷ ಕಾಲ. ಇದಕ್ಕೆ ಪ್ರವೇಶಾತಿ ಪಡೆಯಲು ಕನಿಷ್ಠ (ಎಸ್.ಎಸ್.ಎಲ್.ಸಿ) ಪ್ರೌಢ ಶಿಕ್ಷಣ ಅಥವಾ ಉನ್ನತ ಪ್ರೌಢ ಶಿಕ್ಷಣ (ಪಿ.ಯು.ಸಿ) ಅಗತ್ಯವಿದೆ. ಶಿಕ್ಷಣ ಕ್ಷೇತ್ರದಲ್ಲಿ ಆದ ಬದಲಾವಣೆಗಳಿಂದಾಗಿ, ಪಾಶ್ಚಾತ್ಯೀಕರಣದಿಂದಾಗಿ ಕಿಂಡರ್ ಗಾರ್ಟನ್, ಮಾಂಟೆಸೋರಿ ಇತ್ಯಾದಿ ಹೆಸರುಗಳಿಂದ ನಡೆಯುವ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಲು ಅಗತ್ಯವಾದ ಅಧ್ಯಾಪಕರನ್ನು ತಯಾರುಮಾಡಲು (DPPTE) ಡಿಪ್ಲೊಮೊ–ಇನ್–ಪ್ರಿ ಪ್ರೈಮರಿ ಟೀಚರ್ ಎಜುಕೇಶನ್ (Diploma in Pre-primary Teacher Training Education) ಮತ್ತು (P.P.T.C) Pre-Primary Teacher Training Course ಅಂದರೆ ಪೂರ್ವ ಪ್ರಾಥಮಿಕ ಅಧ್ಯಾಪಕರ ತರಬೇತಿ ಶಿಕ್ಷಣ ನೀಡಲಾಗುತ್ತಿದೆ. ಇದಕ್ಕೂ ಅಗತ್ಯವಾದ ವಿದ್ಯಾರ್ಹತೆ (ಎಸ್.ಎಸ್.ಎಲ್.ಸಿ/ಪಿ.ಯು.ಸಿ) ಪ್ರೌಢ ಅಥವಾ ಉನ್ನತ ಪ್ರೌಢ ಶಿಕ್ಷಣ ಪಾಸಾಗಿರಬೇಕು. ತರಬೇತಿ ಅವಧಿ ಒಂದು ವರ್ಷ. ಆದರೆ ಕೆಲವೊಂದು ಖಾಸಗೀ ತರಬೇತಿ ಶಿಕ್ಷಣ ಕೇಂದ್ರಗಳಲ್ಲಿ ಇದರ ಅವಧಿ 2 ವರ್ಷಗಳದ್ದೂ ಆಗಿದೆ. ಇತ್ತೀಚೆಗೆ ಮೈಸೂರಿನ 'ಪ್ರಥಮ್'

Digitised by Bharatavani, CIIL

ಸಂಸ್ಥೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಪೂರ್ವ–ಪ್ರಾಥಮಿಕ ಶಿಕ್ಷಕರಿಗೆ ಸರ್ಟಿಫಿಕೇಟ್ ಕೋರ್ಸ್ (ಒಂದು ವರ್ಷ) ಆರಂಭಿಸಿದೆ. ಪೂರ್ವ–ಪ್ರಾಥಮಿಕ ಅಧ್ಯಾಪಕ ಶಿಕ್ಷಣ ಖಾಸಗಿ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಈ ಸಂಸ್ಥೆಗಳು ನೀಡುವ ಡಿಪ್ಲೊಮಾ ಮತ್ತೆ ಸರ್ಟಿಫಿಕೇಟನ್ನು ಕರ್ನಾಟಕ ಸರ್ಕಾರ ಮಾನ್ಯ ಮಾಡುತ್ತದೆ.

**2) ಪ್ರಾಥಮಿಕ ಅಧ್ಯಾಪಕ ಶಿಕ್ಷಣದ ವ್ಯವಸ್ಥೆ (ಡಿ.ಎಡ್.,):** ಅಧ್ಯಾಪಕರ ಶಿಕ್ಷಣವು ಪ್ರಮುಖವಾಗಿ ಎರಡು ರೀತಿಗಳಲ್ಲಿ ನಡೆಯುತ್ತದೆ. 1) ಸೇವಾ ಪೂರ್ವ ಶಿಕ್ಷಣ 2) ಸೇವಾನಿರತರಿಗೆ ಶಿಕ್ಷಣ. ಪ್ರಸ್ತುತ ಸೇವಾಪೂರ್ವ ಅಧ್ಯಾಪಕರ ಶಿಕ್ಷಣದ ಬಗ್ಗೆ ವಿಚಾರಮಾಡೋಣ. ಪ್ರತಿಯೊಬ್ಬ ವ್ಯಕ್ತಿಯ ವಿದ್ಯಾಭ್ಯಾಸಕ್ಕೆ ಸೂಕ್ತವಾದ ಭದ್ರಬುನಾದಿ ಹಾಕುವ ಶಿಕ್ಷಣವೆಂದರೆ ಪ್ರಾಥಮಿಕ ಶಿಕ್ಷಣ. ಈ ಹಂತದಲ್ಲಿ ಕಾರ್ಯನಿರ್ವಹಿಸುವ ಅಧ್ಯಾಪಕರ ಪಡೆಯನ್ನು ಸಮರ್ಥ ಮತ್ತು ಕ್ರಿಯಾಶೀಲರನ್ನಾಗಿಸುವ ತರಬೇತಿ ನೀಡಲು ಕರ್ನಾಟಕ ರಾಜ್ಯಾದ್ಯಂತ ಅಧ್ಯಾಪಕ ಶಿಕ್ಷಣವು ಟಿ.ಸಿ.ಎಲ್. (ಟೀಚರ್ ಸರ್ಟಿಫಿಕೇಟ್ ಲೋಯರ್) ಮತ್ತು ಟಿ.ಸಿ.ಹೆಚ್. (ಟೀಚರ್ ಸರ್ಟಿಫಿಕೇಟ್ ಹೈಯರ್) ಎಂದು ಪ್ರಾರಂಭಗೊಂಡು 2002–03ರ ನಂತರದಲ್ಲಿ ಈ ಅಧ್ಯಾಪಕ ಶಿಕ್ಷಣವನ್ನು ಪುನರ್ ನಾಮಕರಣ ಮಾಡಿ ಡಿ.ಎಡ್., (ಡಿಪ್ಲೊಮೋ–ಇನ್–ಎಜುಕೇಷನ್) ಎಂದು ಮಾಡಲಾಗಿದೆ. ಪ್ರತಿಯೊಂದು ಡಿ.ಎಡ್. ಶಿಕ್ಷಣ ಸಂಸ್ಥೆಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿಪಡಿಸುವ ಮತ್ತು ಅದರ ನಿಯಂತ್ರಣ ವ್ಯವಸ್ಥೆಯನ್ನು ರಾಷ್ಟ್ರೀಯ ಶಿಕ್ಷಣ ಪರಿಷತ್ತು (NCTE) ಮಾಡುತ್ತದೆ.

ಪ್ರಾಥಮಿಕ ಅಧ್ಯಾಪಕರ ತರಬೇತಿಗೆ ಸಂಬಂಧಿಸಿದಂತೆ ಪ್ರಸ್ತುತ ಕರ್ನಾಟಕದಲ್ಲಿ ಒಂದು ಸಾವಿರದ ಎರಡು (1002) (ಡಿ.ಎಡ್.) ಶಿಕ್ಷಕ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಜಿಲ್ಲಾ ಶಿಕ್ಷಣ ತರಬೇತಿ (DIET) ಸಂಸ್ಥೆಗಳು 21, ಸರ್ಕಾರಿ ಅಧ್ಯಾಪಕ ಶಿಕ್ಷಣ ತರಬೇತಿ ಸಂಸ್ಥೆಗಳು (TTI) 15, ಖಾಸಗಿಯಾಗಿ ಅನುದಾನಕ್ಕೆ ಒಳಪಟ್ಟು ಕಾರ್ಯನಿರ್ವಹಿಸುತ್ತಿರುವ ಡಿ.ಎಡ್. ಶಿಕ್ಷಣ ಸಂಸ್ಥೆಗಳು 40 ಹಾಗೂ ಅನುದಾನ ರಹಿತ ಡಿ.ಎಡ್. ಕಾಲೇಜುಗಳು 962. ಮೇಲ್ಕಂಡ ಎಲ್ಲಾ ಬಗೆಯ ಡಿ.ಎಡ್. ಶಿಕ್ಷಣ ಕಾಲೇಜುಗಳು ಸರ್ಕಾರದಿಂದ ಅನುಮತಿ ಪತ್ರ ಪಡೆದು, ತದನಂತರ ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ತಿನ (NCTE) ಮಾನ್ಯತೆಯನ್ನು ಕಡ್ಡಾಯವಾಗಿ ಪಡೆದೇ ಕಾರ್ಯನಿರ್ವಹಿಸುವ ವ್ಯವಸ್ಥೆ ಇದೆ. ಡಿ.ಎಡ್., ಕಾಲೇಜುಗಳಿಗೆ ಪ್ರವೇಶಾತಿ ಪಡೆಯಲು ಪ್ರಸ್ತುತ ಕರ್ನಾಟಕದಲ್ಲಿ ಕೇಂದ್ರೀಯ ಪ್ರವೇಶಾತಿ ಘಟಕದ (CAC) ಮೂಲಕ ಮೆರಿಟ್ ಮತ್ತು ಮೀಸಲಾತಿ ಅನ್ವಯದ ಆಧಾರದ ಮೇಲೆ ಕೌನ್ಸಿಲಿಂಗ್ ಮಾಡಿ ಆಯ್ಕೆ ಮಾಡಲಾಗುತ್ತದೆ. ಈ ಕೋರ್ಸಿಗೆ ಪ್ರವೇಶಾತಿ ಪಡೆಯಲು ಅಭ್ಯರ್ಥಿಯು ದ್ವಿತೀಯ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಅಥವಾ ಹನ್ನೆರಡನೇ ತರಗತಿ (12) ಅಥವಾ ಅದಕ್ಕೆ ತತ್ಸಮಾನವಾದ ವಿದ್ಯಾರ್ಹತೆ ಹೊಂದಿ ಅಂತಿಮ ಪರೀಕ್ಷೆಯಲ್ಲಿ ಕನಿಷ್ಠ ಶೇ. 50 ಅಂಕ ಪಡೆದಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ (S.C & S.T.) ದವರು ಶೇ. 45ರಷ್ಟು ಅಂಕ ಅಂತಿಮ ಪರೀಕ್ಷೆಯಲ್ಲಿ ಪಡೆದಿರಬೇಕು. ಕನಿಷ್ಠ ಶೇ. 50 ಪ್ರಮಾಣದಲ್ಲಿ ಎಲ್ಲ ವರ್ಗಗಳಲ್ಲಿಯೂ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾತಿ ಒದಗಿಸಲಾಗುತ್ತದೆ. ವಿದ್ಯಾರ್ಥಿಗಳ ಪ್ರವೇಶ ಪ್ರಮಾಣವು ಸರ್ಕಾರಿ ಅಧ್ಯಾಪಕ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 100, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 75, ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 50 ಹಾಗೂ ಖಾಸಗಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 25 ಪ್ರಮಾಣದಲ್ಲಿ ನಿಗದಿಗೊಳಿಸಲಾಗಿದೆ.

ಪ್ರಾಥಮಿಕ ಅಧ್ಯಾಪಕ ಶಿಕ್ಷಣ ಸಂಸ್ಥೆಗಳಿಗೆ ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ತು ಮಾನ್ಯತೆ ಮತ್ತು ವಿದ್ಯಾರ್ಥಿಗಳ ಸಂಖ್ಯೆ ನಿಗದಿಗೊಳಿಸುವ ಅಧಿಕಾರ ಹೊಂದಿದ್ದರೂ ರಾಜ್ಯದಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ (DSERT) ಆಡಳಿತಾತ್ಮಕ ಮತ್ತು ಶೈಕ್ಷಣಿಕವಾದ ವಿಚಾರಗಳಿಗೆ ಸಂಬಂಧಿಸಿದಂತೆ ಡಿ.ಎಡ್.ಗೆ ಪಠ್ಯಕ್ರಮ, ಪಠ್ಯಪುಸ್ತಕಗಳ ತಯಾರಿ, ವಿದ್ಯಾರ್ಥಿಗಳ ಪ್ರವೇಶಾತಿಯ ಅನುಮೋದನೆಯನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಮೂಲಕ ಮಾಡುತ್ತದೆ. ಅಲ್ಲದೆ ಖಾಸಗೀ ಅನುದಾನಿತ ಡಿ.ಎಡ್. ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು ಆಯ್ಕೆಗೊಳ್ಳುವ ಅಧ್ಯಾಪಕರ ಹುದ್ದೆಗಳನ್ನು ಅನುಮೋದನೆ ಮಾಡುತ್ತದೆ ಹಾಗೂ ಶೈಕ್ಷಣಿಕವಾಗಿ ವಾರ್ಷಿಕ ವೇಳಾಪಟ್ಟಿಯನ್ನು ನಿಗದಿಗೊಳಿಸುತ್ತದೆ. ಸರ್ಕಾರಿ ಮತ್ತು ಅನುದಾನಿತ ಅಧ್ಯಾಪಕ ಶಿಕ್ಷಣ ತರಬೇತಿ ಸಂಸ್ಥೆಗಳಿಗೆ ಸಂಬಳ ಬಟವಾಡೆ/ಸಹಾಯಧನ ಹಂಚಿಕೆಯನ್ನು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳ (DIET) ಮೂಲಕ ವಿತರಿಸುವುದು ಮತ್ತು ಇವುಗಳ ಮೂಲಕ ಖಾಸಗಿ ಡಿ.ಎಡ್. ಕಾಲೇಜುಗಳ ತನಿಖೆ ಮಾಡುವುದು ಮುಂತಾದ ಜವಾಬ್ದಾರಿಗಳನ್ನೂ ನಿರ್ವಹಿಸುತ್ತದೆ. ಡಿ.ಎಡ್. ಕೋರ್ಸಿನ ಪರೀಕ್ಷೆಯನ್ನು ನಿರ್ದೇಶಕ, ಕರ್ನಾಟಕ ರಾಜ್ಯ ಪ್ರೌಢಶಾಲಾ ಪರೀಕ್ಷಾ ಮಂಡಳಿ, ಬೆಂಗಳೂರು, ಇವರು ನಡೆಸುತ್ತಾರೆ. ಈ ಸಂಸ್ಥೆಗಳ ತರಬೇತಿ ಅವಧಿ 2 ವರ್ಷಗಳದ್ದಾಗಿದೆ.

**3) ಪ್ರೌಢಶಿಕ್ಷಣ ಅಧ್ಯಾಪಕ ಶಿಕ್ಷಣ ವ್ಯವಸ್ಥೆ (ಬಿ.ಎಡ್.,):** ಪ್ರೌಢಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುವವರು ಬಿ.ಎಡ್. ಪದವಿಯನ್ನು ಪೂರ್ಣಗೊಳಿಸುವ ಅಗತ್ಯವಿದೆ. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಪ್ರೌಢಶಾಲಾ ಶಿಕ್ಷಕರಾಗುವುದಕ್ಕೆ ಬೇಕಾದ ಒಂದು ವರ್ಷದ ಸೇವಾ ಪೂರ್ವ ಶಿಕ್ಷಣವನ್ನು ಪಡೆದು ಬಿ.ಎಡ್., ಕಾಲೇಜುಗಳಿಂದ ಹೊರಗೆ ಬರುತ್ತಿರುವ ಪದವೀಧರರು ಪ್ರೌಢಶಾಲೆಗಳಲ್ಲಿ ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಬೋಧನೆ ಮಾಡುವ ರೀತಿಯಲ್ಲಿ ಅವರನ್ನು ತಯಾರುಮಾಡುವ ಜವಾಬ್ದಾರಿಯನ್ನು ಶಿಕ್ಷಣ ಕಾಲೇಜುಗಳು ನಿರ್ವಹಿಸುವಂತಹ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪ್ರೌಢಶಾಲಾ ಅಧ್ಯಾಪಕ ಶಿಕ್ಷಣ ಕರ್ನಾಟಕದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ಕೆಲವು ಮಹತ್ವದ ತಿರುವುಗಳನ್ನು ಪಡೆದುಕೊಂಡಿದೆ. ಅದರ ಜೊತೆಯಲ್ಲಿಯೇ ಪ್ರಮಾಣ ಮತ್ತು ಪರಿಮಾಣಾತ್ಮಕವಾಗಿ ಅಪಾರ ವಿಸ್ತೃತತೆಯನ್ನೂ ಪಡೆದುಕೊಂಡು ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಒಂದು ಸವಾಲಾಗಿದೆ. ಕಳೆದ ಕೆಲವು ವರ್ಷಗಳಿಂದೀಚೆಗೆ ಪ್ರೌಢಶಾಲಾ ಅಧ್ಯಾಪಕ ಶಿಕ್ಷಣ ಕಾಲೇಜುಗಳ ಸಂಖ್ಯೆ (ಬಿ.ಎಡ್.) ಸುಮಾರು 411 ಆಗಿದ್ದು ಅಧಿಕ ಸಂಖ್ಯೆ ಶಿಕ್ಷಣ ಕಾಲೇಜುಗಳನ್ನು ಹೊಂದಿರುವ ರಾಜ್ಯವೆಂದು ಹೆಸರಾಗಿದೆ. ಈ ಕಾಲೇಜುಗಳಿಗೆ ಬಿ.ಎಡ್. ಶಿಕ್ಷಣ ಪಡೆಯಲು ಅಭ್ಯರ್ಥಿಯು ಪದವೀಧರನಾಗಿದ್ದು ಐಚ್ಛಿಕ ಮತ್ತು ಭಾಷಾವಿಷಯಗಳು ಸೇರಿದಂತೆ ಸರಾಸರಿ ಶೇಕಡ 50 ಅಂಕಗಳನ್ನು ಪಡೆದಿರಬೇಕು. ಆದರೆ ಎಸ್.ಸಿ./ಎಸ್.ಟಿ. ಪ್ರವರ್ಗ– 1 ಮತ್ತು ಅಂಗವಿಕಲ ಅಭ್ಯರ್ಥಿಗಳು ಒಟ್ಟು ಮೂರು ವರ್ಷಗಳ ಅವಧಿಯಲ್ಲಿ ಸರಾಸರಿ ಕನಿಷ್ಠ ಶೇಕಡ 45 ಅಂಕಗಳನ್ನು ಪಡೆದಿರಬೇಕು. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಅಧ್ಯಾಪಕ ಶಿಕ್ಷಣ ಕಾಲೇಜು ಎಂದು ಹೊಸದಾಗಿ ನಾಮಕರಣಗೊಂಡು ಕಾರ್ಯನಿರ್ವಹಿಸುತ್ತಿರುವ ಕಾಲೇಜುಗಳ ಸಂಖ್ಯೆ 8. ವಿಶ್ವವಿದ್ಯಾನಿಲಯ ಶಿಕ್ಷಕರ ಕಾಲೇಜು ಧಾರವಾಡ 1, ಖಾಸಗೀ ಅನುದಾನಿತ ಬಿ.ಎಡ್. ಕಾಲೇಜುಗಳ ಸಂಖ್ಯೆ 42, ಖಾಸಗೀ ಅನುದಾನರಹಿತ ಬಿ.ಎಡ್. ಕಾಲೇಜುಗಳ ಸಂಖ್ಯೆ 360, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಕಾಲೇಜು ಮೈಸೂರು (RIMSE) 1, ಪ್ರಾದೇಶಿಕ ಶಿಕ್ಷಣ ಸಂಸ್ಥೆ ಮೈಸೂರು (RIE) 1 ಹಾಗೂ ಸ್ವಾಯತ್ತತೆ ಪಡೆದ ಕೆಲವು ಬಿ.ಎಡ್. ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದ ಬಿ.ಎಡ್. ಕಾಲೇಜುಗಳು ವಿವಿಧ ವಿಶ್ವವಿದ್ಯಾನಿಲಯಗಳ ಅಡಿಯಲ್ಲಿ ಸಂಯೋಜನೆಗೊಂಡು ಕಾರ್ಯನಿರ್ವಹಿಸುತ್ತಿವೆ. ಬಿ.ಎಡ್.

Digitised by Bharatavani, CIIL

ಕಾಲೇಜುಗಳ ಶೈಕ್ಷಣಿಕ ವೇಳಾಪಟ್ಟಿ, ಪಠ್ಯಕ್ರಮ, ಪಠ್ಯಸೂಚಿ, ಪರೀಕ್ಷೆ ನಡೆಸುವುದು ಮತ್ತು ಪದವಿ ನೀಡುವಿಕೆಯನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳೇ ನಿರ್ವಹಿಸುತ್ತಿವೆ. ಪ್ರಾದೇಶಿಕ ಅಧ್ಯಾಪಕ ಶಿಕ್ಷಣ ಕಾಲೇಜು (RIE) ಮೈಸೂರು, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಕಾಲೇಜು ಮೈಸೂರು ಹಾಗೂ ಕೆಲವು ಸ್ವಾಯತ್ತ ಶಿಕ್ಷಣ ಕಾಲೇಜುಗಳನ್ನು ಹೊರತುಪಡಿಸಿ ವಿದ್ಯಾರ್ಥಿಗಳ ಸಂಖ್ಯೆ ನಿಗದಿಗೊಳಿಸುವುದು ಹಾಗೂ ಪ್ರತಿವರ್ಷ ಶಿಕ್ಷಣ ಕಾಲೇಜುಗಳ ಮಾನ್ಯತೆ ನವೀಕರಿಸುವುದು ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ತಿನ ಜವಾಬ್ದಾರಿಯಾಗಿದೆ. ರಾಜ್ಯದ ಪ್ರತಿಯೊಂದು ಬಿ.ಎಡ್. ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 100 ಎಂದು ನಿಗದಿಗೊಳಿಸಲಾಗಿದೆ. ರಾಜ್ಯದ ಬಿ.ಎಡ್. ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಪ್ರವೇಶಾತಿ ಪಡೆಯಲು ಸಾಮಾನ್ಯ ಪರೀಕ್ಷೆ (CET) ಬರೆದು ನಂತರ ಮೆರಿಟ್‌ನ ಹಾಗೂ ಮೀಸಲಾತಿ ಆಧಾರದ ಮೇಲೆ ಆಯ್ಕೆಗೊಳ್ಳಬೇಕು. ಇದನ್ನು ರಾಜ್ಯದ ಕೇಂದ್ರೀಯ ಪ್ರವೇಶಾತಿ/ದಾಖಲಾತಿ ಘಟಕ (CAC) ನಡೆಸುತ್ತದೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯವು ರಾಜ್ಯದ ಬಿ.ಎಡ್. ಕಾಲೇಜುಗಳ ಆಡಳಿತ ನಿರ್ವಹಣೆ, ಅನುದಾನಿತ ಬಿ.ಎಡ್. ಕಾಲೇಜುಗಳ ಹುದ್ದೆಗಳ ಅನುಮೋದನೆ ಹಾಗೂ ಸಂಬಳ ಬಟವಾಡೆ/ಅನುದಾನದ ಹಂಚಿಕೆ ಮುಂತಾದ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಮುಕ್ತ ವಿಶ್ವವಿದ್ಯಾನಿಲಯವೂ ಸಹ ಬಿ.ಎಡ್., ಶಿಕ್ಷಣವನ್ನು ಅಂಚೆ ಮತ್ತು ತೆರಪಿನ ಶಿಕ್ಷಣವಾಗಿ ನೀಡುತ್ತಿದೆ. ಪ್ರವೇಶಾತಿ ನಿಯಮ ಮೇಲಿನಂತೆಯೇ ಇದೆ. ಆದರೆ ಇಲ್ಲಿ ಪ್ರವೇಶಾತಿ ಪಡೆಯುವವರು ಮಾಧ್ಯಮಿಕ ಅಥವಾ ಇನ್ನಿತರ ಶಿಕ್ಷಣ ಸಂಸ್ಥೆಗಳಲ್ಲಿ ಸೇವಾನಿರತರಾಗಿರಬೇಕು. ಅದಕ್ಕೆ ಬೇಕಾದ ಸೂಕ್ತ ದಾಖಲಾತಿ ನೀಡಬೇಕು. ತರಬೇತಿಯ ಅವಧಿಯು ಎರಡು ವರ್ಷಗಳದ್ದಾಗಿರುತ್ತದೆ.

4) **ಚಿತ್ರಕಲಾ ಅಧ್ಯಾಪಕ ಶಿಕ್ಷಣದ ವ್ಯವಸ್ಥೆ:** ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಾತಿ ಹೊಂದಬೇಕಾದರೆ ಅದಕ್ಕೆ ಬೇಕಾದ ತರಬೇತಿ ಮತ್ತು ಪ್ರಶಸ್ತಿ ಪತ್ರವನ್ನು ಪಡೆದಿರಬೇಕು. ಪ್ರಸ್ತುತ ಪ್ರಾಥಮಿಕ ಚಿತ್ರಕಲಾ ಶಿಕ್ಷಕ ಶಿಕ್ಷಣ ಪಡೆಯಲು ಪ್ರೌಢಶಿಕ್ಷಣವನ್ನು ಮುಗಿಸಿ ಉತ್ತೀರ್ಣರಾದವರಿಗೆ (ಎಸ್.ಎಸ್.ಎಲ್.ಸಿ) ಹಿಂದೆ ಮತ್ತು ಈಗಲೂ ಚಾಲ್ತಿಯಲ್ಲಿರುವ ಕೋರ್ಸ್ (ಎ.ಟಿ.ಸಿ) ಆರ್ಟ್ ಟೀಚರ್ ಟ್ರೈನಿಂಗ್ ಸರ್ಟಿಫಿಕೇಟ್ ಹೊಂದಿರಬೇಕು. ಬದಲಾವಣೆಗೊಂಡ ಶಿಕ್ಷಣ ವ್ಯವಸ್ಥೆಯಲ್ಲಿ ಈಗ (ಡಿ.ಎಂ.ಸಿ) ಡ್ರಾಯಿಂಗ್ ಮಾಸ್ಟರ್ ಕೋರ್ಸ್ ಮಾಡಿರಬೇಕು. ಚಿತ್ರಕಲಾ ಶಿಕ್ಷಕ ತರಬೇತಿ ಹೊಂದಲು 2 ವರ್ಷದ ಫೌಂಡೇಷನ್ ಕೋರ್ಸ್ ಮುಗಿಸಿದ ನಂತರ ಒಂದು ವರ್ಷದ ತರಬೇತಿಗೆ ಅರ್ಹನಾಗುತ್ತಾನೆ.

ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕನಾಗಬೇಕಾದರೆ ಚಿತ್ರಕಲಾ ಶಿಕ್ಷಕ ಶಿಕ್ಷಣ/ತರಬೇತಿ ಹೊಂದಿರಬೇಕು. ಎ.ಎಂ.ಡಿ. (ಆರ್ಟ್ ಮಾಸ್ಟರ್ ಡಿಪ್ಲೊಮೋ ಅಥವಾ ಆರ್ಟ್ ಎಜುಕೇಷನ್ ಡಿಪ್ಲೊಮೋ) ಅಗತ್ಯ.

ಈ ಕೋರ್ಸ್‌ಗೆ ಪ್ರವೇಶಾತಿ ಪಡೆಯಲು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರು ಅರ್ಹರಾಗಿರುತ್ತಾರೆ. ಈ ಕೋರ್ಸನ್ನು ಎ.ಎಮ್.ಡಿ. (ಆರ್ಟ್ ಎಜುಕೇಷನಲ್ ಡಿಪ್ಲೊಮೋ) ಎಂದು ಕರೆಯಲಾಗುತ್ತದೆ. ಇದಕ್ಕೂ ಒಂದು ವರ್ಷದ ಕಲಾಮೂಲ ಶಿಕ್ಷಣ ಮಾಡಿದ ನಂತರ ನಾಲ್ಕು ವರ್ಷಗಳ ಡಿಪ್ಲೊಮೋ ಕೋರ್ಸ್ ಮಾಡಬೇಕು. ಹಾಗೆಯೇ ಆರ್ಟ್ಸ್ ಎಜುಕೇಷನ್‌ಲ್ ಡಿಪ್ಲೊಮೋ ಮಾಡಲು ಕಲಾಮೂಲ 2 ವರ್ಷದ (ಫೌಂಡೇಷನ್ ಕೋರ್ಸ್) ಮುಗಿಸಿದ ನಂತರ 3 ವರ್ಷಗಳ ವಿಶೇಷ ಶಿಕ್ಷಣವನ್ನು ಮಾಡಬೇಕು. ಇವುಗಳ ಪರೀಕ್ಷೆಯನ್ನು ಇತ್ತೀಚಿನ ದಿನಗಳಲ್ಲಿ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ನಡೆಸಿ ಸಂಬಂಧಪಟ್ಟ ಸರ್ಟಿಫಿಕೇಟ್‌ಗಳನ್ನು ವಿತರಿಸುತ್ತಿದೆ. ಪ್ರಸ್ತುತ ಸರ್ಕಾರಿ ಸ್ಕೂಲ್ ಆಫ್ ಆರ್ಟ್ಸ್ (ಕಲಾ ಶಿಕ್ಷಕ ಶಿಕ್ಷಣ) ತರಬೇತಿ ಕೇಂದ್ರಗಳು ತುಮಕೂರು ಮತ್ತು ಧಾರವಾಡಗಳಲ್ಲಿವೆ. ಜೊತೆಗೆ ಅನೇಕ ಖಾಸಗಿ ತರಬೇತಿ ಸಂಸ್ಥೆಗಳು ಈ ಕೋರ್ಸುಗಳನ್ನು ನಡೆಸುತ್ತಿವೆ.

5. **ದೈಹಿಕ ಶಿಕ್ಷಕ ಶಿಕ್ಷಣದ ವ್ಯವಸ್ಥೆ:** ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರಾಗಿ ನೇಮಕಾತಿ ಹೊಂದಬೇಕಾದರೆ ಸೇವಾ ಪೂರ್ವ ಶಿಕ್ಷಣದ ಅಗತ್ಯವಿದೆ. ಅದನ್ನು ಡಿಪ್ಲೊಮೋ-ಇನ್-ಫಿಸಿಕಲ್ ಎಜುಕೇಷನ್ (ಡಿ.ಪಿ.ಎಡ್) ಎಂದು ನಾಮಕರಣ ಮಾಡಲಾಗಿದೆ. ಈ ತರಬೇತಿ ಹೊಂದಲು ಪದವಿ ಪೂರ್ವ (ಪಿ.ಯು.ಸಿ) ಶಿಕ್ಷಣ ಮುಗಿಸಿದ ನಂತರ ಪ್ರವೇಶಾತಿ ಪಡೆಯಲು ಅರ್ಹರಾಗಿರುತ್ತಾರೆ. ತರಬೇತಿ ಅವಧಿ ಒಂದು ವರ್ಷ. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ದೈಹಿಕ ಶಿಕ್ಷಣ ಶಿಕ್ಷಕರ ತರಬೇತಿ ಸಂಸ್ಥೆ 1, ಅನುದಾನಿತ ಶಿಕ್ಷಣ ಸಂಸ್ಥೆಗಳು 3 ಹಾಗೂ ಅನುದಾನ ರಹಿತ ದೈಹಿಕ ಶಿಕ್ಷಣ ಶಿಕ್ಷಕರ ತರಬೇತಿ ಸಂಸ್ಥೆಗಳು 29 ಇವೆ. ಒಟ್ಟು 33 ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಡಿ.ಇಡಿ. ಮತ್ತು ಬಿ.ಇಡಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುವವರು ಸ್ನಾತಕೋತ್ತರ ಅಧ್ಯಾಪಕ ಶಿಕ್ಷಣ (ಎಂ.ಇಡಿ) ಪಡೆದಿರಬೇಕು. ಕರ್ನಾಟಕ ರಾಜ್ಯದಲ್ಲಿ ಎಲ್ಲ ವಿಶ್ವವಿದ್ಯಾನಿಲಯಗಳೂ ಶಿಕ್ಷಣ ವಿಭಾಗವನ್ನು ತೆರೆದು ಆ ಮೂಲಕ ಒಂದು ವರ್ಷದ ಸ್ನಾತಕೋತ್ತರ ಅಧ್ಯಾಪಕ ಶಿಕ್ಷಣವನ್ನು ನೀಡುತ್ತವೆ. ಇದಕ್ಕೆ ಸೇರಬಯಸುವ ಅಭ್ಯರ್ಥಿಗಳು ಬಿ.ಇಡಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ವಿಶ್ವವಿದ್ಯಾನಿಲಯಗಳು ನಡೆಸುವ ಪ್ರವೇಶಾತಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಮೆರಿಟ್ ಮತ್ತು ಮೀಸಲಾತಿ ನಿಯಮಗಳಡಿಯಲ್ಲಿ ಅರ್ಹರಾದವರನ್ನು ಆಯ್ಕೆ ಮಾಡುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಎಂ.ಇಡಿ ಪದವಿ ಪಡೆಯಲು ಆಯಾ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ನಡೆಯುತ್ತಿರುವ ಆಯ್ದ ಅರ್ಹ ಬಿ.ಇಡಿ. ಕಾಲೇಜುಗಳಲ್ಲಿಯೂ ಅವಕಾಶ ಮಾಡಿಕೊಡಲಾಗಿದೆ. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಮೂಲಕವೂ ಎಂ.ಇಡಿ. ಪದವಿಯನ್ನು ಪಡೆಯಲು ಅವಕಾಶವಿದೆ.

– ಸಿ.ಎಂ.ಕ.

## ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಬೆಳವಣಿಗೆ

ವಿಸ್ತಾರವಾದ ಜ್ಞಾನಪ್ರಪಂಚವನ್ನು ಸಾಮಾಜಿಕ ವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮಾನವಿಕ ಮತ್ತು ಭಾಷೆಗಳು ಎಂಬ ಮೂರು ಪ್ರಮುಖ ಶಾಖೆಗಳನ್ನಾಗಿ ವಿಂಗಡಿಸಬಹುದು. ಈ ಎಲ್ಲಾ ಶಾಖೆಗಳೂ ಇಂದು ತನ್ನದೇ ಆದ ರೀತಿಯಲ್ಲಿ ಅಭಿವೃದ್ಧಿಹೊಂದಿ, ಸ್ವತಂತ್ರ ಅಧ್ಯಯನ ಕ್ಷೇತ್ರಗಳಾಗಿ ರೂಪುಗೊಂಡಿವೆ. ಇವುಗಳಲ್ಲಿ ಕೆಲವೊಂದು ವಿಷಯ ಕ್ಷೇತ್ರಗಳು ತಮ್ಮ ಮೂಲಭೂತ ವಿಚಾರಗಳನ್ನು/ಸಿದ್ಧಾಂತಗಳನ್ನು ಆಳವಾಗಿ ಬೇರೂರಿಸಿಕೊಳ್ಳುವುದರ ಜೊತೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಅಂಶಗಳನ್ನು ಮೈಗೂಡಿಸಿಕೊಂಡು ವಿಶಿಷ್ಟ ಕಾರ್ಯಕ್ಷೇತ್ರವಾಗಿ ಬೆಳೆದಿವೆ. ಇಂತಹ ಕೆಲವೇ ಅಧ್ಯಯನ ಕ್ಷೇತ್ರಗಳಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರವೂ ಒಂದೆನಿಸಿದೆ. ಈ ಕ್ಷೇತ್ರವು ಸಾಮಾಜಿಕ ವಿಜ್ಞಾನದ ಪ್ರಾಥಮಿಕ ತತ್ವಗಳನ್ನು ಒಳಗೊಂಡ ಅತ್ಯಾಧುನಿಕವಾದ ಗಣಕ ತಂತ್ರಜ್ಞಾನದ ಲಕ್ಷಣಗಳನ್ನು ತನ್ನದಾಗಿಸಿಕೊಂಡು ಪ್ರತ್ಯೇಕ ಸಂಶೋಧನಾ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿದೆ.

ಗ್ರಂಥಾಲಯಗಳಿಗೆ ಅವಶ್ಯಕವಾದ ವಿವಿಧ ರೀತಿಯ ಅಧ್ಯಯನ ಸಾಮಗ್ರಿಗಳ ಆಯ್ಕೆ, ಸಂಗ್ರಹಣೆ, ಪರಿಷ್ಕರಣೆ ಹಾಗೂ ಯುಕ್ತ ವಿತರಣೆ;

Digitised by Bharatavani, CIIL

ಸಾಮಾನ್ಯ ಓದುಗರಿಗೆ ಅನುಕೂಲಕರವಾದ ರೀತಿಯಲ್ಲಿ ವಿವಿಧ ಬಗೆಯ ಸೂಚಿಗಳನ್ನು ತಯಾರಿಸಿ, ತನ್ಮೂಲಕ ಬಳಕೆದಾರರಿಗೆ ಗ್ರಂಥಾಲಯದ ಒಟ್ಟಾರೆ ಸಂಗ್ರಹಣೆಯ ಮಾಹಿತಿ ನೀಡಿಕೆ; ಓದುಗರ ಅಭಿರುಚಿಗೆ ಅನುಸಾರವಾಗಿ ಅಗತ್ಯವಾದ ಅಧ್ಯಯನ ಸಾಮಗ್ರಿಗಳನ್ನು ಸೂಕ್ತ ಸಮಯದಲ್ಲಿ ದೊರಕಿಸಿಕೊಡುವುದು; ಗ್ರಂಥಾಲಯ ಸೂಚಿಯ ವಿನ್ಯಾಸ; ಗ್ರಂಥಾಲಯದ ಆಯವ್ಯಯ ತಯಾರಿಕೆ ಹಾಗೂ ಲಭ್ಯವಿರುವ ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳ ಸಮರ್ಪಕ ನಿರ್ವಹಣೆ; ಗಣಕಯಂತ್ರ ತಂತ್ರಾಂಶಗಳ ಸಹಾಯದಿಂದ ಗ್ರಂಥಾಲಯ ವ್ಯವಸ್ಥೆಯ ನವೀಕರಣ ಇವೇ ಮೊದಲಾದ ಗ್ರಂಥಾಲಯ ನಿರ್ವಹಣೆಗೆ ಸಂಬಂಧಿಸಿದ ವಿವಿಧ ವಿಷಯವನ್ನೊಳಗೊಂಡ ಅಧ್ಯಯನ ವಿಷಯವೇ ಗ್ರಂಥಾಲಯ ವಿಜ್ಞಾನ. ಹಾಗೆಯೇ ಗ್ರಂಥಗಳು ಅಥವಾ ಇನ್ನಾವುದೇ ಮಾಹಿತಿ ಮೂಲಗಳಿಂದ ಅಗತ್ಯವಾದ ಮಾಹಿತಿಯ ಸಂಗ್ರಹಣೆ, ಸಂಸ್ಕರಣೆ ಮತ್ತು ವಿಶ್ಲೇಷಣೆಯನ್ನೊಳಗೊಂಡ ಶಾಸ್ತ್ರವನ್ನು ಮಾಹಿತಿ ವಿಜ್ಞಾನ ಎಂದು ಕರೆಯಬಹುದು. ಒಟ್ಟಾರೆ ಗ್ರಂಥಗಳು ಹಾಗೂ ಇನ್ನಿತರ ಯಾವುದೇ ಮಾಹಿತಿಯ ಮೂಲಗಳ ವಿಶ್ಲೇಷಣಾತ್ಮಕ ಪ್ರಕ್ರಿಯೆಯನ್ನು ಅಧ್ಯಯನ ಮಾಡುವ ಶಾಸ್ತ್ರವನ್ನು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಎಂಧು ಪರಿಗಣಿಸಲಾಗಿದೆ.

ಸರಳವಾಗಿ ಹೇಳಬಹುದಾದರೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನದ ವಿವಿಧ ಹಂತಗಳಲ್ಲಿ ಗ್ರಂಥಾಲಯದ ನಾನಾ ದಾಖಲೆಗಳನ್ನು ಸ್ಫುಟವಾಗಿ ಬರೆಯುವುದು; ಪುಸ್ತಕವನ್ನು ವಿಶ್ಲೇಷಿಸುವುದು; ಹೊಸ ಪುಸ್ತಕಗಳನ್ನು ದಾಖಲಿಸುವುದು; ಅವುಗಳಿಗೆ ಗ್ರಂಥ ಪರಿಗ್ರಹಣಾಂಕ ಮತ್ತು ವರ್ಗೀಕರಣ ಸಂಖ್ಯೆಯನ್ನು ನೀಡುವುದು; ಗ್ರಂಥ ವಿವರಣೆ ಹಾಗೂ ಗ್ರಂಥ ಸೂಚಿಯನ್ನು ತಯಾರಿಸುವುದು; ಗ್ರಂಥ ವಿತರಣೆ ಹಾಗೂ ಹಿಂಪಡೆಯುವ ಕಾರ್ಯವಿಧಾನ; ಗ್ರಂಥಾಲಯ ತಂತ್ರಾಂಶ ನಿರ್ವಹಣೆ ಇವೇ ಮೊದಲಾದ ಅಂಶಗಳನ್ನು ಈ ವಿಷಯದ ಅಧ್ಯಯನದ ಮೂಲಕ ಅಮೂಲಾಗ್ರವಾಗಿ ತಿಳಿಯಬಹುದಾಗಿದೆ.

15ನೆಯ ಶತಮಾನದ ಅನಂತರ ಮುದ್ರಣ ಯಂತ್ರದ ಅವಿರ್ಭಾವದಿಂದಾಗಿ ವಿಶ್ವದ ನಾನಾ ಭಾಗಗಳಲ್ಲಿ ಶಿಕ್ಷಣದ ಅರಿವುಂಟಾಗಿ ಜನರು ಹೆಚ್ಚಾಗಿ ಓದುಬರಹವನ್ನು ಕಲಿಯತೊಡಗಿದಾಗ ಗ್ರಂಥಾಲಯಗಳ ಸ್ಥಾಪನೆಯಾಯಿತಲ್ಲದೇ, ಅವುಗಳನ್ನು ಶಾಸ್ತ್ರೀಯವಾಗಿ ವ್ಯವಸ್ಥೆಗೊಳಿಸುವ ಸಲುವಾಗಿ ಗ್ರಂಥಾಲಯ ಸಿಬ್ಬಂದಿಗೆ ಈ ಬಗ್ಗೆ ಶಿಕ್ಷಣ ನೀಡುವ ಪ್ರಯತ್ನಗಳು ಪ್ರಾರಂಭವಾದುದರ ಫಲವಾಗಿ ಅವಶ್ಯಕತೆಗೆ ತಕ್ಕಂತೆ ವಿವಿಧ ಹಂತಗಳಲ್ಲಿ ಈ ವಿಷಯದ ಬೋಧನಾಕಾರ್ಯವು ಪ್ರಾರಂಭವಾಗಿ ವಿಸ್ತೃತವಾದ ಅಧ್ಯಯನ ಹಾಗೂ ಸಂಶೋಧನಾ ಕ್ಷೇತ್ರವಾಗಿ ಬೆಳೆದಿದೆ.

### ಗ್ರಂಥಾಲಯ ಮತ್ತು ಮಾಹಿತಿ ಶಿಕ್ಷಣ ಬೆಳವಣಿಗೆಯಲ್ಲಿ ಯು.ಜಿ.ಸಿ.ಯ ಪಾತ್ರ:

ಭಾರತದಲ್ಲಿ ಗ್ರಂಥಾಲಯ ಶಿಕ್ಷಣವು ಸುಮಾರು ನೂರು ವರ್ಷದಷ್ಟು ಹಳೆಯದು (1911, ಬರೋಡ). ಭಾರತದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟವನ್ನು ತರಲು ಶ್ರಮಿಸುತ್ತಿರುವ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಎಸ್.ಆರ್. ರಂಗನಾಥನ್‌ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಸಮಿತಿಯನ್ನು (1957) ರಚಿಸಿ, ಆ ಸಮಿತಿಯ ವರದಿಯನ್ನಾಧರಿಸಿ. ಭಾರತದಲ್ಲಿ ಗ್ರಂಥಾಲಯಗಳ ಸ್ಥಾಪನೆಗೆ ಒತ್ತು ನೀಡಿತು. ಅಲ್ಲದೇ 1965ರಲ್ಲಿ ಎಸ್.ಆರ್. ರಂಗನಾಥನ್‌ರವರ ಅಧ್ಯಕ್ಷತೆಯಲ್ಲಿಯೇ 'ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯ ಶಿಕ್ಷಣ' ಎಂಬ ಶಿರೋನಾಮೆಯಡಿಯಲ್ಲಿ ಸಮಿತಿಯನ್ನು ರಚಿಸಿ, ಇವರ ಮಾರ್ಗಾನುಸೂಚಿಯಂತೆ ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯ ಶಿಕ್ಷಣ ಹಾಗೂ ತರಬೇತಿಗೆ ಒತ್ತುನೀಡಿತು. ಯು.ಜಿ.ಸಿಯ ಈ ಕ್ರಮವು ಹೀಗೆಯೇ ಮುಂದುವರೆದು, 1992ರಲ್ಲಿ ಪಿ.ಎನ್. ಕೌಲ್‌ರವರ ನೇತೃತ್ವದಲ್ಲಿ 'ಪಠ್ಯವಸ್ತು ಅಭಿವೃದ್ಧಿ ಸಮಿತಿ'ಯನ್ನು ರಚಿಸಿ, ಭಾರತದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿದ್ದ ಗ್ರಂಥಾಲಯ ವಿಜ್ಞಾನ ವಿಷಯದ ಪಠ್ಯವಸ್ತುವನ್ನು ಅಗತ್ಯತೆಗೆ ತಕ್ಕಂತೆ ಮಾರ್ಪಡಿಸುವ ಅವಶ್ಯಕತೆಯನ್ನು ಮನಗಂಡಿತು. ನಂತರ 2001ರಲ್ಲಿ ಸಿ.ಆರ್.ಕರಿಸಿದ್ದಪ್ಪನವರ ನೇತೃತ್ವದಲ್ಲಿ ಮತ್ತೊಂದು 'ಪಠ್ಯವಸ್ತು ಅಭಿವೃದ್ಧಿ ಸಮಿತಿ'ಯನ್ನು ರಚಿಸಿ, ಭಾರತದ ಎಲ್ಲ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಕ್ಷೇತ್ರದ ಪಠ್ಯವಸ್ತುವನ್ನು ಸಂದರ್ಭೋಚಿತವಾಗಿ ಮಾರ್ಪಡಿಸಿ, ನವೀಕರಿಸುವ ಯೋಜನೆಯನ್ನು ಕೈಗೊಂಡು ಯಶಸ್ವಿಯಾಗಿದೆ.

### ಅಂತಾರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಬೆಳವಣಿಗೆಯಲ್ಲಿ ಇಫ್ಲಾದ ಪಾತ್ರ

ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಂತರ್‌ರಾಷ್ಟ್ರೀಯ ಗ್ರಂಥಾಲಯ ಸಂಘಗಳ ಸಂಸ್ಥೆ (ಇಫ್ಲಾ)ಯೂ ಗ್ರಂಥಾಲಯ ವಿಜ್ಞಾನ ಕ್ಷೇತ್ರವನ್ನು ಉನ್ನತೀಕರಿಸುವ ಯೋಜನೆಯಲ್ಲಿ ಬಹಳಷ್ಟು ಶ್ರಮಿಸುತ್ತಿದೆ. ಈ ಸಂಸ್ಥೆಯು "Standard for Library Schools 1976"ನ್ನು ರಚಿಸಿ, ಗ್ರಂಥಾಲಯ ಶಿಕ್ಷಣ ಹಾಗೂ ತರಬೇತಿಗೆ ಅಗತ್ಯವಾದ ಹೊಸ ನೀತಿಯನ್ನು ರೂಪಿಸಿತು. ಹಾಗೆಯೇ, 2000ರಲ್ಲಿ 'Guidelines for Professional Library and Information Education Program" ಎಂಬ ಮಾರ್ಗಸೂಚಿಯನ್ನು ತಯಾರಿಸಿ, ಪಠ್ಯವಸ್ತುಗಳ ಮಾರ್ಪಾಡು; ಉದ್ಯೋಗಾವಕಾಶಗಳು ಹಾಗೂ ತರಬೇತಿ ಸಂಸ್ಥೆಗಳ ಗುಣಮಟ್ಟವನ್ನು ನಿಯಂತ್ರಿಸುವುದು ಇವೇ ಮೊದಲಾದ ವಿಷಯಗಳ ಬಗೆಗೆ ಹೆಚ್ಚಿನ ಒತ್ತು ನೀಡಿದೆ. ಇತ್ತೀಚಿಗೆ, 2010ರಲ್ಲಿ ಇಫ್ಲಾ ಸಂಸ್ಥೆಯು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಕ್ಷೇತ್ರಕ್ಕೆ ಅಂತರ್‌ಶಾಸ್ತ್ರೀಯ ವಿಷಯಗಳನ್ನು ಸೇರಿಸುವ ಪ್ರಾಮುಖ್ಯಕ್ಕೆ ಒತ್ತು ನೀಡಿ, ಇದರ ಅಧ್ಯಯನವನ್ನು ಮತ್ತಷ್ಟು ಅಧುನೀಕರಿಸಿ, ಮಾಹಿತಿ ಸಂಪರ್ಕ ಹಾಗೂ ತಂತ್ರಜ್ಞಾನ ಅನ್ವಯಿಕತೆಯನ್ನು ಪ್ರಧಾನವಾಗಿ ಬೋಧಿಸಬೇಕಾದ ಅವಶ್ಯಕತೆಯನ್ನು ಸಾರಿ ಹೇಳಿದೆ.

### ಭಾರತದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣ ಬೆಳವಣಿಗೆಯ ಮೊದಲ ಪ್ರಯತ್ನಗಳು

ಕ್ರಿ.ಶ 1911ರಲ್ಲಿ ಹಿಂದಿನ ರಾಜಸಂಸ್ಥಾನಗಳಲ್ಲಿ ಒಂದೆನಿಸಿದ್ದ ಬರೋಡಾ ಸಂಸ್ಥಾನದಲ್ಲಿ ಉಚಿತ ಸಾರ್ವಜನಿಕ ವಾಚನಾಲಯವನ್ನು ವ್ಯವಸ್ಥೆಗೊಳಿಸಿದಾಗ, ಅದರ ಜೊತೆಯಲ್ಲಿಯೇ ಗ್ರಂಥಪಾಲ ಶಿಕ್ಷಣ ಕಾರ್ಯವೂ ಪ್ರಾರಂಭವಾಯಿತು. ಭಾರತದಲ್ಲಿ 1911ರ ಇಸವಿಯು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಛಾಪನ್ನು ಮೂಡಿಸಿತು. ಮುಂದೆ ಲಾಹೋರಿನ ಪಂಜಾಬ್ ವಿವಿಯು 1915ರಲ್ಲಿ ಗ್ರಂಥಾಲಯ ವಿಜ್ಞಾನ ಶಿಕ್ಷಣ ತರಗತಿಯನ್ನು ಪ್ರಾರಂಭಿಸಿತು. ದಾಖಲೆಗಳ ಪ್ರಕಾರ ಭಾರತದ ವಿಶ್ವವಿದ್ಯನಿಲಯಗಳಲ್ಲಿ ಇದೇ ಮೊತ್ತಮೊದಲ ಗ್ರಂಥಾಲಯ ಶಿಕ್ಷಣ ತರಬೇತಿ ಕೇಂದ್ರವೆಂದು ಪರಿಗಣಿಸಬಹುದು. 1920ರಲ್ಲಿ ಆಂಧ್ರಪ್ರದೇಶದ ವಿಜಯವಾಡದ ರಾಮಮೋಹನ್ ಗ್ರಂಥಾಲಯದಲ್ಲಿ ಆಂಧ್ರಪ್ರದೇಶ ಗ್ರಂಥಾಲಯ ಸಂಘವು ಗ್ರಂಥಾಲಯ ಶಿಕ್ಷಣ ಶಾಲೆಯನ್ನು ತೆರೆಯಿತು.

1929ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದ ಎಸ್.ಆರ್. ರಂಗನಾಥನ್‌ರವರ ಸಲಹೆಯಂತೆ, ಮದ್ರಾಸ್ ಗ್ರಂಥಾಲಯ ಸಂಘದ ಆಶ್ರಯದಲ್ಲಿ ಗ್ರಂಥಾಲಯ ವಿಜ್ಞಾನದ ಸರ್ಟಿಫಿಕೇಟ್ ತರಗತಿಗಳು ಪ್ರಾರಂಭವಾದವು. 1932ರಲ್ಲಿ ಮದ್ರಾಸ್

Digitised by Bharatavani, CIIL

ವಿಶ್ವವಿದ್ಯಾನಿಲಯವು ಈ ತರಗತಿಗಳನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತಿತ್ತು. ನಂತರ 1937ರಲ್ಲಿ ಅದನ್ನು ಒಂದು ವರ್ಷದ ಅವಧಿಯ ಗ್ರಂಥಾಲಯ ಶಿಕ್ಷಣ ಡಿಪ್ಲೋಮ ಶಿಕ್ಷಣವನ್ನಾಗಿ ಪರಿವರ್ತಿಸಿತು.

1935ರಲ್ಲಿ ಭಾರತ ಸರ್ಕಾರದ ಬೆಂಬಲದಿಂದ ಇಂಪೀರಿಯಲ್ ಗ್ರಂಥಾಲಯ, ಕಲ್ಕತ್ತಾದಲ್ಲಿ ಗ್ರಂಥಾಲಯ ಶಿಕ್ಷಣದ ತರಗತಿಯನ್ನು ಆರಂಭಿಸಲಾಯಿತು. ಇದೇ ರಾಜ್ಯದ ಬನಸ್‌ಚಿರಿಯಾ ಎಂಬಲ್ಲಿ ಬಂಗಾಳ ಗ್ರಂಥಾಲಯ ಸಂಘವು 1936ರಲ್ಲಿ ಗ್ರಂಥಾಲಯ ಶಿಕ್ಷಣ ಶಾಲೆಯನ್ನು ಸ್ಥಾಪಿಸಿ, 1937ರಲ್ಲಿ ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿತು. ಸರಿಸುಮಾರು ಇದೇ ದಶಕದಲ್ಲಿ (1935) ಆಂಧ್ರ ವಿಶ್ವವಿದ್ಯಾನಿಲಯ ಸಹಾ ಸರ್ಟಿಫಿಕೇಟ್ ಶಿಕ್ಷಣವನ್ನು ಆರಂಭಿಸಿತು. ಮುಂದೆ ಬನಾರಸ್ ಹಿಂದು ವಿಶ್ವವಿದ್ಯಾನಿಲಯವು (1941); ಮುಂಬೈ ವಿವಿ (1943) ಮತ್ತು ಕಲ್ಕತ್ತ ವಿವಿ (1945)ಗಳು ಡಿಪ್ಲೋಮ ಶಿಕ್ಷಣ ತರಗತಿಗಳನ್ನು ಆರಂಭಿಸಿ ಯುವ ಜನತೆಯನ್ನು ಗ್ರಂಥಾಲಯ ಶಿಕ್ಷಣದೆಡೆಗೆ ಸೆಳೆದವು.

1947ರಲ್ಲಿ ಎಸ್.ಆರ್. ರಂಗನಾಥನ್‌ರವರ ನೇತೃತ್ವದಲ್ಲಿ ದೆಹಲಿ ವಿವಿಯಲ್ಲಿ ಗ್ರಂಥಾಲಯ ಶಿಕ್ಷಣ ವಿಭಾಗವನ್ನು ತೆರೆಯಲಾಯಿತು. ನಂತರ ಇದೇ ಕ್ಷೇತ್ರದಲ್ಲಿ ಪದವಿ ತರಗತಿಯನ್ನು ಮೊದಲ ಬಾರಿಗೆ ತೆರೆದ ಹೆಗ್ಗಳಿಕೆಗೆ ಪಾತ್ರವಾಯಿತು.

ಮುಂದಿನ ದಿನಗಳಲ್ಲಿ ಅಲಿಘಡ್ ಮುಸ್ಲಿಂ ವಿವಿ (1951); ಅಣ್ಣಾಮಲೈ ವಿವಿ (1962); ಜಿವಾಜಿ ವಿವಿ (1964); ಶಿವಾಜಿ ವಿವಿ (1965) ಬರ್ದಾನ್ ವಿವಿ (1965) ಜಾಧವಪುರ ವಿವಿ (1965); ಭಾಗಲ್ಪುರ ವಿವಿ (1970); ಗೌಹಾತಿ ವಿವಿ (1966); ಗುಜರಾತ್ ವಿವಿ (1966) ಜಮ್ಮು ವಿವಿ (1971)ಗಳಲ್ಲಿ ಗ್ರಂಥಾಲಯ ವಿಜ್ಞಾನ ಶಿಕ್ಷಣ ತರಗತಿ ಹಾಗೂ ತರಬೇತಿಗಳನ್ನು ಆರಂಭಿಸಲಾಯಿತು.

ಪ್ರಸ್ತುತ ಭಾರತದಲ್ಲಿ ಸುಮಾರು 118 ವಿವಿಗಳು ಹಾಗೂ ಶಿಕ್ಷಣ ಸಂಸ್ಥೆಗಳು ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಶಿಕ್ಷಣವನ್ನು ನೀಡುತ್ತಿವೆ ಇದರಲ್ಲಿ 105 ವಿವಿಗಳು ಕೇವಲ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಸ್ನಾತಕ ಪದವಿ ಶಿಕ್ಷಣವನ್ನು, 78 ವಿವಿಗಳು ಸ್ನಾತಕೋತ್ತರ ಪದವಿ ಶಿಕ್ಷಣವನು, 21 ವಿವಿಗಳು ಎರಡು ವರ್ಷಗಳ ಸಂಯೋಜಿತ ಸ್ನಾತಕೋತ್ತರ ಪದವಿ ಶಿಕ್ಷಣವನ್ನು, 16 ವಿವಿಗಳು ಎಂ.ಫಿಲ್ ಪದವಿಯನ್ನು, 46 ವಿವಿಗಳು ಪಿಎಚ್.ಡಿ ಪದವಿಯನ್ನು ಹಾಗೂ 2 ವಿವಿಗಳು ಡಿ.ಲಿಡ್ ಪದವಿಯನ್ನು ನೀಡುತ್ತಿವೆ. ಇದಲ್ಲದೇ ಕೆಲವು ಕೇಂದ್ರಿಯ ವಿವಿಗಳು ಹಾಗೂ ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳಾದ ನವದೆಹಲಿಯ ರಾಷ್ಟ್ರೀಯ ವಿಜ್ಞಾನ ಸಂಪರ್ಕ ಹಾಗೂ ಮಾಹಿತಿ ಸಂಪನ್ಮೂಲ (NISCAIR) ಸಂಸ್ಥೆ ಹಾಗೂ ಬೆಂಗಳೂರಿನ ಪ್ರಲೇಖನ ಸಂಶೋಧನೆ ಮತ್ತು ತರಬೇತಿ (DRTC) ಸಂಸ್ಥೆಯೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ತರಗತಿಗಳನ್ನು ಸಂಘಟಿಸುತ್ತಿವೆ.

**ಕರ್ನಾಟಕದಲ್ಲಿ ಗ್ರಂಥಾಲಯ ವಿಜ್ಞಾನ ಶಿಕ್ಷಣದ ಬೆಳವಣಿಗೆ**

1962ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡದಲ್ಲಿ ಗ್ರಂಥಾಲಯ ವಿಜ್ಞಾನ ಶಿಕ್ಷಣದ ತರಗತಿಗಳು ಪ್ರಾರಂಭವಾದವು. ಆರಂಭದ ದಿನಗಳಲ್ಲಿ ಕೇವಲ ಡಿಪ್ಲೋಮ ತರಗತಿಗಳನ್ನು ನಡೆಸುತ್ತಿದ್ದ ವಿಭಾಗವು 1965ರಲ್ಲಿ ಸ್ನಾತಕ ಪದವಿ ಹಾಗೂ 1971ರಲ್ಲಿ ಸ್ನಾತಕೋತ್ತರ ಪದವಿಯ ಶಿಕ್ಷಣವನ್ನು ಪ್ರಾರಂಭಿಸಿ, ಮುಂದೆ ಉತ್ತಮ ಸಂಶೋಧನಾ ಕೇಂದ್ರವಾಗಿಯೂ ಬೆಳೆದಿದೆ.

1965ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ವಿಜ್ಞಾನ ಪದವಿಯನ್ನೂ, 1971 ಸ್ನಾತಕೋತ್ತರ ಪದವಿಯ ಶಿಕ್ಷಣವನ್ನು ಪ್ರಾರಂಭಿಸಿ, 1991ರಲ್ಲಿ ಎರಡು ವರ್ಷದ ಸಂಯೋಜಿತ ಎಂ.ಎಲ್.ಐ.ಎಸ್ಸಿ ಶಿಕ್ಷಣವನ್ನು ಮುಂದುವರೆಸಿತು. ಅಲ್ಲದೇ ಸಂಶೋಧನಾ ಪದವಿಗಳಾದ ಎಂ.ಫಿಲ್ ಮತ್ತು ಪಿಎಚ್.ಡಿ. ಅಧ್ಯಯನ ಕೇಂದ್ರವಾಗಿಯೂ ಇದು ಹೆಸರುವಾಸಿಯಾಗಿದೆ. 1996ರಲ್ಲಿ PMLIScDLAN ಎಂಬ ಅಲ್ಪಾವಧಿ ಕೋರ್ಸ್‌ನ್ನು ಪ್ರಾರಂಭಿಸಿ ಗ್ರಂಥಾಲಯ ಗಣಕೀಕರಣ ಹಾಗೂ ಜಾಲಸಂಪರ್ಕ ಸೇವೆಗಳ ಕ್ಷೇತ್ರದಲ್ಲಿ ಶಿಕ್ಷಣವನ್ನು ಪ್ರಾರಂಭಿಸಿತು.

ಮೊದಲು ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಗುರುತಿಸಿಕೊಂಡಿದ್ದು, ನಂತರ ವಿದ್ಯಾರ್ಥಿಗಳ ದಾಖಲಾತಿಯ ಹೆಚ್ಚಳದಿಂದಾಗಿ ಬೆಂಗಳೂರು ವಿವಿ ಹಾಗೂ ಕಾಲಾನಂತರ ಮಂಗಳೂರು ವಿಶ್ವವಿದ್ಯಾನಿಲಯವು ಪ್ರತ್ಯೇಕವಾದ ಅಸ್ತಿತ್ವವನ್ನು ಹೊಂದಿದವು.

ಬೆಂಗಳೂರು ವಿಶ್ವವಿದ್ಯಾನಿಲಯದ (1974) ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗವೂ ಮೊದಲು ಕೇವಲ ಸ್ನಾತಕ ಪದವಿಯ ಶಿಕ್ಷಣಕ್ಕೆ ಮೀಸಲಾಗಿದ್ದು, ನಂತರ ಸ್ನಾತಕೋತ್ತರ, ಸಂಶೋಧನಾ ಕೇಂದ್ರವಾಗಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿತು. ಅಂತೆಯೇ ಮಂಗಳೂರು ವಿಶ್ವವಿದ್ಯಾನಿಲಯವು (1982) ಬಿ.ಎಲ್.ಐ.ಎಸ್ಸಿ; ಎಂ.ಎಲ್.ಐ.ಎಸ್ಸಿ ಹಾಗೂ ಪಿಎಚ್.ಡಿ. ಮಾರ್ಗದರ್ಶನ ಕೇಂದ್ರವಾಗಿ ಉತ್ತಮವಾದ ಹೆಸರನ್ನು ಗಳಿಸಿದೆ.

1979ರಲ್ಲಿ ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗವು ಅಸ್ತಿತ್ವಕ್ಕೆ ಬಂದಿತು. ಅಂದಿನಿಂದ ಅಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ಚಟುವಟಿಕೆಗಳು ಅವ್ಯಾಹತವಾಗಿ ಸಾಗುತ್ತಿವೆ.

1993ರಿಂದ ಶಿವಮೊಗ್ಗದ ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾನಿಲಯವು ಎಂ.ಎಸ್ಸಿ (ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ) ಸ್ನಾತಕೋತ್ತರ ಪದವಿಯ ಶಿಕ್ಷಣವನ್ನು ಪ್ರಾರಂಭಿಸಿ, ಇಂದು ಉತ್ತಮ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವಾಗಿಯೂ ಜನಪ್ರಿಯವಾಗಿದೆ. ಅಲ್ಲದೇ 2005ರಿಂದ ಕುವೆಂಪು ವಿಶ್ವವಿದ್ಯಾನಿಲಯ ದೂರಶಿಕ್ಷಣ ಕೇಂದ್ರದ ಮೂಲಕವಾಗಿಯೂ ಎಂ.ಎಲ್.ಐ.ಎಸ್ಸಿ ಪದವಿಯ ಶಿಕ್ಷಣವನ್ನು ನೀಡುತ್ತಿದೆ.

2000ನೇ ಇಸವಿಯಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಒಂದು ವರ್ಷದ ಬಿ.ಎಲ್.ಐ.ಎಸ್ಸಿ ಹಾಗೂ 2002ರಲ್ಲಿ ಒಂದು ವರ್ಷದ ಅವಧಿಯ ಎಂ.ಎಲ್.ಐ.ಎಸ್ಸಿ ಪದವಿಯ ಶಿಕ್ಷಣವನ್ನು ನೀಡುತ್ತಿದೆ. 2009ರಲ್ಲಿ ಎಂಫಿಲ್ ಪದವಿಯ ಅಧ್ಯಯನ ಕೇಂದ್ರವನ್ನು ತೆರೆಯುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಮುಂದೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಉತ್ತಮ ಸಂಶೋಧನಾ ಕ್ಷೇತ್ರವಾಗಿ ಮುಂದುವರೆಯುವ ಎಲ್ಲ ಲಕ್ಷಣಗಳನ್ನು ತೋರುತ್ತಿದೆ. ಕರ್ನಾಟಕ ಮಹಿಳಾ ವಿಶ್ವವಿದ್ಯಾನಿಲಯ, ವಿಜಾಪುರ ಇಲ್ಲಿ 2004ರಿಂದ ಎರಡು ವರ್ಷದ ಎಂ.ಎಲ್.ಐ.ಎಸ್ಸಿ ಪದವಿಯ ಶಿಕ್ಷಣವನ್ನು ಆರಂಭಿಸಿ, ಉತ್ತಮ ಅಧ್ಯಯನ ಕೇಂದ್ರವೆನಿಸಿಕೊಂಡಿದೆ. ಇತ್ತೀಚಿಗೆ 2010ರಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಿ, ವಿದ್ಯಾರ್ಥಿಗಳಿಗೆ ಎರಡು ವರ್ಷದ ಸ್ನಾತಕೋತ್ತರ ಪದವಿಯನ್ನು ಕೊಡಮಾಡಿದೆ. ಇನ್ನುಳಿದಂತೆ ಕೇಂದ್ರೀಯ ವಿಶ್ವವಿದ್ಯಾನಿಲಯ, ಗುಲ್ಬರ್ಗ, ದಾವಣಗೆರೆ ವಿವಿ ಹಾಗೂ ರಾಣಿಚೆನ್ನಮ್ಮ ವಿವಿ, ಬೆಳಗಾಂ ಮತ್ತು ಕೃಷ್ಣದೇವರಾಯ ವಿವಿ, ಬಳ್ಳಾರಿ ಇವುಗಳು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವ/ ತೆರೆಯುವ ನಿಟ್ಟಿನಲ್ಲಿ ಯೋಜಿಸುತ್ತಿದೆ.

1962ರ ಜನವರಿಯಲ್ಲಿ ಬೆಂಗಳೂರಿನ ಭಾರತೀಯ ಸಾಂಖ್ಯಿಕ ಸಂಸ್ಥೆಯ ಅಂಗಸಂಸ್ಥೆಯಾದ ಪ್ರಲೇಖನ ಸಂಶೋಧನಾ ಮತ್ತು ತರಬೇತಿ

Digitised by Bharatavani, CIIL

ಕೇಂದ್ರವು ಎಸ್.ಆರ್. ರಂಗನಾಥನ್‌ರವರ ಮಾರ್ಗದರ್ಶನದಲ್ಲಿ ಕಾರ್ಯಾರಂಭ ಮಾಡಿತು. ಈ ಕೇಂದ್ರದಲ್ಲಿ ಇಂದಿಗೂ ಅಸೋಸಿಯೇಟ್‌ಷಿಫ್ ಇನ್ ಲೈಬ್ರರಿ ಅಂಡ್ ಇನ್ಫರ್ಮೇಷನ್ ಸೈನ್ಸ್ ಎಂಬ ಶಿಕ್ಷಣವನ್ನು ನೀಡುತ್ತಿದ್ದು, ಸ್ನಾತಕೋತ್ತರ ಪದವಿಗೆ ತತ್ಸಮಾನವೆಂದು ಪರಿಗಣಿಸಲಾಗಿದೆ.

**ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಹಂತಗಳು:**

1. ಸರ್ಟಿಫಿಕೇಟ್ ಶಿಕ್ಷಣ (ಸಿ.ಲಿಬ್.ಎಸ್ಸಿ)
2. ಜೆ.ಓ.ಸಿ. ಶಿಕ್ಷಣ (ಜೆ.ಓ.ಸಿ. ಇನ್ ಲಿಬ್.ಎಸ್ಸಿ)
3. ಡಿಪ್ಲೋಮ ಶಿಕ್ಷಣ (ಡಿ ಎಲ್ ಎಸ್ಸಿ)
4. ಪದವಿ ಶಿಕ್ಷಣ (ಬಿ ಲಿಬ್ ಎಸ್ಸಿ/ ಬಿ ಎಲ್ ಐ ಎಸ್ಸಿ)
5. ಸ್ನಾತಕೋತ್ತರ ಶಿಕ್ಷಣ (ಎಂ ಲಿಬ್ ಎಸ್ಸಿ/ಎಂ ಎಲ್ ಐ ಎಸ್ಸಿ/ ಅಸೋಸಿಯೇಟ್‌ಷಿಪ್ ಇನ್ ಎಲ್ ಐ ಎಸ್ಸಿ)
6. ಸ್ನಾತಕೋತ್ತರಾನಂತರದ ಶಿಕ್ಷಣ – ಪಿ.ಜಿ.ಡಿ.ಎಲ್.ಎ.ಎನ್ – ಎಂ.ಫಿಲ್ – ಪಿಎಚ್.ಡಿ – ಡಿ.ಲಿಟ್

**ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಪಠ್ಯವಸ್ತುಗಳು:**

ಗ್ರಂಥಾಲಯ ವಿಜ್ಞಾನದ ಮೂಲಾಂಶಗಳನ್ನು ಮೈಗೂಡಿಸಿಕೊಂಡು ಆಧುನಿಕ ಮಾಹಿತಿ ವಿಜ್ಞಾನದ ಅಂಶಗಳನ್ನು ಅಳವಡಿಸಿಕೊಂಡಿರುವ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಕ್ಷೇತ್ರವು ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿದ್ದು ಮಾಹಿತಿಯ ಸಂಗ್ರಹಣೆ, ಪರಿಷ್ಕರಣೆ, ವಿಶ್ಲೇಷಣೆ ಹಾಗೂ ಮಾಹಿತಿ ಪ್ರದಾನ ಕಾರ್ಯವು ಸುಲಭ ಸಾಧ್ಯವಾಗುವಂತೆ ಮಾಡಿದೆ.

ಈ ಅಧ್ಯಯನ ಕ್ಷೇತ್ರದಲ್ಲಿ ಗಣಕಯಂತ್ರ ತಂತ್ರಾಂಶಗಳು, ಸಂಗ್ರಹಣಾ ವಿನ್ಯಾಸ, ದತ್ತಾಂಶಮೂಲ ನಿರ್ವಹಣೆ, ಮಾಹಿತಿ ಜಾಲ ಬಂಧಗಳು, ಗಣಕಯಂತ್ರ ಅನ್ವಯಿಕ ವ್ಯವಸ್ಥೆಯ ವಿನ್ಯಾಸ ಮತ್ತು ವಿಶ್ಲೇಷಣೆ, ಮಾಹಿತಿ ಅನ್ವೇಷಣಾ ವಿಧಾನಗಳು, ಅಂತರ್ಜಾಲ ತಂತ್ರಗಳು ಮತ್ತು ಗಣಕಯಂತ್ರಾಧಾರಿತ ಮಾಹಿತಿ ಹಿಂಪಡೆಯುವಿಕೆ.

ಇವೇ ಮೊದಲಾದ ನವೀನ ವಿಷಯಗಳನ್ನು ಪ್ರಮುಖವಾಗಿ ಬೋಧಿಸಲಾಗುತ್ತದೆ.

ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಗಳು ಇತರರೊಡನೆ ಸಮರ್ಥವಾಗಿ ಸ್ಪರ್ಧಿಸಬೇಕಾಗಿರುವುದರಿಂದ, ಶಿಕ್ಷಣಕ್ರಮ, ಪಠ್ಯವಸ್ತು ಹಾಗೂ ಬೋಧನಾ ವಿಧಾನದಲ್ಲಿಯೂ ಬದಲಾವಣೆಯನ್ನು ತರಲಾಗಿದೆ. ಇದರಿಂದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗಗಳೂ ತಮ್ಮನ್ನು ಆಧುನೀಕರಿಸಿಕೊಂಡು ಹೊಸ ಪಠ್ಯಕ್ರಮದ ಬೋಧನೆಗೆ ಒತ್ತು ನೀಡಿವೆ ಹಾಗೂ ತಮ್ಮ ಕಾರ್ಯದಲ್ಲಿ ಯಾಶಸ್ವಿಯಾಗಿವೆ. ಈ ಶಿಕಣ ಕೇವಲ ಗ್ರಂಥಾಲಯ ಜೋಡಣೆಯಷ್ಟೇ ಅಲ್ಲದೇ ಜ್ಞಾನಪ್ರಪಂಚದ ಅರಿವಿಗೆ ಸಹಾಯಕವಾಗಿರುವುದರಿಂದ ಶಿಕ್ಷಣಾರ್ಥಿಗಳು ಈ ಅಧ್ಯಯನ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವ ಮೂಲಕ ಹೊಸ ಆವಿಷ್ಕಾರಗಳನ್ನು ಮಾಡಿ ಅದನ್ನು ಗ್ರಂಥಾಲಯ ಕ್ಷೇತ್ರಕ್ಕೆ ಅಳವಡಿಸಿ, ತಮ್ಮ ವೃತ್ತಿಗೆ ಹಾಗೂ ವೃತ್ತಿ ಶಿಕ್ಷಣ ಕ್ಷೇತ್ರಕ್ಕೆ ಬಳಸಬಹುದು.

–ಎಂ.ಗೋ. ಮತ್ತು ಎಸ್.ಎನ್.ಕು.

## ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣ ವ್ಯವಸ್ಥೆ : ಪ್ರಸ್ತುತ ಸ್ಥಿತಿ

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರವು ಸಾಮಾಜಿಕ ವಿಜ್ಞಾನದ ಪ್ರಾಥಮಿಕ ತತ್ವಗಳನ್ನು ಒಳಗೊಂಡು ಅತ್ಯಾಧುನಿಕವಾದ ಮಾಹಿತಿ ತಂತ್ರಜ್ಞಾನದ ಲಕ್ಷಣಗಳನ್ನು ತನ್ನದಾಗಿಸಿಕೊಂಡು ಸ್ವತಂತ್ರ ವೃತ್ತಿ–ಶಿಕ್ಷಣ ಕ್ಷೇತ್ರವಾಗಿ ಹೊರಹೊಮ್ಮಿದೆ.

ಗ್ರಂಥಾಲಯಗಳಿಗೆ ಅವಶ್ಯಕವಾದ ವಿವಿಧ ರೀತಿಯ ಗ್ರಂಥಗಳ ಆಯ್ಕೆ, ಸಂಗ್ರಹಣೆ, ಪರಿಷ್ಕರಣೆ ಹಾಗೂ ವಿತರಣೆ; ಸಾಮಾನ್ಯ ಓದುಗರಿಗೆ ಅನುಕೂಲಕರವಾದ ರೂಪದಲ್ಲಿ ವಿವಿಧ ಬಗೆಯ ಸೂಚಿಗಳನ್ನು ತಯಾರಿಸಿ, ತನ್ಮೂಲಕ ಬಳಕೆದಾರರಿಗೆ ಗ್ರಂಥಾಲಯದ ಸಮಗ್ರ ಸಂಗ್ರಹಣೆಯ ಮಾಹಿತಿ ನೀಡಿಕೆ; ಓದುಗರ ಅಭಿರುಚಿಗೆ ಅನುಸಾರವಾಗಿ ಅಗತ್ಯವಾದ ಗ್ರಂಥವನ್ನು ಸೂಕ್ತ ಸಮಯದಲ್ಲಿ ದೊರಕಿಸುವುದು; ಗ್ರಂಥಾಲಯದ ಆಯವ್ಯಯ ತಯಾರಿಕೆ ಹಾಗೂ ಲಭ್ಯವಿರುವ ಆರ್ಥಿಕ ಸಂಪನ್ಮೂಲಗಳ ಸಮರ್ಪಕ ನಿರ್ವಹಣೆ; ಕಂಪ್ಯೂಟರ್ ಹಾಗೂ ಸಂಬಂಧಿಸಿದ ತಂತ್ರಾಂಶಗಳ ಸಹಾಯದಿಂದ ಗ್ರಂಥಾಲಯ ವ್ಯವಸ್ಥೆಯ ನವೀಕರಣ ಹಾಗೂ ಸಂರಕ್ಷಣೆ ಇವೇ ಮೊದಲಾದ ಗ್ರಂಥಾಲಯ ನಿರ್ವಹಣೆಗೆ ಸಂಬಂಧಿಸಿದ ವಿವಿಧ ವಿಷಯಗಳನ್ನೊಳಗೊಂಡ ಅಧ್ಯಯನ ವಿಷಯವೇ ಗ್ರಂಥಾಲಯ ವಿಜ್ಞಾನ. ಹಾಗೆಯೇ ಗ್ರಂಥಗಳು ಹಾಗೂ ಇನ್ನಾವುದೇ ಮೂಲಗಳಿಂದ ಅಗತ್ಯವಾದ ಮಾಹಿತಿಯ ಸಂಗ್ರಹಣೆ, ಸಂಸ್ಕರಣೆ ಮತ್ತು ವಿಶ್ಲೇಷಣೆಯನ್ನೊಳಗೊಂಡ ಶಾಸ್ತ್ರವನ್ನು ಮಾಹಿತಿವಿಜ್ಞಾನ ಎಂದು ಕರೆಯಬಹುದು. ಒಟ್ಟಾರೆ ಗ್ರಂಥಗಳು ಹಾಗೂ ಇನ್ನಿತರ ಯಾವುದೇ ಮಾಹಿತಿಯ ಮೂಲಗಳ ವಿಶ್ಲೇಷಣಾತ್ಮಕ ಪ್ರಕ್ರಿಯೆಯನ್ನು ಅಧ್ಯಯನ ಮಾಡುವ ಶಾಸ್ತ್ರವನ್ನು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಎಂದು ಪರಿಗಣಿಸಲಾಗಿದೆ. ಸರಳವಾಗಿ ಹೇಳಬಹುದಾದರೆ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿವಿಧ ಹಂತಗಳಲ್ಲಿ ಗ್ರಂಥಾಲಯದ ನಾನಾ ದಾಖಲೆಗಳನ್ನು ಸ್ಫುಟವಾಗಿ ಬರೆಯುವುದು, ಪುಸ್ತಕವನ್ನು ಮೌಲ್ಯಮಾಪನ ಮಾಡುವುದು, ಹೊಸ ಪುಸ್ತಕಗಳನ್ನು ದಾಖಲಿಸುವುದು. ಅವುಗಳಿಗೆ ಕ್ರಮಾಂಕ ಮತ್ತು ವರ್ಗೀಕರಣ ಸಂಖ್ಯೆಯನ್ನು ನೀಡುವುದು, ಗ್ರಂಥ ವಿವರಣೆ ಮತ್ತು ಗ್ರಂಥ ಸೂಚಿಯನ್ನು ತಯಾರಿಸುವುದು, ಇವನ್ನು ಕಂಪ್ಯೂಟರೀಕರಣಗೊಳಿಸುವುದು, ಗ್ರಂಥಗಳನ್ನು ಜೋಡಿಸಿ, ಸಮರ್ಪಕವಾಗಿ ವಿತರಿಸುವುದು ಮತ್ತು ನಿರ್ದಿಷ್ಟ ಸಮಯದಲ್ಲಿ ಹಿಂಪಡೆಯುವುದು ಇವೇ ಮೊದಲಾದ ಅಂಶಗಳನ್ನು ಈ ಅಧ್ಯಯನದ ಮೂಲಕ ಆಮೂಲಾಗ್ರವಾಗಿ ಅರಿಯಲಾಗುತ್ತದೆ.

15ನೆಯ ಶತಮಾನದ ಅನಂತರ ಮುದ್ರಣ ಯಂತ್ರದ ಆವಿರ್ಭಾವದಿಂದಾಗಿ ಪ್ರಪಂಚದ ನಾನಾ ಭಾಗಗಳಿಗೆ ಶಿಕ್ಷಣವು ಹರಡಿ, ಜನರು ಹೆಚ್ಚಾಗಿ ಓದುಬರಹವನ್ನು ಕಲಿಯಲು ತೊಡಗಿದಾಗ ಗ್ರಂಥಗಳ ರಚನೆಯಾಯಿತಲ್ಲದೇ, ಅವುಗಳನ್ನು ಶಾಸ್ತ್ರೀಯವಾಗಿ ವ್ಯವಸ್ಥೆಗೊಳಿಸುವ ಸಲುವಾಗಿ ಗ್ರಂಥಾಲಯ ಸಿಬ್ಬಂದಿಗೆ ಈ ಬಗ್ಗೆ ಶಿಕ್ಷಣ–ತರಬೇತಿ ಕೊಡಲು ಪ್ರಯತ್ನಗಳು ಪ್ರಾರಂಭವಾದುದರ ಫಲವಾಗಿ ಅವಶ್ಯಕತೆಗೆ ತಕ್ಕಂತೆ ವಿವಿಧ ಹಂತಗಳಲ್ಲಿ ಈ ವಿಷಯದ ಬೋಧನಾ ಕಾರ್ಯವು ಪ್ರಾರಂಭವಾಗಿ ಇಂದಿಗೂ ಅವಿರತವಾಗಿ ಸಾಗಿದೆ.

**ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನದ ವಿವಿಧ ಹಂತಗಳು:** ಇತರ ಎಲ್ಲ ಅಧ್ಯಯನ ಯೋಗ್ಯ ವಿಷಯಗಳಂತೆ ಇದನ್ನೂ ಸಹಾ ಶಿಕ್ಷಣದ ನಾನಾ ಸ್ತರಗಳಲ್ಲಿ ಅಧ್ಯಯನ ಮಾಡಬಹುದಾಗಿದೆ. ಅಲ್ಲದೇ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ವಿಧಾನಗಳ ಮೂಲಕವೂ ತರಬೇತಿಯನ್ನು ಪಡೆಯಬಹುದಾಗಿದೆ. ಈ ವಿಷಯವನ್ನು

Digitised by Bharatavani, CIIL

ಪ್ರಮುಖವಾಗಿ ಎಸ್.ಎಸ್.ಎಲ್.ಸಿ. ಶಿಕ್ಷಣ ನಂತರದಿಂದ ಸಂಶೋಧನಾ ಪದವಿಯವರೆಗೆ ಐದು ಹಂತಗಳಲ್ಲಿ ಅಭ್ಯಾಸ ಮಾಡಬಹುದಾಗಿದೆ. ಅವುಗಳೆಂದರೆ,

1. ಸರ್ಟಿಫಿಕೇಟ್ ಶಿಕ್ಷಣ (ಸಿ.ಎಲ್.ಐ.ಎಸ್ಸಿ.)
2. ವೃತ್ತಿ ಶಿಕ್ಷಣ (ಜೆ.ಓ.ಸಿ.)
3. ಡಿಪ್ಲೋಮ ಮತ್ತು ಪದವಿ ಶಿಕ್ಷಣ (ಡಿ.ಎಲ್.ಐ.ಎಸ್ಸಿ ಮತ್ತು ಬಿ.ಎಲ್.ಐ.ಎಸ್ಸಿ.)
4. ಸ್ನಾತಕೋತ್ತರ ಪದವಿ ಶಿಕ್ಷಣ (ಎಂ.ಎಲ್.ಐ.ಎಸ್ಸಿ.) ಮತ್ತು
5. ಸಂಶೋಧನಾ ಪದವಿ ಶಿಕ್ಷಣ (ಎಂ.ಫಿಲ್, ಮತ್ತು ಪಿಎಚ್.ಡಿ.)

ಈ ವಿವಿಧ ಹಂತಗಳಲ್ಲಿ ಮಾಡಬಹುದಾದ ಅಭ್ಯಾಸದ ಮೂಲ ಉದ್ದೇಶಗಳು, ಅರ್ಹತೆ ಹಾಗೂ ಕಲಿಯುವ ವಿಷಯಗಳು ಈ ರೀತಿಯಾಗಿರುತ್ತವೆ.

**1. ಸರ್ಟಿಫಿಕೇಟ್ ಶಿಕ್ಷಣ :–** ಈ ಹಂತದ ತರಗತಿ – ತರಬೇತಿಗಳನ್ನು ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ನಡೆಸುತ್ತದೆ. ಇಂತಹ ತರಗತಿಗಳಲ್ಲಿ ಸಾಮಾನ್ಯವಾಗಿ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿ ಆಯ್ಕೆಯಾಗಿದ್ದು, ಈಗಾಗಲೇ ಕಾರ್ಯನಿರತವಾಗಿರುವ ಪಂಚಾಯಿತಿ ಮಟ್ಟದ (ಗ್ರಾಮೀಣ) ಗ್ರಂಥಾಲಯಗಳ ಮೇಲ್ವಿಚಾರಕರನ್ನು ತರಬೇತುಗೊಳಿಸಲಾಗುತ್ತದೆ. ಇದರ ಅವಧಿ ಸುಮಾರು 6 ವಾರದಿಂದ 12 ವಾರಗಳಾಗಿದ್ದು, ಈ ತರಬೇತಿಯ ಅವಧಿಯಲ್ಲಿ ಗ್ರಂಥಾಲಯದ ದೈನಂದಿನ ಕಾರ್ಯಗಳಾದ ವರ್ಗೀಕರಣ ಪದ್ಧತಿ, ಗ್ರಂಥವಿವರಣಾ ವಿಧಾನಗಳು ಮತ್ತು ಸೂಚೀಕರಣ ಪ್ರಕ್ರಿಯೆಗಳನ್ನು ಸ್ಥೂಲವಾಗಿ ಪರಿಚಯಿಸಲಾಗುತ್ತದೆ. ಹೀಗೆ ತರಬೇತಿ ಹೊಂದಿದ ಗ್ರಂಥಾಲಯ ಮೇಲ್ವಿಚಾರಕರು ಗ್ರಂಥಾಲಯದ ದೈನಂದಿನ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಸಹಾಯವಾಗುತ್ತದೆ.

**2. ವೃತ್ತಿ ಶಿಕ್ಷಣ (ಜೆ.ಓ.ಸಿ) :–** ಎಸ್.ಎಸ್.ಎಲ್.ಸಿ.ಯ ನಂತರ ಪಿ.ಯು.ಸಿ.ಗೆ ತತ್ಸಮಾನವಾದ ವೃತ್ತಿ ಶಿಕ್ಷಣ ತರಬೇತಿಯು ಎರಡು ವರ್ಷಗಳ ಅವಧಿಯದ್ದಾಗಿರುತ್ತದೆ. ಈ ತರಬೇತಿಯ ಮೂಲಕ ವಿದ್ಯಾರ್ಥಿಗಳಿಗೆ ಗ್ರಂಥಾಲಯ ವಿಜ್ಞಾನದ ಬಗ್ಗೆ ಸ್ಥೂಲವಾದ ತಿಳುವಳಿಕೆಯನ್ನು ನೀಡುವುದು; ಗ್ರಂಥಾಲಯದ ದೈನಂದಿನ ಕಾರ್ಯಗಳ ಬಗ್ಗೆ ತರಬೇತುಗೊಳಿಸುವುದು, ವಿವಿಧ ರೀತಿಯ/ಪ್ರಕಾರದ ಗ್ರಂಥಾಲಯಗಳನ್ನು ಸಂದರ್ಶಿಸಿ ಅವುಗಳ ಕಾರ್ಯವೈಖರಿಯನ್ನು ಗಮನಿಸಿ ಸವಿಸ್ತಾರವಾದ ವರದಿಯನ್ನು ತಯಾರಿಸುವುದು, ವಿವಿಧ ರೀತಿಯ ಗ್ರಂಥಾಲಯಗಳಲ್ಲಿ ಸೇವಾವಕಾಶವನ್ನು ಕಲ್ಪಿಸಿಕೊಡುವ ಮೂಲಕ ಅವರ ಕಾರ್ಯಾನುಭವವನ್ನು ಹೆಚ್ಚಿಸುವುದು– ಇದರ ಮೂಲ ಉದ್ದೇಶಗಳಾಗಿವೆ. ತರಬೇತಿಯ ಅವಧಿಯಲ್ಲಿ ವರ್ಗೀಕರಣಶಾಸ್ತ್ರ (ತತ್ವ ಮತ್ತು ಆಚರಣೆ), ಸೂಚೀಕರಣ (ತತ್ವ ಮತ್ತು ಆಚರಣೆ) ಗ್ರಂಥಾಲಯಗಳ ಆಡಳಿತ ಮತ್ತು ಮೇಲ್ವಿಚಾರಣೆ ಹಾಗೂ ಗ್ರಂಥಸೂಚಿ ಮತ್ತು ಪರಾಮರ್ಶನ ಸೇವೆ–ಇವೇ ಮೊದಲಾದ ವಿಷಯಗಳನ್ನು ಪಠ್ಯಕ್ರಮವಾಗಿ ಬೋಧಿಸಲಾಗುತ್ತದೆ. ಇದರಿಂದ ಯಾವುದೇ ಗ್ರಂಥಾಲಯವನ್ನು ನಿರ್ದಿಷ್ಟ ರೀತಿಯಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡಲು ಅರ್ಹತೆ ದೊರಕುತ್ತದೆ.

**3. ಡಿಪ್ಲೋಮಾ (ಡಿ.ಎಲ್.ಐ.ಎಸ್ಸಿ) ಮತ್ತು ಪದವಿ (ಬಿ.ಎಲ್.ಐ.ಎಸ್ಸಿ) ಶಿಕ್ಷಣ:–** ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಇವೆರಡೂ ಹಂತಗಳು ಮೂರು ವರ್ಷಗಳ ಅವಧಿಯದ್ದಾಗಿವೆ. ಡಿಪ್ಲೋಮಾ ಶಿಕ್ಷಣವನ್ನು ಪಿಯುಸಿ ನಂತರ ಕೆಲವು ಆಯ್ದ ಪಾಲಿಟೆಕ್ನಿಕ್‌ಗಳಲ್ಲಿ ಅಭ್ಯಸಿಸಬಹುದಾಗಿದೆ. ಪದವಿ ಶಿಕ್ಷಣವನ್ನು ಪಿಯುಸಿಯ ನಂತರ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಬಹುದಾಗಿದೆ. ಈ ಪದವಿಯನ್ನು ಸ್ನಾತಕ ಮಟ್ಟದಲ್ಲಿ ಎರಡು ಐಚ್ಛಿಕ ವಿಷಯಗಳೊಡನೆ ಮೂರನೆಯ ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಅಲ್ಲದೇ, ಈ ಪದವಿಯನ್ನು ಯಾವುದೇ ಸ್ನಾತಕ ಪದವಿಯ ನಂತರ ಒಂದು ವರ್ಷ ಅವಧಿಯ ಶಿಕ್ಷಣವಾಗಿಯೂ ಅಭ್ಯಾಸಮಾಡಬಹುದಾಗಿದೆ. ಈ ಶಿಕ್ಷಣ ಹಂತಗಳಲ್ಲಿ ಗ್ರಂಥಾಲಯ ವಿಜ್ಞಾನದ ಬೆಳವಣಿಗೆ ಹಾಗೂ ಮೂಲಭೂತ ತತ್ವಗಳ ಸಮಗ್ರ ತಿಳುವಳಿಕೆ ಬದಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿಯಲ್ಲಿ ಗ್ರಂಥಾಲಯಗಳ ಪಾತ್ರ, ಕಾರ್ಯವ್ಯಾಪ್ತಿ ಹಾಗೂ ಉದ್ದೇಶಗಳ ಅರಿವು ಗ್ರಂಥಾಲಯಗಳ ಆಡಳಿತ ವ್ಯವಸ್ಥೆ ಮತ್ತು ಓದುಗರಿಗೆ ಒದಗಿಸಬಹುದಾದ ವಿಶೇಷ ಸೌಲಭ್ಯಗಳ ಪರಿಜ್ಞಾನ. ಇವು ಮುಖ್ಯ ಉದ್ದೇಶಗಳಾಗಿವೆ. ಎಲ್ಲ ವಿಶ್ವವಿದ್ಯಾನಿಲಯಗಳು ಆಯಾ ಪ್ರಾದೇಶಿಕ ಅಗತ್ಯತೆಗಳನ್ನು ಹಾಗೂ ಅನುಕೂಲತೆಗಳನ್ನು ಗಮನದಲ್ಲಿರಿಸಿಕೊಂಡು ಕೆಲವೊಂದು ಮಾರ್ಪಾಡುಗಳೊಡನೆ ಗ್ರಂಥಾಲಯ ಸಂಘಟನೆ, ಆಡಳಿತ ವ್ಯವಸ್ಥೆ, ಗ್ರಂಥಗಳ ಆಯ್ಕೆ ಪ್ರಕ್ರಿಯೆ, ಪ್ರಲೇಖನ ಮತ್ತು ಪರಾಮರ್ಶನ ಸೇವೆ, ಮಾಹಿತಿಯ ಮೂಲಗಳು, ಗ್ರಂಥ ವರ್ಗೀಕರಣ, ಗ್ರಂಥ ವಿವರಣೆ ಹಾಗೂ ಗ್ರಂಥ ಸೂಚಿಯ ತಯಾರಿಕೆ, ಮಾಹಿತಿ ಕೇಂದ್ರಗಳಲ್ಲಿ ಕಂಪ್ಯೂಟರ್‌ಗಳ ಬಳಕೆ ಮತ್ತು ಅಂತರ್ಜಾಲ ವಿಸ್ತರಣೆ–ಇದೇ ಮೊದಲಾದ ಪೂರಕ ಅಂಶಗಳನ್ನು ಬೋಧನಾ ವಿಷಯಗಳನ್ನಾಗಿ ನಿಗದಿಪಡಿಸಿಕೊಂಡಿರುತ್ತವೆ.

**4. ಸ್ನಾತಕೋತ್ತರ ಪದವಿ (ಎಂ.ಎಲ್.ಐ.ಎಸ್ಸಿ):–** ಇದು ಕಲೆ, ವಾಣಿಜ್ಯ ಅಥವಾ ವಿಜ್ಞಾನ ವಿಷಯವನ್ನು ಅಥವಾ ತತ್ಸಮಾನವಾದ ಯಾವುದೇ ಸ್ನಾತಕ ಪದವಿಯನ್ನು ಇಲ್ಲವೇ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನವನ್ನು ಪದವಿಯ ಮಟ್ಟದಲ್ಲಿ ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರುವ ಅಥವಾ ಒಂದು ವರ್ಷದ ಬಿ.ಎಲ್.ಐ.ಎಸ್ಸಿ. ಪದವಿಯನ್ನು ಹೊಂದಿರುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಅಭ್ಯಾಸ ಮಾಡಬಹುದಾದ ಎರಡು ವರ್ಷದ ಅವಧಿಯ ವೃತ್ತಿ ಶಿಕ್ಷಣ ಸ್ನಾತಕೋತ್ತರ ಪದವಿಯಾಗಿದೆ. ಈ ಹಂತದಲ್ಲಿ ಜ್ಞಾನ ಪ್ರಪಂಚ, ಅದರ ವ್ಯವಸ್ಥೆ ಮತ್ತು ಬೆಳವಣಿಗೆ, ಸಂಶೋಧನೆಗಳನ್ನು ಸಂಘಟಿಸುವ ಬಗ್ಗೆ ಹಾಗೂ ವಿಧಾನಗಳು, ಮಾಹಿತಿ ಮೂಲಗಳು ಹಾಗೂ ಅವುಗಳ ವಿವಿಧ ಬಗೆಗಳು ವಿವಿಧ ಬಗೆಯ ಗ್ರಂಥಾಲಯಗಳು ಮತ್ತು ಅವುಗಳ ಕಾರ್ಯವೈಖರಿ, ಗ್ರಂಥಾಲಯಗಳ ಮೇಲ್ವಿಚಾರಣೆಯಲ್ಲಿ ಬಳಕೆ, ಗ್ರಂಥಾಲಯಗಳ ಕಟ್ಟಡ ವಿನ್ಯಾಸ, ಆಡಳಿತ ವ್ಯವಸ್ಥೆ ಹಾಗೂ ಕಾರ್ಯನಿರ್ವಹಣಾ ಕ್ರಮಗಳ ಬಗ್ಗೆ ಅರಿವನ್ನುಂಟುಮಾಡುವುದೇ ಆಗಿದೆ. ಅಲ್ಲದೇ ಮಾಹಿತಿ, ಸಂಪರ್ಕ, ಸಮಾಜ ಮಾಹಿತಿ ಸಂಗ್ರಹಣೆ ಮತ್ತು ಹಿಂಪಡೆಯುವ ವಿಧಾನ, ಕಂಪ್ಯೂಟರ್ ತತ್ವಗಳು ಹಾಗೂ ಆಚರಣೆ ಸಂಶೋಧನಾ ವಿಧಾನಗಳು ಮತ್ತು ಪೂರಕವಾದ ಐಚ್ಛಿಕ ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ. ಹಾಗೆಯೇ ಎರಡು ವರ್ಷದ ಅವಧಿಯಲ್ಲಿ ಹಲವಾರು ಚರ್ಚಾಗೋಷ್ಠಿಗಳು, ವಿಚಾರಗೋಷ್ಠಿಗಳು, ಲೇಖನ ಬರಹಗಳು ಹಾಗೂ ಲಘು–ಸಂಶೋಧನಾ ಪ್ರಬಂಧಗಳನ್ನು ರಚಿಸುವ ಕೌಶಲದಲ್ಲಿಯೂ ಪರಿಣತಿ ಹೊಂದಬಹುದಾಗಿದೆ.

**5. ಅಸೋಸಿಯೇಟ್‌ಷಿಪ್ ಇನ್ ಲೈಬ್ರರಿ ಅಂಡ್ ಇನ್‌ಫರ್ಮೇಶನ್ ಸೈನ್ಸ್ :–** ಬೆಂಗಳೂರಿನ ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರವು (ಡಿ.ಆರ್.ಟಿ.ಸಿ) ಎರಡು ವರ್ಷ ಅವಧಿಯ ಅಸೋಸಿಯೇಟ್‌ಷಿಪ್ ತರಬೇತಿಯನ್ನು ನೀಡುತ್ತಿದ್ದು, ಈ ತರಬೇತಿಯನ್ನು

Digitised by Bharatavani, CIIL

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಪದವಿ ಅಥವಾ ಯಾವುದೇ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಗ್ರಂಥಾಲಯ ಕ್ಷೇತ್ರದಲ್ಲಿ ಕಾರ್ಯಾನುಭವ ಉಳ್ಳ ಅಭ್ಯರ್ಥಿಗಳು ಪಡೆಯಬಹುದಾಗಿದೆ.

6. **ಸಂಶೋಧನಾ ಪದವಿ (ಎಂ.ಫಿಲ್. ಮತ್ತು ಪಿಎಚ್.ಡಿ.):–** ಸ್ನಾತಕೋತ್ತರ ಪದವಿಯ ನಂತರ ಒಂದು ವರ್ಷದ ಅವಧಿಯಲ್ಲಿ ಕೈಗೊಳ್ಳಬಹುದಾದ ಶಿಕ್ಷಣ ಎಂ.ಫಿಲ್. ಪದವಿ. ಒಂದು ನಿರ್ದಿಷ್ಟ ವಿಷಯ ಕ್ಷೇತ್ರದ ಅಧ್ಯಯನವನ್ನು ಆಳವಾಗಿ ಹಾಗೂ ವಿಸ್ತಾರವಾಗಿ ಪರಿಚಯಿಸುವುದೇ ಇದರ ಮೂಲ ಉದ್ದೇಶ. ಕೆಲವು ಆಯ್ದ ಪೂರಕ ಪತ್ರಿಕೆಗಳೊಡನೆ ಸಂಶೋಧಿಸಿದ ಲಘು ಪ್ರಬಂಧವನ್ನು ಸಲ್ಲಿಸುವ ಮೂಲಕ ಈ ಪದವಿಯನ್ನು ಪಡೆಯಬಹುದಾಗಿದೆ. ಪಿಎಚ್.ಡಿ. ಪದವಿಯು ಸ್ನಾತಕೋತ್ತರ ಪದವಿಯನ್ನು ಪಡೆದ ನಂತರ ಮೂರರಿಂದ ಐದು ವರ್ಷಗಳ ಅವಧಿಯ ಪದವಿಯ ಹಂತವಾಗಿದೆ. ಸ್ನಾತಕೋತ್ತರ ಪದವಿಯನ್ನು ಪಡೆದ ನಂತರ ಮೂರರಿಂದ ಐದು ವರ್ಷಗಳ ಅವಧಿಯ ಪದವಿಯ ಹಂತವಾಗಿದೆ. ಸ್ನಾತಕೋತ್ತರ ಪದವಿಯನ್ನು ಪಡೆದ ಯಾವುದೇ ಅಭ್ಯರ್ಥಿಯು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗವು ನಡೆಸುವ ರಾಷ್ಟ್ರಮಟ್ಟದ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಆ ಸಂಸ್ಥೆ ನೀಡುವ ಫೆಲೋಷಿಪ್ (ಶಿಷ್ಯವೇತನ)ಅನ್ನು ಬಳಸಿಕೊಂಡು ಸಂಶೋಧನೆಯನ್ನು ನಡೆಸಬಹುದಾಗಿದೆ. ಅಲ್ಲದೇ ಆಯಾ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ದೊರಕುವ ಸಾಮಾನ್ಯ ಅಥವಾ ಸ್ವತಂತ್ರವಾಗಿ ಧನಸಹಾಯ ಇಲ್ಲವೇ ಪರಿಶಿಷ್ಟ ಜಾತಿ ಅಥವಾ ಪಂಗಡದ ವಿಶೇಷ ಘಟಕದಿಂದ ನೀಡಲ್ಪಡುವ ಫೆಲೋಷಿಪ್ ಅನ್ನು ಪಡೆದು ಸಂಶೋಧನೆಯನ್ನು ಕೈಗೊಳ್ಳಬಹುದು. ಬಾಹ್ಯ ಅಭ್ಯರ್ಥಿಯಾಗಿ ಹಾಗೂ ಸಿಬ್ಬಂದಿ ಉತ್ತಮೀಕರಣ ಯೋಜನೆಯಡಿಯಲ್ಲಿಯೂ ಸಂಶೋಧನೆ ಕೈಗೊಂಡು ಈ ಪದವಿಯನ್ನು ಪಡೆಯಬಹುದಾಗಿದೆ. ಈ ಹಂತದಲ್ಲಿ ಯಾವುದೇ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು, ಮಾನ್ಯತೆ ಪಡೆದ ಮಾರ್ಗದರ್ಶಕರ ಮಾರ್ಗದರ್ಶನದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ದತ್ತಾಂಶವನ್ನು ಆಮೂಲಾಗ್ರವಾಗಿ ಸಂಗ್ರಹಿಸಿ, ವಿಶ್ಲೇಷಿಸಿ, ಮಹಾಪ್ರಬಂಧವನ್ನು ಮಂಡಿಸಿದ ನಂತರ ಸಂಶೋಧಕರ ಎರಡು ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಲೇಖನಗಳು, ಪ್ರಬಂಧ ಮಂಡನೆ, ಬಾಹ್ಯ ಪರೀಕ್ಷಕರ ವರದಿ ಹಾಗೂ ಮೌಖಿಕ ಪರೀಕ್ಷೆಯ ಆಧಾರದ ಮೇಲೆ ಪಿಎಚ್.ಡಿ ಪದವಿಯನ್ನು ನೀಡಲಾಗುತ್ತದೆ.

**ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯವನ್ನು ಅಭ್ಯಾಸ ಮಾಡಬಹುದಾದ ಸಂಸ್ಥೆಗಳು**

- ಸಾರ್ವಜನಿಕ ಗ್ರಂಥಾಲಯ ಇಲಾಖೆಯ ತರಬೇತಿ ಸಂಸ್ಥೆ, ಬೆಂಗಳೂರು
- ಕರ್ನಾಟಕ ಪದವಿ-ಪೂರ್ವ ಇಲಾಖೆಯ ವೃತ್ತಿ ಶಿಕ್ಷಣ ಘಟಕ
- ಕರ್ನಾಟಕ ತಾಂತ್ರಿಕ ಶಿಕ್ಷಣ ಸಂಸ್ಥೆಯ ಪಾಲಿಟೆಕ್ನಿಕ್‌ಗಳು
- ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
- ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು
- ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು
- ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ
- ಗುಲ್ಬರ್ಗ ವಿಶ್ವವಿದ್ಯಾನಿಲಯ, ಕಲಬುರ್ಗಿ
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು
- ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಸಂಘ, ಬೆಂಗಳೂರು
- ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
- ಕುವೆಂಪು ವಿಶ್ವವಿದ್ಯಾನಿಲಯ, ಬಿ.ಆರ್. ಪ್ರಾಜೆಕ್ಟ್
- ವಿಜಾಪುರ ಮಹಿಳಾ ವಿಶ್ವವಿದ್ಯಾನಿಲಯ, ವಿಜಾಪುರ

**ಉದ್ಯೋಗಾವಕಾಶಗಳು :** ಈ ಅಧ್ಯಯನ ಕ್ಷೇತ್ರದ ಯಾವುದೇ ಹಂತದಲ್ಲಿ ಶಿಕ್ಷಣವನ್ನು ಪಡೆದ ಅಭ್ಯರ್ಥಿಗಳು ಆಯಾ ಸ್ಥಾನಕ್ಕೆ ನಿಗದಿ ಪಡಿಸಿದ ವಿದ್ಯಾರ್ಹತೆಯನ್ನು ಅವಲಂಬಿಸಿ ಈ ಕೆಳಕಂಡ ಉದ್ಯೋಗಗಳನ್ನು ಪಡೆಯಬಹುದಾಗಿದೆ.

- ಗ್ರಂಥಾಲಯ ಮೇಲ್ವಿಚಾರಕರು
- ಗ್ರಂಥಾಲಯ ಅಧಿಕಾರಿಗಳು
- ಮಾಹಿತಿ ಅಧಿಕಾರಿಗಳು
- ಉಪನ್ಯಾಸಕರು

**ವೃತ್ತಿನಿರತರಾಗಬಹುದಾದ ಸ್ಥಳಗಳು :** ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಿಪ್ಲೋಮೊ/ಪದವಿಗಳನ್ನು ಪಡೆದವರು ಕೆಳಕಂಡ ಸ್ಥಾನಗಳಲ್ಲಿ ಸೇವೆ ಸಲ್ಲಿಸಬಹುದು.

- ಸಾರ್ವಜನಿಕ ಗ್ರಂಥಾಲಯಗಳು
- ಶಾಲಾ-ಕಾಲೇಜುಗಳನ್ನೊಳಗೊಂಡು ವಿವಿಧ ಶಿಕ್ಷಣ ಸಂಸ್ಥೆಗಳು
- ಕೃಷಿ, ತಾಂತ್ರಿಕ, ವೈದ್ಯಕೀಯ ಸಂಸ್ಥೆಗಳನ್ನೊಳಗೊಂಡ ವಿಶ್ವವಿದ್ಯಾನಿಲಯಗಳು
- ಬ್ಯಾಂಕುಗಳು, ಕಾರ್ಖಾನೆಗಳು ಮತ್ತು ಬಹುರಾಷ್ಟ್ರೀಯ ಖಾಸಗೀ ಸಂಸ್ಥೆಗಳು
- ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು
- ಲೋಕಸಭೆ, ವಿಧಾನಸಭೆಗಳ ಶಾಸನ ಸಭಾ ಗ್ರಂಥಾಲಯಗಳು
- ದೂರದರ್ಶನ ಕೇಂದ್ರದ ವಿವಿಧ ಟಿ.ವಿ. ಚಾನಲ್‌ಗಳು
- ಪತ್ರಿಕಾ ಸಂಸ್ಥೆಗಳು

ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ವಲಯಗಳೆರಡರಲ್ಲಿಯೂ ಶಿಕ್ಷಣವನ್ನು ಪಡೆಯಬಹುದಾದ ಈ ಅಧ್ಯಯನ ಕ್ಷೇತ್ರದಲ್ಲಿ ಅನೇಕ ಬಗೆಯ ಸಂಶೋಧನೆಗಳು ನಡೆದು, ಇಂದು ಯಾವುದೇ ತಾಂತ್ರಿಕ ಕ್ಷೇತ್ರಕ್ಕೂ ಸರಿಸಮವಾಗಿ ನಿಂತಿದೆ. ಜಗತ್ತಿನ ಯಾವುದೇ ನೂತನ ಬಗೆಯ ಆವಿಷ್ಕಾರವನ್ನು ತನ್ನದಾಗಿಸಿಕೊಂಡು, ಅವುಗಳ ಸಮರ್ಪಕ ಬಳಕೆಯಿಂದ ಉತ್ತಮ ರೀತಿಯ ಸೇವೆಯನ್ನು ಒದಗಿಸುವಷ್ಟರಮಟ್ಟಿಗೆ ಈ ಕ್ಷೇತ್ರವು ಪರಿಣಾಮಕಾರಿಯಾಗಿ ಬೆಳೆದಿದೆ. ಅಲ್ಲದೆ, ಕಾರ್ಯನಿರತ ಗ್ರಂಥಾಲಯ ವ್ಯವಸ್ಥಾಪಕರಿಗೆ ವಿವಿಧ ಸಂಸ್ಥೆಗಳು (ಸರ್ಕಾರಿ/ಸರ್ಕಾರೇತರ) ಆಗ್ಗಾಗ್ಗೆ ನೀಡುವ ಪುನಶ್ಚೇತನ ತರಬೇತಿಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಹಾಗೂ ಕಂಪ್ಯೂಟರ್ ಆಧಾರಿತ ತಂತ್ರಾಂಶ ತರಬೇತಿಗಳು ಅತ್ಯಂತ ಉಪಯುಕ್ತವಾಗಿದ್ದು, ತಾವು ಕಾರ್ಯ ನಿರ್ವಹಿಸುವ ಗ್ರಂಥಾಲಯಗಳನ್ನು ಸಮರ್ಪಕವಾಗಿ ವ್ಯವಸ್ಥೆಗೊಳಿಸಲು ಸಹಕಾರಿಯಾಗಿವೆ. ಹಾಗೆಯೇ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ

Digitised by Bharatavani, CIIL

ವಿಷಯದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ದೊರೆಯುತ್ತಿರುವ ಓಪನ್ ಸೋರ್ಸ್ ಸಾಫ್ಟ್‌ವೇರ್‌ಗಳು ಹಾಗೂ ವೆಬ್ ಪೋರ್ಟಲ್ ಟೆಕ್ನಾಲಜಿಯ ಮೂಲಕ ಗ್ರಂಥಾಲಯ ಕಂಪ್ಯೂಟರೀಕರಣ ವ್ಯವಸ್ಥೆಯನ್ನು ಅಧ್ಯಯನ ಮಾಡಿ ತಾವು ತಮ್ಮ ಶಿಕ್ಷಣದ ನಂತರ ಕಾರ್ಯ ನಿರ್ವಹಿಸುವ ಮಾಹಿತಿ ಕೇಂದ್ರಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಿ ಉತ್ತಮ ಸೇವೆಯನ್ನು ನೀಡಲು ಶಕ್ತರಾಗುತ್ತಾರೆ.

–ಎಂ.ಗೋ.

–ಎಸ್.ಎನ್.ಕು.

## ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ವ್ಯವಸ್ಥೆ

ಕರ್ನಾಟಕ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣವನ್ನು ಪ್ರಮುಖವಾಗಿ 5 ಮಟ್ಟಗಳಲ್ಲಿ ನೀಡಲಾಗುತ್ತಿದೆ. ಅವು ಯಾವುವೆಂದರೆ – ಔದ್ಯೋಗಿಕ ತರಬೇತಿಯನ್ನು ನೀಡುವ ಸರ್ಟಿಫಿಕೇಟ್ (ITI), ಡಿಪ್ಲೋಮಾ, ಸ್ನಾತಕಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನೆ. ಈ ಪ್ರಮುಖ ಮಟ್ಟಗಳಲ್ಲದೆ ಸ್ನಾತಕೋತ್ತರ ಡಿಪ್ಲೋಮಾ ಹಾಗೂ ಡಾಕ್ಟರೇಟ್ ಪದವಿಯ ನಂತರದ ಉಚ್ಚ ಸಂಶೋಧನೆಗಳಿಗೂ ಅವಕಾಶವಿದೆ. ವೃತ್ತಿ ನಿರತರಾಗಿರುವವರು, ನಿಯಮಿತವಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣವನ್ನು (ಪದವಿಯನ್ನು) ಹೊಂದಲು ಸಾಧ್ಯವಿಲ್ಲದವರು ಎ.ಎಂ.ಐ.ಇ. ಎಂಬ ಸದಸ್ಯತ್ವವನ್ನು ಪಡೆಯಬಹುದು. ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ ಸಂಸ್ಥೆ ಅಖಿಲ ಭಾರತ ಮಟ್ಟದಲ್ಲಿ ನಡೆಸುವ ಎ.ಎಂ.ಐ.ಇ. ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸಂಸ್ಥೆಯ ಸದಸ್ಯತ್ವವನ್ನು, ಹಾಗೂ ವೃತ್ತಿಯೋಗ್ಯತಾ ಪತ್ರವನ್ನು ನೀಡಲಾಗುತ್ತದೆ. ಇದನ್ನು ತಂತ್ರಜ್ಞಾನದಲ್ಲಿ ಸ್ನಾತಕಪದವಿಗೆ ಸಮನೆಂದು ಪರಿಗಣಿಸಲಾಗಿದೆ. ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲೂ ಇದಕ್ಕೆ ಮಾನ್ಯತೆ ಇದೆ. ಈ ಕೋರ್ಸಲ್ಲಿ ಉತ್ತೀರ್ಣರಾಗುವುದು ಸ್ವಲ್ಪ ಕಠಿಣವೇ ಎಂದರೆ ತಪ್ಪಲ್ಲ. ವಿದ್ಯಾರ್ಥಿಗಳು ಖಾಸಗಿಯಾಗಿ ಅಧ್ಯಯನವನ್ನು ಕೈಗೊಂಡು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗ ಬೇಕಾಗುತ್ತದೆ.

ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ ಉತ್ತೀರ್ಣರಾದವರು ಐ.ಟಿ.ಐ. (I.T.I.) ಸರ್ಟಿಫಿಕೇಟ್ ಕೋರ್ಸಿಗೆ ಅರ್ಹರಾಗುತ್ತಾರೆ. ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ (ITI) ಎಂಬ ಈ ಸಂಸ್ಥೆಗಳು ವಿವಿಧ ಕೈಗಾರಿಕೆಗಳಿಗೆ ಅಗತ್ಯವಾದ ಕಾರ್ಮಿಕ ಸಿಬ್ಬಂದಿಯನ್ನು ಒದಗಿಸುವ ಉದ್ದೇಶವನ್ನು ಹೊಂದಿವೆ. ಆಪರೇಟರ್‌ಗಳು, ಕುಶಲಕರ್ಮಿಗಳು ಕೈಗೊಳ್ಳಬೇಕಾದ ಕೆಲಸಗಳಿಗೆ ಅಗತ್ಯವಿರುವ ಕುಶಲತೆಯನ್ನು ಈ ಸಂಸ್ಥೆಗಳು ಕಲಿಸಿಕೊಡುತ್ತವೆ. ಪ್ರಾಯೋಗಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಒತ್ತನ್ನು ನೀಡುವುದು ಈ ಶಿಕ್ಷಣದ ವಿಶೇಷ ಲಕ್ಷಣ. ಈ ಕೋರ್ಸಿನ ಅವಧಿ ಆಯ್ಕೆ ಮಾಡಿಕೊಂಡ ವಿಷಯಕ್ಕೆ (ಫಿಟ್ಟರ್, ಟರ್ನರ್, ವೆಲ್ಡರ್ ಇತ್ಯಾದಿ) ಅನುಸಾರವಾಗಿ ಒಂದರಿಂದ ಮೂರು ವರ್ಷಗಳವರೆಗೆ ವಿಸ್ತೃತಗೊಳ್ಳುತ್ತದೆ.

ಡಿಪ್ಲೋಮಾ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ ಉತ್ತೀರ್ಣರಾಗಿರಬೇಕು. ಈ ಶಿಕ್ಷಣ ಮೂರು ವರ್ಷ ಅವಧಿಯುಳ್ಳದ್ದು. ಸಿವಿಲ್, ಮೆಕ್ಯಾನಿಕಲ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ ಮುಂತಾದ ವಿಷಯಗಳಲ್ಲಿ ಡಿಪ್ಲೋಮಾವನ್ನು ಪಡೆಯಬಹುದು. ಈ ಮಟ್ಟದಲ್ಲಿ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ ಅದಕ್ಕೆ ಅಗತ್ಯವಾದ ತಾಂತ್ರಿಕ ಪರಿಕಲ್ಪನೆಗಳನ್ನು ಬೋಧಿಸಲಾಗುತ್ತದೆ. ವಿದ್ಯಾರ್ಥಿಗಳು ಒಂದು ಪ್ರಾಯೋಜನೆಯನ್ನು ಸಹ ಸಿದ್ಧಗೊಳಿಸಬೇಕಾಗುತ್ತದೆ.

ತಾಂತ್ರಿಕ ಪದವಿ ಶಿಕ್ಷಣ ನಾಲ್ಕು ಅಥವಾ ಐದು ವರ್ಷಗಳ ಅವಧಿಯುಳ್ಳದ್ದು. ಬಹುತೇಕ ಸಂಸ್ಥೆಗಳಲ್ಲಿ ನಾಲ್ಕು ವರ್ಷದ ಪದವಿ ಶಿಕ್ಷಣ ಪ್ರಚಲಿತವಾಗಿದೆ. ಆದರೆ, ಕೆಲವು ಸಂಸ್ಥೆಗಳು ಐದು ವರ್ಷದ ಇಂಟಿಗ್ರೇಟೆಡ್ ಕೋರ್ಸನ್ನು ಬೋಧಿಸುತ್ತವೆ. ಬಿ.ಇ., ಬಿ.ಟೆಕ್. ಎಂಬ ಎರಡು ಸ್ನಾತಕ ಪದವಿಗಳು ಪ್ರಚಲಿತದಲ್ಲಿದ್ದು ಇವೆರಡರ ನಡುವೆ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಇವೆರಡೂ ತಂತ್ರಜ್ಞಾನದಲ್ಲಿ ಸ್ನಾತಕಪದವಿಯನ್ನೇ ಸೂಚಿಸುತ್ತವೆ. ನಿರ್ದಿಷ್ಟ ತಂತ್ರಜ್ಞಾನ ಶಾಖೆಯಲ್ಲಿ ಪದವಿಯನ್ನು ಪಡೆಯಲು ಆಯಾ ನಿರ್ದಿಷ್ಟ ಶಾಖೆಗಳ ವಿವಿಧ ವಿಷಯಗಳಲ್ಲಿ (Subjects) ಉತ್ತೀರ್ಣರಾಗಬೇಕಲ್ಲದೆ ಅಂತಿಮ ವರ್ಷದಲ್ಲಿ ಪ್ರಾಯೋಜನೆ (Project) ಯೊಂದನ್ನು ಸಿದ್ಧಪಡಿಸಬೇಕಾಗುತ್ತದೆ.

ಸ್ನಾತಕೋತ್ತರ ಪದವಿಯು ಎರಡು ವರ್ಷದ ಅವಧಿಯುಳ್ಳದ್ದು ಗೇಟ್ (GATE) ಅಂದರೆ 'ಗ್ರಾಜುಯೇಟ್ ಆಪ್ಟಿಟ್ಯೂಡ್ ಟೆಸ್ಟ್ ಫಾರ್ ಇಂಜಿನಿಯರ್ಸ್' ಎಂಬ ಪ್ರವೇಶಪರೀಕ್ಷೆಯನ್ನು ರಾಷ್ಟ್ರೀಯಮಟ್ಟದಲ್ಲಿ ನಡೆಸಲಾಗುತ್ತದೆ. ಈ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಅನುಸಾರವಾಗಿ ನಿರ್ದಿಷ್ಟ ಸಂಸ್ಥೆಯಲ್ಲಿ ನಿರ್ದಿಷ್ಟ ತಂತ್ರಜ್ಞಾನ ಶಾಖೆಗೆ ಪ್ರವೇಶ ದೊರಕುತ್ತದೆ. ಜೊತೆಗೆ ವಿದ್ಯಾರ್ಥಿ ವೇತನವೂ ಲಭ್ಯವಾಗುತ್ತದೆ. ಈ ಪರೀಕ್ಷೆ ತೆಗೆದುಕೊಳ್ಳದೆಯೂ ಶಿಕ್ಷಣ ಸಂಸ್ಥೆಗಳು ನಡೆಸುವ ಪ್ರವೇಶ ಪರೀಕ್ಷೆಗಳ ಮುಖಾಂತರ ಪ್ರವೇಶವನ್ನು ಪಡೆಯಬಹುದಾಗಿದೆ. ಈ ಎರಡು ವರ್ಷಗಳ ಅವಧಿಯಲ್ಲಿ ಆರು ತಿಂಗಳು ಕೈಗಾರಿಕೆಗಳಲ್ಲಿ ಪ್ರಾಯೋಗಿಕ ತರಬೇತಿಯನ್ನು ಪಡೆದು "ತರಬೇತಿ ಪೂರ್ಣತಾ ಪತ್ರ'ವನ್ನು ಆಯಾ ಕೈಗಾರಿಕೆಗಳಿಂದ ಪಡೆದುಕೊಳ್ಳಬೇಕು. ನಂತರ, ಕೊನೆಯ ಆರು ತಿಂಗಳಲ್ಲಿ 'ಪ್ರೌಢ ಪ್ರಬಂಧ'ವೊಂದನ್ನು ಸಿದ್ಧಪಡಿಸಬೇಕು'. ಮೊದಲನೆಯ ವರ್ಷದಲ್ಲಿ ಆಯಾ ಶಾಖೆಗೆ ಸಂಬಂಧಪಟ್ಟ ವಿಷಯುಗಳಲ್ಲಿ ಉತ್ತೀರ್ಣರಾಗಬೇಕು. ಇವೆಲ್ಲವುಗಳಲ್ಲೂ ಸಫಲರಾದವರು ಸ್ನಾತಕೋತ್ತರ ಪದವಿಯನ್ನು ಪಡೆಯಲು ಅರ್ಹರಾಗುತ್ತಾರೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಈ ಶಿಕ್ಷಣ ಮೂರು ವರ್ಷದ ಅವಧಿಯುಳ್ಳದ್ದಾಗಿರುವುದುಂಟು. ಈ ಮಟ್ಟದ ಶಿಕ್ಷಣ ವಿದ್ಯಾರ್ಥಿಗೆ ನಿರ್ದಿಷ್ಟ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶೇಷ ಪ್ರಾವೀಣ್ಯವನ್ನು ನೀಡಲು ಸಮರ್ಥವಾಗಿದೆ.

ಸ್ನಾತಕೋತ್ತರ ಪದವಿಯ ನಂತರ ಯಾವುದಾದರೂ ತಂತ್ರಜ್ಞಾನದ ವಿಶೇಷ ಕ್ಷೇತ್ರದಲ್ಲಿ ಸಂಶೋಧನೆ (Research) ಯನ್ನು ಕೈಗೊಂಡು ಡಾಕ್ಟರೇಟ್ ಪದವಿಯನ್ನು ಪಡೆಯಬಹುದು. ಇದರ ಕಾಲಮಿತಿ ಮೂರು ವರ್ಷಗಳು. ಮೂರು ವರ್ಷಗಳ ಕಾಲಮಿತಿಯಲ್ಲಿ ಸಂಶೋಧನೆಯನ್ನು ಪೂರೈಸಲಾಗದಿದ್ದರೆ ಈ ಅವಧಿಯನ್ನು ವಿಸ್ತರಿಸಲು ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ಕೋರಿಕೆಯನ್ನು ಸಲ್ಲಿಸಬಹುದು. ಇತ್ತೀಚೆಗೆ, ಸ್ನಾತಕೋತ್ತರ ಸಂಶೋಧನೆಯನ್ನು ಕೈಗೊಳ್ಳಬೇಕಾದರೆ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗಿದೆ. ಇದರಲ್ಲಿ ಉತ್ತೀರ್ಣರಾದವರು ಸಂಶೋಧನಾ ಕಾರ್ಯಕ್ಕೆ ಅರ್ಹರಾಗುತ್ತಾರೆ.

ಸ್ನಾತಕೋತ್ತರ ಪದವಿಯ ನಂತರ ಪೋಸ್ಟ್‌ಗ್ರಾಜುಯೇಟ್ ಡಿಪ್ಲೋಮಾ ಶಿಕ್ಷಣವನ್ನು ಪಡೆಯಬಹುದು. ಇದು ಸ್ನಾತಕೋತ್ತರ ಪದವಿ ಹಾಗೂ ಡಾಕ್ಟರೇಟ್ ಪದವಿಗಳ ಮಟ್ಟದಲ್ಲಿ ಬರುವುದು. ಪ್ರಾರಂಭದಲ್ಲಿ ಹೊರದೇಶದಿಂದ ಆಮದು ಮಾಡಿಕೊಂಡ ತಂತ್ರಜ್ಞಾನದ ಆಧಾರಿತ ಕೈಗಾರಿಕೆಗಳನ್ನು ನಡೆಸಲು, ವ್ಯವಸ್ಥಾಪನೆಗೊಳಿಸಲು ಬೇಕಾದ ತಂತ್ರಜ್ಞಾನ ಪದವೀಧರರನ್ನು ಒದಗಿಸುವುದು ತಾಂತ್ರಿಕ ಶಿಕ್ಷಣ ವ್ಯವಸ್ಥೆಯ ಮುಖ್ಯ ಉದ್ದೇಶವಾಗಿತ್ತು. ಆಗ ಕೈಗಾರಿಕೆಗಳು ಅಭಿವೃದ್ಧಿಯ ಹಾದಿಯಲ್ಲಿದ್ದವು. ಕಾಲಾನಂತರ ಆರ್ಥಿಕ ವ್ಯವಸ್ಥೆಯು ಬೆಳೆಯುತ್ತಾ ಹೋದಂತೆ ತಾಂತ್ರಿಕ ಅಭಿವೃದ್ಧಿ ಹಾಗೂ ಸಂಶೋಧನೆ ಮತ್ತು ವಿಕಾಸಗಳು ಅವಶ್ಯವಾಯಿತು.

Digitised by Bharatavani, CIIL

ಇದರಿಂದಾಗಿ ಮೂಲತಃ ಸ್ನಾತಕಪದವಿಯನ್ನು ನೀಡಲೆಂದು ಪ್ರಾರಂಭಗೊಂಡ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಕ್ರಮೇಣ ಸಂಶೋಧನೆಗೆ ಒತ್ತು ನೀಡಿ ಸ್ನಾತಕೋತ್ತರ ಹಾಗೂ ಡಾಕ್ಟರೇಟ್ ಕಾರ್ಯಕ್ರಮಗಳನ್ನು ಪ್ರಾರಂಭಿಸಿದವು.

ಸದ್ಯದ ಶಿಕ್ಷಣ ಪದ್ಧತಿಯು ಉತ್ತಮ ವಿದ್ಯಾರ್ಥಿಗಳನ್ನು ಸಂಶೋಧನಾ ಕ್ಷೇತ್ರಕ್ಕೆ ಆಕರ್ಷಿಸಲು ಅಸಮರ್ಥವಾಗಿದೆ. ಬಹಳಷ್ಟು ವಿದ್ಯಾರ್ಥಿಗಳಲ್ಲಿ ಪಾಶ್ಚಾತ್ಯ ದೇಶಗಳಿಗೆ, ಅದರಲ್ಲೂ ಅಮೆರಿಕಾ ದೇಶಕ್ಕೆ ತೆರಳಿ ಅಲ್ಲಿ ಸಂಶೋಧನೆಯನ್ನು ನಡೆಸುವ ಪ್ರವೃತ್ತಿ ಬೆಳೆದುಬಿಟ್ಟಿದೆ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸಂಶೋಧನಾ ಕ್ಷೇತ್ರಕ್ಕೆ ಕಾಲಿಡುವಂತೆ ಮಾಡಲು ಶಿಕ್ಷಣ ಪದ್ಧತಿಯನ್ನು ಅನುವುಗೊಳಿಸಬೇಕಾಗಿದೆ.

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಸಿವಿಲ್ ಎಂಜಿನಿಯರಿಂಗ್ ಶಿಕ್ಷಣವನ್ನು ಶಿಕ್ಷಣ ಸಂಸ್ಥೆಗಳಲ್ಲಿ ನೀಡಲಾಗುತ್ತಿತ್ತು. ಕ್ರಮೇಣ, ತಂತ್ರಜ್ಞಾನ ವಿಸ್ತಾರಗೊಂಡಿದ್ದರಿಂದ ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಿಕಲ್ ಶಾಖೆಗಳನ್ನು ಬೋಧಿಸುವುದು ಅಗತ್ಯವಾಯಿತು. 1950ರ ಹೊತ್ತಿಗೆ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿನ ಹೊಸ ಆವಿಷ್ಕಾರಗಳ (ಡೈಯೋಡ್, ಟ್ರಾನ್ಸಿಸ್ಟರ್ ಮುಂತಾದ ಉಪಕರಣಗಳು) ಕಾರಣದಿಂದ ವಿದ್ಯುನ್ಮಾನ ತಂತ್ರಜ್ಞಾನ (Electronics) ಶಾಖೆಯು ಹುಟ್ಟಿಕೊಂಡಿತು. ನಂತರದ ದಶಕಗಳಲ್ಲಿ ಮಾನವನ ತಂತ್ರಜ್ಞಾನದ ಕ್ಷೇತ್ರದ ಆವಿಷ್ಕಾರಗಳು, ಸಂಶೋಧನೆಗಳು ಹೊಸಹೊಸ ತಂತ್ರಜ್ಞಾನದ ಉದಯಕ್ಕೆ ದಾರಿಮಾಡಿಕೊಟ್ಟವು. ಕಂಪ್ಯೂಟರ್‌ನ ಆವಿಷ್ಕಾರ 1946ರಷ್ಟು ಹಿಂದೆಯೇ ಆಗಿದ್ದರೂ 1970ರ ದಶಕದಲ್ಲಿ ಅದು ಒಂದು ತಂತ್ರಜ್ಞಾನ ಶಾಖೆಯಾಗಿ ಅಸ್ತಿತ್ವಕ್ಕೆ ಬಂದಿತು. ಸಿವಿಲ್ ಶಾಖೆಯಿಂದ ಹುಟ್ಟಿಕೊಂಡ ಪರಿಸರ ತಂತ್ರಜ್ಞಾನ ಶಾಖೆ ಕಳೆದ ಎರಡು ದಶಕಗಳಿಂದ ಬೋಧಿಸಲ್ಪಡುತ್ತಿದೆ. ಆಧುನಿಕ ಯುಗದಲ್ಲಿ ಮಾಹಿತಿಯನ್ನು ಸಹ ಒಂದು ಸಂಪನ್ಮೂಲ (Resource) ಎಂದು ಪರಿಗಣಿಸಲಾಗಿದೆ. ಪರಿಣಾಮವಾಗಿ ಮಾಹಿತಿ ತಂತ್ರಜ್ಞಾನ ಶಾಖೆಯು ಇತ್ತೀಚಿನ ಕೆಲವು ವರ್ಷಗಳಲ್ಲಿ ಪ್ರಾಮುಖ್ಯವನ್ನು ಪಡೆದಿದೆ. ನಮ್ಮ ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲ್ಪಡುತ್ತಿರುವ ತಂತ್ರಜ್ಞಾನ ಶಾಖೆಗಳು ಇಂತಿವೆ. ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಸಿವಿಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್, ಕೆಮಿಕಲ್, ಪರಿಸರತಂತ್ರಜ್ಞಾನ, ಮೆಕಟ್ರಾನಿಕ್ಸ್, ಪಾಲಿಮರ್, ಇಂಡಸ್ಟ್ರಿಯಲ್ ಮತ್ತು ಪ್ರೊಡಕ್ಷನ್, ಕಂಪ್ಯೂಟರ್, ಇನ್ಸ್ಟ್ರುಮೆಂಟೇಷನ್, ಟೆಲಿಕಮ್ಯುನಿಕೇಷನ್, ಆರ್ಕಿಟೆಕ್ಚರ್, ಟೆಕ್ಸ್‌ಟೈಲ್, ಆಟೋಮೊಬೈಲ್, ಇತ್ಯಾದಿ.

–ಬಿ.ಎಂ.ಚಂ.

## ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ

ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ಪಠ್ಯಕ್ರಮದ ಭಾಗವಾಗಿ ಹತ್ತೊಂಬತ್ತನೇ ಶತಮಾನದ ಕಡೆಯಲ್ಲಿ ಆರಂಭಗೊಂಡಿತು. ವಿಶ್ವವಿದ್ಯಾಲಯಕ್ಕೆ ಸೇರಿದಂತೆ ಬೆಂಗಳೂರಿನಲ್ಲಿ 1862ರಲ್ಲಿ ತಾಂತ್ರಿಕ ಶಾಲೆಯೊಂದು ಪ್ರಾರಂಭಗೊಂಡಿತು. ಲೋಕೋಪಯೋಗಿ ಇಲಾಖೆಯ ಕೆಳದರ್ಜೆಯ ಸೇವೆಗಳಿಗಾಗಿ ಸಿಬ್ಬಂದಿಯನ್ನು ತರಬೇತುಗೊಳಿಸಲು ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್‌ರವರು ತಾಂತ್ರಿಕ ಸಂಸ್ಥೆಯೊಂದನ್ನು ಸ್ಥಾಪಿಸಿದರು. 1873ರಲ್ಲಿ ಬೆಂಗಳೂರಿನ ನಾಗರಿಕ ಮತ್ತು ಸೈನಿಕ ಕೇಂದ್ರದಲ್ಲಿ ಈ ಸಂಸ್ಥೆ ಆರಂಭಗೊಂಡಿತು. ಇದೇ ಅವಧಿಯಲ್ಲಿ ಧಾರವಾಡದ ಕೈಗಾರಿಕಾ ಶಾಲೆ ಸಹ ಪ್ರಾರಂಭವಾಯಿತು. 1905ರಲ್ಲಿ ಬೀದರಿನಲ್ಲಿಯೂ 1913ರಲ್ಲಿ ಬೆಂಗಳೂರಿನಲ್ಲಿಯೂ ತಾಂತ್ರಿಕ ಸಂಸ್ಥೆಗಳು ಸ್ಥಾಪನೆಗೊಂಡವು. ಕ್ರಮೇಣ ಮೈಸೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ತಾಂತ್ರಿಕ ಸಂಸ್ಥೆಗಳು ಪ್ರಾರಂಭಗೊಂಡವು. ಇವೆಲ್ಲವೂ ವಿದ್ಯಾರ್ಥಿಗಳಿಗೆ ತಾಂತ್ರಿಕ ಕುಶಲತೆಯನ್ನು ಕಲಿಸಿಕೊಡುವುದಕ್ಕೆ ಸೀಮಿತವಾಗಿದ್ದವು. ಚನ್ನಪಟ್ಟಣದ ಜನಾನಾ ಗೃಹ ಕೈಗಾರಿಕಾ ಸಂಸ್ಥೆ ಮಹಿಳೆಯರಿಗೆ ತಾಂತ್ರಿಕ ಕುಶಲತೆಯನ್ನು ಬೋಧಿಸುವ ಏಕಮಾತ್ರ ಅನುದಾನಿತ ಸಂಸ್ಥೆಯಾಗಿತ್ತು. ಇವೆಲ್ಲಕ್ಕೂ "ವೃತ್ತಿಪರ ಸಂಸ್ಥೆ" (Occupational Institutes) ಯೆಂಬ ಹೆಸರನ್ನು ಕೊಟ್ಟಿದ್ದರು. ನಂತರ ಇವುಗಳು ಪಾಲಿಟೆಕ್ನಿಕ್ ಎಂದು ಕರೆಯಲ್ಪಟ್ಟವು. ಭಾಷಾವಾರು ಪ್ರಾಂತ್ಯರಚನೆಯ ಸಮಯದಲ್ಲಿ ಮೈಸೂರು ಪ್ರಾಂತ್ಯದಲ್ಲಿ 14 ತಾಂತ್ರಿಕ ಶಾಲೆಗಳಿದ್ದವು. ಮೈಸೂರು ಸರ್ಕಾರ ತಾಂತ್ರಿಕ ಶಿಕ್ಷಣ ಸಮಿತಿಯೊಂದನ್ನು ಹಾಗೂ ಪಠ್ಯಕ್ರಮ ಸಿದ್ಧಪಡಿಸಲು ಮಂಡಳಿಯೊಂದನ್ನು ರಚಿಸಿತು. 1952ರಲ್ಲಿ ತಾಂತ್ರಿಕ ಪರೀಕ್ಷೆಗಳನ್ನು ನಡೆಸಲು ರಾಜ್ಯಮಟ್ಟದಲ್ಲಿ ಮಂಡಳಿಯೊಂದು ಸ್ಥಾಪಿತವಾಯಿತು. ಸ್ವಾತಂತ್ರ್ಯ ಪೂರ್ವದಿಂದ 1959ರವರೆಗೆ ಈ ಪಾಲಿಟೆಕ್ನಿಕ್‌ಗಳು "ಸಾರ್ವಜನಿಕ ಶಿಕ್ಷಣ ಇಲಾಖೆ"ಯ ಅಧೀನದಲ್ಲಿದ್ದವು.

ತಾಂತ್ರಿಕ ಪದವಿ ಕಾಲೇಜು ಪ್ರಥಮ ಬಾರಿಗೆ ಬೆಂಗಳೂರಿನಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ 1917ರಲ್ಲಿ ಮೈಸೂರು ಸರ್ಕಾರದಿಂದ ಸ್ಥಾಪಿತಗೊಂಡಿತು. 1946ರ ನಂತರ ಮೂರು ಕಾಲೇಜುಗಳು – ಒಂದು ಸರ್ಕಾರದಿಂದ, ಇನ್ನೆರಡು ಖಾಸಗಿ ಸಂಸ್ಥೆಗಳಿಂದ ಸ್ಥಾಪಿತಗೊಂಡವು. ಕರ್ನಾಟಕ ರಾಜ್ಯ ಪುನರ್‌ರಚನೆಯ ಸಮಯದಲ್ಲಿ ಒಟ್ಟಾರೆ 5 ಪದವಿ ಕಾಲೇಜುಗಳು– ಎರಡು ಸರ್ಕಾರಿ, ಮೂರು ಖಾಸಗಿ– ಅಸ್ತಿತ್ವದಲ್ಲಿದ್ದವು. ಅವು ಯಾವುವೆಂದರೆ ಗವರ್ನಮೆಂಟ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು, 1917, (ಈಗ ಯುನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್), ಗವರ್ನಮೆಂಟ್ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು (ದಾವಣಗೆರೆ 1951 ಈಗ ಯುನಿವರ್ಸಿಟಿ ಬಿ.ಡಿ.ಟಿ. ಕಾಲೇಜ್ ಆಫ್ ಇಂಜಿನಿಯರಿಂಗ್), ಬಿ.ಎಂ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್ (ಬೆಂಗಳೂರು, 1946), ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು, 1946, ಬಿ.ವಿ.ಬಿ. ಕಾಲೇಜ್ ಆಫ್ ಇಂಜಿನಿಯರಿಂಗ್, ಹುಬ್ಬಳ್ಳಿ, 1947. ಸ್ವಾತಂತ್ರ್ಯಾ ನಂತರ 1947ರಿಂದ 1980ರ ಅವಧಿಯಲ್ಲಿ ಒಟ್ಟಾರೆ 25 ಪದವಿ ಕಾಲೇಜುಗಳು 26 ಡಿಪ್ಲೋಮಾ ಕಾಲೇಜುಗಳು, 6 ಜೂನಿಯರ್ ಟೆಕ್ನಿಕಲ್ ಶಾಲೆಗಳು ಅಸ್ತಿತ್ವಕ್ಕೆ ಬಂದಿದ್ದವು. ಸಂಸ್ಥೆಗಳ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಾ ಬಂದುದರಿಂದ ಎಲ್ಲ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಒಂದು ಅಂಗದಡಿಯಲ್ಲಿ ತರಲು "ತಾಂತ್ರಿಕ ಶಿಕ್ಷಣ ಇಲಾಖೆ'ಯನ್ನು 1959ರಲ್ಲಿ ಆರಂಭಿಸಲಾಯಿತು. 1991–92ರ ಅವಧಿಯಲ್ಲಿ 3 ಕಲಾ ಕಾಲೇಜುಗಳು ಸ್ಥಾಪಿತಗೊಂಡವು. ಇವುಗಳೂ "ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲೆ ಬರುತ್ತವೆ. 80ರ ದಶಕದಲ್ಲಿ 21 ಪದವಿ ಕಾಲೇಜು, 111 ಡಿಪ್ಲೋಮಾ ಕಾಲೇಜುಗಳು ಆರಂಭಗೊಂಡವು. 90ರ ದಶಕದಲ್ಲಿ ಈ ಸಂಖ್ಯೆ ಕ್ರಮವಾಗಿ 27 ಮತ್ತು 32ಕ್ಕೆ ಏರಿತು. 2000 ದಿಂದ 2010ರ ಅವಧಿಯಲ್ಲಿ ಇದು 92, 102ಕ್ಕೆ ಏರಿತು. ಇದೇ ಅವಧಿಯಲ್ಲಿ 6 ಜೂನಿಯರ್ ಟೆಕ್ನಿಕಲ್ ಶಾಲೆಗಳು ಆರಂಭಗೊಂಡವು. ಪ್ರಸ್ತುತ ತಾಂತ್ರಿಕ ಸಂಸ್ಥೆಗಳ ಅಂಕಿ ಅಂಶ ಹೀಗಿದೆ– 14 ಸರ್ಕಾರಿ ಪದವಿ ಕಾಲೇಜು, 11 ಸರ್ಕಾರಿ ಪದವಿ ಅನುದಾನಿತ ಕಾಲೇಜು, 149 ಖಾಸಗಿ ಪದವಿ ಕಾಲೇಜು.

81 ಸರ್ಕಾರಿ ಪಾಲಿಟೆಕ್ನಿಕ್, 43 ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್, 149 ಖಾಸಗಿ ಪಾಲಿಟೆಕ್ನಿಕ್‌ಗಳು,

6 ಸರ್ಕಾರಿ ಜೂನಿಯರ್ ಟೆಕ್ನಿಕಲ್ ಶಾಲೆ, 6 – ಖಾಸಗಿ ಜೂನಿಯರ್ ಶಾಲೆಗಳು

Digitised by Bharatavani, CIIL

3 ಸರ್ಕಾರಿ ಅನುದಾನಿತ ಕಲಾ ಕಾಲೇಜುಗಳು.

2000–2010ರ ಅವಧಿಯಲ್ಲಿ ಖಾಸಗಿ ತಾಂತ್ರಿಕ ಪದವಿ ಕಾಲೇಜುಗಳು ಮತ್ತು ಡಿಪ್ಲೋಮಾ ಕಾಲೇಜುಗಳು ಸ್ಥಾಪಿತಗೊಂಡವು. ಇದಕ್ಕೆ ಮುಖ್ಯ ಕಾರಣ ಕಂಪ್ಯೂಟರ್ ತಂತ್ರಜ್ಞಾನದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಾಯೋಗಿಕವಾಗಿ ಬಳಕೆಗೆ ಬಂದದ್ದು. ಇದರಿಂದ ಕಂಪ್ಯೂಟರ್ ತಂತ್ರಜ್ಞಾನವನ್ನು ಹೊಂದಿರುವ ಸಿಬ್ಬಂದಿಗಳ ತೀವ್ರ ಕೊರತೆಯುಂಟಾದ್ದರಿಂದ ಈ ಕೊರತೆಯನ್ನು ತುಂಬಲು ಹಲವಾರು ತಾಂತ್ರಿಕ ಸಂಸ್ಥೆಗಳು ಹುಟ್ಟಿಕೊಂಡವು.

ತಾಂತ್ರಿಕ ಪದವಿ ಕಾಲೇಜುಗಳಿಗೆ ಪ್ರವೇಶ ಪರೀಕ್ಷೆಯ ಮೂಲಕ ಸೀಟುಗಳ ಹಂಚಿಕೆಯಾಗುತ್ತದೆ. ಮೀಸಲಾತಿ ಕಾನೂನಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಪ್ರವೇಶವು ದೊರಕುತ್ತದೆ. ಪದವಿ ಪೂರ್ವ ಮಟ್ಟದಲ್ಲಿ ಪಡೆದ ಅಂಕಗಳಲ್ಲಿ ಅರ್ಧದಷ್ಟು ಹಾಗೂ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಲ್ಲಿ ಅರ್ಧದಷ್ಟು ಇವೆರಡನ್ನೂ ಪರಿಗಣಿಸಿ ಯೋಗ್ಯತಾ ಪಟ್ಟಿಯನ್ನು ತಯಾರಿಸಿ ರ್‍ಯಾಂಕ್‌ಗಳನ್ನು ಕೊಡಲಾಗುತ್ತದೆ. ಈ ರ್‍ಯಾಂಕುಗಳಿಗೆ ಅನುಗುಣವಾಗಿ ವಿವಿಧ ಕಾಲೇಜುಗಳಲ್ಲಿ ಗಳಿಸಿದ ರ್‍ಯಾಂಕುಗಳಿಗೆ ತಕ್ಕ ತಂತ್ರಜ್ಞಾನ ಶಾಖೆಗಳಿಗೆ ಪ್ರವೇಶವು ದೊರಕುತ್ತದೆ. ಕೆಲವರ್ಷಗಳ ಹಿಂದೆ ಕರ್ನಾಟಕ ಸರ್ಕಾರದ ಈ ಪ್ರವೇಶ ಪರೀಕ್ಷೆಯ ಮೂಲಕವೇ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಿಗೆ ಪ್ರವೇಶವನ್ನು ಪಡೆಯಬೇಕಾಗಿತ್ತು. ಆದರೆ ಇತ್ತೀಚಿನ ಕೆಲವು ವರ್ಷಗಳಿಂದ ಖಾಸಗಿ ಸಂಸ್ಥೆಗಳು ಸೇರಿ ವೈದ್ಯಕೀಯ, ತಾಂತ್ರಿಕ ಮತ್ತು ದಂತ ಕಾಲೇಜುಗಳ ಒಕ್ಕೂಟವೊಂದನ್ನು ಮಾಡಿಕೊಂಡಿದ್ದಾರೆ. ಇದನ್ನು ಇಂಗ್ಲಿಷಿನಲ್ಲಿ "ಕನ್ಸೋರ್ಟಿಯಂ ಆಫ್ ಮೆಡಿಕಲ್, ಇಂಜಿನಿಯರಿಂಗ್ ಆ್ಯಂಡ್ ಡೆಂಟಲ್ ಕಾಲೇಜಸ್ ಆಫ್ ಕರ್ನಾಟಕ" (COMED-K) ಎಂದು ಕರೆಯುತ್ತಾರೆ. ಈ ಒಕ್ಕೂಟದ ಸದಸ್ಯ ಸಂಸ್ಥೆಗಳಿಗೆ ಪ್ರವೇಶವನ್ನು COMED-K ನಡೆಸುವ ಪ್ರವೇಶ ಪರೀಕ್ಷೆಗಳ ಮೂಲಕವೂ ಪಡೆಯಬಹುದು. ಈ ಖಾಸಗಿ ಸಂಸ್ಥೆಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಸೀಟುಗಳಿಗೆ ಕರ್ನಾಟಕ ಸರ್ಕಾರ ನಡೆಸುವ ಪ್ರವೇಶ ಪರೀಕ್ಷೆಯ ಮೂಲಕವೂ ಅರ್ಹತೆಯನ್ನು ಪಡೆಯಬಹುದು.

ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆ ಅವುಗಳ ಆಡಳಿತವನ್ನು ಸುಗಮಗೊಳಿಸುವುಕ್ಕಾಗಿ 90ರ ದಶಕದ ಅಂತ್ಯಭಾಗದಲ್ಲಿ (1998) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಸರ್ ಎಂ. ವಿಶ್ವೇಶ್ವರಯ್ಯನವರ ನೆನಪಿನಲ್ಲಿ ಬೆಳಗಾವಿಯಲ್ಲಿ ಸ್ಥಾಪಿತಗೊಂಡ ಈ ವಿಶ್ವವಿದ್ಯಾಲಯದಡಿಯಲ್ಲಿ 144 ಪದವಿ ಕಾಲೇಜುಗಳು ಕೆಲಸಮಾಡುತ್ತಿವೆ. ಪಠ್ಯಕ್ರಮ, ಪರೀಕ್ಷಾ ಪದ್ಧತಿ ಮುಂತಾದವುಗಳನ್ನು ವಿಶ್ವವಿದ್ಯಾಲಯವು ಸಿದ್ಧಪಡಿಸುತ್ತದೆ. ಸ್ನಾತಕ, ಸ್ನಾತಕೋತ್ತರ ಪದವಿಗಳು ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಪದವಿಗಳನ್ನು ವಿಶ್ವವಿದ್ಯಾಲಯವು ನೀಡುತ್ತದೆ. ಈ ತಾಂತ್ರಿಕ ವಿಶ್ವವಿದ್ಯಾಲಯವು ಆರಂಭವಾಗುವುದಕ್ಕೆ ಮುಂಚೆ ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿನ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಆಯಾ ಪ್ರಾಂತೀಯ ವಿಶ್ವವಿದ್ಯಾಲಯಗಳಡಿಯಲ್ಲಿ ಕೆಲಸ ಮಾಡುತ್ತಿದ್ದವು. ತಾಂತ್ರಿಕ ವಿಶ್ವವಿದ್ಯಾಲಯವು ಸಮಸ್ತ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸಂಘಟಿಸಿ ತನ್ನ ಅಧೀನಕ್ಕೆ ತಂದುದರ ಫಲವಾಗಿ ಸಂಸ್ಥೆಗಳ ಕಾರ್ಯನಿರ್ವಹಣೆ ಸುಗಮಗೊಂಡಿತು. ಕರ್ನಾಟಕದ ನಾಲ್ಕು ಕಡೆ–ಬೆಳಗಾವಿ, ಬೆಂಗಳೂರು, ಮೈಸೂರು, ಗುಲ್ಬರ್ಗ ಈ ವಿಶ್ವವಿದ್ಯಾಲಯದ ಕೇಂದ್ರಗಳು ಕೆಲಸಮಾಡುತ್ತಿವೆ.

ನಮ್ಮ ದೇಶದಲ್ಲಿ ತಾಂತ್ರಿಕ ಶಿಕ್ಷಣವನ್ನು ಭಾರೀ ಪ್ರಮಾಣದಲ್ಲಿ ಆರಂಭಗೊಳಿಸಿದ ಮೊಟ್ಟ ಮೊದಲ ಕೆಲವು ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. 1960ರ ದಶಕದಲ್ಲೇ ನಮ್ಮ ರಾಜ್ಯವು ತಾಂತ್ರಿಕ ಶಿಕ್ಷಣದಲ್ಲಿ ಸುಧಾರಣೆಗಳನ್ನು ತಂದಿತು. ತಂತ್ರಜ್ಞಾನದ ವಿವಿಧ ಶಾಖೆಗಳಲ್ಲಿ ಯುವಪ್ರತಿಭೆಯು ನಮ್ಮ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದೆಯೆಂದರೆ ಅತಿಶಯೋಕ್ತಿಯಲ್ಲ. ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಸಂಖ್ಯ ಸಾಫ್ಟ್‌ವೇರ್ ಕಂಪನಿಗಳು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿರುವುದು ರಾಜ್ಯದ ಪ್ರೋತ್ಸಾಹಕ್ಕೆ ಹಾಗೂ ಪ್ರತಿಭೆಯು ಲಭ್ಯವಿರುವುದಕ್ಕೆ ನಿದರ್ಶನ.

ಕರ್ನಾಟಕವು ಬಹಳ ಹಿಂದಿನಿಂದಲೂ ಶಿಕ್ಷಣಕ್ಕೆ ಪ್ರಾಧಾನ್ಯವನ್ನು ನೀಡಿದೆ. ಹಾಗೆಯೇ, ತಾಂತ್ರಿಕ ಶಿಕ್ಷಣಕ್ಕೂ ಸಮನಾದ ಪ್ರಾಧಾನ್ಯತೆಯನ್ನು ನೀಡುತ್ತಾ ಬಂದುದರಿಂದ ಕರ್ನಾಟಕ ರಾಜ್ಯವು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದಾಳತ್ವವನ್ನು ವಹಿಸಿಕೊಂಡಿರುವುದು ಸಹಜವೇ ಆಗಿದೆ.

– ಬಿ.ಎಂ.ಚಂ.

## ಕರ್ನಾಟಕದಲ್ಲಿ ದೈಹಿಕ ಶಿಕ್ಷಣ

ಹಿಂದೆ ದೈಹಿಕ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವ ಕುರಿತು ಅಷ್ಟಾಗಿ ಯಾರೂ ಚಿಂತಿಸುತ್ತಿರಲಿಲ್ಲ. ಅವುಗಳನ್ನು ದಿನನಿತ್ಯ ಜೀವನದಲ್ಲಿ ಅವಳಡಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿರಲಿಲ್ಲ. ಏಕೆಂದರೆ ಸಾಮಾನ್ಯವಾಗಿ ಪ್ರತಿಯೊಬ್ಬರು ಆರೋಗ್ಯವಾಗಿರುತ್ತಿದ್ದರು. ಅದಕ್ಕೆ ಅನೇಕ ಕಾರಣಗಳಿದ್ದವು.

1. ಯಾವುದೇ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಸಿಂಪರಣೆಗಳಿಲ್ಲದೆ ಸಾವಯವ ಕೃಷಿ ಆಧಾರಿತವಾಗಿ ಬೆಳೆದ ಮತ್ತು ಕಲಬೆರಕೆ ಇಲ್ಲದ ಆಹಾರ ಸೇವನೆ. 2. ಪರಿಶುದ್ಧವಾದ ಗಾಳಿ ಮತ್ತು ನೀರಿನ ಸೇವನೆ. 3. ಯಾಂತ್ರೀಕರಣವಿಲ್ಲದ ಜೀವನ ಶೈಲಿ. 4. ದಿನ ನಿತ್ಯದ ಪ್ರತಿಯೊಂದು ತಮ್ಮ ಕೆಲಸ ಕಾರ್ಯಗಳನ್ನು ತಾವೇ ಸ್ವತ ಮಾಡಿಕೊಳ್ಳುವದು. 5. ಆಧುನಿಕತೆಯ ಜೀವನದಿಂದ ಬಹು ದೂರವಿರುವದು. 6. ಯಾವುದೇ ತರಹದ ಮಾನಸಿಕ ಖಿನ್ನತೆ, ಉದ್ವೇಗ ಮತ್ತು ಆವೇಶಗಳಿಗೆ ಒಳಗಾಗುವಂತಹ ಸನ್ನಿವೇಶ ಮತ್ತು ಸಂದರ್ಭಗಳು ವಿರಳರಾಗಿದ್ದುದು.

ಈಗ ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಅವರ ಬೇಕು ಬೇಡಿಕೆಗಳನ್ನು ಪೂರೈಸುವದಕ್ಕಾಗಿ ಅರಣ್ಯಗಳನ್ನು ನಾಶಗೊಳಿಸಿ ವಸತಿ ಸಮುಚ್ಚಯಗಳನ್ನು ನಿರ್ಮಿಸುವದು, ಔದ್ಯೋಗೀಕರಣ, ಅವಶ್ಯಕತೆಗಿಂತ ಹೆಚ್ಚಿನ ಯಂತ್ರಗಳ ಬಳಕೆ ಪರಿಸರ, ಮನುಷ್ಯ, ಪ್ರಾಣಿ, ಪಕ್ಷಿ, ಜೀವ ಸಂಕುಲನಕ್ಕೆ ಮಾರಕವಾಗುವಂತಹ ಅತ್ಯಾಧುನಿಕ ಸಾಮಗ್ರಿಗಳನ್ನು ಉಪಯೋಗಿಸುತ್ತಿರುವದು. ಅಲ್ಲದೆ,

1. ಹಣದ ವಿಪರೀತ ದಾಹ ಮತ್ತು ದಿಢೀರನೆ ಶ್ರೀಮಂತರಾಗಬೇಕೆಂಬ ದುರಾಶೆಯಿಂದ ಅನೇಕ ವರ್ತಕರು ತಾವು ಮಾರಾಟ ಮಾಡುವ ಧವಸ ಧಾನ್ಯಗಳಲ್ಲಿ, ಕುಡಿಯುವ ನೀರಿನಲ್ಲಿ, ಪ್ರಾಣ ರಕ್ಷಣೆಗೆ ಅವಶ್ಯಕವಾಗಿರುವ ಮಾತ್ರೆ ಮತ್ತು ಔಷಧಗಳಲ್ಲಿಯೂ ಆರೋಗ್ಯಕ್ಕೆ ಮಾರಕವಾಗುವಂತಹ ವಸ್ತುಗಳನ್ನು ಕಲಬೆರೆಕೆಗೊಳಿಸಿ ಮಾರುತ್ತಿರುವದು.
2. ಈಗ ಬೆಳೆಯುತ್ತಿರುವ ಪ್ರತಿಯೊಂದು ಬೆಳೆಗೆ ಕೀಟನಾಶಕ ಸಿಂಪರಣೆ ಮತ್ತು ರಾಸಾಯನಿಕ ಗೊಬ್ಬರಗಳ ಅಧಿಕ ಬಳಕೆ.
3. ಇತ್ತೀಚಿನ ದಿನಗಳಲ್ಲಿ ಆಗಿರುವ ಜಾಗತೀಕರಣ ಕೂಡ ಯುವಕರು ತಮ್ಮ ಆರೋಗ್ಯ ಉತ್ತಮವಾಗಿ ಕಾಪಾಡಿಕೊಳ್ಳುವಲ್ಲಿ ಒಂದು ದೊಡ್ಡ ಮಾರಕ ಅಸ್ತ್ರವಾಗಿ ಪರಿಣಮಿಸಿದೆ. ಜಾಗತೀಕರಣದಿಂದಾಗಿ ಯುವಕರ ದುಶ್ಚಟಗಳಿಗೆ ಬೇಕಾಗುವ ವಸ್ತುಗಳು ಸುಲಭವಾಗಿ

Digitised by Bharatavani, CIIL

ದೊರೆಯುವಂತಹ ಸಂದರ್ಭಗಳು ಹೆಚ್ಚಾಗಿರುವುದರಿಂದ, ಅವರು ದುಶ್ಚಟಗಳಿಗೆ ದಾಸರಾಗುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ ದೇಶದ ಭಾವಿ ಪ್ರಜೆಗಳ ಜೀವನ ಶೈಲಿಯೇ ಬದಲಾಗುತ್ತಿದೆ.

4. ಇಂದು ಪ್ರತಿಯೊಬ್ಬರೂ ದಿನ ಬೆಳಗಾದರೆ ಸಾಕು ನನ್ನ ಮಕ್ಕಳನ್ನು ಶಾಲಾ ಸಮವಸ್ತ್ರದೊಂದಿಗೆ ಶಾಲೆಗೆ ಕಳುಹಿಸಬೇಕು ಯೋಚಿಸುತ್ತಲೇ ಒಂದುವೇಳೆ ಬಸ್ಸು ಸಿಗದಿದ್ದರೆ ಹೇಗೆ ಎನ್ನುವ ಸಣ್ಣ ವಿಷಯ ಅನೇಕ ಸಣ್ಣ ಸಣ್ಣ ವಿಚಾರಗಳನ್ನು ಯೋಚಿಸುತ್ತಲೇ ಅವರ ದಿನಚರಿ ಪ್ರಾರಂಭವಾಗುವದು. ಹೀಗಾಗಿ ಮಾನಸಿಕ ಒತ್ತಡ, ಖಿನ್ನತೆ ಮತ್ತು ಉದ್ವೇಗಗಳಿಗೆ ಒಳಗಾಗುವದು ಸಾಮಾನ್ಯವಾಗಿದೆ.

ಹಿಂದಿನ ದಿನಗಳಲ್ಲಿ ದೇಶದ ಚುಕ್ಕಾಣಿ ಹಿಡಿದು ಮುನ್ನಡೆಸುವ ಮಹತ್ತರವಾದ ಜವಾಬ್ದಾರಿಯನ್ನು ಹೊರಿಸುವ ನಿಟ್ಟಿನಲ್ಲಿ ಪ್ರತಿಭಾವಂತ ಯುವಕ ಯುವತಿಯರಿಗಾಗಿ ಕೇಂದ್ರ ಸರಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಮುಂತಾದವುಗಳಲ್ಲಿ ಪಾಲ್ಗೊಳ್ಳುವ ಅನೇಕ ಯುವಕ ಯುವತಿಯರು ಎಲ್ಲಾ ವಿವಿಧ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ದೈಹಿಕ ಸಧೃಡತೆಯ ಪರೀಕ್ಷೆಯಲ್ಲಿ ಕನಿಷ್ಟ ಅಂಕಗಳೊಂದಿಗೆ ತೇರ್ಗಡೆಯಾಗಲು ಅಸಮರ್ಥರಾಗಿರುವದನ್ನು ನಾವು ಪ್ರತ್ಯಕ್ಷವಾಗಿ ನೋಡಿದ್ದೇವೆ ಮತ್ತು ಕೇಳಿದ್ದೇವೆ.

ಇಂದು ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್ ಮುಂತಾದ ಪರೀಕ್ಷೆಗಳಿಗೆ ಸಿದ್ಧತೆ ನಡೆಯುವವರಿಗಾಗಿಯೇ ಅನೇಕ ದೈಹಿಕ ಚಟುವಟಿಕೆಗಳಲ್ಲಿ ತರಬೇತಿ ಕೊಡುವ ಅನೇಕ ಕೇಂದ್ರಗಳಿವೆ.

ವಿಶ್ವದ ಯಾವುದೇ ಮೂಲೆಯಲ್ಲಿರುವಂತಹ ವಿಶೇಷ ಪರಿಣಿತಿ ಹೊಂದಿ ಸಾಕಷ್ಟು ನುರಿತ ವೈದ್ಯರಲ್ಲಿಗೆ ಹೋಗಿ ಆರೋಗ್ಯ ಕುರಿತು ಸಾಮಾನ್ಯ ತಪಾಸಣೆಗಾಗಲಿ ಅಥವಾ ಸರ್ವೆ ಸಾಮಾನ್ಯ ರೋಗದಿಂದ ಅತ್ಯಂತ ಜೀವಕ್ಕೆ ಗಂಡಾಂತರ ತರುವಂತಹ ರೋಗಗಳ ಚಿಕಿತ್ಸೆಗಾಗಿ ಹೋದಾಗ, ವೈದ್ಯರು ತಮ್ಮ ಚಿಕಿತ್ಸೆಯನ್ನು ಪೂರ್ಣಗೊಳಿಸಿದ ನಂತರ ಪ್ರತಿಯೊಬ್ಬ ರೋಗಿಗಳಿಗೂ ಹೇಳುವ ಮೂಲ ಮಂತ್ರವೆಂದರೆ ತಾವು ತಪ್ಪದೇ ದಿನಾಲೂ ಕನಿಷ್ಠ ಒಂದೆರಡುಗಂಟೆಗಳ ಕಾಲವಾದರೂ ವಾಯು ವಿಹಾರ, ಜಾಗಿಂಗ, ಹಗುರವಾದ ದೈಹಿಕ ಚಟುವಟಿಕೆಗಳನ್ನು ವಯಸ್ಸಿಗೆ ತಕ್ಕ ಹಾಗೆ ಮಾಡುವಂತೆ ಸೂಚಿಸುವರು.

ಮಾನಸಿಕವಾಗಿ ಅತಿಯಾದ ಒತ್ತಡ, ಉದ್ವೇಗ ಮತ್ತು ಖಿನ್ನತೆಯನ್ನು ಹೊಂದಿದವರಿಗೂ ಮನೋ ವೈದ್ಯರು ಬೆಳಗಿನ ಜಾವ ಪ್ರಶಾಂತವಾದ ವಾತಾವರಣದಲ್ಲಿ ವಾಯು ವಿಹಾರಕ್ಕೆ ತೆರುಳುವಂತೆ ಸಲಹೆಸೂಚನೆಗಳನ್ನು ಕೊಡುವದು ಸಾಮಾನ್ಯ ಸಂಗತಿಯಾಗಿದೆ.

ದೈಹಿಕ ಚಟುವಟಿಕೆಗಳಿಲ್ಲದೆ ನಿಷ್ಕ್ರಿಯರಾಗಿ ಮನುಷ್ಯನ ದೇಹ ಮತ್ತು ಆರೋಗ್ಯದ ಸ್ಥಿತಿಯು ಹದಗೆಡುತ್ತಾ ಹೋಗುವದನ್ನು ಕಂಡ ಸರ್ಕಾರ ಮತ್ತು ಸಾರ್ವಜನಿಕರು ಎಚ್ಚೆತ್ತುಕೊಳ್ಳುವಂತಾಯಿತು.

ರಾಜ್ಯ, ರಾಷ್ಟ್ರ ಮತ್ತು ಅಂತರ್ ರಾಷ್ಟ್ರೀಯ ಮಟ್ಟದ ಮೇಲಾಟ, ವೈಯಕ್ತಿಕ ಕ್ರೀಡೆ ಮತ್ತು ಗುಂಪು ಕ್ರೀಡೆಗಳಲ್ಲಿ ಭಾಗವಹಿಸಲು ಕ್ರೀಡಾಪಟುಗಳ ಆಯ್ಕೆಯು ಪಿರ್‍ಯಾಮಿಡ್ ಮಾದರಿಯಲ್ಲಿ ನಡೆಸಬೇಕಾಗುವದು. ಈ ಪ್ರಕ್ರಿಯೆಯು ನಮ್ಮ ರಾಷ್ಟ್ರದ ಮಟ್ಟಿಗೆ ಹೇಳುವದಾದರೆ ಕೇವಲ ಕ್ರಿಕೆಟ್ ತಂಡದ ಆಯ್ಕೆಯಲ್ಲಿ ಅಳವಡಿಸುತ್ತಿರುವದನ್ನು ಕಾಣಬಹುದಾಗಿದೆ.

ಈ ಎಲ್ಲಾ ಸನ್ನಿವೇಶಗಳ ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಣದ ಪ್ರಸ್ತುತ ಸ್ಥಿತಿಯನ್ನು ನಾವು ಅವಲೋಕಿಸುತ್ತಾ ಹೊದಾಗ ನಮಗೆ ಅಖಂಡ ಭಾರತ ಮತ್ತು ಕರ್ನಾಟಕದಲ್ಲಿಯ ದೈಹಿಕ ಶಿಕ್ಷಣದ ಪ್ರಸ್ತುತ ಸ್ಥಿತಿಯಲ್ಲಿ ಅಷ್ಟಾಗಿ ವ್ಯತ್ಯಾಸಗಳನ್ನು ಕಾಣುವದಿಲ್ಲ. ಏಕೆಂದರೆ ಬಹುತೇಕವಾಗಿ ಕೇಂದ್ರ ಸರಕಾರ ದೈಹಿಕ ಶಿಕ್ಷಣ, ಆರೋಗ್ಯ ಶಿಕ್ಷಣ, ಸಾಮಾನ್ಯ ಶಿಕ್ಷಣ ಮತ್ತು ಕ್ರೀಡಾ ವಿಭಾಗಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ವಿವಿಧ ನೀತಿ ಮತ್ತು ಕಾರ್ಯಯೋಜನೆಗಳನ್ನು ರೂಪಿಸಿ ಅವುಗಳ ಅನುಷ್ಠಾನ ಬೆಳವಣಿಗೆ ಮತ್ತು ಮೌಲೀಕರಿಸುವಿಕೆ ಕಾರ್ಯವನ್ನು ಕೇಂದ್ರ ಸರಕಾರವೇ ಮಾಡವದು.

ಸಮಯೋಚಿತವಾಗಿ ಸರಕಾರದ ನೀತಿ ಮತ್ತು ಕಾರ್ಯಯೋಜನೆಗಳಲ್ಲಿ ಪರಿವರ್ತನೆ ಮತ್ತು ಸೇರ್ಪಡೆಗಳ ಅವಶ್ಯಕತೆ ಎನಿಸಿದಾಗಲೂ, ತಜ್ಞರ ಸಲಹೆ ಮತ್ತು ಸಹಯೋಗದೊಂದಿಗೆ ಸೂಕ್ತ ಬದಲಾವಣೆ, ಸೇರ್ಪಡೆ, ರೂಪರೇಷೆಗಳನ್ನು ನಿರೂಪಿಸಿ, ಅವುಗಳನ್ನು ಕಾರ್ಯರೂಪಗೊಳಿಸುವ ಗುರುತರವಾದ ಜವಾಬ್ದಾರಿಯು ಕೂಡಾ ಕೇಂದ್ರ ಸರಕಾರವೇ ಮಾಡುವದರಿಂದ ಏಕಕಾಲದಲ್ಲಿಯೇ ದೇಶದ ತುಂಬೆಲ್ಲ ಅವುಗಳ ಅನುಷ್ಠಾನಗೊಳಿಸುವಿಕೆಯ ಕಾರ್ಯನಡೆಯುವದು.

ಈ ಎಲ್ಲಾ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಗೊಳಿಸಿ ಅವುಗಳನ್ನು ಸೂಕ್ತವಾಗಿ ನಿರ್ವಹಿಸುವದಕ್ಕಾಗಿ ಕೇಂದ್ರ ಸರ್ಕಾರವು 1982ರಲ್ಲಿ ಒಂದು ಪ್ರತ್ಯೇಕವಾದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖಾ ಮಂತ್ರಾಲಯವನ್ನು ಪ್ರಾರಂಭಿಸಿತು. ಅಲ್ಲದೆ ಸರಕಾರದ ಮತ್ತು ವಿವಿಧ ಇಲಾಖಾ ಸಹಯೋಗ, ಕ್ರೀಡಾ ಪ್ರಾಧಿಕಾರ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ಎನ್.ಎಸ್.ಸಿ., ಎನ್.ಎಡಿ.., ಎನ್.ಸಿ. ಇ.ಡಿ., ಎ.ಸಿ.ಸಿ., ಸ್ಪೋರ್ಟ್ಸ್ ಕೌನ್ಸಿಲ್., ಎಸ್.ಜಿ.ಎಫ್.ಆಯ್. ಸ್ಪೋರ್ಟ್ಸ್ ಅಥಾರಿಟಿ ಆಫ್. ಕರ್ನಾಟಕ (1982) ಮುಂತಾದ ಸಂಸ್ಥೆಗಳು ಹುಟ್ಟಿಕೊಂಡವು.

**ನೆಹರು ಯುವಕ ಕೇಂದ್ರಗಳು**

1972ರಲ್ಲಿ ವಿದ್ಯಾರ್ಥಿಗಳಲ್ಲದ ಹಳ್ಳಿಯ ಯುವಕರಲ್ಲಿ ರಾಷ್ಟ್ರ ಪ್ರೇಮ, ರಾಷ್ಟ್ರೀಯ ಭಾವೈಕ್ಯತೆ ತರುವ ಉದ್ದೇಶಗಳಿಂದ ಶಿಕ್ಷಣ ಮಂತ್ರಾಲಯ ಇಲಾಖಾ ಅಧೀನದಲ್ಲಿ ನೆಹರು ಯುವಕ ಕೇಂದ್ರಗಳನ್ನು ಪ್ರಾರಂಭಿಸಲಾಯಿತು.

1987ರಲ್ಲಿ ನೆಹರು ಯುವಕ ಕೇಂದ್ರಗಳ ಯೋಜನೆಯ ಅಡಿಯಲ್ಲಿ ಮರುಸಂಘಟನೆ ಮಾಡಿ ಅವುಗಳಿಗೆ ಯುವಜನ ಅಫೇರ್ಸ್ ಇಲಾಖೆಯ ಮೂಲಕ ಸ್ವಾಯತ್ತ ಸಂಸ್ಥೆಗಳ ಸ್ಥಾನವನ್ನು ಕಲ್ಪಿಸಲಾಯಿತು.

**ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ.**

1969ರಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ನಿರ್ದೇಶನಾಲಯವನ್ನು ಪ್ರಾರಂಭಿಸಲಾಯಿತು. ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯು ವಿಭಾಗಿಯು ಮಟ್ಟಗಳಲ್ಲಿ ಕಚೇರಿಗಳನ್ನು ಪ್ರಾರಭಿಸುವ ಮೂಲಕ 1975ರಲ್ಲಿ ಮರುಸಂಘಟನೆಮಾಡಿ ಯುವಜನ ಸೇವೆ ಎಂದು ಮಾಡಿತು. 1977ರಲ್ಲಿ ಮರುಸಂಘಟನೆಮಾಡಿ ಕರ್ನಾಟಕ ಕ್ರೀಡಾ ಕೌನ್ಸಿಲ್ ನಲ್ಲಿ ವಿಲೀನಗೊಳಿಸಿ ಅದಕ್ಕೆ ಯುವಜನಸೇವೆ ಮತ್ತು ಕ್ರೀಡಾ ಇಲಾಖೆ ಎಂದು ಹೆಸರಿಸಿದರು.

ಸ್ವತಂತ್ರ ಪೂರ್ವದಲ್ಲಿ ನಮ್ಮ ರಾಜ್ಯದಲ್ಲಿ ದೈಹಿಕ ಶಿಕ್ಷಣ ಮಹಾವಿದ್ಯಾಯ ಮತ್ತು ಕ್ರೀಡಾ ಶಾಲೆಗಳಲ್ಲಿ ಇರಲಿಲ್ಲ. ಆ ಕಾರಣಕ್ಕಾಗಿ ಸೈನ್ಯದಿಂದ ನಿವೃತ್ತಿ ಹೊಂದಿದ ಸಿಪಾಯಿಗಳ ಸಹಾಯದಿಂದ ಅಥವಾ ಕ್ರೀಡೆಗಳಲ್ಲಿ ಅಭಿರುಚಿ ಹೊಂದಿದ ಯುವಕರ ಸಹಾಯದಿಂದ ಶಾಲೆಗಳಲ್ಲಿ ದೈಹಿಕ ಚಟುವಟಿಕೆಗಳನ್ನು ನಡೆಸಲಾಗುತಿತ್ತು.

ಸ್ವತಂತ್ರದ ನಂತರ ಅನೇಕ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು, ಕ್ರೀಡಾ ಪ್ರಾಧಿಕಾರ, ವಿಶ್ವವಿದ್ಯಾಲಯ ಧನಸಹಾಯ ಆಯೋಗ, ಎನ್.ಎಸ್.ಸಿ., ಎನ್.ಎಡಿ.ಎಸ್., ಎನ್.ಪಿ.ಇಡಿ., ಎ.ಸಿ.ಸಿ., ಸ್ಪೋರ್ಟ್ಸ್

Digitised by Bharatavani, CIIL

ಕೌನ್ಸಿಲ್., ಎಸ್.ಜಿ.ಎಫ್.ಆಯ್. ಸ್ಪೋರ್ಟ್ಸ್ ಅಥಾರಿಟಿ ಆಫ್. ಕರ್ನಾಟಕ (1982) ಮುಂತಾದ ಸಂಸ್ಥೆಗಳನ್ನು ಸರಕಾರವು ಪ್ರಾರಂಭಿಸಿತು.

ಇಂದು ಕೇಂದ್ರ ಮತ್ತು ರಾಜ್ಯ ಸರಕಾರಗಳ, ಅನೇಕ ಸಂಘ ಸಂಸ್ಥೆಗಳ ಸಹಾಯ ಸಹಕಾರಗಳು ಇರುವದರಿಂದ, ದೈಹಿಕ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಯಾಗುವದಕ್ಕೆ ಸಾಕಷ್ಟು ಅವಕಾಶಗಳಿವೆ ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾಲಯಗಳಲ್ಲಿ ಖಾಯಂ ಮೂಲಭೂತ ಸೌಕರ್ಯಗಳಾದ ಆಡಿಟೋರಿಯಮ್, ಸ್ಟೇಡಿಯಮ್, ಕ್ರೀಡಾಂಗಣಗಳ, ಈಜುಗೊಳ, ಮುಂತದವುಗಳ ನಿರ್ಮಾಣಕ್ಕೂ ಮತ್ತು ಮಲ್ಟಿಜಿಮ್, ಟೆಬಲ್ ಟೆನ್ನಿಸ್, ಕ್ರಿಕೆಟ್ ಮ್ಯಾಟ್ ಮುಂತಾದ ಕ್ರೀಡಾಸಾಮಗ್ರಿಗಳ ಖರೀದಿಗೆ ಪ್ರತಿಶತ 80 ರಷ್ಟು ಹಣದ ಸಹಾಯವನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಕೊಡುವದು.

ಇಂದು ದೂರದರ್ಶನ ಮಾಧ್ಯಮದ ಮೂಲಕ ನಾವು ಹೆಚ್ಚು ಕಡಿಮೆ ಪ್ರತಿಯೊಂದು ಚನಲ್‌ಗಳಲ್ಲಿ ಬೆಳಗಿನ ಜಾವ ಆರೋಗ್ಯ ಕುರಿತಾಗಿ ಅನೇಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತೇವೆ. ಇವುಗಳಲ್ಲಿ ಅತ್ಯಂತ ವಿಶೇಷ ಮತ್ತು ಪ್ರಭಾವಿತ ಕಾರ್ಯಕ್ರಮವೆಂದರೆ ಯೋಗ ಗುರು ರಮದೇವ ಮಹಾರಾಜರದು. ಅವರ ಪರಿಶ್ರಮ, ಕಾಳಜಿ, ತ್ಯಾಗ ಮುಂತಾದವುಗಳಿಂದ ಇಡೀ ವಿಶ್ವಕ್ಕೆ ಆರೋಗ್ಯ ಕಾಪಾಡಿಕೊಳ್ಳುವುದು ಹೇಗೆ ದೈಹಿಕ ಮತ್ತು ಮಾನಸಿಕ ರೋಗಗಳಿಗೆ ಯೋಗ ಮತ್ತು ದೈಹಿಕ ಚಟುವಟಿಕೆಗಳ ಮೂಲಕ ಚಿಕಿತ್ಸೆಯನ್ನು ಮಾಡಿಕೊಂಡು ಗುಣಮುಖರಾಗಿಸುವ ಪರಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಸೂಚಿಸುವುದಷ್ಟೇ ಅಲ್ಲ, ರೋಗಗಳು ಬಾರದಂತೆ ಮುಂಜಾಗ್ರತಾ ಕ್ರಮಗಳನ್ನು ಮನವರಿಕೆ ಮಾಡಿಕೊಡುತ್ತಿದ್ದಾರೆ. ಒಂದುವೇಳೆ ರೋಗಗಳಿಗೆ ತುತ್ತಾದರೆ ಮುಂಜಾಗ್ರತಾ ಕ್ರಮಗಳನ್ನು ಮನವರಿಕೆ ಮಾಡಿಕೊಡುತ್ತಿದ್ದಾರೆ.

ಇಂದು ದೈಹಿಕ ಶಿಕ್ಷಣದಲ್ಲಿ ಸರ್ಟಿಫೀಕೇಟ ಕೋರ್ಸ್, ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಹೊಂದಿದವರ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಿರುವದನ್ನು ಗಮನಿಸಬಹುದಾಗಿದೆ.

ಎಮ್.ಫಿಲ್. ಮತ್ತು ಪಿ.ಹೆಚ್.ಡಿ. ಪದವಿದರರು ಮತ್ತು ಎಮ್.ಫಿಲ್. ಮತ್ತು ಪಿ.ಹೆಚ್.ಡಿ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ ಮಾರ್ಗದರ್ಶಕರಾಗುವ ಅರ್ಹತೆ ಪಡೆದವರನ್ನು ಸಾಕಷ್ಟು ಸಂಖ್ಯೆಯಲ್ಲಿ ನೋಡಬಹುದಾಗಿದೆ.

ಹಿಂದಿನ ದಿನಗಳಲ್ಲಿ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು ಕೇವಲ ಸರ್ಟಿಫೀಕೇಟ್ ಕೋರ್ಸ್, (Cerfificate Course in Physical Education.) ಪದವಿ (Bachelor in Physical Education) ಮತ್ತು ಸ್ನಾತಕೋತ್ತರ (Master in Physical Education) ಪದವಿಗಳ ವ್ಯಾಸಂಗ ಮಾಡುವ ಸೌಲಭ್ಯಗಳನ್ನು ಮಾತ್ರ ಹೊಂದಿದ್ದವು.

**ಇಂದು ದೈಹಿಕ ಶಿಕ್ಷಣ ವ್ಯಾಸಂಗದಲ್ಲಿ**

1. ಕ್ರೀಡಾ ವ್ಯವಸ್ಥೆ. (Sports Management)
2. ಕ್ರೀಡಾ ಆಡಳಿತ. (Sports Administration.)
3. ಕ್ರೀಡಾ ಪತ್ರಿಕೋದ್ಯಮ (Sports Journalism.)
4. ಕ್ರೀಡಾ ಫಿಜಿಯೊಥೆರಾಫಿ. (Sports Physiotherapy)
5. ಕ್ರೀಡಾ ಮೆಡಿಸಿನ್. (Sports Medicine.)
6. ಕ್ರೀಡಾ ಮನೋವಿಜ್ಞಾನ (Sports Psychology.)
7. ಅಕ್ಯುಪಂಕ್ಚರ್. (Acupuncture.)
8. ವಾಟರ್ ಥೆರಾಫೀ. (Water Therapy)

ಇಂದು ದೈಹಿಕ ಶಿಕ್ಷಣವು ವಿವಿಧ ವಿಷಯಗಳಾಗಿರುವಂತಾ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ, ಸಮಾಜ ಶಾಸ್ತ್ರ, ಮನೋವಿಜ್ಞಾನ ಮುಂತಾದ ಶಾಸ್ತ್ರಗಳಿಂದ ಸಿದ್ಧಾಂತಗಳನ್ನು ಆಯ್ದುಕೊಂಡು ಪಠ್ಯಕ್ರಮದಲ್ಲಿ ಅಳವಡಿಸಿಕೊಂಡಿದ್ದರಿಂದ ವಿವಿಧ ಕ್ಷೇತ್ರಗಳಲ್ಲಿಯೂ ಸಂಶೋಧನೆಗಳನ್ನು ಮಾಡುವ ವಿಫುಲ ಅವಕಾಶಗಳಿವೆ.

ಉದಾಹರಣೆಗಾಗಿ : ಬಾಯೋಮೆಕ್ಯಾನಿಕ್ಸ್, (Biomechanics), ಅಂತ್ರೋಪಮೆಟ್ರಿ (Anthropometry), ಎಕ್ಸರ್‌ಸೈಜ್ ಆಫ್ ಫಿಜಿಯಾಲಾಜಿ (Exercise of Physiology), ಕ್ರೀಡಾ ಮನೋವಿಜ್ಞಾನ, (Sports Psychology), ಕ್ರೀಡಾ ಸಮಾಜಶಾಸ್ತ್ರ (Sports Sociology) ಮುಂತಾದ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಕೈಗೊಳ್ಳಬಹುದಾಗಿದೆ.

ಅಂದು ಜಿಮಾನ್ಯಾಲೊಯಮ್, ಫಿಟ್ನೆಸ್ ಕ್ಲಬ್ ಇನ್ನಿತರ ಆರೋಗ್ಯಕ್ಕೆ ಸಂಬಂಧಿಸಿದ ಕೇಂದ್ರಗಳನ್ನು ಬೃಹತ್ ನಗರಗಳಲ್ಲಿ ಕೂಡಾ ಬಹಳ ವಿರಳವಾಗಿ ಕಾಣುತ್ತಿದ್ದವು.

ಇಂದು ಪ್ರತಿ ಓಣಿಗಳಲ್ಲಿ ಹೆಲ್ತ್ ಕ್ಲಬ್, ಸೋನಾ ಕ್ಲಬ್, ವ್ಯಾಕ್ಸ್ ಕ್ಲಬ್, ಫಿಜಿಯೊಥೆರಾಫಿ, ಏರೋಬಿಕ್ಸ್ ಫಿಟ್ನೆಸ್ ಕ್ಲಬ್ ಹೀಗೆ ಅನೇಕ ಕೇಂದ್ರಗಳನ್ನು ನೋಡಬಹುದಾಗಿದೆ.

ವೈದ್ಯನಾಗಿ ಇಂದು ದೈಹಿಕ ಶಿಕ್ಷಕನಾದವನು ಮಕ್ಕಳಿಗೆ ವೈದ್ಯರ ಸ್ಥಾನದಲ್ಲಿ ನಿಂತು ಸಲಹೆ ಸೂಚನೆ ಕೊಡುತ್ತಾನೆ. ಏಕೆಂದರೆ ದೈಹಿಕ ಶಿಕ್ಷಣ ಪಠ್ಯಕ್ರಮದಲ್ಲಿ ರಸಾಯನ ಶಾಸ್ತ್ರ, ಪ್ರಾಣಿ ಶಾಸ್ತ್ರ, ಶರೀರ ರಚನಾ ಶಾಸ್ತ್ರ, ಪ್ರಥಮ ಚಿಕಿತ್ಸೆ ಹೀಗೆ ಮುಂತಾಗಿ ಆರೋಗ್ಯಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಅವರು ಅಧ್ಯಯನ ಮಾಡಿರುತ್ತಾರೆ.

ಇಂಜಿನೀಯರಾಗಿ ದೈಹಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಭೌತಶಾಸ್ತ್ರದ ಸಿದ್ಧಾಂತ ಮತ್ತು ಬಾಯೋಮೆಕ್ಯಾನಿಕ್ಸ ವಿಷಯಗಳ ಅಳವಡಿಕೆ, ಆಡಿಟೋರಿಯಮ್, ಈಜುಕೋಳ, ಕ್ರೀಡಾ ಮೈದಾನ, ಸ್ಟೇಡಿಯಮ್ ಮುಂತಾದವುಗಳ ನಿರ್ಮಾಣದ ವಿಧಾನ, ಅವುಗಳ ಅಳತೆ ಇನ್ನಿತರ ಪ್ರತಿಯೊಂದು ಸಂಪೂರ್ಣ ಮಾಹಿತಿಯ ಅಧ್ಯಯನ ಮಾಡಿರುವದರಿಂದ ಶಾಲೆ ಮತ್ತು ಕಾಲೇಜುಗಳಲ್ಲಿ ಇವುಗಳ ನಿರ್ಮಾಣ ಮಾಡುವ ಸಮಯದಲ್ಲಿ ಇಂಜಿನೀಯರವರಿಗೆ ಸಲಹೆ ಸೂಚನೆಗಳನ್ನು ಕೊಡುತ್ತಾರೆ ಅವರ ಅನುಪಸ್ಥಿತಿಯಲ್ಲಿ ತಾವೇ ಆ ಕಾರ್ಯಗಳ ಉಸ್ತುವಾರಿ ಮಾಡುತ್ತಾರೆ.

ಇಂದು ದೈಹಿಕ ಶಿಕ್ಷಕರಾದವರು ಕ್ರೀಡಾ ತಂತ್ರಜ್ಞಾನವನ್ನು (Sports Technology) ಅಭಿವೃದ್ಧಿಗೊಳಿಸಿ, ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅವುಗಳನ್ನು ಮಾರುವಷ್ಟರ ಮಟ್ಟಿಗೆ ಬೆಳೆದು ನಿಂತಿದ್ದಾರೆ.

ಇಂದಿನ ದಿನಗಳಲ್ಲಿ ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಿಂದ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಅತ್ಯಂತ ಸುಸಜ್ಜಿತ ಒಳ ಮತ್ತು ಹೊರ ಕ್ರೀಡಾಂಗಣಗಳ ನಿರ್ಮಾಣ ಮತ್ತು ಅತ್ಯಾಧುನಿಕ ಕ್ರೀಡಾಸಾಮಗ್ರಿಗಳ ಪೂರೈಕೆ ಮತ್ತು ಅವುಗಳ ನಿರ್ವಹಣೆಯ ಜವಾಬ್ದಾರಿಯು ಕೂಡಾ ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯದೆ ಆಗಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೂ ಮತ್ತು ಸಾರ್ವಜನಿಕರಿಗೂ ಎಲ್ಲಾ ರೀತಿಯ ಅನುಕೂಲವಾಗಿದೆ. ಈಗ ಈ ಸವಲತ್ತುಗಳನ್ನು ತಾಲೂಕಾ ಮತ್ತು ಪಂಚಾಯ್ತಿಗಳಿಗೂ ವಿಸ್ತರಿಸಲಾಗಿದೆ.

ಇಂದು ಪ್ರತಿಯೊಂದು ಜಿಲ್ಲಾ ಕೇಂದ್ರಗಳಿಗೆ ಒಂದರಂತೆ ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾ ಇಲಖೆಯಿಂದ ಕ್ರೀಡಾ ಶಾಲೆಗಳನ್ನು

Digitised by Bharatavani, CIIL

ಪ್ರಾರಂಭಿಸಿ, ಆ ಜಿಲ್ಲೆಯಲ್ಲಿ ಯಾವ ಕ್ರೀಡೆಗಳ ಪ್ರಚಲಿತವಗಿರುವವೂ ಆ ಕ್ರೀಡೆಗಳಲ್ಲಿ ವಿಶೇಷ ತರಬೇತಿಯನ್ನು ಕೊಡಲಾಗುತ್ತದೆ.

**ಕ್ರೀಡಾಕೂಟ ಮತ್ತು ಕ್ರೀಡಾ ತರಬೇತಿ ಶಿಬಿರಗಳನ್ನು ಸಂಘಟನೆಗಳು.**

ಇಂದು ಕೇಂದ್ರ ಮತ್ತು ರಾಜ್ಯ ಸರಕಾರ, ಕ್ರೀಡಾ ಪ್ರಾಧಿಕಾರ, ಅನೇಕ ಸಂಘ ಸಂಸ್ಥೆ ಮತ್ತು ಪ್ರಾಯೋಜಕರ ಸಹಾಯ ಮತ್ತು ಸಹಯೋಗದೊಂದಿಗೆ

1. ಪ್ರತಿಯೊಂದು ವೈಯಕ್ತಿಕ ಮತ್ತು ಗುಂಪು ಕ್ರೀಡೇ ಮತ್ತು ಮೇಲಾಟಗಳಲ್ಲಿ ಕ್ರೀಡಾಕೂಟಗಳನ್ನು ಸಂಘಟಿಸಲಾಗುತ್ತಿದೆ.
2. ಪ್ರತಿಯೊಂದು ವಿಭಾಗಗಳಲ್ಲಿ ಅಂದರೆ ಕೆಡೆಟ್, ಸಬ್ ಜೂನಿಯರ್, ಜೂನಿಯರ್, ಸೀನಿಯರ್ ಮತ್ತು ಮುಕ್ತ ಪಂದ್ಯಾಟಗಳನ್ನು ಬಾಲಕ ಮತ್ತು ಬಾಲಕಿಯರ ಪುರುಷ ಮತ್ತು ಮಹಿಳೆಯರ ಅಲ್ಲದೆ ಮಿಕ್ಸಡ ಸಿಂಗಲ್ಸ ಮತ್ತು ಮಿಕ್ಸಡ ಡಬಲ್ಸ್ ವಿಭಾಗಗಳಲ್ಲಿಯೂ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.
3. ಪ್ರತಿಯೊಂದು ಕ್ರೀಡೆಗಳಲ್ಲಿ ಕ್ರೀಡಾಧಿಕಾರಿಗಳಿಗಾಗಿ ಇರುವ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಧಿಕಾರಿಗಳ ಸಂಖ್ಯೆಯು ಸಾಕಷ್ಟು ಪ್ರಮಾಣದಲ್ಲಿದೆ.
4. ಇಂದು ಸಾಕಷ್ಟು ಸಂಖ್ಯೆಯಲ್ಲಿ ಪ್ರತಿಯೊಂದು ಕ್ರೀಡೆಗಳಲ್ಲಿ ಡಿಪ್ಲೋಮಾ ಇನ್ ಕೋಚಿಂಗ್ (Diploma in Coaching) ಮಾಡಿದವರು ದೊರೆಯುತ್ತಾರೆ.

ಅಂದು ಕೆಲವೆ ಕ್ರೀಡಾಕೂಟಗಳನ್ನು ನಿರ್ದಿಷ್ಟ ವಯೋಮಿತಿ ಮತ್ತು ವಿಭಾಗಗಳಿಗೆ ಸಂಬಂಧಿಸಿದವಾಗಿದ್ದವು.

ಇಂದು.

1. ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕ್ರೀಡಾಕೂಟ.
2. ಪದವಿ ಪೂರ್ವ ಕ್ರೀಡಾಕೂಟ.
3. ಅಂತರ್ ಮಹಾವಿದ್ಯಾಲಯ ಕ್ರೀಡಾಕೂಟ.
4. ಅಂತರ್ ವಿಶ್ವವಿದ್ಯಾನಿಲಯ ಕ್ರೀಡಾಕೂಟ.
5. ದಸರಾ ಕ್ರೀಡಕೂಟ.
6. ಗ್ರಾಮೀಣ ಕ್ರೀಡಾಕೂಟ.
7. ಡಾ.ಬಿ.ಆರ್. ಅಂಬೆಡ್ಕರ್ ಗ್ರಾಮೀಣ ಕ್ರೀಡಾಕೂಟ.
8. ಮಹಿಳಾ ಕ್ರೀಡಾಕೂಟ.
9. ಕನ್ನಡ ರಾಜ್ಯೋತ್ಸವ ಕ್ರೀಡಾಕೂಟ.
10. ನಾಡಹಬ್ಬಗಳು.
11. ವೆಟರ್ನ್ಸ ಕ್ರೀಡಾಕೂಟ.
12. ವಿಕಲ ಚೇತನರ ಕ್ರೀಡಾಕೂಟಗಳು.

**ದೈಹಿಕ ಶಿಕ್ಷಕರ ಗುರುತರವಾದ ಜವಾಬ್ದಾರಿಗಳು.**

2003ರಲ್ಲಿ ಎನ್.ಎ.ಎಸ್.ಪಿ.ಇ. (National Association of Sports and Physical Education) ಇವರು ಶಾಲೆಯ ಆವರಣದಲ್ಲಿ ಕನಿಷ್ಠ 60 ನಿಮಿಷಗಳಾದರೂ ದೈಹಿಕ ಚಟುವಟಿಕೆಗಳು ಮತ್ತು ಕ್ರೀಡೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಬೇಕೆಂದು ಶಿಫಾರಸ್ಸು ಮಾಡುವುದರ ಜೊತೆಗೆ ಪ್ರತಿಯೊಂದು ಶಾಲಾ ಪಠ್ಯಕ್ರಮದಲ್ಲಿ ಅಳವಡಿಸುವಂತೆ ಸೂಚಿಸಿತ್ತು.

1. ದೈಹಿಕ ಶಿಕ್ಷಣ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸಾಕಷ್ಟು ಸೌಕರ್ಯಗಳನ್ನು ಒದಗಿಸುವುದು.
2. ಮಕ್ಕಳಲ್ಲಿ ಅಭಿರುಚಿ ಹುಟ್ಟಿಸುವಂತಹ ಕ್ರೀಡೆ ಮತ್ತು ಚಟುವಟಿಕೆಗಳನ್ನು ಸಂಘಟಿಸುವುದು. ಸಂಘಟಿಸಿದ ಚಟುವಟಿಕೆ ಮತ್ತು ಕ್ರೀಡೆಗಳಿಗೆ ಸಾಕಷ್ಟು ಸ್ಥಳಾವಕಾಶ ಮತ್ತು ಕ್ರೀಡಾ ಸಾಮಗ್ರಿಗಳನ್ನು ಒದಗಿಸುವುದು.
3. ಶಿಕ್ಷಕರಾದವರು ಅತಿಯಾಗಿ ಮಾತನಾಡುವುದು ಮತ್ತು ಸಲಹೆ ಸೂಚನೆಗಳನ್ನು ಕೊಡುವುದನ್ನು ನಿಯಂತ್ರಿಸಿಕೊಂಡು ಕ್ರೀಡಾ ಕೌಶಲ್ಯಗಳನ್ನು ಕಲಿಸುವವರಾಗಬೇಕು.
4. ಹೆಚ್ಚಿನ ವಿದ್ಯಾರ್ಥಿಗಳಿಗೆ ಭಾಗವಹಿಸಲು ಅವಕಾಶಗಳು ದೊರೆಯುವ ಕ್ರೀಡಾ ಯೋಜನೆಗಳನ್ನು ರೂಪಿಸುವುದು.
5. ದೈಹಿಕ ಶಿಕ್ಷಣದ ತರಗತಿಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ಸಂತೋಷದಿಂದ ಸಂಭ್ರಮಿಸಿ, ಕ್ರೀಡಾ ಕೌಶಲ್ಯಗಳನ್ನು ಕಲಿಯುವಂತೆ ಪ್ರೇರೇಪಿಸುವುದು.
6. ವಿದ್ಯಾರ್ಥಿಗಳು ಜೀವನದುದ್ದಕ್ಕೂ ಶಿಸ್ತು ಅವಳಡಿಸಿಕೊಳ್ಳುವಂತೆ ಮಾನಸಿಕವಾಗಿ ತಯಾರು ಮಾಡುವುದು.
7. ವಿದ್ಯಾರ್ಥಿಗಳು ಸದಾ ಕ್ರೀಯಾಶೀಲರಾಗುವಂತೆ ಅವರನ್ನು ಉತ್ತೇಜಿಸಿ ಮಾರ್ಗದರ್ಶನ ಮಾಡುವುದು.
8. ಶಾಲೆಯಿಂದ ವಿದ್ಯಾರ್ಥಿಗಳು ಮನೆಗೆ ತೆರಳಿದ ನಂತರ ಅವರ 'ಬಿಡುವಿನ ವೇಳೆಯನ್ನು' ಸದುಪಯೋಈಗಪಡಿಸಿಕೊಳ್ಳುವ ಉದ್ದೇಶದಿಂದ ಅನೇಕ ಸುಗುಮವಾದ ಕ್ರೀಡೆಗಳನ್ನು ಮತ್ತು ಚಟುವಟಿಕೆಗಳನ್ನು ಮನೆಗೆಲಸ (Home Work ರೂಪದಲ್ಲಿ ಕೊಡುವುದು.
9. ದೈಹಿಕ ಶಿಕ್ಷಕನಾದವನು ವಿದ್ಯಾರ್ಥಿಗಳು ಉತ್ತಮ ಕ್ರೀಡಾ ಪ್ರದರ್ಶನ ನೀಡಿದಾಗ ಅವರನ್ನು ಹೊಗಳಿಕೆಯ ಮಾತುಗಳಿಂದ ಪ್ರಶಂಸೆ ಮಡುವುದು.
10. ದೈಹಿಕ ಶಿಕ್ಷಕನಾದವನು ದೈಹಿಕ ಚಟುವಟಿಕೆ ಮತ್ತು ಕ್ರೀಡೆಗಳ ಬಗ್ಗೆ ಸಕಾರಾತ್ಮಕ ವಿಚಾರಗಳನ್ನು ತಿಳಿಸುತ್ತಿರಬೇಕು. ಆರೋಗ್ಯದ ಮಹತ್ವ ತಿಳಿಸುತ್ತಾ, ಭಾವಿ ಜೀವನದಲ್ಲಿ ಅವುಗಳ ಪ್ರಯೋಜನ ಕುರಿತು ತಿಳುವಳಿಕೆ ನೀಡುವುದು.

ಯಾವುದೇ ಶಿಕ್ಷಣ ಸಂಸ್ಥೆಗಳನ್ನು ನಾವು ಗಮನಿಸಿದರೆ, ವಿದ್ಯಾಥಿಗಳು ಮುಖ್ಯೋಪಾಧ್ಯಾಯರ ಪ್ರಭಾವದಲ್ಲಿ ಬರುವಂತೆ ದೈಹಿಕ ಶಿಕ್ಷಕನ ಪ್ರಭಾವದಲ್ಲಿಯೂ ಬರುತ್ತಾರೆ.

**ದೈಹಿಕ ಶಿಕ್ಷಕರಿಗೆ ಉದ್ಯೋಗ ಅವಕಾಶಗಳು.**

ಹಿಂದೆ : ದೈಹಿಕ ಶಿಕ್ಷಣದಲ್ಲಿ ಸರ್ಟಿಫಿಕೇಟ್ ಕೋರ್ಸ್, ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದವರು ಕೇವಲ.

1. ಸರಕಾರಿ, ಅರೆ-ಸರಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಪದವಿ ಪೂರ್ವ ಮಹಾವಿದ್ಯಾನಿಲಯ ಮತ್ತು ಮಹಾವಿದ್ಯಾನಿಲಯಗಳಲ್ಲಿ, ದೈಹಿಕ ಶಿಕ್ಷಣ ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸುವ ಅವಕಾಶಗಳು ಇದ್ದವು.

Digitised by Bharatavani, CIIL

**ಇಂದು ಮೇಲೆ ವಿವರಿಸಿದ ಅವಕಾಶಗಳನ್ನು ಹೊರತುಪಡಿಸಿ**

1. ಫಿಟ್ನೆಸ್ ಕೇಂದ್ರ, ಜಿಮ್ನಾಷಿಯಮ್, ಹೆಲ್ತ್ ಕ್ಲಬ್, ಕ್ರೀಯೋಥೆರಾಫಿ, ಥರ್ಮೋಥೆರಾಫಿ, ಇಲೆಕ್ಟ್ರೋ ಮ್ಯಾಗ್ನಿಟಿಕ್ ಥೆರಾಫಿ, ಮಸಾಜ್ ಥೆರಾಫಿ, ಮತ್ತು ಯೋಗ ಕೇಂದ್ರಗಳಲ್ಲಿ ಸೇವೆ ಸಲ್ಲಿಸುವ ಅವಕಾಶಗಳಿವೆ.
2. ತಾಂತ್ರಿಕ ಸಂಸ್ಥೆಗಳಾದ ಐ.ಐ.ಟಿ., ಎನ್.ಐ.ಟಿ. ಮುಂತಾದವುಗಳು.
3. ವಿವಿಧ ಕೈಗಾರಿಕೆಗಳಲ್ಲಿ ಕ್ರೀಡಾಧಿಕಾರಿಯಾಗಿ,
4. ಕ್ರೀಡಾ ಪತ್ರಿಕೋದ್ಯಮ.
5. ಆಧುನಿಕ ಆಸ್ಪತ್ರೆಗಳಲ್ಲಿ ಫಿಜಿಯೋಥೆರಾಪಿ ಇಲಾಖೆಯನ್ನು ಪ್ರತ್ಯೇಕವಾಗಿ ಪ್ರಾರಂಭಿಸಿ, ಆಸ್ಪತ್ರೆಯಲ್ಲಿರುವ ವೈದ್ಯರ ಸಹಯೋಗದೊಂದಿಗೆ ಸೇವೆ ಸಲ್ಲಿಸುವ ಅವಕಾಶಗಳು.
6. ರಕ್ಷಣೆ ಮತ್ತು ಪೊಲೀಸ್ ಇಲಾಖೆಯಲ್ಲಿ ವಿಶೇಷ ಭರ್ತಿಗಳಿಗೆ ಅವಕಾಶವಿದೆ.
7. ರಕ್ಷಣಾ ಇಲಾಖೆಯಿಂದ ನಡೆಸಲ್ಪಡುವ ದೈಹಿಕ ಚಟುವಟಿಕೆಗಳ ತರಬೇತಿ ಕೇಂದ್ರಗಳಲ್ಲಿ ಪ್ರಸ್ತುವಾಗಿ ಸೇವೆ ಸಲ್ಲಿಸುವ ಅವಕಾಶಗಳು.

ಕರ್ನಾಟಕದಲ್ಲಿ ದೈಹಿಕ ಶಿಕ್ಷಣದ ಸ್ಥಿತಿಯನ್ನು ಸ್ವತಂತ್ರ ಪೂರ್ವ, ಸ್ವತಂತ್ರ ನಂತರ ಮತ್ತು ಪ್ರಸ್ತುತ ಸ್ಥಿತಿಗಳನು ಕೂಲಂಕಷವಾಗಿ ಗಮನಿಸಿದರೆ ಪ್ರಸ್ತುತ ಸ್ಥಿತಿಯಲ್ಲಿ ಗಮನಾರ್ಹವಾದ ಬದಲಾವಣೆ ಮತ್ತು ಬೆಳವಣಿಗೆಗಳನ್ನು ಕಾಣಬಹುದು.

–ಎಸ್.ಎಲ್.ಬಿ.

## ಕರ್ನಾಟಕದಲ್ಲಿ ದೈಹಿಕ ಶಿಕ್ಷಣದ ಬೆಳವಣಿಗೆ

ದೈಹಿಕ ಶಿಕ್ಷಣದ ಬೆಳವಣಿಗೆ ಕುರಿತು ಇತಿಹಾಸದ ಪುಟಗಳನ್ನು ಅವಲೋಕಿಸುತ್ತಾ ಹೋದಂತೆಲ್ಲ, ಸ್ವಾರಸ್ಯಕರವಾದ ಸಂಗತಿಗಳು ನಮ್ಮ ಗಮನಕ್ಕೆ ಬರುತ್ತವೆ. ಅವುಗಳೆಂದರೆ ಸೇನೆಯಿಂದ ನಿವೃತ್ತರಾದ ಸಿಪಾಯಿಗಳ ಸಹಾಯದಿಂದ ಅಥವಾ ದೈಹಿಕವಾಗಿ ಆರೋಗ್ಯ ಮತ್ತು ಸದೃಢರಾಗಿದ್ದು ಕ್ರೀಡೆಯ ಬಗ್ಗೆ ಜ್ಞಾನ ಮತ್ತು ಆಸಕ್ತಿ ಹೊಂದಿರುವ ಯುವಕರ ಸಹಾಯದಿಂದ, ಶಾಲೆಗಳಲ್ಲಿ ದೈಹಿಕ ಶಿಕ್ಷಣವನ್ನು ನಿರ್ವಹಿಸಲಾಗುತ್ತಿತ್ತು. ಅಂಥ ಸಂದರ್ಭಗಳಲ್ಲಿ ಶಿಕ್ಷಕರಾದವರು ತಮಗೆ ತಿಳಿದ ಅಲ್ಲದೆ ತಾವು ಸೇನೆಯಲ್ಲಿರುವಾಗ ಪಡೆದ ತರಬೇತಿಯ ಆಧಾರದ ಮೇಲೆ ಅಂಗಸಾಧನೆ, ಕಸರತ್ತು, ಕವಾಯತ್ತು, ಓಡುವುದು, ಜಿಗಿಯುವುದು, ಭಾರ ಎತ್ತುವುದು ಹೀಗೆ ಮುಂತಾದ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುತ್ತಿದ್ದರು. ಒಟ್ಟಾರೆ **ದೈಹಿಕ ಶಿಕ್ಷಣ**ದ ಮೂಲಕ ವಿದ್ಯಾರ್ಥಿಗಳನ್ನು, ಸದೃಢ, ಬಲಿಷ್ಠ ಮತ್ತು ಆರೋಗ್ಯವಂತರನ್ನಾಗಿ ತಯಾರು ಮಾಡಿ, ಮಿಲಿಟರಿ ಸೇರಿ ತಮ್ಮನ್ನು ತಾವು ದೇಶ ರಕ್ಷಣೆಯಲ್ಲಿ ತೊಡಗಿಸಿಕೊಂಡು ಯುದ್ಧಭೂಮಿಯಲ್ಲಿ ವೀರ ಯೋಧರಾಗಿ ಕೆಚ್ಚೆದೆಯಿಂದ ಹೋರಾಡಿ ಜಯ ಸಾಧಿಸುವಂತೆ ಪ್ರಚೋದನೆ ಮಾಡುತ್ತಿದ್ದರು.

ಈ ಒಂದು ಅಭಿಪ್ರಾಯ ಕಾಲಕ್ರಮೇಣ ಬದಲಾಗಿ ದೈಹಿಕ ಶಿಕ್ಷಣವನ್ನು ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಿ ಅದನ್ನು ಸಹ–ಪಠ್ಯ ಚಟುವಟಿಕೆಯೆಂದು ಪರಿಗಣಿಸಲಾಯಿತು. ದೈಹಿಕ ಶಿಕ್ಷಣದ ಅವಧಿಯಲ್ಲಿ ಎಲ್ಲಾ ತರಗತಿಗಳ ವಿದ್ಯಾರ್ಥಿಗಳೆಲ್ಲರನ್ನು ಒಟ್ಟುಗೂಡಿಸಿ ದೈಹಿಕ ಚಟುವಟಿಕೆ, ಕವಾಯತು, ವೈಯಕ್ತಿಕ ಮತ್ತು ಗುಂಪು ಆಟಗಳು, ಮನೋರಂಜನೆಯ ಕ್ರೀಡೆಗಳಲ್ಲಿ ಭಾಗವಹಿಸುವಂತೆ ಅನುಕೂಲ ಮಾಡಿಕೊಡಲು ಪ್ರಾರಂಭಿಸಿದರು.

ಶಾಲೆಗಳಲ್ಲಿ ಏರ್ಪಡಿಸುವ ವಿಶೇಷ ದಿನಗಳಾದ ವಾರ್ಷಿಕ ಕ್ರೀಡಾ ದಿನಾಚರಣೆ, ಸ್ನೇಹ ಸಮ್ಮೇಳನ, ಶಾಲೆಗಳಿಗೆ ಮೇಲಾಧಿಕಾರಿಗಳು ಶಾಲಾ ತಪಾಸಣೆಗೆ ಭೇಟಿ ನೀಡಲು ಬಂದಾಗ, ಇಂಥ ಅನೇಕ ವಿಶೇಷ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣದ ಅವಧಿಯಲ್ಲಿ ತರಬೇತಿ ನೀಡಲಾಗಿರುವ ಚಟುವಟಿಕೆ ಮತ್ತು ಕವಾಯಿತುಗಳ ಪ್ರದರ್ಶನ ಮಾಡಿಸಲಾಗುತ್ತಿತ್ತು. ಹೀಗೆ ದೈಹಿಕ ಶಿಕ್ಷಣದ ವ್ಯಾಪ್ತಿಯು ಅಷ್ಟಕ್ಕೇ ಸೀಮಿತವಾಗಿತ್ತು ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ.

### ದೈಹಿಕ ಶಿಕ್ಷಣದ ಬೆಳವಣಿಗೆ

ಕರ್ನಾಟಕ ರಾಜ್ಯದಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳ ಬೆಳವಣಿಗೆಯನ್ನು ಅವಲೋಕಿಸಿದಾಗ ಮುಖ್ಯವಾಗಿ ರಾಜ್ಯ ಮತ್ತು ರಾಷ್ಟ್ರದ ಜನತೆಯ ಗಮನ ಸೆಳೆದದ್ದು ವಿಜಯನಗರ ಸಾಮ್ರಾಜ್ಯದ ವಂಶಸ್ಥರಾದ ಮೈಸೂರಿನ ಮಹಾರಾಜರು, ವಿಜಯನಗರ ಸಾಮ್ರಾಜ್ಯದ ಕಾಲದಿಂದಲೇ **ದಸರಾ ಹಬ್ಬವನ್ನು** ಅತ್ಯಂತ ವೈಭವಪೂರಿತವಾಗಿ ನೆರವೇರಿಸುತ್ತಾ ಬಂದಿರುವುದನ್ನು ಇತಿಹಾಸವು ನಮಗೆ ತಿಳಿಸುತ್ತದೆ. ಅದೇ ಒಂದು ಪರಂಪರೆಯನ್ನು ಮೈಸೂರಿನ ಮಹಾರಾಜರುಗಳಾದ ಒಡೆಯರವರು ಮುಂದುವರೆಸಿಕೊಂಡು ಬಂದರು. ನಂತರದ ದಿನಗಳಲ್ಲಿ ಮೈಸೂರಿನಲ್ಲಿಯ ದಸರಾ ಆಚರಣೆಯು ಜಗದ್ವಿಖ್ಯಾತಿಯನ್ನು ಪಡೆದುಕೊಂಡಿತು.

ದಸರಾ ಹಬ್ಬದ ನಿಮಿತ್ತ ಮೈಸೂರು ಮಹಾರಾಜರು 16ನೇ ಶತಮಾನದಿಂದಲೇ ಸಾಂಪ್ರದಾಯಿಕ ಕ್ರೀಡೆಗಳಾದ ಕುಸ್ತಿ, ಮಲ್ಲಯುದ್ಧ, ದೇಹದಾರ್ಢ್ಯ ಮುಂತಾದ ಸ್ಪರ್ಧೆಗಳನ್ನು ಆಯೋಜಿಸುತ್ತಾ ಬಂದರು. ಮುಂದೆ ಮಹಾರಾಜಾ ಜಯಚಾಮರಾಜೇಂದ್ರ ಒಡೆಯರವರು ಸಿಂಹಾಸನವನ್ನು ಅಲಂಕರಿಸಿದ ನಂತರ ಅವರು ಹೆಚ್ಚಿನ ಮುತುವರ್ಜಿ ವಹಿಸಿ ದಸರಾ ಹಬ್ಬದ ನಿಮಿತ್ತ ನಡೆಸಲ್ಪಡುವ ಅನೇಕ ಸಾಂಪ್ರದಾಯಿಕ ಕ್ರೀಡೆಗಳಲ್ಲದೆ, ವೈಯಕ್ತಿಕ ಮೇಲಾಟ, ಗುಂಪು ಆಟಗಳನ್ನು ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿಯೂ, ಅನೇಕ ವಿಧದ ಕ್ರೀಡೆಗಳನ್ನು ಕ್ರೀಡಾಕೂಟದ ಸಂಘಟನೆಯಲ್ಲಿ ಸೇರ್ಪಡೆಗೊಳಿಸಿ ಈ ಕ್ರೀಡಾಕೂಟಕ್ಕೆ **"ದಸರಾ ಕ್ರೀಡಾಕೂಟ"**ವೆಂದು ಹೆಸರಿಸಿದರು.

ದಸರಾ ಕ್ರೀಡಾಕೂಟವು ಎಲ್ಲ ರೀತಿಯಿಂದ ಸುಸಂಘಟಿತವಾಗಿ ಬೆಳೆಯಲು ಬೇಕಾಗುವ ಎಲ್ಲಾ ವಿಧವಾದ ಸಹಾಯ ಮತ್ತು ಸೌಕರ್ಯಗಳನ್ನು ಒದಗಿಸಿ ನಂತರದ ದಿನಗಳಲ್ಲಿ ದಸರಾ ಹಬ್ಬದ ನಿಮಿತ್ತ ಈ ಕ್ರೀಡಾಕೂಟವನ್ನು ತಾಲೂಕು, ಜಿಲ್ಲಾ ಮತ್ತು ವಿಭಾಗೀಯ ಮಟ್ಟಕ್ಕೂ ವಿಸ್ತರಿಸಿ ಸ್ಪರ್ಧೆಗಳನ್ನು ನೆರವೇರಿಸುತ್ತಾ ಬಂದರು. ವಿಭಾಗೀಯ ಮಟ್ಟದಲ್ಲಿ ಮೇಲಾಟಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದು ವಿಜೇತರಾದ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಮತ್ತು ಗುಂಪು ಆಟಗಳಲ್ಲಿ ವಿಜೇತ ತಂಡಗಳು ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವ ಅರ್ಹತೆಯನ್ನು ಪಡೆದುಕೊಳ್ಳುತ್ತಿದ್ದವು.

ರಾಜ್ಯಮಟ್ಟದ ದಸರಾ ಕ್ರೀಡೆಗಳಲ್ಲಿ ಭಾಗವಹಿಸುವ ಅರ್ಹತೆಯನ್ನು ಪಡೆದ ಮೇಲಾಟ ಕ್ರೀಡಾಪಟುಗಳನ್ನು ಮತ್ತು ತಂಡಗಳನ್ನು ಪ್ರವಾಸ ಮತ್ತು ದಿನಭತ್ಯೆಯನ್ನು ಕೊಟ್ಟು ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಮೈಸೂರಿಗೆ ಬರಮಾಡಿಕೊಂಡು ವಿಶ್ವವಿಖ್ಯಾತಿ ಪಡೆದ ದಸರಾ ಮಹೋತ್ಸವದ ಸಮಯದಲ್ಲಿ ಮೈಸೂರು ನಗರದಲ್ಲಿಯೇ ಎಲ್ಲಾ ಸಕಲ ಸೌಕರ್ಯಗಳೊಂದಿಗೆ ಕ್ರೀಡೆಗಳನ್ನು ಸಂಘಟಿಸಿ ಕ್ರೀಡಾಕೂಟವನ್ನು ಮುಕ್ತಾಯಗೊಳಿಸುತ್ತಿದ್ದರು. ಈಗಲೂ ಅದೇ ವಾಡಿಕೆ ಮುಂದುವರೆದಿದೆ.

ಮಹಾರಾಜಾ ಕೃಷ್ಣರಾಜ ಒಡೆಯರವರು ಒಳಾಂಗಣ ಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವರಾಗಿದ್ದ ಕಾರಣ ಅವರೇ ಸ್ವತಃ ಒಂದು

Digitised by Bharatavani, CIIL

ಕ್ರೀಡೆಯನ್ನು ಕಂಡುಹಿಡಿದು **"ಗಂಜೀಫಾ"** ಎಂದು ಆ ಕ್ರೀಡೆಗೆ ಹೆಸರಿಸಿ, ಅದನ್ನು ಸಾಕಷ್ಟು ಬೆಳೆಯುವ ಹಾಗೆ ನೋಡಿಕೊಂಡರು. ಮಹಾರಾಜಾ ಜಯಚಾಮರಾಜೇಂದ್ರ ಒಡೆಯರವರು ಮೈಸೂರಿನಲ್ಲಿ 1906ರಲ್ಲಿಯೇ **"ಗಾಲ್ಫ"** ಸಂಘವನ್ನು (Golf Club) ಪ್ರಾರಂಭಿಸಿದರು.

ನಮ್ಮ ದೇಶದಲ್ಲಿಯೇ ಪ್ರಪ್ರಥಮವಾಗಿ **ಯುವಕರಿಗಾಗಿ ವಸತಿ ನಿಲಯವನ್ನು** (Youth Hostel) ಸ್ಥಾಪಿಸಿದ ಕೀರ್ತಿಯು ಮಹಾರಾಜಾ ಜಯಚಾಮರಾಜೇಂದ್ರ ಒಡೆಯರವರಿಗೆ ಸಲ್ಲುತ್ತದೆ. ಇದನ್ನು 1949ರಲ್ಲಿ ಮಹಾರಾಜಾ ಮಹಾವಿದ್ಯಾಲಯ ಮೈಸೂರಿನಲ್ಲಿ ಪ್ರಾರಂಭಿಸಲಾಯಿತು.

**ಪ್ರತಿಯೊಂದು ಕ್ರೀಡೆಗಳ ಉಗಮಸ್ಥಾನ ದೈಹಿಕ ಶಿಕ್ಷಣವೇ** ಆಗಿರುವುದರಿಂದ ದೈಹಿಕ ಶಿಕ್ಷಣದ ಮಹತ್ವ ಅರಿತ ಅಂದಿನ ಮೈಸೂರು ಸರಕಾರವು 1959ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಅಧೀನದಲ್ಲಿ ದೈಹಿಕ ಶಿಕ್ಷಣದಲ್ಲಿ ಡಿಪ್ಲೋಮಾ ಪದವಿಯೊಂದಿಗೆ (Diploma in Physical Education) ದೈಹಿಕ ಶಿಕ್ಷಣ ಮಹಾವಿದ್ಯಾಲಯವನ್ನು ಪ್ರಾರಂಭಿಸಿತು. ನಂತರದ ದಿನಗಳಲ್ಲಿ ಅಂದರೆ 1963–64ರಲ್ಲಿ ಈ ಒಂದು ಪದವಿಯನ್ನು ಬಿ.ಇಡಿ. (Bachelor of Education) ಗೆ ಸರಿಸಮಗೊಳಿಸುವ ಉದ್ದೇಶದಿಂದ ಡಿ.ಪಿ.ಇಡಿ.ಯನ್ನು / ಬಿ.ಪಿ.ಇಡಿ. (Bachelor of Physcial Education) ಎಂದು ಬದಲಾವಣೆ ಮಾಡಲಾಯಿತು. ಇದೇ ಮಹಾವಿದ್ಯಾಲಯದಲ್ಲಿ 1967ರಲ್ಲಿ ಸಿ.ಪಿ.ಇಡಿ. ಕೋರ್ಸ್ (Certificate Course in Physical Education) ಪ್ರಾರಂಭಿಸಿ, ನಂತರದ ದಿನಗಳಲ್ಲಿ ಕಾರಣಾಂತರಗಳಿಂದ ಸಿ.ಪಿ.ಇಡಿ. ಕೋರ್ಸನ್ನು ಮಹಾವಿದ್ಯಾಲಯದಿಂದ ಕೈಬಿಡಲಾಯಿತು. 1972ರಲ್ಲಿ ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು (Master of Physical Education) ಪ್ರಾರಂಭಿಸಲಾಯಿತು.

1972ರಲ್ಲಿ ಚಿಕ್ಕ ಬಳ್ಳಾಪುರದಲ್ಲಿ ಸಿ.ಪಿ.ಇಡಿ. ಕೋರ್ಸನೊಂದಿಗೆ (Certificate Course in Physical Education) ಮುನ್ಸಿಪಲ್ ದೈಹಿಕ ಶಿಕ್ಷಣ ಮಹಾವಿದ್ಯಾಲಯವು ಪ್ರಾರಂಭವಾಯಿತು. ಇದು ರಾಜ್ಯದಲ್ಲಿಯೇ ಸಿ.ಪಿ.ಇಡಿ. ಕೋರ್ಸನೊಂದಿಗೆ ಪ್ರಾರಂಭವಾದ ಪ್ರಥಮ ದೈಹಿಕ ಶಿಕ್ಷಣ ಮಹಾವಿದ್ಯಾಲಯವೆಂಬ ಕೀರ್ತಿಗೂ ಪಾತ್ರವಾಯಿತು.

1956 ರಲ್ಲಿ ಮೈಸೂರು ಸಂಸ್ಥಾನವು (ರಾಜ್ಯವು) ಕರ್ನಾಟಕ ರಾಜ್ಯವಾಗಿ ನಾಮಕರಣಗೊಂಡ ನಂತರ, ಕರ್ನಾಟಕ ಸರಕಾರವು ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಶೈಕ್ಷಣಿಕ ವರ್ಷದಿಂದಲೇ ಅನ್ವಯುವಾಗುವಂತೆ ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ಮಹಾವಿದ್ಯಾಲಯವನ್ನು ಪದವಿಯೊಂದಿಗೆ ಪ್ರಾರಂಭಗೊಳಿಸಿತು. ಅದರಂತೆ ಕರ್ನಾಟಕ ವಿಶ್ವವಿದ್ಯಾಲಯ ಸಂಲಗ್ನತೆಯಲ್ಲಿ ಬರುವ ಧಾರವಾಡದ ಮಲ್ಲಸರ್ಜ ವ್ಯಾಯಾಮ ಶಿಕ್ಷಣ ಸಂಸ್ಥೆ ಮತ್ತು ಬೆಳಗಾವಿಯ ಬಿನಿಯಾನ್ ಸ್ಮಿತ್ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ದೈಹಿಕ ಶಿಕ್ಷಣದಲ್ಲಿ ಪದವಿ ಕೋರ್ಸನೊಂದಿಗೆ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಸರಕಾರ ಅನುಮತಿಯನ್ನು ನೀಡಿತು.

ಆ ನಂತರದ ದಿನಗಳಲ್ಲಿ ಜನತೆಯ ಬೇಡಿಕೆಯನ್ನು ಈಡೇರಿಸುವ ದೃಷ್ಟಿಯಿಂದ ಇಂದಿನವರೆಗೂ, ಪ್ರತಿಯೊಂದು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವಂತೆ ಸುಮಾರು 20 ಶಿಕ್ಷಣ ಸಂಸ್ಥೆಗಳಿಗೆ ಕರ್ನಾಟಕ ಸರಕಾರವು ದೈಹಿಕ ಶಿಕ್ಷಣದಲ್ಲಿ ಪದವಿ (ಬಿ.ಪಿ.ಇಡಿ.) ಕೋರ್ಸ್ (Bachelor of Physical Education Course) ಪ್ರಾರಂಭಿಸುವುದಕ್ಕೆ ಅನುಮತಿಯನ್ನು ನೀಡಿದೆ.

ಡಿಸೆಂಬರ್ 1974ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1990 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, 1998 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 2005ರಲ್ಲಿ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, 2001ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಧಾರವಾಡದ ಅಧೀನದಲ್ಲಿ ಬರುವ ಬಾಗಲಕೋಟೆಯ ಬಸವೇಶ್ವರ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಗಳನ್ನು (Master of Physical Education) ಪ್ರಾರಂಭಿಸಲು ಕರ್ನಾಟಕ ಸರಕಾರವು ಅನುಮತಿ ನೀಡಿತು.

1996 ರಂದು ಮಂಗಳೂರು ವಿಶ್ವವಿದ್ಯಾಲಯವು ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯಾದ ಎಮ್.ಪಿ.ಇ.ಎಸ್. (Master of Physical Education and Sports) ಪ್ರಾರಂಭಿಸಿ ನಂತರ ಅದನ್ನು 2004–05ರಲ್ಲಿ ಎಮ್.ಪಿ.ಇಡಿ. (Master of Physical Education) ಎಂದು ಪರಿವರ್ತಿಸಲಾಯಿತು.

ದೈಹಿಕ ಶಿಕ್ಷಣ ಸಂಶೋಧನೆಯಲ್ಲಿ ಸ್ನಾತಕೋತ್ತರ ಪದವಿಯಾದ ಎಮ್.ಫಿಲ್. (Master of Philosophy in Physical Education) ಮತ್ತು ಪಿಹೆಚ್.ಡಿ. (Doctor of Philosophy in Physical Education) ಯಂಥ ಉನ್ನತ ವ್ಯಾಸಂಗ ಪ್ರಾರಂಭಿಸಿ ಮಾರ್ಗದರ್ಶನ ಮಾಡುವ ಪ್ರಕ್ರಿಯೆ 2005 ರಲ್ಲಿಯೇ ಗುಲ್ಬರ್ಗಾ ವಿಶ್ವವಿದ್ಯಾಲಯವು ಪ್ರಾರಂಭಿಸಿತು. ಇತ್ತೀಚಿನ ದಿನಗಳಲ್ಲಿ ಕರ್ನಾಟಕ ರಾಜ್ಯದ ಪ್ರತಿಯೊಂದು ವಿಶ್ವವಿದ್ಯಾಲಯಗಳಲ್ಲಿಯೂ ದೈಹಿಕ ಶಿಕ್ಷಣ ಸಂಶೋಧನೆಯಲ್ಲಿ ತೊಡಗುವವರಿಗೆ ಮಾರ್ಗದರ್ಶಕರಾಗುವ ಅರ್ಹತೆಯನ್ನು ಸಾಕಷ್ಟು ಪ್ರಾಧ್ಯಾಪಕರು ಹೊಂದಿದ್ದಾರೆ.

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ದೈಹಿಕ ಶಿಕ್ಷಣದ ಬೆಳವಣಿಗೆ**

1985–86 ರಲ್ಲಿ ಜನತಾ ಸರಕಾರವು ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಆಡಳಿತವನ್ನೂ ನಡೆಸುತ್ತಿತ್ತು. ಅವರ ಸರಕಾರದಲ್ಲಿ ಸನ್ಮಾನ್ಯ ಶ್ರೀ ರಘುಪತಿಯವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಸಾರ್ವಜನಿಕರ ಬೇಡಿಕೆಯ ಮೇರೆಗೆ ಒಂದೇ ಕಂತಿನಲ್ಲಿ 142 ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳನ್ನು ಸ್ಥಾಪಿಸಿ ಸಿ.ಪಿ.ಇಡಿ. (Certificate Course in Physical Education) ಕೋರ್ಸ್ ಪ್ರಾರಂಭಿಸಲು ಸರಕಾರದಿಂದ ಅನುಮತಿಯನ್ನು ಕೊಡಲಾಯಿತು. ಈ ಒಂದು ಸರಕಾರದ ನಿರ್ಣಯದಿಂದ ಒಮ್ಮಿಂದೊಮ್ಮೆಲೇ ರಾಜ್ಯದ ತುಂಬೆಲ್ಲಾ ನಾಯಿಕೊಡೆಯಂತೆ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು ತಲೆ ಎತ್ತಿ ನಿಂತ ಕಾರಣ ಅನೇಕ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು ವಿವಿಧ ರೀತಿಯ ತೊಂದರೆಗಳನ್ನು ಅನುಭವಿಸುವಂಥ ಸನ್ನಿವೇಶ ನಿರ್ಮಾಣವಾಯಿತು. ಅದರಲ್ಲಿ ಮುಖ್ಯವಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯ ಕೊರತೆಯಾಯಿತು. ಆದರೂ ಅದನ್ನು ಹೇಗೋ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು ನಿಭಾಯಿಸಿಕೊಂಡು ಬಂದವು. ಏಕೆಂದರೆ ಆಗ ಸಿ.ಪಿ.ಇಡಿ. ಕೋರ್ಸಿಗೆ ಪ್ರವೇಶ ಪಡೆಯಲು ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಮಾತ್ರ ಬೇಕಿತ್ತು.

1989–90ನೇ ಶೈಕ್ಷಣಿಕ ವರ್ಷದಿಂದಲೇ ಅನ್ವಯವಾಗುವಂತೆ ಅಂದಿನ ಕರ್ನಾಟಕ ಸರಕಾರದ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷದ ಸರಕಾರವು ಸಿ.ಪಿ.ಇಡಿ. ಕೋರ್ಸಿಗೆ ಪ್ರವೇಶ ಪಡೆಯಲು ಕನಿಷ್ಠ ವಿದ್ಯಾರ್ಹತೆಯನ್ನು ಎಸ್.ಎಸ್.ಎಲ್.ಸಿ. ಯು ಬದಲಾಗಿ ಪಿ.ಯು.ಸಿ.ಯನ್ನಾಗಿ ನಿಗದಿಪಡಿಸಿತು. ಆಗ ಮಾತ್ರ ನಿಜವಾದ ತೀವ್ರ ತರಹದ ಸಮಸ್ಯೆಗಳು ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ ಶುರುವಾದವು. ಇದಕ್ಕೆ ಕಾರಣ ಸಿ.ಪಿ.ಇಡಿ. ಬದಲಾಗಿ ಟಿ.ಸಿ.ಹೆಚ್. ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶಗಳು

Digitised by Bharatavani, CIIL

ಹೇರಳವಾಗಿದ್ದ ಕಾರಣ ಪಾಲಕರು ಮತ್ತು ವಿದ್ಯಾರ್ಥಿಗಳು ಟಿ.ಸಿ.ಹೆಚ್. ವ್ಯಾಸಂಗದ ಕಡೆಗೆ ಹೆಚ್ಚಿನ ಒಲವು ತೋರಲು ಪ್ರಾರಂಭಿಸಿದ್ದರಿಂದ ಅನೇಕ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಹಂತಕ್ಕೆ ತಲುಪಿದವು.

2006-07ರಲ್ಲಿ 2006-07ನೇ ಶೈಕ್ಷಣಿಕ ವರ್ಷದಿಂದಲೇ ಅನ್ವಯವಾಗುವಂತೆ ಸಿ.ಪಿ.ಇಡಿ. (Certificate Course in Physical Education) ಕೋರ್ಸನ್ನು ಡಿ.ಪಿ.ಇಡಿ. (Diploma in Physical Education) ಎಂದು ಪರಿವರ್ತನೆಗೊಳಿಸಿ, ಅದನ್ನು ಎರಡು ವರ್ಷದ ಅವಧಿಗೆ ಹೆಚ್ಚಿಸಿ ಡಿ.ಪಿ.ಇಡಿ. ಮತ್ತು ಡಿ.ಇಡಿ. ಎರಡು ಕೋರ್ಸ್‌ಗಳಿಗೆ ಸರಿಸಮವಾದ ಸ್ಥಾನವನ್ನು ಕಲ್ಪಿಸುವ ಸದುದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸಿತು.

ಡಿ.ಪಿ.ಇಡಿ.ಯನ್ನು ಎರಡು ವರ್ಷಕ್ಕೆ ವಿಸ್ತರಿಸಿದಾಗ ಪ್ರವೇಶ ಪಡೆಯುವ ಆಕಾಂಕ್ಷಿಗಳ ಕೊರತೆ ಹೆಚ್ಚಾಗಿ ಡಿ.ಪಿ.ಇಡಿ. ಪ್ರವೇಶದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯವಾಗಿ ಇಳಿಮುಖ ಕಂಡಿತು. ಇದಕ್ಕೆ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಕರ್ನಾಟಕ ಸರಕಾರವು ಗಂಭೀರ ಚಿಂತನೆ ನಡೆಸಿ, ದೈಹಿಕ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವ ಅಷ್ಟೇ ಅಲ್ಲದೆ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ತಲೆದೋರಿರುವ ಪ್ರವೇಶದ ಕೊರತೆಯನ್ನು ನೀಗಿಸುವ ದೃಷ್ಟಿಕೋನದಿಂದ ಕರ್ನಾಟಕ ಸರಕಾರವು ಒಂದು ತಜ್ಞರ ಸಮಿತಿಯನ್ನು (Experts Committee) ರಚಿಸುವ ಚಿಂತನೆಯಲ್ಲಿ ತೊಡಗಿತು. ಈ ಸಮಸ್ಯೆಯೊಂದಿಗೆ ಇನ್ನೊಂದು ಗಂಭೀರ ಸಮಸ್ಯೆಯು ತಲೆದೋರಿತು, ಅದು ಈ ಕೆಳಗಿನಂತಿದೆ.

ಶಿಕ್ಷಣ ಮತ್ತು ದೈಹಿಕ ಶಿಕ್ಷಣವು ಒಂದೇ ವಿಭಾಗಕ್ಕೆ ಸಂಬಂಧಿಸಿದ ವಿಷಯವಾಗಿದ್ದರೂ ಶಿಕ್ಷಣಕ್ಕೆ ಸರಕಾರ, ಸಾರ್ವಜನಿಕರು, ಸಂಘ ಸಂಸ್ಥೆಗಳು ಮತ್ತು ಇನ್ನಿತರ ಏಜನ್ಸಿಗಳಿಂದ ದೊರೆತ ಸಹಾಯ, ಸಹಕಾರ, ಸೌಕರ್ಯ ಮತ್ತು ಪ್ರೋತ್ಸಾಹಗಳು ದೈಹಿಕ ಶಿಕ್ಷಣಕ್ಕೆ ದೊರೆಯದೇ ಹೋದವು. ಹೀಗಾಗಿ ಶಿಕ್ಷಣ ವಿಭಾಗದ ಬೆಳವಣಿಗೆಯು ಹೇಗೆ ಗಣನೀಯ ಪ್ರಮಾಣದಲ್ಲಿ ಬೆಳೆಯುತ್ತಾ ಹೋಯಿತೋ, ಅದೇ ಪ್ರಮಾಣದಲ್ಲಿ ದೈಹಿಕ ಶಿಕ್ಷಣ ವಿಭಾಗದ ಬೆಳವಣಿಗೆಯು ಕಾಣದೇ ಇರುವುದನ್ನು ಮನಗಂಡ ಸನ್ಮಾನ್ಯ ಶ್ರೀ ಕುಮಾರಸ್ವಾಮಿಯವರ ನೇತೃತ್ವದ ಜನತಾದಳದ ಕರ್ನಾಟಕ ಸರಕಾರವು ಈ ಮೊದಲೇ ಒಂದು ತಜ್ಞರ ಸಮಿತಿಯನ್ನು (Experts Committee) ರಚಿಸುವ ಚಿಂತನೆಯಲ್ಲಿ ತೊಡಗಿರುವ ಪ್ರಕಾರ ಅಂದಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತಜ್ಞರ ಸಮಿತಿ ರಚಿಸಲು ಹೆಚ್ಚಿನ ಕಾಳಜಿ ವಹಿಸಿದರು. ಏಕೆಂದರೆ ಮೂಲತಃ ಅವರು ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದವರಾಗಿದ್ದರಿಂದ ದೈಹಿಕ ಶಿಕ್ಷಣದ ಬೇಕು ಬೇಡಗಳು, ಸಮಸ್ಯೆಗಳು ಮುಂತಾದ ಒಳ ಮತ್ತು ಹೊರ ನೋಟಗಳು ಅವರಿಗೆ ಸಂಪೂರ್ಣವಾಗಿ ಮಾಹಿತಿ ಮತ್ತು ಮನವರಿಕೆ ಇದ್ದ ಕಾರಣ ಪ್ರಾಥಮಿಕ ಶಿಕ್ಷಣದಿಂದ ಪದವಿ-ಪೂರ್ವ ಶಿಕ್ಷಣದವರೆಗೂ ದೈಹಿಕ ಶಿಕ್ಷಣದ ಸಮಗ್ರ ಬೆಳವಣಿಗೆಗಾಗಿ ಸಲಹೆ, ಸೂಚನೆ ಮತ್ತು ಯೋಜನೆಗಳನ್ನು ಒಳಗೊಂಡಂತೆ ಸಂಪೂರ್ಣ ಮಾಹಿತಿ ಕುರಿತು ವರದಿ ಪಡೆಯುವ ವಿಚಾರದಿಂದ ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಲ್.ಆರ್. ವೈದ್ಯನಾಥನ್ ಇವರ ಅಧ್ಯಕ್ಷತೆಯಲ್ಲಿ ಏಳು ಸದಸ್ಯರಿರುವ ಒಂದು ತಜ್ಞರ ಸಮಿತಿಯನ್ನು (Expert Committee) ರಚಿಸಲಾಯಿತು.

ಈ ತಜ್ಞರ ಸಮಿತಿಯು ಪ್ರತಿಯೊಂದು ದಿಶೆಯಲ್ಲಿ ಚಿಂತನೆ ಮಾಡುವ ಮೂಲಕ ಅಂದರೆ ಶಿಕ್ಷಣ ತಜ್ಞರ, ಕ್ರೀಡಾ ತಜ್ಞರ, ಸಂಘ ಸಂಸ್ಥೆಗಳ ಶಾಲಾ ಕಾಲೇಜುಗಳ ಮುಖ್ಯಸ್ಥರ, ವಿಶೇಷವಾಗಿ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳ ಮುಖ್ಯಸ್ಥರ, ವಿವಿಧ ಎನ್.ಜಿ.ಓ.ಗಳ ಸದಸ್ಯರುಗಳನ್ನು ಸಂಪರ್ಕಿಸಿ ಅವರ ಅಭಿಪ್ರಾಯಗಳ ಸಂಗ್ರಹ ಮಾಡುವುದರ ಜೊತೆಗೆ ಬೇರೆ ಬೇರೆ ರಾಜ್ಯಗಳಲ್ಲಿರುವ ದೈಹಿಕ ಶಿಕ್ಷಣಗಳ ಪಠ್ಯಕ್ರಮ ಅಳವಡಿಕೆ ಮಾಡಿದ ವಿಧಾನ ಮತ್ತು ಮಾದರಿಗಳನ್ನು ಸಂಗ್ರಹಿಸಿ, ದೈಹಿಕ ಶಿಕ್ಷಣದ ಪರಿವರ್ತನೆ ಮತ್ತು ಪುನರ್ ರಚಿಸುವ ನಿಟ್ಟಿನಲ್ಲಿ ಸಂಪೂರ್ಣ ವರದಿ ಒಪ್ಪಿಸುವಂತೆ ಸೂಚಿಸಲಾಯಿತು.

ಸರಕಾರದ ಸೂಚನೆಯಂತೆ ಪ್ರೊ. ಎಲ್.ಆರ್. ವೈದ್ಯನಾಥರವರ ಅಧ್ಯಕ್ಷತೆಯಲ್ಲಿ ರಚಿತವಾದ ತಜ್ಞರ ಸಮಿತಿಯು ತಮ್ಮ ಪೂರ್ಣ ಪ್ರಮಾಣದ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು.

**ತಜ್ಞರ ವರದಿಯ ಸಂಕ್ಷಿಪ್ತ ಸಾರಾಂಶ ಇಂತಿದೆ**

1) ರಾಜ್ಯದಲ್ಲಿ ಪ್ರತ್ಯೇಕ ದೈಹಿಕ ಶಿಕ್ಷಣ ನಿರ್ದೇಶನಾಲಯವನ್ನು ಪ್ರಾರಂಭಿಸುವುದು.

2) ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದ ಕ್ರೀಡಾ ಶುಲ್ಕದಲ್ಲಿ (Sports fees) ದೈಹಿಕ ಶಿಕ್ಷಣ ನಿರ್ದೇಶನಾಲಯದ ಖರ್ಚು ವೆಚ್ಚಗಳನ್ನು ನಿಭಾಯಿಸಲು ಅನುಕೂಲವಾಗುವಂತೆ ಸರಕಾರದ ನೀತಿ ರೂಪಿಸುವಂತೆ ಶಿಫಾರಸು.

3) ದೈಹಿಕ ಶಿಕ್ಷಕರ ಪದೋನ್ನತಿ ಹಾಗೂ ನೇಮಕಾತಿಯ ನಿಯಮಗಳಿಗೆ ಬದಲಾವಣೆ ತರುವುದು. (Changes of Cadre and Recruitment Rules) ದೈಹಿಕ ಶಿಕ್ಷಕರನ್ನು ಸಹಾಯಕ ಶಿಕ್ಷಕರೆಂದು ಪರಿಗಣಿಸಿ, ಅವರಿಗೂ ಮುಖ್ಯೋಪಾಧ್ಯಾಯರ ಹುದ್ದೆಯವರೆಗೂ ಬಡ್ತಿಯನ್ನು ನೀಡುವುದು.

4) ದೈಹಿಕ ಶಿಕ್ಷಣವನ್ನು ಶಾಲಾ ಪಠ್ಯಕ್ರಮದಲ್ಲಿ ಇನ್ನುಳಿದ ವಿಷಯಗಳಂತೆ ಅಳವಡಿಸಿ, ಒಂದನೇ ತರಗತಿಯಿಂದ ಹನ್ನೊಂದನೇ ತರಗತಿಯವರೆಗೂ ಕಡ್ಡಾಯಗೊಳಿಸುವುದು.

5) ಪ್ರತಿಯೊಂದು ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ 50 ವಿದ್ಯಾರ್ಥಿಗಳಿಗೆ ಒಬ್ಬರಂತೆ ದೈಹಿಕ ಶಿಕ್ಷಕರ ನೇಮಕಾತಿ ಮಾಡುವುದು, ನಂತರ ಶಾಲಾ ವಿದ್ಯಾರ್ಥಿಗಳ ನೊಂದಾವಣೆ ಸಂಖ್ಯೆಯು 500 ನ್ನು ಮೀರಿದರೆ, ಹೆಚ್ಚುವರಿಯಾಗಿ ಮತ್ತೊಬ್ಬ ದೈಹಿಕ ಶಿಕ್ಷಕರ ನೇಮಕಾತಿಗೆ ಕ್ರಮ ಕೈಗೊಳ್ಳುವುದು.

6) ದೈಹಿಕ ಶಿಕ್ಷಕರ ಹುದ್ದೆಗೆ ನೇಮಕಾತಿ ಮಾಡುವ ಸಂದರ್ಭದಲ್ಲಿ ತಾಲೂಕು ಮಟ್ಟದಿಂದ, ಅಂತಾರಾಷ್ಟ್ರೀಯ ಮಟ್ಟದವರೆಗೂ ಕ್ರೀಡೆಗಳಲ್ಲಿ ಭಾಗವಹಿಸಿ, ಸಾಧನೆ ಮಾಡಿದ ಅಭ್ಯರ್ಥಿಗಳಿಗೆ ಪ್ರತಿಶತ 3 ರಿಂದ 20 ರ ವರೆಗೆ ಹೆಚ್ಚಿನ ಅಂಕಗಳನ್ನು ನೀಡುವುದು.

7) ಕರ್ನಾಟಕ ಲೋಕಸೇವಾ ಆಯೋಗವು ನೇಮಕಾತಿಯ ಸಲುವಾಗಿ ನಡೆಸುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ, ಬಿ.ಪಿ.ಇಡಿ. ಮತ್ತು ಎಮ್.ಪಿ.ಇಡಿ. ಪದವಿಗಳನ್ನು ಹೊಂದಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ದೈಹಿಕ ಶಿಕ್ಷಕರಿಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸುವ ಅವಕಾಶ ನೀಡುವುದು.

8) ತಾಲೂಕು ಮಟ್ಟದಲ್ಲಿ ಹೆಚ್ಚು ಹೆಚ್ಚು ಕ್ರೀಡಾ ಸ್ಪರ್ಧೆಗಳನ್ನು ಸಂಘಟಿಸಲು ಉತ್ತೇಜಿಸುವುದು, ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಸಂಘಟಿಸಲು ಮುಂದಾದ ಶಾಲೆಗಳಿಗೆ ಕ್ರೀಡಾ ಸ್ಪರ್ಧೆಗಳನ್ನು ನಡೆಸಲುಬೇಕಾಗುವ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿಕೊಳ್ಳಲು ಅನುಕೂಲವಾಗುವಂತೆ ಹಣದ ಅನುದಾನವನ್ನು ಸರಕಾರವೇ ಕೊಡುವುದು.

Digitised by Bharatavani, CIIL

9) ದೈಹಿಕ ಶಿಕ್ಷಣವನ್ನು ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಿದ ಹಾಗೆ, ಯೋಗ ಶಿಕ್ಷಣವನ್ನು ಶಾಲಾ ಪಠ್ಯ ಕ್ರಮದಲ್ಲಿ ಅಳವಡಿಸಿ, ಪ್ರಾಥಮಿಕ ಶಿಕ್ಷಣದಿಂದ ಪದವಿ–ಪೂರ್ವ ಶಿಕ್ಷಣದವರೆಗೂ ಕ್ರೀಡಾ ಮತ್ತು ಯೋಗ ಬೆಳವಣಿಗೆಗೆ ಕ್ರೀಡಾ ನಿಧಿ ಹೊರತುಪಡಿಸಿ ಸರಕಾರವು 15 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡುವುದು.

ಹೀಗೆ ಅನೇಕ ಮಹತ್ವದ ಸಲಹೆ ಮತ್ತು ಯೋಜನೆಗಳೊಂದಿಗೆ ಪ್ರೊ. ಎಲ್.ಆರ್. ವೈದ್ಯನಾಥರವರ ಅಧ್ಯಕ್ಷತೆಯಲ್ಲಿ ರಚಿತಗೊಂಡ ತಜ್ಞರ ಸಮಿತಿಯು ಪೂರ್ಣ ಪ್ರಮಾಣದ ವರದಿಯನ್ನು ಆಗ ಇದ್ದ ಸರಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ಸಲ್ಲಿಸಿತು.

ಭಾರತೀಯ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ ಯೋಜನೆಯ ಕಾನೂನು 2009 ರ ಪ್ರಕಾರ ಉಚಿತ ಶಿಕ್ಷಣ ಪಡೆಯುವ ಹಕ್ಕನ್ನು ಭಾರತ ಸರಕಾರದಿಂದ ಮಕ್ಕಳಿಗೆ ನೀಡಲಾಗಿದೆ. ಇದರ ಹಿನ್ನೆಲೆ ಮತ್ತು 2006–07 ರಲ್ಲಿ ಸನ್ಮಾನ್ಯ ಶ್ರೀ ಕುಮಾರಸ್ವಾಮಿಯವರ ನೇತೃತ್ವದ ಜನತಾದಳ ಸರಕಾರಕ್ಕೆ ಸಲ್ಲಿಸಿದ್ದ ಪ್ರೊ. ಎಲ್.ಆರ್. ವೈದ್ಯನಾಥರವರ ಅಧ್ಯಕ್ಷತೆಯ ಏಳು ಸದಸ್ಯರ ತಜ್ಞರ ಸಮಿತಿಯು (Committee Report) ಸಲ್ಲಿಸಿದ ಪೂರ್ಣ ಪ್ರಮಾಣದ ವರದಿಯಲ್ಲಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಜಾರಿಗೊಳಿಸುವ ಐತಿಹಾಸಿಕ ನಿರ್ಣಯಗಳನ್ನು ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಆಗ ಅಧಿಕಾರದಲ್ಲಿದ್ದ ಸರಕಾರವು ತೆಗೆದುಕೊಂಡಿರುವುದು ಅತ್ಯಂತ ಸಂತೋಷ ಮತ್ತು ಸ್ವಾಗತಾರ್ಹ ಸಂಗತಿಯಾಗಿದೆ.

ಅಷ್ಟೇ ಅಲ್ಲದೆ ಕರ್ನಾಟಕ ರಾಜ್ಯದ ಪ್ರತಿಯೊಂದು ಸರಕಾರಿ, ಸರಕಾರದಿಂದ ಅನುದಾನ ಪಡೆಯುವ ಮತ್ತು ಖಾಸಗಿ ಶಾಲೆಗಳಲ್ಲಿಯೂ ದೈಹಿಕ ಶಿಕ್ಷಕರ ನೇಮಕಾತಿಯನ್ನು ಕಡ್ಡಾಯವಾಗಿ ಮಾಡಲೇಬೇಕೆಂಬ ಆಜ್ಞೆಯನ್ನು ಜಾರಿಗೊಳಿಸಿ ಪ್ರತಿಯೊಂದು ಶಾಲೆಗಳಿಗೂ ಅನ್ವಯವಾಗುವಂತೆ ಏಕರೂಪದ ದೈಹಿಕ ಶಿಕ್ಷಣವನ್ನು ಪಠ್ಯಕ್ರಮವನ್ನು ಕಡ್ಡಾಯವಾಗಿ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ಜಾರಿಗೊಳಿಸುವ ಕ್ರಮ ತೆಗೆದುಕೊಳ್ಳಲಾಗುತ್ತದೆ. ದೈಹಿಕ ಶಿಕ್ಷಣಕ್ಕೆ ನಿಗದಿಗೊಳಿಸಿದ್ದ 100 ಅಂಕಗಳಲ್ಲಿ 60 ಅಂಕಗಳನ್ನು ಕ್ರೀಡೆಗಳ ಪ್ರದರ್ಶನಕ್ಕೂ ಮತ್ತು 40 ಅಂಕಗಳನ್ನು ಥಿಯರಿ ಪತ್ರಿಕೆಗೆ (Theory Paper) ನಿಗದಿಪಡಿಸುವುದರ ಮೂಲಕ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶ ಮತ್ತು ಗುರಿಯನ್ನು ಸರ್ಕಾರ ಹೊಂದಿದೆ. ದೈಹಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಆರು ಮುಖ್ಯ ಕ್ರೀಡೆಗಳನ್ನು, ವಿವಿಧ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳನ್ನು, ಶಾರೀರಿಕ ಚಟುವಟಿಕೆಗಳು, ಯೋಗ, ಪ್ರಾಣಾಯಾಮ ಧ್ಯಾನ ಒಳಗೊಂಡಿರುವುದು. ವಿದ್ಯಾರ್ಥಿಗಳನ್ನು ಆರೋಗ್ಯವಂತರನ್ನಾಗಿ ನೋಡಿಕೊಳ್ಳುವ ದೃಷ್ಟಿಯಿಂದ ಅವರಿಗೆ ಆರೋಗ್ಯ ಶಿಕ್ಷಣದ ಜ್ಞಾನವನ್ನು ವಿವರಿಸುತ್ತಾ ಒಳ್ಳೆಯ ಆಹಾರ ಮತ್ತು ಸ್ವಚ್ಛತೆಯ ಮಹತ್ವ ತಿಳಿಸುವುದು, ರಾಷ್ಟ್ರ ಪ್ರೇಮ ಮತ್ತು ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವ ಮುಖ್ಯ ಉದ್ದೇಶದಿಂದ ಇವೆಲ್ಲವುಗಳನ್ನು ದೈಹಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಅಳವಡಿಸುವುದಾಗಿ ತಿಳಿಸುತ್ತ, ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆ ತಯಾರಿ ಇರುವುದರಿಂದ ಅವರಿಗೆ ದೈಹಿಕ ಶಿಕ್ಷಣ ಪರೀಕ್ಷೆಯಿಂದ ರಿಯಾಯಿತಿ ನೀಡಲಾಗಿರುವುದಾಗಿ ತಿಳಿಸಿದರು.

ದೈಹಿಕ ಶಿಕ್ಷಣದ ಪಾಠ ವಿಷಯ ಕುರಿತ ಪುಸ್ತಕಗಳು ಇಂಗ್ಲಿಷ್ ಭಾಷೆಗಳನ್ನೊಳಗೊಂಡು ವಿವಿಧ ಆರು ಭಾಷೆಗಳಲ್ಲಿ ಮುದ್ರಣ ಮಾಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ.

### ಪದವಿ ಮಹಾವಿದ್ಯಾಲಯಗಳಲ್ಲಿ ದೈಹಿಕ ಶಿಕ್ಷಣ ಬೆಳವಣಿಗೆ ಕುರಿತು

ದೇಶದ ಕೆಲವು ರಾಜ್ಯಗಳಲ್ಲಿ ಪದವಿ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣವನ್ನು ಒಂದು ಐಚ್ಛಿಕ ವಿಷಯವೆಂದು ಆಯ್ಕೆ ಮಾಡಿಕೊಂಡು ಓದುವ ಅವಕಾಶ ಕಲ್ಪಿಸಿದ ಹಾಗೆ ನಮ್ಮ ರಾಜ್ಯದಲ್ಲಿಯೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ಬಿ.ಎ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣವನ್ನು ಒಂದು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳುವ ಅವಕಾಶಗಳನ್ನು ಕಲ್ಪಿಸಿರುವ ಕರ್ನಾಟಕದ ವಿಶ್ವವಿದ್ಯಾಲಯಗಳ ವಿವರ ಇಂತಿದೆ.

### ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

ಮಂಗಳೂರು ವಿಶ್ವವಿದ್ಯಾಲಯ, ಸಂಲಗ್ನತೆಯಲ್ಲಿ ಬರುವ ಮಂಗಳೂರಿನ ಸೇಂಟ ಅಲೋಸಿಸ್ ಮಹಾವಿದ್ಯಾಲಯದಲ್ಲಿ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ವಿಷಯವನ್ನು ಇನ್ನಿತರ ವಿಷಯಗಳೊಂದಿಗೆ ಐಚ್ಛಿಕ ವಿಷಯವಾಗಿ ಪರಿಗಣಿಸಿ ಅಭ್ಯಸಿಸುವ ಅವಕಾಶವನ್ನು 1987–88 ನೇ ಶೈಕ್ಷಣಿಕ ವರ್ಷದಿಂದಲೇ ಒದಗಿಸಿದೆ.

ಮೂಡಬಿದರೆಯ ಆಳ್ವಾ ಮಹಾವಿದ್ಯಾಲಯದಲ್ಲಿ 2008–09ನೇ ಶೈಕ್ಷಣಿಕ ವರ್ಷದಿಂದಲೇ ಅನ್ವಯವಾಗುವಂತೆ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ವಿಷಯವನ್ನು ಇನ್ನಿತರ ವಿಷಯಗಳೊಂದಿಗೆ ಐಚ್ಛಿಕ ವಿಷಯವಾಗಿ ಪರಿಗಣಿಸಿ ಅಭ್ಯಸಿಸುವ ಅವಕಾಶವನ್ನು ಒದಗಿಸಿದೆ.

### ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ

ದಾವಣಗೆರೆ ವಿಶ್ವವಿದ್ಯಾಲಯ ದಾವಣಗೆರೆ, ಸಂಲಗ್ನತೆಯಲ್ಲಿ ಬರುವ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಚಿತ್ರದುರ್ಗದಲ್ಲಿ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2005–06ನೇ ಶೈಕ್ಷಣಿಕ ವರ್ಷದಿಂದಲೇ ದೈಹಿಕ ಶಿಕ್ಷಣ ವಿಷಯವನ್ನು ಇನ್ನಿತರ ವಿಷಯಗಳೊಂದಿಗೆ ಐಚ್ಛಿಕ ವಿಷಯವಾಗಿ ಪರಿಗಣಿಸಿ ಅಭ್ಯಾಸಿಸುವ ಅವಕಾಶವನ್ನು ಒದಗಿಸಿದೆ.

### ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ

ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾದ ಸಂಲಗ್ನತೆಯಲ್ಲಿ ಬರುವ ಗಂಗಾವತಿಯ ಶಿಕ್ಷಣ ಸಂಸ್ಥೆಯ, ಹೆಚ್.ಆರ್.ಎಸ್.ಎಮ್. ಮಹಾವಿದ್ಯಾಲಯ ಗಂಗಾವತಿಯು ದೈಹಿಕ ಶಿಕ್ಷಣ ವಿಷಯವನ್ನು ಬಿ.ಎ. ವಿದ್ಯಾರ್ಥಿಗಳಿಗೆ ಐಚ್ಛಿಕ ವಿಷಯವಾಗಿ ಪರಿಗಣಿಸಿ ಅನುಮತಿ ಕೊಡಬೇಕೆಂದು ಸಂಯೋಜನ ಶುಲ್ಕ (Affiliation fees) ದೊಂದಿಗೆ ಅರ್ಜಿಯನ್ನು ಸಲ್ಲಿಸಿತ್ತು. ಕೆಲವು ಕಾರಣಾಂತರಗಳಿಂದ ಅದು ಕಾರ್ಯರೂಪಕ್ಕೆ ಬರಲಿಲ್ಲ.

### ಕೃಷಿ, ಪಶುಸಂಗೋಪನೆ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲಿ, ದೈಹಿಕ ಶಿಕ್ಷಣ

ಕೃಷಿ, ಪಶುಸಂಗೋಪನೆ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳ, ಸಂಲಗ್ನತೆಯಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳಲ್ಲಿಯೂ ಪ್ರಾರಂಭದಿಂದಲೇ ದೈಹಿಕ ಶಿಕ್ಷಣದ ವಿಷಯವನ್ನು ಕಡ್ಡಾಯವಾಗಿಸಿಕೊಂಡಿದ್ದಾರೆ.

Digitised by Bharatavani, CIIL

ಕೃಷಿ, ಪಶುಸಂಗೋಪನೆ ಮತ್ತು ತೋಟಗಾರಿಕಾ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ವರ್ಷದ ಎಲ್ಲಾ ವಿದ್ಯಾರ್ಥಿಗಳಿಗೂ ಎರಡು ಸೆಮಿಸ್ಟರುಗಳಿಗೆ ಮಾತ್ರ ಅನ್ವಯವಾಗುವಂತೆ 100 ಅಂಕಗಳ ದೈಹಿಕ ಶಿಕ್ಷಣವನ್ನು ಪರಿಗಣಿಸಲಾಗಿದೆ. ಇದರಲ್ಲಿ 80 ಅಂಕಗಳನ್ನು ಪ್ರಾಯೋಗಿಕ ಮತ್ತು ಪಠ್ಯ ವಿಷಯಗಳಿಗೂ ಹಾಗೂ 20 ಅಂಕಗಳನ್ನು ಆಂತರಿಕ ಅಂಕಗಳೆಂದು ನಿಗದಿಪಡಿಸಲಾಗಿದೆ.

–ಎಲ್.ಎಸ್.ಬಿ.

## ಕರ್ನಾಟಕದಲ್ಲಿ ನಾಟಕ ಶಿಕ್ಷಣ (ರಂಗ ಶಿಕ್ಷಣ)

ಶಿಕ್ಷಣವನ್ನು ಉತ್ತಮಗೊಳ್ಳಿಸುವ ನಿಟ್ಟಿನಲ್ಲಿ ಅನೇಕ ಶೈಕ್ಷಣಿಕ ನೀತಿಯನ್ನು ಜಾರಿಗೊಳಿಸಿ ಯಾವ ರೀತಿಯಿಂದ ಅಥವಾ ಮಾರ್ಗದಿಂದ ಶಿಕ್ಷಣವನ್ನು ನೀಡಿದರೆ ಉತ್ತಮ ಕಲಿಕೆಯಾಗುತ್ತದೆ ಎಂಬುದನ್ನು ತಿಳಿದು ಅನೇಕ ಅಂಶಗಳನ್ನು ಮಾದರಿಗಳನ್ನು, ವಿಧಾನಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ ರಂಗಮಾಧ್ಯಮವು ಸಹ ಒಂದು ಅಂದರೆ "ಶಿಕ್ಷಣದಲ್ಲಿ ರಂಗಭೂಮಿ".

ರಂಗ ಶಿಕ್ಷಣದ ಸ್ವರೂಪ:

| ನಾಟಕ | ಶಿಕ್ಷಣ |
|---|---|
| ↓ | ↓ |
| ಕಥಾವಸ್ತು | ಸಾಮರ್ಥ್ಯ/ಪಠ್ಯಪುಸ್ತಕ |
| ↓ | ↓ |
| ನಿರ್ದೇಶಕರು | ಶಿಕ್ಷಕರು |
| ↓ | ↓ |
| ನಟ/ನಟಿ | ವಿದ್ಯಾರ್ಥಿ/ವಿದ್ಯಾರ್ಥಿನಿ |
| ↓ | ↓ |
| ರಂಗಸ್ಥಳ | ಶಾಲಾ ಕೊಠಡಿ |
| ↘ | ↙ |

ಸಮಾಜ

ನಾಟಕಕ್ಕೆ ಮನರಂಜನೆಯ ಜೊತೆಗೆ ಬೋಧಕ ಗುಣವಿದೆ ಹಾಗಾಗಿಯೇ ಅದನ್ನು ಪಂಚಮವೇದ ಎಂದೂ ಕರೆಯುತ್ತಾರೆ. ಶಿಕ್ಷಣದಲ್ಲಿ ಕೂಡ ಆನಂದ ಮತ್ತು ಕಲಿಕೆ ಜೊತೆ ಜೊತೆಯಾಗಿಯೇ ಇರಬೇಕು ಹೇಗೆ ಕಲಿಸಬೇಕು/ಕಲಿಯಬೇಕು ಎನ್ನುವಾಗ Learning with joy' ಬಗ್ಗೆ ಮಾತನಾಡುತ್ತೇವೆ. ಈ ಎರಡೂ ಕ್ಷೇತ್ರಗಳು ಒಂದರೊಡನೆ ಒಂದು ಹಾಸುಹೊಕ್ಕಾಗಿವೆ. ತತ್ವಶಾಸ್ತ್ರ ಮತ್ತು ಮನೋವಿಜ್ಞಾನಗಳ ಹಿನ್ನೆಲೆಯಲ್ಲಿ ಶಿಕ್ಷಣವನ್ನು ಪರಿಚಯಿಸುವ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದಾಗ 'ಬೋಧನೆ ಎಂದರೆ ಕಟ್ಟುವಿಕೆ' ಎಂಬ ಬಹಳ ಮಹತ್ವದ ನಿರ್ಧಾರವನ್ನು ಕೈಗೊಳ್ಳಬಹುದು. ವಿದ್ಯಾರ್ಥಿಗಳ ಮನಸ್ಸು ಕಟ್ಟುವುದನ್ನು' ಕುರಿತ ಮಾತಿದು. ರಂಗಭೂಮಿಯ ಪ್ರದರ್ಶನಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಬಳಕೆಯಲ್ಲಿರುವ ಅತ್ಯಂತ ದೇಸಿಯವಾದ ನುಡಿಗಟ್ಟು 'ಆಟ ಕಟ್ಟೋದು' ರಂಗಭೂಮಿಯ ಸಿದ್ಧಾಂತಗಳು ಮತ್ತು ಚಟುವಟಿಕಾ ಸ್ವರೂಪಗಳಿಂದ ಶಿಕ್ಷಣ ಕ್ಷೇತ್ರ ಎಷ್ಟು ಪಡೆಯಬಹುದು ಎನ್ನುವುದು ಎಷ್ಟು ಮುಖ್ಯವೋ ಶಿಕ್ಷಣ ಕ್ಷೇತ್ರದಿಂದ ರಂಗಭೂಮಿ ಏನನ್ನು ಎಷ್ಟನ್ನು ಪಡೆದುಕೊಳ್ಳಬೇಕು ಎನ್ನುವುದೂ ಮುಖ್ಯ.

**ರಂಗಶಿಕ್ಷಣದ ಅವಶ್ಯಕತೆ** ಮಗುವು ಹುಟ್ಟುತ್ತಾ ನೀತಿವಂತನೂ ಅಲ್ಲ ಅನೀತಿವಂತನೂ ಅಲ್ಲ. ಅದರ ವರ್ತನೆಗಳಲ್ಲಿ ನೀತಿ ನಿಯಮಗಳಾವುವು ಇಲ್ಲ. ಕ್ರಮೇಣ ತಂದೆ ತಾಯಿ ಗುರು–ಹಿರಿಯರು ಒಡನಾಡಿಗಳು. ಸಹಪಾಠಿಗಳು ಮತ್ತಿತರರ ಪ್ರಭಾವಕ್ಕೊಳಗಾಗಿ ತನ್ನ ಸಮಾಜದ ನೀತಿ ನಿಯಮಗಳನ್ನು ಕಲಿತುಕೊಂಡು ಅವುಗಳಿಗೆ ಅನುಗುಣವಾಗಿ ವರ್ತಿಸಲು ಉದ್ಯುಕ್ತವಾಗುತ್ತದೆ. ಒಂದು ಮಾಂಸದ ಮುದ್ದೆಯಾಗಿ ಜನ್ಮ ತಾಳಿದ ಭಾವನೆಗಳಿಲ್ಲದ ನೀತಿ ನಿಯಮಗಳಿಲ್ಲದ, ಮಾನವ ಶಿಶುವು ಬೆಳೆದು ಸಮಾಜದಲ್ಲಿ ಸುಸಂಸ್ಕೃತ ವ್ಯಕ್ತಿಯಾಗಿ ಸಂಸ್ಕರಣಗೊಳ್ಳಬೇಕಾದರೆ ಅದನ್ನೊಂದು ಸಭ್ಯ ಸಮಾಜದ ಸಾತ್ವಿಕ ಸದಸ್ಯನನ್ನಾಗಿಸಬೇಕಾದರೆ, ಅದಕ್ಕೆ ಸೂಕ್ತ ಶಿಕ್ಷಣ ನೀಡಬೇಕು. ಏಕೆಂದರೆ ಮನೋ ವಿಜ್ಞಾನಿಗಳ ಪ್ರಕಾರ "ಜನನವಾದಾಗ ಶಿಶುವಿನಲ್ಲಿ ದೈಹಿಕ ಧರ್ಮ ಬಿಟ್ಟರೆ ಬೇರೆ ಯಾವ ವ್ಯಕ್ತಿತ್ವವೂ ಇರುವುದಿಲ್ಲ.'

ಹೀಗೆ ಶಿಕ್ಷಣವನ್ನು ಪಡೆದು ಬೆಳೆದು ದೊಡ್ಡವರಾಗಿ, ಇಡೀ ದೇಶದ ಆಸ್ತಿಗಳಾಗಿ ಅರಳಬೇಕಾದ ಮಕ್ಕಳ ವ್ಯಕ್ತಿತ್ವ ವಿಕಸದಲ್ಲಿ ಅವರ ಚಾರಿತ್ಯ ನಿರ್ಮಾಣದಲ್ಲಿ ನಾಟಕದಂತಹ ಕಲೆಗಳು ನಿರ್ವಹಿಸುವ ಪಾತ್ರಗಳ ಕುರಿತು ನಮಗೆ ನೂರಾರು ಉದಾಹರಣೆಗಳು ದೊರೆಯುತ್ತದೆ. ತಮ್ಮ ಆತ್ಮಕಥೆಯಲ್ಲಿ ಗಾಂಧೀಜಿಯವರು, ಸುಳ್ಳು ಹೇಳುತ್ತಿದ್ದ ತಾವು 'ಸತ್ಯಹರಿಶ್ಚಂದ್ರ; ಶ್ರವಣ ಕುಮಾರ' ಮುಂತಾದ ನಾಟಕಗಳನ್ನು ನೋಡಿ ಸತ್ಯದ ಹಾದಿಯನ್ನು ಆಯ್ದುಕೊಂಡಿದ್ದಾಗಿ ಹೇಳಿದ್ದಾರೆ. ಅಂದರೆ ಮೋಹನದಾಸನಂತಹ ಒಬ್ಬ ಸಾಧಾರಣ ಬಾಲಕನನ್ನು 'ಮಹಾತ್ಮ ಗಾಂಧೀಜಿ"ಯಾಗಿ ಪರಿವರ್ತಿಸುವಲ್ಲಿ ನಾಟಕಗಳು ವಹಿಸಿದ ಪಾತ್ರವನ್ನು ಗಮನಿಸಬಹುದು. ಆದ್ದರಿಂದ ಪ್ರಸ್ತುತದಲ್ಲಿ ರಂಗ ಶಿಕ್ಷಣ ತೀರಾ ಅವಶ್ಯಕವಾಗಿದೆ.

### ರಂಗಶಿಕ್ಷಣದ ಮುಖ್ಯ ಗುರಿಗಳು

1. ಉತ್ತಮ ಮಾನವೀಯ ಮೌಲ್ಯಗಳನ್ನು ಬೆಳೆಸುವುದು.
2. ಆತ್ಮ ವಿಶ್ವಾಸವನ್ನು ಬೆಳೆಸಿಕೊಂಡು ಸಮರ್ಥರನ್ನಾಗಿ ಮಾಡುವುದು.
3. ಸಹಕಾರ ಮನೋಧೋರಣೆಯನ್ನು ಬೆಳೆಸುವುದು.
4. ಭಾವನೆ, ಆಲೋಚನೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ ಬೆಳೆಸುವುದು.
5. ನಾಟಕ ಪ್ರಯೋಗದ ವಿವಿಧ ಕೌಶಲ್ಯಗಳನ್ನು ಪರಿಚಯಿಸುವುದು.
6. ಕಲ್ಪನೆ, ಸೃಜನಶೀಲತೆ, ತಾರ್ಕಿಕ ಚಿಂತನೆಗಳನ್ನು ಬೆಳೆಸುವುದು.
7. ಪ್ರಸ್ತುತ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವ ಗುಣವನ್ನು ಬೆಳೆಸುವುದು.
8. ಭಾಷಾ ಕೌಶಲ್ಯಗಳನ್ನು ಬೆಳೆಸುವುದು.
9. ಸಂಘಟನೆ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಬೆಳೆಸುವುದು.
10. ನಾಯಕತ್ವದ ಗುಣಗಳನ್ನು ಬೆಳೆಸುವುದು.

### ರಂಗ ಶಿಕ್ಷಣದ ಪಠ್ಯಕ್ರಮ

ನಾಟಕದ ಮಹತ್ವ, ಅವಶ್ಯಕತೆಯನ್ನು ಅರಿತು ಕರ್ನಾಟಕ ಸರ್ಕಾರವು ಹಲವು ಶಿಕ್ಷಣ ತಜ್ಞರು ಮತ್ತು ರಂಗ ತಜ್ಞರುಗಳ ಜೊತೆ ಚರ್ಚಿಸಿ ರಂಗಶಿಕ್ಷಣದ ಪಠ್ಯಕ್ರಮವನ್ನು ಪ್ರಥಶಾಲಾ ವಿದ್ಯಾರ್ಥಿಗಳಿಗಾಗಿ ರಚಿಸಿದೆ.

8ನೇ ತರಗತಿಯಲ್ಲಿ : ನಾಟಕದ ಅರ್ಥ, ಉದ್ದೇಶ, ಪ್ರಭಾವ ನಾಟಕದ ವಿಶ್ಲೇಷಣೆ, ರಂಗ ವೇದಿಕೆಯ ಪರಿಚಯ, ಪಾತ್ರಗಳ ಪರಿಚಯ '(ಭರತನ ನಾಟ್ಯಶಾಸ್ತ್ರ'ದ ಆಧಾರಿತ) ಆಭಿನಯ ಚಲನೆ, ಹಾವಭಾವ, ಭಂಗಿಗಳು ಮಾತುಗಾರಿಕೆ, ರಂಗಸಜ್ಜಿಕೆ, ಪ್ರಸಾಧನ ವಸ್ತ್ರಾಲಂಕಾರ, ರಂಗ ಸಂಗೀತ, ರಂಗ ಪ್ರಯೋಗ ಮತ್ತು ಪ್ರಯೋಗದ ಪ್ರಶಂಸೆ ಮತ್ತು ವಿಮರ್ಶೆ

Digitised by Bharatavani, CIIL

9ನೇ ತರಗತಿಯಲ್ಲಿ ನಾಟಕದ ಬಗೆಗಳು, ನಾಟಕದ ವಿಶ್ಲೇಷಣೆ, ರಂಗ ಭೂಗೋಳ, ಪಾತ್ರಗಳು, ಅಭಿನಯ, ನವರಸಗಳು, ಮಾತುಗಾರಿಕೆ, ರಂಗ ವ್ಯವಹಾರಗಳು ಮತ್ತು ಮಹತ್ವ, ಸಾಮಯಿಕತೆ, ರಂಗಸಂಜ್ಜಿಕೆ. ವಸ್ತ್ರಾಲಂಕಾರ ರಂಗಸಂಗೀತ, ಪ್ರಸಾಧನ ರಂಗ ತಾಲೀಮು, ಪ್ರಯೋಗ, ಪ್ರಶಂಸೆ ಮತ್ತು ವಿಮರ್ಶೆ

10ನೇ ತರಗತಿಯಲ್ಲಿ ನಾಟಕದ ಉಗಮ, ಸೌಂದರ್ಯ ಪ್ರಜ್ಞೆ, ರಂಗ ಮಂದಿರಗಳು. ಅಭಿನಯ, ಮಾತುಗಾರಿಕೆ, ಮೂಕಾಭಿನಯ, ಲಯ, ರಂಗಸಜ್ಜಿಕೆ ಬೆಳಕು, ನಿರ್ದೇಶಕನ ಮಹತ್ವ ಮತ್ತು ಕಾರ್ಯಗಳು ಪ್ರಯೋಗ ಪ್ರಶಂಸೆ ಮತ್ತು ವಿಮರ್ಶೆ.

ಹೀಗೆ ರಂಗ ಶಿಕ್ಷಣವನ್ನು 3 ವರ್ಷಗಳ ಅವಧಿಯಲ್ಲಿ ನೀಡಲಾಗುತ್ತಿದೆ. ದುರಂತವೆಂದರೆ ಈ ಪಠ್ಯಕ್ರಮ ಪಠ್ಯಕ್ರಮವಾಗಿಯೇ ಉಳಿದಿದೆ. ಯಾವ ಶಾಲೆಯಲ್ಲಿಯೂ ನಾಟಕ ಬೋಧನೆಯ ಶಿಕ್ಷಕರು ನಾಟಕ ಬೋಧನೆಯ ಬದಲು ಬೇರೆ ವಿಷಯಗಳನ್ನು ಬೋಧಿಸುತ್ತಿದ್ದಾರೆ. ಕಾರಣ ಸರ್ಕಾರದ ನಿರ್ಲಕ್ಷ್ಯ.

**ಬೋಧಕನ ಪಾತ್ರ.**

ನಾಟಕಾಭಿನಯಕ್ಕೂ ಮತ್ತು ಮಕ್ಕಳಿಗೂ ಅವಿನಾಭಾವ ಸಂಬಂಧ ವಿರುವುದರಿಂದ ಮಕ್ಕಳ ಈ ಗುಣಗಳನ್ನು ಪೋಷಿಸುವ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯ ನಿರ್ವಹಿಸಬೇಕಾಗುತ್ತದೆ. ಮಕ್ಕಳ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಡುವ ವೇದಿಕೆಯನ್ನು ಸೃಷ್ಟಿಸಬೇಕು. ಬರಿ ಪುಸ್ತಕದ ಹುಳುವಾಗಿ ಪರೀಕ್ಷೆಯ ಬಾವಿಯಲ್ಲಿ ಬಿದ್ದು ಹೋರಾಟ ಮಾಡುವುದೇ ಏಕೈಕ ಗುರಿ ಎಂಬುದನ್ನು ತೊಲಗಿಸಿ ಸಾಮೂಹಿಕವಾಗಿ ಚಿಂತಿಸುವ, ಮಾನವೀಯ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಶಿಕ್ಷರು ಕಾರ್ಯನಿರ್ವಹಿಸಬೇಕು. ಇದಕ್ಕೆಲ್ಲಾ ಶಿಕ್ಷಕರು ಸುಸಂಸ್ಕೃತರು ಸೂಕ್ಷ್ಮ ಮನಸ್ಥಿತಿಯುಳ್ಳವರು. ಕಲೆ ಸಾಹಿತ್ಯದ ಅಭಿರುಚಿ ಉಳ್ಳವರಾಗಿದ್ದಾಗ ಮಾತ್ರ ಸಾಧ್ಯ. "ಯಥಾರಾಜಾ ತಥಾಪ್ರಜಾ'.

**ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ.**

ಕರ್ನಾಟವು ರಂಗ ಶಿಕ್ಷಣವನ್ನು ನೀಡುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಇದಕ್ಕೆ ಕಾರಣ ಸರ್ಕಾರದ ನಿರ್ಲಕ್ಷ್ಯ ಶಾಲೆಗಳಲ್ಲಿ ವಾರ್ಷಿಕೋತ್ಸವಗಳಲ್ಲಿ ಮಾತ್ರ ಸಾಂಸ್ಕೃತಿಕ ಕಾರ್ಯಕ್ರಮಗಳು ನೆನಪಿಗೆ ಬರುವುದು ವಿಷಾದರ ಸಂಗತಿ. ಸರ್ಕಾರ ಹತ್ತು-ಹಲವು ಯೋಜನೆಗಳ ಮೂಲಕ ರಂಗ ಶಿಕ್ಷಣವನ್ನು ಪರೋಕ್ಷವಾಗಿ ನೀಡಲು ಪ್ರಯತ್ನಮಾಡಿದೆ. ಉದಾಹರಣೆಗೆ;- ಚಿಣ್ಣರ ಅಂಗಳ. ಮಾಡಿಕಲಿ-ನೋಡಿತಿಳಿ, ಪ್ರತಿಭಾಕಾರಂಜಿ ರಂಗಾಯಣ ಮಕ್ಕಳಿಗಾಗಿ ಬೇಸಿಗೆ ರಜಾದಲ್ಲಿ ರಂಗ ತರಬೇತಿ ಶಿಬಿರಗಳನ್ನು ಏರ್ಪಡಿಸುತ್ತಿರುವುದು. ಸಮಾಧಾನದ ಸಂಗತಿಯಾದರೂ, ಈ ಶಿಬಿರಗಳಲ್ಲಿ ಭಾಗವಹಿಸಲು ನಗರದ ಮಕ್ಕಳಿಗೆ ಮಾತ್ರ ಸಾಧ್ಯವಾಗುತ್ತಿದೆ. ಸರ್ಕಾರೇತರ ಸಂಸ್ಥೆಗಳು ಸಹ ಈ ನಿಟ್ಟಿನಲ್ಲಿ ಹಲವು ಶಿಬಿರಗಳನ್ನು ಏರ್ಪಡಿಸುತ್ತಿದ್ದರೂ ಎಲ್ಲ ಮಕ್ಕಳಿಗೆ ಅದು ತಲುಪುತ್ತಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ರಂಗಶಿಕ್ಷಣವನ್ನು ಎಲ್ಲ ಮಕ್ಕಳಿಗೂ ತಲುಪುವಂತೆ ಮಾಡುವುದು ಅವಶ್ಯಕವಾಗಿದೆ.

-ಚಿ.ಸ್ವಾ.

## ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ

ಕರ್ನಾಟಕದ ಶಿಕ್ಷಣ ವ್ಯವಸ್ಥೆಯನ್ನು ಅವಲೋಕಿಸಿದಾಗ ರಾಜ್ಯದಲ್ಲಿ ಪುರಾತನ ಕಾಲದಿಂದಲೂ ವೈದಿಕ ಶಿಕ್ಷಣ ಪದ್ಧತಿ ಜಾರಿಯಲ್ಲಿದ್ದುದು ಕಂಡುಬರುತ್ತದೆ. ಇದನ್ನು ಗುರುಕುಲ ಪದ್ಧತಿ ಎಂಬ ಹೆಸರಿನಿಂದ ಗುರುತಿಸಲಾಗುತ್ತಿತ್ತು. ಪುರಾತನ ಕರ್ನಾಟಕವು ಅಗ್ರಹಾರಗಳು, ಮಠಗಳು, ಬ್ರಹ್ಮಪುರಿಗಳು ಮತ್ತು ಘಟಿಕ್ ಸ್ಥಾನಗಳ ರೂಪದಲ್ಲಿ ಶೈಕ್ಷಣಿಕ ಸಂಸ್ಥೆಗಳ ಜಾಲವನ್ನು ಹೊಂದಿತ್ತು. ಈ ಸಂಸ್ಥೆಗಳು ಸಾಂಪ್ರಾದಾಯಿಕ ಹಿಂದೂ ಬೋಧನಾ ವಿಧಾನಗಳನ್ನು ಅನುಸರಿಸುತ್ತಿದ್ದವು.

ಶಿಕ್ಷಣವು ಸಂಪೂರ್ಣವಾಗಿ ಮೌಖಿಕ ರೂಪದಲ್ಲಿ ಇರುತ್ತಿತ್ತು. ಶಿಷ್ಯ ವೃತ್ತಿಯ ಕಾಲಾವಧಿ ಸುಮಾರು 12 ವರ್ಷಗಳಾಗಿತ್ತು. ಪಠ್ಯಕ್ರಮವು ವೇದಗಳು, ವೇದಾಂಗಗಳು, ವೇದಾಂತ, ಪುರಾಣ, ನ್ಯಾಯ, ಮೀಮಾಂಸೆ, ಆಗಮ, ಜೋತಿಷ್ಯ, ವ್ಯಾಕರಣ, ಗಣಿತ, ತರ್ಕಶಾಸ್ತ್ರ, ನೀತಿಶಾಸ್ತ್ರ, ವೃತ್ತಿ ಶಾಸ್ತ್ರ, ಯುದ್ಧ ವಿದ್ಯೆ, ಖಗೋಳ ವಿಜ್ಞಾನ ಮತ್ತು ಯೋಗಶಾಸ್ತ್ರಗಳನ್ನು ಒಳಗೊಂಡ ವಿಸ್ತಾರವಾದ ಹರವನ್ನು ಪಡೆದಿತ್ತು. ನಂತರ ರಾಜ್ಯದ ವಿವಿಧ ಭಾಗಗಳೆಡೆ ಪಾಠಶಾಲೆಗಳೆಂದು ಕರೆಯಲಾಗುತ್ತಿದ್ದ ಸಂಸ್ಕೃತ ಶಾಲೆಗಳನ್ನು ಅಗ್ರಹಾರ ಮತ್ತು ಮಠಗಳಲ್ಲಿ ಸ್ಥಾಪಿಸಲಾಯಿತು. ಪ್ರಾಥಮಿಕ ಶಿಕ್ಷಣವು ಕನ್ನಡ ಭಾಷೆಯಲ್ಲಿತ್ತು. ಪಾಠಶಾಲೆಗಳಿಗೆ ರಾಜರು ಕೊಂಚ ಹಣಕಾಸಿನ ನೆರವನ್ನು ನೀಡುತ್ತಿದ್ದರು. ವಿದ್ಯಾರ್ಥಿಗಳ ಪೋಷಕರು ಶಿಕ್ಷಕರಿಗೆ ಗುರುದಕ್ಷಿಣೆ ರೂಪದಲ್ಲಿ ನಗದು ಹಣ ಅಥವಾ ದವಸಧಾನ್ಯಗಳನ್ನು ನೀಡುತ್ತಿದ್ದರು.

ಪ್ರಾಥಮಿಕ ಶಿಕ್ಷಣವು "ಬಾಲಬೋಧೆ" ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಮಕ್ಕಳು ಅಕ್ಷರಗಳು, 100ರ ವರೆಗಿನ ಸಂಖ್ಯೆಗಳು, ಮಗ್ಗಿ ಕೋಷ್ಟಕಗಳು, ಭಿನ್ನರಾಶಿ, ಹಣದ ಲೆಕ್ಕಾಚಾರ ಮುಂತಾದವುಗಳನ್ನು ಮರಳಿನ ಮೇಲೆ ಬರೆಯುತ್ತಿದ್ದರು. ಕ್ರಮೇಣ ತಾಳೆಗರಿ ಮೇಲೆ ಬರೆಯುತ್ತಿದ್ದರು. ಜೊತೆಗೆ ಓದುವ ಕಲೆ ಮತ್ತು ಗಣಿತ ಶಾಸ್ತ್ರವನ್ನು ಅಭ್ಯಾಸ ಮಾಡುತ್ತಿದ್ದರು.

ಮುಸ್ಲಿಂ ಆಡಳಿತದ ಆಗಮನದೊಂದಿಗೆ ಸಮಾನ ಸ್ವರೂಪ ವ್ಯವಸ್ಥೆಯ ಇಸ್ಲಾಂ ಶಿಕ್ಷಣವು ಮಕ್ತಬ್, ಮದ್ರಸಗಳು ಶಿಕ್ಷಣ ಹಾಗೂ ಸಾಹಿತ್ಯದ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಮಕ್ತಬ್‌ನಲ್ಲಿನ ಶಿಕ್ಷಣ ಚಟುವಟಿಕೆಯು ಪ್ರಾಥಮಿಕ ಹಂತದ್ದಾಗಿದ್ದರೆ ಮದ್ರಸವು ಉನ್ನತ ಕಲಿಕೆ ಶಾಲೆಯಾಗಿತ್ತು. ಕೆಲವು ನಿರ್ಬಂಧಗಳ ಮೇರೆಗೆ ಬಾಲಕಿಯರಿಗೂ ಶಿಕ್ಷಣವನ್ನು ನೀಡಲಾಗುತ್ತಿತ್ತು. ಶಿಕ್ಷಣದ ಪಾಠ ಪ್ರವಚನಗಳು ವ್ಯಾಕರಣ, ತರ್ಕಶಾಸ್ತ್ರ ಮತ್ತು ಕಾನೂನು, ಇಸ್ಲಾಂ ಧರ್ಮದ ಮೂಲ ಸಿದ್ಧಾಂತಗಳು, ಟೋಲೆಮಿಯ ತರ್ಜುಮೆಗಳನ್ನು ಆಧರಿಸಿದ ಖಗೋಳ ವಿಜ್ಞಾನ ಮತ್ತು ಆಧ್ಯಾತ್ಮಿಕ ಸಿದ್ಧಾಂತಗಳನ್ನು ಒಳಗೊಂಡಿರುತ್ತಿದ್ದವು.

19ನೇ ಶತಮಾನದ ಪ್ರಾರಂಭದಲ್ಲಿ ನೀಡಲ್ಪಡುತ್ತಿದ್ದ ಪ್ರಾಥಮಿಕ ಶಿಕ್ಷಣವು ಅತ್ಯಗತ್ಯವಾಗಿ ಮೂರು ಅಂಶಗಳನ್ನು ಒಳಗೊಂಡಿರುತ್ತಿತ್ತು. ಅವುಗಳೆಂದರೆ ಓದುವುದು (ರೀಡಿಂಗ್), ಬರೆಯವುದು (ರೈಟಿಂಗ್) ಮತ್ತು ಗಣಿತ (ಅರಿಥ್‌ಮೆಟಿಕ್). 1877ರಲ್ಲಿ ಬೆಂಗಳೂರಿನ ಕೋಟೆ ಮತ್ತು ಕಂಟೋನ್ಮೆಂಟ್ ಪ್ರದೇಶಗಳಲ್ಲಿ ಒಟ್ಟಾರೆ 560 ವಿದ್ಯಾರ್ಥಿಗಳನ್ನು ಹೊಂದಿದ್ದ 35 ಹಿಂದೂ ಶಾಲೆಗಳು ಇದ್ದವು.

1833ರಷ್ಟು ಹಿಂದೆಯೇ ಮೈಸೂರಿನ ಮಹಾರಾಜರು "ರಾಜರ ಶಾಲೆ" ಎಂಬ ಉಚಿತ ಸರ್ಕಾರಿ ಆಂಗ್ಲ ಶಾಲೆಯನ್ನು ಸ್ಥಾಪಿಸಿದಾಗ ಮೈಸೂರಿನಲ್ಲಿ ಶಿಕ್ಷಣಕ್ಕಾಗಿ ನೂತನ ವ್ಯವಸ್ಥೆಯೊಂದು ಅಸ್ತಿತ್ವಕ್ಕೆ ಬಂದಂತಾಯಿತು. ಮೈಸೂರು ಮಹಾರಾಜರ ಬೆಂಬಲದಿಂದ 1881ರಲ್ಲಿ ಆರಂಭವಾದ ಸರ್ಕಾರಿ ಬಾಲಕಿಯರ ಶಾಲೆಯು ರಾಜ್ಯದಲ್ಲಿನ ಬಾಲಕಿಯರ ಶಿಕ್ಷಣದಲ್ಲಿ ಒಂದು ಮೈಲುಗಲ್ಲಾಯಿತು. 1948-49ರ ಹೊತ್ತಿಗೆ 1.9 ಲಕ್ಷ ಬಾಲಕಿಯರು ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು.

1835ರಲ್ಲಿ ಮೈಸೂರಿನಲ್ಲಿ ಆರಂಭವಾದ ವೆಸ್ಲಿಯನ್ ಮಿಷನ್ ಇಂಗ್ಲಿಷ್ ಬೋಧನಾ ಶಾಲೆಯು ಈಗಲೂ ನಡೆಯುತ್ತಿದೆ. ಲಂಡನ್

Digitised by Bharatavani, CIIL

ಮಿಷನ್‌ನಿಂದ ಬಾಲಕಿಯರಿಗಾಗಿ ಮೊದಲ ಶಾಲೆಯು ಬೆಂಗಳೂರು ನಗರದಲ್ಲಿ 1840ರಲ್ಲಿ ಆರಂಭಿಸಲ್ಪಟ್ಟಿತು. ಇದು 1902ರಲ್ಲಿ ಬಾಲಕಿಯರ ಪ್ರೌಢಶಾಲೆಯಾಗಿ ಉನ್ನತೀಕರಣಗೊಂಡಿತು.

**ಸಾರ್ವಜನಿಕ ಶಿಕ್ಷಣ ಇಲಾಖೆಯ ಸ್ಥಾಪನೆ**

ಅಂದಿನ ಮೈಸೂರಿನ ಮುಖ್ಯ ಕಮೀಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್ ಅವರು ಮೈಸೂರು ಹಾಗೂ ಕೊಡಗು ಎರಡಕ್ಕೂ ಜಂಟಿಯಾಗಿ ಅನ್ವಯವಾಗುವಂತೆ ಶಿಕ್ಷಣ ಯೋಜನೆಯೊಂದನ್ನು ಭಾರತದ ಗವರ್ನರ್ ಜನರಲ್ ಅವರಿಗೆ ಸಲ್ಲಿಸಿದರು. 1857ರ ಫೆಬ್ರವರಿ 6ರಂದು ಈಸ್ಟ್ ಇಂಡಿಯಾ ಕಂಪನಿಯಿಂದ ಆದೇಶ ಸಂಖ್ಯೆ 585ರಲ್ಲಿ ಯೋಜನೆಗೆ ಮಂಜೂರಾತಿ ನೀಡಲ್ಪಟ್ಟಿತು. ಈ ಯೋಜನೆಯಡಿ ಮೈಸೂರು ಮತ್ತು ಕೊಡಗಿಗಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಸ್ಥಾಪಿಸಲ್ಪಟ್ಟಿತು. ಓರ್ವ ಸಾರ್ವಜನಿಕ ಶಿಕ್ಷಣ ನಿರ್ದೇಶಕರು, 2 ಶಾಲಾ ಇನ್ಸ್‌ಪೆಕ್ಟರ್, 4 ಉಪನಿರ್ದೇಶಕರು ಮತ್ತು 20 ಉಪಸಹಾಯಕ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಸೃಷ್ಟಿಸಲಾಯಿತು. ಓರ್ವ ಉಪಸಹಾಯಕ ಇನ್ಸ್‌ಪೆಕ್ಟರ್ ಅಧಿಕಾರ ವ್ಯಾಪ್ತಿಯಲ್ಲಿ ಸರಾಸರಿ 4 ತಾಲೂಕುಗಳು ಬರುತ್ತಿದ್ದವು. ಉತ್ಕೃಷ್ಟ ದರ್ಜೆಯ ನಾಲ್ಕು ಆಂಗ್ಲ ಭಾಷೆಯ ಶಾಲೆಗಳು, ವಿಭಾಗಕ್ಕೆ ಒಂದರಂತೆ ಮತ್ತು 80 ಮಾತೃಭಾಷೆ ಶಾಲೆಗಳು ಪ್ರತಿ ತಾಲೂಕಿಗೆ ಒಂದರಂತೆ ಮತ್ತು 2 ನಾರ್ಮಲ್ ಶಾಲೆ (ಶಿಕ್ಷಕರ ತರಬೇತಿಗಾಗಿ)ಗಳನ್ನು ಯೋಜನೆಯಡಿ ಸ್ಥಾಪಿಸಲಾಯಿತು. ಈ ಯೋಜನೆಯ ಒಟ್ಟು ವೆಚ್ಚ 1.13 ಲಕ್ಷ ರೂ.ಗಳು.

ಸಾರ್ವಜನಿಕ ಶಿಕ್ಷಣದ ನಿರ್ದೇಶಕರಾಗಿದ್ದ ಲೂಯಿಸ್ ರೈಸ್ ಅವರು ರೂಪಿಸಿದ ಯೋಜನೆಯಡಿ, 1868 ಮತ್ತು 1880ರ ನಡುವೆ ಹಂತಹಂತವಾಗಿ ಎಲ್ಲಾ 645 ಹೋಬಳಿಗಳಲ್ಲಿ ಹೋಬಳಿ ಶಾಲೆ (ಮಾತೃ ಭಾಷೆ ಶಿಕ್ಷಣ ಒದಗಿಸುವ ಸಾರ್ವಜನಿಕ ಶಾಲೆ)ಗಳನ್ನು ಆರಂಭಿಸಲಾಯಿತು. ಇದು ರಾಜ್ಯದ ಶಿಕ್ಷಣ ಚರಿತ್ರೆಯಲ್ಲಿ ಮುಖ್ಯವಾದ ಮೈಲುಗಲ್ಲಾಗಿದೆ. ಹೋಬಳಿ ಶಾಲೆಗಳ ಮಕ್ಕಳ ಸಂಖ್ಯಾ ಬಲ ಹೆಚ್ಚುತ್ತಿದ್ದಂತೆ, ಪಕ್ಕದ ಗ್ರಾಮಗಳಲ್ಲಿ ಶಾಖಾ ಶಾಲೆಗಳನ್ನು ಆರಂಭಿಸಲಾಯಿತು. ಕೆಲವು ಶಾಲೆಗಳು ಮಾಧ್ಯಮಿಕ ಶಾಲಾ ತರಗತಿಗಳನ್ನು ಹೊಂದಿದ್ದರೂ ಎಲ್ಲಾ ಹೋಬಳಿ ಶಾಲೆಗಳನ್ನು ಪ್ರಾಥಮಿಕ ಶಾಲೆಗಳೆಂದು ವರ್ಗೀಕರಿಸಲಾಯಿತು. ಈ ಶಾಲೆಗಳನ್ನು ಕಿರಿಯ ಪ್ರಾಥಮಿಕ (ಶಿಶುವಿಹಾರ ಮತ್ತು 1ನೇ ತರಗತಿ) ಮತ್ತು ಹಿರಿಯ ಪ್ರಾಥಮಿಕ (ಶಿಶುವಿಹಾರ ಮತ್ತು 3 ಉನ್ನತ ತರಗತಿಗಳು) ಶಾಲೆಗಳೆಂದು ವರ್ಗೀಕರಿಸಲಾಯಿತು.

1907–08ರ ಹೊತ್ತಿಗೆ ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಈ ಎರಡೂ ಹಂತಗಳಿಗೆ ಉಚಿತ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಲಾಯಿತು. 1923ರಲ್ಲಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ 4 ವರ್ಷಗಳ ಮಾತೃಭಾಷಾ ಶಿಕ್ಷಣವನ್ನು ಕಡ್ಡಾಯ ಮಾಡಲಾಯಿತು. ವಿದ್ಯಾರ್ಥಿ-ಶಿಕ್ಷಕರ ಅನುಪಾತವನ್ನು 30:1ಕ್ಕೆ ನಿಗದಿಪಡಿಸಲಾಯಿತು. 1922ರಲ್ಲಿ ಪ್ರತಿಯೊಂದು ಶಾಲೆಗಾಗಿ ನಿರ್ದಿಷ್ಟ ಅಧಿಕಾರಗಳನ್ನು, ಕರ್ತವ್ಯಗಳನ್ನು ಹೊಂದಿದ್ದ ಗ್ರಾಮ ಶಾಲಾ ಸಮಿತಿಗಳನ್ನು ಸ್ಥಾಪಿಸಲಾಯಿತು.

1914–15ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು (ಪ್ರಾಥಮಿಕ ಶಿಕ್ಷಣ ಕಾಯ್ದೆ 1913) ಆಯ್ದ 15 ಕೇಂದ್ರಗಳಲ್ಲಿ ಆಚರಣೆಗೆ ತರಲಾಯಿತು. ತದನಂತರ ರಾಜ್ಯದ ಎಲ್ಲ ಮುಖ್ಯ ಪಟ್ಟಣಗಳು ಮತ್ತು ಪ್ರಮುಖ ಗ್ರಾಮಗಳು ಒಳಗೊಳ್ಳುವಂತೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು 250 ಕೇಂದ್ರಗಳಿಗೆ ವಿಸ್ತರಿಸಲಾಯಿತು. 4 ವರ್ಷಗಳ ಪ್ರಾಥಮಿಕ ಪಾಠ ಪ್ರವಚನಗಳ ಸರಣಿಗೆ ಹೊಂದುವಂತೆ ಕಡ್ಡಾಯ ವಯೋಮಿತಿಯನ್ನು 7 ರಿಂದ 11 ವರ್ಷಗಳೆಂದು ಸೂಚಿಸಲಾಯಿತು. 1931ರಲ್ಲಿ, ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಜಿಲ್ಲಾ ಮಂಡಳಿಗಳು ಮತ್ತು ಪುರಸಭೆಗಳ ನಿಯಂತ್ರಣಕ್ಕೆ ವರ್ಗಾಯಿಸಲಾಯಿತು. ಆದರೆ ಇದು ಶಿಕ್ಷಣದ ಸೌಲಭ್ಯಗಳ ಮತ್ತಷ್ಟು ವಿಸ್ತರಣೆಗೆ ನೆರವು ನೀಡಲಿಲ್ಲವಾದ್ದರಿಂದ, ಸರ್ಕಾರವು ಪ್ರಾಥಮಿಕ ಶಿಕ್ಷಣ ಕಾಯಿದೆ 1941ರ ಮುಖಾಂತರ, ಪ್ರಾಥಮಿಕ ಶಿಕ್ಷಣದ ಮೇಲೆ ಮರು ನಿಯಂತ್ರಣ ಪಡೆದುಕೊಂಡಿತು. ಸ್ಥಳೀಯ ಮಂಡಳಿಗಳ ಅಡಿಯಲ್ಲಿದ್ದ ಪ್ರಾಥಮಿಕ ಶಾಲೆಗಳು ಇಲಾಖಾ ಶಾಲೆಗಳಾದವು. ಇದೂ ಸಹ ರಾಜ್ಯದಲ್ಲಿ ಶಾಲಾ ಸೌಲಭ್ಯಗಳು ಶೀಘ್ರ ವಿಸ್ತರಣೆಯಾಗಲು ಕಾರಣವಾಯಿತು. ಹೀಗಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿದ್ದ 16.6% ಸಾಕ್ಷರತೆಗೆ ಹೋಲಿಸಿದಾಗ ಅರಸರ ಮೈಸೂರು ರಾಜ್ಯವು 20.3% ಸಾಕ್ಷರತೆಯೊಂದಿಗೆ ಪ್ರಶಂಸಾತ್ಮಕ ಸಾಧನೆಯನ್ನು ಮಾಡಿತ್ತು.

1826ರಷ್ಟು ಹಿಂದೆಯೇ ಎರಡು ಮರಾಠಿ ಮಾತೃಭಾಷಾ ಶಾಲೆಗಳನ್ನು ಬೆಳಗಾಂನಲ್ಲಿ ಸ್ಥಾಪಿಸಲಾಯಿತು. 1836ರ ನಂತರ ಕನ್ನಡ ಶಾಲೆಗಳನ್ನು ಸ್ಥಾಪಿಸಲಾಯಿತು. 1840ರಲ್ಲಿ ಶಿಕ್ಷಣ ಮಂಡಳಿಯೊಂದು ಅಸ್ತಿತ್ವಕ್ಕೆ ಬಂದು 1855ರ ವರೆಗೆ ಕಾರ್ಯಾಚರಣೆ ನಡೆಸಿತು. ಈ ಅವಧಿಯಲ್ಲಿ ಒಂದು ಇಂಗ್ಲಿಷ್ ಶಾಲೆಯ ಜೊತೆಗೆ 34 ಮಾತೃಭಾಷಾ ಶಾಲೆಗಳನ್ನು ಸ್ಥಾಪಿಸಲಾಯಿತು. 1881–82ರ ಹೊತ್ತಿಗೆ ಬೆಳಗಾಂ ಪ್ರದೇಶದ 4 ಜಿಲ್ಲೆಗಳಲ್ಲಿ 763 ಸರಕಾರಿ ಮಾತೃ ಭಾಷಾ ಶಾಲೆಗಳು ಮತ್ತು ಅನುದಾನಿತ ಶಾಲೆಗಳ ಜೊತೆಗೆ ನೊಂದಾಯಿಸಲ್ಪಡದ 574 ಖಾಸಗಿ ಶಾಲೆಗಳಿದ್ದವು. 1881–82ರಲ್ಲಿ 47ರ ಸಂಖ್ಯೆಯಲ್ಲಿದ್ದ ಬಾಲಕಿಯರ ಪ್ರಾಥಮಿಕ ಶಾಲೆಗಳು 1947ರ ಹೊತ್ತಿಗೆ 402ಕ್ಕೆ ಹೆಚ್ಚಾದವು. 1923ರ ಬಾಂಬೆ ಪ್ರಾಥಮಿಕ ಶಿಕ್ಷಣ ಕಾಯಿದೆಯು ಸ್ಥಳೀಯ ಸಂಸ್ಥೆಗಳಿಗೆ ಪ್ರಾಥಮಿಕ ಶಿಕ್ಷಣವನ್ನು ವರ್ಗಾಯಿಸಿತ್ತು. ಈ ಸಂದರ್ಭದಲ್ಲಿ ಶಿಕ್ಷಣ ಯೋಜನೆಯೊಂದನ್ನು ರೂಪಿಸಲಾಯಿತು. 1947ರ ಬಾಂಬೆ ಪ್ರಾಥಮಿಕ ಶಿಕ್ಷಣ ಕಾಯಿದೆಯು ಪ್ರಾಥಮಿಕ ಶಿಕ್ಷಣದ ನಿರ್ವಹಣೆಯ ಅಧಿಕಾರವನ್ನು ಸರ್ಕಾರಕ್ಕೆ ನೀಡಿತು ಮತ್ತು ಕಡ್ಡಾಯ ಶಿಕ್ಷಣವನ್ನು ಹಂತಹಂತವಾಗಿ ಜಾರಿಗೊಳಿಸಲಾಯಿತು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾರಂಭಿಕವಾಗಿ ಶಿಕ್ಷಣ ಮಾಧ್ಯಮವು ಮರಾಠಿ ಭಾಷೆಯಲ್ಲಿತ್ತಾದರೂ ನಂತರದ ದಿನಗಳಲ್ಲಿ ಕನ್ನಡ ಭಾಷೆಯು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವಾಯಿತು. 1911ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ನೀಡುವತ್ತ ನವಾಬರಿಂದ ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತು. 1911–21ರ ಅವಧಿಯಲ್ಲಿ 1000ಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ಪ್ರತಿ ಗ್ರಾಮಕ್ಕೂ ಒಂದು ಶಾಲೆಯನ್ನು ನೀಡುವ ಉದ್ದೇಶದೊಂದಿಗೆ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸಲಾಯಿತು. ಈ ಪ್ರದೇಶದಲ್ಲಿ ಶಿಕ್ಷಣದ ವಿಸ್ತರಣೆಯು ಕೊಂಚ ನಿಧಾನಗತಿಯಲ್ಲೇ ಆಯಿತು. 1961ರ ಜನಗಣತಿ ಸಂದರ್ಭದಲ್ಲಿ ರಾಜ್ಯದ ಇತರ ಕಡೆ ಮಹಿಳಾ ಸಾಕ್ಷರತೆಯು 18%ರಷ್ಟು ಇದ್ದರೆ ಅದು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೇವಲ 7% ನಷ್ಟಿತ್ತು.

1838ರ ಹೊತ್ತಿಗೆ ಮದ್ರಾಸ್ ಕರ್ನಾಟಕ ಪ್ರದೇಶದಲ್ಲಿನ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದ ಮಿಷನರಿ ಸಂಸ್ಥೆಗಳು ಮಂಗಳೂರು, ಉಡುಪಿ ಮತ್ತು ಬಳ್ಳಾರಿಯಲ್ಲಿ ಶಾಲೆಗಳನ್ನು ಸ್ಥಾಪಿಸಿದವು. 1833ರಲ್ಲಿ ಲಂಡನ್ ಮಿಷನ್ ಬಾಲಕಿಯರ ಮೊದಲ ಶಾಲೆಯನ್ನು ಪ್ರಾರಂಭಿಸಿತು. 1863ರ ಮದ್ರಾಸ್ ಪ್ರಾಥಮಿಕ ಶಿಕ್ಷಣ ಕಾಯಿದೆಯು ಪ್ರಾಥಮಿಕ ಶಿಕ್ಷಣದ ವಿಸ್ತರಣೆಗೆ ಹಣಕಾಸು ಒದಗಿಸಿ ಬೆಂಬಲ ನೀಡಿತು. 1931–32ರ ಹೊತ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಲಕಿಯರಿಗಾಗಿ 132 ಪ್ರಾಥಮಿಕ ಮತ್ತು 7 ಪ್ರೌಢಶಾಲೆಗಳಿದ್ದವು.

Digitised by Bharatavani, CIIL

1956ರ ರಾಜ್ಯದ ಏಕೀಕರಣದ ಸಂದರ್ಭದಲ್ಲಿ ಅರಸರ ಮೈಸೂರು ರಾಜ್ಯದಲ್ಲಿ ಸಂಯೋಜನೆಗೊಂಡಿದ್ದ ಪ್ರದೇಶಗಳಲ್ಲಿ ಶಾಲಾ ಶಿಕ್ಷಣದ ವಿವಿಧ ಸ್ವರೂಪಗಳು ಅಸ್ತಿತ್ವದಲ್ಲಿದ್ದವು. ಅರಸರ ಮೈಸೂರು ಪ್ರದೇಶದಲ್ಲಿ 4 ವರ್ಷಗಳ ಪ್ರಾಥಮಿಕ ಶಿಕ್ಷಣ ಮತ್ತು 7 ವರ್ಷಗಳ ಪ್ರೌಢ ಶಿಕ್ಷಣವಿತ್ತು. (ಈ ಪ್ರೌಢ ಶಿಕ್ಷಣದಲ್ಲಿ ಕಿರಿಯ ಪ್ರೌಢ ಶಿಕ್ಷಣ ಎಂದು ಕರೆಯಲಾಗುತ್ತಿದ್ದ 4 ವರ್ಷಗಳ ಮಾಧ್ಯಮಿಕ ಶಾಲಾ ಶಿಕ್ಷಣದೊಂದಿಗೆ 3 ವರ್ಷಗಳ ಪ್ರೌಢಶಾಲಾ ಶಿಕ್ಷಣವು ಸೇರ್ಪಡೆಯಾಗಿತ್ತು.)

ಮದ್ರಾಸ್ ಕರ್ನಾಟಕ ಪ್ರದೇಶ ಮತ್ತು ಕೊಡಗಿನಲ್ಲಿ ಪ್ರಾಥಮಿಕ ಶಿಕ್ಷಣದ ಅವಧಿಯು 5+3 ವರ್ಷಗಳದ್ದಾಗಿದ್ದರೆ, ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಅದು 4+3 ವರ್ಷಗಳದ್ದಾಗಿತ್ತು.

1955–56ರ ಅವಧಿಯಲ್ಲಿ ಹಳೇ ಮೈಸೂರು ಪ್ರದೇಶದಲ್ಲಿ "ಪ್ರಾಥಮಿಕ ಶಿಕ್ಷಣ" ಎಂಬ ಪದದ ಅರ್ಥವು ತೀವ್ರ ಬದಲಾವಣೆಗೆ ಒಳಗಾಯಿತು. 4 ವರ್ಷಗಳ ಪ್ರಾಥಮಿಕ ಮತ್ತು 4 ವರ್ಷಗಳ ಮಾಧ್ಯಮಿಕ ಶಿಕ್ಷಣವನ್ನು ಸೇರಿಸಿ 8 ವರ್ಷಗಳ ಸಂಯುಕ್ತ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲಾಯಿತು. ಈ ಮಧ್ಯೆ ಪ್ರಾಥಮಿಕ ಶಿಕ್ಷಣವನ್ನು 7 ವರ್ಷಗಳ ಕೋರ್ಸ್ ಆಗಿ ಏಕೀಕರಿಸಬೇಕೆಂಬ ಶಿಕ್ಷಣ ಏಕೀಕರಣ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ರಾಜ್ಯದಲ್ಲಿ 1962–63ರಲ್ಲಿ ಸಾರ್ವತ್ರಿಕವಾಗಿ ಅನುಷ್ಠಾನಕ್ಕೆ ತರಲಾಯಿತು.

ಪ್ರಸ್ತುತ ಕರ್ನಾಟಕದಲ್ಲಿನ ಶಾಲಾಶಿಕ್ಷಣವು 10 ವರ್ಷಗಳ ಏಕ ಸ್ವರೂಪವನ್ನು ಅನುಸರಿಸುತ್ತಿದೆ. ಇದರ ವಿಂಗಡಣೆಯನ್ನು 5+3+2 ಎಂದು ಮಾಡಬಹುದು. ಆದರೆ ವಾಸ್ತವ ಸ್ಥಿತಿ ಎಂದರೆ, ಇದು 5+2+3ರ ಸ್ವರೂಪದಲ್ಲಿದೆ. ಕಾರಣವೆಂದರೇ ಕೆಲವೇ ಕೆಲವು ಹಿರಿಯ ಪ್ರಾಥಮಿಕ ಶಾಲೆಗಳು 8ನೇ ತರಗತಿಯನ್ನು ಹೊಂದಿದ್ದು ಪ್ರತಿ ಪ್ರೌಢಶಾಲೆಯಲ್ಲಿ ಒಂದು 8ನೇ ತರಗತಿ ಇರುತ್ತದೆ. ಇಷ್ಟೇ ಅಲ್ಲದೆ, +2 ಹಂತದ ಸಂಯುಕ್ತ ಕಿರಿಯ ಕಾಲೇಜುಗಳು ಅಸ್ತಿತ್ವದಲ್ಲಿವೆ.

**ಏಕೀಕರಣದ ನಂತರ ಪ್ರಾಥಮಿಕ ಶಾಲೆಗಳ ಬೆಳವಣಿಗೆ**

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸೇವೆ ಇರುವ ಪ್ರದೇಶಗಳ ನಕ್ಷೆ ತಯಾರಿಕೆ ಮತ್ತು ಅವುಗಳ ಎಲ್ಲೆಗಳನ್ನು ಗುರುತಿಸುವ ಸಲುವಾಗಿ 1957ರಲ್ಲಿ ಸಮೀಕ್ಷಾ ಘಟಕವೊಂದು ಮೊದಲ ಶಿಕ್ಷಣ ಸಮೀಕ್ಷೆಯನ್ನು ನಡೆಸಿತು. 1956–57ರಲ್ಲಿ ಶಿಕ್ಷಣ ಸಮೀಕ್ಷಾ ವರದಿಯ ಶಿಫಾರಸ್ಸಿನ ಮೇರೆಗೆ ಪ್ರಾಥಮಿಕ ಶಿಕ್ಷಣ ಸೌಲಭ್ಯದ ಕೊರತೆ ಇದೆ ಎಂದು ಕಂಡುಬಂದ ಸ್ಥಳಗಳಲ್ಲಿ, ಬಹುಸಂಖ್ಯೆಯಲ್ಲಿ ಏಕೋಪಾಧ್ಯಾಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. 1965 ರಲ್ಲಿ ಎರಡನೇ ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿನ ಶೇಕಡಾ 89 ರಷ್ಟು ಜನರಿಗೆ ಪ್ರಾಥಮಿಕ ಶಾಲೆಗಳ ಸೇವೆಯು ಲಭ್ಯವಾಗಿತ್ತು ಎಂದು ಈ ಸಮೀಕ್ಷೆ ಬಹಿರಂಗಪಡಿಸಿತು.

1950–51ರ ಅವಧಿಗೆ ಲಭ್ಯವಿದ್ದ ಅಂಕಿ ಅಂಶಗಳೊಂದಿಗೆ ಹೋಲಿಸಿದರೆ 2005–06 ಹೊತ್ತಿಗೆ ಪ್ರಾಥಮಿಕ ಶಾಲೆಗಳ ಸಂಖ್ಯೆಯಲ್ಲಿ 5 ಪಟ್ಟು, ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣದಲ್ಲಿ 13 ಪಟ್ಟು ಮತ್ತು ಶಿಕ್ಷಕರ ಸಂಖ್ಯೆಯಲ್ಲಿ 12 ಪಟ್ಟು ಹೆಚ್ಚಳವಾಗಿದೆ.

**ಪ್ರಾಥಮಿಕ ಶಿಕ್ಷಣದ ವಿಸ್ತರಣೆ**

| ವರ್ಷ | ಪ್ರಾಥಮಿಕ ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ (ಲಕ್ಷ) | ಶಿಕ್ಷಕರ ಸಂಖ್ಯೆ |
|---|---|---|---|
| 1950–51 | 10,184 | 6.35 | 21,268 |
| 1960–61 | 27,050 | 24.46 | 72,569 |
| 1970–71 | 32,630 | 39.24 | 96,362 |
| 1980–81 | 35,116 | 49.86 | 1,12,839 |
| 1990–91 | 39,857 | 69.33 | 1,40,435 |
| 2000–01 | 49,914 | 84.25 | 2,34,100 |
| 2006–07 | 56,348 | 87.21 | 2,53,576 |

ಮೂಲ: ವಾರ್ಷಿಕ ವರದಿಗಳು.

ಸಂವಿಧಾನದ 45ನೇ ನಿಬಂಧದಲ್ಲಿನ ಮಾರ್ಗದರ್ಶನದಂತೆ ಭಾರತ ಸರ್ಕಾರವು, 6 ರಿಂದ 14 ವಯಸ್ಸಿನ ಶೇಕಡಾ 90 ರಷ್ಟು ಮಕ್ಕಳನ್ನಾದರೂ 1961–62 ರಿಂದ 1965–66 ರ ವೇಳೆಗೆ ಶಾಲೆಗೆ ಸೇರಿಸುವಂತೆ ಮಾಡಲು ಉದ್ದೇಶಿಸಿತು. ಅದರಂತೆ ಕರ್ನಾಟಕ ಸರ್ಕಾರವು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ 1961 ನ್ನು ಜಾರಿಗೆ ತಂದಿತು. 6 ರಿಂದ 10 ವಯೋಮಾನದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿತು.

ಕಪ್ಪು ಹಲಗೆ ಕಾರ್ಯಕ್ರಮವು 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಮುಂದುವರೆದ ಭಾಗವಾಗಿ ಬಂದ ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮ. ಇದು 8 ಹಂತಗಳಲ್ಲಿ 1987–88 ರಿಂದ 1994–95ರ ಅವಧಿಯಲ್ಲಿ ಜಾರಿಗೊಳಿಸಲ್ಪಟ್ಟಿತು ಮತ್ತು ನಾಲ್ಕು ಹಂತಗಳಲ್ಲಿ 1994–95 ರಿಂದ 1999–2000 ವರೆಗೆ ವಿಸ್ತರಿಸಲ್ಪಟ್ಟಿತು.

ವಿಶ್ವಬ್ಯಾಂಕ್ ಪ್ರಾಯೋಜಿತವಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ಅಧಿಕೃತವಾಗಿ ಕರ್ನಾಟಕದ 4 ಜಿಲ್ಲೆಗಳಲ್ಲಿ 26 ನೇ ಜನವರಿ 1995 ರಿಂದ ಜಾರಿಗೆ ಬಂದಿತು. ನಂತರ 2 ನೇ ಹಂತದಲ್ಲಿ ಇನ್ನೂ 7 ಜಿಲ್ಲೆಗಳಿಗೆ ವಿಸ್ತರಿಸಲ್ಪಟ್ಟಿತು. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು. ಅವುಗಳೆಂದರೆ ನಲಿಕಲಿ, ವಿದ್ಯಾ ವಿಕಾಸ ಯೋಜನೆ, ಬಾ ಮರಳಿ ಶಾಲೆಗೆ, ಚಿಣ್ಣರ ಅಂಗಳ ಮುಂತಾದವು.

ದೇಶದ ಎಲ್ಲ ಮಕ್ಕಳಿಗೂ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ನೀಡುವಿಕೆ ಮತ್ತು 6 ರಿಂದ 14 ವಯೋಮಿತಿಯ ಎಲ್ಲ ಮಕ್ಕಳಿಗೂ 2010ರ ವೇಳೆಗೆ ಪ್ರಾಥಮಿಕ 2001–02 ರಲ್ಲಿ ಭಾರತ ಸರ್ಕಾರವು ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು ಜಾರಿಗೊಳಿಸಿತು. ಈ ಯೋಜನೆ ಮೂಲಕ ಅನೇಕ ಯೋಜನೆಗಳು ಕರ್ನಾಟಕದಲ್ಲಿಯೂ ಜಾರಿಗೊಂಡು ಉದ್ದೇಶಿತ ಗುರಿಮುಟ್ಟುವುದರ ಕಡೆಗೆ ಪ್ರಾಥಮಿಕ ಶಿಕ್ಷಣ ಸಾಗುತ್ತಿದೆ.

–ಅ.ವಿ.ಬ

Digitised by Bharatavani, CIIL

## ಕರ್ನಾಟಕದಲ್ಲಿ ಪ್ರೌಢಶಿಕ್ಷಣ ವ್ಯವಸ್ಥೆ

ಪ್ರೌಢಹಂತದಲ್ಲಿ ಅಳವಡಿಸಿರುವ ವ್ಯಾಸಂಗಕ್ರಮಗಳು ಜ್ಞಾನದ ವಿವಿಧ ಶಾಖೆಗಳ ಬಗ್ಗೆ ಅರಿವನ್ನು ಮೂಡಿಸುವ ಗುರಿಯನ್ನು ಹೊಂದಿರುತ್ತವೆ ಮತ್ತು ವಿದ್ಯಾರ್ಥಿಗಳಿಗೆ ಅಧ್ಯಯನ ವ್ಯಾಪ್ತಿ ಮತ್ತು ಸಾಧ್ಯತೆಯನ್ನು ಪರಿಚಯಿಸುತ್ತವೆ. ಈ ರೀತಿ ವ್ಯಾಪ್ತಿಯನ್ನು ಪಡೆದ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳುವುದರ ಮೂಲಕ ಅವರು ತಮ್ಮ ಆಸಕ್ತಿ ಮತ್ತು ಪ್ರವೃತ್ತಿಗಳನ್ನು ಕಂಡುಕೊಳ್ಳುತ್ತಾರೆ. ಅನಂತರ ಯಾವ ಉದ್ಯೋಗ ಮತ್ತು ತತ್ಸಂಬಂಧವಾದ ಅಧ್ಯಯನವನ್ನು ಮಾಡಬೇಕು ಎಂಬ ಬಗ್ಗೆ ಕಲ್ಪಿಸಿಕೊಳ್ಳಲು ಆರಂಭಿಸುತ್ತಾರೆ. ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಇದು ಶಾಲೆಯನ್ನು ಬಿಡುವ ಅಂತಿಮ ಘಟ್ಟವಾಗಿದ್ದು, ಈ ಅವಧಿಯಲ್ಲಿ ಉತ್ಪಾದಕ ಕೌಶಲ್ಯಗಳನ್ನು ಬೆಳೆಸಿಕೊಳ್ಳತೊಡಗುತ್ತಾರೆ. ಅನೇಕ ಮಕ್ಕಳಿಗೆ ಸಾಮಾಜಿಕ ಮತ್ತು ಆರ್ಥಿಕ ಸಂದರ್ಭಗಳಿಂದ ಇದು ವ್ಯಾಸಂಗದ ಅಂತಿಮ ಹಂತವಾದುದರಿಂದ, ಪ್ರೌಢ / ಮಾಧ್ಯಮಿಕ ಶಿಕ್ಷಣದ ಸಾರ್ವತ್ರೀಕರಣವಾಗುತ್ತಿರುವ ಈ ಹಂತದಲ್ಲಿ ಮಕ್ಕಳಿಗೆ ಸೃಜನಾತ್ಮಕ ಹಾಗೂ ಭವಿಷ್ಯಕ್ಕೆ ಅನುಕೂಲವಾದ ಕಾರ್ಯಕೌಶಲಗಳನ್ನು ಪಡೆದುಕೊಳ್ಳಲು ಅವಕಾಶಗಳನ್ನು ಒದಗಿಸಬೇಕೆಂಬುದು ರಾಷ್ಟ್ರ ಹಾಗೂ ರಾಜ್ಯದ ಆಶಯ.

ಪ್ರಾರಂಭದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ನೀಡಿದ ಪ್ರಾಧಾನ್ಯತೆಯು ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸಿರುವುದಲ್ಲದೆ ಪ್ರೌಢಶಿಕ್ಷಣಕ್ಕೆ ಬೇಡಿಕೆಯನ್ನು ತಂದಿತು. ಈ ಒಂದು ಸನ್ನಿವೇಶವನ್ನು 2006ರಲ್ಲಿ ಗಮನಿಸಿದ ಕೇಂದ್ರ ಸರ್ಕಾರವು 2006ರಲ್ಲಿ ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ ಶಾಸನಬದ್ಧ ಸ್ಥಾನವನ್ನು ನೀಡಿ ತನ್ನ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ನಿಗದಿಪಡಿಸಿತು. ಕೇಂದ್ರದ ಈ ನೀತಿಯು ರಾಜ್ಯದಲ್ಲಿನ ಶೈಕ್ಷಣಿಕ ಬೆಳವಣಿಗೆಗೆ ನಾಂದಿಯಾಯಿತು. 1968–69ರಲ್ಲಿ ಕೇವಲ 1830 ಇದ್ದ ಪ್ರೌಢಶಾಲೆಗಳ ಸಂಖ್ಯೆಯು 2006–07ರ ವೇಳೆಗೆ 10,537ಕ್ಕೆ ಏರಿತು. ಅಂತೆಯೇ 1960–61ರಲ್ಲಿ 1.6 ಲಕ್ಷದಷ್ಟಿದ್ದ ವಿದ್ಯಾರ್ಥಿಗಳ ದಾಖಲಾತಿ, 2006–07ರಲ್ಲಿ 24.11 ಲಕ್ಷ ಮುಟ್ಟುವಂತಾಯಿತು. ಶಿಕ್ಷಕರ ಸಂಖ್ಯೆಯು 2,515 (1950–51) ರಿಂದ 92,287 (2006–07) ರಷ್ಟಾಯಿತು.

ಇಷ್ಟೆಲ್ಲಾ ಆದಾಗ್ಯೂ ಪ್ರೌಢಶಿಕ್ಷಣಕ್ಕೆ ಅವಶ್ಯಕವೆನ್ನುವಷ್ಟು ಶಾಲೆಗಳು, ಉಪಾಧ್ಯಾಯರು, ಸಂಪನ್ಮೂಲಗಳು ನಿಶ್ಚಿತವಾಗಿ ಒದಗಿಬರಲಿಲ್ಲ. ರಾಜ್ಯ ಸರ್ಕಾರದ ದೃಷ್ಟಿಕೋನವು ಕೇವಲ ಪ್ರಾಥಮಿಕ ಶಿಕ್ಷಣದತ್ತಲೇ ಹೆಚ್ಚು ಕೇಂದ್ರೀಕೃತವಾಗಿದ್ದುದರಿಂದ ಪ್ರೌಢಶಿಕ್ಷಣದ ಬೆಳವಣಿಗೆ ಸಂಕುಚಿತವಾಯಿತು. ತತ್ಪರಿಣಾಮವಾಗಿ ಪ್ರೌಢಶಿಕ್ಷಣದಲ್ಲಿ 1/3 ಭಾಗದಷ್ಟು ಮಾತ್ರ ಸರ್ಕಾರಿ ಶಾಲೆಗಳಾಗಿದ್ದು, 1/3ಕ್ಕೂ ಕಡಿಮೆಯಷ್ಟು ಅನುದಾನಿತ ಖಾಸಗಿ ಶಾಲೆಗಳು ಹಾಗೂ ಉಳಿದವು ಅನುದಾನರಹಿತ ಖಾಸಗಿ ಶಾಲೆಗಳಾದವು. ಖಾಸಗಿ ಶಾಲೆಗಳ ಪ್ರಮಾಣ ಹೆಚ್ಚಿದರೂ ಇವೆಲ್ಲ ನಗರ ಹಾಗೂ ಅರೆನಗರ ಪ್ರದೇಶಗಳಿಗೆ ಸೀಮಿತವಾಗಿದ್ದವು. ಶೈಕ್ಷಣಿಕ ಅವಶ್ಯಕತೆ ಇರುವಂತಹ ನಗರ ಹಾಗೂ ಹಳ್ಳಿಗಳಲ್ಲಿ ಬಡವರಿಗೆ, ಅಂಗವಿಕಲ ಮಕ್ಕಳಿಗೆ ನಿಲುಕುವಂತಹ ಶಿಕ್ಷಣವನ್ನೀಯುವುದು ಸರ್ಕಾರಕ್ಕೆ ಒಂದು ಸವಾಲಾಗಿ ಪರಿಣಮಿಸಿತು.

**1947ಕ್ಕೆ ಪೂರ್ವದಲ್ಲಿನ ಶಿಕ್ಷಣ :** ಪ್ರಾಚೀನ ಕಾಲದಿಂದಲೂ 'ಗುರುಕುಲ ವಿದ್ಯಾಭ್ಯಾಸ' ಪದ್ಧತಿಯು ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ಪ್ರಾಚೀನ ಕರ್ನಾಟಕದ ಭಾಗಗಳಲ್ಲಿ 'ಅಗ್ರಹಾರ', 'ಮಠ', 'ಬ್ರಹ್ಮಪುರಿ' ಎಂಬ ಸಂಸ್ಥೆಗಳಲ್ಲಿ ಹಿಂದೂ ಸಂಪ್ರದಾಯ ಪದ್ಧತಿಯಂತೆ ಶಿಕ್ಷಣ ನೀಡಲಾಗುತ್ತಿತ್ತು. ವಿದ್ಯಾರ್ಥಿ ದೆಸೆಯು (ವ್ಯಾಸಂಗಾವಧಿಯು) ಸುಮಾರು 12 ವರುಷಗಳಾಗಿತ್ತು. ಪಠ್ಯಕ್ರಮವು ವ್ಯಾಪಕವಾಗಿದ್ದು ಅದು ವೇದ, ವೇದಾಂಗ, ವೇದಾಂತ, ಪುರಾಣ, ನ್ಯಾಯ, ಮೀಮಾಂಸೆ, ಆಗಮ, ಜ್ಯೋತಿಷ್ಯ, ವ್ಯಾಕರಣ, ಗಣಿತ, ತರ್ಕ, ಶಸ್ತ್ರಾಭ್ಯಾಸ (War fare), ಯೋಗಶಾಸ್ತ್ರಗಳನ್ನು ಒಳಗೊಂಡಿತ್ತು. ಪ್ರಥಮತಃ ಕೇವಲ ಬ್ರಾಹ್ಮಣರಿಗೆ ಮೀಸಲಾಗಿದ್ದ ಈ ಸಂಸ್ಥೆಗಳು ಅನಂತರ ಕ್ಷತ್ರಿಯ ಹಾಗೂ ವೈಶ್ಯರೂ ಪ್ರವೇಶ ಪಡೆಯುವಂತಾಯಿತು.

ನಂತರದ ದಿನಗಳಲ್ಲಿ ಸಂಸ್ಕೃತ ಶಾಲೆಗಳೆನಿಸಿದ್ದ "ಪಾಠಶಾಲೆ"ಗಳು ರಾಜ್ಯದ ಅನೇಕ ಅಗ್ರಹಾರ ಹಾಗೂ ಮಠಗಳಲ್ಲಿ ಸ್ಥಾಪನೆಗೊಂಡವು. ಇವು ಕೂಡಾ ಪ್ರಾಚೀನ ಪದ್ಧತಿಯ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದುದಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಕನ್ನಡದಲ್ಲಿಯೂ ಹಾಗೂ ಉನ್ನತ ಶಿಕ್ಷಣವನ್ನು ಸಂಸ್ಕೃತದಲ್ಲಿಯೂ ನೀಡುತ್ತಿದ್ದವು. ಈ ಪಾಠಶಾಲೆಗಳು, ಸರ್ಕಾರ ಎಂದರೆ ರಾಜರುಗಳಿಂದ ಕೊಡಲ್ಪಟ್ಟ ಸಹಾಯಧನ (grants) ಗಳಿಂದ ನಡೆಯುತ್ತಿದ್ದವು.

12ನೇ ಶತಮಾನದಲ್ಲಿ ವೀರಶೈವ ಮಠಗಳು, ಜಾತಿ ಹಾಗೂ ಲಿಂಗ ಭೇದವನ್ನೆಣಿಸದೆ ಕನ್ನಡ ಭಾಷೆಯಲ್ಲಿ ವಿದ್ಯಾಭ್ಯಾಸ ನೀಡುವತ್ತ ಪ್ರಮುಖ ಪಾತ್ರ ವಹಿಸಿದವು.

ಮುಸ್ಲಿಮರ ಆಡಳಿತ ಕಾಲದಲ್ಲಿ ಕರ್ನಾಟಕದಲ್ಲಿ ಇಸ್ಲಾಂ ಶಿಕ್ಷಣವು ಪ್ರಾರಂಭವಾಯಿತು. ಶೈಕ್ಷಣಿಕ ಸಂಸ್ಥೆ ಮಕ್ತಬ್ ಪ್ರಾಥಮಿಕ ಹಂತದ್ದಾದರೆ ಉನ್ನತ ಶಿಕ್ಷಣವು ಮದರಸಾಗಳಲ್ಲಿ ನಡೆಯುತ್ತಿತ್ತು.

19ನೇ ಶತಮಾನದ ಆದಿಭಾಗದಲ್ಲಿ ಕೆಲವು ಸ್ಥಳೀಯ ಶಾಲೆಗಳು ಸ್ಥಾಪಿತವಾದವು. ಇಲ್ಲಿ ಓದುವುದು, ಬರೆಯುವುದು ಹಾಗೂ ಗಣಿತದ ಅಭ್ಯಾಸವನ್ನು (3Rs - Reading, Writing, Arithmetic) ಉನ್ನತವರ್ಗದ ಕೆಲವರಿಗೆ ಮಾತ್ರ ಬೋಧಿಸಲಾಗುತ್ತಿತ್ತು. ಶಿಕ್ಷಣವು ರಾಜ್ಯದ ಕರ್ತವ್ಯವೇ ಅಲ್ಲವೆಂಬ ಭಾವನೆ ಇದ್ದುದರ ಪರಿಣಾಮವಾಗಿ ಶಿಕ್ಷಕರು ತಮ್ಮ ವರಮಾನಕ್ಕೆ ಶೈಕ್ಷಣಿಕ ಅಭಿವೃದ್ಧಿಯ ಗುರಿ ಹೊಂದಿರುವ ಸ್ಥಳೀಯ ಸಂಸ್ಥೆಗಳು, ಧಾರ್ಮಿಕ ನಾಯಕರುಗಳು ಹಾಗೂ ಪೋಷಕರ ಕೊಡುಗೆಗಳನ್ನು ಅವಲಂಬಿಸಬೇಕಾಗಿತ್ತು.

19ನೇ ಶತಮಾನದಲ್ಲಿ ಕ್ರೈಸ್ತ ಸಂಸ್ಥೆಗಳೂ ಸಹ ಕರ್ನಾಟಕಕ್ಕೆ ಶೈಕ್ಷಣಿಕ ಕೊಡುಗೆಗಳನ್ನು ನೀಡಿದವು. ವೆಸ್ಲಿಯನ್ ಸಂಸ್ಥೆಯು 1835ರಲ್ಲಿ ಮೈಸೂರಿನಲ್ಲಿ ಆಂಗ್ಲ ಬೋಧನೆ ಶಾಲೆಯನ್ನು ಪ್ರಾರಂಭಿಸಿತು (English Teaching School). ಲಂಡನ್ ಸಂಸ್ಥೆಯವರಿಂದ ಬೆಂಗಳೂರಿನಲ್ಲಿ 1840ರಲ್ಲಿ ಹೆಣ್ಣುಮಕ್ಕಳಿಗೇ ಸೀಮಿತವಾದ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ನಂತರ 1902ರಲ್ಲಿ ಅದನ್ನು ಹೆಣ್ಣುಮಕ್ಕಳ ಪ್ರೌಢಶಾಲೆಯಾಗಿ ಪರಿವರ್ತಿಸಲಾಯಿತು. ಈ ಶಾಲೆಗಳು ಹೆಚ್ಚಾಗಿ ಸ್ಥಳೀಯ ಕ್ರೈಸ್ತರಿಗೆ ಮಾತ್ರ ಮೀಸಲಾಗಿದ್ದರೂ, ಎಲ್ಲ ಪಂಗಡದವರ ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಿ ಓದುವುದು, ಬರೆಯುವುದು, ಬೈಬಲ್ ಉಪದೇಶ, ಭೂಗೋಳ, ಗಣಿತ ಪಾಠಗಳನ್ನು ಬೋಧಿಸುತ್ತಿದ್ದವು.

**19, 20ನೇ ಶತಮಾನದಲ್ಲಿ ಪ್ರೌಢಶಿಕ್ಷಣ ಶಾಲೆಗಳ ಸ್ಥಾಪನೆ:** ಸರಕಾರಿ ಪ್ರೌಢಶಾಲೆ ಎಂಬ ಹೆಸರಿನಲ್ಲಿ ಸ್ಥಾಪಿತವಾಗಿ ಅನಂತರ ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿಸಲ್ಪಟ್ಟ (affiliated) ಪ್ರಥಮ ಪ್ರೌಢಶಾಲೆಯು ಮೈಸೂರು ರಾಜ್ಯದ ಬೆಂಗಳೂರಿನಲ್ಲಿ 1858ರಲ್ಲಿ ಸ್ಥಾಪಿತವಾಯಿತು. ಇದಕ್ಕೆ ಪ್ರಥಮ ಪ್ರಾಂಶುಪಾಲರಾಗಿದ್ದ ಶ್ರೀ ಲಿವೀಸ್ ರೈಸ್‌ರವರು ಮೈಸೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಥಮ ನಿರ್ದೇಶಕರೂ ಆಗಿದ್ದರು. 1865ರಲ್ಲಿ ಬಿಷಪ್‌ಕಾಟನ್ ಶಾಲೆ ಹಾಗೂ ಸೆಂಟ್ ಆಂಡ್ರ್ಯೂ ಎಂಬ ಎರಡು ಖಾಸಗಿ ಆಂಗ್ಲ ಶಾಲೆಗಳು

Digitised by Bharatavani, CIIL

ಪ್ರಾರಂಭವಾದವು. ಮೈಸೂರು ರಾಜ್ಯದಲ್ಲಿ 1871ರಲ್ಲಿ ಕೇವಲ 11 ಇದ್ದ ಪ್ರೌಢಶಾಲೆಗಳು 1900ರಲ್ಲಿ 14ನ್ನು ಮುಟ್ಟುವಂತಾಯಿತು. ಪ್ರೌಢಶಾಲೆಗಳ ಮಾನ್ಯತೆ ಕುರಿತಾದ ನಿಯಮಾವಳಿಗಳನ್ನು 1882ರಲ್ಲಿ ಹೊರಡಿಸಲಾಯಿತು. ಅಂತೆಯೇ ಮದ್ರಾಸ್ ವಿಶ್ವವಿದ್ಯಾನಿಲಯ ಮಾನ್ಯ ಮಾಡದ ಯಾವ ಪ್ರೌಢಶಾಲೆಯೂ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಹಾಗಿರಲಿಲ್ಲ.

ಸಾಮಾನ್ಯ ಶಿಕ್ಷಣ ಹಾಗೂ ಶಿಕ್ಷಕ ತರಬೇತಿ ಶಿಕ್ಷಣವನ್ನು ಒಟ್ಟಿಗೆ ಸೇರಿಸುವ ಉದ್ದೇಶದಿಂದ ಪ್ರೌಢಶಾಲೆಯ ತರಗತಿಗಳನ್ನು 1918–19ರಲ್ಲಿ ಜಿಲ್ಲಾ ಸಾಮಾನ್ಯ ಶಾಲೆಗಳಿಗೆ (District Normal Schools) ಸೇರಿಸಲಾಯಿತು. ಹೀಗೆ ವಿಲೀನಗೊಂಡ ಪ್ರೌಢಶಿಕ್ಷಣವು IV ಫಾರಮ್, V ಫಾರಮ್, VI ಫಾರಮ್ ಎಂದು ಕರೆಯಲ್ಪಟ್ಟು ವಿದ್ಯಾರ್ಥಿಗಳು VI ಫಾರಮ್ ಮುಗಿಸಿದ ನಂತರ ಮದ್ರಾಸ್ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರು. 1948–49ರಲ್ಲಿ ಜಿಲ್ಲಾ ಮಂಡಳಿಗಳು (District Boards) ಪ್ರೌಢಶಾಲೆಗಳ ಆಡಳಿತವನ್ನು ವಹಿಸಿಕೊಂಡಿದ್ದರ ಫಲವಾಗಿ ಮೈಸೂರು ರಾಜ್ಯದಲ್ಲಿ ಪ್ರೌಢಶಾಲೆಗಳು ತೀವ್ರಗತಿಯಲ್ಲಿ ವಿಸ್ತರಿಸಲ್ಪಟ್ಟವು.

1860ರಲ್ಲಿ ಕ್ರೈಸ್ತಧರ್ಮ ಪ್ರಚಾರಕರಿಂದ ಮದ್ರಾಸು ಕರ್ನಾಟಕ ದಕ್ಷಿಣ ಕನ್ನಡದಲ್ಲಿ ಪ್ರಥಮವಾಗಿ ಪ್ರೌಢಶಾಲೆಯು ಪ್ರಾರಂಭವಾಯಿತು. ಜಿಲ್ಲಾ ಪ್ರೌಢಶಿಕ್ಷಣ ಮಂಡಳಿಯು 1923ರಲ್ಲಿ ಸ್ಥಾಪಿತವಾದ ಹಿನ್ನೆಲೆಯಲ್ಲಿ ಪ್ರೌಢಶಿಕ್ಷಣವು ವಿಸ್ತಾರಗೊಂಡು 1951ರಲ್ಲಿ ಸುಮಾರು 64 ಪ್ರೌಢಶಾಲೆಗಳು ಈ ಭಾಗದಲ್ಲಿ ಕಾರ್ಯನಿರ್ವಹಿಸುವಂತಾಯಿತು.

1890ರಲ್ಲಿ ಬಾಂಬೆ ಕರ್ನಾಟಕ ಪ್ರದೇಶದಲ್ಲಿನ ನಾಲ್ಕು ಜಿಲ್ಲೆಗಳಲ್ಲಿ ಒಂದೊಂದು ಪ್ರೌಢಶಾಲೆಗಳಿದ್ದವು. ನಗರಗಳಲ್ಲಿ ಕ್ರೈಸ್ತ ಸಂಘದವರಿಂದ ಹಾಗೂ ಖಾಸಗಿ ಸಂಘಗಳಲ್ಲಿ ಒಂದಾದ KLE ಸೊಸೈಟಿಯವರಿಂದ ಪ್ರೌಢಶಾಲೆಗಳು ಸ್ಥಾಪಿತವಾದವು. ಹೀಗಾಗಿ 1956ರಲ್ಲಿ ಒಟ್ಟು 128 ಪ್ರೌಢಶಾಲೆಗಳು ಶಿಕ್ಷಣವನ್ನು ನೀಡುತ್ತಿದ್ದು ಅದರಲ್ಲಿ 09 ಸರ್ಕಾರಿ ಪ್ರೌಢಶಾಲೆಗಳಾಗಿದ್ದವು.

ಹೈದರಾಬಾದ್ ಕರ್ನಾಟಕಕ್ಕೆ ಸೇರಿದ ಗುಲ್ಬರ್ಗದಲ್ಲಿ ಪ್ರೌಢಶಾಲೆ 1885–86ರಲ್ಲಿ ಸ್ಥಾಪಿತವಾದರೆ, ಬೀದರ್ ಜಿಲ್ಲೆಯು 1891ರಲ್ಲಿ ಮೊದಲ ಪ್ರೌಢಶಾಲೆಯನ್ನು ಕಂಡಿತು. ಒಟ್ಟಾರೆ ಈ ಪ್ರದೇಶದಲ್ಲಿ 1956ರಲ್ಲಿ ನಾಲ್ಕು ಹೆಣ್ಣು ಮಕ್ಕಳ ಶಾಲೆಗಳೂ ಸೇರಿದಂತೆ ಒಟ್ಟು 19 ಪ್ರೌಢಶಾಲೆಗಳು ಶಿಕ್ಷಣವನ್ನು ನೀಡುತ್ತಿದ್ದವು.

1879ರಲ್ಲಿ ಕೊಡಗು ಪ್ರಥಮ ಪ್ರೌಢಶಾಲೆಯನ್ನು ಕಂಡಿತು. 1909ರಲ್ಲಿ ಫ್ರೆಂಚ್ ಕ್ಯಾಥೋಲಿಕ್ ಧರ್ಮದವರು ಹೆಣ್ಣು ಮಕ್ಕಳಿಗೆ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. 1956ರ ಹೊತ್ತಿಗೆ ಒಟ್ಟು 05 ಸರ್ಕಾರಿ ಪ್ರೌಢಶಾಲೆಗಳು ಮತ್ತು 06 ಸರ್ಕಾರಿ ಅನುದಾನಿತ ಖಾಸಗಿ ಪ್ರೌಢಶಾಲೆಗಳು ಪ್ರಾರಂಭವಾಗಿದ್ದವು.

20ನೇ ಶತಮಾನದ ಪೂರ್ವಾರ್ಧದಲ್ಲಿ ಪ್ರಾಥಮಿಕ ಶಿಕ್ಷಣವು ವಿಸ್ತಾರಗೊಂಡುದರ ಪರಿಣಾಮವಾಗಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಅಸ್ತಿತ್ವದತ್ತ ಒತ್ತಡವು ಹೆಚ್ಚಾಯಿತು. ಅನೇಕ ಮುನಿಸಿಪಲ್ ಸಂಸ್ಥೆಗಳು 1928ರಲ್ಲಿ ಪ್ರೌಢಶಾಲೆಗಳನ್ನು ತೆರೆಯಲು ಮುಂದಾದವು. ಇದಕ್ಕೆ ಸ್ಪಂದಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಸರ್ಕಾರವು ಶಾಲಾ ಕಟ್ಟಡದ ಅನುದಾನ (Building Grant) ಹಾಗೂ ಕಟ್ಟಡವನ್ನು ಸುಸ್ಥಿತಿಯಲ್ಲಿಡುವುದಕ್ಕೋಸ್ಕರ ಅನುದಾನವನ್ನು ಕೊಡುವ (Maintenance Grants) ನಿಯಮವನ್ನು ಉದಾರಗೊಳಿಸಿ, ಶಾಲಾ ಸುಸ್ಥಿತಿಯಲ್ಲಿಡಲು ಒಟ್ಟಾರೆ ಕೊಡಬೇಕಾದ ಖರ್ಚನ್ನು 1/2 ರಿಂದ 3/4ಕ್ಕೆ ಹೆಚ್ಚಿಸಿದುದಲ್ಲದೆ ಕೇವಲ ರೂ. 25,000/– ಇದ್ದ ಶಾಲಾ ಕಟ್ಟಡದ ಅನುದಾನವನ್ನು ರೂ. 50,000/–ಕ್ಕೆ ಹೆಚ್ಚಿಸಲಾಯಿತು. ಸ್ಥಳೀಯ ಹಾಗೂ ಖಾಸಗೀ ಸಂಸ್ಥೆಗಳವರು ಶಾಲೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಿದ್ದಲ್ಲದೆ, ಎಲ್ಲಿ ಖಾಸಗೀ ಸಂಸ್ಥೆಗಳು ಶಾಲೆಗಳನ್ನು ತೆರೆಯಲಾಗಲಿಲ್ಲವೋ ಅಂತಹ ಹಳ್ಳಿಗಳಲ್ಲಿ/ ಪ್ರದೇಶಗಳಲ್ಲಿ ಸರ್ಕಾರವೇ ಶಾಲೆಗಳನ್ನು ಪ್ರಾರಂಭಿಸಿತು.

ಅಖಂಡ ಕರ್ನಾಟಕದ ನಂತರ ಪ್ರೌಢಶಾಲೆಗಳನ್ನು ವಿಸ್ತರಿಸುವತ್ತ ಅನುಕೂಲಕರ ಪರಿಸ್ಥಿತಿ ತೀವ್ರಗೊಂಡಿತು. ಪರಿಣಾಮವಾಗಿ 2005–06ರಲ್ಲಿ 1950–51ರಲ್ಲಿದ್ದ ಶಾಲೆಗಳ ಸಂಖ್ಯೆಗಿಂತ 50ರಷ್ಟು ಹೆಚ್ಚಾದವು. ಹಾಗೆಯೇ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಸಂಖ್ಯೆಯಲ್ಲಿ ಏರಿಕೆ ಕಾಣಲಾಯಿತು.

**ಶಾಲಾ ಶಿಕ್ಷಣದಲ್ಲಿ ಬದಲಾವಣೆಯ ಮಾದರಿ:** ಕರ್ನಾಟಕ ರಾಜ್ಯದಲ್ಲಿ ಶಾಲಾ ಶಿಕ್ಷಣವು ಅನೇಕ ಬದಲಾವಣೆಗಳಿಗೆ ಒಳಪಟ್ಟಿತು. 1918–19ರಲ್ಲಿ IV, V, VI ಫಾರಂ ಎಂಬ ಮೂರು ವರ್ಷಗಳ ಅವಧಿಯಲ್ಲಿ ಪ್ರೌಢ ಶಿಕ್ಷಣವನ್ನು ಪಡೆದು ಕೊನೆಯ ಅಂದರೆ 6ನೆಯ ಫಾರಂನಲ್ಲಿ ಮದರಾಸಿನ ಮೆಟ್ರಿಕ್ಯೂಲೇಷನ್ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿತ್ತು. ಪ್ರಾರಂಭದಲ್ಲಿ ಬೋಧನಾ ಮಾಧ್ಯಮ ಆಂಗ್ಲ ಭಾಷೆಯಲ್ಲಿ ಇದ್ದು 1930–31ರಿಂದ ಕನ್ನಡ ಮಾಧ್ಯಮವು ಜಾರಿಗೆ ಬಂದಿತು.

ವಿವಿಧ ಪ್ರದೇಶಗಳ ವಿವಿಧ ಶೈಕ್ಷಣಿಕ ಮಾದರಿಗಳು ಚಾಲ್ತಿಯಲ್ಲಿದ್ದವು. 1956ರಲ್ಲಿ ಮೈಸೂರು ಪ್ರದೇಶದಲ್ಲಿ 4 ವರ್ಷಗಳ ಅವಧಿಯ ಪ್ರಾಥಮಿಕ ಶಿಕ್ಷಣ ಹಾಗೂ 7 ವರ್ಷಗಳ ಅವಧಿಯ ಪ್ರೌಢಶಿಕ್ಷಣವು ಜಾರಿಯಲ್ಲಿದ್ದಿತು. (07 ವರ್ಷ ಎಂದರೆ – 4 ವರ್ಷ ಹಿರಿಯ ಪ್ರಾಥಮಿಕ ಹಂತ, ಅಥವಾ ಲೋಯರ್ ಸೆಕೆಂಡರಿ ಹಂತ ಹಾಗೂ 03 ವರ್ಷ ಪ್ರೌಢಶಾಲೆ) ವಿದ್ಯಾರ್ಥಿಗಳು ಐಚ್ಛಿಕ ವಿಷಯಗಳನ್ನು ಪ್ರೌಢಶಿಕ್ಷಣದ ಎರಡನೇ ವರ್ಷದಲ್ಲಿ ಆಯ್ಕೆ ಮಾಡಿಕೊಳ್ಳಬೇಕಾಗಿತ್ತು. ವಿದ್ಯಾರ್ಥಿಗಳು ಎರಡು ಪಬ್ಲಿಕ್ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಿತ್ತು. ಒಂದು ಲೋಯರ್ ಸೆಕೆಂಡರಿ ಹಂತದ ಕೊನೆಯಲ್ಲಿ (8 ವರ್ಷ) ಹಾಗೂ ಮತ್ತೊಂದು ಪ್ರೌಢಹಂತದ ಕಡೆಯಲ್ಲಿ (11 ವರ್ಷ).

ಪ್ರಾಥಮಿಕ ಶಿಕ್ಷಣದ ಅರ್ಥವ್ಯಾಪ್ತಿಯು 1955–56ರಲ್ಲಿ ತೀವ್ರಗತಿಯ ಬದಲಾವಣೆಗೆ ಒಳಪಟ್ಟಿತು. 4 ವರ್ಷ ಅವಧಿಯ ಪ್ರಾಥಮಿಕ ಹಂತದಲ್ಲಿ 04 ವರ್ಷ ಅವಧಿಯ ಹಿರಿಯ ಪ್ರಾಥಮಿಕ ಹಂತ ವಿಲೀನವಾಯಿತು. ಹೀಗಾಗಿ ಪ್ರೌಢಶಿಕ್ಷಣದ ಅವಧಿ 3 ವರ್ಷಗಳಿಗೆ ಸೀಮಿತವಾಯಿತು. 1957ರಲ್ಲಿ ರಚಿಸಲ್ಪಟ್ಟ ಸಮಗ್ರ ಶಿಕ್ಷಣದ ಸಲಹಾ ಸಮಿತಿಯ (Education Integration Advisory Committee) ಶಿಫಾರಸ್ಸಿನಂತೆ ಪ್ರಾಥಮಿಕ ಹಂತವು 07 ವರ್ಷದ ಒಂದು ಸಮಗ್ರ ಹಂತ ಎಂದು ಪರಿಗಣಿಸಲ್ಪಟ್ಟಿತು. ಹಾಗೂ ಈ ಶಿಫಾರಸ್ಸು 1962–63 ರಿಂದ ಕರ್ನಾಟಕದಲ್ಲಿ ಜಾರಿಗೊಂಡಿತು.

1960–61ರಲ್ಲಿ ಪ್ರೌಢಶಾಲಾ ಹಂತದಲ್ಲಿ ಜಾರಿಗೆ ಬಂದ ಹೊಸ ಮಾದರಿಯ ಪ್ರಕಾರ ಪ್ರೌಢಶಾಲೆಯ ಮೊದಲನೆಯ ವರ್ಷವನ್ನು ಎಂಟನೇ ಸ್ಟ್ಯಾಂಡರ್ಡ್ ಎಂದೂ, ಎರಡನೆಯ ವರ್ಷವನ್ನು ಒಂಬತ್ತನೆಯ ಸ್ಟ್ಯಾಂಡರ್ಡ್ ಎಂದೂ, ಹಾಗೂ ಅಂತಿಮ ವರ್ಷವನ್ನು ಹತ್ತನೇ ಸ್ಟ್ಯಾಂಡರ್ಡ್ ಎಂದೂ ಕರೆಯಲಾಯಿತು. ಹೀಗಾಗಿ 63–64ರಲ್ಲಿ ಹೊಸ ಮಾದರಿಯ ಏಳನೇ ಸ್ಟ್ಯಾಂಡರ್ಡ್ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಹಳೆಯ ಮಾದರಿಯ ಎಂಟನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಇಬ್ಬರೂ ಹೊಸ ಮಾದರಿಯ ಎಂಟನೇ ಸ್ಟ್ಯಾಂಡರ್ಡ್‌ನಲ್ಲಿ

Digitised by Bharatavani, CIIL

ಒಟ್ಟಿಗೆ ಅಭ್ಯಾಸ ಮಾಡುವಂತಾಯಿತು. 63–64ಲ್ಲಿ ಹೊಸ ಮಾದರಿಯಂತೆ ಎರಡು ಮಾದರಿಗಳಲ್ಲಿ ಅಭ್ಯಸಿಸಿದ ವಿದ್ಯಾರ್ಥಿಗಳು ಒಂದೇ ತರಗತಿಯಲ್ಲಿ ಶಿಕ್ಷಣವನ್ನು ಪಡೆಯುವಂತಾಯಿತು.

ಪ್ರಸ್ತುತ ಕರ್ನಾಟಕದಲ್ಲಿ ಶಾಲಾ ಶಿಕ್ಷಣವು 10 ವರ್ಷಗಳ ಮಾದರಿಯನ್ನು ಅನುಸರಿಸಲಾಗುತ್ತಿದೆ. ಇದು 5 + 3 + 2 ಅನ್ನಾಗಿ ವಿಂಗಡಿಸಲ್ಪಟ್ಟಿದ್ದರೂ ಬಹಳ ಕಡಿಮೆ ಸಂಖ್ಯೆಯ ಹಿರಿಯ ಪ್ರಾಥಮಿಕ ಶಾಲೆಗಳು 8ನೇ ತರಗತಿಯನ್ನು ಹೊಂದಿರುವುದರಿಂದ ಹಾಗೂ ಪ್ರತಿ ಪ್ರೌಢಶಾಲೆಯಲ್ಲಿಯೂ 08ನೇ ತರಗತಿಯು ಕಡ್ಡಾಯವಾಗಿ ಇರುವುದರಿಂದ ಶಿಕ್ಷಣದ ಮಾದರಿಯ ಕ್ರಮ 5 + 2 + 3 ಅನ್ನುವುದೇ ಹೆಚ್ಚು ಸೂಕ್ತವೆನ್ನಿಸುತ್ತದೆ.

ಕೇಂದ್ರ ಸರ್ಕಾರದ ನೌಕರರ ಮಕ್ಕಳು ಹಾಗೂ ರಕ್ಷಣಾ ಇಲಾಖೆಯಲ್ಲಿನ ನೌಕರರ ಮಕ್ಕಳಿಗೋಸ್ಕರ 1964–65ರಲ್ಲಿ ಭಾರತ ಸರ್ಕಾರವು 1 ರಿಂದ XII ತರಗತಿಯವರೆವಿಗೆ ಕೇಂದ್ರೀಯ ಶಾಲೆಗಳನ್ನು ತೆರೆಯಿತು.

**ಪಠ್ಯಕ್ರಮ :** ಪ್ರಾರಂಭದಲ್ಲಿ ಯಾವುದೇ ಗೊತ್ತುಪಡಿಸಿದ ಪಠ್ಯಕ್ರಮ ಇರಲಿಲ್ಲ. ಪದ್ಯಸಾರ (ಪದ್ಯ), ಕಥಾಸಪ್ತತಿ (ಗದ್ಯ), ವಾಗ್ವಿದ್ಯಾನಿ (ವ್ಯಾಕರಣ), ಭೂಮಿವರ್ಣನೆ (ಭೂಗೋಳ) ಇವುಗಳು ಕಡಿಮೆ ದರದಲ್ಲಿ ಅಚ್ಚಾಗಿ ಪ್ರಕಾಶಿಸಲ್ಪಟ್ಟವು ಎಂಬುದಾಗಿ 1868–69ರ ರಾಜ್ಯದ ವಾರ್ಷಿಕ ವರದಿಯು ಸ್ಪಷ್ಟಪಡಿಸಿದೆ. ಪ್ರೌಢಹಂತಕ್ಕೆ ಅದೇ ವರದಿಯಂತೆ ಸಂಪೂರ್ಣ ರಾಮಾಯಣವನ್ನು ಸಂಪಾದಿಸಿ ಪ್ರಕಟಿಸಿದ ಕೆಲವು ಭಾಗಗಳನ್ನು ಇಡಲಾಗಿತ್ತು. 1866ರಲ್ಲಿ ವಿದ್ಯಾರ್ಥಿಗಳನ್ನು ಮದ್ರಾಸ್ ವಿಶ್ವವಿದ್ಯಾನಿಲಯದ ಮೆಟ್ರಿಕ್ಯುಲೇಷನ್‌ನ ಪರೀಕ್ಷೆಗೆ ತಯಾರು ಮಾಡಲು ಬೆಂಗಳೂರಿನ ಪ್ರೌಢ ತರಗತಿಗಳ ಪಠ್ಯಕ್ರಮವನ್ನು ಪರಿಷ್ಕರಿಸಲಾಯಿತು.

ಕನ್ನಡ ಶಾಲೆಗಳಲ್ಲಿ ಭಾಷೆ, ಗಣಿತ, ಭೂಗೋಳ, ಭಾರತೀಯ ಚರಿತ್ರೆಯಲ್ಲದೆ ಐಚ್ಛಿಕ ವಿಷಯಗಳಾಗಿ ವ್ಯವಸಾಯ, ಸಂಸ್ಕೃತ, ಶುಚಿತ್ವ ವಿಷಯಗಳು ಬೋಧಿಸಲ್ಪಡುತ್ತಿದ್ದವು. ಸ್ಥಳೀಯ ಆಂಗ್ಲ ಶಾಲೆಗಳಲ್ಲಿ ಪ್ರಥಮ ಭಾಷೆ ಆಂಗ್ಲ, ದ್ವಿತೀಯ ಭಾಷೆ ಕನ್ನಡ / ಉರ್ದು / ತೆಲುಗು / ತಮಿಳು ಇದಲ್ಲದೆ ಗಣಿತ, ಭೂಗೋಳ, ಭಾರತೀಯ ಇತಿಹಾಸಗಳು ಬೋಧಿಸಲ್ಪಡುತ್ತಿದ್ದವು. ಐಚ್ಛಿಕ ವಿಷಯಗಳಾಗಿ ಸಂಸ್ಕೃತ ರೇಖಾಗಣಿತ ಕೂಡಾ ಇದ್ದವು.

**ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡಬಹುದಾದ ವಿಷಯಗಳು :** ಪ್ರಥಮ ಭಾಷೆ ಕನ್ನಡ/ ಉರ್ದು, ದ್ವಿತೀಯ ಭಾಷೆ ಸಂಸ್ಕೃತ / ಪರ್ಷಿಯನ್ ಇದಲ್ಲದೆ ಗಣಿತ, ವಿಜ್ಞಾನ, ಆರೋಗ್ಯ, ಚರಿತ್ರೆ, ಭೂಗೋಳವನ್ನು ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದರು. ಹೆಣ್ಣು ಮಕ್ಕಳು ವಿಜ್ಞಾನಕ್ಕೆ ಬದಲಾಗಿ ಕಸೂತಿ ಅಥವಾ ಸಂಗೀತವನ್ನು ಅಭ್ಯಾಸಿಸಬಹುದಾಗಿತ್ತು. 1892–93 ರಿಂದ ಪ್ರೌಢಶಾಲಾ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪ್ರತಿ ವರ್ಷವೂ ನಿಗದಿತ ಪಠ್ಯಪುಸ್ತಕಗಳು ಪ್ರಕಾಶನಗೊಳ್ಳುತ್ತಿದ್ದವು. 1937–38ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಸಲುವಾಗಿ ಪರಿಷ್ಕರಿಸಿದ ಪಠ್ಯ ಜಾರಿಗೆ ಬಂದಿತು. ಅದರ ವಿವರಣೆ ಇಂತಿದೆ–

**I. ಕಡ್ಡಾಯ ವಿಭಾಗ**

ಎ) ಆಂಗ್ಲ

ಬಿ) ದ್ವಿತೀಯ ಭಾಷೆ ಕನ್ನಡ / ತಮಿಳು / ತೆಲುಗು / ಉರ್ದು/ ಸಂಸ್ಕೃತ / ಅರೇಬಿಕ್ / ಪರ್ಷಿಯನ್ / ಫ್ರೆಂಚ್

ಸಿ) ಗಣಿತ (ಅಂಕಗಣಿತ, ಬೀಜಗಣಿತ, ರೇಖಾಗಣಿತ)

ಡಿ) ಸಾಮಾನ್ಯ ವಿಜ್ಞಾನ (ಭೌತಶಾಸ್ತ್ರ, ರಾಸಾಯನಿಕಶಾಸ್ತ್ರ, ಜೀವಶಾಸ್ತ್ರ)

ಇ) ಇತಿಹಾಸ, ಭೂಗೋಳ, ಪೌರಶಾಸ್ತ್ರ

**II. ಐಚ್ಛಿಕ ವಿಭಾಗ**

ಎ) ಮಾನವಿಕ ವಿಭಾಗ – (i) ಇಂಗ್ಲೆಂಡಿನ ಚರಿತ್ರೆ, (ii) ಭೂಗೋಳ, (iii) ಯಾವುದಾದರೂ ಒಂದು ಭಾಷೆ : ಕನ್ನಡ / ಆಂಗ್ಲ / ಸಂಸ್ಕೃತ / ಅರೇಬಿಕ್ / ಪರ್ಷಿಯನ್ / ಹಿಂದಿ

ಬಿ) ಗಣಿತ ಮತ್ತು ವಿಜ್ಞಾನ ವಿಭಾಗ – (i) ಗಣಿತ, (ii) ವಿಜ್ಞಾನ

ಸಿ) ಪ್ರಾಯೋಗಿಕ ಮಾನವಿಕ ವಿಭಾಗ – ವ್ಯವಸಾಯ, ರೇಷ್ಮೆ ವ್ಯವಸಾಯ, ಇನ್ನಿತರ ಕಸುಬುಗಳು

ಡಿ) ಸಂಗೀತ ಮತ್ತು ಕಲೆ ವಿಭಾಗ

ಪಠ್ಯಕ್ರಮವು 1959–60ರಲ್ಲಿ ಸಮಗ್ರ ಶಿಕ್ಷಣ ಸಲಹಾ ಸಮಿತಿ ನೀಡಿದ ಶಿಫಾರಸ್ಸಿನ ಮೇಲೆ ಪರಿಷ್ಕೃತಗೊಂಡಿತು. ಸುಮಾರು 1962ರಷ್ಟರಲ್ಲಿ ರಾಜ್ಯಾದ್ಯಂತ ಏಕರೂಪ ಪಠ್ಯಕ್ರಮವಾಯಿತು. ಇದರ ಪ್ರಕಾರ ತ್ರಿಭಾಷಾ ಸೂತ್ರ ಅನುಸರಿಸಲಾಯಿತು. ಆರೋಗ್ಯ ಶಿಕ್ಷಣವು ವಿಜ್ಞಾನದ ಭಾಗವಾಯಿತು. ಮೌಲ್ಯ ಶಿಕ್ಷಣ ಹಾಗೂ ದೈಹಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲಾಯಿತು.

ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಹಂತದಲ್ಲಿ ಆಯ್ಕೆ ಮಾಡಿಕೊಳ್ಳಬಹುದಾದ ಭಾಷಾ ವಿವರ

| ಪ್ರಥಮ ಭಾಷೆ | ದ್ವಿತೀಯ ಭಾಷೆ[1] | ತೃತೀಯ ಭಾಷೆ[2] |
|---|---|---|
| ಕನ್ನಡ | ಆಂಗ್ಲ | ಹಿಂದಿ / ಸಂಸ್ಕೃತ |
| ಉರ್ದು/ ಮರಾಠಿ/ ತೆಲುಗು ತಮಿಳು/ ಹಿಂದಿ/ ಸಂಸ್ಕೃತ[3] | ಕನ್ನಡ / ಆಂಗ್ಲ | ಆಂಗ್ಲ / ಕನ್ನಡ |
| ಆಂಗ್ಲ | ಕನ್ನಡ | ಹಿಂದಿ / ಸಂಸ್ಕೃತ |

1. ದ್ವಿತೀಯ ಭಾಷೆಯನ್ನು 5ನೇ ತರಗತಿಯಿಂದ ಪ್ರಾರಂಭಿಸಲಾಗುತ್ತದೆ. ಆದರೆ 2007–08 ರಿಂದ ಆಂಗ್ಲ ಭಾಷೆಯನ್ನು ಒಂದನೇ ತರಗತಿಯಿಂದ ಪ್ರಾರಂಭಿಸಲಾಯಿತು.
2. ತೃತೀಯ ಭಾಷೆ 6ನೇ ತರಗತಿಯಿಂದ ಪ್ರಾರಂಭಿಸಲಾಗುತ್ತದೆ.
3. ಸಂಸ್ಕೃತವನ್ನು ಪ್ರಥಮಭಾಷೆಯನ್ನಾಗಿ 8ನೇ ತರಗತಿಯಿಂದ ಅಭ್ಯಾಸಿಸಬಹುದು.
4. ಅರೇಬಿಕ್ / ಪರ್ಷಿಯನ್ / ಕೊಂಕಣಿಯನ್ನು ತೃತೀಯ ಭಾಷೆಯನ್ನಾಗಿ 6ನೇ ತರಗತಿಯಿಂದ ಪ್ರಾರಂಭಿಸಬಹುದು.

**ಪ್ರೌಢಶಿಕ್ಷಣದಲ್ಲಿ ಶಿಕ್ಷಕರು:** ತರಬೇತಿ ಹೊಂದಿದ ಶಿಕ್ಷಕರ ಸಂಖ್ಯೆ 1950–51ರಲ್ಲಿ 33% ಇದ್ದು 1970–71ರಲ್ಲಿ 67.05% ಆಗಿರುತ್ತದೆ. ಅನಂತರದ ದಿನಗಳಲ್ಲಿ ಪ್ರಾರಂಭವಾಯಿತು. ತರಬೇತಿ ಹೊಂದಿದ ಶಿಕ್ಷಕರನ್ನು ಮಾತ್ರ ಪ್ರೌಢಶಾಲೆಗೆ ನೇಮಕ ಮಾಡಿಕೊಳ್ಳಲು ಪ್ರಸ್ತುತ ಸರಕಾರಿ ಪ್ರೌಢಶಾಲೆಯಲ್ಲಿ 32,859 (33.43%) ಶಿಕ್ಷಕರು, ಸರಕಾರಿ

Digitised by Bharatavani, CIIL

ಅನುದಾನಿತ ಖಾಸಗಿ ಶಾಲೆಗಳಲ್ಲಿ 25,148 (27.29%) ಶಿಕ್ಷಕರು ಹಾಗೂ ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ 36,280 (39.31%) ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್ಲ ಶಿಕ್ಷಕರು ಕನಿಷ್ಠ B.A./ B.Sc. ಹಾಗೂ B.Ed. ಪದವಿ ಅರ್ಹತೆಯನ್ನು ಪಡೆದವರಾಗಿರುತ್ತಾರೆ.

ಪ್ರೌಢಶಾಲಾ ಹಂತದ ನೇಮಕಾತಿ ಕಾರ್ಯವು ವಿಭಾಗೀಯ ಮಟ್ಟದ್ದಾಗಿರುವುದರಿಂದ ಇಂತಹ ಶಿಕ್ಷಕರ ನೇಮಕಾತಿ ಅಧಿಕಾರವು ವಿಭಾಗೀಯ ಸಹನಿರ್ದೇಶಕರದ್ದೇ (JDPI) ಆಗಿರುತ್ತದೆ. 2003ರಿಂದ ವಿಭಾಗೀಯ ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಮಾರ್ಪಡಿಸಿದ ಕಾರಣ ನೇಮಕಾತಿ ಅಧಿಕಾರವನ್ನು ಉಪನಿರ್ದೇಶಕರು (DDPI) ವಹಿಸಿಕೊಂಡಿದ್ದಾರೆ.

ಅಭ್ಯರ್ಥಿಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಅರ್ಹತಾ ಪಟ್ಟಿಯನ್ನು ಸಿದ್ಧಗೊಳಿಸುವಾಗ ಔಚಿತ್ಯಪೂರ್ಣವಾಗಿ ವಿವಿಧ ಹಂತಗಳಿಗೆ ಪ್ರಾಮುಖ್ಯವನ್ನು ನೀಡಲಾಗುತ್ತದೆ (CET = 70%, ಡಿಗ್ರಿ = 20%, ಬಿ.ಎಡ್. = 10%). ಹೀಗೆ ನೀಡಿದ ಅಂಕಿಗಳಿಂದ ಅರ್ಹತಾ ಪಟ್ಟಿ ರಚಿಸುವಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಅನಂತರ ಕಂಪ್ಯೂಟರೀಕೃತ ಕೌನ್ಸಿಲಿಂಗನ್ನು ವಿಭಾಗೀಯ ಮಟ್ಟದಲ್ಲಿ ನಡೆಸಿ, ಸ್ಥಳದ ಆಯ್ಕೆಯಾದ ನಂತರ ಸಂಬಂಧಿಸಿದ ಉಪನಿರ್ದೇಶಕರಿಂದ ನೇಮಕಾತಿ ಆದೇಶವನ್ನು ಪಡೆಯಬಹುದಾಗಿದೆ.

ಮೂರು ತರಗತಿಗಳುಳ್ಳ ಪ್ರೌಢಶಾಲೆಗಳಲ್ಲಿ ಓರ್ವ ಮುಖ್ಯೋಪಾಧ್ಯಾಯರು ಜೊತೆಗೆ ಓರ್ವ ಕನ್ನಡ ಪಂಡಿತ, 04 ಪದವೀಧರ ಸಹಶಿಕ್ಷಕರು, ಓರ್ವ ಕುಶಲಕಲೆ ಶಿಕ್ಷಕ, ಓರ್ವ ದೈಹಿಕ ಶಿಕ್ಷಕರು, ಓರ್ವ ಹಿಂದಿ ಶಿಕ್ಷಕರ ಹುದ್ದೆಯನ್ನು ಮಾನ್ಯ ಮಾಡಲಾಗಿರುತ್ತದೆ. ಐದಕ್ಕಿಂತ ಹೆಚ್ಚಿನ ವಿಭಾಗಗಳುಳ್ಳ ಶಾಲೆಗಳಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ, ವಿಭಾಗಕ್ಕೆ 1 1/2ರಂತೆ ಶಿಕ್ಷಕರನ್ನು ನೀಡಲಾಗುತ್ತದೆ.

**ಪಬ್ಲಿಕ್ ಪರೀಕ್ಷೆಗಳು:** 1876 ರವರೆವಿಗೂ ಮಿಡಲ್ ಸ್ಕೂಲ್‌ನ ಕೊನೆಯ ಹಂತದವರೆವಿಗೂ ಪಬ್ಲಿಕ್ ಪರೀಕ್ಷೆಯೇ ಇರಲಿಲ್ಲ. 1879–80ರಿಂದ 1890 ರವರೆವಿಗೂ ಆಂಗ್ಲ ಶಾಲೆಯ ವಿದ್ಯಾರ್ಥಿಗಳು ಮದ್ರಾಸ್‌ನ ಮಿಡಲ್ ಸ್ಕೂಲ್ ಪರೀಕ್ಷೆಯನ್ನು ಬರೆಯಬೇಕಿತ್ತು. 1887ರಿಂದ ಕನ್ನಡ ಶಾಲೆಗಳ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಗೆ ಒಳಪಟ್ಟ ಮಂಡಳಿಯು ನಿರ್ವಹಿಸಲು ಪ್ರಾರಂಭಿಸಿತು.

ರಾಜ್ಯದ ಎಲ್ಲ ಬಗೆಯ ಲೋಯರ್ ಸೆಕೆಂಡರಿ ಶಾಲೆಗಳನ್ನು ಒಳಗೊಂಡಂತೆ ಮೈಸೂರಿನ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು 1891ರಲ್ಲಿ ಪ್ರಾರಂಭಿಸಲಾಯಿತು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರೌಢಶಾಲಾ ಪ್ರವೇಶಕ್ಕೆ ಅರ್ಹರಾಗುತ್ತಿದ್ದರು. ಈ ಪರೀಕ್ಷೆಯು 1938 ರಿಂದ ಹೆಣ್ಣು ಮಕ್ಕಳಿಗೆ ಕಡ್ಡಾಯವಾಗಿರಲಿಲ್ಲ. ಅವರ ಆಯ್ಕೆಗೆ ಬಿಡಲಾಗಿತ್ತು. ಅನಂತರ 1954 ರಿಂದ ಸಂಪೂರ್ಣವಾಗಿ ಈ ಪರೀಕ್ಷೆಯನ್ನು ತೆಗೆದು ಹಾಕಲಾಯಿತು.

1962–63ರಲ್ಲಿ, VII ನೇ ತರಗತಿಯ ಕೊನೆಯಲ್ಲಿ ಶಾಲೆಗಳು ತಮ್ಮದೇ ಆದ ಪ್ರಮೋಷನಲ್ ಪರೀಕ್ಷೆಯನ್ನು ನಡೆಸುತ್ತಿದ್ದವು. ಆದರೆ ಒಂದು ಪಬ್ಲಿಕ್ ಪರೀಕ್ಷೆಯ ಅವಶ್ಯಕತೆಯನ್ನು ಮನಗಂಡು 1964–65 ರಿಂದ 7ನೇ ತರಗತಿಯ ಕೊನೆಯಲ್ಲಿ ಜಿಲ್ಲಾ ಹಂತದ ಸಾಮಾನ್ಯ ವಾರ್ಷಿಕ ಪರೀಕ್ಷೆಯನ್ನು ಎಲ್ಲ ಶಾಲೆಗಳಲ್ಲಿಯೂ ನಡೆಸಲಾಯಿತು. ಆದರೆ ಈ ಪರೀಕ್ಷೆಯ ಪರಿಣಾಮವನ್ನು ವಿಶ್ಲೇಷಿಸಿದಾಗ ಸಾಕಷ್ಟು ಧನಾತ್ಮಕ ಅಂಶಗಳು ಕಾಣದ ಕಾರಣ 2001ರಲ್ಲಿ ಪಬ್ಲಿಕ್ ಪರೀಕ್ಷೆಯನ್ನು VII ನೇ ತರಗತಿಗೆ ರದ್ದುಪಡಿಸಲಾಯಿತು.

1892ರಲ್ಲಿ ಶಿಕ್ಷಣ ಕಮಿಷನ್‌ನ ಶಿಫಾರಸ್ಸಿನಂತೆ "ಸೆಕೆಂಡರಿ ಸ್ಕೂಲ್ ಲೀವಿಂಗ್ ಎಗ್ಸಾಮಿನೇಷನ್" SSLC ಸ್ಥಾಪಿಸಲ್ಪಟ್ಟು ಮೈಸೂರಿನಲ್ಲಿ ಇದು 1912 ರಿಂದ ಜಾರಿಗೆ ಬಂದಿತು ಮತ್ತು ಎಸ್.ಎಸ್.ಎಲ್.ಸಿ.ಯು ಸರ್ಕಾರಿ ಸೇವೆಗಳಿಗೆ ಸೇರಲು ಅಧಿಕೃತ ಹಾಗೂ ಆವಶ್ಯಕ ವಿದ್ಯಾರ್ಹತೆಯಾಯಿತು. ಈ ಮಂಡಳಿಯು ಪ್ರೌಢಶಾಲಾ ಕಡೆಯ ಹಂತದಲ್ಲಿ ಪ್ರಮಾಣಪತ್ರವನ್ನು ನೀಡುತ್ತಿದ್ದು ಇದಕ್ಕೆ ಶಿಕ್ಷಣ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಪದನಿಮಿತ್ತ ಅಧ್ಯಕ್ಷರಾಗಿರುತ್ತಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯು 1913 ಮಾರ್ಚ್‌ನಲ್ಲಿ ಪ್ರಾರಂಭವಾಯಿತು. 1965–66ರವರೆವಿಗೂ ಎಸ್.ಎಸ್.ಎಲ್.ಸಿ. ಮಂಡಳಿಯು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಜವಾಬ್ದಾರಿಯಲ್ಲಿದ್ದು ಅನಂತರ ನಿರ್ದೇಶಕರನ್ನು ಈ ಕಾರ್ಯದಿಂದ ಬಿಡುಗಡೆಗೊಳಿಸಿ, ಹೆಚ್ಚುವರಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಮಂಡಳಿಯ ಪದನಿಮಿತ್ತ ಛೇರ್‌ಮನ್ ಎಂಬ ಹೊಸ ಹುದ್ದೆಯನ್ನು ಸೃಷ್ಟಿಸಿ 1966 ರಿಂದ ಅವರಿಗೆ ಈ ಕಾರ್ಯವನ್ನು ವಹಿಸಲಾಯಿತು. ಪ್ರಸ್ತುತ CPI ರವರ (ಆಯುಕ್ತರು) ಛೇರ್‌ಮನ್‌ಶಿಪ್‌ನಲ್ಲಿ ಮಂಡಳಿ ಕಾರ್ಯ ನಿರ್ವಹಿಸುತ್ತಿದೆ.

2003ರವರೆವಿಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 50%ರಷ್ಟು ಮಾತ್ರ ಉತ್ತೀರ್ಣರಾಗುತ್ತಿದ್ದರು. ನಂತರ ಪ್ರಶ್ನೆಪತ್ರಿಕೆಯ ವಿನ್ಯಾಸವನ್ನು ಬದಲಾಯಿಸಿ ಬಹುವಿಧ ಆಯ್ಕೆಯ (MCQ) ಪ್ರಶ್ನೆಗಳಿಗೆ ಅವಕಾಶವನ್ನು ಕಲ್ಪಿಸಲಾಯಿತು. ತತ್ಪರಿಣಾಮವಾಗಿ ಎಸ್.ಎಸ್.ಎಲ್.ಸಿ. ಫಲಿತಾಂಶವು ಗಣನೀಯವಾಗಿ ಉತ್ತಮಗೊಂಡು 2006ರಲ್ಲಿ 68.46% ರಷ್ಟಾಯಿತು. ಅನಂತರದ ದಿನಗಳಲ್ಲಿ ಎಸ್.ಎಸ್.ಎಲ್.ಸಿ. ಮಂಡಳಿಯು ಕೆಳಕಂಡ ಸುಧಾರಣೆಗಳನ್ನು ತಂದಿತು –

1. 1999 ರಿಂದ ಫಲಿತಾಂಶವು ಇಂಟರ್‌ನೆಟ್‌ನಲ್ಲಿ ಪ್ರಕಟಗೊಳ್ಳುವಂತಾಯಿತು.
2. ರ್‍ಯಾಂಕ್‌ಗಳನ್ನು ರದ್ದುಗೊಳಿಸಿ 85%ರ ಮೇಲೆ ಅಂಕ ಪಡೆದ ವಿದ್ಯಾರ್ಥಿಗಳಿಗೆ "ಡಿಸ್ಟಿಂಗ್‌ಷನ್" ನೀಡಲಾಗುತ್ತಿದೆ.
3. ಉತ್ತರಪತ್ರಿಕೆಯ ನಕಲು ಪ್ರತಿಯನ್ನು ಪಡೆಯಲು ಅವಕಾಶವಿದೆ.
4. ಅಕ್ರಮ ತಿದ್ದುಪಡಿಗೆ ಅವಕಾಶವಿಲ್ಲದಂತೆ ಅಂಕಪಟ್ಟಿಯನ್ನು ಲ್ಯಾಮಿನೇಟ್ ಮಾಡಿ ವಿಶಿಷ್ಟವಾದ ಹಾಲೋಗ್ರಾಂ ಅನ್ನು ಬಳಸಲಾಗುತ್ತಿದೆ.
5. ಪರೀಕ್ಷಾ ಮಂಡಳಿಯ ಕಾರ್ಯಗಳ ವಿಕೇಂದ್ರೀಕರಣಕ್ಕೆ ಒಳಪಡಿಸಿ, ವಿಭಾಗೀಯ ಸಹನಿರ್ದೇಶಕರನ್ನು ಮಂಡಳಿಯ ಪದನಿಮಿತ್ತ ಕಾರ್ಯದರ್ಶಿಗಳನ್ನಾಗಿ ಮಾಡಿ ನಕಲು ಅಂಕಪಟ್ಟಿ ವಿತರಣೆ, ಇವೇ ಮೊದಲಾದ ಕೆಲವು ಕಾರ್ಯಗಳನ್ನು ವಹಿಸಲಾಗಿದೆ.

**ಪ್ರೌಢಶಿಕ್ಷಣದಲ್ಲಿ ಇನ್ನಿತರೇ ಅಭಿವೃದ್ಧಿ ಯೋಜನೆಗಳು :** 6 ರಿಂದ 16 ವರ್ಷದ ಎಲ್ಲಾ ಮಕ್ಕಳೂ ವಿದ್ಯೆಯನ್ನು ಕಲಿಯುವಂತಾಗಬೇಕು. ಒಮ್ಮೆ ಶಾಲೆಗೆ ಸೇರಿದ ನಂತರ ಯಾವ ಕಾರಣಕ್ಕೂ ಶಾಲೆಯನ್ನು ಮಧ್ಯದಲ್ಲಿ ಬಿಡಬಾರದು ಎಂಬ ಸದುದ್ದೇಶದಿಂದ ಕರ್ನಾಟಕ ಸರ್ಕಾರ ಅನೇಕ ಪ್ರೋತ್ಸಾಹಪೂರಿತ ಸುಧಾರಣೆಗಳನ್ನು ಕೈಗೊಂಡಿದೆ– ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳು, ಅಕ್ಷರದಾಸೋಹ (ಮಧ್ಯಾಹ್ನದ

Digitised by Bharatavani, CIIL

ಬಿಸಿಯೂಟ ಯೋಜನೆ 2007 ರಿಂದ), ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ, SC/ST / ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಸತಿ / ಹಾಸ್ಟೆಲ್ ವ್ಯವಸ್ಥೆ ಇತ್ಯಾದಿ ಸೌಕರ್ಯಗಳನ್ನು ಪ್ರೌಢಶಿಕ್ಷಣಕ್ಕೂ ವಿಸ್ತರಿಸಲಾಯಿತು.

2004–05ರಲ್ಲಿ ಐದರಿಂದ ಒಂಬತ್ತನೇ ತರಗತಿಯವರೆವಿಗೆ ತ್ರೈಮಾಸಿಕ ಪದ್ಧತಿಯನ್ನು ಜಾರಿಗೆ ತಂದು, ಉತ್ತೀರ್ಣರಾಗಲು ಕನಿಷ್ಠ C+ ಶ್ರೇಣಿಯನ್ನಾದರೂ ಪಡೆದಿರಬೇಕೆಂದು ಗೊತ್ತುಪಡಿಸಿ ಇದರಲ್ಲೂ ಅನುತ್ತೀರ್ಣರಾದ ವಿದ್ಯಾರ್ಥಿಗೆ ಮುಂದಿನ ತರಗತಿಯಲ್ಲಿ ಪರಿಹಾರ ಬೋಧನೆಗೆ ಒಳಪಡಿಸಿ ಸಮಗ್ರ ಮೌಲ್ಯಮಾಪನದ ಮೂಲಕ ಪರಿಣತೆಯನ್ನು ಪಡೆಯುವಂತೆ ಮಾಡಲಾಯಿತು. 2007–08ರಲ್ಲಿ ಪರೀಕ್ಷೆ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ ಸೆಮೆಸ್ಟರ್ ಪದ್ಧತಿಯನ್ನು ತರಲಾಯಿತು.

ಮಾಹಿತಿ ತಂತ್ರಜ್ಞಾನವು ತನ್ನದೇ ಆದ ಪ್ರಾಧಾನ್ಯವನ್ನು ಹೊಂದುತ್ತಾ ಇರುವುದರಿಂದಲೂ, ಶಿಕ್ಷಣವು ಸಮಾಜಮುಖಿಯಾಗುತ್ತಿರುವುದನ್ನು ಗಮನಿಸಿ ಮಾಹಿತಿಸಿಂಧು ಹಾಗೂ ICT ಯೋಜನೆಯಡಿ ಕಂಪ್ಯೂಟರ್ ಶಿಕ್ಷಣವನ್ನು ಜಾರಿಗೆ ತಂದು ಹಳ್ಳಿಯ ಮಕ್ಕಳೂ ಕಂಪ್ಯೂಟರ್ ಕಲಿಯುವಂತೆ ಮಾಡಲಾಗಿದೆ.

ಪ್ರೌಢಶಾಲೆಯಲ್ಲಿ ಹದಿಹರೆಯದ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿರುವುದರಿಂದ (Adolescent Education) ಹದಿಹರೆಯದ ಶಿಕ್ಷಣವನ್ನೂ ನೀಡುತ್ತಿರುವುದಲ್ಲದೇ ಜೀವನ ಕೌಶಲ್ಯದ (Life skill) ಬಗ್ಗೆಯೂ ತರಬೇತಿಗೊಳಿಸಿ ಭವಿಷ್ಯದಲ್ಲಿ ವಿದ್ಯಾರ್ಥಿಗಳು ತಮ್ಮದೇ ಆದ ಜೀವನವನ್ನು ರೂಪಿಸಿಕೊಳ್ಳಲು ಸಮರ್ಥರನ್ನಾಗಿ ಮಾಡುವುದರ ಮೂಲಕ ಸಮರ್ಥ ಭಾರತಕ್ಕೆ ತಳಹದಿಯನ್ನು ಹಾಕಿದಂತಾಗಿ ಸರ್ವಾಂಗೀಣ ಬೆಳವಣಿಗೆಯತ್ತ ಧಾವಿಸುತ್ತಿರುವುದು ಶ್ಲಾಘನೀಯವೆನಿಸಿದೆ.

– ಎಂ.ಮ.

## ಕರ್ನಾಟಕದಲ್ಲಿ ಪ್ರೌಢಶಾಲಾ ಶಿಕ್ಷಣದ ಬೆಳವಣಿಗೆ

ಪ್ರೌಢಶಾಲಾ ಶಿಕ್ಷಣವು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ಮಧ್ಯಂತರ ಘಟ್ಟವಾಗಿರುವುದರಿಂದ ಇದರ ಪಾತ್ರ ಮತ್ತು ಕಲ್ಪನೆ ವಿಶಿಷ್ಟವಾದುದಾಗಿದೆ. ಕರ್ನಾಟಕದಲ್ಲಿ ಪ್ರೌಢ ಶಿಕ್ಷಣ ಬೆಳೆದು ಬಂದ ದಾರಿ ದೀರ್ಘವಾದುದು. ಅರಸರಾಡಳಿತದ ಮೈಸೂರು ರಾಜ್ಯದಲ್ಲಿ ಮೊದಲ ಸರ್ಕಾರಿ ಪ್ರೌಢಶಾಲೆಯು 1858 ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿತು. ನಂತರ ಅದನ್ನು ಸರ್ಕಾರಿ ಕೊಲಿಜಿಯೇಟ್ ಪ್ರೌಢಶಾಲೆ ಎಂಬ ಹೆಸರಿನಿಂದ ಕರೆಯಲಾಯಿತಲ್ಲದೆ ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸೇರ್ಪಡೆ ಮಾಡಲಾಯಿತು. ಲೂಯಿಸ್ ರೈಸ್ ಅವರು ಅದರ ಮೊದಲ ಪ್ರಾಂಶುಪಾಲರಾಗಿದ್ದರು. ಅಲ್ಲದೆ ಅವರು ಮೈಸೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಮೊದಲ ನಿರ್ದೇಶಕರೂ ಆಗಿ ಸೇವೆ ಸಲ್ಲಿಸಿದರು. 1865ರಲ್ಲಿ ಬಿಷಪ್ ಕಾಟನ್ ಶಾಲೆ ಮತ್ತು ಸೆಂಟ್ ಆಂಡ್ರೂಸ್ ಎಂಬ ಎರಡು ಖಾಸಗಿ ಇಂಗ್ಲಿಷ್ ವಿದ್ಯಾ ಸಂಸ್ಥೆಗಳು ಆರಂಭಗೊಂಡವು.

1871 ರಲ್ಲಿ ರಾಜ್ಯದಲ್ಲಿ ಇದ್ದ 11 ಪ್ರೌಢಶಾಲೆಗಳ ಸಂಖ್ಯೆ 1900 ರಲ್ಲಿ 14ಕ್ಕೆ ಏರಿತು. ಸಾಮಾನ್ಯ ಶಿಕ್ಷಣ ಮತ್ತು ಶಿಕ್ಷಕರ ತರಬೇತಿಯನ್ನು ಒಟ್ಟುಗೂಡಿಸುವ ದೃಷ್ಟಿಯೊಂದಿಗೆ 1918–19 ರಲ್ಲಿ ಪ್ರೌಢಶಾಲೆಯ ತರಗತಿಗಳನ್ನು ಜಿಲ್ಲಾ ನಾರ್ಮಲ್ ಶಾಲೆಗಳಿಗೆ ಸೇರ್ಪಡೆ ಮಾಡಲಾಯಿತು. ಪ್ರೌಢಶಾಲೆಗಳು 4, 5 ಮತ್ತು 6 ನೇ ಫಾರಂಗಳೆಂಬ 3 ವರ್ಷಗಳನ್ನು ಹೊಂದಿದ್ದವು. 6 ನೇ ಫಾರಂನ್ನು ಪೂರ್ಣಗೊಳಿಸಿದ ನಂತರ, ವಿದ್ಯಾರ್ಥಿಗಳು ಮದ್ರಾಸ್ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರು. ಕನ್ನಡವನ್ನು ಮಾಧ್ಯಮವನ್ನಾಗಿ ಪರಿಚಯಿಸುವ ತನಕ ಅಂದರೆ 1930–31 ರ ತನಕ ಇಂಗ್ಲಿಷ್ ಭಾಷೆಯು ಶಿಕ್ಷಣದ ಮಾಧ್ಯಮವಾಗಿತ್ತು. 1948–49 ರಲ್ಲಿ ಜಿಲ್ಲಾ ಬೋರ್ಡ್‌ಗಳು ಪ್ರೌಢಶಾಲೆಗಳ ನಿರ್ವಹಣೆಯ ಅಧಿಕಾರವನ್ನು ವಹಿಸಿಕೊಂಡವು. ತತ್ಪರಿಣಾಮವಾಗಿ ಅರಸರಾಡಳಿತದ ಮೈಸೂರು ರಾಜ್ಯದಲ್ಲಿ ಪ್ರೌಢಶಾಲಾ ಶಿಕ್ಷಣ ವಿಸ್ತರಣೆಯನ್ನು ಕಂಡಿತು.

1890ರಲ್ಲಿ ಬಾಂಬೆ ಕರ್ನಾಟಕ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ಒಂದೊಂದು ಪ್ರೌಢಶಾಲೆಯಿತ್ತು. ಕ್ರೈಸ್ತ ಮಿಷನ್‌ಗಳು ಮತ್ತು ಕೆ.ಎಲ್.ಇ. ಸಂಸ್ಥೆಯಂತಹ ಖಾಸಗಿ ಸಂಸ್ಥೆಗಳು ದೊಡ್ಡ ಪಟ್ಟಣಗಳಲ್ಲಿ ಪ್ರೌಢಶಾಲೆಗಳನ್ನು ತೆರೆದವು. 1956ರ ಹೊತ್ತಿಗೆ ಬಾಂಬೆ ಕರ್ನಾಟಕ ಪ್ರದೇಶವು 128 ಪ್ರೌಢಶಾಲೆಗಳನ್ನು ಹೊಂದಿತ್ತು. ಇವುಗಳ ಪೈಕಿ 9 ಮಾತ್ರ ಸರ್ಕಾರಿ ಪ್ರೌಢಶಾಲೆಗಳಾಗಿದ್ದವು.

ಮದ್ರಾಸ್ ಕರ್ನಾಟಕ ಪ್ರದೇಶದಲ್ಲಿ 1860 ರಲ್ಲಿ ಮೊದಲ ಮಿಷನರಿ ಶಾಲೆಯನ್ನು ದಕ್ಷಿಣ ಕನ್ನಡದಲ್ಲಿ ಸ್ಥಾಪಿಸಲಾಯಿತು. 1923 ರಲ್ಲಿ ಜಿಲ್ಲಾ ಪ್ರೌಢಶಿಕ್ಷಣ ಬೋರ್ಡ್‌ಗಳು ಸ್ಥಾಪಿತಗೊಂಡು ಈ ಪ್ರದೇಶದಲ್ಲಿನ ಪ್ರೌಢಶಿಕ್ಷಣದ ವಿಸ್ತರಣೆಗೆ ನೆರವಾದವು. 1951 ರ ಹೊತ್ತಿಗೆ ಈ ಪ್ರದೇಶದಲ್ಲಿ 64 ಪ್ರೌಢಶಾಲೆಗಳಿದ್ದವು.

1885–86 ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ, ಗುಲ್ಬರ್ಗಾದಲ್ಲಿ ಮೊದಲ ಪ್ರೌಢಶಾಲೆಯು ಸ್ಥಾಪನೆಗೊಂಡಿತು. ಬೀದರ್ ತನ್ನ ಮೊದಲ ಪ್ರೌಢಶಾಲೆಯನ್ನು 1897ರಲ್ಲಿ ಕಂಡಿತು. 1956ರ ಹೊತ್ತಿಗೆ 4 ಬಾಲಕಿಯರ ಪ್ರೌಢಶಾಲೆಗಳು ಸೇರಿದಂತೆ ಒಟ್ಟು 19 ಪ್ರೌಢಶಾಲೆಗಳು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ಥಾಪಿತಗೊಂಡಿದ್ದವು.

ಕೊಡಗಿನಲ್ಲಿ ಮೊದಲ ಪ್ರೌಢಶಾಲೆಯನ್ನು 1879 ರಲ್ಲಿ ತೆರೆಯಲಾಯಿತು. 1909ರಲ್ಲಿ ಫ್ರೆಂಚ್ ಕ್ಯಾಥೋಲಿಕ್ ಮಿಷನ್ ಒಂದು ಬಾಲಕಿಯರ ಪ್ರೌಢಶಾಲೆಯನ್ನು ತೆರೆಯಿತು. ಈ ಪ್ರದೇಶದಲ್ಲಿ 1956ರ ಹೊತ್ತಿಗೆ 5 ಸರಕಾರಿ ಪ್ರೌಢಶಾಲೆಗಳು ಮತ್ತು 6 ಖಾಸಗಿ ಅನುದಾನಿತ ಪ್ರೌಢಶಾಲೆಗಳಿದ್ದವು.

ಇಪ್ಪತ್ತನೆಯ ಶತಮಾನದ ಮೊದಲರ್ಧ ಭಾಗದಲ್ಲಿ ಪ್ರಾಥಮಿಕ ಶಿಕ್ಷಣವು ವಿಸ್ತರಣೆಯನ್ನು ಕಾಣುತ್ತಿದ್ದಂತೆ, ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಿಗಾಗಿನ ಬೇಡಿಕೆಯು ಸ್ಥಿರವಾಗಿ ಬೆಳೆಯತೊಡಗಿತು. ಪ್ರೌಢಶಾಲಾ ಶಿಕ್ಷಣದ ಬೇಡಿಕೆಯನ್ನು ಪೂರೈಸಲು 1928ರಷ್ಟು ಹಿಂದೆಯೇ ಅನೇಕ ಪುರಸಭೆಗಳು ರಾಜ್ಯದಲ್ಲಿ ಪ್ರೌಢಶಾಲೆಗಳನ್ನು ತೆರೆಯಲು ಮುಂದಾದವು. ಸರಕಾರವು ಈ ನಡೆಯನ್ನು ಮೆಚ್ಚಿಕೊಂಡಿತಲ್ಲದೆ ಕಟ್ಟಡ ಮತ್ತು ನಿರ್ವಹಣೆ ನಿಮಿತ್ತ ಇದ್ದ ಅನುದಾನ ನೀಡುವ ವ್ಯವಸ್ಥೆಯನ್ನು ಉದಾರೀಕರಿಸಿ ನಿವ್ವಳ ಅಧಿಕೃತ ವೆಚ್ಚದಲ್ಲಿ ಅರ್ಧ ಭಾಗ ಇದ್ದ ನಿರ್ವಹಣಾ ಅನುದಾನವನ್ನು ಮುಕ್ಕಾಲು ಭಾಗಕ್ಕೆ ಹೆಚ್ಚಿಸಲಾಯಿತು. ಕಟ್ಟಡ ಅನುದಾನವನ್ನು ಪ್ರತಿ ಸಂದರ್ಭಕ್ಕೆ ಅನ್ವಯವಾಗುವಂತೆ 25,000 ರೂಪಾಯಿಗಳಿಂದ 50,000 ಸಾವಿರ ರೂಪಾಯಿಗಳಿಗೆ ಹೆಚ್ಚಿಸಲಾಯಿತು.

ಸ್ವಾತಂತ್ರ್ಯ ಬಂದ ಸಮಯದಲ್ಲಿ ರಾಜ್ಯದಲ್ಲಿನ 93 ಪ್ರೌಢಶಾಲೆಗಳಲ್ಲಿ 45% ಅಥವಾ 50% ರಷ್ಟು ಪುರಸಭಾ ಪ್ರೌಢಶಾಲೆಗಳಿದ್ದವು. ಆ ಸಮಯದಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯು ಗಮನಾರ್ಹವಾದುದು. ಏಕೆಂದರೆ ಆ ಸಂದರ್ಭದಲ್ಲಿ 14 ಅನುದಾನಿತ ಮತ್ತು 15 ಅನುದಾನ ರಹಿತ ಖಾಸಗಿ ಪ್ರೌಢಶಾಲೆಗಳು ರಾಜ್ಯದಲ್ಲಿ ಇದ್ದವು.

Digitised by Bharatavani, CIIL

ರಾಜ್ಯ ಶಿಕ್ಷಣ ಏಕೀಕರಣ ಸಮಿತಿಯ ಶಿಫಾರಸ್ಸಿನಂತೆ ಒಂದು ಏಕ ರೂಪದ ಸ್ವರೂಪ ಮತ್ತು ಪಠ್ಯಕ್ರಮವನ್ನು ಗೊತ್ತು ಮಾಡಲಾಯಿತಲ್ಲದೆ ಅದನ್ನು 1960–61 ರಿಂದ 8ನೇ ತರಗತಿಗೆ ಜಾರಿ ಮಾಡಲಾಯಿತು. ಮತ್ತು ಅದನ್ನು 1961–62ರಲ್ಲಿ 9ನೇ ತರಗತಿಗೆ ಮತ್ತು 1962–63ರಲ್ಲಿ 10ನೇ ತರಗತಿಗೆ ವಿಸ್ತರಿಸಲಾಯಿತು. ಕೆಲವು ಶಾಲೆಗಳನ್ನು ಹೈಯರ್ ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸಲಾಯಿತು ಮತ್ತು ಈ ಶಾಲೆಗಳಿಗೆ 11ನೇ ತರಗತಿಯನ್ನು ಸೇರಿಸಲಾಯಿತು. 11ನೇ ತರಗತಿಯ ಪರೀಕ್ಷೆಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ನಡೆಸುತ್ತಿದ್ದವು.

**ಏಕೀಕರಣದ ನಂತರ ಪ್ರೌಢಶಾಲಾ ಶಿಕ್ಷಣದ ಬೆಳವಣಿಗೆ**

ಕರ್ನಾಟಕ ಏಕೀಕರಣದ ನಂತರ ರಾಜ್ಯದಲ್ಲಿ ಪ್ರೌಢಶಾಲೆ ಸೌಲಭ್ಯಗಳು ಶೀಘ್ರಗತಿಯಲ್ಲಿ ವಿಸ್ತರಣೆಗೊಂಡವು. ಅಗಾಧ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹಾಗೂ ಅಧಿಕ ಸಂಖ್ಯೆಯ ಶಿಕ್ಷಕರ ಬಲದೊಂದಿಗೆ ಪ್ರೌಢಶಾಲೆಗಳ ಸಂಖ್ಯೆಯು 2005–06 ರ ಹೊತ್ತಿಗೆ ಐವತ್ತು ಪಟ್ಟು ಹೆಚ್ಚಾಯಿತು.

1971–72ರಲ್ಲಿ ಸರಕಾರವು ಸ್ಥಳೀಯ ಸಂಸ್ಥೆಗಳ 365 ಪ್ರೌಢಶಾಲೆಗಳನ್ನು ತನ್ನ ಸ್ವಾಮ್ಯಕ್ಕೆ ತೆಗೆದುಕೊಂಡಿತು. 1950–51ರಲ್ಲಿ 33% ಇದ್ದು, ತರಬೇತಿಗೊಂಡ ಪದವೀಧರ ಶಿಕ್ಷಕರ ಶೇಕಡಾವಾರು ಪ್ರಮಾಣವು 1970–71 ರಲ್ಲಿ 67.50 ಶೇಕಡಾಗೆ ಹೆಚ್ಚಾಯಿತು. ನಂತರ ಕೇವಲ ತರಬೇತಿಗೊಂಡ ಪದವೀಧರ ಶಿಕ್ಷಕರನ್ನು ಮಾತ್ರ ಪ್ರೌಢಶಾಲಾ ಶಿಕ್ಷಕರನ್ನಾಗಿ ನೇಮಕ ಮಾಡಿಕೊಳ್ಳುವುದು ಚಾಲ್ತಿಗೆ ಬಂದಿತು.

ಪ್ರಾಥಮಿಕ ಶಿಕ್ಷಣದ ಜಾಲದ ವಿಸ್ತಾರಕ್ಕೆ ಹೋಲಿಕೆ ಮಾಡಿದರೆ, ರಾಜ್ಯದಲ್ಲಿರುವ ಪ್ರೌಢಶಿಕ್ಷಣದ ಜಾಲದ ವಿಸ್ತಾರ ಹೆಚ್ಚು ಪ್ರಭಾವಿಯಾಗಿದೆ. ಪ್ರೌಢಶಾಲೆಗಳ ಸಂಖ್ಯೆಯು 1968–69ರಲ್ಲಿ 1830 ಆಗಿದ್ದು, ಕಳೆದ ನಾಲ್ಕು ದಶಕಗಳಲ್ಲಿ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿ, 2006–07 ರ ವೇಳೆಗೆ 10537ಕ್ಕೆ ಏರಿದೆ (ಕೋಷ್ಟಕ – 1). ಪ್ರೌಢಶಾಲೆಗಳಲ್ಲಿ ದಾಖಲಾತಿಯು ಈ ಪ್ರಗತಿಗೆ ಅನುಗುಣವಾಗಿ ಹೆಚ್ಚಳವಾಗಿದ್ದು. 1960–61ರಲ್ಲಿ 1.6 ಲಕ್ಷದಷ್ಟು ಇದ್ದ ಪ್ರೌಢಶಾಲಾ ದಾಖಲಾತಿಯು 2006–07 ರ ವೇಳೆಗೆ 24.11 ಲಕ್ಷಗಳಾಗಿವೆ (ಕೋಷ್ಟಕ – 2). ಇದೇ ರೀತಿಯಲ್ಲಿ ಪ್ರೌಢಶಾಲಾ ಶಿಕ್ಷಕರ ಸಂಖ್ಯೆಯು 1950–51ರಲ್ಲಿ 2515 ಇದ್ದದ್ದು 2006–07 ನೇ ಸಾಲಿಗೆ 92,287 ಆಗಿದೆ. (ಕೋಷ್ಟಕ–3)

**ಕೋಷ್ಟಕ – 1**

| ವರ್ಷ | 51-52 | 56-57 | 68-69 | 80-81 | 86-87 | 96-97 | 99-00 | 06-07 |
|---|---|---|---|---|---|---|---|---|
| ಸರಕಾರಿ | ಅಲಭ್ಯ | ಅಲಭ್ಯ | 611 | 847 | 1615 | 2397 | 2667 | 3452 |
| ಖಾಸಗಿ | ಅಲಭ್ಯ | ಅಲಭ್ಯ | 1219 | 1749 | 3239 | 5049 | 5480 | 6766 |
| ಒಟ್ಟು | 218 | 530 | 1830 | 3596 | 4814 | 7446 | 8147 | 10537 |

ಮೂಲ: ಕರ್ನಾಟಕ ರಾಜ್ಯದಲ್ಲಿ ಶಿಕ್ಷಕರ ಚರಿತ್ರೆ ಮತ್ತು ವಾರ್ಷಿಕ ವರದಿಗಳು.

**ಕೋಷ್ಟಕ – 2**

| ವರ್ಷ | ದಾಖಲಾತಿ ಲಕ್ಷಗಳಲ್ಲಿ |
|---|---|
| 46–47 | 0.27 |
| 50–51 | 0.54 |
| 55–56 | 0.84 |
| 56–57 | 1.25 |
| 60–61 | 1.69 |
| 70–71 | 4.82 |
| 80–81 | 7.89 |
| 90–91 | 13.30 |
| 99–00 | 16.89 |
| 06–07 | 24.11 |

**ಕೋಷ್ಟಕ – 3**

| ವರ್ಷ | ಪ್ರೌಢಶಾಲಾ ಶಿಕ್ಷಕರು |
|---|---|
| 1950–51 | 2,515 |
| 1960–61 | 10,634 |
| 1970–71 | 21,400 |
| 1980–81 | 30,297 |
| 1990–91 | 37,344 |
| 2000–01 | 78,888 |
| 2006–07 | 92,287 |
| ಪ್ರೌಢಶಾಲಾ ಶಿಕ್ಷಕರ ದಶಕವಾರು ಹೆಚ್ಚಳ | |

**ಕರ್ನಾಟಕದಲ್ಲಿ ಪ್ರೌಢಶಾಲೆಗಳಲ್ಲಿ ದಾಖಲಾತಿಯ ಹೆಚ್ಚಳ**

ಮೂಲ: ಕರ್ನಾಟಕ ರಾಜ್ಯದಲ್ಲಿ ಶಿಕ್ಷಣದ ಇತಿಹಾಸ ಮತ್ತು ವಾರ್ಷಿಕ ವರದಿಗಳು.

ಶಿಕ್ಷಣ ಏಕೀಕರಣ ಸಲಹಾ ಸಮಿತಿಯ ಶಿಫಾರಸ್ಸುಗಳ ಅನ್ವಯ ಇಡೀ ರಾಜ್ಯದಲ್ಲಿ ಪ್ರೌಢ ಶಿಕ್ಷಣದ ವಿನ್ಯಾಸವು 1960–61 ರಿಂದ ನಾಲ್ಕು ವರ್ಷಗಳದ್ದಾಗಿದ್ದಿತು. ಇದರಲ್ಲಿ ಮೂರು ವರ್ಷಗಳ ಪ್ರೌಢಶಿಕ್ಷಣ ಮತ್ತು 11ನೇ ತರಗತಿ ಎಂಬ ಹೆಸರಿನ ಒಂದು ವರ್ಷದ ಕಲಿಕೆ ಅಡಕವಾಗಿದ್ದಿತು. 9ನೇ ತರಗತಿಯಿಂದ ಐಚ್ಛಿಕ ವಿಷಯಗಳು ಇದ್ದವು. ಹತ್ತನೇ ತರಗತಿಯ ನಂತರ ಮತ್ತು 11ನೇ ತರಗತಿಯ ನಂತರದಲ್ಲಿ ಒಟ್ಟು ಎರಡು ಪಬ್ಲಿಕ್ ಪರೀಕ್ಷೆಗಳಿದ್ದವು. ಹತ್ತನೆಯ ತರಗತಿಗೆ ಹೊಸ ಪಠ್ಯಗಳುಳ್ಳ ಮೊದಲ ಪಬ್ಲಿಕ್ ಪರೀಕ್ಷೆಯು ಮಾರ್ಚ್ / ಏಪ್ರಿಲ್ 1963 ರಲ್ಲಿ ನಡೆಯಿತು. ನಂತರ ಪ್ರೌಢಶಾಲೆಗಳು ಹಿರಿಯ ಪ್ರೌಢಶಾಲೆಗಳಾಗಿ ಪರಿವರ್ತಿತವಾದವು. 11ನೇ ತರಗತಿಯ ಪಠ್ಯವು ಒಂದು ವರ್ಷದ ಪಿ.ಯು.ಸಿ.ಯ ತತ್ಸಮಾನವಾಗಿದ್ದಿತು ಮತ್ತು ಪರೀಕ್ಷೆಯನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯ ನಡೆಸುತ್ತಿತ್ತು. 11ನೇ ತರಗತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಮೂರು ವರ್ಷಗಳ ಪದವಿ ವ್ಯಾಸಂಗಕ್ಕೆ ದಾಖಲಾಗಲು ಅರ್ಹರಾಗುತ್ತಿದ್ದರು.

ರಾಷ್ಟ್ರೀಯ ಶಿಕ್ಷಣ ಆಯೋಗದ (1964–66) ವರದಿಯನ್ನು ರಾಜ್ಯ ಸರ್ಕಾರವು ಒಪ್ಪಿ ಹೊಸ ಯೋಜನೆಯನ್ನು ಅಳವಡಿಸಲು ಸಹಾಯ ಮಾಡಲು ಪ್ರೊ. ಎ.ಸಿ. ದೇವೇಗೌಡ ಅವರನ್ನು ಶಾಲಾ ಪುನರ್ವ್ಯವಸ್ಥೆ ವಿಶೇಷಾಧಿಕಾರಿಯಾಗಿ 1968ರಲ್ಲಿ ನೇಮಕ ಮಾಡಿತು. ಅವರ ಶಿಫಾರಸ್ಸುಗಳ ಅನ್ವಯ ಅಂಗೀಕೃತ ಶಿಕ್ಷಣ ಮಾದರಿ ಎಂದರೆ 7 ವರ್ಷಗಳ ಪ್ರಾಥಮಿಕ ಶಿಕ್ಷಣ, ಐಚ್ಛಿಕ ವಿಷಯಗಳಿಲ್ಲದ 3 ವರ್ಷಗಳ ಪ್ರೌಢಶಾಲಾ ಶಿಕ್ಷಣ, 2 ವರ್ಷಗಳ ಪದವಿ ಪೂರ್ವ ಶಿಕ್ಷಣ ಮತ್ತು 3 ವರ್ಷಗಳ ಪದವಿ ಶಿಕ್ಷಣ, ಈ ರೀತಿ ಪದವಿ ಪೂರ್ವ ಶಿಕ್ಷಣಕ್ಕೆ ಇನ್ನೊಂದು ವರ್ಷವನ್ನು ಸೇರ್ಪಡೆ ಮಾಡಲಾಯಿತು.

Digitised by Bharatavani, CIIL

ರಾಷ್ಟ್ರೀಯ ಶಿಕ್ಷಣ ನೀತಿ 1986 ಮತ್ತು 1992ರ ಕಾರ್ಯ ಯೋಜನೆಗಳು ರಾಜ್ಯದ ಪ್ರೌಢಶಿಕ್ಷಣ ವ್ಯವಸ್ಥೆಯ ಮೇಲೆ ಗಾಢವಾದ ಪರಿಣಾಮ ಬೀರಿದವು. ಇವುಗಳ ಶಿಫಾರಸ್ಸಿನಂತೆ ಸರಕಾರವು ಪ್ರತಿವರ್ಷ ಹೆಚ್ಚಿನ ಪ್ರೌಢಶಾಲೆಗಳಿಗೆ ಶಿಕ್ಷಕರ ನೇಮಕಾತಿ ಮಾಡುವುದು, ಮೊರಾರ್ಜಿ ಶಾಲೆ ಮತ್ತಿತರ ವಸತಿ ಶಾಲೆಗಳನ್ನು ಸ್ಥಾಪಿಸುವುದು, ಹೆಣ್ಣು ಮಕ್ಕಳಿಗೆ ಉಚಿತ ಸಮವಸ್ತ್ರ ಮತ್ತು ಶುಲ್ಕ ರಿಯಾಯಿತಿ ನೀಡುವುದು ಮೊದಲಾದ ಅನೇಕ ಕಾರ್ಯಕ್ರಮಗಳು ಜಾರಿಯಾದವು.

ಪ್ರಸ್ತುತ ರಾಜ್ಯದಲ್ಲಿ ಜಾರಿ ಇರುವ ಪ್ರೌಢ ಶಿಕ್ಷಣವು 8 ನೇ ತರಗತಿಯಿಂದ 10ನೇ ತರಗತಿಯವರೆಗಿನ 3 ವರ್ಷಗಳ ಶಿಕ್ಷಣವನ್ನೊಳಗೊಂಡಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಉದ್ದೇಶದಲ್ಲಿ 8 ನೇ ತರಗತಿಯನ್ನು ಸಹ ಪ್ರಾಥಮಿಕ ಶಿಕ್ಷಣದ ಭಾಗವೆಂದು ಪರಿಗಣಿತವಾಗಿದ್ದರೂ ರಾಜ್ಯದಲ್ಲಿ ಸ್ವಲ್ಪ ಸಂಖ್ಯೆಯ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರವೇ ಈ ತರಗತಿಯನ್ನು ಹೊಂದಲಾಗಿದೆ.

ನವೋದಯ ಶಾಲೆಗಳ ಮಾದರಿಯಲ್ಲಿ ಪ್ರತಿಭಾನ್ವಿತ ಮತ್ತು ಜಾಣರಾದ ಹಿಂದುಳಿದ ವರ್ಗಗಳ ಮಕ್ಕಳ ಅನುಕೂಲಕ್ಕಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು 1995–96 ನೇ ಸಾಲಿನಿಂದ ರಾಜ್ಯದ 20 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಯಿತು.

ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ 8 ರಿಂದ 10 ನೇ ತರಗತಿಯವರೆಗೆ ಕಲಿಯುತ್ತಿರುವ ಎಲ್ಲ ಹೆಣ್ಣು ಮಕ್ಕಳಿಗೆ ಉಚಿತ ಸಮವಸ್ತ್ರ ಮತ್ತು ಪುಸ್ತಕಗಳನ್ನು ವಿದ್ಯಾ ವಿಕಾಸ ಯೋಜನೆಯ ಅಡಿಯಲ್ಲಿ ನೀಡಲಾಗುತ್ತದೆ. ಇದರ ಜೊತೆಗೆ ಅಕ್ಷರ ದಾಸೋಹ (ಮಧ್ಯಾಹ್ನದ ಬಿಸಿಊಟ) ಯೋಜನೆಯನ್ನು ರಾಜ್ಯದಲ್ಲಿರುವ ಎಲ್ಲ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ 2007–08 ನೇ ಸಾಲಿನಿಂದ ವಿಸ್ತರಿಸಲಾಗಿದೆ.

ಕಂಪ್ಯೂಟರ್ ಶಿಕ್ಷಣ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣದ ಅಂಗವಾಗಿ "ಮಾಹಿತಿ ಸಿಂಧು" ಯೋಜನೆಯನ್ನು 5 ವರ್ಷಗಳ ಕಾರ್ಯಕ್ರಮದ ರೂಪದಲ್ಲಿ 2001 ರಿಂದ ಜಾರಿಗೊಳಿಸಲಾಯಿತು. ಇದು ಶಿಕ್ಷಣ ಇಲಾಖೆಯ ಅತ್ಯಂತ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ.

ಸ್ವಾತಂತ್ರ್ಯಾ ನಂತರ ರಾಜ್ಯದಲ್ಲಿ ಪ್ರೌಢಶಾಲಾ ಶಿಕ್ಷಣವು ಗುಣಾತ್ಮಕ ಹಾಗೂ ಪರಿಮಾಣಾತ್ಮಕ ದೃಷ್ಟಿಕೋನದಿಂದ ಅಗಾಧವಾದ ಬೆಳವಣಿಗೆಯನ್ನು ಹೊಂದಿದೆ. ಸರಕಾರ ಈ ದಿಶೆಯಲ್ಲಿ ಬಜೆಟ್‌ನಲ್ಲಿ ಸಾಕಷ್ಟು ನೆರವನ್ನು ನೀಡುವುದರ ಮೂಲಕ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರುವುದರ ಜೊತೆಗೆ ಪ್ರೌಢಶಾಲಾ ಶಿಕ್ಷಣವನ್ನು ಅರ್ಥಪೂರ್ಣವಾಗಿಸುವುದರ ಕಡೆಗೆ ಗಮನಹರಿಸುತ್ತಿದೆ.

–ಅ.ವಿ.ಬ.

## ಕರ್ನಾಟಕದಲ್ಲಿ ಲಲಿತಕಲೆಗಳ ಶಿಕ್ಷಣದ ವ್ಯವಸ್ಥೆ

ಕರ್ನಾಟಕದಲ್ಲಿ ಪ್ರದರ್ಶನ ಕಲೆಗಳ ಶಿಕ್ಷಣದ ವ್ಯವಸ್ಥೆ ಉನ್ನತ ಮಟ್ಟದಲ್ಲಿದೆ. ಪ್ರತಿಯೊಬ್ಬನ ಜೀವನದಲ್ಲೂ ಕಲೆ ಎಂಬುದು ಒಂದಿಲ್ಲೊಂದು ಪ್ರಕಾರದಲ್ಲಿ ಹಾಸುಹೊಕ್ಕಾಗಿದೆ. ಕಲೆಯ ಗಂಧವಿಲ್ಲದ ಮನುಷ್ಯನಿಲ್ಲ, ಕಲೆಯು ಮನುಷ್ಯನ ಶಿಸ್ತಿನ ಜೀವನ, ನಡೆನುಡಿಗಳ ವ್ಯವಸ್ಥೆಗೆ ಸಹಕಾರಿಯಾಗಿದೆ. ಆದುದರಿಂದ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ, ತಾಲ್ಲೂಕಿನಲ್ಲೂ ಪ್ರದರ್ಶನ ಕಲೆಗಳ ಶಿಕ್ಷಣಕ್ಕೆ ವ್ಯವಸ್ಥೆಗಳಾಗಿವೆ. ಹಳ್ಳಿಹಳ್ಳಿಗಳಲ್ಲೂ ಕಲೆಗಳ ಶಿಕ್ಷಣ ಶಾಲೆ ಇಲ್ಲದಿದ್ದರೂ ಒಬ್ಬರಿಂದೊಬ್ಬರಿಗೆ ಕರ್ಣ ಪರಂಪರೆಯಿಂದ ಜಾನಪದ ಕಲೆಗಳು ನೃತ್ಯ, ಸಂಗೀತ, ನಾಟಕಗಳು ಮುಂದುವರಿಯುತ್ತಿದೆ.

ಬಹಳ ಹಿಂದೆ ಕಲೆಗಳ ಶಿಕ್ಷಣಕ್ರಮದಲ್ಲಿ ಗುರುಕುಲ ಪದ್ಧತಿಯು ಬಹುಕಾಲ ನಡೆಯಿತು. ಈ ಗುರು ಶಿಷ್ಯ ಪರಂಪರೆಯು ಅನೂಚಾನವಾಗಿ ಮಾನ್ಯವಾಗಿದ್ದು ಒಬ್ಬ ಶಿಷ್ಯನಿಗೆ ಒಬ್ಬ ಗುರು ಎಂಬುದು ವಾಡಿಕೆಯಾಗಿತ್ತು. ಆಗ ಗುರು ಅಂದರೆ ಸಾಕ್ಷಾತ್ ದೇವರು ಎಂಬ ಭಾವನೆ ಇತ್ತು. ಗುರುವಾಕ್ಯವನ್ನು ಚಾಚೂ ತಪ್ಪದೆ ಶಿಷ್ಯನು ಪಾಲಿಸುತ್ತಿದ್ದನು, ಶಿಷ್ಯನಿಗೆ ಕಲಿಯುತ್ತಿದ್ದ ಕಲೆಯು ಒಂದು ಮಟ್ಟ ತಲುಪಿದ ಮೇಲೆಯೆ ಆ ಗುರುವಿನಿಂದ ಅಪ್ಪಣೆ ಪಡೆದು ಶಿಷ್ಯ ಬರುತ್ತಿದ್ದನು. ಈ ಕ್ರಮವು ಬಹುಮಟ್ಟಿಗೆ ಹಿಂದೆ ಸರಿದು ಈಗ ಒಬ್ಬ ವಿದ್ಯಾರ್ಥಿಗೆ ಎರಡು, ಮೂರು ಗುರುಗಳ ಬಳಿ ಪಾಠ ಆಗಿರುವುದೂ ಇದೆ. ಅಂದರೆ ವಿದ್ಯಾರ್ಥಿ ಸ್ವಲ್ಪ ಕಾಲ ಒಬ್ಬ ಗುರುವಿನಲ್ಲಿ ಕಲಿತು, ಕಾರಣಾಂತರದಿಂದ ಬೇರೆ ಗುರುವನ್ನೂ ಅರಸಿ ಹೋಗುವ ಪರಿಪಾಠವೇ ಹೆಚ್ಚಾಗಿದೆ. ಹಿಂದೆ ಗುರುಗಳು ಶಿಷ್ಯನು ಸರಿಯಾಗಿ ಪಾಠ ಒಪ್ಪಿಸದಿದ್ದರೆ ಶಿಕ್ಷೆಯನ್ನು ಕೊಡಬಹುದಿತ್ತು. ಆದರೆ ಈಗ ಗುರುಗಳು ಶಿಷ್ಯನನ್ನು ಅನುಸರಿಸಿಕೊಂಡು ಪಾಠ ಹೇಳಬೇಕಾಗಿರುವುದರಿಂದ ಶಿಕ್ಷೆಯ ಮಾತೆಲ್ಲಿ? ಹಾಗೆಯೇ ಶಿಷ್ಯರೇ ಗುರುಗಳನ್ನು ಬದಲಾಯಿಸಿಕೊಂಡು ಬೇರೆ ಗುರುಗಳನ್ನು ಅರಸಿಹೋಗುತ್ತಾರೆ.

ಕರ್ನಾಟಕದಲ್ಲಿ ಲಲಿತಕಲೆ (ಪ್ರದರ್ಶನ)ಗಳಾದ ಸಂಗೀತ, ನೃತ್ಯ, ನಾಟಕಾದಿ ಕಲೆಗಳ ಶಿಕ್ಷಣ ವ್ಯವಸ್ಥೆಯ ಬಗ್ಗೆ ಗಮನ ಹರಿಸಿದರೆ ಅನೇಕ ಅಂಶಗಳು ಗೋಚರವಾಗುತ್ತವೆ. ಸುಮಾರು 20ನೇ ಶತಮಾನದಲ್ಲಿ ಸಂಗೀತ, ನೃತ್ಯಕಲೆಗಳು ಗುಂಪುಗಳಲ್ಲಿ ಅಂದರೆ ಸಾಮೂಹಿಕವಾಗಿ ಬೋಧಿಸುವ ಕ್ರಮವು ರೂಢಿಗೆ ಬಂದಿತು. ಈ ವೇಳೆಗೆ ಗುರುಕುಲ ಶಿಕ್ಷಣ ಪದ್ಧತಿ ಅಸ್ತಮಾನವಾಗಿತ್ತು. ಸಾಮೂಹಿಕ ಅಂದರೆ ನಿರ್ದಿಷ್ಟ ಸಂಖ್ಯೆ ಇಲ್ಲದಿರುವುದು. ಐದು ವಿದ್ಯಾರ್ಥಿಗಳಿರಬಹುದು, ಹತ್ತು ಇರಬಹುದು ಅಂದರೆ ಇದಕ್ಕೆ ಮಿತಿ ಇಲ್ಲ, ಈಗ ಎಲ್ಲರಿಗೂ ಶೀಘ್ರವಾಗಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಓದುತ್ತಿರುವವರು ಕಲಿಯುತ್ತಿರುವ ಕಲೆಯನ್ನು ಕಡೆಗಣಿಸಿ ಓದಿನ ಕಡೆ ಗಮನ ಹರಿಸುತ್ತಾರೆ. ಆದುದರಿಂದ ಮಕ್ಕಳ ಪೋಷಕರು ಅಷ್ಟರಲ್ಲೇ ಒಂದು ಅಥವಾ ಎರಡು ಸಂಗೀತ/ನೃತ್ಯ ಪರೀಕ್ಷೆ ಮುಗಿಸಿಬಿಡಲಿ ಎಂಬ ಆತುರ ತೋರಿಸುತ್ತಾರೆ. ಹಾಗೆಯೇ ಗುರುಗಳಿಗೂ ಸ್ವಾರ್ಥದಿಂದಾಗಿ ವಿದ್ಯಾರ್ಥಿಗೆ ಸರಿಯಾಗಿ ಬರಲಿ, ಬಿಡಲಿ ಪರೀಕ್ಷೆಗೆ ಕಟ್ಟಿಸಿ ಬಿಡುತ್ತಾರೆ. ಗುರುಗಳಿಗೆ ಏನು ಬಾಧಕವಿಲ್ಲ. ತಮ್ಮ ವಿದ್ಯಾರ್ಥಿ ಸಂಖ್ಯೆ ಇಷ್ಟಿದೆ ಎಂದು ಹೇಳಿಕೊಳ್ಳಲು ಅನುಕೂಲ. ಇದರಿಂದ ಗುಣಾತ್ಮಕವಾಗಿ ಕಲೆ ಉಳಿಯುವುದಿಲ್ಲ.

ಗುರುಕುಲ ಪದ್ಧತಿಯಲ್ಲಿ ಗುಣಾತ್ಮಕವಾಗಿ ಕಲೆಯನ್ನು ಹೇಳಿಕೊಡಲಾಗುತ್ತಿತ್ತು. ಗುರುಕುಲದಲ್ಲಿ ವಿದ್ಯಾರ್ಥಿಯ ಸಂಖ್ಯೆಗೆ ಪ್ರಾಶಸ್ತ್ಯವಿರಲಿಲ್ಲ. ಚೆನ್ನಾಗಿ ಕಲಿಸುವುದು ಮುಖ್ಯ ಗುರಿಯಾಗಿತ್ತು. ಪ್ರಸ್ತುತ ಖಾಸಗಿಯಾಗಿ ಅನೇಕ ವಿದ್ವಾಂಸರುಗಳು ಕಲಾಶಾಲೆಗಳಲ್ಲಿ ಇಂದು ಶಿಕ್ಷಣ ನೀಡುತ್ತಿದ್ದಾರೆ. ಈ ಸಾಮೂಹಿಕ ಶಿಕ್ಷಣವೆಂಬುದು (ಸಂಗೀತ/ನೃತ್ಯ ಕಲೆಗಳಿಗೆ) ಆರಂಭವಾಗಿದುದು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ಅಂಚಿನಲ್ಲಿ ಅಂದರೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ಅರಮನೆಯ, ಅರಸು ಮನೆತನದ ಹೆಣ್ಣುಮಕ್ಕಳಿಗೆ ಸಂಗೀತ ಪಾಠವನ್ನು ಹೇಳಿಸುತ್ತಿದ್ದರು. ಹಾಗೆಯೇ ಅರಮನೆಯಲ್ಲಿ ಬ್ಯಾಂಡ್‌ನ್ನು ನಿಯೋಜಿಸಿ, ಆ ಬ್ಯಾಂಡ್ ಕಲಾವಿದರಿಗೆ ಶ್ರೇಷ್ಠ ಹಿರಿಯ ವಿದ್ವಾಂಸರುಗಳಿಂದ ಕೃತಿಗಳ ಪಾಠವನ್ನು ಹೇಳಿಸುತ್ತಿದ್ದರು. ಆ ವೇಳೆಗೆ ಗುಂಪಿನಲ್ಲಿ ಸಂಗೀತ ಶಿಕ್ಷಣವು ಆರಂಭವಾಗಿತ್ತು. ಅನಂತರ ಮಹಾರಾಣಿಯವರ ಪ್ರೌಢಶಾಲೆಯಲ್ಲೂ ಸಂಗೀತ ಹೇಳಿಕೊಡುತ್ತಿದ್ದರಂತೆ. ಶಾಲೆಯಲ್ಲಿ ಇತರ ವಿಷಯಗಳ ಜೊತೆಗೆ ಸಂಗೀತವು ಒಂದು ವಿಷಯವಾಗಿ ಕಲಿಯಬೇಕಾಗಿತ್ತು.

Digitised by Bharatavani, CIIL

**ಶಿಕ್ಷಣ ವ್ಯವಸ್ಥೆ**

ಕ್ರಿ.ಶ. ಇಪ್ಪತ್ತನೆಯ ಶತಮಾನದ ವೇಳೆಗೆ ಅರಮನೆ, ಗುರುಮನೆ, ಪ್ರೌಢಶಾಲೆ, ಕಾಲೇಜುಗಳಲ್ಲಿ ಸಂಗೀತ ಶಿಕ್ಷಣ ನೀಡುವ ನೀತಿ ಆರಂಭವಾಯಿತು. ನಿರ್ದಿಷ್ಟವಾದ ಪಠ್ಯವಸ್ತು (Syllabus) ನಿಗದಿತ ವೇಳೆಯಲ್ಲಿ ಪಠ್ಯವನ್ನು ಮುಗಿಸಬೇಕಾದ ಅನಿವಾರ್ಯತೆ, ಆಯಾಯ ದಿನಗಳು ಬೋಧಿಸಿದ ಪಠ್ಯವನ್ನು ಬರೆದಿಡಬೇಕಾದ ನಿಯಮ, ತರಗತಿಯ ಎಲ್ಲಾ ವಿದ್ಯಾರ್ಥಿಗಳು ಕಲಿಯಲೇಬೇಕಾದ ಒತ್ತಡ. ಹೀಗೆ ಎಲ್ಲವೂ ಕಡ್ಡಾಯವಾಯಿತು. ಇದು ಮುಂದುವರಿಯುತ್ತಲೇ ಇದೆ. ಸಾಮೂಹಿಕ ಶಿಕ್ಷಣದಲ್ಲಿ ತರಹೇವಾರಿ ಬುದ್ಧಿ ಶಕ್ತಿ ಉಳ್ಳವರು ಇರುತ್ತಾರೆ. ಕೆಲವರಿಗೆ ಗ್ರಹಣ ಶಕ್ತಿ ಹೆಚ್ಚು. ಮತ್ತೆ ಕೆಲವರಿಗೆ ಗ್ರಹಣಶಕ್ತಿ ಕಡಿಮೆ, ಇನ್ನು ಕೆಲವರಿಗೆ ಮರೆವು. ಹೀಗೆ ಎಲ್ಲಾ ರೀತಿಗೂ ಹೊಂದಿಕೊಂಡು ಗುರು ಬೋಧಿಸಬೇಕು. ಸಾಮೂಹಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪರಿಪೂರ್ಣತೆ ಅನ್ನುವುದು ಕಷ್ಟವಾಗುತ್ತದೆ. ಪ್ರಸ್ತುತ ಪ್ರೌಢಶಾಲೆ, ಸ್ನಾತಕ ಪೂರ್ವ ಮಟ್ಟದಲ್ಲಿ ಸಂಗೀತವನ್ನು ಒಂದು ವಿಷಯವಾಗಿ ಬೋಧಿಸಿದರು ಅದು ಪರೀಕ್ಷಾ ದೃಷ್ಟಿಯಿಂದ ಮುಖ್ಯವಾದುದಲ್ಲ. ಸುಮ್ಮನೆ ಕಲಿಯಬೇಕು. ನಿರ್ದಿಷ್ಟ ಪಠ್ಯವಸ್ತುವಿದ್ದರು ಅದು ನಿಯಮಬದ್ಧವಾಗಿ ನಡೆಯುತ್ತಿಲ್ಲ. ಲಘು ರಚನೆಗಳಿಗೆ ಮಿತಿಯಾಗಿವೆ.

ಕಲೆ ಬೆಳೆಯಬೇಕು ನಿಜ. ಆದರೆ ಈಗ ಇತಿ ಮಿತಿ ಇಲ್ಲದ ಒಂದು ವಿಶೇಷ ರೀತಿಯಲ್ಲಿ ಬೆಳೆಯುತ್ತಿದೆ. ಹಿಂದೆ ಇದ್ದ ಸಂಪ್ರದಾಯ ಬದ್ಧ ಸಂಗೀತ/ನೃತ್ಯಗಳು ಶ್ರೋತೃಗಳ ಇಚ್ಛೆಗೆ ತಕ್ಕ ಹಾಗೆ ಸ್ವಲ್ಪ ಮಟ್ಟಿಗೆ ಮಾರ್ಪಾಡಾಗಿದೆ. ಅದೇ ಕ್ರಮ ಪಠ್ಯಕ್ಕೂ ಅಳವಡಿಸಲ್ಪಡುತ್ತದೆ.

ಕಾಲೇಜು ಮಟ್ಟದಲ್ಲಿ ಪದವಿ, ಸ್ನಾತಕ ಪದವಿ (ಎಂ.ಎ.)ಯಲ್ಲಿ ಸಂಗೀತ/ನೃತ್ಯ ಪ್ರಧಾನ ವಿಷಯವಾಗಿದೆ. ಜಾತಿ, ಮತ, ಲಿಂಗ ಭೇದವಿಲ್ಲದೆ ಎಲ್ಲರೂ ಸಂಗೀತ/ನೃತ್ಯ ಕಲಿಯಬಹುದಾಗಿದೆ. ಅವರವರ ಬುದ್ಧಿಮಟ್ಟಕ್ಕೆ ತಕ್ಕಹಾಗೆ ಕಲಿಯುತ್ತಾರೆ. ಕಾಲೇಜಿನಲ್ಲಿ ವಿವಿಧ ಹಂತಗಳಲ್ಲಿ ಬೋಧಿಸಲಾಗುತ್ತದೆ. ಇಲ್ಲಿ ಸಾಮೂಹಿಕ ಶಿಕ್ಷಣವಾಗಿರುತ್ತದೆ. ಸಂಗೀತವನ್ನೂ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳ ಪ್ರಸಾರ ಮಾಧ್ಯಮವಾಗಿ ವಿವಿಧ ಹಂತಗಳಲ್ಲಿ ಬೋಧಿಸಲಾಗುತ್ತದೆ. ಸಮೂಹ ಶಿಕ್ಷಣದಲ್ಲಿ ವಿದ್ಯಾರ್ಥಿಗಳೆಲ್ಲರೂ ಒಂದೇ ರೀತಿಯ ಕಲಿಕೆಯ ಅನುಭವ ಹೊಂದುತ್ತಾರೆ. ಕಲಿಯುವುದು ಮತ್ತು ಕಲಿಸುವುದು ಪರಸ್ಪರ ಇರುತ್ತದೆ. ವಿದ್ಯಾರ್ಥಿಗಳು ಗುರುಗಳಿಂದ ಕಲಿಯುವುದೇ ಅಲ್ಲದೆ ಸಹಪಾಠಿಗಳು ಒಬ್ಬರಿಗೊಬ್ಬರು ಪರಸ್ಪರ ಕಲಿಸುವ, ಕಲಿಯುವ ಸಾಧ್ಯತೆಗಳು ಉಂಟು. ಇದರಿಂದ ವಿದ್ಯಾರ್ಥಿಗಳಲ್ಲಿ ಸಾಮರಸ್ಯ ಬೆಳೆದು, ದಿಟ್ಟತನವಿಲ್ಲದಿರುವವರಿಗೆ ಬಹಿರ್ಮುಖರಾಗಲು ಉತ್ತೇಜನ ನೀಡಿದಂತಾಗುತ್ತದೆ. ಸಮೂಹ ಬೋಧನೆ ಮತ್ತು ಕಲಿಕೆಯಿಂದ ಉತ್ಸಾಹ ಮತ್ತು ಆಸಕ್ತಿಗಳು ಹೆಚ್ಚಾಗುತ್ತವೆ. ಈ ಎರಡು ಗುಣಗಳು ಒಬ್ಬರಿಂದೊಬ್ಬರಿಗೆ ವಿಶೇಷವಾಗಿ ಒಂದೇ ಕೆಲಸದಲ್ಲಿ ತೊಡಗುವವರಲ್ಲಿ ಹರಡುವಂತಹುದು. ಇದು ಒಂದು ರೀತಿಯ ಪ್ರಚೋದನೆಯನ್ನು ನೀಡುತ್ತದೆ. ಪ್ರಚೋದನೆಯ ಕಲಿಕಾ ವೇಳೆಯಲ್ಲಿ ಬಹಳ ಮುಖ್ಯ. ಶಿಕ್ಷಕ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪ್ರಚೋದಿಸಬೇಕಾದುದು ಮತ್ತು ಉತ್ತೇಜಿಸಬೇಕಾದ ಕರ್ತವ್ಯ ಹೊಂದಿರುತ್ತಾನೆ. ಶಿಷ್ಯನ ವೈಯಕ್ತಿಕ ದೋಷಗಳನ್ನು ತಿಳಿಯುವ ಶಕ್ತಿ ಹೊಂದಿದಾಗ ಗುರು, ಶಿಷ್ಯನ ಸಂಪನ್ಮೂಲಗಳಿಗೆ ಹೊಂದುವ ವೇಗದಲ್ಲಿ ವಿಧಾನದಲ್ಲಿ ತರಬೇತಿ ನೀಡಲು ತೊಡಗಬಹುದು. ಇದರಿಂದ ಶಿಷ್ಯ ಹೆಚ್ಚಿನ ಆಸ್ಥೆ ವಹಿಸಿ, ಶ್ರಮವಹಿಸಿ ಚೆನ್ನಾಗಿ ಕಲಿಯುತ್ತಾನೆ. ಈ ಕ್ರಮವು ಪ್ರಸ್ತುತ ಕೆಲವು ಕಾಲೇಜುಗಳಲ್ಲಿ ನಡೆಯುತ್ತಿದೆ.

ಶಾಲೆಗಳಲ್ಲಿ ವಾರಕ್ಕೆ ಎರಡು ಗಂಟೆಗಳು ಸಂಗೀತ ವಿಷಯಕ್ಕೆ ದೊರಕುತ್ತದೆ. ಪ್ರಸ್ತುತ ಕೆಲವು ಶಾಲೆಗಳಲ್ಲಿ ಸಂಗೀತಕ್ಕೆ ಬೇಕಾದ ಮೂಲ ಸಂಪನ್ಮೂಲಗಳೇ ಇಲ್ಲವೆನ್ನಬಹುದು. ಗಾಯನಕ್ಕೆ ಆಧಾರ ವಾದ್ಯವಾದ ತಂಬೂರಿ ಅಥವಾ ಎಲೆಕ್ಟ್ರಾನಿಕ್ ಶ್ರುತಿ ಪೆಟ್ಟಿಗೆಯೇ ಇಲ್ಲ. ಈ ದಿಸೆಯಿಂದ ಗಮನಿಸಿದರೆ ಸಂಪ್ರದಾಯ ಸಂಗೀತದ ಬದಲು ಲಘು ಶಾಸ್ತ್ರೀಯ ರಚನೆಗಳನ್ನು ಹೇಳಿಕೊಡುವುದೇ ಸೂಕ್ತವಾಗುತ್ತದೆ. ಪ್ರಸ್ತುತ ನಡೆಯುತ್ತಿರುವುದು ಈ ಕ್ರಮವೇ.

ಕಾಲೇಜುಗಳಲ್ಲಿ ಸಂಗೀತವೇ ಪ್ರಧಾನ ವಿಷಯವಾಗಿರುವುದರಿಂದ ತರಗತಿವಾರು, ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷಗಳಲ್ಲಿ ಓದುತ್ತಿರುವವರಿಗೆ ಆಯಾ ಪಠ್ಯವಸ್ತುಗಳ ಪ್ರಕಾರ ಬೋಧನ ಪ್ರಕ್ರಿಯೆಯು ನಡೆಯುತ್ತಿದೆ. ವಾರಕ್ಕೆ ನಾಲ್ಕು ಗಂಟೆಗಳು ಪ್ರಯೋಗಕ್ಕೂ (practical) ಮತ್ತು ಎರಡು ಗಂಟೆ ಶಾಸ್ತ್ರ (theory) ಬೋಧನಾ ತರಗತಿಗಳಿರುತ್ತವೆ. ಕಾಲೇಜುಗಳಲ್ಲಿರುವ ಅಧ್ಯಾಪಕ, ಪ್ರಾಧ್ಯಾಪಕರುಗಳು ಗರಿಷ್ಠ ವಿದ್ಯಾರ್ಹತೆ ಹೊಂದಿದವರೇ ಇದ್ದರೂ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಬೋಧನಾ ಕ್ರಮವನ್ನು ಅದರಂತೆ ಅಳವಡಿಸಿಕೊಳ್ಳಬೇಕು. ಹಾಗೆಯೇ ಸ್ವಲ್ಪ ಸ್ವಲ್ಪವಾಗಿ ವಿದ್ಯಾರ್ಥಿಗಳ ಗುಣಮಟ್ಟವನ್ನು ಹೆಚ್ಚಿಸಲು ಶ್ರಮಿಸಬೇಕು. ಇಂತಹ ಕಲಾ ಸಾಮರ್ಥ್ಯ ಬೋಧಕನಲ್ಲಿರಬೇಕಾದ ಮುಖ್ಯ ಗುಣ. ಕಾಲೇಜಿನಲ್ಲಿಯು ಪಠ್ಯವಸ್ತುವು ನಿಗದಿಯಾಗಿರುತ್ತದೆ. ನಿಗದಿತ ವೇಳೆಯಲ್ಲಿ ಮುಗಿಸಬೇಕು, ಜೊತೆ ಜೊತೆಗೆ ಆಂತರಿಕ ಮೌಲ್ಯಮಾಪನ (Internal Assessment) ನಡೆಯುತ್ತದೆ. ಪ್ರಸ್ತುತ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ಇರುವುದರಿಂದ ಪಠ್ಯವನ್ನು ಮುಗಿಸುವುದು ಕಷ್ಟವಾಗುತ್ತದೆ. ಆದರೂ ವಿಶೇಷ ತರಗತಿಗಳನ್ನು ಮಾಡಿ ಮುಗಿಸಲಾಗುತ್ತಿದೆ.

ಕರ್ನಾಟಕದಲ್ಲಿರುವ ಕಾಲೇಜುಗಳಲ್ಲಿ ಲಲಿತಕಲೆಗಳಿಗೆ (ಪ್ರದರ್ಶನಕಲೆ) ಬೇಕಾಗುವ ಸಂಪನ್ಮೂಲಗಳು ಸರಿಯಾದ ರೀತಿಯಲ್ಲಿದ್ದರೂ ಸಂದರ್ಭಾನುಸಾರ ಆಗಬೇಕಾದ ವಾದ್ಯಗಳ ದುರಸ್ತಿಗಳು ಆಗುತ್ತಿಲ್ಲ. ಅಲ್ಲಿರುವ ಪಠ್ಯವಸ್ತುವು, ಬೋಧಕರಾಗಿರುವವರು ಎಲ್ಲವೂ ಸರಿಯಾದ ಪ್ರಮಾಣದಲ್ಲಿದೆ ಎಂದೆನ್ನಬಹುದು. ಕರ್ನಾಟಕದಲ್ಲಿರುವ ಕೆಲವೇ ವಿಶ್ವವಿದ್ಯಾಲಯಗಳಲ್ಲಿ ಪ್ರದರ್ಶನ ಕಲೆಗಳು ಬೋಧಿಸಲ್ಪಡುತ್ತಿವೆ.

ಆದರೆ ಕರ್ನಾಟಕ ಸರ್ಕಾರದ ಪ್ರೌಢಶಿಕ್ಷಣ ಮಂಡಳಿಯಿಂದ ಏರ್ಪಡುವ ಪರೀಕ್ಷೆಯ ಪಠ್ಯವಸ್ತುವು ಸ್ವಲ್ಪ ಜಾಸ್ತಿಯಾಗಿದೆ ಎಂದು ಹೇಳಬಹುದು. ಒಟ್ಟಿಗೆ ಎಲ್ಲವನ್ನೂ ತುರುಕಿದಂತಿದೆ. ವಿದ್ಯಾರ್ಥಿಯು ಎಲ್ಲವನ್ನೂ ಪರಿಪೂರ್ಣವಾಗಿ ಕಲಿತಿದ್ದೇನೆ ಎಂಬ ಸಮಾಧಾನವಿಲ್ಲ. ಹಾಗೆಯೇ ಹೇಳಿಕೊಟ್ಟ ಗುರುಗಳಿಗೂ ಸಮಾಧಾನವಿರುವುದಿಲ್ಲ. ಜೂನಿಯರ್ ಪರೀಕ್ಷೆ ತೆಗೆದುಕೊಳ್ಳಲು ವಯಸ್ಸಿನ ಪರಿಮಿತಿ ಕನಿಷ್ಠ ಹತ್ತು ವರ್ಷವಾಗಿರಬೇಕು. ಒಟ್ಟು 400 ಅಂಕಗಳಿಗೆ ಪರೀಕ್ಷೆ ನಡೆಯುತ್ತದೆ. ಇದರಲ್ಲಿ ಒಂದು ಲಿಖಿತ ಶಾಸ್ತ್ರ ಪರೀಕ್ಷೆ 100 ಅಂಕಗಳಿಗೆ 50 ಅಂಕಗಳು ಮೌಖಿಕ ಪರೀಕ್ಷೆ (oral) ಉಳಿದ 250 ಅಂಕಗಳು ಪ್ರಯೋಗ ಪರೀಕ್ಷೆಗೆ ಇರುತ್ತದೆ.

ಸೀನಿಯರ್ ಪರೀಕ್ಷೆಗೆ ಕನಿಷ್ಠ ಹದಿಮೂರು ವರ್ಷವಾಗಿರಬೇಕು. ಇಲ್ಲಿ ಒಟ್ಟು 600 ಅಂಕಗಳಿಗೆ ಪರೀಕ್ಷೆ ನಡೆಯುತ್ತದೆ. ಎರಡು (200 ಅಂಕ) ಲಿಖಿತ ಶಾಸ್ತ್ರ ಪತ್ರಿಕೆ. ಉಳಿದದ್ದು ಪ್ರಯೋಗ (Practical) ಪರೀಕ್ಷೆ ನಡೆಯುತ್ತದೆ.

ವಿದ್ವತ್ ಪರೀಕ್ಷೆಯು ಎರಡು ಸ್ತರದಲ್ಲಿ ನಡೆಯುತ್ತದೆ. ವಿದ್ವತ್ ಪೂರ್ವ ಮತ್ತು ವಿದ್ವತ್ ಅಂತಿಮ. ಕಲಾ 500 ಅಂಕಗಳಿಗೆ. ವಿದ್ವತ್ ಪೂರ್ವದಲ್ಲಿ 200 ಅಂಕಗಳಿಗೆ ಎರಡು ಲಿಖಿತ ಶಾಸ್ತ್ರ (Theory) ಪತ್ರಿಕೆ, ಎರಡು ಪ್ರಯೋಗ ಪತ್ರಿಕೆ ತಲಾ 150 ಅಂಕಗಳಿಗೆ.

Digitised by Bharatavani, CIIL

ವಿದ್ವತ್ ಅಂತಿಮದಲ್ಲಿ 100 ಅಂಕಗಳ ಎರಡು ಲಿಖಿತ ಶಾಸ್ತ್ರ ಪತ್ರಿಕೆ, ಮತ್ತು ಪ್ರಯೋಗ 1, 150 ಅಂಕಗಳಿಗೆ ಪ್ರಯೋಗ 2ರಲ್ಲಿ ಒಂದು ಗಂಟೆಯ ಕಾಲದ ಕಛೇರಿ ನಡೆಸಬೇಕು ಮತ್ತು ಮೌಖಿಕ ಪರೀಕ್ಷೆ ಇರುತ್ತದೆ. ಒಟ್ಟು ಎಲ್ಲ ಪತ್ರಿಕೆಗಳು ಸೇರಿ 500 ಅಂಕಗಳು.

ಜೂನಿಯರ್ ಮತ್ತು ಸೀನಿಯರ್ ಪಠ್ಯವಸ್ತುವು ಸ್ವಲ್ಪ ಜಾಸ್ತಿ ಇದ್ದರೂ ಕಲಿಯುವಂತಿದೆ. ಆದರೆ ವಿದ್ವತ್ ಪೂರ್ವ ಮತ್ತು ಅಂತಿಮ ಪರೀಕ್ಷೆಗಳ ಪಠ್ಯವಸ್ತುವು ಬಹಳ ಜಾಸ್ತಿ ಇದೆ. ವಿದ್ವತ್ ಪೂರ್ವದಲ್ಲಿ 60 ರಾಗಗಳಿದ್ದು ಕಲಿಯುವುದೇ ಕಷ್ಟವಾಗಿದೆ. ಅಲ್ಲದೆ ಹಳೆಯ ವಿದ್ವತ್ ಪರೀಕ್ಷೆಯನ್ನು ತೇರ್ಗಡೆಯಾದವರು ಆ ರಾಗಗಳನ್ನು ಹೇಳಿಕೊಡುವುದೂ ಕಷ್ಟ. ವೇದಿಕೆ ಕಲಾವಿದರು ಪಠ್ಯದಲ್ಲಿ ನಿರ್ದೇಶಿಸಿರುವ ರಾಗಗಳನ್ನು ಬೋಧಿಸಲು ಸುಲಭವಾಗುತ್ತದೆ. ಹಾಗೆಯೇ ವಿದ್ವತ್ ಅಂತಿಮದ ಪಠ್ಯವಸ್ತುವಿನಲ್ಲಿ ಅನಾವಶ್ಯಕವಾಗಿ ಕೆಲವು ಸೇರಿವೆ. ಅಂದರೆ ಅಗತ್ಯಕ್ಕಿಂತ ಜಾಸ್ತಿಯಾಗಿದೆ. ಏಕತಾನತೆಯು ಎದ್ದು ಕಾಣುತ್ತದೆ.

ಕಾಲೇಜುಗಳಲ್ಲಿ ಪದವಿಗೆ ಒಟ್ಟು 500 ಅಂಕಗಳೂ, ಸ್ನಾತಕೋತ್ತರ ಪದವಿಗೆ ಇನ್ನು ಮುಂದೆ 2000 ಅಂಕಗಳು ಇರುತ್ತವೆ. ಕಾಲೇಜಿನಲ್ಲಿ ಕಲಿಯಬೇಕಾದವರು ಪಿಯುಸಿಯಲ್ಲಿ ಸಂಗೀತ ಐಚ್ಛಿಕವಾಗಿ ತೆಗೆದುಕೊಂಡಿರಬೇಕು ಅಥವಾ ಪಿಯುಸಿ ಮುಗಿಸಿ ಜೂನಿಯರ್ ಪರೀಕ್ಷೆ ತೇರ್ಗಡೆಯಾಗಿರಬೇಕು. ಹಾಗೆಯೇ ಸ್ನಾತಕೋತ್ತರ ಪದವಿಗೆ ವಿದ್ಯಾರ್ಹತೆ ಪದವಿಯಲ್ಲಿ ಸಂಗೀತ ಒಂದು ವಿಷಯ ಐಚ್ಛಿಕವಾಗಿರಬೇಕು ಅಥವಾ ಯಾವುದಾದರು ಪದವಿಯ ಜೊತೆಗೆ ಸೀನಿಯರ್ ಆಗಿರಬೇಕು. ಇದರಿಂದ ಮುಂದೆ ಕಲಿಯಲು ಅನುಕೂಲವಾಗುತ್ತದೆ. ಹಂತ ಹಂತವಾಗಿ ಕಲಿತು, ಶ್ರಮವಹಿಸಿ ಅಭ್ಯಾಸ ಮಾಡಿದರೆ ಅವರು ಒಬ್ಬ ಉತ್ತಮ ಕಲಾವಿದರಾಗುವುದರಲ್ಲಿ ಸಂದೇಹವಿಲ್ಲ.

ಪ್ರದರ್ಶನ ಕಲೆಗಳ ಶಿಕ್ಷಣದಲ್ಲಿ ಬಹಳಷ್ಟು ಮಾರ್ಪಾಡುಗಳಾಗಿದೆ. ಈ ಕಲೆಗಳನ್ನು ಶಾಲಾ ಕಾಲೇಜಿನಲ್ಲಿ ಕಲಿಯಬೇಕೆಂದಿಲ್ಲ. ಕರ್ನಾಟಕದಲ್ಲಿ ಅನೇಕ ಖಾಸಗಿ ಸಂಸ್ಥೆಗಳು, ಕಲಾಶಾಲೆಗಳು, ವ್ಯಕ್ತಿಗತವಾದ ಮನೆಪಾಠಗಳಲ್ಲಿ ಬೋಧಿಸಲಾಗುತ್ತಿದೆ. ಖಾಸಗಿಯಾಗಿ ಕಲಿಯುವವರೂ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು. ಖಾಸಗಿಯಾಗಿ ಒಬ್ಬನೇ ಗುರುವಿನಿಂದ ಕಲಿಯುತ್ತಾರೆ. ಆದರೆ ಕಾಲೇಜುಗಳಲ್ಲಿ ಇಬ್ಬರು, ಮೂವರು ಅಧ್ಯಾಪಕರಿಂದ ಕಲಿಯಬೇಕಾಗುತ್ತದೆ. ಆಗ ಒಬ್ಬೊಬ್ಬ ಅಧ್ಯಾಪಕರ ಶೈಲಿಗೆ ಹೊಂದಿಕೊಂಡು ಕಲಿತು ಕೊನೆಗೆ ತಮ್ಮ ಒಂದು ಶೈಲಿಯಲ್ಲಿ ಪ್ರಸ್ತುತಪಡಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸಂಗೀತಾದಿ ಕಲೆಗಳನ್ನು ಪ್ರವೃತ್ತಿಯಾಗಿ ಕಲಿಯುವವರೇ ಹೆಚ್ಚಾಗಿದ್ದಾರೆ. ಮಾತಾಪಿತೃಗಳ ಬಲವಂತಕ್ಕೆ ಕಲಿತು, ಅದರಿಂದ ಏನನ್ನು ಸಾಧಿಸಲು ಸಾಧ್ಯವಿಲ್ಲ. ಅಭ್ಯಾಸಕ್ಕೂ ವೇಳೆ ಕಡಿಮೆ ಇರುತ್ತದೆ.

–ಆರ್.ಎನ್. ಶ್ರೀ

## ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ

ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಶಿಕ್ಷಣ ಮುಖ್ಯ ಪಾತ್ರವಹಿಸುತ್ತದೆ. ಔಪಚಾರಿಕ ಶಿಕ್ಷಣದಂತೆಯೇ ವಯಸ್ಕರ ಶಿಕ್ಷಣವೂ ಶಿಕ್ಷಣದ ಒಂದು ಬಗೆ. ವಯಸ್ಕರಿಗೆ, ಮುಖ್ಯವಾಗಿ 15–35 ವಯೋಮಿತಿಯಲ್ಲಿರುವವರಿಗೆ ನೀಡುವ ಶಿಕ್ಷಣ ವಯಸ್ಕರ ಶಿಕ್ಷಣ. ಅನೌಪಚಾರಿಕ ರೀತಿಯಲ್ಲಿ ನೀಡುವ ಶಿಕ್ಷಣ ಇದಾದ್ದರಿಂದ ಇದನ್ನು ಅನೌಪಚಾರಿಕ ಶಿಕ್ಷಣ ಎಂದೂ ಕರೆಯಬಹುದು.

ಹಲವು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಎಲ್ಲ ಜನರೂ ಶಿಕ್ಷಣವನ್ನು ಶಾಲಾ ಕಾಲೇಜುಗಳ ಮೂಲಕ ಪಡೆಯುವ ಸ್ಥಿತಿಯಲ್ಲಿ ಇಲ್ಲದಿರುವುದರಿಂದ ಅನೌಪಚಾರಿಕ ರೀತಿಯ ಶಿಕ್ಷಣ ಪದ್ಧತಿಗಳು – ವಯಸ್ಕರ ಶಿಕ್ಷಣವನ್ನೊಳಗೊಂಡಂತೆ ಜಾರಿಗೆ ಬಂದಿವೆ. ಅನೌಪಚಾರಿಕ ವಯಸ್ಕರ ಶಿಕ್ಷಣಕ್ಕೆ ತಗಲುವ ವೆಚ್ಚವೂ ಔಪಚಾರಿಕ ಶಿಕ್ಷಣಕ್ಕಿಂತ ತುಂಬ ಕಡಿಮೆ. ಹಾಗಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವಯಸ್ಕರ ಶಿಕ್ಷಣ ಅನಿವಾರ್ಯ, ಅಪೇಕ್ಷಣೀಯ.

ವಯಸ್ಕರ ಶಿಕ್ಷಣಕ್ಕೆ ಕರ್ನಾಟಕದಲ್ಲಿ ಸುದೀರ್ಘವಾದ ಇತಿಹಾಸವಿದೆ. ಕರ್ನಾಟಕದ ವಯಸ್ಕರ ಶಿಕ್ಷಣ ನಡೆದು ಬಂದ ದಾರಿಯನ್ನು 5 ಐತಿಹಾಸಿಕ ಕಾಲಘಟ್ಟಗಳಲ್ಲಿ ಗುರುತಿಸಬಹುದು.

**1. ಮೊದಲ ಹೆಜ್ಜೆ :** ಪೂರ್ವ ವಯಸ್ಕರ ಶಿಕ್ಷಣ ಸಮಿತಿ ಅವಧಿ (ಕ್ರಿ.ಶ. 1912–1940) ವ್ಯಾಪಕವಾದ ಅರ್ಥದಲ್ಲಿ ಅನೌಪಚಾರಿಕ ಶಿಕ್ಷಣ / ವಯಸ್ಕರ ಶಿಕ್ಷಣ ಇತಿಹಾಸ ಪೂರ್ವಕಾಲದಿಂದಲೂ ಕರ್ನಾಟಕದಲ್ಲಿ ನಡೆದಿದ್ದರೂ ಈಗಿನ ಅರ್ಥದಲ್ಲಿ ವಯಸ್ಕರ ಶಿಕ್ಷಣ ಒಂದು ಶತಮಾನದ ಇತಿಹಾಸವನ್ನು ಪಡೆದಿದೆ.

1868ರಲ್ಲಿ ಮೈಸೂರು ಸಂಸ್ಥಾನ ಜಾರಿಗೊಳಿಸಿದ 'ಹೋಬಳಿ ಶಾಲೆ ಯೋಜನೆ'ಯಲ್ಲಿ ವಯಸ್ಕರ ಶಿಕ್ಷಣದ ಪ್ರಸ್ತಾಪವಿದ್ದು, ಇದರಲ್ಲಿ ಅನಕ್ಷರಸ್ಥ ಪೊಲೀಸ್ ಪೇದೆಗಳಿಗೆ ಹಾಗೂ ಜೈಲಿನ ಖೈದಿಗಳಿಗೆ ಓದು, ಬರಹ ಕಲಿಸುವ ಅವಕಾಶವಿತ್ತು. ಕರ್ನಾಟಕ ವಯಸ್ಕರ ಶಿಕ್ಷಣ ಇತಿಹಾಸದಲ್ಲಿ ಮುಂಜಾನೆಯ ತಾರೆಯಂತೆ ಮೈಸೂರಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಈ ಶಿಕ್ಷಣಕ್ಕೆ ಬುನಾದಿ ಹಾಕಿದರು. ಹಲವು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದರು. ಇವರ ಕಾಲದಲ್ಲಿ 7 ಸಾವಿರ ರಾತ್ರಿ ಶಾಲೆಗಳು ಮತ್ತು ಹಲವು ಸಂಚಾರಿ ಪುಸ್ತಕ ಭಂಡಾರಗಳು ಪ್ರಾರಂಭಗೊಂಡು ಹಲವು ವರ್ಷಕಾಲ ಯಶಸ್ವಿಯಾಗಿ ನಡೆದವು. ಕೊನೆಗೆ ಉಳಿದುಕೊಂಡಿದ್ದ ರಾತ್ರಿ ಶಾಲೆಗಳು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ವಿಲೀನಗೊಂಡವು.

**2. ಮುಂದಿನ ಹೆಜ್ಜೆ :** ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಅವಧಿ (1940–1978)

1940ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಗ್ರಾಮ ಪುನರುಜ್ಜೀವನ ಕಾರ್ಯಕ್ರಮದ ಅಂಗವಾಗಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಈ ಕಾರ್ಯಕ್ರಮದ ಅಂಗವಾಗಿ ಮೈಸೂರು ನಗರದ ವಿವಿಧ ಭಾಗಗಳಲ್ಲಿ ವಯಸ್ಕರ ಶಿಕ್ಷಣ ತರಗತಿಗಳನ್ನು ನಡೆಸಲಾಯಿತು. 'ಮೈಸೂರು ನಗರ ಅಕ್ಷರ ಪ್ರಚಾರ ಸಮಿತಿ' ಸ್ಥಾಪನೆಗೊಂಡದ್ದು ಹೀಗೆ. 1941ರಲ್ಲಿ ಇದು ಅಕ್ಷರ ಪ್ರಚಾರ ಸಮಿತಿ ಆಯಿತು. 1943ರಲ್ಲಿ ಸರ್ಕಾರದ ಆಸಕ್ತಿಯಿಂದಾಗಿ ಇದು "ಸಂಸ್ಥಾನ ಅಕ್ಷರ ಸಮಿತಿಯಾಗಿ" ಮಾರ್ಪಟ್ಟಿತ್ತು. 1945ರಲ್ಲಿ ಇದು 'ವಯಸ್ಕರ ಶಿಕ್ಷಣ ಸಮಿತಿ'ಯಾಗಿ ಪರಿವರ್ತಿತವಾಯಿತಲ್ಲದೆ ಹಲವು ವಿನೂತನ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿತು. ಇದರ ನಂತರದ ಹೆಸರು 'ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ'.

ಅಕ್ಷರ ಪ್ರಚಾರ, ಪುಸ್ತಕ ಭಂಡಾರಗಳ ಸ್ಥಾಪನೆ, ಪುಸ್ತಕಗಳ ಪ್ರಕಟಣೆ, ವಿದ್ಯಾಪೀಠಗಳ ಸ್ಥಾಪನೆ, ಸಂಚಾರಿ ದೃಕ್ ಶ್ರವಣ ಘಟಕಗಳು, ವಿವಿಧ ಹಂತದ ಕಾರ್ಯಕರ್ತರ ತರಬೇತಿಗಳು, ಸಂಶೋಧನೆ, ಬರಹಗಾರರ ಕಮ್ಮಟಗಳು, ಜನತಾ ಶಿಕ್ಷಣ ಕೇಂದ್ರಗಳು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು 'ಸಮಿತಿ' ಹೆಸರುವಾಸಿ ಆಯಿತು.

Digitised by Bharatavani, CIIL

ಕರ್ನಾಟಕದ ಉದ್ದಗಲಕ್ಕೂ 2714 ಗ್ರಾಮೀಣ ಗ್ರಂಥಾಲಯಗಳ ಸ್ಥಾಪನೆ, 250ಕ್ಕೂ ಮಿಕ್ಕ ಪುಸ್ತಕಗಳ ಪ್ರಕಟಣೆ, ಡೆನ್ಮಾರ್ಕ್‌ನ ಫೋಕ್ (Folk) ಹೈಸ್ಕೂಲ್ ಮಾದರಿಯಲ್ಲಿ 16 ಗ್ರಾಮೀಣ ವಿದ್ಯಾಪೀಠಗಳನ್ನು ಸ್ಥಾಪಿಸಿ ಸಾವಿರಾರು ಗ್ರಾಮೀಣ ವೃತ್ತಿ ಕೋರ್ಸುಗಳನ್ನು ನಡೆಸಿದುದು, 'ಪುಸ್ತಕ ಪ್ರಪಂಚ' ಮಾಸಿಕ ಪತ್ರಿಕೆ ಹಾಗೂ 'ಬೆಳಕು' ನವಸಾಕ್ಷರ ವಾರ ಪತ್ರಿಕೆಯನ್ನು ಪ್ರಕಟಿಸಲು ಆರಂಭಿಸಿದ್ದು, 40 ಸಾವಿರಕ್ಕೂ ಮಿಕ್ಕು ದೃಕ್ ಶ್ರವಣ ಪ್ರದರ್ಶನಗಳನ್ನು ನೀಡಿದ್ದು, 132 ಮಂದಿ ಲೇಖಕರಿಗೆ ನವಸಾಕ್ಷರ ಸಾಹಿತ್ಯ ಕಮ್ಮಟಗಳನ್ನು ನಡೆಸಿದ್ದು, ಸುಮಾರು 88,000 ವಯಸ್ಕರ ಶಿಕ್ಷಣ ಕೇಂದ್ರಗಳ ಮೂಲಕ 11,00,000 ಮಂದಿಯನ್ನು ಸಾಕ್ಷರರನ್ನಾಗಿ ಮಾಡಿದ್ದು, 14 ಕ್ಷೇತ್ರ ಗ್ರಂಥಾಲಯಗಳು ಹಾಗೂ 12 ಕೇಂದ್ರೀಯ ಗ್ರಂಥಾಲಯಗಳನ್ನು ತೆರೆದು ಸಾವಿರಾರು ಓದುಗರಿಗೆ, ನವಸಾಕ್ಷರರಿಗೆ ಓದುವ ಆಸಕ್ತಿಯನ್ನು ಪ್ರೇರೇಪಿಸಿದ್ದು – ಇವೆಲ್ಲ 'ಸಮಿತಿ' ಮಾಡಿದ ಕೆಲಸಾಧನೆಗಳು.

ಅಕ್ಷರ ಪ್ರಚಾರ, ವಯಸ್ಕರ ಶಿಕ್ಷಣ ಹಾಗೂ ಗ್ರಂಥ ಭಂಡಾರಗಳ ಸ್ಥಾಪನೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ 'ಸಮಿತಿ' ಹಲವು ಪುರಸ್ಕಾರಗಳಿಗೆ ಭಾಜನವಾಯಿತು. 1970ರಲ್ಲಿ ಕೇಂದ್ರ ಸರ್ಕಾರದ 'ನೆಹರೂ ಸಾಕ್ಷರತಾ ಪ್ರಶಸ್ತಿ' 1973ರಲ್ಲಿ ಅಂತಾರಾಷ್ಟ್ರೀಯ ಮಟ್ಟದ 'ಮಹಮದ್‌ರೇಜ ಕುಹಲ್ವಿ' ಪ್ರಶಸ್ತಿ ಹಾಗೂ ಯುನೆಸ್ಕೊ ಅಂಗಸಂಸ್ಥೆಯಾಗಿ ಪರಿಗಣಿತವಾದುದು 'ಸಮಿತಿ'ಗೆ ಸಂದ ಕೆಲಮುಖ್ಯ ಪ್ರಶಸ್ತಿ, ಪುರಸ್ಕಾರಗಳು.

1978ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ 'ಸಮಿತಿ'ಯಂತಹ ಸಂಸ್ಥೆಗಳು 'ಮುನ್‌ಸೂಚನೆ' 'ಮಾರ್ಗದರ್ಶಿ'ಯಂತೆ ಕೆಲಸ ಮಾಡಿದವು ಎಂದರೆ ಅತಿಶಯೋಕ್ತಿ ಆಗಲಾರದು.

**ಮಹಿಳೆಯರಿಗಾಗಿ ಅನೌಪಚಾರಿಕ ಶಿಕ್ಷಣ (1975)** 1975ರಲ್ಲಿ ಮಹಿಳಾ ಅನಕ್ಷರತೆಯನ್ನು ತೊಡೆದು ಹಾಕಲು ಕೇಂದ್ರ ಸರ್ಕಾರ ಮಹಿಳೆಯರಿಗೆ ಅನೌಪಚಾರಿಕ ಶಿಕ್ಷಣವನ್ನು ದೇಶದಾದ್ಯಂತ ಜಾರಿಗೊಳಿಸಿತು. ಈ ಶಿಕ್ಷಣದಲ್ಲಿ ಆರೋಗ್ಯ ಮತ್ತು ನೈರ್ಮಲ್ಯ, ಆಹಾರ ಮತ್ತು ಪೌಷ್ಟಿಕತೆ, ಕುಟುಂಬ ನಿರ್ವಹಣೆ ಮತ್ತು ಮಕ್ಕಳ ಆರೈಕೆ, ನೀತಿ ಶಿಕ್ಷಣ ಹಾಗೂ ವೃತ್ತಿ ಮತ್ತು ಉದ್ಯಮದಲ್ಲಿ ಕುಶಲತೆಗೆ ಆದ್ಯತೆ ನೀಡಲಾಯಿತು. ಕರ್ನಾಟಕವು ಸಹ ಈ ಯೋಜನೆಯಲ್ಲಿ ಪಾಲ್ಗೊಂಡಿತು.

**3. ಮುಂದುವರೆದ ಹೆಜ್ಜೆ :** ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅವಧಿ (National Adult Education Programme) (1978-1988)

ಭಾರತದಾದ್ಯಂತ ಹಲವು ರೀತಿಯಲ್ಲಿ ನಡೆಯುತ್ತಿದ್ದ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೆ ಒಂದು ವ್ಯಾಪಕವಾದ, ಸ್ಪಷ್ಟವಾದ ರೂಪವನ್ನು ಕೊಟ್ಟಿದ್ದು ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ. ಇದು ಕೇಂದ್ರ ಸರ್ಕಾರದಿಂದ 1978ರಲ್ಲಿ ಜಾರಿಗೊಂಡಿತು. ಇದು ಪಠ್ಯ ಪುಸ್ತಕ ರಚನೆ, ತರಬೇತಿ, ಮೇಲ್ವಿಚಾರಣೆ, ಮೌಲ್ಯಮಾಪನ, ಸಂಶೋಧನೆ, ಸಾಕ್ಷರೋತ್ತರ, ನಿರಂತರ ಶಿಕ್ಷಣ ಹೀಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮದ ವಿವಿಧ ಅಂಶಗಳಲ್ಲಿ ನವೀನತೆಯನ್ನು ತರುವುದರ ಜೊತೆಗೆ ಅವು ಅಭಿವೃದ್ಧಿಯ ಪಥಕ್ಕೆ ಅನಿವಾರ್ಯ ಎಂದು ಎಲ್ಲರೂ ಅರಿಯುವಂತೆ ಮಾಡಿತು.

15–35 ವಯೋಮಿತಿಯ 100 ಮಿಲಿಯನ್ ಅನಕ್ಷರಸ್ಥರನ್ನು 5 ವರ್ಷಗಳಲ್ಲಿ ಅಕ್ಷರಸ್ಥರನ್ನಾಗಿ ಮಾಡುವುದು ಇದರ ಮುಖ್ಯ ಉದ್ದೇಶವಾಗಿತ್ತು. ಕೇಂದ್ರ ಸರ್ಕಾರದ ಅನುದಾನದಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ 300 ಕೇಂದ್ರಗಳನ್ನೊಳಗೊಂಡ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾಯೋಜನೆಗಳು 100 ಕೇಂದ್ರಗಳನ್ನೊಳಗೊಂಡ ರಾಜ್ಯ ವಯಸ್ಕರ ಶಿಕ್ಷಣ ಯೋಜನೆಗಳು, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಅನುದಾನದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿದ್ದ ಯೋಜನೆಗಳು – ಇವೆಲ್ಲವೂ ಕರ್ನಾಟಕದಲ್ಲಿ ನಡೆದ ಕೆಲ ವಯಸ್ಕರ ಶಿಕ್ಷಣ ಯೋಜನೆಗಳು. ಮುಂದೆ ಈ ಕಾರ್ಯಕ್ರಮ ಇನ್ನೂ 5 ವರ್ಷಗಳಿಗೆ ವಿಸ್ತರಿಸಿತು.

**ಅಕ್ಷರಸೇನೆ (1963 – 1997)** ಇದೇ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಅನುದಾನದಲ್ಲಿ ಜಾರಿಗೊಂಡ ಕಾರ್ಯಕ್ರಮವೇ 'ಅಕ್ಷರಸೇನೆ'. ಈ ಕಾರ್ಯಕ್ರಮವು 1973 ರಿಂದ ಜಾರಿಗೊಂಡು 50 ಲಕ್ಷ ಮಂದಿಗೆ ಸಾಕ್ಷರತೆಯನ್ನು ನೀಡುವ ಕೆಲಸ ಮಾಡಿತು.

ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ (Mass Programme For Functional Literacy) (1986-1994)

1986ರಲ್ಲಿ ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ ಜಾರಿಗೆ ಬಂದು 8 ವರ್ಷಗಳ ಕಾಲ ನಡೆದಿದ್ದು ಇದರಲ್ಲಿ ವಿದ್ಯಾರ್ಥಿಗಳೇ ಹೆಚ್ಚಾಗಿ ಪಾಲ್ಗೊಳ್ಳುತ್ತಿದ್ದರು. 150 ಗಂಟೆಗಳ ಕಲಿಕಾ ಕಾರ್ಯಕ್ರಮ ಇದಾಗಿದ್ದು, ಭಾರತದಲ್ಲಿ 7 ಲಕ್ಷ ವಿದ್ಯಾರ್ಥಿಗಳ ನೆರವಿನಿಂದ ಇದನ್ನು ಜಾರಿಗೊಳಿಸುವ ಯೋಜನೆ ಆಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 2500 ಎನ್.ಎಸ್.ಎಸ್. ಅಧಿಕಾರಿಗಳು ಹಾಗೂ 1.25 ಲಕ್ಷ ವಿದ್ಯಾರ್ಥಿಗಳು ತರಬೇತಿ ಪಡೆದು 4 ಲಕ್ಷ ಮಂದಿಗೆ ಕಲಿಕಾ ಕಾರ್ಯಕ್ರಮವನ್ನು ನಡೆಸಿಕೊಟ್ಟಿರುತ್ತಾರೆ.

**4. ವ್ಯಾಪಕ ಹೆಜ್ಜೆ :** ಆಂದೋಲನ ಅವಧಿ (1988–1999)

**ರಾಷ್ಟ್ರೀಯ ಸಾಕ್ಷರತಾ ಮಿಷನ್ (National Literacy Mission)** 1988ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ಸಾಕ್ಷರತಾ ಮಿಷನ್ ದೇಶವ್ಯಾಪಿಯಾಗಿ ವಯಸ್ಕರ ಶಿಕ್ಷಣವನ್ನು – ಮೂಲಸಾಕ್ಷರತೆ, ಸಾಕ್ಷರೋತ್ತರ ಹಾಗೂ ನಿರಂತರ ಶಿಕ್ಷಣ ಕಾರ್ಯಕ್ರಮಗಳನ್ನು ಹೊಸ ಹುರುಪಿನಿಂದ, ಜನಾಂದೋಲನ ರೀತಿಯಲ್ಲಿ ಹಾಗೂ ಮಿಷನರಿ ತುಡಿತದಲ್ಲಿ ಹಮ್ಮಿಕೊಂಡಿತು. ನವಸಾಕ್ಷರರು ಮತ್ತೆ ಅನಕ್ಷರತೆಗೆ ಮರಳದಂತೆ ನೋಡಿಕೊಳ್ಳಲು ಜನಶಿಕ್ಷಣ ನಿಲಯಗಳನ್ನು ಸ್ಥಾಪಿಸಲಾಯಿತು. ಕರ್ನಾಟಕದಲ್ಲಿ ಇಂತಹ 1508 ಜನಶಿಕ್ಷಣ ನಿಲಯಗಳನ್ನು ಸ್ಥಾಪಿಸಲಾಗಿದ್ದು ಅವುಗಳ ಮುಖೇನ ನಿರಂತರ ಶಿಕ್ಷಣವನ್ನು ನೀಡಲಾಯಿತು.

ರಾಷ್ಟ್ರೀಯ ಸಾಕ್ಷರತಾ ಮಿಷನ್ ಅಡಿಯಲ್ಲಿ ಸಾಕ್ಷರತಾ ಆಂದೋಲನಗಳು ದೊಡ್ಡ ಪ್ರಮಾಣದಲ್ಲಿ ಭಾರತದಾದ್ಯಂತ ನಡೆದವು. ಸ್ವಯಂ ಸೇವಾ ನೆಲೆಗಟ್ಟಿನಲ್ಲಿ, ಕ್ಷಿಪ್ರ ಅವಧಿಯಲ್ಲಿ, ಅಧಿಕ ಸಂಖ್ಯೆಯ ಅನಕ್ಷರಸ್ಥ ಕಲಿಕಾರ್ಥಿಗಳನ್ನು ಒಳಗೊಂಡ, ಸೂಕ್ತವಾತಾವರಣ ನಿರ್ಮಾಣದ ಹಿನ್ನೆಲೆಯಲ್ಲಿ ರೂಪುಗೊಂಡ ಆಂದೋಲನಗಳು ಹಲವು ಜಿಲ್ಲೆಗಳಲ್ಲಿ ಜಾರಿಗೆ ಬಂದವು. ಸ್ವಾತಂತ್ರ್ಯ ಹೋರಾಟದ ನಂತರ ದೊಡ್ಡ ಪ್ರಮಾಣದ ಚಳುವಳಿ ಅಂದರೆ ಸಾಕ್ಷರತಾ ಆಂದೋಲನವೇ.

1960ರ ದಶಕದಲ್ಲಿ ನಡೆದ ಮಹಾರಾಷ್ಟ್ರ 'ಗ್ರಾಮ ಶಿಕ್ಷಣ ಮೊಹಿಂ', ಕೇರಳದ ಕೊಟ್ಟಾಯಂ ಹಾಗೂ ಎರ್ನಾಕುಲಂ ಜಿಲ್ಲೆಯ ಆಂದೋಲನಗಳು ನಮ್ಮ ಕರ್ನಾಟಕ 'ಸಾಮೂಹಿಕ ಸಾಕ್ಷರತಾ ಆಂದೋಲನ– ಕರ್ನಾಟಕ ಪ್ರಯೋಗ : 1989' ಮುಂಬರುವ ಈ ಆಂದೋಲನಕ್ಕೆ ದಾರಿದೀಪ ಹಾಗೂ ಮಾರ್ಗದರ್ಶಿ ಆದವು.

Digitised by Bharatavani, CIIL

**ಸಾಮೂಹಿಕ ಸಾಕ್ಷರತಾ ಆಂದೋಲನ – ಕರ್ನಾಟಕ ಪ್ರಯೋಗ – 1989** ಅಂದಿನ ಇಪ್ಪತ್ತು ಜಿಲ್ಲೆಗಳ ಆಯ್ದ ಇಪ್ಪತ್ತು ತಾಲ್ಲೂಕುಗಳಲ್ಲಿ ಇದು ಜಾರಿಗೊಂಡಿತು. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಒಟ್ಟುಗೂಡಿ ನಡೆಸಿದ ಈ ಪ್ರಯೋಗ ನಂತರ ಬಂದ ಸಾಕ್ಷರತಾ ಆಂದೋಲನದ ರೀತಿಯಲ್ಲಿಯೇ ರೂಪುಗೊಂಡಿತ್ತು.

**ಸಾಕ್ಷರತಾ ಆಂದೋಲನಗಳು (1990–99)** ವ್ಯಾಪಕವಾದ ರೀತಿಯಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಸಾಕ್ಷರತಾ ಆಂದೋಲನಗಳು 1990ರಿಂದ 1999ರವರೆಗೆ, ವಿವಿಧ ಹಂತಗಳಲ್ಲಿ ನಡೆದವು. 1991ರ ಜನಗಣತಿ ಪ್ರಕಾರ ಅಂದಿನ 15–35 ವಯೋಮಾನದ ಅನಕ್ಷರಸ್ಥರ ಸಂಖ್ಯೆ 77.16 ಲಕ್ಷ. ಇವರಲ್ಲಿ ಆಂತರಿಕ / ಬಾಹ್ಯ ಮೌಲ್ಯಮಾಪನದ ಪ್ರಕಾರ ಆಂದೋಲನಗಳ ಮೂಲಕ 56.07 ಲಕ್ಷ ಮಂದಿ ಕಲಿಕೆಯನ್ನು ಮುಗಿಸಿ ಸಾಕ್ಷರರಾಗಿರುತ್ತಾರೆ.

ಸಾಕ್ಷರತಾ ಆಂದೋಲನದ ನಂತರದ ಹಂತ ಸಾಕ್ಷರೋತ್ತರ ಕಾರ್ಯಕ್ರಮ (Post Literacy Programme). ನವಸಾಕ್ಷರರ ಓದು, ಬರಹ ಕೌಶಲಗಳನ್ನು ಗಟ್ಟಿಗೊಳಿಸಲು, ಹೆಚ್ಚಿಸಿಕೊಳ್ಳಲು ಕರ್ನಾಟಕದಾದ್ಯಂತ ಸಾಕ್ಷರೋತ್ತರ ಕಾರ್ಯಕ್ರಮ ಜಾರಿಗೆ ಬಂತು. 56.07 ನವಸಾಕ್ಷರರ ಪೈಕಿ 35.8 ಲಕ್ಷ ಮಂದಿ ಸಾಕ್ಷರೋತ್ತರ ಕಾರ್ಯಕ್ರಮಕ್ಕೆ ದಾಖಲಾಗಿ 22.92 ಲಕ್ಷ ಮಂದಿ ಸಾಕ್ಷರೋತ್ತರ ಪಠ್ಯ ಪುಸ್ತಕವನ್ನು ಪೂರೈಸಿರುತ್ತಾರೆ. ಇದು ಕೂಡ ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆದ ಕಾರ್ಯಕ್ರಮ.

**ಕನ್ನಡನಾಡು – ಸಾಕ್ಷರ ನಾಡು :** ಕರ್ನಾಟಕ ಸರ್ಕಾರ 1997–98ರಲ್ಲಿ ಜಾರಿಗೆ ತಂದ ಕಾರ್ಯಕ್ರಮವೆಂದರೆ 4 ತಿಂಗಳ, 100 ಗಂಟೆಗಳ ಅವಧಿಯ ಈ ಕಾರ್ಯಕ್ರಮದ ಗುರಿ 27.33 ಲಕ್ಷ, ದಾಖಲಾದವರು 22.67 ಲಕ್ಷ. ಬಾಹ್ಯ ಮೌಲ್ಯಮಾಪನದ ಪ್ರಕಾರ ಸಾಕ್ಷರರಾದುದು 14.76 ಲಕ್ಷ ಮಂದಿ.

**ಆಂದೋಲನಗಳ ಫಲಶ್ರುತಿ:** ಈಗಾಗಲೇ ತಿಳಿಸಿರುವಂತೆ ಸಾಕ್ಷರತಾ ಆಂದೋಲನಗಳಿಂದ ಹಲವು ಲಕ್ಷ ಮಂದಿ ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ ಉದ್ದೇಶದಂತೆ ಓದು, ಬರಹ ಮತ್ತು ಲೆಕ್ಕಾಚಾರದಲ್ಲಿ ಸ್ವಾವಲಂಬನೆ ಪಡೆದು ಸಂಘಟಿತರಾಗಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾರಂಭಿಸಿದರು, ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಬೇಕಾದ ಕೌಶಲಗಳನ್ನು ಪಡೆಯಲು ಯತ್ನಿಸಿದರು ಹಾಗೂ ರಾಷ್ಟ್ರೀಯ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳತೊಡಗಿದರು. ಸಾಕ್ಷರತಾ ಆಂದೋಲನಗಳಿಂದ ಪ್ರಾಥಮಿಕ ಶಿಕ್ಷಣವೂ ಬಲಗೊಂಡಿತು. ಇದರಿಂದ ಕಲಿಕಾವಾತಾವರಣ, ಕಲಿಕಾ ಸಮಾಜ ನಿರ್ಮಾಣವಾಗಲು ಪ್ರೋತ್ಸಾಹ ದೊರಕಿತು.

**5. ಸ್ಥಿರಹೆಜ್ಜೆ :** ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ / ಬಹುರೂಪಿ ಕಾರ್ಯಕ್ರಮಗಳ ಅವಧಿ (2001–09) ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ:

ಇದೊಂದು ವಿಶಿಷ್ಟವಾದ ಕಾಲಘಟ್ಟ. ಈಗಾಗಲೇ ಸಾಕ್ಷರತಾ ಆಂದೋಲನದಿಂದ ಮೂಲ ಸಾಕ್ಷರತೆಯನ್ನು, ನಂತರ ಸಾಕ್ಷರೋತ್ತರ ಕಾರ್ಯಕ್ರಮದಿಂದ ಗಟ್ಟಿಕೊಂಡ ಸಾಕ್ಷರತಾ ಕೌಶಲಗಳನ್ನು ಪಡೆದ ನವ ಸಾಕ್ಷರರು ತಮ್ಮ ಕಲಿಕೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಲು ನೆರವಾಗುವಂತೆ ಮುಂದುವರಿಕಾ ಶಿಕ್ಷಣ ಕೇಂದ್ರಗಳು ಸ್ಥಾಪನೆ ಆದದ್ದು ಈ ಕಾಲಘಟ್ಟದಲ್ಲಿ. ಹಿಂದಿನ ಜನಶಿಕ್ಷಣ ಕೇಂದ್ರಗಳ ವಿಸ್ತೃತ ಹಾಗೂ ಸಾಂಸ್ಥಿಕರೂಪವೇ ಇದು. ಮುಂದುವರಿಕೆ ಶಿಕ್ಷಣ ಕೇಂದ್ರಗಳ ಉಸ್ತುವಾರಿ ಇಬ್ಬರು ಪ್ರೇರಕರದ್ದು. ಇವು ಬಹುಮುಖೀ ಕಾರ್ಯಕ್ರಮಗಳ ಕೇಂದ್ರಗಳು. ಯುನೆಸ್ಕೋ ಪ್ರಕಾರ ಮುಂದುವರಿಕೆ ಶಿಕ್ಷಣವೆಂದರೆ "ಮೂಲ ಸಾಕ್ಷರತೆ ಹಾಗೂ ಪ್ರಾಥಮಿಕ ಶಿಕ್ಷಣದ ಚೌಕಟ್ಟಿನಿಂದ ಹೊರಗಿರುವ ಎಲ್ಲ ವ್ಯಕ್ತಿಗಳಿಗೆ ಅವರ ಅಗತ್ಯಗಳಿಗನುಗುಣವಾಗಿ ಕಲಿಕೆಗೆ ಮುಕ್ತವಾದ ಅವಕಾಶಗಳನ್ನು ಒಳಗೊಂಡಿರುವ ಒಂದು ವ್ಯಾಪಕ ಶಿಕ್ಷಣ ಕಾರ್ಯಕ್ರಮ."

ಮುಂದುವರಿಕೆ ಶಿಕ್ಷಣದ ಉದ್ದೇಶಗಳೆಂದರೆ ನವಸಾಕ್ಷರರ ಓದು ಬರಹದ ಕೌಶಲಗಳನ್ನು ಹೆಚ್ಚಿಸಿ ಮುಂದುವರೆಸುವ ಅವಕಾಶವನ್ನು ಕಲ್ಪಿಸಿಕೊಡುವುದು, ಅರೆಸಾಕ್ಷರರು, ಕಲಿಕೆ ಮಧ್ಯೆ ಬಿಟ್ಟವರು ಹಾಗೂ ಉಳಿದ ಅನಕ್ಷರಸ್ಥರ ಕಲಿಕೆಗೆ ಬೇಕಾದ ಅವಕಾಶವನ್ನು ಕಲ್ಪಿಸುವುದು, ಅನೌಪಚಾರಿಕ ಶಿಕ್ಷಣದ ಮೂಲಕ ಔಪಚಾರಿಕ ಶಿಕ್ಷಣಕ್ಕೆ ಹೋಗಲು ವಾತಾವರಣ ನಿರ್ಮಿಸುವುದು, ಜೀವನಪರ್ಯಂತ ಕಲಿಕೆಗೆ ವ್ಯವಸ್ಥೆ ಮಾಡುವುದು ಹಾಗೂ ಕಲಿಕಾ ಸಮಾಜ ನಿರ್ಮಾಣಕ್ಕೆ ನೆರವಾಗುವುದು.

ಮುಂದುವರಿಕೆ ಶಿಕ್ಷಣದ ಫಲಾನುಭವಿಗಳೆಂದರೆ ನವಸಾಕ್ಷರರು, ಶಾಲೆ ಮಧ್ಯೆಬಿಟ್ಟವರು, ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ಯುವಕರು, ಅರೆ ಸಾಕ್ಷರರು ಮತ್ತು ಅನಕ್ಷರಸ್ಥರು ಹಾಗೂ ಇತರೇ ಸಾಮಾನ್ಯ ಜನತೆ.

ಮುಂದುವರಿಕೆ ಶಿಕ್ಷಣ ಕೇಂದ್ರಗಳು ಕಲಿಕಾ ಕೇಂದ್ರ, ಗ್ರಂಥಾಲಯ, ವಾಚನಾಲಯ, ಚರ್ಚಾಮಂಡಲಿ, ಮಾಹಿತಿ ಕೇಂದ್ರ, ತರಬೇತಿ ಕೇಂದ್ರ, ಅಭಿವೃದ್ಧಿ ಕೇಂದ್ರ, ಸಾಂಸ್ಕೃತಿಕ ಮತ್ತು ಮನರಂಜನಾ ಕೇಂದ್ರ, ಕ್ರೀಡಾ ಮತ್ತು ಸಾಹಸ ಚಟುವಟಿಕೆ ಕೇಂದ್ರ ಹಾಗೂ ಸಮುದಾಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದವು.

ಕರ್ನಾಟಕದಾದ್ಯಂತ ಜಾರಿಗೆ ಬಂದ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ 16641 ಮುಂದುವರಿಕೆ ಶಿಕ್ಷಣ ಕೇಂದ್ರಗಳು ಹಾಗೂ ಇವುಗಳ ಉಸ್ತುವಾರಿ ನೋಡಿಕೊಳ್ಳಲು 1739 ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳು 2009ರವರೆಗೆ ಅನುಷ್ಠಾನಗೊಂಡವು. ಮುಂದುವರಿಕೆ ಶಿಕ್ಷಣ ಯೋಜನೆಗಳ ಮೂಲಕ ಒಟ್ಟು ಸಾಕ್ಷರರಾದವರು 8.2 ಲಕ್ಷ.

ಮುಂದುವರಿಕೆ ಶಿಕ್ಷಣದ ಮೂಲಕ ವಯಸ್ಕರ ಹಾಗೂ ನಿರಂತರ ಶಿಕ್ಷಣಕ್ಕೆ ಕರ್ನಾಟಕದಲ್ಲಿ ಒಂದು ಸಾಂಸ್ಥಿಕ ರೂಪ ದೊರೆತಂತಾಯಿತು.

**ಬಹುರೂಪಿ ಕಾರ್ಯಕ್ರಮಗಳು:** ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದ ಒಂದು ಪ್ರಮುಖ ಚಟುವಟಿಕೆ ಎಂದರೆ ಅನಕ್ಷರಸ್ಥರಿಗೆ ಕಲಿಕೆಯನ್ನು ನೀಡುವುದು. ಇದನ್ನು ಮುಂದುವರಿಕೆ ಶಿಕ್ಷಣ ಕೇಂದ್ರಗಳ ಮೂಲಕ ಮಾತ್ರ ನೀಡಲು ಸಾಧ್ಯವಾಗದ ಸಂಗತಿಯಾದ್ದರಿಂದ ಈ ದಶಕದಲ್ಲಿ ಕರ್ನಾಟಕದಲ್ಲಿ ವಿವಿಧ ಸಮುದಾಯಗಳ ಅಗತ್ಯಗಳಿಗೆ ಅನುಗುಣವಾಗಿ ಹಲವು ವಿನೂತನ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು. ಅವುಗಳ ಸಂಕ್ಷಿಪ್ತ ಚಿತ್ರಣವನ್ನಿಲ್ಲಿ ನೀಡಿದೆ.

**ವಯಸ್ಕರ ಶಿಕ್ಷಣಪಡೆ (2003–05):** ಮಹಿಳಾ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಿ ಅವರನ್ನು ಸಬಲೀಕರಣಗೊಳಿಸುವುದು ಇದರ ಉದ್ದೇಶವಾಗಿದ್ದು, ಕರ್ನಾಟಕದ ಈಶಾನ್ಯ ಜಿಲ್ಲೆಗಳಾದ ಬಳ್ಳಾರಿ, ಬೀದರ್, ಬಾಗಲಕೋಟೆ, ಕೊಪ್ಪಳ, ಗುಲ್ಬರ್ಗ, ರಾಯಚೂರು, ಬಿಜಾಪುರ ಹಾಗೂ ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆ, ಹೀಗೆ 8 ಜಿಲ್ಲೆಗಳಲ್ಲಿ 'ವಯಸ್ಕರ ಶಿಕ್ಷಣ ಪಡೆ' 2003–04 ಹಾಗೂ 2004–05ರಲ್ಲಿ ಜಾರಿಗೊಂಡಿತು. ಈ ಕಾರ್ಯಕ್ರಮದ ಗುರಿ 2 ಲಕ್ಷ ಅನಕ್ಷರಸ್ಥ ಮಹಿಳೆಯರು; ಸಾಕ್ಷರರಾದವರ ಸಂಖ್ಯೆ 47,637.

Digitised by Bharatavani, CIIL

**ಕಿರುಸಾಕ್ಷರತಾ ಯೋಜನೆ (2005–06):** 2005–06ರಲ್ಲಿ ಜಾರಿಗೊಂಡ ಈ ಕಾರ್ಯಕ್ರಮದ ಗುರಿ 0.52 ಲಕ್ಷ, ಸಾಕ್ಷರರಾದವರು 0.32 ಲಕ್ಷ ಮಂದಿ. ಐದ್ಯೆದು ಗ್ರಾಮ ಪಂಚಾಯಿತಿಗಳ 'ಸಾಕ್ಷರತಾ ಸಮುಚ್ಚಯಗಳ ಮೂಲಕ' 23 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಂಡಿತು.

**ಸಾಕ್ಷರ ಸನ್ಮಾನ (2005–06):** ಪ್ರಜೆಗಳನ್ನಾಳುವವರು ಪ್ರಜಾಪ್ರತಿನಿಧಿಗಳು. ಗ್ರಾಮಗಳಲ್ಲಿ ಇವರು ಗ್ರಾಮಪಂಚಾಯಿತಿ ಸದಸ್ಯರು. ಇವರಲ್ಲಿ ಇರುವ ಅನಕ್ಷರತೆಯನ್ನು ಹೋಗಲಾಡಿಸಲು ರೂಪುಗೊಂಡ ಸಾಕ್ಷರ ಸನ್ಮಾನ ಕಾರ್ಯಕ್ರಮ 2005–06ನೇ ಸಾಲಿನಲ್ಲಿ ನಡೆಯಿತು.

ಕಾರ್ಯಕ್ರಮದ ಗುರಿ 23,000, ಅಕ್ಷರಸ್ಥರಾದವರು 18057 ಮಂದಿ. ಸನ್ನಿವಾಸ ಶಿಬಿರಗಳ ಮೂಲಕ ಈ ಕಾರ್ಯಕ್ರಮ ನಡೆಯಿತು.

**ಕಲಿಕೆ – ಗಳಿಕೆ (2005–06):** ಸಂಘಟನೆ, ಸ್ವಾವಲಂಬನೆ ಹಾಗೂ ಸಶಕ್ತತೆ, ಸ್ವಸಹಾಯ ಸಂಘಗಳ ಆಶಯ. 'ಕ್ರಿಯಾತ್ಮಕ ಸಾಕ್ಷರತೆ'ಯನ್ನು ನೀಡುವುದರಿಂದ ಸ್ವಸಹಾಯ ಸಂಸ್ಥೆಗಳ ಅನಕ್ಷರಸ್ಥ ಸದಸ್ಯರು ಅಭಿವೃದ್ಧಿ ಪಥದಲ್ಲಿ ನಡೆಯಲು ಸಾಧ್ಯ ಎಂಬುದನ್ನು ಅರಿತು 2005–06ರಲ್ಲಿ ಜಾರಿಗೊಂಡ ಕಲಿಕೆ–ಗಳಿಕೆ ಕಾರ್ಯಕ್ರಮದ ಗುರಿ 5.83 ಲಕ್ಷ. ದಾಖಲಾದವರು 4.74 ಲಕ್ಷ, ಅಕ್ಷರಸ್ಥರಾದವರು 2.35 ಲಕ್ಷ ಮಂದಿ. 'ಗಳಿಸುತ್ತಾ ಕಲಿಯುವುದು, ಕಲಿಯುತ್ತಾ ಬೆಳೆಯುವುದು, ಬೆಳೆಯುತ್ತಾ ಸಬಲರಾಗುವುದು' ಎಂಬುದು ಸ್ವಸಹಾಯಸಂಘಗಳ ಕಲಿಕೆ–ಗಳಿಕೆ ಕಾರ್ಯಕ್ರಮದ ಆಶಯ.

**ಜಲ ಸಂವರ್ಧನ ಯೋಜನೆ ಅಡಿಯಲ್ಲಿ ಕ್ರಿಯಾತ್ಮಕ ಸಾಕ್ಷರತೆ (2004–08):** ಸಮಗ್ರ ಕೆರೆ ಅಭಿವೃದ್ಧಿಗಾಗಿ ಜಲಸಂವರ್ಧನ ಯೋಜನೆಯನ್ನು ಕರ್ನಾಟಕದಲ್ಲಿ ಜಾರಿಗೊಳಿಸಲು ವಿಶ್ವಬ್ಯಾಂಕ್ ಅನುದಾನ ನೀಡಿದ್ದು, ಇದರಡಿಯಲ್ಲಿ 9 ಜಿಲ್ಲೆಗಳಲ್ಲಿ, 34 ತಾಲ್ಲೂಕುಗಳಲ್ಲಿ ಜಾರಿಗೊಂಡ ಈ ಯೋಜನೆಯ ಒಂದು ಉದ್ದೇಶ ಇದರ ಅನಕ್ಷರಸ್ಥ ಫಲಾನುಭವಿಗಳಿಗೆ ಸಾಕ್ಷರತಾ ಕಾರ್ಯಕ್ರಮವನ್ನು ನೀಡುವುದು. 4000 ಕೇಂದ್ರಗಳ ಮೂಲಕ 50000 ಮಂದಿಗೆ ಕಲಿಕೆ ನೀಡುವುದು ಇದರ ಗುರಿಯಾಗಿದ್ದು ಯಶಸ್ವಿಯಾಗಿ ಕಲಿಕೆ ಪೂರೈಸಿದವರು 36000.

**ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ (2005–10):** 5 ವರ್ಷಗಳ ಕಾಲ ಕರ್ನಾಟಕದಲ್ಲಿ ಈ ಕಾರ್ಯಕ್ರಮವು ನಡೆದಿದೆ. 8 ಮತ್ತು 9ನೆಯ ತರಗತಿ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುತ್ತಾರೆ. ಯಶಸ್ವಿಯಾಗಿ ಕಲಿಕೆ ನೀಡಿದ ವಿದ್ಯಾರ್ಥಿಗಳಿಗೆ ಬೋನಸ್ ಅಂಕಗಳನ್ನು ನೀಡಿ ಪ್ರೋತ್ಸಾಹಿಸುವುದು ಈ ಕಾರ್ಯಕ್ರಮದ ವೈಶಿಷ್ಟ್ಯ. ಈ ಕಾರ್ಯಕ್ರಮದಲ್ಲಿ ಸುಮಾರು 10 ಲಕ್ಷ ಮಂದಿ ಅನಕ್ಷರಸ್ಥರು ಕಲಿಕೆಯಲ್ಲಿ ಪಾಲ್ಗೊಂಡಿರುತ್ತಾರೆ.

**ಶಿಬಿರ ಸಾಕ್ಷರತೆ (2006–08):** ಸುವರ್ಣ ಕರ್ನಾಟಕ ಕಾರ್ಯಾಚರಣೆಯ ಅಂಗವಾಗಿ ಕರ್ನಾಟಕದ ವಿವಿಧೆಡೆಗಳಲ್ಲಿ ಜಾರಿಗೊಂಡ ಈ ಅಲ್ಪಾವಧಿ ಕಾರ್ಯಕ್ರಮದಲ್ಲಿ 18 ದಿನಗಳ ಶಿಬಿರಗಳ ಮೂಲಕ ಸಾಕ್ಷರತೆಯನ್ನು ನೀಡುವುದಾಗಿದ್ದು, ಇದರ ಗುರಿ 7.50 ಲಕ್ಷ. ಶಿಬಿರಕ್ಕೆ 50 ಮಂದಿಯಂತೆ, 11.245 ಶಿಬಿರಗಳ ಮೂಲಕ ದಾಖಲಾದದ್ದು 5.30 ಲಕ್ಷ ಮಂದಿ; ಇವರಲ್ಲಿ ಸಾಕ್ಷರರಾದುದು 3.46 ಲಕ್ಷ.

2007ರ ಬೇಸಿಗೆಯಲ್ಲಿ 30 ದಿನಗಳ ಶಿಬಿರಗಳು ನಡೆದವು. ಇದರ ಗುರಿ 5000 ಶಿಬಿರಗಳು. 2.5 ಲಕ್ಷ ಮಂದಿ; ಸಾಧನೆ 5270 ಶಿಬಿರಗಳು, ದಾಖಲಾತಿ 2.36 ಲಕ್ಷ, ಕಲಿತದ್ದು 1.62 ಲಕ್ಷ ಮಂದಿ. ಶಿಬಿರ ಸಾಕ್ಷರತೆಯ ಮುಂದಿನ ಹಂತ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ವಿಶೇಷ ಶೀಘ್ರ ಕಲಿಕಾ ಶಿಬಿರಗಳು. ಇದು ಜಾರಿಗೊಂಡದ್ದು 2007–08ರಲ್ಲಿ.

**ಬಾಕಿ ಉಳಿದ ಅನಕ್ಷರಸ್ಥರಿಗಾಗಿ ಕಾರ್ಯಕ್ರಮ (Project for Residual Literacy 2005-06)**

ಕರ್ನಾಟಕದ 14 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಜಾರಿಗೆ ಬಂತು. ಸಾಕ್ಷರತಾ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಅನುಷ್ಠಾನಗೊಳಿಸಿದ ಈ ಕಾರ್ಯಕ್ರಮದ ಗುರಿ 11.06 ಲಕ್ಷ : ಸಾಧನೆ 3.01 ಲಕ್ಷ.

ಕರ್ನಾಟಕದಲ್ಲಿ ಮೇಲ್ಕಂಡ ಯೋಜನೆಗಳಲ್ಲದೆ ಕಾರಾಗೃಹ ಸಾಕ್ಷರತೆ, ಎಸ್.ಡಿ.ಎಂ.ಸಿ. ಅನಕ್ಷರಸ್ಥ ಸದಸ್ಯರಿಗೆ ಸಾಕ್ಷರತೆ, ಅಕ್ಷರ ದಾಸೋಹ, ಅಡಿಗೆ ಸಹಾಯಕರಿಗೆ ಸಾಕ್ಷರತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಾಕ್ಷರತೆ, ಸುಜಲ ಜಲಾನಯನ ಯೋಜನೆ, ಅನಕ್ಷರಸ್ಥರಿಗೆ ಸಾಕ್ಷರತೆ ಮುಂತಾದ ಸಾಕ್ಷರತಾ ಯೋಜನೆಗಳು ತಮ್ಮದೇ ರೀತಿಯಲ್ಲಿ ಕಾರ್ಯನಿರ್ವಹಿಸಿದವು.

ಆದರೆ ಏಕೋ ಏನೋ ಕರ್ನಾಟಕದಲ್ಲಿ, ಭಾರತದ ಉಳಿದೆಡೆಗಳಂತೆ, ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಾಧನೆ ಆಗಲಿಲ್ಲ. ಆದುದರಿಂದ 2009 ಮಾರ್ಚಿಗೆ ಕೇಂದ್ರ ಸರ್ಕಾರದ ಆದೇಶದಂತೆ ಎಲ್ಲ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಲಾಯಿತು. ಹೊಸದಿಕ್ಕಿನಲ್ಲಿ ವಿನೂತನ ರೀತಿಯಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಿ ಜಾರಿಗೊಳಿಸುವ ಉದ್ದೇಶದಿಂದ ಹೀಗೆ ಮಾಡಲಾಯಿತು.

ಆದರೆ ಕರ್ನಾಟಕ ಮಾತ್ರ ತನ್ನದೇ ರೀತಿಯಲ್ಲಿ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಯಿತು. ಉಳಿದೆಡೆ ಈ ಕಾರ್ಯಕ್ರಮಕ್ಕೆ ವಿಶ್ರಾಂತಿ ನೀಡಿದರೆ ಕರ್ನಾಟಕದಲ್ಲಿ ರಾಜ್ಯ ಕಾರ್ಯಕ್ರಮವಾಗಿ ಇದು ಸಮುದಾಯ ಶಿಕ್ಷಣ ಮತ್ತು ವೃತ್ತಿ ಕೌಶಲ ತರಬೇತಿ ಕಾರ್ಯಕ್ರಮವಾಗಿ ರೂಪುತಾಳಿತು.

**ಸಮುದಾಯ ಶಿಕ್ಷಣ ಹಾಗೂ ವೃತ್ತಿ ಕೌಶಲ ತರಬೇತಿ ಕಾರ್ಯಕ್ರಮ (Community Learning and Vocational Training - CLVT 2009-10):** ಇದೊಂದು ರಾಜ್ಯ ಅನುದಾನಿತ ಪರ್ಯಾಯ ಕಾರ್ಯಕ್ರಮ. ಈ ಕಾರ್ಯಕ್ರಮ ಡಾ. ಡಿ.ಎಂ. ನಂಜುಂಡಪ್ಪ ವರದಿಯನ್ವಯ ಸಾಕ್ಷರತೆಯಲ್ಲಿ ಅತಿ ಹಿಂದುಳಿದ ಹಾಗೂ ಹಿಂದುಳಿದ 21 ಜಿಲ್ಲೆಗಳ 75 ತಾಲ್ಲೂಕುಗಳಲ್ಲಿ, 2452 ಗ್ರಾಮ ಪಂಚಾಯಿತಿಗಳಲ್ಲಿ 6066 ಸಿಎಲ್‌ವಿಟಿ ಕೇಂದ್ರಗಳ ಮೂಲಕ, 1,18,560 ಅನಕ್ಷರಸ್ಥರಿಗೆ ಜಾರಿಗೊಳಿಸುವ ಉದ್ದೇಶವನ್ನು ಹೊಂದಿದ್ದು, ಇದರಿಂದ 75452 ಮಂದಿ ಅನುಕೂಲ ಪಡೆದಿರುತ್ತಾರೆ.

**ವಯಸ್ಕರ ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಕಾರ್ಯಕ್ರಮಗಳು– ಬಾನುಲಿ ಕಲಿಕೆ:** ಕಲಿಕೆಯಲ್ಲಿ ನವೀನತೆಯನ್ನು ತಂದು, ಅದರ ಮೂಲಕ ಕಲಿಕೆಗೆ ಉತ್ತೇಜನ ದೊರೆಯಲೆಂಬ ಉದ್ದೇಶದಿಂದ ಕರ್ನಾಟಕದ ವಯಸ್ಕರ ಶಿಕ್ಷಣದಲ್ಲಿ ಕೆಲ ಪ್ರಯೋಗಗಳನ್ನು ಮಾಡಲಾಯಿತು. ಅಂತೆಯೇ 8–9–2007 ರಿಂದ 60 ದಿನಗಳ ಕಾಲ ನಡೆದ ಬಾನುಲಿ ಕಲಿಕೆಯಲ್ಲಿ 18000 ಮುಂದುವರಿಕೆ ಶಿಕ್ಷಣ ಕೇಂದ್ರಗಳಲ್ಲಿ 'ಬಾರವ್ವ ಕಲಿಯಾಕ' ಪಠ್ಯದ ಮೂಲಕ ಅನಕ್ಷರಸ್ಥರಿಗೆ ಕಲಿಯಲು ಅವಕಾಶ ದೊರೆಯಿತು. ನಂತರ 2008–09ರಲ್ಲಿ ಕೂಡ ಇದು ಮುಂದುವರೆಯಿತು.

Digitised by Bharatavani, CIIL

**ಉಪಗ್ರಹ ಆಧಾರಿತ ಸಂವಾದ ಕಾರ್ಯಕ್ರಮ (2008):** ಎಜುಸ್ಯಾಟ್ ಮೂಲಕ ಡಿ.ಎಸ್.ಇ.ಆರ್.ಟಿ. ನೆರವಿನಿಂದ ಕರ್ನಾಟಕಾದ್ಯಂತ ಕಾರ್ಯಕರ್ತರು, ಕಲಿಕಾರ್ಥಿಗಳು, ಜನಪ್ರತಿನಿಧಿಗಳು ಈ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುತ್ತಾರೆ. ಡಿ.ಎಸ್.ಇ.ಆರ್.ಟಿ. ಸ್ಟುಡಿಯೋದಿಂದ ತಜ್ಞರು, ಅಧಿಕಾರಿಗಳು ಸಂವಾದವನ್ನು ನಡೆಸಿಕೊಟ್ಟಿರುತ್ತಾರೆ.

**ಎಜುಸ್ಯಾಟ್ ಮೂಲಕ ವಯಸ್ಕರ ಶಿಕ್ಷಣ ಕಾರ್ಯಕ್ರಮ (2009):** ಚಾಮರಾಜನಗರ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ 'ಸಾಕ್ಷರ ಸಂಗಾತಿ' ಪಠ್ಯ ಪುಸ್ತಕವನ್ನು ಬಳಸಿ, 30 ದಿನಗಳು, ಪ್ರತಿದಿನ 45 ನಿಮಿಷಗಳ ಕಾಲ, ಈ ಕಾರ್ಯಕ್ರಮಗಳನ್ನು ಬಿತ್ತರಗೊಳಿಸಲಾಯಿತು. ಇದು ಕೂಡ ಡಿ.ಎಸ್.ಇ.ಆರ್.ಟಿ. ನೆರವಿನಿಂದ ಜಾರಿಗೆ ಬಂದಿತು.

ಇಷ್ಟೆಲ್ಲಾ ವೈವಿಧ್ಯಮಯವಾದ ರೀತಿಯಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ಜಾರಿಗೊಂಡಿದ್ದರೂ ಇದರಲ್ಲಿ ಕೊರತೆಗಳು ಇಲ್ಲವೆಂದಲ್ಲ. ಹಲವೆಡೆ ಅನಕ್ಷರಸ್ಥರು ಅರೆಸಾಕ್ಷರರು ಮಾತ್ರ ಆದದ್ದು, ಮೂಲ ಸಾಕ್ಷರತೆ ಆದಕೂಡಲೇ, ಸಾಕ್ಷರೋತ್ತರ / ಮುಂದುವರಿಕೆ ಶಿಕ್ಷಣ ಅನುಷ್ಠಾನಗೊಳ್ಳದಿರುವುದರಿಂದ ಕಲಿತವರು, ಅರೆಸಾಕ್ಷರರು ಬಹುಬೇಗನೇ ನಿರಕ್ಷರರಾಗಿ ಮರಳಿದ್ದು, ಮುಂದೆ ಅವರನ್ನು ಮತ್ತೊಮ್ಮೆ ಸಾಕ್ಷರತಾಕಾರ್ಯಕ್ರಮಗಳಿಗೆ ತೊಡಗಿಸಿಕೊಂಡದ್ದು, ಅನುದಾನದ ಕೊರತೆಯಿಂದಾಗಿ, ಮುಂದುವರಿಕೆ ಶಿಕ್ಷಣ ಕೇಂದ್ರಗಳು ಸರಿಯಾಗಿ ನಡೆಯದಿದ್ದುದು ಹಾಗೂ ಹಲವೆಡೆ ಸ್ಥಗಿತಗೊಂಡದ್ದು, ಇವೆಲ್ಲ ಈ ಕಾರ್ಯಕ್ರಮಗಳಲ್ಲಿ ನಡೆದುಹೋದ ದುರ್ದೈವದ ಸಂಗತಿಗಳು.

**ಸಾಕ್ಷರ ಭಾರತ್ (2009–12):** ಒಂದು ವರ್ಷಕಾಲ ಚರ್ಚೆ, ಕಮ್ಮಟಗಳು, ಸಂಶೋಧನೆ, ಕ್ಷೇತ್ರಾಧ್ಯಯನ, ಕಮಿಟಿಗಳ ಶಿಫಾರಸ್ ಹಾಗೂ ಹಿಂದಿನ ಅನುಭವಗಳ ಹಿನ್ನೆಲೆಯಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ರೂಪುಗೊಂಡಿದೆ. ಸಾಕ್ಷರ ಭಾರತ್ ಕಾರ್ಯಕ್ರಮ ಮೂಲಸಾಕ್ಷರತೆ, ಸಮಾನ ಶಿಕ್ಷಣ, ವೃತ್ತಿಕೌಶಲ ತರಬೇತಿ ಮತ್ತು ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳನ್ನೊಳಗೊಂಡ ವಿಸ್ತೃತ ರೂಪದ ಪರಿಕಲ್ಪನೆಯನ್ನು ಹೊಂದಿರುತ್ತದೆ.

ಈ ಕಾರ್ಯಕ್ರಮದಲ್ಲಿ ಶೇ. 50ಕ್ಕಿಂತ ಕಡಿಮೆ ಮಹಿಳಾ ಸಾಕ್ಷರತೆ ಇರುವ 18 ಜಿಲ್ಲೆಗಳಲ್ಲಿ ಅನಕ್ಷರಸ್ಥ ಮಹಿಳೆಯರು, ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗಗಳು, ಅಲ್ಪಸಂಖ್ಯಾತ ಮುಸ್ಲಿಂ ಅನಕ್ಷರಸ್ಥರನ್ನೇ ವಿಶೇಷವಾಗಿ ತೊಡಗಿಸಿಕೊಳ್ಳಲಾಗಿದೆ. ಕಾರ್ಯಕ್ರಮದ ಒಟ್ಟು ಗುರಿಯಲ್ಲಿ 85% ಮಹಿಳೆಯರು, 15% ಪುರುಷರು ಸೇರಿದ್ದರು. 2012ರ ವೇಳೆಗೆ ಸಾಕ್ಷರತಾ ಪ್ರಮಾಣವನ್ನು 80%ಕ್ಕೆ ಹೆಚ್ಚಿಸುವುದು, ಮಹಿಳಾ ಸಾಕ್ಷರತೆ ಹಾಗೂ ಪುರುಷ ಸಾಕ್ಷರತಾ ಪ್ರಮಾಣದ ಅಂತರವನ್ನು ಕಡಿಮೆಗೊಳಿಸುವುದು; ಜೀವನ ಸುಧಾರಣೆ ವೃತ್ತಿ ಕೌಶಲ ತರಬೇತಿ ನೀಡುವುದು, ಜೀವನದುದ್ದಕ್ಕೂ ಕಲಿಕೆಗೆ ಅವಕಾಶ ಕಲ್ಪಿಸುವುದು, ಇವೆಲ್ಲ ಈ ಕಾರ್ಯಕ್ರಮದ ಉದ್ದೇಶಗಳು.

ಕರ್ನಾಟಕದಲ್ಲಿ ಕಾರ್ಯಕ್ರಮದ ಗುರಿ 36.64 ಲಕ್ಷ; ಮೊದಲ ಹಂತದಲ್ಲಿ 20 ಲಕ್ಷ ಮಂದಿ; ನಂತರದ ಹಂತದಲ್ಲಿ 16.64 ಲಕ್ಷ ಮಂದಿ, 18 ಜಿಲ್ಲೆಗಳ 07 ತಾಲ್ಲೂಕು ಮತ್ತು 345 ಗ್ರಾಮ ಪಂಚಾಯಿತಿಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿದೆ.

2009–2012ರ ಅವಧಿಯ ಸಾಕ್ಷರ ಭಾರತ್ ಕಾರ್ಯಕ್ರಮದ ಮೂಲಕ ಹಿಂದಿನ ಕಾರ್ಯಕ್ರಮಗಳಲ್ಲಿ ಆಗಿಹೋದ ಕೊರತೆಗಳನ್ನು ನೀಗಿಕೊಂಡು ಯಶಸ್ಸನ್ನು ಪಡೆದು ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಹೊಸ ದಿಕ್ಕಿಗೆ ಕೊಂಡೊಯ್ದು, ಕಲಿಕಾ ಸಮಾಜವನ್ನು ನಿರ್ಮಿಸುವುದು ಸಾಧ್ಯ ಎಂಬ ಆಶಯವನ್ನು, ನಂಬಿಕೆಯನ್ನು ಇಟ್ಟುಕೊಳ್ಳಲಾಗಿದೆ.

**ಕರ್ನಾಟಕದ ಕೆಲ ವಯಸ್ಕರ ಶಿಕ್ಷಣ ಸಂಸ್ಥೆಗಳು:** ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿ ಹಲವು ಸಂಸ್ಥೆಗಳು ಶ್ರಮಿಸುತ್ತಿವೆ. ಇವುಗಳಲ್ಲಿ ಸರ್ಕಾರೀ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ವಿಶ್ವವಿದ್ಯಾನಿಲಯಗಳಂತಹ ಸ್ವಾಯತ್ತ ಸಂಸ್ಥೆಗಳು ಸೇರಿದ್ದು, ಅವುಗಳಲ್ಲಿ ಮುಖ್ಯವಾದ ಕೆಲವನ್ನಿಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ.

**ಕರ್ನಾಟಕದ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ (1995):** ಕರ್ನಾಟಕದ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ 1995ರಲ್ಲಿ ನೋಂದಣಿಗೊಂಡ ಸ್ವಾಯತ್ತ ಸಂಸ್ಥೆ. ಇದರ ಅಧ್ಯಕ್ಷರು, ಮಾನ್ಯ ಮುಖ್ಯಮಂತ್ರಿಗಳು ಸದಸ್ಯ ಕಾರ್ಯದರ್ಶಿ ಲೋಕಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು. ಕರ್ನಾಟಕದಲ್ಲಿ ನಡೆಯುವ ಎಲ್ಲ ರೀತಿಯ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೆ ಮಾರ್ಗದರ್ಶನ ನೀಡುವ, ಯೋಜನೆಗಳನ್ನು ರೂಪಿಸುವ, ಪರಿವೀಕ್ಷಣ ಮಾಡುವ ಸಂಸ್ಥೆ. ವಿವಿಧ ಜಿಲ್ಲೆಗಳ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡಿ ರವಾನಿಸಿ, ಅನುದಾನ ತರಿಸಿಕೊಂಡು, ವಿತರಣೆ ಮಾಡುವ ಸಂಸ್ಥೆಯೂ ಇದೇ ಆಗಿದೆ. ಕ.ರಾ.ಸಾ.ಮಿ.ಪ್ರಾ. ಮಾಡಿದ ಗಣನೀಯ ಸಾಧನೆಗೆ 2000 ಸಾಲಿನಲ್ಲಿ ಎನ್.ಎಲ್.ಎಂ. – ಯುನೆಸ್ಕೋ ಪ್ರಶಸ್ತಿ ದೊರೆಯಿತು.

**ಲೋಕಶಿಕ್ಷಣ ನಿರ್ದೇಶನಾಲಯ:** ಇದೊಂದು ಸರ್ಕಾರದ ವಿಭಾಗ. ಜಿಲ್ಲಾಮಟ್ಟದ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ನೇರ ನಿರ್ದೇಶನ ನೀಡುವುದು, ಸರ್ಕಾರ ರೂಪಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು, 'ಪ್ರಾಧಿಕಾರ' ಹಾಗೂ ಕೇಂದ್ರ ಸರ್ಕಾರ ನೀಡುವ ನಿರ್ದೇಶನಗಳನ್ನು ಪಾಲಿಸುವುದು, ಜಿಲ್ಲಾ ಸಮಿತಿಗಳು ಮಾಡುವ ಎಲ್ಲ ಕಾರ್ಯಕ್ರಮಗಳು ಹಾಗೂ ಖರ್ಚುವೆಚ್ಚಗಳ ಉಸ್ತುವಾರಿ ಮಾಡುವುದು ಇದರ ಇತರೇ ಚಟುವಟಿಕೆಗಳು. ಒಂದು ರೀತಿಯಲ್ಲಿ ಇದು ಪ್ರಾಧಿಕಾರದ 'ಅನುಷ್ಠಾನಾಂಗ'.

**ಜಿಲ್ಲಾ ಸಾಕ್ಷರ ಸಮಿತಿಗಳು:** ಇವು ಕೂಡ ಪ್ರಾಧಿಕಾರದಂತೆಯೇ ನೋಂದಣಿಗೊಂಡಿರುವ ಸ್ವಾಯತ್ತ ಸಂಸ್ಥೆಗಳು; ಜಿಲ್ಲಾ ಮಟ್ಟದ ಕಾರ್ಯಕ್ರಮಗಳ ಅನುಷ್ಠಾನ ಘಟಕಗಳು. ಜಿಲ್ಲಾಧಿಕಾರಿಗಳು ಇದರ ಅಧ್ಯಕ್ಷರು; ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಇದರ ಸದಸ್ಯ ಕಾರ್ಯದರ್ಶಿ. ಜಿಲ್ಲಾಮಟ್ಟದ ಎಲ್ಲ ಬಗೆಯ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವವರು ಇವರೇ. ತಾಲೂಕು ಮಟ್ಟದಲ್ಲಿ ತಾಲೂಕು ಸಾಕ್ಷರ ಸಮಿತಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಗ್ರಾಮ ಪಂಚಾಯಿತಿ' ತಳಮಟ್ಟದ ಅನುಷ್ಠಾನ ಸಂಸ್ಥೆಗಳು.

**ಜನಶಿಕ್ಷಣ ಸಂಸ್ಥಾನಗಳು:** ಕರ್ನಾಟಕದ 9 ಜಿಲ್ಲೆಗಳಲ್ಲಿ ಇವು ಕಾರ್ಯ ನಿರ್ವಹಿಸುತ್ತಿವೆ. ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆಯುವ ಇವು ನವಸಾಕ್ಷರರು, ಕಡಿಮೆ ಸಾಕ್ಷರತೆಯುಳ್ಳ ಯುವಕ, ಯುವತಿಯರಿಗೆ ವೃತ್ತಿ ತರಬೇತಿಗಳನ್ನು ನಡೆಸುವುದಲ್ಲದೆ ಅನಕ್ಷರಸ್ಥರಿಗೆ ಸಾಕ್ಷರತಾ ಕಾರ್ಯಕ್ರಮಗಳನ್ನು ನಡೆಸುವುದು, ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ದತ್ತು ತೆಗೆದುಕೊಂಡು ನಡೆಸುವುದನ್ನು ಮಾಡುತ್ತವೆ. ಕಳೆದ 25 ವರ್ಷಗಳಿಂದ ಜನಶಿಕ್ಷಣ ಸಂಸ್ಥೆಗಳು ಕರ್ನಾಟಕದ ವಯಸ್ಕರ ಶಿಕ್ಷಣಕ್ಕೆ ಕ್ರಿಯಾತ್ಮಕ ಆಯಾಮವನ್ನು ನೀಡುವುದರಲ್ಲಿ ಗಣನೀಯ ಸಾಧನೆಯನ್ನು ಮಾಡಿವೆ.

Digitised by Bharatavani, CIIL

**ರಾಜ್ಯ ಸಂಪನ್ಮೂಲ ಕೇಂದ್ರ – ಕರ್ನಾಟಕ (1979):** ಕರ್ನಾಟಕದಲ್ಲಿ ಹಾಗೂ ಕನ್ನಡ ಮಾತನಾಡುವ ಜನರಿರುವ ನೆರೆಯ ರಾಜ್ಯಗಳಲ್ಲಿ ಜಾರಿಗೊಳ್ಳುತ್ತಿರುವ ವಯಸ್ಕರ ಶಿಕ್ಷಣ, ಸಾಕ್ಷರೋತ್ತರ ಹಾಗೂ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳಿಗೆ ಶೈಕ್ಷಣಿಕ ಹಾಗೂ ತಾಂತ್ರಿಕ ನೆರವನ್ನು ನೀಡುತ್ತಿರುವ ಸಂಸ್ಥೆ. ವಿವಿಧ ಕಾರ್ಯಕ್ರಮಗಳಿಗೆ ಸಾಹಿತ್ಯ ಸಾಮಗ್ರಿಯನ್ನು ತಯಾರಿಸುವುದು, ವಿವಿಧ ಹಂತದ ಕಾರ್ಯಕರ್ತರಿಗೆ ತರಬೇತಿಗಳನ್ನು ಆಯೋಜಿಸುವುದು, ಮಾಧ್ಯಮ ಸಲಹೆಗೆ ಸಹಕರಿಸುವುದು, ಸಂಶೋಧನೆ ಹಾಗೂ ಪರಿವೀಕ್ಷಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಮಹಿಳಾ ಶಿಕ್ಷಣ, ಜನಸಂಖ್ಯಾ ಶಿಕ್ಷಣಗಳಿಗೆ ಬೇಕಾದ ಮಾರ್ಗೋಪಾಯಗಳನ್ನು ರೂಪಿಸುವುದು – ರಾಜ್ಯ ಸಂಪನ್ಮೂಲ ಕೇಂದ್ರದ ಜವಾಬ್ದಾರಿಗಳು, ಉದ್ದೇಶಗಳು.

ರಾಜ್ಯ ಸಂಪನ್ಮೂಲ ಕೇಂದ್ರ ಇದುವರೆಗೆ 29 ಮೂಲಸಾಕ್ಷರತಾ ಪಠ್ಯಗಳು, 505 ನವಸಾಕ್ಷರ ಪುಸ್ತಕಗಳು, 50 ತರಬೇತಿ ಸಾಹಿತ್ಯಗಳು, 32 ಸಂಶೋಧನ ಮತ್ತು ಮೌಲ್ಯಮಾಪನ ಅಧ್ಯಯನಗಳು, 33 ಸಾಕ್ಷರತಾ ಮಾಹಿತಿ ಅಂಕಿ ಅಂಶಗಳ ಕುರಿತ ಪ್ರಕಟಣೆಗಳು, ನೂರಾರು ಭಿತ್ತಿಪತ್ರಗಳು, ಸ್ಟಿಕರ್‌ಗಳು, ಸಿ.ಡಿ., ಧ್ವನಿಸುರಳಿಗಳು ಹಾಗೂ ಚಾರ್ಟುಗಳನ್ನು ಹೊರತಂದಿದ್ದು, 75 ಸಾವಿರಕ್ಕೂ ಮೇಲ್ಪಟ್ಟು ವಿವಿಧ ಹಂತದ ಕಾರ್ಯಕರ್ತರಿಗೆ, ಅಧಿಕಾರಿಗಳಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಗಳನ್ನು ನಡೆಸಿಕೊಟ್ಟಿದೆ. 'ಸಾಕ್ಷರತಾ ಆಂದೋಲನದ ತರಬೇತಿ ಅಧ್ಯಯನ' ಸಂಶೋಧನೆಗೆ ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಶಸ್ತಿ (1997) ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಗಣನೀಯ ಸೇವೆಗಾಗಿ 2001ರಲ್ಲಿ 'ಎನ್.ಎಲ್.ಎಂ. ಯುನೆಸ್ಕೋ' ಪ್ರಶಸ್ತಿ ಹಾಗೂ 2008–09 ಸಂಸ್ಥೆ 'ಎ' ಶ್ರೇಣಿಗೆ ಏರಿದ್ದು ರಾಜ್ಯ ಸಂಪನ್ಮೂಲ ಕೇಂದ್ರಕ್ಕೆ ದಕ್ಕಿರುವ ಕೆಲ ಪುರಸ್ಕಾರಗಳು. ಈ ಕೇಂದ್ರ ಮೈಸೂರಿನಲ್ಲಿದೆ.

**ಹಿಂತಿರುಗಿ ನೋಡಿದಾಗ:** ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವುಳ್ಳ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ಕರ್ನಾಟಕವನ್ನೊಂದು ಮಾದರಿ ರಾಜ್ಯವನ್ನಾಗಿಸಿದೆ. 19ನೆಯ ಶತಮಾನದಲ್ಲಿ ಆಗೊಮ್ಮೆ, ಈಗೊಮ್ಮೆ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ನಡೆದುವಾದರೂ, ಅದಕ್ಕೊಂದು ಭದ್ರಬುನಾದಿ ದೊರೆತದ್ದು ಸರ್ ಎಂ. ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದಾಗ. ಅನಂತರ ವಯಸ್ಕರ ಶಿಕ್ಷಣ ಸಮಿತಿ ಶಾಖೋಪಶಾಖೆಗಳಾಗಿ ಬೆಳೆಯಿತು. ನಂತರ ಜಾರಿಗೆ ಬಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ, ರಾಷ್ಟ್ರೀಯ ಸಾಕ್ಷರತಾ ಮಿಷನ್ ಅಡಿಯಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನಗಳು, ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳು, ಅಕ್ಷರಸೇನೆ, ಕನ್ನಡನಾಡು – ಸಾಕ್ಷರನಾಡು ಮುಂತಾದ ರಾಜ್ಯ ಕಾರ್ಯಕ್ರಮಗಳು, 21ನೆಯ ಶತಮಾನದ ಮೊದಲ ದಶಕದಲ್ಲಿ ನಡೆದ ವೈವಿಧ್ಯಮಯ ಸಾಕ್ಷರತಾ ಕಾರ್ಯಕ್ರಮಗಳು– ಇವೆಲ್ಲವೂ ಕರ್ನಾಟಕದ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೊಂದು ವೈವಿಧ್ಯತೆಯನ್ನು, ವಿಶಿಷ್ಟತೆಯನ್ನು ತಂದುಕೊಟ್ಟಿವೆ.

ಈ ಎಲ್ಲ ಕಾರ್ಯಕ್ರಮಗಳ ಮೂಲಕ ಸಾಕ್ಷರರಾದವರು ಹಲವು ಲಕ್ಷ ಅನಕ್ಷರಸ್ಥರು, ಹಲವು ಲಕ್ಷ ಮಂದಿ ಸ್ವಯಂಸೇವಕರು, ಕಾರ್ಯಕರ್ತರು, ಕಲಾವಿದರು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡರು. ಇವರು ನಿಸ್ವಾರ್ಥ, ಸ್ವಯಂ ಸೇವಾ ಮನೋಭಾವದಿಂದ ವಯಸ್ಕರ ಶಿಕ್ಷಣಕ್ಕೆ ದುಡಿದರು; ಕರ್ನಾಟಕದಲ್ಲಿ ಕಲಿಕಾ ವಾತಾವರಣ ನಿರ್ಮಿಸಿದರು; ಸಾಮಾಜಿಕ ಬದಲಾವಣೆಗಳನ್ನು ತಂದರು; ಸಾಕ್ಷರತಾ ಪ್ರಮಾಣ ಹೆಚ್ಚಿಸಿದರು.

– ಸಿ.ಪಿ.ವಿ.

## ಕರ್ನಾಟಕದಲ್ಲಿ ವೈದ್ಯ ಶಿಕ್ಷಣ – ಪ್ರಸ್ತುತ ಸ್ಥಿತಿ

**ಆಯುರ್ವೇದ ಶಿಕ್ಷಣ:** ರಾಜ್ಯದಲ್ಲಿ ಇಂದು ಆಯುರ್ವೇದ ಶಿಕ್ಷಣ ಪದ್ಧತಿಯು ಏಕರೂಪದಲ್ಲಿದೆ. ಮೈಸೂರು, ಬೆಂಗಳೂರು ಮತ್ತು ಸರ್ಕಾರಿ ಆಯುರ್ವೇದ ವೈದ್ಯ ವಿದ್ಯಾಲಯಗಳಲ್ಲದೆ, ಸುಮಾರು 45 ಅನುದಾನಸಹಿತ ಹಾಗೂ ಅನುದಾನರಹಿತ ಖಾಸಗಿ ಪದವಿ ಕಾಲೇಜುಗಳು ಅಸ್ತಿತ್ವದಲ್ಲಿದ್ದು, ಶಿಕ್ಷಣಸೇವೆ ಮತ್ತು ಜನಸೇವೆಯಲ್ಲಿ ನಿರತವಾಗಿವೆ. ಇವುಗಳು ಆಡಳಿತಾತ್ಮಕವಾಗಿ ಕರ್ನಾಟಕ ಸರಕಾರದ ಆಯುರ್ವೇದ ಶಿಕ್ಷಣ ಮತ್ತು ಆರೋಗ್ಯ ಸೇವೆ ನಿರ್ದೇಶನಾಲಯ, ನವದೆಹಲಿಯ ಅಗ್ರಸಂಸ್ಥೆ ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ (Central Council of Indian Medicine, CCIM) ಮತ್ತು ರಾಜ್ಯದ ರಾಜೀವ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (Rajiv Gandhi University of Health Sciences, RGUHS) ದ ನೀತಿ ನಿಯಮಗಳನುಸಾರವಾಗಿ ಕಾರ್ಯನಿರ್ವಹಿಸುತ್ತಿವೆ. ಅಂದಿನ ಎಲ್.ಎ.ಎಂ.ಎಸ್. (1932), ಡಿಪ್ಲೊಮಾ ಇನ್ ಆಯುರ್ವೇದಿಕ್ ಮೆಡಿಸಿನ್ (1958), ಜಿ.ಸಿ.ಐ.ಎಂ. (1959), ಬಿ.ಎಸ್.ಎ.ಎಂ. (1966), ಮಿಶ್ರ ಬಿ.ಎಸ್.ಎ.ಎಂ. (1969), ಅಮಿಶ್ರ ಬಿ.ಎಸ್.ಎ.ಎಂ. (1978)ರ ನಂತರ ಪ್ರಸ್ತುತದಲ್ಲಿ 1989ರ ಲಾಗಾಯ್ತು $4^1/_2$ ವರುಷಗಳ ಬೋಧನೆ ಮತ್ತು 1 ವರುಷದ ತರಬೇತಿ ಅವಧಿಯು ಸೇರಿದಂತೆ ಒಟ್ಟು $5\ ^1/_2$ ವರುಷಗಳ ಸ್ನಾತಕ ಆಯುರ್ವೇದಾಚಾರ್ಯ – ಬ್ಯಾಚಲರ್ ಆಫ್ ಆಯುರ್ವೇದಿಕ್ ಮೆಡಿಸಿನ್ ಅಂಡ್ ಸರ್ಜರಿ (BAMS, Bachelor of Ayurvedic Medicine and Surgery) ಪದವಿ ಶಿಕ್ಷಣವನ್ನು ನೀಡಲಾಗುತ್ತಿದೆ. ವಿದ್ಯಾಲಯಗಳಲ್ಲಿ ಆಯುರ್ವೇದ ಸಿದ್ಧಾಂತ ಮತ್ತು ಸಂಹಿತೆ, ಶರೀರರಚನೆ, ಶರೀರಕ್ರಿಯೆ, ರಸಶಾಸ್ತ್ರ ಮತ್ತು ಭೈಷಜ್ಯ ಕಲ್ಪನ, ದ್ರವ್ಯಗುಣ, ರೋಗನಿದಾನ, ಸ್ವಸ್ಥವೃತ್ತ, ಅಗದತಂತ್ರ, ಕಾಯಚಿಕಿತ್ಸೆ, ಪಂಚಕರ್ಮ, ಶಾಲ್ಯತಂತ್ರ, ಶಾಲಾಕ್ಯತಂತ್ರ, ಪ್ರಸೂತಿತಂತ್ರ ಮತ್ತು ಸ್ತ್ರೀರೋಗಗಳು ಹಾಗೂ ಕೌಮಾರ್ಯಭೃತ್ಯ ವಿಷಯಗಳ ಇಲಾಖೆಗಳಿವೆ. 1972ರ ಲಾಗಾಯ್ತು ಆಯ್ದ ಕೆಲವು ವಿಷಯಗಳಲ್ಲಿ 3 ವರ್ಷಗಳ ಶಿಕ್ಷಣ ಅವಧಿಯ ಸ್ನಾತಕೋತ್ತರ ಎಂ.ಡಿ. ಪದವಿ ಶಿಕ್ಷಣವನ್ನು ನೀಡಲಾಗುತ್ತದೆ. ಪಿ.ಯು.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳ ವಿದ್ಯಾರ್ಹತೆ ಮತ್ತು ಮೌಲ್ಯವನ್ನು ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (Karnataka Common Entrance Test) ಮೂಲಕ ಪರಿಗಣಿಸಿ ಆಯ್ಕೆಮಾಡಿ ಪ್ರವೇಶ ನೀಡಲಾಗುತ್ತಿದೆ. ಕರ್ನಾಟಕದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಪ್ರಸ್ತುತ ಮೈಸೂರು, ಬೆಂಗಳೂರು, ಹುಬ್ಬಳ್ಳಿ ಮತ್ತು ಬಳ್ಳಾರಿ ತಾರಾನಾಥ ಸರ್ಕಾರಿ ಕಾಲೇಜು ಹಾಗೂ ಹಾಸನದ ಎಸ್.ಡಿ.ಎಂ., ಬೆಳಗಾವಿಯ ಕೆ.ಎಲ್.ಇ. ಸೊಸೈಟಿಯ ಬಿ.ಎಂ. ಕಂಕನವಾಡಿ, ಗದಗಿನ ಡಿ.ಜಿ. ಮೆಲಮೊಳಗಿ, ಉಡುಪಿಯ ಎಸ್.ಡಿ.ಎಂ., ದಾವಣಗೆರೆಯ ಅಶ್ವಿನಿ ಎಜುಕೇಷನ್ ಅಸೋಸಿಯೇಷನ್, ಘಟಪ್ರಭಾದ ಬಿ.ಜಿ. ಕೋ–ಆಪರೇಟಿವ್ ಹಾಸ್ಪಿಟಲ್, ಕೊಪ್ಪ (ಚಿಕ್ಕಮಗಳೂರು ಜಿಲ್ಲೆ)ದ ಎ.ಎಲ್.ಎನ್. ರಾವ್ ಮೆಮೋರಿಯಲ್, ಮೈಸೂರಿನ ಜೆ.ಎಸ್.ಎಸ್., ಬಿಜಾಪುರದ ಡಾ. ಬಿ.ಎನ್.ಎಂ. ರೂರಲ್ ಆಯುರ್ವೇದ ಮಹಾವಿದ್ಯಾಲಯ ಹಾಗೂ ಬೀದರ್‌ನ ಎ.ವಿ. ಸಮಿತಿಯ ಎನ್.ಕೆ. ಜಬಶೆಟ್ಟಿ, ಮೂಡುಬಿದ್ರೆಯ ಆಳ್ವ, ಸುಳ್ಯದ ಕೆ.ವಿ.ಜಿ. ಮತ್ತು ಮಣಿಪಾಲ್‌ನ ಮುನಿಯಾಳ್ ಇನ್ಸ್ಟಿಟ್ಯೂಟ್ ಮುಂತಾದ ಖಾಸಗಿ ಆಯುರ್ವೇದ ಕಾಲೇಜುಗಳಲ್ಲಿ ಆಯ್ದ ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ (CCIM) ಆಯುರ್ವೇದ ಶಿಕ್ಷಣದ ಗುಣಮಟ್ಟವನ್ನು ಮೌಲ್ಯಮಾಪನ ಮಾಡಿ ಮನ್ನಣೆ ನೀಡುವುದನ್ನು ನಿರ್ಧರಿಸುತ್ತದೆ.

Digitised by Bharatavani, CIIL

**ಯುನಾನಿ ವೈದ್ಯ ಶಿಕ್ಷಣ:** ರಾಜ್ಯದಲ್ಲಿ ಒಟ್ಟು ನಾಲ್ಕು ಯುನಾನಿ ಕಾಲೇಜುಗಳಿವೆ. ಅವುಗಳೆಂದರೆ ಬೆಂಗಳೂರಿನ ಸರ್ಕಾರಿ ಯುನಾನಿ ಮೆಡಿಕಲ್ ಕಾಲೇಜು (ಸ್ಥಾಪನೆ: 1975), ಬಿಜಾಪುರದ ಎಸ್.ಇ.ಸಿ.ಎ.ಬಿ. ಸಂಘದ ಲ್ಯುಕುಮನ್ ಯುನಾನಿ ಮೆಡಿಕಲ್ ಕಾಲೇಜು (ಸ್ಥಾಪನೆ: 1966), ಗುಲ್ಬರ್ಗದ ಟೀಪೂ ಸುಲ್ತಾನ್ ಶಾಹಿದ್ ಎಜುಕೇಷನ್ ಟ್ರಸ್ಟ್‌ನ ಯುನಾನಿ ಮೆಡಿಕಲ್ ಕಾಲೇಜು (ಸ್ಥಾಪನೆ 1998) ಮತ್ತು ತುಮಕೂರಿನ ಎಚ್.ಎಂ.ಎಸ್. ಸೊಸೈಟಿಯ ಯುನಾನಿ ಮೆಡಿಕಲ್ ಕಾಲೇಜು (ಸ್ಥಾಪನೆ: 2006). ಕರ್ನಾಟಕದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳು ಆಯ್ಕೆಗೊಂಡು ಪ್ರವೇಶ ಪಡೆಯುವರು. ಸ್ನಾತಕ ಬ್ಯಾಚಲರ್ ಆಫ್ ಯುನಾನಿ ಮೆಡಿಸಿನ್ (Bachelor of Unani Medicine, BUMS) $5^1/_2$ ವರುಷಗಳ ಅವಧಿಯದ್ದಾಗಿದೆ. 2004ರಂದು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರವು ಒಗ್ಗೂಡಿ ಬೆಂಗಳೂರಿನಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಯುನಾನಿ ಮೆಡಿಸಿನ್ (NIUM, National Institute of Unani Medicine) ನ್ನನ್ನು ಸ್ಥಾಪಿಸಿದವು. ಇದು ದೇಶದ ಪ್ರಮುಖ ಮಾದರಿ ಯುನಾನಿ ವೈದ್ಯ ಸಂಸ್ಥೆಯಾಗಿದ್ದು, ಸ್ನಾತಕೋತ್ತರ ವ್ಯಾಸಂಗ ಮತ್ತು ಸಂಶೋಧನಾ ಕೇಂದ್ರವಾಗಿದೆ. ಪ್ರಸ್ತುತ ಇದು 3 ವರುಷಗಳ ಅವಧಿಯ (ಎಂ.ಡಿ. ಯುನಾನಿ ಮೆಡಿಸಿನ್) ಕೋರ್ಸನ್ನು ನಡೆಸುತ್ತಿದೆ.

ಈ ಕೆಳಕಂಡ ವಿಷಯಗಳಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಸಂಶೋಧನಾ ಬೋಧನಾ ಕಾರ್ಯಕ್ರಮಗಳು ನಡೆಯುತ್ತಿವೆ.

1. ಕುಲ್ಲಿಯಾತ್ (Basic Principles) – ಮೂಲ ತತ್ತ್ವಗಳು
2. ತಶ್ರೀ (Anatomy) – ಶರೀರರಚನೆ
3. ಇಲ್‌ಮಲದ್ (Pharmacology) – ಔಷಧಶಾಸ್ತ್ರ
4. ಹಿಫ್‌ಜಾನೆ ಸೇಹತ್ (Hygiene) – ಆರೋಗ್ಯ ಶಾಸ್ತ್ರ
5. ಮೊಆಲಿಜಾತ್ (Medicine) – ಔಷಧವೈದ್ಯ ಶಾಸ್ತ್ರ
6. ಜರಾ–ಹಿಯಾತ್ (Surgery) – ಶಸ್ತ್ರಚಿಕಿತ್ಸೆ
7. ಕಬಲಾ–ವಾ (Obstetrics) – ಪ್ರಸೂತಿ
8. ಅಮರಾಜ್ – ಎ–ನಿಸ್ವಾನ್ (Gynaecology) – ಸ್ತ್ರೀರೋಗ ಶಾಸ್ತ್ರ

**ಆಲೋಪಥಿ ವೈದ್ಯ ಶಿಕ್ಷಣ:** ದೇಶದ ಇತರೆಡೆಗಳಲ್ಲಿಯಂತೆ ಪಾಶ್ಚಾತ್ಯ (ಆಧುನಿಕ) ಅಲೋಪತಿ ವೈದ್ಯ ಪದ್ಧತಿಯು ಕರ್ನಾಟಕದಲ್ಲಿ ಅತ್ಯಂತ ಪ್ರಚಲಿತ, ಪ್ರಭಾವಿಯುತ ಹಾಗೂ ಜನಪ್ರಿಯ ವೈದ್ಯ ಪದ್ಧತಿಯಾಗಿದೆ. ಇಂದು ರಾಜ್ಯದಲ್ಲಿ 10 ಸರ್ಕಾರಿ ವೈದ್ಯಕೀಯ ಕಾಲೇಜುಗಳು (ಮೈಸೂರು, ಬೆಂಗಳೂರು, ಬಳ್ಳಾರಿ, ಹುಬ್ಬಳ್ಳಿ ಹಾಗೂ ಈ ದಶಕದಲ್ಲಿ ಪ್ರಾರಂಭವಾದ ಹಾಸನ, ಮಂಡ್ಯ, ಬೀದರ್, ಬೆಳಗಾವಿ, ರಾಯಚೂರು ಮತ್ತು ಶಿವಮೊಗ್ಗದ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್)ಗಳೊಂದಿಗೆ ಸುಮಾರು 29 ಖಾಸಗಿ ವೈದ್ಯಕೀಯ ಕಾಲೇಜುಗಳಿವೆ. ಇವುಗಳು ಮೂಲತಃ $5\ ^1/_2$ ವರುಷಗಳ ($4\ ^1/_2$ ವರ್ಷಗಳ ಅಧ್ಯಯನ ಮತ್ತು 1 ವರುಷದ ತರಬೇತಿ) ಅವಧಿಯ ಸ್ನಾತಕ ಎಂ.ಬಿ.ಬಿ.ಎಸ್. ಶಿಕ್ಷಣವನ್ನು ನೀಡುತ್ತವೆ. ಅಲ್ಲದೆ ಮನ್ನಣೆ ಪಡೆದ ಸುಸಜ್ಜಿತ ವಿದ್ಯಾಸಂಸ್ಥೆಗಳು ಎರಡು ವರುಷಗಳ ಅವಧಿಯ ಡಿಪ್ಲೋಮಾ ಕೋರ್ಸುಗಳನ್ನು (ಡಿ.ಸಿ.ಎಚ್. ಡಿಪ್ಲೋಮಾ ಇನ್ ಚೈಲ್ಡ್ ಹೆಲ್ತ್, ಡಿ.ಎಲ್.ಓ. ಡಿಪ್ಲೋಮಾ ಇನ್ ಲೆರೆಂಗೋ ಓಟೋ ರೈನಾಲಜಿ– (ಕಿವಿ, ಮೂಗು, ಗಂಟಲು ಬೇನೆಗಳು), ಡಿ.ಎ. – ಡಿಪ್ಲೋಮಾ ಇನ್ ಅನಸ್ಥೆಸಿಯಾಲಜಿ (ಅರಿವಳಿಕೆ), ಡಿ.ಜಿ.ಓ. – ಡಿಪ್ಲೋಮಾ ಇನ್ ಆಬ್‌ಸ್ಟೆಟ್ರಿಕ್ಸ್ ಅಂಡ್ ಗೈನೆಕಾಲಜಿ – (ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ), ಡಿ.ಸಿ.ಪಿ. – ಡಿಪ್ಲೋಮಾ ಇನ್ ಕ್ಲಿನಿಕಲ್ ಪೆಥಾಲಜಿ (ರೋಗನಿದಾನ ಶಾಸ್ತ್ರ), ಡಿ.ಪಿ.ಎಂ.– ಡಿಪ್ಲೋಮಾ ಇನ್ ಸೈಕಿಯಾಟ್ರಿಕ್ ಮೆಡಿಸಿನ್ (ಮಾನಸಿಕ ರೋಗಗಳು), ಡಿ.ಆರ್ಥೋ. – ಡಿಪ್ಲೋಮಾ ಇನ್ ಆರ್ಥೋಪೆಡಿಕ್ಸ್ (ಎಲುಬು ಮತ್ತು ಕೀಲು ರೋಗಗಳು), ಡಿ.ಎಂ.ಆರ್.ಡಿ.– ಡಿಪ್ಲೋಮಾ ಇನ್ ರೇಡಿಯೋಡಯಾಗ್ನೋಸಿಸ್, ಡಿ.ಓ.ಎಂ.ಎಸ್.– ಡಿಪ್ಲೋಮಾ ಇನ್ ಆಪ್ತಾಲ್ಮಿಕ್ ಮೆಡಿಸಿನ್ ಅಂಡ್ ಸರ್ಜರಿ ಮತ್ತು ಅದೇ ವಿಷಯಗಳಲ್ಲಿ ಎಂ.ಡಿ. ಮತ್ತು ಎಂ.ಎಸ್. ಡಿಗ್ರಿ ಕೋರ್ಸುಗಳನ್ನು ನಡೆಸುತ್ತಿವೆ. ಇದರಿಂದಾಗಿ ರೋಗತಜ್ಞರ ಸೇವೆಯು ರೋಗಿಗಳಿಗೆ ದೊರಕುವಂತಾಗಿ ಉತ್ತಮ ಸ್ವಾಸ್ಥ್ಯ ಸ್ಥಿತಿಯು ಮೂಡಿದೆ. ಅಲ್ಲದೆ ಜೀವರಸಾಯನಶಾಸ್ತ್ರ, ಮಿಣಿಜೀವಿಶಾಸ್ತ್ರ, ಸಮುದಾಯ ಆರೋಗ್ಯಶಾಸ್ತ್ರ, ಕ್ಷಯ ಮತ್ತು ಎದೆರೋಗಗಳ ಶಾಸ್ತ್ರಗಳಲ್ಲಿಯೂ ಸ್ನಾತಕೋತ್ತರ ಪದವಿ ಶಿಕ್ಷಣಗಳಿವೆ.

1975ರಲ್ಲಿ ಕೇಂದ್ರ ಸರ್ಕಾರವು ಸ್ಥಾಪಿಸಿದ ಸ್ವಾಯತ್ತ ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್ಸ್ (National Board of Examinations, NBE) ಇನ್ನೂ ಹೆಚ್ಚಿನ ಪರಿಣಿತ ವೈದ್ಯಕೀಯ ಶಿಕ್ಷಣಕ್ಕೆ ನೆರವಾಯಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಇದರ ಸ್ವಾಯತ್ತತೆಯನ್ನು ರಕ್ಷಿಸುತ್ತದೆ. ಇದು ಅಧಿಕೃತತೆಯನ್ನು ಹೊಂದಿದ ಬೋಧನಾ ಆಸ್ಪತ್ರೆಗಳಲ್ಲಿ ಮತ್ತು ಕೌನ್ಸಿಲ್ ಆಫ್ ಇಂಡಿಯಾದಿಂದ ಪುರಸ್ಕೃತಗೊಂಡ ವೈದ್ಯಕೀಯ ವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಹೊಂದಿದ ನಂತರದ ಸಂದರ್ಭಗಳಲ್ಲಿ ಪರೀಕ್ಷೆ ಅಥವಾ ತತ್ಸಮಾನ ಶೈಕ್ಷಣಿಕ ಕಾರ್ಯಕ್ರಮಗಳ ಮುಖೇನ ಹೆಚ್ಚುವರಿ ಹಾಗೂ ಸಮಾನ ಗುಣಮಟ್ಟವನ್ನು ಆಧುನಿಕ ವೈದ್ಯ ಪದ್ಧತಿ ಮತ್ತು ತತ್ಸಂಬಂಧಿ ವಿಷಯಗಳಲ್ಲಿ ಕಾಯ್ದುಕೊಂಡು ಬರುವಲ್ಲಿ ಉದ್ಯುಕ್ತವಾಗಿದೆ. ಇದು ಪರಿಣಿತ ಹಾಗೂ ಅತಿಪರಿಣಿತ ವಿಷಯಗಳಲ್ಲಿ ಮೂರು ವರುಷಗಳ ಸ್ಥಾನಿಕ ಯೋಜನೆಯನ್ವಯ "ಡಿಎನ್‌ಬಿ" (DNB-DIploma of National Board) ಡಿಗ್ರಿಯನ್ನು ನೀಡುತ್ತದೆ. ಇದು ಯಾವುದೇ ಭಾರತೀಯ ವಿಶ್ವವಿದ್ಯಾಲಯವು ನೀಡುವ ವೈದ್ಯಕೀಯ ಸ್ನಾತಕೋತ್ತರ ಪದವಿಗೆ ಸರಿಸಮಾನವಾದುದಾಗಿರುತ್ತದೆ.

ಇದು ನೀಡುವ DNB ಡಿಗ್ರಿಯ ತಜ್ಞ ವಿಷಯಗಳೆಂದರೆ 1. ಶರೀರ ರಚನಾಶಾಸ್ತ್ರ, 2. ಶರೀರ ಕ್ರಿಯಾಶಾಸ್ತ್ರ, 3. ಜೀವ ರಸಾಯನಶಾಸ್ತ್ರ, 4. ರೋಗನಿದಾನಶಾಸ್ತ್ರ, 5. ಮಿಣಿಜೀವಿಶಾಸ್ತ್ರ, 6. ವೈದ್ಯವಿಜ್ಞಾನ, 7. ಔಷಧಶಾಸ್ತ್ರ, 8. ಸಾಮಾನ್ಯವೈದ್ಯಶಾಸ್ತ್ರ, 9. ಮಕ್ಕಳರೋಗಗಳಶಾಸ್ತ್ರ, 10. ಮನೋರೋಗಶಾಸ್ತ್ರ, 11. ರೇಡಿಯೋಥೆರಪಿ, 12. ರೇಡಿಯೋಡಯಾಗ್ನೋಸಿಸ್, 13. ಅರಿವಳಿಕೆ ಶಾಸ್ತ್ರ, 14. ಚರ್ಮರೋಗ ಮತ್ತು ಲೈಂಗಿಕರೋಗಗಳಶಾಸ್ತ್ರ, 15. ಶ್ವಾಸಕೋಶ ಕಾಯಿಲೆಗಳಶಾಸ್ತ್ರ, 16. ನ್ಯೂಕ್ಲಿಯರ್ ಮೆಡಿಸಿನ್, 17. ಸಾಮಾನ್ಯ ಶಸ್ತ್ರಚಿಕಿತ್ಸೆ, 18. ಎಲುಬು–ಕೀಲುಗಳ ಶಸ್ತ್ರಚಿಕಿತ್ಸೆ, 19 ಪ್ರಸೂತಿ ಮತ್ತು ಸ್ತ್ರೀರೋಗಗಳ ಶಾಸ್ತ್ರ, 20. ನೇತ್ರಶಾಸ್ತ್ರ, 21. ಕಿವಿ–ಮೂಗು–ಗಂಟಲು ರೋಗಗಳ ಶಾಸ್ತ್ರ, 22. ಶಾರೀರಿಕ ಔಷಧವೈದ್ಯ ಮತ್ತು ಪುನರ್ವಸತಿ, 23. ಸಮುದಾಯ ವೈದ್ಯವಿಜ್ಞಾನ, 24. ಆರೋಗ್ಯ ಆಡಳಿತ (ಆಸ್ಪತ್ರೆ ಆಡಳಿತವನ್ನು ಒಳಗೊಂಡು) 25. ಕೌಟುಂಬಿಕ ವೈದ್ಯ, 26. ಇಮ್ಯುನೋಹಿಮೆಟಾಲಜಿ ಮತ್ತು ಟ್ರಾನ್ಸ್‌ಫ್ಯೂಸನ್ ಮೆಡಿಸಿನ್ 27. ತಾಯಿ ಮತ್ತು ಮಗುವಿನ ಆರೋಗ್ಯ ಮತ್ತು 28. ಗ್ರಾಮೀಣ ಶಸ್ತ್ರಚಿಕಿತ್ಸೆ ಇತ್ಯಾದಿ.

ಹೆಚ್ಚುವರಿ ವಿಶೇಷಜ್ಞತೆಯ ವಿಷಯಗಳೆಂದರೆ 1. ಕಾರ್ಡಿಯಾಲಜಿ (ಹೃದಯರೋಗಶಾಸ್ತ್ರ), 2. ಗ್ಯಾಸ್ಟ್ರೋಎಂಟರಾಲಜಿ (ಜಠರ–ಕರುಳುರೋಗಶಾಸ್ತ್ರ), 3. ನೆಫ್ರೋಲಜಿ (ಮೂತ್ರಪಿಂಡರೋಗಶಾಸ್ತ್ರ),

Digitised by Bharatavani, CIIL

4. ಎಂಡೋಕ್ರೈನಾಲಜಿ (ನಿರ್ನಾಳಗ್ರಂಥಿ ಶಾಸ್ತ್ರ), 5. ನ್ಯೂರಾಲಜಿ (ನರಶಾಸ್ತ್ರ), 6. ಮೆಡಿಕಲ್ ಆಂಕಾಲಜಿ (ವೈದ್ಯಕೀಯ ಅರ್ಬುದರೋಗಶಾಸ್ತ್ರ), 7. ರಕ್ತಶಾಸ್ತ್ರ, 8. ರ್‍ಯುಮಾಟಾಲಜಿ. 9. ಕಾರ್ಡಿಯೋಥೊರಾಸಿಕ್ ಶಸ್ತ್ರಚಿಕಿತ್ಸೆ, 10. ಮಕ್ಕಳ ಶಸ್ತ್ರಚಿಕಿತ್ಸೆ, 11. ಜೆನೈಟೋಯುರಿನರಿ ಶಸ್ತ್ರಚಿಕಿತ್ಸೆ (ಯುರಾಲಜಿ), 12. ನ್ಯೂರೋಸರ್ಜರಿ (ನರಶಸ್ತ್ರಚಿಕಿತ್ಸೆ), 13. ಪ್ಲಾಸ್ಟಿಕ್ ಸರ್ಜರಿ (ಸುರೂಪಿಕಾ ಶಸ್ತ್ರಚಿಕಿತ್ಸೆ), 14. ಸರ್ಜಿಕಲ್ ಆಂಕಾಲಜಿ (ಶಸ್ತ್ರಚಿಕಿತ್ಸಾ ಅರ್ಬುದರೋಗಶಾಸ್ತ್ರ), 15. ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ 16. ಫೆರಿಫೆರಲ್ ವ್ಯಾಸ್ಕ್ಯುಲಾರ್ ಸರ್ಜರಿ (ಪರಿಧಿ ರಕ್ತನಾಳಗಳ ಶಸ್ತ್ರಚಿಕಿತ್ಸೆ), 17. ನ್ಯಿಯೋನೇಟಾಲಜಿ ಮುಂತಾದವು.

ಎಂ.ಡಿ./ಎಂ.ಎಸ್./ಡಿ.ಎನ್.ಬಿ. ಸ್ನಾತಕೋತ್ತರ ಪದವಿಗಳನ್ನು ಪಡೆದ ನಂತರ ಮೆಡಿಸಿನ್ ಮತ್ತು ಶಸ್ತ್ರಚಿಕಿತ್ಸೆ ವಿಷಯಗಳಲ್ಲಿ ಇನ್ನೂ ಹೆಚ್ಚಿನ ಪರಿಣತಿಯನ್ನು ಪಡೆಯಲು ಅವಕಾಶಗಳಿವೆ. ಅವುಗಳು ಮೂರು ವರುಷಗಳ ಅವಧಿಯ ಸತತ ಪರಿಶ್ರಮದ ತರಬೇತಿ ಮತ್ತು ಅಧ್ಯಯನದ ನಂತರ ಲಿಖಿತ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಪಡೆಯುವ ಡಿ.ಎಂ. (DM-Doctor of Medicine) ಮತ್ತು ಎಂ.ಸಿ.ಎಚ್. (M. Master of Ch. / Churgery) ಆಗಿವೆ.

ಪ್ರವೇಶಾಯ್ಕೆ ಬಯಸುವ ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷೆ ಮಂಡಳಿ Karnataka Education Authority, K.E.A., ಕರ್ನಾಟಕ ಸರ್ಕಾರ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಮತ್ತು ರಾಜ್ಯದ ವಿಶ್ವವಿದ್ಯಾಲಯದ ಕೇಂದ್ರೀಕೃತ ವಿಚಾರದನ್ವಯ ನಿಯಮ – ನಿರ್ಣಯಾನುಸಾರ ನಿಗಡಿಪಡಿಸಿದಂತೆ ಮೇಲ್ಕಾಣಿಸಿದ ವೈದ್ಯಕೀಯ ವಿಷಯಗಳ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ನೀಡಲಾಗುತ್ತದೆ. ಕರ್ನಾಟಕ ಸರ್ಕಾರದ ಸಾಮಾನ್ಯ ಪ್ರವೇಶ ಪರೀಕ್ಷೆ, ಖಾಸಗಿ ಕಾಲೇಜುಗಳ ಒಕ್ಕೂಟ ಕೈಗೊಳ್ಳುವ ಸಾಮಾನ್ಯ 'ಕಾಮೆಡ್–ಕೆ' (COMED-K= Consortium of Medical, Engineering and Dental Colleges of Karnataka) ಹಾಗೂ ಡೀಮ್ಡ್ (ಪರಿಗಣಿತ) ವಿಶ್ವವಿದ್ಯಾಲಯದ ಸ್ಥಾನಗಳಿಸಿರುವ ಬೆಳಗಾವಿಯ ಕೆ.ಎಲ್.ಇ. ಸೊಸೈಟಿಯ ಜವಾಹರಲಾಲ್ ನೆಹರು ಮೆಡಿಕಲ್ ಕಾಲೇಜು, ವಿಜಾಪುರದ ಬಿ.ಎಲ್.ಡಿ.ಇ.ಯ ಶ್ರೀ ಬಿ.ಎಂ. ಪಾಟೀಲ ಮೆಡಿಕಲ್ ಕಾಲೇಜು, ಹಾಸ್ಪಿಟಲ್ ಮತ್ತು ರಿಸರ್ಚ್ ಸೆಂಟರ್, ಕೋಲಾರದ ಡಿ. ದೇವರಾಜ ಅರಸ್ ಮೆಡಿಕಲ್ ಕಾಲೇಜು, ಮೈಸೂರಿನ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು, ಮಣಿಪಾಲ್‌ನ ಕಸ್ತೂರಿಬಾ ಮೆಡಿಕಲ್ ಕಾಲೇಜು ಮತ್ತು ಮಂಗಳೂರು ಸಮೀಪದ ದೇರಲಕಟ್ಟೆಯ ಯೇನೋಪೋಯಾ ಮೆಡಿಕಲ್ ಕಾಲೇಜು ಇವುಗಳು ಪ್ರತ್ಯೇಕ ಆಡಳಿತಾತ್ಮಕ ಅಧಿಕಾರವನ್ನು ಹೊಂದಿವೆ. ವಿಶ್ವವಿದ್ಯಾಲಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮತ್ತು ಪ್ರವೇಶಾರ್ಹ ಪರೀಕ್ಷೆಗಳ ಅಂಗಗಳನ್ನು ಕ್ರೋಡೀಕರಿಸಿ ಶ್ರೇಣೀಕೃತ ಪಟ್ಟಿಯ ರೀತ್ಯ ಪ್ರವೇಶಾನುಕೂಲವನ್ನು ಒದಗಿಸಲಾಗುತ್ತದೆ. ಅಲ್ಲದೆ ಜಮ್ಮು ಮತ್ತು ಕಾಶ್ಮೀರ ರಾಜ್ಯಗಳ ವಲಸೆ ವಿದ್ಯಾರ್ಥಿಗಳಿಗೆ ಹಾಗೂ ಮೀಸಲಾತಿ, ಅಂಗವಿಕಲರು, ಕ್ರೀಡಾಪಟುಗಳಿಗೆ ವಿಶೇಷ ಕೋಟಾದಡಿ ಸಮಾಲೋಚನೆ ನಡೆಸಲಾಗುತ್ತದೆ.

ಎಲ್ಲ ವೈದ್ಯಕೀಯ ವಿದ್ಯಾಲಯಗಳ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣದ ಗುಣಮಟ್ಟ, ಬೆಳವಣಿಗೆ, ಆಯ್ಕೆ, ಪ್ರವೇಶ ಮತ್ತಿತರ ಅಂಶಗಳನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ (MCI) ನಿಯಂತ್ರಿಸುತ್ತದೆ.

30 ಜೂನ್ 1953ರಂದು ಸ್ಥಾಪನೆಗೊಂಡ ಮಣಿಪಾಲ್ ಕಸ್ತೂರಿಬಾ ಮೆಡಿಕಲ್ ಕಾಲೇಜು ದೇಶದ ಪ್ರತಿಷ್ಠಿತ ಖಾಸಗಿ ಸ್ವಾಮ್ಯದ ಹಾಗೂ ಪ್ರಸ್ತುತ ಡೀಮ್ಡ್ ವಿಶ್ವವಿದ್ಯಾಲಯವಾಗಿದೆ. ಇದು ಇಂಗ್ಲೆಂಡಿನ ಜನರಲ್ ಮೆಡಿಕಲ್ ಕೌನ್ಸಿಲ್ ಮತ್ತು ಮಲೇಷಿಯಾದ ಮೆಡಿಕಲ್ ಕೌನ್ಸಿಲ್‌ನಿಂದಲೂ ಮನ್ನಣೆ ಗಳಿಸಿದೆ. ಮೈಸೂರಿನ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು (ಸ್ಥಾಪನೆ: 1984) ಇಂಗ್ಲೆಂಡಿನ ಜನರಲ್ ಮೆಡಿಕಲ್ ಕೌನ್ಸಿಲ್ ಮತ್ತು ಮಲೇಷಿಯಾದ ಮೆಡಿಕಲ್ ಕೌನ್ಸಿಲ್‌ಗಳಿಂದಲೂ ಮನ್ನಣೆ ಗಳಿಸಿದೆ. ಇಂಗ್ಲೆಂಡಿನ ಎಂ.ಆರ್.ಸಿ.ಓ.ಜಿ. (M.R.C.O.G.) ಪದವಿ ನೀಡಲು ಅರ್ಹತೆಯನ್ನು ಹೊಂದಿದೆ. ಇದು 2008–09ರ ಶೈಕ್ಷಣಿಕ ವರ್ಷದಿಂದ ಜೆ.ಎಸ್.ಎಸ್. ವಿಶ್ವವಿದ್ಯಾಲಯದ ಒಂದು ಅಂಗವಾಗಿದೆ. ಇದು ಬಿ.ಎಸ್ಸಿ. (B.Sc., in Respiratory Technology) ಮತ್ತು ಎಂ.ಎಸ್ಸಿ. (M.Sc., in Psychosocial Rehabilitation) ಕೋರ್ಸ್‌ಗಳನ್ನು ನಡೆಸುತ್ತಿದೆ. ಬೆಳ್ಳೂರಿನ ಆದಿಚುಂಚನಗಿರಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (ಸ್ಥಾಪನೆ: 1986) ಗ್ರಾಮೀಣ ಜನರ ವೈದ್ಯಕೀಯ ಅಗತ್ಯಗಳನ್ನು ಪೂರೈಸುತ್ತಿದೆ. ಇದು ಇಂಗ್ಲೆಂಡಿನ ಜನರಲ್ ಮೆಡಿಕಲ್ ಕೌನ್ಸಿಲ್‌ನಿಂದಲೂ ಮನ್ನಣೆ ಪಡೆದಿದೆ.

ಬೆಂಗಳೂರಿನ ಇಂದಿರಾಗಾಂಧಿ ಇನ್ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್ ಸ್ವಾಯತ್ತ ಸಂಸ್ಥೆ (ನೋಂದಣಿ: 6–8–1985, ಸ್ಥಾಪನೆ: 1991)ಯು ನವದೆಹಲಿಯ ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್ಸ್ ವತಿಯಲ್ಲಿ ಮಕ್ಕಳ ಆರೋಗ್ಯ ಕುರಿತಂತೆ ಜುಲೈ 1998 ರಿಂದ 3 ವರುಷಗಳ ಅವಧಿಯ ಸ್ನಾತಕೋತ್ತರ ಪರೀಕ್ಷೆಗಳನ್ನು ನಡೆಸುತ್ತಿದೆ. ಇದು ಡಿ.ಸಿ.ಎಚ್. ಪರೀಕ್ಷೆ ಉತ್ತೀರ್ಣರಾದವರಿಗೆ ಎರಡು ವರುಷಗಳ ಕೋರ್ಸ್ ಆಗಿರುತ್ತದೆ. ಇದಲ್ಲದೆ ಅಕ್ಟೋಬರ್ 2000 ರಿಂದ ಎನ್.ಬಿ.ಇ. ಅನುಮತಿ ಮೇರೆಗೆ ಹೆಚ್ಚುವರಿ ಮಕ್ಕಳ ಶಸ್ತ್ರಚಿಕಿತ್ಸೆ ಕೋರ್ಸನ್ನು ನಡೆಸುತ್ತಿದೆ. ಸಂಸ್ಥೆಯು ಡಿಪ್ಲೋಮಾ ಇನ್ ಪೀಡಿಯಾಟ್ರಿಕ್ಸ್ (DNB Paediatrics), ಡಿಪ್ಲೋಮಾ ಇನ್ ಪೀಡಿಯಾಟ್ರಿಕ್ ಸರ್ಜರಿ (DNB Paediatric Surgery), ಪೀಡಿಯಾಟ್ರಿಕ್ಸ್ ಅನೆಸ್ಥಿಸಿಯಾ (Paediatrics Anaesthesia) ಮತ್ತು ನ್ಯುಯೋನೇಟಾಲಜಿ (Neonatology) ಯಲ್ಲಿ ಫೆಲೋಷಿಪ್‌ಗಳು ಹಾಗೂ ವೈದ್ಯಕೀಯ ಪ್ರಯೋಗಾಲಯ ತಾಂತ್ರಿಕತೆ, ಆಪರೇಷನ್ ಥಿಯೇಟರ್ ತಾಂತ್ರಿಕತೆ ಮತ್ತು ಅರಿವಳಿಕೆ ತಾಂತ್ರಿಕತೆ ವಿಷಯಗಳಲ್ಲಿ ಬಿ.ಎಸ್ಸಿ., ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

ನವದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (Indira Gandhi National Open University, IGNOU)ವು ಕರ್ನಾಟಕದ ಸುಸಜ್ಜಿತ ಮನ್ನಣೆ ಪಡೆದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ (ಸರಕಾರಿ ಮತ್ತು ಖಾಸಗಿ)ಗಳಲ್ಲಿ ಎಂ.ಬಿ.ಬಿ.ಎಸ್. ಪದವಿಯ ನಂತರ ಎರಡು ವರುಷಗಳ ಸ್ನಾತಕೋತ್ತರ ಹೃದಯ ಚಿಕಿತ್ಸಾ ಡಿಪ್ಲೋಮಾ ಕೋರ್ಸ್‌ಗಳನ್ನು (ಕ್ಲಿನಿಕಲ್ ಕಾರ್ಡಿಯಾಲಜಿ) ನಡೆಸುತ್ತಿದೆ.

**ದಂತ ವೈದ್ಯ ಶಿಕ್ಷಣ:** ಕರ್ನಾಟಕದಾದ್ಯಂತ ನಗರ, ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 40ಕ್ಕೂ ಮೀರಿ ಮನ್ನಣೆ ಪಡೆದ ದಂತ ವೈದ್ಯ ಕಾಲೇಜುಗಳು ಮತ್ತು ಆಸ್ಪತ್ರೆಗಳು ಹರಡಿವೆ. ಇವುಗಳು ಸ್ನಾತಕ ಬಿ.ಡಿ.ಎಸ್. (B.D.S. - Bachelor of Dental Science) ಕೋರ್ಸ್ ಶಿಕ್ಷಣವನ್ನು ನೀಡುತ್ತಿವೆ. ಸುಮಾರು 30 ಕಾಲೇಜುಗಳಲ್ಲಿ 9 ಆಯ್ದ ಸ್ನಾತಕೋತ್ತರ ಎಂ.ಡಿ.ಎಸ್. ಪರಿಣಿತ ವಿಷಯಗಳಲ್ಲಿ (MDS- Master of Dental Surgery) ಅಧ್ಯಯನದ ಅವಕಾಶಗಳಿವೆ. ಆ ದಂತ ವಿಷಯಗಳೆಂದರೆ 1. ಪರಿಓಡೋಂಟಿಕ್ಸ್ ಅಂಡ್ ಓರಲ್ ಇಂಪ್ಲಾಂಟಾಲಜಿ (Periodontics and Oral Implantology), 2. ಪ್ರಾಸ್ತೋಡಾಂಟಿಕ್ಸ್, ಕ್ರೌನ್ ಅಂಡ್ ಬ್ರಿಡ್ಜ್, ಈಸ್ಥೆಟಿಕ್ಸ್ ಡೆಂಟಿಸ್ಟ್ರಿ ಮತ್ತು ಓರಲ್ ಇಂಪ್ಲಾಂಟಾಲಜಿ (Periodontics, Crown & Bridge, Aesthetic Dentistry and Oral Implantology, 3. ಓರಲ್ ಅಂಡ್ ಮ್ಯಾಕ್ಸಿಲೋಫೇಸಿಯಲ್

Digitised by Bharatavani, CIIL

ಶಸ್ತ್ರಚಿಕಿತ್ಸೆ ಮತ್ತು ಓರಲ್ ಇಂಪ್ಲಾಂಟಾಲಜಿ (Oral & Maxillofacial Surgery and Oral Implantology), 4. ಕನ್ಸರ್‌ವೇಟಿವ್ ಡೆಂಟಿಸ್ಟ್ರಿ, ಎಂಡೋಡಾಂಟಿಕ್ಸ್ ಅಂಡ್ ಈಸ್ಥೆಟಿಕ್ ಡೆಂಟಸ್ಟ್ರಿ (Conservative Dentistry, Endontics & Aesthetic Dentistry), 5. ಆರ್ಥೋಡಾಂಟಿಕ್ಸ್ ಅಂಡ್ ಡೆಂಟೋಫೇಸಿಯಲ್ ಆರ್ಥೋಪೆಡಿಕ್ಸ್ (Orthodontics & Dentofacial Orthopedics), 6. ಓರಲ್ ಪೆಥಾಲಜಿ, ಮೈಕ್ರೋಬಯಾಲಜಿ ಮತ್ತು ಪೋರೆನ್ಸಿಕ್ ಒಡೆಂಟಾಲಜಿ (Oral Pathology, Microbiology & Forensic Odontology), 7. ಸಾರ್ವಜನಿಕ ಆರೋಗ್ಯ ದಂತವೈದ್ಯ (Public Health/ Community Dentistry), 8. ಪೀಡೋಡಾಂಟಿಕ್ಸ್ ಅಂಡ್ ಪ್ರಿವೆಂಟಿವ್ ಡೆಂಟಿಸ್ಟ್ರಿ (Paedodontics and Preventive Dentistry) ಮತ್ತು 9. ಜನರಲ್ ಮೆಡಿಸಿನ್ ಅಂಡ್ ರೇಡಿಯೋಲಜಿ (Oral Medicine & Radiology). ಸ್ನಾತಕೋತ್ತರ ಡೆಂಟಲ್ ಮೆಟಿರಿಯಲ್ಸ್, ತಾಂತ್ರಿಕ ತರಬೇತಿದಾರರಿಗೆ ಡೆಂಟಲ್ ಹೈಜಿಯಿನ್ ಮತ್ತು ಡೆಂಟಲ್ ಮೆಕಾನಿಕ್ಸ್– ಶೈಕ್ಷಣಿಕವಾಗಿ ಪೋರೆನ್ಸಿಕ್ ಡೆಂಟಿಸ್ಟ್ರಿಯಲ್ಲಿ ಲೇಸರ್ ಕಿರಣಗಳ ಉಪಯೋಗ ಕುರಿತಂತೆ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. 4 $^{1}/_{2}$ ವರುಷಗಳ ಅವಧಿಯ ಬಿ.ಡಿ.ಎಸ್. ಮತ್ತು 3 ವರುಷಗಳ ಅವಧಿಯ ಎಂ.ಡಿ.ಎಸ್. ಕೋರ್ಸುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ಕಾಮೆಡ್–ಕೆ ಅರ್ಹತಾ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಆಯ್ಕೆ ಮತ್ತು ಪ್ರವೇಶಾವಕಾಶವನ್ನು ಒದಗಿಸಲಾಗುತ್ತಿದೆ.

ಜೂನ್ 2009ರಂದು ಧಾರವಾಡದ ಎಸ್.ಡಿ.ಎಂ. ದಂತವೈದ್ಯ ಕಾಲೇಜಿನಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಸಂಯೋಜನೆಯಲ್ಲಿ ದಂತ ವೈದ್ಯದಲ್ಲಿ ಒಂದು ವರುಷದ ಡಿಪ್ಲೋಮಾ ಕೋರ್ಸನ್ನು ಪ್ರಾರಂಭಿಸಲಾಯಿತು. ಡೀಮ್ಡ್ ವಿಶ್ವವಿದ್ಯಾಲಯಕ್ಕೆ ಸೇರಿದ ಬೆಳಗಾವಿಯ ಕೆ.ಎಲ್.ಇ. ಡೆಂಟಲ್ ಕಾಲೇಜು, ಮಂಗಳೂರು ಮತ್ತು ಮಣಿಪಾಲ್ ದಂತವೈದ್ಯ ವಿದ್ಯಾಲಯಗಳು, ರಾಜೀವ್‌ಗಾಂಧೀ ವಿಶ್ವವಿದ್ಯಾಲಯಕ್ಕೆ ಸೇರಿದ ಬೆಂಗಳೂರಿನ ಸರ್ಕಾರಿ ದಂತವೈದ್ಯ ಕಾಲೇಜು ಹಾಗೂ ಎ.ಬಿ. ಶೆಟ್ಟಿ ಮೆಮೋರಿಯಲ್ ಇನ್ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್ ಇವುಗಳನ್ನು ಪಿಎಚ್.ಡಿ. ಸಂಶೋಧನಾ ಕೇಂದ್ರಗಳನ್ನಾಗಿ ಪರಿಗಣಿಸಲಾಗಿದೆ.

ಮಣಿಪಾಲ್ ಡೆಂಟಲ್ ಕಾಲೇಜು (1965), ರಾಷ್ಟ್ರೀಯ ಮಾನ್ಯತಾ ಸಮಿತಿ (National Accreditation Council-NCA) 'ನ್ಯಾಕ್'ನಿಂದ ಪಂಚತಾರಾ ಸ್ಥಾನಗಳಿಸಿರುವ ಧಾರವಾಡದ ಎಸ್.ಡಿ.ಎಂ. ಡೆಂಟಲ್ ಕಾಲೇಜು (1986), ಮೈಸೂರಿನ ಜೆ.ಎಸ್.ಎಸ್. ಡೆಂಟಲ್ ಕಾಲೇಜು (1986–87), ದಾವಣಗೆರೆಯ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ (1991), ಬೀದರ್‌ನ ಸೋಮನಾಥ ವಿದ್ಯಾ ಸಂಸ್ಥೆಯ ಎಸ್.ಬಿ. ಪಾಟೀಲ್ ಇನ್ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್ ಮತ್ತು ರಿಸರ್ಚ್ (1991) ಹಾಗೂ ಮಲೆನಾಡು ವಲಯ (ಹಾಸನ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ) ಹಾಸನದ ಹಾಸನಾಂಬ ಡೆಂಟಲ್ ಕಾಲೇಜು (1991) ಮೊದಲಾದವು ಪ್ರಗತಿಪಥದ ಹಾದಿಯಲ್ಲಿವೆ.

**ಹೋಮಿಯೋಪಥಿ ವೈದ್ಯ ಶಿಕ್ಷಣ:** ಕರ್ನಾಟಕದಲ್ಲಿ ಒಟ್ಟು 11 ಹೋಮಿಯೋಪಥಿ ಕಾಲೇಜುಗಳಿದ್ದು, ಸೆಂಟ್ರಲ್ ಕೌನ್ಸಿಲ್ ಆಫ್ ಹೋಮಿಯೋಪಥಿ ನಿಯಮಾವಳಿಯಂತೆ 5 $^{1}/_{2}$ ವರುಷಗಳ ಅವಧಿಯ ಸ್ನಾತಕ ಬಿ.ಎಚ್.ಎಂ.ಎಸ್. (BHMS-Bachelor of Homeopathic Medicine & Surgery) ಮತ್ತು 3 ವರುಷಗಳ ಸ್ನಾತಕೋತ್ತರ MD (Hom) ಪದವಿ ಕೋರ್ಸುಗಳಿವೆ. ಮೆಟಿರಿಯಾ ಮೆಡಿಕಾ, ಆರ್ಗನಾನ್ ಮತ್ತು ಫಿಲಾಸಫಿ, ಹೋಮಿಯೋ ಫಾರ್ಮಸಿ ವಿಷಯಗಳಲ್ಲಿ ಶಿಕ್ಷಣಾವಕಾಶಗಳಿವೆ. ಸ್ನಾತಕೋತ್ತರ ಕೋರ್ಸುಗಳು 1997ರಿಂದ ಬೆಳಗಾವಿಯ ಡಾ. ಎಂ.ಎಂ. ಶೇಖ್ ಮೆಡಿಕಲ್ ಕಾಲೇಜು ಮತ್ತು 2002 ರಿಂದ ಮಂಗಳೂರಿನ ಫಾದರ್ ಮುಲ್ಲರ್ ಕಾಲೇಜುಗಳಲ್ಲಿವೆ. ಇವು ರಾಜೀವ್‌ಗಾಂಧೀ ವೈದ್ಯಕೀಯ ವಿಶ್ವವಿದ್ಯಾಲಯದ ಶೈಕ್ಷಣಿಕ ಉಸ್ತುವಾರಿಗೆ ಒಳಪಟ್ಟಿವೆ.

ನವದೆಹಲಿಯ ಸೆಂಟ್ರಲ್ ಕೌನ್ಸಿಲ್ ಆಫ್ ಹೋಮಿಯೋಪಥಿ (CCL, Central Council of Homeopathy) ನೀಡಿದ ಶಿಫಾರಸ್ಸಿನನ್ವಯ ಕೇಂದ್ರ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 1983ರ ಮುಂಚಿನ ಎಲ್.ಸಿ.ಇ.ಎಚ್. (LCEH- Licentiate Court of Examiners in Homeopathy), ಜಿ.ಸಿ.ಇ.ಎಚ್. (GCEH- Graduate Court of Examiners in Homeopathy) ಮತ್ತು ಡಿ.ಎಚ್.ಎಂ.ಎಸ್. (DHMS- Diploma in Homeopathy Medicine & Surgery) ಪದವಿಗಳನ್ನು ಈಗಿನ ಬಿ.ಎಚ್.ಎಂ.ಎಸ್.ಗೆ ಸರಿಸಮಾನವಾದುವೆಂದು ಪರಿಗಣಿಸಿತು.

ನವದೆಹಲಿಯ ಸೆಂಟ್ರಲ್ ಕೌನ್ಸಿಲ್ ಆಫ್ ರಿಸರ್ಚ್ ಇನ್ ಹೋಮಿಯೋಪಥಿ (CCRH- Central Council of Research in Homeopathy) ಯು ಶಿಕ್ಷಣಾನ್ವೇಷಣೆ ಮತ್ತು ವೈಜ್ಞಾನಿಕ ಸಂಶೋಧನೆಯ ಕುರಿತು ಕಾರ್ಯನಿರ್ವಹಿಸುತ್ತಿದೆ.

– ಎಚ್.ಎ.ಪಾ.

## ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣದ ಬೆಳವಣಿಗೆ

ವೈದ್ಯಕೀಯ ಚಿಕಿತ್ಸಾಪದ್ಧತಿಗಳಾದ ಆಯುರ್ವೇದ, ಯುನಾನಿ, ಹೋಮಿಯೋಪಥಿ, ಅಲೋಪಥಿ ಮತ್ತು ಇತ್ತೀಚೆಗೆ ಪ್ರಸಿದ್ಧವಾಗುತ್ತಿರುವ ಔಷಧರಹಿತ ಪರಿಶುದ್ಧ ಚಿಕಿತ್ಸಾಕ್ರಮ (Holistic System of Medicine)ಗಳಾದ ಪ್ರಕೃತಿ ಚಿಕಿತ್ಸೆ (Naturopathy), ಯೋಗಚಿಕಿತ್ಸೆ, ಸ್ವಯಂಭು, ಪ್ರಾಣಿಕ ಹೀಲಿಂಗ್, ಆಯಿಲ್ ಪುಲ್ಲಿಂಗ್, ಪಿರಮಿಡ್ ಥೆರಪಿ, ಆರೋಮಾ ಥೆರಪಿ, ಕಲರ್ ಥೆರಪಿ, ಆಯಸ್ಕಾಂತ ಚಿಕಿತ್ಸೆ, ಬೆಮರ್ದಿನಿ, ರೇಖಿ, ಶೂಷ್ಣರನ ಬಯೋಕೆಮಿಸ್ಟ್ರಿ, ಮ್ಯೂಸಿಕ್ ಥೆರಪಿ, ಕ್ರೋನೋಥೆರಪಿಟಿಕ್ಸ್, ತರಕಾರಿ ಚಿಕಿತ್ಸೆ, ಹಣ್ಣಿನ ರಸ ಚಿಕಿತ್ಸೆ, ಹುಲ್ಲಿನ ರಸ ಚಿಕಿತ್ಸೆ, ಜಾನಪದ, ನಾಟೀವೈದ್ಯ ಹಾಗೂ ಮನೆವೈದ್ಯ ಮುಂತಾದ ಶಾಸ್ತ್ರೀಯ, ಅರೆಶಾಸ್ತ್ರೀಯ ವೈದ್ಯ ಪ್ರಕಾರಗಳ ಬಗೆಗಿನ ತಿಳಿವಳಿಕೆಯು ಅನೇಕ ಸ್ಥಿತ್ಯಂತರಗಳನ್ನು ದಾಟಿ ಮುನ್ನಡೆಯುತ್ತಿದೆ.

ಕರ್ನಾಟಕದಲ್ಲಿ ವೈದ್ಯಕೀಯ ವಿಷಯದ ಬಗೆಗೆ ಅರಿವನ್ನುಂಟು ಮಾಡುವ ಪ್ರಯತ್ನವು ಪ್ರಾಚೀನ ವೇದಕಾಲೀನ ಗುರುಕುಲ ಪದ್ಧತಿಯಿಂದ ಮೊದಲ್ಗೊಂಡು ಇಂದಿನ ವಿಶ್ವವಿದ್ಯಾಲಯ ಮಟ್ಟದ ಆಧುನಿಕ ಶಿಕ್ಷಣ ಪದ್ಧತಿಯವರೆಗೆ ಹರಡಿದೆ. ವೈದ್ಯಕೀಯ ವಿದ್ಯಾಭ್ಯಾಸವನ್ನೊಳಗೊಂಡಂತೆ ಸ್ವಾಧ್ಯಾಯವು ಶಿಕ್ಷಣ ಮತ್ತು ಪ್ರಶಿಕ್ಷಣದ ಮೂಲಮಂತ್ರವಾಗಿತ್ತು. ಅಂದಿನ ಗುರುಕುಲ ಕಲಿಕಾ ಪದ್ಧತಿಯ ದ್ವಾದಶ ಕಾಲದಲ್ಲಿ ಎಂಟು ವರುಷದ ವಟುಗಳಿಗೆ ವೇದಾಭ್ಯಾಸ, ವೇದಗಳ ಸಂಹಿತೆಗಳ ಪದಪಾಠ, ಕ್ರಮಪಾಠ, ಘನಪಾಠ, ಜಟಾಪಾಠಗಳ ಜೊತೆಗೆ ಆಯುರ್ವೇದ, ವನಸ್ಪತ್ಯೌಷಧಿ ವೃತ್ತಿಪರ ವೈದ್ಯಕೀಯ ಪದ್ಧತಿಗಳ ಕುರಿತು ಪ್ರಾತ್ಯಕ್ಷಿಕೆಗಳೊಂದಿಗೆ ಸೂಕ್ತವಾಗಿ ಬೋಧಿಸಲಾಗುತ್ತಿತ್ತು. ಶಾರೀರಿಕ, ಪ್ರಾಣಿಕ, ಮಾನಸಿಕ, ಚೈತ್ಯಾತ್ಮಕ ಹಾಗೂ ಆಧ್ಯಾತ್ಮಿಕ ಶಿಕ್ಷಣವೆಂಬ 5 ಅಂಗಗಳನ್ನೊಳಗೊಂಡ ಸಮಾನ, ಸಾಮರಸ್ಯಪೂರ್ಣ ಯೋಜಿತ ಸಮಗ್ರ ಶಿಕ್ಷಣವನ್ನು ನೀಡಲಾಗುತ್ತಿದ್ದಿತು. ಹೊರದೇಶದಿಂದ ಪ್ರವೇಶಿಸಿ ಬಂದ ಯುನಾನಿ ಪದ್ಧತಿಯು ಭಾರತೀಯ

Digitised by Bharatavani, CIIL

ವೈದ್ಯ ಪದ್ಧತಿಗಳಲ್ಲಿ ಒಂದಾಗಿ ಬೆರೆತು ಬೆಳೆದು ತನ್ನ ಆಳ ಹಾಗೂ ನಿಜವಾದ ಬೇರುಗಳನ್ನು ಭದ್ರಪಡಿಸಿಕೊಂಡಿತು. ಪ್ರಸ್ತುತ ಹೆಚ್ಚು ಪ್ರಚಲಿತವಿರುವ ಆಧುನಿಕ ವೈದ್ಯ ಪದ್ಧತಿ (Allopathy)ಯು ಸುಮಾರು ಒಂದೂವರೆ ಶತಕಗಳಿಂದ ಭಾರತದಲ್ಲಿ ಭದ್ರವಾಗಿ ನೆಲೆಗೊಂಡಿದೆ. ಕಾಲ ಸರಿದಂತೆ ವೈದ್ಯಕೀಯ ಶಿಕ್ಷಣವು ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯೊಂದಿಗೆ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿತು. ಅನಿವಾರ್ಯವಾದ ಹಲವೆಡೆಗಳಲ್ಲಿ ಸ್ಥಳೀಯ ವೈದ್ಯ ಪದ್ಧತಿಗಳೊಂದಿಗೆ ಆಧುನಿಕ ವೈದ್ಯ ಪದ್ಧತಿಯು ಇಂಗ್ಲಿಷ್ ಚಿಕಿತ್ಸಾ ಕ್ರಮವನ್ನು ಅನುಸರಿಸಿತು. ಅಂತೆಯೇ ಶಿಕ್ಷಣ ವ್ಯವಸ್ಥೆ ಮತ್ತು ತತ್ಸಂಬಂಧ ಸಾಹಿತ್ಯ ನಿರ್ಮಾಣ ಸಂಗತಿಯು ಒಂದಕ್ಕೊಂದು ಪೂರಕ ಹಾಗೂ ಪ್ರೇರಕಶಕ್ತಿಗಳಾಗಿವೆ. ಆದುದರಿಂದ ಇವೆರಡೂ ಬೋಧಪ್ರದ ಶೈಕ್ಷಣಿಕ ಲಕ್ಷಣಗಳನ್ನು ಅಳವಡಿಸಿಕೊಂಡು ವೃದ್ಧಿಸಿವೆ.

ಸ್ವಾತಂತ್ರ್ಯಪೂರ್ವದಲ್ಲಿ ನಮ್ಮ ದೇಶದಲ್ಲಿ ಆರೋಗ್ಯ ಶಿಕ್ಷಣ ಕ್ಷೇತ್ರದಲ್ಲಿ ಹೇಳಿಕೊಳ್ಳುವಂಥ ಯಾವುದೇ ಆಡಳಿತ ವ್ಯವಸ್ಥೆಯಿರಲಿಲ್ಲ. ಮೆಕಾಲೆ ವರದಿ (1835)ಯ ಪರಿಣಾಮವಾಗಿ ಭಾರತದ ಇತರೆಡೆಗಳಲ್ಲಿಯಂತೆ ಕರ್ನಾಟಕದಲ್ಲಿಯೂ ಪಾಶ್ಚಾತ್ಯ ಶಿಕ್ಷಣ ಪದ್ಧತಿಯು ಕಾಲಿಟ್ಟಿತು. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯೊಂದಿಗೆ ಸಮಕಾಲೀನ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯು ವೈಜ್ಞಾನಿಕ ದೃಷ್ಟಿಯನ್ನು ತಾಳಿತು. 1956ನೇ ಸಾಲಿನಲ್ಲಿ ಕೇಂದ್ರಮಟ್ಟದಲ್ಲಿ ಆರೋಗ್ಯ ಶಿಕ್ಷಣ ವಿಭಾಗಗಳು ಅಸ್ತಿತ್ವಕ್ಕೆ ಬಂದವು.

**ಆಯುರ್ವೇದ:** ಅತಿ ಪುರಾತನವಾದ ಹಾಗೂ ಪೌರಾಣಿಕವಾಗಿ ಬ್ರಹ್ಮದೇವ ಹಾಗೂ ಬ್ರಹ್ಮಜ್ಞಾನಿ ಋಷಿಪುಂಗವರಿಂದ ಮೊದಲ್ಗೊಂಡು ಸಮಕಾಲೀನ ಸೈದ್ಧಾಂತಿಕ ವಿಚಾರಧಾರೆಯ ಶ್ರೇಷ್ಠರು ಆಯುರ್ವೇದ ಶಾಸ್ತ್ರ (ಭಾರತೀಯ ವೈದ್ಯಕೀಯ ಪದ್ಧತಿ)ಯ ಕಾರಣ ಪುರುಷರಾಗಿದ್ದಾರೆ. ಕ್ರಿ.ಪೂ. 3000 – 5000 ವರುಷಗಳಷ್ಟು ಹಿಂದೆಯೇ ಐತಿಹಾಸಿಕ ಹಾಗೂ ಧಾರ್ಮಿಕ ಜಿಜ್ಞಾಸೆಯ ಉತ್ಪತ್ತಿರೂಪ ತಾಳಿದ ಶಾರೀರಿಕ ಹಾಗೂ ಮಾನಸಿಕ (ತನು – ಮನ = psychosomatic) ಸ್ವಾಸ್ಥ್ಯವೇ ಇದರ ಪ್ರತಿಫಲನದ ಹೆಗ್ಗುರಿ. ಇದು ಪ್ರಮುಖ ವೇದಕಾಲೀನ ವೈದ್ಯವಿದ್ಯೆಯಾಗಿ ಋಗ್ವೇದದಿಂದ ಅಥರ್ವವೇದದ ಕಾಲದವರೆಗೆ ಅಂಗೋಪಾಂಗವಾಗಿ ತನ್ನ ಬಿಗಿ ಬಾಹುಗಳನ್ನು ಹರಡಿತು. ಅಧ್ಯಾತ್ಮದ ಒಲ್ಮೆಕೆಯೇ ಆರೋಗ್ಯ ಸಾಧನದ ತಳಪಾಯ. ಇದು ಭಗವಾನ್ ಬುದ್ಧ ಮತ್ತು ಭಗವಾನ್ ಮಹಾವೀರನಿಗಿಂತಲೂ ಪೂರ್ವದಲ್ಲಿ ನಾನಾ ಐತಿಹಾಸಿಕ ಕಾಲಘಟ್ಟಗಳಲ್ಲಿ, ಮುಸಲ್ಮಾನ್ ಮತ್ತು ಬ್ರಿಟಿಷರ ಆಳ್ವಿಕೆಯ ಅವಧಿಗಳಲ್ಲಿ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಸಿಂಧೂ ಕಣಿವೆ ಸಂಸ್ಕೃತಿಯಿಂದ ಅವತರಿಸಿ ಕ್ರಮೇಣ ದ್ರಾವಿಡ ಕೊಡುಗೆಯಾಗಿ ಮಾರ್ಪಟ್ಟಿತೆಂದು ಅಭಿಪ್ರಾಯಪಡಲಾಗಿದೆ. ಅಂತೆಯೇ ಕರ್ನಾಟಕದಲ್ಲಿನ ಇದರ ಬೆಳವಣಿಗೆಯು ದೀರ್ಘವಾದುದಾಗಿದ್ದು, ಇಲ್ಲಿನ ಮೂಲನಿವಾಸಿಗಳು ಆರ್ಯ ಸಂಸ್ಕೃತಿಯ ಆಯುರ್ವೇದವನ್ನು ತಮ್ಮದಾಗಿಸಿಕೊಂಡು ಮಾನವ ಜನಾಂಗದ ಆರೋಗ್ಯ ರಕ್ಷಣೆಯಲ್ಲಿ ತೊಡಗಿದರೆನ್ನಲಾಗಿದೆ. ಈ ಕುರಿತು ನಿರಂತರ ಅಧ್ಯಯನ ಮತ್ತು ಅಧ್ಯಾಪನದ ಸಾರಭೂತವಾಗಿ ಆಯುರ್ವೇದವು ಉದಾತ್ತ ಹಾಗೂ ಉತ್ಕರ್ಷಸ್ವರೂಪ ಪಡೆದಿದೆ. ಬೌದ್ಧಿಕ ಮತ್ತು ಭೌತಿಕ ಅರಿವಿನ ಪರಿಪಾಕವಾಗಿದೆ. ವಿಶಾಲ ವ್ಯಾಪ್ತಿಯುಳ್ಳ ಔಷಧಶಾಸ್ತ್ರವಾಗಿ ಹೊರಹೊಮ್ಮಿ ಆಯುರ್ಮಾನದ ವೇದವೇ ಆಯುರ್ವೇದವಾಗಿದೆ. ಮಾನವನು ಯಾವುದೇ ತೆರನ ಬೇನೆ – ಬೇಸರಿಕೆ – ಚಿಂತೆ ಇತ್ಯಾದಿಗಳಿಂದ ಬಳಲಿ, ತೊಳಲಿ, ನರಳದೆ ಮುಕ್ತ ಹಾಗೂ ಶಕ್ತನಾಗಿರಬೇಕು, ಆಯುಷ್ಮಂತನಾಗಿ ಬಾಳಬೇಕು. ಇದಕ್ಕೆ ಪೂರಕವಾದುದು ಆಯುಷ್ಯ ಕುರಿತ ಸಂಪೂರ್ಣಜ್ಞಾನ. ಇದನ್ನು ಅರಿತು ಅರ್ಜಿಸುವುದೇ ಪ್ರೌಢ ಪಾರಂಪರಿಕ ಆಯುರ್ವೇದದ ಮಹತ್ತರ ಧ್ಯೇಯೋದ್ದೇಶವಾಗಿದೆ. ಇದು ವಿಶ್ವದಲ್ಲಿಯೇ ಪ್ರಥಮ ವೈದ್ಯಕೀಯ ಪದ್ಧತಿಯೆಂಬ ಹೆಗ್ಗಳಿಕೆಯನ್ನು ಪಡೆದಿದೆ.

ದಕ್ಷಪ್ರಜಾಪತಿ ಬ್ರಹ್ಮ, ಅಶ್ವಿನಿಕುಮಾರರು ಮತ್ತು ಇಂದ್ರರಿಂದ ಉಪದೇಶಿತವಾದ ಆಯುರ್ವೇದವು ವೈದ್ಯಾಚಾರ್ಯ ವಾಗ್ಭಟನಿಂದ ಅಷ್ಟಾಂಗ ವಿಭಾಗಗಳಾದ ಕಾಯಚಿಕಿತ್ಸಾ, ಬಾಲಚಿಕಿತ್ಸಾ, ಗ್ರಹಚಿಕಿತ್ಸಾ, ಊರ್ಧ್ವಾಂಗಚಿಕಿತ್ಸಾ, ಶಲ್ಯಚಿಕಿತ್ಸಾ, ದಂಷ್ಟ್ರಾಚಿಕಿತ್ಸಾ, ಜರಾಚಿಕಿತ್ಸಾ, ವೃಷಾಚಿಕಿತ್ಸಾವನ್ನನುಸರಿಸಿದ ವೈದ್ಯಪದ್ಧತಿಯನ್ನು ಅನುಸರಿಸಲಾಗುತ್ತಿದ್ದಿತು.

**ಐತಿಹಾಸಿಕ ಹಿನ್ನೆಲೆ:** ಕರ್ನಾಟಕದ ರಾಜರು ತಮ್ಮ ಇಷ್ಟದೇವತೆಗಳಿಗಾಗಿ ನಿರ್ಮಿಸಿದ ದೇವಾಲಯಗಳಲ್ಲಿ ವಿದ್ಯಾದಾನದೊಂದಿಗೆ ಆಯುರ್ವೇದ ವೈದ್ಯ ಕಲಿಕೆಗೂ ಆಸ್ಪದ ನೀಡುತ್ತಿದ್ದುದು ಸಾಮಾನ್ಯ ಸಂಗತಿಯಾಗಿದ್ದಿತು. ಕ್ರಿ.ಶ. 945ರಲ್ಲಿ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಮಂತ್ರಿ ನಾರಾಯಣನು ಬಿಜಾಪುರ ಜಿಲ್ಲೆಯ ಸಾಲೋಟಗಿ ಗ್ರಾಮದ ತ್ರಯೀಪುರುಷ ದೇವಾಲಯದಲ್ಲಿ ಹಾಗೂ ಮುಂಪುಟಗಳಲ್ಲಿ ಕಾಣಸಿಗುವಂತೆ ಧಾರವಾಡ ಜಿಲ್ಲೆ ಹೆಬ್ಬಾಳು ಗ್ರಾಮದ ಭುಜಬಲೇಶ್ವರ ದೇವಾಲಯದಲ್ಲಿ, ಶಿವಮೊಗ್ಗ ಜಿಲ್ಲೆಯ ತಾಳಗುಂದ ಶಾಸನದ ರೀತ್ಯ (ಕ್ರಿ.ಶ. 1158) ಆಲೂರಿನ ಪ್ರಣವೇಶ್ವರ ದೇವಾಲಯದಲ್ಲಿ ಹಾಗೂ 12ನೆಯ ಶತಮಾನದ ಉತ್ತರಾರ್ಧದಲ್ಲಿ ಬಿಜಾಪುರ ಜಿಲ್ಲೆ ಮುಂಗೋಲಿ ಮುಂತಾದೆಡೆಗಳಲ್ಲಿ ಸಾಗುತ್ತಿದ್ದ ದೇವಾಲಯಗಳ ಪಾಠಶಾಲೆಗಳಲ್ಲಿ ಆಯುರ್ವೇದವನ್ನು ಬೋಧಿಸಲಾಗುತ್ತಿತ್ತು. ವ್ಯವಸ್ಥಿತ ವೈದ್ಯ ಶಿಕ್ಷಣವು ದೊರಕುತ್ತಿದ್ದುದು ವಿಜಯನಗರ ಕಾಲದಲ್ಲಿ. ಸುಮಾರು ಕ್ರಿ.ಶ. 1500ರವರೆಗೆ ಕರ್ನಾಟಕದಲ್ಲಿ ಆಯುರ್ವೇದವು ಏಕೈಕ ವೈದ್ಯ ಪದ್ಧತಿಯಾಗಿದ್ದಿತು.

**ಆಧುನಿಕ ನೆಲೆ:** 18ನೇ ಶತಮಾನದಲ್ಲಿ ಬಹುತೇಕ ಭಾರತದಲ್ಲಿ ಬ್ರಿಟಿಷರ ಆಡಳಿತದ ಪ್ರಾರಂಭದ ಪರಿಣಾಮವಾಗಿ ಹಾಗೂ ಜನಸಾಮಾನ್ಯರು ಶಾಸ್ತ್ರಾಧ್ಯಯನದ ಬಗೆಗೆ ತಾಳಿದ ನಿರುತ್ಸಾಹ, ಸರ್ಕಾರದ ತಾತ್ಸಾರ ಹಾಗೂ ತತ್ಪಾರದಿಂದಾಗಿ ಆಯುರ್ವೇದ ಪದ್ಧತಿಗೆ ಭಾರೀ ಕೊಡಲಿಪೆಟ್ಟು ಬಿದ್ದಿತು. ತತ್ಪರಿಣಾಮವಾಗಿ ಕೇವಲ ಆಯುರ್ವೇದ ಕಲಿಸುವ ಪ್ರತ್ಯೇಕ ಸಂಘ ಸಂಸ್ಥೆಗಳು ಹಾಗೂ ಶಾಲೆಗಳು ಅಸ್ತಿತ್ವದಲ್ಲಿರಲಿಲ್ಲ. ಆದಾಗ್ಯೂ ಸಂಸ್ಕೃತ ಪಾಠಶಾಲೆಗಳಲ್ಲಿ ತರ್ಕ, ವ್ಯಾಕರಣ, ಸಾಹಿತ್ಯ, ವೇದಾಂತಗಳ ಸಮೃದ್ಧ ಕಲಿಕೆಯೊಂದಿಗೆ ಆಯುರ್ವೇದ ಅಧ್ಯಯನದತ್ತ ವಿಶೇಷ ಲಕ್ಷ್ಯ ವಹಿಸಲಾಯಿತು. ನಮ್ಮನ್ನಾಳಿದ ಮಹಾಪ್ರಭುಗಳಾದ ಶ್ರೀಮನ್ಮಹಾರಾಜ ಚಾಮರಾಜ ಒಡೆಯರ್ (1863 – 1891)ರವರ ಕಾಲದಲ್ಲಿ ವೇದಾಧ್ಯಯನದೊಂದಿಗೆ ಇತರ ಭಾರತೀಯ ವಿದ್ಯೆಗಳನ್ನು ಅಧ್ಯಯನ ಮಾಡಲು ವ್ಯವಸ್ಥಿತ ಸಂಸ್ಕೃತ ಕಾಲೇಜೊಂದು ಮೈಸೂರಿನಲ್ಲಿ ಸ್ಥಾಪನೆಗೊಂಡಿತು. 1876ರಲ್ಲಿ ಸ್ಥಾಪನೆಗೊಂಡ ಈ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಪ್ರಾರಂಭದಲ್ಲಿ ವೇದಗಳು, ವೇದಾಂಗಗಳು, ಸಂಸ್ಕೃತ ಸಾಹಿತ್ಯ ಮತ್ತು ದರ್ಶನಗಳನ್ನು ಕಲಿಸುತ್ತಿದ್ದಾಗ್ಯೂ ನಂತರದಲ್ಲಿ ಸಂಗೀತ, ಜ್ಯೋತಿಷ್ಯ ಮತ್ತು ಆಯುರ್ವೇದ ಮುಂತಾದ ವಿಷಯಗಳ ವಿಭಾಗಗಳೂ ತೆರೆಯಲ್ಪಟ್ಟವು. ಆಯುರ್ವೇದವು ವಿದ್ವತ್ ಅಧ್ಯಯನದ ವಿಷಯ ಗಳಲ್ಲೊಂದಾಗಿ ಮಹತ್ವಪೂರ್ಣ ಸ್ಥಾನಗಳಿಸಿತು. ಶ್ರೀಮನ್ಮಹಾರಾಜರು ವೈದ್ಯಶಾಸ್ತ್ರಾಧ್ಯಯನದಲ್ಲಿನ ವಾಸ್ತವಸ್ಥಿತಿಯನ್ನು ಅರಿತು ಅದರ ಕೊರತೆಯನ್ನು ನೀಗಲು ಮುಂದಾದರು. ವೈದ್ಯ ಶಾಸ್ತ್ರಾಧ್ಯಯನವನ್ನು ಐಚ್ಛಿಕ ವಿಷಯವನ್ನಾಗಿಸದೆ ಪ್ರಮುಖ ವಿಷಯವನ್ನಾಗಿ ಪರಿಗಣಿಸಿ 1890ರಂದು ಸಂಸ್ಕೃತ ಕಾಲೇಜಿನಲ್ಲಿ ಆಯುರ್ವೇದ ವಿದ್ವತ್ ಕೋರ್ಸನ್ನು ಪ್ರಾರಂಭಿಸಲು ನಿಶ್ಚಯಿಸಿದರು. ಈ ಶತಕದ ಉತ್ತರಾರ್ಧದಲ್ಲಿನ ಆಯುರ್ವೇದ ಅಧ್ಯಾಪನಾದಿಗಳ ಕ್ಷೀಣಾವಸ್ಥೆಯನ್ನು ನೀಗಿದರು. ಈ ವಿಭಾಗದ ಪ್ರಪ್ರಥಮ ಉಪಾಧ್ಯಾಯನನ್ನಾಗಿ ಆಸ್ಥಾನ ವೈದ್ಯ ಶ್ರೀ ಅಗರಂ

Digitised by Bharatavani, CIIL

ಪುಟ್ಟಸ್ವಾಮಿ ಪಂಡಿತರನ್ನು ನೇಮಕ ಮಾಡಿದರು. 1893ರಲ್ಲಿ ಡಿಪ್ಲೋಮಾ 'ಆಯುರ್ವೇದ ವಿದ್ವಾನ್' ಮೊದಲ ಯಶಸ್ವಿ ಗುಂಪು ಹೊರಬಂದಿತು. ಮೈಸೂರು ದೇಶದಲ್ಲಿ ಹೀಗೆ ವ್ಯವಸ್ಥಿತ ರೀತಿಯಲ್ಲಿ ಆಯುರ್ವೇದ ಶಾಸ್ತ್ರಾಧ್ಯಯನವು ಪ್ರಾರಂಭವಾದುದು ಇದೇ ಮೊದಲು.

ನಂತರದಲ್ಲಿ ಆಯುರ್ವೇದ ವಿದ್ವತ್ ಕೋರ್ಸಿನ ಮುನ್ನಡೆಗೆ ತಡೆಯುಂಟಾಯಿತು. ಅಕ್ಟೋಬರ್ 1908ರಂದು ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆಸ್ಥಾನ ವೈದ್ಯ ಶ್ರೀ ಅಂಬಳೆ ಅಣ್ಣಯ್ಯ ಪಂಡಿತರ ಪ್ರಥಮ ಪುತ್ರ ಸುಬ್ರಹ್ಮಣ್ಯ ಪಂಡಿತರ ಸಲಹೆ ಮತ್ತು ಕೋರಿಕೆಯ ಮೇರೆಗೆ ಅಸ್ತಿತ್ವದಲ್ಲಿದ್ದ ಸಂಸ್ಕೃತ ಕಾಲೇಜಿನಲ್ಲಿ ಆಯುರ್ವೇದ ಕಲಿಕಾ ಕೋರ್ಸನ್ನು ಪುನರುಜ್ಜೀವಿತಗೊಳಿಸಿದರು. ಅಲ್ಲದೆ ಅದಕ್ಕೆ ಪೂರಕವಾಗಿ ಚಿಕಿತ್ಸಾಲಯ ವಿಭಾಗವನ್ನು ಹೊಂದಿಸಲಾಯಿತು. ಆದರೆ ಶಾಲೆ ಮತ್ತು ಆಸ್ಪತ್ರೆಗೆ ಸೂಕ್ತ ಹಾಗೂ ಅಗತ್ಯ ಜಾಗದ ಕೊರತೆಯು ಎದುರಾಗಲು ಅವುಗಳ ವ್ಯವಸ್ಥೆಗಾಗಿ 1910ರಲ್ಲಿ ದೇವರಾಜ ಮಾರ್ಕೆಟ್ ಕಟ್ಟಡದ ಉತ್ತರ ಭಾಗದಲ್ಲಿನ ಮೂರು ಕೊಠಡಿಗಳಿಗೆ ವರ್ಗಾಯಿಸಲಾಯಿತು. ವಿದ್ವಾಂಸ ಕೆಂಪುರಾಮ ಪಂಡಿತರನ್ನು ಮುಖ್ಯವೈದ್ಯ ಹಾಗೂ ಶಾಲಾ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಲಾಯಿತು. ಅನಂತರ ಅದನ್ನೂ ವರ್ಗಾಯಿಸಲಾಯಿತು. ವಿದ್ಯಾರ್ಥಿಗಳ ಪ್ರವೇಶ ತೀವ್ರತೆಯಿಂದಾಗಿ ಆಯುರ್ವೇದ ಪಾಠಶಾಲೆಯನ್ನು ಸಿದ್ದಪ್ಪನವರ ಅನಾಥಾಲಯ ಕಟ್ಟಡಕ್ಕೆ ತಾತ್ಕಾಲಿಕವಾಗಿ ವರ್ಗಾಯಿಸಿ ತದನಂತರ 1915 ರಂದು ಉತ್ತರ ಭಾಗದ ಚಾಮರಾಜೇಂದ್ರ ಕಲಾ ಮತ್ತು ತಾಂತ್ರಿಕ ಸಂಸ್ಥೆಯ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಯುವರಾಜ ಶ್ರೀ ನರಸಿಂಹರಾಜ ಒಡೆಯರ್ ನೇತೃತ್ವದ ಸಲಹಾ ಸಮಿತಿಯ ಸೂಚನೆಯ ಮೇರೆಗೆ 1928 ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹೊಸ ಹಾಗೂ ಸ್ವತಂತ್ರ ಪಾಠಶಾಲಾ ಕಟ್ಟಡದ ನಿರ್ಮಾಣಕ್ಕಾಗಿ ಆಜ್ಞಾಪಿಸಿದರು. ಈ ಸತ್ಕಾರ್ಯಕ್ಕೆ ಸಾಹುಕಾರ ಡಿ. ಬನುಮಯ್ಯ ಮತ್ತು ಅವರ ಸಹೋದರ ರಾಗಿಮಂಡಿ ಚೌಡಯ್ಯ ಹಾಗೂ ಆಯುರ್ವೇದ ವೈದ್ಯರತ್ನ ಶ್ರೀ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರು ಉದಾರ ಆರ್ಥಿಕ ನೆರವನ್ನಿತ್ತರು. ಇದೇ ರೀತಿ ಲಕ್ಷ್ಮೀನರಸಿಂಹಶಾಸ್ತ್ರೀ, ಎರಡನೆಯ ಅಂಬಳೆ ಅಣ್ಣಯ್ಯ ಪಂಡಿತರು ಹಾಗೂ ಟಿ.ಎಂ. ಸಿದ್ದಪ್ಪನವರು ಆರ್ಥಿಕವಾಗಿ ಸಹಕರಿಸಿದರು. 1959ರಂದು ಡಾ. ಬಿ.ವಿ. ಪಂಡಿತರು ತಮ್ಮ ಮಾತೋಶ್ರೀ ಶ್ರೀಮತಿ ಕೆಂಚಮ್ಮ (ವೆಂಕಟಸುಬ್ಬಮ್ಮ) ಅವರ ಹೆಸರಿನಲ್ಲಿ ಮಕ್ಕಳ ವಾರ್ಡ್ ಬೆಳವಣಿಗೆಗೆ ದಾನವಿತ್ತರು. ಸಂಸ್ಥೆಯ ಆಡಳಿತ ಮಂಡಳಿಯ ಸಹಾಯಕರಾಗಿ ಮುಜರಾಯಿ ಕಮೀಷನರ್ ಪಿ.ಜಿ. ಡಿಸೌಜಾ (ಅಧ್ಯಕ್ಷರು) ಮತ್ತು ಮೈಸೂರು ನಗರದ ಸಭಾಧ್ಯಕ್ಷ ಟಿ.ಜಿ. ರಾಮಯ್ಯ (ಸದಸ್ಯ)ರವರು ಆಯುರ್ವೇದಾಭಿವೃದ್ಧಿಗೆ ಉತ್ಕೃಷ್ಟ ಸೇವೆ ಸಲ್ಲಿಸಿದರು.

1930 ರಲ್ಲಿ 'ಆಯುರ್ವೇದ ಪಾಠಶಾಲೆ'ಯು 'ಆಯುರ್ವೇದ ಮಹಾಪಾಠಶಾಲೆ' (ಕಾಲೇಜು)ಯಾಗಿ ಪರಿವರ್ತನೆಗೊಂಡು 'ಮುಖ್ಯೋಪಾಧ್ಯಾಯರು' ಎಂಬ ಪದನಾಮವನ್ನು 'ಪ್ರಾಚಾರ್ಯ' ಎಂದು ಬದಲಾಯಿಸಲಾಯಿತು. ಡಾ. ವೈ. ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಇದರ ಪ್ರಾಚಾರ್ಯರಾದರು. ಮಹಾಪಾಠಶಾಲೆಯನ್ನು ದಿವಾನ್ ಸರ್ ಎಂ. ಮಿರ್ಜಾ ಇಸ್ಮಾಯಿಲ್ ಅವರು ಉದ್ಘಾಟಿಸಿದರು. ಅವರ ಆಜ್ಞೆಯ ಮೇರೆಗೆ ಆಯುರ್ವೇದ ಶಿಕ್ಷಣದೊಂದಿಗೆ ಯುನಾನಿ ಪದ್ಧತಿಯನ್ನು ಸೇರಿಸಿಕೊಳ್ಳಲಾಯಿತು. ಅಂತೆಯೇ ವಿದ್ಯಾಲಯವನ್ನು 'ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರ ಆಯುರ್ವೇದ ಮತ್ತು ಯುನಾನಿ ಕಾಲೇಜು' ಎಂದು ಹೆಸರಿಸಲಾಯಿತು. ಕಟ್ಟಡದ ಮೊದಲನೆಯ ಮಹಡಿಯನ್ನು ದಾನಿ ಡಿ. ಬನುಮಯ್ಯನವರ ತಂದೆ ಶ್ರೀ ದೊಡ್ಡಯ್ಯನವರ ಹೆಸರಿನಲ್ಲಿ ಕರೆಯಲಾಯಿತು. 1932 ರ ನಂತರದಲ್ಲಿ ಉತ್ತೀರ್ಣರಾದವರಿಗೆ 'ಆಯುರ್ವೇದ ವಿದ್ವಾನ್' ಎಲ್.ಎ.ಎಂ.ಎಸ್. (Licentiate in Ayurvedic Medicine and Surgery) ಹಾಗೂ ಟಿಬ್ಬೆ ಹಸೀಕ್ – ಎಲ್.ಯು.ಎಂ.ಎಸ್. (Licentiate in Unani Medicine and Surgery) ಅರ್ಹತೆಗಳನ್ನು ನೀಡಲಾಯಿತು. ಅಧ್ಯಯನ ಕ್ಷಿತಿಜವನ್ನು ವಿಸ್ತರಿಸಲೋಸುಗ 1929 ರಂದು ಮೈಸೂರಿನ ಕುಕ್ಕನಹಳ್ಳಿ ಕೆರೆಯ ಕೆಳಭಾಗದಲ್ಲಿ ಸುಮಾರು ನಾಲ್ಕು ಎಕರೆಗಳ ಪ್ರದೇಶದಲ್ಲಿ ಔಷಧ ಗಿಡಮೂಲಿಕೆಗಳನ್ನುಳ್ಳ ಮೂಲಿಕೋದ್ಯಾನವನ್ನು ಪ್ರಾರಂಭಿಸಲಾಯಿತು. ಅಲ್ಲದೆ ಔಷಧಿ ತಯಾರಿಕೆಯನ್ನು ಶಾಲೆಯ ಒಂದು ಭಾಗದಲ್ಲಿ ಪ್ರಾರಂಭಿಸಿ ತಯಾರಿಕಾಕ್ರಮವನ್ನು ವಿದ್ಯಾರ್ಥಿಗಳ ಪ್ರಾತ್ಯಕ್ಷಿಕೆಯಾಗಿಯೂ ಬಳಸಲಾಯಿತು. 1942 ರಲ್ಲಿ ಆಯುರ್ವೇದ ಔಷಧಿಗಳನ್ನು ಶಾಸ್ತ್ರೀಯವಾಗಿ ಉತ್ಪಾದಿಸುವ ಸಂಸ್ಥೆ ಕೂಡಾ ಪ್ರಾರಂಭವಾಯಿತು. ಮೈಸೂರು ನಗರದ ಇಂಗ್ಲಿಷ್ ವೈದ್ಯ ಅಧೀಕಾರಿ ವೆಂಕೋಬರಾಯರ ಉಸ್ತುವಾರಿಕೆಯಲ್ಲಿ ಆಧುನಿಕ ವೈಜ್ಞಾನಿಕ ವೈದ್ಯಕೀಯ ಜ್ಞಾನಾರ್ಜನೆಯ ನಿಮಿತ್ತ ಪ್ರತ್ಯಕ್ಷ ಕಲಿಕೆಗಾಗಿ ಶವವಿಚ್ಛೇದನೆ, ಶರೀರರಚನೆ ವಿಭಾಗ, ಶರೀರಕ್ರಿಯಾ, ದ್ರವ್ಯಗುಣ, ಪ್ರಸೂತಿ ತಂತ್ರ ಮತ್ತು ಸಾರ್ವಜನಿಕ ಆರೋಗ್ಯ ಶಾಸ್ತ್ರಗಳ ಪರಿಚಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಏರ್ಪಾಟಾಯಿತು. ಪ್ರಾಚಾರ್ಯರು ಮತ್ತು ಮೂರು ಆಯುರ್ವೇದ ಪಂಡಿತರನ್ನೊಳಗೊಂಡ ಸಮಿತಿಯು ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದಿತು. 1943ರಲ್ಲಿ ಯಡತೊರೆ ಪಾರ್ಥನಾರಾಯಣ ಪಂಡಿತರು ವಿಶೇಷ ಆಸಕ್ತಿವಹಿಸಿ ಮೈಸೂರು ನಗರದಲ್ಲಿ 'ಅಭಯ ಆಯುರ್ವೇದ ಸಂಶೋಧನಾಲಯ ಸಂಸ್ಥೆ'ಯನ್ನು ತೆರೆದು ಚಿಕಿತ್ಸೆ ಮತ್ತು ಶಿಕ್ಷಣಕ್ಕೆ ಅನುವು ಮಾಡಿಕೊಟ್ಟರು. ಸಂಸ್ಥೆಯು ಅಖಿಲ ಭಾರತ ಆಯುರ್ವೇದ ಮಹಾಮಂಡಳದ ಭಿಷಕ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುತ್ತಿದ್ದಿತು. ಆದರೆ ಇದು ಆರ್ಥಿಕ ಮುಗ್ಗಟ್ಟಿನಿಂದಾಗಿ ಅಲ್ಪಾಯುವಾಯಿತು. 1948–49ರ ಅವಧಿಯಲ್ಲಿ ಬೆಂಗಳೂರಿನ ಜಯಚಾಮರಾಜ ಇಂಡಿಯನ್ ಇನ್ಸ್ಟಿಟ್ಯೂಟ್‌ನ ಸಂಶೋಧನಾಧಿಕಾರಿಯಾಗಿದ್ದ ಡಾ. ಸಿ. ದ್ವಾರಕಾನಾಥ್ ಅವರು ಪ್ರಾಚಾರ್ಯರಾಗಿ ಕಾಲೇಜಿನ ಸರ್ವತೋಮುಖ ಬೆಳವಣಿಗೆಗೆ ಕಾರಣರಾದರು. ಶ್ರೀಯುತರು ಬೋಧನಾಕ್ರಮದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳನ್ನು ಸೇರಿಸಿದರು. ಇದರಿಂದಾಗಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಆಕರ್ಷಿತರಾದರು. ಎಲ್.ಎ.ಎಂ.ಎಸ್. ಡಿಪ್ಲೋಮಾ ಕೋರ್ಸನ್ನು ಡಿಗ್ರಿ ಕೋರ್ಸನ್ನಾಗಿ ಪರಿವರ್ತಿಸಲು ಒತ್ತಾಸೆ ಉಂಟಾಯಿತು. 1955 ರಂದು ಕಾಲೇಜನ್ನು ಸರಕಾರಿ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ಎಂದು ಕರೆಯಲಾಯಿತು. 1958ರಲ್ಲಿ ಪಾರ್ಥನಾರಾಯಣ ಪಂಡಿತರು ಮತ್ತವರ ಕೆಲವು ಸ್ನೇಹಿತರ ಪ್ರಯತ್ನದಿಂದಾಗಿ ಬೆಂಗಳೂರಿನಲ್ಲಿ ವೈದ್ಯ ಶಿಕ್ಷಣ ಶಾಲೆಯು ಪ್ರಾರಂಭಗೊಂಡಿತು. ಇದೇ ಸಮಯದಲ್ಲಿ ಕೇಂದ್ರ ಸರ್ಕಾರವು ಶ್ರೀ ವ್ಯಾಸ್ ನೇತೃತ್ವದ ಸಮಿತಿಯು ವರದಿಯ ರೀತ್ಯ ಭಾರತದಾದ್ಯಂತವಿರುವ ಎಲ್ಲ ಆಯುರ್ವೇದಿಕ್ ಡಿಪ್ಲೋಮಾ ಕೋರ್ಸ್‌ಗಳನ್ನು ಸಮಾನ ರೀತಿಯ ಡಿಗ್ರಿ ಕೋರ್ಸ್‌ಗಳನ್ನಾಗಿ ಬದಲಾಯಿಸಲು ಹಾಗೂ ಅವೆಲ್ಲವುಗಳನ್ನು ಆಯಾಯ ಸಂಬಂಧಪಟ್ಟ ವಿಶ್ವವಿದ್ಯಾಲಯಗಳೊಡನೆ ಮಾನ್ಯತೆ ಪಡೆಯಲುದ್ಯುಕ್ತವಾಗಬೇಕೆಂದು ತಿಳಿಸಲಾಯಿತು. ಮೈಸೂರು ಸರ್ಕಾರವು 4 ವರುಷಗಳ ಕೋರ್ಸನ್ನಾಗಿ ಮಾಡಿ ಆಧುನಿಕ ವೈದ್ಯಕೀಯ ವಿಷಯಗಳನ್ನು ತೆಗೆದುಹಾಕಿ ಡಿಪ್ಲೋಮಾ ಇನ್ ಆಯುರ್ವೇದಿಕ್ ಮೆಡಿಸಿನ್ (D.A.M.) ಎಂದಾಗ ವಿದ್ಯಾರ್ಥಿಗಳಲ್ಲಿ ಅಸಮಾಧಾನ ಉಂಟಾಯಿತು. 1959ರ ನಂತರ ಪಠ್ಯಕ್ರಮದಲ್ಲಿ ಸುಧಾರಣೆಗೈದು 5 1/2 ವರ್ಷದ ಜಿ.ಸಿ.ಐಯ್.ಎಂ. (G.C.I.M.) ಕೋರ್ಸನ್ನು ಪ್ರಾರಂಭಿಸಲಾಯಿತು. 1966 ರಲ್ಲಿ 5 1/2 ವರ್ಷದ ಪದವಿ ಕೋರ್ಸನ್ನು ಬಿ.ಎಸ್.ಎ.ಎಂ. (B.S.A.M. Bachelor of

Digitised by Bharatavani, CIIL

Shudda Ayurvedic Medicine) ಎಂದು ಕರೆಯಲಾಯಿತು. 1968ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು 4 ವರ್ಷಗಳ ಅಧ್ಯಯನ ಅವಧಿಯ 'ಆಯುರ್ವೇದ ವಿದ್ವಾನ್' ಪದವಿಯನ್ನು ನೀಡುತ್ತಿತ್ತು. 1969ರಲ್ಲಿ ಮಿಶ್ರವೈದ್ಯ ಪದ್ಧತಿಗಳ ಶಿಕ್ಷಣದ ಫಲವಾಗಿ National Integrated Medical Association ಅಸ್ತಿತ್ವಕ್ಕೆ ಬಂದಿತು. ಸಾರ್ವತ್ರಿಕ ಉಪಯುಕ್ತತೆಗಾಗಿ ಆಯುರ್ವೇದದೊಡನೆ ಆಧುನಿಕ ವೈದ್ಯ ಪದ್ಧತಿಯನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪ್ರಯತ್ನಗಳಾದವು. ತತ್ಪರಿಣಾಮವಾಗಿ 1969ರಂದು ಗ್ರಾಜುಯೇಟ್ ಕೋರ್ಸ್ ಇನ್ ಇನ್‌ಟಿಗ್ರೇಟೆಡ್ ಮೆಡಿಸಿನ್ (GCIM, Graduate Course in Integrated Medicine) ರೂಪತಾಳಿ ಅದು ಸುಮಾರು 8 ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದಿತಾದರೂ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರಲಿಲ್ಲ. 1978ರಲ್ಲಿ Central Council of Indian Medicine (CCIM) ಅಗ್ರ ಸಂಸ್ಥೆಯು ಆಯುರ್ವೇದ ಪದವಿಯನ್ನು BSAM (Bachelor in Ayurvedic Medicine and Surgery) ಎಂದು ಹೆಸರಿಸಿತು. 1972ರಲ್ಲಿ ಭಾರತ ಸರಕಾರದ 3 ವರ್ಷಗಳ D.Ay.M. (Doctor of Ayurvedic Medicine) ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯವು ಅನುಮೋದಿಸಿತು. ಮೂರು ವರುಷಗಳನಂತರ ಇದು Doctor of Medicine (M.D.) ಎಂದು ಪುನರ್ ನಾಮಕರಣಗೊಂಡಿತು. ಸಂಸ್ಥೆಯು 2006ರಿಂದ 'ಆಯುರ್ವೇದ ಸಿದ್ಧಾಂತ'ದಲ್ಲಿ ಸ್ನಾತಕೋತ್ತರ ಕೋರ್ಸನ್ನು ನಡೆಸುತ್ತಿದೆ. ಈ ವಿದ್ಯಾಲಯವು ನಾನಾ ಎಡರು ತೊಡರುಗಳನ್ನು ಎದುರಿಸಿ ಕಾಲಕಾಲಕ್ಕೆ ಉಂಟಾದ ಸೂಕ್ತ ಸಮುಚಿತ ಸುಧಾರಣೆಗಳಿಂದ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿದೆ. ಆಡಳಿತಾತ್ಮಕವಾಗಿ ಹಾಗೂ ಶೈಕ್ಷಣಿಕವಾಗಿ ಪ್ರಗತಿಪರ ಮುಂಚೂಣಿಯಲ್ಲಿದ್ದು ನವೆಂಬರ್ 2008ರಲ್ಲಿ ಸ್ಮರಣೀಯ ಶತಮಾನೋತ್ಸವವನ್ನು ಆಚರಿಸಿಕೊಂಡು ದೇಶದಲ್ಲಿಯೇ ಅತ್ಯುತ್ತಮ ಆಯುರ್ವೇದ ಶೈಕ್ಷಣಿಕ ಕೇಂದ್ರವಾಗಿ ಮುನ್ನಡೆಯುತ್ತಿದೆ. B.A.M.S. (1989) ಪದವಿಯನ್ನು ಪಡೆದ ನಂತರದಲ್ಲಿ ಔಷಧಶಾಸ್ತ್ರ, ಶಸ್ತ್ರಚಿಕಿತ್ಸೆ, ಸ್ತ್ರೀರೋಗ ಚಿಕಿತ್ಸೆ ಮತ್ತು ರಸಶಾಸ್ತ್ರ ಮುಂತಾದ ವಿಷಯಗಳಲ್ಲಿ ಸ್ನಾತಕೋತ್ತರ ಅಧ್ಯಯನ ಹಾಗೂ ತದನಂತರದಲ್ಲಿ ಪಿಎಚ್.ಡಿ. ಪದವಿಯನ್ನು ಹೊಂದಲು ಅನುವು ಮಾಡಿಕೊಡಲಾಯಿತು. ಪ್ರಸ್ತುತದಲ್ಲಿ B.A.M.S. (ಆಯುರ್ವೇದಾಚಾರ್ಯ) ಪದವಿ ಕೋರ್ಸ್‌ನೊಂದಿಗೆ B.U.M.S. (Bachelor of Unani Medicine and Surgery) ಮತ್ತು B.S.M.S. (Bachelor of Siddha Medicine and Surgery) ಕೋರ್ಸುಗಳು ನಡೆಯುತ್ತಿವೆ. ಅಲ್ಲದೆ ಆಯುರ್ವೇದ ವಾಚಸ್ಪತಿ M.D. (Ay), Mahir-e-Tib M.D. (ಯುನಾನಿ) ಮತ್ತು ಸಿದ್ಧ ಮಾರುತುವ ಪೆರರಿಗ್ನಾರ್ (Siddha Maruthuva Perarignar), M.D. (Siddha) ಸ್ನಾತಕೋತ್ತರ ಕೋರ್ಸುಗಳು ನಡೆಯುತ್ತಿವೆ.

ಮೊದಮೊದಲು ಆಯುರ್ವೇದ ಮತ್ತು ಪಾಶ್ಚಾತ್ಯ ವೈದ್ಯ ವಿಜ್ಞಾನಗಳ ಸಮ್ಮಿಶ್ರ ಪದ್ಧತಿ ವಿದ್ಯಾಭ್ಯಾಸ ಹಾಗೂ ಶುದ್ಧ ಆಯುರ್ವೇದ ವಿದ್ಯಾಭ್ಯಾಸಕ್ಕೆ ಅವಕಾಶವಿದ್ದಿತಾದರೂ ಕ್ರಮೇಣ ಪ್ರತ್ಯೇಕ ನೋಂದಣಿ ಪದ್ಧತಿಯನ್ನು ಅನುಸರಿಸಬೇಕಾಯಿತು. 1975ರಲ್ಲಿ ಪುನಃ ಆಯುರ್ವೇದ ಪದ್ಧತಿ ವೈದ್ಯರು ಒಂದೂವರೆ ವರ್ಷದ ಪಾಶ್ಚಾತ್ಯ ವೈದ್ಯಕೀಯವನ್ನು ವ್ಯಾಸಂಗ ಮಾಡಲು ಅನುಕೂಲ ಮಾಡಿಕೊಡಲಾಯಿತಾದರೂ ಇದನ್ನು 1989 ರಲ್ಲಿ ಹಿಂತೆಗೆದುಕೊಳ್ಳಲಾಯಿತು.

ಪ್ರಸ್ತುತ ಕರ್ನಾಟಕದಲ್ಲಿ ಮೈಸೂರು (1908), ಬಳ್ಳಾರಿ (1947) ಮತ್ತು ಬೆಂಗಳೂರಿ (1967)ನ ಮೂರು ಸರ್ಕಾರಿ ಹಾಗೂ ಉಡುಪಿ, ಹುಬ್ಬಳ್ಳಿ, ಗದಗ, ಬೆಳಗಾವಿ ಮತ್ತು ಬಿಜಾಪುರದ ಐದು ಅನುದಾನಿತವಲ್ಲದೆ ಇತರೇ ಅನುದಾನರಹಿತ ಖಾಸಗಿ ಆಯುರ್ವೇದ ಕಾಲೇಜುಗಳಿದ್ದು, ಒಟ್ಟು ಸುಮಾರು 50 ಆಯುರ್ವೇದ ಕಾಲೇಜುಗಳಿವೆ. ಮಾರ್ಚ್ 1995 ರಂದು ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ (ISM = Indian Systems of Medicine and Homeopathy)ಯನ್ನು ಸೃಜಿಸಲಾಯಿತು. ನವೆಂಬರ್ 2003 ರಂದು ಶಿಕ್ಷಣ ಹಾಗೂ ಸಂಶೋಧನೆಯ ಬೆಳವಣಿಗೆಯತ್ತ ದೃಷ್ಟಿ ಹಾಯಿಸಿ ಆಯುರ್ವೇದ, ಯೋಗ ಮತ್ತು ನಿಸರ್ಗಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ (Ayurveda, Yoga & Naturopathy, Unani, Sidda and Homeopathy) ಪದ್ಧತಿಗಳನ್ನು ಒಗ್ಗೂಡಿಸಿ 'ಆಯುಷ್' (AYUSH) ಇಲಾಖೆಯೆಂದು ಕರೆಯಲಾಯಿತು. ಇದು ಈ ವೈದ್ಯ ಪದ್ಧತಿಗಳ ಗುಣಮಟ್ಟ, ಗುಣ ನಿಯಂತ್ರಣ, ಔಷಧಿಗಳ ಗುಣಮಟ್ಟ ಕಾಯ್ದುಕೊಳ್ಳುವಿಕೆ, ಔಷಧ ಗಿಡಮೂಲಿಕೆಗಳ ಬಳಕೆಯಲ್ಲಿ ಮುನ್ನಡೆ, ಸಂಶೋಧನೆ, ಬೆಳವಣಿಗೆ, ಮನೆಯಿಂದ ಮೊದಲ್ಗೊಂಡು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇವೆಲ್ಲವುಗಳ ಸಾಮರ್ಥ್ಯದ ಅರಿವು ಮೂಡಿಸುವ ಉದ್ದೇಶವನ್ನು ಹೊಂದಿದೆ.

ಬೆಂಗಳೂರಿನ ಜಿ. ಶ್ರೀನಿವಾಸಮೂರ್ತಿಯವರು ದೇಶೀಯ ವೈದ್ಯದ ಪ್ರಗತಿಗೆ ದುಡಿದ ಮಹಾನುಭಾವರಲ್ಲೋರ್ವರು. ಅವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ದೇಶೀಯ ವೈದ್ಯ ವಿಭಾಗವನ್ನು ಅಳವಡಿಸುವ ಪರಿಶೀಲನಾ ಕಾರ್ಯ ಸಮಿತಿಯ ಸದಸ್ಯರಾಗಿದ್ದರು. 1952ರಲ್ಲಿ ಮೈಸೂರು ಸರಕಾರವು ನೇಮಿಸಿದ್ದ ಈ ಮಹತ್ವದ ಸಮಿತಿಗೆ ಬಹು ಉಪಯುಕ್ತವಾದ ಸಲಹೆಗಳನ್ನಿತ್ತರು.

ಉತ್ತರ ಕರ್ನಾಟಕದ ಹಲವೆಡೆ ಆಯುರ್ವೇದ ಶಿಕ್ಷಣ ವ್ಯವಸ್ಥೆಯು ಸಾಕಷ್ಟು ಗಮನಾರ್ಹ ಅಭಿವೃದ್ಧಿ ಹೊಂದಿದ್ದು ಆಯುರ್ವೇದ ಶಿಕ್ಷಣ ಪಥದಲ್ಲಿ ಹೆಜ್ಜೆಯಿಟ್ಟ ಪ್ರಯತ್ನಶೀಲ ಹಾಗೂ ಕ್ರಿಯಾಶೀಲ ಮಹನೀಯರು ಹಲವಾರು ಮಂದಿ. ಬೆಳಗಾವಿಯ ಡಾ. ಹನುಮಂತರಾವ್ ವೆಂಕಟೇಶ್ ಸವಣೂರರು ಪಾಶ್ಚಾತ್ಯ ಹಾಗೂ ಭಾರತೀಯ ವೈದ್ಯ ಪದ್ಧತಿಯಲ್ಲಿ ಪರಿಣತಿಗಳಿಸಿ ಶಾಸ್ತ್ರಾಧ್ಯಯನಕ್ಕೆ ಅನುಕೂಲ ಕಲ್ಪಿಸಲೋಸುಗ "ಆಯುರ್ವೇದೋತ್ತೇಜಕ ಸಭಾ" ಖಾಸಗಿ ಪುದುವಟ್ಟಿನಡಿಯಲ್ಲಿ ಬೆಳಗಾವಿಯಲ್ಲಿ ಆಯುರ್ವೇದ ವಿದ್ಯಾಲಯವನ್ನು ಪ್ರಾರಂಭಿಸಿದ್ದರು. ಸ್ವಾತಂತ್ರ್ಯಪೂರ್ವದ 2 – 3 ದಶಕಗಳ ಹಿಂದೆ ಆಯುರ್ವೇದಾಧ್ಯಯನ ಕುರಿತಂತೆ ವಿಶೇಷ ಜಾಗೃತಿ ಮೂಡಲಾರಂಭಿಸಿತು. ಖ್ಯಾತ ಪಂಡಿತ ತಾರಾನಾಥರು ರಾಯಚೂರಿನಲ್ಲಿ 'ಹಮದರ್ದ್ ಮದರಸಾ' ಎಂಬ ಸ್ವತಂತ್ರ ಪಾಠಶಾಲೆಯನ್ನು ಸ್ಥಾಪಿಸಿದ್ದರು. 1920ರಂದು ತುಂಗಭದ್ರೆಯ ಬಳಿ 'ಪ್ರೇಮಾಯತನ'ವೆಂಬ ಪರ್ಣಶಾಲೆಯಲ್ಲಿ ಸಾಹಿತ್ಯ, ಪತ್ರಿಕೋದ್ಯಮ ಮತ್ತು ಸಮಾಜಶಾಸ್ತ್ರಗಳೊಡನೆ ಆಯುರ್ವೇದ ವೈದ್ಯವನ್ನು ಕಲಿಸತೊಡಗಿದರು. ಇದು 1932 ರಿಂದ ಪ್ರೇಮ ಮೆಡಿಕಲ್ ಸ್ಕೂಲ್ ಎಂಬ ಅಭಿದಾನದಿಂದ ಕಾರ್ಯವೆಸಗತೊಡಗಿತು. 1933 ರಿಂದ ಪಂಡಿತ ತಾರಾನಾಥರೊಂದಿಗೆ ಸುಪ್ರಸಿದ್ಧ ಆಯುರ್ವೇದ ಪಂಡಿತರಾದ ವಾಳ್ವೇಕರ, ದತ್ತಾತ್ರೇಯ ಕೃಷ್ಣ ಭಾರದ್ವಾಜ ಮತ್ತು ಹಲಸೀಕರ ಮುಂತಾದವರು ವೈದ್ಯಶಾಸ್ತ್ರದ ವಿವಿಧ ವಿಭಾಗಗಳನ್ನು ಬೋಧಿಸುತ್ತಿದ್ದರು. ಶೈಕ್ಷಣಿಕ ಕ್ರಮದಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಉತ್ತೀರ್ಣರಿಗೆ 'ಭಿಷಗಿಂದು' ಮತ್ತು ನಂತರದ ಎರಡು ವರ್ಷಗಳ ಉತ್ತೀರ್ಣರಿಗೆ 'ಆಯುರ್ವೇದ ಚೂಡಾಮಣಿ' ಪದವಿಗಳು ದೊರಕುತ್ತಿದ್ದವು. 1947ರಲ್ಲಿ ತಾರಾನಾಥರ ಶಿಷ್ಯರಾದ ವೈದ್ಯ ಸ್ವಾಮಿ ರಾಯಾಚಾರ್ಯರು ಬಳ್ಳಾರಿಯಲ್ಲಿ ತಾರಾನಾಥ ಆಯುರ್ವೇದ ವಿದ್ಯಾಪೀಠವನ್ನು ಸ್ಥಾಪಿಸಿದರು. 1939ರಲ್ಲಿ ಡಿ.ಎನ್. ನಾರಾಯಣ ಪಂಡಿತರು ಬೆಂಗಳೂರಿನಲ್ಲಿ ಶ್ರೀರಾಮ ವಿದ್ಯಾಪೀಠ – ಆಯುರ್ವೇದ ವಿದ್ಯಾಲಯವನ್ನು ಗುರುಕುಲ ಪದ್ಧತಿಯಂತೆ ಸ್ಥಾಪಿಸಿದ್ದರೂ 1946ರಲ್ಲಿ ಅದು ನಿಂತು ಹೋಯಿತು. ಯಮಕನಮರಡಿ ಬಸಪ್ಪ

Digitised by Bharatavani, CIIL

ಕಂಕಣವಾಡಿಯವರು 1933ರಲ್ಲಿ ಸ್ಥಾಪಿಸಿದ ಕರ್ನಾಟಕ ಆಯುರ್ವೇದ ವಿದ್ಯಾಪೀಠ ಸಂಸ್ಥೆಯಡಿಯಲ್ಲಿ ಆಯುರ್ವೇದಾಧ್ಯಯನಕ್ಕಾಗಿ ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಆಯುರ್ವೇದ ವಿದ್ಯಾಲಯಗಳನ್ನು ತೆರೆದರಾದರೂ, 1950ರಲ್ಲಿ ಅವರ ನಿಧನಾನಂತರ ಹುಬ್ಬಳ್ಳಿಯ ವಿದ್ಯಾಲಯವು ಮುಚ್ಚಿಹೋಯಿತಾದರೂ, ಬೆಳಗಾವಿಯ ವಿದ್ಯಾಲಯವು ಮುಂದುವರೆಯಿತು.

ಸ್ವಾತಂತ್ರ್ಯಾನಂತರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಯುರ್ವೇದದ ಪ್ರಗತಿಗೆ ವಿಶೇಷ ಗಮನವನ್ನಿತ್ತವು. ಆಡಳಿತ ಅನುಸಂಧಾನ, ಉತ್ತಮ ಶಿಕ್ಷಣ ಜಾರಿ, ಔಷಧ ತಯಾರಿಕಾ ನಿಯಮಗಳು ಹಾಗೂ ವೈದ್ಯವೃತ್ತಿ ನಿಯಮಾವಳಿಗಳ ಬಗ್ಗೆ ಸೂಕ್ತ ಶಾಸನಗಳ ಅನ್ವಯ ಮುಂತಾದ ವಿಷಯಗಳ ಕುರಿತು ಗಮನಹರಿಸಲಾಯಿತು. ಈ ಅವಧಿಯಲ್ಲಿ ಮತ್ತೆ ಕೆಲವು ಪ್ರಮುಖ ಆಯುರ್ವೇದ ಕಾಲೇಜುಗಳು ತೆರೆಯಲ್ಪಟ್ಟವು. ಧಾರವಾಡ ಜಿಲ್ಲೆಯ ಹಲಸಿಗೆ ಗ್ರಾಮದ 'ವೈದ್ಯಗುರು' ದಾಮೋದರ ಅನಂತ ಹಲಸೀಕರ (1898 – 1969) ಅವರು 1954 ರಲ್ಲಿ ಮುಂಬಯಿ ಸರಕಾರದ ಪಠ್ಯಕ್ರಮವನ್ನು ಅನುಸರಿಸಿ ಹುಬ್ಬಳ್ಳಿಯಲ್ಲಿ ಆಯುರ್ವೇದ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು, ಅಲ್ಲದೆ ಅದರ ಪ್ರಾಚಾರ್ಯರಾಗಿಯೂ ಕಾರ್ಯನಿರ್ವಹಿಸಿದರು (1954 – 60). ಈ ಮಹಾವಿದ್ಯಾಲಯದ ಮುಂದಿನ ಪ್ರಾಚಾರ್ಯರಾಗಿ ಎನ್. ರಾಘವೇಂದ್ರರು ನೇಮಕಗೊಂಡು ಉತ್ತಮ ವೈದ್ಯ, ದಕ್ಷ ಅಧ್ಯಾಪಕ ಹಾಗೂ ಆಡಳಿತಗಾರನೆಂದು ಹೆಸರಾದರು. 1954 – 56ರ ಅವಧಿಯಲ್ಲಿ ಬಿಜಾಪುರದಲ್ಲಿ ಆದ್ಯ ಅನಂತಾಚಾರ್ಯ, ಡಾ. ಮಂಗಳವೇಡೆ, ಡಾ. ಕಂಕಣವಾಡಿ ಮತ್ತು ಬಾಗಲಕೋಟಕರ ಮುಂತಾದವರ ಅವಿರತ ಪ್ರಯತ್ನದಿಂದಾಗಿ ಆಯುರ್ವೇದ ವಿದ್ಯಾಲಯವು ಸ್ಥಾಪನೆಗೊಂಡಿತು. 1957ರಲ್ಲಿ ಕುಷ್ಟಗಿಯಲ್ಲಿ ರಾಷ್ಟ್ರೀಯ ಆಯುರ್ವೇದ ವಿದ್ಯಾಪೀಠ (ಆಯುರ್ವೇದ ಪಾಠಶಾಲೆ)ವು ಸ್ವಾಮಿ ರಾವಾಚಾರ್ಯರ ಕರ್ಣಧಾರತ್ವದಲ್ಲಿ ಸ್ಥಾಪನೆಗೊಂಡು 1961ರಲ್ಲಿ ಸ್ಥಳಾಂತರಿಸಲ್ಪಟ್ಟು ಆಯುರ್ವೇದ ಕಾಲೇಜು, ಬಾಗಲಕೋಟೆ ಎಂಬ ಹೆಸರನ್ನು ಪಡೆಯಿತು. 1958ರಲ್ಲಿ ಉಡುಪಿಯಲ್ಲಿ ಆಯುರ್ವೇದ ಮಹಾವಿದ್ಯಾಲಯವು ಸ್ಥಾಪನೆಯಾಯಿತು. ಸಂಶೋಧನಾಚಾರ್ಯ ವಿನಾಯಕರಾವ್ ಬಾಪಟ್‌ರವರು ಈ ಸಂಸ್ಥೆಯಲ್ಲಿ ಎರಡು ವರುಷಗಳ ಕಾಲ ಅಧ್ಯಾಪನಗೈದರು.

ಬೆಳಗಾವಿಯ ಆಯುರ್ವೇದ ಶಿಕ್ಷಣವನ್ನು ದೇಶೀಯ ವೈದ್ಯ ಇಲಾಖೆಯು ಮಾನ್ಯ ಮಾಡಲಾಗಿ 1964ರಿಂದ ಉತ್ತೀರ್ಣರಾದವರಿಗೆ 'ಆಯುರ್ವೇದ ಪ್ರವೀಣ' ಪದವಿಯನ್ನು ನೀಡಲಾರಂಭಿಸಿತು.

ಆಡಳಿತಾತ್ಮಕವಾಗಿ ಗಮನಿಸಬೇಕಾದುದೆಂದರೆ 1949–50ರಲ್ಲಿ ಸೆಂಟ್ರಲ್ ಬೋರ್ಡ್ ಆಫ್ ಇಂಡಿಯನ್ ಮೆಡಿಸಿನ್ ಪ್ರಾರಂಭ ವಾಗಿದ್ದಿತಾದರೂ, ತನ್ನ ತುಸು ನಿಷ್ಕ್ರಿಯತೆಯಿಂದಾಗಿ ವಿಸರ್ಜನೆಗೊಂಡಿತು. 1954ರಲ್ಲಿ ದೇಶೀಯ ವೈದ್ಯ ಇಲಾಖೆಯನ್ನು ಪ್ರಾರಂಭಿಸಲಾಯಿತು. ಆದರೆ ಇದನ್ನು 1959ರಲ್ಲಿ ಸ್ಥಳೀಯ ಸಂಸ್ಥೆಗಳ ಕಮೀಷನರ್ ಆಡಳಿತದಿಂದ ಬೇರ್ಪಡಿಸಿ, ಆಧುನಿಕ ವೈದ್ಯಕೀಯ ನಿರ್ದೇಶನಾಲಯದೊಂದಿಗೆ ಐಕ್ಯಗೊಳಿಸಲಾಯಿತು (Directorate of Medical Sciences).

ಕೇಂದ್ರೀಯ ಭಾರತೀಯ ವೈದ್ಯಪದ್ಧತಿ ಸಂಸ್ಥೆ (Central Council of Indian Medicine, CCIM)ಯು ಒಂದು ಸ್ಥಾಪಿತ ಅಂಗವಾಗಿ 1970ರಂದು ಅಸ್ತಿತ್ವಕ್ಕೆ ಬಂದಿತು. ಇದು ಸಮಸ್ತ ಆಧುನಿಕ ವೈದ್ಯ ಶಿಕ್ಷಣ ವ್ಯವಸ್ಥೆಯ ಗುಣಮಟ್ಟವನ್ನು ಹಾಗೂ ಪ್ರಮುಖ ಆಡಳಿತಾತ್ಮಕ ನಿಯಮಗಳನ್ನು ನಿರ್ಧರಿಸಿ ನಿಯಂತ್ರಿಸುತ್ತದೆ. ವೃತ್ತಿನಿರತ ಪದವೀಧರ ವೈದ್ಯರು ತಮ್ಮ ಸೇವಾಕೈಂಕರ್ಯದಲ್ಲಿ ತೊಡಗಿಸಿಕೊಳ್ಳಲು ಆಯುರ್ವೇದ ವೈದ್ಯಕೀಯ ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಬೇಕು.

**ಯುನಾನಿ**

ಪಾಶ್ಚಾತ್ಯ ವೈದ್ಯ ಪಿತಾಮಹ ಹಿಪೋಕ್ರೇಟಿಸ್ ಮತ್ತು ಗ್ಯಾಲನ್ ಸಿದ್ಧಾಂತದ ಭದ್ರ ತಳಹದಿಯ ಮೇಲೆ ಜನ್ಮತಾಳಿದ ಯುನಾನಿ (ಅಯೋನಿಯಾ) ವೈದ್ಯ ಪದ್ಧತಿಯು ಮೂಲತಃ ಗ್ರೀಕರ ವೈದ್ಯ ಪದ್ಧತಿ. ಯುನಾನ್ ಎಂದರೆ ಗ್ರೀಕ್ ದೇಶ. ಪರ್ಷಿಯಾ, ಅರೇಬಿಯಾ ಮತ್ತು ಇರಾನ್ ಪ್ರದೇಶಗಳು ಗ್ರೀಕ್ ರಾಜ್ಯದ ಭಾಗಗಳಾಗಿವೆ. 11ನೆಯ ಶತಮಾನದಲ್ಲಿ ಮಹಮ್ಮದೀಯರು ತಮ್ಮ ದೇಶಗಳಿಂದ ಹೊರಬಂದು ದಕ್ಷಿಣ ಏಷ್ಯಾದಲ್ಲಿ ಕಾಲಿರಿಸಿ ಉತ್ತರ ಭಾರತದಲ್ಲಿ ನೆಲೆಯೂರಿದರು. ವಿಶೇಷವಾಗಿ ಅರಬ್ಬರು ಒಳ್ಳೊಳ್ಳೆಯ ಹಕೀಮರನ್ನು ಭಾರತಕ್ಕೆ ಕರೆತಂದು ಈ ವೈದ್ಯಶಾಸ್ತ್ರ ಪದ್ಧತಿಯನ್ನು ಪ್ರಚಲಿತಗೊಳಿಸಿದರು. ಅಲ್ಲದೆ ಇದು ಭಾರತೀಯ ಆಯುರ್ವೇದದಿಂದ ಮತ್ತೂ ಪ್ರಭಾವಿತಗೊಂಡು ಪುಷ್ಟಿಗೊಂಡಿತು. ಬೆಳೆಯುತ್ತಾ ಎಲ್ಲೆಡೆಗೆ ಹರಡುತ್ತಾ ಮೊಘಲರ ಉತ್ತರ ಭಾರತದ ಮೂರು ಶತಕಗಳ ಆಳ್ವಿಕೆಯಲ್ಲಿ ಸುಸ್ಥಿರಗೊಂಡಿತು. ಮುಸ್ಲಿಂ ದೊರೆಗಳೊಂದಿಗೆ ನವಾಬರು ಮತ್ತು ಅಮೀರರು ಇದನ್ನು ಪೋಷಿಸಿ ಮನ್ನಣೆಯನ್ನಿತ್ತರು. ದಶಕಗಳುರುಳಿದಂತೆ ದಖ್ಖನ್ನಿನ ಬಹಮನಿ ಸುಲ್ತಾನರು ತಮ್ಮ ಆಳ್ವಿಕೆಯಲ್ಲಿ ಇದಕ್ಕೆ ಇಂಬನ್ನಿತ್ತರು. ಸಾಮ್ರಾಟರು ಮತ್ತವರ ಅನುಯಾಯಿಗಳ ಆಸ್ಥಾನಗಳಲ್ಲಿ ಯುನಾನಿ ಹಕೀಮರು ರಾಜವೈದ್ಯರಾಗಿದ್ದರು. ಯುನಾನಿ ವೈದ್ಯ ಪದ್ಧತಿ ಜನಸಾಮಾನ್ಯರ ಆರೋಗ್ಯ ರಕ್ಷಣೆಯತ್ತ ಧಾವಿಸಿ ದೇಶಾದ್ಯಂತ ಪಾರಂಪರಿಕ ವೃತ್ತಿಯಾಗಿ ಹಬ್ಬಿತು. ಬಿಜಾಪುರದ ಹಕೀಮ್ ಮೊಹಮ್ಮದ್ ಖಾಸಿ 'ದಸ್ತೂರಿಲ್ ಅತಿಬ್ಬಾ' ಗ್ರಂಥವನ್ನು ರಚಿಸಿದನು. ಇದೇ ಕಾಲ (ಕ್ರಿ.ಶ. 1590)ದಲ್ಲಿ ಯುನಾನಿ ಮತ್ತು ಆಯುರ್ವೇದ ವೈದ್ಯಕೀಯ ಪದ್ಧತಿಗಳ ಸಂಗಮವಾದ 'ತಿಬ್ಬಿ ಪರಿಷಾಹ' ಎಂಬ 9 ಫೈದಾಗಳನ್ನುಳ್ಳ ಶ್ರೇಷ್ಠ ಕೃತಿಯು ಹೊರಹೊಮ್ಮಿತು. ಇದರಲ್ಲಿ ಅರಸ, ಭೂಮಿ, ದೇಶ ವರ್ಗೀಕರಣ, ದೇಹಶಾಸ್ತ್ರ ಮತ್ತು ದೋಷಶಾಸ್ತ್ರಗಳನ್ನೊಳಗೊಂಡ ಹಲವಾರು ವಿವರಣೆಗಳಿವೆ. ಬಿಜಾಪುರದ ಶಸ್ತ್ರವೈದ್ಯರು ತಮ್ಮ ಗಾಯಾಳು ಸೈನಿಕರ ದುರವಸ್ಥೆಯನ್ನು ಸರಿಪಡಿಸಲು ಶಸ್ತ್ರಕ್ರಿಯೆಯನ್ನು ಕೈಗೊಳ್ಳುತ್ತಿದ್ದರು. ಆಗ ಚರ್ಮಕಸಿ ಪದ್ಧತಿಯು ಬಳಕೆಯಲ್ಲಿದ್ದಿತು. 15ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಕಾಲಿಟ್ಟಿದ್ದ ಯುನಾನಿ ವೆಬ್ ಎಂಬ ಮುಸ್ಲಿಮ್ ವೈದ್ಯ ಪದ್ಧತಿಯೊಂದಿಗೆ ಐರೋಪ್ಯ ಪದ್ಧತಿಯೂ ಪ್ರತಿಸ್ಪರ್ಧಿಯಾಗಿ ನೆಲೆಗೊಂಡಿದ್ದಿತು. ಆದರೆ 19ನೆಯ ಶತಮಾನದ ಹೊತ್ತಿಗೆ ಯುನಾನಿಯು ಆಧುನಿಕ ಐರೋಪ್ಯ ವೈದ್ಯಕೀಯ ಪದ್ಧತಿಯ ಪ್ರಭಾವಕ್ಕೂ ಒಳಗಾಯಿತು. ಮೊದಮೊದಲು ಯುನಾನಿಗೆ ಆಯುರ್ವೇದದೊಡನೆ ಸ್ಪರ್ಧೆಯಿದ್ದಿತಾದರೂ ನಂತರದಲ್ಲಿ ಜನಮಾನಸದಲ್ಲಿ ಹಾಸುಹೊಕ್ಕಾಗಿ ದೇಶದ ಎರಡನೆಯ ವೈದ್ಯಕೀಯ ಪದ್ಧತಿಯಾಗಿ ಪರಿವರ್ತನೆಗೊಂಡಿತು. ಆದರೆ ಬ್ರಿಟಿಷ್ ಆಡಳಿತದ ಪರಿಣಾಮವಾಗಿ ಅದರ ಬೆಳವಣಿಗೆಯು ಕುಂಠಿತಗೊಂಡಿತು.

ಮೈಸೂರು ನಗರದ ಮಂಡಿಮೊಹಲ್ಲಾದಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಳಿ ಮತ್ತು ನಗರಸಭೆಯಿಂದ ಆರ್ಥಿಕವಾಗಿ ಪೋಷಿಸಲ್ಪಡುತ್ತ ಹೊರ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ ಯುನಾನಿ ವೈದ್ಯಶಾಲೆಯ ಕಾರ್ಯನಿರ್ವಹಿಸುತ್ತಿತ್ತು. ಇಲ್ಲಿ ಕೇವಲ ಒಬ್ಬಿಬ್ಬರು ಮುಸ್ಲಿಂ ವಿದ್ಯಾರ್ಥಿಗಳು ಮಾತ್ರ ಇದ್ದರು. ಇದನ್ನು ಕಂಡು ನಿಬ್ಬೆರಗಾದ ಅಂದಿನ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರು ಯುನಾನಿ ವೈದ್ಯ ಪದ್ಧತಿಯ ಪುನರುಜ್ಜೀವನದ ಅಗತ್ಯವನ್ನು ಮನಗಂಡು 1930ರಲ್ಲಿ ಪೂರ್ಣಗೊಂಡಿದ್ದ ಆಯುರ್ವೇದ ಮಹಾಪಾಠಶಾಲೆಯ ಕಟ್ಟಡದಲ್ಲಿಯೇ ಯುನಾನಿ

Digitised by Bharatavani, CIIL

ಶಾಲೆಯನ್ನು ತೆರೆಯಲು ಮುಂದಾದರು. ಅವರಿಂದಲೇ ಅಂದು ಆರಂಭೋತ್ಸವ ಕಂಡ ಆ ಸಂಸ್ಥೆ 'ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು' ಎಂದು ನಾಮಕರಣಗೊಂಡಿತು. ಮುಸ್ಲಿಂ ವಿದ್ಯಾರ್ಥಿಗಳ ಸಂಖ್ಯೆ ಏರಿತು. ಆಡಳಿತಾತ್ಮಕವಾಗಿ ಅದರ ಪ್ರಿನ್ಸಿಪಾಲರು ಯುನಾನಿ ಕಾಲೇಜಿಗೂ ಮುಖ್ಯಾಧಿಕಾರಿಗಳಾಗಿ ಹಾಗೂ ಯುನಾನಿಗೆ ಪ್ರತ್ಯೇಕವಾದ ಸೂಪರಿಂಟೆಂಡೆಂಟರು ನೇಮಕಗೊಂಡರು. ನಾಲ್ಕು ವರ್ಷಗಳ ಅಧ್ಯಯನಾನಂತರ ತಬೀಬ್ – ಎ – ಹಸೀಖ್ ಮತ್ತು ಎಲ್.ಯು.ಎಂ.ಎಸ್. (ಲೈಸೆನ್ಸಿಯೇಟ್ ಇನ್ ಯುನಾನಿ ಮೆಡಿಸಿನ್ ಅಂಡ್ ಸರ್ಜರಿ) ಪದವಿಯನ್ನು ಕೊಡಲಾಗುತ್ತಿದ್ದಿತು. ಇದರ ಮುನ್ನಡೆಯಾಗಿ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಪ್ರತ್ಯೇಕ ಹೊರ ಮತ್ತು ಒಳರೋಗಿ ವಿಭಾಗಗಳನ್ನೊಳಗೊಂಡ ಔಷಧಾಲಯ 'ಲಕ್ನೂರು ಕಾವೇರಿಬಾಯಿ ಶ್ರೀನಿವಾಸರಾವ್ ಔಷಧಾಲಯ' ಹಾಗೂ 'ಶ್ರೀ ಜಯಚಾಮರಾಜೇಂದ್ರ ದೇಶೀಯ ವೈದ್ಯ ಸಂಸ್ಥೆ' ತಲೆಯೆತ್ತಿದ್ದವು. ಭಾರತ ಸರಕಾರವು ಕರ್ನಾಟಕ ಸರಕಾರದೊಂದಿಗೆ ಒಗ್ಗೂಡಿ ಬೆಂಗಳೂರಿನಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಯುನಾನಿ ಮೆಡಿಸಿನ್ (National Institute of Unani Medicine, NIUM) ಸಂಸ್ಥೆಯನ್ನು ಸ್ಥಾಪಿಸಿತು. ಇದನ್ನು ಸ್ನಾತಕೋತ್ತರ ಬೋಧನೆ ಮತ್ತು ಸಂಶೋಧನಾ ಮಾದರಿ ಕೇಂದ್ರವನ್ನಾಗಿ ರೂಪಿಸಲು ಪ್ರಯತ್ನಗಳಾದವು.

ಕರ್ನಾಟಕದಲ್ಲಿ ಬೆಂಗಳೂರಿನ ಸರ್ಕಾರಿ ಯುನಾನಿ ಮೆಡಿಕಲ್ ಕಾಲೇಜು (1975), ಸ್ನಾತಕ BUMS ಮತ್ತು ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಯುನಾನಿ ಮೆಡಿಸಿನ್, ಬೆಂಗಳೂರು 3 ವರ್ಷಗಳ MD (Medicine) ಸ್ನಾತಕೋತ್ತರ ಶಿಕ್ಷಣವನ್ನು ನೀಡುತ್ತಿದೆ. ಬಿಜಾಪುರದ ಟೀಪೂ ಸುಲ್ತಾನ್ ಶಾಹೀದ್ ಎಜುಕೇಷನಲ್ ಟ್ರಸ್ಟ್ ಯುನಾನಿ ಮೆಡಿಕಲ್ ಕಾಲೇಜು (1998) ಮತ್ತು ಗುಲ್ಬರ್ಗಾದ SECAB Association ನ ಲುಕ್‌ಮನ್ ಯುನಾನಿ ಮೆಡಿಕಲ್ ಕಾಲೇಜು (1946) ಇದೆ ಹಾಗೂ ತುಮಕೂರಿನ HMS ಸೊಸೈಟಿಯ ಯುನಾನಿ ಮೆಡಿಕಲ್ ಕಾಲೇಜು (2006) ನಡೆಯುತ್ತಿದ್ದು BUMS ಸ್ನಾತಕ ಪದವಿ ನೀಡುತ್ತಿವೆ. ಇವುಗಳು 5 $^1/_2$ ವರುಷಗಳ ಬಿ.ಯು.ಎಂ.ಎಸ್. (B.U.M.S. Bachelor of Unani Medicine and Surgery) ಪದವಿಯನ್ನು ನೀಡುತ್ತಿವೆ. ಪ್ರಸ್ತುತ ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ (C.C.I.M) (ಸ್ಥಾಪನೆ: 1970) ಇದರ ಬೋಧನಾ ಮತ್ತು ಸಂಶೋಧನಾ ಗುಣಮಟ್ಟವನ್ನು ನಿಯಂತ್ರಿಸುತ್ತಿದೆ.

**ಅಲೋಪಥಿ:** ಪಾಶ್ಚಿಮಾತ್ಯ ವೈದ್ಯ ಪದ್ಧತಿಯಾದ ಅಲೋಪತಿ (ಆಧುನಿಕ ವೈದ್ಯ ಪದ್ಧತಿ)ಯು ಇಂದು ಭಾರತದಾದ್ಯಂತ ಆಳವಾಗಿ ಬೇರೂರಿದೆ. ಇದು ಪೋರ್ಚುಗೀಸರ ಮುಖಾಂತರ ಭಾರತವನ್ನು ಪ್ರವೇಶಿಸಿತೆನ್ನಬಹುದು. ವಿಜಯನಗರದ ಅರಸ ಶ್ರೀ ಕೃಷ್ಣದೇವರಾಯನ ಕಾಲದಲ್ಲಿಯೇ ಗೋವಾ ಪಟ್ಟಣದಲ್ಲಿ ಪೋರ್ಚುಗೀಸ್ ವೈದ್ಯರು ವೃತ್ತಿಜೀವಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಕ್ರಿ.ಶ. 17ನೆಯ ಶತಮಾನದ ವೇಳೆಗೆ ಭಾರತದಲ್ಲಿ ವಿದೇಶಿ ರಾಜ್ಯ ಸ್ಥಾಪನೆಯಾಯಿತು. ಆಗ ಪೋರ್ಚುಗೀಸರು ಭಾರತದ ಅಲ್ಪಭಾಗಗಳಲ್ಲಿ ಹಾಗೂ ಇಂಗ್ಲಿಷರು ಹೆಚ್ಚು ಭಾಗಗಳಲ್ಲಿಯೂ ನೆಲೆಸಿದ್ದರು. ಕ್ರಮೇಣ ಇಂಗ್ಲಿಷರು ಮೇಲುಗೈ ಪಡೆದು 18ನೆಯ ಶತಮಾನದಲ್ಲಿ ಪ್ರಬಲರಾದರು. ಅವರು ಭಾರತದಲ್ಲಿ ನೆಲೆಯೂರಿ ವಸಾಹತುಗಳನ್ನು ನಿರ್ಮಿಸಿದರು. ತಮ್ಮ ಆಳ್ವಿಕೆಯ ಮೂಲಕ ಅವರು ವಿದೇಶಿ ವೈದ್ಯರನ್ನು ಇಲ್ಲಿಗೆ ಕರೆತಂದರು; ಐರೋಪ್ಯ ವೈದ್ಯಕ ವಿದ್ಯೆಗಳು ರೂಢಿಗೆ ಬಂದವು. ಅನೇಕ ಹೊಸ ಹೊಸ ವೈದ್ಯಕೀಯ ಸಲಕರಣೆಗಳು ಅಸ್ತಿತ್ವಕ್ಕೆ ಬಂದವು. ಆಂಗ್ಲ ವೈದ್ಯರ ಪದ್ಧತಿಯು ಹೆಚ್ಚು ವೈಜ್ಞಾನಿಕ ವಿಧಾನದ ಮಹತ್ವ ಮತ್ತು ಹೆಚ್ಚು ಪರಿಣಾಮಕಾರಿ ಔಷಧಿಗಳ ಲಭ್ಯತೆಯನ್ನು ಕಂಡುಕೊಂಡಿತು. ಪಥ್ಯ ಕ್ರಮವಿಲ್ಲದ ಔಷಧಿ ವಿಧಾನ ಹಾಗೂ ತೀವ್ರವಾಗಿ ಗುಣಪಡಿಸಿ ಶೀಘ್ರ ಪರಿಹಾರವನ್ನು ನೀಡುವ ವಿಶಿಷ್ಟ ಗುಣಲಕ್ಷಣಗಳಿಂದ ರಾಜಪ್ರೋತ್ಸಾಹದಿಂದ ಮೊದಲ್ಗೊಂಡು ಜನಸಾಮಾನ್ಯರನ್ನು ತನ್ನೆಡೆಗೆ ಆಕರ್ಷಿಸತೊಡಗಿತು. ದಿನೇ ದಿನೇ ಇದರ ವ್ಯಾಪ್ತಿ, ಪ್ರಾಪ್ತಿ, ಪ್ರಭಾವವು ಹೆಚ್ಚಾದವು. ಇದು ಭಾರತದ ಹಳ್ಳಿ ಹಳ್ಳಿಗೂ ವ್ಯಾಪಿಸಿ ರೂಢಮೂಲವಾಗಿ ರಾಷ್ಟ್ರಮಾನ್ಯತೆ ಪಡೆದ ಜನಪ್ರಿಯ ವೈದ್ಯ ಪದ್ಧತಿಯಾಯಿತು. ಅಂದು ಕಾಣಿಸಿಕೊಂಡ ಪ್ಲೇಗ್, ಮೈಲಿಬೇನೆ (ಸಿಡುಬು) ಮುಂತಾದ ಸಾಂಕ್ರಾಮಿಕ ರೋಗರುಜಿನಗಳನ್ನು ತಡೆಗಟ್ಟಿ ನಿಯಂತ್ರಿಸುವಲ್ಲಿ ಮೇಲುಗೈ ಪಡೆಯಿತು. 1799ರಲ್ಲಿ ಶ್ರೀರಂಗಪಟ್ಟಣದಲ್ಲಿ ಪ್ರಪ್ರಥಮವಾಗಿ ಅಬೈಡು ಬಾಸ್ ಎಂಬುವವನು ಪ್ಲೇಗ್ ಮತ್ತು ಕಾಲರಾ ನಿಯಂತ್ರಣಕ್ಕಾಗಿ ವ್ಯಾಕ್ಸಿನೇಷನ್ ಪದ್ಧತಿಯನ್ನು ಪ್ರಾರಂಭಿಸಿದನು. ಇದು ನಾಡಿನೆಲ್ಲೆಡೆ ಪ್ರಚಾರಗೊಂಡು ಜನಪ್ರಿಯತೆ ಗಳಿಸಿತು. ಹೆರಿಗೆ ಆಸ್ಪತ್ರೆಗಳೊಂದಿಗೆ ನಿರ್ದಿಷ್ಟ ಕಾಯಿಲೆಗಳಿಗೆ ಪ್ರತ್ಯೇಕ ಆಸ್ಪತ್ರೆಗಳನ್ನು ಸ್ಥಾಪಿಸಲಾಯಿತು. ಮನೋರೋಗಿಗಳ ಆಸ್ಪತ್ರೆ (Mental Asylm/Hospital), ಕುಷ್ಠರೋಗ ಆಸ್ಪತ್ರೆ (Leprosorium), ಕ್ಷಯರೋಗ ಆಸ್ಪತ್ರೆ (Sanatorium) ಹಾಗೂ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ (Epidemic diseases Hospital) ಮುಂತಾದವು ಪ್ರಾರಂಭಗೊಂಡವು. ಶ್ರೀ ಚಾಮರಾಜ ಒಡೆಯರ್‌ರವರ ಕಾಲದಲ್ಲಿ (1880) ಮದರಾಸ್ ಮತ್ತು ಬೊಂಬಾಯಿಗಳಲ್ಲಿ ಶಿಕ್ಷಣ ಪಡೆದವರನ್ನು ಮೈಸೂರಿನ ಔಷಧಾಲಯಗಳಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದ್ದಿತು.

ಇಂಗ್ಲಿಷ್ ವೈದ್ಯಕೀಯ ಪದ್ಧತಿಯಲ್ಲಿ ಹೆಚ್ಚು ಜನರನ್ನು ಶಿಕ್ಷಿತರನ್ನಾಗಿ ಮಾಡುವ ಉದ್ದೇಶದಿಂದ 1881ರಲ್ಲಿ ಒಂದು ವೈದ್ಯಕೀಯ ಪಾಠಶಾಲೆಯನ್ನು ಸ್ಥಾಪಿಸಲಾಯಿತು. ಆದರೆ ದಕ್ಷ ಅಧ್ಯಾಪಕರು ಮತ್ತು ಶೈಕ್ಷಣಿಕ ಅವಶ್ಯಕತೆಗಳ ಅಭಾವದಿಂದ ಈ ಶಾಲೆಯನ್ನು 1886ರಲ್ಲಿ ಮುಚ್ಚಬೇಕಾಯಿತು. ವಿದ್ಯಾರ್ಥಿಗಳನ್ನು ಶಿಕ್ಷಣಕ್ಕಾಗಿ ಮದರಾಸ್ ಮತ್ತು ಬೊಂಬಾಯಿಗೆ ವಿದ್ಯಾರ್ಥಿವೇತನಗಳನ್ನು ಕೊಟ್ಟು ಕಳುಹಿಸಲು ಸರ್ಕಾರವು ನಿರ್ಧರಿಸಿತು. 1885ರ ವೇಳೆಗೆ ದೇಶದಾದ್ಯಂತ 116 ಇಂಗ್ಲಿಷ್ ಔಷಧಾಲಯಗಳು ತೆರೆಯಲ್ಪಟ್ಟವು.

1917ರಲ್ಲಿ ಅಂದಿನ ಮೈಸೂರು ರಾಜ್ಯದ ಬೆಂಗಳೂರಿನಲ್ಲಿ ಮೆಡಿಕಲ್ ಸ್ಕೂಲ್ ಪ್ರಾರಂಭವಾಯಿತು. ಇದು ವೈದ್ಯಕೀಯ ಇಲಾಖೆಯ ಹಿರಿಯ ಶಸ್ತ್ರವೈದ್ಯರ ನಿಯಂತ್ರಣದಲ್ಲಿದ್ದಿತು. ಇದು ವಿದ್ಯಾರ್ಥಿಗಳಿಗೆ 4 1/2 ವರ್ಷಗಳ ತರಬೇತಿ ಅವಧಿಯ ನಂತರ ಉತ್ತೀರ್ಣರಾದವರಿಗೆ ಎಲ್.ಎಂ.ಪಿ., ಅರ್ಹತೆಯನ್ನು ನೀಡುತ್ತಿದ್ದಿತು. 1924ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಎಂ.ಬಿ.ಬಿ.ಎಸ್. ವೈದ್ಯಕೀಯ ಶಿಕ್ಷಣ ಕಾಲೇಜು ಪ್ರಾರಂಭಗೊಂಡಿತು. ಈ ಎರಡು ಸಂಸ್ಥೆಗಳು ಮುಂದಿನ ಆರು ವರುಷಗಳವರೆಗೆ ಒಂದೇ ಬೋಧಕ ವರ್ಗದಿಂದ ನಡೆಯುತ್ತಿದ್ದಿತು. 1930ರಲ್ಲಿ ಎಂ.ಬಿ.ಬಿ.ಎಸ್. ವೈದ್ಯಕೀಯ ಕಾಲೇಜು ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತರಗೊಂಡಿತಾದರೂ ಎಲ್.ಎಂ.ಪಿ. ಮೆಡಿಕಲ್ ಸ್ಕೂಲನ್ನು ಬೆಂಗಳೂರಿನಲ್ಲಿ ಉಳಿಸಿಕೊಂಡು ಕಾಲಕ್ರಮೇಣ 1956ರಲ್ಲಿ ಅದನ್ನೂ ಮುಚ್ಚಲಾಯಿತು. 1940ರಲ್ಲಿ ಮೈಸೂರು ಮೆಡಿಕಲ್ ಕಾಲೇಜನ್ನು ವಿಸ್ತರಿಸಲಾಯಿತು.

1896ರಲ್ಲಿ ಬೆಂಗಳೂರು ನಗರದಲ್ಲಿ ಪ್ರತ್ಯೇಕ ನೇತ್ರ ಔಷಧಾಲಯ (ಈಗಿನ ಮಿಂಟೋ ಆಸ್ಪತ್ರೆ, 1913) ಸ್ಥಾಪನೆಯಾಯಿತು. 1914ರಲ್ಲಿ ಮೈಸೂರಿನ ಕೆ.ಆರ್. ಆಸ್ಪತ್ರೆ (ದೊಡ್ಡಾಸ್ಪತ್ರೆ)ಯು ಪ್ರಾರಂಭವಾಯಿತು. ಐರೋಪ್ಯ ವೈದ್ಯ ಪದ್ಧತಿಯು ಕ್ರಮಕ್ರಮವಾಗಿ ರಾಜರು, ಸರ್ಕಾರ, ಗಣ್ಯ ವ್ಯಕ್ತಿಗಳು ಮತ್ತು ಜನಸಾಮಾನ್ಯರಲ್ಲಿ ದೇಶೀಯ ವೈದ್ಯ ಪದ್ಧತಿಗಳಿಗಿಂತ

Digitised by Bharatavani, CIIL

ಹೆಚ್ಚು ಯಶಸ್ವಿ ಹಾಗೂ ಉಪಯುಕ್ತವೆಂದು ಗ್ರಹಿಸಲಾಯಿತು. ಸರಕಾರವು ದೇಶದಾದ್ಯಂತ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣಾ ಕಾರ್ಯಗಳಲ್ಲೆಲ್ಲ ಇದನ್ನೇ ಜಾರಿಗೆ ತರತೊಡಗಿತು. ದೇಶೀಯ ವೈದ್ಯರೂ ಸಾಂಕ್ರಾಮಿಕ ವ್ಯಾಧಿಗಳ ನಿರೋಧಕಕ್ಕೆ ತಮ್ಮ ಚಿಕಿತ್ಸಾ ಕ್ರಮಗಳನ್ನು ಕೈಬಿಡುತ್ತಾ ಬಂದರು. ಆಗಾಗ್ಗೆ ಈ ಪದ್ಧತಿಗಳಲ್ಲಿ ತೀವ್ರ ಸ್ಪರ್ಧೆ ಏರ್ಪಡುತ್ತಿದ್ದಿತು.

1954ರಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜು, 1956ರಲ್ಲಿ ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜು, 1953ರಲ್ಲಿ ಮಣಿಪಾಲದ ಕಸ್ತೂರಿಬಾ ಮೆಡಿಕಲ್ ಕಾಲೇಜು ಹಾಗೂ 1961ರಲ್ಲಿ ಬಳ್ಳಾರಿ ಮೆಡಿಕಲ್ ಕಾಲೇಜು ಅಸ್ತಿತ್ವಕ್ಕೆ ಬಂದವು. 1980ರ ವೇಳೆಗೆ ರಾಜ್ಯದಲ್ಲಿದ್ದ ಒಟ್ಟು 12 ವೈದ್ಯಕೀಯ ಕಾಲೇಜುಗಳಲ್ಲಿ 4 ಸರ್ಕಾರಿ ಸ್ವಾಮ್ಯಕ್ಕೊಳಪಟ್ಟಿದ್ದವು. 1993–94ರಲ್ಲಿ 19 ಮೆಡಿಕಲ್ ಕಾಲೇಜುಗಳಿದ್ದವು. 1995ರಲ್ಲಿ ಬಳ್ಳಾರಿ ಮತ್ತು ಹುಬ್ಬಳ್ಳಿ ಮೆಡಿಕಲ್ ಕಾಲೇಜುಗಳನ್ನು ಸ್ವಾಯತ್ತ ಸಂಸ್ಥೆಗಳೆಂದು ಘೋಷಿಸಲಾಯಿತು. ಪ್ರಸ್ತುತದಲ್ಲಿ ರಾಜ್ಯದಲ್ಲಿ 6 ಹೊಸ ಸರ್ಕಾರಿ ಮೆಡಿಕಲ್ ಕಾಲೇಜುಗಳು (ಹಾಸನ, ಮಂಡ್ಯ, ಬೆಳಗಾಂ, ರಾಯಚೂರು, ಬೀದರ್, ಶಿವಮೊಗ್ಗ) ಸ್ಥಾಪಿಸಲ್ಪಟ್ಟು ಖಾಸಗಿಕಾಲೇಜುಗಳೂ ಸೇರಿ ಒಟ್ಟು 39 ಮೆಡಿಕಲ್ ಕಾಲೇಜುಗಳಿವೆ.

ಬೆಳಗಾವಿಯ ಜೆ.ಎನ್.ಎಂ.ಸಿ.ಯು ಉತ್ತರ ಕರ್ನಾಟಕದಲ್ಲಿ ಪ್ರಾರಂಭಿಸಿದ ಪ್ರಥಮ ಎಂ.ಡಿ., ಸ್ನಾತಕೋತ್ತರ ಶಿಕ್ಷಣ ಕೇಂದ್ರವೆಂಬ ಹೆಗ್ಗಳಿಕೆಯನ್ನು ಹೊಂದಿದೆ.

ಕರ್ನಾಟಕದ ಸರ್ಕಾರಿ ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳು ಭಾರತೀಯ ವೈದ್ಯಕೀಯ ಮಂಡಳಿ (MCI)ಯ ನಿಯಮಗಳ ರೀತ್ಯ ಕಾರ್ಯನಿರ್ವಹಿಸುತ್ತಿವೆ.

**ಮಾನಸಿಕ ಆರೋಗ್ಯ ಮತ್ತು ಶೈಕ್ಷಣಿಕ ಸಂಸ್ಥೆಗಳು:** ಕರ್ನಾಟಕದಲ್ಲಿನ ಮಾನಸಿಕ ಸ್ವಾಸ್ಥ್ಯರಕ್ಷಣೆ ಹಾಗೂ ಶಿಕ್ಷಣ ಕುರಿತಂತೆ ಧಾರವಾಡ ಮತ್ತು ಬೆಂಗಳೂರಿನ ಮಾನಸಿಕ ಆರೋಗ್ಯ ಆಸ್ಪತ್ರೆ ಹಾಗೂ ಶೈಕ್ಷಣಿಕ ಸಂಸ್ಥೆಗಳು ಮಹತ್ವದ ಸ್ಥಾನವನ್ನು ಗಳಿಸಿವೆ.

ಧಾರವಾಡದ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ (K.I.M.H.) ಸಂಸ್ಥೆಯು ಸುಮಾರು 150 ವರುಷಗಳ ಸೇವಾ ಇತಿಹಾಸವನ್ನು ಹೊಂದಿದೆ. 25–9–1908ರ ಬಾಂಬೆ ಪ್ರಾಂತ್ಯದ ದಕ್ಷಿಣ ವಿಭಾಗದ ಅಧೀಕ್ಷಕ ಇಂಜಿನಿಯರ್‌ರವರ ಪತ್ರ ದಾಖಲೆಯ ರೀತ್ಯ ಇದು 1845ರಲ್ಲಿ ಬಾಂಬೆ ಪ್ರಾಂತ್ಯದಲ್ಲಿ ನಿರ್ಮಿಸಲಾದ ಪ್ರಪ್ರಥಮ 'ಹುಚ್ಚಾಸ್ಪತ್ರೆ'ಯಾಗಿದೆ. ಇದಕ್ಕೆ 1922ರಂದು ಸರ್ಕಾರಿ ಮಾನಸಿಕ ಆಸ್ಪತ್ರೆಯೆಂದು ಪುನರ್‌ನಾಮಕರಣ ಮಾಡಲಾಯಿತು. 1963–71ರವರೆಗೆ ಕರ್ನಾಟಕ ವಿಶ್ವವಿದ್ಯಾಲಯವು ಈ ಸಂಸ್ಥೆಗೆ ಬೋಧಕ ಆಸ್ಪತ್ರೆಯೆಂದು ಮನ್ನಣೆ ನೀಡಲಾಗಿ ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜಿನ ಪದವಿ ಕಲಿಕಾ ವಿದ್ಯಾರ್ಥಿಗಳು ಮಾನಸಿಕ ರೋಗಗಳ ಬಗೆಗೆ ಶಿಕ್ಷಣ ಪಡೆಯುತ್ತಿದ್ದರು. 1977–80ರ ಅವಧಿಯಲ್ಲಿ ಸಂಸ್ಥೆಯಲ್ಲಿ ಹೆಚ್ಚಿನ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಪ್ರಯತ್ನಗಳಾದವು. 1979ರಂದು ಆಸ್ಪತ್ರೆಯ ಮುಖ್ಯಸ್ಥ ಡಾ. ಜಿ.ಸಿ. ಸುವರ್ಣ ಅವರು ಕರ್ನಾಟಕ ವಿಶ್ವವಿದ್ಯಾಲಯದ ಮಾನಸಿಕಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ತಜ್ಞತೆಯ ಕೋರ್ಸುಗಳನ್ನು ಪ್ರಾರಂಭಿಸಲು ಆಲೋಚಿಸಿ ಆಸ್ಪತ್ರೆಯಲ್ಲಿ ಶೈಕ್ಷಣಿಕ ವಾತಾವರಣವನ್ನುಂಟುಮಾಡಿದರು. ಡಾ. ವಿ. ವೆಂಕಟರಾಮಯ್ಯ (1980–89)ರವರು 17 ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಇನ್ ಸೈಕಿಯಾಟ್ರಿಕ್ ಮೆಡಿಸಿನ್‌ನ ಶಿಕ್ಷಣವಿತ್ತರು. ಆದರೂ 1989–90ರಂದು ಆಸ್ಪತ್ರೆಯಲ್ಲಿ ತರಬೇತಿ ಹೊಂದಿದ ಮಾನವ ಸಂಪನ್ಮೂಲಗಳ ಕೊರತೆ ಮತ್ತು ಇತರ ಸಮಸ್ಯೆಗಳಿಂದಾಗಿ ಸ್ನಾತಕೋತ್ತರ ತರಬೇತಿಯು ಮುಚ್ಚಲ್ಪಟ್ಟಿತು. ಡಾ. ಹೆಚ್.ಆರ್. ವಿವೇಕಾನಂದರ ಅವಧಿಯಲ್ಲಿ 1993ರಂದು ಈ ಸರ್ಕಾರಿ ಮಾನಸಿಕ ಆಸ್ಪತ್ರೆಯು ಕರ್ನಾಟಕ ಮಾನಸಿಕ ಆರೋಗ್ಯ ಸಂಸ್ಥೆಯೆಂದು ನಾಮಕರಣಗೊಂಡಿತು. KIMH ಸ್ವಾಯತ್ತ ಮತ್ತು ಸ್ವತಂತ್ರ ಸಂಸ್ಥೆಯನ್ನಾಗಿ ರಾಜ್ಯ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ DIMHANS (Dharwad Inistitute of Mental Health and Neuro Services) ಎಂದು ಕರೆಯಲಾಗಿದೆ. ಇದು 375 ಹಾಸಿಗೆ ಸಾಮರ್ಥ್ಯವನ್ನು ಹೊಂದಿದ್ದು ಹೆಚ್ಚಿನ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಹಾಗೂ ಶೈಕ್ಷಣಿಕವಾಗಿ MD ಮತ್ತು MS ಕೋರ್ಸ್‌ಗಳನ್ನು ಆರಂಭಿಸುವ ಉದ್ದೇಶವನ್ನು ಹೊಂದಿದೆ. ಇದು ಉತ್ತರ ಕರ್ನಾಟಕ ವಿಭಾಗದ ಪ್ರಥಮ ಸರ್ಕಾರಿ ಸೂಪರ್ ಸ್ಪೆಷಾಲಿಟಿ (ಅತ್ಯುನ್ನತ ಪರಿಣತಿ ಹೊಂದಿದ) ಆಸ್ಪತ್ರೆಯಾಗಿದೆ. 1998 – 99ರಂದು ಉಚ್ಚ ನ್ಯಾಯಾಲಯದ ಆದೇಶದಂತೆ ಇದನ್ನು ಹುಬ್ಬಳ್ಳಿಯ 'ಕಿಮ್ಸ್'ಗೆ ಹಸ್ತಾಂತರಿಸಲಾಯಿತು.

ಬೆಂಗಳೂರಿನ ಮಾನಸಿಕ ಆಸ್ಪತ್ರೆಯು 19ನೆಯ ಶತಮಾನದ ಉತ್ತರಾರ್ಧದಲ್ಲಿ ಹುಚ್ಚಾಸ್ಪತ್ರೆ (Lunatic Asylm) ಎಂಬುದಾಗಿ ಅಸ್ತಿತ್ವಕ್ಕೆ ಬಂದಿತು. ಆದರೆ ಹೆಚ್ಚುತ್ತಿದ್ದ ಜಾಗೃತಿ, ಮಾನಸಿಕ ರೋಗಿಗಳ ಅನುಕೂಲತೆ ಮತ್ತು ಹಿತಕರ ವಾತಾವರಣದ ಅಗತ್ಯತೆ ಸಲುವಾಗಿ ಅಂದಿನ ರೂಢಮೂಲ ಸಾಮಾಜಿಕ ಹಾಗೂ ವೈದ್ಯಕೀಯ ಅಭಿಪ್ರಾಯದ ಸಡಿಲಿಕೆಯಿಂದಾಗಿ 1925ರಿಂದ ಈ ಸಂಸ್ಥೆಯನ್ನು ಮಾನಸಿಕ ಆಸ್ಪತ್ರೆ (Mental Hospital) ಯೆಂದು ಕರೆಯಲಾಯಿತು. ಇದರ ಮೊದಲ ಅಧೀಕ್ಷಕರಾಗಿ ಡಾ. ಫ್ರಾಂಕ್ ನರೋನಾ ಅವರು 1922ರಿಂದ 1935ರವರೆಗೆ ಕಾರ್ಯನಿರ್ವಹಿಸಿದರು. 1936 ರಂದು ಶ್ರೀ ಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ್–ಉಲ್–ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರ ಅತೀವ ಆಸಕ್ತಿಯ ಫಲವಾಗಿ ಹಾಗೂ ಅವರ ಅನುಮೋದನೆಯ ಮೇರೆಗೆ ಆಸ್ಪತ್ರೆಯನ್ನು ನವೆಂಬರ್ 1937ರಂದು ಈಗಿನ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. 1938ರಂದು ಸ್ನಾತಕ ಮತ್ತು ಸ್ನಾತಕೋತ್ತರ ಮಾನಸಿಕ ರೋಗಗಳ ಶುಶ್ರೂಷೆ ಮತ್ತು ಶಿಕ್ಷಣ ಕುರಿತಂತೆ ಕೆಲವು ಸಾಂಪ್ರದಾಯಿಕ ನಿಯಮಗಳನ್ನು ರೂಪಿಸಲಾಯಿತು. ಭಾರತ ಸರಕಾರವು ಇವುಗಳನ್ನು ಅಂಗೀಕರಿಸಿತು. 1940ರಲ್ಲಿ ಸಂಸ್ಥೆಯು ವೈದ್ಯಕೀಯ ಗ್ರಂಥಭಂಡಾರ ಮತ್ತು ಪ್ರಯೋಗಾಲಯವನ್ನು ಪ್ರಾರಂಭಿಸಿತು ಹಾಗೂ ಎಂ.ಬಿ.ಬಿ.ಎಸ್., ಬಿ.ಎ. ಆನರ್ಸ್ ಇನ್ ಸೈಕಾಲಜಿ ಮತ್ತು ಎಲ್.ಎಂ.ಪಿ. ಕೋರ್ಸುಗಳ ಬೋಧನಾ ಸಂಸ್ಥೆಯೆಂದು ಮನ್ನಣೆ ಪಡೆಯಿತು. ಅಲ್ಲದೆ ಸಂಸ್ಥೆಯನ್ನು ಸ್ನಾತಕೋತ್ತರ ಅಧ್ಯಯನ ಕೈಗೊಳ್ಳಲು ಸೂಕ್ತ ಕೇಂದ್ರವೆಂದು ಪರಿಗಣಿಸಲಾಯಿತು. 1946ರಲ್ಲಿ ಶ್ರೀ ಜೋಸೆಫ್ ಬೋರ್ ಅವರ ಅಧ್ಯಕ್ಷತೆಯ ಆರೋಗ್ಯ ಸರ್ವೇಕ್ಷಣಾ ಮತ್ತು ಪ್ರಗತಿ ಸಮಿತಿ ವರದಿಯ ಶಿಫಾರಸ್ಸಿನ ಮೇರೆಗೆ ಭಾರತ ಸರಕಾರವು ಮಾನಸಿಕ ಆರೋಗ್ಯದ ವಿವಿಧ ಆಯಾಮಗಳ ಕುರಿತ ವೈದ್ಯಕೀಯ ಹಾಗೂ ಅದರ ಸರಕಾರಿ ಸಿಬ್ಬಂದಿ ತರಬೇತಿಯ ಅಗತ್ಯಗಳನ್ನು ಪೂರೈಸಲು ಮೊದಲಾಯಿತು. ಅಂತೆಯೇ ರಾಜ್ಯದ ಮಾನಸಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಯಿತು. 1954ರಲ್ಲಿ ರಾಷ್ಟ್ರಮಟ್ಟದಲ್ಲಿ ಮಾನಸಿಕತಜ್ಞರು, ಮಾನಸಿಕರೋಗತಜ್ಞರು, ಮಾನಸಿಕ ದಾದಿಯರು ಹಾಗೂ ಮಾನಸಿಕ – ಸಾಮಾಜಿಕ ಕಾರ್ಯಕರ್ತರನ್ನು ತರಬೇತಿಗೊಳಿಸಲು ಉದ್ಯುಕ್ತವಾಯಿತು. ಸ್ವಾತಂತ್ರ್ಯಾನಂತರ ಭಾರತ ಸರಕಾರದಿಂದ 1 ಏಪ್ರಿಲ್ 1954ರಂದು ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆ (All India Institute of Mental Health, AIMH)ಯೆಂದು ಅನುಮೋದನೆಗೊಂಡು 6 ಆಗಸ್ಟ್ 1954ರಂದು ಕೇಂದ್ರ ಆರೋಗ್ಯಮಂತ್ರಿ ರಾಜಕುಮಾರಿ ಅಮೃತ ಕೌರ್ ಅವರಿಂದ ಉದ್ಘಾಟನೆಗೊಂಡಿತು. 15

Digitised by Bharatavani, CIIL

ಸೆಪ್ಟೆಂಬರ್ 1954ರಂದು ಇದರ ಪ್ರಥಮ ಹಾಗೂ ಉಸ್ತುವಾರಿ ಅಧೀಕ್ಷಕರಾಗಿ ಮಾನಸಿಕ ರೋಗತಜ್ಞ ಡಾ. ಎಂ.ವಿ. ಗೋಪಾಲಸ್ವಾಮಿಯವರು ನೇಮಕಗೊಂಡರು. ಜನವರಿ 1955 ರಿಂದ ವಾರ್ಷಿಕ ಪ್ರತಿ 12 ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಇನ್ ಸೈಕಲಾಜಿಕಲ್ ಮೆಡಿಸಿನ್ (DPM) ಮತ್ತು ಡಿಪ್ಲೊಮಾ ಇನ್ ಮೆಡಿಕಲ್ ಸೈಕಾಲಜಿ (DPM) ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಿತು. ಇವುಗಳು ಮೈಸೂರು ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡವು. ಜನವರಿ 1956ರಲ್ಲಿ 20 ವಿದ್ಯಾರ್ಥಿಗಳಂತೆ ಡಿಪ್ಲೋಮಾ ಇನ್ ಸೈಕ್ರಿಯಾಟ್ರಿಕ್ ನರ್ಸಿಂಗ್ (DPN) ಪ್ರಮಾಣಪತ್ರೋತ್ತರ ಕೋರ್ಸನ್ನು ನಡೆಸಲಾಗುತ್ತಿತ್ತು. ಅವರಿಗೆ ಮಿತಸಂಬಳ ಯೋಜನೆ ಅನುಕೂಲದೊಂದಿಗೆ ಉಚಿತ ತರಬೇತಿ ಸೌಲಭ್ಯವನ್ನೂ ಒದಗಿಸಲಾಗಿತ್ತು. ಸಂಸ್ಥೆಯು ಖಾಯಂ ಬೋಧಕ ಸಿಬ್ಬಂದಿಯೊಂದಿಗೆ ನರಶಾಸ್ತ್ರ, ಸಂಶೋಧನತಳಿಶಾಸ್ತ್ರ, ಸಾಮಾಜಿಕ ರೋಗಲಕ್ಷಣಶಾಸ್ತ್ರ, ಸಾಮಾಜಿಕ ಜೀವನ ಮತ್ತು ಭಾರತೀಯ ಸಾಮಾಜಿಕ ಸಂಸ್ಥೆಗಳ ಅಧ್ಯಯನದ ಸಲುವಾಗಿ ಗೌರವ ಉಪನ್ಯಾಸಕರನ್ನು ನೇಮಿಸಿತು. 1961–62ರಂದು ವಿದ್ಯಾರ್ಥಿಗಳ ಸಂಖ್ಯೆಯನ್ನು ಏರಿಸಲಾಗಿ 6 ಸೀಟುಗಳನ್ನು ಕರ್ನಾಟಕದವರಿಗೆ ಮೀಸಲಿಡಲಾಯಿತು. ಇದೇ ಅವಧಿಯಲ್ಲಿ ಮಂದ ಮಕ್ಕಳ ಮಾನಸಿಕ ಚಿಂತನಶೀಲತೆ ಹಾಗೂ ತರಬೇತಿ ಕಾರ್ಯಕ್ರಮಗಳತ್ತ ದೃಷ್ಟಿಹರಿಸಲಾಯಿತು. 1964ರಂದು ಆಡಳಿತ ಮತ್ತು ಬೋಧನಾ ವಿಭಾಗವು ಅಸ್ತಿತ್ವಕ್ಕೆ ಬಂದಿತು. 1966ರಂದು ಇದು ಬೆಂಗಳೂರು ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡಿತು. 1962–63ರ ಬೋರ್ಡ್ ಆಫ್ ಸ್ಟಡೀಸ್ ಶಿಫಾರಸ್ಸಿನನ್ವಯ 1966ರಂದು M.D. (ಸೈಕಲಾಜಿಕಲ್ ಮೆಡಿಸಿನ್), D.M. (ನ್ಯೂರಾಲಜಿ), M.C.H. (ನರಚಿಕಿತ್ಸಾಶಾಸ್ತ್ರ), ಡಿಪ್ಲೋಮಾ ಇನ್ ಸೈಕಿಯಾಟ್ರಿಕ್ ಸೋಶಿಯಲ್ ವರ್ಕ್ (D.P.S.W.) ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಿತು. 1973ರಂದು ಇತರೆ ಸ್ನಾತಕೋತ್ತರ ಕೋರ್ಸ್‌ಗಳೊಂದಿಗೆ ಸಂಶೋಧನೆಗೆ ಉತ್ತೇಜಿಸಲಾಯಿತು. 1974ರ ಲಾಗಾಯ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಗ್ಗೂಡಿ ಸೊಸೈಟಿ ಕಾಯ್ದೆಯನ್ವಯ ನೋಂದಾಯಿಸಿ ಇದನ್ನು ಸ್ವಾಯತ್ತ 'ನಿಮ್ಹಾನ್ಸ್' (National Institute of Mental Health and Neuro Sciences, NIMHANS) ಎಂದು ನಾಮಕರಣ ಮಾಡಲಾಯಿತು. ಸಂಸ್ಥೆಯು M.Phil ಹಾಗೂ Ph.d ಕೋರ್ಸ್‌ಗಳೊಂದಿಗೆ ರಾಜ್ಯಮಟ್ಟದ ತರಬೇತಿದಾರರ ತರಬೇತಿ ಕಾರ್ಯಕ್ರಮ (National Mental Health Programme, NMHP)ವನ್ನು ನಡೆಸುತ್ತಿದೆ.

**ದಂತ ವೈದ್ಯಕೀಯ ಸಂಸ್ಥೆಗಳು:** ಕರ್ನಾಟಕ ದಂತವೈದ್ಯ ಶಿಕ್ಷಣವು ವಿಶಿಷ್ಟ ಪರಂಪರೆಯನ್ನು ಹೊಂದಿದೆ. ಪರಿಣಿತ ದಂತವೈದ್ಯರ ಪ್ರಾದೇಶಿಕ ಅವಶ್ಯಕತೆಯನ್ನು ಮನಗಂಡು 1959ರಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ದಂತವೈದ್ಯ ಕಾಲೇಜು ಅಸ್ತಿತ್ವಕ್ಕೆ ಬಂದಿತು. ಅನತಿ ಕಾಲದಲ್ಲಿಯೇ 1965ರಂದು ಮಣಿಪಾಲ್‌ನಲ್ಲಿ ರಾಜ್ಯ ಹಾಗೂ ದೇಶದ ಪ್ರಥಮ ಖಾಸಗಿ ದಂತವೈದ್ಯ ಕಾಲೇಜನ್ನು ತೆರೆಯಲಾಯಿತು. ಮಹತ್ವದ ಅಂಶವೆಂದರೆ 1980ರ ದಶಕದಲ್ಲಿ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ದಂತವೈದ್ಯ ಕಾಲೇಜುಗಳು ತೀವ್ರಗತಿಯಲ್ಲಿ ಪ್ರಾರಂಭವಾದವು. ಒಂದು ವಿಧದಲ್ಲಿ ಇವು ಕರ್ನಾಟಕದ ವೈದ್ಯಕೀಯ ಕ್ಷೇತ್ರದಲ್ಲಿನ ಹಿರಿಮೆಯನ್ನು ವಿಸ್ತರಿಸಿದವು. ವೃತ್ತಿಪರ ಶಿಕ್ಷಣ ಕೇಂದ್ರವು ದೇಶ ವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಿತು. ಇಂದು ರಾಜ್ಯದಾದ್ಯಂತ ನಗರ ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳನ್ನೊಳಗೊಂಡಂತೆ 40ಕ್ಕೂ ಮಿಕ್ಕು ಮನ್ನಣೆ ಪಡೆದ ದಂತ ವೈದ್ಯ ಕಾಲೇಜುಗಳು ಹರಡಿವೆ; ಮತ್ತವುಗಳಲ್ಲಿ ಸುಮಾರು 30 ಕಾಲೇಜುಗಳು ಮನ್ನಣೆ ಪಡೆದು ಸ್ನಾತಕೋತ್ತರ ಪದವಿ ತರಗತಿಗಳನ್ನು ನಡೆಸುತ್ತಿವೆ. ಎಲ್ಲ ಕಾಲೇಜುಗಳು ಪದವೀಧರರಿಗೆ ಬಿ.ಡಿ.ಎಸ್. (B.D.S. Bachelor of Dental Surgery) ಡಿಗ್ರಿಯನ್ನು ನೀಡುತ್ತಿವೆ. ಓರಲ್ ಮೆಡಿಸಿನ್ ಮತ್ತು ರೇಡಿಯಾಲಜಿ (Oral Medicine and Radiology), ಪೆರಿಡೊಂಟಿಕ್ಸ್ (Periodontics), ಕನ್ಸರ್‌ವೇಟಿವ್ ಡೆಂಟಿಸ್ತ್ರಿ (Conservative Dentistry), ಪ್ರಾಸ್ತೋಡಾಂಟಿಕ್ಸ್ (Prosthodontics), ಓರಲ್ ಫೆಥಾಲಜಿ (Oral Pathology) ಮೈಕ್ರೋ ಬಯೋಲಾಜಿ (Micro-biology) ಓರಲ್ ಅಂಡ್ ಮ್ಯಾಕ್ಸಿಲೋಫೇಸಿಯಲ್ ಸರ್ಜರಿ (Oral and Maxillofacial Surgery) ಆರ್ಥೋಡಾಂಟಿಕ್ಸ್ (Orthodontics) ಹಾಗೂ ಕಮ್ಯುನಿಟಿ ಡೆಂಟಿಸ್ತ್ರಿ (Community Dentistry) ವಿಭಾಗಗಳಲ್ಲಿ ವಿಶೇಷ ಶಿಕ್ಷಣ ತರಬೇತಿಯನ್ನು ನೀಡುತ್ತಿವೆ. ಸ್ನಾತಕೋತ್ತರ ಪದವೀಧರರು, ಎಂ.ಡಿ.ಎಸ್. (M.D.S) ಕೋರ್ಸ್ ಪರಿಣತರಾಗಿರುವವರು SDME Society (ಸ್ಥಾಪನೆ 1966)ಯ ಧಾರವಾಡದ ಎಸ್.ಡಿ.ಎಂ. ದಂತವೈದ್ಯ ಕಾಲೇಜಿನಲ್ಲಿ ಭಾರತೀಯ ದಂತವೈದ್ಯ ಸಂಸ್ಥೆ (Dental Council of India) ಯು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (Indira Gandhi National Open University) ದೊಡಗೂಡಿ ಒಂದು ವರ್ಷದ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸನ್ನು ತೆರೆಯಲು ಜೂನ್ 2009 ರಂದು ಅನುಮತಿಯನ್ನಿತ್ತಿದೆ. ಕರ್ನಾಟಕದ ಕೆಲವು ಕಾಲೇಜುಗಳು ಸ್ನಾತಕೋತ್ತರ ಡಿಪ್ಲೋಮಾ ಮತ್ತು ಎಂ.ಡಿ.ಎಸ್.ಕೋರ್ಸ್‌ಗಳೊಂದಿಗೆ ಪಿಎಚ್.ಡಿ., ಸಂಶೋಧನಾ ಕೋರ್ಸುಗಳನ್ನು ಕೂಡಾ ನಡೆಸುತ್ತಿವೆ. ಬಹುತೇಕ ಇವುಗಳು ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ಸೇರಿದವುಗಳಾಗಿವೆ. ಇವುಗಳೆಂದರೆ ಬೆಳಗಾವಿಯ ಕೆ.ಎಲ್.ಇ. ದಂತವೈದ್ಯ ಕಾಲೇಜು, ಮಂಗಳೂರಿನ ಎ.ಬಿ.ಶೆಟ್ಟಿ ದಂತವೈದ್ಯಕೀಯ ಕಾಲೇಜು ಹಾಗೂ ಮಂಗಳೂರು ಮತ್ತು ಮಣಿಪಾಲ್ ದಂತವೈದ್ಯ ವಿಜ್ಞಾನಗಳ ಕಾಲೇಜುಗಳು. ಇವುಗಳಲ್ಲದೆ ರಾಜೀವ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸೇರಿದ ಬೆಂಗಳೂರಿನ ಸರ್ಕಾರಿ ದಂತವೈದ್ಯ ಕಾಲೇಜು ಕೂಡ ಕೆಲವು ದಂತ ವಿಭಾಗಗಳಲ್ಲಿ ಪಿಎಚ್.ಡಿ. ಪದವಿಗೆ ಎಡೆಮಾಡಿಕೊಟ್ಟಿದೆ. ಮೇಲ್ಕಂಡ ಎಲ್ಲ ಸಂಸ್ಥೆಗಳ ಶೈಕ್ಷಣಿಕ ಗುಣಮಟ್ಟವನ್ನು ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ (Dental Council of India, D.C.I.) (ಸ್ಥಾಪನೆ: 1948) ನಿಯಂತ್ರಿಸುತ್ತಿದೆ. ದಂತವೈದ್ಯ ಕಾಲೇಜುಗಳು ಮತ್ತು ಆಸ್ಪತ್ರೆಗಳು ದೇಶದಲ್ಲಿ ಅಧಿಕ ಸಂಖ್ಯೆಯ ದಂತವೈದ್ಯರು ಮತ್ತು ತಜ್ಞರನ್ನು ಉತ್ಪಾದಿಸುವುದರ ಮೂಲಕ ಜನರ ದಂತ ಹಾಗೂ ಬಾಯಿ ಆರೋಗ್ಯ ಸಂರಕ್ಷಣೆ ಮತ್ತು ಸುಧಾರಣೆಯಲ್ಲಿ ಮಹತ್ತರ ಪಾತ್ರವಹಿಸಿ ಬದಲಾವಣೆಯನ್ನುಂಟುಮಾಡಿವೆ.

**ಹೋಮಿಯೋಪಥಿ** ಎಲ್ಲ ದೀರ್ಘಕಾಲೀನ ರೋಗಗಳಿಗೆ ರಾಮಬಾಣವೆನ್ನಲಾದ ಹೋಮಿಯೋಪಥಿ ವೈದ್ಯ ಪದ್ಧತಿಯು ಅತಿ ಕಡಿಮೆ ಪ್ರಮಾಣದ ಔಷಧಿಗಳಿಂದ ಚರ್ಮರೋಗಗಳು, ಅಸ್ತಮಾ ಕಾಯಿಲೆಗಳು, ಕಿವಿ ಸೋರುವಿಕೆ, ಮೂಲವ್ಯಾಧಿ, ಗರ್ಭಿಣಿಯರು ಮತ್ತು ಇತರೇ ಮಹಿಳೆಯರನ್ನು ವ್ಯಾಧಿಮುಕ್ತರನ್ನಾಗಿ ಮಾಡುವಲ್ಲಿ ಅತ್ಯಂತ ಪರಿಣಾಮಕಾರಿ ವಿಶೇಷತೆಯನ್ನುಳ್ಳ ಕ್ರಿಯಾಚಿಕಿತ್ಸಾ ವಿಧಾನವಾಗಿದೆ. ಇದರ ಜನಕ ಜರ್ಮನ್ ದೇಶದ ವೈದ್ಯ ಸಾಮ್ಯುಯೆಲ್ ಹ್ಯಾನಿಮನ್ (1755–1843). ಈ ವೈದ್ಯ ಪದ್ಧತಿಯು ಭಾರತವನ್ನು ಪ್ರವೇಶಿಸಲು ಹೆಚ್ಚು ಸಮಯ ಹಿಡಿಯಲಿಲ್ಲ. 1810ರಲ್ಲಿ ಭೂಗರ್ಭ ಶಾಸ್ತ್ರಜ್ಞನೋರ್ವನು ಮತ್ತು ಫ್ರೆಂಚ್ ಯಾತ್ರಿಕ ಡಾ. ಜಾನ್ ಮಾರ್ಟಿನ್ ಅವರು ಕಲ್ಕತ್ತ ಮತ್ತು ಪಂಜಾಬ್‌ಗೆ ಆಗಮಿಸಿ ಹೋಮಿಯೋಪಥಿ ವೈದ್ಯ ಸಂಪ್ರದಾಯವನ್ನು ಪರಿಚಯಿಸಿದರು. 1839ರಲ್ಲಿ ಎರಡನೆಯ ಬಾರಿ ಭಾರತಕ್ಕೆ ಆಗಮಿಸಿದ ಡಾ. ಮಾರ್ಟಿನ್ನನು 1835ರಲ್ಲಿ ಫ್ರಾನ್ಸ್‌ನಲ್ಲಿ ಹ್ಯಾನ್‌ಮನ್‌ನಿಂದ ಕಲಿತ ವೈದ್ಯವಿದ್ಯೆಯನ್ನು ಪಂಜಾಬಿನ ಮಹಾರಾಜ

Digitised by Bharatavani, CIIL

ರಣಜಿತ್‌ಸಿಂಗ್‌ನ ಮೇಲೆ ಪ್ರಯೋಗಿಸಿ ಯಶಸ್ವಿಯಾದನು. ಇದರ ಪರಿಣಾಮವು ಕರ್ನಾಟಕದಲ್ಲಿಯೂ ಉಂಟಾಯಿತು. 1934ರಲ್ಲಿ ಲೇನರ್, ಗೆಟ್ನರ್ ಮತ್ತು ಹೆಬಿಕ್ ಎಂಬ ಮೂವರು ಜರ್ಮನ್ ಕ್ರೈಸ್ತ ಪಾದ್ರಿಗಳು ಮಂಗಳೂರನ್ನು ತಲುಪಿದರು. ಅವರು ಅನೇಕ ಉಪಾಧ್ಯಾಯರು, ವಕೀಲರು, ಸರ್ಕಾರಿ ಅಧಿಕಾರಿಗಳು, ಅಭಿಯಂತರರು ಹಾಗೂ ಮತ್ತಿತರ ಸಾಮಾಜಿಕ ವ್ಯವಸ್ಥೆಯಲ್ಲಿನ ರೋಗಿಗಳನ್ನು ಹೋಮಿಯೋಪತಿ ವಿಧಾನದಿಂದ ಗುಣಪಡಿಸಿ ಚಕಿತಗೊಳಿಸಿದರು. ಅಲ್ಲದೆ ಕೆಲವು ಆಸಕ್ತರಿಗೆ ಈ ಬಗೆಗೆ ತರಬೇತಿ ನೀಡಿದರು. ಅಂದಿನ ದಿನಮಾನಗಳಲ್ಲಿ ವಿಶಿಷ್ಟವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಲೋಕಲ್ ಫಂಡ್ ಡಿಸ್ಪೆನ್ಸರಿಗಳಾಗಲಿ ಅಥವಾ ತರಬೇತಿ ಹೊಂದಿದ ವೈದ್ಯರಾಗಲಿ ಹೇಳಿಕೊಳ್ಳುವಷ್ಟು ಸಂಖ್ಯೆಯಲ್ಲಿ ಇರಲಿಲ್ಲ. ಕ್ರಮೇಣ ಹೋಮಿಯೋಪಥಿ ಪದ್ಧತಿಯು ಜನಪ್ರಿಯತೆ ಪಡೆಯುತ್ತಿರುವಾಗ ಜರ್ಮನಿಯ ವೆಸ್ಟ್‌ಫೇಲಿಯಾದ ಫಾದರ್ ಅಗಸ್ಟಸ್ ಮ್ಯುಲ್ಲರ್‌ರವರು ಬೆಂಗಳೂರಿಗೆ ಆಗಮಿಸಲು ಕರ್ನಾಟಕವು ತನ್ನ ಶುಕ್ರದೆಸೆಯನ್ನು ಕಂಡುಕೊಂಡಿತು. ಅವರು ಸಂತ ಅಲೋಸಿಯಸ್ ಕಾಲೇಜಿನ ಸಿಬ್ಬಂದಿಯಲ್ಲೊಬ್ಬರಾಗಿ ಸೇರ್ಪಡೆಯಾದರು. ಅವರು ಅಲೋಪತಿಯಿಂದ ತಮ್ಮ ಕಾಯಿಲೆಯನ್ನು ಗುಣಪಡಿಸಿಕೊಳ್ಳಲು ವಿಫಲರಾದಾಗ ಹೋಮಿಯೋಪಥಿಯ ಬಗೆಗೆ ಆಳವಾದ ಆಸಕ್ತಿ ಮತ್ತು ನಂಬಿಕೆಯನ್ನು ತಾಳಿ ಅದರ ಶ್ರೇಯೋಭಿವೃದ್ಧಿಗೆ ತಮ್ಮ ಬದುಕನ್ನು ಪೂರ್ಣವಾಗಿ ಸಮರ್ಪಿಸಿಕೊಂಡರು. ಅವರು 1879ರಲ್ಲಿ ಮಂಗಳೂರಿಗೆ ಆಗಮಿಸಿ ಅಲ್ಲಿನ ಸಂತ ಅಲೋಸಿಯಸ್ ಶಾಲೆಯ ಉಪಾಧ್ಯಾಯರಾಗಿ ಸೇರಿಕೊಂಡರು. ತಮ್ಮ ಬೋಧನೆಯ ಕರ್ತವ್ಯದೊಂದಿಗೆ ಕುಷ್ಠರೋಗಿಗಳಿಗೆ ಹೋಮಿಯೋಪತಿ ಔಷಧಿಗಳನ್ನು ವಿತರಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1880 ರಂದು ಮಂಗಳೂರಿನ ಕಂಕನಾಡಿಯಲ್ಲಿ 'ಬಡವರಿಗಾಗಿ ಹೋಮಿಯೋಪಥಿ ಚಿಕಿತ್ಸಾಲಯ'ವನ್ನು ತೆರೆದರು. 1891ರಂದು ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ ಪರಿತ್ಯಜ್ಯ ಬಡ ಕುಷ್ಠರೋಗಿಗಳ ಗುಣಪಡಿಸುವಿಕೆ ಮತ್ತು ಆರೈಕೆಗಾಗಿ ಸಂತ ಜೋಸೆಫ್ ಕುಷ್ಠರೋಗ ಆಸ್ಪತ್ರೆ ಹಾಗೂ ವಸತಿಗೃಹಗಳನ್ನು ಪ್ರಾರಂಭಿಸಿದರು. 1895ರಂದು ಸಾರ್ವಜನಿಕ ಆಸ್ಪತ್ರೆಯೊಂದನ್ನು ನಿರ್ಮಿಸಲು ಪ್ರಾರಂಭಿಸಿದರು. ಈ ಎಲ್ಲ ಬಿಡುವಿಲ್ಲದ ಕೆಲಸ ಕಾರ್ಯಗಳ ನಡುವೆಯೂ ಹೋಮಿಯೋಪಥಿ ಪದ್ಧತಿ ಮತ್ತು ದೇಹಬಾಧೆ ನಿವಾರಣೆಗಳು ಕುರಿತಂತೆ ಉಪಯುಕ್ತ ಗ್ರಂಥಗಳನ್ನು ಬರೆದು ಪ್ರಕಟಿಸಿದರು. 1902ರಲ್ಲಿ ಭಯಾನಕ ಸಾಂಕ್ರಾಮಿಕ ಪ್ಲೇಗ್ ರೋಗವು ಕಾಣಿಸಿಕೊಳ್ಳಲು, ಪ್ಲೇಗ್ ಆಸ್ಪತ್ರೆಯನ್ನು ನಿರ್ಮಿಸಿ ಪ್ರಶಂಸಾರ್ಹ ಯಶಸ್ವೀ ಹೋಮಿಯೋಪಥಿ ಚಿಕಿತ್ಸೆಯನ್ನು ನೀಡಿ ಮೆಚ್ಚುಗೆಗಳಿಸಿದರು. ಇವರ ಗುರುತರ ಸೇವೆಯನ್ನು ಪರಿಗಣಿಸಿ ವಿವಿಧ ಸಾರ್ವಜನಿಕ ಸಂಘ ಸಂಸ್ಥೆಗಳು ಮತ್ತು ಸರಕಾರವು ಸಮುಚಿತ ಬಿರುದು ಬಾವಲಿಗಳಿಂದ ಇವರನ್ನು ಗೌರವಿಸಿತು. ಮ್ಯುಲ್ಲರ್ ಅವರು 30 ವರ್ಷಗಳ ಕೀರ್ತಿವಂತ ಮಾನವೀಯ ಸೇವೆಯ ನಂತರ 1 ನವೆಂಬರ್ 1910ರಂದು ತಮ್ಮ 69ನೇ ವಯಸ್ಸಿನಲ್ಲಿ ನಿರ್ಗಮಿಸಿದರು. ನಂತರ ಅವರ ಸಮರ್ಥ ಶಿಷ್ಯರಲ್ಲೊಬ್ಬರಾಗಿದ್ದ ಅಲೋಪತಿ ವೈದ್ಯತಜ್ಞ ಡಾ. ಎಲ್.ಪಿ. ಫರ್ನಾಂಡಿಸ್ ಅವರು 10 ಜೂನ್ 1946ರವರೆಗೆ ಫಾದರ್ ಮ್ಯುಲ್ಲರ್‌ರವರ ಅಗಣಿತ ಶ್ಲಾಘನೀಯ ಚಟುವಟಿಕೆಗಳನ್ನು ಮುನ್ನಡೆಸಿದರು.

ಬೆಂಗಳೂರು ನಗರವು ಹೋಮಿಯೋಪಥಿ ವೈದ್ಯ ಪದ್ಧತಿಯಲ್ಲಿ ತನ್ನದೇ ಆದ ವಿಶಿಷ್ಟ ಹೆಜ್ಜೆಗುರುತುಗಳನ್ನು ಮೂಡಿಸಿದೆ. ಇಲ್ಲಿ ಕೆಲವು ಭಾರತೀಯ ಹಾಗೂ ವಿದೇಶಿ ಹೋಮಿಯೋಪಥಿ ವೈದ್ಯರು ತಮ್ಮ ಸ್ಪಷ್ಟ ಛಾಪನ್ನೊತ್ತಿದ್ದಾರೆ. ಎರಡನೆಯ ವಿಶ್ವ ಯುದ್ಧವು ಘಟಿಸುವ ಮುನ್ನವೇ ಅಮೆರಿಕದ ಡಾ. ಡೆಸ್ಮಾಂಡ್, ಜರ್ಮನಿಯ ಡಾ. ಮಾರ್ಟಿನ್ ಬೆಜ್ ಹಾಗೂ ಬೆಂಗಳೂರಿನ ಕೆಲವು ಹಳಬರು ರಾಜ್ಯದಲ್ಲಿನ ಹೋಮಿಯೋಪಥಿ ಬೆಳವಣಿಗೆಗೆ ಹಾಗೂ ನಿಕಟತೆಗೆ ನಾಯಕತ್ವವನ್ನು ತೋರಿ ತಮ್ಮನ್ನು ಸಮಗ್ರವಾಗಿ ಸಮರ್ಪಿಸಿಕೊಂಡರು. ಅವರು ನೀಡಿದ ಅಮಿತ ಸಹಕಾರದಿಂದಾಗಿ ವೈದ್ಯರು ನೋಂದಣಿಗೊಂಡು, ವೈದ್ಯ ಕ್ಷೇತ್ರ ಹಾಗೂ ಸಾರ್ವಜನಿಕ ವಲಯಗಳಲ್ಲಿ ಗಣನೆಗೆ ಬರುವಂತಾಯಿತು. 28 ಆಗಸ್ಟ್ 1975ರಂದು ರಾಜ್ಯ ಹೋಮಿಯೋಪಥಿ ಬೋರ್ಡನ್ನು ರಚಿಸಲಾಯಿತು. ರಾಜ್ಯ ಸರ್ಕಾರದ ಅಂದಿನ ಆರೋಗ್ಯ ಮಂತ್ರಿಗಳಾಗಿದ್ದ ಹೆಚ್. ಸಿದ್ಧವೀರಪ್ಪ ಮತ್ತು ಕೆ.ಆರ್.ಎಸ್. ನಾಯ್ಡುರವರು ಇದರ ರಚನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು. ಅಂದಿನಿಂದ ಇದು ಹೋಮಿಯೋಪತಿಯ ಉಚ್ಛ್ರಾಯ ಸ್ಥಿತಿಗಾಗಿ ನಿರಂತರವಾಗಿ ಶ್ರಮಿಸುತ್ತಾ ಬಂದಿತು. ಹೋಮಿಯೋಪಥಿ ಬೆಳವಣಿಗೆಗಾಗಿ 1983ರಲ್ಲಿ ನವದೆಹಲಿಯ ಕೇಂದ್ರೀಯ ಹೋಮಿಯೋಪಥಿ ಮಂಡಳಿ (Central Council of Homeopathy, CCH) ಯು ಜನ್ಮತಾಳಿ ಈ ಪದ್ಧತಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮುಂದಾಯಿತು. ಇದು 1983ರ ಮುಂಚಿನ L.C.E.H. (Licentiate Court of Examiners in Homeopathy) ಮತ್ತು D.H.M.S. (Diploma in Homeopathic Medicine and Surgery) ಕೋರ್ಸುಗಳನ್ನು 5 $^1/_2$ ವರ್ಷಗಳ B.H.M.S (Bachelor of Homeopathic Medicine and Surgery) ಗೆ ಸಮವಾದುವೆಂದು ಪರಿಗಣಿಸಿತು. 3 ವರುಷಗಳ ಸ್ನಾತಕೋತ್ತರ ಕೋರ್ಸನ್ನು M.D. (Home) ಎಂದು ಕರೆಯಲಾಗಿದೆ.

1943ರಲ್ಲಿ ಮೈಸೂರು ಹೋಮಿಯೋಪಥಿಕ್ ಅಸೋಸಿಯೇಷನ್ ಜನ್ಮತಾಳಿತು. ಅದು ನಂತರದಲ್ಲಿ ಬೆಂಗಳೂರು ಹೋಮಿಯೋಪತಿ ಅಸೋಸಿಯೇಷನ್ ಮತ್ತು ಕೋ–ಆಪರೇಟಿವ್ ಸೊಸೈಟಿಯಾಗಿ ರೂಪುಗೊಂಡಿತು. 1945ರಲ್ಲಿ ಅಖಿಲ ಕರ್ನಾಟಕ ಹೋಮಿಯೋಪಥಿಕ್ ಅಸೋಸಿಯೇಷನ್ (Karnataka Homeopathic Association) ಪ್ರಾರಂಭವಾಗಲು ಅದರಡಿಯಲ್ಲಿ ಎಲ್ಲ ಹೋಮಿಯೋಪಥಿ ಸಂಘಗಳು ಮಿಳಿತಗೊಂಡವು.

ಜಗತ್ತಿನ ಎರಡನೆಯ ಮಹಾಯುದ್ಧದ ಮುನ್ನ ಬೆಂಗಳೂರಿನಲ್ಲಿ ಹೋಮಿಯೋಪಥಿ ವೈದ್ಯ ಪದ್ಧತಿಯನ್ನು ಅನುಸರಿಸಿ ಜನರಿಗೆ ತಲುಪಿಸಿ ಅದರ ಯಶಸ್ಸಿಗೆ ಕಾರಣರಾದವರು ಅನೇಕ ಪ್ರತಿಭಾನ್ವಿತರು. ಅಂಥವರ ಪೈಕಿ ಡಾ. ಟಿ. ಎಸ್. ಐಯ್ಯರ್ ಅವರು ಪ್ರಮುಖವಾಗಿ ಕಂಡುಬರುತ್ತಾರೆ. "Beginners Guide to Homeopathy" ಎಂಬ ಅತ್ಯುಪಯುಕ್ತ ಗ್ರಂಥವನ್ನು ರಚಿಸಿರುವರು. ಅವರ ಹಾದಿಯಲ್ಲಿಯೇ ಮುಂದುವರಿದ ಇನ್ನೊಬ್ಬ ಪ್ರಮುಖರೆಂದರೆ ಶ್ರೀ ತಿರುಪತಿ ಅಯ್ಯರ್.

5 ಅಕ್ಟೋಬರ್ 1971ರಂದು ಬೆಂಗಳೂರು ಸರ್ಕಾರಿ ಹೋಮಿಯೋಪಥಿಕ್ ಕಾಲೇಜು ಸ್ಥಾಪನೆಯ ಆಜ್ಞೆಯು ಹೊರಬಿದ್ದಿತು. 25–11–1971ರಂದು ರಾಜ್ಯ ಸರ್ಕಾರವು ಹೋಮಿಯೋಪಥಿ ವೈದ್ಯ ಪದ್ಧತಿಯ ಉನ್ನತಿಗಾಗಿ ಆರೋಗ್ಯ ಸೇವೆಗಳ ಇಲಾಖಾ ನಿರ್ದೇಶಕ ಡಾ. ಕೆ.ಜಿ. ಸಕ್ಸೇನಾ ಅವರ ಅಧ್ಯಕ್ಷತೆಯಲ್ಲಿ ಐದು ಜನ ಸದಸ್ಯರನ್ನುಳ್ಳ ಸಮಿತಿಯೊಡನೆ ಹೋಮಿಯೋಪಥಿಕ್ ಕನ್ಸಲ್ಟೇಟಿವ್ ಸಮಿತಿಯನ್ನು ರಚಿಸಿತು. 1975ರಲ್ಲಿ ಹೋಮಿಯೋಪಥಿಕ್ ಬೋರ್ಡ್ ಅಸ್ತಿತ್ವಕ್ಕೆ ಬಂದಿತು. 18 ಜುಲೈ 1972ರಂದು ಸರ್ಕಾರವು ದೇಶೀಯ ವೈದ್ಯ ಪದ್ಧತಿಗಳಾದ ಆಯುರ್ವೇದ, ಯುನಾನಿ, ಹೋಮಿಯೋಪಥಿ ಮತ್ತು ಪ್ರಕೃತಿ ಚಿಕಿತ್ಸೆ ಸುಧಾರಣೆಗಾಗಿ ಡಾ. ಮೇಲುಕೋಟೆಯವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯೊಂದನ್ನು ರಚಿಸಿತು. ಸಮಿತಿಯು ಕಾರ್ಯೋನ್ಮುಖವಾಗಿ ಹೋಮಿಯೋಪಥಿ ಪದ್ಧತಿಯ ಬೆಳವಣಿಗೆಗೆ ಅನೇಕ ಸುಧಾರಣೆಗಳನ್ನು ಶಿಫಾರಸ್ಸು ಮಾಡಿತು.

Digitised by Bharatavani, CIIL

1975ರಲ್ಲಿ ಆಯುರ್ವೇದ, ಯುನಾನಿ, ಹೋಮಿಯೋಪಥಿ ವೈದ್ಯ ಪದ್ಧತಿಗಳ ಆಡಳಿತವನ್ನು ನಡೆಸಲು ಭಾರತೀಯ ವೈದ್ಯ ಪದ್ಧತಿಯ ನಿರ್ದೇಶನಾಲಯವನ್ನು ಸೃಷ್ಟಿಸಿತು. ಡಾ. ಕೆ. ಸದಾಶಿವ ಶರ್ಮ ಅವರು ಅದರ ಪ್ರಥಮ ನಿರ್ದೇಶಕರಾಗಿ ನೇಮಕಗೊಂಡರು. ಪ್ರಸ್ತುತ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರವು ಹೊಸ ಕಾಲೇಜುಗಳ ತೆರೆಯುವಿಕೆ, ಸೀಟುಗಳ ಹೆಚ್ಚಳ ಹಾಗೂ ಹೊಸ ಕೋರ್ಸುಗಳ ಪ್ರಾರಂಭಿಸುವಿಕೆ ಮುಂತಾದವುಗಳಿಗೆ ಅನುಮತಿಯನ್ನು ನೀಡುವ ಅಧಿಕಾರವನ್ನು ಹೊಂದಿದೆ.

ಕರ್ನಾಟಕದಲ್ಲಿ ಒಟ್ಟು 11 ಹೋಮಿಯೋಪತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರಿನ ಸರ್ಕಾರಿ ಹೋಮಿಯೋಪಥಿ ಮೆಡಿಕಲ್ ಕಾಲೇಜು (1973–74) (ಇದನ್ನು ಕೊಡಗಿನ ಜಿಲ್ಲೆಯ ಸೋಮವಾರ ಪೇಟೆಯಲ್ಲಿ ಪ್ರಾರಂಭಿಸಲಾಗಿದ್ದಿತ್ತಾದರೂ ನಂತರ ಬೆಂಗಳೂರಿಗೆ ವರ್ಗಾಯಿಸಲಾಯಿತು.) ಮತ್ತು ಭಗವಾನ್ ಬುದ್ಧ ಹೋಮಿಯೋಪತಿ ಮೆಡಿಕಲ್ ಕಾಲೇಜು (1996), ಬೆಳಗಾವಿಯ ಎ.ಎಂ. ಶೇಖ್ ಹೋಮಿಯೋಪಥಿ ಮೆಡಿಕಲ್ ಕಾಲೇಜು (1967), ಎಸ್.ಸಿ.ಎಸ್.ಇ.ಎಸ್. ಶಿವಬಸವಜ್ಯೋತಿ ಹೋಮಿಯೋಪಥಿ ಮೆಡಿಕಲ್ ಕಾಲೇಜು (ಮರಾಠ ಮಂಡಲ ಹೋಮಿಯೋಪಥಿ ಮೆಡಿಕಲ್ ಕಾಲೇಜು) (1982), ಭರತೇಶ ಹೋಮಿಯೋಪಥಿ ಮೆಡಿಕಲ್ ಕಾಲೇಜು (1984), ಸಂಕೇಶ್ವರದ ಆದ್ಯ ಶ್ರೀ ನಿಜಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಎಸ್.ಬಿ. ಶಿರ್ಕೋಲಿ ಹೋಮಿಯೋಪಥಿ ಮೆಡಿಕಲ್ ಕಾಲೇಜು (1992), ಗುಲ್ಬರ್ಗದ ಹೋಮಿಯೋಪಥಿ ಮೆಡಿಕಲ್ ಕಾಲೇಜು (1985–86), ಧಾರವಾಡದ ಬಿ.ಡಿ. ಜತ್ತಿ ಹೋಮಿಯೋಪಥಿ ಮೆಡಿಕಲ್ ಕಾಲೇಜು (1990–91) ಮತ್ತು ಸತ್ಯಸಾಯಿ ಹೋಮಿಯೋಪಥಿ ಮೆಡಿಕಲ್ ಕಾಲೇಜು (2004), ಮೂಡುಬಿದರೆಯ ಆಳ್ವ ಹೋಮಿಯೋಪಥಿ ಮೆಡಿಕಲ್ ಕಾಲೇಜು (2005) ಹಾಗೂ ಮಂಗಳೂರಿನ ಫಾದರ್ ಮ್ಯುಲ್ಲರ್ ಹೋಮಿಯೋಪತಿ ಮೆಡಿಕಲ್ ಕಾಲೇಜು (1985) (1908ರಲ್ಲಿ ನೆರವೇರಿದ ಫಾದರ್ ಮುಲ್ಲರ್‌ರವರ ಶತಮಾನದ ಸ್ಮರಣೆಗಾಗಿ) 5 $^{1}/_{2}$ ವರುಷಗಳ B.H.M.S. ಸ್ನಾತಕ ಪದವಿಗಳನ್ನು ನೀಡುತ್ತಿವೆ. ಅಲ್ಲದೆ ಮೆಟಿರಿಯಾ ಮೆಡಿಕಾ, ಫಾರ್ಮಸಿ ಹಾಗೂ ಆರ್ಗನಾನ್ ಮತ್ತು ಫಿಲಾಸಫಿ ವಿಷಯಗಳಲ್ಲಿ ಸ್ನಾತಕೋತ್ತರ M.D. (Home) ಅಧ್ಯಯನದ ಅನುಕೂಲತೆ ಹಾಗೂ ಅವಕಾಶಗಳಿವೆ.

ಹೋಮಿಯೋಪಥಿ ವೈದ್ಯ ಪದ್ಧತಿಯು 'ಸಮಃ ಸಮಂ ಶಮಯತಿ' (Similia Similibus Curentur) ಅಂದರೆ ಸಮನಾದುದು ಸಮನಾಗಿರುವುದರಿಂದಲೇ ಗುಣವಾಗುತ್ತದೆಯೆಂಬ ತತ್ತ್ವವನ್ನನುಸರಿಸಿ ರೋಗಿಗಳ ಆರೈಕೆಯಲ್ಲಿ ಮುನ್ನಡೆಯುತ್ತಿದೆ.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳು ಹಾಗೂ ಪರಸ್ಪರ ಅವಲಂಬಿತವಾದವುಗಳು. ಸೂಕ್ತ ಹಾಗೂ ಸಮರ್ಥ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ತರಬೇತಿಯ ಬಗೆಗೆ ಜಾಗೃತಿ ಅಗತ್ಯ. ಇವುಗಳ ಮೂಲೋದ್ದೇಶಗಳು ಹಾಗೂ ಸೂತ್ರವಿಧಾನಗಳು ಮಾತ್ರ ಭಿನ್ನವಾದುವು. ಕರ್ನಾಟಕವು ವೈದ್ಯಕೀಯ ಕ್ಷೇತ್ರದಲ್ಲಿ ಪಾರಂಪರಿಕ ದೇಶೀಯ ವೈದ್ಯ ಪದ್ಧತಿಗಳೊಂದಿಗೆ ವಿದೇಶೀಯ ವೈದ್ಯ ಪದ್ಧತಿಗಳನ್ನು ಸಮೀಕರಿಸಿಕೊಂಡು ಸಾಗುತ್ತಿದೆ. ವಿಶ್ವವಿದ್ಯಾನಿಲಯಗಳು, ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖೆಗಳು, ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಮತ್ತು ಶೈಕ್ಷಣಿಕ ಕೇಂದ್ರಗಳು ಈ ದಿಸೆಯಲ್ಲಿ ಗಮನಾರ್ಹ ಹೆಜ್ಜೆಗಳನ್ನಿಟ್ಟಿವೆ. ಕರ್ನಾಟಕದಲ್ಲಿ ಎಲ್ಲ ವೈದ್ಯಕೀಯ ಕಾಲೇಜುಗಳು ರಾಜೀವ್‌ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ನಿಯಂತ್ರಣದಡಿಯಲ್ಲಿ ಶೈಕ್ಷಣಿಕ ಕಾರ್ಯಗಳನ್ನು ನಿರ್ವಹಿಸುತ್ತಿವೆ.

ವೈದ್ಯಕೀಯ ಜ್ಞಾನದ ಪ್ರಸಾರಕ್ಕೆ ಸಮೂಹ ಮಾಧ್ಯಮಗಳಾದ ಪತ್ರಿಕೆಗಳು, ಆಕಾಶವಾಣಿ, ದೂರದರ್ಶನ ಮುಂತಾದ ವಿದ್ಯುನ್ಮಾನಗಳ ಸಮುಚಿತ ಬಳಕೆಯು ಹೆಚ್ಚು ಉಪಯುಕ್ತವಾಗಿದೆ.

ವೈದ್ಯಕೀಯದಂತಹ ಸೇವಾ ವೃತ್ತಿಪರ ವಿಷಯವು ಪ್ರಾಂತೀಯ ಭಾಷೆಗಳಲ್ಲಿ ದೊರಕುವುದು ಬಹಳ ಸೂಕ್ತವಾದುದು. ಅಂತೆಯೇ ವಿವಿಧ ವೈದ್ಯ ಪದ್ಧತಿಗಳಲ್ಲಿ ಅಸಂಖ್ಯ ಶಾಲಾ ಕಾಲೇಜು ಮತ್ತು ಆಸ್ಪತ್ರೆಗಳು ಹಾಗೂ ವಿಶ್ವವಿದ್ಯಾಲಯಗಳು ತಲೆಯೆತ್ತಿವೆ, ಪರಿಣಿತ ವೈದ್ಯರನ್ನು ಉತ್ಪಾದಿಸುತ್ತಿವೆ. ಇದರೊಟ್ಟಿಗೆ ವೈದ್ಯಕೀಯ ವಿಜ್ಞಾನ ಸಂಶೋಧನೆಗಳು ಮತ್ತು ಆಡಳಿತಾತ್ಮಕ ಸುಧಾರಣೆಗಳು ಜರುಗುತ್ತಿವೆ. ಈ ನಿರಂತರ ಸಾಧನೆ, ಸಫಲತೆಗಳು ಪರಿಣಾಮಕಾರಿಯಾಗಿ ಮೂಡಿಬಂದು ವೈದ್ಯಕೀಯ ಶಿಕ್ಷಣದ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿವೆ

– ಎಚ್.ಎ.ಪಾ.

## ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು

ಶಿಕ್ಷಣವನ್ನು ಔಪಚಾರಿಕ ಮತ್ತು ಅನೌಪಚಾರಿಕ ಎಂಬ ಎರಡು ವಿಭಾಗಗಳಲ್ಲಿ ಪ್ರಮುಖವಾಗಿ ವಿಂಗಡಿಸಿ ನೀಡಲಾಗುತ್ತಿದ್ದು, ಔಪಚಾರಿಕ ಶಿಕ್ಷಣವನ್ನು ಸರ್ಕಾರ ಹಾಗೂ ಖಾಸಗಿ ಸಂಘ ಸಂಸ್ಥೆಗಳು ಕೆಲವು ಕ್ರಿಶ್ಚಿಯನ್ ಮಿಷನರಿಗಳು, ಧಾರ್ಮಿಕ ಮಠಮಾನ್ಯಗಳು ಪೂರೈಸುತ್ತಾ ಬಂದಿವೆ. ಔಪಚಾರಿಕ ಶಿಕ್ಷಣಕ್ಕೆ ಬೇಕಾದ ಶಾಲಾಕಟ್ಟಡ, ಶಿಕ್ಷಕರ ನೇಮಕಾತಿ, ಪೀಠೋಪಕರಣಗಳನ್ನು ಒದಗಿಸುವಿಕೆ, ಸುಸಜ್ಜಿತ ಸೌಲಭ್ಯಗಳನ್ನು ಸರ್ಕಾರವು ನೀಡುತ್ತಿದ್ದರೂ ದೇಶದ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಹಾಗೂ ಅನಕ್ಷರತೆ ಪ್ರಮಾಣವನ್ನು ಕಡಿಮೆ ಮಾಡಲು ಅಸಾಧ್ಯವಾಗಿದೆ. ಈ ಕಾರಣದಿಂದಾಗಿ ಸರ್ಕಾರವು ಸಬಲ ಹಾಗೂ ಸೂಕ್ತ ಸಂಘ–ಸಂಸ್ಥೆಗಳಿಗೆ ಶಾಲಾ ಕಾಲೇಜುಗಳನ್ನು ನಡೆಸಲು ಅನುಮತಿಯನ್ನು ನೀಡಿ ಮುಕ್ತ ಅವಕಾಶವನ್ನು ಒದಗಿಸಿಕೊಟ್ಟಿದೆ. ಈ ಅವಕಾಶದ ಸದ್ವಿನಿಯೋಗ ಪಡಿಸಿಕೊಂಡ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣವನ್ನು ನೀಡುವಲ್ಲಿ ತಮ್ಮ ಛಾಪನ್ನು ಎತ್ತಿತೋರಿಸಿವೆ.

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಕೇಂದ್ರ, ರಾಜ್ಯ ಸರ್ಕಾರಿ ಸಂಸ್ಥೆಗಳಿಗಿಂತ ಖಾಸಗಿ ಸಂಸ್ಥೆಗಳೇ ಅಧಿಕ ಪ್ರಮಾಣದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಖಾಸಗಿ ಸಂಸ್ಥೆಗಳನ್ನು ಸ್ಥೂಲವಾಗಿ ಎರಡು ಬಗೆಗಳಲ್ಲಿ ವಿಂಗಡಿಸಬಹುದು.

- ಅನುದಾನಿತ ಸಂಸ್ಥೆಗಳು (Aided Institutions)
- ಅನುದಾನರಹಿತ ಸಂಸ್ಥೆಗಳು (Unaided Institutions)

ಕೇಂದ್ರ, ರಾಜ್ಯ ಅಥವಾ ಸ್ಥಳೀಯ ಸರ್ಕಾರಗಳಿಂದ ಧನ ಸಹಾಯ ಪಡೆದು ಖಾಸಗಿಯವರು, ಮಠಪೀಠಗಳು ಅಥವಾ ಇತರ ಸಂಘ ಸಂಸ್ಥೆಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳೇ ಅನುದಾನಿತ ಸಂಸ್ಥೆಗಳು. ಈ ಸಂಸ್ಥೆಗಳು ಸರ್ಕಾರದ ನೀತಿ ನಿಯಮಗಳನ್ನು ಅನುಸರಿಸ ಬೇಕಾಗುವುದು. ಇಂತಹ ಸಂಸ್ಥೆಗಳು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅಂಗೀಕಾರವನ್ನು ಪಡೆದು ಅದರ ಆದೇಶ ನಿರ್ದೇಶನಗಳಿಗೂ ಮೇಲ್ವಿಚಾರಣೆಗೂ ಒಳಪಟ್ಟಿರಬೇಕು. ಆಡಳಿತದ ಹೊಣೆಗಾರಿಕೆ ಮಾತ್ರ ಖಾಸಗಿಯವರಿಗೆ ಸೇರಿರುತ್ತದೆ.

ಸರ್ಕಾರದ ಯಾವುದೇ ಧನಸಹಾಯವಿಲ್ಲದೆ ಖಾಸಗಿಯವರು, ಮಠಪೀಠಗಳು ಅಥವಾ ಇತರೇ ಯಾವುದೇ ಸಂಘ ಸಂಸ್ಥೆಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳೇ

Digitised by Bharatavani, CIIL

ಅನುದಾನರಹಿತ ಸಂಸ್ಥೆಗಳು. ಇವುಗಳಿಗೆ ಸರ್ಕಾರದ ಹಣಕಾಸಿನ ನೆರವಿಲ್ಲದಿದ್ದರೂ ಸಹ ಸರ್ಕಾರದ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ನೀತಿ ನಿಯಮಗಳಿಗೆ ಅನುಗುಣವಾಗಿ ಅವುಗಳ ಆದೇಶ ನಿರ್ದೇಶನ ಮೇಲ್ವಿಚಾರಣೆಗೆ ಒಳಪಟ್ಟಿರಬೇಕು. ಇವುಗಳ ಆಡಳಿತದ ಪೂರ್ಣ ಜವಾಬ್ದಾರಿಯು ಆ ಸಂಸ್ಥೆಯ ಆಡಳಿತ ಮಂಡಳಿ ಅಥವಾ ಖಾಸಗಿ ವ್ಯಕ್ತಿಗಳಿಗೆ ಸೇರಿರುತ್ತದೆ.

ಖಾಸಗಿ ಸಂಸ್ಥೆಗಳನ್ನು ನಿರ್ವಹಿಸುವ ಆಡಳಿತ ಮಂಡಳಿಯ ಆಧಾರದ ಮೇಲೆ ಈ ಕೆಳಗಿನಂತೆ ವಿಭಾಗಿಸಬಹುದು.

- ಧಾರ್ಮಿಕ ಸಂಸ್ಥೆಗಳು
- ನೋಂದಾಯಿತ ವಿಶ್ವಸ್ಥ ಮಂಡಳಿಗಳು
- ಖಾಸಗಿ ಆಡಳಿತ ಮಂಡಳಿಗಳು
- ವೈಯಕ್ತಿಕ ಸಂಸ್ಥೆಗಳು.

**ಧಾರ್ಮಿಕ ಸಂಸ್ಥೆಗಳು:** ಉತ್ತಮ ರೀತಿಯಲ್ಲಿ ಜನತೆಗೆ ಶಿಕ್ಷಣ ನೀಡಲು ಅನೇಕ ಮಠ–ಮಾನ್ಯಗಳು, ಕ್ರೈಸ್ತ ಪೀಠಗಳು, ಮುಸ್ಲಿಂ ಸಂಘಟನೆಗಳು, ಹಿಂದೂ ಸಂಘಟನೆಗಳು ಮುಂತಾದ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿವೆ. ಇವು ಸರ್ಕಾರದಿಂದ ಅನುದಾನ ಪಡೆಯಬಹುದು ಅಥವಾ ಪಡೆಯದಿರಬಹುದು.

**ನೋಂದಾಯಿತ ವಿಶ್ವಸ್ಥ ಮಂಡಳಿಗಳು:** ಕೆಲವು ನೋಂದಾಯಿತ ಅಥವಾ ಆಯ್ಕೆಯಾದ ಸದಸ್ಯರು ಆಡಳಿತ ಮಂಡಳಿಯನ್ನು ರಚಿಸಿಕೊಂಡು ಅಧ್ಯಕ್ಷರು, ಕಾರ್ಯದರ್ಶಿ ಮುಂತಾದವರನ್ನು ಆಯ್ಕೆಮಾಡಿ ಕೊಂಡಿರುತ್ತಾರೆ. ಇಂತಹ ಬಗೆಯ ಮಂಡಳಿಗಳು ಕೂಡ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ನಡೆಸುತ್ತವೆ. ಇವು ಕೂಡ ಸರ್ಕಾರದಿಂದ ಅನುದಾನ ಪಡೆಯಬಹುದು ಅಥವಾ ಪಡೆಯದಿರಬಹುದು.

**ವೈಯಕ್ತಿಕ ಸಂಸ್ಥೆಗಳು:** ಸಮಾಜದ ಗಣ್ಯವ್ಯಕ್ತಿಗಳು ಅಥವಾ ಶ್ರೀಮಂತರು ತಮ್ಮ ಒಡೆತನದಲ್ಲಿ ಕೆಲವು ಶಾಲಾ ಕಾಲೇಜುಗಳನ್ನು ತೆರೆದು ನಿರ್ವಹಿಸುವುದುಂಟು. ನಿರ್ವಹಣೆಗೆ ಬೇಕಾದ ಸಂಪನ್ಮೂಲಗಳನ್ನು ತಾವೇ ಕ್ರೋಡೀಕರಿಸಿಕೊಳ್ಳಬೇಕಾಗುವುದು. ಇಂತಹ ಹಲವಾರು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದನ್ನು ನಾವು ಕಾಣಬಹುದು.

**ಖಾಸಗಿ ಆಡಳಿತ ಮಂಡಳಿಗಳು:** ಸಮಾಜದ ಕೆಲವು ವ್ಯಕ್ತಿಗಳು ಅಥವಾ ವ್ಯಕ್ತಿಗಳ ಸಮೂಹ ಸೇರಿ ಆಯಾ ಪ್ರದೇಶಗಳ ಶೈಕ್ಷಣಿಕ ಅಗತ್ಯತೆಗಳನ್ನು ಪೂರೈಸುವ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬಹುದು. ಇವುಗಳನ್ನು ಇವರುಗಳೇ ನಡೆಸುತ್ತಾರೆ. ಇವರಲ್ಲಿ ಚುನಾಯಿತ ಸದಸ್ಯರಿರಬಹುದು. ಇವರೂ ಕೂಡ ಆಡಳಿತ ಮಂಡಳಿಗಳನ್ನು ಸ್ಥಾಪಿಸಿಕೊಂಡು ಅವುಗಳ ಮೂಲಕ ಕಾರ್ಯನಿರ್ವಹಿಸುತ್ತಾರೆ. ಇವು ಸಹ ಸರ್ಕಾರದಿಂದ ಅನುದಾನ ಪಡೆಯುತ್ತಿರಬಹುದು ಅಥವಾ ಪಡೆಯದಿರಬಹುದು.

ಶಾಲಾ ಶಿಕ್ಷಣವನ್ನು ನೀಡುವುದು ಸರ್ಕಾರದ ಮಹತ್ತರ ಹೊಣೆಗಾರಿಕೆಗಳಲ್ಲೊಂದು. ಆದರೆ ಇದು ಕೇವಲ ಸರ್ಕಾರಕ್ಕೆ ಮಾತ್ರ ಸೀಮಿತಗೊಂಡರೆ ಹಲವಾರು ಗಂಭೀರ ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಹಳ್ಳಿ ಪಟ್ಟಣಗಳೆನ್ನದೆ, ಪ್ರಾಥಮಿಕದಿಂದ ಉನ್ನತ ಹಂತದವರೆಗೂ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾ ಸಾಗಿವೆ.

ಬಹು ಪ್ರಮುಖವಾಗಿ ಹೇಳುವುದಾದರೆ ಹಳ್ಳಿ ಹಳ್ಳಿಗಳಲ್ಲಿ ಪ್ರಾರಂಭಿಸಲ್ಪಟ್ಟಿರುವ ಖಾಸಗಿ ಶಾಲೆಗಳು ವಿದ್ಯಾರ್ಥಿಗಳು ಸೂಕ್ತ ರೀತಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಹಂಚಿಕೆಯಾಗುವಲ್ಲಿ ನೆರವಾಗುತ್ತಿವೆ.

ಇನ್ನು ಗುಣಮಟ್ಟದ ವಿಷಯವನ್ನು ತೆಗೆದುಕೊಂಡರೆ ಸಹಜವಾಗಿಯೇ ಕಂಡುಬರುವಂತೆ ಅನೇಕ ಯೋಜನೆಗಳ ಶಿಫಾರಸ್ಸುಗಳು, ಆಯೋಗಗಳ ಸಲಹೆಗಳ ನಂತರವೂ ಸರ್ಕಾರಿ ಶಾಲೆಗಳಲ್ಲಿನ ಗುಣಮಟ್ಟವನ್ನು ಅರ್ಧದಷ್ಟು ಸುಧಾರಿಸಲಾಗುತ್ತಿಲ್ಲ. ಯೋಜನೆಗಳ ಅನುಷ್ಠಾನ ಪ್ರಾರಂಭಿಕ ಹಂತದಲ್ಲಿ ಉತ್ತಮವಾಗಿದ್ದರೂ, ಸೂಕ್ತ ಮೇಲ್ವಿಚಾರಣೆ ಹಾಗೂ ತಪಾಸಣೆಯ ಕೊರತೆಯಿಂದಾಗಿ ನಂತರದ ಹಂತದಲ್ಲಿ ಕುಂಠಿತಗೊಂಡಿವೆ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮಲ್ಲಿಯ ಪೈಪೋಟಿಯನ್ನು ಎದುರಿಸಲು ಹಾಗೂ ಸ್ಪರ್ಧೆಯಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಶಿಕ್ಷಣದಲ್ಲಿ ಉತ್ಕೃಷ್ಟತೆಯನ್ನು ಕಾಪಾಡಿಕೊಳ್ಳುವಲ್ಲಿ ಕ್ರಿಯಾಶೀಲವಾಗಿವೆ. ಸೃಜನಶೀಲತೆ, ನಮ್ಯತೆ ಹಾಗೂ ಪ್ರತಿಭಾವಂತರಿಗೆ ಅವಕಾಶ ಒದಗಿಸುವುದರ ಮೂಲಕ ಸೇವೆಗೆ ದಾರಿಮಾಡಿಕೊಡುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಗಣನೀಯವಾಗಿದೆ.

ಶಿಕ್ಷಕರಿಗೆ ನುರಿತ, ಕಾರ್ಯಕ್ಷಮತೆಯ ಸಂಪನ್ಮೂಲ ವ್ಯಕ್ತಿಗಳಿಂದ ಕಾಲಕ್ಕೆ ತಕ್ಕಂತೆ ತರಬೇತಿ ಮತ್ತು ಮಾರ್ಗದರ್ಶನವನ್ನು ಕೊಡಿಸುವುದರ ಮೂಲಕ ಜಾಗತೀಕರಣದ ಸವಾಲುಗಳನ್ನು ಎದುರಿಸಲು ಆತ್ಮವಿಶ್ವಾಸ ನೀಡುವುದರ ಜೊತೆಗೆ ವಿದ್ಯಾರ್ಥಿಗಳನ್ನು ಆ ನಿಟ್ಟಿನಲ್ಲಿ ಸಜ್ಜುಗೊಳಿಸಲು ಶಿಕ್ಷಕರಿಗೆ ನೆರವಾಗುತ್ತಿವೆ. ಇದಲ್ಲದೆ ಆಧುನಿಕ ತಂತ್ರಜ್ಞಾನದ ಬಳಕೆ, ಅಂತರ್ಜಾಲದ ಸದ್ಬಳಕೆಯ ಅವಕಾಶ ಸರ್ಕಾರಿ ಶಾಲೆಗಳಲ್ಲಿ ವಿರಳವಾಗಿ ಕಂಡುಬಂದರೂ ಹೆಚ್ಚಿನ ಸದುಪಯೋಗಪಡಿಸಿಕೊಂಡು ನಾಗಾಲೋಟದಲ್ಲಿ ಮುನ್ನುಗ್ಗುತ್ತಿರುವ ಜಾಗತೀಕರಣದ ಜಗತ್ತಿಗೆ ಎದೆಕೊಟ್ಟು ನಿಲ್ಲುವಂತೆ ಮಾಡುತ್ತಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳು.

ಪೂರ್ವ ನಿರ್ಧಾರಿತ ಯೋಜನೆ ಹಾಗೂ ಅವುಗಳ ಅನುಷ್ಠಾನವನ್ನು ಇತರೇ ಸಿಬ್ಬಂದಿ ವರ್ಗದವರೊಡನೆ ಚರ್ಚಿಸಿ, ಸಮಾಲೋಚಿಸಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವ ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಕಾಣಬಹುದಾಗಿದೆ. ಇವುಗಳು ಸಂಸ್ಥೆಯ ಉಳಿವಿಗಾಗಿ, ಸಮಯ, ಹಣ, ಶಿಸ್ತು ಮತ್ತು ಕಾರ್ಯದಕ್ಷತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತವೆ. ಸಂಪ್ರದಾಯ ಆಧಾರಿತ ಬೋಧನಾ ಪದ್ಧತಿ ಉತ್ತಮವಾಗಿದ್ದರೂ, ಪೀಳಿಗೆಗಳ ಅಂತರದಿಂದಾಗಿ ಈ ವಿಧಾನಗಳಲ್ಲಿ ಪ್ರಸಕ್ತ ಬದಲಾವಣೆಗಳನ್ನು ತರುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳದ್ದೇ ಮೇಲುಗೈ.

ಮತ್ತೊಂದು ಪ್ರಮುಖವಾದ ಅಂಶವೆಂದರೆ ಉದ್ಯೋಗ. ಉದ್ಯೋಗವಿದ್ದರೆ ಮಾತ್ರ ಜೀವನದ ಹಾದಿಯನ್ನು ಸಾಗಿಸಲು ಸಾಧ್ಯ. ಮಿತಿಮೀರಿದ ಜನಸಂಖ್ಯೆಯಿರುವ ಭಾರತದಂತಹ ದೇಶಕ್ಕೆ ಸರ್ಕಾರವೇ ಉದ್ಯೋಗ ಒದಗಿಸಬೇಕೆಂದಿದ್ದರೆ ಅದು ಕಲ್ಪನೆಗೆ ನಿಲುಕದ ಸಂಗತಿಯಾಗುತ್ತದೆ. ಈ ಒಂದು ಕೊರತೆಯನ್ನು ಖಾಸಗಿ ಶಿಕ್ಷಣ – ಸಂಸ್ಥೆಗಳು ಹೋಗಲಾಡಿಸುತ್ತಿವೆ. ಪ್ರತಿಭಾವಂತ ಹಾಗೂ ನುರಿತ ಶಿಕ್ಷಕರಿಗೆ ಉದ್ಯೋಗ ಕಲ್ಪಿಸಿಕೊಟ್ಟು ಅವರ ಜೀವನ ನಿರ್ವಹಣೆಗೆ ಸಹಾಯ ಒದಗಿಸುತ್ತಿವೆ. ಎಲ್ಲಾ ಪದವೀಧರರಿಗೂ ಸರ್ಕಾರವೇ ಉದ್ಯೋಗವನ್ನು ಕಲ್ಪಿಸಿಕೊಡುವುದಾಗಿದ್ದರೆ, ಹೆಚ್ಚಿನ ಆರ್ಥಿಕ ಹೊರೆ ಸರ್ಕಾರದ ಮೇಲೆ ಬೀಳುತ್ತಿದ್ದು, ವೆಚ್ಚದಾಯಕವಾಗಿ ಪರಿಣಮಿಸುತ್ತಿತ್ತು, ಈಗ ಈ ಸರ್ಕಾರದ ಹೊರೆಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಸರಿದೂಗಿಸಿದ್ದು, ಹಲವಾರು ರೀತಿಯ ನೌಕರ ವರ್ಗದವರಿಗೆ ಉದ್ಯೋಗವನ್ನು ನೀಡಿ ದೇಶದ ತಲಾ

Digitised by Bharatavani, CIIL

ಆದಾಯದ ಜೊತೆಗೆ ರಾಷ್ಟ್ರೀಯ ಆದಾಯದ ಹೆಚ್ಚಳಕ್ಕೆ ಅನುಕೂಲ ಮಾಡಿಕೊಟ್ಟಿವೆ.

ಇನ್ನು ಉನ್ನತ ಶಿಕ್ಷಣವನ್ನು ಪರಿಗಣಿಸಿದರೆ ಪ್ರತಿಯೊಂದು ನಗರದಲ್ಲಿ ಸರ್ಕಾರಕ್ಕೆ ಸಂಬಂಧಪಟ್ಟ ಮಹಾವಿದ್ಯಾಲಯಗಳು, ಕಾಲೇಜುಗಳಿದ್ದರೂ ಅವು ಬೆರಳೆಣಿಕೆಯಷ್ಟು ಮಾತ್ರ. ದಾಖಲಾತಿಯ ಗೊಂದಲವನ್ನು ದೂರಮಾಡಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆಯುವಂತಾಗಿರುವುದು. ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ವಿಶೇಷವಾಗಿ ವಿದ್ಯಾರ್ಥಿನಿಯರು. ಖಾಸಗಿ ಶಿಕ್ಷಣ ಸಂಸ್ಥೆಗಳು ಸ್ಥಳೀಯ ಪ್ರದೇಶಗಳಲ್ಲಿಯೇ ಸ್ಥಾಪಿಸಲ್ಪಟ್ಟು ಶಿಕ್ಷಣಕ್ಕೆ ಅವಕಾಶ ಕಲ್ಪಿಸಿರುವುದರಿಂದ ಹೆಚ್ಚು ಪ್ರಮಾಣದಲ್ಲಿ ವಿದ್ಯಾರ್ಹತೆ ಹೊಂದಲು ಸಾಧ್ಯವಾಗಿದೆ. ಇದರಿಂದ ಉನ್ನತ ಶಿಕ್ಷಣ ಹಂತದಲ್ಲೂ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆ ಕಡಿಮೆಯಿದ್ದರೂ ಶೇಕಡ 25–30 ಪ್ರತಿಶತ ಅವಕಾಶವನ್ನು ಉಪಯೋಗಪಡಿಸಿಕೊಳ್ಳಲು ಸಾಧ್ಯವಾಗಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಮಾತ್ರ.

ಇಂದಿನ ವಿದ್ಯಮಾನದಲ್ಲಿ ಬೇಡಿಕೆ ಇರುವ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಿ ವಿವಿಧ ಕೋರ್ಸುಗಳನ್ನು ಪ್ರಾರಂಭಿಸುವುದರ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳು ನವೀನ ರೀತಿಯ ಜೀವನ ನಿರ್ವಹಣೆಯ ಮಾರ್ಗಗಳನ್ನು ಹುಡುಕಿಕೊಟ್ಟಿವೆ. ಬೋಧನೆಯಲ್ಲಿ ಹೊಸ ವಿಧಾನಗಳ ಅಳವಡಿಕೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ, ಸಂಶೋಧನೆಗೂ ಕೂಡ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೆರವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಒದಗಿಸುತ್ತಿವೆ. ಕ್ರೀಡೆ, ಸ್ಪರ್ಧೆ, ಸಾಂಸ್ಕೃತಿಕ ಚಟುವಟಿಕೆಗಳ ಸುಸಜ್ಜಿತ ಸಂಘಟನೆಯಿಂದ ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆಯನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹ ಒದಗಿಸುತ್ತಿವೆ.

ಸರ್ಕಾರಿ ಶಾಲೆಗಳಲ್ಲಿನ ಮಕ್ಕಳು ಸರಾಸರಿ ಮಟ್ಟದಲ್ಲಿ ಕಲಿಯುವಿಕೆಯಲ್ಲಿ ತೊಡಗಿದ್ದು, ಪ್ರತಿಭಾವಂತ ಹಾಗೂ ಸೃಜನಶೀಲತೆಯನ್ನು ಹೊಂದಿರುವ ವಿದ್ಯಾರ್ಥಿಗಳ ಜ್ಞಾನಾರ್ಜನೆಯನ್ನು ಪೂರ್ತಿ ಮಾಡುವಲ್ಲಿ ಯಶಸ್ವಿಯಾಗಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳು, ವೈಯಕ್ತಿಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯ ಕಡೆ ಗಮನವಿಡುವುದು, ನಿರಂತರ ಮತ್ತು ಸಮಗ್ರ ಪರೀಕ್ಷೆ ಮತ್ತು ಮೌಲ್ಯಮಾಪನ, ವಿದ್ಯಾರ್ಥಿಗಳ ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ತಕ್ಕಂತಹ ತರಬೇತಿ ಮತ್ತು ಬೋಧನೆ, ಅನುಭವಿ ಮತ್ತು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ಒದಗಿಸುವುದು, ಚಟುವಟಿಕೆ ಹಾಗೂ ಪ್ರಾಯೋಗಿಕ ಜ್ಞಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು, ಮಾರಿಗಳು, ಭೂಪಟಗಳು, ಕಲಿಕೋಪಕರಣಗಳ ಸಮರ್ಪಕ ಬಳಕೆ, ಬದಲಾದ ವಿದ್ಯಮಾನಗಳಿಗೆ ತಕ್ಕಂತೆ ಜ್ಞಾನದ ಪೂರೈಕೆ, ಸಮರ್ಥ ವ್ಯಕ್ತಿಗಳಿಗೆ ಸೇವೆಗೆ ಅವಕಾಶ ನೀಡಿರುವುದು, ಶಿಸ್ತು, ಸಮಯಪಾಲನೆ, ನಿಯಮಪಾಲನೆ ಕಾರ್ಯಕ್ಷಮತೆ, ಸಂಸ್ಕೃತಿ ಸಂಸ್ಕಾರಗಳನ್ನು ಕಟ್ಟುನಿಟ್ಟಾಗಿ ತಮ್ಮ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳನ್ನು ತರುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಅತ್ಯಂತ ಶ್ಲಾಘನೀಯ.

ಸರ್ಕಾರಕ್ಕೆ ಒಂದು ಮಾದರಿಯಂತೆ ಕಾರ್ಯನಿರ್ವಹಿಸುವುದರ ಜೊತೆಗೆ ಹೊಸತನಕ್ಕೆ ಅವಕಾಶ ಒದಗಿಸಿ, ಸರ್ಕಾರಿ ನೌಕರ ವರ್ಗದವರಿಗೂ ತರಬೇತಿಯನ್ನು ನೀಡಿ ಬದಲಾವಣೆಯ ದಾರಿಯಲ್ಲಿ ಸಾಗುವಂತೆ ಮಾಡಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳು. ಒಟ್ಟಿನಲ್ಲಿ ಶಿಕ್ಷಣ ಕ್ಷೇತ್ರದ ಆಮೂಲಾಗ್ರ ಬದಲಾವಣೆಗೆ ಹಾಗೂ ಸ್ಪರ್ಧಾ ಜಗತ್ತಿನ ಪೈಪೋಟಿಗೆ ವಿದ್ಯಾರ್ಥಿಗಳನ್ನು ಹೊಂದಿಕೊಳ್ಳುವಂತೆ ಮಾಡಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳ ಅತ್ಯಮೂಲ್ಯ ಕೊಡುಗೆ.

**ಶಿಕ್ಷಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ನಿರ್ವಹಿಸುತ್ತಿರುವ ಪ್ರಮುಖ ಕಾರ್ಯಗಳು**

- ತಮ್ಮ ಸ್ಥಳೀಯ ಅಗತ್ಯತೆಗಳಿಗನುಗುಣವಾದ ಶಾಲಾ–ಕಾಲೇಜುಗಳನ್ನು ತೆರೆಯುವುದು.
- ತಾವು ತೆರೆದ ಶಾಲಾ ಕಾಲೇಜುಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡಿರುತ್ತವೆ.
- ತಮ್ಮ ಸಂಸ್ಥೆಗಳಿಗೆ ಬೇಕಾದ ಭೌತಿಕ ಸಂಪನ್ಮೂಲಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತವೆ.
- ಆಡಳಿತ ನಿರ್ವಹಣೆಗೆ ಬೇಕಾದ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಅವರನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತವೆ.
- ಹಿಂದುಳಿದ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಕೂಡ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ, ಈ ಮೂಲಕ ಉದ್ಯಮ ವರ್ಗದವರ ಮಕ್ಕಳಿಗೆ ಉತ್ತಮ ಗುಣಾತ್ಮಕ ಶಿಕ್ಷಣ ಕೊಡಲು ಪ್ರಯತ್ನಿಸುವುದು.
- ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸುವಲ್ಲಿ ಖಾಸಗಿ ಶಿಕ್ಷಣಗಳ ಪಾತ್ರ ಅತ್ಯಮೂಲ್ಯ.
- ಖಾಸಗಿ ಸಂಸ್ಥೆಗಳು ತೃಪ್ತಿಕರವಾದ ವ್ಯವಸ್ಥಿತ, ಕ್ರಮಬದ್ಧ ಆಡಳಿತ ನಡೆಸಿಕೊಂಡು ಹೋಗುತ್ತವೆ.
- ಸ್ಥಳೀಯ ನಿರುದ್ಯೋಗಿಗಳನ್ನು ಶೈಕ್ಷಣಿಕ ಕಾರ್ಯಚಟುವಟಿಕೆಗೆ ನೇಮಕ ಮಾಡಿಕೊಂಡು ಉದ್ಯೋಗಾವಕಾಶ ಒದಗಿಸುತ್ತವೆ.
- ಖಾಸಗಿ ಸಂಸ್ಥೆಗಳು ಔಪಚಾರಿಕ ಶಿಕ್ಷಣದ ಜೊತೆಗೆ ಅನೌಪಚಾರಿಕ ಶಿಕ್ಷಣಗಳಾದ ಸಾಮಾಜಿಕ ಶಿಕ್ಷಣ, ವಯಸ್ಕರ ಶಿಕ್ಷಣ ಮುಂತಾದವುಗಳನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.
- ಶೈಕ್ಷಣಿಕ ಆಡಳಿತದ ವಿಕೇಂದ್ರೀಕರಣದ ಮೂಲಕ ಉತ್ತಮ ಶೈಕ್ಷಣಿಕ ಆಡಳಿತ ನಿರ್ವಹಣೆಗೆ ಉತ್ತೇಜನ ನೀಡುತ್ತವೆ.
- ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸುತ್ತವೆ.
- ಪ್ರತಿಭಾ ಪುರಸ್ಕಾರ, ಉತ್ತಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗೂ ಸಲಹೆ, ಸೂಚನೆಗಳನ್ನು ಈ ಸಂಸ್ಥೆಗಳು ಸಕಾರಾತ್ಮಕವಾಗಿ ರೂಢಿಸಿಕೊಂಡು ಮುನ್ನಡೆಸುತ್ತಿವೆ.
- ಶಾಲೆ ಬಿಡುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆಗೊಳಿಸಿ ಅವರ ಸಮಸ್ಯೆಗಳನ್ನು ಪರಿಹರಿಸುತ್ತವೆ.
- ಪ್ರಾಯೋಗಿಕ ಪರೀಕ್ಷೆಗಳು, ಉತ್ತಮ ನಿರ್ದೇಶನಗಳು, ಪ್ರಾತ್ಯಕ್ಷಿಕೆಗಳು ಹಾಗೂ ಕ್ಷೇತ್ರ ಪ್ರವಾಸಗಳು ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕತೆಯನ್ನು ಹೆಚ್ಚಿಸಿ ಕಿರು ಸಂಶೋಧನೆಯ ಕಡೆಗೆ ಒಲವು ತೋರಿಸುವಂತಹ ಮಹತ್ತರ ಕಾರ್ಯ ಖಾಸಗಿ ಶಿಕ್ಷಣ ಸಂಸ್ಥೆಗಳದ್ದಾಗಿರುತ್ತದೆ.
- ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ, ಪ್ರಜಾಸತ್ತಾತ್ಮಕ ಮೌಲ್ಯಗಳು, ಆತ್ಮವಿಶ್ವಾಸ ಹಾಗೂ ಒದಗುವ ಹೊಸ ಸಮಸ್ಯೆಗಳನ್ನು

Digitised by Bharatavani, CIIL

ಉತ್ತಮ ರೀತಿಯಲ್ಲಿ ಪರಿಹರಿಸಿಕೊಂಡು ತಮ್ಮ ಯಶಸ್ಸಿನ ಗುರಿಯನ್ನು ಸಾಧಿಸುವಲ್ಲಿ ನೆರವಾಗುವಂತಹ ಕಾರ್ಯವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಮಾಡುತ್ತಿವೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಸ್ತುತ ವಿದ್ಯಮಾನದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರೂ ಇತ್ತೀಚಿನ ದಿನಗಳಲ್ಲಿ ಬಹುತೇಕ ಖಾಸಗಿ ಸಂಸ್ಥೆಗಳು ವಿದ್ಯಾರ್ಥಿಗಳಿಂದ ಅಧಿಕ ಶುಲ್ಕವನ್ನು ವಸೂಲು ಮಾಡುತ್ತಿವೆ. ಅವುಗಳ ಹಣಕಾಸಿನ ಸ್ಥಿತಿಯು ಉತ್ತಮವಾಗಿಲ್ಲ. ಅಲ್ಲದೆ ಮಾನವ ಸಂಪನ್ಮೂಲವಾದ ಶಿಕ್ಷಕರು ಹಾಗೂ ಇತರೇ ನೌಕರ ವರ್ಗದವರು ಹಾಗೂ ಭೌತಿಕ ಸಂಪನ್ಮೂಲಗಳಾದ ಪೀಠೋಪಕರಣಗಳು ಮತ್ತು ಪಾಠೋಪಕರಣಗಳ ಕೊರತೆಯನ್ನು ಎದುರಿಸುತ್ತಿವೆ.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆಯನ್ನು ನಿರ್ವಹಿಸುತ್ತಿರುವವರಿಗೆ ಸರಿಯಾದ ಮತ್ತು ಸಮರ್ಪಕವಾದ ವೇತನವನ್ನು ನೀಡುವುದಿಲ್ಲ, ಜೊತೆಗೆ ಕಿರುಕುಳ ನೀಡುವುದು, ಪಕ್ಷಪಾತ ಮಾಡುವುದು ಮತ್ತು ಕಾರ್ಯದ ಒತ್ತಡವನ್ನು ಹೆಚ್ಚಿಸುವುದನ್ನು ಕಾಣಬಹುದು. ವಿವಿಧ ಪ್ರಕಾರದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪತೆ ಇಲ್ಲದಿರುವುದು ಇವುಗಳ ಅಭಿವೃದ್ಧಿಗೆ ಮೂಲ ತೊಡಕಾಗಿದೆ. ಕೆಲವು ಧಾರ್ಮಿಕ ಶಿಕ್ಷಣ ಸಂಸ್ಥೆಗಳು ಸಂಕುಚಿತ ಮನೋಭಾವನೆಯನ್ನು ಹೊಂದಿದವುಗಳಾಗಿದ್ದು, ಕೆಲವು ಧಾರ್ಮಿಕ ಕಟ್ಟುಪಾಡುಗಳ ಸಂಕೋಲೆಯಲ್ಲಿ ಸಿಲುಕಿಕೊಂಡಿವೆ. ಇಂತಹ ಆಡಳಿತ ಮಂಡಳಿಯಲ್ಲಿ ಶಿಕ್ಷಕರಿಗೆ ಹಾಗೂ ಶಿಕ್ಷಣಾಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಸದಸ್ಯತ್ವದ ಪ್ರಾತಿನಿಧ್ಯವನ್ನು ನೀಡುವುದಿಲ್ಲ. ಸರಿಯಾದ ನಿಯಂತ್ರಣ, ಮಾರ್ಗದರ್ಶನ, ವ್ಯವಸ್ಥಾಪಕತೆ, ಮೇಲ್ವಿಚಾರಣೆ ಯೋಜನೆ, ಸಂಘಟನೆ ಹಾಗೂ ಸೌಕರ್ಯಗಳಿಲ್ಲದೆ ಇಂತಹ ಸಂಸ್ಥೆಗಳು ಅವನತಿಯ ಹಾದಿಯಲ್ಲಿವೆ. ದೋಷಗಳೇನೇ ಇದ್ದರೂ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಗತಿಯ ದಾರಿಯಲ್ಲಿ ನಮ್ಮ ದೇಶವನ್ನು ಮುನ್ನಡೆಸಲು ಸಕ್ರಿಯವಾಗಿ ಪಾಲುಗೊಂಡಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಮುಖವಾಡ ಹಾಕಿಕೊಂಡು ಹಗಲು ದರೋಡೆಯಲ್ಲಿ ತೊಡಗದೆ, ತಮ್ಮ ಕಾರ್ಯನಿರ್ವಹಣೆಯಲ್ಲಿನ ಲೋಪದೋಷಗಳನ್ನು ಹೋಗಲಾಡಿಸಿಕೊಳ್ಳುವುದರ ಮೂಲಕ ಸಮಾಜಕ್ಕೆ ಗುಣಾತ್ಮಕ ಮತ್ತು ಮೌಲ್ಯಧಾರಿತ ಶಿಕ್ಷಣವನ್ನು ದೊರಕಿಸಿಕೊಡಬಹುದಾಗಿದೆ.

– ಜಿ.ಎನ್.ಅ.

## ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕ್ರೈಸ್ತ ಮಿಷನರಿಗಳ ಕೊಡುಗೆ

ಭಾರತದ ಖ್ಯಾತಿಯಿಂದ, ಸಂಪತ್ತಿನಿಂದ ಆಕರ್ಷಿತರಾದ ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಆಂಗ್ಲರು ಮುಂತಾದ ಪಾಶ್ಚಿಮಾತ್ಯರು ಸಮುದ್ರ ಮಾರ್ಗವನ್ನು ಕಂಡುಹಿಡಿದು ಮೊದಲು ವ್ಯಾಪಾರಕ್ಕಾಗಿ ಭಾರತವನ್ನು ಪ್ರವೇಶಿಸಿ, ಪೈಪೋಟಿಯಿಂದ ವಸಾಹತುಗಳನ್ನು ಸ್ಥಾಪಿಸಿಕೊಂಡರು. ಅನಂತರ ದೇಶಾಕ್ರಮಣ ನೀತಿ ಅನುಸರಿಸಿ ಪ್ರಬಲರಾದ ಆಂಗ್ಲರು ತಮ್ಮ ಧರ್ಮಪ್ರಚಾರ ಮಾಡುವ ಗುರಿ ಹೊಂದಿ ಕೆಲವು ಕೇಂದ್ರಗಳನ್ನು ಸ್ಥಾಪಿಸಿದರು. ಇಂಥ ಕೇಂದ್ರಗಳಲ್ಲಿ ಚರ್ಚುಗಳಿಗೆ ಸೇರಿದಂತೆ ಶಾಲೆಗಳನ್ನು ಸ್ಥಾಪಿಸಿದರು. ಅವರಿಗೆ ಧಾರ್ಮಿಕ ಶಿಕ್ಷಣ, ಶಿಕ್ಷಣದ ಮುಖ್ಯ ಅಂಗವಾಗಿದ್ದಿತು. ಆಂಗ್ಲ ಭಾಷೆಯನ್ನು ಇತರ ವಿಷಯಗಳ ಜೊತೆ ಬೋಧಿಸಲಾರಂಭಿಸಿದರು. ಈ ಐರೋಪ್ಯ ಶಾಲೆಗಳ ಜೊತೆ ಜೊತೆಯಲ್ಲಿ ಪಾಠಶಾಲೆಗಳು, ಮದ್ರಸಾಗಳು ಪೈಪೋಟಿ ನಡೆಸಲು ಅಸಮರ್ಥವಾದವು. ಹೀಗೆ 19ನೇ ಶತಮಾನದ ಪ್ರಾರಂಭದಲ್ಲಿ ಐರೋಪ್ಯ ಶಾಲೆಗಳು ಪ್ರಾರಂಭವಾದವು.

ಭಾರತದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯನ್ನು ಪ್ರಥಮವಾಗಿ ಪ್ರಾರಂಭಿಸಿದ ಕೀರ್ತಿ ಪೋರ್ಚುಗೀಸರಿಗೆ ಸಲ್ಲುತ್ತದೆ. ಕ್ರಿ.ಶ. 1675ರಲ್ಲಿ ಸಂತ ಕ್ಸೇವಿಯರರನೂ, ಫ್ರೆಂಚರೂ, ಆಂಗ್ಲರೂ ಮತ ಪ್ರಚಾರದ ಹಿನ್ನೆಲೆಯಲ್ಲಿ ಶಾಲೆಗಳನ್ನು ಸ್ಥಾಪಿಸಿದರು. 1792ರಲ್ಲಿ ಚಾರ್ಲ್ಸ್‌ಗ್ರಾಂಟ್ ಎಂಬುವನು ಶಿಕ್ಷಣ ಪ್ರಸಾರದ ಸೋಗಿನಲ್ಲಿ ಮತ ಪ್ರಚಾರಕ್ಕೆ ಆಲೋಚಿಸಿ ವಿಜ್ಞಾನ ಬೋಧನೆಗಳಿಗೆ, ಆಂಗ್ಲ ಶಿಕ್ಷಣ ಮಾಧ್ಯಮಕ್ಕೆ ಸೂಚನೆ ನೀಡಿದ.

ಈ ವೇಳೆಗೆ ಅನೇಕ ಆಂಗ್ಲರು ಸಹ ಭಾರತೀಯ ಶಿಕ್ಷಣದ ಸುಧಾರಿತ ವ್ಯವಸ್ಥೆಗೆ ಒತ್ತಾಯಿಸಿದ್ದರು. ಈ ಬಗ್ಗೆ ವಿಚಾರ ಮಂಥನ ನಡೆಯುತ್ತಿದ್ದ ಆ ಕಾಲದಲ್ಲಿ ಭಾರತದ ಗೌರ್ನರ್ ಜನರಲ್ ಆಗಿದ್ದ ಲಾರ್ಡ್‌ಮಿಂಟೋ ಭಾರತೀಯ ಸಾಹಿತ್ಯ ಹಾಗೂ ಸಂಸ್ಕೃತಿಗಳ ಅಧ್ಯಯನ, ಅಭಿವೃದ್ಧಿ, ರಕ್ಷಣೆಗಳ ಬಗ್ಗೆ ಸೂಕ್ತ ರಕ್ಷಣೆ, ಉತ್ತೇಜನ ನೀಡಲು ಕಂಪೆನಿಯ ಡೈರಕ್ಟರ್‌ಗಳಲ್ಲಿ ಮನವಿ ಮಾಡಿಕೊಂಡದ್ದರ ಫಲವಾಗಿ 1813ರಲ್ಲಿ ಚಾರ್ಟರ್ ಶಾಸನ ಜಾರಿಗೆ ಬಂದು ಐರೋಪ್ಯ ಪಾದ್ರಿಗಳು ಭಾರತದಲ್ಲಿ ವಿದ್ಯಾ ಪ್ರಚಾರ ಮಾಡಲು ಅನುಮತಿ ಜೊತೆಗೆ ವರ್ಷಂಪ್ರತಿ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದೆ ಸಾಹಿತ್ಯದ ಪುನರುಜ್ಜೀವನ, ದೇಶೀಯ ವಿದ್ವಾಂಸರ ಉತ್ತೇಜನ ಇವುಗಳಿಗಾಗಿ ವೆಚ್ಚ ಮಾಡಲು ಅನುಮತಿ ನೀಡಲಾಯಿತು.

18ನೇ ಶತಮಾನದ ಕಡೆಯ ಭಾಗವು ಭಾರತೀಯ ಚರಿತ್ರೆಯಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲವಾಗಿತ್ತು. ಬ್ರಿಟಿಷರು ತಮ್ಮ ಆಳ್ವಿಕೆಯ ಕೇಂದ್ರ ಸ್ಥಾನಗಳನ್ನು ಬಂಗಾಳ, ಕಲ್ಕತ್ತ ಹಾಗೂ ಮುಂಬೈ ಪಟ್ಟಣಗಳಲ್ಲಿ ಸ್ಥಾಪಿಸಿದ್ದರು. ಅದೇ ಸಮಯದಲ್ಲಿ "ಮಾಡರ್ನ್ ಮಿಶನರಿ ಮೂವ್‌ಮೆಂಟ್" ಎಂಬ ಸಂಸ್ಥೆ ಇಂಗ್ಲೆಂಡ್, ಅಮೇರಿಕಾ ಹಾಗೂ ಇತರ ಪಾಶ್ಚಾತ್ಯ ದೇಶಗಳಲ್ಲಿ ಸ್ಥಾಪನೆಗೊಂಡಿತ್ತು. ಅಮೇರಿಕಾದ ಪ್ರಥಮ ಸಂಸ್ಥೆಯಾದ, "ಅಮೇರಿಕನ್ ಬೋರ್ಡ್ ಆಫ್ ಕಮಿಷನರ್ಸ್" 1810ರಲ್ಲಿ ಸ್ಥಾಪನೆಗೊಂಡಿತು. ಇಂತಹ ಸಮಯದಲ್ಲಿ **'ವಿಲಿಯಂ ಕೇರಿ'** ಎಂಬ ಪಾದ್ರಿ ಒಂದು ಗ್ರಾಮೀಣ ಶಾಲೆಯಲ್ಲಿ ಶಿಕ್ಷಕನಾಗಿದ್ದುಕೊಂಡು, ಮೋಚಿ ಕೆಲಸವನ್ನು ಮಾಡುತ್ತಾ **'ಬಾಪ್ಟಿಸ್ಟ್ ಮಿಷನರಿ ಸೊಸೈಟಿ'** ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಇವರ ಸಹಪಾಠಿಗಳಾದ ಡಾ॥ ಜಾನ್ ಥಾಮಸ್ ಮತ್ತು ಕೇರಿಯವರ ಪತ್ನಿ ಹಾಗೂ ನಾಲ್ಕು ಮಕ್ಕಳು ಮತ್ತು ಅವರ ಹೆಂಡತಿಯ ತಂಗಿ ಎಲ್ಲರೂ ಮಿಷನರಿ ಕೆಲಸದಲ್ಲಿ ಭಾರತದ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕ್ರೈಸ್ತ ಮಿಶನರಿಗಳ ಪ್ರಥಮ ಕೊಡುಗೆ ಮುದ್ರಣಾಲಯದ ಸ್ಥಾಪನೆ. 19ನೇ ಶತಮಾನದ ಮೊದಲ ಭಾಗದಲ್ಲಿ ಎಲ್ಲ ಮುಖ್ಯ ಸ್ಥಳಗಳಲ್ಲಿಯೂ ಮುದ್ರಣಾಲಯಗಳು ಸ್ಥಾಪಿತವಾದವು. ಆಗ ಸ್ಥಾಪಿತವಾದ ಬ್ಯಾಪ್ಟಿಸ್ಟ್ ಮಿಶನ್ ಪ್ರೆಸ್ (ಕೋಲ್ಕತ), ಬಾಸೆಲ್ ಮಿಷನ್ ಪ್ರೆಸ್ (ಮಂಗಳೂರು 1841), ವೆಸ್ಲಿ ಪ್ರೆಸ್ (ಮೈಸೂರು 1890) ಮುಂತಾದವು ಇನ್ನೂ ಕಾರ್ಯ ನಿರ್ವಹಿಸುತ್ತಿವೆ.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ 19ನೇ ಶತಮಾನದ ಮೊದಲಾರ್ಧದಲ್ಲಿ ಕ್ರೈಸ್ತ ಮಿಷನರಿಗಳ ಹೆಂಡತಿಯರು ಲೇಸ್ (Lace) ಮಾಡುವುದರ ಬಗ್ಗೆ, ಹೊಲಿಗೆ, ಕಸೂತಿ, ಎಂಬ್ರಾಯಿಡ್ರಿ ಮುಂತಾದವುಗಳ ಬಗ್ಗೆ ತರಬೇತಿ ನೀಡುತ್ತಿದ್ದರು. ಜೆನೆರ (Zenara) ಗುಂಪಿಗೆ ಸೇರಿದ ಹೆಂಗಸರು, ಗೊಂಬೆಗಳನ್ನು ತಯಾರು ಮಾಡುವುದನ್ನು ಹೆಣ್ಣು ಮಕ್ಕಳಿಗೆ ಹೇಳಿಕೊಡುತ್ತಿದ್ದರು.

ಮಿಶನರಿಗಳ ಪತ್ನಿಯರು ಭಾರತದಲ್ಲಿ ಅನೇಕ ಅನಾಥಾಲಯಗಳನ್ನು, ಉಚಿತ ಶಾಲೆಗಳನ್ನು, ವಸತಿ ಗೃಹಗಳನ್ನು ಸ್ಥಾಪಿಸಿದರು. ಪಶ್ಚಿಮ ಘಟ್ಟದ ಬಾಸೆಲ್ ಮಿಷನ್ ಹೆಂಚು ತಯಾರಿಕೆ ಕಾರ್ಖಾನೆ, ಬಟ್ಟೆಯ ಕಾರ್ಖಾನೆಗಳನ್ನು ಸ್ಥಾಪಿಸಿತು. ಈಗ ಇವು 'ಕಾಮನ್‌ವೆಲ್ತ್ ಟ್ರಸ್ಟ್'ನ ಕೈಕೆಳಗಿವೆ. ಇನ್ನಿತರ ಮಿಷನರಿಗಳು ಮರಗೆಲಸ, ಪೀಠೋಪಕರಣಗಳ ಕಾರ್ಖಾನೆ ಪ್ರಾರಂಭಿಸಿದರು. ಮಗ್ಗದ ಕೈಗಾರಿಕೆ, ಟ್ರಾವೆನ್‌ಕೋರಿನ ಲೇಸ್

Digitised by Bharatavani, CIIL

ಹಾಗೂ ಎಂಬ್ರಾಯಡ್ರಿ ಹೆಸರುವಾಸಿಯಾದವು. ಆರ್ಥಿಕವಾಗಿ ಹಿಂದುಳಿದ ಗುಂಪುಗಳನ್ನು ಸಶಕ್ತರನ್ನಾಗಿ, ತಮ್ಮ ಕಾಲ ಮೇಲೆ ನಿಂತು ತಮ್ಮ ಜೀವನೋಪಾಯದ ಮಾರ್ಗಗಳನ್ನು ಹುಡುಕಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಇಂತಹ ತರಬೇತಿಗಳನ್ನು ಕೊಡುತ್ತಿದ್ದರು. ವ್ಯವಸಾಯವೇ ದೇಶದ ಬೆನ್ನೆಲುಬು ಎಂಬ ಭಾವನೆಯಿಂದ ಅನೇಕ ಮಿಶನ್‌ಗಳು, ಚರ್ಚುಗಳು ಹಾಗೂ ರಾಕ್‌ಫೆಲರ್ ಫೌಂಡೇಶನ್‌ನ ಅನುದಾನಗಳು ವ್ಯವಸಾಯಕ್ಕೆ ಸಹಾಯ ಹಸ್ತ ನೀಡುತ್ತಿದ್ದವು. ಈ ಸಂಸ್ಥೆಗಳು ಭಾರತೀಯ ವಿದ್ಯಾರ್ಥಿಗಳು ಉತ್ತಮ ರೈತರಾಗಿ, ಭೂಒಡೆಯರಾಗಿ, ಶಿಕ್ಷಕರಾಗಿ, ಸಂಶೋಧನೆ ಕಾರ್ಯಗಳಲ್ಲಿ ತೊಡಗುವವರಾಗಿ ಮತ್ತು ವ್ಯವಸ್ಥಾಪಕರಾಗಿ ಗ್ರಾಮೀಣ ಭಾರತದ ಏಳಿಗೆಗಾಗಿ ದುಡಿಯುವಂತೆ ಸಹಾಯ ನೀಡುತ್ತಿದ್ದವು.

ಮಿಶನರಿಗಳ ಸೇವೆ ಕ್ರೈಸ್ತರಿಗೆ ಮಾತ್ರ ಸೀಮಿತವಾಗಿರದೆ ಇಡೀ ಮಾನವ ಕುಲಕ್ಕೆ ಉಪಯುಕ್ತವೆನಿಸಿತ್ತು.

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಮಿಷನರಿಗಳ ಕೊಡುಗೆ ಅಪಾರವಾದದ್ದು. ಏಸುಕ್ರಿಸ್ತನ ತತ್ವಗಳು ಜಗತ್ತಿನಾದ್ಯಂತ ಪ್ರಸಾರವಾಗಲಿ ಎಂಬ ಅಭಿಪ್ರಾಯ ಬೈಬಲ್ಲಿನಲ್ಲಿದೆ. ಅದರಿಂದಾಗಿಯೇ ಕ್ರೈಸ್ತಗುಂಪುಗಳು ಮಿಷನರಿಗಳನ್ನು ಅಭಿವೃದ್ಧಿಶೀಲ ಹಾಗೂ ಹಿಂದುಳಿದ ದೇಶಗಳಿಗೆ ಕಳುಹಿಸಿದವು. ಈ ಕಾರಣದಿಂದಾಗಿ ಮಿಷನರಿಗಳು ನಮ್ಮ ದೇಶವನ್ನು ಪ್ರವೇಶಿಸಿದರು. ಅವರಿಗೆ ಬ್ರಿಟಿಷರ ಪರೋಕ್ಷ ಬೆಂಬಲವಿತ್ತು.

19ನೇ ಶತಮಾನದಲ್ಲಿ 'ಲಂಡನ್ ಬಾಸೆಲ್ ಮಿಷನ್' ಮತ್ತು 'ವೆಸ್ಲಿಯನ್ ಮಿಷನ್'ಗಳ ಮಿಷನರಿಗಳ ಪ್ರಯತ್ನಗಳಿಂದಾಗಿ ಚರ್ಚುಗಳು ಸ್ಥಾಪಿತವಾದವು. ಅನಂತರ ಕ್ರೈಸ್ತ ಮತವು ಕರ್ನಾಟಕದಲ್ಲಿ ಕ್ರಮೇಣ ನಿಧಾನವಾಗಿ ಹರಡಿತು. ಕನ್ನಡಿಗರ ಮನವೊಲಿಸಲು ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸುವುದು ಒಂದು ಮುಖ್ಯ ಸಾಧನವಾಗುವುದೆಂಬುದನ್ನು ಅವರು ಕಂಡುಕೊಂಡರು. ಪ್ರಕಟನೆ ಮತ್ತು ಬೋಧನೆಗಳಿಗೆ ಭಾಷಾ ಕೌಶಲ ಮತ್ತು ಪ್ರಭುತ್ವಗಳು ಬೇಕೆಂದು ಅವರು ಮನಗಂಡರು. ಇದರಿಂದಾಗಿ ಕ್ರಿಶ್ಚಿಯನ್ ಮಿಷನರಿಗಳು ಮೊದಲ ಬಾರಿಗೆ ಮುದ್ರಣವನ್ನು ಆರಂಭಿಸಿ ಕನ್ನಡದಲ್ಲಿ ಪುಸ್ತಕಗಳನ್ನು ಅಚ್ಚು ಹಾಕಿಸಿ ಕನ್ನಡನಾಡಿನಲ್ಲೆಲ್ಲಾ ಅವು ದೊರೆಯುವ ಹಾಗೆ ಮಾಡಿದರು. ಈ ಮೂಲಕವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ಕ್ರಿಶ್ಚಿಯನ್ ಮಿಷನರಿಗಳು ಅಮೂಲ್ಯ ಸೇವೆಯನ್ನು ಮಾಡಿದರೆಂಬುದು ಐತಿಹಾಸಿಕ ಸತ್ಯ.

ನಮ್ಮ ನಾಡಿಗೆ ಕ್ರಿಶ್ಚಿಯನ್ ಮಿಷನರಿಗಳು ಬರುವುದಕ್ಕಿಂತ ಮುಂಚೆ ಕನ್ನಡದಲ್ಲಿದ್ದದ್ದು ಒಂದೇ ಬಗೆಯಾದ ಹಳೆಗನ್ನಡ ಸಾಹಿತ್ಯ. 19ನೇ ಶತಮಾನದ ಆರಂಭದ ವೇಳೆಗೆ ಬಂದ ಮಿಷನರಿಗಳ ಮನಸ್ಸಿನಲ್ಲಿ ಎರಡು ಗುರಿಗಳಿದ್ದವು. ಅವೇನೆಂದರೆ ಕ್ರಿಶ್ಚಿಯನ್ ಸಾಹಿತ್ಯದ ಪ್ರಚಾರಕ್ಕೆ 1) ಬೈಬಲಿನ ಕನ್ನಡ ಅನುವಾದ 2) ಆಧುನಿಕ ರೀತಿಯಲ್ಲಿ ಪ್ರಾಥಮಿಕ ಶಾಲೆಗಳ ಸ್ಥಾಪನೆ. ಈ ಎರಡು ಉದ್ದೇಶಗಳ ಸಾಧನೆಗೆ ಅವರಿಗೆ ಅವಶ್ಯಕವಾಗಿದ್ದುದು **'ಮುದ್ರಣ ಯಂತ್ರ'**. 1826ರಲ್ಲಿ ಜಾನ್‌ಹ್ಯಾನ್ಸ್ ಎಂಬುವನು ಮುದ್ರಣ ಯಂತ್ರವನ್ನು ಭಾರತಕ್ಕೆ ತಂದ. ಅಲ್ಲದೇ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಮಿಶನರಿಗಳು ಪ್ರಾಥಮಿಕ ಶಾಲೆಗಳನ್ನು ತೆರೆದರು. ಕನ್ನಡ ಸಾಹಿತ್ಯವನ್ನು ಅಭ್ಯಾಸಮಾಡಿ ಮುದ್ರಣ ಮಾಧ್ಯಮದ ಸಾಮರ್ಥ್ಯವನ್ನು ಗುರುತಿಸಿ, ಅವರು ಮುದ್ರಣ ತಂತ್ರಜ್ಞಾನವನ್ನು ಕನ್ನಡ ಪ್ರಕಟಣೆಗಳನ್ನು ಮಾಡಲು ಹೊಸದಾಗಿ ವಿನ್ಯಾಸಗೊಂಡ ಕನ್ನಡದ ಮೊಳೆಗಳನ್ನು ವಿದೇಶದಿಂದ ತರಿಸಿಕೊಂಡರು. ಬೈಬಲ್ ಮತ್ತಿತರ ಪ್ರಮುಖ ಕೃತಿಗಳ ಜೊತೆ ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳನ್ನು ಪ್ರಕಟಿಸಿದರು. ಹೀಗೆ ಕನ್ನಡದ ಮೊದಲ ಮುದ್ರಿತ ಪುಸ್ತಕವು ಬೆಳಕು ಕಂಡದ್ದು ಮಿಶನರಿಗಳ ಪ್ರಯತ್ನದಿಂದ. ಇದು ಸೃಜನಶೀಲ ಬರವಣಿಗೆಯ ಸ್ವರೂಪವನ್ನು ಬದಲಿಸಿದುದೇ ಅಲ್ಲದೆ ನಾಡಿನಲ್ಲಿ ಸಾಹಿತ್ಯವು ಜನಪ್ರಿಯವಾಗಲು ಕಾರಣವಾಯಿತು.

19ನೇ ಶತಮಾನ ಕರ್ನಾಟಕದ ಕತ್ತಲೆ ಯುಗ. ಅದು ಅನೇಕ ಭಾಗಗಳಾಗಿ ಒಡೆದು ಹೋಗಿದ್ದುದಲ್ಲದೆ, ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದಿತ್ತು. ಈ ಸಂದರ್ಭದಲ್ಲಿ ಮಿಷನರಿಗಳು ನಾಡನ್ನು ಪ್ರವೇಶಿಸಿ ಭಾಷೆಯ ಬೆಳವಣಿಗೆಗೆ ವ್ಯಾಪಕವಾಗಿ ಶ್ರಮಿಸಿದರು. ಕನ್ನಡದ ಏಳಿಗೆಗಾಗಿ ಕರ್ನಾಟಕದಲ್ಲಿ ಶ್ರಮಿಸಿದ ಪ್ರಮುಖ ಮಿಷನರಿ ಸಂಸ್ಥೆಗಳೆಂದರೆ **'ಲಂಡನ್ ಮಿಷನರಿ ಸೊಸೈಟಿ'** ಮತ್ತು **'ಪ್ಯಾರಿಸ್ ಫಾರಿನ್ ಮಿಷನ್'**ಗಳು. ಇವೆರಡು ಬೆಳಗಾವಿ ಮತ್ತು ಬೆಂಗಳೂರು ಭಾಗಗಳಲ್ಲಿ ಕೆಲಸ ಮಾಡಿದವು. **'ಬ್ಯಾಪ್ಟಿಸ್ ಮಿಷನ್'**, ಮೈಸೂರು, ಬೆಂಗಳೂರು ಮತ್ತು ಹಳೆಯ ಮೈಸೂರುಗಳಲ್ಲಿ ಕಾರ್ಯಶೀಲವಾಗಿದ್ದ **'ವೆಸ್ಲಿಯನ್ ಮಿಷನ್'** ವ್ಯಾಪಕವಾಗಿ ಕೆಲಸ ಮಾಡುತ್ತಿದ್ದವು. **'ಬ್ಯಾಪ್ಟಿಸ್ಟ್ ಮಿಷನ್'** ಕೂಡ ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ.

ಕರ್ನಾಟಕಕ್ಕೆ ಬಂದ ಮೊದಲ ಮಿಷನರಿ ಎಂದರೆ **'ಲಿಯೊನಾರ್ಡೋ ಚಿನಾಮಿ'**. ಈತ ಮೈಸೂರಿನಲ್ಲಿ 17ನೇ ಶತಮಾನದ ಮಧ್ಯಭಾಗದಲ್ಲಿ ಕ್ರೈಸ್ತ ಮತವನ್ನು ಪ್ರಚಾರ ಮಾಡುತ್ತಾ, ಕನ್ನಡ ವ್ಯಾಕರಣದ ಬಗ್ಗೆ ಪುಸ್ತಕಗಳನ್ನು ಬರೆದಿದ್ದಾನೆ. ಇವನು ಒಂದು **ಕನ್ನಡ ನಿಘಂಟನ್ನು**, ಒಂದು ಕನ್ನಡ ವ್ಯಾಕರಣವನ್ನು ರಚಿಸಿದ್ದಾನೆ.

ಕ್ರೈಸ್ತ ಮಿಷನ್ನಿನ ಇನ್ನೊಂದು ಪ್ರಮುಖ ಕಾಣಿಕೆ ಎಂದರೆ **'ಶ್ಲೋಕ ಸಂಗ್ರಹ'** ಎಂಬ ಹೆಸರಿನ ಗ್ರಂಥವನ್ನು 1868ರಲ್ಲಿ ಹೊರತಂದದ್ದು, ಇದರಲ್ಲಿ ಸಂಸ್ಕೃತ ಶ್ಲೋಕಗಳ ಅನುವಾದಗಳಿವೆ.

1848ರಲ್ಲಿ 'ಕ್ಯಾಥೋಲಿಕ್ ಮಿಷನ್' ಕೂಡ ಬೆಂಗಳೂರಿನಲ್ಲಿ ಒಂದು ಮುದ್ರಣಾಲಯವನ್ನು ಸ್ಥಾಪಿಸಿತು. ಇದರಲ್ಲಿ ಹಲವಾರು ಧಾರ್ಮಿಕ ಗ್ರಂಥಗಳು ಹಾಗೂ ಶಾಲಾ ಪಠ್ಯಪುಸ್ತಕಗಳು ಮುದ್ರಣಗೊಂಡವು.

**ಬಾತ್ತೆಲ್ಲೋ** ಮಾಡಿದ ಬೈಬಲಿನ ಪೂರ್ಣ ಅನುವಾದವು ಕನ್ನಡದ ಮಟ್ಟಿಗೆ ಪೂರ್ಣ ಕೊರತೆಯನ್ನು ನೀಗಿತು. ಇದರಲ್ಲಿ ಕನ್ನಡ ಭಾಷೆಯ ಜಾಯಮಾನವನ್ನು ಲ್ಯಾಟಿನ್ನಿನಲ್ಲಿ ವಿವರಿಸಿ ಕನ್ನಡ ಭಾಷೆಯನ್ನು ಜಗತ್ತಿಗೆ ಪರಿಚಯಿಸಲಾಗಿದೆ.

**'ಲಂಡನ್ ಮಿಷನ್'** ಕನ್ನಡ ಸಾಹಿತ್ಯ ಹಾಗೂ ಕನ್ನಡ ಬೋಧನೆಯ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿ ಇತಿಹಾಸದಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದೆ.

**'ಜಾನ್‌ರೀಡ್'** ಎಂಬ ಮತ್ತೊಬ್ಬ ಮಿಷನರಿಯು **'ಕನ್ನಡ ಭಾಷೆಯನ್ನು ಕಲಿಯುವುದಕ್ಕೆ ಸಹಾಯವು'** ಎಂಬ ಗ್ರಂಥವನ್ನು ರಚಿಸಿದ.

**'ವಿಲಿಯಂ ರೀವ್'** ಎರಡು ಭಾಷೆಗಳನ್ನು ಕಲಿಯುವವರು ಬಹುನಿರೀಕ್ಷೆಯಿಂದ ಕಾಯುತ್ತಿದ್ದ ನಿಘಂಟೊಂದನ್ನು ಪ್ರಕಟಿಸಿದ. ಅವನ ಕನ್ನಡ-ಇಂಗ್ಲಿಷ್ ನಿಘಂಟನ್ನು ತನ್ನ ಸಹೋದ್ಯೋಗಿಗಳಿಗೆ ಅನುಕೂಲವಾಗುವಂತೆಯೂ, ಇಂಗ್ಲಿಷ್-ಕನ್ನಡ ನಿಘಂಟು ಇಲ್ಲಿನವರು ಇಂಗ್ಲಿಷನ್ನು ಕಲಿಯಲು ಅನುಕೂಲವಾಗುವಂತೆಯೂ ರಚಿಸಿ ಅವುಗಳನ್ನು ಪ್ರಕಟಿಸಿದ. ಬಳ್ಳಾರಿಯಲ್ಲಿ ಇಂಗ್ಲಿಷ್ ಕನ್ನಡ ನಿಘಂಟನ್ನು 1828ರಲ್ಲಿ ಹೊರತಂದನು. ಕನ್ನಡದ ಮೊಳೆಗಳು ದೊರೆಯದ ಕಾಲದಲ್ಲಿ ಮರದಲ್ಲಿ ಕನ್ನಡ ಮೊಳೆಗಳನ್ನು ಕೆತ್ತಿ ಅಳವಡಿಸಿದರು. ಇಡೀ ಶಬ್ದಗಳನ್ನು ಮರದಲ್ಲಿ ಕೊರೆದು ನಿಘಂಟಿನಲ್ಲಿದ್ದ ಇಂಗ್ಲಿಷ್ ಶಬ್ದಗಳೆದುರು ಜೋಡಿಸಿದರು. ಮೊದಲ ಕನ್ನಡ ನಿಘಂಟು ನಿರ್ಮಾಣವಾದುದ್ದು ಹೀಗೆ. ಇದನ್ನು **'ಇಂಗ್ಲಿಷ್-ಕರ್ನಾಡ್'** ನಿಘಂಟು ಎನ್ನುತ್ತಾರೆ.

Digitised by Bharatavani, CIIL

**'ಕಾಲಿನ್–ಕ್ಯಾಂಪ್‌ಬೆಲ್'** **'ಕನ್ನಡ ವ್ಯಾಕರಣ'**ವನ್ನು ಬರೆದ. ಇದು **ಪ್ರಾಥಮಿಕ ಶಾಲೆಗಳ** ವಿದ್ಯಾರ್ಥಿಗಳಿಗಾಗಿ ಬರೆದ ಸರಳ ವ್ಯಾಕರಣ.

**ಬಿ.ಹೆಚ್. ರೈಸ್** 'ಲಂಡನ್ ಮಿಷನ್'ನಲ್ಲಿ ಎದ್ದು ಕಾಣುವ ವ್ಯಕ್ತಿ. ಈತನು ಸ್ಥಳೀಯರ ಓದು ಮತ್ತು ಆಲೋಚನೆ, ಶೈಲಿಗಳಿಗೆ ಅನುಗುಣವಾಗಿ ಕನ್ನಡ ಬೋಧನೆಗಳನ್ನು ರಚಿಸಿದ. 1861ರಲ್ಲಿ ಆತನು 'ಅರುಣೋದಯ' ಎಂಬ ಮಾಸ ಪತ್ರಿಕೆಯೊಂದನ್ನು ಆರಂಭಿಸಿದ. ಧಾರ್ಮಿಕ ಲೇಖನಗಳಲ್ಲದೆ ಅದರಲ್ಲಿ ವಿಜ್ಞಾನ, ಇತಿಹಾಸ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳು ಚಿತ್ರಗಳೊಡನೆ ಪ್ರಕಟವಾಗುತ್ತಿದ್ದವು.

**'ವೆಸ್ಲಿಯನ್ ಮಿಷನ್'** ಶಿಕ್ಷಣದ ಕಡೆಗೆ ಹೆಚ್ಚು ಗಮನ ನೀಡಿತು. ಅನೇಕ ಮಿಷನ್ ಶಾಲೆಗಳನ್ನು ಸ್ಥಾಪನೆ ಮಾಡಿ ಮುಖ್ಯವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಿತು. ಮೈಸೂರಿನಲ್ಲಿರುವ **'ವಿಕ್ಟೋರಿಯ ಮಿಷನ್ ಶಾಲೆ'** ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಇಂದಿಗೂ ಶ್ರಮಿಸುತ್ತಿದೆ. ಇನ್ನೂ ಅನೇಕ **'ವೆಸ್ಲಿಯನ್ ಮಿಷನ್'** ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

**'ಜಾನ್ ಗ್ಯಾರೆಟ್'** ವೆಸ್ಲಿಯನ್ ಮುದ್ರಣಾಲಯವನ್ನು ಮರುವಿನ್ಯಾಸಗೊಳಿಸಿ ಅದರ ಗುಣಮಟ್ಟ ಶ್ರೇಷ್ಠವಾಗುವಂತೆ ಮಾಡಿದ. ಒಬ್ಬ ಶಿಕ್ಷಣ ತಜ್ಞನಾಗಿದ್ದ ಆತನ ಗಮನ ಹೆಚ್ಚಾಗಿ ಗ್ರಂಥ ಸಂಪಾದನೆ ಮತ್ತು ಸಂಕಲನಗಳ ಕಡೆ ನೆಟ್ಟಿತು. ಮಕ್ಕಳು ಇಂಗ್ಲಿಷನ್ನು ಚೆನ್ನಾಗಿ ಕಲಿಯಲು ಸಹಾಯವಾಗುವಂತೆ ಆತನು 'ರೀಡ್'ನ ನಿಘಂಟನ್ನು ಪರಿಷ್ಕರಿಸಿದ. ಅದು ಹೆಚ್ಚು ವ್ಯಾಪಕವಾಗಿದ್ದು ಅದರಲ್ಲಿ ಹದಿನಾರು ಸಾವಿರ ಹೊಸ ಉಲ್ಲೇಖಗಳು ಸೇರಿದ್ದವು. ಆತನು ಸಂಕಲಿಸಿದ ಭಗವದ್ಗೀತೆ ಉಲ್ಲೇಖನೀಯ. ಇವನ ಇನ್ನೊಂದು ಕೃತಿ 'A Classical Dictionary of India' ಭಾರತದ ಧಾರ್ಮಿಕ ಕೃತಿಗಳು, ಕಾವ್ಯ, ಮಹಾಕಾವ್ಯ ಮತ್ತು ಕಲೆಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ.

**ಡೇನಿಯಲ್ ಸ್ಯಾಂಡರ್‌ಸನ್** **'ಕನ್ನಡ ಕಥಾ ಸಂಗ್ರಹ'** ಎಂಬ ಜನಪ್ರಿಯ ಕೃತಿಯನ್ನು 1868ರಲ್ಲಿ ಪ್ರಕಟಿಸಿದ. ಇದರಲ್ಲಿ ಕನ್ನಡವನ್ನು ಹಂತ ಹಂತವಾಗಿ ಕಥೆಗಳ ಮೂಲಕ ಪರಿಚಯ ಮಾಡಿಕೊಡಲಾಗಿದೆ.

**'ಬಾಸೆಲ್ ಮಿಷನ್'** ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಕಡೆಗೆ ನೀಡಿದ ಕೊಡುಗೆ ಉಲ್ಲೇಖನೀಯವಾದುದ್ದು. ಈ ಮಿಷನ್ ಕನ್ನಡ ನಾಡಿಗೆ ಬಂದದ್ದು 1834ರಲ್ಲಿ. ಮಂಗಳೂರು ಅದರ ಕೇಂದ್ರವಾಗಿತ್ತು. ಬಹು ಕಡಿಮೆ ಅವಧಿಯಲ್ಲಿಯೇ ಅದು ತನ್ನ ಕಾರ್ಯಕ್ಷೇತ್ರವನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಧಾರವಾಡ ಜಿಲ್ಲೆಗಳಾದ್ಯಂತ ವಿಸ್ತರಿಸಿಕೊಂಡಿತು. ಶಿಕ್ಷಣ ಮತ್ತು ಪ್ರಕಟಣೆಗಳಲ್ಲಿನ ಅದರ ಕಾರ್ಯಗಳು ಸಾಹಿತ್ಯ ಮತ್ತು ಭಾಷೆಯವಲಯಗಳಲ್ಲಿ ಫಲ ನೀಡಿದವು. ಅನೇಕ ಬಾಸೆಲ್ ಮಿಷನ್ ಶಾಲೆಗಳು ಇಂದಿಗೂ ಕರ್ನಾಟಕದ ಅನೇಕ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಮಿಶನರಿಗಳು ಶಿಕ್ಷಣಕ್ಷೇತ್ರವಲ್ಲದೆ, ವೈದ್ಯಕೀಯ ಕ್ಷೇತ್ರದಲ್ಲೂ ತಮ್ಮ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಅನೇಕ ಮಿಶನ್ ಆಸ್ಪತ್ರೆಗಳು ಇಂದಿಗೂ ಕರ್ನಾಟಕದ ಹೆಚ್ಚು ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದಕ್ಕೆ ಸೇರಿದಂತೆ **'ಸ್ಕೂಲ್ ಆಫ್ ನರ್ಸಿಂಗ್'** (ನರ್ಸಿಂಗ್ ಶಾಲೆಗಳು) ಸ್ಥಾಪನೆಯಾಗಿವೆ. ಕ್ರೈಸ್ತರು ಸೇವಾ ಧುರೀಣರು. ಅವರು ಸೇವಾ ಮನೋಭಾವನೆಯುಳ್ಳವರಾಗಿರಬೇಕೆಂಬುದೇ ಈ ತರಬೇತಿ ನರ್ಸಿಂಗ್ ಶಾಲೆಗಳ ಹಾಗೂ ಇನ್ನಿತರ ಶಿಕ್ಷಣ ಸಂಸ್ಥೆಗಳ ಉದ್ದೇಶವಾಗಿತ್ತು.

**ರೆವೆರೆಂಡ್ ಕಿಟ್ಟೆಲ್**

ಕ್ರೈಸ್ತ ಪಾದ್ರಿ ರೆವೆರೆಂಡ್ ಕಿಟ್ಟೆಲ್ ಶಿಕ್ಷಣಕ್ಕೆ ನೀಡಿದ ಕೊಡುಗೆ ಪ್ರಶಂಸನೀಯವಾದುದು. ಇವರು ಕನ್ನಡ ಭಾಷೆಯನ್ನು ತಮ್ಮ ಇಂಗ್ಲಿಷ್–ಕನ್ನಡ ನಿಘಂಟಿನಿಂದ ಶ್ರೀಮಂತಗೊಳಿಸಿದರು. ಈ ಶಬ್ದಕೋಶ 1894ರಲ್ಲಿ ಪ್ರಕಟವಾಯಿತು. ಇದು ಪ್ರಮಾಣಭೂತವಾಗಿಯೂ, ಶಾಸ್ತ್ರೀಯವಾಗಿಯೂ ಇದೆಯೆಂದು ಕನ್ನಡ ಭಾಷಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇವರ ಮಹತ್ಕಾರ್ಯವನ್ನು ಗುರುತಿಸಿ 1896ರಲ್ಲಿ ಟೂಬಿಂಗನ್ ವಿಶ್ವವಿದ್ಯಾಲಯ ಇವರಿಗೆ ಡಾಕ್ಟರ್ ಆಫ್ ಫಿಲಾಸಫಿ ಪದವಿ ನೀಡಿ ಗೌರವಿಸಿತು. ಕೇಶಿರಾಜನ ಶಬ್ದಮಣಿದರ್ಪಣವನ್ನು ಒಂಬತ್ತು ಹಸ್ತಪ್ರತಿಗಳನ್ನಾಧರಿಸಿ ಶಾಸ್ತ್ರೀಯ ರೀತಿಯಲ್ಲಿ ಸಂಪಾದಿಸಿ ವಿದ್ವತ್ಪೂರ್ಣವಾದ ಮುನ್ನುಡಿಯೊಂದಿಗೆ ಕಿಟ್ಟೆಲ್ ಪ್ರಕಟಿಸಿದರು. ಇದೇ ರೀತಿ ನಾಗವರ್ಮನ ಛಂದೋಂಬುಧಿಯನ್ನು ಪರಿಷ್ಕರಿಸಿ ಪ್ರಕಟಿಸಿ ಇದಕ್ಕೆ ಬರೆದ ವಿಸ್ತಾರವಾದ ಮುನ್ನುಡಿಯಲ್ಲಿ 19ನೇ ಶತಮಾನದವರೆಗಿನ ಕನ್ನಡ ಸಾಹಿತ್ಯದ ಸ್ಥೂಲ ಪರಿಚಯವನ್ನು ಸಹ ಕೊಟ್ಟಿದ್ದಾರೆ. 'ಪಂಚತಂತ್ರ' ಇವರು ಸಂಪಾದಿಸಿರುವ ಮತ್ತೊಂದು ಗ್ರಂಥ. 'ಕರ್ನಾಟಕ ಕಾವ್ಯಮಾಲೆ' ಎಂಬ ಒಂದು ಸಂಗ್ರಹವನ್ನೂ ಇವರು ಪ್ರಕಟಿಸಿದ್ದಾರೆ. ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದಂತೆ 18 ಸಣ್ಣಪುಟ್ಟ ಕೃತಿಗಳನ್ನು ಆರು ಕನ್ನಡ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡ ವ್ಯಾಕರಣದ ಮೇಲೆ ಇಂಗ್ಲಿಷ್‌ನಲ್ಲಿ "ಗ್ರಾಮರ್ ಆಫ್ ದಿ ಕನ್ನಡ ಲಾಂಗ್ವೇಜ್" ಎಂಬ ಗ್ರಂಥವನ್ನು ರಚಿಸಿದ್ದಾರೆ.

**ರೈಸ್ ಬಿ.ಎಲ್.** ಕ್ರೈಸ್ತ ಮಿಶನರಿಯಾಗಿರಲಿಲ್ಲ. ಇವರು ಬೆಂಗಳೂರಿನಲ್ಲಿ ಹೈಸ್ಕೂಲ್ ಶಿಕ್ಷಕರಾಗಿ ನಂತರ ಕೊಡಗಿನಲ್ಲಿ ಶಾಲಾ ಇನ್ಸ್‌ಪೆಕ್ಟರಾಗಿ ಸೇವೆ ಸಲ್ಲಿಸಿದರು. ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಸಿದ್ಧಪಡಿಸಿ ಕನ್ನಡ ಭಾಷೆಯ ತನ್ಮೂಲಕ ಶಿಕ್ಷಣದ ಅಭಿವೃದ್ಧಿಗೆ ಶ್ರಮಿಸಿದ ಇವರು ತಮ್ಮ ಕಾರ್ಯದಿಂದ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ. ಶಿಕ್ಷಣ ಇಲಾಖೆಯಲ್ಲಿದ್ದ ಇವರು ಬೇರೆ ಬೇರೆ ಕಡೆಗಳಲ್ಲಿ ಸಂಚರಿಸುತ್ತಿದ್ದಾಗ ಸ್ಥಳ ಪುರಾಣಗಳು, ಚಾರಿತ್ರಿಕ ವಿಷಯಗಳು, ಪುರಾತನ ಗ್ರಂಥಗಳು ಮೊದಲಾದುವುಗಳನ್ನು ಸಂಗ್ರಹಿಸುತ್ತಿದ್ದರು. ಶಾಸನಗಳನ್ನು ಓದಿ ಆ ವಿಷಯಗಳನ್ನು ಪ್ರಕಟಿಸುತ್ತಿದ್ದರು. ಪಂಪಭಾರತ, ಪಂಪರಾಮಾಯಣ, ಶಬ್ದಾನುಶಾಸನ ಮುಂತಾದ ಮುಖ್ಯವಾದ ಕೆಲವು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಬಿಬ್ಲಿಯೋಥಿಕಾ ಕರ್ನಾಟಿಕ ಗ್ರಂಥಮಾಲೆಯನ್ನು ಹೊರತಂದಿರುವುದಲ್ಲದೆ ಕನ್ನಡನಾಡಿನ ಚರಿತ್ರೆಗೆ ಸಂಬಂಧಿಸಿದಂತೆ ನೂರಾರು ಲೇಖನಗಳನ್ನು ಹಲವು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಪ್ರತಿ ಜಿಲ್ಲೆಯ ಹಳ್ಳಿಹಳ್ಳಿಗಳನ್ನೂ ಸುತ್ತಿ ಶಾಸನಗಳನ್ನು ಸಂಗ್ರಹಿಸಿ ಅವನ್ನು ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸಿದರು. ಈ ಶಾಸನಗಳಿಂದ ತಿಳಿದುಬರುವ ರಾಜಕೀಯ ಇತಿಹಾಸವನ್ನು, ಸಂಗ್ರಹವಾಗಿ ತಿಳಿಸುವ 'ಮೈಸೂರ್ ಅಂಡ್ ಕೂರ್ಗ್ ಫ್ರಮ್ ಇನ್‌ಸ್ಕ್ರಿಪ್ಷನ್ಸ್' ಎಂಬ ಗ್ರಂಥವನ್ನು ಇವರು ಹೊರತಂದರು. ಶಾಸನಗಳಿಗೆ ಸಂಬಂಧಿಸಿದ ಈ ಹನ್ನೆರಡು ಸಂಪುಟಗಳು ಶಿಕ್ಷಣ ಶಾಸ್ತ್ರ ಮತ್ತು ಇತಿಹಾಸ ಅಧ್ಯಯನ ಮಾಡುವವರಿಗೆ ಸಮೃದ್ಧ ಸಂಪನ್ಮೂಲಗಳಾಗಿವೆ. ಕನ್ನಡವನ್ನು ಓದಲು, ಬರೆಯಲು ಹಾಗೂ ಮಾತನಾಡಲು ಕಲಿತಿದ್ದ ರೈಸ್ ಉತ್ಕಟ ಕನ್ನಡಾಭಿಮಾನಿಯಾಗಿದ್ದರು. 1924ರಲ್ಲಿ ಲಂಡನ್ನಿನ ಪೆವಿಲಿಯನ್ ಒಂದರಲ್ಲಿ ಕನ್ನಡಿಗರೊಬ್ಬರನ್ನು ಭೇಟಿ ಮಾಡಿದ ರೈಸ್‌ರವರು ಉಭಯ ಕುಶಲೋಪರಿ ಆದ ನಂತರ ಕನ್ನಡದಲ್ಲಿ "ಅಯ್ಯಾ! ಕನ್ನಡದಲ್ಲಿ ಮಾತನಾಡೋಣವೇ? ಮುದ್ದಿನ ಕನ್ನಡ ಕಿವಿಯ ಮೇಲೆ ಬಿದ್ದು ಬಹಳ ದಿನಗಳಾಗಿವೆ" ಎಂದರಂತೆ. ಇದು ಅವರ ಕನ್ನಡ ಭಾಷಾಭಿಮಾನವನ್ನು

Digitised by Bharatavani, CIIL

ತೋರಿಸುತ್ತದೆ. ರೈಸ್ ಅವರ ಮರಿ ಮಕ್ಕಳು 2009ರಲ್ಲಿ ಮೈಸೂರಿಗೆ ಭೇಟಿ ನೀಡಿದಾಗ ಅವರಿಗೆ ಹಾರ್ದಿಕ ಸ್ವಾಗತ ನೀಡಲಾಯಿತು.

ಕ್ರಿ.ಶ. 1808ರಿಂದ ಪ್ರೊಟೆಸ್ಟಾಂತರು ಕರ್ನಾಟಕದಲ್ಲಿ ತಮ್ಮ ಚಟುವಟಿಕೆಗಳನ್ನು ಆರಂಭಿಸಿ, ತಮ್ಮ ಸೇವಾ ಕೇಂದ್ರಗಳನ್ನು ಬೆಂಗಳೂರು, ಬಳ್ಳಾರಿ, ಬೆಳಗಾವಿ, ಮೈಸೂರು, ಧಾರವಾಡ, ಹುಬ್ಬಳ್ಳಿ, ಬಿಜಾಪುರ ಮತ್ತು ಕಾರವಾರಗಳಲ್ಲಿ ತೆರೆದು, ಶಿಕ್ಷಣ, ವೈದ್ಯಕೀಯ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. 1810ರಲ್ಲಿ ಲಂಡನ್ ಮಿಷನ್ ವಸಾಹತು ಸರ್ಕಾರದ ನೆರವಿನೊಂದಿಗೆ ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಕೆಲಸ ಮಾಡಿತು.

ಸಾಹಿತ್ಯ, ಭಾಷಾ ಅಧ್ಯಯನ, ಪತ್ರಿಕೋದ್ಯಮ, ಪ್ರಕಟಣೆ, ಕೈಗಾರಿಕೆ, ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಪ್ರೊಟೆಸ್ಟಾಂತ ಮಿಷನರಿಗಳು ಅಪಾರ ಕೊಡುಗೆ ನೀಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಂತೂ ಈ ಮಿಷನರಿಗಳು ಸಲ್ಲಿಸಿದ ಸೇವೆ ಶ್ಲಾಘನೀಯ.

–ಆ.ಕೃ.

## ಕರ್ನಾಟಕದಲ್ಲಿ ಹಿಂದಿ ಶಿಕ್ಷಣ

ದಕ್ಷಿಣದಲ್ಲಿ ಹಿಂದಿ ಪ್ರಚಾರಕ್ಕೆ ಬುನಾದಿಯಾದದ್ದು 1918ರಲ್ಲಿ. ಗಾಂಧೀಜಿಯವರ ಆದೇಶದಂತೆ ಬೀಜಾಂಕುರಗೊಂಡು 1927ರಲ್ಲಿ ಮದರಾಸಿನಲ್ಲಿ (ಇಂದಿನ ಚೆನ್ನೈಯಲ್ಲಿ) ಆರಂಭವಾದದ್ದು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ. ಇದು ದಕ್ಷಿಣ ಭಾರತದಲ್ಲಿ ಹಿಂದಿ ಪ್ರಚಾರ ಮತ್ತು ಪ್ರಸಾರದ ಮೂಲ ನೆಲೆ, ಹಿಂದಿಯ ಪಾವನಗಂಗೆಯನ್ನು ಇಡೀ ದಕ್ಷಿಣಭಾರತದಲ್ಲಿ ಹರಿಸಿದ ಸೇವಾಸಂಸ್ಥೆ. ಇದಕ್ಕೂ ಮುನ್ನ ಇಂದೂರಿನಲ್ಲಿ ಗಾಂಧೀಜಿ ಹಿಂದಿ ಭಾಷಾ ಕಲಿಕೆಯನ್ನು ಕುರಿತು ಮಾಡಿದ ಭಾಷಣ ದೇಶದ ಪಾಲಿಗೆ ಹಿಂದಿ ದೀಕ್ಷೆಯ ಭಾಷಣವಾಗಿತ್ತು. ಅವರ ಮಾತುಗಳಲ್ಲಿ ಎಂಥ ಪ್ರಭಾವವಿತ್ತೆಂದರೆ ದಕ್ಷಿಣದ ರಾಜ್ಯಗಳಲ್ಲಿ ಮತ್ತು ಇತರ ಭಾಗಗಳಲ್ಲಿ ಹಿಂದಿ ಕಲಿಯಲು ಮತ್ತು ಕಲಿಸಲು ಹಿಂದಿ ಸೇನಾನಿಗಳ ದಂಡುಗಳು ಕರ್ನಾಟಕ ಸೇರಿದಂತೆ ಎಲ್ಲ ಭಾಗಗಳಲ್ಲೂ ಸಿದ್ಧಗೊಂಡವು. ಈ ಪ್ರಚಾರಕ ಸೇನಾನಿಗಳಿಗೆ ಗಾಂಧೀಜಿ ಪ್ರೇರಣೆಯ ಸ್ರೋತವಾಗಿದ್ದರು. ಹಿಂದಿ ಪ್ರಚಾರ ಕಾರ್ಯವನ್ನು ಮಾಡಲು ತಮ್ಮ ಮಗ ದೇವದಾಸ್ ಗಾಂಧಿಯವರನ್ನು ಮದರಾಸಿಗೆ ಕಳುಹಿಸಿದ ಗಾಂಧೀಜಿ ಅವರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಹೇಳಿದರು "ನೀನು ಮದರಾಸಿಗೆ ಹಿಂದಿ ದೀಕ್ಷೆಯನ್ನು ಕೊಡುವುದಾದರೆ ಮತ್ತು ಅದನ್ನು ಜನತೆ ಸ್ವೀಕರಿಸಿದ್ದಾದರೆ ಮಹತ್ವದ ಒಂದು ಪ್ರಶ್ನೆ ಬಗೆಹರಿದಂತಾಗುತ್ತದೆ. ಆಗ ನೀನು ಮದರಾಸನ್ನು ಭಾರತದ ಇತರ ಭಾಗಗಳೊಂದಿಗೆ ಜೋಡಿಸಿದೆ ಎಂದು ಹೇಳಬಹುದು. ಗಂಗೆಗೆ ಸೇತುವೆ ಕಟ್ಟಲು ಎಂತಹ ಕೌಶಲ್ಯ ಮತ್ತು ಧೈರ್ಯದ ಆವಶ್ಯಕತೆಯಿದೆಯೋ ಅದಕ್ಕಿಂತಲೂ ಹೆಚ್ಚು ಕೌಶಲ್ಯ ಮತ್ತು ಧೈರ್ಯ ನೀನು ಕಟ್ಟುತ್ತಿರುವ ಭಾಷಾ ಸೇತುವೆಗೆ ಬೇಕಾಗಿದೆ."

ಗಾಂಧೀಜಿಯವರ ವಿಚಾರಧಾರೆಯಿಂದ ಕರ್ನಾಟಕದಲ್ಲಿ ಅನೇಕ ಯುವಕರು ಎಷ್ಟು ಆಕರ್ಷಿತರಾಗಿ ಹಿಂದಿ ಪ್ರಚಾರ–ಪ್ರಸಾರವನ್ನು ರಾಷ್ಟ್ರೀಯ ಅಭಿಯಾನವೆಂದು ಸ್ವೀಕರಿಸಿ ಹಳ್ಳಿ–ಹಳ್ಳಿಗಳಿಗೆ ಹೋಗಿ ಹಿಂದಿ ಪ್ರಚಾರ ಕಾರ್ಯವನ್ನು ಕೈಗೊಂಡರು. ಜನರ ಮನಸ್ಸುಗಳನ್ನು ಹಿಂದಿಯೆಡೆಗೆ ಸೆಳೆಯುವ, ಹಿಂದಿ ಕಲಿಕೆಯ ಅನಿವಾರ್ಯತೆಯನ್ನು ತಿಳಿಸುವ ಕೆಲಸ ಮಾಡಿದರು. ಈ ಕಾರ್ಯದಲ್ಲಿ ಮಹಿಳೆಯರೂ ಮುಂದೆ ಬಂದರು. ಅವರೂ ಹಿಂದಿಯನ್ನು ಕಲಿಸುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸ್ವಾತಂತ್ರ್ಯಪೂರ್ವದ ವರ್ಷಗಳಲ್ಲಿ ಹಿಂದಿ ಪ್ರಚಾರದಲ್ಲಿ ನಮ್ಮ ಜನಸಮುದಾಯ ಮತ್ತು ಪ್ರಚಾರಕ–ಪ್ರಚಾರಕಿಯರು ಅತೀವ ಉತ್ಸಾಹ, ಪ್ರೀತಿ, ಆದರವನ್ನು ತೋರುತ್ತಿದ್ದರು. ಇವರ ಪಾಲಿಗೆ ಇದು ರಾಷ್ಟ್ರೀಯ ಭಾವನೆಗಳ ಪ್ರಸಾರದ ಮಾಧ್ಯಮವಾಗಿತ್ತು. ದೇಶವನ್ನು ಒಗ್ಗೂಡಿಸುವ ಸೂತ್ರವಾಗಿತ್ತು.

ಕರ್ನಾಟಕದ ಹಿಂದಿ ಪ್ರಚಾರಕರು ಗಾಂಧೀಜಿಯವರಿಂದ ಪ್ರತಿಪಾದಿತವಾದ ರಾಷ್ಟ್ರಭಾಷೆಯ ವ್ಯಾಖ್ಯಾನಕರಾಗಿದ್ದರು. ಪರಾಧೀನ ಭಾರತವನ್ನು ಇಂಗ್ಲಿಷ್‌ನ ಬಂಧನದಿಂದ ಮುಕ್ತಗೊಳಿಸಿ ಹಿಂದಿ ಹಾಗೂ ದೇಶಭಾಷೆಗಳ ಮಹತ್ವವನ್ನು ಎತ್ತಿ ಹಿಡಿಯುವುದು ಈ ಪ್ರಚಾರಕರ ಕೆಲಸವಾಗಿತ್ತು. ಹಿಂದಿ ಆ ದಿನಗಳಲ್ಲಿನ ಪ್ರಚಾರಕರಿಗೆ ಆದಾಯದ ಮೂಲವಾಗಿರಲಿಲ್ಲ. ದೇಶಸೇವೆಯ ಸಾಧನವಾಗಿತ್ತು. ಜನಜಾಗೃತಿಯ ಮಾಧ್ಯಮವಾಗಿತ್ತು. ಕರ್ನಾಟಕದ ಹಿಂದಿ ಪ್ರಚಾರಕರು ಹಿಂದಿ ಪ್ರಚಾರಾಂದೋಲನವನ್ನು ಆಸ್ಥೆಯಿಂದ ಮಾಡಿದ್ದರಿಂದಲೇ ಕರ್ನಾಟಕದಲ್ಲಿ ಹಿಂದಿಯ ಬೇರುಗಳು ಇಂದು ಬಲವಾಗಿವೆ. ಈ ಬೇರುಗಳ ಬಲದ ಮೇಲೆ ಇಂದು ಕರ್ನಾಟಕದಲ್ಲಿ ಹಿಂದಿ ಹೆಮ್ಮರವಾಗಿ ವಿಕಸಿತಗೊಂಡಿದೆ. ಅಂದಿನ ಹಿಂದಿ ಪ್ರಚಾರಕರು ನಿಜವಾದ ಅರ್ಥದಲ್ಲಿ ತಮ್ಮ ತನು–ಮನ–ಧನವನ್ನು ಹಿಂದಿಗಾಗಿ ಅರ್ಪಿಸಿದ್ದರ ಫಲವಾಗಿ ಇಂದು ನಾವು ಅದರ ಫಸಲನ್ನು ಉಣ್ಣುತ್ತಿದ್ದೇವೆ.

ದಕ್ಷಿಣಭಾರತದಲ್ಲಿ ಹಿಂದಿ ಪ್ರಚಾರದ ಇತಿಹಾಸ ತುಂಬಾ ರೋಚಕವಾಗಿದೆ. 1918ರಲ್ಲಿ ಮದ್ರಾಸ್‌ನಲ್ಲಿ ಹಿಂದಿ ಸಾಹಿತ್ಯ ಸಮ್ಮೇಳನದ ಒಂದು ಶಾಖೆ ಆರಂಭವಾಯಿತು. ಇದೇ ಮುಂದೆ ದಕ್ಷಿಣಭಾರತ ಹಿಂದಿ ಪ್ರಚಾರ ಸಭಾ ಆಯಿತು. ಅದರ ಆಶ್ರಯದಲ್ಲಿ ದಕ್ಷಿಣದಲ್ಲಿ ಹಿಂದಿ ಕಲಿಸಲು ಉತ್ತರದಿಂದ ಬಂದ ಮಹನೀಯರ ಪೈಕಿ ದೇವದಾಸ್ ಗಾಂಧಿ, ಸ್ವಾಮಿ ಸತ್ಯದೇವ ಪರಿವ್ರಾಜಕ, ಪ್ರತಾಪ್ ನಾರಾಯಣ್‌ವಾಜಪೇಯಿ, ಹೃಷಿಕೇಶ್ ಶರ್ಮಾ ಪ್ರಮುಖರು.

1927ರ ಹೊತ್ತಿಗೆ ದಕ್ಷಿಣಭಾರತದಲ್ಲಿ ಹಿಂದಿ ಪ್ರಚಾರಕ್ಕೆ ಭದ್ರವಾದ ಬುನಾದಿ ದೊರಕಿತು. ಅದೇ ವರ್ಷ ಮದರಾಸ್‌ನಲ್ಲಿ ಹಿಂದೀ ಪ್ರಚಾರ ಸಭೆಯ ಸ್ಥಾಪನೆಯಾಯಿತು. ದಕ್ಷಿಣದಲ್ಲಿ ಹಿಂದೀ ಪ್ರಚಾರಕರನ್ನು ತರಬೇತುಗೊಳಿಸುವ ಉದ್ದೇಶದಿಂದ ರಾಜಮಹೇಂದ್ರಿ ಮತ್ತು ಈರೋಡ್‌ನಲ್ಲಿ ಪ್ರಚಾರಕ ವಿದ್ಯಾಲಯಗಳನ್ನು ಪ್ರಾರಂಭಿಸಲಾಯಿತು. ಇಲ್ಲಿ ಶಿಕ್ಷಣ ಪಡೆದುಕೊಂಡವರಲ್ಲಿ ಕರ್ನಾಟಕದ ಮಾರ್ಕಂಡೇಯ ರಾವ್ ಸಹ ಇದ್ದರು. ಇವರು ಮದರಾಸ್‌ನಲ್ಲಿ ಓರ್ವ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದರು. ಅದೇ ಕಾಲದಲ್ಲಿ ಸಿದ್ಧನಾಥ್ ಪಂತರು ಹಿಂದಿ ಪ್ರಚಾರಕ್ಕೆ ಬಂದರು. 1923ರಲ್ಲಿ ಮದರಾಸ್ ಮತ್ತು ಕಾಕಿನಾಡಲ್ಲಿ ಜರುಗಿದ ಕಾಂಗ್ರೆಸ್ ಮಹಾಸಭೆಯ ಸಂದರ್ಭದಲ್ಲಿ ನಡೆದ ಹಿಂದಿ ಪ್ರಚಾರಕ ಸಮ್ಮೇಳನದಿಂದ ಹಿಂದಿ ಪ್ರಚಾರಕಾರ್ಯಕ್ಕೆ ತುಂಬಾ ಪ್ರೋತ್ಸಾಹ ದೊರೆಕಿತು. ಈ ಸಮ್ಮೇಳನದ ಅಧ್ಯಕ್ಷರಾದ ಜಮನಾಲಾಲ್ ಬಜಾಜರು ಹಿಂದಿಯ ಪಾವನ ಕೆಲಸಕ್ಕೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದರು ಮತ್ತು ನೂರಾರು ಪ್ರಚಾರಕರಿಗೆ ಆರ್ಥಿಕವಾಗಿ ನೆರವಾದರು. ಕರ್ನಾಟಕದ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಕಾರ್ನಾಡ್ ಸದಾಶಿವರಾಯರು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಅವರು ಕರ್ನಾಟಕದ ಹಿಂದಿ ಪ್ರಚಾರ ಕಾರ್ಯಕ್ಕೆ ಪ್ರೇರಣೆಯಾದರು. ಕರ್ನಾಟಕದ ಹಿಂದಿ ಪ್ರಚಾರದ ಕಾರ್ಯಕ್ಕೆ ಇಂಬಾಗಿದ್ದವರಲ್ಲಿ ಸರ್ವಶ್ರೀ ಶಿವರಾಮಶಾಸ್ತ್ರಿ, ಟಿ.ಕೃಷ್ಣಸ್ವಾಮಿ, ಜಮುನಾಪ್ರಸಾದ್, ಸಿದ್ಧನಾಥ ಪಂತ್, ಸಿದ್ಧಗೋಪಾಲ್ ಪ್ರಮುಖರು. ಇವರು ಕರ್ನಾಟಕದ ವಿಭಿನ್ನ ಭಾಗಗಳಲ್ಲಿ ಹಿಂದಿ ಪ್ರಚಾರ ಕಾರ್ಯವನ್ನು ಕೈಗೊಂಡರು. ಮಹಾತ್ಮಾ ಗಾಂಧೀಜಿಯವರು 1927ರಲ್ಲಿ ಕರ್ನಾಟಕದ ಪ್ರವಾಸ ಕೈಗೊಂಡಿದ್ದಾಗ ಬೆಂಗಳೂರಿನಲ್ಲಿ ಒಂದು ಹಿಂದಿ ಪ್ರಚಾರಕರ ಸಮ್ಮೇಳನ ನಡೆಯಿತು. ಗಾಂಧೀಜಿಯವರು ಇದರ

Digitised by Bharatavani, CIIL

ಅಧ್ಯಕ್ಷರಾಗಿದ್ದರು ಮತ್ತು ಪಂಡಿತ್ ಮದನಮೋಹನ ಮಾಳವೀಯರು ಸಮ್ಮೇಳನವನ್ನು ಉದ್ಘಾಟಿಸಿದರು. ಗಾಂಧೀಜಿಯವರು ರಾಷ್ಟ್ರಭಾಷೆಯ ಆವಶ್ಯಕತೆಯನ್ನು ಕುರಿತಂತೆ ಮಾಡಿದ ವಿಚಾರೋತ್ತೇಜಕ ಭಾಷಣ ಕರ್ನಾಟಕದ ಯುವಕರಲ್ಲಿ ಪ್ರೇರಣೆ ಮತ್ತು ಉತ್ಸಾಹವನ್ನು ತುಂಬಿತು. ಆಗ ಬಂದ ಮೊದಲ ಪೀಳಿಗೆಯ ಪ್ರಚಾರಕರಲ್ಲಿ ಶ್ರೀ ವೆಂಕಟಾಚಲ ಶರ್ಮ, ರಾಘವಾಚಾರ್ಯ, ಟಿ.ಕೆ. ಸುಬ್ಬರಾವ್, ಎಂ.ವಿ. ಜಂಬುನಾಥನ್, ವೆಂಕಟಾಚಲಯ್ಯ, ಡಿ.ಕೆ. ಭಾರದ್ವಾಜ, ಮಾರ್ಕಂಡೇಯ ರಾವ್, ಎ.ಟಿ. ಶ್ರೀನಿವಾಸ್ ಮುಂತಾದವರು ಪ್ರಮುಖರು.

ಕರ್ನಾಟಕದ ಹಿಂದಿ ಆಂದೋಲನದ ಸೌಭಾಗ್ಯವೆಂದರೆ ಕೇವಲ ಹಿಂದಿ ಕಲಿತವರಷ್ಟೇ ಅಲ್ಲ. ಸಮಾಜದ ಬೇರೆ ಬೇರೆ ಕ್ಷೇತ್ರದ ಮಹಾನುಭಾವರೂ ಸಹ ಹಿಂದಿಯ ಪ್ರಚಾರ ಮತ್ತು ಪ್ರಸಾರವನ್ನು ರಾಷ್ಟ್ರೀಯ ಆವಶ್ಯಕತೆಯೆಂದು ಭಾವಿಸಿ ಈ ಪ್ರಚಾರಾಂದೋಲನದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡರು. ಇವರಿಂದ ಹಿಂದಿ ಪ್ರಚಾರಕ್ಕೆ ಬಲ ಬಂತು. ಇವರಲ್ಲಿ ಕೆಲವರ ಹೆಸರೆಂದರೆ, ಡಾ. ನ.ಸು. ಹರ್ಡೀಕರ್, ಶ್ರೀ ಗಂಗಾಧರರಾವ್ ದೇಶಪಾಂಡೆ, ಬೆಂಗಳೂರಿನ ಸರ್ ಕೆ.ಸಿ. ಪುಟ್ಟಣ್ಣ ಚೆಟ್ಟಿ, ಡಾ. ಬಿ.ಸಿ ರಾಮರಾವ್, ಶ್ರೀ ಸಂಪದ್ಗಿರಿರಾವ್, ಮೈಸೂರಿನ ತಾತಯ್ಯ ಎಂದೇ ಪ್ರಸಿದ್ಧರಾದ ವೆಂಕಟಕೃಷ್ಣಯ್ಯ, ಮಹಿಳೆಯರಲ್ಲಿ ಶ್ರೀಮತಿ ಸುಶೀಲಾಬಾಯಿ, ರುಕ್ಮಿಣೀದೇವಿ, ಕಾಮಾಕ್ಷಿದೇವಿ, ಉಮಾಬಾಯಿ ಕುಂದಪುರ್‌ಕರ್, ಇಂದಿರಾಬಾಯಿ ಕೃಷ್ಣಮೂರ್ತಿ ಪ್ರಮುಖರು. ಇವರೆಲ್ಲರ ಅವಿರತ ಶ್ರಮ ಮತ್ತು ತ್ಯಾಗದಿಂದ ಹಿಂದಿ ಪ್ರಚಾರ ಕ್ಷೇತ್ರದಲ್ಲಿ ಸಂಚಲನ ಉಂಟಾಯಿತು.

ಕರ್ನಾಟಕದಲ್ಲಿ ಹಿಂದಿ ಪ್ರಚಾರ ಆಂದೋಲನ ಎಷ್ಟು ಗಟ್ಟಿಯಾಗಿತ್ತೆಂದರೆ ಹಿಂದಿಯ ಬಗೆಗೆ ಜನರ ಗಮನವನ್ನು ಸೆಳೆಯಲು ಆಗ ಹಿಂದೀ ನಾಟಕಗಳನ್ನು ಕೂಡ ಆಡಲಾಯಿತು. ಗಾಂಧೀಜಿ ಭಾಗವಹಿಸಿದ್ದ ಒಂದು ಸಮಾರಂಭದಲ್ಲಿ ಪಂಡಿತ್ ತಾರಾನಾಥರು ಹಿಂದಿಯಲ್ಲಿ ಬರೆದಿದ್ದ 'ದೀನಬಂಧು ಕಬೀರ್' ಎಂಬ ನಾಟಕವನ್ನು ಅಭಿನಯಿಸಲಾಯಿತು.

ಪಂಡಿತ್ ತಾರಾನಾಥರು ಅನೇಕ ಭಾಷೆಗಳಲ್ಲಿ ಪರಿಣತರಿದ್ದರು. ಒಳ್ಳೆಯ ನಟರಾಗಿದ್ದರು ಮತ್ತು ಹಿಂದಿಯ ಉತ್ತಮ ಲೇಖಕರಾಗಿದ್ದರು. ಅವರು ಬರೆದಿದ್ದ "ದೀನಬಂಧು ಕಬೀರ್' ನಾಟಕವನ್ನು ನೋಡಿ ಗಾಂಧೀಜಿಯವರು ಪ್ರಭಾವಿತರಾದರು. ಮತ್ತು ಆ ನಾಟಕವನ್ನು ಬಹುವಾಗಿ ಪ್ರಶಂಸಿಸಿದರು. ಆ ದಿನಗಳಲ್ಲಿಯೇ 'ಮೇವಾಡ್ ಪತನ್', 'ವೀರ ಅಭಿಮನ್ಯು'ಮುಂತಾದ ನಾಟಕಗಳನ್ನು ಮೈಸೂರು, ಬೆಂಗಳೂರು, ಮದರಾಸ್ ಮುಂತಾದ ನಗರಗಳಲ್ಲಿ ಅಭಿನಯಿಸಿದರು. ನಾಟಕಗಳ ಮೂಲಕ ಮಾಡಿದ ಹಿಂದಿ ಪ್ರಚಾರಾಂದೋಲನದಲ್ಲಿ ಆಕಾಶವಾಣಿಯ ನಿರ್ದೇಶಕರಾಗಿದ್ದ ಡಾ. ನಟೇಶ್ ಮೊದಲಿಯಾರ್, ಚಿತ್ರ ಸಾಹಿತಿ ಚಿ. ಸದಾಶಿವಯ್ಯ ಮತ್ತು ಸಿ.ಕೆ. ನಾಗರಾಜರಾವ್ ಮುಂತಾದವರ ಹೆಸರುಗಳನ್ನು ನೆನಪಿಸಿಕೊಳ್ಳಲೇಬೇಕು.

ಹಿಂದಿ ಪ್ರಚಾರಕ್ಕೆ ಅನಿವಾರ್ಯವಾಗಿ ಬೇಕಾಗಿದ್ದ ಪೂರಕ ಸಾಮಗ್ರಿಯನ್ನು ಸಿದ್ಧಪಡಿಸಿದ್ದು ಆ ದಿನಗಳಲ್ಲಿ ಮಾಡಿದ ಮಹತ್ವದ ಕೆಲಸವಾಗಿತ್ತು. ಶಬ್ದಕೋಶ, ಸ್ವಯಂಬೋಧಿನಿ, ವ್ಯಾಕರಣ ಗ್ರಂಥಗಳ ರಚನೆ ಹಿಂದಿ ಪ್ರಚಾರಕ್ಕೆ ಪೂರಕವಾಗಿತ್ತು. ಪಂಡಿತ್ ಸಿದ್ಧನಾಥ್ ಪಂತರ 'ಹಿಂದಿ-ಕನ್ನಡ ಸ್ವಯಂಬೋಧನಿ' ಗ್ರಾಮೀಣ ಪ್ರದೇಶಗಳಲ್ಲಿನ ಹಿಂದಿ ಕಲಿಯುವ ಮಂದಿಗೆ ಬಹಳಷ್ಟು ಸಹಾಯಕವಾಯಿತು. ಡಾ. ಜಂಬುನಾಥನ್‌ರವರು ರಚಿಸಿದ ಹಿಂದಿ ವ್ಯಾಕರಣ, ಹಿಂದಿ-ಕನ್ನಡ ಕೋಶ, ನುಡಿಗಟ್ಟು ಕೋಶ ಮುಂತಾದ ಪುಸ್ತಕಗಳು ಹಿಂದಿ ಕಲಿಕೆಗೆ ಬಹಳಷ್ಟು ಕೊಡುಗೆಗಳನ್ನು ನೀಡಿದವು. ಡಿ.ಕೆ. ಭಾರದ್ವಾಜರು ರಚಿಸಿದ ಶಬ್ದಕೋಶ ಇಂದಿಗೂ ಮಹತ್ವವನ್ನು ಹೊಂದಿದೆ.

**ಹಿಂದಿ ಸೇವಾಸಂಸ್ಥೆಗಳು :** ಕಳೆದ ಅರ್ಧಶತಮಾನಕ್ಕಿಂತಲೂ ಹೆಚ್ಚಿನ ಕಾಲಾವಧಿಯಿಂದ ಕರ್ನಾಟದಲ್ಲಿ ಹಿಂದಿ ಪ್ರಚಾರ-ಪ್ರಸಾರಕ್ಕೆಂದು ಸ್ಥಾಪಿತಗೊಂಡು ಹಿಂದಿ ಕೈಂಕರ್ಯದಲ್ಲಿ ತೊಡಗಿರುವ ಹಿಂದಿ ಸೇವಾಸಂಸ್ಥೆಗಳ ಕೊಡುಗೆ ಅಪಾರವಾದದ್ದು. ಗಾಂಧೀಜಿಯವರ ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ದಕ್ಷಿಣಭಾರತದಲ್ಲಿ 1918ರಲ್ಲೇ ಹಿಂದಿ ಸಂಸ್ಥೆಗೆ ಬೀಜಾಂಕುರವಾಯಿತಾದರೂ ದಕ್ಷಿಣಭಾರತ ಹಿಂದಿ ಪ್ರಚಾರ ಸಭೆ ಆರಂಭವಾದದ್ದು 1927ರಲ್ಲಿ. ಸಭಾದ ಕೇಂದ್ರ ಕಛೇರಿ ಮದರಾಸ್ ನಗರದಲ್ಲಿದೆ. ಆಚಾರ್ಯ ಕಾಕಾ ಕಾಲೇಲ್ಕರರ ಸಲಹೆಯ ಮೇರೆಗೆ 1933-34ರಲ್ಲಿ ಹಿಂದಿ ಶಿಕ್ಷಾ ಪರಿಷತ್‌ನ ಸ್ಥಾಪನೆಯಾಯಿತು. ಇದರ ಸಲಹೆಯಂತೆ ಹಿಂದಿ ಪ್ರಚಾರಕ್ಕೆ ಪ್ರೋತ್ಸಾಹ ನೀಡಲು ದಕ್ಷಿಣದ ನಾಲ್ಕೂ ರಾಜ್ಯಗಳಲ್ಲಿ ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯ ಪ್ರಾಂತೀಯ ಶಾಖೆಗಳನ್ನು ತೆರೆಯಲಾಯಿತು. ಹೀಗೆ ತೆರೆದ ಶಾಖೆಯೇ ಮೈಸೂರು ಪ್ರಾಂತೀಯ ಹಿಂದಿ ಪ್ರಚಾರ ಸಭಾ. ಇದು ನಂತರ ಕರ್ನಾಟಕ ಪ್ರಚಾರ ಸಭೆಯಾಗಿ, ಆಮೇಲೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಶಾಖೆಯಾಗಿ ಧಾರವಾಡದಲ್ಲಿ ಕೆಲಸ ನಿರ್ವಹಿಸುತ್ತಿದೆ. ಈ ದಕ್ಷಿಣಭಾರತ ಹಿಂದಿ ಪ್ರಚಾರ ಸಭಾ ಮೊದಲಿನಿಂದಲೂ ಮದ್ರಾಸ್ ಕೇಂದ್ರದ ಪರೀಕ್ಷೆಗಳನ್ನು ನಡೆಸುತ್ತಿದೆ. ಇಡೀ ಕರ್ನಾಟಕದ ತುಂಬಾ ಈ ಸಂಸ್ಥೆಯ ಪ್ರಚಾರಕರಿದ್ದು ಇವರೆಲ್ಲಾ ಕಳೆದ 70-80 ವರ್ಷಗಳಿಂದ ಹಿಂದಿ ಪ್ರಚಾರಕಾರ್ಯದಲ್ಲಿ ತೊಡಗಿದ್ದಾರೆ. ಸರ್ವಶ್ರೀ ರಂ.ರಾ.ದಿವಾಕರ್, ಸಿ.ಬಿ. ರಾಮರಾವ್, ನವರತ್ನ ರಾಮರಾವ್, ಅಣ್ಣಾಸಾಹೇಬ್ ಲಟ್ಟೆ, ಟಿ. ಸುಬ್ರಮಣ್ಯಂ, ಎಸ್.ಆರ್.ಕಂಠಿ, ಜಿ.ವಿ.ಹಳ್ಳಿಕೇರಿ, ಬಿ.ಸಿ. ನಂಜುಂಡಯ್ಯ, ವೀರೇಂದ್ರ ಪಾಟೀಲ್, ಬಿ.ಡಿ. ಜತ್ತಿ ಮುಂತಾದವರು ಇದರ ಅಧ್ಯಕ್ಷರಾಗಿದ್ದರು. ಈ ಸಭೆಯಿಂದ 'ಭಾರತ್‌ವಾಣಿ' ಎಂಬ ಮಾಸಿಕ ಪತ್ರಿಕೆ ಐದಾರು ದಶಕಗಳಿಂದ ಪ್ರಕಟವಾಗುತ್ತಿದ್ದು ಇದು ಕರ್ನಾಟಕದ ಹಿಂದಿ ಲೇಖಕರನ್ನು, ಅನುವಾದಕರನ್ನು ಪ್ರೋತ್ಸಾಹಿಸುತ್ತಿದೆ. ಜೊತೆಗೆ ಹಿಂದಿ ಸಾಹಿತ್ಯಕ್ಕೆ ಸಂಬಂಧಿಸಿದ ಉನ್ನತಮಟ್ಟದ ಲೇಖನಗಳು ಇವರಲ್ಲಿ ಪ್ರಕಟವಾಗುತ್ತಿವೆ.

ಕರ್ನಾಟಕದಲ್ಲಿ ಹಿಂದಿ ಪ್ರಚಾರದಲ್ಲಿ ತೊಡಗಿಕೊಂಡಿರುವ ಕರ್ನಾಟಕ ಹಿಂದಿ ಪ್ರಚಾರ ಸಮಿತಿ 70 ವರ್ಷಗಳ ಇತಿಹಾಸವನ್ನು ಹೊಂದಿದೆ. 1939ರಲ್ಲಿ 'ಮೈಸೂರು ರಿಯಾಸತ್ ಹಿಂದಿ ಪ್ರಚಾರ ಸಮಿತಿ' ಎಂಬ ಸಂಸ್ಥೆಯು ಹಿಂದಿ ಪ್ರಚಾರವನ್ನು ತನ್ನ ಉದ್ದೇಶವಾಗಿರಿಸಿಕೊಂಡು ಮೈಸೂರಿನಲ್ಲಿ ಸ್ಥಾಪಿತವಾಯಿತು. ಒಂದು ವರ್ಷದಲ್ಲಿಯೇ ಇದರ ಕಾರ್ಯಾಲಯವನ್ನು ಬೆಂಗಳೂರಿಗೆ ಸ್ಥಾನಾಂತರಿಸಲಾಯಿತು. 1985ರಲ್ಲಿ ಇದರ ಹೆಸರನ್ನು 'ಕರ್ನಾಟಕ ಹಿಂದಿ ಪ್ರಚಾರ ಸಮಿತಿ' ಎಂದು ಬದಲಾಯಿಸಲಾಯಿತು. ಸರ್ವಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್, ಜಸ್ಟಿಸ್ ಕೆ. ಶಂಕರನಾರಾಯಣ ರಾವ್, ಟಿ, ಭುಜಂಗರಾವ್, ಹೆಚ್.ಸಿ. ದಾಸಪ್ಪ, ಟಿ.ಸುಬ್ರಹ್ಮಣ್ಯಮ್, ಕೆ. ಶ್ಯಾಮರಾಜ್ ಅಯ್ಯಂಗಾರ್, ಎ.ಜಿ. ರಾಮಚಂದ್ರರಾವ್, ಕೆ.ಸಿ. ರೆಡ್ಡಿ, ಎಸ್. ನಿಜಲಿಂಗಪ್ಪ, ರಾಮಕೃಷ್ಣಹೆಗಡೆ ಮುಂತಾದವರು ಈ ಸಮಿತಿಯ ಅಧ್ಯಕ್ಷರಾಗಿದ್ದರು. ಆರಂಭದ ವರ್ಷಗಳಲ್ಲಿ ಡಾ. ಹಿರಣ್ಮಯ, ಆನಂತರ ಎ.ವಿ. ಶ್ರೀನಿವಾಸಮೂರ್ತಿ ಈ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿ ಸರ್ವತೋಮುಖ ವಿಕಾಸಕ್ಕಾಗಿ ಕೆಲಸ ಮಾಡಿದರು. ಈ ಸಂಸ್ಥೆಯು 'ಭಾಷಾ ಪೀಯೂಷ್' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಅನೇಕ ವರ್ಷಗಳಿಂದ ಪ್ರಕಟಿಸುತ್ತಿದ್ದು ಇದರಲ್ಲಿ ವಿದ್ವತ್ ಲೇಖನಗಳು ಪ್ರಕಟವಾಗುತ್ತಿವೆ.

Digitised by Bharatavani, CIIL

ಆರಂಭದಲ್ಲಿ ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯಲ್ಲಿ ಹಿಂದೂಸ್ತಾನಿ ಮತ್ತು ಉರ್ದು ಲಿಪಿಯ ಪ್ರಚಾರವಾಗುತ್ತಿತ್ತು. ಆದರೆ ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿ ಸಾಹಿತ್ಯದ ಪ್ರಚಾರ-ಪ್ರಸಾರ ಮಾಡಲು 1943ರಲ್ಲಿ ಹಿಂದಿ ಭಾಷಾಭಿಮಾನಿಗಳು ಸ್ಥಾಪಿಸಿದ ಸಂಸ್ಥೆಯೇ ಮೈಸೂರು ಹಿಂದಿ ಪ್ರಚಾರ ಪರಿಷತ್. ಈ ಪರಿಷತ್ತಿನ ಮೊದಲ ಅಧ್ಯಕ್ಷರು ಶ್ರೀ ಡಿ.ಕೆ. ಭಾರದ್ವಾಜರು. ಅವರ ನಂತರ ಸರ್ವಶ್ರೀ ಪಿ.ವಿ. ನರಸಿಂಹರಾವ್, ರಾಮಕೃಷ್ಣರಾವ್, ಡಾ.ಕೆ. ನಾಗಪ್ಪ ಆಳ್ವ, ಎಸ್.ಎಂ. ಕೃಷ್ಣ ಮುಂತಾದ ಮಹನೀಯರು ಈ ಪರಿಷತ್‌ನ ಅಧ್ಯಕ್ಷರಾಗಿದ್ದರು. ಸರ್ವಶ್ರೀ ಯೋಗಾನರಸಿಂಹ, ಕೆ.ಬಿ.ಮಾನಪ್ಪ, ವಿ.ವೀರಪ್ಪ ಕಾರ್ಯದರ್ಶಿಗಳಾಗಿ ಸೇವೆಗೈದಿದ್ದಾರೆ. ಇವರ ನಿರಂತರ ಶ್ರಮ ರಚನಾತ್ಮಕ ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಹಿಂದಿ ಆಂದೋಲನ ಚುರುಕಾಗಿ ನಡೆಯುತ್ತಿದೆ. ಈ ಪರಿಷತ್ತಿನಿಂದಲೂ 'ಮೈಸೂರು ಹಿಂದೀ ಪ್ರಚಾರ್ ಪರಿಷತ್ ಪತ್ರಿಕಾ' ಎಂಬ ಮಾಸಿಕ ಪತ್ರಿಕೆ ಪ್ರಕಟವಾಗುತ್ತಿದೆ.

ಮಹಾತ್ಮಾ ಗಾಂಧೀಜಿಯವರ ಹಿಂದಿ ಪ್ರಚಾರ ಕಾರ್ಯದಲ್ಲಿ ಮಹಿಳೆಯರು ಸಕ್ರಿಯರಾದರೆ ಅದ್ಭುತವಾದುದನ್ನು ಸಾಧಿಸಬಹುದೆಂದು, ಇದಕ್ಕಾಗಿ ಒಂದು ಸಂಘಟನೆಯ ಆವಶ್ಯಕತೆಯಿದೆ ಎಂದು ನೀಡಿದ ಸಲಹೆಯನ್ನು ಸಾಕಾರಗೊಳಿಸಲು ಶ್ರೀ ಪಿ.ಆರ್.ಶ್ರೀನಿವಾಸಶಾಸ್ತ್ರಿಯವರ ಮಾರ್ಗದರ್ಶನದಲ್ಲಿ 1953ರಲ್ಲಿ ಬೆಂಗಳೂರಿನಲ್ಲಿ 'ಕರ್ನಾಟಕದ ಮಹಿಳಾ ಹಿಂದೀ ಸೇವಾ ಸಮಿತಿ'ಯ ಸ್ಥಾಪನೆಯಾಯಿತು. ಶ್ರೀಮತಿ ಮುತ್ತೂಬಾಯಿ ಮಾನೆ ಬಹುವರ್ಷಗಳ ಕಾಲ ಇದರ ಅಧ್ಯಕ್ಷೆಯಾಗಿ, ಶ್ರೀ ಪಿ.ಆರ್. ಶ್ರೀನಿವಾಸಶಾಸ್ತ್ರಿಗಳು ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದರು. ಈ ಸಮಿತಿಯು 'ಹಿಂದಿ ಪ್ರಚಾರ ವಾಣಿ' ಎಂಬ ಮಾಸಿಕವನ್ನು ಪ್ರಕಟಿಸುತ್ತಿದೆ.

ಆರಂಭದ ವರ್ಷಗಳಲ್ಲಿ ಈ ಮೇಲಿನ ಸಂಸ್ಥೆಗಳು ಹಿಂದಿ ಪ್ರಚಾರವನ್ನು ಮುಖ್ಯವಾಗಿ ಮಾಡುತ್ತಾ ಜನಗಳಲ್ಲಿ ಹಿಂದಿ ಬಗೆಗೆ ಆಸಕ್ತಿ ಬೆಳೆಯುವಂತೆ ಮಾಡಿವೆ. ಈ ನಾಲ್ಕೂ ಸಂಸ್ಥೆಗಳು ತಮ್ಮದೇ ಆದ ಪರೀಕ್ಷೆಗಳನ್ನು ವರ್ಷಕ್ಕೆ ಎರಡು ಬಾರಿ ನಡೆಸಿ ಉನ್ನತ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರಗಳನ್ನು ವಿತರಿಸುತ್ತಿವೆ. ಈ ಎಲ್ಲ ಸಂಸ್ಥೆಗಳು ನಡೆಸುತ್ತಿರುವ ಪರೀಕ್ಷೆಗಳಿಗೆ ಕರ್ನಾಟಕದ ಮೂಲೆ-ಮೂಲೆಗಳಲ್ಲಿ ಅಪಾರ ಸಂಖ್ಯೆಯ ಪ್ರಚಾರಕರಿದ್ದು ಇವರು ನಡೆಸುವ ಹಿಂದಿ ಪರೀಕ್ಷೆಗಳಿಗೆ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದರು. ಪ್ರತಿ ಹಳ್ಳಿ, ತಾಲ್ಲೂಕು ನಗರಗಳಲ್ಲಿ ಹಿಂದಿ ತರಗತಿಗಳು ಸಂಜೆಯ ಹೊತ್ತು ಶಾಲೆಗಳಂತೆ ನಡೆಯುತ್ತಿದ್ದವು. ಈಚಿನ ವರ್ಷಗಳಲ್ಲಿ ಈ ತೀವ್ರತೆ ಕಡಿಮೆಯಾಗಿದೆ ಎಂದೇ ಹೇಳಬೇಕು. ಇದಕ್ಕೆ ಕಾರಣವೆಂದರೆ ಈ ಮೇಲಿನ ಎಲ್ಲ ಸಮಿತಿಗಳ ಗಮನ ಬೇರೆಡೆಗೆ ಸರಿದಿದೆ. ಎಲ್ಲ ಹಿಂದಿ ಸಂಸ್ಥೆಗಳು ಹಿಂದಿ ಪ್ರಶಿಕ್ಷಣ ಕಾಲೇಜುಗಳನ್ನು ಕರ್ನಾಟಕದ ಉದ್ದಗಲಕ್ಕೂ ನಡೆಸುತ್ತಿವೆ. ಅದರಿಂದಾಗುವ ಲಾಭಗಳ ಕಡೆಯೇ ಇವರ ಗಮನವೆಲ್ಲಾ ಕೇಂದ್ರೀಕೃತವಾಗಿದೆ. ಇದು ಈಚಿನ ದಿನಗಳಲ್ಲಿ ಹಿಂದಿ ಪ್ರಚಾರಕ್ಕೆ ಆದ ಕೊಂಚ ಹಿನ್ನಡೆಯೆನ್ನಬೇಕಾಗುತ್ತದೆ. ಜೊತೆಗೆ ಹಿಂದಿ ಪ್ರಚಾರವನ್ನು ಜೀವನೋಪಾಯಕ್ಕೆ ಬಳಸಿಕೊಳ್ಳುವುದರ ಕಡೆಗೂ ಕೂಡ ಈ ಸಂಸ್ಥೆಗಳು ಗಮನ ನೀಡಿವೆ. ಹಿಂದಿ ಟೈಪಿಂಗ್ ತರಗತಿಗಳನ್ನು ನಡೆಸುವುದು, ಕಂಪ್ಯೂಟರ್ ಕೋರ್ಸ್, ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ಅನುವಾದದ ಕೋರ್ಸ್‌ಗಳನ್ನು ನಡೆಸುವುದು, ಮುದ್ರಣಕಲೆಯಲ್ಲಿ ಪ್ರಶಿಕ್ಷಣ ನೀಡುವುದು ಮುಂತಾದ ಕಡೆಯೂ ಇವು ಗಮನವನ್ನು ಹರಿಸುತ್ತಿವೆ.

ಕರ್ನಾಟಕದಲ್ಲಿರುವ ಮೇಲಿನ ನಾಲ್ಕೂ ಸಂಸ್ಥೆಗಳು ತಮ್ಮ ತಮ್ಮ ಪರೀಕ್ಷೆಗಳಿಗೆ ಪಠ್ಯಗಳನ್ನು ತಯಾರಿಸುತ್ತಿವೆ. ಅಂತೆಯೇ ಕನ್ನಡ ಮತ್ತು ಹಿಂದಿಯ ಮಧ್ಯೆ ಕೊಳು-ಕೊಡುಗೆಯ ಕ್ಷೇತ್ರದಲ್ಲಿ ಮಹತ್ವದ ಕೆಲಸವನ್ನು ಮಾಡುತ್ತಿವೆ. ಈ ಸಂಸ್ಥೆಗಳು ಪ್ರಕಟಿಸಿರುವ ಹಿಂದಿ ಗ್ರಂಥಗಳು ಮತ್ತು ಕನ್ನಡ-ಹಿಂದೀ ಅನುವಾದಗಳು ಓದುಗರ ಗಮನವನ್ನು ಸೆಳೆದಿವೆ. ಮೇಲಿನ ನಾಲ್ಕು ಸಂಸ್ಥೆಗಳಿಗೆ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಶುಲ್ಕರಹಿತ ಹಿಂದಿ ತರಗತಿಗಳನ್ನು ನಡೆಸಲು ಲಕ್ಷಾಂತರ ರೂಪಾಯಿ ಅನುದಾನವನ್ನು ನೀಡುತ್ತಿವೆ. ಈ ಅನುದಾನವನ್ನು ಉಪಯೋಗಿಸಿಕೊಂಡು ಈ ಸಂಸ್ಥೆಗಳು ತಮ್ಮ ಪ್ರಚಾರಕರಿಗೆ ಹಿಂದಿ ತರಗತಿಗಳನ್ನು ನಡೆಸಲು ಪ್ರೋತ್ಸಾಹಿಸುತ್ತಿವೆ. ಅಂತೆಯೇ ಸರ್ಕಾರವೂ ಕೂಡ ತನ್ನ ಅಧೀನದ ಶಾಲೆಗಳಲ್ಲಿ ಹಿಂದಿ ತರಗತಿಗಳನ್ನು ನಡೆಸಲು ಅನುಮತಿ ನೀಡಿದೆ.

ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯ ಧಾರವಾಡ ಕಾರ್ಯಾಲಯಕ್ಕೆ ಧಾರವಾಡದಲ್ಲಿ ಮತ್ತು ಬೆಂಗಳೂರಿನಲ್ಲಿರುವ ಎಲ್ಲ ಹಿಂದಿ ಪ್ರಚಾರ ಸಂಸ್ಥೆಗಳಿಗೂ ತಮ್ಮದೇ ಆದಂತಹ ಸ್ವತಂತ್ರ ಭಾವನೆಗಳಿವೆ ಮತ್ತು ಸುಸಜ್ಜಿತ ಗ್ರಂಥಾಲಯಗಳು ಹಾಗೂ ಕಾರ್ಯಾಲಯಗಳನ್ನೂ ಹೊಂದಿವೆ.

ಮೇಲಿನ ನಾಲ್ಕು ಸಂಸ್ಥೆಗಳೇ ಅಲ್ಲದೆ ತುಮಕೂರಿನ ಮಾನಸ ಶಿಕ್ಷಣ ಸಂಸ್ಥೆ, ಮಂಡ್ಯದ ಕರ್ನಾಟಕ ಹಿಂದಿ ಸಭಾ, ಬೀದರ್‌ನ ಪೀಪಲ್ಸ್ ಶಿಕ್ಷಣ ಸಂಸ್ಥೆ, ಗುಲ್ಬರ್ಗಾದ ಕರ್ನಾಟಕ ಪ್ರದೇಶ ಸಾಹಿತ್ಯ ಸಮ್ಮೇಳನ ಸಂಸ್ಥೆಗಳು ಒಂದೊಂದು ಹಿಂದಿ ಶಿಕ್ಷಕ್ ಪ್ರಶಿಕ್ಷಣ ಕಾಲೇಜನ್ನು ನಡೆಸುವುದರ ಮೂಲಕ ಹಿಂದಿ ಪ್ರಚಾರ ಮತ್ತು ಪ್ರಸಾರ ಕಾರ್ಯವನ್ನು ಮಾಡುತ್ತಿವೆ. ಮಂಡ್ಯದ ಕರ್ನಾಟಕ ಹಿಂದಿ ಸಭಾದ ವತಿಯಿಂದ 'ಕರ್ನಾಟಕ ಹಿಂದಿ ಸಭಾ ಪತ್ರಿಕಾ' ಎಂಬ ಮಾಸಿಕ ಪತ್ರಿಕೆ ಪ್ರಕಟಗೊಳ್ಳುತ್ತಿದೆ.

ಸಂಸ್ಥೆಗಳಲ್ಲದೆ ಕರ್ನಾಟಕದ ಉದ್ದಗಲಕ್ಕೂ ಹಿಂದಿ ಪ್ರಚಾರ ಕಾರ್ಯವನ್ನು ತಮ್ಮ ಗುರಿಯಾಗಿಸಿಕೊಂಡು ಕೆಲಸ ಮಾಡುತ್ತಿರುವ ಸಂಘ ಸಂಸ್ಥೆಗಳಿವೆ. ಈ ಸಂಸ್ಥೆಗಳು ಹಿಂದಿ ಸೇವಾ ಸಮಿತಿಗಳಿಗೆ ಕೆಲಸ ಮಾಡುತ್ತಿದ್ದರೂ ಇವು ಸ್ವತಂತ್ರ ಸಂಸ್ಥೆಗಳಾಗಿವೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಹಿಂದಿ ಪ್ರಚಾರ ಸಮಿತಿಗಳು ಸ್ಥಾಪನೆಗೊಂಡು ಸ್ವಾತಂತ್ರ್ಯಪೂರ್ವ ದಿನಗಳಿಂದಲೂ ಆಯಾಯಾ ಜಿಲ್ಲೆಗಳಲ್ಲಿ ಸಕ್ರಿಯವಾಗಿ ಹಿಂದಿ ಪ್ರಚಾರ ಕಾರ್ಯವನ್ನು ಮಾಡುತ್ತ ಬಂದದ್ದರಿಂದ ಹಿಂದಿ ಪ್ರಚಾರ ಕಾರ್ಯಕ್ಕೆ ತೀವ್ರತೆ ಮತ್ತು ಚಲನಶೀಲತೆ ಬಂದಿವೆ. ಇವು ಹಿಂದಿ ವಿದ್ಯಾಲಯಗಳನ್ನು ನಡೆಸುತ್ತಿದ್ದು ಸಾವಿರಾರು ಮಕ್ಕಳನ್ನು ವಿಭಿನ್ನ ಪರೀಕ್ಷೆಗಳಿಗೆ ತಯಾರು ಮಾಡುತ್ತಿವೆ. ಇಂಥ ಕೆಲವು ಹಿಂದಿ ವಿದ್ಯಾಲಯಗಳೆಂದರೆ ಬೆಂಗಳೂರಿನ ಆದರ್ಶ ಹಿಂದಿ ವಿದ್ಯಾಲಯ, ಗುರು ಹಿಂದಿ ಶಿಕ್ಷಣ ಮಂಡಲ, ಜಯಭಾರತಿ ಹಿಂದಿ ವಿದ್ಯಾಲಯ, ಸರಸ್ವತಿ ಹಿಂದಿ ವಿದ್ಯಾಲಯ, ಮೈಸೂರಿನ ಭಾರತಿ ಹಿಂದಿ ವಿದ್ಯಾಲಯ, ಭದ್ರಾವತಿಯ ಭಾರತಿ ಹಿಂದಿ ವಿದ್ಯಾಲಯ, ಬಿಜಾಪುರದ ಹಿಂದಿ ಶೈಕ್ಷಣಿಕ ಸೇವಾ ಸಮಿತಿ, ಬಳ್ಳಾರಿಯ ಜಿಲ್ಲಾ ಹಿಂದಿ ಪ್ರೇಮಿ ಮಂಡಲ್, ಮಂಡ್ಯದ ನವೀನ್ ಹಿಂದಿ ವಿದ್ಯಾಲಯ ಮುಂತಾದವುಗಳನ್ನು ಹೆಸರಿಸಬಹುದು. ಈ ಎಲ್ಲ ಸಂಸ್ಥೆಗಳು ಕೇಂದ್ರಸರ್ಕಾರದ ವಾರ್ಷಿಕ ಅನುದಾನವನ್ನು ಪಡೆದು ಹಿಂದಿ ಪ್ರಚಾರ ಕಾರ್ಯದಲ್ಲಿ ತೊಡಗಿವೆ. ಇವಿಷ್ಟೇ ಅಲ್ಲದೆ ಕರ್ನಾಟಕದ ಉದ್ದಗಲಕ್ಕೂ ಹಿಂದಿ ತರಗತಿಗಳನ್ನು ನಡೆಸುವ ಅನೇಕ ಸಂಘ ಸಂಸ್ಥೆಗಳಿವೆ.

**ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಿಂದಿ:** ಕರ್ನಾಟಕದಲ್ಲಿ ಹಿಂದಿಯನ್ನು ಜನಪ್ರಿಯಗೊಳಿಸುವ ದಿಕ್ಕಿನಲ್ಲಿ ಕರ್ನಾಟಕದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕೊಡುಗೆ ಮಹತ್ವದ್ದಾಗಿದೆ. ಕರ್ನಾಟಕದ ಕೆಲವು ಭಾಗಗಳು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸೇರಿದ್ದಾಗ ಅಲ್ಲಿನ ಪ್ರಾಂತ್ಯಗಳು ಹಿಂದಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿದ್ದವು. ದಕ್ಷಿಣ ಕನ್ನಡ ಜಿಲ್ಲೆಯ

Digitised by Bharatavani, CIIL

ಆಯ್ದ ಶಾಲೆಗಳಲ್ಲಿ 1937 ರಿಂದಲೇ ಕಾಂಗ್ರೆಸ್ ಸರ್ಕಾರ ಹಿಂದಿಯನ್ನು ಕಲಿಸಲು ವ್ಯವಸ್ಥೆ ಮಾಡಿತ್ತು. ಮುಂಬೈ ಪ್ರಾಂತ್ಯದ ಕಾಂಗ್ರೆಸ್ ಸರ್ಕಾರ ಉತ್ತರ ಕನ್ನಡ ಧಾರವಾಡ, ಕಾರವಾರ, ಬೆಳಗಾಂ, ಬಿಜಾಪುರ ಜಿಲ್ಲೆಗಳಲ್ಲಿನ ಶಾಲೆಗಳಲ್ಲಿ ಹಿಂದಿ ಕಲಿಕೆ ಕಡ್ಡಾಯಗೊಳಿಸಿತ್ತು. ಆ ದಿನಗಳಲ್ಲಿಯೇ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮತ್ತು ಮೈಸೂರಿನ ಬನುಮಯ್ಯ ಪ್ರೌಢಶಾಲೆಗಳಲ್ಲಿ ಹಿಂದಿ ಕಲಿಕೆ ಆರಂಭವಾಯಿತು. ಸ್ವಾತಂತ್ರ್ಯಾನಂತರ ಹಿಂದಿಯನ್ನು ಭಾರತ ಒಕ್ಕೂಟದ ರಾಜಭಾಷೆ ಎಂದು ಮಾನ್ಯ ಮಾಡಿದ ಮೇಲೆ 1950 ರಿಂದ ಹಿಂದಿಯನ್ನು ಭಾಷೆಯನ್ನಾಗಿ ಪ್ರೌಢಶಾಲಾ ಶಿಕ್ಷಣದಲ್ಲಿ ಸೇರ್ಪಡೆಗೊಳಿಸಲಾಯಿತು. ಅಂದಿನಿಂದ ಇಂದಿನವರೆಗೆ ಹಿಂದಿಯನ್ನು ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಲಾಗುತ್ತಿದೆ ಮತ್ತು ಇತರೇ ಭಾರತೀಯ ಭಾಷೆಗಳಿಗಿರುವ ಸ್ಥಾನಮಾನ ಹಿಂದಿಗೂ ಲಭ್ಯವಾಗಿದೆ.

1963ರಲ್ಲಿ ಜಾರಿಯಾದ ಹೊಸ ಪಠ್ಯಕ್ರಮದಂತೆ ಕರ್ನಾಟಕದ ಪ್ರಾಥಮಿಕ ಶಾಲಾಸ್ತರದಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಹಿಂದಿಯನ್ನು ಕಲಿಸಲು ವ್ಯವಸ್ಥೆ ಮಾಡಲಾಯಿತು. ದೌರ್ಭಾಗ್ಯವೆಂದರೆ ಹಿಂದಿ ಬೇರೆ ಭಾಷೆಗಳಂತೆ ಪರೀಕ್ಷಾ ವಿಷಯವಾಗಿ ಬಹಳ ದಿನಗಳ ಕಾಲ ಇರಲಿಲ್ಲ. ಕೆಲ ವರ್ಷಗಳ ಕಾಲ 50 ಅಂಕಗಳಿಗೆ ಪರೀಕ್ಷಾ ವಿಷಯವೆಂದು ಕಡ್ಡಾಯವಾಗಿದ್ದರೂ ಹಿಂದಿಯಲ್ಲಿ ಉತ್ತೀರ್ಣತೆಯ ಷರತ್ತು ಇರಲಿಲ್ಲ. ಹೀಗಾಗಿ ಹಿಂದಿ ಕಲಿಕೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅನಾಸಕ್ತಿ ಇತ್ತು. ದಶಕಗಳ ಹಿಂದೆ ಪ್ರೌಢಶಾಲೆಗಳಲ್ಲಿ ಐಚ್ಛಿಕ ವಿಷಯವಾಗಿಯೂ ಪಠ್ಯ ವಿಷಯದಲ್ಲಿತ್ತು. ಪ್ರಸ್ತುತ ಪ್ರೌಢಶಾಲಾ ಶಿಕ್ಷಣದಲ್ಲಿ ಹಿಂದಿ ಒಂದು ವಿಷಯವಾಗಿ ಎಲ್ಲ ಶಾಲೆಗಳಲ್ಲಿಯೂ 100 ಅಂಕಗಳಿಗೆ ಕಲಿಸಲಾಗುತ್ತಿದೆ. ಇದು ಪರೀಕ್ಷಾ ವಿಷಯವಾಗಿದೆ.

ಕರ್ನಾಟಕದಲ್ಲಿ ಪ್ರೌಢಶಿಕ್ಷಣ ವ್ಯವಸ್ಥೆಯಲ್ಲಿ ಮೂರು ಭಾಷೆಗಳನ್ನು ಕಲಿಯುವ ವ್ಯವಸ್ಥೆ ಇದೆಯಾದರೂ ಈ ಮೂರು ಭಾಷೆಗಳಲ್ಲಿ ಹಿಂದಿ ಒಂದಾಗಿರಬೇಕೆಂಬ ನಿಯಮವಿಲ್ಲ. ಒಟ್ಟಿನಲ್ಲಿ ಪ್ರೌಢಶಿಕ್ಷಣ ವ್ಯವಸ್ಥೆಯಲ್ಲಿ ಹಿಂದಿಗೆ ಬೇರೆ ಭಾಷೆಗಳಿಗೆ ಇರುವಷ್ಟೇ ಮಾನ್ಯತೆ ಇದೆ.

ಪ್ರೌಢಶಿಕ್ಷಣ ವ್ಯವಸ್ಥೆಯಲ್ಲಿ ಹಿಂದಿಯನ್ನು ಪ್ರಥಮ, ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಕಲಿಸುವ ವ್ಯವಸ್ಥೆ ಇದೆ. ಈ ಎಲ್ಲ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ರೂಪಿಸುವ ಕೆಲಸವನ್ನು ಇಲಾಖೆ ಮಾಡುತ್ತಿದೆ. ಜೊತೆಗೆ ಕರ್ನಾಟಕದಲ್ಲಿರುವ ಹಿಂದಿ ಮಾತನಾಡುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಗಣಿತ, ಸಮಾಜವಿಜ್ಞಾನ, ವಿಜ್ಞಾನ ಮುಂತಾದ ವಿಷಯಗಳಿಗೆ ಪಠ್ಯಪುಸ್ತಕಗಳನ್ನು ಹಿಂದಿಯಲ್ಲಿ ಬರೆಸುವ/ ಅನುವಾದಿಸುವ ಕೆಲಸವನ್ನು ಸಹ ಮಾಡಲಾಗುತ್ತಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಿಂದಿಯ ಅಧ್ಯಯನ ಮತ್ತು ಅಧ್ಯಾಪನಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಲು 1952ರಲ್ಲಿ ಅಂದಿನ ಮೈಸೂರು ಸರ್ಕಾರ 'ಹಿಂದಿ ಬೋರ್ಡ್ ಆಫ್ ಸ್ಟಡೀಸ್' ಅನ್ನು ಸ್ಥಾಪಿಸಿತು. ಇದರ ಸಲಹೆಯಂತೆ 1955ರಲ್ಲಿ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಒಂದು ಹಿಂದಿ ವಿಭಾಗವನ್ನು ಸ್ಥಾಪಿಸಿ ಸಹಾಯಕ ನಿರ್ದೇಶಕ ಹುದ್ದೆಯನ್ನು ಸೃಷ್ಟಿಸಿತು. 1987ರಲ್ಲಿ ಈ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಹಿರಿಯ ಸಹಾಯಕ ನಿರ್ದೇಶಕರೆಂದು ಪರಿವರ್ತಿಸಿತು. ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿದ ಅನೇಕ ಅಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಿಂದಿ ಕಲಿಕೆಗೆ ಮತ್ತು ಪ್ರಚಾರ ಪ್ರಸಾರಕ್ಕಾಗಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು.

1963ರಲ್ಲಿಯೇ ಕರ್ನಾಟಕದಲ್ಲಿ 6 ರಿಂದ 10ನೇ ತರಗತಿಯವರೆಗೆ ಹಿಂದಿಯನ್ನು ಬೋಧಿಸುವ ಶಿಕ್ಷಕರಿಗೆ ತರಬೇತಿ ನೀಡಲು ಸ್ಥಾಪಿಸಲಾದ ಟಿ.ಸಿ.ಎಚ್. ಮತ್ತು ಟಿ.ಸಿ.ಎಲ್.ಪ್ರಶಿಕ್ಷಣಾ ಕೋರ್ಸುಗಳಲ್ಲಿ ಹಿಂದಿಗೂ ಸ್ಥಾನ ದೊರೆಯಿತು. ಕರ್ನಾಟಕ ಸರ್ಕಾರ ಪ್ರೌಢಶಾಲೆಗಳಲ್ಲಿ ಉತ್ತಮವಾಗಿ ಹಿಂದಿ ಶಿಕ್ಷಣವನ್ನು ಕೊಡುವಂತಾಗಲು ತೆಗೆದುಕೊಂಡ ಕ್ರಮಗಳಲ್ಲಿ ಮೈಸೂರಿನಲ್ಲಿ ಸ್ಥಾಪಿತವಾದ ಹಿಂದಿ ವಿದ್ವಾನ್ ಕೋರ್ಸ್ ಮುಖ್ಯವಾದದ್ದು. ಇದು ನಾಲ್ಕು ವರ್ಷಗಳ ಅವಧಿಯ ಕೋರ್ಸ್ ಆಗಿದ್ದು ಇಲ್ಲಿ ಅಧ್ಯಯನ ಮಾಡಲು ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿ ಅಧ್ಯಾಪಕರಾಗಿದ್ದವರನ್ನು ನಿಯೋಜನೆ ಮಾಡಿ ಹಿಂದಿಯಲ್ಲಿ ಉನ್ನತ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡಲಾಗುತ್ತಿತ್ತು. ಈ ಕೋರ್ಸನ್ನು ಯಶಸ್ವಿಯಾಗಿ ಮುಗಿಸಿದವರಿಗೆ ಪ್ರೌಢಶಾಲೆಗಳ ಹಿಂದಿ ಅಧ್ಯಾಪಕರಾಗಿ ಬಡ್ತಿ ನೀಡಲಾಗುತ್ತಿತ್ತು. ಹೀಗೆ ಪ್ರೌಢಶಾಲೆಯ ಹಿಂದಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಕೆಲಸ ಮಾಡಿದ್ದು ಒಂದು ಐತಿಹಾಸಿಕ ಘಟನೆಯಾಗಿದೆ. ಆದರೆ ಸರ್ಕಾರ ಈ ಕೋರ್ಸನ್ನು ಕಾಲಾಂತರದಲ್ಲಿ ಮುಚ್ಚಿದ್ದು ದುರ್ದೈವದ ಸಂಗತಿಯಾಗಿದೆ. ಅಂತೆಯೇ ಪ್ರೌಢಶಾಲೆಗಳಲ್ಲಿ ಹಿಂದಿ ಕಲಿಸುವ ಶಿಕ್ಷಕರಿಗೆ ಪ್ರಶಿಕ್ಷಣ ನೀಡಲು ಮೈಸೂರು, ಗುಲ್ಬರ್ಗಾ ಮತ್ತು ಬಾಗಲಕೋಟೆ ನಗರಗಳಲ್ಲಿ 'ಹಿಂದಿ ಶಿಕ್ಷಕ' ಪ್ರಶಿಕ್ಷಣ ಕಾಲೇಜುಗಳನ್ನು ಪ್ರಾರಂಭಿಸಿ ಸಾವಿರಾರು ಅಧ್ಯಾಪಕರಿಗೆ ತರಬೇತು ನೀಡಿತು. ದುರದೃಷ್ಟವಶಾತ್ ಕಾಲಾಂತರದಲ್ಲಿ ಅಂದರೆ 1980–81ರಲ್ಲಿ ಸರ್ಕಾರ ಈ ಮೂರು ಪ್ರಶಿಕ್ಷಣ ಕಾಲೇಜುಗಳನ್ನೂ ಮುಚ್ಚಿತ್ತು. ಒಂದೆರಡು ವರ್ಷಗಳ ನಂತರ 1983–84ರಲ್ಲಿ ಭಾರತ ಸರ್ಕಾರದ ಪೂರ್ಣ ಆರ್ಥಿಕ ನೆರವಿನಿಂದ ಮೈಸೂರಿನಲ್ಲಿ ಒಂದು ಪ್ರಶಿಕ್ಷಣ ಕಾಲೇಜು ಆರಂಭವಾಯಿತು. ಇದು ಆಗ್ರಾದ ಕೇಂದ್ರೀಯ ಹಿಂದಿ ಸಂಸ್ಥಾನ ನಡೆಸುವ 'ಹಿಂದಿ ಪಾರಂಗತ' ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದೆ.

ಅತ್ತ ಸರ್ಕಾರ ತನ್ನ ಎರಡು ಪ್ರಶಿಕ್ಷಣ ಕಾಲೇಜುಗಳನ್ನು ಮುಚ್ಚಿತು. ಇತ್ತ ಕರ್ನಾಟಕದಲ್ಲಿರುವ ಎಲ್ಲ ಹಿಂದಿ ಸೇವಾಸಂಸ್ಥೆಗಳಿಗೆ ಪ್ರಶಿಕ್ಷಣ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡಿತು. ಇದರ ಪರಿಣಾಮವಾಗಿ ರಾಜ್ಯದ ಮೂರು ಹಿಂದಿ ಸೇವಾಸಂಸ್ಥೆಗಳು ಕರ್ನಾಟಕದ ಉದ್ದಗಲಕ್ಕೂ ಅನೇಕ ಹಿಂದಿ ಶಿಕ್ಷಕ ಪ್ರಶಿಕ್ಷಣ ಕಾಲೇಜುಗಳನ್ನು ಆರಂಭಿಸಿ ಶಿಕ್ಷಕರಾಗುವವರಿಗೆ ತರಬೇತು ನೀಡಲಾರಂಭಿಸಿದವು! ಸಾರ್ವಜನಿಕ ಶಿಕ್ಷಣ ಇಲಾಖೆ ಈ ಪ್ರಶಿಕ್ಷಣಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಿ ಪದವಿಪತ್ರಗಳನ್ನು ನೀಡುತ್ತಿದೆ. ದಕ್ಷಿಣಭಾರತ ಹಿಂದಿ ಪ್ರಚಾರ ಸಭೆ ತನ್ನ ಅಧೀನದಲ್ಲಿ ರಾಜ್ಯದಲ್ಲಿ ನಡೆಸುವ ಕಾಲೇಜುಗಳ ವಿದ್ಯಾರ್ಥಿಗಳಿಗೆ ತಾನೇ ಪರೀಕ್ಷೆ ನಡೆಸಿ 'ಸ್ನಾತಕ' ಮತ್ತು ಬಿ.ಎಡ್. ಪ್ರಮಾಣಪತ್ರಗಳನ್ನು ನೀಡುತ್ತಿದೆ.

ಕರ್ನಾಟಕದಲ್ಲಿ ವ್ಯಾಪಕ ಹಿಂದಿ ಪ್ರಚಾರ ಪ್ರಸಾರಕ್ಕಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಆರ್ಥಿಕ ಸಹಯೋಗದೊಂದಿಗೆ ನಡೆಸುವ ಹಲವಾರು ಯೋಜನೆಗಳಲ್ಲಿ ನಿಃಶುಲ್ಕ ಹಿಂದಿ ತರಗತಿಗಳನ್ನು ನಡೆಸುವ ಯೋಜನೆ ಪ್ರಮುಖವಾದದ್ದಾಗಿದೆ. ಈ ನಿಃಶುಲ್ಕ ಹಿಂದಿ ತರಗತಿಗಳು ಈ ನಾಲ್ಕೂ ಹಿಂದಿ ಪ್ರಚಾರ ಸೇವಾ ಸಂಸ್ಥೆಗಳ ಮೂಲಕವೇ ನಡೆಯುತ್ತಿದ್ದು ವಿದ್ಯಾರ್ಥಿಗಳಿಂದ ಯಾವುದೇ ಬಗೆಯ ಶುಲ್ಕವನ್ನು ತೆಗೆದುಕೊಳ್ಳದೆ ಹಿಂದಿ ಕಲಿಸುವ ಈ ಯೋಜನೆ ಹಿಂದಿ ಪ್ರಚಾರಕ್ಕೆ ಸರ್ಕಾರ ನೀಡಿರುವ ಮಹತ್ವದ ಕೊಡುಗೆ ಎಂದೇ ಹೇಳಬೇಕು. ಈ ಯೋಜನೆಯಡಿ ಕರ್ನಾಟಕದ ಉದ್ದಗಲಕ್ಕೂ ಸಾವಿರಾರು ಪ್ರಚಾರಕರು ಲಕ್ಷಾಂತರ ಮಂದಿಗೆ ಹಿಂದಿ ಕಲಿಸಿದ್ದಾರೆ, ಹಿಂದಿ ಪ್ರಚಾರ ಮಾಡಿದ್ದಾರೆ. ಕೇಂದ್ರ ಸರ್ಕಾರ ಹಿಂದೀತರ ಪ್ರದೇಶಗಳಲ್ಲಿ ಹಿಂದಿ ಅಧ್ಯಯನಕ್ಕೆ ಪ್ರೋತ್ಸಾಹ ನೀಡುವ ತನ್ನ ಯೋಜನೆಯಡಿ ಕರ್ನಾಟಕದಲ್ಲೂ ಪಿ.ಯು.ಸಿ, ಪದವಿ ಮತ್ತು ಸ್ನಾತಕೋತ್ತರ ಹಿಂದಿ ಎಂ.ಎ. ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಎಷ್ಟೋ ದಶಕಗಳಿಂದ ನೀಡುತ್ತಿದೆ. ಹಿಂದಿ ಪ್ರದೇಶಗಳಲ್ಲಿ ಹಿಂದೀತರ ಭಾಷೆಗಳನ್ನಾಡುವ ವಿದ್ಯಾರ್ಥಿಗಳು ಸುತ್ತಾಡಿ ಅಲ್ಲಿನ ಸಾಂಸ್ಕೃತಿಕ ಬದುಕನ್ನು ಅರ್ಥಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಪ್ರವಾಸಗಳನ್ನು ಏರ್ಪಡಿಸುತ್ತಿದೆ.

Digitised by Bharatavani, CIIL

ಹಿಂದೀತರ ಪ್ರದೇಶಗಳಲ್ಲಿ ಹಿಂದಿಯಲ್ಲಿ ಬರೆಯುವವರನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ಬಹುಮಾನ ಯೋಜನೆಯನ್ನು ದಶಕಗಳ ಹಿಂದೆಯೇ ಆರಂಭಿಸಿತು. ಈ ಯೋಜನೆಯಡಿ ಪ್ರತಿವರ್ಷವೂ ಕನ್ನಡ ಭಾಷೀಯ ಹಿಂದಿ ಲೇಖಕರು ಪುರಸ್ಕೃತರಾಗಿದ್ದಾರೆ. ಹಿಂದೀ ಭಾಷೆ ಲೇಖಕರಂತೆ ಕನ್ನಡ ಭಾಷಿ ಹಿಂದಿ ಲೇಖಕರು ಅಖಿಲ ಭಾರತ ಮಟ್ಟದಲ್ಲಿ ಖ್ಯಾತರಾಗಿದ್ದಾರೆ.

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಸಹ 1983ರಿಂದ ನಾಲ್ಕು ವರ್ಷಗಳ ಕಾಲ ಕರ್ನಾಟಕದಲ್ಲಿ ಕನ್ನಡ ಭಾಷಿ ಹಿಂದಿ ಲೇಖಕರ ಮತ್ತು ಕನ್ನಡ ಮತ್ತು ಹಿಂದಿಗೆ ಪರಸ್ಪರ ಅನುವಾದಿಸುವ ಅನುವಾದಕರ ಕೃತಿಗಳಿಗೆ ಪುರಸ್ಕರಿಸುವ ಯೋಜನೆಯನ್ನು ಹೊಂದಿತ್ತು. 1983–84ರಿಂದ ಕೆಲವು ವರ್ಷಗಳವರೆಗೆ ಹೈಸ್ಕೂಲ್‌ಗಳಲ್ಲಿ 25–30 ವರ್ಷಗಳ ಕಾಲ ಸೇವೆ ಸಲ್ಲಿಸಿದ ನುರಿತ ಹಿಂದಿ ಅಧ್ಯಾಪಕರಿಗೆ ಜಿಲ್ಲೆಗೊಬ್ಬರಂತೆ ಆಯ್ದು ರಾಜ್ಯ ಮಟ್ಟದಲ್ಲಿ ಸನ್ಮಾನಿಸುವ ಯೋಜನೆ ಜಾರಿಗೆ ಬಂದು, 150ಕ್ಕೂ ಹೆಚ್ಚು ಹಿಂದಿ ಅಧ್ಯಾಪಕರನ್ನು ಸನ್ಮಾನಿಸಲಾಗಿದೆ.

ಪ್ರೌಢಶಾಲೆಗಳಲ್ಲಿ ಹಿಂದಿ ಕಲಿಯುವ ವಿದ್ಯಾರ್ಥಿಗಳ ಪ್ರತಿಭೆಯನ್ನು ಬೆಳಕಿಗೆ ತರಲು 1982ರಲ್ಲಿ ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ಜಿಲ್ಲಾ ಮಟ್ಟದಲ್ಲಿ, ನಂತರ ರಾಜ್ಯಮಟ್ಟದಲ್ಲಿ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಪುರಸ್ಕಾರಗಳನ್ನು ನೀಡಿ ಪ್ರೋತ್ಸಾಹಿಸುವ ಯೋಜನೆಯನ್ನು ಆರಂಭಿಸಿತು. ಕರ್ನಾಟಕದಲ್ಲಿ ಸರ್ಕಾರಿ ನೌಕರರು ಹಿಂದಿ ಕಲಿಯಲು ಪ್ರೋತ್ಸಾಹ ನೀಡುವ ದೃಷ್ಟಿಯಿಂದ, ನಿಗದಿಗೊಳಿಸಿದ ಒಂದು ಹಿಂದಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಒಂದು ಮುಂಬಡ್ತಿ ನೀಡುವ ಪದ್ಧತಿಯನ್ನು ಜಾರಿಗೆ ತಂದಿತು. ಇದರಿಂದ ಸಾವಿರಾರು ಮಂದಿ ಹಿಂದಿ ಕಲಿತು ಲಾಭಾನ್ವಿತರಾದರು. ಕರ್ನಾಟಕ ಸರ್ಕಾರದ ಮೇಲಿನ ನಾಲ್ಕು ಯೋಜನೆಗಳು ನಂತರದ ವರ್ಷಗಳಲ್ಲಿ ನಿಂತುಹೋದವು.

**ವಿಶ್ವವಿದ್ಯಾನಿಲಯಗಳಲ್ಲಿ ಹಿಂದಿ :** ಕರ್ನಾಟಕದ ಕಾಲೇಜುಗಳಲ್ಲಿ ಹಿಂದಿಯ ಅಧ್ಯಯನಕ್ಕೆ ಸ್ಥಾನ ದೊರೆತದ್ದು ಮತ್ತು ವಿಶ್ವವಿದ್ಯಾಲಯಗಳಲ್ಲಿ ಹಿಂದಿ ವಿಭಾಗಗಳು ಆರಂಭವಾಗಿ ಹಿಂದಿ ಅಧ್ಯಯನ ಮತ್ತು ಸಂಶೋಧನೆಗೆ ಅವಕಾಶವಾದದ್ದು ಕರ್ನಾಟಕದಲ್ಲಿ ಹಿಂದಿ ಅಧ್ಯಯನಕ್ಕೆ ಹೊಸ ಆಯಾಮ ಬಂದಂತಾಯಿತು. ವಿದ್ಯಾರ್ಥಿಗಳು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಹಿಂದಿ ಸಾಹಿತ್ಯದ ಗಂಭೀರ ಅಧ್ಯಯನಕ್ಕೆ ತೊಡಗಲು ಅವಕಾಶವಾಯಿತು. ಹಿಂದಿ ಪ್ರಚಾರ ಮತ್ತು ಸಾಹಿತ್ಯದ ಅಧ್ಯಯನ ಒಟ್ಟೊಟ್ಟಿಗೆ ಸಾಗತೊಡಗಿದವು.

1938ರಷ್ಟು ಹಿಂದೆಯೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಪ್ರವೇಶವಾಯಿತು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಹಿಂದಿಯನ್ನು ಐಚ್ಛಿಕವಾಗಿ ತೆಗೆದುಕೊಂಡು ಓದಿದ ಮೂವರು ವಿದ್ಯಾರ್ಥಿಗಳ ಮೊದಲ ತಂಡ 1942ರಲ್ಲಿ ಹೊರ ಬಂತು. ಮುಂದೆ ಈ ಮೂವರೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಹೋಗಿ ಹಿಂದಿ ಎಂ.ಎ. ಪದವಿ ಮಾಡಿದರು. ಅದೇ ರೀತಿ ಇಂಟರ್‌ಮೀಡಿಯಟ್ ಹಾಗೂ ಬಿ.ಕಾಂ. ತರಗತಿಗಳಲ್ಲಿ ಹಿಂದಿಯನ್ನು ಕಲಿಸುವ ವ್ಯವಸ್ಥೆ ಸ್ವಾತಂತ್ರ್ಯ ಪೂರ್ವದ ವರ್ಷಗಳಿಂದಲೂ ಜಾರಿಯಲ್ಲಿದೆ. 1958ರಲ್ಲಿ ಪಿ.ಯು.ಸಿ. ಕೋರ್ಸ್ ಆರಂಭವಾದ ಮೇಲೆ ಹಿಂದಿಗೂ ಬೇರೆ ಭಾಷೆಗಳಿಗೆ ಸಿಕ್ಕ ಸ್ಥಾನಮಾನ ಸಿಕ್ಕಿತು. ಅಂದರೆ ಭಾಷೆ ಮತ್ತು ಐಚ್ಛಿಕವಾಗಿ ಹಿಂದಿಯನ್ನು ಕಲಿಸುವ ವ್ಯವಸ್ಥೆಯಾಯಿತು. ಪದವಿ ತರಗತಿಗಳಲ್ಲಿ ಹಿಂದಿಯನ್ನು ಒಂದು ಭಾಷೆಯಾಗಿ ಸರಿಸುಮಾರು ರಾಜ್ಯದ ಎಲ್ಲ ಕಾಲೇಜುಗಳಲ್ಲಿ ಅಧ್ಯಯನ ಮಾಡುವ ಅವಕಾಶವಿದೆ ಮತ್ತು ಐಚ್ಛಿಕ ಭಾಷೆಯಾಗಿ ಕೆಲವು ಕಾಲೇಜುಗಳಲ್ಲಿ ಮಾತ್ರ ಬೋಧಿಸಲಾಗುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1959ರಲ್ಲಿ, ಕರ್ನಾಟಕದ ವಿಶ್ವವಿದ್ಯಾಲಯದಲ್ಲಿ 1960ರಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 1971ರಲ್ಲಿ, ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ 1980ರಿಂದ ಹಿಂದೀ ವಿಭಾಗಗಳು ಆರಂಭವಾದವು. ಮೈಸೂರು ವಿಶ್ವವಿದ್ಯಾನಿಲಯದ ಬಿ.ಆರ್. ಪ್ರಾಜೆಕ್ಟ್, ಶಂಕರಘಟ್ಟದಲ್ಲಿದ್ದ ಸ್ನಾತಕೋತ್ತರ ಕೇಂದ್ರ ಕುವೆಂಪು ವಿಶ್ವವಿದ್ಯಾನಿಲಯವಾಯಿತು. ಇಲ್ಲೂ ಹಿಂದಿ ವಿಭಾಗ ಆರಂಭವಾಯಿತು. ಈ ಎಲ್ಲ ಹಿಂದಿ ವಿಭಾಗಗಳಲ್ಲಿ ಸ್ನಾತಕೋತ್ತರ ಎಂ.ಎ. ಮತ್ತು ಎಂ.ಫಿಲ್. ತರಗತಿಗಳು ನಡೆಯುತ್ತಿವೆ. ಜೊತೆಗೆ ಈ ವಿಭಾಗಗಳಿಂದ ಹಿಂದಿ ಸಾಹಿತ್ಯ ಮತ್ತು ಹಿಂದಿ ಕನ್ನಡ ಸಾಹಿತ್ಯವನ್ನು ಕುರಿತಂತೆ ತೌಲನಿಕ ವಿಷಯಗಳ ಮೇಲೆ ಪಿಎಚ್.ಡಿ.ಗಾಗಿ ಸಂಶೋಧನೆ ಮಾಡಿ ಸುಮಾರು ಐನೂರು ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಪ್ರಾಧ್ಯಾಪಕರಾಗಿ ಮತ್ತು ವಿಭಾಗಾಧ್ಯಕ್ಷರಾಗಿ ವಿಭಾಗಕ್ಕೆ ಪ್ರೊ. ನಾ. ನಾಗಪ್ಪನವರು ಭದ್ರಬುನಾದಿಯನ್ನು ಹಾಕಿದರು. ಬೇರೆ ವಿಶ್ವವಿದ್ಯಾಲಯಗಳ ಪ್ರೊ. ಆರ್. ಕೆ. ಮೊದಲಿಯಾರ್, ಡಾ. ಸರಗೂ ಕೃಷ್ಣಮೂರ್ತಿ, ಪ್ರೊ. ಶಂಕರರಾವ್ ಕಪ್ಪೀಕೇರಿ ತಮ್ಮ ತಮ್ಮ ವಿಭಾಗಗಳನ್ನು ಕಟ್ಟಿದರು. ಈ ಐದೂ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಮತ್ತು ಹಿಂದಿ ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧರಾದ ವಿದ್ವಾಂಸರು ಅಧ್ಯಾಪಕ, ರೀಡರ್ ಮತ್ತು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಪ್ರಯೋಜನ ಮೂಲಕ ಹಿಂದಿಯಲ್ಲಿ ಡಿಪ್ಲೊಮಾ, ಅನುವಾದ ಕಲೆಯಲ್ಲಿ ಡಿಪ್ಲೊಮಾ ತರಗತಿಗಳೂ ನಡೆಯುತ್ತಿವೆ. ಮೈಸೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗದಿಂದ 'ಪ್ರತಿಭಾ' ಎಂಬ ಕೈಬರಹದ ವಾರ್ಷಿಕ ಪತ್ರಿಕೆ ಪ್ರಕಟವಾಗುತ್ತಿದೆ. ಜೊತೆಗೆ 'ಮಾನಸಿ' ಎಂಬ ಸಂಶೋಧನ ಪತ್ರಿಕೆಯನ್ನು ಪ್ರೊ. ನಾಗಪ್ಪನವರು ಆರಂಭಿಸಿದ್ದರು. ಇದರ ಹಲವು ಸಂಚಿಕೆಗಳು ಪ್ರಕಟವಾದುವು. ಆಮೇಲೆ ಅದು ನಿಂತುಹೋಯಿತು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವ ಉತ್ತರ ಪ್ರದೇಶ ಸರ್ಕಾರದ ದತ್ತಿ ನಿಧಿ ಯೋಜನೆಯ ಬಗೆಗೆ ಹೇಳಲೇಬೇಕಿದೆ. ಅಂದಿನ ವಿಭಾಗಾಧ್ಯಕ್ಷರಾಗಿದ್ದ ಪ್ರೊ. ಮೇ. ರಾಜೇಶ್ವರಯ್ಯನವರ ನಿರಂತರ ಶ್ರಮ ಮತ್ತು ಹಿಂದಿ–ಕನ್ನಡ ಸಾಹಿತ್ಯದ ಆದಾನ ಪ್ರದಾನ ಕಾರ್ಯದಲ್ಲಿ ಅವರಿಗಿದ್ದ ಅತೀವ ಪ್ರೀತಿ ಮತ್ತು ಕಾಳಜಿಯಿಂದ ಅಂದಿನ ಲೋಕಸಭಾ ಸದಸ್ಯರಾದ ಶ್ರೀ ಎಚ್.ಡಿ. ತುಲಸೀದಾಸಪ್ಪನವರ ನೆರವಿನಿಂದ ಉತ್ತರಪ್ರದೇಶದ ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ವಿ.ಪಿ. ಸಿಂಗ್ ಅವರಿಂದ ಐದು ಲಕ್ಷ ರೂ.ಗಳ ದೇಣಿಗೆ ತಂದು ವಿಶ್ವವಿದ್ಯಾಲಯದಲ್ಲಿ ದತ್ತಿ ಸ್ಥಾಪಿಸಿದರು. ಈ ದತ್ತಿಯ ಮೂಲ ಉದ್ದೇಶ ಕನ್ನಡದಿಂದ ಹಿಂದಿಗೆ ಮತ್ತು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸುವುದಾಗಿತ್ತು. ದತ್ತಿಯಿಂದ ದೊರೆತ ಬಡ್ಡಿ ಹಣದಿಂದ ಈವರೆಗೆ ಐದು ಗ್ರಂಥಗಳು ಪ್ರಕಟವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡೇತರರಿಗೆ ಅಂಚೆ ಮೂಲಕ ಕನ್ನಡ ಕಲಿಸುವ ಯೋಜನೆಯೂ ಸೇರಿತ್ತು. ಒಂದೆರಡು ವರ್ಷ ಮಾತ್ರ ಈ ಯೋಜನೆ ಜಾರಿಯಲ್ಲಿತ್ತು. ಮುಂದೆ ಆ ಯೋಜನೆ ಕಾರಣಾಂತರಗಳಿಂದ ನಿಂತು ಹೋಯಿತು.

ಮೈಸೂರು ವಿಶ್ವವಿದ್ಯಾನಿಲಯ 1981–82ರಲ್ಲಿ ತನ್ನ ಅಂಗಸಂಸ್ಥೆಯಾದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಹಿಂದಿ ಎಂ.ಎ. ಶಿಕ್ಷಣವನ್ನು ಆರಂಭಿಸಿದ್ದು ಕರ್ನಾಟಕದ ಹಿಂದಿ ಪ್ರಚಾರಾಂದೋಲನದಲ್ಲಷ್ಟೇ ಅಲ್ಲ, ವಿಶ್ವವಿದ್ಯಾನಿಲಯಗಳ ಇತಿಹಾಸದಲ್ಲಿಯೂ ಒಂದು ಐತಿಹಾಸಿಕ ಘಟನೆಯಾಗಿದೆ. ಅಂದಿನ ಹಿಂದಿ ವಿಭಾಗಾಧ್ಯಕ್ಷರಾಗಿದ್ದ ಪ್ರೊ. ಮೇ. ರಾಜೇಶ್ವರಯ್ಯನವರು ಈ ಯೋಜನೆಯ ರೂವಾರಿಯಾಗಿದ್ದರು. ಹಿಂದಿ ಎಂ. ಎ. ತರಗತಿಯ

Digitised by Bharatavani, CIIL

ಎಲ್ಲ ಪತ್ರಿಕೆಗಳಿಗೂ ವಿದ್ವಾಂಸರಿಂದ ಪಾಠಗಳನ್ನು ಸಿದ್ಧಪಡಿಸಿ ಕಳುಹಿಸುವ, ಸಂಪರ್ಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಪಾಠಪ್ರವಚನಗಳನ್ನು ವಿಶೇಷೋಪನ್ಯಾಸಗಳನ್ನು ನಡೆಸುವ ರೀತಿಯಿಂದಾಗಿ ಈ ಕೋರ್ಸ್ ತುಂಬಾ ಜನಪ್ರಿಯವಾಯಿತು. ಒಂದು ಕಾಲದಲ್ಲಿ ಕನ್ನಡಿಗರು ಹಿಂದಿ ಅಧ್ಯಯನ ಮಾಡಲು ಬನಾರಸ್ ಹಾಗೂ ಇನ್ನಿತರ ಹಿಂದಿ ಪ್ರದೇಶಗಳಿಗೆ ಹೋಗುತ್ತಿದ್ದರು. ಈಗ ಅಲ್ಲಿಯವರು ಕರ್ನಾಟಕಕ್ಕೆ ಬರತೊಡಗಿದರು. ಇದಕ್ಕೆ ಇನ್ನೊಂದು ಕಾರಣವೂ ಇದೆ. 18 ವರ್ಷ ದಾಟಿದ ಯಾರು ಬೇಕಾದರೂ ಬಿ.ಎ. ಕೋರ್ಸನ್ನು ಮತ್ತು 21 ವರ್ಷ ದಾಟಿದ ಯಾರು ಬೇಕಾದರೂ ಯಾವುದೇ ಪೂರ್ವ ಶೈಕ್ಷಣಿಕ ಅರ್ಹತೆ ಇಲ್ಲದೆ ಹಿಂದಿ ಸೇರಿದಂತೆ ಯಾವುದೇ ವಿಷಯದಲ್ಲಿ ಎಂ.ಎ. ಮಾಡಬಹುದಿತ್ತು. ಲಕ್ಷಾಂತರ ವಿದ್ಯಾರ್ಥಿಗಳು ಈ ಶೈಕ್ಷಣಿಕ ಸೌಲಭ್ಯದ ಪ್ರಯೋಜನ ಪಡೆದುಕೊಂಡಿದ್ದಾರೆ. ಮುಂದಿನ ವರ್ಷಗಳಲ್ಲಿ ಅಂದರೆ 1996ರಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವಾಯಿತು. ಈ ವಿಶ್ವವಿದ್ಯಾನಿಲಯದಲ್ಲಿ ಒಂದು ಭಾಷೆ ಮತ್ತು ಐಚ್ಛಿಕ ಭಾಷೆಯಾಗಿ ಹಿಂದಿಯನ್ನು ಕಲಿಸುತ್ತಿರುವುದಲ್ಲದೆ ಹಿಂದಿ ಎಂ.ಎ. ಶಿಕ್ಷಣವನ್ನೂ ನೀಡುತ್ತಿದೆ. ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಿಂದಿ ಎಂ.ಎ.ಗೆ ಸೇರುತ್ತಿದ್ದಾರೆ. ಕರ್ನಾಟಕದಲ್ಲಿ ಹಿಂದಿ ಸಾಹಿತ್ಯ ಪ್ರಚಾರಾಂದೋಲನಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೊಡುಗೆ ಮಹತ್ವದ್ದಾಗಿದೆ.

ದೂರಶಿಕ್ಷಣ ಮೂಲಕ ಹಿಂದಿ ಎಂ.ಎ. ಮತ್ತು ಅನುವಾದ ಡಿಪ್ಲೋಮಾ ಶಿಕ್ಷಣವನ್ನು ಬೆಂಗಳೂರು ವಿಶ್ವವಿದ್ಯಾಲಯ ಪ್ರಾರಂಭಿಸಿತು. ಕುವೆಂಪು ವಿಶ್ವವಿದ್ಯಾಲಯ ಹಿಂದಿ ಎಂ.ಎ. ಶಿಕ್ಷಣವನ್ನು ಆರಂಭಿಸಿತು. ಕರ್ನಾಟಕ ವಿಶ್ವವಿದ್ಯಾಲಯ ದಶಕಗಳಷ್ಟು ಹಿಂದೆಯೇ ಬಾಹ್ಯ ವಿದ್ಯಾರ್ಥಿಗಳಾಗಿ ಹಿಂದಿ ಎಂ.ಎ. ಮಾಡಲು ಅವಕಾಶವನ್ನು ಕಲ್ಪಿಸಿತ್ತು. ಮುಂದೆ ಅಲ್ಲೂ ಸಹ ಪಾಠಗಳನ್ನು ಕಳಿಸುವ ಮೂಲಕ ಹಿಂದಿ ಎಂ.ಎ. ಶಿಕ್ಷಣ ನೀಡುವ ಯೋಜನೆ ಜಾರಿಗೆ ಬಂತು.

ಹೀಗೆ ಕರ್ನಾಟಕದ ಬಹಳಷ್ಟು ವಿಶ್ವವಿದ್ಯಾನಿಲಯಗಳಲ್ಲಿರುವ ಹಿಂದಿ ವಿಭಾಗಗಳು ಹಿಂದಿ ಭಾಷೆ ಮತ್ತು ಸಾಹಿತ್ಯದ ಅಧ್ಯಯನಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿವೆ.

ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯ ಧಾರವಾಡ ಕೇಂದ್ರದಲ್ಲೂ ಕಳೆದ ದಶಕದಲ್ಲಿ ಸ್ನಾತಕೋತ್ತರ ಹಿಂದಿ ಎಂ.ಎ. ತರಗತಿಗಳು ಆರಂಭವಾಗಿವೆ. ಜೊತೆಗೆ ಸಂಶೋಧನೆಗೂ ಇಲ್ಲಿ ಅವಕಾಶವಿದ್ದು ಅನೇಕರು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯ ಮೊಟ್ಟ ಮೊದಲ ಬಾರಿಗೆ ಕರ್ನಾಟಕ ಹಿಂದಿ ಪ್ರಚಾರ ಸಮಿತಿಗೆ ಎಂ.ಎ. ತರಗತಿಗಳನ್ನು ನಡೆಸಲು ಮಾನ್ಯತೆ ನೀಡಿದೆ.

ಒಟ್ಟಿನಲ್ಲಿ ಕರ್ನಾಟಕದ ಬಹುತೇಕ ಎಲ್ಲ ಪದವಿಪೂರ್ವ ಕಾಲೇಜುಗಳಲ್ಲಿ, ಪದವಿ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಹಿಂದಿ ಅಧ್ಯಯನ-ಅಧ್ಯಾಪನ ಕಾರ್ಯ ನಡೆಯುತ್ತಿದೆ.

**ಕರ್ನಾಟಕದಲ್ಲಿ ಹಿಂದಿ ಲೇಖಕರು :** ಕರ್ನಾಟಕ ಹಿಂದೀತರ ರಾಜ್ಯ. ಇಲ್ಲಿನ ಭಾಷೆ ಕನ್ನಡವಾದರೂ ಹಿಂದಿಯಲ್ಲಿ ಮೌಲಿಕವಾಗಿ ಬರೆಯುವಷ್ಟು ಭಾಷಾಪ್ರಭುತ್ವವನ್ನು ಕನ್ನಡಭಾಷಿ ಲೇಖಕರು ಹೊಂದಿರುವುದು ಒಂದು ಹೆಗ್ಗಳಿಕೆಯೇ ಸರಿ. ಹಿಂದೀತರ ಅಥವಾ ಅಹಿಂದೀಯರೆಂದು ನೋಡುವ ಅಗತ್ಯವಿಲ್ಲದಷ್ಟು ಪ್ರೌಢ ಬರವಣಿಗೆಯನ್ನು ಕನ್ನಡ ಭಾಷಿ ಹಿಂದಿ ಲೇಖಕರು ಹೊರ ತಂದಿದ್ದಾರೆ. ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ಕನ್ನಡ ಭಾಷಿ ಲೇಖಕರ ಕೊಡುಗೆಯನ್ನು ಮುಂದೆ ಸಂಕ್ಷಿಪ್ತವಾಗಿ ಉಲ್ಲೇಖಿಸಿದೆ.

ಹಿಂದಿ ಕಾವ್ಯ ಪ್ರಕಾರಕ್ಕೆ ಕೊಡುಗೆ ನೀಡಿರುವವರಲ್ಲಿ ಡಾ. ಸರಗೂ ಕೃಷ್ಣಮೂರ್ತಿ (ಮಧುಸ್ವಪ್ನ, ಜ್ವಾಲಾಕೇತನ), ಅಪ್ಪಾ ಸಾಹೇಬ 'ಶೈಲ್' ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿ 'ಸಾಗರ್' (ಶೈಲ್ ಔರ್ ಸಾಗರ್), ಕೆ. ಹನುಮಂತರಾವ್ (ಕಾವ್ಯರಶ್ಮಿಯಾಂ), ವೈ. ವಜ್ರಮಟ್ಟಿ ಮೇಘಮಿತ್ರ (ಮಿಟ್ಟೀ ಕೇ ಫೂಲ್ ಮತ್ತು ಅಗ್ನಿಪಥ್), ಡಾ. ಎನ್.ಎಸ್. ದಕ್ಷಿಣಮೂರ್ತಿ (ಮೂರ್ತಿ ಶತಕ್), ಡಾ. ಟಿ.ಜಿ. ಪ್ರಭಾಶಂಕರ್ 'ಪ್ರೇಮಿ' (ಕಾವ್ಯಬಾಲಾ ಮತ್ತು ತಲಾಶ್) ಪ್ರಮುಖರು. ಈಚಿನ ವರ್ಷಗಳಲ್ಲಿ ಅನೇಕ ಕವಿಗಳು ಬರೆಯುತ್ತಿದ್ದಾರೆ.

ಕಾದಂಬರಿ ಕ್ಷೇತ್ರದಲ್ಲಿ ಡಾ.ಎಂ.ಎಸ್. ಕೃಷ್ಣಮೂರ್ತಿಯವರು ಮಹತ್ವದ ಕೊಡುಗೆ ನೀಡಿದ್ದಾರೆ. ಹಿಂದಿಯಲ್ಲಿ ಪ್ರಕಟವಾಗಿರುವ ಅವರ ಅಪರಾಜಿತ, ರಾಗ್ ಕಾನಡಾ, ಪರಶುರಾಂ ಕೀ ಬಹನೇಂ, ಜ್ಯೋತಿಕಲಶ್ ಕಾದಂಬರಿಗಳು ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ.

ಸಣ್ಣ ಕಥಾಪ್ರಕಾರದಲ್ಲಿ ಚಂದ್ರಕಾಂತ ಕುಸನೂರ್ (ರೇಶಮ್ ಕೀ ಗುಡಿಯಾ), ಅಪ್ಪಾ ಸಾಹೇಬ್ ಶೈಲ್ (ಆದಿ ಅನಂತ್), ಕೇಶವ್ ಮಳಗಾಂವರ್ (ಧೂಪ್ ಛಾವ್), ಡಾ. ಎಂ.ಎಸ್. ಕೃಷ್ಣಮೂರ್ತಿ (ಆರಣ್ಯಕ) ಪ್ರಸಿದ್ಧರು.

ಪ್ರೊ. ನಾ. ನಾಗಪ್ಪನವರ ವ್ಯಕ್ತಿಚಿತ್ರಗಳ ಸಂಗ್ರಹ 'ಬುಆಜಿ' ಮತ್ತು ಎಂ.ಕೆ. ಭಾರತೀ ರಮಣಾಚಾರ್ಯರ ಮಕ್ಕಳ ಕತೆಗಳ ಸಂಗ್ರಹ 'ಗಿಲಹರಿ ಕೇ ಗಲ್ಫ್'ಈ ಪ್ರಕಾರಗಳಲ್ಲಿ ಉಲ್ಲೇಖನೀಯ ಕೃತಿಗಳಾಗಿವೆ.

ಈಚಿನ ವರ್ಷಗಳಲ್ಲಿ ಹಲವಾರು ಲೇಖಕರು ಹಿಂದಿಯಲ್ಲಿ ಕಥೆಗಳನ್ನು ಬರೆದಿದ್ದರೂ ಸಂಗ್ರಹರೂಪದಲ್ಲಿ ಪ್ರಕಟವಾಗಿಲ್ಲ.

ನಾಟಕ ಕ್ಷೇತ್ರದಲ್ಲಿ ಕನ್ನಡ ಭಾಷಿ ಹಿಂದಿ ಲೇಖಕರು ಸಾಕಷ್ಟು ಕೆಲಸ ಮಾಡಿದ್ದಾರೆ. ಈ ಸಂದರ್ಭದಲ್ಲಿ ಪಂಡಿತ ತಾರಾನಾಥರನ್ನು ಅತ್ಯಂತ ಗೌರವದಿಂದ ನೆನೆಯಬೇಕಿದೆ. ಅವರು 'ದೀನಬಂಧು ಕಬೀರ್' ಎಂಬ ಹಿಂದಿ ನಾಟಕವನ್ನು ದೇವನಾಗರಿ ಲಿಪಿಯಲ್ಲಿ ಬರೆಯದೆ ಕನ್ನಡ ಲಿಪಿಯಲ್ಲಿ ಬರೆದಿದ್ದರು. ಈ ನಾಟಕಕ್ಕೆ ಕನ್ನಡಿಗರು ಬರೆದ ಹಿಂದಿ ನಾಟಕಗಳಲ್ಲಿ ಐತಿಹಾಸಿಕ ಮಹತ್ವವಿದೆ.

ಹಿಂದಿ ಕನ್ನಡ ಶಬ್ದಕೋಶಗಳನ್ನು ಪ್ರಕಟಿಸಿದ ಎಂ.ವಿ. ಜಂಬುನಾಥನ್ ನಾಟಕಕ್ಷೇತ್ರದಲ್ಲೂ ಅನುಪಮ ಸೇವೆಗೈದಿದ್ದಾರೆ. ಅವರು 'ಸತೀ ಶರ್ಮಿಷ್ಠಾ' ಮತ್ತು 'ದಾನವೀರ್ ಸುಮನ್' ಎಂಬ ನಾಟಕಗಳನ್ನು ಬರೆದು ಅವುಗಳ ರಂಗ ಪ್ರಯೋಗಗಳನ್ನು ಮಾಡಿದರು. ಜೊತೆಗೆ ರಾಧೇಶ್ಯಾಮ್ ಕಥಾವಾಚಕ್ ಅವರ ಪ್ರಸಿದ್ಧ ನಾಟಕಗಳ ಸಂಕ್ಷಿಪ್ತ ರೂಪಗಳನ್ನು ಸಿದ್ಧಪಡಿಸಿದರು. ಹಿಂದಿ ನಾಟಕಗಳ ಮೂಲಕ ಕನ್ನಡಿಗರಲ್ಲಿ ಹಿಂದಿ ಭಾಷಾಭಿಮಾನವನ್ನು ಬೆಳೆಸಿದವರಲ್ಲಿ ಜಂಬುನಾಥನ್‌ರಿಗೆ ಪ್ರಮುಖಸ್ಥಾನವಿದೆ.

ಹಿಂದಿ ನಾಟಕಗಳನ್ನು ಬರೆದ ಕನ್ನಡಿಗರಲ್ಲಿ ಆರ್.ಸಿ. ಭೂಸನೂರಮಠ್ (ಹರಳಯ್ಯ ಮಧುವಯ್ಯ, ಪ್ಯಾರ್ ಕೀ ಭೇಂಟ್), ಚಂದ್ರಕಾಂತ ಕುಸನೂರ್ (ಮಹಾಪುರುಷ್) ಜಿ.ಜೆ. ಹರಿಜಿತ್ (ಹುಮಾಯೂನ್, ಮೃಚ್ಛಕಟಿಕ ಮುಂತಾದ ಹಲವು ನಾಟಕಗಳು), 'ರಂಗಾಯನ್' ಎಂಬ ಏಕಾಂಕಗಳ ಸಂಗ್ರಹ ಡಾ. ಎನ್.ಎಸ್. ದಕ್ಷಿಣಾಮೂರ್ತಿ ('ರಾಷ್ಟ್ರ ಕೀ ವೇದಿ ಪರ್' ಎಂಬ ಏಕಾಂಕ ನಾಟಕಗಳ ಸಂಗ್ರಹ) ಪ್ರಮುಖರಾಗಿದ್ದಾರೆ.

ಹಿಂದಿ ವಿಮರ್ಶೆಯ ಪ್ರಕಾರಕ್ಕೂ ಕನ್ನಡ ಭಾಷಿ ಹಿಂದಿ ಲೇಖಕರು ನೀಡಿರುವ ಕೊಡುಗೆ ಮಹತ್ವದ್ದಾಗಿದೆ. ಗುರುನಾಥ ಜೋಶಿ, ಡಾ. ಹಿರಣ್ಮಯ, ಪ್ರೊ. ನಾ. ನಾಗಪ್ಪ, ಡಾ. ಮೇ. ರಾಜೇಶ್ವರಯ್ಯ, ಡಾ. ಪ್ರಧಾನ್

Digitised by Bharatavani, CIIL

ಗುರುದತ್ತ, ಸಿದ್ಧಗೋಪಾಲ, ಕಾಶೀನಾಥ ಹಳ್ಳಿಕೇರಿ, ಡಾ. ಎಂ.ಎಸ್. ಕೃಷ್ಣಮೂರ್ತಿ, ಡಾ. ಎನ್.ಎಸ್. ದಕ್ಷಿಣಾಮೂರ್ತಿ, ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಡಾ. ತಿಪ್ಪೇಸ್ವಾಮಿ ಡಾ. ಜೆ.ಎಸ್. ಕುಸುಮಗೀತಾ, ಪ್ರೊ. ಬಿ.ವೈ. ಲಲಿತಾಂಬ, ಡಾ. ಎಂ.ವಿಮಲ, ಡಾ, ಮಿಥಾಲಿ ಭಟ್ಟಾಚಾರ್ಯ, ಡಾ. ವಿ.ಡಿ ಹೆಗಡೆ, ಡಾ. ಕಾಶೀನಾಥ್ ಅಂಬಲಗಿ, ಡಾ. ಚಂದುಲಾಲ್ ದುಬೆ, ಡಾ. ಶಂಕರ್‌ರಾವ್ ಕಪ್ಪಿಕೇರಿ, ಡಾ. ಶಿವರಾಜ್ ಹಳ್ಳಿಖೇಡ್, ಡಾ. ಟಿ.ಆರ್.ಭಟ್, ಡಾ. ಎಸ್. ಸಿ. ಚುಳಕಿಮಠ, ಡಾ. ಸರಗೂ ಕೃಷ್ಣಮೂರ್ತಿ, ಡಾ. ಟಿ.ಬಿ. ಪ್ರಭಾಶಂಕರ್ ಪ್ರೇಮಿ, ಡಾ. ಸುಮಂಗಲಾ ಮಮ್ಮಿಗಟ್ಟಿ, ಡಾ. ಪ್ರಭಾ ಭಟ್, ಡಾ. ಪರಿಮಳ ಅಂಬೇಡಕರ್, ಡಾ. ತೇಜಸ್ವಿ ಕಟ್ಟಿಮನಿ, ಡಾ. ಅಶೋಕ ಕಾಂಬ್ಳೆ, ಡಾ. ಎಲ್.ಜಿ. ಶಶಿಧರ್, ಡಾ. ಪ್ರತಿಭಾ ಮೊದಲಿಯಾರ್ ಮುಂತಾದ ಅನೇಕ ಲೇಖಕರು ಕರ್ನಾಟಕ ಸಂಸ್ಕೃತಿ ಮತ್ತು ಸಾಹಿತ್ಯ ಹಾಗೂ ಹಿಂದಿ ಭಾಷೆ ಮತ್ತು ಸಾಹಿತ್ಯವಷ್ಟೇ ಅಲ್ಲದೆ ತೌಲನಿಕ ವಿಮರ್ಶೆ ಮುಂತಾದ ವಿಭಿನ್ನ ವಿಷಯಗಳನ್ನು ಕುರಿತಂತೆ ಹಿಂದಿಯಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ.

– ತಿ.ಸ್ವಾ.

## ಕಲಿಕೆ ಮತ್ತು ಸ್ವವಿಕಾಸ

ನಾವು ಸ್ವಭಾವತಃ ಕಲಿಕಾರ್ಥಿಗಳು. ನಮ್ಮ ಉಳಿವು ಭೌತಿಕ ಮತ್ತು ಸಾಮಾಜಿಕ ಜಗತ್ತಿಗೆ ನಾವು ಹೇಗೆ ಸ್ಪಂದಿಸುತ್ತೇವೆ, ಸಕ್ರಿಯಾತ್ಮಕವಾಗಿ ಜಗತ್ತನ್ನು ಹೇಗೆ ನಿರ್ಮಿಸುತ್ತೇವೆ ಎನ್ನುವುದನ್ನು ಅವಲಂಬಿಸಿದೆ.

ಕಲಿಕೆಯಿಂದ ನಾವು ಅನುಭವ ಪಡೆಯುತ್ತೇವೆ. ಈ ಅನುಭವದ ಆಧಾರದ ಮೇಲೆ ಪುನಃ ಕಲಿಯುತ್ತೇವೆ. ಹೀಗೆ ಜೀವನಪರ್ಯಂತ ಕಲಿಕೆ–ಅನುಭವ–ಕಲಿಕೆಯ ಚಕ್ರ ಮುಂದುವರಿಯುತ್ತದೆ. ಡೇವಿಡ್ ಎ. ಕೋಲ್ಡ್ ಪ್ರಕಾರ ಅನುಭವವು ಕಲಿಕೆ ಮತ್ತು ವಿಕಾಸದ ಮೂಲವಾಗಿದೆ.

ಕಲಿಕೆ ಮುಂದುವರಿದಂತೆ ಸ್ವವಿಕಾಸ ಅಥವಾ ಸ್ವಯಂ (Self)ನ ವಿಕಾಸ ಉಂಟಾಗುತ್ತದೆ. ಈ ಕೆಳಗಿನ ಅಂಶಗಳು ಸ್ವವಿಕಾಸದಲ್ಲಿ ಒಳಗೊಂಡಿವೆ. ಸ್ವ ವಿಕಾಸ ಸೂಕ್ತ ರೀತಿಯಲ್ಲಿ ಆಗಬೇಕಾದರೆ ಕೆಳಕಂಡ ಅಂಶಗಳನ್ನು ಅನುಸರಿಸಬೇಕು.

1. ವಿಮರ್ಶೆಗಳನ್ನು ಸ್ವೀಕರಿಸುವುದು
2. ಸ್ವತಿಳಿವಳಿಕೆ
3. ಆತ್ಮವಿಶ್ವಾಸ
4. ದೈಹಿಕ ಸಾಮರ್ಥ್ಯದ ಅರಿವು
5. ಜೀವನ ಶೈಲಿಯ ಮೂಲಭೂತ ಅಂಶಗಳು
6. ಸಾಮಾಜಿಕ ಕಟ್ಟುಪಾಡುಗಳಿಗೆ ಹೊಂದಿಕೊಳ್ಳುವುದು
7. ಅಲ್ಪ ವಿಚಾರ ಅಥವಾ ಕ್ಷುಲ್ಲಕ ವಿಚಾರಗಳನ್ನು ತ್ಯಜಿಸುವುದು.

**ವಿಮರ್ಶೆಗಳನ್ನು ಸ್ವೀಕರಿಸುವುದು:** ಸ್ವ ವಿಮರ್ಶೆಗಳನ್ನು ಸ್ವೀಕರಿಸುವುದು ಸ್ವವಿಕಾಸದ ಒಂದು ಭಾಗವೆಂದು ಭಾವಿಸಬೇಕು. ವಿಮರ್ಶೆಗಳನ್ನು ದೂರ ತಳ್ಳುವುದಕ್ಕಿಂತ ಅವುಗಳನ್ನು ಸ್ವೀಕರಿಸುವುದು ಒಳ್ಳೆಯದು. ವಿಮರ್ಶೆಗಳನ್ನು ಸ್ವೀಕರಿಸದಿದ್ದರೆ ಆತ್ಮವಿಶ್ವಾಸ ಯಾವುದಕ್ಕೂ ಉಪಯೋಗಕ್ಕೆ ಬಾರದು. ಕ್ರಮವಾಗಿದೆ. ವಿಮರ್ಶೆಗಳನ್ನು ಸ್ವೀಕರಿಸುವುದು ಸ್ವತಿಳಿವಳಿಕೆ ಹೊಂದಲು ಇರುವ ಒಂದು ಕ್ರಮವಾಗಿದೆ ಮತ್ತು ಇದರಿಂದ ನಮ್ಮ ನ್ಯೂನತೆಗಳು ಅರಿವಿಗೆ ಬರುತ್ತವೆ. ನಾವು ನಮ್ಮ ನ್ಯೂನತೆಗಳನ್ನು ತಿಳಿಯದಿದ್ದರೆ ನಾವು ಸ್ವವಿಕಾಸ ಹೊಂದಲು ಸಾಧ್ಯವಿಲ್ಲ.

**ಸ್ವತಿಳಿವಳಿಕೆ – ಸ್ವವಿಕಾಸ:** ಸ್ವ–ತಿಳಿವಳಿಕೆ ಇಲ್ಲದೆ ಸ್ವ–ವಿಕಾಸ ಸಾಧ್ಯವಿಲ್ಲ. ಬೇರೆ ಜನರ ಜೊತೆ ವ್ಯವಹರಿಸುವಾಗ ನಾವು ಯಾವ ರೀತಿಯವರಿದ್ದೇವೆ ಎಂಬುದರ ಜ್ಞಾನ ಅವಶ್ಯಕವಾಗಿರುತ್ತದೆ. ಬೇರೆಯವರ ದೃಷ್ಟಿಕೋನದಲ್ಲಿ ನಾವು ಹೇಗೆ ಕಾಣುತ್ತೇವೆ ಮತ್ತು ನಮ್ಮ ಬಲಗಳ ಹಾಗೂ ನ್ಯೂನತೆಗಳ ಜ್ಞಾನವಿರಬೇಕು.

ಎಲ್ಲರ ನ್ಯೂನತೆಯೆಂದರೆ ತಮ್ಮ ನ್ಯೂನತೆಗಳನ್ನು ತಿಳಿದುಕೊಳ್ಳದೆ ಇರುವುದು ಮತ್ತು ಅದನ್ನು ಬೇರೆಯವರು ದುರುಪಯೋಗ ಪಡಿಸಿಕೊಳ್ಳಲಿಕ್ಕೆ ಬಿಡುವುದು. ನೀವು ನಿಮ್ಮ ಗೆಳೆಯನನ್ನು ಗೌರವಿಸುವುದಾದರೆ ಅವನ ಕೌಶಲಗಳನ್ನು ಬೆಳೆಸಿಕೊಳ್ಳಲು ತರಬೇತಿ ನೀಡುವುದು. ಇದರಿಂದ ಎಲ್ಲರೂ ನಿಮ್ಮನ್ನು ಮೆಚ್ಚುವರು. ಅಲ್ಲದೇ ನಿಮ್ಮ ಗೆಳೆಯರಲ್ಲದವರು ಸಹ ನಿಮ್ಮನ್ನು ಮೆಚ್ಚುವರು ಮತ್ತು ನಿಮ್ಮ ಶತ್ರುಗಳು ಇದರಿಂದ ಅಂಜುವರು.

ಜನರು ದೌರ್ಬಲ್ಯಗಳನ್ನು ಗುರುತಿಸುವುದರಿಂದ ನಮಗೆ ನಮ್ಮ ದೌರ್ಬಲ್ಯಗಳ ಬಗ್ಗೆ ಅರಿವು ಮೂಡುತ್ತದೆ ಮತ್ತು ಅವುಗಳನ್ನು ನಿವಾರಿಸಲು ಕೈಗೊಳ್ಳಬೇಕಾದ ಕ್ರಮಗಳು ಗೊತ್ತಾಗುತ್ತವೆ.

**ಆತ್ಮವಿಶ್ವಾಸ:** ಮನುಷ್ಯರಿಗೆ ಆತ್ಮವಿಶ್ವಾಸ ಬಹಳ ಮುಖ್ಯ. ಆದರೆ ವಿನಮ್ರತೆ ಇಲ್ಲದ ಆತ್ಮವಿಶ್ವಾಸ ದುರಹಂಕಾರಕ್ಕೆ ದಾರಿ ಮಾಡಿಕೊಡುತ್ತದೆ. ಸ್ವಾಭಾವಿಕ ವಿಶ್ವಾಸವು ನಮ್ರತೆ ಮತ್ತು ಪ್ರಸನ್ನತೆಯನ್ನು ಹೊಂದಿರುತ್ತದೆ.

ಯಾರು ಸ್ವಾಭಾವಿಕ ಆತ್ಮವಿಶ್ವಾಸ ಹೊಂದಿರುವುದಿಲ್ಲವೋ ಅವರು ದೈನ್ಯ ಭಾವವನ್ನು ಹೊಂದಿರುತ್ತಾರೆ. ಈ ಭಾವವನ್ನು ಆತ್ಮವಿಶ್ವಾಸದಿಂದ ಎದುರಿಸಲು ಸಾಧ್ಯವಿದೆ. ಯಾವ ಕೆಲಸ ನಮಗೆ ಆತ್ಮವಿಶ್ವಾಸ ಕೊಡುತ್ತದೆಯೋ ಅಂತಹ ಕೆಲಸವನ್ನು ಮಾಡಬೇಕು.

ನೆನಪಿಡಬೇಕಾದುದೇನೆಂದರೆ ನಮ್ರತೆಯಿಲ್ಲದೆ ಇದ್ದರೆ ಅದು ಗರ್ವ, ಸೊಕ್ಕಿನಲ್ಲಿ ಪರಿವರ್ತಿತವಾಗುತ್ತದೆ. ಆದ್ದರಿಂದ ದೃಢ ವ್ಯಕ್ತಿತ್ವಕ್ಕೆ ಮಾನವೀಯತೆ ಮತ್ತು ಬೇರೆಯವರ ಬಗ್ಗೆ ಅನುಭೂತಿ ಬಹಳ ಮುಖ್ಯ.

**ದೈಹಿಕ ಸಾಮರ್ಥ್ಯದ ಅರಿವು:** ದೈಹಿಕವಾಗಿ ಸ್ವಾಸ್ಥ್ಯವಿಲ್ಲದಿದ್ದರೆ ಮಾನಸಿಕವಾಗಿ ಆರೋಗ್ಯದಿಂದಿರಲು ಸಾಧ್ಯವಿಲ್ಲ. ಮಾನಸಿಕ ಆರೋಗ್ಯವು ದೈಹಿಕ ಸಾಮರ್ಥ್ಯವನ್ನು ಒಳಗೊಂಡಿದೆ. ದೇಹ ಮತ್ತು ಮನಸ್ಸು ಒಂದಕ್ಕೊಂದು ಬೆಸೆದುಕೊಂಡಿವೆ. ನಮ್ಮ ಮಾನಸಿಕ ಸ್ಥಿತಿ ನಮ್ಮ ದೇಹದ ಸದೃಢತೆಯನ್ನು ಅವಲಂಬಿಸಿದೆ.

ಧನಾತ್ಮಕ ಯೋಚನೆ ನಮ್ಮ ದೇಹಕ್ಕೆ ಚೈತನ್ಯ ನೀಡುತ್ತದೆ. ಇದು ವೈದ್ಯಕೀಯವಾಗಿ ಪ್ರಮಾಣಿತವಾಗಿದೆ. ಖಿನ್ನತೆ ಹೊಂದಿರುವ ವ್ಯಕ್ತಿ ಬಹಳ ಸಲ ಅನಾರೋಗ್ಯಕ್ಕೆ ತುತ್ತಾಗುತ್ತಾನೆ. ಮನೋದೈಹಿಕ ಸಾಮರ್ಥ್ಯವು ಸ್ವ–ವಿಕಾಸದ ತರಬೇತಿಗಳ ಮೂಲಕ ಧನಾತ್ಮಕ ಆಲೋಚನೆಯನ್ನು ಮಾಡಲು ಪ್ರೇರೇಪಿಸುತ್ತದೆ. ದೈಹಿಕ ಸಾಮರ್ಥ್ಯವನ್ನು ಬಲಪಡಿಸುವ ಪ್ರಯತ್ನವು ಧನಾತ್ಮಕ ಯೋಚನೆಯಿಂದ ನಡೆಯುತ್ತದೆ.

ದೈಹಿಕ ಸಾಮರ್ಥ್ಯವು ಮತ್ತು ಧನಾತ್ಮಕ ಆಲೋಚನೆಗಳು ಮನುಷ್ಯರಲ್ಲಿ ಹೆಚ್ಚಾಗಿ ಕಂಡು ಬಂದರೆ ಅವರಲ್ಲಿ ಸ್ವವಿಕಾಸ ಹೆಚ್ಚಾಗುತ್ತದೆ. ಆದ್ದರಿಂದ ಧನಾತ್ಮಕ ಆಲೋಚನೆಗೆ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯದ ಅವಶ್ಯಕತೆ ಹೆಚ್ಚಾಗಿಯೇ ಇರುತ್ತದೆ.

**ಮೂಲಭೂತ ಜೀವನ ಶೈಲಿ:** ಮನುಷ್ಯರು ಹೆಚ್ಚು ದುರಾಸೆಯುಳ್ಳವರಾಗಿ ಎಲ್ಲವನ್ನು ಹೊಂದಬಯಸಿದ್ದರೆ ಮನಸ್ಸು ಅದನ್ನು ಅನುಭವಿಸಿ ಸಂತೋಷಪಡುವುದಕ್ಕಿಂತ ಹೆಚ್ಚಾಗಿ ಅದನ್ನು ರಕ್ಷಿಸಿಕೊಳ್ಳುವ ಚಿಂತೆ ಹೆಚ್ಚಾಗುತ್ತದೆ. ಈ ಚಿಂತೆಯಲ್ಲಿ ಅದರ ಸುಖವನ್ನು ಅನುಭವಿಸಲು

Digitised by Bharatavani, CIIL

ಸಮಯವೇ ಇಲ್ಲವಾಗುತ್ತದೆ. ಆದ್ದರಿಂದ ಉತ್ತಮ ಜೀವನ ಶೈಲಿಗೆ ಕನಿಷ್ಠ ಮೂಲಭೂತ ಸೌಕರ್ಯ/ಅಗತ್ಯಗಳನ್ನು ಹೊಂದಿರಬೇಕು.

ಮಾನವನು ಇತ್ತೀಚೆಗೆ ತನ್ನ ಸಾಮರ್ಥ್ಯ ಮತ್ತು ಬುದ್ಧಿಶಕ್ತಿಯ ಮನಸ್ಸು ಇವುಗಳ ಮೇಲೆ ಸ್ವ-ನಿಯಂತ್ರಣ ಕಳೆದುಕೊಂಡು ಚಿಂತೆಯಿಂದ ಮುಕ್ತನಾಗಲು ಮಾದಕ ಔಷಧ ದ್ರವ್ಯಗಳಿಗೆ ದಾಸನಾಗುತ್ತಿದ್ದಾನೆ. ಇವು ಮಾನವನ ಸಂತೋಷ, ಸುಖ ಮತ್ತು ಸಾಮಾನ್ಯ ಅನುಭವಗಳನ್ನು ದೂರಮಾಡುತ್ತವೆ. ಯಾವುದೇ ಮಾದಕ ದ್ರವ್ಯಗಳು ಮತ್ತು ಅದನ್ನು ಉಪಯೋಗಿಸುವವರು ಕೆಟ್ಟವರೆಂದು ಹೇಳಲು ಸಾಧ್ಯವಿಲ್ಲ. ಆದರೆ ಅವು ಯಾವಾಗ ಎಷ್ಟು ಪ್ರಮಾಣದಲ್ಲಿ ಬೇಕು ಎಂಬುದನ್ನು ಪರಿಣಿತರಿಂದ ಸಲಹೆ ಪಡೆದು ಸ್ವೀಕರಿಸಬೇಕು. ಉದಾ: ಪಾರ್ಟಿಗಳಲ್ಲಿ ಕುಡಿಯುವುದು, ಮಾದಕ ದ್ರವ್ಯ ಸೇವನೆ, ಸಿಗರೇಟ್ ಸೇದುವುದು ಮುಂತಾದವು ಅತಿಯಾಗಿ ಮಾಡಿ ಸಾಮಾಜಿಕ ಸ್ವಾಸ್ತ್ಯಗಳನ್ನು ಹಾಳುಮಾಡುವುದು ಅಪರಾಧವಾಗುತ್ತದೆ. ಆದರೆ ಮಾನವನು ಕೆಲವೊಂದು ರೋಗಗಳಿಗೆ ಅಗತ್ಯವಾದ ಮಾದಕ ದ್ರವ್ಯಗಳನ್ನು ಅಗತ್ಯ ಪ್ರಮಾಣದಲ್ಲಿ ಪರಿಣಿತರ ಸಲಹೆಯನ್ನು ಸ್ವೀಕರಿಸಿ ತೆಗೆದುಕೊಳ್ಳುವುದು ವೈದ್ಯಕೀಯ ರಂಗದಲ್ಲಿ ಮೊದಲಿನಿಂದಲೂ ನಡೆದು ಬಂದಿದೆ.

ಒಟ್ಟಿನಲ್ಲಿ ಜೀವನದಲ್ಲಿ ಯಾವುದೇ ಜೀವಿಯು ಇನ್ನಾವುದೇ ಮಾದಕ ದ್ರವ್ಯಗಳು (ರಸಾಯನಿಕ ವಸ್ತುಗಳು) ಇಲ್ಲದೇ ದೈಹಿಕವಾಗಿ ಮಾನಸಿಕವಾಗಿ ಸದೃಢವಾಗಿರಲು ಸಾಧ್ಯ. ಆದರೆ ಅದಕ್ಕೆ ಕ್ರಮೇಣವಾದ ಶಿಸ್ತಿನ ರೂಢಿ ಮತ್ತು ಉತ್ತಮ ಜೀವನದ ಶೈಲಿಯ ಅಗತ್ಯವಾಗಿದೆ.

**ಸಾಮಾಜಿಕ ಕಟ್ಟುಪಾಡುಗಳಿಗೆ ಹೊಂದಿಕೊಳ್ಳುವುದು:** ಯಾವುದೇ ಸಮಾಜವನ್ನು ತೆಗೆದುಕೊಂಡಾಗ ಅಲ್ಲಿ ತನ್ನದೇ ಆದ ಕೆಲವೊಂದು ಸಾಮಾಜಿಕ ಕಟ್ಟುಪಾಡುಗಳು ಇರುತ್ತವೆ. ಇವುಗಳನ್ನು ಪ್ರಶ್ನಿಸುವಂತಿಲ್ಲ ಮತ್ತು ಇವುಗಳ ಬಗ್ಗೆ ಮಾತನಾಡುವಂತಿಲ್ಲ. ಏಕೆಂದರೆ ಇಂತಹ ಸಮಾಜದಲ್ಲಿ ಜನರು ಮೂಢನಂಬಿಕೆ ಉಳ್ಳವರಾಗಿರುತ್ತಾರೆ. ಇದರಿಂದ ಭವಿಷ್ಯದಲ್ಲಿ ಜನರ ಜೀವನವು ಅಸಂತೋಷ ಮತ್ತು ಮೂಢನಂಬಿಕೆಗಳಿಂದ ನರಳಿ ಸಾಮಾಜಿಕ ಕಟ್ಟುಪಾಡುಗಳ ಬಂಧನದಲ್ಲಿ ಹಾಳಾಗುತ್ತವೆ. ಕ್ರಮೇಣ ನಿಧಾನಗತಿಯಲ್ಲಿ ಜನರಲ್ಲಿ ಈ ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ಅರಿವು ಮೂಡಿಸಿ ವೈಜ್ಞಾನಿಕ ಮನೋಭಾವ ಬೆಳೆಸಿ ಅವರ ನಂಬಿಕೆ ಮತ್ತು ಆಚರಣೆಗಳನ್ನು ಸರಳಗೊಳಿಸಿದಾಗ ಜನರಲ್ಲಿ ಹೆಚ್ಚಿನ ತಿಳಿವಳಿಕೆ ಉಂಟಾಗುವುದು. ಈ ಸಾಮಾಜಿಕ ಕಟ್ಟುಪಾಡುಗಳು ಹೇಗೆ ವೈಚಾರಿಕತೆಯನ್ನು ಹಾಳು ಮಾಡಿ ಮಾನಸಿಕ ಖಿನ್ನತೆಯನ್ನು ತರುವುವೆಂದು ಜನರು ಅರಿತಲ್ಲಿ ಈ ಮೌಢ್ಯ ಆಚರಣೆಗಳು ತಾವಾಗಿ ನಶಿಸಿಹೋಗುತ್ತವೆ.

**ಕ್ಷುಲ್ಲಕ ವಿಚಾರಗಳನ್ನು ತ್ಯಜಿಸುವುದು:** ಬಹಳಷ್ಟು ಜನ ಬಹಳಷ್ಟು ಸಲ ತಮ್ಮ ಅಸಂತೋಷಕ್ಕೆ ತಾವೇ ಕಾರಣರಾಗಿರುತ್ತಾರೆ ಎಂಬುದನ್ನು ಅರಿಯುವುದಿಲ್ಲ. ಈ ಒಂದು ಗುಂಪಿಗೆ ಮಧ್ಯಮ ವರ್ಗ ಹಾಗೂ ಉತ್ತಮ ವರ್ಗದ ಜನರು ಸೇರಿರುತ್ತಾರೆ.

ಮೂಲಭೂತವಾಗಿ ಎಲ್ಲರಿಗೂ ಅವರದೇ ಆದ ಅಭಿರುಚಿಗಳು ಮತ್ತು ಆಯ್ಕೆಗಳು ಇರುತ್ತವೆ. ಆದರೆ ಸಣ್ಣ, ಕ್ಷುಲ್ಲಕ ವಿಚಾರಕ್ಕಾಗಿ ಬೇರೆಯವರು ನಮ್ಮಿಂದ ಪೀಡನೆಗೊಳಗಾಗಿ ನಮ್ಮನ್ನು ದೂರವಿಡದಂತೆ ನಾವು ಬದುಕಬೇಕು, ಏನೇ ಸಂಕಷ್ಟ ಬಂದರೂ ಧನಾತ್ಮಕ ಭಾವನೆಯಿಂದ ಜೀವನವನ್ನು ಸಾಗಿಸಬೇಕು.

ಒಟ್ಟಿನಲ್ಲಿ ಈ ಮೇಲೆ ಚರ್ಚಿಸಿದ ಎಲ್ಲಾ ವಿಷಯಗಳಿಂದ ಮುಕ್ತವಾದಾಗ ಮಾತ್ರ ಜೀವನದಲ್ಲಿ ಸುಖ ಎಂಬ ಸವಿಯನ್ನು ಕಾಣಲು ಸಾಧ್ಯ. ಸುಖವೆಂದರೆ ದುರಾಶೆ ಮತ್ತು ಪ್ರಚೋದನೆಗೆ ಒಳಗಾಗದೇ ಸಾಹಸ ಜೀವನವನ್ನು ನಡೆಸಿ ಸ್ವ-ಸಂತೃಪ್ತಿಯನ್ನು ಕಾಣುವುದಾಗಿದೆ.

ಕೆಟ್ಟ ವಿಚಾರಗಳನ್ನು ದೂರಮಾಡಲು ನಾವು ಪ್ರಶ್ನಿಸುವ, ವಿಚಾರಿಸುವ, ಕ್ರಿಯಾತ್ಮಕವಾಗಿ ಅನುಮಾನಪಡುವ, ತರ್ಕಿಸುವ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಬೇಕು. ಅಂದಾಗ ಮಾತ್ರ ಕ್ರಿಯೆ, ವಿಚಾರ ಶಕ್ತಿ ಮತ್ತು ವೈಚಾರಿಕ ಶಕ್ತಿಗಳು ಒಟ್ಟುಗೂಡಿ ನಿಧಾನವಾಗಿ ನಮ್ಮಲ್ಲಿ ಬದಲಾವಣೆಗಳಾಗುತ್ತವೆ. ನಮ್ಮ ಅಸಾಮರ್ಥ್ಯ, ಅಪನಂಬಿಕೆ ಮುಂತಾದವುಗಳನ್ನು ತೊಡೆದು ಹಾಕಲು ಸಾಧ್ಯವಾಗುವುದು. ಸಂತೋಷ ಎಂಬುದನ್ನು ಹುಡುಕುತ್ತಾ ಹೋದರೆ ಸಿಗುವುದಿಲ್ಲ. ಅದು ನಮ್ಮಲ್ಲಿಯೇ ಅಡಗಿದ್ದು ಅದನ್ನು ಹುಡುಕುವ ಮತ್ತು ಪಡೆಯುವ ಶಕ್ತಿ ನಮ್ಮಲ್ಲಿರಬೇಕು.

–ಎಚ್.ಎಂ.ಶೈ.

## ಕಲಿಕೆಯ ಕನಿಷ್ಠ ಮಟ್ಟಗಳು

ಕಲಿಕೆಯ ಕನಿಷ್ಠ ಮಟ್ಟದ (Minimum Levels of Learning M.L.L) ಪರಿಕಲ್ಪನೆಯು ಮೂರು ಅಂಶಗಳನ್ನೊಳಗೊಂಡಿದೆ. ಅವುಗಳೆಂದರೆ 'ಕಲಿಕೆ', 'ಕನಿಷ್ಠ' ಮತ್ತು 'ಮಟ್ಟ' ಇವುಗಳಲ್ಲಿ 'ಕನಿಷ್ಠ' ಮತ್ತು 'ಮಟ್ಟಗಳು' ಎಂಬ ಅಂಶಗಳು ಕಲಿಕೆಗೆ ವಿಶೇಷಣಗಳಾಗಿವೆ.

ಕಲಿಕೆ ಎಂದರೆ ವಿದ್ಯಾರ್ಥಿಯ ಜ್ಞಾನ, ಗ್ರಹಿಕೆ, ಮನೋಭಾವಗಳು, ಕೌಶಲಗಳು ಇತ್ಯಾದಿಗಳೆಲ್ಲವೂ ಆತನ ವರ್ತನೆಗಳ ಮೇಲೆ ಅಪೇಕ್ಷಿತ ಹಾಗೂ ದೀರ್ಘಕಾಲಿಕ ಬದಲಾವಣೆಗಳನ್ನು ತರುವುದು ಎಂದರ್ಥ. ನಮಗೆಲ್ಲಾ ತಿಳಿದಿರುವ ಹಾಗೆ ವಿದ್ಯಾರ್ಥಿಯ ಶಾಲಾ ಜೀವನದಲ್ಲಿ ಕಲಿಕಾ ಪ್ರಕ್ರಿಯೆಯು ಶಾಲಾ ಒಳಗಿನ ಹಾಗೂ ಹೊರಗಿನಿಂದ ದೊರೆಯುವ ಪಠ್ಯ ಅನುಭವಗಳ ಮೂಲಕ ಉಂಟಾಗುತ್ತದೆ.

'ಮಟ್ಟ' ಎಂಬುದು ಕಾರ್ಯನಿರ್ವಹಣೆಯ ಮಟ್ಟವನ್ನು ತಿಳಿಸುವುದು. ಪ್ರತಿ ತರಗತಿಯ ಹಂತದಲ್ಲೂ ಪ್ರತಿಯೊಬ್ಬ ವಿದ್ಯಾರ್ಥಿಯು ನಿರ್ದಿಷ್ಟವಾದ ಅಪೇಕ್ಷಿತ ಸಾಮರ್ಥ್ಯಗಳನ್ನು ಪಡೆದುಕೊಳ್ಳಲೇಬೇಕು. ಪ್ರತಿಯೊಂದು ಮಟ್ಟವೂ ಸಾಮರ್ಥ್ಯಗಳ ಹೇಳಿಕೆಗಳನ್ನೊಳಗೊಂಡಿದ್ದು, ಪ್ರತಿ ಸಾಮರ್ಥ್ಯವೂ ನಿರ್ದಿಷ್ಟ ಕಲಿಕೆಯನ್ನು ನಿರೀಕ್ಷಿಸಿ ಅದೇ ಮುಂದೆ 'ಕಲಿಕೆಯಮಟ್ಟ'ವಾಗುತ್ತದೆ.

'ಕನಿಷ್ಠ' ಎಂಬುದು ನಿಗದಿತ ಕಲಿಕಾ ಸಮಯದ ಚೌಕಟ್ಟಿನಲ್ಲಿ ಪ್ರತಿ ವಿದ್ಯಾರ್ಥಿಯೂ ಗಳಿಸಲೇಬೇಕಾದ ಸಾಮರ್ಥ್ಯಗಳ ಪ್ರಮಾಣಕ್ಕೆ ಅನ್ವಯಿಸುತ್ತದೆ. ಎಲ್ಲ ಮಕ್ಕಳು ಈ 'ಕನಿಷ್ಠ' ಮಟ್ಟವನ್ನು ತಲುಪಲೇಬೇಕೆಂಬುದು ಉದ್ದೇಶ. ಆದರೆ ಕೆಲವು ಮಕ್ಕಳು ಈ ಮಟ್ಟವನ್ನು ಮೀರಿ ಕಲಿಯುವವರಿರುತ್ತಾರೆ. ಶಿಕ್ಷಕರು ಅಂತಹ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು.

### ಕಲಿಕೆಯ ಕನಿಷ್ಠ ಮಟ್ಟದ ಇತಿಹಾಸ

1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಾಲಾ ಶಿಕ್ಷಣದ ಪ್ರತಿ ಹಂತಕ್ಕೂ ಕಲಿಕೆಯ ಕನಿಷ್ಠ ಮಟ್ಟಗಳನ್ನು ರೂಪಿಸಬೇಕೆಂದು ಶಿಫಾರಸ್ಸು ಮಾಡಿತು. ಅಷ್ಟೇ ಅಲ್ಲದೆ ಶಿಕ್ಷಣದ ಪ್ರತಿ ಹಂತದಲ್ಲೂ ವಿದ್ಯಾರ್ಥಿಗಳು ಈ ಮಟ್ಟಗಳನ್ನು ಖಂಡಿತವಾಗಿ ಸಾಧಿಸುವಂತೆ ಕ್ರಮಕೈಗೊಳ್ಳಬೇಕೆಂದೂ ಸೂಚಿಸಲಾಯಿತು. (POA-1992) ಪರಿಷ್ಕೃತ ನೀತಿ ನಿರೂಪಣೆ ಹಾಗೂ ಕ್ರಿಯಾ ಕಾರ್ಯಕ್ರಮಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳೂ ಕಲಿಕೆಯ ಕನಿಷ್ಠ ಮಟ್ಟಗಳನ್ನು ಮುಟ್ಟಲೇಬೇಕಾದ/ತಲುಪಲೇಬೇಕಾದ ತುರ್ತು ಅವಶ್ಯಕತೆಯನ್ನು ಮತ್ತೆ ಒತ್ತಿ ಹೇಳಲಾಗಿದೆ.

Digitised by Bharatavani, CIIL

1986ರ ರಾಷ್ಟ್ರೀಯ ಶಿಕ್ಷಣ ನೀತಿಯ ನಿರ್ದೇಶನದ ಅನುಸರಣಾ ಕ್ರಮವಾಗಿ 1990ರಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಹಾಗೂ ಅಭಿವೃದ್ಧಿ ಇಲಾಖೆಯ ಶಿಕ್ಷಣ ವಿಭಾಗವು ಪ್ರಾಥಮಿಕ ಹಂತದಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳನ್ನು ರೂಪಿಸಲು ಒಂದು ಸಮಿತಿಯನ್ನು ನೇಮಿಸಿತು. 1991ರಲ್ಲಿ ಈ ಸಮಿತಿಯ "ಪ್ರಾಥಮಿಕ ಹಂತದಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳು" ಎಂಬ ಶೀರ್ಷಿಕೆಯ ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿ 1 ರಿಂದ 5ನೇ ತರಗತಿಯ ಮಕ್ಕಳು ಭಾಷೆ, ಗಣಿತ, ಪರಿಸರ ಅಧ್ಯಯನಗಳಲ್ಲಿ ಗಳಿಸಬೇಕಾದ ಕನಿಷ್ಠ ಕಲಿಕಾ ಮಟ್ಟಗಳನ್ನು ಗುರುತಿಸಲಾಗಿತ್ತು.

'ಸಮತೆಯೊಂದಿಗೆ ಗುಣಮಟ್ಟದ ಚಿಂತನೆಯು ಪ್ರಾಥಮಿಕ ಹಂತದಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳನ್ನು ರೂಪಿಸುವ ಪ್ರಯತ್ನಕ್ಕೆ ಆಧಾರವಾಗಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಶಿಕ್ಷಣ ಇಲಾಖೆಯು ರಾಷ್ಟ್ರೀಯ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮ ಪ್ರಾರಂಭಿಸಿತು. ಪ್ರತಿ ರಾಜ್ಯದ ಪಠ್ಯಕ್ರಮದಲ್ಲಿರುವ ಪಠ್ಯವಿಷಯಗಳಾದ ಭಾಷೆ, ಗಣಿತ ಹಾಗೂ ಸಮಾಜ ಮತ್ತು ಪರಿಸರ ಅಧ್ಯಯನಗಳಲ್ಲಿ ಕಲಿಸಬೇಕಾದ ಮೂಲ ಸಾಮರ್ಥ್ಯಗಳನ್ನು ಗುರುತಿಸಿ ಪತ್ತೆ ಹಚ್ಚುವುದೇ ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಇದನ್ನೇ ಕಲಿಕೆಯ ಕನಿಷ್ಠ ಮಟ್ಟಗಳು ಎಂದು ಕರೆಯಲಾಗಿದೆ.

**ಕಲಿಕೆಯ ಕನಿಷ್ಠ ಮಟ್ಟದ ಮಹತ್ವ**

ಶಾಲೆಗೆ ಬಂದ ವಿದ್ಯಾರ್ಥಿಗಳ ಕಲಿಕೆಯ ಸಾಧನೆಗೂ ಅವರಿಂದ ನಿರೀಕ್ಷಿಸುವ ಸಾಧನೆಯ ಮಟ್ಟಕ್ಕೂ ಯಾವಾಗಲೂ ಬಹಳ ಅಂತರವಿರುತ್ತದೆ. ಪಂಚವಾರ್ಷಿಕ ಯೋಜನೆ ಹಾಗೂ ಪ್ರತಿ ವರ್ಷದ ಆಯವ್ಯಯ ಮಂಡನೆಯಲ್ಲೂ ಶಿಕ್ಷಣದ ಅಭಿವೃದ್ಧಿಗಾಗಿ ಹಾಗೂ ವಿದ್ಯಾರ್ಥಿಗಳ ಪ್ರಗತಿಗಾಗಿ ಸಾಕಷ್ಟು ಹಣವನ್ನು ಮಂಜೂರು ಮಾಡಲಾಗುತ್ತದೆ. ಈ ಮಂಜೂರಾದ ಹಣದಿಂದ ಶಾಲೆಗಳಿಗೆ ಬೇಕಾದ ಸೌಕರ್ಯಗಳು, ವಿದ್ಯಾರ್ಥಿಗಳಲ್ಲಿ ಒದಗಿಸಬೇಕಾದ ಸವಲತ್ತುಗಳು ಎಲ್ಲವನ್ನು ಪೂರೈಸಲಾಗುತ್ತದೆ. 2001ರಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ 'ಸರ್ವಶಿಕ್ಷಣ ಅಭಿಯಾನ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಇದರ ಅಡಿಯಲ್ಲಿ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದ ಹತ್ತು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಲಾಯಿತು.

ಹೀಗೆ ದೊಡ್ಡ ಮೊತ್ತದ ಹಣ, ಸಮಯ, ಪ್ರಯತ್ನಗಳು, ವ್ಯಯವಾಗಿದ್ದರೂ ಸಾಮಾನ್ಯವಾಗಿ ನಮ್ಮ ಶಾಲೆಗಳು ಎಲ್ಲ ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಹೆಚ್ಚಿಸುವ ಗುರಿಯತ್ತ ಸಾಗಿಯೇ ಇಲ್ಲ. ಮಕ್ಕಳಿಗೆ ನಡದೇ ಹೋಗುವಷ್ಟು ದೂರದಲ್ಲಿ ಶಾಲೆ ಕಲಿಕಾ ಕೇಂದ್ರ ಸ್ಥಾಪನೆ ಮತ್ತು ದಾಖಲಾತಿ ಹೆಚ್ಚಿಸುವುದರಲ್ಲಿ ಗಣನೀಯ ಸಾಧನೆಗಳಾಗಿವೆ. ಆದರೆ ಮಕ್ಕಳ ಕಲಿಕಾ ಸಾಧನೆಗಳು ಕೆಳಮಟ್ಟವನ್ನೇ ಸೂಚಿಸುತ್ತಿರುವುದಲ್ಲದೆ ಸಾಧನೆಯ ಮಟ್ಟದಲ್ಲಿ ಮಕ್ಕಳ ನಡುವೆ ಬಹಳಷ್ಟು ಅಂತರಗಳೂ ಇವೆ.

ಮಕ್ಕಳ ಸಾಧನೆಯ ಮಟ್ಟ ಹಾಗೂ ಸಾಧನೆಯಲ್ಲಿ ಅಂತರಗಳು ಶಾಲೆಯಿಂದ ಶಾಲೆಗೆ ಭಿನ್ನವಾಗಿದ್ದು ಕೇವಲ ಭೌತಿಕ ಸೌಲಭ್ಯಗಳನ್ನಷ್ಟೇ ಒದಗಿಸುವುದರಿಂದ ಕಾರ್ಯ ಸಾಧನೆಯಾಗುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕಲಿಕೆಯ ಪ್ರಮಾಣ ಅಥವಾ ಗುಣಮಟ್ಟವನ್ನು ರೂಪಿಸಿ ಎಲ್ಲ ಮಕ್ಕಳು ಈ ಮಟ್ಟವನ್ನು ಸಾಧಿಸಲೇಬೇಕೆಂಬ ಎಂದರೆ ಸಮತೆ ಸಾಧ್ಯವಾಗಬೇಕೆಂಬುದನ್ನು ಖಚಿತಪಡಿಸಬೇಕು, 'ಸಮತೆಯ' ಜೊತೆಗೆ 'ಗುಣಮಟ್ಟ'ದ ಆಲೋಚನೆಯುಂಟಾಗಿ, ಪ್ರತಿ ಮಗುವು ತೃಪ್ತಿಕರ ಗುಣಮಟ್ಟದ ಶಿಕ್ಷಣ ಪಡೆಯುವ ಅವಕಾಶ ಪಡೆಯಬೇಕೆಂಬುದು ಖಚಿತವಾಗುತ್ತದೆ.

**ಶಿಕ್ಷಕರಿಗೆ ಸಂಬಂಧಿಸಿದಂತೆ ಕಲಿಕೆಯ ಕನಿಷ್ಠ ಮಟ್ಟ ಈ ರೀತಿಯಾಗಿ ಮಹತ್ವದ್ದಾಗಿದೆ:**

1. ಶಿಕ್ಷಕರು ತಮ್ಮ ಬೋಧನಾ ಗುರಿಗಳನ್ನು ವಿದ್ಯಾರ್ಥಿಗಳ ಮಟ್ಟ ಹಾಗೂ ಅಗತ್ಯತೆಗಳಿಗನುಗುಣವಾಗಿ ಸ್ಪಷ್ಟವಾಗಿ ರಚಿಸಲು ನಿರ್ದೇಶನ ನೀಡುತ್ತದೆ.
2. ಎಲ್ಲ ಮಕ್ಕಳು ಅಪೇಕ್ಷಿತ, ನಿರ್ಧಾರಿತ ಮಟ್ಟಗಳನ್ನು ಮುಟ್ಟಲು ಅವಶ್ಯವಾದ ಸಾಮರ್ಥ್ಯಗಳನ್ನು ಸಾಧಿಸುವಂತೆ ಸಹಾಯ ಮಾಡಲು ಶಿಕ್ಷಕರ ಪ್ರಯತ್ನಗಳಿಗೆ ಮಾರ್ಗಸೂಚಿಯಾಗಿದೆ.
3. ಶಿಕ್ಷಕರು ಎಲ್ಲ ಮಕ್ಕಳು ಅಪೇಕ್ಷಿತಾ ಮಟ್ಟವನ್ನು ತಲುಪುವಂತೆ ಮಾಡಲು ಸೂಕ್ತ ಬೋಧನಾ-ಕಲಿಕಾ ಮಾರ್ಗೋಪಾಯಗಳನ್ನು ಆಯ್ಕೆ ಮಾಡಲು ಸಹಾಯಕವಾಗಿದೆ.
4. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ನಿರ್ದಿಷ್ಟ ಸಾಮರ್ಥ್ಯಗಳನ್ನು ಬೆಳೆಸಲು ಬಳಸುವ ಬೋಧನಾ ಪದ್ಧತಿ ಹಾಗೂ ವಿಷಯಾಂಶಗಳ ಆಯ್ಕೆಯ ಬಗ್ಗೆ ಸ್ಪಷ್ಟತೆ ಒದಗಿಸುತ್ತದೆ.
5. ವಿದ್ಯಾರ್ಥಿಗಳ ಸಾಧನೆಯ ಮೌಲ್ಯಮಾಪನಕ್ಕಾಗಿ ಸೂಕ್ತವಾದ ವಿಧಾನವನ್ನು ಆಯ್ದುಕೊಳ್ಳಲು ಸಹಾಯಕವಾಗಿದೆ.

**ಕಲಿಕೆಯ ಕನಿಷ್ಠ ಮಟ್ಟದ ಸ್ವರೂಪ**

ಕಲಿಕೆಯ ಕನಿಷ್ಠ ಮಟ್ಟದ ಸ್ವರೂಪ ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿದೆ.

1. ಪ್ರಭುತ್ವ ಕಲಿಕೆ
2. ಸಾಮರ್ಥ್ಯಾಧಾರಿತ ಬೋಧನೆ
3. ವ್ಯಾಪಕ ಮೌಲ್ಯಮಾಪನ

**1. ಪ್ರಭುತ್ವ ಕಲಿಕೆ:** ಪ್ರತಿ ತರಗತಿಯ ಪ್ರತಿ ವಿಷಯದ ಪ್ರತಿ ಘಟಕವನ್ನು ಸರಳದಿಂದ ಸಂಕೀರ್ಣದ ಕಡೆಗೆ ಸಾಗುವಂತೆ ಜೋಡಿಸಲಾಗಿದೆ.

ಪ್ರತಿ ಸಾಮರ್ಥ್ಯವನ್ನೂ ಪೂರ್ಣವಾಗಿ ಕಲಿಯಬೇಕಾಗಿದೆ. ಇದನ್ನು ಕಲಿಯುವುದರಿಂದ ಮುಂದಿನ ಸಾಮರ್ಥ್ಯದ ಕಲಿಕೆಗೆ ಅದು ಆಧಾರವಾಗಿರುತ್ತದೆ.

ಕಲಿಕೆ ಕನಿಷ್ಠ ಮಟ್ಟದ ಕ್ರಮವೆಂದರೆ ಪ್ರತಿ ಸಾಮರ್ಥ್ಯವನ್ನು ಪ್ರಭುತ್ವಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ತಲುಪುವಂತೆ ಮಾಡುವುದು.

**2. ಸಾಮರ್ಥ್ಯಾಧಾರಿತ ಬೋಧನೆ:** ಸಾಮರ್ಥ್ಯಗಳನ್ನು ಪ್ರಭುತ್ವ ಮಟ್ಟದಲ್ಲಿ ಬೆಳೆಸುವುದೇ ಇದರ ಪ್ರಮುಖ ಕಾಳಜಿಯಾಗಿದೆ.

ಇದಕ್ಕಾಗಿ ಮಕ್ಕಳ ಕಲಿಕೆಯ ಅವಶ್ಯಕತೆಗಳನ್ನು ಪೂರೈಸಲು ಸೂಕ್ತವಾದ ಬೋಧನಾ ಕಲಿಕಾ ಚಟುವಟಿಕೆಗಳ ಆಯ್ಕೆ ಮತ್ತು ಜೋಡಣೆಗೆ ಒಂದು ಸಾಮರ್ಥ್ಯವೇ ಆಧಾರವಾಗಿರುತ್ತದೆ. ಇದಕ್ಕಾಗಿ ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಸಾಮರ್ಥ್ಯಾಧಾರಿತ ಬೋಧನೆ ಅಗತ್ಯವಾಗಿದೆ.

**3. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ:** ಕಲಿಕೆಯ ಕನಿಷ್ಠ ಮಟ್ಟದ ಕ್ರಮದ ಪ್ರಮುಖ ಉದ್ದೇಶ ಸಾಮರ್ಥ್ಯಗಳ ಮೇಲೆ ಪ್ರಭುತ್ವ ಸಾಧಿಸುವುದೇ ಆಗಿದೆ. ಒಬ್ಬ ವಿದ್ಯಾರ್ಥಿ ಸಾಮರ್ಥ್ಯಗಳ ಮೇಲೆ ಪ್ರಭುತ್ವ ಸಾಧಿಸಿದ್ದಾನೆಯೇ ಎಂಬುದನ್ನು ನಿರ್ಧರಿಸಲು ನಿಯಮಿತವಾಗಿ ವಿದ್ಯಾರ್ಥಿಯ ಸಾಧನೆಯ ಮೌಲ್ಯಮಾಪನ ಮಾಡಬೇಕಾಗಿದೆ.

Digitised by Bharatavani, CIIL

ಒಬ್ಬ ವಿದ್ಯಾರ್ಥಿಯು ಹಿಂದಿನ ಸಾಮರ್ಥ್ಯವನ್ನು ಗಳಿಸಿದ ನಂತರವೇ ಮುಂದಿನ ಸಾಮರ್ಥ್ಯ ಗಳಿಸಲಾಗುವುದು. ಆದ್ದರಿಂದ ವಿದ್ಯಾರ್ಥಿಯು ಸಾಮರ್ಥ್ಯಗಳ ಮೇಲೆ ಪ್ರಭುತ್ವ ಸಾಧಿಸಿದ್ದಾನೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಮೌಲ್ಯಮಾಪನದ ಒಂದು ಯೋಜನೆಯನ್ನು ಅಳವಡಿಸಬೇಕಾಗುತ್ತದೆ. ಮೌಲ್ಯಮಾಪನದ ಪ್ರಕ್ರಿಯೆ ನಿರಂತರವಾಗಿರಬೇಕೆಂಬುದೇ ಇದರ ಅರ್ಥ.

ಮೌಲ್ಯಮಾಪನವು ಜ್ಞಾನ, ಗ್ರಹಿಕೆ, ಕೌಶಲ ಮತ್ತು ಅನ್ವಯ ಈ ವಲಯಗಳಿಗೆ ಮಾತ್ರ ಸೀಮಿತವಾಗಿರಬಾರದು. ಇವುಗಳನ್ನು ಹೊರತುಪಡಿಸಿ ವ್ಯಕ್ತಿತ್ವದ ಗುಣಲಕ್ಷಣಗಳು, ಮೌಲ್ಯಗಳು ಮತ್ತು ವರ್ತನೆಗಳ ಮೌಲ್ಯಮಾಪನ ಕೂಡ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಕಲಿಕೆಯ ಕನಿಷ್ಠ ಮಟ್ಟದ ಕ್ರಮದಲ್ಲಿ ಮೌಲ್ಯಮಾಪನ ಅವಶ್ಯವೆಂದು ಪರಿಗಣಿಸಲಾಗಿದೆ.

ಈ ರೀತಿಯ ನಿರಂತರ ಮೌಲ್ಯಮಾಪನದ ಪ್ರಕ್ರಿಯೆಯಿಂದ ವಿದ್ಯಾರ್ಥಿಗಳ ಕಲಿಕಾ ನ್ಯೂನತೆಗಳನ್ನು ನೈದಾನಿಕ ಪರೀಕ್ಷೆಗಳ ಸಹಾಯದಿಂದ ಪತ್ತೆಹಚ್ಚಬಹುದು. ನಂತರ ಸೂಕ್ತ ಪರಿಹಾರೋಪಾಯಗಳಿಂದ ವಿದ್ಯಾರ್ಥಿಯು ತನ್ನ ಕಲಿಕಾ ಸಾಮರ್ಥ್ಯಗಳನ್ನು ಉತ್ತಮಪಡಿಸಿಕೊಂಡು ಅಪೇಕ್ಷಿತ ಕಲಿಕಾ ಮಟ್ಟವನ್ನು ತಲುಪಬಹುದಾಗಿದೆ.

ಕಲಿಕೆಯ ಕನಿಷ್ಠ ಮಟ್ಟದ ಕ್ರಮದಿಂದ ವಿದ್ಯಾರ್ಥಿಗಳು ಪ್ರತಿ ಹಂತದ ಶಿಕ್ಷಣದಲ್ಲೂ ನಿರೀಕ್ಷಿತ ಮಟ್ಟವನ್ನು ತಲುಪಲು ಸಾಧ್ಯವಾಗಿದೆ. ತಮ್ಮ ಸಾಮರ್ಥ್ಯಗಳನ್ನು ಉತ್ತಮಗೊಳಿಸಿಕೊಳ್ಳಲು ಸಹಾ ಇದು ಬಹಳ ಅನುಕೂಲಕರವಾಗಿದೆ. ಶಿಕ್ಷಕರು ಕೂಡ ಪ್ರತಿ ವಿದ್ಯಾರ್ಥಿಯು ಕನಿಷ್ಠ ಮಟ್ಟವನ್ನು ತಲುಪಲು ಅಗತ್ಯವಿರುವ ಪೂರಕ ಕಲಿಕಾ ಚಟುವಟಿಕೆಗಳನ್ನು ಯೋಜಿಸಿ ಕಾರ್ಯಗತಗೊಳಿಸಬಹುದಾಗಿದೆ.

ಕಲಿಕೆಯ ಕನಿಷ್ಠ ಮಟ್ಟದ ಕ್ರಮದಲ್ಲಿ ನೀಡಲಾಗಿರುವ ಸಾಮರ್ಥ್ಯಗಳ ಹೇಳಿಕೆಗಳು ಪ್ರಾಥಮಿಕ ಶಿಕ್ಷಣದ ಎಲ್ಲ ವಿಷಯಗಳಲ್ಲಿಯೂ ರೂಪಿಸಲ್ಪಟ್ಟಿವೆ. ಕರ್ನಾಟಕ ಮತ್ತಿತರ ರಾಜ್ಯಗಳ ಇತ್ತೀಚಿನ ಪಠ್ಯಪುಸ್ತಕಗಳೂ ಪ್ರತಿ ವಿಷಯದಲ್ಲಿ ಗುರ್ತಿಸಲ್ಪಟ್ಟಿರುವ ಸಾಮರ್ಥ್ಯಗಳನ್ನೇ ಆಧರಿಸಿವೆ. ಕಲಿಕೆಯ ಕನಿಷ್ಠ ಮಟ್ಟದ ಫಲಿತಾಂಶಗಳನ್ನು ರಾಷ್ಟ್ರಾದ್ಯಂತ ಹಾಗೂ ರಾಜ್ಯವಾರು ಎಸ್.ಎಸ್.ಎ. ಅಡಿಯ ಕಾರ್ಯಕ್ರಮದಲ್ಲಿ ಸಮಗ್ರವಾಗಿ ಮೌಲ್ಯಮಾಪನ ಮಾಡಬೇಕಾಗಿದೆ.

–ಎಂ.ಸ.ಪಾ.

## ಕೃತಕ ಬುದ್ಧಿಶಕ್ತಿ

ಕೃತಕ ಬುದ್ಧಿಶಕ್ತಿ ಎಂದಾಕ್ಷಣ ಇದು ಪರಲೋಕದ ಜೀವಿಗೋ, ಮಾನವಾತೀತ ಶಕ್ತಿಗೋ, ಯಂತ್ರ ಮಾನವನಿಗೋ, ಮತ್ಯಾವುದೋ ಯಂತ್ರ ವ್ಯವಸ್ಥೆಗೋ ಸಂಬಂಧಿಸಿರಬಹುದೆಂದು ಅನೇಕರು ಭಾವಿಸುವುದು ಸಹಜ. ಯೋಚಿಸಿ ನಿರ್ಧಾರ ತೆಗೆದುಕೊಳ್ಳುವಂತಹ ಯಂತ್ರ ಅಥವಾ ಶಕ್ತಿಯರೂಪದ ಬಗ್ಗೆ ಪುರಾಣ ಕಥೆಗಳಲ್ಲಿ ಉಲ್ಲೇಖವಿದೆ ಎಂದು ತಿಳಿಸಲಾಗಿದೆ. ಮಾನವನನ್ನು ಅನುಕರಿಸುವಂತಹ ಕಂಪ್ಯೂಟರ್ ಸೃಷ್ಟಿಸುವ ಪ್ರಯತ್ನಗಳು ಹಲವಾರು ದಶಕಗಳಿಂದ ನಡೆಯುತ್ತಾ ಬಂದಿದೆ. ಕಳೆದ 50 ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಪ್ರಯತ್ನ ಹಾಗೂ ಸಂಶೋಧನೆಗಳು ತೀವ್ರಗೊಂಡಿದ್ದು, ಈ ವಿಷಯಕ್ಕೆ ಹೆಚ್ಚು ಚಾಲನೆ ಸಿಕ್ಕಿದೆ. 1956ರಲ್ಲಿ **'ಕೃತಕ ಬುದ್ಧಿಶಕ್ತಿ'** ಪದವನ್ನೂ ಜಾನ್ ಮೆಕಾರ್ತಿ ಇವರು ಮೊದಲಬಾರಿಗೆ ಬಳಕೆಗೆ ತಂದರು.

**ಅರ್ಥ, ಸ್ವರೂಪ ಮತ್ತು ವ್ಯಾಪ್ತಿ:** ಕೃತಕ ಬುದ್ಧಿಶಕ್ತಿ–ಇದು ಕಂಪ್ಯೂಟರ್ ವಿಜ್ಞಾನದ ಉಪ ವಿಭಾಗವಾಗಿದೆ. ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸುವಂತಹ ಕಂಪ್ಯೂಟರ್ ವ್ಯವಸ್ಥೆ ರಚಿಸುವುದಕ್ಕೆ ಹಾಗೂ ಬುದ್ಧಿಶಕ್ತಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದಕ್ಕೆ ಇದು ಸಂಬಂಧಿಸಿದೆ. ಕೃತಕ ಬುದ್ಧಿಶಕ್ತಿಯು ವಿದ್ಯುನ್ಮಾನ ಮೆದುಳನ್ನು ಸೃಷ್ಟಿಸುವ ಸಾಧ್ಯತೆಗೆ ಸಂಬಂಧಿಸಿದೆ. ಮನುಷ್ಯನ ಬುದ್ಧಿ, ಸಾಮರ್ಥ್ಯಗಳನ್ನೂ ಅನುಕರಿಸುವ ಪ್ರೋಗ್ರಾಂಗಳನ್ನೂ ಒಳಗೊಂಡ ಕಂಪ್ಯೂಟರ್ ವ್ಯವಸ್ಥೆ ರೂಪಿಸುವುದಕ್ಕೂ ಇದು ಸಂಬಂಧಿಸಿದೆ. ಕೃತಕ ಬುದ್ಧಿಶಕ್ತಿಯು ತತ್ವಶಾಸ್ತ್ರ, ಮನಶ್ಶಾಸ್ತ್ರ, ಜೀವಶಾಸ್ತ್ರ, ಗಣಿತ, ಕಂಪ್ಯೂಟರ್ ವಿಜ್ಞಾನ, ಎಂಜಿನಿಯರಿಂಗ್, ಅರ್ಥಶಾಸ್ತ್ರ, ಭಾಷಾ ಅಧ್ಯಯನ ಶಾಸ್ತ್ರ ಈ ಎಲ್ಲ ಕ್ಷೇತ್ರಗಳಿಂದ ವಿವಿಧ ಅಂಶಗಳನ್ನು ಪಡೆದುಕೊಂಡಿದೆ.

ಕೃತಕಬುದ್ಧಿಶಕ್ತಿಗೆ ಔಪಚಾರಿಕ, ಪರಿಪೂರ್ಣ ಹಾಗೂ ಸರ್ವಸಮ್ಮತ ವ್ಯಾಖ್ಯೆ ಸದ್ಯಕ್ಕೆ ಅಲಭ್ಯವೆಂದು ಹೇಳಲಾಗಿದೆ. ಏಕೆಂದರೆ ಇದರ ಪರಿಕಲ್ಪನೆ ನಿರಂತರ ವಿಕಾಸಕ್ಕೆ ಒಳಗಾಗುತ್ತಿದೆ. ಮಾನವನ ಮೆದುಳಿಗಿಂತ ಒಂದು ಕೋಟಿಯಷ್ಟು ವೇಗವಾಗಿ ಕೃತಕ ಬುದ್ಧಿಶಕ್ತಿ ವಿಕಾಸ ಹೊಂದುತ್ತಿದೆ ಎನ್ನಲಾಗಿದೆ. ಆದರೂ ಬಳಸಲು ಸಾಧ್ಯವಾಗುವಂತಹ / ವ್ಯಾವಹಾರಿಕ ವ್ಯಾಖ್ಯೆಯೊಂದನ್ನು ಪಡೆಯುವ ದೃಷ್ಟಿಯಿಂದ ಈ ಕೆಳಗಿನ ಹೇಳಿಕೆಗಳು/ ವಿವರಣೆ ಕೃತಕ ಬುದ್ಧಿಶಕ್ತಿಯ ಅರ್ಥ, ಸ್ವರೂಪ ಮತ್ತು ವಿಸ್ತಾರಗಳನ್ನು ತಿಳಿಸಲು ಸಹಾಯ ಮಾಡುತ್ತದೆ ಎನ್ನಬಹುದು.

ಮನುಷ್ಯನ ಬುದ್ಧಿವಂತಿಕೆ ಮತ್ತು ಕಾರ್ಯನಿರ್ವಹಿಸುವಿಕೆ ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ಕೃತಕವಾಗಿ ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಅಧ್ಯಯನವನ್ನೇ ಕೃತಕ ಬುದ್ಧಿಶಕ್ತಿ ಎಂದು ಕರೆಯಲಾಗುತ್ತದೆ. ಚಿಂತನೆ, ತರ್ಕ, ವಿವೇಚನೆಗಳನ್ನೂ ಬಳಸಿಕೊಂಡು ಕಾರ್ಯನಿರ್ವಹಿಸುವ ಸಾಧನವನ್ನು ತಯಾರಿಸುವುದಕ್ಕೆ ಇದು ಸಂಬಂಧಿಸಿದೆ. ಕಾರ್ಯನಿರ್ವಹಣೆಗೆ ಮಾತ್ರ ಸೀಮಿತವಾಗಿರದೆ ಮನುಷ್ಯನಂತೆ ಯೋಚಿಸುವ ಸಾಮರ್ಥ್ಯ ಒಳಗೊಂಡಿರುವ ವ್ಯವಸ್ಥೆ ನಿರ್ಮಾಣಕ್ಕೂ ಇದು ಸೇರಿದೆ. ಅಲ್ಲದೆ, ಆದರ್ಶ ರೀತಿಯಲ್ಲಿ ಚಿಂತನಾ ಕಾರ್ಯ ಮತ್ತು ಕಾರ್ಯನಿರ್ವಹಣೆ ವ್ಯವಸ್ಥೆ ಅಭಿವೃದ್ಧಿಪಡಿಸುವ ಗುರಿಯನ್ನೂ ಹೊಂದಿದೆ.

ಪ್ರಸ್ತುತ ಕೆಳಕಂಡ ಕಾರ್ಯಕ್ಷೇತ್ರಗಳಲ್ಲಿ ಕೃತಕ ಬುದ್ಧಿಶಕ್ತಿಯನ್ನು ಬಳಸಿಕೊಳ್ಳಲಾಗುತ್ತಿದೆ:

- ಬೇರೆ ಬೇರೆ ಉತ್ಪನ್ನಗಳನ್ನು ನಿಖರವಾಗಿ ಗುರುತಿಸುವ ಕಾರ್ಯ.
- ಸೀಮಿತ ಹಾಗೂ ವಿಶೇಷ ಪರಿಣತಿಯ ರಂಗಗಳಲ್ಲಿ ಜ್ಞಾನ ನಿರ್ವಹಣಾ ಕಾರ್ಯ.
- ಸ್ಪಷ್ಟ / ಪರಿಪೂರ್ಣ ವ್ಯಾಖ್ಯೆ ಒದಗಿಸಲು ಸಾಧ್ಯತೆ ಇರುವ ಕ್ಷೇತ್ರಗಳ ಕಾರ್ಯನಿರ್ವಹಣೆ.
- ಧ್ವನಿ ಗುರುತಿಸುವಿಕೆ ಮತ್ತು ಮುಖ ಪತ್ತೆಹಚ್ಚುವಿಕೆ
- ಯಂತ್ರ ಮಾನವ ಅವಲಂಬಿತ ಕೆಲಸಗಳು
- ಗಣಿತದ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸುವುದು
- ವೈದ್ಯಕೀಯ ತಪಾಸಣೆ ಹಾಗೂ ತಪಾಸಣೆ ಆಧಾರಿತ ಸಲಹೆ/ ಸೂಚನೆ ನೀಡುವಿಕೆ.
- ಸಂಕೀರ್ಣ ಯೋಜನೆಗಳ ತಯಾರಿ.
- ವ್ಯಕ್ತಿ ಕೇಂದ್ರಿತ ಪಾಠದ ವ್ಯವಸ್ಥೆ ರೂಪಿಸುವಿಕೆ ಮತ್ತು ನಿರ್ವಹಣೆ.
- ಕ್ರೆಡಿಟ್ ಕಾರ್ಡ್ ಮತ್ತು ಹಣಕಾಸು ಸಂಬಂಧಿತ ಮೋಸ ಹಾಗೂ ವಂಚನೆ ಪ್ರಕರಣಗಳ ಪತ್ತೆ ಹಚ್ಚುವ ಕಾರ್ಯ.
- ಸ್ವಾಭಾವಿಕ ಭಾಷೆಯ ಗ್ರಹಿಕೆ ಮತ್ತು ಬಳಕೆ (ತಕ್ಕ ಮಟ್ಟಿಗೆ)

Digitised by Bharatavani, CIIL

**ಕೃತಕ ಬುದ್ಧಿಶಕ್ತಿಗೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ಆಗಬಹುದಾದ ಕೆಲವು ಬೆಳವಣಿಗೆಗಳು**

- ಕಂಪ್ಯೂಟರ್ ಜೊತೆ ಸ್ವಾಭಾವಿಕವಾಗಿ ಮಾತಾಡುವ ಭಾಷೆಯಲ್ಲಿ ವ್ಯವಹರಿಸುವ ಸಾಧ್ಯತೆ.
- ದೃಶ್ಯ ಮಾಹಿತಿ, ವಿಶ್ಲೇಷಣೆ, ಅರ್ಥೈಸುವಿಕೆ
- ಸ್ವಯಂಚಾಲಿತ, ಸ್ವತಂತ್ರ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಅಭಿವೃದ್ಧಿಪಡಿಸುವಿಕೆ.
- ಎಲ್ಲ ರೀತಿಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಅವುಗಳಿಗೆ ಪರಿಹಾರ ಒದಗಿಸುವ ಸಾಮರ್ಥ್ಯ ಬೆಳೆಸುವಿಕೆ.
- ಕಲಿಯುವ, ತರ್ಕಿಸುವ ಮತ್ತು ಯೋಚಿಸುವ ಸಾಮರ್ಥ್ಯಗಳನ್ನು ವೃದ್ಧಿಸುವಿಕೆ.
- ಯಂತ್ರ ಮಾನವನ ಸಹಾಯದಿಂದ ಸ್ವಯಂಚಾಲಿತ ಕಾರ್ಯ ನಿರ್ವಹಿಸುವಿಕೆ.
- ಕಂಪ್ಯೂಟರ್ ಬಳಸಿ ಪರಿಪೂರ್ಣ ವೈದ್ಯಕೀಯ ತಪಾಸಣೆ ಆಧರಿಸಿದ ಸೇವೆ ಲಭ್ಯತೆ.
- ಬಾಹ್ಯಾಕಾಶ ಪರಿಶೋಧನೆಯಲ್ಲಿ ಯಂತ್ರಮಾನವನ ಬಳಕೆ.
- ಅಂತರ್ಜಾಲ ಸೇವೆಯ ಮಧ್ಯವರ್ತಿಯಾಗಿ ಬಳಕೆದಾರನ ಕಾರ್ಯಗಳ ಮೇಲುಸ್ತುವಾರಿ.
- ಮನುಷ್ಯನ ಕಾರ್ಯಗಳನ್ನು ನೆರವೇರಿಸಲು ಅಗತ್ಯವಾದ ಪ್ರೋಗ್ರಾಂಗಳನ್ನು ರೂಪಿಸುವುದು.

ಇಷ್ಟೆಲ್ಲಾ ಬೆಳವಣಿಗೆಗಳ ಹಿನ್ನೆಲೆ ಇದ್ದರೂ 'ಕೃತಕ ಬುದ್ಧಿಶಕ್ತಿ' ತಂತ್ರಜ್ಞಾನವು ಮಾನವನನ್ನು ಸ್ಥಾನಪಲ್ಲಟ ಮಾಡಲು ಸಾಧ್ಯವೇ ಇಲ್ಲ ಎನ್ನುವುದು ಒಂದು ಅಭಿಪ್ರಾಯವಾಗಿದೆ. ಕೃತಕ ಬುದ್ಧಿಶಕ್ತಿಯು ನಮ್ಮ ದೇಹದ ವಿಸ್ತೃತ ವ್ಯವಸ್ಥೆಯಾಗಿ ವೈಚಾರಿಕ ನಿರ್ಣಯಗಳನ್ನು ಶೀಘ್ರವಾಗಿ ಕೈಗೊಳ್ಳಲು ಸಹಾಯಮಾಡಲಿದೆ. ಕೃತಕ ಬುದ್ಧಿಶಕ್ತಿ ಕ್ಷೇತ್ರದ ಸಂಭವನೀಯ ಬೆಳವಣಿಗೆಗಳು. ಉದ್ಯೋಗರಂಗ, ಶಿಕ್ಷಣ ರಂಗ, ಸೇರಿದಂತೆ ನಮ್ಮ ನಿತ್ಯ ಜೀವನದ ಮೇಲೆ ತೀವ್ರ ಹಾಗೂ ವ್ಯಾಪಕ ಬದಲಾವಣೆ ಉಂಟುಮಾಡಬಲ್ಲದ್ದಾಗಿವೆ.

–ಎ.ಶ್ರೀ

## ಕಾರ್ಯಾಗಾರಗಳು

ಉನ್ನತ ಶಿಕ್ಷಣದ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ವಿಷಯದಲ್ಲಾದ ಬದಲಾವಣೆಗೆ ತಕ್ಕಂತೆ ಪರಿಣಾಮಕಾರಿಯಾದ ಬೋಧನೆ ಮಾಡಬೇಕೆಂದರೆ ಶಿಕ್ಷಕರು ನವೀನ ಬೋಧನಾ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು. ಇಂಥ ಹೊಸ ಬೋಧನಾ ತಂತ್ರಗಳಲ್ಲಿ ಕಾರ್ಯಾಗಾರ (Workshop) 'ವಿಚಾರ ಸಂಕಿರಣ' (Seminar)' ವಿಚಾರಗೋಷ್ಠಿ (Symposium) ಇವುಗಳು ಕಾಲೇಜು ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಹೆಚ್ಚು ಪ್ರಚಲಿತವಾಗಿವೆ. ಕಾರ್ಯಾಗಾರಕ್ಕೆ ಕನ್ನಡದಲ್ಲಿ ಕಮ್ಮಟ ಎಂಬ ಪದವನ್ನೂ ಬಳಸುತ್ತಾರೆ. ನಿರ್ದಿಷ್ಟ ಸೃಜನಾತ್ಮಕ ಉತ್ಪನ್ನವನ್ನು ಉಂಟುಮಾಡುವುದು ಕಾರ್ಯಾಗಾರದ ಮುಖ್ಯ ಉದ್ದೇಶ.

ಶೈಕ್ಷಣಿಕ ಕಾರ್ಯಾಗಾರವು ಎಲ್ಲರೂ ಕೂಡಿಕೊಂಡು ಸೃಜನಾತ್ಮಕ ಕಾರ್ಯ ಕೈಗೊಳ್ಳುವುದಾಗಿದೆ. ಕಾರ್ಯಾಗಾರದಲ್ಲಿ ಒಂದು ನಿರ್ದಿಷ್ಟ ವಿಷಯವು ಸಾಕಷ್ಟು ಚರ್ಚಿಸಲ್ಪಡುತ್ತದೆ. ಇಲ್ಲಿ ಕೆಲಸಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಮುಖ್ಯವಾಗಿರುವ ಶೈಕ್ಷಣಿಕ ತಂತ್ರ ಇದಾಗಿದೆ. ಕಾರ್ಯಾಗಾರವು ಶಿಕ್ಷಕರನ್ನು, ವಿದ್ಯಾರ್ಥಿಗಳನ್ನು, ಆಡಳಿತಗಾರರನ್ನು ಒಳಗೊಂಡಿರುತ್ತದೆ. ಪ್ರಾರಂಭದ ಸಾಮಾನ್ಯ ಸಭೆಯಲ್ಲಿ ಕಾರ್ಯಾಗಾರ ನಡೆಸುವ ಸೂಚನೆಯನ್ನು ಮಂಡಿಸಿ ಕಾರ್ಯಾಗಾರದ ಮಾರ್ಗದರ್ಶಿ ಸೂತ್ರಗಳನ್ನು ವಿವರಿಸಿ ಕಾರ್ಯಾಗಾರಕ್ಕೆ ಸಂಬಂಧಿಸಿದ ವಿಷಯದ ಮೇಲೆ ತಜ್ಞರಿಂದ ಉಪನ್ಯಾಸ ಏರ್ಪಡಿಸುವರು. ನಂತರ ಕಾರ್ಯಾಗಾರದಲ್ಲಿ ಸದಸ್ಯರೆಲ್ಲರೂ ಚಿಕ್ಕ ಚಿಕ್ಕ ಗುಂಪುಗಳಲ್ಲಿ ವಿಂಗಡಿಸಲ್ಪಟ್ಟು ಅನೇಕ ಅವಧಿಗಳಲ್ಲಿ ಮತ್ತು ದಿನಗಳವರೆಗೆ ಸಭೆ ಸೇರಿ ಕೊಟ್ಟಂತಹ ವಿಷಯದ ಮೇಲೆ ನಿರ್ದಿಷ್ಟವಾಗಿ ಕೆಲಸ ಮಾಡುವರು. ಇವರಿಗೆ ಮಾರ್ಗದರ್ಶನ ಮಾಡಲು ಆ ಕ್ಷೇತ್ರದಲ್ಲಿ ಪರಿಣತಿ ಹೊಂದಿದ ತಜ್ಞರು ಇರುತ್ತಾರೆ. ಕಾರ್ಯಾಗಾರ ಜ್ಞಾನ ಕ್ಷೇತ್ರ (ಬುದ್ಧಿವಂತಿಕೆ) ಮತ್ತು ಕೌಶಲ್ಯ ಕ್ಷೇತ್ರ ಎರಡನ್ನೂ ಒಳಗೊಂಡಿದೆ. ಕಾರ್ಯಾಗಾರದ ಅವಧಿಯಲ್ಲಿ ಸಾಮಾನ್ಯವಾಗಿ ಕೈಗೊಳ್ಳುವ ಚಟುವಟಿಕೆಗಳೆಂದರೆ ಬೇರೆ ಬೇರೆ ವಿಷಯಗಳ ವರದಿ ತಯಾರಿಸುವುದು, ಪಠ್ಯಕ್ರಮ ತಯಾರಿಸುವುದು, ಕೈಪಿಡಿ ತಯಾರಿಸುವುದು, ಬೋಧನಾ ವಸ್ತುಗಳನ್ನು ತಯಾರಿಸುವುದು, ಮಾದರಿಗಳನ್ನು ತಯಾರಿಸುವುದು ಇತ್ಯಾದಿಗಳು. ನಿರ್ದಿಷ್ಟಪಡಿಸಿದ ವೇಳೆಯಲ್ಲಿ ಪ್ರತಿಯೊಂದು ಗುಂಪಿನ ಸದಸ್ಯರು ಕೆಲಸ ಮಾಡಿ ತೋರಿಸಬೇಕಾಗುತ್ತದೆ. ಆದ್ದರಿಂದ ಕಾರ್ಯಾಗಾರದ ಸದಸ್ಯರಲ್ಲಿ ಪರಸ್ಪರ ಸಹಕಾರವಿರಬೇಕು. ಎಲ್ಲರೂ ಕಾರ್ಯಾಗಾರದ ಗುರಿಯನ್ನು ಮುಟ್ಟುವ ಸಲುವಾಗಿ ವೈಯಕ್ತಿಕ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ, ಗುಂಪಿನಲ್ಲಿರುವ ತಾವೆಲ್ಲಾ ಒಂದೇ ಎಂದು ಭಾವಿಸಿ, ಚಟುವಟಿಕೆಗಳಲ್ಲಿ ಭಾಗವಹಿಸಿ ಸಂಬಂಧಪಟ್ಟ ವಸ್ತುಗಳನ್ನು ಸಾಮಗ್ರಿಯನ್ನು ತಯಾರಿಸಬೇಕಾಗುತ್ತದೆ. ಕಾರ್ಯಾಗಾರಗಳಲ್ಲಿರುವ ವ್ಯಕ್ತಿಗಳು ತಾವು ಮಾಡಿದ ಕೆಲಸವನ್ನು ದಾಖಲು ಮಾಡಿ ಉತ್ಪಾದಿಸಿದ ವಸ್ತುವಿನ ಬಗೆಗೆ ವರದಿಯನ್ನು ತಯಾರಿಸಬೇಕಾದದ್ದು ಅತಿ ಅವಶ್ಯಕವಾಗಿದೆ. ಪ್ರಾರಂಭದಿಂದಲೂ ವೈಯಕ್ತಿಕ ಪ್ರತಿಭೆಗೆ ಮತ್ತು ಗುಂಪು ಕೆಲಸಕ್ಕೆ ಹೆಚ್ಚಿನ ಮಹತ್ವವನ್ನು ಕಾರ್ಯಾಗಾರವು ಕೊಡುವುದರಿಂದ ಅದರಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಸಂತೋಷದಿಂದ ಮತ್ತು ಉಲ್ಲಾಸದಿಂದ ಕೆಲಸ ಮಾಡುವರು.

### ಪರಿಣಾಮಕಾರಿ ಕಾರ್ಯಾಗಾರದ ಸಂಘಟನೆಗೆ ಕೆಲವು ಸಲಹೆಗಳು

**ಅ) ತಯಾರಿ (ಪೂರ್ವ ಸಿದ್ಧತೆ) :** ಮೊದಲು ಕಾರ್ಯಾಗಾರದಲ್ಲಿ ಭಾಗವಹಿಸುವವರನ್ನು ಗುರುತಿಸಬೇಕು. ಭಾಗವಹಿಸುವವರ ಗುಣಲಕ್ಷಣಗಳು ಕಾರ್ಯಾಗಾರದ ರೂಪುರೇಷೆ, ವಿಷಯವಸ್ತು ಹಾಗೂ ಆಯ್ದುಕೊಳ್ಳುವ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತದೆ ಆದ್ದರಿಂದ ಎಷ್ಟು ಜನರು ಭಾಗವಹಿಸುವರು? ಯಾವ ಯಾವ ವಯಸ್ಸಿನ ಮತ್ತು ಎಷ್ಟೆಷ್ಟು ಬೋಧನಾ ಅನುಭವ ಉಳ್ಳವರು ಭಾಗವಹಿಸುವರು? ಅವರ ಆಸಕ್ತಿಗಳ ಸ್ಥರವೇನು? ಅವರ ಅವಶ್ಯಕತೆಗಳೇನು? ಅವರು ಯಾವ ಯಾವ ಕೊಡುಗೆಗಳನ್ನು ಕಾರ್ಯಾಗಾರದಲ್ಲಿ ನೀಡಬಲ್ಲರು? ಮತ್ತು ಅವರ ವೈಯಕ್ತಿಕ ಭಿನ್ನತೆಗಳನ್ನು ಹೇಗೆ ಸರಿದೂಗಿಸಿ ಕಾರ್ಯಾಗಾರ ನಡೆಸಬೇಕೆಂಬುದನ್ನು ಪೂರ್ವಭಾವಿಯಾಗಿ ಯೋಜಿಸಬೇಕು.

### ಕಾರ್ಯಾಗಾರದ ಸ್ಥಳ

ಕಾರ್ಯಾಗಾರಕ್ಕಾಗಿ ಆರಿಸಿದ ಸ್ಥಳವು ಉಪಯುಕ್ತವಾಗಿರಬೇಕು. ಅವಶ್ಯಕವಿದ್ದಷ್ಟು ಕೋಣೆಗಳು ಚರ್ಚೆಗೆ ಅನುಕೂಲವಾದ ಪರಿಸರ, ಅವಶ್ಯಕ ಸಲಕರಣೆಗಳು ಉದಾಹರಣೆಗೆ ಓ.ಹೆಚ್.ಪಿ., ಕಂಪ್ಯೂಟರ್,

Digitised by Bharatavani, CIIL

ಎಲ್.ಸಿ.ಡಿ. ಇತ್ಯಾದಿಗಳ ಬಳಕೆಗೆ ಸುಲಭ ಮತ್ತು ಪರಿಣಾಮಕಾರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿರಬೇಕು. ಸಂದರ್ಭ ಬಂದಾಗ ಸುಗಮವಾಗಿ ಓಡಾಡಲು ಅನುಕೂಲವಿರಬೇಕು. ಭಾಗವಹಿಸುವವರಿಗೆಲ್ಲಾ ಕಾರ್ಯಾಗಾರಕ್ಕೆ ಬರಲು ಅನುಕೂಲವಿರುವ ಸ್ಥಳವಾಗಿರಬೇಕು.

**ಆ) ಕಾರ್ಯಾಗಾರದಲ್ಲಿನ ಕಾರ್ಯಕ್ರಮಗಳು**

**ವಿಷಯ ವಸ್ತು** : ವಿಷಯವಸ್ತುವನ್ನು ಆರಿಸುವಾಗ ಆರಿಸಿದ ವಿಷಯವಸ್ತು ಭಾಗವಹಿಸುವವರ ಅವಶ್ಯಕತೆಗಳನ್ನು ಪೂರೈಸುತ್ತವೆ? ಈ ವಿಷಯವಸ್ತುವಿನ ಮೇಲೆ ಚರ್ಚಿಸಲು, ಮೌಲ್ಯಮಾಪನ ಮಾಡಲು ಉಪಯುಕ್ತ ಮಾಹಿತಿಗಳನ್ನು ನೀಡಲು ಪರಿಣಿತರಿರುವರೇ? ಭಾಗವಹಿಸುವವರು ಅನುಸರಿಸಲು ಯೋಗ್ಯರೇ? ಭಾಗವಹಿಸುವವರ ಕಲಿಕಾ ಅನುಭವಗಳು ಅವರ ವೃತ್ತಿ ಬೆಳವಣಿಗೆಗೆ ಸಹಾಯಕವೇ? ಇತರ ಸಂದರ್ಭಗಳಲ್ಲಿ ಇಲ್ಲಿ ಪಡೆದ ಕಲಿಕಾ ಅನುಭವಗಳು ಉಪಯುಕ್ತವೇ? ಇತ್ಯಾದಿ ಅಂಶಗಳನ್ನು ಗಮನಿಸಿ ವಿಷಯವಸ್ತುವನ್ನು ಆರಿಸಬೇಕು.

**ಪ್ರಕ್ರಿಯೆ** : ಕಾರ್ಯಾಗಾರದ ಸಂದರ್ಭದಲ್ಲಿ ಪ್ರಕ್ರಿಯೆಯ ಸೂಕ್ಷ್ಮ ಚಾಲನೆ ಮಾಡುವಾಗ ಕಾರ್ಯಾಗಾರದಲ್ಲಿ ಮಂಡಿಸಿದ ಅಂಶಗಳು ಕಾರ್ಯಾಗಾರದ ಗುರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಂಡಿಸಲಾಗಿದೆಯೇ? ಮಂಡಿಸಿದ ವಿಷಯಕ್ಕೆ ಅನುಗುಣವಾಗಿ ಸಾಮಗ್ರಿ ತಯಾರಾಗುತ್ತಿದೆಯೇ? ಸೃಜನಶೀಲತೆಗೆ ಅವಕಾಶ ನೀಡಲಾಗಿದೆಯೇ? ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ಅವಶ್ಯಕ ವಸ್ತುಗಳನ್ನು ಪೂರೈಸಲಾಗುತ್ತಿದೆಯೇ? ಮಂಡಿಸಿದ ವಿಷಯಗಳು/ಅಂಶಗಳು ಭಾಗವಹಿಸುವವರಿಗೆ ಸರಿಯಾಗಿ ಅರ್ಥವಾಗಿದೆಯೇ? ಚರ್ಚೆ ಅಥವಾ ವಸ್ತುಗಳ ಉತ್ಪಾದನೆ ಉಪಯುಕ್ತ ರೀತಿಯಲ್ಲಿ ಸಾಗಿದೆಯೇ? ಅನ್ನುವ ಅಂಶಗಳನ್ನು ಗಮನಿಸಬೇಕು.

**ಮೌಲ್ಯಮಾಪನ** : ಕಾರ್ಯಾಗಾರದ ಆಯೋಜನೆ, ವ್ಯವಸ್ಥೆ, ವಿಷಯವಸ್ತು, ಪ್ರಕ್ರಿಯೆಗಳು, ಎಷ್ಟರಮಟ್ಟಿಗೆ ಸಮರ್ಪಕವಾಗಿ ನಡೆಯಿತು ಎನ್ನುವುದರ ಬಗ್ಗೆ ಕಾರ್ಯಾಗಾರದ ಮೌಲ್ಯಮಾಪನ ಮಾಡುವುದರಿಂದ ತಿಳಿದುಬರುತ್ತದೆ. ಈಗ ಆಗಿರುವಂತಹ ತಪ್ಪುಗಳು ಮುಂದಿನ ಕಾರ್ಯಾಗಾರದಲ್ಲಿ ಆಗದಂತೆ ತಡೆಯಲೂ ಈ ರೀತಿಯ ಮೌಲ್ಯಮಾಪನ ಸಹಾಯಕವಾಗುತ್ತದೆ. ಭಾಗವಹಿಸುವವರಿಗೆ ಯಾವ ಯಾವ ವಿಷಯಗಳ ಸಾಮಗ್ರಿ ತಯಾರಿಸಬೇಕಾಗಿತ್ತು? ಆ ಸಾಮಗ್ರಿ ಉಪಯುಕ್ತವಾಗುತ್ತದೆಯೇ? ಗರಿಷ್ಠ ಕಲಿಕ ಅನುಭವಗಳನ್ನು ಒದಗಿಸಿತ್ತೇ? ಇತ್ಯಾದಿ ಅಂಶಗಳ ಬಗ್ಗೆ ಕಾರ್ಯಾಗಾರದ ಕೆಲಸದ ಮೌಲ್ಯಮಾಪನ ಮಾಡಬೇಕು.

–ರ.ಭೀ.

## ಕಿಶೋರರ ಶಿಕ್ಷಣ

ವ್ಯಕ್ತಿಯು ಜೀವನದಲ್ಲಿ ತಾರುಣ್ಯಾವಸ್ಥೆಯು ಹಂತವು ಬಹುಮುಖ್ಯವಾದದ್ದು ಇದು ಬಾಲ್ಯವಸ್ಥೆ ಮತ್ತು ಯೌವ್ವನಾವಸ್ಥೆಯ, ನಡುವಿನ ಕಾಲ ಇದೊಂದು ಅಪೂರ್ವವಾದ ಕಾಲವಾಗಿದ್ದು 'ಬಾಲಕ ಗಂಡಾಗುವ'ಕಾಲ ಬಾಲಕಿ 'ಹೆಣ್ಣಾಗುವ'ಕಾಲ ಈ ಅವಧಿಯಲ್ಲಿನ ಅನುಭವಗಳು ವ್ಯಕ್ತಿಯ ಮುಂದಿನ ಜೀವನ ವಿಕಾಸದ ಮೇಲೆ ಪ್ರಭಾವ ಬೀರುತ್ತವೆ. ಈ ಅವಧಿಯಲ್ಲಿ ವ್ಯಕ್ತಿ ದೈಹಿಕವಾಗಿಯೂ ಮಾನಸಿಕವಾಗಿಯೂ ಪಕ್ವತೆಯನ್ನು ಹೊಂದುತ್ತಾನೆ ಈ ಹಂತದ ವಿಕಾಸವು ಹನ್ನೊಂದು ವರ್ಷದಿಂದ 17 ಮತ್ತು 21 ವರ್ಷದವರೆಗೂ ನಡೆಯುತ್ತದೆ.

ಅರ್ಥ : ತಾರುಣ್ಯವಸ್ಥೆ ಎಂಬ ಪದವನು ಆಂಗ್ಲಭಾಷೆಯ Adolescence ಎಂಬ ಪದಕ್ಕೆ ಸಮನಾಗಿ ಬಳಸುತ್ತೇವೆ. Adoloescence ಎಂಬ ಆಗ್ಲಪದವು Adolescere ಎಂಬ ಲ್ಯಾಟಿನ್ ಪದದಿಂದ ಉತ್ಪತ್ತಿಯಾಗಿದೆ ಇದರ ಅರ್ಥ ಪರಿಪಕ್ವತೆಯೆಡೆಗೆ ಸಾಗುವುದು. ಎಂದಾಗುತ್ತದೆ. ತಾರುಣ್ಯವಸ್ಥೆಯನ್ನು ಹದಿಹರೆಯ ಅಥವಾ ಕಿಶೋರಾವಸ್ಥೆ ಎಂಬ ಪದಗಳಿಂದಲೂ ಗುರ್ತಿಸುತ್ತಾರೆ.

ಎ.ಸಿ. ಜರ್ಸಿಲ್ಡ್‌ರವರ ಪ್ರಕಾರ "ಬೌದ್ಧಿಕವಾಗಿ ಸಂವೇಗಾತ್ಮಕವಾಗಿ ಸಾಮಾಜಿಕವಾಗಿ ಮತ್ತು ದೈಹಿಕವಾಗಿ ಬಾಲಕ ಬಾಲಕಿಯರು ಬಾಲ್ಯವಸ್ಥೆಯಿಂದ ಪ್ರೌಢಾವಸ್ಥೆಗೆ ಸಾಗುವ ಹಂತವೇ ತಾರುಣ್ಯವಸ್ಥೆ"

ಸ್ಟ್ಯಾನ್ಲಿಹಾಲ್‌ರವರ ಪ್ರಕಾರ "ತಾರುಣ್ಯವಸ್ಥೆಯ ಅತಿಯಾದ ಮಾನಸಿಕ ಒತ್ತಡ ಸಂಕ್ಷೋಂಬೆ ಮತ್ತು ಪ್ರಯಾಸಗಳ ಕಾಲವಾಗಿದೆ. ಈ ಅವಧಿ ಬಾಲ್ಯವಸ್ಥೆಯ ಪರಾವಲಂಬನೆಯಿಂದ ಪ್ರೌಢವಸ್ಥೆಯ ಸ್ವಾವಲಂಬನೆಯ ಕಡೆಗೆಸಾಗುವ ಹಂತವಾಗಿದೆ.

**ತಾರುಣ್ಯಾವಸ್ಥೆಯ ಅಧ್ಯಯನದ ಪ್ರಾಮುಖ್ಯ**

1. ಹದಿಹರೆಯದವರ ವಿಕಾಸಾತ್ಮಕ ಲಕ್ಷಣಗಳು ಮತ್ತು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು. ಶಿಕ್ಷಕರು ಮತ್ತು ಪೋಷಕರು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯನ್ನು ತಲುಪುವ ಮಧ್ಯದ ಈ ಸಂಕ್ರಮಣ ಕಾಲದಲ್ಲಾಗುವ ಬದಲಾವಣೆಗಳ ಸ್ವರೂಪವನ್ನು ಅರಿತಿರಬೇಕು. ಹದಿಹರೆಯದವರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದರೆ ಬೆಳವಣಿಗೆಯ ಲಕ್ಷಣಗಳೊಂದಿಗೆ ಉದಯಿಸುವ ವಿವಿಧ ಸಮಸ್ಯೆಗಳನ್ನು ಅವುಗಳ ಸ್ವರೂಪವನ್ನು ತಿಳಿದಿರಬೇಕು. ಇವರ ಸಮಸ್ಯೆಗಳಿಗೆ ಕಾರಣವಾಗುವ ಅಂಶಗಳ ಬಗ್ಗೆ ಅರಿವಿರಬೇಕು. ಆಗ ಮಾತ್ರ ಸೂಕ್ತ ಶೈಕ್ಷಣಿಕ, ವೃತ್ತಿ ಹಾಗೂ ವೈಯಕ್ತಿಕ ಮರ್ಗದರ್ಶನ ನೀಡುವ ಮೂಲಕ ಸಮಾಜದೊಡನೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಮಾಡಬಹುದಾಗಿದೆ.

2. ಮಾನಸಿಕ ಆರೋಗ್ಯದ ಸಂರಕ್ಷಣೆಗಾಗಿ ಯಾವುದೇ ಒಂದು ರಾಷ್ಟ್ರದ ಪ್ರಗತಿ ಆ ರಾಷ್ಟ್ರದಲ್ಲಿರುವ ಮಾನವ ಸಂಪನ್ಮೂಲಗಳ ಗರಿಷ್ಠ ಬಳಕೆ ಮತ್ತು ಸದುಪಯೋಗಗಳ ಮೇಲೆ ಅವಲಂಬಿಸಿದೆ. ವ್ಯಕ್ತಿಯ ಸಮತೋಲನ ವಿಕಾಸದ ಪ್ರಥಮ ಅವಶ್ಯಕ ಅಂಶವೇ ಉತ್ತಮ ಮಾನಸಿಕ ಆರೋಗ್ಯ ತಾರುಣ್ಯಾವಸ್ಥೆಯಲ್ಲಿ ವ್ಯಕ್ತಿಯ ಮಾನಸಿಕ ಆರೋಗ್ಯವನ್ನು ಕದಡುವಂತಹ ಹಲವಾರು ಸಮಸ್ಯೆಗಳು ಕಂಡು ಬರುತ್ತದೆ. ಹದಿಹರೆಯದವರಲ್ಲಿ ಮಾನಸಿಕ ಉದ್ವೇಗ, ಆಶಾಭಂಗಗಳು, ಮಾನಸಿಕ ಘರ್ಷಣೆಗಳು, ಮಾನಸಿಕ ಒತ್ತಡ ಮತ್ತು ಕೀಳರಿಮೆ ಮುಂತಾದವುಗಳು ಅವರನ್ನು ಅಪಸಮಾಯೋಚಿತರನ್ನಾಗಿಸುತ್ತವೆ. ತಾರುಣ್ಯವಸ್ಥೆಯ ಮನೋವಿಜ್ಞಾನದ ಜ್ಞಾನವು ಶಿಕ್ಷಕನಿಗೆ ಮಕ್ಕಳಲ್ಲಿ ಕಂಡುಬರುವಂತಹ ಅಪಸಮಾಯೋಜನೆಯನ್ನು ತಡೆಗಟ್ಟಲು ಮತ್ತು ಮಾನಸಿಕ ಸ್ವಾಸ್ಥತೆಯನ್ನು ಕಾಪಾಡಲು ನೆರವಾಗುತ್ತವೆ.

**ಜವಾಬ್ದಾರಿಗಳಿಗೆ ಹೊಂದಿಕೊಳ್ಳುವಂತೆ ಮಾಡಲು**

ತಾರುಣ್ಯ ಮನೋವಿಜ್ಞಾನದ ಜ್ಞಾನವು ತರುಣ ತರುಣಿಯರಿಗೆ ಅವರ ಅಗತ್ಯತೆಗಳು ಹಾಗೂ ವಿಕಾಸಾತ್ಮಕ ಕಾರ್ಯಗಳು ಜ್ಞಾನ ನೀಡಲು ಅವಶ್ಯಕವಾದುದಾಗಿದೆ. ಪೋಷಕರ ಮತ್ತು ಶಿಕ್ಷಕರು ಹದಿಹರೆಯದವರು ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಮಾಡಲು ಸಹಾಯ ಮಾಡಬೇಕು. ಹದಿಹರೆಯದವರ ಅಗತ್ಯತೆಗಳನ್ನು ಅರ್ಥ ಮಾಡಿಕೊಂಡು ಶಿಕ್ಷಕರು ಮತ್ತು ಆಡಳಿತಗಾರರು ಪಠ್ಯಕ್ರಮ ಶಾಲಾ ನೀತಿ ನಿಯಮಗಳು. ಬೋಧನಾ ವಿಧಾನಗಳು ಮತ್ತು ಸಹಪಠ್ಯ

Digitised by Bharatavani, CIIL

ಚಟುವಟಿಕೆಗಳನ್ನು ಯೋಜಿಸಬೇಕು ಶಾಲೆಯ ತನ್ನ ಕಾರ್ಯಕ್ರಮಗಳ ಮೂಲಕ ಪ್ರತಿಯೊಬ್ಬನೂ ತನ್ನ ಜವಾಬ್ದಾರಿಯನ್ನು ಅರಿತುಕೊಂಡು ಸಮರ್ಪಕವಾಗಿ ನಿರ್ವಹಿಸುವಂತೆ ಮಾರ್ಗದರ್ಶನ ನೀಡಬೇಕು.

ಕುತೂಹಲ ತಣಿಸಲು ತಾರುಣ್ಯ ವಸ್ಥೆಯಲ್ಲಿರುವ ಮಕ್ಕಳು ತಮ್ಮನ್ನು ತಾವು ಅರಿತುಕೊಳ್ಳಲು ಈ ಜ್ಞಾನ ಅತ್ಯವಶ್ಯಕ ಹದಿಹರೆಯದಲ್ಲಾಗುವ ಬದಲಾವಣೆಗಳನ್ನು ತಿಳಿದುಕೊಳ್ಳುವ ಕುತೂಹಲ ಪ್ರತಿಯೊಬ್ಬ ತರುಣ/ತರುಣಿಯಲ್ಲಿರುತ್ತದೆ. ತಾವು ಈ ಹಂತದಲ್ಲಿ ನಿರ್ವಹಿಸಬೇಕಾದ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ವಯಸ್ಕರ ಈ ಜ್ಞಾನವನ್ನು ಪಡೆಯುವ ಮೂಲಕ ತಮ್ಮ ಹದಿಹರೆಯದ ಮಕ್ಕಳ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಪರಿಹರಿಸಲು ಸೂಕ್ತ ಕ್ರಮಕೈಗೊಳ್ಳಲು ನೆರವಾಗುತ್ತವೆ. ಹಿರಿಯರು ತಮ್ಮ ಜೀವನದ ತಾರುಣ್ಯವಸ್ಥೆಯಲ್ಲಿ ಎದುರಿಸಿದ ಸಮಸ್ಯೆಗಳ ಒಳನೋಟ ಹರಿಸಿ ತಮ್ಮ ಮಕ್ಕಳನ್ನು ನಡೆಸಿಕೊಳ್ಳುವಲ್ಲಿ ಸಹಾಯ ಮಾಡುತ್ತವೆ.

**ಕಿಶೋರಾವಸ್ಥೆಯ ಬೆಳವಣಿಗೆಯ ಹಂತಗಳು.**

ಯೌವ್ವನಾವಸ್ಥೆಯಲ್ಲಿ ಶಾರೀರಿಕ ಗುಣಧರ್ಮಗಳು ಸ್ಫೋಟಗೊಂಡು ರಸಿಕ ಜೀವನ ಆರಂಭವಾಗುತ್ತದೆ ಬಾಲಕರು ಬಾಲಕಿಯರಲ್ಲಿ ನೂತನ ಆಸಕ್ತಿಗಳು ಹುಟ್ಟುತ್ತವೆ. ಪ್ರೇಮಾಂಕುರಗಳಿಂದ ವರ್ತಿಸುವುದಲ್ಲದೆ ಕಾಮುಕ ಭಾವನೆಗಳು ಸ್ಫೋಟಗೊಳ್ಳುತ್ತವೆ ಸಂವೇದನೆಗಳು ಬಹು ರಭಸದಿಂದ ತಳಮಳ ಗೊಳ್ಳುತ್ತವೆ ಆದುದರಿಂದ ತರುಣ ತರುಣಿಯರಿಗೆ ಲೈಂಗಿಕ ಶಿಕ್ಷಣ ಅವಶ್ಯಕ ವೆನಿಸುತ್ತದೆ.

**೧. ತಾರುಣ್ಯವಸ್ಥೆಯಲ್ಲಿನ ದೈಹಿಕ ಬೆಳವಣಿಗೆ**

ಇದ್ದಕ್ಕಿದ್ದಂತೆ ದೈಹಿಕ ಬದಲಾವಣೆಗಳು ಕಂಡುಬರುತ್ತವೆ ಇದು ಲೈಂಗಿಕವಾಗಿ ಪಕ್ವವಾಗುವಕಾಲ. ಹುಡುಗಿಯರು ಹುಡುಗರಿಗಿಂತ ತ್ವರಿತವಾಗಿ ಲೈಂಗಿಕವಾಗಿ ಪಕ್ವವಾಗುತ್ತಾರೆ.

**ತಾರುಣ್ಯದಲ್ಲಿ ದೈಹಿಕ ಬೆಳವಣಿಗೆಯ ವಿನ್ಯಾಸಗಳು.**

1. ಹುಡುಗಿಯರು 17, 18ನೇ ವರ್ಷದಲ್ಲಿ ಹುಡುಗರು 18,19ನೇ ವರ್ಷದಲ್ಲಿ ತಮ್ಮ ಎತ್ತರದ ಗರಿಷ್ಠ ಮಟ್ಟವನ್ನು ಮುಟ್ಟುತ್ತಾರೆ.
2. ಎತ್ತರಕ್ಕನುಗುಣವಾಗಿ ತೂಕಹೆಚ್ಚಾಗಿ ದೇಹ ವಯಸ್ಕ ಪ್ರಮಾಣವನ್ನು ಪಡೆಯುತ್ತದೆ.
3. ಜನನೇಂದ್ರಿಯಗಳು ವಯುಸ್ಸು ಪ್ರವಾಣವನ್ನು ಪಡೆದು ಅನುಷಂಗಿಕ ಲೈಂಗಿಕ ಲಕ್ಷಣಗಳು ಸ್ಫೋಟಗೊಳ್ಳುತ್ತವೆ.
4. ಹೃದಯ ತೀವ್ರವಾಗಿ ಬೆಳೆದು ರಕ್ತನಾಳಗಳು ಪಕವವಾಗುತ್ತದೆ.
5. ನಿರ್ನಾಳ ಗ್ರಂಥಗಳು ತೀವ್ರಗತಿಯಲ್ಲಿ ಕಾರ್ಯನಿರ್ವಹಿಸುತ್ತವೆ.

**ಮಾನಸಿಕ ವಿಕಾಸ**

ತಾರುಣ್ಯವಸ್ಥೆಯಲ್ಲಿ ಯುವಕರ ಮಾನಸಿಕ ವಿಕಾಸ ಹೆಚ್ಚು ಕಮ್ಮಿ ಪೂರ್ಣವಾಗಿರುತ್ತವೆ. ಅನೇಕ ಸಂಶೋಧನೆಗಳು 13 ರಿಂದ 21 ವರ್ಷ ವಯಸ್ಸಿನಲ್ಲಿ ವೈಯಕ್ತಿಕವಾದ ನಿರ್ದಿಷ್ಟ ವಯಸ್ಸಿನ ನಂತರ ಬುದ್ಧಿಶಕ್ತಿ ವಿಕಸಿಸುವದಿಲ್ಲ ಎಂಬುದನ್ನು ಸೂಚಿಸುತ್ತದೆ. ಭಾಷಾ, ವಿಕಾಸ, ವಾಕ್‌ವಿಕಾಸ, ಪರಿಕಲ್ಪನೆಗಳ ವಿಕಾಸ ಪರಿಪೂರ್ಣ ಗೊಳ್ಳುತ್ತವೆ ಆಲೋಚನೆ ತರ್ಕಮುಂತಾದ ಕ್ಲಿಷ್ಟಕಾರ್ಯಗಳನ್ನು ಕೈಗೊಳ್ಳುವರು ಪಿಯಾಜೆ ಇದನ್ನು ಔಪಚಾರಿಕ ಕಾರ್ಯಗಳ ಹಂತವೆಂದು ಕರೆದಿದ್ದಾರೆ. ತಂದೆ ತಾಯಿಯರ ಆರ್ಥಿಕ ಸಾಮಾಜಿಕ ಸ್ಥಾನಮಾನ ವಿದ್ಯಾಮಟ್ಟ, ಯುವಕರ ಮಾನಸಿಕ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತವೆ.

**ತಾರುಣ್ಯದಲ್ಲಿ ಸಾಮಾಜಿಕ ವಿಕಾಸ.**

ಮುಗ್ಧವ್ಯಕ್ತಿಯ ಸಾಮಾಜಿಕ ನಡೆವಳಿಕೆಗಳನ್ನು ರೂಢಿಸಬೇಕಾದ ಹಂತವಿದು ಸಾಂಘಿಕಜೀವನದಲ್ಲಿ ಹೆಚ್ಚು ಆಸಕ್ತಿಯನ್ನು ತೋರುತ್ತಾರೆ. ಗುಂಪುಗಳನ್ನು ರಚಿಸಿಕೊಳ್ಳುವುದರೊಂದಿಗೆ ಸಾಮಾಜಿಕ ಪ್ರಪಂಚವು ವಿಸ್ತಾರಗೊಳ್ಳುತ್ತದೆ. ಈ ಹೊಸ ವ್ಯವಸ್ಥೆಯಲ್ಲಿ ತರುಣನ ಬಾಲ್ಯಾವಸ್ಥೆಯಲ್ಲಿನ ಸಾಮಾಜಿಕ ಪ್ರಪಂಚಕ್ಕಿಂತ ಭಿನ್ನವಾದ ಕೆಲವು ಬದಲಾವಣೆಗಳನ್ನು ಕಾಣುತ್ತಾನೆ.

ಮಿತ್ರರನ್ನು ಆಯ್ಕೆಮಾಡುವ ವಿಶ್ವಾಸನೀಯತೆಯನ್ನು ಆಧಾರವಾಗಿಟ್ಟುಕೊಳ್ಳುವ ಕಾರಣ ಆತ್ಮೀಯ ಮಿತ್ರರ ಸಂಖ್ಯೆ ಕಡಿಮೆಯಾಗಿ ಪರಿಚಿತರ ಸಂಖ್ಯೆ ವೃದ್ಧಿಸುತ್ತದೆ. ಕ್ರಿಯಾಶೀಲತೆ, ಮುನ್ನುಗ್ಗುವ ಪ್ರವೃತ್ತಿ ಬರ್ಹಿಮುಖತ್ವ, ಸಹಕಾರ ಮನೋಭಾವ, ವ್ಯವಹಾರ ಕುಶಲತೆ ವಿಶ್ವಾಸನೀಯ ಉಡುಗೆ ತೊಡುಗೆಗಳಲ್ಲಿ ಆಧುನಿಕವಾಗಿರುವುದು.

ಕ್ರೀಡಾ ಮನೋಭಾವ, ಹಾಸ್ಯ ಪ್ರವೃತ್ತಿಗಳು ತಾರುಣ್ಯದಲ್ಲಿ ಜನಪ್ರಿಯತೆಯನ್ನು ಗಳಿಸಬಲ್ಲ ಗುಣಗಳಾಗಿರುತ್ತವೆ ತಾರುಣ್ಯವಸ್ಥೆಯಲ್ಲಿ ಅವರವರ ಅಭಿರುಚಿಗಳಿಗನುಗುಣವಾಗಿ ಗುಂಪುಗಳ ರಚನೆಗಳಾಗುತ್ತವೆ ಅವುಗಳಲ್ಲಿ ಕೆಲವು ಈ ರೀತಿ ಇದೆ.

1. ಆತ್ಮೀಯ ಮಿತ್ರರ ಗುಂಪು ಒಂದೇ ಲಿಂಗದ ಸಮಾನ ಆಸಕ್ತಿ ಮತ್ತು ಸಾಮರ್ಥ್ಯವುಳ್ಳ ಇಬ್ಬರು ಅಥವಾ ಮೂರು ಮಂದಿ
2. ಗೆಳೆಯರ ಬಳಗ : ಅನೇಕ ಆತ್ಮೀಯ ಮಿತ್ರರ ಗುಂಪುಗಳು ಸೇರಿ ಗೆಳೆಯರ ಬಳಗಗಳಾಗುತ್ತವೆ. ಸಾಮಾನ್ಯವಾಗಿ ಒಂದೇ ಲಿಂಗದವರು ಈ ಬಳಗದಲ್ಲಿ ಇರುತ್ತಾರೆ. ಇದು ಸಮಾನ ಆಸಕ್ತಿ, ಸಾಮರ್ಥ್ಯಗಳನ್ನು ಮೂಡಿಸುತ್ತವೆ.
3. ಮಿತ್ರವೃಂದ : ಅನೇಕ ಗೆಳೆಯರ ಬಳಗಗಳ ಸಂಘಟನೆ ಸಂತೋಷಕೂಟಗಳಲ್ಲಿ ಭಾಗವಹಿಸುವುದು ಸಾಮೂಹಿಕ ಚಟುವಟಿಕೆಗಳನ್ನು ನಿರ್ವಹಿಸುವುದು ಇಂಥ ಚಟುವಟಿಕೆಗಳಲ್ಲಿ ಮಗ್ನರಾಗಿರುತ್ತಾರೆ.
4. ಔಪಚಾರಿಕ ಸಂಘಗಳು : ಶಾಲೆ ಮತ್ತು ಸಮಾಜ ತರುಣ ತರುಣಿಯರಿಗೆ ಸ್ಥಾಪಿಸಿದ ಸಂಘಗಳು.
5. ಬೀದಿಯ ಕೂಟಗಳು : ವಿನಾಕಾರಣ ತಿರುಗಾಡುವುದು ಸಮಾಜ ಘಾತಕ ಕೃತ್ಯಗಳಲ್ಲಿ ತೊಡಗುವುದೋ ಇವರ ಗುರಿಯಾಗಬಹುದು.

ತಾರುಣ್ಯ ವಸ್ಥೆಯಲ್ಲಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ, ವೃತ್ತಿ ಹಾಗೂ ವೈಯಕ್ತಿಕ ಮಾರ್ಗದರ್ಶನ ನೀಡಲು ಶಾಲೆಗಳಲ್ಲಿ ಮಾರ್ಗದರ್ಶನ ಸೇವಾ ಕೇಂದ್ರಗಳನ್ನು ಸ್ಥಾಪಿಸಿಕೊಳ್ಳಬೇಕು. ತರುಣ ತರುಣಿಯರ ಸಾಮರ್ಥ್ಯಗಳು ಅವಶ್ಯಕತೆ ಮತ್ತು ಆಸಕ್ತಿಗಳನ್ನು ಗಮನಿಸಿ ಅವರಿಗೆ ಶೈಕ್ಷಣಿಕ ಹಾಗೂ ವೃತ್ತಿ ಮಾರ್ಗದರ್ಶನ ನೀಡಬೇಕು. ಈ ಹಂತದ ಮಕ್ಕಳ ಎದುರಿಸುವ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮಾರ್ಗದರ್ಶನ ಸೇವಾಕೇಂದ್ರದ ಸಲಹೆಗಾರರಿಂದ ಅಥವಾ ಅನುಭವಿ ಶಿಕ್ಷಕರಿಂದ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ಪಡೆಯಬಹುದು.

–ಎಸ್.ಎಸ್.ಹೂ.

Digitised by Bharatavani, CIIL

## ಕ್ರಿಯಾ ಸಂಶೋಧನೆ

ಸಂಶೋಧನೆಯೆಂದರೆ ಯೋಜನೆ ಮತ್ತು ಕ್ರಮಬದ್ಧವಾಗಿ ಒಂದು ಸಮಸ್ಯೆಗೆ ಸಂಬಂಧಿಸಿದಂತೆ ದತ್ತಾಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಪರಿಹಾರವನ್ನು ಕಂಡುಕೊಳ್ಳುವ ಒಂದು ಕ್ರಮ. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ವಿವಿಧ ದೃಷ್ಟಿಕೋನಗಳಿಂದ ವೀಕ್ಷಿಸಲಾಗುತ್ತದೆ. ನಮ್ಮ ಪರಿಸರದಲ್ಲಿನ ವಿವಿಧ ಘಟನಾವಳಿಗಳಿಗೆ ಇರುವ ಸಂಬಂಧವನ್ನು ಕಂಡುಹಿಡಿಯುವುದು ಸಂಶೋಧನೆಯ ಮುಖ್ಯ ಅಂಶ. ಸಂಶೋಧನೆಯು ಪ್ರಾಥಮಿಕ ಅಥವಾ ನೇರ ಮೂಲಗಳಿಂದ ಹೊಸ ಜ್ಞಾನ ಅಥವಾ ದತ್ತಾಂಶವನ್ನು ಸಂಗ್ರಹಿಸುತ್ತದೆ. ಇದು ಕ್ರಮಬದ್ಧವಾಗಿ ಮತ್ತು ನಿಖರವಾದ ವಿಧಾನ. ಸಂಶೋಧನೆಯು ತಾರ್ಕಿಕ ಮತ್ತು ವಸ್ತುನಿಷ್ಠವಾಗಿರುತ್ತದೆ. ಸಂಶೋಧಕನ ವೈಯಕ್ತಿಕ ಅಂಶಗಳು ಸಂಶೋಧನೆಯಲ್ಲಿ ಪ್ರಭಾವವನ್ನು ಬೀರುವುದಿಲ್ಲ. ಸಂಶೋಧನೆಯನ್ನು ಕ್ರಮಬದ್ಧವಾಗಿ ದಾಖಲಿಸಿ ವರದಿ ಮಾಡಲಾಗುತ್ತದೆ.

ಶೈಕ್ಷಣಿಕ ಸನ್ನಿವೇಶದಲ್ಲಿ ಮೂರು ರೀತಿಯ ಸಂಶೋಧನೆಗಳನ್ನು ಗುರುತಿಸಲಾಗುತ್ತದೆ. ಒಂದು ಮೂಲ ಸಂಶೋಧನೆ, ಎರಡು, ಅನ್ವಯಿಕ ಸಂಶೋಧನೆ ಮತ್ತು ಮೂರನೆಯದು, ಕ್ರಿಯಾಸಂಶೋಧನೆ. ಪ್ರಮುಖ ಸಮಸ್ಯೆಗಳಿಗೆ ಅಥವಾ ಮೂಲಭೂತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಮೂಲ ಸಂಶೋಧನೆ. ಇದು ದಿನನಿತ್ಯದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದಕ್ಕೆ ಹೆಚ್ಚಿನ ಒತ್ತನ್ನು ಕೊಡುವುದಿಲ್ಲ. ಇದು ವಿಶಾಲವಾದ ಸಾಮಾನ್ಯೀಕರಣಗಳು ಅಥವಾ ತತ್ವಗಳು ಮತ್ತು ಸಿದ್ಧಾಂತದ ರೂಪಗಳಲ್ಲಿ ನೀಡುತ್ತದೆ. ಮೂಲ ಸಂಶೋಧನೆಯು ಕೆಲವು ನೈಜಾಂಶಗಳು ಮತ್ತು ಸತ್ಯವನ್ನು ಸಂಶೋಧಿಸುವುದಕ್ಕೆ ಒತ್ತನ್ನು ಕೊಡುತ್ತದೆಯೇ ಹೊರತು ನೇರ ಕ್ಷೇತ್ರಾನುಭವದಿಂದ ಉದ್ಭವಿಸುವ ತತ್‌ಕ್ಷಣದ ಸಮಸ್ಯೆಗಳಿಗಲ್ಲ. ಇದನ್ನು ಸಾಮಾನ್ಯವಾಗಿ ಉತ್ತಮ ಪರಿಕರಗಳನ್ನು ಹೊಂದಿರುವ ಪ್ರಯೋಗಾಲಯಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಕೈಗೊಳ್ಳಲಾಗುತ್ತದೆ.

ಶಿಕ್ಷಣ ಕ್ಷೇತ್ರದಲ್ಲಿ, ಅಭಿಪ್ರೇರಣೆ, ಪುನರ್ಬಲನ, ಕಲಿವಿನಲ್ಲಿ ಪರಿಕಲ್ಪನೆಗಳ ಮೂಡಿಸುವುವಿಕೆ ಮುಂತಾದ ಅಂಶಗಳನ್ನು ಕಂಡುಕೊಳ್ಳುವುದಕ್ಕೆ ಮೂಲ ಸಂಶೋಧನೆಯು ಒತ್ತು ಕೊಡುತ್ತದೆ. ಬೆಳವಣಿಗೆಯ ಹಂತಗಳು, ಅನುವಂಶೀಯತೆ ಮತ್ತು ಪರಿಸರಗಳ ಪ್ರಭಾವ, ಶಿಕ್ಷಣದ ಗುರಿಗಳು, ಕಲಿವಿನಲ್ಲಿ ಚಟುವಟಿಕೆಗಳ ಪಾತ್ರ ಇತ್ಯಾದಿ ವಿಷಯಗಳು ಮೂಲ ಸಂಶೋಧನೆಯ ವ್ಯಾಪ್ತಿಗೆ ಒಳಪಡುತ್ತವೆ. ಮೂಲ ಸಂಶೋಧನೆಯು ಉನ್ನತ ಸಮಸ್ಯೆಗಳು, ಪ್ರಕ್ರಿಯೆಗಳು, ಪರಿಕರಗಳು, ವಿಶ್ಲೇಷಣೆ ಇತ್ಯಾದಿಗಳನ್ನು ಬಯಸುತ್ತದೆ. ಮೂಲ ಸಂಶೋಧನೆಯನ್ನು ಕೈಗೊಳ್ಳಲು ಹೆಚ್ಚಿನ ಪರಿಣತಿಯ ಅಗತ್ಯತೆ ಇದೆ.

ಮೂಲ ಸಂಶೋಧನೆಗೆ ಕೆಲವು ಸಾಮಾನ್ಯ ಲಕ್ಷಣಗಳಿವೆ. ಇಲ್ಲಿ ಪ್ರಾಥಮಿಕ ಮೂಲದಿಂದ ಹೊಸ ಜ್ಞಾನ ಪಡೆಯುವುದನ್ನು ಗಮನದಲ್ಲಿಡಲಾಗುತ್ತದೆ. ಸಾಮಾನ್ಯ ತತ್ವಗಳು ಮತ್ತು ನಿಯಮಗಳನ್ನು ಕಂಡುಕೊಳ್ಳಲು ಇಲ್ಲಿ ಹೆಚ್ಚಿನ ಒತ್ತನ್ನು ನೀಡಲಾಗುತ್ತದೆ. ಇದು ಅತ್ಯಂತ ಕ್ರಮಬದ್ಧವೂ ನಿಖರವೂ ಆದುದು. ಇದು ತಾರ್ಕಿಕ ಮತ್ತು ವಸ್ತುನಿಷ್ಠವಾದದ್ದು. ಸಂಶೋಧಕನ ವೈಯುಕ್ತಿಕ ಅಂಶಗಳು ಇಲ್ಲಿ ಯಾವುದೇ ಪ್ರಭಾವವನ್ನು ಬೀರುವುದಿಲ್ಲ. ಕೆಲವು ವೈಜ್ಞಾನಿಕ ಕ್ರಮಗಳನ್ನು ನಿರ್ದಿಷ್ಟವಾಗಿ ಅನುಸರಿಸುವುದರ ಮೂಲಕ ಇಲ್ಲಿ ನಿರ್ಧಾರಗಳು/ಅಂತಿಮ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ.

ಅನ್ವಯಿಕ ಸಂಶೋಧನೆಯಲ್ಲಿ ಮೂಲಭೂತ ಸಂಶೋಧನೆಯಿಂದ ರೂಪಿತವಾದ ಮೂಲಭೂತ ತತ್ವಗಳನ್ನು ನಿಯಮಗಳ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಅನ್ವಯಿಸಿ ಅಥವಾ ಉಪಯೋಗಿಸಿ ಅವುಗಳ ಉಪಯುಕ್ತತೆಯನ್ನು ಮತ್ತು ಅನ್ವಯಿಕತೆಯನ್ನು ಪರೀಕ್ಷಿಸಲಾಗುತ್ತದೆ.

ಕ್ರಿಯಾ ಸಂಶೋಧನೆ ಈ ಎರಡೂ ರೀತಿಯ ಸಂಶೋಧನೆಗಳಿಗಿಂತ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಹೆಚ್ಚು ಹತ್ತಿರವಾದುದು. ವ್ಯಕ್ತಿಗಳು ತಮ್ಮ ಕಾರ್ಯ ಕ್ಷೇತ್ರಗಳಲ್ಲಿ, ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬಳಸುವ ಒಂದು ಸಂಶೋಧನಾ ಪ್ರಕ್ರಿಯೆಯೇ ಕ್ರಿಯಾ ಸಂಶೋಧನೆ, ಕಾರ್ಯ ಕ್ಷೇತ್ರದಲ್ಲಿನ ಮಾರ್ಗೋಪಾಯಗಳನ್ನು ಉತ್ತಮ ಪಡಿಸಿಕೊಳ್ಳಲು, ವೃತ್ತಿಪರ ಸಂಶೋಧಕರ ಮಾರ್ಗದರ್ಶನದಲ್ಲಿ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳಲಾಗುತ್ತದೆ. ಕರ್ಟ್ ಲೆವಿನ್ (Kurt Lewin) ಎಂಬ ಅಮೇರಿಕಾದ ಸಾಮಾಜಿಕ ಮನೋವಿಜ್ಞಾನಿ ಮತ್ತು ಶಿಕ್ಷಣ ತಜ್ಞರು ಮೊದಲ ಬಾರಿಗೆ ಕ್ರಿಯಾ ಸಂಶೋಧನೆ ಎಂಬ ಪದವನ್ನು ಬಳಸಿದ್ದಾರೆ. (McFarland & Stansell, 1993). "ತಮ್ಮ ಸಾಮಾಜಿಕ. ಅಥವಾ ಶೈಕ್ಷಣಿಕ ಅಭ್ಯಾಸಗಳನ್ನು ತಕ್ಷಣದ ಸಂದರ್ಭಗಳಲ್ಲಿ ಉತ್ತಮ ಪಡಿಸಿಕೊಳ್ಳಲು ನಿರ್ವಹಣಾಕಾರರು ಕೈಗೊಳ್ಳುವ ಸಮಯೋಚಿತ, ಸ್ವ-ಬಿಂಬಕ ವೈಜ್ಞಾನಿಕ ಅನ್ವೇಷಣೆಯೇ ಕ್ರಿಯಾ ಸಂಶೋಧನೆ." ಸ್ಟೀಫನ್ ಎಂ. ಕೋರಿ (Stephen M. Corey)ಯವರು ಶಿಕ್ಷಣ ಕ್ಷೇತ್ರದಲ್ಲಿ ಕ್ರಿಯಾ ಸಂಶೋಧನೆ ಎಂಬ ಪದವನ್ನು ಬಳಸಿದವರಲ್ಲಿ ಮೊದಲಿಗರಾಗಿದ್ದಾರೆ. ಅವರ ಪ್ರಕಾರ "ತಮ್ಮ ನಿರ್ಧಾರ ಮತ್ತು ಕ್ರಿಯೆಗಳನ್ನು ನಿರ್ದೇಶಿಸಲು, ಸರಿಪಡಿಸಿಕೊಳ್ಳಲು ಮತ್ತು ಮೌಲ್ಯಮಾಪನ ಮಾಡಿಕೊಳ್ಳಲು, ನಿರ್ವಹಣಾಕಾರರು ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಅಭ್ಯಾಸಿಸುವ ಪ್ರಕ್ರಿಯೆಯೇ ಕ್ರಿಯಾಸಂಶೋಧನೆ." ಮೆಕ್ ಥ್ರೆಟೆ (Mc Threte)ರವರ ಪ್ರಕಾರ "ಒಂದು ನಿರ್ದಿಷ್ಟವಾದ ಪರಿಸರ ಅಥವಾ ಸನ್ನಿವೇಶದಲ್ಲಿ ರಚನಾತ್ಮಕವಾಗಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಆಯೋಜಿಸಿದ. ಶೋಧನಾತ್ಮಕವಾದ ಚಟುವಟಿಕೆಯೇ ಕ್ರಿಯಾ ಸಂಶೋಧನೆ". ಗುಡ್ (Good)ರವರ ಪ್ರಕಾರ "ತಮ್ಮ ನಿರ್ಧಾರಗಳು ಮತ್ತು ಕ್ರಿಯೆಯ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಶಿಕ್ಷಕರು, ಮೇಲ್ವಿಚಾರಕರು ಮತ್ತು ಆಡಳಿತಗಾರರು ಬಳಸುವ ಕ್ರಿಯೆಯೇ ಕ್ರಿಯಾ ಸಂಶೋಧನೆ". ಜಾನ್ ಡಬ್ಲ್ಯೂ ಬೆಸ್ಟ್ (John W. Best)ರವರ ಪ್ರಕಾರ "ಕ್ರಿಯಾ ಸಂಶೋಧನೆಯ ಉದ್ದೇಶ ತತ್ ಕ್ಷಣದ ಅನ್ವಯವೇ ಹೊರತು ಸಿದ್ಧಾಂತದ ಬೆಳವಣಿಗೆಯಲ್ಲ. ಇದು ಪ್ರಸ್ತುತದಲ್ಲಿನ ಸಮಸ್ಯೆಯನ್ನು ಆಗಲೇ ಅದೇ ಸನ್ನಿವೇಶದಲ್ಲಿ ಪರಿಹರಿಸುವುದಕ್ಕೆ ಒತ್ತು ಕೊಡುತ್ತದೆ."

**ಕ್ರಿಯಾ ಸಂಶೋಧನೆ** ಶಿಕ್ಷಣದ ಪ್ರಾಯೋಗಿಕ ಸಮಸ್ಯೆಗಳನ್ನು ಅಭ್ಯಾಸಿಸುವ ಒಂದು ಪ್ರಕ್ರಿಯೆ. ಜೊತೆಗೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಒಂದು ವೈಜ್ಞಾನಿಕ ವಿಧಾನ. ಇದು ವೈಯಕ್ತಿಕವಾಗಿ ಕೈಗೊಳ್ಳುವ ಕಾರ್ಯ. ಪ್ರಸ್ತುತದ ಸಮಸ್ಯೆಗಳನ್ನು ಉತ್ತಮಪಡಿಸಿಕೊಳ್ಳುವುದು ಮತ್ತು ಮಾರ್ಪಾಡುಗಳನ್ನು ಮಾಡಿಕೊಳ್ಳುವುದು ಕ್ರಿಯಾ ಸಂಶೋಧನೆಯ ಮುಖ್ಯ ಅಂಶ. ಆದರೆ ಇದು ವ್ಯಕ್ತಿ ತನ್ನ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಕೈಗೊಳ್ಳುವ ಕಾರ್ಯವಲ್ಲ.

ಸಂಶೋಧನೆಯನ್ನು ಸಾಮಾನ್ಯವಾಗಿ ಉನ್ನತ ವಿದ್ಯಾರ್ಹತೆ ಮತ್ತು ತರಬೇತಿ ಪಡೆದ ವ್ಯಕ್ತಿಗಳು ಮಾತ್ರ ಕೈಗೊಳ್ಳುವ ಕ್ರಿಯೆಯೆಂದು ಭಾವಿಸಲಾಗುತ್ತದೆ. ಆದರೆ ಕ್ರಿಯಾ ಸಂಶೋಧನೆಯು ಯಾವುದೇ ಶಿಕ್ಷಕರು ಮತ್ತು ಆಡಳಿತಗಾರರು ಕೈಗೊಳ್ಳುವ ಸಂಶೋಧನೆ. ಸಮಸ್ಯೆಯನ್ನು ಅನುಭವಿಸುವ ಸ್ವಾಭಾವಿಕವಾದ ಸನ್ನಿವೇಶಗಳಲ್ಲಿಯೇ ಕ್ರಮಬದ್ಧವಾದ ಅಧ್ಯಯನ ಕೈಗೊಳ್ಳುವುದನ್ನು ಕ್ರಿಯಾ ಸಂಶೋಧನೆಯು ಒಳಗೊಳ್ಳುತ್ತದೆ. ಹೆಚ್ಚಿನ ಹಣಕಾಸಿನ ವೆಚ್ಚವಿಲ್ಲದೆ, ಬೋಧನಾ-ಕಲಿಕಾ ಪ್ರಕ್ರಿಯೆಯ ಗುಣಮಟ್ಟವನ್ನು ಕ್ರಿಯಾ ಸಂಶೋಧನೆಯು ಉತ್ತಮಪಡಿಸುತ್ತದೆ. ದಿನ

Digitised by Bharatavani, CIIL

ನಿತ್ಯದ ತರಗತಿ ಸಮಸ್ಯೆ ಮತ್ತು ಆಡಳಿತಾತ್ಮಕ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರವನ್ನು ಒದಗಿಸುತ್ತದೆ. ಕ್ರಿಯಾ ಸಂಶೋಧನೆಯು ಶಿಕ್ಷಕರು, ಮೇಲ್ವಿಚಾರಕರು, ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಒಳಗೊಂಡ ಒಂದು ಸಾಮೂಹಿಕ ಕ್ರಿಯೆ. ಶೈಕ್ಷಣಿಕ ಅಭ್ಯಾಸಗಳನ್ನು ಉತ್ತಮ ಪಡಿಸಲು ಈ ರೀತಿಯ ಸಂಶೋಧನೆಯಲ್ಲಿ ಶಿಕ್ಷಣ ರಂಗದ ಹಲವಾರು ವ್ಯಕ್ತಿಗಳು ಒಟ್ಟಾಗಿ ಕೈಜೋಡಿಸುತ್ತಾರೆ. ಇದು ಶಿಕ್ಷಕರಿಗೆ ಪ್ರಗತಿದಾಯಕ ಒಳನೋಟವನ್ನು ಒದಗಿಸುತ್ತದೆ ಮತ್ತು ಶಾಲಾ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸ್ವಾತಂತ್ರ್ಯವನ್ನು ನೀಡುತ್ತದೆ. ವೃತ್ತಿಪರ ಬೆಳವಣಿಗೆಗೆ, ವಿಶೇಷವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಣೆಗೆ ಕ್ರಿಯಾ ಸಂಶೋಧನೆಯು ಪ್ರೋತ್ಸಾಹವನ್ನು ನೀಡುತ್ತದೆ.

ಸಿದ್ಧಾಂತಗಳನ್ನು ಪರೀಕ್ಷಿಸಿ, ಸಾರ್ವತ್ರಿಕವಾಗಿ ಬಳಸಲ್ಪಡುಬಹುದಾದ ತತ್ವಗಳನ್ನು ಕಂಡುಕೊಳ್ಳುವುದು ಮೂಲ ಸಂಶೋಧನೆಯ ಮುಖ್ಯ ಉದ್ದೇಶವಾದರೆ, ಶಾಲೆ ಮತ್ತು ತರಗತಿಯ ಪ್ರಕ್ರಿಯೆಗಳನ್ನು ಉತ್ತಮಪಡಿಸುವಲ್ಲಿ ಉದ್ಭವವಾಗುವ ಸಮಸ್ಯೆಗಳನ್ನು ತತ್ ಕ್ಷಣದಲ್ಲಿ ಪರಿಹರಿಸಿಕೊಳ್ಳುವುದು ಕ್ರಿಯಾ ಸಂಶೋಧನೆಯ ಮುಖ್ಯ ಉದ್ದೇಶವಾಗಿರುತ್ತದೆ. ಮೂಲ ಸಂಶೋಧನೆಯಲ್ಲಿ ಸಂಶೋಧನಾ ವಿಧಾನ ಅಳತೆ ಮತ್ತು ಮಾಹಿತಿ ಸಂಗ್ರಹಣೆಯಲ್ಲಿ ಪರಿಣತ ತರಬೇತಿಯ ಅವಶ್ಯಕತೆಯಿದೆ. ಸಂಶೋಧನೆಯ ಸಮಸ್ಯೆಯನ್ನು ಗುರುತಿಸಲು ವಿಶಾಲ ವ್ಯಾಪ್ತಿಯ ವಿಧಾನಗಳು ಮತ್ತು ಪ್ರಕ್ರಿಯೆಗಳು ಬೇಕಾಗುತ್ತವೆ. ಆದರೆ ಕ್ರಿಯಾ ಸಂಶೋಧನೆಯನ್ನು ಸಾಮಾನ್ಯ ಶಿಕ್ಷಕರೂ ಒಬ್ಬರ ಮಾರ್ಗದರ್ಶನದಲ್ಲಿ ಕೈಗೊಳ್ಳಬಹುದಾಗಿದ್ದು, ಪರಿಣತ ತರಬೇತಿಯ ಅವಶ್ಯಕತೆಯಿರುವುದಿಲ್ಲ. ತರಗತಿ ಪ್ರಕ್ರಿಯೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಶಿಕ್ಷಕರುಗಳೇ ಸುಲಭವಾಗಿ ಗುರುತಿಸಬಹುದು. ಮೂಲ ಸಂಶೋಧನೆಯಲ್ಲಿ ಸಂಶೋಧನೆಗೆ ಒಳಪಡಿಸಬೇಕಾದ ಸಮಸ್ಯೆಯನ್ನು ಸಂಶೋಧಕನೇ ವೈಯಕ್ತಿಕವಾಗಿ ಗುರುತಿಸಬೇಕೆಂದೇನಿಲ್ಲ. ಇಲ್ಲಿ ಅತ್ಯಂತ ನಿರ್ದಿಷ್ಟ ಮತ್ತು ಸ್ಪಷ್ಟವಾಗಿ ನಿರೂಪಿಸಲ್ಪಟ್ಟ ಪ್ರಾಕ್ ಕಲ್ಪನೆಗಳನ್ನೇ ಅಳವಡಿಸಿಕೊಳ್ಳಲಾಗಿದೆ. ಸಮಸ್ಯಾ ಪರಿಹಾರಕ್ಕೆ ಲಭ್ಯವಿರುವ ಎಲ್ಲಾ ಮಾಹಿತಿಯನ್ನು ವಿಶದವಾಗಿ ಅಭ್ಯಾಸಿಸುವುದರ ಮೂಲಕ ಸಮಸ್ಯೆಯನ್ನು ಅರ್ಥೈಸಿಕೊಳ್ಳಲಾಗುತ್ತದೆ. ಅದರೆ ಕ್ರಿಯಾ ಸಂಶೋಧನೆಯಲ್ಲಿ ಸಂಶೋಧನೆಗೆ ಒಳಪಡಿಸಬೇಕಾದ ಸಮಸ್ಯೆಯನ್ನು ಸಂಶೋಧಕನೇ ವೈಯಕ್ತಿಕವಾಗಿ ಗುರುತಿಸಬೇಕಾಗುತ್ತದೆ. ಇಲ್ಲಿ ನಿರ್ದಿಷ್ಟವಾಗಿ ಸಮಸ್ಯೆಯನ್ನು ರೂಪಿಸಿದ ಹೇಳಿಕೆಯೇ ಪ್ರಾಕ್ ಕಲ್ಪನೆಯಾಗುತ್ತದೆ. ಸಮಸ್ಯಾ ಕ್ಷೇತ್ರವನ್ನು ಸಾಮಾನ್ಯವಾಗಿ ಅರ್ಥ ಮಾಡಿಕೊಳ್ಳುವುದರ ಮೂಲಕ ಸಮಸ್ಯೆಯನ್ನು ತಿಳಿದುಕೊಳ್ಳಲಾಗುತ್ತದೆ. ಮೂಲ ಸಂಶೋಧನೆಯಲ್ಲಿ ಪೂರ್ವಾಗ್ರಹ ಪೀಡಿತವಲ್ಲದ ಯಾದೃಚ್ಛಿಕ ಸಮಷ್ಟಿಯನ್ನು ಸಂಶೋಧನೆಗಾಗಿ ಆಯ್ಕೆಮಾಡಿಕೊಳ್ಳಬೇಕಾಗುತ್ತದೆ. ಹಾಗೂ ಸಂಶೋಧನಾ ವಿನ್ಯಾಸವು ನಿರ್ದಿಷ್ಟವಾಗಿದ್ದು ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ. ಸಂಶೋಧಕನಿಗೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಜ್ಞಾನಗಳೆರಡೂ ಅಗತ್ಯ. ಕ್ರಿಯಾ ಸಂಶೋಧನೆಯಲ್ಲಿ ಶಿಕ್ಷಕರು ತಮ್ಮ ಬೋಧನಾ ತರಗತಿಯ ವಿದ್ಯಾರ್ಥಿಗಳನ್ನಷ್ಟೆ ಸಂಶೋಧನಾ ಉದ್ದೇಶಕ್ಕಾಗಿ ಬಳಸಿಕೊಳ್ಳಬೇಕಾಗುತ್ತದೆ. ಸಂಶೋಧನಾ ವಿನ್ಯಾಸವು ಬದಲಾವಣೆಗೊಳಪಟ್ಟಿದ್ದು. ಸಂಶೋಧಕನ ಅಗತ್ಯತೆಗನುಗುಣವಾಗಿ ಬದಲಾಯಿಸಿಕೊಳ್ಳಬಹುದಾಗಿದೆ. ಮೂಲ ಸಂಶೋಧನೆಯಲ್ಲಿ ದತ್ತಾಂಶಗಳ ಸಂಗ್ರಹಣೆಗೆ ಪ್ರಮಾಣಬದ್ಧವಾದ ಪರೀಕ್ಷಣಗಳನ್ನೇ ಬಳಸಿಕೊಳ್ಳಲಾಗುತ್ತದೆ. ಈ ಪರೀಕ್ಷಣಗಳು ಹೆಚ್ಚಿನ ಸಮಂಜಸತೆ ಮತ್ತು ವಿಶ್ವಾಸನೀಯತೆಯನ್ನು ಹೊಂದಿರಬೇಕಾಗುತ್ತದೆ. ದತ್ತಾಂಶಗಳ ವಿಶ್ಲೇಷಣೆಯು ಸಂಕೀರ್ಣ ವಿಧಾನಗಳನ್ನು ಬಳಸಿಕೊಳ್ಳುತ್ತದೆ. ಕ್ರಿಯಾ ಸಂಶೋಧನೆಯಲ್ಲಿ ವೀಕ್ಷಣೆ ಮತ್ತು ಶಿಕ್ಷಕ ನಿರ್ಮಿತ ಪರೀಕ್ಷೆಗಳನ್ನೇ ದತ್ತಾಂಶಗಳ ಸಂಗ್ರಹಣೆಗಾಗಿ ಬಳಸಿಕೊಳ್ಳಲಾಗುತ್ತದೆ. ಲಭ್ಯವಿದ್ದಲ್ಲಿ ಮಾತ್ರ ಪ್ರಮಾಣಬದ್ಧ ಪರೀಕ್ಷಣಗಳನ್ನು ಬಳಸಿಕೊಳ್ಳಬಹುದು. ದತ್ತಾಂಶಗಳ ವಿಶ್ಲೇಷಣೆಯ ಸರಳ ವಿಧಾನಗಳನ್ನು ಬಳಸಿಕೊಳ್ಳುತ್ತದೆ. ಮೂಲ ಸಂಶೋಧನೆಯಲ್ಲಿ ಸಮಸ್ಯಾ ಪರಿಹಾರ ಕ್ರಮಗಳು ಸಾಮಾನ್ಯೀಕರಣಗಳಾಗಿರುತ್ತವೆ. ಈ ನಿರ್ಧಾರಗಳು ಜ್ಞಾನವನ್ನು ಹೆಚ್ಚಿಸುತ್ತವೆ. ಇಲ್ಲಿ ಅನ್ವಯ ಕ್ಷೇತ್ರದ ವ್ಯಾಪ್ತಿ ನಿರ್ದಿಷ್ಟ ಸಮಸ್ಯಾ ಕ್ಷೇತ್ರಕ್ಕಷ್ಟೇ ಸೀಮಿತವಾಗಿರುತ್ತದೆ. ಕ್ರಿಯಾ ಸಂಶೋಧನೆಯು ಬಳಕೆಯಲ್ಲಿರುವ ಅಭ್ಯಾಸಗಳನ್ನು ಉತ್ತಮಪಡಿಸಿಕೊಳ್ಳಲು ಪರಿಹಾರಾತ್ಮಕ ಕ್ರಮಗಳನ್ನು ಸೂಚಿಸುತ್ತದೆ. ಈ ನಿರ್ಧಾರಗಳು ಕೇವಲ ಜ್ಞಾನವನ್ನು ಹೆಚ್ಚಿಸುವುದಿಲ್ಲ ಅಲ್ಲದೆ ಇದರ ಅನ್ವಯ ಕ್ಷೇತ್ರದ ವ್ಯಾಪ್ತಿ ವಿಶಾಲವಾಗಿರುತ್ತದೆ.

ಕ್ರಿಯಾ ಸಂಶೋಧನೆಯು ತಮ್ಮ ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವುದಷ್ಟೇ ಅಲ್ಲ. ಒಬ್ಬರ ಸಮಸ್ಯೆಗೆ ಮತ್ತೊಬ್ಬರು ಪರಿಹಾರವನ್ನು ಕಂಡುಹಿಡಿಯುವುದಲ್ಲ. ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರುವ ಪ್ರಾಕ್ಕಲ್ಪನೆ ಅಥವಾ ಶೈಕ್ಷಣಿಕ ಸಿದ್ಧಾಂತವೊಂದನ್ನು ಒರೆಗೆ ಹಚ್ಚುವ ಪ್ರಯತ್ನವಲ್ಲ. ಕಾರ್ಯ ಕ್ಷೇತ್ರದ ಹೊರತಾಗಿ, ಕಾರ್ಯನಿರ್ವಹಣೆ ಮಾಡದ ವ್ಯಕ್ತಿಯೊಬ್ಬರಿಂದ ಕೈಗೊಳ್ಳುವ ಸಂಶೋಧನೆಯಲ್ಲ ಕಾರ್ಯ ನಿರ್ವಹಣಾ ಕ್ಷೇತ್ರದಲ್ಲಿ–ತಕ್ಷಣ ಅನ್ವಯಿಸಿಕೊಳ್ಳಲು ಸಾಧ್ಯವಾಗದ ಉನ್ನತವಾದ ಶೈಕ್ಷಣಿಕ ಚಟುವಟಿಕೆಯಲ್ಲ. ಗ್ರಂಥಾಲಯದಲ್ಲಿ ಅಧಯನ ವಿಷಯದ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವ ಒಂದು ಯೋಜನೆಯಲ್ಲ. ಕ್ರಿಯಾ ಸಂಶೋಧನೆಯು ತಪ್ಪುಗಳನ್ನು ಕಂಡುಹಿಡಿದು ಸರಿಪಡಿಸಿಕೊಳ್ಳುವ ಕ್ರಿಯೆಯಲ್ಲ. ಬದಲಾಗಿ ಒಂದು ವ್ಯವಸ್ಥೆಯನ್ನು ಉತ್ತಮಪಡಿಸಲು ಕೈಗೊಳ್ಳುವ ಯೋಜನೆ.

**ಕ್ರಿಯಾ ಸಂಶೋಧನೆಯ ವಿಧಾನ ಮತ್ತು ಕ್ರಮವು ಈ ಹಂತಗಳನ್ನು ಒಳಗೊಳ್ಳುತ್ತದೆ.**

1. ಸಮಸ್ಯೆಯನ್ನು ಗುರುತಿಸುವುದು. 2. ಸಮಸ್ಯೆಯನ್ನು ಸ್ಪಷ್ಟಪಡಿಸುವುದು ಮತ್ತು ನಿರೂಪಿಸುವುದು. 3. ಸಂಭವನೀಯ ಕಾರಣಗಳನ್ನು ವಿಶ್ಲೇಷಿಸುವುದು. 4 ಕ್ರಿಯಾ ಪ್ರಾಕ್ಕಲ್ಪನೆಗಳನ್ನು ರೂಪಿಸುವುದು. 5. ಪ್ರಾಕಲ್ಪನೆಗಳನ್ನು ಪರೀಕ್ಷಿಸಲು ಕ್ರಿಯಾ ಯೋಜನೆಯನ್ನು ತಯಾರಿಸುವುದು. 6 ಅಂಕಿ ಅಂಶಗಳ ವಿಶ್ಲೇಷಣೆ 7. ಕ್ರಿಯಾ ಸಂಶೋಧನೆಯ ಆಧಾರದ ಮೇಲೆ ಅಂತಿಮ ತೀರ್ಮಾನ ಮತ್ತು 8. ವರದಿ ತಯಾರಿಸುವುದು.

1. **ಸಮಸ್ಯೆಯನ್ನು ಗುರುತಿಸುವುದು:** ತಾನು ನಿರ್ವಹಿಸುತ್ತಿರುವ ಕಾರ್ಯ ಕ್ಷೇತ್ರದಲ್ಲಿ ಎದುರಾಗುತ್ತಿರುವ ಸಮಸ್ಯೆಯನ್ನು ಈ ಹಂತದಲ್ಲಿ ಗುರುತಿಸಲಾಗುತ್ತದೆ. ಈ ಸಮಸ್ಯೆಯು ಅನುಭವ ವೇದ್ಯವಾಗಿದ್ದು ಅದಕ್ಕೆ ಪರಿಹಾರದ ಅವಶ್ಯಕತೆಯಿರಬೇಕು. ಸಮಸ್ಯೆಯ ಪ್ರಯೋಗಾರ್ಹತೆ ಮತ್ತು ಸಮಂಜಸತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಗುರುತಿಸಿದ ಸಮಸ್ಯೆಯ ಕ್ಷೇತ್ರವನ್ನು ಸ್ಪಷ್ಟಪಡಿಸಿಕೊಳ್ಳಬೆಕು. ಸಮಸ್ಯೆಯು ಸುಲಭ ಹಾಗೂ ವೇದ್ಯವಾದ ವಿಧಾನಗಳಿಂದ ಪರಿಹರಿಸಲು ಸಾಧ್ಯವಾಗದಿದ್ದಾಗ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳಬೇಕಾಗುತ್ತದೆ.

2. **ಸಮಸ್ಯೆಯನ್ನು ಸ್ಪಷ್ಟಪಡಿಸುವುದು ಮತ್ತು ನಿರೂಪಿಸುವುದು:** ಒಮ್ಮೆ ಸಮಸ್ಯೆಯನ್ನು ಗುರುತಿಸಿದ ನಂತರ ಅದನ್ನು ಸ್ಪಷ್ಟಪಡಿಸಿ ನಿರೂಪಿಸಬೇಕು. ಇದರಿಂದ ಸಮಸ್ಯೆಯ ಸಂಪೂರ್ಣ ಚಿತ್ರಣ ದೊರೆಯುತ್ತದೆ. ಸಮಸ್ಯೆಯ ನಿರೂಪಣೆಯಿಂದ ಅದರ ವ್ಯಾಪ್ತಿ. ತರಗತಿ, ವಿಷಯ, ಸಮೂಹ(ತರಗತಿ) ಇತ್ಯಾದಿಗಳನ್ನು ತಿಳಿಯಬಹುದು.

3. **ಸಂಭವನೀಯ ಕಾರಣಗಳನ್ನು ವಿಶ್ಲೇಷಿಸುವುದು :** ಈ ಹಂತದಲ್ಲಿ ಸಂಶೋಧಕನು ಸಮಸ್ಯೆಯ ಬಗ್ಗೆ ತಾನು ತಿಳಿದಿರುವ ಅಂಶಗಳನ್ನು

Digitised by Bharatavani, CIIL

ಪಟ್ಟಿಮಾಡಬೇಕು. ಇದಕ್ಕಾಗಿ ಸಮಸ್ಯೆಯ ಬಗ್ಗೆ ತಿಳಿವಳಿಕೆ ಇರುವ ಸಹೋದ್ಯೋಗಿಗಳೊಂದಿಗೂ ಚರ್ಚಿಸಬಹುದು. ಸಮಸ್ಯೆಗೆ ಕಾರಣವಾದ ಸಂಭವನೀಯ ಅಂಶಗಳ ಬಗ್ಗೆ ಎಚ್ಚರಿಕೆಯಿಂದ ಅಭ್ಯಸಿಸಿದ ನಂತರ, ಅವುಗಳನ್ನು ಪಟ್ಟಿಮಾಡಿ ವಿಶ್ಲೇಷಿಸಬೇಕು. ಸಂಭವನೀಯ ಕಾರಣಗಳನ್ನು ವಿಶ್ಲೇಷಿಸುವಾಗ ಅದಕ್ಕೆ ಪೂರಕವಾಗಿ ಲಭ್ಯವಿರುವ ಆಧಾರಗಳನ್ನು ಪರಿಗಣಿಸಬೇಕು. ಇವುಗಳು ಸಂಶೋಧಕನ ಕಾರ್ಯ ವ್ಯಾಪ್ತಿಗೆ/ನಿಯಂತ್ರಣಕ್ಕೆ ಒಳಪಡುವ ಅಂಶಗಳೇ ಅಲ್ಲವೇ ಎಂಬುದನ್ನೂ ಗಮನಿಸಬೇಕು. ಇದು ಕ್ರಿಯಾ ಪ್ರಕಲ್ಪನೆಗಳನ್ನು ರಚಿಸಲು ಸಹಾಯಕವಾಗುತ್ತದೆ.

**4. ಪ್ರಾಕ್ಕಲ್ಪನೆಗಳನ್ನು ರೂಪಿಸುವುದು :** ಸಮಸ್ಯೆಗೆ ಸಂಭವನೀಯವಾದ ಕಾರಣಗಳ ಆಧಾರದ ಮೇಲೆ ಪ್ರಾಕಲ್ಪನೆಗಳನ್ನು ರೂಪಿಸಬೇಕು. ಕ್ರಿಯಾ ಪ್ರಾಕ್‌ಕಲ್ಪನೆಗಳು ಅತ್ಯಂತ ಸ್ಪಷ್ಟವಾಗಿದ್ದು, ಸಂಶೋಧಕನಿಗೆ ಕ್ರಿಯಾ ಯೋಜನೆಯನ್ನು ತಯಾರಿಸಲು ಸಾಧ್ಯವಾಗಬೇಕು. ಇವುಗಳು ಪ್ರಾಯೋಗಿಕವಾಗಿದ್ದು, ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಸಹಾಯ ಮಾಡವಂತಿರಬೇಕು.

**5. ಪ್ರಾಕ್ಕಲ್ಪನೆಗಳನ್ನು ಪರೀಕ್ಷಿಸಲು ಕ್ರಿಯಾ ಯೋಜನೆಯನ್ನು ತಯಾರಿಸುವುದು** ಪ್ರಾಕ್ಕಲ್ಪನೆಗಳನ್ನು ಪರೀಕ್ಷಿಸಲು ಒಂದು ಕ್ರಿಯಾ ಯೋಜನೆಯನ್ನು ತಯಾರಿಸಬೇಕು. ಈ ಯೋಜನೆಯಂತೆ ಕಾರ್ಯ ನಿರ್ವಹಿಸಿ ಪಕಲ್ಪನೆಗಳನ್ನು ಪರೀಕ್ಷಿಸಿ, ಫಲಿತಾಂಶಗಳನ್ನು ದಾಖಲಿಸಬೇಕು. ಒಮ್ಮೆಲೆ ಒಂದು ಪ್ರಾಕ್ಕಲ್ಪನೆಯನ್ನು ಮಾತ್ರ ಪರೀಕ್ಷಿಸಬೇಕು.ಈ ಕ್ರಿಯಾ ಯೋಜನೆಯನ್ನು ಸಂದರ್ಭಾನುಸಾರ ಅಗತ್ಯತೆಗನುಗುಣವಾಗಿ ಬದಲಾವಣೆ ಮಾಡಿಕೊಳ್ಳಬಹುದು.

ಕ್ರಿಯಾ ಯೋಜನೆಯು ಈ ಅಂಶಗಳನ್ನು ಒಳಗೊಂಡಿರಬೇಕು. ಉದ್ದೇಶ, ಸಂಭವನೀಯ ಕಾರಣಗಳು, ಪ್ರಾಕ್ಕಲ್ಪನೆ, ಶಿಕ್ಷಕರ/ವಿದ್ಯಾರ್ಥಿಗಳ ಚಟುವಟಿಕೆ, ಅಗತ್ಯ ಸಾಮಗ್ರಿಗಳು, ಕಲಿವಿನ/ಚಟುವಟಿಕೆಯ ನಿರೀಕ್ಷಿತ ಫಲ.

**6. ಅಂಕಿ-ಅಂಶಗಳ ವಿಶ್ಲೇಷಣೆ :** ಗುರುತಿಸಿದ ಸಮಸ್ಯೆಯನ್ನು ದೃಢೀಕರಿಸಿಕೊಳ್ಳಲು ನಡೆಸಿದ ಪೂರ್ವ ಪರೀಕ್ಷೆ ಮತ್ತು ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಿದ. ನಂತರ ನಡೆಸಿದ ಉತ್ತರ ಪರೀಕ್ಷೆಯ ಅಂಕಗಳ ಸರಾಸರಿಯನ್ನು ಕಂಡುಹಿಡಿದು, ಕ್ರಿಯಾ ಸಂಶೋಧನೆಯ ಫಲಿತಾಂಶವನ್ನು ತಿಳಿದುಕೊಳ್ಳಬೇಕು.

**7. ಕ್ರಿಯಾ ಸಂಶೋಧನೆಯ ಆಧಾರದ ಮೇಲೆ ಅಂತಿಮ ತೀರ್ಮಾನ:** ಪರೀಕ್ಷಿಸಿದ ಕ್ರಿಯಾ ಪ್ರಾಕ್ಕಲ್ಪನೆಯನ್ನು ಒಪ್ಪಿಕೊಳ್ಳುವುದು. ಅಥವಾ ತಿರಸ್ಕರಿಸುವುದು ಕೆಲವು ನಿರ್ಧಾರಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ. ಈ ಅಂತಿಮ ತೀರ್ಮಾನವು ಸಮಸ್ಯೆಗೆ ಪ್ರಯೋಗಾರ್ಹವಾದ ಪರಿಹಾರವನ್ನು ಒದಗಿಸುತ್ತದೆ. ಈ ರೀತಿಯಾಗಿ ಅಂತಿಮ ತೀರ್ಮಾನಗಳನ್ನು ಕೈಗೊಳ್ಳಲು ಸಂಗ್ರಹಿಸಿದ ದತ್ತಾಂಶಗಳನ್ನು ಸಮರ್ಪಕವಾಗಿ ವಿಶ್ಲೇಷಿಸಬೇಕು. ತೆಗೆದುಕೊಂಡ ತೀರ್ಮಾನಗಳನ್ನು ಸೂಕ್ತವಾಗಿ ಮೌಲ್ಯಮಾಪನ ಮಾಡಿ, ಕ್ರಿಯಾ ಪ್ರಾಕ್ಕಲ್ಪನೆಯ ಸಮಂಜಸತೆಯನ್ನು ಪರೀಕ್ಷಿಸಬೇಕು. ಇದಕ್ಕಾಗಿ ಅಂಕಿ ಅಂಶಗಳ ವಿಶ್ಲೇಷಣೆಯನ್ನು ಬಳಸಿಕೊಳ್ಳಬಹುದು.

**8. ವರದಿ ತಯಾರಿಸುವುದು :** ಸರಳವಾದ ಮತ್ತು ಸ್ಪಷ್ಟವಾದ ಟಿಪ್ಪಣಿಯನ್ನು ಮೇಲೆ ವಿವರಿಸಿದ ಎಲ್ಲಾ ಹಂತಗಳಿಗೂ ನೀಡುವುದೇ ಕ್ರಿಯಾ ಸಂಶೋಧನೆಯ ವರದಿಯಾಗುತ್ತದೆ. ಹೀಗೆ ವಿವರಿಸಿದ ರೀತಿಯಲ್ಲಿ ಒಂದು ಕ್ರಿಯಾ ಸಂಶೋಧನೆಯನ್ನು ಹೇಗೆ ಕೈಗೊಳ್ಳಬಹುದು ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಗಮನಿಸೋಣ.

**ಉದಾಹರಣೆ ಒಂದು**

**ಕ್ರಿಯಾ ಸಂಶೋಧನೆಯ ಪ್ರಸ್ತಾವನೆಯು ಈ ಅಂಶಗಳನ್ನು ಒಳಗೊಳ್ಳುತ್ತದೆ.**

**ಪ್ರಾಥಮಿಕ ಮಾಹಿತಿ.** ಅ) ಕ್ರಿಯಾ ಸಂಶೋಧಕನ ಹೆಸರು: ಬ) ಕಾರ್ಯನಿರ್ವಹಿಸುತ್ತಿರುವ ಶಾಲೆಯ ಹೆಸರು ಮತ್ತು ವಿಳಾಸ :

**ಸಮಸ್ಯೆಯ ಕ್ಷೇತ್ರ :** ರೇಖಾಗಣಿತದಲ್ಲಿ ಸಮಾನಾಂತರ ಸರಳ ರೇಖೆಗಳನ್ನು ಒಂದು ಛೇದಕವು ಛೇಧಿಸಿದಾಗ ಉಂಟಾಗುವ ಕೋನಗಳು.

**ಸಮಸ್ಯೆಯ ನಿರೂಪಣೆ :** ಶಾಲೆಯ 7ನೇ ತರಗತಿಯ ಬಹುತೇಕ ವಿದ್ಯಾರ್ಥಿಗಳು ಒಂದು ಛೇದಕವು ಎರಡು ಸಮಾನಾಂತರ ಸರಳ ರೇಖೆಗಳನ್ನು ಛೇಧಿಸಿದಾಗ ಉಂಟಾಗುವ ವಿವಿಧ ಕೋನಗಳನ್ನು ಗುರುತಿಸುವಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

**ಸಮಸ್ಯೆಯನ್ನು ಸ್ಪಷ್ಟಪಡಿಸುವುದು :** ಶಾಲೆಯ 7ನೇ ತರಗತಿಯ ಬಹುತೇಕ ವಿದ್ಯಾರ್ಥಿಗಳು ಸಮಾನಾಂತರ ಸರಳ ರೇಖೆಗಳ ಗುಣ ಲಕ್ಷಣಗಳನು ಸರಿಯಾಗಿ ತಿಳಿದಿಲ್ಲ. ಅವರುಗಳು ಒಂದು ಜೊತೆ ಸಮಾನಾಂತರ ಸರಳ ರೇಖೆಗಳನ್ನು ಛೇದಕವು ಛೇಧಿಸಿದಾಗ ಉಂಟಾಗುವ ಈ ಕೋನಗಳನ್ನು ಸರಿಯಾಗಿ ಗುರುತಿಸಲು ಅಸಮರ್ಥರಾಗಿದ್ದಾರೆ: ಅನುರೂಪ ಕೋನಗಳು, ಶೃಂಗಾಭಿಮುಖ ಕೋನಗಳು, ಪರ್ಯಾಯ ಕೋನಗಳು, ಪಾರ್ಶ್ವ ಕೋನಗಳು.

**ಸಂಭವನೀಯ ಕಾರಣಗಳು :** ಸಮಾನಾಂತರ ಸರಳ ರೇಖೆಗಳ ಬಗ್ಗೆ ತಿಳಿಸುವಾಗ ಶಿಕ್ಷಕರು ಹೊಸ ಪದಗಳ ಬಳಕೆಯ ಬಗ್ಗೆ ವಿದ್ಯಾರ್ಥಿಗಳ ಗಮನವನ್ನು ಸಮರ್ಪಕವಾಗಿ ಸೆಳೆಯದೆ ಇರುವುದು, ವಿದ್ಯಾರ್ಥಿಗಳಲ್ಲಿ ಆಸಕ್ತಿ ಮತ್ತು ಅವಧಾನದ ಕೊರತೆ, ಬೋಧನೆಯ ವಿವಿಧ ಸಂದರ್ಭಗಳಲ್ಲಿ ಶಿಕ್ಷಕರು ಹೊಸ ಪರಿಕಲ್ಪನೆಗಳ ಬಗ್ಗೆ ಪುನರ್ಬಲನವನ್ನು ನೀಡದೆ ಇರುವುದು, ಬೋಧನಾ ಸಮಯದಲ್ಲಿ ಶಿಕ್ಷಕರು ಸೂಕ್ತವಾದ ಸಾಧನ ಮತ್ತು ತಂತ್ರಗಳನ್ನು ಬಳಸದೇ ಇರುವುದು.

**ಕ್ರಿಯಾ ಪ್ರಾಕ್ಕಲ್ಪನೆಗಳು :** ಶಿಕ್ಷಕರು ಕೋನಗಳು, ಸಮಾನಾಂತರ ಸರಳ ರೇಖೆಗಳು, ಛೇಧಕ, ಅನುರೂಪ ಕೋನಗಳು, ಪರ್ಯಾಯ ಕೋನಗಳು, ಪಾರ್ಶ್ವ ಕೋನಗಳು ಈ ಪದಗಳನ್ನು ಸೂಕ್ತವಾಗಿ ವಿವರಿಸಿದರೆ, ವಿದ್ಯಾರ್ಥಿಗಳು ಸಮಾನಾಂತರ ಸರಳ ರೇಖೆಗಳ ಗುಣಗಳನ್ನು ಸುಲಭವಾಗಿ ಅರ್ಥ ಮಾಡಿಕೊಂಡು ಇವುಗಳನ್ನು ಹೊಸ ಸನ್ನಿವೇಶಗಳಲ್ಲಿ ಬಳಸುತ್ತಾರೆ.

ಈ ಪದಗಳನ್ನು ಪರಿಚಯಿಸುವಾಗ ಶಿಕ್ಷಕರು ವಿವಿಧ ತಂತ್ರಗಳನ್ನು ಬಳಸಿದರೆ, ವಿದ್ಯಾರ್ಥಿಗಳು ಸಮಾನಾಂತರ ಸರಳ ರೇಖೆಗಳ ಲಕ್ಷಣಗಳನ್ನು ಹೆಚ್ಚಿನ ಆಸಕ್ತಿಯಿಂದ ತಿಳಿಯುತ್ತಾರೆ.

ವಿದ್ಯಾರ್ಥಿಗಳೇ ಸಮಾನಾಂತರ ಸರಳ ರೇಖೆಗಳನ್ನು ಎಳೆದು, ವಿವಿಧ ಕೋನಗಳನ್ನು ಅವರೇ ಗುರುತಿಸಲು ಸಹಾಯ ಮಾಡಿದರೆ, ಸುಲಭವಾಗಿ ಇವುಗಳನ್ನು ಸ್ಮರಿಸಿ ಗುರುತಿಸಲು ಉಪಯುಕ್ತವಾಗುತಿತ್ತು.

ವಿವಿಧ ಜಾಮಿತಿಯ ಉಪಕರಣಗಳು ಮತ್ತು ತಂತ್ರಗಳನ್ನು ಶಿಕ್ಷಕರು ಬೋಧನಾ ಸಂದರ್ಭಗಳಲ್ಲಿ ಬಳಸಿದರೆ ವಿದ್ಯಾರ್ಥಿಗಳು ಪರಿಕಲ್ಪನೆಯನ್ನು ಸಮರ್ಪಕವಾಗಿ ಗ್ರಹಿಸುತ್ತಾರೆ.

**ಈ ಕ್ರಿಯಾ ಯೋಜನೆಯು ಈ ಅಂಶಗಳನ್ನು ಒಳಗೊಳ್ಳುತ್ತದೆ.**

**ಉದ್ದೇಶ :** ವಿದ್ಯಾರ್ಥಿಗಳು ಸಮಾನಾಂತರ ರೇಖೆಗಳು, ಛೇಧಕ, ಶೃಂಗಾಭಿಮುಖ ಕೋನಗಳು, ಅನುರೂಪ ಕೋನಗಳು, ಪರ್ಯಾಯ ಕೋನಗಳು, ಸಮಾನಾಂತರ ಸರಳ ರೇಖೆಗಳು ಇವುಗಳ ಅರ್ಥವನ್ನು ತಿಳಿಯುವರು.

Digitised by Bharatavani, CIIL

**ಸಂಭವನೀಯ ಕಾರಣಗಳು :** ಘಟಕವನ್ನು ಪರಿಚಯಿಸುವ ಸಮಯದಲ್ಲಿ ಶಿಕ್ಷಕರು ಈ ಪದಗಳ ಬಗ್ಗೆ ವಿದ್ಯಾರ್ಥಿಗಳ ಅವಧಾನವನ್ನು ಸರಿಯಾಗಿ ಪಡೆಯದೇ ಇರುವುದು. ಶಿಕ್ಷಕರು ವಿದ್ಯಾರ್ಥಿಗಳೇ ಚಿತ್ರಗಳನ್ನು ಬರೆದು, ಕೋನಗಳನ್ನು ಗುರುತಿಸಿ ಅವುಗಳನ್ನು ಹೆಸರಿಸುವಂತೆ ಸೂಚಿಸಿದರೆ, ಅವುಗಳನ್ನು ಸಮರ್ಪಕವಾಗಿ ಗುರುತಿಸಿ ಹೆಸರಿಸುತ್ತಾರೆ. ಘಟಕವನ್ನು ಪರಿಚಯಿಸುವ ಸಮಯದಲ್ಲಿ ಶಿಕ್ಷಕರು ಈ ಪದಗಳ ಬಗ್ಗೆ ವಿದ್ಯಾರ್ಥಿಗಳ ಅವಧಾನವನ್ನು ಸರಿಯಾಗಿ ಪಡೆಯದೇ ಇರುವುದು. ಶಿಕ್ಷಕರು ಹೊಸ ಪರಿಕಲ್ಪನೆಗಳ ಬಗ್ಗೆ ಸಮರ್ಪಕವಾಗಿ ಪುನರ್ಬಲನಗಳನ್ನು ನೀಡದೆ ಇರುವುದು.

**ಕ್ರಿಯಾ ಪ್ರಾಕ್ಕಲನೆ :** ಶಿಕ್ಷಕರು ಕೋನಗಳು, ಶೃಂಗಾಭಿಮುಖ ಕೋನಗಳು ಇವುಗಳನ್ನು ಸೂಕ್ತ ಚಿತ್ರಗಳು, ಸಾಧನಗಳನ್ನು ಬಳಸಿ ವಿವರಿಸಿದರೆ, ವಿದ್ಯಾರ್ಥಿಗಳು ಹೊಸ ಪದಗಳನ್ನು ಕಲಿಯುವಾಗ ಯಾವುದೇ ಸಂಶಯವನ್ನು ಹೊಂದಿರುವುದಿಲ್ಲ. ಶಿಕ್ಷಕರು ವಿವಿಧ ತಂತ್ರಗಳನ್ನು ಬಳಸಿದರೆ ಅಥವಾ ವಿದ್ಯಾರ್ಥಿಗಳಿಗೆ ಈ ಕೋನಗಳ ಲಕ್ಷಣಗಳನ್ನು ಕಂಡುಹಿಡಿಯುವ ಅವಕಾಶಗಳನ್ನು ಒದಗಿಸಿದರೆ, ವಿದ್ಯಾರ್ಥಿಗಳು ವಿವಿಧ ಕೋನಗಳನ್ನು ಯಾವುದೇ ಕಠಿಣತೆಯಿಲ್ಲದೆ ಗುರುತಿಸುತ್ತಾರೆ. ಕೋನಗಳ ಜೋಡಿಗಳನ್ನು ಹೆಸರಿಸುತ್ತಾರೆ. ಒಂದು ಜೊತೆ ಸರಳ ರೇಖೆಗಳನ್ನು ಎಳೆದು, ಕೋನಗಳನ್ನು ಅಳತೆ ಮಾಡಿ ವಿವಿಧ ಕೋನಗಳ ಅಳತೆಗಳಿಂದ ಅವುಗಳು ಸಮಾನಾಂತರ ಸರಳ ರೇಖೆಗಳೆಂದು ನಿರೂಪಿಸುತ್ತಾರೆ. ಶಿಕ್ಷಕರು ಜಿಯೋ ಬೋರ್ಡ್, ಜಾಮಿತೀಯ ಉಪಕರಣಗಳು ಇತ್ಯಾದಿಗಳು ಬೋಧನೆಯಲ್ಲಿ ಬಳಸಿದರೆ ವಿದ್ಯಾರ್ಥಿಗಳು ಪರಿಕಲ್ಪನೆಯನ್ನು ಸರಿಯಾಗಿ ಗ್ರಹಿಸುತ್ತಾರೆ.

**ವಿದ್ಯಾರ್ಥಿ/ಶಿಕ್ಷಕರ ಚಟುವಟಿಕೆ :** ಶಿಕ್ಷಕರು ಈ ಪದಗಳನ್ನು ವಿವರಿಸಿ ಚಿತ್ರಗಳ ಸಹಾಯದಿಂದ ನಿರೂಪಿಸುತ್ತಾರೆ. ಕೋನ, ಅನುರೂಪ ಕೋನಗಳು, ಶೃಂಗಾಭಿಮುಖ ಕೋನಗಳು, ವಿದ್ಯಾರ್ಥಿಗಳು ವಿವಿಧ ಕೋನಗಳನ್ನು ರಚಿಸಿ, ಅವುಗಳನ್ನು ಕೋನಮಾಪಕದ ಸಹಾಯದಿಂದ ಅಳೆದು ಹೆಸರಿಸುತ್ತಾರೆ. ವಿದ್ಯಾರ್ಥಿಗಳು ಶೃಂಗಾಭಿಮುಖ ಕೋನಗಳನ್ನು ರಚಿಸಿ, ಅವುಗಳನ್ನು ಅಳತೆ ಮಾಡುತ್ತಾರೆ. ಕೋನಗಳನ್ನು ಅಕ್ಷರಗಳು, ಸಂಖ್ಯೆಗಳಿಂದ ಹೆಸರಿಸುತ್ತಾರೆ ಮತ್ತು ಅಳತೆ ಮಾಡುತ್ತಾರೆ. ಶೃಂಗಾಭಿಮುಖ ಕೋನಗಳನ್ನು ಚಿತ್ರದ ಸಹಾಯದಿಂದ ವಿವರಿಸುತ್ತಾರೆ. ಇವುಗಳನ್ನು ಅಳೆದು ಅವುಗಳು ಸಮನಾಗಿರುವುದಕ್ಕೆ ತೋರಿಸುತ್ತಾರೆ. ಎರಡು ಸಮಾನಾಂತರ ಸರಳ ರೇಖೆಗಳನ್ನು ಒಂದು ಛೇದಕವು ಛೇದಿಸಿದಾಗ ಉಂಟಾಗುವ ಕೋನಗಳನ್ನು ಚಿತ್ರ ಸಹಿತ ವಿವರಿಸುತ್ತಾರೆ. ಒಂದು ಜೊತೆ ಸಮಾನಾಂತರ ಸರಳ ರೇಖೆಗಳಿಗೆ ಛೇಧಕವನ್ನು ಎಳೆದು, ಉಂಟಾಗುವ 8 ಕೋನಗಳನ್ನು ಗುರುತಿಸಿ, ಅವುಗಳನ್ನು ಅಳತೆ ಮಾಡಿ, ವಿವಿಧ ಜೋಡಿ ಕೋನಗಳನ್ನು ಪರಿಚಯಿಸುತ್ತಾರೆ.

**ಅಗತ್ಯವಾದ ಸಾಮಗ್ರಿಗಳು :** ಜಾಮಿತಿಯ ಉಪಕರಣಗಳ ಪೆಟ್ಟಿಗೆ, ಬಣ್ಣದ ಸೀಮೆ ಸುಣ್ಣ, ಎಲ್.ಸಿ.ಡಿ. ಪ್ರೊಜೆಕ್ಟರ್ ಚಾರ್ಟುಗಳು, ಸಂದರ್ಭಾನುಸಾರ ವಿವಿಧ ಜಾಮಿತೀಯ ಉಪಕರಣಗಳು.

**ನಿರೀಕ್ಷಿತ ಫಲ :** ಕೋನಗಳನ್ನು ನಿರೂಪಿಸುತ್ತಾರೆ. ಶೃಂಗಾಭಿಮುಖ ಕೋನಗಳು, ಅನುರೂಪ ಕೋನಗಳು, ಪರ್ಯಾಯ ಕೋನಗಳು ಇವುಗಳನ್ನು ಗುರುತಿಸುತ್ತಾರೆ, ವಿವಿಧ ಕೋನಗಳನ್ನು ರಚಿಸಿ, ಹೆಸರಿಸುತ್ತಾರೆ. ಪ್ರತಿ ಜೊತೆ ಅನುರೂಪ ಕೋನಗಳು, ಪರ್ಯಾಯ ಕೋನಗಳು, ಪಾರ್ಶ್ವ ಕೋನಗಳು ಇವುಗಳು ಸಮ ಎಂದು ಗುರುತಿಸುತ್ತಾರೆ. ಸಮಾನಾಂತರ ಸರಳ ರೇಖೆಗಳಿಂದ ಉಂಟಾಗುವ ಕೋನಗಳು ಜೋಡಿಗಳನ್ನು ಗುರುತಿಸುತ್ತಾರೆ. ಸಮಾನಾಂತರ ಸರಳ ರೇಖೆಗಳ ಗುಣಲಕ್ಷಣಗಳನ್ನು ಪತ್ತೆ ಹಚ್ಚುತ್ತಾರೆ. ತ್ರಾಪಿಜ್ಯದಲ್ಲಿ ಸಮಾನಾಂತರ ಸರಳ ರೇಖೆಗಳನು ಗುರುತಿಸುತ್ತಾರೆ.

**ಅಂಕಿ ಅಂಶಗಳ ವಿಶ್ಲೇಷಣೆ :** ಪೂರ್ವ ಪರೀಕ್ಷೆ ಮತ್ತು ಉತ್ತರ ಪರೀಕ್ಷೆಗಳ ಸರಾಸರಿಯನ್ನು ಕಂಡುಹಿಡಿದು, ಅದರಿಂದ ಕ್ರಿಯಾ ಸಂಶೋಧನೆಯ ಫಲಿತವನ್ನು ದಾಖಲಿಸುವುದು.

**ಅಂತಿಮ ತೀರ್ಮಾನ :** ಮೇಲಿನ ಕ್ರಿಯಾ ಯೋಜನೆಯಂತೆ ಕಾರ್ಯ ನಿರ್ವಹಿಸಿ, ನಂತರ ಉತ್ತರ ಪರೀಕ್ಷೆಯನ್ನು ನಡೆಸುವುದು. ಮೇಲೆ ಕೈಗೊಂಡ ಕ್ರಮಗಳು ಯಾವ ರೀತಿಯಲ್ಲಿ ಸಮಸ್ಯೆಗೆ ಪರಿಹಾರವನ್ನು ಒದಗಿಸಿವೆ ಎಂಬುದನ್ನು ಕಂಡುಕೊಳ್ಳುವುದು.

ಉದಾಹರಣೆ ಎರಡು

**ಸಮಸ್ಯೆಯನ್ನು ಗುರುತಿಸುವುದು :** ಶಾಲೆಯ 6ನೇ ತರಗತಿಯ ಬಹುತೇಕ ವಿದ್ಯಾರ್ಥಿಗಳು, ಭಾರತದ ರಾಜಕೀಯ ಭೂಪಟದಲ್ಲಿ, ಸ್ಥಳಗಳನ್ನು ಸರಿಯಾಗಿ ಗುರುತಿಸುವುದರಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

**ಸಮಸ್ಯೆಯನ್ನು ಸ್ಪಷ್ಟಪಡಿಸುವುದು :** ಭಾರತದ ರಾಜಕೀಯ ಭೂಪಟದಲ್ಲಿ ಸ್ಥಳಗಳನ್ನು ಗುರುತಿಸುವಲ್ಲಿ ಪದೇ ಪದೇ ತಪ್ಪುಗಳನ್ನು ಮಾಡುತ್ತಿದ್ದಾರೆ.

**ಸಂಭವನೀಯ ಕಾರಣಗಳು:** ವಿದ್ಯಾರ್ಥಿಗಳು ಭೂಪಟವನ್ನು ಸರಿಯಾಗಿ ಬಳಕೆ ಮಾಡುವ ಕ್ರಮವನ್ನು ತಿಳಿಯದೇ ಇರುವುದು, ಶಿಕ್ಷಕರು ಭೂಪಟದಲ್ಲಿ ಸ್ಥಳಗಳನ್ನು ಗುರುತಿಸುವ ಸಮಯದಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಗಮನವನ್ನು ಹರಿಸದೇ ಇರುವುದು, ವಿದ್ಯಾರ್ಥಿಗಳಿಗೆ ಸ್ಥಳಗಳನ್ನು ಭೂಪಟದಲ್ಲಿ ನಿಖರವಾಗಿ ಗುರುತಿಸಲು ಸರಿಯಾದ ತಿಳಿವಳಿಕೆಯನ್ನು ನೀಡದೇ ಇರುವುದು, ಭೂಪಟದಲ್ಲಿ ಸ್ಥಳದಲ್ಲಿ ಗುರುತಿಸಲು ಸಮರ್ಪಕವಾದ ಅಭ್ಯಾಸಗಳನ್ನು ನೀಡದೇ ಇರುವುದು.

**ಉದ್ದೇಶಗಳನ್ನು ಪಟ್ಟಿ ಮಾಡುವುದು :** ಒಂದು ಕೊಟ್ಟ ಸಾಮ್ರಾಜ್ಯದ ಮೇರೆಯನ್ನು ಗುರುತಿಸುವುದು, ಒಂದು ಸ್ಥಳವನ್ನು ಗುರುತಿಸುವಾಗ ಗಮನಿಸಬೇಕಾದ ಅಂಶಗಳನ್ನು ಪಟ್ಟಿಮಾಡುವುದು.

**ಕ್ರಿಯಾ ಪ್ರಾಕ್ಕಲ್ಪನೆಗಳನ್ನು ಪಟ್ಟಿಮಾಡುವುದು :** ಭೂಪಟದಲ್ಲಿ ಸ್ಥಳಗಳನ್ನು ಗುರುತಿಸುವ ಕ್ರಮವನ್ನು ಸರಿಯಾಗಿ ಹೇಳಿಕೊಟ್ಟರೆ, ವಿದ್ಯಾರ್ಥಿಗಳು ಅದನ್ನು ಅನುಸರಿಸುವರು, ಸ್ಥಳಗಳನ್ನು ಗುರುತಿಸುವ ಬಗ್ಗೆ ಸೂಕ್ತವಾದ ನಿರ್ದೇಶನಗಳನ್ನು ನೀಡಿದರೆ, ಅವುಗಳನ್ನು ಪಾಲಿಸುವರು, ಸ್ಥಳವನ್ನು ಗುರ್ತಿಸುವ ಕ್ರಿಯೆಯನ್ನು ಹಂತ ಹಂತವಾಗಿ, ಭೂಪಟಗಳನ್ನು ಬಳಸಿ ವಿವರಿಸಿದರೆ ಸ್ಥಳಗಳನ್ನು ಸರಿಯಾಗಿ ಗುರುತಿಸುವರು, ವಿದ್ಯಾರ್ಥಿಗಳು ಸ್ಥಳಗಳನ್ನು ಗುರುತಿಸುವಾಗ ಮಾಡುವ ತಪ್ಪುಗಳನ್ನು ಸೂಕ್ತವಾಗಿ ತಿದ್ದಿದರೆ, ಸರಿಯಾದ ಕ್ರಮವನ್ನು ತಿಳಿಯುವರು.

**ಕ್ರಿಯಾ ಯೋಜನೆಯನ್ನು ತಯಾರಿಸುವುದು :** ಮೇಲಿನ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕ್ರಿಯಾ ಯೋಜನೆಯನ್ನು ತಯಾರಿಸಿ ಕ್ರಿಯಾ ಸಂಶೋಧನೆಯ ಉಳಿದ ಹಂತಗಳಂತೆ ಸಂಶೋಧನೆಯನ್ನು ಕೈಗೊಂಡು ತೀರ್ಮಾನ ಕೈಗೊಳ್ಳುವುದು.

–ಟಿ.ಕೆ.ರಾ.

Digitised by Bharatavani, CIIL

## ಕ್ವಿಜ್‌ಗಳು

ಕ್ವಿಜ್ ಪದವು ಮೊದಲು ಅಮೆರಿಕಾದಲ್ಲಿ ಉದ್ಭವಿಸಿತು. ಕ್ರಿ.ಶ. 1847ರಲ್ಲಿ ಕ್ವಿಜ್ ಪದ ಬಳಕೆಯಾಯಿತು ಎನ್ನುವ ಪ್ರತೀತಿಯಿದೆ. ಕ್ವಿಜ್ ಎಂದರೆ ವಿಚಿತ್ರ ವ್ಯಕ್ತಿ ಎನ್ನುವುದಷ್ಟೇ ಅರ್ಥ. Quiset ಎನ್ನುವ ಪದವೇ ಅಪಭ್ರಂಶಗೊಂಡು Quiz ಪದವಾಗಿ ಬಳಕೆಗೆ ಬಂದಿದೆ.

ದಂತ ಕಥೆಯೊಂದು ಹೇಳುವಂತೆ ಕ್ರಿ.ಶ. 1780ರಲ್ಲಿ ಡಬ್ಲಿನ್ ಪ್ಲೇಹೌಸ್ ಮ್ಯಾನೇಜರ್ ಆದ ಡ್ಯಾಲಿಯು 24 ಗಂಟೆಯೊಳಗೆ ಅರ್ಥರಹಿತ ಪದವೊಂದನ್ನು ನಗರದಾದ್ಯಂತ ಜನ-ಸಾಮಾನ್ಯರ ಮಾತಾಗಬೇಕು ಎಂದು ಪಣತೊಟ್ಟು ಆದರಂತೆ QUIZ ಎಂಬ 4 ಅಕ್ಷರದ ಪದವೊಂದನ್ನು ಸೃಷ್ಟಿಸಿ ಡಬ್ಲಿನ್ ಪ್ಲೇಹೌಸ್‌ನ ಗೋಡೆ ಮೇಲೆ quiz ಎಂದು ಸೀಮೆಸುಣ್ಣದಲ್ಲಿ ಬರೆದು ಆ ಪದವನ್ನು ಜನಪ್ರಿಯಗೊಳಿಸುವಲ್ಲಿ ವಿಜಯಿಯಾದ. ನಂತರ quiz ಪದವೇ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ/ಮಕ್ಕಳ ಜ್ಞಾನವನ್ನು) ಪರೀಕ್ಷಿಸಲು ಮೌಖಿಕ ಪರೀಕ್ಷೆಯ ಒಂದು ಸಾಧನವಾಗಿ ರೂಪಾಂತರಗೊಂಡಿರಬಹುದು ಎನ್ನುತ್ತಾರೆ.

Webster ನಿಘಂಟಿನ ಪ್ರಕಾರ ತಮಾಷೆಯಾಗಿ ಸಾಂದರ್ಭಿಕವಾಗಿ, ಸೋದಾಹರಣವಾಗಿ, ಆಕಸ್ಮಿಕವಾಗಿ, ಅನೌಪಚಾರಿಕವಾಗಿ ಒಂದಷ್ಟು ಪ್ರಶ್ನೆಗಳ ಮೂಲಕ ಅಡ್ಡಾದಿಡ್ಡಿಯಾಗಿ ಪರೀಕ್ಷಿಸುವುದು, ಅಡ್ಡಾದಿಡ್ಡಿಯಾದ ಪ್ರಶ್ನೆಗಳಿದ್ದರೂ ಸಹ ಹುರುಪಿನಿಂದ ಕೂಡಿರುತ್ತವೆ, quiz ಎಂದರೆ ಶಬ್ದಕೋಶದಲ್ಲಿ ಸಾಮಾನ್ಯಜ್ಞಾನಪರೀಕ್ಷೆ, ರಸಪ್ರಶ್ನೆ, ಪ್ರಶ್ನಾವಳಿ, ಪ್ರಶ್ನೆಮಾಲೆ, ಕುಚೋದ್ಯ, ಕುಚೇಷ್ಟೆ, ಲೇವಡಿ, ವಿಡಂಬನೆ ಎಂಬ ಅರ್ಥಗಳಿವೆ.

ಕ್ವಿಜ್ ಔಪಚಾರಿಕವಲ್ಲದ ಮೌಖಿಕ ಪರೀಕ್ಷೆಯಾಗಿದೆ. ಇದನ್ನು (Speaking Exam) ಮಾತನಾಡುವ ಪರೀಕ್ಷೆಯೆಂತಲೂ ಕರೆಯುತ್ತಾರೆ. ಇದು ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ಸಾಮಾನ್ಯ ಜ್ಞಾನವನ್ನು ಅನೇಕ ಪ್ರಶ್ನೆಗಳ ಸರಮಾಲೆಯಲ್ಲಿ ಪರೀಕ್ಷಿಸುವುದು. 20–21ನೇ ಶತಮಾನದಲ್ಲಿ ಕ್ವಿಜ್ ಕಾರ್ಯಕ್ರಮವು ದೂರದರ್ಶನ, ರೇಡಿಯೋ ಮುಂತಾದ ಮಾಧ್ಯಮಗಳಲ್ಲಿ ವಿದ್ಯಾರ್ಥಿಗಳ/ಜನರ ಜ್ಞಾನವನ್ನು ವಿವಿಧ ಕ್ಷೇತ್ರಗಳಾದ ಆಟಗಳು, ಸಂಗೀತ, ಸಾಮಾನ್ಯ ಜ್ಞಾನ, ವಿಜ್ಞಾನ, ಸಮಾಜ ವಿಜ್ಞಾನ, ಪರಿಸರ, ಗಣಿತ ಮುಂತಾದವುಗಳಲ್ಲಿ ಪರೀಕ್ಷಿಸುವುದು ಸರ್ವೇ ಸಾಮಾನ್ಯವಾಗಿದೆ.

ಕ್ವಿಜ್ ನಡೆಸಿಕೊಡುವವನನ್ನು 'ಕ್ವಿಜ್ ಮಾಸ್ಟರ್' ಎಂತಲೂ ಅಂಕಗಳನ್ನು ದಾಖಲಿಸುವವನನ್ನು 'ಕ್ವಿಜ್ ಸ್ಕೋರರ್' ಎಂತಲೂ, ವೇಳೆಯನ್ನು ಗುರುತಿಸಿ ಬೆಲ್/ಬಜರ್ ಮೂಲಕ ಸ್ಪರ್ಧಾಳುಗಳಿಗೆ ಕಾಲಮಿತಿಯನ್ನು ಸೂಚಿಸುವವನನ್ನು 'ಟೈಮ್ ಕೀಪರ್' ಎಂತಲೂ ಕ್ವಿಜ್‌ನಲ್ಲಿ ಪ್ರಶ್ನೆಗಳಿಗೆ ಉತ್ತರಿಸುವವನನ್ನು 'ಸ್ಪರ್ಧಾಳು' ಎಂತಲೂ ಕರೆಯುತ್ತಾರೆ.

ಕ್ವಿಜ್‌ನಲ್ಲಿ ಒಂದು ಪದದ ಉತ್ತರದ ಪ್ರಶ್ನೆಗಳು, ವೇಗವಾಗಿ ಒಂದು ನಿಮಿಷದಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರಿಸುವ ಪ್ರಶ್ನೆಗಳು ಇರಬಹುದು. ಕ್ವಿಜ್ ಮಾಸ್ಟರ್ ಪ್ರಶ್ನೆ ಕೇಳಿದ ತಕ್ಷಣ ಬಜರ್‌ನ ಗುಂಡಿಗಳನ್ನು ಸ್ಪರ್ಧಾಳು ಒತ್ತುವುದರ ಮೂಲಕ ತನ್ನ ತಯಾರಿಯನ್ನು ತಿಳಿಸಬೇಕು. ಇದನ್ನು ಬಜರ್ ಸುತ್ತು ಎಂದು ಕರೆಯುತ್ತಾರೆ. ವ್ಯಕ್ತಿ, ಕಟ್ಟಡ, ಪ್ರಾಣಿ, ಪಕ್ಷಿ, ದೇವಾಲಯ ಮುಂತಾದವುಗಳ ಚಿತ್ರ ತೋರಿಸಿ ಗುರುತಿಸಲು ಹೇಳುವ ಪ್ರಶ್ನೆಗಳು ಅಥವಾ ದೃಕ್-ಶ್ರವಣ ಮಾಧ್ಯಮ ಬಳಸಿ ಸಂಗೀತ ಆಲಿಸುವಂತೆ ಹೇಳಿ ರಾಗವನ್ನು ಗುರುತಿಸುವಂತೆ ಮತ್ತು ಅದನ್ನು ಹಾಡಿದ ವ್ಯಕ್ತಿಯನ್ನು ಸ್ಮರಿಸಿ ಹೇಳುವಂತಹ ಪ್ರಶ್ನೆಗಳು. ಪರದೆಯ ಮೇಲೆ ಚಿತ್ರಗಳನ್ನು ಪ್ರಕ್ಷೇಪಿಸಿ ಅದನ್ನು ಗುರುತಿಸುವಂತೆ ಹೇಳುವ ಪ್ರಶ್ನೆಗಳು. ಹೀಗೆ ಅನೇಕ ವಿಧಗಳಲ್ಲಿ ಕ್ವಿಜ್ ನಡೆಸಬಹುದು.

### ಕ್ವಿಜ್‌ನ ಅನುಕೂಲಗಳು

1. ಸ್ಮರಣ ಶಕ್ತಿಯನ್ನು ಪರೀಕ್ಷಿಸುತ್ತದೆ.
2. ಸಾಮಾನ್ಯ ಜ್ಞಾನದ ಮಟ್ಟವನ್ನು ಗುರುತಿಸುತ್ತದೆ.
3. ಮನಸ್ಸಿಗೆ ಸಂತೋಷ, ಹರ್ಷ, ಲವಲವಿಕೆಯನ್ನು ಉಂಟುಮಾಡುತ್ತದೆ.
4. ಜ್ಞಾನದ ಪುನಶ್ಚೇತನವಾಗುತ್ತದೆ.
5. ಆರೋಗ್ಯಕರವಾದ ಸ್ಪರ್ಧಾಭಾವನೆ ಬೆಳೆಸುತ್ತದೆ.
6. ಆತ್ಮವಿಶ್ವಾಸ, ಆತ್ಮಸಂಯಮ, ಆತ್ಮನಂಬಿಕೆಯನ್ನು ಬೆಳೆಸುತ್ತದೆ.
7. ಓದುವ ಹವ್ಯಾಸವನ್ನು ಬೆಳೆಸುತ್ತದೆ.
8. ಪ್ರಶ್ನೆಗಳನ್ನು ಉತ್ತರಿಸಲು ಸದಾ ಏಕಾಗ್ರತೆ, ಎಚ್ಚರ (Alert), ವೀಕ್ಷಣೆ, ಮಾನಸಿಕ ಸಿದ್ಧತೆ ಮುಂತಾದ ಗುಣಗಳನ್ನು ಬೆಳೆಸುತ್ತದೆ. ಕ್ವಿಜ್ ಸಾಮಾನ್ಯ ಜ್ಞಾನದ ಪರೀಕ್ಷೆಯಾದರೂ ಇಂದಿನ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ, ದೂರದರ್ಶನ ಮತ್ತು ರೇಡಿಯೋಗಳಲ್ಲಿ ಬಿತ್ತರಿಸುವ ಕ್ವಿಜ್ ಕಾರ್ಯಕ್ರಮಗಳು ವಸ್ತುಗಳನ್ನು ಮತ್ತು ಹಣವನ್ನು ಬಹುಮಾನದ ರೂಪದಲ್ಲಿ ಗಳಿಸುವಲ್ಲಿ ಸಹಕಾರಿಯಾಗಿದೆ.
9. ಜ್ಞಾನವನ್ನು ಬೆಳೆಸುವ ಶೈಕ್ಷಣಿಕ ಉದ್ದೇಶಗಳನ್ನು ಹೊಂದಿದೆ.
10. ತತ್‌ಕ್ಷಣದಲ್ಲಿ ಮರುಸೃಷ್ಟಿ ದೊರೆಯುತ್ತದೆ.
11. ಮನರಂಜನೆಯನ್ನು ನೀಡುತ್ತದೆ.
12. ಧನಾತ್ಮಕ ಭಾವನೆಗಳನ್ನು ಉತ್ತೇಜಿಸುತ್ತದೆ.
13. ಗುಣಾತ್ಮಕ ಹವ್ಯಾಸವನ್ನು ಬೆಳೆಸುತ್ತದೆ.
14. ವ್ಯಕ್ತಿ ಸಾಮಾಜೀಕರಣಗೊಳ್ಳುವಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುತ್ತದೆ.
15. ನಿರ್ದಿಷ್ಟಪಡಿಸಿದ ಮತ್ತು ನಿರ್ದಿಷ್ಟವಲ್ಲದ ವಿಷಯಗಳೆರಡರಲ್ಲೂ ಕ್ವಿಜ್ ನಡೆಸಬಹುದಾದ್ದರಿಂದ ಜ್ಞಾನದ ವಿಸ್ತಾರವನ್ನು ಪರೀಕ್ಷಿಸಬಹುದು.

### ಇತಿಮಿತಿ

1. ಇದು ಕೇವಲ ಸ್ಮರಣ ಶಕ್ತಿಯನ್ನು ಪರೀಕ್ಷಿಸುತ್ತದೆ.
2. ಕ್ವಿಜ್ ಸ್ಪರ್ಧಾಳುಗಳು ಮಾತ್ರ ವಿಷಯವನ್ನು ಓದುವುದರಿಂದ ತರಗತಿಗಳಲ್ಲಿ ಕ್ವಿಜ್‌ನಲ್ಲಿ ಭಾಗವಹಿಸದೇ ಇರುವ ವಿದ್ಯಾರ್ಥಿಗಳು ಇದರಿಂದ ವಂಚಿತರಾಗಬಹುದು.
3. ಕ್ವಿಜ್ ಸ್ಪರ್ಧೆಗೆ ಸ್ಪರ್ಧಾಳು ಬಾಯಿಪಾಠ ಮಾಡುವ ಸಾಧ್ಯತೆಗಳಿರುವುದರಿಂದ ಇದು ಯಾಂತ್ರಿಕವಾಗಿದೆ.
4. ಕ್ವಿಜ್ ಕಾರ್ಯಕ್ರಮಗಳನ್ನು ಸಂಘಟಿಸುವವರಲ್ಲಿ ಮತ್ತು ಭಾಗವಹಿಸುವವರಲ್ಲಿ ಸಮಯ, ಶ್ರಮ ಅಪವ್ಯಯಗೊಳ್ಳುವ ಸಾಧ್ಯತೆಯಿದೆ.
5. ಕ್ವಿಜ್‌ಗಳಲ್ಲಿ ಹಲವು ಸುತ್ತುಗಳಿರುವುದರಿಂದ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಸಹಾಯವನ್ನು ಪಡೆಯಬೇಕಾದ್ದರಿಂದ ವೆಚ್ಚದಾಯಕವಾದುದು.
6. ಕ್ವಿಜ್ ಸ್ಪರ್ಧೆಯಲ್ಲಿ ಗೆದ್ದವನಲ್ಲಿ ಮೇಲರಿಮೆ, ಸೋತವನಲ್ಲಿ ಕೀಳರಿಮೆ ಬೆಳೆಯಬಹುದು.

Digitised by Bharatavani, CIIL

ಕ್ವಿಜ್ ಕಾರ್ಯಕ್ರಮದದಲ್ಲಿ ಕ್ವಿಜ್ ನಡೆಸಿಕೊಡುವವರು ಮತ್ತು ಸ್ಪರ್ಧಾಳುಗಳು ಇಬ್ಬರಲ್ಲೂ ತಮಾಷೆಯ ಮತ್ತು ಆನಂದಿಸುವ ಗುಣವಿರಬೇಕು. ಇದು ವ್ಯಕ್ತಿತ್ವದ ಸರ್ವಾಂಗೀಣ ವಿಕಸನಕ್ಕೆ ಬಹಳ ಸಹಕಾರಿಯಾಗಿದೆ.

–ಎನ್.ಎಸ್.ಸು.

## ಕುಟುಂಬ ಮತ್ತು ಶಿಕ್ಷಣ

ಕುಟುಂಬವು ಮಾನವ ಜೀವಿಗಳ ಒಂದು ಸಮೂಹ. ಕುಟುಂಬವು ಗಂಡ, ಹೆಂಡತಿ ಮಕ್ಕಳು ಮತ್ತು ಇತರ ಕೆಲ ಸಂಬಂಧಿಕರನ್ನು ಒಳಗೊಂಡಿರುವುದು. ಫ್ಯಾಮಿಲಿ ಎಂಬ ಶಬ್ದ ಲ್ಯಾಟಿನ್ ಭಾಷೆಯ ಫ್ಯಾಮುಲಸ್ (Famulus) ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಫ್ಯಾಮುಲಸ್ ಎಂದರೆ ಆಳು ಮಗ ಎಂಬರ್ಥವಾಗುವುದು.

ಹಲವಾರು ಸಮಾಜಶಾಸ್ತ್ರಜ್ಞರು ಈ ಕುಟುಂಬದ ಬಗೆಗೆ ಅರ್ಥ ವಿವರಣೆಯನ್ನು ಮಾಡಿದ್ದಾರೆ. ಅವರಲ್ಲಿ ಪ್ರಮುಖವಾಗಿ ಆಗ್ಬರ್ನ್ ಮತ್ತು ನಿಮಕಾಫ್ "ಸಂತತಿ ಸಹಿತ ಇಲ್ಲವೇ ಸಂತತಿ ರಹಿತ ದೀರ್ಘಕಾಲ ಬಾಳಿಕೆ ಬರುವ ಗಂಡ ಹೆಂಡಿರ ಸಮೂಹವೇ ಕುಟುಂಬ" ಎಂದಿದ್ದಾರೆ.

ಮೆಕೈವರ್ ಮತ್ತು ಪೇಜರ ಅಭಿಪ್ರಾಯದಂತೆ, "ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ ಪೋಷಣೆಯ ಕಾರ್ಯಗಳನ್ನು ನಿರ್ವಹಿಸುವುದರ ಸಲುವಾಗಿ ಲಿಂಗ ಸಂಬಂಧದ ಆಧಾರದ ಮೇಲೆ ರಚಿತವಾದ, ಸಾಕಷ್ಟು ಖಚಿತವಾದ ದೀರ್ಘಕಾಲ ಉಳಿಯುವ ಸಮೂಹವೇ ಕುಟುಂಬ".

ಈಲಿಯಟ್ ಮತ್ತು ಮೆರಿಲ್ ಅವರು ಹೇಳುವಂತೆ, "ಜೈವಿಕ ಸಾಮಾಜಿಕ ಸಂಬಂಧಗಳೊಂದಿಗೆ ಗಂಡ ಹೆಂಡತಿ ಮತ್ತು ಮಕ್ಕಳು ಬೆರೆತಿರುವುದೇ ಕುಟುಂಬ."

ತಂದೆ, ತಾಯಿ, ಮಕ್ಕಳ ಸಮೂಹವೇ ಕುಟುಂಬ. ಇದು ಅಜ್ಜ, ಅಜ್ಜಿ, ತಂದೆ, ತಾಯಿ, ಮಕ್ಕಳು, ಮೊಮ್ಮಕ್ಕಳನ್ನು ಒಳಗೊಂಡಂತಹ ವಿಶಾಲ ಅಂದರೆ ಅವಿಭಕ್ತ ಕುಟುಂಬವಿರಬಹುದು. ಇಲ್ಲವೇ ತಂದೆ, ತಾಯಿ ಮತ್ತು ಮಕ್ಕಳನ್ನು ಮಾತ್ರ ಹೊಂದಿರುವ ವಿಭಕ್ತ ಅಥವಾ ಚಿಕ್ಕ ಆಧುನಿಕ ಅಣುಕುಟುಂಬವಿರಬಹುದು. ಸಮಾಜಶಾಸ್ತ್ರೀಯ ದೃಷ್ಟಿಯಿಂದ ನೋಡಿದಾಗ ಕುಟುಂಬವು ಸಮಾಜದ ಸೂಕ್ಷ್ಮ ಪ್ರತಿರೂಪವಾಗಿದೆ. ಅಂದರೆ ಸಮಾಜದಲ್ಲಿ ಕಂಡುಬರುವ ಮುಖ್ಯಾಂಶಗಳೆಲ್ಲವೂ ಕುಟುಂಬದ ಪ್ರತಿಬಿಂಬವಾಗಿವೆ.

### ಕುಟುಂಬದ ಪ್ರಮುಖ ಲಕ್ಷಣಗಳು

1. **ಕುಟುಂಬವು ವಿಶ್ವವ್ಯಾಪಕವಾದದ್ದು:** ಪ್ರಪಂಚದ ಎಲ್ಲ ಸಮಾಜಗಳಲ್ಲಿಯೂ ಕೌಟುಂಬಿಕ ವ್ಯವಸ್ಥೆಯಿದೆ. ಯಾವುದೇ ಕಾಲ, ದೇಶ ತೆಗೆದುಕೊಂಡರೂ ಅಲ್ಲಿ ಕೌಟುಂಬಿಕ ಜೀವನ ಸಮಾಜದ ಮುಖ್ಯ ಘಟಕವಾಗಿದ್ದುದು ಕಂಡುಬರುವುದು. ಆದಿವಾಸಿಗಳ ಜೀವನದಲ್ಲಿಯೂ ಕುಟುಂಬವಿದೆ. ಪ್ರಾಚೀನ ನಾಗರಿಕತೆಯಲ್ಲಿಯೂ ಕುಟುಂಬ ಇತ್ತು. ಅಷ್ಟೇ ಏಕೆ, ಮಾನವನಿಗಿಂತ ಕೆಳಮಟ್ಟದಲ್ಲಿರುವ ಕೀಳುಪ್ರಾಣಿಗಳಲ್ಲಿಯೂ ಕುಟುಂಬ ವ್ಯವಸ್ಥೆ ಇದೆ ಎಂದು ಫ್ರೆಂಚ್ ಸಮಾಜಶಾಸ್ತ್ರಜ್ಞನಾದ ಫೇಬರ್ ಎಂಬುವವರು ಅಭಿಪ್ರಾಯಪಟ್ಟಿರುವರು.

2. **ಕುಟುಂಬವು ಆದರ್ಶಗಳ ದ್ಯೋತಕವಾಗಿದೆ:** ಕುಟುಂಬವು ದಾಂಪತ್ಯ ಪ್ರೇಮ, ಸಂತಾನೋತ್ಪತ್ತಿ, ಮಾತೃಪ್ರೇಮ, ಪಿತೃವಾತ್ಸಲ್ಯ, ಮಕ್ಕಳ ಪಾಲನೆ ಪೋಷಣೆ, ಅವರ ಅಭಿವೃದ್ಧಿ ಮುಂತಾದ ಸಂಗತಿಗಳನ್ನು ಒಳಗೊಂಡಿದೆ. ಕುಟುಂಬದ ಸದಸ್ಯರು ಸ್ವಾರ್ಥಪರರಾಗಿರದೇ ಪರಸ್ಪರ ಸುಖ ದುಃಖಗಳಲ್ಲಿ ಪಾಲುಗಾರರಾಗುತ್ತಾರೆ. ಕುಟುಂಬದ ಸದಸ್ಯರು ಕುಟುಂಬದ ಕಲ್ಯಾಣಕ್ಕಾಗಿ ತಮ್ಮ ವೈಯಕ್ತಿಕ ಸ್ವಾರ್ಥಗಳನ್ನು ಬಲಿ ಕೊಡುತ್ತಾರೆ.

3. **ಔಪಚಾರಿಕ ಪ್ರಭಾವ:** ಮಗು ಹುಟ್ಟುವುದು ಕುಟುಂಬದಲ್ಲಿ, ಬೆಳೆಯುವುದು ಕುಟುಂಬದಲ್ಲಿ, ಮಗು ಚಿಕ್ಕದಾಗಿರುವಾಗ ಅದರ ಮನಸ್ಸು ತುಂಬ ನಿರ್ಮಲವಾಗಿರುತ್ತದೆ. ಬಿಳಿಯ ಹಾಳೆಯಂತಿರುತ್ತದೆ. ಅದರ ಮೇಲೆ ಮಂಗನ ಚಿತ್ರವನ್ನಾದರೂ ಬಿಡಿಸಬಹುದು. ಮಹಾಪುರುಷನ ಚಿತ್ರವನ್ನಾದರೂ ಬಿಡಿಸಬಹುದು. ಈ ಚಿತ್ರ ಬಿಡಿಸುವವರು ಕುಟುಂಬದಲ್ಲಿಯ ತಂದೆ ತಾಯಿಗಳು, ಸಹೋದರರು, ಸಹೋದರಿಯರು. ಮೂರು ವರುಷದ ಬುದ್ಧಿ ನೂರು ವರುಷದ ತನಕ ಎಂಬಂತೆ ಮಗು ಚಿಕ್ಕದಿದ್ದಾಗ ಕುಟುಂಬದಲ್ಲಿ ಏನನ್ನು ಕಲಿಯುವುದೋ ಅದನ್ನೇ ತನ್ನ ಜೀವನಪರ್ಯಂತ ಮುಂದುವರೆಸಿಕೊಂಡು ಬರುತ್ತದೆ. ಪ್ರೀತಿ, ಅನುಕಂಪ, ದಯೆ, ಪರೋಪಕಾರ, ತ್ಯಾಗ, ಶೀಲ, ಭಕ್ತಿ, ನಂಬಿಕೆ ಮುಂತಾದ ಜೀವನ ಮೌಲ್ಯಗಳ ಬಗೆಗೆ ಕುಟುಂಬವು ಶಿಕ್ಷಣ ಕೊಡುವುದು. ವ್ಯಕ್ತಿ ಕುಟುಂಬದೊಂದಿಗೆ ಜೀವನದ ಅಂತ್ಯದವರೆಗೂ ಸಂಬಂಧವನ್ನು ಇಟ್ಟುಕೊಳ್ಳಬೇಕಾಗುತ್ತದೆ. ವ್ಯಕ್ತಿಯು ಗೆಳೆಯರನ್ನು ಮರೆಯಬಹುದು. ಶಿಕ್ಷಕರನ್ನು ಮರೆಯಬಹುದು. ಆದರೆ ಕುಟುಂಬದ ಸದಸ್ಯರನ್ನು ಮರೆಯಲು ಸಾಧ್ಯವಿಲ್ಲ. ಪ್ರಾರಂಭಿಕ ಹಂತದಿಂದಲೇ ಅದು ವ್ಯಕ್ತಿಯ ಜೀವನದ ಮೇಲೆ ಪ್ರಭಾವವನ್ನು ಬೀರುತ್ತಿರುತ್ತದೆ.

4. **ಚಿಕ್ಕ ಗಾತ್ರ:** ಕುಟುಂಬವು ಗಾತ್ರದಲ್ಲಿ ಚಿಕ್ಕದು. ಕೀರ್ತಿಯಲ್ಲಿ ಹಿರಿಯದು. ಇದೊಂದು ಸಮಾಜದ ಕೇಂದ್ರಬಿಂದು. ಇದು ಸಮಾಜದಲ್ಲಿಯ ಇನ್ನುಳಿದ ಸಂಘ-ಸಂಸ್ಥೆಗಳೊಂದಿಗೆ ಹೋಲಿಕೆ ಮಾಡಿದಾಗ ತುಂಬ ಕಿರಿಯದು. ಸಂಯುಕ್ತ ಕುಟುಂಬ ಮಾತ್ರ ಗಾತ್ರದಲ್ಲಿ ದೊಡ್ಡದು. ನಾಗರಿಕತೆ ಹೆಚ್ಚುತ್ತಾ ನಡೆದಂತೆ ಕುಟುಂಬದ ಗಾತ್ರ ಚಿಕ್ಕದಾಗುತ್ತಾ ನಡೆದಿದೆ. ಅಮೆರಿಕೆಯಂತಹ ರಾಷ್ಟ್ರಗಳಲ್ಲಿ ಸಂತಾನರಹಿತ ಕುಟುಂಬಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ನಡೆದಿದೆ.

5. **ಸಮಾಜದ ಕೇಂದ್ರಬಿಂದು:** ಸಾಮಾಜಿಕ ರಚನೆಯಲ್ಲಿ ಕುಟುಂಬಕ್ಕೆ ಕೇಂದ್ರ ಸ್ಥಾನವಿದೆ. ಮಾನವನ ಇಡೀ ಜೀವನವು ಕುಟುಂಬವನ್ನು ಆಧರಿಸಿರುವುದು. ಇದೊಂದು ಕಿರಿಯ ಸಮಾಜವಿದ್ದಂತೆ. ಬೇರೆ ಸಂಘ ಸಂಸ್ಥೆಗಳು ನಿರ್ವಹಿಸಲಾಗದಂತಹ ಹಲವಾರು ಮೂಲಭೂತ ಕಾರ್ಯಗಳನ್ನು ಕುಟುಂಬ ನಿರ್ವಹಿಸುವುದು. ಚೀನಾ ದೇಶದ ತತ್ವಜ್ಞಾನಿಯಾದ ಕನ್‌ಫ್ಯೂಶಿಯಸ್ "ಸಮಾಜವು ಅಭಿವೃದ್ಧಿ ಹೊಂದಬೇಕಾದರೆ ಮೊದಲು ಕುಟುಂಬವನ್ನು ಅಭಿವೃದ್ಧಿಪಡಿಸು" ಎಂದು ಹೇಳಿದ್ದಾರೆ.

6. **ಪರಸ್ಪರ ಜವಾಬ್ದಾರಿ:** ಕುಟುಂಬದಲ್ಲಿ ಸದಸ್ಯರು ತಮ್ಮದೇ ಆದ ಜವಾಬ್ದಾರಿಯನ್ನು ಹೊತ್ತು ಆ ಜವಾಬ್ದಾರಿಗನುಗುಣವಾಗಿ ಕಾರ್ಯನಿರ್ವಹಿಸುತ್ತಾರೆ. ಆಹಾರ ಗಳಿಕೆ, ಸಂತಾನೋತ್ಪತ್ತಿ, ಶಿಶುಪಾಲನೆ, ಹಿರಿಯರ ಆರೈಕೆ, ಕುಟುಂಬದ ಗೌರವವನ್ನು ಕಾಪಾಡುವುದು ಮುಂತಾದ ಜವಾಬ್ದಾರಿಗಳನ್ನು ಹೊಂದಿದ್ದಾರೆ. ಎಲ್ಲರೂ ಐಕ್ಯತೆಯಿಂದ ತ್ಯಾಗ ಮನೋಭಾವದಿಂದ ಕೆಲಸ ಮಾಡುತ್ತಾರೆ. ಮಕ್ಕಳ ಕಲ್ಯಾಣ ದೃಷ್ಟಿಯಿಂದ ತಂದೆ ತಾಯಿಗಳು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಕಡೆಗಣಿಸುತ್ತಾರೆ.

7. **ಕುಟುಂಬದ ಸ್ಥಿರತೆ ಮತ್ತು ಬದಲಾವಣೆ:** ಶ್ರೇಷ್ಠ ಸಮಾಜಶಾಸ್ತ್ರಜ್ಞರಾದ ಮೆಕಾಯಿವರ್ ಮತ್ತು ಪೇಜರು ಹೇಳುವಂತೆ, ಕುಟುಂಬವು ಒಂದು ವ್ಯಾಪಕವಾದ ಸ್ಥಿರವಾದ ವ್ಯವಸ್ಥೆಯಾಗಿದೆ. ಮಾನವನ ಮೂಲಭೂತ ಬೇಡಿಕೆಗಳನ್ನು ಪೂರೈಸುವ ಕುಟುಂಬ ಒಂದು ಶಾಶ್ವತ

Digitised by Bharatavani, CIIL

ಸಂಘವಾಗಿದೆ. ಇದು ಎಲ್ಲಾ ಕಾಲಗಳಲ್ಲಿಯೂ ಸ್ಥಿರವಾಗಿ ಉಳಿದುಕೊಂಡು ಬಂದಿದೆ. ಅದೇ ರೀತಿಯಾಗಿ ಕುಟುಂಬ ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಅನುಭವಿಸಿದೆ. ಹಿಂದಿನ ಮತ್ತು ಇಂದಿನ ಕುಟುಂಬದ ರಚನೆ ಹಾಗೂ ಕಾರ್ಯಗಳನ್ನು ಅವಲೋಕನ ಮಾಡಿದಾಗ ಕುಟುಂಬವು ಬದಲಾವಣೆಯಾಗಿದೆ ಎಂಬುದು ವಿದಿತವಾಗುವುದು.

**ಕುಟುಂಬದ ಕಾರ್ಯಗಳು:** ಕೆ. ಡೇವಿಸ್, ರೀಡ್, ಲುಂಡಬರ್ಗ್, ಮೆಕೈವರ್ ಮತ್ತು ಪೇಜ್ ಮುಂತಾದವರು ಕುಟುಂಬದ ಕಾರ್ಯಗಳನ್ನು ಅನೇಕ ಬಗೆಯಲ್ಲಿ ವಿಂಗಡಿಸಿದ್ದಾರೆ. ಮೆಕೈವರ್‌ರವರು ಕುಟುಂಬದ ಕಾರ್ಯಗಳನ್ನು ಎರಡು ಪ್ರಕಾರಗಳಲ್ಲಿ ವಿಂಗಡಿಸಿದ್ದಾರೆ.

## I. ಪ್ರಾಥಮಿಕ ಕಾರ್ಯಗಳು

1. **ಲೈಂಗಿಕ ಬಯಕೆಯ ಪೂರೈಕೆ:** ಲೈಂಗಿಕ ಬಯಕೆಯು ಒಂದು ಸಹಜ ಪ್ರವೃತ್ತಿಯಾಗಿದ್ದು ಸ್ತ್ರೀ ಪುರುಷ ಇಬ್ಬರಲ್ಲಿಯೂ ಅದರ ವಾಸನೆ ಇದೆ. ಇದು ಮಾನವರಲ್ಲಿ ಗೌಪ್ಯವಾಗಿರುವುದು. ಇದನ್ನು ಆತ ಸಮಾಜದ ಮನ್ನಣೆಗನುಗುಣವಾಗಿ ಪೂರೈಸಿಕೊಳ್ಳಬೇಕು. ಕುಟುಂಬವು ವಿಧಿಬದ್ಧವಾಗಿ ಲೈಂಗಿಕ ಬಯಕೆಯನ್ನು ಈಡೇರಿಸಲು ವ್ಯವಸ್ಥೆ ಮಾಡುವುದಲ್ಲದೆ ಅದರ ಮೇಲೆ ನಿಯಂತ್ರಣವನ್ನು ಹೊಂದಿದೆ. ಮನು, ವಾತ್ಸಾಯನ ಮುಂತಾದ ಚಿಂತಕರು ಲೈಂಗಿಕ ಸಂಬಂಧದ ವ್ಯವಸ್ಥೆಯು ಕುಟುಂಬದ ಪ್ರಮುಖ ಕಾರ್ಯ ಎಂದು ವರ್ಣಿಸಿದ್ದಾರೆ. ಕುಟುಂಬವು ಅನೈತಿಕ ಹಾಗೂ ಕಾನೂನು ಬಾಹಿರ ಲೈಂಗಿಕ ಸಂಬಂಧವನ್ನು ಸಹಿಸುವುದಿಲ್ಲ. ಹ್ಯಾವಲಾಕ್ ಎಂಬ ಚಿಂತಕ ಹೇಳುವಂತೆ, ಲೈಂಗಿಕ ಹೊಂದಾಣಿಕೆ ಇಲ್ಲದ ವಿವಾಹವು ಜಾರುವ ಮರಳಿನ ಮೇಲಿರುವ ಮನೆಯಂತಾಗುತ್ತದೆ.

2. **ಮಕ್ಕಳ ಪಾಲನೆ ಪೋಷಣೆ:** ಪ್ರಜೋತ್ಪಾದನೆ ಮತ್ತು ಮಕ್ಕಳ ಪಾಲನೆ, ಪೋಷಣೆಯು ಕುಟುಂಬದ ಅತಿ ಮುಖ್ಯವಾದ ಕಾರ್ಯವಾಗಿದೆ. ಮಾನವ ಶಿಶು ಜನಿಸಿದ ಕೆಲವು ವರ್ಷಗಳವರೆಗೆ ಅಸಹಾಯಕ ಸ್ಥಿತಿಯಲ್ಲಿರುತ್ತದೆ. ಇಂಥ ಅಸಹಾಯಕ ಸ್ಥಿತಿಯಲ್ಲಿ ಕುಟುಂಬವು ಮಗುವನ್ನು ಪಾಲಿಸದಿದ್ದರೆ ಮಗುವಿನ ಬೆಳವಣಿಗೆ ಕುಂಠಿತಗೊಳ್ಳುವುದು. ತಂದೆ ತಾಯಿಗಳು ಮಗುವಿಗೆ ಪ್ರೀತಿ, ವಾತ್ಸಲ್ಯವನ್ನು ಉಣಿಸಿ, ಬೆಳೆಸುವರು. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯು ಕುಟುಂಬದಿಂದಲೇ ಸಾಧ್ಯವಾಗುವುದು.

3. **ಗೃಹ ವಾತಾವರಣ:** ಮನೆ ಎಂದರೆ ಕೇವಲ ಇಟ್ಟಿಗೆ, ಸೀಮೆಂಟ್ ಮತ್ತು ಪೀಠೋಪಕರಣಗಳನ್ನು ಹೊಂದಿರುವ ಒಂದು ರಚನೆ ಮಾತ್ರವಲ್ಲ. ಅದು ದೇವರ ಮನೆ, ಅಡುಗೆ ಮನೆ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಪ್ರೀತಿ ವಾತ್ಸಲ್ಯಗಳ ಜೀವಂತ ಚಟುವಟಿಕೆಗಳನ್ನು ಹೊಂದಿದೆ. ದುಡಿದು ಬೆಂಡಾಗಿ ಬಂದ ದೇಹ ಮನಸ್ಸುಗಳಿಗೆ ಉಲ್ಲಾಸಮಯ ವಾತಾವರಣವನ್ನು ಕುಟುಂಬವು ಒದಗಿಸುವಂತಿರಬೇಕು. ನಗುಮುಖದ ಹೆಂಡತಿ, ಲವಲವಿಕೆಯಿಂದ ಇರುವ ಮಕ್ಕಳು ಬೇಸರವನ್ನು ಹೊಡೆದು ಹಾಕಬಲ್ಲದು. ಮನೆಯು ಸುಖ, ಸಂತೋಷ, ನೆಮ್ಮದಿ, ಪ್ರೀತಿ, ವಾತ್ಸಲ್ಯಗಳನ್ನು ದೊರಕಿಸುವ ಸ್ವರ್ಗವಿದ್ದಂತೆ.

## II. ಆನುಷಂಗಿಕ ಕಾರ್ಯಗಳು

ಕುಟುಂಬದ ಮಾಧ್ಯಮಿಕ ಕಾರ್ಯಗಳನ್ನು ಪ್ರಮುಖವಾಗಿ ಐದು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

ಆರ್ಥಿಕ ಕಾರ್ಯಗಳು, ಶೈಕ್ಷಣಿಕ ಕಾರ್ಯಗಳು, ಧಾರ್ಮಿಕ ಕಾರ್ಯಗಳು, ಮನರಂಜನಾ ಕಾರ್ಯಗಳು, ಸಾಮಾಜೀಕರಣ– ಈ ಐದು ಕಾರ್ಯಗಳಲ್ಲಿ ಸಾಮಾಜೀಕರಣವೊಂದನ್ನು ಹೊರತುಪಡಿಸಿ, ಉಳಿದ ನಾಲ್ಕು ಕಾರ್ಯಗಳು ಕುಟುಂಬದಿಂದ ತಪ್ಪಿ ಹೋಗಿ ಬೇರೆ ಸಂಘ ಸಂಸ್ಥೆಗಳಿಗೆ ವರ್ಗವಾಗಿದೆ.

1. **ಆರ್ಥಿಕ ಕಾರ್ಯಗಳು:** ಮೊದಲು ಕುಟುಂಬಗಳು ಉತ್ಪಾದನಾ ಮತ್ತು ಉಪಭೋಗದ ಘಟಕವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಅಂದರೆ ಸಾಂಪ್ರದಾಯಿಕ ಕುಟುಂಬಗಳು ತಮಗೆ ಅವಶ್ಯವಾದ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದವು. ಹಿಂದಿನ ಕಾಲದಲ್ಲಿ ಪ್ರತಿಯೊಂದು ಕುಟುಂಬವು ತನ್ನದೇ ಆದ ಕುಲ ಕಸುಬನ್ನು ಹೊಂದಿತ್ತು. ಬಡಿಗತನ ಕಮ್ಮಾರಿಕೆ ಕುಂಬಾರಿಕೆ ನೇಕಾರಿಕೆ ಇತ್ಯಾದಿ. ಕುಟುಂಬವು ಮೂಲಭೂತ ಬೇಡಿಕೆಗಳನ್ನು ಪೂರೈಸುವುದರೊಂದಿಗೆ ಉದ್ಯೋಗವನ್ನು ಕೂಡಾ ಒದಗಿಸುತ್ತಿತ್ತು. ಆದರೆ ಇಂದು ಕೈಗಾರೀಕರಣ, ಆಧುನೀಕರಣದಿಂದಾಗಿ ಆರ್ಥಿಕ ಕಾರ್ಯಗಳು ಕಾರ್ಖಾನೆ, ಬ್ಯಾಂಕು ಮುಂತಾದ ವಾಣಿಜ್ಯ ಮಳಿಗೆಗಳಿಗೆ ವರ್ಗಾಯಿಸಲ್ಪಟ್ಟಿವೆ.

2. **ಶೈಕ್ಷಣಿಕ ಕಾರ್ಯಗಳು:** ಮಗುವಿನ ಶಿಕ್ಷಣ ಮನೆಯಿಂದಲೇ ಪ್ರಾರಂಭವಾಗುವುದು. ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು. ಮಗು ತನ್ನ ತಾಯಿಯ ಮೂಲಕ ಮಾತೃಭಾಷೆಯನ್ನು ಕಲಿಯುತ್ತದೆ. ತನ್ನ ತಾಯಿ ನುಡಿಯನ್ನು ಕಲಿಯುವ ಮಗುವಿನ ಸಾಮಾಜೀಕರಣವು ಕುಟುಂಬದಿಂದ ಪ್ರಾರಂಭವಾಗುವುದು. ಮಗು ಕುಟುಂಬದಲ್ಲಿ ಅತ್ಯಮೂಲ್ಯವಾದ ಜೀವನ ಶಿಕ್ಷಣವನ್ನು ಪಡೆಯುವುದು ಮತ್ತು ಮಗು ಸಾಮಾಜಿಕ ಮೌಲ್ಯಗಳನ್ನು ಕಲಿಯುವುದು. ಆದ್ದರಿಂದ ಮನೆಯನ್ನು ಮಗುವಿನ ಜೀವನದ ನಿತ್ಯ ಶಾಲೆಯೆಂದು ಕರೆಯುತ್ತಾರೆ.

3. **ಧಾರ್ಮಿಕ ಕಾರ್ಯಗಳು:** ಸಾಂಪ್ರದಾಯಿಕ ಕುಟುಂಬವು ಧಾರ್ಮಿಕ ಆಚರಣೆಗಳ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಕುಟುಂಬದ ಹಿರಿಯ ವ್ಯಕ್ತಿಯು ಪುರೋಹಿತನಾಗಿಯೂ ಮತ್ತು ನಿರ್ವಹಿಸುತ್ತಿದ್ದ ಕುಟುಂಬದಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಪೂಜಾ ವಿಧಾನದ ಬಗ್ಗೆ ತಿಳಿಹೇಳುತ್ತಿದ್ದರು. ಭಾರತೀಯ ಕುಟುಂಬದಲ್ಲಿ ಮೇಲಿಂದ ಮೇಲೆ ಪ್ರಾರ್ಥನೆ, ಭಜನೆ, ಕೀರ್ತನೆ, ಹರಿಕಥೆ ಮುಂತಾದ ಧಾರ್ಮಿಕ ಕಾರ್ಯಗಳು ನಡೆಯುತ್ತಿದ್ದವು. ಫಲವಾಗಿ ಭಕ್ತಿ, ವಿಶ್ವಾಸ, ಸಹಕಾರ, ಗೌರವ, ಪೂಜ್ಯಭಾವನೆ, ಸಹಾನುಭೂತಿ, ಸತತ ವೈಯಕ್ತಿಕ ಕಾರ್ಯ ಕೈಗೊಳ್ಳುವುದು, ಇವುಗಳ ಬಗ್ಗೆ ತರಬೇತಿ ನೀಡುವುದು.

4. **ಮನೋರಂಜನಾ ಕಾರ್ಯಗಳು :** ಮೊದಲಿನ ಕುಟುಂಬಗಳು ಸದಸ್ಯರಿಗೆ ಮನರಂಜನೆಯನ್ನು ಒದಗಿಸುತ್ತಿದ್ದವು. ಹಾಡುವುದು, ಕುಣಿಯುವುದು, ಅಜ್ಜ ಅಜ್ಜಿಯರು ಕಥೆ ಹೇಳುವುದು, ಹಾಸ್ಯ ಮಾಡುವುದು ಮುಂತಾದ ಕಾರ್ಯಕ್ರಮಗಳು ಕುಟುಂಬದಲ್ಲಿ ಜರುಗುತ್ತಿದ್ದವು. ಈ ಮನೆಯ ಮನರಂಜನೆಯು ದೇಹ ಮತ್ತು ಮನಸ್ಸು ಎರಡನ್ನೂ ತಣಿಸುತ್ತಿತ್ತು. ಆದರೆ ಆ ಕಾರ್ಯವನ್ನು ಇಂದು ದೂರದರ್ಶನ, ಚಲನಚಿತ್ರ ಮಂದಿರಗಳು, ಕ್ಲಬ್ಬು, ಹೋಟೆಲುಗಳು ನಿರ್ವಹಿಸುತ್ತಿವೆ.

5. **ಸಾಮಾಜೀಕರಣ :** ವ್ಯಕ್ತಿಯ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರ ತುಂಬಾ ಪ್ರಮುಖವಾದುದು. ಮನೆ ಮತ್ತು ನೆರೆಹೊರೆಯವರೊಂದಿಗೆ ಬೆರೆಯುವ, ಹೊಂದಿಕೊಳ್ಳುವ ಗುಣ ಇಲ್ಲೇ ಆರಂಭವಾಗುವುದು. ಈ ಸಾಮಾಜೀಕರಣದ ಮೂಲಕ ಮಗುವು ಕುಟುಂಬದಿಂದ ಸಾಮಾಜಿಕ ಮೌಲ್ಯಗಳು, ನೈತಿಕ ಸದ್ಗುಣಗಳು, ಸಂಸ್ಕೃತಿ, ಕಲೆ, ಕಾರ್ಯ ಮುಂತಾದವುಗಳನ್ನು ತಿಳಿಯುವುದು. ಮಗುವಿನ ನಡತೆಯನ್ನು ರೂಪಿಸುವಲ್ಲಿ ಕುಟುಂಬದ ಪಾತ್ರ ಅತ್ಯಮೂಲ್ಯವಾದುದು. ಮಗುವಿಗೆ ಸಾಮಾಜೀಕರಣದ ದೀಕ್ಷೆಯನ್ನು ನೀಡುವಲ್ಲಿ ಕುಟುಂಬದ ಪಾತ್ರವನ್ನು ಮಹಾತ್ಮಗಾಂಧೀಜಿ ಹಾಗೂ ಸಿಗ್ಮಂಡ್ ಫ್ರಾಯ್ಡ್ ಇವರು ಕೊಂಡಾಡಿದ್ದಾರೆ.

Digitised by Bharatavani, CIIL

ಹೀಗೆ ಕುಟುಂಬವು ಕೆಲವೊಂದು ಕಡ್ಡಾಯ ಅಥವಾ ಪ್ರಾಥಮಿಕ ಕಾರ್ಯಗಳನ್ನು ಕೆಲವು ಮಾಧ್ಯಮಿಕ ಕಾರ್ಯಗಳನ್ನು ನಿರ್ವಹಿಸುವುದು. ಇಂದು ಕುಟುಂಬದ ಬಹುತೇಕ ಕಾರ್ಯಗಳನ್ನು ವಿಜ್ಞಾನ, ತಂತ್ರಜ್ಞಾನ ಶಿಕ್ಷಣ, ಆಧುನೀಕರಣ, ನಗರೀಕರಣ ಕಾರ್ಯವನ್ನು ಕೆಲವು ಬೇರೆ ಬೇರೆ ಸಂಘ ಸಂಸ್ಥೆಗಳು ಕಸಿದುಕೊಂಡಿವೆ.

ಶಿಕ್ಷಣಕ್ಕೂ ಕುಟುಂಬಕ್ಕೂ ನಿಕಟ ಸಂಬಂಧವಿದೆ. ಟಿ.ಪಿ. ಕೈಲಾಸಂ 'ಮಕ್ಕಳ ಸ್ಕೂಲು ಮನೇಲಲ್ವೆ' ಎಂದು ಹೇಳಿ ಮಗುವಿನ ಶಿಕ್ಷಣದಲ್ಲಿ ಕುಟುಂಬದ ಮಹತ್ವದ ಮೇಲೆ ಬೆಳಕು ಚೆಲ್ಲಿದ್ದಾರೆ. ಮಗುವಿಗೆ ನಿಜವಾದ ಅರ್ಥದಲ್ಲಿ ತಾಯಿಯೇ ಪ್ರಥಮ ಗುರು. ತಂದೆ–ತಾಯಿಯ ಶೈಕ್ಷಣಿಕ ಮಾರ್ಗದರ್ಶನವನ್ನು ಶಾಲೆ ವ್ಯವಸ್ಥಿತ ರೀತಿಯಲ್ಲಿ ಮುಂದುವರಿಸುತ್ತದೆ. ಶಿಕ್ಷಕ ಮಗುವಿಗೆ ಬೋಧಿಸುವುದರ ಜೊತೆಗೆ ಪೋಷಕರಿಗೂ ಮಾರ್ಗದರ್ಶನ ನೀಡಿ ಅವರ ಸಹಕಾರ ಪಡೆಯುವುದು ಒಳ್ಳೆಯದು. ಶಿಕ್ಷಕ ಮಕ್ಕಳಲ್ಲಿ ಕುಟುಂಬದ ಮಹತ್ವ, ಕಾರ್ಯಗಳನ್ನು ತಿಳಿಸಿ, ಮಕ್ಕಳ ಸರ್ವಾಂಗೀಣ ವಿಕಾಸದಲ್ಲಿ ಕುಟುಂಬದ ಪಾತ್ರದ ಬಗ್ಗೆ ಅರಿವು ಮೂಡಿಸಬೇಕು. ಮಕ್ಕಳಲ್ಲಿ ವಿಧೇಯತೆ, ತಂದೆ–ತಾಯಿ ಬಗ್ಗೆ ಗೌರವ ಭಾವನೆ, ವೃದ್ಧಾಪ್ಯದಲ್ಲಿ ಅವರ ಸಂರಕ್ಷಣೆಯ ಅಗತ್ಯ, ಕುಟುಂಬ ಗೌರವದ ಸಂರಕ್ಷಣೆ ಮುಂತಾದ ಗುಣಗಳನ್ನು ಶಿಕ್ಷಣ ಬೆಳೆಸಬೇಕು.

–ಎನ್.ಬಿ.ಕೊ.

## ಕೂಟ ವಿಶ್ಲೇಷಣೆ

ಕೂಟ ವಿಶ್ಲೇಷಣೆ ಎಂಬುದು ಸಂಶೋಧನಾ ಅಧ್ಯಯನದ ಒಂದು ವಿಧಾನ ಅಥವಾ ವಿನ್ಯಾಸ. ಇದನ್ನು ಸಮಾಜಶಾಸ್ತ್ರ, ವೈದ್ಯಕೀಯ, ಪರಿಸರ ಅಧ್ಯಯನ ಹಾಗೂ ಶಿಕ್ಷಣ ಶಾಸ್ತ್ರ ಮುಂತಾದ ಅನೇಕ ವಿಷಯಗಳ ಸಂದರ್ಭಗಳಲ್ಲಿ ಯಶಸ್ವಿಯಾಗಿ ಬಳಸಲಾಗಿದೆ. ಈ ಪ್ರಕ್ರಿಯಾತ್ಮಕ ವಿನ್ಯಾಸ ಮೂಲಭೂತವಾಗಿ ದೀರ್ಘಕಾಲದ ಅಧ್ಯಯನವಾಗಿದ್ದು, ಇದರ ಫಲಿತಾಂಶವನ್ನು ಕಾಲಮಾನದ ಒಂದು ನಿರ್ದಿಷ್ಟ ಹಂತದ ದತ್ತಾಂಶಗಳಿಗೆ ಹೋಲಿಸಿ ನಿರ್ಧಾರಗಳನ್ನು ರೂಪಿಸಲಾಗುತ್ತದೆ.

ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಸಮಾನ ಅಂಶವನ್ನು, ಲಕ್ಷಣಗಳನ್ನು ಹೊಂದಿರುವ ವ್ಯಕ್ತಿಗಳ ಗುಂಪು 'ಕೂಟ' (ಕೋಹಾರ್ಟ್) ಎನಿಸಿಕೊಳ್ಳುತ್ತದೆ. ಒಂದೇ ರೀತಿಯ ಅನುಭವವನ್ನು ಹಂಚಿಕೊಂಡ ಜನರ ಸಮೂಹವು 'ಕೂಟ'ವಾಗುತ್ತದೆ. ಉದಾಹರಣೆಗೆ, ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಹುಟ್ಟಿದ ಮಕ್ಕಳು 'ಜನನ ಕೂಟ'ವನ್ನು ಸೃಷ್ಟಿಸುತ್ತಾರೆ. ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಮದುವೆಯಾದ ದಂಪತಿಗಳು 'ವಿವಾಹಕೂಟ'ದ ಸದಸ್ಯರಾಗುತ್ತಾರೆ. ಹಣದುಬ್ಬರದ ಸಂದರ್ಭದಲ್ಲಿ ಮದುವೆಯಾದ ದಂಪತಿಗಳು ಇತ್ಯಾದಿ. ಇದಲ್ಲದೆ ಯುದ್ಧಗಳ ಸಂದರ್ಭದಲ್ಲಿ, ಪ್ರವಾಹಗಳ ಸಂದರ್ಭದಲ್ಲಿ, ಭೂಕಂಪಗಳ ಸಂದರ್ಭದಲ್ಲಿ ಸಮಾಜದಲ್ಲಿ ವಿಶಿಷ್ಟ 'ಕೂಟ'ಗಳನ್ನೂ ಗಮನಿಸಬಹುದು. ಶಾಲೆ ಬಿಟ್ಟ ಮಕ್ಕಳು, ಕೆಲಸ ಕಳೆದುಕೊಂಡ ವಿವಾಹಿತ ವಯಸ್ಕರು, ನಿರ್ದಿಷ್ಟ ಔಷಧದ ಪ್ರಭಾವಕ್ಕೆ ಒಳಗಾದವರು, ನಿರ್ದಿಷ್ಟ ಅಭ್ಯಾಸ ದುರಭ್ಯಾಸ ಚಟಗಳನ್ನು ರೂಢಿಸಿಕೊಂಡವರೂ 'ಕೂಟ' ಸೃಷ್ಟಿಗೆ ಕಾರಣರಾಗುತ್ತಾರೆ.

ಕೂಟ ವಿಶ್ಲೇಷಣೆಯ ಪ್ರಕ್ರಿಯೆಯಲ್ಲಿ ಒಂದು ನಿರ್ದಿಷ್ಟ ಅವಲಂಬಿತ ಚಲಕವನ್ನು (ಉದಾ: ಶಾಲಾ ಮಕ್ಕಳ ಶೈಕ್ಷಣಿಕ ಸ್ಥಿತಿ) ಸಂಬಂಧಪಟ್ಟ ಸ್ವತಂತ್ರ ಚಲಕದ (ಉದಾ: ಸುನಾಮಿಯ ಪ್ರಭಾವ) ಹಿನ್ನೆಲೆಯಲ್ಲಿ ನಿರ್ದಿಷ್ಟ ಕಾಲಾಂತರದಲ್ಲಿ ಅಧ್ಯಯನ ಮಾಡಲಾಗುತ್ತದೆ. ಇಂತಹ ಅಧ್ಯಯನಗಳು ಅವಲಂಬಿತ ಚಲಕವನ್ನು ಕುರಿತ ಫಲಿತಾಂಶಗಳನ್ನು ಬೆಳಕಿಗೆ ತರುವುದರ ಜೊತೆಗೆ ಸ್ವತಂತ್ರ ಚಲಕವನ್ನು ಕುರಿತಂತೆಯೂ ಅನೇಕ ಹೊಳಹುಗಳನ್ನು ಹೊರಚೆಲ್ಲುತ್ತದೆ.

ಕೂಟಗಳನ್ನು ಕುರಿತ ವಿಶ್ಲೇಷಣೆ ಹೊಸದೇನೂ ಅಲ್ಲ. ಆದರೆ ಅದು ಸಮಾಜಶಾಸ್ತ್ರವನ್ನು ಪ್ರವೇಶಿಸಿದುದು 1960ರ ದಶಕದಲ್ಲಿ. ನಂತರ ಶಿಕ್ಷಣ ವಿಷಯದಲ್ಲಿ ಆಸಕ್ತರಾದ ಅರ್ಥಶಾಸ್ತ್ರಜ್ಞರಿಂದ 1970ರ ದಶಕದಲ್ಲಿ ಇದು ಶಿಕ್ಷಣವನ್ನು ಪ್ರವೇಶಿಸಿತು.

ಕೂಟಗಳ ಮೂಲ ಕಲ್ಪನೆಯನ್ನು ಸಮಾಜಶಾಸ್ತ್ರಜ್ಞ ರೈಡರ್‌ನ 1959ರ ಬರಹಗಳಲ್ಲಿ ಕಾಣಬಹುದು. ಅವನು 'ಕೂಟ'ವನ್ನು ಸಾಮಾಜಿಕ ಬದಲಾವಣೆಯ ಸಿದ್ಧಾಂತದ ಒಂದು ಪರಿಕಲ್ಪನೆಯಾಗಿ ಗಮನಿಸಿದ್ದಾನೆ. ಕೂಟಗಳನ್ನು ಗುರುತಿಸುವ ಅಂಶಗಳನ್ನು ಅವನು ಪ್ರಸ್ತುತಪಡಿಸಿದ. ಅವನು ಹೇಳುವಂತೆ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಹುಟ್ಟಿದ ಅಥವಾ ನಿರ್ದಿಷ್ಟ ವ್ಯವಸ್ಥೆಯ ಪ್ರಭಾವಕ್ಕೆ ಸಮಾನವಾಗಿ ಒಳಗಾದ ಅಥವಾ ಯಾವುದೇ ಸಮಾನ ಅಂಶಗಳ ಪ್ರಭಾವಕ್ಕೆ ಒಳಗಾದ ವ್ಯಕ್ತಿಗಳು 'ಕೂಟ'ದ ಸದಸ್ಯರಾಗುತ್ತಾರೆ. ಕೂಟ ವಿಶ್ಲೇಷಣೆಯ ಪ್ರಕ್ರಿಯೆಯಲ್ಲಿ ಇವರನ್ನು ಒಂದು ಕಾಲಾಂತರದ ವಿವಿಧ ಘಟ್ಟಗಳಲ್ಲಿ ನಿರಂತರವಾಗಿ ಅಧ್ಯಯನ ಮಾಡಲಾಗುತ್ತದೆ.

ಕೂಟ ವಿಶ್ಲೇಷಣೆಯ ಮೊದಲ ಅಧ್ಯಯನಗಳು 'ಕೂಟ' ವಯಸ್ಸು ಹಾಗೂ ಕಾಲಾಂತರ – ಈ ಮೂರು ಘಟಕಗಳ ಸಂಬಂಧವನ್ನು ಕುರಿತು ಅಧ್ಯಯನ ನಡೆಸಿರುವುದಾದರೂ ಮುಂದಿನ ಅಧ್ಯಯನಗಳಲ್ಲಿ ಕೂಟ ಅಧ್ಯಯನದ ಈ ಅವಯವಗಳು ಬದಲಾಗಿವೆ. ಸಾಂಪ್ರದಾಯಿಕವಾದ ವಿನ್ಯಾಸವನ್ನು ಕೆಳಕಂಡಂತೆ ಗುರುತಿಸಬಹುದು.




**ಕೂಟ, ಕಾಲಾಂತರ ಹಾಗೂ ವಯಸ್ಸು ಇವುಗಳ ಪರಿಣಾಮದ ಸಂಬಂಧ**

Digitised by Bharatavani, CIIL

ಇಲ್ಲಿ ಬಿ–ಎ ಎಂಬುದು ಕಾಲಾಂತರದಲ್ಲಿ ಕಿರಿಯರ ಕೂಟದ ವ್ಯತ್ಯಾಸವನ್ನೂ, ಸಿ–ಎ ಎಂಬುದು ಮೊದಲ ಕಾಲಘಟ್ಟದಲ್ಲಿ ಕಿರಿಯರು ತಮ್ಮ ಹಿರಿಯರ ಗುಂಪಿನ ವಯಸ್ಸಿನ ವ್ಯತ್ಯಾಸವನ್ನೂ, ಬಿ–ಸಿ ಎಂಬುದು ಇಂದು ಹಿರಿಯರ ವಯಸ್ಸನ್ನು ತಲುಪಿರುವವರು ಹಾಗೂ ಅಂದು ಹಿರಿಯರ ವಯಸ್ಸಿನವರು ಇವರ ನಡುವಿನ ವ್ಯತ್ಯಾಸವನ್ನೂ ತಿಳಿಸುತ್ತದೆ. ಇಂದಿನ ಪರಿಸ್ಥಿತಿಯಲ್ಲಿ 'ಕೂಟ ವಿಶ್ಲೇಷಣೆ'ಗೆ ಒಂದು ನಿರ್ದಿಷ್ಟ ಉದಾಹರಣೆ ಹೀಗಿರಬಹುದು.

ಸುನಾಮಿ ಸನ್ನಿವೇಶ ಆ ಪ್ರದೇಶದ ಮಕ್ಕಳ ಶಿಕ್ಷಣದ ಮೇಲೆ ಹೇಗೆ ಪ್ರಭಾವಬೀರಿದೆ ಅಥವಾ ಸುನಾಮಿಯಿಂದ ಮಕ್ಕಳು, ಮುಖ್ಯವಾಗಿ ಅವರ ಶಿಕ್ಷಣ ಹೇಗೆ ಪ್ರಭಾವಿತವಾಗಿದೆ ಎಂದು ಗಮನಿಸುವುದು ಒಂದು ಅಧ್ಯಯನದ ಉದ್ದೇಶವಾಗಿದೆ ಎಂದಿಟ್ಟುಕೊಳ್ಳೋಣ. ಆಗ ಸುನಾಮಿಪೀಡಿತ ಮಕ್ಕಳ ಗುಂಪು ಒಂದು 'ಕೂಟ' (ಸುನಾಮಿ ಮಕ್ಕಳ ಕೂಟ) ವೆನಿಸಿಕೊಳ್ಳುತ್ತದೆ. ಏಕೆಂದರೆ ಈ ಮಕ್ಕಳೆಲ್ಲರೂ ಒಂದೇ ಕಾಲಘಟ್ಟದಲ್ಲಿ ಒಂದೇ ರೀತಿಯ ಅನುಭವವನ್ನು ಹಂಚಿಕೊಂಡವರು. ಶಿಕ್ಷಣದಲ್ಲಿ ಮಕ್ಕಳ ಸಾಧನಾಮಟ್ಟ, ಶಿಕ್ಷಣವನ್ನು ಕುರಿತ ಅವರ ಮನೋಭಾವ, ಅವರ ಓದುವ ಅಭ್ಯಾಸ, ಅವರ ಸಂವಹನ ಸಾಮರ್ಥ್ಯ ಇತ್ಯಾದಿ ಹಲವಾರು ಮಾನದಂಡಗಳ ಹಿನ್ನೆಲೆಯಲ್ಲಿ ಅವರನ್ನು ಒಂದು ಕಾಲಾಂತರದಲ್ಲಿ (ಎರಡು ಅಥವಾ ಮೂರು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳು) ಗಮನಿಸಲಾಗುತ್ತದೆ. ಸುನಾಮಿ ವರ್ಷದಲ್ಲಿ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದ ಮಕ್ಕಳನ್ನು ಆಯ್ಕೆ ಮಾಡಿಕೊಂಡು ಮೂರು ವರ್ಷಗಳ ಕಾಲ ಮೇಲೆ ತಿಳಿಸಿದ ಅಂಶಗಳ (ಚಲಕಗಳ) ಹಿನ್ನೆಲೆಯಲ್ಲಿ ಅವರನ್ನು ಅಧ್ಯಯನ ಮಾಡಿ, ಇವರನ್ನು ಮೊದಲ ಹಂತದ ಸಮಾನಾಂತರವಾದ (ಸುನಾಮಿ ಅನುಭವದಲ್ಲಿ) ಹಿರಿಯ ಗುಂಪಿನೊಂದಿಗೆ (ಸುನಾಮಿ ಪೀಡಿತರಾದ ವರ್ಷದಲ್ಲಿ ಏಳನೇ ತರಗತಿಯಲ್ಲಿರುವ ಮಕ್ಕಳ ಗುಂಪಿನೊಂದಿಗೆ) ಹೋಲಿಸುತ್ತೇವೆ. ಈ ಎರಡು ಗುಂಪುಗಳ ನಡುವಿನ ವ್ಯತ್ಯಾಸ ಸುನಾಮಿಯಿಂದ ಮಕ್ಕಳ ಶೈಕ್ಷಣದ ಮೇಲಿನ ಪ್ರಭಾವವನ್ನು ಮನಗಾಣಿಸುತ್ತದೆ.

ಉದಾಹರಣೆಗೆ, ಮಕ್ಕಳ ಸಾಧನಾ ಮಟ್ಟ ಮೊದಲ ವರ್ಷಕ್ಕಿಂತ ಉತ್ತಮವಾಗಿರಬಹುದು. ಮನೋಭಾವ ಸ್ವಲ್ಪ ಇಥ್ಯಾತ್ಮಕತೆಯ ಕಡೆಗೆ ವಾಲಿರಬಹುದು, ಓದುವ ಅಭ್ಯಾಸ ಸ್ವಲ್ಪ ಬಲವಾಗಿರಬಹುದು ಇತ್ಯಾದಿ ಆಗಿಲ್ಲದೆಯೂ ಇರಬಹುದು. ಈ ವಿನ್ಯಾಸವನ್ನೂ ಕೆಳಕಂಡಂತೆ ಸೂಚಿಸಬಹುದು:




ಬಿ–ಎ= ಒಂದು ಕಾಲಾಂತರದಲ್ಲಿ ಮಕ್ಕಳ ಶೈಕ್ಷಣಿಕ ಸ್ಥಿತಿಯಲ್ಲಿ ಕಂಡ ವ್ಯತ್ಯಾಸ

ಸಿ–ಎ=ಒಂದೇ ಕಾಲಘಟ್ಟದಲ್ಲಿ ಎರಡು ಹಂತದ ಮಕ್ಕಳ ನಡುವಿನ ವ್ಯತ್ಯಾಸ

ಬಿ–ಸಿ= ಸುನಾಮಿಯ ಮೂರು ವರ್ಷಗಳ ನಂತರದ ಶೈಕ್ಷಣಿಕ ಸ್ಥಿತಿ ಮೂರು ವರ್ಷಗಳ ಹಿಂದಿನ ಅದೇ ವಯೋಮಾನದ ಮಕ್ಕಳ ಶೈಕ್ಷಣಿಕ ಸ್ಥಿತಿ ಇವುಗಳ ನಡುವಿನ ವ್ಯತ್ಯಾಸ, ಇದೇ ಗುರುತಿಸಿಕೊಂಡ ಮಕ್ಕಳ ಮೇಲೆ ಸನ್ನಿವೇಶ ಬೀರಿದ ಪರಿಣಾಮ.

ಈ ಮೂರನೆಯ ಅಂಶ ಮಕ್ಕಳ ಶಿಕ್ಷಣದ ಮೇಲೆ ಸುನಾಮಿಯ ಪ್ರಭಾವದ ಗತಿಯನ್ನು ಸೂಚಿಸುತ್ತದೆ. ಈ ವ್ಯತ್ಯಾಸವನ್ನು ಸಂಪೂರ್ಣವಾಗಿ ಸುನಾಮಿಗೇ ಅಂಟಿಸಲಾಗದು. ಏಕೆಂದರೆ ಆಯಾ ಕಾಲಘಟ್ಟದಲ್ಲಿ ಆ ಕೂಟವು ಎದುರಾದ ಪರಿಸ್ಥಿತಿಯನ್ನು ಎದುರಿಸುವಲ್ಲಿ ಆ ಕೂಟದ ಒಟ್ಟು ಅನನ್ಯತೆಯ ಪ್ರಭಾವ ಇರುತ್ತದೆ.

ಮಾನವಿಕ ವಿಭಾಗಗಳ ಅಧ್ಯಯನದಲ್ಲಿ ಪರಿಸರ ಮತ್ತು ಮಾನವನ ಅಂತರ್‌ಕ್ರಿಯೆಗೆ ಸಂಬಂಧಪಟ್ಟ ಫಲಿತಾಂಶಗಳನ್ನು ಗುರುತಿಸಲು 'ಕೂಟ ವಿಶ್ಲೇಷಣೆ' ಅಥವಾ 'ಕೂಟ ಅಧ್ಯಯನ'ವನ್ನು ಬಳಸಲಾಗುತ್ತದೆ. ಒಂದು ಪ್ರದೇಶದ ಭೌಗೋಳಿಕ, ರಾಜಕೀಯ, ತಾಂತ್ರಿಕ ಸನ್ನಿವೇಶಗಳಲ್ಲಾದ ಬದಲಾವಣೆಗಳಿಂದಾಗಿ ಸಮಾಜದಲ್ಲಿ ಅನೇಕ ಬದಲಾವಣೆಗಳು ಉಂಟಾಗುತ್ತವೆ. ಈ ಅಂಶಗಳಿಗೆ ವ್ಯಕ್ತಿ ಹೇಗೆ ಪ್ರತಿಕ್ರಿಯಿಸುತ್ತಾನೆ ಎಂಬುದರ ಮೇಲೆ ಆಯಾ ಸ್ಥಳದ ಸಾಮಾಜಿಕ ಬದಲಾವಣೆಗಳು ನಿರ್ಧಾರವಾಗುತ್ತವೆ. ಮಾನವನ ಈ ಸ್ಪಂದನ ಅಥವಾ ಪ್ರತಿಕ್ರಿಯೆಯನ್ನು 'ಕೂಟ ಅಧ್ಯಯನ'ಗಳು ಯಶಸ್ವಿಯಾಗಿ ದಾಖಲಿಸುತ್ತವೆ. ಸುನಾಮಿಯಿಂದಾಗಿ ಆ ಸಮಾಜದ ಭಿನ್ನ ಗುಂಪುಗಳು ಹೇಗೆ ಪ್ರಭಾವಿತವಾದವು ಹಾಗೂ ಅವುಗಳನ್ನು ಹೇಗೆ ನಿಭಾಯಿಸಿಕೊಂಡವು ಎಂಬುದನ್ನು ತೋರಿಸಿಕೊಡುತ್ತಲೇ ಸುನಾಮಿಯ ಸ್ವರೂಪವನ್ನೂ ಈ ಅಧ್ಯಯನಗಳು ದಾಖಲಿಸುತ್ತವೆ. ಹೀಗೆ ನಿರ್ದಿಷ್ಟ ಕಾಲದ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಪಡೆದ ಸಾಮಾನ್ಯೀಕರಣಗಳಿಗಿಂತ ಕಾಲಾಂತರದಲ್ಲಿನ ವಿದ್ಯಮಾನಗಳನ್ನು ಆಧರಿಸಿದ ಫಲಿತಾಂಶಗಳನ್ನು ಹೊರಗೆಡಹುವುದೇ 'ಕೂಟ ಅಧ್ಯಯನ' ಅಥವಾ "ಕೂಟ ವಿಶ್ಲೇಷಣೆ"ಯ ವೈಶಿಷ್ಟ್ಯ. ಇದಲ್ಲದೆ, 'ಕೂಟ'ಗಳು ವೈಚಾರಿಕವಾದ ಹಿನ್ನೆಲೆಯಲ್ಲಿ ಆಯ್ಕೆ ಮಾಡಿದ ಗುಂಪುಗಳಾದ್ದರಿಂದ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಹೆಚ್ಚು ಸಮಂಜಸತೆಯ ಸಾಧನೆಗೆ ಅವಕಾಶವಿದೆ. ಸಂಶೋಧನೆಯ ಉಳಿದ ವಿನ್ಯಾಸಗಳು ಒಟ್ಟು ಜನಸಂಖ್ಯೆಗೆ ಸಂಬಂಧಪಟ್ಟಿರುವುದರಿಂದ ಪರಿಣಾಮದ ಸ್ಪಷ್ಟ ಪರಿಣಾಮ ಜನಸಂಖ್ಯೆಯ ಯಾವ ಭಾಗಕ್ಕೆ ಆಗಿದೆ ಎಂದು ಹೇಳಲಾಗುವುದಿಲ್ಲ. ಸಮಾಜದಲ್ಲಾಗುವ ಬದಲಾವಣೆಗಳು ಎಲ್ಲ ಗುಂಪುಗಳನ್ನೂ (ಒಂದೇ ಲಕ್ಷಣಗಳಿರುವ) ಒಂದೇ ರೀತಿಯಲ್ಲಿ ಪ್ರಭಾವಿಸುವುದಿಲ್ಲ. ಹಾಗೂ ಈ ಬದಲಾವಣೆಗಳಿಗೆ ಎಲ್ಲ ಗುಂಪುಗಳೂ ಒಂದೇ ರೀತಿಯಲ್ಲಿ ಪ್ರತಿಕ್ರಿಯಿಸುವುದಿಲ್ಲ. ಎಂಬ ಸತ್ಯದ ಹಿನ್ನೆಲೆಯಲ್ಲೂ 'ಕೂಟ ವಿಶ್ಲೇಷಣೆ'ಗೆ ಹೆಚ್ಚಿನ ಮನ್ನಣೆ ಸಿಗುತ್ತದೆ.

ಸಮಾಜ ಚಲನಶೀಲವಾದುದು. ಹಾಗಾಗಿ ಬದಲಾವಣೆ ಯಾವುದೇ ಸಮಾಜದ ಅನಿವಾರ್ಯ ಲಕ್ಷಣ. ಸಮಾಜದಲ್ಲಿ ಆಗುವ ಬದಲಾವಣೆಗಳು ಸಮಾಜದ ಬೇರೆ ಬೇರೆ ಗುಂಪುಗಳನ್ನು ಅಥವಾ ಘಟಕಗಳನ್ನು ಭಿನ್ನ ರೀತಿಯಲ್ಲಿ ಪ್ರಭಾವಿಸುತ್ತವೆ. ಈ ಪ್ರಭಾವವನ್ನು ಒಂದೆರಡು ದಿನಗಳಲ್ಲಿ ಗುರುತಿಸಲು ಸಾಧ್ಯವಿಲ್ಲ. ಐದಾರು ವರ್ಷಗಳ ನಿರಂತರ ವೀಕ್ಷಣೆ, ಅಧ್ಯಯನ ಆಯಾ ಬದಲಾವಣೆ ಅಥವಾ ನಿರ್ದಿಷ್ಟ ಸನ್ನಿವೇಶದ ಪ್ರಭಾವವನ್ನು ಕುರಿತಂತೆ ಮಹತ್ವದ ಅಂಶಗಳನ್ನು ಹೊರಗೆಡಹುತ್ತದೆ. ಈ ದೃಷ್ಟಿಯಿಂದ ಕೂಟ ವಿಶ್ಲೇಷಣೆ ಪ್ರಮುಖವಾಗುತ್ತವೆ.

ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಉಂಟಾದ ಬದಲಾವಣೆಯು ಸಮಾನ ಅಂಶಗಳಿಗೆ ಸಂಬಂಧಿಸಿದಂತೆ ಆ ಸಮಾಜದ ಮಕ್ಕಳು ಹಾಗೂ ವಯಸ್ಕರ ಮೇಲೆ ವಿಭಿನ್ನವಾಗಿ ಪ್ರಭಾವ ಬೀರಬಹುದು.

Digitised by Bharatavani, CIIL

ಉದಾಹರಣೆಗೆ, ಜಾಗತೀಕರಣಕ್ಕೆ ಮಕ್ಕಳು ಹಾಗೂ ವಯಸ್ಕರಿಬ್ಬರೂ ಏಕಕಾಲದಲ್ಲಿ ಪ್ರಭಾವಿತರಾದರೂ ಅದರ ಪರಿಣಾಮ ಎರಡು ಗುಂಪುಗಳ ಮೇಲೆ ಬೇರೆಯೇ ಆಗಿದೆ. ಇದಕ್ಕೆ ಕಾರಣ ಆಯಾ ಕೂಟದ ರಚನೆಯ ಆಂತರಿಕ ವ್ಯವಸ್ಥೆಯ ಅನನ್ಯತೆಯೇ ಆಗಿರುತ್ತದೆ. ಹೀಗೆ ಒಟ್ಟು ಬದಲಾವಣೆಯಲ್ಲಿ ಆಯಾ ಕೂಟದ ಪಾತ್ರ ಅಥವಾ ಕೊಡುಗೆಯನ್ನೂ ಕೂಟ ವಿಶ್ಲೇಷಣೆ ಬೆಳಕಿಗೆ ತರುತ್ತದೆ. ಇದಲ್ಲದೆ ಒಂದು ಕೂಟದ ಭವಿಷ್ಯವನ್ನು ಇತಿಹಾಸವು ನಿರ್ಧರಿಸುತ್ತದೆ ಎಂದು ಹೇಳಲಾಗುತ್ತದೆ. ಆದುದರಿಂದಲೇ ಒಟ್ಟು ಗುಂಪಿನ ಅಧ್ಯಯನಕ್ಕಿಂತ ಕೂಟ ಅಧ್ಯಯನ ಒಳ್ಳೆಯದು.

ಶಿಕ್ಷಣದಲ್ಲಿ ಹೊರಬರುತ್ತಿರುವ ಹೊಸ ಬದಲಾವಣೆಗಳ ವಿಧಾನಗಳ ಪರಿಣಾಮವನ್ನೂ ಕೂಟ ವಿಶ್ಲೇಷಣೆಯಿಂದ ಕಂಡುಹಿಡಿಯಬಹುದು. ಉದಾಹರಣೆಗೆ 'ನಲಿಕಲಿ' ಉಪಕ್ರಮವು ನಾಲ್ಕು ವರ್ಷಗಳಲ್ಲಿ ಮಕ್ಕಳಲ್ಲಿ ಯಾವ ಬದಲಾವಣೆಯನ್ನು ಅಪೇಕ್ಷಿಸಿದೆ. ಅದು ಕಾರ್ಯಗತವಾಗಿದೆಯೇ ಎಂಬುದನ್ನು ಈ ರೀತಿ ಗುರುತಿಸಬಹುದು.




ಬಾಣದ ಗುರುತು ಹಾಕಿದ ಗುಂಪುಗಳ ವ್ಯತ್ಯಾಸ 'ನಲಿಕಲಿ' ಮಕ್ಕಳಲ್ಲಿನ ಬದಲಾವಣೆಯ ಜೊತೆಗೆ ಈ ಉಪಕ್ರಮದ ಪ್ರಭಾವವನ್ನು ಗುರುತಿಸುತ್ತದೆ.

ವೈದ್ಯಕೀಯ ಶಾಸ್ತ್ರದ ಅಧ್ಯಯನದಲ್ಲೂ ಕಾರ್ಯಕಾರಣಗಳ ಸಂಬಂಧವನ್ನು ಗುರುತಿಸಲು ಕೂಟವಿಶ್ಲೇಷಣೆಯನ್ನು ಬಳಸಲಾಗಿದೆ. ಉದಾಹರಣೆಗೆ, ಸಿಗರೇಟ್ ಸೇದುವಿಕೆಗೂ ಕ್ಯಾನ್ಸರ್ ರೋಗಕ್ಕೂ ಇರುವ ಸಂಬಂಧವನ್ನು ಗುರುತಿಸಬೇಕಾದರೆ ಸಿಗರೇಟ್ ಸೇದುವವರನ್ನೂ ಸೇದದವರನ್ನೂ ಕ್ಯಾನ್ಸರ್ ರೋಗಸಂಬಂಧಿ ಲಕ್ಷಣಗಳ ಹಿನ್ನೆಲೆಯಲ್ಲಿ ಸುಮಾರು 4–5 ವರ್ಷಗಳ ಒಂದು ಕಾಲಾಂತರದಲ್ಲಿ ಗಮನಿಸಿ, ಅಲ್ಲಿ ವ್ಯತ್ಯಾಸವಿದ್ದರೆ ರೂಪಿಸಿಕೊಂಡ ಊಹೆಯನ್ನು (ಶೂನ್ಯ ಪ್ರಾಕ್ಕಲ್ಪನೆಯನ್ನು) ಅಲ್ಲಗಳೆಯಲಾಗುತ್ತದೆ. ಇಲ್ಲಿ ರೋಗ ತಗಲಿದ ಮೇಲೆ ಕೂಟ ರೂಪುಗೊಳ್ಳುವುದಿಲ್ಲ. ಈ ಎರಡು ಗುಂಪುಗಳನ್ನು ಸಮಾನಾಂತರವಾಗಿ ಕ್ಯಾನ್ಸರ್ ರೋಗಸಂಬಂಧಿ ಲಕ್ಷಣಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗುವುದು.

ಸಂಶೋಧನಾ ನೀತಿಸಂಹಿತೆಯ ದೃಷ್ಟಿಯಿಂದಲೂ ಕೂಟ ಅಧ್ಯಯನ ಕ್ಷೇಮಕರ, ಸಂಶೋಧನೆಯ ಪ್ರಾಯೋಗಿಕ ವಿನ್ಯಾಸದ ಅನೇಕ ಸನ್ನಿವೇಶಗಳಲ್ಲಿ ಒಂದು ಸನ್ನಿವೇಶದ ಪ್ರಭಾವವನ್ನು ಅಧ್ಯಯನ ಮಾಡಲು ಒಂದು ಗುಂಪನ್ನು ಪ್ರಯೋಗಕ್ಕೆ ಒಳಗುಮಾಡಿ ಮತ್ತೊಂದು ಗುಂಪನ್ನು ನಿಯಂತ್ರಿಸಬೇಕಾದ ಅಗತ್ಯವಿದೆ. ಪರಿಣಾಮ ಸ್ಪಷ್ಟವಿರದ ಕಾರಣ ಇಲ್ಲಿ ನೀತಿಸಂಹಿತೆಯ ಪ್ರಶ್ನೆ ಏಳುತ್ತದೆ. ಕೂಟ ವಿಶ್ಲೇಷಣೆಯನ್ನು ಸಹಜವಾದ ಗುಂಪುಗಳನ್ನು ಸಹಜ ಸನ್ನಿವೇಶಗಳಲ್ಲಿ ಅಧ್ಯಯನ ಮಾಡುವುದರಿಂದ ಆ ಅಪಾಯವಿಲ್ಲ. ಹೀಗೆ ಕೂಟ ವಿಶ್ಲೇಷಣೆಗೆ ಅದರದ್ದೇ ಆದ ಪ್ರಯೋಜನಗಳಿರುವುದರ ಹಿನ್ನೆಲೆಯಲ್ಲಿ ಅದನ್ನು ಸೂಕ್ತವಾದ ಕಡೆಗಳಲ್ಲಿ ಬಳಸಿ ಹೆಚ್ಚು ಸಮಂಜಸವಾದ ಸಂಶೋಧನಾ ಫಲಿತಾಂಶಗಳನ್ನು ಪಡೆಯಬಹುದು.

–ಎ.ಶ.

## ಕೇಂದ್ರೀಯ ಪ್ರವೃತ್ತಿ ಮಾಪಕಗಳು

ಶೈಕ್ಷಣಿಕ ಸಂಶೋಧನೆ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ದತ್ತಾಂಶವನ್ನು ಸಂಗ್ರಹಿಸಲಾಗುತ್ತದೆ. ಅದು ಹೆಚ್ಚಿನ ಪ್ರಮಾಣದಲ್ಲಿದ್ದಾಗ ಅದನ್ನು ತಿಳಿದುಕೊಳ್ಳುವುದು ಕಷ್ಟ ಸಾಧ್ಯವಾಗುತ್ತದೆ. ಅದನ್ನು ಸರಳಗೊಳಿಸಿ ಗುಂಪಿನ ವ್ಯಕ್ತಿ ಸ್ವರೂಪವನ್ನು ಏಕಮೌಲ್ಯದಿಂದ (ಒಂದೇ ಮೌಲ್ಯದಿಂದ ಪ್ರತಿನಿಧಿಸುವುದು ಅವಶ್ಯಕ. ಅಂದರೆ ಇಡೀ ದತ್ತಾಂಶವನ್ನು ಪ್ರತಿನಿಧಿಸುವ ಒಂದು ಮೌಲ್ಯ ಅಥವಾ ಸಂಖ್ಯೆ ಅವಶ್ಯಕ. ಅಂತಹ ಸಂಖ್ಯೆಗೆ ಕೇಂದ್ರೀಯ ಪ್ರವೃತ್ತಿ ಮಾಪಕ ಎನ್ನುವರು. ಈ ಬೆಲೆಯು ಸಂಗ್ರಹಿಸಿದ ದತ್ತಾಂಶದ ಪ್ರಾತಿನಿಧಿಕ ಬೆಲೆ. ಮುಂದೆ ಕೊಟ್ಟಿರುವ ಅಂಕ ವಿತರಣೆಯನ್ನು ನಾವು ಇದು ಒಂದು ಗುಂಪಿನ ಕೇಂದ್ರ ಪ್ರವೃತ್ತಿಯನ್ನು ತಿಳಿಸುವುದರಿಂದ ಈ ಬೆಲೆಯನ್ನು ಕೇಂದ್ರೀಯ ಪ್ರವೃತ್ತಿ ಮಾಪಕ ಎನ್ನುವರು. ಪರಿಶೀಲಿಸಿದರೆ ಪ್ರತಿಯೊಂದು ಆವೃತ್ತಿಯೂ ಕೇಂದ್ರದ ಕಡೆಗೆ ವಾಲಿದ ಪ್ರವೃತ್ತಿ ಕಂಡುಬರುತ್ತದೆ. ಅಂದರೆ ವಿತರಣೆಯ ಮಧ್ಯದಲ್ಲಿ ಹೆಚ್ಚಿಗೆ ಆವೃತ್ತಿಗಳಿದ್ದು ಕೇಂದ್ರದಿಂದ ದೂರ ಹೋದಂತೆ ಆವೃತ್ತಿಗಳು ಕಡಿಮೆಯಾಗುತ್ತಾ ಹೋಗುತ್ತವೆ.

ಉದಾಹರಣೆಗೆ, ಒಂದು ತರಗತಿಯಲ್ಲಿ 80 ವಿದ್ಯಾರ್ಥಿಗಳು ಪಡೆದ ಎಲ್ಲಾ ಅಂಕಗಳನ್ನು ಪ್ರತಿನಿಧಿಸಲು ಒಂದು ಅಂಕವನ್ನು ಬಳಸಿದರೆ ಅದು ಆ ಗುಂಪಿನ ಕೇಂದ್ರೀಯ ಪ್ರವೃತ್ತಿ ಮಾಪನವೆನಿಸುತ್ತದೆ.

ಕೇಂದ್ರೀಯ ಪ್ರವೃತ್ತಿ ಮಾಪಕಗಳಲ್ಲಿ ಈ ಕೆಳಗಿನವು ಮುಖ್ಯವೆನಿಸಿವೆ.

1. ಸರಾಸರಿ (Mean)
2. ಮಧ್ಯಮಾಂಕ (Mediam)
3. ಬಹುಲಕ (Mode)
4. ಹರಾತ್ಮಕ ಸರಾಸರಿ (Harmonic mean)
5. ಜ್ಯಾಮಿತೀಯ ಸರಾಸರಿ (Geometric mean)

Digitised by Bharatavani, CIIL

**1. ಸರಾಸರಿ (Mean)**

$$\text{ಸರಾಸರಿ} = \frac{\text{ಎಲ್ಲಾ ಫಲಾಂಕಗಳ ಮೊತ್ತ}}{\text{ಎಲ್ಲಾ ಫಲಾಂಕಗಳ ಸಂಖ್ಯೆ}}$$

$$M = \frac{X_1 + X_2 + X_3 ........ X_n}{N}$$

$X_1, X_2$...............ಫಲಾಂಕಗಳು

N = ಫಲಾಂಕಗಳ ಸಂಖ್ಯೆ

ಉದಾಹರಣೆ : ಆಂತರಿಕ ಮೌಲ್ಯಮಾಪನ 20ಕ್ಕೆ ಪರೀಕ್ಷೆ ನಡೆಸಿದಾಗ ಪಡೆದ ಅಂಕಗಳು 15, 16, 12, 18, 17 ಆಗಿರುತ್ತವೆ.

| $X_1$ | $X_2$ | $X_3$ | $X_4$, | $X_5$ |
|---|---|---|---|---|
| 15, | 16 | 14, | 18, | 17 |

N = 05

16 $$\text{ಸರಾಸರಿ} = \frac{15 + 16 + 14 + 18 + 17}{5} = \frac{80}{5} = 16$$

$$M = \frac{\sum X}{N}$$

$\sum X$ ದತ್ತಾಂಶದಲ್ಲಿನ ಎಲ್ಲಾ ಅಂಶಗಳ ಮೊತ್ತ

N = ಸರಾಸರಿ    N = ದತ್ತಾಂಶಗಳಲ್ಲಿನ ಸಂಖ್ಯೆ

ದತ್ತಾಂಶ ಹೆಚ್ಚಾಗಿದ್ದಾಗ ಎಚ್.ಇ. ಗ್ಯಾರಟ್‌ರವರ ಪ್ರಕಾರ ವರ್ಗೀಕೃತ ವಿಸ್ತರಣೆಯ ಸರಾಸರಿಯನ್ನು ದೀರ್ಘವಿಧಾನ (Long method) ಅಥವಾ ಲಘು ವಿಧಾನ ಕ್ರಮದಿಂದ ಕಂಡುಹಿಡಿಯಬಹುದು.

**ದೀರ್ಘವಿಧಾನ ಕ್ರಮ**

| ವರ್ಗಾಂತರಗಳು | ಮಧ್ಯಬಿಂದು(X) | ಆವೃತ್ತಿ ಸಂಖ್ಯೆ(f) | ಸಂಕೇತ ಆವೃತ್ತಿ cum (f) | ಆವೃತ್ತಿ ಸಂಖ್ಯೆ X ಮಧ್ಯಬಿಂದು (F x X) |
|---|---|---|---|---|
| 95-99 | 97 | 1 | 40 | 97 |
| 90-94 | 92 | 2 | 39 | 184 |
| 85-89 | 87 | 3 | 37 | 261 |
| 80-84 | 82 | 4 | 34 | 328 |
| 75-79 | 77 | 7 | 30 | 539 |
| 70-74 | 72 | 11 | 23 | 792 |
| 65-69 | 67 | 6 | 12 | 402 |
| 60-64 | 62 | 3 | 6 | 186 |
| 55-59 | 57 | 2 | 3 | 114 |
| 50-54 | 52 | 1 | 1 | 52 |
| | | N = 40 | | $\sum$ fx = 2955 |

$$\text{ಸರಾಸರಿಸೂತ್ರ} \quad \frac{\sum fX}{N} = \frac{2955}{40} = 73.875$$

**ಲಘು ವಿಧಾನ ಕ್ರಮ**

| ವರ್ಗಾಂತರಗಳು | ಮಧ್ಯಬಿಂದು(X) | ಆವೃತ್ತಿ ಸಂಖ್ಯೆ(f) | X | (f x X′) |
|---|---|---|---|---|
| 95-99 | 97 | 1 | 5 | 5 |
| 90-94 | 92 | 2 | 4 | 8 |
| 85-89 | 87 | 3 | 3 | 9 |
| 80-84 | 82 | 4 | 2 | 8 |
| 75-79 | 77 | 7 | 1 | 7 |
| 70-74 | 72 (AM) | 11 | 0 | 0 |
| 65-69 | 67 | 6 | -1 | -6 |
| 60-64 | 62 | 3 | -2 | -6 |
| 55-59 | 57 | 2 | -3 | -6 |
| 50-54 | 52 | 1 | -4 | -4 |
| | | N = 40 | $\sum$ fx = 15 | |

ಊಹೆಯ ಸರಾಸರಿ = 72

Digitised by Bharatavani, CIIL

ಸರಾಸರಿ = ಊಹೆಯ ಸರಾಸರಿ, + ಸರಿಪಡಿಸಿದ ಮೌಲ್ಯ X ವರ್ಗಾಂತರದ ಹಂತ.

ಸರಾಸರಿ ಸೂತ್ರ $M = AM + ci$ ; $C = \frac{\sum fX}{N}$

$$= \frac{15}{40} = 0.38$$

= 72 + 0.38x5

= 72+1.90

= 73.90

**ಅನುಕೂಲಗಳು**

- ಸರಳ ಹಾಗೂ ತಿಳಿದುಕೊಳ್ಳಲು ಸುಲಭ
- ಸಂಶೋಧನೆಯಲ್ಲಿ ಇದನ್ನು ಹೆಚ್ಚಾಗಿ ಬಳಸಲಾಗುತ್ತದೆ.
- ಬೇರೆ ವಿತರಣೆಯಲ್ಲಿ ಪ್ರಾಪ್ತಾಂಕ ತುಲನ ಅಧ್ಯಯನ ಮಾಡಲು ಸಾಧ್ಯ.
- ಸರಾಸರಿಯು ಎಲ್ಲಾ ಪ್ರಾಪ್ತಾಂಕಗಳನ್ನು ಒಳಗೊಂಡಿರುವುದರಿಂದ ಹೆಚ್ಚು ಸ್ಥಿರ ಮಾಪನ (More stable measure) ವಾಗಿಸುತ್ತದೆ.

**ಅನಾನುಕೂಲಗಳು**

- ಯಾವಾಗಲೂ ಒಂದು ಪ್ರಾಪ್ತಾಂಕ ತುಂಬಾ ವ್ಯತ್ಯಾಸವಾದರೆ ಸರಾಸರಿಯಲ್ಲಿ ವ್ಯತ್ಯಾಸವಾಗುತ್ತದೆ.
- ವಿತರಣೆ ಅಪೂರ್ಣವಿದ್ದರೆ ನಿಖರತೆ ಕಡಿಮೆ.
- ಗರಿಷ್ಠ, ಕನಿಷ್ಠ ಅಂಕಗಳು ಸರಾಸರಿಯ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ.

**2) ಮಧ್ಯಮಾಂಕ (Mediam)**

ಹೆಸರೇ ತಿಳಿಸುವಂತೆ ಮಧ್ಯಮಾಂಕವು ಏರಿಕೆ ಅಥವಾ ಇಳಿಕೆ ಕ್ರಮದಲ್ಲಿನ ಮಧ್ಯಬಿಂದು ಎಂದು ಹೇಳಬಹುದು. (i.e.mid point in a given ascending or descending series)

ಎಚ್.ಇ. ಗ್ಯಾರೆಟ್ ಪ್ರಕಾರ "ಮಧ್ಯಮಾಂಕವು ದತ್ತಾನುಸಾರವಾಗಿ ಕ್ರಮಬದ್ಧಗೊಳಿಸಿದ ಸಂಖ್ಯಾ ವಿತರಣೆಯ ಮಧ್ಯಬಿಂದುವಾಗಿದೆ." ಅಂದರೆ ಸರಣಿಯ ಮಧ್ಯಬಿಂದು ಒಟ್ಟು ಆವೃತ್ತಿಗಳನ್ನು ಸರಿಯಾಗಿ ಎರಡು ಭಾಗಗಳನ್ನಾಗಿ ಮಾಡುತ್ತದೆ. ಮಧ್ಯಮಾಂಕದ ಮೇಲೆ ಅರ್ಧದಷ್ಟು, (ಶೇ. 50) ಕೆಳಗೆ ಅರ್ಧದಷ್ಟು (ಶೇ. 50) ಆವೃತ್ತಿಗಳಿರುತ್ತವೆ.

ಜೆ.ಪಿ. ಗಿಲ್‌ಫರ್ಡ್ ಪ್ರಕಾರ ಮಧ್ಯಮಾಂಕವು ಅಳತೆ ಮಾಪನದ ಮೇಲಿನ ಒಂದು ಬಿಂದುವಾಗಿದ್ದು ಆ ಬಿಂದುವಿನಿಂದ ಕೆಳಗಡೆ ಸರಿಯಾಗಿ ಅರ್ಧದಷ್ಟು ಮತ್ತು ಮೇಲ್ಭಾಗದಲ್ಲಿ ಸರಿಯಾಗಿ ಉಳಿದ ಅರ್ಧದಷ್ಟು ಪ್ರಾಪ್ತಾಂಕಗಳಿರುತ್ತವೆ. "The Mediam in the midpoing in a given series, below which 50% of the scores and above which other 50% of scores lie" i.e. totally divided into two parts."

ಅವರ್ಗೀಕೃತ ದತ್ತಾಂಶಗಳಿದ್ದಾಗ ಮಧ್ಯಮಾಂಕವನ್ನು ಕಂಡುಹಿಡಿಯುವ ಕ್ರಮ :

$$Md_n = \frac{N+1}{2} \quad \text{(ವಿಷಮ ಸಂಖ್ಯೆಯಲ್ಲಿದ್ದಾಗ)}$$

$$Md_n = \left(\frac{N}{2}\right) + \left(\frac{N}{2} + 1\right) \quad \text{(ಸರಿ ಸಂಖ್ಯೆಯಲ್ಲಿದ್ದಾಗ)}$$

ವಿಷಮ ಸಂಖ್ಯೆಯ ದತ್ತಾಂಶಗಳಿದ್ದಾಗ ದತ್ತಾಂಶಗಳನ್ನು ಏರಿಕೆ ಕ್ರಮದಲ್ಲಿ ಬರೆಯಿರಿ.

| | | | | | | | |
|---|---|---|---|---|---|---|---|
| | 5, | 7, | 10, | 15 | 8, | 13, | 16 |
| ಏರಿಕೆ ಕ್ರಮ | 5, | 7, | 8, | 10, | 13, | 15, | 16 |

ಒಟ್ಟು N ಬೆಲೆ = 7

ಕೊಟ್ಟಿರುವ ದತ್ತಾಂಶಗಳಲ್ಲಿ 10 ನಾಲ್ಕನೇ ಸ್ಥಾನದಲ್ಲಿದ್ದು ಅದು ಮಧ್ಯಮಾಂಕವಾಗುತ್ತದೆ. ಇದರ ಮೇಲೆ ಮತ್ತು ಕೆಳಗೆ ಸರಿಯಾಗಿ ಮೂರು, ಮೂರು ದತ್ತಾಂಶಗಳಿವೆ.

ಸರಿಸಂಖ್ಯೆಯ ದತ್ತಾಂಶಗಳಿಗೆ ಉದಾಹರಣೆ = 5, 10, 13, 15, 7, 8

ಮೊದಲು ಇವುಗಳನ್ನು ಏರಿಕೆ ಕ್ರಮದಲ್ಲಿ ಬರೆಯಬೇಕು.

ಇಲ್ಲಿ N = 6 ಇವು ಕ್ರಮವಾಗಿ 5, 7, 8, 10, 13, 15 ಆಗಿರುತ್ತವೆ.

ಉಪಯೋಗಿಸಬೇಕಾದ ಸೂತ್ರ.

$$Md_n = \frac{\frac{N}{2} + \left(\frac{N}{2} + 1\right)}{2}$$

$$Md_n = \frac{\frac{6}{2} + \left(\frac{6}{2} + 1\right)}{2}$$

$$= \frac{3 + 4}{2}$$

ಅಂದರೆ ಏರಿಕೆಕ್ರಮದಲ್ಲಿರುವ ದತ್ತಾಂಶಗಳಲ್ಲಿ $\frac{\textbf{3ನೇ ಬೆಲೆ+ 4ನೇ ಬೆಲೆ}}{\textbf{2}}$

$$\frac{8 + 1}{2} = \frac{18}{2} = 9$$

ವರ್ಗೀಕೃತ ದತ್ತಾಂಶದಲ್ಲಿ ಮಧ್ಯಮಾಂಕವನ್ನು ಕಂಡುಹಿಡಿಯಲು ಉಪಯೋಗಿಸುವ ಸೂತ್ರ

$$Md_n = 1 + \left(\frac{\frac{N^1}{2} - F}{f\ mdn}\right) i$$

cum (f) = ಸಂಕಲಿತ ಆವೃತ್ತಿ

i = ವರ್ಗಾಂತರದ ಗಾತ್ರ

fm = ಮಧ್ಯಮಾಂಕ ಇರುವ ವರ್ಗಾಂತರದ ಆವೃತ್ತಿ

l = ಮಧ್ಯಮಾಂಕ ಇರುವ ವರ್ಗಾಂತರದ ಕನಿಷ್ಠ ಮಟ್ಟ

F = ಮಧ್ಯಮಾಂಕ ಇರುವ ವರ್ಗಾಂತರದ ಕೆಳಗಿನ ಸಂಕಲಿತ ಆವೃತ್ತಿ

Digitised by Bharatavani, CIIL

$$Mdn = 69.5 + \left( \frac{\frac{40}{2} - 12}{11} \right) 5$$

$$= 69.5 + \left( \frac{20 - 12}{11} \right) 5$$

$$= 69.5 + 0.72 \times 5$$

$$= 69.5 + 3.63 \times 5$$

$$\boxed{Md_n = 73.13}$$

**3. ಬಹುಲಕ (Mode)**

ವಿತರಣೆಯಲ್ಲಿ ಅತಿ ಹೆಚ್ಚುಬಾರಿ ಪುನರಾವರ್ತನೆಯಾದ ಸಂಖ್ಯೆಗೆ ಬಹುಲಕವೆನ್ನುವರು.

"The most repeated value in a series is known as mode."
5, 6, 6, 6, 7, 8

ಅಂಕ 6 ಮೂರು ಸಲ ಬಂದಿರುವುದರಿಂದ ಅದು ಬಹುಲಕವಾಗುತ್ತದೆ.

ಈ ಕೆಳಗಿನ ಸೂತ್ರದಿಂದಲೂ ಬಹುಲಕವನ್ನು ಕಂಡುಹಿಡಿಯಬಹುದು.

ಬಹುಲಕ MO = (3*x* ಮಧ್ಯಮಾಂಕ–(2 X ಸರಾಸರಿ)

**4. ಹರಾತ್ಮಕ ಸರಾಸರಿ (Harmonic Mean-HM)**

ಹರಾತ್ಮಕ ಸರಾಸರಿಯು ಅಂಕಗಣಿತ ಸರಾಸರಿಯ ವ್ಯತ್ಯಮವಾಗಿದೆ.

ಅಂದರೆ ಅಂಕಗಳ ಸರಾಸರಿಯ ವ್ಯತ್ಯಮವಾಗಿದೆ (HM is based on the reciprocal of the arithmetic mean of the reciprocals of a specified set of numbers)

$$H.M. = \frac{N}{\frac{1}{x_1} + \frac{1}{x_2} + \frac{1}{x_3} + \ldots\ldots \frac{1}{x_{10}}}$$

H M = ಹರಾತ್ಮಕ ಸರಾಸರಿ

N = ಒಟ್ಟು ವೀಕ್ಷಣೆಗಳ ಸಂಖ್ಯೆ

$X_1$. = ದತ್ತಾಂಶದಲ್ಲಿನ ಫಲಾಂಕಗಳು

ಇದನ್ನು ಸರಳಗೊಳಿಸಿ.

$$H.M. = \frac{N}{\Sigma\left(\frac{1}{x}\right)}$$ (ಅವರ್ಗೀಕೃತ ದತ್ತಾಂಶ)

$$H.M. = \frac{N}{\Sigma f x \frac{1}{x}} \text{ or } \frac{N}{\Sigma\left(\frac{f}{x}\right)}$$ (ವರ್ಗೀಕೃತ ದತ್ತಾಂಶ)

$$H.M. = \frac{N}{\Sigma 1.09} = \frac{25}{1.09}$$

$$= 22.94$$

**5. ಜ್ಯಾಮಿತೀಯ ಸರಾಸರಿ (Geometric Mean-GM)**

ಜ್ಯಾಮಿತೀಯ ಸರಾಸರಿಯನ್ನು N ಸಂಖ್ಯೆಗಳ ಅಥವಾ ಮೌಲ್ಯಗಳ ಅಥವಾ ಗುಣಲಬ್ಧಗಳ N ವರ್ಗಮೂಲ ಎಂದು ವ್ಯಾಖ್ಯಾನಿಸಲಾಗಿದೆ. (Geometric Mean is the Nth root of the product of N items or values) N ಸಂಖ್ಯೆಗಳು ಎರಡಿದ್ದಲ್ಲಿ ವರ್ಗಮೂಲವಾಗುತ್ತದೆ. ಮೂರು ಇದ್ದಲ್ಲಿ ಅದು ಘನಮೂಲವಾಗುತ್ತದೆ ಇತ್ಯಾದಿ ಇದರ ಸಾಮಾನ್ಯ ಸೂತ್ರ ಹೀಗಿದೆ–

$$GM = \sqrt[N]{(X_1) \times (X_2) \times (X_3) \times ---- Xn}$$

ಈ ಸೂತ್ರದಲ್ಲಿ G.M. ಅಂದರೆ ಜ್ಯಾಮಿತೀಯ ಸರಾಸರಿ ಮತ್ತು $X_1$, $X_2$, $X_3$ –Xn ನಿರ್ದಿಷ್ಟ ಮೌಲ್ಯಗಳು.

ಹರಾತ್ಮಕ ಸರಾಸರಿ ಮತ್ತು ಜ್ಯಾಮಿತೀಯ ಸರಾಸರಿಗಳು ಶಿಕ್ಷಣಶಾಸ್ತ್ರ ಸಂಶೋಧನೆಯಲ್ಲಿ ಅಷ್ಟಾಗಿ ಬಳಕೆಗೆ ಬರುವುದಿಲ್ಲ. ಅರ್ಥಶಾಸ್ತ್ರ ನಿರ್ವಹಣಶಾಸ್ತ್ರ ವಾಣಿಜ್ಯಶಾಸ್ತ್ರಗಳ ದತ್ತಾಂಶಗಳ ವಿಶ್ಲೇಷಣೆಯಲ್ಲಿ. ಈ ಸರಾಸರಿಗಳು ಉಪಯೋಗಕ್ಕೆ ಬರುತ್ತವೆ.

ಉದಾಹರಣೆಗೆ :

| ವರ್ಗಾಂತರಗಳು | mxp | ಆವೃತ್ತಿ | (F x X) |
|---|---|---|---|
| 35-39 | 37 | 3 | 0.08 |
| 30-34 | 32 | 4 | 0.12 |
| 25-29 | 27 | 7 | 0.26 |
| 20-24 | 22 | 5 | 0.23 |
| 15-19 | 17 | 4 | 0.24 |
| 10-14 | 12 | 2 | 0.17 |
| | | N = 25 | $\Sigma f/x=1.09$ |

Digitised by Bharatavani, CIIL

**ಅನುಕೂಲಗಳು**

- ನಿಖರತೆ ಹೆಚ್ಚಾಗಿರುತ್ತದೆ
- ದತ್ತಾಂಶದ ಎಲ್ಲ ಅಂಶಗಳ ಮೇಲೆ ಅವಲಂಬಿತವಾಗಿದೆ.
- ದರ ಮತ್ತು ಕಾಲಕ್ಕೆ ಸಂಬಂಧಿಸಿದ ಅಂಶಗಳನ್ನು ಬಿಡಿಸಲು ಹೆಚ್ಚು ಪ್ರಯೋಜನಕಾರಿ.

–ಎಚ್.ಎಸ್. ಜ

## ಕೇಂದ್ರೀಯ ವಿಶ್ವವಿದ್ಯಾನಿಲಯಗಳು

ಭಾರತದ ವಿಶ್ವವಿದ್ಯಾನಿಲಯಗಳನ್ನು ಕೇಂದ್ರೀಯ, ರಾಜ್ಯ, ಡೀಮ್ಡ್, ಖಾಸಗಿ, ಗ್ರಾಮೀಣ, ಮುಕ್ತವಿಶ್ವವಿದ್ಯಾನಿಲಯಗಳೆಂದು ವಿಂಗಡಿಸಲಾಗಿದೆ. ಭಾರತದಲ್ಲಿ ಈ ವಿಶ್ವವಿದ್ಯಾನಿಲಯಗಳು ನ್ಯಾಯಸಮ್ಮತವಾದ ಹಾಗೂ ಒಂದು ಸ್ಪಂದಕ ಸಮಾಜದ ಉಳಿವಿಗೆ ಮಾತ್ರವಲ್ಲದೆ ಅದರ ಪ್ರಜಾಪ್ರಭುತ್ವ ಕಟ್ಟಳೆಗಳನ್ನು ಮುಂದುವರೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ವಿಶ್ವವಿದ್ಯಾನಿಲಯಗಳು ರಾಜ್ಯ ಸರ್ಕಾರದಿಂದ ಸ್ಥಾಪಿತವಾದವು. ಆದರೆ ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಪಾರ್ಲಿಮೆಂಟ್ ಕಾಯಿದೆ ಅನ್ವಯಾನುಸಾರ ಭಾರತ ಸರ್ಕಾರದಿಂದ ರಚಿತವಾದವು. ಕೇಂದ್ರೀಯ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ಯು.ಜಿ.ಸಿ.ಗೆ ಅಗತ್ಯವಿರುವ ಆರ್ಥಿಕ ಸಂಪನ್ಮೂಲದ ವ್ಯವಸ್ಥೆ, ಸ್ಥಳ ನಿರ್ದೇಶನ (allocation) ಹಾಗೂ ಹಂಚಿಕೆ ಮುಂತಾದವುಗಳನ್ನು ಒದಗಿಸುವುದು ಭಾರತ ಸರ್ಕಾರದ ಜವಾಬ್ದಾರಿಯಾಗಿದೆ.

ಭಾರತದಲ್ಲಿ ಇಪ್ಪತ್ತು (20) ಕೇಂದ್ರೀಯ ವಿಶ್ವವಿದ್ಯಾನಿಲಯಗಳಿದ್ದು ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಉನ್ನತ ಶಿಕ್ಷಣ ವ್ಯವಸ್ಥೆಯಾಗಿದೆ. ಇದರ ಗುಣಮಟ್ಟದ ಸುಧಾರಣೆಯ ದೃಷ್ಟಿಯಿಂದ ಸೂಕ್ತ ಕಾಯಿದೆಗಳನ್ನು ನಿರ್ಮಿಸುವ ಜವಾಬ್ದಾರಿ ಕೇಂದ್ರ ಸರ್ಕಾರದ್ದಾಗಿದೆ. ಆರ್ಥಿಕ ವ್ಯವಸ್ಥೆಯ ವಿವಿಧ ಕ್ಷೇತ್ರಗಳಲ್ಲಿ ಬೆಳೆಯುತ್ತಿರುವ ಮಾನವ ಸಂಪನ್ಮೂಲದ ಬೇಡಿಕೆಯ ದೃಷ್ಟಿಯಿಂದ ಉನ್ನತ ಶಿಕ್ಷಣದ ಗುಣಾತ್ಮಕ ಸುಧಾರಣೆ, ಅದರ ಲಭ್ಯತೆ ಹಾಗೂ ಸಂಶೋಧನೆ ಭಾರತದಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಹಾಗಾಗಿ ತಕ್ಷಣದ ಭವಿಷ್ಯದಲ್ಲೇ ಭಾರತದಲ್ಲಿ ಹೆಚ್ಚು ಕೇಂದ್ರೀಯ ವಿಶ್ವವಿದ್ಯಾನಿಲಯಗಳನ್ನು ಕಾಣುವ ಸಾಧ್ಯತೆ ಇದೆ. ಪಾರ್ಲಿಮೆಂಟಿನ ಕಾಯಿದೆಯಡಿಯಲ್ಲಿ ಸುಮಾರು 39 ಕೇಂದ್ರೀಯ ವಿಶ್ವವಿದ್ಯಾನಿಲಯಗಳನ್ನು ಮಾನವ ಸಂಪನ್ಮೂಲ ವಿಭಾಗದ ವ್ಯಾಪ್ತಿಗೆ ಬರುವಂತೆ ಸೃಷ್ಟಿಸಲಾಗಿದೆ. ಇವುಗಳ ಪೈಕಿ 15 ಹೊಸ ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಹಲವು ರಾಜ್ಯಗಳಲ್ಲಿ ಮೊಟ್ಟಮೊದಲ ಬಾರಿಗೆ (ಗೋವಾ ಹೊರತುಪಡಿಸುವಂತೆ) ದಿನಾಂಕ 15.1.2009ರಿಂದ ಕಾರ್ಯಾಚರಣೆಗೆ ಬರುವಂತೆ ಭಾರತದ ಅಧ್ಯಕ್ಷರು ಹೊರಡಿಸಿರುವ ಶಾಸನದ ಆಧಾರದ ಮೇರೆಗೆ ಸ್ಥಾಪನೆಯಾಗಿವೆ. ಈ ಶಾಸನವನ್ನು 'ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಕಾಯಿದೆ–2009' ಎಂದು ಕರೆಯಲಾಗಿದೆ.

ಭಾರತದ ಅಧ್ಯಕ್ಷರು 20.3.2009ರಂದೇ ಇದಕ್ಕೆ ಸಮ್ಮತಿ ಸೂಚಿಸಿದ್ದಾರೆ. 39 ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಪೈಕಿ, 38 ಕೇಂದ್ರೀಯ ವಿಶ್ವವಿದ್ಯಾನಿಲಯಗಳು ನಿರ್ವಹಣೆ ಹಾಗೂ ಬೆಳವಣಿಗೆಗೆ ಆರ್ಥಿಕ ಸಹಾಯವನ್ನು ಯುಜಿಸಿಯಿಂದ ಪಡೆದರೆ, ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯವು (ನವ ದೆಹಲಿ) ಮಾನವ ಸಂಪನ್ಮೂಲ ವಿಭಾಗದಿಂದ ನೇರವಾಗಿ ಆರ್ಥಿಕ ಸಹಾಯ ಪಡೆಯುತ್ತದೆ.

ಸದ್ಯದಲ್ಲೇ ಕಾರ್ಯನಿರತವಾಗಲಿರುವ ಹೊಸ ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಜಾರ್ಖಂಡ್, ಕರ್ನಾಟಕ, ಬಿಹಾರ್, ಹರಿಯಾಣ, ಹಿಮಾಚಲ ಪ್ರದೇಶ, ಪಂಜಾಬ, ಜಮ್ಮು ಮತ್ತು ಕಾಶ್ಮೀರ, ಒರಿಸ್ಸಾ, ಕೇರಳ, ಗುಜರಾತ್, ರಾಜಸ್ತಾನ ಹಾಗೂ ತಮಿಳುನಾಡುಗಳಲ್ಲಿ ಸ್ಥಾಪನೆಯಾಗಿವೆ. ಇದು 2009ರ ಮೇ ತಿಂಗಳಲ್ಲಿ ನಡೆದ ಎರಡು ದಿವಸಗಳ ಸಮ್ಮೇಳನವೊಂದರ ನಿರ್ಧಾರವಾಗಿದೆ. ಈ ಸಂದರ್ಭದಲ್ಲಿ 15 ಹೊಸ ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು ತಮ್ಮ ತಮ್ಮ ಯೋಜನೆಗಳನ್ನು ಯುಜಿಸಿ ಮುಂದೆ ಪ್ರಸ್ತುತಪಡಿಸಿದರು. ಇದೇ ಸಂದರ್ಭದಲ್ಲಿ ಉಪಕುಲಪತಿಗಳು ಈ 15 ಕೇಂದ್ರೀಯ ವಿ.ವಿ.ಗಳನ್ನು ಕಾರ್ಯಾಚರಣೆಗೆ ತರಲು ಒಂದು ಭೂ ನಕ್ಷೆ (Road Map) ಮೊಟ್ಟ ಮೊದಲ ಬಾರಿಗೆ ತಯಾರಿಸಿದರು. ಹದಿನೈದು ವಿ.ವಿ.ಗಳ ಪೈಕಿ ಹನ್ನೆರಡು ಕೇಂದ್ರೀಯ ವಿ.ವಿ.ಗಳನ್ನು ಪ್ರತ್ಯೇಕ ರಾಜ್ಯಗಳಲ್ಲಿ ಸ್ಥಾಪಿಸಲಾಯಿತು ಹಾಗೂ ಮೂರು ಕೇಂದ್ರೀಯ ವಿ.ವಿ.ಗಳನ್ನು ಮೇಲ್ದರ್ಜೆಗೆ ಏರಿಸಲಾಯಿತು. ಈ ಎಲ್ಲಾ ವಿ.ವಿ.ಗಳ ಉಪಕುಲಪತಿಗಳೂ ತಮ್ಮ ತಮ್ಮ ಸಂಸ್ಥೆಗಳನ್ನು ಆರಂಭಗೊಳಿಸಲು ಸಾಧ್ಯವಿದೆ ಎಂದು ಯುಜಿಸಿಗೆ ಖಚಿತಪಡಿಸಿದ್ದಾರೆ.

ಈ ವಿಶ್ವವಿದ್ಯಾನಿಲಯಗಳಿಂದ ಪದವಿ ಸ್ನಾತಕೋತ್ತರ, ಎಂ.ಫಿಲ್. ಹಾಗೂ ಪಿಎಚ್.ಡಿ. ಪದವಿಗಳ ಸೇವೆ ಲಭ್ಯವಿದೆ. ಪ್ರತಿ ವಿಶ್ವವಿದ್ಯಾನಿಲಯಕ್ಕೂ ತನ್ನ ಕಾರ್ಯಾಚರಣೆಯ ವೆಚ್ಚ ಭರಿಸಲು ಯುಜಿಸಿ 2 ಕೋಟಿಯಷ್ಟು ಹಣವನ್ನು ಮಂಜೂರು ಮಾಡಿದೆ.

ಕೇಂದ್ರೀಯ ಹಾಗೂ ರಾಜ್ಯ ವಿಶ್ವವಿದ್ಯಾನಿಲಯಗಳಲ್ಲಿ ಗುಣಾತ್ಮಕ ಸುಧಾರಣೆಗಳ ದೃಷ್ಟಿಯಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಡುವೆ ಉತ್ತಮ ಸಹಕಾರ ಇರಬೇಕಾದದ್ದು ಅವಶ್ಯಕ. ಆದ್ದರಿಂದ ಈ ಎರಡೂ ಸರ್ಕಾರಗಳ ಕಾರ್ಯವನ್ನು ಸಹಕರಿಸಿ ಅವೆರಡರ ಮಧ್ಯೆ ಸಮತೋಲನವನ್ನು ಕಾಪಾಡಲು ಕೇಂದ್ರೀಯ ಶಿಕ್ಷಣ ಸಲಹಾ ಸಮಿತಿ (CABE) ಅನ್ನು ರಚಿಸಲಾಗಿದೆ.

ದೇಶದಲ್ಲಿ ಆರೋಗ್ಯಕರ ಶಿಕ್ಷಣ ವ್ಯವಸ್ಥೆಯನ್ನು ಕಾಪಾಡಲು ಸಂವಿಧಾನದ ವಿಶೇಷ ಕಾಯಿದೆಯೊಂದರ ಮುಖಾಂತರ ಕೇಂದ್ರ ಸರ್ಕಾರದ ಬಲ ಊರ್ಜಿತಗೊಳಿಸಲಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಬೇಕಾದ 'ಸಂಶೋಧನೆ ಹಾಗೂ ಅಭಿವೃದ್ಧಿ'ಯ ಕಡೆಗೆ ಇದು ಹೆಚ್ಚು ಗಮನಹರಿಸುತ್ತದೆ.

ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಕೆಲವು ವಿಶೇಷ ಲಕ್ಷಣಗಳೆಂದರೆ,

– ರಾಷ್ಟ್ರಾಧ್ಯಕ್ಷರು ಎಲ್ಲ ಕೇಂದ್ರೀಯ ವಿಶ್ವವಿದ್ಯಾನಿಲಯಗಳಿಗೂ ಪರಿಶೀಲಕರಾಗಿರುತ್ತಾರೆ.

– ವಿಶ್ವವಿದ್ಯಾನಿಲಯದ ಕಾಯಿದೆಯಡಿಯಲ್ಲಿ ವಿವಿಧ ಲಿಖಿತ ಶಾಸನ ಹಾಗೂ ಷರತ್ತುಗಳ ಪ್ರಕಾರ ಕೆಲವು ಪ್ರತಿನಿಧಿಗಳನ್ನು ಎಕ್ಸಿಕ್ಯೂಟಿವ್ ಸಮಿತಿ/ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್/ನ್ಯಾಯಾಲಯ/ಆಯ್ಕೆ ಸಮಿತಿಗಳಿಗೆ ಸೂಚಿಸುವ ಹಕ್ಕು ಅಧ್ಯಕ್ಷರಿಗಿರುತ್ತವೆ.

– ಉಪಕುಲಪತಿಗಳನ್ನು ನ್ಯಾಯಾಲಯದ ಕೋರ್ಟಿನ ನಾಮಿನಿಗಳನ್ನು ಹಾಗೂ ಆಯ್ಕೆ ಸಮಿತಿ ನಾಮಿನಿಗಳನ್ನು ನೇಮಕ ಮಾಡುವ ಹಕ್ಕು ಅಧ್ಯಕ್ಷರಿಗಿರುತ್ತದೆ.

– ಅಧ್ಯಕ್ಷರು 'ಪರೀಕ್ಷಕ'ರಾಗಿ ಈ ಕೆಳಕಂಡ ಅಂಶಗಳಿಗೆ ತಮ್ಮ ಸ್ಥಾನ ಬಲವನ್ನು ಬಳಸುವರು.

- ತಿದ್ದುಪಡಿಗೆ ಸಂಬಂಧಿಸಿದಂತೆ
- ಕಾಲೇಜಿಗೆ ಮಾನ್ಯತೆ, ಸೇರ್ಪಡೆ ಹಾಗೂ ರದ್ದುಗೊಳಿಸುವಿಕೆ
- ಶಾಸನಗಳ ತಾತ್ಕಾಲಿಕ ರದ್ದುಪಡಿಸುವಿಕೆ ಹಾಗೂ ಮಂಜೂರು ಮಾಡುವಿಕೆ.

Digitised by Bharatavani, CIIL

- ವಿಶ್ವವಿದ್ಯಾನಿಲಯಗಳ ವ್ಯವಹಾರಗಳ ವಿಚಾರಣೆಗಾಗಿ ಆಜ್ಞೆ ಹೊರಡಿಸುವಿಕೆ.
- ಆಯ್ಕೆ ಸಮಿತಿಗಳ ಹಾಗೂ ಕಾರ್ಯನಿರ್ವಹಣಾ ಸಮಿತಿಗಳ ನಡುವಿನ ವಾಗ್ವಾದ ಪರಿಹರಿಸುವುದು.

**ಭಾರತದ ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಪಟ್ಟಿ ಈ ಕೆಳಕಂಡಂತಿದೆ.**

| ವಿ.ವಿ. ಹೆಸರು | ರಾಜ್ಯ / ಕೇಂದ್ರಾಡಳಿತ ಪ್ರದೇಶ | ನಗರದ ಹೆಸರು |
|---|---|---|
| ಆಂಗ್ಲ ಭಾಷೆ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾನಿಲಯ | ಆಂಧ್ರಪ್ರದೇಶ | ಹೈದರಾಬಾದ್ |
| ಮೌಲಾನಾ ಅಜಾದ್ ರಾಷ್ಟ್ರೀಯ ವಿ.ವಿ. | ಆಂಧ್ರಪ್ರದೇಶ | ಹೈದರಾಬಾದ್ |
| ಹೈದರಾಬಾದ್ ವಿ.ವಿ. | ಆಂಧ್ರಪ್ರದೇಶ | ಹೈದರಾಬಾದ್ |
| ರಾಜೀವ್ ಗಾಂಧಿ ವಿ.ವಿ. | ಅರುಣಾಚಲ ಪ್ರದೇಶ | ಇಟಾನಗರ |
| ಅಸ್ಸಾಂ ವಿ.ವಿ. | ಅಸ್ಸಾಂ | ಸಿಲ್‌ಚಾರ್ |
| ತೇಜ್‌ಪುರ್ ವಿ.ವಿ. | ಅಸ್ಸಾಂ | ತೇಜ್‌ಪುರ್ |
| ಬಿಹಾರ್ ಕೇಂದ್ರೀಯ ವಿ.ವಿ. | ಬಿಹಾರ್ | ಮೋತಿ ಹರಿ |
| ಗುರುಘಾಸಿಪಾಸ್ ವಿ.ವಿ. | ಛತ್ತೀಸ್‌ಘಡ್ | ಬಿಲಾಸಪುರ |
| ಜವಹರ್‌ಲಾಲ್ ನೆಹರು ವಿ.ವಿ. | ದೆಹಲಿ | ಹೊಸದೆಹಲಿ |
| ಜಾಮಿಯ ಮಿಲಿಯ ಇಸ್ಲಾಮಿಯ | ದೆಹಲಿ | ಹೊಸದೆಹಲಿ |
| ಇಂದಿರಾಗಾಂಧಿ ಮುಕ್ತ ವಿ.ವಿ. | ದೆಹಲಿ | ಹೊಸದೆಹಲಿ |
| ದೆಹಲಿ ವಿ.ವಿ. | ದೆಹಲಿ | ಹೊಸದೆಹಲಿ |
| ಗುಜರಾತ್ ಕೇಂದ್ರೀಯ ವಿ.ವಿ. | ಗುಜರಾತ್ | ಗಾಂಧೀನಗರ |
| ಹರಿಯಾಣ-ಕೇಂದ್ರೀಯ ವಿ.ವಿ. | ಹರಿಯಾಣ | ಮಹೇಂದರ್ ಘರ್ |
| ಹಿಮಾಚಲ ಪ್ರದೇಶ ಕೇಂದ್ರೀಯ ವಿ.ವಿ. | ಹಿಮಾಚಲ ಪ್ರದೇಶ | ಕಾಂಗ್ರಾ |
| ಜಾರ್ಖಂಡ್ ಕೇಂದ್ರೀಯ ವಿ.ವಿ. | ಜಾರ್ಖಂಡ್ | ಭಾಂಚೆ |
| ಜಮ್ಮು ಕಾಶ್ಮೀರ ಕೇಂದ್ರೀಯ ವಿ.ವಿ. | ಜಮ್ಮು ಮತ್ತು ಕಾಶ್ಮೀರ | – |
| ಕರ್ನಾಟಕ ಕೇಂದ್ರೀಯ ವಿ.ವಿ. | ಕರ್ನಾಟಕ | ಗುಲ್ಬರ್ಗ |
| ಕೇರಳ ಕೇಂದ್ರೀಯ ವಿ.ವಿ. | ಕೇರಳ | ಕಾಸರಗೋಡು |
| ಕೇಂದ್ರೀಯ ಕೃಷಿ ವಿ.ವಿ. | ಮಣಿಪುರ | ಇಂಫಾಲ |
| ಮಣಿಪುರ ವಿ.ವಿ. | ಮಣಿಪುರ | ಇಂಫಾಲ |
| ಡಾ. ಹರಿಸಿಂಗ್ ಗೋರ್ ವಿ.ವಿ. | ಮಧ್ಯಪ್ರದೇಶ | ಸಾಗರ |
| ಮಹಾತ್ಮ ಗಾಂಧೀ ಅಂತಾರಾಷ್ಟ್ರೀಯ ಹಿಂದಿ ವಿ.ವಿ | ಮಹಾರಾಷ್ಟ್ರ | ವಾರಿಧಿ |
| ನಾರ್ಥ ಈಸ್ಟರ್ ಹಿಲ್ ವಿ.ವಿ. | ಮೇಘಾಲಯ | ಶಿಲ್ಲಾಂಗ್ |
| ಮಿಜೋರಮ್ ವಿ.ವಿ. | ಮಿಜೋರಮ್ | ಏಜಾಲ |
| ನಾಗಾಲ್ಯಾಂಡ್ ವಿ.ವಿ. | ನಾಗಾಲ್ಯಾಂಡ್ | ಕೊಹಿಮಾ |
| ಒರಿಸ್ಸಾ ಕೇಂದ್ರೀಯ ವಿ.ವಿ. | ಒರಿಸ್ಸಾ | ಕೊರಾಪುಟ್ |
| ಪಾಂಡಿಚೇರಿ ವಿ.ವಿ. | ಪಾಂಡಿಚೇರಿ | ಪಾಂಡಿಚೇರಿ |
| ಪಂಜಾಬ್ ಕೇಂದ್ರೀಯ ವಿ.ವಿ. | ಪಂಜಾಬ್ | ಬಟಿಂಡಾ |
| ರಾಜಸ್ಥಾನ ಕೇಂದ್ರೀಯ ವಿ.ವಿ. | ರಾಜಸ್ಥಾನ | ಬಿಕನೇರ್ |
| ಸಿಕ್ಕಿಂ ವಿ.ವಿ. | ಸಿಕ್ಕಿಂ | ಯಂಗಾಂಗ್ |
| ತಮಿಳುನಾಡು ಕೇಂದ್ರೀಯ ವಿ.ವಿ. | ತಮಿಳುನಾಡು | ತಿರುಪರೂರ್ |
| ಹೇಮಾವತಿ ಸಂದನ್ ಬಹುಗುಣ ತರ್‌ವಾಲಾ ವಿ.ವಿ. | ಉತ್ತರಾಖಂಡ | ಗರವ್‌ವಾಲ್ |
| ಆಲಿಗರ್ ಮುಸಲೀಮ್ ವಿ.ವಿ. | ಉತ್ತರ ಪ್ರದೇಶ | ಆಲಿಗರ್ |
| ಅಲಹಾಬಾದ್ ವಿ.ವಿ. | ಉತ್ತರ ಪ್ರದೇಶ | ಅಲಹಾಬಾದ್ |
| ಬನಾರಸ್ ಹಿಂದೂ ವಿ.ವಿ. | ಉತ್ತರ ಪ್ರದೇಶ | ವಾರಣಾಸಿ |
| ಬಾಬಾ ಸಾಹೇಬ್ ಭೀಮ್ ರಾವ್ ಅಂಬೇಡ್ಕರ್ ವಿ.ವಿ. | ಉತ್ತರ ಪ್ರದೇಶ | ಲಕ್ನೋ |
| ಪಶ್ಚಿಮ ಬಂಗಾಳ ವಿ.ವಿ. | ಪಶ್ಚಿಮ ಬಂಗಾಳ | ಶಾಂತಿನಿಕೇತನ |

–ಬಿ.ಎನ್.ಆ.

Digitised by Bharatavani, CIIL

## ಕ್ಷೇತ್ರ ಅಧ್ಯಯನ

ಶಾಲೆಯಲ್ಲಿನ ಇತರ ಎಲ್ಲಾ ಪಠ್ಯ ವಿಷಯಗಳಿಗಿಂತ ಹೆಚ್ಚಾಗಿ ಭೂಗೋಳ ಶಾಸ್ತ್ರವು ತರಗತಿಯಿಂದ ಹೊರಗಿನ ಅಧ್ಯಯನಕ್ಕೆ ಹೆಚ್ಚು ಅವಕಾಶವನ್ನು ಹೊಂದಿರುತ್ತದೆ. ಆದುದರಿಂದ ಶಾಲೆಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಭೂಗೋಳವನ್ನು ಕಲಿಸುವುದಕ್ಕಿಂತ ಶಾಲೆಯ ಹೊರಗೆ ನೈಜ ಸನ್ನಿವೇಶದಲ್ಲಿ ಮಕ್ಕಳ ನೇರ ಅನುಭವದ ಮೂಲಕ ಕಲಿಯುವಂತಹ ಸನ್ನಿವೇಶವನ್ನು ಒದಗಿಸಬೇಕು. ಹೀಗೆ ಮಾಡುವಲ್ಲಿ ಅತ್ಯಂತ ಹೆಚ್ಚು ಉಪಯುಕ್ತವಾದ ಮತ್ತು ಪರಿಣಾಮಕಾರಿ ವಿಧಾನವೆಂದರೆ ಕ್ಷೇತ್ರ ಅಧ್ಯಯನ. (Field Study)

ಜೆಮ್ಸ್ ಪೇಠ್ ಗೀವ್ಸ್ ಈ ಅಧ್ಯಯನದ ಮಹತ್ವವನ್ನು ಈ ರೀತಿ ಹೇಳಿದ್ದಾರೆ. "ಭೂಗೋಳ ಶಾಸ್ತ್ರವು ತಲೆಯಿಂದ ಕಲಿಯಲ್ಪಡುವುದಕ್ಕಿಂತ ಹೆಚ್ಚಾಗಿ ಪಾದಗಳಿಂದ ಕಲಿಯಲ್ಪಡುತ್ತದೆ". ಅಂದರೆ ತರಗತಿಯಲ್ಲಿ ಕೇಳಿ ಅಥವಾ ಓದಿ ಮಾನಸಿಕವಾಗಿ ಕಲಿಯುವುದಕ್ಕಿಂತ ಹೆಚ್ಚಿನ ವಿಷಯಗಳನ್ನು ಶಾಲಾ ಹೊರಗಿನ ಪರಿಸರಕ್ಕೆ ಹೋಗಿ ಕಲಿಯಬಹುದು.

E.A. ಮ್ಯಾಕ್ನೇ ಎಂಬ ತಜ್ಞನ ಪ್ರಕಾರ "ಭೌಗೋಳಿಕ ಜ್ಞಾನದ ಮೂಲಾಧಾರಗಳು ಕ್ಷೇತ್ರಗಳಿಂದ ಮೂಡಿ ಬರುತ್ತದೆ. ಎಷ್ಟೇ ಪ್ರಮಾಣದ ಪುಸ್ತಕಗಳಿಂದ ಪಡೆದ ಜ್ಞಾನವು ಮಗು ತಾನು ಅಧ್ಯಯನ ಮಾಡುತ್ತಿರುವ ಭೂಮಿಯ ಬಗೆಗೆ ನೋಡಿ ಪಡೆದ ಪ್ರಾಯೋಗಿಕ ಜ್ಞಾನಕ್ಕೆ ಸಮನಾಗಿರುವುದಿಲ್ಲ".

### ಕ್ಷೇತ್ರ ಅಧ್ಯಯನದ ಮಹತ್ವ

- ಭೌಗೋಳಿಕ ಘಟನೆಗಳನ್ನು ಅವುಗಳ ನೈಜತೆಯನ್ನು ಮತ್ತು ಕಾಲಕ್ರಮದಲ್ಲಿ ಆದ ಬದಲಾವಣೆಗಳು ತನಗೆ ಗೊತ್ತಿದ್ದ ಪುಟ್ಟ ಪ್ರಪಂಚಕ್ಕೆ ಹೇಗೆ ಹತ್ತಿರವಾದವುಗಳೆಂಬುದನ್ನು ತಿಳಿಸುತ್ತದೆ.

- ಭೌತಿಕ ಸತ್ಯಗಳು ಮಗುವನ್ನು ಕಾಲ ಮತ್ತು ಸ್ಥಳದ ಇತಿಹಾಸಕ್ಕೆ ಸಮೀಪ ತರುತ್ತವೆ.

- ಮಕ್ಕಳು ಸ್ಥಳೀಯ ಜನರ ಸಾಧನೆಗಳ ಕಥೆಗಳಲ್ಲಿ ಆಸಕ್ತಿಯನ್ನು ಹೊಂದುತ್ತಾರೆ. ಕ್ಷೇತ್ರದ ಇತಿಹಾಸವು ಮಕ್ಕಳಿಗೆ ಇಂದಿನ ಜೀವನವು ಯಾವ ರೀತಿ ಹಿಂದಿನ ಜೀವನದಿಂದ ಹೇಗೆ ಭಿನ್ನವಾಗಿದೆ ಸಾಮಾಜಿಕ ಜೀವನವು ಯಾವ ರೀತಿ ಹಿಂದಿನ ಜೀವನಕ್ಕಿಂತ ಬದಲಾವಣೆ ಹೊಂದಿದೆ ಎಂಬುದನ್ನು ನೇರವಾಗಿ ತಿಳಿದುಕೊಳ್ಳುತ್ತಾರೆ.

- ಕ್ಷೇತ್ರ ಅಧ್ಯಯನದಿಂದ ಮಕ್ಕಳಲ್ಲಿ ಕಲ್ಪನಾಶಕ್ತಿಯನ್ನು ಪ್ರಚೋದಿಸುತ್ತದೆ. ಸ್ಥಳೀಯ ಸ್ಮಾರಕಗಳಾದ ಹಳೆಯ ದೇವಾಲಯಗಳು, ಬಸದಿಗಳು, ಮಸೀದಿಗಳು, ಕೋಟೆಗಳು, ಅವಶೇಷಗಳು, ಪಳಿಯುಳಿಕೆಗಳು ಮುಂತಾದವುಗಳು ವಿದ್ಯಾರ್ಥಿಗಳಿಗೆ ವಾಸ್ತವಿಕ ಜ್ಞಾನವನ್ನು ನೀಡುತ್ತದೆ.

- ಕ್ಷೇತ್ರ ಅಧ್ಯಯನವು ಸಮಾಜದ ಆರ್ಥಿಕ ಸಾಮಾಜಿಕ ಸ್ಥಿತಿಯನ್ನು ತಿಳಿಯುವಲ್ಲಿ ಸಹಾಯಕವಾಗುತ್ತದೆ. ವಿದ್ಯಾರ್ಥಿಗಳನ್ನು ತಮ್ಮ ನೆರೆಹೊರೆಯ ಸ್ಥಳಗಳ ಅಧ್ಯಯನವನ್ನು ಮಾಡಲು ಕಳಿಸಿದಾಗ ಅವರು ಸಮಾಜದ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಅಭ್ಯಸಿಸುವರು, ತಾವೆಲ್ಲರೂ ಒಂದೇ ಎಂದೆಂಬ ಭಾವನೆಯನ್ನು ಬೆಳೆಸಿಕೊಳ್ಳುವರು.

- ಈ ಅಧ್ಯಯನವು ಪಠ್ಯೇತರ ಚಟುವಟಿಕೆಗಳಲ್ಲಿ ಒಂದಾಗಿದೆ. ಇಂದಿನ ಯುಗದಲ್ಲಿ ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಪ್ರಾಮುಖ್ಯತೆಯನ್ನು ನೀಡಿರುವುದರಿಂದ ಮತ್ತು ಸ್ಥಳೀಯ ಭೌಗೋಳಿಕ ಅಧ್ಯಯನವು ಮಕ್ಕಳಲ್ಲಿ ಹೊಸ ದೃಷ್ಟಿಯನ್ನೊಳಗೊಂಡ ವಿಚಾರಶೀಲತೆ ಮತ್ತು ಹೊಸ ಮಾರ್ಗವನ್ನು ಬೆಳೆಸುತ್ತದೆ. ಇಂತಹ ಚಟುವಟಿಕೆಗಳು ವೈಜ್ಞಾನಿಕ ಸ್ಫೂರ್ತಿಯನ್ನು ಬೆಳೆಸುತ್ತದೆ.

- ಮಕ್ಕಳಿಗೆ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ವಿವಿಧ ರೀತಿಯ ಪ್ರಾಣಿಗಳು, ವಿವಿಧ ರೀತಿಯ ಬೆಳೆಗಳು, ವಿವಿಧ ರೀತಿಯ ಮೋಟಾರು ವಾಹನಗಳು, ವಿವಿಧ ರೀತಿಯ ಸಸ್ಯವರ್ಗ, ಸ್ಥಳೀಯ ಮಾರುಕಟ್ಟೆ, ಕಾರ್ಖಾನೆಗಳು, ನದಿಗಳು, ಪರ್ವತಗಳು, ಅಣೆಕಟ್ಟು ಇತ್ಯಾದಿಗಳ ಬಗ್ಗೆ ಪ್ರಾಥಮಿಕವಾದ ಅಥವಾ ನೇರವಾದ ಮಾಹಿತಿಯನ್ನು ಪಡೆಯಲು ಉಪಯುಕ್ತವಾದವು.

- ನೇರ ಕಲಿಕೆಯ ಅನುಭವವನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ ಭೌಗೋಳಿಕ ಅಂಶಗಳನ್ನು ನೇರವಾಗಿ ವೀಕ್ಷಿಸುವ ಅವಕಾಶಗಳನ್ನು ಒದಗಿಸುತ್ತದೆ. ಈ ಮೂಲಕ ವಿದ್ಯಾರ್ಥಿಗಳು ತರಗತಿಯಲ್ಲಿ ಪಡೆಯಲಾಗದ ನೇರ/ಪ್ರತ್ಯಕ್ಷ ಕಲಿಕಾ ಅನುಭವವನ್ನು ಪಡೆಯುತ್ತಾರೆ. ಈ ವಿಧಾನವು ವಿದ್ಯಾರ್ಥಿಗಳ ವೈಯಕ್ತಿಕ ಅನುಭವದ ಮೂಲಕ ಭೌಗೋಳಿಕ ಅಂಶವನ್ನು ಕಲಿಯಲು ಸಹಾಯ ಮಾಡುತ್ತದೆ.

- ವಿಶಾಲ ದೃಷ್ಟಿಕೋನ ಬೆಳೆಯುತ್ತದೆ. ವಿದ್ಯಾರ್ಥಿಗಳ ದೃಷ್ಟಿಕೋನವನ್ನು ವಿಶಾಲಗೊಳಿಸುತ್ತದೆ. ಬೇರೆ ಬೇರೆ ರೀತಿಯ ವಾಯುಗುಣ ಬೇರೆ ಬೇರೆ ರೀತಿಯ ಪ್ರಾಕೃತಿಕ ಲಕ್ಷಣಗಳಿಂದ ಕೂಡಿರುವ ಮತ್ತು ಬೇರೆ ಬೇರೆ ರೀತಿಯ ಆಹಾರ, ಉಡುಪು ಮತ್ತು ವಸತಿಗಳ ಜನರನ್ನು ಸಂಪರ್ಕಿಸುತ್ತಾರೆ. ಅವರು ವಿಶಾಲವಾದ ದೇಶದಲ್ಲಿ ಜನಜೀವನದ ವಿವಿಧತೆಯನ್ನು ಕಂಡುಕೊಳ್ಳುತ್ತಾರೆ. ಈ ರೀತಿಯ ಅನುಭವಗಳು ಅವರ ಮನಸ್ಸನ್ನು ವಿಶಾಲಗೊಳಿಸುತ್ತದೆ ಮತ್ತು ಅವರನ್ನು ಮೊದಲಿಗಿಂತ ಹೆಚ್ಚು ಸಹಿಷ್ಣುಗಳನ್ನಾಗಿ ಮತ್ತು ವಿಶಾಲ ಹೃದಯಿಗಳನ್ನಾಗಿ ಮಾಡುತ್ತದೆ.

- ಪ್ರಾಯೋಗಿಕ ಸಾಮಾಜಿಕ ತರಬೇತಿ ಕೊಡುತ್ತದೆ. ವಿದ್ಯಾರ್ಥಿಗಳಲ್ಲಿ ಕೆಲವು ಉತ್ತಮ ಸಾಮಾಜಿಕ ಕೌಶಲಗಳನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳು ಒಟ್ಟಾಗಿ ಕೆಲಸ ನಿರ್ವಹಿಸುವಾಗ ಸಹಕಾರ ಬೆಳೆಸಿಕೊಳ್ಳುವರು. ಅವರಲ್ಲಿ ನಾಯಕತ್ವ ವಹಿಸುವ ಗುಣ, ಗುಂಪು ಭಾವನೆ, ಸಹನೆ, ಸ್ವಸಹಾಯ, ಪರಿಸರಕ್ಕೆ ಹೊಂದಿಕೊಳ್ಳುವ ಗುಣ, ಶಿಕ್ಷಕರಿಗೆ ವಿಧೇಯತೆ, ಇತ್ಯಾದಿ ಸಾಮಾಜಿಕ ಗುಣಗಳು ಬೆಳೆಯುತ್ತವೆ.

- ಸ್ವಾಭಾವಿಕ ಒತ್ತಡಗಳನ್ನು ತೃಪ್ತಿಗೊಳಿಸುತ್ತದೆ. ಮನೋವಿಜ್ಞಾನದ ಪ್ರಕಾರ ಯುವ ಪೀಳಿಗೆಯವರು ಸ್ವಾಭಾವಿಕವಾಗಿ ಅನೇಕ ಆಸಕ್ತಿಗಳು, ಅಗತ್ಯತೆಗಳು ಮತ್ತು ಪ್ರವೃತ್ತಿಗಳನ್ನು ಹೊಂದಿರುತ್ತಾರೆ. ಅವುಗಳಲ್ಲಿ ಭಿನ್ನತೆ ಇರುತ್ತದೆ. ಕುತೂಹಲವೇ ಜ್ಞಾನದ ತಾಯಿ ಇದ್ದಂತೆ. ಕ್ಷೇತ್ರ ಅಧ್ಯಯನಗಳು ವಿದ್ಯಾರ್ಥಿಗಳ ಈ ರೀತಿಯ ಕುತೂಹಲ, ಆಸಕ್ತಿಗಳು, ಸಾಹಸ ಪ್ರವೃತ್ತಿಗಳನ್ನು ತೃಪ್ತಿಪಡಿಸಲು ವಾಸ್ತವವಾದ ಮತ್ತು ಸ್ವಾಭಾವಿಕವಾದ ಅವಕಾಶಗಳನ್ನು ಒದಗಿಸುತ್ತದೆ.

- ಸೌಂದರ್ಯೋಪಾಸನೆಯ ದೃಷ್ಟಿ ಬೆಳೆಯುತ್ತದೆ. ಕ್ಷೇತ್ರ ಅಧ್ಯಯನ ಸ್ವಾಭಾವಿಕವಾದ ಪರಿಸರದಲ್ಲಿ ವ್ಯವಸ್ಥೆಗೊಳಿಸಲ್ಪಡುವುದರಿಂದ ವಿದ್ಯಾರ್ಥಿಗಳಲ್ಲಿ ಪ್ರಕೃತಿಯ ಬಗ್ಗೆ ಪ್ರೇಮ ಬೆಳೆದು ಬರುತ್ತದೆ. ಗಿರಿಧಾಮ, ಜಲಪಾತ, ಕಣಿವೆ, ಸಮುದ್ರದಲ್ಲಿನ ಸೂರ್ಯೋದಯ ಮತ್ತು ಸೂರ್ಯಾಸ್ತ ಇತ್ಯಾದಿಗಳಿಗೆ ನೀಡುವ ಭೇಟಿ ಕೇವಲ ಭೌಗೋಳಿಕ ಜ್ಞಾನವನ್ನು ಮಾತ್ರ ನೀಡುವುದಿಲ್ಲ. ಬದಲಾಗಿ ಪ್ರಕೃತಿಯ ವರ್ಣಮಯ ದೃಶ್ಯಗಳನ್ನು ಸೌಂದರ್ಯವನ್ನು ಆಸ್ವಾದಿಸುವುದರಿಂದ ಪ್ರಕೃತಿ ಮತ್ತು ಸೌಂದರ್ಯ ಹಾಗೂ ಸುತ್ತಮುತ್ತಲಿನ ಪರಿಸರದ ಬಗ್ಗೆ ಸೌಂದರ್ಯೋಪಾಸನೆಯ ದೃಷ್ಟಿಕೋನವನ್ನು ಬೆಳೆಸುತ್ತದೆ. ಬಿಡುವಿನ ವೇಳೆಯಲ್ಲಿ ಪ್ರಕೃತಿಯನ್ನು ವೀಕ್ಷಿಸುವ ಹವ್ಯಾಸದ ಬೆಳವಣಿಗೆಯಾಗುತ್ತದೆ. ಕಣ್ಣನ ತಣಿಸುವಂತಹ

Digitised by Bharatavani, CIIL

ಇಂತಹ ಪ್ರಕೃತಿ ಸೌಂದರ್ಯವನ್ನು ರಕ್ಷಿಸಬೇಕು ಎಂಬ ಅರಿವು ಸಹ ವಿದ್ಯಾರ್ಥಿಗಳಲ್ಲಿ ಬೆಳೆದು ಬರುತ್ತದೆ.

**ಶಿಕ್ಷಕನ ಪಾತ್ರ:** ಭೂಗೋಳ ಶಿಕ್ಷಕನು ಆಸಕ್ತಿ ವಹಿಸಿ ಪರಿಸರ ಅಥವಾ ನೆರೆಹೊರೆಯ ಸ್ಥಳಗಳ ಬಗೆಗೆ ಅಧ್ಯಯನವನ್ನು ವಿದ್ಯಾರ್ಥಿಗಳು ಮಾಡುವ ಅವಕಾಶವನ್ನು ಒದಗಿಸಿ ಕೊಡಬೇಕು. ಅವನು ವಿದ್ಯಾರ್ಥಿಗಳಿಗೆ ಟಿಪ್ಪಣಿಯ ಪುಸ್ತಕಗಳನ್ನು, ದೊರಕಿದ ದಾಖಲೆಗಳನ್ನು, ಅವಲೋಕನಗಳನ್ನು ಸಮೀಕ್ಷೆಗಳನ್ನು, ಕಟ್ಟಡಗಳನ್ನು, ಸ್ಮಾರಕಗಳನ್ನು, ಕೈಗಾರಿಕೆಗಳನ್ನು, ಬೆಳೆಗಳನ್ನು ಮುಂತಾದವುಗಳ ಬಗೆಗೆ ಅನುಭವಗಳನ್ನು ಬರೆದಿಡುವಂತೆ ಪ್ರೋತ್ಸಾಹಿಸಬೇಕು.

ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಉದ್ದೇಶಗಳ ಬಗ್ಗೆ ಅರಿವನ್ನು ಹೊಂದಿರಬೇಕು. ತರಗತಿಯಲ್ಲಿ ಒದಗಿಸಲಾದ ಕಲಿಕಾ ಅನುಭವಗಳನ್ನು ಪಡೆಯುವ ಉದ್ದೇಶ ಹೊಂದಿರಬೇಕು.

ಶಿಕ್ಷಕರು ಕ್ಷೇತ್ರ ಅಧ್ಯಯನಕ್ಕೆ ಹೋಗಬೇಕೆಂದಿರುವ ಸ್ಥಳಗಳನ್ನು ಪೂರ್ವಭಾವಿಯಾಗಿ ಸಂದರ್ಶಿಸಿದ ಬೇರು ಅದರ ಬಗ್ಗೆ ಪೂರ್ಣವಾದ ಜ್ಞಾನವನ್ನು ಹೊಂದಿರಬೇಕು.

ಕ್ಷೇತ್ರಗಳಿಗೆ ಹೊರಡುವುದಕ್ಕೆ ಮುಂಚೆ ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಯವನ್ನು ನೀಡಬೇಕು. ಅಲ್ಲದೆ ಕ್ಷೇತ್ರಗಳಿಗೆ ಭೇಟಿ ಮಾಡಲಿರುವ ಸ್ಥಳಗಳು ಮತ್ತು ಭೌಗೋಳಿಕ ಅಂಶಗಳ ಬಗ್ಗೆ ಪುಸ್ತಕಗಳಿಂದ ಮತ್ತು ನಕ್ಷೆಗಳಿಂದ ಮತ್ತು ಈಗಾಗಲೇ ಕೆಲವರ ಅನುಭವಗಳಿಂದ ವಿಷಯವನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳಲು ಸೂಚನೆ ನೀಡಬೇಕು.

ಶಿಕ್ಷಕರು ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಮತ್ತು ಅವರ ಸಂದೇಹಗಳಿಗೆ ಪರಿಹಾರವನ್ನು ಸ್ಥಳದಲ್ಲಿಯೇ ನೀಡಬೇಕು.

–ಎಸ್.ವಿ.ಕು.

# ಗ

## ಗಣಿತಶಾಸ್ತ್ರ ಬೋಧನೆ

**ಗಣಿತದ ಉದ್ದೇಶಗಳು:** ರಾಷ್ಟ್ರೀಯ ಶಿಕ್ಷಣ ನೀತಿ (1986) ಗಣಿತ ಶಿಕ್ಷಣವನ್ನು ಕುರಿತು ಹೀಗೆ ಹೇಳಿದೆ– ಗಣಿತವನ್ನು ಮಗುವು ಯೋಚಿಸುವ, ವಿವೇಚಿಸುವ, ವಿಶ್ಲೇಷಿಸುವ ಹಾಗೂ ತಾರ್ಕಿಕವಾಗಿ ಒಗ್ಗೂಡಿಸುವ ಒಂದು ಸಾಧನವನ್ನಾಗಿ ಪರಿಗಣಿಸಬೇಕು. ಗಣಿತವು ಒಂದು ವಿಶೇಷ ಅಧ್ಯಯನ ವಿಷಯವಾಗಿರುವುದರ ಜೊತೆಗೆ ವಿಶ್ಲೇಷಣೆ ಹಾಗೂ ವಿವೇಚನೆಯನ್ನು ಒಳಗೊಳ್ಳುವ ಯಾವುದೇ ಒಂದು ವಿಷಯದ ಸಹವರ್ತಿಯೆಂದು ಭಾವಿಸಬೇಕು.

ಇತ್ತೀಚಿನ ದಿನಗಳಲ್ಲಿ ಶಾಲೆಗಳಲ್ಲಿ ಗಣಕಯಂತ್ರಗಳನ್ನು ಅಳವಡಿಸಿರುವುದರಿಂದ ಶೈಕ್ಷಣಿಕ ಗಣಕೀಕರಣ ಮತ್ತು ಕಾರ್ಯ–ಕಾರಣಗಳ ಸಂಬಂಧವನ್ನು ತಿಳಿದುಕೊಂಡು ಕಲಿಯಬೇಕು. ಬದಲಾವಣೆಗಳ ಅಂತರ್ ಪ್ರಭಾವಗಳು ಮುಂತಾದವುಗಳು ಹುಟ್ಟಿಕೊಂಡಿರುವುದರಿಂದ ಗಣಿತ ಬೋಧನೆಯನ್ನು ಸೂಕ್ತವಾಗಿ ಪುನರ್ ರೂಪಿಸಲಾಗುವುದು.

ಗಣಿತದ ಬೋಧನೆಯು ತನ್ನದೇ ಆದ ಧ್ಯೇಯೋದ್ದೇಶಗಳನ್ನು ಹೊಂದಿದೆ. ಗಣಿತ ಬೋಧನೆಯ ಧ್ಯೇಯಗಳು ಅಥವಾ ಗುರಿಗಳು ಶಿಕ್ಷಣದ ಪರಮೋಚ್ಚ ಗುರಿಯಾದ ಮಗುವಿನ ವ್ಯಕ್ತಿತ್ವದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಉಂಟುಮಾಡುವುದು ಎಂಬುದಕ್ಕೆ ಪೂರಕವಾಗಿರಬೇಕು. ಗುರಿಗಳು ದೀರ್ಘಕಾಲಿಕ, ಸಾಮಾನ್ಯ ಮತ್ತು ವ್ಯಾಪಕವಾಗಿರುತ್ತದೆ. ಇವುಗಳ ಸಾಧನೆಗೆ ನಾವು ಗುರಿಗಳನ್ನು ವಿಶ್ಲೇಷಿಸಿ ಅವುಗಳಲ್ಲಿ ಚಿಕ್ಕ ಚಿಕ್ಕ ಸಾಧನಾ ಬಿಂದುಗಳನ್ನು ಗುರುತಿಸುತ್ತೇವೆ. ಇವು ಅಲ್ಪಕಾಲಿಕ, ನಿರ್ದಿಷ್ಟ ಹಾಗೂ ಸೀಮಿತವಾಗಿರುತ್ತವೆ. ಇವುಗಳನ್ನೇ ಉದ್ದೇಶಗಳು ಎನ್ನುತ್ತೇವೆ. ಉದ್ದೇಶಗಳ ಸಾಧನೆಯಿಂದ ಗುರಿಯ ಸಾಧನೆಯನ್ನು ಈಡೇರಿಸಿಕೊಳ್ಳುತ್ತೇವೆ.

ಗಣಿತ ಬೋಧನೆಯ ಗುರಿ ಅಥವಾ ಮೌಲ್ಯಗಳೆಂದರೆ ಉಪಯುಕ್ತತಾ ಮೌಲ್ಯ, ಶಿಸ್ತಿನ ಮೌಲ್ಯ, ಸಾಂಸ್ಕೃತಿಕ ಮೌಲ್ಯ, ಮನರಂಜನಾ ಮೌಲ್ಯ, ಇತ್ಯಾದಿ. ಗಣಿತದ ಉದ್ದೇಶಗಳನ್ನು ಬೆಂಜಮಿನ್ ಎಸ್ ಬ್ಲೂಮ್‌ರವರ ಶೈಕ್ಷಣಿಕ ಉದ್ದೇಶಗಳ ವರ್ಗೀಕರಣ ಪದ್ಧತಿಯನ್ನು ಆಧರಿಸಿ ಗುರುತಿಸಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ ಪದ್ಧತಿಯನ್ನೂ ಗಮನಿಸಿದೆ. ಇವುಗಳ ಪ್ರಕಾರ ಗಣಿತ ಬೋಧನೆಯ ಉದ್ದೇಶಗಳೆಂದರೆ ಜ್ಞಾನ, ತಿಳಿವಳಿಕೆ, ಅನ್ವಯ, ಕೌಶಲ, ಪ್ರಶಂಸೆ, ಆಸಕ್ತಿ, ಮನೋಭಾವನೆ. ಇವುಗಳನ್ನು ಬ್ಲೂಮ್ ಪದ್ಧತಿಯಲ್ಲಿನ ಜ್ಞಾನ ವಲಯ, ಭಾವನಾ ವಲಯ ಮತ್ತು ಮನಸ್ ಚಾಲಿತ ವಲಯಗಳಲ್ಲಿ ವರ್ಗೀಕರಿಸಬಹುದಾಗಿದೆ. ಈ ಉದ್ದೇಶಗಳನ್ನು ಒಂದೊಂದಾಗಿ ಪರಿಶೀಲಿಸೋಣ:

1. **ಜ್ಞಾನ:** ಜ್ಞಾನ ವಲಯದ ಮೊದಲನೇ ಹಂತವೇ ಜ್ಞಾನ. ಇದು ಆ ವಲಯದ ಕೆಳಸ್ತರದಲ್ಲಿ ವರ್ಗೀಕರಣಗೊಂಡಿದೆ. ಇಲ್ಲಿ ಜ್ಞಾನವೆಂದರೆ ಸಂಪೂರ್ಣ ಅಥವಾ ಸಮಗ್ರ ಜ್ಞಾನವೆಂದಲ್ಲ. ಇಲ್ಲಿ ವಿದ್ಯಾರ್ಥಿಗೆ ಕೊಡಮಾಡುವುದು ವಿಷಯದ ಮೂಲ ಅಥವಾ ಸರಳ ಜ್ಞಾನ. ಇದನ್ನು ಮೇಲ್ಪದರದ ಜ್ಞಾನವೆಂದೂ ಹೇಳುತ್ತೇವೆ. ವಿಷಯಕ್ಕೆ ಸಂಬಂಧಿಸಿದಂತೆ ಪಾರಿಭಾಷಿಕ ಶಬ್ದಗಳ ಅರ್ಥ, ವ್ಯಾಖ್ಯೆ, ಹೇಳಿಕೆಗಳು, ಹೆಸರುಗಳು, ಕಾಲ, ಸಂಕೇತ, ಸೂತ್ರ, ಚಿತ್ರ ಇಂತಹವುಗಳನ್ನು ಪರಿಚಯಿಸಲಾಗುತ್ತದೆ. ಉದಾ: ಗಣ, ಭಿನ್ನರಾಶಿ, ವೃತ್ತ ಇತ್ಯಾದಿ ಶಬ್ದಗಳ ಅರ್ಥ, ವ್ಯಾಖ್ಯೆ, ಪೈಥಾಗೊರಸ್ ಪ್ರಮೇಯದ ಹೇಳಿಕೆ, $\varphi$, $\Delta$ ಮುಂತಾದ ಸಂಕೇತಗಳು, $A=bh$ ಇತ್ಯಾದಿ ಸೂತ್ರಗಳು. ಇವುಗಳ ಜ್ಞಾನ ಪಡೆದ ವಿದ್ಯಾರ್ಥಿ ಅವುಗಳನ್ನು ಸ್ಮರಿಸುವ, ಗುರುತಿಸುವ ವರ್ತನೆಗಳನ್ನು ಪ್ರಕಟಿಸುತ್ತಾನೆ.
2. **ತಿಳಿವಳಿಕೆ:** ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಷಯದ ಸಂಕೀರ್ಣಾಂಶಗಳನ್ನು, ಅದರ ಒಳ/ಕೆಳ ಪದರಗಳನ್ನು ಒಂದೊಂದಾಗಿ ಕಲಿಸಲಾಗುತ್ತದೆ. ಅಂದರೆ ಗಣಿತದ ಪರಿಕಲ್ಪನೆಗಳು, ಪರಿಕಲ್ಪನೆಗಳ ನಡುವಿನ ಸಂಬಂಧಗಳು, ಸಾಮಾನ್ಯೀಕರಣಗಳು, ವಿಧಾನಗಳು, ಪ್ರಮೇಯಗಳ ಬಗ್ಗೆ ಅವರಲ್ಲಿ ಆಳವಾದ ಗಟ್ಟಿಯಾದ ತಿಳಿವಳಿಕೆಯನ್ನು ಬೆಳೆಸುವ ಕಾರ್ಯವನ್ನು ಈ ಹಂತದಲ್ಲಿ

Digitised by Bharatavani, CIIL

ಮಾಡಲಾಗುವುದು. ವಿಷಯದ ಮೇಲೆ ತಿಳಿವಳಿಕೆ ಬೆಳೆಸಿಕೊಂಡ ವಿದ್ಯಾರ್ಥಿ ವಿವರಿಸುವ, ಉದಾಹರಿಸುವ, ಹೋಲಿಸುವ, ಸಾಮಾನ್ಯೀಕರಿಸುವ, ಅನುಸರಿಸುವ, ಸಾಧಿಸುವ ವರ್ತನೆಗಳನ್ನು ಪ್ರಕಟಿಸುತ್ತಾನೆ.

3. **ಅನ್ವಯ:** ಇದು ವಿದ್ಯಾರ್ಥಿಯು ಈ ಹಿಂದಿನ ಹಂತಗಳಲ್ಲಿ ಪಡೆದುಕೊಂಡ ಜ್ಞಾನ ಮತ್ತು ಬೆಳೆಸಿಕೊಂಡ ತಿಳಿವಳಿಕೆಯನ್ನು ಹೊಸ ಸನ್ನಿವೇಶಗಳಲ್ಲಿ ಬಳಸಿಕೊಳ್ಳುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದಕ್ಕೆ ಸಂಬಂಧಿಸಿದೆ. ವಿದ್ಯಾರ್ಥಿಯ ಕಲಿಕೆ ಕೇವಲ ಪುಸ್ತಕ ಜ್ಞಾನವಾಗಬಾರದು. ಅದು ಅವನ ನಿತ್ಯಜೀವನದಲ್ಲಿ ಸಂದರ್ಭಾನುಸಾರವಾಗಿ ಬಳಸಲು ಸಾಧ್ಯವಾಗಬೇಕು. ಪಾಠ ವಿಷಯದಲ್ಲಿ ಹಾಗೂ ಮುಂದೆ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ರೂಢಿಸಬೇಕು. ಮುಖ್ಯವಾಗಿ ಸಮಸ್ಯಾ ಪರಿಹಾರ ಸಾಮರ್ಥ್ಯದ ಬೆಳವಣಿಗೆಯನ್ನು ಈ ಹಂತದಲ್ಲಿ ನಿರೀಕ್ಷಿಸಲಾಗಿದೆ. ವಿಶ್ಲೇಷಿಸುವ, ತೀರ್ಮಾನಿಸುವ, ಊಹಾಕಲ್ಪನೆಗಳನ್ನು ರಚಿಸುವ ಮತ್ತು ಪರೀಕ್ಷಿಸುವ, ಕಾರಣ ತಿಳಿಸುವ, ಭವಿಷ್ಯೀಕರಿಸುವ, ಮುಂತಾದ ವರ್ತನೆಗಳನ್ನು ಈ ಉದ್ದೇಶ ಸಾಧನೆಯಾದಾಗ ಮಕ್ಕಳಲ್ಲಿ ಕಾಣುತ್ತೇವೆ.

4. **ಕೌಶಲ:** ಗಣಿತದ ಕಲಿಕೆಯು ಪ್ರಮುಖವಾಗಿ ಈ ಕೆಳಕಂಡ ಕೌಶಲಗಳನ್ನು ಮಕ್ಕಳಲ್ಲಿ ಬೆಳೆಸುತ್ತದೆ; ಉಪಕರಣಗಳನ್ನು ಬಳಸುವ ಕೌಶಲ, ಚಿತ್ರ ರಚನಾ ಕೌಶಲ, ಲೆಕ್ಕ ಬಿಡಿಸುವ ಅಥವಾ ಗಣನಾ ಕೌಶಲ ಮತ್ತು ವಾಚನಾ ಕೌಶಲ. ಗಣಿತದಲ್ಲಿ ಚಿತ್ರ ಅಥವಾ ಆಕೃತಿಗಳನ್ನು ರಚಿಸಲು ಅಡಿಗೋಲು, ಕೈವಾರ, ಕೋನಮಾಪಿ, ಮುಮ್ಮೂಲೆ ಮಟ್ಟ ಮುಂತಾದ ಉಪಕರಣಗಳನ್ನು, ಹಾಗೆಯೇ ಸೀಸದಕಡ್ಡಿ ಮುಂತಾದ ಸಾಧನಗಳನ್ನು ಮತ್ತು ಲೆಕ್ಕ ಬಿಡಿಸುವಾಗ ಗಣನ ಯಂತ್ರ (Calculator), ಗಣಕ ಯಂತ್ರ (Computer) ಮುಂತಾದ ಆಧುನಿಕ ಯಂತ್ರಗಳನ್ನು ಬಳಸಲಾಗುತ್ತದೆ. ಉಪಕರಣವನ್ನು ಸರಿಯಾಗಿ ಇಟ್ಟುಕೊಳ್ಳುವಲ್ಲಿ, ಹಿಡಿದುಕೊಳ್ಳುವಲ್ಲಿ ಮತ್ತು ಬಳಸುವಲ್ಲಿ ಕುಶಲತೆ ಇರಬೇಕು. ಚಿತ್ರ ರಚಿಸುವಾಗ ಅವುಗಳು ಅಳತೆಗೆ ಸರಿಯಾಗಿ, ಮಾಟವಾಗಿ ಹಾಗೂ ಅಂದವಾಗಿ ಇರಬೇಕು. ಮುಖ್ಯವಾಗಿ ಗೆರೆಗಳು ಬರೆಗಳ ಹಾಗೆ ಇರಬಾರದು. ಚಿತ್ರದ ಭಾಗಗಳನ್ನು ಸರಿಯಾದ ಸಂಕೇತಗಳನ್ನು ಬಳಸಿ ಗುರುತಿಸಬೇಕು. ಚಿತ್ರದ ಪಾದ, ಎತ್ತರಗಳು ಪ್ರಮಾಣಬದ್ಧವಾಗಿರುವಂತೆ ಅಳತೆ ತೆಗೆದುಕೊಳ್ಳಬೇಕು. ಲೆಕ್ಕ ಬಿಡಿಸುವಾಗ ಲಿಖಿತವಾಗಿ ಹಾಗೂ ಮೌಖಿಕವಾಗಿ ಲೆಕ್ಕ ಬಿಡಿಸುತ್ತೇವೆ. ಯಾವುದೇ ರೀತಿಯಾಗಲಿ ಲೆಕ್ಕಗಳನ್ನು ತಪ್ಪಿಲ್ಲದಂತೆ ಹಾಗೂ ತ್ವರಿತವಾಗಿ ಬಿಡಿಸಬೇಕು. ಉತ್ತರಗಳನ್ನು ಬರೆಯುವಾಗ ಮೂಲಮಾನಗಳು ಇದ್ದಲ್ಲಿ, ಅವುಗಳನ್ನು ಸರಿಯಾಗಿ ನಮೂದಿಸಬೇಕು. ಆಲೇಖಗಳು, ಅಕ್ಷಗಳು, ಅವುಗಳಲ್ಲಿ ಬಿಂದುಗಳ ಸ್ಥಾನ, ಕೋಷ್ಟಕಗಳು ದಶಮಾಂಶ ಬಿಂದುವಿನ ನಂತರದ ಅಂಕೆಗಳು ಇಂತಹವುಗಳನ್ನು ಓದುವಾಗ ತಪ್ಪಾಗಬಾರದು.

5. **ಪ್ರಶಂಸೆ:** ಗಣಿತ ಒಂದು ಸುಂದರವಾದ ವಿಷಯ. ಕೆಪ್ಲರ್ ಹೇಳುವಂತೆ, "ಸುಂದರತೆಯ ತಳರೂಪಿಕೆ ಗಣಿತ". ಸಂಖ್ಯೆಗಳು, ಸಂಖ್ಯೆಗಳ ಸಂಯೋಜನೆ, ಚಿತ್ರಗಳು, ಸಮೀಕರಣಗಳು, ಸೂತ್ರಗಳು ಮುಂತಾದವುಗಳಲ್ಲೆಲ್ಲ ಸೌಂದರ್ಯ ಅಡಗಿರುತ್ತದೆ. ಇವನ್ನು ಕಾಣುವ ಕಂಡು ಮೆಚ್ಚುವ ಸಾಮರ್ಥ್ಯ ಬೆಳೆಸುವುದು ಈ ಹಂತದ ಉದ್ದೇಶ. ವಿದ್ಯಾರ್ಥಿಯು ಗಣಿತದ ಗುಣಗಳಾದ ನಿಖರತೆ, ಸಂಕ್ಷಿಪ್ತತೆ, ನಿಷ್ಕೃಷ್ಟತೆ, ಖಚಿತತೆ ಮತ್ತು ತಾರ್ಕಿಕ ಸುಸಂಬದ್ಧತೆಗಳು ಸಾಮ್ಯತೆ, ಸಮಪಾರ್ಶ್ವತೆ, ಮುಂತಾದವುಗಳು ಜೀವನದ ಸಂದರ್ಭಗಳಲ್ಲೂ ಕಾಣಬರುವುದನ್ನು ಪ್ರಶಂಸಿಸಬೇಕು. ಗಣಿತದ ಸಂರಚನೆ ಮತ್ತು ವಿನ್ಯಾಸಗಳನ್ನು ಮೆಚ್ಚಬೇಕು. ಸಮಾಜ ಹಾಗೂ ನಾಗರಿಕತೆಗಳ ಮುನ್ನಡೆಯಲ್ಲಿ ಗಣಿತ ಮತ್ತು ಗಣಿತಜ್ಞರ ಕೊಡುಗೆಗಳನ್ನು ಪ್ರಶಂಸಿಸುವ ಸಾಮರ್ಥ್ಯ ಬೆಳೆಸುವುದು ಈ ಉದ್ದೇಶಕ್ಕೆ ಸಂಬಂಧಿಸುತ್ತದೆ.

6. **ಆಸಕ್ತಿ:** ಗಣಿತದ ಸಾಹಿತ್ಯವನ್ನು ಓದುವುದು, ಗಣಿತಜ್ಞರ ಜೀವನ ಚರಿತೆಗಳನ್ನು ಓದುವುದು ಗಣಿತದ ತರಗತಿಗಳಲ್ಲಿ ಹಾಗೂ ಗಣಿತ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು, ಗಣಿತದ ವಿಚಾರಗಳನ್ನು ಚರ್ಚಿಸುವುದು, ವಿವರಗಳನ್ನು ಸಂಗ್ರಹಿಸುವುದು ಇವೆಲ್ಲವೂ ಗಣಿತದಲ್ಲಿರುವ ಆಸಕ್ತಿಯನ್ನು ಬಿಂಬಿಸುತ್ತದೆ. ಹಾಗಾಗಿ ಮೇಲೆ ತಿಳಿಸಿದ ವರ್ತನೆಗಳನ್ನು ವಿದ್ಯಾರ್ಥಿಗಳಲ್ಲಿ ರೂಢಿಸುವುದು ಆಸಕ್ತಿ ಉದ್ದೇಶಕ್ಕೆ ಸಂಬಂಧಿಸುತ್ತದೆ.

7. **ಮನೋಭಾವನೆ:** ಮೇಲಿನ ಉದ್ದೇಶಗಳ ಸಾಧನೆಗೆ ಹೋಲಿಸಿದರೆ ಮನೋಭಾವನೆ ಉದ್ದೇಶವು ದೀರ್ಘಕಾಲಿಕವೇ ಆಗುತ್ತದೆ. ಏಕೆಂದರೆ ಮನೋಭಾವನೆಯ ಬೆಳವಣಿಗೆ ಅಥವಾ ಬದಲಾವಣೆಗಳು ರಾತ್ರೋರಾತ್ರಿ ಆಗುವುದಿಲ್ಲ. ಇದಕ್ಕೆ ಹೆಚ್ಚಿನ ಸಮಯ, ಶ್ರದ್ಧೆ, ಪ್ರಯತ್ನ ಎಲ್ಲವೂ ಬೇಕಾಗುತ್ತದೆ. ಗಣಿತದ ಕಲಿಕೆಯಿಂದಲೂ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಬೇಕು. ಜೊತೆಗೆ ಸಂಶೋಧನಾ ಮನೋಭಾವ, ಸಮಸ್ಯಾ–ಪರಿಹಾರ ಮನೋಭಾವಗಳು ಕೂಡ ಗಣಿತ ಬೋಧನೆಯಿಂದ ಸಾಧಿಸಬೇಕಾದ ಉದ್ದೇಶಗಳು.

**ಗಣಿತದ ಪಠ್ಯಕ್ರಮ:** ಪಠ್ಯಕ್ರಮವೆಂಬುದು ಶಿಕ್ಷಣದ ಅಥವಾ ಬೋಧನಾ ಉದ್ದೇಶಗಳ ಸಾಧನೆಗೆ ಇರುವ ಪ್ರಮುಖ ಸಾಧನ. ಪಠ್ಯಕ್ರಮ ಹೆಚ್ಚು ವಿಶಾಲವೂ ಸಮಗ್ರವೂ ಆಗಿದೆ. ಕನ್ನಿಂಗ್ ಹ್ಯಾಂ ಪ್ರಕಾರ, "ಪಠ್ಯಕ್ರಮವೆಂಬುದು ಕಲಾವಿದನೊಬ್ಬನು ತನ್ನಲ್ಲಿರುವ ಸಾಮಗ್ರಿಗಳನ್ನು ತನ್ನ ಕಾರ್ಯಶಾಲೆಯಲ್ಲಿ ತನ್ನ ಆದರ್ಶಗಳಿಗೆ ತಕ್ಕಂತೆ ರೂಪಿಸಲು ತಾನು ಇಟ್ಟುಕೊಂಡಿರುವ ಸಾಧನ". ಇಲ್ಲಿ ಕಲಾವಿದ ಎಂದರೆ ಶಿಕ್ಷಕ, ಸಾಮಗ್ರಿಗಳೆಂದರೆ ವಿದ್ಯಾರ್ಥಿಗಳು, ಆದರ್ಶಗಳೆಂದರೆ ಗುರಿ ಮತ್ತು ಉದ್ದೇಶಗಳು, ಕಾರ್ಯಶಾಲೆ ಎಂದರೆ ಶಾಲೆ ಹಾಗೂ ತರಗತಿ ಎಂದು ಅರ್ಥೈಸಬೇಕು. ಇಂತಹ ಪಠ್ಯಕ್ರಮ ಹಲವಾರು ತತ್ವಗಳಿಗನುಗುಣವಾಗಿ ರಚನೆಯಾಗಿ ಕೆಲವು ಪದ್ಧತಿಗಳಿಗನುಗುಣವಾಗಿ ವ್ಯವಸ್ಥೆಯಾಗಿರಬೇಕು. ಮುಖ್ಯವಾಗಿ ಪಠ್ಯಕ್ರಮ ವಿದ್ಯಾರ್ಥಿ ಕೇಂದ್ರಿತವಾಗಿದ್ದು ಉದ್ದೇಶ ಸಾಧನೆಗೆ ಪೂರಕವಾಗಿರಬೇಕು. ಅವರ ವ್ಯಕ್ತಿತ್ವ ಬೆಳವಣಿಗೆಗೆ ಅಗತ್ಯ ಅನುಭವಗಳನ್ನು ದೊರಕಿಸಿಕೊಡುವಷ್ಟು ಶ್ರೀಮಂತವಾಗಿರಬೇಕು. ಪಠ್ಯಕ್ರಮವು ಪಠ್ಯ ಮತ್ತು ಸಹ ಪಠ್ಯಚಟುವಟಿಕೆ ಎರಡನ್ನೂ ಒಳಗೊಂಡಿರಬೇಕು. ಇದು ಅಗತ್ಯ ಬದಲಾವಣೆಗೆ ಹೊಂದಿಕೊಳ್ಳುವಂತಿರಬೇಕು. ಶಾಲಾ ಹಂತದ ಪ್ರಸಕ್ತ ಗಣಿತ ಪಠ್ಯಕ್ರಮವು ಈ ಕೆಳಗಿನ ಕೆಲವು ಘಟಕಗಳ ಮೇಲಿನ ಪಠ್ಯವಸ್ತುವನ್ನು ಹೊಂದಿದೆ: ಸಂಖ್ಯಾಪದ್ಧತಿ, ಗಣಗಳು, ಮಾತೃಕೆಗಳು, ನಿತ್ಯ ಜೀವನದಲ್ಲಿ ಗಣಿತ, ಸಂಖ್ಯಾಶಾಸ್ತ್ರ, ಅಪವರ್ತಿಸುವಿಕೆ, ನಿತ್ಯಸಮೀಕರಣಗಳು, ಲಸಾಅ ಮತ್ತು ಮಸಾಅ, ರೇಖಾಗಣಿತದ ಮೂಲ ಪರಿಕಲ್ಪನೆಗಳು, ಸ್ವಯಂಸಿದ್ಧಗಳು, ಸಮತಳೀಯ ಆಕೃತಿಗಳು, ಘನಾಕೃತಿಗಳು, ವೃತ್ತ, ಪ್ರಮೇಯಗಳು ಇತ್ಯಾದಿ.

**ಗಣಿತ ಬೋಧನಾ ವಿಧಾನಗಳು:** ಗಣಿತದ ಉದ್ದೇಶಗಳ ಸಾಧನೆಗೆ ಪಠ್ಯಕ್ರಮ ಒಂದು ಸಾಧನ ಸರಿಯಷ್ಟೆ. ಆದರೆ ಆ ಪಠ್ಯಕ್ರಮದಲ್ಲಿನ ಪಠ್ಯವಸ್ತುವನ್ನು ಪರಿಣಾಮಕಾರಿಯಾಗಿ ಬೋಧಿಸಿದಾಗ ಮಾತ್ರ ಉದ್ದೇಶ

Digitised by Bharatavani, CIIL

ಸಾಧನೆ ಸುಲಭ ಸಾಧ್ಯವಾಗುತ್ತದೆ. ಪಠ್ಯವಸ್ತುವನ್ನು ಸೂಕ್ತ ಬೋಧನಾ ವಿಧಾನ ಅಥವಾ ಪದ್ಧತಿಯನ್ನು ಬಳಸಿ ಬೋಧಿಸಬೇಕು. ಬೋಧನಾ ವಿಧಾನಗಳು ಹತ್ತು ಹಲವಾರು. ಅವುಗಳ ಆಯ್ಕೆಯ ಸಂದರ್ಭದಲ್ಲಿ ಪಾಠ ಬೋಧನೆಯ ಉದ್ದೇಶಗಳು, ಪಠ್ಯವಸ್ತುವಿನ ಸ್ವಭಾವ, ಶಿಕ್ಷಕನ ಬೋಧನಾ ಸಾಮರ್ಥ್ಯ, ವಿದ್ಯಾರ್ಥಿಗಳ ಕಲಿಕಾ ಶಕ್ತಿ, ಬೋಧನೆಗೆ ದೊರಕುವ ಸಂಪನ್ಮೂಲ ಮುಂತಾದವುಗಳನ್ನು ಪರಿಗಣಿಸಬೇಕು. ಪ್ರಮುಖ ಬೋಧನಾ ವಿಧಾನಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

1) ಅನುಗಮನ ವಿಧಾನ 2) ನಿಗಮನ ವಿಧಾನ 3) ಅನುಗಮನ–ನಿಗಮನ ವಿಧಾನ 4) ವಿಶ್ಲೇಷಣ ವಿಧಾನ 5) ಸಂಶ್ಲೇಷಣ ವಿಧಾನ 6) ಮಾರ್ಗದರ್ಶಿತ ಅನ್ವೇಷಣ ವಿಧಾನ 7) ಯೋಜನಾ ವಿಧಾನ 7) ಪ್ರಯೋಗ ಶಾಲಾ ವಿಧಾನ 8) ಗಣಕ ಯಂತ್ರೀಕೃತ ಬೋಧನಾ ವಿಧಾನ ಇತ್ಯಾದಿ. ಗಣಿತದ ತರಗತಿಗಳಲ್ಲಿ ಹೆಚ್ಚಾಗಿ ಬಳಕೆಯಾಗುವ ಕೆಲವು ಪದ್ಧತಿಗಳ ಸಂಕ್ಷಿಪ್ತ ವಿವರಣೆ ಇಂತಿದೆ.

1) **ಅನುಗಮನ ವಿಧಾನ (Inductive Method):** ಈ ವಿಧಾನದಲ್ಲಿ ಮೊದಲಿಗೆ ನಿರ್ದಿಷ್ಟವಾದ ಉದಾಹರಣೆಗಳನ್ನು ನೀಡಿ ಅವುಗಳನ್ನು ವಿಶ್ಲೇಷಿಸಿ ಅವುಗಳಲ್ಲಿ ಅಡಕವಾಗಿರುವ ಒಂದು ಸಾಮಾನ್ಯ ಗುಣವನ್ನು ಅನ್ವೇಷಿಸಿ ಆ ತೀರ್ಮಾನ ಕೈಗೊಳ್ಳುವಂತೆ ಮಾಡಲಾಗುವುದು. ಇಲ್ಲಿ ಕಲಿಕೆಯು ನಿರ್ದಿಷ್ಟದಿಂದ ಸಾಮಾನ್ಯದೆಡೆಗೆ, ಗೊತ್ತಿರುವುದರಿಂದ ಗೊತ್ತಿಲ್ಲದಿರುವುದರೆಡೆಗೆ, ಮೂರ್ತದೆಡೆಯಿಂದ ಅಮೂರ್ತದೆಡೆಗೆ ಹಾಗೂ ಸರಳತೆಯಿಂದ ಕಠಿಣತೆಗೆ ಮುಂದುವರಿಯುತ್ತದೆ. ಈ ಪದ್ಧತಿಯನ್ನು ಗಣಿತದಲ್ಲಿ ಪರಿಕಲ್ಪನೆಗಳನ್ನು ಹಾಗೂ ಸಾಮಾನ್ಯೀಕರಣಗಳನ್ನು ಬೋಧಿಸಲು ಬಳಸಬಹುದಾಗಿದೆ.

2) **ನಿಗಮನ ವಿಧಾನ (Deductive Method):** ಈ ವಿಧಾನದಲ್ಲಿ ಮೊದಲಿಗೆ ಸಾಮಾನ್ಯೀಕರಣವನ್ನು ತಿಳಿಸಿ ಅದನ್ನು ಪರೀಕ್ಷಿಸಲು ಅಥವಾ ಸಾಧಿಸುವ ಸಲುವಾಗಿ ನಿರ್ದಿಷ್ಟ ಉದಾಹರಣೆಗಳನ್ನು ನೀಡಲಾಗುವುದು. ಇಲ್ಲಿ ಕಲಿಕೆಯು ಸಾಮಾನ್ಯದಿಂದ ನಿರ್ದಿಷ್ಟದ ಕಡೆಗೆ, ಗೊತ್ತಿಲ್ಲದೆಡೆಯಿಂದ ಗೊತ್ತಿರುವುದರೆಡೆಗೆ, ಅಮೂರ್ತದೆಡೆಯಿಂದ ಮೂರ್ತದೆಡೆಗೆ ಹಾಗೂ ಕಠಿಣತೆಯಿಂದ ಸರಳತೆಯೆಡೆಗೆ ಸಾಗುತ್ತದೆ. ಈ ಪದ್ಧತಿಯನ್ನು ಪರಿಕಲ್ಪನೆ, ವ್ಯಾಖ್ಯೆಗಳನ್ನು ಬೋಧಿಸಲು, ಸಾರ್ವತ್ರಿಕ ನಿಯಮಗಳನ್ನು ಪರೀಕ್ಷಿಸಿ ತಾಳೆನೋಡಲು, ಸಾಮಾನ್ಯೀಕರಣಗಳನ್ನು ಬೋಧಿಸಲು ಬಳಸಬಹುದಾಗಿದೆ.

3) **ಅನುಗಮನ–ನಿಗಮನ ವಿಧಾನ:** ಅನುಗಮನ ಮತ್ತು ನಿಗಮನ ಪದ್ಧತಿಗಳು ಎಷ್ಟೇ ಉಪಯುಕ್ತವಾದಾಗ್ಯೂ ಮಿತಿಗಳಿಂದ ಹೊರತಾಗಿಲ್ಲ. ಅನುಗಮನ ಪದ್ಧತಿಯಲ್ಲಿ ಸೂತ್ರ ನಿಯಮ ಇತ್ಯಾದಿಗಳನ್ನು ರೂಪಿಸಬಹುದು. ಆದರೆ ಅವುಗಳ ತಾಳೆನೋಡುವಿಕೆಗೆ ಅವಕಾಶವಿಲ್ಲ. ನಿಗಮನ ಪದ್ಧತಿಯಲ್ಲಿ ಸಿದ್ಧ ಸೂತ್ರ, ಸಾಮಾನ್ಯೀಕರಣಗಳ ಪರಿಶೀಲನೆ, ಅನ್ವಯವು ಸಾಧ್ಯವಿದೆ. ಆದರೆ ಅವುಗಳು ಹೇಗೆ ನಿರ್ಮಿತವಾದವು ಎಂದುದಕ್ಕೆ ಉತ್ತರವಿರುವುದಿಲ್ಲ. ಇವೆರಡೂ ಪದ್ಧತಿಗಳನ್ನು ಸಂಯೋಜಿಸಿ ಅನುಗಮನ–ನಿಗಮನ ಪದ್ಧತಿಯನ್ನು ರೂಪಿಸಲಾಗಿದೆ. ಇದು ಆ ಎರಡು ಪದ್ಧತಿಗಳ ಗುಣಗಳನ್ನು ಹೊಂದಿದ್ದು ಎರಡರ ಮಿತಿಗಳನ್ನು ದೂರಮಾಡುತ್ತದೆ. ಈ ಪದ್ಧತಿಯಲ್ಲಿ ಉದಾಹರಣೆಗಳ ಮೂಲಕ ಸಾಮಾನ್ಯೀಕರಣ, ಸೂತ್ರ, ನಿಯಮ ಇತ್ಯಾದಿಗಳನ್ನು ರೂಪಿಸಿ ಅವುಗಳನ್ನು ಇತರೇ ಕೆಲವು ಉದಾಹರಣೆಗಳ ಮೂಲಕ ತಾಳೆನೋಡಬಹುದು ಅಥವಾ ಅನ್ವಯ ಮಾಡಬಹುದು. ಅನುಗಮನ ಮತ್ತು ನಿಗಮನ ಪದ್ಧತಿಗಳು ಆಂಶಿಕ ಪದ್ಧತಿಗಳಾದರೆ ಅನುಗಮನ–ನಿಗಮನ ಪದ್ಧತಿ ಪೂರ್ಣ ಪದ್ಧತಿಯಾಗಿದೆ. ಗಣಿತದ ತರಗತಿಗಳಲ್ಲಿ ಸಾಮಾನ್ಯೀಕರಣಗಳನ್ನು ಬೋಧಿಸಲು ಅನುಗಮನ–ಪದ್ಧತಿಯು ಹೆಚ್ಚು ಪರಿಣಾಮಕಾರಿಯಾಗಿದೆ. ಗಣಿತದ ಉಗಮ ಮತ್ತು ಬೆಳವಣಿಗೆಗಳು ಹೀಗೆಯೇ ಆಗಿರುವುದನ್ನು ಗಮನಿಸಬಹುದು. ಹಾಗಾಗಿ ಇವುಗಳನ್ನು ಕುರಿತ ಈ ಮುಂದಿನ ಹೇಳಿಕೆ ಗಮನಾರ್ಹ: Mathematics in the making is inductive and deductive in its finished form.

4) **ವಿಶ್ಲೇಷಣ ವಿಧಾನ (Analytic Method):** ವಿಶ್ಲೇಷಣ ವಿಧಾನವು 'ವಿಶ್ಲೇಷಣ' ತತ್ವಾಧಾರಿತವಾಗಿದೆ. ವಿಶ್ಲೇಷಣೆ ಎಂದರೆ 'ಇಡಿ'ಯಾದ ವಸ್ತು/ಸನ್ನಿವೇಶವನ್ನು ಬಿಡಿ ಬಿಡಿಯಾಗಿಸುವುದು. ಅಂದರೆ ಅದರ ಘಟಕಾಂಶಗಳಾಗಿ ಪ್ರತ್ಯೇಕಿಸುವುದು ಅಥವಾ ವಿಂಗಡಿಸುವುದು ಎಂದರ್ಥ. "ಮಾನವಮತಿ ನಿರ್ವಹಿಸುವ ಎಲ್ಲ ಕಾರ್ಯಗಳಲ್ಲಿ ಬಹು ಉನ್ನತವಾದುದೆಂದರೆ ವಿಶ್ಲೇಷಿಸುವುದು" ಎಂದು ಥಾರ್ನ್ ಡೈಕ್ ಅಭಿಪ್ರಾಯಪಡುತ್ತಾರೆ. ಗಣಿತದ ಸಮಸ್ಯೆಗಳಿಗಾಗಲಿ ಅಥವಾ ಜೀವನದ ಸಮಸ್ಯೆಗಳಿಗಾಗಲಿ ಪರಿಹಾರ ಕಂಡುಕೊಳ್ಳುವಾಗ ಮಾಡುವ ಮೊದಲ ಕೆಲಸವೇ ವಿಶ್ಲೇಷಣೆ. ಹಾಗಾಗಿ ಗಣಿತ ಬೋಧನೆಯಲ್ಲಿ ಸಮಸ್ಯಾ ಪರಿಹಾರವನ್ನು ಬೋಧಿಸುವಾಗ ವಿಶ್ಲೇಷಣೆ ವಿಧಾನವನ್ನು ಅನುಸರಿಸಲಾಗುವುದು. ಈ ವಿಧಾನದಲ್ಲಿ ಗೊತ್ತಿಲ್ಲದಿರುವುದರಿಂದ ಗೊತ್ತಿರುವುದರೆಡೆಗೆ ಸಾಗುತ್ತೇವೆ. ತೀರ್ಮಾನದಿಂದ ದತ್ತಾಂಶದ ಕಡೆ ಮುಂದುವರಿಯುತ್ತೇವೆ. ಸಮಸ್ಯೆಗೆ ಕಂಡುಹಿಡಿಯಬೇಕಿರುವ ಪರಿಹಾರದಿಂದ ಆಲೋಚನೆಯನ್ನು ಆರಂಭಿಸಿ ದತ್ತಾಂಶಗಳು ಮತ್ತು ಲೆಕ್ಕಾಚಾರಗಳಿಂದ ಅವುಗಳ ಸಂಯೋಜನೆ ಮಾಡಿ ಪರಿಹಾರವನ್ನು ತರ್ಕಬದ್ಧವಾಗಿ ಕಂಡುಹಿಡಿಯಲಾಗುವುದು.

5) **ಸಂಶ್ಲೇಷಣ ವಿಧಾನ (Synthetic Method):** ಸಂಶ್ಲೇಷಣ ವಿಧಾನವು 'ಸಂಶ್ಲೇಷಣ' ತತ್ವಾಧಾರಿತವಾಗಿದೆ. ಸಂಶ್ಲೇಷಣೆ ಎಂದರೆ ಬಿಡಿಬಿಡಿಯಾದ ಅಂಶಗಳನ್ನು ಒಗ್ಗೂಡಿಸುವುದು ಎಂದರ್ಥ. 'ಬಿಡಿ ಬಿಡಿ'ಯಾದ ಘಟಕಾಂಶಗಳನ್ನು ಒಂದು ಕ್ರಮವಾಗಿ ಒಗ್ಗೂಡಿಸಿದರೆ ಅರ್ಥಪೂರ್ಣವಾದ ಒಂದು 'ಇಡಿ'ಯಾದ ಘಟಕ ದೊರಕುತ್ತದೆ. ಸಮಸ್ಯೆ ಪರಿಹಾರದಲ್ಲಿ ವಿಶ್ಲೇಷಣೆಯಷ್ಟೇ ಮುಖ್ಯವಾದ ಕಾರ್ಯ ಸಂಶ್ಲೇಷಣೆ. ಸಮಸ್ಯೆಯ ವಿಶ್ಲೇಷಣೆಯ ನಂತರ ದತ್ತಾಂಶಗಳ ಸಂಶ್ಲೇಷಣೆ ನಡೆದಾಗಲೇ ಪರಿಹಾರ ದೊರಕುವುದು. ಹಾಗಾಗಿ ವಿಶ್ಲೇಷಣೆಯ ಮುಂದಿನ ಕಾರ್ಯವೇ ಸಂಶ್ಲೇಷಣೆ. ಈ ವಿಧಾನದಲ್ಲಿ ಗೊತ್ತಿರುವುದರಿಂದ (ದತ್ತಾಂಶಗಳು) ಗೊತ್ತಿಲ್ಲದಿರುವುದರೆಡೆಗೆ (ಪರಿಹಾರ, ತೀರ್ಮಾನ ಅಥವಾ ಸಾಧನೆ), ಪ್ರಾಕಲ್ಪನೆಯಿಂದ ನಿರ್ಣಯದೆಡೆಗೆ ಮುಂದುವರಿಯುತ್ತೇವೆ. ಪ್ರಮೇಯಗಳನ್ನು, ಮುಖ್ಯವಾಗಿ ಅದರ ಸಾಧನೆಯನ್ನು, ಬೋಧಿಸುವಾಗ ಸಂಶ್ಲೇಷಣ ವಿಧಾನವು ಬಳಕೆಯಾಗುತ್ತದೆ.

ವಿಶ್ಲೇಷಣ ಮತ್ತು ಸಂಶ್ಲೇಷಣ ವಿಧಾನಗಳು ಒಂದಕ್ಕೊಂದು ಪೂರಕವಾಗಿವೆ. "Analysis is the fore runner of Synthesis and Synthesis is the follower of Analysis"ಎಂದು ಹೇಳಲಾಗಿದೆ.

ಮೇಲೆ ತಿಳಿಸಿದ ಬೋಧನಾ ವಿಧಾನಗಳು ಗಣಿತ ಬೋಧನೆಯ ದಿನನಿತ್ಯದ ತರಗತಿಗಳಲ್ಲಿ ಸುಲಭವಾಗಿ ಮತ್ತು ಪರಿಣಾಮವಾಗಿ

Digitised by Bharatavani, CIIL

ಬಳಸಬಹುದಾದವು. ಇವುಗಳ ಜೊತೆಗೆ, ಗಣಿತದ ಅಂತರಾಳವೇ ಆದ 'ಅನ್ವೇಷಣೆ'ಗೆ ಪೂರಕವಾಗಿರುವ ಬ್ರೂನರ್ ಅವರ ಮಾರ್ಗದರ್ಶಿತ ಅನ್ವೇಷಣ ವಿಧಾನ, ಕಿಲ್ ಪ್ಯಾಟ್ರಿಕ್ ಅವರ ಯೋಜನಾ ವಿಧಾನ, ನೈಜ ಬೋಧನೆಗೆ ಮತ್ತು ಪ್ರಮುಖವಾಗಿ ರೇಖಾಗಣಿತದ ಬೋಧನಾ ಸಂದರ್ಭದಲ್ಲಿ ಪರಿಣಾಮಕಾರಿಯಾಗುವ ಪ್ರಯೋಗಶಾಲಾ ವಿಧಾನ, ವಿದ್ಯಾರ್ಥಿಗಳ ಸ್ವಯಂಕಲಿಕೆಗೆ, ಯೋಜಿತ ಕಲಿಕೆಗೆ ಅನುಸರಿಸಬಹುದಾದ ಗಣಕ ಯಂತ್ರಗಳನ್ನು ಬಳಸುವ ಬೋಧನಾ ವಿಧಾನಗಳೂ ಗಣಿತ ಬೋಧನೆಗೆ ಬಳಸಬಹುದಾದ ಇನ್ನಿತರ ಹಲವು ಉಪಯುಕ್ತ ಗಣಿತ ಬೋಧನಾ ವಿಧಾನಗಳು.

**ಮೌಲ್ಯಮಾಪನ:** ಗಣಿತದ ಬೋಧನೆ ಕಲಿಕೆ ಪ್ರಕ್ರಿಯೆಯ ಸಂದರ್ಭದಲ್ಲಿ ನಿರ್ಣಾಯಕ ಘಟ್ಟವೇ ಮೌಲ್ಯಮಾಪನ. ಮೌಲ್ಯಮಾಪನವೆಂದರೆ ಒಂದು ವಸ್ತುವಿನ ನಿಜವಾದ ಬೆಲೆಯನ್ನು ನಿರ್ಧರಿಸುವುದು ಎಂದರ್ಥ. ಬೋಧನಾ ಉದ್ದೇಶಗಳು ಯಾವ ಮಟ್ಟದಲ್ಲಿ ಸಾಧನೆಯಾಗಿದೆ ಎಂಬುದನ್ನು ನಿರ್ಧರಿಸುವ ಕ್ರಮಬದ್ಧವಾದ ಪ್ರಕ್ರಿಯೆಗೆ ಮೌಲ್ಯಮಾಪನ ಎನ್ನುತ್ತೇವೆ. ಇದು ಪರಿಮಾಣಾತ್ಮಕ ಮತ್ತು ಗುಣಾತ್ಮಕವೂ ಆಗಿದೆ. ಜೊತೆಗೆ ನಿರಂತರವೂ ಮತ್ತು ವ್ಯಾಪಕವೂ ಆಗಿದೆ.

ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಕಲಿಕೆಯ ಗುಣ ಮತ್ತು ಪ್ರಮಾಣಗಳನ್ನು ಪರೀಕ್ಷಿಸಲು, ಆ ಮೂಲಕ ಅವರ ವರ್ತನೆಯಲ್ಲಿ ಕಂಡುಬಂದಿರುವ ಬದಲಾವಣೆಗಳನ್ನು ತಿಳಿದು ಬೋಧನಾ ಉದ್ದೇಶಗಳ ಸಾಧನೆಯ ಮಟ್ಟವನ್ನು ನಿರ್ಧರಿಸುವುದು ಮೌಲ್ಯಮಾಪನದ ಮುಖ್ಯ ಗುರಿ. ಉದ್ದೇಶ ಸಾಧನೆಯ ಮಟ್ಟ ತೃಪ್ತಿಕರವಾಗಿಲ್ಲದಿದ್ದಲ್ಲಿ ಕಲಿಕೆಯಲ್ಲಿನ ಲೋಪದೋಷಗಳನ್ನು ಪತ್ತೆ ಹಚ್ಚಿ (ನ್ಯೂನ್ಯತಾ ಪರಿಶೋಧನೆ) ಸೂಕ್ತ ಪರಿಹಾರ ಕ್ರಮಗಳನ್ನು ಯೋಜಿಸಿ, ಅನುಷ್ಠಾನಗೊಳಿಸಿ ಕಲಿಕೆಯನ್ನು ಉತ್ತಮಪಡಿಸುವುದೂ ಮೌಲ್ಯಮಾಪನದ ಉದ್ದೇಶ.

ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಕಲಿಕೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ಮೌಲ್ಯಮಾಪನದ ವಿವಿಧ ತಂತ್ರ ಮತ್ತು ಸಾಧನಗಳನ್ನು ಬಳಸುತ್ತೇವೆ. ಪರೀಕ್ಷಾ ತಂತ್ರ (ಪರಿಮಾಣಾತ್ಮಕ), ವೀಕ್ಷಣಾ ತಂತ್ರ ಇತ್ಯಾದಿಗಳನ್ನು ಬಳಸುತ್ತೇವೆ. ಈ ತಂತ್ರಗಳು ಮಾಹಿತಿ ಸಂಗ್ರಹಣೆಗೆ ಅನುಸರಿಸುವ ವಿಧಾನಗಳಾಗುತ್ತವೆ. ಈ ತಂತ್ರಗಳನ್ನು ಅನುಸರಿಸಿ ಮಾಹಿತಿ ಸಂಗ್ರಹಕ್ಕೆ ಬಳಸುವ ನಿರ್ದಿಷ್ಟ ಉಪಕರಣಕ್ಕೆ ಮೌಲ್ಯಮಾಪನ ಸಾಧನ ಎನ್ನುತ್ತೇವೆ. ಪ್ರಶ್ನೆಗಳು, ಪ್ರಶ್ನೆಪತ್ರಿಕೆ, ಸಾಧನೆ ಪರೀಕ್ಷೆ, ತಾಳೆಪಟ್ಟಿ, ದರ್ಜಾಮಾಪನಿ ಮುಂತಾದವುಗಳು ಸಾಧನಗಳಾಗುತ್ತವೆ.

ತರಗತಿಯ ವಿಷಯದ ಕಲಿಕೆಯನ್ನು ಪರೀಕ್ಷಿಸಲು ಪ್ರಮುಖವಾಗಿ ಸಾಧನಾ ಪರೀಕ್ಷೆಯನ್ನು ಬಳಸುತ್ತೇವೆ. ಘಟಕ ಪರೀಕ್ಷೆ, ಮಾಸಿಕ ಪರೀಕ್ಷೆ, ಅರ್ಧವಾರ್ಷಿಕ ಪರೀಕ್ಷೆ, ಅಂತಿಮ ಪರೀಕ್ಷೆ ಅಥವಾ ಸೆಮಿಸ್ಟರ್ ಪರೀಕ್ಷೆ ಮುಂತಾದವುಗಳು ವಿವಿಧ ಸಾಧನಾ ಪರೀಕ್ಷೆಗಳು. ಈ ಪರೀಕ್ಷೆಗಳಿಗಾಗಿ ಬಳಸುವ ಪ್ರಶ್ನೆಪತ್ರಿಕೆಯನ್ನು ಬಹಳ ಕರಾರುವಕ್ಕಾಗಿ ಯೋಜಿಸಿ, ನೀಲನಕಾಶೆ ರಚಿಸಿ ತಯಾರಿಸಬೇಕು. ಇದು ಉದ್ದೇಶಾಧಾರಿತವೂ, ವಿಷಯಾಧಾರಿತವೂ ಮತ್ತು ಸಮತೂಕದ್ದೂ ಆಗಿರಬೇಕು. ವಿವಿಧ ಮಾದರಿಯ ಹಾಗೂ ವಿವಿಧ ಕ್ಲಿಷ್ಟತೆಯ ಮಟ್ಟದ ಪ್ರಶ್ನೆಗಳನ್ನು ಒಳಗೊಂಡಿರಬೇಕು.

ಗಣಿತದ ಪರೀಕ್ಷೆಗಳಲ್ಲಿ ವಸ್ತುನಿಷ್ಠ ಪ್ರಶ್ನೆಗಳು, ಸಣ್ಣ ಮತ್ತು ಹೆಚ್ಚು ಉತ್ತರದ ಪ್ರಶ್ನೆಗಳನ್ನು ಪ್ರಶ್ನೆಪತ್ರಿಕೆಯಲ್ಲಿ ಸೇರಿಸುತ್ತೇವೆ. ಸಣ್ಣ ಉತ್ತರದ ಮತ್ತು ದೀರ್ಘ ಉತ್ತರದ ಪ್ರಶ್ನೆಗಳು ಬಹುತೇಕ ಲೆಕ್ಕ ಬಿಡಿಸುವ ಪ್ರಶ್ನೆಗಳಾಗಿಯೇ ಇರುತ್ತವೆ. ವಸ್ತುನಿಷ್ಠ ಪ್ರಶ್ನೆಗಳಲ್ಲಿ ಬಹು-ಆಯ್ಕೆ ಮಾದರಿ ಪ್ರಶ್ನೆಗಳೂ ಸೇರಿದಂತೆ ಇನ್ನಿತರ ಮಾದರಿ ಪ್ರಶ್ನೆಗಳನ್ನು ಬಳಸಬಹುದು.

ಯಾವುದೇ ಮಾದರಿಯ ಪ್ರಶ್ನೆಯಾಗಲಿ ಅದು ಉದ್ದೇಶಾಧಾರಿತ ಪ್ರಶ್ನೆಯಾಗಿರಬೇಕು.

ಸಾಧನೆ ಪರೀಕ್ಷೆಯಿಂದ ವಿದ್ಯಾರ್ಥಿಗಳ ಜ್ಞಾನ, ತಿಳಿವಳಿಕೆ, ಅನ್ವಯ ಮತ್ತು ಕೌಶಲಕ್ಕೆ ಸಂಬಂಧಿಸಿದ ಸಾಮರ್ಥ್ಯಗಳನ್ನು ಮಾತ್ರ ತಿಳಿಯಬಹುದು. ಅವರಲ್ಲಿನ ಆಸಕ್ತಿ, ಪ್ರಶಂಸಿಸುವ ಸಾಮರ್ಥ್ಯ ಮತ್ತು ಮನೋಭಾವನೆಗಳನ್ನು ಪರೀಕ್ಷಿಸಲು ಗುಣಾತ್ಮಕ ತಂತ್ರಗಳನ್ನು ಉಪಯೋಗಿಸಬೇಕು.

ಒಟ್ಟಿನಲ್ಲಿ ಮೌಲ್ಯಮಾಪನ ನಿರಂತರವೂ ವ್ಯಾಪಕವೂ ಯೋಜಿತವೂ ಆಗಿದ್ದು ವಿದ್ಯಾರ್ಥಿಯ ಕಲಿಕೆಯ ಮಟ್ಟ ಮತ್ತು ಉದ್ದೇಶ ಸಾಧನೆಗಳನ್ನು ತಿಳಿಸುವುದರ ಜೊತೆಗೆ ಕಲಿಕಾ ಪ್ರಕ್ರಿಯೆ ಹಾಗೂ ಅದರ ಸುಧಾರಣೆಯ ಮೇಲೆ ಬೆಳಕು ಚೆಲ್ಲುವಂತಿರಬೇಕು.

**ಗಣಿತ ಶಾಸ್ತ್ರ ಅಧ್ಯಾಪಕ :** ಗಣಿತ ಶಾಸ್ತ್ರ ಅಧ್ಯಾಪಕನಿಗೆ ಎಲ್ಲ ಅಧ್ಯಾಪಕರಿಗೆ ಇರಬೇಕಾದ ಆಳವಾದ ವಿಷಯ ಪ್ರೌಢಿಮೆ. ನಿರೂಪಣಾ ಚತುರತೆ, ಭಾಷಾ ಕೌಶಲಗಳು ಇರಬೇಕಾಗುವುದರ ಜೊತೆಗೆ ಕೆಲವು ವಿಶಿಷ್ಟ ಲಕ್ಷಣಗಳು ಇರಬೇಕಾಗುತ್ತದೆ. ಗಣಿತಶಾಸ್ತ್ರ ಅಧ್ಯಾಪಕ ಹೆಚ್ಚಿನ ಮಟ್ಟದ ವೈಜ್ಞಾನಿಕ ಮನೋಭಾವವನ್ನು ಹೊಂದಿರಬೇಕು. ತಾರ್ಕಿಕ ನಿಯಮಗಳ ಜ್ಞಾನ ಹೊಂದಿದ್ದು ತಾರ್ಕಿಕವಾಗಿ ಚಿಂತಿಸುವ ಸಾಮರ್ಥ್ಯ ಹೊಂದಿರಬೇಕು. ಗಣಿತ ಬೋಧನೆಯಲ್ಲಿ ವಿಶ್ಲೇಷಣೆ ಹಾಗೂ ಸಂಶ್ಲೇಷಣಾ ಪ್ರಕ್ರಿಯೆಗಳು ಒಳಗೊಳ್ಳುವುದರಿಂದ ಶಿಕ್ಷಕನಿಗೆ ಈ ಸಾಮರ್ಥ್ಯಗಳಿರಬೇಕು. ಗಣಿತ ಕಲಿಕೆ ವಿದ್ಯಾರ್ಥಿಗಳಿಗೆ ಕ್ಲಿಷ್ಟವೆನಿಸುವುದರಿಂದ ಅದನ್ನು ಸುಲಭವಾಗಿಸುವಂತೆ ಸರಸಗೊಳಿಸುವ ಸಾಮರ್ಥ್ಯ ಶಿಕ್ಷಕನಿಗೆ ಇರಬೇಕು. ಗಣಿತ ಬೋಧನೆ ಕ್ರಮಾಗತವಾಗಿರಬೇಕು. ಅದನ್ನು ಕ್ರಮಾಗತಗೊಳಿಸುವ ಸಾಮರ್ಥ್ಯಗಳು ಶಿಕ್ಷಕನಿಗೆ ಇರಬೇಕು.

–ಎಚ್.ಎಂ.ಎಂ.

## ಗುಂಪು ವರ್ತನೆಯ ಮನೋವಿಜ್ಞಾನ ಮತ್ತು ಶಿಕ್ಷಣ

ಮನುಷ್ಯ ಸಂಘ ಜೀವಿ. ತನ್ನ ಸುತ್ತ ಒಂದು ಸಾಮಾಜಿಕ ಸಂಬಂಧಗಳ ವೃತ್ತ ನಿರ್ಮಿಸಿಕೊಂಡು ಜೀವಿಸುತ್ತಾನೆ. ಗಾಳಿ, ನೀರು, ಆಹಾರ ಮುಂತಾದ ಅಗತ್ಯಗಳಷ್ಟೇ ಮುಖ್ಯ ಬೇರೆ ಮಾನವರ ಸಹವಾಸ ಮತ್ತು ಸಂಪರ್ಕ.

ನಿಸರ್ಗದಲ್ಲಿರುವ ಎಲ್ಲ ಪ್ರಾಣಿ-ಪಕ್ಷಿಗಳು ಗುಂಪು ಗುಂಪಾಗಿ ವಾಸಮಾಡಲು ಇಷ್ಟಪಡುತ್ತವೆ. ಇರುವೆಗಳ ಸಾಲು, ಆನೆಗಳ ಹಿಂಡು, ಪಕ್ಷಿಗಳ ಗುಂಪು ಇತ್ಯಾದಿಗಳನ್ನು ಗಮನಿಸಿದಾಗ ಒಂದಕ್ಕೊಂದು ಸಹಕಾರ-ಸಹಾಯದ, ಪ್ರೀತಿ-ವಾತ್ಸಲ್ಯದ, ಸ್ನೇಹ-ಮಮತೆಯ ಮನೋಭಾವನೆಯನ್ನು ಕಾಣಬಹುದು. ಇವೆಲ್ಲವೂ ಮನುಷ್ಯನಂತೆ ತಮ್ಮದೇ ಆದ ಸಾಮಾಜಿಕ ಪದ್ಧತಿಯನ್ನು ರಚಿಸಿಕೊಂಡಿವೆ.

ಮಾನವ ಸ್ವಭಾವತಃ ಸಂಘಜೀವಿ ಎಂಬ ಅಭಿಪ್ರಾಯವನ್ನು ಅರಿಸ್ಟಾಟಲ್ ವ್ಯಕ್ತಪಡಿಸಿರುವರು. ಮಾನವನು ಸಮಾಜದಲ್ಲಿ ಜನಿಸಿ, ಸಮಾಜದಲ್ಲಿ ವಿಕಾಸಗೊಂಡು, ಸಮಾಜದಲ್ಲಿಯೇ ತನ್ನ ಜೀವನವನ್ನು ಪರಿಸಮಾಪ್ತಿಗೊಳಿಸುವನು. ಆತ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಮಾಜದಲ್ಲಿ ಬಾಳಬೇಕಾಗುತ್ತದೆ.

ಸಾಮಾನ್ಯ ಅರ್ಥದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಕ್ತಿಗಳು ಒಂದುಗೂಡಿದ್ದಾಗ/ಒಂದು ಕಡೆ ಸೇರಿದಾಗ "ಗುಂಪು" ಎನ್ನುತ್ತೇವೆ. ಈ ಅರ್ಥದ ಮೇರೆಗೆ ಜಾತ್ರೆ, ಸಂತೆ, ರೈಲ್ವೆ ಪ್ಲಾಟ್‌ಫಾರ್ಮ್, ಬಸ್ ಸ್ಟ್ಯಾಂಡ್, ಸಿನೆಮಾ ಮಂದಿರ ಮುಂತಾದವುಗಳಲ್ಲಿ ನೆರೆದ ಜನರನ್ನು ಒಟ್ಟಾಗಿ (crowd) ಗುಂಪೆಂದು ಕರೆಯಬಹುದು.

Digitised by Bharatavani, CIIL

ಈ ಗುಂಪಿನ ಪರಿಕಲ್ಪನೆ ಸಮೂಹದ ಪರಿಕಲ್ಪನೆಗಿಂತ ಭಿನ್ನವಾಗಿದೆ. ಮನೋವಿಜ್ಞಾನದಲ್ಲಿ ಸಮೂಹವೆಂದರೆ "ಒಂದು ನಿರ್ದಿಷ್ಟ ಸಂದರ್ಭದಲ್ಲಿ ನಿರ್ದಿಷ್ಟ ಕಾಲಾವಧಿ ತನಕ ಮೂರು ಅಥವಾ ಮೂರಕ್ಕಿಂತ ಹೆಚ್ಚು ವ್ಯಕ್ತಿಗಳು ಸೇರಿ ಒಂದೇ ತೆರನಾಗಿ ಆಲೋಚಿಸಿ ತಮ್ಮ ಭಾವನೆಗಳನ್ನು ವ್ಯಕ್ತ ಪಡಿಸಿ, ಒಂದೇ ರೀತಿಯ ಉದ್ದೇಶ ಸಕಾರಾತ್ಮವಾಗಿ ಕಾರ್ಯಮಾಡುವುದಕ್ಕೆ ಸಮೂಹ (Group) ಎಂದು ಕರೆಯುವರು."

ಅಂದರೆ ಒಂದಕ್ಕಿಂತ ಹೆಚ್ಚು ಜನರಿರುವ ಒಂದೇ ರೀತಿಯ ಮನೋಭಾವನೆಯನ್ನು, ಒಂದೇ ಉದ್ದೇಶವನ್ನು, ಒಂದೇ ರೀತಿಯ ನಂಬಿಕೆಯನ್ನು ಹೊಂದಿರುವಂತಹ ವ್ಯಕ್ತಿಗಳ ಸಮಷ್ಠಿಯೇ ಸಮೂಹ.

ಆದರೆ ಇಲ್ಲಿ ಗುಂಪಿನ ಪರಿಕಲ್ಪನೆಯು ಸಮೂಹದ ಪರಿಕಲ್ಪನೆಗಿಂತ ಭಿನ್ನವಾಗಿದೆ.

ಯಾವುದೇ ನಿರ್ದಿಷ್ಟವಾದ ಗುರಿ– ಉದ್ದೇಶವಿಲ್ಲದೇ, ಯಾವುದೇ ಒಂದು ಶಾಶ್ವತವಾದ ಧ್ಯೇಯವಿಲ್ಲದೇ ಒಂದು ತಾತ್ಕಾಲಿಕ ಪ್ರಚೋದನೆಗೆ ಒಳಗಾಗಿ ಒಂದು ಸ್ಥಳದಲ್ಲಿ ನೆರೆದ ಜನರ ಮೊತ್ತಕ್ಕೆ 'ಗುಂಪು (crowd) ಎಂದು ಕರೆಯುವರು.

ಉದಾಹರಣೆಗೆ, ರಸ್ತೆಯಲ್ಲಿ ಅಪಘಾತ ಸಂಭವಿಸಿದಾಗ ಸೇರುವ ಜನರನ್ನು ಗುಂಪು ಎನ್ನಬಹುದು. ಈ ಗುಂಪು ತಮ್ಮ ಕುತೂಹಲ ತಣಿದ ನಂತರ ಕೂಡಲೇ ಕರಗಿ ಹೋಗುತ್ತದೆ.

ಕೆಲವು ಸಂದರ್ಭಗಳಲ್ಲಿ ಈ ರೀತಿಯ ಗುಂಪಿಗೆ ಜನಜಂಗುಳಿ, ದೊಂಬಿ, ಕಿಕ್ಕಿರಿದ ಜನಸಂದಣಿ ಮುಂತಾದ ಪದಗಳನ್ನು ಉಪಯೋಗಿಸುತ್ತಾರೆ.

**ಗುಂಪಿನ ಗುಣಲಕ್ಷಣಗಳು**

1. ನಿರ್ದಿಷ್ಟವಾದ ಗುರಿ ಅಥವಾ ಧ್ಯೇಯ ಇರುವುದಿಲ್ಲ.
2. ಗುಂಪಿನ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ.
3. ಸದಸ್ಯರ ಸಂಖ್ಯೆ ನಿರ್ದಿಷ್ಟವಾಗಿರುವುದಿಲ್ಲ. ಸದಸ್ಯರ ಪೂರ್ಣ ವಿವರ ದಾಖಲಾಗಿರುವುದಿಲ್ಲ.
4. ಸದಸ್ಯರ ನಡುವೆ ಅನ್ಯೋನ್ಯ ಕ್ರಿಯೆ ಇರುವುದಿಲ್ಲ.
5. ಸದಸ್ಯರ ವರ್ತನೆಯನ್ನು ನಿಯಂತ್ರಿಸುವ ಸ್ವ–ರೂಪಿತ ನಿರ್ದಿಷ್ಟ ರೀತಿಯ ನಿಯಮಾವಳಿಗಳಿರುವುದಿಲ್ಲ.
6. ಸದಸ್ಯರ ನಡುವೆ ವ್ಯವಸ್ಥಿತವಾದ ವಿಚಾರವಿನಿಮಯ ಇರುವುದಿಲ್ಲ.
7. ನಿರ್ದಿಷ್ಟವಾದ ನಾಯಕತ್ವದ ಕೊರತೆ ಇರುತ್ತದೆ.
8. ಸದಸ್ಯರ ಸ್ಥಾನಮಾನ ಹಾಗು ಹಕ್ಕುಗಳ ಬಗ್ಗೆ ಸ್ಪಷ್ಟತೆ ಇರುವುದಿಲ್ಲ.
9. ಸದಸ್ಯರ ನಡುವೆ ಪರಸ್ಪರ ವಿಚಾರ ವಿನಿಮಯದ ಕೊರತೆ ಕಾಣುತ್ತದೆ.
10. ಗುಂಪಿನ ವರ್ತನೆಯು ಹೆಚ್ಚು ಸಂದರ್ಭಗಳಲ್ಲಿ ವ್ಯಕ್ತಿಗತವಾಗಿರುತ್ತದೆ.
11. ಗುಂಪಿನ ಇರುವಿಕೆಯ ಕಾಲಾವಧಿ ಅನಿರ್ದಿಷ್ಟವಾಗಿರುತ್ತದೆ.
12. ಸದಸ್ಯರ ನಡುವೆ ಭಾವನಾತ್ಮಕ ಸಂಬಂಧ ತಾತ್ಕಾಲಿಕವಾಗಿರುತ್ತದೆ.
13. ಹಲವಾರು ಸಂದರ್ಭದಲ್ಲಿ ಗುಂಪಿನ ರಚನೆ ಉದ್ದೇಶರಹಿತವಾಗಿದ್ದು ಆಕಸ್ಮಿಕವಾಗಿ ರಚನೆಯಾಗಿರುತ್ತದೆ.
14. ಗುಂಪಿನೊಡನೆ ವ್ಯಕ್ತಿಯ ತಾದಾತ್ಮ್ಯತೆ ಪ್ರಬಲವಾಗಿರುತ್ತದೆ.
15. ಸದಸ್ಯರ ನಡುವೆ ಸಮಾನ ಆಸಕ್ತಿ ಇರುವುದಿಲ್ಲ.
16. ಸದಸ್ಯರ ವರ್ತನೆ ಹೆಚ್ಚು ಸಂದರ್ಭಗಳಲ್ಲಿ ವಿವೇಚನಾ ರಹಿತವಾಗಿರುತ್ತದೆ.
17. ಗುಂಪಿನ ಸದಸ್ಯರಿಗೆ ಗುಂಪಿನ ವರ್ತನೆಯಿಂದ ಆಗುವ ಪರಿಣಾಮಗಳ ಬಗ್ಗೆ ಕಾಳಜಿ ಇರುವುದಿಲ್ಲ.
18. ಗುಂಪಿನ ವರ್ತನೆ ಬಹುತೇಕ ಹಿಂಸಾಚಾರ, ಆಕ್ರಮಣದ ರೂಪ ತೆಗೆದುಕೊಳ್ಳುತ್ತದೆ. ಅಥವಾ ಕುತೂಹಲದಿಂದ ಪ್ರೇರಿತವಾಗಿರುತ್ತದೆ.

**ಗುಂಪಿನ ಪ್ರಕಾರಗಳು**

1) ಸಾಮಾನ್ಯ ಗುಂಪು: "ಯಾವುದೇ ನಿರ್ದಿಷ್ಟವಾದ ಗುರಿ ಉದ್ದೇಶವಿಲ್ಲದೇ, ಯಾವುದೇ ಒಂದು ಶಾಶ್ವತವಾದ ಧ್ಯೇಯವಿಲ್ಲದೇ ಒಂದು ತಾತ್ಕಾಲಿಕ ಪ್ರಚೋದನೆಗೊಳಗಾಗಿ ಒಂದು ಸ್ಥಳದಲ್ಲಿ ನೆರೆದ ಜನರ ಮೊತ್ತಕ್ಕೆ "ಸಾಮಾನ್ಯ ಗುಂಪು" ಎನ್ನುವರು.

   ಉದಾ: ವ್ಯಾಪಾರ ವಹಿವಾಟು ನಡೆಯುವ ಸ್ಥಳಗಳಲ್ಲಿ, ರೈಲು, ಬಸ್, ವಿಮಾನ ನಿಲ್ದಾಣಗಳಲ್ಲಿ ಸೇರುವ ಜನರ ಗುಂಪು ತಾತ್ಕಾಲಿಕ ಗುಂಪುಗಳು.

2) ಕುತೂಹಲ ಗುಂಪು: ಅಪಘಾತ, ವ್ಯಕ್ತಿಗಳ ನಡುವಣ ಜಗಳ, ಹೊಡೆದಾಟ, ಯಾವುದೇ ರೀತಿಯ ವಿಚಿತ್ರ, ಆಕಸ್ಮಿಕ ಘಟನೆ ನಡೆದಾಗ ಅದೇನೆಂದು ತಿಳಿಯಲು ಜನರು ತಮ್ಮ ಕುತೂಹಲವನ್ನು ತಣಿಸಲು ಸೇರುವ ಗುಂಪು ಇದಾಗಿದೆ. ಇಂಥ ಗುಂಪಿನ ಸದಸ್ಯರು ಸಕ್ರಿಯವಾಗಿ ಯಾವುದೇ ರೀತಿಯ ವರ್ತನೆ ತೋರಿಸುವುದಿಲ್ಲ. ಘಟನೆಯ ಪ್ರೇಕ್ಷಕರಾಗಿ ಕುತೂಹಲ, ಆಶ್ಚರ್ಯ ಪ್ರಕಟಿಸಬಹುದು ಅಥವಾ ಶಾಬ್ದಿಕ ಟೀಕೆ–ಟಿಪ್ಪಣಿ ಮಾಡಬಹುದು. ಘಟನೆ ಮುಕ್ತಾಯಗೊಂಡಾಗ ಗುಂಪು ಚದುರಿ ಹೋಗುತ್ತದೆ. ಅಥವಾ ಕುತೂಹಲ ಕಡಿಮೆಯಾದಂತೆಲ್ಲಾ ಗುಂಪು ಕರಗಲು ಆರಂಭವಾಗುತ್ತದೆ. ಇಂಥ ಗುಂಪಿನಿಂದ ಯಾವುದೇ ರೀತಿಯ ದುಷ್ಪರಿಣಾಮ ಉಂಟಾಗುವುದಿಲ್ಲ.

3) ಮನರಂಜನೆ ಗುಂಪು: ನಾಟಕ, ನೃತ್ಯ, ಸರ್ಕಸ್, ಸಿನೇಮಾ ಮುಂತಾದವುಗಳ ಮೂಲಕ ಮನರಂಜನೆ ಪಡೆಯಲು ಸೇರುವ ಜನಗಳ ಗುಂಪು ಮನರಂಜನೆಯ ಗುಂಪು ಎನಿಸುತ್ತದೆ. ಇಂಥ ಗುಂಪಿಗೆ ತಾತ್ಕಾಲಿಕವಾದ ಒಂದು ಸಾಮಾನ್ಯ ಉದ್ದೇಶವಿರುತ್ತದೆ. ಈ ಗುಂಪಿನ ವರ್ತನೆ ಸಾಮಾನ್ಯವಾಗಿ ಶಾಂತಿಯುತವಾಗಿರುತ್ತದೆ.

4) ಗಾಬರಿ ಗುಂಪು: ಪ್ರವಾಹ, ಭೂಕಂಪ, ಬಿರುಗಾಳಿ ಮುಂತಾದ ಪ್ರಾಕೃತಿಕ ಪ್ರಕೋಪಗಳಾದಾಗ, ಬಾಂಬ್ ದಾಳಿ, ಗೋಲಿಬಾರ್ ಮುಂತಾದ ಮಾನವ ನಿರ್ಮಿತ ಗಾಬರಿಯುಂಟು ಮಾಡುವ ಘಟನೆಗಳು ಉಂಟಾದಾಗ ಜನರು ಗುಂಪುಗಳಲ್ಲಿ ಸೇರಿ ಅಸ್ತವ್ಯಸ್ತವಾಗಿ ಚಲಿಸತೊಡಗಿದಾಗ ಗಾಬರಿ ಗುಂಪು ಉಂಟಾಗುತ್ತದೆ. ಇಂಥ ಗುಂಪು ಭಯ, ಆತಂಕದಿಂದ ಪ್ರೇರಿತವಾಗಿರುತ್ತದೆ. ಗುಂಪಿನ ಪ್ರತಿಯೊಬ್ಬ ವ್ಯಕ್ತಿಯೂ ಭಯದ ಸಂವೇಗದಿಂದ ಉತ್ತೇಜಿತನಾಗುವುದರಿಂದ ಅಸ್ತವ್ಯಸ್ತವಾಗಿ, ಗೊತ್ತುಗುರಿಯಿಲ್ಲದೆ ವರ್ತಿಸುವುದರಿಂದ, ಇಡೀ ಗುಂಪಿನ ವರ್ತನೆ ಅಸ್ತವ್ಯಸ್ತವಾಗಿ, ಗೊತ್ತುಗುರಿಯಿಲ್ಲದಂತಾಗುತ್ತದೆ. ಗುಂಪಿನ ವರ್ತನೆ ವಿವೇಚನಾ

Digitised by Bharatavani, CIIL

ರಹಿತವಾಗುತ್ತದೆ. ಗುಂಪಾಗಿ ಕಿರುಚುವುದು ಸಂವೇಗಗಳನ್ನು ಒರಟಾಗಿ ವ್ಯಕ್ತಪಡಿಸುವುದು, ದಿಕ್ಕುಪಾಲಾಗಿ ಸಹಾಯ ಯಾಚಿಸುವುದು, ಓಡುವುದು ಮುಂತಾದ ವರ್ತನೆಗಳನ್ನು ಈ ರೀತಿಯ ಗುಂಪು ತೋರಿಸುತ್ತದೆ.

5) ಹಿಂಸಾಚಾರಿ ಗುಂಪು : ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರ, ಮೆರವಣಿಗೆ ನಡೆಸಲು ಸೇರುವ ಗುಂಪು ಶಾಂತಿಯುತ ಮಾರ್ಗವನ್ನು ಬಿಟ್ಟು ಹಿಂಸಾಚಾರದಲ್ಲಿ ತೊಡಗಿದಾಗ ಅದು ಹಿಂಸಾಚಾರದ ಗುಂಪಾಗಿ ಬದಲಾವಣೆ ಹೊಂದುತ್ತದೆ. ಆಗ ಗುಂಪಿನ ಸದಸ್ಯರು ವಿವೇಕರಹಿತವಾಗಿ ವರ್ತಿಸತೊಡಗಿ ಹಿಂಸಾಚಾರದಲ್ಲಿ ತೊಡಗುತ್ತಾರೆ. ಇಂಥ ವರ್ತನೆಯಿಂದ ಗುಂಪಿನ ಉದ್ದೇಶ ಈಡೇರುವುದಿಲ್ಲ. ಆದರೆ ಗುಂಪಿನ ಹಿಂಸಾಚಾರ ವರ್ತನೆಯಿಂದ ಜನರಿಗೆ, ಆಸ್ತಿಪಾಸ್ತಿಗೆ ಹಾನಿ ಉಂಟಾಗುತ್ತದೆ.

6) ಆಕ್ರಮಣಕಾರಿ ಗುಂಪು: ಸಮುದಾಯದ ಯಾವುದಾದರೂ ನಿರ್ದಿಷ್ಟ ಗುಂಪಿಗೆ ತನಗೆ ಸಮುದಾಯದಿಂದ ಅನ್ಯಾಯವಾಗಿದೆ ಎಂಬ ಭಾವನೆ ಮೂಡಿದಾಗ, ಆ ಗುಂಪಿನ ಸದಸ್ಯರು ಒಟ್ಟಾಗಿ ಸೇರಿ ತಮಗೆ ಅನ್ಯಾಯ ಮಾಡಿದೆ ಎಂದು ಭಾವಿಸುವ ಗುಂಪಿನ ಮೇಲೆ ಆಕ್ರಮಣ ಮಾಡುವ ಸಂದರ್ಭದಲ್ಲಿ ಆಕ್ರಮಣಕಾರಿ ಗುಂಪು ರೂಪುಗೊಳ್ಳುತ್ತದೆ. ಜಾತಿಗಳ, ವರ್ಗಗಳ ನಡುವಣ ವೈಷಮ್ಯ, ತಪ್ಪು ಕಲ್ಪನೆಗಳು, ಧಾರ್ಮಿಕ ಕಾರಣಗಳಿಂದ ಉಂಟಾಗುವ ಸಾಂಪ್ರದಾಯಿಕ ಗಲಭೆಗಳು, ಕೆಲವು ವೇಳೆ ರಾಜಕೀಯ ಪಕ್ಷಗಳ ಹಿಂಬಾಲಕರ ನಡುವಣ ಘರ್ಷಣೆ ಆಕ್ರಮಣಕಾರಿ ಗುಂಪು ರೂಪುಗೊಳ್ಳಲು ಕಾರಣವಾಗುತ್ತದೆ. ಆಕ್ರಮಣಕಾರಿ ಗುಂಪು ತಮಗೆ ಅನ್ಯಾಯವಾಗಿದೆ ಎಂದು ವಾಸ್ತವಿಕತೆಯ ಆಧಾರದ ಮೇಲೆ, ಬಹುತೇಕ ಸಂದರ್ಭಗಳಲ್ಲಿ ಹಾಗೆಂದು ಊಹಿಸಿಕೊಳ್ಳುವುದರ ಆಧಾರದ ಮೇಲೆ ವರ್ತಿಸುವುದರಿಂದ ಅದರ ವರ್ತನೆ ಸ್ವಾಭಾವಿಕವಾಗಿ ಆಕ್ರಮಣಕಾರಿಯಾಗಿ ಹಿಂಸಾಚಾರದಲ್ಲಿ ಪರ್ಯವಸಾನಗೊಳ್ಳುತ್ತದೆ. ಗುಂಪಿನ ವ್ಯಕ್ತಿಗಳ ಕೋಪ, ಆಕ್ರೋಶಕ್ಕೆ ಒಳಗಾಗಿ, ತರ್ಕರಹಿತವಾಗಿ ವರ್ತಿಸುವುದರಿಂದ ಅಮಾಯಕ ಹೆಂಗಸರು, ಮಕ್ಕಳು ಮತ್ತು ಪುರುಷರ ಬಗ್ಗೆ ಹಿಂಸಾತ್ಮಕ ವರ್ತನೆ ತೋರಿಸುತ್ತಾರೆ. ಇದರಿಂದಾಗಿ ಎಲ್ಲ ಗುಂಪುಗಳವರು ಗಾಯಗೊಳ್ಳುತ್ತಾರೆ. ಸಾವಿಗೂ ಒಳಗಾಗುತ್ತಾರೆ.

**ಗುಂಪು ವರ್ತನೆಯ ಪರಿಣಾಮಗಳು**

ವ್ಯಕ್ತಿ ತಾನು ಗುಂಪಿನಲ್ಲಿ ಇರುವಾಗ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಾನೆ. ಎಷ್ಟೋ ಸಂದರ್ಭಗಳಲ್ಲಿ ಸಮಾಜಘಾತುಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ನೈತಿಕತೆಗೆ ವಿರುದ್ಧವಾಗಿ ವರ್ತಿಸುತ್ತಾನೆ. ತಾನೇಕೆ ಹೀಗೆ ವರ್ತಿಸುತ್ತಿದ್ದೇನೆ ಎಂಬ ವಿವೇಚನೆ ಮಾಡುವ ಮನಃಸ್ಥಿತಿಯಲ್ಲಿ ಇರುವುದಿಲ್ಲ. ಗುಂಪಿನ ಜೊತೆಗೂಡಿ, ಇತರರು ತೊಡಗಿರುವ ಕಾರ್ಯದಲ್ಲಿ ತಾನೂ ಕೈಜೋಡಿಸುತ್ತಾನೆ. ಆ ಕಾರ್ಯ ತಾನೇಕೆ ಮಾಡುತ್ತಿದ್ದೇನೆ, ಇದು ನನಗೆ ಸೂಕ್ತವಾದ ಕಾರ್ಯವೇ ಎಂದು ತನ್ನ ಬುದ್ಧಿವಂತಿಕೆಯನ್ನು ಉಪಯೋಗಿಸಲು ಆತನಿಗೆ ಅವಕಾಶವಿರುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ತನ್ನ ವ್ಯಕ್ತಿತ್ವಕ್ಕೆ ಹಾಗೂ ವೈಯಕ್ತಿಕ ಆಚಾರ ವಿಚಾರಗಳಿಗೆ ವಿರುದ್ಧವಾಗಿ ಗುಂಪಿನಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ.

ಗುಂಪಿನ ಸದಸ್ಯರಲ್ಲಿ ಮೂರು ಪ್ರಮುಖವಾದ ಕಾರ್ಯವೈಖರಿ ಅಥವಾ ವರ್ತನೆಗಳನ್ನು ಗಮನಿಸಬಹುದು. ಅವುಗಳೆಂದರೆ:

1) ಗುಂಪಿನಲ್ಲಿ ವ್ಯಕ್ತಿ ಅನಾಮಧೇಯನಾಗಿ ಉಳಿದು ತನ್ನ ವೈಯಕ್ತಿಕ ಜವಾಬ್ದಾರಿಗಳ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾನೆ. ಸಾಮಾನ್ಯವಾಗಿ ತಾನು ನಿರ್ವಹಿಸದೇ ಇರುವ ಕೆಲವು ಸಮಾಜ ಘಾತುಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕಾಗುತ್ತದೆ.

2) ಗುಂಪಿನಲ್ಲಿರುವ ಇತರರ ವರ್ತನೆಗಳ ಪ್ರಭಾವದಿಂದ ತಾನು ಕೂಡ ಸಿದ್ಧನಾಗಿ ಅವರಂತೇ ವರ್ತಿಸುತ್ತಾನೆ. ಅಂದರೆ ಗುಂಪಿನ ಸದಸ್ಯರ ಪರಸ್ಪರ ವರ್ತನೆ, ಚಟುವಟಿಕೆ, ಹಾವ ಭಾವ, ಆಚಾರ–ವಿಚಾರಗಳನ್ನು ಅಂಧನಾಗಿ ಅನುಕರಿಸುತ್ತಾನೆ. ತನ್ನ ಅಸ್ತಿತ್ವವನ್ನು ಮರೆತು ಅಂಧಾನುಕರಣೆಯಿಂದ ಕಾರ್ಯ ನಿರತನಾಗುತ್ತಾನೆ.

3) ಗುಂಪಿನ ಇತರ ಸದಸ್ಯರ ಸೂಚನೆ ಹಾಗು ಸಲಹೆಗಳಿಗೆ ಹೆಚ್ಚು ಆದ್ಯತೆ ನೀಡಿ ಅವರನ್ನು ಅನುಸರಿಸುತ್ತಾನೆ. ತಾತ್ಕಾಲಿಕವಾಗಿ ನಾಯಕತ್ವದ ಪಟ್ಟ ವಹಿಸಿರುವ ವ್ಯಕ್ತಿಗಳ ಸೂಚನೆ ಹಾಗು ಸಲಹೆಗಳಿಗನುಗುಣವಾಗಿ ಕಾರ್ಯನಿರತನಾಗಿ ವರ್ತಿಸುತ್ತಾನೆ.

ಗುಂಪಿನ ವಿವೇಚನಾರಹಿತವಾದ ವರ್ತನೆಯಿಂದ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ.

1) ಗುಂಪು ಭಾವನಾತ್ಮಕವಾಗಿ ಉದ್ರಿಕ್ತಗೊಂಡು, ತೀವ್ರತರದ ಕಾರ್ಯ ಚಟುವಟಿಕೆಗಳಲ್ಲಿ ತೊಡಗುತ್ತದೆ.

2) ಬಾಹ್ಯ ಪ್ರಭಾವಕ್ಕೆ ಒಳಪಟ್ಟು, ಸಮಾಜ ಘಾತುಕ ಕಾರ್ಯದಲ್ಲಿ ತೊಡಗಿ, ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿ ಮಾಡುತ್ತದೆ.

3) ಸಮಾಜದ ಆಸ್ತಿ ಪಾಸ್ತಿಗಳನ್ನು ಧ್ವಂಸ ಮಾಡುತ್ತದೆ.

4) ಹಲವಾರು ಸಂದರ್ಭಗಳಲ್ಲಿ ಸಾವು ನೋವು ಕೂಡ ಉಂಟಾಗುತ್ತದೆ.

5) ಗುಂಪು ವರ್ತನೆ ಸಾರ್ವಜನಿಕ ಜೀವನದಲ್ಲಿ ಅಶಾಂತಿಯನ್ನು ಉಂಟುಮಾಡುತ್ತದೆ.

6) ಎಷ್ಟೋ ಸಂದರ್ಭಗಳಲ್ಲಿ ಗುಂಪಿನ ಸದಸ್ಯರು ಪಾನಮತ್ತರಾಗಿ, ಹರಿತವಾದ ಆಯುಧಗಳ ಸಹಾಯದಿಂದ ತಮ್ಮ ಅರ್ಥವಿಲ್ಲದ ಆಕ್ರೋಶ ವ್ಯಕ್ತಪಡಿಸುತ್ತಾರೆ.

7) ಕಲ್ಲು ತೂರಾಟದಲ್ಲಿ ತೊಡಗಿ ವ್ಯಕ್ತಿ ಅಥವಾ ಸಂಬಂಧಪಟ್ಟ ಸರ್ಕಾರ ಅಥವಾ ಸಂಘ ಸಂಸ್ಥೆಗಳ ವಿರುದ್ಧ ಘೋಷಣೆಗಳನ್ನು ಮಾಡುತ್ತಾ, ಜನರ ಹಾಗು ಸಮಾಜದ ಆಸ್ತಿ ಪಾಸ್ತಿಗಳನ್ನು ನಾಶಮಾಡುತ್ತಾರೆ.

8) ಗುಂಪಿನ ಆಕ್ರೋಶವನ್ನು ಹಲವಾರು ರೀತಿಯಿಂದ ವ್ಯಕ್ತಪಡಿಸುತ್ತಾರೆ. ಈ ಸಂದರ್ಭದಲ್ಲಿ ಅನೇಕ ವೇಳೆ ಬಡಪಾಯಿ ವ್ಯಕ್ತಿಗಳು ತಮ್ಮ ಪ್ರಾಣವನ್ನು ತೆರಬೇಕಾಗುತ್ತದೆ. ಎಷ್ಟೋ ಸಲ ಜೈಲು ಶಿಕ್ಷೆಗೂ ಒಳಪಡಬೇಕಾಗುತ್ತದೆ.

**ಗುಂಪು ವರ್ತನೆಯನ್ನು ನಿಯಂತ್ರಿಸುವ ಕ್ರಮಗಳು**

ಯಾವುದೇ ಗುಂಪು ವರ್ತನೆಯ ಮಾಹಿತಿ ದೊರೆತ ತಕ್ಷಣ ಸಂಬಂಧಪಟ್ಟ ಸರ್ಕಾರ ಅಥವಾ ಆಡಳಿತ ವರ್ಗ ಜನಸಾಮಾನ್ಯರ ಹಿತಾಸಕ್ತಿಯನ್ನು ಕಾಪಾಡಲು ಮುಂದಾಗಬೇಕು.

1) ತೀವ್ರತರದ ಗುಂಪು ಗಲಭೆ ನಡೆಯುವ ಪ್ರದೇಶಗಳಿಗೆ ಪೋಲೀಸರನ್ನು ನಿಯೋಜಿಸಬೇಕು.

2) ಕಾನೂನಿನ ಕ್ರಮ ಜರುಗಿಸಿ ಗಲಭೆಗೆ ಒಳಪಟ್ಟಿರುವ ಸದಸ್ಯರನ್ನು ಬಂಧಿಸಿ ಗುಂಪು ವರ್ತನೆಯನ್ನು ನಿಯಂತ್ರಿಸಬೇಕು.

Digitised by Bharatavani, CIIL

3) ಜನರ ಆಸ್ತಿ ಪಾಸ್ತಿಗಳು ನಷ್ಟವಾಗದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

4) ಗುಂಪಿನ ವರ್ತನೆಗೆ ಪ್ರಚೋದಿಸುವ ಬಾಹ್ಯ ಶಕ್ತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ನಿಯಂತ್ರಿಸಬೇಕು.

5) ಗುಂಪು ವರ್ತನೆಗೆ ಕಾರಣವೇನೆಂದು ಅಧಿಕಾರಿಗಳ ಜೊತೆ ಕುಳಿತು ವಿಶ್ಲೇಷಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

6) ಗುಂಪು ವರ್ತನೆ ಅತಿರೇಕಕ್ಕೆ ಹೋಗಿ ಸಾವು ನೋವಿಗೆ ಎಡೆಮಾಡಿಕೊಡುವ ಮೊದಲೇ ಸಾಮಾನ್ಯ ಜನರಿಗೆ ಸೂಕ್ತ ರಕ್ಷಣೆ ನೀಡಬೇಕು.

7) ಜನರಲ್ಲಿ ಭಯ ಭೀತಿಯ ವಾತಾವರಣವನ್ನು ಸೃಷ್ಟಿ ಮಾಡದೇ ಅವರಿಗೆ ಧೈರ್ಯ ತುಂಬಬೇಕು.

8) ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ತರುತ್ತಿರುವ ಬಗ್ಗೆ ಪತ್ರಿಕೆಗಳು, ರೇಡಿಯೋ, ದೂರದರ್ಶನದ ಮೂಲಕ ಜನ ಸಾಮಾನ್ಯರಿಗೆ ವಿಷಯ ತಲುಪಿಸಬೇಕು.

9) ಜನ ಸಾಮಾನ್ಯರು ಗಲಭೆ ಪ್ರದೇಶದಿಂದ ದೂರ ಉಳಿಯುವಂತೆ ಅವರಿಗೆ ಎಚ್ಚರಿಕೆ ನೀಡಬೇಕು.

10) ಜನರಿಗೆ ಸ್ಪಷ್ಟವಾದ, ಸೂಕ್ತವಾದ ಮಾಹಿತಿ ರವಾನೆಯಾಗುವಂತೆ ಎಚ್ಚರಿಕೆ ವಹಿಸಬೇಕು.

**ಗುಂಪು ವರ್ತನೆ ಮತ್ತು ಶಿಕ್ಷಣ :** ಸಮಾಜದಲ್ಲಿನ ಇತರ ಸದಸ್ಯರು ಅಪೇಕ್ಷಿಸುವ ರೀತಿಯಲ್ಲಿ ವ್ಯಕ್ತಿಯ ವ್ಯಕ್ತಿತ್ವವನ್ನು ತಿದ್ದಿ ತೀಡುವ ಜವಾಬ್ದಾರಿಯನ್ನು ಶಿಕ್ಷಣ ವಹಿಸುತ್ತದೆ. ಶಿಕ್ಷಣದಿಂದಲೇ ಒಂದು ಮೌಲ್ಯಾಧಾರಿತ ಸಮಾಜ ರೂಪುಗೊಳ್ಳಲು ಸಾಧ್ಯ. ಕ್ರಮಬದ್ಧವಾದ ನೀತಿ ನಿಯಮಗಳಿಗನುಸಾರವಾಗಿ ವ್ಯಕ್ತಿಯನ್ನು ಸಮಾಜ ಒಪ್ಪುವಂತೆ ರೂಪಿಸುವ ಜವಾಬ್ದಾರಿ ಶಿಕ್ಷಣ ನೀಡುವ ಶಾಲೆಯದ್ದಾಗಿರುತ್ತದೆ. ಇಲ್ಲಿ ವಿದ್ಯಾರ್ಥಿಗೆ ಸಾಮಾಜಿಕ ತರಬೇತಿಯನ್ನು ಕೊಟ್ಟು ಜವಾಬ್ದಾರಿಯುತ ಭಾವೀ ಪೌರರನ್ನಾಗಿ ಮಾಡುತ್ತದೆ. ಸಹಕಾರ, ಸಹನೆ, ಅನುಕಂಪ, ಔದಾರ್ಯ, ಸಾಮಾಜಿಕ ಸಾಮರಸ್ಯ, ರಾಷ್ಟ್ರ ಪ್ರೇಮ ಬೆಳೆದು ಸಮರ್ಥ ಪೌರರಾಗಲು ಶಿಕ್ಷಣ ತಳಹದಿ ಹಾಕಿಕೊಡುತ್ತದೆ. ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆ, ಮಾರ್ಗದರ್ಶನವನ್ನು ನೀಡಿ ಗುಂಪು ವರ್ತನೆಯಿಂದ ಆಗುವ ಸಾಧಕ ಬಾಧಕಗಳ ಬಗ್ಗೆ ಸೂಕ್ತ ನಿದರ್ಶನಗಳ ಸಹಾಯದಿಂದ ತಿಳಿಸಿ ಅದರಿಂದ ದೂರವಿರುವ ಬಗ್ಗೆ ಬುದ್ಧಿವಾದವನ್ನು ಹೇಳಬೇಕು. ಪ್ರತಿ ವಿದ್ಯಾರ್ಥಿಯಲ್ಲೂ ಒಬ್ಬ ಉತ್ತಮ ಮನುಷ್ಯ ರೂಪಗೊಳ್ಳುವಂತೆ ಸೂಕ್ತ ಅನುಭವಗಳನ್ನು ನೀಡಬೇಕು. ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಕಲ್ಪಿಸಿಕೊಡಬೇಕು.

**ಗುಂಪು ವರ್ತನೆಯ ಜ್ಞಾನ ಶಿಕ್ಷಕನಿಗೆ ಅವಶ್ಯಕ**

ಈ ದೇಶದ ಭಾವಿ ಪ್ರಜೆಗಳನ್ನು ರೂಪಿಸುವ ಜವಾಬ್ದಾರಿ ಶಿಕ್ಷಕನಿಗೆ ಸಂಬಂಧಪಟ್ಟದ್ದು. ಆದ ಕಾರಣ ಸಮಾಜಕ್ಕೆ ಎಂತಹ ಪ್ರಜೆಯ ಅಗತ್ಯವಿದೆ ಎಂಬ ಪರಿಜ್ಞಾನ ಶಿಕ್ಷಕನಿಗೆ ಇರಬೇಕು. ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣವಾಗಬೇಕಾದರೆ ಅದರ ಪ್ರತಿಯೊಬ್ಬ ಸದಸ್ಯನೂ ಆರೋಗ್ಯವಾಗಿರಬೇಕು (ಕಾಯಾ, ವಾಚಾ, ಮನಸಾ). ಹಾಗಾದರೆ ಈ ಆರೋಗ್ಯಕರ ಸಮಾಜವೆಂದರೇನು? ಆರೋಗ್ಯಕರ ಸದಸ್ಯರೆಂದರೆ ಯಾರು? ಎಂಬ ಅರಿವು ಶಿಕ್ಷಕರಿಗೆ ಇರಲೇಬೇಕಲ್ಲವೆ.

ಈ ಕೆಳಕಂಡ ಕಾರಣಗಳಿಂದಾಗಿ ಶಿಕ್ಷಕನಿಗೆ ಗುಂಪು ವರ್ತನೆಯ ಜ್ಞಾನ ಅತ್ಯವಶ್ಯಕ

1) ತರಗತಿಯ ಸಾಮೂಹಿಕ ಜೀವನವು ಭವಿಷ್ಯದ ಸಾಮಾಜಿಕ ಮತ್ತು ಸಾಂಘಿಕ ಜೀವನಕ್ಕೆ ತಳಹದಿಯಾಗುವುದು. ಪರಸ್ಪರ ಸಹಾಯ, ಸಹಕಾರ, ಸಹಯೋಗ ನೀಡುವ ಮೂಲಕ ಮತ್ತು ಸ್ವೀಕರಿಸುವ ಮೂಲಕ ಸಾಮಾಜಿಕ ಜೀವನವನ್ನು ರೂಪಿಸುವಂತೆ ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆ, ಮಾರ್ಗದರ್ಶನ ನೀಡಬೇಕು.

2) ಸಮಾಜ ಘಾತುಕ ಚಟುವಟಿಕೆಗಳಲ್ಲಿ ತೊಡಗುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಸೂಕ್ತ ಉದಾಹರಣೆಯೊಂದಿಗೆ ವಿವರಿಸಬೇಕು. ಹಾಗೆ ಮಾಡಲು ಗುಂಪಿನ ವರ್ತನೆಯ ಜ್ಞಾನ ಇರಬೇಕು.

3) ಸಮಾಜದಲ್ಲಿ ಒಬ್ಬ ಜವಾಬ್ದಾರಿಯುತ ಪ್ರಜೆಯಾಗಿ ಕಾರ್ಯ ನಿರ್ವಹಿಸುವುದರಿಂದ ಆಗುವ ಲಾಭಗಳ ಬಗ್ಗೆ ಅರಿವು ಮೂಡಿಸಲು ಅದರ ಜ್ಞಾನ ಅವಶ್ಯಕ.

4) ವ್ಯಕ್ತಿ ವ್ಯಕ್ತಿಯನ್ನು ಗೌರವಿಸುವುದು ಹೇಗೆ, ಉತ್ತಮ ಮನುಷ್ಯನಾಗಿ ರೂಪುಗೊಳ್ಳುವುದು ಹೇಗೆ ಎಂಬ ಅರಿವು ಮೂಡಲು ಜ್ಞಾನದ ಅಗತ್ಯವಿದೆ.

5) ಸಮಾಜದ ಹಿತಾಸಕ್ತಿಯನ್ನು ಕಾಪಾಡಲು, ಕಾನೂನನ್ನು ರಕ್ಷಿಸಲು ನಾವು ಹೇಗೆ ವರ್ತಿಸಬೇಕೆಂಬ ಅರಿವು ಮೂಡಿಸಲು ಅಗತ್ಯವಾಗಿ ಬೇಕು ಗುಂಪು ವರ್ತನೆಯ ಜ್ಞಾನ.

6) ಭ್ರಾತೃಪ್ರೇಮ ಮತ್ತು ವಸುದೈವ ಕುಟುಂಬಕಂ ಎಂಬ ಪರಿಕಲ್ಪನೆಯನ್ನು ಅರ್ಥೈಸಲು ಇದರ ಜ್ಞಾನದಿಂದ ಸಾಧ್ಯವಾಗುತ್ತದೆ.

7) ಸಮಾಜದಲ್ಲಿ ಮೌಲ್ಯಾಧಾರಿತ ಹಾಗು ನೈತಿಕತೆಯ ವಾತಾವರಣ ಇರುವಂತೆ ಮಾಡಬೇಕಾದರೆ ಇದರ ಜ್ಞಾನ ಅವಶ್ಯಕ.

8) ಸಮಾಜ ಘಾತುಕ ಚಟುವಟಿಕೆಗಳಲ್ಲಿ ತೊಡಗಿದರೆ ಆಗುವ ಶಿಕ್ಷೆ ಹಾಗೂ ಕಾನೂನಿನ ಕ್ರಮದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಇದರ ಜ್ಞಾನ ಅವಶ್ಯಕ.

–ಸ. ಎಂ.

## ಗೃಹ ಅರ್ಥಶಾಸ್ತ್ರ

ಗೃಹ ಅರ್ಥಶಾಸ್ತ್ರವು ಮನೆವಾರ್ತೆಯ ಕಲೆಯನ್ನು ಅಭ್ಯಾಸ ಮಾಡುವ ಶಾಸ್ತ್ರವಾಗಿದೆ. ಇದು ಗೃಹ ಮತ್ತು ಸಮೂಹ ಅಥವಾ ಸಮಾಜಗಳು ಪರಸ್ಪರ ಹೊಂದಿರುವ ಆರ್ಥಿಕ ಸಂಬಂಧವನ್ನು ಅಭ್ಯಾಸ ಮಾಡುವ ಶಾಸ್ತ್ರವಾಗಿದೆ.

ಗೃಹ ಅರ್ಥಶಾಸ್ತ್ರವನ್ನು ಕೌಟುಂಬಿಕ ಮತ್ತು ಉಪಭೋಗಿ ವಿಜ್ಞಾನ ಎಂದೂ ಕರೆಯುತ್ತಾರೆ. ಇದು ಒಂದು ಉದ್ಯೋಗ ಮತ್ತು ಅಭ್ಯಾಸದ ವಿಷಯವನ್ನು ಸೂಚಿಸುತ್ತದೆ. ಇದರಲ್ಲಿ ಒಂದು ಮನೆಯ ಮತ್ತು ಸಮೂಹದ ನಿರ್ವಹಣೆಯ ಕ್ರಮ ಇರುತ್ತದೆ. ಗೃಹ ಅರ್ಥಶಾಸ್ತ್ರವು ಒಳಗೊಂಡಿರುವ ಅಭ್ಯಾಸದ ಘಟಕಗಳು ಎಂದರೆ, ಉಪಭೋಗಿಯ ಶಿಕ್ಷಣ, ಗೃಹ ನಿರ್ವಹಣೆ, ಒಳಾಂಗಣ ವಿನ್ಯಾಸ, ಮನೆಯ ಅಥವಾ ಕಛೇರಿಯ ಪೀಠೋಪಕರಣ ವ್ಯವಸ್ಥೆ, ಶುಚಿಗೊಳಿಸುವ ವಿಷಯ, ಕೈಕೆಲಸ, ಹೊಲಿಗೆ, ಅಡಿಗೆ ಮಾಡುವುದು, ಪೌಷ್ಟಿಕ ಆಹಾರವನ್ನು ತಯಾರಿಸುವುದು, ಆಹಾರವನ್ನು ರಕ್ಷಿಸಿಡುವುದು, ಆರೋಗ್ಯಕರ ವಾತಾವರಣವನ್ನು ಉಂಟುಮಾಡುವುದು, ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ವಿಷಯ, ಅಂತರ್‌ಜಾಲ ರಕ್ಷಣೆ, ಕುಟುಂಬದ ಹಣ ನಿರ್ವಹಣೆ ಮತ್ತು ಕೌಟುಂಬಿಕ ಸಂಬಂಧಗಳ ಅಭಿವೃದ್ಧಿ.

Digitised by Bharatavani, CIIL

ಇವುಗಳೊಂದಿಗೆ ಲೈಂಗಿಕ ಶಿಕ್ಷಣ, ಮಾದಕ ವಸ್ತುಗಳ ವಿರುದ್ಧ ವಹಿಸಬೇಕಾದ ಎಚ್ಚರಿಕೆ, ಅಗ್ನಿ ದುರಂತಗಳನ್ನು ತಪ್ಪಿಸುವ ಕ್ರಮಗಳು, ಮುಂತಾದವುಗಳನ್ನೂ ಸೇರಿಸಬಹುದು. ಇದರಿಂದ ವಿದ್ಯಾರ್ಥಿಗಳು ಇವುಗಳಲ್ಲಿ ತಮಗೆ ಇಷ್ಟವಾದ ಯಾವುದನ್ನಾದರೂ ಅಭ್ಯಸಿಸಿ ನಂತರ ಅದನ್ನೇ ತಮ್ಮ ವೃತ್ತಿಯಾಗಿ ಸ್ವೀಕರಿಸಬಹುದು ಅಥವಾ ತಮ್ಮ ಮನೆಯ ನಿರ್ವಹಣೆಗೆ ಉಪಯೋಗಿಸಿಕೊಳ್ಳಬಹುದು.

ಗೃಹ ಅರ್ಥಶಾಸ್ತ್ರವನ್ನು ಪ್ರೌಢಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಮಟ್ಟಗಳಲ್ಲಿ ಮತ್ತು ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ, ವಯಸ್ಕರ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಸಬಹುದು.

1800ರಲ್ಲಿ ಗೃಹ ವಿಜ್ಞಾನವನ್ನು ಯುವಕ-ಯುವತಿಯರಿಗೆ ತಮ್ಮ ತಮ್ಮ ಮನೆಗಳನ್ನು ನಿಭಾಯಿಸಲು ತರಗತಿಗಳಲ್ಲಿ ಕಲಿಸಲಾಗುತ್ತಿತ್ತು. ಈ ಪದ್ಧತಿ ಮೊದಲು ಪ್ರಾರಂಭವಾದದ್ದು ಅಮೆರಿಕಾದ ಸಂಯುಕ್ತ ಸಂಸ್ಥಾನ, ಕೆನಡ ಮತ್ತು ಗ್ರೇಟ್ ಬ್ರಿಟನ್‌ಗಳಲ್ಲಿ. ನಂತರ ಅದು ಲ್ಯಾಟಿನ್ ಅಮೆರಿಕ, ಏಷ್ಯಾ ಮತ್ತು ಆಫ್ರಿಕಾಗಳಲ್ಲೂ ಪ್ರಾರಂಭವಾಯಿತು. ನಂತರ ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಪ್ರಪಂಚದ ಅನೇಕ ದೇಶಗಳಲ್ಲಿ ಗೃಹ ಅರ್ಥಶಾಸ್ತ್ರವನ್ನು ಶಿಕ್ಷಣ ಸಂಸ್ಥೆಗಳ ಮೂಲಕ ಕಲಿಸುವುದನ್ನು ಪ್ರಾರಂಭಿಸಲಾಯಿತು.

### ಗೃಹ ಅರ್ಥಶಾಸ್ತ್ರಕ್ಕೆ ನಾಲ್ಕು ಆಯಾಮಗಳಿವೆ

- ಒಂದು ಶೈಕ್ಷಣಿಕ ವಿಷಯವಾಗಿ ಇದು ಸಂಶೋಧಕರಿಗೆ ಅನೇಕ ಸಂಶೋಧನೆಗಳನ್ನು ಕೈಗೊಂಡು ಹೊಸ ಜ್ಞಾನದ ಸೃಷ್ಟಿಗೆ ದಾರಿಮಾಡಿಕೊಡಬಲ್ಲದು.

- ಪ್ರತಿಯೊಂದು ಮನೆಯಲ್ಲೂ, ಕುಟುಂಬಗಳಲ್ಲೂ ಮತ್ತು ಸಮಾಜದಲ್ಲೂ ಇದು ಮಾನವರ ಶಕ್ತಿ ಸಾಮರ್ಥ್ಯಗಳ, ಮಾನವನ ಮೂಲ ಅವಶ್ಯಕತೆಗಳ ಪೂರೈಕೆ ಮತ್ತು ಅಭಿವೃದ್ಧಿಗೆ ನೆರವಾಗುತ್ತದೆ.

- ಇದು ಪಠ್ಯ ವಿಷಯವಾಗಿ ವಿದ್ಯಾರ್ಥಿಗಳು ತಮ್ಮ ಸಂಪನ್ಮೂಲಗಳನ್ನು ಹಾಗೂ ತಮ್ಮ ಸ್ವಂತ ಶಕ್ತಿಯನ್ನು ಅರಿತುಕೊಳ್ಳಲು ಹಾಗೂ ಅಭಿವೃದ್ಧಿಪಡಿಸಿಕೊಳ್ಳಲು ಸಹಾಯಮಾಡುತ್ತದೆ. ಈ ಮೂಲಕ ಭವಿಷ್ಯದಲ್ಲಿ ಜೀವನ ನಡೆಸಲು ಅಗತ್ಯವಾದ ನಿರ್ದೇಶನವನ್ನು ನೀಡುತ್ತದೆ.

- ಸಾಮಾಜಿಕ ಕ್ಷೇತ್ರದಲ್ಲಿ ವ್ಯಕ್ತಿಗಳ, ಕುಟುಂಬಗಳ ಹಾಗೂ ಒಟ್ಟಾರೆ ಸಮಾಜದ ಅಭಿವೃದ್ಧಿಗೆ ಮತ್ತು ಅವುಗಳು ಸ್ವತಃ ಶಕ್ತಿ ಸಂಪಾದಿಸಲು ಹಾಗೂ ಭವಿಷ್ಯದಲ್ಲಿ ದೀರ್ಘಾವಧಿ ಉತ್ತಮ ಜೀವನ ನಡೆಸಲು ಸಹಾಯ ಮಾಡುತ್ತದೆ.

ಈ ನಾಲ್ಕು ಆಯಾಮಗಳಲ್ಲೂ ಉತ್ತಮ ಫಲಿತಾಂಶ ಪಡೆಯಲು ಈ ವಿಷಯವು ಸತತವಾಗಿ ವಿಕಸಿತವಾಗುತ್ತಿರಬೇಕು ಮತ್ತು ಹೊಸ ವಿಧಾನಗಳು ಸೃಷ್ಟಿಯಾಗುತ್ತಿರಬೇಕು. ಇದು ಈ ವಿಷಯದ ಮುಖ್ಯವಾದ ಲಕ್ಷಣ. ಏಕೆಂದರೆ ಇದು 21ನೇ ಶತಮಾನದ ಒಂದು ಅವಶ್ಯಕತೆಯಾಗಿದೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿಯೂ ವಿಶೇಷ ವ್ಯಕ್ತಿಯಾಗಬಲ್ಲನು. ಅಂಥ ವ್ಯಕ್ತಿ ಬದಲಾಗುವ ಪರಿಸರಕ್ಕೆ ಬೇಗ ಹೊಂದಿಕೊಳ್ಳಬಲ್ಲನು, ಎದುರಾಗುವ ಅನೇಕ ಸವಾಲುಗಳನ್ನು ಎದುರಿಸಬಲ್ಲನು.

ಹಿಂದಿನ ಕಾಲದಲ್ಲಿ ಮನೆಯ ಕೌಶಲ ಎಂದರೆ ಗಿಡ ಮೂಲಿಕೆಗಳಿಂದ ಔಷಧಗಳನ್ನು ತಯಾರಿಸುವುದು, ಪ್ರಾಣಿಗಳ ಚರ್ಮವನ್ನು ಹದಗೊಳಿಸುವುದು, ಸೋಪನ್ನು ತಯಾರಿಸುವುದು, ಹತ್ತಿ ಅಥವಾ ಉಣ್ಣೆಯಿಂದ ನೂಲು ತೆಗೆಯುವುದು ಮತ್ತು ನೇಯುವುದು, ಕಂಬಳಿ ಮತ್ತು ತೇಪೆಹಾಕಿದ ಮೆತ್ತೆ (ಕ್ವಿಲ್ಟ್) ಗಳನ್ನು ತಯಾರಿಸುವುದು ಮುಂತಾದವುಗಳಾಗಿದ್ದವು. ಇನ್ನೂ ಮುಂದುವರೆದ ಕೌಶಲ ಎಂದರೆ ಸೌದೆ ಒಲೆಯಲ್ಲಿ ಅಡಿಗೆ ಮಾಡುವುದು, ಮೊಸರನ್ನು ಕಡೆದು ಬೆಣ್ಣೆ ತೆಗೆಯುವುದು, ಬ್ರೆಡ್ ಮಾಡುವುದು, ಆಹಾರ ಪದಾರ್ಥಗಳನ್ನು ಒಣಗಿಸಿ ಕೆಡದಂತೆ ರಕ್ಷಿಸಿಡುವುದು ಅಥವಾ ಜಾಡಿಗಳಲ್ಲಿ ಶೇಖರಿಸಿಡುವುದು ಮುಂತಾದವುಗಳು. ಆದರೆ ಈಗ ಇದರಲ್ಲಿ ಅನೇಕ ಬದಲಾವಣೆಗಳಾಗಿವೆ. ಇದಕ್ಕೆ ಮುಖ್ಯ ಕಾರಣ ವೈಜ್ಞಾನಿಕ ಹಾಗೂ ತಾಂತ್ರಿಕಾಭಿವೃದ್ಧಿಗಳು ಮತ್ತು ಮಾನವನ ಜೀವನಕ್ರಮದಲ್ಲಾಗಿರುವ ಅನೇಕ ಬದಲಾವಣೆಗಳು ಎಂದು ಹೇಳಬಹುದು.

ಗೃಹ ಅರ್ಥಶಾಸ್ತ್ರವು ಮುಖ್ಯವಾಗಿ ಹಣದ ನಿರ್ವಹಣೆಯನ್ನು ಒಳಗೊಂಡಿರುತ್ತದೆ. ಮನೆಯ ಆದಾಯ ಮತ್ತು ವೆಚ್ಚಕ್ಕೆ ಅನುಗುಣವಾಗಿ ಒಂದು ಯೋಜನೆಯನ್ನು ತಯಾರಿಸುವುದಕ್ಕೆ ಗೃಹ ಬಜೆಟ್ ಅಥವಾ ಕುಟುಂಬ ಆಯವ್ಯಯ ಪಟ್ಟಿ ಎಂದು ಹೆಸರು. ಅದರಲ್ಲಿ ಉಳಿತಾಯ ಎಷ್ಟು ಮಾಡಬೇಕು, ವಿವಿಧ ಪದಾರ್ಥಗಳನ್ನು ಯಾವ ಯಾವ ಬೆಲೆಗೆ ಕೊಂಡುಕೊಳ್ಳಬೇಕು, ಎನ್ನುವುದರೊಂದಿಗೆ ಬ್ಯಾಂಕ್‌ನಲ್ಲಿರುವ ಕುಟುಂಬದ ಹಣದ ಲೆಕ್ಕಾಚಾರ, ಕೊಡಬೇಕಾದ ಟ್ಯಾಕ್ಸ್ (ತೆರಿಗೆ) ಲೆಕ್ಕಾಚಾರ, ಹಣ ಹೂಡಿಕೆಯ ಲೆಕ್ಕಾಚಾರ, ಕ್ರೆಡಿಟ್ ಕಾರ್ಡ್ ಮೂಲಕ ಕೊಂಡದ್ದು, ಅದಕ್ಕಾಗಿ ಪಾವತಿಸಬೇಕಾದದ್ದು, ಮುಂತಾದವುಗಳನ್ನೂ ಅದು ಒಳಗೊಂಡಿರುತ್ತದೆ.

ಈಗಿನ ಕಾಲದಲ್ಲಿ ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಜನರ ಗಮನವನ್ನು ಸೆಳೆಯುತ್ತಿರುವುದು ಗೃಹ ಅರ್ಥಶಾಸ್ತ್ರ. ಏಕೆಂದರೆ ಈಗಿನ ಪ್ರಪಂಚವು ಕೈಗಾರಿಕಾ ಆರ್ಥಿಕ ವ್ಯವಸ್ಥೆಯಿಂದ ಜ್ಞಾನವನ್ನು ತಳಪಾಯವನ್ನಾಗಿಹೊಂದಿರುವ ಸಾಂಸ್ಕೃತಿಕ ಜಾಗತೀಕರಣದ ಅರ್ಥವ್ಯವಸ್ಥೆಯಾಗಿದೆ. ಯಾವುದೇ ಬದಲಾವಣೆ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಈಗಿನ ಮಾಹಿತಿ ತಂತ್ರಜ್ಞಾನದ ದಿನಗಳು ವಿಪರೀತ ಸಂಕೀರ್ಣತೆಯಿಂದ ಕೂಡಿದ್ದು, ಸಾಮಾಜಿಕ ಮೌಲ್ಯಗಳನ್ನು ಕಾಪಾಡಲು ಅದು ಎಲ್ಲ ರೀತಿಯಲ್ಲೂ ಪ್ರಯತ್ನಿಸುತ್ತದೆ. ಇಲ್ಲಿ ಗೃಹ ಅರ್ಥಶಾಸ್ತ್ರದ ಸಾರ ಅಡಗಿದೆ. ಅದರಿಂದಾಗಿ ಈ ವಿಷಯದ ಬಗ್ಗೆ ಅಗತ್ಯವಾದ ಕಾಳಜಿಯನ್ನು ಆಗಾಗ್ಗೆ ನವೀಕರಿಸುತ್ತಾ ಹೋಗುವುದು ಅಗತ್ಯ.

- ಗೃಹ ಅರ್ಥಶಾಸ್ತ್ರಜ್ಞರು 1994ರಲ್ಲಿ "ಅಂತಾರಾಷ್ಟ್ರೀಯ ಕುಟುಂಬ ವರ್ಷ"ವನ್ನು ಆಚರಿಸಿ, ಕುಟುಂಬ ಜೀವನದ ಪ್ರಾಮುಖ್ಯವನ್ನು ಪ್ರಪಂಚಾದ್ಯಂತ ಸಾರಿದರು.

- ಅಂತಹ ದೇಶಗಳಲ್ಲಿ ಜಾರಿಗೆ ತಂದ ಯೋಜನೆಗಳೆಂದರೆ, ಬಡತನ ನಿರ್ಮೂಲನೆ, ಲಿಂಗ ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳು. ಇವುಗಳು ಗೃಹ ಅರ್ಥಶಾಸ್ತ್ರಜ್ಞರ ಪ್ರಮುಖ ವಿಷಯವಾಗಿದ್ದವು.

- ಗೃಹ ಅರ್ಥಶಾಸ್ತ್ರದ ಅಂತಾರಾಷ್ಟ್ರೀಯ ಒಕ್ಕೂಟವು (International Federation for Home Economics) ಅಂತಾರಾಷ್ಟ್ರೀಯ ಸರ್ಕಾರೇತರ ಸಂಘಟನೆ. ಇದಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಸಲಹೆಗಳನ್ನು ಕೇಳುವ ಅವಕಾಶಗಳಿವೆ.

- ಪ್ರಪಂಚಾದ್ಯಂತ ಅನೇಕ ಸಂಸಾರಗಳನ್ನು ಉತ್ತಮಪಡಿಸಲು ಗೃಹ ಅರ್ಥಶಾಸ್ತ್ರಜ್ಞರು ಅನೇಕ ಸರ್ಕಾರೇತರ ಸಂಸ್ಥೆಗಳೊಂದಿಗೆ ಕೈ ಜೋಡಿಸಿ ಕೆಲಸಮಾಡುವ ಯೋಜನೆಗಳನ್ನು ರೂಪಿಸಿದ್ದಾರೆ. ಶಾಂತಿ, ಶಿಕ್ಷಣ, ಲಿಂಗ ಸಂಬಂಧಿತ ವಿಷಯಗಳು, ಸ್ತ್ರೀ ಶಕ್ತಿ ಅಭಿವೃದ್ಧಿ,

Digitised by Bharatavani, CIIL

ಸಂಕಷ್ಟಕ್ಕೊಳಕ್ಕಾಗಾದ ಕುಟುಂಬಗಳ ಸುಧಾರಣೆಗಾಗಿ ಯೋಜನೆಗಳು, ಮಾನವ ಹಕ್ಕಿಗೆ ಸಂಬಂಧಪಟ್ಟ ವಿಷಯಗಳು, ಮುಂತಾದವುಗಳು ಮುಖ್ಯ ಯೋಜನೆಗಳಾಗಿವೆ.

• ಗೃಹ ಅರ್ಥಶಾಸ್ತ್ರಜ್ಞರು ವ್ಯಕ್ತಿಗತ ಹಾಗೂ ಕೌಟುಂಬಿಕ ಯೋಗಕ್ಷೇಮದ ಪ್ರತಿಪಾದಕರು. ಆದ್ದರಿಂದಲೇ ಶಾಲೆಗಳ ಮತ್ತು ವಿಶ್ವವಿದ್ಯಾನಿಲಯಗಳ ಗೃಹ ಅರ್ಥಶಾಸ್ತ್ರದ ಪಠ್ಯವನ್ನು ಆಗಾಗ್ಗೆ ಅಭಿವೃದ್ಧಿಪಡಿಸುತ್ತಿರುತ್ತಾರೆ.

–ಎಚ್.ಎಸ್.ಆರ್.

## ಗ್ರಂಥಾಲಯದ ಬಳಕೆಯ ಶಿಕ್ಷಣ

"ಗ್ರಂಥಗಳಿಲ್ಲದಿದ್ದಲ್ಲಿ ದೇವರೇ ಮೂಕನಾಗಿ ಬಿಡುತ್ತಾನೆ, ನ್ಯಾಯದೇವತೆ ನಿದ್ರಿಸುತ್ತಾಳೆ, ವಿಜ್ಞಾನ ದೇವತೆ ವಿಶ್ರಾಂತಿ ಪಡೆಯುತ್ತಾಳೆ, ತತ್ವಜ್ಞಾನ ಕುಂಟುತ್ತದೆ, ಸಾಹಿತ್ಯ ಬಾಯಿಗೆ ಬೀಗ ಹಾಕಿಕೊಂಡು ಬಿಡುತ್ತದೆ, ಉಳಿದುದೆಲ್ಲವೂ ಅಂಧಕಾರದಲ್ಲಿ ಅಡಗಿ ಬಿಡುತ್ತದೆ" ಎಂದು ಥಾಮಸ್ ಬಾರ್ಥೋಲಿನ್ ಎಂಬ ಡೆನ್ಮಾರ್ಕ್ ದೇಶದ ಗ್ರಂಥಪಾಲಕರೊಬ್ಬರು 1962ರಲ್ಲಿಯೇ ಸಾರಿ ಹೇಳಿದ್ದಾರೆ.

ಇಂದಿನ ಯುಗದಲ್ಲಿ ಗ್ರಂಥಾಲಯವು ಶಿಕ್ಷಣ ಸಂಸ್ಥೆಗಳ ತೀರ ಪ್ರಮುಖವಾದ ಅಂಶವೆನಿಸಿಕೊಂಡಿದೆ. ಶೈಕ್ಷಣಿಕ ಉದ್ದೇಶಗಳು ನೆರವೇರುವುದರಲ್ಲಿ ಗ್ರಂಥಾಲಯಗಳ ಪಾತ್ರ ಮುಖ್ಯವಾದುದು. ವಿದ್ಯಾರ್ಜನೆಗೆ ಸಂಬಂಧಿಸಿದ ವಿಷಯ ಸಂಗ್ರಹಣಕ್ಕೆ ಅವಶ್ಯಕವಾದ ಎಲ್ಲ ಬಗೆಯ ಲಿಖಿತ ಹಾಗೂ ದೃಶ್ಯರೂಪದ ಮಾಹಿತಿ ಸಲಕರಣೆಗಳನ್ನೂ ಹೊಂದಿರುತ್ತದೆ.

ನಾವೆಲ್ಲ ಓದು ಬರಹ ಬಲ್ಲವರಾಗಿ ಬೆಳೆದು ಬೆಳಗಬೇಕೆಂಬ ಹಂಬಲ ಹುದುಗಿಕೊಂಡಿರುತ್ತದೆ. ಇದಕ್ಕಾಗಿ ಸರಕಾರವು ಉಚಿತವಾಗಿ ಶಾಲೆ ಮತ್ತು ಗ್ರಂಥಾಲಯಗಳ ಅಭಿವೃದ್ಧಿಗೆ ವಿಶೇಷ ಆಸಕ್ತಿ ವಹಿಸುತ್ತಿದೆ. ಜೀವನದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಪುಸ್ತಕಗಳು ತುಂಬಾ ಅವಶ್ಯಕ. ಗ್ರಂಥಾಲಯಗಳು ಸಾಹಿತ್ಯ, ಸಂಸ್ಕೃತಿಗಳ ಮತ್ತು ಇತರೇ ಬೆಳವಣಿಗೆಗಳ ಕೇಂದ್ರಗಳಾಗಿವೆ. ನಾಡಿನ ಜನರ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ಗ್ರಂಥಾಲಯಗಳ ಬಗ್ಗೆ ಇಟ್ಟ ಆಸಕ್ತಿ ಮತ್ತು ಶ್ರದ್ಧೆಗಳ ಮೇಲೆ ರಾಷ್ಟ್ರದ ಪ್ರಗತಿಯು ಅವಲಂಬಿಸಿದೆ. ನಿಜವಾಗಿಯೂ ಗ್ರಂಥಗಳು ನಮ್ಮ ನಾಗರಿಕತೆಯ ತಳಹದಿ ಮತ್ತು ಸಾಕ್ಷರತೆಗೆ ಗ್ರಂಥಗಳೇ ಆಧಾರ. ಜೀವನದ ಶೈಕ್ಷಣಿಕ ಉನ್ನತಿಗೆ ಗ್ರಂಥಾಲಯಗಳು ತುಂಬಾ ಅವಶ್ಯಕವಾಗಿದೆ. ಡಾ॥ ಎಸ್.ಆರ್. ರಂಗನಾಥನ್‌ರವರ ಪ್ರಕಾರ "ಇಂದಿನ ಬದಲಾಗುತ್ತಿರುವ ಪ್ರಪಂಚಕ್ಕೆ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಶಾಲೆಗಳಲ್ಲಿ ಶಾಲಾ ಗ್ರಂಥಾಲಯವು ಒಂದು ಜೀವಂತ ಕಾರ್ಯಾಗಾರವಿದ್ದಂತೆ".

"ವಿದ್ಯಾರ್ಥಿಗಳು ಬಿತ್ತಿ ಬೆಳೆಯುವ ಗದ್ದೆಗಳಾಗಬೇಕು, ಬರೀ ತುಂಬುವ ಚೀಲಗಳಾಗಬಾರದು" ಎಂಬ ಕುವೆಂಪುರವರ ನುಡಿಗೆ ಗ್ರಂಥಾಲಯಗಳೇ ಜೀವ ತುಂಬಬಲ್ಲವು. ಇಂದಿನದು ಕಂಪ್ಯೂಟರ್ ಯುಗ. ಮಾಹಿತಿ ಮತ್ತು ತಂತ್ರಜ್ಞಾನದಲ್ಲಿ ಮಹತ್ತರವಾದ ಬದಲಾವಣೆ ಕ್ಷಣಕ್ಷಣಕ್ಕೂ ನಡೆಯುತ್ತದೆ. ಇಂತಹ ಸಮಯದಲ್ಲೂ ಪುಸ್ತಕಗಳು ತಮ್ಮ ಸ್ಥಿತಿ ಕಾಯ್ದುಕೊಂಡು ಬಂದಿವೆ. ಮಾನವನ ಅಂತಶ್ಶಕ್ತಿಯನ್ನು ಪರಿಣಾಮಕಾರಿಯಾಗಿ ಬೆಳೆಸಲು ಪುಸ್ತಕಗಳು ದಾರಿದೀಪಗಳಾಗಿವೆ. ವಿದ್ಯಾರ್ಥಿ ಮತ್ತು ಶಿಕ್ಷಕರ ಜ್ಞಾನದ ಹಸಿವನ್ನು ಕ್ಷಣಾರ್ಧದಲ್ಲಿಯೇ ಕಡಿಮೆ ಮಾಡಿ, ಉತ್ತಮ ಭವಿಷ್ಯ ನೀಡುವಲ್ಲಿ ಗ್ರಂಥಾಲಯಗಳ ಪಾತ್ರ ಹಿರಿದಾಗಿದೆ. ಪುಸ್ತಕಗಳು ಇನ್ನು ಹುಟ್ಟಲಿರುವ ಜನಾಂಗದ ಆಸ್ತಿಗಳಾಗಿವೆ. ಪ್ರತಿಯೊಂದು ಪುಸ್ತಕ ಓದಿದಾಗಲೂ ಹೊಸ ಹೊಸ ಅನುಭವಗಳು ನಮ್ಮೊಡನೆ ಸೇರುತ್ತವೆ. ಪುಸ್ತಕಗಳು ವಿದ್ಯಾರ್ಥಿ ಹಾಗೂ ಶಿಕ್ಷಕರ ಮತ್ತು ಎಲ್ಲ ವ್ಯಕ್ತಿಗಳ ಹೃದಯಾಲಯಗಳಾಗಿವೆ.

• ಗ್ರಂಥಾಲಯಗಳು ಶಿಕ್ಷಕರನ್ನು ನಿರಂತರವಾಗಿ ಕಲಿಯಲು ಪ್ರೇರೇಪಿಸುವುದು.

• ವಿದ್ಯಾರ್ಥಿ ಮತ್ತು ಶಿಕ್ಷಕರು ತಮ್ಮ ಬಿಡುವಿನ ವೇಳೆಯಲ್ಲಿ ಗ್ರಂಥಾಲಯದ ಉಪಯೋಗ ತೆಗೆದುಕೊಳ್ಳುವರು.

• ಗ್ರಂಥಾಲಯವು ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಮೂಡಿಸುವುದು.

• ತರಗತಿಯಲ್ಲಿ ಪಡೆದ ಜ್ಞಾನಕ್ಕೆ ಪೂರಕ ಅಧ್ಯಯನಾವಕಾಶ ನೀಡುವುದು.

ಪುಸ್ತಕಗಳ ಸಂಗ್ರಹವೇ ಗ್ರಂಥಾಲಯ. ಸ್ವಾಮಿ ವಿವೇಕಾನಂದರಿಗೆ ಓದುವಾಗಿನ ಏಕಾಗ್ರತೆ ಬಹಳ ತೀವ್ರವಾಗಿತ್ತು. ಅವರು ಸ್ವಲ್ಪವೇ ಸಮಯದಲ್ಲಿ ಅತಿ ಹೆಚ್ಚು ಪುಟಗಳನ್ನು ಓದುತ್ತಿದ್ದರಲ್ಲದೇ ತಾವು ಓದಿದ ಯಾವುದೇ ವಿಷಯದ ಪುಟಸಂಖ್ಯೆ ಮತ್ತು ಸಾಲಿನ ಸಂಖ್ಯೆ ಕರಾರುವಕ್ಕಾಗಿ ಹೇಳುತ್ತಿದ್ದರಂತೆ ಎಂದು ಓದಿದ್ದೇವೆ. ಗಾಂಧೀಜಿಯವರು "ಶ್ರವಣನ ಪಿತೃಭಕ್ತಿ" ಎಂಬ ಪುಸ್ತಕ ಓದಿದ್ದು "ಇದೋ ಇಲ್ಲಿದೆ ನಿನಗೊಂದು ಬದುಕಿನ ಹೊಸ ಮಾದರಿ" ಎಂಬ ಸಂದೇಶ ತಮಗೆ ಸಿಕ್ಕಿತೆಂದು ತಮ್ಮ ಆತ್ಮಕಥೆಯಲ್ಲಿ ಹೇಳುತ್ತಾರೆ. ಹರಿಶ್ಚಂದ್ರನ ಕತೆಯೂ ಅವರನ್ನು ಪ್ರಭಾವಿಸಿತ್ತು. ಜಾನ್ ರಸ್ಕಿನ್ 'ಅನ್ ಟು ದಿಸ್ ಲಾಸ್ಟ್' ಪುಸ್ತಕದಿಂದ ಪ್ರಭಾವಿತರಾಗಿದ್ದ ನೋಬೆಲ್ ಪಾರಿತೋಷಕ ಪಡೆದ ಸುಪ್ರಸಿದ್ಧ ಭೌತ ರಸಾಯನಶಾಸ್ತ್ರ ವಿಜ್ಞಾನಿ ಮೈಕೆಲ್ ಫರಾಡೆಯವರಿಗೆ ಗ್ರಂಥಗಳೇ ಗುರುಗಳಾಗಿದ್ದವು. ಗ್ರಂಥಾಲಯಗಳು ಶಿಕ್ಷಣಕ್ಕೆ ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಾಗಿದ್ದವು. ಶಿಕ್ಷಣದ ಬಗ್ಗೆ ಮಾತನಾಡುತ್ತ ಸಾಮ್ಯುಯಲ್ ಜಾನ್‌ಸನ್ ಹೀಗೆ ಹೇಳಿದ್ದಾರೆ, ಉಪನ್ಯಾಸಗಳಿಗಿಂತ ಪುಸ್ತಕಗಳಿಂದ ಸಿಗುವ ಉಪಯೋಗ ಬಹಳ. ಏಕೆಂದರೆ ಉಪನ್ಯಾಸಗಳು ಕೂಡ ಪುಸ್ತಕದಿಂದಲೇ ತೆಗೆದುಕೊಂಡ ವಿಷಯವಾಗಿದೆ. ಪ್ರಯೋಗಗಳ ಮೂಲಕ ಕಲಿಸುವ ವಿಷಯಗಳನ್ನು ಉಪನ್ಯಾಸಗಳಿಂದ ಕಲಿಸಬಹುದೇ ಹೊರತು ಬೇರೇನನ್ನೂ ಅವುಗಳಿಂದ ಕಲಿಸಲಾಗುವುದಿಲ್ಲ. ಗ್ರಂಥಾಲಯ ಜ್ಞಾನದ ಸಂರಕ್ಷ ಸಿರಿವಂತ ಗ್ರಂಥಾಲಯ ಹೊಂದಿದ ಶಿಕ್ಷಣ ಸಂಸ್ಥೆ ಶ್ರೇಷ್ಠ ಶಿಕ್ಷಕರನ್ನು ತನ್ನೆಡೆ ಆಕರ್ಷಿಸುತ್ತದೆ.

ಪ್ರತಿವರ್ಷ ಏಪ್ರಿಲ್ 20ರಂದು ಜಾಗತಿಕ ಮಟ್ಟದಲ್ಲಿ ಪುಸ್ತಕ ದಿನವನ್ನಾಗಿ ಆಚರಿಸಲ್ಪಡುತ್ತದೆ ಮತ್ತು ಇದು ಪ್ರತಿಯೊಬ್ಬ ವ್ಯಕ್ತಿಗೂ ವಾಚನಾಲಯದ ಶಿಕ್ಷಣವನ್ನೂ ಒದಗಿಸುತ್ತದೆ. ಮಾನವನ ಕಲಿಕೆಯ ವಿಕಾಸದ ವಿವಿಧ ಘಟ್ಟಗಳಲ್ಲಿ ಮೂಡಿ ಬಂದ ಜ್ಞಾನವನ್ನು ವ್ಯಾಪಿಸಿಕೊಂಡು ನಿರಂತರ ವಿಕಾಸ ಹೊಂದುತ್ತಿರುವ ಜ್ಞಾನ ಸಾರಥಿಗಳಂತಿರುವ ಸಮರ್ಥವಾದ ಪುಸ್ತಕಗಳು ಇಂದು ಅತಿ ಅವಶ್ಯ. ಅಂದರೆ ಮಾತ್ರ ಶಿಕ್ಷಣದಲ್ಲಿ ಗ್ರಂಥಾಲಯದ ಪಾತ್ರ ಹಿರಿದು ಎಂದು ಮನದಟ್ಟಾಗುವುದು. ಹಾಗೆಯೇ ಗ್ರಂಥಾಲಯ ಬಳಕೆಯ ಶಿಕ್ಷಣವು ಅರ್ಥಪೂರ್ಣತೆಗೊಳ್ಳುತ್ತದೆ.

–ಶ.ನಾ.ಪ.

Digitised by Bharatavani, CIIL

# ಜ

## ಜನನಪೂರ್ವ ಅವಧಿ

ಜೀವಿಯು ಗರ್ಭಾಂಕುರವಾದಂದಿನಿಂದ ಜನನದವರೆಗೆ ಸುಮಾರು 280 ದಿವಸಗಳ ಕಾಲ ಅಥವಾ 9 ಕ್ಯಾಲೆಂಡರ್ ತಿಂಗಳುಗಳ ಕಾಲ ತಾಯಿಯ ಗರ್ಭದಲ್ಲಿ ಆಶ್ರಯವನ್ನು ಪಡೆಯುತ್ತದೆ. ಜನನಿಯ ಗರ್ಭದಲ್ಲಿರುವ ಈ ಕಾಲ ಆಯುರಾವಧಿಯನ್ನು 'ಜನನ ಪೂರ್ವ ಕಾಲ' ಎನ್ನುತ್ತಾರೆ. ಈ ಅವಧಿ ವ್ಯಾಪ್ತಿಯಲ್ಲಿ ಕಿರಿದಾಗಿದ್ದರೂ ಬಹಳ ಪ್ರಮುಖವಾಗಿದೆ.

ಶಿಶುವಿನ ಗರ್ಭದಲ್ಲಿ ಮುಂದಾಗುವ ವಿವಿಧ ವಿಕಾಸಗಳಿಗೆ ಅಗತ್ಯವಾದ ಅನುವಂಶಿಕ ಗುಣಗಳು ನಿರ್ಧಾರವಾಗುವುದರೊಂದಿಗೆ ಅಲ್ಲಿನ ಸನ್ನಿವೇಶಗಳು, ಸ್ಥಿತಿಗತಿಗಳು ಶಿಶುವಿನ ವಿಕಾಸದ ಮೇಲೆ ಪ್ರಭಾವ ಬೀರುತ್ತವೆ.

ಲಿಂಗಕೋಶಗಳು ಸ್ತ್ರೀ–ಪುರುಷರ ಲೈಂಗಿಕ ಗ್ರಂಥಿಗಳಲ್ಲಿ (ಪ್ರಜನನಾಂಗಗಳಲ್ಲಿ) ಉತ್ಪತ್ತಿಯಾಗುತ್ತವೆ. ಶುಕ್ರಾಣುಗಳು ಪುರುಷನ ವೃಷಣಗಳಲ್ಲೂ, ಅಂಡಾಣುಗಳು ಸ್ತ್ರೀಯ ಅಂಡಾಶಯಗಳಲ್ಲೂ ಉತ್ಪತ್ತಿಯಾಗುತ್ತವೆ. ಈ ಎರಡೂ ಲಿಂಗಕೋಶಗಳು ಗಾತ್ರ, ರಚನೆ, ಕಾರ್ಯಗಳಲ್ಲಿ ಭಿನ್ನತೆಯನ್ನು ಹೊಂದಿದೆ. ಪ್ರತಿ ಅಂಡಾಣು ಹಾಗೂ ಶುಕ್ರಾಣುವಿನಲ್ಲೂ 23 ಜತೆ ವರ್ಣತಂತುಗಳಿರುತ್ತವೆ. ಈ 23 ವರ್ಣತಂತು ಜೊತೆಗಳಲ್ಲಿ 23ನೆಯ ಜೊತೆ ವರ್ಣತಂತುವೇ ಜೀವಿಯ ಲಿಂಗ ನಿರ್ಧರಿಸುವುದು. ಉಳಿದ 22 ಜೊತೆ ವರ್ಣತಂತುಗಳು ಇತರ ಗುಣಗಳನ್ನು ನಿರ್ಧರಿಸುತ್ತವೆ. ಅಂಡಾಣುವಿನಲ್ಲಿ 23ನೆಯ ಜೊತೆ ವರ್ಣತಂತುವು XX ಎಂದು ಆದರೆ ಶುಕ್ರಾಣು(ರೇತಸ್ಸು)ವಿನಲ್ಲಿ 23ನೆಯ ವರ್ಣತಂತು ಜೊತೆಯನ್ನು XY ಎಂದೂ ಸಂಕೇತಿಸಲಾಗಿದೆ. ಶುಕ್ರಾಣುವಿನಲ್ಲಿರುವ ಈ 23ನೆಯ X ವರ್ಣತಂತು ಜೊತೆ ಹೆಣ್ಣು ಜನನಕ್ಕೂ, Y ವರ್ಣತಂತು ಜೊತೆ ಗಂಡು ಜನನಕ್ಕೂ ಕಾರಣವಾಗುತ್ತದೆ. XX ಜೋಡಿಯು ಹೆಣ್ಣು ಮಗುವಿನ ಜನನವನ್ನು, XY ಜೋಡಿಯು ಗಂಡುಮಗುವಿನ ಜನನಕ್ಕೂ ಕಾರಣವಾಗುತ್ತದೆ.

**ಶುಕ್ರಾಣು, ಅಂಡ, ಲಿಂಗ ನಿರ್ಧಾರಣ:** ಈ ಹೊಸಜೀವಿಯ ಉದಯಕ್ಕೆ ಮುಂಚೆ ಅದಕ್ಕೆ ಕಾರಣವಾದ ಅಂಡಾಣುವಿನ ಪೂರ್ವಸಿದ್ಧತೆಯು ಅಂಡಪಕ್ವತೆ, ಅಂಡೋತ್ಸರ್ಗ ಹಾಗೂ ಗರ್ಭಾಂಕುರತೆಯೆಂಬ ಮೂರು ಹಂತಗಳಲ್ಲಿ ಆಗುತ್ತದೆ.

ಅಂಡಾಣು ಮತ್ತು ಶುಕ್ರಾಣುಗಳು ಮಿಲನವಾಗಿ ಹೆಣ್ಣು ಗರ್ಭಿಣಿಯಾಗುವ ಕಾಲವು ಅತಿ ಮುಖ್ಯವಾದುದು. ಈ ಪರ್ವಕಾಲದಲ್ಲಿ ಮೂರು ಮುಖ್ಯ ಅಂಶಗಳು ಮಾನವ ಜೀವಿಯ ಭವಿಷ್ಯವನ್ನು ನಿರ್ಧರಿಸುತ್ತವೆ. ಅವುಗಳು 1. ಶಿಶುವಿನ ಅನುವಂಶಿಕ ಗುಣಗಳು 2. ಲಿಂಗ ನಿರ್ಧಾರಣ ಕಾರ್ಯ 3. ಜನನವಾಗುವ ಶಿಶುಗಳ ಸಂಖ್ಯೆ.

ಅನುವಂಶಿಕ ಕೊಡುಗೆಗಳು ವ್ಯಕ್ತಿಯ ಬಾಳಿನಲ್ಲಿ ವಿವಿಧ ವಿಕಾಸಗಳ ಮಿತಿಯನ್ನು ನಿರ್ಧರಿಸುತ್ತವೆ. ಲಿಂಗನಿರ್ಧಾರವು ಮುಂದಿನ ವಿಕಾಸಗಳ ಮೇಲೆ ಪರಿಣಾಮ ಬೀರುತ್ತದೆ. ಎಳೆತನದಿಂದಲೇ ತಂದೆ ತಾಯಿಯರು, ಗುರುಹಿರಿಯರು ಮತ್ತು ಸಮವಯಸ್ಕರು ಎಲ್ಲರೂ ಲಿಂಗ ಸೂಕ್ತ ವರ್ತನೆಯನ್ನು, ಮನೋಭಾವನೆಗಳನ್ನು ಮತ್ತಿತರ ಕ್ರಿಯೆಗಳನ್ನು ಬಾಲಕ ಅಥವಾ ಬಾಲಕಿಯರು ಕಲಿತುಕೊಳ್ಳುವಂತೆ ಒತ್ತಾಯ ಮಾಡುತ್ತಾರೆ. ಕೆಲವು ತಂದೆತಾಯಿಯರು ತಮ್ಮ ಇಚ್ಛೆಯಂತೆ ಸಂತಾನವಾಗದಿದ್ದಾಗ ಆ ಮಗುವಿನ ಬಗ್ಗೆ ಭಿನ್ನವಾದ ಮನೋಭಾವ, ವರ್ತನೆಯನ್ನು ತೋರುತ್ತಾರೆ. ಸಂತಾನಗಳ ಸಂಖ್ಯೆಯು ಕೂಡ ತನ್ನದೇ ಆದ ಪರಿಣಾಮವನ್ನು ವಿಕಾಸದ ಮೇಲೆ ಬೀರುತ್ತದೆ. ಅನನ್ಯ ಅವಳಿ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಗಳು ಒಂದೇ ರೀತಿಯಾಗಿರುತ್ತವೆಯಲ್ಲದೆ, ಅವರ ವ್ಯಕ್ತಿತ್ವದಲ್ಲಿ ಭಿನ್ನತೆಗಳಿಗಿಂತ ಸಾಮ್ಯತೆಗಳು ಹೆಚ್ಚಾಗಿ ಕಂಡುಬರುತ್ತವೆ. ಅನನ್ಯ ಅವಳಿ ಅಥವಾ ತ್ರಿವಳಿ ಮಕ್ಕಳು ಗರ್ಭಕೋಶವನ್ನು ಹಂಚಿಕೊಳ್ಳಬೇಕಾಗಿರುವುದರಿಂದ, ಗರ್ಭಕೋಶದಲ್ಲಿಯ ಚಟುವಟಿಕೆಗೆ ಅಡ್ಡಿಯುಂಟಾಗಿ, ಯಥಾಸ್ಥಿತಿಯಲ್ಲಾಗುವ ಸ್ನಾಯುಗಳ ವಿಕಾಸ ಆಗುವುದಿಲ್ಲ. ಇದು ಅಂಗವಿಕಲ ಅಥವಾ ವಿಕಾರ ರೂಪಿಗಳ ಜನ್ಮಕ್ಕೆ ಕಾರಣವಾಗಬಹುದು. ಹಾಗೆಯೇ ಅವಳಿ ಸಂತಾನದ ಸಂಖ್ಯೆ ಹೆಚ್ಚಾದಷ್ಟು ಪೂರ್ಣಾವಧಿಗೆ ಮುನ್ನ ಜನನವಾಗುವ ಸಂಭವ ಹೆಚ್ಚಾಗುತ್ತದೆ. ಇದರಿಂದ ಅವಳಿಗಳ ಮರಣ ಸಂಖ್ಯೆ ಹೆಚ್ಚಾಗಬಹುದು.

ಜನನ ಪೂರ್ವದಲ್ಲಿಯ ವಿಕಾಸವು ನಿರ್ದಿಷ್ಟವಾದ, ಕ್ರಮಬದ್ಧವಾದ ಜೀವಾಂಡಾವಧಿ, ಭ್ರೂಣಾವಧಿ ಹಾಗೂ ಪಿಂಡಾವಧಿಗಳಲ್ಲಿ ಉಂಟಾಗುತ್ತದೆ. ಜೀವಾಂಡಾವಧಿಯು ಗರ್ಭಾಂಕುರತೆಯಿಂದ ಮೊದಲ ಎರಡು ವಾರಗಳನ್ನು ಒಳಗೊಂಡಿದೆ. ಈ ಅವಧಿಯಲ್ಲಿ ಅಂಡಾಣುವು ಗರ್ಭಕೋಶದ ಒಳಪದರದಲ್ಲಿ ಸೂಕ್ತವಾದ ಸ್ಥಳದಲ್ಲಿ ನೆಲೆಗೊಳ್ಳುತ್ತದೆ.

ಮೊದಲು ಹೆಣ್ಣಿನ ಅಂಡಾಶಯಗಳಲ್ಲಿ ಅಂಡ (Ovum) ಪಕ್ವಗೊಳ್ಳುತ್ತದೆ. ಹೀಗೆ ಪಕ್ವಗೊಂಡ ಅಂಡ ಅಂಡಾಶಯ ಮತ್ತು ಗರ್ಭಕೋಶವನ್ನು ಸಂಪರ್ಕಿಸುವ ಪೆಲೋಪಿಯನ್ ನಾಳವನ್ನು ಪ್ರವೇಶಿಸುವ ಹಂತವೇ ಅಂಡೋತ್ಸರ್ಗ. ಹೆಣ್ಣಿನಲ್ಲಿರುವ ಎರಡು ಅಂಡಾಶಯಗಳು ಪರ್ಯಾಯ ರೀತಿಯಲ್ಲಿ ಅಂಡಗಳನ್ನು ಉತ್ಪತ್ತಿ ಮಾಡುತ್ತವೆ. ಸಾಮಾನ್ಯವಾಗಿ ಒಂದು ಸಲಕ್ಕೆ ಒಂದು ಅಂಡ ಪಕ್ವಗೊಂಡು ಪೆಲೋಪಿಯನ್ ನಾಳವನ್ನು ಪ್ರವೇಶಿಸುತ್ತದೆ. ಆದರೆ ಕೆಲವು ವೇಳೆ ಒಂದಕ್ಕಿಂತ ಹೆಚ್ಚು (ಎರಡು, ಮೂರು) ಅಂಡಗಳು ಪಕ್ವಗೊಂಡು ಪೆಲೋಪಿಯನ್ ನಾಳ ತಲುಪುವ ಸಾಧ್ಯತೆ ಇದೆ. ಗಂಡು, ಹೆಣ್ಣು ಸಂಭೋಗ ಕ್ರಿಯೆಯಲ್ಲಿ ಸೇರಿದಾಗ ಗಂಡಿನಿಂದ ಸಹಸ್ರಾರು ಸಂಖ್ಯೆಯಲ್ಲಿ ರೇತಸ್ಸುಗಳು ಅಥವಾ ಶುಕ್ರಾಣುಗಳು (Sperms) ಹೆಣ್ಣಿನ ಗರ್ಭಕೋಶ ಸೇರುತ್ತವೆ. ಪ್ರತಿಯೊಂದು ರೇತಸ್ಸು ಒಂದು ತಲೆ ಭಾಗವನ್ನು, ಒಂದು ಬಾಲವನ್ನು ಹೊಂದಿರುತ್ತದೆ. ತಲೆಭಾಗದಲ್ಲಿ ಬೆಳವಣಿಗೆಯಕಾರಕಗಳಾದ 23 ಜೊತೆ ವರ್ಣತಂತುಗಳಿರುತ್ತವೆ. ಈ ರೇತಸ್ಸುಗಳು ಎಲ್ಲಾ ದಿಶೆಗಳಲ್ಲಿ ಧಾವಿಸಿದಾಗ ಕೆಲವು ಪೆಲೋಪಿಯನ್ ನಾಳವನ್ನು ಪ್ರವೇಶಿಸುತ್ತವೆ. ಅವುಗಳಲ್ಲಿ ಯಾವುದೋ ಒಂದು ರೇತಸ್ಸು ಅಲ್ಲಿರುವ ಪಕ್ವಗೊಂಡ ಅಂಡದ ಜೊತೆ ಸಂಯೋಗಗೊಂಡು ಗರ್ಭೋತ್ಪತ್ತಿಯಾಗುತ್ತದೆ. ಹೀಗೆ ಉಂಟಾದ ಕೋಶವನ್ನು ಜೀವಾಂಡ (Zygote) ಎನ್ನುತ್ತಾರೆ. ಒಂದಕ್ಕಿಂತ ಹೆಚ್ಚು ಪಕ್ವಗೊಂಡ ಅಂಡಗಳಿದ್ದರೆ ಅಷ್ಟು ಸಂಖ್ಯೆಯ (ಎರಡು, ಮೂರು) ರೇತಸ್ಸುಗಳು ಅವುಗಳೊಂದಿಗೆ ಮಿಲನಗೊಂಡು ಬಹು ಜೀವಾಂಡಗಳು (Polyzygotes) ಉಂಟಾಗುತ್ತವೆ. ಇದರಿಂದಾಗಿ ಅವಳಿಗಳು ಹುಟ್ಟುತ್ತಾರೆ. ಇಂಥ ಅವಳಿಗಳನ್ನು ಸಹೋದರ ಅವಳಿಗಳು ಅಥವಾ ಯಮಳರು (Fraternal or Polyzygous Twins) ಎನ್ನುತ್ತಾರೆ. ಈ ಮಕ್ಕಳು ಏಕಕಾಲದಲ್ಲಿ ತಾಯಿಯ ಗರ್ಭದಲ್ಲಿ ಉತ್ಪತ್ತಿಯಾಗಿರುತ್ತಾರೆ. ಇಂಥ ಅವಳಿಗಳು ರೂಪದಲ್ಲಿ ಅನುವಂಶೀಯ ಲಕ್ಷಣಗಳಲ್ಲಿ ಒಂದೇ ರೀತಿ ಇರುವುದಿಲ್ಲ. ಏಕಲಿಂಗಿಗಳೂ ಆಗಿರಬೇಕಾಗಿಲ್ಲ.

Digitised by Bharatavani, CIIL

ಜೀವಾಂಡ ಆದನಂತರ ಅದು ಕೋಶ ವಿಭಜನೆ ಪ್ರಕ್ರಿಯೆಗೆ ಒಳಪಟ್ಟು ಬೆಳೆಯುತ್ತಾ ಹೋಗುತ್ತದೆ. ಈ ಪ್ರಕ್ರಿಯೆಗೆ ಮೈಟಾಸಿಸ್ (Mitosis) ಎಂದು ಹೆಸರು. ಕೋಶಗಳು ಜ್ಯಾಮಿತೀಯವಾಗಿ ವಿಭಜನೆಯಾಗುತ್ತಾ ಹೋಗುತ್ತವೆ. ಅಂದರೆ ಒಂದೇ ಕೋಶವಾಗಿದ್ದ ಜೀವಾಂಡ ಎರಡು ಕೋಶಗಳಾಗಿ ವಿಭಜನೆ ಹೊಂದುತ್ತದೆ. ಆದರೆ ಅವು ಸಂಪೂರ್ಣವಾಗಿ ಪ್ರತ್ಯೇಕವಾಗುವುದಿಲ್ಲ. ಪರಸ್ಪರ ಸೇರಿಕೊಂಡೇ ಇರುತ್ತವೆ. ಪ್ರತಿಯೊಂದು ಕೋಶದಲ್ಲಿಯೂ 23 ಜೊತೆ ವರ್ಣತಂತುಗಳು ಇರುತ್ತವೆ. ಹೀಗೆ 2 ಕೋಶಗಳು 4 ಆಗಿ, 4 ಕೋಶಗಳು 8 ಆಗಿ, ಹೀಗೆಯೇ ದ್ವಿಗುಣಗೊಳ್ಳುತ್ತಾ ಇಡೀ ಮಾನವ ದೇಹದ ರಚನೆಗೆ ಬೇಕಾದಷ್ಟು ಕೋಶಗಳಾಗುವವರೆಗೆ ವಿಭಜನೆ ಮುಂದುವರಿಯುತ್ತದೆ. ಹೀಗೆ ವಿಭಜನೆ ಆಗುವಾಗ ಕೆಲವು ವೇಳೆ ಕಾರಣಾಂತರದಿಂದ 2 ಅಥವಾ 4 ಕೋಶಗಳ ವಿಭಜನೆ ಹಂತದಲ್ಲಿ ಕೋಶಗಳು ಸಂಪೂರ್ಣವಾಗಿ ಪ್ರತ್ಯೇಕಿತಗೊಂಡು ಪ್ರತಿಯೊಂದರಲ್ಲೂ ವಿಭಜನೆ ಕ್ರಿಯೆ ಮುಂದುವರಿದು ಪ್ರತ್ಯೇಕಗೊಂಡ ಜೀವಾಂಡಗಳು ಬೆಳೆದು ಅವಳಿ ಮಕ್ಕಳಾಗುತ್ತವೆ. ಇವುಗಳು ಅನುವಂಶೀಯ ಗುಣಗಳನ್ನು ಸಮನಾಗಿ ಹಂಚಿಕೊಂಡಿರುವುದರಿಂದ ಅವು ಅವಳಿ ಏಕಲಿಂಗಿಗಳಾಗಿರುತ್ತವೆ. (ಎರಡು ಹೆಣ್ಣು ಅಥವಾ ಗಂಡು) ಮತ್ತು ಬಾಹ್ಯ ಲಕ್ಷಣಗಳಲ್ಲೂ ಸಮರೂಪದವುಗಳಾಗಿರುತ್ತವೆ. ಆದ್ದರಿಂದ ಇಂಥ ಅವಳಿಗಳನ್ನು ಸಮರೂಪ ಅವಳಿಗಳು ಅಥವಾ ಯಮಳರು (Identical Twins) ಎನ್ನುತ್ತಾರೆ. ಇಂಥ ಅವಳಿಗಳನ್ನು ಅನುವಂಶೀಯತೆ ಪರಸ್ಪರ ಪ್ರಭಾವವನ್ನು ಅಧ್ಯಯನ ಮಾಡಲು ಉಪಯೋಗಿಸಿದ್ದಾರೆ.

ಭ್ರೂಣಾವಧಿಯು ಎರಡನೆಯ ವಾರದ ಅಂತ್ಯದಿಂದ ಎರಡನೆಯ ತಿಂಗಳ ಅಂತ್ಯದವರೆಗೆ, ಎಂದರೆ ಸುಮಾರು ಆರು ವಾರಗಳವರೆಗೆ ವ್ಯಾಪಿಸಿದೆ. ಕೇವಲ ಕೋಶಗಳ ಮುದ್ದೆಯಾಗಿದ್ದ ಜೀವಾಂಡ ಈ ಆರು ವಾರಗಳಲ್ಲಿ ಪುಟ್ಟ ಮನುಷ್ಯಾಕೃತಿಯನ್ನು ಹೊಂದುವುದು. ವಿಕಾಸವು ಮುಡಿಯಿಂದ ಪಾದಾಭಿಮುಖವಾಗಿ ಮುಂದುವರೆಯುವುದರಿಂದ ವಿಜ್ಞಾನಿಗಳು ಈ ವಿಕಾಸವನ್ನು 'ಶಿರೋಪಾದಾಭಿಮುಖ ವಿಕಾಸ' ಎನ್ನುವರು. ಈ ಭ್ರೂಣದ ವಿಕಾಸ ದೋಷಗಳಿಗೆ, ಅದರ ಆಂತರಿಕ ಲೋಪದೋಷಗಳು ಅಥವಾ ಬಾಹ್ಯ ಪ್ರತಿಕೂಲ ಪರಿಸರಗಳು ಕಾರಣವಾಗಬಹುದು. ಇದರ ಪರಿಣಾಮವಾಗಿ 'ಅಕಾಲಪ್ರಸವ' 'ಗರ್ಭಪಾತ' (abortion) ಉಂಟಾಗಬಹುದು.

'ಪಿಂಡಾವಧಿ' ಅಥವಾ 'ಗರ್ಭಾಂತರ ಶೈಶವಾವಧಿ'ಯ ಎರಡನೆಯ ತಿಂಗಳ ಅಂತ್ಯದಿಂದ ಜನನವಾಗುವವರೆಗೆ ಸುಮಾರು ಎಂಟು ಮಾಸಗಳನ್ನು ಒಳಗೊಂಡಿದೆ. ಈ ಅವಧಿಯಲ್ಲಿ ಪ್ರತಿಯೊಂದು ಅಂಗವೂ ಬೆಳೆದು ದೊಡ್ಡದಾಗುವುದು. ಬೇರೆ ಹೊಸ ಅಂಗ ವಿಕಾಸಗೊಳ್ಳುವುದಿಲ್ಲ. ಪಿಂಡದ ಚಟುವಟಿಕೆಯು ತನ್ನ ಸುತ್ತಲಿರುವ ವಾತಾವರಣಕ್ಕೆ ತಕ್ಕಂತೆ ಏರಿಳಿತಗಳನ್ನು ತೋರಿಸುತ್ತದೆ. ಈ ಅವಧಿಯಲ್ಲಿ ಅಕಾಲ ಪ್ರಸವ (Miscarriage), ಅಪಕ್ವಜನನ (Premature birth) ಹಾಗೂ ಪ್ರಸವ ತೊಡಕುಗಳಂತಹ (Complications of delivery) ತೊಂದರೆಗಳು ಉಂಟಾಗಬಹುದು. ಈ ಅವಧಿಯಲ್ಲಿ ಅನೇಕ ಅಂಶಗಳು ಬೆಳವಣಿಗೆಯ ದೋಷಗಳಿಗೆ ಕಾರಣವಾಗುತ್ತವೆ. ಅವುಗಳಲ್ಲಿ ಪ್ರತಿಕೂಲ ಪರಿಸರ ಥೈರಾಕ್ಸಿನ್ ಮತ್ತು ಪಿಟ್ಯುಟರಿ ಗ್ರಂಥಿಸ್ರಾವಗಳ ಕೊರತೆ, ಪೌಷ್ಟಿಕ ಆಹಾರದ ಕೊರತೆ, ಗರ್ಭಿಣಿಯಲ್ಲಿರುವ ಕಾಯಿಲೆ, ಎಕ್ಸ್-ರೇ ಕಿರಣಗಳಿಗೆ ಅನೇಕ ಬಾರಿ ಒಳಗಾಗುವುದು, ತಾಯಿಯಿಂದ ಮದ್ಯಪಾನ ಮತ್ತು ಧೂಮಪಾನ ಮುಖ್ಯವಾದವು.

ಜನನಪೂರ್ವ ಅವಧಿ ಹಾಗೂ ಪ್ರಸವಕಾಲ ಮಗುವಿನ ವಿಕಾಸದ ಮೇಲೆ ಮಹತ್ತರವಾದ ಪ್ರಭಾವ ಬೀರುತ್ತವೆಂಬುದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಗರ್ಭಿಣಿ ತಾಯಿಯ ಮಾನಸಿಕ ಮತ್ತು ದೈಹಿಕ ಆರೋಗ್ಯಸ್ಥಿತಿ, ಸಂವೇಗಾತ್ಮಕ ಸ್ಥಿತಿಗಳು, ಗರ್ಭಸ್ಥ ಶಿಶುವಿನ ಬೆಳವಣಿಗೆಯನ್ನು ಪ್ರಭಾವಗೊಳಿಸುತ್ತವೆ ಎಂದು ಕಂಡುಬಂದಿದೆ. ಗರ್ಭಿಣಿ ಸ್ತ್ರೀಗೆ ಉಂಟಾಗುವ ಸಾಂಕ್ರಾಮಿಕ ರೋಗಗಳು (ದಡಾರ, ಸಿಡುಬು ಇನ್‌ಫ್ಲೂಯನ್ಸ್) ಹುಟ್ಟಲಿರುವ ಮಗುವಿನ ಮೇಲೆ ಅಪಾಯಕರ ಪ್ರಭಾವ ಬೀರುತ್ತವೆ. ಹಾಗೆಯೇ ತಾಯಿಯ ಆಂತರಿಕ ಜೀವ ರಾಸಾಯನಿಕ ಪರಿಸರದಲ್ಲಿ (ಅಂತಃಸ್ರಾವ ಗ್ರಂಥಿಗಳ ಸ್ರಾವಗಳು, ಎನ್‌ಜೈಮ್‌ಗಳು) ವ್ಯತ್ಯಾಸ ಉಂಟಾದರೆ ಭ್ರೂಣದ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

ಪ್ರಸವಕಾಲವೂ ಮುಖ್ಯವೆಂದು ಕಂಡು ಬಂದಿದೆ. ಮನೋವಿಶ್ಲೇಷಕ ಒಟ್ಟೋ ರ‍್ಯಾಂಕ್ ಎಂಬುವನು ಪ್ರಸವದ ರೀತಿ ಮಗುವಿನ ನಂತರದ ವಿಕಾಸದ ಮೇಲೆ ಪ್ರಭಾವ ಬೀರುತ್ತದೆ ಎಂದು ಹೇಳುತ್ತಾನೆ. ಪ್ರಸವ ಕಾಲದಲ್ಲಿ ಆಗುವ ತೊಂದರೆಗಳನ್ನು ಅವನು ಹುಟ್ಟಿನ ಆಘಾತ (Birth Trauma) ಎಂದು ಹೆಸರಿಸಿ ಈ ಪರಿಕಲ್ಪನೆಯನ್ನು ಕೇಂದ್ರವಾಗಿಟ್ಟುಕೊಂಡು ಒಂದು ಸಿದ್ಧಾಂತವನ್ನೇ ರೂಪಿಸಿದ್ದಾನೆ. ಪ್ರಸವ ಕಾಲದಲ್ಲಿ ಉಂಟಾಗುವ ತೊಂದರೆಗಳು ಕರುಳುಬಳ್ಳಿ ಮಗುವಿನ ಕುತ್ತಿಗೆಗೆ ಸುತ್ತಿಕೊಳ್ಳುವುದು, ಪ್ರಸವ ನಿಧಾನವಾಗಿ ಶಿಶುವಿಗೆ ಆಮ್ಲಜನಕದ ಕೊರತೆ ಉಂಟಾಗುವುದು, ಪ್ರಸವ ನಿಧಾನವಾದಾಗ ಇಕ್ಕಳದಿಂದ ಮಗುವನ್ನು ಹೊರತೆಗೆಯುವಾಗ ಅಚಾತುರ್ಯದಿಂದ ತಲೆಗೆ ಒತ್ತಡ ಉಂಟಾಗುವುದು ಇವು ಮಗುವಿನ ದೈಹಿಕ ವಿಕಾಸದ ಮೇಲೆ ಪ್ರಭಾವ ಬೀರುತ್ತವೆ.

ಜನ್ಮಪೂರ್ವ ಅವಧಿ ಪ್ರತಿಯೊಂದು ಜೀವಿಯ ಬದುಕಿನಲ್ಲಿ ಹೆಚ್ಚು ಪ್ರಾಮುಖ್ಯವನ್ನು ಹೊಂದಿದೆ. ತಾಯಿಯು ನಿರಂತರ ವೈದ್ಯರ ತಪಾಸಣೆ, ಪೌಷ್ಟಿಕ ಆಹಾರ, ಆರೋಗ್ಯ ಮನೋಭಾವ, ಸ್ವಚ್ಛ ಪರಿಸರದ ಬಗ್ಗೆ ಹೆಚ್ಚು ಕಾಳಜಿ ವಹಿಸಿದರೆ, ಉತ್ತಮವಾಗಿ ವಿಕಾಸ ಹೊಂದಿದ ಒಂದು ಜೀವವನ್ನು ಈ ಜಗತ್ತಿಗೆ ನೀಡುವುದರಲ್ಲಿ ಸಂಶಯವೇ ಇಲ್ಲ.

(ನೋಡಿ: ಅನುವಂಶೀಯತೆ ತಂತ್ರಗಳು)

–ಕೆ.ಕೆ.ವಿ.

## ಜನಪದ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು

ಜನಪದ ಸಾಹಿತ್ಯದಲ್ಲಿ ಬರುವ ಶೈಕ್ಷಣಿಕ ವಿಚಾರಗಳು ನೇರವಾದವುಗಳಲ್ಲ. ಆದರೆ ಅವೆಲ್ಲವೂ ಎಲ್ಲದರಲ್ಲಿಯೂ ಅಂತರ್ಗತವಾದವು. ಅರಿವಿನಿಂದ ನಮ್ಮ ಬದುಕನ್ನು ಅರಳಿಸಿ, ಬದುಕಿಗೆ ಯೋಗ್ಯರನ್ನಾಗಿಸುವಂಥವುಗಳು. ಅವರ ಮಾತು-ಕೃತಿ-ವರ್ತನೆಗಳಲ್ಲಿ ಅದನ್ನು ಕಾಣಬಹುದು. ಅದು ಅಕ್ಷರದಿಂದ ಬಂದದ್ದಲ್ಲ. ಅಕ್ಕರೆಯಿಂದ ಬಂದದ್ದು. ಅಕ್ಷರವಿದ್ಯೆಗೂ, ಜನಪದರಿಗೂ ಬಹಳದೂರ, ಅಕ್ಕರೆಯೇ ಅವರ ಮೂಲ ಬಂಡವಾಳ.

ಶಿಕ್ಷಣವೆಂದರೆ ಕೇವಲ ಅಕ್ಷರ ಜ್ಞಾನವಲ್ಲ. ಅಕ್ಷರ ಕಲಿತವರು ಮಾತ್ರ ವಿದ್ಯಾವಂತರಲ್ಲ. ಇದು ತಪ್ಪು ಕಲ್ಪನೆ, ತಪ್ಪು ಅಭಿಪ್ರಾಯ.ಮೊದಲು ಮಣ್ಣು, ನಂತರ ಮಡಿಕೆ ಇದ್ದಂತೆ, ಶಿಕ್ಷಣ ಎಲ್ಲ ಕಾಲಕ್ಕೂ ಇದ್ದದ್ದೇ, ಅಕ್ಷರ ಜ್ಞಾನ ನಂತರದ್ದು. ಓದಿನ ಮೂಲಕ ಪಡೆಯುವುದಷ್ಟೇ ಶಿಕ್ಷಣವಲ್ಲ. ಹಲವು ರೂಪಗಳಲ್ಲಿ, ಹಲವು ಮೂಲಗಳಿಂದ ಅದನ್ನು ಪಡೆಯಲು ಸಾಧ್ಯ.

ಜನಪದದ ಜ್ಞಾನ, ತಿಳಿವು, ಶಿಕ್ಷಣ ಎಲ್ಲವೂ ಅಕ್ಷರ ಜ್ಞಾನದ ಮೂಲಕ ಬಂದದ್ದಲ್ಲ, ಅನುಭವದಿಂದ ಬಂದದ್ದು. ಎಲ್ಲವನ್ನು ಕಾಣುತ್ತಾ, ಕೇಳುತ್ತಾ, ಮಾಡುತ್ತಾ, ತಮ್ಮ ಅನುಭವಕ್ಕೆ ತಂದುಕೊಂಡು ಅದನ್ನು ಮಾಡುತ್ತ, ಆಲೋಚಿಸುತ್ತಾ ಅದನ್ನು ವೃದ್ಧಿಸಿಕೊಂಡವರು. ಅವರೇ ಅದನ್ನು ಅತ್ಯಂತ ಮುಗ್ಧವಾಗಿ ನಿವೇದಿಸಿಕೊಳ್ಳುತ್ತಾರೆ:

Digitised by Bharatavani, CIIL

ಹಲಗೇಯ ಹಿಡಿದಿಲ್ಲ ಬಳಪದಿ ಬರೆದಿಲ್ಲ
ಶ್ರೀಗುರು ನಮಗೆ ಕಲಿಸಿಲ್ಲ! ತಾಯಿಗಳಿರ
ಲೇಖ್ಖಣಿಕೆ ನಮಗೆ ಗೊತ್ತಿಲ್ಲ॥

ಅವರು ಓದು-ಬರಹ ಬಲ್ಲವರಲ್ಲ. ಪುಸ್ತಕ ಜ್ಞಾನ ಅವರದಲ್ಲ. ಅವರದ್ದೆಲ್ಲ ಲೋಕಜ್ಞಾನ. ಪ್ರಕೃತಿಯೇ ಅವರ ಗುರು. ಅದೇ ಅವರ ಪಾಠಶಾಲೆ. ಆಧುನಿಕ ಶಿಕ್ಷಣಕ್ರಮದಲ್ಲಿ Earn and Learn scheme ಏನಿದೆ ಅದು ಹೊಸತೇನೂ ಅಲ್ಲ. ಅದು ಆರಂಭಗೊಂಡದ್ದೇ ಜನಪದರಿಂದ. ಅಕ್ಷರ ಜ್ಞಾನ ಆರಂಭವಾಗುವುದಕ್ಕೆ ಮೊದಲೇ ಅದರ ಹುಟ್ಟನ್ನು ಕಾಣಬಹುದು. ಜನಪದರ ಜನಪದ ವಿಶ್ವವಿದ್ಯಾನಿಲಯದಲ್ಲಿ ಎಲ್ಲವೂ ಕಲಿಕೆಯಿಂದ ಕರಗತವಾಗುವಂತಹುದು.

'ಹಾಡ್ತಾ ಹಾಡ್ತಾ ರಾಗ, ನರಳ್ತಾ ನರಳ್ತಾ ರೋಗ' ಎಂಬ ನಾಣ್ಣುಡಿ ಇದರ ಸ್ಪಷ್ಟ ವ್ಯಾಖ್ಯಾನವೆನ್ನಬಹುದು. ಎಲ್ಲವನ್ನೂ ಅನುಕರಣೆಯಿಂದ, ಪ್ರಾಯೋಗಿಕ ಅರಿವಿನಿಂದ ತನ್ನದಾಗಿಸಿಕೊಳ್ಳುವ ಸರಳ ವಿಧಾನ ಇಲ್ಲಿಯದು. ರಾಗಿ ಬೀಸುವ ಹಾಡನ್ನಾಗಲಿ, ಬತ್ತ ಕುಟ್ಟುವ ಹಾಡನ್ನಾಗಲಿ, ಕಳೆ ಕೀಳುವ ಹಾಡನ್ನಾಗಲಿ ಇಲ್ಲಿ ಯಾರೂ ಬರೆದಿಟ್ಟುಕೊಂಡು ಕಂಠಪಾಠವಾಡಿ ಕಲಿಯುವುದಿಲ್ಲ. ಎಲ್ಲವೂ ಕೇಳ್ತಾ ಕೇಳ್ತಾ ಹಾಡುವರೊಂದಿಗೆ ಧ್ವನಿಗೂಡಿಸುವುದರ ಮೂಲಕ ಕಲಿತಂತಹದ್ದು. ಇಂತಹ ಸಾವಿರಾರು ಪುಟಗಳ ಸಾಹಿತ್ಯವನ್ನು ಅವರು ಮಸ್ತಕದಲ್ಲಿ ತುಂಬಿಕೊಂಡು ಬಂದಿದ್ದಾರೆ, ಅದೂ ಹಲವಾರು ರೂಪಗಳಲ್ಲಿ-ಕತೆ, ಗೀತೆ, ಗಾದೆ, ಒಗಟು, ಕಾವ್ಯ ಇತ್ಯಾದಿ. ಇವೆಲ್ಲವೂ ಪುಸ್ತಕ ರೂಪವನ್ನು ಕಂಡದ್ದು ಅನಂತರ.

ಜನಪದರ ಶಿಕ್ಷಣ ಕ್ರಮ ಕೇವಲ ಸಾಹಿತ್ಯ ಕ್ಷೇತ್ರಕ್ಕಷ್ಟೇ ಸೀಮಿತಗೊಂಡದ್ದಲ್ಲ. ಬದುಕಿನ ಎಲ್ಲ ರಂಗವನ್ನೂ ಅದು ಆವರಿಸಿದೆ. ವೃತ್ತಿಶಿಕ್ಷಣ ಅಲ್ಲಿ ಮುಖ್ಯವಾದದ್ದು. ಆಯಾ ವ್ಯಕ್ತಿಯ ವೃತ್ತಿಗೆ ಸಂಬಂಧಿಸಿದ ಶಿಸ್ತುಕ್ರಮವನ್ನು ಕೇವಲ ಸಾಂದರ್ಭಿಕ ಕಲಿಕೆಯ ಮೂಲಕವೇ ಮುಂದುವರೆಸಿಕೊಂಡು ಬಂದದ್ದನ್ನು ಅಲ್ಲಿ ಕಾಣುತ್ತೇವೆ. ಇಂದಿನಂತೆ ಅಂದು ಒಂದೊಂದು ವೃತ್ತಿಗೆ ಸಂಬಂಧಿಸಿದಂತೆ ಒಂದೊಂದು ಶಾಲಾ ಕಾಲೇಜುಗಳಿರಲಿಲ್ಲ. ಜನಪದ ವೈದ್ಯವೇ ಚಿಕಿತ್ಸೆಯ ಕಾರ್ಯವನ್ನು ನಿರ್ವಹಿಸುತ್ತಿತ್ತು. ಕೃಷಿ ವಿಶ್ವವಿದ್ಯಾನಿಲಯದ ಅರಿವಿಲ್ಲದೆಯೇ ಅವರು ಅದರಲ್ಲಿ ಪಾರಂಗತರಾಗಿದ್ದರು. ಮನೆಕಟ್ಟುವುದು, ಮಡಿಕೆ ಮಾಡುವುದು, ಬೆಳೆ ಬೆಳೆಯುವುದು ಇವೆಲ್ಲವೂ ಅವರಿಗೆ ಪಾರಂಪರಿಕವಾಗಿ ಕೇವಲ ಪರೋಕ್ಷ ಕಲಿಕೆಯಿಂದ ಜನಪದ ಶಿಕ್ಷಣದ ಮೂಲಕ ಕಲಿತ ವಿದ್ಯೆ. ಅಷ್ಟೇ ಅಲ್ಲ, ಬದುಕಿಗೆ ಬೇಕಾದ ಮೌಲ್ಯಗಳನ್ನು, ಸಾಮಾಜಿಕ ಕಟ್ಟುಪಾಡುಗಳನ್ನು, ಯಾವುದೇ ಲಿಖಿತರೂಪದ ಅಥವಾ ಕೋರ್ಟು-ಪೋಲೀಸ್ ಠಾಣೆಗಳ ಅರಿವಿಲ್ಲದೆಯೇ ತಮ್ಮದೇ ಆದ ರೀತಿಯಲ್ಲಿ ನಿವಾರಿಸಿಕೊಳ್ಳುವ-ನಿರ್ಮಿಸುವ ಶಿಕ್ಷಣವನ್ನು ಜನಪದರು ಪಡೆದಿದ್ದರು. ಅವೆಲ್ಲವೂ 'ಸಂಸ್ಕೃತಿ'ಯ ಹೆಸರಿನಲ್ಲಿ ಅವರ ಬದುಕಿನ ಮೌಲ್ಯಗಳಾಗಿ ರೂಪುಗೊಂಡಿದ್ದವು. ಇಂದಿಗೂ ಅವು ಬದುಕಿನ ಮೂಲ ದ್ರವ್ಯಗಳಾಗಿ, ಅಡಿಗಲ್ಲಾಗಿ ಉಳಿದಿವೆ. ಅಲ್ಲಿಯದೆಲ್ಲವೂ 'ಅಲಿಖಿತ ಕಾನೂನು'. ಅದನ್ನು ಪ್ರತಿಯೊಬ್ಬರೂ ಪಾಲಿಸಲೇಬೇಕು. ಅವರ ಬೋಧನಾ ಕ್ರಮ ಈ ರೀತಿಯದ್ದು:

ಆಚಾರಕ್ಕರಸಾಗು ನೀತೀಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು।
ನನಕಂದ ಎಲ್ಲರೊಳಗೊಂದಾಗು ಬಾಳಲ್ಲಿ॥

ಬದುಕಿನ ಪೂರ್ಣಪಾಠ ಇಲ್ಲಿ ಬಿತ್ತರಗೊಂಡಿದೆ, ಬಾಲ್ಯದಿಂದಲೇ ಮಕ್ಕಳಿಗೆ ನೀಡುತ್ತಿದ್ದ ಶಿಕ್ಷಣ ಈ ಬಗೆಯದ್ದು.

ತಾಯಿ ತನ್ನ ಮಗಳು ಗಂಡನ ಮನೆಗೆ ತೆರಳುವಾಗ ನೀಡುತ್ತಿದ್ದ ಉಪದೇಶ ಕೂಡ ಶಿಕ್ಷಣದ ಒಂದು ಭಾಗವೇ ಆಗಿತ್ತು:

ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು
ಹೊತ್ತಾಗಿ ನೀಡಿದರೂ ಉಣಬೇಕು। ನನಮಗಳೆ
ತೌರಿಗೆ ಉತ್ತಮ ಹೆಸರ ತರಬೇಕು॥

ಜನಪದ ಶಿಕ್ಷಣ ನಾಲ್ಕು ಗೋಡೆಗಳ ಮಧ್ಯೆ ಕಲಿಯುವಂತಹುದಲ್ಲ. ಬದುಕಿನ ವಿಸ್ತಾರವಾದ ಬಯಲಿನಲ್ಲಿ ಕರಗತವಾಗಿಸಿಕೊಳ್ಳುವಂತಹುದು. ಬದುಕೇ ಅವರ ಪಾಠಶಾಲೆ. ಅಲ್ಲಿ ಒಂದೊಂದು ಘಟನೆಯೂ ಅನುಭವವಾಗಿ ಆ ಅನುಭವ ದೊಡ್ಡ ದೊಡ್ಡ ಗ್ರಂಥವಾಗಿ ಪರಿಣಮಿಸಿರುವುದನ್ನು ಕಾಣಬಹುದು. ಅವು ಇಂದಿಗೂ ಅದೇ ಪರಿಣಾಮವನ್ನು ಬೀರಬಲ್ಲ ಶಕ್ತಿಯನ್ನು ಹೊಂದಿವೆ. ಈ ದೃಷ್ಟಿಯಿಂದ ಜನಪದ ಕತೆಗಳನ್ನು ಹಾಗೂ ಗಾದೆಗಳನ್ನು ಪರಿಗಣಿಸಬಹುದು.

ಜನಪದ ಗಾದೆ ಮತ್ತು ಕತೆಗಳು ಕೇವಲ ಸಾಹಿತ್ಯರೂಪಗಳಷ್ಟೇ ಅಲ್ಲ. ಬದುಕಿನ ವಾಸ್ತವವನ್ನು ಬಿತ್ತರಿಸುವ ಪ್ರಸಂಗಗಳನ್ನು ಒಳಗೊಂಡವು. ಗಾದೆಗಳು ಬದುಕಿನ ಅನುಭವವನ್ನು ಯಥಾವತ್ತಾಗಿ ವ್ಯಕ್ತಪಡಿಸಿದರೆ ಕತೆಗಳು ಸ್ವಾರಸ್ಯಕರವಾಗಿ ಕತೆಯ ನಿರೂಪಣೆಯ ಮೂಲಕ ವಾಸ್ತವವನ್ನು ಬಿಚ್ಚಿಟ್ಟು ನಮಗೆ ಮಾರ್ಗದರ್ಶನ ಮಾಡುತ್ತವೆ. ಇಲ್ಲಿ ದೊರೆಯುವ ಶಿಕ್ಷಣದ ಕ್ರಮವೇ ಇಂತಹುದು. ಎಲ್ಲವೂ ಬೂದಿ ಮುಚ್ಚಿದ ಕೆಂಡದಂತೆ. ಬೂದಿಯನ್ನು ಮರೆಮಾಡಿದರೆ ಒಳಗಿನ ಸತ್ವದ ಅರಿವಾಗುತ್ತದೆ. ಬದುಕಿಗೆ ದಾರಿಮಾಡಿಕೊಡುತ್ತದೆ.

'ಉಪ್ಪು ತಿಂದೋನು ನೀರು ಕುಡೀತಾನೆ', 'ಮಾಡಿದ್ದುಣ್ಣೋ ಮಹಾರಾಯ', 'ಮಾಡಬಾರದ್ದು ಮಾಡಿದರೆ, ಆಗಬಾರದ್ದು ಆಗುತ್ತೆ,' 'ಕೆತ್ತಾ ಕೆತ್ತಾ ಸಿಬಿರು'-ಇಂತಹ ನೂರಾರು ಸಾವಿರಾರು ಗಾದೆಗಳು ಹೇಳುವುದು ಬದುಕಿಗೆ ಬೇಕಾದ ಪಾಠವನ್ನೇ. ಇಂತಹ ಒಂದೊಂದು ಗಾದೆಯೂ ನಮ್ಮನ್ನು ಎಚ್ಚರಿಸುತ್ತದೆ, ತೀಡುತ್ತದೆ, ತಿದ್ದುತ್ತದೆ, ಅಷ್ಟೇ ಅಲ್ಲ, ಮಾರ್ಗದರ್ಶನವನ್ನೂ ಮಾಡುತ್ತದೆ. ಹಿರಿಯರು ಬದುಕಿನಿಂದ ಕಲಿತ ಪಾಠವನ್ನು ಕಂಠಸ್ವರೂಪದಲ್ಲಿಯೇ ಉಳಿಸಿ ಮುಂದಿನ ಪೀಳಿಗೆಗೂ ಅದನ್ನು ಉಳಿಸಿ ಹೋಗಿದ್ದಾರೆ. ಗಾದೆ ಎಂದೂ ಸುಳ್ಳಾಗಲು ಸಾಧ್ಯವಿಲ್ಲ. ಅದಕ್ಕಾಗಿಯೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ನಾಣ್ಣುಡಿ ಹುಟ್ಟಿಕೊಂಡಿತು. ಅಕ್ಷರ ಜ್ಞಾನವಿಲ್ಲದ ಶಾಲೆಯಲ್ಲಿ ಬದುಕಿಗೆ ಬೇಕಾದ ಪಾಠ-ಪಠ್ಯ ಹುಟ್ಟಿಕೊಂಡದ್ದು ಹೀಗೆಯೇ.

ಕುಟ್ಟಿ ಬೀಸುವ ಹಾಡ ಯಾವಾಕಿ ಕಲಿಸ್ಯಾಳ
ಕೃಷ್ಣನ ಮಡದಿ ಸುಭದ್ರೆ ಕಲಿಸ್ಯಾಳ
ಕೃಷ್ಣನ ಮೇಲೆ ಪದಗಳ॥

ಜನಪದರ ಗುರು ಯಾರೋ ಸಾಮಾನ್ಯರಲ್ಲ. ಸಾಕ್ಷಾತ್ ಕೃಷ್ಣನ ಮಡದಿ ರಾಧೆ. ಕುಟ್ಟಿ-ಬೀಸುವ ಹಾಡನ್ನು ಕಲಿಸಿದವಳೂ ಅವಳೇ. ಅದರ ಪ್ರಮಾಣವಾದರೂ ಎಷ್ಟೆಂದು ತಿಳಿದರೆ ಆಶ್ಚರ್ಯವಾಗುತ್ತದೆ. ಎಷ್ಟು ಹಾಡಿದರೂ ಮುಗಿಯದಂತಹುದು. ಎಷ್ಟು ಕೇಳಿದರೂ ತೃಪ್ತಿಯಾಗದಂತಹುದು. ಕುಕ್ಕೆಯಲ್ಲಿರುವ ರಾಗಿ ಜೋಳ ಮುಗಿದರೂ, ಅವರ ಜೋಳಿಗೆಯಲ್ಲಿರುವ ಹಾಡು ಎಂದೂ ಬರಿದಾಗದು. ಅವರು ಅದನ್ನು ಹೇಳಿಕೊಳ್ಳುವುದು ಹೀಗೆ: "ಆದಾವ ನಮ ಜೋಳ ಉಳಿದಾವ ನಿಮ ಹಾಡು". ನಮ್ಮ ಜೋಳ ಮುಗಿದರೂ ನೀವು ಕಲಿಸಿದ ಹಾಡು ಮುಗಿಯಲಿಲ್ಲ ಎಂಬ ಭಾವದಲ್ಲಿ ಅವರು ಪಡೆದ ಶಿಕ್ಷಣ ಅಭಿವ್ಯಕ್ತವಾಗುತ್ತದೆ.

Digitised by Bharatavani, CIIL

'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂಬ ಜನಪದರ ಮಾತು ಶಿಕ್ಷಣಕ್ಕೆ ಸಂಬಂಧಿಸಿದ್ದು. ಅದು ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದ್ದು. 'ಅನ್ನದೇವರ ಮುಂದೆ ಇನ್ನು ದೇವರು ಉಂಟೆ' ಎಂದು ನಂಬಿದ ಜನಪದರು ಕೃಷಿಗೆ ಪ್ರಾಧಾನ್ಯ ಕೊಟ್ಟವರು. 'ಮೇಟಿವಿದ್ಯೆ' ಎಂದರೆ ಬೇಸಾಯಕ್ಕೆ ಸಂಬಂಧಿಸಿದ್ದು. ಉಳಿದೆಲ್ಲ ವಿದ್ಯೆಗಳಿಗಿಂತ ನೇಗಿಲನ್ನು ಹಿಡಿದು ಉತ್ತು ಬೆಳೆ ತೆಗೆಯುವ ಮೇಟಿವಿದ್ಯೆ ಮೇಲು ಎಂಬ ನಂಬಿಕೆ ಅವರದ್ದು.

ಹಾಗಾಗಿ ಶಿಕ್ಷಣವೆಂದರೆ ಕೇವಲ ಶಾಲಾ ಶಿಕ್ಷಣವಲ್ಲ, ಅಕ್ಷರ ಜ್ಞಾನವಷ್ಟೇ ಜ್ಞಾನವಲ್ಲ, ಸಂಸ್ಕೃತಿಯನ್ನು ಬಿತ್ತಿ ಬೆಳೆಯುವ ಬದುಕಿನ ಹೆಜ್ಜೆ ಹೆಜ್ಜೆಯೂ ಶಿಕ್ಷಣದ ಒಂದೊಂದು ಘಟ್ಟ. ಅದಿಲ್ಲದೆ ವ್ಯಕ್ತಿತ್ವ ನಿರ್ಮಾಣವಾಗುವುದಿಲ್ಲ. ಸಮಾಜ ರೂಪುಗೊಳ್ಳುವುದಿಲ್ಲ. ಈ ದೃಷ್ಟಿಯಿಂದ ನೋಡುವಾಗ ಶಿಕ್ಷಣದ ವ್ಯಾಪ್ತಿ ದೊಡ್ಡದು. 'ಸುಗ್ಗೆಯನ್ನು ಮುರಿದು ಬೆಳೆಸಬೇಕು, ಮಕ್ಕಳನ್ನು ಹೊಡೆದು ಬೆಳೆಸಬೇಕು' ಎಂಬ ಅನುಭವದ ಮಾತು ಮಕ್ಕಳಿಗೆ ಶಿಕ್ಷಣ ಕೊಡುವ ವಿಷಯಕ್ಕೆ ಸಂಬಂಧಿಸಿದ್ದು. "ಮೂರು ವರ್ಷದವರೆಗೆ ಮಕ್ಕಳನ್ನು ದೇವರ ಹಾಗೆ ಕಾಣಬೇಕು, ಮೂರುವರ್ಷದಿಂದ ಹದಿನಾರು ವರ್ಷದವರೆಗೆ ಶತ್ರುಗಳ ಹಾಗೆ ಕಾಣಬೇಕು, ಆನಂತರ ಮಿತ್ರರಂತೆ ನೋಡಿಕೊಳ್ಳಬೇಕು" ಎಂಬ ಹಿರಿಯೋಕ್ತಿ ಕೂಡ ಮಕ್ಕಳನ್ನು ಬೆಳೆಸುವಿಕೆಗೆ ಸಂಬಂಧಿಸಿದ್ದೆ ಆಗಿದೆ.

'ಮಕ್ಕಳ ಸ್ಕೂಲು ಮನೇಲಲ್ವೆ' ಎಂಬ ಆಧುನಿಕವಾದ ಮಾತು ಜನಪದ ಜೀವನದಲ್ಲಿ ಎಂದೋ ಮನೆ ಮಾಡಿರುವುದನ್ನು ಕಾಣಬಹುದು. ಅಕ್ಷರದ ಅರಿವೇ ಇಲ್ಲದೆ ಎಲ್ಲವನ್ನೂ ಅನುಭವದಿಂದಲೇ ತಮ್ಮದಾಗಿಸಿಕೊಳ್ಳುವ ಕಲಿಕೆಯ ವಿಶಿಷ್ಟ ಬಗೆಯನ್ನು ಜನಪದ ಶಿಕ್ಷಣಕ್ರಮದಲ್ಲಿ ಕಾಣುತ್ತೇವೆ. 'ತಲೆ ತಾಕಿದ್ರೇನೆ ಬುದ್ಧಿ ಬರೋದು' ಎಂಬ ಅವರ ಅನುಭವದ ನುಡಿ ಇದಕ್ಕೆ ಸಾಕ್ಷಿ. ಇಂತಹ ನೂರಾರು ಅನುಭವದ ನುಡಿಗಳು ಅವರ ಬತ್ತಳಿಕೆಯಲ್ಲಿವೆ. ಕೆಲವೊಮ್ಮೆ ಎಷ್ಟೇ ಹೇಳಿದರೂ ಕಿವಿಗೊಡದಿದ್ದಾಗ, ಸ್ವಂತ ಅನುಭವ ಎಲ್ಲವನ್ನೂ ಕಲಿಸಿಬಿಡುತ್ತದೆ.

'ಮಗ ಮಲಗಕ್ಹೋಗಿ ಕೆಟ್ಟ, ಸೊಸೆ ಬೀಸಕ್ಹೋಗಿ ಕೆಟ್ಟು' ಎಂಬಂತಹ ಗಾದೆಗಳನ್ನು ಗಮನಿಸಿದಾಗ, ಅನುಭವದ ಈ ನುಡಿ ನಿರ್ಬಂಧಗಳನ್ನು ವಿಧಿಸಲು ಹೇಗೆ ಕಾರಣವಾದವು ಎಂಬುದಕ್ಕೆ ಸಾಕ್ಷಿಯಾಗುತ್ತವೆ. ವ್ಯಕ್ತಿಗೆ ದೊರೆಯುವ ಹೆಚ್ಚಿನ ಸ್ವಾತಂತ್ರ್ಯ ಅಥವಾ ಸಲಿಗೆ ಆತನ ದುರ್ಬಳಕೆಗೆ ಕಾರಣವಾಗುತ್ತದೆ. ಹಾಗಾಗಿಯೇ ವ್ಯಕ್ತಿಯ ಬೆಳವಣಿಗೆಯ ಪ್ರತಿ ಹಂತದಲ್ಲಿಯೂ ಕೆಲವೊಂದು ನಿರ್ಬಂಧಗಳನ್ನು ಸಮಾಜ ವಿಧಿಸಿತು. ಜನಪದರು ಸಮಾಜಶಾಸ್ತ್ರವನ್ನು ಓದಿದವರಲ್ಲ, ಆದರೆ ಬದುಕೇ ಅವರಿಗೆ ಅದೆಲ್ಲವನ್ನು ಕಲಿಸಿತು. ಅದನ್ನು ಕಟ್ಟುನಿಟ್ಟಾಗಿ ಬದುಕಿನಲ್ಲಿ ಅಳವಡಿಸಿಕೊಂಡು ಬಂದದ್ದು ಒಳ್ಳೆಯ ಸಂಸ್ಕೃತಿಯ ನಿರ್ಮಾಣಕ್ಕೆ, ಸಮಾಜದ ಕಟ್ಟುನಿಟ್ಟಿಗೆ ಕಾರಣವಾಯಿತೆನ್ನಬಹುದು.

ಜನಪದ ಸಾಹಿತ್ಯವನ್ನು ಗಮನಿಸುತ್ತ ಹೋದರೆ ಅದರ ಎಲ್ಲ ಪ್ರಕಾರಗಳ, ಎಲ್ಲ ಸಾಲುಗಳಲ್ಲಿಯೂ ಶೈಕ್ಷಣಿಕ ವಿಚಾರಗಳು ಅಂತರ್ಗತವಾಗಿವೆ. ಅತ್ಯಂತ ಸೂಕ್ಷ್ಮವಾಗಿ, ಸರಳವಾಗಿ ಅದನ್ನು ಅದರಲ್ಲಿ ಅಡಕವಾಗಿಸಿದ್ದಾರೆ. 'ಗರತಿಯ ಹಾಡು' ಸಂಗ್ರಹದಂತಹ ಜನಪದ ಗೀತೆಗಳ ಸಂಗ್ರಹವನ್ನು ಉದಾಹರಣೆಯಾಗಿ ಗಮನಿಸಿದರೂ ಸಾಕು. ಅದು ಗರತಿಯ ಕೈಗನ್ನಡಿಯಾಗಿ, ಸಂಸಾರ ಗೀತೆಯಾಗಿ ಕಣ್ಣ ಮುಂದೆ ನಿಲ್ಲುತ್ತದೆ. ಅಲ್ಲಿಯ ಒಂದೊಂದು ನುಡಿಯೂ ಬೋಧಪ್ರದವಾಗಿ ವ್ಯಕ್ತಿಯನ್ನು ತಿದ್ದುವಲ್ಲಿ, ವ್ಯಕ್ತಿತ್ವವನ್ನು ರೂಪಿಸುವಲ್ಲಿ ನೆರವಾಗುತ್ತದೆ. ಬದುಕಿನ ವಾಸ್ತವದ ಕನ್ನಡಿಯಾಗುತ್ತದೆ. ದೇವರು, ಧರ್ಮ, ಸಂಬಂಧಗಳ ತತ್ವವನ್ನು-ಸ್ವತ್ವನ್ನು ಬಿಚ್ಚಿಡುತ್ತದೆ. ಆ ಮೂಲಕ ಬದುಕಿನಲ್ಲಿ ಶ್ರದ್ಧೆ, ಭಕ್ತಿ, ಶಿಸ್ತನ್ನು ರೂಢಿಸಿಕೊಳ್ಳಲು ಕಾರಣವಾಗುತ್ತದೆ. ಅಷ್ಟೇ ಏಕೆ, ಇಡೀ ಸಮಾಜದ ಭದ್ರಬುನಾದಿಗೆ ಶಿಕ್ಷಣ ಕಾರಣವಾಗಿದೆ ಎಂಬುದರ ಅರಿವು ಮಾಡಿಕೊಡುತ್ತದೆ.

– ಡಿ.ಕೆ.ರಾ.

## ಜನಸಂಖ್ಯಾ ಶಿಕ್ಷಣ

ಜನಸಂಖ್ಯಾ ಶಿಕ್ಷಣವೆಂದರೆ ಕುಟುಂಬ, ರಾಜ್ಯ, ರಾಷ್ಟ್ರ ಹಾಗೂ ವಿಶ್ವದಲ್ಲಿನ ಜನಸಂಖ್ಯಾ ಪರಿಸ್ಥಿತಿಯನ್ನು ಅಧ್ಯಯನಕ್ಕೆ ಅನುವು ಮಾಡಿಕೊಡುವ ಶೈಕ್ಷಣಿಕ ಕಾರ್ಯಕ್ರಮ. ವಿದ್ಯಾರ್ಥಿಗಳಲ್ಲಿ ಜನಸಂಖ್ಯೆ ಪರಿಸ್ಥಿತಿಗೆ ಸಂಬಂಧಿಸಿದಂತಹ ತರ್ಕಬದ್ಧವಾದ ಮತ್ತು ಜವಾಬ್ದಾರಿಯುತವಾದ ಮನೋಭಾವ ಹಾಗೂ ವರ್ತನೆಗಳನ್ನು ರೂಪಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ. ಜನಸಂಖ್ಯಾ ಶಿಕ್ಷಣಕ್ಕೆ ಮತ್ತೊಂದು ವ್ಯಾಖ್ಯೆಯೂ ಇದೆ. ಜನಸಂಖ್ಯಾ ಗತಿ ಶಾಸ್ತ್ರ ಹಾಗೂ ಜೀವನದ ಗುಣಮಟ್ಟದ ಇತರ ಅಂಶಗಳ ನಡುವೆ ಇರುವ ಅಂತರ ಸಂಬಂಧವನ್ನು ಕಲಿಕಾರ್ಥಿಯು ಅರಿಯಲು ನೆರವಾಗುವ ಶೈಕ್ಷಣಿಕ ಕಾರ್ಯಕ್ರಮವೇ ಜನಸಂಖ್ಯಾ ಶಿಕ್ಷಣ. ಇದರ ಮೂಲಕ ಕಲಿಕಾರ್ಥಿಯು ತನ್ನ ಕುಟುಂಬದ, ಸಮುದಾಯದ, ರಾಷ್ಟ್ರದ ಹಾಗೂ ವಿಶ್ವದ ಜೀವನದ ಗುಣಮಟ್ಟವನ್ನು ಸುಧಾರಿಸಲು ನೆರವಾಗುವ ಜನಸಂಖ್ಯಾ ಸಂಬಂಧಿತ ವಿಚಾರಗಳ ಬಗ್ಗೆ ತಿಳುವಳಿಕೆಯಿಂದ ಕೂಡಿದ ತರ್ಕಬದ್ಧ ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

ಮಾನವನ ಇತಿಹಾಸದಲ್ಲಿ 1987 ಜುಲೈ 11 ಒಂದು ವಿಶಿಷ್ಟವಾದ ದಿನ. ಅಂದು ಪ್ರಪಂಚದ ಜನಸಂಖ್ಯೆ ಐದುನೂರು ಕೋಟಿಯ ಗಡಿಯನ್ನು ದಾಟಿತು. ಸಹಸ್ರಾರು ವರ್ಷಗಳವರೆಗೆ ಪ್ರಪಂಚದ ಜನಸಂಖ್ಯೆ ಸುಮಾರು ಒಂದು ಕೋಟಿಯ ಆಸುಪಾಸಿನಲ್ಲೇ ಇತ್ತು. ಅಧ್ಯಯನಗಳ ಪ್ರಕಾರ ಕ್ರಿ.ಶ.8000 ಮತ್ತು ಕ್ರಿ.ಪೂ 6000 ವರ್ಷಗಳ ಮಧ್ಯೆ ಆಹಾರ ಬೆಳೆಯುವ ಕ್ರಮವನ್ನು ಮಾನವನು ಕಂಡುಕೊಂಡನು. ಆಗಲೇ ಅವನು ಹೆಚ್ಚಿನ ಜನರನ್ನು ಸಾಕಲು ಸಲಹಲು ಸಾಮರ್ಥ್ಯವನ್ನು ಗಳಿಸಿದ. ಇದರ ಪರಿಣಾಮವಾಗಿ ಕ್ರಿ.ಶ. 1650ರ ಹೊತ್ತಿಗೆ ಪ್ರಪಂಚದ ಜನಸಂಖ್ಯೆಯು ಸುಮಾರು 50 ಕೋಟಿಗೆ ಏರಿತು. ಮುಂದಿನ ಎರಡು ಶತಮಾನಗಳಲ್ಲಿ ಅಂದರೆ 1850ರ ಹೊತ್ತಿಗೆ ಈ ಸಂಖ್ಯೆಯು ಒಂದು ನೂರು ಕೋಟಿಗೆ ಏರಿತು. ಅನಂತರದ ಕೇವಲ ಒಂದು ಶತಮಾನದಲ್ಲಿ ಈ ಸಂಖ್ಯೆ ಎರಡು ನೂರು ಕೋಟಿ ಆಯಿತು. ಮುಂದಿನ ಕೇವಲ 45 ವರ್ಷಗಳಲ್ಲಿ ಅಂದರೆ 1975 ರಲ್ಲಿ ಪ್ರಪಂಚದ ಜನಸಂಖ್ಯೆ ನಾಲ್ಕು ನೂರು ಕೋಟಿ ಆಯಿತು.

1987ರ ಜುಲೈನಲ್ಲಿ ಈ ಸಂಖ್ಯೆ 500 ಕೋಟಿ ದಾಟಿತು ಜನಸಂಖ್ಯೆ ಬೆಳೆಯುತ್ತಿರುವ ಈ ವೇಗ ಆಘಾತಕಾರಿಯಾಗಿದೆ. ಇದು ಕೇವಲ ಬೆಳವಣಿಗೆ ಅಲ್ಲ, ಸ್ಫೋಟ! ಜಗತ್ತಿನಾದ್ಯಂತ ಇರುವ ಬುದ್ಧಿಜೀವಿಗಳು, ಸಮಾಜ ಸೇವಾ ಕಾರ್ಯಕರ್ತರು, ಆಡಳಿತಗಾರರು ಮೊದಲಾದ ಸಮಾಜದ ಹಿತಚಿಂತಕರು ಈ ಸ್ಫೋಟದ ಪರಿಣಾಮಗಳ ಬಗ್ಗೆ ಆಳವಾದ, ವಸ್ತುನಿಷ್ಠವಾದ ಚಿಂತನೆ ಪ್ರಾರಂಭಿಸಿದರು. ಒಂದು ವೇಳೆ ಜನಸಂಖ್ಯೆಯ ಬೆಳವಣಿಗೆಯು ಇದೇ ಗತಿಯಲ್ಲಿ ಸಾಗಿದರೆ ಮನುಕುಲದ ನಾಶ ಖಚಿತ ಎಂಬ ತೀರ್ಮಾನಕ್ಕೆ ಬಂದರು. ಈ ಏರುಗತಿಗೆ ಕಡಿವಾಣ ಹಾಕದಿದ್ದರೆ ಜನರ ಜೀವನದ ಗುಣಮಟ್ಟ ಕೆಳಕ್ಕೆ ಇಳಿಯುತ್ತದೆ. ಶಾಂತಿ ಎಂಬುದು ಕನಸಾಗುತ್ತದೆ, ನೈಜ ಅಭಿವೃದ್ಧಿ ಎಂಬುದು ಗಗನ ಕುಸುಮವಾಗುತ್ತದೆ. ದಾರಿದ್ರ್ಯ, ಹಸಿವುಗಳು ತಾಂಡವವಾಡುತ್ತವೆ ಬದುಕುವುದಕ್ಕಾಗಿ ಮನುಷ್ಯರೂ ಪ್ರಾಣಿಗಳಂತೆ ಕಚ್ಚಾಡಿ ಸಾಯಬೇಕಾಗುತ್ತದೆ. ಇಂತಹ ಹಲವಾರು ಘೋರ ಪರಿಣಾಮಗಳನ್ನು ಮುಂದಿನ ಜನಾಂಗ

Digitised by Bharatavani, CIIL

ಎದುರಿಸಲೇಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಮುಂದೆ ಈ ರೀತಿಯ ಸ್ಥಿತಿ ಬಾರದಂತೆ ಮಾಡಬೇಕಾದರೆ ಇಂದು ಪ್ರಪಂಚದ ಎಲ್ಲ ರಾಷ್ಟ್ರಗಳೂ ಕೆಲವು ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕು. ಅದರಲ್ಲಿಯೂ ಜನಸಂಖ್ಯೆ ತೀವ್ರ ಗತಿಯಲ್ಲಿ ವೃದ್ಧಿಯಾಗುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ದುರಂತದ ಬಗ್ಗೆ ಜನತೆಯಲ್ಲಿ ತಿಳಿವಳಿಕೆ ಮೂಡಿಸಿ ಜನಸಂಖ್ಯೆಯ ಏರಿಕೆಯ ಗತಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಜನರಲ್ಲಿ ಅರಿವು ಮೂಡಿಸುವ ಕಾರ್ಯ ನಡೆಯಬೇಕು.

ಮನುಷ್ಯ ಬದುಕಲು ಅಗತ್ಯವಾಗಿ ಬೇಕಾದ ಮೂರು ಮೂಲಭೂತ ಅಗತ್ಯಗಳೆಂದರೆ ಆಹಾರ, ಬಟ್ಟೆ ಮತ್ತು ಮನೆ. ನಾಗರಿಕತೆ ಬೆಳೆದಂತೆ ನೂರಾರು ಬದಲಾವಣೆಗಳು ಆಗಿವೆ. ಕೈಗಾರಿಕಾ ಕ್ರಾಂತಿಯಿಂದ ಜನರ ಜೀವನ ಶೈಲಿಯಲ್ಲಿ ಬದಲಾವಣೆ ಆಯಿತು. ಇನ್ನು ತಂತ್ರಜ್ಞಾನ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲಿ ಆಗಿರುವ ಸಾವಿರಾರು ಆವಿಷ್ಕಾರಗಳಿಂದ ಮನುಷ್ಯ ಜೀವನದ ರೀತಿ ನೀತಿಗಳಲ್ಲಿ ಅಪಾರ ಬದಲಾವಣೆ ಕಂಡುಬರುತ್ತಿದೆ. ಅಂತೆಯೇ ಸಾಮಾಜಿಕ ಜೀವನದಲ್ಲೂ ಸಾಕಷ್ಟು ಮಾರ್ಪಾಡು ಕಾಣಬರುತ್ತಿದೆ. ಇಂದು ಜ್ಞಾನದ ಬೆಳವಣಿಗೆ ಅತೀವ ವೇಗವಾಗಿ ಆಗುತ್ತಿದ್ದು ಜಗತ್ತು ಸಂಕುಚಿತಗೊಳ್ಳುತ್ತಿದೆ. ನೂತನ ಆವಿಷ್ಕಾರಗಳ ಪರಿಣಾಮವಾಗಿ ಜಗತ್ತಿನ ಎಲ್ಲೆಡೆ ಅಭಿವೃದ್ಧಿಯೂ ಆಗುತ್ತಿದೆ. ಆಹಾರ ಧಾನ್ಯಗಳಿಂದ ಹಿಡಿದು ಬಟ್ಟೆ ವಸತಿ, ಗೃಹೋಪಯೋಗಿ ವಸ್ತುಗಳು ಮೊದಲಾದ ಅನೇಕಾನೇಕ ವಸ್ತುಗಳ ಉತ್ಪಾದನೆ ಅಧಿಕವಾಗುತ್ತಲೇ ಬಂದಿದೆ. ಅಂತೆಯೇ ಜನರ ಅಗತ್ಯಗಳಲ್ಲಿ ವೈವಿಧ್ಯತೆಯೂ ಹೆಚ್ಚಾಗುತ್ತಿದೆ. ಆದರೆ ಈ ಎಲ್ಲವುಗಳಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ ಅಗಾಧವಾಗಿ ಏರುತ್ತಿರುವ ಜನಸಂಖ್ಯೆಗೆ ಇದು ಸಾಕಾಗುತ್ತಿಲ್ಲ. ಹಿಂದುಳಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜನಸಂಖ್ಯೆಯ ಹೆಚ್ಚಳ ತೀವ್ರವಾಗಿದೆ. ಹಾಗೂ ಈ ದೇಶಗಳಲ್ಲಿಯೇ ಬಡತನ ರೇಖೆಗಿಂತ ಕೆಳಗೆ ಇರುವವರ ಸಂಖ್ಯೆಯೂ ಅತಿ ಹೆಚ್ಚಿನದಾಗಿದೆ. 'ಅಜ್ಜಿ ನೂತದ್ದೆಲ್ಲಾ ಅಜ್ಜನ ಉಡಿದಾರಕ್ಕೆ' ಎಂಬ ಗಾದೆಯ ಮಾತಿಗೆ ಇಂದಿನ ಸ್ಥಿತಿ ಸರಿಹೊಂದುತ್ತದೆ. ಪರಿಸ್ಥಿತಿ ಹೀಗಿದ್ದಾಗ ಜೀವನದ ಗುಣಮಟ್ಟದಲ್ಲಿ ಸುಧಾರಣೆಯಾಗುವುದು ಕಠಿಣ.

ಜನಸಂಖ್ಯಾ ಸ್ಫೋಟದಿಂದ ಆಗುತ್ತಿರುವ ಪರಿಣಾಮಗಳನ್ನು ಬಹುಸ್ಥೂಲವಾಗಿ ಭೌತಿಕ ಪರಿಸರದ ಮೇಲಿನವು, ಸಾಮಾಜಿಕ ಪರಿಸರದ ಮೇಲಿನವು ಹಾಗೂ ಕೌಟುಂಬಿಕ ಪರಿಸರದ ಮೇಲಿನವು ಎಂದು ವಿಂಗಡಿಸಬಹುದು.

ಭೌತಿಕ ಪರಿಸರವನ್ನು ಗಣನೆಗೆ ತೆಗೆದುಕೊಂಡಾಗ ಮೊದಲು ನಮ್ಮ ಗಮನಕ್ಕೆ ಬರುವುದು ಕೋಟ್ಯಂತರ ವರ್ಷಗಳಿಂದ ಭೂಮಿಯಲ್ಲಿ ಸಂಗ್ರಹವಾಗಿದ್ದ ನೈಸರ್ಗಿಕ ಸಂಪನ್ಮೂಲಗಳು ಕ್ರಮೇಣ ಬರಿದಾಗುತ್ತಿರುವುದು. ಇಂದು ಪ್ರಮುಖ ಇಂಧನಗಳಾದ ಪೆಟ್ರೋಲ್ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಅತಿಯಾಗುತ್ತಿದೆ. ಭೂಮಿಯಲ್ಲಿರುವ ಪೆಟ್ರೋಲ್ ಬಾವಿಗಳು ಕ್ರಮೇಣ ಖಾಲಿಯಾಗುತ್ತಿವೆ. ಇನ್ನು ಕೆಲವೇ ವರ್ಷಗಳಲ್ಲಿ ಈ ಸಂಪನ್ಮೂಲ ನಮಗೆ ಲಭ್ಯವೇ ಆಗುವುದಿಲ್ಲ. ಅಂತೆಯೇ ಕಲ್ಲಿದ್ದಲೂ ಕೂಡ. ಇವುಗಳನ್ನು ಅವಲಂಬಿಸಿರುವ ಕೈಗಾರಿಕೆಗಳ ಹಾಗೂ ಸಾರಿಗೆ ವ್ಯವಸ್ಥೆಯ ಗತಿ ಏನು? ಅಲ್ಲದೆ ಇವುಗಳನ್ನು ಉಪಯೋಗಿಸಿದಾಗ ಬಿಡುಗಡೆಯಾಗುವ ಅನಿಲಗಳು ವಾತಾವರಣವನ್ನು ಸೇರಿಕೊಂಡು ಅದನ್ನು ಮಲಿನಗೊಳಿಸುತ್ತಿವೆ. ಮಲಿನ ಗಾಳಿಯನ್ನು ಸೇವಿಸಿದಾಗ ರೋಗಗಳು ಬರುವುದು ಸಹಜ. ಆರೋಗ್ಯಕರವಾದ ಜೀವನ ಅಶಕ್ಯವಾಗುತ್ತದೆ. ವೇಗವಾಗಿ ಬೆಳೆಯುತ್ತಿರುವ, ಪ್ರತಿದಿನವೂ ಹೊಸದಾಗಿ ಪ್ರಾರಂಭವಾಗುತ್ತಿರುವ ಕಾರ್ಖಾನೆಗಳಿಗೆ ಭೂಮಿಯಲ್ಲಿ ಹುದುಗಿರುವ ಖನಿಜಗಳು ಬೇಕು. ಆದ್ದರಿಂದ ಗಣಿಗಾರಿಕೆ ಹೆಚ್ಚುತ್ತದೆ. ಒಂದು ಕಡೆ ಖನಿಜಗಳ ಖಜಾನೆ ಖಾಲಿಯಾಗುತ್ತಿದ್ದರೆ. ಮತ್ತೊಂದೆಡೆ ಭೂಮಿಯ ಮೇಲ್ಮೈ ವಿಷಪೂರಿತವಾಗಿ ಬರಡಾಗುತ್ತಿದೆ. ಇನ್ನು ಮಾನವ ತನ್ನ ಸುಖ–ಸಂತೋಷಗಳಿಗಾಗಿ ಕಾಂಕ್ರೀಟ್ ಕಾಡನ್ನು ಅಭಿವೃದ್ಧಿಗೊಳಿಸುತ್ತಿರುವಂತೆಯೇ ಇದಕ್ಕಾಗಿ ಅಪೂರ್ವವಾದ ಅರಣ್ಯಗಳು ನಾಶವಾಗುತ್ತಿವೆ. ಜಲಾಶಯಗಳ ನಿರ್ಮಾಣಕ್ಕಾಗಿ ಸಾವಿರಾರು ಎಕರೆ ಸಂಪದ್ಭರಿತ ಭೂಮಿ ನೀರಿನಲ್ಲಿ ಮುಳುಗಡೆಯಾಗುತ್ತಿದೆ. ಅಪರೂಪದ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳು ನಾಶವಾಗುತ್ತಿವೆ. ಕಾರ್ಖಾನೆಗಳಿಂದ ಬಿಡುಗಡೆಯಾದ ವಿಷಪೂರಿತ ತ್ಯಾಜ್ಯ ವಸ್ತುಗಳು ಹಾಗೂ ನಗರ ಪ್ರದೇಶಗಳ ಜನರಿಂದ ಬಿಡುಗಡೆಯಾದ ಮಲಿನ ವಸ್ತುಗಳು ನದಿ, ಕೆರೆ, ಬಾವಿ ಮೊದಲಾದ ಜಲಸಂಪನ್ಮೂಲಗಳನ್ನು ಮಲಿನಗೊಳಿಸುತ್ತಿವೆ. ಇವುಗಳು ಸಮುದ್ರ ತೀರದ ಜಲಚರಗಳ ಜೀವನದ ಮೇಲೂ ಕೆಟ್ಟ ಪರಿಣಾಮ ಉಂಟುಮಾಡಿರುವುದು ಅಧ್ಯಯನಗಳಿಂದ ತಿಳಿದುಬರುತ್ತಿದೆ. ಅರಣ್ಯನಾಶದ ಪರಿಣಾಮವಾಗಿ ಮಳೆಯ ಕ್ರಮಬದ್ಧತೆಯಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಅತಿವೃಷ್ಟಿಯೂ ಆಗಬಹುದು. ಅನಾವೃಷ್ಟಿಯೂ ಆಗಬಹುದು. ಹಾಗೂ ಅಕಾಲದಲ್ಲಿ ಮಳೆ ಸುರಿದು ರೈತ ಕಷ್ಟಪಟ್ಟು ಬೆಳೆಸಿದ ಫಸಲು ನಾಶವಾಗಬಹುದು. ಪ್ರವಾಹ ಉಂಟಾಗಬಹುದು. ಬರಗಾಲವೂ ಬರಬಹುದು. ಒಟ್ಟಿನಲ್ಲಿ ಮನುಷ್ಯನ ಜೀವನದಲ್ಲಿ ಸಂಕಟ ಉಂಟಾಗುವುದು. ಇಷ್ಟೇ ಅಲ್ಲ, ಕೈಗಾರೀಕರಣದಿಂದ ಭೂಮಿಯ ತಾಪಮಾನ ಕ್ರಮೇಣ ಹೆಚ್ಚಾಗುತ್ತಿದೆ. ಭೂಗ್ರಹದ ರಕ್ಷಾ ಕವಚವಾದ ವಾತಾವರಣದ ಓಝೋನ್ ಪದರದಲ್ಲಿ ರಂಧ್ರಗಳು ಕಾಣಿಸಿಕೊಂಡು ಅವು ಕ್ರಮೇಣ ದೊಡ್ಡವಾಗುತ್ತಿವೆ. ಸೂರ್ಯನಿಂದ ಬರುತ್ತಿರುವ ಹಲವಾರು ತೀಕ್ಷ್ಣವಾದ ವಿಕಿರಣಗಳು ಈ ರಂಧ್ರಗಳ ಮೂಲಕ ಭೂಮಿಯ ಮೇಲೆ ನೇರವಾಗಿ ಬಿದ್ದಾಗ ಹಲವು ರೀತಿಯ ಅಪಾಯಗಳು ಉಂಟಾಗುತ್ತವೆ. ಭೂಮಿಯ ತಾಪಮಾನ ಹೆಚ್ಚಿದಾಗ ಧ್ರುವ ಪ್ರದೇಶದಲ್ಲಿನ ನೀರ್ಗಲ್ಲುಗಳು ಕರಗಿ ಪ್ರವಾಹವಾಗಿ ಸಮುದ್ರ ಸೇರಿದಾಗ ಸಮುದ್ರದ ನೀರಿನಮಟ್ಟ ಹೆಚ್ಚಾಗಬಹುದು. ಹಾಗೆ ಆದಾಗ ತೀರ ಪ್ರದೇಶಗಳಲ್ಲಿ ಇರುವ ಹಲವಾರು ಗ್ರಾಮ, ನಗರ, ಪಟ್ಟಣಗಳು ನೀರಿನಲ್ಲಿ ಮುಳುಗಿ ಹೋಗುತ್ತವೆ. ಇವೆಲ್ಲವೂ ಜನಸಂಖ್ಯಾ ಸ್ಫೋಟದಿಂದ ಆಗುವ ಪರಿಣಾಮಗಳಲ್ಲಿ ಕೆಲವು ಮಾತ್ರ. ಈ ಪರಿಣಾಮ ತಕ್ಷಣದಲ್ಲೇ ಕಾಣದಿದ್ದರೂ ಕಾಲಾನುಕ್ರಮದಲ್ಲಿ ಘಟಿಸುವುದರಲ್ಲಿ ಸಂದೇಹವಿಲ್ಲ.

ಜನಸಂಖ್ಯೆ ಹೆಚ್ಚಳದಿಂದ ಉದ್ಯೋಗಾವಕಾಶಗಳನ್ನು ಹುಡುಕಿಕೊಂಡು ಗ್ರಾಮಗಳಿಂದ ಪಟ್ಟಣಗಳ ಕಡೆ ವಲಸೆ ಹೋಗುವವರ ಸಂಖ್ಯೆ ಈ ದಿನಗಳಲ್ಲಿ ಅಧಿಕವಾಗುತ್ತಿದೆ. ಇದರಿಂದ ನಗರ ಪ್ರದೇಶಗಳ ಜನಸಂಖ್ಯೆ ಹೆಚ್ಚಾಗುತ್ತಿದೆ. ಅಂತೆಯೇ ಅಲ್ಲಿನ ಸಾಮಾಜಿಕ ಆರ್ಥಿಕ ಪರಿಸರದಲ್ಲಿ ಏರಿಳಿತ ಉಂಟಾಗುತ್ತದೆ. ವಾಸದ ಮನೆಗಳ ಲಭ್ಯತೆ ಕಡಿಮೆಯಾಗುತ್ತದೆ. ಚಿಕ್ಕಚಿಕ್ಕ ಮನೆಗಳಲ್ಲಿ ಹೆಚ್ಚು ಮಂದಿ ವಾಸಮಾಡಬೇಕಾಗುತ್ತದೆ. ಆರ್ಥಿಕವಾಗಿ ಹಿಂದುಳಿದ ಇಂತಹ ಜನ ವಾಸಮಾಡುವ ಸ್ಥಳಗಳೇ ಮುಂದೆ ಕೊಳೆಗೇರಿಗಳಾಗುತ್ತವೆ. ನಲ್ಲಿ, ಚರಂಡಿ, ರಸ್ತೆ ದೀಪ ಮೊದಲಾದ ಮೂಲಭೂತ ಸೌಲಭ್ಯಗಳು ಇರದ ಈ ಪ್ರದೇಶಗಳು ರೋಗಗಳು ಹರಡಲು ಪ್ರಶಸ್ತವಾಗಿರುತ್ತವೆ. ರೋಗ ಬಂದಾಗ ಅವುಗಳನ್ನು ವಾಸಿಮಾಡಿಕೊಳ್ಳಲು ಈ ಜನರು ಆರ್ಥಿಕವಾಗಿ ಶಕ್ತರೂ ಆಗಿರುವುದಿಲ್ಲ. ಇಲ್ಲಿನ ಜನ ಸುಲಭವಾಗಿ ದುಶ್ಚಟಗಳಿಗೆ ವಶರಾಗುತ್ತಾರೆ. ಅವರ ಬಾಳು ನರಕ ಸದೃಶವಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣ ಕಿತ್ತುತಿನ್ನುವ ಬಡತನ ದೊರಕಿದ ಉದ್ಯೋಗಗಳಲ್ಲಿಯೇ ಸಿಕ್ಕಷ್ಟು ವರಮಾನದಿಂದ ಹೇಗೋ ಬಾಳನ್ನು ದೂಡ ಬೇಕಾಗುವಂತಹ ಪರಿಸ್ಥಿತಿ.

Digitised by Bharatavani, CIIL

ವ್ಯಕ್ತಿಯ ಆಸಕ್ತಿ, ಅಭಿಲಾಷೆ, ಶಕ್ತಿ, ಸಾಮರ್ಥ್ಯಗಳು ನಗಣ್ಯವಾಗಿದ್ದು ಅವನು ಪರಿಸ್ಥಿತಿಯ ದಾಸನಾಗಬೇಕಾಗುತ್ತದೆ. ಇದೊಂದು ಅನಿವಾರ್ಯವಾದ ದುರಂತ. ಇದರ ಜೊತೆಗೆ ಮನೆಯಲ್ಲಿ ಹೆಚ್ಚು ಮಕ್ಕಳಿದ್ದಲ್ಲಿ ಸಮಸ್ಯೆಯ ತೀವ್ರತೆ ಇನ್ನೂ ಅಧಿಕವಾಗುತ್ತದೆ. ಅವರ ಕನಿಷ್ಠ ಅಗತ್ಯಗಳನ್ನು ಪೂರೈಸುವುದಕ್ಕೂ ಕಷ್ಟವಾಗುತ್ತದೆ. ಅವರಿಗೆ ಉತ್ತಮ ಗುಣಮಟ್ಟದ ಜೀವನವನ್ನು ಒದಗಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಇಂತಹ ಸಮಸ್ಯೆ ಕೇವಲ ಬಡವರಿಗೆ ಮಾತ್ರವಲ್ಲ, ಮಧ್ಯಮ ವರ್ಗದ ಜನತೆಯೂ ಸಹ ಇದೇ ಬಗೆಯ ತೊಂದರೆಗಳಿಂದ ಬಳಲುತ್ತಾರೆ. ಮಕ್ಕಳಿಗೆ ಉತ್ತಮ ಶಾಲೆ, ಯುವಜನತೆಗೆ ಗೌರವಯುತ ಸಂಪಾದನೆ ಮಾಡಲು ಸೂಕ್ತವಾದ ಉದ್ಯೋಗ, ವಯಸ್ಕರಿಗೆ ಸಂಸಾರವನ್ನು ಸಾಗಿಸಲು ಅಗತ್ಯವಾದ ಆರ್ಥಿಕ ವರಮಾನ, ವೃದ್ಧರಿಗೆ ಬೇಕಾಗುವ ಆರೋಗ್ಯ ಸೌಲಭ್ಯಗಳು ಹಾಗೂ ಮನಶ್ಶಾಂತಿ ಸುಲಭವಾಗಿ ದೊರಕುವುದಿಲ್ಲ. ಇಂದಿನ ದಿನಗಳಲ್ಲಿ ಮಧ್ಯಮವರ್ಗ ಹಾಗೂ ಅದಕ್ಕಿಂತ ಕೆಳಗಿನ ಮಟ್ಟದಲ್ಲಿರುವ ಜನರ ಸಂಖ್ಯೆಯೇ ಅಧಿಕವಾಗಿದೆ. ಇವರ ಸಾಮಾಜಿಕ ಜೀವನದಲ್ಲಿ ಆಗುವ ಏರುಪೇರುಗಳು ಇಡೀ ರಾಜ್ಯ ಹಾಗೂ ರಾಷ್ಟ್ರದ ಮೇಲೆ ಪರಿಣಾಮ ಉಂಟುಮಾಡುತ್ತವೆ.

ಇನ್ನು ಕುಟುಂಬದಲ್ಲಿಯೂ ಜನಸಂಖ್ಯಾ ಸ್ಫೋಟದ ನೇರ ಪ್ರಭಾವ ಈಗಾಗಲೇ ಕಾಣುತ್ತಿದೆ. ಮನೆಯಲ್ಲಿ ಅಗತ್ಯವಾದ ಸೌಲಭ್ಯಗಳ ಕೊರತೆಯಿದೆ. ಇಕ್ಕಟ್ಟಾದ ಸ್ಥಳವಾದ್ದರಿಂದ ಸಾಕಷ್ಟು ಗಾಳಿ ಬೆಳಕುಗಳು ಮನೆಯ ಒಳಕ್ಕೆ ಬರುವುದಕ್ಕೆ ಅಡ್ಡಿ ಆತಂಕಗಳು ಇವೆ. ಜೀವನ ಶೈಲಿಯಲ್ಲಿನ ಬದಲಾವಣೆಯಿಂದ ಕುಟುಂಬದ ಸದಸ್ಯರ ನಡುವೆ ಇರಬೇಕಾದ ಪರಸ್ಪರ ನಂಬಿಕೆ, ಪ್ರೀತಿ, ವಿಶ್ವಾಸ, ಗೌರವಗಳು ಇಳಿಮುಖವಾಗಿವೆ. ಅಸಹನೆ, ಸಂತೋಷ ಮೊದಲಾದವುಗಳನ್ನು ಬಹುತೇಕ ಕುಟುಂಬಗಳಲ್ಲಿ ಕಾಣಬಹುದು.

ಹೀಗೆ ಜನಸಂಖ್ಯಾ ಸ್ಫೋಟದ ಪರಿಣಾಮಗಳು ಹಲವಾರಿವೆ. ಅಂತೆಯೇ ಈ ಸ್ಫೋಟಕ್ಕೆ ಅನೇಕ ಕಾರಣಗಳೂ ಇವೆ. ಇಂದಿನ ಜನಾಂಗ ಹಾಗೂ ಮುಂದಿನ ಜನಾಂಗ ಈ ಅಪಾಯದಿಂದ ಪಾರಾಗಿ ಸುಖೀಜೀವನ ನಡೆಸಬೇಕಾದಲ್ಲಿ ಇವುಗಳ ಅರಿವು ಎಲ್ಲ ಜನತೆಗೆ ಅದರಲ್ಲೂ ಮುಖ್ಯವಾಗಿ ಯುವ ಜನತೆಗೆ ಅಗತ್ಯವಾಗಿ ಬೇಕು. ಭಾವೀ ಪ್ರಜೆಗಳಾದ ಇಂದಿನ ಮಕ್ಕಳಿಗೂ ಸೂಕ್ತರೀತಿಯಲ್ಲಿ ಇದರ ಬಗೆಗೆ ಸೂಕ್ತ ಪ್ರಮಾಣದ ಅರಿವನ್ನು ಮೂಡಿಸಬೇಕಾದುದು ಅತಿ ಅಗತ್ಯ. ಈ ಅರಿವನ್ನು, ಜ್ಞಾನವನ್ನು ಪಡೆದ ನಂತರ ಅವರ ಮನೋಭಾವದಲ್ಲಿ ಅಪೇಕ್ಷಿತ ಮಾರ್ಪಾಡು ಉಂಟಾಗಬೇಕು. ಅಂತಿಮವಾಗಿ ಅವರು ವಯಸ್ಕರಾಗಿ ಗೃಹಸ್ಥಾಶ್ರಮ ಸ್ವೀಕರಿಸಿದಾಗ ತಮ್ಮ ನಿಜ ಜೀವನದಲ್ಲಿ ಈ ಅಂಶಗಳನ್ನು ಅಳವಡಿಸಿಕೊಂಡು ತಮ್ಮ ಕುಟುಂಬವನ್ನು ಸುಖಿ ಕುಟುಂಬವನ್ನಾಗಿ ಮಾಡಿಕೊಳ್ಳುವುದಲ್ಲದೆ ಇಡೀ ಸಮುದಾಯ ಹಾಗೂ ಸಮಾಜದ ಒಳಿತಿಗೂ ಕಾರಣರಾಗುತ್ತಾರೆ. ಈ ಅರಿವನ್ನು ಕಾರ್ಯರೂಪಕ್ಕೆ ತರುವಲ್ಲಿ ರೂಪಿತಗೊಂಡ ಪ್ರಥಮ ಕಾರ್ಯಕ್ರಮವೇ ಕುಟುಂಬಯೋಜನೆ.

ಜನಸಂಖ್ಯಾ ಹೆಚ್ಚಳವು ಕೇವಲ ಯಾವುದೇ ಒಂದು ದೇಶದ ಸಮಸ್ಯೆ ಅಲ್ಲ. ಇಡೀ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲೂ ಒಂದಲ್ಲ ಒಂದು ಬಗೆಯಲ್ಲಿ, ಬೇರೆ ಬೇರೆ ಮಟ್ಟಗಳಲ್ಲಿ ಈ ಸಮಸ್ಯೆ ಇದೆ. ಜನಸಂಖ್ಯಾ ಹೆಚ್ಚಳ ಹಾಗೂ ಅಭಿವೃದ್ಧಿಗಳಿಗೆ ಇರುವ ಪರಸ್ಪರ ಸಂಬಂಧಗಳ ಬಗ್ಗೆ ವಿಶ್ವಸಂಸ್ಥೆಯ ಅನೇಕ ಸದಸ್ಯ ರಾಷ್ಟ್ರಗಳು ತಮ್ಮ ತೀವ್ರ ಕಾತರವನ್ನು ಕೆಲವು ದಶಕಗಳ ಹಿಂದೆಯೇ ವ್ಯಕ್ತಪಡಿಸಿದವು. ಇದರ ಫಲಶ್ರುತಿಯಾಗಿ ಮಾನವಹಕ್ಕುಗಳ ದಿನವಾದ 1966ನೇ ಡಿಸೆಂಬರ್ 10 ರಂದು ವಿಶ್ವಸಂಸ್ಥೆಯು ಜನಸಂಖ್ಯೆಗೆ ಸಂಬಂಧಿಸಿದಂತೆ ಒಂದು ಘೋಷಣೆಯನ್ನು ಹೊರಡಿಸಿತು. ಅಂದು ಈ ಅಭಿವೃದ್ಧಿಹೊಂದಿದ ರಾಷ್ಟ್ರಗಳಾದ ಸ್ವೀಡನ್, ಫಿನ್‌ಲ್ಯಾಂಡ್ ಮತ್ತು ಯುಗೋಸ್ಲಾವಿಯಗಳು, ಅಭಿವೃದ್ಧಿ ಶೀಲ ರಾಷ್ಟ್ರಗಳು, ಕೊಲಂಬಿಯಾ, ಭಾರತ, ಕೊರಿಯಾ, ಮಲೇಶಿಯ ಮೊರೆಕ್ಕೋ, ನೇಪಾಳ ಮತ್ತು ಸಿಂಗಾಪುರಗಳು ಅದಕ್ಕೆ ಸಹಿ ಹಾಕಿದವು. ಅಂದಿನಿಂದ ಇಂದಿನವರೆಗೆ ಈ ಘೋಷಣೆಗೆ ಸಹಿ ಹಾಕಿರುವ ರಾಷ್ಟ್ರಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಜನಸಂಖ್ಯೆ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧ ಬಹು ಸಂಕೀರ್ಣವಾಗಿದ್ದು ಇಂದಿಗೂ ಇದು ಅತಿ ಸ್ಪಷ್ಟವಾಗಿ ಅರ್ಥವಾಗಿಲ್ಲ. ಎಲ್ಲ ಜೀವರಾಶಿಯು ಅವಲಂಬಿಸಿರುವ ನೈಸರ್ಗಿಕ ಸಂಪನ್ಮೂಲಗಳಾದ ನೆಲೆ, ನೀರು ಮತ್ತು ಗಾಳಿಗಳ ಮೇಲೆ ಹೆಚ್ಚುತ್ತಿರುವ ಮಾನವನ ಬೇಡಿಕೆಗಳು ಹಾನಿಯನ್ನು ಉಂಟುಮಾಡುತ್ತಿವೆ ಎಂಬುದಾಗಿ ವಿಶ್ವಜನಸಂಖ್ಯಾ ಪರಿಸ್ಥಿತಿಯ ಬಗೆಗಿನ 1988ರ ವರದಿಯು ತಿಳಿಸುತ್ತದೆ. ಹೆಚ್ಚಿನ ಪ್ರಜನನ ಫಲವತ್ತತೆ ಹಾಗೂ ಶೀಘ್ರಗತಿಯ ಜನಸಂಖ್ಯಾ ಬೆಳವಣಿಗೆಗಳು ಇದಕ್ಕೆ ಕಾರಣ ಎಂದು ಈ ವರದಿ ತಿಳಿಸುತ್ತದೆ.

ಅಭಿವೃದ್ಧಿಯ ಮೇಲೆ ವೇಗವಾಗಿ ಹೆಚ್ಚುತ್ತಿರುವ ಜನಸಂಖ್ಯೆಯು ಬೀರುತ್ತಿರುವ ಋಣಾತ್ಮಕ ಪ್ರಭಾವವನ್ನು ಅರಿತು ಅನೇಕ ಅಭಿವೃದ್ಧಿ ಶೀಲ ರಾಷ್ಟ್ರಗಳು ಕುಟುಂಬ ಯೋಜನಾ ಕಾರ್ಯಕ್ರಮವನ್ನು ಪ್ರಾರಂಭಿಸಿವೆ. ಚೀನಾದಂತಹ ರಾಷ್ಟ್ರಗಳಲ್ಲಿ ಜನಸಂಖ್ಯೆ ಏರುವಿಕೆಯನ್ನು ಕಡಿಮೆ ಮಾಡುವಲ್ಲಿ ಈ ಯೋಜನೆ ಗಣನೀಯವಾದ ಯಶಸ್ಸನ್ನು ಪಡೆದಿದೆ. ಆದರೆ ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಈ ಯೋಜನೆಯು ಇನ್ನು ಸಾಕಷ್ಟು ಪರಿಣಾಮಕಾರಿ ಫಲವನ್ನು ನೀಡಬೇಕಾಗಿದೆ. ಈ ರಾಷ್ಟ್ರಗಳಲ್ಲಿ ಈ ಯೋಜನೆಯ ಯಶಸ್ಸು ಮುಖ್ಯವಾಗಿ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಅಲ್ಲಿನ ಬಡತನ, ಅನಕ್ಷರತೆ ಮೊದಲಾದುವುಗಳನ್ನು ಮತ್ತು ಅಲ್ಲಿರುವ ಅತಿ ಅಧಿಕವಾದ ಯುವಜನರ ಸಂಖ್ಯೆಯನ್ನು ಅವಲಂಬಿಸಿರುತ್ತದೆ.

ವಾಸ್ತವವಾಗಿ 'ಜನಸಂಖ್ಯಾ ಶಿಕ್ಷಣ' ಎಂಬ ಪರಿಕಲ್ಪನೆಯೇ ಈಚಿನದು. ಇದರ ಅಗತ್ಯ ಹಾಗೂ ಪ್ರಾಮುಖ್ಯದ ಬಗ್ಗೆ ಮೊದಲ ಕೂಗು ಕೇಳಿಸಿದ್ದು 1941ರಲ್ಲಿ, ಆಲ್ವ ಮಿರ್‌ದಾಲ್ ಎಂಬ ಮಹಿಳೆ ಬರೆದು ಪ್ರಕಟಿಸಿದ ರಾಷ್ಟ್ರ ಮತ್ತು ಕುಟುಂಬ ಎಂಬ ಪುಸ್ತಕದಿಂದ ಎಂಬುದಾಗಿ ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ಇದಕ್ಕಿಂತ ಸಾಕಷ್ಟು ಮುಂಚೆಯೇ ಅಂದರೆ 1930ರಲ್ಲಿ ಅಂದಿನ ಮೈಸೂರು ಅರಸರು ವಿಶ್ವದಲ್ಲಿಯೇ ಪ್ರಪ್ರಥಮವಾಗಿ ಕುಟುಂಬ ಯೋಜನೆಯನ್ನು ವಿದ್ಯುಕ್ತವಾಗಿ ಪ್ರಾರಂಭ ಮಾಡಿದರು. ಈ ಸಂಬಂಧವಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಮತ್ತು ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ, ಮಹಾರಾಣಿ ಆಸ್ಪತ್ರೆಗಳಿಗೆ ತಲಾ ಒಂದೊಂದು ಜನನ ನಿಯಂತ್ರಣ ಕೇಂದ್ರವನ್ನು ಮಂಜೂರು ಮಾಡಿದರು. ಪದೇ ಪದೇ ಆಗುತ್ತಿದ್ದ ಹೆರಿಗೆಗಳ ಪರಿಣಾಮವಾಗಿ ಅನೇಕ ಮಂದಿ ತಾಯಂದಿರು ಹೆರಿಗೆ ಸಮಯದಲ್ಲಿ ಸಾವನ್ನಪ್ಪುತ್ತಿದ್ದರು. ಇದಕ್ಕೆ ಪರಿಹಾರವೆಂದರೆ ಒಂದು ಮಗುವಿನ ಜನನಕ್ಕೂ ಮತ್ತೊಂದು ಮಗುವಿನ ಜನನಕ್ಕೂ ನಡುವೆ ಸಾಕಷ್ಟು ಕಾಲದ ಅಂತರ ಇಡುವುದು. ಆ ವಿಷಯದ ಬಗ್ಗೆ ಮತ್ತು ಸಂತಾನ ನಿಯಂತ್ರಣದ ಬಗ್ಗೆ ಜನರಿಗೆ ತಿಳುವಳಿಕೆ ಕೊಡಲು ಈ ಕೇಂದ್ರಗಳು ನೆರವಾದವು. ಇಷ್ಟೇ ಅಲ್ಲದೆ ಗರ್ಭನಿರೋಧಕ ಸಾಧನಗಳನ್ನು ತೆಗೆದುಕೊಳ್ಳಲು ಅಪೇಕ್ಷಿಸುವವರಿಗೆ ಐದು ನೂರು ರೂಪಾಯಿಗಳ ಸಹಾಯಧನವನ್ನು ಕೊಡಲಾಗುತ್ತಿತ್ತು. ಈ ಸೌಲಭ್ಯವು ವಿವಾಹಿತ ಮಹಿಳೆಯರಿಗೆ ಮಾತ್ರ ಸೀಮಿತವಾಗಿತ್ತು. ಅಂದಿನ ಸಾಮಾಜಿಕ ಸನ್ನಿವೇಶದಲ್ಲಿ ಈ ವಿಷಯದಲ್ಲಿ ಸ್ತ್ರೀಯರಿಗೆ ತುಂಬಾ ಸಂಕೋಚ ಇರುತ್ತಿತ್ತು. ಆದ ಕಾರಣ ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವವರ ಸಂಖ್ಯೆ ಬಹುಕಡಿಮೆ ಇರುತ್ತಿತ್ತು. ಈ ಐತಿಹಾಸಿಕ ಕಾರಣದಿಂದ ಕರ್ನಾಟಕದಲ್ಲಿ 1980ರಲ್ಲಿ ಕುಟುಂಬ ಯೋಜನಾ ಸೇವೆಯ ಸುವರ್ಣಮಹೋತ್ಸವ ಆಚರಿಸಲ್ಪಟ್ಟಿತು.

Digitised by Bharatavani, CIIL

ವಿಶ್ವದ ವಿವಿಧ ದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಅಮೇರಿಕಾದಲ್ಲಿ ಸುಮಾರು ಆರು ದಶಕಗಳ ಹಿಂದೆ ಜನಸಂಖ್ಯಾ ಸ್ಫೋಟದ ಕಾರಣ ಪರಿಣಾಮಗಳ ವಿಷಯವನ್ನು ಶಾಲೆಗಳ ಪಠ್ಯವಿಷಯದಲ್ಲಿ ಸೇರಿಸುವ ಬಗ್ಗೆ ಸಾಕಷ್ಟು ಬಹಿರಂಗ ಚರ್ಚೆಯು ಮಾಧ್ಯಮಗಳ ಮೂಲಕ ನಡೆಯಿತು. 1948ರಲ್ಲಿ ಯುನೆಸ್ಕೋದ ಪ್ರಥಮ ಅಧ್ಯಕ್ಷ ಸರ್ ಜೂಲಿಯನ್ ಹಕ್ಸ್‌ಲೆ ತನ್ನ ವರದಿಯಲ್ಲಿ ಭವಿಷ್ಯತ್ತಿನ ನಾಗರಿಕತೆಯ ಮೇಲೆ ವೇಗವಾಗಿ ಹೆಚ್ಚುತ್ತಿರುವ ಜನಸಂಖ್ಯೆಯು ತೀವ್ರ ಪರಿಣಾಮ ಉಂಟುಮಾಡುತ್ತದೆ ಎಂದು ತಿಳಿಸಿದ. ಲಭ್ಯ ಸಂಪನ್ಮೂಲಗಳಿಗೆ ಜನಸಂಖ್ಯೆಯು ಹೊಂದಿಕೊಂಡಿರಬೇಕು. ಇಲ್ಲವಾದರೆ ನಾಗರಿಕತೆ ನಾಶವಾಗುತ್ತದೆ ಎಂಬುದಾಗಿಯೂ ತಿಳಿಸಿದ.

ಯುನೆಸ್ಕೋದ ಏಷಿಯಾದ ಪ್ರಾದೇಶಿಕ ಕಛೇರಿಯು 1970 ಸೆಪ್ಟೆಂಬರ್ ಅಕ್ಟೋಬರ್‌ನಲ್ಲಿ ಬ್ಯಾಂಕರ್‌ನಲ್ಲಿ ಆಯೋಜಿಸಿದ "ಜನಸಂಖ್ಯೆ ಮತ್ತು ಕುಟುಂಬ ಶಿಕ್ಷಣ"ದ ಬಗೆಗಿನ ಕಾರ್ಯಾಗಾರವನ್ನು ಜನಸಂಖ್ಯಾ ಶಿಕ್ಷಣದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎನ್ನಬಹುದು. ಏಷಿಯಾದ ಹದಿಮೂರು ಸದಸ್ಯ ರಾಷ್ಟ್ರಗಳಿಂದ ಆಗಮಿಸಿದ್ದ ಶಿಕ್ಷಣ ತಜ್ಞರು ಆಳವಾದ ಚರ್ಚೆ, ಸಮಾಲೋಚನೆ ನಡೆಸಿ ಅನೇಕ ತೀರ್ಮಾನಗಳನ್ನು ಕೈಗೊಂಡರು. ಜನಸಂಖ್ಯಾ ಶಿಕ್ಷಣದ ಉದ್ದೇಶಗಳು, ಕಾರ್ಯಕ್ರಮಗಳನ್ನು ನಡೆಸಲು ಅನುಸರಿಸಬೇಕಾದ ಕಾರ್ಯತಂತ್ರ, ಶಾಲಾ ಪಠ್ಯ ವಿಷಯದಲ್ಲಿ ಅಂದರೆ ಸಮಾಜ ವಿಜ್ಞಾನ, ಮತ್ತು ಪ್ರಕೃತಿ ವಿಜ್ಞಾನಗಳ ಪಾಠಗಳಲ್ಲಿ ಜನಸಂಖ್ಯಾ ಶಿಕ್ಷಣದ ಪರಿಕಲ್ಪನೆಗಳನ್ನು ಸೇರಿಸುವಿಕೆ ಮೊದಲಾದವುಗಳನ್ನು ಸಲಹೆ ಮಾಡಿದರು. ಗಣಿತ, ವಿಜ್ಞಾನ, ಮತ್ತು ಸಮಾಜ ಅಧ್ಯಯನಗಳಿಗೆ ಸಂಬಂಧಿಸಿದಂತೆ ಮಾದರಿ ಬೋಧನಾ ಸಾಮಗ್ರಿಗಳನ್ನು ರಚಿಸಿದರು. ಈ ಕಾರ್ಯಾಗಾದಲ್ಲಿ ಭಾಗವಹಿಸಿದವರಲ್ಲಿ ಅನೇಕರು ಮುಂದೆ ತಮ್ಮ ತಮ್ಮ ರಾಷ್ಟ್ರಗಳಲ್ಲಿ ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸುವಲ್ಲಿ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಜನಸಂಖ್ಯಾ ಶಿಕ್ಷಣದ ಪ್ರಥಮ ರಾಷ್ಟ್ರೀಯ ಸೆಮಿನಾರ್ ಮುಂಬಯಿಯಲ್ಲಿ 1969ರಲ್ಲಿ ನಡೆಯಿತು. ಶಾಲಾ ಶಿಕ್ಷಣ ಕ್ರಮದಲ್ಲಿ ಜನಸಂಖ್ಯಾಶಿಕ್ಷಣವನ್ನು ಅಳವಡಿಸಲು ಇಲ್ಲಿ ಚಾಲನೆ ದೊರೆಯಿತು. 1980 ರಿಂದ ಜನಸಂಖ್ಯಾ ಶಿಕ್ಷಣವು ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮ (National Population Education Programme) NPEPದ ಅಡಿಯಲ್ಲಿ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದಿಂದ ಜಾರಿಗೆ ಬಂದಿತು. ಇದಕ್ಕೆ UNFPA ಯಿಂದ ಆರ್ಥಿಕ ನೆರವು ಹಾಗೂ UNESCO ಇಂದ ತಾಂತ್ರಿಕ ನೆರವು ಲಭ್ಯವಾದವು. 1988ರ ಹೊತ್ತಿಗೆ 26 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಕಾರ್ಯಕ್ರಮವು ಜಾರಿಗೊಳಿಸಲ್ಪಟ್ಟಿತ್ತು. NCERTಯು NPEP ಕಾರ್ಯಕ್ರಮಗಳನ್ನು ಜಾರಿಗೊಳಿಸಿತು. ಮೊದಲ ಹಂತದಲ್ಲಿ ಔಪಚಾರಿಕ ಶಾಲೆ ಮತ್ತು ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಇದು ಬೋಧನಾ ವಿಷಯಗಳಲ್ಲಿ ಸೇರಿಕೊಂಡಿತು. 1986–90ರ ಏಳನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಕಾರ್ಯಕ್ರಮವು ಅನೌಪಚಾರಿಕ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳಿಗೂ ಪ್ರವೇಶಿಸಿತು.

ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಪೂರಕವಾಗಿ ಈ ಕಾರ್ಯಕ್ರಮ ಪ್ರಾರಂಭವಾದುದರಿಂದ ಶಿಕ್ಷಣ ಕ್ಷೇತ್ರದ ಒಳಗೂ ಹೊರಗೂ ಇದನ್ನು 'ಲೈಂಗಿಕ ಶಿಕ್ಷಣ' ಅಥವಾ 'ಕುಟುಂಬ ಯೋಜನಾ ಶಿಕ್ಷಣ' ಎಂಬುದಾಗಿ ತಪ್ಪಾಗಿ ಗ್ರಹಿಸಲಾಗಿತ್ತು. ವಿಶ್ವದ ಇತರ ಕೆಲವು ರಾಷ್ಟ್ರಗಳಂತೆ ಭಾರತದಲ್ಲೂ ಕುಟುಂಬ ಯೋಜನೆ ಎಂದರೆ ಮಿತಸಂತಾನ ಎಂಬ ಅಪೂರ್ಣ, ಸರಿಯಿಲ್ಲದ ಅರ್ಥವು ಜನಸಾಮಾನ್ಯರಲ್ಲಿ ಹರಡಿದ ಪ್ರಯುಕ್ತ ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಸ್ವಲ್ಪ ಗೊಂದಲವೂ ಉಂಟಾಯಿತು. ಈ ತೊಂದರೆಯಿಂದ ಪಾರಾಗಲು ಕುಟುಂಬಯೋಜನೆ (Family Planning) ಯನ್ನು ಕುಟುಂಬ ಕಲ್ಯಾಣ (Family Welfare) ಎಂಬುದಾಗಿ ಕರೆಯಲು ತೀರ್ಮಾನಿಸಲಾಯಿತು.

ದೇಶದ ಸಾಮಾಜಿಕ ಪಿಡುಗುಗಳಾದ ಆಹಾರದ ಅಭಾವ ಅಪೌಷ್ಟಿಕತೆ, ಅನಕ್ಷರತೆ, ನಿರುದ್ಯೋಗ, ವಸತಿ ಸೌಲಭ್ಯದ ಕೊರತೆ ಹಾಗೂ ಸಂಪನ್ಮೂಲಗಳ ಅತಿಯಾದ ಬಳಕೆಯಿಂದ ಆಗುತ್ತಿರುವ ಹಾನಿಗಳಿಗೆ ಜನಸಂಖ್ಯಾ ಸ್ಫೋಟವೇ ಮೂಲಕಾರಣ. ಈ ದೃಷ್ಟಿಯಿಂದ ಪ್ರತಿ ಪ್ರಜೆಯೂ ಸದಾ ಚಿಂತಿಸಬೇಕಾದ ವಿಚಾರವೆಂದರೆ ಕುಟುಂಬ ಯೋಜನೆ ಅಥವಾ ಕುಟುಂಬ ಕಲ್ಯಾಣ. ವ್ಯಕ್ತಿ ಮೊದಲು ತನ್ನ ಕುಟುಂಬದ ಕಲ್ಯಾಣ ಮಾಡಿಕೊಂಡರೆ ದೇಶದ ಕಲ್ಯಾಣ ಸಾಧ್ಯ. ತಾಯಿ ಮಗುವಿನ ಆರೋಗ್ಯಕ್ಕೆ ಮಿತ ಸಂತಾನ ಎಷ್ಟು ಅಗತ್ಯ ಎಂಬ ಬಗ್ಗೆ ಸರ್ಕಾರಗಳ ವಿವಿಧ ಇಲಾಖೆಗಳು ಆಕಾಶವಾಣಿ ದೂರದರ್ಶನ ಹಾಗೂ ಪತ್ರಿಕೆಗಳ ಮೂಲಕ ವ್ಯಾಪಕ ಪ್ರಚಾರ ನೀಡುತ್ತಿವೆ. ನಾಟಕ, ಚಲನಚಿತ್ರಗಳ ಮೂಲಕವೂ ಹರಿಕಥೆ, ಬಯಲು ನಾಟಕ, ಗೊಂಬೆಯಾಟ, ಯಕ್ಷಗಾನ ಮೊದಲಾದ ಜನಪದ ಮಾಧ್ಯಮಗಳ ಮೂಲಕವಾಗಿಯೂ ಮಿತಸಂತಾನದ ಅಗತ್ಯವನ್ನು ಸಾರುತ್ತಿವೆ. ಕುಟುಂಬ ಕಲ್ಯಾಣವೆಂದರೆ ಕೇವಲ ಸಂತಾನ ನಿಯಂತ್ರಣವಲ್ಲ. ಸಂತಾನವಾಗದ ದಂಪತಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ ಅವರ ಬಂಜೆತನವನ್ನು ನಿವಾರಿಸಿ ಅವರಿಗೆ ಮಕ್ಕಳಾಗುವಂತೆ ಮಾಡುವುದೂ ಇದರಲ್ಲಿ ಸೇರಿದೆ ಎಂಬುದನ್ನು ಜನಸಾಮಾನ್ಯರಿಗೆ ತಿಳಿಸುವುದು ಈ ಕಾರ್ಯಕ್ರಮದ ಯಶಸ್ಸಿಗೆ ಅತಿ ಅಗತ್ಯ. ತಾಯಂದಿರ, ಯುವ ಜನತೆಯ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಕಾರವೂ ಇದಕ್ಕೆ ಬೇಕೇ ಬೇಕು.

ಕುಟುಂಬ ಯೋಜನೆ (ಕುಟುಂಬ ಕಲ್ಯಾಣ) ಯಾವುದೇ ಒಂದು ಜಾತಿಗೆ, ಒಂದುವರ್ಗಕ್ಕೆ ಒಂದು ದೇಶಕ್ಕೆ ಸೀಮಿತವಾದುದಲ್ಲ. ಇದಕ್ಕೆ ಹೆಣ್ಣು–ಗಂಡು, ಜಾತಿ–ಮತ, ಬಡವ–ಬಲ್ಲಿದ ಎಂಬ ಭೇದವಿಲ್ಲ. ಇದು ಇಡೀ ಪ್ರಪಂಚಕ್ಕೆ ಬೇಕಾಗಿರುವುದು. ನಮ್ಮ ದೇಶದಲ್ಲಿಯೂ ಬಹುತೇಕ ಎಲ್ಲ ಜನಾಂಗ, ಧರ್ಮಗಳಿಗೆ ಸೇರಿದವರು ಇದನ್ನು ಅನುಸರಿಸುತ್ತಿದ್ದಾರೆ. ಕುಟುಂಬದ ಜೀವನಾಡಿಯೇ 'ತಾಯಿ–ಮಗು'. ಇವರ ಆರೋಗ್ಯವೇ ಇಡೀ ಕುಟುಂಬದ ಕ್ಷೇಮ. ಆದ್ದರಿಂದ ತಾಯಿ ಮಗುವಿನ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡಬೇಕು. ಹೆರಿಗೆ ಸಮಯದಲ್ಲಿ ತಾಯಂದಿರ ಮರಣ ಪ್ರಮಾಣ, ಶಿಶುಮರಣ ಪ್ರಮಾಣ, ಗರ್ಭಸ್ರಾವದ ಅಪಾಯ ಇವುಗಳಿಗೆ ಸಂಬಂಧಪಟ್ಟ ಕಾಯಿಲೆಗಳು ಮೊದಲಾದವುಗಳ ಗುರ್ತಿಸುವಿಕೆ ಹಾಗೂ ನಿವಾರಣೆಗೆ ನೆರವಾಗಬೇಕು. ಈ ಬಗ್ಗೆ ಸೂಕ್ತ ಅರಿವನ್ನು ಜನಸಾಮಾನ್ಯರಲ್ಲಿ ಮೂಡಿಸುವುದೂ ಜನಸಂಖ್ಯಾ ಶಿಕ್ಷಣದ ಮುಖ್ಯ ಉದ್ದೇಶಗಳಲ್ಲಿ ಸೇರಿದೆ.

ಶೈಕ್ಷಣಿಕ ಕಾರ್ಯಕ್ರಮದ ಅಂತ್ಯದಲ್ಲಿ ಜೀವನದ ಗುಣಮಟ್ಟವನ್ನು ಸುಧಾರಿಸಲು ಅಗತ್ಯವಾದ ಜ್ಞಾನ, ಅರಿವು, ಮನೋಭಾವಗಳು ಹಾಗೂ ಜವಾಬ್ದಾರಿಯುತವಾದ ಅರಿವಿನಿಂದ ಕೂಡಿದ ತೀರ್ಮಾನಗಳನ್ನು ಕೈಗೊಳ್ಳಬಲ್ಲ ಸಾಮರ್ಥ್ಯಗಳನ್ನು ಕಲಿಕಾರ್ಥಿಯಲ್ಲಿ ಉಂಟು ಮಾಡುವುದೇ ಜನಸಂಖ್ಯಾ ಶಿಕ್ಷಣದ ಬಹುತೇಕ ಕಾರ್ಯಕ್ರಮಗಳ ಗುರಿಯಾಗಿರುತ್ತದೆ. ಜನಸಂಖ್ಯಾ ಶಿಕ್ಷಣದ ಪಠ್ಯವಸ್ತುವನ್ನು ರೂಪಿಸಲು ವಿವಿಧ ರಾಷ್ಟ್ರಗಳು ತಮ್ಮದೇ ಆದ ವಿಧಾನಗಳನ್ನು ಅನುಸರಿಸಿವೆ. ಇದು ವಿವಿಧ ವಿಷಯಗಳಿಗೆ ಸಂಬಂಧಿಸಿದ್ದು ಅಂತರಶಿಸ್ತಿನ ಸ್ವರೂಪ ಹೊಂದಿದೆ. ಶಾಲಾ ಪಠ್ಯವಿಷಯಗಳು ಈಗಾಗಲೇ ತುಂಬಿ ತುಳುಕುತ್ತಿರುವುದರಿಂದ ಜನಸಂಖ್ಯಾ ಶಿಕ್ಷಣವನ್ನು ಮತ್ತೊಂದು ಸ್ವತಂತ್ರ ಪ್ರತ್ಯೇಕ, ಪಠ್ಯವಿಷಯವನ್ನಾಗಿ ಸೇರಿಸುವುದು ಅಪೇಕ್ಷಣೀಯವಲ್ಲ. ಆದ್ದರಿಂದ ಬಹುತೇಕ ರಾಷ್ಟ್ರಗಳಲ್ಲಿ ಜನಸಂಖ್ಯಾ ಶಿಕ್ಷಣದ ಪರಿಕಲ್ಪನೆಗಳನ್ನು ಇತರ ವಿಷಯಗಳೊಂದಿಗೆ ಸಾಧ್ಯವಾದಲ್ಲೆಲ್ಲಾ ಸೂಕ್ತವಾಗಿ ಸಂಯೋಜನೆಮಾಡಿ ಬೋಧಿಸುವ

Digitised by Bharatavani, CIIL

ವಿಧಾನವನ್ನು ಅನುಸರಿಸಲಾಗುತ್ತಿದೆ. ಆಯಾ ದೇಶದ ಸಾಮಾಜಿಕ – ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾದ ಹಾಗೂ ಅಲ್ಲಿನ ಶಿಕ್ಷಣದ ಗುರಿಗಳಿಗೆ ಅನುಗುಣವಾದ ರೀತಿಯಲ್ಲಿ ಜನಸಂಖ್ಯಾ ಶಿಕ್ಷಣದ ಕಾರ್ಯಕ್ರಮಗಳನ್ನು ಸಂಯೋಜಿಸಲಾಗುತ್ತಿದೆ. ಹೀಗೆ ಮಾಡಿದಾಗ ಜನಸಂಖ್ಯಾ ಶಿಕ್ಷಣದ ಪಠ್ಯ ವಿಷಯವು ಸಡಿಲವಾಗುವ ತನ್ಮೂಲಕ ಅದು ತನ್ನ ಪ್ರಾಮುಖ್ಯವನ್ನು, ಪ್ರತ್ಯೇಕತೆಯನ್ನು ಕಳೆದುಕೊಳ್ಳುವ ಸಾಧ್ಯತೆಯಂತೂ ಇದೆ.

ಜನಸಂಖ್ಯಾ ಶಿಕ್ಷಣ ಬೋಧನೆಗೆ ಹಲವು ವಿಧಾನಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಅನ್ವೇಷಣಾ ಅಥವಾ ಅನುಶೀಲನ ವಿಧಾನ, ಮೌಲ್ಯ ಸ್ಪಷ್ಟೀಕರಣ ವಿಧಾನ, ಪಾತ್ರಾಭಿನಯ ವಿಧಾನ, ಪ್ರಾಯೋಜನಾ ವಿಧಾನಗಳು ಮುಖ್ಯವಾದವು.

ಶಾಲೆಗಳಲ್ಲಿ ಈಗ ಬೋಧಿಸಲಾಗುತ್ತಿರುವ ವಿವಿಧ ವಿಷಯಗಳಲ್ಲಿ ಜನಸಂಖ್ಯಾ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧವಿರುವ ಹಲವಾರು ಘಟಕಗಳು ಇವೆ. ಇವುಗಳನ್ನು ಸಾಮಾನ್ಯವಾಗಿ ಸಂಯೋಜನ ಘಟ್ಟ (Plug point)ಗಳು ಎಂದು ಕರೆಯಲಾಗುತ್ತದೆ. ಶಿಕ್ಷಕರು ತಾವು ಬೋಧಿಸುವ ವಿಷಯಗಳಲ್ಲಿ ಇಂತಹ ಘಟ್ಟಗಳನ್ನು ಗುರುತಿಸುತ್ತಾರೆ. ಅನಂತರ ಜನಸಂಖ್ಯಾ ಶಿಕ್ಷಣದ ಯಾವ ಪರಿಕಲ್ಪನೆಯನ್ನು ಇಂಥ ಘಟ್ಟಗಳಲ್ಲಿ ಮಕ್ಕಳಿಗೆ ತಿಳಿಸಬಹುದು ಎಂಬುದನ್ನು ನಿರ್ಧರಿಸುತ್ತಾರೆ. ಅಂತೆಯೇ ಪ್ರಾಸಂಗಿಕವಾಗಿ ಈ ವಿಷಯವನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡುತ್ತಾರೆ. ಇದರ ಮೌಲ್ಯಮಾಪನವನ್ನು ಆಯಾ ಪಾಠದ ಇತರ ವಿಷಯಾಂಶಗಳ ಜೊತೆ ಜೊತೆಯಲ್ಲಿಯೇ ನಡೆಸಲಾಗುತ್ತದೆ. ಉದಾಹರಣೆಗೆ, ಪ್ರೌಢಶಾಲೆಯ ಮಕ್ಕಳಿಗೆ ರಸಾಯನ ಶಾಸ್ತ್ರವನ್ನು ಕಲಿಸುವಾಗ ಲೋಹಗಳ ವಿಷಯ ತಿಳಿಸಬೇಕಾಗುತ್ತದೆ. ಈ ಲೋಹಗಳ ದೊರಕುವಿಕೆ, ಅವುಗಳ ಭೌತ ಹಾಗೂ ರಾಸಾಯನಿಕ ಗುಣಗಳು, ಉಪಯೋಗಗಳು ಮೊದಲಾದ ವಿಷಯಗಳನ್ನು ತಿಳಿಸುವಾಗ ಲೋಹಗಳು ಭೂಮಿಯ ಮೇಲಿನ ಪದರದಲ್ಲಿ ಮಣ್ಣಿನ ಆಳದಲ್ಲಿ ಅದಿರಿನ ರೂಪದಲ್ಲಿ ಸಿಗುತ್ತವೆ. ಈ ಅದಿರನ್ನು ಅಗೆದು ತೆಗೆದು ಸಂಸ್ಕರಿಸಿ ಅನಂತರ ಉಪಯೋಗಿಸಲಾಗುತ್ತದೆ; ಇವೇ ಮೊದಲಾದ ವಿಷಯಗಳನ್ನು ವಿವರಿಸುವಾಗ ಭೂಮಿಯಿಂದ ಈ ಅದಿರುಗಳನ್ನು ಒಂದು ಸಮನಾಗಿ ಹೊರತೆಗೆದಾಗ ಇರುವ ಅದಿರೆಲ್ಲವೂ ಖರ್ಚಾಗಿ ಅಲ್ಲಿ ಏನೂ ಉಳಿಯುವುದಿಲ್ಲ ಎಂಬ ಅಂಶವನ್ನು ಕೋಲಾರದ ಚಿನ್ನದ ಗಣಿಯಂತಹ ನಿದರ್ಶನದೊಂದಿಗೆ ವಿವರಿಸಿದರೆ ಮಾನವನು ನಿಸರ್ಗದತ್ತವಾದ ಅಮೂಲ್ಯ ಸಂಪತ್ತನ್ನು ಹೇಗೆ ಲೂಟಿ ಮಾಡುತ್ತಿದ್ದಾನೆ ಎಂಬ ಅಂಶವು ಮಕ್ಕಳಿಗೆ ತಿಳಿಯುತ್ತದೆ ಮತ್ತು ಈ ನೈಸರ್ಗಿಕ ಸಂಪನ್ಮೂಲಗಳನ್ನು ಅಧಿಕಾಧಿಕವಾಗಿ ಬಳಕೆ ಮಾಡುತ್ತಿರುವುದು ಜನಸಂಖ್ಯಾ ಸ್ಫೋಟದ ಪರಿಣಾಮವಾಗಿ ಎಂಬುದನ್ನೂ ಮಕ್ಕಳು ತಿಳಿಯುತ್ತಾರೆ, ಒಪ್ಪಿಕೊಳ್ಳುತ್ತಾರೆ. ತಮ್ಮ ಮನೋಭಾವವನ್ನು ಸೂಕ್ತವಾಗಿ ಮಾರ್ಪಡಿಸಿಕೊಳ್ಳುತ್ತಾರೆ.

ಜನಸಂಖ್ಯಾ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಬೋಧಿಸಲು ಚಿತ್ರಪಟಗಳು ಕೋಷ್ಟಕಗಳು, ಪಟ್ಟಿ, ಚಲನಚಿತ್ರ ಮೊದಲಾದ ಹಲವಾರು ಬೋಧನೋಪಕರಣಗಳ ಅಗತ್ಯವಿದೆ. ಮತ್ತು ಈ ಕಾರ್ಯಕ್ಕಾಗಿ ಅವರಿಗೆ ಸೂಕ್ತ ತರಬೇತಿಯೂ ಬೇಕು. ಭಾರತದ ಇತರ ರಾಜ್ಯಗಳಲ್ಲಿ ನಡೆದಿರುವಂತೆಯೇ ಕರ್ನಾಟಕದಲ್ಲಿಯೂ 1980 ರಿಂದ ವಿಶೇಷ ಕಾರ್ಯಕ್ರಮಗಳು DSERT ಮುಂದಾಳತ್ವದಲ್ಲಿ ನಡೆದವು. ವಿವಿಧ ತರಗತಿಗಳ ವಿವಿಧ ವಿಷಯಗಳಲ್ಲಿ ಇರುವ ಸಂಯೋಜನ ಘಟ್ಟ (Plug point) ಗಳನ್ನು ಗುರುತಿಸಲು ಅನುಭವಿ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ನಡೆಸಲಾಯಿತು, ಹಾಗೂ ಈ ಕಾರ್ಯಕ್ಕೆ ಅಗತ್ಯವಾದ ಪೂರಕ ಸಾಹಿತ್ಯ, ಸಾಮಗ್ರಿ ರಚಿಸಲಾಯಿತು. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಶಿಕ್ಷಕರಿಗೆ, ಮುಖ್ಯ ಶಿಕ್ಷಕರಿಗೆ ಇಲಾಖೆಯ ಅಧಿಕಾರಿಗಳಿಗಾಗಿ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸಿ ಸಾವಿರ ಸಾವಿರ ಸಂಖ್ಯೆಯ ಬೋಧಕರಿಗೆ ತರಬೇತಿ ನೀಡಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವು ಹಲವಾರು ಪುಸ್ತಿಕೆಗಳನ್ನು ಪ್ರಕಟಿಸಿ ವಯಸ್ಕರ ಶಿಕ್ಷಣದ ಕಾರ್ಯಕರ್ತರಿಗೆ ತರಬೇತಿ ನೀಡಿತು. ಸರ್ಕಾರೇತರ ಸಂಸ್ಥೆಯಾದ 'ಭಾರತ ಕುಟುಂಬ ಯೋಜನಾ ಸಂಸ್ಥೆ' (Family Planning Association of India-FPAI) ಗಣನೀಯವಾದ ಸೇವೆಯನ್ನು ಈ ದಿಸೆಯಲ್ಲಿ ಸಲ್ಲಿಸುತ್ತಿದೆ. ಗ್ರಂಥ ಪ್ರಕಟಣೆ, ಆರೋಗ್ಯ ಹಾಗೂ ಸಲಹಾ ಸೇವೆ ಹಾಗೂ ಕುಟುಂಬ ಕಲ್ಯಾಣಕ್ಕೆ ನೆರವಾಗುವ ಬಗೆಬಗೆಯ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೇರಳವಾಗಿ ಹಣ ಖರ್ಚುಮಾಡಿವೆ. ಆದರೆ ಜನಸಂಖ್ಯಾ ಶಿಕ್ಷಣದ ಅಂತಿಮ ಗುರಿಯನ್ನು ಈ ಮೂಲಕ ಎಷ್ಟರಮಟ್ಟಿಗೆ ತಲುಪಲಾಗಿದೆ ಎಂಬುದರ ವಸ್ತುನಿಷ್ಠವಾದ ಸುಸಂಬದ್ಧವಾದ ಮೌಲ್ಯಮಾಪನ ನಡೆದ ಬಗ್ಗೆ ವಿವರಗಳು ಲಭ್ಯವಿಲ್ಲ.

–ಸಿ.ಜಿ. ವೆಂ

## ಝಾಕಿರ್ ಹುಸೇನ್

ಭಾರತದ ಮೂರನೇ ರಾಷ್ಟ್ರಪತಿಗಳಾದ ಝಾಕಿರ್ ಹುಸೇನರು ಹೆಸರಾಂತ ಶಿಕ್ಷಣತಜ್ಞ, ನಿಷ್ಠಾವಂತ ಗಾಂಧೀವಾದಿ ಹಾಗೂ ವೃತ್ತಿಪರ ಶಿಕ್ಷಣ ವ್ಯವಸ್ಥೆಯ ಪ್ರವರ್ತಕ. ಆಂಧ್ರಪ್ರದೇಶದ ಹೈದರಾಬಾದಿನಲ್ಲಿ 1897ರಲ್ಲಿ ಪಠಾಣ್ ಮನೆತನದಲ್ಲಿ ಇವರ ಜನನವಾಯಿತು. ಇವರ ತಂದೆ ವಕೀಲಿ ವೃತ್ತಿಯಲ್ಲಿದ್ದು ತಕ್ಕಮಟ್ಟಿಗೆ ಉತ್ತಮ ಜೀವನ ನಡೆಸುತ್ತಿದ್ದರು. ಆದರೆ ಹುಸೇನರ ಮಾತಾಪಿತೃಗಳು ಇವರು ಚಿಕ್ಕವರಾಗಿದ್ದಾಗಲೇ ಕಾಲವಾದರು. ಆದಾಗ್ಯೂ ಓದಿನಲ್ಲಿ ಆಸಕ್ತಿ ತೋರಿಸಿ ಪ್ರತಿಭಾವಂತ ವಿದ್ಯಾರ್ಥಿಯೆನಿಸಿಕೊಂಡರು. ಮೆಟ್ರಿಕ್ಯುಲೇಷನ್ ನಂತರ ಮೊಹಮ್ಮಡನ್ ಆಂಗ್ಲೊ ಓರಿಯಂಟಲ್ ಕಾಲೇಜಿನ (ನಂತರ ಆಲಿಘಡ್ ಮುಸ್ಲಿಂ ಯುನಿವರ್ಸಿಟಿ) ವಿದ್ಯಾರ್ಥಿಯಾದರು.



ಝಾಕಿರ್ ಹುಸೇನ್

ಯುವಕರಾಗಿದ್ದಾಗ ಇವರಿಗೆ ರಾಜನೀತಿಯಲ್ಲಿ, ಸಭೆಯಲ್ಲಿ ಭಾಷಣ ನೀಡುವುದರಲ್ಲಿ ಆಸಕ್ತಿಯಿತ್ತು. ಆಗಿನಿಂದಲೂ ಅವರು ಒಳ್ಳೆಯ ವಾಗ್ಮಿ ಎಂದು ಹೆಸರುವಾಸಿಯಾಗಿದ್ದರು. ಸೂಫಿ ಸಂತರೊಬ್ಬರ ಒಡನಾಟದಿಂದ ಇವರಲ್ಲಿ ಮಾನವೀಯ ಮೌಲ್ಯಗಳು ರಕ್ತಗತವಾಯಿತಲ್ಲದೆ ಅವರ ನಂತರದ ಜೀವನದಲ್ಲಿ ಸಚ್ಚಾರಿತ್ರ್ಯವುಳ್ಳ ವ್ಯಕ್ತಿಯಾಗಲು ಸಾಧ್ಯವಾಯಿತು. ಮೌಲಾನ ಅಬ್ದುಲ್ ಕಲಾಂ ಆಝಾದ್‌ರವರ ವ್ಯಕ್ತಿತ್ವ ಮತ್ತು ಕೃತಿಗಳಿಂದ ಬಹಳವಾಗಿ ಪ್ರಭಾವಿತರಾದರು. ಇದರಿಂದ ಅವರಲ್ಲಿ ಧರ್ಮದ ಬಗ್ಗೆ ಉತ್ಕಟ ಆಸಕ್ತಿ ಜಾಗೃತವಾಯಿತು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಪ್ಲೇಟೋವಿನ "ರಿಪಬ್ಲಿಕ್" ಗ್ರಂಥವನ್ನು ಉರ್ದುವಿಗೆ ಭಾಷಾಂತರಿಸಿದರು ಹಾಗೂ ಹಲವು ಲೇಖನಗಳನ್ನು ಕಾವ್ಯನಾಮವನ್ನಿಟ್ಟುಕೊಂಡು ಬರೆದರು. ಕಾನೂನು ಶಾಖೆಯಲ್ಲಿ ಕೋರ್ಸೊಂದನ್ನು ಪೂರೈಸಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು.

ಈ ಸಮಯದಲ್ಲಿ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಭಾರತದ ಸ್ವಾತಂತ್ರ್ಯ ಆಂದೋಳನ ಆರಂಭವಾಗಿತ್ತು. 1920ರಲ್ಲಿ ಅಸಹಕಾರ ಹಾಗೂ ಸ್ವದೇಶಿ ಚಳುವಳಿಯಲ್ಲಿ ಗಾಂಧೀಜಿಯವರು ವಿದ್ಯಾರ್ಥಿಗಳಿಗೆ ಆಂಗ್ಲರು ನಡೆಸುತ್ತಿರುವ ಸಂಸ್ಥೆಗಳನ್ನು ಬಿಟ್ಟು ಹೊರಬನ್ನಿ ಎಂಬ ಕರೆಯನ್ನು ಕೊಟ್ಟರು. ದೇಶಪ್ರೇಮಿಯಾಗಿದ್ದ ವಿದ್ಯಾರ್ಥಿ ಝಾಕಿರ್ ಹುಸೇನರು ಈ

Digitised by Bharatavani, CIIL

ಕರೆಗೆ ಸ್ಪಂದಿಸಿ ಮೊಹಮ್ಮಡನ್ ಆಂಗ್ಲೋ ಓರಿಯಂಟಲ್ ಕಾಲೇಜನ್ನು ಬಿಟ್ಟು ಹೊರಬಂದರು. ಸಂಸ್ಥೆಯನ್ನು ಬಿಟ್ಟು ಹೊರಬಂದ ಹತ್ತು ದಿನಗಳಲ್ಲಿ ಇಬ್ಬರು ಪ್ರತಿಷ್ಠಿತ ವ್ಯಕ್ತಿಗಳಾದ ಡಾ॥ ಅನ್ಸಾರಿ ಮತ್ತು ಹಕೀಂ ಅಜ್ಮಲ್‌ಖಾನ್ ಇವರೊಡನೆ ಸೇರಿ ಜಾಮಿಯ ಮಿಲಿಯ ಇಸ್ಲಾಮಿಯ ಎಂಬ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದರು. ಜ್ಞಾನದಾಹಿಯಾದ ಝಾಕಿರ್ ಹುಸೇನರು ತಮ್ಮ ಜ್ಞಾನವರ್ಧನೆಗಾಗಿ ಜರ್ಮನಿಯ ಬರ್ಲಿನ್‌ಗೆ ತೆರಳಿ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಮೂರು ವರ್ಷಗಳ ಕಠಿಣ ಪರಿಶ್ರಮದಿಂದ ಡಾಕ್ಟರೇಟ್ ಪದವಿಯು ದೊರಕಿತು. ಭಾರತಕ್ಕೆ ಹಿಂದಿರುಗಿದಾಗ ಜಾಮಿಯ ಮಿಲಿಯ ಇಸ್ಲಾಮಿಯ ಶೋಚನೀಯ ಸ್ಥಿತಿಯಲ್ಲಿದ್ದುದನ್ನು ಕಂಡು ಅದರ ಉದ್ಧಾರಕ್ಕೆ ಕಟಿಬದ್ಧರಾಗಿ ನಿಂತರು. ಈ ಸಂಸ್ಥೆಯ ಆರಂಭದ ಚರಿತ್ರೆಯೆಂದರೆ ಝಾಕಿರ್ ಹುಸೇನ್ ಮತ್ತು ಅವರ ಸಹೋದ್ಯೋಗಿಗಳ ಸ್ವಾರ್ಥರಹಿತ ಸಾಹಸ ಕಥೆಯೆಂದರೆ ತಪ್ಪಾಗಲಾರದು. ಸಂಸ್ಥೆಯನ್ನು ಮುಚ್ಚುವುದೇ ಸೂಕ್ತ ಎಂದು ಕೆಲವರು ಹೇಳಿದಾಗ ಅದಕ್ಕೊಪ್ಪದೆ ತಮ್ಮ ಸರ್ವಸ್ವವನ್ನು ಸಂಸ್ಥೆಗಾಗಿ ತ್ಯಾಗಮಾಡಲು ಸಿದ್ಧರಾಗಿ ತಮ್ಮ ಸ್ವಾರ್ಥರಹಿತ ಪರಿಶ್ರಮದಿಂದ ಮತ್ತು ಹಲವೆಡೆಯಿಂದ ಚಂದಾ ಸಂಗ್ರಹಿಸುವುದರ ಮೂಲಕ ಸಂಸ್ಥೆಯನ್ನು ಉಳಿಸಿದರು. ಅಷ್ಟೇ ಅಲ್ಲ, ಸಂಸ್ಥೆಯು ಇವರ ಸಮರ್ಪಣಾ ಮನೋಭಾವ ಹಾಗೂ ಶ್ರದ್ಧಾಯುಕ್ತ ಶ್ರಮದಿಂದ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸುವಂತಾಯಿತು. 1927ರಿಂದ ಇಪ್ಪತ್ತೊಂದು ವರ್ಷಗಳ ಕಾಲ ಈ ಸಂಸ್ಥೆಯ ಮುಂದಾಳತ್ವವನ್ನು ವಹಿಸಿದ್ದರು. ಇದು ಕೇವಲ ಒಂದು ಶಿಕ್ಷಣ ಸಂಸ್ಥೆಯ ಮುಂದಾಳತ್ವ ಮಾತ್ರವಾಗದೆ ಒಂದು ಶಿಕ್ಷಣ ಸಂಸ್ಥೆಯು ದೇಶದ ಆಶೋತ್ತರಗಳು ಮತ್ತು ಪರಕೀಯರ ಆಳ್ವಿಕೆಯಿಂದ ಸ್ವತಂತ್ರವಾಗಬೇಕೆಂಬ ದೃಢನಿರ್ಧಾರಗಳಿಗೆ ಪ್ರತೀಕವಾಗಬಲ್ಲದು ಎಂಬುದಕ್ಕೆ ನಿದರ್ಶನವಾಗಿತ್ತು. 1937ರಲ್ಲಿ ಗಾಂಧೀಜಿಯವರು ವಾರ್ಧಾದಲ್ಲಿ ಏರ್ಪಡಿಸಿದ ಶೈಕ್ಷಣಿಕ ಸಭೆಯಲ್ಲಿ ಇವರು ಮುಖ್ಯ ಸಹಭಾಗಿಯಾಗಿದ್ದರು. ಸಭೆಯಲ್ಲಿ ಗಾಂಧೀಜಿಯವರು ಮಂಡಿಸಿದ ವೃತ್ತಿಪರ ಶಿಕ್ಷಣವನ್ನು ಎತ್ತಿಹಿಡಿದ ಝಾಕಿರ್ ಹುಸೇನರಿಗೆ ಈ ನವ ಶೈಕ್ಷಣಿಕ ಆಂದೋಳನಕ್ಕೆ ಪಠ್ಯಕ್ರಮವನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಯುನಿವರ್ಸಿಟಿ ಎಜುಕೇಷನ್ ಕಮೀಷನ್, ಯುಜಿಸಿ, ವರ್ಲ್ಡ್ ಯುನಿವರ್ಸಿಟಿ ಸರ್ವಿಸ್, ಯುನೆಸ್ಕೋಗಳಲ್ಲೂ ಇನ್ನಿತರ ಶ್ರೇಷ್ಠ ಚಿಂತಕರ ಸಾಲಿನಲ್ಲಿಯೂ ಝಾಕಿರ್ ಹುಸೇನರ ಸ್ಥಾನ ನಿಸ್ಸಂಶಯವಾಗಿ ಬಲಗೊಂಡಿತು. 1948ರ ಸ್ವತಂತ್ರ ಭಾರತದ ಆಲಿಘಡ್ ಮುಸ್ಲಿಂ ಯುನಿವರ್ಸಿಟಿಯ ಉಪಕುಲಪತಿಗಳಾಗಿ ಆಯ್ಕೆಗೊಂಡರು. ಈ ಸ್ಥಾನವನ್ನು ಎಂಟು ವರ್ಷಗಳ ಕಾಲ ವಹಿಸಿಕೊಂಡಿದ್ದರು. ಇದು ಅವರ ಮಹತ್ಸಾಧನೆಗಳ ಅವಧಿಯಾಗಿತ್ತು. ಸತತವಾಗಿ ರಾಜ್ಯಸಭೆಗೆ ಚುನಾಯಿತರಾದ ಇವರು 1957ರಲ್ಲಿ ಬಿಹಾರ್ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡರು. ಐದು ವರ್ಷಗಳ ನಂತರ ಭಾರತದ ಉಪರಾಷ್ಟ್ರಪತಿಗಳಾಗಿಯೂ 1967ರಲ್ಲಿ ರಾಷ್ಟ್ರಪತಿಗಳಾಗಿಯೂ ಚುನಾಯಿತರಾದರು. ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸುತ್ತಿರುವಾಗಲೇ 1969ರಲ್ಲಿ ಇಹಲೋಕವನ್ನು ತ್ಯಜಿಸಿದರು.

ಪ್ರತಿಭಾವಂತ ಶಿಕ್ಷಣತಜ್ಞ ಹಾಗೂ ಚಿಂತಕರಾದ ಝಾಕಿರ್ ಹುಸೇನರು ಭಾರತೀಯ ಶಿಕ್ಷಣ ಇತಿಹಾಸಕ್ಕೆ ಮೂಲಶಿಕ್ಷಣವೆಂಬ ಹೊಸ ಆಯಾಮವನ್ನು ಕೊಡಲು ಪ್ರಯತ್ನಿಸಿದರು. ಗಾಂಧೀಜಿಯವರ ಶಿಕ್ಷಣದ ದೃಷ್ಟಿಕೋನದಿಂದ ಅವರು ಪ್ರಭಾವಿತರಾಗಿ ಮೂಲಶಿಕ್ಷಣದ ಮುಖ್ಯ ಪ್ರತಿಪಾದಕರು ಮತ್ತು ವ್ಯಾಖ್ಯಾನಕಾರರಾದರು. ಇದನ್ನು "ನಯೀ ತಾಲೀಂ" ಎಂದು ಕರೆಯುತ್ತಾರೆ. ವಾರ್ಧಾದಲ್ಲಿ ನವ ಶಿಕ್ಷಣದ ಬಗ್ಗೆ ನಡೆದ ಸಭೆಯಲ್ಲಿ ಗಾಂಧೀಜಿಯವರು ಗ್ರಾಮಾಂತರ ಪ್ರದೇಶಗಳಲ್ಲಿ ಉಚಿತ, ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂದೂ ಹಾಗೂ ಅದು ಸ್ವಾವಲಂಬಿಯಾಗಿರಬೇಕೆಂದೂ ಹೇಳಿದರು. ಝಾಕಿರ್ ಹುಸೇನರು ತಮ್ಮ ಭಾಷಣದಲ್ಲಿ ವೃತ್ತಿಪರ ಶಿಕ್ಷಣವನ್ನು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಮಟ್ಟದಲ್ಲಿ ಹೇಳಿಕೊಡಬೇಕು ಎಂದು ಅಭಿಪ್ರಾಯಪಟ್ಟರು. ತಕಲಿಯ ಉಪಯೋಗ ಮತ್ತು ನೂಲುವುದರ ಬಗ್ಗೆ ಹೆಚ್ಚು ಒತ್ತನ್ನು ನೀಡಿದರು.

ಶಿಕ್ಷಣ, ಸಮಾಜ ಮತ್ತು ಸಂಸ್ಕೃತಿ ಈ ಮೂರರ ನಡುವಿನ ಆಂತರಿಕ ಸಂಬಂಧವನ್ನು ಚೆನ್ನಾಗಿ ಅರಿತಿದ್ದ ಹುಸೇನರು ಸಮಾಜ ಮತ್ತು ಸಂಸ್ಕೃತಿಗೆ ಯಾವುದೇ ಸಂಬಂಧವಿಲ್ಲದೆ ಶಿಕ್ಷಣವನ್ನು ಒಪ್ಪುತ್ತಿರಲಿಲ್ಲ. ಅವರ ಮಾತಿನಲ್ಲೇ ಹೇಳುವುದಾದರೆ "ಸಮಾಜ ಎಂಬುದು ವಾಸ್ತವಿಕ ಸತ್ಯ. ವ್ಯಕ್ತಿಯು ಸಮಾಜದ ಅಂಗ. ಸಮಾಜಕ್ಕೆ ಹೊರತಾದ ಆತನ ಬೌದ್ಧಿಕ ಜೀವನ ನಿರರ್ಥಕ. ಬೌದ್ಧಿಕ ಪ್ರತಿಭೆ ಸಮಾಜದೊಡನೆ ಇರುವ ಪರಸ್ಪರ ಒಡನಾಟದ ಮುಖಾಂತರ ವ್ಯಕ್ತವಾಗುತ್ತದೆ. ಮರದ ಎಲೆಗಳು ನಶಿಸುತ್ತವೆ, ಮರ ಪುನರುಜ್ಜೀವಿತಗೊಳ್ಳುತ್ತದೆ. ಈ ಕ್ಷಯ-ವೃದ್ಧಿ ಮರದ ಸತತ ಜೀವನವನ್ನು ಬಾಧಿಸುವುದಿಲ್ಲ. ಇದೇ ರೀತಿ ಮಾನವ ಸಮಾಜದಲ್ಲಿ ವ್ಯಕ್ತಿಗಳು ಬಂದು ಹೋಗುತ್ತಾರೆ. ಆದರೆ ಸಮಾಜ ಹಾಗೆಯೇ ಇರುತ್ತದೆ. ಆದ್ದರಿಂದ, ಸಮಾಜದಲ್ಲಿ ವ್ಯಕ್ತಿಯ ಗುರಿ ಈ ಕ್ಷಯ-ವೃದ್ಧಿ ಚಕ್ರವನ್ನು ಮುಂದುವರೆಯುವಂತೆ ಮಾಡುವುದು, ಆಧುನಿಕ ಪೀಳಿಗೆಯನ್ನು ಇದಕ್ಕನುಸಾರವಾಗಿ ತರಪೇತಿಗೊಳಿಸುವುದು, ಹಾಗೂ ಶಿಕ್ಷಣ ನೀಡುವುದು ವ್ಯಕ್ತಿಯೆಡೆಗೆ ಸಮಾಜವು ಕೈಗೊಳ್ಳಬೇಕಾದ ಕರ್ತವ್ಯವಾಗಿದೆ.

ಶಿಕ್ಷಣ ಎಂಬುದನ್ನು ಝಾಕಿರ್ ಹುಸೇನರು ಹೀಗೆ ವ್ಯಾಖ್ಯಾನಿಸಿದ್ದಾರೆ.

"ತನ್ನ ಅಸ್ತಿತ್ವಕ್ಕಾಗಿ ಹಾಗೂ ಸಾಮಾಜಿಕ ಬದಲಾವಣೆಗೆ ಸ್ಪಂದಿಸುವ ತನ್ನ ಸದಸ್ಯರನ್ನು ತರಬೇತಿಗೊಳಿಸುವುದಕ್ಕಾಗಿ ಸಮಾಜವು ಕೈಗೊಳ್ಳುವ ಯೋಜಿತ ಹಾಗೂ ಉದ್ದೇಶಪೂರ್ವಕ ಪ್ರಯತ್ನವೇ ಶಿಕ್ಷಣ ಎನಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿಯು ಸ್ಮರಣೆಯ ಮುಖಾಂತರ ಗತಕಾಲವನ್ನು ಪುನರ್ರಚಿಸಿಕೊಳ್ಳುವಂತೆ, ಶಿಕ್ಷಣವು ಸಾಮಾಜಿಕ ವ್ಯವಸ್ಥೆಯ ಭೂತ ಹಾಗೂ ಭವಿಷ್ಯತ್ತಿನ ನಡುವೆ ಇರುವ ಕೊಂಡಿಯಂತಿದೆ. ರಾಷ್ಟ್ರೀಯ ಶಿಕ್ಷಣದ ಕೊರತೆ ರಾಷ್ಟ್ರಜೀವನವನ್ನು ಪ್ರತಿಕೂಲವಾಗಿ ಪ್ರಭಾವಿಸುತ್ತದೆ." ಭೌತಿಕ ದೇಹಕ್ಕೆ ಆಹಾರವು ಹೇಗೆ ಅಗತ್ಯವೋ ಹಾಗೆ ಬುದ್ಧಿಯ ಪೂರ್ಣ ಬೆಳವಣಿಗೆಗೆ ಶಿಕ್ಷಣವು ಅತ್ಯಗತ್ಯ ಎಂಬುದು ಅವರ ಮತ. ಶಿಕ್ಷಣದ ಸಾರವನ್ನು ಅವರು ಹೀಗೆ ವ್ಯಾಖ್ಯಾನಿಸಿದ್ದಾರೆ. "ಸಂಸ್ಕೃತಿಯಲ್ಲಿ ಹುದುಗಿರುವ ವಿಶಿಷ್ಟ ಲಕ್ಷಣಗಳಿಂದ ಮಾನವನ ಬುದ್ಧಿಯನ್ನು ಪುಷ್ಟಿಗೊಳಿಸುವ ಪ್ರಕ್ರಿಯೆಯೇ ಶಿಕ್ಷಣದ ಸಾರವಾಗಿದೆ."

ಹುಸೇನರು ಶಿಕ್ಷಣದಲ್ಲಿ ದೈಹಿಕ ಶ್ರಮದ ಪಾತ್ರದ ಬಗ್ಗೆ ಕೆಲವು ವಿಚಾರಗಳನ್ನು ಜಾಮಿಯ ಮಿಲಿಯ ಇಸ್ಲಾಮಿಯ ಸಂಸ್ಥೆಯಲ್ಲಿ ಕಾರ್ಯರೂಪಕ್ಕೆ ತಂದರು. ದೇಶದ ಮಿಷನರಿ ಸಂಸ್ಥೆಗಳು ಹಾಗೂ ಹೊರ ದೇಶದ ಶಿಕ್ಷಣಸಂಸ್ಥೆಗಳು ಈ ವಿಚಾರದ ಅರಿವನ್ನು ಹೊಂದಿದ್ದರೂ ಈ ವಿಚಾರವನ್ನು ಸೂಕ್ಷ್ಮರೀತಿಯಲ್ಲಿ ಅರ್ಥ ಮಾಡಿಕೊಂಡು ಅದನ್ನು ವಿವರವಾಗಿ ತಿಳಿಸಿಕೊಟ್ಟ ಹಿರಿಮೆ ಝಾಕಿರ್ ಹುಸೇನರಿಗೆ ಸಲ್ಲಬೇಕು.

ಶಿಕ್ಷಣದಲ್ಲಿ ದೈಹಿಕ ಶ್ರಮವನ್ನು ಖುಷಿಗಾಗಿಯೋ ಅಥವಾ ಅಲಂಕಾರವೆಂಬಂತೆಯೋ ಪರಿಗಣಿಸಬಾರದು. ಇದು ಒಂದು ಉದ್ದೇಶದಿಂದ ಪ್ರೇರಿತವಾದ ಚಟುವಟಿಕೆ. ಶಿಕ್ಷಣ ವ್ಯವಸ್ಥೆಯಲ್ಲಿ ಇದು ಒಳಗೊಂಡಾಗ ಇದರ ಉದ್ದೇಶವು ಸಾಧಿತವಾಗಬೇಕು ಎಂಬ ಆಸೆ ನಮ್ಮಲ್ಲಿರಬೇಕು. ಮನಸ್ಸು ಬುದ್ಧಿಗಳಿಗೆ ಶಿಕ್ಷಾಪ್ರದವಾಗಬೇಕಾದರೆ ಕೈಕೆಲಸವು ಸರಿಯಾದ ರೀತಿಯಲ್ಲಿ ಯೋಜಿತಗೊಳ್ಳಬೇಕಲ್ಲದೆ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಹಾಗೂ ಉಪಕರಣಗಳನ್ನು ಒದಗಿಸಬೇಕು. ನಂತರ ಅದನ್ನು ಕಾರ್ಯಗತಗೊಳಿಸಿ ಮೌಲ್ಯಮಾಪನ ಮಾಡಬೇಕು. ಇದರಿಂದ ವಿದ್ಯಾರ್ಥಿಯಲ್ಲಿ ಕುಶಲತೆಗಳು ಕರಗತವಾಗುತ್ತವೆ. ಅಂತಿಮವಾಗಿ ದೈಹಿಕ

Digitised by Bharatavani, CIIL

ಶ್ರಮದ ಫಲರೂಪವಾದ ಕುಶಲತೆಗಳು ವ್ಯಕ್ತಿಯ ಸ್ವಾರ್ಥಕ್ಕಾಗಿ ಮಾತ್ರ ಉಪಯೋಗವಾಗದೆ ಉನ್ನತ ಲಕ್ಷ್ಯಗಳನ್ನು ಸಾಧಿಸುವಲ್ಲಿ ಪರ್ಯವಸಾನಗೊಳ್ಳಬೇಕು.

ಜ಼ಾಕಿರ್ ಹುಸೇನರ ಪ್ರಕಾರ ಶಿಕ್ಷಣವು ಭೌತಿಕ ಮತ್ತು ಪಾರಮಾರ್ಥಿಕ ಮೌಲ್ಯಗಳ ನಡುವಿನ ಸೂಕ್ಷ್ಮ ಸಮತೋಲನವನ್ನು ಸಾಧಿಸುವಂತಿರಬೇಕು ಹಾಗೂ ವಿದ್ಯಾರ್ಥಿಯ ವ್ಯಕ್ತಿತ್ವದಲ್ಲಿ ಕ್ರಿಯಾತ್ಮಕ ಶಕ್ತಿಯನ್ನು ವೃದ್ಧಿಗೊಳಿಸುವಂತಿರಬೇಕು. ಸಮಾಜವನ್ನು ಮಾರ್ಪಡಿಸುವಂಥ ವಿದ್ಯಾರ್ಥಿಗಳ ಬುದ್ಧಿ, ಹೃದಯ ಹಾಗೂ ಕರಗಳ ರೂಪಾಂತರವನ್ನು ಶಿಕ್ಷಣವು ತನ್ನ ಉದ್ದೇಶವನ್ನಾಗಿಟ್ಟುಕೊಂಡಿರಬೇಕು.

ಅವರ ನವಶಿಕ್ಷಣದ ವಿಚಾರವನ್ನು ಕೆಲವು ವರ್ಗದವರು ಅದರಲ್ಲೂ ಧಾರ್ಮಿಕ ಶಿಕ್ಷಣ ಅಂತರ್ಗತವಾಗಿಲ್ಲವೆಂಬ ಕಾರಣಕ್ಕೆ ವಿರೋಧ ವ್ಯಕ್ತಪಡಿಸಿದರು. ಆದರೆ ಜ಼ಾಕಿರ್ ಹುಸೇನರು ಈ ದೃಷ್ಟಿಕೋನವನ್ನು ಒಪ್ಪಲಿಲ್ಲ. ಸರ್ಕಾರವು ನಡೆಸುವ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ನೀಡಲಾಗದು ಎಂದು ಅವರು ಪ್ರತಿಕ್ರಿಯಿಸಿದರು. ಅವರ ಮೂಲಶಿಕ್ಷಣ ವ್ಯವಸ್ಥೆ ಅವರಿಗೆ ತೃಪ್ತಿಯಾಗುವಂತೆ ಕಾರ್ಯರೂಪಕ್ಕೆ ಬರಲಿಲ್ಲವಾದರೂ ಜೀವಂತವಾಗಿರುವವರೆಗೂ ಅವಕಾಶ ದೊರೆತಾಗಲೆಲ್ಲಾ ಮೂಲ ಶಿಕ್ಷಣದ ಪ್ರಾಯೋಗಿಕತೆ ಹಾಗೂ ಅದರ ಲಾಭಗಳ ಬಗ್ಗೆ ಶ್ರೋತೃಗಳಿಗೆ ತಿಳಿಸುತ್ತಿದ್ದರು.

ಅವರೇ ಹೇಳುವ ಹಾಗೆ ಅವರ ಶಿಕ್ಷಣದ ವಿಚಾರಗಳು ಮೊದಲು ತಮ್ಮ ಜರ್ಮನ್ ಪ್ರೊಫೆಸರ್‌ಗಳಿಂದಲೂ ನಂತರ ಗಾಂಧೀಜಿಯವರ ವಿಚಾರಗಳಿಂದಲೂ ಬಹಳವಾಗಿ ಪ್ರಭಾವಿತಗೊಂಡವು. ಅವರ ನವಶಿಕ್ಷಣವು ತರ್ಕಬದ್ಧ ಶೈಕ್ಷಣಿಕ, ಮಾನಸಿಕ ಹಾಗೂ ಸಾಮಾಜಿಕ ವಾಸ್ತವಿಕತೆಗಳನ್ನು ಆಧರಿಸಿ ನಿಂತಿರುವುದರಿಂದ ಅದನ್ನು ದೃಢವಿಶ್ವಾಸ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯರೂಪಕ್ಕೆ ತಂದರೆ ಈಗಲೂ ಅಸಂಗತವಲ್ಲ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಗ್ರಂಥಗಳನ್ನು ಮತ್ತು ಲೇಖನಗಳನ್ನು ಜ಼ಾಕಿರ್ ಹುಸೇನ್ ಬರೆದಿದ್ದಾರೆ. ಮಹಾತ್ಮ ಗಾಂಧೀಜಿಯವರನ್ನು ಕುರಿತ ಗ್ರಂಥವೊಂದನ್ನು ಜರ್ಮನ್ ಭಾಷೆಯಲ್ಲಿ ಬರೆದಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಶೈಕ್ಷಣಿಕ ವ್ಯವಸ್ಥೆಯಲ್ಲಿ ಸುಧಾರಣೆಯ ತುರ್ತು ಅಗತ್ಯವನ್ನು ಮನಗಂಡ ಜ಼ಾಕಿರ್ ಹುಸೇನರು ಶಿಕ್ಷಣದ ಪ್ರಾಯೋಗಿಕ ಹಾಗೂ ಆಡಳಿತಾತ್ಮಕ ಆಯಾಮಗಳಲ್ಲಿ ಬಹಳ ಮುಂಚಿತವಾಗಿಯೇ ತಮ್ಮನ್ನು ತಾವು ತೊಡಗಿಸಿಕೊಂಡರು. ಇದರ ಉದ್ದೇಶ ರಾಷ್ಟ್ರೀಯ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಪ್ರೋತ್ಸಾಹಿಸುವುದಾಗಿತ್ತು. ಅವರ ಲಿಖಿತರೂಪದಲ್ಲಿರುವ ವಿಚಾರಗಳು, ಭಾಷಣಗಳು ಅವರ ಸಾಹಿತ್ಯಿಕ ಪ್ರತಿಭೆ, ಶ್ರೀಮಂತ ಚಿಂತನೆಗಳಿಗೆ ನಿದರ್ಶನವಾಗಿವೆ.

– ಬಿ.ಎಂ.ಚಂ.

## ಜ್ಞಾನ ನಿರ್ವಹಣೆ

'ಜ್ಞಾನ ನಿರ್ವಹಣೆ' (Knowledge Management) 1991ರಿಂದಲೇ ಅಧ್ಯಯನದ ಒಂದು ಶಾಸ್ತ್ರ (discipline)ವಾಗಿ ಪರಿಗಣಿಸಲ್ಪಟ್ಟಿದೆ. ಮಾಹಿತಿ ವ್ಯವಸ್ಥೆ, ಮಾಹಿತಿ ನಿರ್ವಹಣೆ, ಗ್ರಂಥಾಲಯ ಮಾಹಿತಿ ವಿಜ್ಞಾನ, ವ್ಯಾಪಾರ, ಆಡಳಿತ ಮುಂತಾದ ಕ್ಷೇತ್ರಗಳಲ್ಲಿ 'ಜ್ಞಾನ ನಿರ್ವಹಣೆ'ಯನ್ನು ಒಂದು ಅಧ್ಯಯನ ವಿಷಯವಾಗಿ ಕಲಿಸಲಾಗುತ್ತದೆ. ಆರೋಗ್ಯ, ಸಾರ್ವಜನಿಕ ನೀತಿ ನಿರೂಪಣೆ, ಕಂಪ್ಯೂಟರ್ ವಿಜ್ಞಾನ ಮಾಹಿತಿ ಮತ್ತು ಮಾಧ್ಯಮ, ಶಿಕ್ಷಣ ಇತ್ಯಾದಿ ಕ್ಷೇತ್ರಗಳು ಜ್ಞಾನ ನಿರ್ವಹಣೆ ಸಂಶೋಧನೆಗೆ ಸಂಬಂಧಿಸಿದಂತೆ ಅನೇಕ ಕೊಡುಗೆಗಳನ್ನು ನೀಡಿವೆ.

### ಅರ್ಥ ಮತ್ತು ವ್ಯಾಪ್ತಿ

'ಜ್ಞಾನ ನಿರ್ವಹಣೆ'ಯ ಪರಿಕಲ್ಪನೆ ವಿಶಾಲ ಅರ್ಥವನ್ನು ಹೊಂದಿದೆ. ಬೇರೆ ಬೇರೆ ದೃಷ್ಟಿಕೋನಗಳಿಂದ ಇದನ್ನು ಅರ್ಥೈಸಬಹುದಾಗಿದೆ. ಜ್ಞಾನ ನಿರ್ವಹಣೆಯು–

i. ವ್ಯವಸ್ಥೆಗಳು ಮತ್ತು ತಂತ್ರಜ್ಞಾನಗಳಿಗೆ

ii. ವ್ಯಕ್ತಿಗಳು ಮತ್ತು ಕಲಿಕಾ ಸಂಘಟನೆಗಳಿಗೆ

iii. ಪ್ರಕ್ರಿಯೆ, ವಿಧಾನ, ತಂತ್ರಗಳಿಗೆ

iv. ಜ್ಞಾನವೆಂಬ ಆಸ್ತಿಯ ನಿರ್ವಹಣೆಗೆ

ಸಂಬಂಧಿಸಿದೆ ಎಂದು ಪರಿಗಣಿಸಲಾಗುತ್ತದೆ.

'ಜ್ಞಾನ ನಿರ್ವಹಣೆ'ಯ ವಿವಿಧ ಅಂಶಗಳನ್ನು ಒಳಗೊಂಡಿರುವ ವ್ಯಾಖ್ಯೆಯೊಂದು ಹೀಗಿದೆ :

"ವ್ಯಕ್ತಿಗಳು, ತಂಡಗಳು, ಸಮಗ್ರ ಸಂಸ್ಥೆಗಳು ಒಟ್ಟಾಗಿ ಮತ್ತು ವ್ಯವಸ್ಥಿತವಾಗಿ ಜ್ಞಾನವನ್ನು ಸೃಷ್ಟಿಮಾಡುವ, ಹಂಚುವ, ಬಳಸಿಕೊಳ್ಳುವುದರ ಮೂಲಕ ಅವರುಗಳ ಗುರಿಗಳನ್ನು ಉತ್ತಮ ರೀತಿಯಲ್ಲಿ ಸಾಧಿಸಲು ಶಕ್ತಗೊಳಿಸುವ ಅಧ್ಯಯನ ಶಾಸ್ತ್ರವನ್ನು ಜ್ಞಾನ ನಿರ್ವಹಣೆ ಎಂದು ಕರೆಯುತ್ತಾರೆ." ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಜ್ಞಾನ ನಿರ್ವಹಣೆಯ ಉದ್ದೇಶ ಜ್ಞಾನಾರ್ಜನೆ ಮಾತ್ರ ಅಲ್ಲ. ಉತ್ತಮ ರೀತಿಯಲ್ಲಿ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಜ್ಞಾನವನ್ನು ಸೃಷ್ಟಿಸುವ, ವರ್ಗಾಯಿಸುವ ಹಾಗೂ ಜ್ಞಾನವನ್ನು ಬಳಸಿಕೊಳ್ಳುವ ಪ್ರಕ್ರಿಯೆಯನ್ನೂ ಒಳಗೊಂಡಿದೆ.

### ಮಹತ್ವ

ಪರಿಣಾಮಕಾರಿ 'ಜ್ಞಾನ ನಿರ್ವಹಣೆಯಿಂದ' ವ್ಯಕ್ತಿಗೆ, ತಂಡಕ್ಕೆ, ಸಂಘ/ಸಂಸ್ಥೆಗಳಿಗೆ, ಸಮುದಾಯಕ್ಕೆ, ಕಂಪೆನಿಗಳಿಗೆ, ರಾಷ್ಟ್ರಕ್ಕೆ, ವಿಶ್ವಕ್ಕೆ ಅನೇಕ ರೀತಿಯ ಅನುಕೂಲತೆಗಳು ಲಭ್ಯ. ಅವುಗಳಲ್ಲಿ ಕೆಲವು ಹೀಗಿವೆ:

- ಶಿಕ್ಷಕರೂ ಒಳಗೊಂಡಂತೆ ವ್ಯಕ್ತಿಗಳು ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು
- ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ ತಮ್ಮ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳಲು
- ವೈಯಕ್ತಿಕವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಜ್ಞಾನ ನಿರ್ವಹಣಾ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳಲು
- ವ್ಯಕ್ತಿಗಳು ಜ್ಞಾನ ಚಾಲಿತ ಸಂಘ ಸಂಸ್ಥೆಗಳಲ್ಲಿ ಯಶಸ್ವೀ ನಾಯಕರುಗಳಾಗಿ ಕಾರ್ಯ ನಿರ್ವಹಿಸಲು
- ಸಾರ್ವಜನಿಕ ಹಾಗೂ ಖಾಸಗೀ ಸ್ವಾಮ್ಯದ ಕೈಗಾರಿಕೆ, ಶಿಕ್ಷಣ ಮತ್ತು ಮಾನವಿಕ ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು
- ಸರ್ಕಾರಿ ಹಾಗೂ ಮಿಲಿಟರಿ ಉದ್ದೇಶಗಳಿಗೆ, ರಾಷ್ಟ್ರೀಯ ಹಾಗೂ ಜಾಗತಿಕ ಬಡತನ ನಿರ್ಮೂಲನೆಗೆ, ಅಂತಾರಾಷ್ಟ್ರೀಯ ವಿಪತ್ತು ನಿರ್ವಹಣೆಗೆ, ರಾಷ್ಟ್ರೀಯ ಹಾಗೂ ಜಾಗತಿಕ ವಾಯುಗುಣ ಬದಲಾವಣೆ ಅಧ್ಯಯನ ಕೈಗೊಳ್ಳಲು
- ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ತಮ್ಮ ಕೆಲಸ ಕಾರ್ಯಗಳನ್ನು ಹೆಚ್ಚು ದಕ್ಷತೆಯಿಂದ ಶೀಘ್ರವಾಗಿ ನಿರ್ವಹಿಸಲು

Digitised by Bharatavani, CIIL

- ಕಂಪನಿಗಳಿಗೆ ಸಂಬಂಧಿಸಿದಂತೆ, ಉತ್ಪನ್ನ/ಸರಕುಗಳು ಹಾಗೂ ಸೇವೆಗಳ ನಿರಂತರ ಗುಣಮಟ್ಟದಲ್ಲಿ ಸುಧಾರಣೆ ಉಂಟುಮಾಡಲು
- ಸೇವೆ ಹಾಗೂ ಉತ್ಪನ್ನಗಳ ಉತ್ಕೃಷ್ಟತೆಯನ್ನು ಕಾಪಾಡಿಕೊಂಡು ಬರಲು
- ಜ್ಞಾನ ಸೃಷ್ಟಿಮಾಡುವ ಪ್ರಕ್ರಿಯೆಯ ಮೂಲಕ ಅದಕ್ಕೆ ಸಂಬಂಧಿಸಿದವರು ಸೃಜನಶೀಲ ಹಾಗೂ ಅನ್ವೇಷಣಾ ಸಾಮರ್ಥ್ಯ ಬೆಳೆಸಿಕೊಳ್ಳಲು.
- ಬಳಕೆದಾರ/ಗ್ರಾಹಕರನ್ನು ತೃಪ್ತಿಪಡಿಸಲು
- ನೌಕರರಿಗೆ ತರಬೇತಿ ಸಮಯ ಕಡಿಮೆ ಮಾಡಲು, ಅನಗತ್ಯ ಕೆಲಸದ ಹೊರೆ ಇಳಿಸಲು ಸಂಸ್ಥೆಗೆ ಸಂಬಂಧಿಸಿದ ಅಮೂಲ್ಯ ಪರಿಜ್ಞಾನವನ್ನು ಹಂಚಿಕೊಳ್ಳಲು
- ಸರಕು/ಸೇವಾ ನಿರ್ವಹಣೆ ಜ್ಞಾನ ಆಧಾರಿತವಾಗಿರುವಂತೆ ಮಾಡಲು
- ಎಲ್ಲಾ ಕಾರ್ಯಕ್ಷೇತ್ರಗಳಲ್ಲೂ ಮಾಹಿತಿ ನಿರ್ವಹಣೆಯ ತತ್ವಗಳು, ತಂತ್ರಗಳು, ಪ್ರಕ್ರಿಯೆಗಳು, ವಿಧಿ ವಿಧಾನಗಳು, ಸಾಧನಗಳನ್ನು ಯಥೇಚ್ಛವಾಗಿ ಬಳಸಿಕೊಳ್ಳಲು
- ಉತ್ಪನ್ನ ಸೇವೆಗಳಿಗೆ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆ ಒದಗಿಸಲು, ಲಾಭ ಗಳಿಸಲು
- ಸಹಭಾಗಿತ್ವ ವಾತಾವರಣವನ್ನು ಉಂಟುಮಾಡಲು, ವೃದ್ಧಿಸಲು

**ಜ್ಞಾನ ನಿರ್ವಹಣೆಗೆ ಬಳಸಬಹುದಾದ ಕೆಲವು ಕಾರ್ಯತಂತ್ರಗಳು**

ವೈಯಕ್ತಿಕ ಮಟ್ಟದಲ್ಲಿ ಲಭ್ಯವಿರುವ ಎಲ್ಲಾ ಮಾಹಿತಿಗಳನ್ನು ಪರಸ್ಪರ ಹಂಚಿಕೊಳ್ಳಲು/ವಿನಿಮಯ ಮಾಡಿಕೊಳ್ಳಲು, ಬೇಕೆಂದಾಗ ಪಡೆಯಲು ಶಕ್ತಗೊಳಿಸಲಾದ ಸಂಗ್ರಹಣಾ ವ್ಯವಸ್ಥೆ ರೂಪಿಸಬಹುದಾಗಿದೆ. ಇದು ಒಂದು ಬಗೆಯ ಕಾರ್ಯತಂತ್ರವಾಗಿದೆ. ಇದನ್ನು ಕೋಡಿಫಿಕೇಶನ್ ತಂತ್ರ ಎಂದು ಕರೆಯುತ್ತಾರೆ. ಲಭ್ಯ ಸೇವೆ ವೈಶಿಷ್ಟ್ಯ, ಉತ್ಪನ್ನಗಳ ಬಗ್ಗೆ ತಜ್ಞ ವ್ಯಕ್ತಿಗಳಿಂದ ಅಭಿಪ್ರಾಯ ವಿಶ್ಲೇಷಣೆ, ಹಿಮ್ಮಾಹಿತಿ, ಆಳವಾದ ಪ್ರತಿಕ್ರಿಯೆ ಒಳಗೊಂಡಿರುವ ಮಾಹಿತಿಗಳ ಸಂಗ್ರಹಣೆ, ವಿತರಣೆ ಮತ್ತು ಬಳಕೆ ಜ್ಞಾನ ನಿರ್ವಹಣೆಯ ಮತ್ತೊಂದು ತಂತ್ರ ಎನಿಸಿಕೊಳ್ಳುತ್ತದೆ. ಇದನ್ನು ವ್ಯಕ್ತಿಗತ ತಂತ್ರ ಎನ್ನುತ್ತಾರೆ.

ಜ್ಞಾನ ನಿರ್ವಹಣೆಯಲ್ಲಿ ಬಳಸಲಾಗುವ ಕೆಲವು ಸಾಧನಗಳಿಗೆ ಉದಾಹರಣೆ ಎಂದರೆ ಸಂಸ್ಥೆಯ ಆಡಳಿತ ವೈಖರಿ, ಲಭ್ಯವಿರುವ ಸೌಲಭ್ಯ, ವೈಶಿಷ್ಟ್ಯಗಳ ವಿವರಗಳನ್ನು ಒಳಗೊಂಡ ಕೈಪಿಡಿ (ಅಥವಾ ವೆಬ್ ಸೈಟ್‌ಗಳು) ಮುದ್ರಣ ರೂಪದ ಸಾಹಿತ್ಯ, ಸಾಫ್ಟ್ ಕಾಪಿ, ಬಳಕೆದಾರನ ಕೈಪಿಡಿ/ಗ್ರಾಹಕನ ಮಾರ್ಗದರ್ಶಿ ಪುಸ್ತಕ, ಫೋಲ್ಡರ್‌ಗಳು, ಉತ್ಪನ್ನ/ಸೇವೆಯ ಬಗ್ಗೆ ವಿವರಣಾ ಸಾಹಿತ್ಯ, ಜಾಹೀರಾತು, ಬಹು ಮಾಧ್ಯಮ ಪ್ರಸ್ತುತೀಕರಣಗಳು (Multi Media Presentations) ಕಂಪ್ಯೂಟರ್ ಬೆಂಬಲಿತ ಇತರೇ ಸೌಲಭ್ಯಗಳು ಇತ್ಯಾದಿ.

ವ್ಯಕ್ತಿಗತ ಮಟ್ಟದ ಜ್ಞಾನ ನಿರ್ವಹಣಾ ಸಾಮರ್ಥ್ಯ ಬೆಳೆಸುವುದು 21ನೇ ಶತಮಾನಕ್ಕೆ ಬೇಕಾಗುವ ಅಗತ್ಯ ಜೀವನ ಕೌಶಲ ಎಂದು ಪರಿಗಣಿಸಲಾಗಿದೆ.

ಅಲ್ಲದೇ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಜ್ಞಾನ ಬೆಂಬಲಿತ ಸಂಘ, ಸಂಸ್ಥೆಯ ನಿರ್ವಹಣೆ ಪೈಪೋಟಿಯಲ್ಲಿ ಬದುಕುಳಿಯಲು ನಮ್ಮದೇ ಆದ ವೈಯಕ್ತಿಕ ಜ್ಞಾನ ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ, ಬಳಸಿಕೊಳ್ಳುವ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಗಮನದಲ್ಲಿಡಬೇಕಾದ ಇನ್ನೊಂದು ಅಂಶವೆಂದರೆ ಉತ್ತಮ ಜ್ಞಾನಕ್ಕೆ ಎಲ್ಲಾ ಕಡೆ, ಎಲ್ಲಾ ಸಮಯದಲ್ಲೂ ಉತ್ತಮ ಬೇಡಿಕೆ ಇದ್ದೇ ಇರುತ್ತದೆ.

–ಎ.ಶ್ರೀ

**ಜಾಗತೀಕರಣ ಮತ್ತು ಶಿಕ್ಷಣ**

ಜಾಗತೀಕರಣವು ಪ್ರಪಂಚದಾದ್ಯಂತ ಇಂದು ಹೆಚ್ಚು ಹೆಚ್ಚು ಆಕರ್ಷಣೆಗೊಳಪಡುತ್ತಿರುವ ಒಂದು ಪ್ರವೃತ್ತಿ. ಅಷ್ಟೇ ಅಲ್ಲ, ಅದು ಇಂದು ವಿಶ್ವದಾದ್ಯಂತ ಮಹತ್ವಪೂರ್ಣ ಬದಲಾವಣೆಗೆ ಪ್ರೇರೇಪಿಸುತ್ತಿರುವ ಒಂದು ಬಹುಮುಖ್ಯ ವಿದ್ಯಮಾನ. ಜಾಗತೀಕರಣವು 20ನೇ ಶತಮಾನದ ಕೊನೆಯ ಭಾಗದಲ್ಲಿ ಬೆಳೆದು ಬಂದ ಪ್ರವೃತ್ತಿ. ಇದು ಇಡೀ ಪ್ರಪಂಚವನ್ನು ಜಾಗತಿಕ ಗ್ರಾಮವನ್ನಾಗಿ ಮಾಡುವ ಶಕ್ತಿಯುಳ್ಳದ್ದು. ದೇಶದೇಶಗಳ ನಡುವಿನ ಆರ್ಥಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಂಡು, ಈ ವ್ಯವಸ್ಥೆ ಆ ದೇಶದ ರಾಜಕೀಯ ಹಾಗೂ ಸಾಮಾಜಿಕ ಪರಿಸರವನ್ನು ಹೇಗೆ ಅವಲಂಬಿಸಿ ನಿರ್ಧರಿಸಲ್ಪಡುತ್ತದೆ ಎಂಬುದನ್ನು ತೋರಿಸುತ್ತದೆ. ಜಾಗತೀಕರಣದ ಲಕ್ಷಣವೆಂದರೆ ಇದು ದೇಶದ ಸಾಮಾಜಿಕ, ಧಾರ್ಮಿಕ, ಮೌಲ್ಯ ಹಾಗೂ ಶೈಕ್ಷಣಿಕ ವ್ಯವಸ್ಥೆಗಳ ಮೇಲೂ ಪ್ರಭಾವ ಬೀರಬಲ್ಲುದು.

1885ರಲ್ಲಿ ಥಿಯೊಡರ್ ಲೆವಿಟ್ಟ್ (Theodore Levitte) "ಜಾಗತೀಕರಣ" ಎಂಬ ಪದವನ್ನು ಮೊಟ್ಟಮೊದಲಿಗೆ ಬಳಕೆಗೆ ತಂದರು. ಜಾಗತೀಕರಣದ ಪರಿಕಲ್ಪನೆಗೆ ಪ್ರಾಧಾನ್ಯತೆ ದೊರೆತದ್ದು 1990ರ ನಂತರ. ಅಭಿವೃದ್ಧಿಯಾದ ಹಾಗೂ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳು ಪರಸ್ಪರ ಹತ್ತಿರವಾಗಿ ಆರ್ಥಿಕ, ವ್ಯಾಪಾರ, ವಾಣಿಜ್ಯ ಸಂಬಂಧಗಳನ್ನು ಸುಗಮಗೊಳಿಸಿಕೊಳ್ಳಲು ಗ್ಯಾಟ್ ಮುಂತಾದ ಕೆಲವು ಒಪ್ಪಂದಗಳನ್ನು ಮಾಡಿಕೊಂಡವು. ವಿಶ್ವ ವಾಣಿಜ್ಯ ಸಂಘಟನೆ (W.T.O.) ಜನ್ಮ ತಾಳಿತು. 1999ರ ದಶಕದಲ್ಲಿ ಜಾಗತೀಕರಣದ ನಿಲುವನ್ನು ಪ್ರಪಂಚದಾದ್ಯಂತ ಅನೇಕ ರಾಷ್ಟ್ರಗಳು ಬಳಸಿಕೊಳ್ಳಲಾರಂಭಿಸಿದವು ಎಂಬ ಅಂಶವನ್ನು ವಿಶ್ವಸಂಸ್ಥೆಯ ಒಂದು ಅಧ್ಯಯನ ತಿಳಿಸುತ್ತದೆ. ರೊಲಾಂಡ್ ರಾರ್ಬೈಸನ್‌ರವರು ಹೇಳುವಂತೆ ಜಾಗತೀಕರಣವು ವಿಶ್ವವನ್ನು "ಒಂದೇ ಗ್ರಾಮ"ವನ್ನಾಗಿ ಮಾಡುವ ಕ್ರಿಯೆ.

ಜಾಗತೀಕರಣದ ಕ್ರಿಯೆ ಅಥವಾ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಾದರೆ ಶಿಕ್ಷಣದ ಸಹಾಯ, ಸಂಪರ್ಕ ಅನಿವಾರ್ಯ. ಅಷ್ಟೇ ಅಲ್ಲ, ಶಿಕ್ಷಣದ ಮೂಲಕ ಜಾಗತೀಕರಣದ ಮೂಲಾಂಶಗಳನ್ನು ಪ್ರಭಾವಗಳನ್ನು ಅರ್ಥೈಸಿಕೊಳ್ಳಬಹುದು. ಭಾರತವು ತನ್ನ ಆರ್ಥಿಕ, ಶೈಕ್ಷಣಿಕ, ವಾಣಿಜ್ಯ ವ್ಯವಹಾರಗಳಲ್ಲಿ ಅಪರಿಮಿತವಾದ ಬದಲಾವಣೆಗಳನ್ನು ಕಂಡುಕೊಂಡಿದೆ ಎನ್ನಬಹುದು. ಅದರಲ್ಲೂ ಮುಖ್ಯವಾಗಿ ಶೀಘ್ರವಾದ ಆರ್ಥಿಕ ಬದಲಾವಣೆಗಳು, ಆರ್ಥಿಕ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸ್ಥಳೀಯ ಸಂಸ್ಥೆಗಳ ನಿಯಂತ್ರಣ ಕಡಿಮೆಯಾಗತೊಡಗಿದೆ. ಹಳೆಯ ಕೈಗಾರಿಕೆಗಳು ಹಾಗೂ ಹಲವು ಸಂಸ್ಥೆಗಳು ನಾಶವಾಗಿ, ರಾಷ್ಟ್ರದ ಆರ್ಥಿಕ ಅಂಶವು ಜಗತ್ತಿನ ಆರ್ಥಿಕ ಸ್ಥಿತಿಗತಿಗಳ ಜೊತೆ ಸೇರಿ ಪಾಶ್ಚಿಮಾತ್ಯ ತಂತ್ರಜ್ಞಾನದ ಮೇಲುಗೈನಿಂದ ಹೊಸ ಹೊಸ ಮಾರುಕಟ್ಟೆಗಳು, ಷೇರುಗಳು, ನಿರ್ವಹಣಾ ತಂತ್ರಗಳು ಮುಂತಾದುವು ಹೊಸ ಹೊಸ ನಿಲುವನ್ನು ಪಡೆದುಕೊಳ್ಳಲಾರಂಭಿಸಿವೆ.

Digitised by Bharatavani, CIIL

ಜಾಗತೀಕರಣ ಪ್ರಕ್ರಿಯೆಯನ್ನು ಸುಗಮಗೊಳಿಸಬೇಕಾದರೆ ಶಿಕ್ಷಣ ತನ್ನ ಪ್ರಬುದ್ಧ ಪಾತ್ರವನ್ನು ವಹಿಸಬೇಕಾಗುತ್ತದೆ. ಒಮ್ಮಿಂದೊಮ್ಮೆಲೇ ಬೆಳಕಿಗೆ ಬಂದ ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳು ಭಾರತೀಯರ ಜನಜೀವನದ ಮೇಲೆ ಅಗಾಧವಾದ ಪ್ರಭಾವವನ್ನು ಉಂಟು ಮಾಡಿದವು. ಜಾಗತೀಕರಣವೆಂದರೆ ಸಾಮಾನ್ಯವಾಗಿ ಸಮಾಜದಲ್ಲಿ ಉತ್ಪಾದಿತವಾಗುವ ಜ್ಞಾನ ಹಾಗೂ ವಿಚಾರಗಳು ಅಡೆತಡೆ ಇಲ್ಲದೇ ಪ್ರಪಂಚದಾದ್ಯಂತ ಪ್ರಸಾರವಾಗಿ, ಆಯಾ ರಾಷ್ಟ್ರಗಳ ಜನರು ಅವುಗಳನ್ನು ಅಳವಡಿಸಿಕೊಂಡು ಅವನ್ನು ತಮ್ಮ ಬದುಕಿಗೆ ಒಳ್ಳೆಯದಾಗುವ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಪ್ರಕ್ರಿಯೆಯಾಗಿರುವುದರಿಂದ ಈ ಪ್ರಕ್ರಿಯೆಗೆ ಅನುಗುಣವಾಗಿ ಶಿಕ್ಷಣವನ್ನು, ಶಿಕ್ಷಣದ ಗೊತ್ತುಗುರಿಗಳನ್ನು ಹಾಗೂ ಶೈಕ್ಷಣಿಕ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಪರಾಮರ್ಶೆ ಮಾಡುವುದು ಅನಿವಾರ್ಯವಾಗತೊಡಗಿತು. ಈ ಹಿಂದೆ ಶಿಕ್ಷಣ ಕೆಲವು ಜನರಿಗೆ ಮಾತ್ರ ಸಾಕಾಗಿತ್ತು. ಆದರೆ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದಂದಿನಿಂದ ಉಚ್ಚಶಿಕ್ಷಣ ಸಂಸ್ಥೆಗಳು ಅನೇಕ ಬದಲಾವಣೆಗಳನ್ನು ಅನಿವಾರ್ಯವಾಗಿ ಮಾಡಿಕೊಳ್ಳಬೇಕಾಗಿದೆ.

ಈವರೆವಿಗೂ ಭಾರತದಲ್ಲಿ ಉಚ್ಚ ಶಿಕ್ಷಣ ಯಾವುದೇ ರೀತಿಯ ಪ್ರೋತ್ಸಾಹವಿಲ್ಲದೇ ಸರ್ಕಾರದಿಂದ ಸಾಕಷ್ಟು ಅನುದಾನವೂ ದೊರೆಯದೆ ಬಹಳ ಸಂಕಟಮಯವಾಗಿತ್ತು. ಆದರೆ ಜಾಗತೀಕರಣದ ಪ್ರಭಾವದಿಂದಾಗಿ ಸ್ವಯಂಪರಿಪೂರ್ಣತೆ ಹಾಗೂ ಸ್ವಯಂ ಬೆಳವಣಿಗೆಯನ್ನು ಕಂಡುಕೊಳ್ಳುವ ಅವಕಾಶ ಒದಗಿ ಬಂದಿದೆ. ಅನೇಕ ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಹಣಕಾಸಿನ ಮುಗ್ಗಟ್ಟಿನಿಂದಾಗಿ ನಿರಂತರ ಸಮಸ್ಯೆಗಳಿಗೆ ಒಳಗಾಗುತ್ತಿದೆ. ಜೊತೆಗೆ ಅಂಥ ಸಂಸ್ಥೆಗಳು ಯಾವುದೇ ಬಗೆಯ ಆದಾಯವನ್ನು ಗಳಿಸುವ ಹಂತದಲ್ಲಿಲ್ಲ. ಈ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಅನೇಕ ಮಾರ್ಗೋಪಾಯಗಳನ್ನು ಜಾಗತೀಕರಣ ಪ್ರೋತ್ಸಾಹಿಸುವ ಚಿಂತಕರು ಹುಡುಕಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ,

ಅ) ಪಾಠ ಪ್ರವಚನಕ್ಕೆ ಶುಲ್ಕವನ್ನು ಹೆಚ್ಚಿಸುವುದು. ಆ)ಸರ್ಕಾರದಿಂದ ಧನಸಹಾಯವನ್ನು ಕೇಳುವುದು. ಇ)ಖರ್ಚಿನಲ್ಲಿ ಆದಷ್ಟು ಉಳಿತಾಯವನ್ನು ಕಂಡುಕೊಳ್ಳುವುದು. ಈ)ಸಹಾಯಧನ ಹಾಗೂ ಸಂಘ ಸಂಸ್ಥೆಗಳಿಂದ ಉದಾರ ದಾನ ಪಡೆಯುವುದು. ಉ) ಕೈಗಾರಿಕಾ ಸಲಹೆಗಾರರಿಂದ ಶುಲ್ಕವನ್ನು ಪಡೆಯುವುದು. ಊ) ಸ್ವಯಂ ಹಣಕಾಸನ್ನು ಪಡೆಯಲು ಪ್ರಯತ್ನಿಸುವುದು. ಋ) ಹಳೆಯ ವಿದ್ಯಾರ್ಥಿಗಳಿಂದ ಹಣವನ್ನು ಶೇಖರಿಸುವುದು.

ಇಂಥ ಕಾರ್ಯಕ್ರಮಗಳಿಂದ ಶಿಕ್ಷಣದ ವ್ಯಾಪ್ತಿ ಹಾಗೂ ಉದ್ದೇಶಗಳನ್ನು ಜಾಗತೀಕರಣದ ಬದಲಾವಣೆಗೆ ಅನುಗುಣವಾಗಿ ಬದಲು ಮಾಡಲು ಪ್ರಯತ್ನಿಸಲಾಗುತ್ತಿದೆ. ಪ್ರಾಥಮಿಕ, ಪ್ರೌಢ ಶಿಕ್ಷಣಗಳನ್ನು ಸರ್ಕಾರಿ ಶಾಲೆಗಳಲ್ಲಿ ಸರ್ಕಾರ ಉಚಿತವಾಗಿ ನೀಡುವ ಕಾರ್ಯಕ್ರಮ ಭಾರತದ ಉದ್ದಗಲಕ್ಕೂ ಈಗಾಗಲೇ ಜಾರಿಯಲ್ಲಿ ಇದೆ. ಆದರೆ ಉಚ್ಚಶಿಕ್ಷಣವನ್ನು ಬಹಳ ಕಡಿಮೆ ಶುಲ್ಕ, ಕೆಲವೊಮ್ಮೆ ಉಚಿತವಾಗಿ ನೀಡುವ ಪರಿಪಾಠವಿರುವುದು ಸರಿಯಲ್ಲ. ಈ ಹಿಂದೆ ನೀಡುತ್ತಿದ್ದ ಸಾಮಾನ್ಯ ಶಿಕ್ಷಣ ಇಂದಿನ ಪರಿಸ್ಥಿತಿಗೆ ತಕ್ಕುದಾದುದಲ್ಲ. ಆದರೆ ಇಂದಿನ ಜಾಗತಿಕ ಸಂಕೀರ್ಣ ಸಮಾಜಕ್ಕೆ ಸವಾಲುಗಳನ್ನು ಎದುರಿಸುವಂತಹ ಶಿಕ್ಷಣದ ಅವಶ್ಯಕತೆ ಇದೆ. ಹಾಗಾಗಿ ಇಂದಿನ ಶಿಕ್ಷಣ ಕ್ರಮ ಉತ್ಕೃಷ್ಟ ಹಾಗೂ ದುಬಾರಿ ಎನ್ನುವಷ್ಟರ ಮಟ್ಟಿಗೆ ಇರುವುದು ಸರಿ ಎನಿಸಿದರೂ, ಉಳ್ಳವರು ಮಾತ್ರ ಇಂತಹ ಶಿಕ್ಷಣವನ್ನು ಪಡೆದು ಉದ್ಯೋಗವಂತರಾಗಬಹುದು. ಆದರೆ ಹಣ ಇಲ್ಲದವರು ಮಾತ್ರ ಶಿಕ್ಷಣ ಸಂಸ್ಥೆಯ ಮೆಟ್ಟಿಲನ್ನು ಹತ್ತಲೂ ಸಹ ಸಾಧ್ಯವಾಗದು. ಇದು ಜಾಗತೀಕರಣದಿಂದ ಉಂಟಾಗುವ ಒಂದು ಸಮಸ್ಯೆಯಾಗಿದೆ. ಐ.ಐ.ಎಮ್., ಸಿಂಬಿಯಾಸಿಸ್, ಐ.ಟಿ.ಐ. ಮುಂತಾದ ಬೃಹತ್ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣವು ಅತ್ಯಂತ ಕಠಿಣ ಹಾಗೂ ದುಬಾರಿ ಎನಿಸಿದರೂ ಶೇಕಡಾ ನೂರು ಭಾಗ ಉದ್ಯೋಗ ಖಾತರಿ ಇರುತ್ತದೆ. ಇದಕ್ಕಾಗಿ ಎಷ್ಟೇ ಶುಲ್ಕ ನೀಡಿಯಾದರೂ ಇಂತಹ ಸಂಸ್ಥೆಗಳಿಗೆ ಸೇರಿ ಹೊರ ಬಂದಾಗ ಕೊನೇ ಪಕ್ಷ ತಿಂಗಳಿಗೆ 1 ಲಕ್ಷದಿಂದ 5 ಲಕ್ಷದವರೆಗೆ ಕೆಲವೊಮ್ಮೆ ಅದಕ್ಕಿಂತಲೂ ಹೆಚ್ಚಾದ ಸಂಬಳವನ್ನು ಪಡೆದವರಿದ್ದಾರೆ. ಪಡೆಯುತ್ತಿದ್ದಾರೆ. ಈ ಉದ್ಯೋಗಗಳೂ ಸಹಾ ಅಷ್ಟೇ ಸವಾಲನ್ನೊಡ್ಡುವ ವೃತ್ತಿಗಳಾಗಿರುತ್ತವೆ. ಇಂದು ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ಸಂಬಳ ಪಡೆಯುವ ವೃತ್ತಿಗಳು ಇವೆ. ಕೇವಲ 20 ವರ್ಷಗಳಿಂದೀಚೆಗೆ ಶಿಕ್ಷಣಕ್ಷೇತ್ರ ಅತ್ಯಂತ ಚಮತ್ಕಾರಿ ಹಾಗೂ ವೈವಿಧ್ಯಮಯವಾದ ಶಿಕ್ಷಣವನ್ನು ನೀಡುತ್ತಿದೆ. ದುಬಾರಿ ಶುಲ್ಕ ಪಡೆಯುವ ಶೈಕ್ಷಣಿಕ ಸಂಘ ಸಂಸ್ಥೆಗಳೂ ಇವೆ. ಜಾಗತೀಕರಣದ ಪ್ರಭಾವದಿಂದಲೇ ಇಂತಹ ಬದಲಾವಣೆಗಳಾಗುತ್ತಿವೆ. ಕಳೆದೆರಡು ದಶಕಗಳಿಂದ ಕಂಪ್ಯೂಟರ್ ಶಿಕ್ಷಣ ಪ್ರತಿಯೊಬ್ಬರೂ ಪಡೆಯಲೇಬೇಕೆಂಬಷ್ಟು ಜನಪ್ರಿಯವಾಗತೊಡಗಿದೆ. ಇತ್ತೀಚೆಗಷ್ಟೇ ಅಮೆರಿಕಾದಲ್ಲಿ ಶುರುವಾದ 'ರಿಸೆಷನ್'ನಿಂದ (ಹಣಕಾಸಿನ ಮುಗ್ಗಟ್ಟಿನಿಂದಾಗಿ) ಕಂಪ್ಯೂಟರ್ ಉದ್ಯೋಗ ಹಾಗೂ ಇನ್ನಿತರ ಉದ್ಯೋಗಗಳಿಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ತೊಂದರೆಯಾಗತೊಡಗಿತು. ಆದರೆ ಭಾರತದಲ್ಲಿ ಈ 'ಹಿಂಜರಿಕೆ' ಎಂಬ ಮಹಾಮಾರಿ ಅಂತಹ ಬದಲಾವಣೆಗಳೇನನ್ನೂ ಆರ್ಥಿಕ ಹಾಗೂ ಶೈಕ್ಷಣಿಕ ಮಟ್ಟದಲ್ಲಿ ತರಲಿಲ್ಲವಾದರೂ ಸ್ವಲ್ಪಮಟ್ಟಿಗಿನ ಸಮಸ್ಯೆಗಳನ್ನು ಉಂಟು ಮಾಡಿತು.

ಜಾಗತೀಕರಣದ ಪರಿಣಾಮವಾಗಿ ಮುಖ್ಯವಾಗಿ ಭಾರತದಲ್ಲಿ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗತೊಡಗಿದ್ದಾರೆ. ಬಡವರು ಮತ್ತಷ್ಟು ಬಡತನಕ್ಕೆ ಇಳಿಯತೊಡಗಿದ್ದಾರೆ. ಸಾಮಾನ್ಯ ಜನಕ್ಕೆ ಜೀವನ ದುಬಾರಿಯಾಗಿ ದುರ್ಭರವಾಗಿದೆ. ಜಾಗತೀಕರಣ ಕೊಟ್ಟ ಪೆಟ್ಟಿನಿಂದ ಭಾರತದ ಅನೇಕ ರೈತರು ಸಾಲ ತೀರಿಸಲಾಗದೆ ಆತ್ಮಹತ್ಯೆಗೆ ಒಳಗಾಗಿದ್ದಾರೆ. ಜಾಗತೀಕರಣವೇನೋ ನೌಕರಿಯ ಅನೇಕ ಅವಕಾಶಗಳನ್ನು ಒದಗಿಸಿದೆ. ಇದರಿಂದಾಗಿ ಭಾರತವು ಒಂದು ಪ್ರಮುಖವಾದ ಉತ್ಪಾದನಾ ಕೇಂದ್ರ ಹಾಗೂ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿದೆ ಎಂಬುದೂ ನಿಜ. ವಿದೇಶಿಗಳು ಭಾರತದಲ್ಲಿ ಹೆಚ್ಚು ಬಂಡವಾಳ ಹೂಡಿ ಪ್ರಪಂಚದ ಮಾರುಕಟ್ಟೆಗೆ ಈ ದೇಶವನ್ನು ಕೇಂದ್ರವನ್ನಾಗಿ ಮಾಡುವ ಪ್ರಯತ್ನವೂ ಕೂಡ ನಡೆಯುತ್ತಿದೆ. ಇಂತಹ ಸ್ಪರ್ಧಾತ್ಮಕವಾದ ಯುಗದಲ್ಲಿ ನಮ್ಮ ದೇಶದಲ್ಲಿಯೂ ಹೊರದೇಶಗಳವರೊಡನೆ ಆರ್ಥಿಕ ಹಾಗೂ ಔದ್ಯೋಗಿಕವಾಗಿ ಸ್ಪರ್ಧಿಸುವ ಕ್ರಿಯಾತ್ಮಕ ಶಿಕ್ಷಣವನ್ನು ನೀಡಬೇಕಾಗುತ್ತದೆ. ಕಳೆದ 20 ವರ್ಷಗಳಿಂದೀಚೆಗೆ ಭಾರತದಲ್ಲೂ ಸಹ ಶೈಕ್ಷಣಿಕ ಕ್ರಾಂತಿಯಾಗತೊಡಗಿ ಶಿಕ್ಷಣವನ್ನು ಪಡೆಯಲು ಭಾರತೀಯರು ಮುಗಿ ಬೀಳುತ್ತಿರುವುದಲ್ಲದೆ ಆಸ್ಟ್ರೇಲಿಯಾ, ಅಮೆರಿಕಾ, ಇಂಗ್ಲೆಂಡ್ ಮುಂತಾದಂತಹ ದೇಶಗಳತ್ತಲೂ ಶಿಕ್ಷಣಾರ್ಥಿಗಳಾಗಿ ಲಕ್ಷಾಂತರ ಜನರು ಹೋಗುತ್ತಿರುವುದು ಹಿಂದೆಂದೆಗಿಂತಲೂ ಇಂದು ಹೆಚ್ಚಾಗುತ್ತಿದೆ. ಹೀಗೆ ಜಾಗತೀಕರಣದಿಂದಾಗಿ ಪ್ರಪಂಚದಾದ್ಯಂತ ಶೈಕ್ಷಣಿಕ ಸಂಸ್ಥೆಗಳ ಹುಡುಕಾಟದಲ್ಲಿ ಭಾರತೀಯರು ತೊಡಗಿದ್ದಾರೆ.

ಹೀಗೆ ಹೊರದೇಶಗಳಿಗೆ ಹೋಗಿ ಲಕ್ಷಾಂತರ ರೂಪಾಯಿಗಳ ಶುಲ್ಕವನ್ನು ತೆತ್ತು ಶಿಕ್ಷಣ ಪಡೆಯಲು ಅದೆಷ್ಟೋ ಭಾರತೀಯರು ಆರ್ಥಿಕವಾಗಿ ಸಬಲರಾಗಿರುತ್ತಾರೆ ಎಂಬ ಪ್ರಶ್ನೆಗೆ ಮತ್ತೆ ಉತ್ತರ ಅಡಗಿರುವುದು "ಜಾಗತೀಕರಣದಿಂದಾಗಿ". ಅನೇಕ ಹೊಸ ಹೊಸ ಬ್ಯಾಂಕುಗಳು ನೀಡುತ್ತಿರುವ ಶೈಕ್ಷಣಿಕ ಸಾಲದಿಂದಾಗಿ, ಕಡಿಮೆ ಬಡ್ಡಿದರದಲ್ಲಿ ಲಕ್ಷಾಂತರ ರೂ. ಹಣವನ್ನು ದೀರ್ಘಾವಧಿ ಸಾಲ ಕೊಡುವ ಮುಖಾಂತರ ಭಾರತವಷ್ಟೇ ಅಲ್ಲ, ಪ್ರಪಂಚದ ಬಹಳಷ್ಟು ರಾಷ್ಟ್ರಗಳು ಆರ್ಥಿಕ ಸಹಾಯ ನೀಡಿ ಶೈಕ್ಷಣಿಕ ಕ್ರಾಂತಿಯನ್ನು ಮಾಡುತ್ತಿರುವುದಲ್ಲದೆ ವೈವಿಧ್ಯಮಯವಾದ ಉದ್ಯೋಗಗಳನ್ನು ಸಹ ಸೃಷ್ಟಿಸುತ್ತಿವೆ.

Digitised by Bharatavani, CIIL

ಜಾಗತೀಕರಣ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಬಂಡವಾಳ ಹೂಡಿಕೆಯಲ್ಲಿ ಹಾಗೂ ಮಾರುಕಟ್ಟೆಗಳ ಕ್ಷೇತ್ರದಲ್ಲಿ ಅನೇಕ ಅವಕಾಶಗಳನ್ನು ಕಲ್ಪಿಸಿದ್ದರೂ ಅಷ್ಟೇ ಸವಾಲುಗಳನ್ನು ಸಹ ತಂದೊಡ್ಡಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಐ.ಸಿ.ಐ.ಸಿ.ಐ., ಹೆಚ್.ಎಸ್.ಬಿ.ಸಿ., ಆಕ್ಸಿಸ್ ಬ್ಯಾಂಕ್ ಮುಂತಾದ ಹೊಸ ಹೊಸ ಬ್ಯಾಂಕುಗಳು ನಿಯಂತ್ರವಿಲ್ಲದಷ್ಟು ಹಣವನ್ನು ಜನರಿಗೆ ಸಾಲ ನೀಡಿ ಅಪಾರ ಬಡ್ಡಿಯನ್ನು ವಸೂಲು ಮಾಡುವುದರ ಮುಖಾಂತರ ಕೆಲವು ಜನರು ಕೆಲವು ಆರ್ಥಿಕ ಸಂಸ್ಥೆಗಳು ಬೆಳೆದುವಾದರೂ ಬಹುತೇಕ ಮಂದಿ ಬಡ್ಡಿ ಕಟ್ಟಲಾರದೆ ಆತ್ಮಹತ್ಯೆಗೆ ಶರಣಾದುದೂ ಜಾಗತೀಕರಣದ ಪ್ರಭಾವದಿಂದಲೇ.

ಪ್ರಸ್ತುತ ಸಮಾಜದಲ್ಲಿ ಅದರಲ್ಲೂ ಇಂದಿನ ಜಾಗತೀಕರಣದ ಯುಗದಲ್ಲಿ ಯಾರು ತಾಂತ್ರಿಕವಾಗಿ ಬಲಿಷ್ಠರೋ, ಶೈಕ್ಷಣಿಕವಾಗಿ ಬುದ್ಧಿವಂತರೋ, ಆರ್ಥಿಕವಾಗಿ ಸ್ಪರ್ಧಾತ್ಮಕತೆಗೆ ಧುಮುಕುವರೋ ಅವರು ಮಾತ್ರ ಬದುಕಬಲ್ಲರು. ಅದರಲ್ಲೂ ಇಂಗ್ಲಿಷ್ ಶಿಕ್ಷಣ, ಕಂಪ್ಯೂಟರ್ ಜ್ಞಾನ, ಸಂವಹನ ಕೌಶಲಗಳನ್ನು ಬಲ್ಲವರು ಮಾತ್ರ ಈ ಜಾಗತೀಕರಣ ಯುಗದಲ್ಲಿ ಬದುಕಬಲ್ಲರು. ಆದರೆ ಅನಕ್ಷರಸ್ಥರು, ಕಡಿಮೆ ಕಲಿತವರು, ಕಂಪ್ಯೂಟರ್ ಜ್ಞಾನವಿಲ್ಲದವರು, ಇಂಟರ್‌ನೆಟ್ (ಅಂತರ್‌ಜಾಲ) ಬಗ್ಗೆ ಜ್ಞಾನವಿಲ್ಲದವರು, ತಾಂತ್ರಿಕವಾಗಿ ಕಲಿಯದವರು ಈ ತಾಂತ್ರಿಕ ಯುಗದಲ್ಲಿ ಯಾವುದೇ ಬಗೆಯ ಜೀವನವನ್ನು ಸಮರ್ಪಕವಾಗಿ ನಡೆಸಲು ಅರ್ಹರಲ್ಲ ಎಂದು ಹೇಳಬಹುದು. ಅಷ್ಟರಮಟ್ಟಿಗೆ ಜಾಗತೀಕರಣವು ಶಿಕ್ಷಣ ಹಾಗೂ ಜ್ಞಾನಾರ್ಜನೆ ಬಗ್ಗೆ ಬಹಳಷ್ಟು ಒತ್ತನ್ನು ಕೊಟ್ಟಿದೆ ಎಂದರೆ ಆಶ್ಚರ್ಯವಿಲ್ಲ. ಜಾಗತೀಕರಣದಿಂದಾಗಿ ಶಿಕ್ಷಣ ಒಂದು ಹೊಸರೂಪವನ್ನು ಪಡೆದು ಸಮಾಜದಲ್ಲಿ ಸುಶಿಕ್ಷಿತರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಲಿಷ್ಠರಾಗುವಂತಹ ಅವಕಾಶಗಳನ್ನು ನೀಡಿದೆ.

ಜಾಗತೀಕರಣವು ಇಂದು ಇಡೀ ಜಗತ್ತನ್ನು ಒಂದು ವಿಶ್ವಗ್ರಾಮವನ್ನಾಗಿ ಮಾಡಿರುವುದೇನೋ ನಿಜ. ಆದರೆ ಇಡೀ ಜಗತ್ತಿನಲ್ಲಿ ಉತ್ಪಾದನೆಯಾಗುತ್ತಿರುವ ವಸ್ತುಗಳು, ಔಷಧಗಳು, ತಂತ್ರಜ್ಞಾನವೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಹಣಕಾಸು ಸಂಸ್ಥೆ, ಶೈಕ್ಷಣಿಕ ಸಂಸ್ಥೆಗಳಲ್ಲಾಗುತ್ತಿರುವ ಬದಲಾವಣೆಗಳು ಅನೇಕ ಸುವರ್ಣಾವಕಾಶಗಳನ್ನು ಒದಗಿಸಿವೆ. ಆದರೆ ಇವೆಲ್ಲವುಗಳ ಬಳಕೆ ಎಲ್ಲ ವರ್ಗದ ಜನರಿಗೂ ತಲುಪದೆ ಇರುವುದು ಒಂದು ದೊಡ್ಡ ಕೊರತೆಯಾಗಿದೆ. ಭಾರತದಲ್ಲಂತೂ ನಿರುದ್ಯೋಗ ಇನ್ನೂ ತಾಂಡವವಾಡುತ್ತಿದೆ. ಇಲ್ಲಿ ಕಲಿತು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಪಲಾಯನವಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಯಾವ ದೇಶದ ಜನರು ದೇಶಪ್ರೇಮ, ಬದ್ಧತೆ ಮತ್ತು ಪ್ರಾಮಾಣಿಕತೆಗೆ ಹೆಚ್ಚು ಆಕರ್ಷಿತರಾಗಿರುತ್ತಾರೋ ಅವರು ಮಾತ್ರ ಈ ಜಾಗತೀಕರಣ ಯುಗದಲ್ಲಿ ಬದುಕಲು ಸಾಧ್ಯ. ಇಲ್ಲದಿದ್ದಲ್ಲಿ ಭಾರತದಲ್ಲಿ ನಿರ್ಮಾಣವಾಗಿರುವಂತಹ ಸ್ಥಿತಿಗತಿಗಳನ್ನು ನೋಡಿದರೆ ಜಾಗತೀಕರಣಕ್ಕೆ ತಿಲಾಂಜಲಿ ನೀಡುವುದೇ ಒಳ್ಳೆಯದು ಎನ್ನಿಸದಿರದು. ಖಾಸಗಿ ವಲಯ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸೃಷ್ಟಿಯಾಗುತ್ತಿರುವ ಉದ್ಯೋಗಗಳೇ ಸ್ವಚ್ಛ ಉದ್ಯೋಗಗಳು, ಇವುಗಳಿಂದಲೇ ದೇಶದ ಅಭಿವೃದ್ಧಿ ಸಾಧ್ಯ ಎಂದು ಅಬ್ಬರದ ಪ್ರಚಾರ ಮಾಡಿ ಸುಮಾರು ಶೇ. 70ರಷ್ಟು ಜನರು ವಾಸಿಸುತ್ತಿರುವ ಗ್ರಾಮೀಣ ಸಮಾಜವನ್ನು ನಿರ್ಲಕ್ಷಿಸಿರುವುದಕ್ಕೂ ಸಹ ಈ ಜಾಗತೀಕರಣವೇ ಕಾರಣ. ವಿದ್ಯಾವಂತರಾದರೂ ಗ್ರಾಮಗಳು ಎತ್ತ ಸಾಗಿವೆ, ಸಮಸ್ಯೆಗಳು ಏನಿವೆ, ಅದರ ಪರಿಹಾರಗಳೇನು ಎನ್ನುವತ್ತ ಬೆಳಕನ್ನು ಚೆಲ್ಲದೆ ಇರುವುದರಿಂದ ಗ್ರಾಮಗಳು ಅವನತಿಯತ್ತ ಸಾಗುತ್ತಿವೆಯೇ ಎನಿಸುತ್ತದೆ.

ಜಾಗತೀಕರಣದಿಂದ ಅನೇಕ ಅನುಕೂಲಗಳಿರುವುದು ನಿಜವೇ ಆದರೂ ಆ ಪ್ರಕ್ರಿಯೆಯಿಂದ ಅನೇಕ ತೊಂದರೆಗಳೂ ಆಗಿವೆ. ಜಾಗತೀಕರಣದಿಂದ ಆಗಿರುವ ಅನುಕೂಲಗಳಲ್ಲಿ ಮುಖ್ಯವಾದುವುಗಳೆಂದರೆ,

(ಅ) ಜಾಗತೀಕರಣದಿಂದ ಉತ್ಪತ್ತಿಯಾದ ಅನೇಕ ಪದಾರ್ಥಗಳು ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ದೊರಕುತ್ತವೆ. (ಆ) ಅರ್ಹ, ಸಮರ್ಥ, ಸುಶಿಕ್ಷಿತ ಮತ್ತು ಉತ್ತಮ ಪಾಂಡಿತ್ಯವಿರುವ ತಂತ್ರಜ್ಞಾನ ಹಾಗೂ ಗಣಕಯಂತ್ರ ತಜ್ಞರಿಗೆ ಉಚ್ಚ ಶಿಕ್ಷಣ ಪಡೆದವರಿಗೆ ಅತ್ಯಧಿಕವೇತನ ಪಡೆಯುವ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆಯಲ್ಲದೆ ಅವರು ಅತ್ಯಂತ ಶ್ರೀಮಂತರಾಗಲು ಕಾರಣವಾಗಿದೆ. (ಇ) ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಪ್ರೋತ್ಸಾಹ ದೊರಕಿದೆ. (ಈ) ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಸಹಕಾರ, ಸಹಬಾಳ್ವೆ ಬೆಳೆಯಲು ಅವಕಾಶ ನೀಡಿದೆ. ಇತ್ತೀಚೆಗಂತೂ ಚೈನಾ, ರಷ್ಯಾ, ಅಮೆರಿಕಾದಂತಹ ಬೃಹತ್ ದೇಶಗಳು (ಆರ್ಥಿಕವಾಗಿ) ಭಾರತದತ್ತ ಗಮನಹರಿಸಿದ್ದು ಭಾರತವೂ ಸಹ ಪ್ರಬಲ ಆರ್ಥಿಕತೆ ಕಡೆಗೆ ಹೆಜ್ಜೆ ಇಡುತ್ತಿದೆ.

ಜಾಗತೀಕರಣದಿಂದ ಶಿಕ್ಷಣ ಕ್ಷೇತ್ರ ಗಂಭೀರವಾಗಿ ಅರ್ಥಪೂರ್ಣವಾಗಿ ಹಾಗೂ ಔದ್ಯೋಗಿಕ ಕ್ರಾಂತಿಗೆ ಎಡೆಮಾಡಿಕೊಟ್ಟು ಸುಶಿಕ್ಷಿತರು ಸುಖವಾದ ಜೀವನ ನಡೆಸುವಂತೆ ಮಾಡಿದೆ. ಆದರೆ ದೇಶೀಯ ವಿದ್ಯೆಗಳು, ಸಂಸ್ಕೃತಿ ಅವನತಿಯತ್ತ ಸಾಗುತ್ತಿವೆ. ಹಳೆಯಜೀವನ ಶೈಲಿ, ಧಾರ್ಮಿಕ, ವೈಚಾರಿಕ ವಿಚಾರಗಳು ನಾಶವಾಗತೊಡಗಿವೆ. ನೀತಿ ನಿಯಮಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಹಣ ಒಂದೇ ಪ್ರಬಲವಾದ ಶಕ್ತಿಯಾಗುತ್ತಿದೆ. ವಿದ್ಯಾವಂತರೂ ಸಹ ಭ್ರಷ್ಟರಾಗುತ್ತಿರುವುದು, ನೀತಿಹೀನರಾಗುತ್ತಿರುವುದು ಆಶ್ಚರ್ಯ ತಂದಿದೆ.

ಇಂತಹ ಗಂಭೀರ ದುಃಸ್ಥಿತಿಯಿಂದ ಜನರನ್ನು ಸುಸ್ಥಿತಿಯತ್ತ ಕೊಂಡೊಯ್ಯುವಂತಹ ಶಿಕ್ಷಣ ದೊರೆಯಬೇಕಾಗಿದೆ. ಪ್ರಸ್ತುತ ಸ್ಥಿತಿಯಲ್ಲಿ ಹೊಸ ಹೊಸ ಬಗೆಯ ಕೌಶಲ್ಯಗಳಿಗೆ ಒಳಪಡುವಂತೆ ಶಿಕ್ಷಣವನ್ನು, ತರಬೇತಿಯನ್ನು ನೀಡುವತ್ತ ಸಂಶೋಧನೆಗಳು ನಡೆಯಬೇಕಾಗಿದೆ. ಅನೇಕ ಪೂರ್ವಏಷ್ಯಾದ ದೇಶಗಳು ಉದಾಹರಣೆಗೆ, ಚೈನಾ, ಜಪಾನ್, ಕೊರಿಯಾ ದೇಶಗಳು ಈ ನಿಟ್ಟಿನಲ್ಲಿ ಪ್ರಗತಿ ಸಾಧಿಸಿವೆ. ದಕ್ಷಿಣ ಏಷ್ಯಾ ಎಂದರೆ ಭಾರತ, ಪಾಕಿಸ್ತಾನದಂತಹ ರಾಷ್ಟ್ರಗಳು ಇನ್ನೂ ಈ ದಿಕ್ಕಿನಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲ. ಈ ನಿಟ್ಟಿನಲ್ಲಿ ಪ್ರಪಂಚದಲ್ಲಿನ ಬಹುತೇಕ ರಾಷ್ಟ್ರಗಳು ಸಮಾನಾವಕಾಶಗಳನ್ನು ಪಡೆದು ಕಾರ್ಯಪ್ರವೃತ್ತರಾಗಬೇಕಾಗಿದೆ.

ಜಾಗತೀಕರಣದಿಂದುಂಟಾಗುವ ಕೆಲವು ದೌರ್ಬಲ್ಯಗಳಲ್ಲಿ ಹಳೆಯ ಸಾಂಸ್ಥಿಕ ವ್ಯವಸ್ಥೆ ಹಾಳಾಗಿ ಹೊಸ ಹೊಸ ಸಂಸ್ಥೆಗಳ ಬೆಳವಣಿಗೆಗೆ ಪ್ರೇರಣೆ ಸಿಕ್ಕಿದೆ. ಶ್ರೀಮಂತರು ಸಾಕಷ್ಟು ಜೀವನ ಮೌಲ್ಯಗಳನ್ನು ಕಳೆದುಕೊಂಡು ಅರಾಜಕತೆಯತ್ತ ನಡೆಯುತ್ತಿದ್ದರೆ ದುರ್ಬಲವರ್ಗ ಹಾಗೂ ಅನಕ್ಷರಸ್ಥರು ಜೀವನಮೌಲ್ಯಗಳನ್ನು ಕಳೆದುಕೊಳ್ಳದೆ ಹೋದರೂ ಜೀವನ ಮಟ್ಟವನ್ನು ಕಳೆದುಕೊಂಡು ನತದೃಷ್ಟರಾಗಿದ್ದಾರೆ. ಈ ಜಾಗತೀಕರಣ ಪ್ರಕ್ರಿಯೆಯಿಂದ ಶಿಕ್ಷಣ ಪಡೆದವರೂ ಸಹ ಇಂದು ಪ್ರೀತಿ, ವಿಶ್ವಾಸ, ಸ್ನೇಹ ಸಂಬಂಧಗಳನ್ನು ತೊರೆದುಕೊಂಡು ಶುಷ್ಕ ಬದುಕಿನತ್ತ ಪಯಣಿಸುವಂತೆ ಮಾಡಿದೆ. ಇಂದು ವಿದ್ಯಾವಂತರೆಲ್ಲಾ ಯೋಚಿಸಬೇಕಾದ ಅಂಶವೆಂದರೆ ಪ್ರಮುಖವಾಗಿ ಏನನ್ನು ಎಂದರೆ ಯಾವ ವಿಚಾರವನ್ನು ಉಳಿಸಿಕೊಳ್ಳಬೇಕು ಯಾವ ವಿಚಾರವನ್ನು ಕೈ ಬಿಡಬೇಕು, ಯಾರು ಬೇಕು, ಯಾರು ಬೇಡ, ಏನು ಒಳ್ಳೆಯದು, ಯಾವುದು ಕೆಟ್ಟದ್ದು ಇವುಗಳ ನಡುವಿನ ಅಂತರವನ್ನು ತಿಳಿದು ಜಾಗತೀಕರಣದಿಂದಾಗಿ ತಮಗೆ ಅರ್ಥಪೂರ್ಣವಾಗಿ, ನಿಶ್ಚಯಾತ್ಮಕವಾಗಿ ಬೇಕಾದುದೇನು ಎಂಬುದನ್ನು ಅರಿತುಕೊಳ್ಳಬೇಕಾಗಿದೆ.

Digitised by Bharatavani, CIIL

ಜಾಗತೀಕರಣದಿಂದ ಸ್ಥಳೀಯ ಭಾಷೆಗಳು, ಸಂಪ್ರದಾಯಗಳು, ಸಾಂಸ್ಕೃತಿಕ ಮೌಲ್ಯಗಳು ನಶಿಸುತ್ತವೆ ಎಂಬುದು ಸತ್ಯ. ಇದಕ್ಕೆ ವಿರುದ್ಧವಾಗಿ ಸುಶಿಕ್ಷಿತರು ಹಾಗೂ ವಿದ್ಯಾವಂತರು ವಿಮರ್ಶಾತ್ಮಕವಾಗಿ ಯಾವುದು ಬೇಕು ಎಂಬುದನ್ನು ನಿರ್ಣಯಿಸುವಂತಹ ವ್ಯಕ್ತಿತ್ವವನ್ನು ಪಡೆಯಬೇಕಾಗಿದೆ. ಆದ್ದರಿಂದ, ನೀನು ಏನನ್ನು ಬೇಕಾದರೂ ಉತ್ತಮ ರೀತಿಯಲ್ಲಿ ಪಡೆದುಕೊಳ್ಳಬಲ್ಲೆ ಎಂಬ ಚೈತನ್ಯಸ್ಫೂರ್ತಿ ಶಿಕ್ಷಣದಿಂದ ಜನರಿಗೆ ಬರಬೇಕು.

ಜಾಗತೀಕರಣ ಪ್ರಕ್ರಿಯೆ ಮುಂದುವರೆದು ಒಳ್ಳೆಯ ಶಿಕ್ಷಣ ದೊರೆತಾಗ ಮಾತ್ರ ಜಗದ ಜನರೆಲ್ಲರ ಸುಖ, ಶಾಂತಿ, ನೆಮ್ಮದಿ ಹಾಗೂ ಸಂತೋಷದ ಬದುಕಿಗೆ ಪೂರಕವಾಗಿರುತ್ತದೆ. ಅಂತಹ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗಿದೆ. ಜಾಗತೀಕರಣ ಶಿಕ್ಷಣ ಪಡೆದು ದುಡಿಯುವ ಕೈಗಳಿಗೆ ಶಕ್ತಿಯನ್ನು ನೀಡಿ ಯುಕ್ತಿವಂತರನ್ನಾಗಿ ಮಾಡಬೇಕು. ಕೃಷಿಕರನ್ನು ಅನ್ನದಾತರನ್ನಾಗಿ ಮಾರ್ಪಡಿಸಬೇಕೇ ಹೊರತು, ಅವರಿಗೆ ಭರವಸೆಯ ಬದುಕನ್ನು ಕಲಿಸಬೇಕೇ ಹೊರತು ಆತ್ಮಹತ್ಯೆಗೆ ಪ್ರೇರೇಪಿಸುವಂತಾಗಬಾರದು. ಹಾಗಾದಾಗ ಮಾತ್ರ ಜಾಗತೀಕರಣವನ್ನು ಹೊಸ ಬಗೆಯ ಶೈಕ್ಷಣಿಕ ಸವಾಲುಗಳೊಂದಿಗೆ ಸ್ವೀಕರಿಸಬೇಕು. ಇಲ್ಲವೇ ಜಾಗತೀಕರಣ ಬೇಡವೆಂದು ಜಾಗೃತರಾಗುವಂತಹ ಶಿಕ್ಷಣ ನೀಡಬೇಕು.

–ಹೆಚ್.ಎಮ್.ವ.

## ಜಾತ್ಯತೀತತೆ ಮತ್ತು ಶಿಕ್ಷಣ

19ನೇ ಶತಮಾನದಲ್ಲಿ **ಜಾರ್ಜ ಹೋಲಿಥೆಕ್** ಮೊದಲ ಬಾರಿಗೆ ಆಂಗ್ಲ ಭಾಷೆಯಲ್ಲಿ **'ಸೆಕ್ಯುಲರಿಸಂ'** ಎಂಬ ಪದವನ್ನು ಬಳಸಿದನು. ಇದರ ಅರ್ಥ ಸದ್ಯದ ಯುಗ, "ವರ್ತಮಾನ ಕಾಲದ ಸ್ಥಿತಿ" ಎಂದು. ಈ ಆಂಗ್ಲ ಪದಕ್ಕೆ ಕನ್ನಡ ಭಾಷೆಯಲ್ಲಿ ಜಾತ್ಯತೀತತೆ ಎಂಬುದಾಗಿ ಬಳಸಿಕೊಂಡಿದ್ದೇವೆ.

ವೆಬ್‌ಸ್ಟರ್ ನಿಘಂಟು "ಧಾರ್ಮಿಕ ನಂಬಿಕೆ, ಪೂಜೆಗಳನ್ನು ತಿರಸ್ಕರಿಸುವ ವ್ಯವಸ್ಥಿತವಾದ ಒಂದು ತತ್ವ ಮತ್ತು ಸಿದ್ಧಾಂತಗಳ ಕಾರ್ಯ ಚಟುವಟಿಕೆ" ಎಂದು ಇದನ್ನು ಅರ್ಥೈಸಿದೆ.

ಛೆಂಬರ್ಸ್ ನಿಘಂಟಿನಲ್ಲಿ "ನಮ್ಮ ಧರ್ಮಗಳಿಗೆ ರಾಷ್ಟ್ರದ ಆಗು ಹೋಗುಗಳಿಗೆ ಮತ್ತು ಶಿಕ್ಷಣಕ್ಕೆ ಯಾವುದೇ ರೀತಿಯ ಸಂಬಂಧಗಳೇ ಇಲ್ಲದಿರುವುದು ಜಾತ್ಯತೀತತೆ" ಎಂದು ಹೇಳಿದೆ.

ಭಾರತೀಯರೆಲ್ಲರೂ ಜಾತ್ಯತೀತತೆ ಎಂಬುದನ್ನು ಜಾತೀಯತೆಗಳಿಲ್ಲದೆ ನಾವೆಲ್ಲರೂ ಒಂದೇ ಮನುಷ್ಯ ಜಾತಿ ಎಂಬ ವಿಶಾಲವಾದ ಮನೋಭಾವನೆ ಎಂಬುದಾಗಿ ಭಾವಿಸಿದ್ದಾರೆ. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ವಿವಿಧ ವರ್ಗಗಳು, ಜಾತಿ ಪಂಗಡಗಳು, ಒಂದೇ ರೀತಿಯಾಗಿ ಪರಸ್ಪರ ಸೌಹಾರ್ದತೆಯಿಂದ ಮತ್ತು ಪರಸ್ಪರ ನಂಬಿಕೆಯಿಂದ ಇರುವುದು. ಅಂದರೆ ವಿವಿಧ ಸಂಸ್ಕೃತಿಗಳ ಸಾಮಾಜಿಕ ಪಂಗಡಗಳು ತಮ್ಮ ಸಂಪ್ರದಾಯ ಮತ್ತಿತರ ಮೌಲ್ಯಗಳನ್ನು ಹೊಂದಿರಬಹುದು. ಇದು ಇತರರಿಗೆ ಧಕ್ಕೆ ಉಂಟುಮಾಡಬಾರದು. ಅಂದರೆ ವಿವಿಧತೆಯಲ್ಲಿ ಏಕತೆಯನ್ನು ತರುವುದಾಗಿದೆ.

ಜಾತ್ಯತೀತತೆಯು ಪ್ರಮುಖವಾದ ಈ ಲಕ್ಷಣಗಳನ್ನು ಹೊಂದಿದೆ. ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದು, ತರ್ಕಬದ್ಧ ವಿಚಾರಗಳನ್ನು ಮಾಡುವುದು, ಪ್ರತ್ಯೇಕತೆಯ ಪ್ರವೃತ್ತಿಗಳನ್ನು ಕಡಿಮೆ ಮಾಡುವುದು, ಸಮಾನ ನಿಲುವುಗಳನ್ನು ಸಾದರಪಡಿಸುವುದು, ಜನರಲ್ಲಿ ಜಾಗೃತಿಯ ಮನೋಭಾವನೆಗಳ ಬೆಳವಣಿಗೆ, ಧರ್ಮದೊಳಗಿನ ಜಾತೀಯತೆಯ ಪಿಡುಗುಗಳನ್ನು ಅಂತ್ಯಗೊಳಿಸುವುದು, ಒಟ್ಟಾರೆ ಸಮಾನತೆಯ ದೃಷ್ಟಿಯ ಬೆಳವಣಿಗೆ.

ಜಾತ್ಯತೀತತೆ ಮತ್ತು ಶಿಕ್ಷಣದ ನಡುವೆ ನಿಕಟ ಸಂಬಂಧವಿದೆ. ನಮ್ಮ ಭಾರತದ ಸಂವಿಧಾನದ ಮೂರನೇ ಅಧ್ಯಾಯದ 14ರಿಂದ....30ನೇ ಅನುಚ್ಛೇದಗಳನ್ನು ಅವಲೋಕಿಸಿದರೆ ಭಾರತದ ಪ್ರತಿಯೊಬ್ಬ ಪೌರನಿಗೆ ಧಾರ್ಮಿಕ ಸ್ವಾತಂತ್ರ್ಯವಿದೆ. ಆದರೆ ಇದರ ಆಚರಣೆಯಲ್ಲಿ ಬೇರೆ ಧರ್ಮದವರಿಗೆ ತೊಂದರೆ ಮಾಡುವಂತಿಲ್ಲ. ಭಾರತವು ಜಾತ್ಯತೀತ ರಾಷ್ಟ್ರವಾಗಿರುವ ಕಾರಣ ಶಿಕ್ಷಣದ ಬಗೆಗೆ ತಟಸ್ಥ ನೀತಿಯನ್ನು ಹೊಂದಿದ್ದು ಅದರ ಪ್ರಚಾರ ಮತ್ತು ಬೆಳವಣಿಗೆಗೆ ಮುಕ್ತ ಅವಕಾಶ ಕಲ್ಪಿಸಿದೆ. ಶಾಲೆಗಳಲ್ಲಿ ಮಕ್ಕಳಿಗೆ ಎಲ್ಲ ಧರ್ಮಗಳ ಸಾರವನ್ನು ತಿಳಿಸುವುದರ ಜೊತೆಗೆ ಜೀವನದಲ್ಲಿ ಉನ್ನತ ಮಟ್ಟದ ಮೌಲ್ಯಗಳನ್ನು ಬೆಳೆಸಲು ಅವಕಾಶಗಳನ್ನು ನೀಡಿದೆ. ಸಮಗ್ರ ಪಠ್ಯವಸ್ತು, ಪಠ್ಯೇತರ ಚಟುವಟಿಕೆಗಳಲ್ಲಿ ಪರಸ್ಪರ ಸಹಕಾರ, ತಿಳಿವಳಿಕೆ, ಹೊಂದಾಣಿಕೆ, ಗೌರವಿಸುವಿಕೆಗಳ ಬೆಳವಣಿಗೆಗೆ ಅವಕಾಶ ಕಲ್ಪಿಸಿ ಜಾತ್ಯತೀತತೆಯನ್ನು ಬೆಳೆಸಲು ಅನುವು ಮಾಡಿದೆ.

ಜಾತ್ಯತೀತತೆಯ ಪರಿಕಲ್ಪನೆಗಳನ್ನು ಶಿಕ್ಷಣದ ಮುಖಾಂತರ ಈ ರೀತಿ ಬೆಳೆಸಬಹುದು. ಎಲ್ಲಾ ಧರ್ಮಗಳಿಗೂ ಸಮಾನ ಗೌರವ ನೀಡುವ ಶಿಕ್ಷಣದ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ವಿವಿಧ ಧರ್ಮ, ವಿವಿಧ ಭಾಷೆ, ವಿವಿಧ ಪರಿಸರ ವಿವಿಧ ಜನಾಂಗಗಳಿದ್ದರೂ ಒಂದೇ ಎಂಬ ಭಾವನೆಯನ್ನು ಶಿಕ್ಷಣದ ಮುಖಾಂತರ ನೀಡುವುದು, ನಾವೆಲ್ಲರೂ ವಿಶ್ವಕುಟುಂಬಕ್ಕೆ ಸೇರಿದವರು ಎಂಬ ಭಾವನೆ ಶಿಕ್ಷಣದ ಮುಖಾಂತರ ಕೊಡುವುದು, ಜಾತೀಯತೆ, ಪ್ರಾಂತೀಯತೆ, ದ್ವೇಷ, ಅಸೂಯೆ, ಸಾಮಾಜಿಕ ಪೂರ್ವಗ್ರಹ ಪೀಡನೆಗಳನ್ನು ಶಿಕ್ಷಣದ ಮುಖಾಂತರ ಹೊಡೆದೋಡಿಸುವುದು, ಪ್ರಜಾಸತ್ತಾತ್ಮಕ ಮಾನವೀಯ ಮೌಲ್ಯಗಳನ್ನು ಶಿಕ್ಷಣದ ಮುಖಾಂತರ ಬೆಳೆಸುವುದು, ವಿಷಯಗಳ ತರ್ಕಬದ್ಧ ಚಿಂತನೆ ಮಾಡುವಂತೆ ಶಿಕ್ಷಣದ ಮುಖಾಂತರ ಪ್ರೋತ್ಸಾಹಿಸುವುದು, ಸೂಕ್ತ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಏರ್ಪಡಿಸುವುದು, ವಿಭಿನ್ನ ದೃಷ್ಟಿಕೋನಗಳ ಬೆಳವಣಿಗೆ, ಈ ರೀತಿ ಜಾತ್ಯತೀತತೆಯ ಅಂಶಗಳನ್ನು ಶಿಕ್ಷಣದ ಮುಖಾಂತರ ಬೆಳೆಸಬಹುದು.

–ವೈ.ಎನ್.ಶ್ರೀ

## ಜಾನ್ಏಮಸ್ ಕೊಮೆನಿಅಸ್

ಜಾನ್ಏಮಸ್ ಕೊಮೆನಿಅಸ್ ಜೆಕೊಸ್ಲೊವಾಕಿಯಾದ ಹೆಸರಾಂತ ಸಾಹಿತಿ, ತತ್ವಶಾಸ್ತ್ರಜ್ಞ ಮತ್ತು ಶಿಕ್ಷಣತಜ್ಞ. ಈತನು ಕೊಮೆನ್ನಿ ಜೊಹಾನಸ್ ಏಮಸ್ ಎಂಬ ಲ್ಯಾಟಿನ್ ರೂಪದ ಹೆಸರಿನಿಂದಲೂ ಕರೆಯಲ್ಪಡುತ್ತಿದ್ದನು. ಇವನು ಮಾರ್ಚ 28, 1592ರಲ್ಲಿ ಮೊರಾವಿಯ ಎಂಬ ಊರಿನಲ್ಲಿ ಹುಟ್ಟಿದನು. ದಟ್ಟದಾರಿದ್ರ್ಯದಿಂದ ನರಳುತ್ತಿದ್ದ ಕಾರಣ ಈತನು ಶಿಕ್ಷಣವನ್ನು ತಡವಾಗಿ ಆರಂಭಿಸಬೇಕಾಯಿತು. ಹದಿನಾರು ವರ್ಷ ವಯಸ್ಸಾದಾಗ ಲ್ಯಾಟಿನ್ ಶಾಲೆಯನ್ನು ಸೇರಿದನು. ತನ್ನ ಚಾಣಾಕ್ಷತನದಿಂದ ಹಲವರ ಮನಸೆಳೆದು ನಂತರದ ವಿದ್ಯಾಭ್ಯಾಸವನ್ನು ಹರ್‌ಬಾರನ್ ಮತ್ತು ಹೈಡಲ್‌ಬರ್ಗ್‌ಗಳಲ್ಲಿ ಮುಂದುವರೆಸಿದನು.

ಜಾನ್ಏಮಸ್ ಕೊಮೆನಿಅಸ್

ಚರಿತ್ರಕಾರರು ಹಾಗೂ ತತ್ವಶಾಸ್ತ್ರಜ್ಞರು ಈತನ ಜೀವನವನ್ನು

Digitised by Bharatavani, CIIL

ಮೂರು ವಿಭಾಗಗಳಲ್ಲಿ ಗುರ್ತಿಸಿದ್ದಾರೆ. ಮೊದಲನೆಯದಾಗಿ, ಚರ್ಚಿನ ಆಜ್ಞೆಗಳು ಹಾಗೂ ಅದರ ನಡಾವಳಿಗಳನ್ನು ಹೊಂದಿಕೊಂಡು ಬಾಳುವ ಜೀವನ, ಎರಡನೆಯದಾಗಿ, ಮಾನವನ ಜ್ಞಾನ ಸಂಪತ್ತಿನ ಕ್ರೋಡೀಕರಣದ ಬಗ್ಗೆ ಈತನು ನಡೆಸಿದ ಆಳವಾದ ಸಂಶೋಧನೆಗಳು, ಮೂರನೆಯದಾಗಿ, ಪ್ರಾಯೋಗಿಕ ಶಿಕ್ಷಣದ ಬಗ್ಗೆ ಆತನಿಗಿದ್ದ ತೀವ್ರ ಕಾಳಜಿ ಹಾಗೂ ಆಸಕ್ತಿ. ಈತನು ತಂದ ಶೈಕ್ಷಣಿಕ ಸುಧಾರಣೆ ಹಾಗೂ ಸಾಮಾಜಿಕ ಸುಧಾರಣೆಗಳಿಗಾಗಿ ಮಾನವ ಚರಿತ್ರೆಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದಾನೆ.

1618ರಲ್ಲಿ ಫುಲಕ್ ಎಂಬ ಸ್ಥಳದಲ್ಲಿ ಧರ್ಮೋಪದೇಶಕನಾಗಿ ಕೊಮೆನಿಅಸ್ ಕೆಲಸ ಮಾಡಿದನು. ನಂತರ ಸ್ಪೇನ್ ದೇಶದಲ್ಲಿ ಪ್ರಾರಂಭವಾದ ದಂಗೆಯಿಂದಾಗಿ 1621ರಲ್ಲಿ ಈತನು ಪೋಲೆಂಡ್‌ಗೆ ಓಡಿ ಹೋಗಿ ಅಲ್ಲಿ ಮೊರಾವಿಯಸ್ ಮತ್ತು ಬೊಹಿಮಿಯನ್ ಚರ್ಚುಗಳಿಗೆ ಅಧ್ಯಕ್ಷನಾದನು. ನಂತರ ಕೆಲಕಾಲ ಲ್ಯಾಟಿನ್ ಶಿಕ್ಷಕನಾಗಿ ಕೆಲಸ ಮಾಡಿದನು. ಅವನ ಪಾಂಡಿತ್ಯವನ್ನು ಗುರ್ತಿಸಿ ಈತನನ್ನು 1638ರಲ್ಲಿ ಸ್ವೀಡನ್ ದೇಶಕ್ಕೂ, 1641ರಲ್ಲಿ ಇಂಗ್ಲೆಂಡಿಗೂ ಶಿಕ್ಷಣ ಸಮಿತಿಯ ಸದಸ್ಯನಾಗಿ ಕಳುಹಿಸಲಾಯಿತು. ಈತನ ವೈದುಷ್ಯವನ್ನು ಬಲ್ಲವರು, ಪಾಂಡಿತ್ಯವನ್ನು ಕಂಡು ಬೆರಗಾದವರು ಕೊಮೆನಿಅಸ್ ಒಬ್ಬ 'ನಡೆದಾಡುವ ವಿಶ್ವಕೋಶ' ಎಂದಿದ್ದಾರೆ. ಈತನು ಮುನ್ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಇನ್ನೂರು ಗ್ರಂಥಗಳಿಗೂ ಹೆಚ್ಚು ಇಂಗ್ಲಿಷ್ ಭಾಷಾಂತರದಲ್ಲಿ ಪ್ರಕಟಗೊಂಡಿವೆ. ಜರ್ಮನಿ ದೇಶದಲ್ಲಿ ಪ್ರೊಟೆಸ್ಟೆಂಟ್ ಪ್ರಭಾವಕ್ಕೆ ಒಳಪಟ್ಟಿದ್ದ ಕೊಮೆನಿಅಸ್ ಈ ಜೀವನದಲ್ಲೇ ಮನುಷ್ಯ ಸಾಯುಜ್ಯವನ್ನು ಸಾಧಿಸಬಹುದು ಎಂದು ನಂಬಿದ್ದನು. ಫ್ರಾನ್ಸಿಸ್ ಬೇಕನ್ ಕೃತಿಗಳನ್ನು ಓದಿ ಮನುಷ್ಯನು ಅತ್ಯಂತ ಉನ್ನತ ಮಟ್ಟವನ್ನು ಈ ಭೂಮಿಯಲ್ಲೇ ವಿಜ್ಞಾನದ ಸಹಾಯದಿಂದ ಪಡೆಯಬಹುದು ಎಂದು ಇವನು ತಿಳಿದಿದ್ದನು. 'ದಿ ಲ್ಯಾಬರಿಂಥ ಆಫ್ ದಿ ವರ್ಲ್ಡ್ ಅಂಡ್ ದಿ ಪ್ಯಾರಡೈಸ್ ಆಫ್ ದಿ ಹಾರ್ಟ್' ಈತನ ಅತ್ಯಂತ ಜನಪ್ರಿಯತೆ ಗಳಿಸಿದ ಕೃತಿ. ಬೊಹಿಮಿಯವನ್ನು ಪ್ರಾಟೆಸ್ಟೆಂಟರು ಸ್ವತಂತ್ರದೆಡೆಗೆ ನಡೆಸುತ್ತಾರೆಂದು ನಂಬಿ ಅಲ್ಲಿ ಸಮಾಜದ ಪುನರ್ನಿರ್ಮಾಣಕ್ಕಾಗಿ ತನ್ನ 'ಸುಧಾರಿತ ಶಿಕ್ಷಣ ನೀತಿ'ಯನ್ನು ಜಾರಿಗೆ ತರಲು ಯತ್ನಿಸಿದನು. ಈ ಸಮಯದಲ್ಲಿ 'ಬ್ರೀಫ್ ಪ್ರೊಪೋಸಲ್' ಎಂಬ ಗ್ರಂಥದ ಮೂಲಕ ಪೂರ್ಣಕಾಲಿಕ ಶಾಲಾಶಿಕ್ಷಣವನ್ನು ಜಾರಿಗೆ ತರಲು ಪ್ರೇರೇಪಿಸಿ ಅಂತಹ ವ್ಯವಸ್ಥೆಯಲ್ಲಿ ದೇಶೀಯ ಸಂಸ್ಕೃತಿ ಹಾಗೂ ಯೂರೋಪಿನ ಸಂಸ್ಕೃತಿಗಳೆರಡನ್ನೂ ಹೇಳಿಕೊಡಬೇಕೆಂದು ಘೋಷಿಸಿದನು.

'ಕೇಂದ್ರ ಆಶಯ' ಎಂಬುದು ಈತನು ರಚಿಸಿದ ಮಾನವ–ಪರಮಾತ್ಮನ ಸಂಬಂಧಗಳನ್ನು ಕುರಿತ ಪಾಂಡಿತ್ಯ ಪೂರ್ಣಗ್ರಂಥ. 1648ರಲ್ಲಿ ಪ್ರಕಟವಾದ "ಸಾಯುತ್ತಿರುವ ತಾಯಿಯ ಮರಣಶಾಸನ" ಎಂಬ ಗ್ರಂಥದಲ್ಲಿ ಈತನು ಜೆಕೊಸ್ಲೋವಾಕಿಯನ್‌ರಿಗೆ ತಮ್ಮ ಪೂರ್ವಕಾಲದ ವೈಭವದ ಜೀವನ ಮತ್ತೆ ಬರಬಹುದೆಂಬ ಆಶಾವಾದವನ್ನು ನೀಡಿದ್ದಾನೆ. ಈ ಗ್ರಂಥದಲ್ಲಿ ಈತನು 'ವೀರಭಾಷೆ'ಯನ್ನು ಉಪಯೋಗಿಸಿದ್ದಾನೆ.

**ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ:** ಅನೇಕ ಯುರೋಪಿಯನ್ ಶಿಕ್ಷಣತಜ್ಞರ ವಿಚಾರದ ಮೇಲೆ ಈತನ ವಿಚಾರಧಾರೆಗಳ ಪ್ರಭಾವವಿದೆ."ದಿ ಗ್ರೇಟ್ ಡೈಡಾಕ್ಟಿಕ್" ಈತನ ಶಿಕ್ಷಣ ಕ್ಷೇತ್ರದ ಮಹಾಗ್ರಂಥ. ಈತನು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮೂಡಿಸಲು ಶಿಕ್ಷಣವನ್ನು 'ರ್‍ಯಾಪಿಡ್, ಪ್ಲೆಸೆಂಟ್, ಥರೋ, (ತ್ವರಿತ, ಆನಂದದಾಯಕ ಮತ್ತು ಪರಿಪೂರ್ಣ) ಮಾಡಲು ಸಮಾಜಕ್ಕೆ ಪ್ರಕೃತಿಯ ಹೆಜ್ಜೆಗಳನ್ನು ಗುರ್ತಿಸಲು ಕರೆ ನೀಡಿದನು. ಕಲಿಯುವ ಮಗುವಿನ ಮನಸ್ಸು ಹಾಗೂ ಕಲಿಕೆಯ ರೀತಿಗಳಿಗೆ ಒತ್ತು ನೀಡಿ ಮಾತೆಯರಿಗಾಗಿ 'ದಿ ಸ್ಕೂಲ್ ಆಫ್ ಇನ್‌ಫೆನ್ಸಿ' ಎಂಬ ಗ್ರಂಥವನ್ನು ಬರೆದನು. ವಸ್ತುಗಳ ಬಗ್ಗೆ ಅರಿವನ್ನು ಬೆಳೆಸಬೇಕೇ ಹೊರತು, ವ್ಯಾಕರಣವನ್ನು ಕಲಿಸಬೇಕಿಲ್ಲ ಎಂದು ಸಾರಿದನು. 'ಜನುವಾ ಲಿಂಗಾರಮ್ ರೆಸೆರಾಟ' ಎಂಬ ಪುಸ್ತಕದಲ್ಲಿ ಲ್ಯಾಟಿನ್ ಮತ್ತು ಜೆಕ್ ಭಾಷೆಗಳ ಪದಗಳನ್ನು ಅಕ್ಕ ಪಕ್ಕ ಮುದ್ರಿಸಿ ಒಂದು ಪಠ್ಯ ಪುಸ್ತಕವನ್ನು ಬರೆದನು. ಈ ಪುಸ್ತಕ ಇಡೀ ಯುರೋಪಿನ ಭಾಷೆಗಳು ಹಾಗೂ ಕೆಲವು ಏಷಿಯನ್ ಭಾಷೆಗಳಿಗೆ ಅನುವಾದಗೊಂಡಿದೆ.

ಯುರೋಪಿನ ಶಿಕ್ಷಣ ತಜ್ಞರಲ್ಲಿ ಸಾರ್ವತ್ರಿಕ ಶಿಕ್ಷಣ ಹಾಗೂ ಸಾರ್ವಜನಿಕ ಶಿಕ್ಷಣಗಳ ಆದ್ಯತೆಯ ತತ್ತ್ವದೃಷ್ಟಿಯನ್ನು ಪ್ರಚಾರ ಮಾಡಿದವರಲ್ಲಿ ಕೊಮೆನಿಅಸ್ ಮೊದಲಿಗ. ಬಾಲಕರಿಗೆ–ಬಾಲಕಿಯರಿಗೆ, ಬಡವರಿಗೆ–ಹಣವಂತರಿಗೆ, ಗ್ರಾಮಸ್ಥರಿಗೆ, ನಗರವಾಸಿಗಳಿಗೆ ಹೀಗೆ ಎಲ್ಲರಿಗೂ ಶಿಕ್ಷಣದಿಂದಾಗುವ ಲಾಭವನ್ನು ಕರಾರುವಾಕ್ಕಾಗಿ ಹೇಳಿದನು. ಈತನ ವಿಚಾರದಲ್ಲಿ ಅಧಃಪತನದ ಕಡೆಗೆ ಸಾಗುತ್ತಿದ್ದ ವಿಶ್ವವನ್ನು ಉಳಿಸಲು ಶಿಕ್ಷಣವೊಂದೇ ದಾರಿದೀಪ. ಮಾನವ ಜನಾಂಗದ ಉಳಿಕೆಗಾಗಿ ಈತನ ಮಂತ್ರವೆಂದರೆ 'ವಿಶ್ವಭ್ರಾತೃತ್ವ' ಹಾಗೂ 'ವಿಶ್ವಶಾಂತಿ'. ವಿಶ್ವ ಸಮನ್ವಯ ಹಾಗೂ ಸಂಯೋಜನೆ ಸಾಧಿಸುವುದು ಸಮಾಜದ ಪ್ರಗತಿಗೂ, ಮಾನವ ಕಲ್ಯಾಣಕ್ಕೂ ಅತ್ಯಗತ್ಯ ಎಂಬುದು ಈತನ ವಾದ. ತನ್ನ ಮಹತ್ವದ ವಿಚಾರಗಳಿಗೆ ಒಂದು ಪ್ರಾಯೋಗಿಕತೆಯ ರೂಪ ನೀಡಲು ವಿಶ್ವದ ಎಲ್ಲ ದೇಶಗಳಿಂದ ಅಧ್ಯಯನ ಮಾಡಲು ಬರುವಂತಹ ಒಂದು ಮಹಾವಿದ್ಯಾಲಯವನ್ನು (ಕಾಲೇಜ್) ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡು ತನ್ನ ಇಂಗ್ಲಿಷ್ ಗೆಳೆಯರನ್ನು ಪ್ರೋತ್ಸಾಹಿಸಿದ್ದ (ಪ್ಯಾನ್ ಸೋಫಿಕ ಕಾಲೇಜ್). ಈತನನ್ನು ಫ್ರಾನ್ಸ್ ದೇಶಕ್ಕೂ ಹಾಗೂ ಹಾರ್ವರ್ಡ್ ಕಾಲೇಜಿಗೂ ಉನ್ನತ ಸ್ಥಾನಗಳಿಗಾಗಿ ಆಹ್ವಾನಿಸಲಾಗಿತ್ತು. ಸ್ವೀಡನ್ ದೇಶದಲ್ಲಿ ಪಠ್ಯಪುಸ್ತಕಗಳನ್ನು ರಚಿಸಲು ಒಪ್ಪಿದ್ದನು. ಶಿಕ್ಷಣದ ಮೂಲಕ ಜಗತ್ತಿನಲ್ಲಿ ಸಮನ್ವಯ, ಸಾಮರಸ್ಯ ಹಾಗೂ ಶಾಶ್ವತ ಸುಖಶಾಂತಿಗಳಿಗೆ ಬೀಜವನ್ನು ಬಿತ್ತಬಹುದೆಂದು ನಂಬಿದ್ದನು.

ಈತನು ಮಾನವ ಜೀವನದಲ್ಲಿ ಅತ್ಯಂತ ಆಸಕ್ತಿಯನ್ನು ಹೊಂದಿದ್ದನು. ಜಾಗತಿಕ ಪ್ರಪಂಚದಲ್ಲಿ ವಿಶ್ವಶಾಂತಿಗೆ ಇರುವ ಒಂದೇ ಆಧಾರಭೂತ ಭರವಸೆ ನೀಡಬಲ್ಲ ಇಂದಿನ ವಿಶ್ವಸಂಸ್ಥೆಯ ಬಗ್ಗೆ ಐದು ಶತಮಾನಗಳ ಹಿಂದೆಯೇ ಕನಸು ಕಂಡ ತತ್ತ್ವಶಾಸ್ತ್ರಜ್ಞ, ಈತನು ಕನಸು ಕಂಡ ಶಿಕ್ಷಣ ನೀತಿಯಲ್ಲಿ ಕೇವಲ ವಿಶ್ವದ ರಾಜಕೀಯ ಹಾಗೂ ಯುದ್ಧ ನಿಗ್ರಹಣ ಮಾತ್ರವಲ್ಲದೆ ಅಂತಹ ಸಂಸ್ಥೆಯ ಮೂಲಕ ಶಿಕ್ಷಣ ಕ್ಷೇತ್ರದ ಗ್ರಂಥ, ಭಾಷೆ, ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಇವೆಲ್ಲದರ ಮೇಲೆ ವಿಶ್ವವ್ಯಾಪಕವಾದ ನಿಯಂತ್ರಣ ಮಾಡಬೇಕೆಂಬುದು ಈತನ ಆಶಯವಾಗಿದ್ದಿತು.

ಶಾಲಾ ವ್ಯವಸ್ಥೆಯ ಬಗೆಗೆ ಈತನ ನೀತಿಯಲ್ಲಿ ಮೊದಲನೆಯ ಶಿಕ್ಷಣ ಸಂಸ್ಥೆಯಲ್ಲಿ ಮಾತ್ರ ಮಕ್ಕಳಿಗೆ ಮಾತೃಭಾಷೆಯಲ್ಲಿ ಬೋಧನೆ. ಬಾಲ್ಯದ ಲ್ಯಾಟಿನ್ ಶಾಲೆಗೆ ಮೂರನೆಯ ಸ್ಥಾನ. ಕಾಲೇಜಿಗೆ ನಾಲ್ಕನೆಯ ಸ್ಥಾನ ಹಾಗೂ ಪ್ರವಾಸಕ್ಕೆ ಪ್ರಾಮುಖ್ಯ ಇಲ್ಲದಿದ್ದರೆ ಅಂಥ ಶಿಕ್ಷಣ ನಿರರ್ಥಕ ಎಂದು ಈತನ ನಂಬಿಕೆ. ಅನೇಕ ದೇಶಗಳ ಶಾಲಾ ವರ್ಗೀಕರಣವನ್ನು ನೋಡಿದರೆ, 21ನೇ ಶತಮಾನದಲ್ಲಿ ಸಹ ಈತನ ವರ್ಗೀಕರಣವೇ ಕಂಡುಬರುತ್ತದೆ.

ತನ್ನ ಮಹಾಗ್ರಂಥಗಳಲ್ಲದೆ, ಶಾಲೆಗಳ ಉಪಯೋಗಕ್ಕಾಗಿ ಈತನೇ ಶ್ರಮವಹಿಸಿ ಪಠ್ಯಪುಸ್ತಕಗಳನ್ನು ರಚಿಸಿದನು. ಪಠ್ಯ ಪುಸ್ತಕಗಳಲ್ಲಿ ಪದಗಳಿಗಿಂತ ವಸ್ತುವಿಗೆ ಪ್ರಾಮುಖ್ಯ ನೀಡಿದ್ದಾನೆ. ಪ್ರಪಂಚದ ಅನೇಕ ದೇಶಗಳಲ್ಲಿ ರೂಢಿಯಲ್ಲಿರುವ 'ಪ್ರತ್ಯಕ್ಷ ವಿಧಾನ' ಬೋಧನಾ ಕ್ರಮಕ್ಕೆ ಈತನೇ ಮೊದಲ ಕರ್ತೃ. ಚಿತ್ರದ ಮೂಲಕ ಅನ್ಯಭಾಷೆಯನ್ನು

Digitised by Bharatavani, CIIL

ಹೇಳಿಕೊಡುವುದರಲ್ಲಿ ಕೊಮೆನಿಅಸ್‌ನೇ ಮೊದಲಿಗ. ಈತನ 'ಆರ್ಬಿನ್‌ತ್ರಿಕ್ಟಸ್'-ಚಿತ್ರದ ಮೂಲಕ ಪರಭಾಷೆಯನ್ನು ಬೋಧಿಸುವ ವಿಧಾನ – ಜಗತ್ತಿನಾದ್ಯಂತ ಅಚ್ಚರಿ ಮೂಡಿಸಿತ್ತು. ಯಾವುದೇ ಶಿಕ್ಷಣವು ಸ್ವಭಾವ ಸಮ್ಮತವಾಗಿರಬೇಕೆಂದು ವಾದಿಸಿದ ಈತನ ವಿಚಾರ ಇಂದಿನ 'ಮೀಡಿಯಾ ಬೇಸ್ಡ್' ಶಿಕ್ಷಣಕ್ಕೆ ತಳಹದಿ. ಕೆಲವು ಚರಿತ್ರಕಾರರು ಈತನ ಮನಶ್ಶಾಸ್ತ್ರ ಪ್ರಜ್ಞೆಯನ್ನು ಹೊಗಳಿದ್ದಾರೆ.

ಕೊಮನಿಅಸ್ ಕಾಲವಾದನಂತರ ಆತನ ವಿಚಾರಗಳು ಹಾಗೂ ಶಿಕ್ಷಣದೃಷ್ಟಿ ಅಳವಡಿಕೆಗೆ ಬಂದಿವೆ. ಅಭಿವೃದ್ಧಿಶೀಲ ದೇಶಗಳಲ್ಲಿ ಚಾಲ್ತಿಯಲ್ಲಿರುವ 'ಯುನಿವರ್ಸಲೈಜೇಷನ್' ಎಂಬ ಶಿಕ್ಷಣ ನೀತಿ ಕೊಮೆನಿಅಸ್‌ನ ಕೊಡುಗೆ. ಆದರೆ ಶಿಕ್ಷಣದ ಮೂಲಕ ವಿಶ್ವಶಾಂತಿಯನ್ನು ಸಾಧಿಸುವ ಈತನ ಕನಸು ಹಾಗೆಯೇ ಉಳಿದಿದೆ ಎಂದು ಹೇಳಬಹುದು.

– ಬಿ.ಎನ್.ಬಾ.

## ಜಾನ್ ಡ್ಯೂಯಿ


ಜಾನ್ ಡ್ಯೂಯಿ

ಜಾನ್ ಡ್ಯೂಯಿ ಅಮೆರಿಕಾದ ತತ್ವಚಿಂತಕ, ಮನೋವಿಜ್ಞಾನಿ ಹಾಗೂ ಶಿಕ್ಷಣ ತಜ್ಞ. ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಇವರ ವಿಚಾರಗಳು ಸಾಕಷ್ಟು ಪ್ರಭಾವವನ್ನು ಬೀರಿವೆ. ಇವರನ್ನು ಪರಿಣಾಮವಾದ (Pragmatism ) ಮತ್ತು ಕ್ರಿಯಾತ್ಮಕ ಮನೋವಿಜ್ಞಾನ ಪ್ರವರ್ತಕರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಇವರು ಶಿಕ್ಷಣಕ್ಷೇತ್ರದ ಪ್ರಗತಿಪರ (Progressive) ಮತ್ತು ಪ್ರಗತಿಪರ ಸಮಷ್ಟಿವಾದಿ ನಿಲುವಿನ (Progressive Populist) ಮುಖ್ಯ ಪ್ರತಿನಿಧಿಯಾಗಿದ್ದಾರೆ.

ಜಾನ್ ಡ್ಯೂಯಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬರೆದಿರುವ ಪುಸ್ತಕಗಳಿಗೆ ಹೆಸರುವಾಸಿಯಾಗಿದ್ದಾರಾದರೂ, ಅವರು ಪ್ರಕೃತಿ, ಕಲೆ, ತರ್ಕ, ಅನುಭವ, ಪ್ರಜಾಪ್ರಭುತ್ವ ಮತ್ತು ನೈತಿಕತೆ (Ethics) ಈ ವಿಷಯಗಳ ಮೇಲೂ ಗ್ರಂಥ ರಚನೆ ಮಾಡಿದ್ದಾರೆ.

ಜಾನ್‌ಡ್ಯೂಯಿ ಬರ್ಲಿಂಗ್‌ಟನ್‌ನ ವರ್‌ಮಾಂಟ್ ಎಂಬಲ್ಲಿ ಅಕ್ಟೋಬರ್ 20, 1859ರಂದು ಜನಿಸಿದರು. ವರ್ಮಾಂಟ್ ವಿಶ್ವವಿದ್ಯಾಲಯದಲ್ಲಿ 1879ರಲ್ಲಿ ಸ್ನಾತಕ ಪದವಿ ಪಡೆದರು. ಜಾರ್ಜ್ ಸಿಲ್ವೆಸ್ಟರ್, ಚಾರ್ಲ್ಸ್ ಸಾಂಡರ್ಸ್ ಪರ್ಸ್ ಮುಂತಾದ ತಾತ್ವಿಕರ ಸಂಗಡ ಅಧ್ಯಯನವನ್ನು ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಸೈನ್ಸ್ ಕಾಲೇಜಿನಲ್ಲಿ ಮುಗಿಸಿ ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದರು. 1884ರಲ್ಲಿ ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ಹುದ್ದೆಯನ್ನು ಅಲಂಕರಿಸಿದರು. 1894ರಲ್ಲಿ ಡ್ಯೂಯಿ ಹೊಸದಾಗಿ ಪ್ರಾರಂಭವಾಗಿದ್ದ ಚಿಕಾಗೋ ವಿಶ್ವವಿದ್ಯಾಲಯವನ್ನು ಸೇರಿದರು. ಇಲ್ಲಿ ಆಗತಾನೇ ಉದಯಿಸುತ್ತಿದ್ದ ಪರಿಣಾಮವಾದದೊಡನೆ ತಮ್ಮನ್ನು ತೊಡಗಿಸಿಕೊಂಡು ಪ್ರಯೋಗವನ್ನಾಧರಿಸಿದ ತಮ್ಮ ಜ್ಞಾನಮೀಮಾಂಸೆ (Theory of knowledge)ಯನ್ನು ರೂಪಿಸಿದರು. ಇದೇ ಸಮಯದಲ್ಲಿ "ಆಲೋಚನೆ ಮತ್ತು ಅದರ ವಿಷಯ" (Thought and its subject matter) ಎಂಬ ಹೆಸರುಳ್ಳ ನಾಲ್ಕು ಪ್ರಬಂಧಗಳ ಸಂಕಲನವೊಂದನ್ನು ರಚಿಸಿದರು. ಇದಲ್ಲದೆ ಶಿಕ್ಷಣದಲ್ಲಿ ಪ್ರಮುಖ ಕೃತಿಯೆನಿಸಿಕೊಂಡಿರುವ "ಶಾಲೆ ಮತ್ತು ಸಾಮಾಜಿಕ ಮುನ್ನಡೆ" (The School and Social Progress) ಅವರು ವಿಶ್ವವಿದ್ಯಾಲಯದಲ್ಲಿ ನಡೆಸಿದ ಪ್ರಯೋಗಗಳ ಫಲವಾಗಿದೆ. ವಿಶ್ವವಿದ್ಯಾಲಯದ ಅಧಿಕಾರವರ್ಗದವರೊಡನೆ ಭಿನ್ನಾಭಿಪ್ರಾಯಗಳುಂಟಾಗಿ ಡ್ಯೂಯಿ ತಮ್ಮ ವೃತ್ತಿಗೆ ರಾಜೀನಾಮೆಯಿತ್ತು ಕೆಲವು ಕಾಲದ ನಂತರ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಹುದ್ದೆಯನ್ನು ಸ್ವೀಕರಿಸಿದರು. ಅಮೆರಿಕನ್ ಸೈಕಾಲಜಿಕಲ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿ ಕೆಲವು ಕಾಲ ಕಾರ್ಯನಿರ್ವಹಿಸಿದರು. 1905ರಲ್ಲಿ ಅಮೆರಿಕನ್ ಫಿಲಾಸಫಿಕಲ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿ ಚುನಾಯಿತರಾದರು. ಡ್ಯೂಯಿ ಸುಮಾರು 700ಕ್ಕೂ ಹೆಚ್ಚು ಲೇಖನಗಳನ್ನು 140 ನಿಯತಕಾಲಿಕೆಗಳಲ್ಲಿ ಪ್ರಕಟಪಡಿಸಿದ್ದಾರೆ.

1920 ಹಾಗೂ 1930ರ ದಶಕಗಳಲ್ಲಿ ಅಮೆರಿಕದ ಶಿಕ್ಷಣಕ್ಷೇತ್ರ ಜಾನ್‌ಡ್ಯೂಯಿಯ ಶೈಕ್ಷಣಿಕ ವಿಚಾರಗಳಿಂದ ಪ್ರಭಾವಿತವಾಯಿತು. ಆಧುನಿಕ ಕಾಲದ ಸಾಂಪ್ರದಾಯಿಕ ಶಿಕ್ಷಣ ವಿಧಾನದಲ್ಲಿನ ಶಿಸ್ತು, ಪೂರ್ವನಿರ್ಧಾರಿತ ಜ್ಞಾನ, ಅಧಿಕಾರಯುತ ಬೋಧನೆ ಇವುಗಳು ಜ್ಞಾನವರ್ಗಾವಣೆಯನ್ನೇ ಮುಖ್ಯ ಉದ್ದೇಶವನ್ನಾಗಿಸಿಕೊಂಡಿವೆ. ಈ ವಿಧಾನ ವಿದ್ಯಾರ್ಥಿಯ ನೈಜ ಅನುಭವಗಳ ಕಡೆಗೆ ಯಾವ ಗಮನವನ್ನೂ ಕೊಟ್ಟಿಲ್ಲ. ಇದು ಜಾನ್‌ಡ್ಯೂಯಿಯ ಶೈಕ್ಷಣಿಕ ವಿಚಾರದ ಸಾರಸರ್ವಸ್ವ.

ಜಾನ್‌ಡ್ಯೂಯಿ ಪ್ರಾಯೋಗಿಕ ಶಿಕ್ಷಣ (Experimental Education)ದ / ಪ್ರಗತಿಪರ ಶಿಕ್ಷಣ (Progressive Education)ದ ಪಿತಾಮಹನೆಂದು ಪರಿಗಣಿಸಲ್ಪಟ್ಟಿದ್ದಾರೆ. ವಿದ್ಯಾರ್ಥಿಯ ನೈಜ ಅನುಭವದ ಪಾತ್ರ ಕಲಿಕೆಯಲ್ಲಿ ಬಹುಮುಖ್ಯವೆಂದು ಡ್ಯೂಯಿ ಹೇಳಿದ್ದಾರಾದರೂ ಸಂಪೂರ್ಣ "ಸ್ವತಂತ್ರ, ವಿದ್ಯಾರ್ಥಿ–ಪ್ರೇರಿತ (Student-driven)" ಶಿಕ್ಷಣವನ್ನು ಇವರು ಒಪ್ಪುವುದಿಲ್ಲ. ಕಾರಣ, ವಿದ್ಯಾರ್ಥಿ ತನ್ನ ಕಲಿಕಾ ಅನುಭವಗಳನ್ನು ಪೂರ್ಣ ಪ್ರಮಾಣದಲ್ಲಿ ಪ್ರಯೋಜನ ಪಡೆಯುವ ರೀತಿಯಲ್ಲಿ ಸಂರಚಿಸಿಕೊಳ್ಳಲು ಅರಿತಿರುವುದಿಲ್ಲ.

ಶಿಕ್ಷಕ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವ್ಯಕ್ತಿಗತ ತಾರತಮ್ಯಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ಪ್ರತಿಯೊಬ್ಬ ವ್ಯಕ್ತಿ ಸ್ವಭಾವದಲ್ಲಿ ಹಾಗೂ ತನ್ನ ಹಿಂದಿನ ಅನುಭವಗಳಲ್ಲಿ ವ್ಯತ್ಯಾಸಗಳನ್ನು ಹೊಂದಿರುತ್ತಾನೆ. ಪ್ರಮಾಣಭೂತವಾದ ಪಠ್ಯಕ್ರಮವನ್ನು ಶೈಕ್ಷಣಿಕಶಾಸ್ತ್ರದ ವಿಧಾನಗಳನ್ನನುಸರಿಸಿ ಬೋಧಿಸಿದರೂ ಪ್ರತಿಯೊಬ್ಬ ವಿದ್ಯಾರ್ಥಿ ವಿವಿಧ ಗುಣಮಟ್ಟದ ಅನುಭವವನ್ನು ಹೊಂದುತ್ತಾನೆ. ಆದ್ದರಿಂದ ಬೋಧನೆ ಮತ್ತು ಪಠ್ಯಕ್ರಮಗಳನ್ನು ವ್ಯಕ್ತಿಗತ ವ್ಯತ್ಯಾಸಗಳನ್ನು ಗಮನಕ್ಕೆ ತೆಗೆದುಕೊಂಡು ವಿನ್ಯಾಸಗೊಳಿಸಬೇಕು.

ಡ್ಯೂಯಿಯ ಪ್ರಕಾರ ಶಿಕ್ಷಣ ವ್ಯಾಪಕವಾದ ಸಾಮಾಜಿಕ ಉದ್ದೇಶವನ್ನು ಹೊಂದಿದೆ. ಶಿಕ್ಷಣ ವ್ಯಕ್ತಿಗಳನ್ನು ಪ್ರಜಾಸತ್ತಾತ್ಮಕ ಸಮಾಜದ ಪ್ರಭಾವಶಾಲಿ ಸದಸ್ಯರನ್ನಾಗಿಸಬೇಕು. ಪ್ರಜಾಸತ್ತಾತ್ಮಕ ಸಮಾಜದ ಜೀವನಕ್ಕೆ ಏಕ ಮಾರ್ಗೀಯ ಶಿಸ್ತಿನಿಂದ ಕೂಡಿದ ಶಿಕ್ಷಣ ಒಳ್ಳೆಯ ಮಾದರಿಯಾಗಿ ಪರಿಣಮಿಸುವುದಿಲ್ಲ. ಆದರೆ, ವಿದ್ಯಾರ್ಥಿಗಳಿಗೆ ಅಗತ್ಯವಿರುವುದು ಅವರನ್ನು ಸಮಾಜದ ಮೌಲಿಕ, ಸಮಾನ ಮತ್ತು ಜವಾಬ್ದಾರಿಯುತ ಸದಸ್ಯರನ್ನಾಗಿ ಮಾಡುವ ಶೈಕ್ಷಣಿಕ ಅನುಭವಗಳು. ಕಲಿಕೆಗೆ ಅವಶ್ಯವಿರುವುದು ಅನುಭವ ತತ್ವ (Principle of Experience) ವನ್ನಾಧರಿಸಿದ ರಚನೆ ಹಾಗೂ ಶ್ರೇಣಿಬದ್ಧತೆ. ಕೇವಲ ಬೋಧಕ ಅಥವಾ ವಿದ್ಯಾರ್ಥಿಯ ಸ್ವತಂತ್ರ ಕಲ್ಪನೆಯಲ್ಲ.

ಮಾನವರು ಏನೊಂದನ್ನೂ ಸ್ವತಃ ಮಾಡುವಾಗ ಯಾವ ರೀತಿಯ ಅನುಭವವನ್ನು ಪಡೆಯುತ್ತಾರೆ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಂಡರೆ ಮಾತ್ರ ಪರಿಣಾಮಕಾರಿ ಶಿಕ್ಷಣದ ವಿನ್ಯಾಸ

Digitised by Bharatavani, CIIL

(design) ಸಾಧ್ಯ. ಇದಕ್ಕೆ ಸಂಬಂಧಿಸಿದಂತೆ ಡ್ಯೂಯಿ ಎರಡು ತತ್ವಗಳನ್ನು ರೂಪಿಸಿದ್ದಾರೆ. ನಿರಂತರತೆ (continuity) ಹಾಗೂ ಪರಸ್ಪರಕ್ರಿಯೆ / ಅನ್ಯೋನ್ಯಕ್ರಿಯೆ (interaction).

ಅನುಭವದಿಂದ ಮಾನವರು ಪ್ರಭಾವಿತರಾಗುತ್ತಾರೆ ಅಥವಾ ಅನುಭವಕ್ಕೆ ಸಂವೇದನಾಶೀಲರಾಗಿರುತ್ತಾರೆ ಎಂಬ ಧೋರಣೆಯನ್ನು ನಿರಂತರತೆ ಎಂಬ ಪದದಿಂದ ಸೂಚಿಸಲಾಗಿದೆ. ಕೇವಲ ಮೂಲ ಪ್ರವೃತ್ತಿಯನ್ನಾಧರಿಸಿ ಬದುಕುವ ಪ್ರಾಣಿಗಳಿಗೆ ವಿರುದ್ಧವಾಗಿ ಮನುಷ್ಯ ತಾನು ಹುಟ್ಟಿದ ನಂತರ ತನ್ನ ಅನುಭವಗಳಿಂದ ಕಲಿತು ಬದುಕುತ್ತಾನೆ. ಮಾನವರಿಗೆ ಶಿಕ್ಷಣವೆನ್ನುವುದು ಸಮಾಜದಲ್ಲಿ ಬದುಕಲು ಬೇಕಾದ ಕೌಶಲಗಳನ್ನು ಕಲಿಸುವಲ್ಲಿ ಪ್ರಮುಖ ಉಪಾಯವಾಗಿದೆ. ಸಕಾರಾತ್ಮಕವಾಗಲಿ ಇಲ್ಲವೇ ನಕಾರಾತ್ಮಕವಾಗಲಿ, ಪ್ರತಿಯೊಂದು ಅನುಭವದಿಂದಲೂ ನಾವು ಕಲಿಯುತ್ತೇವೆ. ಅಲ್ಲದೆ, ಈ ಅನುಭವಗಳು ಸಂಗ್ರಹವಾಗುತ್ತಿದ್ದು ಅವು ನಮ್ಮ ಮುಂದಿನ ಅನುಭವಗಳ ಸ್ವರೂಪವನ್ನು ಪ್ರಭಾವಗೊಳಿಸುತ್ತವೆ. ಆದ್ದರಿಂದ, ಪ್ರತಿಯೊಂದು ಅನುಭವ ವ್ಯಕ್ತಿಯ ಭಾವಿ ಅನುಭವಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿಸುತ್ತದೆ. ಪ್ರತಿಯೊಂದು ಅನುಭವ ಸಂಗ್ರಹಗೊಳ್ಳುವುದಲ್ಲದೆ ನಮ್ಮ ಇಚ್ಛೆಗೂ ಮೀರಿ ಮುಂದಿನ ಭವಿಷ್ಯತ್ತಿನಲ್ಲೂ ಸಕ್ರಿಯವಾಗಿ ಅನುಭವಗಳನ್ನು ಪ್ರಭಾವಿಸುತ್ತದೆ ಎನ್ನುವ ಈ ತತ್ವವನ್ನೇ ನಿರಂತರತೆ ಎನ್ನುತ್ತಾರೆ. ಡ್ಯೂಯಿಯವರ ಅನುಭವ ತತ್ವದ ಆಧಾರದ ಮೇಲೆ ನೇರ ಅನುಭವದಿಂದ ಕಲಿಕೆ ಪ್ರಭಾವಯುತವಾಗುತ್ತದೆ ಎಂದು ನಂತರದ ಡ್ಯೂಯಿಯವರ ಅನುಯಾಯಿಗಳು ಶಿಕ್ಷಣದಲ್ಲಿ 'ಮಾಡುವುದರಿಂದ ಕಲಿಕೆ' (Learning by Doing) ತತ್ವವನ್ನು ರೂಪಿಸಿದರು.

ನಿರಂತರತೆಯ ತತ್ವದ ಬುನಾದಿಯ ಮೇಲೆ ನಿಂತಿರುವ ಅನ್ಯೋನ್ಯಕ್ರಿಯೆಯ ತತ್ವ ವ್ಯಕ್ತಿಯ ವರ್ತಮಾನದ ಅನುಭವಗಳನ್ನು ರೂಪಿಸುವಲ್ಲಿ ಹಿಂದಿನ ಅನುಭವಗಳು ವರ್ತಮಾನದ ಸನ್ನಿವೇಶದೊಡನೆ ಹೇಗೆ ಪರಸ್ಪರ ವರ್ತಿಸುತ್ತವೆ ಎನ್ನುವುದನ್ನು ವಿವರಿಸುತ್ತದೆ. ವ್ಯಕ್ತಿಗತ ವ್ಯತ್ಯಾಸಗಳಿಂದಾಗಿ ಯಾವುದೇ ಒಂದು ಸನ್ನಿವೇಶ ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ರೀತಿಯಲ್ಲಿ ಗಾಢ ಅನುಭವಕ್ಕೆ ಬರಬಹುದು. ಉದಾಹರಣೆಗೆ, ಒಬ್ಬ ವಿದ್ಯಾರ್ಥಿ ಶಾಲೆಯೆಂದರೆ ಬಹಳ ಪ್ರೀತಿಯನ್ನು ತೋರಿದರೆ ಮತ್ತೊಬ್ಬ ವಿದ್ಯಾರ್ಥಿ ಶಾಲೆಯೆಂದಾಕ್ಷಣ ದ್ವೇಷವನ್ನು ತೋರಬಹುದು. ಇದನ್ನು ಶಿಕ್ಷಕರು ಅರಿಯುವುದು ಬಹಳ ಮುಖ್ಯ. ಬೋಧಕನು ವಿದ್ಯಾರ್ಥಿಯ ಗತ ಅನುಭವಗಳನ್ನು ನಿಯಂತ್ರಿಸಲಾರನೆಂಬುದು ನಿಜವಾದರೂ ಆ ಅನುಭವಗಳನ್ನು ಅರ್ಥಮಾಡಿಕೊಂಡು ಉತ್ತಮ ಶೈಕ್ಷಣಿಕ ಸನ್ನಿವೇಶಗಳನ್ನು ವಿದ್ಯಾರ್ಥಿಗಳಿಗಾಗಿ ರೂಪಿಸಲು ಪ್ರಯತ್ನಿಸಬಹುದು. ಕಡೆಯದಾಗಿ ಶಿಕ್ಷಕನಿಗೆ ಇರುವ ಒಂದೇ ಒಂದು ನಿಯಂತ್ರಣವೆಂದರೆ ವರ್ತಮಾನ ಸನ್ನಿವೇಶದ ವಿನ್ಯಾಸದ ಮೇಲಿರುವ ನಿಯಂತ್ರಣ. ವಿದ್ಯಾರ್ಥಿ ತನ್ನೊಡನೆ ಹೊತ್ತು ತಂದಿರುವ ಗತ ಅನುಭವಗಳ ಪರಿಣಾಮದ ಬಗ್ಗೆ ಸರಿಯಾದ ಅಂತರ್ದೃಷ್ಟಿಯುಳ್ಳ ಬೋಧಕ ವಿದ್ಯಾರ್ಥಿಗೆ ಸೂಕ್ತವೂ, ಅರ್ಥಪೂರ್ಣವೂ ಆದ ಶ್ರೇಷ್ಠ ಶಿಕ್ಷಣವನ್ನು ಒದಗಿಸಬಲ್ಲ.

ಡ್ಯೂಯಿ ಬರೆದಿರುವ "ಮೈ ಪೆಡಗಾಗಿಕ್ ಕ್ರೀಡ್", "ದಿ ಸ್ಕೂಲ್ ಅ್ಯಂಡ್ ಸೊಸೈಟಿ", "ದಿ ಚೈಲ್ಡ್ ಅ್ಯಂಡ್ ಕರಿಕ್ಯುಲಮ್", "ಡೆಮಾಕ್ರಸಿ ಅ್ಯಂಡ್ ಎಜುಕೇಷನ್" ಎಂಬ ಗ್ರಂಥಗಳಲ್ಲಿ ಆತನ ಶೈಕ್ಷಣಿಕ ವಿಚಾರಗಳು ಕಂಡು ಬರುತ್ತವೆ. "ಶಿಕ್ಷಣ ಮತ್ತು ಕಲಿಕೆ ಇವೆರಡೂ ಸಾಮಾಜಿಕ ಹಾಗೂ ಪಾರಸ್ಪರಿಕ ಪ್ರಕ್ರಿಯೆಗಳಾಗಿವೆ" ಎಂಬುದು ಈ ಎಲ್ಲಾ ಕೃತಿಗಳ ಜೀವಸ್ವರವಾಗಿ ಕಂಡುಬರುತ್ತದೆ. ಶಾಲೆಯೇ ಒಂದು ಸಾಮಾಜಿಕ ಸಂಸ್ಥೆಯಾಗಿದ್ದು ಇದರ ಮೂಲಕವೇ ಸಾಮಾಜಿಕ ಸುಧಾರಣೆ ಆಗಬಲ್ಲದು, ಆಗಬೇಕಾದ್ದು ಎಂದು ಡ್ಯೂಯಿ ಅಭಿಪ್ರಾಯಪಡುತ್ತಾರೆ.

ಡ್ಯೂಯಿಯ ಅನುಯಾಯಿಗಳೆಂದು ಹೇಳಿಕೊಂಡ ಕೆಲವು ಶಿಕ್ಷಣತಜ್ಞರ "ವಿದ್ಯಾರ್ಥಿಕೇಂದ್ರಿತ" ಶಿಕ್ಷಣ ವಿಧಾನಗಳ ಅತಿರೇಕವನ್ನು ಡ್ಯೂಯಿ ಖಂಡಿಸಿದರು. "ವಿದ್ಯಾರ್ಥಿಯ ದೃಷ್ಟಿಕೋನದಿಂದ ಕಲಿಕಾ ಪ್ರಕ್ರಿಯೆಯನ್ನು ನೋಡಬೇಕೆಂದೂ, ಕಲಿಕೆಯ ಗುಣಮಟ್ಟ ಮತ್ತು ಪರಿಮಾಣ ವಿದ್ಯಾರ್ಥಿಯಿಂದಲೇ ನಿರ್ಧಾರಿತವಾಗುತ್ತದೆಯೇ ಹೊರತು ಕಲಿಕಾವಿಷಯದಿಂದಲ್ಲ" ಎಂಬೀ ವಾದದಲ್ಲಿ ಬೋಧಕನ ಪಾತ್ರ ಮತ್ತು ಕಲಿಕಾ ವಿಷಯದ ಮಹತ್ವಗಳನ್ನು ಕಡೆಗಣಿಸಲಾಗಿದೆ. ಇದನ್ನು ಡ್ಯೂಯಿ ಒಪ್ಪುವುದಿಲ್ಲ.

ಮೊದಲೇ ಹೇಳಿದಂತೆ ಶಿಕ್ಷಣ ವಿಷಯ ಗ್ರಹಿಕೆ ಮತ್ತು ಸಮಾಜ ಜೀವನದ ಕೌಶಲ ಇವೆರಡರಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. "ಸಾಮಾಜಿಕ ಪ್ರಜ್ಞೆಯಲ್ಲಿ ಭಾಗಿಯಾಗುವ ಪ್ರಕ್ರಿಯೆಯ ನಿಯಂತ್ರಣವೇ ಶಿಕ್ಷಣ" ಎಂದು ಡ್ಯೂಯಿ ಶಿಕ್ಷಣದ ಒಂದು ಪರಿಭಾಷೆಯನ್ನು ನೀಡಿದ್ದಾರೆ. ಅಲ್ಲದೆ, ಈ ಸಾಮಾಜಿಕ ಪ್ರಜ್ಞೆಯನ್ನಾಧರಿಸಿದ ವ್ಯಕ್ತಿಗತ ಚಟುವಟಿಕೆಗಳ ಹೊಂದಾಣಿಕೆಯೇ ಸಾಮಾಜಿಕ ಪುನರ್ನಿರ್ಮಾಣದ ನಿಶ್ಚಿತ ಮಾರ್ಗವಾಗಿದೆ.

ಪ್ರಾಯೋಜನಾಧಾರಿತ ಕಲಿಕೆಯ (Project Based Learning) ಪರಿಕಲ್ಪನೆಯನ್ನು ಬಹಳವಾಗಿ ಪ್ರಭಾವಿಸಿದವರೆಂಬ ಖ್ಯಾತಿಯನ್ನು ಡ್ಯೂಯಿಯವರಿಗೆ ಹಲವು ಸಂಶೋಧಕರು ನೀಡಿದ್ದಾರೆ. "ಬಾಹ್ಯ ವಸ್ತುಗಳಿಂದ ನಮ್ಮ ಮೇಲಾಗುವ ಪ್ರಭಾವದಿಂದ ಸ್ಥಾನ ಸಂಪಾದನೆಯಾಗುವುದಾದರೆ ಬಾಹ್ಯವಸ್ತುಗಳಿಲ್ಲದೆಯೇ ಜ್ಞಾನಲಾಭವಾಗದು ಎಂದು ಹೇಳಬಹುದು''. ಈ ತತ್ವದ ಆಧಾರದ ಮೇಲೆ ಪ್ರಾಯೋಜನಾಧಾರಿತ ಕಲಿಕೆ ಅಸ್ತಿತ್ವಕ್ಕೆ ಬಂತು. ಬೋಧಕನ ನಿರ್ದಿಷ್ಟ ಪಾತ್ರದ ಬಗ್ಗೆಯೂ ಡ್ಯೂಯಿ ಹೇಳಿದ್ದಾರೆ. "ಮಗುವಿನಲ್ಲಿ ಕೆಲವು ಅಭ್ಯಾಸಗಳನ್ನು ರೂಪಿಸುವುದು ಅಥವಾ ಕೆಲವು ವಿಚಾರಗಳನ್ನು ಮಗುವಿನ ಮೇಲೆ ಹೇರುವುದು ಬೋಧಕನ ಕರ್ತವ್ಯವಲ್ಲ. ಬದಲಾಗಿ ಶಾಲೆಯಲ್ಲಿ ಒಂದು ಗುಂಪಿನ ಸದಸ್ಯನಾಗಿದ್ದುಕೊಂಡು ಮಗುವನ್ನು ಪ್ರಭಾವಿಸುವ ಅಂಶಗಳನ್ನು ಗುರುತಿಸಿ ಈ ಅಂಶಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸುವಂತೆ ಮಗುವಿಗೆ ಸಹಕರಿಸಬೇಕು" ಇದು ಡ್ಯೂಯಿಯ ಪ್ರಕಾರ ತರಗತಿಯಲ್ಲಿ ಶಿಕ್ಷಕನಿಗಿರುವ ಕರ್ತವ್ಯ. ಕಲಿಕಾ ಪ್ರಕ್ರಿಯೆಯ ಪುನರ್‌ಕಲ್ಪನೆಯನ್ನು ನೀಡಿದ್ದಲ್ಲದೆ, ಆ ಪ್ರಕ್ರಿಯೆಯಲ್ಲಿ ಶಿಕ್ಷಕನ ಪಾತ್ರವನ್ನು ಡ್ಯೂಯಿ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಬೋಧಕ ಕಲಿಕಾ ಪ್ರಕ್ರಿಯೆಯಲ್ಲಿ ಸಹಭಾಗಿಯಾಗಿದ್ದುಕೊಂಡು ಕಲಿಕಾ ವಿಷಯದ ಪರಿಧಿಯಲ್ಲಿ ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಅರ್ಥವನ್ನು ಕಂಡುಕೊಳ್ಳುವಲ್ಲಿ ಸಹಾಯವನ್ನೀಯಬೇಕು.

"ಸೈಕಾಲಜಿ" ಹಾಗೂ "ಲೆಬ್ನಿಟ್ಸ್ ನ್ಯೂ ಎಸ್ಸೇಸ್ ಕನ್ಸರ್ನಿಂಗ್ ದಿ ಹ್ಯೂಮನ್ ಅಂಡರ್‌ಸ್ಟ್ಯಾಂಡಿಂಗ್" ಡ್ಯೂಯಿಯ ಈ ಎರಡು ಪುಸ್ತಕಗಳು ಆಂಗ್ಲರ ನವಹೆಗೆಲನ (Neo Hegelear) ವಾದಕ್ಕೆ ಸಂಬಂಧಿಸಿದಂತಿವೆ. ಮನೋವಿಜ್ಞಾನದಲ್ಲಿ ಡ್ಯೂಯಿ ಆದರ್ಶವಾದ (Idealism) ಮತ್ತು ಪ್ರಾಯೋಗಿಕ ವಿಜ್ಞಾನಗಳ ಸಮನ್ವಯವನ್ನು ಮಾಡಲು ಪ್ರಯತ್ನಿಸಿದ್ದಾರೆ. ಡ್ಯೂಯಿ ತನ್ನ ಸಹೋದ್ಯೋಗಿಗಳಾದ ಜೇಮ್ಸ್ ಹೆಡನ್ ಟಿಪ್ಟ್ಸ್ ಹಾಗೂ ಜಾರ್ಜ್ ಹರ್ಬರ್ಟ್ ಮೀಡ್ ಮತ್ತು ತನ್ನ ವಿದ್ಯಾರ್ಥಿ ಜೇಮ್ಸ್ ರೋಲಂಡ್‌ರೊಡನೆ ಸೇರಿ ಮನೋವಿಜ್ಞಾನದ ಪುನರ್‌ರಚನೆಯನ್ನು ಕೈಗೊಂಡರು. ಈ ಪ್ರಯತ್ನದಲ್ಲಿ ಡ್ಯೂಯಿ ಸಾಮಾಜಿಕ ಪರಿಸರ ಹಾಗೂ

Digitised by Bharatavani, CIIL

ಮಾನಸಿಕಕ್ರಿಯೆ ಮತ್ತು ವರ್ತನೆ ಇವುಗಳ ಮೇಲೆ ಹೆಚ್ಚು ಒತ್ತನ್ನು ನೀಡಿದರು.

ಕ್ರಿಯಾತ್ಮಕ ಮನೋವಿಜ್ಞಾನ ಕ್ರಿಯೆ ಮತ್ತು ಅನ್ವಯಿಕತೆ (application)ಗಳಿಗೆ ಹೆಚ್ಚು ಒತ್ತನ್ನು ನೀಡುತ್ತದೆ. ವುಂಟ್‌ನ ಸಾಂಪ್ರದಾಯಿಕ ಪ್ರಚೋದನೆ–ಪ್ರತಿಕ್ರಿಯೆ (Stimulus-Response)ಯ ಕಲ್ಪನೆಗೆ ಪ್ರತಿಯಾಗಿ ಡ್ಯೂಯಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಅವರ ಪ್ರಕಾರ 'ಪ್ರಚೋದನೆ' ಹಾಗೂ 'ಪ್ರತಿಕ್ರಿಯೆ' ಇವೆರಡು ವ್ಯಕ್ತಿ ಸನ್ನಿವೇಶವನ್ನು ಹೇಗೆ ಗ್ರಹಿಸುತ್ತಾನೆ ಎಂಬುದರ ಮೇಲೆ ಅವಲಂಬಿಸಿದೆ ಮತ್ತು ಸಂವೇದನೆ ಚಾಲನ ಮಂಡಲ (Sensory Motor Circuit)ವು ಏಕಾತ್ಮಕ (unitary) ಸ್ವಭಾವವುಳ್ಳದ್ದಾಗಿದೆ. ಪ್ರಚೋದನೆ, ಸಂವೇದನೆ ಮತ್ತು ಪ್ರತಿಕ್ರಿಯೆ ಇವುಗಳ ಅಸ್ತಿತ್ವವನ್ನು ಡ್ಯೂಯಿ ನಿರಾಕರಿಸಿಲ್ಲವಾದರೂ ಇವುಗಳು ಪ್ರತ್ಯೇಕವಾದುವು ಹಾಗೂ ಸರಪಣಿಯ ಕೊಂಡಿಗಳಂತೆ ಒಂದಾದ ಮೇಲೊಂದು ನಡೆಯುವ ಘಟನೆಗಳು ಎಂಬುದನ್ನು ಅವರು ಸಮರ್ಥಿಸುವುದಿಲ್ಲ. ಪ್ರಚೋದನೆ ಪೂರ್ವಾನುಭವಗಳ ಪರಿಣಾಮದಿಂದ ಶ್ರೀಮಂತಗೊಳ್ಳುವಂತೆ ಮೇಲೆ ಹೇಳಿದ ಘಟನೆಗಳು ಸಂಘಟಿತಗೊಂಡಿವೆ ಎಂಬ ವಿಚಾರವನ್ನು ಡ್ಯೂಯಿ ಮಂಡಿಸಿದರು. ಇಂದ್ರಿಯಾನುಭವದಿಂದ ಪ್ರತಿಕ್ರಿಯೆ ಮಾರ್ಪಾಡುಗೊಳ್ಳುತ್ತದೆ ಎನ್ನುವುದು ಅವರ ಮತ.

ಡ್ಯೂಯಿ 1899 ರಿಂದ 1900 ರವರೆಗೆ ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದರು. "ಅಪ್ಲೈಡ್ ಸೈಕಾಲಜಿ ಆ್ಯನ್ ಇಂಟ್ರಡಕ್ಷನ್ ಟು ದಿ ಪ್ರಿನ್ಸಿಪಲ್ಸ್ ಆ್ಯಂಡ್ ಪ್ರಾಕ್ಟೀಸ್ ಆಫ್ ಎಜುಕೇಷನ್", "ಇಂಟರೆಸ್ಟ್ ಆಸ್ ರಿಲೇಟೆಡ್ ಟು ವಿಲ್", "ಹೌ ವಿ ಥಿಂಕ್" ಎಂಬ ಗ್ರಂಥಗಳಲ್ಲದೆ ಇನ್ನೂ ಹಲವಾರು ಗ್ರಂಥಗಳನ್ನು ಡ್ಯೂಯಿ ರಚಿಸಿದ್ದಾರೆ.

ಫಲಪ್ರಮಾಣವಾದ ಅಥವಾ ಪರಿಣಾಮವಾದವನ್ನು ಯಥಾವತ್ತಾಗಿ ಹೇಳದೆ, ಡ್ಯೂಯಿ ತಮ್ಮ ತತ್ವವನ್ನು ಸಾಧನವಾದ (Instrumentalism)ವೆಂದು ಕರೆದರು. ಸಾಂಪ್ರದಾಯಿಕ ತತ್ವಶಾಸ್ತ್ರಗಳ ಅಧ್ಯಯನ ಮಾಡಿದ ಡ್ಯೂಯಿ ಅವುಗಳು ನಿರಂತರ ಬದಲಾಗುತ್ತಿರುವ ಪ್ರಪಂಚಕ್ಕೆ ಸಮಂಜಸವಾಗಿಲ್ಲವೆಂದು ಅಭಿಪ್ರಾಯಪಟ್ಟರು. ಸಾಂಪ್ರದಾಯಿಕ ತತ್ವಶಾಸ್ತ್ರಗಳು ಒಂದು ತಾತ್ವಿಕ ಸಿದ್ಧಾಂತವನ್ನು ರೂಢಿಸಲು ಅಗತ್ಯವಾದ ಶಾಶ್ವತ ಸತ್ಯಗಳನ್ನು ಅರಸುವ ಗುರಿಯನ್ನು ಹೊಂದಿದ್ದವು. ಆದರೆ ಡ್ಯೂಯಿಯ ಪ್ರಕಾರ ಈ ಸತ್ಯಗಳು ಹಲವು ಅಂಶಗಳ ಮೇಲೆ ಆಧಾರಿತವಾಗಿದ್ದು, ಇವು ಬದಲಾದಂತೆ ಸತ್ಯಗಳು ಬದಲಾಗುತ್ತವೆ. ಉದಾಹರಣೆಗೆ, 14ನೇ ಶತಮಾನದಲ್ಲಿ ಭೂಮಿಯು ಚಪ್ಪಟೆಯಾಗಿದೆ ಎನ್ನುವ ವಿಷಯವನ್ನು ಸತ್ಯವೆಂದೇ ಪರಿಗಣಿಸಲಾಗಿತ್ತು. ಇದು ಆ ಕಾಲದ ಸಂಸ್ಕೃತಿಗೆ ಲಭ್ಯವಿದ್ದ ತಥ್ಯಾಂಶ (facts) ಗಳ ಆಧಾರದ ಮೇಲೆ ರೂಪಿಸಬಹುದಾಗಿದ್ದ ಉತ್ತಮ ವಿಚಾರಧಾರೆಯಾಗಿತ್ತು. ಡ್ಯೂಯಿ ಸಂದರ್ಭ, ಸನ್ನಿವೇಶ ಹಾಗೂ ನಾವು ಎದುರಿಸುತ್ತಿರುವ ಸಮಸ್ಯೆ ಇವುಗಳಿಗೆ ಪ್ರಾಧಾನ್ಯವನ್ನು ಕೊಡುತ್ತಾರಲ್ಲದೆ ಹಿಂದಿನಕಾಲದ ತಾತ್ವಿಕ ಚಿಂತನೆಗಳನ್ನು ಪ್ರಶ್ನಿಸಲು ಹಾಗೂ ಅವುಗಳಲ್ಲಿರಬಹುದಾದ ಕೊರತೆಗಳನ್ನು ಸರಿಪಡಿಸಲು ಪುನರ್ಚಿಂತನೆ (reflection) ಮತ್ತು ವಿವೇಚನ (criticism) ಗಳನ್ನು ಉಪಯೋಗಿಸುತ್ತಾರೆ.

ಪ್ರಯೋಜನದ ದೃಷ್ಟಿಯಿಂದ ಸತ್ಯದ ಪರವಾಗಿ ಡ್ಯೂಯಿ ವಾದಿಸುತ್ತಾರೆಯೇ ಹೊರತು "ಸತ್ಯಕ್ಕಾಗಿ ಸತ್ಯ" ವೆಂಬ ದೃಷ್ಟಿಯಿಂದಲ್ಲ. ಪ್ರಕೃತಿ ನಿರಂತರವಾಗಿ ಹರಿಯುತ್ತಿರುವ ಪ್ರವಾಹದಂತೆ. ಸಾಧನಾವಾದದ ಪ್ರಕಾರ ಒಂದು ಸಂಶಯ ಹಾಗೂ ವೈಷಮ್ಯಪೂರಿತ ಸನ್ನಿವೇಶದಿಂದ ಮತ್ತೊಂದು ಉತ್ತಮ ಹಾಗೂ ಹೊಸ ಸನ್ನಿವೇಶವನ್ನು ಪ್ರವೇಶಿಸಲು ಚಿಂತನೆಯನ್ನು 'ಸಾಧನ' (Instrument) ದಂತೆ ಬಳಸಲಾಗುತ್ತದೆ. ಈ ಹೊಸ ಸನ್ನಿವೇಶವು ಹಿಂದಿನ ಸನ್ನಿವೇಶದ ಅಂಶಗಳನ್ನು ಹೊಂದಿರುತ್ತದೆಯಾದರೂ, ಅದು ಹೊಸ ಆಶಯದಿಂದಲೂ, ಭಿನ್ನತೆಯಿಂದಲೂ ಕೂಡಿರುವುದರಿಂದ ಅಷ್ಟರಮಟ್ಟಿಗೆ ಶ್ರೀಮಂತವೂ, ಉತ್ತಮವೂ ಆಗಿರುತ್ತದೆ.

ಚಾರ್ಲ್ಸ್ ಸ್ಯಾಂಡರ್ಸ್ ಪಿಯರ್ಸ್‌ರವರ ಪ್ರಯೋಗದ ಮೂಲಕ ಸಮರ್ಥನೆ ಮತ್ತು ವಿಲಿಯಂ ಜೇಮ್ಸ್‌ರವರ ಜನಪ್ರಿಯ ಫಲಪ್ರಮಾಣವಾದಗಳ ಜೊತೆಗೆ ಡ್ಯೂಯಿ ತಮ್ಮದೇ ಆದ ಪರಿಣಾಮವಾದದ ಎರಡು ಆಯಾಮಗಳನ್ನು ಸೇರಿಸಿದ್ದಾರೆ. ಅವು ಮನೋವೈಜ್ಞಾನಿಕ ಹಾಗೂ ತಾರ್ಕಿಕ ಆಯಾಮಗಳು. ಮನೋವೈಜ್ಞಾನಿಕ ಆಯಾಮ ತನ್ನ ಜೈವಿಕ ಹರಿವಿ (biological drift) ನಿಂದ ಫಲಪ್ರಮಾಣವಾದವನ್ನು ವಿಶೇಷವಾಗಿ ಪ್ರಭಾವಗೊಳಿಸಿದರೆ ತಾರ್ಕಿಕ ಆಯಾಮ ಸಕಾರಾತ್ಮಕ ವಿಜ್ಞಾನ ಸತ್ಯವೆಂಬ ಪೂರ್ವಭಾವನೆ (assumption)ಯಲ್ಲಿ ಪರಿವರ್ತನೆಗೊಂಡಿತು.

ಒಂದು ಸನ್ನಿವೇಶವನ್ನು ಎದುರಿಸಲು ಅಗತ್ಯವಿರುವ ಶ್ರೇಷ್ಠ ಉಪಕರಣ (Ideal tool) ವನ್ನು ನೀಡಬಲ್ಲದಾವುದೋ ಅದೇ ಗ್ರಹಿಕೆ (cognition) ಎಂಬ ಅಂಶವನ್ನು ಡ್ಯೂಯಿಯ 'ಸಾಧನವಾದ' ಒತ್ತಿ ಹೇಳುತ್ತದೆ. ಉದ್ದೇಶ (purpose)ಗಳನ್ನು ಪೂರ್ಣ ರೂಪದಲ್ಲಿ ಅರ್ಥಮಾಡಿಕೊಳ್ಳಲು ಮನಸ್ಸು ಉಪಕರಣದಂತಿದೆ ಎಂದು ಜೇಮ್ಸ್ ಹೇಳುವ ಹಾಗೆ ಡ್ಯೂಯಿ ಸಹ ಅಭಿಪ್ರಾಯಪಡುತ್ತಾರೆ. ವಿಚಾರಗಳು (Ideas) ಒಂದು ಉದ್ದೇಶಕ್ಕಾಗಿ ಬಳಸುವ ಮನಸ್ಸಿನ ಅಸ್ತ್ರಗಳು. (Ideas are technological weapons of mind). ಅವು ಹಿಗ್ಗುವಂಥವು, ಹೊಂದಿಕೊಳ್ಳುವಂಥವು.

ಯಥಾರ್ಥ ಸತ್ಯದ ಸ್ವರೂಪ (structure of reality) ದ ಬಗ್ಗೆ ತಮ್ಮ ನಿಲುವನ್ನು ಡ್ಯೂಯಿ ಹೀಗೆ ಮಂಡಿಸಿದ್ದಾರೆ. ಯಥಾರ್ಥಸತ್ಯ ಮಾನವನ ಚಟುವಟಿಕೆಗಳನ್ನು ಅವಲಂಬಿಸಿದೆಯಾದ್ದರಿಂದ ಅದನ್ನು ಸ್ಥಿರ ಅಥವಾ ಬದಲಾಗದಂಥದ್ದು ಎಂದು ಹೇಳಲಾಗದು. ಗತ ಅನುಭವಗಳ ಸ್ಮರಣೆಯಿಂದ ಮಾನವನ ಚಟುವಟಿಕೆ ನಿರ್ದೇಶಿತವಾಗುತ್ತದೆ. ಗತ ಅನುಭವದ ಸ್ಮರಣೆಯೇ ವಿಚಾರ (Idea) ವೆಂದು ಹಾಗೂ ಆ ವಿಚಾರದ ಮೌಲ್ಯವನ್ನು ನಾವು ಕೈಗೊಳ್ಳುವ ಅನ್ವೇಷಣೆಯ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ತಿಳಿಯಬಹುದು ಎಂದು ಡ್ಯೂಯಿ ಅಭಿಪ್ರಾಯ ಪಡುತ್ತಾರೆ.

ಪ್ರಕೃತಿಯ ಘಟನೆಗಳೊಂದೇ ಸತ್ಯವೆಂದು ಹೇಳುವ ಡ್ಯೂಯಿ ಎಲ್ಲ ಸಾಂಪ್ರದಾಯಿಕ ತಾತ್ವಿಕ ಚಿಂತನೆಗಳನ್ನು ಅಲ್ಲಗಳೆಯುತ್ತಾರೆ. ಅವರ ಪ್ರಕಾರ ಈ ತಾತ್ವಿಕ ಚಿಂತನೆಗಳು ಒಂದು ಅಭೌತಿಕ ಪ್ರಪಂಚವೊಂದನ್ನು ಸೃಷ್ಟಿಸಿ ಸಾಮಾಜಿಕ ಹಾಗೂ ವೈಜ್ಞಾನಿಕ ಮುನ್ನಡೆಗೆ ಅಡಚಣೆಯಾಗಿ ಪರಿಣಮಿಸಿವೆ.

ಅಭೌತಿಕತೆಗೆ ವಿರೋಧಿಯಾದ ಡ್ಯೂಯಿಗೆ ಯಾವುದೇ ಅಲೌಕಿಕತೆಯ ಗಂಧವಿಲ್ಲದ ಪ್ರಕೃತಿಯ ಘಟನಾವಳಿಗಳ ಸರಣಿಯೊಂದೇ ಸತ್ಯ. ಹಾಗೆಯೇ, ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿದ ವೈಜ್ಞಾನಿಕ ಸಂಶೋಧನೆಗಳಿಂದ ಲಭಿಸುವ ಜ್ಞಾನವೇ ನಿಜವಾದ ಜ್ಞಾನ. ಅಂತೆಯೇ, ವೈಜ್ಞಾನಿಕ ಸಂಶೋಧನೆಯ ಏಕಮೇವ ಉದ್ದೇಶವೆಂದರೆ ಸತ್ಯದ ಸ್ವರೂಪವನ್ನು ನಿರ್ಧರಿಸುವುದು.

–ಬಿ.ಎಂ.ಚಂ.

Digitised by Bharatavani, CIIL

## ಜಾನ್ ಹೆನ್ರಿಚ್ ಪೆಸ್ಟಾಲಝಿ

ಸ್ವಿಡ್ಜರ್‌ಲೆಂಡಿನ ಸಮಾಜ ಸುಧಾರಕ, ಶಿಕ್ಷಣ ತಜ್ಞ, ಆಧುನಿಕ ಶಿಕ್ಷಣದ ಪಿತ, 'ಶಿಕ್ಷಣವು ಮನೋವೈಜ್ಞಾನಿಕವಾಗಬೇಕು' ಎಂಬ ತೀವ್ರ ಕಾಳಜಿಯ ಪ್ರತಿಪಾದಕ ಜಾನ್ ಹೆನ್ರಿಚ್ ಪೆಸ್ಟಾಲಝಿ. (John Heinrich Pestolozzi 1746-1827) 1567ರಲ್ಲಿ ಜ್ಯೂರಿಕ್‌ಗೆ (Zurich) ಆಂಟೋನಿ ಪೆಸ್ಟಾಲಝಿ ಬಂದು ನೆಲಸಿದಾಗ ಆತನಿಗೆ ಸಾಮಾಜಿಕ ಸ್ಥಾನಮಾನವಿರಲಿಲ್ಲ. ಆಂಟೋನಿ ಅವರ ಮಗ ಆಂಡ್ರ್ಯೂ ಅವರ ಮಗ ಜಾನ್ ಬಾಪ್ಟಿಸ್ಟ್ ಪೆಸ್ಟಾಲಝಿ.


ಜಾನ್ ಹೆನ್ರಿಚ್ ಪೆಸ್ಟಾಲಝಿ

ಬಾಪ್ಟಿಸ್ಟ್ ಪೆಸ್ಟಾಲಝಿ ಜ್ಯೂರಿಚ್‌ನಲ್ಲಿ ನೇತ್ರ ವೈದ್ಯ ಹಾಗೂ ಶಸ್ತ್ರ ಚಿಕಿತ್ಸಕರಾಗಿ ಸಾಮಾಜಿಕ ಮನ್ನಣೆ ಹೊಂದಿದ್ದರು. (1718–1751) ಜ್ಯೂರಿಚ್‌ನ ಸರೋವರದ ಆಚೆಯ ಬದಿಯ ರಿಚ್ಟರ್ ಸ್ವೈಲ್‌ನ ಸುಸನ್ನಾಹೊಟ್ಸ್‌ರನ್ನು ಮದುವೆಯಾಗಿ ಎಂಟೇ ವರ್ಷಗಳಲ್ಲಿ ಏಳು ಮಕ್ಕಳನ್ನು ಪಡೆದರು. ಅವುಗಳಲ್ಲಿ 4 ಮಕ್ಕಳು ಶೈಶವದಲ್ಲೇ ನಿಧನವಾದವು. 1746ರ ಜನವರಿ 11ರಂದು ಜನಿಸಿದ ಮಗು ಜಾನ್ ಹೆನ್ರಿಚ್ ಪೆಸ್ಟಾಲಝಿಗೆ 1751ರಲ್ಲಿ ಪಿತೃವಿಯೋಗವಾಯಿತು. ಕುಟುಂಬದ ಆರ್ಥಿಕ ಸ್ಥಿತಿ ಮೊದಲಿಗಿಂತ ಹೀನಾಯವಾಯಿತು. ಸ್ಥಿತಿವಂತ ಬಂಧುಗಳಿದ್ದರೂ ಅವರಲ್ಲಿಗೆ ಹೋಗಲು ಬಯಸದ ಸುಸನ್ನಾ ನೆಚ್ಚಿನ ನಿಷ್ಠಾವಂತ ಪರಿಚಾರಕಿ ಬಾಬೆಲಿಯೊಂದಿಗೆ ಪೆಸ್ಟಾಲಝಿ ಹಾಗೂ ಮತ್ತೊಂದು ಗಂಡು ಹಾಗೂ ಇನ್ನೊಂದು ಹೆಣ್ಣು ಮಗುವಿನೊಂದಿಗೆ ಜ್ಯೂರಿಚ್‌ನಲ್ಲೇ ಸಂಸಾರ ಸಾಗಿಸಲು ನಿರ್ಧರಿಸಿದಳು. ಬಡತನ ಹಾಗೂ ಬೇಗುದಿಗಳಿದ್ದರೂ ಧಾರ್ಮಿಕ ಕಾರ್ಯಾಚರಣೆ, ದಾನ–ಧರ್ಮ, ಪರೋಪಕಾರಗಳಿಂದ ಹಿಂತೆಗೆಯದೇ ಮಕ್ಕಳನ್ನು ಅತ್ಯಂತ ಜೋಪಾನವಾಗಿಯೇ ಲಾಲನೆ–ಪಾಲನೆ ಮಾಡಿದಳು.

'ನನ್ನ ಬಾಲ್ಯವು ತನ್ನ ಜಾಗ ಬಿಡಲು ಅವಕಾಶವಿಲ್ಲದ ಕುರಿಯಂತೆ ರಕ್ಷಿತವಾಗಿತ್ತು. ನನ್ನ ಓರಿಗೆಯ ಬಾಲಕರ ಪರಿಚಯವಾಗಲೀ, ಅವರ ಆಟ ಅನುಭವ, ಗೋಪ್ಯತೆಗಳಾಗಲೀ ನನಗೆ ಪರಿಚಯವಿರಲಿಲ್ಲ. 9, 10ನೇ ವಯಸ್ಸಿನಲ್ಲಿ ಅವರೊಂದಿಗೆ ಬೆರೆಯುತ್ತಿದ್ದಾಗ ನನ್ನನ್ನು ಅಚತುರ, ಅಸಂಬದ್ಧ ಎಂದು ಭಾವಿಸಿ ಗೇಲಿ ಮಾಡುತ್ತಿದ್ದರು. ನನಗೆ ಹಸ್ತಪಾಟತ್ವವು ವಿಕಸಿತವಾಗದಿದ್ದರಿಂದ ನನ್ನ ಕೈಗೆ ಕೊಟ್ಟ ವಸ್ತುಗಳು ಹಾಳಾಗುತ್ತಿದ್ದವು. ನಿಶ್ಚಲವಾಗಿ ಕೂರುವುದಾಗಲೀ ಕೈಕಾಲುಗಳನ್ನು ಆಡಿಸದೇ ಇರುವುದಾಗಲೀ ಆಗುತ್ತಿರಲಿಲ್ಲ. ಯಾವುದಾದರೂ (ಎಲೆ, ಹೂ, ಹಗ್ಗ ... ಮುಂತಾದ) ವಸ್ತುವನ್ನು ಮಡಿಸುವುದೋ, ತಿರುಚುವುದೋ, ಹರಿಯುವುದೋ ಮಾಡುತ್ತಾ ಇರುತ್ತಿದ್ದೆ. ಅದಕ್ಕಾಗಿ 'ಬೈಗುಳ' ಸಾಮಾನ್ಯವಾಗಿ ಇರುತ್ತಿತ್ತು ಎಂದು ಜೆ.ಎಚ್. ಪೆಸ್ಟಾಲಜಿ ತನ್ನ ಪತ್ರಗಳಲ್ಲಿ ಹೇಳಿಕೊಂಡಿದ್ದಾನೆ.

ದೇಶದ ಮಕ್ಕಳು ಉತ್ತಮ ನಾಗರಿಕರಾಗಬೇಕೆಂಬ ಗುರಿ ಹೊಂದಿದ್ದ ಜೂರಿಕ್‌ನಲ್ಲಿ ಶಿಕ್ಷಣವು ನಿಶ್ಚಲವಾಗಿತ್ತು. ಅಲ್ಲಿನ 'ಸ್ಕೂಲಾ ಕರೋಲಿನ' (ಶಾಲೆ), 'ಕಾಲೇಜಿಯಂ ಕರೋಲಿನಂ' (ಕಾಲೇಜು)ಗಳಲ್ಲಿ ಪೆಸ್ಟಾಲಜಿ ಶಿಕ್ಷಣವನ್ನು ಪಡೆದನು.

ಅಲ್ಲಿನ ಶಿಕ್ಷಕರು ತಮ್ಮ ಶಾಲೆ ಕಾಲೇಜುಗಳನ್ನು ಜ್ಞಾನೋತ್ಪತ್ತಿಯ ತಾಣಗಳೆಂದು ಕರೆಯುತ್ತಿದ್ದರು. ತನ್ನ ಅಜ್ಜನಂತೆ ಪ್ರಾಟೆಸ್ಟೆಂಟ್ ಧರ್ಮಾಧಿಕಾರಿಯಾಗಬೇಕೆಂದಿದ್ದ ಹೆನ್ರಿಕ್ ಪೆಸ್ಟಾಲಜಿ ಕಾನೂನು ಮತ್ತು ನೀತಿ ಶಾಸ್ತ್ರವನ್ನು ಅಭ್ಯಾಸ ಮಾಡಿದನು. ಜೂರಿಕ್, ಸ್ವಿಡ್ಜರ್ಲೆಂಡ್ ಹಾಗೂ ಹೊರದೇಶಗಳಲ್ಲಿ ಖ್ಯಾತನಾಮರಾಗಿದ್ದ ಅನೇಕ ಬುದ್ಧಿವಂತ ವಿದ್ಯಾರ್ಥಿಗಳನ್ನು ಹೊಂದಿದ್ದ ಜಾನ್ ಜಕೋಬ್ ಬೋಡ್ಮರ್‌ರವರು ಪೆಸ್ಟಾಲಝಿಯ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ಆ ವೇಳೆಗೆ ಗಾಯ್ಟೆ, ರೋಸೋ, ವಾಲ್ಟೈರ್ ಮುಂತಾದವರ ಸಾಮಾಜಿಕ ಚಿಂತನೆಗಳನ್ನು ಚರ್ಚಿಸುತ್ತಿದ್ದ ಸಂಘಗಳಲ್ಲಿ ಸದಸ್ಯತ್ವವನ್ನು ಪಡೆದಿದ್ದ ಪೆಸ್ಟಾಲಝಿ ಅವುಗಳಿಂದ ಪ್ರಭಾವಿತನಾದನು.

ಪೆಸ್ಟಾಲಝಿಯು 1765ರಲ್ಲಿ ರಾಜಕೀಯ ಬದಲಾವಣೆಯ ಅಪೇಕ್ಷೆಯ 'ಎಜಿಸ್' (Agis) ಪ್ರಕಟಿಸಿದನು. 1766ರಲ್ಲಿ ವೈಚಾರಿಕ ಚಿಂತನೆಗಳ (WÜNsche) ಉನ್‌ಷೆ 1767 ರಿಂದ 1769ರ ವರೆಗೆ ಅನ್ನಾಗೆ ಬರೆದ 468 ಪತ್ರಗಳ ಸಾಹಿತ್ಯವೇ ಸುಮಾರು 650 ಪುಟಗಳ ವೈಚಾರಿಕಧಾರೆಯನ್ನು ಒಳಗೊಂಡಿದೆ. ಅಂಗಡಿ ಮಾಲೀಕರ ಸೋದರಿ, ತನಗಿಂತ 8 ವರ್ಷಕ್ಕೆ ಹಿರಿಯಳಾದ, 'ಅನ್ನಾಚುತ್ತಿಸ್' (Anna Schulthess)ಳನ್ನು 1769ರಲ್ಲಿ ಮದುವೆಯಾದನು. ಅರ್ಗಾರ್‌ನ ಸಮೀಪದ ಬಿರ್ (BIRR) ನಲ್ಲಿ ಚಿಕ್ಕದಾದ ಜಮೀನನ್ನು ಖರೀದಿಸಿ ಅಲ್ಲಿ ಕೃಷಿಯನ್ನು ಪ್ರಾರಂಭಿಸಿ ವ್ಯವಹಾರದ ಅನುಭವವಿಲ್ಲದೆ ಕೈ ಸುಟ್ಟುಕೊಂಡನು. ಫಾರಂಹೌಸನ್ನು ಶಾಲೆಯನ್ನಾಗಿ ಪರಿವರ್ತಿಸಿದರೂ ಸಫಲನಾಗಲಿಲ್ಲ.

ಜೂರಿಕ್ ವಿಶ್ವವಿದ್ಯಾನಿಲಯದಲ್ಲಿ ಕವಿ ಹಾಗೂ ದಾರ್ಶನಿಕನಾದ ಜಾನ್ ಕ್ಯಾಸ್‌ಫರ್ 'ಲೆವ್ಯಾಟರ್'ನ ಮತ್ತು 'ಸುಧಾರಣೆಗಳ ಸಂಘ'ದ ಸಂಪರ್ಕದಿಂದಾಗಿ ಬಡವರು ಹಾಗೂ ದೀನರನ್ನು ಮೇಲೆತ್ತುವ ಕಾಳಜಿಯನ್ನು ಹೊಂದಿದ್ದ ಪೆಸ್ಟಾಲಝಿ ಅಂತಹವರಿಗಾಗಿ ನೂಲುವುದು ಮೊದಲಾದ ಗೃಹ ಕೈಗಾರಿಕೆಗಳನ್ನು ಪ್ರಾರಂಭಿಸಿ ಬಡ ಮಕ್ಕಳನ್ನು ಅದರಲ್ಲಿ ತೊಡಗಿಸಿದ. ಅಲ್ಲಿಯೂ ನಿರಾಶೆ ಕಾದಿತ್ತು. ಗೆಳೆಯನ ಅಕಾಲಿಕ ಮರಣದಿಂದ ಆ ಕಾರ್ಯಕ್ಕೆ ಅಡಚಣೆಯಾಯಿತು. ಇದು ಶಿಕ್ಷಣದ ಕ್ಷೇತ್ರದಲ್ಲಿ ಅವನು ತನ್ನನ್ನು ತೊಡಗಿಸಿಕೊಳ್ಳುವ ಹೊಸ ಹಾದಿಗೆ ಕಾರಣವಾಯಿತು.

1799ರ ಸ್ವಿಸ್ ಕ್ರಾಂತಿಯ ಪರಿಣಾಮವಾಗಿ ನಡೆದ ಯುದ್ಧ, ಅದರಿಂದಾದ ಅನಾಹುತಗಳಲ್ಲಿ ಅನೇಕ ಮಕ್ಕಳು ಅನಾಥರಾದರು. ಅವರಿಗಾಗಿ ಮನಮಿಡಿದ ಪೆಸ್ಟಾಲಝಿ ಸ್ಟಾನ್ಸ್‌ನಲ್ಲಿ 'ಅನಾಥಾಲಯ' ಪ್ರಾರಂಭಿಸಿದ. ಆ 'ಅನಾಥಾಲಯ'ದಲ್ಲಿ ಕನಿಷ್ಠ ಸೌಲಭ್ಯಗಳಿದ್ದವು. ಮತ್ತೊಂದು ಯುದ್ಧ ನಡೆದಾಗ ಸರ್ಕಾರ ಈ ಸ್ಥಳವನ್ನು ಮಿಲಿಟರಿ ಕ್ಯಾಂಪ್‌ಗಾಗಿ ವಶಪಡಿಸಿಕೊಂಡಿತು. 'ಅನಾಥಾಲಯದಲ್ಲಿ' ಉಳಿದಿದ್ದ ಮಕ್ಕಳೊಂದಿಗೆ ಪೆಸ್ಟಾಲಝಿ ಹೊರಬರಬೇಕಾಯಿತು. ಸ್ಟಾನ್ಸ್‌ನ ಕಾರ್ಯಾಚರಣೆ ಕುರಿತು ಪೆಸ್ಟಾಲಝಿ ಬರೆದ ಪತ್ರಗಳು ಅವನ ಶೈಕ್ಷಣಿಕ ಕಾರ್ಯಾಚರಣೆ ಹಾಗೂ ಕನಸುಗಳ ಉತ್ತಮ ದಾಖಲೆಯಾಗಿವೆ. ಅವುಗಳೇ ನಂತರದಲ್ಲಿ 'ಗಟ್ರೂಡ್ ಮತ್ತು ಶಿಕ್ಷಣ'ದ ರೂಪ ತಳೆದವು.

ಬರ್ಗ್‌ಡೊರೆಯಲ್ಲಿ 1800 ರಿಂದ 1804ರ ವರೆಗೆ ಪ್ರಾಥಮಿಕ ಶಿಕ್ಷಣದ ವಿಶಿಷ್ಟ ವಿಧಾನವನ್ನು ಅಳವಡಿಸುವ ಅವಕಾಶವನ್ನು ಆಗಿನ ಸರ್ಕಾರ ಪೆಸ್ಟಾಲಝಿಗೆ ನೀಡಿತು. 15 ಆಗಸ್ಟ್ 1801ರಲ್ಲಿ ಪುತ್ರ ವಿಯೋಗದಿಂದಾಗಿ ಬರ್ಗ್‌ಡೊರೆಯಿಂದ ಹೊರಗುಳಿದ. ಪೆಸ್ಟಾಲಝಿ ದಂಪತಿಗಳು ಪುನಃ ಒಂದು ವರ್ಷದ ನಂತರ ಅಲ್ಲಿಗೆ ಮರಳಿದರು. 1803 ಪೆಸ್ಟಾಲಝಿ ಜೀವನದಲ್ಲಿನ ಹರ್ಷದ ಕಾಲ. ಕಾರಣ ನೆಪೋಲಿಯನ್ 1802ರ ಬೇಸಿಗೆಯಲ್ಲಿ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡನು. ಪೆಸ್ಟಾಲಝಿಗೆ ಪ್ಯಾರಿಸ್‌ಗೆ ವರ್ಗಾವಣೆಯಾಯಿತು. ಅಲ್ಲಿನ ಶೈಕ್ಷಣಿಕ ಸುಧಾರಣೆಗೆ ಪೆಸ್ಟಾಲಝಿಯ ಮಾರ್ಗದರ್ಶನ ಪಡೆಯಲಾಯ್ತು. ಬರ್ಲಿನ್ ಡೇರೆ ತೊರೆದು ಹೊಸಸ್ಥಳದ ಶೋಧದಲ್ಲಿದ್ದ ಪೆಸ್ಟಾಲಝಿ ಸ್ವಿಡ್ಜರ್‌ಲೆಂಡಿನ ಪಶ್ಚಿಮಭಾಗದ ನ್ಯೂಚಾಟೆಲ್ ಪ್ರಾಂತದ

Digitised by Bharatavani, CIIL

ಜಿಲ್ಲಾ ಕೇಂದ್ರ ವೆರ್ಡಾನ್ (Yverdon) ಅನ್ನು ತನ್ನ ಕಾರ್ಯಕ್ಷೇತ್ರವನ್ನಾಗಿಸಿಕೊಂಡ. 20 ವರ್ಷ ಅಲ್ಲಿ ನಿರಂತರ ಕಾರ್ಯನಿರ್ವಹಿಸಿದ. ಆ ಕಾಲದ ಶಿಕ್ಷಣಾಸಕ್ತರಾದ ವಿಲ್‌ಹೆಲ್ಮ್‌ಬೋಲ್ಟ್ (ಬರ್ಲಿನ್ ವಿಶ್ವವಿದ್ಯಾಲಯ ಸ್ಥಾಪಕ), ಜರ್ಮನಿಯ ಜಾನ್‌ಫಿಚ್ ಮುಂತಾದವರು ಅಲ್ಲಿಗೆ ಭೇಟಿ ನೀಡಿದರು. ಮುಡ್‌ರಿಚ್ ಪ್ರೊಟೆಲ್, ಕಾಲ್‌ರಿಟ್ಟರ್, ಝುಲ್ಲರ್ ಮೊದಲಾದ 'ಶಿಷ್ಯರು' ಹೊರಹೊಮ್ಮಿದರು.

1815ರಲ್ಲಿ ತನ್ನ ಪತ್ನಿ ಅನ್ನಾಳ ವಿಯೋಗ ಜೊತೆಗೆ ವೆರ್ಡಾನ್ ಶಾಲಾ ಶಿಕ್ಷಕರಲ್ಲಿ ಘರ್ಷಣೆ ನಡೆಯಿತು. (1818ರಲ್ಲಿ ನೀಡಿದ 'ಜನ್ಮದಿನ' ಉಪನ್ಯಾಸ ಹಾಗೂ 1818–19ರಲ್ಲಿ ಗ್ರೀವ್ಸ್‌ರವರಿಗೆ ಬರೆದ ಪತ್ರಗಳಲ್ಲಿ ಪ್ರಾಥಮಿಕ ಶಿಕ್ಷಣದ ವಿಚಾರವನ್ನು ಪೆಸ್ಟಾಲಝಿ ಪ್ರಸ್ತಾಪಿಸಿದ್ದಾನೆ.)

1825ರ ವರೆಗೆ ಸುಮಾರು 10 ವರ್ಷಗಳು ಇಂತಹವೇ ದುಃಖದುಮ್ಮಾನಗಳು ತಟ್ಟಿದವು. 1825ರಲ್ಲಿ ಬರ್‌ನಲ್ಲಿದ್ದ 'ನ್ಯೂಹಾಫ್'ಗೆ ವಾಪಸ್ಸಾದ ಪೆಸ್ಟಾಲಝಿ 'ಸ್ವಾನ್‌ಸಾಂಗ್' ಹಂಸಗೀತೆ (ಚರಮಗೀತೆ) ಬರೆದನು.

ಪೆಸ್ಟಾಲಝಿಯ ಅಂತ್ಯದ ದಿನಗಳು ಸುಖಕರವಾಗಿರಲಿಲ್ಲ. 1825ರಲ್ಲಿ 'ನ್ಯೂಹಾಫ್'ಗೆ ನಾಲ್ಕು ಮಕ್ಕಳೊಂದಿಗೆ ಮರಳಿದ ಪೆಸ್ಟಾಲಝಿ ತನ್ನ 'ಕನಸು'ಗಳನ್ನು ಕಳೆದುಕೊಂಡಿರಲಿಲ್ಲ. ತನ್ನ ಮೊಮ್ಮಗ ಗೋಟಿಎಬ್ (Gottieb)ನೊಂದಿಗೆ ಸೇರಿ ಕಾರ್ಯ ಮುಂದುವರೆಸುವ ಹಂಬಲ ಹೊಂದಿದ್ದ. 'ಲಿಯೋನಾರ್ಡ್ ಮತ್ತು ಗಟ್ರೂಡ್', 'ಗಟ್ರೂಡ್ ತನ್ನ ಮಕ್ಕಳಿಗೆ ಹೇಗೆ ಕಲಿಸುತ್ತಾಳೆ?' ಇವುಗಳಲ್ಲದೇ ತನ್ನ ಆತ್ಮಕಥನ ಒಳಗೊಂಡಿದ್ದ 'ಸ್ವಾನ್‌ಸಾಂಗ್'ನಲ್ಲಿ ಶೈಕ್ಷಣಿಕ ವಿಚಾರಗಳನ್ನು ವಿಪುಲವಾಗಿ ಪ್ರಸ್ತಾಪಿಸಿರುವ ಪೆಸ್ಟಾಲಝಿಯ 'ಸ್ವಾನ್‌ಸಾಂಗ್'ನ ಮೊದಲ ಭಾಗವನ್ನು "ಬರ್ಗ್‌ಡೊರ್ಫ್ ಹಾಗೂ ಐಫೆರ್‌ಟನ್‌ಗಳ ಅಂಗೀಕೃತ ಶಾಲೆಗಳಲ್ಲಿ ಮುಖ್ಯಸ್ಥನಾಗಿ ನನ್ನ ಜೀವನದ ಹಣೆಬರಹ"ವೆಂದೇ ಕಾರಣಾಂತರಗಳಿಂದ ಪ್ರತ್ಯೇಕವಾಗಿ ಪ್ರಕಟಿಸಬೇಕಾಯ್ತು. ತನ್ನ ಸಹವರ್ತಿಗಳು ಹಾಗೂ ಅವರೊಂದಿಗೆ ಬೆರೆತ ಕೆಲವರು ಪ್ರಕಟಿಸಿದ ಅವಹೇಳನಕಾರಿ ಲೇಖನಗಳಿಂದ ಮಾನಸಿಕವಾಗಿ ನೊಂದ ಪೆಸ್ಟಾಲಝಿ 81ನೇ ಜನ್ಮದಿನದ ನಂತರ ತೀವ್ರವಾಗಿ ಬಳಲಿದ. ತನ್ನ ಬಗ್ಗೆ ಬಂದ ಆಕ್ಷೇಪಣೆ, ಮಿಥ್ಯಾಪವಾದಗಳಿಗೆ ಉತ್ತರಿಸುವುದಕ್ಕಾಗಿ ತನ್ನನ್ನು ಕನಿಷ್ಠ ಆರು ವಾರಗಳಾದರೂ ಬದುಕಿಸಿರಿ ಎಂದು ವೈದ್ಯರಲ್ಲಿ ಪ್ರಾರ್ಥಿಸಿದ ಪೆಸ್ಟಾಲಝಿ 1827ರ ಫೆಬ್ರವರಿ 17ರಂದು ವಿಧಿವಶನಾದನು. ಅವನ ಸಮಾಧಿಯನ್ನು ಬರ್ ಶಾಲೆಯ ಸಮೀಪದಲ್ಲಿ ಮಾಡಲಾಗಿದೆ. 1846ರಲ್ಲಿ ಆರಗ್ (Aaragau) ಆಡಳಿತವು ಇಲ್ಲಿ ಸ್ಮಾರಕ ನಿರ್ಮಿಸಿತು. ಇಂದಿಗೂ ಅದನ್ನು ಸಂರಕ್ಷಿಸಲಾಗಿದೆ.

ರೂಸೋನ ಸೈದ್ಧಾಂತಿಕ ಚಿಂತನೆಗಳಿಗೆ ಕಾರ್ಯರೂಪವನ್ನು ನೀಡಿದುದಲ್ಲದೇ ತನ್ನದೇ ಆದ ಸ್ಪಷ್ಟ ನಿಲುವು, ಧೋರಣೆ, ಚಿಂತನೆಗಳನ್ನು ಶಿಕ್ಷಣಕ್ರಮದಲ್ಲಿ ಅಳವಡಿಸಿದ ಪೆಸ್ಟಾಲಝಿಯ ಬರಹಗಳೆಲ್ಲವೂ 'ಚಿಂತನಶೀಲ'ವಾದವೆಂಬ ಹೆಗ್ಗಳಿಕೆ ಇದೆ. ಪತ್ರಸಾಹಿತ್ಯದಲ್ಲಿ ರಾಜಕೀಯ, ದೀನೋದ್ಧಾರ, ಸಾಮಾಜಿಕ ಕಳಕಳಿಗಳು, 'ಲಿಯನಾರ್ಡ್ ಮತ್ತು ಗಟ್ರೂಡ್', ಗಟ್ರೂಡ್ ತನ್ನ ಮಕ್ಕಳಿಗೆ ಹೇಗೆ ಕಲಿಸುತ್ತಾಳೆ? ಮತ್ತು ಜೆ.ಜಿ. ಗ್ರೀವ್ಸ್ (J.G. Greaves) ಗೆ ಬರೆದ ಪತ್ರಗಳಲ್ಲಿ ಲಭ್ಯವಾಗಿರುವ 35 ಪತ್ರಗಳಲ್ಲಿ ಶೈಕ್ಷಣಿಕ ವಿಚಾರಗಳಿವೆ. ಹಾಗೆಯೇ ಫೆಬಲ್ಸ್ನನ (FABLES) 279 ಚಿಕ್ಕ 'ಕಥೆ'ಗಳಲ್ಲಿ ಪ್ರಾಣಿ, ಸಸ್ಯಗಳ ವಿಚಾರವನ್ನು ಕಾಣಿಕೆಯಾಗಿ ಪೆಸ್ಟಾಲಝಿ ನೀಡಿದ್ದಾನೆ. ತನ್ನ ಒಂಬತ್ತನೇ ವಯಸ್ಸಿನಲ್ಲಿ ಅಜ್ಜನಮನೆಗೆ ಹೋಗಿದ್ದಾಗ ಅಲ್ಲಿನ ಪ್ರಾಕೃತಿಕ ಸೌಂದರ್ಯಕ್ಕೆ ಮನಸೋತಿದ್ದ ಪೆಸ್ಟಾಲಝಿ ಶಿಕ್ಷಣದಲ್ಲಿ ನಿಸರ್ಗದ ಬಳಕೆಗೆ ಗಮನವಿತ್ತಿದ್ದಾನೆ. ಪ್ರಾಚೀನ ವಿಚಾರ ಧಾರೆಗಳಿಂದ ಹೊರ ಬಂದು ಭಾವನಾ ಸ್ವಾತಂತ್ರ್ಯದ ನವೀನ ವಿಚಾರಗಳನ್ನು ತನ್ನ ಬರಹಗಳಲ್ಲಿ ಮೂಡಿಸಿದ.

ಪ್ರತಿಯೊಬ್ಬನಿಗೂ ಕಲಿಯುವ ಸಾಮರ್ಥ್ಯವಿದೆ, ಈ ನಂಬಿಕೆಯನ್ನು ಸಮಾಜ ಅಗಗೊಡಿಸಬೇಕು, ಸ್ವತಂತ್ರ ಜೀವನಕ್ಕೆ ಶಿಕ್ಷಣ ತಳಪಾಯ, 3H {ಹೆಡ್ (Head), ಹಾರ್ಟ್ (Heart), ಹ್ಯಾಂಡ್ (Hand) ಬುದ್ಧಿಶಕ್ತಿ, ಹೃದಯವಂತಿಕೆ ಹಸ್ತಪಾಟವತ್ವ} ಇವುಗಳ ಸಾಮರ್ಥ್ಯವನ್ನು 'ಶಿಕ್ಷಣ'ದಿಂದ ಉಪಯುಕ್ತಗೊಳಿಸಬೇಕು. ಇದರಿಂದಾಗಿ ಪ್ರತಿ ವ್ಯಕ್ತಿಯು ಸುಧಾರಣೆ ಹೊಂದಿ, ತನ್ಮೂಲಕ ಪ್ರತಿಯೊಬ್ಬನು ಜವಾಬ್ದಾರಿಯುತ ನಾಗರಿಕನಾಗಲು ಅವಕಾಶವಾಗುತ್ತದೆ. ಪ್ರಪಂಚದ ಸುಧಾರಣೆಗೆ ಹಾಗೂ ಶಾಂತಿ, ಸುರಕ್ಷತೆಗೆ ಇದೊಂದೇ ಮಾರ್ಗ. ಇದೇ ಮಾನವ ಸಮುದಾಯಕ್ಕೆ ಸಂತೋಷವನ್ನುಂಟು ಮಾಡುವ ಪ್ರಾಯೋಗಿಕ ಮಾರ್ಗ ಎಂದು ಘೋಷಿಸಿದ.

ಲಿಯೋನಾರ್ಡ್ ಕಟ್ಟಡ ಕೆಲಸಗಾರ, ಗಟ್ರೂಡ್ ಆತನ ಪತ್ನಿ, 7 ಮಕ್ಕಳ ತಾಯಿ, ಇವರ ಸಂಸಾರ, ಅವರ ಮಕ್ಕಳ ಶಿಕ್ಷಣದ ಕಥಾನಕದ ಮೂಲಕ ಶೈಕ್ಷಣಿಕ ವಿಚಾರಧಾರೆಯನ್ನು ರೂಸೋ 'ಎಮಿಲಿ'ಯಲ್ಲಿ ನೀಡಿದಂತೆ ನೀಡಿದ್ದಾನೆ. ಈ ಬರಹ ಮಕ್ಕಳ ಶಿಕ್ಷಣಕ್ಕಾಗಿ ತಾಯಿಗೆ ಒಂದು ಕೈಪಿಡಿಯಂತೆ ರೂಪಿತವಾಗಿದೆ, ಪೆಸ್ಟಾಲಝಿ ತನ್ನ ಮಗನಿಗೆ ಶಿಕ್ಷಣ ನೀಡಿದ ಕ್ರಮವೂ ಇದರಲ್ಲಿ ಸೇರ್ಪಡೆಯಾಗಿದೆ. ತಾಯಿಯು ಬೆಳಸಿದ ಮಗುವಾದ ಪೆಸ್ಟಾಲಝಿ ಶಿಕ್ಷಣ ನೀಡಲು 'ತಾಯಿಯೇ' ಅರ್ಹಳೆಂದು, ತಾಯಿ ಹೇಳಿದ ಕಥೆಗಳ ಒಂದು ಪದವನ್ನೂ ತಾನು ಮರೆಯದಿರುವುದನ್ನು ಉಲ್ಲೇಖಿಸುತ್ತಾನೆ.

ಲಿಯೋನಾರ್ಡ್ ಮತ್ತು ಗಟ್ರೂಡ್‌ನಲ್ಲಿ ಶಿಕ್ಷಣವು ಮೂಲಭೂತವಾಗಿ ವೈಯಕ್ತಿಕವಾದುದು. ಕಲಿಯುವ ಪ್ರತಿಯೊಬ್ಬನ ಸಹಜಜ್ಞಾನ (ಅಂತರ್ದೃಷ್ಟಿ)ಕ್ಕೆ ಹೊಂದಿಕೆಯಾಗಬೇಕು ಎಂಬುದನ್ನು ಹಾಗೂ ಮಗುವಿನ ಬಾಲ್ಯ ಜೀವನದ ಪ್ರತಿಯೊಂದು ಅಂಶವೂ ಅವನ ವ್ಯಕ್ತಿತ್ವ, ಚಾರಿತ್ರ್ಯ ಹಾಗೂ ಚಿಂತನೆ ಆಲೋಚನೆಗಳ ಮೇಲೆ ಪ್ರಭಾವ ಬೀರುವುದೆಂದು ತನ್ನ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾನೆ. ಪೆಸ್ಟಾಲಝಿಯ ಡೈರಿಯಲ್ಲಿ ತನ್ನ ಮೂರು ವರ್ಷದ ಮಗು ಹರಿವ ನೀರನ್ನು ಕಂಡು ಅನುಭವಿಸಿದ ಆನಂದವನ್ನು ದಾಖಲಿಸಿದ್ದಾನೆ. ತನ್ಮೂಲಕ ಮಗುವು ತನ್ನ ಜ್ಞಾನವನ್ನು ಹೇಗೆ ವೃದ್ಧಿಸಿಕೊಳ್ಳಬೇಕು, ಅದಕ್ಕಾಗಿ ಪ್ರಾಯೋಗಿಕ, ನೇರ ಅನುಭವದ ಅವಶ್ಯಕತೆಯನ್ನು ತನ್ನ ವಿಚಾರಗಳಲ್ಲಿ ಪ್ರಮುಖವಾಗಿ ಗಮನಿಸಿದ್ದಾನೆ. ಶಬ್ದಗಳು/ಪದಗಳನ್ನು ವಸ್ತುಗಳ ಮುಖೇನ ನೀಡಬೇಕು ಎನ್ನುವ ಪೆಸ್ಟಾಲಝಿ, ಶಿಕ್ಷಕರ ಧ್ವನಿ ಹಾಗೂ ಮನೋಭಾವಗಳು ಮಗುವಿನ ಪ್ರತಿಕ್ರಿಯಿಸುವ ರೀತಿಯ ಮೇಲೆ ಪರಿಣಾಮ ಬೀರುತ್ತದೆ ಎನ್ನುತ್ತಾನೆ. ಪಕ್ಷಿಯ ಇಂಚರ, ಎಲೆಯ ಮೇಲೆ ಕೂತ ಕೀಟದ ರೆಕ್ಕೆಯಿಂದ ಹೊರಹೊಮ್ಮುವ ಮಂದನಾದ ಕೇಳಬೇಕಾದರೆ 'ನೀವು ಮಾತನಾಡುವುದನ್ನು ನಿಲ್ಲಿಸಬೇಕು. ಮಕ್ಕಳು 'ಚಟುವಟಿಕೆ'ಗಳ ಮೂಲಕ ಕಲಿಯುತ್ತಾರೆ. ಮಕ್ಕಳು ಅನುಕರಣೆ ಮಾಡುವರು. ಚಿತ್ರ ಬಿಡಿಸುವರು, ಅವಲೋಕಿಸುವರು ಹಾಗೂ ಸಂಗ್ರಹಿಸುವರು. ಈ ಮೂಲಕವೇ ಕಲಿಯುವರು.

ಗಟ್ರೂಡ್ ತನ್ನ ಮಕ್ಕಳ ಶಿಕ್ಷಣದಲ್ಲಿ ಏಕಾಗ್ರತೆ, ಸತತ ಪ್ರಯತ್ನಗಳು ಸಮಗ್ರ ಕಲಿಕೆಗೆ ಅವಶ್ಯಕವೆಂದು ತಿಳಿದಿರುವಳು. ಚಾರಿತ್ರ್ಯ ನಿರ್ಮಾಣದಲ್ಲೂ ಇವೆಲ್ಲವೂ ಹಾಗೂ ಉಳಿದ ಗುಣಗಳೂ ಇರಬೇಕೆಂದು ಅರಿತಿರುವಳು.

ವೈವರ್ ಡಾನ್ ಶಾಲೆಯ ಸಾಫಲ್ಯವು ಅಮೆರಿಕಾ ಹಾಗೂ ಯುರೋಪ್‌ನ ಶಿಕ್ಷಣ ತಜ್ಞರನ್ನು ಆಕರ್ಷಿಸಿತು. ಪೆಸ್ಟಾಲಝಿಯು ಮಗುವಿನಲ್ಲಿ 'ಪ್ರೀತಿ'ಯನ್ನು ಬೆಳೆಸಬೇಕಾದರೆ ನಾವು ಅವರನ್ನು 'ಪ್ರೀತಿ'ಸಬೇಕು. ಮಗುವಿನಲ್ಲಿರುವ ಸಾಮರ್ಥ್ಯದ ಚಿಗುರುಗಳನ್ನು ಸಮರ್ಥವಾಗಿ ಪೋಷಿಸಬೇಕು, ಉತ್ತಮ ಕುದುರೆಯನ್ನು ಮಾತ್ರ ನೀಡದೆ,

Digitised by Bharatavani, CIIL

ಉತ್ತಮ ದಾರಿಯನ್ನು ಮಾಡಿಕೊಟ್ಟಾಗ ಮಾತ್ರ 'ಗಾಡಿ' ಸುಗಮವಾಗಿ ಸಾಗುತ್ತದೆ. ಮಗುವಿನಲ್ಲಿ ಚಾರಿತ್ರ್ಯ ನಿರ್ಮಾಣಕ್ಕೆ ಧಾರ್ಮಿಕ ಶಿಕ್ಷಣವೂ ಬೇಕಾಗುತ್ತದೆ ಎಂದು ತಿಳಿಸಿದ್ದಾನೆ.

ಪೆಸ್ಟಾಲರಿಝಿಯ ವಿಧಾನವು ಶಿಶುಕೇಂದ್ರಿತವಾದದ್ದು. ಅದು ವೈಯಕ್ತಿಕ ಭಿನ್ನತೆಗಳನ್ನು ಆಧರಿಸಿದ್ದು. ಅವರ ಇಂದ್ರಿಯ ಪಾಟವ, ಗ್ರಹಿಕೆಗಳನ್ನು ಹಾಗೂ ವೈಯಕ್ತಿಕ ಚಟುವಟಿಕೆಗಳನ್ನು ಅವಲಂಬಿಸಿದ್ದು. ವೈಡರ್‌ಡಾನ್‌ನ ಶಾಲೆಯಲ್ಲಿ ಪ್ರಾಚೀನ ಭಾಷೆಗಳಾದ ಲ್ಯಾಟಿನ್, ಹೀಬ್ರೂ ಮತ್ತು ಗ್ರೀಕನ್ನು ಸರಳೀಕರಿಸಿ ಕಲಿಸುವ ಏರ್ಪಾಡು ಹಾಗೂ ಮಾನವೀಯ ಮೌಲ್ಯಗಳನ್ನು ವಿಕಸಿಸುವ ಕ್ರಮ ಗಮನಾರ್ಹವಾದುವು.

ದೈಹಿಕ ಶಿಕ್ಷಣದ ಅವಶ್ಯಕತೆಯು ಜೀವನ ಕ್ರಮದಲ್ಲಿ ವೈದ್ಯನು ವಿಧಿಸುವ ಪಥ್ಯದಂತೆ ಎಂದ ಪೆಸ್ಟಾಲರಿಝಿ ಅದಕ್ಕಾಗಿ ದೈಹಿಕ ಶಿಕ್ಷಣದ ಆರೋಗ್ಯ ಶಿಕ್ಷಣದ ಆಯಾಮಗಳನ್ನು, ಕ್ರಮಗಳನ್ನು, ವ್ಯಾಯಾಮವನ್ನು, ಶಿಕ್ಷಣ ಕ್ರಮದಲ್ಲಿ ಸೇರಿಸಿದ್ದಲ್ಲದೆ ನೈತಿಕ, ಬೌದ್ಧಿಕ ಹಾಗೂ ಸಾಮಾನ್ಯ ಶಿಕ್ಷಣಕ್ಕೆ ಸಂಬಂಧ ಕಲ್ಪಿಸಿ, ಶಿಕ್ಷಣದಲ್ಲಿ 'ಸಾಮರಸ್ಯ' ಸಾಧಿಸಬೇಕಾದ ವಿಧಾನವನ್ನು ರೂಪಿಸಿದನು. ಮನುಷ್ಯನ ಮೂಲ ಸ್ವಭಾವವು ಅತ್ಯಾವಶ್ಯಕವಾಗಿ ಉತ್ತಮವಾದುದೆಂಬ ಸಿದ್ಧಾಂತದಿಂದ ರೂಪಗೊಂಡ ಶೈಕ್ಷಣಿಕ ಸಿದ್ಧಾಂತಕ್ಕೆ ನಾಲ್ಕು ವಲಯಗಳನ್ನು ಪರಿಭಾವಿಸಿದ್ದಾನೆ. 1) ಮನೆ ಮತ್ತು ಕುಟುಂಬ 2) ವೃತ್ತಿ 3) ವ್ಯಕ್ತಿಯ ಸ್ವನಿರ್ಧಾರಗಳು 4) ರಾಜ್ಯ/ರಾಷ್ಟ್ರ/ಆಡಳಿತ ವ್ಯವಸ್ಥೆ. ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಕಲಿಸಬೇಕೆನ್ನುವ ಪೆಸ್ಟಾಲರಿಝಿಯ ವಿಧಾನವು ಸುಲಭದಿಂದ ಕಠಿಣತೆಗೆ ಸಾಗುತ್ತದೆ. ಅವಲೋಕನದಿಂದ ಪ್ರಜ್ಞೆಗೆ ಪ್ರಜ್ಞೆಯಿಂದ 'ಮಾತು'ಗೆ ಅನಂತರ ಅಳತೆ, ಚಿತ್ರ, ಬರಹ, ಸಂಖ್ಯೆಗಳು ಮತ್ತು ಎಣಿಕೆ, ನಿಸರ್ಗದ ನೇರ ಅನುಭವವಾಗಬೇಕು ಎನ್ನುತ್ತಾನೆ.

ಪೆಸ್ಟಾಲರಿಝಿ ಪಠ್ಯಕ್ರಮದಲ್ಲಿ ಭೂಗೋಳ, ಭಾಷೆ, ರೇಖಾಗಣಿತ, ಸಂಗೀತ, ನೀತಿ ಶಿಕ್ಷಣ, ವ್ಯವಸಾಯ, ಶಾರೀರಿಕ ಶಿಕ್ಷಣಗಳನ್ನು ವಿಶಿಷ್ಟ ರೀತಿಯಲ್ಲಿ ಸೇರ್ಪಡೆ ಮಾಡಿ ತನ್ಮೂಲಕ ಮಕ್ಕಳ ನೇರ ಅನುಭವ, ನೇರ ಸಂಬಂಧವಿರುವ ಚಟುವಟಿಕೆಗಳನ್ನು ಮಾಡುತ್ತಾ ಕಲಿಯುವಿಕೆ ಸ್ವಯಂವೀಕ್ಷಣೆ ಹಾಗೂ ಪ್ರತಿಯೊಂದರಲ್ಲೂ ಶ್ರದ್ಧೆ ಮತ್ತು ಪ್ರೀತಿಯಿಂದ ತೊಡಗಿಸಿಕೊಳ್ಳುವಿಕೆಯ 'ವಿಧಾನ'ವನ್ನು ಸೂಚಿಸಿ ಕಾರ್ಯರೂಪವನ್ನು ತಂದಿದ್ದಾನೆ. ಪ್ರೀತಿ ಮತ್ತು ಶ್ರದ್ಧೆಯಿಂದ ನೇರ ಅನುಭವದಿಂದ ಮಕ್ಕಳು ಕಲಿಯುವಿಕೆಯನ್ನು ಪೆಸ್ಟಾಲರಿಝಿ ANASHCHANNG (ಅನಾಶ್ಚಾಂಗ್) ಎಂದಿದ್ದಾನೆ. ಅಧ್ಯಾಪಕರ ಪಾತ್ರ ಮಾದರಿ ವ್ಯಕ್ತಿಯಾಗಿ ಉತ್ತಮ ಮಾರ್ಗದರ್ಶಕನಾಗುವುದು, ಪ್ರೀತಿಯ ಬಗ್ಗೆ ಉಪನ್ಯಾಸ ನೀಡುವುದಲ್ಲ ಅದರ ಆಚರಣೆಯಿಂದ. ಶಿಕ್ಷಕರು ಮಕ್ಕಳಲ್ಲಿ 'ಪ್ರೀತಿ'ಭಾವ ಮೂಡಿಸಬೇಕು. ಶಾಲೆಯು ಪ್ರೀತಿಯ ಆಗರವಾಗಬೇಕು. ವೈಜ್ಞಾನಿಕ ಕ್ರಮದಿಂದ ಕಲಿತಭಾಷೆ ಅದರ ಕೌಶಲಗಳು ಪರಿಣಾಮಕಾರಿಯಾದ ಮಾತುಗಾರಿಕೆಗೆ ಅವಕಾಶ ನೀಡುತ್ತದೆ. ಇದಕ್ಕೆ ಅವಕಾಶಗಳನ್ನು ತಕ್ಕ ಪರಿಸರವನ್ನು ಒದಗಿಸಬೇಕು. ತಂದೆ-ತಾಯಿಗಳು ಮಕ್ಕಳನ್ನು ಪ್ರೀತಿಸುವಂತೆಯೇ ಶಾಲಾ ಶಿಕ್ಷಕರು ಅವರನ್ನು ಪ್ರೀತಿಸಬೇಕು, ಮಕ್ಕಳ ಶಾರೀರಿಕ, ಬೌದ್ಧಿಕ, ನೈತಿಕ ಬೆಳವಣಿಗೆಗೆ ಆಶಿಸಬೇಕು. ಅವರ ಎಲ್ಲ ರೀತಿಯ ಏಳಿಗೆಗೆ ಶ್ರಮಿಸಬೇಕು. ಮಗು ಮನೆಯಲ್ಲಿ ಹೇಗೆ ನಿರಾಳವಾಗಿ ಓಡಾಡಿಕೊಂಡು ಇರುತ್ತದೋ ಹಾಗೆಯೇ ನಿರ್ಭೀತವಾಗಿ ಶಾಲೆಯಲ್ಲೂ ಇರುವಂತಹ ಮುಕ್ತ ವಾತಾವರಣ ನಿರ್ಮಿಸಬೇಕು. "ನಿನ್ನ ಹಲ್ಲು, ಬಾಯಿ ಕೊಳಕಾಗಿದೆ' ಎನ್ನುವ ಬದಲು "ಮಕ್ಕಳೇ ಬನ್ನಿ, ನಿಮ್ಮ ಹಲ್ಲು, ಬಾಯಿ, ಉಗುರುಗಳನ್ನು ತೊಳೆಯುತ್ತೇನೆ" ಎನ್ನೋಣ ಎನ್ನುತ್ತಾನೆ ಪೆಸ್ಟಾಲರಿಝಿ.

ಪೆಸ್ಟಾಲರಿಝಿಯ ಬಗ್ಗೆ ಅಧ್ಯಯನ ನಡೆಸಿದ ತಜ್ಞರು ಸಮಕಾಲೀನ ಶಿಕ್ಷಣ ವ್ಯವಸ್ಥೆಯಲ್ಲಿ ಆತನ ಕೊಡುಗೆಯನ್ನು ಹೀಗೆ ಪಟ್ಟಿ ಮಾಡುತ್ತಾರೆ.

1. ಮಗುವಿನ ಆಸಕ್ತಿ ಮತ್ತು ಅವಶ್ಯಕತೆಗಳ ಅರಿವು.
2. ಬೋಧನೆಯಲ್ಲಿ ಶಿಕ್ಷಕ ಕೇಂದ್ರಿತ ಬದಲು 'ಶಿಶುಕೇಂದ್ರಿತ'.
3. ಕಲಿಕೆಯ ಅನುಭವ ಪಡೆಯುವಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುವಿಕೆ.
4. ಮಗುವಿನ ಸ್ವಾತಂತ್ರ್ಯ, ಅವನ/ಅವಳ ಪ್ರಕೃತಿದತ್ತ ಬೆಳವಣಿಗೆಯನ್ನು 'ಸ್ವಯಂಶಿಸ್ತಿ'ನಲ್ಲಿ ಸಮತೋಲನಗೊಳಿಸಿ ಅದು ವೈಯಕ್ತಿಕ ಹಾಗೂ ಸಮುದಾಯದಲ್ಲಿ ಕಾರ್ಯಗತವಾಗುವಂತೆ ಮಾಡುವುದು.
5. ಬೋಧನೆಯಲ್ಲಿ ಮಗು ಪ್ರಪಂಚದ ನೇರ ಅನುಭವ ಪಡೆಯುವ ಹಾಗೂ ನಿಸರ್ಗದ ವಸ್ತುಗಳನ್ನು ಬಳಸುವ ಅವಕಾಶಗಳು.
6. ಅವಲೋಕನ ಹಾಗೂ ನಿರ್ಣಯಕ್ಕೆ ಬರುವಲ್ಲಿ ಸಮರ್ಥವಾಗುವಂತೆ ಇಂದ್ರಿಯ ಪಾಟವ ಬೆಳೆಸುವಿಕೆ.
7. ಶಾಲೆ ಮತ್ತು ಮನೆ, ಶಿಕ್ಷಕ ಮತ್ತು ಪೋಷಕರಲ್ಲಿ ಸಹಕಾರ.
8. ಹೃದಯಪೂರ್ವಕವಾಗಿ 3Hಗಳ ಪ್ರಾಮುಖ್ಯತೆ ಅರಿತು ಅವುಗಳ ವಿಕಸನಕ್ಕೆ ಅವಕಾಶ.
9. ವ್ಯಾಸಂಗ ಕ್ರಮಕ್ಕೆ ಕ್ರಮಬದ್ಧಗೊಳಿಸಿದ ಹಾಗೂ ವಿವರಣಾತ್ಮಕವಾದ ಬೋಧನಾ ಕಲಿಕಾ ವಿಷಯಗಳು.
10. ಶಾಲಾ ಅನುಭವವೂ ಸೇರಿದಂತೆ ಸಮಗ್ರ ಕಲಿಕೆಗೆ ಅವಕಾಶ.
11. ಏನನ್ನು ಕಲಿಸುತ್ತಿದ್ದೇನೆ, ಹೇಗೆ ಕಲಿಸುತ್ತಿದ್ದೇನೆ ಎಂಬುದಕ್ಕೆ ಒತ್ತು ನೀಡುವ ಶಿಕ್ಷಣಕ್ರಮ.
12. ಭಯ ಮುಕ್ತ, ಪ್ರೀತಿ ತುಂಬಿದ ನಿಯಂತ್ರಣ/ಅಧಿಕಾರ ಚಲಾವಣೆ
13. ಶಿಕ್ಷಕರ ತರಬೇತಿ.

ಅನ್ಯರ ಕಣ್ಣೀರು ಒರೆಸಿ, ತನ್ನ ಕಣ್ಣೀರನ್ನು ತಾನೇ ಒರೆಸಿಕೊಂಡರೂ ಹೇಳಿಕೊಳ್ಳದ, ತ್ಯಾಗಮಯಜೀವಿ ಪೆಸ್ಟಾಲರಿಝಿ ಶಿಕ್ಷಣ ಕ್ಷೇತ್ರದ ಅನರ್ಘ್ಯ ರತ್ನಗಳಲ್ಲಿ ಒಂದು.

– ಎನ್.ಕಾ.ರಾ.

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡೈಯಟ್ಸ್)

ಶಿಕ್ಷಣ ರಂಗದಲ್ಲಿ ಯಾವಾಗಲೂ ಕೇಳಿಬರುತ್ತಿರುವ ವಿಚಾರವೆಂದರೆ "ಶಿಕ್ಷಣದ ಗುಣಮಟ್ಟದ ಸುಧಾರಣೆ". ಈ ಸುಧಾರಣಾ ಕ್ರಮಗಳನ್ನು ನಾವು ಸ್ವಾತಂತ್ರ್ಯಾ ನಂತರ ನಿಯೋಜಿಸಲ್ಪಟ್ಟ ಎಲ್ಲಾ ಆಯೋಗಗಳಲ್ಲಿ ಗಮನಿಸುತ್ತೇವೆ. ವಿಶೇಷವಾಗಿ ಕೊಠಾರಿ ಆಯೋಗವು "ಶಿಕ್ಷಣದ ಗುಣಮಟ್ಟದ ಮೇಲೆ ಪ್ರಭಾವ ಬೀರುವ ಸಕಲ ಅಂಶಗಳಲ್ಲಿ ಶಿಕ್ಷಕರ ಗುಣಮಟ್ಟದ ಸಾಮರ್ಥ್ಯ ಹಾಗೂ ವರ್ತನೆಗಳು ನಿಸ್ಸಂದೇಹವಾಗಿಯೂ ಗಮನಾರ್ಹವಾದವು" ಎಂದು ಸ್ಪಷ್ಟಪಡಿಸುತ್ತದೆ. ಶಿಕ್ಷಕರ ಗುಣಮಟ್ಟದ ಸುಧಾರಣೆ ಅವರಿಗೆ ಸೇವಾ-ಪೂರ್ವ ಅವಧಿಯಿಂದ ಆರಂಭಿಸಿ ಸೇವೆಯ ಅಂತಿಮ ಅವಧಿಯವರೆಗೂ ಲಭ್ಯ.

ಇದು ತನ್ನ ಧ್ಯೇಯ ಸಾಧನೆಗಾಗಿ ಮೂರು ರೀತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿವೆ.

1. ತರಬೇತಿ 2. ಸಂಪನ್ಮೂಲ ಅಭಿವೃದ್ಧಿ 3. ಕ್ರಿಯಾ ಸಂಶೋಧನೆ

Digitised by Bharatavani, CIIL

ರಾಷ್ಟ್ರೀಯ ಶಿಕ್ಷಣನೀತಿಯು 1986 ರಲ್ಲಿ ಜಾರಿಯಾದ ನಂತರ ಶಿಕ್ಷಕರ ಶಿಕ್ಷಣದಲ್ಲಿ ಪುನರ್‌ನಿರ್ಮಾಣ ಹಾಗೂ ಪುನರ್ ವ್ಯವಸ್ಥೆ ಹಾಗೂ ಪುನರ್ ರಚನಾ ಕಾರ್ಯವನ್ನು ನಿರ್ವಹಿಸುವಂತಹ ಮಹತ್ತರ ಯೋಜನೆಯು 1987ನೇ ಅಕ್ಟೋಬರ್‌ನಲ್ಲಿ ಜಾರಿಯಾಯಿತು. ಈ ಯೋಜನೆಯನ್ನು ಕೇಂದ್ರದ ಮಾನವ ಸಂಪನ್ಮೂಲವು ಪ್ರಾಯೋಜಿಸಿರುವುದನ್ನು ಗಮನಿಸಿದಾಗ ಅದರ ಪ್ರಮುಖ ಧ್ಯೇಯೋದ್ದೇಶಗಳು ಕೇಂದ್ರದಿಂದಲೇ ನಿರೂಪಿಸಲ್ಪಟ್ಟಿದ್ದು, ಶಿಕ್ಷಣದ ಪುನರ್‌ನಿರ್ಮಾಣದಲ್ಲಿ ಪ್ರಮುಖವಾದ ಹೆಜ್ಜೆಯನ್ನಿಟ್ಟಂತಾಗಿದೆ. ಈ ಯೋಜನೆಯ ಮುಖ್ಯ ಘಟಕಾಂಶವೆಂದರೆ, "ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು (DIET - "District Institute of Education and Training") ಆರಂಭಿಸಿದ್ದರ ಪ್ರಯುಕ್ತ 1987ರಲ್ಲಿ "ಕರಡು ಮಾರ್ಗದರ್ಶಿ"ಯನ್ನು ತಯಾರಿಸಿ, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅಕ್ಟೋಬರ್ 8ರಲ್ಲಿ ಇದನ್ನು ರವಾನಿಸಲಾಯಿತು. ಇದಕ್ಕೆ ಅನೇಕ ಆದೇಶಗಳೂ ಸೇರಿ ಡೈಯಟ್ ರಚನೆಗೆ ಸೂಕ್ತ ಬುನಾದಿಯನ್ನು ಒದಗಿಸಿದವು. ನಂತರ DIETಗಳನ್ನು 1988ರ ಫೆಬ್ರವರಿ – ಮಾರ್ಚ್ ಸಮಯದಲ್ಲಿ ಜಾರಿಗೊಳಿಸಲಾಯಿತು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪ್ರಧಾನ ಧ್ಯೇಯವು ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣದ ಸಫಲತೆಗಾಗಿ ಶ್ರಮಿಸುವುದಾಗಿದೆ. ಯೋಜನೆ ಹಾಗೂ ಅನುಷ್ಠಾನ ಈ ಎರಡೂ ಹಂತಗಳಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳ ಯಶಸ್ಸಿಗೆ ಅಗತ್ಯವಿದ್ದ ಮಾನವ ಸಂಪನ್ಮೂಲ ಹಾಗೂ ವಿವಿಧ ಸಾಮಗ್ರಿಗಳನ್ನು ಸಿದ್ಧಪಡಿಸಲು ಪ್ರಯತ್ನಿಸುತ್ತಿದೆ. ಹಾಗೆಯೇ 6–14 ವರ್ಷದ ಮಕ್ಕಳಿಗೆ ಶಿಕ್ಷಣದ ಸಾರ್ವತ್ರೀಕರಣ ಹಾಗೂ ರಾಷ್ಟ್ರೀಯ ಸಾಕ್ಷರತಾ ಮಿಶನ್ (ಎನ್ ಎಲ್. ಎಂ.) ಗುರುತಿಸಿರುವ 15–33 ವಯೋಮಾನದವರಿಗೆ ಅಕ್ಷರ ಹಾಗೂ ಅರಿವು ನೀಡುವ ಕಾರ್ಯಕ್ರಮಗಳ ಯೋಜನೆ ಹಾಗೂ ಕಾರ್ಯಾಚರಣೆಗೆ ನೆರವು ನೀಡುತ್ತದೆ.

ನಮ್ಮ ದೇಶದಲ್ಲಿ ಪ್ರಶಿಕ್ಷಣವು ದೀರ್ಘವಾದ ಇತಿಹಾಸವನ್ನು ಹೊಂದಿದೆ. ಅಂತೆಯೇ ಕರ್ನಾಟಕವು ಸಹ ದೀರ್ಘವಾದ ಇತಿಹಾಸವನ್ನೇ ಹೊಂದಿದೆ. ನಮ್ಮ ರಾಜ್ಯದಲ್ಲಿ ಮೊದಲಬಾರಿಗೆ ಪ್ರಶಿಕ್ಷಣವು 1857ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಯಿತು. ಇದರ ಮೊದಲ ಆದ್ಯತೆ ಶಾಲಾ ಶಿಕ್ಷಕರ ತರಬೇತಿಯನ್ನು ಅನುವುಗೊಳಿಸುವುದಾಗಿತ್ತು.

ಮೊದಲಿಗೆ ಟಿ.ಸಿ.ಎಲ್. ಎಂಬ ಕೋರ್ಸ್ ಇತ್ತು. ಟೀಚರ್ ಸರ್ಟಿಫಿಕೇಟ್ ಲೋಯರ್ ಎಂದು ಅದರ ವಿಸ್ತರಣೆ. ಈ ಕೋರ್ಸಿಗೆ ಸೇರಲು ಏಳನೆಯ ತರಗತಿಯಲ್ಲಿ ಪಾಸ್ ಆಗುವುದು ಅವಶ್ಯಕವಾಗಿತ್ತು. ನಂತರ ಟಿ.ಸಿ.ಹೆಚ್. ಎಂಬ ಕೋರ್ಸ್ ಇದ್ದು, 10ನೇ ತರಗತಿಯಲ್ಲಿ ತೇರ್ಗಡೆಯಾದವರಿಗೆ ಇದು ಪ್ರವೇಶ ನೀಡುತ್ತಿತ್ತು. ಇದರ ವಿಸ್ತೃತ ರೂಪ– "ಟೀಚರ್ ಸರ್ಟಿಫಿಕೇಟ್ ಹೈಯರ್" ಈ ಎರಡೂ ಕೋರ್ಸ್‌ಗಳು 1956 ರವರೆಗೆ ಅದೇ ರೀತಿ ತರಬೇತಿ ನೀಡುತ್ತಿದ್ದುವು. 1960ರಲ್ಲಿ ಈ ಕೋರ್ಸಿನ ಪಠ್ಯಕ್ರಮವನ್ನು ಪರಿಷ್ಕರಿಸಿ, 2 ವರ್ಷಗಳಿಗೆ ತನ್ನ ಅವಧಿಯನ್ನು ವಿಸ್ತರಿಸಿತು. 1987–88ರಲ್ಲಿ ಈ ಕೋರ್ಸಿಗೆ ಪ್ರವೇಶ ಪಡೆಯಲು ಪಿ.ಯು.ಸಿ.ಯನ್ನು ಕನಿಷ್ಠ ಅರ್ಹತೆ ಎಂದು ಆದೇಶ ಹೊರಡಿಸಲಾಯಿತು.

ಈಚೆಗೆ ಈ ಕೋರ್ಸಿನ ಪಠ್ಯಕ್ರಮವನ್ನು ಮರು ಪರಿಷ್ಕೃತಗೊಳಿಸಿ ಅದಕ್ಕೆ ಡಿ.ಎಡ್. (ಡಿಪ್ಲೊಮಾ ಇನ್ ಎಜುಕೇಶನ್) ಎಂಬ ಹೊಸ ಹೆಸರನ್ನು ಇಡಲಾಯಿತು. ಹಾಗೆಯೇ ಅದರ ಅವಧಿಯನ್ನು 2 ವರ್ಷಗಳಿಂದ 2 $^{1}/_{2}$ ವರ್ಷಗಳವರೆಗೆ ವಿಸ್ತರಿಸಲಾಯಿತು.

ಪ್ರಶಿಕ್ಷಣವು ಡಿ.ಎಸ್.ಇ.ಆರ್.ಟಿ.ಯ ಒಂದು ಪ್ರಮುಖ ಚಟುವಟಿಕೆ. ಇದರಲ್ಲಿ ಎರಡು ರೀತಿಯ ಮುಖ್ಯ ವಾಹಿನಿಗಳನ್ನು ನೋಡುತ್ತೇವೆ.

- ಸೇವಾಪೂರ್ವ ಪ್ರಶಿಕ್ಷಣ
- ಸೇವಾನಿರತ ಪ್ರಶಿಕ್ಷಣ

ಸೇವಾ–ಪೂರ್ವದ ಪ್ರಶಿಕ್ಷಣದಲ್ಲಿ ಎರಡು ಮಟ್ಟಗಳಿವೆ.

- ಬ್ಯಾಚುಲರ್ ಆಫ್ ಎಜುಕೇಶನ್ – ಬಿ.ಎಡ್. (ಪ್ರೌಢಶಾಲೆಗಳ ಶಿಕ್ಷಕರಿಗೆ)
- ಡಿಪ್ಲೋಮೋ ಇನ್ ಎಜುಕೇಶನ್ – ಡಿ.ಎಡ್. (ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ)

ಎನ್.ಸಿ.ಟಿ.ಇ – ಅಥವಾ ರಾಷ್ಟ್ರೀಯ ಶಿಕ್ಷಕರ ಪ್ರಶಿಕ್ಷಣ ಸಮಿತಿಯು ಇದನ್ನು ನಿಯಂತ್ರಿಸುವ ಮೂಲಕ ಗುಣಾತ್ಮಕ ಶಿಕ್ಷಣವನ್ನು ನೀಡುವ ಪ್ರಯತ್ನ ಮಾಡುತ್ತಿದೆ. ಹಾಗೆಯೇ ಶಿಕ್ಷಣ ಕಾಲೇಜಿನ ಅನುಮೋದನೆಗೆ, ಮಂಜೂರಾತಿಗೆ ಎನ್.ಸಿ.ಟಿ.ಇ. ಯ ಅಂಕಿತ ಮುದ್ರೆ ಅವಶ್ಯಕವಾಗಿದೆ.

ಪ್ರಶಿಕ್ಷಣದಲ್ಲಿ ಸೇವಾನಿರತ ಶಿಕ್ಷಕರಿಗೆ ಶಿಕ್ಷಣ ನೀಡುವಿಕೆಯು ಪ್ರೌಢ ಹಂತದವರಿಗೂ, ಪ್ರಾಥಮಿಕ ಹಂತದವರಿಗೂ ವಿಸ್ತರಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ 134 ಶಿಕ್ಷಕರ ತರಬೇತಿ ಕೇಂದ್ರಗಳಿವೆ. 20 ಡಯಟ್‌ಗಳು (DIET), 17 ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರಗಳು (TTIs), 40 ಖಾಸಗಿ ಅನುದಾನಿತ TTI ಗಳು, 57 ಖಾಸಗಿ ಅನುದಾನರಹಿತ ಸಂಸ್ಥೆಗಳಿವೆ.

ಡಿ.ಎಡ್. ಕೋರ್ಸಿಗೆ ಪ್ರವೇಶವನ್ನು ಕೇಂದ್ರೀಕೃತ ದಾಖಲಾತಿ ಘಟಕದಿಂದ ಮೆರಿಟ್ ಆಧಾರಿತವಾಗಿ ಮಾಡಲಾಗುತ್ತದೆ. 50% ಸ್ತ್ರೀಯರಿಗೆ, ಹಾಗೂ ರೋಸ್ಟರ್ ಪ್ರಕಾರ ನಡೆಯುತ್ತದೆ.

**ಪಠ್ಯವಸ್ತು** : ಒಟ್ಟು 2 $^{1}/_{2}$ ವರ್ಷದ ಕೋರ್ಸ್ ಇದಾಗಿದೆ. 2 ವರ್ಷ ತರಬೇತಿ ಹಾಗೂ 6 ತಿಂಗಳ ಇಂಟರ್ನ್‌ಶಿಪ್ ಇವೆ.

ಇದರ ಉದ್ದೇಶಗಳು, ಈ ಕೆಳಕಂಡಂತಿವೆ.

1. ನಮ್ಮ ರಾಜ್ಯದ ಪ್ರಾಥಮಿಕ ಶಾಲೆಗಳಿಗಾಗಿ ವೃತ್ತಿಪರ ಶಿಕ್ಷಕರನ್ನು ತಯಾರುಮಾಡುವುದು. 2. ಪಠ್ಯವಸ್ತುವಿನ ವಿಷಯ ಉನ್ನತೀಕರಣಕ್ಕೆ ಅಗತ್ಯವಾದ ವಸ್ತುಗಳನ್ನು ಮಾಹಿತಿಯನ್ನು ಶಿಕ್ಷಕರಿಗೆ ಒದಗಿಸುವ ಮೂಲಕ ವಿಷಯದಲ್ಲಿ ಆಳವಾದ ಗ್ರಹಿಕೆಯನ್ನು ಉಂಟುಮಾಡುವುದು. 3. ವಿಷಯದಲ್ಲಿ ಹಿಡಿತ ಸಾಧಿಸಿ, ಪರಿಣಿತಿ ಸಾಧಿಸುವಂತೆ ಶಿಕ್ಷಕರನ್ನು ಅನುವುಗೊಳಿಸುವುದು.

ಕರ್ನಾಟದಲ್ಲಿ 1888 ರಲ್ಲಿ ಮಹಾರಾಣಿ ಹೆಣ್ಣುಮಕ್ಕಳ ಶಾಲೆಯನ್ನು ಮೈಸೂರಿನಲ್ಲಿ ತೆರೆಯಲಾಯಿತು. ಸ್ವಾತಂತ್ರ್ಯಾನಂತರ 1958ರಲ್ಲಿ ಸೇವಾನಿರತ ತರಬೇತಿಯನ್ನು ಬೆಂಗಳೂರಿನಲ್ಲಿ OTC ಯಲ್ಲಿ ಹಮ್ಮಿಕೊಂಡಿತು. ಈ OTC (Orientation Training Centre) 400 ಪ್ರಾಥಮಿಕ ಶಿಕ್ಷಕರನ್ನು ಪುನಶ್ಚೇತನಗೊಳಿಸುವ ಕಾರ್ಯ ನಿರ್ವಹಿಸುತ್ತಿತ್ತು. ಅನೇಕ ವರ್ಷಗಳವರೆಗೆ ಈ ರೀತಿ ತರಬೇತಿ ನಡೆಸಿದರೂ. ಒಟ್ಟಾರೆಯಾಗಿ ಇಡೀ ರಾಜ್ಯದ ಶಿಕ್ಷಕರಿಗೆ ತರಬೇತಿ ನೀಡುವಲ್ಲಿ ಅದು ವಿಫಲವಾಯಿತು.

ಡಿ.ಎಸ್.ಇ.ಆರ್.ಟಿ.ಯು ರಾಜ್ಯ ಮಟ್ಟದಲ್ಲಿ ಅನೇಕ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಹೊಂದಿಸಿಕೊಂಡು ಸಂಚಾಲಕತ್ವವನ್ನು ವಹಿಸಿಕೊಂಡಿದೆ. ಅದರಂತೆ ಜಿಲ್ಲೆಯಲ್ಲಿ ಡಯಟ್‌ಗಳು, ಬ್ಲಾಕ್‌ಮಟ್ಟದಲ್ಲಿ ಬಿ.ಆರ್.ಸಿ.ಗಳು ಕ್ಲಸ್ಟರ್ ಮಟ್ಟದಲ್ಲಿ ಸಿ.ಆರ್.ಸಿ.ಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದಲ್ಲಿ ಒಟ್ಟು 20 ಡಯಟ್‌ಗಳು

Digitised by Bharatavani, CIIL

ಕೇಂದ್ರದಿಂದ ಅನುದಾನ. ಹೊಂದಿ ಕಾರ್ಯನಿರ್ವಹಿಸುತ್ತಿವೆ. 7 ಹೊಸದಾಗಿ ಡಯಟ್‌ಗಳನ್ನು ಸೂಚಿಸಲಾಗಿದೆ. ಅದರಲ್ಲಿ ಕೊಪ್ಪಳ ಚಾಮರಾಜನಗರ, ಉಡುಪಿ, ಚಿತ್ರದುರ್ಗ, ಗದಗ, ಹಾವೇರಿ, ಬಿಜಾಪುರಗಳು ಸೇರಿವೆ. ಸದ್ಯಕ್ಕೆ ಇವುಗಳ ನೆರೆಯ ಜಿಲ್ಲೆಯ ಡಯಟ್‌ಗಳಿಂದ ನೆರವು ಹೊಂದಿವೆ. ಹಾಗೆಯೇ 3 ಹೊಸ ಡಿ.ಆರ್.ಸಿ.ಗಳು ತೆರೆಯಲ್ಪಟ್ಟಿವೆ. ಬೆಂಗಳೂರು ಉತ್ತರ, ಮಧುಗಿರಿ, ಚಿಕ್ಕಬಳ್ಳಾಪುರ, ಯಾದಗೀರ್ ಮತ್ತು ಚಿಕ್ಕೋಡಿಯಲ್ಲಿರುವ ಪ್ರಾಥಮಿಕ ಶಿಕ್ಷಕರು ಸಂಖ್ಯೆಯನ್ನು ಆಧರಿಸಿ ಅವುಗಳಿಗೆ ಈ ನೂತನ ಕೇಂದ್ರಗಳನ್ನು ನೀಡಲಾಗಿದೆ. ಈ ಎಲ್ಲಾ ಡಯಟ್‌ಗಳು ನಿರಂತರವಾಗಿ ಸೇವಾನಿರತರಿಗೆ ತರಬೇತಿಯನ್ನು ನೀಡುತ್ತಿವೆ.

**ಡಯಟ್ ನಿರ್ವಹಿಸಿದ ಕಾರ್ಯಕ್ರಮಗಳು ಇಂತಿವೆ.**

**ಮಿಶನ್: ಸರ್ವರಿಗೂ ಪ್ರಾಥಮಿಕ ಶಿಕ್ಷಣ ಒದಗಿಸುವುದು.** 1. ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳ ಸಹಸಂಚಾಲಕರಿಗೆ ಕಾರ್ಯಯೋಜನೆಯ ತರಬೇತಿ 2. ಐಇಡಿ ತರಬೇತಿ ಕಾರ್ಯಕ್ರಮ (Integrated Education for the Disabled) 3. ಮುಖ್ಯೋಪಾಧ್ಯಾಯರ ತರಬೇತಿ 4. ಆಂಗ್ಲ ಭಾಷೆಯ ತರಬೇತಿ ಕಾರ್ಯಕ್ರಮ 5. ಮಾಹಿತಿ ಸಿಂಧು ಶಿಕ್ಷಕರಿಗೆ ಕಾರ್ಯಾಗಾರ 6. ವಿಷಯದ ಕುರಿತು ವಿಶೇಷ ಜ್ಞಾನದ ತರಬೇತಿ 7. ಮೌಲ್ಯ ಶಿಕ್ಷಣ 8. ಹೊಸ ಪಠ್ಯ ಪುಸ್ತಕದ ಉಪಯೋಗದ ಕುರಿತು ಕಾರ್ಯಾಗಾರ 9. ಕಾರ್ಯಾನುಭವ 10. (EEC) ಕುರಿತು ಅಂಗನವಾಡಿ ಶಿಕ್ಷಕರಿಗೆ ತರಬೇತಿ ವಿಶಿಷ್ಟ ಮಕ್ಕಳ ಶಿಕ್ಷಣ 11. ಶೈಕ್ಷಣಿಕ ತಂತ್ರಜ್ಞಾನದ ಉಪಯೋಗ 12. ಶಿಕ್ಷಣದಲ್ಲಿ ನಾಟಕೀಕರಣ 13. ಜೀವನ ಕೌಶಲಗಳ ತರಬೇತಿ 14. ಏಡ್ಸ್ ಕುರಿತ ಅರಿವಿನ ಕಾರ್ಯಕ್ರಮ.

**ಡಯಟ್‌ನ ಧ್ಯೇಯೋದ್ದೇಶಗಳು**

- ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸೇವಾ – ಪೂರ್ವ ಹಾಗೂ ಸೇವಾ ನಿರತ ಶಿಕ್ಷಣವನ್ನು ಒದಗಿಸುವುದು. ಹಾಗೆಯೇ ಮುಖ್ಯೋಪಾಧ್ಯಾಯರನ್ನು ಮತ್ತು ಅಧಿಕಾರಿಗಳನ್ನು ಶಿಕ್ಷಣದಲ್ಲಿ ಉತ್ತಮ ಗುಣಾತ್ಮಕತೆಯನ್ನು ಕಾಯಲು ತರಬೇತಿ ನೀಡುವುದು.

- ಶಾಲಾಭಿವೃದ್ಧಿ ಸಮಿತಿಯ (SDMC) ಸದಸ್ಯರಿಗೆ ವಯಸ್ಕರ ಶಿಕ್ಷಣಕ್ಕೆ ಮತ್ತು ಅನೌಪಚಾರಿಕ ಶಾಲೆಯ ಕಾರ್ಯಕರ್ತೆಯರಿಗೆ ಸೇವಾನಿರತ ತರಬೇತಿಯನ್ನು ನೀಡುವುದು.

- ಶಿಕ್ಷಕರ ಶಿಕ್ಷಣ ಹಾಗೂ ಸಹ ಸಂಬಂಧಿತ ಅಂಶಗಳನ್ನು ಜಿಲ್ಲೆಯ ಮಟ್ಟದಲ್ಲಿ ಯೋಜಿಸುವುದು ಹಾಗೂ ನಿರ್ವಹಿಸುವುದು.

- ಅನೌಪಚಾರಿಕ ಶಿಕ್ಷಣಕ್ಕೆ, ಪ್ರಾಥಮಿಕ ಶಿಕ್ಷಣಕ್ಕೆ ಹಾಗೂ ವಯಸ್ಕರ ಶಿಕ್ಷಣಕ್ಕೆ ಅಗತ್ಯವಿರುವ ಸಂಪನ್ಮೂಲವನ್ನು ಒದಗಿಸುವುದು.

- ಗುಣಾತ್ಮಕ ಶಿಕ್ಷಣಕ್ಕೆ ಬೇಕಾದ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳುವುದು.

**ಡಯಟ್‌ನ ಪ್ರಮುಖ ಕಾರ್ಯಗಳು**

- ಡಯಟ್ ಸಂಸ್ಥೆಯು ಜಿಲ್ಲೆಯಲ್ಲಿ ಅಗತ್ಯವಿದ್ದ ಶೈಕ್ಷಣಿಕ ನೆರವನ್ನು ನೀಡುತ್ತದೆ. ಜೊತೆಗೆ ಸೇವಾಪೂರ್ವ ಹಾಗೂ ಸೇವಾ ನಿರತ ತರಬೇತಿಯನ್ನು ನೀಡುತ್ತದೆ. ಜೊತೆಗೆ ಈ ಕೆಳಕಂಡ ಕಾರ್ಯವನ್ನೂ ಅದು ನಿರ್ವಹಿಸಬೇಕಾಗಿದೆ.

- ಪ್ರತಿ ಡಯಟ್ ಒಂದು ಶೈಕ್ಷಣಿಕ ಬ್ಲಾಕ್‌ಗೆ ನೋಡಲ್ ಅಧಿಕಾರಿಯನ್ನು ನೇಮಿಸಿ, ಅವರ ಮೂಲಕ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುತ್ತದೆ. ಇವರು ನಿಯತವಾಗಿ ಆಗಾಗ್ಗೆ ಶಾಲೆಗಳಿಗೆ ಭೇಟಿನೀಡುವ ಮೂಲಕ ತರಬೇತಿ ಕಾರ್ಯಕ್ರಮಗಳಿಗೆ ಬೇಕಾದ ಪುನರ್ಬಲನವನ್ನು ನೀಡುತ್ತಾರೆ.

- ಡಯಟ್ ಸಂಸ್ಥೆಯು 'ಮಾಹಿತಿ ಸಿಂಧು' ಕಾರ್ಯಕ್ರಮ ದಡಿಯಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನೀಡುತ್ತದೆ.

- ಡಯಟ್ 'ಕೇಳಿ–ಕಲಿ' ಎಂಬ ರೇಡಿಯೋ ಕಾರ್ಯಕ್ರಮ ಹಾಗೂ ಟಿ.ವಿ. ಕಾರ್ಯಕ್ರಮವಾದ "ಎಜುಸ್ಯಾಟ್" ಕಾರ್ಯಕ್ರಮವನ್ನು ನಿಯಂತ್ರಿಸುತ್ತದೆ.

- ಡಯಟ್– 'ಅಕ್ಷರ ದಾಸೋಹ' ಎಂಬ ಬಿಸಿ ಊಟ ಕಾರ್ಯಕ್ರಮವನ್ನು ಮೌಲ್ಯಮಾಪನ ಮಾಡುವ ಕಾರ್ಯವನ್ನೂ ನಿರ್ವಹಿಸುತ್ತಿದೆ.

- ಡಯಟ್ ಸಂಸ್ಥೆಯು ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅವಲೋಕಿಸಿ ಸಹಭಾಗಿತ್ವವನ್ನು ತೋರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳು, 'ಬಾ ಮರಳಿ ಶಾಲೆಗೆ, ಬಾ ಬಾಲೆ ಶಾಲೆಗೆ, ಕೂಲಿಯಿಂದ ಶಾಲೆಗೆ, ಚಿಣ್ಣರ ಅಂಗಳ, ಸಮುದಾಯದತ್ತ ಶಾಲೆ', ಇವುಗಳಿಂದ ಶಿಕ್ಷಣದಿಂದ ವಂಚಿತರಾಗುತ್ತಿರುವ ಮಕ್ಕಳನ್ನು ಮರಳಿಶಾಲೆಗೆ ಕರೆತರುವ ಕಾರ್ಯ ನಡೆಯುತ್ತಿದೆ.

- CAC ಗಳಿಗೆ ನೋಡಲ್ ಕೇಂದ್ರವಾಗಿ ಡಯಟ್ ಕಾರ್ಯನಿರ್ವಹಿಸುತ್ತದೆ.

- ಕೆ.ಪಿ.ಎಸ್.ಸಿ.ಯ ವಿಭಾಗೀಯ ಪರೀಕ್ಷೆಗಳನ್ನು ಡಯಟ್ ನಡೆಸುವುದರ ಜೊತೆಗೆ, ಶಿಕ್ಷಕರ ನೇಮಕಾತಿ ಪರೀಕ್ಷೆಯನ್ನು ಸಹ ಇದು ನಿರ್ವಹಿಸುತ್ತದೆ.

- ಸರ್ವ ಶಿಕ್ಷಣ ಅಭಿಯಾನ ಪ್ರಾರಂಭದಿಂದ ಶಿಕ್ಷಕರ 'ಸೇವಾ ನಿರತ ತರಬೇತಿ'ಯನ್ನು ನಡೆಸಿಕೊಂಡು ಬರುತ್ತಿದೆ.

- ಸ್ಲಂವಾಸಿಗಳು, ಸಾಮಾಜಿಕ ಸೌಲಭ್ಯ ವಂಚಿತರು ಅಲ್ಪಸಂಖ್ಯಾತರು ಮುಂತಾದವರಿಗೆ ವಿಶೇಷ ಶಿಕ್ಷಣ ನೀಡುತ್ತಿದೆ.

**ಮಾನವ ಸಂಪನ್ಮೂಲ ಖಾತೆಯು ಸೂಚಿಸಿದ ಕಾರ್ಯವೈಖರಿ ಹಾಗೂ ಡಯಟ್‌ನ ಪಾತ್ರ:** ಡಯಟ್‌ಗಳು ಪ್ರಾಥಮಿಕ ಶಿಕ್ಷಣವನ್ನು ಜಿಲ್ಲೆಯಲ್ಲಿ ಅರ್ಥಪೂರ್ಣಗೊಳಿಸುವ ಕೇಂದ್ರದಂತೆ ವರ್ತಿಸುತ್ತಾ, ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಯನ್ನು ನಿರ್ವಹಿಸುವ ಮೂಲ ಕೇಂದ್ರವಾಗುವ ಗುರುತರ ಜವಾಬ್ದಾರಿಯನ್ನು ಹೊಂದಿವೆ.

ಮೂಲದಲ್ಲಿ, ಒಂದು ಜಿಲ್ಲೆಗೆ, ಒಂದೇ ಶಿಕ್ಷಣ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿ ಪ್ರಶಿಕ್ಷಣವನ್ನು ನಿರ್ವಹಿಸುವ ಕಾರ್ಯವನ್ನು ನಿರ್ವಹಿಸುತ್ತಿತ್ತು. ನಮ್ಮ ದೇಶದಲ್ಲಿ ಹಲವಾರು ಚಿಕ್ಕ ಚಿಕ್ಕ ಜಿಲ್ಲೆಗಳಿವೆ. ಇಲ್ಲಿ ಒಂದು ಸಂಪೂರ್ಣವಾದ ತರಬೇತಿ ಸಂಸ್ಥೆಯನ್ನು ನಡೆಸುವಷ್ಟು ಸಾಮರ್ಥ್ಯವೂ ಇರುವುದಿಲ್ಲ. ಹಾಗೆಯೇ ನೆರೆಯ ಜಿಲ್ಲೆಯ ತರಬೇತಿ ಸಂಸ್ಥೆಯಲ್ಲಿ ಸಹಯೋಗವನ್ನು ಹೊಂದುವುದೂ ಸಾಧ್ಯವಾಗುವುದಿಲ್ಲ. ಇಂತಹ ಜಿಲ್ಲೆಗಳು ಚಿಕ್ಕ ಗಾತ್ರದ 'TELESCOPES' DIETಗಳನ್ನು ಹೊಂದಿವೆ. ಇವನ್ನು DRCಗಳು ಎಂದು ಗುರುತಿಸಲಾಗಿದೆ. District Resource Centre (DRC) ಅಂದರೆ, "ಜಿಲ್ಲಾ ಸಂಪನ್ಮೂಲ ಕೇಂದ್ರ". ಇವುಗಳನ್ನು TELESCOPES ಎಂದೂ ಉಲ್ಲೇಖಿಸುವುದುಂಟು. ಈ ಸಂಸ್ಥೆಗಳು ಪೂರ್ವ ಶಿಕ್ಷಕ ತರಬೇತಿಯನ್ನು ನಿರ್ವಹಿಸಲಾರವು. ಆದರೆ, ಸೇವಾನಿರತ ತರಬೇತಿಯನ್ನು ವ್ಯವಸ್ಥಿತವಾಗಿ ನಿಭಾಯಿಸುತ್ತವೆ. ಹಾಗಾಗಿ, ಒಂದು ರಾಜ್ಯವು ತನ್ನ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ಡಯಟ್‌ಗಳನ್ನು ಸ್ಥಾಪಿಸುವ

Digitised by Bharatavani, CIIL

ಹಾಗೂ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸುವ ಹೊಣೆಗಾರಿಕೆಯನ್ನು ಹೊಂದಿದೆ ಮತ್ತು ಇದು ಆಯಾ ರಾಜ್ಯದ ಜಿಲ್ಲೆಗಳ ಸಂಖ್ಯೆ, ವ್ಯಾಪ್ತಿ, ಗಾತ್ರ ಜವಾಬ್ದಾರಿಗಳ ಹಿನ್ನೆಲೆಯಲ್ಲಿ ನಿರ್ಧರಿತವಾಗುತ್ತದೆ.

ಇಲ್ಲಿಯವರೆಗೆ, ಈ ಕೇಂದ್ರಗಳು ಪ್ರಾಥಮಿಕ ಶಾಲಾ ಶಿಕ್ಷಕರನ್ನು ನಿರ್ಮಿಸುವ ಕಾರ್ಯಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದವು. ಆದರೆ ಈಗ ಈ ಕೇಂದ್ರಗಳು ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸೇವಾ ಪೂರ್ವ ತರಬೇತಿಯನ್ನು ನೀಡುವಂತಹ ನೂತನ ಕಾರ್ಯವನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ. ಜೊತೆಗೆ, ಈ ಪೂರ್ವ ಪ್ರಾಥಮಿಕ ಶಿಕ್ಷಕರಿಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬೇಕಾದ ಸಾಮರ್ಥ್ಯವನ್ನು ಕಲಿಸುವುದರ ಜೊತೆಗೆ ಅವರಿಗೆ ಬೇಕಾದ ಪ್ರೋತ್ಸಾಹ ಮತ್ತು ಪ್ರಬಲಗೊಳಿಸುವಂತಹ ಅಂಶಗಳನ್ನೂ ಈಗ ಈ ಸಂಸ್ಥೆಯು ನಿರ್ವಹಿಸಬೇಕಾಗಿದೆ.

ಅಂತೆಯೇ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಹಾಗೂ ಜಿಲ್ಲಾ ಸಂಪನ್ಮೂಲ ಕೇಂದ್ರಗಳು (DRC's) ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸ ಬೇಕಾಗುತ್ತದೆ.

- ಬೋಧನೆ ಹಾಗೂ ಕಲಿಕೆಯ ಪ್ರಕ್ರಿಯೆಯಲ್ಲಿ ಗುಣಾತ್ಮಕ ಸ್ಪರ್ಶವನ್ನು ನೀಡುವ ಮೂಲಕ ಜಿಲ್ಲೆಯ ಪ್ರಾಥಮಿಕ ಶಾಲೆಯ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಾ ನೆರವು ನೀಡುವುದು.

- ಜಿಲ್ಲಾ ಸಂಪನ್ಮೂಲ ಘಟಕದೊಂದಿಗೆ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹಾಗೂ ಪ್ರಾಥಮಿಕ ಶಿಕ್ಷಕರನ್ನು ತಯಾರಿಗೊಳಿಸುವುದು/ಸಿದ್ಧಪಡಿಸುವುದು.

- ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಜಿಲ್ಲೆಯ ಮಟ್ಟದಲ್ಲಿ ಯೋಜನೆ ತಯಾರಿಸುವುದು.

- ಜಿಲ್ಲೆಯಲ್ಲಿ ನಿರ್ದಿಷ್ಟವಾಗಿ ಅವಶ್ಯಕವಾಗಿ ಬೇಕಾದಂತಹ ಕಲಿಕೋಪಕರಣಗಳನ್ನು ಹಾಗೂ ನಿರ್ದಿಷ್ಟ ಪಠ್ಯವಸ್ತುವನ್ನು ಅಭಿವೃದ್ಧಿಪಡಿಸುವುದು.

- ವಲಯ ಮಟ್ಟ ಸಂಪನ್ಮೂಲ ಕೇಂದ್ರ ಹಾಗೂ ಕ್ಲಸ್ಟರ್ ಮಟ್ಟದ ಸಂಪನ್ಮೂಲ ಕೇಂದ್ರಕ್ಕೆ ಬೇಕಾದಂತಹ ಅನುಮೋದನೆಯನ್ನು, ನೆಲೆಯನ್ನು, ಆಧಾರವನ್ನು ನೀಡುವುದು.

- ಪ್ರಾಥಮಿಕ ಶಿಕ್ಷಣದ ಕುರಿತಾಗಿ ಸುಧಾರಿತ ಗ್ರಹಿಕೆಯನ್ನು ರಚಿಸಲು ಅವಶ್ಯಕವಾದ 'ಸಂಶೋಧನೆ'ಯನ್ನು ಕೈಗೊಳ್ಳುವುದು.

- ಸಮುದಾಯದ ಪಾತ್ರವನ್ನು ಪ್ರಾಥಮಿಕ ಶಿಕ್ಷಣದಲ್ಲಿ ತೊಡಗಿಸಿಕೊಳ್ಳಲು ಅವಶ್ಯಕವಾದಂತಹ ಚಾಲನೆಯನ್ನು ಆಯಾ ಜಿಲ್ಲೆಗಳಿಗೆ ನೀಡುವುದು ಹಾಗೂ ಈಗಾಗಲೇ ಇರುವಂತಹ ಸಮುದಾಯದಲ್ಲಿ ತೊಡಗಿಸಿಕೊಳ್ಳುವ ಪಾತ್ರವನ್ನು ಅಭಿವೃದ್ಧಿಗೊಳಿಸುವುದು.

- ವಯಸ್ಕರ ಶಿಕ್ಷಣದಲ್ಲಿ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಪ್ರೋತ್ಸಾಹವನ್ನು ನೀಡುವುದು.

- ಇದಲ್ಲದೆ, ಸಂಸ್ಥೆಯ ಸಾಮರ್ಥ್ಯವನ್ನು ಬಲಯುತ ಗೊಳಿಸುವುದು.

**ಡಯಟ್‌ನ ಸಂರಚನೆ:–** ಈಗಾಗಲೇ ಹಲವು ವಿಶಾಲವಾದ ಮಿತಿಯನ್ನು ಕೇಂದ್ರವು ಈ ಡಯಟ್‌ಗಳಿಗೆ ಸೂಚಿಸಿದ್ದರೂ, ಅದರ ರಚನಾತ್ಮಕ ಯೋಜನೆಯ ಜವಾಬ್ದಾರಿಯನ್ನು ರಾಜ್ಯಕ್ಕೆ ನೀಡಿದೆ. ಕಾರಣ ಆಯಾ ರಾಜ್ಯದ ನಿರ್ದಿಷ್ಟವಾದ ಅವಶ್ಯಕತೆಗಳಿಗೆ ಅನುಗುಣವಾಗಿ ಡಯಟ್‌ಗಳ ರಚನೆಯನ್ನು ವಿಕಾಸಗೊಳಿಸುವುದು ಸೂಕ್ತವೆಂಬ ಅಂಶವನ್ನು ಮನಗಂಡಿದೆ. ಉದಾಹರಣೆಗೆ, ಯಾವುದಾದರೂ ಒಂದು ಜಿಲ್ಲೆಯಲ್ಲಿ ಹೆಚ್ಚಿನ ಜನಸಂಖ್ಯೆಯಲ್ಲಿ "ಬುಡಕಟ್ಟು ಜನಾಂಗವಿದ್ದು", ಆ ಜಿಲ್ಲೆಯಲ್ಲಿ ಡಯಟ್ ಮತ್ತು ಡಿ ಆರ್‌ಸಿಗಳಲ್ಲಿ ಒಂದು ಘಟಕವನ್ನೇ ತೆರೆದು ಅದರ ಕಾರ್ಯಕಲಾಪಗಳು 'ಬಾಲಿಕೆಯರ/ಸ್ತ್ರೀಯರ ಶಿಕ್ಷಣ'ಮತ್ತು 'ಬುಡಕಟ್ಟು ಶಿಕ್ಷಣ'ಕ್ಕೆ ಮೀಸಲಾಗಿಡುವುದು, ಈ ಘಟಕದ ಕಾರ್ಯವೈಖರಿಯು ಇಂತಹ ಮಕ್ಕಳನ್ನು ಅಭಿವೃದ್ಧಿಗೊಳಿಸುವತ್ತ ಕೇಂದ್ರೀಕರಿಸುವುದು. ಆ ಮಕ್ಕಳ ಅವಶ್ಯಕತೆಯನ್ನು ಅಧ್ಯಯನ ಮಾಡಿ ಪೂರೈಸುವುದು ಸಾಧ್ಯವಾಗುತ್ತದೆ.

ಕಾಲಾನಂತರ, ಇಂತಹ ಆಯ್ಕೆ ಮಾಡಿದ ಕ್ಷೇತ್ರಗಳನ್ನು ಡಯಟ್ ಹಾಗೂ ಡಿಆರ್‌ಸಿಗಳು ಅಭಿವೃದ್ಧಿಪಡಿಸಿ ಪ್ರಭುತ್ವ ಸಾಧಿಸುವ ಮೂಲಕ ಇತರ ಸಂಸ್ಥೆಗಳಿಗೆ ಅವಶ್ಯಕವಾದ ಸಂಪನ್ಮೂಲವನ್ನು, ಆಧಾರವನ್ನು ನೀಡಬಹುದು.

10ನೇ ಯೋಜನೆಯಲ್ಲಿ ನೂತನ ಡಯಟ್/ಡಿಆರ್‌ಸಿಗಳನ್ನು ತೆರೆಯಲು/ಸ್ಥಾಪಿಸಲು ಅಗತ್ಯವಾದ ಅಂಶಗಳು.

2500 ರಷ್ಟು ಶಿಕ್ಷಕರನ್ನು ಹೊಂದಿರುವ ಜಿಲ್ಲೆಗೆ ಒಂದು ಡಯಟನ್ನು ಸ್ಥಾಪಿಸುವುದು. ಆ ಜಿಲ್ಲೆಯಲ್ಲಿ ಈಗಾಗಲೇ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆ (ETEI-Elementary Teachers Education Institution) ಇದ್ದರೆ, ಅದನ್ನು ಈ ದರ್ಜೆಗೆ ಮೇಲೇರಿಸುವುದು. ಅಂತಹ ಯಾವುದೇ ಸರಕಾರಿ ETEI ಗಳಿಲ್ಲದಿದ್ದರೆ, ನೂತನವಾಗಿ ಡಯಟ್ಟನ್ನೇ ಅಲ್ಲಿ ಪ್ರಾರಂಭಿಸುವುದು.

ಯಾವ ಜಿಲ್ಲೆಯ ವ್ಯಾಪ್ತಿಯಲ್ಲಿ 2500ಕ್ಕಿಂತ ಕಡಿಮೆ ಶಿಕ್ಷಕರು ಲಭ್ಯವಿದ್ದಾರೆಯೋ, ಅಲ್ಲೆಲ್ಲಾ ಜಿಲ್ಲಾ ಸಂಪನ್ಮೂಲ ಕೇಂದ್ರಗಳನ್ನು ತೆರೆಯುವುದು. ಈಗಾಗಲೇ ಅಂತಹ ಜಿಲ್ಲೆಯಲ್ಲಿ ETEI ಇದ್ದರೆ, ಅದನ್ನು ಡಿಆರ್‌ಸಿ ದರ್ಜೆಗೆ ಏರಿಸುವುದು. ಇಲ್ಲವೇ ನೂತನ ಡಿಆರ್‌ಸಿ ಯನ್ನು ಸ್ಥಾಪಿಸಿ ಅದನ್ನು ಕೇವಲ 'ಸೇವಾ ನಿರತ' ಕಾರ್ಯಕ್ಕೆ ಸೀಮಿತಗೊಳಿಸುವುದು.

ಹಲವು ಬಾರಿ, ಮೊದಲೇ ಸರ್ಕಾರಿ ತರಬೇತಿ ಸಂಸ್ಥೆಗಳಿದ್ದು, ಅವುಗಳು, ಡಿಆರ್‌ಸಿಗಳಾಗಿ ಕಾರ್ಯನಿರ್ವಹಿಸಲು ಬೇಕಾದ ಅನುಕೂಲತೆಗಳನ್ನು ಹೊಂದದೇ ಇದ್ದಲ್ಲಿ, ನೂತನವಾದ ಡಿಆರ್‌ಸಿಯನ್ನು ಜಿಲ್ಲೆಯ ಕೇಂದ್ರದಲ್ಲಿ ಅಥವಾ ಸೂಕ್ತವಾದ ಇತರ ಸ್ಥಳದಲ್ಲಿ ಸ್ಥಾಪಿಸುವುದು.

ಒಂದು ಜಿಲ್ಲೆಯಲ್ಲಿ 2,500 ಶಿಕ್ಷಕರಿದ್ದರೆ, ರಾಜ್ಯ ಸರ್ಕಾರವು ಡಯಟ್ ಸೂಚಿಸಿದರೆ, ಒಂದು ನೂತನವಾಗಿ ಡಿಆರ್‌ಸಿಯನ್ನೇ ಸ್ಥಾಪಿಸಬಹುದು.

10ನೇ ಯೋಜನೆಯ ಅವಧಿಯಲ್ಲಿ ಕೇಂದ್ರದ ಸಹಕಾರ:

**1. ಮರು–ಪೂರಣ ಮಾಡದ ಹೊಸ ಯೋಜನೆಗಳು**

ಈ ಕೆಳಗಿನ ಕೋಷ್ಟಕವು, ಕೇಂದ್ರವು ನೀಡಬಹುದಾದ ಗರಿಷ್ಠ ಮಟ್ಟದ ಅನುದಾನಗಳನ್ನು ತಿಳಿಸುತ್ತದೆ.

**ಡಯಟ್**

| ಅಂಶಗಳು | ನೂತನ | ಮೇಲ್ದರ್ಜೆಗೆ ಏರಿಸಿದ |
|---|---|---|
| ಕಾಮಗಾರಿ ಕೆಲಸ | 150 ಲಕ್ಷ ರೂ. | 90 ಲಕ್ಷ ರೂ. |
| ಉಪಕರಣಗಳಿಗೆ | 25 ಲಕ್ಷ ರೂ. | 20 ಲಕ್ಷ ರೂ. |

Digitised by Bharatavani, CIIL

**ಡಿ ಆರ್ ಸಿ**

| ಅಂಶಗಳು | ನೂತನ | ಮೇಲ್ದರ್ಜೆಗೆ ಏರಿಸಿದ |
|---|---|---|
| ಕಾಮಗಾರಿ ಕೆಲಸ | 75 ಲಕ್ಷ ರೂ. | 45 ಲಕ್ಷ ರೂ. |
| ಉಪಕರಣಗಳಿಗೆ | 12.5 ಲಕ್ಷ ರೂ. | 10 ಲಕ್ಷ ರೂ. |

ಮೇಲ್ಕಂಡ ಅಂಕಿ ಅಂಶಗಳು ಕೇಂದ್ರದ ಧನಸಹಾಯದ ಗರಿಷ್ಠ ಮಿತಿಯನ್ನು ತೋರಿದರೂ, ರಾಜ್ಯವು ತನ್ನದೇ ಮಿತವ್ಯಯದ ಕಾಮಗಾರಿ ಕೈಗೊಳ್ಳಬಹುದಾಗಿದೆ.

ಹೆಚ್ಚುವರಿಯಾಗಿ 20 ಲಕ್ಷ ರೂಪಾಯಿಯಷ್ಟು ಗರಿಷ್ಠ ಮಟ್ಟ ಧನಸಹಾಯವನ್ನು 10ನೇ ಯೋಜನೆಯ ಅವಧಿಯಲ್ಲಿ ನೀಡಲಾಗುವುದು. ಇದನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಡಯಟ್‌ಗಳಿಗೆ ಅವುಗಳ ಕಟ್ಟಡದ ನಿರ್ಮಾಣ ಅಥವಾ ಉಪಕರಣಗಳ ಕಡೆ ನೀಡಲಾಗುವುದು. ಇದು ಅದರ ಅಗತ್ಯಗಳಿಗೆ ಸಹಕಾರ ನೀಡುವಲ್ಲಿ ಆಧಾರವಾಗಲಿದೆ. ಇದರ ಮುಖ್ಯ ಹಂಚಿಕೆಯು ವಿದ್ಯುತ್ ಪೂರೈಕೆ, ನೀರಿನ ವ್ಯವಸ್ಥೆ ಹಾಗೂ ಕಾಂಪೌಂಡ್ ನಿರ್ಮಾಣ ಮಾಡುವುದಾಗಿದೆ.

ಕೇಂದ್ರದ ಆರ್ಥಿಕ ಸಹಾಯವು ಅನೇಕ ಉಪಕರಣಗಳನ್ನು ಖರೀದಿಸುವಲ್ಲಿಯೂ ಸಹಕರಿಸಲಿವೆ. ಅದರಲ್ಲೂ ಪ್ರಮುಖವಾಗಿ ಅಗತ್ಯವಾದ ಉಪಕರಣಗಳಾದ ಗಣಕಯಂತ್ರಗಳನ್ನು ಮತ್ತು ಗ್ರಂಥಾಲಯದ ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಕಂಪ್ಯೂಟರ್‌ಗಳು ದೂರ ಶಿಕ್ಷಣದಲ್ಲಿ ಸಹಕರಿಸಲಿವೆ. ಇದರಲ್ಲಿ ಡಯಟ್‌ಗಳಿಗೆ 6 ಲಕ್ಷ ಹಾಗೂ 3 ಲಕ್ಷವನ್ನು ಡಿಆರ್‌ಸಿಗಳಿಗೂ ನೀಡಲಿವೆ. ಮುಂದಿನ ದಿನಗಳಲ್ಲಿ ಡಯಟ್‌ಗಳು ಹಾಗೂ ಡಿಆರ್‌ಸಿಗಳು ಆಯ್ದ ಕ್ಷೇತ್ರಗಳಲ್ಲಿ ಪ್ರಭುತ್ವ ಸಾಧಿಸುವ ಮೂಲಕ ಇತರ ಸಂಸ್ಥೆಗಳಿಗೂ ಸಂಪನ್ಮೂಲವನ್ನು ವಿಸ್ತರಿಸಲು ಸಾಧ್ಯವಿದೆ. ಪ್ರತಿಯೊಂದು ಡಯಟ್‌ಗೆ ಎರಡು ಗಣಕ ಯಂತ್ರದ ಮಾಡ್ಯೂಲ್ (Module)ಗಳ 5 ಗಣಕಯಂತ್ರಗಳನ್ನು ನೀಡಲಾಗುವುದು. ಅಂತೆಯೇ ಡಿ ಆರ್ ಸಿಗಳಿಗೂ ಅದೇ ತೆರನಾದ ನೆರವನ್ನು ನೀಡಲಾಗುವುದು.

ಸೇವಾ ಪೂರ್ವ ತರಬೇತಿಗಾಗಿಯೂ ಕೇಂದ್ರವು ಧನ ಸಹಾಯವನ್ನು ಸುಮಾರು 5 ಲಕ್ಷದವರೆಗೆ ನೀಡಲಿದೆ. ಜೊತೆಗೆ ಶುಲ್ಕವನ್ನು ಸಂಗ್ರಹಿಸಿ ಹೆಚ್ಚುವರಿ ವೆಚ್ಚವನ್ನು ಸರಿದೂಗಿಸುವ ಸೂಚನೆಯನ್ನು ನೀಡುತ್ತಾ, ಕೇಂದ್ರವು ಇಂತಹ ಸಾಧ್ಯತೆ ಇರುವಲ್ಲಿ ಧನಸಹಾಯವನ್ನು ನೀಡಲಾರದು ಎಂದೂ ತಿಳಿಸುತ್ತದೆ.

9ನೇ ಯೋಜನೆಯವರೆಗೆ ನೀಡಿದ ಹೆಚ್ಚುವರಿ ಧನಸಹಾಯ.

**ಪುನರಾವರ್ತನೆ ಹೊಂದುವ ಖರ್ಚು :– ಸಂಬಳ ಸೌಲಭ್ಯ:** ಡಯಟ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಣಿತರಲ್ಲಿ ಕೇವಲ 17 ಜನರಿಗೆ ಮಾತ್ರ ಕೇಂದ್ರದಿಂದ ಸಂಬಳ ನೀಡಲಾಗುತ್ತಿದೆ. ಹಾಗೆಯೇ 5 ಜನ ತಾಂತ್ರಿಕ ಸಹಾಯಕರಿಗೆ ಲೆಕ್ಕಿಗರಿಗೆ/ಗ್ರಂಥಪಾಲಕರಿಗೆ ಸಂಬಳವನ್ನು ಭರಿಸುತ್ತಿದೆ. ಪ್ರತಿ ಡಯಟ್‌ಗೆ 11 ಜನ ಕಛೇರಿ ಸಿಬ್ಬಂದಿಯನ್ನು ಹಾಗೂ 4 ಜನ 'ಡಿ' ದರ್ಜೆ ನೌಕರರನ್ನು ನೇಮಿಸಲು ಸೂಚನೆ ನೀಡಿದೆ. ಈ ಎಲ್ಲ ಮೇಲ್ಕಂಡ ಹುದ್ದೆಗಳಲ್ಲಿ ಕನಿಷ್ಠ ಒಬ್ಬರಾದರೂ 'ಗಣಕ ಯಂತ್ರ ತಂತ್ರಜ್ಞರು' ಇರುವುದು ಅವಶ್ಯಕ.

ಮೇಲ್ದರ್ಜೆಗೇರಿಸಲ್ಪಟ್ಟ ಡಯಟ್‌ಗಳ ಸಿಬ್ಬಂದಿಗೆ ಸಂಬಳ ಸೌಲತ್ತನ್ನು ರಾಜ್ಯವು ನೀಡುವ ಜವಾಬ್ದಾರಿಯನ್ನು ಹೊಂದಿದೆ. ಜೊತೆಗೆ 2001–02 ರಲ್ಲಿ ಇದ್ದಂತೆ ವ್ಯವಸ್ಥೆಯನ್ನು ಮುಂದುವರೆಸಲಾಗುವುದು. ಸಿಬ್ಬಂದಿಯ ವಿವರವನ್ನು ರಾಜ್ಯ ಮುಂಗಡ ಪತ್ರದ ಯೋಜನೆಯಲ್ಲಿ ಸೇರಿಸಲಾಗುವುದು. ಇದಕ್ಕೆ ಹೊರತಾಗಿಯೂ ರಾಜ್ಯವು ತನ್ನದೇ ಆದ ಸ್ವಂತ "ಸಿಬ್ಬಂದಿ ವಿನ್ಯಾಸ"ವನ್ನು ರಚಿಸಿ ಆದೇಶಿಸಬಹುದಾಗಿದೆ.

ಡಿ ಆರ್ ಸಿ ಗೆ ಸಂಬಂಧಿಸಿದಂತೆ, 8 ಜನ ಪರಿಣಿತರು 3 ಜನ ತಂತ್ರಜ್ಞರು / ಲೆಕ್ಕಿಗರು / ಗ್ರಂಥಪಾಲಕರು, 3 ಜನ ಕಛೇರಿ ಸಿಬ್ಬಂದಿ ಹಾಗೂ 3 ಜನ ಡಿ ದರ್ಜೆಯ ಸಿಬ್ಬಂದಿಗೆ ಹಣಕಾಸಿನ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಹಾಗೆಯೇ ಈಗಾಗಲೇ ಇದ್ದ 'ಟೆಲಿಸ್ಕೋಪ್ ಡಯಟ್'ಗಳು ಈ ಡಿಆರ್‌ಸಿಗೆ ಧನಸಹಾಯವನ್ನು ಮಾಡಬೇಕಾಗುತ್ತದೆ.

**ಡಯಟ್‌ಗಳ ಕಾರ್ಯಕ್ರಮಗಳು:** ಪ್ರತಿಯೊಂದು ಡಯಟ್ / ಡಿಆರ್‌ಸಿಯು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗುತ್ತದೆ. ಪ್ರಮುಖವಾಗಿ,

- ತರಬೇತಿ ರಹಿತ ಶಿಕ್ಷಕರಿಗೆ ತರಬೇತಿ ನೀಡುವುದು
- ಶಾಲಾಭಿವೃದ್ಧಿ ಯೋಜನೆಗಳು
- ಮೌಲ್ಯಮಾಪನದ ಸಾಧನಗಳನ್ನು ಹಾಗೂ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸುವುದು.
- ಪಠ್ಯ ವಸ್ತುವಿನ ತಯಾರಿ
- ಸಂಶೋಧನಾತ್ಮಕ ಯೋಜನೆಗಳು
- ದೂರ ಶಿಕ್ಷಣ
- ಸಂಪನ್ಮೂಲ ವ್ಯಕ್ತಿಗಳಿಗೆ ಪುನಶ್ಚೇತನ ಹಾಗೂ ಓರಿಯಂಟೇಶನ್‌ಗಳನ್ನು ಆಯೋಜಿಸುವುದು.
- ಡಿಆರ್‌ಸಿ ಹಾಗೂ ಸಿಆರ್‌ಸಿಗಳಿಗೆ ಮಾಹಿತಿ ನೀಡುವುದು.
- ಪ್ರಾಥಮಿಕ ಶಿಕ್ಷಣದ ಗುಣಾತ್ಮಕತೆಯನ್ನು ಅಭಿವೃದ್ಧಿಗೊಳಿಸುವುದು.

ಇದಕ್ಕೆಲ್ಲಾ ಕೇಂದ್ರದಿಂದ ವಾರ್ಷಿಕ ಅನುದಾನ 17.00 ಲಕ್ಷ ರೂ. ಆಗಿದೆ. ಇದೇ ರೀತಿ ಡಿ ಆರ್ ಸಿ ಗೆ 10.00 ಲಕ್ಷ ರೂ.ಗಳು.

**ಇತರ ಸವಲತ್ತುಗಳು**

- ಕಂಪ್ಯೂಟರ್ ಪ್ರಯೋಗಾಲಯಕ್ಕೆ ಬೇಕಾದ ಇತರ ವೆಚ್ಚಗಳನ್ನು ಭರಿಸಲು 50,000 ರೂ.ಗಳನ್ನು ಡಯಟಿಗೆ, 25,000 ರೂ.ನ್ನು ಡಿಆರ್‌ಸಿ ಪ್ರತಿ ವರ್ಷ ನೀಡಲಾಗುತ್ತದೆ.
- ಇತರ ಕಛೇರಿ ವೆಚ್ಚಕ್ಕೆ 5.00 ಲಕ್ಷ ರೂ. ಗಳನ್ನು ಡಯಟ್‌ಗೆ, 3.00 ಲಕ್ಷ ರೂ.ಗಳನ್ನು ಡಿಆರ್‌ಸಿಗೆ ಪ್ರತೀ ವರ್ಷ ನೀಡಲಾಗುತ್ತದೆ. ಅನುಮತಿಗೆ ನೀಡಿದ ಡಯಟ್‌ಗಳು ಡಿ ಆರ್‌ಸಿ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಡಯಟ್/ಡಿಆರ್‌ಸಿಗಳು:–

ಕಾರ್ಯ ನಿರ್ವಹಿಸುತ್ತಿರುವ ಡಯಟ್‌ಗಳು ಈ ಸೌಲಭ್ಯಗಳನ್ನು ಹೊಂದುವ ಮೂಲಕ 10ನೇ ಯೋಜನೆಯಲ್ಲಿ ಈಗಾಗಲೇ ಸ್ಥಾಪಿತವಾಗಿರುವ ಡಯಟ್‌ಗಳಿಗಿಂತ ಭಿನ್ನತೆಯನ್ನು ತೋರುತ್ತವೆ. ನೂತನ ಡಯಟ್‌ನಲ್ಲಿ ಕಾಮಗಾರಿ ಕೆಲಸ ಇನ್ನೂ ಆರಂಭಿಸಿರದ ಕಾರಣ ಅವುಗಳಿಗೆ ಕಾರ್ಯಕ್ರಮದ ಬಾಬ್ತಿನ ಹಣ ನೀಡಿಲ್ಲ. ಇದಕ್ಕೆ ಎರಡು ಕಾರಣಗಳನ್ನು ಗುರುತಿಸಿದೆ.

- ಡಯಟ್‌ನ ಕಟ್ಟಡ ನಿರ್ಮಾಣಕ್ಕೆ ಸ್ಥಳೀಯವಾಗಿ ಸ್ಥಳದ ಅಭಾವ.

Digitised by Bharatavani, CIIL

• ಪಿ.ಡಬ್ಲ್ಯೂಡಿ – ಸಾರ್ವತ್ರಿಕ ಕಾಮಗಾರಿ ಇಲಾಖೆಯ ಮಂದಗತಿಯ ಕಾಮಗಾರಿ ಕಾರ್ಯ.

**ಡಯಟ್/ಡಿ.ಆರ್.ಸಿ.ಗಳಿಗೆ ಹಣದ ಬಿಡುಗಡೆ:** 9ನೇ ಯೋಜನೆಯವರೆಗೆ, ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು – ಶಾಶ್ವತ ಅನುದಾನದ ಕೆಳಗೆ ಆರ್ಥಿಕ ಸಹಾಯ / ಅನುದಾನ ಪಡೆದುಕೊಂಡವು. ಆದರೆ, ಆಂಧ್ರಪ್ರದೇಶ, ಮಿಜೋರಾಂ, ಛತ್ತೀಸ್‌ಗಡೆ, ಮತ್ತು ಪಂಜಾಬು ಹೊರತುಪಡಿಸಿ ಈ ಸೌಲಭ್ಯವು ಇತರ ರಾಜ್ಯಗಳಿಗೆ ಸಂದಾಯವಾಗಿದೆ. 10ನೇ ಯೋಜನೆಯಲ್ಲಿ ಅಂದರೆ 31ನೇ ಜನವರಿ 2005ರವರೆಗೆ ಇತರ ರಾಜ್ಯಗಳಿಗೆ ಅನುದಾನ ಸಂದಿತು. ಆದರೆ ಬಿಹಾರ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕೇರಳ, ಮಹಾರಾಷ್ಟ್ರ ಹಾಗೂ ಪಂಜಾಬ್‌ಗಳು ಈ ಸೌಲಭ್ಯವನ್ನು ಹೊಂದಿರುವುದಿಲ್ಲ. ಈ ಅನುದಾನದಿಂದ ಮೇಲ್ದರ್ಜೆಗೇರಿಸಲ್ಪಟ್ಟ ಡಯಟ್ ಡಿ ಆರ್‌ಸಿಗಳು ಹೆಚ್ಚುವರಿ ಭೌತಿಕ ಅವಶ್ಯಕತೆಗಳನ್ನು ಪೂರೈಸಿಕೊಂಡವು.

ಅಂದರೆ, ಕಟ್ಟಡ, ಕಂಪ್ಯೂಟರ್, ಗ್ರಂಥಾಲಯ ಇತ್ಯಾದಿಗಳು, ಸೆಮಿನಾರ್ ಕೊಠಡಿ, ವಿಜ್ಞಾನ, ಪ್ರಯೋಗಾಲಯ, ಮನೋವಿಜ್ಞಾನ ಪ್ರಯೋಗಾಲಯ, ಪ್ರತಿ ವಿಭಾಗಗಳಿಗೆ ಪ್ರತ್ಯೇಕ ಕೊಠಡಿ, ಅಧ್ಯಾಪಕರ ಕೊಠಡಿ, ಸಭಾಭವನ, ತರಬೇತಿ ಹಾಲ್‌ಗಳು, ಕಾನ್ಫರೆನ್ಸ್ ಹಾಲ್‌ಗಳು, ಪ್ರಾಂಶುಪಾಲರ ಕೊಠಡಿ, ಕಲಾ ಕೊಠಡಿ, ಕಾರ್ಯಾನುಭವ ಕೊಠಡಿ, ದೈಹಿಕ ಶಿಕ್ಷಣ ಅಥವಾ ಕ್ರೀಡಾ ಕೊಠಡಿ, ಕ್ಯಾಂಟೀನ್, ಶುದ್ಧೀಕರಿಸಿದ ನೀರು, ನಿರಂತರ ವಿದ್ಯುತ್ ಪೂರೈಕೆ, ಸ್ತ್ರೀಯರಿಗೆ ಪುರುಷರಿಗೆ ಪ್ರತ್ಯೇಕ ಶೌಚಾಲಯವನ್ನು ಹೊಂದಿರಬೇಕೆಂಬ ಪ್ರಯತ್ನಗಳು ಈಡೇರಿದವು.

**ಪದಾರ್ಥ/ವಸ್ತುಗಳು:** ಒಂದು ಉತ್ತಮ ಕಾರ್ಯ ನಿರ್ವಹಿಸುವ ಡಯಟ್ ಹಾಗೂ ಡಿಆರ್‌ಸಿಯು ಈ ಎಲ್ಲಾ ಸೂಚಿತ ಅಂಶಗಳನ್ನು ಹೊಂದಿರುತ್ತದೆ.

ಟಿ.ವಿ. ಸೆಟ್, ಫೋಟೋಕಾಪಿಯರ್, ವಿ.ಸಿ.ಆರ್. ವೀಡಿಯೋ ಕ್ಯಾಮೆರಾ, ಫಿಲ್ಮ್ ಪ್ರೊಜೆಕ್ಟರ್, ಪ್ರಕ್ಷೇಪಗಳು, ಭಾಷಣಕ್ಕೆ ಅಗತ್ಯವಾದ ವ್ಯವಸ್ಥೆ, ಸ್ಲೈಡ್ ಪ್ರೊಜೆಕ್ಟರ್, ರೇಡಿಯೋ, ಟೇಪ್ ರೆಕಾರ್ಡರ್, ಕ್ಯಾಸೆಟ್‌ಗಳು, ಟೆಲಿಸ್ಕೋಪುಗಳು, ಫ್ಯಾಕ್ಸ್ ಮಷೀನು, ಗಣಿತ ಕಿಟ್, ವಿಜ್ಞಾನ ಕಿಟ್, ಉಪಕರಣಗಳ ಕಿಟ್, ಕಂಪ್ಯೂಟರ್ ಮೃದು ಸಾಮಗ್ರಿ, ಹಾರ್ಡ್‌ವೇರ್, ಪ್ರಿಂಟರ್ ಇತ್ಯಾದಿ.

**ನಿರಂತರವಾಗಿ ಪೂರೈಸುವ ಖರ್ಚಿನ ವಿಭಾಗ:** 9ನೇ ಯೋಜನೆಯಲ್ಲಿ ದೇಶದ ಎಲ್ಲಾ ರಾಜ್ಯಗಳು ಹೆಚ್ಚುವರಿ ಅನುದಾನವನ್ನು ಪಡೆದುಕೊಂಡವು. ಆದರೆ ಹಲವು ರಾಜ್ಯಗಳು ಅದರಿಂದ ಹೊರಗುಳಿದವು. ಗೋವಾ, ಸಿಕ್ಕಿಂ, ತ್ರಿಪುರಾ ಮತ್ತು ಉತ್ತರಖಂಡ ರಾಜ್ಯಗಳು ಈ ಅನುದಾನ ಪಡೆದುಕೊಳ್ಳಲಿಲ್ಲ. ಈ ಹೆಚ್ಚುವರಿ ಹಣವು ಸಂಬಳಕ್ಕೆ ಕಾರ್ಯಕ್ರಮಗಳಿಗೆ, ವಸ್ತುಗಳು ಖರೀದಿಸಿ ಬಳಸಿದವು. 10ನೇ ಯೋಜನೆಯಲ್ಲಿ ಬಿಹಾರ, ಗೋವಾ, ಹರಿಯಾಣ ಜಮ್ಮು ಹಾಗೂ ಕಾಶ್ಮೀರ, ಮಹಾರಾಷ್ಟ್ರ ಮತ್ತು ಸಿಕ್ಕಿಂ ರಾಜ್ಯಗಳು ಮೇಲ್ಕಂಡ ವೆಚ್ಚಕ್ಕಾಗಿ ಅನುದಾನ ಪಡೆದಿವೆ.

**ಅನುದಾನ ಬಿಡುಗಡೆ ಹಾಗೂ ಬಳಕೆಯ ಸಮಸ್ಯೆಗಳು:** ಅನುದಾನ ಅನುಮೋದನೆ ಹಾಗೂ ಬಿಡುಗಡೆಯ ನಡುವೆ ಅಂತರವಿರುವುದರಿಂದ ಅನೇಕ ಡಯಟ್‌ಗಳು ಬಿಡುಗಡೆಗೊಂಡ ಹಣವನ್ನು ಉಪಯೋಗಿಸಲಾಗಿಲ್ಲ. ಅದರಲ್ಲಿಯೂ ಶಾಶ್ವತ ಅನುದಾನದ ಹಣವನ್ನು ಕರ್ನಾಟಕ, ಮಧ್ಯಪ್ರದೇಶ, ಒರಿಸ್ಸಾ, ಪುದುಚರಿ, ರಾಜಸ್ಥಾನ ಮತ್ತು ತ್ರಿಪುರಗಳು ಬಳಸಿಕೊಳ್ಳುವಲ್ಲಿ ವಿಫಲವಾಗಿದೆ.

**ಕಟ್ಟಡ (ಇನ್‌ಫ್ರಾಸ್ಟ್ರಕ್ಚರ್) ಭೌತಿಕ ಸೌಕರ್ಯಗಳು:** ಅನೇಕ ರಾಜ್ಯಗಳಲ್ಲಿ ಡಯಟ್‌ಗಳು ಹಾಗೂ ಡಿ ಆರ್ ಸಿ ಗಳು ಮೂಲಭೂತ ಸೌಕರ್ಯಗಳಿಲ್ಲದೆ ದಯನೀಯ ಸ್ಥಿತಿಯಲ್ಲಿ ಇವೆ. ಹಾಗೂ ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ. ಅವುಗಳ ಸಂಖ್ಯೆ ಈ ರೀತಿ ಇದೆ. ಕಂಸದಲ್ಲಿ ಸೂಚಿಸಿದ್ದು ಕಟ್ಟಡ ರಹಿತ ಡಯಟ್‌ಗಳು ಆಂಧ್ರ ಪ್ರದೇಶ (1), ಗುಜರಾತ್ (3), ಮಹಾರಾಷ್ಟ್ರ (9), ಪಂಜಾಬ್ (4), ತಮಿಳು ನಾಡು (1), ಉತ್ತರಪ್ರದೇಶ (1), ಪಶ್ಚಿಮ ಬಂಗಾಳ (1) ಗಳಲ್ಲಿ ಸೆಮಿನಾರ್ ವ್ಯವಸ್ಥೆ, ಕಂಪ್ಯೂಟರ್ ಕೋಣೆ, ಬೇರೆ ಬೇರೆ ಶಾಖೆಗಳಿಗೆ ಪ್ರತ್ಯೇಕವಾದ ಕೊಠಡಿ ವ್ಯವಸ್ಥೆ, ಅಧ್ಯಾಪಕರ ಕೊಠಡಿ, ಸಮಾರಂಭ ಹಾಲ್, ಕಾನ್ಫರೆನ್ಸ್ ಹಾಲ್, ತರಬೇತಿ ಕೊಠಡಿ, ಕಲಾ ಕೊಠಡಿ, ದೈಹಿಕ ಶಿಕ್ಷಣ ಕೊಠಡಿ ಹಾಗೆಯೇ ಉತ್ತಮ ಶುದ್ಧೀಕರಿಸಿದ ಕುಡಿಯುವ ನೀರು, ವಿದ್ಯುತ್ ಸರಬರಾಜು, ಅಧ್ಯಾಪಕರ ವಸತಿ ಗೃಹ ಬೇಲಿಗೆ ಕಾಂಪೌಂಡು, ವಾಹನ ಸೌಕರ್ಯಗಳು ಇಲ್ಲದೆ ಸೂಚಿತ ಅಗತ್ಯತೆಗಳಿಗೆ ಅವು ಸೂಕ್ತವಾಗಿಲ್ಲಾ ಹಾಗೂ ಅವುಗಳ ಕಾರ್ಯ ವೈಖರಿಯಲ್ಲೂ ವ್ಯತ್ಯಯವಿದೆ.

**ಪುನರ್‌ಅಗತ್ಯತೆಯ ಅನುದಾನ:** ಈ ತಲೆಬರಹದ ಕೆಳಗೆ, ಡಯಟ್‌ಗಳು, 2–3 ದಿನದ ಕಾರ್ಯಕ್ರಮಗಳನ್ನು ಮಾತ್ರ ಕೈಗೊಂಡಿವೆ. ಆದರೆ, 3 ವಾರದ ಕಾರ್ಯಕ್ರಮವನ್ನು ಅವರು ನಡೆಸಬೇಕಾಗಿದೆ. ಹಾಗೆಯೇ 'ಕ್ರಿಯಾ ಸಂಶೋಧನೆ' ಯ ಕಾರ್ಯಕ್ರಮಗಳು ಬಹಳ ಕಡಿಮೆ ಇವೆ ಮತ್ತು ಅದು ತೃಪ್ತಿದಾಯಕವಾಗಿಲ್ಲಾ. ಪೂರ್ವಾಂಚಲ ರಾಜ್ಯಗಳಿಗೆ 30% ಹೆಚ್ಚುವರಿಯಾದ ಅನುದಾನವನ್ನು ಬೇಡಿಕೆಯ ಹಿನ್ನೆಲೆಯಲ್ಲಿ ನೀಡುವ ಅವಶ್ಯಕತೆ ಇದೆ.

**ಡಯಟ್‌ನ ಸಿಬ್ಬಂದಿ ವರ್ಗದ:** ಸಂಶೋಧನೆ ಹಾಗೂ ಸರ್ವೆಗಳು ತಿಳಿಸುವ ಪ್ರಕಾರ, ಡಯಟ್ ಮತ್ತು ಡಿ ಆರ್ ಸಿಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಇದರಿಂದ ಕಾರ್ಯ ವೈಖರಿಯ ಮೇಲೆ ಹಾಗೂ ಯೋಜನೆಯ ಮೇಲೆ ಪ್ರಭಾವ ಬೀರಲಿದೆ, ಉದಾಹರಿಸಬಹುದಾದ ರಾಜ್ಯಗಳೆಂದರೆ, ಅರುಣಾಚಲ ಪ್ರದೇಶ, ಬಿಹಾರ, ಛತ್ತೀಸ್‌ಗಡ್, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ಮೇಘಾಲಯ, ಮಿಜೋರಾಂ, ಒರಿಸ್ಸಾ, ಪಂಜಾಬ್, ರಾಜಸ್ತಾನ್, ಸಿಕ್ಕಿಂ, ತಮಿಳುನಾಡು, ತ್ರಿಪುರಾ, ಉತ್ತರ ಪ್ರದೇಶ, ಉತ್ತರ ಖಂಡ, ವೆಸ್ಟ್ ಬೆಂಗಾಲ್ ಹಾಗೂ ಟ್ವಿನ್‌ಸಿಟಿ ಡೆಲ್ಲಿ.

**ಡಯಟ್‌ನ ಶೈಕ್ಷಣಿಕ ಕಾರ್ಯಕ್ರಮಗಳು:** ರಾಜ್ಯದ ಆದೇಶದನ್ವಯ ಹೆಚ್ಚು ಸಂಖ್ಯೆಯ ಡಯಟ್‌ಗಳು ಸೇವಾಪೂರ್ವ ತರಬೇತಿ ಕೋರ್ಸ್‌ಗಳನ್ನು ನಿರ್ವಹಿಸುತ್ತದೆ. ಅಸ್ಸಾಂ, ಅರುಣಾಚಲ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ಸೇವಾ ಪೂರ್ವ ತರಬೇತಿಯನ್ನು ಸ್ಥಗಿತಗೊಳಿಸುವ ಅವಶ್ಯಕತೆಯೂ ಇದೆ. ಉತ್ತರ ಪ್ರದೇಶವು ಎರಡು ರೀತಿಯ ಕಾರ್ಯಕ್ರಮಗಳನ್ನು ಈ ಸೇವಾ ಪೂರ್ವ ತರಬೇತಿಯಲ್ಲಿ ನೀಡುತ್ತದೆ. ಒಂದು 'ವಸಿಷ್ಠ ಬೇಸಿಕ್ ತರಬೇತಿ ಕೋರ್ಸ್' ಮತ್ತು ಎರಡು 'ಉರ್ದು ಬೇಸಿಕ್ ತರಬೇತಿ.'

ವಸಿಷ್ಠ ಬೇಸಿಕ್ ತರಬೇತಿಯು ಬಿ.ಎಡ್. ಮಾಡಿರುವ ಶಿಕ್ಷಕರಿಗಾಗಿ ಇದೆ, 6 ತಿಂಗಳ ಕೋರ್ಸ್ ಇದು. ಉರ್ದು ಬೇಸಿಕ್ ತರಬೇತಿಯು, ಬಿ.ಎ. ಮಾಡಿರುವ ಉರ್ದುವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿರುವವರಿಗೆ ಇದು ಎರಡು ವರ್ಷಗಳ ಕೋರ್ಸ್ ಆಗಿದೆ. ತ್ರಿಪುರ ರಾಜ್ಯದಲ್ಲಿ ಆರು ತಿಂಗಳ ಬ್ರಿಜ್ ಕೋರ್ಸನ್ನು ತರಬೇತಿ ರಹಿತ ಶಿಕ್ಷಕರಿಗೆ ನಡೆಸಲಾಗುತ್ತದೆ. ಜೊತೆಗೆ ಪ್ರಾಥಮಿಕ ಶಿಕ್ಷಕರಿಗೆ ಸತತವಾಗಿ ಒಂದು ವರ್ಷದ ಕೋರ್ಸ್‌ಗಳನ್ನು ನಡೆಸುತ್ತದೆ. ಉತ್ತರ ಖಂಡದ ಡಯಟ್‌ನಲ್ಲಿ ಬಿ.ಟಿ.ಸಿ. ಎಂಬ ಎರಡು ವರ್ಷದ ಕೋರ್ಸ್ ನಡೆಯುತ್ತದೆ. ಇದರ ಜೊತೆಗೆ ಶಿಕ್ಷಾಮಿತ್ರ ಎಂಬ ತರಬೇತಿಯನ್ನೂ ಸಹ ನಡೆಸುತ್ತಿದೆ.

Digitised by Bharatavani, CIIL

ಅನೇಕ ರಾಜ್ಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು 50ಕ್ಕೆ ನಿಗದಿಗೊಳಿಸಲಾಗಿದ್ದು ನಂತರ 200 ವಿದ್ಯಾರ್ಥಿಗಳಿಗೆ ಕಲಿಯಲು ಅವಕಾಶ ಕಲ್ಪಿಸಿಕೊಡಲಾಗಿದೆ. ಈ ಹೆಚ್ಚುವರಿ ಸಂಖ್ಯೆಯು ಹೆಚ್ಚುವರಿ ಮಾನವ ಸಂಪನ್ಮೂಲವನ್ನು ಹಾಗೂ ಕಟ್ಟಡ ಇನ್ನಿತರ ವ್ಯವಸ್ಥೆಯನ್ನು ಬಯಸುತ್ತದೆ. ಹರಿಯಾಣ ರಾಜ್ಯದಲ್ಲಿ ಡಿ.ಎಡ್. ಕೋರ್ಸ್‌ಗೆ ಪದವೀಧರರಿಗೆ ಪ್ರವೇಶ ನೀಡುತ್ತಿದೆ. ಇದಕ್ಕೆ ಮೊದಲು 10+2 ಹಂತಕ್ಕೆ ನಂತರ ಡಿ.ಎಡ್.ಗೆ ಪ್ರವೇಶ ಪಡೆಯಬಹುದಾಗಿತ್ತು. ಎನ್.ಸಿ.ಟಿ.ಇ.ಯ ನಿಯಮಾನುವಳಿಯ ಪ್ರಕಾರ ಡಿ.ಎಡ್. ಪ್ರವೇಶಕ್ಕೆ +2 ಆಗಿರಬೇಕು. ಸಿಕ್ಕಿಂ ರಾಜ್ಯದಲ್ಲಿ 50 ವಿದ್ಯಾರ್ಥಿಗಳಿಗೆ ಅವಕಾಶ ಇದ್ದರೂ ಕೇವಲ 27 ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದರು. ಇದಕ್ಕಿಂತಲೂ ಕಡಿಮೆ ಪ್ರವೇಶವು ಅರುಣಾಚಾಲ ಪ್ರದೇಶದಲ್ಲಿ ಕಂಡುಬಂದಿದೆ. 1 ರಿಂದ 10 ವಿದ್ಯಾರ್ಥಿಗಳು ಮಾತ್ರ ಡಿ.ಎಡ್.ಪ್ರವೇಶ ಪಡೆದಿದ್ದಾರೆ. ಹಾಗೆಯೇ ಬಿ.ಆರ್.ಸಿ & ಸಿ.ಆರ್.ಸಿಗಳ ಸಾಮರ್ಥ್ಯದ ಪ್ರಯತ್ನಗಳು ಮತ್ತು ಕಾರ್ಯಕ್ರಮಗಳು ಅತ್ಯಂತ ಕಳಪೆಯೂ ಎಂದು ಹೇಳಬಹುದು.

**ಸೇವಾನಿರತ: ಪಠ್ಯವಸ್ತುವಿನ ವಿಕಾಸ ಮತ್ತು ಬೆಳವಣಿಗೆ ಬೋಧನೆ–** ಕಲಿಕೆಯ ಸಾಮಗ್ರಿಗಳ ವಿಕಾಸ, ಕ್ರಿಯಾ ಸಂಶೋಧನೆ ಸಮುದಾಯಕ್ಕೆ ಆಧಾರ ನೀಡಬಲ್ಲ ಕಾರ್ಯಕ್ರಮಗಳು ಮತ್ತು ಬಿ.ಆರ್.ಸಿ, ಸಿ.ಆರ್.ಸಿ.ಗಳ ಸಹಸಂಚಾಲಕರುಗಳಿಗೆ, ಹಾಗೆಯೇ ಶಿಕ್ಷಕರಿಗೆ, ತರಬೇತಿ ರಹಿತ ಶಿಕ್ಷಕರಿಗೆ, ಅರೆ ಶಿಕ್ಷಕರಿಗೆ, ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವುದು. ಡಯಟ್‌ನ ಮುಖ್ಯ ಜವಾಬ್ದಾರಿಯಾಗಿದೆ. ಈ ಕಾರ್ಯಕ್ರಮಗಳಲ್ಲಿ ಉತ್ತಮವಾಗಿ ಹಾಗೂ ನಿರಂತರವಾಗಿ ನಡೆದುಕೊಂಡು ಬರುತ್ತಿರುವ ಕಾರ್ಯಕ್ರಮವೆಂದರೆ ಸೇವಾದರ್ಶನ ನೀಡುವಂತಹ ಕಾರ್ಯಕ್ಷಮತೆಯು ಡಯಟ್ ಸಿಬ್ಬಂದಿಗೆ ಇಲ್ಲದಿರುವುದರಿಂದ ಆ ಕ್ಷೇತ್ರದಲ್ಲಿ ದುರ್ಬಲವಾಗಿದೆ. ಜೊತೆಗೆ ಶಾಶ್ವತವಾದ ಸಿಬ್ಬಂದಿ ನೇಮಕಾತಿ ಇರದೆ ರಾಜ್ಯದ ವರ್ಗಾವಣೆಯ ನಿಯಮ ಕೂಡ ಡಯಟ್‌ನಲ್ಲಿ ಉತ್ತಮ ಗುಣಾತ್ಮಕತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ದೊರಕಿದ ರಾಷ್ಟ್ರೀಯ ಮಾಹಿತಿಯ ಪ್ರಕಾರ ಡಯಟ್‌ನ ಸಿಬ್ಬಂದಿಯ ಕೊರತೆ ಮತ್ತು ಸಾಗಾಣಿಕೆಯ ವ್ಯವಸ್ಥೆಯ ಕೊರತೆಯಿಂದ ಡಯಟ್‌ನ ಸಿಬ್ಬಂದಿಯವರು ಹಲವಾರು ಕಾರ್ಯಕ್ರಮಗಳನ್ನು ವೀಕ್ಷಿಸಿ ಪುನರ್‌ಬಲನ ನೀಡಲು ಸಾಧ್ಯವಾಗುತ್ತಿಲ್ಲ. ಅದರಲ್ಲಿಯೂ ಎಸ್.ಎಸ್.ಎ.ಡಯಟ್, ಡಿ.ಪಿ.ಓ. ಮಾಡುವಂತಹ ಅನೇಕ ಕಾರ್ಯಕ್ರಮಗಳಾಗಿರಬಹುದು. ಹಾಗಾಗಿ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಗುಣಾತ್ಮಕತೆಯನ್ನು ತರುವ ಪ್ರಯತ್ನವು ನಿರೀಕ್ಷೆಗಿಂತ ದೂರದಲ್ಲಿದೆ. ಹಾಗೆಯೇ ಹಲವು ರಾಜ್ಯಗಳು ವಿಶಾಲ ಪ್ರದೇಶವನ್ನು ಹೊಂದಿರುವುದರಿಂದ ಸಂಸ್ಥೆಯೇ ಈ ಎಲ್ಲಾ ಕಾರ್ಯಕ್ರಮಗಳನ್ನು ನಿಯಂತ್ರಿಸುವುದದನ್ನು ಆಯೋಜಿಸುವುದನ್ನು ನಿರ್ವಹಿಸಬೇಕಾಗುತ್ತದೆ. ಅಂತಹ ರಾಜ್ಯಗಳೆಂದರೆ ಆಂಧ್ರಪ್ರದೇಶ, ಅಸ್ಸಾಂ, ಬಿಹಾರ್, ಹರಿಯಾಣ, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ಪಂಜಾಬ್, ರಾಜಸ್ಥಾನ, ತಮಿಳುನಾಡು, ಉತ್ತರಪ್ರದೇಶ, ಉತ್ತರ್ ಖಂಡ ಹಾಗೂ ಪಶ್ಚಿಮ ಬಂಗಾಳ. ಇಲ್ಲಿ ಸಂಸ್ಥೆಗಳು ದೂರವಿರುವ ಕಾರಣ ಒಟ್ಟಾರೆ ನಿಯಂತ್ರಣವಾಗುತ್ತಿಲ್ಲ. ಪ್ರಾಥಮಿಕ ಶಿಕ್ಷಣವು ರಾಷ್ಟ್ರದ ಬುನಾದಿಯಾಗಿದೆ. ಈ ಶಿಕ್ಷಣವನ್ನು ನೀಡುತ್ತಿರುವ ಶಿಕ್ಷಕರ ತರಬೇತಿ ಹಾಗೂ ಶಿಕ್ಷಕರ ಸಂಪನ್ಮೂಲವನ್ನು ವೃದ್ಧಿಸುವ ಕಾರ್ಯದಲ್ಲಿ ಡಯಟ್‌ಗಳ ಪಾತ್ರ ಸ್ತುತ್ಯಾರ್ಹವಾಗಿದೆ.

–ವಿ.ದೇ.

## ಜೀನ್ ಜೇಕ್ವಿಸ್‌ರೂಸೋ

ಹದಿನೆಂಟನೇ ಶತಮಾನದ ಪ್ರಮುಖ ತತ್ವಜ್ಞಾನಿ ಶಿಕ್ಷಣತಜ್ಞ, ಬರಹಗಾರ ಜೀನ್ ಜೇಕ್ವಿಸ್ ರೂಸೋ ಸ್ವಿಟ್ಜರ್‌ಲೆಂಡಿನ 'ಜಿನಿವಾ'ದಲ್ಲಿ ಐಸಾಕ್ ರೂಸೋ ಮತ್ತು ಸುಜನ್ನೆ ಬೆರ್ನಾರ್ಡ್ ದಂಪತಿಗಳ ಮಗನಾಗಿ 1712 ಜೂನ್ 28ರಂದು ಜನಿಸಿದ. 'ಮನುಷ್ಯ ಹುಟ್ಟುವಾಗ ಸ್ವತಂತ್ರ'. 'ಆದರೆ ಎಲ್ಲೆಡೆ ಆತ ಸರಪಳಿಗಳಲ್ಲೇ ಇದ್ದಾನೆ', 'ತನ್ನ ಕೊಠಡಿಯ ಕಿಟಕಿಯ ಬಾಗಿಲು ಮುರಿದುದರ ಅನುಭವ ಅವನಿಗಾಗಲಿ', "ಹರಿವ ಹಾವನ್ನು ಹಿಡಿಯಲಿ, ಉರಿವ ಬೆಂಕಿಯನ್ನು ಮುಟ್ಟಲಿ" –ಮುಂತಾದ ತೀಕ್ಷ್ಣವಾಕ್ಯಗಳನ್ನು ಬಳಕೆ ಮಾಡಿದ ರೂಸೋನ 'ಅರ್ಧ–ಸತ್ಯ'ಗಳು ಸರಿಸುಮಾರು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಚರ್ಚಿತ ವಿಷಯವಾದವು; ಇಂದಿಗೂ 'ಶಿಶು ಕೇಂದ್ರಿತ ಶಿಕ್ಷಣ'ದ ಯಾವುದೇ ಪ್ರಸ್ತಾಪಕ್ಕೆ 'ರೂಸೋ'ನ ಹೆಸರು ಅಡಿಟಿಪ್ಪಣಿಯಲ್ಲಿ ಉಲ್ಲೇಖಿತವಾಗಿಯೇ ಇರುತ್ತದೆ. 'ಎಮಿಲಿ' ಎಂಬ ಕಾಲ್ಪನಿಕ ವ್ಯಕ್ತಿಯ ಶಿಕ್ಷಣವನ್ನು ಕುರಿತು ಐದು ಸಂಪುಟಗಳಲ್ಲಿ ಸುದೀರ್ಘವಾಗಿ ಪ್ರಸ್ತಾಪಿಸಿರುವ ರೂಸೋನ ಸಾಮಾಜಿಕ ಒಡಂಬಡಿಕೆಗಳು "ಫ್ರೆಂಚ್‌ಕ್ರಾಂತಿ"ಗೆ ಪ್ರಚೋದನಕಾರಿಯಾದವು.



ಜೀನ್ ಜೇಕ್ವಿಸ್‌ರೂಸೋ

ಜನಿಸಿದ ಒಂಬತ್ತನೇ ದಿನಕ್ಕೆ ತಾಯಿಯನ್ನು ಕಳೆದುಕೊಂಡ 'ನತದೃಷ್ಟ' ರೂಸೋನನ್ನು ತಂದೆ ಹಾಗೂ ಸೋದರತ್ತೆ ಪಾಲನೆಮಾಡಿದರು. ಗಡಿಯಾರ ತಯಾರಿಕನಾಗಿದ್ದ ಐಸಾಕ್‌ರೂಸೋ ಮಧ್ಯಮ ವರ್ಗದ ಸಂಸಾರಿ. ಕುಶಲ ಕರ್ಮಿಯೂ, ಸುಶಿಕ್ಷಿತನೂ, ಸಂಗೀತಪ್ರಿಯನೂ ಆದ ಐಸಾಕ್ ಮಗನಲ್ಲಿ ಓದಿನ ಆಸಕ್ತಿ ಮೂಡಿಸಿ ಬೆಳೆಸಿದ. ರಾತ್ರಿ ಊಟವಾದ ಮೇಲೆ 'ರಂಜನೀಯ ಪುಸ್ತಕಗಳ ಓದು ಸಾಗುತ್ತಿತ್ತು; ಅವುಗಳನ್ನು ಮನರಂಜನೆಗಿಂತ ಹೆಚ್ಚಾಗಿ ಅದರಲ್ಲಿನ ರಮ್ಯತೆ ಮತ್ತು ಸಾಹಸಕ್ಕಾಗಿ ಓದುತ್ತಿದ್ದುದಾಗಿ ರೂಸೋ ತನ್ನ ಜೀವನ ಚರಿತ್ರೆ 'ತಪ್ಪೊಪ್ಪಿಗೆ' ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.

ತಂದೆಯ ಗಡಿಯಾರದಂಗಡಿಯಲ್ಲಿ ಕುಳಿತು ಪ್ಲುಟಾರ್ಕ್ (ಕ್ರಿ.ಶ. 46–140) ಬರೆದ 'ಗ್ರೀಕ್ ಮತ್ತು ರೋಮನ್ ಶ್ರೇಷ್ಠರ ಕೃತಿಯನ್ನು ಓದಿದ ಜೆ.ಜೆ. ರೂಸೋಗೆ ಔಪಚಾರಿಕ ಶಿಕ್ಷಣವಾಗಲಿ ಎಳೆತನದಲ್ಲಿ ದೊರೆಯಬೇಕಾದ ಮಾತೃವಾತ್ಸಲ್ಯವಾಗಲಿ, ಪಿತೃವಾತ್ಸಲ್ಯವಾಗಲಿ ದೊರೆಯಲಿಲ್ಲ. ರೂಸೋ ತನ್ನ ಹತ್ತನೇ ವಯಸ್ಸಿನಲ್ಲಿ ತಂದೆಯಿಂದ ದೂರವಾಗಬೇಕೆಂದು ಜಿನಿವಾದ ಹೊರವಲಯದ ಪುಟ್ಟ ಹಳ್ಳಿಯಲ್ಲಿ ತಾಯಿಯ ಅಣ್ಣನ ಮನೆಯಲ್ಲಿ ಆಶ್ರಯ ಪಡೆದ. ಓರಿಗೆಯ ಅಬ್ರಾಹಂ ಬರ್ನಾರ್ಡ್‌ನೊಂದಿಗೆ ಗಣಿತ, ಚಿತ್ರ ರಚನೆಗಳನ್ನು ಸ್ವಲ್ಪಮಟ್ಟಿಗೆ ಕಲಿತ. ಧಾರ್ಮಿಕ ಕಾರ್ಯಾಚರಣೆ ಸೇವೆಯನ್ನು ಕಂಡು ತೀವ್ರ ಪ್ರಭಾವಿತನಾಗಿದ್ದ ರೂಸೋ ಪ್ರಾಟೆಸ್ಟಂಟ್ ಚರ್ಚ್ ಸೇರಲು ಬಯಸಿದ್ದರೂ ಸೇರಲಿಲ್ಲ. ಹದಿಮೂರನೇ ವಯಸ್ಸಿನಲ್ಲಿ 'ನೋಟರಿ'ಯವರಲ್ಲಿ ಕೆಲಕಾಲ ಕಾರ್ಯನಿರ್ವಹಿಸಿದ ಈತ ಲೋಹ ಕೆತ್ತನೆ ಕೆಲಸಕ್ಕೆ ಸೇರಿದ. ಇಲ್ಲಿನ ನಿರ್ದಯಿ ಯಜಮಾನನಿಂದ ಥಳಿಸಿಕೊಳ್ಳುತ್ತಿದ್ದರೂ ಅಪ್ರಮಾಣಿಕನಾಗುತ್ತಾ ದುಷ್ಟಗಳಿಗೆ ಬಲಿಯಾದ. ಅಲ್ಲಿಂದ ತಪ್ಪಿಸಿಕೊಂಡು ಜಿನಿವಾಕ್ಕೆ ಹೋದರೆ ಅಲ್ಲಿ ಕರ್ಫ್ಯೂ ಜಾರಿಯಲ್ಲಿತ್ತು; ಸಿಕ್ಕವರೊಂದಿಗೆ ಪ್ರಯಾಣ/ಪ್ರವಾಸ ಹೊರಟ ರೂಸೋ ಸ್ವಿಡ್ಜರ್‌ಲೆಂಡಿನ ಸವಾಯ್ ಪ್ರಾಂತ್ಯಕ್ಕೆ ಬಂದು ಅಲ್ಲಿನ ರೋಮನ್ ಕ್ಯಾಥೋಲಿಕ್ ಪಾದ್ರಿಯಲ್ಲಿ ಆಶ್ರಯಪಡೆದ. 1728ರ

Digitised by Bharatavani, CIIL

ಪಾಮ್‌ಸಂಡೆ (ಕ್ರೈಸ್ತೋತ್ಸವ) ದಲ್ಲಿ ಫ್ರಾಂಕ್ ಕೊಯಿಸ್‌ಲೂ ಡಿ ವಾರನ್ಸ್ (ಮಡಾಮ್ ವಾರೆನ್ಸ್) ರೊಂದಿಗೆ ಸ್ನೇಹವಾಗಿ, ಆಕೆಯ ಮನೆಯಲ್ಲೇ ಇದ್ದು ಸಂಗೀತಾಭ್ಯಾಸ ಮಾಡಿದ. ರೂಸೋಗೆ 20 ವರ್ಷ; ವಾರನ್ಸ್ ರೂಸೋನಲ್ಲಿ ಅನುರಕ್ತಳಾದಳು. ಆಕೆ ತನ್ನ ಮನೆಯ ಪಾರುಪತ್ತೆಗಾರನ 'ಸಖ್ಯ'ವನ್ನೂ ಹೊಂದಿದ್ದು ರೂಸೋಗೆ ಮುಜುಗರವಾಯಿತು. ಆದರೂ ಈಕೆಯ ಬಗ್ಗೆ ಗೌರವಯುತವಾಗಿ "ಮಾಮನ್" ಎಂದೇ ರೂಸೋ ಕರೆದಿದ್ದಾನೆ. ಈಕೆಯ ಪುಸ್ತಕ ಭಂಡಾರ ಹಾಗೂ ಸಂಗೀತ ಪ್ರೇಮ, ವಿದ್ಯಾವಂತರ ಕೂಟಗಳು 'ತನಗೇನೋ ಕಾಯಿಲೆ' ಎಂಬ ಭಯದಿಂದ ಅಧ್ಯಯನವನ್ನು ಅಲಕ್ಷ್ಯ ಮಾಡಿದ್ದ ರೂಸೋಗೆ ಕಲಿಕೆಗೆ ತನ್ಮೂಲಕ ಗ್ರಂಥ ರಚನೆಗೆ, ಗಣಿತ, ಸಂಗೀತಾಭ್ಯಾಸಕ್ಕೆ ಪ್ರೇರೇಪಿಸಿದವು. "1732ರಲ್ಲಿ 'ಚೇಂಬರಿ'ಯಲ್ಲಿ ಸಂಗೀತಶಿಕ್ಷಕನಾಗಿಯೂ ಕಾರ್ಯ ನಿರ್ವಹಿಸಿದ. 1740ರಲ್ಲಿ ಲೈಆನ್ ಎಂಬಲ್ಲಿನ ಎರಡು ಗಂಡುಮಕ್ಕಳ ಟ್ಯೂಟರ್‌ಆಗಿ ವಿಫಲನಾದ. 1742ರಲ್ಲಿ ಪ್ಯಾರಿಸ್‌ಗೆ ಹಿಂದಿರುಗಿದ ರೂಸೋ ಅಲ್ಲಿನ ಅಕಾಡೆಮಿ ಆಫ್ ಸೈನ್ಸ್‌ನಲ್ಲಿ ಸಂಗೀತದ ಸ್ವರ ಸ್ಥಾಯಿ ಸಂಖ್ಯಾ ನಮೂನೆ ಬಗ್ಗೆ ಪ್ರಬಂಧ ಮಂಡಿಸಿದಾಗ ಮಾನ್ಯತೆ ಪಡೆದ. ಅದರಲ್ಲೂ 'ಅದೃಷ್ಟ' ಖುಲಾಯಿಸಲಿಲ್ಲ. ಕಾಮ್ಟೆಡಿಮ್ಯಾರ್‍ರೈ ಎಂಬ ವೆನಿಸ್ ರಾಯಭಾರಿಯ ಕಾರ್ಯದರ್ಶಿಯಾದ ರೂಸೋಗೆ (1743–44) ಕಡಿಮೆ ಸಂಭಾವನೆ ಇದ್ದಿತಾದರೂ ಇಟಾಲಿಯನ್ ಸಂಗೀತ–ಅದರಲ್ಲೂ ಅಪೇರ (ಗೀತ ನಾಟಕ)ಗಳಲ್ಲಿ ಆಸಕ್ತಿ ಮೂಡಿತು. ನಿಗದಿತ ಕಾಲಕ್ಕೆ ವೇತನವಿರದೇ ಬರಿಕೈಯಲ್ಲಿ ಪ್ಯಾರಿಸ್‌ಗೆ ಬಂದ ಜೆಜೆ ರೂಸೋಗೆ 1745ರಲ್ಲಿ 'ತೆರೆಸಾ ಲೆ ಮಾಸಿಯರ್' ಎಂಬ ಮಹಿಳೆಯೊಂದಿಗೆ ಸಖ್ಯ ಬೆಳೆಯಿತು. ನಿರಕ್ಷರ ಕುಕ್ಷಿಯಾದ ಈಕೆಯೊಂದಿಗೆ ಒಟ್ಟಿಗೆ ಇರತೊಡಗಿದ. ಅವಿವಾಹಿತ ರೂಸೋ 1746 ರಿಂದ 52ರ ಅವಧಿಯಲ್ಲಿ ಪಡೆದ ಐದು ಮಕ್ಕಳನ್ನು ಸಾಕಲಾಗದೆ ಶಿಶುಪಾಲನಾ ಆಸ್ಪತ್ರೆಗೆ ನೀಡಿದ. 1768 ಆಗಸ್ಟ್ 17ರಂದು ಆಕೆಯನ್ನು ಮದುವೆಯಾದರೂ ಅದಕ್ಕೆ ಕಾನೂನಿನ ಮಾನ್ಯತೆ ದೊರೆಯಲಿಲ್ಲ. ಈ ವಿಷಯದ ಬಗ್ಗೆ ಅನೇಕ ಊಹಾಪೋಹ ಹಾಗೂ ಆಕ್ಷೇಪಣೆಗಳಿವೆ.

ಫ್ರೆಂಚ್ ತತ್ತ್ವಜ್ಞಾನಿ, ಕಲಾವಿಮರ್ಶಕ ಹಾಗೂ ಲೇಖಕನಾದ ಡಿನಿಸ್‌ಡಿಡಾರೋ ಅವರ ಸಖ್ಯ ಹಾಗೂ 1749ರಲ್ಲಿ ಪ್ರತಿದಿನ ಅವರೊಂದಿಗೆ ನಡೆಯುತ್ತಿದ್ದ ಭೇಟಿಯಿಂದಾಗಿ ಡಿಡಾರೋ ಸಂಪಾದಿಸುತ್ತಿದ್ದ ವಿಶ್ವಕೋಶಕ್ಕೆ ರೂಸೋ ಸಂಗೀತದ ಬಗ್ಗೆ ಲೇಖನಗಳನ್ನು ಬರೆದ, ರೂಸೋನ ವಿಚಾರ ಧಾರೆಗೆ ಪೂರ್ವಬರಹಗಾರರೊಂದಿಗೆ ಆವೇಶಭರಿತ ಸಂವಾದ ಹಾಗೂ ಡಿಡಾರೋ ಅವರ 'ಶೋಧಿಸುವಿಕೆ' ಕಾರಣ ಎಂಬ ಮಾತಿದೆ. 1750ರಲ್ಲಿ ಡಿಜಾನ್ ಅಕೆಡಮಿಯಲ್ಲಿ ಕಲೆ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಮಂಡನೆಗೆ ಸಿದ್ಧಪಡಿಸಿದ 'ಕಲೆ ಮತ್ತು ವಿಜ್ಞಾನಗಳ ಅಭಿವೃದ್ಧಿಯು ನೈತಿಕವಾಗಿ ಪ್ರಯೋಜನಕಾರಿಯೆ? ಎಂಬ ಲೇಖನಕ್ಕೆ ಪ್ರಥಮ ಬಹುಮಾನ ರೂಸೋಗೆ ಪ್ರಾಪ್ತವಾಯಿತು; ಲೇಖನ ಪ್ರಕಟವಾಗಿ ಖ್ಯಾತಿಯೂ ಬಂದಿತು.

ಸಂಗೀತದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ರೂಸೋನ 'ಹಳ್ಳಿಯ ಕಣಿ ಹೇಳುವವ' ಗೀತನಾಟಕವು 1752ರಲ್ಲಿ ಫ್ರಾನ್ಸ್‌ನ ದೊರೆ 15ನೇ ಲೂಯಿಗೆ ಮೆಚ್ಚುಗೆಯಾಗಿ ಅವನು ರೂಸೋಗೆ ಜೀವನಪರ್ಯಂತ 'ಗೌರವವೇತನ' ನೀಡಿದ, ಅದನ್ನು ರೂಸೋ ನಿರಾಕರಿಸಿದ. 1754ರಲ್ಲಿ ಕ್ಯಾಲ್ವಿನಿಸಮ್ ಕ್ರಿಶ್ಚಿಯನ್ ಧರ್ಮದ ಒಂದು ಶಾಖೆಗೆ ಮರು ಮತಾಂತರ ಹೊಂದಿದ ರೂಸೋ ಜಿನೀವಾ ಪೌರತ್ವವನ್ನು ಅಧಿಕೃತವಾಗಿ ಪಡೆದ. ಮೇಡಂ ಡಿ ಎಪಿನಾಯೆ ರೂಸೋಗೆ ಆಶ್ರಯದಾತರಾದರು.

ರೂಸೋಗೆ ಸೊಫಿ ಎಂಬ ಯುವತಿಯೊಂದಿಗೆ ಹೊಂದಿದ್ದ ಭಾವನಾತ್ಮಕ ಅಪೂರ್ಣ ಸಂಬಂಧದ ಗೋಜಲು–ಗೊಂದಲಗಳ ನಡುವೆ ರಚಿಸಿದ 800 ಪುಟಗಳ ಕಾವ್ಯಾತ್ಮಕ 'ಜ್ಯುಲಿ ದಿ ನ್ಯೂ ಹೊಲಿಸ್' ಕಾದಂಬರಿ ಹೊರಬಂತು. ಡೆರಾಟ್‌ರವರಿಗೆ ಈ ವೇಳೆಗೆ ರೂಸೋನ ಬಗ್ಗೆ ಕೆಟ್ಟ ಅಭಿಪ್ರಾಯಮೂಡಿತ್ತು. ಇಂಥ ಪ್ರಸಂಗದಲ್ಲಿ ಲಕ್ಸೆನ್ ಬರ್ಗ್‌ನ ಡ್ಯೂಕ್ ಹಾಗೂ ರಾಜಕುಮಾರ ಡಿ ಕಾಂಟಿ ಅವನ ಬೆಂಬಲಕ್ಕಾದರು. ಏಪ್ರಿಲ್ 1762ರಲ್ಲಿ ರಾಜಕೀಯ ನ್ಯಾಯಗಳ ತತ್ವದ ಸಾಮಾಜಿಕ ಒಡಂಬಡಿಕೆಯನ್ನೂ, 1762ರ ಮೇ ತಿಂಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ 'ಎಮಿಲಿ ; ಆನ್ ಎಜುಕೇಷನ್'ನನ್ನು ಬರೆದ. ಎಮಿಲಿಯ 5ನೇ ಸಂಪುಟದಲ್ಲಿ 'ಕ್ರೈಸ್ತಪಾದರಿಗಳ' ಧರ್ಮಪ್ರಚಾರಕರ ವೃತ್ತಿಯಲ್ಲಿನ ನಿಷ್ಠೆಯು ಧಾರ್ಮಿಕ ನಂಬಿಕೆಗಳ ರಕ್ಷಣೆಗಾಗಿ ಇರಬೇಕು ಎನ್ನುವ ರೂಸೋ 'ಆಡಮ್‌ನ ಪಾತಕದಿಂದಾಗಿ ಸರ್ವರಿಗೂ ಜನ್ಮತಃ ಬರುವ ಸ್ವಭಾವ ಸಿದ್ಧವಾದ ಪಾತಿತ್ಯ ಹಾಗೂ ದೈವ ಪ್ರೇರಿತ ಅಂತರ್ಜ್ಞಾನ'ವನ್ನು ನಿರಾಕರಿಸಿದ. ಎಲ್ಲ ಧರ್ಮಗಳು ಸಮಾನವಾದ ಯೋಗ್ಯತೆ ಹೊಂದಿವೆ ಮತ್ತು ವ್ಯಕ್ತಿ ಯಾವ ಧರ್ಮದಲ್ಲಿ ಬೆಳೆದಿರುತ್ತಾನೋ ಅದೇ ಧರ್ಮವನ್ನು ಒಪ್ಪಿಕೊಳ್ಳುವಂತಿರಬೇಕೆಂದು ಪ್ರತಿಪಾದಿಸಿದ್ದಾನೆ. ಈ ಎಲ್ಲ ಕಾರಣಗಳಿಂದಾಗಿ ರೂಸೋನ ಪುಸ್ತಕಗಳನ್ನು ನಿಷೇಧಿಸಿದುದಲ್ಲದೇ ಜಿನೀವಾ, ಫ್ರಾನ್ಸ್‌ಗಳಿಂದ ಅವನನ್ನು 'ಗಡಿಪಾರು'ಮಾಡುವ ಆದೇಶವನ್ನು ಪ್ಯಾರಿಸ್‌ನ ಆರ್ಚ್‌ಬಿಷಪ್ ಹೊರಡಿಸಿದರು. ರೂಸೋನ ಪುಸ್ತಕಗಳನ್ನು ಬಹಿರಂಗವಾಗಿ ಸುಟ್ಟರಲ್ಲದೇ ಅವನ ಬಂಧನಕ್ಕೂ ಆಜ್ಞೆ ಹೊರಬಿತ್ತು. ಡ್ಯೂಕ್ ಹಾಗೂ ಪ್ರಿನ್ಸ್‌ಕಾಂಟಿ ನೆರವಿನಿಂದ ತನ್ನ ಪುಸ್ತಕಗಳೊಂದಿಗೆ ಸ್ವಿಡ್ಜರ್‌ಲೆಂಡಿನ ನ್ಯೂಚೇಟಲ್ ಜಿಲ್ಲೆಯ ಮೋಟಿಯರ್ಸ್‌ಗೆ ರೂಸೋ ಪರಾರಿಯಾದನು. 1765ರಲ್ಲಿ ಆಗ ಅಸ್ತಿತ್ವದಲ್ಲಿದ್ದ ಕಾರ್ಸಿಕನ್ ರಿಪಬ್ಲಿಕ್‌ನ ಸಂವಿಧಾನ ರಚಿಸಿದ. 1765 ಸೆಪ್ಟೆಂಬರ್ 6 ರಂದು ಮೇಟಿಯರ್ಸ್‌ನಲ್ಲಿದ್ದ ರೂಸೋನ ಮನೆಗೆ 'ಕಲ್ಲುಬಿತ್ತು'.

ಗ್ರೇಟ್ ಬ್ರಿಟನ್‌ನ ತತ್ವಜ್ಞಾನಿ ಹ್ಯೂಮ್‌ರ ಆಹ್ವಾನವು 'ನಿರಾಶ್ರಿತ'ನಾದ ರೂಸೋಗೆ ದೊರೆಯಿತು. 1766ರಲ್ಲಿ 'ಜುಗ್ ಡಿ ಜೀನ್‌ಜೆಕ್ವಾಸ್ ಡೈಲಾಗ್ಸ್' ಬರೆದ. 1771ರಲ್ಲಿ 'ತಪ್ಪೊಪ್ಪಿಗೆ' ಜೀವನ ವೃತ್ತಾಂತ ಬರೆದು ಮುಗಿಸಿದ. 1767ರಲ್ಲಿ ಬದಲಿ ಹೆಸರಿನಿಂದ ಫ್ರಾನ್ಸ್ ಸೇರಿದ ರೂಸೋ 1768ರಲ್ಲಿ ಥೆರಾಸಳನ್ನು ವಿವಾಹವಾದ. ಫ್ರಾನ್ಸ್ ಹಾಕಿದ್ದ ಪ್ರವೇಶ ನಿಷೇಧಾಜ್ಞೆ 1770ರಲ್ಲಿ ರೂಸೋ ಏನನ್ನೂ ಪ್ರಕಟಿಸಬಾರದೆಂಬ ಷರತ್ತಿನೊಂದಿಗೆ ತೆರವಾಯ್ತು. ರೂಸೋನ ಬರಹಗಳಲ್ಲಿ 'ನಾರ್ಸಿಸಸ್'ಎಂಬ ಸುಖಾಂತನಾಟಕ, 'ಮಾನವರಲ್ಲಿ ಅಸಮಾನತೆ' ಪ್ರಬಂಧ, 'ರಾಜಕೀಯ ಅರ್ಥಶಾಸ್ತ್ರ ವ್ಯಾಖ್ಯೆ', 'ಸವೋಯಾರ್ಡ್ ಪ್ರೀಸ್ಟ್‌ನ ಕ್ರೀಡ್,' 'ಪರ್ವತದಿಂದ ಬರೆದ ಪತ್ರಗಳು', 'ಭಾಷೆಯ ಉಗಮ', 'ಏಕಾಂಗಿ ಸಂಚಾರಿಯ ಕಲ್ಪನಾಲಹರಿ', 'ಹತ್ತು ಶ್ರೇಷ್ಠವರ್ಗದ ಧ್ಯಾನ' ಮುಂತಾದವು ಇವೆ. 'ತಪ್ಪೊಪ್ಪಿಗೆ' ಪ್ರಕಟವಾದದ್ದು ರೂಸೋ ಸತ್ತ ನಂತರ!

ಪ್ಯಾರಿಸ್‌ನಿಂದ ವಾಯುವ್ಯಕ್ಕೆ 28 ಮೈಲಿ ದೂರದಲ್ಲಿ ಅಲ್ಲಿನ ಎಸ್ಟೇಟ್‌ನಲ್ಲಿ ಅವನಿಗೆ ಆಶ್ರಯ ನೀಡಿದವರು ಗಿರಾರ್ಡಿನ್. ಆ ವೇಳೆಗೆ ಅನೇಕ ಜಂಜಾಟ, ಸ್ನೇಹಿತರಿಂದಲೇ ಅವಹೇಳನ ಹಾಗೂ ಸ್ವೇಚ್ಛಾವಿಹಾರಗಳಿಂದಾಗಿ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದ ರೂಸೋ ಪ್ರತಿದಿನವೂ ವಾಕಿಂಗ್ ಅಧ್ಯಯನ ಸಸ್ಯ ಶಾಸ್ತ್ರೀಯ ಕಾರ್ಯ ನಡೆಸುತ್ತಲೇ ಇದ್ದ. ಯಾರೋ ತನಗೇನೋ ಮಾಡುತ್ತಾರೆ ಎಂಬ ವಿಚಿತ್ರ ಭಯದಿಂದ ಇರುತ್ತಿದ್ದ ರೂಸೋ ಮಾನಸಿಕವಾಗಿ 1778ರ ಜುಲೈ 2 ರಂದು ಅಸ್ವಸ್ಥವಾಗಿದ್ದ ಮೆದುಳಿನ ರಕ್ತಸ್ರಾವದಿಂದ ನಿಧನ ಹೊಂದಿದ. ಎರ್ಮನಾನ್‌ವಿಲ್ಲೆಯಲ್ಲಿ ಆತನ ಸಮಾಧಿ ಮಾಡಲಾಯಿತು. 16 ವರ್ಷಗಳ ನಂತರ ಆ ಸಮಾಧಿಯಲ್ಲಿಯೇ ಶೇಷಭಾಗವನ್ನು 'ಫ್ರೆಂಚ್ ಮಹಾಪುರುಷರ ಸಮಾಧಿ ಸ್ಥಳವಾದ ರೂಸ್ಟಿಕ್ ಮಾದರಿಯ ಸಮಾಧಿ "ಪ್ಯಾನ್‌ಥಿಯೋನ್" ನಲ್ಲಿ ಮರು ಸಮಾಧಿ ಮಾಡಲಾಯಿತು. 1834ರಲ್ಲಿ ಜಿನೀವಾ ಸರ್ಕಾರ ರೂಸೋನ ಪ್ರತಿಮೆ ಸ್ಥಾಪಿಸಿತು. 2002ರಿಂದ ಅವನ ಜನ್ಮಸ್ಥಳದಲ್ಲಿ ಎಸ್ಟೇಸ್ ರೂಸೋ 30 ನಿಮಿಷಗಳ ದೃಕ್‌ಶ್ರವಣ ಕಾರ್ಯಕ್ರಮ ಏರ್ಪಡಿಸಿದೆ. ಮ್ಯೂಸಿಯಂ ನಿರ್ಮಾಣವಾಗಿದೆ.

Digitised by Bharatavani, CIIL

**ರೂಸೋನ ಕೆಲವು ಚಿಂತನೆಗಳು ಹಾಗೂ 'ಶಿಕ್ಷಣ'ಕ್ಕೆ ಕೊಡುಗೆ :** 'ನೆಲದ ಒಂದಿಷ್ಟು ಭಾಗಕ್ಕೆ ಬೇಲಿ ಹಾಕಿದ ಮೊದಲನೇ ಮಾನವ "ಇದು ನನ್ನದು" ಎಂದ; ಅವನೇ ನಾಗರಿಕ ಸಮಾಜದ ಆದ್ಯ ಪ್ರವರ್ತಕ' ಎನ್ನುತ್ತಾನೆ ರೂಸೋ. 'ನೈತಿಕತೆ'ಯು ಸಮಾಜದ ಸೃಷ್ಟಿಯಾದರೂ ಅದು 'ಅಂತರ್ಗತ' ಎನ್ನುವ ಅರ್ಥದಲ್ಲಿ 'ಪ್ರಕೃತಿದತ್ತ'ವಾದದ್ದು; ಒಳ್ಳೆಯದನ್ನು ಮಾಡುತ್ತಾ ಇರುವುದರಿಂದ ನಾವೂ ಒಳ್ಳೆಯವರಾಗುತ್ತೇವೆ.

ಸ್ವತಂತ್ರವಾಗಿ ಜನಿಸಿದರೂ ಸಕಲದಿಕ್ಕುಗಳಿಂದಲೂ ಬಂಧಿತನಾದ ಮಾನವ. ಯಾರು ಕನಿಷ್ಠ ಪ್ರಮಾಣದಲ್ಲಿ ಕಾರ್ಪಣ್ಯ ಪಡುವನೋ ಅವನು ಪರಮ ಸುಖಿ, ಯಾರು ಕನಿಷ್ಠ ಪ್ರಮಾಣದಲ್ಲಿ ಸಂತೋಷಿಸುವನೋ ಅವನು ಪರಮದುಃಖಿ. ಪ್ರಕೃತಿ ಎಂದೂ ಮೋಸ ಮಾಡುವುದಿಲ್ಲ, ಯಾವಾಗಲೂ ನಮಗೆ ನಾವೇ ಮೋಸ ಮಾಡಿಕೊಳ್ಳುತ್ತೇವೆ. ಪ್ರತಿಯೊಂದು ವಸ್ತುವೂ ತನ್ನ ನಿರ್ಮಾತೃವಿನಿಂದ (ಸೃಷ್ಟಿಕರ್ತ) ಬರುವಾಗ ಉತ್ತಮವಾದುವೇ ಆಗಿರುತ್ತದೆ; ಅದು ಮನುಷ್ಯನ ಕೈಗಳಲ್ಲಿ 'ಅವನತಿ'ಹೊಂದುತ್ತದೆ. ಮಾನವ ಒಂದು ಮಣ್ಣು ಮತ್ತೊಂದು ಮಣ್ಣಿನ ಉತ್ಪನ್ನವನ್ನು ನೀಡಲು, ಒಂದು ವೃಕ್ಷ ಮತ್ತೊಂದರ ಫಲ ಬಿಡುವಂತೆ ಬಲಾತ್ಕರಿಸುತ್ತಾನೆ. ಮನುಷ್ಯನು ಕಾಲ, ಸ್ಥಳ ಮತ್ತು ನಿಸರ್ಗ ನಿಬಂಧನೆಗಳನ್ನು ಗಾಬರಿಹುಟ್ಟಿಸುವಷ್ಟು ಅಸ್ತವ್ಯಸ್ತಗೊಳಿಸುತ್ತಾನೆ. ಅವನ ತನ್ನ ನಾಯಿ, ಕುದುರೆ ಹಾಗೂ ಸೇವಕರನ್ನು ಸಹ ಹದಗೆಡಿಸುತ್ತಾನೆ... ಎಲ್ಲವನ್ನೂ ವಿರೂಪಗೊಳಿಸುತ್ತಾನೆ. ತನ್ನನ್ನೂ ತನ್ನ ಕುಡಿಯನ್ನೂ ಸೇರಿದಂತೆ ಯಾವುದನ್ನೂ ಪ್ರಕೃತಿದತ್ತಸ್ಥಿತಿಯಲ್ಲಿ ಮುಂದುವರಿಯಲು ಬಿಡುವುದಿಲ್ಲ. ಅವನಿಗಾಗಿ 'ಮನುಜಕುಲ' ಸವಾರಿಯ ಕುದುರೆಯಂತೆ ತರಬೇತಾಗಬೇಕು, ಅವನು ತೋಟದಲ್ಲಿನ ಮರಗಳಂತೆ ಅಪೇಕ್ಷಿತ ವಿನ್ಯಾಸದಲ್ಲಿ ರೂಪುಗೊಳ್ಳಬೇಕು.

ಈ ರೀತಿಯ ವಿಚಾರಧಾರೆಯನ್ನು ಪ್ರವಹಿಸುವ ರೂಸೋ "ನೀವು 'ಮಾನವ' ನನ್ನು ಮತ್ತು 'ನಾಗರಿಕ' ನನ್ನು ನಿರ್ಮಾಣ ಮಾಡುವುದರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು ಏಕೆಂದರೆ ಈ ಎರಡನ್ನೂ ಏಕಕಾಲದಲ್ಲಿ ಸಾಧಿಸಲಾಗುವುದಿಲ್ಲ. ಎಲ್ಲ ದುರ್ಗುಣಗಳು ಬಲಹೀನತೆಯಿಂದ ಬರುತ್ತವೆ. ಆದ್ದರಿಂದ ಮಗುವನ್ನು ಬಲಾಢ್ಯನನ್ನಾಗಿಸಿ. ಅವನು ಒಳ್ಳೆಯವನಾಗಿರುತ್ತಾನೆ. ನೋಡುವ, ಆಲೋಚಿಸುವ, ಸಂವೇದಿಸುವ ವರ್ತನೆಗಳು ಹೊಂದಿಕೆಯಾಗುವ ತನ್ನದೇ ರೀತಿಯಲ್ಲಿರುತ್ತವೆ. ಮಾನವನ ಹೃದಯದಲ್ಲಿ ಸ್ವಭಾವಸಿದ್ಧವಾಗಿ ದುರ್ನಡತೆ ಇರುವುದಿಲ್ಲ. ಶಿಕ್ಷಣದ ಗುರಿ ಯಾವುದೆಂದರೆ ಅದು ನಿಸರ್ಗದ ಗುರಿ. ಶಿಕ್ಷಣವು ಪ್ರಕೃತಿ, ಪುರುಷ, ಪದಾರ್ಥಗಳಿಂದ (Nature, man, thing) ದೊರೆಯುತ್ತದೆ. ಈ ಮೂರು ಪ್ರಕಾರಗಳು ಒಟ್ಟಾಗಿ ಕಾರ್ಯ ನಿರ್ವಹಿಸಬೇಕು. ನಾವು ನಿಯಂತ್ರಿಸಬಹುದಾದ ಪುರುಷ ಮತ್ತು ಪದಾರ್ಥ (ವ್ಯಕ್ತಿ-ವಸ್ತು)ಗಳು ನಮ್ಮ ನಿಯಂತ್ರಣದಲ್ಲಿರದ ಮತ್ತೊಂದನ್ನು ಅಂದರೆ ಪ್ರಕೃತಿಯನ್ನು ಅನುಸರಿಸಬೇಕು ಎಂದು ಪ್ರತಿಪಾದಿಸಿದ್ದಾನೆ.

ಜೆ.ಜೆ.ರೂಸೋ ತನ್ನ ಶೈಕ್ಷಣಿಕ ವಿಚಾರ/ಚಿಂತನೆಗಳನ್ನು 'ಎಮಿಲಿ ಎಂಬ ಶಿರೋನಾಮೆಯ 5 ಸಂಪುಟಗಳ ಬೃಹತ್ ಕೃತಿಯಲ್ಲಿ ವಿವರಿಸಿದ್ದಾನೆ. 'ಎಮಿಲಿ' ಒಬ್ಬ ಕಾಲ್ಪನಿಕ ವ್ಯಕ್ತಿ. ಈ ವ್ಯಕ್ತಿ ಹಾಗೂ ಈತನ ಸಂಗಾತಿಯಾಗುವ 'ಸೋಫಿ' ಪಾತ್ರಗಳ ಶಿಕ್ಷಣವೇ ಇಲ್ಲಿನ ವಸ್ತು. ಮೊದಲನೇ ಪುಸ್ತಕದಲ್ಲಿ ಎಮಿಲಿಯ ಜನ್ಮದಿಂದ 2 ವರ್ಷದವರೆಗೆ, ಎರಡನೆಯದರಲ್ಲಿ 2 ರಿಂದ 12 ವರುಷದವರೆಗೆ, ಮೂರನೆಯದರಲ್ಲಿ 12 ರಿಂದ 15 ವರ್ಷದವರೆಗೆ, ನಾಲ್ಕನೆಯದರಲಿ 15 ರಿಂದ 20 ವರ್ಷದವರೆಗೆ. ಐದನೆಯದರಲ್ಲಿ 20 ರಿಂದ 25 ವರ್ಷದವರೆಗೆ ಎಮಿಲಿಯ ಶಿಕ್ಷಣವನ್ನು ಹಾಗೂ ಕೊನೆಯಲ್ಲಿ ಸೋಫಿಯ ಶಿಕ್ಷಣ ಹೇಗಿರಬೇಕೆಂದು ಪ್ರಸ್ತಾಪಿಸುವ, ಪ್ರತಿಪಾದಿಸುವ ಪ್ರಚೋದಿಸುವ ವಿಚಾರಗಳನ್ನು ನಿರೂಪಿಸಿದ್ದಾನೆ.

ಎಮಿಲಿಯ ಜನ್ಮದಿಂದ 7 ವರ್ಷದವರೆಗೆ 'ಶೈಶವಾವಸ್ಥೆ'. ಮಕ್ಕಳನ್ನು ಹಿರಿಯರಿಗಿಂತ ಭಿನ್ನವಾಗಿ ಪರಿಗಣಿಸಬೇಕು. ಅವರು ಮುಗ್ಧ ಸ್ವಭಾವದವರು. ಬೇರೆಯವರಿಗೆ ತೊಂದರೆ ಮಾಡದಿರುವುದು, ಸುಲಭವಾಗಿ ಘಾಸಿಯಾಗುವುದು ಅವರ ಗುಣ. ಅವರು ಸ್ವಾತಂತ್ರ್ಯ ಹಾಗೂ ಸಂತೋಷಕ್ಕೆ ಅಧಿಕಾರಸ್ಥರು. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಪ್ರಾಕೃತಿಕವಾಗಿ ಅವರು ಸಭ್ಯರು, ಒಳ್ಳೆಯವರು. ಎರಡು ವರ್ಷದವರೆಗೂ ಮಗುವಿಗೆ ಸ್ತನ್ಯಪಾನವಿರಬೇಕು; ಸ್ತನ್ಯಪಾನ ಬಿಡಿಸುವುದರೊಂದಿಗೆ ಮಗುವಿನ 'ಶೈಶವ' ಮುಗಿಯುತ್ತದೆ ಎನ್ನುವ ರೂಸೋ ಮಕ್ಕಳಿಗೆ ನೈಜವಾದ ಸ್ವಾತಂತ್ರ್ಯವನ್ನು ನೀಡಲು ಪ್ರತಿಪಾದಿಸುತ್ತಾನೆ. ಮಕ್ಕಳನ್ನು ಕುರಿತ ಇನ್ನು ಕೆಲವು ರೂಸೋನ 'ಸ್ವಯಂಸಿದ್ಧ'ಗಳೆಂದರೆ ನೈಜ ಸ್ವಾತಂತ್ರ್ಯದಿಂದಾಗಿ ಮಕ್ಕಳು ತಮ್ಮಷ್ಟಕ್ಕೆ ಹೆಚ್ಚಿನ ಕಾರ್ಯಮಾಡುವಂತಾಗುವುದು; ಅನ್ಯರ ಅಪೇಕ್ಷೆಗಳಿಗೆ, ಒತ್ತಡಗಳಿಗೆ ಬಲಿಯಾಗದಿರುವುದು; ಅವರನ್ನು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ 'ಅಪೇಕ್ಷೆ'ಗಳಿಗೆ ಬದ್ಧರನ್ನಾಗಿಸುವುದು, ಅವರು ತಮ್ಮ ಸಾಮರ್ಥ್ಯಕ್ಕೆ ಮೀರಿದ್ದನ್ನು ಅಪೇಕ್ಷಿಸುವುದಿಲ್ಲ, ಎನ್ನುವುದು. ಯಾವುದೇ ಒಪ್ಪಂದಗಳಿಗೆ ಬದ್ಧರಾಗದ 'ಒಂದೇ ಸ್ವಭಾವ ರೂಪಿಸಿಕೊಳ್ಳಬೇಕು. ತನ್ನ ದೇಹದ ನೈಸರ್ಗಿಕ ಸ್ವಭಾವ ಹಾಗೂ ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ಮತ್ತು ಅದಕ್ಕೆ ಹೊಂದಿಕೊಳ್ಳುವ, ನಿಯಂತ್ರಿಸುವ ಅದನ್ನು ತನ್ನ ಮನಸ್ಸಿನಂತೆ ಆಳುವುದಕ್ಕೆ ಸ್ವಾತಂತ್ರ್ಯವಿರಬೇಕು ಎಂದು ವಿವರಿಸಿದ್ದಾನೆ. 'ಎಮಿಲಿ'ಯನ್ನು ಅವನ ಕುಟುಂಬದಿಂದ ಬೇರ್ಪಡಿಸಿ ಪ್ರತ್ಯೇಕವಾದ ಗ್ರಾಮೀಣ ಪರಿಸರದಲ್ಲಿರಿಸಬೇಕು. ಏಕೆಂದರೆ ಈ ರೀತಿ ಬೇರ್ಪಡಿಸುವುದರಿಂದ ನಾಗರಿಕ ಸಮಾಜದ ದುಷ್ಟವಿಚಾರಗಳಿಂದ 'ಎಮಿಲಿ'ಯನ್ನು ರಕ್ಷಿಸಲು ಸಾಧ್ಯ; ಗ್ರಾಮೀಣ ಸಮುದಾಯವು ನಗರ ಸಮುದಾಯಕ್ಕಿಂತ 'ಉತ್ತಮ'ವಾದುದು ಹಾಗೂ 'ಸುರಕ್ಷಿತ'ವಾದುದು ಎಂಬುದು ಅವನ ವಿಚಾರ. "ಈ ಎಳೆಯ ಸಸ್ಯವನ್ನು ಹೆದ್ದಾರಿಯಿಂದ ಸ್ಥಳಾಂತರಿಸಿ, ಅದನ್ನು ನುಚ್ಚು-ನೂರು ಮಾಡುವ ಸಾಮಾಜಿಕ ಸಂಪ್ರದಾಯದ ನಿರ್ಬಂಧದಿಂದ ರಕ್ಷಿಸಿರೆಂದು ಮೃದು ಸ್ವಭಾವದ ಕಳಕಳಿಯುಳ್ಳ ಮಾತೆಯಾದ ನಿನ್ನಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ ಎನ್ನುವುದು 'ಶಿಶು'ವಿನ ಬಗೆಗಿನ ಅವನ ಕಾಳಜಿ.

ಎಮಿಲಿಯ 2-12ರವರೆಗಿನ ವಯೋಮಾನವನ್ನು 'ನಿಸರ್ಗದ ಕಾಲ' ವೆಂದಿರುವ ರೂಸೋ ಈ ಬಾಲ್ಯಾವಸ್ಥೆಯಲ್ಲಿ ಕೇವಲ 'ನಿಷೇಧಾತ್ಮಕ (ನೇತ್ಯಾತ್ಮಕ) ಶಿಕ್ಷಣ' ನೀಡಬೇಕು ಎನ್ನುತ್ತಾನೆ. ಶೈಶವದಲ್ಲಿ ಹೇಗೆ ನಿಸರ್ಗದತ್ತ ರೀತಿಗೆ ಅನುಗುಣವಾಗಿ ಶಿಕ್ಷಣ ಇರಬೇಕೋ ಹಾಗೆಯೇ ಈ ಅವಧಿಯಲ್ಲೂ ಮುಂದುವರೆಯಬೇಕು. ರೂಢಿಗತವಾಗಿರುವ ವಿಷಯ ಪ್ರಧಾನ ಅಥವಾ ಶಿಕ್ಷಕ ಪ್ರಧಾನವಾದ ಬಳಕೆಯಲ್ಲಿರುವ 'ಧನಾತ್ಮಕ' ಶಿಕ್ಷಣಕ್ಕೆ ಪ್ರತಿಭಟನೆ ಒಡ್ಡಿರುವ ಶಿಕ್ಷಣ ವಿಧಾನ ನಿಷೇದಾತ್ಮಕ ಶಿಕ್ಷಣ; ಇದರ ಅರ್ಥ ಶಿಕ್ಷಣ ಕೊಡದಿರುವುದು ಎಂದಲ್ಲ.

ಎಮಿಲಿಗೆ ಯಾವುದೇ 'ನೈತಿಕ' ಬೋಧನೆ ಮಾಡಬೇಕಿಲ್ಲ. ಸಮುದಾಯದ ಒತ್ತಡದಿಂದ ರೂಪಿತವಾದ ಇದು ಸರಿ ಇದು ಸರಿ ಇಲ್ಲ ಎಂಬ ಶಾಬ್ದಿಕ/ಗ್ರಂಥಸ್ಥ ಕಲಿಕೆ ಬೇಕಿಲ್ಲ. ಕಾಲವನ್ನು ರೂಢಿಗತ ಕಲಿಕೆಗೆ ಬಳಸುವುದಲ್ಲ, ಕಾಲವನ್ನು ಅದಕ್ಕಾಗಿ ಕೂಡಿಡಬೇಕಿಲ್ಲ. ಅದನ್ನು ಸಮರ್ಥವಾಗಿ ಬಳಸುವುದೆಂದರೆ ಆಟ, ಜಿಗಿತ, ಓಟ ಮುಂತಾದ ದೈಹಿಕ ಕ್ರಿಯೆಗಳಿಗೆ ಆದ್ಯತೆ ನೀಡಿ ಹಾಗೂ ಸಾವಕಾಶವಾಗಿ ಮಗು ಸಂತೋಷಿಸಬೇಕು. ಎಮಿಲಿಯು ಕಾಲವನ್ನು ನಿಸರ್ಗಕ್ಕೆ ಅನುಗುಣವಾಗಿ ಸಮರ್ಥವಾಗಿ ಬಳಸಬೇಕು. ಪೂರ್ಣಪ್ರಮಾಣದಲ್ಲಿ ಮನಸ್ಸು ತನ್ನ ವಿವಿಧ ಕ್ಷಮತೆಗಳಿಸುವವರೆಗೆ ಅದನ್ನು ಆತಂಕಗೊಳಿಸಬಾರದು. ಈ

Digitised by Bharatavani, CIIL

ಹಂತದಲ್ಲಿ ಶಿಕ್ಷಣದ ಉದ್ದೇಶವು ದೈಹಿಕ ಸ್ವಭಾವಗಳ ಅದರಲ್ಲೂ ಜ್ಞಾನೇಂದ್ರಿಯಗಳ (ಪಂಚೇಂದ್ರಿಯಗಳ ವಿಕಸನವೇ ಹೊರತಾಗಿ ಮನಸ್ಸಿನ ವಿಕಸನವಲ್ಲ, ಈ ಹಂತದಲ್ಲಿ ಬಳಸಬೇಕಾದ ಏಕೈಕ ಪುಸ್ತಕ (ಪ್ರಕರಣ ಗ್ರಂಥ) "ರಾಬಿನ್ ಸನ್ ಕ್ರೂಸೋ". ಏಕೆಂದರೆ ಎಮಿಲಿ ಓದುವ ಈ ಮೊದಲ ಪುಸ್ತಕವು ನಿಸರ್ಗಕ್ಕೆ ಅನುಗುಣವಾದ ಶಿಕ್ಷಣದ ಮಹಾನ್ ವಿಚಾರವಾಗಿದೆ. ಇದೊಂದೇ ಪುಸ್ತಕವು ಬಹಳ ದೀರ್ಘಕಾಲದವರೆಗೆ ಅವನ ಇಡೀ ಪುಸ್ತಕ ಭಂಡಾರವಾಗಿರಬೇಕು ಮತ್ತು ಅದು ಗೌರವಾನ್ವಿತ ಸ್ಥಾನವನ್ನು ಸದಾ ಅಲಂಕರಿಸಬೇಕು ಎಂದಿರುವ ರೂಸೋ ಎಮಿಲಿಯ ಪಂಚೇಂದ್ರಿಯಗಳಲ್ಲಿ ಸಂಸ್ಕರಣಕ್ಕೆ ಸಂಬಂಧಿಸಿದಂತೆ ಪ್ರತಿಯೊಂದರ ಬಗ್ಗೆ ವಿವರವಾಗಿ ಪ್ರಸ್ತಾಪಿಸಿದ್ದಾನೆ.

ಮನುಷ್ಯ ವಿವಿಧ ಹಂತಗಳಲ್ಲಿ ವಿಕಸನ ಹೊಂದುವುದರಿಂದ ಪ್ರತಿಹಂತಕ್ಕೂ ಯುಕ್ತವಾದ ವೈವಿಧ್ಯತೆಯ ಶಿಕ್ಷಣದ ಅವಶ್ಯಕತೆ ಇದೆ ಎಂದು ರೂಸೋ ವಿವರಿಸುತ್ತಾನೆ. ಪ್ರತಿಹಂತದಲ್ಲೂ ವ್ಯಕ್ತಿಯ ನೈಸರ್ಗಿಕ ಲಕ್ಷಣ ಹಾಗೂ ಅವುಗಳ ವಿಕಸನವನ್ನು ಅರ್ಥೈಸಿಕೊಳ್ಳುವುದು ಆಯಾ ಹಂತದ ಶಿಕ್ಷಣದ ಮಾರ್ಗದರ್ಶಿ ಸೂತ್ರವಾಗಬೇಕೆನ್ನುವುದು ರೂಸೋನ ಪ್ರತಿಪಾದನೆ.

12 ವರ್ಷದ ಬಾಲ್ಯ ಮುಗಿದು ಎಮಿಲಿಯ 3ನೇ ಹಂತವಾದ ಕೌಮಾರ್ಯಾವಸ್ಥೆಯ ಶಿಕ್ಷಣವನ್ನು ಕುರಿತು 3ನೇ ಪುಸ್ತಕದಲ್ಲಿ ಪ್ರಸ್ತಾಪಿಸಿರುವ ರೂಸೋ "ಸಭ್ಯ ಆದಿಮಾನವ" (Noble savage) ಜೀವನದ ಬಗ್ಗೆ ತಮ್ಮ ಸಾಮಾಜಿಕ ಒಡಂಬಡಿಕೆಯಲ್ಲಿ ಪ್ರತಿಪಾದಿಸಿರುವ ಚಿಂತನೆಯನ್ನು ಮತ್ತಷ್ಟು ಸ್ಪಷ್ಟೀಕರಿಸಿದ್ದಾನೆ. ಈ ಹಂತದಲ್ಲಿ ಎಮಿಲಿಯ ದೈಹಿಕ ಹಾಗೂ ಭಾವೋದ್ವೇಗ (ಸಂವೇಗ)ಗಳಿಗೆ ಅವಕಾಶವನ್ನು ನೈಸರ್ಗಿಕ ಆಯ್ಕೆ, ಅಪೇಕ್ಷೆಗಳು 'ಸಭ್ಯ ಆದಿಮಾನವ'ನ 'ಕಾಮಾಭಿಲಾಷೆಯ' ರೀತಿಯಲ್ಲೇ ನಡೆಯಬೇಕೆನ್ನುತ್ತಾನೆ. 12 ರಿಂದ 13ನೇ ವಯಸ್ಸಿನಲ್ಲಿ ಎಮಿಲಿಯ ಶಕ್ತಿಯು ಅಗತ್ಯಕ್ಕಿಂತ ಹೆಚ್ಚಾಗಿ ತೀವ್ರವಾಗಿ ವೃದ್ಧಿಯಾಗುತ್ತದೆ. ಈ ಹಂತದಲ್ಲಿ ಚಟುವಟಿಕೆ ಒತ್ತಡವು ಮಾನಸಿಕ ಸ್ವರೂಪ ಪಡೆಯುತ್ತದೆ.

ಮುಂದುವರಿಯುವ ಅವಧಾನಕ್ಕೆ (Sustained Attention) ಹೆಚ್ಚಿನ ಸಾಮರ್ಥ್ಯವಿರುತ್ತದೆ. ಪ್ರತಿಯೊಂದು ಮನಸ್ಸು ತನ್ನದೇ ಆದ ಸ್ವರೂಪ ಹೊಂದಿರುತ್ತದೆ. ಇದನ್ನು ಶಿಕ್ಷಣ ನೀಡುವವರು ಗಮನಿಸಬೇಕು. ಪ್ರತಿಹಂತದಲ್ಲೂ ವೈಯಕ್ತಿಕ ಭಿನ್ನತೆಗಳಿರುವುದರಿಂದ ಶಿಕ್ಷಣವನ್ನು ವೈಯಕ್ತಿಕಗೊಳಿಸಬೇಕು.

ನಮ್ಮ ನೈಜ ಶಿಕ್ಷಕರೆಂದರೆ ಅನುಭವ ಮತ್ತು ಸಂವೇದನೆಗಳು. ಮಾನವನು ಅವುಗಳದ್ದೇ ಆದ ಸ್ಥಿತಿಯಲ್ಲಿ ತನಗೆ ಲಾಭವಾಗುವುದನ್ನು ಕಲಿಯುತ್ತಾನೆ. ಪ್ರತಿ ಮಗುವು ಕಾರ್ಯಪ್ರವೃತ್ತಿಯನ್ನು ಹೊಂದಿರುತ್ತದೆ. ಸಕಾಲದಲ್ಲಿ ಮನಸ್ಸಿನ ಚಡಪಡಿಕೆಯು ಕುತೂಹಲವಾಗುತ್ತದೆ. ಮಾನಸಿಕ ಚಡಪಡಿಕೆಯು ದೈಹಿಕ ಚಟುವಟಿಕೆಗಳ ವಿಕಸನಕ್ಕೆ ನೇರವಾಗಿ ಸಂಬಂಧಿಸಿದೆ.

ಎಮಿಲಿಗೆ ತಾನು ಪುರುಷನಾಗಬೇಕೆಂದು ಗೊತ್ತಿದೆ. ಪುರುಷನಿಗೆ ಇರಬೇಕಾದ ಎಲ್ಲ ವಿಚಾರಗಳು ಅವನವಾಗಬೇಕು. ಅದಕ್ಕಾಗಿ ಕಲಿಕೆಯ ಅವಕಾಶಗಳನ್ನು ಒದಗಿಸುವುದು ಮಾರ್ಗದರ್ಶಿಯ ಕರ್ತವ್ಯವಾಗಿದೆ. ಆದರೆ ಅವನು ತನ್ನ ಗ್ರಹಿಕೆಗೆ ಸಾಧ್ಯವಾಗದಿರುವಂತಹ ವಿಚಾರಗಳಿಂದ ಸಂಪೂರ್ಣವಾಗಿ 'ಅಜ್ಞ' ನಾಗೇ ಇರಬೇಕು. ಇದು ಶಿಕ್ಷಣದ ಮೂಲತತ್ತ್ವ. ಎಮಿಲಿಯ ಶಿಕ್ಷಣದಲ್ಲಿ ಭಾಷೆ, ಸಂಗೀತ, ಚಿತ್ರಕಲೆ ಈ ಹಂತದಲ್ಲಿ ಸೇರ್ಪಡೆಯಾಗುತ್ತದೆ. 15 ರಿಂದ 20ರ ವಯೋಮಾನದ ಮತ್ತೊಂದು ಹಂತ ತಾರುಣ್ಯಾವಸ್ಥೆ. ಈ ಹಂತದಲ್ಲಿ ಎಮಿಲಿಯ ಆಲೋಚನೆ/ ವಿವೇಚನೆಯು ವಿಕಾಸ ಹೊಂದುತ್ತದೆ. ತಾರುಣ್ಯಾವಸ್ಥೆಯ ಅಪಾಯಕಾರಿ ಸಂವೇಗಗಳೊಂದಿಗೆ ಎಮಿಲಿ ನೈತಿಕ ಹಾಗೂ ಧಾರ್ಮಿಕ ವಿಚಾರಗಳನ್ನು ನಿರ್ವಹಿಸಲು ಸಮರ್ಥನಾಗುತ್ತಾನೆ. 'ನಾವು ಹುಟ್ಟಿದ್ದೇವೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಜೀವನ ನಡೆಸಲು ಹುಟ್ಟಿದ್ದೇವೆ, ಮಾನವರಾಗಲು ಹುಟ್ಟಿದ್ದೇವೆ, 'ವ್ಯಕ್ತಿ'ಯಾಗಲು ಜನಿಸಿದ್ದೇವೆ' ಎಂಬರ್ಥದ ಮಾತುಗಳು ಪ್ರಖ್ಯಾತವಾಗಿವೆ. (4ನೇ ಪುಸ್ತಕದ 2ನೇ ಪ್ಯಾರಾ). ಸಾಮಾಜಿಕ ಒತ್ತಡ ಹಾಗೂ ಪ್ರಭಾವಗಳಿಂದ ನೈಸರ್ಗಿಕ ಒಲವುಗಳಿಗೆ ಬಾಧಕವಾಗದಂತೆ 'ವ್ಯಕ್ತಿ' ಹೊರಹೊಮ್ಮಬೇಕೆಂಬ ಅಂಶವನ್ನು ಪುನಃ ಪ್ರಸ್ತಾಪಿಸುವ ರೂಸೋ ಸಮುದಾಯದ ಭಾಗಿತ್ವವು ಕ್ರಮೇಣ ನಿಧಾನವಾಗಿ ಅವಕಾಶ ಪಡೆಯಬೇಕು ಎನ್ನುತ್ತಾನೆ. ಸಸ್ಯಶಾಸ್ತ್ರ ಖಗೋಳಶಾಸ್ತ್ರಗಳ ಪರಿಚಯ, ಕುತೂಹಲ ತಣಿಸುವ ವಿಚಾರಗಳು ಎಮಿಲಿಯ ಶಿಕ್ಷಣದಲ್ಲಿ ಸೇರುತ್ತವೆ.

16ನೇ ವಯಸ್ಸಿನ ನಂತರ ಎಮಿಲಿಗೆ ಅನ್ಯಲಿಂಗೀಯ ಸೋಫಿಯ ಸಹವರ್ತಿತ್ವಕ್ಕೆ ಸೂಕ್ತ ಕಾಲ. ಈ ಹಂತದಲ್ಲಿ ನೈತಿಕಶಿಕ್ಷಣವನ್ನು ಹಾಗೂ ಧಾರ್ಮಿಕ ಶಿಕ್ಷಣವನ್ನು ಆಚರಣೆಗಳನ್ನು ಮಾದರಿಗಳನ್ನು ವಿವೇಚಿಸಿ ಎಮಿಲಿ ರೂಪಿಸಿಕೊಳ್ಳಬೇಕು, ಚಾರಿತ್ರ್ಯ ನಿರ್ಮಾಣ ಮತ್ತು ನೈತಿಕಪ್ರಜ್ಞೆ, ಧಾರ್ಮಿಕ ಅಭ್ಯಾಸಗಳ ವಿಕಸನ ಕಾರ್ಯದಿಂದ ಎಮಿಲಿ ಆತ್ಮಸಂಯಮರೂಢಿಸಿಕೊಳ್ಳಲು ಕಲಿಯುತ್ತಾನೆ. ಕ್ರೈಸ್ತಧರ್ಮದ ಬಗ್ಗೆ ತನ್ನ ನಿಲುವುಗಳಿಂದ ರೂಸೋಗೆ ಧಾರ್ಮಿಕ ಮುಖಂಡರಿಂದ ತೊಂದರೆಯಾಗಿತ್ತು. ಅವೇ ನಿಲುವುಗಳು ಎಮಿಲಿಯ ಧಾರ್ಮಿಕ ಶಿಕ್ಷಣದ ಅಂಶಗಳಾಗಿ ಪ್ರಸ್ತಾಪಿತವಾಗಿವೆ. ವೃತ್ತಿ ಸಂಬಂಧವಾಗಿ ಸೃಜನಶೀಲತೆ ಮತ್ತು ಆಲೋಚನಾಪರತೆ ಇರುವಂತಹ ಕರಕುಶಲತೆ ಸಿದ್ಧಿಸುವುದಕ್ಕೆ ಬಡಗಿ ಕೆಲಸವನ್ನು ಎಮಿಲಿ– ಈ ಹಂತದಲ್ಲಿ ಕಲಿಯುತ್ತಾನೆ. ಎಮಿಲಿಯು 20ನೇ ವಯಸ್ಸಿನಲ್ಲಿ ಪ್ರೌಢಾವಸ್ಥೆ ತಲುಪುತ್ತಾನೆ, ಈ ಹಂತದಲ್ಲಿ 'ನೀವು ಹೇಳಿದರೆಂಬ ಕಾರಣಕ್ಕಾಗಿ ಎಮಿಲಿ ಏನನ್ನೂ ತಿಳಿಯಬೇಕಾಗಿಲ್ಲ ಎನ್ನುತ್ತಾನೆ. ಆದರೆ ತನ್ನಷ್ಟಕ್ಕೇ ಕಲಿತಿದ್ದರಿಂದ ತಿಳಿಯಲಿ. ಸಾಂಘಿಕ ವ್ಯಕ್ತಿಯು ಕೃತಕನಾಗುವುದನ್ನು ತಡೆಗಟ್ಟಲು ಸಾಕಷ್ಟು ಕುಶಲತೆ ಬೇಕಾಗುತ್ತದೆ. 'ಸಾರ್ವಜನಿಕ ಅಭಿಪ್ರಾಯವೆಂದರೆ ಪುರುಷನ ಸದ್ಗುಣಗಳ ಸಮಾಧಿ ಹಾಗೂ ಮಹಿಳೆಯ ಸಿಂಹಾಸನ' ಎನ್ನುತ್ತಾನೆ ರೂಸೋ. ಸಮಾಜದ ವಿನಾಶಕಾರಿ ಹಾಗೂ ಕೃತಕತೆಗಳಿಂದ ಈವರೆಗೆ ಹೊರಗುಳಿದಿರುವ ಎಮಿಲಿ ಸಾಂಘಿಕ ಜೀವನವನ್ನು ನೈಜರೀತಿಯಲ್ಲಿ ನಡೆಸಲು ಸಮರ್ಥನಾಗಿರುತ್ತಾನೆ. ಪರಿಸರದ ಸಾಮರ್ಥ್ಯವು ಶಿಕ್ಷಣಕ್ಕೆ ಪ್ರತಿರೋಧ ಒಡ್ಡುವುದರಲ್ಲಿ ಫಲಕಾರಿಯಾಗದಂತೆ ಅದರ ಮೇಲಿನ ನಿಯಂತ್ರಣವು ಶಿಕ್ಷಣದ ಪರಿಣಾಮವನ್ನು ಹೆಚ್ಚಿಸುತ್ತದೆ. ತನ್ನ ಬಾಳಸಂಗಾತಿಯನ್ನು ಆರಿಸಿಕೊಳ್ಳುವ ಎಮಿಲಿಯು ಸಮಾಜದಲ್ಲಿ ಉತ್ತಮನಾಗಿ ಬಾಳುತ್ತಾನೆ.

ಸೋಫಿಯ ಶಿಕ್ಷಣವು ಆಕೆಯನ್ನು 'ಸ್ತ್ರೀತ್ವ' ಕ್ಕೆ ತರಬೇತಿಗೊಳಿಸುತ್ತದೆ. ಮೊದಲ ಹತ್ತು ವರ್ಷದ ಶಿಕ್ಷಣದಲ್ಲಿ ದೈಹಿಕತರಬೇತಿಗಳ ಮೂಲಕ ಅಂಗಸೌಷ್ಠವ, ಸೌಂದರ್ಯಗಳ ವಿಕಸನಕ್ಕೆ ಅವಕಾಶ. ಹಾಗೆಯೇ ಬೊಂಬೆಗಳಿಗೆ ಅಲಂಕಾರ ಮಾಡುವ, ಚಿತ್ರಬರೆಯುವ, ಓದುವ, ಬರೆಯುವ, ಎಣಿಸುವ ಕ್ರಿಯೆಗಳಿಗೆ ಮಾರ್ಗದರ್ಶನ ಅಗತ್ಯವಿದೆ. ಜೊತೆಗೆ ಮೈಗಳ್ಳತನವನ್ನು ಮತ್ತು ಆಲಸ್ಯವಾಗಿ ವೃಥಾ ಕಾಲಹರಣವಾಗುವುದನ್ನು ತಪ್ಪಿಸಬೇಕು ಎನ್ನುತ್ತಾನೆ ರೂಸೋ. ಹತ್ತು ವರ್ಷಗಳ ನಂತರ 'ಅಲಂಕರಣ ಗೊಳಿಸುವ ಕಾಳಜಿ' ಸಂತೋಷಗೊಳಿಸುವ ಕಲೆ ಹಾಗೂ ಧರ್ಮ ಮತ್ತು ಚಿಂತನೆಯ ತರಬೇತಿಯನ್ನು ಸೋಫಿ ಪಡೆಯುತ್ತಾಳೆ.

ಆಕೆಯ ತರಬೇತಿಯು ದೃಢತೆಗಿಂತ ಹೆಚ್ಚಾಗಿ ಜಾಗರೂಕತೆಯು ಆಕೆಯ ಅಭಿರುಚಿಗಳಿಗೆ ಅಡ್ಡಗಾಲು ಹಾಕದೆ ಅವುಗಳನ್ನೇ ಅನುಸರಿಸಿ ನೀಡುವಂತಹದು. ಇಂತಹ ಶಿಕ್ಷಣವು ಆಕೆಯನ್ನು ಗುಣಾಢ್ಯಳನ್ನಾಗಿಸುತ್ತದೆ.

Digitised by Bharatavani, CIIL

ಪುರುಷ ಸಬಲ ಹಾಗೂ ಕ್ರಿಯಾಶೀಲ. ಸ್ತ್ರೀ ದುರ್ಬಲೆ ಹಾಗೂ ನಿಷ್ಕ್ರಿಯ ಎಂಬ ರೂಸೋನ ಮಾತು ಸೋಫಿಯ ಶಿಕ್ಷಣಕ್ಕೆ ಪ್ರತ್ಯೇಕವಾದ ವಿಚಾರ ವಿವರಗಳನ್ನು ಹೊಂದಿದೆ.

ಅನುರೂಪಳಾದ ಜೀವನಸಂಗಾತಿಯನ್ನು ಎಮಿಲಿಗೆ ರೂಸೋ ಪರಿಚಯಿಸುತ್ತಾನೆ, ಆಕೆಯನ್ನು ಪ್ರೀತಿಸಲು ಹಾಗೂ ಸಮಾಜ ಸಮುದಾಯಕ್ಕೆ ವಾಪಸ್ಸಾಗಲು ಎಮಿಲಿ ಈ ಹಂತದಲ್ಲಿ ಸಮರ್ಥನಾಗಿರುತ್ತಾನೆ; ಅನುವಾಗಿದ್ದಾನೆ. ಅದಕ್ಕೆ ಪುರಾವೆಯೆಂದರೆ 'ಹಾಳು ಗೆಡುವುವ ಪ್ರಭಾವಗಳ ವಿರುದ್ಧವಾಗಿ ನಿಲ್ಲುವ ಸುದೀರ್ಘಕಾಲದ ಸಿದ್ಧತೆಯನ್ನು ಎಮಿಲಿ ಪಡೆದಿದ್ದಾನೆ ಎಂದು ರೂಸೋ ಬಣ್ಣಿಸುತ್ತಾನೆ.

ಶಿಕ್ಷಣ ಮಾರ್ಗದರ್ಶಿಯ ಕೊನೆಯ ಕರ್ತವ್ಯವೆಂದರೆ ನವದಂಪತಿಗಳನ್ನು ತಮ್ಮ ವೈವಾಹಿಕ ಜೀವನದ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಅರಿಯಲು ಅವಕಾಶ ಮಾಡಿಕೊಡುವುದು, ಅವುಗಳ ತಿಳುವಳಿಕೆ ನೀಡುವುದು ಎಂದು ರೂಸೋ ತಿಳಿಸುತ್ತಾನೆ.

ರೂಸೋನ ಶಿಕ್ಷಣಕ್ರಮದಲ್ಲಿ ನಿರ್ದಿಷ್ಟವಾದ ಬೋಧನಾ ವಿಧಾನಗಳಿಲ್ಲವಾದರೂ 'ನಿಸರ್ಗಕ್ಕೆ ಮರಳಿ' ಕಲಿಸಬೇಕಾದ ಒಂದೇ 'ಅಭ್ಯಾಸ'ವೆಂದರೆ ಯಾವುದೇ ಅಭ್ಯಾಸ ಕಲಿಸದಿರುವುದು, ವೈಯಕ್ತಿಕ ಕಲಿಕೆ, ಮಾಡುತ್ತಾ ಕಲಿಯುವ ಶಿಸ್ತನ್ನು ನಿಸರ್ಗದಿಂದಲೇ ರೂಢಿಸಿ ಕೊಳ್ಳುವ, ಸಾಮಾಜಿಕ ಜ್ಞಾನವನ್ನು ಅದರಲ್ಲಿ ಸೂಕ್ತಹಂತದಲ್ಲಿ ತೊಡಗಿಕೊಳ್ಳುವುದರಿಂದ ಕಲಿಯಬೇಕು. ಸ್ತ್ರೀ ಶಿಕ್ಷಣ ಪುರುಷ ಶಿಕ್ಷಣಕ್ಕಿಂತ ಭಿನ್ನವಾಗಿರಬೇಕು ಮುಂತಾದ ಹಲವು ಕ್ರಾಂತಿಕಾರಕ ಅಂಶಗಳನ್ನು ಒಳಗೊಂಡಿದೆ.

ರೂಸೋನ ವಿಚಾರಧಾರೆಯ ಬಗ್ಗೆ ಸಾಕಷ್ಟು ವಾದ ವಿವಾದಗಳಿವೆ. ಆ ಬಗ್ಗೆ ಬೃಹತ್ ಪ್ರಮಾಣದ ಸಾಹಿತ್ಯವೂ ಅಧ್ಯಯನಕ್ಕೆ ದೊರೆಯುತ್ತದೆ. ಒಟ್ಟಿನಲ್ಲಿ ಮಕ್ಕಳ ಸ್ವರ್ಗ ನಿರ್ಮಿಸಿದ ಜೆಜೆ ರೂಸೋ ಆಧುನಿಕ ಶಿಕ್ಷಣದ ಪಿತಾಮಹ'ಎಂಬ ಖ್ಯಾತಿಗೆ ಪಾತ್ರನಾಗಿದ್ದಾನೆ.

– ಎನ್.ಕಾ.ರಾ.

## ಜೀವ ಪರಿಸರ ವಿಜ್ಞಾನ

ಪರಿಸರ ವಿಜ್ಞಾನವು ಜೀವಶಾಸ್ತ್ರದ ಒಂದು ಶಾಖೆ. ಜೀವಿ ಮತ್ತು ಅದರ ಸುತ್ತಣ ವಾತಾವರಣದ ಅಂಶಗಳ ಸಂಬಂಧಗಳು, ಪ್ರಭಾವಗಳು, ವಿತರಣೆ ಹಾಗೂ ಅಭಿವೃದ್ಧಿಯ ಅಂಶಗಳನ್ನು ತನ್ನ ವ್ಯಾಪ್ತಿಯಲ್ಲಿ ಒಳಗೊಂಡಿದೆ. ಭೂಮಿಯ ಮೇಲೂ ಮಿಲಿಯನ್ ಜೀವಿಗಳು ತಮ್ಮ ಜೀವನಕ್ಕೆ ಅಗತ್ಯವಾದ ಕಚ್ಚಾ ಸಾಮಗ್ರಿಗಳು, ಶಕ್ತಿ ಮೂಲಗಳನ್ನು ಭೌತಿಕ ಜಗತ್ತಿನಿಂದ ಪಡೆದುಕೊಳ್ಳುತ್ತವೆ. ಭೌತಿಕ ಜಗತ್ತು ಜೀವಿಗಳಿಗೆ ಪೂರಕ ಅಥವಾ ಪೂರಕವಲ್ಲದ ಸಂದರ್ಭಗಳನ್ನು ಸೃಷ್ಟಿಸುತ್ತದೆ. ಜೀವಿಗಳು ಹೊಂದಾಣಿಕೆಯ ಮೂಲಕ ಜೀವನದ ಚೌಕಟ್ಟುಗಳನ್ನು ರೂಪಿಸಿಕೊಳ್ಳುವುದರ ಅಧ್ಯಯನ 'ಪರಿಸರ ವಿಜ್ಞಾನ'ದ ಭಾಗವೇ ಆಗಿದೆ. ಪರಿಸರದಲ್ಲಿನ ಪ್ರಭಾವೀ ಇಲ್ಲವೇ ಒಟ್ಟಾಗಿ ಜೀವಿಯೊಂದರ ಮೇಲೆ ಉಂಟುಮಾಡುವ ಪರಿಣಾಮಗಳೇನು, ಜೀವಿಯೊಡನೆ ಹೇಗೆ ವರ್ತಿಸುತ್ತವೆ, ಜೀವಿಗೂ ಪರಿಸರಕ್ಕೂ ಇರುವ ಸಂಬಂಧವೇನು ಎಂಬುದರ ಅಧ್ಯಯನವೇ 'ಪರಿಸರ ವಿಜ್ಞಾನ'.

ಮಾನವನ ಮಿತಿಮೀರಿದ ಚಟುವಟಿಕೆಗಳಿಂದಾಗಿ ಪರಿಸರದಲ್ಲಿ ಉಂಟಾಗಿರುವ ಸಮಸ್ಯೆಗಳು ಹಾಗೂ ಅಸಮತೋಲನಗಳು ಮನುಕುಲವನ್ನು ಕಾಡತೊಡಗಿವೆ. ಈ ಸಮಸ್ಯೆಗಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರಭಾವ ಬೀರುತ್ತಿರುವುದರಿಂದ ಪರಿಸರ ಅಧ್ಯಯನ ಇಂದಿನ ದಿನಗಳಲ್ಲಿ ಪ್ರಮುಖವೂ ಅಗತ್ಯವೂ ಆದ ವಿಷಯವಾಗಿ ಪರಿಣಮಿಸಿದೆ.

"ಜೀವಿಗಳು ಮತ್ತು ಅವುಗಳ ಸುತ್ತಲಿನ ನಿರ್ಜೀವ ಘಟಕಗಳ ನಡುವಿನ ಪರಸ್ಪರ ಪ್ರತಿವರ್ತನೆಯನ್ನು ಅಧ್ಯಯನ ಮಾಡುವ ಜೀವವಿಜ್ಞಾನದ ಶಾಖೆಯೇ ಪರಿಸರ ವಿಜ್ಞಾನ." ಇದು ಇಕಾಲಜಿ ಪದಕ್ಕೆ ಬಳಸಿರುವ ಪದ. 'ಇಕಾಲಜಿ' ಪದವು ಗ್ರೀಕ್‌ಭಾಷೆಯ 'ಇಕಾಸ್' ('ಮನೆ' ಅಥವಾ 'ವಾಸಿಸುವ ಸ್ಥಳ') ಹಾಗೂ 'ಲಾಜಿ' (ಅಧ್ಯಯನ) ಎಂಬ ಪದಗಳಿಂದ ಬಂದಿದೆ.

ಪರಿಸರದ ಘಟಕಗಳನ್ನು ಜೈವಿಕ ಮತ್ತು ಅಜೈವಿಕ ಘಟಕಗಳೆಂದು ವರ್ಗೀಕರಿಸಲಾಗಿದೆ. ಪರಿಸರದ ನಿರ್ಜೀವ ಘಟಕಗಳಾದ ಗಾಳಿ, ನೀರು, ಮಣ್ಣು, ಉಷ್ಣತೆ, ಲವಣಗಳು ಇತ್ಯಾದಿಗಳು, ಅಜೈವಿಕ ಘಟಕಗಳು ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಾಣುಜೀವಿಗಳೇ ಜೈವಿಕ ಘಟಕಗಳು.

ಪರಿಸರ ಅಮೂಲ್ಯ ಸಂಪನ್ಮೂಲಗಳನ್ನು ಹೊಂದಿದೆ ಇವುಗಳನ್ನು ಹೀಗೆ ವಿಂಗಡಿಸಬಹುದು: ಎ) ಸ್ವಾಭಾವಿಕವಾಗಿ ದೊರೆಯುವ ಮಾನವನ ಒಳಿತಿಗೆ ಉಪಯೋಗವಾಗುವ ವಸ್ತುಗಳು. ಇವುಗಳಲ್ಲಿ 2 ವಿಧಗಳು.

1) ನವೀಕರಣಗೊಳ್ಳುವ ಸಂಪನ್ಮೂಲ –ನೀರು, ಮಣ್ಣು, ಕಾಡು ಇತ್ಯಾದಿ.

2) ನವೀಕರಣಗೊಳ್ಳದ ಸಂಪನ್ಮೂಲ – ಖನಿಜಗಳು, ಪೆಟ್ರೋಲಿಯಂ ಇಂಧನಗಳು ಮತ್ತು ಕಲ್ಲಿದ್ದಲು.

ಬ) ಪುನರ್‌ಬಳಕೆ ಸಂಪನ್ಮೂಲಗಳು: ಜೈವಿಕ ವಿಘಟನೆಗೆ ಒಳಪಡದ ಮಲಿನಕಾರಕಗಳನ್ನು ಮರುಚಕ್ರೀಕರಣ ಕ್ರಿಯೆಗೆ ಒಳಪಡಿಸುವ ಮೂಲಕ ಮತ್ತೆ ಮತ್ತೆ ಬಳಸುವುದು. ಉದಾಹರಣೆಗೆ, ಕಬ್ಬಿಣದ ಚೂರುಗಳು, ಗಾಜಿನ ಚೂರುಗಳು, ಪ್ಲಾಸ್ಟಿಕ್ ಪದಾರ್ಥಗಳು, ಸಿಮೆಂಟ್ ಕಾರ್ಖಾನೆಗಳ ಧೂಳು ಇತ್ಯಾದಿಗಳನ್ನು ಪುನರ್‌ಬಳಕೆ ಮಾಡಿಕೊಂಡು ಹೊಸ ವಸ್ತುಗಳನ್ನು ತಯಾರಿಸಬಹುದು ಅಥವಾ ರಸ್ತೆ ಕೆಲಸಗಳಿಗೆ ಇಟ್ಟಿಗೆ ಮಾಡಲು ಉಪಯೋಗಿಸಬಹುದು.

ಈ ಜೈವಿಕ ಹಾಗೂ ಅಜೈವಿಕ ಘಟಕಗಳ ನಡುವಿನ ನಿರಂತರ ಪ್ರತಿವರ್ತನೆ ಹಾಗೂ ಪರಸ್ಪರಾವಲಂಬನೆಯೇ 'ಪರಿಸರದ ಸಮತೋಲನ'ದ ಮೂಲ ಅಂಶ. ಒಂದು ಪ್ರದೇಶದಲ್ಲಿರುವ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳನ್ನು ಪರಿಸರದ ಅಜೈವಿಕ ಅಂಶಗಳಾದ ಉಷ್ಣತೆ, ಬೆಳಕು, ನೀರಿನ ಪ್ರಮಾಣ, ಮಣ್ಣಿನ ಖನಿಜಾಂಶಗಳು ಮುಂತಾದವು ನಿರ್ಧರಿಸುತ್ತವೆ. ಪರಿಸರದ ಘಟಕಗಳಲ್ಲಿನ ಯಾವುದೇ ವ್ಯತ್ಯಾಸವು ಪರಿಸರದ ಈ ಸೂಕ್ಷ್ಮ ಸಮತೋಲನವನ್ನು ನಾಶಗೊಳಿಸಬಹುದು.




**ಚಿತ್ರ: ಜೀವಿಗೋಳದಲ್ಲಿ ಜೈವಿಕ ಮತ್ತು ಅಜೈವಿಕ ಘಟಕಗಳ ನಡುವಿನ ಪ್ರತಿವರ್ತನೆ.**

Digitised by Bharatavani, CIIL

**ಜೀವಿಗೋಳ:** ಭೂಮಿಯಲ್ಲಿ ಜೀವಿಗಳು ವಾಸಿಸುವ ಭಾಗವೇ ಜೀವಿಗೋಳ. ಈ ಗೋಳದಲ್ಲಿ ವಾಸಿಸುವ ಜೀವವ್ಯವಸ್ಥೆಯನ್ನು "ಜೀವಿ ಪ್ರಭೇದ →ಜೀವಿ ಸಂದಣಿ →ಜೀವಿ ಸಮುದಾಯ →ಪರಿಸರ ವ್ಯವಸ್ಥೆ →ಬಯೋಮ್" ಎಂದು ಐದು ಸ್ತರಗಳಾಗಿ ಗುರುತಿಸುತ್ತೇವೆ.

**ಪ್ರಭೇದ:** ಇದು ಜೀವಿಗೋಳದ ಅತ್ಯಂತ ಕೆಳಗಿನ ಸ್ತರ. ತಮ್ಮ ತಮ್ಮಲ್ಲೇ ಪ್ರಜನನ ಕ್ರಿಯೆ ನಡೆಸಿ, ಫಲವಂತ ಪೀಳಿಗೆಗಳನ್ನು ಉತ್ಪತ್ತಿ ಮಾಡಬಲ್ಲ ಜೀವಿಗಳ ಗುಂಪು.

**ಜೀವಿ ಸಂದಣಿ:** ಒಂದು ನಿರ್ದಿಷ್ಟ ಪ್ರದೇಶದಲ್ಲಿ ಕಂಡು ಬರುವ ವಿವಿಧ ಪ್ರಭೇದಗಳ ಜೀವಿ ಸಂದಣಿ.

**ಪರಿಸರ ವ್ಯವಸ್ಥೆ:** ಪರಿಸರದ ಘಟಕಗಳ ನಡುವಣ ನಿರಂತರ ಪ್ರತಿವರ್ತನೆ.

**ಬಯೋಮ್:** ಒಂದೇ ರೀತಿಯ ಹವಾಮಾನ ಪರಿಸ್ಥಿತಿಯನ್ನು ಹೊಂದಿರುವ ವಿಶಾಲವಾದ ಭೌಗೋಳಿಕ ಪ್ರದೇಶದಲ್ಲಿರುವ ಬೃಹತ್ ಪರಿಸರ ವ್ಯವಸ್ಥೆಗಳು. ಬಯೋಮ್‌ಗಳ ಭೌಗೋಳಿಕ ವ್ಯಾಪ್ತಿಯನ್ನು ಉಷ್ಣತೆ, ಮಳೆಯ ಪ್ರಮಾಣ, ಸೂರ್ಯನ ಬೆಳಕಿನ ಲಭ್ಯತೆ ಇತ್ಯಾದಿ ಹವಾಮಾನದ ಅಂಶಗಳನ್ನು ಹಾಗೂ ಜೀವವೈವಿಧ್ಯದ ಆಧಾರದ ಮೇಲೆ ಭೂಬಯೋಮ್‌ಗಳನ್ನು ಐದು ವಿಧಗಳಾಗಿ ವರ್ಗೀಕರಿಸಲಾಗಿದೆ.

1. ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು ಅಥವಾ ಮಳೆಕಾಡುಗಳು (ಭೂಮಿಯಲ್ಲಿರುವ ಶೇ. 50ಕ್ಕೂ ಹೆಚ್ಚಿನ ಸಸ್ಯ ಮತ್ತು ಪ್ರಾಣಿ ಸಂಕುಲಗಳನ್ನು ಈ ಬಯೋಮ್ ಹೊಂದಿದೆ). 2. ಉಷ್ಣವಲಯದ ಮತ್ತು ಸಮಶೀತೋಷ್ಣವಲಯದ ಪರ್ಣಪಾತಿ (ಎಲೆ ಉದುರುವ) ಕಾಡುಗಳು. 3. ಹುಲ್ಲುಗಾವಲು ಬಯೋಮ್ 4. ಮರುಭೂಮಿ ಬಯೋಮ್. 5. ಟಂಡ್ರಾ ಬಯೋಮ್ (ಮಣ್ಣಿನ ಕೆಳಭಾಗದ ಶೀತಲವಾದ, ಘನೀಕೃತ ಪದರ ಪರ್ಮಾಫ್ರಾಸ್ಟನ್ನು ಹೊಂದಿರುವುದು ಈ ಬಯೋಮ್‌ನ ವಿಶಿಷ್ಟ ಲಕ್ಷಣ).

**ಜಲಬಯೋಮ್:** ವಿಶಾಲ ವ್ಯಾಪ್ತಿಯನ್ನು ಹೊಂದಿರುವ ಜಲಪ್ರದೇಶಗಳೇ ಜಲಬಯೋಮ್‌ಗಳು. ಉದಾಹರಣೆಗೆ, ಸಾಗರ ಹಾಗೂ ಸಮುದ್ರಗಳು. ಜಲಬಯೋಮ್‌ಗಳ ಜೀವಿಗಳು ಆ ನೀರಿನಲ್ಲಿರುವ ಲವಣಾಂಶ, ಉಷ್ಣತೆ, ಬೆಳಕು, ನೀರಿನ ಪಿಹೆಚ್ ಮುಂತಾದ ಭೌತರಾಸಾಯನಿಕ ಅಂಶಗಳ ಮೇಲೆ ಅವಲಂಬಿತವಾಗಿರುತ್ತವೆ. ಜಲಬಯೋಮ್‌ಗಳ ಜೀವಿಗಳು ಹಂಚಿಕೆಯಾಗಿರುವ ಪ್ರದೇಶಗಳ ಆಧಾರದ ಮೇಲೆ ಜೀವಿಗಳ ಮೂರು ವಿಧಗಳನ್ನು ಗುರುತಿಸಬಹುದು.

**ಪ್ಲವಕಗಳು:** ನೀರಿನ ಮೇಲ್ಭಾಗದಲ್ಲಿ ಜಡವಾಗಿ ತೇಲುತ್ತಿರುವ ಸೂಕ್ಷ್ಮಗಾತ್ರದ ಜೀವಿಗಳು. ಇದರಲ್ಲಿ ಎರಡು ವಿಧ: 1) ಸಸ್ಯ ಪ್ಲವಕಗಳು – ಏಕಕೋಶೀಯ ಶೈವಲಗಳು. 2) ಪ್ರಾಣಿ ಪ್ಲವಕಗಳು – ಲಾರ್ವಾಗಳು.

**ನೆಕ್ಟಾನ್‌ಗಳು:** ನೀರಿನಲ್ಲಿ ಈಜುವ ಚಟುವಟಿಕೆಯುಳ್ಳ ಪ್ರಾಣಿಗಳ ಗುಂಪು. ಉದಾ: ಹಾವುಗಳು, ಮೃದ್ವಂಗಿಗಳು, ಮೀನುಗಳು, ತಿಮಿಂಗಿಲ ಇತ್ಯಾದಿ.

**ಬೆಂಥಾಸ್‌ಗಳು:** ನೀರಿನ ತಳಭಾಗದಲ್ಲಿ ತೆವಳುತ್ತಾ ಚಲಿಸುವ ಪ್ರಾಣಿಗಳು. ಉದಾ: ಸ್ಪಂಜುಪ್ರಾಣಿ, ಹವಳ, ಕಂಟಕಚರ್ಮಿ ಇತ್ಯಾದಿ.

ಜಲಬಯೋಮ್‌ನ ವಲಯಗಳು : ದ್ಯುತಿ ವಲಯ: ಸೂರ್ಯನ ಬೆಳಕು ಪ್ರವೇಶಿಸುವ ಜಲಬಯೋಮ್‌ನ ನೀರಿನ ಭಾಗ. 2) ಅಬಿಸ್ ವಲಯ: ಸೂರ್ಯನ ಬೆಳಕು ಪ್ರವೇಶಿಸಲಾಗದ ನೀರಿನ ಭಾಗ.

**ಪರಿಸರ ವ್ಯವಸ್ಥೆ:** "ಒಂದು ಪರಿಸರದಲ್ಲಿ ಜೈವಿಕ ಮತ್ತು ಅಜೈವಿಕ ಘಟಕಗಳ ನಡುವೆ ಪರಸ್ಪರ ಅವಲಂಬನೆ ಮತ್ತು ಪ್ರತಿಕ್ರಿಯೆ ತೋರುವಂತಹ ವ್ಯವಸ್ಥೆಯೇ ಪರಿಸರ ವ್ಯವಸ್ಥೆ." ಪರಿಸರ ವ್ಯವಸ್ಥೆಯ ಮೂರು ವಿಧ:

1) ಭೂಪರಿಸರ ವ್ಯವಸ್ಥೆ: ಹುಲ್ಲುಗಾವಲು, ಮರುಭೂಮಿ, ಕಾಡುಗಳು, ಟಂಡ್ರಾ ಇತ್ಯಾದಿ.

2) ಜಲ ಪರಿಸರ ವ್ಯವಸ್ಥೆ: ಸಮುದ್ರ, ಸಾಗರ, ನದಿ, ಕೆರೆ ಇತ್ಯಾದಿ.

3) ಕೃತಕ ಪರಿಸರ ವ್ಯವಸ್ಥೆ: ಮಾನವ ನಿರ್ಮಿತ ಪರಿಸರ. ಉದಾ: ಅಕ್ವೇರಿಯಂ, ಉದ್ಯಾನವನ, ಮೃಗಾಲಯ, ಹೂದೋಟಗಳು, ಆಕಾಶನೌಕೆ ಇತ್ಯಾದಿ.

ಪರಿಸರ ವ್ಯವಸ್ಥೆಯ ಎರಡು ಘಟಕಗಳು: ಅಜೈವಿಕ ಘಟಕಗಳು: ಗಾಳಿ, ನೀರು, ಮಣ್ಣು, ಉಷ್ಣತೆ, ಲವಣಗಳು, ಇತ್ಯಾದಿ. ಜೈವಿಕ ಘಟಕಗಳು: ಸಸ್ಯಗಳು, ಪ್ರಾಣಿಗಳು, ಸೂಕ್ಷ್ಮಾಣುಜೀವಿಗಳು

ಜೈವಿಕಗಳ ಘಟಕಗಳ ವಿಧಗಳು: 1) ಉತ್ಪಾದಕರು : ಎಲ್ಲಾ ಹಸಿರು ಸಸ್ಯಗಳು, 2) ಭಕ್ಷಕರು (ಗ್ರಾಹಕರು) : 3 ವಿಧ

ಪ್ರಾಥಮಿಕ ಭಕ್ಷಕರು: ಉತ್ಪಾದಕ ಜೀವಿಗಳನ್ನು ನೇರವಾಗಿ ತಿನ್ನುವ ಪ್ರಾಣಿಗಳು. ಉದಾ : ಮೊಲ, ಜಿಂಕೆ, ಆಡು, ಕುರಿ. ದ್ವಿತೀಯ ಭಕ್ಷಕರು: ಪ್ರಾಥಮಿಕ ಭಕ್ಷಕ ಜೀವಿಗಳನ್ನು ಸೇವಿಸುವ ಪ್ರಾಣಿಗಳು. ಉದಾ: ಹುಲಿ, ತೋಳ, ಕಪ್ಪೆ. ತೃತೀಯ ಭಕ್ಷಕರು: ದ್ವಿತೀಯ ಭಕ್ಷಕ ಜೀವಿಗಳನ್ನು ಸೇವಿಸುವ ಪ್ರಾಣಿಗಳು. ಉದಾ: ಹಾವು, ಸಿಂಹ. ವಿಘಟಕರು: ಉತ್ಪಾದಕರು ಹಾಗೂ ಭಕ್ಷಕರು ಸತ್ತ ನಂತರ ಅಥವಾ ಕೊಳೆತ ನಂತರ ಅವುಗಳ ದೇಹದಲ್ಲಿರುವ ಕಾರ್ಬಾನಿಕ್ ವಸ್ತುಗಳನ್ನು ವಿಭಜಿಸುವ ಮೂಲಕ ತಮ್ಮ ಆಹಾರ ಪಡೆಯುವ ಜೀವಿಗಳು. ಉದಾ: ಸೂಕ್ಷ್ಮಾಣುಜೀವಿಗಳು.

**ಆಹಾರ ಸರಪಳಿ**

ಆಹಾರದ ಮೂಲಕ ಶಕ್ತಿಯ ಪರಿಸರ ವ್ಯವಸ್ಥೆಯ ಒಂದು ಪೋಷಣಾ ಸ್ತರದಿಂದ ಮತ್ತೊಂದು ಪೋಷಣಾ ಸ್ತರಕ್ಕೆ ವರ್ಗಾವಣೆಯಾಗುವ ಸಂಬಂಧಗಳನು ಸೂಚಿಸುವುದಕ್ಕೆ ಆಹಾರ ಸರಪಳಿ ಎನ್ನಲಾಗುವುದು. ಆಹಾರ ಸರಪಳಿಯ ವಿಧಗಳು : (ಚಿತ್ರಗಳ ಮೂಲಕವೂ ಬಿಂಬಿಸಬಹುದು)

1. ಸಸ್ಯಾಹಾರಿ ಆಹಾರ ಸರಪಳಿ: ಉದಾ : ಹುಲ್ಲು → ಮಿಡತೆ → ಕಪ್ಪೆ → ಹಾವು

2. ಪರಾವಲಂಬಿ ಆಹಾರ ಸರಪಳಿ: ಉದಾ : ಮರ → ಹಕ್ಕಿ → ಹಕ್ಕಿ → ಹೇನಗಳು → ಏಕಕೋಶಜೀವಿಗಳು

3. ಕೊಳೆತಿನಿ ಆಹಾರ ಸರಪಳಿ: ಉದಾ : ಒಣಗಿದ ಎಲೆ → ಎರೆಹುಳು → ಸಣ್ಣ ಹಕ್ಕಿಗಳು → ದೊಡ್ಡ ಹಕ್ಕಿಗಳು.

**ಆಹಾರ ಸರಪಳಿಯ ಪ್ರಾಮುಖ್ಯತೆ**

- ಪರಿಸರ ವ್ಯವಸ್ಥೆಯಲ್ಲಿ ಕಂಡುಬರುವ ಭಕ್ಷಿಸು, ಭಕ್ಷಿಸಲ್ಪಡು, ಎಂಬ ಕ್ರಿಯೆಯ ಮೂಲಕ ಪ್ರಭೇದಗಳ ಸಂಖ್ಯೆಯ ನಿಯಂತ್ರಣವನ್ನು ಬಿಂಬಿಸುತ್ತದೆ.

- ಪರಿಸರ ವ್ಯವಸ್ಥೆಯಲ್ಲಿರುವ ಸಮತೋಲನ ಮತ್ತು ಸ್ಥಿರತೆಯನ್ನು ಸೂಚಿಸುತ್ತದೆ.

- ಮಾನವನ ಹಸ್ತಕ್ಷೇಪದಿಂದಾಗಿ ವ್ಯವಸ್ಥೆಯಲ್ಲಾಗುವ ಅಸಮತೋಲನವನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

Digitised by Bharatavani, CIIL

## ಆಹಾರ ಜಾಲ

“ಒಂದು ಪರಿಸರ ವ್ಯವಸ್ಥೆಯಲ್ಲಿ ಕಂಡುಬರುವ ವಿವಿಧ ಆಹಾರ ಸರಪಳಿಗಳ ನಡುವೆ ಇರುವ ಪರಸ್ಪರ ಸಂಬಂಧ ಮತ್ತು ಅವಲಂಬನೆಯನ್ನು ತೋರಿಸುವ ಚಿತ್ರಣಕ್ಕೆ ಆಹಾರ ಜಾಲ ಎನ್ನುತ್ತೇವೆ.




**ಪರಿಸರದ ಪಿರಮಿಡ್ಡುಗಳು:** ಪರಿಸರ ವ್ಯವಸ್ಥೆಯಲ್ಲಿನ ವಿವಿಧ ಪೋಷಣಾಸ್ತರಗಳ ಜೀವಿಗಳ ಸಂಬಂಧವನ್ನು ಅವುಗಳ ಸಂಖ್ಯೆ, ಜೀವರಾಶಿ ಮತ್ತು ಶಕ್ತಿಪರಿವರ್ತನಾ ಸಾಮರ್ಥ್ಯದ ಆಧಾರದ ಮೇಲೆ ರೂಪಿಸಲಾಗುವ ಚಿತ್ರಣಗಳು ಪಿರಮಿಡ್‌ನ ಆಕಾರವನ್ನು ಹೋಲುತ್ತವೆ. ಈ ರೀತಿಯ ಚಿತ್ರಣಗಳಿಗೆ ಪರಿಸರದ ಪಿರಮಿಡ್‌ಗಳು ಎನ್ನುತ್ತೇವೆ. ಇವುಗಳಲ್ಲಿ ಮೂರು ವಿಧ.

1. ಸಂಖ್ಯಾ ಪಿರಮಿಡ್: ಈ ಪಿರಮಿಡ್ ಜೀವ ವರ್ಗದಿಂದ ‘ಜೀವ ವರ್ಗಕ್ಕೆ’ ಮುಂದುವರಿದಂತೆ ಅವುಗಳ ಒಟ್ಟು ಸಂಖ್ಯೆ ಹೆಚ್ಚುತ್ತ ಹೋಗುತ್ತದೆ ಎನ್ನುವುದನ್ನು ಬಿಂಬಿಸುತ್ತದೆ.




**ಸಂಖ್ಯೆಗಳ ತಲೆಕೆಳಗಾದ ಪಿರಮಿಡ್**




**ನೇರವಾದ ಪಿರಮಿಡ್**

**ಜೀವರಾಶಿ ಪಿರಮಿಡ್**




**ಶಕ್ತಿಯ ಪಿರಮಿಡ್:**




**“ಜೈವಿಕ ಸಾಂದ್ರತಾಭಿವೃದ್ಧಿ”**

“ಒಂದು ಪರಿಸರ ವ್ಯವಸ್ಥೆಯಲ್ಲಿ ಮಾನವ ಎಲ್ಲ ಆಹಾರ ಸರಪಳಿಗಳ ಜೊತೆ ಸಂಪರ್ಕ ಹೊಂದಿದ್ದು, ಅವನ ಚಟುವಟಿಕೆಗಳಿಂದ ಬಿಡುಗಡೆಯಾಗುವ ಬಹುತೇಕ

Digitised by Bharatavani, CIIL

ಮಲಿನಕಾರಕಗಳು ವಿಘಟನೆಗೆ ಒಳಪಡದೆ ಸರಪಳಿಯನ್ನು ಪ್ರವೇಶಿಸುವುದರ ಮೂಲಕ ಅವುಗಳ ಸಾಂದ್ರತೆ ಒಂದು ಸ್ತರದಿಂದ ಮತ್ತೊಂದು ಸ್ತರಕ್ಕೆ ಹೆಚ್ಚುತ್ತಾ ಹೋಗುವ ಪ್ರಕ್ರಿಯೆಗೆ ಜೈವಿಕ ಸಾಂದ್ರತಾಭಿವೃದ್ಧಿ" ಎನ್ನುತ್ತಾರೆ.

ಉದಾಹರಣೆಗೆ : ಗಿಡಗಳಿಗೆ ಸಿಂಪಡಿಸುವ ಡಿ.ಡಿ.ಟಿ. ಅಥವಾ ಮೆಥೆನಾಲ್, ಸಸ್ಯಗಳನ್ನು ಸೇವಿಸುವ ಪ್ರಾಥಮಿಕ ಭಕ್ಷ್ಯಗಳಾದ ಮೊಲ, ಆಡು, ಕುರಿ ಮುಂತಾದವುಗಳ ಮೂಲಕ ಮಾನವನ ದೇಹ ಪ್ರವೇಶಿಸುವಾಗ ಮಾನವ, ಗಿಡ, ಮೊಲ, ಆಡು, ಕುರಿ ಮತ್ತು ಅವುಗಳ ಇತರ ಉತ್ಪನ್ನಗಳನ್ನು ಸೇವಿಸುವುದರ ಮೂಲಕ ಡಿ.ಡಿ.ಟಿ ಅಥವಾ ಮೆಥೆನಾಲ್‌ನ ಸಾಂದ್ರತೆ ಕ್ರಮವಾಗಿ ಶೇ. 5 (ಗಿಡ) ಶೇ. 10 (ಪ್ರಾಥಮಿಕ ಭಕ್ಷಕರು) ಹಾಗೂ ಶೇ. 25 (ಮಾನವನಿಗೆ) ರಂತೆ ಹೆಚ್ಚುತ್ತಾ ಹೋಗುತ್ತದೆ.

**ಜೀವ ಭೂ ರಾಸಾಯನಿಕ ಚಕ್ರಗಳು:** "ಪರಿಸರ ವ್ಯವಸ್ಥೆಯಲ್ಲಿ ಜೈವಿಕ ಹಾಗೂ ಅಜೈವಿಕ ಘಟಕಗಳ ನಡುವೆ ಎಲ್ಲಾ ಮೂಲವಸ್ತುಗಳೂ ಚಕ್ರೀಯವಾಗಿ ಚಲಿಸುತ್ತವೆ.ಈ ಚಲನೆಯನ್ನು ಜೀವ ಭೂ ರಾಸಾಯನಿಕ ಚಕ್ರ" ಎನ್ನಲಾಗುತ್ತದೆ. ಇದರಲ್ಲಿ ಎರಡು ಪ್ರಮುಖ ಘಟಕಗಳು ಕಂಡುಬರುತ್ತವೆ.

**1. ಸಂಗ್ರಹ ಮೂಲ:** ಇದು ಮೂಲವಸ್ತುಗಳ ನಿಧಾನಗತಿಯ ಚಲನೆ, ಮತ್ತು ಅಜೈವಿಕ ಘಟಕಗಳನ್ನು ಹೊಂದಿರುವ ಭಾಗವಾಗಿದೆ. ಇದು ಮೂಲವಸ್ತು ಸಂಗ್ರಹಗೊಂಡಿರುವ ಭಾಗವನ್ನು ಪ್ರತಿನಿಧಿಸುತ್ತದೆ. ವಾಯುಗೋಳ, ಶಿಲಾಗೋಳ ಹಾಗೂ ಜಲಗೋಳ.

**2. ವಿನಿಮಯ ಮೂಲ:** ಇದು ಮೂಲವಸ್ತುಗಳ ತೀವ್ರಗತಿಯ ಚಲನೆ ಮತ್ತು ಜೈವಿಕ ಘಟಕಗಳನ್ನು ಒಳಗೊಂಡಿರುವ ಭಾಗ, ಉದಾ: ಸಸ್ಯ, ಪ್ರಾಣಿ ಮತ್ತು ಸೂಕ್ಷ್ಮಾಣುಜೀವಿಗಳು.

**ಜೀವ ಭೂ ರಾಸಾಯನಿಕ ಚಕ್ರದ ಎರಡು ಕ್ರಿಯೆಗಳು:**

1. ಸ್ಥಿರೀಕರಣ : ಮೂಲವಸ್ತುಗಳು ಸಂಗ್ರಹಮೂಲದಿಂದ ವಿನಿಮಯ ಮೂಲಕ್ಕೆ ಚಲಿಸುವ ಕ್ರಿಯೆ.

2. ಮರುಚಿತ್ರೀಕರಣ : ಮೂಲವಸ್ತುಗಳು ವಿನಿಮಯ ಮೂಲದಿಂದ ಸಂಗ್ರಹಮೂಲಕ್ಕೆ ಹಿಂದಿರುಗುವ ಕ್ರಿಯೆ.

**ಜೀವ ಭೂ ರಾಸಾಯನಿಕ ಚಕ್ರದ ಎರಡು ವಿಧಗಳು.**

1. ಅನಿಲ ಚಕ್ರ (ಪರಿಪೂರ್ಣ ಚಕ್ರ): ಉದಾ : ಇಂಗಾಲ, ಆಮ್ಲಜನಕ ಹಾಗೂ ಸಾರಜನಕ.

2. ಚರಟ ಚಕ್ರ (ಅಪರಿಪೂರ್ಣ ಚಕ್ರ): ಉದಾ : ರಂಜಕ, ಗಂಧಕ.

**ಪರಿಸರ ಮಾಲಿನ್ಯ:** ಪರಿಸರದಲ್ಲಿರುವ ಅಜೈವಿಕ ಘಟಗಳ ಭೌತ, ರಾಸಾಯನಿಕ ಮತ್ತು ಜೈವಿಕ ಗುಣಲಕ್ಷಣಗಳಲ್ಲಾಗುವ ಅನಪೇಕ್ಷಿತ ಬದಲಾವಣೆಯೇ ಪರಿಸರ ಮಾಲಿನ್ಯ. ಮಾಲಿನ್ಯದ ವಿಧಗಳು: ವಾಯು ಮಾಲಿನ್ಯ, ಜಲ ಮಾಲಿನ್ಯ, ಭೂ ಮಾಲಿನ್ಯ, ಶಬ್ದ ಮಾಲಿನ್ಯ, ಉಷ್ಣ ಮಾಲಿನ್ಯ, ವಿಕಿರಣ ಮಾಲಿನ್ಯ.

**ಮಲಿನಕಾರಕಗಳು**

ಮಾಲಿನ್ಯವನ್ನುಂಟು ಮಾಡುವ ವಸ್ತುಗಳು : ಈ ವಸ್ತುಗಳಲ್ಲಿ ಎರಡು ವಿಧ. 1. ಜೈವಿಕ ವಿಘಟನೆಗೆ ಒಳಪಡುವ ಮಲಿನಕಾರಕಗಳು 2. ಜೈವಿಕ ವಿಘಟನೆಗೆ ಒಳಪಡದ ಮಲಿನಕಾರಕಗಳು.

**ಪರಿಸರ ಮಾಲಿನ್ಯದ ಪರಿಣಾಮಗಳು**

- **ಸ್ಮಾಗ್:** ವಿಷ ಅನಿಲಗಳು ವಾತಾವರಣದಲ್ಲಿರುವ ನೈಟ್ರೋಜನ್ ಆಕ್ಸೈಡ್‌ಗಳ ಜೊತೆ ದ್ಯುತಿ ರಾಸಾಯನಿಕ ಕ್ರಿಯೆಗೆ ಒಳಪಟ್ಟು ಉಂಟಾಗುವ ರಾಸಾಯನಿಕ ವಸ್ತುಗಳು.

- **ಆಮ್ಲ ಮಳೆ:** ಸ್ಮಾಗ್‌ನಲ್ಲಿರುವ ಸಲ್ಫರ್ ಡೈ ಆಕ್ಸೈಡ್ ಮತ್ತು ಸಲ್ಫರ್ ಡ್ರೈ ಆಕ್ಸೈಡ್‌ನಂತಹ ಅನಿಲಗಳು ವಾತಾವರಣವನ್ನು ಸೇರಿ ನೀರಿನ ಜೊತೆ ಬೆರೆತು ಆಮ್ಲಗಳಾಗಿ ಪರಿವರ್ತನೆ ಹೊಂದಿ, ಮಳೆಯ ರೂಪದಲ್ಲಿ ಹನಿಯುವುದು.

- **ಹಸಿರು ಮನೆ ಪರಿಣಾಮ** (Green House Effect): ಸೂರ್ಯನಿಂದ ಬಿಡುಗಡೆಯಾಗವ ಅವಕೆಂಪು ಕಿರಣಗಳನ್ನು ವಾತಾವರಣದಲ್ಲಿರುವ ಇಂಗಾಲದ ಡೈ ಆಕ್ಸೈಡ್ ಮತ್ತು ಇತರ ಅನಿಲಗಳು ಹೀರಿಕೊಂಡು ಭೂಮಿಗೆ ಪ್ರತಿಫಲಿಸುತ್ತವೆ. ಇದರಿಂದ ಭೂಮಿಯ ಶಾಖದ ಮಟ್ಟ ಏರಿಕೆಯಾಗುತ್ತದೆ. ಇದು ಹಸಿರುಮನೆಯನ್ನು ಹೋಲುವುದರಿಂದ ಈ ಕ್ರಿಯೆಗೆ 'ಹಸಿರು ಮನೆ ಪರಿಣಾಮ' ಎನ್ನುತ್ತೇವೆ.

**ಓಝೋನ್ ಪದರದ ನಾಶ:** ಓಝೋನ್ ಒಂದು ನೈಸಗಿಕ ಶೋಧಕ ಪದರವಾಗಿದ್ದು ಸೂರ್ಯನಿಂದ ಭೂಮಿಗೆ ಬರುವ ಹಾನಿಕಾರಕ ವಿಕಿರಣಗಳನ್ನು ತಡೆಯುತ್ತದೆ. ಅಈಅ ಮತ್ತು ಇತರ ಮಲಿನಕಾರಕಗಳು ಓಜೋನ್ ಪದರವನ್ನು ಹಾಳು ಮಾಡುವುದರ ಮೂಲಕ ಸಸ್ಯ ಮತ್ತು ಪ್ರಾಣಿಗಳಲ್ಲಿ ಉತ್ಪರಿವರ್ತನೆ ಮತ್ತು ಚರ್ಮದ ಕ್ಯಾನ್ಸರ್ ಮುಂತಾದ ದುಷ್ಪರಿಣಾಮಗಳನ್ನು ಉಂಟುಮಾಡುತ್ತವೆ.

**ಓಝೋನ್:** ಸೂರ್ಯರಶ್ಮಿಯಲ್ಲಿರುವ ಹಾನಿಕಾರಕ ಕಿರಣಗಳು ಭೂಮಿಗೆ ತಲುಪದಂತೆ ತಡೆಯುವ, ಭೂಮಿಯನ್ನು ಆವರಿಸುವ ನೈಸರ್ಗಿಕ ಶೋಧಕವೇ ಓಝೋನ್, ಓಜೋನ್ ಪದರವು ಮೂರು ಆಕ್ಸಿಜನ್ ಪರಮಾಣುಗಳಿಂದ ಮಾಡಲ್ಪಟ್ಟಿದೆ. (ಔ3) ವಾತಾವರಣದ ಸ್ತರಗೋಲದಲ್ಲ ಕಂಡುಬರುವ ಈ ಪದರವು ಸೂರ್ಯನ ಕಿರಣಗಳಲ್ಲಿರುವ ನೇರಳಾತೀತ ಕಿರಣಗಳು ಭೂಮಿಗೆ ಬಾರದಂತೆ ತಡೆದು, ಭೂಮಿಯ ಮೇಲಿರುವ ಜೀವಿಗಳಿಗೆ ರಕ್ಷಣೆಯನ್ನು ನೀಡುತ್ತದೆ.

**ಓಝೋನ್ ಪದರದ ನಾಶ (ಓಝೋ ರಂಧ್ರ)**

1. ಫ್ರೀ ರಾಡಿಕಲ್‌ಗಳು. 2. ಕ್ಲೋರೋಫ್ಲೋರೊ ಕಾರ್ಬನ್‌ಗಳು ಮತ್ತು 3. ಸಲ್ಫೇಟ್ ಏರೋಸಾಲ್‌ಗಳು

ಈ ಮೂರೂ ಓಝೋನ್ ಪದರವನ್ನು ತೆಳ್ಳಗಾಗಿಸಿ ಅದರಲ್ಲಿ ರಂಧ್ರವನ್ನು ಉಂಟುಮಾಡಲು ಕಾರಣವಾಗುತ್ತದೆ. ಇದರಿಂದಾಗಿ ಸೂರ್ಯನ ನೇರಳಾತೀತ ಕಿರಣಗಳು ಭೂಮಿಯನ್ನು ತಲುಪುವುದರಿಂದ ಅನುವಂಶೀಯ ಅಸ್ತವ್ಯಸ್ತತೆ. ಚರ್ಮದ ಕ್ಯಾನ್ಸರ್, ಕಣ್ಣಿನ ಅಕಾಲಿಕ ಪೊರೆ ಮುಂತಾದ ತೊಂದರೆಗಳು ಕಾಣಿಸಿಕೊಳ್ಳುತ್ತವೆ.

**ಭೂತಾಪಮಾನ / ಜಾಗತಿಕ ತಾಪಮಾನ ಏರಿಕೆ**

ಹಸಿರುಮನೆ ಪರಿಣಾಮದಿಂದಾಗಿ, ಭೂಮಿಯ ಸರಾಸರಿ ತಾಪಮಾನದಲ್ಲಿ ಉಂಟಾಗುವ ಏರಿಕೆಯನ್ನು 'ಜಾಗತಿಕ ತಾಪಮಾನ ಏರಿಕೆ' ಎನ್ನುತ್ತೇವೆ.

**ಭೂತಾಪಮಾನ ಏರಿಕೆಯ ಪರಿಣಾಮಗಳು**

ಹಿಮಗೆಡ್ಡೆಗಳು ಮತ್ತು ಹಿಮಪರ್ವತಗಳ ಕರಗುವಿಕೆಯಿಂದ ಸಮುದ್ರಮಟ್ಟದಲ್ಲಿ ಏರಿಕೆಯಾಗಬಹುದು. ತೀರಪ್ರದೇಶದ ಪಟ್ಟಣಗಳು

Digitised by Bharatavani, CIIL

ಮುಳುಗಡೆಯಾಗಬಹುದು. ಧ್ರುವ ಪ್ರದೇಶದ ಹಿಮಕರಗಿ ಕೂಡ ಸಮುದ್ರ ಮಟ್ಟದಲ್ಲಿ ಏರಿಕೆಯಾಗಬಹುದು. ತಾಪಮಾನ ಏರಿಕೆಯು ಸಸ್ಯ ಮತ್ತು ಪ್ರಾಣಿವರ್ಗದ ಮೇಲೆ ಪರಿಣಾಮ ಬೀರುತ್ತದೆ. ಜೀವಗಳ ಜೀವನ ಚಕ್ರ ಮತ್ತು ಪಕ್ಷಿಗಳ ವಲಸೆ ಸಹ ಏರಿಕೆಯ ಪ್ರಭಾವಕ್ಕೊಳಪಡುತ್ತವೆ. "ಪ್ರತಿವರ್ಷ **ಸೆಪ್ಟೆಂಬರ್ 16** ರಂದು '**ವಿಶ್ವ ಓಝೋನ್‌ದಿನ**'ವನ್ನಾಗಿ ಆಚರಿಸಲಾಗುತ್ತದೆ."

**ಶಿಕ್ಷಣದಲ್ಲಿ ಜೀವ ಪರಿಸರ ವಿಜ್ಞಾನದ ಪಾತ್ರ:**

ಶಿಕ್ಷಣದ ಪ್ರಮುಖ ಗುರಿ 'ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ.' ಈ ಗುರಿಯ ಸಾಧನೆಯಾಗುವಲ್ಲಿ ವ್ಯಕ್ತಿಯ ಸುತ್ತಲಿನ ಪರಿಸರದ ಪ್ರಭಾವ ಮತ್ತು ಪ್ರೇರಣೆ ಪ್ರತಿಕ್ರಿಯೆಗಳು ಬಹುಪ್ರಮುಖ ಪಾತ್ರ ವಹಿಸುತ್ತವೆ. ಅದು ಕಾರಣ ವ್ಯಕ್ತಿಯ ವರ್ತನೆಗಳು ಯಾವಾಗಲೂ ಆತ ಬೆಳೆದ ಪರಿಸರಕ್ಕನುಗುಣವಾಗಿಯೇ ಇರುತ್ತವೆ. ಪರಿಸರ ಎಂದಾಗ ಕೇವಲ ಸಾಮಾಜಿಕ ಪರಿಸರವಲ್ಲ. ಭೌತಿಕ ಪರಿಸರದ ಅಂಶಗಳೂ ವ್ಯಕ್ತಿಯ ಬೆಳವಣಿಗೆಯನ್ನು ಪ್ರಭಾವಿಸುತ್ತವೆ. ಅಂದಾಗ ಜೀವಿಗಳು ವಾಸಿಸಲು ಯೋಗ್ಯವಾದ ಏಕೈಕ ಭೂಮಿಯನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು ಮುಂದಿನ ಪೀಳಿಗೆಗೂ ಆರೋಗ್ಯಕರ ಪರಿಸರವನ್ನು ಉಳಿಸಿ, ಬೆಳೆಸುವ ಬಹುದೊಡ್ಡ ಸವಾಲು ನಮ್ಮ ಮುಂದಿದೆ.

ಇಂದು ಮಾನವನ ಚಟುವಟಿಕೆಗಳು ಹಾಗೂ ಧೋರಣೆಗಳಿಂದಾಗಿ ಭೂಮಿ ತಾಯಿ ಅನುಭವಿಸುತ್ತಿರುವಷ್ಟು ಕಷ್ಟ, ಸಮಸ್ಯೆ, ಸವಾಲುಗಳನ್ನು ಮಾನವನೂ ಅನುಭವಿಸುತ್ತಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಪರಿಸರದ ಒಂದು ಭಾಗವಾದ ಮಾನವ, ತನಗಿಂತಲೂ ಮೊದಲಿಗೆ ಭೂಮಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಬಹುತೇಕ ಜೀವಿಗಳನ್ನು ಒಂದೊಂದಾಗಿ ನಾಶಗೊಳಿಸುತ್ತಾ, ಕೊನೆಗೆ ತನಗೇ ಅಸ್ತಿತ್ವವಿಲ್ಲದ ಸ್ಥಿತಿಯನ್ನು ಇಂದು ಸೃಷ್ಟಿಸಿಕೊಂಡಿದ್ದಾನೆ. ತಾನು ಸೃಷ್ಟಿಸಿಕೊಂಡಿರುವ. ಸೃಷ್ಟಿಸಿಕೊಳ್ಳುತ್ತಿರುವ ಈ ಸ್ಥಿತಿ ತನ್ನನ್ನೂ ಉಳಿಸುವುದಿಲ್ಲವೆಂಬ ಸತ್ಯದ ಅರಿವಾಗಿರುವ ಮಾನವ, ತನ್ನ ಪರಿಸರವನ್ನು ಉಳಿಸದೆ, ರಕ್ಷಿಸದೆ ಇದ್ದರೆ ತನಗೂ ಉಳಿಗಾಲವಿಲ್ಲ. ಎಂಬ ನೈಜ ಸತ್ಯವನ್ನು ಅರಿತಿರುವ ಈ ಕಾಲಘಟ್ಟದಲ್ಲಿ ಪರಿಸರ ವಿಜ್ಞಾನವನ್ನು ಶಿಕ್ಷಣದ ಪ್ರಮುಖ ವಿಷಯವಾಗಿ ಪರಿಗಣಿಸಿ ಶಿಕ್ಷಣದ ಎಲ್ಲ ಹಂತಗಳಲ್ಲಿ ಅಳವಡಿಸಲೇಬೇಕಾದ ಅಗತ್ಯವಿದೆ. ಅದಕ್ಕಾಗಿ ಪರಿಸರ ಜೀವಶಾಸ್ತ್ರದಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಬೇಕಾದ ಅಗತ್ಯವಿದೆ.

- ಪರಿಸರದ ಜೈವಿಕ ಅಜೈವಿಕ ಘಟಕಗಳು, ಅವುಗಳ ಪರಸ್ಪರಾವಲಂಬನೆ, ಪರಿಸರ ವ್ಯವಸ್ಥೆಯ ವಿಧಗಳು, ಅವುಗಳಲ್ಲಿನ ಆಹಾರ ಸರಪಳಿಗಳು, ಆಹಾರ ಜಾಲ, ಅವುಗಳ ಪೋಷಣಾಸ್ತರದಲ್ಲಾಗುವ ವ್ಯತ್ಯಾಸ, ಅಡಚನೆಗಳಿಂದ ಮಾನವ ಇಡೀ ಪರಿಸರದ ಮೇಲಾಗುವ ದುಷ್ಪರಿಣಾಮಗಳು, ಆಹಾರ ಸರಪಳಿಗಳ ಯಥಾಸ್ಥಿತಿ ಕಾಪಾಡಿಕೊಳ್ಳಲು ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಪಠ್ಯಸೂಚಿಯಲ್ಲಿ ಅಳವಡಿಸಿದರೆ ಪರಿಸರದ ಜೀವ ವೈವಿಧ್ಯತೆಗಳನ್ನು ಅರಿಯುವ ಹಾಗೂ ತನ್ಮೂಲಕ ಅವುಗಳನ್ನು ಉಳಿಸಿ-ಬೆಳೆಸುವ ಕೆಲಸ ಶಿಕ್ಷಣದಿಂದಾಗಬೇಕಿದೆ.

- ಪರಿಸರದಿಂದ ಕಣ್ಮರೆಯಾಗುತ್ತಿರುವ ಎಷ್ಟೋ ಸಸ್ಯ ಮತ್ತು ಪ್ರಾಣಿ ಪ್ರಭೇದಗಳನ್ನು ಕ್ಷುಲ್ಲಕ ಸಂಗತಿಯೆಂದು ಪರಿಗಣಿಸದೆ, ರಕ್ಷಿಸಬೇಕಿದೆ. ಇಲ್ಲವಾದರೆ ಅದಕ್ಕಾಗಿ ದೊಡ್ಡ ಬೆಲೆ ತೆರಬೇಕಾಗುತ್ತದೆ. ಇವುಗಳನ್ನು ರಕ್ಷಿಸಬೇಕಾದ ಅಗತ್ಯದ ಅರಿವನ್ನು ವಿದ್ಯಾರ್ಥಿಗಳಿಗೆ ನೀಡಬೇಕು.

ಶಿಕ್ಷಣದ ಮೂಲಕ ಸಸ್ಯ ಹಾಗೂ ಪ್ರಾಣಿಗಳ ಜೀವವೈವಿಧ್ಯತೆ, ಅವುಗಳ ಸಂರಕ್ಷಣೆ ಸಂರಕ್ಷಣ ಸ್ಥಳಗಳಾದ ಅರಣ್ಯ, ವನ್ಯಧಾಮ, ಉದ್ಯಾನವನಗಳ ಪ್ರಾಮುಖ್ಯ, ರಕ್ಷಣೆಯ ಉದ್ದೇಶಗಳು, ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜೀವ ವೈವಿಧ್ಯತೆಯ ರಕ್ಷಣೆಗಾಗಿ ಕೈಗೊಂಡಿರುವ ಕ್ರಮಗಳ ಬಗ್ಗೆ ಪಠ್ಯಪುಸ್ತಕದಲ್ಲಿ ವಿಷಯವಿದ್ದರೆ, ಮಕ್ಕಳಲ್ಲಿ ಅವುಗಳ ಬಗ್ಗೆ ಕಾಳಜಿ, ಕುತೂಹಲ, ಪ್ರಶಂಸೆ ಕೃತಜ್ಞತೆಗಳನ್ನು ಬೆಳೆಸಲೇಬೇಕಾದ ತುರ್ತು ಅಗತ್ಯವಿದೆ.

- ಜಗತ್ತು ಇಂದು ಎದುರಿಸುತ್ತಿರುವ ದೊಡ್ಡ ಸವಾಲು 'ಸಂಪನ್ಮೂಲಗಳ ಬಳಕೆ', ಸಂಪನ್ಮೂಲಗಳ ಬಳಕೆ, ಪುನರ್‌ಬಳಕೆ, ಮರು ಚಕ್ರೀಕರಣಗಳ ಮೂಲಕ ಸಂಪನ್ಮೂಲಗಳ ಅಭಿವೃದ್ಧಿಯಂತಹ ವಿಷಯಗಳನ್ನು ಪಠ್ಯಕ್ರಮದ ಒಂದು ಭಾಗವಾಗಿಸಿದ್ದರೆ ಈಗ ಉಳಿದಿರುವ ವಿನಾಶದ ಅಂಚಿನಲ್ಲಿರುವ ಸಂಪನ್ಮೂಲಗಳನ್ನು ಸದ್ಬಳಕ್ಕೆ ಮಾಡಬೇಕಾದ ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ವಿದ್ಯಾರ್ಥಿಗಳಿಗೆ ಸಂಪನ್ಮೂಲಗಳ ಮಹತ್ವವನ್ನು ಅವುಗಳ ದುರ್ಬಳಕೆ ಮಾಡದಿರುವುದನ್ನು, ಅವುಗಳನ್ನು ಸದುಪಯೋಗ ಮಾಡುವಂತೆ ಶಿಕ್ಷಣ ನೀಡಬೇಕು.

- 'ಮಾನವನನ್ನು ಅವಲಂಬಿಸದೆ, ತನಗೆ ತಾನೇ ಸಮತೋಲನಗೊಳಿಸಿಕೊಳ್ಳುವ ಸಾಮರ್ಥ್ಯ ಪರಿಸರಕ್ಕೆ ಇದೆ' ಎಂಬ ಕಹಿ ಸತ್ಯವನ್ನು ನಿರೂಪಿಸುವ ಮೂಲವಸ್ತುಗಳ ಚಕ್ರಗಳಾದ ಜಲಚಕ್ರ, ಇಂಗಾಲಚಕ್ರ, ನೈಟ್ರೋಜನ್ ಚಕ್ರ ಮತ್ತು ರಂಜಕದ ಚಕ್ರಗಳನ್ನು ಪಠ್ಯಭಾಗವಾಗಿಸಿ ವಿವರಿಸಬೇಕಾದ ಅನಿವಾರ್ಯತೆಯೂ ಇದೆ.

- ಮಾಲಿನ್ಯದ ವಿಧಗಳಾದ ಜಲ, ವಾಯು, ಭೂ, ಉಷ್ಣ, ಶಬ್ದ, ವಿಕಿರಣ ಮಾಲಿನ್ಯಗಳು, ಅವುಗಳಿಗೆ ಕಾರಣ, ಪರಿಣಾಮ ಪರಿಹಾರ ಇತ್ಯಾದಿ ಅಂಶಗಳನ್ನು ವ್ಯಾಪಕವಾಗಿ ಅಧ್ಯಯನ ಮಾಡಿದರೆ, ಶಿಕ್ಷಣವು ಮಾಲಿನ್ಯದ ತಡೆಗೆ ಹೊಸದಾದ ದಿಕ್ಸೂಚಿಯನ್ನೇ ಸೂಚಿಸಬೇಕಾದ ತುರ್ತು ಅಗತ್ಯವಿದೆ.

- ಭೂಮಿಯ ಸಮಸ್ಯೆ ಇಂದು ವಿಶ್ವದ ಎಲ್ಲ ನಾಗರಿಕರ ಸಮಸ್ಯೆಯಾಗಿದೆ. ಜಾಗತಿಕ ತಾಪಮಾನ ಓಝೋನ್ ಪದರದ ನಾಶ ಹಸಿರುಮನೆ ಪರಿಣಾಮ ಆಮ್ಲ ಮಳೆ ಮುಂತಾದ ಪರಿಕಲ್ಪನೆಗಳನ್ನು ವಿಸ್ತೃತವಾಗಿ ಶಿಕ್ಷಣದಲ್ಲಿ ಅಳವಡಿಸಬೇಕು. ಆ ಮೂಲಕ ಸಾಮಾನ್ಯ ವ್ಯಕ್ತಿ ಮನೆ-ಮನಗಳಲ್ಲೂ ತುರ್ತು ಬದಲಾವಣೆ ಉಂಟುಮಾಡುವ ಅಸ್ತ್ರವಾಗಿ ಬಳಸಬೇಕಿದೆ.

- ಈ ಎಲ್ಲ ಸಮಸ್ಯೆ-ಸವಾಲುಗಳನ್ನು ನಿವಾರಿಸುವಲ್ಲಿ ವಿಜ್ಞಾನದ ಪಾತ್ರ ವಿಜ್ಞಾನಿಗಳ ಶ್ರಮ, ಕೈಗೊಳ್ಳಬೇಕಾದ ಸಂಶೋಧನೆಗಳು ವಿಚಾರಸಂಕಿರಣಗಳು. ರಾಷ್ಟ್ರ - ಅಂತಾರಾಷ್ಟ್ರಗಳ ಮಟ್ಟದಲ್ಲಿ ಚರ್ಚಿತವಾಗುವ ಸಭೆಗಳ ಬಗೆಗಿನ ಸ್ಪಷ್ಟ ಮಾಹಿತಿ ಶಿಕ್ಷಣದ ಮೂಲಕ ಶಿಕ್ಷಣದ ಎಲ್ಲ ಹಂತಗಳ ವಿದ್ಯಾರ್ಥಿಗಳಿಗೂ ತಲುಪಬೇಕು. ತನ್ನ ಸುತ್ತಲಿನ ಪರಿಸರವನ್ನು ಉಳಿಸುವಲ್ಲಿ ತನ್ನ ಪಾತ್ರವೇನು ಎಂಬುದನ್ನು ಪ್ರತಿಯೊಬ್ಬರು ಕಂಡುಕೊಳ್ಳಬೇಕಾದ ತುರ್ತು ಅಗತ್ಯವಿದೆ.

- ಮೇಲಿನ ಅಂಶಗಳಿಗೆ ಪೂರಕವಾಗಿರುವ ಮತ್ತೊಂದು ದೊಡ್ಡ ಸಮಸ್ಯೆಯೆಂದರೆ ತ್ಯಾಜ್ಯ ವಿಲೇಮಾರಿ, ದ್ರವ, ಘನರೂಪದ ತ್ಯಾಜ್ಯಗಳು, ವಿಕಿರಣ ತ್ಯಾಜ್ಯಗಳು. 'ಇ' ತ್ಯಾಜ್ಯಗಳು ಬಾಹ್ಯಾಕಾಶದಲ್ಲಿ ಸಂಗ್ರಹವಾಗುತ್ತಿರುವ ತ್ಯಾಜ್ಯಗಳು – ಅವುಗಳಿಂದುಂಟಾಗುವ ಆರೋಗ್ಯ ಸಮಸ್ಯೆಗಳು, ತ್ಯಾಜ್ಯಗಳ ವಿಲೇವಾರಿಯ ತೊಡಕುಗಳು ಮುಂದೊಂದು ದಿನ ಒಡ್ಡ ಬಹುದಾದ ಸಂಕಷ್ಟ ಸವಾಲುಗಳನ್ನು ಶಿಕ್ಷಣದ ಮುಖೇನ ಮನಗಾಣಬೇಕಿದೆ. ಹಳ್ಳಿಯಿಂದ ದಿಲ್ಲಿಯವರೆಗೆ 'ಪರಿಸರ ಜಾಗೃತಿ' ಮೂಡಿಸುವ ಅನಿವಾರ್ಯತೆಯನ್ನು ಪ್ರತಿ ಶಾಲೆಗಳಲ್ಲೂ (ಎಲ್ಲ ಹಂತ) 'ಇಕೋ-ಕ್ಲಬ್'ನ್ನು ಸ್ಥಾಪಿಸಿ ಅದು ಶಿಕ್ಷಣದ ಒಂದು ಭಾಗವಾಗಿರುವಂತೆ ನೋಡಿಕೊಳ್ಳಬೇಕು. ಇವೆಲ್ಲವೂ ಸಾಧ್ಯವಾಗಬೇಕಾದರೆ ಮೂಲವಿಜ್ಞಾನವನ್ನು ಚಟುವಟಿಕೆ ಆಧಾರಿತ ಕಲಿಕೆಯಾಗಿಸದೆ ಜೀವ

Digitised by Bharatavani, CIIL

ಪರಿಸರ ಆಧಾರಿತ ಕಲಿಕೆಯಾಗಿಸಬೇಕು. ಆಗ ವಿಜ್ಞಾನವು ವಿದ್ಯಾರ್ಥಿಗಳಿಗೆ ಸಾಮಾನ್ಯ ಜನರಿಗೆ ಜೀವ ಪರಿಸರ ಸ್ನೇಹ ವಿಜ್ಞಾನ' ಎಂಬ ಮನೋಭಾವ, ವಾತಾವರಣ ಸೃಷ್ಟಿಯಾಗುತ್ತದೆ. ಆ ವಾತಾವರಣವನ್ನು ಶಿಕ್ಷಣದ ಮುಖೇನ ಸೃಷ್ಟಿಸಲೇಬೇಕಾದ ಸಮಯವೂ ಇದಾಗಿದೆ.

–ಉ.ದೇ

## ಜೀವ ವಿಜ್ಞಾನಗಳ ಬೋಧನೆ

ಇವು ಪ್ರಸ್ತುತ ಪ್ರಪಂಚದಲ್ಲಿ ಅತಿ ಮಹತ್ತರವಾದ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಮೊಟ್ಟ ಮೊದಲನೆಯದಾಗಿ, ವ್ಯಕ್ತಿಯು ತನ್ನ ಸುತ್ತಮುತ್ತಲ ಪರಿಸರದೊಂದಿಗೆ, ಗೊತ್ತಿದ್ದೋ, ಗೊತ್ತಿಲ್ಲದೆಯೋ, ಅಂತರ್‌ಕ್ರಿಯೆಗೆ ಒಳಗಾಗುತ್ತಾನೆ. ಇದರಿಂದಾಗಿ ಪ್ರಕೃತಿದತ್ತವಾದ ಸಸ್ಯಗಳು, ಪ್ರಾಣಿಗಳು ಮತ್ತು ಇನ್ನಿತರ ಭೌತಿಕ ಅಂಶಗಳ ಅರಿವು ಸ್ವಭಾವ ಸಹಜವಾಗಿ ದೊರೆಯುತ್ತದೆ. ಜೀವ ವಿಜ್ಞಾನದ ವಿಷಯಗಳು ಈ ಕೆಳಕಂಡ ಅಂಶಗಳಿಂದಾಗಿ ಹೆಚ್ಚು ಪ್ರಾಮುಖ್ಯವೆನಿಸುತ್ತವೆ.

- ಸ್ವಚ್ಛ ಮತ್ತು ಆರೋಗ್ಯಕರ ಜೀವನಕ್ಕಾಗಿ ಅಗತ್ಯವಿರುವ ಜ್ಞಾನದ ಅರಿವು, ಅನ್ವಯ, ಮತ್ತು ಕೌಶಲಗಳು–ಇವುಗಳನ್ನು ಕಲಿತು, ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳಲು
- ನಮ್ಮ ದೇಶದ ಮುಖ್ಯ ಕಸುಬಾಗಿರುವ ಕೃಷಿ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿನ ವಿಕಾಸಾತ್ಮಕ ಬದಲಾವಣೆಗಳಿಗಾಗಿ ಮತ್ತು ಉತ್ತಮ ಗುಣಮಟ್ಟದ ಆಹಾರ ಬೆಳೆಗಳನ್ನು ಮತ್ತು ಧಾನ್ಯಗಳನ್ನು ಬೆಳೆಯುವುದಕ್ಕಾಗಿ
- ಹಲವಾರು ರೋಗರುಜಿನಗಳನ್ನು ತಡೆಗಟ್ಟಲು, ಗುಣಪಡಿಸಲು ಮತ್ತು ನಿರೋಧಶಕ್ತಿಯನ್ನು ಬೆಳೆಸಿಕೊಳ್ಳುವುದಕ್ಕಾಗಿ.
- ಜನಸಂಖ್ಯಾ ನಿಯಂತ್ರಣ ಪರಿಸರ ಸಂರಕ್ಷಣೆ ಸ್ವಾಭಾವಿಕ ಸಂಪನ್ಮೂಲಗಳ ರಕ್ಷಣೆ ಇತ್ಯಾದಿ ಸಮಾಜಮುಖೀ ಕೆಲಸಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ.
- ಜೀವ ವಿಜ್ಞಾನಗಳಲ್ಲಿ ಅವಿರತವಾಗಿ ಸಾಗುತ್ತಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನೆಗಳಿಗಾಗಿ, ಜೈವಿಕವಾಗಿ ಸಸ್ಯ ಮತ್ತು ಪ್ರಾಣಿ ತಳಿಗಳ ವಂಶವಾಹಿನಿಯಲ್ಲಿ ವಿಕಾಸಾತ್ಮಕವಾದ ಬದಲಾವಣೆಗಳನ್ನು ವೈಜ್ಞಾನಿಕವಾಗಿ ಸಾಧಿಸುವುದಕ್ಕಾಗಿ
- ಪ್ರಸ್ತುತ ದೇಶವು ಎದುರಿಸುತ್ತಿರುವ ಜಾಗತೀಕರಣ (Globalization) ಮತ್ತು ಉದಾರೀಕರಣ (Liberalization) ದಂತಹ ಸಮಸ್ಯೆಗಳನ್ನು ಸಮರ್ಥವಾಗಿ ನಿಭಾಯಿಸುತ್ತಾ ನೆರೆ ರಾಷ್ಟ್ರಗಳ ವಿಕಾಸಪರ ನಡೆಗೆ ಸರಿದೂಗಿಸುವಂತಹ ಸಾಮರ್ಥ್ಯಗಳನ್ನು ಗಳಿಸುವುದಕ್ಕಾಗಿ.

**ಜೀವ ವಿಜ್ಞಾನದ ಬೋಧನೆಯ ಗುರಿಗಳು ಮತ್ತು ಉದ್ದೇಶಗಳು:** ವಿದ್ಯಾರ್ಥಿಗಳು ದಿನ ನಿತ್ಯದ ಜೀವನದಲ್ಲಿ ಹಾಸು ಹೊಕ್ಕಾಗಿ ಬಳಸಲ್ಪಡುವ ಜೀವ ವಿಜ್ಞಾನದ ಜ್ಞಾನ ಸಂಪಾದನೆಯನ್ನು ಮಾಡಿಕೊಳ್ಳುವುದು.

ತಮ್ಮ ಸುತ್ತಮುತ್ತಲ ಪರಿಸರದಲ್ಲಿನ ಭೌತಿಕ ಹಾಗೂ ಜೈವಿಕ ಅಂಶಗಳ ಪ್ರಕ್ರಿಯೆಗಳನ್ನು ಕುರಿತಂತೆ ಕುತೂಹಲ ಮತ್ತು ಆಸಕ್ತಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ, ಉಳಿಸುವುದು.

ಪ್ರಾಕೃತಿಕ ಸಂಪತ್ತನ್ನು ಕುರಿತಂತೆ ಅವುಗಳ ಬಗ್ಗೆ ಒಲವನ್ನು ಮತ್ತು ಅವುಗಳ ಸಂರಕ್ಷಣಾ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.

ವೈಜ್ಞಾನಿಕ ಪ್ರಕ್ರಿಯಾಕೌಶಲಗಳಾದ, ಅವಲೋಕನ ಅನ್ವೇಷಣೆ; ಗುರುತಿಸುವಿಕೆ; ವರ್ಗೀಕರಣ; ಪ್ರಕಲ್ಪನೆಗಳನ್ನು ರಚಿಸುವಿಕೆ; ಪ್ರಯೋಗಗಳನ್ನು ನಡೆಸುವುದು; ತಾರ್ಕಿಕ ಕೌಶಲಗಳು; ಸಮಸ್ಯೆ ಪರಿಹಾರ ಸಂಶೋಧನೆ – ಇತ್ಯಾದಿಗಳನ್ನು ಅವರಲ್ಲಿ ಬೆಳೆಸುವುದು.

ಜೀವವಿಜ್ಞಾನದ ಮುಖ್ಯ ತಥ್ಯಗಳು; ಪರಿಕಲ್ಪನೆಗಳು ಸಾರ್ವತ್ರೀಕರಣಗಳು; ನಿಯಮ ಮತ್ತು ತತ್ವಗಳು ಇವುಗಳ ನಿಖರವಾದ ಅರ್ಥ ಸಂಗ್ರಹಣೆ.

ಅನುಗಮನ ಮತ್ತು ನಿಗಮನ ಕೌಶಲಗಳನ್ನು ಬಳಸುತ್ತಾ ಸಾರ್ವತ್ರೀಕರಣಗಳನ್ನು ರಚಿಸುವುದು ಮತ್ತು ಸಮಸ್ಯಾ ಪರಿಹಾರದಲ್ಲಿ ಈ ಕೌಶಲಗಳನ್ನು ಬಳಸುವುದು.

ನಿತ್ಯ ಜೀವನದ ಮೇಲೆ ಮತ್ತು ಸಮಾಜದ ಮೇಲೆ ಇರುವ ಜೀವ ವಿಜ್ಞಾನದ ಪ್ರಭಾವವನ್ನು ಅರ್ಥಮಾಡಿಕೊಳ್ಳುವುದು ಹಾಗೂ ಪ್ರಸ್ತುತ ಸಮಾಜಕ್ಕೆ ತನ್ನನ್ನು ತಾನು ಹೊಂದಾಣಿಕೆ ಮಾಡಿಕೊಳ್ಳುವುದು.

ಜೀವವಿಜ್ಞಾನ ಪಠ್ಯಕ್ರಮಗಳ ಬಗೆಗೆ ನಡೆದಿರುವ ಅಧ್ಯಯನಗಳಲ್ಲಿ ಜೀವವಿಜ್ಞಾನ ಪಠ್ಯಕ್ರಮದ ಅಧ್ಯಯನ ಪ್ರಮುಖವಾದುದು.

**ಜೀವ ವಿಜ್ಞಾನ ಪಠ್ಯಕ್ರಮದ ಅಧ್ಯಯನ (Biological Science Curriculum Study):** ಇದು 1959 ರಲ್ಲಿ ಅಮೆರಿಕಾದ ಕೊಲಾರೆಡೊ ವಿಶ್ವವಿದ್ಯಾನಿಲಯದ ಒಂದು ಶೈಕ್ಷಣಿಕ ಆಯೋಗದಿಂದ ಸಂಘಟಿಸಲ್ಪಟ್ಟಿತು. ಇದರ ಪ್ರಕಾರ ಅಂದಿನ ಜೀವವಿಜ್ಞಾನ ಪಠ್ಯಕ್ರಮವು ನ್ಯೂನತೆಗಳಿಂದ ಕೂಡಿದ್ದಿತು. ಜೀವಶಾಸ್ತ್ರವು ಬೇರೆ ಯಾವುದೇ ಶಾಸ್ತ್ರಗಳೊಂದಿಗೆ ಸಹಸಂಬಂಧವನ್ನು ಹೊಂದಿರಲಿಲ್ಲ. ಅಷ್ಟೇ ಅಲ್ಲದೇ,

1. ಜೀವ ವಿಜ್ಞಾನ ಪಠ್ಯಕ್ರಮದ ಅಧ್ಯಯನ ವಸ್ತುಗಳು ಒಂದು ಸಾಮಾನ್ಯ ಸೂತ್ರದಿಂದ ಬಂಧಿಲ್ಪಟ್ಟಿದ್ದವು.
2. ಹಿಂದಿನ ಸಾಂಪ್ರದಾಯಿಕ ಬೋಧನೆಯಲ್ಲಿ ಅಂಗಾಂಶ ಮತ್ತು ಅಂಗಗಳಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು; ಆದರೆ ಅಧ್ಯಯನದಲ್ಲಿ ಜೀವ ವಿಜ್ಞಾನದಲ್ಲಿನ ಅನುರಚನೆ ಮತ್ತು ಜೈವಿಕ ಕಾರ್ಯಗಳು ಮತ್ತು ಜೀವ ವಿಜ್ಞಾನದ ಇನ್ನಿತರ ಅಂಶಗಳೊಂದಿಗೆ ಸಹ ಸಂಬಂಧವನ್ನು ಕಾಣಬಹುದಾಗಿತ್ತು.
3. ಸಾಂಪ್ರದಾಯಿಕ ಬೋಧನೆಯಲ್ಲಿ ತಥ್ಯಾಂಶಗಳ ಕಲಿಕೆ ಅಥವಾ ಗ್ರಹಿಕೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದ್ದಿತು. ಆದರೆ ಪ್ರಯೋಗಗಳಿಗೆ, ಮತ್ತು ಪ್ರಯೋಗಾಲಯದಲ್ಲಿನ ಕೌಶಲಗಳಿಗೆ ಹೆಚ್ಚು ಒತ್ತು ನೀಡಲಾಗಿದ್ದಿತು.

ಜೀವ ವಿಜ್ಞಾನದ ಪಠ್ಯಕ್ರಮದ ಅಧ್ಯಯನವು ಮೂರು ಮುಖ್ಯ ಆವೃತ್ತಿಗಳಲ್ಲಿ ತನ್ನ ರಚನೆಯನ್ನು ಬಿಂಬಿಸಿತ್ತು. 1 ಹಸಿರು ಆವೃತ್ತಿ 2. ಹಳದಿ ಆವೃತ್ತಿ ಮತ್ತು 3. ನೀಲಿ ಆವೃತ್ತಿ. ಆದರೆ ಈ ಮೂರಕ್ಕೆ ಒಂದು ಸಮನ್ವಯವಾದ ಬೋಧನಾ ಪದ್ಧತಿಯನ್ನು ಅಳವಡಿಸಲಾಗಿತ್ತು. ಹಸಿರು ಆವೃತ್ತಿ ಪರಿಸರದ ದೃಷ್ಟಿಯಿಂದ ರಚಿತವಾಗಿತ್ತು. ಹಳದಿ ಆವೃತ್ತಿಯು ವಂಶಾವಳಿಯ ದೃಷ್ಟಿಯಿಂದ ರಚಿತವಾಗಿತ್ತು. ಹಾಗೆಯೇ ನೀಲಿ ಆವೃತ್ತಿಯು ಕಾರ್ಯ ಕಾರಣ ದೃಷ್ಟಿಕೋನದಿಂದ ರಚಿತವಾಗಿದ್ದಿತು.

ಜೀವ ವಿಜ್ಞಾನದ ಪಠ್ಯಕ್ರಮದ ಅಧ್ಯಯನದಲ್ಲಿನ ವಿವಿಧ ಪಠ್ಯವಸ್ತುಗಳು, ಮತ್ತು ವಿವಿಧ ಹಂತಗಳಲ್ಲಿನ ಸಾಮಾನ್ಯ ಅಂಶಗಳು.

1. ವಿಕಾಸ 2. ಜೀವಿಗಳ ವಿಧ ಮತ್ತು ಅವುಗಳಲ್ಲಿನ ಸಾಮಾನ್ಯ ಜೀವನದ ಪ್ರಕ್ರಿಯೆ–ಇವುಗಳ ಅನ್ವೇಷಣೆ. 3. ಜೀವಿಗಳ ವಂಶಪಾರಂಪರ್ಯತೆಯಲ್ಲಿನ ನಿರಂತರತೆ 4) ರಚನೆ ಮತ್ತು ಕಾರ್ಯದ ನಡುವಿನ ಹೊಂದಾಣಿಕೆ / ಅವಲಂಬನೆ 5. ವರ್ತನೆಗಳ ಜೀವಶಾಸ್ತ್ರೀಯ

Digitised by Bharatavani, CIIL

ಮೂಲಗಳ 6. ಜೀವಿ ಮತ್ತು ಕಾರ್ಯ ಇವುಗಳಲ್ಲಿನ ಪರಸ್ಪರ ಪೂರಕ ಗುಣಗಳು 7. ನಿಯಂತ್ರಣ ಮತ್ತು ಸ್ಥಿತಿ ಸ್ಥಾಪಕತ್ವ 8. ವಿಜ್ಞಾನ ಒಂದು ಅನ್ವೇಷಣೆ 9. ಜೀವ ಶಾಸ್ತ್ರೀಯ ಪರಿಕಲ್ಪನೆಗ ಬೌದ್ಧಿಕ ಇತಿಹಾಸ. ಜೀವ ವಿಜ್ಞಾನ ಪಠ್ಯಕ್ರಮದ ಅಧ್ಯಯನವು ಅಳವಡಿಸಿಕೊಂಡ ಪಠ್ಯವಸ್ತುಗಳಲ್ಲಿ ಮುಖ್ಯವಾದವು

1. ಪಠ್ಯ ಪುಸ್ತಕ, 2 ಪ್ರಯೋಗಾಲಯ ಕೈಪಿಡಿ, 3. ಶಿಕ್ಷಕರ ಕೈಪಿಡಿ, 4. ಪ್ರಯೋಗಾಲಯ ಘಟಕಗಳ ಸರಣಿ ಮತ್ತು ಮಾರ್ಗದರ್ಶಿ 5. ಅನ್ವೇಷಣಾ ಪುಸ್ತಕಮಾಲೆಗಳು 6. ಜೀವಶಾಸ್ತ್ರ ಶಿಕ್ಷಣದ ಲಘು ಪ್ರಕಟಣೆಗಳು, 7. ಪ್ರಯೋಗಾಲಯ ತಂತ್ರಗಳನ್ನು ಕುರಿತ ಪ್ರಕ್ಷೇಪಿತ ಚಿತ್ರಗಳು 8. ಮಾಹಿತಿ ಮಾಧ್ಯಮ. 9. ವಾರ್ತಾ ಪತ್ರ 10 ಅಂತಾರಾಷ್ಟ್ರೀಯ ವಾರ್ತಾ ಸೇವೆ ಇತ್ಯಾದಿ.

ಈ ಅಧ್ಯಯನವು ಕೆಲವು ಸವಾಲುಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಯಾವ ತರಗತಿಗೆ ಮತ್ತು ಯಾವ ವಯಸ್ಸಿನವರಿಗೆ, ಮತ್ತು ಯಾವ ಪರಿಸರಕ್ಕೆ ಯಾವ ಆವೃತ್ತಿಯ ಗ್ರಂಥಗಳನ್ನು ನಿಗದಿಪಡಿಸಬೇಕು ಎಂಬ ವಿಚಾರಣೆಯ ಗೊಂದಲವೂ ಒಂದು. ಆದರೆ ಇಲ್ಲಿ ಪ್ರತಿಯೊಬ್ಬ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೂ ತಾವೇ ಆಯ್ಕೆದಾರರಾಗಲು ಅವಕಾಶವಿತ್ತು.

**ನಫೀಲ್ಡ್‌ನ ವಿಜ್ಞಾನ ಬೋಧನಾ ಯೋಜನೆ Nuffield Foundation Science Teaching Project:** ಇದು ಇಂಗ್ಲೆಂಡಿನ ಏಪ್ರಿಲ್ 1962ರಲ್ಲಿ ನಫೀಲ್ಡ್ ಎಂಬಲ್ಲಿ ಆರಂಭವಾಯಿತು. "ವಿಜ್ಞಾನವು ಎಲ್ಲರಿಗಾಗಿ" ಎಂಬುದು ನಫೀಲ್ಡ್‌ನ ಮೂಲ ಧ್ಯೇಯ ವಿಜ್ಞಾನದಲ್ಲಿನ ವಿಷಯಗಳು ಸಾರ್ವಜನಿಕರಿಗೂ ಮತ್ತು ವಿಜ್ಞಾನದ ವಿಶೇಷ ತಜ್ಞರಿಗೂ ಕಲಿಯಲು ಸಹಾಯವಾಗುವಂತೆ ವಿನ್ಯಾಸಗೊಂಡಿದ್ದವು. ಈ ಪದ್ಧತಿಯಲ್ಲಿ ವಿವಿಧ ಕಲಿಕಾ ವಿಷಯಗಳ ನಡುವಿನ ಸಹಸಂಬಂಧಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಲಾಗಿತ್ತು. ಉದಾಹರಣೆಗೆ,

'O' ಹಂತದ ಜೀವಶಾಸ್ತ್ರದ ಯೋಜನೆಯು ಜೀವಶಾಸ್ತ್ರ; ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರದ ನಡುವಿನ ಕೊಂಡಿಯಾಗಿತ್ತು. ಅಂದರೆ, ಜೀವ ಶಾಸ್ತ್ರದಲ್ಲಿನ 'ಉಸಿರಾಟ' ಎಂಬ ಪಾಠವನ್ನು ರಸಾಯನ ಶಾಸ್ತ್ರದ 'ಉತ್ಕರ್ಷಣ' ಪಾಠದ ಬೋಧನೆಯ ನಂತರವೇ ಬೋಧಿಸಲಾಗುತ್ತಿತ್ತು.

'O' ಹಂತದ ನಂತರದ ಪಠ್ಯಕ್ರಮವು ಶೈಕ್ಷಣಿಕವಾಗಿ ತುಂಬಾ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಮೂಡಿಬಂದಿತು. ಅಂದರೆ ಹಿರಿಯ ಪ್ರೌಢಶಾಲಾ ಹಂತದವರೆಗೂ ರಚಿತವಾಗಿದ್ದಿತು. (GCE"A"ಹಂತ) ಇದರಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಜೀವಶಾಸ್ತ್ರ–ಬೇರೆ ಬೇರೆಯಾಗಿ ವಿಕಾಸಗೊಂಡವು. ಅಷ್ಟೇ ಅಲ್ಲದೇ ಪ್ರಾಥಮಿಕ ಹಂತದವರೆಗೆ ಇವೆಲ್ಲವುಗಳ ಸಂಯುಕ್ತ ಪಠ್ಯಕ್ರಮವೂ ರಚಿತವಾಯಿತು. 1967–68ರ ಸುಮಾರಿಗೆ ಸರಾಸರಿ ಮಟ್ಟದ ಮತ್ತು ಸರಾಸರಿ ಮಟ್ಟಕ್ಕಿಂತಲೂ ಕೆಳಗಿರುವ ಪ್ರೌಢಾಶಾಲಾ ವಿದ್ಯಾರ್ಥಿಗಳಿಗಾಗಿ ನಫೀಲ್ಡ್ ಸ್ಕೀಂ ಎಂಬ ಹೊಸದೊಂದು ಪಠ್ಯಕ್ರಮ ತಯಾರಾಯಿತು.

ಆದರೆ ನಫೀಲ್ಡ್ ಕಾರ್ಯಕ್ರಮಗಳು, ಒಂದು ಭದ್ರವಾದ ರಚನೆಯಿಲ್ಲದೆ; ನಿರ್ದಿಷ್ಟವಾದ ವರ್ತನಾ ಉದ್ದೇಶಗಳಿಲ್ಲದೆ; ವಿಸ್ತರಿಸಿದ ಪಠ್ಯಪುಸಕ್ತಗಳಿಲ್ಲದೆ ವಿಫಲಗೊಂಡವು. ಇವುಗಳು ಮುಖ್ಯವಾಗಿ, ಶಿಕ್ಷಕರು ಅತ್ಯಂತ ಲವಲವಿಕೆಯಿಂದ ಬೋಧಿಸುವುದಕ್ಕಾಗಿ ತಯಾರಾದಂತೆ ಇದ್ದವು. ಹಾಗೂ ವಿದ್ಯಾರ್ಥಿಗಳು ಅನ್ವೇಷಣಾ ಮಾದರಿಯಿಂದ ಕಲಿಯಬೇಕೆನ್ನುವ ಉದ್ದೇಶವನ್ನು ಹೊಂದಿದ್ದವು. ಇಲ್ಲಿಯೂ ಕೂಡ ಶಿಕ್ಷಕರಿಗೆ ಯಾವುದೇ ಒಂದು ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲು, ತರ್ಜುಮೆ ಮಾಡಲು, ಶಾಲೆಯ ಅಗತ್ಯಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ನಿಯೋಜಿಸಿಕೊಳ್ಳಲು ಸ್ವಾತಂತ್ರ್ಯವಿತ್ತು. ನಿಜ ಹೇಳಬೇಕೆಂದರೆ, ವಿದ್ಯಾರ್ಥಿಗಳ ಪಠ್ಯಕ್ಕಿಂತಲೂ ಶಿಕ್ಷಕರ ಕೈಪಿಡಿಯಂತೆ ಈ ಪಠ್ಯಕ್ರಮವು ಅಭಿವ್ಯಕ್ತವಾಗಿತ್ತು.

ನಫೀಲ್ಡ್ ವಿಜ್ಞಾನ ಕಾರ್ಯಕ್ರಮದಲ್ಲಿ ಈ ಕೆಳಕಂಡಂತೆ ವಿಷಯಗಳು ಜೋಡಣೆಯಾಗಿದ್ದವು.

1. ನಫೀಲ್ಡ್ ಸಂಯುಕ್ತ ವಿಜ್ಞಾನ
2. ನಫೀಲ್ಡ್ ಸೆಕೆಂಡರಿ ವಿಜ್ಞಾನ
3. ನಫೀಲ್ಡ್ 'O' ಹಂತದ ಜೀವಶಾಸ್ತ್ರ
4. ನಫೀಲ್ಡ್ 'O' ಹಂತದ ರಸಾಯನ ಶಾಸ್ತ್ರ
5. ನಫೀಲ್ಡ್ 'O' ಹಂತದ ಭೌತಶಾಸ್ತ್ರ
6. ನಫೀಲ್ಡ್ 'O' ಹಂತದ ಜೀವ ವಿಜ್ಞಾನಿಗಳು
7. ನಫೀಲ್ಡ್ 'O' ಹಂತದ ರಸಾಯನ ಶಾಸ್ತ್ರ
8. ನಫೀಲ್ಡ್ 'O' ಹಂತದ ಭೌತಶಾಸ್ತ್ರ
9. ನಫೀಲ್ಡ್ 'O' ಹಂತದ ಭೌತ ವಿಜ್ಞಾನಗಳು
10. ನಫೀಲ್ಡ್ ಕಿರಿಯ ವಿಜ್ಞಾನ ಯೋಜನೆ.

**N.C.E.R.T ಪಠ್ಯಕ್ರಮ** : ಭಾರತದಲ್ಲಿನ ಶಿಕ್ಷಣ ಪದ್ಧತಿಯು ರಾಷ್ಟ್ರೀಕರಣಕ್ಕೆ ಒಳಪಟ್ಟ ಮೇಲೆ, ರಾಷ್ಟ್ರೀಯ ಶಿಕ್ಷಣ ಮತ್ತು ಸಂಶೋಧನೆ ತರಬೇತಿ – ಸಮಿತಿ) NCERT ಯು ನವೀನವಾದ ಸಮನ್ವಯ ವಿಜ್ಞಾನ ಪಠ್ಯಕ್ರಮಗಳನ್ನು ರಚಿಸಿದೆ. ಈ ಪಠ್ಯಕ್ರಮ ರಚನೆಯು ಕೆಳಕಂಡ ಕೆಲವು ಮುಖ್ಯ ಉದ್ದೇಶಗಳನ್ನು ಆಧರಿಸಿದೆ.

1. ನಿತ್ಯ ಜೀವನದ ಮತ್ತು ವಿಜ್ಞಾನದ ನಡುವೆ ಇರುವ ಸಂಬಂಧದ ಪ್ರಾಮುಖ್ಯತೆಯನ್ನು ತಿಳಿಸುವುದು.
2. ವೈಜ್ಞಾನಿಕ ಧೋರಣೆಗಳನ್ನು ಬೆಳೆಸುವುದು.
3. ವೈಜ್ಞಾನಿಕ ನಿಯಮ ಮತ್ತು ತತ್ವಗಳ ಅಭ್ಯಾಸ. ಮತ್ತು ಉಪಯೋಗಕ್ಕಾಗಿ ಸರಿದೂಗುವಂತಹ ಪರಿಸರವನ್ನು ನಿರ್ಮಿಸುವುದು.
4. ಸ್ವಾಭಾವಿಕ ತತ್ವಗಳನ್ನು ಮತ್ತು ಪ್ರಾಕೃತಿಕ ಘಟನೆಗಳನ್ನು ವಿದ್ಯಾರ್ಥಿಗಳು ಅರಿಯುವುದು.
5. ವಿಜ್ಞಾನದಲ್ಲಿನ ಪ್ರಯೋಗಲಕ್ಷಣಗಳ ಕಲಿಕೆ
6. ವಿಜ್ಞಾನದ ವಿವಿಧ ಶಾಖೆಗಳ ಅಧ್ಯಯನ

ಒಟ್ಟಾರೆ ಹೇಳಬೇಕೆಂದರೆ, ಮಗುವಿನ ಪರಿಸರಕ್ಕೆ ವಿಜ್ಞಾನದ ಸಂಬಂಧ ಕಲ್ಪಿಸುತ್ತಾ ಸಹಜ ಕಲಿಕೆಗಾಗಿ ಪಠ್ಯಕ್ರಮ ನಿರ್ಮಾಣವಾಗಬೇಕೇ ವಿನಃ ಕೃತಕವಾಗಿ ಅನೇಕ ವಿಷಯಗಳ ಹೇರಿಕೆಯಾಗಬಾರದು ಎಂಬುದೇ NCERT ಯ ಆಶಯವಾಗಿದ್ದಿತು. ಪ್ರಾಥಮಿಕ ಹಂತದಲ್ಲಿ ಸಾಮಾನ್ಯ ವಿಜ್ಞಾನವನ್ನು ಕಲಿಯುವ ವಿದ್ಯಾರ್ಥಿಗಳು. ಮುಂದೆ ಅದೇ ಜ್ಞಾನದ, ಮುಂದುವರಿದ ಭಾಗಗಳನ್ನು ಕಲಿಯುವರು. ಹಾಗೆಯೇ ಪ್ರೌಢಶಾಲಾ ಹಂತದಲ್ಲೂ ಈ ನಿರಂತರತೆಯು ಮುಂದುವರೆಯುವುದು. ಇದಕ್ಕೆ ಸಂಬಂಧಪಟ್ಟ ಪಠ್ಯಪುಸ್ತಕಗಳೂ; ಸಮನ್ವಯ ವಿಜ್ಞಾನದ ಕಿಟ್ಟುಗಳು, ತಯಾರಾದವು.

Digitised by Bharatavani, CIIL

**ರಾಷ್ಟ್ರೀಯ ಶಿಕ್ಷಣ ನೀತಿಯು ಈ ಕೆಳಕಂಡ ಶಿಫಾರಸ್ಸು ಮಾಡಿದೆ:** "ರಾಷ್ಟ್ರದ ಆರ್ಥಿಕ ಬೆಳವಣಿಗೆಗಾಗಿ, ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆಗಳು ಅತೀ ಹೆಚ್ಚಿನ ಆದ್ಯತೆಯನ್ನು, ಪ್ರಾಮುಖ್ಯತೆಯನ್ನು ಪಡೆದುಕೊಳ್ಳಬೇಕು. ಶಾಲಾಹಂತದ ಶಿಕ್ಷಣ ಮುಗಿಯುವವರೆಗೂ ವಿಜ್ಞಾನ ಮತ್ತು ಗಣಿತ ವಿಷಯಗಳು, ಸಾಮಾನ್ಯ ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು."

ಸಾಮಾನ್ಯವಾಗಿ ಜೀವವಿಜ್ಞಾನ ಬೋಧನೆಯಲ್ಲಿ ಬಳಸಲ್ಪಡುವ ಪ್ರಮುಖ ಬೋಧನಾ ವಿಧಾನಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಉಪನ್ಯಾಸ ವಿಧಾನ
2. ಉಪನ್ಯಾಸ-ಪ್ರಾತ್ಯಕ್ಷಿಕಾ ವಿಧಾನ
3. ಐತಿಹಾಸಿಕ ವಿಧಾನ
4. ಸಂಶೋಧನಾ ವಿಧಾನ
5. ಯೋಜನಾ ವಿಧಾನ
6. ಸಮಸ್ಯಾ ಪರಿಹಾರ ವಿಧಾನ
7. ಚರ್ಚಾ ವಿಧಾನ
8. ಸ್ವಕಲಿಕಾ ವಿಧಾನ.

(1) (2) ಮತ್ತು (3) ಶಿಕ್ಷಕಕೇಂದ್ರಿತ ವಿಧಾನಗಳು; ಉಳಿದವು ವಿದ್ಯಾರ್ಥಿ ಕೇಂದ್ರಿತವೂ, ಚಟುವಟಿಕಾ ಕೇಂದ್ರಿತವೂ ಆಗಿವೆ.

**1. ಉಪನ್ಯಾಸ ವಿಧಾನ :** ಇದೊಂದು ಶಿಕ್ಷಕ-ಕೇಂದ್ರಿತ ವಿಧಾನವಾಗಿದ್ದು, ಬಹುಪಾಲು ತರಗತಿಗಳಲ್ಲಿ ಇದನ್ನು ನೇರವಾಗಿ ಅಳವಡಿಸಿಕೊಳ್ಳಲಾಗುತ್ತಿದೆ. ಆದರೆ ವಿಜ್ಞಾನ ಬೋಧನೆಗೆ ಈ ವಿಧಾನ ಅಷ್ಟಾಗಿ ಹೊಂದಿಕೊಳ್ಳುವುದಿಲ್ಲ. ಶಿಕ್ಷಕ ಪಾತ್ರವೇ ಮೇಲ್ಗೈ ಪಡೆಯುವ ಈ ವಿಧಾನದಲ್ಲಿ ವಿದ್ಯಾರ್ಥಿಗಳು ಮೌನ ಶ್ರೋತೃಗಳಾಗಿರುತ್ತಾರೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಸಹಜವಾಗಿಯೇ ಈ ವಿಧಾನ ಬೇಸರ ಹುಟ್ಟಿಸಬಹುದಾಗಿದೆ. ಈ ಒಂದು ವಿಧದಲ್ಲಿ ವಿದ್ಯಾರ್ಥಿಗಳಿಗೆ, ತಾವು ಕಲಿಯಬೇಕಾಗಿರುವ ಜ್ಞಾನವು ತಮ್ಮಿಂದ ಏನೇನೂ ಶ್ರಮವಿಲ್ಲದೇ ಲೀಲಾಜಾಲವಾಗಿ ಪಡೆದುಕೊಳ್ಳುವ ಸಾಧ್ಯತೆ ಇದೆ. ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ತಾರ್ಕಿಕಶಕ್ತಿ ಮತ್ತು ವಿಷಯವನ್ನು ಕುರಿತ ಆಸಕ್ತಿ ಇವು ಗೌಣವಾಗಿ ಬಿಡುತ್ತವೆ.

**ಗುಣಗಳು**

1. ಹೆಚ್ಚು ಖರ್ಚು ವೆಚ್ಚವಿಲ್ಲದೇ ನಿಭಾಯಿಸಬಹುದಾದ ವಿಧಾನ
2. ಅತೀ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿಗೆ ಯಾವ ಪ್ರಯೋಗ ಶಾಲೆ, ಉಪಕರಣಗಳು, ಕಲಿಕಾ ಸಹಾಯಕಗಳಿಲ್ಲದೇ ಇದ್ದಾಗಲೂ ಬೋಧಿಸಬಹುದಾಗಿದೆ.
3. ಸಮಯದ ಬಳಕೆ ಕ್ಲುಪ್ತವಾಗಿರುತ್ತದೆ. ಮತ್ತು ಇಡೀ ಪಠ್ಯ ಸೂಚಿಯನ್ನು ಒಂದು ಶೈಕ್ಷಣಿಕ ಅವಧಿಯಲ್ಲಿ ಕರಾರುವಕ್ಕಾಗಿ ಮುಗಿಸಲು ಸಹಾಯ ಮಾಡುತ್ತದೆ.
4. ಶಿಕ್ಷಕರ ಶ್ರಮವು ಹಿತಮಿತವಾಗಿ ಬಳಕೆಯಾಗುವುದಲ್ಲದೆ; ತಥ್ಯಾಂಶಗಳ ಬೋಧನೆಗೆ ವಿಜ್ಞಾನದ ಕೆಲವು ಚರಿತ್ರಾಂಶಗಳ ಬೋಧನೆಗೆ ಅತ್ಯಂತ ಸೂಕ್ತವಾದುದಾಗಿದೆ.

**ದೋಷಗಳು**

1. ಮಾಡಿಕಲಿ ತತ್ವಕ್ಕೆ ವಿರೋಧವಾಗಿದೆ. ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲಾರರು.
2. ವೈಜ್ಞಾನಿಕ ಧೋರಣೆಯನ್ನು ಮತ್ತು ವೈಜ್ಞಾನಿಕ ವಿಧಾನವನ್ನು ಬೆಳೆಸಲು ಸಹಾಯ ಮಾಡುವುದಿಲ್ಲ.
3. ಮನೋವೈಜ್ಞಾನಿಕ ದೃಷ್ಟಿಯಿಂದ ಸಮಂಜಸವಾಗಿಲ್ಲ.
4. ವಿದ್ಯಾರ್ಥಿಗಳ ಕಲಿಕಾ ಫಲಶ್ರುತಿಗಳಿಗೆ ಕರಾರುವಾಕ್ಕಾದ ಸಾಕ್ಷಿ, ಪುರಾವೆಗಳನ್ನೊದಗಿಸುವುದಿಲ್ಲ.
5. ವ್ಯಕ್ತಿ ಭಿನ್ನತೆಗೆ ಗಮನವೀಯುವುದಿಲ್ಲ.
6. ವಿದ್ಯಾರ್ಥಿಗಳಿಗೆ ಪ್ರಶ್ನಿಸುವ ಅವಕಾಶವಿರುವುದಿಲ್ಲ.

**2. ಉಪನ್ಯಾಸ – ಪ್ರಾತ್ಯಕ್ಷಿಕಾ ವಿಧಾನ :** ಉಪನ್ಯಾಸ ವಿಧಾನವನ್ನು ಸೂಕ್ತವಾಗಿ ಪರಿಷ್ಕೃತಗೊಳಿಸಿ, ಅದರಲ್ಲಿ ಸಾಂದರ್ಭಿಕವಾಗಿ ಪ್ರಾತ್ಯಕ್ಷಿಕೆಗಳನ್ನು ಅಳವಡಿಸಿಕೊಂಡಾಗ, ಉಪನ್ಯಾಸ-ಪ್ರಾತ್ಯಕ್ಷಿಕಾ ವಿಧಾನವು ಆವಿಷ್ಕಾರಗೊಳ್ಳುವುದು. ಶಿಕ್ಷಕರು ಪಾಠದ ಮೌಖಿಕ ವಿವರಣೆಯನ್ನು ನೀಡುತ್ತಿರುವಾಗಲೇ, ಅದಕ್ಕೆ ಬೆಂಬಲ ನೀಡುವಂತಹ ಪ್ರಯೋಗಗಳನ್ನು ತರಗತಿಯಲ್ಲಿ ನಡೆಸುವ ಬೋಧನಾ ವಿಧಾನವೇ ಉಪನ್ಯಾಸ-ಪ್ರಾತ್ಯಕ್ಷಿಕಾ ವಿಧಾನವೆಂದು ಹೇಳಬಹುದು. ಇಲ್ಲಿ ವಿದ್ಯಾರ್ಥಿಗಳ ಸಕ್ರಿಯವಾದ ಭಾಗವಹಿಸುವಿಕೆಯನ್ನು ನಿರೀಕ್ಷಿಸಬಹುದು. ಏಕೆಂದರೆ, ಪ್ರಾತ್ಯಕ್ಷಿಕೆಯು ಅವರಲ್ಲಿ ಆಸಕ್ತಿಯನ್ನು, ಕುತೂಹಲವನ್ನು ಮೂಡಿಸುವುದು. ಅಲ್ಲದೇ ಶಿಕ್ಷಕರ ವಿವರಣೆಯೂ ಜೊತೆಯಲ್ಲಿಯೇ ಸಾಗುವುದರಿಂದ, ಅವರಲ್ಲಿ ಅರ್ಥಪೂರ್ಣ ಕಲಿಕೆಗೆ ಅನುವು ಮಾಡಿಕೊಡುತ್ತದೆ. ವಿದ್ಯಾರ್ಥಿಗಳಲ್ಲಿ ಗೊಂದಲಗಳು ತಕ್ಕಮಟ್ಟಿಗೆ ನಿವಾರಣೆಯಾಗುವುದಕ್ಕೆ ಈ ವಿಧಾನವು ಸಹಾಯ ಮಾಡುವುದು. ಇಲ್ಲಿ ಮೂರ್ತ ಸ್ವರೂಪಗಳ ಕಲಿಕೆಯಿಂದ ಅಮೂರ್ತಗಳ ಕಲಿಕೆಯೆಡೆಗೆ ಬೋಧನಾ ಕಲಿಕಾ ಪ್ರಕ್ರಿಯೆಯು ವಿನ್ಯಾಸಗೊಳ್ಳುವುದು. ವಿದ್ಯಾರ್ಥಿಗಳೂ ಪ್ರಯೋಗಗಳನ್ನು ವೀಕ್ಷಿಸುತ್ತಾ ತಮ್ಮ ತೀರ್ಮಾನಗಳನ್ನು ರಚಿಸುವರು; ಫಲಿತಾಂಶಗಳನ್ನು ವಿಶ್ಲೇಷಿಸುವರು, ಶಿಕ್ಷಕರು ಈ ವಿಧಾನದಲ್ಲಿ ಬರುವ ಪ್ರಯೋಗಗಳನ್ನು ಪೂರ್ವದಲ್ಲಿಯೇ ಒಮ್ಮೆ ಅಭ್ಯಾಸ ಮಾಡಿ ಅನಂತರ ತರಗತಿಗಳಲ್ಲಿ ಅಳವಡಿಸಿಕೊಂಡಿದುದೇ ಆದರೆ ಉತ್ತಮವಾದ ಕಲಿಕಾ ಪರಿಣಾಮಗಳನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

**ಉತ್ತಮ ಪ್ರಾತ್ಯಕ್ಷಿಕೆಯ ಲಕ್ಷಣಗಳು**

1. ಉತ್ತಮವಾದ ಪೂರ್ವತಯಾರಿ ಮತ್ತು ಅಭ್ಯಾಸಗಳು, ಅಲ್ಲದೇ, ತೆಗೆದುಕೊಳ್ಳಬೇಕಾದ ಜಾಗರೂಕತೆ, ಮುನ್ನೆಚ್ಚರಿಕೆಗಳು ಇವುಗಳ ಸ್ಪಷ್ಟ ಅರಿವು ಶಿಕ್ಷಕರಿಗಿರಬೇಕು.
2. ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಾತ್ಯಕ್ಷಿಕೆಯು ಗೋಚರಿಸುವಂತೆ ತರಗತಿಯ ವ್ಯವಸ್ಥೆಯಿರಬೇಕು. ಗಾಳಿ, ಬೆಳಕು, ಯಥೇಚ್ಛವಾಗಿರುವುದು ಅವಶ್ಯಕ.
3. ಪ್ರಾತ್ಯಕ್ಷಿಕೆಗೆ ಮೊದಲು ಬಳಸಬಹುದಾದ ಎಲ್ಲಾ ಉಪಕರಣಗಳನ್ನು ಕ್ರಮವಾಗಿ, ಸುಸಜ್ಜಿತವಾಗಿ ಶಿಕ್ಷಕರು ತಮ್ಮ ಎಡಭಾಗದಲ್ಲಿ ಜೋಡಿಸಿಕೊಂಡು, ಬಳಸಿದ ನಂತರದವುಗಳನ್ನು ತಮ್ಮ ಬಲಭಾಗಕ್ಕೆ ವರ್ಗಾಯಿಸುತ್ತಾ ಪ್ರಾತ್ಯಕ್ಷಿಕೆ ನೀಡುವುದು ಒಳ್ಳೆಯದು.
4. ಪ್ರಾತ್ಯಕ್ಷಿಕೆಗೆ ಸಂಬಂಧಪಟ್ಟಂತಹ ವಸ್ತುಗಳು ಮಾತ್ರ ಪ್ರಾತ್ಯಕ್ಷಿಕಾ ಮೇಜಿನ ಮೇಲೆ ಇರಬೇಕು.

Digitised by Bharatavani, CIIL

5. ಶಿಕ್ಷಕರು ಸೂಕ್ತವಾದ ಪೀಠಿಕೆಯೊಂದಿಗೆ ಉಪನ್ಯಾಸ ನೀಡುತ್ತಾ ತಾವು ಕೈಗೊಳ್ಳುತ್ತಿರುವ ಪ್ರಯೋಗದ ಗುರಿಯನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು.
6. ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುತ್ತಾ ಬೋಧನೆಯು ದ್ವಿಮುಖ ಸಂವಹನದಿಂದ ಕೂಡಿರುವಂತೆ ನೋಡಿಕೊಳ್ಳಬೇಕು.
7. ಅನಾವಶ್ಯಕವಾಗಿ ದೀರ್ಘವಾಗಿಸುವಿಕೆ, ಬೇಡದ ವಿವರಣೆಗಳನ್ನು ನೀಡುವಿಕೆ, ಸಂಬಂಧ ಪಡದ ವಸ್ತುಗಳನ್ನು ಪ್ರಾತ್ಯಕ್ಷಿಕಾ ಮೇಜಿನ ಮೇಲೆ ಇರಿಸಿಕೊಳ್ಳುವುದು ಇವುಗಳಾವುವು ಆಗದಂತೆ ಶಿಕ್ಷಕರು ಗಮನವಿರಿಸಬೇಕು.

**ಗುಣಗಳು**

- ಉಪನ್ಯಾಸ – ಪ್ರಾತ್ಯಕ್ಷಿಕಾ ವಿಧಾನವು, ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ಇವೆರೆಡರ ಧನಾತ್ಮಕ ಅಂಶಗಳನ್ನು ಒಳಗೊಂಡಿದೆ.
- ಇದು ಆರ್ಥಿಕವಾಗಿ ಹಿತಮಿತವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಪ್ರಯೋಗಗಳಿಗಾಗಿ ಬಳಸಲ್ಪಡುವ ಉಪಕರಣಗಳು, ಇನ್ನಿತರ ಸಂಪನ್ಮೂಲಗಳು ಶಿಕ್ಷಕರೊಬ್ಬರಿಗೆ ಸಾಕಾಗುವಷ್ಟು ಇದ್ದರೆ ಸಾಕು.
- ವಿದ್ಯಾರ್ಥಿಗಳು ಸಾಕಷ್ಟು ಪರಿಣಿತಿ ಇಲ್ಲದೇ ಮಾಡುವ ಪ್ರಯೋಗಗಳ ವೈಫಲ್ಯತೆಯನ್ನು ಈ ವಿಧಾನವು ತಪ್ಪಿಸುತ್ತದೆ.
- ವಿದ್ಯಾರ್ಥಿಗಳಲ್ಲಿ ಉತ್ಸಾಹ, ಆಸಕ್ತಿ, ಅಭಿಪ್ರೇರಣೆ ಮತ್ತು ಕುತೂಹಲವನ್ನುಂಟುಮಾಡುತ್ತಾ ಅಮೂರ್ತವಾದವುಗಳನ್ನು ಮೂರ್ತ ಸ್ವರೂಪದಲ್ಲಿ ಕಲಿಯಲು ಪ್ರೋತ್ಸಾಹ ನೀಡುತ್ತದೆ.

**ದೋಷಗಳು**

- "ಮಾಡಿ ಕಲಿ" ನಿಯಮಕ್ಕೆ ಹೊರತಾಗಿದೆ.
- ವಿದ್ಯಾರ್ಥಿಗಳಲ್ಲಿನ ವ್ಯಕ್ತಿಭಿನ್ನತೆಗೆ ಗಮನ ನೀಡುವುದಿಲ್ಲ.

**3. ಯೋಜನಾ ವಿಧಾನ :** ಇದು ವಿದ್ಯಾರ್ಥಿ ಕೇಂದ್ರಿತ ವಿಧಾನವಾಗಿದ್ದು, ಇಲ್ಲಿ ಬೋಧನೆಯು ಸಂಪೂರ್ಣವಾಗಿ ಚಟುವಟಿಕೆಗಳನ್ನು ಆಧರಿಸಿರುತ್ತದೆ. ಕಿಲ್ ಪ್ಯಾಟ್ರಿಕ್ ಹೇಳುವಂತೆ "ಒಂದು ಸಾಮಾಜಿಕ ಪರಿಸರದಲ್ಲಿ ಒಂದು ಗೊತ್ತಾದ ಉದ್ದೇಶಕ್ಕಾಗಿ ತನ್ಮಯತೆಯಿಂದ ಕೈಗೊಳ್ಳುವ ಚಟುವಟಿಕೆಯೇ ಯೋಜನೆ".

**ಯೋಜನಾ ವಿಧಾನದಲ್ಲಿ**

1. ಯೋಜನೆಯನ್ನು ಕೈಗೊಳ್ಳುವಂತಹ ಸಂದರ್ಭಗಳನ್ನು ಒದಗಿಸುವುದು.
2. ಉದ್ದೇಶ ಪೂರಿತವಾದ ಆಯ್ಕೆ ಮಾಡುವುದು.
3. ಯೋಜನಾ ಕಾರ್ಯಕ್ಕಾಗಿ ಯೋಜನೆಯನ್ನು ತಯಾರಿಸುವುದು.
4. ಯೋಜನೆಯನ್ನು ಕಾರ್ಯರೂಪಕ್ಕಿಳಿಸುವುದು.
5. ಮೌಲ್ಯಮಾಪನ
6. ದಾಖಲಿಸುವುದು ಎಂಬ ಹಲವಾರು ಹಂತಗಳನ್ನು ಕಾಣಬಹುದು.

**ಗುಣಗಳು:** ಮನೋವೈಜ್ಞಾನಿಕವಾಗಿ ಅರ್ಥಪೂರ್ಣವಾಗಿದೆ.

- ವಿದ್ಯಾರ್ಥಿಯ ನೈಜವಾತಾವರಣಕ್ಕೂ, ಜೀವನಕ್ಕೂ ಸಂಬಂಧವನ್ನು ಕಲ್ಪಿಸುತ್ತದೆ.
- ವಿದ್ಯಾರ್ಥಿಯ ಅಭಿರುಚಿ, ಅಭಿಕ್ಷಮತೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲು ಸಹಾಯ ಮಾಡುವುದು.

**ದೋಷಗಳು**

- ಬಹಳ ಸಮಯವನ್ನು ತೆಗೆದುಕೊಳ್ಳುವುದು.
- ವಿಜ್ಞಾನದ ಎಲ್ಲಾ ರೀತಿಯ ಪಠ್ಯಾಂಶಗಳಿಗೂ ಸರಿಹೊಂದುವುದಿಲ್ಲ.,
- ಶಿಕ್ಷಕರ ಮೇಲೆ ಹೆಚ್ಚಿನ ಒತ್ತಡವನ್ನು ಹೇರುತ್ತದೆ.

**4. ಸಮಸ್ಯಾ ಪರಿಹಾರ ವಿಧಾನ:** ಇದು ಒಂದು ವೈಜ್ಞಾನಿಕ ವಿಧಾನವಾಗಿದ್ದು, ಹಲವಾರು ಕ್ರಮಬದ್ಧವಾದ ಹಂತಗಳಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಯು ಸಾಗುತ್ತದೆ. ಅವು ಈ ಕೆಳಕಂಡಂತಿವೆ,

1. ಸಮಸ್ಯೆಯನ್ನು ಗುರುತಿಸಿ, ಸ್ಪಷ್ಟಪಡಿಸಿಕೊಳ್ಳುವುದು.
2. ಸಮಸ್ಯೆಯ ವಿಶ್ಲೇಷಣೆ
3. ಸಮಸ್ಯೆಯನ್ನು ಕುರಿತಂತೆ ಆಮೂಲಾಗ್ರವಾಗಿ ವಿಚಾರಗಳ ಸಂಗ್ರಹಣೆ
4. ಪ್ರಾಕಲ್ಪನೆಗಳ / ಆಧಾರ ಕಲ್ಪನೆಗಳ ರಚನೆ
5. ಸೂಕ್ತವಾದ ಆಧಾರ ಕಲ್ಪನೆ / ಪ್ರಾಕಲ್ಪನೆಯ ಆಯ್ಕೆ ಮತ್ತು ಅದರ ಪರೀಕ್ಷೆ
6. ಪ್ರಾಕಲ್ಪನೆಯನ್ನು ಪರೀಕ್ಷಿಸುವುದಕ್ಕಾಗಿ ನಡೆಸುವ ಪ್ರಯೋಗಗಳು
7. ಮಾಹಿತಿ ಸಂಗ್ರಹಣ ಮತ್ತು ಮಾಹಿತಿ ವಿಶ್ಲೇಷಣೆ
8. ಫಲಿತಾಂಶಗಳು ಮತ್ತು ತೀರ್ಮಾನಗಳು

**5. ಪ್ರಯೋಗ ಶಾಲಾ ವಿಧಾನ :** ಜೀವ ವಿಜ್ಞಾನಗಳ ಬೋಧನೆಯಲ್ಲಿ ಪ್ರಯೋಗಶಾಲೆಗೆ ಹೆಚ್ಚಿನ ಮಹತ್ವವಿದೆ. ಪ್ರಯೋಗಶಾಲೆಯಲ್ಲಿನ ಪ್ರಯೋಗಗಳನ್ನು ಜೀವಶಾಸ್ತ್ರ ಸಂಬಂಧಿತ ಮಾದರಿಗಳು/ಚಿತ್ರಗಳನ್ನು ಉಪಯೋಗಿಸಿಕೊಂಡು ಬೋಧನೆ ಮಾಡುವ ವಿಧಾನವೇ ಪ್ರಯೋಗಶಾಲಾ ವಿಧಾನ. ಒಂದು ಸುಸಜ್ಜಿತವಾದ ಜೀವಶಾಸ್ತ್ರ ಪ್ರಯೋಗಶಾಲೆ ಜೀವಿಗಳ ಸಸ್ಯಗಳ ಜೀವಂತ ಅಥವಾ ಮೃತ (ರಾಸಾಯನಿಕ ದ್ರವದಲ್ಲಿ ಸಂರಕ್ಷಿಸಿಟ್ಟ) ಮಾದರಿಗಳನ್ನು ಕೃತಕ ಮಾದರಿಗಳನ್ನು ಒಳಗೊಂಡಿರಬೇಕು. ಜೀವಿಗಳ/ಸಸ್ಯಗಳ ಮತ್ತು ಅವುಗಳ ವಿಕಾಸ, ಜೀವನ ಕ್ರಮವನ್ನು ಚಿತ್ರಿಸುವ ಪಟಗಳು, ಸ್ಲೈಡ್‌ಗಳು ಚಿತ್ರಸುರಳಿಗಳು ಶೈಕ್ಷಣಿಕ ಚಲನಚಿತ್ರಗಳು, ಇತ್ತೀಚೆಗೆ ಬಂದಿರುವ ಜೀವ ವಿಜ್ಞಾನ ಸಿ.ಡಿ.ಗಳ ಸಂಗ್ರಹ ಹೊಂದಿರಬೇಕು. ಜೀವಕೋಶಗಳನ್ನು ಪರೀಕ್ಷಿಸಲು ದೇಹ ಛೇದನ (ಡಿಸೆಕ್ಷನ್) ಮಾಡಲು ಬೇಕಾದ ಸೂಕ್ಷ್ಮದರ್ಶಕಗಳು ಶಸ್ತ್ರಗಳು ಮುಂತಾದವುಗಳನ್ನು ಹೊಂದಿರಬೇಕು. ಪ್ರಯೋಗಶಾಲೆ ಸಾಕಷ್ಟು ವಿಸ್ತಾರವಾಗಿದ್ದು ದೊಡ್ಡ ಮೇಜುಗಳು, ಕೂರಲು ಆಸನಗಳಿಂದ ಸುಸಜ್ಜಿತವಾಗಿರಬೇಕು. ಪ್ರಯೋಗಶಾಲೆಯಲ್ಲಿ ಬೆಳಕು, ನೀರಿನ ವ್ಯವಸ್ಥೆ ಚೆನ್ನಾಗಿರಬೇಕು. ಅಧ್ಯಾಪಕರು ಪ್ರಯೋಗಶಾಲೆ ವಿಧಾನದಿಂದ ಬೋಧಿಸಬಹುದಾದ ಪಠ್ಯವಸ್ತುವಿನ ಭಾಗಗಳನ್ನು ಪ್ರತ್ಯೇಕಿಸಿ ಅವುಗಳನ್ನು ಪ್ರಯೋಗಶಾಲೆಯಲ್ಲಿಯೇ ಬೋಧಿಸುವುದು ಒಳ್ಳೆಯದು.

ಈ ವಿಧಾನ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಗಳ ಮೂಲಕ, ಪ್ರಯೋಗಗಳ ನೇರ ಅನುಭವ ಒದಗಿಸುವುದರಿಂದ ಪ್ರಭಾವಯುತ ಕಲಿಕೆ ಉಂಟಾಗುವುದಲ್ಲದೆ ಪ್ರಯೋಗಶಾಲೆ ಕೌಶಲಗಳನ್ನು ಕಲಿಯಲು ನೆರವಾಗುತ್ತದೆ.

**ಬೋಧನಾ ತಂತ್ರಗಳು** ಬೋಧನಾ ವಿಧಾನಗಳು ಹಲವಾರು ಇದ್ದು, ಇವುಗಳನ್ನು ಬಳಸಿಕೊಂಡು ಬೋಧಿಸುವಾಗ, ಅನೇಕ ತಂತ್ರಗಳು ಬಳಸಲ್ಪಡುತ್ತದೆ. ಹೀಗೆ ಹೇಳುವ ಈ ಬೋಧನಾ ತಂತ್ರಜ್ಞಾನವು ಶೈಕ್ಷಣಿಕ ತಂತ್ರಜ್ಞಾನದ ಕೊಡುಗೆಯಾಗಿದೆ. ಇದು ಸಾಮಾನ್ಯವಾಗಿ ತರಗತಿಗಳಲ್ಲಿ

Digitised by Bharatavani, CIIL

ನಡೆಯುವ ಬೋಧನಾ ಕಲಿಕಾ ಸಂದರ್ಭಕ್ಕೆ ಸೀಮಿತವಾಗಿರುತ್ತದೆ. ಬೋಧನಾ ತಂತ್ರಜ್ಞಾನವು ಸಂಪೂರ್ಣವಾಗಿ ವಿದ್ಯಾರ್ಥಿಯ ಕಲಿಕೆಯನ್ನೇ ಆಧರಿಸಿ ನಡೆಸುವ ಕಲಾಪವಾಗಿದೆ. ಬೋಧನಾ ಉದ್ದೇಶಗಳ ಸಾಧನೆಗೆ ಬೋಧನಾ ತಂತ್ರಜ್ಞಾನವು ಸಹಾಯ ಮಾಡುತ್ತಾ, ವಿದ್ಯಾರ್ಥಿಗಳು ಕಲಿಯುವಾಗ ಸಾಮಾನ್ಯವಾಗಿ ಕಂಡು ಬರುವ ಎಡರು ತೊಡರುಗಳನ್ನು ನಿವಾರಿಸುವುದೇ ಅಲ್ಲದೇ, ವಿದ್ಯಾರ್ಥಿಗಳ ಕಲಿಕಾ ಫಲಶ್ರುತಿಯಲ್ಲಿ ಕಂಡು ಬರುವಂತಹ ದೋಷಗಳ ನಿವಾರಣೆಗೂ ಪರಿಹಾರೋಪಾಯವನ್ನು ಸೂಚಿಸುವುದು. ಬೋಧನಾ ತಂತ್ರಜ್ಞಾನವು. ಒಂದು ಪಠ್ಯಕ್ರಮ ರಚಿತವಾಗುವಾಗ ಅದರ ಗುರಿ, ಮತ್ತು ಉದ್ದೇಶಗಳನ್ನು ಸೃಷ್ಟಿಸುವುದರಿಂದ ಹಿಡಿದು, ಪಠ್ಯಕ್ರಮದ ವರ್ಗಾವಣೆಯ ಹಂತವನ್ನೂ ಸೇರಿದಂತೆ, ಮೌಲ್ಯಮಾಪನದವರೆಗೂ ತನ್ನ ವ್ಯಾಪ್ತಿಯನ್ನು ತೋರಿಸಿ ಕೊಟ್ಟಿದೆ. ಮೌಲ್ಯಮಾಪನದಲ್ಲಿನ ವಿಧಿ, ವಿಧಾನಗಳಲ್ಲಿ ಅನೇಕ ಹೊಸ ತಂತ್ರಗಳನ್ನು ಅಳವಡಿಸುತ್ತಾ, ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ವಸ್ತುನಿಷ್ಠವಾದ ಮಾಹಿತಿಯನ್ನು ಪಡೆದುಕೊಳ್ಳಲು ದಾರಿದೀಪವಾಗಿದೆ. ಇದರಿಂದಾಗಿ ಪೂರ್ವಾಗ್ರಹ ಪೀಡಿತವಾದ ಮೌಲ್ಯಮಾಪನವು ಬಹುಪಾಲು ಇಲ್ಲದಂತಾಗಿದೆ. ಇಷ್ಟೇ ಅಲ್ಲದೇ, ಶಿಕ್ಷಕರ ಅನುಪಸ್ಥಿತಿಯಲ್ಲಿಯೂ, ವಿದ್ಯಾರ್ಥಿಗಳ ಕಲಿಕೆಯ ನಿಲ್ಲದೇ ನಿರಂತರವಾಗಿ ಸಾಗುತ್ತದೆ ಎಂದರೆ, ಅದು ನಿಸ್ಸಂಶಯವಾಗಿ ಬೋಧನಾ ತಂತ್ರಜ್ಞಾನದಿಂದ ಮಾತ್ರ ಎಂದು ಹೇಳಬಹುದು.

ಶೈಕ್ಷಣಿಕ ತಂತ್ರಜ್ಞಾನದ ಇನ್ನೆರಡು ಕೊಡುಗೆಗಳೆಂದರೆ, ಅಧ್ಯಾಪನಾ ತಂತ್ರಜ್ಞಾನ ಮತ್ತು ವರ್ತನಾ ತಂತ್ರಜ್ಞಾನ, ಅಧ್ಯಾಪನಾ ತಂತ್ರಜ್ಞಾನವು ಕೇವಲ ಶಿಕ್ಷಕರನ್ನೇ ಕುರಿತು ಬೆಳೆದಿರುವ ಶಾಸ್ತ್ರವಾಗಿದ್ದು ಇದರಲ್ಲಿ ಶಿಕ್ಷಕರ ಬೋಧನೆಯು ಹೆಚ್ಚು ಪರಿಣಾಮಕಾರಿಯಾಗಿರಬೇಕಾದರೆ, ಹೇಗಿರಬೇಕೆಂದು ತಿಳಿಸುತ್ತದೆ. ವರ್ತನಾ ತಂತ್ರಜ್ಞಾನದಲ್ಲಿ, ಬಿ.ಎಫ್. ಸ್ಕಿನ್ನರ್‌ನ ನಿಯಮಗಳನ್ನು ಆಧರಿಸಿ ಅನೇಕ ಕಲಿಕಾ ತಂತ್ರಗಳನ್ನು ನಿರೂಪಿಸಲಾಗಿದೆ. ವಿದ್ಯಾರ್ಥಿಯು ವರ್ತನೆಗಳಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ತರಲು ಸಹಾಯ ಮಾಡುವ ಶಾಸ್ತ್ರವು ಇದಾಗಿದೆ.

**ಮೌಲ್ಯಮಾಪನ :** ಶಿಕ್ಷಣ ಕ್ಷೇತ್ರದಲ್ಲಿ ಮೌಲ್ಯಮಾಪನವೆಂಬುದು ಅತ್ಯಂತ ಪ್ರಮುಖವಾದ ಅಂಗವಾಗಿದೆ. ಶಿಕ್ಷಣ ನಡೆಯವ ಹಲವಾರು ಪ್ರಕ್ರಿಯೆಗಳಿಗೆ. ಚಟುವಟಿಕೆಗಳಿಗೆ ಬೆಲೆಕಟ್ಟುವ ಕೆಲಸವೇ ಮೌಲ್ಯಮಾಪನ. ಇದು ಪರಿಮಾಣಾತ್ಮಕವಾಗಿಯೂ, ಗುಣಾತ್ಮಕವಾಗಿಯೂ ಇರುವುದು.

ವಿದ್ಯಾರ್ಥಿಗಳು ಶೈಕ್ಷಣಿಕ ಉದ್ದೇಶಗಳನ್ನು ಎಷ್ಟರಮಟ್ಟಿಗೆ ಸಾಧಿಸಿಕೊಂಡಿದ್ದಾರೆ ಎಂಬುದನ್ನು ಕ್ರಮಬದ್ಧವಾಗಿ ತಿಳಿಯುವ ಪ್ರಕ್ರಿಯೆಯೇ ಮೌಲ್ಯಮಾಪನ ಪದ್ಧತಿಯು ಇಲ್ಲಿಯವರೆಗೆ ಅನೇಕ ವಿಧದಲ್ಲಿ ಪರಿಷ್ಕರಣೆಗೆ ಒಳಪಟ್ಟು ಸೃಷ್ಟಿಯಾಗಿರುವಂಥದ್ದು. ಈಗಿನ ಮೌಲ್ಯಮಾಪನವು ನಿರಂತರ, ಸಮಗ್ರ ಮೌಲ್ಯಮಾಪನವೆಂಬ ಘೋಷಣೆಯೊಡನೆ ಪ್ರಚಲಿತದಲ್ಲಿದೆ.

ವಿದ್ಯಾರ್ಥಿಗಳ ಜ್ಞಾನವಲಯ, ಭಾವವಲಯ ಮತ್ತು ಮನೋಜನ್ಯ ದೈಹಿಕ ವಲಯ ಇವೆಲ್ಲವುಗಳ ಮೌಲ್ಯಮಾಪನವು ಸತತವಾಗಿ ಚಾಲನೆಯಲ್ಲಿರುವುದೇ "ನಿರಂತರ ಸಮಗ್ರ ಮೌಲ್ಯಮಾಪನ".

ನಿರಂತರ ಸಮಗ್ರ ಮೌಲ್ಯಮಾಪನವು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಶಾಲೆ, ತರಗತಿಯ ಒಳಗೆ ಮತ್ತು ಹೊರಗೆ, ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಪೋಷಕರ ಹಾಗೂ ಸಮುದಾಯ ಸಕ್ರಿಯವಾದ ಸಹಭಾಗಿತ್ವವನ್ನು ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಅವಲೋಕಿಸಿ, ಪರೀಕ್ಷಿಸುತ್ತದೆ.

ಮೌಲ್ಯಮಾಪನವು ಮೌಖಿಕಪರೀಕ್ಷೆ ಲಿಖಿತ ಪರೀಕ್ಷೆ ಮತ್ತು ನಿರ್ವಹಣಾ ಪರೀಕ್ಷೆ ಎಂಬ ಮೂರು ಮುಖ್ಯವಾದ ವಿಧಗಳಲ್ಲಿ ನಡೆಸಲ್ಪಡುವುದು. ಮೌಲ್ಯಮಾಪನದ ಮುಖ್ಯ ಉದ್ದೇಶಗಳೆಂದರೆ,

1. ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ಅಳೆಯಲು
2. ಬೋಧನಾ ವಿಧಾನಗಳ ಪರಿಣಾಮವನ್ನು ಅರಿಯಲು ಮತ್ತು ಸುಧಾರಣೆಗಳನ್ನು ತರಲು
3. ಸೂಕ್ತವಾದ ಪಠ್ಯಕ್ರಮದ ಉದ್ದೇಶಗಳನ್ನು ರಚಿಸಿಕೊಳ್ಳಲು
4. ಶಿಕ್ಷಕರು ತಮ್ಮ ಬೋಧನಾ ವಿಧಾನದ ಗುಣಮಟ್ಟವನ್ನು ತಿಳಿದುಕೊಳ್ಳಲು.
5. ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಅಳೆಯಲು
6. ವಿಶೇಷ ಉದ್ದೇಶಗಳಿಗಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು.

ಇಷ್ಟೇ ಅಲ್ಲದೇ ಒಂದು ಶಿಕ್ಷಣ ಸಂಸ್ಥೆಯು ಪ್ರಮುಖವಾಗಿ ಎರಡು ಉದ್ದೇಶಗಳನ್ನಿಟ್ಟುಕೊಂಡು ಮೌಲ್ಯಮಾಪನವನ್ನು ನಡೆಸಬಹುದು, ಅವುಗಳೆಂದರೆ 1. ಶೈಕ್ಷಣಿಕ ಮೌಲ್ಯಮಾಪನ 2. ಆಡಳಿತಾತ್ಮಕ ಮೌಲ್ಯಮಾಪನ

ಮೌಲ್ಯಮಾಪನದಲ್ಲಿ ಮೂರು ವಿಧಗಳನ್ನು ಕಾಣಬಹುದಾಗಿದೆ. ಅವು ಯಾವುವೆಂದರೆ, 1. ನೈದಾನಿಕ 2. ರೂಪಣಾತ್ಮಕ 3. ಸಂಕಲನಾತ್ಮಕ

1. **ನೈದಾನಿಕ ಮೌಲ್ಯಮಾಪನ :** ಬೋಧನಾ – ಕಲಿಕಾ ಪ್ರಕ್ರಿಯೆಯ ಪೂರ್ವಾರ್ಧದಲ್ಲಿ ಮೊಟ್ಟ ಮೊದಲಿಗೆ ನಡೆಸಲಾಗುವುದು. ಇದರಿಂದಾಗಿ ವಿದ್ಯಾರ್ಥಿಯ ಸಾಮರ್ಥ್ಯಗಳ ಮಟ್ಟವನ್ನು, ಅವನ ಪ್ರತಿಭೆಯನ್ನು ಮತ್ತು ದೋಷಗಳನ್ನು ಕಂಡುಕೊಳ್ಳಲು ಸಾಧ್ಯವಾಗುವುದು. ಇದನ್ನು ಆಧರಿಸಿ ಮುಂದಿನ ಪಠ್ಯಕ್ರಮವನ್ನು ವಿನ್ಯಾಸಮಾಡಿಕೊಂಡಾಗ, ಪಠ್ಯಕ್ರಮವು ಹೆಚ್ಚು ಸೂಕ್ತವೂ ಯುಕ್ತವೂ ಆಗಬಹುದಾಗಿದೆ. ಇದಲ್ಲದೇ, ಇಡೀ ಶೈಕ್ಷಣಿಕ ವರ್ಷದಲ್ಲಿ ಯಾವುದೇ ವಿಷಯದಲ್ಲಾಗಲೀ, ಯಾವುದೇ ಹಂತದಲ್ಲಾಗಲೀ, ನೈದಾನಿಕ ಮೌಲ್ಯಮಾಪನಕ್ಕೆ ಗುರುತರವಾದ ಸ್ಥಾನವಿದೆ. ನೈದಾನಿಕ ಪರೀಕ್ಷೆಗಳನ್ನು ಆಧರಿಸಿ ಅನೇಕ ಪರಿಹಾರೋಪಾಯಗಳನ್ನು ಶಿಕ್ಷಕರು ಕೈಗೊಳ್ಳುವುದರ ಮೂಲಕ ವಿದ್ಯಾರ್ಥಿಗಳ ಕಲಿಕಾ ದೋಷಗಳನ್ನು ನಿವಾರಿಸಲು ಪ್ರಯತ್ನಿಸಿ, ಸಫಲರಾಗಬಹುದಾಗಿದೆ.

2. **ರೂಪಣಾತ್ಮಕ ಮೌಲ್ಯಮಾಪನ :** ಇದು ವಿದ್ಯಾರ್ಥಿಯು ಇನ್ನೂ ಕಲಿಕೆಯುಲ್ಲಿ ನಿರತನಾಗಿರುವಾಗಲೇ ನಡೆಸಲಾಗುವ ಮೌಲ್ಯಮಾಪನವಾಗಿದೆ. ಇದರಿಂದಾಗಿ ಬೋಧನಾ-ಕಲಿಕಾ ಪ್ರಕ್ರಿಯೆಯು ನಡೆಯುತ್ತಿರುವಾಗಲೇ ವಾಸ್ತವವಾಗಿ ಅದರ ಗುಣಮಟ್ಟವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು. ಅಲ್ಲದೇ ದೊರೆತ ಮರುಸೂಚನೆಗೆ ಅನುಗುಣವಾಗಿ ಸೂಕ್ತ ಸುಧಾರಣೆಗಳನ್ನು ರೂಪಿಸಿಕೊಳ್ಳಲು ಇದು ಸಹಾಯ ಮಾಡುವುದು.

3. **ಸಂಕಲನಾತ್ಮಕ ಮೌಲ್ಯಮಾಪನ :** ಒಂದು ಶೈಕ್ಷಣಿಕ ಅವಧಿಯು ನಿಗದಿತ ಘಟ್ಟವನ್ನು ತಲುಪಿದಾಗ ಅಥವಾ ಅಂತಿಮ ಘಟ್ಟವನ್ನು ತಲುಪಿದಾಗ ನಡೆಸುವ ಮೌಲ್ಯಮಾಪನವೇ ಸಂಕಲನಾತ್ಮಕ ಮೌಲ್ಯಮಾಪನ.

Digitised by Bharatavani, CIIL

**ಉದಾಹರಣೆಗೆ:** ಕಿರುಪರೀಕ್ಷೆಗಳು, ಘಟಕ ಪರೀಕ್ಷೆಗಳು, ಅರೆ ವಾರ್ಷಿಕ ಪರೀಕ್ಷೆಗಳು, ರೂಪಣಾತ್ಮಕ ಮೌಲ್ಯಮಾಪನವೆಂದಾದರೆ ವಾರ್ಷಿಕ ಪರೀಕ್ಷೆಯನ್ನು ಸಂಕಲನಾತ್ಮಕ ಮೌಲ್ಯಮಾಪನವೆಂದು ಪರಿಗಣಿಸಲಾಗುವುದು.

ಮೇಲೆ ಹೇಳಿದ ಪರೀಕ್ಷೆಗಳೇ, ಅಲ್ಲದೇ, ಸಾಧನ ಪರೀಕ್ಷೆ; ನಿಕಷ ಪರೀಕ್ಷೆ; ಅಧ್ಯಾಪಕ ನಿರ್ಮಿತ ಪರೀಕ್ಷೆ; ಪ್ರಮಾಣ ಬದ್ಧ ಪರೀಕ್ಷೆ; ನಿಬಂಧ ಪರೀಕ್ಷೆ; ವಸ್ತುನಿಷ್ಠ ಪರೀಕ್ಷೆ; ಪ್ರಬಂಧ ಪರೀಕ್ಷೆ; ಕಿರು ಉತ್ತರ ಮಾದರಿ ಪರೀಕ್ಷೆ – ಇತ್ಯಾದಿ ರೂಪದ ಪರೀಕ್ಷೆಗಳು ಮೌಲ್ಯಮಾಪನದ ಸಾಧನಗಳಾಗಿವೆ. ಇಂತಹ ಸಾಧನಗಳು ಉತ್ತಮ ಸಾಧನಗಳೆನ್ನಿಸಿಕೊಳ್ಳಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. **ಸಿಂಧುತ್ವ:** ಒಂದು ಪರೀಕ್ಷೆಯು ಏನನ್ನು ಪರೀಕ್ಷಿಸಲು ಉದ್ದೇಶಿಸುವುದೋ ಅದನ್ನೇ ಪರೀಕ್ಷಿಸುವಂತಿರಬೇಕು. ಹಾಗಿದ್ದಾಗ, ಪರೀಕ್ಷೆಯು ಸಿಂಧುವಾದುದು ಎಂದು ಸಮ್ಮತಿಸಲ್ಪಡುತ್ತದೆ.
2. **ವಿಶ್ವಾಸನೀಯತೆ:** ಒಂದು ಪರೀಕ್ಷೆಯು ತನ್ನ ಮೌಲ್ಯಮಾಪನವನ್ನು ಏಕರೀತಿಯಲ್ಲೇ ಉಳಿಸಿಕೊಳ್ಳುವುದು ಆ ಪರೀಕ್ಷೆಯ ವಿಶ್ವಾಸನೀಯತೆ ಎನಿಸಿಕೊಳ್ಳುವುದು.
3. **ವಸ್ತುನಿಷ್ಠತೆ:** ಪರೀಕ್ಷಾ ಸಾಧನವು, ಪೂರ್ವಭಾವಿಯಾಗಿ ತೀರ್ಮಾನಿಸಲ್ಪಟ್ಟ ಉತ್ತರಗಳನ್ನು ಹೊಂದಿರುವ ಪ್ರಶ್ನೆಗಳಿಂದ ಮಾಡಲ್ಪಟ್ಟಿರುತ್ತದೆ. ಆದ್ದರಿಂದ ವಸ್ತುನಿಷ್ಠ ಪ್ರಶ್ನೆಗೆ ಒಂದೇ ಉತ್ತರ ಇರಲು ಸಾಧ್ಯ. ಪರೀಕ್ಷಾ ಸಾಧನಗಳು ಈ ನಿಬಂಧನೆಗೆ ಅನುಗುಣವಾಗಿರಬೇಕು.
4. **ಉಪಯುಕ್ತತೆ:** ಪರೀಕ್ಷಾ ಸಾಧನಗಳು ಬೋಧನಾ-ಕಲಿಕಾ ಪ್ರಕ್ರಿಯೆಯನ್ನು ಸುಧಾರಿಸಲು, ಅದರ ಗುಣಮಟ್ಟವನ್ನು ಅಳೆಯಲು, ಉಪಯೋಗಕ್ಕೆ ಬರುವಂತೆ ರಚಿತವಾಗಿರಬೇಕು.
5. ಸ್ಪಷ್ಟತೆ, ಆಸಕ್ತಿದಾಯಕ, ಮತ್ತು ಗ್ರಹಿಸಲು ಸಾಧ್ಯವಾಗಿರುವಂತಹದ್ದಾಗಿರಬೇಕು.

ಮೌಲ್ಯಮಾಪನಕ್ಕಾಗಿ ರಚಿತವಾಗುವ ಪರೀಕ್ಷೆಗಳು ಈ ಕೆಳಕಂಡ ಹಂತಗಳ ಮೂಲಕ ಹಾದು ಬರುತ್ತವೆ

1. ಉದ್ದೇಶಗಳು
2. ವರ್ತನಾ ಪದಗಳಲ್ಲಿ ಉದ್ದೇಶಗಳ ರಚನೆ
3. ಸೂಕ್ತ ಕಲಿಕಾ ಅನುಭವಗಳು
4. ಅಳೆಯುವ ಪ್ರಕ್ರಿಯೆ
5. ಕಲಿಕಾ ಫಲಶ್ರುತಿಗಳ ಮೌಲ್ಯಮಾಪನ

ಒಂದು ಪ್ರಶ್ನೆ ಪತ್ರಿಕೆಯು ವೌಲ್ಯಮಾಪನದ ಉತ್ತಮ ಸಾಧನವಾಗಬೇಕಾದರೆ, ಅದು ಸಮತೋಲನ ಪ್ರಶ್ನೆಪತ್ರಿಕೆಯಾಗಿರಬೇಕು. ಅಂದರೆ ಅದರಲ್ಲಿ ವಿಷಯವಾರು, ಉದ್ದೇಶವಾರು, ಕ್ಲಿಷ್ಟತಾವಾರು, ಮತ್ತು ಪ್ರಶ್ನಾವಾರು ಸಮತೋಲನವು ಇರಬೇಕು ಎಂಬುದು ನಿರ್ವಿವಾದ. ಹೀಗೆ ಒಂದು ಸಮತೋಲನದ ಪ್ರಶ್ನೆಯನ್ನು ತಯಾರಿಸಲು ಮೊದಲು ಶಿಕ್ಷಕರು ಒಂದು ನೀಲ ನಕ್ಷೆಯ ಆಧಾರವನ್ನು ರಚಿಸಿಕೊಂಡು ನಂತರ ಪ್ರಶ್ನೆ ಪತ್ರಿಕೆಯನ್ನು ರಚಿಸುವರು.

–ಸಿ.ಎನ್.ಸು.

# ಟ

## ಟೆಲಿ ಕಾನ್ಫರೆನ್ಸ್

ಆಂಗ್ಲ ಭಾಷೆಯಲ್ಲಿ 'ಟೆಲಿ' ಎಂದರೆ ದೂರದಲ್ಲಿರುವುದು ಅಥವಾ ಕೈಗೆಟುಕದಿರುವುದು ಎಂದರ್ಥ. 'ಕಾನ್ಫರೆನ್ಸ್' ಎಂದರೆ 'ಸಮಾಲೋಚನೆ', 'ಸಂವಾದ' ಎಂದರ್ಥ. ದೂರದ ಪ್ರದೇಶಗಳಲ್ಲಿರುವ ಕಛೇರಿಗಳಾಗಲೀ, ಶೈಕ್ಷಣಿಕ ಸಂಸ್ಥೆಗಳಾಗಲೀ ಅಥವಾ ಔದ್ಯಮಿಕ ಕೇಂದ್ರಗಳಾಗಲೀ ಯಾವುದೇ ರೀತಿಯ ಸಂವಾದ, ಸಮಾಲೋಚನೆ ನಡೆಸಬೇಕಾದಲ್ಲಿ ಒಂದು ಸಮಾನ ಕೇಂದ್ರದಲ್ಲಿ ಭೇಟಿಯಾಗುವುದು ಇಂದು ಅಪರೂಪದ ಸಂಗತಿ. ಪರಸ್ಪರ ಆಸಕ್ತಿಯುಳ್ಳ ವ್ಯಕ್ತಿ ಅಥವಾ ಸಂಸ್ಥೆಗಳು ತಾವಿದ್ದ ಸ್ಥಳದಲ್ಲೇ ಕುಳಿತು ದೂರವಾಣಿ, ಫ್ಯಾಕ್ಸ್ ಮತ್ತು ಅಂತರ್ಜಾಲದ ಮೂಲಕ ಸಂವಾದ ನಡೆಸುವುದು ಅಥವಾ ಸಮಾಲೋಚನೆ ನಡೆಸುವುದು ದೂರ ಸಮಾಲೋಚನೆಯ (Tele Conference) ತಂತ್ರಗಾರಿಕೆಯಿಂದ ಸಾಧ್ಯವಾಗಿದೆ. ಈ ತಂತ್ರಜ್ಞಾನದ ಮೂಲಕ ದೂರದಲ್ಲಿರುವ ವ್ಯಕ್ತಿಗಳು ಪರಸ್ಪರ ಕೇಳುತ್ತಲೇ ವೀಕ್ಷಿಸಲೂಬಹುದು. ದೂರ ಸಮಾಲೋಚನೆಯ ತಂತ್ರಜ್ಞಾನವನ್ನು ಪ್ರಪ್ರಥಮ ಬಾರಿಗೆ 1960ರಲ್ಲಿ ಅಮೇರಿಕಾದ ದೂರವಾಣಿ ಮತ್ತು ತಂತುವಾಹಕ ಮಾಧ್ಯಮದ ಮೂಲಕ ಅಳವಡಿಸಲಾಗಿತ್ತು. 'ಶ್ರಾವ್ಯ ಸಮಾಲೋಚನೆ' 'ದೂರವಾಣಿ ಸಮಾಲೋಚನೆ' 'ದೃಶ್ಯ ಸಮಾಲೋಚನೆ' ಹೀಗೆ ವಿಭಿನ್ನ ರೀತಿಯಲ್ಲಿ ದೂರ ಸಮಾಲೋಚನೆಯನ್ನು ಬಣ್ಣಿಸಲಾಗುತ್ತದೆ.

**ಟೆಲಿ ಕಾನ್ಫರೆನ್ಸಿನ ಪ್ರಕ್ರಿಯೆ:** ಟೆಲಿ ಕಾನ್ಫರೆನ್ಸಿನಲ್ಲಿ ಭಾಗವಹಿಸುವವರ ನಡುವೆ ಪರಸ್ಪರ ಕ್ರಿಯೆಗಳು ಒಂದೇ ವೇಳೆಯಲ್ಲಿ ಸಂಭವಿಸುತ್ತವೆ. ಭಾಗವಹಿಸುವವರು, ಕಲಿಕಾ ಅಭ್ಯರ್ಥಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳು ವಿವಿಧ ಸ್ಥಳಗಳಲ್ಲಿ ಏಕಕಾಲದಲ್ಲಿ ಲಭ್ಯವಿರುತ್ತಾರೆ. ಹಾಗಾಗಿ ಪರಸ್ಪರ ವಿದ್ಯುನ್ಮಾನ ಮಾಧ್ಯಮದ ಮೂಲಕ ಸಂಪರ್ಕ ಸಾಧಿಸುವುದು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ ದೂರ ಸಮಾಲೋಚನೆಯು ನೂರಾರು ಮೈಲು ದೂರದ ವಿಭಿನ್ನ ಪ್ರದೇಶಗಳಲ್ಲಿರುವ ಜನರನ್ನು ಮಾನಸಿಕವಾಗಿ, ಭಾವುಕವಾಗಿ ಒಂದೇ ವೇದಿಕೆಯಲ್ಲಿ ಸೇರಿಸುತ್ತದೆ.

**ಟೆಲಿ ಕಾನ್ಫರೆನ್ಸಿನ ವಿಧಾನಗಳು:** ಟೆಲಿ ಕಾನ್ಫರೆನ್ಸಿನಲ್ಲಿ ಹಲವು ವಿಧಾನಗಳಿವೆ. ಪ್ರಮುಖವಾಗಿ ಮೂರು ವಿಧಾನಗಳನ್ನು ಗುರುತಿಸಬಹುದು. ಮೊದಲನೆಯದು ದೃಶ್ಯ ಸಮಾಲೋಚನೆ (Video Conference). ಎರಡನೆಯದು ಶ್ರಾವ್ಯ ಸಮಾಲೋಚನೆ (Audio Conference) ಮತ್ತು ಮೂರನೆಯದು ದೃಶ್ಯ-ಶ್ರಾವ್ಯ ಸಮಾಲೋಚನೆ (Video-Audio Conference). ಇವುಗಳಲ್ಲಿ ಶಿಕ್ಷಣ ಮತ್ತು ತರಬೇತಿ ಕ್ಷೇತ್ರದಲ್ಲಿ ಪ್ರಮುಖವಾಗಿ ಚಾಲ್ತಿಯಲ್ಲಿರುವುದು, ಕಂಪ್ಯೂಟರ್ ಆಧಾರಿತ ದೃಶ್ಯ ಸಮಾಲೋಚನೆ.

ಒಮ್ಮುಖ ದೃಶ್ಯ ಸಮಾಲೋಚನೆಯಲ್ಲಿ ಕಲಿಕಾ ಅಭ್ಯರ್ಥಿಗಳು ಹಾಗೂ ಪ್ರಶಿಕ್ಷಣಾರ್ಥಿಗಳು ಒಂದೆಡೆ, ಮತ್ತು ಸಂಪನ್ಮೂಲ ವ್ಯಕ್ತಿಗಳು ಮತ್ತೊಂದೆಡೆ ಇದ್ದಾಗ, ಈ ಎರಡು ಗುಂಪುಗಳ ನಡುವೆ ಪರಸ್ಪರ ಕ್ರಿಯೆ ಶ್ರವಣ ಮಾಧ್ಯಮ ಮೂಲಕ ಮಾತ್ರ ಸಾಧ್ಯವಾಗಬಹುದು. ಶಿಕ್ಷಣ

Digitised by Bharatavani, CIIL

ಮತ್ತು ತರಬೇತಿ ಕ್ಷೇತ್ರದಲ್ಲಿ ಈ ತಂತ್ರಜ್ಞಾನ ಹೆಚ್ಚು ಪ್ರಚಲಿತವಾಗಿದೆ. ಈ ದೃಶ್ಯ ಸಮಾಲೋಚನೆಯನ್ನು C.D.ಗಳಲ್ಲಿ ದಾಖಲಿಸಿ ಸಮಾಲೋಚನೆಯಲ್ಲಿ ಭಾಗವಹಿಸದ ಇನ್ನಿತರ ಪ್ರಶಿಕ್ಷಣಾರ್ಥಿಗಳ ಕಲಿಕೆಗಾಗಿ ಕಳುಹಿಸಬಹುದು.

ದ್ವಿಮುಖ ದೃಶ್ಯ ಸಮಾಲೋಚನೆಯಲ್ಲಿ ಕಲಿಕಾ ಅಭ್ಯರ್ಥಿಗಳು–ಪ್ರಶಿಕ್ಷಣಾರ್ಥಿಗಳು ಒಂದೆಡೆ ಮತ್ತು ಸಂಪನ್ಮೂಲ ವ್ಯಕ್ತಿಗಳು ಮತ್ತೊಂದೆಡೆ ದೃಶ್ಯ ಮತ್ತು ಶ್ರಾವ್ಯ ಮಾಧ್ಯಮಗಳ ಮೂಲಕ ಪರಸ್ಪರ ಸಮಾಲೋಚನೆ ನಡೆಸಬಹುದು. ಈ ತಂತ್ರಜ್ಞಾನದಲ್ಲಿ ಭಾಗವಹಿಸುವವರು ದೃಶ್ಯ ಮತ್ತು ಶ್ರಾವ್ಯ ಮಾಧ್ಯಮಗಳ ಮೂಲಕವೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಬಹುದು.

**ಮುಂಜಾಗ್ರತಾ ಕ್ರಮಗಳು**

- ಕಂಪ್ಯೂಟರ್‌ಗಳ ಯಾಂತ್ರಿಕ ಭಾಗಗಳು ಕಾರ್ಯ ನಿರ್ವಹಿಸುವ ಸ್ಥಿತಿಯಲ್ಲಿರುವುದನ್ನು ದೃಢಪಡಿಸಿಕೊಳ್ಳಬೇಕು. ಸಂಪನ್ಮೂಲ ವ್ಯಕ್ತಿಗಳು ಮತ್ತು ನಿರ್ವಹಣಕಾರರು ಸಮಾಲೋಚನೆಯನ್ನು ಏರ್ಪಡಿಸುವ ಸ್ಟುಡಿಯೋ ಪರಿಸರವನ್ನು, ಸ್ಟುಡಿಯೋದಲ್ಲಿ ಬಳಸಲಾಗುವ ಪದಗಳ ಅರ್ಥಗಳನ್ನು ಮತ್ತು ಕಾರ್ಯಕ್ರಮ ನಿರ್ವಹಿಸುವವರ ಸಂಜ್ಞೆಗಳನ್ನು ಚೆನ್ನಾಗಿ ಗ್ರಹಿಸಿರಬೇಕು.

- ಸಂಪನ್ಮೂಲ ವ್ಯಕ್ತಿಗಳ ಹಾಗೂ ನಿರ್ವಹಣಕಾರರ ಮೇಕಪ್ ಮತ್ತು ಬೆಳಕಿನ ವ್ಯವಸ್ಥೆಯನ್ನು ಸರಿಯಾಗಿ ಏರ್ಪಡಿಸಬೇಕು.

- ವಿಷಯವನ್ನು ಯಾವ ಅನುಕ್ರಮದಲ್ಲಿ ಪ್ರಸ್ತುತಪಡಿಸಬೇಕು, ದೃಶ್ಯಾವಳಿಯನ್ನು ವಿಷಯ ಮಂಡನೆಯ ಸಮಯದಲ್ಲಿ ಹೇಗೆ ಉಪಯೋಗಿಸಬೇಕು ಎಂದು ಮೊದಲೇ ನಿರ್ಧರಿಸಬೇಕು.

- ಸ್ಟುಡಿಯೋದಲ್ಲಿ ವಿಷಯ ಮಂಡನೆಯ ಸಂಬಂಧದಲ್ಲಿ ಅಗತ್ಯವಿರಬಹುದಾದ ವಿವಿಧ ಕಾರ್ಯಚಟುವಟಿಕೆಗಳನ್ನು ಪ್ರದರ್ಶಿಸಲು ಅನುಕೂಲವಾಗುವಂತೆ ಅಗತ್ಯವಾದ ಸಾಧನಗಳನ್ನು ಸಂಗ್ರಹಿಸಿ ಸರಿಯಾಗಿ ಏರ್ಪಡಿಸಬೇಕು.

- ವೀಕ್ಷಕರಿಗೆ ಸರಿಯಾಗಿ ವೀಕ್ಷಿಸಲು ಅನುಕೂಲವಾಗುವಂತೆ ಟಿ.ವಿ.ಯನ್ನು ಸರಿಯಾದ ಮಟ್ಟದಲ್ಲಿ ಇರಿಸಬೇಕು ಮತ್ತು ಶ್ರಾವ್ಯ ಯೋಗ್ಯವಾಗಿರಬೇಕು.

- ನಿರಂತರ ವಿದ್ಯುತ್ ಸರಬರಾಜು, ವಿದ್ಯುತ್ ಕಡಿತವಾದರೆ ಪೂರಕವಾಗಿ ಜನರೇಟರ್ ಅಥವಾ ಇನ್‌ವರ್ಟರ್, ದೂರವಾಣಿ, ಫ್ಯಾಕ್ಸ್, ಅಂತರ್ಜಾಲ ವ್ಯವಸ್ಥೆ ಇವೆಲ್ಲವನ್ನೂ ಸಮರ್ಪಕವಾಗಿ ಏರ್ಪಡಿಸಿರಬೇಕು.

- ಕಂಪ್ಯೂಟರ್‌ನ ತಾಂತ್ರಿಕ ಭಾಗಗಳು ಕಾರ್ಯ ನಿರ್ವಹಿಸುವ ಸ್ಥಿತಿಯಲ್ಲಿರುವುದೇ ಎಂದು ಪರಿವೀಕ್ಷಿಸಬೇಕು ಹಾಗೂ ತಂತ್ರಜ್ಞರೊಬ್ಬರ ಉಪಸ್ಥಿತಿ ಅನಿವಾರ್ಯವಾಗಿ ಇರಲೇಬೇಕು.

- ಸ್ಟುಡಿಯೋದ ಕೋಣೆಯಲ್ಲಿ ಪ್ರತಿಧ್ವನಿ ಬರದಂತೆ, ಅನ್ಯ ಯಾವುದೇ ಶಬ್ದ ಮಾಲಿನ್ಯವಾಗದಂತೆ, ನೋಡಲು ಅನುಕೂಲವಾಗುವಂತೆ ಅಗತ್ಯ ವ್ಯವಸ್ಥೆಯನ್ನು ಮಾಡಬೇಕು.

- ಪ್ರಶಿಕ್ಷಣಾರ್ಥಿಗಳಿಗೆ, ಕಲಿಕಾ ಅಭ್ಯರ್ಥಿಗಳಿಗೆ ಟಿ.ವಿ. ಪರದೆಯಿಂದ ಸೂಕ್ತ ಅಳತೆಯ ದೂರದಲ್ಲಿ ಆಸೀನರಾಗುವಂತೆ ಸೂಚನೆ ನೀಡಬೇಕು.

**ಉಪಯುಕ್ತತೆ:** ಟೆಲಿ ಕಾನ್ಫರೆನ್ಸ್ ಮುಖ್ಯವಾಗಿ ಸಂವಹನ ಮತ್ತು ತರಬೇತಿಯ ದೃಷ್ಟಿಯಿಂದ ಉಪಯುಕ್ತವಾದುದು. ಈ ತಂತ್ರಜ್ಞಾನವನ್ನು ಮಾಹಿತಿ ಸಂಗ್ರಹಣೆ, ಪ್ರಸರಣ ಕ್ರಿಯೆ, ಒಂದು ಯೋಜನೆಯನ್ನು ಕುರಿತ ಮಾರ್ಗದರ್ಶನ, ವಿಶೇಷ ತಜ್ಞರೊಡನೆ ಸಲಹೆ ಕೇಳುವುದು, ನಿರ್ದೇಶಿತ ಗುಂಪು ಚರ್ಚೆಗಳು, ಸಂದರ್ಶನಗಳು ಮುಂತಾದ ಕ್ರಿಯೆಗಳಲ್ಲಿ ಉಪಯೋಗಿಸಬಹುದು. ಒಂದು ತಂತ್ರಜ್ಞಾನವಾಗಿ ದೂರ ಸಮಾಲೋಚನೆಯನ್ನು ಶಿಕ್ಷಣ ಕ್ಷೇತ್ರದಲ್ಲಿ, ತರಬೇತಿಗಳಲ್ಲಿ, ಅಭಿವೃದ್ಧಿ ಕಾರ್ಯಗಳಲ್ಲಿ, ವ್ಯಾಪಾರ ವಾಣಿಜ್ಯೋದ್ಯಮದಲ್ಲಿ, ಆಡಳಿತ ಯಂತ್ರದಲ್ಲಿ, ವೃತ್ತಿಪರ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ, ಸೇವಾ ಕ್ಷೇತ್ರದಲ್ಲಿ ಉಪಯೋಗಿಸಲಾಗುತ್ತದೆ.

ಸಂಘಟನಾಕಾರರಿಗೆ, ಆಡಳಿತ ವರ್ಗಗಳಿಗೆ, ಶೈಕ್ಷಣಿಕ ತಜ್ಞರಿಗೆ ಮತ್ತು ಕಲಿಕಾ ಅಭ್ಯರ್ಥಿಗಳಿಗೆ ದೂರ ಸಮಾಲೋಚನೆಯು ಅನೇಕ ಪ್ರಯೋಜನಗಳನ್ನು ಒದಗಿಸುತ್ತದೆ.

1. ಭೌಗೋಳಿಕವಾಗಿ ಹಂಚಿಹೋಗಿರುವ ಅನೇಕ ಗುಂಪುಗಳಿಗೆ ಒಂದು ವೇದಿಕೆ ಒದಗಿಸುತ್ತದೆ.
2. ಸಂಘಟನಾಕಾರರಿಗೆ ವಿತರಣಾ ವೆಚ್ಚವೂ ಕಡಿಮೆಯಾಗಿ ಇಡೀ ಪ್ರಕ್ರಿಯೆಯ ಬೆಲೆಯ ಮೇಲೂ ಪರಿಣಾಮ ಉಂಟುಮಾಡುತ್ತದೆ. ಸಮಯ ಪ್ರಯಾಣದ ಅವಧಿಯೂ ಉಳಿತಾಯವಾಗುತ್ತದೆ. ಸಂಪನ್ಮೂಲಗಳನ್ನು ವ್ಯಾಪಕ ಗುಂಪುಗಳಲ್ಲಿ ಹರಡಲು ಹಾಗೂ ಅಭ್ಯರ್ಥಿಗಳ ಬಳಿಯೇ ಅವಕಾಶಗಳನ್ನು ಕೊಂಡೊಯ್ಯಲು ಸಹಾಯಕವಾಗುತ್ತದೆ.
3. ಅಧ್ಯಾಪಕರುಗಳಿಗೆ ತಮ್ಮ ಪೂರ್ಣಾವಧಿ ಅಥವಾ ಅಲ್ಪಾವಧಿ ಕಾರ್ಯಗಳು, ಕೌಟುಂಬಿಕ ಅವಶ್ಯಕತೆಗಳು ಇರುವುದರಿಂದ ಸಮಾಲೋಚನೆಗಳನ್ನು ಏರ್ಪಡಿಸಲು ನಿಗದಿತ ಕಾಲಾವಧಿಯಲ್ಲಿ ಮಾತ್ರ ಸಾಧ್ಯವಾಗುತ್ತದೆ. ಈ ತಂತ್ರಜ್ಞಾನದ ಪರಿಣಾಮವಾಗಿ ಅಧ್ಯಾಪಕರಿಗೆ ಸಮಯಾಭಾವದ ಕೊರತೆ ಉಂಟಾಗುವುದಿಲ್ಲ.
4. ಟೆಲಿ ಕಾನ್ಫರೆನ್ಸಿನ ಮೂಲಕ ನೀಡುವ ತರಬೇತಿಯು ಉತ್ತಮ ಗುಣಮಟ್ಟದ್ದಾಗಿದ್ದು ಸಮಂಜಸವಾಗಿರುತ್ತದೆ. ಪ್ರಾಥಮಿಕ ಸಂಪನ್ಮೂಲಗಳಿಂದಲೇ ವಿಭಿನ್ನವಾದ ಬಹುದೃಷ್ಟಿಕೋನಗಳಿಗೆ ಅವಕಾಶಗಳು ತೆರೆದುಕೊಳ್ಳುತ್ತವೆ. ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಗಳು ನೇರವಾಗಿ ಲಭ್ಯವಾಗುವುದರಿಂದ ಗುಣಮಟ್ಟದ ಕೊರತೆ ಕಂಡುಬರುವುದಿಲ್ಲ. ಬಹು ತರಬೇತಿ ಸಂಪನ್ಮೂಲಗಳನ್ನು ಬಳಸುವುದರಿಂದ ಉತ್ತಮ ಗುಣಮಟ್ಟದ ತರಬೇತಿ ನೀಡಬಹುದು.
5. ಈ ತಂತ್ರಜ್ಞಾನವು ಹೆಚ್ಚು ಆಕರ್ಷಣೀಯವಾಗಿರುತ್ತದೆ. ವೈವಿಧ್ಯಮಯ ತಂತ್ರಗಾರಿಕೆಗಳನ್ನು ಉಪಯೋಗಿಸುವುದರಿಂದ ಭಾಗವಹಿಸುವವರಿಗೆ ಉತ್ತಮ ಪ್ರೇರಣೆ ಮತ್ತು ಪ್ರೋತ್ಸಾಹ ನೀಡುವ ಮೂಲಕ ಲಭ್ಯವಾಗುವ ಮಾಹಿತಿ ಬಹುಕಾಲ ನೆನಪಿನಲ್ಲಿ ಉಳಿಯುತ್ತದೆ.
6. ಅನಿಮೇಷನ್ ತಂತ್ರಜ್ಞಾನ, ಗ್ರಾಫಿಕ್ಸ್ ಮತ್ತಿತರ ತಂತ್ರಜ್ಞಾನಗಳನ್ನು ಉಪಯೋಗಿಸುವುದರಿಂದ ಪ್ರದರ್ಶನಕಾರರಿಗೆ, ಪ್ರಯೋಗಾರ್ಥಿಗಳಿಗೆ ದೂರ ಸಮಾಲೋಚನೆಯು ಉತ್ತಮವಾದ ತಂತ್ರಗಾರಿಕೆಯನ್ನು ಒದಗಿಸುತ್ತದೆ. ಹಾಗಾಗಿ ಕಲಿಕೆಯನ್ನು ದೃಢಗೊಳಿಸುತ್ತದೆ.
7. ಇದರಿಂದ ಕಲಿಕಾ ಅಭ್ಯರ್ಥಿಗಳು ಪರಸ್ಪರ ಚರ್ಚೆ ನಡೆಸಿ, ಪ್ರಶ್ನೆಗಳನ್ನು ಕೇಳಿ ಸವಾಲು ಎಸೆಯುವ ಮೂಲಕ ಹೆಚ್ಚು ವಿಷಯ ಗ್ರಹಿಕೆ ಸಾಧ್ಯವಾಗುತ್ತದೆ. ಕಲಿಕಾ ಅಭ್ಯರ್ಥಿಗಳು ಸಂದರ್ಭಾನುಸಾರ ಪ್ರತಿಕ್ರಿಯಿಸಲು ದೃಶ್ಯ ಮಾಧ್ಯಮವು ಉತ್ತೇಜನಕಾರಿಯಾಗಿರುತ್ತದೆ.

Digitised by Bharatavani, CIIL

8. ಹಿಂದೆ ನಡೆದ ಸಮಾಲೋಚನೆಗಳ ಬಗ್ಗೆ ಪರಾಮರ್ಶೆ ಮತ್ತು ಪುನರಾಲೋಚನೆಯನ್ನು ಮಾಡುವುದು ಅತಿ ಸರಳ ಮತ್ತು ಕಡಿಮೆ ವೆಚ್ಚದಲ್ಲಿ ಆಗುತ್ತದೆ.
9. ಸಾಧಾರಣ ಸಮಸ್ಯೆಗಳ ಪರಿಹಾರಕ್ಕೆ, ಮಾಹಿತಿ ವಿನಿಮಯಕ್ಕೆ, ನಿಯಮಾವಳಿಗಳ ಪೂರೈಕೆಗೆ ಇದು ಸಮಾಧಾನಕರ ಮಾರ್ಗವಾಗಿದೆ.
10. ಗುಂಪಿನಲ್ಲಿ ಭಾಗವಹಿಸುವವರು ಇತರ ಸಭೆಗಳಿಗಿಂತಲೂ ಉತ್ತಮವಾದ ಸಿದ್ಧತೆಯೊಂದಿಗೆ ಬಂದಿರುತ್ತಾರೆ.
11. ಟೆಲಿ ಕಾನ್ಫರೆನ್ಸ್ ಉತ್ತಮ ಸಂಬಂಧಗಳನ್ನು ಏರ್ಪಡಿಸುತ್ತದೆ. ಅರ್ಥಾತ್ ಎಲ್ಲೋ ಇರುವ ಗುಂಪುಗಳು ಏಕಕಾಲದಲ್ಲಿ ಪರಸ್ಪರ ಪ್ರತಿಕ್ರಿಯಿಸಲು ನೆರವಾಗುತ್ತದೆ.

ದೂರ ಸಮಾಲೋಚನೆಯು ಮಾನವ ಸಮಾಜದ ಅಭ್ಯುದಯದಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಂವಹನ ಕ್ರಿಯೆ. ಮನುಷ್ಯರು ಪರಸ್ಪರ ಅರಿತುಕೊಳ್ಳಲು, ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು, ದೂರ ಪ್ರದೇಶಗಳಲ್ಲಿ ವಾಸಿಸುವ ವಿಭಿನ್ನ ಜನಸಮುದಾಯಗಳ ಜೀವನ ಶೈಲಿಯನ್ನು ಗ್ರಹಿಸಲು ಹೆಚ್ಚು ಅನುಕೂಲಕರವಾಗಿರುವ ಈ ಸಂಪರ್ಕ ವ್ಯವಸ್ಥೆಯು ಶಿಕ್ಷಣ ರಂಗದಲ್ಲಿ ಹೆಚ್ಚು ಬಳಕೆಯಾಗಿ ಎಲ್ಲರ ಜ್ಞಾನ ಸಂಪತ್ತನ್ನು ಶ್ರೀಮಂತಗೊಳಿಸಬೇಕು.

– ಕೆ.ಕೆ.ವಿ.

## ಟ್ಯುಟೋರಿಯಲ್ ವ್ಯವಸ್ಥೆ

ಕ್ರಿಸ್ತಪೂರ್ವ ಮೊದಲನೆಯ ಶತಮಾನದಲ್ಲಿ ಒಂದು ತರಗತಿಯ ಹಿರಿಯ ವಿದ್ಯಾರ್ಥಿಗಳು ತಮ್ಮ ಕಿರಿಯ ಸಹಪಾಠಿಗಳಿಗೆ ಬೋಧಿಸುತ್ತಿದ್ದರು ಹಾಗೂ ಅವರ ಅಭ್ಯಾಸದ ಮೇಲ್ವಿಚಾರಣೆ ಮಾಡುತ್ತಿದ್ದರು.

ಕ್ರಿ.ಶ. ಪೂರ್ವ 469–399ರಲ್ಲಿದ್ದ ಶತಮಾನದಲ್ಲಿ ಸಾಕ್ರೆಟಿಸ್‌ರವರು ಯಾವಾಗಲೂ ಸಂಭಾಷಣೆ ಮಾಡುತ್ತಾ ಬೋಧಿಸುತ್ತಿದ್ದರು. ಅವರು ಬರೀ ಪ್ರಶ್ನೆಗಳನ್ನು ಮಾತ್ರ ಕೇಳುತ್ತಿದ್ದರು. ಗ್ರೀಕ್ ದೇಶದ ಜನರು ಹೆಚ್ಚಿಗೆ ಯಾವಾಗಲೂ ಪ್ರಶ್ನೆಗಳನ್ನು ಕೇಳುವುದರ ಜೊತೆಗೆ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು ಅವರು ವಿದ್ಯಾರ್ಥಿಗಳು ಹೇಳುವ ವಿಚಾರಗಳನ್ನು ಆಲಿಸುವುದನ್ನು ಮತ್ತು ಹೇಳಿದ ವಿಚಾರಗಳ ಬಗ್ಗೆ ಚರ್ಚಿಸುವುದನ್ನು ಮಾತ್ರ ಇಷ್ಟಪಡುತ್ತಿದ್ದರು. ಹೀಗಾಗಿ ಸಾಕ್ರೆಟಿಸ್‌ರವರು ಬೋಧನೆ ಎಂದರೆ 'ವಿದ್ಯಾರ್ಥಿಯ ಪೂರ್ತಿ ಮೆದುಳಿನಲ್ಲಿ ವಿಚಾರಗಳನ್ನು ಸುರಿಯುವುದಲ್ಲ. ಆದರೆ ಅವರ ಮನಸ್ಸಿನಲ್ಲಿ ಹುದುಗಿರುವ ಸಾರ್ವತ್ರಿಕ ಸತ್ಯವನ್ನು ಹೊರಸೆಳೆಯುವುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ರೀತಿ ಬೋಧನೆಯ ಮೇಲ್ವಿಚಾರಣಾ ವ್ಯವಸ್ಥೆಯ ಕಲ್ಪನೆಯನ್ನು ಸಾಕ್ರೆಟಿಸ್‌ರವರು ಶೋಧಿಸಿದ್ದಾರೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾರಂಭದಲ್ಲಿ ಕಲಿಯುವುದಕ್ಕಾಗಿ ಹಾಗೂ ಮಾರ್ಗದರ್ಶನ ಪಡೆಯಲು ಒಬ್ಬ ವಿದ್ಯಾರ್ಥಿಯು ಮಾತ್ರ ಒಬ್ಬ ಶಿಕ್ಷಕರ ಹತ್ತಿರ ಹೋಗುತ್ತಿದ್ದನು. ಕೆಲವು ವರ್ಷಗಳ ನಂತರ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದ ಕಾರಣ ಒಬ್ಬ ಶಿಕ್ಷಕನಿಗೆ ವಿದ್ಯಾರ್ಥಿಗಳ ಸಣ್ಣ ಗುಂಪಿನ ಕಲಿಕೆಯ ಮೇಲ್ವಿಚಾರಣೆ ಮಾಡುವ ವ್ಯವಸ್ಥೆ ಜಾರಿಗೆ ಬಂದಿತು. ಆದರೆ ಕೇರಿಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಒಬ್ಬ ಶಿಕ್ಷಕರು ಇಬ್ಬರು ವಿದ್ಯಾರ್ಥಿಗಳ ಕಲಿಕೆಯ ಮೇಲ್ವಿಚಾರಣೆ ಮಾಡುತ್ತಿದ್ದರು. ಇಂಗ್ಲೆಂಡ್‌ನಲ್ಲಿ ವಸತಿಯಿಂದ ಕಾಲೇಜುಗಳ ಸಂಖ್ಯೆಯು ಹೆಚ್ಚಾದ ಕಾರಣ ಬೋಧನಾ ಮೇಲ್ವಿಚಾರಣೆಯ ವ್ಯವಸ್ಥೆಯು ಒಂದು ವಿಶೇಷ ಬೋಧನಾ ಪದ್ಧತಿಯಾಯಿತು.

ಕ್ರಿಸ್ತಶಕ ಎಂಟನೇ ಶತಮಾನದಲ್ಲಿ ಮಹಮ್ಮದೀಯರು ಭಾರತದ ಮೇಲೆ ದಾಳಿ ನಡೆಸಿದರು. ಆಗ ವೇದಗಳ ಕಾಲದ ಶಿಕ್ಷಣ ಕೇಂದ್ರದಲ್ಲಿ ಬೌದ್ಧರ ಕಾಲದ ಶಿಕ್ಷಣ ಅನುಷ್ಠಾನದಲ್ಲಿದ್ದಿತು. ಮಧ್ಯಕಾಲೀನ ಭಾರತದಲ್ಲಿ ಇಸ್ಲಾಂ ಧರ್ಮದ ಶಿಕ್ಷಣವನ್ನು ಮದರಸಾಗಳಲ್ಲಿ ನೀಡುತ್ತಿದ್ದರು. ಪ್ರತಿ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು. ವಿದ್ಯಾರ್ಥಿಗೆ ಇಷ್ಟವಿರುವ ಒಂದು ವಿಷಯದ ಬಗ್ಗೆ ಕಲಿಯುವ ಸ್ವಾತಂತ್ರ್ಯ ಕೊಡಲಾಗಿತ್ತು. ತರಗತಿಯಲ್ಲಿ ಕಡಿಮೆ ಜ್ಞಾನ ಮಕ್ಕಳು ಇದ್ದ ಕಾರಣ ಇವರ ಶಿಕ್ಷಣದ ಪ್ರಗತಿಯು ಕುಂಠಿತವಾಗತೊಡಗಿತು. ಹೆಚ್ಚಿನ ಬೋಧನಾ ಸಾಮರ್ಥ್ಯ ಹೊಂದಿದ ಪ್ರಸಿದ್ಧ ಶಿಕ್ಷಕರು ಬೋಧಿಸುತ್ತಿದ್ದರೂ ಸಹ ಆಗ "ಹಿರೇಮಣಿ ಪದ್ಧತಿ" ರೂಢಿಯಲ್ಲಿದ್ದಿತು. ಪ್ರತಿನಿತ್ಯ ಬೋಧಿಸುವ ಶಿಕ್ಷಕರು ಬೋಧಿಸಲು ಬರದೇ ಇದ್ದಾಗ ಅಥವಾ ಕೆಲವು ಸಾರಿ ಶಿಕ್ಷಕರ ಬೋಧನಾ ಕಾರ್ಯದ ಭಾರವನ್ನು ಕಡಿಮೆಗೊಳಿಸಲು ನಿರ್ಧರಿಸಿದಾಗ ಆಯಾ ಶಿಕ್ಷಕರ ಪರವಾನಿಗೆ ತೆಗೆದುಕೊಂಡು ಉನ್ನತ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಹಿರಿಯ ವಿದ್ಯಾರ್ಥಿಗಳು ತಮಗಿಂತ ಕೆಳಗಿನ ತರಗತಿಗಳ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು.

ಹದಿನಾರನೇ ಶತಮಾನದಲ್ಲಿ ಜರ್ಮನಿ ಮತ್ತು ಸ್ಪೇನ್‌ದಲ್ಲಿ 'ಟ್ಯುಟೋರಿಯಲ್' ವ್ಯವಸ್ಥೆಯನ್ನು ಬಹಳ ಇತಿ–ಮಿತಿಗಳೊಂದಿಗೆ ಅನುಸರಿಸಲಾಯಿತು. ಸ್ಕಾಟ್ಲಂಡಿನ ಆ್ಯಂಡ್ರ್ಯೂ ಬೆಲ್‌ರವರು 18ನೇ ಶತಮಾನದಲ್ಲಿ ಬ್ರಿಟಿಷ್ ಸೈನಿಕರ ಪರದೇಶಿ ಮಕ್ಕಳಿಗೆ ಹಾಗೂ ಭಾರತೀಯ ಪರದೇಶಿ ಮಕ್ಕಳಿಗೆ ಮದ್ರಾಸ್‌ನಲ್ಲಿ ಶಾಲೆ ಸ್ಥಾಪಿಸಿದರು. ಬೆಲ್‌ರವರು 1797ರಲ್ಲಿ ಪ್ರಾಚೀನ ಹಿಂದೂ ಟ್ಯುಟೋರಿಯಲ್ ಪದ್ಧತಿಯನ್ನು ಮಾರ್ಪಡಿಸಿ ಇದನ್ನು ವಿದ್ಯಾರ್ಥಿಯ ಅಥವಾ ಸಹಪಾಠಿಗಳ ಮೇಲ್ವಿಚಾರಣೆ ಹಾಗೂ ತರಗತಿಯಲ್ಲಿ ಶಿಸ್ತು ಕಾಪಾಡುವ ವಿಧಾನವಾಗಿ ಬಳಸಿಕೊಂಡರು. ಬೆಲ್‌ರವರ ಈ ವಿಧಾನಗಳನ್ನು ಇಂಗ್ಲೆಂಡಿನ ಪ್ರಶಿಕ್ಷಕ ಜೋಸೆಫ್ ಲ್ಯಾಂಕಾಸ್ಟರ್‌ರವರು ಬಳಸಿಕೊಂಡು ಟ್ಯುಟೋರಿಯಲ್ ಅಥವಾ 'ಹಿರೇಮಣಿ' (Monitorial) ಬೋಧನಾ ಪದ್ಧತಿಯನ್ನು ಪ್ರತಿಪಾದಿಸಿದರು. ಹೀಗಾಗಿ ಈ ಬೆಲ್–ಲ್ಯಾಂಕಾಸ್ಟರ್ ಪದ್ಧತಿಯನ್ನು ಅನೇಕ ಶಿಕ್ಷಕರು ಅನುಸರಿಸಿದರು. ಶಿಕ್ಷಕರು ತಮ್ಮ ಶಿಕ್ಷಣ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಿಗೆ ಒಂದು ವಿಷಯ ಬೋಧಿಸಿದ ನಂತರ ಅದೇ ವಿಷಯವನ್ನು ಅದೇ ಶಿಕ್ಷಣ ಸಂಸ್ಥೆಯ ಕಿರಿಯ ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂದು ಹಿರಿಯ ವಿದ್ಯಾರ್ಥಿಗಳಿಗೆ ಸೂಚಿಸಿದರು. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಈ ಪದ್ಧತಿಯನ್ನು 1800ರಲ್ಲಿ ಯೂರೋಪಿನಲ್ಲಿ ಅನೇಕ ದೇಶಗಳು ಅನುಸರಿಸುತ್ತಿದ್ದವು. ಆದರೆ ಬೋಧನಾ ವೃತ್ತಿ ಕೈಗೊಳ್ಳಲು ತರಬೇತಿ ಮತ್ತು ಪ್ರತಿಭೆ ಅವಶ್ಯಕವಾಗಬೇಕು ಎಂಬ ಅಂಶ ಮನದಟ್ಟಾದಾಗ ಸಾರ್ವಜನಿಕ ಶಿಕ್ಷಣಕ್ಕೂ ಸಹ ಹೆಚ್ಚಿನ ಹಣ ವಿನಿಯೋಗಿಸಲು ನಿರ್ಧರಿಸಲಾಯಿತು. ಹೀಗಾಗಿ ಸಹಪಾಠಿಗಳ ಮೇಲ್ವಿಚಾರಣೆ ಒಪ್ಪಿಕೊಂಡು ಅಮೆರಿಕಾ ಇತಿಹಾಸದ ವಸಾಹತು ಪೂರ್ವ ಅವಧಿಯಲ್ಲಿ 'ಒಂದು ಕೋಣೆಯ ಶಾಲೆಯ ಮನೆ' (One-room school house)ಗಳಲ್ಲಿ ಈ ಪದ್ಧತಿ ಬಳಸಲಾಯಿತು.

**ಟ್ಯುಟೋರಿಯಲ್ ಪದದ ವ್ಯಾಖ್ಯೆ:** ಸುಮಾರು 4ರಿಂದ 8 ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಎಷ್ಟು ವಿಷಯಗಳನ್ನು ಕಲಿಯುತ್ತಿರುವರೋ ಅಷ್ಟು ಜನ ಶಿಕ್ಷಕರನ್ನು ಪ್ರತಿ ವಾರಕ್ಕೊಮ್ಮೆ ಒಬ್ಬರಂತೆ ಮುಂಚಿತವಾಗಿ ನಿಗದಿಪಡಿಸಿದ ಅವಧಿಯಲ್ಲಿ ಒಂದು ತಾಸು

Digitised by Bharatavani, CIIL

ಭೇಟಿಯಾಗುವರು. ಈಗಾಗಲೇ ಆಯಾ ವಿಷಯದ ಶಿಕ್ಷಕರು ಹಿಂದಿನ ತರಗತಿಗಳಲ್ಲಿ ಕಲಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಸಂದೇಹಗಳ, ವಿವಿಧ ವಿದ್ಯಾಥಿಗಳು ತಯಾರಿಸಿದ ಪ್ರಬಂಧಗಳ ಹಾಗೂ ಶಿಕ್ಷಕರು ಅಂದಿನ ಟ್ಯುಟೋರಿಯಲ್ ತರಗತಿಗೆಂದೇ ಯೋಜಿಸಿದ ಅನೇಕ ಚಟುವಟಿಕೆಗಳ ಚರ್ಚೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುತ್ತಾರೆ.

ಇಂತಹ ಟ್ಯುಟೋರಿಯಲ್ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ನಕ್ಷೆ–1ರ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿರುತ್ತದೆ.




ನಕ್ಷೆ–1

**ಟ್ಯುಟೋರಿಯಲ್ ವ್ಯವಸ್ಥೆಯ ಅವಶ್ಯಕತೆ:** "ಜ್ಞಾನವನ್ನು ಯಾರು ಹುಡುಕಿಕೊಂಡು ಹೋಗುವರೋ ಅಂಥವರು ಬುದ್ಧಿವಂತರಿಗೆ ಸತತವಾಗಿ ಅನೇಕ ಪ್ರಶ್ನೆಗಳನ್ನು ಕೇಳುವುದರ ಮೂಲಕವೇ ಜ್ಞಾನ ಪಡೆದುಕೊಳ್ಳಬೇಕು" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ್ದಾನೆ. ಕೊನೆಯಲ್ಲಿ ತಾನು ಈವರೆಗೆ ಹೇಳಿದ ಎಲ್ಲ ವಿಚಾರಗಳನ್ನು ಏಕಾಗ್ರತೆಯಿಂದ ಕೇಳುವುದರಿಂದ ಮನಸ್ಸಿನ ಅಜ್ಞಾನವು ದೂರವಾಯಿತೇ? ಎಂಬ ಪ್ರಶ್ನೆಯನ್ನು ಕೃಷ್ಣನು ಅರ್ಜುನನಿಗೆ ಕೇಳಿದ್ದಾನೆ. ಇದಕ್ಕನುಗುಣವಾಗಿ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಜ್ಞಾನಾರ್ಜನೆಗಾಗಿ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳು ಜ್ಞಾನ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಜ್ಞಾನಾರ್ಜನೆಗಾಗಿ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳು ಜ್ಞಾನ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ಇಂತಹ ಪ್ರಯತ್ನ ಮುಂದುವರೆಸಲು ವಿದ್ಯಾರ್ಥಿಗಳಿಗೆ ಎಲ್ಲ ಶಿಕ್ಷಣ ಸಂಸ್ಥೆಗಳು ಅನುಕೂಲಕರವಾದ ವಾತಾವರಣ ಕಲ್ಪಿಸಲು ಮನಃಪೂರ್ವಕ ಪ್ರಯತ್ನ ಮಾಡುವುದು ಅವಶ್ಯಕವಾಗಿದೆ.

ಸಾಮಾನ್ಯವಾಗಿ ವಿದ್ಯಾರ್ಥಿಗಳು ತಾವು ಓದಿದ ವಿಷಯದ ಪ್ರತಿಶತ 10 ರಷ್ಟು ವಿಷಯವನ್ನು, ಕೇಳಿದ ವಿಷಯದ ಪ್ರತಿಶತ 20 ರಷ್ಟು ವಿಷಯವನ್ನು, ನೋಡಿದ ಘಟನೆಗಳ ಪ್ರತಿಶತ 30 ರಷ್ಟು ವಿವರವನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಇನ್ನು ಕೆಲವು ಸಂದರ್ಭದಲ್ಲಿ ಕೆಲವು ವಿಷಯದ ಬಗ್ಗೆ ವಿವರಗಳನ್ನು ಕೇಳುತ್ತಾ ಇದಕ್ಕೆ ಸಂಬಂಧಿಸಿದ ಅನೇಕ ಸನ್ನಿವೇಶಗಳನ್ನು ವೀಕ್ಷಿಸಿದ್ದರೆ ಇಂತಹ ಘಟನೆಗಳ ಪ್ರತಿಶತ 50 ರಷ್ಟು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಆದರೆ ಅಭ್ಯಾಸದ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಅನೇಕ ಚಟುವಟಿಕೆಗಳನ್ನು ತಾವೇ ಸ್ವತಃ ಕೈಗೊಂಡರೆ ಅಂತಹ ಕಾರ್ಯಕ್ಕೆ ಸಂಬಂಧಿಸಿದಂತೆ ಪ್ರತಿಶತ 90 ರಷ್ಟು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಆದಕಾರಣ ನಮ್ಮ ವಿದ್ಯಾರ್ಥಿಗಳು ಹೆಚ್ಚಿನ ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಲು ಟ್ಯುಟೋರಿಯಲ್ ವ್ಯವಸ್ಥೆ ಸಂಘಟಿಸಬೇಕಾಗಿದೆ.

ಭಾರತ ದೇಶದ ಕೆಲವೇ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಈ ವ್ಯವಸ್ಥೆ ಅಳವಡಿಸಲಾಯಿತು. ಕೆಲವು ಕಡೆಗೆ ಬಹಳ ಕಡಿಮೆ ವಿದ್ಯಾರ್ಥಿಗಳಿಗೆ ಹಾಗೂ ಇನ್ನೂ ಕೆಲವು ಕಡೆಗೆ 25 ವಿದ್ಯಾರ್ಥಿಗಳಿಗೆ ಟ್ಯುಟೋರಿಯಲ್ ವ್ಯವಸ್ಥೆಗೊಳಿಸುತ್ತಿದ್ದರು. ಹೀಗಾಗಿ ಪ್ರತಿ ಟ್ಯುಟೋರಿಯಲ್ ಗುಂಪಿನ ವಿದ್ಯಾರ್ಥಿಗಳ ಸಂಖ್ಯೆ ಪ್ರಮಾಣ ಹೆಚ್ಚುತ್ತಾ ಹೋಗಿ ಕೆಲವು ಶಿಕ್ಷಕರು ತರಗತಿಯಲ್ಲಿ ಉಪನ್ಯಾಸ ನೀಡಲು ಪ್ರಾರಂಭಿಸಿದರು. ಆದರೆ 1948ರಲ್ಲಿ ಡಾ. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವು ಟ್ಯುಟೋರಿಯಲ್ ತರಗತಿ ಸಂಘಟಿಸುವ ಬಗ್ಗೆ ಇರುವ ಅನೇಕ ಅನಾನುಕೂಲತೆಗಳನ್ನು ಗುರುತಿಸಿ ಈ ಪದ್ಧತಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸುಧಾರಿಸಬೇಕೆಂದು ಸೂಚಿಸಿದ್ದರು (11). ಇದರ ಮಹತ್ವ ಅರಿತುಕೊಂಡ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದವರು 1956ರ ಯು.ಜಿ.ಸಿ. ಕಾಯ್ದೆ (1956ರ ನಂ–3) ಯ ಕ್ಲಾಸ್ (f) ಕಲಮಿನ ಉಪವಿಭಾಗ (1)ರ 26ನೇ ವಿಭಾಗದಲ್ಲಿ ತಮಗೆ ಕೊಟ್ಟಿರುವ ಅಧಿಕಾರ ಉಪಯೋಗಿಸಿ ದಿನಾಂಕ 25–11–1985 (ನಂಬರ್ F 1–117/83 (cp) ರಂದು ನಿರ್ಣಯ ತೆಗೆದುಕೊಂಡರು. ಇದರ ಪ್ರಕಾರ ಪ್ರತಿಯೊಬ್ಬ ಉಪನ್ಯಾಸಕರು ಪ್ರತಿ ವಾರ ಕನಿಷ್ಠ 40 ತಾಸಿನ ಅವಧಿಯ ಕಾರ್ಯ ಕೈಗೊಳ್ಳಬೇಕಾಯಿತು. ನಂತರ ಪ್ರಯೋಗಾಲಯ ಕಾರ್ಯ ಇಲ್ಲದಿರುವ ವಿಷಯ ಬೋಧಿಸುವ ಉಪನ್ಯಾಸಕರುಗಳು ಮಾತ್ರ ಪ್ರತಿವಾರ ಬೇರೆ ಬೇರೆ ವಿದ್ಯಾರ್ಥಿಗಳ ನಾಲ್ಕು ಗುಂಪುಗಳಿಗೆ ತಲಾ ಒಂದು ತಾಸಿನಂತೆ ಕನಿಷ್ಠ ನಾಲ್ಕು ತಾಸಿನ ಟ್ಯುಟೋರಿಯಲ್ ತರಗತಿ ಸಂಘಟಿಸಲು ಸೂಚಿಸಿದರು.

ಏಪ್ರಿಲ್ 1990ರಲ್ಲಿ ಕರ್ನಾಟಕ ಸರ್ಕಾರವು ಡಾ.ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತು. ಈ ಸಮಿತಿಯ ವರದಿಯ ಪ್ರಕಾರ ಪ್ರಾಯೋಗಿಕ ತರಗತಿ ಸಂಘಟಿಸುವ ಉಪನ್ಯಾಸಕರು ಪ್ರತಿ ವಾರ ಎರಡು ತಾಸುಗಳ ಹಾಗೂ ಪ್ರಯೋಗಾಲಯ ತರಗತಿ ಸಂಘಟಿಸದೇ ಇರುವ ಉಪನ್ಯಾಸಕರು ಪ್ರತಿ ವಾರ ನಾಲ್ಕು ತಾಸುಗಳ ಕಾಲ ಟ್ಯುಟೋರಿಯಲ್ ತರಗತಿ ಸಂಘಟಿಸಲು ಸೂಚನೆ ನೀಡಿತು.

**ಟ್ಯುಟೋರಿಯಲ್ ವ್ಯವಸ್ಥೆಯ ಲಾಭಗಳು**

1. ಟ್ಯುಟೋರಿಯಲ್ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ಶಿಕ್ಷಕರು ಒಳ್ಳೆಯ ಕಲಿಯುವ ವಾತಾವರಣವನ್ನು ನಿರ್ಮಿಸಬಹುದು. ವಿದ್ಯಾರ್ಥಿಗಳೊಂದಿಗೆ ಆತ್ಮೀಯ ಸಂಬಂಧ ಬೆಳೆಸಿಕೊಳ್ಳಬಹುದು. ವಿದ್ಯಾರ್ಥಿಗಳು ತಮ್ಮ ಅಭ್ಯಾಸಕ್ಕೆ ಸಂಬಂಧಿಸಿದ ಎಲ್ಲಾ ತರಹದ ಸಹಾಯ ಹಾಗೂ ಮಾರ್ಗದರ್ಶನವನ್ನು ಶಿಕ್ಷಕರಿಂದ ಪಡೆದುಕೊಳ್ಳುವುದು ಬಹಳ ಸುಲಭವಾಗುತ್ತದೆ.
2. ಪ್ರತಿಯೊಂದು ಟ್ಯುಟೋರಿಯಲ್ ತರಗತಿಯ ಅವಧಿಯು ಒಂದು ವಾರ ಮುಂಚೆಯೇ ನಿಗದಿಪಡಿಸಲ್ಪಟ್ಟ ಕಾರಣ ಶಿಕ್ಷಕರು ಆಯಾ ಟ್ಯುಟೋರಿಯಲ್ ಗುಂಪಿನ ವಿದ್ಯಾರ್ಥಿಗಳಿಗೆ ಕೊಡಬೇಕಾದ ಚಟುವಟಿಕೆಗಳನ್ನು ಮುಂಚಿತವಾಗಿ ಯೋಜಿಸಿಕೊಂಡು ವಿದ್ಯಾರ್ಥಿಗಳಿಗೆ ವಾಸ್ತವ ಅನುಭವ ಒದಗಿಸಲು ಸಾಧ್ಯವಾಗುತ್ತದೆ.
3. ವಿದ್ಯಾರ್ಥಿಗಳು ತಾವು ತಯಾರಿಸಿದ ಹಂಚಿಕೆ ಕಾರ್ಯ (ಅಸ್ಸೈನ್‌ಮೆಂಟ್) ಹಾಗೂ ಪ್ರತಿಪಾದಿಸುವ ವಿಷಯವನ್ನು ಶಿಕ್ಷಕರ ಜೊತೆಗೆ ಬಹಳ ವಿವರವಾಗಿ ಚರ್ಚಿಸಲು ಹೆಚ್ಚಿನ ಸಮಯ ಮತ್ತು ಅವಕಾಶ ಸಿಗುತ್ತದೆ.
4. ವಿದ್ಯಾರ್ಥಿಗಳು ತಮ್ಮ ಅಭ್ಯಾಸ ವಿಷಯ ಕ್ಷೇತ್ರದಲ್ಲಿ ಇತ್ತೀಚೆಗೆ ಆಗಿರುವ ಬೆಳವಣಿಗೆ ಹಾಗೂ ಸಂಗತಿಗಳನ್ನು ತಿಳಿದುಕೊಳ್ಳಲು

Digitised by Bharatavani, CIIL

ಸಹಾಯಕವಾಗುವ ಪುಸ್ತಕ, ನಿಯತಕಾಲಿಕೆ, ವೃತ್ತ ಪತ್ರಿಕೆ, ಇಂಟರ್‌ನೆಟ್, ವೆಬ್‌ಸೈಟ್ ವಿಳಾಸ, ಸಿ.ಡಿ.ಗಳ ಉಪಯೋಗ, ಇನ್ನಿತರ ವಿಷಯಗಳ ಪರಿಚಯ ಮಾಡಿಕೊಳ್ಳುತ್ತಾರೆ. ನಂತರ ಅವುಗಳನ್ನು ಓದುವ, ಬಳಸುವ ಹಾಗೂ ಸರಿಯಾದ ರೀತಿಯಲ್ಲಿ ವಿವೇಚನೆ ಮಾಡುವ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ.

**ವಿಶಿಷ್ಟ ಲಕ್ಷಣಗಳು**

1. ಶಿಕ್ಷಕರು ಪ್ರತಿಯೊಬ್ಬ ವಿದ್ಯಾರ್ಥಿಗೆ ವೈಯಕ್ತಿಕ ಗಮನ ನೀಡುವುದರಿಂದ ನಿಗದಿಪಡಿಸಿದ ಪಠ್ಯಕ್ರಮದ ಚೌಕಟ್ಟಿನಲ್ಲಿ ಕೈಗೊಳ್ಳಬೇಕಾದ ಎಲ್ಲ ಕಾರ್ಯಗಳನ್ನು ನಿಗದಿಪಡಿಸಿದ ವೇಗದಲ್ಲಿ ಪೂರ್ತಿಗೊಳಿಸುತ್ತಾರೆ.

2. ಟ್ಯುಟೋರಿಯಲ್ ತರಗತಿಗಳ ಎಲ್ಲ ವಿದ್ಯಾರ್ಥಿಗಳು ತಮ್ಮ ಅಭ್ಯಾಸ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುವುದರ ಮೂಲಕ, ಆಕ್ಷೇಪಣೆ ಮತ್ತು ಅನುಮಾನ ಎತ್ತುವುದರ ಮೂಲಕ, ನೆನಪಿಸಿಕೊಳ್ಳುವುದರ ಮೂಲಕ ತಮ್ಮ ಗುಂಪಿನ ಬೇರೆ ಬೇರೆ ವಿದ್ಯಾರ್ಥಿಗಳ ಜೊತೆಗೆ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾ ಅನೇಕ ಆಧಾರಗಳನ್ನು ಉಲ್ಲೇಖಿಸಿ ತಮ್ಮ ವಾದವನ್ನು ಮಂಡಿಸುತ್ತಾರೆ. ಇತರೇ ವಿದ್ಯಾರ್ಥಿಗಳು ಮಂಡಿಸಿದ ವಿಚಾರಗಳನ್ನು ಧೈರ್ಯದಿಂದ ನಿರಾಕರಿಸಿ ಉಳಿದವರ ಆಲೋಚನಾ ಶಕ್ತಿಯನ್ನು ಕೆರಳಿಸುತ್ತಾರೆ. ಈ ಸಣ್ಣ ತರಗತಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳ ವಿಚಾರಧಾರೆಯು ಶಿಕ್ಷಕರಿಗೆ ಗೊತ್ತಾಗುತ್ತದೆ.

3. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ನಿರ್ದಿಷ್ಟ ಗುರಿ ತಲುಪಲು ಸಹಾಯಕವಾಗುವಂತೆ ಶಿಕ್ಷಕರು ಆಕರ ಗ್ರಂಥ, ನಿಯತಕಾಲಿಕೆ, ಸಂಶೋಧನಾ ವರದಿ, ಪರಾಮರ್ಶೆ ಮಾಧ್ಯಮ ಹಾಗೂ ಇತರ ವಿಷಯಗಳ ವಿವರ ಒದಗಿಸುತ್ತಾರೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಅನೇಕ ಪ್ರಶ್ನೆಗಳಿಗೆ ಶಿಕ್ಷಕರ ಸಹಾಯವಿಲ್ಲದೆ ಉತ್ತರ ಹುಡುಕಿಕೊಳ್ಳುವ ಸಾರ್ಥಕ ಕಲಿಕೆಯ ವಾತಾವರಣ ನಿರ್ಮಾಣವಾಗುತ್ತದೆ.

**ಟ್ಯುಟೋರಿಯಲ್ ವ್ಯವಸ್ಥೆಗೊಳಿಸುವ ರೀತಿನೀತಿಗಳು:** ಪ್ರತಿಯೊಬ್ಬ ವಿದ್ಯಾರ್ಥಿ ನಿರ್ವಹಿಸಿದ ಕಾರ್ಯ, ಬರೆದ ಉತ್ತರಗಳು ಹಾಗೂ ವಿವರಿಸಿದ ಅಭಿಪ್ರಾಯಗಳಿಗೆ ಅನುಗುಣವಾಗಿ ಶಿಕ್ಷಕರು ಪುನರ್‌ಬಲನ ನೀಡಬೇಕು. ಇದರಿಂದಾಗಿ ವಿದ್ಯಾರ್ಥಿ ತಾನು ಹೊಂದಿದ ಅಂಜಿಕೆ ಹಾಗೂ ಅನುವಾದ ಕಡಿಮೆಯಾಗುವುದರ ಜೊತೆಗೆ ಇನ್ನು ಮುಂದೆ ಶಿಕ್ಷಕರು ಕೊಟ್ಟ ಕಾರ್ಯಗಳನ್ನು ಹೇಗೆ ನಿರ್ವಹಿಸಬೇಕು. ಪ್ರಶ್ನೆಗಳಿಗೆ ಯಾವ ರೀತಿ ಉತ್ತರಗಳನ್ನು ಬರೆಯಬೇಕು ಹಾಗೂ ತನ್ನ ಅಭಿಪ್ರಾಯಗಳನ್ನು ಹೇಗೆ ಮಂಡಿಸಬೇಕು ಎಂಬ ಕಲ್ಪನೆ ಅವರಲ್ಲಿ ಮೂಡುತ್ತದೆ. ಒಂದೇ ತರಗತಿಯ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಬೆಳೆಸಲು ಹಾಗೂ ವಿದ್ಯಾರ್ಥಿಗಳನ್ನು ಅನೇಕ ಗುಂಪುಗಳನ್ನಾಗಿ ಮಾಡಿ ವಿಷಯದ ಬಗ್ಗೆ ಹೆಚ್ಚಿನ ಚಿಂತನೆ ನಡೆಸಲು ಪ್ರೋತ್ಸಾಹಿಸಬೇಕು. ನಿಗದಿಪಡಿಸಲಾದ ಅಧ್ಯಯನ ಪಠ್ಯವಸ್ತುವಿಗೆ ನೇರವಾಗಿ ಸಂಬಂಧ ಹೊಂದಿರುವ ಅಥವಾ ಅದರ ಪೂರಕ ವಿಚಾರಗಳನ್ನು ತಿಳಿಸಲು ಸಹಾಯಕವಾಗುವ ಪ್ರಶ್ನೆಗಳನ್ನು ಪ್ರತಿ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಕೊಡಬೇಕು. ಪ್ರತಿ ವಿದ್ಯಾರ್ಥಿಯ ಹೆಸರು ಹಾಗೂ ಅವನು ಉತ್ತರ ತಯಾರಿಸುವ ಪ್ರಶ್ನೆಯನ್ನು ಅಥವಾ ವಿಷಯದ ವಿವರವನ್ನು ಒಂದುವಾರ ಮುಂಚಿತವಾಗಿ ಸೂಚನಾ ಫಲಕದ ಮೇಲೆ ಪ್ರಕಟಿಸಬೇಕು. ವಿದ್ಯಾರ್ಥಿಗಳು ತಮ್ಮ ಸ್ವಂತ ಅನುಭವಗಳನ್ನು ಸಂಘಟಿಸಿ ತರಗತಿಯಲ್ಲಿ ವಿವರಿಸಬಹುದು ಅಥವಾ ಬರೆದು ಕೊಡಬಹುದು. ಇದರಿಂದಾಗಿ ತಾನು ಸರಿಯಾಗಿ ಹೇಳಬಲ್ಲೆ ಅಥವಾ ಬರೆಯಬಲ್ಲೆ ಎಂಬ ಧೈರ್ಯ ತನ್ನಷ್ಟಕ್ಕೆ ತಾನೇ ಮೂಡುತ್ತದೆ.

ಕೆಲವು ಪ್ರಮುಖ ಪರಿಕಲ್ಪನೆಗಳ ಬಗ್ಗೆ ಚರ್ಚಿಸುವಾಗ ಶಿಕ್ಷಕರು ಚರ್ಚಿಸುವ ನಿರ್ದಿಷ್ಟ ವಿಷಯದ ಸ್ಥೂಲ ಪರಿಚಯ ಮಾಡಿಕೊಡಬೇಕು. ವಿದ್ಯಾರ್ಥಿಗಳು ವಿಷಯದ ಆಳವಾದ ವಿವರ ಮಂಡಿಸಲು ಹಾಗೂ ವಿಷಯದ ತುಲನಾತ್ಮಕ ಅಧ್ಯಯನ ಮಾಡಲು ಅವಕಾಶ ನೀಡಬೇಕು. ಏನಾದರೂ ವ್ಯತ್ಯಾಸಗಳಿದ್ದರೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ರೀತಿ ತಿಳಿಸಬೇಕು. ವಿದ್ಯಾರ್ಥಿಗಳಿಂದಲೇ ಇನ್ನಿತರ ಅನೇಕ ವಿಚಾರಗಳನ್ನೂ ಹೇಳಿಸಬೇಕು.

ತರಗತಿಯಲ್ಲಿ ಚರ್ಚೆ ನಡೆಸಬೇಕೆಂದು ನಿರ್ಧರಿಸಿದಾಗ ಪಠ್ಯ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಪ್ರಶ್ನೆಯನ್ನು ಶಿಕ್ಷಕರೇ ಕಪ್ಪು ಹಲಗೆಯ ಮೇಲೆ ಬರೆಯಬೇಕು. ನಂತರ ಆ ಗುಂಪಿನ ವಿದ್ಯಾರ್ಥಿಗಳು ಒಂದು ಹಾಳೆಯನ್ನು ತೆಗೆದುಕೊಂಡು ಆ ಪ್ರಶ್ನೆಯ ಬಗ್ಗೆ ಮೂರು ಅಥವಾ ನಾಲ್ಕು ನಿಮಿಷಗಳಲ್ಲಿ ತಮಗೆ ಹೊಳೆದ ವಿಚಾರಗಳನ್ನು ಬರೆಯಬೇಕು. ನಂತರ ಮೂರು ನಿಮಿಷಗಳವರೆಗೆ ಪಕ್ಕದಲ್ಲಿರುವ ಸಹಪಾಠಿಯ ಜೊತೆಗೆ ಆ ಪ್ರಶ್ನೆಯ ಬಗ್ಗೆ ಚರ್ಚಿಸುತ್ತಾನೆ. ಪ್ರತಿಯೊಬ್ಬ ವಿದ್ಯಾರ್ಥಿಯು ಇಂತಹ ಚರ್ಚೆಯಲ್ಲಿ ಭಾಗವಹಿಸಲು ಪ್ರಯತ್ನಿಸುತ್ತಾನೆ. ತಮ್ಮ ಅನುಭವಗಳನ್ನು ಹಾಗೂ ವಿಚಾರಗಳನ್ನು ವ್ಯಕ್ತಪಡಿಸುತ್ತಾನೆ. ಕೆಲವು ವಿದ್ಯಾರ್ಥಿಗಳು ತಾವೇ ಅನೇಕ ವಿಚಾರಗಳನ್ನು ವ್ಯಕ್ತಪಡಿಸಲು ಹಾತೊರೆಯುತ್ತಾರೆ. ಈ ರೀತಿಯ ಕ್ರಮೇಣವಾಗಿ ಅನೇಕ ವಿದ್ಯಾರ್ಥಿಗಳಲ್ಲಿ ಚರ್ಚೆಯಲ್ಲಿ ಭಾಗವಹಿಸುವ ಸ್ಪರ್ಧಾತ್ಮಕ ಮನೋಭಾವನೆ ಬೆಳೆಯುತ್ತದೆ.

ಒಂದು ಟ್ಯುಟೋರಿಯಲ್ ಗುಂಪಿನ ವಿದ್ಯಾರ್ಥಿಗಳು ಚರ್ಚೆ ನಡೆಸಲು ಒಂದು ಟೇಬಲ್‌ನ ಸುತ್ತಲೂ ಕುಳಿತುಕೊಳ್ಳುವರು. ಪ್ರತಿ ವಿದ್ಯಾರ್ಥಿಯ ಎದುರಿಗೆ ಟೇಬಲ್ ಮೇಲೆ ತಲಾ ಮೂರು ಸಣ್ಣ ಕಡ್ಡಿಗಳನ್ನು ಕೊಡಬೇಕು. ಒಬ್ಬ ವಿದ್ಯಾರ್ಥಿಯು ಪ್ರತಿ ಸಾರಿ ಮಾತನಾಡುವಾಗ ಒಂದು ಕಡ್ಡಿಯನ್ನು ಟೇಬಲ್‌ನ ಮಧ್ಯದಲ್ಲಿ ಇಟ್ಟು ಮಾತನಾಡಬೇಕು. ಪ್ರತಿ ಸಾರಿ ಇಷ್ಟೇ ನಿಮಿಷ ಮಾತನಾಡಬೇಕೆಂದು ನಿಗದಿಗೊಳಿಸಲಾಗುತ್ತದೆ. ಆದರೆ ಯಾವುದೇ ವಿದ್ಯಾರ್ಥಿಯು ಮೂರು ಸಾರಿ ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡಿದರೆ ಅವನ ಸರದಿ ಮುಗಿಯುತ್ತದೆ. ಈ ರೀತಿ ಪ್ರತಿ ವಿದ್ಯಾರ್ಥಿಯು ಕನಿಷ್ಠ ಒಂದು ಸಾರಿ ಅಥವಾ ಗರಿಷ್ಠ ಮೂರು ಸಾರಿ ಮಾತ್ರ ತನ್ನ ಅಭಿಪ್ರಾಯ ವ್ಯಕ್ತಪಡಿಸಬೇಕು. ಹೀಗಾಗಿ ತರಗತಿಯ ಎಲ್ಲ ವಿದ್ಯಾರ್ಥಿಗಳು ಸಹ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಮಾತನಾಡುವ ಕಲೆ ಬೆಳೆಸಿಕೊಳ್ಳುತ್ತಾರೆ.

ವಿದ್ಯಾರ್ಥಿಗಳಿಗೆ ಮೊದಲೇ ಅಭ್ಯಾಸ ಕೌಶಲಗಳನ್ನು ತಿಳಿಸಬೇಕು. ಓದಿದ ಅನೇಕ ಅಂಶಗಳ ಬಗ್ಗೆ ಯೋಚಿಸುವ, ಓದಿದ ವಿಷಯವನ್ನು ಗ್ರಹಿಸಿಕೊಳ್ಳುವ ಮತ್ತು ನೆನಪಿನಲ್ಲಿಟ್ಟುಕೊಳ್ಳುವ, ಓದಿದ ಅನೇಕ ಅಂಶಗಳ ಬಗ್ಗೆ ಸರಿಯಾದ ಗ್ರಹಿಕೆ ಆಗದಿದ್ದಾಗ ತೆಗೆದುಕೊಳ್ಳಬೇಕಾದ ಕ್ರಮಗಳ, ಕೆಲವು ದೈಹಿಕ ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳಲು ಪಾಲಿಸಬೇಕಾದ ಅಂಶಗಳು, ತರಗತಿಯಲ್ಲಿ ಉಪನ್ಯಾಸ ಆಲಿಸುವಾಗ ಪ್ರಮುಖ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳುವ ಕಲೆ, ವೃಥಾ ಕಾಲಹರಣ ಮಾಡದೇ ಅಭ್ಯಾಸದ ಬಗ್ಗೆ ಧನಾತ್ಮಕ ಭಾವನೆ ಬೆಳೆಸಿಕೊಳ್ಳುವ, ಕಲಿಕೆಯ ಮೌಲ್ಯಗಳನ್ನು ತಿಳಿದುಕೊಳ್ಳುವ, ಅಭ್ಯಾಸಕ್ಕೆ ಸಂಬಂಧಿಸಿದಂತೆ ತನ್ನಲ್ಲಿರುವ ನ್ಯೂನತೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವ, ಪರೀಕ್ಷೆಯಲ್ಲಿ ಚೆನ್ನಾಗಿ ಉತ್ತರ ಬರೆಯುವ, ಹೆಚ್ಚು ಅಂಕಗಳನ್ನು ಪಡೆದುಕೊಳ್ಳುವ, ಶಿಕ್ಷಕರು ಕೊಟ್ಟಿರುವ ಕಾರ್ಯಗಳನ್ನು ವ್ಯವಸ್ಥಿತವಾಗಿ ಮಾಡುವ, ತರಗತಿಯಲ್ಲಿ

Digitised by Bharatavani, CIIL

ಕಲಿಯುವ ವಾತಾವರಣ ನಿರ್ಮಾಣವಾದಾಗ ಚುರುಕಾಗಿ ವರ್ತಿಸುವ, ಚೆನ್ನಾಗಿ ಕಲಿಯಲು ಬೇರೆ ಶಿಕ್ಷಕರ ಸಹಪಾಠಿಗಳ ಮತ್ತು ಇತರ ಮೂಲಗಳ ಸದುಪಯೋಗಪಡಿಸಿಕೊಳ್ಳುವ, ಹಾಗೂ ಬುದ್ಧಿಮತ್ತೆಯ ಅರ್ಥ ತಿಳಿದುಕೊಂಡು ಅದನ್ನು ಹೆಚ್ಚಿಸಿಕೊಳ್ಳುವ ತಂತ್ರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು.

ಶಿಕ್ಷಕರು ಒಂದೇ ತರಗತಿಯಲ್ಲಿ ಅನೇಕ ಗುಂಪುಗಳನ್ನು ರಚಿಸಿ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಆಯಾ ಗುಂಪುಗಳಿಗೆ ವ್ಯಕ್ತಪಡಿಸಲು ಅವಕಾಶ ಮಾಡಿಕೊಡಬೇಕು. ಚರ್ಚೆಯನ್ನು ಇನ್ನೂ ಚೆನ್ನಾಗಿ ನಡೆಸಲು ಮತ್ತು ಒಬ್ಬ ವ್ಯಕ್ತಿಯ ವಿಚಾರಗಳನ್ನು ಬೇರೆಯವರಿಗೆ ಗೊತ್ತುಪಡಿಸುವುದಕ್ಕೆ ಕೆಲವೊಂದು ಸಾರೆ ಒಂದು ಗುಂಪಿನಲ್ಲಿ ಉಪಗುಂಪುಗಳ ರಚನೆ ಮಾಡಬಹುದು. ಒಂದು ಗುಂಪಿನಲ್ಲಿ 8 ಜನ ವಿದ್ಯಾರ್ಥಿಗಳು ಇದ್ದಾರೆ ಎಂದು ನಿರ್ಧರಿಸಿದ್ದರೆ ಪ್ರತಿ ಗುಂಪಿನಲ್ಲಿ ಕೆಳಗೆ ತಿಳಿಸಿದ ಹಾಗೆ ಉಪಗುಂಪುಗಳನ್ನು ರಚಿಸಬಹುದು.

**ಕೋಷ್ಟಕ 1 :** ಒಟ್ಟು 8 ವಿದ್ಯಾರ್ಥಿಗಳ ಟ್ಯುಟೋರಿಯಲ್ ಗುಂಪನ್ನು ಉಪ-ಗುಂಪುಗಳನ್ನಾಗಿ ರಚಿಸುವ ರೀತಿ.

| ಉಪ ಗುಂಪುಗಳು | ಮೊದಲನೆಯ ಉಪ ಗುಂಪು | ಎರಡನೆಯ ಉಪ ಗುಂಪು | ಮೂರನೆಯ ಉಪ ಗುಂಪು |
|---|---|---|---|
| ಜೋಡಿ ಗುಂಪು | A ಗುಂಪು: 1 ಮತ್ತು 2<br>B ಗುಂಪು: 3 ಮತ್ತು 4<br>C ಗುಂಪು: 5 ಮತ್ತು 6<br>D ಗುಂಪು: 7 ಮತ್ತು 8 | A ಗುಂಪು : 1 ಮತ್ತು 4<br>B ಗುಂಪು: 3 ಮತ್ತು 2<br>B ಗುಂಪು: 5 ಮತ್ತು 8<br>D ಗುಂಪು: 7 ಮತ್ತು 6 | A ಗುಂಪು; 1 ಮತ್ತು 8<br>B ಗುಂಪು: 3 ಮತ್ತು 6<br>C ಗುಂಪು: 5 ಮತ್ತು 4<br>D ಗುಂಪು: 7 ಮತ್ತು 2 |
| ನಾಲ್ಕರ ಗುಂಪು – I | A ಗುಂಪು: 1,2,3 ಮತ್ತು 4<br>B ಗುಂಪು: 5,6,7 ಮತ್ತು 8 | A ಗುಂಪು: 1,3,6 ಮತ್ತು 8<br>B ಗುಂಪು: 2,4,5 ಮತ್ತು 7 | A ಗುಂಪು: 1,2,5 ಮತ್ತು 7<br>B ಗುಂಪು: 3,4,6 ಮತ್ತು 8 |
| ನಾಲ್ಕರ ಗುಂಪು – II | A ಗುಂಪು: 1,4,5 ಮತ್ತು 7<br>B ಗುಂಪು: 2,3,6 ಮತ್ತು 8 | A ಗುಂಪು: 1,2,4 ಮತ್ತು 5<br>B ಗುಂಪು: 3,6,7 ಮತ್ತು 8 | A ಗುಂಪು: 1,3,4 ಮತ್ತು 8<br>B ಗುಂಪು: 2,5,6 ಮತ್ತು 7 |

ಸೂಚನೆ : ಇಂಗ್ಲಿಷ್ ಅಂಕಿಗಳು ವಿದ್ಯಾರ್ಥಿಗಳಿಗೆ ಕೊಟ್ಟಿರುವ ಹಾಜರಿ ಸಂಖ್ಯೆ ತಿಳಿಸುತ್ತವೆ.

**ಬುದ್ಧಿಕ್ಷೋಭೆ ಪದ್ಧತಿ (Brainstorming):** ಈ ಪದ್ಧತಿಯ ಮೂಲಕ ಸಾಧ್ಯವಾದಷ್ಟು ಅನೇಕ ವಿಚಾರಗಳನ್ನು ಸಂಗ್ರಹಿಸುವುದರ ಜೊತೆಗೆ ಇರುವ ಸಮಸ್ಯೆಗೆ ಸೃಜನಾತ್ಮಕ ಪರಿಹಾರ ಕಂಡು ಹಿಡಿಯಲು ಸಹಾಯವಾಗುತ್ತದೆ. ಒಂದು ಟ್ಯುಟೋರಿಯಲ್ ಗುಂಪಿನಲ್ಲಿ 8 ವಿದ್ಯಾರ್ಥಿಗಳು ಇದ್ದರೆ ಶಿಕ್ಷಕರು 15 ನಿಮಿಷಗಳವರೆಗೆ ಬುದ್ಧಿಕ್ಷೋಭೆ ನಡೆಸುವ ಉದ್ದೇಶದಿಂದ ತರಗತಿಯಲ್ಲಿ ಕೆಳಗಿನ ಹೇಳಿಕೆ ನೀಡಿ ಇದಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ವಿದ್ಯಾರ್ಥಿಗಳಿಂದಲೇ ಪಡೆಯಬಹುದು "ಭಾರತ ದೇಶವು 1947ರಿಂದ 6 ರಿಂದ 14 ವರ್ಷಗಳವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಸಲಹೆಗಳನ್ನು ಸೂಚಿಸಿರಿ". ವಿದ್ಯಾರ್ಥಿಗಳ ಮನಸ್ಸಿಗೆ ಬರಬಹುದಾದ ಕೆಲವು ಸೂಕ್ತ ಸಲಹೆಗಳನ್ನು ನೀಡುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಎಲ್ಲ 8 ವಿದ್ಯಾರ್ಥಿಗಳು ಸೂಚಿಸಿದ ಪರಿಹಾರಗಳನ್ನು ಯಾವುದೇ ರೀತಿಯ ಬದಲಾವಣೆ ಮಾಡದೆ ನೇರವಾಗಿ ಶಿಕ್ಷಕರೇ ಕಪ್ಪು ಹಲಗೆಯ ಮೇಲೆ ಬರೆಯುತ್ತಾರೆ. ಎಲ್ಲ 8 ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ತಮ್ಮ ವಿಚಾರಗಳನ್ನು ಹೇಳುವ ಅವಕಾಶ ದೊರೆಯುತ್ತದೆ. ನಂತರ ಎಲ್ಲಾ ಅಂಶಗಳ ಬಗ್ಗೆ ವಿಮರ್ಶಾತ್ಮಕ ಚರ್ಚೆ ನಡೆಯುತ್ತದೆ. ಸನ್ನಿವೇಶಕ್ಕೆ ತಕ್ಕಂತೆ ಸರಿ ಎನಿಸುವ ಪರಿಹಾರಗಳನ್ನು ಮಾತ್ರ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಯಾರೂ ಒಪ್ಪಿಕೊಳ್ಳದ ಸಲಹೆಗಳನ್ನು ಕೂಡಲೇ ಶಿಕ್ಷಕರು ಅಳಿಸುತ್ತಾರೆ. ಹೀಗಾಗಿ 15 ನಿಮಿಷಗಳಲ್ಲಿ ವಿದ್ಯಾರ್ಥಿಗಳಿಂದಲೇ ಸಮಸ್ಯೆಗೆ ಸಲಹೆಗಳನ್ನು ಸಂಗ್ರಹಿಸಲಾಗುತ್ತದೆ.

**ಪಿರಮಿಡ್ ಪದ್ಧತಿ** : ಕಲಿಸುವ ವಿಷಯದ ಕಠಿಣತೆ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ಶಿಕ್ಷಕರು ತರಗತಿಯ ವಿದ್ಯಾರ್ಥಿಗಳನ್ನು ಅನೇಕ ಗುಂಪುಗಳನ್ನಾಗಿ ವಿಂಗಡಿಸಬಹುದು. 'ಪಿರ್‍ಯಾಮಿಡ್' ಎಂದು ಕರೆಯಲಾಗುವ ಈ ಪದ್ಧತಿಯನ್ನು ಆ್ಯಂಡ್ರ್ಯೂ ನಾರ್ಥೆಜ್ (9) ರವರು ಪ್ರಾರಂಭಿಸಿದರು. ಒಂದು ಟ್ಯುಟೋರಿಯಲ್ ಗುಂಪಿನಲ್ಲಿ 8 ಜನ ವಿದ್ಯಾರ್ಥಿಗಳು ಇದ್ದರೆ ಮೊದಲನೆಯ ಹಂತದಲ್ಲಿ ಶಿಕ್ಷಕರು ಒಂದು ವಿಷಯವನ್ನು ಕಪ್ಪುಹಲಗೆಯ ಮೇಲೆ ಬರೆದು ಇದರ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಯು ಸ್ವಂತವಾಗಿ ಯೋಚಿಸಲು 5 ನಿಮಿಷ ಸಮಯ ಕೊಡುತ್ತಾರೆ. ಎರಡನೆಯ ಹಂತದಲ್ಲಿ ಈ 8 ವಿದ್ಯಾರ್ಥಿಗಳ ಗುಂಪನ್ನು ತಲಾ ಇಬ್ಬರು ವಿದ್ಯಾರ್ಥಿಗಳ 4 ಚಿಕ್ಕ ಗುಂಪುಗಳನ್ನು ರಚಿಸುತ್ತಾರೆ. ಇಬ್ಬರು ವಿದ್ಯಾರ್ಥಿಗಳಿರುವ ಈ 4 ಉಪಗುಂಪಿನವರು 10 ನಿಮಿಷಗಳಲ್ಲಿ ತಮ್ಮ ವಿಚಾರಗಳನ್ನು ಪರಸ್ಪರ ಚರ್ಚಿಸುತ್ತಾರೆ. ಹಾಗೂ ಪ್ರಶ್ನೆಗೆ ತಕ್ಕ ಉತ್ತರಗಳ ವಿನಿಮಯ ಮಾಡಿಕೊಳ್ಳುತ್ತಾರೆ. ಮೂರನೆಯ ಹಂತದಲ್ಲಿ ಈ ತರಗತಿಯ 8 ವಿದ್ಯಾರ್ಥಿಗಳ ಗುಂಪನ್ನು ತಲಾ ನಾಲ್ಕರಂತೆ 2 ಉಪಗುಂಪುಗಳನ್ನಾಗಿ ರಚಿಸುತ್ತಾರೆ. ಎರಡೂ ಗುಂಪಿನ ವಿದ್ಯಾರ್ಥಿಗಳು 20 ನಿಮಿಷ ಚರ್ಚೆ ನಡೆಸುತ್ತಾರೆ. ನಾಲ್ಕನೆಯ ಹಂತದಲ್ಲಿ ಈ ಎರಡು ಉಪ ಗುಂಪಿನ ಒಬ್ಬೊಬ್ಬ ಪ್ರತಿನಿಧಿ ತಮ್ಮ ಗುಂಪಿನ ಅಭಿಪ್ರಾಯದ ಸಾರಾಂಶವನ್ನು 3 ನಿಮಿಷಗಳಲ್ಲಿ ಮಂಡಿಸುತ್ತಾನೆ. ಈ ರೀತಿಯ ವ್ಯವಸ್ಥೆಯನ್ನು ನಕ್ಷೆ-2ರಲ್ಲಿ ಸೂಚಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳು ಸ್ವಇಚ್ಛೆಯಿಂದ ಭಾಗವಹಿಸುತ್ತಾರೆ. ಪಿರಮಿಡ್ ಪದ್ಧತಿ ಬಳಸಿಕೊಂಡು ಮುಂದೆ ಕಾಣಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಸಬಹುದು. 1) ಭಾರತದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ 2) ಉನ್ನತ ಶಿಕ್ಷಣದ ಗುಣಮಟ್ಟ ಕ್ಷೀಣಿಸುವಿಕೆ. 3) ಭಾರತದಲ್ಲಿ ಸುಶಿಕ್ಷಿತ ನಿರುದ್ಯೋಗ ಸಮಸ್ಯೆ.

Digitised by Bharatavani, CIIL




**ಆಕೃತಿ: ಒಂದು ಟ್ಯುಟೋರಿಯಲ್ ಗುಂಪಿನವರು ಕಾರ್ಯ ನಿರ್ವಹಿಸುವ ರೀತಿ**

**ನಕ್ಷೆ – 2**

**ದೂರದರ್ಶನ ಹಾಗೂ ರೇಡಿಯೋ ಕಾರ್ಯಕ್ರಮಗಳ ಸದುಪಯೋಗ**

ಪ್ರತಿದಿನ ಅನೇಕ ದೂರದರ್ಶನ ಚಾನಲ್ ಮತ್ತು ಕೇಂದ್ರಗಳಿಂದ ಉಪಯುಕ್ತ ಕಾರ್ಯಕ್ರಮಗಳು ಪ್ರಸಾರವಾಗುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಇತ್ತೀಚೆಗೆ ಆಗಿರುವ ಬದಲಾವಣೆಯನ್ನು ತಿಳಿದುಕೊಳ್ಳಲು ದೂರದರ್ಶನ ಮತ್ತು ರೇಡಿಯೋ ಕಾರ್ಯಕ್ರಮಗಳು ಸಹಕಾರಿಯಾಗಿವೆ. ಆದ ಕಾರಣ ಡಿಡಿ–1, ಡಿಡಿ ಭಾರತಿ, ಬಿ.ಬಿ.ಸಿ. ವರ್ಲ್ಡ್, ಸಿ.ಎನ್.ಎನ್. ಇಂಟರ್‌ನ್ಯಾಷನಲ್, ಏಶಿಯನ್ ನೆಟ್, ಈಟಿವಿ ಕನ್ನಡ, ಚಂದನ ಟಿವಿ, ನ್ಯಾಷನಲ್ ಜಿಯೋಗ್ರಾಫಿಕ್ ಚಾಲನ್, ಫಾಕ್ಸ್ ಹಿಸ್ಟರಿ, ಡಿಸ್ಕವರಿ ಚಾಲನ್, ಏಶಿಯಾನ ಪ್ಲಾನೆಟ್, ಸ್ಟಾರ್ ಕ್ರಿಕೆಟ್, ಸ್ಟಾರ್ ಸ್ಪೋರ್ಟ್ಸ್, ಟೆನ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಮ್ಯೂಸಿಕ್ ಟಿವಿ, ಎಸ್.ಎಸ್. ಮ್ಯೂಸಿಕ್ ಹಾಗೂ ಇತರ ಉಪಯುಕ್ತ ದೂರದರ್ಶನ ಚಾಲನ್‌ಗಳ ಕಾರ್ಯಕ್ರಮಗಳನ್ನು ವೀಕ್ಷಿಸಲು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಪ್ರತಿ ಶಿಕ್ಷಣ ಸಂಸ್ಥೆಯವರು ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗುವ ಕಾರ್ಯಕ್ರಮಗಳ ಪಟ್ಟಿಯನ್ನು ಮುಂಚೆಯೇ ಸೂಚನಾಫಲಕದಲ್ಲಿ ಪ್ರಕಟಿಸಬೇಕು. ವಿದ್ಯಾರ್ಥಿಗಳು ಬಿಡುವಿನ ವೇಳೆಯಲ್ಲಿ ಇಂತಹ ಕಾರ್ಯಕ್ರಮಗಳನ್ನು ವೀಕ್ಷಿಸಿ ಎರಡು ಪುಟಗಳಷ್ಟು ವಿವರವಾದ ವರದಿ ಬರೆಯಲು ಸೂಚಿಸಬೇಕು. ಇಂತಹ ವರದಿಗಳನ್ನು ಪರೀಕ್ಷಿಸಿ ವಿಷಯ ಸಂಗ್ರಹಣೆಯ ಬಗ್ಗೆ ತರಬೇತಿ ನೀಡಬೇಕು. ಇದೇ ರೀತಿ ರೇಡಿಯೋ ಕಾರ್ಯಕ್ರಮಗಳನ್ನು ಆಲಿಸಲು ತಿಳಿಸಬೇಕು. ಆಲಿಸಿದ ರೇಡಿಯೋ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿಯನ್ನು ಬರೆಯಲು ತಿಳಿಸಬೇಕು.

**ಪತ್ರಿಕೆಗಳ ಉಪಯೋಗ:** ಇತ್ತೀಚಿನ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳಲು ಬೇರೆ ಬೇರೆ ಭಾಷೆಗಳ ವೃತ್ತಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ ಪತ್ರಿಕೆ, ಮಾಸಿಕ ಪತ್ರಿಕೆ, ದ್ವೈಮಾಸಿಕ ಪತ್ರಿಕೆ, ತ್ರೈಮಾಸಿಕ ಪತ್ರಿಕೆ, ಅರ್ಧವಾರ್ಷಿಕ ಹಾಗೂ ವಾರ್ಷಿಕ ವಿಶೇಷ ಸಂಚಿಕೆಗಳನ್ನು ಓದಿ ವಿಷಯ ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ತಿಳಿಸಬೇಕು.

ಪ್ರತಿಯೊಬ್ಬ ಶಿಕ್ಷಕರು ತಮ್ಮ ನಿಯಂತ್ರಣದಲ್ಲಿರುವ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಅರಿತುಕೊಂಡಿರಬೇಕು. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಹುದುಗಿದ ಪ್ರತಿಭೆಗಳ ವಿವರ ಶಿಕ್ಷಕರಿಗೆ ಗೊತ್ತಾಗುತ್ತದೆ. ವಿದ್ಯಾರ್ಥಿಯ ಅಪೇಕ್ಷೆ ಹಾಗೂ ಹಿನ್ನೆಲೆ ಅರಿತುಕೊಂಡು ಟ್ಯುಟೋರಿಯಲ್ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡುತ್ತಾ ಮುಂದುವರೆಯಬಹುದು. ಇಂತಹ ಪೂರ್ವನಿಯೋಜಿತ ಯೋಜನೆಗಳ ಮೂಲಕ ಮಾತ್ರ ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠತೆ ಬೆಳೆಸಬಹುದು.

–ಎಂ. ಎಂ. ಪ.

Digitised by Bharatavani, CIIL

# ತ

## ತಂಡ ಬೋಧನೆ

ಶಿಕ್ಷಣದ ಗುಣ ವಿಶೇಷವನ್ನು ಹೆಚ್ಚಿಸುವುದಕ್ಕಾಗಿ ಶಿಕ್ಷಣ ತಜ್ಞರಿಂದ ಆಗಿರುವ ಪ್ರಯತ್ನಗಳಲ್ಲಿ ವಿವಿಧ ಕಲಿಸುವ ಯೋಜನೆಗಳ ದಿಶೆಯಲ್ಲಿ ತಂಡ ಬೋಧನೆ (ಟೀಮ್ ಟೀಚಿಂಗ್) ವಿಧಾನವೂ ಒಂದು. ಮೂಲತಃ ಈ ವಿಧಾನ ವಿದ್ಯಾರ್ಥಿಗಳನ್ನು ದೊಡ್ಡ ಗುಂಪುಗಳಲ್ಲಿ ಬೋಧಿಸುವುದೇ ಆಗಿದೆ. ಈ ರೀತಿಯ ಕೂಡಿಸಿದ ವಿದ್ಯಾರ್ಥಿಗಳಿಗೆ ಆಯಾ ವಿಷಯಗಳಲ್ಲಿ ಪ್ರಾವೀಣ್ಯ ಪಡೆದ ಶಿಕ್ಷಕರಿಂದ ಬೋಧನೆ ನಡೆಯುತ್ತದೆ. ಅದರಂತೆ, ಒಬ್ಬನೇ ಶಿಕ್ಷಕನು ಒಂದು ವಿಷಯ ಕಲಿಸುವುದರ ಬದಲು ಆಯಾ ವಿಷಯದ ಪರಿಣತರಿಂದ ವಿಷಯಗಳ ಬೋಧನೆಯಾಗುವ ವಿದ್ಯಾರ್ಥಿಗಳಿಗೆ ಹಲವಾರು ಉತ್ತಮ ಶಿಕ್ಷಕರ ಸಂಪರ್ಕ ಬರುತ್ತದೆ. ಈ ರೀತಿಯಲ್ಲಿ ಅವರು ಉತ್ತಮ ಶಿಕ್ಷಕರ ನೇತೃತ್ವದಲ್ಲಿ ಹೆಚ್ಚು ಉತ್ತಮ ರೀತಿಯಲ್ಲಿ ಕಲಿಯುತ್ತಾರೆ. ಹೆಚ್ಚು ವಿಷಯ ಸಂಗ್ರಹಿಸುತ್ತಾರೆ. ಮೇಲಾಗಿ ಇನ್ನೂ ಹೆಚ್ಚು ಅಭ್ಯಾಸ ಮಾಡಲು ಸ್ಫೂರ್ತಿ ಹುಮ್ಮಸ್ಸನ್ನು ಪಡೆಯುತ್ತಾರೆ. ಒಬ್ಬನೇ ಶಿಕ್ಷಕನು ಇಡೀ ವರ್ಗಕ್ಕೆ ವರ್ಷಾನುಗಟ್ಟಲೇ ಒಂದು ವಿಷಯ ಕಲಿಸುವುದಕ್ಕಿಂತ ಈ ವಿಧಾನ ಮೇಲಾಗಿದೆ.

ಸಾಮಾನ್ಯವಾಗಿ ಈ ವಿಧಾನದಿಂದ ಕಲಿಸುವಾಗ ಮಾಮೂಲು ಬೋಧನೆಗಿಂತ ಕೆಲವು ಮೂಲಭೂತ ಬದಲಾವಣೆಗಳನ್ನು ಶಿಕ್ಷಕರು ಮಾಡಬೇಕಾಗುತ್ತದೆ. ಒಬ್ಬ ಶಿಕ್ಷಕನ ಬದಲು ಇಲ್ಲಿ ಹಲವಾರು ಶಿಕ್ಷಕರು ವರ್ಗ ಬೋಧನೆಯಲ್ಲಿ ಭಾಗಿಗಳಾಗುತ್ತಾರೆ. ಯಾವುದೊಂದು ವಿಷಯ ಕಲಿಸುವಾಗ ಆ ವಿಷಯದಲ್ಲಿ ಆ ಶಾಲೆಯಲ್ಲಿಯೇ ಹೆಚ್ಚು ಅನುಭವ, ಪ್ರಾವೀಣ್ಯ ಪಡೆದ ಹಿರಿಯ ಶಿಕ್ಷಕನ ನೇತೃತ್ವದಲ್ಲಿ ಆ ವಿಷಯದ ಇತರ ಶಿಕ್ಷಕರು ಒಟ್ಟುಗೂಡುತ್ತಾರೆ. ಅವರೆಲ್ಲ ಈ ನುರಿತ ಶಿಕ್ಷಕನಿಗೆ ಸಹಾಯಕಾರಿಗಳು. ಪ್ರತಿಯೊಂದು ವರ್ಗದಲ್ಲಿ ಸುಮಾರು 50 ಹುಡುಗರಿರುವಂತೆ ವರ್ಗಗಳನ್ನು ಹೊಂದಿಸಿಕೊಳ್ಳುತ್ತಾರೆ. ಈ ಸಂಖ್ಯೆ ಇಷ್ಟೇ ಇರಬೇಕೆಂಬ ನಿಯಮವಿಲ್ಲ. ಶಾಲೆಯ ಪರಿಸ್ಥಿತಿಯನ್ನವಲಂಬಿಸಿ ಈ ಸಂಖ್ಯೆಯನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಶಾಲೆಯ ಅವಧಿಯಲ್ಲಿ ಈ ವಿದ್ಯಾರ್ಥಿಗಳನ್ನು ಒಂದೇ ದೊಡ್ಡ ವರ್ಗದಲ್ಲಿ ಕಲೆಹಾಕಲಾಗುತ್ತದೆ. ಒಂದೇ ಸ್ಟ್ಯಾಂಡರ್ಡ್‌ನ ಎರಡು ಮೂರು ತರಗತಿಗಳನ್ನು ಈ ರೀತಿ ಒಂದೇ ಕೋಣೆಯಲ್ಲಿ ಕಲೆ ಹಾಕಲೂಬಹುದು.

ವರ್ಗದಲ್ಲಿಯ ಪಾಠ ಪ್ರಾರಂಭಕ್ಕಿಂತ ಪೂರ್ವದಲ್ಲಿ ಶಿಕ್ಷಕರು ಅದರ ಹಿಂದಿನ ದಿನಗಳಲ್ಲಿ ಕಲಿತು ಚರ್ಚಿಸುತ್ತಾರೆ. ಈ ಚರ್ಚೆಯಲ್ಲಿ ಪ್ರಮುಖವಾಗಿ ಪಾಠದ ಗುರಿ, ನಿರ್ದೇಶನ, ಪ್ರತಿಯೊಬ್ಬ ಶಿಕ್ಷಕನ ಕೆಲಸ, ಮುಂತಾದವುಗಳನ್ನು ಚರ್ಚಿಸುತ್ತಾರೆ. ಮೊದಲು ಆ ಗುಂಪಿನಲ್ಲಿಯ ಮುಖ್ಯ ಶಿಕ್ಷಕನು ಪಾಠವನ್ನು ಬೋಧಿಸಿ ವಿಷಯ ಪ್ರವೇಶ ಮಾಡಿಸುವನು. ಈ ರೀತಿ ಪಾಠವನ್ನು ಪ್ರಾರಂಭಿಸುವ ಶಿಕ್ಷಕನು ತನ್ನ ವಿಷಯದಲ್ಲಿ ಪರಿಣತಿಯನ್ನು ಪಡೆದವನಿದ್ದು, ಉಳಿದವರಿಗೆ ಮಾರ್ಗದರ್ಶನ ಮಾಡುವ ಯೋಗ್ಯತೆಯವನಿರಬೇಕು. ಉಳಿದ ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ (ಉಪ ಶಿಕ್ಷಕರು, ಕಾರಕೂನರು, ಇತ್ಯಾದಿ) ಅವರವರ ಕೆಲಸಗಳನ್ನು ಮುಖ್ಯ ಶಿಕ್ಷಕನೇ ಕೊಡಬಹುದು. ಈ ರೀತಿ ಪಾಠಗಳನ್ನು ಈ ಗುಂಪಿನವರು ಎರಡು ರೀತಿಯಲ್ಲಿ ಸಂಯೋಜಿಸುತ್ತಾರೆ. ಒಂದು ಅಲ್ಪಾವಧಿ ಯೋಜನೆ, ಎರಡು ದೀರ್ಘಾವಧಿ ಯೋಜನೆ. ಆ ದಿಶೆಯಲ್ಲಿ ಇದು ಪ್ರಾಜೆಕ್ಟ್ ಪದ್ಧತಿಗೆ ಸಮೀಪವರ್ತಿಯಾಗಿದೆ. ಹಲವಾರು ಪಾಠಗಳನ್ನು ಒಂದೇ ರೀತಿಯಲ್ಲಿ ಯೋಜಿಸಲಾಗುತ್ತದೆ.

**ಬೋಧನೆಯ ಕ್ರಮ** : ಮೊದಲು ಇಡೀ ವರ್ಗಕ್ಕೆ ಮುಖ್ಯ ಶಿಕ್ಷಕ ಪಾಠ ಮಾಡುತ್ತಾನೆ. ಈ ವರ್ಗವು ದೊಡ್ಡದಿರುವುದರಿಂದ ಶಾಲೆಯ ಸಭಾಗೃಹವನ್ನೋ, ನಾಟಕಗೃಹವನ್ನೋ ಅಥವಾ ದೊಡ್ಡವರ್ಗದ ಕೋಣೆಯನ್ನೋ ಉಪಯೋಗಿಸಬೇಕಾಗುತ್ತದೆ. ಸಂದರ್ಭಕ್ಕನುಸರಿಸಿ ಸಿನಿಮಾ ಫಿಲ್ಮ್ ಸ್ಟ್ರಿಪ್ (ಚಿತ್ರಸುರಳಿ). ಸ್ಲಾಯಿಡ್ ಮುಂತಾದವುಗಳನ್ನು ಕಲಿಸುವುದಕ್ಕಾಗಿ ಉಪಯೋಗಿಸಬಹುದು. ಈ ರೀತಿಯ ಒಮ್ಮೆ ಪ್ರಾಸ್ತಾವಿಕ ಪಾಠ ನಡೆದ ಮೇಲೆ ಈ ದೊಡ್ಡ ವರ್ಗವು ಸಣ್ಣ ಸಣ್ಣ ಗುಂಪುಗಳಲ್ಲಿ ಬೇರೆ ಬೇರೆಯಾಗುತ್ತದೆ. ಮತ್ತು ಪ್ರತಿಯೊಂದು ಗುಂಪು ಚರ್ಚೆಯ ಸಲುವಾಗಿ ಬೇರೆ ಬೇರೆ ವರ್ಗಗಳಿಗೆ ಹೋಗುತ್ತದೆ. ವಿದ್ಯಾರ್ಥಿಗಳಿಗೆ ಅವರ ವೈಯಕ್ತಿಕ ಅಭ್ಯಾಸಕ್ಕೂ ಅಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.

ಉಳಿದ ಶಿಕ್ಷಕರು ಈ ಸಣ್ಣ ಸಣ್ಣ ಗುಂಪುಗಳಲ್ಲಿ ನಾಯಕರಾಗಿ ಚರ್ಚೆಯನ್ನು ನಡೆಸುತ್ತಾರೆ. ಮಕ್ಕಳು ಬರೆದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುತ್ತಾರೆ. ವೈಯಕ್ತಿಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಕೆಲಸವನ್ನು ಮೇಲ್ವಿಚಾರಕರು ಮಾಡಿ ಅವರ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಈ ರೀತಿ ಪರಿಣತ ಶಿಕ್ಷಕರಿಗೂ ವಿದ್ಯಾರ್ಥಿಗಳ ನಡುವೆ ಒಂದು ಭದ್ರವಾದ ಸಂಬಂಧ ಏರ್ಪಡುತ್ತದೆ. ಈ ರೀತಿಯ ಹೊಂದಾಣಿಕೆಗೆ ಶಿಕ್ಷಕರು ತಮ್ಮ ತಮ್ಮ ಕೆಲಸಗಳನ್ನು ಯೋಜಿಸಿಕೊಳ್ಳಲು ಸಮಯಬೇಕು. ಅದು ಅವರಿಗೆ ದೊರೆಯಬೇಕು. ಪೂರ್ವ ಸಿದ್ಧತೆಯೂ ಇಲ್ಲಿ ಮಹತ್ವದ್ದಾಗಿದೆ. ಒಂದು ಪಾಠವು ಯಶಸ್ವಿ ರೀತಿಯಲ್ಲಿ ಜರುಗಬೇಕಾದರೆ ದೊಡ್ಡ ಪ್ರಮಾಣದ ಹಿನ್ನೆಲೆಯಲ್ಲೂ ತಯಾರಿಸಬೇಕು. ಅವರೆಲ್ಲರೂ ಪ್ರತಿಯೊಂದು ಸಂದರ್ಭವನ್ನು ಚರ್ಚಿಸಬೇಕಾಗುತ್ತದೆ. ಅದರಂತೆ ಶಿಕ್ಷಕರು ತಮ್ಮ ಗುಂಪಿನ ಮಕ್ಕಳೊಡನೆ ಯಾವ ರೀತಿ ಕೂಡಿಕೊಂಡು ಕೆಲಸ ಮಾಡಬೇಕೆಂಬುದನ್ನೂ ನಿರ್ಧರಿಸಬೇಕು.

ಈ ದಿಕ್ಕಿನಲ್ಲಿ ನಮ್ಮ ಮುಂದೆ ಬರುವ ಪ್ರಶ್ನೆ ಇಂತಹ ವಿಧಾನವನ್ನು ನಮ್ಮ ಶಾಲೆಗಳಲ್ಲಿ ಉಪಯೋಗಕ್ಕೆ ತರಬಹುದೇ? ಕೆಳಗಿನ ಪ್ರಶ್ನೆಗಳಿಗೆ ನಾವು ಸಮರ್ಪಕ ಉತ್ತರ ಪಡೆದರೆ, ಈ ವಿಧಾನವನ್ನು ಯಾವ ಶಾಲೆಯಲ್ಲಿಯಾದರೂ ಅಳವಡಿಸಬಹುದು.

1. ಶಿಕ್ಷಕರು ತಾತ್ವಿಕವಾಗಿ ಈ ವಿಧಾನವನ್ನು ಒಪ್ಪಿಕೊಂಡಿದ್ದಾರೆಯೇ?
2. ಅವರಿಗೆ ಈ ವಿಧಾನದ ಅನುಭವವಿದೆಯೇ?
3. ಶಾಲೆಯಲ್ಲಿ ದೊಡ್ಡಕೋಣೆಗಳು, ಸಣ್ಣ ಕೋಣೆಗಳು ಈ ಪದ್ಧತಿಗಾಗಿ ಲಭ್ಯವಿದೆ?
4. ವೈಯಕ್ತಿಕ ಅಭ್ಯಾಸಕ್ಕಾಗಿ ಸುಸಜ್ಜಿತ ಗ್ರಂಥ ಭಂಡಾರವಿದೆಯೇ?
5. ತಂಡ ಬೋಧನಾ ವಿಧಾನಕ್ಕೆ ಅವಶ್ಯಕವಾದ ವರ್ಗಗಳ ಶಿಕ್ಷಕರು ಈ ಬೋಧನಾ ಯೋಜನೆಗೆ ಮುಂಚಿತವಾಗಿಯೇ ದೊರಕುವರೇ?
6. ದೊಡ್ಡ ತರಗತಿ ಬೋಧನೆ ಮಾಡುವಂಥ ನುರಿತ ಅನುಭವಿ ಶಿಕ್ಷಕರು ನಮ್ಮ ಶಾಲೆಯಲ್ಲಿ ಇರುವರೆ?
7. ಉಳಿದ ಶಿಕ್ಷಕರು ಈ ಹೊಸ ವಿಧಾನದಲ್ಲಿ ಅನುಭವ ಶಿಕ್ಷಕರಿಗೆ ಉಪಶಿಕ್ಷಕರಾಗಿ ದುಡಿಯಲು ಸಿದ್ಧರಿರುವರೆ ?
8. ಈ ವಿಧಾನದ ಉಪಯೋಗಕ್ಕೆ ಬೇಕಾದ ಸಲಕರಣೆಗಳು ಈ ಶಾಲೆಯಲ್ಲಿವೆಯೇ?

Digitised by Bharatavani, CIIL

9. ವಿದ್ಯಾರ್ಥಿಗಳ ಸಂಖ್ಯೆ ದೊಡ್ಡದಿದೆಯೇ?

10. ಪಾಲಕರು ಈ ವಿಧಾನಕ್ಕೆ ಪುರಸ್ಕಾರ, ಸ್ಫೂರ್ತಿ ಮತ್ತು ಪ್ರೋತ್ಸಾಹವನ್ನು ಕೊಡುತ್ತಾರೆಯೇ?

ಈ ಬೋಧನಾ ವಿಧಾನ ಮೊದಲು ಪಾಶ್ಚಾತ್ಯ ದೇಶಗಳಲ್ಲಿ ಪ್ರಾರಂಭವಾಯಿತು. ಅದಕ್ಕೆ ಒಂದು ಹಿನ್ನೆಲೆಯುಂಟು ಡೇವಿಡ್‌ರ ಮಾತಿನಲ್ಲಿ ಹೇಳಬೇಕೆಂದರೆ, “ಈಗ ಶಿಕ್ಷಣ ಸಂಸ್ಥೆಗಳಲ್ಲಿ ದೊಡ್ಡ ದೊಡ್ಡ ಗಾತ್ರದ ಸಂಸ್ಥೆಗಳು ಹೆಚ್ಚಾಗುತ್ತಲಿವೆ. ಒಂದೊಂದು ಶಾಲೆಯಲ್ಲಿಯೂ ಅನೇಕ ವಿಷಯಗಳ ವಿಭಾಗಗಳು ತಲೆಯೆತ್ತಿವೆ. ಒಂದೊಂದು ವಿಷಯವನ್ನೂ ಅನೇಕ ಶಿಕ್ಷಕರು ಕಲಿಸುವ ಸಂದರ್ಭಗಳೂ ಹೆಚ್ಚಾಗುತ್ತಿವೆ. ಈ ಸಂದರ್ಭದಲ್ಲಿ ಆರ್ಥಿಕ ಮತ್ತು ಸಮಯದ ಉಳಿತಾಯದ ದೃಷ್ಟಿಯಲ್ಲಿ ತಂಡ ಬೋಧನೆಯು ಸಹಕಾರಿಯಾಗಿದೆ.” ಒಂದು ವಿಷಯವನ್ನು ದೊಡ್ಡ ಗುಂಪುಗಳಿಗೆ ಕೆಲವೇ ಅವಧಿಗಳಲ್ಲಿ ಕಲಿಸಬಾರದೇಕೆ? ಇಲ್ಲಿ ಆರ್ಥಿಕ ಅನುಕೂಲತೆಗಳುಂಟು. ಎರಡನೆಯದಾಗಿ, ಒಬ್ಬ ಶಿಕ್ಷಕನು ಒಂದು ವಿಷಯದ ಒಂದು ವಿಭಾಗದಲ್ಲಿ ಪರಿಣಿತನಿದ್ದರೆ, ಆ ವಿಷಯವನ್ನು ಅವನು ಚೆನ್ನಾಗಿ ಕಲಿಸುತ್ತಾನೆ. ಈ ಅನುಕೂಲತೆಯನ್ನು ನಾವು ಮಕ್ಕಳಿಗೆ ಒದಗಿಸಬಾರದೇಕೇ? ಯಾವ ಶಿಕ್ಷಕನು ಯಾವ ಮುಖ್ಯ ಸಂಗತಿ, ವಿಷಯಗಳಲ್ಲಿ ಪರಿಣತನಿರುವನೋ ಆ ವಿಷಯಗಳನ್ನು ಅವನಿಂದ ಎಲ್ಲಾ ಹುಡುಗರು ಕಲಿಯಬಹುದಲ್ಲವೇ? ಇಂತಹ ಸಂದರ್ಭಗಳಲ್ಲಿ ಶಿಕ್ಷಕರು ಹೆಚ್ಚು ಆತ್ಮೀಯವಾಗಿ ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಳ್ಳಬಹುದು. ಯಾವ ಶಿಕ್ಷಕರು ತಮ್ಮದೇ ಆದ ಕಲಿಸುವ ವಿಧಾನಗಳಲ್ಲಿ ಹಾಗೂ ವಿಷಯಗಳಲ್ಲಿ ಪರಿಣಿತಿ ಹೊಂದಿದ್ದಾರೆಯೋ ಅವರನ್ನು ಆ ವಿಷಯಗಳಲ್ಲಿ ಕಲಿಸಲು ಅವಕಾಶವಿರುವುದರಿಂದ ಅವರಿಗೂ ಆನಂದ, ಮಕ್ಕಳಿಗೂ ಆನಂದ, ಇನ್ನೊಂದು ದೃಷ್ಟಿಯಲ್ಲಿ ಅನೇಕ ಶಿಕ್ಷಕರಲ್ಲಿ ವ್ಯಕ್ತಿಶಃ “ತಮ್ಮಷ್ಟಕ್ಕೆ ತಾವು ಎನ್ನುವ” ಭಾವನೆಗಳು ಇದ್ದರೆ ಈ ವಿಧಾನದಲ್ಲಿ ಅದು ನಿವಾರಣೆಯಾಗುತ್ತದೆ.




“ಟೀಮ್” ವಿಧಾನದಲ್ಲಿ

(ಶಿಕ್ಷಕರನ್ನು ಹೊಂದಿಸುವುದು)

ತಂಡ ಬೋಧನೆ ಮಕ್ಕಳ ಬೇಡಿಕೆಗಳನ್ನು ಈಡೇರಿಸಲು ರೂಪಿಸಿದ ಒಂದು ಕ್ರಮ. ಇಲ್ಲಿ ವರ್ಗದ ಕಟ್ಟುನಿಟ್ಟುಗಳು ದೂರವಾಗಿ ಇಡಿಯ ವಿದ್ಯಾರ್ಥಿಗಳ ದೊಡ್ಡ ಗುಂಪುಗಳನ್ನೂ ಬೋಧನೆ–ಕಲಿಕೆಗೆ ಸಂಘಟಿಸಲಾಗುತ್ತದೆ.

ತಂಡ ಬೋಧನೆಯಲ್ಲಿ ಸಾಧನಗಳ ಮಿತವ್ಯಯವಿದೆ; ಜನಶಕ್ತಿಯನ್ನು ವ್ಯವಸ್ಥಿತವಾಗಿ ಉಪಯೋಗಿಸಬಹುದಾಗಿದೆ. ಶಿಕ್ಷಕರು ಅಭಿರುಚಿಗೆ ತಕ್ಕಂತೆ ಕಲಿಸುವ ಅವಕಾಶವಿದೆ; ಅದನ್ನು ಅನುಸರಿಸಿಯೇ ಪಾಠದ ಯೋಜನೆ ಇರುತ್ತದೆ. ಪ್ರಾಥಮಿಕ ಮಾಧ್ಯಮಿಕ ಶಿಕ್ಷಣದಲ್ಲಿ ಈ ವಿಧಾನವನ್ನೂ ಉಪಯೋಗಿಸಬಹುದು.

ತಂಡ ಬೋಧನೆಕ್ರಮ ನಮ್ಮ ಶಾಲೆಗಳಲ್ಲಿ ಉಪಯೋಗಿಸಲು ಯೋಗ್ಯವಾಗಿದೆ. ಹಳ್ಳಿಗಳಲ್ಲಿಯ ಮಾಧ್ಯಮಿಕಶಾಲೆಗಳಲ್ಲಿಯಂತೂ ಇದು ತೀರಾ ಅವಶ್ಯವಿದೆ. ಏಕೆಂದರೆ ವಿಷಯಗಳಲ್ಲಿಯಾಗಲಿ, ಪದ್ಧತಿಗಳಲ್ಲಿಯಾಗಲಿ ನುರಿತ ಶಿಕ್ಷಕರು ಅಲ್ಲಿ ಕೆಲವರೇ ಇರುತ್ತಾರೆ. ಅನೇಕ ಶಾಲೆಗಳಲ್ಲಿ ಅನನುಭವಿ ಶಿಕ್ಷಕರೇ ಹೆಚ್ಚು. ಅವರು ಪದವಿ ಮಟ್ಟದಲ್ಲಿ ಯಾವ ವಿಷಯಗಳನ್ನು ಅಧ್ಯಯನ ಮಾಡಿ ನಂತರ ಶಾಲೆಗಳಲ್ಲಿ ಬೋಧಕರಾದ ಮೇಲೆ ಅದೇ ವಿಷಯಗಳನ್ನು ಕಲಿಸುತ್ತಾರೆಂಬುದರ ಭರವಸೆ ಇರುವುದಿಲ್ಲ. ಕಾಲೇಜುಗಳಲ್ಲಿ ಅವರು ಕಲಿತದ್ದೇ ಬೇರೆ. ಅವರು ಕಲಿಸುವುದೇ ಬೇರೆ. ಈ ವಿಧಾನದಿಂದ ಅನುಭವಿ ಶಿಕ್ಷಕರ ಅನುಭವಗಳನ್ನು ನಾವು ಎಲ್ಲಾ ವರ್ಗಗಳ ವಿದ್ಯಾರ್ಥಿಗಳ ಬೋಧನೆಗೆ ಉಪಯೋಗಿಸಬಹುದು. ಅನುಭವಿ ಶಿಕ್ಷಕರ ಕೊರತೆ ಈಗೀಗ ಹೆಚ್ಚುತ್ತಲೇ ಇದೆ. ತುಸು ಅನುಭವ ಆಗುವುದರೊಳಗಾಗಿ ಅವರು ಸ್ನಾತಕೋತ್ತರ ಪರೀಕ್ಷೆಗಳನ್ನು ಮುಗಿಸಿ ಕಾಲೇಜು ಶಿಕ್ಷಕರಾಗುತ್ತಾರೆ. ಇಲ್ಲವೇ ಯಾವುದಾದರೊಂದು ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಹೋಗುತ್ತಾರೆ. ಇಂದು ಪರಿಣಿತರಾದ ಶಿಕ್ಷಕರನ್ನು ಅದೇ ಶಾಲೆಯಲ್ಲಿ ದೀರ್ಘಕಾಲ ಇಟ್ಟುಕೊಳ್ಳುವ ಖಾತರಿಯೂ ಇಲ್ಲ. ಅವರ ಅನುಭವದ ಲಾಭ ಉಳಿದ ಅನನುಭವಿ ಶಿಕ್ಷಕರಿಗೂ ಕಲಿಯುವ ವಿದ್ಯಾರ್ಥಿಗಳಿಗೂ ತಲುಪಬೇಕು. ಇದು ನಿಜವಾದ ತಂಡಬೋಧನೆಯ ಒಳಗುಟ್ಟು.

ನಮ್ಮ ದೇಶದಲ್ಲಿ ಬಹುತೇಕ ಶಾಲೆಗಳಲ್ಲಿ ಇನ್ನೂ ಸಾಂಪ್ರದಾಯಿಕ ಬೋಧನಾ ವಿಧಾನಗಳನ್ನು ಉಪಯೋಗಿಸಲಾಗುತ್ತದೆ. ಈ ಪರಿಸ್ಥಿತಿಯಲ್ಲಿ ನಾವು ತಂಡ ಬೋಧನೆಯ ಮುಖಾಂತರ ಅನೇಕ ಅನುಕೂಲಕರವಾದ ಬದಲಾವಣೆಗಳನ್ನು ತರಬಹುದು. ಭವಿಷ್ಯತ್ತಿನಲ್ಲಿ ಅದಕ್ಕೊಂದು ಮಹತ್ವದ ಸ್ಥಾನ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ದೊರೆಯಲಿದೆ.

**ಪ್ರಯೋಜನಗಳು**

1. ತಂಡ ಬೋಧನೆಯಿಂದ ನುರಿತ ಶಿಕ್ಷಕನ ಪಾಂಡಿತ್ಯದ ಉಪಯೋಗವು ಎಲ್ಲಾ ಶಿಕ್ಷಕರಿಗೂ ಮಕ್ಕಳಿಗೂ ದೊರೆಯುತ್ತದೆ.
2. ಎಲ್ಲರಿಗೂ ಅನೇಕ ಹೊಸ ಹೊಸ ವಿಚಾರಗಳು ದೊರೆಯುತ್ತದೆ.
3. ಎಲ್ಲರೂ ಕೂಡಿಯೇ ಸಾಮೂಹಿಕ ಜವಾಬ್ದಾರಿಯಿಂದ ಕಲಿಯುವರು.
4. ಸಣ್ಣ ಸಣ್ಣ ಗುಂಪುಗಳಲ್ಲಿ ಮಕ್ಕಳು ಅನೇಕ ಚಟುವಟಿಕೆಗಳನ್ನು ಮಾಡುವುದರಿಂದ ಪ್ರತಿಯೊಬ್ಬರೂ ಈ ವಾತಾವರಣವನ್ನು ಅನುಭವಿಸಬಹುದು.
5. ಶಿಕ್ಷಕರ ಕಲಿಸುವ ಯೋಗ್ಯತೆಯನ್ನು ಕಂಡು ಹಿಡಿಯಲು ಇಲ್ಲಿ ಸಾಧ್ಯ.
6. ಪ್ರತಿಯೊಬ್ಬರೂ ಪರಸ್ಪರ ಪೂರಕವಾದ ರೀತಿಯಲ್ಲಿ ಕೆಲಸ ಮಾಡುತ್ತಾರೆ.

Digitised by Bharatavani, CIIL

7. ಅವರವರ ಯೋಗ್ಯತೆಗಳಿಗೆ ಅನುಸಾರವಾಗಿ ಈ ಚಟುವಟಿಕೆಯಲ್ಲಿ ಬೇರೆ ಬೇರೆ ಕೆಲಸಗಳನ್ನು ವಿದ್ಯಾರ್ಥಿಗಳಾಗಲಿ, ಶಿಕ್ಷಕರಾಗಲಿ ಮಾಡಬಹುದು.
8. ಕಲಿಸುವ-ಕಲಿಯುವ ಉಪಕರಣ – ಸಾಧನಗಳನ್ನು ಇಂತಹ ಸಂದರ್ಭದಲ್ಲಿ ಉಪಯೋಗಿಸಬಹುದು
9. ವೈಯಕ್ತಿಕ ಕಾರ್ಯವನ್ನು ಮತ್ತು ಸಾಮೂಹಿಕ ಕೆಲಸಗಳನ್ನು ಎಲ್ಲರೂ ಪರಿಣಾಮಕಾರಿಯಾಗಿ ವಿನಿಮಯ ಮಾಡಿಕೊಳ್ಳಬಹುದು.

–ಎಸ್.ವಿ.ಸು.

## ತಂತ್ರಜ್ಞಾನದ ಹಿನ್ನೆಲೆ

ಮಾನವನು ಮೊತ್ತಮೊದಲಿಗೆ ಚಿಂತನೆ ಮಾಡತೊಡಗಿದ ಕೂಡಲೇ ತನ್ನ ಸುತ್ತಮುತ್ತಲ ಪರಿಸರವನ್ನು ನಿಸರ್ಗ ಶಕ್ತಿಗಳನ್ನು ತನ್ನ ಜೀವನದ ಅವಶ್ಯಕತೆಗಳಿಗಾಗಿ ವಿವಿಧ ರೀತಿಯ ಸಾಧನೋಪಾಯಗಳನ್ನು ಸೃಷ್ಟಿಸಿದ. ಉದಾಹರಣೆಗೆ, ಮಾನವನು ಕಲ್ಲುಗಳನ್ನು ಉಪಯೋಗಿಸಿಕೊಂಡ ರೀತಿ, ಕಲ್ಲುಗಳಿಂದ ಬೆಂಕಿ, ಬೆಂಕಿಯನ್ನು ಉಪಯೋಗಿಸಿ ತನ್ನ ಆಹಾರವನ್ನು ತಯಾರಿಸಿಕೊಳ್ಳುವುದು. ಅಷ್ಟೇ ಅಲ್ಲದೆ, ಕಲ್ಲುಗಳನ್ನೇ ಆಯುಧಗಳನ್ನಾಗಿ ಉಪಯೋಗಿಸಿದ. ಕಾಲ ಕಳೆದಂತೆ ಈ ಸಾಧನಗಳ ಸ್ವರೂಪ ಹಾಗೂ ಅವುಗಳ ಬಳಕೆಯ ವಿಧಾನಗಳು ಬದಲಾಗುತ್ತಾ ಹೋದವು. ಇಂಥ ಸಾಧನೋಪಾಯಗಳೇ ತಂತ್ರಜ್ಞಾನವೆನಿಸಿಕೊಂಡವು.

ಮಾನವನ ಅವಶ್ಯಕತೆಗಳು ಹೆಚ್ಚಿದಂತೆ ವಿಜ್ಞಾನ ಬೆಳೆಯುತ್ತಾ ಅತ್ಯಾಶ್ಚರ್ಯಗೊಳಿಸುವಂಥ ಸಾಧನಗಳ ಜನ್ಮವಾಯಿತು. ಈ ತಂತ್ರ ಜ್ಞಾನದ ಫಲಗಳ ಬಳಕೆಯಿಂದ ಮಾನವನ ಜೀವನ ಶೈಲಿ, ಬುದ್ಧಿಶಕ್ತಿ, ಕೌಶಲ್ಯ ಹಾಗೂ ಪರಿಣತಿಗಳು ವಿಶೇಷವಾಗಿ ಬೆಳೆದಿವೆ. ಮಾನವನ ಈ ಪ್ರಗತಿ, ವಿವೇಚನಾ ಶೀಲತೆಯಿಂದ ಅವನು ಹೊಸ ವಿಷಯಗಳ ಅನ್ವೇಷಣೆ ಹಾಗೂ ಸಂಶೋಧನೆಯಲ್ಲಿ ತೊಡಗಿದುದರ ಪ್ರತಿಫಲವಾಗಿ ಅವನು ಅನೇಕ ವಾಹನಗಳು, ರೈಲು, ವಿಮಾನ, ಮನರಂಜನೆಗಾಗಿ ಚಲನಚಿತ್ರ, ದೂರದರ್ಶನ, ರೇಡಿಯೋ, ವಿದ್ಯುತ್ ಬಲ್ಬು, ರಾಸಾಯನಿಕಗಳು, ಲೋಹಗಳು, ಮುದ್ರಣ ಯಂತ್ರ ಇತ್ಯಾದಿ ಸಾಧನಗಳನ್ನು ಕಂಡುಹಿಡಿದ.

ಈ ರೀತಿ ಮಾನವನು ವಿಜ್ಞಾನ, ವೈದ್ಯಕೀಯ, ತಾಂತ್ರಿಕ ಇತ್ಯಾದಿ ಕ್ಷೇತ್ರಗಳಲ್ಲಿ ನವೀನತೆಗಳನ್ನು ಕಂಡುಕೊಂಡ. ಅಂತೆಯೇ ಶಿಕ್ಷಣ ಕ್ಷೇತ್ರದಲ್ಲಿಯೂ ಕೂಡ ನವೀನ ರೀತಿಯ ಬದಲಾವಣೆ ಆರಂಭವಾಯಿತು. ಶಿಕ್ಷಣ ಕ್ಷೇತ್ರಕ್ಕೆ ತಂತ್ರಜ್ಞಾನ ಹಾಗೂ ನವೀನ ವಿಜ್ಞಾನದ ಅವಯವವು ಒಂದು ಶಾಸ್ತ್ರವಾಗಿ ಜನ್ಮ ತಾಳಿತು. ಅದುವೇ ಶೈಕ್ಷಣಿಕ ತಂತ್ರಶಾಸ್ತ್ರ.

1960ರ ಪೂರ್ವದಲ್ಲಿ ಇಡೀ ಶೈಕ್ಷಣಿಕ ವ್ಯವಸ್ಥೆಗೆ 'ಶೈಕ್ಷಣಿಕ ತಂತ್ರಜ್ಞಾನ' ಎಂಬ ಪದದ ಪರಿಚಯವಿರಲಿಲ್ಲ. ಶೈಕ್ಷಣಿಕ ತಂತ್ರಶಾಸ್ತ್ರದ ಬಳಕೆ ಕೇವಲ ದೃಕ್ ಶ್ರವಣೋಪಕರಣಗಳ ಉಪಯೋಗಕ್ಕೆ ಮಾತ್ರ ಸೀಮಿತಗೊಂಡಿತು. ಭಾರತದಲ್ಲಿ ಮಾತ್ರ ಕ್ರಮಾನುಗತ ಬೋಧನೆಯು ಅರವತ್ತರ ಪೂರ್ವದಲ್ಲಿ ಬೋಧನೆಯ ಅಭಿವೃದ್ಧಿಗಾಗಿ ಅನೇಕ ವಿಧದಲ್ಲಿ ಕೊಡುಗೆಯನ್ನು ನೀಡಿದೆ. ಹಂತಹಂತವಾಗಿ ಶೈಕ್ಷಣಿಕ ತಂತ್ರಜ್ಞಾನದ ಪರಿಕಲ್ಪನೆ ವಿಶಾಲವಾಗಿಯೂ ಮತ್ತು ಸ್ವತಂತ್ರವಾಗಿಯೂ ಬೆಳೆಯಲಾರಂಭಿಸಿತು. ವೈಜ್ಞಾನಿಕ ಸಂಶೋಧನೆಯ ನವ ಕಲ್ಪನೆಗಳು ಹಾಗೂ ಕಲಿಕೆಯ ನಿಯಮಗಳ ಅನ್ವೇಷಣೆಯಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಕಠಿಣ ಸಾಮಗ್ರಿಗಳ ಪ್ರವೇಶದಿಂದ ಬೋಧನೆ ಮತ್ತು ಕಲಿಕೆ ಪ್ರಭಾವಗೊಂಡಿತು. ಉದಾ: ರೇಡಿಯೋ, ಟೇಪ್ ರೆಕಾರ್ಡರ್, ದೂರದರ್ಶನ, ವೀಡಿಯೋ, ಕಂಪ್ಯೂಟರ್ ಆಧಾರಿತ ಬೋಧನೆ, ಇಂಟರ್ ನೆಟ್ (ಅಂತರ್‌ಜಾಲ) ಮುಂತಾದವುಗಳು ಪರಿಣಾಮಕಾರಿಯಾದ ಕಲಿಕೆಗೆ ಉತ್ತಮ ಮಾರ್ಗವನ್ನು ನಿರ್ಮಿಸಿದವು. ಅದರಂತೆ ತಂತ್ರಾಂಶಗಳ (Software) ಆವಿಷ್ಕಾರವು ವ್ಯಕ್ತಿಶಃ ಕಲಿಕೆಗೆ ಮಹತ್ವ ಕೊಟ್ಟು ಮನೋವೈಜ್ಞಾನಿಕ ರೀತಿಯಲ್ಲಿ ಕಲಿಕೆಯು ನಿರಂತರವಾಗಿ ಮುಂದೆ ಸಾಗುವಂತೆ ಮಾಡಿದೆ. ಇಂದಿನ ಶಿಕ್ಷಣ ಕ್ರಮದಲ್ಲಿ ಮಗು ಕೇಂದ್ರೀಕೃತ ಶಿಕ್ಷಣ ಎಂಬ ಉಕ್ತಿಯನ್ನು ಮಹತ್ವದ ಅಂಶವನ್ನಾಗಿಟ್ಟುಕೊಂಡು ಶಿಕ್ಷಣವನ್ನು ಕಾರ್ಯಗತಗೊಳಿಸಲು ಶೈಕ್ಷಣಿಕ ತಂತ್ರಜ್ಞಾನವು ಮಹತ್ವದ ಪಾತ್ರವಹಿಸುತ್ತಲಿದೆ.

ಶೈಕ್ಷಣಿಕ ತಂತ್ರಶಾಸ್ತ್ರವು 'ಶಿಕ್ಷಣ' ಮತ್ತು 'ತಂತ್ರಶಾಸ್ತ್ರ' ಎಂಬ ಎರಡು ಪದಗಳಿಂದ ಕೂಡಿದೆ. 'ಶಿಕ್ಷಣ' ಎಂಬ ಪದವು ಅತಿ ವಿಸ್ತಾರವಾದ ಅರ್ಥವನ್ನು ಹೊಂದಿದೆ. ಶಿಕ್ಷಣವೆಂದರೆ ಉದ್ದೇಶಪೂರ್ವಕವಾಗಿ, ವೈಯಕ್ತಿಕ ಮತ್ತು ಸಾಮಾಜಿಕ ಜೀವನವನ್ನು ವೃದ್ಧಿ ಮಾಡುವ ಒಂದು ಪ್ರಕ್ರಿಯೆ ಎಂದು ವ್ಯಾಖ್ಯಾನಿಸಬಹುದು. 'ತಂತ್ರಶಾಸ್ತ್ರ'ವೆಂದರೆ ಪರಿಸರವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಹಾಗೂ ಮಾನವನ ಚಟುವಟಿಕೆಗಳನ್ನು ಸಂಘಟಿತಗೊಳಿಸುವ ವೈಜ್ಞಾನಿಕ ಜ್ಞಾನ ಶಾಖೆ.

**ಶೈಕ್ಷಣಿಕ ತಂತ್ರಜ್ಞಾನದ ವ್ಯಾಪ್ತಿ:** ಶೈಕ್ಷಣಿಕ ತಂತ್ರಜ್ಞಾನದ ವ್ಯಾಪ್ತಿಯು ಶೈಕ್ಷಣಿಕ ತಂತ್ರಜ್ಞಾನವನ್ನು ಯಾವ ಯಾವ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳಲಾಗಿದೆ ಎಂಬುದನ್ನು ಅವಲಂಬಿಸಿದೆ. ಇದು ಕಾರ್ಯಕ್ಷೇತ್ರ ಮತ್ತು ವಿಷಯ ಅಧ್ಯಯನದ ಉಪಯೋಗಕ್ಕೆ ಅನ್ವಯಿಸುತ್ತದೆ. ಇಂದಿನ ಶಿಕ್ಷಣದ ಪ್ರತಿಯೊಂದು ಕ್ಷೇತ್ರದಲ್ಲಿ ಈ ತಂತ್ರಶಾಸ್ತ್ರವು ವ್ಯಾಪಿಸಿಕೊಂಡಿದೆ. ಶಿಕ್ಷಣದ ಪ್ರತಿಯೊಂದು ಚಟುವಟಿಕೆಗಳನ್ನು ವಿಶ್ಲೇಷಿಸುತ್ತಾ ಹೋದಂತೆ ಅದರ ವ್ಯಾಪ್ತಿಯ ಅರಿವು ನಮಗಾಗುತ್ತದೆ.

**ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯ ವಿಶ್ಲೇಷಣೆ:** ಶೈಕ್ಷಣಿಕ ತಂತ್ರಶಾಸ್ತ್ರವು ಬೋಧನೆಯ ಪರಿಕಲ್ಪನೆ, ಬೋಧನಾ ಪ್ರಕ್ರಿಯೆಯ ವಿಶ್ಲೇಷಣೆ, ಬೋಧನೆಯ ಪರಿವರ್ತ್ಯಗಳು, ಘಟ್ಟಗಳು, ಮಟ್ಟಗಳು, ಸಿದ್ಧಾಂತಗಳು, ಸೂತ್ರಗಳು ಮತ್ತು ತತ್ವಗಳು, ಕಲಿಕೆಯ ಪರಿಕಲ್ಪನೆ, ಕಲಿಕೆಯ ಸಿದ್ಧಾಂತಗಳ ಸಮರ್ಪಕತೆ, ಬೋಧನೆ ಮತ್ತು ಕಲಿಕೆಯ ನಡುವಿನ ಸಂಬಂಧ, ಬೋಧನೆಯ ಸಿದ್ಧಾಂತಗಳು ಮತ್ತು ತತ್ವಗಳ ಐಕ್ಯತೆ ಹಾಗೂ ಶೈಕ್ಷಣಿಕ ಉದ್ದೇಶಗಳ ಅತ್ಯುನ್ನತೆಯನ್ನು ಸಾಧಿಸುವುದಕ್ಕಾಗಿ ಕಲಿಕೆ ಮುಂತಾದವುಗಳನ್ನು ಚರ್ಚಿಸಲು ಪ್ರಯತ್ನಿಸುತ್ತದೆ.

**ಶೈಕ್ಷಣಿಕ ಗುರಿಗಳು ಮತ್ತು ಉದ್ದೇಶಗಳು:** ಶೈಕ್ಷಣಿಕ ತಂತ್ರ ಶಾಸ್ತ್ರವು ಸಮುದಾಯದ ಶೈಕ್ಷಣಿಕ ಅಗತ್ಯತೆಗಳು ಮತ್ತು ಆಕಾಂಕ್ಷೆಗಳ ಗುರುತಿಸುವಿಕೆ, ಈ ಅಗತ್ಯತೆಗಳು ಮತ್ತು ಆಕಾಂಕ್ಷೆಗಳನ್ನು ತೃಪ್ತಿಪಡಿಸುವುದಕ್ಕಾಗಿ ಲಭ್ಯವಿರುವ ಸಂಪನ್ಮೂಲಗಳ ಸಮೀಕ್ಷೆ, ವಿಶಾಲ ಶೈಕ್ಷಣಿಕ ಉದ್ದೇಶಗಳನ್ನು ಹೇಳುವುದು. ವಿಶಾಲ ಉದ್ದೇಶಗಳನ್ನು ನಿರ್ದಿಷ್ಟ ವರ್ಗಕೋಣೆಯ ಬೋಧನೆ ಮತ್ತು ಕಲಿಕೆಯ ಉದ್ದೇಶಗಳ ವಿಶ್ಲೇಷಣೆ, ವರ್ತನೆಯ ಪದಗಳಲ್ಲಿ ಈ ಉದ್ದೇಶಗಳ ನಿರ್ದಿಷ್ಟಪಡಿಸುವಿಕೆ ಮೊದಲಾದವುಗಳನ್ನು ಕುರಿತು ಚರ್ಚಿಸಲು ಪ್ರಯತ್ನಿಸುತ್ತದೆ.

**ಪಠ್ಯಕ್ರಮದ ವಿಕಾಸ:** ಶೈಕ್ಷಣಿಕ ತಂತ್ರಶಾಸ್ತ್ರವು ಪ್ರಸ್ತಾವಿಕ ಉದ್ದೇಶಗಳ ಸಾಧನೆಗಾಗಿ ಯೋಗ್ಯಪಠ್ಯ ಕ್ರಮ ರೂಪಿಸಲು ಮಾರ್ಗದರ್ಶನ ನೀಡುತ್ತದೆ. ಅದು ಯೋಗ್ಯವಾದ ಕಲಿಕೆಯ ಅನುಭವಗಳ ಅಥವಾ ವಿಷಯ ವಸ್ತುಗಳ ಆಯ್ಕೆಯ ಮಾರ್ಗ ಮತ್ತು ಸಾಧನಗಳನ್ನು ವಿವರಿಸುವುದು, ಯೋಗ್ಯವಾದ ಚೌಕಟ್ಟಿನಲ್ಲಿ ಈ ವಿಷಯ ವಸ್ತುಗಳ ಸಂಘಟನೆ ಮತ್ತು ಅತಿ ಪರಿಣಾಮಕಾರಿ

Digitised by Bharatavani, CIIL

ಬೋಧನೆಗಳನ್ನು ವ್ಯವಸ್ಥಿತಗೊಳಿಸುವುದು ಮತ್ತು ಉದ್ದೇಶಗಳು, ಸಾಧನಗಳು, ಸಾಮಗ್ರಿಗಳು ಹಾಗೂ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮದ ಯೋಗ್ಯತೆಯನ್ನು ವಿಶ್ಲೇಷಿಸುತ್ತದೆ.

**ಬೋಧನಾ ಕಲಿಕಾ ಸಾಮಗ್ರಿಯ ವಿಕಾಸ:** ಶೈಕ್ಷಣಿಕ ತಂತ್ರಶಾಸ್ತ್ರದ ಕ್ಷೇತ್ರವು ಪ್ರಸ್ತಾವಿಕ ಉದ್ದೇಶಗಳು, ವಿನ್ಯಾಸಗೊಳಿಸಿದ ಪಠ್ಯಕ್ರಮ ಮತ್ತು ಲಭ್ಯವಿರುವ ಸಂಪನ್ಮೂಲಗಳ ಲಭ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಯೋಗ್ಯ ಬೋಧನಾ–ಕಲಿಕಾ ಸಾಮಗ್ರಿ ಅಭಿವೃದ್ಧಿಪಡಿಸುವುದು ಮತ್ತು ಉತ್ಪಾದಿಸುವುದರೊಂದಿಗೆ ಸಂಬಂಧಿಸಿದೆ.

**ಶಿಕ್ಷಕರ ಸಿದ್ಧತೆ ಅಥವಾ ಶಿಕ್ಷಕರ ತರಬೇತಿ:** ಶಿಕ್ಷಕನು ಯಾವುದೇ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯ ಕೇಂದ್ರ ಬಿಂದು. ಆದ್ದರಿಂದ ಶೈಕ್ಷಣಿಕ ತಂತ್ರಶಾಸ್ತ್ರವು, ಶಿಕ್ಷಕನ ತರಬೇತಿಯಲ್ಲಿ ಹೆಚ್ಚಿನ ಕಾಳಜಿಯನ್ನು ವಹಿಸುತ್ತದೆ. ಈ ಉದ್ದೇಶಕ್ಕಾಗಿ ಶೈಕ್ಷಣಿಕ ತಂತ್ರ ಶಾಸ್ತ್ರವು ಬೋಧನಾ ಮಾದರಿಗಳು, ಅಣು ಬೋಧನೆ, ತಂಡ ಬೋಧನೆ, ಶಿಕ್ಷಕ ಪ್ರಭಾವಶೀಲತೆ, ಶಿಕ್ಷಕನ ವರ್ತನೆಯ ಬದಲಾವಣೆ, ವರ್ಗಕೋಣೆಯ ಆಂತರಿಕ ಸಂಬಂಧ ಮತ್ತು ಅದರ ವಿಶ್ಲೇಷಣೆ ಮುಂತಾದ ಘಟಕಗಳನ್ನು ಒಳಗೊಂಡಿದೆ.

**ಬೋಧನೆ – ಕಲಿಕೆಯ ವ್ಯೂಹಗಳು ಮತ್ತು ಕೌಶಲ್ಯಗಳ ಆಯ್ಕೆ ಮತ್ತು ವಿಕಾಸ:** ಈ ಅಂಶಗಳನ್ನು ಬೋಧನೆ – ಕಲಿಕೆಯ ಕಾರ್ಯದ ಕೇಂದ್ರ ಸಮಸ್ಯೆಗಳನ್ನು ಒಳಗೊಂಡಿದೆ. ಇಲ್ಲಿ ಶೈಕ್ಷಣಿಕ ತಂತ್ರಶಾಸ್ತ್ರವು ಬೋಧನೆಯ ಯೋಗ್ಯವಾದ ವ್ಯೂಹಗಳು ಹಾಗೂ ಕೌಶಲಗಳನ್ನು ಸಂಶೋಧಿಸುವ ಮಾರ್ಗ ಮತ್ತು ಸಾಧನಗಳನ್ನು ವಿವರಿಸಲು ಪ್ರಯತ್ನಿಸುವುದು.

**ಸಮರ್ಪಕವಾದ ದೃಕ್ – ಶ್ರವಣೋಪಕರಣಗಳ ವಿಕಾಸ, ಆಯ್ಕೆ ಮತ್ತು ಉಪಯೋಗ:** ಶೈಕ್ಷಣಿಕ ತಂತ್ರಶಾಸ್ತ್ರವು ಶೈಕ್ಷಣಿಕ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುವ ಎಲ್ಲಾ ಪ್ರಕಾರದ ದೃಕ್ – ಶ್ರವಣೋಪಕರಣಗಳನ್ನು ಕುರಿತು ಚರ್ಚಿಸುತ್ತದೆ. ಬೋಧನೆ–ಕಲಿಕೆಯ ಸನ್ನಿವೇಶಗಳಿಗೆ ಅವುಗಳ ಆಯ್ಕೆ, ಅವುಗಳ ಅಭಿವೃದ್ಧಿಪಡಿಸುವಿಕೆ ಮತ್ತು ಉತ್ಪಾದನೆ, ಅವುಗಳನ್ನು ಬಳಸುವಾಗ ಎದುರಾಗುವ ಸಮಸ್ಯೆಗಳು, ಮಾಧ್ಯಮಗಳ ನಿರೂಪಣೆ ಮತ್ತು ಮಾಹಿತಿಯ ಪ್ರಸಾರ, ಸಂಗ್ರಹಣೆ ಮತ್ತು ಪುನರ್ ಪ್ರಸಾರ ಮತ್ತು ಅವುಗಳ ಪರಿಣಾಮದ ಮೌಲ್ಯಮಾಪನ ಮತ್ತು ಪರಿಣಾಮಕಾರಿ ಉಪಯುಕ್ತತೆ ಇತ್ಯಾದಿ ಕುರಿತು ಚರ್ಚಿಸುವುದು.

**ಯಂತ್ರಾಂಶ (Hardware) ಮತ್ತು ಸಮೂಹ ಮಾಧ್ಯಮಗಳ ಪರಿಣಾಮಕಾರಿ ಉಪಯೋಗ:** ವಿವಿಧ ಸೂಕ್ಷ್ಮವಾದ ಸಾಧನಗಳು, ಸಲಕರಣೆಗಳು, ಉಪಕರಣಗಳು ಮತ್ತು ಸಂಪರ್ಕ ಸಾಧನಗಳನ್ನು ಯಾಂತ್ರೀಕರಣ ಮತ್ತು ವಿದ್ಯುನ್ಮಾನಗಳ ಕ್ರಾಂತಿಯಿಂದಾಗಿ ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸಲು ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದಕ್ಕಾಗಿ ಪರಿಣಾಮಕಾರಿ ಪಾತ್ರ ವಹಿಸಲು ತರಲಾಗಿದೆ. ಶೈಕ್ಷಣಿಕ ತಂತ್ರಶಾಸ್ತ್ರವು ಅವುಗಳ ನಿರ್ದಿಷ್ಟ ಕಾರ್ಯಗಳು, ಬೋಧನೆ ಕಲಿಕೆಯ ಸನ್ನಿವೇಶದಲ್ಲಿ ಅವುಗಳ ಅನ್ವಯ, ಅವುಗಳ ಆಯ್ಕೆ, ಕಾಪಾಡುವುದು, ಅವುಗಳ ತಯಾರಿಕೆ, ಅಭಿವೃದ್ಧಿಪಡಿಸುವಿಕೆ, ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದಲ್ಲಿ ಅವುಗಳ ಉಪಯೋಗ ಕುರಿತು ಚರ್ಚಿಸುವುದು.

**ಶಿಕ್ಷಣದ ಉಪವ್ಯವಸ್ಥೆಯ ಪರಿಣಾಮಕಾರಿ ಉಪಯೋಗಕ್ಕಾಗಿ ಕಾರ್ಯ ನಿರ್ವಹಿಸುವುದು:** ಶೈಕ್ಷಣಿಕ ತಂತ್ರಶಾಸ್ತ್ರವು ಶಿಕ್ಷಣವನ್ನು ಒಂದು ವ್ಯವಸ್ಥೆಯೆಂದು ಪರಿಗಣಿಸಿದೆ. ಅದು ಶೈಕ್ಷಣಿಕ ಉದ್ದೇಶಗಳ ಸಾಧನೆಗೆ ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ.

**ಅವಶ್ಯಕ ಪ್ರತಿಪುಷ್ಟೀಕರಣ ಒದಗಿಸುವುದು ಮತ್ತು ಮೌಲ್ಯ ಮಾಪನದ ಮುಖಾಂತರ ನಿಯಂತ್ರಿಸುವುದು:** ಶೈಕ್ಷಣಿಕ ತಂತ್ರಶಾಸ್ತ್ರವು ಬೋಧನೆ–ಕಲಿಕೆಯ ಚಟುವಟಿಕೆಗಳ ಫಲಗಳ ನಿರಂತರ ಮೌಲ್ಯಮಾಪನದ ಪ್ರಕ್ರಿಯೆಗೆ ಯೋಗ್ಯವಾದ ಸಾಧನಗಳನ್ನು ಯೋಚಿಸುವುದು ಮತ್ತು ಕಲಿಕೆ ಮತ್ತು ಬೋಧನೆಯ ಪ್ರಕ್ರಿಯೆಯನ್ನು ಸಮರ್ಪಕವಾದ ನಿಯಂತ್ರಿಸುವ ಕಾರ್ಯಕ್ಕೆ ಸಂಬಂಧಿಸಿದುದಾಗಿದೆ.

**ಶೈಕ್ಷಣಿಕ ತಂತ್ರಶಾಸ್ತ್ರ ಮತ್ತು ಬೋಧನಾ ತಂತ್ರಶಾಸ್ತ್ರ:** (Educational Technology and Instructional Technology)

ಈ ಎರಡೂ ಪದಗಳನ್ನು ಒಂದೇ ಅರ್ಥದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಶೈಕ್ಷಣಿಕ ತಂತ್ರಶಾಸ್ತ್ರ ಅತಿ ಸಮಗ್ರತೆ ಮತ್ತು ವಿಶಾಲ ತಳಹದಿಯ ಪರಿಕಲ್ಪನೆಯಾಗಿದೆ. ಬೋಧನಾ ತಂತ್ರಶಾಸ್ತ್ರವು ಶೈಕ್ಷಣಿಕ ತಂತ್ರಶಾಸ್ತ್ರದ ಮುಖ್ಯ ವ್ಯವಸ್ಥೆಯ ಉಪ ವ್ಯವಸ್ಥೆಯಾಗಿದೆ. ಶಿಕ್ಷಣವು ಸಮಗ್ರತೆಯ ಪ್ರಕ್ರಿಯೆಯಾಗಿದೆ ಮತ್ತು ಶಿಕ್ಷಣದ ಗುರಿಗಳನ್ನು ಸಾಧಿಸಲು ಉಪಯೋಗಿಸುವ ಅನೇಕ ಸಾಧನಗಳಲ್ಲಿ ಬೋಧನೆ ಒದಗಿಸುವುದು ಶೈಕ್ಷಣಿಕ ತಂತ್ರಶಾಸ್ತ್ರವಾಗಿದೆ. ಶೈಕ್ಷಣಿಕ ತಂತ್ರಶಾಸ್ತ್ರದಲ್ಲಿ ಬೋಧನಾ ತಂತ್ರಶಾಸ್ತ್ರವೂ ಒಂದು ಭಾಗವಾಗಿದೆ.

ಸಂಕುಚಿತಾರ್ಥದಲ್ಲಿ ಬೋಧನಾ ತಂತ್ರಶಾಸ್ತ್ರವು ಕಲಿಕೆಯನ್ನು ಪರಿಣಾಮಕಾರಿಗೊಳಿಸಲು ನಿಶ್ಚಿತ ರೀತಿಯ ಅನುಕ್ರಿಯೆಗಳನ್ನು ಉಂಟು ಮಾಡಲು ವಿದ್ಯಾರ್ಥಿಗೆ ಸಮರ್ಪಕವಾದ ಬೋಧನೆಯನ್ನು ನಿರ್ಧರಿಸುವುದಕ್ಕೆ ಮತ್ತು ಒದಗಿಸುವುದಕ್ಕೆ ಸಂಬಂಧಿಸಿದುದಾಗಿದೆ. ಇನ್ನೊಂದರ್ಥದಲ್ಲಿ ಬೋಧನಾ ತಂತ್ರಶಾಸ್ತ್ರವು ಪ್ರಸ್ತಾವಿತ ಉದ್ದೇಶಗಳನ್ನು ಸಾಧಿಸಲು ಬೋಧನೆ ಕಲಿಕೆಯ ಸನ್ನಿವೇಶವನ್ನು ಒದಗಿಸಿ ಮಾಧ್ಯಮ, ವಿಧಾನಗಳು ಮತ್ತು ಸಾಮಗ್ರಿಗಳನ್ನು ಉಪಯೋಗಿಸುವುದನ್ನು ನಿರ್ಧರಿಸುವುದಾಗಿದೆ. ಆದರೆ ಶೈಕ್ಷಣಿಕ ತಂತ್ರಶಾಸ್ತ್ರವು ಇಡೀ ಬೋಧನೆ–ಕಲಿಕಾ ಪ್ರಕ್ರಿಯೆಯ ಫಲಿತಾಂಶಗಳನ್ನು ಸಾಧಿಸುವುದಕ್ಕೆ ಶಿಕ್ಷಣದ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಲಭ್ಯವಿರುವ ಮಾನವ ಮತ್ತು ಮಾನವೇತರ ಸಂಪನ್ಮೂಲಗಳ ವೈಜ್ಞಾನಿಕ ಉಪಯೋಗದೊಂದಿಗೆ ಸಂಬಂಧಿಸಿದುದಾಗಿದೆ.

**ಶೈಕ್ಷಣಿಕ ತಂತ್ರಶಾಸ್ತ್ರದ ಪ್ರಕಾರಗಳು: (Types of Educational Technology)** ಎ.ಎ. ಲ್ಯೂಮ್ಸ್ ಡೇಸ್ (1964) ರವರು ಶೈಕ್ಷಣಿಕ ತಂತ್ರಜ್ಞಾನವನ್ನು ಮೂರು ಪ್ರಕಾರಗಳನ್ನಾಗಿ ವರ್ಗೀಕರಿಸಿದ್ದಾರೆ.

1. ಶೈಕ್ಷಣಿಕ ತಂತ್ರಶಾಸ್ತ್ರ I : ಅಥವಾ ಯಂತ್ರಾಂಶ ತಂತ್ರಜ್ಞಾನ (Hardware Technology)
2. ಶೈಕ್ಷಣಿಕ ತಂತ್ರಶಾಸ್ತ್ರ II : ಅಥವಾ ತಂತ್ರಾಂಶ ತಂತ್ರಜ್ಞಾನ (Software Technology)
3. ಶೈಕ್ಷಣಿಕ ತಂತ್ರಶಾಸ್ತ್ರ III : ಅಥವಾ ವ್ಯವಸ್ಥೆ ತಂತ್ರಜ್ಞಾನ (Systems Technology)

**1. ಶೈಕ್ಷಣಿಕ ತಂತ್ರಶಾಸ್ತ್ರ I : ಅಥವಾ ತಂತ್ರಾಂಶ ತಂತ್ರಜ್ಞಾನ**

ಶೈಕ್ಷಣಿಕ ತಂತ್ರಶಾಸ್ತ್ರದ ಈ ಪ್ರಕಾರದ ಶೈಕ್ಷಣಿಕ ತಂತ್ರಶಾಸ್ತ್ರದ ಹುಟ್ಟು ಭೌತಶಾಸ್ತ್ರಗಳು ಮತ್ತು ತಾಂತ್ರಿಕ ಶಾಸ್ತ್ರಗಳಲ್ಲಿ ಆಯಿತು. ಅದು ಸೇವೆಯ ಪರಿಕಲ್ಪನೆಯ ಮೇಲೆ ಆಧರಿಸಿದೆ. ಅದುವೇ ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಉಪಯೋಗಿಸುವುದು. ಒಂದು ದೊಡ್ಡ ಕೊಠಡಿಯಲ್ಲಿ ಶಿಕ್ಷಕನು ಬೋಧಿಸುವಾಗ ಎಲ್ಲರಿಗೂ ತನ್ನ ಧ್ವನಿಯು ಕೇಳಿಸಲೆಂದು ಮೈಕ್ರೋಫೋನನ್ನು ಉಪಯೋಗಿಸಬಹುದು. ಶಿಕ್ಷಕ ಬೋಧನೆಯನ್ನು ಪರಿಣಾಮಕಾರಿಗೊಳಿಸಲು ಶೈಕ್ಷಣಿಕ ತಂತ್ರಶಾಸ್ತ್ರದ ಈ ಪ್ರಕಾರವನ್ನು

Digitised by Bharatavani, CIIL

ಉಪಯೋಗಿಸಬಹುದು. ಈ ಅರ್ಥದಲ್ಲಿ ದೃಕ್ – ಶ್ರವಣೋಪಕರಣಗಳಾದ ಚಿತ್ರಪಟಗಳು, ಮಾದರಿಗಳು, ಸ್ಲೈಡ್‌ಗಳು ಹಾಗೂ ಸೂಕ್ಷ್ಮವಾದ ಉಪಕರಣಗಳೂ ಮತ್ತು ದೂರದರ್ಶನ, ಚಲನಚಿತ್ರಗಳು, ಪ್ರಕ್ಷೇಪಕಗಳು, ಧ್ವನಿಮುದ್ರಿಕೆ, ವೀಡಿಯೋ, ಬೋಧನಾ ಯಂತ್ರಗಳು ಮತ್ತು ಗಣಕಗಳು ಮುಂತಾದವುಗಳೆಲ್ಲವನ್ನು ಉಪಯೋಗಿಸಬಹುದು. ಶೈಕ್ಷಣಿಕ ಉದ್ದೇಶಗಳಿಗಾಗಿ ಸಂಪರ್ಕ ಜಗತ್ತಿನಲ್ಲಿ ತಾಂತ್ರಿಕ ಮುನ್ನಡೆಯ ಸಾಧನಗಳು ಉಪಯೋಗಿಯಾಗಿವೆ. ಇಂಥ ಯಾಂತ್ರಿಕ ಮತ್ತು ತಾಂತ್ರಿಕ ಕ್ರಾಂತಿಯು ಬೋಧನಾ–ಕಲಿಕಾ ಪ್ರಕ್ರಿಯೆಗಳನ್ನು ಬಹುಮಟ್ಟಿಗೆ ಯಾಂತ್ರೀಕರಣಗೊಳಿಸಿದೆ. ಸಮೂಹ ಮಾಧ್ಯಮಗಳ ಪ್ರಗತಿಯಿಂದಾಗಿ ಜನ ಸಮೂಹಕ್ಕೆ ಶೈಕ್ಷಣಿಕ ಲಾಭವನ್ನು ಸುಲಭವಾಗಿ ಮತ್ತು ಮಿತವ್ಯಯಕಾರಿಯಾಗಿ ಮುಟ್ಟಿಸಲು ಸಾಧ್ಯವಾಗಿದೆ. ಈ ರೀತಿಯಾಗಿ ಶಿಕ್ಷಣದಲ್ಲಿ ಯಂತ್ರಾಂಶ ತಂತ್ರಜ್ಞಾನ ಶೈಕ್ಷಣಿಕ ಸಾಧನಗಳ ನೈಪುಣ್ಯತೆಯನ್ನು ಸುಧಾರಿಸಿದೆ ಹಾಗೂ ಶಿಕ್ಷಣದ ವೆಚ್ಚವನ್ನು ಕಡಿಮೆಗೊಳಿಸಿದೆ. ಆದಾಗ್ಯೂ ಈ ಪ್ರಕಾರದ ತಂತ್ರಶಾಸ್ತ್ರ ಶಿಕ್ಷಣವನ್ನು ಹೊರಗಿನಿಂದ ಪ್ರವೇಶಿಸಲು ಪ್ರಯತ್ನಿಸಿದೆ. ಅದು ಶಿಕ್ಷಣ ಪ್ರಕ್ರಿಯೆಯಲ್ಲಿ ಸಂಮಿಳನಗೊಳ್ಳದೆ, ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತದೆ. ಯಂತ್ರಾಂಶ ತಂತ್ರಜ್ಞಾನದ ಬಹುತೇಕ ಸಾಮಗ್ರಿ ಮತ್ತು ಉಪಕರಣಗಳು ಮೂಲತಃ ಶಿಕ್ಷಣವಲ್ಲದ ಕ್ಷೇತ್ರಕ್ಕೆ ಸಂಬಂಧಿಸಿದವುಗಳಾಗಿವೆ. ಅವುಗಳನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಆಮದು ಮಾಡಿಕೊಂಡು ಉಪಯೋಗಿಸ ಲಾಗುತ್ತದೆ.

### 2. ಶೈಕ್ಷಣಿಕ ತಂತ್ರಶಾಸ್ತ್ರ II ಅಥವಾ ತಂತ್ರಾಂಶ ತಂತ್ರಜ್ಞಾನ

ಶೈಕ್ಷಣಿಕ ತಂತ್ರಶಾಸ್ತ್ರದ ಮೊದಲನೆಯ ಪ್ರಕಾರವು ಭೌತಶಾಸ್ತ್ರ ಮತ್ತು ಅನ್ವಯಿಕ ಇಂಜಿನಿಯರಿಂಗ್‌ಗಳಿಂದ ಜನಿಸಿದರೆ, ಶೈಕ್ಷಣಿಕ ತಂತ್ರಶಾಸ್ತ್ರದ ಎರಡನೆಯ ಪ್ರಕಾರವು ವರ್ತನ ಶಾಸ್ತ್ರಗಳ ಮತ್ತು ಕಲಿಕೆಯ ಮನೋವಿಜ್ಞಾನಕ್ಕೆ ಸಂಬಂಧಿಸಿದ ಅನ್ವಯಿಕ ಅಂಶಗಳಿಂದ ಜನಿಸಿದೆ. ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ವರ್ತನೆಯ ಬದಲಾವಣೆಗಳನ್ನು ತರಲಿಕ್ಕೆ ತಂತ್ರಜ್ಞಾನವನ್ನು ಒದಗಿಸುವುದು ಮತ್ತು ನಿರ್ದಿಷ್ಟ ಬೋಧನಾ ಪದ್ಧತಿ, ಬೋಧನಾ ವರ್ತನೆ ಮತ್ತು ವರ್ತನೆಯ ಪರಿವರ್ತನೆಯ ಸಾಧನಗಳನ್ನು ರೂಪಿಸುವ ಮುಖಾಂತರ ಶಿಕ್ಷಣದ ಒಳಿತಿಗಾಗಿ ಈ ಪ್ರಕಾರ ಸೇವೆ ಸಲ್ಲಿಸುತ್ತದೆ. ಈ ಅರ್ಥದಲ್ಲಿ ಶೈಕ್ಷಣಿಕ ತಂತ್ರಶಾಸ್ತ್ರದ ಎರಡನೆಯ ಪ್ರಕಾರವನ್ನು ಕೆಲವು ಸಾರಿ ಬೋಧನಾ ತಂತ್ರಶಾಸ್ತ್ರ, ಕಲಿಸುವಿಕೆಯ ತಂತ್ರಶಾಸ್ತ್ರ ಅಥವಾ ವರ್ತನೆಯ ತಂತ್ರಶಾಸ್ತ್ರವೆಂದು ಕರೆಯುತ್ತಾರೆ.

ಕಲಿಕೆಯ ಸಿದ್ಧಾಂತಗಳಿಂದ ಜನಿಸಿದ ಈ ಪ್ರಕಾರದ ತಂತ್ರಶಾಸ್ತ್ರವು ಸೂಕ್ತವಾದ ಬೋಧನೆ–ಕಲಿಕಾ ಸಾಮಗ್ರಿ, ಬೋಧನೆ–ಕಲಿಕೆಯ ವ್ಯೂಹಗಳು, ಮೌಲ್ಯಮಾಪನದ ತಂತ್ರಗಳ ಉತ್ಪಾದನೆ, ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಗುರಿ ಸಾಧನೆ ಫಲಿತಾಂಶಗಳಿಗಾಗಿ ಪ್ರಕ್ರಿಯಾ ಕೇಂದ್ರಿತ ತಂತ್ರಗಳನ್ನು ಅನ್ವಯಿಸಲಿಕ್ಕೆ ಪ್ರಯತ್ನಿಸುವುದು.

ಇನ್ನೊಂದು ರೀತಿಯಲ್ಲಿ ಯಂತ್ರಾಂಶವು ಹೆಚ್ಚಾಗಿ ದೃಕ್–ಶ್ರವಣ ಸಾಮಗ್ರಿಯ ಉತ್ಪಾದನೆ ಮತ್ತು ಉಪಯೋಗಕ್ಕೆ ಸಂಬಂಧಿಸಿದೆ ಮತ್ತು ಸೂಕ್ಷ್ಮವಾದ ಸಲಕರಣೆಗಳು, ಸಣ್ಣ ಸಲಕರಣೆಗಳು ಹಾಗೂ ಸಮೂಹ ಮಾಧ್ಯಮಗಳು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ಸಹಾಯಕವಾಗುತ್ತದೆ. ಬೋಧನೆ ಮತ್ತು ಕಲಿಕೆಗಳನ್ನು ಸುಗಮಗೊಳಿಸುತ್ತವೆ.

### ಯಂತ್ರಾಂಶ ಮತ್ತು ತಂತ್ರಾಂಶಗಳ ಸಾಮ್ಯತೆಗಳು

- ಎರಡೂ ರೀತಿಯ ತಂತ್ರಜ್ಞಾನಗಳು ಕಲಿಕೆ ಮತ್ತು ಕಲಿಸುವಿಕೆಗೆ ಉಪಯುಕ್ತ.
- ಎರಡೂ ರೀತಿಯ ತಂತ್ರಜ್ಞಾನಗಳು ಶೈಕ್ಷಣಿಕ ತಂತ್ರಶಾಸ್ತ್ರದ ಅವಿಭಾಜ್ಯ ಅಂಗಗಳಾಗಿವೆ.
- ಪಠ್ಯಕ್ರಮದ ವಿನ್ಯಾಸ, ಬೋಧನಾ ಪ್ರಕ್ರಿಯೆ, ಶಿಕ್ಷಣದ ಗುರಿ ಸಾಧಿಸುವಲ್ಲಿ ಎರಡೂ ರೀತಿಯ ತಂತ್ರಜ್ಞಾನಗಳು ಮಹತ್ತರ ಪಾತ್ರ ವಹಿಸುತ್ತವೆ.
- ಇವುಗಳು ವಿನೂತನವಾಗಿದ್ದು ಸರ್ವರಿಗೂ ಸಮಾನಾವಕಾಶಗಳನ್ನು ಕಲ್ಪಿಸಿಕೊಡುತ್ತವೆ.
- ಶಿಕ್ಷಣದ ಗುರಿ ಮತ್ತು ಉದ್ದೇಶಗಳ ಸಾಧನೆಗಾಗಿ ಎರಡೂ ರೀತಿಯ ತಂತ್ರಜ್ಞಾನಗಳು ಅನಿವಾರ್ಯ ಸಾಧನಗಳಾಗಿವೆ.
- ಶೈಕ್ಷಣಿಕ ರಂಗದಲ್ಲಿರುವ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ಇವು ಸಹಾಯಕವಾಗಿವೆ.

### 3. ಶೈಕ್ಷಣಿಕ ತಂತ್ರಜ್ಞಾನ–III ಅಥವಾ ವ್ಯವಸ್ಥೆ ತಂತ್ರಜ್ಞಾನ (Systems Technology)

ಶೈಕ್ಷಣಿಕ ತಂತ್ರಶಾಸ್ತ್ರದ ಮೂರನೆಯ ಪ್ರಕಾರವು ವ್ಯವಸ್ಥೆಗಳ ಇಂಜಿನಿಯರಿಂಗ್‌ಗೆ ಸಂಬಂಧಿಸಿದುದಾಗಿದೆ. ಅದರ ಹುಟ್ಟು ಕಂಪ್ಯೂಟರ್ ವಿಜ್ಞಾನದಿಂದ ಆಗಿದೆ. ಅದು ಶಿಕ್ಷಣ ತಂತ್ರಶಾಸ್ತ್ರದಲ್ಲಿಯ ಇತ್ತೀಚಿನ ಪರಿಕಲ್ಪನೆಯನ್ನು ಪ್ರತಿನಿಧಿಸುತ್ತದೆ. ಈ ಕ್ರಮದಲ್ಲಿ ಶೈಕ್ಷಣಿಕ ತಂತ್ರಶಾಸ್ತ್ರವು ನಿರ್ದಿಷ್ಟ ಉದ್ದೇಶಗಳ ಸಾಧನೆಗೆ ಶಿಕ್ಷಣದ ಒಟ್ಟು ಪ್ರಕ್ರಿಯೆಯ ವಿನ್ಯಾಸ, ಕಾರ್ಯಾಚರಣೆ ಮತ್ತು ಮೌಲ್ಯಮಾಪನಕ್ಕೆ ವ್ಯವಸ್ಥಿತ ಮಾರ್ಗವನ್ನು ಪ್ರತಿಪಾದಿಸುತ್ತದೆ. ವ್ಯವಸ್ಥೆ ಉಪಕ್ರಮದ ಅರ್ಥ ಶೈಕ್ಷಣಿಕ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮತ್ತು ಮಿತವ್ಯಯಕಾರಿ ಸಂಘಟಿಸಲಿಕ್ಕೆ ಶೈಕ್ಷಣಿಕ ಉದ್ದೇಶಗಳನ್ನು ಮತ್ತು ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಾಗಿದೆ.

ಈ ವ್ಯವಸ್ಥಾ ಉಪಕ್ರಮವು ಶಿಕ್ಷಣವನ್ನು ಒಂದು ವ್ಯವಸ್ಥೆಯನ್ನಾಗಿ ಪರಿಗಣಿಸುತ್ತದೆ. ವ್ಯವಸ್ಥೆಯು ನಿಗದಿಪಡಿಸಿದ ಉದ್ದೇಶಗಳನ್ನು ಈಡೇರಿಸಲು ಉದ್ದೇಶಿತ ನಿಶ್ಚಿತ ಫಲಿತಗಳನ್ನು ಉತ್ಪಾದಿಸಲಿಕ್ಕೆ, ಪ್ರಕ್ರಿಯೆ ವಿನ್ಯಾಸಗೊಳಿಸಲಿಕ್ಕೆ ಬಳಸಿರುವ ವಸ್ತುಗಳ ವಿನ್ಯಾಸವನ್ನು ಹೊಂದಿರುತ್ತದೆ. ಶೈಕ್ಷಣಿಕ ತಂತ್ರಶಾಸ್ತ್ರದ ಈ ಪ್ರಕಾರದ ಅನ್ವಯವು ಶಿಕ್ಷಣ ವ್ಯವಸ್ಥೆಯನ್ನು ಇಡಿಯಾಗಿ ತೆಗೆದುಕೊಳ್ಳುತ್ತದೆ ಮತ್ತು ಅದರ ಆತಂಕ ಸಂಬಂಧಗಳನ್ನು, ಭಾಗಗಳ ಕಾರ್ಯ ಮತ್ತು ನಿರ್ದಿಷ್ಟಪಡಿಸಿದ ಉದ್ದೇಶಗಳ ಅಗತ್ಯತೆಗಳನ್ನು ನಿಶ್ಚಿತ ಪಡಿಸುತ್ತದೆ. ಒಂದು ವೇಳೆ ವ್ಯವಸ್ಥೆ ನಿರ್ದಿಷ್ಟಪಡಿಸಿದ ಉದ್ದೇಶಗಳನ್ನು ಪೂರೈಸದಿದ್ದರೆ ಅದನ್ನು ಬದಲಾಯಿಸಲಾಗುವುದು. ಅದರ ಪರಿಣಾಮವಾಗಿ ವಿವಿಧ ಬದಲಿ ವ್ಯೂಹಗಳು ಮತ್ತು ಕೌಶಲಗಳು ಅವು ವಿನ್ಯಾಸಗೊಂಡು ಕಾರ್ಯಾಚರಣೆಗೆ ಉಪಯೋಗಿಸಲ್ಪಡುತ್ತವೆ.

ವ್ಯವಸ್ಥಾ ಉಪಕ್ರಮದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಸಿಬ್ಬಂದಿ, ಯಂತ್ರ ಮತ್ತು ಮಾಧ್ಯಮಗಳ ವಿವಿಧ ಪಾತ್ರಗಳನ್ನು ನಿರಂತರವಾಗಿ ತುಲನೆ ಮಾಡುತ್ತದೆ ಮತ್ತು ನಿಗದಿಪಡಿಸಿದ ಉದ್ದೇಶಗಳಿಗೆ ಸಂಬಂಧಿಸಿದಂತೆ ಸಮಂಜಸವಾದ ಬೋಧನಾ ವಿನ್ಯಾಸ ಮತ್ತು ವ್ಯೂಹವನ್ನು ವಿಕಾಸಗೊಳಿಸಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡುತ್ತದೆ.

### ಶಿಕ್ಷಣದಲ್ಲಿ ತಂತ್ರಶಾಸ್ತ್ರದ ಪಾತ್ರ (Role of Technology in Education)

'ಶಿಕ್ಷಣದಲ್ಲಿ ತಂತ್ರಶಾಸ್ತ್ರ' ಎಂಬ ಪದವು ಶೈಕ್ಷಣಿಕ ಉದ್ದೇಶಗಳಿಗಾಗಿ ತಾಂತ್ರಿಕ ಮುನ್ನಡೆಗಳಾದ ವಿವಿಧ ಉಪಕರಣಗಳು, ಸಾಮಗ್ರಿಗಳು ಮತ್ತು

Digitised by Bharatavani, CIIL

ಯಂತ್ರಗಳನ್ನು ಉಪಯೋಗಿಸುವುದಕ್ಕೆ ಸಂಬಂಧಿಸಿದುದಾಗಿದೆ. ಇದು ದೃಕ್-ಶ್ರವಣ ಉಪಕರಣಗಳು ಯಂತ್ರಾಂಶಗಳು ಮತ್ತು ಸೂಕ್ಷ್ಮವಾದ ವಿದ್ಯುನ್ಮಾನ ಸಾಧನೆಗಳಾದ ಪ್ರಕ್ಷೇಪಕಗಳು, ಚಲನಚಿತ್ರಗಳು, ದೂರದರ್ಶನ, ಧ್ವನಿಮುದ್ರಿಕೆ, ಬೋಧನಾ ಯಂತ್ರಗಳು, ಟೆಲಿಟೆಕ್ಸ್ ಮತ್ತು ವೈಯಕ್ತಿಕ ಮತ್ತು ಸಮೂಹ ಕಲಿಕೆಗೆ ಕಂಪ್ಯೂಟರ್ ಸಹಾಯಿತ ಬೋಧನೆ (CAT) ಮುಂತಾದವುಗಳನ್ನು ಒಳಗೊಂಡಿದೆ.

ಶಿಕ್ಷಣದಲ್ಲಿ ತಂತ್ರಶಾಸ್ತ್ರ ಪದವು ಸಹ ಮಾನವ ಜನಾಂಗದ ಸೇವೆಯಲ್ಲಿ ವಿಜ್ಞಾನ ಅಥವಾ ಒಕ್ಕಲುತನದ ಸೇವೆಯಲ್ಲಿಯ ತಂತ್ರಶಾಸ್ತ್ರದಂತೆ ಸೇವಾ ಪರಿಕಲ್ಪನೆಯನ್ನು ಹೊಂದಿದೆ. ಈ ಅರ್ಥದಲ್ಲಿ ಶೈಕ್ಷಣಿಕ ತಂತ್ರಶಾಸ್ತ್ರವು ಶಿಕ್ಷಕರಿಗೆ ಈ ಕೆಳಗಿನ ತನ್ನ ಸೇವೆಗಳನ್ನು ಒದಗಿಸುತ್ತದೆ.

- ವಿವಿಧ ಪ್ರಕಾರದ ಉಪಕರಣಗಳು, ಸಲಕರಣೆಗಳು, ದೃಕ್-ಶ್ರವಣೋಪಕರಣ ಮತ್ತು ಸಮೂಹ ಮಾಧ್ಯಮಗಳ ಉದ್ದೇಶ ಮತ್ತು ಕಾರ್ಯಗಳನ್ನು ವಿವರಿಸುವುದು.

- ಹೊಸ ಬೋಧನ ಮಾಧ್ಯಮ ಮತ್ತು ಸಾಮಗ್ರಿಗಳನ್ನು ಉಪಯೋಗಿಸುವಲ್ಲಿ ಮತ್ತು ನಿರ್ವಹಣೆಯಲ್ಲಿ ತರಬೇತಿ ನೀಡುವುದು.

- ಔಪಚಾರಿಕ ಅಥವಾ ಅನೌಪಚಾರಿಕ ಶಿಕ್ಷಣದ ಗುರಿಗಳನ್ನು ಸಾಧಿಸಲು ವೈಯಕ್ತಿಕ ಮತ್ತು ಸಮೂಹ ಕಲಿಕೆಯ ಸಂದರ್ಭದಲ್ಲಿ ಈ ಉಪಕರಣಗಳನ್ನು ಮತ್ತು ಸಾಮಗ್ರಿಗಳ ಉಪಯೋಗಗಳನ್ನು ತೋರಿಸುವುದು.

ಶಿಕ್ಷಣದ ತಂತ್ರಶಾಸ್ತ್ರ ಅಥವಾ ಶೈಕ್ಷಣಿಕ ತಂತ್ರಶಾಸ್ತ್ರ ಪದದ ಅರ್ಥ ಮತ್ತು ಪರಿಕಲ್ಪನೆ ಶಿಕ್ಷಣದಲ್ಲಿ ತಂತ್ರಶಾಸ್ತ್ರದಂತೆ ಕೇವಲ ಸೇವೆಯ ಪಾತ್ರಕ್ಕೆ ಸೀಮಿತಗೊಂಡಿಲ್ಲ. ಶಿಕ್ಷಣದ ತಂತ್ರಶಾಸ್ತ್ರವು ಶಿಕ್ಷಣದ ಸಮಸ್ಯೆಗಳಿಗೆ ತಾಂತ್ರಿಕ ಅಥವಾ ವ್ಯವಸ್ಥಾ ಕ್ರಮದ ಮಹತ್ವವನ್ನು ತೋರಿಸುತ್ತದೆ.

**ಮಾಹಿತಿ ತಂತ್ರಶಾಸ್ತ್ರ (Information Technology)**

ಮಾಹಿತಿ ತಂತ್ರಶಾಸ್ತ್ರವು ಶಿಕ್ಷಣ ಕ್ಷೇತ್ರಕ್ಕೆ ಒಂದು ವಿಶೇಷವಾದ ಕೊಡುಗೆ. ಶಿಕ್ಷಣದ ಪ್ರಕ್ರಿಯೆಗಳಲ್ಲಿ ಕಂಪ್ಯೂಟರ್ ಬಳಕೆ ಹಾಗೂ ಮಾಹಿತಿ ಸಂಗ್ರಹಣೆಗಾಗಿ ಈ ತಂತ್ರಶಾಸ್ತ್ರವನ್ನು ಬಳಸಲಾಗುತ್ತದೆ. ಬೋಧನಾ, ಕಲಿಕೆ, ಮೌಲ್ಯಮಾಪನ, ಪ್ರತಿ-ಪುಷ್ಟೀಕರಣ ಮುಂತಾದ ಪ್ರಕ್ರಿಯೆಗಳನ್ನು ಹೆಚ್ಚು ಪರಿಣಾಮಕಾರಿಗೊಳಿಸಲು, ಮಾಹಿತಿ ಸಂಗ್ರಹಣೆ, ಸಂವಹನಕ್ಕಾಗಿ, ಕಚೇರಿಯ ವ್ಯವಹಾರಕ್ಕಾಗಿ, ಮುದ್ರಣಕ್ಕಾಗಿ, ಶೈಕ್ಷಣಿಕ ಸಂಶೋಧನೆಗಳನ್ನು ಕೈಗೊಳ್ಳಲು ಕಂಪ್ಯೂಟರ್‌ಗಳನ್ನು ಬಳಸಲಾಗುತ್ತದೆ. ಮಾಹಿತಿ ತಂತ್ರಶಾಸ್ತ್ರದಲ್ಲಿ ಇಂದು ಇ-ಕಲಿಕೆ, ಇ-ಬೋಧನೆ, ಇ-ಅಂಚೆ, ಅಂತರ್‌ಜಾಲ, ಇ-ಮೌಲ್ಯಮಾಪನ, ಇ-ಸಂವಹನ ಇತ್ಯಾದಿ ಪರಿಕಲ್ಪನೆಗಳು, ಇವುಗಳ ಬಳಕೆ ಹೆಚ್ಚಾಗಿದೆ. ಈ ತಂತ್ರಶಾಸ್ತ್ರದಿಂದ ಲಭ್ಯವಿರುವ ಮಾಹಿತಿ ಗ್ರಂಥಾಲಯ ವ್ಯವಸ್ಥೆ (Information Library System) ಶಿಕ್ಷಣ ಕ್ಷೇತ್ರಕ್ಕೆ ಒಂದು ವಿಶೇಷ ಕೊಡುಗೆಯಾಗಿದೆ.

– ಎಂ.ಪ.

## ತಪಶೀಲು ಪಟ್ಟಿಗಳು (Inventories)

ತಪಶೀಲು ಪಟ್ಟಿಗಳು ಎಂದರೇನು? ಎಂಬ ಪ್ರಶ್ನೆಗೆ ಒಮ್ಮತದ ಉತ್ತರವಿಲ್ಲ.

ಮೇಲ್ನೋಟಕ್ಕೆ ಪ್ರಶ್ನಾವಳಿಗೂ, ತಪಶೀಲು ಪಟ್ಟಿಗೂ ವ್ಯತ್ಯಾಸ ಕಂಡುಬರುವುದಿಲ್ಲ. ಅನೇಕರು ತಮ್ಮ ಲೇಖನಗಳಲ್ಲಿ ಈ ಎರಡು ಪದಗಳನ್ನು ಸಮಾನಾರ್ಥ ಪದಗಳೆಂದು ಪರಿಗಣಿಸಿ ಪ್ರಯೋಗಿಸುತ್ತಾರೆ. ಆದರೆ, ಸಾಮಾನ್ಯವಾಗಿ ತಪಶೀಲು ಪಟ್ಟಿ ಎಂಬುದು ಆಸಕ್ತಿ, ಮನೋಧೋರಣೆ, ವ್ಯಕ್ತಿತ್ವ, ವೈಯಕ್ತಿಕ ಹೊಂದಾಣಿಕೆಯ ಸಮಸ್ಯೆಗಳು ಮೊದಲಾದವುಗಳನ್ನು ಅಳತೆ ಮಾಡುವ ಸಾಧನಗಳಲ್ಲಿ ಕಂಡು ಬರುತ್ತದೆ. ತಪಶೀಲು ಪಟ್ಟಿಗಳಲ್ಲಿ ಸಾಮಾನ್ಯವಾಗಿ ಯಾವುದೇ ಒಂದು ನಿರ್ದಿಷ್ಟ ವಿಧಾನದಲ್ಲಿ ಉತ್ತರ ನೀಡಬೇಕಾದ ಪ್ರಶ್ನೆಗಳು ಅಥವಾ ಹೇಳಿಕೆಗಳಿರುತ್ತವೆ. ಉದಾ: ಹೌದು/ಇಲ್ಲ ಒಪ್ಪುತ್ತೇನೆ/ಒಪ್ಪುವುದಿಲ್ಲ/ಹೇಳಲಾಗುವುದಿಲ್ಲ ಇತ್ಯಾದಿ.

ಪ್ರಶ್ನಾವಳಿಯಲ್ಲಿ ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳಿರಬಹುದು. ಆದರೆ ತಪಶೀಲು ಪಟ್ಟಿಗಳಲ್ಲಿ ಯಾವುದೇ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳಿರುವುದು ವಾಡಿಕೆ. ವಸ್ತು ಸ್ಥಿತಿಯಲ್ಲಿ ತರಗತಿಯ ಅಧ್ಯಾಪಕ, ಆಸಕ್ತಿ, ಮನೋಧೋರಣೆ, ಹೊಂದಾಣಿಕೆಯ ಸಮಸ್ಯೆಗಳು ಇವೇ ಮೊದಲಾದವುಗಳನ್ನು ಅಳತೆ ಮಾಡುವ ಉದ್ದೇಶದಿಂದ ರೂಪಿಸಲಾಗಿರುವ ಪ್ರಶ್ನಾವಳಿಗಳೇ ತಪಶೀಲು ಪಟ್ಟಿಗಳು.

### ತಪಶೀಲು ಪಟ್ಟಿಗಳ ಮಾದರಿಗಳು

**ಮಾದರಿ – 1 ಸ್ಟ್ರಾಂಗ್‌ನಿಂದ ರೂಪಿತವಾದ ವೃತ್ತಿ ತಪಶೀಲು ಪಟ್ಟಿ**

ವ್ಯಕ್ತಿ – ಪ್ರತಿ ವೃತ್ತಿಯ ಮುಂಭಾಗದಲ್ಲಿ ಹೌದು/ ಇಲ್ಲ/ ಹೇಳಲಾರೆ ಎಂಬುದನ್ನು ತಿಳಿಸಲು ಅಭಿಪ್ರಾಯ ಸೂಚಿಸುವ ಪದದ ಕೆಳಗೆ ಗೆರೆ ಎಳೆಯಬೇಕು.

| | | | | |
|---|---|---|---|---|
| 1. | ನಟ | ಹೌದು | ಇಲ್ಲ | ಹೇಳಲಾರೆ. |
| 2. | ಕಲೆಗಾರ | ಹೌದು | ಇಲ್ಲ | ಹೇಳಲಾರೆ. |
| 3. | ಖಗೋಳಶಾಸ್ತ್ರಜ್ಞ | ಹೌದು | ಇಲ್ಲ | ಹೇಳಲಾರೆ. |
| 4. | ಹರಾಜು ಮಾಡುವವ | ಹೌದು | ಇಲ್ಲ | ಹೇಳಲಾರೆ. |
| 5. | ಶಿಕ್ಷಕ | ಹೌದು | ಇಲ್ಲ | ಹೇಳಲಾರೆ |
| 6. | ವೈದ್ಯ | ಹೌದು | ಇಲ್ಲ | ಹೇಳಲಾರೆ |
| 7. | ಇಂಜಿನಿಯರ್ | ಹೌದು | ಇಲ್ಲ | ಹೇಳಲಾರೆ |

Digitised by Bharatavani, CIIL

**ಮಾದರಿ – 2 ಬೆಲ್‌ನ ಸಾಮಾಜಿಕ ಹೊಂದಾಣಿಕೆಯ ತಪಶೀಲು ಪಟ್ಟಿ:**

| | | | | |
|---|---|---|---|---|
| 1. | ನೀವು ನಾಚಿಕೆ ಮತ್ತು ಸಂಕೋಚಗಳಿಂದ ತೊಂದರೆಗೊಳಗಾಗುತ್ತೀರಾ? | ಹೌದು | ಇಲ್ಲ | ಹೇಳಲಾರೆ. |
| 2. | ನೀವು ಸುಲಭವಾಗಿ ಬೇರೆಯವರೊಡನೆ ಸ್ನೇಹ ಬೆಳೆಸುತ್ತೀರಾ? | ಹೌದು | ಇಲ್ಲ | ಹೇಳಲಾರೆ. |
| 3. | ನಿಮಗೆ ಆಗಾಗ್ಗೆ ತಲೆನೋವು ಬರುತ್ತದೆಯೇ? | ಹೌದು | ಇಲ್ಲ | ಹೇಳಲಾರೆ |
| 4. | ನೀವು ಹೇಳುವುದು ತಪ್ಪಾದೀತೆಂದು ಭಯದಿಂದ ಗುಂಪಿನಲ್ಲಿ ಮಾತನಾಡಲು ಹಿಂಜರಿಯುವಿರಾ? | ಹೌದು | ಇಲ್ಲ | ಹೇಳಲಾರೆ |

**ತಪಶೀಲು ಪಟ್ಟಿಯ ಉಪಯೋಗಗಳು :**

1. ಒಬ್ಬ ವ್ಯಕ್ತಿಯ ಅಭಿಪ್ರಾಯ ಪಡೆಯಲು ತಪಶೀಲು ಪಟ್ಟಿಯನ್ನು ಉಪಯೋಗಿಸುವರು. ಇವುಗಳ ಸಹಾಯದಿಂದ ಕುಳಿತ ಸ್ಥಳದಿಂದಲೇ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಬಹುದು.
2. ಆಸಕ್ತಿ, ಅಭಿರುಚಿ, ಒಲವು ಮುಂತಾದವುಗಳನ್ನು ಪರೀಕ್ಷಿಸಲು ತಪಶೀಲು ಪಟ್ಟಿಗಳನ್ನು ಉಪಯೋಗಿಸುವರು.
3. ವಿದ್ಯಾರ್ಥಿಗಳ ಹಲವಾರು ಚಟುವಟಿಕೆಗಳನ್ನು ಪರೀಕ್ಷಿಸಲು ಈ ತಂತ್ರವನ್ನು ಉಪಯೋಗಿಸುವರು.
4. ಏಕಕಾಲದಲ್ಲಿ ಬಹಳಷ್ಟು ಜನರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಮಾಹಿತಿಗಳನ್ನು ಸಂಗ್ರಹಿಸಲು ಈ ತಂತ್ರವನ್ನು ಬಳಸುವರು.

**ತಪಶೀಲು ಪಟ್ಟಿಯನ್ನು ರಚಿಸುವಾಗ ಗಮನಿಸಬೇಕಾದ ಅಂಶಗಳು:–**

1. ಅಳೆಯುವ ಉದ್ದೇಶವನ್ನು ತಿಳಿಸುವುದು.
2. ಅಭ್ಯಾಸ ವರ್ತನೆ, ಮನೋಧೋರಣೆ, ಆಸಕ್ತಿಗೆ ಸಂಬಂಧ ಪಟ್ಟ ಅಂಶಗಳನ್ನು ಬರೆಯುವುದು.
3. ಹೌದು ಅಥವಾ ಇಲ್ಲ ಎಂಬ ಪ್ರಶ್ನೆಗಳನ್ನು ಅಥವಾ ಬಹುಅಂಶ ಆಯ್ಕೆ ಪ್ರಶ್ನೆಗಳನ್ನು ಉಪಯೋಗಿಸಬೇಕು.
4. ಅಂಶ ವಿಶ್ಲೇಷಣೆ ಮಾಡಬೇಕು.
5. ಉತ್ತರ ಬರೆಯಲು ಅಗತ್ಯ ಸ್ಥಳ ಬಿಡಬೇಕು.
6. ಸಮಂಜಸತೆ ವಿಶ್ವಸನೀಯತೆ ಇತ್ಯಾದಿಗಳನ್ನು ತಿಳಿಯಬೇಕು.
7. ತಪಶೀಲು ಪಟ್ಟಿಯನ್ನು ರಚಿಸಿದ ನಂತರ ಅಂತಿಮವಾಗಿ ತೀರ್ಮಾನಿಸಬೇಕು.

ತಪಶೀಲು ಪಟ್ಟಿಯನ್ನು ರಚಿಸುವಾಗ ಉದ್ದೇಶಪೂರ್ವಕವಾಗಿ ಏನನ್ನು ಅಳೆಯಬೇಕಾಗಿದೆ ಎಂಬುದನ್ನು ತಿಳಿದುಕೊಂಡು ರಚಿಸಬೇಕಾಗುತ್ತದೆ.

ಉದಾ :– ವರ್ತನೆ, ಮನೋವೃತ್ತಿ, ಪರಿಸರ, ಉದ್ವೇಗ, ಹೊಂದಾಣಿಕೆಯ ಸಮಸ್ಯೆಗಳು ಮುಂತಾದವುಗಳು.

**ಉದಾ :**

1. ದೈಹಿಕ ಶಿಕ್ಷಣದ ತಪಶೀಲು ಪಟ್ಟಿ.
2. ವಿಜ್ಞಾನ ವಿಷಯದ ಬಗ್ಗೆ ತಪಶೀಲು ಪಟ್ಟಿ
3. ಮನೋವೃತ್ತಿ ತಪಶೀಲು ಪಟ್ಟಿ.
4. ಬಹುಮುಖ ವ್ಯಕ್ತಿತ್ವ ತಪಶೀಲು ಪಟ್ಟಿ.

–ಸು

## ತಾರುಣ್ಯ (ಕೌಮಾರ್ಯ)

ತಾರುಣ್ಯ (Adolescence) ಎನ್ನುವ ಪದವು 'Adoloscere' ಎಂಬ ಲ್ಯಾಟಿನ್‌ನ ಪದದಿಂದ ಬಳಕೆಗೆ ಬಂದಿದ್ದು, ಇದರರ್ಥ– 'To grow into maturity' ಎನ್ನಲಾಗುತ್ತದೆ. ಅರ್ಥಾತ್ 'ಪರಿಪಕ್ವತೆಯೆಡೆಗೆ ಬೆಳವಣಿಗೆ ಹೊಂದುವುದು' ಎಂದಾಗುವುದು. ಸುಮಾರು 12 ರಿಂದ 19 ವರ್ಷದ ಹದಿಹರೆಯದವರನ್ನು ತರುಣ, ತರುಣಿಯರು ಎನ್ನಲಾಗುತ್ತದೆ. ಬಾಲ್ಯಾವಸ್ಥೆಯಿಂದ ವಯಸ್ಕತನಕ್ಕೆ ನಿಧಾನವಾಗಿ ರೂಪಾಂತರವಾಗುವ ಈ ಅವಧಿಯನ್ನು 'ಬೆಳವಣಿಗೆಯ ಬುಗ್ಗೆ' ಎಂದೂ ಕರೆಯಲಾಗಿದೆ. ಜೈವಿಕ ಮತ್ತು ಮಾನಸಿಕ ಪರಿಪಕ್ವವಾಗುವಿಕೆ ಇದರ ವೈಶಿಷ್ಟ್ಯಗಳು. ಈ ಪರಿಪಕ್ವತೆ ಹೊಂದುವ ವಯಸ್ಸು, ಪರಿಸರ ಹಾಗೂ ವ್ಯಕ್ತಿಯ ಹಿನ್ನೆಲೆಗೆ ತಕ್ಕಂತೆ ಭಿನ್ನವಾಗಿರುತ್ತದೆ. ಈ ಭಿನ್ನತೆಗೆ 'ವಂಶವಾಹಿನಿ' (Genetic), ಜೈವಿಕ ಹಾಗೂ ಪರಿಸರಾತ್ಮಕ, (ದೈಹಿಕ, ಬೌದ್ಧಿಕ, ಸಾಮಾಜಿಕ) ಅಂಶಗಳು ಕಾರಣವಾಗಿರಬಹುದು. ಇವು ಮಗುವಿನ ದೈಹಿಕ, ಮಾನಸಿಕ, ಸಾಮಾಜಿಕ, ನೈತಿಕ ಪರಿಪಕ್ವತೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆಯನ್ನು ಹೊಂದಿವೆ.

**ದೈಹಿಕ ಬೆಳವಣಿಗೆ:** ತಾರುಣ್ಯಾವಸ್ಥೆಯಲ್ಲಿ ದೈಹಿಕ ಬೆಳವಣಿಗೆ ಮತ್ತು ಶರೀರ ಕ್ರಿಯೆ ಪಕ್ವವಾಗುವಿಕೆ ಅತ್ಯಂತ ಶೀಘ್ರಗತಿಯದಾಗಿದ್ದು ಗರಿಷ್ಠ ಮಟ್ಟ ತಲುಪುತ್ತದೆ, ಬೆಳವಣಿಗೆಯು ರಭಸದಿಂದ ಸಾಗುತ್ತದೆ. ದೇಹದ ವಿವಿಧ ಗ್ರಂಥಿಗಳು ಕಾರ್ಯೋನ್ಮುಖವಾಗಿ ಅನೇಕ ಹಾರ್ಮೋನ್ (ಚೋದಕ)ಗಳನ್ನು ಸ್ರವಿಸುತ್ತವೆ. ಈ ಹಂತದಲ್ಲಿ ಹುಡುಗಿಯರು ಹುಡುಗರಿಗಿಂತ ವಿಕಸಿಸಿರುತ್ತಾರೆ. ಸುಮಾರು 16 ವರ್ಷ ವಯಸ್ಸಿನ ವೇಳೆಗೆ ಹುಡುಗಿಯರು, 18 ರಿಂದ 20 ವರ್ಷ ವಯಸ್ಸಿನ ವೇಳೆಗೆ ಹುಡುಗರು ತಮ್ಮ ಎತ್ತರದ ಗರಿಷ್ಠ ಮಿತಿಯನ್ನು ಮುಟ್ಟುತ್ತಾರೆ. ಹುಡುಗಿಯರಲ್ಲಿ ಋತುಚಕ್ರ ಆರಂಭವಾಗುವುದಲ್ಲದೆ, ಸ್ತನಗಳು ವಿಕಸಿಸುತ್ತವೆ ಮತ್ತು ಕಟಿಪ್ರದೇಶ ಅಗಲವಾಗುತ್ತದೆ. ಗಂಡು ಮಕ್ಕಳಲ್ಲಿ ಜನನೇಂದ್ರಿಯಗಳು ಬೆಳೆಯುವುದಲ್ಲದೆ ಧ್ವನಿ ದಪ್ಪವಾಗುವುದು, ಮುಖದಲ್ಲಿ ಗಡ್ಡ–ಮೀಸೆ ಬೆಳೆಯಲಾರಂಭಿಸುತ್ತದೆ. ಮರ್ಮಾಂಗ ರೋಮ ಮತ್ತು ಕಂಕುಳ ರೋಮ ಹುಡುಗ ಹುಡುಗಿಯರಿರ್ವರಲ್ಲೂ ಬೆಳೆದಿರುತ್ತದೆ. ದೇಹದ ರಚನೆ ಆಕಾರದಲ್ಲಿ ಸಾಕಷ್ಟು ಆಸಕ್ತಿ, ಕಾಳಜಿ ಹುಡುಗ–ಹುಡುಗಿಯರಿರ್ವರಲ್ಲೂ ಆಗುವುದರೊಂದಿಗೆ ಪರಸ್ಪರ ಲೈಂಗಿಕ ಆಕರ್ಷಣೆಗೊಳಗಾಗುತ್ತಾರೆ.

ತಾರುಣ್ಯದಲ್ಲಿ ದೈಹಿಕ ಬೆಳವಣಿಗೆಯಿಂದ ಉಂಟಾಗುವ ತೀವ್ರ ಆತಂಕ, ಭಯ, ಸಂಕೋಚ ಹಾಗೂ ಅನ್ಯ ಲಿಂಗದವರ ಬಗ್ಗೆ ಇರುವ ಕುತೂಹಲ, ತಪ್ಪು ಕಲ್ಪನೆ, ವಿರೋಧ ಭಾವನೆಗಳನ್ನು ಸರಿಯಾದ ತಿಳುವಳಿಕೆ ಹಾಗೂ ವೈಜ್ಞಾನಿಕ ರೀತಿಯ ಮಾರ್ಗದರ್ಶನದೊಂದಿಗೆ ಹೋಗಲಾಡಿಸಬೇಕು. ಆರೋಗ್ಯ ಸಂರಕ್ಷಣೆಯ ಮಹತ್ವ, ವ್ಯಾಯಾಮ ಹಾಗೂ ಆಟಕ್ಕೆ ಸೂಕ್ತ ವಾತಾವರಣ ಒದಗಿಸಿಕೊಡುವುದರೊಂದಿಗೆ ಉತ್ತಮ ಆಹಾರ, ವಿಶ್ರಾಂತಿ, ನಿದ್ದೆ, ಉತ್ತಮ ಹವ್ಯಾಸಗಳು, ಮುಕ್ತ ವ್ಯಾಯಾಮಗಳೊಡಗೂಡಿದ ದೈಹಿಕ ಶಿಕ್ಷಣ ನೀಡುವುದು ಹೆಚ್ಚು ಅನಿವಾರ್ಯ. ಲೈಂಗಿಕ ಶಿಕ್ಷಣ ಹಾಗೂ ಆರೋಗ್ಯದಾಯಕ

Digitised by Bharatavani, CIIL

ಮನೋಭಾವನೆಯ ಭದ್ರಬುನಾದಿ ಹಾಕುವುದು ಎಲ್ಲರ ಜವಾಬ್ದಾರಿಯುತ ಕರ್ತವ್ಯವಾಗಿದೆ.

**ಸಂಜ್ಞಾನಾತ್ಮಕ ವಿಕಾಸ:** ತಾರುಣ್ಯವು ಸಂಜ್ಞಾನಾತ್ಮಕ (ಬುದ್ಧಿಶಕ್ತಿ) ವಿಕಾಸವು ಅತ್ಯಂತ ಗರಿಷ್ಠ ಮಟ್ಟದಲ್ಲಿ ತುಟ್ಟತುದಿಯನ್ನು ಮುಟ್ಟುವ ಅವಧಿಯಾಗಿದೆ. ಜೀನ್‌ಪಿಯಾಜ್ಜೆಯವರು ಈ ಅವಧಿಯನ್ನು 'ಔಪಚಾರಿಕ ಕ್ರಿಯೆಗಳ ಹಂತ' ಎಂದು ಕರೆದಿದ್ದಾರೆ. ಮಾನಸಿಕ ಸಾಮರ್ಥ್ಯಗಳಾದ ವಿಚಾರಶಕ್ತಿ, ಅಮೂರ್ತ ಚಿಂತನೆ, ತಾರ್ಕಿಕ ವಿಚಾರ ಸಾಮರ್ಥ್ಯ, ಏಕಾಗ್ರ ಚಿಂತನೆ, ಭಾವರೂಪಣ, ಕಲ್ಪನಾ ಶಕ್ತಿಗಳು ಶೀಘ್ರಗತಿಯಲ್ಲಿ ವಿಕಾಸ ಹೊಂದುತ್ತವೆ. ವೈಜ್ಞಾನಿಕ ರೀತಿಯ ಚಿಂತನೆ, ಅನುಶೀಲನೆ ಪ್ರಾರಂಭವಾಗುತ್ತದೆ. ವೀಕ್ಷಣಾ ಶಕ್ತಿ ಹಾಗೂ ಕ್ರಿಯಾತ್ಮಕ ಆಲೋಚನಾ ಶಕ್ತಿ ಹೆಚ್ಚಿನ ಮಟ್ಟದಲ್ಲಿ ವಿಕಾಸಗೊಳ್ಳುವುದರೊಂದಿಗೆ ಎಲ್ಲ ವಿಚಾರದಲ್ಲೂ ತರ್ಕಬದ್ಧವಾದ ವಾದ ಮಂಡಿಸಿ ಚರ್ಚಿಸುವ ಪ್ರವೃತ್ತಿ ಬೆಳೆಯುತ್ತದೆ. ವಿಶೇಷ ಕ್ಷೇತ್ರಗಳಲ್ಲಿ ಸೃಜನಾತ್ಮಕ ಪ್ರತಿಭೆಗಳು ಅರಳುತ್ತವೆ. ವೈಚಾರಿಕ ಸಾಮರ್ಥ್ಯ ಗಮನಾರ್ಹವಾಗಿ ವಿಕಸಿಸುತ್ತದೆ. ಜ್ಞಾನ ಭಂಡಾರ ನಿರಂತರವಾಗಿ ವಿಕಸಿಸುತ್ತದೆ ಮತ್ತು ಶ್ರೀಮಂತವಾಗುತ್ತಿರುತ್ತದೆ. ಪುನರ್ ಸಂಘಟಿತವಾಗುತ್ತಿರುತ್ತದೆ. ಗ್ರಹಿಕೆಯ ಅಭಿವ್ಯಕ್ತಿಯ ಮತ್ತು ಪ್ರಶಂಸಿಸುವ ಸಾಮರ್ಥ್ಯಗಳು ಇನ್ನೂ ವಿಕಸಿಸುತ್ತವೆ. ಆಸಕ್ತಿಗಳು, ಮೆಚ್ಚುಗೆಗಳು, ರುಚಿಗಳು, ಸ್ವೀಕಾರಾತ್ಮಕ ಮತ್ತು ಉತ್ಪಾದಕ ಕುಶಲತೆಗಳು ವಿಕಸಿಸುತ್ತವೆ. ವಿಶೇಷ ಶೈಕ್ಷಣಿಕ ಮತ್ತು ವೃತ್ತಿಪರ ಆಸಕ್ತಿಗಳು ಗರಿಗೆದರಿಕೊಳ್ಳುತ್ತವೆ. ಹೊಸ ಗುರಿಗಳು, ಮೆಚ್ಚುಗೆಗಳು, ಆಕಾಂಕ್ಷೆಗಳು ಮತ್ತು ಯೋಜನೆಗಳು ಮೂಡುತ್ತವೆ. ಕಥೆ ಕಾದಂಬರಿಗಳ ಬಗ್ಗೆ ಒಲವು ತೋರಿಸುವುದರೊಂದಿಗೆ ಹಗಲುಗನಸುಗಳನ್ನು ಕಾಣುವುದು ಹೆಚ್ಚಾಗುತ್ತದೆ.

ಶಾಲಾ ಕಾಲೇಜುಗಳಲ್ಲಿನ ಹಿತಕರ ವಾತಾವರಣ, ಸ್ಪರ್ಧಾತ್ಮಕ ಮನೋಭಾವನೆ, ಸುಸಂಸ್ಕೃತ ಪರಿಸರ, ಮಕ್ಕಳ ಮಾನಸಿಕ ವಿಕಾಸದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿ ಕಾರ್ಯನಿರ್ವಹಿಸುತ್ತವೆ. ಸ್ಪರ್ಧಾತ್ಮಕ ಹಾಗೂ ಸಹಪಠ್ಯ ಚಟುವಟಿಕೆಗಳಾದ ಚರ್ಚೆ, ವಿಚಾರಗೋಷ್ಠಿ, ರಸಪ್ರಶ್ನೆ ಕಾರ್ಯಕ್ರಮ, ವಿಚಾರ ಸಂಕಿರಣ, ಭಾಷಣ, ಆಶು-ಭಾಷಣ, ಪ್ರಬಂಧ ಸ್ಪರ್ಧೆಗಳು ಮಕ್ಕಳ ಮಾನಸಿಕ ವಿಕಾಸಕ್ಕೆ ಭದ್ರ ತಳಹದಿ ಹಾಕುತ್ತವೆ. ಆದ್ದರಿಂದ ಸ್ವಲ್ಪಮಟ್ಟಿನ ಸ್ವಾತಂತ್ರ್ಯ ನೀಡುವುದರೊಂದಿಗೆ ಮಕ್ಕಳ ಭಾಷಾಭಿವೃದ್ಧಿಯ ದೃಷ್ಟಿಯಿಂದ, ಕುಟುಂಬದಲ್ಲಿ ಹಿರಿಯರ ಹಾಗೂ ಶಾಲಾಕಾಲೇಜುಗಳ ಶಿಕ್ಷಕರ ಭಾಷೆ, ಸ್ಪಷ್ಟ ಹಾಗೂ ಸುಸಂಸ್ಕೃತವಾಗಿದ್ದು ಮಾದರಿಯಾಗಬೇಕು. ಬೌದ್ಧಿಕ ವಿಕಾಸಕ್ಕಾಗಿ ಶಾಲೆಯು ಪ್ರಯೋಗಾಲಯ, ಗ್ರಂಥಾಲಯ ಸೌಲಭ್ಯ ಹಾಗೂ ಬೋಧನೋಪಕರಣಗಳನ್ನು ಹೊಂದಿರಬೇಕು.

**ಸಾಮಾಜಿಕ ವಿಕಾಸ:** ಹದಿವಯಸ್ಸಿನಲ್ಲಿ ಸಾಮಾಜಿಕ ವಿಕಾಸವು ತ್ವರಿತಗತಿಯಿಂದ ಸಾಗುವುದು. ಮಕ್ಕಳಲ್ಲಿ ಸಾಮಾಜಿಕ ಹೊಂದಾಣಿಕೆಯ ಕಾಲ ಅಥವಾ ಸಾಮಾಜಿಕ ಪ್ರಜ್ಞೆ ಮೂಡುವ ಅವಧಿ ಇದು. ಅನೇಕ ಅಂಶಗಳನ್ನು ಆಧರಿಸಿದ, ಹೊಸ ಸ್ನೇಹ ಸಂಬಂಧಗಳ ಸಮೂಹ ರಚನೆ ಉಂಟಾಗುತ್ತವೆ. ಅಂತರ ವ್ಯಕ್ತಿ ಗ್ರಹಿಕೆಗಳು ಮತ್ತು ಸಂಬಂಧಗಳು ಬದಲಾಗಬಹುದು. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದಲ್ಲದೆ ಗುಂಪಿನ ನಾಯಕ ಹಾಗೂ ಸದಸ್ಯರೊಂದಿಗೆ ಬೆರೆತು ಗುಂಪಿಗೆ ವಿಧೇಯರಾಗಿರುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಾರೆ. ವಿರುದ್ಧ ಲಿಂಗದವರಲ್ಲಿ ಆಸಕ್ತಿ, ಸ್ನೇಹ ಮೂಡಿ, ಪರಸ್ಪರ ಮೆಚ್ಚುಗೆ ಮತ್ತು ಗಮನ ಪಡೆಯುವ ಬಯಕೆ ಗರಿಗೆದರುತ್ತದೆ. ಸಖ ಸಮೂಹದವರೊಂದಿಗೆ ಆತ್ಮೀಯ ವರ್ತನೆಯೊಂದಿಗೆ ನಿಕಟವರ್ತಿಗಳಾಗಿ ಎಲ್ಲರಿಗೂ ಸರಿಹೋಲುವ ಅಭಿರುಚಿಗಳು, ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾರೆ. ಸ್ವಾತಂತ್ರ್ಯ ಪ್ರಿಯರು ಹಾಗೂ ಆರ್ಥಿಕ ಸ್ವಾವಲಂಬನೆಗಾಗಿ ಸಣ್ಣಪುಟ್ಟ ಉದ್ಯೋಗದಲ್ಲಿ ತೊಡಗುತ್ತಾರೆ. ಸಾಮಾನ್ಯವಾಗಿ ಬಹಿರ್ಮುಖಿಗಳಾಗಿದ್ದರೂ, ಸಂಘವನ್ನು ಬಯಸಿದರೂ, ಕೊಂಚ ಒಂಟಿತನ, ಹಗಲುಗನಸುಗಳಲ್ಲಿ ತಮ್ಮ ಶಕ್ತಿಸಾಮರ್ಥ್ಯಗಳನ್ನು ವ್ಯಯಿಸುತ್ತಾ ಸದಾ ಹಸನ್ಮುಖಿಗಳಾಗಿರುತ್ತಾರೆ. ಸಾಹಸ, ಕ್ರೀಡೆಗಳಲ್ಲಿ ಆಸಕ್ತಿ, ಚಲನಚಿತ್ರ ತಾರೆಯರನ್ನು ಅನುಸರಿಸುವ ಪ್ರವೃತ್ತಿ ಈ ಅವಧಿಯಲ್ಲಿ ಸಾಮಾನ್ಯವಾಗಿರುತ್ತದೆ.

ಸಾಮಾಜಿಕ ವಿಕಾಸದಲ್ಲಿ ಶಾಲೆಯ ಪಾತ್ರ ಮಹತ್ವಪೂರ್ಣದ್ದಾಗಿದೆ. ಸಾಮೂಹಿಕ ಕಾರ್ಯಕ್ರಮಗಳ ಸಂಘಟನೆಯ ಮುಖಾಂತರ ಪ್ರೀತಿ, ವಿಶ್ವಾಸ, ಸಹಕಾರ, ಮಮತೆ, ಕರುಣೆ, ಸಹಾನುಭೂತಿ ಮುಂತಾದ ಗುಣಗಳ ಬೆಳವಣಿಗೆಯೊಂದಿಗೆ ತರುಣ / ತರುಣಿಯರನ್ನು ಸಾಮಾಜೀಕರಣಗೊಳಿಸುವ ಪ್ರಯತ್ನವನ್ನು ಶಾಲೆಯು ಕೈಗೊಳ್ಳಬೇಕು. ಅನುಕರಣೆಯಿಂದ ಮಕ್ಕಳು ಕಲಿಯುವುದರಿಂದ ಹಿರಿಯರ ಸಾಮಾಜಿಕ ವರ್ತನೆಗಳು ಮಾದರಿಯಾಗಿದ್ದು, ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವಂತಿರಬೇಕು. ಹೆಚ್ಚು ನಿಯಂತ್ರಣದಿಂದ ಕೂಡಿದ ವಾತಾವರಣವನ್ನು ಸೃಷ್ಟಿಸಬಾರದು ಹಾಗೂ ಸಂಪೂರ್ಣ ಸ್ವೇಚ್ಛೆಗೂ ಬಿಡದಂತೆ ಜಾಗರೂಕತೆ ವಹಿಸಬೇಕು. ಶಿಕ್ಷಕರು ಮಕ್ಕಳ ಸ್ವಯಂ ಕಲಿಕೆಗೆ, ಸ್ವ ಅಭಿವೃದ್ಧಿಗೆ ಹೆಚ್ಚು ಅವಕಾಶ ಕಲ್ಪಿಸಬೇಕು. ಸಾಮೂಹಿಕ ಚಟುವಟಿಕೆಗಳಲ್ಲಿ ಎಲ್ಲರಿಗೂ ಜವಾಬ್ದಾರಿ ಹಂಚಿ, ಎಲ್ಲರೂ ಕಾರ್ಯನಿರ್ವಹಿಸುವಂತೆ ಮಾಡಬೇಕು.

**ಸಂವೇಗಾತ್ಮಕ ವಿಕಾಸ**

ಈ ಅವಧಿಯನ್ನು 'ಸಂಕ್ಷೋಭೆ ಮತ್ತು ಪ್ರಯಾಸಗಳ ಕಾಲ' ಅಥವಾ ಸಂವೇಗಾತ್ಮಕ ಅಸ್ಥಿರತೆಯ ಕಾಲವೆಂದು ಕರೆಯುತ್ತಾರೆ. ತರುಣ/ತರುಣಿಯರು ಮಾನಸಿಕ ಬದಲಾವಣೆಗಳೊಂದಿಗೆ, ಸಂವೇಗಾತ್ಮಕ ಜೀವಿಗಳಾಗಿರುತ್ತಾರೆ. ದುಃಖ, ಹರ್ಷ, ಭಯಭೀತಿ, ಕೋಪಗಳು ತಾಂಡವವಾಡಬಹುದು. ಒಟ್ಟಾರೆ ಸಂವೇಗಾತ್ಮಕ ಅಸ್ಥಿರತೆ, ಕುತೂಹಲ, ಸಂಕೋಚ ಸ್ವಭಾವಗಳು ತುಂಬಿ ತುಳುಕುತ್ತವೆ. ಟೀಕೆಗಳಿಗೆ ಸೂಕ್ಷ್ಮಸಂವೇದಿಗಳಾಗಿರುತ್ತಾರೆ. ಬಯ್ಗುಳು, ಶಿಕ್ಷೆ, ಅವಮಾನ ಇತ್ಯಾದಿಗಳಿಗೆ ಮುನಿಸಿಕೊಳ್ಳುತ್ತಾರೆ. ಹೊಗಳಿಕೆಗೆ ಬೇಗ ಉಬ್ಬುವರು. ವಾಸ್ತವದ ಕಾರಣಗಳಿಗಿಂತ ಹೆಚ್ಚಾಗಿ ಸ್ವಕಪೋಲಕಲ್ಪಿತ ಕಾರಣಗಳಿಗಾಗಿಯೇ ಚಿಂತಿಸುತ್ತಾರೆ.

ತಾರುಣ್ಯಾವಸ್ಥೆ ತೀವ್ರ ವಿಮರ್ಶನಾ ಭಾವನೆಯಿಂದ ಕೂಡಿದ ಹಂತ. ಇವರಿಗೆ ವಿಶೇಷ ತಾಳ್ಮೆಯಿಂದ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳುವ ಅವಕಾಶ ನೀಡಬೇಕು. ಸಂವೇಗಾತ್ಮಕ ಸಂತುಲನೆ ಮತ್ತು ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಬೇಕು. ಮನೆ ಮತ್ತು ಶಾಲೆ ವಿವಿಧ ಹಿತಕರ ಸಂವೇಗಾನುಭವಗಳನ್ನು ಧಾರಾಳವಾಗಿ ಒದಗಿಸಬೇಕು. ಅಹಿತಕರ ಸಂವೇಗಾನುಭವ ಸಾಧ್ಯವಾದಷ್ಟು ಕಡಿಮೆ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳಬೇಕು. ಕ್ಷುಲ್ಲಕ ಜಗಳಗಳು, ವೈರತ್ವಗಳು, ಅಸೂಯೆಗಳು, ದ್ವೇಷಗಳನ್ನು ಪ್ರೋತ್ಸಾಹಿಸಬಾರದು. ಗೌರವಯುತವಾದ ಅರ್ಥಪೂರ್ಣವಾದ ಮಾರ್ಗದರ್ಶನ, ಸಹಾನುಭೂತಿಯನ್ನು ನೀಡಬೇಕು.

**ನೈತಿಕ ಬೆಳವಣಿಗೆ:** ತರುಣರು ಚಿಕ್ಕಂದಿನಿಂದ ಬೆಳೆಸಿಕೊಂಡಿದ್ದ ನೈತಿಕ ಭಾವನೆಗಳ ಸರಿ ತಪ್ಪುಗಳನ್ನು ಸ್ವಯಂ ವಿವೇಚಿಸಿ ಅನಂತರ ತಮ್ಮದೇ ಆದ ಕೆಲವು ನೈತಿಕ ಸೂತ್ರಗಳನ್ನು ರೂಪಿಸಿಕೊಳ್ಳಲು ಯತ್ನಿಸುತ್ತಾರೆ. ಸಾಮಾನ್ಯವಾಗಿ ಅವರು ತಮ್ಮ ನಂಬಿಕೆಗಳಿಗೆ ಅನುಗುಣವಾಗಿ ವರ್ತಿಸುತ್ತಾರೆ. ಕೆಲವರು ಅವಿಧೇಯತೆಯಿಂದ ಬೇಕೆಂದೇ ವರ್ತಿಸುತ್ತಾರೆ. ಸಮೂಹದ ನಿರೀಕ್ಷೆಯನ್ನು ಸ್ವತಃ ಅರ್ಥ ಮಾಡಿಕೊಂಡು ಅದಕ್ಕೆ ತಕ್ಕಂತೆ

Digitised by Bharatavani, CIIL

ತನ್ನ ವರ್ತನೆಯನ್ನು ರೂಪಿಸಿಕೊಳ್ಳಲು ವ್ಯಕ್ತಿ ತಾರುಣ್ಯದಲ್ಲಿ ಕಲಿಯುತ್ತಾನೆ. ಸಾರ್ವತ್ರಿಕ ನೈತಿಕ ತತ್ವಗಳನ್ನು ಆಧರಿಸಿ, ವರ್ತನೆಯ ಮಾರ್ಗದರ್ಶನ ಮಾಡಬಲ್ಲ ನೀತಿಸಂಹಿತೆಯ ನಿರ್ಮಾಣ ಕೂಡ ಈ ಹಂತದಲ್ಲಿ ಆಗುತ್ತದೆ. ನೈತಿಕ ತತ್ವಗಳು ಸಾರ್ವಕಾಲಿಕ ಸತ್ಯಗಳಾಗಿರಬೇಕೆಂದು ಆಶಿಸುತ್ತಾರೆ. ತಮ್ಮ ಇತರರ ಹಕ್ಕುಗಳನ್ನು ಸಂರಕ್ಷಿಸುವ ಅದಕ್ಕಾಗಿ ಹೋರಾಡುವ ನೈತಿಕ ಸ್ಥೈರ್ಯವಿರುತ್ತದೆ.

ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ, ತರುಣರು ತಮ್ಮ ಮನೋಭಾವಗಳು ಮತ್ತು ನಡತೆಯನ್ನು ರೂಪಿಸಿಕೊಳ್ಳಬೇಕಾದುದು ಅತ್ಯವಶ್ಯಕ. ಅವರಿಗೆ ಯುಕ್ತ ಮಾರ್ಗದರ್ಶನ ಮತ್ತು ಅನುಕರಣೀಯ ಮಾದರಿ ಒದಗಿಸಬೇಕಾದುದು ಅತ್ಯಗತ್ಯ. ಚರ್ಚೆ, ತತ್ವಶಾಸ್ತ್ರಗಳ ಅಧ್ಯಯನ, ವೈಯಕ್ತಿಕ ಮಾರ್ಗದರ್ಶನ ಈ ಹಂತದ ನೈತಿಕ ವಿಕಾಸಕ್ಕೆ ಉಪಯುಕ್ತವಾಗಿದೆ.

ಪಿಯಾಜೆ ಪ್ರಕಾರ ತಾರುಣ್ಯಾವಸ್ಥೆಯಲ್ಲಿ ಸಂಜ್ಞಾನಾತ್ಮಕ ವಿಕಾಸ ಮತ್ತು ನೈತಿಕ ವಿಕಾಸಗಳು ಪರಸ್ಪರ ಅವಲಂಬನೆ ಹೊಂದಿರುತ್ತವೆ. ಈ ಅವಧಿಯಲ್ಲಿ ಸಂಜ್ಞಾನಾತ್ಮಕ ಬೆಳವಣಿಗೆ ತರ್ಕಬದ್ಧ ಹಾಗೂ ಅಮೂರ್ತ ರೂಪದಲ್ಲಿ ಆಗುವುದರಿಂದ ಮಕ್ಕಳು ನೈತಿಕ ನಿಯಮಗಳನ್ನು ಹಿಂದಿನ ತರ್ಕವನ್ನು, ಚಿಂತನೆಯನ್ನು ತಿಳಿದುಕೊಳ್ಳುತ್ತಾರೆ. ನೈತಿಕ ವರ್ತನೆಯನ್ನು ಮೌಲ್ಯಮಾಪನ ಮಾಡುವಾಗ ವರ್ತನೆಯ ಹಿಂದಿರುವ ಇಚ್ಛೆ ಮುಖ್ಯವಾಗುತ್ತದೆ ಎಂದು ತಿಳಿದುಕೊಳ್ಳುತ್ತಾರೆ. ನೈತಿಕ ನಿಯಮಗಳು ಜನಗಳ ಪರಸ್ಪರ ಒಪ್ಪಿಗೆಯಿಂದ ಜಾರಿಗೆ ಬಂದಿವೆ ಎಂದು ಅರ್ಥಮಾಡಿಕೊಳ್ಳುತ್ತಾರೆ. ನೈತಿಕ ವಿಕಾಸದ ಮತ್ತೊಂದು ಸಿದ್ಧಾಂತವನ್ನು ಪ್ರತಿಪಾದಿಸಿರುವ ಲಾರೆನ್ಸ್‌ಗೋಹ್ಲ್‌ಬರ್ಗ್ ಸಹ ಈ ಅವಧಿಯಲ್ಲಿನ ನೈತಿಕ ವಿಕಾಸದ ಬಗ್ಗೆ ಇದೇ ರೀತಿಯ ವಿಚಾರಗಳನ್ನು ಮಂಡಿಸಿದ್ದಾನೆ. ಈ ಅವಧಿಯಲ್ಲಿ ವ್ಯಕ್ತಿಗಳು ಮೊದಲು ತಂದೆ, ತಾಯಿ, ಗುರುಹಿರಿಯರ ಮೆಚ್ಚುಗೆ ಪಡೆಯಲು ಒಳ್ಳೆಯವರಾಗಿ, ನೈತಿಕವಾಗಿ ವರ್ತಿಸುತ್ತಾರೆ. ಆದರೆ ಕ್ರಮೇಣ ನೈತಿಕ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ನೈತಿಕ ನಿಯಮವು ಸಾಮಾಜಿಕ ಒಪ್ಪಂದದ ಆಧಾರದ ಮೇಲೆ ಸಮಾಜದ ಒಳಿತಿಗಾಗಿಯೇ ರೂಪಿತವಾಗಿದೆ ಎಂದು ಅರ್ಥಮಾಡಿಕೊಳ್ಳುತ್ತಾರೆ. ನೈತಿಕ ನಿಯಮಗಳನ್ನು ಅಂತರೀಕರಣ ಮಾಡಿಕೊಂಡು (ತಮ್ಮದಾಗಿಸಿಕೊಂಡು) ಸ್ವಇಚ್ಛೆಯಿಂದ ನೈತಿಕವಾಗಿ ವರ್ತಿಸತೊಡಗುತ್ತಾರೆ. ಕೆಲವೇ ಮಂದಿ ತರುಣರ ಈ ಅವಧಿಯ ಎಲ್ಲ ಬೆಳವಣಿಗೆ ಮತ್ತು ವಿಕಾಸಗಳ ಆಯಾಮಗಳನ್ನು ಅರ್ಥೈಸಿಕೊಂಡು ಅವರ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕೆ ಒತ್ತು ಕೊಡಬೇಕು. ಈ ಹಂತದಲ್ಲಿ ಶಾಲಾ ವ್ಯವಸ್ಥಾಪಕರ ಹಾಗೂ ಶಿಕ್ಷಕರ ಮಾರ್ಗದರ್ಶನ ಅತ್ಯಂತ ಅವಶ್ಯಕ ಹಾಗೂ ಅನಿವಾರ್ಯ ನೈತಿಕ ವಿಕಾಸದಲ್ಲಿ ಇನ್ನೂ ಮೇಲಿನ ಮಟ್ಟಕ್ಕೆ ಹೋಗಿ ನೈತಿಕ ನಿಯಮಗಳು ಸಾರ್ವತ್ರಿಕವಾಗಿ ಇಡೀ ಮಾನವಕುಲಕ್ಕೆ ಅನ್ವಯಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.

–ಕೆ.ಕೆ.ವಿ.

## ತೆರೆದ ಪುಸ್ತಕ ಪರೀಕ್ಷೆಗಳು

ಪ್ರಸ್ತುತ ನಮ್ಮ ದೇಶದಲ್ಲಿ ನಾವು ಕಾಣುತ್ತಿರುವ ಪಠ್ಯಕ್ರಮ ಮತ್ತು ಪರೀಕ್ಷೆಗಳು ಸಾಂಪ್ರದಾಯಿಕ ಶೈಲಿಯಲ್ಲಿವೆ. ಈ ಪರೀಕ್ಷೆಗಳನ್ನು ಮುಚ್ಚಿದ ಪುಸ್ತಕ ಪರೀಕ್ಷೆಗಳೆಂದು ಹೇಳಲಾಗುತ್ತದೆ. ಇಂತಹ ವ್ಯವಸ್ಥೆಯ ವಿರುದ್ಧ ದಿಕ್ಕಿನಲ್ಲಿರುವ ಪರೀಕ್ಷಾ ವ್ಯವಸ್ಥೆಯನ್ನು ತೆರೆದ ಪುಸ್ತಕ ಪರೀಕ್ಷೆ ಎಂದು ಹೇಳಬಹುದು.

ಯಾವ ಪರೀಕ್ಷೆಗಳಲ್ಲಿ ಪರೀಕ್ಷಾರ್ಥಿಗಳು ಪರೀಕ್ಷಾ ಕೊಠಡಿಯೊಳಕ್ಕೆ ತಮ್ಮ ಪಠ್ಯಪುಸ್ತಕಗಳನ್ನು, ನೋಟ್ಸ್‌ಗಳನ್ನು, ವರದಿಗಳನ್ನು ಮತ್ತು ಇನ್ನಿತರ ಸಮ್ಮತಿಸಲ್ಪಟ್ಟ ಅಥವಾ ಪರವಾನಿಗೆಯನ್ನು ಪಡೆದ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಅಲ್ಲಿಯೇ ಅವನ್ನು ಪರಾಮರ್ಶಿಸಿ ಉತ್ತರಿಸಲು ಅವಕಾಶವಿರುವುದೋ ಅಂತಹ ಪರೀಕ್ಷೆಗಳನ್ನು ತೆರೆದ ಪುಸ್ತಕ ಪರೀಕ್ಷೆಗಳೆಂದು ಕರೆಯುವರು. ಸಾಮಾನ್ಯವಾಗಿ ಕಾನೂನು ಪರೀಕ್ಷೆಗಳಲ್ಲಿ ಇಂತಹ ತೆರೆದ ಪುಸ್ತಕ ಪರೀಕ್ಷೆಗಳನ್ನು ಕಾಣುತ್ತೇವಾದರೂ ಇತರ ಬಹಳಷ್ಟು ಕ್ಷೇತ್ರಗಳಲ್ಲಿ ಇಂತಹ ಪದ್ಧತಿ ಅಪರಿಚಿತ. ವಿದ್ಯಾರ್ಥಿಗಳಲ್ಲಿ ಚಿಂತಿಸುವ, ಯೋಚಿಸುವ ಮತ್ತು ಆಲೋಚಿಸುವ ಕೌಶಲಗಳನ್ನು ಬೆಳೆಸಬೇಕೆಂಬ ಗುರಿ ಮತ್ತು ಉದ್ದೇಶ ಹೊಂದಿರುವ ಎಲ್ಲಾ ಬೋಧನಾ ಕಾರ್ಯಕ್ರಮಗಳಲ್ಲಿಯೂ ಇಂತಹ ಪರೀಕ್ಷಾ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ತುಂಬಾ ಒಳ್ಳೆಯ ಸೂಚನೆ ಮತ್ತು ಲಕ್ಷಣವೆನಿಸಿಕೊಳ್ಳುತ್ತದೆ. ಆದರೂ "ತೆರೆದ ಪುಸ್ತಕ ಪರೀಕ್ಷೆ" ಎಂಬ ಪದವೇ ಅನೇಕರಿಗೆ ಒಂದು ಒಗಟಾಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ. ಈ ಕುರಿತು ಇನ್ನಷ್ಟು ತಿಳಿದುಕೊಳ್ಳಬೇಕೆಂದಾದರೆ, ಮೊದಲಿಗೆ ಈಗಿನ ಪರೀಕ್ಷಾ ವ್ಯವಸ್ಥೆಯೆಡೆಗೂ, ಬೋಧನಾ ಕಲಿಕಾ ಪ್ರಕ್ರಿಯೆಯ ಕಡೆಗೂ ಒಂದು ಸಿಂಹಾವಲೋಕನ ಮಾಡೋಣ. ಅನೇಕರು ಭಾವಿಸಿರುವಂತೆ, ಶಾಲಾ–ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯಗಳ ಮುಖ್ಯ ಗುರಿಯೆಂದರೆ "ಜ್ಞಾನ ಪ್ರಸರಣ". ಇದರಿಂದಾಗಿ ಯಾವುದೇ ಒಂದು ವಿಷಯದ ಬಗ್ಗೆ ದೊರಕುವ ಮಾಹಿತಿ ಅತೀ ಹೆಚ್ಚು ಪ್ರಾಮುಖ್ಯವನ್ನು ಪಡೆದುಕೊಂಡಿದೆ. ಬಹಳಷ್ಟು ಸಲ ಶಿಕ್ಷಕರ ಪಾತ್ರವು, ಪಠ್ಯಪುಸ್ತಕಗಳಲ್ಲಿ ದೊರಕುವ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ವರ್ಗಾಯಿಸುವ ಮಟ್ಟಕ್ಕಷ್ಟೇ ಸೀಮಿತವಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ವಿದ್ಯಾರ್ಥಿಗಳು ತಮಗೆ ದೊರಕಿದ ಮಾಹಿತಿಯನ್ನು ಅರ್ಥಮಾಡಿಕೊಂಡು, ಮನನ ಮಾಡಿಕೊಂಡು ತಮ್ಮ ನೆನಪಿನ ಕೋಠಿಯಲ್ಲಿ ಅದನ್ನು ದಾಖಲಿಸಿಟ್ಟುಕೊಂಡು ಪುನಃ ಅದರ ಅಗತ್ಯ ಬಿದ್ದಾಗ ಅಂದರೆ ಪರೀಕ್ಷೆಗಳಲ್ಲಿ ಪ್ರಸ್ತುತಪಡಿಸಬೇಕಾದ ವ್ಯವಸ್ಥೆ ಇದಾಗಿರುತ್ತದೆ. ಹಾಗಾಗಿ ಇಂತಹ ಪರೀಕ್ಷೆಗಳು ನೇರವಾಗಿ ವಿದ್ಯಾರ್ಥಿಗಳ ನೆನಪಿನ ಶಕ್ತಿಯನ್ನಷ್ಟೇ ಪರೀಕ್ಷಿಸುತ್ತಿವೆ ಎಂಬುದು ಸರ್ವಸಮ್ಮತವಾಗಿದೆ.

ಆದ್ದರಿಂದ ವಿದ್ಯಾರ್ಥಿಗಳಿಗೆ ಮೇಲೆ ಹೇಳಿದ ರೀತಿಯಲ್ಲಿ ವಿದ್ಯಾಭ್ಯಾಸ ಕ್ರಮ ದೊರೆತರೆ, ಪ್ರಯೋಜನ ಅಷ್ಟಕಷ್ಟೆ! ಇದರ ಬದಲಿಗೆ, ನಿಜವಾದ ಬೋಧನೆಯು, ವಿದ್ಯಾರ್ಥಿಗಳಿಗೆ ಕಲಿಯಲು ಕಲಿಸುವಂತಿರಬೇಕು. ಅಂದರೆ, ವಿದ್ಯಾರ್ಥಿಗಳಿಗೆ ಅವರೇ ಸ್ವಯಂ ಜ್ಞಾನಗಳಿಸಲು ಈಗಾಗಲೇ ಅಸ್ತಿತ್ವದಲ್ಲಿರುವ ಜ್ಞಾನ ಸಂಗ್ರಹಣೆಯನ್ನು ಮಾರ್ಪಡಿಸಲು ಇದಕ್ಕಾಗಿ ಪ್ರಸ್ತುತದಲ್ಲಿ ಸಂಗ್ರಹಿಸಿದ ಜ್ಞಾನವನ್ನು ಬಳಸಿಕೊಳ್ಳಲು, ಹೊಸ ಅನುಭವಗಳನ್ನು ಪಡೆದುಕೊಳ್ಳಲು, ಸವಾಲುಗಳನ್ನು ಎದುರಿಸಲು ಮತ್ತು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಹಾಯ ಮಾಡುವಂತಿರಬೇಕು. ಶಿಕ್ಷಣವೆಂದರೆ ಕೇವಲ ಪದವಿಗಳನ್ನು ಪಡೆಯುವ ಪ್ರಕ್ರಿಯೆಯಾಗಿರದೆ ಜೀವನಪರ್ಯಂತ ನಡೆಯುವ ಒಂದು ಕ್ರಿಯಾತ್ಮಕ ಕಾರ್ಯವೆಂದಾಗಬೇಕು. ಇದು ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಯಾಗಿ ಗೋಚರವಾಗುವಂತಿರಬೇಕು. ಅಂದರೆ ವಿದ್ಯಾರ್ಥಿಗಳು ಪಠ್ಯವಸ್ತುವನ್ನು ಕಂಠಪಾಠಮಾಡಿ ಕಲಿಯುವಂತಹ ಅಭ್ಯಾಸವನ್ನು ತಪ್ಪಿಸಿದಾಗ ಮಾತ್ರ ಇದು ಸಾಧ್ಯವಾಗಬಲ್ಲುದು. ಆಗ, ಶಿಕ್ಷಕರ ಪಾತ್ರವು ಕೇವಲ ವಿಷಯ ವರ್ಗಾವಣೆಗೆ ಸೀಮಿತವಾಗದೆ, ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ವಿಮರ್ಶೆ ಮುಂತಾದ ಬೌದ್ಧಿಕ ಕೌಶಲಗಳ ಬೆಳವಣಿಗೆಯವರಿಗೂ ವಿಸ್ತರಿಸಿಕೊಳ್ಳುವುದು. ವಿದ್ಯಾರ್ಥಿಗಳ ಬೌದ್ಧಿಕ ಪ್ರಕ್ರಿಯೆಗಳನ್ನು ತೀಕ್ಷ್ಣಗೊಳಿಸುವಂತಹ ವಿಧಾನಗಳಾದ, ಪ್ರಶ್ನೆಗಳು, ಅಭ್ಯಾಸಗಳು, ಪ್ರಾಯೋಜನೆಗಳು, ಯೋಜನಾ ಕಾರ್ಯಗಳು, ಸಮಸ್ಯಾ ಪರಿಹಾರ ವಿಧಾನಗಳು, ವೈಜ್ಞಾನಿಕ ಧೋರಣೆ ಮತ್ತು ವಿಧಾನಗಳು ಮುಂತಾದವುಗಳನ್ನು ಅಳವಡಿಸಿಕೊಂಡು, ಸೂಕ್ತ ಸಮಯದಲ್ಲಿ ಅವರಿಗೆ

Digitised by Bharatavani, CIIL

ಯುಕ್ತವಾದ ಮಾರ್ಗದರ್ಶನ, ವಿಮರ್ಶೆ ಮತ್ತು ಮರುಸೂಚನೆಗಳನ್ನು ಅಥವಾ ಹಿಮ್ಮಾಹಿತಿಗಳನ್ನು ನೀಡುತ್ತಾ ಸಾಗಿದರೆ, ಮೇಲೆ ಹೇಳಿದ ಗುರಿಯನ್ನು ತಲುಪಬಹುದಾಗಿದೆ. ಉದಾಹರಣೆಗೆ, ಒಬ್ಬ ದೈಹಿಕ ಶಿಕ್ಷಕನ ಗುರಿಯೆಂದರೆ, ವಿದ್ಯಾರ್ಥಿಗಳಲ್ಲಿ ದೇಹ ದಾರ್ಢ್ಯತೆಯನ್ನು ಮತ್ತು ದೈಹಿಕ ನಮ್ಯತೆಯನ್ನು ಬೆಳೆಸುವುದೇ ಆಗಿದೆ. ಅದರಂತೆಯೇ ಶಾಲಾ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ನಡೆಸುವ ಪಾಠ ಪ್ರವಚನಗಳಿಂದ ವಿದ್ಯಾರ್ಥಿಗಳ ಬೌದ್ಧಿಕ ಸದೃಢತೆಯನ್ನು, ಬೌದ್ಧಿಕ ಸಾಮರ್ಥ್ಯವನ್ನು ಮತ್ತು ಬೌದ್ಧಿಕ ನಮ್ಯತೆ ಮತ್ತು ಮುಕ್ತತೆಯನ್ನು ಬೆಳೆಸುವಂತಿರಬೇಕು. ಇಂತಹ ಬದಲಾವಣೆಯನ್ನು ತರಲೇಬೇಕೆಂದಾದರೆ, ಮೊಟ್ಟಮೊದಲಿಗೆ ಆದ್ಯತೆಯಿಂದ ಮಾರ್ಪಾಡಾಗಬೇಕಾದ ಕ್ಷೇತ್ರವೆಂದರೆ, ಅದು ಪ್ರಸ್ತುತ ಚಲಾವಣೆಯಲ್ಲಿರುವ ಪರೀಕ್ಷಾ ವ್ಯವಸ್ಥೆ ಹಾಗೂ ಮೌಲ್ಯಮಾಪನದ ಕ್ರಮಗಳು.

### ತೆರೆದ ಪುಸ್ತಕ ಪರೀಕ್ಷೆಗಳ ಅಗತ್ಯತೆ

ವಿದ್ಯಾರ್ಥಿಗಳು, ಒಂದು ವೇಳೆ, ಪರೀಕ್ಷೆಯಲ್ಲಿ "ಸಾಪೇಕ್ಷತಾ ಸಿದ್ಧಾಂತ ಅನ್ವೇಷಿಸಿದವರು ಯಾರು?" "ದ್ಯುತಿಸಂಶ್ಲೇಷಣಾ ಪ್ರಕ್ರಿಯೆಯನ್ನು ವಿವರಿಸಿ", "ಆಂಗ್ಲ ಸಾಹಿತ್ಯವನ್ನು ಕುರಿತು ಸುಮಾರು ಮೂರು ಪುಟಗಳಷ್ಟು ವಿವರಿಸಿ" ಎಂಬಂತಹ ಪ್ರಶ್ನೆಗಳನ್ನು ಎದುರಿಸಿದ್ದೇ ಆದರೆ, ಬಹು ಸುಲಭವಾಗಿ ತಮ್ಮ ನೋಟ್ಸ್‌ಗಳಿಂದಲೋ, ಪಠ್ಯಪುಸ್ತಕಗಳಿಂದಲೋ ಉತ್ತರವನ್ನು ಕಂಡುಹಿಡಿದು ನಕಲು ಮಾಡಿಬಿಡಬಹುದು. ಇದರ ಬದಲಿಗೆ, ನಮ್ಮ ಪರೀಕ್ಷೆಗಳು ವಿದ್ಯಾರ್ಥಿಗಳಲ್ಲಿನ, ಸಮಸ್ಯಾ ಪರಿಹಾರದ ಕೌಶಲಗಳನ್ನೋ, ವಿಮರ್ಶಾ ಚಿಂತನವನ್ನೋ, ಅಥವಾ ಸೂಕ್ಷ್ಮ ಅವಲೋಕನ, ವಿಶ್ಲೇಷಣೆ ಮತ್ತು ಸಂಶ್ಲೇಷಣೆ ಈ ಸಾಮರ್ಥ್ಯಗಳನ್ನು ಪರೀಕ್ಷಿಸ ಹೊರಟಾಗ, ಅದು ಪಠ್ಯಪುಸ್ತಕದ ಸೀಮೆಯನ್ನೂ ಮೀರಿದ ಪ್ರಕ್ರಿಯೆಯಾಗುವುದರಲ್ಲಿ ಸಂದೇಹವೇ ಇಲ್ಲ. ಇಂತಹ ಪರೀಕ್ಷೆಗಳು ವಿದ್ಯಾರ್ಥಿಗಳ ಕೇವಲ ನೆನಪಿನ ಶಕ್ತಿಯನ್ನು ಪರೀಕ್ಷಿಸ ಹೊರಟ ಪರೀಕ್ಷೆಗಳಿಗಿಂತ ಶ್ರೇಷ್ಠಮಟ್ಟದ್ದಾಗಿರುತ್ತವೆ ಹಾಗೂ ಈ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನೇರವಾಗಿ ಪಠ್ಯಪುಸ್ತಕ, ಮತ್ತಿತರ ಪರಾಮರ್ಶನ ಸಾಮಗ್ರಿಗಳನ್ನು ಬಳಸಬಹುದಾದರೂ, ನಕಲು ಮಾಡುವ ಸಂದರ್ಭ ಬರುವುದೇ ಇಲ್ಲ. ಏಕೆಂದರೆ ಇಲ್ಲಿಯ ಪ್ರಶ್ನೆಗಳು "ಪರಮಾಣುವನ್ನು ವ್ಯಾಖ್ಯಾನಿಸಿ" ಎಂಬ ರೀತಿಯಲ್ಲಿ ಇರುವುದಿಲ್ಲ. ಸಾಮಾನ್ಯವಾಗಿ ನಮ್ಮ ವಿದ್ಯಾರ್ಥಿಗಳು ಪಠ್ಯಪುಸ್ತಕದ ವಿಚಾರಗಳನ್ನು ಮನನ ಮಾಡಿಕೊಂಡು ತಮ್ಮ ಮೆದುಳಿನಲ್ಲಿ ನೆನಪಾಗಿ ಶೇಖರಿಸಿಟ್ಟುಕೊಳ್ಳುವರು. ಅಂದರೆ ವಿಚಾರಗಳು ಮುದ್ರಣ ರೂಪದಿಂದ ನೆನಪಿನ ಅಂಗಣಕ್ಕೆ ರವಾನೆಯಾಗುವುವು. ನಂತರ ಪರೀಕ್ಷೆಯಲ್ಲಿ ಪುನಃ ನೆನಪಿನಾಳದಿಂದ ಉತ್ತರ ರೂಪದಲ್ಲಿ ಲಿಖಿತ ರೂಪದಲ್ಲಿ ಹಾಳೆಗಳಿಗೆ ರವಾನೆಯಾಗುವುವು. ಕೇವಲ ನೆನಪನ್ನಾಗಿಸುವ ಕಲಿಕಾ ಪ್ರಕ್ರಿಯೆಯನ್ನು ನಿರ್ಮೂಲನ ಮಾಡುವುದೇ ತೆರೆದ ಪುಸ್ತಕ ಪರೀಕ್ಷೆಗಳ ಮುಖ್ಯ ಉದ್ದೇಶವಾಗಿದೆ. ಅಂದರೆ ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಪಠ್ಯಪುಸ್ತಕವನ್ನು ಪರಾಮರ್ಶಿಸಲು ಅವಕಾಶವಿದ್ದರೂ, ಶಿಕ್ಷಕರು ನೀಡುವ ಪ್ರಶ್ನೆಗಳು ಕೇವಲ ಪಠ್ಯಪುಸ್ತಕದ ಮಿತಿಗೆ ಸೀಮಿತವಾಗಿರುವುದಿಲ್ಲ. ಒಂದು ಮುಖ್ಯವಾದ ವಿಚಾರವೆಂದರೆ ತೆರೆದ ಪುಸ್ತಕ ಪರೀಕ್ಷೆಗಳು ಕೇವಲ ವಿದ್ಯಾರ್ಥಿಗಳ ನೆನಪಿನ ಶಕ್ತಿಯನ್ನು ಮಾತ್ರ ಪರೀಕ್ಷಿಸುವುದಿಲ್ಲ. ಇಲ್ಲಿಯೂ ಕೂಡ ನೆನಪಿನ ಶಕ್ತಿಯ ಬಳಕೆ ಆಗುತ್ತದೆ ಮತ್ತು ಪರೀಕ್ಷಿಸಲ್ಪಡುತ್ತದೆ. ಆದರೆ ಇದು ತಟಸ್ಥವಾದ ಅಥವಾ ಜಡವಾದ ನೆನಪಿನ ಪರೀಕ್ಷೆಯಾಗಿರದೆ, ಕ್ರಿಯಾಶೀಲ ನೆನಪಿನ ಪರೀಕ್ಷೆಯಾಗಿರುತ್ತದೆ. ಮುಚ್ಚಿದ ಪುಸ್ತಕ ಪರೀಕ್ಷೆಗಳು, ವಿದ್ಯಾರ್ಥಿಯ ಕಂಠಪಾಠ ಸಾಮರ್ಥ್ಯವನ್ನು, ಉರುಹೊಡೆದು ಬರೆಯಬಲ್ಲ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಇಲ್ಲಿಯ ನೆನಪು, ತಟಸ್ಥ ಅಥವಾ ಜಡ ನೆನಪು, ಆದರೆ ತೆರೆದ ಪುಸ್ತಕ ಪರೀಕ್ಷೆಗಳಲ್ಲಿ ಕ್ರಿಯಾಶೀಲ ನೆನಪಿನ ಪರೀಕ್ಷೆಯು ನಡೆಯುತ್ತದೆ. ಇಲ್ಲಿನ ನೆನಪು ವಿದ್ಯಾರ್ಥಿಗಳಿಗೆ ವಿಮರ್ಶೆ ಮಾಡಲು, ಸೃಜನಶೀಲತೆಯಿಂದ ಚಿಂತಿಸಲು ನೆರವಾಗುವುದು.

ಉದಾಹರಣೆಗೆ, ಯಾವುದೋ ಒಂದು ಪಾಶ್ಚಿಮಾತ್ಯ ಭಾಷೆಯ ನಾಲ್ಕಾರು ವಾಕ್ಯಗಳನ್ನು, ಅವುಗಳ ಅರ್ಥ ಗೊತ್ತಿಲ್ಲದೆಯೂ ಕಲಿತು ಪುನರಪಿ ಪ್ರಸ್ತುತಪಡಿಸುವುದು ಕಷ್ಟದ ಕೆಲಸವೇನಲ್ಲ! ಆದರೆ, ಒಬ್ಬ ರಾಜನೀತಿ ನಿಮಣನಾಗಬೇಕಾದರೆ, ಅವನು ಒಂದು ಘಟನೆಯನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ನೈತಿಕವಾಗಿ ಹೀಗೆ ಅನೇಕ ದೃಷ್ಟಿಕೋನಗಳಿಂಧ ನೋಡಲು ಬರುವಂತಿರಬೇಕು. ಅಷ್ಟೇ ಅಲ್ಲದೆ, ಆ ಘಟನೆಗೆ ತಕ್ಕಂತೆ ಅನೇಕ ತಥ್ಯಾಂಶಗಳನ್ನು ನೆನಪಿನಲ್ಲಿಟ್ಟುಕೊಂಡು ಅನೇಕ ಕೋನಗಳಿಂದ ವಿಶ್ಲೇಷಿಸಿ ಒಂದು ನಿರ್ಧಾರಕ್ಕೆ ಬರಬೇಕಾಗುವುದು. ಮುಂದೆ ತನ್ನ ನಿರ್ಧಾರದಿಂದ ಏನೇನಾಗಬಹುದು ಎಂದು ಮುಂದಾಲೋಚನೆ ಮಾಡುವುದು, ಮತ್ತು ಅಂತಹ ಸಂದರ್ಭ ಬಂದಾಗ ತಾನು ಈಗಾಗಲೇ ನಿರ್ಧರಿಸಿದಂತೆ ನಡೆದುಕೊಳ್ಳುವುದು – ಇವೆಲ್ಲಾ ಆಗಬೇಕು. ಹೀಗೆ ವಿದ್ಯಾರ್ಥಿಗಳೂ ಆಗಬೇಕಾದರೆ, ವಿದ್ಯಾರ್ಥಿಗಳಲ್ಲಿ ಈಗ ನಾವು ಪೋಷಿಸುತ್ತಿರುವ **ಗಿಳಿಪಾಠಗಳು, ಉರುಹೊಡೆದು ಕಲಿಯುವುದು, ಕಂಠಪಾಠ ಮಾಡಿ ಕಲಿಯುವುದು** ಇಂತಹವುಗಳು ಏನೇನೂ ಪ್ರಯೋಜನಕ್ಕೆ ಬಾರವು! ಬದಲಿಗೆ, ತೆರೆದ ಪುಸ್ತಕದ ಪರೀಕ್ಷೆಗಳು ಈ ತೊಡಕನ್ನು ಬಹು ಸುಲಭವಾಗಿ ನಿವಾರಿಸಿ, ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲ ನೆನಪನ್ನು ಉದ್ದೀಪನಗೊಳಿಸುವುದರಲ್ಲಿ ಎರಡು ಮಾತಿಲ್ಲ!

**ತೆರೆದ ಪುಸ್ತಕ ಪರೀಕ್ಷೆಯ ವಿಧಗಳು:** ಇವುಗಳಲ್ಲಿ ಎರಡು ವಿಧಗಳನ್ನು ಕಾಣಬಹುದಾಗಿದೆ.

1. ನಿರ್ಬಂಧಿತ ತೆರೆದ ಪುಸ್ತಕ ಪರೀಕ್ಷೆಗಳು ಮತ್ತು
2. ಅನಿರ್ಬಂಧಿತ ತೆರೆದ ಪುಸ್ತಕ ಪರೀಕ್ಷೆಗಳು.

ನಿರ್ಬಂಧಿತ ತೆರೆದ ಪುಸ್ತಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಗೆ ಒಂದು ಅಥವಾ ಹೆಚ್ಚು ಸಂಖ್ಯೆಯಲ್ಲಿ ಕೇವಲ ನಿರ್ದಿಷ್ಟ ದಾಖಲೆಗಳನ್ನು ಬೋಧಕರ ಅನುಮತಿಯ ಮೇರೆಗೆ ತಮ್ಮ ಜೊತೆಯಲ್ಲಿಯೇ ಇರಿಸಿಕೊಂಡು ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಉದಾಹರಣೆಗೆ ಮುದ್ರಿತ ಲಾಗರಿದಂ ಪುಸ್ತಕ, ಅರ್ಥಕೋಶಗಳು ಅಥವಾ ಶೇಕ್ಸ್‌ಪಿಯರ್‌ನ ಎಲ್ಲ ಕೃತಿಗಳು ಇತ್ಯಾದಿ. ಆದರೆ, ಯಾವುದೇ ರೀತಿಯ ಕೈಬರಹದ ದಾಖಲೆಗಳು ಅಥವಾ ಮುದ್ರಿತ ದಾಖಲೆಗಳನ್ನೂ ಶಿಕ್ಷಕರ ಪೂರ್ವಾನುಮತಿಯಿಲ್ಲದೇ ಪರೀಕ್ಷಾ ಕೊಠಡಿಗೆ ತರುವಂತಿಲ್ಲ ಮತ್ತು ನೋಡಿಕೊಂಡು ಬರೆಯುವಂತಿಲ್ಲ. ಅಷ್ಟೇ ಅಲ್ಲದೆ ಒಂದು ವೇಳೆ ಮುದ್ರಿತ ವಸ್ತುಗಳನ್ನು ತಂದದ್ದೇ ಆದಲ್ಲಿ, ಅಲ್ಲಿಯ ಹಾಳೆಗಳ ಮಾರ್ಜಿನ್‌ಗಳಲ್ಲಿ ಏನನ್ನೂ ಬರೆದಿರಬಾರದು, ಟಿಪ್ಪಣಿಗಳನ್ನು ಬರೆದುಕೊಂಡಿರಬಾರದು ಎಂಬ ನಿಯಮವೂ ಇಲ್ಲಿ ಸೇರ್ಪಡೆಯಾಗುತ್ತದೆ. ಇಲ್ಲಿನ ಪರಾಮರ್ಶನ ವಸ್ತುಗಳು ಪರೀಕ್ಷೆಯಲ್ಲಿನ ಪ್ರಶ್ನೆಪತ್ರಿಕೆಗೆ ಪರಿಶಿಷ್ಟ (appendices) ಅಥವಾ ಪುರವಣಿಗಳಾಗಿ ಕೆಲಸಕ್ಕೆ ಬರುವಂತಿರುತ್ತವೆ.

**ಅನಿರ್ಬಂಧಿತ ತೆರೆದ ಪುಸ್ತಕ ಪರೀಕ್ಷೆಯಲ್ಲಿ** ವಿದ್ಯಾರ್ಥಿಗಳು ತಮಗೆ ಇಷ್ಟಬಂದ, ಸೂಕ್ತವಾದ ಪುಸ್ತಕಗಳನ್ನು ತರಬಹುದು. ಆ ಪುಸ್ತಕಗಳಲ್ಲಿ ತಮ್ಮ ಟಿಪ್ಪಣಿಗಳು, ಮಾರ್ಜಿನ್‌ಗಳಲ್ಲಿ ಸಂಕೇತಾಕ್ಷರಗಳು ಹೀಗೆ ಏನು ಬೇಕಾದರೂ ಇರಬಹುದು ಅಥವಾ ಏನಿಲ್ಲದೆಯೂ ಇರಬಹುದು. ತಮ್ಮ ನೋಟ್ಸ್‌ಗಳನ್ನು ಉಪನ್ಯಾಸ ಸಾರಾಂಶಗಳನ್ನು ಅಥವಾ ತಮ್ಮದೇ ಆದ ಸ್ವಂತ ಲಿಖಿತ ದಾಖಲೆಗಳು ಹೀಗೆ ಏನನ್ನು ಬೇಕಾದರೂ ಪರೀಕ್ಷಾ ಕೊಠಡಿಗೆ ತರಬಹುದು. ಇಂತಹ ಪರೀಕ್ಷೆಗಳಿಗೆ ಒಂದು ನಿರ್ದಿಷ್ಟ ತಂತ್ರಗಳಿಂದ ಕೂಡಿದ ಬೋಧನಾ. ಕಲಿಕಾ ಸನ್ನಿವೇಶಗಳು, ಪ್ರಶ್ನೆಗಳು

Digitised by Bharatavani, CIIL

ಮತ್ತು ಸಮಸ್ಯೆಗಳು ಪೂರ್ವ ಬೇಡಿಕೆಯಾಗಿ ಕಂಡುಬರುತ್ತವೆ. ಹಾಗಾಗಿ, ಇಲ್ಲಿ ವಿದ್ಯಾರ್ಥಿಗಳು ತಮಗೆ ದೊರಕುವ ಜ್ಞಾನವನ್ನು ಹೇಗೆ ಪ್ರಕ್ರಿಯೆಗೆ ಒಳಪಡಿಸಿಕೊಂಡಿದ್ದಾರೆ ಎಂದು ಪರೀಕ್ಷಿಸಲಾಗುವುದೇ ವಿನಃ ಕೇವಲ ಅವರು ಎಷ್ಟು ಮಾಹಿತಿಯನ್ನು ಸಂಗ್ರಹಿಸಿಕೊಂಡಿದ್ದಾರೆ ಎಂಬುದನ್ನಲ್ಲ! ನೇರವಾದ ವಿಷಯಾಧಾರಿತ ಪ್ರಶ್ನೆಗಳಿಗಿಲ್ಲಿ ಜಾಗವಿಲ್ಲ.

ತೆರೆದ ಪುಸ್ತಕದ ಪರೀಕ್ಷೆಗಳಲ್ಲಿನ ಪ್ರಶ್ನೆಗಳು ಹೇಗಿರುತ್ತವೆ ಎಂದರೆ, ವಿದ್ಯಾರ್ಥಿಗಳು ಇವುಗಳನ್ನು ಉತ್ತರಿಸಲು ಶ್ರಮಪಡಬೇಕಾಗುತ್ತದೆ. ಏಕೆಂದರೆ ಇಂತಹ ಪ್ರಶ್ನೆಗಳಿಗೆ ಉತ್ತರಗಳು ಪಠ್ಯಪುಸ್ತಕಗಳಲ್ಲಾಗಲಿ, ಕೈಬರಹಗಳಲ್ಲಾಗಲೀ ಅಥವಾ ತರಗತಿಯ ನೋಟ್ಸ್ ಅಥವಾ ಗೈಡುಗಳಲ್ಲಾಗಲೀ ದೊರಕುವುದಿಲ್ಲ.

**ಈಗ ತೆರೆದ ಪುಸ್ತಕ ಪರೀಕ್ಷೆಗಳ ಸಾಧಕ–ಬಾಧಕಗಳತ್ತ ಕೊಂಚ ಗಮನ ಹರಿಸೋಣ:**

**ಗುಣಾತ್ಮಕ ಅಂಶಗಳು:**

1. ನಿಜವಾದ ಕಲಿಕೆ, ಮತ್ತು ಬೋಧನೆಗೆ ವೇದಿಕೆಯಾಗುವುದು; ಆದ್ದರಿಂದ ವಿದ್ಯಾರ್ಥಿ ಮತ್ತು ಶಿಕ್ಷಕ ಇವರಿಬ್ಬರಿಗೂ ಒಂದು ವಿನೂತನವಾದ ಮನೋಭೂಮಿಕೆಯನ್ನು ಸೃಷ್ಟಿಸುವುದು.
2. ತಕ್ಷಣವೇ ಕಂಡುಬರುವ ಬದಲಾವಣೆಯ ಸೂಚನೆಯೆಂದರೆ, ವಿದ್ಯಾರ್ಥಿಗಳು ಉರು ಹೊಡೆಯುವುದನ್ನು ನಿಲ್ಲಿಸುವರು.
3. ಕಲಿಕೆಯು ಕೇವಲ ನೆನಪುಮಾಡಿಕೊಳ್ಳುವುದಕ್ಕೆ ಸೀಮಿತವಾಗದೆ, ಪರಿಕಲ್ಪನೆಗಳ ಅರ್ಥಪೂರ್ಣ ಕಲಿಕೆಗೆ, ಸಂಗ್ರಹಿಸಿದ ಜ್ಞಾನದ ಸಮನ್ವಯ ರಚನೆಗೆ, ವಿಮರ್ಶೆ ಸಮಸ್ಯಾ ಪರಿಹಾರದ ಕೌಶಲಗಳ ಕಲಿಕೆ ಇವುಗಳೆಡೆಗೆ ವಿಸ್ತಾರಗೊಳ್ಳುವುದು.
4. ಕಂಠಪಾಠ ಮಾಡಿ ಕಲಿಯುವುದು ಅತ್ಯಂತ ತ್ರಾಸದಾಯಕವಾದ ವಿಚಾರ. ಪರೀಕ್ಷೆಗಳಲ್ಲೇ ಇದರ ಪ್ರಾಮುಖ್ಯತೆ ನಶಿಸಿತೆಂದರೆ, ಒಮ್ಮೆಲೇ ಕಂಠಪಾಠಮಾಡುವ ರೇಜಿಗೆಯೇ ಇಲ್ಲವಾಗುವುದು. ಇದರಿಂದಾಗಿ ಕಲಿಕೆಯೊಂದು ಸಂತಸದಾಯಕವಾದ, ತೃಪ್ತಿ ತಂದು ಕೊಡುವಂತಹ ಚಟುವಟಿಕೆಯಾಗಿ ಬಿಡುವುದು. ಸಂತೋಷದಾಯಕವಾದ ಕಲಿಕೆ ಪರಿಣಾಮಕಾರಿ ಕಲಿಕೆ.

**ಮಿತಿಗಳು**

ಪ್ರಸ್ತುತ ವ್ಯವಸ್ಥೆಯಲ್ಲಿ ತೆರೆದ ಪುಸ್ತ ಪರೀಕ್ಷೆಯನ್ನು ಅಳವಡಿಸಲು ಅನೇಕ ಅಡೆತಡೆಗಳಿವೆ.

1. ನೇರವಾಗಿ " 'X' ಕುರಿತು ಒಂದು ಪ್ರಬಂಧ ಬರೆಯಿರಿ"; " 'Y' ಯನ್ನು ವಿವರಿಸಿ"; " 'Z' ನ್ನು ವ್ಯಾಖ್ಯಾನಿಸಿ"–ಹೀಗೆ ಕೇಳಲಾಗುವುದಿಲ್ಲ. ಬದಲಿಗೆ, ಎಚ್ಚರಿಕೆಯಿಂದ, ವಿದ್ಯಾರ್ಥಿಗಳು ಅರ್ಥಮಾಡಿಕೊಂಡಿರುವ ಮಟ್ಟವನ್ನು, ಕಲಿಕಾ ದರ್ಜೆಯನ್ನು, ಗಳಿಸಿದ ಕೌಶಲಗಳನ್ನು ಪರೀಕ್ಷಿಸುವಂತಹ ಪ್ರಶ್ನೆಪತ್ರಿಕೆಯನ್ನು ಬುದ್ಧಿವಂತಿಕೆಯಿಂದ ರಚಿಸಬೇಕಾಗುವುದು, ಇದಕ್ಕೆ ತಕ್ಕಂತೆ ಮೌಲ್ಯಮಾಪನ ಪ್ರಕ್ರಿಯೆಯನ್ನೂ ಬದಲಿಸಿಕೊಳ್ಳಬೇಕಾಗುವುದು.
2. ಪರೀಕ್ಷಾ ಮಾದರಿ ಬದಲಾಯಿತೆಂದರೆ, ಅದಕ್ಕೂ ಮುಂಚಿತವಾಗಿ, ಪಠ್ಯಕ್ರಮ, ಬೋಧನಾ ಕಲಿಕಾ ಪ್ರಕ್ರಿಯೆ, ಸಂಪನ್ಮೂಲ ಮತ್ತು ಆಕರಗಳು ಅಂದರೆ ಇಡೀ ಶಿಕ್ಷಣ ವ್ಯವಸ್ಥೆಯೇ ಸಾದ್ಯಂತವಾಗಿ ಬದಲಾಗಬೇಕಾಗಬಹುದು.
3. ತರಗತಿಗಳಲ್ಲಿ ಅನೇಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಕೌಶಲಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು. ಇದು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ.
4. ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ವಿಷಯಗಳ ರವಾನೆಯಾಗುವ, ಸಾಂಪ್ರದಾಯಿಕ ಶೈಲಿಯ ಶಿಕ್ಷಣವ್ಯವಸ್ಥೆಗೆ ಇಲ್ಲಿ ಅವಕಾಶವೇ ಗೌಣವಾಗಿ, ತಕ್ಷಣ ಒಂದು ಹೊಸ ವ್ಯವಸ್ಥೆಗೆ ವಿದ್ಯಾರ್ಥಿ ಮತ್ತು ಶಿಕ್ಷಕ ವೃಂದದವರು ಹೊಂದಿಕೊಳ್ಳುವುದು ಅಷ್ಟೊಂದು ಸುಲಭದ ಮಾತೇನಲ್ಲ, ಇಲ್ಲಿ ಶಿಕ್ಷಣವು ಮತ್ತು ತರಬೇತಿಗಳು ಶಿಕ್ಷಕರಿಗೂ ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಬೇಕಾಗಿರುವುದು ಸುಸ್ಪಷ್ಟ. ಇದಕ್ಕಾಗಿ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

–ಸು ಸಿ.ಎನ್.

# ದ

## ದರ್ಜಾ ಮಾಪನ

ವ್ಯಕ್ತಿತ್ವವನ್ನು ಕುರಿತು ಮೌಲ್ಯನಿರ್ಧಾರ ಮಾಡುವ ಮುಖ್ಯ ತಂತ್ರಗಳಲ್ಲಿ ದರ್ಜಾ ಮಾಪನ (Rating Scale) ಒಂದಾಗಿದೆ. ದರ್ಜಾ ಮಾಪನವನ್ನು ಸ್ಥಾನ ನಿರ್ಣಯ ಮಾಪನ ಅಥವಾ ನಿರ್ಧಾರಣಾ ಮಾಪನ ಎಂದೂ ಕರೆಯುವರು. ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಸಾಧಾರಣ, ಉತ್ತಮ, ಅತ್ಯುತ್ತಮ, ಪರವಾಗಿಲ್ಲ, ತೃಪ್ತಿಕರ, ಅತೃಪ್ತಿಕರ ಇವೇ ಮೊದಲಾದ ಗುಣವಾಚಕಗಳಿಂದ ವರ್ಗೀಕರಿಸುತ್ತಾರೆ. ಇವುಗಳಲ್ಲಿ ಯಾವುದೇ ಒಂದು ಗುಣ ಬೇರೆ ಬೇರೆ ಮಟ್ಟಗಳಲ್ಲಿ ವಿದ್ಯಾರ್ಥಿಗಳಲ್ಲಿರುವುದರಿಂದ ಅವರ ಗುಣಮಟ್ಟಕ್ಕನುಸಾರವಾಗಿ ವರ್ಗೀಕರಿಸಬಹುದು.

ತಪಶೀಲು ಪಟ್ಟಿ (Inventory) ಮತ್ತು ತನಿಖಾಪಟ್ಟಿ (Check List)ಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ವ್ಯಕ್ತಿ ನೀಡುವ ಉತ್ತರಗಳು ವಿಶ್ವಾಸನೀಯವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕಷ್ಟ. ಒಬ್ಬ ವ್ಯಕ್ತಿ ತಾನು ಉತ್ತಮ ಸಮಾಯೋಜಿತ ಎಂದು ತೋರಿಸಿಕೊಳ್ಳಲು ಸುಳ್ಳು ಉತ್ತರಗಳನ್ನು ನೀಡಬಹುದು. ಆದ್ದರಿಂದ ಪರೀಕ್ಷಕ ತಾನು ಅಧ್ಯಯನ ಮಾಡಬೇಕಾಗಿರುವ ವ್ಯಕ್ತಿಯ ವರ್ತನೆಯನ್ನು ತಾನೇ ಅವಲೋಕಿಸಿ ಅಗತ್ಯ ಮಾಹಿತಿ ಸಂಗ್ರಹಿಸಿಕೊಳ್ಳಬಹುದು. ಹೀಗೆ ಮಾಹಿತಿ ಸಂಗ್ರಹಿಸಲು ದರ್ಜಾ ಮಾಪನಗಳನ್ನು ವಸ್ತುನಿಷ್ಠ ಸಾಧನಗಳನ್ನಾಗಿ ಬಳಸಿಕೊಳ್ಳಬಹುದು. ನಿರ್ಧಾರಣಾಮಾಪನಗಳನ್ನು ಬಳಸಿಕೊಂಡು ಶಿಕ್ಷಕರು ಅಥವಾ ಮಾರ್ಗದರ್ಶಕರು ವ್ಯಕ್ತಿಗಳ ಗುಣಗಳನ್ನು ಅಥವಾ ಮನೋಭಾವಗಳನ್ನು ನಿರ್ಧರಿಸಬಹುದು.

**ಅರ್ಥ ಮತ್ತು ವ್ಯಾಖ್ಯೆ:** ಶಾಲಾ ತರಗತಿಗಳಲ್ಲಿ ವಿದ್ಯಾರ್ಥಿಗಳ ನಡತೆಯನ್ನು ತೃಪ್ತಿಕರ ಗುಣದ ವಿವಿಧ ಮಟ್ಟಗಳನ್ನು ವೀಕ್ಷಣೆಯಿಂದ ನಿರ್ಧರಿಸಲು, ಆ ನಿರ್ಧಾರವನ್ನು ದಾಖಲೆ ಮಾಡಲು ಪದಪುಂಜ,

Digitised by Bharatavani, CIIL

ವ್ಯಾಖ್ಯೆ ಇವುಗಳ ಪಟ್ಟಿಯೇ ದರ್ಜಾಮಾಪನ. ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಗುಣಗಳು ಯಾವ ಮಟ್ಟದಲ್ಲಿವೆ ಎಂಬುದನ್ನು ನಿರ್ಧರಿಸಲು ಬಳಸುವ ತಂತ್ರವೇ ದರ್ಜಾಮಾಪನವಾಗಿದೆ. ತರಗತಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳು ಒಂದೇ ರೀತಿ ಇರುವುದಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯ ವ್ಯಕ್ತಿತ್ವವುಳ್ಳವರಾಗಿರುತ್ತಾರೆ. ಇದು ಯಾವ ಪ್ರಮಾಣದಲ್ಲಿದೆ ಎಂಬುದರ ಸ್ಥಾನ ನಿರ್ಣಯವೇ ದರ್ಜಾ ಮಾಪನವಾಗಿದೆ.

ರುತ್ ಸ್ಟ್ರಾಂಗ್ ಅವರ ಪ್ರಕಾರ "ಇದೊಂದು ನೇರವೀಕ್ಷಣೆ ಆಗಿದ್ದು ಇಚ್ಛಿತ ವ್ಯಕ್ತಿಯಲ್ಲಿರಬೇಕಾದ ಗುಣ ಸಾಮರ್ಥ್ಯಗಳು ಯಾವ ಮಟ್ಟದಲ್ಲಿವೆ ಎಂಬುದನ್ನು ನಿರ್ಧರಿಸುವ ತಂತ್ರವೇ ದರ್ಜಾ ಮಾಪನವಾಗಿದೆ.

- ವಿದ್ಯಾರ್ಥಿಗಳ ವರ್ತನೆ, ವ್ಯಕ್ತಿತ್ವ ಹಾಗೂ ಸಾಮರ್ಥ್ಯಗಳಿಗೆ ಬೆಲೆಕಟ್ಟಲು ನೆರವಾಗುವ ಸಾಧನವೇ ದರ್ಜಾಮಾಪನ.

- ಒಬ್ಬ ವ್ಯಕ್ತಿಯ ವ್ಯತ್ಯಾಸಕ್ಕೆ ಸಂಬಂಧಿಸಿದ ಗುಣಗಳು ಯಾವ ಮಟ್ಟದಲ್ಲಿವೆ ಎಂಬುದನ್ನು ನಿರ್ಧರಿಸಲು ಬಳಸುವ ತಂತ್ರವೇ ದರ್ಜಾ ಮಾಪನವಾಗಿದೆ.

ಪ್ರತಿವರ್ತನೆಯ ಗುಣಮಟ್ಟವನ್ನು ದರ್ಜಾ ಮಾಪನಗಳಲ್ಲಿ ಸೂಚಿಸಿರುವ ಅಳತೆಗೋಲಿನ ಸಹಾಯದಿಂದ ನಿರ್ಧರಿಸಿ ವೀಕ್ಷಕ ವೀಕ್ಷಣೆಯನ್ನು ದಾಖಲು ಮಾಡಬೇಕು. ವೀಕ್ಷಣೆಯಿಂದ ವಿದ್ಯಾರ್ಥಿಯ ವರ್ತನೆಯನ್ನು ದಾಖಲುಮಾಡಿಕೊಳ್ಳಲು, ವರದಿ ತಯಾರಿಸಲು, ತೀರ್ಮಾನಕ್ಕೆಗೊಳ್ಳಲು ದರ್ಜಾ ಮಾಪನವು ಶಿಕ್ಷಕನಿಗೆ ಉಪಯುಕ್ತವಾಗಿದೆ. ದರ್ಜಾ ಮಾಪನಗಳಲ್ಲಿ 3 ಅಂಶ, 5 ಅಂಶ ಮತ್ತು 7 ದರ್ಜಾ ಅಂಶಗಳ ಪಟ್ಟಿಯನ್ನು ಬಳಸಿ ವರ್ತನಾಗುಣಲಕ್ಷಣಗಳ ದರ್ಜೆ ಅಥವಾ ಸ್ಥಾನ ನಿರ್ಣಯಿಸಬಹುದಾಗಿದೆ.

**ಗುಣಲಕ್ಷಣಗಳು**

1. ದರ್ಜಾ ಮಾಪನವು ಸುಧಾರಿತ ಪಟ್ಟಿ ಆಗಿದೆ.
2. ವ್ಯಕ್ತಿಯ ವರ್ತನೆಗಳು ಅಥವಾ ಗುಣಲಕ್ಷಣಗಳನ್ನು ಸುಲಭವಾಗಿ ವೀಕ್ಷಣೆ ಮಾಡಬಹುದು.
3. ವ್ಯಕ್ತಿಯ ನಿರ್ದಿಷ್ಟ ಸಾಮರ್ಥ್ಯಕ್ಕನುಗುಣವಾಗಿ ಸ್ಥಾನ ನಿರ್ಣಯಿಸುತ್ತದೆ ಇಲ್ಲವೇ ವರ್ಗೀಕರಿಸುತ್ತದೆ.
4. ಈ ಮಾಪನವು ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ.
5. ವ್ಯಕ್ತಿತ್ವದ ಗುಣಲಕ್ಷಣಗಳು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರಬೇಕು.

**ವಿಧಾನಗಳು**

ದರ್ಜಾ ಮಾಪನದಲ್ಲಿ ಮೂರು ವಿಧಾನಗಳಿವೆ. ಅವುಗಳೆಂದರೆ,

1. ವರ್ಣನಾತ್ಮಕ ದರ್ಜಾ ಮಾಪನ
2. ಸಂಖ್ಯಾತ್ಮಕ ದರ್ಜಾ ಮಾಪನ
3. ಆಲೇಖ ದರ್ಜಾ ಮಾಪನ

**1. ವರ್ಣನಾತ್ಮಕ ದರ್ಜಾ ಮಾಪನ (Descriptive Rating Scale)**

ಈ ಮಾಪನವು ವ್ಯಕ್ತಿಯ ವರ್ತನೆಯನ್ನು ಬಿಂಬಿಸುವ ವರ್ಣನಾತ್ಮಕ ವಿವರವನ್ನು ಒಳಗೊಂಡಿರುತ್ತದೆ. ಮೌಲ್ಯ ನಿರ್ಧರಿಸಬೇಕಾದ ನಿರ್ದಿಷ್ಟ ವಿವಿಧ ಗುಣಮಟ್ಟಗಳನ್ನು ಮತ್ತು ವೀಕ್ಷಣೆಯ ವರ್ತನೆಗಳ ವರ್ಣನೆಯನ್ನು ಪಟ್ಟಿಮಾಡಲಾಗಿರುತ್ತದೆ. ವೀಕ್ಷಕನು ವೀಕ್ಷಿತ ವರ್ತನೆಯನ್ನು ಸಮಂಜಸ ವರ್ಣನೆಯ ಮುಂದೆ ✓ ಗುರುತು ಹಾಕಿ ವ್ಯಕ್ತಿಯ ಗುಣಮಟ್ಟವನ್ನು ದಾಖಲೆ ಮಾಡಬೇಕು. ಈ ವಿಧಾನವು ಮೇಲ್ನೋಟಕ್ಕೆ ತನಿಖಾಪಟ್ಟಿಯಂತೆ ಕಂಡುಬಂದರೂ ಅದಕ್ಕಿಂತ ಸುಧಾರಿತ ಮಾಪನವಾಗಿದೆ. ತನಿಖಾ ಪಟ್ಟಿಯಲ್ಲಿ ಗುಣಾವಗುಣಗಳು ಇದೆಯೇ ಇಲ್ಲವೇ ಎಂದು ಮಾತ್ರ ತಿಳಿಯುತ್ತದೆ. ಆದರೆ ದರ್ಜಾ ಮಾಪನದಲ್ಲಿ ಆ ಗುಣಾವಗುಣಗಳು ಎಷ್ಟರಮಟ್ಟದಲ್ಲಿವೆ ಎಂದು ತಿಳಿದುಬರುತ್ತದೆ.

ಈ ಮಾಪನವು ಸಂಘಪ್ರವೃತ್ತಿ, ವಿಧೇಯತೆ, ಪ್ರಾಮಾಣಿಕತೆ, ಕಾರ್ಯನಿರ್ವಹಣೆ, ಕಲ್ಪನಾಶಕ್ತಿ, ಸೃಜನಾತ್ಮಕತೆ ಇತ್ಯಾದಿ ಅಳತೆಗಳಲ್ಲಿ ಉಪಯೋಗಕ್ಕೆ ಬರುತ್ತದೆ.

**ಉದಾಹರಣೆಗೆ: ಸಂಘ ಪ್ರವೃತ್ತಿಗೆ ಸಂಬಂಧಿಸಿದ ಮಾಪನ.** ಸೂಚನೆ: ವೀಕ್ಷಿತ ವರ್ತನೆಯನ್ನು ಸೂಕ್ತವಾಗಿ ವಿವರಿಸುವ ಹೇಳಿಕೆಯ ಮುಂದೆ ಪಟ್ಟಿಯಲ್ಲಿ ✓ ಗುರುತು ಹಾಕಿರಿ.

| | **ವೀಕ್ಷಿತ ವರ್ತನೆಗಳು** | **ಯಾವಾಗಲೂ** | **ಹೆಚ್ಚಿನ ಸಮಯದಲ್ಲಿ** | **ಕೆಲವು ಸಲ** | **ಅಪರೂಪ ಕ್ಕೊಮ್ಮೆ** | **ಯಾವಾಗಲೂ ಇಲ್ಲ** |
|---|---|---|---|---|---|---|
| 1 | ಶಾಲಾ ಚಟುವಟಿಕೆಗಳಲ್ಲಿ ಇತರರೊಡನೆ ಸಹಕರಿಸುತ್ತಾನೆ. | | | | | |
| 2 | ಇತರರ ಸಹಾಯ ಬಯಸುತ್ತಾನೆ. | | | | | |
| 3 | ಬೇರೆಯವರ ಕೆಲಸದಲ್ಲಿ ಭಾಗಿ ಆಗಿ ಸಹಕಾರ ನೀಡುತ್ತಾನೆ. | | | | | |
| 4 | ಇತರರ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಾನೆ. | | | | | |
| 5 | ಸಾಮೂಹಿಕ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಾನೆ. | | | | | |
| 6 | ಚಟುವಟಿಕೆಯಲ್ಲಿ ಉಂಟಾದ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. | | | | | |

Digitised by Bharatavani, CIIL

**2. ಸಂಖ್ಯಾತ್ಮಕ ದರ್ಜಾ ಮಾಪನ** (Numerical Rating Scale)

ವಿದ್ಯಾರ್ಥಿಗಳ ವರ್ತನೆ ಅಥವಾ ಸಾಮರ್ಥ್ಯವನ್ನು ಅಂಕಿ-ಸಂಖ್ಯೆಗಳೊಂದಿಗೆ ಹೋಲಿಕೆ ಮಾಡಿ ಅವನ ಸ್ಥಾನ / ದರ್ಜೆ / ಶ್ರೇಣಿಯನ್ನು ನಿರ್ಧರಿಸುವುದಕ್ಕೆ ಸಂಖ್ಯಾತ್ಮಕ ದರ್ಜಾ ಮಾಪನ ಎನ್ನುವರು.

ಇದು ಅತ್ಯಂತ ಸರಳ ಮಾದರಿಯ ಮಾಪನವಾಗಿದೆ. ವರ್ತನೆ ಬಗ್ಗೆ ಮೌಲ್ಯನಿರ್ಧರಿಸಬೇಕಾದ ಗುಣವನ್ನು ಪ್ರತಿಬಿಂಬಿಸುವ ವರ್ತನೆಗಳ ಪಟ್ಟಿಯನ್ನು, ಗುಣಮಟ್ಟವನ್ನು ಸೂಚಿಸಲು ಸಂಖ್ಯಾಸೂತ್ರವನ್ನು ಕೊಡಲಾಗುತ್ತದೆ. ದತ್ತಸೂತ್ರಕ್ಕನುಗುಣವಾಗಿ ಯುಕ್ತ ಹೇಳಿಕೆಯ ಮುಂದೆ ಕ್ರಮಸಂಖ್ಯೆಗಳನ್ನು ಅಥವಾ ಸಂಖ್ಯೆಗಳಿಗೆ ಚಿಕ್ಕದಾದ ವೃತ್ತವನ್ನು ಸುತ್ತುವುದರ ಮೂಲಕ ದಾಖಲೆ ಮಾಡಬೇಕು. ವಿವಿಧ ವರ್ತನೆಯ ಗುಣಲಕ್ಷಣಗಳು ಹೇಳಿಕೆರೂಪದಲ್ಲಿರುತ್ತವೆ. ಅಭಿಪ್ರಾಯವನ್ನು ಸೂಚಿಸಬೇಕಾದ ಸಂಖ್ಯೆಗಳನ್ನು ಪ್ರತಿಯೊಂದು ಗುಣಲಕ್ಷಣಕ್ಕೆ ತಕ್ಕಂತೆ ಸೂಚಿಪಟ್ಟಿಯ ಸಹಾಯದಿಂದ ದಾಖಲಾತಿ ಕಾರ್ಯ ಮುಂದುವರಿಯಬೇಕು.

**ಉದಾಹರಣೆಗೆ : ಒಬ್ಬ ವಿದ್ಯಾರ್ಥಿ ತರಗತಿಯ ಸಮೂಹ ಚರ್ಚೆಯಲ್ಲಿ ಭಾಗವಹಿಸುವುದರ ಬಗ್ಗೆ ಸೂಚನೆ:** ಸೂಕ್ತ ಸಂಖ್ಯೆಗೆ ವೃತ್ತವನ್ನು ಸುತ್ತುವುದರ ಮೂಲಕ ವಿದ್ಯಾರ್ಥಿಯು ತರಗತಿಯಲ್ಲಿ ನಡೆಯುವ ಚರ್ಚೆಯಲ್ಲಿ ಯಾವ ಪ್ರಮಾಣದಲ್ಲಿ ಭಾಗವಹಿಸುತ್ತಾನೆ ಎಂಬುದನ್ನು ಸೂಚಿಸಬೇಕು.

| | ಅಭಿಪ್ರಾಯ | ಕ್ರಮಾಂಕ |
|---|---|---|
| 1 | ತೃಪ್ತಿಕರ | |
| 2 | ಸಾಧಾರಣಕ್ಕಿಂತ ಕಡಿಮೆ | |
| 3 | ಸಾಧಾರಣ | |
| 4 | ಉತ್ತಮ | |
| 5 | ಅತ್ಯುತ್ತಮ | |

**3. ರೇಖಾತ್ಮಕ ದರ್ಜಾಮಾಪನ** (Graphic Rating Scale): ವಿದ್ಯಾರ್ಥಿಗಳ ವರ್ತನೆ ಹಾಗೂ ವ್ಯಕ್ತಿತ್ವದ ಗುಣಲಕ್ಷಣಗಳನ್ನು ವಸ್ತುನಿಷ್ಠವಾಗಿ ರೇಖೆಯ ಮೇಲೆ ಗುರುತಿಸಿ ಅವನ ಸ್ಥಾನವನ್ನು ನಿರ್ಧರಿಸುವ ಕ್ರಮಕ್ಕೆ ರೇಖಾತ್ಮಕ ದರ್ಜಾ ಮಾಪನ ಎನ್ನುವರು.

ಕಾಗದದ ಮೇಲೆ ಅಡ್ಡಲಾಗಿ ಎಳೆದಿರುವ ಸರಳ ರೇಖೆಯ ಮೇಲೆ ನಿರ್ದಿಷ್ಟ ಅಂತರಗಳಲ್ಲಿ ಗುರುತಿಸಲಾದ ಬಿಂದುಗಳ ಕೆಳಗೆ ಮೌಲ್ಯನಿರ್ಧರಿಸಬೇಕಾದ ಗುಣದ ವಿವಿಧ ಮಟ್ಟಗಳನ್ನು ಪ್ರತಿಬಿಂಬಿಸುವ ವೀಕ್ಷಣೆಯ ವರ್ತನೆಗಳನ್ನು ಬರೆಯಬೇಕು. ಗೆರೆಯ ಮೇಲೆ ಯುಕ್ತ ಸ್ಥಳದಲ್ಲಿ ತಾಳೆ ಗುರುತುಗಳನ್ನು ಹಾಕುವುದರ ಮೂಲಕ ವೀಕ್ಷಕ ವೀಕ್ಷಣೆಯನ್ನು ದಾಖಲು ಮಾಡಬೇಕು.

**ಉದಾಹರಣೆಗೆ: ಕೈಬರಹದ ದರ್ಜಾಮಾಪನ ಸೂಚನೆ:** ಅಡ್ಡವಾಗಿ ಎಳೆದಿರುವ ಗೆರೆಯಮೇಲೆ ✓ ಗುರುತು ಹಾಕುವುದರ ಮೂಲಕ ವಿದ್ಯಾರ್ಥಿಯ ಕೈಬರಹದ ಗುಣಮಟ್ಟವನ್ನು ಸೂಚಿಸುವುದು.

ತುಂಬಾ ಸುಂದರ — ಸುಂದರ — ಸಾಮಾನ್ಯ — ಸ್ವಲ್ಪವೂ ಚೆನ್ನಾಗಿಲ್ಲ — ಓದಲು ಸಾಧ್ಯವೇ ಇಲ್ಲ

**ಉಪಯೋಗಗಳು**

1. ದರ್ಜಾ ಅಥವಾ ನಿರ್ಧಾರಣಾ ಮಾಪನವನ್ನು ಅನೇಕ ಸನ್ನಿವೇಶ ಮತ್ತು ಸಂದರ್ಭಗಳಲ್ಲಿ ಬಳಸಬಹುದು.
2. ವಿದ್ಯಾರ್ಥಿಯ ವೈಯಕ್ತಿಕ ಮತ್ತು ಅನೇಕ ಸಾಮಾಜಿಕ ಗುಣಗಳ ಗುಣಮಟ್ಟವನ್ನು ನಿರ್ಧರಿಸಲು ಇದು ಉಪಯುಕ್ತವಾಗಿದೆ.
3. ಇದು ತಾಳೆಪಟ್ಟಿಗಿಂತಲೂ ಉತ್ತಮವಾಗಿದ್ದು ಇದರ ವಿಶ್ವಸನೀಯತೆ ವೀಕ್ಷಕನ ವಸ್ತುನಿಷ್ಠತೆಯನ್ನು ಅವಲಂಬಿಸಿದೆ.
4. ಶಿಕ್ಷಕರ ಬೋಧನೆಯ ನಿರ್ದಿಷ್ಟ ಪರಿಣಾಮ ಮತ್ತು ಶಿಕ್ಷಣದ ಉದ್ದೇಶಗಳ ಮೌಲ್ಯಮಾಪನ ಮಾಡಲು ಶಿಕ್ಷಕರಿಗೂ ಉಪಯುಕ್ತವಾಗಿದೆ.
5. ವಿದ್ಯಾರ್ಥಿ ಹಾಗೂ ಶಿಕ್ಷಕರ ಸ್ಥಾನಮಟ್ಟ ನಿರ್ಧರಿಸಲು ಉಪಯುಕ್ತವಾಗಿದೆ.
6. ವಿದ್ಯಾರ್ಥಿಗಳಲ್ಲಿ ಶಿಸ್ತು, ವಿಧೇಯತೆ, ಸಹಕಾರ, ಆತ್ಮವಿಶ್ವಾಸ, ಮನೋಧೋರಣೆ, ಉದ್ಯೋಗಶೀಲತೆ ಗುರುತಿಸಲು ಸಹಾಯಕವಾಗಿದೆ
7. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಗುರುತಿಸಲು ಉಪಯುಕ್ತವಾಗಿದೆ.
8. ಇದು ತನಿಖಾಪಟ್ಟಿಗಿಂತಲೂ ಉತ್ತಮವಾಗಿದೆ.
9. ಸಾಮೂಹಿಕ ಪ್ರಾರ್ಥನೆ, ಸ್ಕೌಟ್, ಗೈಡ್ಸ್, ಎನ್.ಎಸ್.ಎಸ್. ಮುಂತಾದ ಸಮಾಜ ಸೇವಾ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ಅಳೆಯಲು ಉಪಯುಕ್ತವಾಗಿದೆ.
10. ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿಯನ್ನು ತಿಳಿಯಬಹುದು.

**ಮಿತಿಗಳು**

1. ಕೇವಲ ದರ್ಜಾಮಾಪನದ ಸಹಾಯದಿಂದ ವಿದ್ಯಾರ್ಥಿಗಳ ಸಮಗ್ರ ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ.
2. ವಿದ್ಯಾರ್ಥಿಗಳ ಮನೋಭಾವ ಕ್ಷಣಕ್ಷಣಕ್ಕೂ ಬದಲಾಗುವುದರಿಂದ ನಿರ್ದಿಷ್ಟವಾಗಿ ನಿರ್ಧರಿಸುವುದು ಕಷ್ಟ.
3. ನಿರ್ಧಾರಣಾಮಾಪನದ ವರ್ತನಾಂಶಗಳ ತಯಾರಿಕೆಯಲ್ಲಿ ತರಬೇತಿ ಹೊಂದಿದ ಶಿಕ್ಷಕರ ಅಗತ್ಯವಿದೆ.
4. ನಿರ್ಧಾರಣಾಮಾಪನಗಳ ಬಳಕೆಯಲ್ಲಿ ತಾರ್ಕಿಕ ತೀರ್ಮಾನಗಳು ಬಹಳಷ್ಟು ಕಡಿಮೆ ಇರುತ್ತದೆ.
5. ಇದನ್ನು ಬಳಸುವವರು ಪೂರ್ವಗ್ರಹ ಪೀಡಿತರಾಗಿದ್ದರೆ ಅದು ವ್ಯಕ್ತಿನಿಷ್ಠತೆಯನ್ನುಂಟು ಮಾಡುತ್ತದೆ.

Digitised by Bharatavani, CIIL

6. ಎಲ್ಲ ಶಿಕ್ಷಕರ ನಿರ್ಣಾಯಕ ಶಕ್ತಿ ಒಂದೇ ಗುಣಮಟ್ಟದಲ್ಲಿರುವುದಿಲ್ಲ.
7. ದರ್ಜಾ ಮಾಪನದಿಂದ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವವನ್ನು ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ.

ಹೀಗೆ ದರ್ಜಾ ಮಾಪನವು ಎಷ್ಟೇ ಗುಣದೋಷಗಳನ್ನು ಹೊಂದಿದ್ದರೂ ವಿದ್ಯಾರ್ಥಿಗಳ ಶಕ್ತಿ ಸಾಮರ್ಥ್ಯಗಳನ್ನು ಆಸಕ್ತಿ, ಅಭಿರುಚಿ, ವ್ಯಕ್ತಿತ್ವವನ್ನು ನಿರ್ಣಯಿಸುವಲ್ಲಿ ಮುಖ್ಯ ಪಾತ್ರವಹಿಸುತ್ತದೆ.

–ಕೆ.ಎಸ್.ರಾ.

## ದತ್ತಾಂಶಗಳ ಆಲೇಖೀಕರಣ

ದತ್ತಾಂಶಗಳ ಆಲೇಖೀಕರಣಗಳು ಪ್ರಮುಖವಾಗಿ ಸಂಗ್ರಹಿಸಿದ ಹಾಗೂ ವ್ಯವಸ್ಥಿತವಾಗಿ ವಿಶ್ಲೇಷಿಸಲಾದ ದತ್ತಾಂಶಗಳನ್ನು ಚಿತ್ರಣಗಳ ಮೂಲಕ ಪ್ರತಿನಿಧಿಸುತ್ತವೆ. ಸಂಗ್ರಹಿಸಿದ ಅಂಕಿ ಅಂಶಗಳನ್ನು ಪರಿಣಾಮಕಾರಿಯಾಗಿ ಆಲೇಖಗಳ ಮೂಲಕ ಅಭಿವ್ಯಕ್ತಗೊಳಿಸಲಾಗುವುದು. ಇದರಿಂದಾಗಿ ಇವು ಹೆಚ್ಚು ಆಕರ್ಷಕವಾಗುತ್ತವೆ. ಹಾಗೂ ವ್ಯಕ್ತಿಗಳ ಮನಸ್ಸಿನ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ.

ಸಾಮಾನ್ಯವಾಗಿ ಓದುಗರು ಓದಿ ತಿಳಿಯುವ ಮಾಹಿತಿಗಿಂತ ವೀಕ್ಷಿಸಿ ತಿಳಿಯುವ ಮಾಹಿತಿಗೆ ಆದ್ಯತೆ ನೀಡುತ್ತಾರೆ. ಆದ್ದರಿಂದ ದತ್ತಾಂಶಗಳ ಆಲೇಖೀಕರಣದ ಆವಶ್ಯಕತೆ ಹೆಚ್ಚು ಕಂಡುಬರುತ್ತದೆ. ದತ್ತಾಂಶಗಳ ಆಲೇಖೀಕರಣವನ್ನು (ಇದನ್ನು ಆಲೇಖಿಯ ಪ್ರತಿನಿಧೀಕರಣ Graphical Representation ಎಂದೂ ಹೇಳುತ್ತಾರೆ.) ದತ್ತಾಂಶಗಳ ದೃಶ್ಯರೂಪ ವಿಶ್ಲೇಷಣೆಗಾಗಿ ಮಾಡಲಾಗುತ್ತದೆ.

ಓದುಗರಿಗೆ ಈ ಕ್ರಮ ಹೆಚ್ಚು ಆಕರ್ಷಣೀಯವೆನ್ನಿಸುತ್ತದೆ ಈ ಪ್ರಕ್ರಿಯೆ ಅರ್ಥೈಸಿಕೊಳ್ಳಲು ಸುಲಭ ಹಾಗ ಪರಿಣಾಮಕಾರಿ, ವೀಕ್ಷಿಸಿದ ವಿಚಾರಗಳು ದೀರ್ಘಕಾಲದವರೆಗೆ ಮನಸ್ಸಿನಲ್ಲಿ ನಿಲ್ಲುತ್ತವೆ. ಸಂಶೋಧಕನಿಗೆ ಹೆಚ್ಚು ಪ್ರಯೋಜನಕಾರಿ.

ಆಲೇಖನಗಳನ್ನು ರಚಿಸುವಾಗ ಕೆಲವು ಮೂಲಭೂತ ಅಂಶಗಳನ್ನು ಗಮನಿಸಬೇಕು. ಎರಡು ಸರಳರೇಖೆಗಳು ಲಂಬೀಯವಾಗಿ ಪರಸ್ಪರ ಛೇದಿಸಿದಾಗ (ಚಿತ್ರ ನೋಡಿ) ನಾಲ್ಕು ಚತುರ್ಥಕ (quadrants) ಭಾಗಗಳಾಗುತ್ತವೆ. ಬೀಜ ಗಣಿತೀಯವಾಗಿ ಈ ನಾಲ್ಕು ಖಂಡಗಳನ್ನು ಕ್ರಮವಾಗಿ ಒಂದನೇ ಚತುರ್ಥಕ (+ +) ಎರಡನೇ ಚತುರ್ಥಕ (– –), ಮೂರನೇ ಚತುರ್ಥಕ (–, –) ಹಾಗೂ ನಾಲ್ಕನೇ ಚತುರ್ಥಕ (+, –) ಎಂದು ಗುರುತಿಸಲಾಗುತ್ತದೆ.




ಸಂಗ್ರಹಿಸಿದ ದತ್ತಾಂಶಗಳನ್ನು ವರ್ಗಾಂತರಗಳಾಗಿ ವಿಂಗಡಿಸಿ X ಅಕ್ಷರದಲ್ಲಿ ವರ್ಗಾಂತರಗಳನ್ನೂ ಮತ್ತು ಆವೃತ್ತಿಗಳನ್ನುನ್ನೂ Y ಅಕ್ಷರದಲ್ಲಿಯೂ ಪ್ರತಿನಿಧಿಸಲಾಗುತ್ತದೆ. ಆಲೇಖವು ಅರ್ಥಪೂರ್ಣವಾಗಿರಲು X ಅಕ್ಷದ ಉದ್ದದ ಶೇಕಡ 75 ರಿಂದ 80ರವರೆಗೆ Y ಅಕ್ಷದ ಎತ್ತರ ಇರುವಂತೆ ಕಾಯ್ದುಕೊಳ್ಳಲಾಗುವುದು. ದತ್ತಾಂಶವನ್ನು ವರ್ಗಾಂತರಗಳಾಗಿ ವಿಂಗಡಿಸುವಾಗ ಅವುಗಳ ವ್ಯಾಪ್ತಿ (Range) ಯನ್ನು 8 ರಿಂದ 10 ಅಥವಾ 12 ರವರೆಗೆ ಬರುವಂತೆ ನೋಡಿಕೊಳ್ಳುವುದು ಒಳ್ಳೆಯದು. ಇದು ದತ್ತಾಂಶಗಳಲ್ಲಿನ ವ್ಯಾಪ್ತಿ ಹಾಗೂ ವರ್ಗಾಂತರದ ಅಂತರದ ಮೇಲೆ ಅವಲಂಬಿತವಾಗಿರುತ್ತದೆ.

### ಆವೃತ್ತಿ ಬಹುಭುಜಾಕೃತಿ (Frequency Polygon)

ಬಹುಭುಜಾಕೃತಿ ಅಂದರೆ ಅನೇಕ ಕೋನಗಳುಳ್ಳ ನಕ್ಶೆ. ಈ ನಕ್ಷೆಯನ್ನು ವರ್ಗಾಂತರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಆವೃತ್ತಿಗಳ ಆಧಾರದಲ್ಲಿ ರಚಿಸಲಾಗುವುದು.

"ಆವೃತ್ತಿ ವಿತರಣೆಯನ್ನು ರೇಖಾ ಅಲೇಖದ (ನಕ್ಷೆ) ರೂಪದಲ್ಲಿ ರಚಿಸುವ ವಿಧಾನಕ್ಕೆ ಆವೃತ್ತಿ "ಬಹುಭುಜಾಕೃತಿ ಎನ್ನುವರು." (Frequency Polygon)

**ಕ್ರಮ**

1. ಎಲ್ಲಾ ವರ್ಗಾಂತರಗಳ ಮಧ್ಯಬಿಂದುಗಳನ್ನು ಕಂಡುಹಿಡಿಯುವುದು.
2. ಮಧ್ಯಬಿಂದುಗಳ X ಅಕ್ಷದ ಮೇಲೆ, ಆವೃತ್ತಿಗಳನ್ನು (f) Y ಅಕ್ಷದ ಮೇಲೆ ಗುರುತಿಸುವುದು.
3. ಮಧ್ಯಬಿಂದುಗಳನ್ನು ಆವೃತ್ತಿಗಳನ್ನು ಗುರುತಿಸಿದ ನಂತರ ಬಂದ ವಿವಿಧ ಬಿಂದುಗಳನ್ನು ಸರಳ ರೇಖೆಯಿಂದ ಸೇರಿಸಿದಾಗ ಆವೃತ್ತಿಯು ಬಹುಭುಜಾಕೃತಿಯ ರೂಪ ಪಡೆಯುತ್ತದೆ.

**ರಚನೆ**

50 ವಿದ್ಯಾರ್ಥಿಗಳ ಸಾಧನ ಅಂಕಗಳ ಆವೃತ್ತಿ ವಿತರಣೆಯ ಆವೃತ್ತಿ ಬಹುಭುಜಾಕೃತಿಯನ್ನು ಈ ಕೆಳಗಿನಂತೆ ರಚಿಸಲಾಗಿದೆ.

Digitised by Bharatavani, CIIL

| ವರ್ಗಾಂತರಗಳು | ಮಧ್ಯಬಿಂದು | ಆವೃತ್ತಿ |
|---|---|---|
| 95 – 99 | 97 | 1 |
| 90 – 94 | 92 | 2 |
| 85 – 89 | 87 | 4 |
| 80 – 84 | 82 | 5 |
| 75 – 79 | 77 | 8 |
| 70 – 74 | 72 | 10 |
| 65 – 69 | 67 | 6 |
| 60 – 64 | 62 | 4 |
| 55 – 59 | 57 | 4 |
| 50 – 54 | 52 | 2 |
| 45 – 49 | 47 | 3 |
| 40 – 44 | 42 | 1 |
| | | **N = 50** |

**ನಯಗೊಳಿಸಿದ ಆವೃತ್ತಿ ಬಹುಭುಜಾಕೃತಿ ವಕ್ರ (Smoothed Frequency Curve)**

ಈ ರೇಖಾಲೇಖವನ್ನು ರಚಿಸುವಾಗ ಆವೃತ್ತಿಗಳ ಸರಾಸರಿಯನ್ನು ತೆಗೆದುಕೊಳ್ಳಬೇಕು. ಅಂದರೆ ವಿತರಣೆಯ ಹಿಂದಿನ ಆವೃತ್ತಿ ಸಂಖ್ಯೆ, ಮುಂದಿನ ಆವೃತ್ತಿ ಸಂಖ್ಯೆ ಮತ್ತು ಪ್ರಸ್ತುತ ಆವೃತ್ತಿ ಸಂಖ್ಯೆ ಈ 3 ಸಂಖ್ಯೆಗಳ ಸರಾಸರಿ ತೆಗೆದು ನಕ್ಷೆಯನ್ನು ಈ ಕೆಳಗಿನಂತೆ ರಚಿಸಲಾಗಿದೆ.

x–ಅಕ್ಷದ ಮೇಲೆ ಮಧ್ಯಬಿಂದುಗಳನ್ನು y–ಅಕ್ಷದ ಮೇಲೆ ನಯಗೊಳಿಸಿದ ಆವೃತ್ತಿಯ ಬೆಲೆಯನ್ನು ಗುರುತಿಸಿ ಈ ನಕ್ಷೆಯನ್ನು ರಚಿಸಲಾಗಿದೆ.




| ವರ್ಗಾಂತರಗಳು | ಮಧ್ಯಬಿಂದು | ಆವೃತ್ತಿ | ನಯಗೊಳಿಸಿದ ಆವೃತ್ತಿ |
|---|---|---|---|
| 100 – 104 | 102 | 0 | 0.33 |
| 95 – 99 | 97 | 1 | 1.00 |
| 90 – 94 | 92 | 2 | 2.33 |
| 85 – 89 | 87 | 4 | 3.67 |
| 80 – 84 | 82 | 5 | 5.67 |
| 75 – 79 | 77 | 8 | 7.67 |
| 70 – 74 | 72 | 10 | 8.00 |
| 65 – 69 | 67 | 6 | 6.67 |
| 60 – 64 | 62 | 4 | 4.67 |
| 55 – 59 | 57 | 4 | 3.33 |
| 50 – 54 | 52 | 2 | 3.00 |
| 45 – 49 | 47 | 3 | 2.00 |
| 40 – 44 | 42 | 1 | 1.33 |
| 35 – 39 | 37 | 0 | 0.33 |
| | | **N = 50** | **50.00** |

Digitised by Bharatavani, CIIL

### ಸ್ತಂಭನಕ್ಷೆ (Histogram)

ಇದು ದತ್ತಾಂಶಗಳನ್ನು ಪ್ರತಿನಿಧಿಸುವ ಮತ್ತೊಂದು ಬಗೆ. ವರ್ಗಾಂತರದಲ್ಲಿನ ಒಟ್ಟು ಆವೃತ್ತಿಗಳ ಪೂರ್ಣ ಚಿತ್ರಣವನ್ನು ಈ ನಕ್ಷೆ ನೀಡುತ್ತದೆ. ಇದರಲ್ಲಿ ಪ್ರತಿಯೊಂದು ವರ್ಗಾಂತರ (x-ಅಕ್ಷ)ದ ಮೇಲೆ ಆವೃತ್ತಿಗೆ ಅನುಗುಣವಾಗಿ ಸ್ತಂಭ ರಚಿಸಲಾಗುತ್ತದೆ. ಎಲ್ಲಾ ಸ್ತಂಭಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. x–ಅಕ್ಷದ ಮೇಲೆ ವರ್ಗಾಂತರ ಹಾಗೂ y–ಅಕ್ಷದ ಮೇಲೆ ಆವೃತ್ತಿಗಳ ಸಂಖ್ಯೆಯನ್ನು ಸ್ತಂಭರೂಪದಲ್ಲಿ ತೋರಿಸಿ ಸ್ತಂಭ ನಕ್ಷೆಯನ್ನು ರಚಿಸಲಾಗುತ್ತದೆ. ಈ ಆಯತಾಕೃತಿಯನ್ನು ಬೇರ್ಪಡಿಸಿದಲ್ಲಿ ಸ್ತಂಭಲೇಖ ನಕ್ಷೆ ಉಂಟಾಗುತ್ತದೆ. ಸ್ತಂಭಗಳನ್ನು ರಚಿಸುವಾಗ ದತ್ತಾಂಶದ ಚರಾಂಶ ನಿರಂತರ ಚಲನವಾದರೆ (ಉದಾ: ಸಾಧನೆಯ ಅಂಕಗಳು, ಬುದ್ಧಿಶಕ್ತಿ ಅಂಕಗಳು) ಸ್ತಂಭಗಳು ಒಂದಕ್ಕೊಂದು ಅಂಟಿಕೊಂಡಿರುವಂತೆ ಚಿತ್ರಿಸಲಾಗುತ್ತದೆ. ಪ್ರತ್ಯೇಕ ಚರಾಂಶ ಅಥವಾ ಗುಂಪುಗಳ ದತ್ತಾಂಶಗಳಾದರೆ ಸ್ತಂಭಗಳ ನಡುವೆ ಅಂತರ ತೋರಿಸಲಾಗುತ್ತದೆ.







### ವೃತ್ತ ಖಂಡಾಲೇಖ ಅಥವಾ ಪೈ ನಕ್ಷೆ (Pie Diagram)

ಪೈ ಆಕೃತಿಯು ಒಂದು ವರ್ತುಳವನ್ನು (360°) ಚಲಕಗಳ ಮೌಲ್ಯಕ್ಕೆ ಅನುಸಾರವಾಗಿ ವಿಭಜಿಸಿ ರಚಿಸಲಾಗುತ್ತದೆ. ವರ್ತುಳಗಳನ್ನು ಚರಾಂಶದ ಹಂಚಿಕೆ (ಶೇಕಡಾವಾರು, ಅನುಪಾತ)ಗೆ ಅನುಗುಣವಾಗಿ ಅನೇಕ ತ್ರಿಜ್ಯವೃತ್ತ ಖಂಡಗಳಾಗಿ ವಿಭಾಗಿಸಲಾಗುತ್ತದೆ. ಇವು ಆಯಾ ಭಾಗದಲ್ಲಿನ ಬೆಲೆಯನ್ನು ಸೂಚಿಸುತ್ತವೆ. ಅವುಗಳನ್ನು ಪ್ರತ್ಯೇಕಿಸಲು ವಿವಿಧ ಬಣ್ಣಗಳನ್ನು ಬಳಸುವುದು ಉತ್ತಮ.

ಉದಾಹರಣೆಗೆ, ಒಬ್ಬ ವಿದ್ಯಾರ್ಥಿ ತನ್ನ ಅಭ್ಯಾಸದಲ್ಲಿ ಪಡೆದಿರುವ ಅಂಕಗಳನ್ನು ಪೈ ನಕ್ಷೆಯಲ್ಲಿ ತೋರಿಸಲಾಗಿದೆ.

| **ವಿಷಯಗಳು** | **ಪಡೆದ ಅಂಕಗಳು** | **ಕೋನಗಳಿಗೆ ಪರಿವರ್ತಿಸಿದ ಬೆಲೆ** |
|---|---|---|
| ಕನ್ನಡ | 45 | 54° |
| ಇಂಗ್ಲಿಷ್ | 35 | 42° |
| ಅರ್ಥಶಾಸ್ತ್ರ | 40 | 48° |
| ವಾಣಿಜ್ಯಶಾಸ್ತ್ರ | 45 | 54° |
| ಗಣಿತಶಾಸ್ತ್ರ | 70 | 84° |
| ಸಂಖ್ಯಾಶಾಸ್ತ್ರ | 65 | 78° |
| | **300** | **360°** |

### ಆಗೈವ್ ವಕ್ರ ಅಥವಾ ಸಂಚಿತ ಆವೃತ್ತಿ ವಕ್ರ (Ogive or Cumulative Frequency Curve)

ಇದು ಆವೃತ್ತಿ ವಿತರಣೆಗಳನ್ನು ಪ್ರತಿನಿಧಿಸುವ ಮತ್ತೊಂದು ವಿಧಾನ.

ವರ್ಗಾಂತರದ ಸಂಚಿತ ಆವೃತ್ತಿ ಎಂದರೆ ಆ ವರ್ಗಾಂತರದ ಮತ್ತು ಅದರ ಕೆಳಗಿನ ವರ್ಗಾಂತರದ ಆವೃತ್ತಿಯ ಮೊತ್ತ. ಸಂಚಿತ ಆವೃತ್ತಿ ಮೊತ್ತ ದತ್ತಾಂಶದ ಸಂಖ್ಯೆಗೆ ಸಮನಾಗಿರಬೇಕು. ಈ ಸಂಚಿತಾವೃತ್ತಿಗಳ ಸಹಾಯದಿಂದ ರಚಿಸಿದ ರೇಖಾಲೇಖವೇ ಸಂಚಿತಾವೃತ್ತಿ ವಕ್ರ ಅಥವಾ ಆಗೈವ್ ವಕ್ರ.

Digitised by Bharatavani, CIIL




| ವರ್ಗಾಂತರಗಳು | ಆವೃತ್ತಿ | ಸಂಚಿತ ಆವೃತ್ತಿ |
|---|---|---|
| 90 – 99 | 15 | 250 |
| 80 – 89 | 15 | 235 |
| 70 – 79 | 20 | 220 |
| 60 – 69 | 40 | 200 |
| 50 – 59 | 60 | 160 |
| 40 – 49 | 50 | 150 |
| 30 – 39 | 20 | 50 |
| 20 – 29 | 18 | 30 |
| 10 – 19 | 12 | 12 |
| | **N = 250** | |




ಆಗ್ರೈವ್‌ನಿಂದ ಮೇಲ್ನೋಟದಿಂದಲೇ ಒಂದು ಗುಂಪಿನ ಅಂಕಗಳ ಪ್ರವೃತ್ತಿ (ದಿಶೆ)ಯನ್ನು ತಿಳಿದುಕೊಳ್ಳಬಹುದು. ಎರಡು ಗುಂಪುಗಳನ್ನು (ಉದಾ: ಬಾಲಕ, ಬಾಲಕಿಯರ ಶೈಕ್ಷಣಿಕ ಸಾಧನೆಯ ಅಂಕಗಳು) ಹೋಲಿಸುವಾಗ ಆಗ್ರೈವ್ ಸಹಾಯಕಾರಿ.

– ಎಚ್.ಎಸ್.ಜಿ.

## ದೃಕ್–ಶ್ರವಣ ಶಿಕ್ಷಣ

ದೃಕ್ ಎಂದರೆ ನೋಡುವುದು ಅಥವಾ ನೋಡಲು ಸಾಧ್ಯವಿರುವಂಥದ್ದು. ಶ್ರವಣ ಎಂದರೆ ಕೇಳುವಂಥದ್ದು. ಅಂದರೆ ಶಬ್ದವನ್ನು ಉತ್ಪತ್ತಿ ಮಾಡುವಂಥದ್ದು. ಈ ಮಾಧ್ಯಮಗಳನ್ನು ಬಳಸಿ ನೀಡಲಾಗುವ ಶಿಕ್ಷಣವೇ ದೃಕ್–ಶ್ರವಣ ಶಿಕ್ಷಣ.

ಇನ್ನೂ ಸ್ಪಷ್ಟ ಹಾಗೂ ಸರಳವಾಗಿ ಹೇಳಬೇಕೆಂದರೆ ಕೇವಲ ಮಾತಿನ ವಿವರಣೆಯಲ್ಲದೆ ನೋಡುವ, ಕೇಳುವ ವಸ್ತು/ಉಪಕರಣಗಳನ್ನು ನೀಡಲಾಗುವ ಶಿಕ್ಷಣವನ್ನು ದೃಕ್–ಶ್ರವಣ ಶಿಕ್ಷಣ ಎನ್ನುತ್ತಾರೆ.

ಒಂದು ಶತಮಾನದ ಹಿಂದೆ ಶಿಕ್ಷಣ ಎಂದರೆ ತರಗತಿಯಲ್ಲಿ ಶಿಕ್ಷಕರು ಪಾಠವನ್ನು ವಿವರಿಸಿ ಹೇಳುವುದು ಹಾಗೂ ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುವುದು ಎಂದು ಅರ್ಥವಿತ್ತು. ಆದರೆ ಮನಃಶಾಸ್ತ್ರದ ತಿಳಿವಳಿಕೆ ಬೆಳೆದಂತೆ ಕಣ್ಣಿನ ಮೂಲಕ ನೋಡಿದ್ದನ್ನು ಬುದ್ಧಿ ಬೇಗ ಗ್ರಹಿಸುತ್ತದೆ ಎಂಬ ಸತ್ಯ ಅರ್ಥವಾಯಿತು. ಆದ್ದರಿಂದ ನಾವು ಏನನ್ನು ವಿವರಿಸುತ್ತೇವೋ ಅದಕ್ಕೆ ಸಂಬಂಧಿಸಿದ್ದನ್ನು ತೋರಿಸಿದರೆ ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ ಹಾಗೂ ಅದು ಹೆಚ್ಚುಕಾಲ

Digitised by Bharatavani, CIIL

ವಿದ್ಯಾರ್ಥಿಗಳ ನೆನಪಿನಲ್ಲಿ ಉಳಿಯುತ್ತದೆ ಎಂಬ ತತ್ವ ಶಿಕ್ಷಣ ಕ್ಷೇತ್ರದಲ್ಲಿ ನೆಲೆಯೂರಿತು. ಇಪ್ಪತ್ತನೇ ಶತಮಾನದ ಆರಂಭದ ವೇಳೆಗಾಗಲೇ ಅಮೆರಿಕಾ ಮತ್ತು ಯುರೋಪಿನ ಕೆಲವು ದೇಶಗಳಲ್ಲಿ ಇಂಥ ಕೆಲವು ಸಾಮಗ್ರಿಗಳನ್ನು ಉಪಯೋಗಿಸಿ ಬೋಧಿಸುವ ಮತ್ತು ಕಲಿಸುವ ಕೆಲಸ ಪ್ರಾರಂಭವಾಗಿ ಯಶಸ್ಸನ್ನು ಕಂಡಿತ್ತು. ಅಮೆರಿಕಾದ ಶಿಕ್ಷಣತಜ್ಞ ಎಡ್ಗರ್‌ಡೇಲ್ ತಾನು ರೂಪಿಸಿ ವಿವರಿಸಿದ ಅನುಭವ ಶಂಖು (Cone of Experience) (ಚಿತ್ರ ನೋಡಿ) ಪರಿಕಲ್ಪನೆಯ ಮೂಲಕ ದೃಕ್‌ಶ್ರವಣ ಶಿಕ್ಷಣಕ್ಕೆ ಹೆಚ್ಚಿನ ಪ್ರಚಾರ, ಬಳಕೆಗೆ ಕಾರಣಕರ್ತನಾದನು. ಇವನನ್ನು ದೃಕ್–ಶ್ರವಣ ಶಿಕ್ಷಣದ ಪಿತಾಮಹ ಎಂದು ಪರಿಗಣಿಸಲಾಗಿದೆ. ರೇಡಿಯೋ, ಟೇಪ್‌ರೆಕಾರ್ಡರ್‌ಗಳ ಆವಿಷ್ಕಾರದೊಂದಿಗೆ ಈ ಬಗೆಯ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನವೂ ಸಿಕ್ಕಿತು. ಇಪ್ಪತ್ತನೇ ಶತಮಾನದಲ್ಲಿ ಇದು ಭಾರತಕ್ಕೂ ಕಾಲಿಟ್ಟಿತು.

ದೃಕ್ ಶ್ರವಣ ಶಿಕ್ಷಣದಲ್ಲಿ ಮಕ್ಕಳಿಗೆ ಪಾಠ ಕಲಿಸಲು ಬಳಸಲಾಗುವ ವಸ್ತುಗಳನ್ನು ದೃಕ್–ಶ್ರವಣ ಸಾಧನಗಳು (Audio Visual Aids) ಅಥವಾ ಇನ್ನೂ ಸರಳವಾಗಿ 'ಬೋಧನೋಪಕರಣಗಳು' ಎನ್ನುತ್ತೇವೆ. ಇವುಗಳನ್ನು ಮೂರು ವಿಧವಾಗಿ ವಿಂಗಡಿಸಲಾಗುತ್ತದೆ.

1. **ದೃಕ್ ಉಪಕರಣಗಳು**–ಕೇವಲ ನೋಡಲು ಮಾತ್ರ ಸಾಧ್ಯವಾಗುವಂಥವು. ಇವುಗಳಿಂದ ಯಾವುದೇ ಬಗೆಯ ಶಬ್ದ ಉತ್ಪತ್ತಿಯಾಗುವುದಿಲ್ಲ. ಉದಾ: ಚಿತ್ರಪಟಗಳು (ಚಾರ್ಟ್), ವಿವಿಧ ವಸ್ತುಗಳ ಮಾದರಿಗಳು (ಮಾಡೆಲ್‌ಗಳು) ಇತ್ಯಾದಿ. ಕರಿಹಲಗೆಯನ್ನು ಕೂಡ ಈ ಗುಂಪಿಗೆ ಸೇರಿಸಬಹುದು.




ಎಡ್ಗರ್ ಡೇಲರ ಅನುಭವ ಶಂಖುವಿನ ನಿಹಿತಾರ್ಥಗಳು




ಎಡ್ಗರ್ ಡೇಲರ ಅನುಭವ ಶಂಖು

Digitised by Bharatavani, CIIL

**2. ಶ್ರವಣೋಪಕರಣಗಳು**–ಇವು ಶಬ್ದಗಳನ್ನು ಉಂಟು ಮಾಡುತ್ತವೆ. ಆದರೆ ಇವುಗಳಲ್ಲಿ ನೋಡಲು ಏನೂ ಇರುವುದಿಲ್ಲ. ಉದಾ: ರೇಡಿಯೋ, ಟೇಪ್‌ರೆಕಾರ್ಡರ್, ಆಡಿಯೋ, ಸಿ.ಡಿ. ಇತ್ಯಾದಿ.

**3. ದೃಕ್–ಶ್ರವಣೋಪಕರಣಗಳು:** ಇವು ಕಣ್ಣು ಹಾಗೂ ಕಿವಿ, ಎರಡೂ ಇಂದ್ರಿಯಗಳ ಮೇಲೆ ಪರಿಣಾಮ ಉಂಟು ಮಾಡುತ್ತವೆ. ಉದಾ: ಟೆಲಿವಿಷನ್, ಕಂಪ್ಯೂಟರ್, ಸಿನಿಮಾ ಇತ್ಯಾದಿ.

ತರಗತಿಯಲ್ಲಿ ಉಪಯೋಗಿಸಲು ತೀರಾ ಸುಲಭವಾಗಿ ಲಭ್ಯವಾಗುವ ಸಾಧನಗಳೆಂದರೆ ದೃಕ್ ಉಪಕರಣಗಳು. ವರ್ತಮಾನ ಪತ್ರಿಕೆಯಲ್ಲಿ ಬಂದ ಯಾವುದಾದರೂ ಚಿತ್ರ, ಬರೆದ ಚಾರ್ಟ್, ಮುದ್ರಿತ ಚಿತ್ರಪಟ, ರಟ್ಟು/ಕಾಗದ/ಪ್ಲೈವುಡ್‌ನಿಂದ ತಯಾರಿಸಿದ ಯಾವುದಾದರೂ ವಸ್ತುವಿನ ಮಾದರಿ, ಜೇಡಿಮಣ್ಣಿನಿಂದ ನಿರ್ಮಿಸಿದ ಯಾವುದಾದರೂ ವಸ್ತು ಇವೆಲ್ಲ ಶಿಕ್ಷಕರು ಸಾಮಾನ್ಯವಾಗಿ ಬಳಸುವ ದೃಶ್ಯ ಉಪಕರಣಗಳು. ಭೂಗೋಳ ಪಾಠ ಮಾಡಲು ಬಳಸುವ ಗ್ಲೋಬ್ ಮತ್ತು ನಕಾಶೆಗಳು ಕೂಡಾ ದೃಕ್ ಉಪಕರಣಗಳೇ.

ಶಾಲೆಗಳಿಗಾಗಿ ರೇಡಿಯೋ ಪಾಠಗಳನ್ನು ಪ್ರಸಾರ ಮಾಡುವ ಕಾರ್ಯಕ್ರಮ ಪ್ರಚಾರಕ್ಕೆ ಬಂದ ಮೇಲೆ (ನೋಡಿ– ಶೈಕ್ಷಣಿಕ ರೇಡಿಯೋ) ಸರ್ಕಾರವೇ ಅನೇಕ ಶಾಲೆಗಳಿಗೆ ರೇಡಿಯೋ ಸೆಟ್‌ಗಳನ್ನು ನೀಡಿತು. ಶಾಲೆಯ ನಿರ್ದಿಷ್ಟ ವೇಳೆಯಲ್ಲಿ ನಿರ್ದಿಷ್ಟ ತರಗತಿಗಾಗಿ ಅವರ ಪಠ್ಯಕ್ರಮದಲ್ಲಿನ ಪಾಠಗಳನ್ನು ಸಿದ್ಧಪಡಿಸಿ ಪ್ರಸಾರ ಮಾಡುವ ಕಾರ್ಯ ಆರಂಭವಾಯಿತು. ಆಗ ಆ ತರಗತಿಯ ಮಕ್ಕಳಿಗೆಲ್ಲ ಶಿಕ್ಷಕರು ಆ ಪಾಠಗಳನ್ನು ಕೇಳಿಸುವ ಕೆಲಸ ಮಾಡಿದರು. ಇಂಥ ರೇಡಿಯೋಗಳು ಶ್ರವಣೋಪಕರಣವಾಗಿ ಕೆಲಸ ಮಾಡಿದವು. ಅದೇ ರೀತಿ ನಾವು ಟೇಪ್ ರೆಕಾರ್ಡರಿನಲ್ಲಿ ಯಾರಾದರೂ ಓದಿದ/ಹಾಡಿದ ಪಾಠವನ್ನು ಕವಿತೆಯನ್ನು ದಾಖಲಿಸಿಕೊಂಡು ಬಂದು ತರಗತಿಯಲ್ಲಿ ಅದನ್ನು ಉಪಯೋಗಿಸಿದರೆ ಅದು ಶ್ರವಣೋಪಕರಣವಾಗಿ ಬೋಧನೆಗೆ ಸಹಾಯಕವಾದಂತಾಗುತ್ತದೆ.

ಕಂಪ್ಯೂಟರ್ ಹಾಗೂ ದೂರದರ್ಶನಗಳಲ್ಲಿ ಈಗ ನೋಡುವಿಕೆ ಕೇಳುವಿಕೆಗಳೆರಡೂ ಸಾಧ್ಯವಾಗುತ್ತವೆ. ಇವನ್ನು ವ್ಯಾಪಕವಾಗಿ ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಆದ್ದರಿಂದ ಇಂಥವು ದೃಕ್‌ಶ್ರವಣೋಪಕರಣಗಳು. ಶಬ್ದಗ್ರಹಣೆಯುಳ್ಳ ವೀಡಿಯೋ, ಕ್ಯಾಮರಾ, ಮೊಬೈಲ್ ಕ್ಯಾಮರಾ ಕೂಡ ಇಂಥ ಸಾಧನಗಳೇ; ಶಬ್ದಗ್ರಹಣೆಯಿಲ್ಲದೆ ಕೇವಲ ಚಿತ್ರವನ್ನು ಮಾತ್ರ ಗ್ರಹಿಸಿಟ್ಟುಕೊಂಡ ವೀಡಿಯೋ ಕ್ಯಾಮರಾ ಕೇವಲ ದೃಶ್ಯೋಪಕರಣ ಮಾತ್ರ.

ದೃಕ್ ಶ್ರವಣೋಪಕರಣಗಳ ವರ್ಗೀಕರಣವನ್ನು ಈ ಕೆಳಕಂಡ ನಕ್ಷೆಯ ಮೂಲಕ ತೋರಿಸಬಹುದು.




ಸಿನಿಮಾ, ವೀಡಿಯೋ, ದೃಶ್ಯ ಪ್ರಕ್ಷೇಪಣ ದಾಖಲಾಗಿರುವ ಸಿ.ಡಿ. ಇವೆಲ್ಲ ಪ್ರಕ್ಷೇಪಣ ಮಾಡಲಾಗುವ ಸಾಧನಗಳು. ಚಿತ್ರಪಟ, ಮಾಡೆಲ್ ಇವೆಲ್ಲ ಪ್ರೊಜೆಕ್ಟ್ ಮಾಡಲಾಗದ ಸಾಧನಗಳು. ಛಾಯಾಚಿತ್ರಗಳು, ಪೋಸ್ಟರ್‌ಗಳು, ಡ್ರಾಯಿಂಗ್, ಗ್ರಾಫ್‌ಗಳು ಇವೂ ಸಹ ಪ್ರಕ್ಷೇಪಣ ಮಾಡಲಾಗದ ಸಾಧನಗಳು.

ಶ್ರವಣೋಪಕರಣಗಳೇ ಆಗಲಿ, ದೃಕ್–ಶ್ರವಣೋಪಕರಣಗಳೇ ಆಗಲಿ, ಅವುಗಳಲ್ಲಿನ ಧ್ವನಿ ಸರಿಯಾದ ಏರಿಳಿತಗಳನ್ನು ಹೊಂದಿದ್ದು, ಉಚ್ಚಾರಣೆ ಸ್ಪಷ್ಟವಾಗಿರಬೇಕು. ಮಾತಿನ/ಹಾಡಿನ ಕೊನೆಯ ಅಕ್ಷರ ಕೂಡಾ ಸ್ಪಷ್ಟವಾಗಿ ಕೇಳುವಂತಿರಬೇಕು. ಅದನ್ನು ಕೇಳುತ್ತಿರುವಾಗ ನಡುನಡುವೆ ಕರಕರವೆಂಬಂಥ ಶಬ್ದ ಬರಬಾರದು. ಅಂದರೆ ಧ್ವನಿ ರೆಕಾರ್ಡಿಂಗ್ ಉತ್ತಮವಾಗಿರಬೇಕು.

ದೃಶ್ಯೋಪಕರಣಗಳನ್ನು ಬಳಸುವಾಗ ಈ ಕೆಳಕಂಡ ಅಂಶಗಳನ್ನು ನೆನಪಿನಲ್ಲಿಟ್ಟಿರಬೇಕು.

1. ತರಗತಿಯ ಎಲ್ಲರಿಗೂ ಕಾಣುವಷ್ಟು ಅವು ದೊಡ್ಡದಾಗಿರಬೇಕು.
2. ಪಠ್ಯದಲ್ಲಿನ ವಿವರಣೆಗೆ ತಕ್ಕಂತೆ ಚಿತ್ರ/ಮಾದರಿ ಇರಬೇಕು ಅಥವಾ ಅದಕ್ಕೆ ಪೂರಕವಾಗಿರಬೇಕು. ಪಠ್ಯದಲ್ಲಿರುವ ವಿವರವೇ ಬೇರೆ ಚಿತ್ರದಲ್ಲಿರುವುದೇ ಬೇರೆ ಆಗಬಾರದು.

Digitised by Bharatavani, CIIL

3. ವಿವರಣೆಯ ಭಾಷೆಯೇ ಚಿತ್ರಪಟದಲ್ಲಿನ ಭಾಷೆಯೂ ಆದರೆ ಉತ್ತಮ. ಅಂದರೆ ಕನ್ನಡದಲ್ಲಿ ಬೋಧಿಸುತ್ತಿದ್ದರೆ ಚಿತ್ರಪಟ/ನಕಾಶೆಯಲ್ಲಿನ ಭಾಷೆಯೂ ಅದೇ ಆಗಿರುವುದು ಅಪೇಕ್ಷಣೀಯ.

4. ಚಿತ್ರಗಳು ಸ್ಪಷ್ಟವಾಗಿರಬೇಕು. ಮಬ್ಬಾಗಿರುವುದು ಅಥವಾ ಹರಿದಿರುವುದು ಒಳ್ಳೆಯ ಪರಿಣಾಮ ಮಾಡಲಾರದು.

5. ಚಿತ್ರ/ಮಾದರಿ/ನಕ್ಷೆಗಳಲ್ಲಿ ಬಳಸಲಾದ ಸಂಕೇತಗಳನ್ನು ವಿದ್ಯಾರ್ಥಿಗಳು ಸುಲಭವಾಗಿ ಅರ್ಥಮಾಡಿಕೊಳ್ಳುವಂತಿರಬೇಕು.

ಹೀಗೆ ದೃಶ್ಯೋಪಕರಣಗಳನ್ನು ಬಳಸುವಾಗಲೂ ಇಂಥ ಅಂಶಗಳ ಕಡೆ ಗಮನವಿಡಬೇಕು. ಸಿನಿಮಾ, ಟೆಲಿವಿಷನ್ ಮೊದಲಾದ ದೃಕ್ ಶ್ರವಣೋಪಕರಣಗಳನ್ನು ಬಳಸುವಾಗ ಅಲ್ಲಿನ ವಸ್ತು/ವ್ಯಕ್ತಿಗಳನ್ನು ಅಗತ್ಯಕ್ಕೆ ತಕ್ಕಂತೆ ಸರಿಯಾದ ದೂರ/ಸಮೀಪದಿಂದ ತೋರಿಸುವಂತಿರಬೇಕು. ಇಲ್ಲವಾದರೆ ಪರಿಣಾಮ ಕಡಿಮೆ.

### ದೃಕ್-ಶ್ರವಣ ಶಿಕ್ಷಣದ ಪ್ರಯೋಜನಗಳು

1. ಇದು ಕಲಿಕೆಯನ್ನು ಸುಲಭಗೊಳಿಸುತ್ತದೆ ಮತ್ತು ಕಲಿತಿದ್ದನ್ನು ಬಹುಕಾಲ ನೆನಪಿಡುವಂತೆ ಮಾಡುತ್ತದೆ.

2. ಇದು ಶಿಕ್ಷಕನ ಕೆಲಸವನ್ನು ಸುಲಭಗೊಳಿಸುತ್ತದೆ ಹಾಗೂ ಮಾತನಾಡಬೇಕಾದ ಅನಿವಾರ್ಯತೆಯನ್ನು ಕಡಿಮೆ ಮಾಡುತ್ತದೆ.

3. ಇದು ಕಲಿಕೆಯಲ್ಲಿನ ಏಕತಾನತೆಯನ್ನು ದೂರಮಾಡಿ ಅದನ್ನು ಆಕರ್ಷಕಗೊಳಿಸುತ್ತದೆ. ಇದರಿಂದ ವಿದ್ಯಾರ್ಥಿಗಳ ಆಸಕ್ತಿಯನ್ನು ಕೇಂದ್ರೀಕರಿಸಿಕೊಳ್ಳುವುದು ಸಾಧ್ಯವಾಗುತ್ತದೆ.

4. ಇವುಗಳ ಉಪಯೋಗದಿಂದ ಪ್ರಶ್ನಿಸುವಿಕೆ ಹಾಗೂ ಪ್ರಶ್ನೆಗೆ ಉತ್ತರ ಪಡೆಯುವಿಕೆ ಸುಲಭ.

### ಭಾರತದಲ್ಲಿ ದೃಕ್ ಶ್ರವಣ ಶಿಕ್ಷಣದ ಬೆಳವಣಿಗೆ

ವಿಶ್ವದಲ್ಲಿ ದೃಕ್ ಶ್ರವಣ ಶಿಕ್ಷಣದ ಬೆಳವಣಿಗೆಯಲ್ಲಿ 1873ರಲ್ಲಿ ನಡೆದ ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಒಂದು ಮಹತ್ವದ ಘಟ್ಟ ಎಂದು ಭಾವಿಸಲಾಗುತ್ತದೆ. ಆ ಪ್ರದರ್ಶನದಲ್ಲಿ ಅಮೆರಿಕೆಯ ಶಾಲೆಯೊಂದು ಪ್ರದರ್ಶಿಸಿದ ಚಿತ್ರಪಟಗಳು, ಪಠ್ಯಪುಸ್ತಕಗಳು, ಇತರ ಉಪಕರಣಗಳು ಎಲ್ಲರ ಮೆಚ್ಚುಗೆ ಪಡೆದವು.

ಮುಂದೆ ಅಂತಹ ಸಮ್ಮೇಳನಗಳು 1878ರಲ್ಲಿ ಪ್ಯಾರಿಸ್‌ನಲ್ಲಿ, 1880ರಲ್ಲಿ ಮೆಲ್ಬೋರ್ನ್‌ನಲ್ಲಿ ನಡೆದವು.

ವಿಶ್ವದಲ್ಲಿ ದೃಕ್ ಶ್ರವಣ ಶಿಕ್ಷಣದ ಬೆಳವಣಿಗೆಯ ಮುಖ್ಯ ಘಟ್ಟಗಳಿವು. ಇಲ್ಲಿಂದ ಮುಂದೆ ಇದರ ಪ್ರಸಾರ ವೇಗ ಪಡೆದುಕೊಂಡಿತು.

ಭಾರತದಲ್ಲಿ ಈ ಶಿಕ್ಷಣದ ಪ್ರಾಮುಖ್ಯತೆ ಸರ್ಕಾರದ ಮಟ್ಟದಲ್ಲಿ ಮಾನ್ಯತೆ ಪಡೆದದ್ದು 1900ರ ನಂತರದ ಪ್ರಮುಖ ಬೆಳವಣಿಗೆಗಳನ್ನು ಹೀಗೆ ಪಟ್ಟಿ ಮಾಡಬಹುದು.

- ದೃಕ್ ಶ್ರವಣ ಶಿಕ್ಷಣಕ್ಕಾಗಿ ಪ್ರತ್ಯೇಕ ಇಲಾಖೆಯೊಂದನ್ನು ತೆರೆಯುವ ಕಲ್ಪನೆ ಆಗಿನ ಮುಂಬೈ ಸರ್ಕಾರ (ಇಂದಿನ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು)ಕ್ಕೆ 1920ರಲ್ಲಿ ಬಂದಿತು.

- ಮುಂಬೈ ಸರ್ಕಾರ 1947ರಲ್ಲಿ ದೃಕ್-ಶ್ರವಣ ಸಾಧನಗಳ ಇಲಾಖೆಗೆ ಸಿನಿಮಾ ಪ್ರೊಜೆಕ್ಟರ್ ಮತ್ತು ಸಿನಿಮಾ ಲೈಬ್ರರಿಯನ್ನು ಒದಗಿಸಿತು. ಈ ಸಂಗ್ರಹಾಲಯದಲ್ಲಿ ಬಹುಸಂಖ್ಯೆಯ ಮೂಕಿ ಸಿನಿಮಾಗಳಿದ್ದವು.

- ದೃಕ್ ಶ್ರವಣ ಶಿಕ್ಷಣಕ್ಕೆ ಸಂಬಂಧಿಸಿದ ಅಖಿಲಭಾರತ ಸಮ್ಮೇಳನವೊಂದು 1948ರಲ್ಲಿ ಭಾರತ ಸರ್ಕಾರದ ವತಿಯಿಂದ ನಡೆದು, ಈ ಶಿಕ್ಷಣದ ವ್ಯಾಪ್ತಿ, ಸಮಸ್ಯೆಗಳನ್ನು ಅಧ್ಯಯನ ಮಾಡಲು ಸಮಿತಿಯೊಂದನ್ನು ನೇಮಿಸಲಾಯಿತು. ದೃಕ್-ಶ್ರವಣ ಶಿಕ್ಷಣಕ್ಕೆ ಸಹಾಯಕವಾಗುವ ಚಲನಚಿತ್ರಗಳ ತಯಾರಿಕೆಗೆ ಸಹಾಯಧನ ನೀಡಿ ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿತು.

- ಭಾರತದಲ್ಲಿ ಖಾಸಗಿ ವ್ಯಕ್ತಿ/ಸಂಸ್ಥೆಗಳಿಂದ ದೃಕ್ ಶ್ರವಣ ಶಿಕ್ಷಣ ಕುರಿತಂತೆ ಫಿಲಂ ಸೊಸೈಟಿಗಳು ಹಾಗೂ ದೃಕ್-ಶ್ರವಣ ಶಿಕ್ಷಣ ಕೇಂದ್ರಗಳು 1950ರ ವೇಳೆಗೆ ಸ್ಥಾಪನೆಗೊಂಡವು ಈ ಪೈಕಿ ಗಮನಾರ್ಹವಾದುದೆಂದರೆ ಪಶ್ಚಿಮ ಬಂಗಾಳದ ಗೊರಬಾ ವಿಷುಯಲ್ ಎಜ್ಯುಕೇಷನ್ ಸೆಂಟರ್.

- ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ದೃಕ್ ಶ್ರವಣ ಶಿಕ್ಷಣಕ್ಕಾಗಿ ರಾಷ್ಟ್ರೀಯ ಬೋರ್ಡ್ ಒಂದನ್ನು 1952ರಲ್ಲಿ ಸ್ಥಾಪಿಸಿತು.

- ಈ ಶಿಕ್ಷಣವನ್ನು ಜಾರಿಗೊಳಿಸುವ ಬಗ್ಗೆ ಲಕ್ನೋದಲ್ಲಿ 1955ರಲ್ಲಿ ವಿಚಾರ ಸಂಕಿರಣವೊಂದು ನಡೆಯಿತು.

- ರಾಷ್ಟ್ರೀಯ ದೃಕ್-ಶಿಕ್ಷಣ ಸಂಸ್ಥೆಯು 60ರ ದಶಕದಲ್ಲಿ ಈ ಶಿಕ್ಷಣದ ಬಗ್ಗೆ ಎರಡು ಕಾರ್ಯಾಗಾರಗಳನ್ನು ನಡೆಸಿತು. 1962ರಲ್ಲಿ ಇಂಥದೇ ಒಂದು ಕಾರ್ಯಾಗಾರ ಯುನೆಸ್ಕೋ ನೆರವಿನಿಂದ ನಡೆಯಿತು.

- ನವದೆಹಲಿಯಲ್ಲಿ 1965ರಲ್ಲಿ 'Indian Institute of Mass Communication' ಅನ್ನು ಸ್ಥಾಪಿಸಲಾಯಿತು.

- ಎನ್.ಸಿ.ಇ.ಆರ್.ಟಿ. ಬೋಧನೋಪಕರಣಗಳ ವಿಭಾಗದಿಂದ 1970–80ರ ಅವಧಿಯಲ್ಲಿ ಪದೇ ಪದೇ ತರಬೇತಿ ಕಾರ್ಯಾಗಾರಗಳು ನಡೆದವು. ಒಂಬತ್ತು ತಿಂಗಳ ಡಿಪ್ಲೋಮಾ ಕೋರ್ಸನ್ನು ಈ ಬಗ್ಗೆ ಎನ್.ಸಿ.ಇ.ಆರ್.ಟಿ. ಆರಂಭಿಸಿತು.

- ಶಿಕ್ಷಣದಲ್ಲಿ 'ಬಹು ಮಾಧ್ಯಮದ ಬಳಕೆಯ ಮಾರ್ಗ' (Multi Media Approach)ವನ್ನು 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅಳವಡಿಸಿಕೊಳ್ಳಲಾಯಿತು.

ಇಲ್ಲಿಂದ ಮುಂದಿನ ವರ್ಷಗಳಲ್ಲಿ ಉಪಗ್ರಹ ಆಧಾರಿತ ಬಹುಮಾಧ್ಯಮ ಶಿಕ್ಷಣ ತೀವ್ರವಾಗಿ ಪ್ರಸಾರಗೊಳ್ಳುತ್ತಿದೆ.

– ಎಸ್.ಪಿ. ಪಿ

## ದೈಹಿಕ ಶಿಕ್ಷಣ ವ್ಯವಸ್ಥೆ

ಪ್ರಾಚೀನ ದಿನಗಳಲ್ಲಿ ದೈಹಿಕ ಶಿಕ್ಷಣವು ಬದುಕಿನ ಒಂದು ಅತ್ಯವಶ್ಯ ಚಟುವಟಿಕೆ ಎಂಬ ಹಣೆಪಟ್ಟಿಯೊಂದಿಗೆ ಪ್ರಾರಂಭಗೊಂಡಿತು. ಮುಂದೆ ನೂರಾರು ವರ್ಷಗಳ ನಂತರ ಒಂದು ಸುಸಂಘಟಿತ ಶೈಕ್ಷಣಿಕ ಸಂಸ್ಥೆಯಾಗಿ ಪರಿವರ್ತನೆ ಹೊಂದಿತು. ಇಂದಿನ ನಾಗರಿಕತೆ, ಸಂಸ್ಕೃತಿ, ವಿಚಾರಗಳಿಗೆ ಸಂಬಂಧಪಡುವ ಪ್ರಾಚೀನ ಕಾಲದ ರೂಢಿಗಳು, ಪದ್ಧತಿಗಳು ಹಾಗೂ ಸಂಪ್ರದಾಯಗಳ ಬಗ್ಗೆ ಜ್ಞಾನವಿರದೆ ಆಧುನಿಕ ಕಾಲದ ದೈಹಿಕ ಶಿಕ್ಷಣವನ್ನು ಅರಿತುಕೊಳ್ಳುವುದು ಸೂಕ್ತವಾಗದು.

ಅರಿವಿಗೆ ಸಿಗುವ ದೈಹಿಕ ಶಿಕ್ಷಣದ ಐತಿಹಾಸಿಕ ನೋಟವನ್ನು ಎರಡು ಪ್ರಮುಖ ಭಾಗಗಳಲ್ಲಿ ವಿಂಗಡಿಸಬಹುದು. ಮೊದಲನೆಯ ಭಾಗ ಇತಿಹಾಸಕ್ಕೆ ಸಂಬಂಧಪಟ್ಟರೆ, ಎರಡನೆಯ ಭಾಗ ಇತ್ತೀಚಿನ ಆಗು ಹೋಗುಗಳಿಗೆ ಸಂಬಂಧಪಟ್ಟಿದ್ದಾಗಿದೆ.

Digitised by Bharatavani, CIIL

ಶಿಕ್ಷಣ ಅನ್ನುವುದು ಮೂಲ ಲ್ಯಾಟಿನ್ನಿನ **"Educe"** ಎಂಬ ಪದದಿಂದ ಬಂದಿರುವುದು. **"ಎಡ್ಯುಸ್"** ಅಂದರೆ 'ಹೊರತೆಗೆ' ಅಥವಾ ಬೆಳೆಸು ಎಂದು ಆಗುತ್ತದೆ. ಇದರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇರುವ ಒಳ್ಳೆಯ ಗುಣಗಳನ್ನು ಮಾತ್ರ ಹೊರ ತೆಗೆದು, ಬೆಳೆಸಿ ಪೋಷಿಸುವುದು ಎಂದರ್ಥ. ಶಿಕ್ಷಣ ಎಂದರೆ ಬರಿ ಅನುಭವ ಅಥವಾ ಜ್ಞಾನದ ಬೆಳವಣಿಗೆ ಅಲ್ಲ. ಒಳ್ಳೆಯ ಅಭ್ಯಾಸಗಳ ರೂಢಿ, ಯೋಗ್ಯ ಮನೋವೃತ್ತಿ ಮತ್ತು ಒಳ್ಳೆಯ ನಿಪುಣತೆಗಳ ಬೆಳವಣಿಗೆಯಾಗುವುದೂ ಆಗಿದೆ.

ಶಿಕ್ಷಣ ಪದದ ಅರ್ಥವನ್ನು ಶರೀರ ಅಂದರೆ ದೇಹಕ್ಕೆ ಅನ್ವಯಿಸಿದಾಗ **"ದೈಹಿಕ ಶಿಕ್ಷಣ"** ಎಂದಾಗುವುದು. ಈ ಪದವು ದೈಹಿಕ ಶಕ್ತಿ, ದೈಹಿಕ ಬೆಳವಣಿಗೆ, ದೈಹಿಕ ಆರೋಗ್ಯ, ದೈಹಿಕ ತೋರಿಕೆ ಮತ್ತು ದೈಹಿಕ ನಿಪುಣತೆಗಳು ಇವೇ ಮೊದಲಾದ ಶಾರೀರಿಕ ಗುಣಗಳಿಗೆ ಸಂಬಂಧಿಸಿ ಉಪಯೋಗಿಸಲಾಗುತ್ತದೆ.

ದೈಹಿಕ ಶಿಕ್ಷಣವು ಶಾರೀರಿಕ ಚಟುವಟಿಕೆಗಳ ಮುಖಾಂತರ ವ್ಯಕ್ತಿಗಳ ಬೆಳವಣಿಗೆಯನ್ನು ಮಾಡತಕ್ಕಂತಹ ಶಿಕ್ಷಣದ ಒಂದು ಕ್ರಿಯೆಯಾಗಿದೆ. ದೇಹದ ಮುಖಾಂತರ ವ್ಯಕ್ತಿಗಳಲ್ಲಿ ಬದಲಾವಣೆಗಳನ್ನು ತರುವುದಕ್ಕೆ ದೈಹಿಕ ಶಿಕ್ಷಣವೆನ್ನುತ್ತಾರೆ. ಶರೀರದ ನಾನಾವಿಧ ಚಟುವಟಿಕೆಗಳಿಂದ ಮಾನವನ ಅಖಂಡ ವ್ಯಕ್ತಿತ್ವಕ್ಕೆ ಶಿಕ್ಷಣ ದೊರೆಯುತ್ತದೆ.

ದೈಹಿಕ ಶಿಕ್ಷಣದ ಬಗ್ಗೆ ಅನೇಕ ಜನರು ತಪ್ಪು ತಿಳುವಳಿಕೆಯನ್ನು ಹೊಂದಿದ್ದು, "ದೈಹಿಕ ಶಿಕ್ಷಣ" ಈ ಪದಕ್ಕೆ ಬದಲಾಗಿ ಬೇರೆ ಬೇರೆ ಪದಗಳನ್ನು ಉಪಯೋಗಿಸುತ್ತಾರೆ, ಅವುಗಳಲ್ಲಿ ಕೆಲವು ಪದಗಳನ್ನು ಈ ಕೆಳಗೆ ಕೊಡಲಾಗಿದೆ.

ಹಾಗಾದರೆ ದೈಹಿಕ ಶಿಕ್ಷಣದ ಅರ್ಥ ಮತ್ತು ವ್ಯಾಖ್ಯಾನಗಳನ್ನು ತಿಳಿಯುವುದು ಅವಶ್ಯವೆಂದು ಭಾವಿಸಬೇಕು. ಅಂಗಸೌಷ್ಠವ (Physical Culture), ಅಂಗಸಾಧನೆ (Physical Training), ಕಸರತ್ತುಗಳು (Gymnastics), ಕವಾಯತು (Drill), ಆಟಗಳು (Games), ಮೇಲಾಟಗಳು (Sports), ಆರೋಗ್ಯ ಶಿಕ್ಷಣ (Health Education), ವಿಶ್ರಾಂತಿ (Rest), ವಿರಮಿಸುವಿಕೆ (Relaxation), ಮನೋಲ್ಲಾಸ (Recreation), ಚಟುವಟಿಕೆಯುಳ್ಳ ಶಿಕ್ಷಣ ಅಥವಾ ಚಲನಾ ಶಿಕ್ಷಣ (Movement Education) ಈ ಎಲ್ಲ ಪದಗಳು ದೈಹಿಕ ಶಿಕ್ಷಣದಷ್ಟು ವ್ಯಾಪಕವಾದ ಅರ್ಥವನ್ನು ಹೊಂದಿಲ್ಲ.

### ದೈಹಿಕ ಶಿಕ್ಷಣದ ವ್ಯಾಖ್ಯೆ ಮತ್ತು ಅರ್ಥ

ದೈಹಿಕ ಶಿಕ್ಷಣವು ಒಟ್ಟು ಶಿಕ್ಷಣದ ಒಂದು ಅವಿಭಾಜ್ಯ ಅಂಗವಾಗಿದ್ದು, ಇದರ ಬಗ್ಗೆ ಕೆಲವು ಶಿಕ್ಷಣ ತಜ್ಞರು ಈ ಕೆಳಗಿನಂತೆ ವಿವರಿಸಿದ್ದಾರೆ.

1) **ಭಾರತ ಸರಕಾರದ ಶರೀರ ಸಲಹಾ ಸಮಿತಿಯ** ಪ್ರಕಾರ "ದೈಹಿಕ ಶಿಕ್ಷಣವು ಮೂಲತಃ ಶಿಕ್ಷಣವಾಗಿದೆ. ಇದು ವ್ಯಕ್ತಿಯ ಸಂಪೂರ್ಣ ಬೆಳವಣಿಗೆಗಾಗಿ ಇದ್ದು ಶರೀರ, ಮನಸ್ಸು ಮತ್ತು ಆತ್ಮದ ಪರಿಪೂರ್ಣತೆಯನ್ನು ಶಾರೀರಿಕ ಚಟುವಟಿಕೆಗಳ ಮೂಲಕ ಸಾಧಿಸಲು ಯತ್ನಿಸುತ್ತದೆ".

2) **ಜೆ.ಪಿ. ಥಾಮಸ್** ಇವರ ಪ್ರಕಾರ "ದೈಹಿಕ ಶಿಕ್ಷಣವು ಶರೀರಕ್ಕೆ ಮತ್ತು ಶರೀರದ ಮೂಲಕ ಕೊಡುವ ಶಿಕ್ಷಣವಾಗಿದೆ. ಇದು ಶರೀರಕ್ಕೆ ಸಂಬಂಧಿಸಿದ್ದಕ್ಕಿಂತಲೂ ಹೆಚ್ಚು, ಶಿಕ್ಷಣಕ್ಕೆ ಸಂಬಂಧಿಸಿದ್ದಾಗಿರುತ್ತದೆ".

3) **ಹರಾಲ್ಡ್ ಬ್ಯಾರೋ** ಇವರ ಪ್ರಕಾರ "ಕ್ರೀಡೆ, ವ್ಯಾಯಾಮ, ನೃತ್ಯ ಮೊದಲಾದ ದೊಡ್ಡ ಸ್ನಾಯುಗಳ ಕಾರ್ಯದಿಂದ ಮನುಷ್ಯನು ಶಿಕ್ಷಣದ ಗುರಿಯನ್ನು ಮುಟ್ಟುವುದೇ ದೈಹಿಕ ಶಿಕ್ಷಣ".

4) **ನಿಕ್ಸನ್ ಮತ್ತು ಬ್ಯುಯೆಟ್** ಇವರ ಪ್ರಕಾರ "ಶರೀರ ಶಿಕ್ಷಣವು ವ್ಯಕ್ತಿಯ ಚಲನಾಶಕ್ತಿ, ವೇಗ ಮೊದಲಾದ ಪ್ರತಿಕ್ರಿಯೆಗಳಿಗೆ ಸಂಬಂಧಿಸಿದ ಮತ್ತು ಅವುಗಳಿಂದ ನಡೆಯುವ ಮಾನಸಿಕ, ನೈತಿಕ ಮತ್ತು ಸಾಮಾಜಿಕ ಬದಲಾವಣೆಗಳಿಂದೊಡಗೂಡಿದ ಒಟ್ಟು ಶಿಕ್ಷಣ ಕ್ರಿಯೆಯ ಒಂದು ಭಾಗವಾಗಿದೆ."

5) **C.A. ಬ್ಯುಕರ** ಇವರ ಪ್ರಕಾರ "ದೈಹಿಕ ಶಿಕ್ಷಣವು ಶಿಕ್ಷಣ ಕ್ರಿಯೆಯ ಒಂದು ಮಹತ್ವದ ಭಾಗ. ಯೋಗ್ಯವಾದ ಶಾರೀರಿಕ ಚಟುವಟಿಕೆಗಳ ಮುಖಾಂತರ ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಸಾಮಾಜಿಕವಾಗಿ ಯೋಗ್ಯರಾದ ನಾಗರಿಕರನ್ನು ನಿರ್ಮಾಣ ಮಾಡುವ ಉದ್ದೇಶವನ್ನಿಟ್ಟುಕೊಂಡ ಶಿಕ್ಷಣ ಕ್ಷೇತ್ರವೇ ದೈಹಿಕ ಶಿಕ್ಷಣ."

ಈ ಎಲ್ಲ ವ್ಯಾಖ್ಯೆಗಳನ್ನು ಅಭ್ಯಸಿಸಿದಾಗ ದೈಹಿಕ ಶಿಕ್ಷಣದ ಬಗ್ಗೆ ಈ ಕೆಳಗೆ ವಿವರಿಸಲ್ಪಟ್ಟ ಕೆಲವು ಮುಖ್ಯವಾದ ಅಂಶಗಳು ಕಂಡುಬರುತ್ತವೆ.

ದೈಹಿಕ ಶಿಕ್ಷಣ, ಒಟ್ಟು ಶಿಕ್ಷಣ ಕ್ರಿಯೆಯ ಒಂದು ಮಹತ್ವದ ಭಾಗವಾಗಿದೆ. ಶರೀರ ಶಿಕ್ಷಣದಲ್ಲಿ ಶಾರೀರಿಕ ಚಟುವಟಿಕೆಗಳು ಶಿಕ್ಷಣ ಕ್ರಿಯೆಯ ಮಾಧ್ಯಮಗಳಾಗಿವೆ. ಆಟಗಳು ವ್ಯಕ್ತಿಗೆ ಸಮಸ್ಯಾತ್ಮಕ ಸನ್ನಿವೇಶಗಳನ್ನು ಒದಗಿಸಿ ಅವುಗಳ ಪರಿಹಾರಕ್ಕಾಗಿ ಜಾಣತನದ ನಿರ್ಣಯಗಳನ್ನು ಕೈಗೊಳ್ಳುವಂತೆ ಪ್ರಚೋದಿಸುತ್ತವೆ. ಶಾರೀರಿಕ ಚಟುವಟಿಕೆಗಳು ಪ್ರತಿಯೊಬ್ಬ ವ್ಯಕ್ತಿಗೆ ಅವನಲ್ಲಿರುವ ಗುಣ- ವಿಶೇಷಗಳನ್ನು ಬೆಳೆಸುವುದಕ್ಕೆ ಪ್ರೇರಕವಾಗಿವೆ.

### ದೈಹಿಕ ಶಿಕ್ಷಣದ ಉದ್ದೇಶಗಳು

ದೈಹಿಕ ಶಿಕ್ಷಣವು ಒಟ್ಟು ಶಿಕ್ಷಣ ಕ್ರಿಯೆಯ ಒಂದು ಮಹತ್ವವಾದ ಭಾಗವಾಗಿರುವುದರಿಂದ ಶಿಕ್ಷಣದ ಗುರಿ ಮತ್ತು ದೈಹಿಕ ಶಿಕ್ಷಣದ ಗುರಿ ಇವೆರಡೂ ಒಂದೇ ಆಗಿವೆ. ಆದರೆ ಈ ಗುರಿಯ ಸಾಧನೆಯು ಶರೀರ ಶಿಕ್ಷಣದಲ್ಲಿ ವಿಶಿಷ್ಟವಾದ ರೀತಿಯಲ್ಲಿ ನಡೆಯುವುದರಿಂದ ದೈಹಿಕ ಶಿಕ್ಷಣದ ಗುರಿಯನ್ನು ತಜ್ಞರು ಈ ಕೆಳಗಿನಂತೆ ವ್ಯಾಖ್ಯಾನಿಸಿದ್ದಾರೆ.

**ಬುಕ್ ವಾಲ್ಟರ್:** ಇವರ ಪ್ರಕಾರ "ಒಳ್ಳೆಯ ಮಾರ್ಗದರ್ಶನದ ಬೋಧನೆಯಿಂದ ಆರಿಸಿದ ಪರಿಪೂರ್ಣ ಕ್ರೀಡೆಗಳಲ್ಲಿ, ನೃತ್ಯಗಳಲ್ಲಿ ಮತ್ತು ಕಸರತ್ತುಗಳಲ್ಲಿ ಆರೋಗ್ಯದಾಯಕ ಹಾಗೂ ಸಮಾಜ ಗ್ರಾಹ್ಯ ಪರಿಸರದಲ್ಲಿ ಭಾಗವಹಿಸಿ, ಸಾಮಾಜಿಕವಾಗಿ ಹಾಗೂ ಮಾನಸಿಕವಾಗಿ ಸಮನ್ವಯಗೊಂಡು ಅಧಿಕ ಬೆಳವಣಿಗೆ ಹೊಂದುವುದೇ ದೈಹಿಕ ಶಿಕ್ಷಣದ ಗುರಿಯಾಗಿರಬೇಕು".

**ಶರ್ಮನ್:** ಇವರ ಪ್ರಕಾರ "ಪ್ರತಿ ವ್ಯಕ್ತಿಯು ದೈಹಿಕವಾಗಿ ಪರಮಾವಧಿ ಬೆಳವಣಿಗೆ ಹೊಂದುವಂತೆ ಮಾಡುವುದು ಮಾತ್ರವಲ್ಲದೇ ಉಳಿದವರೊಡನೆ ಯಶಸ್ವಿಯಾಗಿ ಹೊಂದಿಕೊಂಡು ಹೋಗುವಂತೆ ಮಾಡುವುದು ಮತ್ತು ತನ್ನ ಜೀವನದ ಬೇಡಿಕೆಯನ್ನು ಪೂರೈಸಿಕೊಳ್ಳಲು ಸಾಮರ್ಥ್ಯವನ್ನು ತಂದುಕೊಡುವುದು ದೈಹಿಕ ಶಿಕ್ಷಣದ ಗುರಿಯಾಗಿರಬೇಕು".

**ಅಖಿಲ ಭಾರತ ಶರೀರ ಶಿಕ್ಷಣ ಸಲಹಾ ಸಮಿತಿ (ಅ.ಭಾ.ಶ.ಶಿ.ಸ. ಸಮಿತಿ):** ಪ್ರಕಾರ "ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ

Digitised by Bharatavani, CIIL

ಪ್ರತಿಯೊಂದು ಮಗುವು ಸದೃಢವಾಗುವಂತೆ ಮಾಡುವುದಲ್ಲದೆ, ಉಳಿದವರೊಡನೆ ಸುಖವಾಗಿ ಬಾಳುವಂತೆ ಮಾಡಲು ವೈಯಕ್ತಿಕ ಹಾಗೂ ಸಾಮಾಜಿಕ ಸದ್ಗುಣಗಳನ್ನು ಅಳವಡಿಸುವುದು ಮತ್ತು ಒಳ್ಳೆ ನಾಗರಿಕರನ್ನಾಗಿ ಮಾಡುವುದೇ ದೈಹಿಕ ಶಿಕ್ಷಣದ ಗುರಿಯಾಗಿರಬೇಕು".

**ಜೆ.ಎಫ್. ವಿಲಿಯಮ್ಸ್:** ಇವರ ಪ್ರಕಾರ "ಓರ್ವ ವ್ಯಕ್ತಿಗಾಗಲಿ ಅಥವಾ ಗುಂಪಿಗಾಗಲಿ ದೈಹಿಕವಾಗಿ ಆರೋಗ್ಯದಾಯಕ, ಮಾನಸಿಕವಾಗಿ ಪ್ರಚೋದನಾತ್ಮಕ ಮತ್ತು ತೃಪ್ತಿದಾಯಕ ಅಲ್ಲದೇ ಸಾಮಾಜಿಕವಾಗಿ ಸುಭದ್ರವಾದ ಸನ್ನಿವೇಶಗಳಲ್ಲಿ ಕ್ರಿಯಾಶೀಲರಾಗುವಂತೆ ಮಾಡಲು ಸಾಕಷ್ಟು ಸುಸಂಧಿಗಳನ್ನು ಒದಗಿಸುವ ನಿಪುಣ ನಾಯಕರನ್ನು ವಿಪುಲ ಸೌಕರ್ಯಗಳನ್ನು ಒದಗಿಸುವುದೇ ದೈಹಿಕ ಶಿಕ್ಷಣದ ಗುರಿಯಾಗಿದೆ".

ಈ ಎಲ್ಲ ವ್ಯಾಖ್ಯೆಗಳಲ್ಲಿ ಕೊನೆಯದಾದ ಜೆ.ಎಫ್. ವಿಲಿಯಮ್ಸ್ ಇವರ ವ್ಯಾಖ್ಯೆ ಹೆಚ್ಚು ಮಾನ್ಯತೆಯನ್ನು ಪಡೆದಿದೆ. ಅದನ್ನು ಈ ಕೆಳಗಿನಂತೆ ಅರ್ಥೈಸಿಕೊಳ್ಳಬಹುದಾಗಿದೆ.

ಅ) ಒಳ್ಳೆಯ ತರಬೇತಿ ಮತ್ತು ನಿಪುಣತೆಯನ್ನು ಹೊಂದಿದ ನಾಯಕರು ಅಂದರೆ ದೈಹಿಕ ಶಿಕ್ಷಕರು, ಶಿಕ್ಷಣ ತಜ್ಞರು, ತರಬೇತುದಾರರು ಮುಂತಾದವರು ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶಕರಿದ್ದಂತೆ.

ಬ) ಆಟದ ಬಯಲು, ವ್ಯಾಯಾಮ ಮಂದಿರ, ಈಜುಗೊಳ, ಸಾಮಗ್ರಿಗಳು ಇತ್ಯಾದಿಗಳು ಇರದೆ ಒಳ್ಳೆಯ ಪ್ರತಿಫಲವನ್ನು ಅಪೇಕ್ಷಿಸುವುದು ಸಾಧ್ಯವಿಲ್ಲ.

ಕ) ಅಭಿವೃದ್ಧಿಯು ಅತಿ ನಿಧಾನವಾಗಿ ನಡೆಯುವಂತಹ ಕ್ರಿಯೆಯಾದ್ದರಿಂದ ಮಾನಸಿಕ ಮತ್ತು ಶಾರೀರಿಕ ನಿಪುಣತೆಗಳ ಅಭಿವೃದ್ಧಿಗಾಗಿ ಸಾಕಷ್ಟು ವೇಳೆಯನ್ನು ವಿನಿಯೋಗಿಸುವುದು.

ಡ) ಒಬ್ಬನೇ ವ್ಯಕ್ತಿ ಬೇರೆಯವರ ಸಂಪರ್ಕವಿಲ್ಲದೇ ವ್ಯಾಯಾಮಗಳನ್ನು ಮಾಡುವುದರಿಂದ ಅವನು ಸಾಮಾಜಿಕವಾಗಿ ಯೋಗ್ಯವಾದ ನಾಗರಿಕನಾಗಲು ಸಾಧ್ಯವಿಲ್ಲ. ಎಲ್ಲ ವ್ಯಕ್ತಿಗಳೂ ಸಾಮೂಹಿಕವಾಗಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲೇಬೇಕು.

### ದೈಹಿಕ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವ

ಇಂದಿನ ವೈಜ್ಞಾನಿಕ ಮತ್ತು ಯಾಂತ್ರಿಕ ಯುಗದಲ್ಲಿ ಮನುಷ್ಯನು ನಡೆಯುವುದರ ಬದಲಾಗಿ ವಾಹನಗಳನ್ನು ಬಳಸುವುದು, ನಿಂತು ಕೆಲಸ ಮಾಡುವ ಸಂದರ್ಭಗಳಲ್ಲಿ ಕುಳಿತು ಕೆಲಸ ಮಾಡುವುದು, ಅನೇಕ ಕೆಲಸ ಕಾರ್ಯಗಳಲ್ಲಿ ಸ್ವತಃ ಭಾಗವಹಿಸುವುದರ ಬದಲಾಗಿ ವೀಕ್ಷಕರಾಗುವುದು ಹೀಗಾಗಿ ಮನುಕುಲ ಕ್ರಿಯಾಶೀಲವಾಗಿರದೆ, ನಿಂತ ನೀರಿನಂತೆ ಜೀವನದಲ್ಲಿಯ ಆನಂದ ಮತ್ತು ಉತ್ಸಾಹವನ್ನು ಕಳೆದುಕೊಳ್ಳುತ್ತಿರುವಂಥಾ ಸನ್ನಿವೇಶ ಮತ್ತು ಸಂದರ್ಭಗಳಲ್ಲಿ ಸಮತೋಲನವಾದ ಜೀವನ ನಡೆಸಲು ದೈಹಿಕ ಶಿಕ್ಷಣದ ಅವಶ್ಯಕತೆ ಏಕಿದೆ ಅನ್ನುವುದಕ್ಕೆ ವಿವರಣೆ ಇಲ್ಲಿದೆ.

ಇಂದಿನ ಯಾಂತ್ರಿಕ ಯುಗದಲ್ಲಿ ಪ್ರತಿಯೊಬ್ಬರೂ ಸತತ ಹತ್ತಾರು ಗಂಟೆಗಳ ಕಾಲ ಕುಳಿತು ಕೆಲಸ ಮಾಡುವಂತಹ ಸಂದರ್ಭಗಳೇ ಹೆಚ್ಚಾಗಿರುವುದರಿಂದ, ದೈಹಿಕ ಚಟುವಟಿಕೆ ಮತ್ತು ಮನೋರಂಜನೆಯಲ್ಲಿ ಭಾಗವಹಿಸದಂತಾಗಿದೆ. ಮಕ್ಕಳ ಸರಿಯಾದ ವಿಕಾಸ ಮತ್ತು ಬೆಳವಣಿಗೆಗಾಗಿ, ಯೌವ್ವನಾವಸ್ಥೆಯಲ್ಲಿ ಸರಿಯಾಗಿ ದೈಹಿಕ ಸದೃಢತೆ ಮತ್ತು ಆರೋಗ್ಯವನ್ನು ಉಳಿಸಿಕೊಳ್ಳುವುದಕ್ಕೋಸ್ಕರ, ವೃದ್ಧಾಪ್ಯದಲ್ಲಿ ಬರುವಂತಹ ರೋಗಗಳಿಂದ ಕಾಪಾಡಿಕೊಳ್ಳಲು, ದೇಹದ ರಚನೆ ಮತ್ತು ದೇಹದಲ್ಲಿ ಆಗುವಂತಹ ರಾಸಾಯನಿಕ ಕ್ರಿಯೆಗಳ ಬಗ್ಗೆ ಜ್ಞಾನ ಪಡೆಯಲು, ವಿವಿಧ ದೈಹಿಕ ಚಟುವಟಿಕೆಗಳನ್ನು ಕಲಿಯುವ ಮೂಲಕ ಅನೇಕ ಚಾಲಕ ಕೌಶಲ ಮತ್ತು ಕ್ರೀಡಾ ಕೌಶಲಗಳಲ್ಲಿ ಪರಿಣಿತರಾಗಲು ಮತ್ತು ವಿವಿಧ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುವುಮಾಡಿಕೊಡಲು, ವಿವಿಧ ಮೇಲಾಟ ಮತ್ತು ಕ್ರೀಡೆಗಳಲ್ಲಿ ಭಾಗವಹಿಸುವಾಗ ನೈತಿಕ ವರ್ತನೆಯ ಮಹತ್ವವನ್ನು ತಿಳಿಯಲು, ದೈಹಿಕ ಸದೃಢತೆಯ ಮತ್ತು ಸದ್ಬಳಕೆಯ ಮಹತ್ವ ತಿಳಿಯಲು, ವಿವಿಧ ಬಗೆಯ ಕಾರ್ಯಕ್ರಮಗಳಾದ ದೈಹಿಕ ಕಸರತ್ತು, ನೃತ್ಯ, ದೈಹಿಕ ಸೌಂದರ್ಯಗಳಿಗೆ ಹೆಚ್ಚು ಆಕರ್ಷಕವಾಗಿ ಕಾಣುವಂತೆ ನೋಡಿಕೊಳ್ಳಲು, ಜೀವನದಲ್ಲಿ ಬರುವ ಮಾನಸಿಕ ಒತ್ತಡ, ಜಿಗುಪ್ಸೆ ಮುಂತಾದ ತೊಂದರೆಗಳನ್ನು ಹೋಗಲಾಡಿಸಲು, ಅಪ್ರಾಪ್ತ ವಯಸ್ಸಿನಲ್ಲಿ ಬರುವ ತೊಂದರೆಗಳು ಮತ್ತು ವಿಲೋಪಗಳನ್ನು ತಡೆಯಲು, ಬಾಲಾಪರಾಧಗಳನ್ನು ತಡೆಯಲು ದೈಹಿಕ ಶಿಕ್ಷಣ ನೆರವಾಗುತ್ತದೆ.

ದೈಹಿಕ ಶಿಕ್ಷಣವು ಸೃಜನಾತ್ಮಕ, ಕ್ರಿಯಾಶೀಲ, ಬೌದ್ಧಿಕ ಜ್ಞಾನದೊಂದಿಗೆ ದೈಹಿಕ ಆರೋಗ್ಯ ಕಾಪಾಡಿಕೊಳ್ಳುವ ಮೂಲ ಮಂತ್ರವಾಗಿದೆ.

ದೈಹಿಕ ಶಿಕ್ಷಣವನ್ನು ಸಾಮಾನ್ಯವಾಗಿ ಶಾಲೆಯ ಪಠ್ಯಕ್ರಮದಲ್ಲಿಯೇ ಅಳವಡಿಸಿದಾಗ ಅದರ ಮೂಲಕ ಅಂದರೆ ಅಂಗಸಾಧನೆ (Physical Training), ಕಸರತ್ತುಗಳು (Gymnastics), ಕವಾಯತು (Drill), ವೈಯಕ್ತಿಕ ಮತ್ತು ಗುಂಪು ಆಟಗಳು, ಮೇಲಾಟಗಳು (Games ad Sports), ಮನೋಲ್ಲಾಸ ಕ್ರೀಡೆಗಳು (Recreation Games) ಮತ್ತು ಆರೋಗ್ಯ ಶಿಕ್ಷಣದ (Health Education) ಜ್ಞಾನದೊಂದಿಗೆ, ದೈಹಿಕ ಸದೃಢತೆಯನ್ನು ಹೆಚ್ಚಿಸಿ ಕಾಪಾಡಿಕೊಳ್ಳುವುದು ಬೌದ್ಧಿಕ ಜ್ಞಾನ, ಚಾಲಕ ಕೌಶಲ್ಯ ಹೆಚ್ಚಿಸುವುದರೊಂದಿಗೆ ಸಮಗ್ರ ವ್ಯಕ್ತಿತ್ವ ವಿಕಸನಗೊಳ್ಳಲು ಸಹಾಯವಾಗುತ್ತದೆ.

ದೈಹಿಕ ಶಿಕ್ಷಣದ ಮಹತ್ವವನ್ನು ಹೀಗೆ ಸಮರ್ಥಿಸಬಹುದು.

### ದೈಹಿಕ ಸದೃಢತೆಯನ್ನು ಕಾಪಾಡಿಕೊಳ್ಳಲು

ಪ್ರತಿದಿನ ನಾವು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಸ್ನಾಯು ಬಲ ಹೆಚ್ಚುವುದು, ಪಚನಕ್ರಿಯೆ ಉತ್ತಮಗೊಂಡು ಆಹಾರದಲ್ಲಿರುವ ಸತ್ವಗಳನ್ನು ಅರಗಿಸಿಕೊಂಡು ಆರೋಗ್ಯಕರವಾದ, ಸುಂದರವಾದ ದೈಹಿಕ ನಿಲುವಿನೊಂದಿಗೆ ಸದೃಢವಾದ ಕಾಯವನ್ನು ಹೊಂದುತ್ತೇವೆ. ದಿನನಿತ್ಯದ ಕೆಲಸ ಕಾರ್ಯಗಳನ್ನು ಸುಲಭವಾಗಿ ಮುಗಿಸಿ ಸಂತೋಷದಿಂದಿರಲು ಸಹಕರಿಸುವುದು.

### ಸಮಗ್ರವಾದ ಆತ್ಮವಿಶ್ವಾಸ ಬಲಗೊಳಿಸುವುದು

ವಿವಿಧ ವೈಯಕ್ತಿಕ ತಂಡಗಳ ಮತ್ತು ಮನೋರಂಜನೆಯ ಕ್ರೀಡೆಗಳಲ್ಲಿ ಹಾಗೂ ಮೇಲಾಟಗಳಲ್ಲಿ ತೊಡಗಿಕೊಂಡಾಗ ಸೋಲು ಮತ್ತು ಗೆಲುವು ಸರ್ವೇ ಸಾಮಾನ್ಯ. ಹೀಗಿರುವಾಗ ಕ್ರೀಡೆಯಲ್ಲಿ ಗೆದ್ದಾಗ ವ್ಯಕ್ತಿಯ ಆತ್ಮವಿಶ್ವಾಸ ಹೆಚ್ಚುತ್ತಾ ಹೋಗಿ, ಸಕಾರಾತ್ಮಕ ವಿಚಾರಗಳಿಂದ ರೂಪುಗೊಳ್ಳುತ್ತಾನೆ. ಅಷ್ಟೇ ಅಲ್ಲ, ಒಂದು ವೇಳೆ ಕ್ರೀಡೆಯಲ್ಲಿ ಸೋಲು ಕಂಡಾಗಲೂ ಅದನ್ನು ಸಂತೋಷದಿಂದ ಸ್ವೀಕರಿಸುವ ಮನೋಸ್ಥೈರ್ಯವು ಬೆಳೆಯುವುದು.

### ಸಮತೋಲ ಆಹಾರ ಮತ್ತು ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ಉಂಟುಮಾಡುತ್ತದೆ

ದೈಹಿಕ ಶಿಕ್ಷಣ ಎಂದಾಕ್ಷಣ ಕೇವಲ ವಿವಿಧ ವೈಯಕ್ತಿಕ ತಂಡಗಳ ಮತ್ತು ಮನೋರಂಜನೆಯ ಕ್ರೀಡೆಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲ, ಅದು ದೈಹಿಕ ಆರೋಗ್ಯದ ಬಗ್ಗೆ ಜ್ಞಾನವನ್ನು ಕೊಡುವುದು. ಉದಾ : ರಕ್ತಹೀನತೆಯ, ಅಶಕ್ತ ದೇಹ ಮತ್ತು ಸ್ಥೂಲಕಾಯದಿಂದಾಗುವ

Digitised by Bharatavani, CIIL

ತೊಂದರೆಗಳನ್ನು ತಿಳಿಸುತ್ತಾ, ಸಮತೋಲ ಆಹಾರದ ಮಹತ್ವ ಮತ್ತು ಊಟದ ವಿಧಾನ ಮುಂತಾದವುಗಳ ತಿಳುವಳಿಕೆಯನ್ನು ಕೊಡುತ್ತದೆ.

**ಕ್ರೀಡಾ ಮನೋಭಾವನೆ ಮತ್ತು ತಂಡಗಳ ಬಗ್ಗೆ ಉತ್ಸಾಹ**

ವೈಯಕ್ತಿಕ ಮತ್ತು ತಂಡಗಳ ಕ್ರೀಡೆಗಳಲ್ಲಿ ಭಾಗವಹಿಸುವಂತಹ ವಿದ್ಯಾರ್ಥಿಗಳಲ್ಲಿ ತಮ್ಮ ತಂಡದ ಬಗ್ಗೆ ಅಭಿಮಾನ ಮತ್ತು ತಂಡಗಳಲ್ಲಿ ಒಗ್ಗಟ್ಟು ತರುವುದು, ಸಂಘಟನಾ ಸಾಮರ್ಥ್ಯ ಹೆಚ್ಚುವುದು, ಕ್ರೀಡಾಮನೋಭಾವನೆ ಬೆಳೆಸುವುದು, ವಿವಿಧ ಸಂಘಟನೆಗಳಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರಿಂದಾಗಿ ಸಂಪೂರ್ಣ ವ್ಯಕ್ತಿತ್ವ ವಿಕಸನವಾಗುವುದು.

**ಚಾಲನಾ ಕೌಶಲ್ಯಗಳು ಬೆಳವಣಿಗೆಯಾಗುವುದು**

ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಶಿಸ್ತು, ಸಂಯಮ ಮತ್ತು ಏಕಾಗ್ರತೆ ಬೆಳೆಯುವುದು ಮತ್ತು ವಿವಿಧ ಅವಯವಗಳ ಮೇಲೆ ಸಮನ್ವಯ ಸಾಧಿಸಲು ಸಹಕರಿಸುವುದರಿಂದ ಆರೋಗ್ಯ ವೃದ್ಧಿಸಿ ದೈಹಿಕವಾಗಿ ಸುಂದರ ನಿಲುವನ್ನು ಹೊಂದುವಂತೆ ಮಾಡುವುದು.

**ಸ್ವಚ್ಛತೆಯ ಮಹತ್ವವನ್ನು ತಿಳಿಸುತ್ತದೆ**

ದೈಹಿಕ ಶಿಕ್ಷಣವು ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಮಹತ್ವವನ್ನು ತಿಳಿಸುತ್ತದೆ. ವೈಯಕ್ತಿಕ ಸ್ವಚ್ಛತೆ, ತಾವಿರುವಂತಹ ಶಾಲಾ ಕೊಠಡಿ, ಸುತ್ತಮುತ್ತಲಿನ ಪರಿಸರ, ಮನೆಯ ಪರಿಸರ ಹಾಗೂ ಸಾರ್ವಜನಿಕರಿರುವ ಸ್ಥಳಗಳಲ್ಲಿ ಹೇಗೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕೆಂಬುದರ ತಿಳಿವಳಿಕೆ ಮತ್ತು ಮಹತ್ವ ಕುರಿತ ಜ್ಞಾನ ಕೊಡುವುದರಿಂದ ಜೀವನದುದ್ದಕ್ಕೂ ಸ್ವಚ್ಛತೆಯನ್ನು ಅಳವಡಿಸಿಕೊಳ್ಳುವಂತೆ ಮಾಡುವುದು.

**ಒಟ್ಟು ಬುದ್ಧಿಮತ್ತೆಯ ಸಾಮರ್ಥ್ಯ ಹೆಚ್ಚುವುದು**

ವಿವಿಧ ಕ್ರೀಡೆಗಳ ಕುರಿತು ಸಂಪೂರ್ಣ ಜ್ಞಾನವನ್ನು ಹೊಂದಿರುವುದು, ಬೇರೆ ಬೇರೆ ಸ್ಥಳಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸುವುದು, ವಿವಿಧ ಸಂಘಟನೆಗಳ ಸಂಪರ್ಕದಲ್ಲಿ ಬರುವುದು, ಅಲ್ಲದೆ ತಮ್ಮ ಸಾಮರ್ಥ್ಯ, ಪ್ರತಿಭೆಗಳಿಗೆ ತಕ್ಕಂತೆ ಪ್ರದರ್ಶನಗಳಿಗೆ ಅವಕಾಶಗಳನ್ನು ದೊರಕಿಸಿಕೊಳ್ಳುವ ಪ್ರಕ್ರಿಯೆಯಲ್ಲಿರುವುದರಿಂದ ಬುದ್ಧಿಮತ್ತೆಯು ಸಹಜವಾಗಿಯೇ ಬೆಳವಣಿಗೆಯಾಗುವುದು.

**ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು**

ದೈಹಿಕ ಶಿಕ್ಷಣವು ಉತ್ತಮ ಕ್ರೀಡಾಪಟುಗಳನ್ನು ಗುರುತಿಸಿ ಅವರಲ್ಲಿರುವ ಕ್ರೀಡಾ ಪ್ರತಿಭೆಯನ್ನು ಪ್ರದರ್ಶಿಸಲು ಅನುವುಮಾಡಿಕೊಡುವ ಕಾರ್ಯವನ್ನು ಮಾಡುತ್ತಾ ಅವರನ್ನು ಹೊರ ಜಗತ್ತಿಗೆ ಪರಿಚಯಿಸುವ ಪ್ರಯತ್ನ ಮಾಡುತ್ತದೆ.

**ಮನೋರಂಜನೆಯ ಮೂಲವಾಗುವುದರ ಜೊತೆಗೆ ಮಾನಸಿಕ ಉದ್ವೇಗವನ್ನು ಹೋಗಲಾಡಿಸುವುದು**

ವಿದ್ಯಾರ್ಥಿಗಳ ದೈಹಿಕ ಶಿಕ್ಷಣದ ಮೂಲಕ ಆರೋಗ್ಯ ಮತ್ತು ಸಮತೋಲ ಆಹಾರದ ಮಹತ್ವ ಕುರಿತು ತಿಳಿದುಕೊಳ್ಳುವುದರ ಜೊತೆ ಜೊತೆಗೆ ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಿರುವ ಪಾಠ ಪ್ರವಚನ ಕೇಳುವುದು, ಬರೆಯುವುದು, ಓದುವುದು ಮತ್ತು ಮನನ ಮಾಡಿಕೊಳ್ಳುವುದು ಕಷ್ಟವಾಗಿ ಆಲಸ್ಯತನ ಮತ್ತು ಮಾನಸಿಕವಾಗಿ ಉದ್ವೇಗಕ್ಕೆ ಒಳಗಾದ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣವು ಮನೋರಂಜನೆಯ ಮೂಲವಾಗುವುದರ ಜೊತೆಗೆ ಮಾನಸಿಕ ಉದ್ವೇಗವನ್ನು ಹೋಗಲಾಡಿಸುವುದು.

**ಯೌವನಾವಸ್ಥೆಯಲ್ಲಿ ಆರೋಗ್ಯಕರವಾದ ಜೀವನ ಶೈಲಿಯನ್ನು ಅಳವಡಿಸಿಕೊಂಡು ಸಂತೋಷವಾಗಿರುವಂತೆ ಮಾಡುವುದು**

ಚಿಕ್ಕ ಮಕ್ಕಳಾಗಿರುವಾಗಲೇ ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಲಾದ ದೈಹಿಕ ಶಿಕ್ಷಣದ ಮೂಲಕ ಆರೋಗ್ಯ ಮತ್ತು ಸಮತೋಲ ಆಹಾರದ ಮಹತ್ವ ಕುರಿತು ತಿಳಿದುಕೊಳ್ಳುವುದರ ಜೊತೆಗೆ ವಿವಿಧ ದೈಹಿಕ ಚಟುವಟಿಕೆಗಳ ಮತ್ತು ಕ್ರೀಡೆಗಳ ಜ್ಞಾನವಿರುವುದರಿಂದ ಜವಾಬ್ದಾರಿಯುತವಾಗಿ ಆರೋಗ್ಯಕರವಾದ ಜೀವನ ಶೈಲಿಯನ್ನು ಅಳವಡಿಸಿಕೊಂಡು ಸಂತೋಷವಾಗಿರುವಂತೆ ಮಾಡುವುದು.

**ಭಾರತ ಸರಕಾರದ ಕೆಲವು ಮಹತ್ವದ ನಿರ್ಧಾರಗಳು**

**ದೈಹಿಕ ಶಿಕ್ಷಣವು ಎಲ್ಲಾ ಕ್ರೀಡೆಗಳಿಗೂ ಮಾತೃ ಸ್ಥಾನದಲ್ಲಿದೆ**

ಕ್ರೀಡೆಗಳು ಮನುಷ್ಯನ ಸಮಗ್ರ ವ್ಯಕ್ತಿತ್ವ ವಿಕಸನದ ಅವಿಭಾಜ್ಯ ಅಂಗವಾಗಿದ್ದು, ವ್ಯಕ್ತಿಯು ಕ್ರೀಡಾ ಲೋಕದಲ್ಲಿ ಅತ್ಯಂತ ಉನ್ನತ ಸಾಧನೆ ಮಾಡುವುದಾಗಲಿ, ಕ್ರೀಡಾ ಜಗತ್ತಿನಲ್ಲಿ ಸ್ಥಾನಮಾನ, ಕೀರ್ತಿಯನ್ನು ಗಳಿಸುವುದಾಗಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರಧ್ವಜವನ್ನು ವಿಜೃಂಭಿಸುವಂತೆ ಮಾಡಿ ದೇಶದ ಘಟನೆಯನ್ನು ಎತ್ತಿ ಹಿಡಿಯುವಂತಹ ಕಾರ್ಯದಲ್ಲಿ ಕ್ರೀಡಾಪಟುಗಳ ಪಾತ್ರ ಮಹತ್ವದ್ದಾಗಿದೆ. ಇಂದು ಯಾವುದೇ ದೇಶದ ಘಟನೆ, ಗೌರವ, ಸಾಮರ್ಥ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ಗೌರವಿಸಬೇಕಾದರೆ, ಆ ದೇಶದಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳು, ಮಾನವ ಸಂಪನ್ಮೂಲ, ತಂತ್ರಜ್ಞಾನ, ಕ್ರೀಡಾ ವಿಭಾಗದ ಸಾಧನೆ ಮುಂತಾದವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಅತಿ ವೇಗವಾಗಿ ಬದಲಾಗುತ್ತಿರುವ ಜಗತ್ತಿನ ಪರಿಸರಕ್ಕನುಗುಣವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಬೇಕಾದರೆ ಯಾವ ಯಾವ ಬೇಡಿಕೆಗಳನ್ನು ಕ್ರೀಡಾಪಟುಗಳು ಪೂರೈಸಬೇಕಾಗುವುದೆಂಬ ಅಂಶವನ್ನು ಅರಿತ ಭಾರತ ಸರಕಾರವು ರಾಷ್ಟ್ರ ಮಟ್ಟದಲ್ಲಿ ಕ್ರೀಡಾ ಪ್ರಾಧಿಕಾರವನ್ನು (Sports Authority of India) ಸ್ಥಾಪಿಸಲು ನಿರ್ಧರಿಸಿತು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಭಾರತ ಸರಕಾರವು 1961ರಲ್ಲಿ ಪಂಜಾಬ್ ರಾಜ್ಯದ ಪಟಿಯಾಲದಲ್ಲಿ ರಾಷ್ಟ್ರೀಯ ಕ್ರೀಡಾ ಸಂಸ್ಥೆಯನ್ನು (National Institute of Sports) ಪ್ರಾರಂಭಿಸಿತು. ನಂತರ ದಿನಾಂಕ 23 ಜನವರಿ 1973ರಂದು ಭಾರತ ಮಾತೆ ಕಂಡ ಅತ್ಯಂತ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಾದ ನೇತಾಜಿ ಸುಭಾಷ್ಚಂದ್ರ ಬೋಸ್‌ರವರ ಹೆಸರನ್ನು ಈ ಸಂಸ್ಥೆಗೆ ಇಡಲಾಯಿತು.

ದಿನಾಂಕ 25 ಜನವರಿ 1984 ರಂದು ಭಾರತೀಯ ಕ್ರೀಡಾ ಪ್ರಾಧಿಕಾರವನ್ನು (Sports Authority of India) ನೋಂದಾಯಿತ ಸಂಸ್ಥೆಯಾಗಿ ಮಾರ್ಪಡಿಸಿಕೊಂಡು, ಬೆಳೆಯುವ ಕ್ರೀಡಾಪಟುಗಳನ್ನು ಗುರುತಿಸಿ ಅವರಲ್ಲಿರುವ ಕ್ರೀಡಾ ಪ್ರತಿಭೆಯನ್ನು ನುರಿತ ಕ್ರೀಡಾ ತರಬೇತುದಾರರ ಮೂಲಕ ಮುಂದುವರೆದ ಕ್ರೀಡಾ ಕೌಶಲ್ಯಗಳನ್ನು ಅಳವಡಿಸಿ ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡಾಪಟುವನ್ನಾಗಿ ರೂಪಿಸುವ ಮುಖ್ಯ ಉದ್ದೇಶದಿಂದ ದೇಶದ ವಿವಿಧ ಭಾಗಗಳಲ್ಲಿ ಏಳು ಕ್ರೀಡಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಅವುಗಳೆಂದರೆ, ಬೆಂಗಳೂರು, ಗಾಂಧೀನಗರ, ಕಲ್ಕತ್ತಾ, ಸೊನಾಪತ್ತ, ದೆಹಲಿ, ಮುಂಬಯಿ ಮತ್ತು ಇಂಪಾಲ.

Digitised by Bharatavani, CIIL

ದೈಹಿಕ ಶಿಕ್ಷಣದ ಮಹತ್ವ ಅರಿತ ಭಾರತದ ಘನ ಸರಕಾರವು ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳನ್ನು ಪ್ರಾರಂಭಿಸುವ ನಿರ್ಧಾರ ತೆಗೆದುಕೊಂಡು, ಮಧ್ಯಪ್ರದೇಶದ ಗ್ವಾಲಿಯರ್ ಪಟ್ಟಣದಲ್ಲಿ ರಾಷ್ಟ್ರೀಯ ದೈಹಿಕ ಶಿಕ್ಷಣ ಮಹಾವಿದ್ಯಾಲಯುವನ್ನು 1957ರಂದು ಪ್ರಾರಂಭಿಸಲಾಯಿತು. ನಂತರ ಈ ಮಹಾವಿದ್ಯಾಲಯಕ್ಕೆ ಝೂನ್ಸಿ ಮಹಾರಾಣಿ ಲಕ್ಷ್ಮೀಬಾಯಿಯವರ ಹೆಸರನ್ನು ಇಡಲಾಯಿತು.

**ಮಹಾವಿದ್ಯಾಲಯವು ಪ್ರಾರಂಭಿಸಿದ ಪದವಿಗಳ ವಿವರ ಇಂತಿವೆ**

1957 ರಲ್ಲಿ : ದೈಹಿಕ ಶಿಕ್ಷಣದಲ್ಲಿ ಪದವಿ

1963 ರಲ್ಲಿ : ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ.

1980 ರಲ್ಲಿ : ದೇಶದಲ್ಲಿಯೇ ಪ್ರಪ್ರಥಮವಾಗಿ ಎಮ್.ಫಿಲ್. ಪ್ರಾರಂಭಿಸಿದ ಕೀರ್ತಿಗೂ ಪಾತ್ರವಾಯಿತು.

1995ರಲ್ಲಿ ಭಾರತ ಸರಕಾರದ ಸ್ವಾಯತ್ತತೆ ಪಡೆದ, ದೈಹಿಕ ಶಿಕ್ಷಣದಲ್ಲಿ ದೇಶದಲ್ಲಿಯೇ ಪ್ರಪ್ರಥಮ. ಅಷ್ಟೇ ಅಲ್ಲ, ಒಂದೇ ಒಂದು ವಿಶ್ವವಿದ್ಯಾಲಯ ಎನ್ನುವ ಕೀರ್ತಿಗೆ ಪಾತ್ರವಾಯಿತು.

**ಆರೋಗ್ಯ ಶಿಕ್ಷಣದ ಸರ್ವತೋಮುಖ ಬೆಳವಣಿಗೆಗಾಗಿ ಅನೇಕ ಸಮಿತಿಗಳನ್ನು ರಚಿಸಲಾಯಿತು.**

1944ರಲ್ಲಿ ಕೇಂದ್ರ ಸಲಹಾ ಸಮಿತಿ : ಈ ಸಮಿತಿಯು ಆರೋಗ್ಯ ಶಿಕ್ಷಣ, ದೈಹಿಕ ಶಿಕ್ಷಣದ ಪ್ರತಿಯೊಂದು ಸೇವೆಯನ್ನೂ ಶಿಕ್ಷಣ ಇಲಾಖೆಯ ಮೂಲಕವೇ ಆಡಳಿತವನ್ನು ನಡೆಸುವಂತೆ ಸೂಚಿಸಿತು.

1946 ರಲ್ಲಿ ಭೋರೆ ಸಮಿತಿ : ಈ ಸಮಿತಿಯು ಆರೋಗ್ಯ ಶಿಕ್ಷಣವನ್ನು ಎರಡು ಭಾಗಗಳಾಗಿ ವಿಂಗಡಿಸಿತು. ಆರೋಗ್ಯ ಶಿಕ್ಷಣದ ಅವಶ್ಯಕತೆಗಳು ಮತ್ತು ಶಾಲೆಗಳಲ್ಲಿ ಸಲ್ಲಿಸುವ ಆರೋಗ್ಯ ಶಿಕ್ಷಣದ ಸೇವೆಗಳು.

1954ರಲ್ಲಿ ಶಾಲಾ ಮಟ್ಟದಲ್ಲಿ ಆರೋಗ್ಯ ವಿಭಾಗವನ್ನು ತೆರೆಯಲಾಯಿತು.

1960ರಲ್ಲಿ ರೇಣುಕಾರಾಯ ಸಮಿತಿ : ಈ ಸಮಿತಿಯು ಆರೋಗ್ಯ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದ ಒಂದು ಭಾಗವಾಗಿ ಪರಿಗಣಿಸುವಂತೆ ಶಿಫಾರಸ್ಸು ಮಾಡಲಾಯಿತು.

1986ರಲ್ಲಿ ರೂಪಿಸಿದ ಶಿಕ್ಷಣ ನೀತಿಯನ್ನು 1992ರಲ್ಲಿ ತಿದ್ದುಪಡಿ ಮಾಡಲಾಯಿತು.

2002ರಲ್ಲಿ ರಾಷ್ಟ್ರೀಯ ಆರೋಗ್ಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು.

2005ರಲ್ಲಿ ಎನ್.ಸಿ.ಇ.ಆರ್.ಟಿ. ಇಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು.

ದಿನಾಂಕ 28 ಡಿಸೆಂಬರ್ 1953 ರಂದು ಭಾರತ ಸರಕಾರವು "ವಿಶ್ವವಿದ್ಯಾಲಯ ಧನ ಸಹಾಯ ಆಯೋಗ"ವನ್ನು ಪ್ರಾರಂಭಿಸಿತು.

**ಯುವಜನ ಮತ್ತು ಕ್ರೀಡಾ ಇಲಾಖೆ ಮಂತ್ರಾಲಯ, ಭಾರತ ಸರ್ಕಾರ**

1982 ರಂದು ಹೊಸ ದೆಹಲಿಯಲ್ಲಿ ಭಾರತ ಸರಕಾರವು 9ನೇ ಏಷಿಯನ್ ಕ್ರೀಡಾಕೂಟವನ್ನು ಸಂಘಟಿಸುವ ಸಂದರ್ಭದಲ್ಲಿ ಅದರ ಜವಾಬ್ದಾರಿಯನ್ನು ನಿರ್ವಹಿಸಲು ಮತ್ತು ಸಂಘಟನೆಗೆ ಸಹಕರಿಸಿ, ನಂತರದ ದಿನಗಳಲ್ಲಿ ಕ್ರೀಡಾಪಟುಗಳ ಸಂಪೂರ್ಣ ಬೆಳವಣಿಗೆ ಮತ್ತು ಪರಿಪೂರ್ಣ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಲು ಸಹಕಾರಿಯಾಗುವಂತಹ ಎಲ್ಲ ಸೌಕರ್ಯಗಳನ್ನು ಒದಗಿಸಿ, ತನ್ಮೂಲಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾಪಟುಗಳನ್ನು ತಯಾರಿಸಿ ಕ್ರೀಡಾ ಸಾಧನೆ ಮಾಡಿಸುವ ದೃಷ್ಟಿಕೋನ ಇಟ್ಟುಕೊಂಡು, ಅನೇಕ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಯುವಜನ ಮತ್ತು ಕ್ರೀಡಾ ಇಲಾಖೆ ಮಂತ್ರಾಲಯ ಪ್ರಾರಂಭಿಸಲಾಯಿತು. ನಂತರ ದಿನಾಂಕ 27 ಮೇ 2000 ದಿಂದ ಇದು ಸ್ವತಂತ್ರ ಮಂತ್ರಾಲಯವಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು.

**ಮಹತ್ವವಾದ ಕಾರ್ಯಕ್ರಮ ಮತ್ತು ಯೋಜನೆಗಳು ಇಂತಿವೆ**

**ಧನ ಸಹಾಯ**

- ಮೂಲಭೂತ ಕ್ರೀಡಾ ಸೌಕರ್ಯಗಳ ನಿರ್ಮಾಣಕ್ಕಾಗಿ
- ಗ್ರಾಮೀಣ ಕ್ರೀಡೆಗಳಿಗಾಗಿ ಕ್ರೀಡಾ ಸಾಮಗ್ರಿಗಳ ಖರೀದಿ ಮತ್ತು ಕ್ರೀಡಾಂಗಣಗಳನ್ನು ನಿರ್ಮಿಸುವುದು.
- ಕ್ರೀಡಾಂಗಣಗಳಿಗೆ ಕೃತಕವಾದ ಮೇಲ್ಹಾಸನ್ನು (Synthetic Playing Surface) ನಿರ್ಮಿಸಲು.
- ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯಗಳಲ್ಲಿ ಸಂಪೂರ್ಣ ಕ್ರೀಡಾ ಬೆಳವಣಿಗೆಗೆ.
- ರಾಷ್ಟ್ರೀಯ ಕ್ರೀಡಾ ಸಂಘಟನೆಗಳಿಗೆ ಸಹಾಯ ಒದಗಿಸುವುದು.
- ವಿದ್ಯಾರ್ಥಿಗಳಿಗೆ ಕ್ರೀಡಾ ವೇತನ ಕೊಡುವುದು.

**ಕ್ರೀಡಾ ಚಟುವಟಿಕೆಗಳನ್ನು ಬಡತಿಗೊಳಿಸುವ ಉದ್ದೇಶ ಮತ್ತು ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಅನೇಕ ಯೋಜನೆಗಳನ್ನು ರೂಪಿಸಿಕೊಂಡ ವಿವರ ಇಂತಿದೆ.**

- ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಕ್ರೀಡಾಪಟುಗಳಿಗೆ ರೂಪಾಯಿ 50 ಸಾವಿರದಿಂದ 5 ಲಕ್ಷ ರೂಪಾಯಿಗಳವರೆಗೆ ವಿಶೇಷ ನಗದು ಪುರಸ್ಕಾರಗಳನ್ನು ಕೊಡಲು ಯೋಜಿಸಲಾಯಿತು. ಈ ಯೋಜನೆಯು 1986 ರಿಂದಲೇ ಕಾರ್ಯರೂಪಕ್ಕೆ ಬಂದಿದೆ.

ಈ ಯೋಜನೆಯು ಅಡಿಯಲ್ಲಿ 1995-96 ರಲ್ಲಿ 107 ಕ್ರೀಡಾಪಟುಗಳು/ತರಬೇತುದಾರರು ಪ್ರಯೋಜನ ಪಡೆದುಕೊಂಡರು.

- ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಅಂತಹ ಕ್ರೀಡಾಪಟುಗಳಿಗೆ ಕ್ರೀಡಾ ವೇತನ ಕೊಡುವುದು. ಈ ಯೋಜನೆಯನ್ನು 1970-71 ರಿಂದ ಪ್ರಾರಂಭಿಸಲಾಯಿತು. ಇದನ್ನು ಸೆಕೆಂಡರಿ ಶಾಲೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಕೊಡಲಾಗುವುದು.
- ಕ್ರೀಡಾ ವೇತನವನ್ನು ವಿಶೇಷ ತರಬೇತುದಾರರಿಗೂ ಮತ್ತು ಪ್ರಮುಖ ಕ್ರೀಡಾಪಟುಗಳಿಗೂ ಕೊಡಲಾಗುವುದು. ಈ ಯೋಜನೆಯನ್ನು 1990-91ರಲ್ಲಿ ಜಾರಿಗೊಳಿಸಲಾಯಿತು.
- ಕ್ರೀಡಾ ನಿವೃತ್ತಿ ವೇತನವನ್ನು ಪ್ರಮುಖ ಕ್ರೀಡಾಪಟುಗಳಿಗೆ ಕೊಡುವ ಉದ್ದೇಶದಿಂದ ಈ ಯೋಜನೆಯನ್ನು 1984ರಲ್ಲಿ ಪ್ರಾರಂಭಿಸಲಾಯಿತು.
- ರಾಷ್ಟ್ರೀಯ ಕ್ರೀಡಾ ಕಲ್ಯಾಣ ನಿಧಿಯನ್ನು 1986ರಲ್ಲಿ ಜಾರಿಗೆ ತರಲಾಯಿತು.

Digitised by Bharatavani, CIIL

- ಪ್ರವಾಸ ದರದಲ್ಲಿ ರಿಯಾಯಿತಿಯನ್ನು 1987ರಿಂದ ಪ್ರಾರಂಭಿಸಲಾಯಿತು.
- ಮಹಿಳಾ ಕ್ರೀಡಾಪಟುಗಳಿಗೆ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸಲು ಪ್ರೋತ್ಸಾಹಿಸುವುದಕ್ಕೋಸ್ಕರ ಧನಸಹಾಯ ಯೋಜನೆ.
- 1970–71 ರಿಂದ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸುವ ಯೋಜನೆ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಗ್ರಾಮೀಣ ಕ್ರೀಡಾಕೂಟಗಳನ್ನು ಪ್ರಾರಂಭಿಸಲಾಯಿತು.
- 1975ರಲ್ಲಿ ಮಹಿಳೆಯರಿಗಾಗಿ ರಾಷ್ಟ್ರೀಯ ಕ್ರೀಡಾಕೂಟಗಳು ಪ್ರಾರಂಭಗೊಂಡವು.
- 1994–95 ರಿಂದ ಕ್ರೀಡಾ ಯೋಜನೆಗಳನ್ನು ಮೌಲ್ಯಮಾಪನಕ್ಕೆ ಅಳವಡಿಸಲಾಯಿತು.

**ಕ್ರೀಡಾ ಸಾಧಕ ಮತ್ತು ತರಬೇತುದಾರರಿಗೆ ಕೊಡಮಾಡುವ ಪ್ರಶಸ್ತಿಗಳ ವಿವರ**

- **ಅರ್ಜುನ ಪ್ರಶಸ್ತಿ** : ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿ. ಇದು ರೂಪಾಯಿ 3 ಲಕ್ಷ ನಗದು ಹಣವನ್ನು ಹೊಂದಿರುವುದು.
- **ರಾಜೀವ ಗಾಂಧಿ ಖೇಲ್ ರತ್ನ ಪ್ರಶಸ್ತಿ** : ಇದು ನಗದು ಹಣ ರೂಪಾಯಿ 7.5 ಲಕ್ಷವನ್ನು ಒಳಗೊಂಡಿರುತ್ತದೆ. ಇದನ್ನು ಸಾಧನೆ ಮಾಡಿದ ತಂಡದ ಸದಸ್ಯರುಗಳಿಗೆ ಕೊಡಲಾಗುವುದು.
- **ದ್ರೋಣಾಚಾರ್ಯ ಪ್ರಶಸ್ತಿ** : ಇದನ್ನು ತರಬೇತುದಾರರಿಗೆ ನೀಡಲಾಗುವುದು.
- **ಮೌಲಾನಾ ಅಬ್ದುಲ್ ಕಲಾಮ್ ಅಜಾದ್ ಟ್ರೋಫಿ** : ಇದನ್ನು ಅಂತರ್ ವಿಶ್ವವಿದ್ಯಾಲಯ ಮಟ್ಟದಲ್ಲಿ ಸಮಗ್ರ ಕ್ರೀಡಾ ಸಾಧನೆ ಮಾಡಿದವರಿಗೆ ಕೊಡಲಾಗುವುದು.

–ಎಲ್.ಎಸ್.ಬಿ

## ದೈಹಿಕ ಸವಾಲುಳ್ಳ ಮಕ್ಕಳ ಶಿಕ್ಷಣ

ತಮ್ಮ ದಿನನಿತ್ಯ ಕೆಲಸಕಾರ್ಯಗಳಲ್ಲಿ ಅಥವಾ ಚಟುವಟಿಕೆಗಳಲ್ಲಿ ಇತರ ಸಾಮಾನ್ಯ ಮಕ್ಕಳಂತೆ ಭಾಗವಹಿಸಲು ತಡೆಯೊಡ್ಡುವ ಯಾವುದೇ ರೀತಿಯ ದೈಹಿಕ ವಿಕಾಲಾಂಗತೆಯನ್ನು ಹೊಂದಿರುವ ಮಕ್ಕಳನ್ನೇ ದೈಹಿಕ ಸವಾಲುಳ್ಳ ಮಕ್ಕಳೆನ್ನುವರು. ಇಂತಹ ಮಕ್ಕಳ ದೈಹಿಕ ಅಂಗಾಂಗಗಳ ನ್ಯೂನತೆಯಿಂದಾಗಿ ಇತರ ಸಾಮಾನ್ಯ ಮಕ್ಕಳಂತೆ ಪರಿಸರದಲ್ಲಿ ಸರಾಗವಾಗಿ ಓಡಾಡಲು ಸಾಧ್ಯವಾಗುವುದಿಲ್ಲ. ದೈಹಿಕ ನ್ಯೂನತೆಯಿಂದ ಮಾತ್ರವಲ್ಲದೆ ಕೆಲವು ಸಂದರ್ಭಗಳಲ್ಲಿ ನರಮಂಡಲದ ತೊಂದರೆಯಿಂದಾಗಿಯೂ ತಮ್ಮ ಬಹುತೇಕ ದಿನನಿತ್ಯದ ಕೆಲಸ ಕಾರ್ಯಗಳನ್ನು ಸುಲಭವಾಗಿ ನಿರ್ವಹಿಸಲು ಇಂಥ ಮಕ್ಕಳಿಗೆ ಸಾಧ್ಯವಾಗುವುದಿಲ್ಲ. ಮಕ್ಕಳ ವಿಕಲಾಂಗತೆಯು ಕೆಲವೊಮ್ಮೆ ಬಹಳ ತೀವ್ರತೆರನಾಗಿರಬಹುದು ಅಥವಾ ಬಹಳ ಸಾಧಾರಣಮಟ್ಟದ್ದು ಆಗಿರಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ಇಂತಹ ನ್ಯೂನತೆಗಳು ಶಾಶ್ವತವಾಗಿರಬಹುದು.

ಇಂತಹ ಮಕ್ಕಳಿಗೆ ಅವರ ನ್ಯೂನತೆಯ ತೀವ್ರತೆಗನುಗುಣವಾಗಿ ವಿಶೇಷ ಶಾಲೆಯ ವ್ಯವಸ್ಥೆಯಲ್ಲಿ ಶಿಕ್ಷಣ ನೀಡಲಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ದೈಹಿಕ ಸವಾಲುಳ್ಳ ಮಕ್ಕಳಿಗೆ ಸಾಮಾನ್ಯ ಶಾಲೆಗಳಲ್ಲೇ ಶಿಕ್ಷಣವನ್ನು ನೀಡಲಾಗುತ್ತದೆ.

**ದೈಹಿಕ ಸವಾಲುಳ್ಳ ಮಕ್ಕಳ ಗುಣಲಕ್ಷಣಗಳು**

1. ದೈಹಿಕ ಸವಾಲುಳ್ಳ ಮಕ್ಕಳ ಚಲನೆಯ ಮೇಲೆ ಅಸ್ಥಿರ ನಿಯಂತ್ರಣ ಅಥವಾ ಅಂಗಾಂಗಗಳ ನಡುವೆ ಸಮರ್ಪಕ ಹೊಂದಾಣಿಕೆ ಇರುವುದಿಲ್ಲ.
2. ನಡೆಯುವಾಗ ಕುಂಟುವುದು ಅಥವಾ ಬಾಗಿ ನಡೆಯುವುದು ಅಥವಾ ಕಾಲುಗಳನ್ನು ಎಳೆದು ನಡೆಯುವುದು ಮುಂತಾದ ತೊಂದರೆಗಳಿರುತ್ತವೆ.
3. ಮಂಡಿಯಲ್ಲಿ ಅಥವಾ ಸ್ನಾಯುಗಳಲ್ಲಿ ನೋವು ಪದೇ ಪದೇ ಕಾಣಿಸಿಕೊಳ್ಳುತ್ತದೆ.
4. ಸಾಮಾನ್ಯ ಮಕ್ಕಳೊಂದಿಗೆ ಬೆರೆಯಲು ಇಷ್ಟಪಡುವುದಿಲ್ಲ.
5. ದೈನಂದಿನ ಚಟುವಟಿಕೆಗಳನ್ನು ಸಮರ್ಪಕವಾಗಿ ಮಾಡುವುದರಲ್ಲಿ ಅಸಹಾಯಕರಾಗಿರುತ್ತಾರೆ.
6. ಕೀಳರಿಮೆ ಹೆಚ್ಚಾಗಿ ಕಂಡುಬರುತ್ತವೆ.
7. ಅನೇಕ ಸಂವೇಗಾತ್ಮಕ ತೊಂದರೆಗಳು ಕಂಡುಬರುತ್ತವೆ.
8. ಇವರ ಕಾರ್ಯಗಳಲ್ಲಿ ದಕ್ಷತೆ, ಪರಿಮಾರ್ಜನೆ ಕಡಿಮೆ ಇರುತ್ತದೆ.

**ವರ್ಗೀಕರಣ**

ದೈಹಿಕ ಸವಾಲುಳ್ಳ ಮಕ್ಕಳ ವರ್ಗೀಕರಣವನ್ನು ಈ ಕೆಳಕಂಡಂತೆ ಮಾಡಬಹುದಾಗಿದೆ.

| | |
|---|---|
| ನರಮಂಡಲದ ತೊಂದರೆ | ಮೆದುಳಿನ ಪಾರ್ಶ್ವವಾಯು ಮೂರ್ಛೆ ಕಾಯಿಲೆ (ಎಪಿಲೆಪ್ಸಿ) ಬೆನ್ನುಹುರಿಯಲ್ಲಿರುವ ತೊಂದರೆ |
| ಸ್ನಾಯು ಮೂಳೆ ತೊಂದರೆಗಳು | ಮಸ್ಕಿಲರ್ ಡಿಸ್ಟ್ರೋಫಿ (ಮಾಂಸ ಖಂಡಗಳ ನಶಿಸುವಿಕೆ), ಸಂಧಿವಾತ (ಆರ್ಥ್ರೈಟಿಸ್) |
| ಅನುವಂಶಿಕ ದೈಹಿಕ ತೊಂದರೆಗಳು | ಅಂಗಾಂಗಗಳ ಅಸಮರ್ಪಕ ಬೆಳವಣಿಗೆ ಟೆಟ್ರೋಜನ್ ರೋಗಾಣುಗಳಿಂದ ಉಂಟಾಗುವ ದೈಹಿಕ ಅಸಮರ್ಪಕ ಬೆಳವಣಿಗೆ. |
| ಅಪಘಾತಗಳು | |
| ಸೋಂಕು, ಇತರೆ ಸ್ಥಿತಿಗಳು | ಸುಟ್ಟಗಾಯ, ಬಿದ್ದಗಾಯ, ಪೋಲಿಯೋ ಕ್ಯಾನ್ಸರ್, ಅಸ್ತಮಾ, ಏಡ್ಸ್. |

**ನರಮಂಡಲದ ತೊಂದರೆಗಳು**

ಇಂತಹ ತೊಂದರೆಯುಳ್ಳ ಮಗುವಿನಲ್ಲಿ ಮಧ್ಯನರಗಳ ವಿನ್ಯಾಸ ಮತ್ತು ಬೆನ್ನುಹುರಿ ಸೇರಿದಂತೆ ನ್ಯೂನತೆಗಳು ಉಂಟಾಗುತ್ತವೆ. ಇದರಿಂದ ಬುದ್ಧಿಮಾಂದ್ಯತೆ, ಕಲಿಯುವಿಕೆಯಲ್ಲಿ ತೊಂದರೆ, ಕಡಿಮೆ ಗ್ರಹಣ ಶಕ್ತಿ, ಅಸಮರ್ಪಕ ಅನ್ಯೋನ್ಯ ಸಂಬಂಧ, ಮನಸ್ಸು ಗಲಿಬಿಲಿಗೊಳ್ಳುವುದು,

Digitised by Bharatavani, CIIL

ಸಂವೇಗಾತ್ಮಕ ತೊಂದರೆಗಳು, ಮಾತು ಮತ್ತು ಭಾಷೆಯ ಅವ್ಯವಸ್ಥೆ ಮುಂತಾದ ತೊಂದರೆಗಳು ಕಂಡುಬರುತ್ತದೆ.

ಈ ನರಮಂಡಲದ ತೊಂದರೆಗಳಿಂದ ಉಂಟಾಗುವ ಇತರ ಕಾಯಿಲೆಗಳೆಂದರೆ ಮೆದುಳಿನ ಪಾರ್ಶ್ವವಾಯು, ಮೂರ್ಛೆ ಕಾಯಿಲೆ (ಎಪಿಲೆಪ್ಸಿ) ಹಾಗೂ ಬೆನ್ನುಹುರಿಯಲ್ಲಿರುವ ತೊಂದರೆಗಳು.

**ಸ್ನಾಯು, ಮೂಳೆ ತೊಂದರೆಗಳು**

ಹಲವು ಮಕ್ಕಳು ದೈಹಿಕವಾಗಿ ಅಂಗವಿಕಲರಾಗುವುದು ಸ್ನಾಯುಗಳ ಅಥವಾ ಮೂಳೆಗಳ ದೋಷಗಳಿಂದಾಗಿ. ಸ್ನಾಯು ಮತ್ತು ಅಸ್ಥಿಪಂಜರದ ಸಮಸ್ಯೆಯು ಕಾಲುಗಳನ್ನು, ತೋಳುಗಳನ್ನು, ಕೀಲು ಸಂಧಿಗಳು ಹಾಗೂ ಬೆನ್ನುಹುರಿಯನ್ನು ಒಳಗೊಳ್ಳುವುದರಿಂದ ಮಗು ಓಡಾಡಲು, ನಿಂತುಕೊಳ್ಳಲು, ಕುಳಿತುಕೊಳ್ಳಲು ಅಥವಾ ಕೈಗಳನ್ನು ಉಪಯೋಗಿಸಲು ಕಷ್ಟವಾಗುತ್ತದೆ ಹಾಗೂ ಕೆಲವೊಮ್ಮೆ ಇವುಗಳು ಸಾಧ್ಯವಾಗುವುದಿಲ್ಲ. ಸ್ವಯಂ ಇಚ್ಛೆಯ ಸ್ನಾಯುಗಳು ಕ್ರಮೇಣ ಬಲಹೀನವಾಗಿ ಕೆಲಸ ಮಾಡದೇ ದುರ್ಬಲವಾಗುತ್ತವೆ. ಇದೊಂದು ವಂಶಜನ್ಯವಾದ ಕಾಯಿಲೆ. ಇದಕ್ಕೆ ಚಿಕಿತ್ಸೆಯೇ ಇಲ್ಲ.

ಅನುವಂಶಿಕ ದೈಹಿಕ ತೊಂದರೆಗಳು ಮಕ್ಕಳು ಹುಟ್ಟುವಾಗಲೇ ಕಾಣಿಸಿಕೊಳ್ಳಬಹುದು. ಅನೇಕ ಮಕ್ಕಳಿಗೆ ಹುಟ್ಟಿನಿಂದಲೇ ಸೊಂಟ ಸ್ಥಾನ ಪಲ್ಲಟವಾಗಿರುವುದು (ಹೆಚ್ಚಾಗಿ ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ) ಕಂಡು ಬರುತ್ತದೆ. ಹಾಗೂ ಇದನ್ನು ಸೊಂಟದ ಗೂಡು ಸರಿಯಾಗಿ ಬೆಳೆಯುವವರೆಗೆ ಬಿಗಿ ಕಟ್ಟಿನ ಉಪಯೋಗದಿಂದ ಸರಿಪಡಿಸಬಹುದು. ಬೇರೆ ವಿರೂಪಗಳಲ್ಲಿ ಪಾದದ ಅಸಮಾನತೆ, ತಲೆ ಮತ್ತು ಮುಖದ ಅಸಮಂಜನ (ಕಾಲು ಬೆರಳುಗಳ ನಡುವೆ ಚರ್ಮ ಬೆಳೆದಿರುವುದು, ಮುಖದ ವಿಕಾರರೂಪ ಇರಬಹುದು).

ಟೆಟ್ರೋಜನ್ ರೋಗಾಣುಗಳಿಂದ ಕೆಲವರು ಗರ್ಭ ಬೆಳವಣಿಗೆಯಾಗುತ್ತಿರುವ ಸಮಯದಲ್ಲಿ ಹಾನಿಗೊಳಗಾಗುತ್ತಾರೆ. ಈ ರೋಗಾಣುಗಳು ತಂದೆ – ತಾಯಿಗಳ ವಂಶವಾಹಿನಿಗೆ ಕೆಡಕುಂಟುಮಾಡುತ್ತವೆ ಅಥವಾ ಸಾಮಾನ್ಯವಾದ ಗರ್ಭ ಬೆಳವಣಿಗೆಯಲ್ಲಿ ಹಸ್ತಕ್ಷೇಪ ಮಾಡುತ್ತವೆ. ಮೂರು ತಿಂಗಳ ಗರ್ಭಿಣಿಯಾದ ತಾಯಿಗೆ ದಡಾರ ಬಂದಿದ್ದಲ್ಲಿ ಆಕೆಗೆ ಜನಿಸಿದ ಮಗುವಿಗೆ ಅಂಗವಿಕಲತೆ ಉಂಟಾಗುತ್ತದೆ.

ಅಪಘಾತಗಳು, ಸೋಂಕು ರೋಗ ಮತ್ತು ಬೇರೆ ಇತರ ಪರಿಸ್ಥಿತಿಗಳಲ್ಲಿ ಉಂಟಾಗುವ ಅಂಗವಿಕಲತೆಯ ವಿವರ ಹೀಗಿದೆ. ಸ್ವಯಂಚಾಲಿತ ವಾಹನಗಳು ಮತ್ತು ಮೋಟಾರ್ ಬೈಕುಗಳಿಂದ ಉಂಟಾದ ಅಪಘಾತಗಳಿಂದಾಗುವ ಅಂಗವಿಕಲತೆಗಳು, ನರಗಳಿಗೆ ಸಂಬಂಧಪಟ್ಟ ನ್ಯೂನತೆಗಳಿಗೆ ಮತ್ತು ವಿರೂಪಕ್ಕೆ ದಾರಿಯಾಗಬಹುದು. ಸೂಕ್ಷ್ಮಾಣುವಿನ ಸೋಂಕು ಪಾರ್ಶ್ವವಾಯುವಿಗೆ ದಾರಿಮಾಡುತ್ತದೆ. ಅಸ್ತಮಾ, ಕ್ಯಾನ್ಸರ್ ಮತ್ತು ಏಡ್ಸ್ ಮುಂತಾದ ಕಾಯಿಲೆಗಳಿಂದಲೂ ಅಂಗವಿಕಲತೆಗಳು ಉಂಟಾಗಬಹುದು

**ದೈಹಿಕ ಸವಾಲುಳ್ಳ ಮಕ್ಕಳು ಎದುರಿಸುವ ಕೆಲವು ಪ್ರಮುಖ ಸಮಸ್ಯೆಗಳು**

**1) ಶಾರೀರಕ ಸದೃಢತೆ ಹಾಗೂ ಚಲನೆಯ ಸಮಸ್ಯೆಗಳು**

ದೈಹಿಕ ಸವಾಲುಳ್ಳ ಮಕ್ಕಳ ದೈಹಿಕ ಅಂಗವಿಕಲತೆಯ ಕಾರಣದಿಂದ ವಿವಿಧ ರೀತಿಯಿಂದ ಇತರ ಅಂಗಾಂಗಗಳೊಂದಿಗಿನ ಚಲನೆಗೆ ಸಮನ್ವಯ ಹಾಗೂ ಯೋಜನೆಯ ಕೊರತೆ ಕಂಡುಬರುತ್ತದೆ. ಇದರಿಂದ ಚಲನೆಗೆ ತೊಂದರೆ ಉಂಟಾಗುವುದು ಹಾಗೂ ಅಂಗಾಂಗಗಳ ಸಹಾಯದಿಂದ ನಿರ್ವಹಿಸಬಹುದಾದ ಕೆಲಸ ಕಾರ್ಯಗಳಿಗೆ ತೊಂದರೆ ಉಂಟಾಗುವುದು. ಆರೋಗ್ಯಕರ ಸದೃಢ ದೇಹವನ್ನು ಬೆಳೆಸಿಕೊಳ್ಳಲು ಸಾಧ್ಯವಾಗದ ಕಾರಣ, ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಂಡು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ತೊಡಗುವುದು ಸಾಧ್ಯವಾಗುವುದಿಲ್ಲ.

**2) ಗ್ರಹಿಕೆ ಮತ್ತು ಏಕಾಗ್ರತೆಯ ಸಮಸ್ಯೆಗಳು**

ನರಮಂಡಲದ ತೊಂದರೆಯಿಂದಾಗಿ ಪಂಚೇಂದ್ರಿಯಗಳ ಯಶಸ್ವಿಕಾರ್ಯ ನಿರ್ವಹಣೆ ಕ್ಷೀಣಿಸುತ್ತದೆ. ಇದರ ಪರಿಣಾಮವಾಗಿ ಗ್ರಹಿಕೆ ಮತ್ತು ಏಕಾಗ್ರತೆಯಲ್ಲಿ ತೊಂದರೆ ಉಂಟಾಗುತ್ತದೆ.

**3) ಬುದ್ಧಿಶಕ್ತಿಯ ಸಮಸ್ಯೆಗಳು**

ನರಮಂಡಲಕ್ಕೆ ಸಂಬಂಧಿಸಿದ ದೈಹಿಕ ತೊಂದರೆಗಳಿದ್ದಲ್ಲಿ ಅಂತಹ ಮಕ್ಕಳ ಬುದ್ಧಿಶಕ್ತಿಯು ವಯೋಮಿತಿಗನುಗುಣವಾಗಿ ಬೆಳೆಯುವುದಿಲ್ಲ ಹಾಗೂ ಸಾಮಾನ್ಯಮಟ್ಟಕ್ಕಿಂತ ಕಡಿಮೆ ಇರುತ್ತದೆ. ಈ ಕಾರಣದಿಂದಾಗಿ ಅಂತಹ ಮಕ್ಕಳು ಎಲ್ಲಾ ದೈನಂದಿನ ಕೆಲಸ ಕಾರ್ಯಗಳನ್ನು ಇತರ ಸಾಮಾನ್ಯ ಮಕ್ಕಳಂತೆ ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ.

**4) ಸಂವಹನ ಕೌಶಲದ ಸಮಸ್ಯೆಗಳು**

ಮಕ್ಕಳ ಸಂವಹನ ಕೌಶಲ ಕುಂಠಿತಗೊಳ್ಳುತ್ತದೆ. ಇವರ ಶಾಬ್ದಿಕ ಹಾಗೂ ಅಶಾಬ್ದಿಕ ಎರಡೂ ಸಂವಹನ ಕೌಶಲಗಳು ಬಹಳ ಅಸಂಬದ್ಧವಾಗಿರುತ್ತವೆ. ಸ್ಪಷ್ಟತೆ ಇರುವುದಿಲ್ಲ.

**5) ಸಂವೇಗಗಳ ಮತ್ತು ಆತ್ಮವಿಶ್ವಾಸದ ಸಮಸ್ಯೆಗಳು**

ಇಂತಹ ಮಕ್ಕಳು ತೀವ್ರ ರೀತಿಯಲ್ಲಿ ಸಂವೇಗಾತ್ಮಕ ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ. ಇವರ ಆತ್ಮವಿಶ್ವಾಸ, ಸ್ವ–ಪರಿಕಲ್ಪನೆ ಬಹಳ ಕಡಿಮೆ ಇರುತ್ತದೆ. ಇವರು ಸಮಾಜದ ಕನಿಕರ, ಪರಾವಲಂಬನೆ ಹಾಗೂ ಕೆಲವು ಸಂದರ್ಭಗಳಲ್ಲಿ ಬೇರೆಯವರ ತಿರಸ್ಕಾರಕ್ಕೆ ಒಳಗಾಗುತ್ತಾರೆ. ಸಮಾಜದ ಇಂತಹ ವರ್ತನೆಯಿಂದಾಗಿ ಈ ಮಕ್ಕಳಲ್ಲಿ ಕೀಳರಿಮೆ, ನಿರಾಶೆ, ಆತಂಕ, ಆಶಾಭಂಗ ಮುಂತಾದ ಮಾನಸಿಕ ತೊಂದರೆಗಳು ಉಂಟಾಗುತ್ತವೆ.

**ದೈಹಿಕ ಸವಾಲುಳ್ಳ ಮಕ್ಕಳ ಶಿಕ್ಷಣವನ್ನು ವ್ಯವಸ್ಥೆಗೊಳಿಸುವಾಗ ಮುಂದಿನ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು**

1) ಇಂತಹ ಮಕ್ಕಳ ಅಗತ್ಯತೆಗಳಿಗೆ ಅನುಗುಣವಾಗಿ ಇವರುಗಳಿಗೆ ಸಾಮಾನ್ಯ ಶಾಲೆಗಳಲ್ಲಿ ವಿಶೇಷ ದೈನಿಕ ಶಾಲೆಗಳು ಹಾಗೂ ವಿಶೇಷ ವಸತಿ ಶಾಲೆಗಳಲ್ಲಿ ಶಿಕ್ಷಣಕ್ಕೆ ವ್ಯವಸ್ಥೆಗೊಳಿಸಬೇಕು.

2) ಇಂತಹ ಮಕ್ಕಳು ಸಮಾಜದೊಂದಿಗೆ / ಶಾಲೆಗಳಲ್ಲಿ ಬೆರೆತಾಗ, ಅವರುಗಳನ್ನು ಸಮಾಜದ ಸದಸ್ಯರು ಪ್ರೀತಿ ವಿಶ್ವಾಸದಿಂದ ಸ್ವೀಕರಿಸಬೇಕು. ಅಷ್ಟೇ ಅಲ್ಲದೆ ಅವರುಗಳಿಗೆ ಮಾನಸಿಕವಾಗಿ ಹಾಗೂ ಸಂವೇಗಾತ್ಮಕವಾಗಿ ಅವರ ಅಗತ್ಯತೆಗಳನ್ನು ಪೂರೈಸುವಲ್ಲಿ ಸಹಾಯ ಮಾಡಿ ಅವರಿಗೆ ಸುರಕ್ಷತೆಯನ್ನು ನೀಡಿ ಅವರು ತಮ್ಮ ಜೀವನವನ್ನು ಯಶಸ್ವಿಯಾಗಿ ನಿರ್ವಹಿಸುವಂತೆ ಪ್ರೋತ್ಸಾಹಿಸಬೇಕು.

3. ಸ್ವತಂತ್ರ ಜೀವನ ನಿರ್ವಹಣೆಗಾಗಿ ಅಗತ್ಯವಿರುವ ಮೂಲಭೂತ ಜೀವನ ಕೌಶಲಗಳನ್ನು ಕಲಿಸಬೇಕು ಹಾಗೂ ಅವುಗಳಲ್ಲಿ ತರಬೇತಿ ನೀಡಬೇಕು.

Digitised by Bharatavani, CIIL

4. ಅಂತಹ ಮಕ್ಕಳು ತಮ್ಮ ಶಾರೀರಕ ಸಮಸ್ಯೆಗಳ ಸಾಧಕ ಬಾಧಕಗಳನ್ನು ಅರಿತು ನೈಜತೆಯಲ್ಲಿ ಬದುಕುವ ಆತ್ಮವಿಶ್ವಾಸ ಮೂಡಿಸಿ ಜೀವನದ ಬಗ್ಗೆ ಸಕಾರಾತ್ಮಕ ಧೋರಣೆ ತಾಳುವಂತೆ ಪ್ರೇರೇಪಿಸಬೇಕು.
5. ಅವರ ಜೀವನದ ಶೈಲಿಯನ್ನು ಗುಣಾತ್ಮಕವಾಗಿ ಪರಿವರ್ತಿಸಲು ಅಗತ್ಯವಿರುವ ಹವ್ಯಾಸಗಳನ್ನು ಹಾಗೂ ಆಸಕ್ತಿಗಳನ್ನು ಮೂಡಿಸಬೇಕು ಅಥವಾ ಬೆಳೆಸುವಂತೆ ಸೂಕ್ತ ಸಲಹೆ ಮಾರ್ಗದರ್ಶನ ನೀಡಬೇಕು.
6. ಇತರರೊಂದಿಗಿನ ಅವರ ಅನ್ಯೋನ್ಯ ಸಂಬಂಧವನ್ನು ಉತ್ತಮಪಡಿಸಲು ಪ್ರೇರೇಪಿಸಿ ಜನರೊಂದಿಗಿನ ಒಡನಾಟ ಸಂಪರ್ಕವನ್ನು ಸಕಾರಾತ್ಮಕವಾಗಿ ಬಲಪಡಿಸಬೇಕು.
7. ಈ ಮಕ್ಕಳಿಗೆ ಸೂಕ್ತ ವೈದ್ಯಕೀಯ ಸೌಲಭ್ಯಗಳು, ಔದ್ಯೋಗಿಕ ಮತ್ತು ಶೈಕ್ಷಣಿಕ ಸಲಹೆಗಳು, ಭಾಷಾ ಚಿಕಿತ್ಸೆಯ ಸೌಲಭ್ಯ, ಶಾರೀರಕ ಚಿಕಿತ್ಸಾ ಸೌಲಭ್ಯಗಳನ್ನೂ ಒದಗಿಸಬೇಕು.
8. ಅವರ ದೈಹಿಕ ನ್ಯೂನತೆಗಳಿಂದಾಗಿ ಕ್ಷೀಣಿಸಿರುವ ಪರಿಸರದ ಅನುಭವಗಳನ್ನು ಇತರ ಚಟುವಟಿಕೆಗಳ ಮೂಲಕ ಪೂರಕಗೊಳಿಸಬೇಕು.
9. ವಿಶೇಷ ಶಿಕ್ಷಣದಲ್ಲಿ ತರಬೇತಿ ಪಡೆದ ಶಿಕ್ಷಕರು ಹಾಗೂ ಸಂಪನ್ಮೂಲ ವ್ಯಕ್ತಿಗಳ ಸೇವೆ ಲಭಿಸುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು.

## ಶೈಕ್ಷಣಿಕ ಸೌಲಭ್ಯಗಳು

### 1. ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

ಈ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಪ್ರತಿಯೊಬ್ಬ ಸದಸ್ಯರು ತಮ್ಮ ಸ್ವಇಚ್ಛೆಯಿಂದ ಇಂತಹ ಮಕ್ಕಳ ಸೇವೆಗಾಗಿ ತಮ್ಮ ತನು, ಮನ, ಧನವನ್ನು ಅರ್ಪಿಸಲು ತಯಾರಿರುತ್ತಾರೆ. (ದೆಹಲಿಯಲ್ಲಿರುವ ಅಮರ್‌ಜ್ಯೋತಿ ಶಾಲೆ, ಹೈದರಾಬಾದಿನಲ್ಲಿರುವ ಬುದ್ಧಿಮಾಂದ್ಯರಿಗಾಗಿ ಠಾಕೂರ್ ಪ್ರಸಾದ್ ಸಂಸ್ಥೆ, Spastic Society of India, ಭಾವನಗರ etc).

### 2. ರಾಷ್ಟ್ರೀಯ ಸಂಸ್ಥೆಗಳ ಪಾತ್ರ

a) ಮೂಳೆಗಳ ತೊಂದರೆಗಳುಳ್ಳವರಿಗೆ ರಾಷ್ಟ್ರೀಯ ಸಂಸ್ಥೆ ಕೋಲ್ಕತ್ತ (National Institute for Orthopaedic Handicaps NIOH, Colcutta) ಚಲನವಲನದ ತೊಂದರೆಯುಳ್ಳ ಮಕ್ಕಳ ಕ್ಷೇಮಾಭಿವೃದ್ಧಿಗೆ ನೆರವು ನೀಡುತ್ತದೆ.

b) ರಾಷ್ಟ್ರೀಯ ಶೈಕ್ಷಣಿಕ, ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ನವದೆಹಲಿ (NCERT). ದೈಹಿಕ ಸವಾಲುಳ್ಳ ಮಕ್ಕಳ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ತನ್ನ ವಿಶೇಷ ಶಿಕ್ಷಣ ವಿಭಾಗದಿಂದ ಸಲಹೆ ಸಹಾಯ ನೀಡುತ್ತದೆ.

### 3. ಅಂತಾರಾಷ್ಟ್ರೀಯ ಸಂಸ್ಥೆಗಳ ಪಾತ್ರ

a) ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯ (MHRD, New Delhi) ಅಂಗವಿಕಲತೆಯುಳ್ಳ ಮಕ್ಕಳ ವಿದ್ಯಾಭ್ಯಾಸ, ಅಂತಾರಾಷ್ಟ್ರೀಯ ಸಂಸ್ಥೆಗಳ ಮತ್ತು ಮಾನವ ಸಂಪನ್ಮೂಲಗಳ ಅಭಿವೃದ್ಧಿ ಸೌಹಾರ್ದದ ಪಾಲುಗಾರಿಕೆ, ಸಂಶೋಧನೆ ಮತ್ತು ತನಿಖೆ, ಅಂಗವಿಕಲತೆಗಳಿಗೆ ಕಾರಣಗಳು ಮತ್ತು ತಡೆಗಟ್ಟುವಿಕೆ, ಯೋಜನೆಯನ್ನು ನವೀನ ರೀತಿಯಲ್ಲಿ ಸಾಧಿಸುವುದು ಮತ್ತು ಯೋಜನೆಗಳಿಗೆ ಹಣ ಶೇಖರಿಸುವುದು ಮುಂತಾದುವುಗಳಿಗೆ ಸಂಬಂಧಿಸಿದಂತೆ ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಪಡೆದಿದೆ.

ಉದಾ: UNESCO ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (UNESCO), 1946ರಲ್ಲಿ ಜನ್ಮ ತಾಳಿತು.

b) UNICEF- ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಕ್ಕಳ ತುರ್ತುನಿಧಿ. ಈ ಸಂಸ್ಥೆಯು ಸದಸ್ಯ ರಾಷ್ಟ್ರಗಳಿಗೆ ಔಪಚಾರಿಕ ಮತ್ತು ಅನೌಪಚಾರಿಕ ವಿದ್ಯಾಭ್ಯಾಸಕ್ಕೆ ನೆರವು ನೀಡಲು ಸಹಾಯ ಮಾಡುತ್ತದೆ. ಎಲ್ಲರಿಗೂ ವಿದ್ಯಾಭ್ಯಾಸ ಒದಗಿಸುವ ಪ್ರಯಾಸದಲ್ಲಿ UNESCO ನೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿದೆ.

### ದೈಹಿಕ ಸವಾಲುಳ್ಳ ಮಕ್ಕಳಿಗೆ ಒದಗಿಸಬಹುದಾದ ಸಹಾಯಕ ಸಾಧನಗಳು, ಸೇವಾ ಸೌಲಭ್ಯಗಳು

1) ಆಡಳಿತ ಮಂಡಳಿ ಅಥವಾ ಸ್ಥಳೀಯ ಸಂಘ ಸಂಸ್ಥೆಗಳು ಶಾಲಾ ಕಟ್ಟಡ ವಿನ್ಯಾಸದಲ್ಲಿ ಕೆಳಕಂಡ ಸುಧಾರಣೆಗಳಿಗೆ ಮಾಡಬೇಕು.

a) ಗಾಲಿ ಕುರ್ಚಿಯಲ್ಲಿ ಚಲಿಸುವ ಮಕ್ಕಳಿಗಾಗಿ ಮೆಟ್ಟಿಲುಗಳಿರುವ ಕಡೆಗಳಲ್ಲಿ ಸುಲಭವಾಗಿ ಓಡಾಡಲು ಅನುಕೂಲವಾಗುವಂತೆ ಇಳಿಜಾರು ದಾರಿ ಮಾಡಿಕೊಡಬೇಕು.

b) ತರಗತಿಯಲ್ಲಿ ಕಪ್ಪು ಹಲಗೆಯ ಬಳಿಯಲ್ಲಿ ಹಿಡಿದು ನಿಲ್ಲಲು ಆಧಾರವಾಗುವಂತೆ ಅಡ್ಡ ಸಲಾಕೆಯನ್ನು ಹಾಕಿಸಬೇಕು. ನೀರು ಉಪಯೋಗಿಸುವ ಕಡೆಯೂ ಅಡ್ಡ ಸಲಾಕೆಗಳನ್ನು ಹಾಕಿಸಬೇಕು.

c) ಮಕ್ಕಳ ಅವಶ್ಯಕತೆಗಳಿಗನುಗುಣವಾಗಿ ಸುಧಾರಿಸಿದ ಪೀಠೋಪಕರಣಗಳನ್ನೊದಗಿಸುವುದು ಅತಿ ಅವಶ್ಯಕ.

2) ಗಾಲಿ ಕುರ್ಚಿ/ಊರುಗೋಲು ಸಹಾಯದಿಂದ ಓಡಾಡುವ ಮಕ್ಕಳು ತರಗತಿಯಲ್ಲಿ ಸುಲಭವಾಗಿ ಯಾವ ರೀತಿಯ ತೊಂದರೆಯೂ ಇಲ್ಲದೆ ಓಡಾಡಲು ಅನುಕೂಲವಾಗುವಂತೆ ಪೀಠೋಪಕರಣಗಳನ್ನು ಜೋಡಿಸಬೇಕು.

3) ಕೈಗಳ ಹೊಂದಾಣಿಕೆಯಿಲ್ಲದ ಮಕ್ಕಳ ಸಮಸ್ಯೆಗಳನ್ನು ಬಗೆಹರಿಸಲು ತರಗತಿಯಲ್ಲಿ ಸೂಕ್ತ ವ್ಯವಸ್ಥೆ ಮಾಡಬೇಕು.

a) ಬರೆಯುವ ಡೆಸ್ಕ್‌ಗೆ ಕಾಗದ ಕಟ್ಟುವುದು.

b) ಲೇಖನ ಸಾಮಗ್ರಿಗಳು ಕೆಳಗೆ ಬೀಳದಂತೆ ಡೆಸ್ಕ್‌ಗಳಲ್ಲಿ ಸೂಕ್ತ ರೀತಿಯ ಸೌಲಭ್ಯ ಒದಗಿಸುವುದು (ತಡೆ ಪಟ್ಟಿ, ಲೇಖನಿ (ಪೆನ್) ಗಳಿಗೆ ದಾರ ಕಟ್ಟಿ ಡೆಸ್ಕ್‌ಗಳಿಗೆ ತೂಗುಬಿಡುವುದು ಇತ್ಯಾದಿ)

c) ಪುಸ್ತಕ ಹಿಡಿಯುವ ಸಾಧನವನ್ನು ಇಲ್ಲವೇ ಯಾಂತ್ರಿಕವಾಗಿ ತಾನೇ ತಾನಾಗಿ ಹಾಳೆ ತಿರುಗಿಸುವ ಸಾಧನವನ್ನು ಒದಗಿಸಬೇಕು.

4) ಯಾವುದಾದರೂ ನಿರ್ದಿಷ್ಟ ಸನ್ನಿವೇಶದಲ್ಲಿ/ಸನ್ನಿವೇಶಕ್ಕೆ ಹೊಂದಾಣಿಕೆಯಿಲ್ಲದ ಮಕ್ಕಳಿಗೆ ಸಹಾಯಕವೆನಿಸುವ ಕೆಲವು ಸರಳ ಸಾಧನ ಸಲಕರಣೆಗಳನ್ನು ಬೋಧಕರೇ ಯೋಜಿಸಿ ನಿರ್ಮಿಸಬೇಕು.

ಈ ಮಕ್ಕಳಲ್ಲಿ ಸ್ವಾವಲಂಬನಾ ಶಕ್ತಿಯನ್ನು ಹೆಚ್ಚಿಸಲು ಪೋಷಕರು ಹಾಗೂ ಶಿಕ್ಷಕರು ಹೊಸ ಹೊಸ ಕ್ರಮಗಳನ್ನು ಪ್ರಯತ್ನಿಸಿ ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಸ್ವಕಾರ್ಯ ಪ್ರವೃತ್ತಿಯನ್ನು ಬೆಳೆಸಬೇಕು.

Digitised by Bharatavani, CIIL

5) ಕ್ರಿಯಾತ್ಮಕ ಸಾಧನೋಪಕರಣಗಳ ಬಳಕೆ: (Functional Prosthetics) ಅಂಗಗಳು ಊನವಿದ್ದಾಗ ಕೃತಕ ಅಂಗಗಳನ್ನು ಅಳವಡಿಸಿ ವ್ಯಕ್ತಿಯು ಸಾಧಾರಣ ಕ್ರಮದಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡುವುದು, ಉದಾ: ಕೃತಕ ಜೈಪುರ ಕಾಲುಗಳು, ಕೈಗಳು ಹಾಗೂ ಕನ್ನಡಕಗಳು ಇತ್ಯಾದಿ.

6) ಅಲಂಕಾರಿಕ ಸಾಧನೋಪಕರಣಗಳ ಬಳಕೆ (Cosmetic Prosthotics): ಕೆಲವು ಸಂದರ್ಭಗಳಲ್ಲಿ ನ್ಯೂನತೆಗಳು ಎದ್ದು ಕಾಣುವಂತಿದ್ದರೆ ಸಾಮಾಜಿಕ ಸಂಬಂಧಗಳಿಗೆ ಅಡ್ಡಿಯನ್ನುಂಟು ಮಾಡಬಹುದು, ನ್ಯೂನತೆ ಉಳ್ಳವರ ಬಗೆಗೆ ಇತರರು ಅಸಡ್ಡೆ, ತಿರಸ್ಕಾರ, ಭಯ, ಭೀತಿ ಇತ್ಯಾದಿ ಅಪ್ರಿಯ ಮನೋಭಾವನೆಗಳನ್ನು ಬೆಳೆಸಿಕೊಳ್ಳಬಹುದು. ನ್ಯೂನತೆ ಇತರರಿಗೆ ಗೋಚರವಾಗುವುದನ್ನು ಕಡಿಮೆ ಮಾಡುವ ಸಾಮಗ್ರಿಗಳಿಗೆ ಅಲಂಕಾರಿಕ ಸಾಧನೋಪಕರಣಗಳು ಎಂದು ಕರೆಯುತ್ತಾರೆ. ಕೃತಕ ಕಿವಿಗಳು, ಕಣ್ಣು, ಮೂಗು ಇತ್ಯಾದಿ ಕೃತಕ ಸಾಧನಗಳ ಬಳಕೆ ನ್ಯೂನತೆಯ ಇರುವಿಕೆಯನ್ನು ಮರೆಸಬಹುದು.

ತೀವ್ರತರ ದೋಷಗಳಾದ ಸೀಳುತುಟಿ, ಸೀಳು ಅಂಗುಳ ಇತ್ಯಾದಿಗಳನ್ನು ಶಸ್ತ್ರ ಚಿಕಿತ್ಸೆಯ ಮೂಲಕ ಸರಿಪಡಿಸಬಹುದು.

–ಎಂ.ಸ.ಪಾ.

## ದೂರದರ್ಶನ

ದೃಶ್ಯ ಸಂವಹನೆಯ ಸಾಮರ್ಥ್ಯದೊಂದಿಗೆ ಧ್ವನಿಯನ್ನು ಸಂವಹಿಸುವ ಅತ್ಯಂತ ಉತ್ಕೃಷ್ಟ ಪ್ರಸಾರ ತಾಂತ್ರಿಕತೆಯನ್ನು ಹೊಂದಿರುವ ಸಾಧನವೇ ದೂರದರ್ಶನ. ದೂರದರ್ಶನದ ಆವಿಷ್ಕಾರವಾಗುವ ಮೊದಲೇ ಜಗತ್ತಿಗೆ ಚಲಿಸುವ ಚಿತ್ರಗಳ ತಿಳುವಳಿಕೆಯಿತ್ತು. ರೇಡಿಯೋ ಪ್ರಸಾರವೂ ಪ್ರಾರಂಭವಾಗಿತ್ತು. ದೂರದರ್ಶನಕ್ಕೆ ಬಹಳ ಸುದೀರ್ಘವಾದ ಇತಿಹಾಸವಿಲ್ಲ. ಇದು 20ನೇ ಶತಮಾನದ ಆವಿಷ್ಕಾರ. ಸುಮಾರು 83 ವರ್ಷಗಳಷ್ಟು ಮಾತ್ರ ಹಳೆಯದು.

**ಹಿನ್ನೆಲೆ:** ದೂರದರ್ಶನವನ್ನು ಕಂಡು ಹಿಡಿದ ಕೀರ್ತಿ ಇಂಗ್ಲೆಂಡಿನ ಜಾನ್ ಲೋಗಿ ಬೆಯರ್ಡ್‌ಗೆ ಸಲ್ಲುತ್ತದೆ. ಬೆಯರ್ಡ್ ಇಂಗ್ಲೆಂಡಿನ ಉತ್ತರಭಾಗದ ಸ್ಕಾಟ್‌ಲ್ಯಾಂಡ್‌ನ ಹೆಲೆನ್‌ಬರ್ಗ್‌ನಲ್ಲಿ 13ನೇ ಆಗಸ್ಟ್ 1888ರಲ್ಲಿ ಜನಿಸಿದನು. ಶಬ್ದ ತರಂಗಗಳನ್ನು ವಿದ್ಯುತ್‌ಕಾಂತೀಯ ಅಲೆಗಳಾಗಿ (Electro-Magnetic Waves) ಪರಿವರ್ತಿಸಿ ದೂರ ಸ್ಥಳಗಳಿಗೆ ಪ್ರೇಷಣೆ (Transmit) ಮಾಡಿದಂತೆ, ಚಿತ್ರಗಳನ್ನು ಸಹ ವಿದ್ಯುತ್‌ಕಾಂತೀಯ ಅಲೆಗಳಾಗಿ ಪರಿವರ್ತಿಸಿ ಪ್ರೇಷಣೆ ಮಾಡಿ ಅವುಗಳು ಗ್ರಾಹಕ (receiver) ವ್ಯವಸ್ಥೆಯ ಪರದೆಯ ಮೇಲೆ ಮೂಡುವಂತೆ ಮಾಡಲು ಸಾಧ್ಯವೆಂಬುದನ್ನು ತೋರಿಸಿದನು. ತನ್ನ ಅನ್ವೇಷಣೆಯನ್ನು ಮುಂದುವರಿಸಿ ಲೋಗಿ ಬೆಯರ್ಡ್ ವಿದ್ಯುನ್ಮಾನ ರೀತಿಯಲ್ಲಿ ಕಾರ್ಯನಿರ್ವಹಿಸುವ ವರ್ಣ ದೂರದರ್ಶನ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಯಶಸ್ವಿಯಾದನು. ಆದ್ದರಿಂದ ಬೆಯರ್ಡ್‌ನನ್ನು ದೂರದರ್ಶನದ ಅನ್ವೇಷಕ ಎಂದು ಗುರ್ತಿಸಲಾಗಿದೆ. ಬೆಯರ್ಡ್ 14 ಜೂನ್ 1946ರಲ್ಲಿ ನಿಧನ ಹೊಂದಿದನು.

ಜಾನ್ ಲೋಗಿ ಬೆಯರ್ಡ್

1921ರಲ್ಲಿ ಅಮೆರಿಕಾದ ಫಿಲೋ ಫಾರೆನ್ಸ್‌ವರ್ತ್ ತನ್ನ 13ನೇ ವಯಸ್ಸಿನಲ್ಲಿಯೇ ಅಯಸ್ಕಾಂತೀಯವಾಗಿ ವಿಚಲಿತಗೊಂಡ ಎಲೆಕ್ಟ್ರಾನ್. ತೊಲೆಯ ಮೂಲಕ ಚಲಿಸುವ ಚಿತ್ರಗಳನ್ನು ನೇರವಾಗಿ ರವಾನಿಸಬಹುದು ಎಂಬುದನ್ನು ಕಂಡು ಹಿಡಿದನು. ತನ್ನ 20ರ ಹರೆಯದಲ್ಲಿ ಫಿಲೋ ಫಾರೆನ್ಸ್‌ವರ್ತ್ ಕೈಯಿಂದಲೇ ಊದಿ ಬಿಡುವ ಕೊಳವೆಯು ಸೇರಿದಂತೆ ತನ್ನದೇ ಆದಂತಹ ಇತರ ಸಲಕರಣೆಗಳನ್ನು ತಯಾರಿಸಿಕೊಂಡು ತನ್ನ ಮೊದಲ ಬಿಂಬ ವಿಚ್ಛೇಧಕ (image dissector)ವನ್ನು ಪೂರ್ಣಗೊಳಿಸಿದ್ದನು. 1923ರಲ್ಲಿ ಡಾ. ವ್ಲಾಡಿಮಿರ್ ಜ್ವೋರಿಕಿನ್ 'ಐಕನೋಸ್ಕೋಪ್' ಎನ್ನುವ ವಿದ್ಯುತ್ ಟೆಲಿವಿಷನ್ ಟ್ಯೂಬ್ ಕಂಡು ಹಿಡಿಯುವುದರೊಂದಿಗೆ ಟೆಲಿವಿಷನ್ ಸೆಟ್ ಕಂಡು ಹಿಡಿದನು. ಟೆಲಿವಿಷನ್‌ನ ಆವಿಷ್ಕಾರ ಮಾಡಿದ ಕೀರ್ತಿ ಆತನಿಗೆ ಸಲ್ಲುತ್ತದೆ ಎಂಬುದಾಗಿ ರೇಡಿಯೋ ಕಾರ್ಪೋರೇಷನ್, ಅಮೆರಿಕಾ ತಿಳಿಸಿತು. ಇದಾದ ಎರಡು ವರ್ಷಗಳ ನಂತರ ಅಮೆರಿಕಾದ ಜೆನ್‌ಕಿನ್ಸ್‌ಸನ್ ಟಿ.ವಿ. ಉಪಕರಣವನ್ನು ಕಂಡು ಹಿಡಿದನು ಹಾಗೂ ಇದು ದೂರದರ್ಶನ ಸೆಟ್‌ಗಳ ಉಗಮಕ್ಕೆ ತಳಹದಿಯಾಯಿತು.

**ಐತಿಹಾಸಿಕ ಬೆಳವಣಿಗೆ:** 1925ರಲ್ಲಿ ಬೆಲ್ ಟೆಲಿಫೋನ್ ಲ್ಯಾಬರೇಟರೀಸ್ ಎನ್ನುವ ಸಂಸ್ಥೆ ನ್ಯೂಯಾರ್ಕ್‌ನಿಂದ ವಾಷಿಂಗ್‌ಟನ್‌ವರೆಗೆ ತಂತಿ ಮುಖೇನ ಪ್ರಾಯೋಗಿಕ ದೂರದರ್ಶನ ಕಾರ್ಯಕ್ರಮವೊಂದನ್ನು ರವಾನಿಸಿತ್ತು. 1928ರಲ್ಲಿ ಅದೇ ಪ್ರಯೋಗ ಶಾಲೆ ಪ್ರಾಯೋಗಿಕವಾಗಿ ಹೊರಾಂಗಣ ಕಾರ್ಯಕ್ರಮವನ್ನು ಟಿ.ವಿ.ಯಲ್ಲಿ ಪ್ರಸಾರ ಮಾಡುವ ಮೂಲಕ ದೃಶ್ಯ – ಧ್ವನಿಯ ಏಕಕಾಲೀನ ಸಂಯೋಜಿತ ಪ್ರಸಾರ ಆರಂಭಗೊಂಡಂತಾಯಿತು.

1936ರಲ್ಲಿ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಶನ್ (ಬಿ.ಬಿ.ಸಿ) ಜಗತ್ತಿನ ಮೊಟ್ಟಮೊದಲ ಸಾರ್ವಜನಿಕ ಟೆಲಿವಿಷನ್ ಸೇವೆಯನ್ನು ಆರಂಭಿಸಿತು. 1941ರಲ್ಲಿ ಅಮೆರಿಕನ್ ಫೆಡರಲ್ ಕಮ್ಯುನಿಕೇಷನ್ ಅಥಾರಿಟಿ ಟೆಲಿವಿಷನ್ ಕಾರ್ಯಕ್ರಮಗಳ ಗುಣಮಟ್ಟವನ್ನು ನಿಗದಿಪಡಿಸಿತು. ಹಾಗೂ ಅದನ್ನು ಇಲೆಕ್ಟ್ರಾನಿಕ್ ಇಂಡಸ್ಟ್ರೀಸ್ ಅಸೋಸಿಯೇಶನ್ ಸ್ಟಾಂಡರ್ಡ್ ಎಂದು ಕರೆಯಿತು. 1944ರಲ್ಲಿ ಬಿ.ಬಿ.ಸಿ. ತನ್ನ ಎರಡನೇ ಚಾನಲ್ ಅನ್ನು ಪ್ರಾರಂಭಿಸಿತು. ಈ ಚಾನೆಲ್ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮ ವಿನಿಮಯ ಪ್ರಾರಂಭವಾಯಿತು. 1972ರ ವೇಳೆಗೆ ದೂರದರ್ಶನ ಸಾಮಾನ್ಯರ ಮನೆ ಮಾತಾಗಿತ್ತು.

1925ರಲ್ಲೇ ಬಣ್ಣದ ಟಿ.ವಿ. ಸೆಟ್ ತಯಾರಿಕೆಯ ಪ್ರಯತ್ನ ಪ್ರಾರಂಭವಾಗಿದ್ದರೂ 1929ರಲ್ಲಿ ಹಾಬರ್ಟ್ ಐವ್ಸ್ ನೇತೃತ್ವದ ಅಮೆರಿಕನ್ನರ ತಂಡ ಮೊದಲ ಬಣ್ಣದ ಟಿ.ವಿ. ಪರದೆಯ ಮೂಲಕ ಸಾರ್ವಜನಿಕ ಪ್ರಸಾರ ಸೇವೆ ಆರಂಭಿಸಿತು. 1960ರಲ್ಲಿ ಜಪಾನ್, 1967ರಲ್ಲಿ ಬ್ರಿಟನ್ ಮತ್ತು ಅನೇಕ ಐರೋಪ್ಯ ರಾಷ್ಟ್ರಗಳು ಬಣ್ಣದ ಟಿ.ವಿ.ಯನ್ನು ಬಳಕೆಗೆ ತಂದವು. 1979ರಲ್ಲಿ ಅತ್ಯಂತ ಚಿಕ್ಕ (ಕಿಸೆ ಗಾತ್ರದ) ಟಿ.ವಿ.ಯನ್ನೂ ಅದಾದ ಹತ್ತು ವರ್ಷಗಳ ನಂತರ 1989ರಲ್ಲಿ ದೊಡ್ಡ ಪರದೆಯ ದೂರದರ್ಶನ ಸೆಟ್ಟನ್ನೂ ಸಿದ್ಧಪಡಿಸಲಾಯಿತು.

**ತಂತ್ರಜ್ಞಾನದ ವಿಕಾಸ:** ಭೂಮಿಯ ಮೇಲೆ ಸ್ಥಾಪಿತವಾದ ಸೀಮಿತ ವ್ಯಾಪ್ತಿಯ ಟೆಲಿವಿಷನ್ ಟ್ರಾನ್ಸ್‌ಮೀಟರ್‌ಗಳಿಗೆ ಪರ್ಯಾಯಗಳನ್ನು ಕಂಡು ಹಿಡಿಯುವ ಪ್ರಯತ್ನಗಳು 1940ರ ದಶಕದಲ್ಲೇ ನಡೆದಿದ್ದವು. ಇದರ ಫಲವಾಗಿ ಕೇಬಲ್ ಟಿ.ವಿ.ಗಳು ಬಳಕೆಗೆ ಬಂದವು. ಇದನ್ನು ಆರಂಭದಲ್ಲಿ ಕಮ್ಯುನಿಟಿ ಆಂಟೇನಾ ಟೆಲಿವಿಷನ್ ಎಂಬುದಾಗಿ ಕರೆಯಲಾಗುತ್ತಿತ್ತು. 1950ರಲ್ಲಿ ರಾಬರ್ಟ್ ಜೆ. ಟಾರ್ಲ್‌ಟನ್ ಪೆನ್ಸಿಲ್‌ವೇನಿಯಾದ

Digitised by Bharatavani, CIIL

ಲಾನ್ಸ್‌ಪೋರ್ಡ್‌ನಲ್ಲಿ ಮೊತ್ತ ಮೊದಲ ಕಮ್ಯುನಿಟಿ ಆಂಟೆನ್ನಾ ಟೆಲಿವಿಷನ್ ಸ್ಥಾಪಿಸಿದನು. 1962ರಲ್ಲಿ ಯುರೋಪಿನಲ್ಲಿ ಟೆಲಿವಿಷನ್ ಸಿಗ್ನಲನ್ನು ಟೆಲ್‌ಸ್ಟಾರ್ ಉಪಗ್ರಹದ ಮೂಲಕ ಉತ್ತರ ಅಮೆರಿಕದಾದ್ಯಂತ ಪ್ರಸಾರ ಮಾಡಲಾಯಿತು. ಅಂದಿನ ಉಪಗ್ರಹ ಟೆಲಿವಿಷನ್ ಪ್ರಸಾರಗಳಲ್ಲಿ ಅನೇಕ ಬೆಳವಣಿಗೆಗಳಾದವು. ಉಪಗ್ರಹ ಟಿ.ವಿ. ಬೆಳೆದಂತೆ ಪ್ರಸಾರ ತಂತ್ರಜ್ಞಾನ ವಿವಿಧ ದಿಕ್ಕುಗಳಲ್ಲಿ ಬೆಳೆಯಿತು. ಇಂದು ಹೆಚ್ಚಾಗಿ ಬಳಕೆಯಲ್ಲಿರುವ ಡಿ.ಟಿ.ಹೆಚ್. ಹಾಗೂ ಡಿಶ್ ಟಿ.ವಿ.ಗಳು ಉಪಗ್ರಹ ಟೆಲಿವಿಷನ್ ವೀಕ್ಷಕರಿಗೆ ಹಾಗೂ ಪ್ರಸಾರಕರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಕಾರಣ ಇದು ಹೆಚ್ಚು ಜನಪ್ರಿಯವಾಗಿದೆ.

**ಭಾರತದಲ್ಲಿ ದೂರದರ್ಶನ:** ಯುನೆಸ್ಕೋದ ಒಂದು ಪ್ರಾಯೋಗಿಕ ಯೋಜನೆಯ ಅಂಗವಾಗಿ 1959ರ ಸೆಪ್ಟೆಂಬರ್ 15ರಂದು ಭಾರತದಲ್ಲಿ ದೂರದರ್ಶನ ಕಾರ್ಯಾರಂಭ ಮಾಡಿತು. ಈ ಶೈಕ್ಷಣಿಕ ಕಾರ್ಯಕ್ರಮ ಗ್ರಾಮೀಣ ಹಾಗೂ ಸಮುದಾಯದ ಅಭಿವೃದ್ಧಿಯ ಉದ್ದೇಶವನ್ನು ಹೊಂದಿತ್ತು. ಆ ಕಾರ್ಯಕ್ರಮದ ಯಶಸ್ಸಿನ ಬಳಿಕ 1961ರಲ್ಲಿ ಶಾಲಾ ಶೈಕ್ಷಣಿಕ ಕಾರ್ಯಕ್ರಮಗಳು ವಾರಕ್ಕೊಮ್ಮೆಯಂತೆ 10 ವಾರಗಳ ಕಾಲ ಪ್ರಸಾರವಾಯಿತು. 1965 ಆಗಸ್ಟ್ 15ರಿಂದ ದಿನವಹಿ ಒಂದು ಗಂಟೆ ಅವಧಿಯ ಕ್ರಮಬದ್ಧ ಪ್ರಸಾರ ಆರಂಭಗೊಂಡಿತು. 1970ರಲ್ಲಿ ಪ್ರಸಾರಾವಧಿಯನ್ನು 3 ಗಂಟೆಗಳಿಗೆ ಹೆಚ್ಚಿಸಲಾಯಿತು. 1972ರಲ್ಲಿ ಮುಂಬಯಿಯ ದೂರದರ್ಶನ ಕೇಂದ್ರ ಕಾರ್ಯಾರಂಭ ಮಾಡಿತು. 1975ರ ಹೊತ್ತಿಗೆ ಶ್ರೀನಗರ, ಅಮೃತಸರ, ಪುಣೆ, ಕಲ್ಕತ್ತಾ, ಮದ್ರಾಸ್ ಹಾಗೂ ಲಕ್ನೋಗಳಲ್ಲಿ ದೂರದರ್ಶನ ಕೇಂದ್ರಗಳು ಆರಂಭಗೊಂಡವು 1982ರಲ್ಲಿ ಭಾರತದಲ್ಲಿ ಬಣ್ಣದ ಟಿ.ವಿ. ಕಾರ್ಯಗಳು ಪ್ರಸಾರಗೊಂಡವು. ಪ್ರಸ್ತುತ ಟಿ.ವಿ.ಯು ಅತ್ಯಂತ ಪ್ರಬಲ ಸಮೂಹ ಸಂಪರ್ಕ ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಇದು ಜನಜೀವನದ ಒಂದು ಅವಿಭಾಜ್ಯ ಅಂಗವಾಗಿ ಪರಿಗಣಿಸಲ್ಪಟ್ಟಿದೆ.

**ದೂರದರ್ಶನದ ಪ್ರಭಾವ:** ಟೆಲಿವಿಷನ್ ಸಮಾಜದ ವಿವಿಧ ಸ್ತರಗಳ ಜನರ ಮೇಲೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸಿದ ಪ್ರಭಾವಶಾಲಿ ಸಮೂಹ ಸಂವಹನ ಮಾಧ್ಯಮವಾಗಿದೆ. ದೂರದರ್ಶನದ ಪ್ರಸಾರ ಕಾರ್ಯಕ್ರಮಗಳಲ್ಲಾದ ಬೆಳವಣಿಗೆಯಿಂದಾಗಿ ಪ್ರಪಂಚದ ಆಗು ಹೋಗುಗಳ ಸವಿವರವಾದ ಮಾಹಿತಿ ಆಗಿಂದಾಗ್ಗೆ ಜನರಿಗೆ ಲಭಿಸುತ್ತದೆ. ಹಾಗೆಯೇ ಜ್ಞಾನಾಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರು ಪರಿಣಾಮಕಾರಿಯಾಗಿ ಹಾಗೂ ಅತೀ ಶೀಘ್ರವಾಗಿ ಜ್ಞಾನವನ್ನು ಗಳಿಸಿಕೊಳ್ಳಲು ಹಾಗೂ ಅಭಿವೃದ್ಧಿ ಪಡಿಸಿಕೊಳ್ಳಲು ಸಹಕಾರಿಯಾಗಿದೆ. ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ವಿವಿಧ ವೃತ್ತಿಪರ ಶಿಕ್ಷಣ ಹಾಗೂ ಸಾಮಾನ್ಯ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳಿಗೆ ಉತ್ತಮವಾದ ಪೂರಕ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲೂ ತನ್ನ ಪ್ರಭಾವವನ್ನು ಬೀರಿದೆ. ತನ್ನ ವಿವಿಧ ಕಾರ್ಯಕ್ರಮಗಳ ಮೂಲಕ ಕೃಷಿ, ವೈದ್ಯಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲೂ ಅಭಿವೃದ್ಧಿಗೆ ಪೂರಕವಾಗಿ ಕಾರ್ಯ ನಿರ್ವಹಿಸಿದೆ. ಮನೋರಂಜನಾ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಸೂಕ್ತ ಕಾರ್ಯಕ್ರಮಗಳ ಆಯ್ಕೆ ಮಾಡಬಲ್ಲ ವೀಕ್ಷಕನಿಗೆ ತನ್ನ ಬಿಡುವಿನ ಸಮಯದ ಸದುಪಯೋಗಕ್ಕೆ ಹಾಗೂ ಮನೋರಂಜನೆಗೆ ಇದು ಒಂದು ಉತ್ತಮ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿದೆ.

ಇಷ್ಟೆಲ್ಲಾ ಧನಾತ್ಮಕ ಕೊಡುಗೆಗಳನ್ನು ನೀಡಿದ ಟೆಲಿವಿಷನ್ ಸಮಾಜದ ಮೇಲೆ ಋಣಾತ್ಮಕವಾಗಿಯೂ ಪ್ರಭಾವವನ್ನು ಬೀರಿದೆ. ಪ್ರಸಾರವಾಗುವ ಕಳಪೆ ಗುಣಮಟ್ಟದ ಕಾರ್ಯಕ್ರಮಗಳು ಯುವ ಜನತೆಯನ್ನು ಅಡ್ಡದಾರಿಗೆಳೆಯುತ್ತಿವೆ. ಹಾಗೆಯೇ ಕೆಲವೊಂದು ಕಾರ್ಯಕ್ರಮಗಳು ವೀಕ್ಷಕರ ದೈನಂದಿನ ಕೆಲಸ ಕಾರ್ಯಗಳಲ್ಲಿ ಹಾಗೂ ಮನಸ್ಸಿನಲ್ಲಿ ಗೊಂದಲದ ಅಲೆಗಳನ್ನು ಸೃಷ್ಟಿಸುತ್ತಿವೆ. ಟಿ.ವಿ. ವ್ಯಸನಿಗಳಿಂದಾಗಿ ಸಮಾಜದಲ್ಲಿನ ಬಾಂಧವ್ಯಗಳು ಕ್ಷೀಣಿಸುತ್ತಿವೆ ಹಾಗೂ ಕೆಲಸ ಕಾರ್ಯಗಳು ಸಹಾ ನಿಧಾನಗತಿಯಲ್ಲಿ ಸಾಗುತ್ತಿವೆ. ಇಷ್ಟೆಲ್ಲಾ ಗುಣಾವಗುಣಗಳನ್ನು ಹೊಂದಿರುವ 'ಮಾಯಾ ಪೆಟ್ಟಿಗೆ'ಯೆಂದೇ ಪರಿಚಿತವಾಗಿರುವ ಟೆಲಿವಿಷನ್ ಇಲ್ಲದೆ ಇಂದಿನ ಸಮಾಜವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದಂತಾಗಿದೆ.

– ವಿ.ಕು.

## ದೂರವಾಣಿ ಸಮಾಲೋಚನೆ

ದೂರವಾಣಿ ಅಥವಾ ಟೆಲಿಫೋನ್– ಇಂದು ತುಂಬ ಸುಲಭಸಾಧ್ಯವೂ ಅಗ್ಗದ್ದೂ ಆದ ಸಂಪರ್ಕ ಸಾಧನವಾಗಿದೆ. ಹತ್ತು ವರ್ಷಗಳ ಹಿಂದಿನವರೆಗೂ ಭಾರತದಲ್ಲಿ ಇದು ಹೊಂದಲು ಹಾಗೂ ಉಪಯೋಗಿಸಲು ತುಸು ದುಬಾರಿಯೇ ಆದ ಸಾಧನವಾಗಿತ್ತು. ಆದರೆ ಕೇಂದ್ರ ಸರ್ಕಾರದ ದೂರ ಸಂಪರ್ಕ ನೀತಿಯಲ್ಲಾದ ಬದಲಾವಣೆ ಹಾಗೂ ದಿ. ರಾಜೀವ್ ಗಾಂಧಿಯವರು ಈ ಕ್ಷೇತ್ರಕ್ಕೆ ಕೊಟ್ಟ ಆದ್ಯತೆಯ ಪರಿಣಾಮವಾಗಿ ದೂರ ಸಂಪರ್ಕ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಆಗಿ ಹೋಯಿತು. ಉಪಗ್ರಹ ನಿರ್ಮಾಣ ಹಾಗೂ ಉಡಾವಣಾ ಕ್ಷೇತ್ರದಲ್ಲಿ ಭಾರತದ ವಿಜ್ಞಾನಿಗಳು ಭಾರೀ ಪ್ರಗತಿಯನ್ನು ಸಾಧಿಸಿದ್ದೂ ಸಹ ದೂರಸಂಪರ್ಕ ಕ್ಷೇತ್ರಕ್ಕೆ ವರವಾಗಿ ಪರಿಣಮಿಸಿತು.

ದೂರವಾಣಿಯನ್ನು ನಾವು ಬಹುಬಗೆಯ ಮಾತುಕತೆಗಳಿಗಾಗಿ ಬಳಸುತ್ತೇವೆ. ವೈಯಕ್ತಿಕ ಸಂಭಾಷಣೆಗಳು, ಕ್ಷೇಮ ವಿನಿಮಯ, ವ್ಯವಹಾರದ ಮಾತುಕತೆಗಳು, ರಾಜಕೀಯ ಸಮಾಲೋಚನೆ–ಹೀಗೆ ಹಲವು ವಿಧದ ಮಾತು, ಚರ್ಚೆ, ವಿಚಾರ ವಿನಿಮಯಗಳಿಗೆ ದೂರವಾಣಿ ಇಂದು ಸುಲಭ ಲಭ್ಯವಾಗಿದೆ. ದೂರವಾಣಿಯನ್ನು ಟೆಲಿವಿಷನ್ ಹಾಗೂ ಕಂಪ್ಯೂಟರ್ ಅಂತರ್ಜಾಲದೊಂದಿಗೆ ಹಲವರೊಂದಿಗೆ ಸಂಪರ್ಕಿಸಿ ಏಕಕಾಲಕ್ಕೆ ಹಲವು ಜನ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ 'ವಿಡಿಯೋ ಕಾನ್ಫರೆನ್ಸಿಂಗ್' ಹಾಗೂ 'ಟೆಲಿಫೋನ್ ಕಾನಫರೆನ್ಸಿಂಗ್' ಕೂಡ ಈಗ ಸಾಧ್ಯ. ಮೊದಲನೆಯದಕ್ಕೆ ಕೆಲವು ವಿಶೇಷ ವ್ಯವಸ್ಥೆಗಳು ಬೇಕು. ಆದರೆ ಎರಡನೆಯದಕ್ಕೆ ಸುಲಭವಾಗಿ ವ್ಯವಸ್ಥೆ ಮಾಡುವುದು ಸಾಧ್ಯ.

ಈ ದೂರವಾಣಿಯನ್ನು 1980 ರಿಂದೀಚೆಗೆ ಶೈಕ್ಷಣಿಕ ಉದ್ದೇಶಗಳಿಗಾಗಿ ದೂರಶಿಕ್ಷಣದಲ್ಲಿಯೂ ಬಳಸಲಾಗುತ್ತಿದೆ. ದೂರಶಿಕ್ಷಣದ ಮೂಲಕ ಯಾವುದೇ ಕೋರ್ಸನ್ನು ಕಲಿಯುತ್ತಿರುವ ವಿದ್ಯಾರ್ಥಿಗಳು ಅಧ್ಯಯನ ಕೇಂದ್ರದಲ್ಲಿರುವ ಮಾರ್ಗದರ್ಶಕರೊಂದಿಗೆ ದೂರವಾಣಿ ಮೂಲಕ ಮಾತನಾಡಿ ತಮ್ಮ ಅನುಮಾನಗಳನ್ನು ಬಗೆಹರಿಸಿಕೊಳ್ಳುವುದೇ ಇಲ್ಲಿ ನಡೆಯುವ ಕಾರ್ಯ. ಈ ವ್ಯವಸ್ಥೆ ಆರಂಭವಾದ ಹೊಸದರಲ್ಲಿ ಇದನ್ನು ಬಳಸಿಕೊಳ್ಳುವವರ ಸಂಖ್ಯೆ ಹೆಚ್ಚಿರಲಿಲ್ಲ. ದೂರವಾಣಿ ಕರೆಗೆ ಆಗುತ್ತಿದ್ದ ಖರ್ಚು (call charges) ಹೆಚ್ಚಾಗಿದ್ದದ್ದೇ ಇದಕ್ಕೆ ಕಾರಣ. ಆದರೆ ಕ್ರಿ.ಶ. 2000ದ ನಂತರದಿಂದ ದೂರವಾಣಿ ಸಂಪರ್ಕ ಕ್ಷೇತ್ರದಲ್ಲಿ ಹೆಚ್ಚಿದ ಸೌಲಭ್ಯ ಹಾಗೂ ಬೆಳೆದ ಪೈಪೋಟಿಗಳಿಂದಾಗಿ 'ಕರೆ ದರ' ಸಾಕಷ್ಟು ಕಡಿಮೆಯಾಯಿತು. ಆದ್ದರಿಂದ ದೂರಶಿಕ್ಷಣದಲ್ಲೂ ದೂರವಾಣಿಯನ್ನು ಬಳಕೆ ಮಾಡಿಕೊಳ್ಳುವವರ ಸಂಖ್ಯೆಯೂ ಈಗ ಕ್ರಮೇಣ ಏರುತ್ತಿದೆ.

ದೂರಶಿಕ್ಷಣದಲ್ಲಿ ದೂರವಾಣಿಯ ಬಳಕೆ ಮೂರು ವಿಧದಲ್ಲಿ ಆಗುತ್ತಿದೆ.

Digitised by Bharatavani, CIIL

1. ಒಮ್ಮೆಗೆ ಒಬ್ಬ ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆ ನಡೆಯುವ ಶೈಕ್ಷಣಿಕ ಮಾತುಕತೆ.
2. ನಿರ್ದಿಷ್ಟ ವೇಳೆಯಲ್ಲಿ ಶಿಕ್ಷಕ (ಮಾರ್ಗದರ್ಶಕ) ಹಲವರೊಂದಿಗೆ ನಡೆಸುವ ಸಾಮೂಹಿಕ ಚರ್ಚೆ.
3. 'ಕರೆ ಲಭ್ಯತೆ' (dial access) ವಿಧಾನದಲ್ಲಿ ಏಕಮುಖವಾಗಿ ದೂರವಾಣಿ ಮೂಲಕ ಕೇಳುವುದು.

ಮೊದಲನೆಯ ಬಗೆಯ ದೂರವಾಣಿಯ ಸಮಾಲೋಚನೆಯಲ್ಲಿ– ದೂರ ಶಿಕ್ಷಣದ ವಿದ್ಯಾರ್ಥಿ ಪಾಠದಲ್ಲಿ ತನಗುಂಟಾದ ಸಂಶಯವನ್ನು ತನ್ನ ಮಾರ್ಗದರ್ಶಕರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಕೇಳಿ ಪರಿಹರಿಸಿಕೊಳ್ಳುತ್ತಾನೆ. ಇದು ದ್ವಿಮುಖ ಸಂವಾದ. ವಿದ್ಯಾರ್ಥಿಯ ಸಂದೇಹಕ್ಕೆ ವಿವರಣೆ ಮೂಲಕ ಪರಿಹಾರ ನೀಡುವುದೇ ಶಿಕ್ಷಕನ ಅಥವಾ ಮಾರ್ಗದರ್ಶನ ಕಾರ್ಯ. ಇದಕ್ಕೆ ಮೊದಲೇ ಖಚಿತಪಡಿಸಿದ ವೇಳಾಪಟ್ಟಿಯೇನೂ ಇರುವುದಿಲ್ಲ. ಇಬ್ಬರಿಗೂ ಅನುಕೂಲವಾದ ವೇಳೆಯಲ್ಲಿ ಇದು ನಡೆಯುತ್ತದೆ.

ಎರಡನೆಯ ಬಗೆಯು ಬಹುಮುಖವಾಗಿ ನಡೆಯುವ ದೂರವಾಣಿ ಸಮಾಲೋಚನೆ. ಇದರಲ್ಲಿ– ಮೊದಲೇ ಪ್ರಕಟಿಸಿದ ವೇಳೆಯಲ್ಲಿ ದೂರಶಿಕ್ಷಣ ಅಧ್ಯಯನ ಕೇಂದ್ರದಲ್ಲಿರುವ ಮಾರ್ಗದರ್ಶಕರೊಂದಿಗೆ ಹಲವು ಕಡೆಗಳಲ್ಲಿರುವ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಪಡೆಯುತ್ತಾ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳುತ್ತಾರೆ. ಇಲ್ಲಿ ಎಲ್ಲರ ಮಾತುಗಳು ಎಲ್ಲರಿಗೂ ಕೇಳುವಂತಿರುತ್ತದೆ. ಈ ಕಾರಣದಿಂದ ಅಧ್ಯಯನ ಕೇಂದ್ರದಲ್ಲಿ ವಿಶೇಷವಾದ ಶೈಕ್ಷಣಿಕ ದೂರವಾಣಿ ಅಂತರ್ಜಾಲವಿರುವುದು ಅಗತ್ಯ. ಇದನ್ನು 'ಎಜುಕೇಷನಲ್ ಟೆಲಿಫೋನ್ ನೆಟ್‌ವರ್ಕ್' (ETN) ಎಂದು ಕರೆಯುತ್ತಾರೆ.

ಮೂರನೆಯ ವಿಧಾನವಾದ 'ಕರೆ ಲಭ್ಯತೆ' ಅಥವಾ dial access ಒಂದು ಏಕಮುಖ ಕೇಳುವಿಕೆಯಾಗಿದೆ. ಇದಕ್ಕೆ ದೂರಶಿಕ್ಷಣ ಕೇಂದ್ರದಲ್ಲಿ ವಿಶೇಷ ವ್ಯವಸ್ಥೆ ಅಗತ್ಯವಾಗಿರುತ್ತದೆ. ಈ ಕೇಂದ್ರದಲ್ಲಿ ರೆಕಾರ್ಡ್ ಮಾಡಿಟ್ಟ ಪಾಠಗಳಿದ್ದು ಅದರಲ್ಲಿ ಪ್ರತಿಯೊಂದಕ್ಕೂ ನಿರ್ದಿಷ್ಟ ಸಂಕೇತ ಸಂಖ್ಯೆ ಇರುತ್ತದೆ. ಅದು ವಿದ್ಯಾರ್ಥಿಗೆ ತಿಳಿದಿರುತ್ತದೆ. ತನಗೆ ಬೇಕಾದಾಗ ವಿದ್ಯಾರ್ಥಿಯು ತನಗೆ ಬೇಕಾದ ಪಾಠದ ಕೇಳುವಿಕೆಗಾಗಿ ತನ್ನ ಟೆಲಿಫೋನಿನಿಂದ ಕರೆಮಾಡುತ್ತಾನೆ. ಆಗ ಅಲ್ಲಿರುವ ಸ್ವಯಂಚಾಲಿತ ವ್ಯವಸ್ಥೆಯಿಂದಾಗಿ ಆ ಪಾಠದ ರೆಕಾರ್ಡ್ 'ತೆರೆದು'ಕೊಂಡು ಪಾಠ 'ಹೇಳ'ಲಾರಂಭಿಸುತ್ತದೆ. ವಿದ್ಯಾರ್ಥಿ ತನಗೆ ಬೇಕೆನಿಸುವಷ್ಟು ಕಾಲ ಈ ಪಾಠ ಕೇಳಬಹುದು. ಸಾಕೆನಿಸಿದಾಗ ನಿಲ್ಲಿಸಬಹುದು.

1970ರಿಂದಲೂ ದೂರವಾಣಿ ತಾಂತ್ರಿಕತೆ ಶ್ರವಣ ಪಾಠಗಳನ್ನು ತಲುಪಿಸುವ ಸಾಧನವಾಗಿ, ದೂರಶಿಕ್ಷಣದ ಅವಿಭಾಜ್ಯ ಅಂಗವಾಗಿ ಬಳಕೆಯಲ್ಲಿದೆ. ಇಂದು ಅಮೆರಿಕದಲ್ಲಿ ಶ್ರವಣ ಶಿಕ್ಷಣವು ಸಾರ್ವಜನಿಕ ದೂರವಾಣಿ ಸಂಪರ್ಕ ಜಾಲವನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತಿದೆ. ದೂರವಾಣಿ ಸಮಾಲೋಚನಾ ತಾಂತ್ರಿಕತೆಯನ್ನು ಅಮೆರಿಕದ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಹಾಗೂ ಕೆಲ ಬಗೆಯ ಸರ್ಟಿಫಿಕೇಟ್ ಶಿಕ್ಷಣಕ್ಕೂ, ಶಿಕ್ಷಕ–ವಿದ್ಯಾರ್ಥಿಗಳು ದೂರವಿರುವಂಥ ಕಡೆಗಳಲ್ಲೂ ಬಳಸಿಕೊಳ್ಳಲಾಗುತ್ತಿದೆ.

ದೂರವಾಣಿ ಮೂಲಕ ಶಿಕ್ಷಣ ನೀಡುವಿಕೆಯು ಅಮೆರಿಕದಲ್ಲಿ ಸಾಮಾನ್ಯ ದೂರವಾಣಿ ಕರೆ ಮಾಡುವುದರಿಂದ ಹಿಡಿದು ಆಧುನಿಕ ದೂರವಾಣಿಗಳ ಮೂಲಕ ಚಿತ್ರ, ಮಾಹಿತಿ, ಧ್ವನಿಗಳೆಲ್ಲವನ್ನೂ ಪ್ರಸಾರ ಮಾಡುವುದರವರೆಗೆ ಹಲವಾರು ಬಗೆಯ ತಂತ್ರಗಳನ್ನು ಒಳಗೊಂಡಿದೆ. ಉದಾಹರಣೆಗೆ, ವಿಸ್ಕಾನ್ಸಿನ್ ವಿಶ್ವವಿದ್ಯಾಲಯ 'ಎಜ್ಯುಕೇಷನ್ ಟೆಲಿಫೋನ್ ನೆಟ್‌ವರ್ಕ್' (ETN) ಹಾಗೂ ರಾಜ್ಯವ್ಯಾಪಿ ವಿಸ್ತೃತ ಜಾಲ(Statewide Extension Network-SEEN) ಗಳ ಮೂಲಕ ದೂರಶಿಕ್ಷಣ ನೀಡುತ್ತಲಿದೆ. ETN ಗಳನ್ನು ಹೊಂದಿರುವ ಅನೇಕ ಶಿಕ್ಷಣ ಸಂಸ್ಥೆಗಳು ಅಮೆರಿಕ ಮತ್ತು ಯೂರೋಪ್‌ಗಳಲ್ಲಿವೆ.

ದೂರವಾಣಿ ಸಮಾಲೋಚನೆ ನೀಡುವ ದೂರಶಿಕ್ಷಣ ಸಂಸ್ಥೆಗಳು ಎರಡು ಬಗೆಯ ಟೆಲಿಫೋನುಗಳನ್ನು ಬಳಸಿಕೊಳ್ಳುತ್ತವೆ–

1. ಅನಲಾಗ್ (Analog) ಟೆಲಿಫೋನ್– ಇದು ಟೆಲಿಫೋನ್ ವ್ಯವಸ್ಥೆ ಆರಂಭವಾದಾಗಿನಿಂದ ಇರುವ ಮೂಲಭೂತ ಮಾದರಿ. ಇದರಲ್ಲಿ ಧ್ವನಿ ತಂತುಗಳು ಅವು ಇರುವಂತೆಯೇ ಪ್ರಸಾರವಾಗುತ್ತವೆ. ಅಂದರೆ– ಇವುಗಳ ಮೂಲಕ ಕೇವಲ ಧ್ವನಿ ಪ್ರಸಾರ ಮಾತ್ರ ಸಾಧ್ಯ.
2. ಡಿಜಿಟಲ್ (Digital) ಟೆಲಿಫೋನ್–

ಇದು ಆಧುನಿಕ ಮಾದರಿಯ ಟೆಲಿಫೋನ್. ಇದು ಧ್ವನಿಯನ್ನು ಅಲ್ಲದೆ ಚಿತ್ರ, ಅಂಕಿಅಂಶಗಳನ್ನು ಕಳಿಸಿಕೊಡುತ್ತದೆ.

ಹೀಗೆ ವಿದೇಶಗಳಲ್ಲಿ ಈಗಲೂ ದೂರವಾಣಿಯು ದೂರಶಿಕ್ಷಣದ ಒಂದು ಸಾಧನವಾಗಿ ವ್ಯವಸ್ಥಿತವಾಗಿ ಬಳಕೆಯಾಗುತ್ತಿದೆ. ಆದರೆ ಭಾರತದಲ್ಲಿ ಹೀಗೆ ಬಳಕೆಯಾಗುತ್ತಿರುವುದು ತುಂಬ ಕಡಿಮೆ. ಇದು ಇನ್ನೂ ವ್ಯವಸ್ಥಿತವಾಗಿ ವ್ಯಾಪಕವಾಗಿ ಆಗಬೇಕಾಗಿದೆ.

–ಪ.ಎಸ್.ಪಿ.

## ದೂರ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು

ವಿಶ್ವದ ಬಹುತೇಕ ಮುಕ್ತ ಹಾಗೂ ದೂರಶಿಕ್ಷಣ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿ ಬೆಂಬಲ ಸೇವಾ ಕೇಂದ್ರಗಳು ಅಥವಾ ಪ್ರಾದೇಶಿಕ/ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ, ತನ್ಮೂಲಕ ಅಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ದಾಖಲಾತಿಯ ಅವಧಿ, ಕಲಿಕೆಗೆ ಆಯ್ದುಕೊಳ್ಳಲು ಲಭ್ಯವಿರುವ ವಿಷಯಗಳು, ಸಿದ್ಧಪಾಠ ರವಾನೆ, ಆಪ್ತ ಸಲಹೆ ಮತ್ತು ಮಾರ್ಗದರ್ಶನ, ಪರೀಕ್ಷಾ ವೇಳಾಪಟ್ಟಿ ಇವೇ ಮೊದಲಾದ ವಿದ್ಯಾರ್ಥಿ ಸಂಬಂಧಿ ವಿಷಯಗಳ ಬಗ್ಗೆ ತಿಳುವಳಿಕೆಯನ್ನು ನೀಡುತ್ತಿವೆ. ದೂರ ಶಿಕ್ಷಣ ವ್ಯವಸ್ಥೆಯ ಜನಪ್ರಿಯತೆಗೆ ಶಿಕ್ಷಣ ಕೇಂದ್ರಗಳು ಶಿಕ್ಷಣಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ಬೆಂಬಲ ಸೇವೆಗಳೇ ಕಾರಣ ಎಂದರೆ ತಪ್ಪಾಗಲಾರದು. ದೂರ ಶಿಕ್ಷಣ ಕೇಂದ್ರಗಳು ತನ್ನಲ್ಲಿ ಶಿಕ್ಷಣವನ್ನು ಮುಂದುವರೆಸುತ್ತಿರುವ ವಿದ್ಯಾರ್ಥಿ ಸಮುದಾಯ ಶೈಕ್ಷಣಿಕ ಅವಶ್ಯಕತೆಗಳನ್ನು ಮನಗಂಡು, ಅದನ್ನು ಪೂರೈಸಿದಾಗ ಅವುಗಳ ಉದ್ದೇಶವು ಸಫಲವಾಗುವುದರಲ್ಲಿ ಸಂದೇಹವಿಲ್ಲ.

### ವಿದ್ಯಾರ್ಥಿ ಬೆಂಬಲ ಸೇವೆಗಳ ಅವಶ್ಯಕತೆ

ದೂರ ಶಿಕ್ಷಣ ಹಾಗೂ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ಬೆಂಬಲ ಸೇವಾ ಕೇಂದ್ರಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕಾರ್ಯಚಟುವಟಿಕೆಗಳನ್ನು ಗಮನಿಸಿದಾಗ, ಅಲ್ಲಿ ಕಲಿಯುತ್ತಿರುವ ಶಿಕ್ಷಣಾರ್ಥಿಗಳು ವಿದ್ಯಾರ್ಥಿ ಬೆಂಬಲ ಸೇವಾ ಕೇಂದ್ರಗಳ ಬಗೆಗೆ ತೋರುವ ಪ್ರೋತ್ಸಾಹವನ್ನು ಪರಾಮರ್ಶಿಸಿ ಅವುಗಳ ಉದ್ದೇಶವನ್ನು ಈ ರೀತಿ ಹೇಳಬಹುದು.

- ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿ ರವಾನಿಸಿದ ಸಿದ್ಧಪಾಠಗಳ ಬಗೆಗೆ ಇರುವ ಸಂಶಯವನ್ನು ದೂರಮಾಡುವುದು ಹಾಗೂ ಅವುಗಳ ವಿವರಣೆ ನೀಡುವುದು.

Digitised by Bharatavani, CIIL

- ಸಿದ್ಧಪಾಠದೊಡನೆ ಕಳುಹಿಸಿರುವ ಪುನರಾವರ್ತಿತ ಪ್ರಶ್ನೆಗಳಿಗೆ ಉತ್ತರಿಸಲು ಮಾರ್ಗದರ್ಶನ ನೀಡುವುದು.
- ವಿದ್ಯಾರ್ಥಿಗಳು ತಮ್ಮ ಪದವಿ ಪೂರಕ ವಿಷಯವಾಗಿ ಆಯ್ದುಕೊಂಡಿರುವ ಲಘುಪ್ರಬಂಧಗಳಿಗೆ ವಿಷಯ ಕ್ಷೇತ್ರ ಹಾಗೂ ಮಾರ್ಗದರ್ಶಕರನ್ನು ಒದಗಿಸುವುದು.
- ವಾರ್ಷಿಕ ಪರೀಕ್ಷೆಯ ತಯಾರಿಕೆಗೆ ಅಗತ್ಯವಾದ ಪರಾಮರ್ಶನ ಗ್ರಂಥಗಳನ್ನು ಒದಗಿಸುವುದು.
- ವಿದ್ಯಾರ್ಥಿಗಳು ತಮ್ಮ ಅಧ್ಯಯನಕ್ಕೆ ಪೂರಕವಾದ ವಾರ್ಷಿಕ ಪರೀಕ್ಷಾ ವೇಳಾಪಟ್ಟಿಯನ್ನು ತಮ್ಮ ಅಗತ್ಯತೆಗೆ ತಕ್ಕಂತೆ ಪರ್ಯಾಯ ದಿನಾಂಕಗಳನ್ನು ಆರಿಸಿಕೊಳ್ಳುವ ಅವಕಾಶವನ್ನು ಕಲ್ಪಿಸುವುದು.
- ವಿದ್ಯಾರ್ಥಿಗಳು ತಮ್ಮ ಪದವಿಯ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶವನ್ನೀಯುವುದು.
- ವಿದ್ಯಾರ್ಥಿಗಳು ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಾಯೋಗಿಕ ಜ್ಞಾನವನ್ನು ಬೆಳೆಸಿಕೊಳ್ಳಲು ಪ್ರಾಯೋಗಿಕ ತರಗತಿಗಳನ್ನು ನಡೆಸುವುದು.
- ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಪೂರಕವಾದ ಮಾಹಿತಿಯನ್ನು ನೀಡುವುದು.

ಮುಕ್ತ ವಿಶ್ವವಿದ್ಯಾನಿಲಯಗಳು ಈ ಕೆಳಗಿನ ವಿದ್ಯಾರ್ಥಿ ಬೆಂಬಲ ಸೇವೆಗಳನ್ನು ಒದಗಿಸುವುದು ಅತ್ಯಂತ ಅವಶ್ಯಕವಾಗಿದೆ.

i) ಕಲಿಕಾ ಸಾಮಗ್ರಿಗಳ ಪೂರೈಕೆಯನ್ನು ಪೂರ್ವಭಾವಿಯಾಗಿ ವ್ಯವಸ್ಥಿತವಾಗಿ ಸಿದ್ಧಪಡಿಸಿದ ಸ್ವಯಂ ಕಲಿಕಾ ಸಾಮಗ್ರಿಗಳ ರೂಪದಲ್ಲಿ ಒದಗಿಸಲಾಗುತ್ತದೆ. ಇದನ್ನು ಮುದ್ರಿತ ಪುಸ್ತಕಗಳ ರೂಪದಲ್ಲಿ ಮತ್ತು ಮುದ್ರಿತ ಕ್ಯಾಸೆಟ್ಟುಗಳು, ವೀಡಿಯೋ ಕ್ಯಾಸೆಟ್‌ಗಳ ವಿದ್ಯುನ್ಮಾನ (Electronic) ರೂಪದಲ್ಲಿ ಒದಗಿಸಲಾಗುತ್ತದೆ. ಮುದ್ರಿತ ಪುಸ್ತಕಗಳು ಮಾಮೂಲಿ ಪಠ್ಯಪುಸ್ತಕಗಳಂತೆ ಇರಬಾರದು. ಅವುಗಳನ್ನು ಸಿದ್ಧಪಡಿಸುವ ಪ್ರತ್ಯೇಕ ತತ್ವಗಳನ್ನೂ ಅನುಸರಿಸಬೇಕಾಗುತ್ತದೆ (ನೋಡಿ : ಸ್ವಯಂ ಕಲಿಕಾ ಸಾಮಗ್ರಿಗಳು ಪುಟ...) ಹಾಗೆಯೇ ವಿದ್ಯುನ್ಮಾನ ರೂಪದ ಸಾಮಗ್ರಿಗಳನ್ನು ಸಿದ್ಧಪಡಿಸಲು ಪ್ರತ್ಯೇಕ ತತ್ವಗಳನ್ನು ಅನುಸರಿಸಬೇಕಾಗುತ್ತದೆ. ಸಿದ್ಧಪಾಠಗಳನ್ನು ವಿದ್ಯುನ್ಮಾನ ಸಾಮುಗ್ರಿಗಳನ್ನು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ರಮದ ಆರಂಭದಲ್ಲಿಯೇ ಒದಗಿಸಬೇಕಾದುದು ಅವಶ್ಯಕ

ii) ದೂರಶಿಕ್ಷಣದಲ್ಲಿ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ದೀರ್ಘಕಾಲದ ಸಂಪರ್ಕಕ್ಕೆ ಅವಕಾಶವಿಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಕಲಿಕೆಗೆ ಸಂಬಂಧಿಸಿದಂತೆ ಬೋಧನೆಯನ್ನು ಮತ್ತು ಸಂಶಯಗಳನ್ನು ನಿವಾರಿಸಿ ಸಲಹೆ, ಸೂಚನೆಗಳನ್ನು ನೀಡಬೇಕಾದುದು ಇನ್ನೊಂದು ಮುಖ್ಯವಾದ ಬೆಂಬಲ ಸೇವೆ. ಇದನ್ನು ಅಲ್ಪಾವಧಿ ಸಂಪರ್ಕ ಕಾರ್ಯ್ಕಕ್ರಮಗಳ ರೂಪದಲ್ಲಿ ಮತ್ತು ವಾರಾಂತ್ಯ ಶೈಕ್ಷಣಿಕ ಸಮಾಲೋಚನೆ, ರೇಡಿಯೋ ಮತ್ತು ದೂರದರ್ಶನ ಸವಾಲೋಚನ, ಟೆಲಿಕಾನ್ಫರೆನ್ಸ್ ರೂಪದಲ್ಲಿ ಒದಗಿಸಲಾಗುತ್ತದೆ (ಈ ವಿಷಯಗಳ ಬಗ್ಗೆ ಪ್ರತ್ಯೇಕ ಲೇಖನಗಳನ್ನು ನೋಡಿ.)

iii) ದೂರಶಿಕ್ಷಣದಲ್ಲಿ ವಿದ್ಯಾರ್ಥಿಗಳು ಸಂಪರ್ಕ ಕಾರ್ಯಕ್ರಮಕ್ಕೆ ದೂರದ ಸ್ಥಳಗಳಿಂದ ಬಂದಾಗ ಅವರಿಗೆ ಊಟ, ವಸತಿಗೆ ತೊಂದರೆಯಾಗದಂತೆ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿಯೇ ಅಥವಾ ಹತ್ತಿರದಲ್ಲಿಯೇ ಉಪಹಾರ ಗೃಹ ಮತ್ತು ಹಾಸ್ಟಲ್‌ಗಳನ್ನು ವ್ಯವಸ್ಥೆ ಮಾಡಬೇಕು. ಹಾಗೆಯೇ ವಿಶ್ವವಿದ್ಯಾನಿಲಯದಿಂದಲೇ ವಾಹನ ಸೌಕರ್ಯವನ್ನು ಒದಗಿಸುವುದು ಅಗತ್ಯವಾಗುತ್ತದೆ.

iv) ಮುಕ್ತವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಕುಂದುಕೊರತೆ ನಿವಾರಣ ಸೇವೆಯನ್ನು ಒದಗಿಸಿ ಸಹಾಯ ನೀಡಬೇಕು. ವಿದ್ಯಾರ್ಥಿ ಬೆಂಬಲ ಸೇವೆಗಳ ವಿವಿಧ ಹಂತಗಳು...

ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅಧ್ಯಯನವನ್ನು ಮುಂದುವರೆಸುತ್ತಿರುವ ಹಾಗೂ ಹೊಸದಾಗಿ ದಾಖಲಾದ ವಿದ್ಯಾರ್ಥಿಗಳಿಗೆ ವಿವಿಧ ಹಂತಗಳಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳ ಅಗತ್ಯವಿದೆ. ಆ ಹಂತಗಳನ್ನು ಈ ರೀತಿ ಗುರ್ತಿಸಬಹುದು.

- ದಾಖಲಾತಿ ಪೂರ್ವದ ಹಂತ
- ಶಿಕ್ಷಣ ಮುಂದುವರೆಸುತ್ತಿರುವ ಹಂತ ಹಾಗೂ
- ಶಿಕ್ಷಣವನ್ನು ಪೂರೈಸಿದ ನಂತರದ ಹಂತ

**ದಾಖಲಾತಿ ಪೂರ್ವ ಹಂತ**

ಈ ಹಂತದಲ್ಲಿ ಶಿಕ್ಷಣಾರ್ಥಿಗಳಿಗೆ ಮಾಹಿತಿ, ಸಲಹೆ ಹಾಗೂ ಸಮಾಲೋಚನೆಯ ಅಗತ್ಯವಿರುತ್ತದೆ. ಶಿಕ್ಷಣಾರ್ಥಿಗಳಿಗೆ ದೂರ ಶಿಕ್ಷಣ ಸಂಸ್ಥೆಯಲ್ಲಿ ನೀಡುತ್ತಿರುವ ವಿವಿಧ ಅಧ್ಯಯನ ಕ್ಷೇತ್ರಗಳು, ಐಚ್ಛಿಕ ವಿಷಯಗಳು, ದಾಖಲಾತಿಗೆ ಅಗತ್ಯವಿರುವ ವಿದ್ಯಾರ್ಹತೆ, ಸಂಸ್ಥೆಯ ನಿಯಮಾವಳಿಗಳು, ಶುಲ್ಕದ ವಿವರ, ರಾಷ್ಟ್ರಮಟ್ಟದಲ್ಲಿ ಸಂಸ್ಥೆಯ ಶ್ರೇಣಿ, ಶುಲ್ಕ ರಿಯಾಯಿತಿ, ವಿದ್ಯಾರ್ಥಿ ವೇತನ ಸೌಲಭ್ಯ, ತರಬೇತಿ ಕಾರ್ಯಕ್ರಮ, ವಿದ್ಯಾರ್ಥಿಗಳು ದಾಖಲಾಗುವ ಶಿಕ್ಷಣಕ್ಕೆ ಲಭ್ಯವಿರುವ ಮೌಲ್ಯ, ಇವೇ ಮೊದಲಾದ ಮಾಹಿತಿಗಳನ್ನು ಸಮಾಲೋಚನೆಯ ಘಟ್ಟದಲ್ಲಿ ನೀಡಬಹುದಾಗಿದೆ. ನಂತರ ವಿಶ್ವವಿದ್ಯಾನಿಲಯದಲ್ಲಿ ಯಾವ ಶಿಕ್ಷಣ ಪದ್ಧತಿಗೆ ದಾಖಲಾದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಒದಗುತ್ತವೆ ಎಂಬ ವಿಷಯವನ್ನು ವಿದ್ಯಾರ್ಥಿಗಳಿಗೆ ಮಾರ್ಗದರ್ಶನದ ಹಂತದಲ್ಲಿ ಮನದಟ್ಟು ಮಾಡಿಕೊಡಲಾಗುತ್ತದೆ. ಹಾಗೆಯೇ, ವಿದ್ಯಾರ್ಥಿಗಳು ಅಧ್ಯಯನ ಮುಂದುವರೆಸುವಲ್ಲಿ ಎದುರಾಗುವ ಸಾಮಾನ್ಯ ಶೈಕ್ಷಣಿಕ ಸಮಸ್ಯೆಗಳು ಹಾಗೂ ಪರಿಹಾರ, ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿದ್ದರೆ ತಮ್ಮ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ತೊಂದರೆಯಾಗದಂತೆ ತಮ್ಮ ಶೈಕ್ಷಣಿಕ ಗುರಿಯನ್ನು ಮುಟ್ಟುವ ಬಗೆಯನ್ನು ಸಲಹೆಯ ಹಂತದಲ್ಲಿ ಪಡೆಯಬಹುದಾಗಿದೆ.

**ಶಿಕ್ಷಣ ಮುಂದುವರೆಸುತ್ತಿರುವ ಹಂತ**

ಶಿಕ್ಷಣಾರ್ಥಿಗಳು ದೂರ ಶಿಕ್ಷಣ ವ್ಯವಸ್ಥೆಯಡಿಯಲ್ಲಿ ದಾಖಲಾಗಿ ತಮ್ಮ ಪಠ್ಯವಸ್ತುಗಳನ್ನು (ಸಿದ್ಧಪಾಠಗಳು, ಕಾರ್ಯಕ್ರಮ ಮಾರ್ಗಸೂಚಿ, ನಿಯೋಜಿತ ಪ್ರಬಂಧಗಳ ವಿವರ, ಪ್ರಾಯೋಗಿಕ ವಸ್ತುಗಳು ಇತ್ಯಾದಿ) ಪಡೆದ ನಂತರ ಅವರಿಗೆ ಮಾರ್ಗದರ್ಶನದ ಅಗತ್ಯವಿರುತ್ತದೆ. ಬಹಳಷ್ಟು ವಿದ್ಯಾರ್ಥಿಗಳು ಹಲವು ವರ್ಷಗಳ ವಿಶ್ರಾಂತಿಯ ನಂತರ ಇಲ್ಲಿ ಅಧ್ಯಯನವನ್ನು ಕೈಗೊಂಡಿರುವುದರಿಂದ ಪೂರ್ವಸಿದ್ಧತೆಯ ಸಹಾಯವನ್ನು ಬಯಸುತ್ತಾರೆ. ಸ್ವಕಲಿಕೆಯ ವಸ್ತುಗಳು, ನಿಯೋಜಿತ ಪ್ರಬಂಧಗಳು, ಪರಾಮರ್ಶನ ಗ್ರಂಥಗಳ ಬಗೆಗೆ ಅವರಿಗೆ ಆಳವಾದ ಜ್ಞಾನವಿಲ್ಲದಿರುವುದರಿಂದ ಇಲ್ಲವೇ ತಿಳುವಳಿಕೆಯ ಕೊರತೆಯಿರುವುದರಿಂದ ಅವರಿಗೆ ಅಧ್ಯಯನ ಕೌಶಲ್ಯ ನಿಯೋಜಿತ ಪ್ರಬಂಧ ರಚನೆಯ ಮಾದರಿ ಇವೇ ಮೊದಲಾದ ವಿಚಾರಗಳಲ್ಲಿ ಮಾರ್ಗದರ್ಶನದ ಅಗತ್ಯವಿರುವುದರಿಂದ ಅದನ್ನು ಸಮರ್ಪಕವಾಗಿ ನಿಭಾಯಿಸಬೇಕಾಗುತ್ತದೆ.

ಇದೇ ಸಂದರ್ಭದಲ್ಲಿ ಶಿಕ್ಷಣಾರ್ಥಿಗಳು ತಮ್ಮ ಶೈಕ್ಷಣಿಕ ಪ್ರಗತಿ, ನಿಯೋಜಿತ ಪ್ರಬಂಧದಲ್ಲಿ ಪಡೆದಿರುವ ಶ್ರೇಣಿ, ಅಧ್ಯಯನ ತರಬೇತಿ ಕಾರ್ಯಕ್ರಮ, ಲಘು ಸಂಶೋಧನಾ ಪ್ರಬಂಧ ರಚನೆ, ವಿಚಾರಗೋಷ್ಠಿ, ಪ್ರಾಯೋಗಿಕ ತರಗತಿಗಳು, ಅಧ್ಯಯನ ಕೌಶಲ್ಯವನ್ನು ಬೆಳೆಸಿಕೊಳ್ಳುವಿಕೆ,

Digitised by Bharatavani, CIIL

ಮಾಧ್ಯಮಗಳ ಮೂಲಕ ಕಲಿಕೆ, ವೈಯಕ್ತಿಕ ಹಾಗೂ ತಾಂತ್ರಿಕ ಸಮಸ್ಯೆಗಳನ್ನು ಎದುರಿಸಿ, ಹೊರಬರುವ ಕ್ರಿಯೆ ಇಂತಹುದೇ ಆದ ಹಲವಾರು ಅಧ್ಯಯನ ಪೂರಕ ವಿಷಯಗಳನ್ನು ಕುರಿತು ಚರ್ಚಿಸಬಯಸುವುದರಿಂದ ಅವರಿಗೆ ಪೂರಕ ಮಾಹಿತಿ ಸೇವೆಯನ್ನು ಒದಗಿಸಬೇಕಾಗುತ್ತದೆ.

ಕೊನೆಯ ಹಂತದಲ್ಲಿ, ವಿದ್ಯಾರ್ಥಿಗಳು ಅಪೂರ್ಣವಾಗಿರುವ ನಿಯೋಜಿತ ಪ್ರಬಂಧಗಳು ಇಲ್ಲವೇ ಲಘು ಸಂಶೋಧನಾ ಪ್ರಬಂಧ ರಚನೆ, ಕ್ಲಿಷ್ಟಕರವಾದ ಪಠ್ಯವಸ್ತುಗಳ ಪುನರಾವರ್ತನೆ, ವಾರ್ಷಿಕ ಪರೀಕ್ಷಾ ತಯಾರಿ ಇವೇ ಮೊದಲಾದ ವಿಷಯಗಳ ಬಗ್ಗೆ ಮಾರ್ಗದರ್ಶನವನ್ನು ಅಪೇಕ್ಷಿಸುವುದರಿಂದ ಅವರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಬೇಕಾಗುತ್ತದೆ.

ಇವಲ್ಲದೇ, ಆಗಾಗ್ಗೆ ಕೆಲವೊಂದು ವಿಶೇಷ ಸಂದರ್ಭದಲ್ಲಿಯೂ ವಿದ್ಯಾರ್ಥಿಗಳು ಅಧ್ಯಯನ ಕೇಂದ್ರದ ಮೊರೆಹೋಗಬಹುದಾಗಿದೆ. ಉದಾಹರಣೆಗೆ, ದಾಖಲಾತಿಯ ಅವಧಿ, ಪಾವತಿಸಬಹುದಾದ ವಿಶೇಷ ಶುಲ್ಕ, ವಿದ್ಯಾರ್ಹತೆ, ಉದ್ಯೋಗಾವಕಾಶಗಳು, ತರಬೇತಿ ಕಾರ್ಯಕ್ರಮಗಳು, ವಿದ್ಯಾರ್ಥಿ ವೇತನ ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಕ್ಷಿಪ್ರಗತಿಯ ಮಾಹಿತಿಯ ಅವಶ್ಯಕತೆಯನ್ನು ಮನಗಾಣುತ್ತಾರೆ. ಇದರಿಂದಾಗಿ ದೂರಶಿಕ್ಷಣ ವಿಶ್ವವಿದ್ಯಾನಿಲಯಗಳು ತಮ್ಮಲ್ಲಿ ಸಮರ್ಥವಾದ ಆಡಳಿತಾತ್ಮಕ ಸಲಹೆ ಮತ್ತು ಬೆಂಬಲ ವ್ಯವಸ್ಥೆಯನ್ನು ರೂಪಿಸುವ ಹಾಗೂ ಸ್ಥಾಪಿಸುವ ಅಗತ್ಯವಿದೆ.

**ಶಿಕ್ಷಣ ಪೂರೈಸಿದ ನಂತರದ ಹಂತ**

ವಿದ್ಯಾರ್ಥಿಗಳು ಯಾವುದೇ ದೂರಶಿಕ್ಷಣ ವಿಶ್ವವಿದ್ಯಾನಿಲಯ ಅಥವಾ ಅಧ್ಯಯನ ಕೇಂದ್ರಗಳಿಗೆ ದಾಖಲಾಗಿ ತಮ್ಮ ಅಧ್ಯಯನವನ್ನು ಯಶಸ್ವಿಯಾಗಿ ಪೂರೈಸಿದ ನಂತರ ತಾವು ಮುಂದೆ ಕೈಗೊಳ್ಳಬಹುದಾದ ಉನ್ನತ ಶಿಕ್ಷಣ ವ್ಯವಸ್ಥೆ ಅಥವಾ ಉದ್ಯೋಗಾವಕಾಶದ ಬಗ್ಗೆ ಸಲಹೆಯನ್ನು ಪಡೆಯುವ ಅತ್ಯಮೂಲ್ಯ ಹಂತ ಇದಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಪಡೆಯುವ ಮಾಹಿತಿ ಹಾಗೂ ಅದರ ಸದುಪಯೋಗದ ಮೇಲೆ ಅವರ ಭವಿಷ್ಯ ನಿರ್ಧಾರವಾಗಲಿದೆ.

**ವಿದ್ಯಾರ್ಥಿ ಬೆಂಬಲ ಸೇವೆಯ ಬಗೆಗಳು**

ಈ ಮೇಲೆ ವಿವರಿಸಲಾದ ಅಂಶಗಳನ್ನು ಪರಿಗಣಿಸಿ ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ಕೈಗೊಂಡಿರುವ ವಿದ್ಯಾರ್ಥಿಗಳಿಗೆ ಅಗತ್ಯವಾದ ಸೇವೆಗಳನ್ನು ಸ್ಥೂಲವಾಗಿ ಈ ರೀತಿ ವಿಂಗಡಿಸಬಹುದು.

1. ಶೈಕ್ಷಣಿಕ ಸೇವೆಗಳು
2. ಆಡಳಿತಾತ್ಮಕ ಸೇವೆಗಳು
3. ಮಾಹಿತಿ ಸೇವೆಗಳು

**ವಿದ್ಯಾರ್ಥಿ ಬೆಂಬಲ ಸೇವೆಯಲ್ಲಿ ಅಧ್ಯಯನ ಕೇಂದ್ರಗಳ ಪಾತ್ರ**

ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅಧ್ಯಯನ ಕೇಂದ್ರಗಳ ಸ್ಥಾಪನೆ ಅತೀ ಅವಶ್ಯಕವೆನಿಸಿದೆ. ಈ ಕೇಂದ್ರಗಳು ವಿದ್ಯಾರ್ಥಿಗಳಿಗೆ ಅಗತ್ಯವೆನಿಸಿದ ಸೇವೆಯನ್ನು ಒದಗಿಸಲು ಸಹಾಯಕಾರಿಯಾಗಿವೆ. ಈ ಕೇಂದ್ರಗಳಲ್ಲಿ ಕಚೇರಿ, ಸಮಾಲೋಚನಾ ಕೋಣೆ, ದೃಕ್-ಶ್ರವಣ ಸಾಧನಗಳು, ಟೆಲಿಕಾನ್ಫರೆನ್ಸಿಂಗ್ ಶಾಲೆ, ಗ್ರಂಥಾಲಯ ಇವುಗಳ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಸಾಮಾನ್ಯವಾಗಿ ವಾರದ ಎಲ್ಲ ದಿನಗಳೂ ಈ ಕೇಂದ್ರಗಳು ಕಾರ್ಯ ನಿರ್ವಹಿಸುತ್ತವೆ. ಕೆಲವೊಂದು ಅಧ್ಯಯನ ಕೇಂದ್ರಗಳು ಆಯ್ದ ಕೆಲವು ವಿಷಯಗಳಿಗೆ ವಾರಾಂತ್ಯ ವಿಶೇಷ ತರಗತಿಗಳನ್ನು ನಡೆಸುವ ಮೂಲಕ ವಿದ್ಯಾರ್ಥಿ ಬೆಂಬಲ ಸೇವೆಯನ್ನು ವಿಸ್ತರಿಸುತ್ತವೆ.

**ಅಧ್ಯಯನ ಕೇಂದ್ರಗಳ ಕಾರ್ಯಚಟುವಟಿಕೆಗಳು**

ಅಧ್ಯಯನ ಕೇಂದ್ರಗಳು ಮುಖ್ಯವಾಗಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುತ್ತವೆ.

1. ಶೈಕ್ಷಣಿಕ ಸಮಾಲೋಚನೆಯನ್ನು ನಡೆಸುವುದು.
2. ಗ್ರಂಥಾಲಯ ಸೇವೆಯನ್ನು ಕಲ್ಪಿಸುವುದು.
3. ನಿಯೋಜಿತ ಪ್ರಬಂಧ ರಚನೆಯಲ್ಲಿ ಸಹಾಯ ಒದಗಿಸುವುದು.
4. ಲಘು ಪರೀಕ್ಷೆಗಳನ್ನು ಆಯೋಜಿಸುವುದು.
5. ಮಾಹಿತಿ ಸೇವೆಗಳನ್ನು ಒದಗಿಸುವುದು.

ಸಾಮಾನ್ಯವಾಗಿ ಅಧ್ಯಯನ ಕೇಂದ್ರಗಳಲ್ಲಿ ಕಾರ್ಯಕ್ರಮ ಸಂಯೋಜಕರು, ಸಹಾಯಕ ಸಂಯೋಜಕರು, ಆಡಳಿತ ಸಹಾಯಕರು, ತಾಂತ್ರಿಕ ಸಹಾಯಕರು ಹಾಗೂ ಪರಿಚಾರಕರು ಕಾರ್ಯನಿರ್ವಹಿಸುತ್ತಾರೆ. ಇವರಲ್ಲಿ ಸಂಯೋಜಕರ ಪಾತ್ರ ಅತ್ಯಂತ ಪ್ರಮುಖವಾಗಿದ್ದು ಎಲ್ಲ ಕಾರ್ಯಕ್ರಮಗಳನ್ನು ಸಂಘಟಿಸುವುದರೊಂದಿಗೆ, ಆಡಳಿತಾತ್ಮಕ ಹಾಗೂ ಮೇಲ್ವಿಚಾರಣಾ ಜವಾಬ್ದಾರಿಗಳಿದ್ದು, ಇತರರ ಸಹಾಯದೊಂದಿಗೆ ವಿದ್ಯಾರ್ಥಿ ಬೆಂಬಲ ಸೇವೆಗಳು ಸುಲಲಿತವಾಗಿ ಸಾಗುವಂತೆ ನೋಡಿಕೊಳ್ಳುವ ಹೊಣೆಯೂ ಇವರದ್ದಾಗಿರುತ್ತದೆ. ವಿದ್ಯಾರ್ಥಿ ಬೆಂಬಲ ಸೇವೆಯನ್ನು ಶಿಕ್ಷಣಾರ್ಥಿಗಳು ಸಮರ್ಪಕವಾಗಿ ಬಳಸಿಕೊಂಡಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳು ಹಾಗೂ ದೂರ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿ ಬೆಂಬಲ ಸೇವೆಯನ್ನು ಕಲ್ಪಿಸಿರುವ ಉದ್ದೇಶವು ಸಫಲವಾಗುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

–ಎಂ.ಗೋ.

– ಎಸ್.ಎನ್.ಕು.

## ದೂರಶಿಕ್ಷಣದಲ್ಲಿ ಆನ್‌ಲೈನ್ ಕಾರ್ಯಕ್ರಮಗಳು

**ದೂರಶಿಕ್ಷಣ**

ತಂತ್ರಜ್ಞಾನವು ಮುಂದುವರೆದಂತೆಲ್ಲಾ ದೂರಶಿಕ್ಷಣ ವಿಧಾನದಲ್ಲಿಯೂ ಬಹಳಷ್ಟು ಬದಲಾವಣೆಗಳಾಗಿವೆ. ಈ ಮೊದಲು ಕೇವಲ ಅಂಚೆಯ ಮೂಲಕ ಸಿದ್ಧಪಾಠಗಳನ್ನು ರವಾನಿಸುತ್ತಿದ್ದ ವಿಶ್ವವಿದ್ಯಾನಿಲಯಗಳು ಇಂದು ತಾಂತ್ರಿಕ ವಿಧಾನದಿಂದ ತಮ್ಮದೇ ಆದ ಅಂತರ್ಜಾಲ ತಾಣಗಳನ್ನು ಹೊಂದಿದ್ದು ಇದರ ಮೂಲಕವಾಗಿಯೇ ಪಠ್ಯವಸ್ತುವನ್ನು ಒದಗಿಸಿ, ವಿದ್ಯಾರ್ಥಿಗಳಿಂದ ನಿಯೋಜಿತ ಪ್ರಬಂಧಗಳನ್ನು ಪಡೆದು, ವಾರ್ಷಿಕ ಪರೀಕ್ಷೆ (ಮೌಖಿಕ/ಲಿಖಿತ)ಗಳನ್ನು ಸಂಘಟಿಸಿ ಪದವಿಗಳನ್ನು ನೀಡುತ್ತಿವೆ. ಅದರಲ್ಲೂ ನೇರಶಿಕ್ಷಣ (Online)/ನೇರ ಸಂಪರ್ಕ ವಿಧಾನದ ಮೂಲಕ ನೀಡುತ್ತಿರುವ ಪರೀಕ್ಷಾ ಕ್ರಮಗಳಂತೂ ದೋಷರಹಿತವಾಗಿದ್ದು ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶಗಳನ್ನು ಒದಗಿಸುವಲ್ಲಿ ಸಹಾಯಕಾರಿಯಾಗಿದೆ.

**ನೇರಸಂಪರ್ಕ ಶಿಕ್ಷಣ ವ್ಯವಸ್ಥೆ: (Online Education)**

ನೇರಸಂಪರ್ಕ ಶಿಕ್ಷಣ ಅಥವಾ ಆನ್‌ಲೈನ್ ಶಿಕ್ಷಣ ಪದ್ಧತಿಯು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನುಂಟುಮಾಡಿದ್ದು, ತನ್ನ ಸರಳತೆಯಿಂದಾಗಿ ಅತಿ ಕಡಿಮೆ ಅವಧಿಯಲ್ಲಿ ಬಹಳಷ್ಟು

Digitised by Bharatavani, CIIL

ಜನಪ್ರಿಯತೆಯನ್ನು ಪಡೆದಿದೆ. ವಿದ್ಯಾರ್ಥಿಗಳು ತಮ್ಮ ಸಾಂಪ್ರದಾಯಿಕ ಶಿಕ್ಷಣವನ್ನು ಕಾರಣಾಂತರಗಳಿಂದ ಮೊಟಕುಗೊಳಿಸಿದ್ದು, ಅಗತ್ಯವೆನಿಸಿದಾಗ ಆನ್‌ಲೈನ್ ಶಿಕ್ಷಣ ವಿಧಾನದ ಮೂಲಕ ಶಿಕ್ಷಣವನ್ನು/ಅಧ್ಯಯನವನ್ನು ಮುಂದುವರೆಸಬಹುದಾಗಿದೆ. ಈ ವಿಧಾನದಿಂದ ಪಡೆದ ಪದವಿಗಳಿಂದ ಇತರ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಿಂದ ಪಡೆದ ಪದವಿಗಳಷ್ಟೇ ಮಾನ್ಯತೆ ಪಡೆದಿರುವ ಪದವಿಯನ್ನು ಹೊಂದಿ, ಆ ಪದವಿಯ ಆಧಾರದ ಮೇಲೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳಬಹುದು. ಇಂತಹ ಆನ್‌ಲೈನ್ ಪದವಿಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳಬಹುದು.

ತಮ್ಮದೇ ಆದ ವೈಯಕ್ತಿಕ ಕಾರಣಗಳಿಂದಾಗಿ ದೈನಂದಿನ ಪದವಿ ಶಿಕ್ಷಣಕ್ಕೆ ದಾಖಲಾಗಲು ಸಾಧ್ಯವಿಲ್ಲದ ವ್ಯಕ್ತಿಗಳು ದೂರಶಿಕ್ಷಣ ವ್ಯವಸ್ಥೆಯ ಮೂಲಕ ಶಿಕ್ಷಣವನ್ನು ಮುಂದುವರೆಸಬಹುದಾಗಿದೆ. ಇಂತಹ ದೂರಶಿಕ್ಷಣ ಹಾಗೂ ಮುಕ್ತ ವಿಶ್ವವಿದ್ಯಾನಿಲಯಗಳು ಅಳವಡಿಸಿಕೊಂಡಿರುವ ಆನ್‌ಲೈನ್ ಶಿಕ್ಷಣವನ್ನು ಪಡೆಯಲಿಚ್ಛಿಸುವ ವ್ಯಕ್ತಿಗಳು ಕೇವಲ ಅಂತರ್ಜಾಲದ ಮೂಲಕ ಅತಿ ಕಡಿಮೆ ವೆಚ್ಚದಲ್ಲಿ ವಿವಿಧ ತರಗತಿಗಳಿಗೆ ನೋಂದಾಯಿಸಿಕೊಂಡು, ಆಯ್ಕೆಯಾಧಾರಿತವಾಗಿ ಅಗತ್ಯಕ್ಕೆ ತಕ್ಕಂತಹ ವಿಷಯಗಳನ್ನು ಅಧ್ಯಯನ ಮಾಡಬಹುದಾಗಿದೆ.

ಈ ಆನ್‌ಲೈನ್ ಶಿಕ್ಷಣ ವ್ಯವಸ್ಥೆಯು ಕಂಪ್ಯೂಟರ್ ಜ್ಞಾನ, ಮಾಹಿತಿ ತಂತ್ರಜ್ಞಾನ ಹಾಗೂ ಬಹುಮಾಧ್ಯಮ ಸಾಧನಗಳನ್ನು ಬಳಸಿಕೊಂಡು ಪರಿಣಾಮಕಾರಿಯಾದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತದೆ. ಈ ಶಿಕ್ಷಣ ಪದ್ಧತಿಯ ಮೂಲಕ ದಾಖಲಾದ ವಿದ್ಯಾರ್ಥಿಗಳು ಪಠ್ಯಕ್ರಮ, ಪಠ್ಯವಸ್ತುಗಳನ್ನು ನೇರ ಸಂಪರ್ಕ ತಂತ್ರಜ್ಞಾನದ ಮೂಲಕವಾಗಿಯೇ ಪಡೆದು, ವಾರ್ಷಿಕ ಪರೀಕ್ಷೆಯನ್ನೂ ಹಾಗೂ ಪೂರಕ ಮೌಖಿಕ ಪರೀಕ್ಷೆಯನ್ನೂ ನೇರವಾಗಿಯೇ ಎದುರಿಸಿ, ಪರೀಕ್ಷಾ ಫಲಿತಾಂಶ, ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನೂ ನೇರ ಮಾಹಿತಿ ತಂತ್ರಜ್ಞಾನದ ಮೂಲಕವಾಗಿಯೇ ಪಡೆಯುವ ಅಪೂರ್ವ ಅವಕಾಶವನ್ನು ಕಲ್ಪಿಸಿದೆ.

ಜನಸಾಮಾನ್ಯರಲ್ಲಿ ಉಂಟಾಗಿರುವ ಅಂತರ್ಜಾಲದ ಅಪಾರ ತಿಳುವಳಿಕೆ ಹಾಗೂ ಗಣಕ ತಂತ್ರಾಂಶಗಳ ಸರಳೀಕರಣದ ಕಾರಣದಿಂದಾಗಿ ಇಂದು ಆನ್‌ಲೈನ್ ಶಿಕ್ಷಣ ವಿಧಾನದ ಬಳಕೆ ಜಗತ್ತಿನಾದ್ಯಂತ ವ್ಯಾಪಕವಾಗಿ ಬೆಳೆಯುತ್ತಿದೆ. ವಿಶ್ವದಾದ್ಯಂತ ಇರುವ ಸುಮಾರು ಶೇ. 75ರಷ್ಟು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ತಾವು ನೀಡುವ ಸಾಂಪ್ರದಾಯಿಕ ಶಿಕ್ಷಣದೊಡನೆ ಆನ್‌ಲೈನ್ ಶಿಕ್ಷಣವನ್ನು ನೀಡಲು ಮುಂದಾಗಿವೆ. ಇದರಿಂದ ಜಗತ್ತಿನಾದ್ಯಂತ ಸುಮಾರು 3 ಮಿಲಿಯನ್ ವಿದ್ಯಾರ್ಥಿಗಳು ಆನ್‌ಲೈನ್ ಶಿಕ್ಷಣವನ್ನು ಪಡೆಯಲು ಮುಂದಾಗಿದ್ದಾರೆ ಹಾಗೂ ಸುಮಾರು 6 ಲಕ್ಷ ಮಂದಿ ಈ ವಿಧಾನದ ಮೂಲಕ ತಮ್ಮ ಪದವಿಯನ್ನು ಪಡೆದಿದ್ದಾರೆ ಎಂಬುದು ಕೆಲವು ಅಂಕಿಅಂಶಗಳ ಮೂಲಕ ಸ್ಪಷ್ಟವಾಗಿದೆ. ಇದರಿಂದ ಆನ್‌ಲೈನ್ ಶಿಕ್ಷಣ ವ್ಯವಸ್ಥೆಯು ಅತ್ಯಂತ ಉಪಯುಕ್ತವಾಗಿದ್ದು, ಪ್ರತಿ ವರ್ಷ ಈ ವಿಧಾನದ ಮೂಲಕ ದಾಖಲಾಗುತ್ತಿರುವವರ ಸಂಖ್ಯೆ ಶೇ. 40ರಷ್ಟು ಹೆಚ್ಚಳವಾಗುತ್ತಿದೆ ಎಂಬುದು ಸರ್ವವೇದ್ಯವಾಗಿದೆ. ವಿಶೇಷತಃ ಭಾರತದಲ್ಲಿ ವ್ಯವಹಾರ ನಿರ್ವಹಣೆ ಕ್ಷೇತ್ರದಲ್ಲಿ ಅಧ್ಯಯನಶೀಲರಾದ ವಿದ್ಯಾರ್ಥಿಗಳು MBA ಪದವಿಯನ್ನು ಪಡೆಯುವುದರ ಜೊತೆಯಲ್ಲಿಯೇ ವಿದೇಶಿ ವಿಶ್ವವಿದ್ಯಾನಿಲಯಗಳು ಕೊಡಮಾಡುವ ಪೂರಕ ಪದವಿಯನ್ನು ಪಡೆಯುವ ದ್ವಿಶಿಕ್ಷಣ (Dual) ಪದ್ಧತಿಯ ಮೂಲಕ ಪ್ರಯೋಜನ ಪಡೆಯುತ್ತಿರುವುದು ಕಂಡುಬಂದಿದೆ.

**ನೇರ ಸಂಪರ್ಕ ಶಿಕ್ಷಣ ವಿಧಾನದ ಪ್ರಮುಖ ಅಂತರ್ಜಾಲ ತಾಣಗಳು:** ಈ ಶಿಕ್ಷಣ ವಿಧಾನವು ವಿದ್ಯಾರ್ಥಿಗಳಿಗೆ ವರದಾಯಕವಾಗಿದ್ದು, ಆನ್‌ಲೈನ್ ಶಿಕ್ಷಣ ವ್ಯವಸ್ಥೆಯ ಮೂಲಕ ಶಿಕ್ಷಣವನ್ನು ಮುಂದುವರೆಸುವುದಕ್ಕಾಗಿ ಲಭ್ಯವಿರುವ ಪ್ರಮುಖ ಅಂತರ್ಜಾಲ ತಾಣಗಳು ಈ ರೀತಿಯಾಗಿವೆ.

1. **ಇ–ಕಲಿಕೆ ಬಗ್ಗೆ (About e-learning):** ಇದು ನೇರಸಂಪರ್ಕ ವಿಧಾನದ ಸಂಕ್ಷಿಪ್ತ ಸಂಪನ್ಮೂಲ ಹಾಗೂ ಮಾಹಿತಿಯ ಮಾರ್ಗಸೂಚಿ ತಾಣವಾಗಿದ್ದು, ಅಮೆರಿಕಾ ಸಂಸ್ಥಾನ ಹಾಗೂ ಕೆನಡಾ ದೇಶಗಳಲ್ಲಿ ಲಭ್ಯವಿರುವ ವಿವಿಧ ಅಧ್ಯಯನ ವಿಷಯಗಳು, ಮಾನ್ಯತೆ ಪಡೆದಿರುವ ಶಿಕ್ಷಣ ಕ್ಷೇತ್ರಗಳು, ಆನ್‌ಲೈನ್ ಪದವಿಗಳು, ಹಾಗೂ ಸಂಸ್ಥೆಗಳ ಬಗ್ಗೆ ವಿಸ್ತೃತ ಮಾಹಿತಿಯನ್ನು ನೀಡುತ್ತದೆ.

ಈ ತಾಣವು –

- ಶೈಕ್ಷಣಿಕ ತಂತ್ರಜ್ಞಾನದಲ್ಲಿ ಸಂಶೋಧನೆ ಕೈಗೊಳ್ಳುವವರಿಗೆ
- ಶಿಕ್ಷಣ ತಂತ್ರಜ್ಞಾನ ಹಾಗೂ ನೇರಸಂಪರ್ಕ ಕಲಿಕೆಯಲ್ಲಿ ಆಸಕ್ತರಾದವರಿಗೆ
- ಆನ್‌ಲೈನ್ ಶಿಕ್ಷಣವನ್ನು ನೀಡುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ವಿವರವನ್ನು ಪಡೆಯಲಿಚ್ಛಿಸುವವರಿಗೆ ಉಪಯುಕ್ತವಾಗಿದೆ.

ಅಲ್ಲದೆ ಈ ತಾಣವು ವಿದ್ಯಾರ್ಥಿಗಳಿಗೆ, ಶಿಕ್ಷಣ ತಜ್ಞರಿಗೆ, ಶಿಕ್ಷಕರಿಗೆ, ತರಬೇತುದಾರರಿಗೆ, ಬಹುಮಾಧ್ಯಮ ಹಾಗೂ ವಿದ್ಯುನ್ಮಾನ ಕಲಿಕೆಯ ಸಾಮಗ್ರಿಗಳನ್ನು ರೂಪಿಸುವವರಿಗೆ ಸಹಾಯಕಾರಿಯಾದ ಮಾಹಿತಿಯನ್ನೊದಗಿಸುತ್ತದೆ.

ಇ–ಕಲಿಕೆ ಬಗ್ಗೆ (About e-learning) ತಾಣದ ಉಪತಾಣಗಳಾದ Ph.D. In Educational Technology; .educational degrees; .principles; .careers and jobs; .e-learning blog ಗಳನ್ನು ಬಳಸಿಕೊಂಡು ಪರಿಣಾಮಕಾರಿಯಾದ ಶಿಕ್ಷಣ ಮಾಹಿತಿಯನ್ನು ಪಡೆಯಬಹುದಾಗಿದೆ.

2. **ಆಲ್‌ಪೋರ್ಟಲ್ ಆನ್‌ಲೈನ್ (Allportal online):** ಈ ತಾಣವು ನೇರಸಂಪರ್ಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ಮುಂದುವರೆಸಲು ಇಚ್ಛಿಸುವವರು ಉಪಯುಕ್ತ ಮಾಹಿತಿಯನ್ನು ಪಡೆಯುವ ಉತ್ಕೃಷ್ಟ ಮಾಹಿತಿ ಮೂಲವಾಗಿದೆ. ಇದರಲ್ಲಿ ಅಂತಾರಾಷ್ಟ್ರೀಯ ಮಟ್ಟದ ಶಿಕ್ಷಣ ಸಂಸ್ಥೆಗಳು ಹಾಗೂ ಅವು ನೀಡುವ ಆನ್‌ಲೈನ್ ಪದವಿಗಳ ವಿವರಗಳನ್ನು ಕಾಣಬಹುದಾಗಿದೆ. ಇದರಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಸಂಶೋಧನಾ ಪದವಿಯ ವಿಸ್ತೃತ ಮಾಹಿತಿಯನ್ನು ಪಡೆಯಬಹುದು.

ಆಲ್‌ಪೋರ್ಟಲ್ ಆನ್‌ಲೈನ್ (Allportalonline) ತಾಣವು ಅಮೆರಿಕಾ ದೇಶದ ವಿವಿಧ ಸಂಸ್ಥೆಗಳ ಆನ್‌ಲೈನ್ ಶಿಕ್ಷಣದ ಬಗ್ಗೆ ಮಾಹಿತಿ ನೀಡುವ ಉತ್ತಮ ನಿರ್ದೇಶಿಕೆಯಾಗಿದ್ದು, ಇದು ವಿದ್ಯಾರ್ಥಿಗಳಿಗೆ ಉತ್ತಮ ಉದ್ಯೋಗಾವಕಾಶವನ್ನು ಹೆಚ್ಚಿಸಲು ಅಗತ್ಯವಾದ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಅರಿವು ನೀಡುತ್ತದೆ. ಇದರ ಮೂಲಕ ದೂರಶಿಕ್ಷಣ ಕಲಿಕಾ ಕಾರ್ಯಕ್ರಮಗಳು, ಆನ್‌ಲೈನ್ ಶಿಕ್ಷಣ ಸಂಸ್ಥೆಗಳು, ಆನ್‌ಲೈನ್ ವಿಶ್ವವಿದ್ಯಾನಿಲಯಗಳು, ಆನ್‌ಲೈನ್‌ಶಿಕ್ಷಣ ಮಾಹಿತಿ ಇವೇ ಮೊದಲಾದುವುಗಳ ಬಗ್ಗೆ ತಿಳಿಯಬಹುದಾಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಾಂಪ್ರದಾಯಿಕ ಶಿಕ್ಷಣದೊಡನೆ ನೇರ (online) ವ್ಯವಸ್ಥೆಯ ಮೂಲಕ ಪಡೆಯಬಹುದಾದ ಹೆಚ್ಚುವರಿ ಶಿಕ್ಷಣದ ಬಗ್ಗೆ ಯೋಚಿಸಿ ಮುಂದುವರೆಯುವುದು ಅನಿವಾರ್ಯ.

Digitised by Bharatavani, CIIL

**ಭಾರತದಲ್ಲಿ ದೂರಶಿಕ್ಷಣ ಆನ್‌ಲೈನ್ ಕಾರ್ಯಕ್ರಮಗಳು:** ಭಾರತದಲ್ಲಿ ಇಂದು ದೈನಂದಿನ ತರಗತಿಗಳಿಗೆ ದಾಖಲಾಗುವ ವಿದ್ಯಾರ್ಥಿಗಳಿಗಿಂತ ದೂರಶಿಕ್ಷಣ ಸಂಸ್ಥೆಗಳಿಗೆ ದಾಖಲಾಗುತ್ತಿರುವವರ ಸಂಖ್ಯೆಯಲ್ಲಿ ಗಣನೀಯವಾದ ಹೆಚ್ಚಳ ಕಂಡುಬರುತ್ತಿದೆ. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸೀಮಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ಅವಕಾಶವಿರುವುದರಿಂದ, ದೂರಶಿಕ್ಷಣ ವ್ಯವಸ್ಥೆಯ ಪ್ರಾಮುಖ್ಯವನ್ನು ಮನಗಂಡಿದ್ದಾರೆ. ಈ ಕಾರಣದಿಂದಾಗಿ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ದೂರಶಿಕ್ಷಣ ಕೇಂದ್ರಗಳ ಶಿಕ್ಷಣ ಗುಣಮಟ್ಟವನ್ನು ನಿಯಂತ್ರಿಸುವ ದೃಷ್ಟಿಯಿಂದ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಕಾಯಿದೆ 1985ರನ್ವಯ ದೂರಶಿಕ್ಷಣ ಸಂಸ್ಥೆ (ಆಇಅ)ಯನ್ನು ಸ್ಥಾಪಿಸಿದೆ ಹಾಗೂ ದೂರಶಿಕ್ಷಣದ ಮಾನದಂಡವನ್ನು ಕಾಪಾಡುವ ಜವಾಬ್ದಾರಿಯನ್ನು ಅದಕ್ಕೆ ನೀಡಲಾಗಿದೆ.

ಭಾರತದಲ್ಲಿ ದೂರಶಿಕ್ಷಣ– ಆನ್‌ಲೈನ್ ವ್ಯವಸ್ಥೆಯನ್ನು ಹೊಂದಿರುವ ವಿಶ್ವವಿದ್ಯಾನಿಲಯಗಳೆಂದರೆ–

1) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
2) ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯಗಳು
3) ಓಸ್ಮಾನಿಯಾ ವಿಶ್ವವಿದ್ಯಾನಿಲಯ
4) ಅಣ್ಣಾಮಲೈ ವಿಶ್ವವಿದ್ಯಾನಿಲಯ
5) ಸಿಕ್ಕಿಂ ಮಣಿಪಾಲ್ ದೂರಶಿಕ್ಷಣ ವಿಶ್ವವಿದ್ಯಾನಿಲಯ
6) ಮುಂಬಯಿ ವಿಶ್ವವಿದ್ಯಾನಿಲಯ

ಈ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು ದೂರಶಿಕ್ಷಣ ಅಥವಾ ಆನ್‌ಲೈನ್ ಶಿಕ್ಷಣ ವ್ಯವಸ್ಥೆ ಇಲ್ಲವೇ ಇವೆರಡೂ ವಿಧಾನಗಳಲ್ಲಿ ವೃತ್ತಿಪರ ಕೋರ್ಸ್‌ಗಳನ್ನು ಅಭ್ಯಾಸ ಮಾಡಬಹುದಾಗಿದೆ.

**ಆನ್‌ಲೈನ್ ಶಿಕ್ಷಣ ವ್ಯವಸ್ಥೆಯ ಉಪಯೋಗಗಳು**

- ಸಮಯ ಹಾಗೂ ವೆಚ್ಚದ ದೃಷ್ಟಿಯಿಂದ ಮಿತವ್ಯಯಕಾರಿ
- ಅವಶ್ಯಕ ಸಮಯದಲ್ಲಿ– ಅಗತ್ಯಕ್ಕೆ ತಕ್ಕಂತೆ ಈ ಶಿಕ್ಷಣ ವ್ಯವಸ್ಥೆಗೆ ದಾಖಲಾಗಬಹುದು.
- ಕಲಿಕೆಗೆ ಅಗತ್ಯವಾದ ಸಾಮಗ್ರಿಗಳನ್ನು ನೇರ ಸಂಪರ್ಕ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸುತ್ತದೆ.
- ಇದೇ ಶಿಕ್ಷಣದ ವಿಧಾನದ ಮೂಲಕ ಅಧ್ಯಯನವನ್ನು ಕೈಗೊಂಡಿರುವ ಇತರರೊಡನೆ ಪ್ರತಿಕ್ರಿಯೆಗೆ ಅವಕಾಶವನ್ನು ಕಲ್ಪಿಸುತ್ತದೆ.
- ಅತಿ ಪ್ರಮುಖವಾಗಿ ಒಂದೇ ಕಲಿಕೆಯಲ್ಲಿ ಎರಡು ಪದವಿಗಳನ್ನು ಅಧ್ಯಯನ ಮಾಡಬಹುದಾಗಿದೆ.

ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಈ ಕೆಳಗಿನ ಜಾಲತಾಣಗಳು (ವೆಬ್‌ಸೈಟ್) ಉಪಯುಕ್ತ ಮಾಹಿತಿ ನೀಡುತ್ತವೆ.

1) http://www.online-degree.ws/.
2) http://www.indiaeduinfo.com/.
3) http://allportalonline.com/.
4) http://www.about-elearning.com/.

–ಎಂ. ಗೋ.

–ಎಸ್.ಎನ್.ಕು.

## ದೂರಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ

**ದೂರಶಿಕ್ಷಣ:** ದೂರಶಿಕ್ಷಣ ಅಥವಾ ದೂರಶಿಕ್ಷಣ ಕಲಿಕೆಯೆಂದರೆ ಪರಂಪರಾಗತವಾಗಿ ಬಂದ ಶಿಕ್ಷಣ ವಿಧಾನವನ್ನು ನವೀನ ತಂತ್ರಜ್ಞಾನ ಹಾಗೂ ಸಿದ್ಧಪಡಿಸಿದ ಪಠ್ಯವಸುವಿನೊಡನೆ ಭೌತಿಕವಾಗಿ ವಿಶ್ವವಿದ್ಯಾನಿಲಯದ ಆವರಣದಿಂದ ದೂರವಿರುವ ವಿದ್ಯಾರ್ಥಿಗಳಿಗೆ ತಲುಪಿಸುವ ಶಿಕ್ಷಣ ಪದ್ಧತಿ ಎಂದು ಕರೆಯಬಹುದು. ಇದರಲ್ಲಿ ವಿದ್ಯಾರ್ಥಿಗಳು ತರಗತಿಯ ಸೀಮಿತ ಚೌಕಟ್ಟಿಗೆ ಒಳಗಾಗದೇ, ದೂರಶಿಕ್ಷಣ ವಿಶ್ವವಿದ್ಯಾನಿಲಯದ ಆವರಣದಿಂದ ದೂರವಿದ್ದು ವಿಶ್ವವಿದ್ಯಾನಿಲಯ ಒದಗಿಸುವ ಪಠ್ಯಕ್ರಮ, ಪಠ್ಯವಸ್ತು, ಸಿದ್ಧಪಾಠಗಳು, ದೃಕ್‌ಶ್ರವಣ ಸಾಧನಗಳು ಹಾಗೂ ಸಂಪರ್ಕ ತರಗತಿಗಳ ಮೂಲಕ ಶಿಕ್ಷಣವನ್ನು ಮುಂದುವರೆಸಬಹುದಾಗಿದೆ. ಈ ಶಿಕ್ಷಣ ವಿಧಾನವು ಜಗತ್ತಿನಾದ್ಯಂತ ಅತಿ ಜನಪ್ರಿಯವಾಗಿದ್ದು ಇದರಿಂದ ಬಹಳಷ್ಟು ಮಂದಿ ಉಪಯೋಗ ಹೊಂದಿದ್ದು, ಹಲವಾರು ಕ್ಷೇತ್ರದಲ್ಲಿ ಉದ್ಯೋಗ ನಿರತರಾಗಿ ಗುರಿಯನ್ನು ಸಾಧಿಸಿಕೊಳ್ಳಬಹುದಾಗಿದೆ.

ತಂತ್ರಜ್ಞಾನವು ಮುಂದುವರೆದಂತೆಲ್ಲಾ ಈ ಶಿಕ್ಷಣ ವಿಧಾನದಲ್ಲಿಯೂ ಬಹಳಷ್ಟು ಬದಲಾವಣೆಗಳಾಗಿವೆ. ಈ ಮೊದಲು ಕೇವಲ ಅಂಚೆಯ ಮೂಲಕ ಸಿದ್ಧಪಾಠಗಳನ್ನು ರವಾನಿಸುತ್ತಿದ್ದ ವಿಶ್ವವಿದ್ಯಾನಿಲಯಗಳು, ಇಂದು ತಾಂತ್ರಿಕ ವಿಧಾನದಿಂದ ತಮ್ಮದೇ ಆದ ಅಂತರ್ಜಾಲ ತಾಣಗಳನ್ನು ಹೊಂದಿದ್ದು ಇದರ ಮೂಲಕವಾಗಿಯೇ ಪಠ್ಯವಸ್ತುವನ್ನು ಒದಗಿಸಿ, ವಿದ್ಯಾರ್ಥಿಗಳಿಂದ ನಿಯೋಜಿತ ಪ್ರಬಂಧಗಳನ್ನು ಪಡೆದು, ವಾರ್ಷಿಕ ಪರೀಕ್ಷೆ (ಮೌಖಿಕ/ಲಿಖಿತ)ಗಳನ್ನು ಸಂಘಟಿಸಿ ಪದವಿಗಳನ್ನು ನೀಡುತ್ತಿವೆ. ಅದರಲ್ಲೂ ನೇರಶಿಕ್ಷಣ (Online)/ನೇರ ಸಂಪರ್ಕ ವಿಧಾನದ ಮೂಲಕ ನೀಡುತ್ತಿರುವ ಪರೀಕ್ಷಾ ಕ್ರಮಗಳಂತೂ ದೋಷರಹಿತವಾಗಿದ್ದು ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶಗಳನ್ನು ಒದಗಿಸುವಲ್ಲಿ ಸಹಾಯಕಾರಿಯಾಗಿದೆ.

**ದೂರಶಿಕ್ಷಣ ವ್ಯವಸ್ಥೆಯ ವಿಧಗಳು:** ಅಸಾಂಪ್ರದಾಯಿಕ ವಿಧಾನದಲ್ಲಿ ಶಿಕ್ಷಣವನ್ನು ಮುಂದುವರೆಸಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುವ ದೂರಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ವಿಧಗಳಿವೆ. ಪ್ರಮುಖವಾದುದೆಂದರೆ–

1) ಅಂಚೆ ಮತ್ತು ತೆರಪಿನ ಶಿಕ್ಷಣ ವ್ಯವಸ್ಥೆ
2) ಅಂತರ್ಜಾಲಾಧಾರಿತ ನೇರಸಂಪರ್ಕ ಶಿಕ್ಷಣ ವ್ಯವಸ್ಥೆ
3) ರೇಡಿಯೋ ಅಥವಾ ದೂರದರ್ಶನದ ಮೂಲಕ ನಡೆಸುವ ಟೆಲಿಕೋರ್ಸ್/ಬ್ರಾಡ್‌ಕೋರ್ಸ್
4) ಸಿಡಿರೋಮ್‌ನಲ್ಲಿ ಸಂಗ್ರಹಿಸಲಾಗಿರುವ ದತ್ತಾಂಶಾಧಾರಿತ ಗಣಕಯಂತ್ರ ಶಿಕ್ಷಣ ವ್ಯವಸ್ಥೆ
5) ಚರದೂರವಾಣಿಯಾಧಾರಿತ ಶಿಕ್ಷಣ ವ್ಯವಸ್ಥೆ.

ದೂರಶಿಕ್ಷಣ ವ್ಯವಸ್ಥೆಯು ತನ್ನ ಬೆಳವಣಿಗೆಯಲ್ಲಿ ಹಲವಾರು ತಾಂತ್ರಿಕ ವಂಶಾವಳಿಗಳ ಹಂತಗಳನ್ನು ದಾಟಿಬಂದಿದೆ. ಅವುಗಳಲ್ಲಿ ಪ್ರಮುಖವಾದುದೆಂದರೆ ಮುದ್ರಣ ತಂತ್ರಜ್ಞಾನ; ದೃಕ್‌ಶ್ರವಣ ಸಂಪರ್ಕ ತಂತ್ರಜ್ಞಾನ; ಟೆಲಿಕಾನ್ಫರೆನ್ಸಿಂಗ್ ತಂತ್ರಜ್ಞಾನ; ಗಣಕಯಂತ್ರಾಧಾರಿತ ಡಿಜಿಟಲ್ ತಂತ್ರಜ್ಞಾನ; ನೇರ ಸಂಪರ್ಕ ತಂತ್ರಜ್ಞಾನ ಅಂತರ್ಜಾಲಾಧಾರಿತ ತಂತ್ರಜ್ಞಾನ ಹಾಗೂ ಇವುಗಳನ್ನು ಮೇಳೈಸಿದ ಬಹುಮಾಧ್ಯಮ ತಂತ್ರಜ್ಞಾನ. ಭಾರತದಲ್ಲಿ ಎಫ್.ಎಂ. ರೇಡಿಯೋ ತಂತ್ರಜ್ಞಾನವು ಅತ್ಯಂತ ಜನಪ್ರಿಯವಾಗಿದ್ದು, ಈ ತಾಂತ್ರಿಕತೆಯ ಮೂಲಕ ಹಲವಾರು ದೂರಶಿಕ್ಷಣ

Digitised by Bharatavani, CIIL

ಹಾಗೂ ಮುಕ್ತ ವಿಶ್ವವಿದ್ಯಾನಿಲಯಗಳು ತಮ್ಮ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ಯಶಸ್ವಿಯಾಗಿವೆ. ಈ ತಂತ್ರಜ್ಞಾನದ ಮೂಲಕ ವಿಶೇಷವಾಗಿ ಶಿಕ್ಷಕ ತರಬೇತಿ, ಗ್ರಾಮಾಭಿವೃದ್ಧಿ ಹಾಗೂ ಕೃಷಿ ತರಬೇತಿ, ವಿಜ್ಞಾನ ಶಿಕ್ಷಣ, ಕ್ರಿಯಾತ್ಮಕ ಬರವಣಿಗೆ, ಸಮೂಹ ಸಂವಹನ, ಭಾಷಾ ಸಾಹಿತ್ಯ ಇವೇ ಮೊದಲಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸಾರ ಮಾಡಲಾಗುತ್ತದೆ.

- **ಮಾಹಿತಿ ತಂತ್ರಜ್ಞಾನದ ನವೀನ ಸಾಧನಗಳು:** ದೂರಶಿಕ್ಷಣ ಕ್ಷೇತ್ರದಲ್ಲಿ ಈ ಕೆಳಕಂಡ ಮಾಹಿತಿ ತಂತ್ರಜ್ಞಾನ ಸಾಧನಗಳನ್ನು ಬಳಸಿಕೊಂಡು ಪರಿಣಾಮಕಾರಿಯಾದ ಸಂಪರ್ಕ ವ್ಯವಸ್ಥೆಯ ಮೂಲಕ ಶಿಕ್ಷಣಾರ್ಥಿಗಳಿಗೆ ಅಗತ್ಯವಾದ ಬೋಧನಾ ಸಾಮಗ್ರಿಗಳು ಹಾಗೂ ವಿಶೇಷ ಉಪನ್ಯಾಸ ತರಗತಿಗಳನ್ನು ನೀಡಬಹುದಾಗಿದೆ. ಅವುಗಳೆಂದರೆ; ಬ್ಲಾಗ್‌ಗಳು; ಫೋರಮ್ಸ್; ಕಮ್ಯೂನಿಟೀಸ್; ವೆಬ್‌ಕಾಸ್ಟ್; ಪಾಡ್‌ಕಾಸ್ಟ್' ಯೂಸರ್ ಗ್ರೂಪ್; ಗೂಗಲ್ (ಪಿಕಾಸ್ಸಾ); ಯಾಹೂ (ಫ್ಲಿರ್ಕ್); W3ಸ್ಕೂಲ್ಸ್.ಕಾಮ್; ವೆಬೋಪೀಡಿಯಾ, ಚಾಟ್; ಇ–ಮೇಲ್' ಇನ್‌ಸ್ಟೆಂಟ್ ಮೆಸ್ಸೇಜಿಂಗ್; ಬುಲೆಟಿನ್ ಬೋರ್ಡ್, VOIP ಡಾಟಾ ಕಾನ್ಫರೆನ್ಸಿಂಗ್ ಶೌಟ್‌ಬಾಕ್ಸ್, ಇಮೇಜ್ ಬೋರ್ಡ್, ಯೂಟ್ಯೂಬ್; ಸ್ಲೈಡ್ ಷೇರ್ ಇತ್ಯಾದಿ.

- **ಬ್ಲಾಗ್‌ಗಳು (Blogs):** ಇವು ಒಂದು ಬಗೆಯ ಅಂತರ್ತಾಣವಾಗಿದ್ದು, ಇದನ್ನು ಸಾಮಾನ್ಯವಾಗಿ ವ್ಯಕ್ತಿಗಳು ಇಲ್ಲವೇ ಸಂಸ್ಥೆಗಳು ವೈಯಕ್ತಿಕ ತಾಣವಾಗಿ ನಿರ್ವಹಿಸುವುದರ ಜೊತೆಗೆ, ಇವುಗಳಲ್ಲಿ ತಮ್ಮ ವೈಯಕ್ತಿಕ ಅಭಿಪ್ರಾಯಗಳು, ವಿವರಣೆಗಳು, ಘಟನೆಗಳ ಸುತ್ತ ಹೆಣೆದ ವಿಷಯಗಳು ಹಾಗೂ ಇವುಗಳಿಗೆ ಸಂಬಂಧಿಸಿದಂತೆ ಛಾಯಾಚಿತ್ರಗಳು ಹಾಗೂ ವೀಡಿಯೋ ತುಣುಕುಗಳನ್ನು ಅಳವಡಿಸುತ್ತಾರೆ. ಅಲ್ಲದೇ ಇದರಲ್ಲಿ ಪಠ್ಯವಿವರಣೆಗಳೊಡನೆ ಇದೇ ರೀತಿಯ ಮಾಹಿತಿಯನ್ನು ನೀಡುವ ಆಧಾರಿತ/ಪೂರಕ ಅಂತರ್ತಾಣಗಳಿಗೂ ಇದು ಸಂಪರ್ಕವನ್ನೊದಗಿಸುವ ಕಾರ್ಯವನ್ನು ಕೈಗೊಳ್ಳುತ್ತದೆ.

- **ಫೋರಮ್ (Forum):** ಇದು ಅಂತರ್ಜಾಲಾಧಾರಿತ ಸಂಪರ್ಕ ತಾಣವಾಗಿದ್ದು, ಇದರಲ್ಲಿ ಬಳಕೆದಾರರು ತಮಗೆ ಆಸಕ್ತಿಯಿರುವ ವಿಷಯದ ಬಗ್ಗೆ ಇತರರೊಡನೆ ಸಂದೇಶವನ್ನು ರವಾನಿಸುವ ಮೂಲಕ ಸಂಭಾಷಿಸಬಹುದಾಗಿದೆ.

- **ಕಮ್ಯೂನಿಟೀಸ್ (Communities):** ಇವು ಸಹ ಅಂತರ್ಜಾಲಾಧಾರಿತ ಸಾಮಾಜಿಕ ತಾಣವಾಗಿದ್ದು, ಇದನ್ನು ಕೆಲವು ಆಸಕ್ತ ಗುಂಪುಗಳನ್ನು ಹಾಗೂ ಒಂದೇ ಮನೋಧರ್ಮವಿರುವ ವ್ಯಕ್ತಿಗಳನ್ನು ಉದ್ದೇಶಿಸಿ ರಚಿಸಲ್ಪಟ್ಟಿರುತ್ತದೆ. ಕೃತಿಯನ್ನು ಕುರಿತ ಚರ್ಚೆ, ಪುಸ್ತಕ ವಿಮರ್ಶೆಯಂತಹ ಸಂದರ್ಭಗಳಲ್ಲಿ ಇಂತಹ ತಾಣಗಳ ಮೂಲಕ ಓದುಗರು ಪರಸ್ಪರ ಪ್ರತಿಕ್ರಿಯಿಸಲು ಅವಕಾಶವನ್ನು ಕಲ್ಪಿಸಬಹುದಾಗಿದೆ.

- **ವೆಬ್‌ಕಾಸ್ಟ್ ಮತ್ತು ಪಾಡ್‌ಕಾಸ್ಟ್ (WebCost & PodCost):** ಇವು ಒಂದು ಬಗೆಯ ಮಾಹಿತಿ ತಂತ್ರಜ್ಞಾನ ಸಾಧನಗಳಾಗಿದ್ದು, ಇವುಗಳ ಮೂಲಕ ಸಂಪರ್ಕ ಮಾಧ್ಯಮದ ಡಿಜಿಟಲ್ ಕಡತಗಳನ್ನು ಹಂಚಿಕೆ ಮಾಡಬಹುದಾಗಿದೆ. ಇದರಲ್ಲಿ ದೃಶ್ಯ ಹಾಗೂ ಶ್ರವಣ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಸ್ಥಳದಿಂದ (Creator end) ಮತ್ತೊಂದು ಸ್ಥಳಕ್ಕೆ (Receiving End/reception) ವರ್ಗಾಯಿಸಬಹುದಾಗಿದೆ.

- **ಯೂಸರ್ ಗ್ರೂಪ್ (User Group):** ಇದು ಗಣಕಯಂತ್ರ ತಂತ್ರಜ್ಞಾನ ಹಾಗೂ ಬಹುಮಾಧ್ಯಮ ತಂತ್ರಜ್ಞಾನವನ್ನು ಅರಿತಿರುವ ಬಳಕೆದಾರರ ಗುಂಪಾಗಿದ್ದು, ಈ ಗುಂಪಿನ ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿರುವ ತಮ್ಮದೇ ಆಸಕ್ತಿದಾಯಕ ವಿಷಯ ಕ್ಷೇತ್ರದ ಬಗ್ಗೆ ಆಸಕ್ತಿಯುಳ್ಳವರೊಡನೆ ಪರಸ್ಪರ ಸಂಪರ್ಕಿಸುವ ಮೂಲಕ ತಮ್ಮ ಜ್ಞಾನವನ್ನು ಹಂಚಿಕೊಳ್ಳಬಹುದಾಗಿದೆ.

- **ಪಿಕಾಸ್ಸ (ಗೂಗಲ್):** ಇದು ಬಿಂಬ ಸಂಘಟಕವಾಗಿದ್ದು, ಇದನ್ನು ಬಳಸಿ ಡಿಜಿಟಲ್ ಛಾಯಾಚಿತ್ರಗಳನ್ನು ಪರಿಣಾಮಕಾರಿಯಾಗಿ ಸಂಕಲನ ಮಾಡಬಹುದಾಗಿದೆ. ಅಂದರೆ ಇದು ಸಂಯುಕ್ತ ಛಾಯಾಚಿತ್ರ ಹಂಚಿಕಾ ಅಂತರ್ಜಾಲ ತಾಣವಾಗಿದ್ದು, ಇದು ಗೂಗಲ್ ಸಂಸ್ಥೆಯ ಒಡೆತನದಲ್ಲಿದೆ ಹಾಗೂ ಇದನ್ನು ಉಚಿತವಾಗಿ ಬಳಸಬಹುದಾಗಿದೆ.

- **ಫ್ಲಿಕರ್ (ಯಾಹೂ):** ಇದು ದೃಶ್ಯ ಹಾಗೂ ಶ್ರವಣ ಮಾಹಿತಿಯನ್ನು ಶೇಖರಿಸಿರುವ ಅಂತರ್ಜಾಲ ತಾಣವಾಗಿದ್ದು, ಇದರ ಮೂಲಕ ಬಳಕೆದಾರರು ಪರಸ್ಪರ ಛಾಯಾಚಿತ್ರಗಳು ಹಾಗೂ ವೀಡಿಯೋ ತುಣುಕುಗಳು, ಪಠ್ಯ ಮಾಹಿತಿ, ಇತ್ಯಾದಿಗಳನ್ನು ವಿನಿಮಯ ಮಾಡಿಕೊಳ್ಳುವುದಲ್ಲದೇ, ಛಾಯಾಚಿತ್ರ ಸಂಗ್ರಹತಾಣವಾಗಿಯೂ ಇದನ್ನು ಬಳಸಬಹುದಾಗಿದೆ.

- **W3 ಸ್ಕೂಲ್ಸ್.ಕಾಮ್ (W3 Schools.Com):** ಇದು ಅಂತರ್ಜಾಲವನ್ನು ಅಭಿವೃದ್ಧಿಪಡಿಸುವ ಹಾಗೂ ಮಾರ್ಪಡಿಸುವ ಪೋರ್ಟಲ್ ಆಗಿದ್ದು, ಇದರ ಮೂಲಕ HTML, XML, CSS, Java Script, PHP & SQL ಇವೇ ಮೊದಲಾದ ಜಾಲವನ್ನು ಅಭಿವೃದ್ಧಿಪಡಿಸುವ ಭಾಷಾ ವಿಷಯಗಳು ಹಾಗೂ ತಾಂತ್ರಿಕಾಂಶಗಳನ್ನು ಕುರಿತು ಉಪನ್ಯಾಸ ಕಾರ್ಯಕ್ರಮಗಳು ಹಾಗೂ ಪರಾಮರ್ಶೆಗಳನ್ನು ಪಡೆಯಬಹುದಾಗಿದೆ.

- **ವೆಬೋಪೀಡಿಯೊ (Webopedia):** ಇದು ಜಾಲದಲ್ಲಿ ದೊರೆಯುವ ಪರಾಮರ್ಶನ ತಾಣವಾಗಿದ್ದು, ಇದರಲ್ಲಿ ವಿಶ್ವಕೋಶ ಹಾಗೂ ಪದಕೋಶದ ಮಾದರಿಯಲ್ಲಿ ಜೋಡಿಸಿದ ವಿವರಣಾತ್ಮಕವಾದ ಲೇಖನಗಳು, ಮಾಹಿತಿಗಳು, ಛಾಯಾಚಿತ್ರಗಳು, ನಕ್ಷೆಗಳು, ಸಂಗೀತ ಇವೇ ಮೊದಲಾದ ವಿಷಯಗಳನ್ನು ಅರಿಯಬಹುದಾಗಿದ್ದು, ಇದು ಬಳಕೆದಾರರಿಗೆ ಉಚಿತವಾಗಿ ಮಾಹಿತಿಯನ್ನು ಒದಗಿಸುವ ಅತ್ಯುಪಯುಕ್ತ ತಾಣವಾಗಿದೆ.

- **ಚಾಟ್ (Chat):** ನೇರ ಸಂಭಾಷಣಾ ಮಾಧ್ಯಮವೂ ಅಂತರ್ಜಾಲ ವ್ಯವಸ್ಥೆಯನ್ನು ಬಳಸಿಕೊಂಡು ನಿರ್ವಹಿಸುವ ಸೌಲಭ್ಯವಾಗಿದೆ. ಇದರಲ್ಲಿ ಸಂಪರ್ಕದಲ್ಲಿರುವ ವ್ಯಕ್ತಿಗಳಿಬ್ಬರೂ ನೇರವಾಗಿ ಸಂಭಾಷಿಸಬಹುದಾಗಿದೆ. ಇದನ್ನು ಸಾಂದರ್ಭಿಕ ಸಂದೇಶವಾಹಕಗಳು, ಅಂತರ್ಜಾಲ ಪ್ರಸಾರ ಸಂಭಾಷಣೆ ಹಾಗೂ ಸಂಭಾಷಕ ಇವೇ ಮೊದಲಾದ ಸಾಧನಗಳ ಮೂಲಕ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡಬಹುದಾಗಿದೆ.

- **ಇ–ಮೇಲ್ (E-mail):** ಇದು ಡಿಜಿಟಲ್ ಸಂದೇಶಗಳನ್ನು ಪ್ರಸಾರಮಾಡುವ ವಿಧಾನವಾಗಿದ್ದು, ಇದಕ್ಕಾಗಿ ಅಂತರ್ಜಾಲ ಅಥವಾ ಗಣಕಯಂತ್ರ ಜಾಲಗಳನ್ನು ಬಳಸಿಕೊಳ್ಳಲಾಗುತ್ತದೆ. ಹಿಂದಿನ ದಶಕಗಳಲ್ಲಿ ವಿದ್ಯುನ್ಮಾನ ಅಂಚೆಯನ್ನು ಬಳಸುವಾಗ ಮಾಹಿತಿಯನ್ನು ಕಳುಹಿಸುವ ಹಾಗೂ ಸ್ವೀಕರಿಸುವ ಎರಡು ಗಣಕಯಂತ್ರಗಳೂ ನೇರಸಂಪರ್ಕಕ್ಕೆ ಒಳಗಾಗಬೇಕಾಗುವ ಪರಿಸ್ಥಿತಿಯಿತ್ತು. ಈಗ ನುರಿತ ತಂತ್ರಜ್ಞಾನದ ಬಳಕೆಯಿಂದ ಮಾಹಿತಿ/ಸಂದೇಶವನ್ನು ಸಂಗ್ರಹಿಸಿ–ಮುಂದೆ ಕಳುಹಿಸುವ (Store & Forward Model) ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತದೆ. ವಿದ್ಯುನ್ಮಾನ ಅಂಚೆಯಲ್ಲಿ ಪಠ್ಯ, ದೃಶ್ಯ ಹಾಗೂ ಶ್ರವಣ ಮಾಹಿತಿಗಳನ್ನು ಕಳುಹಿಸಬಹುದಾಗಿದೆ.

Digitised by Bharatavani, CIIL

- **ಇನ್‌ಸ್ಟೆಂಟ್ ಮೆಸ್ಸೇಜಿಂಗ್ (Instant Messaging):** ಇದು ಒಂದು ವಿಶಿಷ್ಟ ಬಗೆಯ ಸಂಪರ್ಕ ವ್ಯವಸ್ಥೆಯಾಗಿದ್ದು, ಇದು ಇಬ್ಬರು ಅಥವಾ ಹೆಚ್ಚಿನ ಸಂಖ್ಯೆಯ ಬಳಕೆದಾರರ ನಡುವೆ ವಾಸ್ತವ–ಸಮಯಾಧಾರಿತ ಸಂಪರ್ಕವನ್ನು ಏರ್ಪಡಿಸುತ್ತದೆ. ಅಂತರ್ಜಾಲದ ನೆರವಿನಿಂದ ಸಂಪರ್ಕಕ್ಕೆ ಬರುವ ಜನರಿಗೆ ಗಣಕಯಂತ್ರದ ಮೂಲಕ ಪರಸ್ಪರ ಮಾಹಿತಿಗಳನ್ನು ಹಂಚಿಕೊಳ್ಳಲು/ವಿನಿಮಯ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಶೀಘ್ರ ಸಂದೇಶ ವಿನಿಮಯ ವಿಧಾನವು ಅತ್ಯಂತ ಜನಪ್ರಿಯವಾಗಿದ್ದು, ಇದರ ಬಳಸಲು ಸುಲಭವಾದ/ಸರಳವಾದ, ಶೀಘ್ರವಾಗಿ ಮಾಹಿತಿಯನ್ನು ತಲುಪಿಸುವ ಗುಣದಿಂದಾಗಿ ಜಗತ್ತಿನ ಅಸಂಖ್ಯಾತ ಜನರು ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಲು, ಮುಖಾಮುಖಿ ಭೇಟಿಯನ್ನು ಏರ್ಪಡಿಸಿಕೊಳ್ಳಲು ಹಾಗೂ ಸ್ನೇಹಿತರು ಮತ್ತು ಸಹೋದ್ಯೋಗಿಗಳೊಡನೆ ಒಗ್ಗೂಡಿ ವಿಚಾರಗೋಷ್ಠಿ ಹಾಗೂ ವಿಷಯಾಧಾರಿತ ಸಮ್ಮೇಳನಗಳನ್ನು ಆಯೋಜಿಸಿಕೊಳ್ಳಲು ಇದನ್ನು ಬಳಸುತ್ತಿದ್ದಾರೆ.

- **ಬುಲೆಟಿನ್ ಬೋರ್ಡ್ (Bulletin Board):** ಇದು ಸಾರ್ವಜನಿಕವಾಗಿ ಬಹಳಷ್ಟು ಜನಪ್ರಿಯತೆ ಪಡೆದಿದ್ದು, ಇದರಲ್ಲಿ ಸಾರ್ವಜನಿಕರು ತಾವು ಕೊಳ್ಳಲು ಬಯಸುವ ಅಥವಾ ವಿಕ್ರಯಿಸಬಯಸುವ ವಸ್ತುಗಳ ಜಾಹೀರಾತನ್ನು ನೀಡಬಹುದಾಗಿದ್ದು, ಬಳಕೆದಾರರು ತಾವು ತಿಳಿದಿರುವ ಮಾಹಿತಿಯನ್ನು ಇತರರಿಗೆ ತಿಳಿಸಲು ಸಾಧ್ಯವಾಗುತ್ತದೆ.

- **ವಾಯ್ಸ್ ಓವರ್ ಇಂಟರ್‌ನೆಟ್ ಪ್ರೋಟೋಕಾಲ್ (Voice Over Internet Protocol VOIP):** ಇದು ಬಹುಮಾಧ್ಯಮ ತಂತ್ರಜ್ಞಾನಗಳನ್ನು ಬಳಸಿಕೊಂಡು ಧ್ವನಿ ಸಂಪರ್ಕ ಮಾಹಿತಿಗಳನ್ನು ಕಳುಹಿಸುವ ವಿಶೇಷ ಸೌಲಭ್ಯವಾಗಿದೆ. ಇದರಲ್ಲಿ ಸಂಪರ್ಕ ತಂತ್ರಜ್ಞಾನ ಹಾಗೂ ಪ್ರಸಾರ ತಂತ್ರಜ್ಞಾನಗಳೆರಡನ್ನು ಬಳಸಿಕೊಂಡು ಮಾಹಿತಿಯನ್ನು ಪರಸ್ಪರ ವಿನಿಮಯಿಸಿಕೊಳ್ಳಬಹುದಾಗಿದೆ.

- **ಡಾಟಾ ಕಾನ್ಫರೆನ್ಸಿಂಗ್ (Data Conferencing):** ಇದು ಇಬ್ಬರು ಅಥವಾ ಹೆಚ್ಚಿನ ಬಳಕೆದಾರರು ವಾಸ್ತವ ಸಮಯದಲ್ಲಿ, ಅಂದರೆ ತಮಗೆ ಅವಶ್ಯಕವಾದ ಸಂದರ್ಭದಲ್ಲಿ ಜಾಲದ ಮೂಲಕ ನೇರ ಸಂಪರ್ಕಕ್ಕೊಳಪಟ್ಟು ಗಣಕ ದತ್ತಾಂಶಗಳನ್ನು ವಿನಿಮಯಮಾಡಿಕೊಳ್ಳುವ ಸಂಪರ್ಕ ವಿಧಾನವಾಗಿದೆ. ಇದರಿಂದ ಬಳಕೆದಾರರು ಗಣಕಯಂತ್ರಗಳ ನಡುವೆ ಪರಸ್ಪರ ನಿಯಂತ್ರಣವನ್ನು ಸಾಧಿಸಬಹುದಾಗಿದೆ.

- **ಬಿಂಬ ಫಲಕ (Image Board):** ಇದು ಅಂತರ್ಜಾಲದ ಮೂಲಕ ಬಿಂಬಗಳನ್ನು ಪ್ರದರ್ಶಿಸುವ ಇಲ್ಲವೇ ಪ್ರಚಾರಪಡಿಸುವ ವ್ಯವಸ್ಥೆಯಾಗಿದ್ದು, ಇದರ ಮೂಲಕ ಜಾಹೀರಾತನ್ನು ನೀಡಿ ಬಳಕೆದಾರರಿಗೆ ಅತ್ಯುಪಯುಕ್ತ ಮಾಹಿತಿಯನ್ನು ನೀಡಬಹುದಾಗಿದೆ.

- **ಯೂಟ್ಯೂಬ್ (Youtube):** ಇದು ಸಾಮಾಜಿಕ ಸೇವಾ ಜಾಲ ವಿಧಾನವಾಗಿದ್ದು, ಇದರ ಮೂಲಕ ಬಳಕೆದಾರರು ತಾವು ಸಂಗ್ರಹಿಸಿದ ವೀಡಿಯೋ ತುಣುಕುಗಳು ಹಾಗೂ ಛಾಯಾಚಿತ್ರಗಳನ್ನು ಅಂತರ್ಜಾಲಕ್ಕೆ ಸೇರಿಸಿ, ಅದನ್ನು ಇತರರು ವೀಕ್ಷಿಸಲು ಹಾಗೂ ತಮ್ಮ ಅಭಿಪ್ರಾಯವನ್ನು ದಾಖಲಿಸಲು ಅನುಕೂಲಕರವಾಗಿದೆ.

- **ಸ್ಲೈಡ್ ಷೇರ್ (Slide Share):** ಇದು ನೇರ ಮಾಹಿತಿ ಸಂಗ್ರಹಣಾ ಸೇವೆಯಾಗಿದ್ದು, ಇದರ ಮೂಲಕ ಬಳಕೆದಾರರು ಪವರ್ ಪಾಯಿಂಟ್, ಪಿಡಿಎಫ್, ಓಪನ್ ಆಫೀಸ್ ಮಾದರಿಯಲ್ಲಿರುವ ಮಾಹಿತಿಗಳನ್ನು ಅಂತರ್ಜಾಲಕ್ಕೆ ನೇರವಾಗಿ ಸೇರಿಸಬಹುದಾಗಿದೆ ಹಾಗೂ ಮಾರ್ಪಡಿಸಬಹುದಾಗಿದೆ.

- **ವೆಬ್ ಕಾನ್ಫರೆನ್ಸಿಂಗ್ (Web Conferencing):** ಈ ಜಾಲಸಮ್ಮೇಳನ ತಾಣದ ಮೂಲಕ ಅಂತರ್ಜಾಲವನ್ನು ಬಳಸಿಕೊಂಡು ನೇರ ಸಭೆಗಳು, ತರಬೇತಿಗಳು ಹಾಗೂ ಲೇಖನ ಪ್ರಸ್ತುತಿಗಳನ್ನು ಮಾಡಬಹುದಾಗಿದೆ. ಈ ತಂತ್ರಜ್ಞಾನ ಸಾಧನದ ಮೂಲಕ ಬಳಕೆದಾರರು ಅಂತರ್ಜಾಲದ ಸಹಾಯದಿಂದ ಪರಸ್ಪರ ಸಂಪರ್ಕಿಸಬಹುದಾಗಿದೆ.

- **ವೀಡಿಯೋ ಕಾನ್ಫರೆನ್ಸಿಂಗ್ (Video Conferencing):** ಇದು ಅನ್ಯೋನ್ಯ ಕ್ರಿಯಾತ್ಮಕವಾದ ಟೆಲಿಸಂಪರ್ಕ ತಂತ್ರಜ್ಞಾನಗಳ ಮೂಲಕ ವೀಡಿಯೋ ಹಾಗೂ ಆಡಿಯೋ ಪ್ರಸಾರ ತಾಂತ್ರಿಕತೆಯನ್ನು ಒದಗಿಸುವ ವಿಶೇಷ ಸೌಲಭ್ಯವಾಗಿದೆ.

**ದೂರಶಿಕ್ಷಣ ವ್ಯವಸ್ಥೆಯ ಮೇಲೆ ಮಾಹಿತಿ ತಂತ್ರಜ್ಞಾನದ ಪರಿಣಾಮ**

- ಇದು ನಿರಂತರ ಚಲನಶೀಲ ಗುಣವನ್ನು ಹೊಂದಿದೆ
- ಇದು ಅಸಾಂಪ್ರದಾಯಿಕ ವ್ಯವಸ್ಥೆಯಾಗಿದೆ
- ಇದು ಬಳಕೆದಾರ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದೆ
- ಇದು ಸಮಯಾಧಾರಿತ ಚೌಕಟ್ಟಿನಲ್ಲಿ ಒಳಪಡದ ವಿಶಾಲ ವ್ಯವಸ್ಥೆಯೆನಿಸಿದೆ
- ಇದು ಸಂದರ್ಭಾನುಸಾರವಾಗಿ ಮಾರ್ಪಡಿಸಿಕೊಳ್ಳಬಹುದಾದ ಸಾಧನಗಳನ್ನು ಹೊಂದಿದೆ
- ಇದು ಪ್ರಗತಿದಾಯಕವಾದ ಫಲಿತಾಂಶಗಳನ್ನು ನೀಡುತ್ತದೆ.
- ಇದರಲ್ಲಿ ಎಲ್ಲ ಬಳಕೆದಾರರೂ ಸಮಾನ ಸಹಭಾಗಿತ್ವವನ್ನು ಹೊಂದಬಹುದಾಗಿದೆ.

**ದೂರಶಿಕ್ಷಣ ವ್ಯವಸ್ಥೆಯಲ್ಲಿ ಮಾಹಿತಿ ತಂತ್ರಜ್ಞಾನದ ಅನುಕೂಲತೆಗಳು**

- ಇದರ ಮೂಲಕ ವೈಜ್ಞಾನಿಕ, ಆರ್ಥಿಕ, ತಾಂತ್ರಿಕ, ಮಾಹಿತಿ ಹಾಗೂ ಬಹು ಸಂಸ್ಕೃತಿ ಕಲಿಕೆ ಹಾಗೂ ಜಾಗತಿಕ ಜಾಗೃತಿಯನ್ನುಂಟುಮಾಡಬಹುದಾಗಿದೆ.
- ಇದು ಸೃಜನಾತ್ಮಕ ಚಿಂತನೆಗೆ ಆಸ್ಪದವನ್ನೀಯುತ್ತದೆ.
- ಇದು ನಾಯಕತ್ವ, ಸಹಭಾಗಿತ್ವ ಹಾಗೂ ಕೌಶಲ್ಯಯುತವಾದ ಪರಿಣಾಮಕಾರೀ ಸಂವಹನಕ್ಕೆ ಅನುವುಮಾಡಿಕೊಡುತ್ತದೆ.
- ಇದು ವೈಯಕ್ತಿಕ, ಸಾಮಾಜಿಕ ಹಾಗೂ ನಾಗರಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ.
- ಸಮರ್ಥ ಯೋಜನೆ ಹಾಗೂ ಫಲಿತಾಂಶಗಳ ಮೂಲಕ ಹೆಚ್ಚಿನ ಉತ್ಪಾದಕತೆಯನ್ನು ಪಡೆಯಲು ಸಹಕಾರಿಯಾಗುತ್ತದೆ.
- ಇದು ಮಿಥ್ಯಾವಾಸ್ತವ (Virtual reality) ತಂತ್ರಜ್ಞಾನವನ್ನು ಉಪಯೋಗಿಸಿ ಪರಿಣಾಮಕಾರಿಯಾದ ಹಾಗೂ ಉತ್ತಮ ಗುಣಮಟ್ಟದ ಫಲಿತಾಂಶಗಳನ್ನು ಹೊಂದಲು ಅವಕಾಶವನ್ನೀಯುತ್ತದೆ.

ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ತಾವು ವಿದ್ಯಾರ್ಥಿಗಳಿಗೆ ವಿವರಿಸಬಯಸುವ ಪಠ್ಯವಿಷಯಗಳನ್ನು ಮೊದಲಿಗೆ ಕಪ್ಪುಹಲಗೆಯ ಮೇಲೆ ಬರೆಯುವ ಮೂಲಕ ಪರಿಣಾಮಕಾರಿಯಾಗಿ ವಿವರಿಸುತ್ತಿದ್ದರು. ಹಾಗೆಯೇ ವಿದ್ಯಾರ್ಥಿಗಳಿಗೂ ಪಠ್ಯಪುಸ್ತಕವಲ್ಲದೇ,

Digitised by Bharatavani, CIIL

ಆ ವಿಷಯವನ್ನು ವಿವರಿಸುವ ಇತರ ಸಾಂದರ್ಭಿಕ ಸೇವೆಗಳು ಇಲ್ಲವೇ ಪರಾಮರ್ಶನ ಗ್ರಂಥಗಳ ಲಭ್ಯತೆಯಿಲ್ಲದಿದ್ದುದರಿಂದ ಕೇವಲ ಬೋಧನೆಯ ವಿಧಾನದ ಮೇಲೆಯೇ ಅವಲಂಬಿತರಾಗಿದ್ದರು. ಹಾಗಾಗಿ, ವಿದ್ಯಾರ್ಥಿ ಹಾಗೂ ಶಿಕ್ಷಕ ಸಮುದಾಯವರೆಡೂ ಕೇವಲ ಪಠ್ಯಪುಸ್ತಕ ಹಾಗೂ ಅದನ್ನಾಧರಿಸಿದ ಟಿಪ್ಪಣಿಗಳನ್ನು ಮೂಲಮಾಹಿತಿ ಸಂಪನ್ಮೂಲಗಳೆಂದು ಪರಿಗಣಿಸಲ್ಪಡುತ್ತಿದ್ದವು. ಮುಂದಿನ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನದ ಆವಿಷ್ಕಾರವಾದಂತೆಲ್ಲಾ ಶಿಕ್ಷಣ ಕ್ಷೇತ್ರದಲ್ಲಿ ಅದರ ಬಳಕೆಯಿಂದಾಗಿ ಮಾಹಿತಿ ತಂತ್ರಜ್ಞಾನಗಳ ಸಾಧನಗಳು ಹಾಗೂ ಹೊಸ ಬೋಧನಾ ಸಾಮಗ್ರಿ/ವಿಧಾನಗಳಲ್ಲಿ ನವೀನ ಕ್ರಾಂತಿಯುಂಟಾಯಿತು. ಹಾಗೂ ಪರಿಣಾಮಕಾರಿ ಬೋಧನೆಗೆ ಇವುಗಳ ಬಳಕೆ ಅನಿವಾರ್ಯವಾಯಿತು. ಇದರಿಂದ ಶಿಕ್ಷಣ ಕ್ಷೇತ್ರವು ಅಂತರ್ಜಾಲ ವ್ಯವಸ್ಥೆ ಹಾಗೂ ಚರದೂರವಾಣಿ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗಿದೆ. ಹಾಗಾಗಿ, ಈ ವ್ಯವಸ್ಥೆಗೆ ಹೊರತಲ್ಲದ ದೂರಶಿಕ್ಷಣ ವ್ಯವಸ್ಥೆಯು ಮಾಹಿತಿ ತಂತ್ರಜ್ಞಾನದ ಸಮರ್ಥ ಬಳಕೆಯ ಮೂಲಕ ಅಸಾಂಪ್ರದಾಯಿಕ ಶಿಕ್ಷಣ ವಲಯದಲ್ಲಿ ಸಂಚಲನವನ್ನುಂಟು ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

–ಎಂ.ಗೋ.

–ಎಸ್.ಎನ್.ಕು

## ದೂರಶಿಕ್ಷಣದಲ್ಲಿ ಶೈಕ್ಷಣಿಕ ಸಮಾಲೋಚನೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು 1996ರಲ್ಲಿ ಸ್ಥಾಪಿಸಲಾಯಿತು. ದೇಶದ ಮುಕ್ತ ಶಿಕ್ಷಣ ಸಂಸ್ಥೆಗಳಲ್ಲಿ ಇದೊಂದು ಹೆಸರಾಂತ ಸಂಸ್ಥೆಯಾಗಿದೆ. ದೇಶದ ಶೈಕ್ಷಣಿಕ ಬೇಡಿಕೆಗಳು, ಅದರಲ್ಲೂ ಕರ್ನಾಟಕ ರಾಜ್ಯದ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಆ ಅವಶ್ಯಕತೆಗಳಿಗನುಗುಣವಾಗಿ ರೂಪಿಸಲಾಗಿದೆ ಎನ್ನುವುದು ಸ್ಪಷ್ಟವಾಗಿ ತಿಳಿಯುತ್ತದೆ. ಇಂತಹ ವಿಶ್ವವಿದ್ಯಾನಿಲಯಗಳು ಅಥವಾ ದೂರ ಶಿಕ್ಷಣ ಸಂಸ್ಥೆಗಳು ಶಿಕ್ಷಣವನ್ನು ಮುಂದುವರೆಸಲಾಗದವರಿಗೆ ಮನೆಯಲ್ಲೇ ಇದ್ದುಕೊಂಡು ಅಥವಾ ಯಾವುದಾದರೂ ಕೆಲಸ ಮಾಡಿಕೊಂಡು ಬಿಡುವಿನ ವೇಳೆಯಲ್ಲಿ ಕಲಿಯಲು ಸಹಾಯ ಮಾಡುತ್ತವೆ. ಇವುಗಳಲ್ಲಿ ಅನೇಕ ವಿಧವಾದ ಕೋರ್ಸ್‌ಗಳು ಇರುವುದರಿಂದ ಅನೇಕ ವಿದ್ಯಾರ್ಥಿಗಳು ತಮಗೆ ಇಷ್ಟವಾದ ಕೋರ್ಸನ್ನು ಆಯ್ಕೆಮಾಡಿಕೊಂಡು ಕಲಿಯಬಹುದು. ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ ಸಮಾಲೋಚನಾ ಸಮಯದಲ್ಲಿ ಮಾತ್ರ ಶಿಕ್ಷಕರನ್ನು ಭೇಟಿ ಮಾಡಲು ಸಾಧ್ಯ. ಆದ್ದರಿಂದ ಶೈಕ್ಷಣಿಕ ಸಮಾಲೋಚನೆಯು ದೂರ ಶಿಕ್ಷಣದ ಒಂದು ಮುಖ್ಯವಾದ ಅಂಶವಾಗಿದೆ.

ದೂರಶಿಕ್ಷಣದಲ್ಲಿ ವಿದ್ಯಾರ್ಥಿಗಳು ಅಧ್ಯಾಪಕರೊಂದಿಗೆ ದೀರ್ಘಕಾಲ ಸಂಪರ್ಕವನ್ನಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಅಧ್ಯಾಪಕರನ್ನು ಸಂಪರ್ಕಿಸಿ ಅವರೊಂದಿಗೆ ಸಮಾಲೋಚನೆ ಮಾಡಿ ತಮ್ಮ ಶೈಕ್ಷಣಿಕ ಸಮಸ್ಯೆಗಳನ್ನು ಸಂದೇಹಗಳನ್ನು ನಿವಾರಿಸಿಕೊಳ್ಳುವ ಕ್ರಮಕ್ಕೆ ಶೈಕ್ಷಣಿಕ ಸಮಾಲೋಚನೆ (Academic Counselling) ಎನ್ನುತ್ತೇವೆ. ಈ ಸಂಪರ್ಕವನ್ನು ದೂರವಾಣಿಯ ಮೂಲಕ ಇಂಟರ್‌ನೆಟ್ ಮೂಲಕ ಇ–ಮೇಲ್ ಮೂಲಕ, ದೂರದರ್ಶನ ಸಮಾಲೋಚನೆ (Tele conferencive) ಮೂಲಕ ಮಾಡಬಹುದಾಗಿದೆ. ಈ ರೀತಿ ಸಮಾಲೋಚಿಸುವಾಗ ನಿಗದಿತ ದಿನ ಹಾಗೂ ವೇಳೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಲಾಗುತ್ತದೆ. ಓರ್ವ ಅಧ್ಯಾಪಕ ಸಮಾಲೋಚನೆಯ ಕಾರ್ಯವನ್ನು ನಿರ್ವಹಿಸುತ್ತಾರೆ. ಇವರು ವಿದ್ಯಾರ್ಥಿಗಳಿಂದ ಬರುವ ಶೈಕ್ಷಣಿಕ ಪ್ರಶ್ನೆಗಳಿಗೆ ಉತ್ತರ ನೀಡುವ ಪಠ್ಯವಸ್ತುವನ್ನು ಸ್ಪಷ್ಟೀಕರಣಗೊಳಿಸುವ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ದೂರಶಿಕ್ಷಣ ಸಂಸ್ಥೆಗಳು/ಮುಕ್ತ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ರೂಢಿಗತವಾದ ಮತ್ತು ರೂಢಿಗತವಲ್ಲದ ಬೋಧನಾ ಮತ್ತು ಕಲಿಕಾ ಪದ್ಧತಿಗಳಿಂದ ಪೂರೈಸುವ ಕೆಲಸವನ್ನು ಮುಖ್ಯವಾಗಿ ಪರಿಗಣಿಸಿವೆ. ದೂರ ಶಿಕ್ಷಣ ಸಂಸ್ಥೆಗಳ/ಮುಕ್ತ ವಿಶ್ವವಿದ್ಯಾನಿಲಯಗಳ ಅಧ್ಯಯನ ಕೇಂದ್ರಗಳು ಅವುಗಳ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ವಿವರವಾದ ಮಾರ್ಗದರ್ಶನವನ್ನು ಮಾಡುವುದಲ್ಲದೆ, ವಿದ್ಯಾರ್ಥಿಗಳು ದೂರ ಶಿಕ್ಷಣ ಸಂಸ್ಥೆಗಳ ಶಿಕ್ಷಕರನ್ನು ಮುಖತಃ ಭೇಟಿಮಾಡಿ ಸಂವಹನ ನಡೆಸಲು ಸಹಾಯ ಮಾಡುತ್ತವೆ. ಅಧ್ಯಯನ ಕೇಂದ್ರಗಳು ವಾರಾಂತ್ಯದ ಶೈಕ್ಷಣಿಕ ಸಮಾಲೋಚನಾ ವ್ಯವಸ್ಥೆಯನ್ನೂ, ಪುಸ್ತಕ ಭಂಡಾರದ ಅನುಕೂಲವನ್ನೂ ಕಲ್ಪಿಸಿಕೊಡುತ್ತವೆ. ವಿದ್ಯಾರ್ಥಿಗಳಿಗೆ ಅಗತ್ಯವಾದ ದೂರ ಶಿಕ್ಷಣ ಸಂಸ್ಥೆಗಳ / ಮುಕ್ತ ವಿಶ್ವವಿದ್ಯಾನಿಲಯಗಳ ಅನೇಕ ಸಲಹೆ ಸೂಚನೆಗಳನ್ನು ಈ ಅಧ್ಯಯನ ಕೇಂದ್ರಗಳು ಒದಗಿಸುತ್ತವೆ. ವಿಶ್ವವಿದ್ಯಾನಿಲಯವು ಅಧ್ಯಯನ ಕೇಂದ್ರಗಳ ಸಂಯೋಜಕರಿಗೆ ಮುಖ್ಯವಾದ ಸೂಚನೆಗಳನ್ನು ಕಳುಹಿಸುತ್ತಿರುತ್ತದೆ. ಅವುಗಳನ್ನು ಸಂಯೋಜಕರು ಅಧ್ಯಯನ ಕೇಂದ್ರದ ಸೂಚನಾ ಫಲಕದಲ್ಲಿ ಪ್ರಕಟಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸುತ್ತಿರುತ್ತಾರೆ.

ವಿದ್ಯಾರ್ಥಿಗಳು ಮನೆಯಲ್ಲೇ ತಮ್ಮ ಬಿಡುವಿನ ಸಮಯದಲ್ಲಿ ವಿಶ್ವವಿದ್ಯಾನಿಲಯವು ಕೊಟ್ಟಿರುವ ಪಾಠಗಳನ್ನು ಓದಿ ಅರ್ಥಮಾಡಿಕೊಳ್ಳಬೇಕು. ಆ ಪಾಠಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವೇ ಎಷ್ಟು ಕಲಿತಿದ್ದಾರೆಂದು ಪರೀಕ್ಷಿಸಿಕೊಳ್ಳುವ ಅವಕಾಶವಿರುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ಏನಾದರೂ ಅನುಮಾನಗಳಿದ್ದರೆ ಅಧ್ಯಯನ ಕೇಂದ್ರದಲ್ಲಿನ ಶೈಕ್ಷಣಿಕ ಸಮಾಲೋಚನೆಯಲ್ಲಿ ಅವುಗಳನ್ನು ಬಗೆಹರಿಸಿಕೊಳ್ಳಬಹುದು. ಈ ವಿಧದ ಸಮಾಲೋಚನೆಯು ಅಧ್ಯಯನ ಕೇಂದ್ರದಲ್ಲಿ ವಾರಾಂತ್ಯದಲ್ಲಿ ಮತ್ತು ವಿಶ್ವವಿದ್ಯಾನಿಲಯದಲ್ಲಿ ವರ್ಷದಲ್ಲಿ ಎರಡು ಬಾರಿ ಒಂದು ವಾರ ಅಥವಾ ಹದಿನೈದು ದಿನ ನಡೆಯುವ ಶೈಕ್ಷಣಿಕ ಸಮಾಲೋಚನಾ ತರಗತಿಗಳಲ್ಲಿ ಬಗೆಹರಿಸಿಕೊಳ್ಳಬಹುದು. ಅಲ್ಲಿ ವಿವಿಧ ವಿಷಯಗಳ ಮತ್ತು ಕೋರ್ಸ್‌ಗಳ ಪ್ರಾಧ್ಯಾಪಕರು ವಿದ್ಯಾರ್ಥಿಗಳನ್ನು ಒಂದು ಗೊತ್ತಾದ ವೇಳಾಪಟ್ಟಿಯ ಪ್ರಕಾರ ಭೇಟಿಮಾಡಿ ವಿಷಯ ವಿಶ್ಲೇಷಣೆಯನ್ನು ಮಾಡಿ, ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿ ಅವರ ಅನುಮಾನಗಳನ್ನು ಬಗೆಹರಿಸುವರು.

ಇತ್ತೀಚೆಗೆ ಶೈಕ್ಷಣಿಕ ಸಮಾಲೋಚನಾ ವಿಧಾನದಲ್ಲಿ ಹಲವು ಉತ್ತಮ ಬದಲಾವಣೆಗಳನ್ನು ಕಾಣಬಹುದು. ಈಗ ಹೆಚ್ಚಿನ ಮಟ್ಟಿಗೆ ರೂಢಿಯಲ್ಲಿರುವ ಟೆಲಿಫೋನ್‌ಗಳ ಉಪಯೋಗದಿಂದ ವಿದ್ಯಾರ್ಥಿಗಳು ತಮ್ಮ ವಿಷಯದ ತಜ್ಞ ಶಿಕ್ಷಕರನ್ನು ಸಂಪರ್ಕಿಸಿ ತಮ್ಮ ಅನುಮಾನಗಳನ್ನು ಬಗೆಹರಿಸಿಕೊಳ್ಳಬಹುದು. ರೇಡಿಯೋ ಮೂಲಕ ಫೋನ್–ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಶೈಕ್ಷಣಿಕ ಸಮಾಲೋಚನೆಯನ್ನು ಮಾಡಬಹುದು. ತಮ್ಮ ಕೋರ್ಸ್‌ಗೆ ಸಂಬಂಧಪಟ್ಟ ಹಲವು ಮಾಹಿತಿಯನ್ನು ಪಡೆಯಲೂ ಕೂಡ ವಿದ್ಯಾರ್ಥಿಗಳು ದೂರ ಶಿಕ್ಷಣ ಸಂಸ್ಥೆಗಳ ಅಧಿಕಾರವರ್ಗದವರೊಂದಿಗೂ ಶೈಕ್ಷಣಿಕ ಸಮಾಲೋಚನೆಯನ್ನು ಟೆಲಿಫೋನ್ ಮೂಲಕ ಮಾಡುವ ಅವಕಾಶವಿದೆ. ಹೀಗೆ ಶೈಕ್ಷಣಿಕ ಸಮಾಲೋಚನೆಯು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ.

–ಎಚ್.ಎಸ್.ರಾ.

Digitised by Bharatavani, CIIL

## ದೃಷ್ಟಾಂತ ದಾಖಲೆ

ದೃಷ್ಟಾಂತ ದಾಖಲೆಯು (Anecdotal Record) ಒಂದು ಅನೌಪಚಾರಿಕ ತಂತ್ರವಾಗಿದೆ. ಪ್ರತಿನಿತ್ಯ ಶಿಕ್ಷಕನು ವಿದ್ಯಾರ್ಥಿಗಳನ್ನು ವಿವಿಧ ಸನ್ನಿವೇಶಗಳಲ್ಲಿ ವೀಕ್ಷಿಸುತ್ತಲೇ ಇರುತ್ತಾನೆ ಹಾಗೂ ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಓರ್ವ ವಿದ್ಯಾರ್ಥಿ ಹೇಗೆ ವರ್ತಿಸಿದ, ಏನು ಮಾಡಿದ, ಏನು ಹೇಳಿದ ಎಂಬುದರ ಬಗ್ಗೆ ಪ್ರತ್ಯಕ್ಷದರ್ಶಿಯು ನೀಡುವ ವಿವರಗಳೇ ದೃಷ್ಟಾಂತ ದಾಖಲೆಗಳು.

ನಿರ್ದಿಷ್ಟ ಉದ್ದೇಶವಿಲ್ಲದೇ ಕೈಗೊಂಡ ವೀಕ್ಷಣೆಗಳು ವಿದ್ಯಾರ್ಥಿಗಳ ನೈಜ ವ್ಯಕ್ತಿತ್ವವನ್ನು ತಿಳಿಯಲು ಸಹಾಯಕವಾಗುತ್ತವೆ. ಈ ವೀಕ್ಷಣೆಗೆ ಸಿದ್ಧಪಡಿಸಿದ ಪೂರ್ವಯೋಜನೆ ಇರುವುದಿಲ್ಲ. ಶಿಕ್ಷಕನು ವಿದ್ಯಾರ್ಥಿಗಳ ಜೀವನದಲ್ಲಿ ಅವಲೋಕಿಸಿದ ಅರ್ಥಪೂರ್ಣ ಘಟನೆಗಳ ನೈಜ ವಿವರಣೆಯೇ ದೃಷ್ಟಾಂತ ದಾಖಲೆಯಾಗಿದೆ. ಶಿಕ್ಷಣ ತಜ್ಞ ಗ್ರೀನ್ ಮತ್ತು ಇತರರು ವ್ಯಾಖ್ಯಾನಿಸುವಂತೆ ದೃಷ್ಟಾಂತ ದಾಖಲೆಯು ವಿದ್ಯಾರ್ಥಿ ಜೀವನದ ಯಾವುದೇ ಪ್ರಮುಖ ಘಟನೆ ಅಥವಾ ವೃತ್ತಾಂತ ಕುರಿತು ಶಿಕ್ಷಕ ನೀಡುವ ವಸ್ತುನಿಷ್ಠ ವಿವರಣೆಯಾಗಿದೆ.

ಉದಾಹರಣೆಗೆ : ಶಾಲೆಯ ವಿಶ್ರಾಂತಿ ಅವಧಿಯಲ್ಲಿ ಎಲ್ಲ ವಿದ್ಯಾರ್ಥಿನಿಯರೂ ಆಟವಾಡುತ್ತಿರುವಾಗ ಸುನೀತಾ ಒಬ್ಬಳೇ ದೂರ ಕುಳಿತಿರುತ್ತಾಳೆ. ಶಿಕ್ಷಕ ಸುನೀತಾಳ ವರ್ತನೆಯನ್ನು ವೀಕ್ಷಿಸಿ ಅವಳ ವರ್ತನೆಯನ್ನು ದಾಖಲಿಸುತ್ತಾನೆ.

### ದೃಷ್ಟಾಂತ ದಾಖಲೆ ಲಕ್ಷಣಗಳು

1. ಇದು ವ್ಯಕ್ತಿಯ ವರ್ತನೆಯನ್ನು ಪ್ರತಿಬಿಂಬಿಸುವ ತತ್‌ಕ್ಷಣ ತೆಗೆದ ಭಾವಚಿತ್ರ ಇರುತ್ತದೆ.
2. ವೃತ್ತಾಂತ ಸಂಗ್ರಹಣೆಯು ಶಿಕ್ಷಕನು ನಿರೀಕ್ಷಿಸಿದ ವಿಶಿಷ್ಟವಾದ ಘಟನಾವಳಿಗಳ ಬಗ್ಗೆ ಲಿಖಿತರೂಪದ ವರ್ಣನೆಯಾಗಿರುವುದು.
3. ಇದು ಒಬ್ಬ ವ್ಯಕ್ತಿಯ ಮೂಲಭೂತವಾದ ವ್ಯಕ್ತಿತ್ವದ ಗುಣಲಕ್ಷಣಗಳನ್ನು ಅರಿತುಕೊಳ್ಳಲು ಸಹಾಯಕವಾಗಿದೆ.
4. ದೃಷ್ಟಾಂತ ದಾಖಲೆಯು ವಸ್ತುನಿಷ್ಠ ವಿವರಣೆಯೊಂದಿಗೆ ವೀಕ್ಷಿಸಿದ ವರ್ತನೆಯ ಅರ್ಥ ವಿವರಣೆಗಳನ್ನು ಒಳಗೊಂಡಿರುತ್ತದೆ.
5. ಇದು ಎಲ್ಲ ಶಿಕ್ಷಕರು ತರಗತಿಯಲ್ಲಿ ಬಳಸಬಹುದಾದ ಉತ್ತಮ ಮೌಲ್ಯಮಾಪನ ತಂತ್ರವಾಗಿದೆ.

### ದೃಷ್ಟಾಂತ ದಾಖಲೆ ಬರೆಯುವಾಗ ಗಮನಿಸಬೇಕಾದ ಅಂಶಗಳು

1. ವೀಕ್ಷಿಸಿದ ವಿವರಗಳನ್ನು ನಿರ್ದಿಷ್ಟವಾಗಿ ಹಾಗೂ ವಸ್ತುನಿಷ್ಠವಾಗಿ ದಾಖಲಿಸಬೇಕು.
2. ಒಮ್ಮೆ ಒಂದು ಘಟನೆ ವೀಕ್ಷಿಸಿದ ತಕ್ಷಣ ವಿಳಂಬ ಮಾಡದೆ ಯಥಾರೀತಿ ದಾಖಲಿಸಬೇಕು.
3. ವೀಕ್ಷಿಸುವ ಪ್ರತಿಯೊಂದು ಘಟನೆ ಮತ್ತು ವರ್ತನೆಗಳಿಗೂ ಪ್ರತ್ಯೇಕವಾದ ವಿವರ ಇರಬೇಕು.
4. ದಾಖಲಿಸಿದ ವರ್ತನೆಯು ಮಹತ್ವದ್ದಾಗಿರಬೇಕು. ಅವಶ್ಯವಿದ್ದಲ್ಲಿ ಸೂಕ್ತ ಹಿನ್ನೆಲೆ ಮಾಹಿತಿ ಒದಗಿಸಬೇಕು.
5. ವೀಕ್ಷಣೆ ಮಾಡುವಂತಹ ಶಿಕ್ಷಕ ಪೂರ್ವಗ್ರಹಪೀಡಿತನಾಗದೆ ನೈಜ ಸಂಗತಿಗಳನ್ನು ದಾಖಲಿಸಬೇಕು.
6. ಪ್ರತಿ ವರದಿಯಲ್ಲಿ ಘಟನೆ ನಡೆದ ಸ್ಥಳ, ದಿನಾಂಕ, ಸಮಯ, ವೀಕ್ಷಕ ಮತ್ತು ವೀಕ್ಷಿತರ ಹೆಸರನ್ನು ನಮೂದಿಸಬೇಕು.
7. ಒಬ್ಬ ವಿದ್ಯಾರ್ಥಿಗೆ ಸಂಬಂಧಿಸಿದ ವರದಿಗಳನ್ನು ಒಂದೇ ಪುಸ್ತಕದಲ್ಲಿ ಬರೆದಿಡಬೇಕು. ಈ ಪುಸ್ತಕವು ಎಲ್ಲ ಶಿಕ್ಷಕರಿಗೆ ಸುಲಭವಾಗಿ ಸಿಗುವ ಸ್ಥಳದಲ್ಲಿ ಇದ್ದು ವಿವಿಧ ಶಿಕ್ಷಕರು ಒಬ್ಬ 'ವಿದ್ಯಾರ್ಥಿ'ಗೆ ಸಂಬಂಧಿಸಿದ ವರದಿಗಳನ್ನು ಒಂದೇ ಪುಸ್ತಕದಲ್ಲಿ ಬರೆಯಬೇಕು.

### ದೃಷ್ಟಾಂತ ದಾಖಲೆಯ ಉಪಯೋಗಗಳು

1. ವಿದ್ಯಾರ್ಥಿಯ ವ್ಯಕ್ತಿತ್ವ ಶೋಧನೆಗೆ ಇದೊಂದು ಉತ್ತಮ ತಂತ್ರವಾಗಿದೆ.
2. ವಿದ್ಯಾರ್ಥಿಯ ವರ್ತನೆಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಬಹುದು.
3. ಬೇರೆ ಬೇರೆ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ವರ್ತನೆಗಳನ್ನು ಅಧ್ಯಯನ ಮಾಡಲು ಇದು ಉಪಯುಕ್ತವಾಗಿದೆ.
4. ವಿದ್ಯಾರ್ಥಿಯ ಬಗ್ಗೆ ವೀಕ್ಷಿತ ಮಾಹಿತಿಗಳ ಬಗ್ಗೆ ಅಗತ್ಯ ದಾಖಲಾತಿ ಇಟ್ಟಿರುವುದರಿಂದ ಉಳಿದ ಶಿಕ್ಷಕರು ಇದನ್ನನುಸರಿಸಿ ಇತರ ಮಾಹಿತಿಗಳನ್ನು ಪಡೆಯಬಹುದು.
5. ಯಾವುದೇ ರೀತಿಯ ಸಲಕರಣೆ ಅನುಭವ ತರಬೇತಿ ಇಲ್ಲದ ಶಿಕ್ಷಕರು ಸಹ ವಿದ್ಯಾರ್ಥಿಗಳ ವ್ಯಕ್ತಿತ್ವದ ಬಹುಮುಖ ಅಂಶಗಳನ್ನು ಗಮನಿಸಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಲು ಉಪಯುಕ್ತವಾಗಿದೆ.

### ದೃಷ್ಟಾಂತ ದಾಖಲೆಯ ಮಿತಿಗಳು

1. ವೀಕ್ಷಿತ ಅಂಶಗಳೆಲ್ಲವನ್ನೂ ಚಾಚೂ ತಪ್ಪದೆ ನಿಷ್ಪಕ್ಷಪಾತವಾಗಿ ದಾಖಲಿಸುವುದು ತರಬೇತಿ ಪಡೆಯದ ಶಿಕ್ಷಕನಿಗೆ ಕಷ್ಟವಾಗುತ್ತದೆ.
2. ವರ್ತನೆಯನ್ನು ವೀಕ್ಷಿಸಿ ಉಪಾಖ್ಯಾನಿಸಲು ಹೆಚ್ಚು ವೇಳೆ/ಶ್ರಮ ಬೇಕಾಗುತ್ತದೆ.
3. ವಿದ್ಯಾರ್ಥಿಯ ವರ್ತನೆ ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸುವುದರಿಂದ ಎಲ್ಲವನ್ನು ವಸ್ತುನಿಷ್ಠವಾಗಿ ವೀಕ್ಷಿಸಲು ಸಾಧ್ಯವಾಗುವುದಿಲ್ಲ.
4. ವೀಕ್ಷಿತ ವರ್ತನೆಗಳನ್ನು ದಾಖಲಿಸುವಾಗ ವೀಕ್ಷಕನಿಗೆ ಸಾಕಷ್ಟು ತಾಳ್ಮೆ, ಅನುಭವ, ಅಗತ್ಯ ತರಬೇತಿ ಇಲ್ಲದೇ ಇರುವುದರಿಂದ ಸಮರ್ಪಕವಾಗಿ ವೀಕ್ಷಿಸಲು ಸಾಧ್ಯವಾಗುವುದಿಲ್ಲ.
5. ದೃಷ್ಟಾಂತ ದಾಖಲೆಯು ವರ್ತನೆಗಳನ್ನು ದಾಖಲಿಸುತ್ತದೆ. ಆದರೆ ವರ್ತನೆಯ ಮೂಲ ಕಾರಣದ ಮೇಲೆ ಬೆಳಕು ಬೀರುವುದಿಲ್ಲ.

### ದೃಷ್ಟಾಂತ ದಾಖಲೆಯ ಉದಾಹರಣೆಗಳು

**ನಮೂನೆ – 1**

| | | | |
|---|---|---|---|
| A. | ವಿದ್ಯಾರ್ಥಿಯ ಹೆಸರು | : | ನಿರಂಜನ್ |
| B. | ವೀಕ್ಷಣೆಯ ದಿನಾಂಕ | : | 2–7–2009 |
| C. | ತರಗತಿ | : | ಒಂಬತ್ತನೇ ತರಗತಿ |
| D. | ವೀಕ್ಷಕರ ಹೆಸರು | : | ಸುರೇಶ್ |

Digitised by Bharatavani, CIIL

E. **ಘಟನೆ :–** ಕನ್ನಡ ತರಗತಿಗೆ ತಡವಾಗಿ ಬಂದನು (ಬೆಳಿಗ್ಗೆ ಮೊದಲನೆಯ ಪಿರಿಯಡ್‌ಗೆ)

ಒಂದು ಪೆನ್ನಿನ ಕಾರಣಕ್ಕೆ ಪಕ್ಕದಲ್ಲಿದ್ದ ನಿಶಾಂತ್ ಜೊತೆ ಜಗಳವಾಡಿದನು.

ನಂತರ ಸ್ವಲ್ಪ ದೂರವೇ ಕುಳಿತಿದ್ದ ನಿಖಿಲ್‌ನನ್ನು ಜಿಗುಟಿದನು, ಮುಂದಿನ ಬೆಂಚಿನಲ್ಲಿ ಕುಳಿತಿದ್ದವರೊಡನೆ ಜೋರಾಗಿ ಮಾತನಾಡಿದನು.

**ಅಭಿಪ್ರಾಯ :** ಸಾಮಾನ್ಯವಾಗಿ ನಿರಂಜನ್ ಹೀಗೆ ವರ್ತಿಸುವುದಿಲ್ಲ. ಅವನು ಎಲ್ಲರಿಗೂ ಪ್ರಿಯನಾದ ಹುಡುಗ. ಆಕಸ್ಮಿಕವಾಗಿ ಸಂದರ್ಭವಶಾತ್ ಹೀಗೆ ವರ್ತಿಸಿದ್ದಾನೆ.

**ನಮೂನೆ – 2**

A. ವಿದ್ಯಾರ್ಥಿಯ ಹೆಸರು : ಚಂದ್ರಶೇಖರ್

B. ವೀಕ್ಷಕನ ಹೆಸರು : ಮಹೇಶ

C. ವೀಕ್ಷಣೆಯ ದಿನಾಂಕ : 10–7–2009

D. ತರಗತಿ : ಎಂಟನೇ ತರಗತಿ

E. ಸಮಯ : ಬೆಳಿಗ್ಗೆ 10 ಗಂಟೆ

**ಘಟನೆ :** ಚಂದ್ರಶೇಖರನು ಪುಸ್ತಕದ ವಿಷಯವಾಗಿ ನಂದೀಶನೊಂದಿಗೆ ಜಗಳವಾಡುತ್ತಾನೆ. ಪಕ್ಕದಲ್ಲಿದ್ದ ರಾಘವೇಂದ್ರನ ಮೇಲೂ ಎರಗುತ್ತಾನೆ. ಸ್ವಲ್ಪ ಹೊತ್ತಿನಲ್ಲೇ ಪ್ರಶಾಂತ್‌ನನ್ನು ದುರುಗುಟ್ಟಿ ನೋಡುತ್ತಾನೆ.

**ಅಭಿಪ್ರಾಯ :** ಚಂದ್ರಶೇಖರನು ಒಬ್ಬ ಒಳ್ಳೆಯ ಹುಡುಗ. ಅವನು ಎಲ್ಲರಿಗೂ ಪ್ರಿಯನಾದ ಹುಡುಗ. ಅವನು ಸಾಮಾನ್ಯವಾಗಿ ಈ ರೀತಿಯಲ್ಲಿ ವರ್ತಿಸುವುದಿಲ್ಲ. ಅವನ ಇಂದಿನ ವರ್ತನೆಗೆ ಏನೋ ಕಾರಣವಿರಬೇಕು ವಿಚಾರಿಸಬೇಕು.

**ನಮೂನೆ – 3**

A. ವಿದ್ಯಾರ್ಥಿಯ ಹೆಸರು : ಶೀಲಾ

B. ವೀಕ್ಷಣೆಯ ದಿನಾಂಕ : 25–08–2010

C. ತರಗತಿ : ಒಂಬತ್ತನೇ ತರಗತಿ

D. ವೀಕ್ಷಕಳ ಹೆಸರು : ಶ್ವೇತಾ

**ಘಟನೆ :–** ತರಗತಿಯ ಒಳಗೆ ಪಾಠ ನಡೆಯುವಾಗ ಕಿಸಕ್ಕನೆ ನಕ್ಕಳು. ಕೈಮಾಡಿ ತೋರಿಸಿದಳು. ಪಕ್ಕದವಳನ್ನು ಕರೆದು ಅವಳನ್ನು ನಗುವಂತೆ ಮಾಡಿದಳು. ಇದರಿಂದ ತರಗತಿಯಲ್ಲಿ ಪಾಠ ಮಾಡುವ ಶಿಕ್ಷಕರಿಗೆ ತೊಂದರೆಯಾಯಿತು.

**ಒಟ್ಟಾರೆ ಅಭಿಪ್ರಾಯ:** ಶೀಲಾ ಯಾವಾಗಲೂ ಹಾಗೆಯೇ ಮಾಡುತ್ತಾಳೆ. ಅವಳು ಪ್ರತಿ ತರಗತಿಯಲ್ಲೂ ಇಂತಹ ಕೆಲಸಗಳನ್ನು ಮಾಡುವಳು. ಪಾಠದ ಕಡೆ ಗಮನ ನೀಡುವುದಿಲ್ಲ. ಅವಳಿಗೆ ಸಲಹೆ (ಸಮಾಲೋಚನೆ)ಯ ಅಗತ್ಯವಿದೆ.

**ದೃಷ್ಟಾಂತ ದಾಖಲೆಯ ಮಹತ್ವ**

1. ಅತ್ಯಂತ ಚಿಕ್ಕವಯಸ್ಸಿನ ವಿದ್ಯಾರ್ಥಿಗಳ ವರ್ತನೆಗಳನ್ನು ವೀಕ್ಷಿಸಲು ಹಾಗೂ ಸಂವಹನ ಕೌಶಲಗಳಲ್ಲಿ ದುರ್ಬಲವಾಗಿರುವ ಯಾವುದೇ ವ್ಯಕ್ತಿಯ ವರ್ತನೆಯನ್ನು ವೀಕ್ಷಿಸಲು ದೃಷ್ಟಾಂತ ದಾಖಲೆಗಳು ಸಹಾಯಕವಾಗಿದೆ.
2. ಬೇರೆ ಬೇರೆ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ವರ್ತನೆಗಳನ್ನು ಅಧ್ಯಯನ ಮಾಡಲು ಸಹಾಯಕವಾಗಿವೆ.

–ಸು.

**ದ್ವಂದ್ವಗಳು**

'ದ್ವಂದ್ವ' ಪದಕ್ಕೆ ಪರ್ಯಾಯವಾಗಿ ತುಮುಲ, ಉಭಯಸಂಕಟ ಈ ಪದಗಳನ್ನು ಬಳಸಲಾಗುತ್ತದೆ. ಅನಿವಾರ್ಯವಾಗಿ ಎರಡು ಅಥವಾ ಹೆಚ್ಚಿನ ಆಯ್ಕೆ(ಗುರಿ)ಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸ್ಥಿತಿಗೆ 'ದ್ವಂದ್ವ' (Conflict) ಎನ್ನುತ್ತೇವೆ. ಪ್ರತಿನಿತ್ಯ ನಾವು ವಿವಿಧ ರೀತಿಯ ದ್ವಂದ್ವಗಳನ್ನು ಎದುರಿಸುತ್ತಿರುತ್ತೇವೆ. ನಾವು ಹಲವಾರು ರೀತಿಯ ಸರಳವಾದ, ಕಠಿಣವಾದ, ತಕ್ಷಣದಲ್ಲಿ ಲಾಭನೀಡುವ, ಸರಿಯಾದ, ತಪ್ಪಾದ ಅಥವಾ ಕೆಟ್ಟ ವಿಚಾರಗಳಲ್ಲಿ ಅಥವಾ ವಿಷಯಗಳಲ್ಲಿ ಸಿಲುಕಿಕೊಂಡಿರುತ್ತೇವೆ. ಇವುಗಳಿಗೆ ಸಂಬಂಧಿಸಿದಂತೆ ನಮ್ಮೆದುರು ಬಹಳಷ್ಟು ಆಯ್ಕೆಗಳಿರುತ್ತವೆ. ಬಹಳಷ್ಟು ಬಾರಿ ನಾವು ಈ ಆಯ್ಕೆಗಳಲ್ಲಿ ಒಂದನ್ನು ಆಯ್ದುಕೊಳ್ಳಲೇಬೇಕಾಗುತ್ತದೆ. ಬಹಳಷ್ಟು ಅಹಿತಕರವಾದ ಅಥವಾ ಹಿತಕರವಾದ ಸಂಗತಿಗಳಲ್ಲಿ ಒಂದನ್ನು ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳಬೇಕಾಗಿ ಬರಬಹುದು. ನಮಗೆ ಯಾವುದು ಅತ್ಯಂತ ಕಡಿಮೆ ಅಹಿತಕರವಾದುದು ಅಥವಾ ಯಾವುದು ಹೆಚ್ಚು ಹಿತಕರವಾದುದು ಎಂಬುದು ಖಚಿತವಾಗಿ ತಿಳಿದಿರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಯಾವುದನ್ನು ಆಯ್ದುಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂದು ನಿರ್ಧರಿಸಬೇಕಾಗಿ ಬಂದಾಗ ನಾವು ಮಾನಸಿಕವಾಗಿ ಬಿಗಿತದಿಂದ ಕೂಡಿದ ಅಹಿತಕರ ಮನಃಸ್ಥಿತಿಗೆ ಒಳಗಾಗುತ್ತೇವೆ. ಈ ಸ್ಥಿತಿಯೇ ದ್ವಂದ್ವ.

ದ್ವಂದ್ವವು ಎರಡು ಅಥವಾ ಹೆಚ್ಚು ಪರಸ್ಪರ ವಿರುದ್ಧವಾದ ಕ್ರಿಯಾ ವ್ಯವಸ್ಥೆಗಳ (action systems) ನಿರ್ವಹಣೆಯಾಗಿದೆ. ಈ ಕ್ರಿಯಾ ವ್ಯವಸ್ಥೆಗಳು–ಪ್ರೇರಕಗಳು, ಅಗತ್ಯಗಳು, ಪ್ರವೃತ್ತಿಗಳು ಅಥವಾ ಚಾಲನಶಕ್ತಿಗಳಾಗಿರಬಹುದು. ಎರಡು ಅಥವಾ ಹೆಚ್ಚಿನ ಕ್ರಿಯಾ ವ್ಯವಸ್ಥೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದಾಗ ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುವ ಅಪ್ರಿಯ ಸಂವೇಗಾತ್ಮಕ ಸ್ಥಿತಿಯೇ ದ್ವಂದ್ವವಾಗಿದೆ. ಎರಡು ಅಥವಾ ಹೆಚ್ಚು ಅಗತ್ಯಗಳು ಅಥವಾ ಗುರಿಗಳು ಒಂದೇ ಸಮಯದಲ್ಲಿ ಎದುರಾದಾಗ ವ್ಯಕ್ತಿಯು ಒಂದನ್ನು ಆಯ್ದುಕೊಂಡರೆ ಇನ್ನೊಂದನ್ನು ನಿರಾಕರಿಸಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ದ್ವಂದ್ವ ಉಂಟಾಗುತ್ತದೆ. ಪ್ರತಿ ಬಾರಿ ದ್ವಂದ್ವ ಉಂಟಾದಾಗಲೂ ವ್ಯಕ್ತಿಗಳು ಸ್ವಲ್ಪ ಮಟ್ಟಿಗೆ ಆತಂಕ ಮತ್ತು ಅಸಮಾಧಾನವನ್ನು ಅನುಭವಿಸುತ್ತಾರೆ. ಪರಿಹರಿಸದ ದ್ವಂದ್ವಗಳು ವ್ಯಕ್ತಿಗಳಲ್ಲಿ ಒತ್ತಡ ಮತ್ತು ಮಾನಸಿಕ ಆಯಾಸದ ಸ್ಥಿತಿಯನ್ನು ಉಂಟುಮಾಡುತ್ತವೆ. ಪರಸ್ಪರ ವಿರುದ್ಧವಾದ ಅಗತ್ಯಗಳು ಅಥವಾ ಗುರಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದಾಗ ಮಾತ್ರವಲ್ಲದೆ, ಎರಡು ಅಥವಾ ಹೆಚ್ಚು ವ್ಯಕ್ತಿಗಳು ಒಂದೇ ವಸ್ತುವನ್ನು ಪಡೆಯಲು ಪ್ರಯತ್ನಿಸುವಾಗಲೂ ದ್ವಂದ್ವಗಳು ಉಂಟಾಗುತ್ತವೆ. ಇದೇ ರೀತಿ ಎರಡು ಅಥವಾ ಹೆಚ್ಚು ಗುಂಪುಗಳು, ಸಂಸ್ಥೆಗಳು ಮತ್ತು ರಾಷ್ಟ್ರಗಳ ನಡುವೆ ದ್ವಂದ್ವ ಉಂಟಾಗಬಹುದು. ಇದನ್ನು ಅಂತರ್ ವ್ಯಕ್ತಿ (inter personal) ದ್ವಂದ್ವ ಎನ್ನುತ್ತಾರೆ.

ಮನೋವಿಜ್ಞಾನಿ ಲೆವಿನ್‌ನು ನಾಲ್ಕು ರೀತಿಯ ದ್ವಂದ್ವಗಳನ್ನು ವಿವರಿಸಿದ್ದಾನೆ.

Digitised by Bharatavani, CIIL

## 1. ಉಪಾಗಮ–ಉಪಾಗಮ ದ್ವಂದ್ವ

ಇದು ವ್ಯಕ್ತಿಗೆ ಎರಡು ಅಥವಾ ಹೆಚ್ಚು ಸಮಾನ ಆಕರ್ಷಣೆಯುಳ್ಳ ಗುರಿಗಳಲ್ಲಿ ಅಥವಾ ಅಗತ್ಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದಾಗ ಉಂಟಾಗುವ ದ್ವಂದ್ವವಾಗಿದೆ. ವ್ಯಕ್ತಿ ಸಮಾನ ಆಕರ್ಷಕ ಗುರಿಗಳಲ್ಲಿ ಯಾವುದನ್ನು ಆಯ್ದುಕೊಳ್ಳುವುದು, ಯಾವುದನ್ನು ಬಿಡುವುದು ಎಂದು ನಿರ್ಧರಿಸಬೇಕಾದಾಗ ಉಂಟಾಗುವ ದ್ವಂದ್ವ ಇದಾಗಿದೆ. ಉದಾಹರಣೆಗೆ, ಒಬ್ಬ ನಿರುದ್ಯೋಗಿ ಸಮಾನ ವೇತನ ಮತ್ತು ಸಾಮಾಜಿಕ ಗೌರವ ತರುವ ಎರಡು ಉದ್ಯೋಗಗಳಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿ ಬಂದಾಗ ಉಂಟಾಗುವ ದ್ವಂದ್ವವಾಗಿದೆ. ಈ ರೀತಿಯ ದ್ವಂದ್ವವನ್ನು ಈ ಕೆಳಗಿನ ಚಿತ್ರದ ಮೂಲಕ ಸ್ಪಷ್ಟಪಡಿಸಬಹುದಾಗಿದೆ.




ಇಂತಹ ದ್ವಂದ್ವಗಳಲ್ಲಿ ವ್ಯಕ್ತಿ ಒಂದು ಗುರಿಯ ಆಕರ್ಷಣ ಮೌಲ್ಯವನ್ನು ಬೇರೊಂದಕ್ಕಿಂತ ಹೆಚ್ಚು ಮಾಡಿಕೊಂಡು ದ್ವಂದ್ವವನ್ನು ಪರಿಹರಿಸಿಕೊಳ್ಳಬಹುದು.

## 2. ಉಪಾಗಮ–ನಿವಾರಣ ದ್ವಂದ್ವ

ಇದು ಒಂದೇ ಗುರಿ, ಪ್ರೇರಕ ಅಥವಾ ಅಗತ್ಯದಲ್ಲಿ ಹಿತಕರ ಮತ್ತು ಅಹಿತಕರ (ಆಕರ್ಷಕ ಮತ್ತು ಅನಾಕರ್ಷಕ) ಗುಣಗಳೆರಡೂ ಇದ್ದಾಗ ಉಂಟಾಗುವ ದ್ವಂದ್ವವಾಗಿದೆ. ಇಲ್ಲಿ ವ್ಯಕ್ತಿಯು ಒಂದೇ ಗುರಿಗೆ ಸಂಬಂಧಿಸಿದಂತೆ ಆಕರ್ಷಣೆ ಮತ್ತು ವಿಕರ್ಷಣೆ ಎರಡನ್ನೂ ಹೊಂದಿರುತ್ತಾನೆ. ಉದಾಹರಣೆಗೆ, ಸಿಗರೇಟು ಸೇದುವ ಚಟವಿರುವವರಿಗೆ ಸಿಗರೇಟು ಸೇವನೆ ಹಿತಕರ, ಅದೇ ಸಮಯಕ್ಕೆ ಅದು ಆರೋಗ್ಯಕ್ಕೆ ಹಾನಿಕಾರಕವು ಕೂಡ. ಈ ರೀತಿಯ ದ್ವಂದ್ವಕ್ಕೆ ಇನ್ನೊಂದು ಉದಾಹರಣೆ ಒಬ್ಬ ವ್ಯಕ್ತಿಗೆ ಉದ್ಯೋಗದ ಅಗತ್ಯವಿದೆ. ಮದುವೆಯ ಅಗತ್ಯವಿಲ್ಲ. ಆದರೆ ಆ ವ್ಯಕ್ತಿ ಉದ್ಯೋಗವನ್ನು ಪಡೆಯಬೇಕಾದರೆ ಉದ್ಯೋಗ ಕೊಡುವಾತನ ಮಗಳನ್ನು ಮದುವೆಯಾಗಬೇಕು. ಇಂಥ ಸಂದರ್ಭಗಳಲ್ಲಿ ಉಂಟಾಗುವ ದ್ವಂದ್ವವನ್ನು ಉಪಾಗಮ–ನಿವಾರಣ ದ್ವಂದ್ವ ಎನ್ನುತ್ತಾರೆ. ಈ ವಿಧದ ದ್ವಂದ್ವವನ್ನು ಈ ಕೆಳಗಿನ ಚಿತ್ರದ ಮೂಲಕ ಸ್ಪಷ್ಟಪಡಿಸಬಹುದು.




ಈ ಸ್ಥಿತಿಯಲ್ಲಿ ವ್ಯಕ್ತಿ ಗುರಿಯ ಆಕರ್ಷಣೆ, ವಿಕರ್ಷಣೆಯ ತೀವ್ರತೆಯನ್ನು ಮೌಲ್ಯಮಾಪನ ಮಾಡಿಕೊಂಡು ದ್ವಂದ್ವವನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ.

## 3. ನಿವಾರಣ–ನಿವಾರಣ ದ್ವಂದ್ವ

ಇದು ಎರಡು ಅನಾಕರ್ಷಕ ಗುರಿಗಳಲ್ಲಿ ಒಂದನ್ನು ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳಲೇಬೇಕಾಗಿ ಬಂದಾಗ ಉಂಟಾಗುವ ದ್ವಂದ್ವವಾಗಿದೆ. ಉದಾಹರಣೆಗೆ, ಮಗುವಿಗೆ ಓದಲು ಇಷ್ಟವಿಲ್ಲ, ಆದರೆ ಅದೇ ವೇಳೆಗೆ ಓದದೆ ಪಾಲಕರಿಗೆ ಬೇಸರ ಉಂಟು ಮಾಡುವುದೂ ಇಷ್ಟವಿಲ್ಲ. ಇದಕ್ಕೆ ಇನ್ನೊಂದು ಉದಾಹರಣೆ ಸೈನಿಕನಿಗೆ ಬೇರೆ ವ್ಯಕ್ತಿಯನ್ನು ಕೊಲ್ಲುವುದು ಇಷ್ಟವಿಲ್ಲ. ಹಾಗೆಯೇ ತಾನು ಸಾಯುವುದೂ ಇಷ್ಟವಿಲ್ಲದ ಕಾರ್ಯ. ಆದರೂ ಸಹ ಯುದ್ಧದ ಸಮಯದಲ್ಲಿ ಸೈನಿಕನು ತಾನು ಸಾಯಬೇಕು ಅಥವಾ ವೈರಿಯನ್ನು ಸಾಯಿಸಬೇಕು. ಇಂಥ ಸಂದರ್ಭಗಳಲ್ಲಿ ಉಂಟಾಗುವ ದ್ವಂದ್ವವನ್ನು ನಿವಾರಣ–ನಿವಾರಣ ದ್ವಂದ್ವ ಎನ್ನುತ್ತಾರೆ. ಈ ಕೆಳಗಿನ ಚಿತ್ರವು ಈ ರೀತಿಯ ದ್ವಂದ್ವವನ್ನು ಪ್ರತಿನಿಧಿಸುತ್ತದೆ.




ಇಂಥ ದ್ವಂದ್ವದಲ್ಲಿ ಯಾವ ಗುರಿಯಲ್ಲಿ ಕಡಿಮೆ ಅಹಿತಕರ ಪ್ರಭಾವವಿರುತ್ತದೆಯೋ ಅದನ್ನು ಆಯ್ಕೆ ಮಾಡಿಕೊಂಡು ದ್ವಂದ್ವ ಪರಿಹಾರ ಮಾಡಿಕೊಳ್ಳಬೇಕು.

## 4. ಸಂಯುಕ್ತ ಉಪಾಗಮ–ನಿವಾರಣ ದ್ವಂದ್ವ

ಈ ರೀತಿಯ ದ್ವಂದ್ವದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಗುರಿಗಳಲ್ಲಿ ಪ್ರತಿಯೊಂದು ಗುರಿಯಲ್ಲೂ ಹಿತಕರ ಮತ್ತು ಅಹಿತಕರ (ಆಕರ್ಷಕ ಮತ್ತು ಅನಾಕರ್ಷಕ) ಅಂಶಗಳಿರುತ್ತವೆ. ಉದಾಹರಣೆಗೆ, ಒಬ್ಬ ವ್ಯಕ್ತಿಗೆ ಉತ್ತಮ ಸಂಬಳ ತರುವ ಉದ್ಯೋಗ ದೊರೆತಿದ್ದು ಅದು ಆ ವ್ಯಕ್ತಿಯ ಊರಿನಿಂದ ಬಹಳ ದೂರದಲ್ಲಿದೆ. ಅದೇ ವೇಳೆಗೆ ಆ ವ್ಯಕ್ತಿಗೆ ಅವನ ಊರಿನಲ್ಲೇ ಉದ್ಯೋಗ ದೊರೆತಿದೆ. ಆದರೆ ಸಂಬಳ ತೀರಾ ಕಡಿಮೆ. ಇಂಥ ಸಂದರ್ಭಗಳಲ್ಲಿ ಉಂಟಾಗುವ ದ್ವಂದ್ವವನ್ನು ಸಂಯುಕ್ತ ಉಪಾಗಮ ನಿವಾರಣ ದ್ವಂದ್ವ ಎನ್ನುತ್ತಾರೆ. ಈ ರೀತಿಯ ದ್ವಂದ್ವವನ್ನು ಈ ಕೆಳಗಿನ ಚಿತ್ರದ ಮೂಲಕ ಸ್ಪಷ್ಟಪಡಿಸಬಹುದಾಗಿದೆ.




ನಿವಾರಣ–ನಿವಾರಣ ಮತ್ತು ಸಂಯುಕ್ತ ಉಪಾಗಮ–ನಿವಾರಣ ದ್ವಂದ್ವಗಳು ಹೆಚ್ಚು ಅಪಾಯಕಾರಿ. ಇವು ಸಮರ್ಪಕ ನಿರ್ಧಾರ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವಾಗುತ್ತವೆ. ಅಲ್ಲದೆ ಉದ್ವೇಗ, ಅನಿಶ್ಚಿತತೆ ಮತ್ತು ಆತಂಕಕ್ಕೆ ದಾರಿಮಾಡಿ ಕೊಡುತ್ತವೆ.

ಇಂತಹ ದ್ವಂದ್ವ ಸ್ಥಿತಿಯಲ್ಲಿ ವ್ಯಕ್ತಿ ಸುಲಭವಾಗಿ ಆಯ್ಕೆ ಮಾಡಿಕೊಳ್ಳಲಾರದ ತುಯ್ದಾಟಕ್ಕೆ ಒಳಗಾಗುತ್ತಾನೆ. ನಿರ್ಣಯಿಸಲಾಗದ ಸ್ಥಿತಿಗೊಳಗಾಗುತ್ತಾನೆ. ಇದರಿಂದಾಗಿ ಅನಿಶ್ಚಯತೆ, ಉದ್ವೇಗ, ಆತಂಕದ ಅನುಭವವಾಗುತ್ತದೆ. ಇಂಥ ಸ್ಥಿತಿಯಲ್ಲಿ ವ್ಯಕ್ತಿ ಗುರಿಗಳಲ್ಲಿರುವ ಆಕರ್ಷಣೆ, ವಿಕರ್ಷಣೆಯ ಅಂಶಗಳನ್ನು ಪರಸ್ಪರ ತುಲನೆ ಮಾಡಿ ಆಕರ್ಷಣೆ ಪ್ರಮಾಣ ಹೆಚ್ಚಾಗಿದ್ದು, ವಿಕರ್ಷಣೆಯ ಅಂಶ ಆದಷ್ಟು ಕಡಿಮೆ ಇರುವ ಗುರಿಯನ್ನು ಆಯ್ಕೆ ಮಾಡಿಕೊಂಡು ದ್ವಂದ್ವವನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ.

ಸಮಾಯೋಜನೆಯನ್ನು ಉಳಿಸಿಕೊಳ್ಳಲು ನಾವು ದ್ವಂದ್ವಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಪರಿಹರಿಸಿಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ

Digitised by Bharatavani, CIIL

ಸಮಾಯೋಜಿತರಾದ ವ್ಯಕ್ತಿಗಳು ತಮ್ಮ ದ್ವಂದ್ವಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳುತ್ತಾರೆ. ದ್ವಂದ್ವಗಳು ತೀವ್ರರೂಪ ತಳೆದಾಗ ಹಾಗೂ ವ್ಯಕ್ತಿಯಲ್ಲಿ ಅಪಸಮಾಯೋಜಿತ ಸ್ಥಿತಿ ಇದ್ದಲ್ಲಿ ದ್ವಂದ್ವಗಳ ಪರಿಹಾರ ಕಷ್ಟ ಸಾಧ್ಯವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿ ದ್ವಂದ್ವ ಪರಿಸ್ಥಿತಿಯಿಂದ ಪಲಾಯನ ಮಾಡುತ್ತಾನೆ. ಅದನ್ನು ಎದುರಿಸದೆ ಅದರ ಅಸ್ತಿತ್ವವನ್ನೇ ನಿರಾಕರಿಸುತ್ತಾನೆ. ಕಡೆಗೆ ದ್ವಂದ್ವ ಪರಿಹಾರವಾಗದೆ ಅದರಿಂದಾಗುವ ಉದ್ವೇಗ, ಆತಂಕ ಇನ್ನೂ ಹೆಚ್ಚಾಗಿ ಮನೋರೋಗ ಸ್ಥಿತಿಗೆ ಒಳಗಾಗುತ್ತಾನೆ.

–ಎಸ್.ಪಿ.ಎಸ್.

## ಧ್ಯಾನ ಮತ್ತು ಅರಿವಿನ ಮೇಲ್ಮಟ್ಟಗಳು

ಇಂದು ಧ್ಯಾನದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿದ್ದು ಈ ಪದದ ಬಳಕೆ ಮಾಧ್ಯಮಗಳಲ್ಲಿ ಮತ್ತು ಸಾರ್ವಜನಿಕರ ಜೀವನದಲ್ಲಿ ಹೆಚ್ಚಾಗಿದೆ. ಒಂದು ಕಾಲದಲ್ಲಿ ಧ್ಯಾನ ಆಧ್ಯಾತ್ಮಿಕ ಮತ್ತು ಮತೀಯ ಪರಿಭಾಷೆಯಾಗಿತ್ತು. ಆದರೆ ಈಗ ಆರೋಗ್ಯ, ಶಿಕ್ಷಣ, ಉದ್ಯೋಗ ಮತ್ತು ಇತರ ಕ್ಷೇತ್ರಗಳಲ್ಲೂ ಧ್ಯಾನದ ಉಪಯುಕ್ತತೆ ಕಂಡು ಬಂದಿದ್ದು ಇದರ ಅರ್ಥ ಮತ್ತು ವ್ಯಾಪ್ತಿ ಎರಡೂ ಬದಲಾವಣೆಯನ್ನು ಹೊಂದಿವೆ. ವಿಶ್ರಾಂತಿಯಿಂದ ಸಾಕ್ಷಾತ್ಕಾರದವರೆಗೆ (Relaxation to Realization) ಧ್ಯಾನದ ಬಳಕೆಯನ್ನು ಚರ್ಚಿಸಲಾಗುತ್ತಿದೆ. ಪ್ರಪಂಚದಾದ್ಯಂತ ವಿವಿಧ ಧ್ಯಾನ ಕ್ರಮಗಳು ಬಳಕೆಯಲ್ಲಿದ್ದು ಅವುಗಳನ್ನು ಸಮಾಜದ ಒಳಿತಿಗಾಗಿ ಉಪಯೋಗಿಸುವ ಪ್ರಯತ್ನಗಳು ಎಲ್ಲೆಡೆ ನಡೆದಿದ್ದು, ಅವು ಸಂಶೋಧನೆಗೂ ಒಳಪಟ್ಟಿವೆ. ಧ್ಯಾನ ಮಾನಸಿಕ ಪ್ರಕ್ರಿಯೆಯಾದ್ದರಿಂದ ಮನೋವಿಜ್ಞಾನಿಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಸಿದ್ದಾರೆ.

### ಧ್ಯಾನ ಮತ್ತು ಧ್ಯಾನಕ್ರಮಗಳು

ಧ್ಯಾನ ಸಂಸ್ಕೃತದ ಧ್ಯಾನಂ ಎಂಬ ಪದದ ಕನ್ನಡ ರೂಪವಾಗಿದೆ. ಈ ಪದ 'ಚಿಂತನೆ', 'ಮನಸ್ಸಿನಲ್ಲಿ ಯೋಚಿಸುವುದು', 'ಮನನ' ಎಂಬ ಮೂಲ ಅರ್ಥವನ್ನು ಹೊಂದಿದೆ. ಧ್ಯಾನ ಪ್ರಕ್ರಿಯೆಯ ಮುಖ್ಯ ಉದ್ದೇಶ ಮನಸ್ಸನ್ನು ಸತತವಾಗಿ ಯಾವುದೇ ಒಂದು ವಸ್ತು ಅಥವಾ ವಿಷಯ (ಮಂತ್ರ, ಇತ್ಯಾದಿ)ದ ಮೇಲೆ ಗಮನವನ್ನು ಸ್ಥಿರವಾಗಿ ನಿಲ್ಲಿಸುವುದು. ಪತಂಜಲಿ ಮಹರ್ಷಿಗಳು ತಮ್ಮ 'ಯೋಗಸೂತ್ರ' ಎಂಬ ಗ್ರಂಥದಲ್ಲಿ ಧಾರಣಾ, ಧ್ಯಾನ ಮತ್ತು ಸಮಾಧಿ ಎಂಬುದಾಗಿ ಮೂರು ಹಂತಗಳನ್ನು ಗುರುತಿಸಿದ್ದಾರೆ. ಅವರ ಪ್ರಕಾರ ಯಾವುದಾದರೂ ವಸ್ತು (ದೇವತೆಯ ವಿಗ್ರಹ ಇತ್ಯಾದಿ) ಅಥವಾ ವಿಷಯ (ಮಂತ್ರ, ಇತ್ಯಾದಿ)ದ ಮೇಲೆ ಏಕಾಗ್ರತೆಯನ್ನು ಹೊಂದುವುದು. ಧಾರಣ ಈ ಪ್ರಕ್ರಿಯೆ ನಿರಂತರವಾಗಿ 'ತೈಲಧಾರೆಯಂತೆ', ಮುಂದುವರಿದಾಗ ಅದು ಧ್ಯಾನವೆನಿಸಿಕೊಳ್ಳುತ್ತದೆ. ಧ್ಯಾನ ಸಮಾಧಿಯಲ್ಲಿ ಪರಿಸಮಾಪ್ತಿಯನ್ನು ಹೊಂದುತ್ತದೆ. ಆಂಗ್ಲ ಭಾಷೆಯಲ್ಲಿ 'ಧಾರಣೆ'ವನ್ನು Concentration ಅಥವಾ Centering ಎಂತಲೂ ಧ್ಯಾನವನ್ನು Meditation ಎಂತಲೂ ಕರೆಯಲಾಗಿದೆ.

ಬೌದ್ಧ ಧರ್ಮದಲ್ಲಿ 'ವಿಪಶ್ಯನ' ಎಂಬ ಧ್ಯಾನ ಕ್ರಮವನ್ನು ಅಭ್ಯಾಸ ಮಾಡಲಾಗುತ್ತದೆ. ಈ ಕ್ರಮದಲ್ಲಿ ಗಮನವನ್ನು ಬಾಹ್ಯ ವಸ್ತುವಿನ ಮೇಲೆ ಹರಿಸುವ ಬದಲು ನಮ್ಮ ಆಲೋಚನಾ ಸರಣಿಯ ಮೇಲೆ ಹರಿಸಬೇಕಾಗುತ್ತದೆ. ಹೀಗೆ ಮಾಡುವಾಗ ನಮ್ಮ ಗಮನ ಆಲೋಚನಾ ಸರಣಿಯ ಸಾಕ್ಷಿಯಾಗಿರುತ್ತದೆಯೆ ಹೊರತು ನಮ್ಮಲ್ಲಿ ಮೂಡುವ ಆಲೋಚನೆ (ಭಾವನೆಗಳನ್ನೊಳಗೊಂಡು)ಗಳ ಬಗ್ಗೆ ಯಾವುದೇ ಪ್ರತಿಕ್ರಿಯೆಯನ್ನು ತೋರಿಸುವುದರ ಕಡೆಗೆ ಇರುವುದಿಲ್ಲ. ಈ ಅಭ್ಯಾಸ ಮಂತ್ರ ಜಪಕ್ಕಿಂತ ಕಠಿಣವಾದದ್ದು.

ಈ ವಿಧಗಳ ಧಾರಣ–ಧ್ಯಾನ ಮತ್ತು ವಿಪಶ್ಯನವನ್ನು ಪ್ರಕ್ರಿಯೆಗಳು ಮನೋವೈಜ್ಞಾನಿಕ ಪ್ರಕ್ರಿಯೆಯ ದೃಷ್ಟಿಯಿಂದ ವಿಭಿನ್ನವಾಗಿದ್ದು, ಸಂಶೋಧಕರು ಅವುಗಳನ್ನು ಬೇರೆಯಾಗಿ ಗುರುತಿಸಿದ್ದಾರೆ. ಧಾರಣ–ಧ್ಯಾನ ಕ್ರಮವನ್ನು "Concentration–Meditation" ಎಂತಲೂ, ವಿಪಶ್ಯನವನ್ನು "awareness" ಅಥವಾ "insight" ಅಥವಾ "Mindfulness–Meditation ಎಂತಲೂ ಕರೆದಿದ್ದಾರೆ. ಇವೆರಡು ಧ್ಯಾನ ಕ್ರಮವಲ್ಲದೆ, ಸೂಫಿ ಸಂತರು ವೃತ್ತಾಕಾರದಲ್ಲಿ ನಿಂತು ವಿವಿಧ ಭಂಗಿಗಳಲ್ಲಿ ನೃತ್ಯದ ರೀತಿಯಲ್ಲಿ ಮೈಮನಗಳನ್ನು ತಲ್ಲೀನಗೊಳಿಸುವ ವಿಧವನ್ನು ಸೂಫಿ ದರ್ವೇಶ ನೃತ್ಯ (Sufi Dervish Dance), ಗತ್ಯಾತ್ಮಕ ಧ್ಯಾನ "Dynamic Meditation" ಎಂದು ಕರೆದಿದ್ದಾರೆ. ಇಷ್ಟಲ್ಲದೆ ಗಮನಕೇಂದ್ರೀಕರಣ "concentration" ಮತ್ತು ಲಕ್ಷ್ಯಪೂರ್ಣತೆ (mindfulness) ಈ ಎರಡೂ ಅಂಶಗಳನ್ನೊಳಗೊಂಡ ಭಾವಾತೀತ ಧ್ಯಾನ ("Transcendental Meditation") ಕ್ರಮವನ್ನು ಮಹರ್ಷಿ ಮಹೇಶಯೋಗಿಗಳು 1960 ರಿಂದ ಮುಂದೆ ಪ್ರಚಲಿತಗೊಳಿಸಿದ್ದಾರೆ. ಇವುಗಳಲ್ಲದೆ ಪೌರಾತ್ಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬೇರೆ ಬೇರೆ ರೀತಿಯ ಧ್ಯಾನ ಕ್ರಮಗಳು ಪ್ರಚಲಿತವಾಗಿವೆ. ಜಪಾನ್ ದೇಶದಿಂದ ಜೆನ್ ಧ್ಯಾನಕ್ರಮ (Zen Meditation) ಪ್ರಪಂಚದ ಇತರ ದೇಶಗಳಿಗೆ ಹರಡಿದೆ. ಇನ್ನೂ ನಾನಾರೀತಿಯ ಧ್ಯಾನಕ್ರಮಗಳು ರೂಢಿಯಲ್ಲಿವೆ. ಆ ಎಲ್ಲ ಕ್ರಮಗಳೂ ಮೂಲತಃ ಧಾರಣ ಧ್ಯಾನ ಅಥವಾ ವಿಪಶ್ಯನ ಧ್ಯಾನ ಪ್ರಕ್ರಿಯೆ ಮೇಲೆ ಆಧಾರಿತವಾಗಿರುತ್ತವೆ ಎಂದರೆ ತಪ್ಪಾಗಲಾರದು.

### ಅರಿವು

ಅರಿವು ಎಂಬ ಪದ ನಮ್ಮ ದೈನಂದಿನ ಜೀವನದಲ್ಲಿ ಹಾಸು–ಹೊಕ್ಕಾಗಿದೆ. ನಮಗರಿವಿಲ್ಲದೆ ಆ ಪದವನ್ನು ಎಷ್ಟು ಬಾರಿ ಬಳಸುತ್ತೇವೋ! ಅರಿವೆಂದರೇನು? ಈ ಪದದ ವ್ಯಾಖ್ಯೆಯನ್ನು ನೀಡುವುದು ಕಷ್ಟ. ಅದರ ಬಗ್ಗೆ ಕೆಲವು ವಿವರಣೆಗಳನ್ನು ನೀಡಬಹುದಷ್ಟೆ. ಮೊದಲನೆಯದಾಗಿ, 'ಅರಿವು' ಜೀವಿಗಳಲ್ಲಿ ಇರತಕ್ಕ ಮೂಲಸ್ಥಿತಿ. ಅರಿವನ್ನು ಎರಡು ರೀತಿಯಾಗಿ ವಿಭಜಿಸಲಾಗಿದೆ ಸ್ವ–ಅರಿವು (Self-awareness) ಮತ್ತು ಪರ–ಅರಿವು (other awareness). ಸ್ವ–ಅರಿವೆಂದರೆ 'ನಮ್ಮತನದ', 'ನಮ್ಮ ಅಸ್ತಿತ್ವದ' ಬಗ್ಗೆ ಇರುವ ಅರಿವು. ಇಂತಹ ಅರಿವು ಎಲ್ಲ ಜೀವಿಗಳಲ್ಲೂ ಇರುತ್ತದೆ ಎಂದರೆ ತಪ್ಪಾಗಲಾರದು. ಕ್ರಿಮಿ–ಕೀಟಗಳಲ್ಲಿ ಸರಿ–ಸೃಪಗಳಲ್ಲಿ, ಈ ಸ್ವ–ಅರಿವು ಹೇಗಿರುತ್ತದೋ ಹೇಳುವುದು ಕಷ್ಟ. ಆದರೆ ಸಸ್ತನಿ ಪ್ರಾಣಿಗಳಲ್ಲಿ ಇದನ್ನು ಗುರುತಿಸುವುದು ಸುಲಭ. ನಮಗೆಲ್ಲಾ ತಿಳಿದಿರುವಂತೆ ಹಸು, ನಾಯಿ, ಆನೆ, ಇವುಗಳಿಗೆ ನಾವು ಹೆಸರಿಟ್ಟು ಕರೆಯುತ್ತೇವೆ. ಅವು ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸುತ್ತವೆ. ಆದರೆ ಮನುಷ್ಯರಿಗಿರುವಂತೆ ಪ್ರಾಣಿಗಳಲ್ಲಿ ಅರಿವಿನ ಬಗ್ಗೆ ಅರಿವು ಇರುವಂತೆ ತೋರುವುದಿಲ್ಲ. ಅಂದರೆ (I am aware that I am aware) ನನಗೆ ಅರಿವಿದೆ ಎಂಬ ಅರಿವು ನನಗಿದೆ. ಪ್ರಾಣಿಗಳಲ್ಲಿ ಈ ಲಕ್ಷಣ ಇದೆಯೇ ಎಂದರೆ ಉತ್ತರಿಸುವುದು ಕಷ್ಟ.

ಪರ–ಅರಿವು ಎಂದರೆ ನಮ್ಮ ಸುತ್ತಲಿನ ಪ್ರಪಂಚದ ಬಗೆಗಿನ ಅರಿವು. ಪ್ರಾಣಿಗಳಲ್ಲಿ ಪರ ಅರಿವು ಚೆನ್ನಾಗಿಯೇ ಇರುತ್ತದೆ. ಕೆಲವು ವಿಚಾರಗಳಲ್ಲಿ ಮನುಷ್ಯನಿಗಿಂತ ಹೆಚ್ಚಾಗಿ ಪ್ರಾಣಿಗಳಲ್ಲಿ ಈ ಅರಿವು ಇರುತ್ತದೆ. ಆದರೆ ಸ್ವ–ಅರಿವಿನ ಬಗ್ಗೆ ಹೇಳಿದಂತೆ ಪರ–ಅರಿವಿನ ವಿಷಯದಲ್ಲೂ ಪ್ರಾಣಿಗಳಿಗೂ ಮನುಷ್ಯರಿಗೂ ವ್ಯತ್ಯಾಸವಿದೆ. ಪ್ರಾಣಿಗಳಿಗೆ ತಮ್ಮ ಸುತ್ತಲಿನ ಪರಿಸರದ ಅರಿವಿರುತ್ತದೆ. ಆದರೆ ಮನುಷ್ಯನಿಗೆ ಇದಕ್ಕೆ ಮಿಗಿಲಾಗಿ ವಿಶಾಲ ಪ್ರಪಂಚದ ಅರಿವಿದೆ. ಹೀಗೆ ಮನುಷ್ಯ ಇತರ ಪ್ರಾಣಿಗಳಿಗಿಂತ ಹೆಚ್ಚಿನ ಅರಿವಿನ ಮಟ್ಟದಲ್ಲಿದ್ದಾನೆ. ಹಾಗಾದರೆ ಅರಿವಿಗೆ ಇನ್ನೂ ಮೇಲ್ಪಟ್ಟ ಇರುವುದು ಎಂದರೇನು? ಧ್ಯಾನಕ್ಕೂ ಈ ಮೇಲ್ಮಟ್ಟಗಳಿಗೂ ಇರುವ ಸಂಬಂಧವಾದರೂ

Digitised by Bharatavani, CIIL

ಏನು ಎಂಬುದನ್ನು ನಾವು ತಿಳಿಯಬೇಕಾಗಿದೆ. ಈ ಪ್ರಶ್ನೆಗಳಿಗೆ ಉತ್ತರ ನೀಡಬೇಕಾದರೆ ಅರಿವಿನ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ತಿಳಿಯಬೇಕು.

## ಅರಿವಿನ ಸ್ಥಿತಿಗಳು

ನೀವು ಅರಿವಳಿಕೆ ತಜ್ಞರ (Anesthetist) ಬಗ್ಗೆ ತಿಳಿದಿದ್ದೀರಿ. ಯಾವುದೇ ಮುಖ್ಯವಾದ ದೊಡ್ಡ ಪ್ರಮಾಣದ ಶಸ್ತ್ರ ಚಿಕಿತ್ಸೆ ನಡೆಯಬೇಕಾದರೆ ಇವರು ಇರಲೇಬೇಕು. ಇವರ ಕೆಲಸ ಅರಿವನ್ನು ಅಳಿಸುವುದು/ತಪ್ಪಿಸುವುದು. ಇದಕ್ಕೆ Anesthesia ಎಂದು ಕರೆಯುತ್ತಾರೆ. ಶಸ್ತ್ರ ಚಿಕಿತ್ಸೆಗೊಳಪಡುವ ವ್ಯಕ್ತಿ ಅದರ ನೋವನ್ನು ಅನುಭವಿಸದಂತೆ ಮಾಡುವುದು ಇವರ ಕೆಲಸ. ಚಿಕ್ಕ ಪ್ರಮಾಣದ ಶಸ್ತ್ರಚಿಕಿತ್ಸೆಯಲ್ಲಿ ಉದಾಹರಣೆಗೆ ದಂತ ಚಿಕಿತ್ಸೆಯಲ್ಲಿ ವೈದ್ಯರೇ ಆ ಭಾಗಕ್ಕೆ ನೋವನ್ನು ಅನುಭವಿಸಿದಂತೆ ಮಾಡಲು ಚುಚ್ಚುಮದ್ದಿನಿಂದ ಅರಿವಳಿಕೆಯ ಔಷಧಿಯನ್ನು ನೀಡುತ್ತಾರೆ. ಹೀಗೆ ದೇಹದ ಚಿಕ್ಕ ಭಾಗದಿಂದ ಹಿಡಿದು ಇಡೀ ದೇಹ ಬಗ್ಗೆಯೇ ನಮ್ಮ ಬಗ್ಗೆಯೇ ನಮ್ಮ ಪರಿಸರದ ಬಗ್ಗೆಯೇ ನಮ್ಮ ಅರಿವನ್ನು ಒಂದಷ್ಟು ಕಾಲ ತಪ್ಪಿಸಬಹುದು. ಈ ಕಾಲದಲ್ಲಿ ಏನು ನಡೆಯುತ್ತದೆ ಎಂಬುದು ನಮ್ಮ ತಿಳುವಳಿಕೆಯಲ್ಲಿ ಇರುವುದಿಲ್ಲ. ನಾವು ಎಚ್ಚರವಾಗಿದ್ದರೂ ಹಲ್ಲು ಕಿತ್ತದ್ದು ಗೊತ್ತಾಗಿರುವುದಿಲ್ಲ. ದೊಡ್ಡ ಪ್ರಮಾಣದ ಶಸ್ತ್ರಚಿಕಿತ್ಸೆಯಾದರೆ ನಮಗೆ ಎಚ್ಚರವೇ ಇರುವುದಿಲ್ಲ.

ಎಚ್ಚರವೆಂದರೇನು? ನಾನು ಯಾರು, ಎಲ್ಲಿದ್ದೇನೆ, ನನ್ನ ಸುತ್ತ ಏನಿದೆ, ಏನು ಮಾಡುತ್ತಿದ್ದೇನೆ ಇತ್ಯಾದಿ ಅಂಶಗಳನ್ನೊಳಗೊಂಡ ಅರಿವಿನ ಸ್ಥಿತಿ. ಈ ಅರಿವಿನ ಸ್ಥಿತಿಯಲ್ಲಿ ಈ ಭೌತಿಕ ಜಗತ್ತು ನಮ್ಮ ಅನುಭವ ಕ್ಷೇತ್ರವಾಗಿರುತ್ತದೆ. ಆಕಸ್ಮಿಕವಾಗಿಯೋ ಅಥವಾ ಅರಿವಳಿಕೆ ಔಷಧಿಯ ಪ್ರಭಾವದಿಂದಲೊ ನಾವು ಎಚ್ಚರ ತಪ್ಪಬಹುದು. ಆಗ ನಮ್ಮ ಅನುಭವ ಏನಾಗಿರುತ್ತದೆ? ಎಲ್ಲರಿಗೂ ಈ ಅನುಭವ ಇರುವುದಿಲ್ಲ. ಅನುಭವ ಇದ್ದವರು ಏನು ಹೇಳುತ್ತಾರೆ? ಸಾಮಾನ್ಯ ಉತ್ತರವೆಂದರೆ "ನನಗೇನು ಗೊತ್ತಾಗಲಿಲ್ಲ" "ನನಗೇನು ತಿಳಿಯಲಿಲ್ಲ" ಇತ್ಯಾದಿ. ಇಂತಹ ಅನುಭವ ಗಾಢವಾದ ನಿದ್ರೆಯಲ್ಲಿ ಎಲ್ಲರಿಗೂ ಉಂಟಾಗುತ್ತದೆ. ಕಿವಿಯ ಬಳಿ ತಮಟೆ ಬಡೆದರೂ ಎಚ್ಚರವಾಗದ ಭೂಪರಿದ್ದಾರೆ! ಇಂತಹ ನಿದ್ರೆಯಲ್ಲಿ ನಮಗೆ ಯಾವ ರೀತಿಯ ಅನುಭವವೂ ಇರುವುದಿಲ್ಲ.

ಈ ಎಚ್ಚರ ಮತ್ತು ಗಾಢನಿದ್ರೆಗಳ ಮಧ್ಯೆ ನಾವು ಕನಸು ಕಾಣುತ್ತೇವೆ. ಕನಸೂ ಕೂಡ ಎಚ್ಚರದ ಸ್ಥಿತಿಯಂತೆ ಇರುತ್ತದೆ. ಕನಸಿನಲ್ಲೂ 'ಭೌತಿಕ ಜಗತ್ತಿನ' ಅನುಭವ ಇರುತ್ತದೆ. ನಾವು ಎಲ್ಲಿಯೋ ಇರುತ್ತೇವೆ, ಏನೋ ಮಾಡುತ್ತೇವೆ, ಸುತ್ತ, ಮುತ್ತ ಏನೋ ಇರುತ್ತದೆ. ನಗುತ್ತೇವೆ, ಅಳುತ್ತೇವೆ, ಓಡುತ್ತೇವೆ, ವಿಮಾನದಲ್ಲಿ ಪ್ರಯಾಣ ಮಾಡುತ್ತೇವೆ, ನದಿಯಲ್ಲಿ ಈಜುತ್ತೇವೆ, ತಿನ್ನುತ್ತೇವೆ ಇತ್ಯಾದಿ. ಆದ್ದರಿಂದ 'ಎಚ್ಚರದಂತೆ' ಇದೂ ಅರಿವಿನ ಸ್ಥಿತಿಯೆ. ಆದರೆ ಕೆಲವೊಮ್ಮೆ ಇನ್ನೂ ವಿಚಿತ್ರವಾದ ಅನುಭವ ಉಂಟಾಗುತ್ತದೆ. ಉದಾಹರಣೆಗೆ, ಮೈಸೂರಿನ ನಮ್ಮ ಮನೆ ಬೆಂಗಳೂರಿನ ಅಥವಾ ಇನ್ನಾವುದೂ ಊರಿನಲ್ಲಿ ಇರುವಂತೆ ಅನುಭವವಾಗಬಹುದು. ಸತ್ತು ಹೋಗಿರುವ ಸಂಬಂಧಿಕರ ಜೊತೆ ಸಂಭಾಷಿಸುತ್ತಿರಬಹುದು. ನಮ್ಮ ದೇಹದ ಅರ್ಧಭಾಗ ಪ್ರಾಣಿಯ ದೇಹದಂತೆ ಭಾಸವಾಗಬಹುದು. ಆದರೆ ಇವುಗಳು ವಿಚಿತ್ರ ಎಂದೆನಿಸುವುದಿಲ್ಲ. ನಮಗೆ ಕನಸು, ಕನಸೆಂದು ತಿಳಿಯುವುದು 'ಎಚ್ಚರ'ವಾದ ಮೇಲೆ. ಹಾಗಾದರೆ ಕನಸಿನ ಪ್ರಪಂಚದಲ್ಲಿ ಅನುಭವ ಪಡೆದವರಾರು? ಎಚ್ಚರವಾಗಿದ್ದವರು ಯಾರು? ಗಾಢನಿದ್ರೆಯ ಅನುಭವ ಪಡೆದವರಾರು? ನಿದ್ರೆಯಿಂದ ಎಚ್ಚೆತ್ತವರಾರು? ಈ ಪ್ರಶ್ನೆಗಳು ಮನುಷ್ಯಕುಲವನ್ನೇ ವಿಸ್ಮಯಗೊಳಿಸಿವೆ. ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ವಿಶ್ವದಲ್ಲೆಡೆ ಎಲ್ಲ ಸಂಸ್ಕೃತಿಗಳಲ್ಲೂ ನಡೆದಿದೆ. 'ನಾನು ಯಾರು?' (ಕೋಹಂ?) ಎಂಬ ಪ್ರಶ್ನೆ ಎಲ್ಲರನ್ನೂ ಕಾಡಿದೆ. ಈ ಪ್ರಶ್ನೆಗೆ ಉತ್ತರ ಪಡೆಯುವ ಪ್ರಯತ್ನವೇ ಧ್ಯಾನ.

## ಅರಿವಿನ ಮೇಲ್ಮಟ್ಟಗಳು

ಅರಿವಿನಲ್ಲಿ ಮಟ್ಟಗಳು, ಮಜಲುಗಳು ಇರಲು ಸಾಧ್ಯವೆ? ಸಾಧ್ಯ ಎಂಬುದಾಗಿ ನಮ್ಮ ಭಾರತೀಯ ಪರಂಪರೆಯಲ್ಲಿ ವಿಶದವಾಗಿ ಉಪನಿಷತ್ತುಗಳಲ್ಲಿ ಮತ್ತು ಯೋಗಶಾಸ್ತ್ರದಲ್ಲಿ ಹೇಳಲಾಗಿದೆ. ಆಧುನಿಕ ಮನೋವಿಜ್ಞಾನ ಕೂಡ ಇದನ್ನು ಪುಷ್ಟೀಕರಿಸಿದೆ. ಈಗಾಗಲೇ ಸ್ವ ಅರಿವು ಮತ್ತು ಪರ ಅರಿವಿನ ಬಗ್ಗೆ ತಿಳಿಸಿದ್ದಾಗಿದೆ. ಪ್ರಾಣಿಗಳಲ್ಲಿ ಕೂಡ ಈ ಎರಡು ವಿಧವಾದ ಅರಿವು ಇರುತ್ತದೆ ಎಂದು ತಿಳಿದಿದ್ದೇವೆ. ಆದರೆ ಮನುಷ್ಯನ ಈ ಎರಡು ರೀತಿಯ ಅರಿವಿಗೂ, ಪ್ರಾಣಿಗಳಲ್ಲಿಯ ಅರಿವಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ ಎಂಬುದು ನಮ್ಮ ಅನುಭವಕ್ಕೆ ಬಂದಿರುವ ವಿಷಯ. ಮುಖ್ಯವಾದ ವ್ಯತ್ಯಾಸವೆಂದರೆ ಮನುಷ್ಯನಿಗೆ ಅರಿವಿನ ಬಗ್ಗೆ ಅರಿವಿದೆ ಎಂದು ಈಗಾಗಲೇ ಹೇಳಿದೆ. ಇದರಿಂದಾಗಿ ಮನುಷ್ಯ ಎಚ್ಚರ, ನಿದ್ರೆ, ಕನಸು ಎಂಬ ಸ್ಥಿತಿಗಳ ಬಗ್ಗೆ ಆಲೋಚಿಸಬಲ್ಲವನಾಗಿದ್ದು ಅವುಗಳ ಲಕ್ಷಣಗಳ ಬಗ್ಗೆ ನಿರೂಪಣೆ ನೀಡಬಲ್ಲವನಾಗಿದ್ದಾನೆ. ಆದರೆ ಪ್ರಾಣಿಗೆ ಇದು ಸಾಧ್ಯವಾಗುವುದಿಲ್ಲ. ಈ ಮೂರು ಅರಿವಿನ ಸ್ಥಿತಿಗಳೇ ಅಲ್ಲದೆ ಮನುಷ್ಯನಲ್ಲಿ ಸ್ವಾಭಾವಿಕವಾಗಿಯೋ ಅಥವಾ ಕಾರಣಾಂತರಗಳಿಂದಲೋ ಬೇರೆಯಾದಂತಹ ಅರಿವಿನ ಸ್ಥಿತಿಗಳು ಉಂಟಾಗುತ್ತವೆ. ಉದಾಹರಣೆಗೆ, ಮಹಾತ್ಮರಾದಂತಹ ಬುದ್ಧ, ಮಹಾವೀರ, ಏಸು, ಶಂಕರಾಚಾರ್ಯ, ನಾನಕ್, ದಾಸಶ್ರೇಷ್ಠರುಗಳಾದ ಪುರಂದರ, ಕನಕದಾಸ, ಚೈತನ್ಯ ಮಹಾಪ್ರಭು, ಮೀರಾ, ಅಕ್ಕಮಹಾದೇವಿ, ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿ, ಶ್ರೀ ಅರವಿಂದೂ ಇನ್ನೂ ಮುಂತಾದವರು ಅರಿವಿನ ಮೇಲ್ಮಟ್ಟಗಳನ್ನು ತಲುಪಿದವರಾಗಿದ್ದರೆಂದು ನಾವು ತಿಳಿದಿದ್ದೇವೆ. ಈ ಎಲ್ಲ ಮಹನೀಯರ ಪ್ರಕಾರ ಮನುಷ್ಯ ತನ್ನ ದೈನಂದಿನ ಜೀವನದಲ್ಲಿ ತನ್ನ ಅರಿವನ್ನು ಭೌತಿಕ ಜಗತ್ತಿನ ಕಾಲ–ದೇಶಗಳ ಪರಿಮಿತಿಗೆ ಮಿತಿಗೊಳಿಸಿಕೊಂಡಿದ್ದಾರೆ. ಆದರೆ ಪ್ರಯತ್ನಪಟ್ಟಲ್ಲಿ ಈ ಮಿತಿಯನ್ನು ದಾಟಿ ಅರಿವನ್ನು ಹಿಗ್ಗಿಸಿಕೊಳ್ಳಲು ಸಾಧ್ಯವಿದೆ. ಹಾಗಾದಾಗ ಮನುಷ್ಯ "ಇನ್ನೊಂದು ಎಚ್ಚರದ ಸ್ಥಿತಿಯನ್ನು" ಅನುಭವಿಸಬಲ್ಲ. ಆಗ ನಾವು ಹೇಗೆ ಕನಸಿನಲ್ಲಿರುವ ತನಕ ಅದೇ ವಾಸ್ತವ ಎಂಬುದಾಗಿ ತಿಳಿದು, ಎಚ್ಚರಗೊಂಡಾಗ ಅದರ ಅವಾಸ್ತವತೆಯನ್ನು ಗ್ರಹಿಸುತ್ತೇವೊ, ಹಾಗೆಯೇ ಆ ಇನ್ನೊಂದು ಎಚ್ಚರದ ಸ್ಥಿತಿಗೆ ತಲುಪಿದಾಗ ನಮ್ಮ ದೈನಂದಿನ ಜೀವನ ಕೂಡ ಅವಾಸ್ತವ ಎಂದು ತಿಳಿಯಲ್ಪಡುತ್ತದೆ. ಇದನ್ನೇ ವೇದ, ಉಪನಿಷತ್ತುಗಳು, ಗೀತೆ, ಯೋಗಸೂತ್ರ, ಜೈನ ಮತ್ತು ಬೌದ್ಧಧರ್ಮಗಳು ತಮ್ಮದೇ ಆದ ರೀತಿಯಲ್ಲಿ ತಿಳಿಸಿವೆ. ಪಾಶ್ಚಾತ್ಯ ಸಂಸ್ಕೃತಿಗಳಲ್ಲಿ ಕೂಡ ಅನುಭಾವಿಗಳು ಮತ್ತು ಸಂತರುಗಳು ಮನುಷ್ಯನ ಈ ಸಾಧನೆಯ ಬಗ್ಗೆ ತಿಳಿಸಿದ್ದಾರೆ. ಆಧುನಿಕ ಮನೋವಿಜ್ಞಾನದಲ್ಲಿ ಕೂಡ ಈ ಸಾಧ್ಯತೆಯನ್ನು ವಿಲಿಯಂ ಜೇಮ್ಸ್‌ರಂತಹ ಶ್ರೇಷ್ಠರು ಒಪ್ಪಿಕೊಂಡಿದ್ದಾರೆ. ಭಗವದ್ಗೀತೆಯಲ್ಲಿ ಈ ಬಗ್ಗೆ ಶ್ರೀಕೃಷ್ಣ ಹೀಗೆ ಹೇಳುತ್ತಾನೆ.

> **"ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿಸಂಯಮೀ।**
> **ಯಸ್ಯಾಂ ಜಾಗೃತಿ ಭೂತಾನೀ ಸಾನಿಶಾ ಪಶ್ಯೊತೋ ಮುನೇಃ॥"**

ಯಾವುದು ಎಲ್ಲ ಜೀವಿಗಳಿಗೆ ಕತ್ತಲೆಯೋ ಆ ಸಮಯದಲ್ಲಿ ಸಂಯಮಿಯಾದವನು (ಯೋಗಿಯಾದವನು) ಎಚ್ಚರವಾಗಿರುತ್ತಾನೆ. ಯಾವಾಗ ಎಲ್ಲ ಜೀವಿಗಳೂ ಎಚ್ಚರವಾಗಿರುತ್ತವೋ ಆ ಕತ್ತಲೆಯನ್ನು ಮುನಿಯು (ಯೋಗಿಯು) ನೋಡುತ್ತಾನೆ.

Digitised by Bharatavani, CIIL

ಇಂತಹ ಉನ್ನತವಾದ ಅರಿವನ್ನು ಪಡೆಯಲು ಭಾರತೀಯ ಪರಂಪರೆಯಲ್ಲಿ ಸಾವಿರಾರು ಋಷಿ–ಮುನಿಗಳು, ಯೋಗಿಗಳು, ಜಿನರು, ಬೌದ್ಧಭಿಕ್ಷುಗಳು, ಶರಣರು, ದಾಸವರೇಣ್ಯರುಗಳು, ಮುಂತಾದವರು ನಾನಾ ಮಾರ್ಗಗಳನ್ನು ಅನುಸರಿಸಿದ್ದಾರೆ. ತಮ್ಮ ಗುರಿಯಡೆಗೆ ಪ್ರಯಾಣ ಬೆಳೆಸುವಾಗ ತಾವು ಕಂಡ ಅರಿವಿನ ಮಜಲುಗಳನ್ನು ತಮ್ಮದೇ ಆದ ಭಾಷೆಯಲ್ಲಿ ವರ್ಣಿಸಿದ್ದಾರೆ. ಉಪನಿಷತ್ತುಗಳಲ್ಲಿ, ಯೋಗಸೂತ್ರದಲ್ಲಿ, ಇವುಗಳನ್ನು ಸಮಾಧಿಯ ಹಂತಗಳೆಂದು ವರ್ಣಿಸಲಾಗಿದೆ. ಕುಂಡಲಿನೀ ಯೋಗದಲ್ಲಿ ಷಟ್‌ಚಕ್ರಗಳೆಂದೂ, ಬೌದ್ಧಗ್ರಂಥಗಳಲ್ಲಿ ಚಾನಾ ಎಂದು ಶರಣರ ವಚನಗಳಲ್ಲಿ ಷಟ್‌ಸ್ಥಲಗಳೆಂದೂ ಈ ಹಂತಗಳನ್ನು ವರ್ಣಿಸಲಾಗಿದೆ.

ಆಧುನಿಕ ಮನೋವಿಜ್ಞಾನದಲ್ಲಿ ಇವುಗಳೆಲ್ಲವನ್ನೂ 'ಬದಲಾದ ಅರಿವಿನ ಸ್ಥಿತಿಗಳು' (Altered States of Consciousness) ಎಂಬುದಾಗಿ ಕರೆದಿದ್ದಾರೆ. ಧ್ಯಾನ, LSD ಮತ್ತಿತರ ಮಾದಕವಸ್ತು ಸೇವನೆ, ಸಂಮ್ಮೋಹನ ವಿದ್ಯೆ (Hypnotism) ಇಂದ್ರಿಯ ಸಂವೇದನಗಳ ವಂಚನೆ (Sensory Deprivation) ಇವುಗಳಿಂದ ನಮ್ಮ ಅರಿವಿನ ಸ್ಥಿತ್ಯಂತರ ಮಾಡಲು ಸಾಧ್ಯ ಎಂಬುದಾಗಿ ಗುರುತಿಸಿದ್ದಾರೆ. ಕಳೆದ ಐದು ದಶಕಗಳಲ್ಲಿ ಈ ವಿಷಯವಾಗಿ ಹೆಚ್ಚಿನ, ಸಂಶೋಧನೆ ನಡೆದಿದ್ದು 'ವ್ಯಕ್ತಿ ಅತೀತ ಮನೋವಿಜ್ಞಾನ'ವೆಂಬ (Transpersonal Psychology) ಶಾಖೆಯೊಂದು ಅಸ್ತಿತ್ವಕ್ಕೆ ಬಂದಿದೆ. ಈ ಮನೋವಿಜ್ಞಾನ ಶಾಖೆಯು ಭೂಖಂಡದ ವಿವಿಧ ಸಂಸ್ಕೃತಿಗಳಲ್ಲಿ ಪ್ರಚಲಿತವಿರುವ ವಿವಿಧ ಧರ್ಮಗಳಲ್ಲಿ ಮತ್ತು ಜನಪದಗಳಲ್ಲಿ ಅರಿವಿನ ಸ್ವರೂಪ ಮತ್ತು ಮಜಲುಗಳ ಬಗ್ಗೆ ಇರುವ ಎಲ್ಲ ವಿವರಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಮನುಷ್ಯನ ಅರಿವಿನ ಪರಾಕಾಷ್ಠೆಯ ಬಗ್ಗೆ ಸಮಗ್ರವಾದ ತಿಳುವಳಿಕೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಈ ಬಗ್ಗೆ ವ್ಯವಸ್ಥಿತವಾಗಿ ಅಧ್ಯಯನ ನಡೆಸಲು ವ್ಯಕ್ತಿ ಅತೀತ ಮನೋವಿಜ್ಞಾನ ಸಂಸ್ಥೆ (Institute of Transpersonal Psychology) ಎಂಬ ಶಿಕ್ಷಣ ಕೇಂದ್ರವೊಂದು ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಪ್ಯಾಲೊ ಆಲ್ಟೊ ಎಂಬಲ್ಲಿ ಸ್ಥಾಪಿತವಾಗಿದೆ.

– ಕಿ.ಕು.

## ಧಾರ್ಮಿಕ ಶಿಕ್ಷಣ

ಮಗುವಿನ ಸರ್ವತೋಮುಖ ಬೆಳವಣಿಗೆಗಾಗಿ ಉದ್ದೇಶ ಪೂರ್ವಕವಾಗಿ ಧರ್ಮದ ಕುರಿತು ನೀಡುವ ಶಿಕ್ಷಣವೇ ಧಾರ್ಮಿಕ ಶಿಕ್ಷಣ. ಹಾಗಾದರೆ 'ಧರ್ಮ' ಎಂದರೇನು? ಈ ಪ್ರಶ್ನೆಗೆ ಪ್ರಾಚೀನಕಾಲದಿಂದ ಜಿಜ್ಞಾಸುಗಳು, ಋಷಿಮುನಿಗಳು, ಪ್ರವಾದಿಗಳು, ಖಲೀಫರು, ಬಿಶಪ್ಪರು ಉತ್ತರ ಹೇಳುತ್ತಲೇ ಬಂದಿದ್ದಾರೆ. ಆದರೂ ಇದು ಇಂದಿಗೂ ನಿತ್ಯನೂತನವಾದ ಪ್ರಶ್ನೆ.

ಪ್ರಾಚೀನ ಋಷಿಮುನಿಗಳ ಪ್ರಕಾರ "ಯತೋಭ್ಯುದಯನಿಃ ಶ್ರೇಯಸ್ಸಿದ್ಧಿಃ ಸ ಧರ್ಮಃ" "ಧಾರಣಾದ್ಧರ್ಮಮಿತ್ಯಾಹುಃ" ಸಮಾಜದ ಅಭ್ಯುದಯ, ಶ್ರೇಯಸ್ಸಾಧನೆಯನ್ನು ಎತ್ತಿ ಹಿಡಿಯುವುದೇ ಧರ್ಮ. ಜನಮಾನಸವನ್ನು ಅಧಃಪತನದ ಕೊಳದಿಂದ ಶಿಖರದತ್ತ ಒಯ್ಯಲೆಳಸುವುದೇ ಧರ್ಮ. ಪೈಗಂಬರರ ಪ್ರಕಾರ– "ಧರ್ಮವೆಂಬುದು ಹೃದಯ ಪ್ರಕಾಶ, ಅಂತರಂಗದ ಜ್ಯೋತಿ, ಸತ್ಯವನ್ನು ನುಡಿಯುವುದರಲ್ಲಿ ಸಹನಶೀಲತೆಯಲ್ಲಿ, ಪರರಿಗೆ ಉಪಕಾರ ಮಾಡುವುದರಲ್ಲಿ ಇಸ್ಲಾಮ್ ಧರ್ಮ ಹುದುಗಿಕೊಂಡಿದೆ. ಒಟ್ಟಾರೆ ಎಲ್ಲ ಜಿಜ್ಞಾಸುಗಳು ಪ್ರಕಾರ "ಜೀವನದಲ್ಲಿ ಪಾಲಿಸಬೇಕಾದ ಆದರ್ಶಗಳು, ಸದಾಚಾರಗಳು, ರೂಢಿಗಳು ರೀತಿ ನೀತಿಗಳು ಮೌಲ್ಯಗಳು ಮುಪುರಿಗೊಂಡು ಧರ್ಮವೆಂದು ಕರೆಯಲ್ಪಟ್ಟಿದೆ. ವಿಶ್ವ ಸಂಸ್ಕೃತಿಯ ವಿಶ್ವ ಬಂಧುತ್ವದ ಮಾನವ ಧರ್ಮದ ಹೆಗ್ಗುರುತು ಧರ್ಮ."

ಇಂತಹ ಧರ್ಮದ ಪಾಲನೆಗಾಗಿ ಮನಸ್ಸಿನಲ್ಲಿ ಬುದ್ಧಿಯಲ್ಲಿ ವಿದ್ವತ್ಪೂರಿತವಾಗಿ ವಸ್ತುವಾಚಕ ಜ್ಞಾನ ಸಂಗ್ರಹವನ್ನು ತುಂಬುವುದಕ್ಕಿಂತ ಮನಸ್ಸನ್ನು ಜ್ಞಾನದ ಮಾಧ್ಯಮವಾಗಿ ತರಬೇತುಗೊಳಿಸಲು ಇಡಿಯ ಮಾನಸಿಕ ಶಕ್ತಿಯನ್ನು ಯಶಸ್ವಿ ಜೀವನದ ಶಕ್ತಿಯಾಗಿ ಪರಿವರ್ತಿಸಲು ಪೂರಕವಾಗಿ ಧಾರ್ಮಿಕ ಮೌಲ್ಯಗಳನ್ನು ಕಲಿಸಿ ಬೆಳೆಸುವುದು ಧಾರ್ಮಿಕ ಶಿಕ್ಷಣ.

ಮಾನವ ಜೀವನದ ಕುರಿತು ಒಂದು ನಿರ್ದಿಷ್ಟ ಧನಾತ್ಮಕ ದೃಷ್ಟಿಕೋನವನ್ನು ಭೌತಿಕ. ಅಭೌತಿಕ, ನೈತಿಕ, ಆಧ್ಯಾತ್ಮಿಕ, ವಿನಾಶಕ, ಅವಿನಾಶಕ ಹಿತಾಸಕ್ತಿಗಳನ್ನು ಜೀವನ ಮೌಲ್ಯಗಳನ್ನು ಸುಸ್ಪಷ್ಟವಾಗಿ ವ್ಯಾಖ್ಯಾನಿಸಿ ನ್ಯಾಯ ಸಮ್ಮತ ಭಾವನೆ ಮತ್ತು ಪ್ರಮಾಣವನ್ನು ನೀಡಿ ಅದರಂತೆ ವಿದ್ಯಾರ್ಥಿಯ ವ್ಯಕ್ತಿತ್ವ ಪರಿಪೂರ್ಣವಾಗಿ ವಿಕಾಸವಾಗುವಂತೆ ಮಾಡುವುದು ಧಾರ್ಮಿಕ ಶಿಕ್ಷಣ.

**ಭಾರತೀಯ ಶಿಕ್ಷಣ ಪರಂಪರೆಯಲ್ಲಿ ಧಾರ್ಮಿಕ ಶಿಕ್ಷಣ :** ಪ್ರಾಚೀನ ಭಾರತೀಯ ಶಿಕ್ಷಣವು ಆಗ ಭಾರತೀಯರು ಜೀವನವನ್ನು ನೋಡುವ ವ್ಯಾಪಕ ದೃಷ್ಟಿ ಹಾಗೂ ಅವರ ಧರ್ಮಾಚರಣೆಯ ಪರಿಣಾಮವಾಗಿತ್ತು. ಈ ವಿಶಾಲ ದೃಷ್ಟಿ ಈ ಜಗತ್ತಿಗಷ್ಟೇ ಸೀಮಿತವಾಗಿರಲಿಲ್ಲ. ಮರಣಾನಂತರದ ಶಾಶ್ವತ ಜಗತ್ತನ್ನು ಒಳಗೊಂಡಿತ್ತು. ಆದ್ದರಿಂದ ಮಾನವ ಜೀವನವನ್ನು ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುವ ಆಧ್ಯಾತ್ಮಿಕ ಜ್ಞಾನ ಸಂಪಾದನೆಯ ಮೂಲಕ ಬ್ರಹ್ಮಜ್ಞಾನ ಗಳಿಸಿಕೊಂಡು ಆತ್ಮಸಾಕ್ಷಾತ್ಕಾರದೊಂದಿಗೆ ಜೀವನದ ಪರಮಗುರಿಯಾದ ಮೋಕ್ಷಪ್ರಾಪ್ತಿ ಮಾಡಿಕೊಳ್ಳುವುದು ಭಾರತೀಯ ಶಿಕ್ಷಣದ ಪರಮ ಗುರಿಯಾಗಿತ್ತು.

ಮೋಕ್ಷಪ್ರಾಪ್ತಿಗೆ 'ಆತ್ಮ ಸಾಕ್ಷಾತ್ಕಾರ' (Self realisation) ವೇ ಹೆಬ್ಬಾಗಿಲಾಗಿತ್ತು. ಆತ್ಮಸಾಕ್ಷಾತ್ಕಾರವೆಂದರೆ ಜೀವನದ ಅನಂತತೆ, ಪರಿಪೂರ್ಣತೆ, ಪೂರ್ಣಜ್ಞಾನ ಮತ್ತು ಸಚ್ಚಿದಾನಂದಗಳ ಅರಿವು. ಮಾನವನಲ್ಲಿರುವ ಭೌತಿಕದಲ್ಲಿನ ಅಭೌತಿಕದ, ದೈವಿಕತೆಯ ಹಾಗೂ ಬುದ್ಧಿ ದೇಹ ಬಂಧನದಲ್ಲಿ 'ಆತ್ಮ'ದ ದರ್ಶನ. ಈ ಆತ್ಮೋದ್ಧಾರದ ಗುರಿಸಾಧನೆಗೆ ಮೂಲಾಧಾರ ಧರ್ಮಾಚರಣೆಯಾಗಿತ್ತು. ಆದ್ದರಿಂದ ಭಾರತೀಯ ಶಿಕ್ಷಣ ಪರಂಪರೆಯಲ್ಲಿ ಧಾರ್ಮಿಕ ಶಿಕ್ಷಣವೇ ಶಿಕ್ಷಣದ ತಳಪಾಯವಾಗಿತ್ತು.

'ಧರ್ಮ' ಎನ್ನುವುದು ವಸ್ತುವಾಚಕವಲ್ಲ. ಇಂದ್ರಿಯಗೋಚರವೂ ಅಲ್ಲ. ಅದು ಮೌಲ್ಯಗಳನ್ನು ಅಳವಡಿಸಿಕೊಂಡು ಕರ್ಮದ ಮೂಲಕ ಅವುಗಳನ್ನು ನಿಯತವಾಗಿ ಆಚರಿಸಿದ ಫಲ. ಇಂತಹ ಫಲಕ್ಕಾಗಿ ಸದಾಚಾರ. ಸನ್ನಡತೆ, ಸದ್ವಿಚಾರ, ಸದ್ವಿನಿಯೋಗ, ಗುರುಹಿರಿಯರಿಗೆ ಗೌರವ, ದೇವತಾರಾಧನೆ, ಕರ್ತವ್ಯ ಪಾಲನೆ ಮಾಡುವುದು ಶಿಕ್ಷಣದ ಅವಿಭಾಜ್ಯ ಅಂಗವಾಗಿತ್ತು.

ಆದ್ದರಿಂದ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ದೈನಂದಿನ ವ್ಯವಹಾರಗಳಿಂದ ಹಿಡಿದು ಜೀವನದ ಎಲ್ಲ ಆಗು ಹೋಗುಗಳೂ ಧರ್ಮನಿಷ್ಠೆ. ಧಾರ್ಮಿಕ ಆಚರಣೆಗಳಿಂದ ಬಂಧಿತವಾಗಿದ್ದವು. ಈ ಧರ್ಮನಿಷ್ಠೆ. ಧಾರ್ಮಿಕ ಆಚರಣೆಗಳು ಮಾನಸಿಕ ಹಾಗೂ ನೈತಿಕ ಪಾಲನೆಗಳ ಮೂಲಕವಾಗಿ ಹೊರಹೊಮ್ಮಿ ಪರಮಸತ್ಯದ ಅರಿವಾಗುವಲ್ಲಿ ಕಾರಣವಾಗುತ್ತವೆ ಎಂದು ಭಾವಿಸಲಾಗಿತ್ತು. ಇದಕ್ಕಾಗಿ ಶಿಕ್ಷಣದಲ್ಲಿ ಶೀಲಸಂವರ್ಧನೆಗೆ ಅತ್ಯಂತ ಮಹತ್ವ ನೀಡಲಾಗಿತ್ತು.

Digitised by Bharatavani, CIIL

ಚತುರ್ವಿಧ ಪುರುಷಾರ್ಥಗಳ ಸಾಧನೆ ಶಿಕ್ಷಣದ ಇನ್ನೊಂದು ಪ್ರಮುಖ ಗುರಿಯಾಗಿತ್ತು. ಪುರುಷಾರ್ಥ ಸಾಧನೆಯಲ್ಲಿ ಧರ್ಮಕ್ಕೆ ಪ್ರಥಮ ಸ್ಥಾನ, ಏಕೆಂದರೆ 'ಧರ್ಮ' ಜೀವನದ ಜಯದ ಸಾಧನ. ಉಳಿದ ಮೂರು ಪುರುಷಾರ್ಥಗಳಾದ ಅರ್ಥ. ಕಾಮ, ಮೋಕ್ಷಗಳ ಸಾಧನೆಗಳಿಗೂ ಧರ್ಮದ ಆಧಾರ ಅಗತ್ಯ. ಧಾರ್ಮಿಕವಾಗಿ ಪುರುಷಾರ್ಥಗಳ ಆಚರಣೆ ಜೀವನಾನಂದಕ್ಕೆ ಮೂಲ.

**ಏವಮರ್ಥಃ ಚ ಕಾಮಂ ಧರ್ಮಂ ಚೋಪಾಚರನ್ನರಃ ।**
**ಇಹಮುತ್ರಚ ನಿಃಶಲ್ಯ ಮತ್ಯಂತಂ ಸುಖಮಶ್ನುತೇ॥**

'ಯಾವ ವ್ಯಕ್ತಿಯು ಧರ್ಮಾರ್ಥಕಾಮಗಳನ್ನು ಸರಿಯಾಗಿ ಆಚರಿಸುವನೋ ಅವನು ಈ ಲೋಕದಲ್ಲಿಯೂ ಹಾಗೂ ಪರಲೋಕದಲ್ಲಿಯೂ ಆನಂದವನ್ನು ಹೊಂದುವನು'. ಆದ್ದರಿಂದ ಮೋಕ್ಷಸಾಧನೆಗಾಗಿ ಧರ್ಮಯುಕ್ತ ಪುರುಷಾರ್ಥ ಸಾಧನೆ ಅವಶ್ಯವಾಗಿತ್ತು.

ಉತ್ತಮ ಚಾರಿತ್ರ್ಯ ನಿರ್ಮಾಣ ಜೈನ ಶಿಕ್ಷಣದಲ್ಲಿಯ ಪ್ರಮುಖ ಗುರಿಯಾಗಿತ್ತು. ಇದಕ್ಕಾಗಿ ಜೈನ ಧರ್ಮವು ಪಂಚಶೀಲಗಳನ್ನು ಪ್ರತಿಪಾದಿಸಿತ್ತು. ಸತ್ಯ, ಅಹಿಂಸೆ, ಆಸ್ತೇಯ (ಕಳ್ಳತನ ಮಾಡದಿರುವುದು), ಅಪರಿಗ್ರಹ (ಸಂಪತ್ತಿನ ವ್ಯಾಮೋಹಕ್ಕೆ ಒಳಗಾಗಿ ಅದನ್ನು ಸಂಗ್ರಹಿಸದಿರುವುದು) ಮತ್ತು ಬ್ರಹ್ಮಚರ್ಯ. ಈ ಪಂಚಶೀಲಗಳ ಆಚರಣೆಗಳ ಮೂಲಕ ಕೈವಲ್ಯ ಪ್ರಾಪ್ತಿ ಜೈನ ಶಿಕ್ಷಣದ ಗುರಿಯಾಗಿತ್ತು.

ಬೌದ್ಧ ಶಿಕ್ಷಣದಲ್ಲಿಯೂ ಮೋಕ್ಷ ಅಥವಾ ನಿರ್ವಾಣದ ಗುರಿಸಾಧನೆಗಾಗಿ ಶೀಲಸಂವರ್ಧನೆ ಅಥವಾ ಧರ್ಮಾಚರಣೆ ಮುಖ್ಯ ಗುರಿಯಾಗಿರುವುದು ಕಂಡುಬರುತ್ತದೆ. ಇದಕ್ಕಾಗಿ ಬೌದ್ಧ ಧರ್ಮವು ಅಷ್ಟಾಂಗ ಮಾರ್ಗಗಳಾದ ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮಾಂತ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ, ಸಮ್ಯಕ್ ಸಮಾಧಿಗಳನ್ನು ಹಾಗೂ ಚತುರ್ಥ ಶೀಲಗಳಾದ ಸತ್ಯ. ಅಹಿಂಸೆ. ಆಸ್ತೇಯ ಪಾವಿತ್ರ್ಯತೆಗಳನ್ನು ಪ್ರತಿಪಾದಿಸಿತ್ತು.

ಇಸ್ಲಾಂ ಧರ್ಮದ ಶಿಕ್ಷಣದಲ್ಲಿಯೂ ಧಾರ್ಮಿಕ ಶಿಕ್ಷಣಕ್ಕೆ ಮಹತ್ವ ನೀಡಲಾಗಿತ್ತು. "ಚಾರಿತ್ರ್ಯ ಹೀನ ವ್ಯಕ್ತಿ ಕಸಕ್ಕಿಂತಲೂ ಕಡೆ, ಅವನನ್ನು ಅಲ್ಲಾನು ಮೆಚ್ಚುವುದಿಲ್ಲ" ಎಂದು ಭಾವಿಸಿ ಚಾರಿತ್ರ್ಯ ನಿರ್ಮಾಣಕ್ಕೆ ಅತ್ಯಂತ ಮಹತ್ವ ನೀಡಲಾಗಿತ್ತು.

ಮುಂದೆ ಬ್ರಿಟಿಷ್ ಕಾಲದಲ್ಲಿ ಹಾಗೂ ಸ್ವತಂತ್ರ ಭಾರತದಲ್ಲಿಯೂ ಎಲ್ಲ ಶಿಕ್ಷಣ ಆಯೋಗಗಳೂ ಧಾರ್ಮಿಕ ಶಿಕ್ಷಣಕ್ಕೆ ಮಹತ್ವ ನೀಡಿರುವುದು ಕಂಡುಬರುತ್ತದೆ.

**ಧಾರ್ಮಿಕ ಶಿಕ್ಷಣ ಹಾಗೂ ಧರ್ಮದ ಬಗ್ಗೆ ಶಿಕ್ಷಣ:** ಧಾರ್ಮಿಕ ಶಿಕ್ಷಣವೆಂದರೆ – 'ವ್ಯಕ್ತಿಯ ಇಡೀ ಮಾನಸಿಕ ಶಕ್ತಿಯನ್ನು ಯಶಸ್ವಿ ಜೀವನದ ಶಕ್ತಿಯಾಗಿ ಪರಿವರ್ತಿಸಲು ಪೂರಕವಾಗಿ ಜೀವನವನ್ನು ಆದರ್ಶಪಥದತ್ತ ಸಾಗಿಸುವ ಮೌಲ್ಯಗಳನ್ನು ಕಲಿಸಿ ಬೆಳೆಸುವುದು. ಇದರಿಂದ ಜೀವನದ ಅನಂತತೆ, ಪರಿಪೂರ್ಣತೆ, ಪೂರ್ಣಜ್ಞಾನ ಸಚ್ಚಿದಾನಂದಗಳ ಅರಿವಿನತ್ತ ಮಾನವನ ಮನಸ್ಸನ್ನು ಕೊಂಡೊಯ್ದು ಅವನಿಗೆ 'ಆತ್ಮ'ದ ದರ್ಶನದೊಂದಿಗೆ ಆತ್ಮಸಾಕ್ಷಾತ್ಕಾರಗೊಳಿಸುವುದು' ಎಂದರ್ಥ. ಈ ವಿಶಾಲ ಅರ್ಥದ ಧಾರ್ಮಿಕ ಶಿಕ್ಷಣ ಭಾರತೀಯ ಶಿಕ್ಷಣ ಪರಂಪರೆಯ ಅಡಿಗಲ್ಲು ಎಂಬುದನ್ನು ಅರಿತಿದ್ದೇವೆ.

ಈ ರೀತಿಯ ಧಾರ್ಮಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಧರ್ಮಾಚರಣೆ ಮಾಡುವಲ್ಲಿ ಯಾವುದೇ ರೀತಿಯ ಒಡಂಬಡಿಕೆಗಳಿಗೆ ಅಂದಿನ ಶಿಕ್ಷಣ ಒಪ್ಪುತ್ತಿರಲಿಲ್ಲ. ಯಾಕೆಂದರೆ ಸಮಾಜದ ಸ್ವಾಸ್ಥ್ಯದೊಂದಿಗೆ ಆದರ್ಶ ಸಮಾಜ ವ್ಯವಸ್ಥೆಯ ನಿರ್ಮಿತಿಗೆ ತನ್ಮೂಲಕ ರಾಷ್ಟ್ರದ ಅಭಿವೃದ್ಧಿ ಹಾಗೂ ವಿಶ್ವಬಾಂಧವ್ಯದ ಬೇರಿರುವುದು ಧಾರ್ಮಿಕ ಮೌಲ್ಯಗಳ ವ್ಯಕ್ತಿಗತ ಬೆಳವಣಿಗೆಯಲ್ಲಿ ಎಂಬ ಅರಿವು ಅಂದಿನ ಶಿಕ್ಷಣಕ್ಕಿತ್ತು. ಆದರೆ ಮುಂದುವರಿದಂತೆ ಧಾರ್ಮಿಕ ಆಚರಣೆಗಳು ಮತಾಚರಣೆಗಳಿಗೆ ಸೀಮಿತವಾಗಿ ದೇವರ ಕಲ್ಪನೆಯ ರೂಪುತಾಳಿ, ಮತಗಳಿಗೆ ಸಂಬಂಧಪಟ್ಟ ದೇವತಾರಾಧನೆಗಳು ಪ್ರಾರಂಭವಾಗಿ ಧರ್ಮವೆಂದರೆ ದೇವರು ಎಂದಾಗಿ, ಒಂದೊಂದು ಮತಗಳ ದೇವರು ಒಬ್ಬೊಬ್ಬನಿದ್ದಾನೆಂಬ ಬೇರ್ಪಡುವಿಕೆಯಾಗಿ ದೇವರ ಹೆಸರಿನಲ್ಲಿ ವ್ಯಾಜ್ಯಸಂಘರ್ಷಗಳು ತಲೆಯೆತ್ತಿ ಧರ್ಮದ ಹೆಸರಿನಲ್ಲಿ ಯುದ್ಧಗಳೂ ಆದವು. ಧರ್ಮದ ವ್ಯಾಪ್ತಿ ಸಂಕುಚಿತವಾಗಿ ಅದು ಸಂಘರ್ಷಗಳು ರಕ್ತಪಾತಗಳಿಗೆ ಕಾರಣವಾಯಿತು.

ನಮ್ಮ ಸಂವಿಧಾನವು ಶಿಕ್ಷಣದಲ್ಲಿ ಧರ್ಮದ ಅಧ್ಯಯನವನ್ನು ನಿಷೇಧಿಸಿಲ್ಲ. ಆದರೂ ನಮ್ಮ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪಠ್ಯವು ಮತಗಳಿಗೆ ಸಂಬಂಧಿಸಿದ ಧಾರ್ಮಿಕ ವಿಚಾರಗಳನ್ನೊಳಗೊಂಡಿರಬಾರದು ಎಂಬ ಅಲಿಖಿತ ನಿರ್ಬಂಧವಿದೆ.

ಶಿಕ್ಷಣದಲ್ಲಿ ಧಾರ್ಮಿಕ ಮೌಲ್ಯಗಳ ಬೆಳವಣಿಗೆಯ ವಿಶಾಲ ವ್ಯಾಪ್ತಿಯು ಮೌಲ್ಯಾಧಾರಿತ ಶಿಕ್ಷಣದ ಗುರಿಯಿದ್ದರೂ ಕಾರ್ಯರೂಪಕ್ಕಿಳಿಯುತ್ತಿಲ್ಲ. ಧರ್ಮದ ಬಗ್ಗೆ ಶಿಕ್ಷಣ ನೀಡುವುದು. ತಮ್ಮ ತಮ್ಮ ಧರ್ಮದ ಪ್ರಚಾರವು ಧಾರ್ಮಿಕ ಸಂಸ್ಥೆಗಳು ಮಾತ್ರವಲ್ಲ ಇತರ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುತ್ತಿರುವುದು ವಿಷಾದನೀಯ. ನಿಜವಾದ ಅರ್ಥದ ಧಾರ್ಮಿಕ ಶಿಕ್ಷಣ ಅಥವಾ ಮೌಲ್ಯಧಾರಿತ ಶಿಕ್ಷಣ ಪಠ್ಯಕ್ರಮಕ್ಕೆ ಸೀಮಿತವಾಗಿಲ್ಲದಿದ್ದರೆ ಮತೀಯ ಭಾವನೆ ಜಾಗೃತಗೊಂಡು ಇಡೀ ರಾಷ್ಟ್ರ ಮತಾಂಧತೆಯಿಂದ, ಕೋಮುಗಲಭೆಗಳಿಂದ ದಹಿಸಿ ಹೋಗುತ್ತದೆ.

ಪ್ರಸ್ತುತ ಶಿಕ್ಷಣದಲ್ಲಿ ಮೌಲ್ಯಧಾರಿತ ಶಿಕ್ಷಣವನ್ನು ಅರ್ಥಪೂರ್ಣವಾಗಿ, ಸಮಗ್ರವಾಗಿ ಜಾರಿಯಲ್ಲಿ ತರಲು ಎಲ್ಲ ಆಯೋಗಗಳೂ, 1986ರ ರಾಷ್ಟ್ರೀಯ ಶಿಕ್ಷಣ ನೀತಿ, 1992 ರಾಷ್ಟ್ರೀಯ ಶಿಕ್ಷಣ ನೀತಿಯ ಪುನರ್ ಯೋಜನೆಗಳೆಲ್ಲವೂ ಮೌಲ್ಯಾಧಾರಿತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದವು. NCERT - ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ ರಾಷ್ಟ್ರೀಯ ಪಠ್ಯಕ್ರಮ ನೀತಿಯಡಿಯಲ್ಲಿ 2002ರಲ್ಲಿ ಶಾಲಾ ಪಠ್ಯಕ್ರಮದ ಸಮಗ್ರ ಬದಲಾವಣೆಗೆ ಆಧಾರಕಟ್ಟನ್ನು (Frame work) ರೂಪಿಸಿದಾಗ ಇದರಲ್ಲಿ ಮೌಲ್ಯಧಾರಿತ ಧಾರ್ಮಿಕ ಶಿಕ್ಷಣ. ಪರಧರ್ಮ ಸಹಿಷ್ಣುತೆಗೆ ಮಹತ್ವ ನೀಡಿತು. ಬಳಿಕ 2005ರಲ್ಲಿಯೂ ಪಠ್ಯಕ್ರಮ ಬದಲಾವಣೆಯಲ್ಲಿ ಮೌಲ್ಯ ಶಿಕ್ಷಣಕ್ಕೆ ಮಹತ್ವ ನೀಡಿತು.

**ಧಾರ್ಮಿಕ ಶಿಕ್ಷಣ ಮತ್ತು ಜಾತ್ಯತೀತತೆ:** ಧಾರ್ಮಿಕ ಭಾವನೆಗೂ, ಜಾತ್ಯತೀತ ಭಾವನೆಗೂ ನಿಕಟವಾದ ಸಂಬಂಧವಿದೆ. ಚಿಂತಕರು. ಜಿಜ್ಞಾಸುಗಳು ಅರ್ಥೈಸುವಂತೆ – "ಜಾತ್ಯತೀತತೆ ಎಂದರೆ ಧರ್ಮ ನಿರಪೇಕ್ಷತೆ, ಧರ್ಮಾತೀತತೆ, ಧಾರ್ಮಿಕ ತಾಟಸ್ಥ್ಯತೆ, ಸರ್ವಧರ್ಮ ಸಮಭಾವ, ಲೋಕಾಯುತ (ಲೋಕಕ್ಕೆ ಹಿತವಾದದ್ದು). ಸರ್ವರಿಗೂ ಸಮಬಾಳು, ಧಾರ್ಮಿಕ ಸ್ವಾತಂತ್ರ್ಯ" ಎಂಬಿತ್ಯಾದಿ ಅರ್ಥಗಳು ಹೊರಹೊಮ್ಮುತ್ತವೆ. ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿ ಮೊದಲು ಜಾತ್ಯತೀತತೆಯ ಉಲ್ಲೇಖವಿರದಿದ್ದರೂ 1976ರ 42ನೇ ತಿದ್ದುಪಡಿಯಲ್ಲಿ 'ಜಾತ್ಯತೀತ' ಪದವನ್ನು ಸೇರಿಸುವುದರ ಮೂಲಕ ಸಂವಿಧಾನಬದ್ಧವಾಗಿ ಎಲ್ಲ ಧರ್ಮಗಳು ಸರಿಸಮಾನವಾದ ಸ್ಥಾನಮಾನಗಳಿಗೆ ಅರ್ಹವಾದವು. ಸರ್ವಧರ್ಮಗಳನ್ನು ಸಮಾನ ದೃಷ್ಟಿಕೋನದಿಂದ ನೋಡುವುದಲ್ಲದೇ ಎಲ್ಲ ಧರ್ಮಗಳ ವಿಷಯದಲ್ಲಿ ತಟಸ್ಥ ನೀತಿ ಅನುಸರಿಸುವುದರ ಮೂಲಕ ಭಾರತ ಜಾತ್ಯತೀತ ರಾಷ್ಟ್ರವಾಯಿತು. ಇದರ ಒಳಾರ್ಥದಲ್ಲಿ ಏಕತೆಯ ವಿಶ್ವಬಂಧುತ್ವದ ಕಲ್ಪನೆಗಳಿಗೆ ಅವಕಾಶ ಕಲ್ಪಿಸಿದಂತಾಗಿ ವಿಶಾಲ ಅರ್ಥದ ಧಾರ್ಮಿಕ ಭಾವನೆಯನ್ನು ಎತ್ತಿ ಹಿಡಿದಂತಾಯಿತು.

Digitised by Bharatavani, CIIL

ಇದಕ್ಕೆ ಎನ್.ಸಿ.ಇ.ಆರ್.ಟಿ.ಇ. ತನ್ನ 2002ರ ಪಠ್ಯಕ್ರಮ ಬದಲಾವಣೆಯಲ್ಲಿ ಪುಷ್ಟೀಕರಣ ನೀಡಿತು. "ನಮ್ಮ ಪ್ರಜಾಪ್ರಭುತ್ವದಲ್ಲಿನ ಜಾತ್ಯತೀತ, ಸಾಂಸ್ಕೃತಿಕ ಅನೇಕತ್ವ, ವಿವಿಧತೆಯಲ್ಲಿ ಏಕತೆ, ಮೂಲಭೂತ ಹಕ್ಕುಗಳು ಮತ್ತು ಇತರ ಧಾರ್ಮಿಕ ಜೀವನ ಮೌಲ್ಯಗಳನ್ನು ನವಪೀಳಿಗೆ ಗೌರವಿಸಿ ಅದನ್ನು ಅಳವಡಿಸಿಕೊಳ್ಳುವಂತೆ ಶಿಕ್ಷಣದಲ್ಲಿ ಅನುವು ಮಾಡಿಕೊಡಬೇಕು" ಎಂಬ ತತ್ವದಡಿಯಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನು ಪಠ್ಯಕ್ರಮದಲ್ಲಿ ಅಳವಡಿಸಿತು.

ಆದರೆ ಇದರ ಕುರಿತು ಸಲಹೆಗಳು, ಶಿಫಾರಸ್ಸುಗಳು, ವಿರೋಧಾಭಾಸಗಳು, ತಲೆದೋರಿ ಇದು ಕೇಸರೀಕರಣಕ್ಕೆಡೆಮಾಡಿ ಕೊಡುತ್ತದೆಂಬುದಾಗಿ ಸರ್ವೋಚ ನ್ಯಾಯಾಲಯದ ಮೆಟ್ಟಿಲೇರಿದರು. ಆದರೆ ಸೆಪ್ಟೆಂಬರ್ 12, 2002 ರಂದು ಸರ್ವೋಚ ನ್ಯಾಯಾಲಯ ಎನ್.ಸಿ.ಇ.ಆರ್.ಟಿ.ಯ ಹೊಸ ರಾಷ್ಟ್ರೀಯ ಪಠ್ಯ ನೀತಿಯನ್ನು ಎತ್ತಿ ಹಿಡಿದು ಮಹತ್ವ ತೀರ್ಪು ನೀಡಿತು. ಇದು ಶಿಕ್ಷಣವನ್ನು ಕೇಸರೀಕರಣಗೊಳಿಸುವ ಪ್ರಯತ್ನವಲ್ಲವೆಂದು ಹೇಳಿ ಎಲ್ಲ ಆಕ್ಷೇಪಗಳನ್ನು ತಿರಸ್ಕರಿಸಿತು. ನ್ಯಾಯಪೀಠ ಉತ್ತರಿಸುತ್ತ "ನಮ್ಮದು ಜಾತ್ಯತೀತ ದೇಶ. ಆದರೆ ನಮ್ಮ ಸಂವಿಧಾನ ಧಾರ್ಮಿಕ ಶಿಕ್ಷಣದ ಬಗ್ಗೆ ಸಂವಿಧಾನದ 28ನೇ ಕಾಲಮಿನ ಯಾವ ವ್ಯಾಖ್ಯೆ ಉಪವ್ಯಾಖ್ಯೆಗಳೂ ಶಿಕ್ಷಣದಲ್ಲಿ ಧರ್ಮಗಳ ಬೋಧನೆ ನಿಷೇಧಿಸಿಲ್ಲ. ತರಗತಿಯಲ್ಲಿ ಧರ್ಮಗಳ ಬಗೆಗಿನ ಬೋಧನೆಗಳೂ ತರಗತಿಗಳ ಹೊರಗೆ ಧರ್ಮಬೋಧನೆಗೂ ವ್ಯತ್ಯಾಸವಿದೆ" ಎಂದು ಹೇಳಿತು. ಆದ್ದರಿಂದ ನ್ಯಾಯಪೀಠ ನಿಜವಾದ ಅರ್ಥದ ಸರ್ವಧರ್ಮ ಸಮಭಾವದ ಧಾರ್ಮಿಕ ಶಿಕ್ಷಣ ಎತ್ತಿ ಹಿಡಿದಂತಾಯಿತು.

ಇದರಿಂದ 2005 ಎನ್.ಸಿ.ಇ.,ಆರ್.ಟಿ.ಯ ರಾಷ್ಟ್ರೀಯ ಪಠ್ಯಕ್ರಮ ಆಧಾರ ಪಟ್ಟಿ (Frame Work) ಯಲ್ಲಿ ಜಾತ್ಯತೀತೆಯ ಅಡಿಪಾಯದ ಮೌಲ್ಯಾಧಾರಿತ (ಧಾರ್ಮಿಕ) ಶಿಕ್ಷಣಕ್ಕೆ ಮಹತ್ವ ನೀಡಿ ಜಾರಿಗೊಳಿಸಿತು.

**ಸಂಬಂಧಿತ ವಿವಾದ:** ಧರ್ಮವೆಂದರೆ ಧಾರ್ಮಿಕ ಮೌಲ್ಯಗಳ ಆಚರಣೆಗಳನ್ನೊಳಗೊಂಡ ಧರ್ಮವೇ ಅಥವಾ ಮತ-ಪಂಗಡಗಳ ಸಹಿಷ್ಣುತೆಗಳಿಗೆ ಸಂಬಂಧಪಟ್ಟ ಧರ್ಮವೇ ಎಂಬುದು ಹಿಂದಿನಿಂದಲೂ ಇರುವ ವಿವಾದ. ಮತ- ಪಂಗಡಗಳಿಗೆ ಹೊಂದಿಸಿ ಲೆನಿನ್ನರು – "ಧರ್ಮವು ಜನತೆಯ ಅಫೀಮು" ಎಂದು ಸಾರಿದರು. ತತ್ವಜ್ಞಾನಿ ಮಾರ್ಕ್ಸರು– "ಧರ್ಮವು ದಲಿತರ ಆಳುವ ಬಿಕ್ಕು; ಹೃದಯವಿಲ್ಲದ ಜಗತ್ತಿನ ಹೃದಯ; ಆತ್ಮವಿಲ್ಲದ ಕರಾರುಗಳ ಆತ್ಮ; ಮನಸ್ಸಿನ ಅಫೀಮು" ಎಂದರು.

ಇಂತಹ ಸಾಮ್ಯವಾದ ಮತ್ತು ಮಾನವತಾವಾದದ ಧುರೀಣರ ಅಭಿಪ್ರಾಯದ ಮೇರೆಗೆ– "ಸಾಮಾಜಿಕ ಸುಲಿಗೆಯ ಸಾಧನವನ್ನು ಸಿದ್ಧಪಡಿಸುವುದಕ್ಕಾಗಿ ಧರ್ಮವು ಸುಳ್ಳು ಸುಖದ ಕಲ್ಪನೆಯನ್ನೀಯುತ್ತದೆ. ಅದು ನಮ್ಮನ್ನು ಜಗತ್ ಬಾಹಿರರನ್ನಾಗಿ ನಿಶ್ಚೇಷ್ಟಿತರನ್ನಾಗಿ ಮಾಡುತ್ತದೆ; ದೂರದ ಸುಖದ ರಾಜ್ಯದ ಚಿಂತನೆಯಲ್ಲಿ ನಮ್ಮನ್ನು ಮುಳುಗಿಸಿ ಸಾಮಾಜಿಕ ನ್ಯಾಯಾನ್ಯಾಯಗಳನ್ನು ನಾವು ಅಲಕ್ಷಿಸುವಂತೆ ಮಾಡುತ್ತದೆ; ಅದು ಜನತೆಯ ಜೀವನ ಮೌಲ್ಯಗಳನ್ನು ತಿರುವು ಮುರುವಾಗಿ ಮಾಡುತ್ತದೆ. – ದೇವರು ರಾಜ್ಯವೊಂದನ್ನು ನಿರ್ಮಿಸಿ ಅದರಲ್ಲಿ ಮುಳುಗಿಸಿ ಸಾಮಾಜಿಕ ಅನ್ಯಾಯಗಳಿಗೆ ಕಿವುಡಾಗುವಂತೆ ಮಾಡುತ್ತದೆ."

ಭಾರತೀಯ ಸಂಸ್ಕೃತಿಯಲ್ಲಿಯೂ ಅದರ ಧಾರ್ಮಿಕ ಭಾವನೆಗಳನ್ನು, ಆಚರಣೆಗಳನ್ನು ಮತ ಸಹಿಷ್ಣುತೆಯನ್ನು ಅಪಾರ್ಥ ಮಾಡಲಾಗಿದೆ. ಭಾರತೀಯರಿಗೆ ಎಲ್ಲಾ ಮಟ್ಟಗಳ ಧಾರ್ಮಿಕ ಅನುಭವಗಳೂ ಒಂದೇ. ಹಿಂದೂ ಮತವು ಪ್ರಕೃತಿ ಪೂಜೆ, ವಸ್ತು ಪೂಜೆಯಿಂದ ಹಿಡಿದು ಏಕದೇವವಾದ. ಏಕತ್ವವಾದದವರೆಗೂ ವಿವಿಧವಾದ ಧಾರ್ಮಿಕ ದೃಷ್ಟಿಗಳನ್ನೊಳಗೊಂಡ ತೊಡಕು; ಅಂಧಶ್ರದ್ಧೆ ಮತ್ತು ವಿವೇಕ ಎರಡನ್ನೂ ಒಟ್ಟಿಗೆ ಸೇರಿಸಿದರೆ. ಒಂದೇ ರೀತಿ ಅವು ಸ್ವೀಕೃತವಾದಲ್ಲಿ ಮೊದಲನೆಯದು ಎರಡನೆಯದನ್ನು ಭಸ್ಮೀಕರಿಸಿ ಜಯಶಾಲಿಯಾಗುವ ಸಂಭವವಿದೆ ಎಂಬ ವಾದವಿದೆ.

ಭಾರತೀಯ ಮತಸಹಿಷ್ಣುತೆಯ ಧಾರ್ಮಿಕ ಅನುಭವದ ವಿವಿಧ ಘಟ್ಟಗಳನ್ನು ಒಪ್ಪಿಕೊಂಡಿದೆ. ಮೂಢ ಭಕ್ತಿಯಿಂದ ಮೇಲ್ಮಟ್ಟಕ್ಕೇರುವ ಆತ್ಮವಿಕಾಸವನ್ನು ಒಪ್ಪಿಕೊಂಡಿದೆ. ಆತ್ಮಜ್ಞಾನ ಪ್ರಗತಿಗಾಗಿ ಆಧ್ಯಾತ್ಮಿಕತೆ ಕೆಳಮಟ್ಟದಿಂದ ಮೇಲಮೇಲಕ್ಕೆ ಭಾರತೀಯ ಪ್ರವೃತ್ತಿ ಯಾವಾಗಲೂ ಉದಾರ ಮನೋಭಾವ ಮತ್ತು ವಿಶಾಲ ಭಾವನೆಗಳ ಕಡೆಗೆ ಸಾಗುತ್ತದೆ. ಆದರೆ ವಾದ-ವಿವಾದವಿದ್ದೆಡೆ ವಿಚಾರಶೀಲತೆಯಿಲ್ಲ, ಅರ್ಥಜ್ಞಾನವಿಲ್ಲ. ಧರ್ಮದ ಉದ್ದೇಶವು ಆಧ್ಯಾತ್ಮಿಕ ಪ್ರವೃತ್ತಿಯ ವಿಕಾಸದಿಂದ ಜೀವನದ ಸಾರ್ಥಕತೆ. ಈ ಅರ್ಥದಲ್ಲಿ ಧರ್ಮವನ್ನು ಪರಿಗಣಿಸದೆ ಭಾರತದಲ್ಲಿ ತಮ್ಮ ತಮ್ಮ ಮತ-ಪಂಗಡಗಳಿಗೆ ಹೊಂದಿಕೊಂಡು ಧರ್ಮಕ್ಕೆ ಉಕ್ಕಿನ ಕವಚ ತೊಡಿಸಿ ಶ್ವಾಸ ನಿರ್ಬಂಧ ಮಾಡಲಾಗಿದೆ.

ಧರ್ಮವನ್ನು ಮತಗಳೊಂದಿಗೆ ಬೆರೆಸುವುದು ಧರ್ಮದ ಆಚರಣೆಯಲ್ಲಿ ಮಹಾವಿಘ್ನವಾಗಿದೆ. ಆಧ್ಯಾತ್ಮ ಜೀವನದ ಸರಳತೆಯನ್ನು ಅದು ಕೆಡಿಸುತ್ತದೆ. ಧರ್ಮದ ಗುರುತ್ವವು ಪ್ರಮಾಣ. ದರ್ಶನ. ಮತ-ಮಂದಿರಗಳಲ್ಲಿರದೆ ಆತ್ಮಾನುಭಾವದಲ್ಲಿದೆ. ಆತ್ಮದ ಅನುಭವವೊಂದೇ ಧರ್ಮದ ಸತ್ಯಗಳನ್ನು ತಿಳಿಸಿಕೊಡಬಲ್ಲದು. ಸ್ವಾಮಿ ವಿವೇಕಾನಂದರು ಹೇಳುವಂತೆ – "ಧರ್ಮವು ಸಾಕ್ಷಾತ್ಕಾರ: ಅದು ಬರೀ ಮಾತಲ್ಲ, ತತ್ವವಲ್ಲ, ಶಾಸ್ತ್ರವಲ್ಲ, ಅದು ಸತ್ವವಾಗಿದೆ. ಅದೇ ಜೀವನ ಸಾರ್ಥಕತೆಯ ಮಾನದಂಡವಾಗಿದೆ. ಇದನ್ನು ತಲುಪಿಸುವುದೇ ಧಾರ್ಮಿಕ ಶಿಕ್ಷಣವಾಗಿದೆ.

– ಪ್ರೀ.ಬ.

## ದ್ವಿಭಾಷಾ ಶಿಕ್ಷಣ

ಭಾರತವು ಒಂದು ಜಾತ್ಯತೀತ, ಬಹುಸಾಂಸ್ಕೃತಿಕ ಮತ್ತು ಬಹುಭಾಷಾ ರಾಷ್ಟ್ರವಾಗಿದೆ. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಭಾಷೆಯನ್ನು ಹೊಂದಿದ ಏಕೈಕ ರಾಷ್ಟ್ರವಾಗಿದೆ. ಸಂವಿಧಾನದ ಎಂಟನೆ ಅನುಸೂಚಿಯ ಪ್ರಕಾರ ನಮ್ಮಲ್ಲಿ ಪ್ರಾದೇಶಿಕ ಭಾಷೆಗಳಿವೆ. ಆದರೆ ಪ್ರಾದೇಶಿಕ ಭಾಷೆಗಳು ಎಲ್ಲರ ಮಾತೃಭಾಷೆಯಾಗಿಲ್ಲ. ಭಾರತದ ಎಲ್ಲಾ ರಾಜ್ಯಗಳು ತಮ್ಮ ರಾಜ್ಯದ ಮಾತೃಭಾಷೆಯನ್ನೇ ಆಡಳಿತ ಭಾಷೆಯನ್ನಾಗಿಸಲು ತೀರ್ಮಾನಿಸಿವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಆಡಳಿತ ಭಾಷೆಯಾಗಿ ಕನ್ನಡವೆಂದು ತೀರ್ಮಾನಿಸಲ್ಪಟ್ಟಿದೆ. ಇದರಿಂದ ಮಕ್ಕಳು ಪ್ರಾಥಮಿಕ ಹಂತದಿಂದ ಮಾತೃಭಾಷೆಯ ಮೂಲಕವೇ ಶಿಕ್ಷಣವನ್ನು ಪಡೆಯುತ್ತಿದ್ದಾರೆ.

ಮೊದಲನೆಯದಾಗಿ ಮಾತೃಭಾಷೆಯಲ್ಲಿ ಕಲಿತ ಮಕ್ಕಳು ಭಿನ್ನ ಭಾಷೆಯಿರುವ ಬೇರೆ ರಾಜ್ಯಕ್ಕೆ ಹೋದಾಗ ಸಂವಹನದ ಸಮಸ್ಯೆಯುಂಟಾಗುತ್ತದೆ, ಅಲ್ಲದೆ ಹೊಂದಾಣಿಕೆಯ ಸಮಸ್ಯೆ ಎದುರಾಗುತ್ತದೆ. ಎರಡನೆಯದಾಗಿ ಜೀವನ ನಡೆಸುವುದು ಕಷ್ಟಮಯವಾಗುತ್ತದೆ ಇದಕ್ಕಾಗಿ ಪ್ರಾಥಮಿಕ ಹಂತದಲ್ಲಿ ದ್ವಿಭಾಷಾ ನೀತಿಯನ್ನು ಅನುಸರಿಸಲಾಗುತ್ತಿದೆ ಅಂದರೆ ಆಯಾ ರಾಜ್ಯದ ಮಾತೃಭಾಷೆ ಮತ್ತು ಸುತ್ತಲೂ ಇರುವ ರಾಜ್ಯಗಳ ಒಂದು ಭಾಷೆ.

ನಮ್ಮ ಕರ್ನಾಟಕ ರಾಜ್ಯಕ್ಕೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ಈ ರಾಜ್ಯಗಳ ಗಡಿಗಳು ಹೊಂದಿಕೊಂಡಿವೆ. ಆಯಾ ಗಡಿ ಭಾಗದಲ್ಲಿ ಇರುವ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯ

Digitised by Bharatavani, CIIL

ಜೊತೆಗೆ ಪಕ್ಕದ ರಾಷ್ಟ್ರದ ಭಾಷೆಯನ್ನು ಕಲಿಯುವರು. ಬೆಳಗಾಂ ಗಡಿಭಾಗದ ವಿದ್ಯಾರ್ಥಿಗಳು ಮರಾಠಿ ಭಾಷೆಯನ್ನು ಕಲಿಯುವರು. ಕಾಸರಗೂಡಿನ ಕಡೆಯ ಮಕ್ಕಳು ಮಲಯಾಳಿ ಭಾಷೆಯನ್ನು ಕಲಿಯುವರು. ಬಳ್ಳಾರಿ ಗುಲ್ಬರ್ಗಾ ಕಡೆಗೆ ಇರುವ ಮಕ್ಕಳು ತೆಲುಗು ಭಾಷೆ ಕಲಿಯುವರು ಕೋಲಾರ ಕೆ.ಜಿ.ಎಫ್. ಕಡೆಯ ಮಕ್ಕಳು ತಮಿಳು ಭಾಷೆಯನ್ನು ಕಲಿಯುವರು ಹೀಗಾಗುವುದರಿಂದ ನೆರೆಯ ರಾಜ್ಯದ ಮಕ್ಕಳೊಡನೆ ಮತ್ತು ಸಾರ್ವಜನಿಕರೊಡನೆ ಬೆರೆತುಕೊಂಡು ಮುಂದುವರೆಯಬಹುದು.

ಇಂಗ್ಲಿಷ್ ಕೇಂದ್ರದ ಸಹ ಅಧಿಕೃತ ಭಾಷೆಯಾಗಿದೆ. ಉನ್ನತ ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಸಂವಹನದ ಸಂದರ್ಭದಲ್ಲಿ ಜಗತ್ತಿನ ಕೀಲಿಕೈ ಅನಿಸಿದ ಇಂಗ್ಲಿಷ್ ಕಲಿಕೆ ಅನಿವಾರ್ಯ.

ಗಡಿ ಭಾಗದಲ್ಲಿ ಇರುವ ಶಾಲೆಗಳಿಗೆ ಆಯಾರಾಜ್ಯದ ಸರ್ಕಾರಗಳು ವಿಶೇಷ ಮಹತ್ವವನ್ನು ನೀಡಿ ಶಾಲಾ ಪಠ್ಯಕ್ರಮದಲ್ಲಿ ದ್ವಿಭಾಷಾ ಸೂತ್ರವನ್ನು ಅಳವಡಿಸುವುದು ವಾಡಿಕೆಯಾಗಿದೆ.

ದ್ವಿಭಾಷಾ ಸೂತ್ರವೆಂದರೆ ಮಾತೃಭಾಷೆ ಮತ್ತು ಇತರ ಒಂದು ಭಾಷೆಯಾಗಿರುತ್ತದೆ. (ಹಿಂದಿ, ಇಂಗ್ಲಿಷ್, ಮರಾಠಿ, ತಮಿಳು, ತೆಲುಗು ಇತ್ಯಾದಿ).

**ಅವಶ್ಯಕತೆ**

1. ಇಂದು ಭಾಷಾವಾರು ರಾಜ್ಯಗಳ ವಿಂಗಡಣೆಯಾಗಿ ಭಾರತವು ತನ್ನ ಪ್ರಜಾಸತ್ತಾತ್ಮಕ ಗುಣಗಳನ್ನು ಮೈಗೂಡಿಸಿಕೊಂಡು ತೀವ್ರ ಅಭಿವೃದ್ಧಿ ಹೊಂದುತ್ತಲಿದೆ. ನಮ್ಮ ಭಾರತದ ವೈಶಿಷ್ಟ್ಯ, ವಿವಿಧತೆಯಲ್ಲಿ ಏಕತೆ, ವಿವಿಧ ಮಾತೃಭಾಷೆಗಳು, ವಿವಿಧ ಸಂಸ್ಕೃತಿ.

ಇಷ್ಟೆಲ್ಲ ಆದರೂ ಭಾರತವು ಒಕ್ಕೂಟ ರಾಷ್ಟ್ರ. ಯಾವುದೇ ರಾಜ್ಯದ ಪ್ರಜೆಯು ಸ್ವತಂತ್ರವಾಗಿ ಇಡೀ ದೇಶದ ತುಂಬ ಸುತ್ತ ಬೇಕಾದಲ್ಲಿ ದ್ವಿಭಾಷಾ ಸೂತ್ರವು ಅತ್ಯಂತ ಪ್ರಶಸ್ತವಾಗಿದೆ.

1952 ಪ್ರೌಢಶಾಲಾ ಶಿಕ್ಷಣ ಆಯೋಗವು ಮಾತೃಭಾಷೆಯ ಕಲಿಕೆಯ ಜೊತೆ ಜೊತೆಗೆ ಉಳಿದ ಎರಡು ಭಾಷೆಗಳ ಕಲಿಕೆಯು ವಿದ್ಯಾರ್ಥಿಗೆ ಭಾರವಾದೀತು, ಆದರೂ ವಿವಿಧ ಭಾಷೆಗಳ ನಾಡಾದ ನಮ್ಮ ದೇಶದಲ್ಲಿ ಆ ಹೊರೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವು ನಮ್ಮ ಸಮೃದ್ಧ ಭಾಷಿಕ ಪರಂಪರೆಗೆ ಈ ರೀತಿಯ ಬೆಲೆ ಕೊಡಬೇಕು ಎಂದು ಹೇಳಿದೆ.

1. ಪ್ರಾಥಮಿಕ ಹಂತದಲ್ಲಿ ಒಂದು ಭಾಷೆ (ಮಾತೃಭಾಷೆ/ಪ್ರಾದೇಶಿಕ ಭಾಷೆ)

2. ಮುಂದೆ ನೀಡಿರುವ ಭಾಷೆಗಳಲ್ಲಿ ಒಂದು ಭಾಷೆ ಹಿಂದಿ. (ಹಿಂದಿ ಮಾತೃಭಾಷೆ ಅಲ್ಲದವರಿಗೆ), ಇಂಗ್ಲಿಷ್ (ಮಾಧ್ಯಮಿಕ ಹಂತದಲ್ಲಿ) ಪ್ರೌಢ ಇಂಗ್ಲಿಷ್ (ಮಾಧ್ಯಮಿಕ ಹಂತದಲ್ಲಿ ಇಂಗ್ಲಿಷ್ ಕಲಿತವರಿಗೆ) ಆಧುನಿಕ ಭಾರತೀಯ ಭಾಷೆ (ಹಿಂದಿ ಹೊರತು ಪಡಿಸಿ) ಆಧುನಿಕ ವಿದೇಶ ಭಾಷೆ (ಇಂಗ್ಲಿಷ್ ಹೊರತುಪಡಿಸಿ), ಅಭಿಜಾತ ಭಾಷೆ ಅಥವಾ ಪ್ರಾದೇಶಿಕ ಭಾಷೆ.

ದೇಶದ ಅವಶ್ಯಕತೆ ಮತ್ತು ಸಂವಿಧಾನದ ನಿಯಮಗಳನ್ನು ಅವಲಂಬಿಸಿ 195ರ ಶಿಕ್ಷಣ ಕೇಂದ್ರೀಯ ಸಲಹಾ ಸಮಿತಿ ತ್ರಿಭಾಷಾ ಸೂತ್ರದ ಸಲಹೆ ನೀಡಿತು. 1961ರ ಮುಖ್ಯಮಂತ್ರಿಗಳ ಸಮಾವೇಶವು ಶಾಲೆಗಳು ಅನುಸರಿಸಬೇಕಾದ ಭಾಷಾ ನೀತಿಯನ್ನು ರೂಪಿಸಿತು. ಅದರಂತೆ,

ಪ್ರಾಥಮಿಕ ಹಂತದಲ್ಲಿ 1. ಮಾತೃಭಾಷಾ ಮಾಧ್ಯಮ 2. ಪ್ರೌಢ ಶಾಲಾ ಹಂತದಲ್ಲಿ ಇಂಗ್ಲಿಷ್ ಅಥವಾ ಆಧುನಿಕ ಭಾರತೀಯ ಭಾಷಾ ಮಾಧ್ಯಮ ಮತ್ತು 3. ಇಂಗ್ಲಿಷ್ ಹಾಗೂ ಹಿಂದಿಯನ್ನು ಎಲ್ಲರೂ ಸಂವಹನದ ಅಗತ್ಯವಾಗಿ ಕಲಿಯಲೇಬೇಕು.

1966ರ ಭಾರತೀಯ ಶಿಕ್ಷಣ ಆಯೋಗವು ವ್ಯಾವಹಾರಿಕವಾದ ತ್ರಿಭಾಷಾ ಸೂತ್ರವನ್ನು ರೂಪಿಸಿತು. 1. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ 2. ಕೇಂದ್ರದ ಅಧಿಕೃತ ಭಾಷೆ/ಸಹ ಅಧಿಕೃತ ಭಾಷೆ 3. ಆಧುನಿಕ ಭಾರತೀಯ ಭಾಷೆ ಅಂದರೆ ಮೇಲೆ ಹೇಳಿದ ಎರಡು ಭಾಷೆಗಳಿಗೆ ಹೊರತಾದ, ಶಿಕ್ಷಣ ಮಾಧ್ಯಮವಲ್ಲದ ವಿದೇಶಿ ಭಾಷೆ. ಹೀಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಗಳನ್ನು ಕ್ರಮವಾಗಿ 10, 6 ಮತ್ತು 3 ವರ್ಷಗಳ ಕಾಲ ಕಡ್ಡಾಯವಾಗಿ ಕಲಿಯಬೇಕು. ಶಿಕ್ಷಣ ಆಯೋಗದ ಈ ಸೂತ್ರವನ್ನು ಭಾರತ ಸರ್ಕಾರವು ಅಂಗೀಕರಿಸಿತು. 1986ರ ಹೊಸ ಶಿಕ್ಷಣ ನೀತಿಯೂ ಇದನ್ನು ಅಂಗೀಕರಿಸಿತು. ಆದರೆ ಈ ತ್ರಿಭಾಷಾ ಶಿಕ್ಷಣವು ನಿಜವಾದ ಅರ್ಥದಲ್ಲಿ ಜಾರಿಗೆ ಬಂದಿರುವುದು ದಕ್ಷಿಣ ಭಾರತದಲ್ಲಿ ಮಾತ್ರ.

ಕರ್ನಾಟಕದಲ್ಲಿ ಇಂಗ್ಲಿಷನ ವ್ಯಾಮೋಹ ಒಂದು ಕಡೆಯಾದರೆ ಕನ್ನಡಕ್ಕೆ ಬದಲಾಗಿ ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡು ಹೆಚ್ಚು ಅಂಕ ಗಳಿಸುವ ಆಸೆ ಮತ್ತೊಂದು ಕಡೆಗೆ. ಹೀಗಾಗಿ 1970ರಿಂದೀಚೆಗೆ ಪ್ರೌಢಶಾಲೆಗಳಲ್ಲಿ ಸಂಸ್ಕೃತವೇ ಮುಖ್ಯವಾಗಿ ಕನ್ನಡವು ತೃತೀಯ ಭಾಷೆಸ್ಥಾನಕ್ಕೆ ತಳ್ಳಲ್ಪಟ್ಟಿತು. ಈ ಬಗೆಗೆ ಇದ್ದ ಗೊಂದಲವನ್ನು ಸರಿಪಡಿಸಿ ಕರ್ನಾಟಕ ಶಿಕ್ಷಣದಲ್ಲಿ ಒಂದು ನಿಶ್ಚಿತವಾದ ಭಾಷಾ ನೀತಿಯನ್ನು ಜಾರಿಗೆ ತರುವ ಉದ್ದೇಶದಿಂದ ಡಾ॥ ವಿ.ಕೆ. ಗೋಕಾಕ್‌ರವರ ಅಧ್ಯಕ್ಷತೆಯಲ್ಲಿ ನೇಮಕವಾದ ಸಮಿತಿ 27–1–1987ರಂದು ತನ್ನ ವರದಿಯನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿತು. ಗೋಕಾಕ್ ವರದಿಯ ಪ್ರಕಾರ 1. ಎಲ್ಲ ಮಕ್ಕಳಿಗೂ ಮೂರನೇ ತರಗತಿಯಿಂದ ಕನ್ನಡ ಕಡ್ಡಾಯ 2. ಪ್ರೌಢ ಶಾಲೆಗಳಲ್ಲಿ ಎಲ್ಲ ವಿದ್ಯಾರ್ಥಿಗಳೂ 150 ಅಂಕಗಳಿಗೆ ಕನ್ನಡವನ್ನು ಕಡ್ಡಾಯವಾಗಿ ಓದಬೇಕು. 1981–82ರಿಂದ ಕನ್ನಡವನ್ನು ಮೂರನೇ ತರಗತಿಯಿಂದ ಕಲಿಸಬೇಕು. 1986–87ರಿಂದ ಅವರಿಗೆ 150 ಅಂಕಗಳಿಗೆ ಕನ್ನಡವನ್ನು ಮೊದಲ ಭಾಷೆಯಾಗಿ ಕಲಿಸುವಂತಾಯಿತು. 3. ಕನ್ನಡ ಬಿಟ್ಟು ಉಳಿದ ಭಾಷೆಗಳಲ್ಲಿ ಅಂದರೆ ಇಂಗ್ಲಿಷ್, ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ, ಸಂಸ್ಕೃತ, ಮಲೆಯಾಳಂ ಎರಡನ್ನು ದ್ವಿತೀಯ/ತೃತೀಯ ಭಾಷೆಯಾಗಿ 100 ಮತ್ತು 50 ಅಂಕಗಳಿಗೆ ಕಲಿಯಬೇಕು. ಗೋಕಾಕ್ ವರದಿಯ ಶಿಫಾರಸ್ಸಿನಂತೆ ಕನ್ನಡವನ್ನು ಏಕೈಕ ಪ್ರಥಮ ಭಾಷೆಯೆಂಬ ಸಲಹೆಯನ್ನು ಪೂರ್ಣವಾಗಿ ಸರ್ಕಾರ ಒಪ್ಪಲಿಲ್ಲ. ನಂತರ ಕರ್ನಾಟಕದ ಉಚ್ಚ ನ್ಯಾಯಾಲಯದ 25–1–1989ರಂದು ತೀರ್ಪು ನೀಡಿ ಹೊರಡಿಸಿದ ಆದೇಶವು ಇಂದೂ ಜಾರಿಯಲ್ಲಿದೆ. ಅದರಂತೆ ಪ್ರಾಥಮಿಕ ಹಂತದಲ್ಲಿ ಒಂದು ಭಾಷೆ ಅಂದರೆ ಮಾತೃಭಾಷೆ, ಮಾಧ್ಯಮಿಕ ಹಂತದಲ್ಲಿ ಇಂಗ್ಲಿಷ್ ಭಾಷಾ ಶಿಕ್ಷಣ, ಪ್ರೌಢಶಾಲಾ ಹಂತದಲ್ಲಿ ಮೂರು ಬಾಷೆಗಳ ಕಲಿಕೆ, ಅದರಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯುವುದು. ಆದರೆ ಕನ್ನಡವೇ ಏಕೈಕ ಪ್ರಥಮಭಾಷೆಯಾಗುವುದು ಸಾಧ್ಯವಾಗಿಲ್ಲ.

ಮಾತೃಭಾಷೆಯ ಜೊತೆಗೆ ರಾಷ್ಟ್ರಭಾಷೆ ಹಿಂದಿ ನಮ್ಮ ರಾಷ್ಟ್ರದ ತುಂಬೆಲ್ಲ ಪರಿಚಯವಿದ್ದು ದಕ್ಷಿಣದ ಕೆಲರಾಜ್ಯಗಳನ್ನು ಬಿಟ್ಟರೆ ಎಲ್ಲ ಕಡೆಗೆ ತನ್ನ ಪ್ರಭಾವವನ್ನು ಬೀರುತ್ತಿದೆ.

ದಕ್ಷಿಣದ ರಾಜ್ಯಗಳಾದ ಕೇರಳ, ತಮಿಳುನಾಡು, ಒಡಿಸ್ಸಾ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಹಿಂದಿ ಪ್ರಭಾವವಿಲ್ಲ, ಆದರೆ ಇಂಗ್ಲಿಷ್ ಭಾಷೆ

Digitised by Bharatavani, CIIL

ಎರಡನೆಯ ಭಾಷೆಯಾಗಿ ಪ್ರಯೋಗಿಸಲ್ಪಡುತ್ತದೆ. ಮಿತಿಮೀರಿದ ಜನಸಂಖ್ಯೆಯಿಂದ ಒಂದು ರಾಜ್ಯದಲ್ಲಿ ಶಿಕ್ಷಣ ಪಡೆದು ಯೋಗ್ಯನಾದ ವ್ಯಕ್ತಿಗೆ ತನ್ನ ಮಾತೃರಾಜ್ಯದಲ್ಲಿ ಸರಿಯಾದ ಕೆಲಸ ಸಿಕ್ಕದೆ ಬೇರೆ ರಾಜ್ಯಗಳಿಗೆ ಹೋಗಿ ಕೆಲಸ ಪಡೆಯುವ ಸಂಭವ ಹೆಚ್ಚಾಗಿದೆ. ಇದಕ್ಕಾಗಿ ಅಂತಹವರಿಗೆ ಆಯಾ ರಾಜ್ಯದ ಮಾತೃಭಾಷೆಯ ಜ್ಞಾನ ಅತ್ಯವಶ್ಯಕವಾಗಿದೆ. ನಂತರ ಅವರ ಮಕ್ಕಳು ಅದೇ ರಾಜ್ಯದ ಭಾಷೆಯನ್ನು ಕಲಿಯಬೇಕಾಗುತ್ತದೆ. ಹೀಗೆ ಶಿಕ್ಷಣದಲ್ಲಿ ಯೋಗ್ಯವಾದ ಹೊಂದಾಣಿಕೆ ಮತ್ತು ತಿಳುವಳಿಕೆ ಇವುಗಳಿಂದ ದ್ವಿಭಾಷಾ ಸೂತ್ರವನ್ನು ಅಳವಡಿಸಬೇಕಾಗುತ್ತವೆ. ಕೊಠಾರಿ ಶಿಕ್ಷಣ ಆಯೋಗ (1964–66), 1986ರ ರಾಷ್ಟ್ರೀಯ ಶಿಕ್ಷಣ ನೀತಿ ಶಾಲೆಗಳಲ್ಲಿ ತ್ರಿಭಾಷಾ ಸೂತ್ರ ಇರಬೇಕೆಂದು ಶಿಫಾರಸ್ಸು ಮಾಡಿವೆ. ಇವುಗಳ ಪ್ರಕಾರ ಮಾತೃಭಾಷೆ, ರಾಷ್ಟ್ರಭಾಷೆ (ಹಿಂದಿ) ಮತ್ತು ಸಂಪರ್ಕಭಾಷೆ ಅಂತರಾಷ್ಟ್ರೀಯ ಭಾಷೆ ಹೀಗೆ ಮೂರು ಭಾಷೆಗಳನ್ನು ಮಕ್ಕಳು 5ನೇ ತರಗತಿಯಿಂದ ಕಲಿಯುವರು ಆದರೆ 1ನೇ ತರಗತಿಯಿಂದ 4ನೆಯ ತರಗತಿವರೆಗೆ ಮಾತೃಭಾಷೆ ಮಾತ್ರ ಕಲಿಯಬೇಕು. ಈ ಸಂದರ್ಭದಲ್ಲಿ ಗಡಿ ಪ್ರದೇಶದಲ್ಲಿರುವ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಹೊಂದಿಕೊಂಡ ರಾಜ್ಯಗಳ ಮಾತೃಭಾಷೆಯನ್ನು ಮಕ್ಕಳು ಕಲಿಯುವುದು ಮುಂದೆ ವ್ಯವಹಾರಿಕವಾಗಿ ಸಾಮಾಜಿಕವಾಗಿ ಅನುಕೂಲಕರವೆಂದು ಕಂಡು ಬಂದಿದೆ.

ಸಾಮಾನ್ಯವಾಗಿ ವ್ಯವಹಾರವು ಒಂದು ರಾಜ್ಯದಲ್ಲಿ ಮಾತೃಭಾಷೆಯಿಂದ ನಡೆದರೆ ಗಡಿ ಪ್ರದೇಶಗಳಲ್ಲಿರುವ ಜನರು ಪರಸ್ಪರ ಎದುರಾದ ರಾಜ್ಯದ ಭಾಷೆಗಳನ್ನು ಪ್ರಯೋಗಿಸುವುದುಂಟು.

ಉದಾಹರಣೆಗೆ: ಕೊಲ್ಲಾಪುರ, ಸೊಲ್ಲಾಪುರ ಮುಂತಾದ ಭಾಗಗಳಲ್ಲಿ ಕನ್ನಡ ಮಾತನಾಡುವ ಜನರ ಮತ್ತು ನಿಪ್ಪಾಣಿ ಗಡಿ, ಬೆಳಗಾಂ ಮುಂತಾದ ಪ್ರದೇಶಗಳಲ್ಲಿ ಮರಾಠಿ ಭಾಷಿಗರ ಸಂಖ್ಯೆ ಹೆಚ್ಚಿದೆ.

ಇದರಂತೆ ಬಳ್ಳಾರಿ, ರಾಯಚೂರ್, ಬೀದರ್ ಜಿಲ್ಲೆಗಳಲ್ಲಿ ತೆಲುಗು ಭಾಷಿಕರ ಸಂಖ್ಯೆ ಹೆಚ್ಚಿದ್ದು, ಕೋಲಾರ ಮೈಸೂರು ಪ್ರದೇಶಗಳಲ್ಲಿ ಮಲಯಾಳಂ ಮಾತನಾಡುವವರ ಸಂಖ್ಯೆ ಹೆಚ್ಚಿದೆ. ಕೃಷಿ ವ್ಯಾಪಾರ, ವ್ಯವಹಾರಗಳನ್ನು ಮಾತನಾಡುವ ಜನರು ಪರಸ್ಪರ ಆಯಾ ಭಾಷೆಗಳನ್ನು ಮಾತನಾಡುವುದು ಅನಿವಾರ್ಯವಾಗಿದೆ.

ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಸಹ ದ್ವಿಭಾಷಾ ನೀತಿಯನ್ನು ಅನುಸರಿಸುವವರು ಎರಡು ದೇಶದ ರಾಜತಾಂತ್ರಿಕರು ಪರಸ್ಪರ ಒಪ್ಪಂದಗಳನ್ನು ದ್ವಿಭಾಷಾ ಸೂತ್ರದ ಅನ್ವಯ ಮಾಡಿಕೊಳ್ಳುವರು. ಇದಕ್ಕಾಗಿ ಎರಡೂ ಭಾಷೆಗಳ ಲಿಖಿತ ಕರಡು ಪತ್ರಿಕೆಯನ್ನು ತಯಾರಿಸಿ ಅದನ್ನು ಸರಿಯಾಗಿ ಓದಿ ಅರ್ಥೈಸಿಕೊಂಡು ನಂತರ ಅನುಮೋದನೆಗೆ ಸಹಿ ಹಾಕಲಾಗುವುದು. ಭಾರತದಲ್ಲಿ ದ್ವಿಭಾಷಾ ಸೂತ್ರದಿಂದ ಶಿಕ್ಷಣ ಪಡೆದ ವ್ಯಕ್ತಿಗಳು ದೇಶದ ಯಾವುದೇ ಮೂಲೆಗೂ ಸಂಚರಿಸಿ ತಮ್ಮ ಜೀವನದ ಮಾರ್ಗೋಪಾಯಗಳನ್ನು ಕಂಡುಕೊಳ್ಳಬಹುದಾಗಿದೆ. ಆದ್ದರಿಂದ ಇಂದಿನ ಶಾಲಾ ಪಠ್ಯಕ್ರಮದಲ್ಲಿ ತ್ರಿಭಾಷಾಸೂತ್ರದೊಂದಿಗೆ ದ್ವಿಭಾಷಾ ನೀತಿಯನ್ನು ಅನುಸರಿಸುವಂತೆ ಮಾಡಲಾಗಿದೆ.

ಭವಿಷ್ಯದ ಶಾಲಾ ಪಠ್ಯಕ್ರಮವು ಮೂರು ಅವಶ್ಯಕ ಭಾಷೆಗಳೊಂದಿಗೆ ಮಗ್ಗಲಿನ/ನೆರೆಯ/ರಾಷ್ಟ್ರದ ಭಾಷೆ ಅನುಸರಿಸಿದರೆ ಮಕ್ಕಳಿಗೆ ಭವಿಷ್ಯದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ.

ಜಾಗತೀಕರಣದ ನಿಯಮಗಳ ಪ್ರಕಾರ ಬೇರೆ ಬೇರೆ ದೇಶದ ವಿದ್ಯಾಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯಗಳು ಭಾರತದಲ್ಲಿ ಈಗ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಿವೆ.

ಶಿಕ್ಷಣದ ಮಹತ್ವದ ನಿರ್ಣಯವಾದ ಜಾಗತೀಕರಣ. ಖಾಸಗೀಕರಣ ಉದಾರೀಕರಣ ಇವುಗಳು ಸಾಕಾರವಾಗಬೇಕಾದರೆ ಯೋಗ್ಯ ದ್ವಿಭಾಷಾ ನೀತಿಯನ್ನು ಅನುಸರಿಸಬೇಕು. ಕೇವಲ ತ್ರಿಭಾಷಾ ಸೂತ್ರದಿಂದ ಮಗು ಅಂತರಾಷ್ಟ್ರೀಯ ಮಟ್ಟಕ್ಕೇರಲು ಸಾಧ್ಯವಿಲ್ಲ. ಅದಕ್ಕೆ ಆಯಾ ದೇಶದ ಪ್ರತಿಷ್ಠಿತವಾದ ಭಾಷೆಯ ಪರಿಜ್ಞಾನವಿರಬೇಕು. ಇದು ಉದಾರೀಕರಣದಿಂದಲೇ ಸಾಧ್ಯ. ಹೀಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ದ್ವಿಭಾಷಾ ಶಿಕ್ಷಣನೀತಿಯನ್ನು ಅನುಸರಿಸುವುದು ಅತಿ ಅವಶ್ಯಕವಾಗಿದೆ.

–ಎಸ್.ಎಸ್. ಹೂ

# ನ

## ನಗರೀಕರಣ ಮತ್ತು ಶಿಕ್ಷಣ

ನಗರೀಕರಣ ಹಾಗೂ ಶಿಕ್ಷಣ ಇವೆರಡೂ ಸಾಮಾಜಿಕ ಪ್ರಕ್ರಿಯೆಗಳೇ. ಆದರೆ ಅವುಗಳ ಅಧ್ಯಯನ ವಸ್ತು ವಿಷಯಗಳು ಮಾತ್ರ ಬೇರೆ ಬೇರೆ. ಆದರೂ ಸಮಾಜವಿಜ್ಞಾನಗಳಲ್ಲಿ ಇವೆರಡಕ್ಕೂ ಅವಿನಾಭಾವ ಸಂಬಂಧವಿರುವುದಂತೂ ನಿಜ. ನಗರೀಕರಣವು ಒಂದು ಪ್ರಕ್ರಿಯೆ. ಇದು ಗ್ರಾಮೀಣ ಪ್ರದೇಶದ ಜನರು ನಗರಗಳತ್ತ ಹೇರಳವಾಗಿ ವಲಸೆ ಬರುವ ಒಂದು ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ತಳ್ಳುವ–ಎಳೆಯುವ ಅಂಶಗಳಲ್ಲದೆ (Push & Pull factors) ಕೈಗಾರಿಕೀಕರಣ, ವ್ಯಾಪಕವಾದ ಕೈಗಾರಿಕಾ ಅಭಿವೃದ್ಧಿ, ಶೈಕ್ಷಣಿಕ ವ್ಯವಸ್ಥೆಯ ವಿಸ್ತಾರವಾದ ಬೆಳವಣಿಗೆ, ಆರ್ಥಿಕ ಹಾಗೂ ಔದ್ಯೋಗೀಕರಣದ ಅಂಶಗಳು ನಗರದ ಆಕರ್ಷಣೆ ಮುಂತಾದ ಅನೇಕ ಅಂಶಗಳು ನಗರ ಬೆಳವಣಿಗೆಗೆ ಕಾರಣವಾಗಿರುತ್ತವೆ. 'God created the village and man created the city.' ಅಂದರೆ ದೇವರು ಗ್ರಾಮವನ್ನು ಸೃಷ್ಟಿಸಿದರೆ ಮಾನವರು ನಗರಗಳನ್ನು ಸೃಷ್ಟಿಸುತ್ತಾರೆ ಎಂಬ ಮಾತು ಇದೆ. ನಗರ ಸಮಾಜಶಾಸ್ತ್ರಜ್ಞರು ನಗರಗಳ ಹುಟ್ಟು ಬೆಳವಣಿಗೆಯ ಬಗ್ಗೆ ಅನೇಕ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಅಂಡರ್‌ಸನ್‌ರವರ ಪ್ರಕಾರ ನಗರೀಕರಣ ಎಂದರೆ ಕೇವಲ ನಗರಗಳತ್ತ ಜನ ವಲಸೆ ಬರುವುದಷ್ಟೇ ಅಲ್ಲ. ಅದರ ಜೊತೆಗೆ ವಲಸೆ ಬಂದ ಜನಗಳ ನಡೆ, ನುಡಿ, ನಂಬಿಕೆ ಮೌಲ್ಯಗಳೂ ಎಲ್ಲದರಲ್ಲೂ ಬದಲಾವಣೆ ಆಗುತ್ತದೆ.

ಪ್ರಾಚೀನ ನಾಗರಿಕತೆಗಳಲ್ಲಿ ನಗರಗಳು ಇಲ್ಲವೆಂದಲ್ಲ. ಆದರೆ ಕಳೆದೆರಡು ಶತಮಾನಗಳಿಂದೀಚೆಗೆ ನಗರಗಳ ಬೆಳವಣಿಗೆಯಿಂದಾಗಿ ಹೊಸಬಗೆಯ ಜೀವನ ಕ್ರಿಯೆಯೊಂದು ಸೃಷ್ಟಿಯಾಗತೊಡಗಿದೆ. ಸಾವಿರಾರು ವರ್ಷಗಳ ಕಾಲ ಮಾನವನ ಇತಿಹಾಸವು ಗ್ರಾಮ ಪ್ರಧಾನವಾಗಿತ್ತು. ಆದರೂ ಭಾರತದಲ್ಲಿ ನಗರಗಳು ಕ್ರಿ.ಪೂ. 2500ರಲ್ಲಿಯೇ ಅಸ್ತಿತ್ವದಲ್ಲಿದ್ದುವೆಂಬುದು ಇತಿಹಾಸದ ಅಧ್ಯಯನದಿಂದ ತಿಳಿದುಬರುತ್ತದೆ. ನಗರಗಳು ಅದರಲ್ಲೂ ಸಿಂಧೂ ನದಿಯ ನಾಗರಿಕತೆಯು ಸಾವಿರಾರು ಮೈಲುಗಳು ಹರಡಿದ್ದು ಹರ್‍ಯಾಣದ ರೂಪಾರ್‌ನಿಂದ ಹಿಡಿದು ಕಾಥಿವಾರದ ರಂಗ್‌ಪುರದವರೆಗೂ ನಗರಗಳು ವಿಸ್ತರಿಸಿದ್ದವು. ಇತ್ತ ದಕ್ಷಿಣ ಕಾಥೇವಾಡದಿಂದ ಹಿಡಿದು ಪೂರ್ವ ಬಲೂಚಿಸ್ತಾನದವರೆವಿಗೂ ನಾಗರಿಕತೆ

Digitised by Bharatavani, CIIL

ಹರಡಿತ್ತು. ಅವುಗಳಲ್ಲಿ ಮುಖ್ಯವಾದ ನಗರಗಳೆಂದರೆ ಹರಪ್ಪ ಮತ್ತು ಮಹೆಂಜೋದಾರೊ.

ಆದರೆ ಶಿಕ್ಷಣಕ್ಕೆ ತನ್ನದೇ ಆದ ಇತಿಹಾಸವಿದೆ. ಪಾಶ್ಚಿಮಾತ್ಯ, ಪೌರಾತ್ಯ ಹಾಗೂ ಭಾರತೀಯ ದೇಶಗಳಲ್ಲಿ ಅತ್ಯಂತ ಹೆಸರುವಾಸಿಯಾದ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಇದ್ದವು. ಭಾರತದ ಉಜ್ಜಯಿನಿ, ನಳಂದ, ತಕ್ಷಶಿಲೆ ಮುಂತಾದ ಪ್ರಾಚೀನ ವಿಶ್ವವಿದ್ಯಾಲಯಗಳು ಪವಿತ್ರ ಸಂಸ್ಥೆಗಳಾಗಿದ್ದವು. ಅಲ್ಲದೆ ಅನೇಕ ಸಾವಿರ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಈ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಸಿಸಿದ ಉದಾಹರಣೆಗಳೂ ಇವೆ. ಬಹುಶಃ ಭಾರತದ ಶೈಕ್ಷಣಿಕ ಸಂಸ್ಥೆಗಳು ಸಂಸ್ಕೃತ ಮಾಧ್ಯಮದಲ್ಲಿದ್ದು ಮೇಲ್ಜಾತಿಯವರಿಗೆ ಮಾತ್ರ ಸೀಮಿತವಾಗಿತ್ತು. ಆದರೆ ನಗರಗಳ ಬೆಳವಣಿಗೆಯಾಗತೊಡಗಿದಂದಿನಿಂದೀಚೆಗೆ ಶಿಕ್ಷಣವೂ ಸಹ ಅನೇಕ ವಿಧವಾದ ಧ್ಯೇಯಗಳನ್ನು ಹೊಂದಿ ಬೆಳಕಿಗೆ ಬರುತ್ತಿದೆ. ಅನೇಕ ನಗರಗಳು ಶೈಕ್ಷಣಿಕವಾಗಿ ಹೆಸರುಮಾಡಿವೆ. ಯಾವುದೇ ನಗರ ಬೆಳಕಿಗೆ ಬರಬೇಕಾದರೂ ಅಲ್ಲಿ ಮೂಲಭೂತವಾಗಿ ಶೈಕ್ಷಣಿಕ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳು, ಆರ್ಥಿಕ ಸಂಸ್ಥೆಗಳು, ರಾಜಕೀಯ ಆಡಳಿತ ಸಂಸ್ಥೆಗಳು. ಕೈಗಾರಿಕೆಗಳೊಂದಿಗೆ ಬೆಸೆದುಕೊಂಡಿರುವಂತೆ ಬೆಳೆಯಲಾರಂಭಿಸುತ್ತವೆ. ಶಾಲೆಗಳಿಲ್ಲದ ಊರುಗಳಿಲ್ಲ. ಅದರಲ್ಲೂ ನಗರಗಳಲ್ಲಿ ಶಾಲೆ, ಕಾಲೇಜುಗಳು, ಆಸ್ಪತ್ರೆಗಳು ವ್ಯಾಪಕವಾಗಿ ಬೆಳೆದಿರುತ್ತವೆ.

ಬ್ರಿಟಿಷರು ಭಾರತದಲ್ಲಿ ಅನೇಕ ಮಹಾನಗರಗಳನ್ನು ಕಟ್ಟಿದರಲ್ಲದೆ ಕೆಲವು ಬಂದರು ನಗರಗಳನ್ನು ಸಹ ನಿರ್ಮಾಣ ಮಾಡಿದರು. ಮದ್ರಾಸ್, ಮುಂಬಯಿ ಹಾಗೂ ಕಲ್ಕತ್ತಾ ಇಂತಹ ಪ್ರಮುಖ ನಗರಗಳು.

ಮುಸಲ್ಮಾನರ ಕಾಲದ ನಗರಗಳೆಂದರೆ ಆಗ್ರಾ, ದೆಹಲಿ, ಲಾಹೋರ್ ಅಲ್ಲದೆ ಗೋಲ್ಕೊಂಡ, ಹೈದರಾಬಾದ್, ಬಿಜಾಪುರ ಮುಂತಾದವು. ಇದರ ಜೊತೆಗೆ ಭಾರತ ಸ್ವಾತಂತ್ರ್ಯ ಪಡೆದ ನಂತರ ಬೆಳಕಿಗೆ ಬಂದ ನಗರಗಳೆಂದರೆ ಚಂಡೀಘಡ, ಭುವನೇಶ್ವರ, ಭಿಲಾಯ್, ದುರ್ಗಾಪುರ್ ಮುಂತಾದುವು. ಇವುಗಳ ಜೊತೆಗೆ ಕಳೆದ 4–6 ದಶಕಗಳಿಂದೀಚೆಗೆ ಪ್ರಸಿದ್ಧಿಗೆ ಬಂದಿರುವ ಸಾವಿರಾರು ನಗರಗಳ ಸಾಲಿಗೆ ಬೆಂಗಳೂರು, ಮಂಗಳೂರು, ಅಹಮದಾಬಾದ್, ಉದಯ್‌ಪುರ, ಜಯ್‌ಪುರ ಮುಂತಾದುವು ಸೇರುತ್ತವೆ. ಈ ಎಲ್ಲ ನಗರಗಳ ಹೃದಯಭಾಗದಲ್ಲಿ ಶೈಕ್ಷಣಿಕ ಸಂಸ್ಥೆಗಳು ಬೆಳೆದು ಬಂದಿರುವುದನ್ನು ನೀವು ಕಾಣಬಹುದು.

ಆಧುನಿಕ ಭಾರತದಲ್ಲಿ ನಗರೀಕರಣ ಪ್ರಾರಂಭವಾದುದು ಬಹುಶಃ 19ನೇ ಶತಮಾನದ ಪ್ರಾರಂಭದಿಂದೀಚೆಗೆ. ಭಾರತದ ಮೊದಲನೇ ಜನಗಣತಿಯಾದ 1901–1911ರ ದಶಕದಲ್ಲಿ ನಗರದ ಜನಸಂಖ್ಯೆ ಕೇವಲ ಶೇ. 10.5 ಇತ್ತು. 1931ರಲ್ಲಿ ಅದು ಶೇ. 12 ಆಯಿತು. ಆದರೂ 1941, 51, 61, 71, 81, 91 ಹೀಗೆ ವಿವಿಧ ದಶಕಗಳಲ್ಲೂ ನಗರದ ಜನಸಂಖ್ಯೆಯಲ್ಲಿ ತೀವ್ರ ಹೆಚ್ಚಳ ಆಗಲಿಲ್ಲ. ಈಗಲೂ 2001–2010ರ ಜನಗಣತಿಯನ್ವಯ ಶೇ. 30 ಭಾಗ ಭಾರತದಲ್ಲಿ ನಗರವಾಸಿಗಳು. ಉಳಿದ ಶೇ. 70 ಭಾಗದಷ್ಟು ಜನ ಇಂದಿಗೂ ಸಹ ಗ್ರಾಮೀಣವಾಸಿಗಳೇ. ಇದರಿಂದ ಭಾರತದಲ್ಲಿ ಗ್ರಾಮೀಣ ಸಮಾಜದ ಪ್ರಾಧಾನ್ಯತೆಯನ್ನು ತಿಳಿಯಬಹುದಾಗಿದೆ. ಬೃಹತ್‌ನಗರಗಳ ಜೊತೆಗೆ ಸಣ್ಣಪುಟ್ಟ ನಗರಗಳೂ ಹೆಚ್ಚು ಪ್ರಸಿದ್ಧಿಗೆ ಬರುತ್ತಿವೆ. ಉದಾಹರಣೆಗೆ, ಮೈಸೂರು, ಮಂಡ್ಯ, ಹಾಸನ, ಧಾರವಾಡ, ಬೆಳಗಾವಿ, ಹುಬ್ಬಳ್ಳಿ ಮೊದಲಾದವು. ಇತ್ತೀಚೆಗೆ ವಿಶ್ವಸಂಸ್ಥೆ 'ನಗರ'ದ ವ್ಯಾಖ್ಯೆಯನ್ನು ಬದಲಿಸಿದ್ದು 20,000ಕ್ಕಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಸ್ಥಳಗಳು ನಗರಗಳೆನಿಸುತ್ತವೆ.

ಶಿಕ್ಷಣವು ಮಾನವನ ನಾಗರಿಕತೆಗೆ ಆಧಾರವಾಗಿರುತ್ತದೆ. ಬೆಳೆಯುತ್ತಿರುವ ನಗರಗಳಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರವನ್ನು ಕಂಡಾಗ ಇದನ್ನು ಅರ್ಥಮಾಡಿಕೊಳ್ಳಬಹುದು. ಅನೇಕ ನಗರಗಳಲ್ಲಿ ಸರ್ಕಾರಿ ಶಾಲೆಗಳು ಒಂದೆಡೆಯಾದರೆ, ಖಾಸಗೀ ಶಾಲೆಗಳು ಹಾಗೂ ಕ್ರಿಶ್ಚಿಯನ್ ಮಿಶನರಿಗಳು ಸ್ಥಾಪಿಸಿರುವ ಕಾನ್ವೆಂಟ್‌ಗಳು ವ್ಯಾಪಕವಾಗಿ ಕಂಡು ಬರುತ್ತಿವೆ. ಇತ್ತೀಚೆಗಂತೂ ಅನೇಕ ಬೃಹತ್ ನಗರಗಳಲ್ಲಿ ಶಾಲೆಗಳು ಹಾಗೂ ಕಾಲೇಜುಗಳು ನಾಯಿಕೊಡೆಗಳಂತೆ ಬೆಳೆಯತೊಡಗಿವೆ. ಎಲ್ಲಿ ಶಾಲೆ ಪ್ರಾರಂಭಿಸಿದರೂ ಆಕರ್ಷಕವಾಗಿದ್ದರೆ ಅಲ್ಲಿಗೆ ವಿದ್ಯಾರ್ಥಿಗಳು ಅಪಾರಸಂಖ್ಯೆಯಲ್ಲಿ ಹಾಜರಾಗುತ್ತಿದ್ದಾರೆ. ಅನೇಕ ಔಪಚಾರಿಕ ಸಂಸ್ಥೆಗಳು ಭಾರತದ ಉದ್ದಗಲಕ್ಕೂ ಆಯಾ ರಾಜ್ಯದ ಭಾಷೆ, ರಾಷ್ಟ್ರಭಾಷೆ ಹಾಗೂ ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲಿಷ್ ಮಾಧ್ಯಮ ಹೀಗೆ ಮೂರು ಭಾಷೆಗಳಲ್ಲೂ ಶಿಕ್ಷಣ ನೀಡುತ್ತಿವೆ. ಇದನ್ನೆಲ್ಲಾ ನೋಡಿದರೆ ಒಂದು ಕಡೆ ಶಿಕ್ಷಣದಲ್ಲಿ ಕ್ರಾಂತಿಯಾಗುತ್ತಿರುವುದು ಮತ್ತೊಂದು ಕಡೆ ಗ್ರಾಮೀಣ ಜನರು ಶಿಕ್ಷಣ ಪಡೆಯಲು ಹರಸಾಹಸ ಪಡುತ್ತಿರುವುದು ಕಣ್ಣಿಗೆ ಬೀಳುತ್ತದೆ.

ನಗರೀಕರಣದಲ್ಲಿ ಎದ್ದು ಕಾಣುವ ಅಂಶವೆಂದರೆ ಪ್ರದೇಶವೊಂದರ ಮೂಲೆ ಮೂಲೆಗಳಲ್ಲಿರುವ ಜನ ತಂಡೋಪತಂಡವಾಗಿ ಹಾಗೂ ನಿರಂತರವಾಗಿ ನಗರಗಳ ಕಡೆಗೆ ಧಾವಿಸುವುದು. ಈ ವಿಷಯ ಭಾರತದಲ್ಲಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲೂ ಕಾಣಬರುತ್ತದೆ. ಕ್ರಿ.ಶ. 1850ರಲ್ಲಿ ಜಗತ್ತಿನ ಜನಸಂಖ್ಯೆಯಲ್ಲಿ ಕೇವಲ ಶೇ. 5ರಷ್ಟು ಮಂದಿ ಮಾತ್ರ ನಗರಗಳಲ್ಲಿದ್ದರು. ಬಹುಶಃ ಭಾರತದಲ್ಲೂ ಇದೇ ಚಿತ್ರಣವಿದ್ದಿರಬಹುದು. ಜಗತ್ತಿನ ಜನಸಂಖ್ಯೆಯ ಶೇ. 48ರಷ್ಟು ಮಂದಿ ಈಗಾಗಲೇ ನಗರವಾಸಿಗಳಾಗಿದ್ದಾರೆ. ಭಾರತದಲ್ಲೂ ಈ ಸಂಖ್ಯೆ ಶೇ. 30ರಷ್ಟು ಇದೆ.

ಯಾವ ಹಂತದಲ್ಲಾದರೂ ಆಗಲಿ ಪಟ್ಟಣ ಪ್ರವೇಶ ಮಾಡಿದ ಜನಸ್ತೋಮ ಮೊದಲು ವಸತಿ ಸೌಕರ್ಯಕ್ಕಾಗಿ ಅಲೆದಾಡುತ್ತಾರೆ. ನಂತರ ಮಕ್ಕಳಿಗಾಗಿ ಶಾಲೆ ಹುಡುಕಾಟ, ನಂತರ ರೋಗಗಳಿಂದ ಮುಕ್ತರಾಗಲು ಆಸ್ಪತ್ರೆಗಳಿಗೆ ಅಲೆದಾಟ. ಹೀಗೆ ಮೂಲಭೂತವಾಗಿ ಮನೆ, ರಸ್ತೆ, ನೀರು, ಶಾಲೆ ಎಲ್ಲದರ ಅವಶ್ಯಕತೆಯು ಅಪಾರವಾಗಿರುತ್ತದೆ. ನಗರಗಳಲ್ಲಿ ಎಲ್ಲಾಮಟ್ಟದ ಶಾಲೆಗಳನ್ನು ಕಾಣಬಹುದು. ಬಹುತೇಕ ಶಾಲೆಗಳು ತುಂಬಿತುಳುಕುತ್ತಿರುತ್ತವೆ. ಶಿಕ್ಷಣವು ಪ್ರತಿಯೊಬ್ಬ ನಗರವಾಸಿಯ ಸ್ವತ್ತು ಎಂದು ಪರಿಗಣಿಸಿ ಶಾಲೆಗಾಗಿ ಅಲೆದಾಡುವ ಪರಿ ಅಷ್ಟಿಷ್ಟಲ್ಲ. ಆ ಶಿಕ್ಷಣ ಸಂಸ್ಥೆಗಳಲ್ಲಿ ಅತಿ ಹೆಚ್ಚು ಹಣ ತೆತ್ತು ಮಕ್ಕಳಿಗೆ ಪ್ರವೇಶ ಪಡೆದು ಪುಸ್ತಕ, ಸಮವಸ್ತ್ರ, ಷೂ ಹೀಗೆ ಅನೇಕ ಬೇಡಿಕೆಗಳನ್ನು ಪೂರೈಸಿದ ನಂತರ ದಿನನಿತ್ಯ ಮಕ್ಕಳನ್ನು ಓದಿಸುವ ಜವಾಬ್ದಾರಿಯನ್ನು ಪೂರೈಸಬೇಕು. ಒಟ್ಟಿನಲ್ಲಿ ನಗರದಲ್ಲಿ ಶಿಕ್ಷಣ ಬಲು ದುಬಾರಿ.

ಮಾನವ ಸಮಾಜದ ಸ್ವರೂಪವನ್ನು ನಗರೀಕರಣ ಬದಲಿಸಿದೆ. ಜನರ ಮನೋಭಾವನೆ, ಅಭಿರುಚಿ ಅನಿಸಿಕೆ ಎಲ್ಲವೂ ನಗರಗಳಲ್ಲಿ ಭಿನ್ನವಾಗಿರುತ್ತದೆ. ಅದೆಷ್ಟೋ ಜನರು ನಗರಗಳ ಸಂಪರ್ಕದಿಂದಾಗಿ ಆಧುನೀಕರಣಗೊಂಡಿದ್ದಾರೆ. 300 ವರ್ಷಗಳ ಹಿಂದೆ ಕೇವಲ 300 ಮನೆಗಳಿದ್ದ ಮುಂಬಾದೇವಿ ದೇವಸ್ಥಾನದ ಸುತ್ತಮುತ್ತಲಿನ ಮುಂಬಯಿಯಲ್ಲಿ ಇಂದು 1 ಕೋಟಿಗೂ ಮೀರಿ ಜನಸಂಖ್ಯೆ ಕಂಡು ಬರುತ್ತಿದೆ. ಈ ಕೋಟಿ ಜನಸಂಖ್ಯೆಗೆ ಬೇಕಾಗಿರುವ ಸೌಲಭ್ಯಗಳನ್ನು ದೊರಕಿಸಿಕೊಡಲು ನಗರ ಸಮಾಜಶಾಸ್ತ್ರ, ನಗರ ಪರಿಸರ ಶಾಸ್ತ್ರ, ನಗರಯೋಜನೆ ಎಂಬ ಅನೇಕ ಹೊಸ ವಿಜ್ಞಾನಗಳು ಅಸ್ತಿತ್ವಕ್ಕೆ ಬಂದು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಅಲೆಗಳನ್ನು ಎಬ್ಬಿಸಿವೆ. ನಗರದ ಸಂಸ್ಕೃತಿ ಹಾಗೂ ಮೌಲ್ಯಗಳು ಎಲ್ಲೆಡೆ ತಮ್ಮ ಪ್ರಾಬಲ್ಯವನ್ನು ಪ್ರದರ್ಶಿಸುತ್ತಿವೆ. ಶಿಕ್ಷಣವನ್ನು ಪಡೆದವರು ಪ್ರಸಕ್ತ ಜೀವನದ ಅನೇಕ ರೀತಿನೀತಿಗಳನ್ನು ಪರಾಮರ್ಶೆ ಮಾಡಬಲ್ಲವರಾಗಿದ್ದಾರೆ.

Digitised by Bharatavani, CIIL

ಭಾರತದಲ್ಲಿ ಜನಸಂಖ್ಯೆಯ ಅಪರಿಮಿತವಾದ ಹೆಚ್ಚಳದಿಂದ ನಗರಗಳಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಎಲ್ಲೆಲ್ಲಿ ನಗರೀಕರಣ ಪ್ರಕ್ರಿಯೆ ಪ್ರಾರಂಭವಾಗಿದೆಯೊ ಅದೆಲ್ಲಾ ಕೈಗಾರಿಕೆಗಳ ಬೆಳವಣಿಗೆಯಿಂದ. ಎಲ್ಲೆಲ್ಲಿ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದಿವೆಯೋ ಅದು ಶಿಕ್ಷಣದ ಪ್ರಭಾವದಿಂದ. ಹೀಗೆ ಶಿಕ್ಷಣ, ಕೈಗಾರಿಕೀಕರಣ, ನಗರೀಕರಣಗಳು ಒಂದಕ್ಕೊಂದು ತಳಕು ಹಾಕಿಕೊಂಡಿವೆ. ಶಿಕ್ಷಣದಿಂದ ಹೊಸ ಹೊಸ ಸಂಶೋಧನೆಗಳು ಸಾಧ್ಯವಾದುದಲ್ಲದೆ ನಗರಗಳ ಅಸ್ತಿತ್ವಕ್ಕೂ ನಾಂದಿ ಹಾಡಿವೆ. ಇಂದು ಭಾರತದಲ್ಲಿ ಶಿಕ್ಷಣ ವ್ಯಾಪಕವಾಗಿ ಬೆಳೆಯುತ್ತಿರುವುದರಲ್ಲಿ ಯಾವ ಅನುಮಾನವೂ ಇಲ್ಲ.

ಭಾರತದಲ್ಲಿ ಹಾಗೂ ಪ್ರಪಂಚದಾದ್ಯಂತ ಶೈಕ್ಷಣಿಕ ಪ್ರಗತಿಯಿಂದಾಗಿ ಸಾಮಾಜಿಕ ಪ್ರಗತಿ, ಆರ್ಥಿಕ ಪ್ರಗತಿ, ಕೈಗಾರಿಕೆ ಹಾಗೂ ನಗರಗಳ ಬೆಳವಣಿಗೆ ಮೊದಲಾದವುಗಳಿಗೆ ಶಿಕ್ಷಣ ಕಾರಣವಾಗಿದೆ. ಬಹುಶಃ ಶಿಕ್ಷಣವು ಜನಸಾಮಾನ್ಯರಿಗೆ ದೊರಕದೇ ಇದ್ದಲ್ಲಿ ಮಾನವನ ನಾಗರಿಕತೆಗೆ ಹೊಸ ಹೊಸ ತಿರುವುಗಳು ಸಾಧ್ಯವಾಗುತ್ತಿರಲಿಲ್ಲ. ಶಿಕ್ಷಣ ವ್ಯವಸ್ಥೆಯನ್ನು ಬದಿಗಿಟ್ಟು ಮಾನವ ಸಮಾಜವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಆ ಮಟ್ಟಿನ ಪ್ರಭಾವವನ್ನು ಶಿಕ್ಷಣದಿಂದ ಸಮಾಜ ಪಡೆದುಕೊಳ್ಳುತ್ತಿದೆ. ಇಂದಿಗೂ ನಗರಗಳಿಗೆ ವಲಸೆ ಬರುತ್ತಿರುವ ಬಹುತೇಕ ಮಂದಿ ಅತ್ಯವಶ್ಯಕವಾಗಿ ಶಿಕ್ಷಣ ಹಾಗೂ ಉದ್ಯೋಗ ಇವೆರಡನ್ನೂ ಗಮನದಲ್ಲಿಟ್ಟುಕೊಂಡು ಬರುವಂತಹವರಾಗಿರುತ್ತಾರೆ. ಒಂದು ದೃಷ್ಟಿಯಲ್ಲಿ ನಗರೀಕರಣ ಜನರನ್ನು ಶಿಕ್ಷಣ, ಉದ್ಯೋಗ, ಮನರಂಜನೆ, ಆರೋಗ್ಯ ಈ ದೃಷ್ಟಿಗಳಿಂದಲೇ ಹೆಚ್ಚು ಹೆಚ್ಚು ಆಕರ್ಷಿಸುತ್ತಿದೆ. ಹೀಗೆ ಒಮ್ಮೆ ತಮ್ಮ ಸ್ವಗ್ರಾಮಗಳನ್ನು ತ್ಯಜಿಸಿ ಬಂದ ಜನರು ನಗರಗಳನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡು ದಿನೇ ದಿನೇ ನಗರಗಳು ವ್ಯಾಪಕವಾಗಿ ಬೆಳೆಯಲು ಕಾರಣವಾಗುತ್ತಿದ್ದಾರೆ. ಈ ಬಗೆಯ ವಲಸೆಗಳಿಗೆ ಪಾಶ್ಚಿಮಾತ್ಯರು ತಮ್ಮ ತಮ್ಮ ರಾಷ್ಟ್ರಗಳಲ್ಲಿ ಕಡಿವಾಣ ಹಾಕಲಾರಂಭಿಸಿದ್ದಾರೆ. ಆದರೆ ಭಾರತದಲ್ಲಿ ನಗರಗಳ ಬೆಳವಣಿಗೆಯನ್ನು ನಿಯಂತ್ರಿಸುವಂತಹ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ. ಇತ್ತೀಚೆಗಂತೂ ಗ್ರಾಮಗಳಿಂದ ಜನರು ತಂಡೋಪ ತಂಡವಾಗಿ ನಗರಗಳತ್ತ ಧಾವಿಸುತ್ತಿದ್ದಾರೆ. ಇದರಿಂದ ನಗರಗಳ ಪರಿಸ್ಥಿತಿ ಭೀಕರವಾಗುತ್ತಿದೆ. ಇದು ನಗರಗಳಲ್ಲಿ ಶಿಕ್ಷಣದಿಂದ ಕೈಗಾರಿಕೆ, ಔದ್ಯೋಗಿಕ ಕ್ಷೇತ್ರಗಳಲ್ಲಿ ಕ್ರಾಂತಿ ನಡೆಯುತ್ತಿರುವಂತೆಯೇ ಅನೇಕ ಗಂಭೀರವಾದ ಸಮಸ್ಯೆಗಳು ನಗರಗಳಲ್ಲಿ ಉದ್ಭವವಾಗಿವೆ. ಅಪರಾಧ, ವೇಶ್ಯಾವೃತ್ತಿ, ಮಾದಕ ಪದಾರ್ಥಗಳ ಸೇವನೆ, ಕೊಳಚೆ ಪ್ರದೇಶಗಳ ಸಮಸ್ಯೆ, ಕೊಲೆ, ಸುಲಿಗೆ, ದರೋಡೆ ಮುಂತಾದ ದುಷ್ಕೃತ್ಯಗಳು ನಗರಗಳಲ್ಲಿ ವ್ಯಾಪಕವಾಗಿ ಕಂಡು ಬರುತ್ತಿದೆ. ಇವುಗಳನ್ನು ನಿಯಂತ್ರಿಸಲು ಆರಕ್ಷಕದಳ, ಅರೆಸೇನಾಪಡೆ ಹಾಗೂ ಮಿಲಿಟರಿ ಮುಂತಾದುವುಗಳು ಸಹಾಯಕ್ಕೆ ಬರುತ್ತಿವೆ. ನಿಂತ ನೀರಿನಂತೆ ಬಹಳ ಶಾಂತವಾಗಿದ್ದ ಸಣ್ಣ ಸಣ್ಣ ಹಳ್ಳಿಗಳೂ ಇಂದು ಚಿಕ್ಕ ಪುಟ್ಟ ಪಟ್ಟಣಗಳಾಗಿ ಪರಿವರ್ತನೆಗೊಂಡು ಅನೇಕ ಒಳ್ಳೆಯ ಹಾಗೂ ಕೆಟ್ಟ ಅಂಶಗಳನ್ನು ತಮ್ಮ ಒಡಲಲ್ಲಿ ಸೇರಿಸಿಕೊಳ್ಳತೊಡಗಿವೆ.

ಅನೇಕ ನಗರಗಳು ಇಂದು ಬಹುರೂಪಿ ನಗರಗಳಾಗಿ ಬೆಳೆಯುತ್ತಿದೆ. ಈ ಎಲ್ಲ ಬಹುರೂಪಿ ನಗರಗಳಲ್ಲೂ ಶಿಕ್ಷಣ ತನ್ನದೇ ಆದ ಪಾತ್ರವನ್ನು ವಹಿಸುತ್ತದೆ. ವಾರಣಾಸಿ, ಮಧುರೈ, ಚೆನ್ನೈ ಮುಂತಾದ ನಗರಗಳು ಪವಿತ್ರ ಕೇಂದ್ರಗಳು. ಈ ಸ್ಥಳಗಳಲ್ಲಿ ಐತಿಹಾಸಿಕವಾದ ಕೆಲವು ವಿಶ್ವವಿದ್ಯಾನಿಲಯಗಳು ಪ್ರಾರಂಭವಾಗಿದ್ದು ಅವುಗಳ ಜೊತೆಗೆ ವ್ಯಾಪಾರ, ವಾಣಿಜ್ಯಕೇಂದ್ರಗಳು ಮೊದಲಾದ ಬಹು ಬಗೆಯ ವೈವಿಧ್ಯಮಯವಾದ ಸಂಘ ಸಂಸ್ಥೆಗಳ ಹುಟ್ಟು ಹಾಗೂ ಬೆಳವಣಿಗೆಗೆ ಕಾರಣವಾಗಿದೆ. ಉದಾಹರಣೆಗೆ, ಕಾಶಿ ಅಥವಾ ವಾರಣಾಸಿಯು ಗಂಗಾತಟದಲ್ಲಿರುವ ಪವಿತ್ರ ವಿಶ್ವನಾಥನ ದೇವಾಲಯವನ್ನು ಮಾತ್ರ ಒಳಗೊಂಡಿಲ್ಲ. ಅಲ್ಲಿ ಪ್ರಸಿದ್ಧವಾದ ಹಿಂದೂ ವಿಶ್ವವಿದ್ಯಾನಿಲಯ, ಸಂಸ್ಕೃತಮಹಾಶಾಲೆ ಇವೆ. ಜೊತೆಗೆ ತನ್ನಲ್ಲಿ ತಯಾರಾಗುವ ರೇಷ್ಮೆಸೀರೆಗಳಿಗೆ ಪ್ರಖ್ಯಾತಿ. ಕೆಲವು ನಗರಗಳು ಐತಿಹಾಸಿಕ ಹಿನ್ನೆಲೆಯೊಂದಿಗೆ ಶಿಕ್ಷಣದ ಪ್ರಭಾವದಿಂದ ಬಹುಮುಖ ಬೆಳವಣಿಗೆ ಪಡೆದು ಜನರನ್ನು ಹೆಚ್ಚು ಹೆಚ್ಚು ಆಕರ್ಷಿಸುತ್ತಿವೆ.

ಭಾರತದಲ್ಲೂ ನಗರೀಕರಣ ವೇಗವಾಗಿ ಅಲ್ಲದಿದ್ದರೂ ನಿರಂತರವಾಗಿ ನಿಧಾನವಾಗಿಯೇ ನಡೆದು ದಿನೇ ದಿನೇ ನಗರಗಳ ಸಂಖ್ಯೆ ಹೆಚ್ಚಾಗುತ್ತಿದೆ. ಯಾವುದೇ ನಗರ, ಎಲ್ಲೇ ಆಗಲಿ ಕೇವಲ ಒಂದು ಅಂಶವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಬೆಳೆದಿರುವುದಿಲ್ಲ. ಪ್ರತಿಯೊಂದು ನಗರವೂ ಕಿಚಡಿ ಇದ್ದಂತೆ. ಬಹು ವೈವಿಧ್ಯಮಯವಾದ ಅಂಶಗಳನ್ನೊಳಗೊಂಡ ಆಕರ್ಷಣೆ. ಆ ದಿಕ್ಕಿನಲ್ಲಿ ಶಿಕ್ಷಣದ ಪಾತ್ರ ಅಪಾರ. ಶಿಕ್ಷಣ ಸಂಸ್ಥೆಗಳಿಲ್ಲದ ನಗರಗಳು, ಇಂದು ಎಲ್ಲೂ ಕಂಡುಬರುವುದಿಲ್ಲ.

ನಗರ ಜೀವನವು ಅಲ್ಲಿನ ನಿವಾಸಿಗಳ ಜೀವನದ ಮೇಲೆ ಎಂತಹ ಪ್ರಭಾವವನ್ನು ಬೀರುತ್ತದೆ ಎಂಬುದನ್ನು ಕೇವಲ ಶಿಕ್ಷಣದಿಂದ ಮಾತ್ರ ತಿಳಿದುಕೊಳ್ಳಲು ಸಾಧ್ಯ. ಎಲ್ಲ ವರ್ಗದ ಜನರಿಗೆ ನಗರ ಆಶ್ರಯ ನೀಡುವುದರ ಜೊತೆಗೆ ಸುಶಿಕ್ಷಿತರಿಗೆ, ವಿದ್ಯಾವಂತರಿಗೆ ತವರುಮನೆಯಾಗುತ್ತಿದೆ. ಇಂದು ರಾಜಕೀಯ, ಆರ್ಥಿಕಶಕ್ತಿ ನಗರಗಳಲ್ಲಿ ಕಂಡು ಬರಲು ಶಿಕ್ಷಣವೇ ಕಾರಣ. ಇಂದು ಬೆಳೆಯುತ್ತಿರುವ ಭಾರತದ ನಗರಗಳಲ್ಲಿ ಉದ್ಯೋಗಾವಕಾಶಗಳಿಗಾಗಿ ವಿದ್ಯಾವಂತರೂ ಹಾಗೂ ಅವಿದ್ಯಾವಂತರೂ ದೌಡಾಯಿಸುತ್ತಿದ್ದಾರೆ. ಎಲ್ಲ ನಗರಗಳತ್ತ ಇಂತಹ ಸೆಳೆತ ಇಲ್ಲದಿದ್ದರೂ ಬೆಂಗಳೂರು, ಮುಂಬಯಿ, ದೆಹಲಿ ಇವು ನಾಗರಿಕ, ಶೈಕ್ಷಣಿಕ ಹಾಗೂ ರಾಜಕೀಯ ಕೇಂದ್ರಗಳಾಗಿ ವಿದ್ಯಾವಂತ ಜನರನ್ನು ಹೆಚ್ಚು ಆಕರ್ಷಿಸಿದರೆ ಭಿಲಾಯ್, ರಾಂಚಿ, ಧನಬಾದ್, ಬೊಕಾರೋ ಮೊದಲಾದ ನಗರಗಳು ಕಾರ್ಮಿಕ ವರ್ಗದವರನ್ನು ಗ್ರಾಮ ಪ್ರದೇಶದಿಂದ ಆಕರ್ಷಿಸುತ್ತಿವೆ. ಕೌಶಲ ಪಡೆದಿರುವವರು ನಗರಗಳತ್ತ ಬರುತ್ತಿದ್ದಾರೆ. ಹೀಗೆ ಸೆಳೆಯುತ್ತಾ ಹೋದಲ್ಲಿ ನಗರಗಳ ಸಮಸ್ಯೆಗಳು ವ್ಯಾಪಕವಾಗಿ ಹೆಚ್ಚಿ ಹಳ್ಳಿಗಳು ಬಂದಾಗಬಹುದು. ಜೊತೆಗೆ ಇದನ್ನು ತಪ್ಪಿಸಲು ಶಿಕ್ಷಣವು ಹೊಸ ಬಗೆಯ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಉದ್ಯೋಗಾವಕಾಶಗಳ ಸೆಳೆತ, ಶಿಕ್ಷಣ ಸಂಸ್ಥೆಗಳ ಬೆಳವಣಿಗೆ, ಕೈಗಾರಿಕೀಕರಣ, ವಾಣಿಜ್ಯೀಕರಣ, ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳ ಹೆಚ್ಚಳ, ಗಣಕಯಂತ್ರ ಹಾಗೂ ವಿವಿಧ ಮಹಾಜಾಲಗಳ ಬೆಳವಣಿಗೆ, ಭದ್ರತೆಯ ಅಂಶ, ರಾಜಕೀಯ ಶಕ್ತಿಯ ಕೇಂದ್ರೀಕೃತ ಅಂಶ ಹೀಗೆ ಅನೇಕ ಅಂಶಗಳು ಸೇರಿ ನಗರಗಳನ್ನು ಬೆಳೆಸುತ್ತಿವೆಯಾದರೂ ಈ ಎಲ್ಲ ಅಂಶಗಳಿಗೂ ಶಿಕ್ಷಣ ಮೂಲ ಕಾರಣ. ಶಿಕ್ಷಣ ಕ್ಷೇತ್ರದ ಪ್ರಗತಿಯಿಂದಲೇ ಇಂದು ವೈವಿಧ್ಯಮಯವಾದ ನಗರಗಳ ಬೆಳವಣಿಗೆ ಸಾಧ್ಯವಾಗಿವೆ. ಶಿಕ್ಷಣವು ನಗರಗಳ ಬೆಳವಣಿಗೆಗೆ ಅತಿ ಮುಖ್ಯವಾದ ಅಸ್ತ್ರ. ಈ ಕ್ಷೇತ್ರ ಬೆಳೆದಂತೆ ಮಾನವ ಹೆಚ್ಚು ಹೆಚ್ಚು ಜವಾಬ್ದಾರಿಯುತ ನಾಗರಿಕ ಮಾತ್ರ ಆಗುತ್ತಿಲ್ಲ. ಏನೇ ಆದರೂ ನಗರೀಕರಣ ಇಂದು ಜಾಗತಿಕ ಸಮಸ್ಯೆಯಾಗಿದೆ ಎಂದು ಪರಿಗಣಿಸಲ್ಪಟ್ಟಿರುವುದು ಶಿಕ್ಷಣದಿಂದಲೇ. ಆದಾಗ್ಯೂ ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ನಗರೀಕರಣದ ಕಾರಣಗಳೂ ಅದರಿಂದ ಉಂಟಾಗಿರುವ ಸಮಸ್ಯೆಗಳು, ಆ ಸಮಸ್ಯೆಗಳನ್ನು ಕಡಿಮೆ ಮಾಡಬಹುದಾದ ಮಾರ್ಗೋಪಾಯಗಳ ಬಗ್ಗೆ ಅರಿವು ಮೂಡಿಸುವಲ್ಲಿ ಶಿಕ್ಷಣ ಪ್ರಭಾವಯುತ ಪಾತ್ರ ವಹಿಸಬೇಕು.

–ಹೆಚ್.ಎಮ್.ವ.

Digitised by Bharatavani, CIIL

## ನವೋದಯ ಶಾಲೆಗಳು

ಭಾರತವು ಎದುರಿಸುತ್ತಿರುವ ಹಲವು ಸಮಸ್ಯೆಗಳಲ್ಲಿ ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಸಹ ಪ್ರಮುಖವಾಗಿವೆ. ಶಿಕ್ಷಣವನ್ನು ಉತ್ತಮಪಡಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಭಾರತದಲ್ಲಿ ಕಂಡುಬರುವ ಪ್ರಮುಖ ಶೈಕ್ಷಣಿಕ ಸಮಸ್ಯೆಗಳಲ್ಲಿ ಜನಸಂಖ್ಯಾ ಸ್ಫೋಟ ಮತ್ತು ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ತರುತ್ತಿರುವ ಅಂಶಗಳು ಪ್ರಮುಖವಾದವುಗಳಾಗಿವೆ. ಇಂತಹ ಮೂಲ ಸಮಸ್ಯೆಗಳ ನಿವಾರಣೆ ರಾಷ್ಟ್ರದ ಹಲವು ಸಮಸ್ಯೆಗಳನ್ನು ನಿವಾರಿಸುವುದರಲ್ಲಿ ನೆರವಾಗುವುದೆಂಬುದು ತಜ್ಞರ ಅಭಿಮತ. ಈ ಹಿನ್ನೆಲೆಯಲ್ಲಿ ರಾಷ್ಟ್ರವು ಆಗಾಗ್ಗೆ ಕೈಗೊಳ್ಳುವ ತೀರ್ಮಾನಗಳಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ 1986' ಪ್ರಮುಖವಾದವುಗಳಲ್ಲಿ ಒಂದಾಗಿದೆ. ರಾಷ್ಟ್ರೀಯ ಐಕ್ಯತೆ ತರಲು ಮತ್ತು ಪ್ರತಿಭಾವಂತ ಗ್ರಾಮಾಂತರ ಮಕ್ಕಳಿಗೆ ಶ್ರೇಷ್ಠ ಗುಣಮಟ್ಟದ ಉಚಿತ ಶಿಕ್ಷಣ ನೀಡುವಲ್ಲಿ "ನವೋದಯ ವಿದ್ಯಾಲಯ"ಗಳ ಪಾತ್ರ ಪ್ರಮುಖವಾದುದು.

ವಿಶೇಷ ಪ್ರತಿಭೆ ಅಥವಾ ಅಭಿರುಚಿಯುಳ್ಳ ಮಕ್ಕಳು ಹೆಚ್ಚಿನ ವೇಗದಲ್ಲಿ ಕಲಿಯಲು ಅವಕಾಶ ಮಾಡಿಕೊಡಬೇಕು ಎಂಬುದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಅಂತಹ ಶಿಕ್ಷಣವನ್ನು ಪಡೆಯಲು ಆರ್ಥಿಕವಾಗಿ ಅವರಿಗೆ ಶಕ್ತಿ ಇದೆಯೋ ಅಥವಾ ಇಲ್ಲವೋ ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ಆರ್ಥಿಕ ಶಕ್ತಿ ಇಲ್ಲದ ಮಕ್ಕಳಿಗೆ ಉತ್ತಮ ಮಟ್ಟದ ಶಿಕ್ಷಣವನ್ನು ಈ ಶಾಲೆಗಳಲ್ಲಿ ಕೊಡಲಾಗುವುದು.

ಅನ್ವೇಷಣೆ ಹಾಗೂ ಪ್ರಯೋಗಶೀಲತೆಗೆ ಪೂರ್ಣ ಪ್ರಮಾಣದ ಅವಕಾಶವಿರುವಂತಹ ನವೋದಯ ಶಾಲೆಗಳನ್ನು ರಾಷ್ಟ್ರಾದ್ಯಂತ ಏಕರೀತಿಯಲ್ಲಿ ಇರುವಂತೆ ಸ್ಥಾಪಿಸುವ ಗುರಿಯನ್ನು ಹೊಂದಿದ್ದು ಇವು ಮೇಲಿನ ಉದ್ದೇಶಗಳನ್ನು ಈಡೇರಿಸುವಂತಿರುತ್ತವೆ. ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಮತ್ತು ಉತ್ಕೃಷ್ಟತೆ ಮುಂತಾದ ಗುರಿಗಳನ್ನು ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವುದಕ್ಕಾಗಿ ರಾಷ್ಟ್ರದ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳ ಗ್ರಾಮೀಣ ವಿದ್ಯಾರ್ಥಿಗಳ ಜೊತೆಯಲ್ಲಿ ವಾಸಿಸಿ ಕಲಿಯುವ ಪೂರ್ಣ ಸಾಮರ್ಥ್ಯ ಬೆಳೆಸಿಕೊಳ್ಳುವಂತೆ ಶಾಲಾ ವ್ಯವಸ್ಥೆಯನ್ನು ರೂಪಿಸುವುದೇ ಇದರ ಮೂಲ ಗುರಿಯಾಗಿದೆ. ಇವು ಉಚಿತವಾದ ವಸತಿ ಶಾಲೆಗಳಾಗಿರುತ್ತವೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ಹಾಗೂ ದುರ್ಬಲ ಮಕ್ಕಳಿಗೆ ಏಕ ರೀತಿಯಾದ ಶಿಕ್ಷಣವನ್ನು ನೀಡಲು ಸಹಾಯಕವಾಗುವಂತೆ ಸರಾಸರಿ ಜಿಲ್ಲೆಗೆ ಒಂದರಂತೆ ನವೋದಯ ಶಾಲೆಗಳನ್ನು ತೆರೆಯಲು ಸೂಚಿಸಲಾಗಿದೆ.

1985–86ರಲ್ಲಿ ಹರ್‍ಯಾಣ ರಾಜ್ಯದ ಜೈಜಾರ್ ಮತ್ತು ಮಹಾರಾಷ್ಟ್ರದಲ್ಲಿರುವ ಅಮರಾವತಿಯಲ್ಲಿ ಮೊದಲ ನವೋದಯ ಶಾಲೆ ಪ್ರಾರಂಭವಾಯಿತು. 1995ರ ಅಂಕಿ ಅಂಶದ ಪ್ರಕಾರ 22 ರಾಜ್ಯ 7 ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 280 ನವೋದಯ ಶಾಲೆಗಳನ್ನು ತೆರೆಯಲಾಗಿತ್ತು. 1986–1988ರಲ್ಲಿ ಕೋಲಾರದ ವಲಿದಗಲೆ, ಮಂಡ್ಯದ ಶಿವಾರಗುಡ್ಡ, ಶಿವಮೊಗ್ಗದ ಗಾಜನೂರ್, ಬೆಂಗಳೂರಿನ ದೊಡ್ಡಬಳ್ಳಾಪುರ ಚಿಕ್ಕಮಗಳೂರಿನ ಬಾಳೆಹೊನ್ನೂರು, ರಾಯಚೂರಿನ ಕುಕನೂರು ಎಂಬ ಪ್ರದೇಶಗಳಲ್ಲಿ ನವೋದಯ ಶಾಲೆ ಪ್ರಾರಂಭಗೊಂಡವು.

1987–88ನೇ ಸಾಲಿನಲ್ಲಿ ಚಿತ್ರದುರ್ಗದ ಉಡವಳ್ಳಿ, ಬಳ್ಳಾರಿಯ ಚಿಕ್ಕಜೋಗಿಹಳ್ಳಿ, ಬಿಜಾಪುರದ ಆಲಮಟ್ಟಿ, ಬೆಳಗಾವಿಯ ಕಥೋಲಿ ಕುಪ್ಪನವಾಡಿ, ಧಾರವಾಡದ ಕೆಲಗೇರಿ, ಗುಲ್ಬರ್ಗಾದ ಭೀಮಾರಾಯಿಗುಡಿ, ಕೊಡಗಿನ ಗಾಳೀಬೀಡು, ಬೀದರ್‌ನ ತಿಪ್ಪಾಸ್, ಹಾಸನದ ಮಾವಿನಕೆರೆ, ಉತ್ತರಕನ್ನಡದ ಶಟಗೇರೆ ಪ್ರದೇಶಗಳಲ್ಲಿ ಈ ಶಾಲೆಗಳು ಪ್ರಾರಂಭಗೊಂಡವು.

1988–89ನೇ ಸಾಲಿನಲ್ಲಿ ಮೈಸೂರಿನ ನೆಲ್ಲೂರು ಗ್ರಾಮದ ಹೊಂಡ್ರಬಾಳು, ತುಮಕೂರಿನ ಗೊಲ್ಲರ ಹಳ್ಳಿಯಲ್ಲಿ, ಹಾವೇರಿ ಜಿಲ್ಲೆಯ ಹಾನಗನಲ್ಲಿ ನವೋದಯ ಶಾಲೆಗಳನ್ನು ತೆರೆಯಲಾಯಿತು.

ಈ ಶಾಲೆಯಲ್ಲಿ ಮಕ್ಕಳು 6ನೇ ತರಗತಿಯಿಂದ 12ನೇ ತರಗತಿಯವರೆಗೆ ಅಭ್ಯಾಸ ಮಾಡಲು ಅವಕಾಶವಿದೆ. ದೆಹಲಿಯ ಕೇಂದ್ರೀಯ ಸೆಕೆಂಡರಿ ಶಿಕ್ಷಣ ಮಂಡಳಿಯ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿ ಹೊತ್ತಿದೆ. ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಶೇ.75ರಷ್ಟು ಪ್ರವೇಶ ಅವಕಾಶವನ್ನು ಸ್ಥಳೀಯವಾಗಿ ನೀಡುತ್ತದೆ. ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಪಟ್ಟಣ ವರ್ಗದವರಿಗೆ ಸರಿಸಮಾನವಾಗಿರುವ ಶೈಕ್ಷಣಿಕ ಅವಕಾಶ ಮಧ್ಯಮ ಹಾಗೂ ಕೆಳ ಮತ್ತು ದುರ್ಬಲವರ್ಗದ ಮಕ್ಕಳಿಗೆ ದೊರಕಿಸುವುದು ಈ ಶಾಲೆಯ ವಿಶೇಷತೆ.

**ನವೋದಯ ಶಾಲೆಗಳ ಮುಖ್ಯ ಗುರಿಗಳು:** ಗ್ರಾಮಾಂತರ ಪ್ರದೇಶದ ಪ್ರತಿಭಾವಂತರಿಗೆ ಅತ್ಯಾಧುನಿಕ ಹಾಗೂ ಉನ್ನತ ಮಟ್ಟದ ಶಿಕ್ಷಣ ಸೌಲಭ್ಯ ನೀಡುವುದು, ಎಲ್ಲರಿಗೂ ಶೈಕ್ಷಣಿಕ ಸರಿಸಮಾನ ಅವಕಾಶವನ್ನು ನೀಡುವುದು, ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವುದು ರಾಷ್ಟ್ರವ್ಯಾಪಿ ಶಾಲೆಯ ವ್ಯವಸ್ಥೆಯನ್ನು ಉತ್ತಮಪಡಿಸುವುದು, ಭೌತಿಕ ಹಾಗೂ ಸಾರ್ವಜನಿಕ ಪರಿಸರಗಳ ಹಿನ್ನೆಲೆ ಹಾಗೂ ಮುನ್ನೋಟಗಳ ಸಾರ್ಥಕ ತಿಳುವಳಿಕೆಗಾಗಿ ಪ್ರೋತ್ಸಾಹ ನೀಡುವುದು, ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಬೆಳವಣಿಗೆ ತರುವುದು, ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಆತ್ಮವಿಶ್ವಾಸವನ್ನು ಮೂಡಿಸುವುದು, ಜಾತ್ಯತೀತತೆ, ಸಾಮಾಜಿಕ ನ್ಯಾಯ ರಾಷ್ಟ್ರೀಯ ಸಮಗ್ರತೆ ಮತ್ತು ಅಂತಾರಾಷ್ಟ್ರೀಯ ಸಮಗ್ರತೆ ಮತ್ತು ಅಂತಾರಾಷ್ಟ್ರೀಯ ತಿಳುವಳಿಕೆ ಪ್ರೋತ್ಸಾಹ ನೀಡುವುದು, ಸಂಸ್ಕೃತಿಯನ್ನು ಬಲಪಡಿಸುವುದು ಮತ್ತು ಮಕ್ಕಳಲ್ಲಿ ಹಲವು ಶ್ರೇಷ್ಠ ಮೌಲ್ಯಗಳನ್ನು ಬೆಳೆಸುವುದು, ಪರಿಸರದ ಬಗ್ಗೆ ಹೆಚ್ಚು ಅರಿವನ್ನು ಮೂಡಿಸುವುದು, ಮಕ್ಕಳಿಗೆ ಸಾಹಸ ಚಟುವಟಿಕೆಗಳಲ್ಲಿ ಮಹತ್ವದ ತರಬೇತಿ ನೀಡುವುದು ಹಾಗೂ ತ್ರಿಭಾಷಾ ಸೂತ್ರದಿಂದ ಭಾಷೆಗಳಲ್ಲಿ ದಕ್ಷತೆ ಹೆಚ್ಚಿಸುವುದು.

ಪ್ರತಿ ನವೋದಯ ಶಾಲೆಗೆ 560 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ತರಗತಿಯಲ್ಲಿ 40 ವಿದ್ಯಾರ್ಥಿಗಳಿರುತ್ತಾರೆ. ಐದನೇ ತರಗತಿಯಲ್ಲಿ ಉತ್ತೀರ್ಣರಾದವರು ಮತ್ತು ಆಯಾ ಜಿಲ್ಲೆಯವರು ಆಯಾ ಜಿಲ್ಲೆಯಲ್ಲಿ ಪರೀಕ್ಷೆಗೆ ಅರ್ಹರು ವಿದ್ಯಾರ್ಥಿಯ ವಯಸ್ಸು ಮೇ 1 ರಂದು 9 ವರ್ಷಕ್ಕಿಂತ ಕಡಿಮೆ ಹಾಗೂ 13 ವರ್ಷಕ್ಕಿಂತ ಹೆಚ್ಚು ಇರಬಾರದು. 5ನೇ ತರಗತಿ ಓದಿದ ಶಾಲೆಯ ಮುಖಾಂತರವೇ ಪರೀಕ್ಷೆಗೆ ಕಟ್ಟಬೇಕು. NCERT ಯು ಪರೀಕ್ಷೆಯನ್ನು ನಡೆಸುವ ಜವಾಬ್ದಾರಿ ಹೊತ್ತಿರುತ್ತದೆ. ಇದು ಎಲ್ಲಾ ಪಂಗಡಗಳವರಿಗೆ ಅನ್ವಯವಾಗುತ್ತದೆ. ಶೇ. 75ರಷ್ಟು ಸೀಟುಗಳು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಹಾಗೂ ಶೇ. 25 ರಷ್ಟು ಪಟ್ಟಣ ಪ್ರದೇಶದವರಿಗೆ ಮೀಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಆಯಾ ಜಿಲ್ಲೆಯ ಜನಸಂಖ್ಯೆ ಪ್ರಮಾಣದ ಮೇಲೆ ಮೀಸಲಾತಿ ಕಲ್ಪಿಸಲಾಗಿದೆ. ಮೂರನೇ ಒಂದರಷ್ಟು ಸೀಟುಗಳನ್ನು ಹೆಣ್ಣು ಮಕ್ಕಳಿಗೆ ಮೀಸಲಿಡಲಾಗಿದೆ.

ಪ್ರವೇಶ ಪರೀಕ್ಷೆಯನ್ನು, ಅಭ್ಯಾಸ ಮಾಡಿದ ಭಾಷೆಯ ಮೂಲಕವೇ ತೆಗೆದುಕೊಳ್ಳಬೇಕು. ಮಾನಸಿಕ ಯೋಗ್ಯತೆ ಪರೀಕ್ಷೆ ಅವಧಿ 60ನಿ, 60 ಅಂಕಗಳು, ಭಾಷಾ ಪರೀಕ್ಷೆ ಅವಧಿ 30 ನಿ, 30 ಅಂಕಗಳು, ಗಣಿತ ಪರೀಕ್ಷೆ ಅವಧಿ 30ನಿ, 20 ಅಂಕಗಳು. ಆಯ್ಕೆಯಾದ ವಿದ್ಯಾರ್ಥಿಗಳಿಗೆ

Digitised by Bharatavani, CIIL

ಮನಶ್ಶಾಸ್ತ್ರ, ವಿಜ್ಞಾನ, ವಾಣಿಜ್ಯ, ವೃತ್ತಿಪರ, ದೈಹಿಕ ಶಿಕ್ಷಣ ಹಾಗೂ ಲಲಿತ ಕಲೆಗಳನ್ನು ಕಲಿಸಲಾಗುವುದು. ಸಾಂಸ್ಕೃತಿಕ ಚಟುವಟಿಕೆ, ಪ್ರವಾಸ, ಕಾರ್ಯಾನುಭವ, ಆರೋಗ್ಯ, ನೈರ್ಮಲ್ಯ ಮುಂತಾದವುಗಳಿಗೆ ವಿಶೇಷ ಗಮನ ನೀಡಲಾಗುತ್ತದೆ. ಊಟ, ವಸತಿ, ಪುಸ್ತಕ, ಸಮವಸ್ತ್ರಗಳನ್ನು ಉಚಿತವಾಗಿ ನೀಡಲಾಗುವುದು. ಆಧುನಿಕ ಸಲಕರಣೆಗಳ ಮೂಲಕ ಬೋಧನೆ ನಡೆಯುವುದು. ಶಾಶ್ವತ ಶಿಕ್ಷಕರ ನೇಮಕಾತಿ ಅನುಷ್ಠಾನಕ್ಕೆ ಬರುತ್ತಲಿದೆ. ಶಿಕ್ಷಕರಿಗೆ ವಸತಿ ಸೌಲಭ್ಯ ಹಾಗೂ ಅವರ ಇಬ್ಬರು ಮಕ್ಕಳಿಗೆ ಶಾಲೆಯಲ್ಲಿ ಅಭ್ಯಾಸ ಮಾಡಲು ಅವಕಾಶವಿರುತ್ತದೆ. ಸರ್ಕಾರವು 30 ಎಕರೆ ಜಮೀನು ಹಾಗೂ ಹೊಸ ಕಟ್ಟಡವನ್ನು ರೂಪಿಸಿಕೊಡುತ್ತದೆ.

ನವೋದಯ ಶಾಲೆಗಳ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಪ್ರತಿಭಾವಂತರಾಗಬೇಕು ಎಂಬುದೇ ಸರ್ಕಾರದ ಮುಖ್ಯ ಉದ್ದೇಶ. ಈ ವಿದ್ಯಾರ್ಥಿಗಳು ಮುಂದುವರಿದ ಶಿಕ್ಷಣ ಪಡೆದು ಪ್ರತಿಭಾವಂತರ ಪಲಾಯನಕ್ಕೆ ನಾಂದಿ ಹಾಡಬಾರದು. ಉನ್ನತ ಶಿಕ್ಷಣ ಪಡೆದು ಜನಸಾಮಾನ್ಯರ ಮಧ್ಯೆ ಬಾಳುವಂತಹವರಾಗಬೇಕು. ನವೋದಯ ಶಾಲೆಯೊಂದು ಉತ್ತಮ ಶಾಲೆಯಾಗಿ ಉಳಿದವರಿಗೆ ಮಾದರಿ ಶಾಲೆಯಾಗಬೇಕು ಎನ್ನುವುದೇ ಇದರ ಉದ್ದೇಶ.

– ಎಸ್.ಜ.

## ನಾಗರಿಕತೆ ಮತ್ತು ಶಿಕ್ಷಣ

'ನಗರ'ಎನ್ನುವ ಶಬ್ದದಿಂದ ನಾಗರಿಕತೆ ಬಂದಿದೆ. ನಗರದ ಜನರ ಜೀವನ ರೀತಿಯೇ ನಾಗರಿಕತೆ. "ನಾಗರಿಕತೆ" ಎನ್ನುವುದು ಒಂದು ಸಂಕೀರ್ಣವಾದ ಪದವಾಗಿದ್ದು ಒಂದು ಸಾಂಸ್ಕೃತಿಕ ಗುಂಪನ್ನು ಪ್ರತಿನಿಧಿಸುತ್ತದೆ. ಈ ಗುಂಪು ಕೆಲವು ಪ್ರಮುಖವಾದ ಕ್ಷೇತ್ರಗಳೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಅವುಗಳೆಂದರೆ ಕೃಷಿ, ವ್ಯಾಪಾರ, ಸರ್ಕಾರ, ವೃತ್ತಿ, ಜನಸಂಖ್ಯೆ ಮತ್ತು ವಿವಿಧ ವರ್ಗಗಳು ಅಥವಾ ಸ್ತರಗಳು.

'ನಾಗರಿಕತೆ' ಎನ್ನುವ ಪದವನ್ನು ವಿಶಾಲ ಅರ್ಥದಲ್ಲಿ 'ಸಂಸ್ಕೃತಿ'ಗೆ ಪರ್ಯಾಯವಾಗಿ ಬಳಸಲಾಗುತ್ತದೆ. ಆದರೆ ಸಂಸ್ಕೃತಿಗೂ ನಾಗರಿಕತೆಗೂ ವ್ಯತ್ಯಾಸವಿದೆ. ಸಂಸ್ಕೃತಿ ನಾವು ಏನಾಗಿದ್ದೇವೆ, ನಮ್ಮ ಆಂತರಿಕ ಸ್ವರೂಪವೇನು ಎನ್ನುವುದನ್ನು ತಿಳಿಸಿದರೆ, ನಾಗರಿಕತೆ ನಾವು ಏನು ಹೊಂದಿದ್ದೇವೆ ಎನ್ನುವುದನ್ನು ತಿಳಿಸುತ್ತದೆ. ಸಂಸ್ಕೃತಿ ನಮ್ಮ ಸ್ವಭಾವ, ಭಾಷೆ, ನೈತಿಕತೆ, ರೀತಿ–ನೀತಿಗಳು, ಹಬ್ಬ–ಹರಿದಿನಗಳು, ಆಚರಣೆಗಳನ್ನು ಒಳಗೊಂಡಂತೆ ನಾಗರಿಕತೆ ಕಟ್ಟಡಗಳು, ಸ್ಮಾರಕಗಳು, ಜೀವನದ ಅನುಕೂಲತೆಗಳು, ಯಂತ್ರಗಳು, ಉತ್ಪಾದನ ವ್ಯವಸ್ಥೆಗಳನ್ನು ಒಳಗೊಳ್ಳುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ 'ಸಂಸ್ಕೃತಿ'ಯನ್ನು ಹೊಂದಿರುತ್ತಾನೆ. ನಮ್ಮಲ್ಲಿರುವ ಕಲೆಗಳು, ರೂಢಿಗಳು, ಹವ್ಯಾಸಗಳು, ನಂಬಿಕೆಗಳು, ಮೌಲ್ಯಗಳು, ವರ್ತನೆಗಳು ಮುಂತಾದ, ಐಹಿಕ ವಿಚಾರಗಳೊಂದಿಗೆ ಸಂಸ್ಕೃತಿಯನ್ನು ಸಮೀಕರಿಸಲಾಗುತ್ತದೆ.

'ನಾಗರಿಕತೆ' ಎನ್ನುವುದು ವಿವರಣಾತ್ಮಕ ಪದವಾಗಿದ್ದು ಒಂದು ಇಡೀ ಸಮುದಾಯದ ಅಥವಾ ಸಮಾಜದ ಜನರು ನಡೆಸುವ ಜೀವನದ ರೀತಿ–ನೀತಿಗಳನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಂದು ಸಮಾಜವೂ ತನ್ನದೇ ಆದ ವೈಶಿಷ್ಟ್ಯಪೂರ್ಣವಾದ ಮೇಲ್ಮಟ್ಟದ ಸಾಮಾಜಿಕ ಸಂಕೀರ್ಣತೆಯನ್ನು ಮತ್ತು ಸಂಘಟನೆಯನ್ನು ಒಳಗೊಂಡಿರುತ್ತದೆ. ಇದಲ್ಲದೆ ನಾಗರಿಕತೆಯನ್ನು 'ಬದಲಾವಣೆ'ಗೆ ಒಳಪಟ್ಟ ಆಲೋಚನೆಗಳು, ನಡೆವಳಿಕೆಗಳು ಮತ್ತು ಆಸಕ್ತಿ ಎಂಬುದಾಗಿಯೂ ತಿಳಿಯಬಹುದಾಗಿದೆ.

'ನಾಗರಿಕತೆಯ' ತಾತ್ವಿಕ ವಿಚಾರಗಳನ್ನು ಪ್ರಚಾರಪಡಿಸಿದ ಆಲ್ಬರ್ಟ್ ಸ್ವೆಟ್ಜರ್'ರವರು ತಮ್ಮ ಪುಸ್ತಕವಾದ "ದಿ ಫಿಲಾಸಫಿ ಆಫ್ ಸಿವಿಲೈಜೇಷನ್"ನಲ್ಲಿ ಈ ರೀತಿಯಾಗಿ ತಿಳಿಸಿದ್ದಾರೆ. ನಾಗರಿಕತೆಯ ಬಗ್ಗೆ ಎರಡು ರೀತಿಯ ವ್ಯಾಖ್ಯಾನಗಳಿದ್ದು, ಒಂದು 'ನಾಗರಿಕತೆ' ಕೇವಲ ಐಹಿಕ ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತದೆ ಎಂದಾದರೆ, ಇನ್ನೊಂದು 'ಐಹಿಕ ಮತ್ತು ನ್ಯಾಯಪರ' ವಿಚಾರಗಳೆರಡರ ಬಗ್ಗೆಯೂ ಬೆಳಕನ್ನು ಚೆಲ್ಲುತ್ತದೆ ಎನ್ನುತ್ತದೆ. 'ನಾಗರಿಕತೆ' ಎನ್ನುವುದರ ಅರ್ಥ 'ಅನಾಗರಿಕತೆ'ಗೆ ವಿರುದ್ಧವಾದುದು ಎಂಬುದಲ್ಲ ಎನ್ನುವ ವಿಚಾರ 17ನೇ ಶತಮಾನದಲ್ಲಿಯೇ ಅರಿವಿಗೆ ಬಂದಿತು.

### ಗುಣಲಕ್ಷಣಗಳು

- ನಾಗರಿಕತೆಯು ತನ್ನದೇ ಆದ ಜೀವನ ಶೈಲಿ, ಸರ್ಕಾರದ ರೂಪುರೇಷೆ, ಸಾಮಾಜಿಕ ಸ್ತರೀಕರಣ, ಆರ್ಥಿಕ ವ್ಯವಸ್ಥೆ, ಇತ್ಯಾದಿ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದೆ.
- ನಾಗರಿಕತೆಯು ತನ್ನ ಇರುವಿಕೆಗಾಗಿ ಕೃಷಿಯನ್ನು ಅವಲಂಬಿಸಿದ್ದು ಅಲ್ಲಿ ಬೆಳೆಯಲಾಗುವ ಬೆಳೆಗಳ ಸಂರಕ್ಷಣೆಯನ್ನು ನಿರ್ವಹಿಸುತ್ತದೆ.
- ನಾಗರಿಕತೆಯು ತನ್ನಲ್ಲಿ ವಿವಿಧ ರೀತಿಯ ಕೌಶಲ್ಯಗಳನ್ನು ಪಡೆದ ಕಲಾಕಾರರು, ಬಡಗಿಗಳು, ಚಿನಿವಾರರು ಮುಂತಾದ ವ್ಯಕ್ತಿಗಳನ್ನು ವೃತ್ತಿನಿರತರನ್ನು ಹೊಂದಿರುತ್ತದೆ.
- ನಾಗರಿಕತೆಯು ತನ್ನದೇ ಆದ ಒಂದು ರಾಜಕೀಯ ಸ್ವರೂಪವನ್ನು ಹೊಂದಿರುತ್ತದೆ. ಆಳುವವರು ನಗರ ಪ್ರದೇಶಗಳಲ್ಲಿ ಕಂಡು ಬರುತ್ತಾರೆ.

ಆರ್ಥಿಕವಾಗಿ ನಾಗರಿಕತೆಗಳು ಕೊಡು–ಕೊಳ್ಳುವಿಕೆಯ (ಬಾರ್ಟರ್ ಪದ್ಧತಿ) ಅಂಶಗಳನ್ನು ಆಧರಿಸಿ ಬೆಳೆದು ಬಂದವುಗಳೆನ್ನಬಹುದಾಗಿದೆ. ನಮ್ಮಲ್ಲಿ ಲಭ್ಯವಿರುವ ಪದಾರ್ಥಗಳನ್ನು ಅಥವಾ ವಸ್ತುಗಳನ್ನು ಅದರ ಅವಶ್ಯಕತೆ ಇರುವಂತಹವರಿಗೆ ನೀಡಿ ಅವರಲ್ಲಿರುವ ವಸ್ತುಗಳನ್ನು ನಾವು ಪ್ರತಿಯಾಗಿ ಪಡೆದುಕೊಳ್ಳಲು ಅವಕಾಶಗಳಿದ್ದವು. ಆದರೆ ಕಾಲಕ್ರಮೇಣ ಹಣ ವಿನಿಮಯ ಮಾಧ್ಯಮವಾಗಿ ಕೊಡು–ಕೊಳ್ಳುವಿಕೆ ಪದ್ಧತಿ ನಿಂತು ಹೋಯಿತು.

**ನಾಗರಿಕತೆಯ ಕುರುಹು / ಲಕ್ಷಣ / ವೈಶಿಷ್ಟ್ಯ:** ನಾಗರಿಕತೆಯು ಒಂದು ಸಂಕೀರ್ಣ ಸಮಾಜದ 'ಸಂಸ್ಕೃತಿ'ಯನ್ನು ವರ್ಣಿಸುತ್ತದೆ. ಪ್ರತಿಯೊಂದು ನಾಗರಿಕತೆಯು ತನ್ನದೇ ಆದ ಭಾವನೆಗಳು, ಸಂಪ್ರದಾಯಗಳು, ಕಲೆಗಳು, ವಸ್ತುಗಳನ್ನು ಹೊಂದಿದ್ದು ಬೇರೆಯ ನಾಗರಿಕತೆಗಳಿಂದ ಪ್ರತ್ಯೇಕವಾಗಿ ಗುರುತಿಸಲ್ಪಡುತ್ತದೆ.

ಇದಲ್ಲದೆ ನಾಗರಿಕತೆಯು ತನ್ನದೇ ಆದ ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಧರ್ಮ, ಸಂಕೀರ್ಣ ಆಚರಣೆಗಳನ್ನು ಒಳಗೊಂಡಿರುತ್ತದೆ. ನಾಗರಿಕತೆಯು ಸಮಾಜದಲ್ಲಿ ಬದಲಾವಣೆಯನ್ನು ತರಲು ಬಯಸುತ್ತದೆ, ಅವುಗಳನ್ನು ಹರಡಲು ಪ್ರಯತ್ನಿಸುತ್ತದೆ. ಆದಾಗ್ಯೂ ಕೆಲವು ಪಂಗಡಗಳ ಜನರು ಇನ್ನೂ ಅನಾಗರಿಕತೆಯ ಜೀವನವನ್ನು ಸಾಗಿಸುತ್ತಿದ್ದಾರೆ. ಉದಾಹರಣೆಗೆ, ದಕ್ಷಿಣ ಆಫ್ರಿಕಾದ ಒಳಾಂಗಣ ದಟ್ಟಕಾಡುಗಳಲ್ಲಿರುವ ಕಾಡುಜನರು.

ಕೆಲವು ಮಾನವ ಶಾಸ್ತ್ರಜ್ಞರು 'ಅನಕ್ಷರಸ್ಥರು' ಎನ್ನುವುದಕ್ಕೆ ಪರ್ಯಾಯವಾಗಿ ಅನಾಗರಿಕರು ಎನ್ನುವ ಪದದ ಬಳಕೆಯನ್ನು ಮಾಡುತ್ತಾರೆ.

ನಾಗರಿಕ ಸಮಾಜವು ಬೆಳೆದು ಬಂದದ್ದು ಆವಿಷ್ಕಾರಗಳ ಮೂಲಕ, ಧರ್ಮಗಳ ಮೂಲಕ, ವ್ಯಾಪಾರಗಳ ಮೂಲಕ, ಪ್ರತಿಯೊಂದು ನಾಗರಿಕತೆಯ ಇನ್ನುಳಿದ ನಾಗರಿಕತೆಗಳ ಮೇಲೆ ಪ್ರಭಾವ ಬೀರಲು

Digitised by Bharatavani, CIIL

ಪ್ರಯತ್ನಿಸುತ್ತಲೇ ಇರುತ್ತವೆ. ಉದಾ: ಚೀನಾ ನಾಗರಿಕತೆಯು, ಕೊರಿಯಾ, ಜಪಾನ್ ಮತ್ತು ವಿಯೆಟ್ನಾಂಗಳ ಮೇಲೆ ಪ್ರಭಾವ ಬೀರಿದೆ.

ಒಬ್ಬ ಉತ್ತಮವಾದ ಮನುಷ್ಯನ ನಾಗರಿಕತೆಯು ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿದ್ದು ಅವುಗಳೆಂದರೆ, ಅಳತೆ ಮತ್ತು ತೂಕ ಮತ್ತು ನೈತಿಕವಾದ, ಆರೋಗ್ಯಕರವಾದ ಸಾಮಾಜಿಕ ವ್ಯವಸ್ಥೆ.

ಸಮಾಜದ ಯಾವುದೇ ಒಂದು ಸಂಘಟನೆಯು ಒಂದು ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯಾಗಿದ್ದು, ನಾಗರಿಕತೆಯು ಒಂದು ದೊಡ್ಡ ಸಂಘಟನೆಯಾಗಿದೆ.

ಇಡೀ ವಿಶ್ವವೇ 'ಒಂದು ವ್ಯವಸ್ಥೆ'ಯಾಗಿ ಪರಿಭಾವಿಸಲ್ಪಟ್ಟಿದ್ದು ಇಡೀ ಜಗತ್ತಿನ ಎಲ್ಲಾ ನಾಗರಿಕತೆಗಳು ಮತ್ತು ಸಮಾಜಗಳು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಅನೇಕ ರೀತಿಯಲ್ಲಿ ಪರಸ್ಪರ ಅವಲಂಬಿಸಿದೆ ಎನ್ನಬಹುದಾಗಿದೆ. ಇದನ್ನೇ ನಾವು 'ಜಾಗತೀಕರಣ' ಎಂಬ ಅರ್ಥದಲ್ಲಿ ತಿಳಿಯಬಹುದಾಗಿದೆ.

"ನಾಗರಿಕತೆ' ಎನ್ನುವುದು ಹಲವಾರು ನಗರಗಳನ್ನು ಸಂಪರ್ಕಿಸುವಂತಹ ಬಲೆಯಾಗಿದ್ದು, ಅವುಗಳು ತಮ್ಮದೇ ಆದ ಆರ್ಥಿಕ, ರಾಜಕೀಯ, ಸೈನಿಕ ಮತ್ತು ಸಾಂಸ್ಕೃತಿಕ ಅಂತರ್‌ಕ್ರಿಯೆಗಳನ್ನು ಅಲ್ಲಿನ ಜನರುಗಳ ನಡುವೆ ಹೊಂದಿರುತ್ತದೆ.

ಪ್ರಸ್ತುತ ಸನ್ನಿವೇಶದಲ್ಲಿ ಜಾಗತಿಕ ನಾಗರಿಕತೆಯು 'ಔದ್ಯೋಗಿಕ ಸಮಾಜ' ಎನ್ನುವಂತೆ ಪ್ರತಿಬಿಂಬಿಸಲ್ಪಟ್ಟಿದ್ದು, ಭವಿಷ್ಯಕಾರರ ಪ್ರಕಾರ 'ನಾಗರಿಕತೆಯು' ಸಾಕಷ್ಟು ಬದಲಾವಣೆ ಅಥವಾ ಮಾರ್ಪಾಡಾಗುತ್ತಿದ್ದು, ಜಾಗತಿಕ ಸಮಾಜವು ಇನ್ನು ಮುಂದೆ 'ಮಾಹಿತಿ ನೀಡುವ ಸಮಾಜ' ಎಂದಾಗಿ ಪರಿಗಣಿಸಲ್ಪಡುತ್ತದೆ.

ವಿಮರ್ಶಕರ ಪ್ರಕಾರ ನಾಗರಿಕತೆ ಎನ್ನುವುದು ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು ಬೀರುತ್ತದೆ. ಪರಿಸರವಾದಿಗಳ ಪ್ರಕಾರ ನಾಗರಿಕತೆಯು ಇಡೀ ಪರಿಸರದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಹೇಗೆಂದರೆ ನಗರೀಕರಣ ಮತ್ತು ಅದರ ಬೆಳವಣಿಗೆಯು ನೈಸರ್ಗಿಕವಾದ ಪರಿಸರ ಮತ್ತು ವಾತಾವರಣವನ್ನು ಹಾಳುಮಾಡುತ್ತದೆ ಹಾಗೂ ಸಂಪನ್ಮೂಲಗಳನ್ನು ಕುಂಠಿತಗೊಳಿಸುತ್ತದೆ. ನಗರ ಜೀವನದ ನಾಗರಿಕತೆಯು ಪ್ರಮುಖವಾಗಿ ಐದು ಅಂಶಗಳಿಂದಾಗುವುದು ಎಂದು ಭಾವಿಸಬಹುದು. ಅವು ಆಡಳಿತ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ನೀತಿ ಮತ್ತು ಶಿಷ್ಟಾಚಾರಗಳ ಸಂಪ್ರದಾಯ ಕಲೆಗಳ ಅಭಿವೃದ್ಧಿ ಮತ್ತು ಜ್ಞಾನದ ಬೆಳವಣಿಗೆ, ಇವು ಜಟಿಲವೂ ಶಕ್ತಿಶಾಲಿಯಾದುವೂ ಮತ್ತು ಪರಿವರ್ತನ ಶೀಲವೂ ಆಗಿರುತ್ತವೆ. ಶಿಕ್ಷಣವು ವಿದ್ಯಾರ್ಥಿಗಳಿಗೆ ಆಡಳಿತ ವ್ಯವಸ್ಥೆಯ ಪರಿಚಯ ನೀಡಿ ಅವರು ಮುಂದಿನ ಪ್ರಜೆಗಳಾಗುವವರು ವ್ಯವಸ್ಥೆಯ ತಕ್ಕ ಪ್ರಜೆಗಳಾದರೆ ಮತ್ತು ಸಮರ್ಥ ಆಡಳಿತಗಾರರಾಗುವರು. ಸುಖ ಸಮೃದ್ಧ ಮತ್ತು ತೃಪ್ತಜೀವನಕ್ಕೆ ಆಧಾರ ಆರ್ಥಿಕ ಅಂಶಗಳು. ಅದರ ವ್ಯವಸ್ಥೆ ಸಮಾಜದ ಪ್ರತಿಯೊಬ್ಬ ಸದಸ್ಯನಿಗೆ ಶಿಕ್ಷಣದಿಂದ ದೊರಕಬೇಕು ಸಮಷ್ಟಿ ಪ್ರಪಂಚದಲ್ಲಿ ಎಲ್ಲರೂ ಸೌಹಾರ್ದದಿಂದಿರಲು ಶಿಷ್ಟಾಚಾರ ಸಂಪ್ರಾದಾಯಗಳ ಕಲಿಕೆ ಮತ್ತು ಅರಿವು ವಿದ್ಯಾರ್ಥಿಗಳಿಗೆ ಬೇಕು. ಸೌಂದರ್ಯ ಪ್ರಿಯರಾಗುವುದು ಮಾನವನಾ ಸಹಜ ಗುಣ. ಸುಂದರ ವಸ್ತುಗಳ ಸೃಷ್ಟಿಯಿಂದ ಕಲಾಭಿವೃದ್ಧಿ ಆಗುತ್ತದೆ. ಇದು ಶಿಕ್ಷಣದ ಮೂಲಕ (ಸಂಗೀತ, ನಾಟ್ಯ, ಅಭಿನಯ, ಚಿತ್ರಕಲೆ ಇತ್ಯಾದಿ) ಸಹಜವೇ. ಆದರೆ ಅದರಂತೆಯೇ ವಿದ್ವಾಂಸರ ಮತ್ತು ವಿಜ್ಞಾನಿಗಳ ಸಾಧನೆ ಅಪಾರ. ಅವುಗಳ ಪರಿಚಯ ಶಿಕ್ಷಣದಿಂದಲೇ.

–ಎಂ.ಎಸ್.ತ.

## ನಾಯಕತ್ವ–ಅರ್ಥ, ಕಾರ್ಯಗಳು

ಮಾನವನು ಸಂಘಜೀವಿಯಾದುದರಿಂದ ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದರೂ ಇತರರೊಡಗೂಡಿ ಮಾಡುವುದು ಸರ್ವೇಸಾಮಾನ್ಯ. ಕೂಡಿಮಾಡುವುದು ಅನಿವಾರ್ಯ.

ನಾಯಕ ಒಂದು ಸಮೂಹದ ಸದಸ್ಯನಾಗಿದ್ದು, ಈ ಸಮೂಹದ ಗುರಿ ಸಾಧನೆಗೆ ಒಬ್ಬ ವ್ಯಕ್ತಿಯ ನಿರ್ದೇಶನ ಮತ್ತು ಮಾರ್ಗದರ್ಶನಗಳು ಅನಿವಾರ್ಯ, ಸಮೂಹದ ಗುರಿ ಸಾಧನೆಗಾಗಿ ಈ ಎಲ್ಲವುಗಳನ್ನು ಒದಗಿಸಿ ಮುಂದಾಳತ್ವ ವಹಿಸುವ ವ್ಯಕ್ತಿಯೇ ನಾಯಕ. ನಾಯಕನಿಲ್ಲದ ಸಮೂಹವಿಲ್ಲ, ಸಮೂಹವಿಲ್ಲದ ನಾಯಕನಿರುವುದಿಲ್ಲ. ಹೀಗೆ ಇವೆರಡು ಪರಸ್ಪರ ಪೂರಕ ಎನ್ನಬಹುದು. ಹೀಗೆ ನಾಯಕರಿಲ್ಲದೇ ಯಾವ ಕ್ಷೇತ್ರದಲ್ಲಿಯೂ ಯಾವ ಸಾಧನೆಯೂ ಆಗಲಾರದು. ವಿಶಾಲ ದೃಷ್ಟಿಯಲ್ಲಿ ನೋಡಿದರೆ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಕ್ಷೇತ್ರದಲ್ಲಿ ಅನುಚರನಾಗಿಯೂ ಇರುತ್ತಾನೆ. ಉದಾ: ಮನೆಯಲ್ಲಿ ನಾಯಕನಾದ ವ್ಯಕ್ತಿಯು ತನ್ನ ಉದ್ಯೋಗ ಕಛೇರಿಯಲ್ಲಿಯ ಮೇಲಾಧಿಕಾರಿಗೆ ಅನುಚರನಾಗಿರುತ್ತಾನೆ. ವರ್ಗಕೋಣೆಯ ವಿದ್ಯಾರ್ಥಿಗಳಿಗೆ ನಾಯಕನಾದ ಶಿಕ್ಷಕನು ತನ್ನ ಮುಖ್ಯೋಪಾಧ್ಯಾಯನಿಗೆ ಅನುಚರನಾಗಿರುತ್ತಾನೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಗೆ ನಾಯಕತ್ವದ ಹೊಣೆ ಇದ್ದೇ ಇರುತ್ತದೆ.

### ನಾಯಕತ್ವದ ಅರ್ಥ ಮತ್ತು ವ್ಯಾಖ್ಯೆಗಳು

ನಾಯಕತ್ವ (Leader ship) ಎಂದರೆ ಇತರರಿಗೆ ಮಾರ್ಗದರ್ಶನ ನೀಡುವುದು. ಸಾಮಾಜಿಕ ಮನೋವಿಜ್ಞಾನಿಗಳು, 'ನಾಯಕತ್ವ'ವನ್ನು ಒಂದು ಸಾಮಾಜಿಕ ವರ್ತನಾ ವಿಶೇಷವೆಂದು ಪರಿಗಣಿಸುತ್ತಾರೆ.

**ಸಿ.ವಿ. ಗೂಡ್ಸ್‌ರವರ ಶಿಕ್ಷಣ ನಿಘಂಟಿನ ಪ್ರಕಾರ:** ನಾಯಕತ್ವವೆಂದರೆ ಬೇರೆಯವರನ್ನು ಮಾರ್ಗದರ್ಶನ ಮಾಡುವ, ನಿರ್ದೇಶಿಸುವ ಮತ್ತು ನಿರ್ವಹಿಸುವ ವ್ಯಕ್ತಿಯ ಸಹಜ ಸಾಮರ್ಥ್ಯವಾಗಿದೆ.

**ಕೌಲಿಯವರ ಪ್ರಕಾರ:** ಬೇರೆಯವರು ತನ್ನನ್ನು ಅನುಸರಿಸುವಂತೆ ಮಾಡುವ ವ್ಯಕ್ತಿಯ ಸಹಜ ಗುಣಗಳೇ ನಾಯಕತ್ವ.

**ಆಲ್‌ಪೋರ್ಡ್ ಮತ್ತು ಬೆಟ್‌ರ ಪ್ರಕಾರ:** ಯಾವುದೇ ಒತ್ತಾಯವಿಲ್ಲದೇ, ಸಹಾಯಕ ಸಿಬ್ಬಂದಿಯವರಿಂದ ಆತ್ಮ ಸಂತೋಷದಿಂದ ಅಪೇಕ್ಷಿತ ಕೆಲಸವನ್ನು ಮಾಡಿಸಿಕೊಳ್ಳುವ ಸಾಮರ್ಥ್ಯವೇ ನಾಯಕತ್ವವಾಗಿದೆ.

ಒಟ್ಟಿನಲ್ಲಿ ಈ ಮೇಲಿನ ವ್ಯಾಖ್ಯೆಗಳನ್ನು ಗಮನಿಸಿದಾಗ ನಾಯಕತ್ವವೆಂದರೆ ನಿಶ್ಚಿತ ಗುರಿಯನ್ನು ತಲುಪಲು ವ್ಯಕ್ತಿಗಳು ಹಾಗೂ ಗುಂಪನ್ನು ಹೊಂದಾಣಿಕೆಯಿಂದ ದಿಗ್ದರ್ಶಿಸುವ ಮತ್ತು ಪ್ರಚೋದಿಸುವ ಕಲೆಯಾಗಿದೆ.

### ನಾಯಕತ್ವದ ಕಾರ್ಯಗಳು

1. ಸಮೂಹದ ಚಟುವಟಿಕೆಗಳನ್ನು ಅನುಷ್ಠಾನಕ್ಕೆ ತರುವಂತೆ ಕಾರ್ಯನಿರ್ವಾಹಕ ಜವಾಬ್ದಾರಿ ಹೊರುವುದು.
2. ಸಮೂಹದ ಸದಸ್ಯರು ತಮ್ಮ ಗುರಿಗಳನ್ನು ಹೇಗೆ ಸಾಧಿಸಬೇಕೆಂಬುದರ ಕುರಿತು ಯೋಜನೆಗಳನ್ನು ಮತ್ತು ಮಾರ್ಗೋಪಾಯಗಳನ್ನು ನಿರ್ಧರಿಸುವ ಯೋಜನೆ ನೀಡುವುದು.
3. ಸಮೂಹದ ನೀತಿ ರೂಪಿಸುವಾಗ ಮತ್ತು ನಿರೂಪಿಸುವಾಗ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸುವುದು.

Digitised by Bharatavani, CIIL

4. ನಡೆದಾಡುವ ವಿಶ್ವಕೋಶದಂತೆ ವರ್ತಿಸಿ ತನ್ನ ಕ್ಷೇತ್ರದ ಪ್ರತಿ ವಿಷಯ ಮಾಹಿತಿ ಮತ್ತು ಕೌಶಲ್ಯ ಅರಿತಿರುವ ಪರಿಣಿತನಾಗುವ ಕಾರ್ಯವನ್ನು ಹೊಂದುವುದು.
5. ನಾಯಕನು ತನ್ನ ಕಾರ್ಯಾಲಯದ ವಕ್ತಾರನಂತೆ ಕೆಲಸ ಮಾಡಿ ಹೊರಗಿನ ಮತ್ತು ಒಳಗಿನ ಸಂವಹನಗಳೆರಡು ಅವನ ಮೂಲಕ ನಡೆಯುವಂತೆ **ಬಾಹ್ಯ ಸಮೂಹದ ಪ್ರತಿನಿಧಿ**ಯಂತೆ ವರ್ತಿಸುವುದು.
6. ಸಮೂಹ ರಚನೆಯ ನಿರ್ದಿಷ್ಟ ಅಂಶಗಳನ್ನು ನಿಯಂತ್ರಿಸಿ ಸಮೂಹ ಸಂಬಂಧ ಮತ್ತು **ಅಂತರ ಸಂಬಂಧಗಳ ನಿಯಂತ್ರಣಾಧಿಕಾರಿ**ಯಂತೆ ವರ್ತಿಸುವುದು.
7. ಸಮೂಹದ ಆಂತರಿಕ ಸಂಘರ್ಷಗಳನ್ನು ನಿವಾರಿಸಿ, ನ್ಯಾಯಾಧೀಶನಂತೆ ವರ್ತಿಸಿ ಸಮೂಹದಲ್ಲಿಯ ಒಡಕನ್ನು ಕಡಿಮೆಗೊಳಿಸುವ **ನಿರ್ಣಾಯಕ ಮತ್ತು ಮಧ್ಯವರ್ತಿ**ಯಂತಿರುವುದು.
8. ನಾಯಕನು ಸಮೂಹದ ಏಕತೆಯನ್ನು ಹೆಚ್ಚಿಸಿ, ಸಮೂಹದ ಪ್ರತ್ಯೇಕವಾದ ಅಸ್ತಿತ್ವರೂಪಗೊಳ್ಳುವ **ಸಮೂಹದ ಸಂಕೇತ**ದಂತೆ ವರ್ತಿಸುವುದು.
9. ಸಮೂಹದ ಆದರ್ಶಗಳು ಸಮೂಹದಿಂದ, ನಾಯಕನಿಂದ ಅಥವಾ ಅಧಿಕಾರಿಗಳಿಂದ ನಿರ್ಧರಿಸಲ್ಪಡುವಂತೆ **ಆದರ್ಶವಾದಿ**ಯಂತೆ ವರ್ತಿಸುವುದು.
10. ನಾಯಕನು ವ್ಯಕ್ತಿಯ ಧನಾತ್ಮಕ, ಸಂವೇಗಾತ್ಮಕ ಭಾವನೆಗಳ ಮೇಲೆ ಪರಿಪೂರ್ಣ ಬೆಳಕು ಚೆಲ್ಲಿ ಅವರ ಭಾವನೆಗಳು, ಅನಿಸಿಕೆಗಳು ಮತ್ತು ಬೇಕು ಬೇಡಿಕೆಗಳಿಗೆ ಸ್ಪಂದಿಸುವ **ತಂದೆಯ ಪ್ರತೀಕ**ದಂತಿರುವುದು.
11. ನಾಯಕನು ತನ್ನ ಅನುಯಾಯಿಗಳು ಕೂಡಲೇ ಕಾರ್ಯಗತಗೊಳಿಸುವಂತೆ ಆದೇಶಿಸುವುದು.
12. ಒಂದು ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಸಾಧಿಸಲು ಚಟುವಟಿಕೆಗಳನ್ನು **ಸುಸಂಘಟಿತಗೊಳಿಸುವ** ಮತ್ತು **ಸಮನ್ವಯಗೊಳಿಸುವಂತೆ** ಕಾರ್ಯನಿರ್ವಹಿಸುವುದಾಗಿದೆ.
13. ನಾಯಕನು ಯೋಗ್ಯವಾದ ಕಾಲಾವಧಿಯೊಳಗೆ ಯಾವುದೇ ಸಮಸ್ಯೆಯ ಪರಿಹಾರಕ್ಕಾಗಿ ಯೋಗ್ಯ ನಿರ್ಣಯ ಕೈಗೊಳ್ಳುವಿಕೆಯು ಅತ್ಯಂತ ಪ್ರಮುಖವಾದ ಕಾರ್ಯಗಳಲ್ಲೊಂದಾಗಿದೆ.

ಪ್ರಜಾಪ್ರಭುತ್ವದಲ್ಲಿ ನಾಯಕರ ಅಗತ್ಯತೆಯಿದೆ. ನಾಯಕರಿಲ್ಲದೆ ಯಾವುದೇ ಪ್ರಜಾಪ್ರಭುತ್ವವು ಉಳಿಯಲಾರದು ಮತ್ತು ಯಾವುದೇ ನಾಯಕನು ಪ್ರಜಾಸತ್ತಾತ್ಮಕ ತತ್ವಗಳಿಲ್ಲದೆ ನಿಜವಾಗಿಯೂ ಶ್ರೇಷ್ಠ ವ್ಯಕ್ತಿಯಾಗಲಾರನು.

ಶಿಕ್ಷಕನು ಶಾಲಾ ತರಗತಿಯ ನಾಯಕ, ಶಿಕ್ಷಕನ ನಾಯಕ ಪಟ್ಟ ಸಂಪ್ರದಾಯವಾದುದು. ನಾಯಕನಾದವನು ಮಾತ್ರ ಆದೇಶ ಮತ್ತು ನಿರ್ದೇಶನಗಳನ್ನು ನೀಡಬಹುದಾಗಿದೆ. ಶೈಕ್ಷಣಿಕ ಸಂಸ್ಥೆಯಲ್ಲಿ ನಾಯಕತ್ವವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಂಸ್ಥೆಯ ಯಶಸ್ಸು ಸಮರ್ಥ ನಾಯಕರನ್ನೇ ಅವಲಂಬಿಸಿರುತ್ತದೆ. ನಾಯಕತ್ವವು ಅನುಯಾಯಿಗಳ ಮೂಲಕ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಸಾಧಿಸುವಲ್ಲಿ ಮತ್ತು ಧೋರಣೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವಲ್ಲಿ ಮಹತ್ವದ ಸಾಧನವಾಗಿದೆ. ಒಟ್ಟಿನಲ್ಲಿ ಮಾರ್ಗದರ್ಶನ ಮಾಡುವ ವ್ಯಕ್ತಿಯ ವರ್ತನೆಯ ಗುಣಮಟ್ಟವೇ ನಾಯಕತ್ವವಾಗಿದೆ.

–ಆರ್.ಎಚ್.ನಾ.

## ನಾಯಕತ್ವ ಪರಿಣಾಮಕಾರಿತ್ವ

ಒಂದು ಶಿಕ್ಷಣ ಸಂಸ್ಥೆಯು ಸಾಮಾನ್ಯ ಉದ್ದೇಶದ ಸಾಧನೆಗಾಗಿ, ಎಲ್ಲರನ್ನೂ ಒಗ್ಗೂಡಿಸಿಕೊಂಡು ಮುಂದಾಗಿ ಕಾರ್ಯನಿರ್ವಹಿಸುವ ಗುರಿ ವಿಶೇಷತೆಯನ್ನು ಸಾಮಾನ್ಯವಾಗಿ ನಾಯಕತ್ವ ಎಂದು ಕರೆಯಲಾಗುತ್ತದೆ. ಒಂದರ್ಥದಲ್ಲಿ ಶಿಕ್ಷಣ ಸಂಘಟನೆಗಳಲ್ಲಿ ಎಲ್ಲರೂ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ನಾಯಕರೇ ಮತ್ತು ಅನುಯಾಯಿಗಳೇ ಆಗಿದ್ದಾರೆ. ಆದಾಗ್ಯೂ ಪರಿಣಾಮಕಾರಿ ನಾಯಕತ್ವದ ಶೈಲಿ ಇವುಗಳಿಗಿಂತ ವಿಭಿನ್ನವಾಗಿದೆ.

ಶಿಕ್ಷಣ ರಂಗದಲ್ಲಿ ಪರಿಣಾಮಕಾರಿ ನಾಯಕತ್ವ ಅಥವಾ ನಾಯಕತ್ವದ ಪರಿಣಾಮಕಾರತೆಯನ್ನು ವ್ಯಾಖ್ಯಿಸುವುದು ಕಠಿಣಸಾಧ್ಯ. ಶಾಲೆಯ ತಾತ್ವಿಕ ನಡೆಯನ್ನು ಉತ್ತಮೀಕರಿಸಲು, ಸಂಸ್ಥೆಯ ಭವಿಷ್ಯತ್ತನ್ನು ದೃಷ್ಟಿಗೋಚರಿಸಿಕೊಳ್ಳಲು ಸಂಸ್ಥೆಯ ಫಲಾನುಭವಿಗಳ, ಸಂಸ್ಥೆಯ ವೈವಿಧ್ಯಮಯ ಲಕ್ಷಣಗಳನ್ನು ಅರ್ಥೈಸಿಕೊಳ್ಳಲು ಮತ್ತು ಉದ್ದೇಶದ ಸಾಫಲ್ಯತೆಗಾಗಿ ತಂಡಸ್ಫೂರ್ತಿಯನ್ನು ಸಹಯೋಗಶೀಲತೆಯನ್ನೂ ಮತ್ತು ಬದ್ಧತೆಯನ್ನೂ ಬೆಳೆಸುವ ನಾಯಕತ್ವದ ಅಭಿಸಾಮರ್ಥ್ಯಗಳನ್ನು ಪಡೆದು ತೋರ್ಪಡಿಸುತ್ತಾ ಮುಂದೆ ಸಾಗುವುದೇ ನಾಯಕತ್ವದ ಪರಿಣಾಮಕಾರಿತವಾಗಿದೆ. (Leadership Effectiveness)

"ಯಾರು ತಮ್ಮ ದೈನಂದಿನ ಕಾರ್ಯದಲ್ಲಿ ಧನಾತ್ಮಕ ಮನೋವೈಜ್ಞಾನಿಕತೆಯನ್ನು ಪ್ರದರ್ಶಿಸುತ್ತಾರೋ ಮತ್ತು ಸಂಸ್ಥೆಯಲ್ಲಿ ಒಳಗೊಂಡ ಎಲ್ಲ ಶ್ರೇಷ್ಠತೆಯ ಬೆಳವಣಿಗೆಯನ್ನು ಉತ್ಪಾದಿಸುವಂತಹ ಕಾರ್ಯಕ್ಕೆ ಅದನ್ನು ಹೆಚ್ಚುವರಿಯಾಗಿ ಶಾಲೆಗೆ ತರುತ್ತಾರೋ ಅವರೇ ಪರಿಣಾಮಕಾರಿ ನಾಯಕರು (ಕ್ಲಿಫ್ಟನ್ – 2004).

ಪರಿಣಾಮಕಾರಿ ನಾಯಕರು ಸುತ್ತಲಿನ ವಾತಾವರಣದ ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿರುತ್ತಾರೆ. ಶಾಲೆಗೆ ವಾಸ್ತವಿಕ ದೃಷ್ಟಿಕೋನವನ್ನು ಒದಗಿಸುವ ಮೂಲಕ ತಮ್ಮ ಸ್ಥಾನಮಾನ ಸ್ಪಷ್ಟವಾದ ನಕ್ಷೆಯನ್ನು ಹೊಂದಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿರುತ್ತಾರೆ. ಅಲ್ಲದೇ ಶಾಲೆಯ ಸವಾಲುಗಳನ್ನು ಮತ್ತು ಫಲಾನುಭವಿಗಳನ್ನು ತೃಪ್ತಿಪಡಿಸುವ ಕುರಿತು ಆಲೋಚಿಸುತ್ತಾರೆ. (Blackaby - 2001)

ಪರಿಣಾಮಕಾರಿ ನಾಯಕರು ಶಾಲೆಯ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಬೆಳವಣಿಗೆಗಾಗಿ ಯೋಜಿಸುತ್ತಾರೆ. ಪರಿಣಾಮಕಾರಿ ನಾಯಕರು ಮುಂಬರುವ ಸವಾಲುಗಳನ್ನು ಎದುರಿಸುವ ಸಮಸ್ಯಾಪರಿಹಾರದ ಕೌಶಲ್ಯಗಳೊಂದಿಗೆ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರೊಡನೆ ತಮ್ಮ ವಿಚಾರಗಳನ್ನು ಹಂಚಿಕೊಂಡು, ಭವಿಷ್ಯವನ್ನು ದೃಷ್ಟಿಗೋಚರಿಸಿಕೊಂಡು, ಎದುರಿಸಲು ಸ್ವಯಂಪ್ರೇರಿತರಾಗುತ್ತಾರೆ (ಮರ್ಜಾನೊ ಮತ್ತು ವಾಟರ್ಸ್ 2005).

ಪರಿಣಾಮಕಾರಿ ನಾಯಕರು ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯತೆಗಳನ್ನು ಗುರುತಿಸುತ್ತಾರೆ. ಸಂಸ್ಕೃತಿಯ ವೈವಿಧ್ಯತೆ ಹಿನ್ನೆಲೆ ಮತ್ತು ಸಾಮರ್ಥ್ಯವನ್ನು ಪರಿಗಣಿಸುತ್ತಾರೆ. ಉನ್ನತ ಕಾರ್ಯನಿರ್ವಹಣೆಗಾಗಿ ಸ್ವಯಂ ವಿಕಾಸವನ್ನು ಹೆಚ್ಚಿಸಲು ಕಲಿಕೆಯ ವಿವಿಧ ಆಯಾಮಗಳು ಮತ್ತು ಬಹುವಿಧ ಬುದ್ಧಿಶಕ್ತಿಯೆಡೆಗೆ ಬೆಳಕು ಚೆಲ್ಲುತ್ತಾರೆ. (ಗೋಲ್ಡ್‌ರಿಂಗ್ 2000).

ಪರಿಣಾಮಕಾರಿ ನಾಯಕರು ವಿವಿಧ ವ್ಯವಸ್ಥಾಪನಾ ಕೌಶಲ್ಯಗಳೆಡೆಗೆ ಗಮನಹರಿಸುತ್ತಾರೆ ಮತ್ತು ಅವರು ಯೋಜಿಸುವಿಕೆ ನಿರ್ದೇಶಿಸುವಿಕೆ,

Digitised by Bharatavani, CIIL

ಸಂಘಟಿಸುವಿಕೆ ಸಮನ್ವಯಗೊಳಿಸುವಿಕೆ ಮತ್ತು ಮೌಲ್ಯಮಾಪನದಂತಹ ಚಟುವಟಿಕೆಗಳಲ್ಲಿ ಶಿಕ್ಷಕರು, ಪಾಲಕರು ಮತ್ತು ಇತರ ಫಲಾನುಭವಿಗಳನ್ನು ತೊಡಗಿಸುತ್ತಾರೆ.

ಪರಿಣಾಮಕಾರಿ ನಾಯಕತ್ವ ಈ ಮುಂದಿನ ಲಕ್ಷಣಗಳನ್ನು ಹೊಂದಿರುತ್ತದೆ. ಸಕಾರಾತ್ಮಕ ಮನೋಭಾವ, ಪ್ರಾಮಾಣಿಕತೆ ಮತ್ತು ಸಮಗ್ರತೆ, ಸ್ವಯಂಪ್ರೇರಿತ ಕಾರ್ಯಾರಂಭಿಸುವಿಕೆ, ಮಹತ್ವಾಕಾಂಕ್ಷೆ, ಅಭಿಸ್ಥಾಪನೆ, ಆತ್ಮವಿಶ್ವಾಸ, ಸ್ವಯಂ ಸಲಹೆ, ಪರಿಹಾರ ನಿರ್ದೇಶಿತವಾಗಿರುವುದು, ರಚನಾತ್ಮಕತೆ, ಕಲ್ಪನಾಶೀಲತೆ, ಆಶಾವಾದ, ವಿಶ್ವಸನೀಯತೆ, ಧಾರಣ ಶಕ್ತಿ, ಸಹನಶೀಲತೆ, ಸ್ಥಿರತೆ, ಭವಿಷ್ಯದ ಅಭಿಸ್ಥಾಪನೆ, ಒಳನೋಟ, ಕಷ್ಟಸಹಿಷ್ಣುತೆ, ಈಕ್ಷಣ ಚಿಂತನೆ.

ನಾಯಕತ್ವದ ಪರಿಣಾಮಕಾರತೆಯನ್ನು ಅನೇಕ ಅಂಶಗಳು ಪ್ರಭಾವಗೊಳಿಸುತ್ತವೆ: ಒಬ್ಬ ಯಶಸ್ವಿನಾಯಕನು ತನ್ನ ಸ್ಥಾನದ ಅಧಿಕಾರವನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಆತನ ಹಿಂಬಾಲಕರ ವರ್ತನೆಯನ್ನು ಮಾತ್ರ ಬದಲಾಯಿಸುವವನಾಗಿರುತ್ತಾನೆ. ಒಬ್ಬ ಪರಿಣಾಮಕಾರಿ ನಾಯಕನು ತನ್ನ ಹಿಂಬಾಲಕರ ವರ್ತನೆಯನ್ನು ಮಾತ್ರ ಬದಲಾಯಿಸದೇ ತನ್ನ ಸ್ಥಾನದ ಅಧಿಕಾರವನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಅವರ ಮನೋಭಾವನೆಗಳನ್ನು ಕೂಡ ಬದಲಾಯಿಸುತ್ತಾನೆ. (Hersey and Blanchard) ಅಂದರೆ ಯಶಸ್ವಿ ನಾಯಕರು ಮಾಡಿದ ಬದಲಾವಣೆಯು ಅಲ್ಪಕಾಲಿಕ ಮತ್ತು ಪರಿಣಾಮಕಾರಿ ನಾಯಕರು ಮಾಡಿದ ಬದಲಾವಣೆಯು ದೀರ್ಘಕಾಲಿಕವಾಗಿರುತ್ತದೆ. ಎಲ್ಲ ಯಶಸ್ವಿ ನಾಯಕರು ಪರಿಣಾಮಕಾರಿ ನಾಯಕರಲ್ಲ. ಆದರೆ, ಎಲ್ಲ ಪರಿಣಾಮಕಾರಿ ನಾಯಕರು ಯಶಸ್ವಿ ನಾಯಕರಾಗಿರುತ್ತಾರೆ. ಈ ಪರಿಣಾಮಕಾರಿ ನಾಯಕತ್ವವನ್ನು ಪ್ರಭಾವಿಸುವ ನಿರ್ಧಾರಿತ ಅಂಶಗಳು ಈ ಕೆಳಗಿನಂತಿವೆ.

**ನಾಯಕನಲ್ಲಿರುವ ಶಕ್ತಿ:** ನಾಯಕನು ತನ್ನ ಸ್ವಭಾವ, ಮನೋಭಾವಗಳು, ಮೌಲ್ಯಗಳು, ಜ್ಞಾನ, ಅನುಭವ, ಕೌಶಲ್ಯ, ಭಾವನಾಪಕ್ವತೆ ಈ ಎಲ್ಲ ಶಕ್ತಿಗಳನ್ನೊಳಗೊಂಡ ನಾಯಕತ್ವವು ಆತನ ಕುರಿತು ಇತರರು ಉತ್ತಮ ಊಹೆಗಳನ್ನು ಮಾಡಿಕೊಳ್ಳುವಂತೆ ಪ್ರಭಾವ ಬೀರುತ್ತವೆ.

**ಮೇಲ್ವಿಚಾರಕರ ನಾಯಕತ್ವದ ಶೈಲಿ:** ನಾಯಕರ ಮೇಲಾಧಿಕಾರಿಗಳು ಹೊಂದಿರುವ ಅಧಿಕಾರ ವರ್ತನೆಯ, ನಿರಂಕುಶ ಪ್ರಜಾಸತ್ತಾತ್ಮಕ ವಿವಿಧ ಶೈಲಿಗಳು ನಾಯಕತ್ವದ ಮೇಲೆ ಪರಿಣಾಮ ಬೀರುತ್ತವೆ.

**ಕೆಲಸದ ಬೇಡಿಕೆಗಳು:** ಉತ್ಪಾದನಾ ವಿಭಾಗ, ಶಿಕ್ಷಣ ವಿಭಾಗ, ಸಂಶೋಧನಾ ವಿಭಾಗ, ಆಡಳಿತ ವಿಭಾಗ ಹೀಗೆ ವಿವಿಧ ವಿಭಾಗದ ನಾಯಕರ ವರ್ತನೆಗಳು ಹಿಂಬಾಲಕರ ಕಾರ್ಯಕ್ಷಮತೆಯ ಕೊರತೆ ಮತ್ತು ಪರಸ್ಪರ ಪ್ರಭಾವಗಳು ನಾಯಕತ್ವದ ಪ್ರಭಾವಶೀಲತೆಯ ಮೇಲೆ ಪರಿಣಾಮ ಬೀರುತ್ತವೆ.

**ಸಮಯದ ಒತ್ತಡ:** ಸಾಮಾನ್ಯ ಸ್ಥಿತಿ, ತುರ್ತುಸ್ಥಿತಿ, ಸಂದಿಗ್ಧ ಸ್ಥಿತಿ ಹೀಗೆ ವಿವಿಧ ಸಮಯದಲ್ಲಿನ ಒತ್ತಡಗಳು ನಾಯಕತ್ವದ ಪರಿಣಾಮಕಾರತೆಯನ್ನು ಬಾಧಿಸುತ್ತವೆ.

**ಕಾರ್ಯ ವಿಭಜನೆ:** ಪ್ರಜಾತಾಂತ್ರಿಕವಾಗಿ ಮೇಲ್ಮಟ್ಟದ, ಕೆಳಮಟ್ಟದ ಕಾರ್ಯಗಳನ್ನು ಹಂಚಿಕೆ ಮಾಡಿರುವುದು ಮತ್ತು ಮೇಲಿಂದ ಮೇಲೆ ಜನತೆಯ ಸಮೀಪದ ಸಂಪರ್ಕಗಳೆಲ್ಲವೂ ಪರಿಣಾಮಕಾರಿ ನಾಯಕತ್ವವನ್ನು ಪ್ರಭಾವಿಸುತ್ತವೆ.

**ಸಂಸ್ಥೆಯ ರಚನೆ:** ಶಿಕ್ಷಣ ಸಂಸ್ಥೆಯು ದೊಡ್ಡದಾಗಿದ್ದರೆ ಹೆಚ್ಚಿನ ನಿಯೋಜನೆ ಮತ್ತು ನಿರಂಕುಶ ನಿರ್ಣಯಗಳು ಇರುತ್ತವೆ. ಚಿಕ್ಕದಾಗಿದ್ದರೆ ಪ್ರಜಾಸತ್ತಾತ್ಮಕತೆಯ ನಿರ್ಣಯಿಸುವಿಕೆ ಮತ್ತು ಕಡಿಮೆ ನಿಯೋಜನೆಯಿರುತ್ತದೆ.

**ಉತ್ಪಾದನೆ:** ಉತ್ಪಾದನೆಯ ತಂತ್ರವು ಹೊಂದಿದ ಕೆಲಸದ ಕೋರಿಕೆ, ದೊಡ್ಡ ಮತ್ತು ಸಗಟು ಉತ್ಪಾದನೆ ಮತ್ತು ದೀರ್ಘಕಾಲದ ಪ್ರಕ್ರಿಯೆಯ ಉತ್ಪಾದನೆಗಳು ನಾಯಕತ್ವದ ಪರಿಣಾಮಕಾರತೆಯನ್ನು ಪ್ರಭಾವಿಸುತ್ತವೆ. ಅನುಮೋದನೆಯ ಪರಿಸ್ಥಿತಿ, ಭಾಗವಹಿಸುವಿಕೆ, ಜವಾಬ್ದಾರಿ, ಮೇಲ್ಮನವಿಯ ಹಕ್ಕು, ತೀರ್ಮಾನಿಸುವಿಕೆ, ಉತ್ಪಾದನಾ ಸಾಮರ್ಥ್ಯ.

ಈ ಎಲ್ಲಾ ಅಂಶಗಳು ನಾಯಕತ್ವದ ಪರಿಣಾಮಕಾರತೆಯ ಮೇಲೆ ಪ್ರಭಾವ ಬೀರುತ್ತವೆ.

**ಈ ಕೆಳಗಿನ ತಾಲಿಕೆ ನಾಯಕತ್ವದ ಪರಿಣಾಮಕಾರತ್ಯ ಒಳಗೊಂಡಿರುವ ಅಂಶಗಳನ್ನು ತೋರಿಸುತ್ತದೆ.**

| ನಾಯಕತ್ವದ ಗುರಿಗಳು | ಸಾಂದರ್ಭಿಕ ಕಾರಕಗಳು | ನಾಯಕತ್ವದ ಶೈಲಿಗಳು |
|---|---|---|
| • ಸಂಘಟನೆ | ಸಂಘಟನೆ<br>– ಲಭ್ಯ ನಿರ್ಣಯ ಸಮಯ | ನಿರ್ದೇಶಿತ<br>– ನಿರಂಕುಶ |
| • ಕಾರ್ಯ<br>– ಗುರಿ ಕೇಂದ್ರಿತ<br>– ಕಾರ್ಯ ಸುಗಮತೆ | – ಸಂಘಟನಾ ಸಂಸ್ಕೃತಿ<br>– ಇತರ ನಾಯಕರ ಶೈಲಿಗಳು | – ನಿರಂಕುಶಾತ್ಮಕ<br>ಅನ್ಯೋನ್ಯಕ್ರಿಯಾತ್ಮಕ |
| • ಜನತೆ<br>– ಅನ್ಯೋನ್ಯಕ್ರಿಯಾ ಸುಗಮಸುವಿಕೆ<br>– ಪೂರಕ ವರ್ತನೆ<br>– ವೈಯಕ್ತಿಕ ವಿಕಾಸ | ಮಾಡಬೇಕಾದ ಕಾರ್ಯ<br>– ಕಾರ್ಯ ನಿರ್ವಹಿಸುವಿಕೆಯ ಗುರಿಯ ಮಟ್ಟ<br>ಜನತೆ ಮಾಡುತ್ತಿರುವ ಕಾರ್ಯ<br>– ವೃತ್ತಿ ಸ್ವಾಯತ್ತತೆಗಾಗಿ ಸಾಮರ್ಥ್ಯ | – ಸಂಪರ್ಕಿಸುವ<br>– ಸಹಭಾಗಿಸುವಿಕೆ’<br>ಅನಿರ್ದೇಶಿತ<br>– ಏಕಪ್ರಜ್ಞೆ<br>– ಸರಿಹೊಂದುವ |

Digitised by Bharatavani, CIIL

ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಗುರಿ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಸಾಧಿಸುವಲ್ಲಿ ಉದ್ದೇಶಗಳಿಗೆ ಪೂರಕವಾಗಿ ಸಹಾಯಕ ಸಿಬ್ಬಂದಿಯ ವರ್ಗದವರ ಸಹಕಾರವನ್ನು ಪಡೆಯುವಲ್ಲಿ ಮನೋಭಾವವನ್ನು ಧನಾತ್ಮಕವಾಗಿ ಬದಲಾಯಿಸುವಲ್ಲಿ ಹಾಗೂ ನಾಯಕರ ಬಗ್ಗೆ ಇತರರು ಉತ್ತಮ ಮನೋಭಾವವನ್ನು ಹೊಂದುವಂತೆ ಮಾಡುವಲ್ಲಿ ನಾಯಕತ್ವದ ಪರಿಣಾಮಕತೆಯು ಮಹತ್ವದ ಪಾತ್ರ ವಹಿಸುತ್ತದೆ.

–ಎನ್.ಎನ್.ಗ

## ನಾಯಕತ್ವದ ಶೈಲಿಗಳು

### ನಾಯಕತ್ವದ ಪರಿಕಲ್ಪನೆ

ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಯಾರಾದರೂ ಒಬ್ಬರ ಪ್ರಭಾವಕ್ಕೆ ಒಳಗಾಗಿಯೇ ಇರುತ್ತಾರೆ ಮತ್ತು ತಾವೂ ಅವರಂತೆ ಆಗಬೇಕೆಂದು ಪ್ರಯತ್ನಿಸುತ್ತಾರೆ. ಹೀಗೆ ಇನ್ನೊಬ್ಬರನ್ನು ಪ್ರಭಾವಿಸುವ ವ್ಯಕ್ತಿಯೇ ನಾಯಕ. ಇಂಥ ನಾಯಕರು ತಾನೂ ಬೆಳೆದು ಇನ್ನೊಬ್ಬರನ್ನೂ ಬೆಳೆಸುತ್ತಾರೆ. ಒಂದು ಗುರಿಯನ್ನು ತಲುಪಲು ತಂಡ ಕಟ್ಟುವುದರೊಂದಿಗೆ ಸಮನ್ವಯತೆಯನ್ನು ಕಾಯ್ದುಕೊಂಡು ಮುಂದುವರೆಯುತ್ತಾರೆ.

ಒಂದು ಸಂಸ್ಥೆಯಲ್ಲಿ ಮಾನವ ಸಂಪನ್ಮೂಲ, ಭೌತಿಕ ಸಂಪನ್ಮೂಲ, ಅಲ್ಲದೆ ಇತರೇ ಸಹಕಾರದ ಲಭ್ಯತೆಯೂ ಇರುತ್ತದೆ. ಆದರೆ, ಒಬ್ಬ ಯಶಸ್ವೀ ನಾಯಕನಿಲ್ಲದಿದ್ದರೆ ಸಂಪನ್ಮೂಲಗಳಿದ್ದಾಗ್ಯೂ ಸಂಸ್ಥೆಯ ನಿರ್ವಹಣೆ ಕಷ್ಟಸಾಧ್ಯ. ಆದರೆ, ಎಲ್ಲಾ ಕೊರತೆ ಮತ್ತು ಕಷ್ಟಗಳ ಮಧ್ಯೆಯೂ ಯಶಸ್ವೀ ನಾಯಕ ಬದ್ಧತೆಯಲ್ಲಿ ಕಾರ್ಯನಿರ್ವಹಿಸುವನಲ್ಲದೆ, ಪ್ರತಿಕೂಲ ಪರಿಸರವನ್ನು ತಮ್ಮ ಗುರಿ ತಲುಪಲು ಅನುಕೂಲವಾಗುವಂತೆ ಪರಿವರ್ತಿಸಿಕೊಳ್ಳಬಲ್ಲನಾಗಿರುತ್ತಾನೆ.

ಈ ಪ್ರಪಂಚದಲ್ಲಿ ಹುಟ್ಟಿದ ಪ್ರತಿಯೊಬ್ಬರಲ್ಲೂ ನಾಯಕತ್ವ ಅಡಗಿದೆ. ಇಲ್ಲಿ ಪ್ರತಿಯೊಬ್ಬರು ನಾಯಕರೇ, ನಾಯಕರು ತಮ್ಮನ್ನು ತಾವು ನಿರ್ವಹಿಸಿಕೊಂಡು ಇತರರನ್ನು ಮುನ್ನಡೆಸುತ್ತಾರೆ. ಹುಟ್ಟಿನಿಂದಲೇ ಯಾರೂ ನಾಯಕರಾಗುವುದಿಲ್ಲ. ನಾಯಕರಾಗಬೇಕೆಂದು ಯಾರೂ ಸಂಕಲ್ಪ ಮಾಡುತ್ತಾರೋ ಅವರು ತಮ್ಮ ಆಸೆ ಹಾಗೂ ಆತ್ಮವಿಶ್ವಾಸದಿಂದ ಅದಕ್ಕೆ ಬೇಕಾದ ಶಿಕ್ಷಣ, ತರಬೇತಿ, ಅನುಭವ ಎನ್ನುವ ನಿರಂತರ ಪ್ರಕ್ರಿಯೆಗೆ ಒಳಪಟ್ಟು ನಾಯಕರಾಗಬಹುದು. ಹಾಗಾಗಿ ಪ್ರತಿಯೊಬ್ಬರೂ ನಾಯಕತ್ವ ವಹಿಸುವ ಅವಕಾಶ ಇದೆ.

ನಿಜವಾದ ನಾಯಕರು ಇತರರಲ್ಲಿರುವ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಗುರುತಿಸುತ್ತಾರೆ. ಇತರರನ್ನು ಉತ್ತೇಜಿಸುವ ಕೆಲಸ ಮಾಡುತ್ತಾರೆ. ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಹೇಳುವುದಾದರೆ ಒಬ್ಬ ಯಶಸ್ವೀ ಮುಖ್ಯಶಿಕ್ಷಕರು ಶಾಲೆಯ ಉತ್ತಮ ನಾಯಕರಾದ ಪಕ್ಷದಲ್ಲಿ ಸಹಶಿಕ್ಷಕರ, ಎಸ್.ಡಿ.ಎಂ.ಸಿ. ಸದಸ್ಯರ, ಸಮುದಾಯ ಸಹಕಾರದೊಂದಿಗೆ ಕಾರ್ಯನಿರ್ವಹಿಸಬಲ್ಲರು. ಶಾಲೆಯನ್ನು ಗುಣಮಟ್ಟದ ಶಿಕ್ಷಣದ ಕಡೆಗೆ ಕೊಂಡೊಯ್ಯಬಲ್ಲರು.

ನಾಯಕ ಮತ್ತು ನಾಯಕತ್ವದ ಪರಿಕಲ್ಪನೆಗಳನ್ನು ಹೀಗೆ ವ್ಯಾಖ್ಯಾನಿಸಬಹುದು

1. ಸರಿಯಾದ ಕೆಲಸಗಳನ್ನು ಸಕಾಲದಲ್ಲಿ ಮಾಡುವವನೇ ನಾಯಕ.
2. “ಬದಲಾವಣೆಯೊಂದಿಗೆ ಹೊಂದಿಕೊಳ್ಳುವುದೇ ನಾಯಕತ್ವ; ಬದಲಾವಣೆಯೊಂದಿಗೆ ಹೊಂದಿಕೊಳ್ಳುವವನೇ ನಾಯಕ”

–ಜಾನ್ ಕಾಟರ್

3. ಸಂಸ್ಥೆಯ ಸಾಮಾನ್ಯ ಉದ್ದೇಶಗಳನ್ನು ಈಡೇರಿಸಲು ತಂಡದ ನೆರವು ಪಡೆದು ಕಾರ್ಯನಿರ್ವಹಿಸುವವರೇ ನಾಯಕರು.
4. ಇತರರ ಅಭಿವೃದ್ಧಿಯೊಂದಿಗೆ ತನ್ನ ಅಭಿವೃದ್ಧಿಯನ್ನು ಸಾಧಿಸುವುದೇ ನಾಯಕತ್ವ.
5. ಕೆಲಸವನ್ನು ಯಶಸ್ವಿಯಾಗಿ ಪೂರೈಸುವಲ್ಲಿ ತಂಡವನ್ನು ಪ್ರತಿನಿಧಿಸುವ ಹಾಗೂ ಪ್ರಗತಿಯತ್ತ ಕೊಂಡೊಯ್ಯುವ ಒಂದು ಕೌಶಲ್ಯವೇ ನಾಯಕತ್ವ.
6. ಮಾನವ ಸಂಪನ್ಮೂಲವನ್ನು ಸನ್ನಿವೇಶಕ್ಕೆ ಅನುಕೂಲವಾಗುವಂತೆ ವ್ಯವಸ್ಥಿತವಾಗಿ ಬೆಳೆಸಿ, ಪೋಷಿಸಿ, ಸಂರಕ್ಷಿಸುವವರೇ ನಾಯಕರು.
7. ಸಾಮಾನ್ಯರಿಂದ ಅಸಾಮಾನ್ಯ ಫಲಿತಾಂಶ ಪಡೆಯುವುದೇ ನಾಯಕತ್ವ.
8. ಸಮರ್ಥ ಮುಂದಾಳತ್ವವೇ ನಾಯಕತ್ವ.

### ನಾಯಕತ್ವದ ಶೈಲಿಗಳು (Styles of Leadership)

ವೈಯಕ್ತಿಕ ಗುಣಲಕ್ಷಣಗಳಿಗಾಗಿ ಅಥವಾ ಆಡಳಿತಾತ್ಮಕ ಅಪೇಕ್ಷೆಯಿಂದಾಗಿ ಕಾರ್ಯನಿರ್ವಹಿಸುವ ಶೈಲಿಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಶೈಲಿಯಲ್ಲಿನ ವ್ಯತ್ಯಾಸಗಳಿಂದಾಗಿ ತಂಡದ ಕಾರ್ಯ ನಿರ್ವಹಣೆಯಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ. ಯಾವುದೇ ಶಿಕ್ಷಣ ಸಂಸ್ಥೆಯು ಯಾವುದೇ ಸ್ತರದ ಅಧಿಕಾರಿಯು ನಾಯಕನಾಗಿ ಕೆಲಸ ನಿರ್ವಹಿಸಬೇಕಾದಾಗ ತನ್ನದೇ ಆದ ಶೈಲಿಯನ್ನು ಅನುಸರಿಸುತ್ತಾರೆ. ಬೇರೆ ಬೇರೆ ರೀತಿಯ ಕಾರ್ಯತಂತ್ರಗಳೇ ವಿವಿಧ ರೀತಿಯ ನಾಯಕತ್ವದ ಶೈಲಿಗಳಿಗೆ ಎಡೆಮಾಡಿಕೊಡುತ್ತವೆ.

ತನ್ನ ತಂಡ ಗುರಿ ತಲುಪಲು ಯಾವ ವರ್ತನೆಯನ್ನು ಅಳವಡಿಸಿಕೊಳ್ಳುತ್ತಾರೆಯೋ ಅದೇ ಅವರ ಶೈಲಿ. ನಾಯಕತ್ವದ ಶೈಲಿಯ ಪರಿಸ್ಥಿತಿಯಿಂದ ಪ್ರಭಾವಿಸಲ್ಪಡುತ್ತದೆ. ಒಂದು ಸಂದರ್ಭದಲ್ಲಿ ನಿರಂಕುಶ ರೀತಿಯನ್ನು ಅನುಸರಿಸಬೇಕಾದರೆ ಮತ್ತೊಮ್ಮೆ ಪ್ರಜಾಪ್ರಭುತ್ವ ರೀತಿಯನ್ನು ಅನುಸರಿಸಬೇಕಾಗುತ್ತದೆ. ಪ್ರತಿಯೊಬ್ಬರಲ್ಲಿಯೂ ಒಂದೊಂದು ರೀತಿ ವ್ಯಕ್ತಿತ್ವವಿದ್ದು, ಅವರದ್ದೇ ಆದ ಶೈಲಿಯಲ್ಲಿ ನಾಯಕತ್ವ ಹೊಂದಿರುತ್ತಾರೆ. ನಾಯಕತ್ವದಲ್ಲಿ ಹಲವು ಶೈಲಿಗಳಿವೆ. ಪ್ರತಿಯೊಂದು ಶೈಲಿಯೂ ಅದರದ್ದೇ ಆದ ವಿಶೇಷತೆ ಹೊಂದಿದ್ದು, ಪ್ರತಿಯೊಂದು ಶೈಲಿಯಲ್ಲಿಯೂ ಅನುಕೂಲಗಳು ಹಾಗೂ ಅನಾನುಕೂಲಗಳು ಇವೆ.

ನಾಯಕನಾದವನು ಅನುಸರಿಸಬಹುದಾದ ವರ್ತನೆಯ ಮಾದರಿಗೆ ‘ನಾಯಕತ್ವ’ದ ಶೈಲಿ ಎಂದು ಕರೆಯುತ್ತಾರೆ. ವಿವಿಧ ಸಮಯ ಹಾಗೂ ಸನ್ನಿವೇಶಗಳಲ್ಲಿ ನಾಯಕನು ಬೇರೆ ಬೇರೆ ಪ್ರಕಾರದ ನಾಯಕತ್ವದ ಶೈಲಿಗಳನ್ನು ಅನುಸರಿಸುತ್ತಾನೆ. ನಿರ್ದಿಷ್ಟ ಸನ್ನಿವೇಶದಲ್ಲಿ ಅನುಸರಿಸಬೇಕಾದ ನಾಯಕತ್ವದ ಶೈಲಿಯು ನಾಯಕನ ವ್ಯಕ್ತಿತ್ವ, ಅನುಭವ ಮತ್ತು ಮೌಲ್ಯ ವ್ಯವಸ್ಥೆ, ಅನುಯಾಯಿಗಳ ಸ್ವಭಾವ ಮತ್ತು ಪರಿಸರದ ಸ್ವರೂಪಗಳನ್ನವಲಂಬಿಸಿರುತ್ತದೆ. ನಾಯಕತ್ವದ ಶೈಲಿಗಳಲ್ಲಿ ಮುಖ್ಯವಾಗಿ ಐದು ಪ್ರಕಾರಗಳುಂಟು. ಅವು ಯಾವುವೆಂದರೆ (1) ನಿರಂಕುಶ ಶೈಲಿ (2) ಪ್ರಜಾಪ್ರಭುತ್ವದ ಶೈಲಿ (3) ಮುಕ್ತ ನೀತಿ ಅಥವಾ ತಾಟಸ್ಥ್ಯ ಶೈಲಿ (4) ಔಪಚಾರಿಕ ಶೈಲಿ (5) ಅನೌಪಚಾರಿಕ ಶೈಲಿ.

### 1. ನಿರಂಕುಶ ನಾಯಕತ್ವ ಶೈಲಿ (Autocratic-Authoritarian Style)

ಈ ಶೈಲಿಯು ಪ್ರಜಾಸತ್ತಾತ್ಮಕ ರೀತಿಗೆ ವಿರುದ್ಧವಾದದ್ದು. ಇಲ್ಲಿ ನಾಯಕ ಗುಂಪಿನಲ್ಲಿ ತನ್ನದೇ ಆದ ಏಕರೀತಿಯ ನಿರ್ಧಾರ ತೆಗೆದುಕೊಂಡು

Digitised by Bharatavani, CIIL

ಆಡಳಿತ ನಡೆಸುತ್ತಾರೆ. ಅಧಿಕಾರ ಹಾಗೂ ನಿರ್ಧಾರಗಳನ್ನು ತನ್ನಲ್ಲಿಯೇ ಇಟ್ಟುಕೊಂಡು ಇತರರು ತನ್ನ ಆದೇಶಗಳನ್ನು ಪಾಲಿಸಬೇಕೆಂದು ನಿರೀಕ್ಷಿಸುತ್ತಾನೆ. ಉದಾಹರಣೆಗೆ: ಹಿಟ್ಲರ್, ಮುಸ್ಸಲೋನಿ.

ನಿರಂಕುಶ ನಾಯಕನು ತಾನು ತನ್ನ ಅನುಯಾಯಿಗಳಿಗೆ ನೀಡಿದ ಆದೇಶಗಳನ್ನು ಅವರು ಪಾಲಿಸಲಿಕ್ಕೇ ಬೇಕೆಂದು ಬಯಸುತ್ತಾನೆ. ಅಂದರೆ ಯಾವ ಅನುಯಾಯಿಯೂ ಅವನ ಆದೇಶಗಳನ್ನು ಕಡೆಗಣಿಸುವ ಧೈರ್ಯ ಮಾಡುವುದಿಲ್ಲ. ನಿರಂಕುಶ ನಾಯಕನು ಧೋರಣೆಗಳನ್ನು ರೂಪಿಸುವಾಗ ತನ್ನ ಅನುಯಾಯಿಗಳೊಂದಿಗೆ ಸಮಾಲೋಚಿಸುವುದಿಲ್ಲ. ಹಾಗೂ ಮುಂದಿನ ಯೋಜನೆಗಳ ಬಗೆಗೆ ಅವರಿಗೆ ಮುಂಚಿತವಾಗಿ ಯಾವ ವಿವರಗಳನ್ನೂ ಕೊಡುವುದಿಲ್ಲ. ಅವನು ಕೇವಲ ಸದ್ಯಕ್ಕೆ ಏನು ಮಾಡಬೇಕೆಂಬುದನ್ನು ಮಾತ್ರ ಅನುಯಾಯಿಗಳಿಗೆ ತಿಳಿಸುತ್ತಾನೆ. ಅವನು ಪ್ರತಿಯೊಬ್ಬ ಅನುಯಾಯಿಯನ್ನು ಅವನ ಕೆಲಸಕ್ಕಾಗಿ ಶ್ಲಾಘಿಸಬಹುದು ಅಥವಾ ಟೀಕಿಸಬಹುದು. ಆದರೆ ಅವನು ತನ್ನ ಅನುಯಾಯಿಗಳೊಂದಿಗೆ ಬೆರೆಯದೆ ಅವರಿಂದ ಬಹಳಷ್ಟು ಕಾಲ ದೂರ ಉಳಿಯುತ್ತಾನೆ.

ನಿರಂಕುಶ ನಾಯಕತ್ವವು ಅತ್ಯಂತ ಬಿಗುವಿನದಾಗಿರಬಹುದು ಅಥವಾ ದಯಾಪರವಾಗಿರಬಹುದು.

ಅತ್ಯಂತ ಬಿಗುವಿನ ನಾಯಕನು ಋಣಾತ್ಮಕನಾಗಿರುತ್ತಾನೆ. (Strict Autocrat or Negative Autocrat). ಅವನ ಅನುಯಾಯಿಗಳು ಅವನ ಎಲ್ಲ ಆದೇಶಗಳನ್ನು ಪಾಲಿಸಲಿಕ್ಕೇಬೇಕು; ಅವನು ಅವನ ಅಧಿಕಾರವನ್ನು ಪ್ರಶ್ನಿಸಲಾರರು; ಅವರು ಅವನ ಅಧಿಕಾರಕ್ಕೆ ಹೆದರಿ ಯಾವಾಗಲೂ ಕೆಲಸ ಮಾಡುತ್ತಿರುತ್ತಾರೆ. ಅವನು ಅವರಿಗೆ ಯಾವ ವಿವರಗಳನ್ನೂ ನೀಡುವುದಿಲ್ಲ. ಆದರೆ ಅವನಿಗೆ ಬೇಕಾಗಿರುವುದು ಅವರ ಕೆಲಸ. ಅವರು ಅಭದ್ರತೆಯಲ್ಲಿ ಹೆದರಿಕೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ.

ನಿರಂಕುಶ ನಾಯಕನು ದಯಾಪರ ನಾಯಕ ಅಥವಾ ವಿಧಿವಹಿತ (Benevolent or Positive Autocrat) ನಾಯಕನಾಗಿರಬಹುದು. ಅವನು ತನ್ನ ಅನುಯಾಯಿಗಳನ್ನು ವಿಶ್ವಾಸದಲ್ಲಿ ತೆಗೆದುಕೊಂಡು, ಅವರ ಕೆಲಸಕ್ಕೆ ಪ್ರತಿಫಲವನ್ನು ನೀಡುತ್ತ, ಉತ್ತೇಜನ ನೀಡುವವರ ಮೂಲಕ ಅವರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತಾನೆ. ಅವನು ತನ್ನ ಅನುಂಯಾಯಿಗಳೊಂದಿಗೆ ಯಾವಾಗಲೂ ಸುಮಧುರ ಸಂಬಂಧವನ್ನು ಇಟ್ಟುಕೊಂಡಿರುತ್ತಾನೆ.

ಅನುಕೂಲಗಳು: ಒಬ್ಬರ ಅಭಿಪ್ರಾಯಗಳಿಗಿಂತ ಎಲ್ಲರ ಅಭಿಪ್ರಾಯ ಪಡೆಯುವುದು ಲೇಸು. ಹಾಗಾಗದೇ ಹೋದರೆ ಇತರ ಅಂಶಗಳು ಗೌಣವಾಗುತ್ತವೆ. ಅಲ್ಲದೇ ಗುಂಪಿನ ಸದಸ್ಯರಲ್ಲಿ "ನಮ್ಮದು" ಎನ್ನುವ ಭಾವನೆ ಇರುವುದಿಲ್ಲ. ಹಾಗಾಗಿ ಮನಃಪೂರ್ವಕವಾಗಿ ಕೆಲಸದಲ್ಲಿ ತೊಡಗುವುದಿಲ್ಲ.

### 2. ಪ್ರಜಾಸತ್ತಾತ್ಮಕ/ಪ್ರಜಾಪ್ರಭುತ್ವದ ಶೈಲಿ (Democratic Style)

ಪ್ರಜಾಪ್ರಭುತ್ವ ಶೈಲಿಯು, ನಾಯಕನು ತನ್ನ ಅನುಯಾಯಿಗಳೊಂದಿಗೆ ಸಮಾಲೋಚಿಸಿ ಅವರಿಗಾಗಿ ಧೋರಣೆಗಳನ್ನು ರೂಪಿಸುತ್ತಾನೆ ಮತ್ತು ಅವರಿಗೆ ಆದೇಶಗಳನ್ನು ನೀಡುತ್ತಾನೆ. ಅನುಯಾಯಿಗಳು ಸಮ್ಮತಿಸಿದರೆ ಮಾತ್ರ ಧೋರಣೆಗಳನ್ನು ಕಾರ್ಯಗತಗೊಳಿಸಲು, ನಾಯಕನು ಕೇಳಿಕೊಳ್ಳುತ್ತಾನೆ. ದೀರ್ಘಾವಧಿ ಯೋಜನೆಗಳ ಬಗೆಗೆ ಅವರಿಗೆ ತಿಳಿಸಿದ ಹೊರತು, ಅವರಿಗೆ ಕೆಲಸ ಮಾಡಲು ಕೇಳಿಕೊಳ್ಳುವುದಿಲ್ಲ. ಮತ್ತು ವೈಯಕ್ತಿಕವಾಗಿ ಯಾವನೊಬ್ಬ ಕೆಲಸಗಾರನನ್ನೂ ದೂಷಿಸುವುದಿಲ್ಲ ಅಥವಾ ಶ್ಲಾಘಿಸುವುದಿಲ್ಲ. ಕೆಲಸದ ಯಶಸ್ಸಿಗೆ ಅಥವಾ ವಿಫಲತೆಗೆ ಎಲ್ಲರೂ ಭಾಗಿಗಳಾಗುತ್ತಾರೆಂಬುದನ್ನು ಅವನು ಸ್ಪಷ್ಟಪಡಿಸುತ್ತಾನೆ. ಅವನು ಏಕಪಕ್ಷೀಯವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವುದಿಲ್ಲ. ಅವನು ತನ್ನ ಅನುಯಾಯಿಗಳೊಂದಿಗೆ ಸಮಾಲೋಚಿಸಿ ಅವರ ಸಮ್ಮತಿಯೊಂದಿಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾನೆ. ನಿರಂಕುಶ ನಾಯಕನು ಅಧಿಕಾರದ ಬಲದಿಂದ ಕೆಲಸವನ್ನು ಮಾಡಿಸಿಕೊಂಡರೆ, ಪ್ರಜಾಪ್ರಭುತ್ವ ನಾಯಕನು ಜನತಂತ್ರದ ಮೂಲಕ ಕೆಲಸವನ್ನು ಮಾಡಿಸಿಕೊಳ್ಳುತ್ತಾನೆ.

ಈ ಶೈಲಿಯು ನಾಯಕರು ತಮ್ಮ ಗುಂಪಿನ ಸದಸ್ಯರ ಅಭಿಪ್ರಾಯ ಹಾಗೂ ಮನ್ನಣೆಯನ್ನು ಪಡೆದು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಈ ಶೈಲಿಯಲ್ಲಿ ಯಾವುದೇ ಕಾರಣಕ್ಕೂ ನಾಯಕರು ತಮ್ಮಿಚ್ಛೆಯಂತೆ ನಡೆದುಕೊಳ್ಳುವುದಿಲ್ಲ. ಇಲ್ಲಿ ತಮ್ಮ ತಂಡದ ಸದಸ್ಯರು ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಅವರಿಗೆ ಜವಾಬ್ದಾರಿ ಹಾಗೂ ಅಧಿಕಾರವನ್ನೂ ನೀಡುತ್ತಾರೆ. ಪ್ರಜಾಪ್ರಭುತ್ವ ಮೌಲ್ಯ ಮತ್ತು ಸಿದ್ಧಾಂತಗಳನ್ನು ಆಧರಿಸಿ ಗುಂಪನ್ನು ನಡೆಸುತ್ತಾರೆ.

ಪ್ರಜಾಪ್ರಭುತ್ವ ರೀತಿಯ ನಾಯಕತ್ವದಲ್ಲಿ ಕೆಲವು ಅನುಕೂಲ ಮತ್ತು ಅನುಕೂಲಗಳು ಇರುತ್ತವೆ. ಅವು ಈ ಕೆಳಗಿನಂತಿವೆ.

**ಅನುಕೂಲಗಳು:**

1) ಅದು ಆಡಳಿತ ಮಂಡಳಿಯ ರೀತಿ-ನೀತಿಗಳನ್ನು ಅನುಯಾಯಿಗಳು ವಿರೋಧವಿಲ್ಲದೆ ಒಪ್ಪಿಕೊಳ್ಳುವಂತೆ ಮಾಡುತ್ತದೆ.
2) ಅದು ಬದಲಾವಣೆಗಳಿಗೆ ಅನುಯಾಯಿಗಳು ಸುಲಭವಾಗಿ ಒಪ್ಪಿಕೊಳ್ಳುವಂತೆ ಪ್ರೇರೇಪಿಸುತ್ತದೆ.
3) ಅನುಯಾಯಿಗಳು ಕೆಲಸದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುವಂತೆ ಮತ್ತು ಸಂಸ್ಥೆಯ ಹಿತಾಸಕ್ತಿಗಳನ್ನು ರಕ್ಷಿಸುವಂತೆ ಅವರನ್ನು ಪ್ರೇರೇಪಿಸುತ್ತದೆ.
4) ಅದು ಅನುಯಾಯಿಗಳ ನೈತಿಕಮಟ್ಟವನ್ನು ಸುಧಾರಿಸುತ್ತದೆ.
5) ಅದು ಕಾರ್ಮಿಕರ ಕುಂದು-ಕೊರತೆಗಳನ್ನು ಕಡಿಮೆ ಮಾಡುತ್ತದೆ.
6) ಅದು ಒಂದು ಬಗೆಯ ಸ್ವಯಂ ನಿಯಂತ್ರಣ ಮತ್ತು ಸ್ವಯಂ ಸ್ಫೂರ್ತಿಗೆ ಅವಕಾಶ ಮಾಡಿಕೊಡುತ್ತದೆ.
7) ಕಾರ್ಮಿಕರೊಡನೆ ಸಮಾಲೋಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುವುದರಿಂದ, ತೀರ್ಮಾನಗಳು ಹೆಚ್ಚು ವಾಸ್ತವಿಕವೂ ಹೆಚ್ಚು ಲಾಭದಾಯಕವೂ ಆಗುತ್ತವೆ.
8) ಅದು ನಾಯಕ ಮತ್ತು ಅವನ ಅನುಯಾಯಿಗಳ ನಡುವೆ ಹಾರ್ದಿಕ ಸಂಬಂಧವನ್ನು ಏರ್ಪಡಿಸುತ್ತದೆ.

**ಅನಾನುಕೂಲಗಳು**

1) ಅನುಯಾಯಿಗಳಿಗೆ ಸಂಸ್ಥೆಯು ಕ್ಲಿಷ್ಟಮಯ ಸಮಸ್ಯೆಗಳ ಅರಿವು ಇಲ್ಲದಿರುವುದರಿಂದ ಅವರಿಗೆ ಪರಿಣಾಮಕಾರಿಯಾಗಿ ಸಲಹೆ-ಸೂಚನೆಗಳನ್ನು ನೀಡಲು ಸಾಧ್ಯವಾಗುವುದಿಲ್ಲ.
2) ಕೆಲವು ಸಲ ಪ್ರಜಾಪ್ರಭುತ್ವದ ಶೈಲಿಯು ನಾಯಕತ್ವದ ದುರುಪಯೋಗವಾಗುವ ಸಂಭವ ಇರುತ್ತದೆ.

Digitised by Bharatavani, CIIL

### 3. ಮುಕ್ತ ಶೈಲಿಯ ನಾಯಕತ್ವ (Laissez-faire Style)

ಮುಕ್ತ ಶೈಲಿಯ ನಾಯಕನು ತನ್ನ ಅಧಿಕಾರವನ್ನು ನಡೆಸಲು ಹೋಗುವುದೇ ಇಲ್ಲ. ಎಲ್ಲವನ್ನೂ ತನ್ನ ಅನುಯಾಯಿಗಳಿಗೇ ಬಿಟ್ಟುಕೊಡುತ್ತಾನೆ. ಅವನು ತನ್ನ ಅನುಯಾಯಿಗಳಿಗೆ ಯಾವುದೇ ಆದೇಶಗಳನ್ನಾಗಲಿ ಅಥವಾ ನಿರ್ದೇಶನಗಳನ್ನಾಗಲಿ ನೀಡುವುದಿಲ್ಲ. ತೀರ್ಮಾನಗಳನ್ನು ತೆಗೆದುಕೊಳ್ಳುವ, ಕೆಲಸವನ್ನು ಮಾಡಿ ಮುಗಿಸುವ, ಗುರಿಗಳನ್ನು ಸಾಧಿಸುವ ಇವೇ ಮೊದಲಾದ ಎಲ್ಲ ಕೆಲಸಗಳ ಹೊಣೆಗಾರಿಕೆಯನ್ನು ಅವನು ತನ್ನ ಅನುಯಾಯಿಗಳ ಮೇಲೆಯೇ ವಿಧಿಸುತ್ತಾನೆ. ಅವನು ತನ್ನ ಅನುಯಾಯಿಗಳು ಮಾಡುವ ಕೆಲಸದಲ್ಲಿ ಕೈಹಾಕುವುದಿಲ್ಲ. ಅವನು ತಟಸ್ಥ ಧೋರಣೆ ತಳೆದು, ನಿರ್ಲಿಪ್ತನಾಗಿ ಉಳಿಯುತ್ತಾನೆ. ಅವನು ಆಡಳಿತ ಮಂಡಳಿ ಹಾಗೂ ತನ್ನ ಕಾರ್ಮಿಕರ ನಡುವೆ ಕೇವಲ ಮಧ್ಯಸ್ಥಗಾರನಾಗಿ ಅಂಚೆಯ ಪೇದೆಯಂತೆ ಕೆಲಸ ಮಾಡುತ್ತಾನೆ.

ಅನುಯಾಯಿಗಳು ಅತ್ಯಂತ ಪ್ರಾಮಾಣಿಕರೂ ಮತ್ತು ನಂಬಿಗಸ್ಥರೂ ಆಗಿದ್ದರೆ ಮಾತ್ರ ಈ ಶೈಲಿಯ ನಾಯಕತ್ವವು ಯಶಸ್ವಿಯಾಗುತ್ತದೆ. ಅನುಯಾಯಿಗಳು ತಮ್ಮ ಕೆಲಸಕ್ಕೆ ಬದ್ಧರಾಗಿ, ಆದೇಶಗಳಿಲ್ಲದೆ, ಸ್ವಯಂ ಪ್ರೇರಣೆಯಿಂದ ಅವನು ಕೆಲಸ ಮಾಡಿದರೆ ಮಾತ್ರ ಈ ಶೈಲಿಯು ಫಲಪ್ರದವಾಗುತ್ತದೆ. ಆದರೆ ಇಂಥ ಸನ್ನಿವೇಶವು ಕಂಡು ಬರುವುದು ಬಹಳ ಅಪರೂಪ.

### 4. ಔಪಚಾರಿಕ ಶೈಲಿ

ಈ ಶೈಲಿಯಲ್ಲಿ ಅನುಯಾಯಿಗಳು ನಿಗದಿತ ನಾಯಕರಿಂದ ನಿರ್ದೇಶನ ಪಡೆಯುತ್ತಾರೆ. ಔಪಚಾರಿಕ ಸನ್ನಿವೇಶ/ತಂಡಗಳಲ್ಲಿ, ಪದನಿಮಿತ್ತವಾಗಿ/ಸ್ಥಾನದಿಂದ/ಪ್ರಾಧಿಕಾರದಿಂದ ಗುಂಪಿನ ಕೆಲಸವನ್ನು ನಿರ್ವಹಿಸುತ್ತಾರೆ. ಕೆಲಸಕ್ಕೆ ನಿಯೋಜನೆಗೊಂಡ ಸಮಯದಿಂದಲೇ ನಾಯಕರು ತಮ್ಮ ಯೋಜನೆಗಳನ್ನು ತಂಡದ ಸದಸ್ಯರೊಂದಿಗೆ ಹಂಚಿಕೊಳ್ಳುತ್ತಾರೆ.

**ಅನುಕೂಲಗಳು :** ಕೆಲಸಗಳು ಸುಸೂತ್ರವಾಗಿ, ಸಕಾಲದಲ್ಲಿ, ಸರಳವಾಗಿ ನಾಯಕರ ಆದೇಶದಂತೆ ನಡೆಯುತ್ತವೆ.

**ಅನಾನುಕೂಲಗಳು**

1) ಇಲ್ಲಿ ತಂಡದ ಸದಸ್ಯರಿಗೆ ಸಾಮಾಜಿಕ ಅಂತರವ್ಯಕ್ತಿ ಸಂಬಂಧಗಳಿಗೆ ಅವಕಾಶಗಳು ಕಡಿಮೆ. ಕೆಲಸದ ಗುಣಮಟ್ಟದ ಸುಧಾರಣೆಯ ಸಾಧ್ಯತೆಗಳೂ ಕಡಿಮೆ.
2) ಸಹೋದ್ಯೋಗಿಗಳಲ್ಲಿ ನಂಬಿಕೆ ಇಲ್ಲದಿದ್ದಲ್ಲಿ ಕಷ್ಟ.
3) ಅನುಪಾಲತೆ ಸರಿಯಾಗಿ ಇರದಿದ್ದರೆ ಕಾರ್ಯ ಸಫಲವಾಗುವುದಿಲ್ಲ.

### 5. ಅನೌಪಚಾರಿಕ ಶೈಲಿ

ಗುಂಪಿನಲ್ಲಿ ಇದ್ದಕ್ಕಿದ್ದಂತೆ ಯಾರಾದರೊಬ್ಬ ಗುಂಪಿನ ಸದಸ್ಯರು ತಮ್ಮ ವೈಯಕ್ತಿಕ ಗುಣಲಕ್ಷಣಗಳಿಂದ ನಾಯಕರಾಗಿ ಘೋಷಿಸಿಕೊಂಡು/ ಸ್ವಇಚ್ಛೆಯಿಂದ ಕೆಲಸದಲ್ಲಿ ತೊಡಗಿ ಮುಂದೆ ಸಾಗುತ್ತಾರೆ.

**ಅನುಕೂಲಗಳು**

ನಿರ್ದಿಷ್ಟ ಕೆಲಸದಲ್ಲಿ ವಿಘ್ನಗಳು ಉಂಟಾದಾಗ, ಔಪಚಾರಿಕ ನಾಯಕ ಆ ಸಂಸ್ಥೆಯ ತನ್ನ ಕಾರ್ಯದಲ್ಲಿ ವಿಫಲವಾದಾಗ ತಂಡದ ಕೆಲಸಗಳು ಯಾರಾದರೂ ಒಬ್ಬರು ಸಮರ್ಥರಿಂದ ಸುಸೂತ್ರವಾಗಿ ನಡೆಯುತ್ತವೆ.

**ಅನಾನುಕೂಲಗಳು**

ಇಂಥ ಸಂದರ್ಭಗಳಲ್ಲಿ ಮಾಡಿದ ಬಹುತೇಕ ಕೆಲಸದಲ್ಲಿ ಪರಿಪೂರ್ಣತೆ ಇರುವುದಿಲ್ಲ. ತಾತ್ಕಾಲಿಕವಾಗಿ ಸಾಫಲ್ಯ ದೊರಕಬಹುದು. ಆದರೆ, ಇದು ಶಾಶ್ವತವಾಗಿ ಕಷ್ಟ.

ಉತ್ತಮ ನಾಯಕರು ಎಲ್ಲ ಶೈಲಿಗಳ ಉತ್ತಮ ಅಂಶಗಳನ್ನು ಸಂದರ್ಭಕ್ಕೆ ತಕ್ಕಂತೆ ಅಳವಡಿಸಿಕೊಳ್ಳುತ್ತಾರೆ. ಎಲ್ಲಾ ಶೈಲಿಗಳ ಬಗ್ಗೆ ಆಳವಾಗಿ ಚಿಂತನೆ ಮಾಡಿ ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಿಕೊಂಡಿರುತ್ತಾರೆ.

–ವಿ.ವಿ. ಮ.

## ನಿರ್ಣಯಿಸುವಿಕೆ

ವ್ಯಕ್ತಿಯ ವ್ಯಕ್ತಿತ್ವದ ನಿರ್ಮಾಣದಲ್ಲಿ ನಿರ್ಣಯಿಸುವಿಕೆ (Decision Making) ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ನಾಯಕನ ಕಾರ್ಯಗಳಲ್ಲಿ ಉಚ್ಚತಮ ಸ್ಥಾನವನ್ನು ಹೊಂದಿದೆ.

ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಏನನ್ನು ಮಾಡಬೇಕು ಮತ್ತು ಏನನ್ನು ಮಾಡಬಾರದು ಎಂಬುದರ ಬಗೆಗೆ ತೆಗೆದುಕೊಳ್ಳುವ ತೀರ್ಮಾನವೇ ನಿರ್ಣಯಕೈಗೊಳ್ಳುವ ಪ್ರಕ್ರಿಯೆ ಆಗಿದೆ. ಏಕೆಂದರೆ ಅದು ಗತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್ಕಾಲವನ್ನು ಗಮನಿಸಿ ಕಾರ್ಯ ನಿರ್ವಹಿಸಬೇಕಾಗುವುದು.

**ಆಂಡ್ರಿವ್ಯ–ಸ್ಲಿಲಾಗೀ ಪ್ರಕಾರ:** "ನಿರ್ಣಯಿಸುವಿಕೆ ಒಂದು ಪ್ರಕ್ರಿಯೆ. ಅದು ಮಾಹಿತಿ ಒಳಗೊಂಡು ಅದು ಆಯ್ಕೆಯ ಪರ್ಯಾಯ ವ್ಯವಸ್ಥೆಯ ಕ್ರಿಯಾಜನ್ಯವಾಗಿದ್ದು ಅದನ್ನು ಅನುಷ್ಠಾನಗೊಳಿಸಿ ಮೌಲ್ಯಮಾಪನ ಮಾಡಿ ನಿರ್ದೇಶನದಂತೆ ಸಾಧನೆಯ ಗುರಿಗಳನ್ನು ತಲುಪುವುದು."

**ಮೆನಲಿ ಎಚ್. ಜೋನ್ಸ್ ಪ್ರಕಾರ:** "ಹಲವಾರು ಪರ್ಯಾಯಗಳನ್ನು ಪರೀಕ್ಷೆಗಳಿಗೆ ಒಳಪಡಿಸಿ, ಮುಂದಿನ ಆಗುಹೋಗುಗಳನ್ನು ಆಯ್ಕೆ ಮಾಡುವುದರ ಮೇಲೆ ಕ್ರಿಯಾತ್ಮಕ ಶಕ್ತಿಯಿಂದ ಭವಿಷ್ಯದ ಗುರಿಗಳನ್ನು ಈಡೇರಿಸುವುದರ ಮೂಲಕ ಗರಿಷ್ಠ ಮಟ್ಟದಲ್ಲಿ ಉದ್ದೇಶಗಳನ್ನು ಸಾಧಿಸುತ್ತ ಯಶಸ್ಸನ್ನು ಕಾಣುವುದು."

ಒಟ್ಟಿನಲ್ಲಿ ವಿವಿಧ ಪರ್ಯಾಯ ಮಾರ್ಗಗಳ ಬಗ್ಗೆ ಪರಿಶೀಲಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮೊದಲು ಅವುಗಳ ಫಲಿತಾಂಶವನ್ನು ಪರಸ್ಪರ ಹೋಲಿಸಿ ಮೌಲ್ಯಮಾಪನ ಮಾಡುತ್ತಾನೆ. ಆದರೆ ಯಾವುದಾದರೂ ಪರ್ಯಾಯ ಕಾರ್ಯ ಮಾರ್ಗ ಒಂದನ್ನು ಕುರಿತು ಆಲೋಚಿಸಿದ ನಂತರ, ಆ ನಿರ್ದಿಷ್ಟ ಸನ್ನಿವೇಶದಲ್ಲಿ ಏನು ಮಾಡತಕ್ಕದ್ದು ಎಂಬುದಕ್ಕೆ ಸಂಬಂಧಿಸಿದಂತೆ ಒಂದು ನಿರ್ಧಾರಕ್ಕೆ ಬರುವುದೇ "ತೀರ್ಮಾನ ತೆಗೆದುಕೊಳ್ಳುವುದು" ಎಂದು ಸಾಮಾನ್ಯವಾಗಿ ಬಳಸಲಾಗುವ ಪದದ ಅರ್ಥವಾಗಿರುತ್ತದೆ.

ನಿರ್ಣಯ ತೆಗೆದುಕೊಳ್ಳುವ ಕಾರ್ಯವು ಮಾನವೀಯ ಮತ್ತು ಮಾನಸಿಕ ಪ್ರಕ್ರಿಯೆಯಾಗಿರುವುದರಿಂದ ಅದು ವಿವೇಚನಾಶಕ್ತಿಯುಳ್ಳದ್ದು ಅಥವಾ ತರ್ಕಬದ್ಧವಾಗಿರುತ್ತದೆ. ಇದರಿಂದ ಮನುಷ್ಯನ ಸಾಧಕ ಬಾಧಕಗಳನ್ನು ಯುಕ್ತಾಯುಕ್ತತೆಗಳ ಮೂಲಕ ವಿವೇಚಿಸಿ ನಿರ್ಣಯ ತೆಗೆದುಕೊಳ್ಳುವನು. ಇದು ಆ ವ್ಯಕ್ತಿಯ ಆತ್ಮವಿಶ್ವಾಸವನ್ನು ಮತ್ತು ಆತ್ಮಸಾಕ್ಷಾತ್ಕಾರ ಹೆಚ್ಚಿಸುತ್ತದೆ. ಆದರೆ ನಿರ್ಣಯಗಳು ಉದ್ದೇಶಗಳನ್ನು ಸಾಧಿಸಲು ಸಾಧನೆ ಮಾತ್ರವಾದರೂ ಅವು ಸಮೂಹದ ಮತ್ತು ಸಂಸ್ಥೆಯ ಗುರಿಗಳನ್ನು ತಲುಪಿ ಸಾಧನಗಳನ್ನು ಪೂರಕವಾಗುವಂತೆ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ, ಆಸೆಗೆ ಪ್ರತಿಫಲ ದೊರೆಯುತ್ತದೆ.

Digitised by Bharatavani, CIIL

'ನಿರ್ಣಯಿಸುವಿಕೆ'ಯ ಪರಿಣಾಮಕಾರಿ ನಿರ್ವಹಣೆಯ ಅವಶ್ಯಕ ಪ್ರಕ್ರಿಯೆ ಆಗಿರುವುದರಿಂದ ಯಾವುದೇ ಕಾರ್ಯ ಯಶಸ್ವಿಯಾಗಲು ಆ ನಿರ್ಣಯವು ಅವನ ವ್ಯಕ್ತಿತ್ವವನ್ನು ಬಿಂಬಿಸುತ್ತದೆ ಮತ್ತು ಆ ಕೆಲಸದ ಗುಣಮಟ್ಟವನ್ನು ಕೂಡಾ ನಿರ್ಧರಿಸುತ್ತದೆ. ಅದು ಯಶಸ್ವಿಯಾದಲ್ಲಿ ಸಾಮೂಹಿಕ ಮೆಚ್ಚುಗೆ ಪಡೆಯುತ್ತದೆ. ಆದರೆ ಅಪಸ್ವರದಿಂದ ಕೂಡಿದ್ದರೆ ಅಪೇಕ್ಷಿತ ಗುರಿ ತಲುಪಲು ಸಾಧ್ಯವಾಗುವುದಿಲ್ಲ.

ಪ್ರಾಣಿಗಳಿಗಿಂತ ಭಿನ್ನವಾಗಿರುವ ಮನುಷ್ಯನಿಗೆ ವಿವೇಚನಾಯುಕ್ತ ಹೊಣೆಗಾರಿಕೆ ಇರುತ್ತದೆ ಎನ್ನುವುದು ಅವನ ದೃಢ ನಿರ್ಧಾರ, ನಿಶ್ಚಲ ಶಕ್ತಿ ಭವಿಷ್ಯದ ಧನಾತ್ಮಕ ನೋಟಗಳನ್ನು ಅವಲಂಬಿಸಿದೆ. ಅದರಲ್ಲೂ ನಾಯಕನಾದವನಿಗೆ ನಿರ್ಣಯಿಸುವಿಕೆ ನಿರಂತರ ಮತ್ತು ವ್ಯಾಪಕವಾದ ತುಮುಲವನ್ನು ಒಳಗೊಂಡ ಇಚ್ಛಾಶಕ್ತಿಯ ಪ್ರತಿಫಲವಾಗಿದೆ. ಅದುವೇ ತನಗೂ, ಸಮಾಜಕ್ಕೂ ಮತ್ತು ರಾಷ್ಟ್ರಕ್ಕೂ ಪ್ರತಿಫಲವಾಗಿದೆ. ಅದರಂತೆ ಮಾರ್ಗಸೂಚಿಯಾಗಿ ಭವಿಷ್ಯದಲ್ಲಿ ಅವಶ್ಯಕತೆಗನುಗುಣವಾಗಿ ಬದಲಾವಣೆ ತಂದು ರಾಷ್ಟ್ರದ ಅಭ್ಯುದಯವನ್ನು ಸಾಧಿಸುತ್ತದೆ.

ಒನ್ವಾಡ್ (1961) ಪ್ರಕಾರ ತೀರ್ಮಾನ ತೆಗೆದುಕೊಳ್ಳುವ ಚಟುವಟಿಕೆಯಲ್ಲಿ ಕಂಡು ಬರುವ ಸಮಸ್ಯೆ ಪರಿಹಾರದ ಏಳು ಅನುಕ್ರಮಗಳು (ಹೆಜ್ಜೆಗಳು)

ಹೆಜ್ಜೆ – 1 ಗುರುತಿಸುವುದು, ವ್ಯಾಖ್ಯಾನಿಸುವುದು ಮತ್ತು ಅಗತ್ಯವನ್ನು (ಹೆಜ್ಜೆಗಳು) ಸೀಮಿತಗೊಳಿಸುವುದು.

ಹೆಜ್ಜೆ – 2 ಅಗತ್ಯವನ್ನು ವಿಶ್ಲೇಷಿಸಿ ಅದರ ಮೌಲ್ಯಮಾಪನ ಮಾಡುವುದು.

ಹೆಜ್ಜೆ – 3 ಒಂದು ಯೋಜನೆ ಎಷ್ಟರಮಟ್ಟಿಗೆ ಸಮರ್ಪಕ ಅಥವಾ ಅಂಗೀಕಾರ ಎಂದು ತೀರ್ಮಾನಿಸಲು ಸಾಧ್ಯವಾಗುವಂತೆ ಆ ಯೋಜನೆ ಸದ್ಯದ ಅಗತ್ಯವನ್ನು ಹೇಗೆ ಪೂರೈಸಬಲ್ಲದು ಎಂದು ವಿಮರ್ಶಿಸುವುದು.

ಹೆಜ್ಜೆ – 4 ಅಗತ್ಯವನ್ನು ಹೇಗೆ ಪೂರೈಸಬಹುದೆಂದು ನಿರ್ಧರಿಸಲು ಸಹಾಯಕವಾಗುವ ದತ್ತಾಂಶಗಳನ್ನು ಸಂಗ್ರಹಿಸುವುದು.

ಹೆಜ್ಜೆ – 5 ಅಗತ್ಯವನ್ನು ಪೂರೈಸುವ ಒಂದು ಅಥವಾ ಹೆಚ್ಚು ವಿಧಾನಗಳನ್ನು ಸೂತ್ರೀಕರಿಸುವುದು, ಆಯ್ಕೆ ಮಾಡಿಕೊಳ್ಳುವುದು, ಹಾಗೂ ಪರೀಕ್ಷಿಸುವುದು.

ಹೆಜ್ಜೆ – 6 ಅಗತ್ಯವನ್ನು ಪೂರೈಸಬಲ್ಲ ಒಂದು ವಿಧಾನವನ್ನು ಅಂತಿಮವಾಗಿ ಆಯ್ಕೆ ಮಾಡಿಕೊಳ್ಳುವುದು.

ಹೆಜ್ಜೆ – 7 ಅಗತ್ಯವನ್ನು ಪೂರೈಸುವಲ್ಲಿ ಆಯ್ದುಕೊಂಡ ವಿಧಾನದ (ಗಳ) ಪರಿಣಾಮಕಾರಿತ್ವದ ಬೆಲೆಕಟ್ಟುವುದು.

**ನಿರ್ಣಯಿಸುವಿಕೆ ಪ್ರಕ್ರಿಯೆ ಮತ್ತು ಅದರ ಬೇಕಾಗಿರುವಿಕೆಗಳು (ಅಗತ್ಯತೆಗಳು)**

| ನಿರ್ಣಯಿಸುವ ಪ್ರಕ್ರಿಯೆ | ಅಗತ್ಯತೆಗಳು |
|---|---|
| 1. ಸಮಸ್ಯೆ ನಿಶ್ಚಯಿಸುವಿಕೆ | ನಿರ್ಣಯಿಸುವುದು |
| 2. ಪರ್ಯಾಯಗಳ ವೃದ್ಧಿಸುವಿಕೆ ಅಥವಾ ವಿಕಾಸ | ಸೃಜನಾತ್ಮಕತೆ ಮತ್ತು ಅನುಭವಗಳು |
| 3. ಪರ್ಯಾಯಗಳ ವಿಶ್ಲೇಷಣೆ | ಪ್ರಮಾಣಾತ್ಮಕ ವಿಶ್ಲೇಷಣೆ ಮತ್ತು ಅನುಭವಗಳು |
| 4. ಅತ್ಯುತ್ತಮ ಪರ್ಯಾಯಗಳ ಆಯ್ಕೆ | ನಿರ್ಣಯಿಸುವುದು ಅಥವಾ ತೀರ್ಮಾನಿಸುವುದು. |

**ನಿರ್ಣಯಿಸುವಿಕೆ ಪ್ರಕಾರಗಳು–** ಇದರಲ್ಲಿ ಪ್ರಮುಖವಾಗಿ ಎರಡು ವಿಧಗಳು:

## 1. ವ್ಯಕ್ತಿಗತ ನಿರ್ಣಯಿಸುವಿಕೆ (Independent Decision)

ಇದು ವೈಯಕ್ತಿಕವಾಗಿ ನಾಯಕನ ಪಾತ್ರ ಅಪೂರ್ವವಾದುದು ಮತ್ತು ಜವಾಬ್ದಾರಿಯಾದುದು. ಇದರಲ್ಲಿ ಮೂರು ಕರ್ತವ್ಯಗಳಿವೆ.

1. **ಸದಸ್ಯತ್ವ ಸಂರಕ್ಷಣೆ** – ನಾಯಕನು ಗುಂಪಿನ ಸದಸ್ಯರ ಸಮೀಪ, ಅವರ ಜೊತೆ ಕೆಲಸ ಮಾಡುವಿಕೆ, ಗುಂಪಿನವರೊಂದಿಗೆ ಅಂಗೀಕಾರಾರ್ಹವೆನಿಸುವಂತೆ ವರ್ತಿಸಬೇಕು.
2. **ಧ್ಯೇಯ ಸಾಧನೆ** – ಕಾರ್ಯ ವಿನ್ಯಾಸಗಳು ಎಲ್ಲರಿಗೂ ಅರ್ಥವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಇರುತ್ತದೆ. ಧ್ಯೇಯ ಸಾಧನೆಯಲ್ಲಿ ಗುಂಪು ಸಹಕರಿಸುವಂತೆ ಕೂಡಾ ನೋಡಿಕೊಳ್ಳಬೇಕು.
3. **ಗುಂಪಿನ ಅಂತರ್ ಕ್ರಿಯೆ** – ಸರಳೀಕರಣ ಸಂಸ್ಥೆ ಸದಸ್ಯರ ನಡುವೆ ಪರಿಣಾಮಕಾರಿ ಅಂತರ್ ಕ್ರಿಯೆಗಳನ್ನು ನಾಯಕನು ಸುಗಮಗೊಳಿಸಬೇಕು.

ಯಾವ ಆದರ್ಶಗಳನ್ನು ವೈಯಕ್ತಿಕವಾಗಿ ನಾಯಕನಾದವನು ಬೋಧಿಸುತ್ತಾನೋ ಅವುಗಳನ್ನು ತಾನು ಕಾಯಾ, ವಾಚಾ, ಮನಸಾ ಅನುಸರಿಸಿ ಬೇರೆಯವರಿಗೆ ಮಾದರಿಯಾಗಬೇಕು.

ಸ್ವಾವಲಂಬನೆ / ವ್ಯಕ್ತಿಗತ
ನಿರ್ಣಯ



ಗುಂಪು /
ಸಾಮೂಹಿಕ
ನಿರ್ಣಯ

## II. ಗುಂಪು ನಿರ್ಣಯಿಸುವಿಕೆ (Group Decision)

ಗುಂಪು ನಿರ್ಣಯಿಸುವಿಕೆಯು ಕೂಡಾ ಗುರಿ ಸಾಧನಾ ಪ್ರಕ್ರಿಯೆಗೆ ಪ್ರಮುಖವಾಗಿದೆ. ಆದರೂ ಗುಂಪಿನ ಗಾತ್ರ ಗುಂಪಿನ ಸಮತೋಲನ, ಸಾಂಘಿಕ ಅಂತರ್ ಕ್ರಿಯಾ ಪರಸ್ಪರ ಸಂಬಂಧ ಮತ್ತು ಸನ್ನಿವೇಶಗಳು ಗುಂಪು ನಿರ್ಣಯದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಇಲ್ಲಿ ಗುಂಪು ನಿರ್ಣಯ ಎಂದಾಗ ಜವಾಬ್ದಾರಿಯಿಂದ ನುಣುಚಿಕೊಳ್ಳಬಹುದಾದ ಸಾಧ್ಯತೆ ಇರುತ್ತದೆ. ಆದರೂ ಕೆಲವು ಸಲ ಉತ್ತಮಾಂಶಗಳನ್ನು ಕೂಡಾ ಚರ್ಚಿಸಬಹುದು. ಇವುಗಳಲ್ಲಿ ಕೆಲವು ಇಂತಿವೆ:

### 1) ಡೆಲ್ಫಿ ತಂತ್ರ (The Delphi Technique)

ಸಾಮೂಹಿಕ ನಿರ್ಣಯ ತೆಗೆದುಕೊಳ್ಳುವಲ್ಲಿ 'ರ್‍ಯಾಂಡ್ ಕಾರ್ಪೋರೇಶನ್' ಇದನ್ನು ವಿಚಾರಗಳ ಹೊಂಡವೆಂದು ಕರೆದಿದ್ದಾರೆ. ಅದರಂತೆ ದೀರ್ಘಕಾಲದವರೆಗೆ ಪೂರ್ವಾನುಮಾನವನ್ನು ಮಾಡುವುದು. ಇಂದು ವ್ಯವಹಾರ, ಶಿಕ್ಷಣ, ಸರಕಾರ, ಆರೋಗ್ಯ ಮತ್ತು ಸೈನಿಕ ವ್ಯವಸ್ಥೆಯಲ್ಲಿ ಸಾಮೂಹಿಕವಾಗಿ ನಿರ್ಣಯಿಸಿ ಯಶಸ್ಸನ್ನು ಕಾಣುವುದಾಗಿದೆ. ಇಲ್ಲಿ,

1. ಪ್ರತಿಭಾನ್ವಿತ ವ್ಯಕ್ತಿಗಳು ಕೂಡಿ ಚರ್ಚಿಸಿ ನಿರ್ಣಯ ಕೈಕೊಳ್ಳುವುದು.
2. ಪ್ರತಿಯೊಬ್ಬರ ಅಭಿಪ್ರಾಯಗಳನ್ನು ತೆಗೆದುಕೊಂಡು ಸೂಕ್ತವಾದುದನ್ನು ನಿರ್ಣಯಿಸುವುದು.

Digitised by Bharatavani, CIIL

3. ವಿಷಯಕ್ಕೆ ಸಂಬಂಧಿಸಿದ್ದನ್ನು ಸ್ವೀಕರಿಸಿ ಅದರಲ್ಲಿಯೇ ಮರುಸೂಚನೆ ನೀಡಿ ಒಟ್ಟಾಭಿಪ್ರಾಯಕ್ಕೆ ಬರುವುದು.

4. ಮರು ಸೂಚನೆ ಸಂದರ್ಭದಲ್ಲಿ ಒಪ್ಪದೇ ಇದ್ದಾಗ ಬಹು ಸಾಂಘಿಕ ಜನರ ಮನೋಭಿಪ್ರಾಯವನ್ನು ತಿಳಿದು ಉಳಿದವರಿಗೂ ಮರು ಚಿಂತನೆಗೆ ಅವಕಾಶ ಕಲ್ಪಿಸುವುದು. ಇದರಿಂದ ಅವನ / ಅವಳ ಸ್ಥಾನಮಾನ ಎತ್ತಿಹಿಡಿದಂತೆ ಆಗುವುದು.

**2) ಗುಂಪು ಚಿಂತನೆ (Group Think)**

ಗುಂಪು ವಿಚಾರವೆಂದೇ ಭಿನ್ನ ಭಿನ್ನ ವ್ಯಕ್ತಿಗಳ ಸಾಂಘಿಕ ವಿಚಾರಗಳು. ಇದು ನೈಜವಾಗಿ ಪರೀಕ್ಷಿಸಿಕೊಂಡು ಉತ್ತಮ ಫಲಿತಾಂಶ ನೀಡುತ್ತದೆ.

1. ಸಾಮೂಹಿಕ ಪ್ರಯತ್ನವು ಗುಣಮಟ್ಟದ ನಿರ್ಣಯವನ್ನು ತೆಗೆದುಕೊಳ್ಳುವುದು.

2. ಗುಂಪು ವಿಚಾರಗಳು ಭ್ರಾಂತಿಯಿಂದೊಡಗೂಡಿದ ಆಶಾಭಾವನೆಗಳಾಗಿಯೂ ಇರಬಹುದು.

3. ಕೆಲವೊಮ್ಮೆ ಹಾಸ್ಯಾಸ್ಪದ ವಿಚಾರಗಳು ಇದ್ದರೂ ಇರುತ್ತವೆ. ಅವುಗಳನ್ನು ಮೊಟಕುಗೊಳಿಸಿ ತಾರ್ಕಿಕದತ್ತ ಕೊಂಡೊಯ್ಯುವುದು.

**3) ಹೆಸರಿಗೆ ಮಾತ್ರ ಗುಂಪು ತಂತ್ರ (The Nominal Group Technique)**

ಇದು ಡೆಲ್ಫಿ ತಂತ್ರ ಹೋಲುತ್ತಿದ್ದರೂ ಮನಃಶಾಸ್ತ್ರಜ್ಞರು ಇದನ್ನು 'ಕಾಗದ ಗುಂಪು' ಎಂದು ಕರೆಯುತ್ತಾರೆ.

1. ಮೌನವಾಗಿ ವಿಚಾರಗಳನ್ನು ಬರೆಯುವುದು.

2. ಸುತ್ತುವರೆಯುತ್ತ ಅವರ ವಿಚಾರಗಳನ್ನು ಚಾರ್ಟ್ (Chart) ಅಥವಾ ಕರಿಹಲಗೆ ಮೇಲೆ ಕಾಣಿಸುವುದು.

3. ಪ್ರತಿಯೊಂದು ದಾಖಲೆಯಲ್ಲಿರುವ ವಿಚಾರಗಳನ್ನು ನಿರ್ಧರಿಸುವುದು ಮತ್ತು ಮೌಲ್ಯಮಾಪನ ಮಾಡುವುದು.

4. ವೈಯಕ್ತಿಕ ವಿಚಾರಗಳನ್ನು ಮತ ಹಾಕುವುದರ ಮೂಲಕ ಶ್ರೇಣೀಯುತವಾಗಿ ನಮೂದಿಸಿ ನಂತರ ಸಾಂಘಿಕವಾಗಿ ನಿರ್ಣಯಿಸುವುದು.

**4) ಪ್ರತಿಭಾ ಪ್ರಕ್ಷೋಭನೆ ತಂತ್ರ (Brain Storming Technique)**

ಇದು ಸೃಜನಾತ್ಮಕ ತಂತ್ರವಾಗಿದ್ದು ವಿಷಯಕ್ಕನುಗುಣವಾಗಿ ಮುಕ್ತವಾದ ವಿಚಾರಗಳನ್ನು ಮುಕ್ತವಾಗಿ ಹೊರಹಾಕುವುದು. ಆದರೆ ವಿಮರ್ಶೆಗೆ ಮತ್ತು ಟೀಕೆಗೆ ಈ ಸಂದರ್ಭದಲ್ಲಿ ಅವಕಾಶವಿರುವುದಿಲ್ಲ.

1. ಗುಂಪಿನ ನಾಯಕ ವಿಷಯದ ಸಮಸ್ಯೆಯನ್ನು ಸ್ಪಷ್ಟವಾಗಿ ತಿಳಿಸುವುದು.

2. ಗುಂಪಿನಲ್ಲಿರುವವರು ತಮ್ಮ ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಅವಕಾಶ ಕಲ್ಪಿಸುವುದು.

3. ವಿಷಯದ ಕುರಿತು ಮಧ್ಯದಲ್ಲಿ ನಿರ್ಣಯಿಸದೇ ತಂತ್ರ ಮುಗಿದ ಮೇಲೆಯೇ ಚರ್ಚಿಸುವುದು.

4. ಉತ್ಸುಕರಾಗಿ ಭಾಗವಹಿಸುವುದರ ಮೂಲಕ ನೇರವಾಗಿ ಸಮಸ್ಯೆಗಳನ್ನು ಬಗೆಹರಿಸಿ ಫಲಿತಾಂಶವನ್ನು ಕಾಣಬಹುದು.

5. ಉನ್ನತ ವಿಚಾರಗಳು ಪ್ರಕ್ಷೋಭನೆ ಮೂಲಕ ಮೂಡಿ ಬಂದಾಗ ನಂತರ ವಿಷಯದ ಕುರಿತು ಚರ್ಚಿಸಿ ನಿರ್ಣಯಿಸಿದಾಗ ಉತ್ತಮವಾದುದು ಮಾತ್ರ ಹೊರಬರುವುದು.

ಒಟ್ಟಿನಲ್ಲಿ ಈ ತಂತ್ರ ಸಾಮೂಹಿಕ ನಿರ್ಣಯಕ್ಕೆ ಸಕಾರಾತ್ಮಕ ಒಲವನ್ನು ತಾಳಿದೆ ಎಂಬುದು ಸಂಶೋಧನೆಯಿಂದ ತಿಳಿದುಬಂದಿದೆ.

**ನಿರ್ಣಯಿಸುವಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು**

ಪರಿಣಾಮಕಾರಿಯಾಗಿ ಪ್ರಭಾವ ಬೀರುವ ನಾಯಕನಾರು? ಪರಿಣಾಮಕಾರಿ ನಾಯಕನೆಂದರೆ ಅವನು ಯಶಸ್ವಿಯುತ ವ್ಯಕ್ತಿ. ಹರ್ಸೆ ಮತ್ತು ಬ್ಲಾಂಚರ್ಡ್ – ಪ್ರಕಾರ ಪರಿಣಾಮಕಾರಿ ನಾಯಕನಿಗೂ ಮತ್ತು ಯಶಸ್ವಿ ನಾಯಕನಿಗೂ ವ್ಯತ್ಯಾಸವಿದೆ. ಯಶಸ್ವಿ ನಾಯಕ ತನ್ನ ಅನುಯಾಯಿಗಳ ವರ್ತನೆಯಲ್ಲಿ ತನ್ನ ಸ್ಥಾನದಿಂದ ಬದಲಾವಣೆಯನ್ನು ತರುತ್ತಾನೆ. (ಆದರೆ ಅವರು ಒಲವಿನಿಂದಲ್ಲ) ಆದರೆ ಪರಿಣಾಮಕಾರಿ ನಾಯಕ ಅನುಯಾಯಿಗಳ ವರ್ತನೆಯಲ್ಲಿ ಬದಲಾವಣೆ ತರದೇ ಅವನ ವ್ಯಕ್ತಿಗತ ಶಕ್ತಿಯನ್ನು ಉಪಯೋಗಿಸಿ ಒಲವು ತೋರುವಂತೆ ಮಾಡುತ್ತಾನೆ. ಮೊದಲನೇ ವ್ಯಕ್ತಿಯಲ್ಲಿ ಬದಲಾವಣೆ ಅಲ್ಲ, ಆದರೆ ಎರಡನೆಯವನಲ್ಲಿ ಅನುಭವಿಸುವಿಕೆಯ ಅನುಭವವಿದೆ. ಅದಕ್ಕಾಗಿ **"ಎಲ್ಲ ಯಶಸ್ವಿ ನಾಯಕರು ಪರಿಣಾಮಕಾರಿ ನಾಯಕರಲ್ಲ. ಆದರೆ ಎಲ್ಲಾ ಪರಿಣಾಮಕಾರಿ ನಾಯಕರು ಯಶಸ್ವಿ ನಾಯಕರಾಗುತ್ತಾರೆ."**

**ಪರಿಣಾಮಕಾರಿ ನಿರ್ಣಯಕ್ಕೆ ನಿರ್ಧರಿಸುವ ನಿರ್ಬಂಧನೆಗಳು**

ನಾಲ್ಕು ಪ್ರಕಾರದ ನಿರ್ಬಂಧನೆಗಳನ್ನು ಮಹತ್ವಪೂರ್ಣವಾಗಿ ರೂಪಿಸುವ ಶೈಲಿ ಇದೆ.

**1. ತನ್ನಷ್ಟಕ್ಕೆ ತಾನೇ ನಿರ್ಬಂಧಿಸಿಕೊಳ್ಳುವುದು:** ನಾಯಕನ ಸ್ವಭಾವದಲ್ಲಿ ಮೂಲಭೂತವಾಗಿ ಒಲವುಗಳು, ಮೌಲ್ಯಗಳು, ಜ್ಞಾನ, ಕೌಶಲ್ಯ, ದಕ್ಷತೆ, ಅನುಭವ, ಭಾವನಾತ್ಮಕ ಸ್ಥಿತಿಸ್ಥಾಪಕತೆ, ಹುಟ್ಟಿನಿಂದ ವಿಕಾಸವಾದವುಗಳು. ಆದರೆ ಇವು ಅವನ ಅನಿಸಿಕೆ, ಊಹೆ, ಗ್ರಹಿಕೆ ಮತ್ತು ವರ್ತನೆಗಳ ಮೇಲೆ ಪ್ರಭಾವ ಬೀರುತ್ತದೆ.

**2. ತನ್ನ ಸಹಚರರನ್ನು ನಿರ್ಬಂಧಿಸುವುದು:** ಒಳಗಿಂದೊಳಗೆ ಸಹಚರರನ್ನು ನಿರ್ಬಂಧಿಸುವುದು. ಇದು ಅವರ ಜ್ಞಾನ, ಕೌಶಲ್ಯ, ಸ್ವಾವಲಂಬನೆ, ಅವಶ್ಯಕತೆ, ನಿರೀಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ನಿರ್ಣಯವನ್ನು ಹಂಚಿಕೊಳ್ಳಬೇಕೆಂದು ಬಯಸುತ್ತಾರೆ.

**3. ಸಾಮಾನ್ಯ ಸನ್ನಿವೇಶ ನಿರ್ಬಂಧಿಸುವುದು:**
1. ನಾಯಕನ ಮೇಲ್ವಿಚಾರಣೆಗಳ ನಾಯಕತ್ವ ಶೈಲಿ
2. ವೃತ್ತಿ ಬೋಧನೆಗಳು
3. ಕಾಲಾವಧಿ ಒತ್ತಡ

**4. ಸಂಘಟನಾ ವ್ಯವಸ್ಥೆಯ ನಿರ್ಬಂಧನೆಗಳು–**
1. ಕೆಲಸದಲ್ಲಿ ವಿಂಗಡಣೆ
2. ಸ್ವರೂಪ ಸಂಘಟಣೆ
3. ತಂತ್ರಜ್ಞಾನ ಉತ್ಪಾದನೆ

ಅದರಂತೆ ನಾಯಕನನ್ನು ಕುಗ್ಗಿಸುವ ಹಲವು ಪ್ರಭಾವಿ ಅಂಶಗಳು ಇರುತ್ತವೆ.

1. ನಾಯಕನು ಅನುಯಾಯಿಗಳ ಸ್ವಭಾವವನ್ನು ಸರಿಯಾಗಿ ಅರಿತುಕೊಳ್ಳಲು ಅಸಮರ್ಥನಾದರೆ ಆತನ ಹಾಗೂ ಅವರ ನಡುವೆ ಸ್ನೇಹದ ಬದಲು ದ್ವೇಷ ಬೆಳೆಯಲು ಅವಕಾಶ.

Digitised by Bharatavani, CIIL

2. ನಾಯಕ ಅನುಯಾಯಿಗಳ ಹತ್ತಿರದಲ್ಲಿದ್ದು ಕಾರ್ಯನಿರ್ವಹಿಸದೇ ಇದ್ದರೆ ಮತ್ತು ಹೊಸ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಅವರ ಭಾವನೆಗಳನ್ನು, ಪ್ರತಿಕ್ರಿಯೆಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ.
3. ಅಪ್ರಬುದ್ಧ ಭಾವನೆ ಹೊಂದಿರುವ ನಾಯಕನು ಕಾರ್ಯಗಳ ಒತ್ತಡದಿಂದ ತನ್ನ ಚಿತ್ತ ಸ್ವಾಸ್ಥ್ಯ ಕಳೆದುಕೊಂಡು ಮನೋವಿಕಾರಗಳಿಗೆ ಗುರಿಯಾಗುವ ಸಾಧ್ಯತೆಯಿದೆ.
4. ಸಂಸ್ಥೆಯಲ್ಲಿ ಮುಂದೆ ಬರಬಹುದಾದ ಸಮಸ್ಯೆ ಗ್ರಹಿಸಿ ಅದಕ್ಕೆ ಅನುಗುಣವಾಗಿ ಮುಂದಾಗಿಯೇ ಯೋಜನೆ ರೂಪಿಸುವ ಸಾಮರ್ಥ್ಯವನ್ನು ಹೊಂದಿಲ್ಲದೆ ಇರಬಹುದು.
5. ನಾಯಕನು ದಂಡನೆ ಮತ್ತು ದ್ರವ್ಯರೂಪದ ಬಹುಮಾನಗಳಿಂದ ಹೆಚ್ಚು ಅವಲಂಬಿಸಿರುವುದರಿಂದ ಅನುಯಾಯಿಗಳ ದಕ್ಷತೆ, ಕಾರ್ಯನಿರ್ವಹಣೆ, ಸಂತೃಪ್ತಿ ಮುಂತಾದವುಗಳನ್ನು ಗುರ್ತಿಸದೆ ಅವುಗಳನ್ನು ಕಡೆಗಾಣಿಸಬಹುದು.
6. ಸಾರ್ವತ್ರಿಕ ಹಿತ ಸಾಧಿಸುವ ಗುರಿ ಹೊಂದಿದ ಇತರ ವ್ಯಕ್ತಿಗಳ ಕಾರ್ಯಾಚರಣೆಯಲ್ಲಿ ನಾಯಕನು ಸಹಕರಿಸದೇ ಇರಬಹುದು.
7. ನಾಯಕನು ತನ್ನ ಭಾವನೆಗಳನ್ನು ಮತ್ತು ಉದ್ದೇಶಗಳನ್ನು ವ್ಯಕ್ತಪಡಿಸಲು ಇಚ್ಛಿಸದಿದ್ದಾಗ ಆತನ ಅನುಯಾಯಿಗಳು ನಿರಾತಂಕವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಿಲ್ಲ.
8. ನಾಯಕನು ತನ್ನ ಸ್ಥಾನಕ್ಕೆ ಅನುಗುಣವಾದ ವ್ಯಕ್ತಿತ್ವ ಹೊಂದಿಲ್ಲದ ಸಂದರ್ಭದಲ್ಲಿ ತಾನು ಕೀಳು ಎಂಬ ಭಾವನೆ ಉಂಟಾಗುತ್ತದೆ. ಅದನ್ನು ಸರಿದೂಗಿಸಲು ಅನುಯಾಯಿಗಳನ್ನು ಹೋಲಿಸಿಕೊಂಡು ತಾನು ಉಚ್ಚತರನೆಂಬ ಮನೋಭಾವ ಬೆಳೆಸಿಕೊಳ್ಳುತ್ತಾನೆ.

ಹೀಗೆ ಹಲವಾರು ಸಂಗತಿಗಳು ನಿರ್ಣಯಿಸುವಿಕೆ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಾಗಿವೆ.

–ವಿ.ಡಿ.ಐ

## ನಿಧಾನ ಕಲಿಕಾರ್ಥಿಗಳ ಶಿಕ್ಷಣ

ಶಾಲೆಯಲ್ಲಿ ಭಿನ್ನ ರೀತಿಯ ಶೈಕ್ಷಣಿಕ ಸಾಧನೆಯನ್ನು ತೋರುವ ಮಕ್ಕಳಿರುತ್ತಾರೆ. ತರಗತಿಯಲ್ಲಿ ಬುದ್ಧಿವಂತರು, ದಡ್ಡರು, ಸಾಧಾರಣ, ಹೀಗೆ ಹಲವು ರೀತಿಯ ವಿದ್ಯಾರ್ಥಿಗಳಿರುತ್ತಾರೆ. ಅವರಲ್ಲಿ ಕೆಲವರು ಶಾಲಾ ಕಾರ್ಯಕ್ರಮಗಳಲ್ಲಿ ಹೊಂದಿಕೊಳ್ಳದೆ, ಭಾಗವಹಿಸದೆ ಯಾವುದೇ ಬುದ್ಧಿವಂತಿಕೆ ತೋರಿಸದೆ ತರಗತಿಯಲ್ಲಿ ನಿಗದಿಯಾದ ವೇಳೆಯಲ್ಲಿ ಕಲಿಯಬೇಕಾದ ವಿಷಯ ಕಲಿಯದೆ ಹಿಂದುಳಿದಿರುವ ಮಕ್ಕಳಿರುತ್ತಾರೆ. ಎಲ್ಲಾ ಶಿಕ್ಷಕರು ಶಾಲಾ ಕೆಲಸದಲ್ಲಿ ಅಥವಾ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಸಮಸ್ಯೆಯನ್ನು ಎದುರಿಸುತ್ತಾರೆ ಹಾಗೂ ತರಗತಿಯ ಇತರ ಮಕ್ಕಳಿಗಿಂತ ಶಾಲಾ ಸಾಧನೆಯಲ್ಲಿ ಭಿನ್ನರಾಗಿರುವ ಮಕ್ಕಳನ್ನು ವೀಕ್ಷಿಸುತ್ತಾರೆ. ಇವರು ಅಂದರೆ ನಿಧಾನ ಕಲಿಕಾರ್ಥಿಗಳು ತರಗತಿಯ ಸಾಮಾನ್ಯ ಬೋಧನೆಯಿಂದ ಹೆಚ್ಚು ಪ್ರಯೋಜನ ಪಡೆಯಲಾರರು.

ತರಗತಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳನ್ನು ಮಂದಗತಿಯಲ್ಲಿ ಕಲಿಯುವವರು ಅಥವಾ ನಿಧಾನಗತಿಯಲ್ಲಿ ಕಲಿಯುವವರು ಎನ್ನುತ್ತಾರೆ. ಅವರಲ್ಲಿ ವ್ಯಾಸಂಗದ ಚಟುವಟಿಕೆಗಳಲ್ಲಿ ಸಾಮಾನ್ಯ ವೇಗದಲ್ಲಿ ಪ್ರಗತಿ ಹೊಂದುವ ಸಾಮರ್ಥ್ಯ ಕಂಡುಬರುವುದಿಲ್ಲ. ಈ ಮಕ್ಕಳು ತಾವಿರುವ ತರಗತಿಯ ಮಟ್ಟಕ್ಕೆ ಅಥವಾ ಅದಕ್ಕಿಂತ ಒಂದು ಕೆಳಗಿನ ತರಗತಿಯ ಮಟ್ಟಕ್ಕೆ ಸಾಧನೆ ಮಾಡಲಾಗದವರು ಅದೇ ವಯಸ್ಸಿನ ಮಕ್ಕಳೊಡನೆ ಇವರನ್ನು ಹೋಲಿಸಿದಾಗ ಇವರಲ್ಲಿ ಸಾಕಷ್ಟು ಕೊರತೆ ಕಂಡುಬರುತ್ತದೆ. ಇವರು ಸಾಮಾನ್ಯವಾಗಿ ಸಾಧಾರಣ ಶಾಲಾ ಪಠ್ಯಕ್ರಮಕ್ಕೆ ಸ್ಪಂದಿಸಲಾರರು.

ಕಲಿಕೆಯಲ್ಲಿ ಹಿಂದುಳಿದ ಮಗು ಸಾಮಾನ್ಯವಾಗಿ ತನ್ನ ಇತರ ಸಮವಯಸ್ಕ ಸಹಪಾಠಿಗಳು ಸಾಧಿಸಿದ ಎಲ್ಲಾ ಸಾಧನೆಗಳಲ್ಲಿ ಹಿಂದುಳಿದಿರುತ್ತದೆ. ಇಂತಹ ಮಗು ಸ್ಪಷ್ಟವಾಗಿ ಯೋಚಿಸುವುದರಲ್ಲಿ ಅವಧಾನ ಕೇಂದ್ರೀಕರಿಸುವುದರಲ್ಲಿ ಇತರ ಸಾಧನೆಗಳಲ್ಲಿ ಆಸಕ್ತಿ ತೋರುವುದಿಲ್ಲ. ಇಂತಹ ಮಗು ಸಾಮಾನ್ಯವಾಗಿ 70 ರಿಂದ 80 ಬುದ್ಧಿಲಬ್ಧ ಹೊಂದಿರುತ್ತದೆ.

### ನಿಧಾನ ಕಲಿಕಾರ್ಥಿಗಳ ಅರ್ಥ ಮತ್ತು ವ್ಯಾಖ್ಯೆಗಳು

ಸಾಮಾನ್ಯ ಅರ್ಥದಲ್ಲಿ ಯಾವ ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ತಮ್ಮ ಸಮ ವಯಸ್ಸಿನ ಹಾಗೂ ಸಹಪಾಠಿಗಳು ಸಾಧಿಸಿದ ಎಲ್ಲಾ ಸಾಧನೆಗಳಲ್ಲಿ ಹಿಂದುಳಿದಿರುತ್ತಾರೋ ಅವರೇ ಹಿಂದುಳಿದ ಮಕ್ಕಳು.

ತರಗತಿಯಲ್ಲಿ ಅಳುಕು, ಅಂಜುಬುರುಕುತನ, ಅಧೈರ್ಯ, ಪರಾವಲಂಬನೆ, ಕಲಿಕೆಯಲ್ಲಿ ನಿರಾಸಕ್ತಿ, ನಿರುತ್ಸಾಹ ತೋರಿಸುವ ಮಕ್ಕಳಿಗೆ ನಿಧಾನವಾಗಿ ಕಲಿಯುವ ಮಕ್ಕಳೆಂದು ಕರೆಯುವರು.

ತಮ್ಮ ವಯಸ್ಸಿಗೆ ತಕ್ಕಂತೆ ಬುದ್ಧಿ ಬೆಳೆಯದೆ ಮತ್ತು ಶೈಕ್ಷಣಿಕ ಸಾಧನೆಯಲ್ಲಿ ಸಾಧಾರಣಕ್ಕಿಂತ ಕಡಿಮೆಯಿರುವ ಮಕ್ಕಳನ್ನು ನಿಧಾನ ಕಲಿಕಾರ್ಥಿಗಳು ಎನ್ನಬಹುದಾಗಿದೆ.

ನಿಧಾನ ಕಲಿಕಾರ್ಥಿಗಳ ಬಗ್ಗೆ ಹಲವಾರು ಮನೋವಿಜ್ಞಾನಿಗಳು ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳು ಕೆಳಕಂಡಂತಿವೆ.

**ಬರ್ಟನ್ ಹಾಲ್**ರವರ ಪ್ರಕಾರ "ಯಾರು ಶಾಲಾ ಕಲಿಕೆಯಲ್ಲಿ ಇತರರೊಡನೆ ಸಮ ಹೆಜ್ಜೆ ಹಾಕುವಲ್ಲಿ ಹಿಂದುಳಿಯುವರೋ ಅವರನ್ನು ಮಂದಗಾಮಿಗಳೆನ್ನುವರು."

**ಸಿರಿಲ್‌ಬರ್ಟ್**ರವರ ಪ್ರಕಾರ "ಶಾಲಾ ಜೀವನ ಗತಿಯಲ್ಲಿ ತಾನು ಕಲಿಯುತ್ತಿರುವ ತರಗತಿಗಿಂತ ಒಂದು ವರ್ಷ ಹಿಂದಿನ ತರಗತಿ ಪಾಠ ಪ್ರವಚನಗಳನ್ನೂ ಕಲಿಯಲಾಗದಿದ್ದರೆ ಅವರು ಹಿಂದುಳಿದ ಮಕ್ಕಳು ಅಥವಾ ನಿಧಾನ ಕಲಿಕಾರ್ಥಿಗಳು".

**ಬರ್ಟ್**ರವರು "85ಕ್ಕಿಂತ ಕಡಿಮೆ ಬುದ್ಧಿಲಬ್ಧ ಹೊಂದಿರುವ ಮಕ್ಕಳೇ ನಿಧಾನವಾಗಿ ಕಲಿಯುವ ಮಕ್ಕಳು" ಎಂದಿದ್ದಾರೆ.

### ನಿಧಾನ ಕಲಿಕಾರ್ಥಿಗಳ ಗುಣಲಕ್ಷಣಗಳು

ಇತ್ತೀಚಿನ ಸಂಶೋಧನಾ ಅಧ್ಯಯನಗಳ ಆಧಾರದ ಮೇಲೆ ಮಂದಗತಿಯಲ್ಲಿ ಕಲಿಯುವ ಮಕ್ಕಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸಲಾಗಿದೆ. ಆದರೆ ಅವರ ಬೆಳವಣಿಗೆಯ ವಿನ್ಯಾಸಗಳಲ್ಲಿ ಹಲವಾರು ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಅವರ ಗುಣಲಕ್ಷಣಗಳು ಈ ಕೆಳಕಂಡಂತೆ ಗುರುತಿಸಬಹುದಾಗಿದೆ.

I **ದೈಹಿಕ ಗುಣಲಕ್ಷಣಗಳು:** ನಿಧಾನವಾದ ಸಂವೇದನಾ ಗತಿವಿಕಾಸದಿಂದಾಗಿ ಈ ಮಕ್ಕಳ ದೈಹಿಕ ಚಟುವಟಿಕೆಗಳಲ್ಲಿನ ಪ್ರಗತಿ ನಿಧಾನವಾಗಿರುತ್ತದೆ. ಅಂದರೆ ನಡೆಯುವಿಕೆ, ಸ್ವಯಂ ಆಹಾರ ಸೇವನೆ, ಭಾಷಾ ಬೆಳವಣಿಗೆ ಇವುಗಳ ಬೆಳವಣಿಗೆ ಸಾಮಾನ್ಯ ಮಕ್ಕಳಿಗಿಂತ ತಡವಾಗಿರುತ್ತದೆ. ಕಡಿಮೆ ಪ್ರಮಾಣದ ದೃಷ್ಟಿದೋಷ, ಮಾತಿನದೋಷ, ಶ್ರವಣದೋಷವಿರುತ್ತದೆ. ಪ್ರತಿಕ್ರಿಯಿಸಲು ಹೆಚ್ಚಿನ

Digitised by Bharatavani, CIIL

ಸಮಯ ತೆಗೆದುಕೊಳ್ಳುತ್ತಾರೆ. ಸ್ನಾಯು ಸಮನ್ವಯದ ಕೊರತೆಯಿರುತ್ತದೆ. ಕನಿಷ್ಠ ಮಟ್ಟದ ಗತಿ ಕೌಶಲವಿರುತ್ತದೆ.

II **ಬೌದ್ಧಿಕ ಗುಣಲಕ್ಷಣಗಳು:** ಅಮೂರ್ತ ಚಿಂತನೆಯ ಕೊರತೆಯಿರುತ್ತದೆ, ತಾರ್ಕಿಕ ಸಾರ್ಥ್ಯದ ಕೊರತೆಯಿರುತ್ತದೆ, ಕಡಿಮೆ ಬುದ್ಧಿಶಕ್ತಿ ಅಂದರೆ ಬುದ್ಧಿಶಕ್ತಿ ಸೂಚ್ಯಾಂಕ 76 ರಿಂದ 89ರೊಳಗೆ ಇರುತ್ತದೆ. ಸಹಪಾಠಿಗಳಿಗಿಂತ ಕಡಿಮೆ ಅಥವಾ ಕೆಳಮಟ್ಟದ ಜ್ಞಾಪಕಶಕ್ತಿ, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆಯಿರುತ್ತದೆ, ಯೋಜನೆ ತಯಾರಿಕೆ ಮತ್ತು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಲ್ಲಿ ಕನಿಷ್ಠ ಮಟ್ಟದ ಸಾಮರ್ಥ್ಯ ಹೊಂದಿರುತ್ತಾರೆ, ಸಾಮಾನ್ಯ ಜ್ಞಾನ ಮತ್ತು ತೀರ್ಮಾನ ಕೈಗೊಳ್ಳುವ ಶಕ್ತಿಯ ಕೊರತೆಯಿರುತ್ತದೆ, ಬಹುಬೇಗ ಅವಧಾನ ಕಳೆದುಕೊಳ್ಳುತ್ತಾರೆ.

III **ಶೈಕ್ಷಣಿಕ ಗುಣಲಕ್ಷಣಗಳು:** ಕನಿಷ್ಠ ಮಟ್ಟದ ಭಾಷಾ ಸಾಮರ್ಥ್ಯ ಹೊಂದಿರುತ್ತಾರೆ. ಅಂದರೆ ಓದುವುದು, ಬರೆಯುವುದು ಮತ್ತು ಕಾಗುಣಿತದಲ್ಲಿ ತಪ್ಪುಗಳನ್ನು ಮಾಡುತ್ತಿರುತ್ತಾರೆ. ಕಲಿಕೆಯ ಬಗ್ಗೆ ಋಣಾತ್ಮಕ ಧೋರಣೆಯನ್ನುಳ್ಳವರಾಗಿರುತ್ತಾರೆ. ಕಲ್ಪನಾ ಸಾಮರ್ಥ್ಯದ ಕೊರತೆಯಿರುತ್ತದೆ. ವ್ಯಾಸಂಗದ ರೀತಿ ಅಸಮರ್ಪಕವಾಗಿರುತ್ತದೆ ಮತ್ತು ವಿಚಾರಣಾ ಕೌಶಲ್ಯ ಸಾಕಷ್ಟು ಇರುವುದಿಲ್ಲ. ಶಾಲಾ ವಿಷಯುಗಳ ಕಲಿಕೆಯಲ್ಲಿ ಹಿಂದುಳಿದವರಾಗಿರುತ್ತಾರೆ.

IV **ಸಾಮಾಜಿಕ ಗುಣಲಕ್ಷಣಗಳು:** ನಿಧಾನಗತಿಯಲ್ಲಿ ಕಲಿಯುವ ಮಕ್ಕಳನ್ನು ಸಾಮಾನ್ಯ ಮಕ್ಕಳೊಂದಿಗೆ ಹೋಲಿಸಿದಾಗ ಇವರು ಹೆಚ್ಚು ಹಗಲುಗನಸುಗಳನ್ನು ಕಾಣುತ್ತಾರೆ. ಇವರು ಸಾಮಾನ್ಯವಾಗಿ/ ಕೆಲವೊಮ್ಮೆ ವ್ಯಾಸಂಗೇತರ ಕ್ಷೇತ್ರಗಳಲ್ಲಿ ಉತ್ತಮ ಹೊಂದಾಣಿಕೆ ಮಾಡಿಕೊಂಡಿರುತ್ತಾರೆ. ಇವರಲ್ಲಿ ಅನಪೇಕ್ಷಿತ ಸಾಮಾಜಿಕ ಗುಣಗಳು ಕಂಡುಬರುತ್ತದೆ. ಸಮವಯಸ್ಕರು ಇವರನ್ನು ಅಲ್ಪರೆಂದು ಭಾವಿಸುತ್ತಾರೆ ಮತ್ತು ತಿರಸ್ಕರಿಸುತ್ತಾರೆ.

ಇವೇ ಮುಂತಾದ ಲಕ್ಷಣಗಳ ಆಧಾರದ ಮೇಲೆ ಸುಲಭವಾಗಿ ತರಗತಿಯಲ್ಲಿ ನಿಧಾನ ಕಲಿಕಾರ್ಥಿಗಳನ್ನು ಗುರುತಿಸಬಹುದಾಗಿದೆ.

**ನಿಧಾನ ಕಲಿಕೆಗೆ ಕಾರಣಗಳು:** ಶೈಕ್ಷಣಿಕವಾಗಿ ಮಕ್ಕಳು ಹಿಂದುಳಿಯುವಿಕೆಗೆ ಹಲವಾರು ಕಾರಣಗಳಿವೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳೂ ನಡೆದಿವೆ. ಬರ್ಟ್ ಮತ್ತು ಶೋನ್ಸ್‌ರವರ ಸಂಶೋಧನೆಯಂತೆ ಹೆಚ್ಚಿನ ಹಿಂದುಳಿಯುವಿಕೆಗೆ ದೈಹಿಕ ಕಾರಣವೆಂದು ದೃಢಪಡಿಸಿದ್ದಾರೆ. ಮಗು ನಿಧಾನವಾಗಿ ಕಲಿಯಲು ದೈಹಿಕ ಹಾಗೂ ಪರಿಸರದ ಅಂಶಗಳು ಕಾರಣವಾಗಿವೆ. ಕೆಲವು ಕಾರಣಾಂಶಗಳು ವ್ಯಕ್ತಿಯುಲ್ಲಿರಬಹುದು ಅಥವಾ ವ್ಯಕ್ತಿಯ ಹೊರಗಿರುವ ಪರಿಸರದಲ್ಲಿರಬಹುದು. ಅನುವಂಶೀಯ ಮತ್ತು ಪರಿಸರದ ಅಂಶಗಳು ಒಟ್ಟಾಗಿ ಮಂದಗತಿಯ ಕಲಿಕೆಗೆ ಕಾರಣವಾಗಬಹುದಾಗಿದೆ. ಆದರೂ ಸಾಮಾನ್ಯವಾಗಿ ಕೆಲವು ಕಾರಣಗಳನ್ನು ಅನುಭವ ಮತ್ತು ಸಂಶೋಧನೆಯ ಆಧಾರದ ಮೇಲೆ ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

1) **ಸಹಜತೆಗಿಂತ ಕೆಳಮಟ್ಟದ ದೈಹಿಕ ವಿಕಾಸ:** ಕಲಿಕೆಯಲ್ಲಿ ಹಿಂದುಳಿದ ಅಥವಾ ನಿಧಾನವಾಗಿ ಕಲಿಯುವ ಮಕ್ಕಳು ಸಾಮಾನ್ಯವಾಗಿ ದೈಹಿಕ ಅಥವಾ ಶಾರೀರಕ ಬೆಳವಣಿಗೆಯಲ್ಲಿ ಸಾಮಾನ್ಯ ಮಕ್ಕಳಿಗಿಂತ ಹಿಂದುಳಿದಿರುತ್ತಾರೆ. ಅನುವಂಶೀಯ ಅಂಶಗಳು ಶಾರೀರಿಕ ತೊಂದರೆಗಳು, ಮೆದುಳಿನ ನ್ಯೂನತೆ ಇವುಗಳು ದೈಹಿಕ ನ್ಯೂನತೆಗಳಿಗೆ ಕಾರಣವಾಗುತ್ತವೆ. ಈ ಅಂಶಗಳು ಮಕ್ಕಳು ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗುತ್ತವೆ.

2) **ದೈಹಿಕ ನ್ಯೂನತೆಗಳು ಮತ್ತು ಕಾಯಿಲೆಗಳು:** ದೃಷ್ಟಿದೋಷ, ಶ್ರವಣದೋಷ ಮತ್ತು ವಾಗ್ದೋಷಗಳು ಪ್ರಮುಖ ದೈಹಿಕ ನ್ಯೂನತೆಗಳಾಗಿವೆ. ಜ್ವರ, ತಲೆನೋವು, ಜೀರ್ಣಕ್ರಿಯೆಯ ತೊಂದರೆಗಳು, ಮಾನಸಿಕ ಆಯಾಸ ಮುಂತಾದವುಗಳೂ ಮಂದಗತಿಯ ಕಲಿಕೆಗೆ ಕಾರಣವಾಗುತ್ತವೆ. ನಿರ್ದಿಷ್ಟ ವಿಷಯಗಳು ಅಥವಾ ಶಾಲಾ ವಿಷಯಗಳ ಕಲಿಕೆಯಲ್ಲಿ ಹಿಂದೆ ಬೀಳಲು ಅಪೌಷ್ಠಿಕತೆ, ಟಿ.ಬಿ. ಕುಷ್ಠರೋಗ, ಜ್ಞಾನೇಂದ್ರಿಯಗಳ ನ್ಯೂನತೆ ಕಾರಣವಾಗಿರಬಹುದು.

3) **ಮೆದುಳಿನ ಕಾರ್ಯಕ್ಷಮತೆಯ ನ್ಯೂನತೆ:** ನರವ್ಯೂಹದ ನ್ಯೂನತೆ ಮತ್ತು ಕಾರ್ಯಕ್ಷಮತೆಯಲ್ಲಿನ ತೊಂದರೆ ಮಂದಗತಿಯ ಕಲಿಕೆಗೆ ಕಾರಣವಾಗುವುದು. ನರವ್ಯೂಹದ ನ್ಯೂನತೆ, ಸಂವೇದನಾತ್ಮಕ ಮತ್ತು ದೈಹಿಕ ತೊಂದರೆಗಳನ್ನುಂಟು ಮಾಡುತ್ತದೆ. ಕೆಲವೊಮ್ಮೆ ಈ ನ್ಯೂನತೆ ದೃಷ್ಟಿದೋಷ ಮತ್ತು ಶ್ರವಣದೋಷಕ್ಕೆ ಕಾರಣವಾಗುತ್ತದೆ. ಈ ನ್ಯೂನತೆ ಮಾತಿನ, ಭಾಷೆಯ, ಓದಿನ, ಬರವಣಿಗೆಯಂತಹ ಹಲವಾರು ಕಲಿಕಾ ದೌರ್ಬಲ್ಯಗಳಿಗೆ ಕಾರಣವಾಗುತ್ತದೆ.

4) **ಕಡಿಮೆ ಬುದ್ಧಿಶಕ್ತಿ:** ಇವರು ಅನುವಂಶೀಯವಾಗಿ ಪಡೆದ ಸಾಮಾನ್ಯ ಸಾಮರ್ಥ್ಯ ಮಂದಗತಿಯ ಕಲಿಕೆಗೆ ಕಾರಣವಾಗಿದೆ. ಇವರ ಬುದ್ಧಿಶಕ್ತಿ ಸೂಚ್ಯಾಂಕ ಸಾಮಾನ್ಯವಾಗಿ 76 ರಿಂದ 89ರೊಳಗೆ ಇರುತ್ತದೆ.

5) **ಮನೆಯ ಪರಿಸ್ಥಿತಿ:** ಮಗುವಿನ ಶೈಕ್ಷಣಿಕ ಸಾಧನೆ ಅವನು ಹೊಂದಿರುವ ಪರಿಸರ ಮತ್ತು ಮನೆಯ ವಾತಾವರಣವನ್ನು ಅವಲಂಬಿಸಿರುತ್ತದೆ. ಮಗುವಿನ ಕಲಿಕೆಯ ಮೇಲೆ ಪ್ರಭಾವ ಬೀರುವ ಮತ್ತು ನಿಧಾನಗತಿಯ ಕಲಿಕೆಗೆ ಕಾರಣವಾಗುವ ಪ್ರಮುಖ ಅಂಶಗಳೆಂದರೆ:

- ಕಿಕ್ಕಿರಿದ ಕುಟುಂಬವಿದ್ದು ಜೀವನದ ಗುಣಮಟ್ಟ ಕಡಿಮೆಯಾಗಲು ಕಾರಣವಾಗುತ್ತದೆ. ಇಂತಹ ಮನೆಯಲ್ಲಿ ದೊರೆಯುವ ಆಹಾರ ಮತ್ತು ಪೌಷ್ಠಿಕಾಂಶಗಳ ಕೊರತೆಯಿರುತ್ತದೆ. ಪೋಷಕರ ಉತ್ತಮ ಬಾಂಧವ್ಯ ಬೆಳೆಯುವುದಿಲ್ಲ. ಅವರಿಂದ ಕಲಿಕೆಗೆ ಸರಿಯಾದ ಪ್ರೋತ್ಸಾಹ ಮತ್ತು ಪ್ರೇರಣೆ ದೊರೆಯುವುದಿಲ್ಲ. ಪೋಷಕರ ಬಡತನ, ಒಡೆದ ಕುಟುಂಬಗಳು, ಉನ್ನತ ಆಕಾಂಕ್ಷೆಯ ಪೋಷಕರು, ಆಗಾಗ್ಗೆ ವಾಸಿಸುವ ಸ್ಥಳದ ಬದಲಾವಣೆ, ಮನೆಯಲ್ಲಿನ ಭಾವನಾತ್ಮಕ ಹಾಗೂ ನೈತಿಕ ಪರಿಸ್ಥಿತಿ ಇವುಗಳು ನಿಧಾನ ಕಲಿಕೆಗೆ ಕಾರಣಗಳಾಗಬಹುದು.

6) **ಕೆಳ ಮಟ್ಟದ ಶಾಲಾ ಪರಿಸ್ಥಿತಿ:** ಶಾಲೆಗೆ ನಿಯಮಿತವಾಗಿ ಹಾಜರಾಗದಿರುವುದು, ಶಾಲೆಯಿಂದ ಶಾಲೆಗೆ ವರ್ಗಾವಣೆ ಯಾಗುತ್ತಿರುವುದು, ಅಸಮರ್ಪಕ ಬೋಧನಾ ವಿಧಾನಗಳು, ವಿದ್ಯಾರ್ಥಿಗಳು ಶಾಲಾ ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗುತ್ತದೆ.

**ಶಾಲೆಯಲ್ಲಿ ಅಸಮರ್ಪಕ ಪರಿಸ್ಥಿತಿ ಕಂಡುಬರುವ ಅಂಶಗಳೆಂದರೆ–** ವಿದ್ಯಾರ್ಥಿ ಶಿಕ್ಷಕರ ಮಧ್ಯೆ ಉತ್ತಮ ಬಾಂಧವ್ಯವಿಲ್ಲದೇ ಇರುವುದು. ಶಾಲೆಯಲ್ಲುಂಟಾಗುವ ನಿರಂತರ ಸೋಲುಗಳು ಅಥವಾ ಫೇಲಾಗುವಿಕೆ. ಅಸಮರ್ಪಕ ಪಠ್ಯಕ್ರಮ. ಮನೋರಂಜನೆ ಮತ್ತು ಆಟಗಳ ಕೊರತೆ. ಅಸಮರ್ಪಕ ತರಗತಿಯ ವಾತಾವರಣ.

Digitised by Bharatavani, CIIL

ಶಾಲೆಯಲ್ಲಿನ ಅನಾರೋಗ್ಯಕರ ಪರಿಸ್ಥಿತಿ. ಕೆಟ್ಟ ಪರೀಕ್ಷಾ ಪದ್ಧತಿ. ಉದ್ಯೋಗದ ಅಭದ್ರತೆ

7) **ನಿರಂತರ ಗೈರುಹಾಜರಾಗುವಿಕೆ:** ಕೆಲವು ಮಕ್ಕಳು ತರಗತಿಗಳಿಗೆ ಆಗಾಗ್ಗೆ ಗೈರುಹಾಜರಾಗುತ್ತಾರೆ ಮತ್ತು ತರಗತಿಯಲ್ಲಿ ಕಲಿಸಿದ ವಿಷಯಗಳ ಬಗ್ಗೆ ಗಮನಹರಿಸುವುದಿಲ್ಲ. ಇದರಿಂದ ಅವರು ಆ ವಿಷಯಗಳ ಕಲಿಕೆಯಲ್ಲಿ ಹಿಂದೆ ಬೀಳುತ್ತಾರೆ.

8) **ನೆರೆಹೊರೆಯವರು:** ಮಗುವಿನ ವರ್ತನೆ ಅವನ ಸ್ನೇಹಿತರ ವರ್ತನೆಯಿಂದ ಪ್ರಭಾವಿತವಾಗುತ್ತದೆ. ಒಂದು ವೇಳೆ ಮಗು ಬೀದಿಕೂಟಗಳಲ್ಲಿ ಸೇರಿಕೊಂಡರೆ ಅವನು ಅನೈತಿಕ ಹಾಗೂ ಸಮಾಜ ವಿದ್ರೋಹಿ ಚಟುವಟಿಕೆಗಳಲ್ಲಿ ತೊಡಗಬಹುದು. ಇದು ಅವನು ಶಾಲಾ ಕಲಿಕೆಯ ಬಗ್ಗೆ ನಿರಾಸಕ್ತಿ ತಾಳಲು ಮತ್ತು ಕಲಿಕೆಯಲ್ಲಿ ಹಿಂದೆ ಬೀಳಲು ಕಾರಣವಾಗುತ್ತದೆ.

9) **ಸಂವೇಗಾತ್ಮಕ ತೊಂದರೆಗಳು:** ವ್ಯಕ್ತಿತ್ವದ ಅಥವಾ ವರ್ತನಾ ಸಮಸ್ಯೆಗಳನ್ನು ಹೊಂದಿರುವ ಮಕ್ಕಳು ಸಂವೇಗಾತ್ಮಕ ತೊಂದರೆಗಳನ್ನು ಎದುರಿಸುತ್ತಾರೆ. ಇಂತಹ ಮಕ್ಕಳು ಆಕ್ರಮಣ ಪ್ರವೃತ್ತಿಯವರು, ಹಠಮಾರಿಗಳು, ತಳಮಳ ಪ್ರವೃತ್ತಿಯವರು ಅಥವಾ ನಾಚಿಕೆ ಸ್ವಭಾವದವರು ಅಥವಾ ಖಿನ್ನತೆ ಹೊಂದಿರುವವರು ಆಗಿರಬಹುದು. ಈ ಗುಣಗಳು ಅವರು ಕಲಿಕೆಯಲ್ಲಿ ಹಿಂದೆ ಬೀಳಲು ಕಾರಣವಾಗುತ್ತವೆ.

**ನಿಧಾನ ಕಲಿಕಾರ್ಥಿಗಳಿಗೆ ಶೈಕ್ಷಣಿಕ ಕ್ರಮಗಳು:** ನಿಧಾನವಾಗಿ ಕಲಿಯುವ ಮಕ್ಕಳು ದಡ್ಡರಲ್ಲ. ಆದರೆ ಅವರಿಗೆ ಸೂಕ್ತ ಅವಕಾಶ, ಪ್ರೇರಣೆ, ಮಾರ್ಗದರ್ಶನ ಸಿಕ್ಕಿದ್ದಾದರೆ ಅವರೂ ಕಲಿಕೆ ಸಾಧಿಸಬಲ್ಲರು. ಈ ಮಕ್ಕಳ ಶಿಕ್ಷಣ ಸುಧಾರಣೆ ಕುರಿತು ಶಿಕ್ಷಕರು, ಶಾಲಾ ಮುಖ್ಯಸ್ಥರು ಪ್ರಯತ್ನಿಸಬೇಕು. ನಿಧಾನವಾಗಿ ಕಲಿಯುವ ಮಕ್ಕಳಿಗೆ ಪ್ರತ್ಯೇಕ ಪಠ್ಯಕ್ರಮವಾಗಲೀ, ವರ್ಗೀಕರಿಸುವುದಾಗಲೀ ಉಚಿತವೆನಿಸಲಾರದು. ಕಾರಣ, ನಿಧಾನ ಕಲಿಯುವ ಮಕ್ಕಳ ಕುರಿತು ಎಲ್ಲರ ಪ್ರಯತ್ನ ಅಗತ್ಯವಾಗಿದೆ. ಇಂತಹ ಮಕ್ಕಳಿಗೆ ಕೆಲವು ಶೈಕ್ಷಣಿಕ ಕ್ರಮಗಳನ್ನು ಈ ಕೆಳಕಂಡಂತೆ ರೂಪಿಸಿ ಬಳಸಿಕೊಳ್ಳಬಹುದು.

ದೃಕ್ ಶ್ರವಣೋಪಕರಣಗಳ ಮೂಲಕ ಕಲಿಸಬೇಕು, ಪಠ್ಯವಸ್ತು ಸುಲಭ ಹಾಗೂ ಚಿಕ್ಕದಾಗಿರಬೇಕು, ಕಲಿಸುವ ವಿಷಯ ಮಕ್ಕಳ ಆಸಕ್ತಿಗನುಗುಣವಾಗಿರಬೇಕು, ಶಿಕ್ಷಕರು ಪ್ರೀತಿ ಮಮತೆಯಿಂದ ಮಕ್ಕಳನ್ನು ಕಾಣಬೇಕು, ಶಿಕ್ಷಕನ ಬೋಧನೆ ಸರಳ ಹಾಗೂ ಸುಲಭವಾಗಿರಬೇಕು, ವಿಶೇಷ ತರಗತಿಗಳನ್ನು ನಡೆಸಬೇಕು. ಶಿಕ್ಷಕರು ಪುನರಾವರ್ತನೆಯ ಮೂಲಕ ಮತ್ತು ವೈವಿಧ್ಯಮಯ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡಬೇಕು. ತರಗತಿಯಲ್ಲಿ ಪಠ್ಯ ವಿಷಯದ ಜೊತೆಗೆ ಆಟಗಳು, ಸಂಗೀತ, ನೃತ್ಯ, ಕಲೆ, ಇತ್ಯಾದಿ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಬೇಕು. ಚಟುವಟಿಕೆಯ ಮೂಲಕ ಕಲಿಸಲು ಯತ್ನಿಸಬೇಕು. ಕಲಿಸುವ ವಿಷಯವನ್ನು ಘಟಕಗಳನ್ನಾಗಿ ಮಾಡಿ ಕಲಿಸಬೇಕು.

ಮಕ್ಕಳನ್ನು ಆಗಾಗ್ಗೆ ವೈದ್ಯಕೀಯ ಪರೀಕ್ಷೆಗೆ ಗುರಿ ಮಾಡಿ ಪರಿಹಾರ ನೀಡಬೇಕು.

ವರ್ಷಕ್ಕೆ ಎರಡು ಬಾರಿಯಾದರೂ ಪೋಷಕರ ಸಭೆಗಳನ್ನು ಏರ್ಪಡಿಸಬೇಕು.

ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆ ಮಾಡಬೇಕು.

ಮಕ್ಕಳ ಹಿಂದುಳಿಯುವಿಕೆ ಗುರ್ತಿಸಿ ಪರಿಹಾರ ಬೋಧನೆ ನಡೆಯಬೇಕು.

ಶಾಲೆಗೆ ಮಕ್ಕಳ ಹಾಜರಾತಿಯನ್ನು ಕಡ್ಡಾಯಗೊಳಿಸಬೇಕು.

ಮಾಸಿಕ ಪರೀಕ್ಷೆ ನಡೆಸಬೇಕು ಮತ್ತು ಮೌಲ್ಯಮಾಪನ ಕಾರ್ಯ ನಿರಂತರವಾಗಿ ನಡೆಯಬೇಕು. ಘಟಕ ಪರೀಕ್ಷೆಯನ್ನು ಕೈಗೊಳ್ಳಬೇಕು.

ಅನುಭವಿಕರಿಂದ ಶಾಲಾ ವಿಷಯಗಳ ಉಪನ್ಯಾಸ ಕಾರ್ಯಾಗಾರಗಳನ್ನು ಏರ್ಪಡಿಸಬೇಕು.

ಸರಳ ರೀತಿಯ ಹೆಚ್ಚು ಬರವಣಿಗೆಯ ಮನೆಗೆಲಸ ಕೊಡಬೇಕು.

ಶಿಕ್ಷಕರು ವಿಶೇಷ ತಾಳ್ಮೆ ವಹಿಸಿ ಮಕ್ಕಳ ಬಗ್ಗೆ ವೈಯಕ್ತಿಕ ಗಮನ ಹರಿಸಬೇಕು.

ನಿಧಾನವಾಗಿ ಕಲಿಯುವ ಮಕ್ಕಳನ್ನು ಪ್ರತ್ಯೇಕಿಸದೇ ಧೈರ್ಯ ಆತ್ಮವಿಶ್ವಾಸ ಮೂಡಿಸಬೇಕು.

ಮಗುವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಪ್ರಗತಿ ದಾಖಲೆ ಹಾಗೂ ಸಂಚಿತ ದಾಖಲೆಯಿಡಬೇಕು.

ಉತ್ತಮ ಕೌಟುಂಬಿಕ ವಾತಾವರಣ ನಿರ್ಮಾಣ ಮಾಡಬೇಕು.

ಪೋಷಕರು ಮಕ್ಕಳ ಅಗತ್ಯತೆಗಳನ್ನು ಪೂರೈಸಬೇಕು ಹಾಗೂ ಶೀಘ್ರ ಕಲಿಕೆಗೆ ಒತ್ತಡ ಹೇರಬಾರದು. ಶಾಲೆಯು ಹಿಂದುಳಿದ ಮಕ್ಕಳ ತಂದೆ ತಾಯಿಯರ ಜೊತೆ ಸಂಪರ್ಕ ಹೊಂದಿ ಅವರ ಸಮಸ್ಯೆಗೆ ಸೂಕ್ತ ಮಾರ್ಗದರ್ಶನ ನೀಡಬೇಕು.

ಹಿಂದುಳಿಯುವಿಕೆಗೆ ಕಾರಣ ಗುರ್ತಿಸಿ ವೈಜ್ಞಾನಿಕ ಪರಿಹಾರ ನೀಡಬೇಕು.

ಮಕ್ಕಳು ಯಾವ ರೀತಿಯ ಸಮಸ್ಯೆ ಹೊಂದಿದ್ದಾರೆ ಎಂಬುದನ್ನು ದೋಷ ನೈದಾನಿಕ ಪರೀಕ್ಷೆಗಳ (Diagnostic Tests) ಮೂಲಕ ಗುರುತಿಸಿ ಚಿಕಿತ್ಸಕ ಬೋಧನೆ ಕೈಗೊಳ್ಳಬೇಕು.

ವಿದ್ಯಾರ್ಥಿಗಳ ಮಕ್ಕಳನ್ನು ಸೇರಿಸಿ ವಿಶೇಷ ಗುಂಪುಗಳ ರಚನೆ ಮಾಡಬೇಕು. ಶಿಕ್ಷಕರು ಈ ವಿಶೇಷ ಗುಂಪುಗಳ ಕಡೆ ವೈಯಕ್ತಿಕ ಗಮನಹರಿಸಿ ಉತ್ತಮ ಬೋಧನೆ ಕೈಗೊಳ್ಳಬೇಕು.

ತರಗತಿಯ ಗಾತ್ರವನ್ನು 20 ಮಕ್ಕಳಿಗೆ ಸೀಮಿತಗೊಳಿಸಬೇಕು.

ಗೃಹಕಾರ್ಯ ಮತ್ತು ನಿಯೋಜಿತ ಕಾರ್ಯಗಳಿಗೆ ಅವಕಾಶ ಮಾಡಿಕೊಡಬೇಕು.

ವಿದ್ಯಾರ್ಥಿಗಳಿಂದಾಗುವ ಗೈರು ಹಾಜರಿಯನ್ನು ತಪ್ಪಿಸಬೇಕು. ಇಂತಹ ಗೈರು ಹಾಜರಿಯ ಬಗ್ಗೆ ಶಾಲೆ ಮತ್ತು ಶಿಕ್ಷಕರು ಗಮನಹರಿಸಿ ನಿಯಮಿತವಾಗಿ ಹಾಜರಾಗುವಂತೆ ಮಾಡಬೇಕು.

–ಜಿ.ಶೀ.

## ನಿಯೋಜಿತ ಕಾರ್ಯಗಳು

ನಿಯೋಜಿತ ಕಾರ್ಯಗಳು ಒಂದು ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿವೆ. ಕೆಲವೊಮ್ಮೆ ಒಂದು ತರಗತಿಯಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆ ನಡೆಯುತ್ತಿರುವಾಗ, ಅದರ ಕೊನೆಯ ಭಾಗವಾಗಿ ನಿಯೋಜಿತ ಕಾರ್ಯಗಳು ಮೂಡಿಬರುತ್ತವೆ. ಆದರೆ ಪ್ರತಿ ಸಂದರ್ಭದಲ್ಲೂ ಇದು ಹೀಗೇ ಆಗಬೇಕೆಂಬುದೇನೂ ಇಲ್ಲ. ಏಕೆಂದರೆ ನಿಯೋಜಿತ ಕಾರ್ಯಗಳು ಒಂದು ಶೈಕ್ಷಣಿಕ ವರ್ಷದ ಯಾವ ಹಂತದಲ್ಲಿ ಬೇಕಾದರೂ

Digitised by Bharatavani, CIIL

ಪ್ರಕಟಗೊಳ್ಳಬಲ್ಲವು. ನಿಯೋಜಿತ ಕಾರ್ಯಗಳಲ್ಲಿ ಹಲವಾರು ವೈವಿಧ್ಯಗಳನ್ನು ಕಾಣಬಹುದಾಗಿದೆ. ಉದಾಹರಣೆಗೆ, ಶಿಕ್ಷಕರು ತರಗತಿಯ ವಿದ್ಯಾರ್ಥಿಗಳಿಗೆ ಕೊಡುವ ವೈಯಕ್ತಿಕ ನಿಯೋಜಿತ ಕಾರ್ಯ ಅಥವಾ ತಂಡ ನಿಯೋಜಿತ ಕಾರ್ಯ, ಪಠ್ಯಪುಸ್ತಕವನ್ನು ಆಧರಿಸಿದ ನಿಯೋಜಿತ ಕಾರ್ಯ, ಪಠ್ಯೇತರ ನಿಯೋಜಿತ ಕಾರ್ಯ, ಘಟಕ ನಿಯೋಜಿತ ಕಾರ್ಯ, ಲಿಖಿತ-ನಿಯೋಜಿತ ಕಾರ್ಯ, ಮೌಲಿಕ – ನಿಯೋಜಿತ ಕಾರ್ಯ, "ನೀನೇ ಮಾಡಿ ನೋಡು" ಎಂಬ ರೀತಿಯ ನಿಯೋಜಿತ ಕಾರ್ಯ, ಪ್ರಯೋಗಾಲಯದ ನಿಯೋಜಿತ ಕಾರ್ಯ, ಓದುವ ನಿಯೋಜಿತ ಕಾರ್ಯ, ಇತ್ಯಾದಿ. ಇಷ್ಟೇ ಅಲ್ಲದೆ ಗೃಹಕಾರ್ಯಗಳಾಗಿಯೂ ಮತ್ತು ಶಾಲಾಕಾರ್ಯಗಳಾಗಿಯೂ ನಿಯೋಜಿತ ಕಾರ್ಯ ಇತ್ಯಾದಿ. ಇಷ್ಟೇ ಅಲ್ಲದೆ ಗೃಹಕಾರ್ಯಗಳಾಗಿಯೂ ಮತ್ತು ಶಾಲಾಕಾರ್ಯಗಳಾಗಿಯೂ ನಿಯೋಜಿತ ಕಾರ್ಯಗಳು ಕಂಡುಬರುತ್ತವೆ.

ಒಂದು ನಿಗದಿತ ಪಠ್ಯಾಂಶವನ್ನು ಅದರ ಅಂತರ್ ಸಂಬಂಧವನ್ನು ಹೊಂದಿರುವ ಉಪವಿಭಾಗಗಳಾಗಿ ವಿಭಜಿಸಿ, ಒಂದು ಗೊತ್ತಾದ ಅವಧಿಯಲ್ಲಿ ಅದಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸಿ, ಮುಗಿಸುವುದಕ್ಕೆ ನಿಯೋಜಿತ ಕಾರ್ಯವೆನ್ನುವರು.

**ನಿಯೋಜಿತ ಕಾರ್ಯಗಳ ಉದ್ದೇಶಗಳು :** ನಿಯೋಜಿತ ಕಾರ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡುವುದರ ಉದ್ದೇಶಗಳು ಈ ಕೆಳಕಂಡಂತಿವೆ:

ವಿದ್ಯಾರ್ಥಿಗಳಲ್ಲಿ ಅನ್ವೇಷಣಾ ಕೌಶಲವನ್ನು ಬೆಳೆಸುವುದಕ್ಕಾಗಿ, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಧೋರಣೆ ಬೆಳೆಸುವುದು, ಅವರಿಗೆ ವೈಜ್ಞಾನಿಕ ವಿಧಾನದ ತರಬೇತಿ ನೀಡುವುದು, ವಿಜ್ಞಾನದ ವಿಷಯಗಳಲ್ಲಿ ಹೆಚ್ಚು ಆಸಕ್ತಿ ಬೆಳೆಸಲು, ಅವರಲ್ಲಿ ವೈಜ್ಞಾನಿಕ ಪ್ರಕ್ರಿಯಾ ಕೌಶಲಗಳಾದ, ವೀಕ್ಷಣೆ, ಗುರುತಿಸುವಿಕೆ, ವರ್ಗೀಕರಣ, ಆಧಾರ ಕಲ್ಪನೆಗಳನ್ನು ರಚಿಸುವಿಕೆ, ಪ್ರಯೋಗಗಳನ್ನು ಕೈಗೊಳ್ಳುವುದು, ಸಮಸ್ಯಾ ಪರಿಹಾರವನ್ನು ಕೈಗೊಳ್ಳುವಿಕೆ, ಇತ್ಯಾದಿ – ಇವುಗಳನ್ನು ಬೆಳೆಸುವುದು, ತನ್ನ ಸ್ವಂತ ಕೆಲಸಗಳನ್ನು ಆತ್ಮವಿಶ್ವಾಸದಿಂದ ಸ್ವತಂತ್ರವಾಗಿ ಮಾಡುವುದನ್ನು ಕಲಿಸುವುದು ಇತ್ಯಾದಿ.

**ನಿಯೋಜಿತ ಕಾರ್ಯದ ಆಧಾರ ತತ್ವಗಳು**

1. ನಿಯೋಜಿತ ಕಾರ್ಯವು ಪಠ್ಯಕ್ರಮದ ಆಧಾರವನ್ನು ಹೊಂದಿರಬೇಕು ಮತ್ತು ಅದಕ್ಕೆ ಸಂಬಂಧಪಟ್ಟಿರಬೇಕು.
2. ನಿಯೋಜಿತ ಕಾರ್ಯಗಳು ಯಾವಾಗಲೂ ಸ್ಪಷ್ಟವಾದ ಉದ್ದೇಶಗಳನ್ನು ಹೊಂದಿದ್ದು ಕ್ಷಿಪ್ರವಾಗಿ ನಡೆಸುವಂತಿರಬೇಕು.
3. ವಿದ್ಯಾರ್ಥಿಗಳ ಪಕ್ವತೆಗೆ ತಕ್ಕಂತೆ ನಿಯೋಜಿತ ಕಾರ್ಯಗಳನ್ನು ನೀಡಬೇಕು. ಅಲ್ಲದೇ ಈ ನಿಯೋಜಿತ ಕಾರ್ಯದಲ್ಲಿ ತಮ್ಮ ಪಾತ್ರವೇನು, ತಾವು ಏನನ್ನು ಮಾಡಬೇಕು, ಏನನ್ನು ಅವಲೋಕಿಸಬೇಕು, ಯಾವ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಬೇಕು-ಎಂಬ ವಿಚಾರವು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಗೊತ್ತಿರಬೇಕಾದ್ದು ಅತಿ ಮುಖ್ಯ.
4. ನಿಯೋಜಿತ ಕಾರ್ಯಗಳು ಸಹಜವಾದ ನಮ್ಯತೆಯನ್ನು ಹೊಂದಿರಬೇಕು. ಇದರಿಂದಾಗಿ ಸಂದರ್ಭಕ್ಕೆ ತಕ್ಕಂತೆ ಸೂಕ್ತ ಬದಲಾವಣೆಯೊಂದಿಗೆ ನಿಯೋಜಿತ ಕಾರ್ಯಗಳನ್ನು ನಡೆಸಲು ಸಾಧ್ಯವಾಗುತ್ತದೆ.
5. ವಿದ್ಯಾರ್ಥಿಗಳ ವಯಸ್ಸು, ಆಸಕ್ತಿ, ಬುದ್ಧಿಮಟ್ಟ, ಧೋರಣೆ, ಅಭಿಕ್ಷಮತೆ, ಸಾಮರ್ಥ್ಯ ಮತ್ತು ಅವರ ಒಲವು-ಇವುಗಳನ್ನು ಆಧರಿಸಿ ನಿಯೋಜಿತ ಕಾರ್ಯಗಳನ್ನು ನೀಡಬೇಕು.
6. ವಿದ್ಯಾರ್ಥಿಗಳಲ್ಲಿ ಚಿಂತನಾ ಶೀಲತೆಯನ್ನು ಮೂಡಿಸುತ್ತಾ ಅವರು ಸ್ವತಂತ್ರ್ಯವಾಗಿ ಅನ್ವೇಷಣೆ ಮಾಡಿ, ಸಕ್ರಿಯವಾಗಿ ಭಾಗವಹಿಸುವಂತಹ ನಿಯೋಜಿತ ಕಾರ್ಯಗಳನ್ನು ನೀಡಬೇಕು.
7. ವಿವಿಧ ಗುಂಪುಗಳಿಗೆ ವಿವಿಧ ರೀತಿಯ ನಿಯೋಜಿತ ಕಾರ್ಯಗಳನ್ನು ನೀಡುತ್ತಾ, ವೈವಿಧ್ಯತೆಯನ್ನು ಪ್ರೋತ್ಸಾಹಿಸಬೇಕು. ಆದರೆ ವಿದ್ಯಾರ್ಥಿಗಳು ತಮಗೆ ಇಷ್ಟವಾದ ನಿಯೋಜಿತ ಕಾರ್ಯವನ್ನು ನಿರ್ವಹಿಸುವಂತೆ ಮಾಡಲು ಅವರಿಗೆ ಆಯ್ಕೆಯನ್ನು ಬಿಡುವುದು ಒಂದು ಉತ್ತಮ ವಿಧಾನ. ಇದರಿಂದಾಗಿ ವಿದ್ಯಾರ್ಥಿಯು ನಿಯೋಜಿತಕಾರ್ಯದ ಮೊದಲ ಹಂತದಿಂದಲೇ ಆತ್ಮವಿಶ್ವಾಸದಿಂದ ಮುಂದುವರೆಯುವನು.
8. ಒಂದು ಗುಂಪಿಗೆ ಅಥವಾ ತಂಡಕ್ಕೆ ನಿಯೋಜಿತಕಾರ್ಯವನ್ನು ನೀಡಿದಾಗ, ಪ್ರತಿಭಾವಂತರಾದ ಹೆಚ್ಚು ಸಾಮರ್ಥ್ಯ ಹೊಂದಿದ ಕೆಲವು ವಿದ್ಯಾರ್ಥಿಗಳು ಕ್ಲಿಷ್ಟಕರ ಭಾಗವನ್ನು ನಡೆಸುವಂತೆಯೂ ಮತ್ತು ಸಾಮಾನ್ಯ ಮಟ್ಟದ ವಿದ್ಯಾರ್ಥಿಗಳು ಸರಳ ಮತ್ತು ಸುಲಭವಾದ ಭಾಗವನ್ನು ನಡೆಸುವಂತೆಯೂ ಅನುವು ಮಾಡಿಕೊಡಬೇಕು. ಹೀಗೆ ಮಾಡುವುದರಿಂದ ಪ್ರತಿಯೊಬ್ಬರಿಗೂ ನಿಯೋಜಿತ ಕಾರ್ಯವನ್ನು ನಡೆಸುವಲ್ಲಿ ಅವಕಾಶ ಸಿಕ್ಕುವುದಲ್ಲದೆ ಶಿಕ್ಷಕರು ಅವರಲ್ಲಿನ ವ್ಯಕ್ತಿಭಿನ್ನತೆಗೆ ಗಮನ ನೀಡಿದಂತೆಯೂ ಆಗುತ್ತದೆ.

ನಿಯೋಜಿತ ಕಾರ್ಯವನ್ನು ವಿದ್ಯಾರ್ಥಿಗಳಿಗೆ ಹಂಚುವಾಗ ಶಿಕ್ಷಕರು ಗಮನದಲ್ಲಿಡಬೇಕಾದ ಅಂಶಗಳು:

ಒಂದು ನಿಯೋಜಿತ ಕಾರ್ಯವು ಸ್ವತಂತ್ರವಾಗಿ ವಿದ್ಯಾರ್ಥಿಗಳಿಂದಲೇ ನಡೆಯಬೇಕಾದುದು ಎಂಬ ಅಂಶ ನಿಜವಾದರೂ, ಇದರ ಯಶಸ್ಸಿಗೆ ಸಫಲತೆಗೆ ಶಿಕ್ಷಕರ ಪಾತ್ರ ಅತಿ ಮುಖ್ಯವಾದುದು. ಶಿಕ್ಷಕರು ಮೂರು ಹಂತಗಳಲ್ಲಿ ನಿಯೋಜಿತ ಕಾರ್ಯವನ್ನು ವಿದ್ಯಾರ್ಥಿಗಳಿಗೆ ಹಂಚಬಹುದು. ಅವು ಯಾವುವೆಂದರೆ,

1. ಒಂದು ಘಟಕದ ಬೋಧನೆಯ ಪೂರ್ವದಲ್ಲಿ,
2. ಒಂದು ಘಟಕದ ಬೋಧನಾ-ಕಲಿಕಾ ಪ್ರಕ್ರಿಯೆಯು ಚಾಲ್ತಿಯಲ್ಲಿರುವಾಗ.
3. ಒಂದು ಘಟಕದ ಬೋಧನಾ-ಕಲಿಕಾ ಪ್ರಕ್ರಿಯೆಯು ಸಂಪೂರ್ಣವಾಗಿ ಮುಗಿದ ನಂತರ.

ಮೇಲೆ ಹೇಳಿದ ಯಾವುದೇ ಹಂತದಲ್ಲಿ ನಿಯೋಜಿತ ಕಾರ್ಯಗಳನ್ನು ವಿದ್ಯಾರ್ಥಿಗಳಿಗೆ ಹಂಚುವಾಗ, ಶಿಕ್ಷಕರು ಈ ಕೆಳಕಂಡ ಅಂಶಗಳೆಡೆಗೆ ಗಮನವೀಯಬೇಕಾದುದು ಅತಿ ಮುಖ್ಯವಾದುದು.

1. ಪಠ್ಯ ಕ್ರಮದಿಂದ ಘಟಕಗಳನ್ನು ಆಯ್ದು ಅವುಗಳನ್ನು ಸ್ವಾಭಾವಿಕ ಉಪಘಟಕಗಳಾಗಿ ವಿಭಜಿಸಿ, ವಿದ್ಯಾರ್ಥಿಗಳಿಗೆ ಹಂಚುವಾಗ, ಪ್ರಸ್ತುತ ನಿಯೋಜಿತ ಕಾರ್ಯಕ್ಕೆ ಬೇಕಾದ ಅವಧಿಯು ತನ್ನ ಶಾಲಾ ವೇಳಾ ಪಟ್ಟಿ ಮತ್ತು ಶಾಲಾ ಕ್ಯಾಲೆಂಡರಿಗೆ ಸರಿಹೊಂದುವುದೋ ಇಲ್ಲವೋ ಎಂಬ ವಿಚಾರವನ್ನು ಶಿಕ್ಷಕರು ಖಚಿತಪಡಿಸಿಕೊಂಡಿರಬೇಕು.
2. ನಿಯೋಜಿತ ಕಾರ್ಯವು ಯಾವಾಗಲೂ ಪೂರ್ವ ನಿರ್ಧರಿತ ಉದ್ದೇಶಗಳಿಂದ ಪ್ರಾರಂಭವಾಗುವುದು. ಆದ್ದರಿಂದ ಶಿಕ್ಷಕರು ಮೊದಲು, ನಿಯೋಜಿತ ಕಾರ್ಯದ ಉದ್ದೇಶಗಳನ್ನು

Digitised by Bharatavani, CIIL

ರಚಿಸಿಕೊಳ್ಳಬೇಕು. ಮತ್ತು ಈ ಉದ್ದೇಶಗಳ ಸಾಧನೆಗೆ ವೈವಿಧ್ಯಮಯವಾದ ಕಾರ್ಯಗಳನ್ನು ಕೈಗೊಳ್ಳಲು ಒಂದು ಉತ್ತಮ ರೂಪದ ಯೋಜನೆಯನ್ನು ತಯಾರಿಸಬೇಕಾಗುವುದು.

3. ವಿದ್ಯಾರ್ಥಿಗಳ ವಯಸ್ಸು, ಬುದ್ಧಿಮಟ್ಟ, ಆಸಕ್ತಿ, ಸಾಮರ್ಥ್ಯ, ಅಭಿಕ್ಷಮತೆ, ಧೋರಣೆ ಮತ್ತು ಒಲವು–ಇವುಗಳನ್ನು ಗಮನಿಸಿ ಅದಕ್ಕೆ ತಕ್ಕಂತೆ ನಿಯೋಜಿತ ಕಾರ್ಯಗಳನ್ನು ಹಂಚಬೇಕು.

4. ಆಗಾಗ್ಗೆ ಅವರಲ್ಲಿ ಕಾರ್ಯೋತ್ಸಾಹವನ್ನು ತುಂಬುತ್ತಾ ಅಭಿಪ್ರೇರಣೆ ನೀಡುವುದೇ ಅಲ್ಲದೇ, ಅವರಿಗೆ ಸವಾಲೆನಿಸುವ ಪ್ರಶ್ನೆಗಳನ್ನು ಕೇಳುತ್ತಾ ಚರ್ಚಾ ಸಂದರ್ಭಗಳನ್ನು ಸೃಷ್ಟಿಸುತ್ತಾ, ನಿಯೋಜಿತ ಕಾರ್ಯವು ನೀರಸವಾಗದಂತೆ ಶಿಕ್ಷಕರು ನೋಡಿಕೊಳ್ಳಬೇಕಾಗುವುದು. ಅದಕ್ಕಾಗಿ ನಿಯೋಜಿತ ಕಾರ್ಯಕ್ಕಾಗಿ ಯೋಜನೆಯನ್ನು ರಚಿಸುವಾಗಲೇ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡುವುದು ಒಂದು ಉತ್ತಮ ಲಕ್ಷಣವೆನಿಸಿಕೊಂಡಿದೆ.

5. ಒಂದು ವೇಳೆ ಗ್ರಂಥಾಲಯದಲ್ಲಿ ಯಾವುದಾದರೂ ಒಂದು ಗ್ರಂಥದ ಪರಾಮರ್ಶನೆ ಅಥವಾ ಅಧ್ಯಯನ ಮಾಡಬೇಕೆಂದಾದಲ್ಲಿ, ಶಿಕ್ಷಕರು ಅಂತಹ ಗ್ರಂಥಗಳು ವಿದ್ಯಾರ್ಥಿಗಳು ಗ್ರಹಿಸುವ ಮಟ್ಟಕ್ಕೆ ಸರಿಹೊಂದುವಂತೆ ಇದೆಯೇ? ಎಂದು ಖಚಿತಪಡಿಸಿಕೊಳ್ಳಬೇಕು. ಸಾಧ್ಯವಾದರೆ ತಾವು ಆಯ್ದ ಪುಸ್ತಕದ ಯಾವ ಭಾಗದ, ಯಾವ ಅಂಶಗಳನ್ನು ಓದಬೇಕು, ಅದನ್ನು ಆಧರಿಸಿ ಮುಂದಿನ ಕಾರ್ಯವನ್ನು ಹೇಗೆ ಕೈಗೊಳ್ಳಬೇಕು ಎಂಬ ಗೊಂದಲದಲ್ಲಿರುವ ವಿದ್ಯಾರ್ಥಿಗಳಿಗೆ ಅವರ ಗೊಂದಲಗಳನ್ನು ನಿವಾರಿಸಿ, ಮಾರ್ಗದರ್ಶನ ನೀಡಬೇಕು. ಹೀಗೆ ಮಾಡುವುದರಿಂದ ಅನಾವಶ್ಯಕವಾಗಿ ವಿದ್ಯಾರ್ಥಿಗಳು ಬೇರೆ ಯಾವುದೋ ದಿಕ್ಕಿನಲ್ಲಿ ನಿಯೋಜಿತ ಕಾರ್ಯವನ್ನು ವ್ಯರ್ಥವಾಗಿ ನಡೆಸುವುದನ್ನು ತಪ್ಪಿಸಿದಂತಾಗುವುದು.

6. ನಿಯೋಜಿತ ಕಾರ್ಯದ ವಿವಿಧ ಹಂತಗಳಿಗೆ ಲಭ್ಯವಿರುವ ಸಮಯವನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸುತ್ತಾ, ಅವರು ಆದಷ್ಟು ಕ್ಲುಪ್ತ ಸಮಯದಲ್ಲಿ ತಮ್ಮ ನಿಯೋಜಿತ ಕಾರ್ಯವನ್ನು ಮುಗಿಸಲು ಅನುವು ಮಾಡಿಕೊಡಬೇಕು.

7. ನಿಯೋಜಿತ ಕಾರ್ಯದ ನಿರ್ವಹಣೆಯಲ್ಲಿ ಶಿಕ್ಷಕರು ಆಗಾಗ್ಗೆ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳುವರು. ಇದರಲ್ಲಿ ಒಂದು ತಂತ್ರ ಅಡಗಿರಬೇಕು. ಈ ಪ್ರಶ್ನೆಗಳು ನೇರವಾಗಿ, ಸ್ಪಷ್ಟವಾಗಿ, ಸಂಕ್ಷಿಪ್ತವಾಗಿ, ಕ್ಲುಪ್ತವಾಗಿ ಕೇಳಲ್ಪಟ್ಟಿರಬೇಕು; ಇವುಗಳು ಲಿಖಿತರೂಪದಲ್ಲಿದ್ದರೆ ಇನ್ನೂ ಉತ್ತಮ. ಇದಕ್ಕಾಗಿ ಬಳಸುವ ಭಾಷೆಯು ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವಂತಿರಬೇಕು. ಶಿಕ್ಷಕರು ನಿಯೋಜಿತ ಕಾರ್ಯದ ಮೌಲ್ಯಮಾಪನಕ್ಕಾಗಿಯೇ ಒಂದಷ್ಟು ಪ್ರಶ್ನೆಗಳನ್ನು ರಚಿಸಿಕೊಂಡು ನಿಯೋಜಿತ ಕಾರ್ಯದ ಕೊನೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಫಲವನ್ನು ಅಳೆಯಲು ಸಾಧ್ಯವಾಗುವುದು.

8. ವಿದ್ಯಾರ್ಥಿಗಳಿಗೆ ತಾವು ಕೈಗೊಳ್ಳುತ್ತಿರುವ ನಿಯೋಜಿತಕಾರ್ಯದಲ್ಲಿನ ಪ್ರಯೋಗಗಳನ್ನು ಕುರಿತಂತೆ ಒಂದು ಮುದ್ರಿತ ಮಾಹಿತಿಯನ್ನು ಶಿಕ್ಷಕರು ನೀಡುವುದು ಒಳಿತು. ಇದರಲ್ಲಿ ಅವರು ಬಳಸಬೇಕಾಗಿರುವ ಸಾಧನ, ಸಲಕರಣೆಗಳಾವುವು, ಅವುಗಳನ್ನು ಬಳಸುವ ಬಗೆ ಹೇಗೆ, ತಾವು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳಾವುವು, ಯಾವ ವಿಧಾನವನ್ನು ಅನುಸರಿಸಬೇಕು, ತಮ್ಮ ವೀಕ್ಷಣೆಯನ್ನು ಹೇಗೆ ದಾಖಲಿಸಿಕೊಳ್ಳಬೇಕು ಎಂಬ ವಿವರಗಳನ್ನು ವಿದ್ಯಾರ್ಥಿಗಳಿಗೆ ನೀಡಬೇಕು.

9. ನಿಯೋಜಿತ ಕಾರ್ಯವನ್ನು ವಿದ್ಯಾರ್ಥಿಗಳಿಗೆ ಹಂಚುವುದಕ್ಕೆ ಮೊದಲು ಅದಕ್ಕೆ ಸಂಬಂಧಪಟ್ಟ ಸಲಕರಣೆಗಳು, ರಾಸಾಯನಿಕಗಳು ಸಾಧನಗಳು ಮತ್ತು ಇತರ ಸಂಪನ್ಮೂಲಗಳು ತಮ್ಮ ಶಾಲೆಯಲ್ಲಿ ಇರುವುದನ್ನು ಶಿಕ್ಷಕರು ಖಚಿತಪಡಿಸಿಕೊಳ್ಳಬೇಕು.

**ನಿಯೋಜಿತ ಕಾರ್ಯಗಳ ವಿಧಗಳು ಮತ್ತು ಅವುಗಳ ಮೌಲ್ಯಮಾಪನ:**

1. **ನೀನೇ ಮಾಡಿ ನೋಡು :** ಇದು ಸಂಪೂರ್ಣವಾಗಿ ವಿದ್ಯಾರ್ಥಿಯೇ ಕೈಗೊಳ್ಳಬೇಕಾದ ನಿಯೋಜಿತಕಾರ್ಯ. ಶಿಕ್ಷಕರ ಪಾತ್ರವಿಲ್ಲಿ ಗೌಣವೆಂದು ಹೇಳಬಹುದಾದರೂ, ಅವರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ, ಅಭಿಪ್ರೇರಣೆಯನ್ನು ನೀಡುವವರಾಗಿರುತ್ತಾರೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಸವಾಲೆನಿಸುವ, ಒಗಟೆನಿಸುವ ಸಂದರ್ಭಗಳನ್ನು ಸೃಷ್ಟಿಸುವವರೂ ಅವರೇ ಆಗಿರುತ್ತಾರೆ. ಇವುಗಳಲ್ಲಿ ಕೆಲವು ಸರಳ ಪ್ರಯೋಗಗಳು ಸೇರಿರಬಹುದು. ಇವು ಶಿಕ್ಷಕರ ಅನುಪಸ್ಥಿತಿಯಲ್ಲಿ ಘಟಿಸುವುದರಿಂದ ಅಪಾಯಕಾರಿ ರಾಸಾಯನಿಕಗಳ ಬಳಕೆ ಅಥವಾ ಅಪಾಯಕಾರಿ ಪ್ರಯೋಗಗಳಿಗೆ ಇಲ್ಲಿ ನಿಷಿದ್ಧವಿದೆ.

**"ನೀನೇ ಮಾಡಿ ನೋಡು" ವಿಧದ ನಿಯೋಜಿತ ಕಾರ್ಯದ ಗುಣಲಕ್ಷಣಗಳು ಈ ಕೆಳಗಿನಂತಿವೆ:–**

- ವಿದ್ಯಾರ್ಥಿಗಳೇ ಕೈಗೊಳ್ಳುವ ಇಂತಹ ಚಟುವಟಿಕೆಗಳಿಗೆ ಶಿಕ್ಷಕರ ಮೇಲ್ವಿಚಾರಣೆ ಇರುವುದಿಲ್ಲ.
- ಶಿಕ್ಷಕರೇ ಇಂತಹ ನಿಯೋಜಿತ ಕಾರ್ಯಗಳನ್ನು ಬೇರೆ ಬೇರೆ ಗ್ರಂಥಗಳ ಪರಾಮರ್ಶನದಿಂದ, ಅಂತರ್ಜಾಲದ ಸಹಾಯದಿಂದ ವಿದ್ಯಾರ್ಥಿಗಳಿಗಾಗಿ ಸೃಷ್ಟಿಸಬೇಕಾಗುತ್ತದೆ.
- ಈ ಚಟುವಟಿಕೆಗಳ ಮೌಲ್ಯಮಾಪನವು ವಿದ್ಯಾರ್ಥಿಗೆ ಪಾಸು/ ನಪಾಸುಗಳನ್ನು ನಿರ್ಧರಿಸುವುದಿಲ್ಲ.
- ಜ್ಞಾನವಲಯ, ಭಾವವಲಯ ಮತ್ತು ಕಾರ್ಯವಲಯ– ಈ ಮೂರು ವಲಯಗಳ ಸಮನ್ವಯತೆಯನ್ನು ಇಂತಹ ಚಟುವಟಿಕೆಗಳಲ್ಲಿ ಕಾಣಬಹುದಾಗಿದೆ.
- ಒಂದು ಮುಕ್ತ ವಾತಾವರಣವನ್ನು ಕಲಿಕೆಗಾಗಿ ನಿಯೋಜಿತ ಕಾರ್ಯಗಳು ಸೃಷ್ಟಿ ಮಾಡುತ್ತವೆ. ಇದರಿಂದಾಗಿ "ಕಲಿಕೆಯ ಮೋಜನ್ನು" ವಿದ್ಯಾರ್ಥಿಗಳು ಅನುಭವಿಸುವರು.

**ಮೌಲ್ಯಮಾಪನ :** ಈ ನಿಯೋಜಿತ ಕಾರ್ಯದ ಮೌಲ್ಯಮಾಪನವು ವಿದ್ಯಾರ್ಥಿಗಳ ಪಾಸು/ಫೇಲುಗಳನ್ನು ನಿರ್ಧರಿಸದೇ ಹೋದರೂ ಅವರಲ್ಲಿ ಕಲಿಕೆಗಾಗಿ ಒಂದು ಜೀವಂತ ಸ್ಫೂರ್ತಿಯನ್ನು ಉಳಿಸಿ, ಬೆಳೆಸುವುದು. ವಿದ್ಯಾರ್ಥಿಗಳು ಮಾಡುವ / ಸೃಷ್ಟಿಸುವ ಉತ್ಪನ್ನಗಳನ್ನು ಮೌಲ್ಯಮಾಪನ ಮಾಡಬೇಕು.

2. **ಸಣ್ಣ ಗುಂಪು ಚರ್ಚೆ :–** ಇದನ್ನು ಒಂದು ನಿಯೋಜಿತ ಕಾರ್ಯವಾಗಿ ನೀಡಬೇಕಾದರೆ, ಶಿಕ್ಷಕರು ಅದಕ್ಕಾಗಿ ಒಂದು ಬೌದ್ಧಿಕ ವೇದಿಕೆಯನ್ನು ನಿರ್ಮಿಸಬೇಕಾಗುವುದು. ಆದ್ದರಿಂದ ವಿದ್ಯಾರ್ಥಿಗಳಿಗೆ ಮೊದಲೇ ಸೂಕ್ತವಾದ ಮಾರ್ಗದರ್ಶನವನ್ನು ನೀಡಿ ಅವರಲ್ಲಿ ಒಂದು ಸರಿಯಾದ ಮನೋಸಿದ್ಧತೆಯನ್ನು ಮಾಡಿಕೊಳ್ಳಲು ಅವಕಾಶ ನೀಡಬೇಕಾಗುತ್ತದೆ. ಏಕೆಂದರೆ, ತಾವು ಏನು ಮಾತನಾಡಬೇಕು, ಯಾವ ವಿಚಾರವನ್ನು ಕುರಿತು ಚರ್ಚಿಸಬೇಕು, ಅದರಲ್ಲಿ ಪರ

Digitised by Bharatavani, CIIL

ಮತ್ತು ವಿರೋಧದ ಮಂಡನೆಗಳು ಹೇಗಿರಬೇಕು– ಇವ್ಯಾವುವೂ ತಿಳಿಯದಿದ್ದರೆ, ಅವರು ಚರ್ಚೆಯಲ್ಲಿ ಹೇಗೆ ಭಾಗವಹಿಸಲು ಸಾಧ್ಯ? ಆದರೆ ಇಲ್ಲಿ ವಿದ್ಯಾರ್ಥಿಗಳ ಅಭಿಪ್ರಾಯಗಳಾಗಲೀ ಅವರ ಯೋಜನೆಗಳಾಗಲೀ ಶಿಕ್ಷಕರ ಪ್ರಭಾವದಿಂದ ಹೊರಗಿರುವಂತೆ ಗಮನಿಸಬೇಕಾದುದು ಮುಖ್ಯ.

ಸಾಮಾನ್ಯವಾಗಿ 3–4 ವಿದ್ಯಾರ್ಥಿಗಳ ಒಂದು ಸಣ್ಣಗುಂಪನ್ನು ಚರ್ಚಾ ನಿಯೋಜಿತಕಾರ್ಯಕ್ಕಾಗಿ ಸಿದ್ಧಗೊಳಿಸಬಹುದಾಗಿದೆ. ಒಂದು ತರಗತಿಯಲ್ಲಿ ಸಣ್ಣ ಸಣ್ಣ ಗುಂಪುಗಳನ್ನು ನಿರ್ಮಿಸುವುದರಿಂದ ಎಲ್ಲ ವಿದ್ಯಾರ್ಥಿಗಳಿಗೂ ಅವಕಾಶ ಸಿಗುವುದು ಮತ್ತು ಇದರಿಂದ ಒಂದು ಉತ್ತಮವಾದ ಸಾಮಾಜೀಕರಣದ ಸಂದರ್ಭರ್ವೇರ್ಪಡುವುದು.

- ಸಾಮಾನ್ಯ ಆಸಕ್ತಿ, ಅಗತ್ಯತೆ, ಧೋರಣೆ ಮತ್ತು ಸಾಮರ್ಥ್ಯ ಇರುವ ವಿದ್ಯಾರ್ಥಿಗಳನ್ನೇ ಒಂದು ಗುಂಪನ್ನಾಗಿ ನಿರ್ಮಿಸಬೇಕು. ಹೀಗೆ ಗುಂಪನ್ನು ರಚಿಸಿ, ಚರ್ಚಾ ಚಟುವಟಿಕೆಯನ್ನು ನಡೆಸುವಾಗ ಅಲ್ಲಿ ಪ್ರಜಾಪ್ರಭುತ್ವದ ಸನ್ನಿವೇಶವಿರಬೇಕು. ಚರ್ಚಾಕೂಟದಲ್ಲಿ ಅರ್ಥಪೂರ್ಣವಾದ ವಿಚಾರಗಳ ಮಂಥನ ನಡೆಯಬೇಕು. ಶಿಕ್ಷಕರು ಇಂತಹ ಚರ್ಚಾ ಕೂಟದಲ್ಲಿ ಸಮತೋಲನದಿಂದ ಇದ್ದು ಎರಡು ಗುಂಪುಗಳ ನಡುವೆ ಮಧ್ಯಸ್ಥಿಕೆಯನ್ನು ವಹಿಸಬೇಕಾಗುತ್ತದೆ. ಅಲ್ಲದೆ ಚರ್ಚೆಯು ಹಳಿತಪ್ಪದಂತೆ ನಿಗಾವಹಿಸಬೇಕು, ಏಕೆಂದರೆ ಚರ್ಚೆಯು ಯಾವುದಾದರೊಂದು ವಿಚಾರ ಕುರಿತಂತೆ, ನಡೆಸುವ ಪರ–ವಿರೋಧದ ಮಾತುಗಳೇ ಆಗಿರುತ್ತವೆ. ವಿದ್ಯಾರ್ಥಿಗಳ ಮೌಖಿಕ ಅಭಿವ್ಯಕ್ತಿಗೆ ಅವಕಾಶವಿರಬೇಕು. ಅಲ್ಲದೆ ಬೇರೆ ವಿದ್ಯಾರ್ಥಿಗಳು ಈ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹವಿರಬೇಕು.

- ಚರ್ಚಾ ನಿಯೋಜಿತ ಕಾರ್ಯದಲ್ಲಿ ಮಧ್ಯಸ್ಥಿಕೆಯ ಪಾತ್ರವಹಿಸುವ ಶಿಕ್ಷಕರು, ಪರ–ವಿರೋಧದ ವಾದಗಳನ್ನು ಗಮನಿಸುತ್ತಾ, ಮಧ್ಯೆ ಮಧ್ಯೆ, ಇತರ ವಿದ್ಯಾರ್ಥಿಗಳ ಪ್ರಶ್ನೋತ್ತರಗಳಿಗೆ ಪ್ರೋತ್ಸಾಹ ನೀಡುತ್ತಾ, ಅಲ್ಲಲ್ಲಿ ಕಂಡುಬರುವ ಮುಖ್ಯಾಂಶಗಳನ್ನು ಕಪ್ಪುಹಲಗೆಯ ಮೇಲೆ ದಾಖಲಿಸುತ್ತಾ ಹೋಗಬೇಕು. ನಂತರ ಕೊನೆಯಲ್ಲಿ ತಮ್ಮ ತೀರ್ಮಾನವನ್ನು ತಿಳಿಸುತ್ತಾ ಕಲಾಪವನ್ನು ಮುಕ್ತಾಯಗೊಳಿಸಬೇಕು.

**ಮೌಲ್ಯಮಾಪನ:** ಈ ವಿಧದ ನಿಯೋಜಿತ ಕಾರ್ಯಗಳು ವಿದ್ಯಾರ್ಥಿಯು ಒಂದು ತರಗತಿಯಿಂದ ಇನ್ನೊಂದು ತರಗತಿಗೆ ಉತ್ತೀರ್ಣನಾಗಲು ಪೂರ್ಣ ಪ್ರಭಾವ ಬೀರಲಾರದು. ಹಾಗಾಗಿ ಶಿಕ್ಷಕರು ಇಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಆಧಾರದ ಮೇಲೆ ಪರಿಮಾಣಾತ್ಮಕ ಮೌಲ್ಯಮಾಪನ ಮಾಡದೆ, ಗುಣಾತ್ಮಕ ಮೌಲ್ಯಮಾಪನವನ್ನು ಮಾಡಬಹುದಾಗಿದೆ.

3. **ಓದುವ ನಿಯೋಜಿತ ಕಾರ್ಯ:–** ಓದುವ ಕಾರ್ಯವು ಯಾವಾಗಲೂ ವೈಯಕ್ತಿಕವಾದ ಕಾರ್ಯವಾಗಿರುತ್ತದೆ. ಇದರಿಂದಾಗಿ ವ್ಯಕ್ತಿಯು ಜ್ಞಾನವನ್ನು ಸಂಪಾದಿಸುತ್ತಾನೆ. ಅಲ್ಲದೇ ಮನೋರಂಜನೆಗಾಗಿಯೂ ಓದುವ ಪ್ರಕ್ರಿಯೆ ನಡೆಯುವುದು. ಓದುವ ಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿದಾಗ, ಇನ್ನಷ್ಟು ಅರ್ಥಗಳು ದೊರೆಯುವುವು. ಓದುವುದರಲ್ಲಿ, ಮೇಲ್ಮೇಲೆ/ತೋರಿಕೆಯ/ಹಗುರ ಓದುವಿಕೆ; ಪುನರಪಿ ಓದುವಿಕೆ; ಗಾಢವಾದ ಪುನರಪಿ ಓದುವಿಕೆ– ಹೀಗೆ ಬಗೆಬಗೆಯ ರೀತಿಯಲ್ಲಿ ಓದುವಿಕೆ ಸಾಗುವುದು.

ಓದುವಾಗ ಅನೇಕ ಬೌದ್ಧಿಕ ಕೆಲಸಗಳನ್ನು ವಿದ್ಯಾರ್ಥಿಯು ನಡೆಸುತ್ತಿರುತ್ತಾನೆ. ಉದಾಹರಣೆಗೆ, ತಾನು ಓದುತ್ತಿರುವ ವಿಷಯಗಳ ವರ್ಗೀಕರಣ, ತಥ್ಯಾಂಶಗಳು ಮತ್ತು ಭಾವಾವೇಗಕ್ಕೊಳಗಾದ ವಿಚಾರಗಳ ನಡುವಿನ ವ್ಯತ್ಯಾಸಗಳನ್ನು ಮನಗಾಣುವುದು; ಅಭಿಪ್ರಾಯಪಡುವುದು; ಕಾರ್ಯ ಕಾರಣ ಸಂಬಂಧಗಳನ್ನು ಮತ್ತು ಕಾರ್ಯ–ಪರಿಣಾಮಗಳ ಸಂಬಂಧಗಳನ್ನು ಕಂಡುಕೊಳ್ಳುವುದು, ಸಾರ್ವತ್ರೀಕರಿಸುವುದು, ತೀರ್ಮಾನಗಳನ್ನು ಮಾಡುವುದು, ಸತ್ಯಾಸತ್ಯತೆಗಳ ಕೂಲಂಕಷ ವಿಶ್ಲೇಷಣೆ ಮಾಡುವುದು ಇತ್ಯಾದಿ.

**ಉದಾಹರಣೆಗೆ :**

- ವಿದ್ಯಾರ್ಥಿಗಳು ಇಬ್ಬರು ಲೇಖಕರ ಕೃತಿಗಳನ್ನು ಓದಿದನಂತರ, ಅವುಗಳ ವಿಮರ್ಶೆಯನ್ನು ಪ್ರಸ್ತುತಪಡಿಸಬೇಕು. ಒಬ್ಬರೇ ಲೇಖಕರ 2 ಅಥವಾ 3 ಕೃತಿಗಳ ತೌಲನಿಕ ಅಧ್ಯಯನವನ್ನು ನಡೆಸಲು ಹೇಳುವುದು. ಇಡೀ ತರಗತಿಯನ್ನು ಚಿಕ್ಕ ಚಿಕ್ಕ ಗುಂಪುಗಳಾಗಿ ವಿಂಗಡಿಸಿ ಒಂದೊಂದು ಗುಂಪಿಗೂ ನಿರ್ದಿಷ್ಟ ಮಾಹಿತಿಯನ್ನು ಸಂಗ್ರಹಿಸಲು ಹೇಳುವುದು.

- ಕ್ಷೇತ್ರ ಭೇಟಿಯ ಕಾರ್ಯಕ್ರಮದಲ್ಲಿ ಸಂಗ್ರಹಿಸಿದ ವೈವಿಧ್ಯಮಯವಾದ ವಿಚಾರಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಹೇಳುವುದು.

ಹೀಗೆ ಓದುವ ನಿಯೋಜಿತ ಕಾರ್ಯವನ್ನು ಒಂದು ಪೂರ್ವ ನಿರ್ಧಾರಿತ ಉದ್ದೇಶದೊಂದಿಗೆ ಸಮಂಜಸವಾಗಿ ವಿದ್ಯಾರ್ಥಿಗಳಿಗೆ ನೀಡಿದರೆ, ಅತ್ಯಂತ ಉತ್ತಮವಾದ ಫಲಿತಾಂಶವನ್ನು ಪಡೆಯಬಹುದು. ಓದುವ ನಿಯೋಜಿತ ಕಾರ್ಯವನ್ನು ವಿದ್ಯಾರ್ಥಿಗಳಿಗೆ ಹಂಚುವಾಗ, ಶಿಕ್ಷಕರು ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು.

- ವಿದ್ಯಾರ್ಥಿಗಳಲ್ಲಿ ಒಂದು ಸಮಸ್ಯಾ–ಪ್ರಜ್ಞೆ ಮೂಡಿಸುವಂತೆ ನೀಡಬೇಕು; ವಿದ್ಯಾರ್ಥಿಗಳಿಗೆ ತಾವು ಒಂದು ಗುರುತರವಾದ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಅನೇಕ ಪುಸ್ತಕಗಳನ್ನು ಓದಬೇಕು ಮತ್ತು ವಿಶ್ಲೇಷಿಸಬೇಕು ಎಂಬುದು ತಿಳಿಯಬೇಕು.

- ವಿಸ್ತರಿತ ಅನುಭವವನ್ನು ಮತ್ತು ಹಿನ್ನೆಲೆಯ ಚಿತ್ರಣವನ್ನು ನೀಡುವಂತಿರಬೇಕು; ಆದ್ದರಿಂದ ಓದುವ ನಿಯೋಜಿತ ಕಾರ್ಯವನ್ನು ಕೈಗೊಳ್ಳುವ ವಿದ್ಯಾರ್ಥಿಗಳಿಗೆ, ಇನ್ನೂ ಹೆಚ್ಚಿನ ತಿಳುವಳಿಕೆ ಅನುಭವಗಳು ದೊರೆಯುವುವು.

- ವಿದ್ಯಾರ್ಥಿಗಳಿಗೆ ಓದುವ ನಿಯೋಜಿತ ಕಾರ್ಯಕ್ಕಾಗಿ ಸೂಕ್ತವಾದ ಸಲಹೆ, ಮಾರ್ಗದರ್ಶನದೊಂದಿಗೆ ಉತ್ತಮ ಪ್ರೋತ್ಸಾಹ ಮತ್ತು ಅಭಿಪ್ರೇರಣೆ ಉತ್ತೇಜನಗಳನ್ನು ನೀಡಬೇಕು.

- ಓದುವ ನಿಯೋಜಿತ ಕಾರ್ಯದ ಫಲವಾಗಿ ಮೂಡಿಬರುವ ಫಲಿತಾಂಶಗಳನ್ನು ಇಡೀ ತರಗತಿಯ ಇತರ ವಿದ್ಯಾರ್ಥಿಗಳೊಡನೆ ಹಂಚಿಕೊಳ್ಳಬೇಕು. ಇದಕ್ಕಾಗಿ ಸಂವಾದ ಕಾರ್ಯಕ್ರಮವನ್ನೋ ಸಂದರ್ಶನಗಳನ್ನೋ. ಸಣ್ಣಗುಂಪು ಚರ್ಚೆಯನ್ನೋ ಏರ್ಪಡಿಸಿದರೆ ಉತ್ತಮ.

**ಮೌಲ್ಯಮಾಪನ :** ಓದುವ ನಿಯೋಜಿತ ಕಾರ್ಯವನ್ನು ನೀಡುವಾಗಲೇ ಅದರ ಹಿನ್ನೆಲೆಯಲ್ಲಿ ಒಂದು ನಿರ್ದಿಷ್ಟವಾದ ಉದ್ದೇಶವಿರುತ್ತದೆ. ಆ ಸಾಧನೆಯ ಮೌಲ್ಯಮಾಪನವಾಗಬೇಕು. ಇದಕ್ಕಾಗಿ ನಿರ್ದಿಷ್ಟ ಅಂಕಗಳನ್ನು ಗರಿಷ್ಠ ಅಂಕಗಳಾಗಿ ನಿಗದಿಪಡಿಸಿಕೊಂಡು, ಮೌಲ್ಯಮಾಪನ ಮಾಡಿದರೆ, ಪ್ರತಿಯೊಬ್ಬ ವಿದ್ಯಾರ್ಥಿಗೂ ಅವರವರ ಪ್ರತಿಭೆಗೆ ತಕ್ಕಂತೆ ಪ್ರಾಪ್ತಾಂಕಗಳು ಲಭ್ಯವಾಗುವುದು. ಪ್ರಾಪ್ತಾಂಕಗಳನ್ನು ವಿಶ್ಲೇಷಿಸಿ ನೋಡಿದಾಗ ವಿದ್ಯಾರ್ಥಿಗಳ ಕಲಿಕಾ ಮಟ್ಟವು ಗೋಚರವಾಗುವುದು.

Digitised by Bharatavani, CIIL

**ಪ್ರಯೋಗಾಲಯದ ನಿಯೋಜಿತ ಕಾರ್ಯ:–** ಇದೊಂದು ಹೆಚ್ಚು ಆಕರ್ಷಕವಾದ ನಿಯೋಜಿತ ಕಾರ್ಯವಾಗಿದೆ. "ಮಾಡಿ ಕಲಿ" ಎಂಬ ಕಲಿಕಾ ನೀತಿಗೆ ತಕ್ಕಂತೆ ಈ ನಿಯೋಜಿತ ಕಾರ್ಯವನ್ನು ವಿನ್ಯಾಸಗೊಳಿಸಬಹುದು. ಪ್ರಯೋಗಾಲಯದ ನಿಯೋಜಿತ ಕಾರ್ಯಗಳಲ್ಲಿ ಪ್ರಯೋಗಗಳದ್ದೇ ಸಿಂಹಪಾಲಾದರೂ, ಹಲವು ಕಾರ್ಯಗಳು ಅವಿಲ್ಲದೆಯೂ ನಡೆಯುತ್ತವೆ. ಪ್ರಯೋಗಗಳಲ್ಲಿ, ನಿದರ್ಶನ ಪ್ರಯೋಗಗಳು, ಅನ್ವೇಷಣಾ ಪ್ರಯೋಗಗಳು ಮತ್ತು ಮುಕ್ತ ಪ್ರಯೋಗಗಳೆಂಬ ಮೂರು ವಿಧಗಳಿವೆ. ಪ್ರಯೋಗಗಳನ್ನು ನಿಯೋಜಿತ ಕಾರ್ಯವನ್ನಾಗಿ ನೀಡುವಾಗ ಇದು ಶಿಕ್ಷಕರ ಅನುಪಸ್ಥಿತಿಯಲ್ಲಿ ನಡೆಯುವ ಕಾರ್ಯವಾದ್ದರಿಂದ ಯಾವುದೇ ರೀತಿಯ ಅಪಾಯಕಾರಿ ಘಟನೆಗಳು ಸಂಭವಿಸುವ ಸಾಧ್ಯತೆಗಳು ಇಲ್ಲದಂತಹ ಪ್ರಯೋಗಗಳನ್ನು ವಿದ್ಯಾರ್ಥಿಗಳಿಗೆ ನಿಯೋಜಿತ ಕಾರ್ಯವನ್ನಾಗಿ ನೀಡಬೇಕು. ಪ್ರಾಯೋಗಿಕ ನಿಯೋಜಿತ ಕಾರ್ಯದ ಮುಖ್ಯ ಲಕ್ಷಣಗಳು ಹೀಗಿವೆ:

- ಪ್ರಾಯೋಗಿಕ ನಿಯೋಜಿತ ಕಾರ್ಯಗಳು ಪ್ರಯೋಗಗಳು, ವೀಕ್ಷಣೆ ಮತ್ತು ಇನ್ನಿತರ ಚಟುವಟಿಕೆಗಳನ್ನು ಹೊಂದಿರುತ್ತವೆ. ವೈಜ್ಞಾನಿಕ ಪ್ರಕ್ರಿಯಾ ಕೌಶಲಗಳಾದ ಗುರುತಿಸುವಿಕೆ, ವರ್ಗೀಕರಣ, ಆಧಾರಕಲ್ಪನೆಗಳ ರಚನೆ, ಪ್ರಯೋಗ ನಡೆಸುವಿಕೆ, ದಾಖಲೆಗಳ ಸಂಗ್ರಹಣ ಮತ್ತು ಜೋಡಣೆ, ದಾಖಲೆಗಳ ವಿಶ್ಲೇಷಣೆ ಮತ್ತು ಫಲಿತಾಂಶಗಳನ್ನು ಕಂಡುಕೊಳ್ಳುವಿಕೆ, ತೀರ್ಮಾನಿಸುವಿಕೆ, ಸಮಸ್ಯೆಯ ಪರಿಹಾರ ಮುಂತಾದವುಗಳನ್ನು ಕಾಣಬಹುದಾಗಿದೆ. ಪ್ರಯೋಗಿಸುವ ವಿಧಾನವು ಪ್ರಯೋಗದ ಫಲಿತಾಂಶಕ್ಕಿಂತಲೂ ಪ್ರಮುಖವಾದುದೆಂದು ನಾವು ಮನಗಾಣಬೇಕು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ನಿಯೋಜಿತ ಕಾರ್ಯಗಳನ್ನು ನೀಡುವಾಗ.

- ಅವುಗಳ ಉದ್ದೇಶಗಳು ವಿದ್ಯಾರ್ಥಿಗಳಿಂದ ಗ್ರಹಿಸಲ್ಪಡುವ ಮಟ್ಟದಲ್ಲಿವೆಯೇ?

- ಅವುಗಳನ್ನು ಕುರಿತಂತೆ ನಿಖರವಾದ ಮಾರ್ಗದರ್ಶನ ನೀಡಲು ಸಾಧ್ಯವಿದೆಯೇ ಅವುಗಳ ಕ್ರಮವು ಸರಳ ಮತ್ತು ನೇರವಾದುದು ಆಗಿದೆಯೇ ಪ್ರಯೋಗಕ್ಕಾಗಿ ಬಳಸಲ್ಪಡುವ ವಸ್ತುಗಳು ವಿದ್ಯಾರ್ಥಿಗಳಿಗೆ ಪರಿಚಿತವಾದುವುಗಳೇ ಪ್ರಯೋಗಕ್ಕಾಗಿ ಬಳಸಲ್ಪಡುವ ವಸ್ತುಗಳು ದುಬಾರಿಯಾಗದೆ ಸುಲಭವಾಗಿ ದೊರಕುವ ಮತ್ತು ಸರಳವಾಗಿ ಸಂರಕ್ಷಿಸಿ ಇಡಬಲ್ಲಂತಹವೇ? ಪ್ರಯೋಗಗಳು ಸ್ಪಷ್ಟವಾದ ಅನ್ವಯಕ್ಕೆ ಒಳಪಡುವಂತಹವೇ? ಎಂಬ ಪ್ರಶ್ನೆಗಳಿಗೆ ಗಮನವೀಯಬೇಕು.

**ಮೌಲ್ಯಮಾಪನ :** ಪ್ರಾಯೋಗಿಕ ನಿಯೋಜಿತ ಕಾರ್ಯಗಳನ್ನು ವಿದ್ಯಾರ್ಥಿಗಳು ನಿರ್ವಹಿಸಿ ಮುಗಿಸಿದಾಗ ಅವುಗಳ ದಾಖಲೆಗಳನ್ನು ಮೌಲ್ಯಮಾಪನ ಮಾಡಬೇಕು. ಪ್ರಯೋಗಗಳನ್ನು ನಡೆಸುತ್ತಿರುವಾಗ ಅವರು ತೋರುವ ವಿವಿಧ ಕೌಶಲಗಳಾದ ವೀಕ್ಷಣೆ, ಗುರುತಿಸುವಿಕೆ, ವರ್ಗೀಕರಣ. ಆಧಾರಕಲ್ಪನೆ ರಚನೆ, ಪ್ರಯೋಗದಿಂದ ದೊರೆತ ಫಲಿತಾಂಶಗಳ ವಿಶ್ಲೇಷಣೆ ಮತ್ತು ಕೂಡು ತೀರ್ಮಾನ ಇವೆಲ್ಲವುಗಳನ್ನೂ ಮೌಲ್ಯಮಾಪನಕ್ಕೆ ಒಳಪಡಿಸುವ ಸಾಧ್ಯತೆ ಇದೆ. ವಿದ್ಯಾರ್ಥಿಗಳು ರಚಿಸಿದ ನಿಯೋಜಿತ ಕಾರ್ಯಗಳ ಮೌಲ್ಯಮಾಪನವು ಖಚಿತ ಹಿಮ್ಮಾಹಿತಿ ಕೊಡಲು ಅಪೇಕ್ಷಿತ ನಿರ್ಣಾಯಾಂಶಗಳನ್ನು ಪಟ್ಟಿಮಾಡಿಕೊಂಡು ಬಳಸಬೇಕು.

–ಸಿ.ಎನ್.ಸು.

## ನಿರುದ್ಯೋಗ ಸಮಸ್ಯೆ

ಕೆಲಸ ಮಾಡಲು ಬೇಕಾದ ಅರ್ಹತೆಯನ್ನು ಗಳಿಸಿಕೊಂಡು ಕೆಲಸ ಪಡೆಯಲು ಸಾಧ್ಯವಾಗದೇ ಸುಮ್ಮನೆ ಇರುವವರಿಗೆ 'ನಿರುದ್ಯೋಗಿಗಳು' ಎನ್ನಬಹುದು. ಅಂತಹವರ ಸಂಖ್ಯೆ ಹೆಚ್ಚಾದಾಗ ಅದು ಒಂದು ಸಮಸ್ಯೆಯಾಗಿ, ಅದನ್ನು ನಿರುದ್ಯೋಗ ಸಮಸ್ಯೆ ಎನ್ನುತ್ತಾರೆ. ಎಲ್ಲಾ ದೇಶಗಳಲ್ಲೂ ನಿರುದ್ಯೋಗ ಸಮಸ್ಯೆಯನ್ನು ಕಾಣಬಹುದು. ಅದು ಕೆಲವು ದೇಶಗಳಲ್ಲಿ ದೊಡ್ಡ ಸಮಸ್ಯೆಯಾಗಿಯೂ, ಮತ್ತೆ ಕೆಲವು ದೇಶಗಳಲ್ಲಿ ಸಣ್ಣ ಸಮಸ್ಯೆಯಾಗಿಯೂ ಇರಬಹುದು.

ಪೂರ್ಣ ಉದ್ಯೋಗವನ್ನು ಪಿಗು ಈ ರೀತಿ ವಿವರಿಸಿದ್ದಾನೆ. "ಪ್ರಸ್ತುತ ಜಾರಿಯಲ್ಲಿರುವ ಕೂಲಿಗೆ ಕೆಲಸ ಮಾಡಲು ಒಪ್ಪಿ ಕೆಲಸ ಮಾಡುವವನು ಉದ್ಯೋಗವನ್ನು ಹೊಂದಿದ್ದಾನೆ ಎಂದು ಅರ್ಥ". ಆದ್ದರಿಂದ ಎಲ್ಲರಿಗೂ ಉದ್ಯೋಗವಿದೆ ಎಂದರೆ, ಪ್ರಸ್ತುತ ಜಾರಿಯಲ್ಲಿರುವ ದರದಲ್ಲಿ (ಕೂಲಿ) ಕೆಲಸ ಮಾಡಲು ಅರ್ಹರಾದ ಮತ್ತು ಇಚ್ಛೆಯುಳ್ಳವರಿಗೆ ಕೆಲಸವಿರುವುದೇ ಆಗಿದೆ.

ಭಾರತದಲ್ಲಿ ನಿರುದ್ಯೋಗ ಸಮಸ್ಯೆ ಅತ್ಯಂತ ದೊಡ್ಡದಾಗಿದೆ. ಇಲ್ಲಿನ ನಿರುದ್ಯೋಗವು ಸ್ವಯಂ ನಿರ್ಧಾರಿತವಾದುದಲ್ಲ. ಎಂದರೆ ಜನರು ಕೆಲಸ ಮಾಡುವ ಯೋಗ್ಯತೆಯನ್ನು ಕೆಲಸ ಮಾಡುವ ಇಚ್ಛೆಯನ್ನು ಹೊಂದಿದ್ದು, ಕೆಲಸ ಸಿಕ್ಕದೆ ನಿರುದ್ಯೋಗಿಗಳಾಗಿದ್ದಾರೆ. ಅವರಾಗಿ ಬಯಸಿ ನಿರುದ್ಯೋಗಿಗಳಾಗಿಲ್ಲ.

**ನಿರುದ್ಯೋಗದ ದುಷ್ಪರಿಣಾಮಗಳು ಹೀಗಿವೆ**

1) ನಿರುದ್ಯೋಗವು ಕೆಲಸಗಾರರ ಸಂಪಾದನೆಯನ್ನು ಕಡಿಮೆ ಮಾಡಿ ಅವರ ಜೀವನ ಮಟ್ಟ ಕುಸಿಯುವಂತೆ ಮಾಡುತ್ತದೆ.

2) ಅದು ಕೆಲಸಗಾರರ ಹಾಗೂ ಅವರನ್ನು ಅವಲಂಬಿಸಿರುವವರಿಗೆ ಆಹಾರದ ಕೊರತೆಯನ್ನುಂಟು ಮಾಡುತ್ತದೆ.

3) ನಿರುದ್ಯೋಗವು ಕೆಲಸಗಾರರ ಸ್ಥೈರ್ಯವನ್ನು ಕುಂದಿಸಿ ಅವರ ಆತ್ಮವಿಶ್ವಾಸವನ್ನು ಹಾಳುಮಾಡುತ್ತದೆ.

4) ನಿರುದ್ಯೋಗವು ಕೆಲಸಗಾರರ ಕೌಶಲವನ್ನು ಕುಂದಿಸಿ ನಂತರ ಅವರ ಕೆಲಸದ ಅರ್ಹತೆಯನ್ನೇ ಹಾಳುಮಾಡುತ್ತದೆ.

5) ದೇಶದ ಆರ್ಥಿಕ ವ್ಯವಸ್ಥೆಯ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದ ನಿರುದ್ಯೋಗವು ಮಾನವ ಶಕ್ತಿಯ ಅಪವ್ಯಯಕ್ಕೆ, ಕಡಿಮೆ ಉತ್ಪಾದನೆಗೆ, ರಾಷ್ಟ್ರೀಯ ಆದಾಯದ ಕುಸಿತಕ್ಕೆ ಹಾಗೂ ಜನರ ಬಡತನಕ್ಕೆ ಕಾರಣವಾಗುತ್ತದೆ.

**ಈ ನಿರುದ್ಯೋಗ ಸಮಸ್ಯೆಯು ತನ್ನದೇ ಆದ ಹಲವು ಲಕ್ಷಣಗಳನ್ನು ಹೊಂದಿದೆ. ಅವುಗಳು ಯಾವುವೆಂದರೆ,**

1. ನಿರುದ್ಯೋಗ ಸಮಸ್ಯೆಯು ಹಳ್ಳಿಗಳಿಗಿಂತ ಪಟ್ಟಣ ಪ್ರದೇಶಗಳಲ್ಲಿ ಬೃಹದಾಕಾರವಾಗಿ ಬೆಳೆದಿದೆ.
2. ಅದು ಗಂಡಸರಿಗಿಂತ ಹೆಂಗಸರಲ್ಲಿ ಹೆಚ್ಚಾಗಿದೆ.
3. ಒಟ್ಟು ನಿರುದ್ಯೋಗಿಗಳ ಸಂಖ್ಯೆಗೆ ಹೋಲಿಸಿದಾಗ ಅದರಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚು.
4. ನಿರುದ್ಯೋಗವು ವ್ಯವಸಾಯ ಕ್ಷೇತ್ರಗಳಲ್ಲಿರುವುದಕ್ಕಿಂತ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚು.

Digitised by Bharatavani, CIIL

ಅರ್ಥಶಾಸ್ತ್ರಜ್ಞರು ನಿರುದ್ಯೋಗವನ್ನು ಅನೇಕ ವರ್ಗಗಳಾಗಿ ವಿಂಗಡಿಸಿದ್ದಾರೆ. ಆದರೆ ಸಾಮಾನ್ಯವಾಗಿ ಅದನ್ನು ಎರಡು ಭಾಗಗಳಾಗಿ ಮಾಡಬಹುದು. ಅವುಗಳೆಂದರೆ,

1. **ಸ್ವಯಂ ನಿರ್ಧಾರಿತ ನಿರುದ್ಯೋಗ:** ಒಬ್ಬ ವ್ಯಕ್ತಿಯು ತನಗೆ ದೊರಕುವ ಸಂಭಾವನೆ ಸಾಲದು ಎಂದು ಅಥವಾ ಮತ್ತೆ ಯಾವ ಕಾರಣಕ್ಕಾದರೂ ಕೆಲಸ ಮಾಡಲು ಸಿದ್ಧನಿಲ್ಲದೆ ನಿರುದ್ಯೋಗಿಯಾಗಿ ಉಳಿದರೆ ಅದು ಸ್ವಯಂ ನಿರ್ಧಾರಿತ ನಿರುದ್ಯೋಗವಾಗುತ್ತದೆ. ಅವನಿಗೆ ತಾನು ಹೆಚ್ಚಿನ ಸಂಭಾವನೆ ಗಳಿಸಬೇಕು, ಇಲ್ಲದಿದ್ದರೆ ನಿರುದ್ಯೋಗಿಯಾಗಿಯೇ ಉಳಿಯುತ್ತೇನೆ ಎಂಬ ತೀರ್ಮಾನ ಇದಕ್ಕೆ ಕಾರಣ. ಇದೊಂದು ಸಾಮಾಜಿಕ ಸಮಸ್ಯೆಯೂ ಆಗಿರುತ್ತದೆ. ಇದು ಸಮಾಜದ ಅವ್ಯವಸ್ಥೆಯನ್ನು ಬಿಂಬಿಸುತ್ತದೆ. ಇದರ ಪರಿಹಾರಕ್ಕಾಗಿ ಹಲವಾರು ಆರ್ಥಿಕ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.

2. **ಸಹಜ ನಿರುದ್ಯೋಗ:** ಇದು ತನ್ನಷ್ಟಕ್ಕೆ ತಾನೇ ಸೃಷ್ಟಿಯಾಗುವ ನಿರುದ್ಯೋಗ. ಇಲ್ಲಿ ನಿರುದ್ಯೋಗಿಯು ಅಸಹಾಯಕ. ತಾನಾಗಿ ನಿರುದ್ಯೋಗವನ್ನು ಅವನು ಬಯಸಿರುವುದಿಲ್ಲ. ಇಲ್ಲಿ ನಿರುದ್ಯೋಗಿಗೆ ಉದ್ಯೋಗಾವಕಾಶವಿರುವುದಿಲ್ಲ, ಇಂತಹ ನಿರುದ್ಯೋಗದಲ್ಲಿ ಹಲವು ವಿಧಗಳಿವೆ. ಹಾಕ್ ಎನ್ನುವ ಅರ್ಥಶಾಸ್ತ್ರಜ್ಞನು ಅದನ್ನು ಹೀಗೆ ವಿಂಗಡಿಸಿದ್ದಾನೆ.

(ಅ) **ವರ್ತುಲ ನಿರುದ್ಯೋಗ:** ಈ ಬಗೆಯ ನಿರುದ್ಯೋಗವು ಆರ್ಥಿಕವಲಯದಲ್ಲಿ ಆಗಾಗ್ಗೆ ಉಂಟಾಗುವ ವ್ಯಾಪಾರ ವರ್ತುಲಗಳಿಂದ (Business Cycles) ಉದ್ಭವಿಸುತ್ತದೆ. ದೇಶದಲ್ಲಿ ಸಂಮೃದ್ಧಿ ಇರುವಾಗ ಉತ್ಪಾದನೆಯ ಎಲ್ಲ ಕ್ಷೇತ್ರಗಳಲ್ಲೂ ಎಲ್ಲ ಸಂಪನ್ಮೂಲಗಳನ್ನೂ ಬಳಸಿಕೊಂಡು ಉತ್ಪಾದನಾ ಕೆಲಸಗಳು ನಿರಾತಂಕವಾಗಿ ನಡೆಯುತ್ತಿರುವಾಗ ಉದ್ಯೋಗಾವಕಾಶಗಳಿಗೆ ಕೊರತೆ ಇರುವುದಿಲ್ಲ. ಆದರೆ ಆರ್ಥಿಕ ಮುಗ್ಗಟ್ಟು ತಲೆದೋರಿದಾಗ ಉತ್ಪಾದನಾ ಚಟುವಟಿಕೆ ಸ್ಥಗಿತಗೊಳ್ಳುತ್ತದೆ. ಇದರಿಂದ ನಿರುದ್ಯೋಗ ಉಂಟಾಗುವುದಕ್ಕೆ ವರ್ತುಲ ನಿರುದ್ಯೋಗ ಎಂದು ಹೆಸರು.

(ಇ) **ತಕ್ಷಣದ ನಿರುದ್ಯೋಗ:** ಹಲವು ಉದ್ಯಮ, ವ್ಯಾಪಾರ, ಮುಂತಾದವುಗಳಲ್ಲಿ ಹಲವು ಕೆಲಸಗಳನ್ನು ಬೇಗ ಮಾಡಿ ಮುಗಿಸುವ ಉದ್ದೇಶದಿಂದ ಹೆಚ್ಚು ಜನರನ್ನು ಕೆಲಸಕ್ಕೆ ನಿಯಮಿಸಿಕೊಳ್ಳಬಹುದು. ಆದರೆ ಆ ಕೆಲಸ ಮುಗಿದ ಮೇಲೆ ಅವರನ್ನು ಕೆಲಸದಿಂದ ಬಿಡುಗಡೆಗೊಳಿಸಲಾಗುತ್ತದೆ. ಹೀಗಾಗಿ ಅನೇಕರು ತಕ್ಷಣ ಯಾವ ಸೂಚನೆಯೂ ಇಲ್ಲದೆ ನಿರುದ್ಯೋಗಿಗಳಾಗುತ್ತಾರೆ.

(ಉ) **ಕೈಗಾರಿಕೆಗಳ ಸ್ಥಗಿತದಿಂದುಂಟಾಗುವ ನಿರುದ್ಯೋಗ:** ಕೈಗಾರಿಕಾ ಘಟಕಗಳು ಅನುಭವಿಸುವ ನಷ್ಟ ಅಥವಾ ಅವುಗಳ ಮಾಲೀಕರ ತಪ್ಪು ನಿರ್ಣಯಗಳಿಂದ, ಪಾಲುದಾರರು ಬೇರೆಯಾಗುವುದರಿಂದ, ಹೀಗೆ ಹಲವು ಕಾರಣಗಳಿಂದ ಕೈಗಾರಿಕಾ ಘಟಕಗಳು ಮುಚ್ಚಿ ಹೋಗಬಹುದು. ಇದರಿಂದ ಅಲ್ಲಿ ಕೆಲಸ ಮಾಡುವವರು ನಿರುದ್ಯೋಗಿಗಳಾಗುತ್ತಾರೆ.

### ಭಾರತದಲ್ಲಿನ ನಿರುದ್ಯೋಗದ ಲಕ್ಷಣಗಳು

1. ಭಾರತದಲ್ಲಿನ ನಿರುದ್ಯೋಗದ ಲಕ್ಷಣವು ಮುಂದುವರೆದ ರಾಷ್ಟ್ರಗಳ ನಿರುದ್ಯೋಗದ ಲಕ್ಷಣಕ್ಕಿಂತ ಭಿನ್ನವಾದುದು. ಮುಂದುವರೆದ ರಾಷ್ಟ್ರಗಳಲ್ಲಿ ವ್ಯಾಪಾರದ ವರ್ತುಲಗಳಿಗನುಗುಣವಾಗಿ ನಿರುದ್ಯೋಗ ಉಂಟಾಗುತ್ತದೆ ಮತ್ತು ಅದು ತಾತ್ಕಾಲಿಕವಾದದ್ದು. ಆದರೆ ಭಾರತದಲ್ಲಿ ಅಂತಹ ವರ್ತುಲಗಳ ಪ್ರಭಾವ ಬಹಳ ಕಡಿಮೆ. ಮತ್ತು ಇಲ್ಲಿನ ನಿರುದ್ಯೋಗವು ಯಾವಾಗಲೂ ಇರುವಂತಹುದು ಹಾಗೂ ಅದರ ಸಂಪೂರ್ಣ ನಿವಾರಣೆ ಅಸಾಧ್ಯವಾದುದರಿಂದ ಅದು ಶಾಶ್ವತವಾದ ಲಕ್ಷಣವನ್ನು ಹೊಂದಿದೆ.
2. ಭಾರತದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳೆರಡರಲ್ಲೂ ನಿರುದ್ಯೋಗವನ್ನು ಕಾಣಬಹುದು. ಆದರೆ ಗ್ರಾಮಾಂತರ ಪ್ರದೇಶದಲ್ಲಿನ ನಿರುದ್ಯೋಗವು ಪಟ್ಟಣ ಪ್ರದೇಶಗಳಲ್ಲಿನ ನಿರುದ್ಯೋಗಕ್ಕಿಂತ ಹೆಚ್ಚಿನ ಆತಂಕವನ್ನುಂಟುಮಾಡುತ್ತದೆ.
3. ಗ್ರಾಮಾಂತರ ಪ್ರದೇಶದ ನಿರುದ್ಯೋಗವು ವೇಷ ಬದಲಿಸಿದ ನಿರುದ್ಯೋಗವಾದರೆ (Disguised Unemployment) ಪಟ್ಟಣ ಪ್ರದೇಶದ ನಿರುದ್ಯೋಗವು ಸ್ಪಷ್ಟವಾಗಿ ಗೋಚರಿಸುವಂತಹುದಾಗಿದೆ.
4. ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗವು ಋತುಮಾನಕ್ಕೆ ಅನುಗುಣವಾಗಿದ್ದರೆ, ಪಟ್ಟಣ ಪ್ರದೇಶದಲ್ಲಿ ಅರೆ-ನಿರುದ್ಯೋಗವು ಸರ್ವೇ ಸಾಮಾನ್ಯ.
5. ಪಟ್ಟಣ ಪ್ರದೇಶದಲ್ಲಿನ ನಿರುದ್ಯೋಗವು ವಿದ್ಯಾವಂತರಲ್ಲಿ ಸಾಮಾನ್ಯವಾದರೂ, ಕೈಗಾರಿಕಾ ಕೆಲಸಗಾರರಲ್ಲಿ ಅದು ಕಂಡು ಬರುವುದಿಲ್ಲ.

### ಭಾರತದಲ್ಲಿ ನಿರುದ್ಯೋಗದ ಪ್ರಮಾಣ

ಭಾರತದಲ್ಲಿನ ನಿರುದ್ಯೋಗದ ಪ್ರಮಾಣವನ್ನು ಭಾರತದ ಯೋಜನಾ ಆಯೋಗವು ಅಂದಾಜು ಮಾಡಿದೆ. ಅದರ ಪ್ರಕಾರ 1995ರಲ್ಲಿ ಸುಮಾರು 18.7 ದಶಲಕ್ಷ ಜನರು ನಮ್ಮ ದೇಶದಲ್ಲಿ ನಿರುದ್ಯೋಗಿಗಳಾಗಿದ್ದರು. 2010ರಲ್ಲಿ ನಿರುದ್ಯೋಗದ ಪ್ರಮಾಣ ಶೇ. 10.7 ಇದ್ದಿತು. ಅದೇ ವರ್ಷ ನಿರುದ್ಯೋಗ ಸಮಸ್ಯೆ ಇರುವ ದೇಶಗಳಲ್ಲಿ ಭಾರತ 122ನೇ ಸ್ಥಾನದಲ್ಲಿತ್ತು.

### ವಿಧಗಳು

ನಿರುದ್ಯೋಗಕ್ಕೆ ಕಾರಣಗಳ ಆಧಾರದ ಮೇಲೆ ವಿಂಗಡಿಸಿದರೆ ಅದರಲ್ಲಿ ನಾನಾ ವಿಧಾನಗಳಿರುವುದು ಗೋಚರವಾಗುತ್ತದೆ. ಅವುಗಳು ಯಾವುವೆಂದರೆ,

1. **ವರ್ತುಲ ನಿರುದ್ಯೋಗ:** ದೇಶಗಳಲ್ಲಿ ಉಂಟಾಗುವ ವ್ಯಾಪಾರದ ವರ್ತುಲಗಳಿಗೆ ಅನುಗುಣವಾಗಿ ಈ ಬಗೆಯ ನಿರುದ್ಯೋಗ ಉಂಟಾಗುತ್ತದೆ. ಆರ್ಥಿಕ ವ್ಯವಸ್ಥೆಯಲ್ಲಿನ ಏರಿಳಿತಗಳಿಂದಾಗಿ ಉದ್ಯೋಗಾವಕಾಶಗಳಲ್ಲೂ ಏರಿಳಿತ ಉಂಟಾಗುವುದೇ ನಿರುದ್ಯೋಗಕ್ಕೆ ಕಾರಣಗಳು. ಇದನ್ನು ತಪ್ಪಿಸಿಕೊಳ್ಳಲು ಮುಂದುವರೆದ ಆರ್ಥಿಕ ವ್ಯವಸ್ಥೆಗಳಲ್ಲಿ ಸಾಧ್ಯವಿಲ್ಲ. ಏಕೆಂದರೆ ಇದು ಮುಖ್ಯವಾಗಿ ಕಂಡುಬರುವುದೇ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ. ಇನ್ನೂ ಮುಂದುವರೆಯುತ್ತಿರುವ ದೇಶಗಳಲ್ಲಿ ಈ ಬಗೆಯ ನಿರುದ್ಯೋಗ ಕಂಡುಬರುವುದಿಲ್ಲ.

2. **ತಾಂತ್ರಿಕತೆಯ ನಿರುದ್ಯೋಗ:** ತಾಂತ್ರಿಕಾಭಿವೃದ್ಧಿಯು ನಿರುದ್ಯೋಗಕ್ಕೆ ಕಾರಣವಾಗುತ್ತದೆ. ಯಂತ್ರಗಳನ್ನು ಕಂಡುಹಿಡಿದು ಅವುಗಳನ್ನು ಜನರ ಬದಲು ಉಪಯೋಗಿಸಿದಾಗ ಇಂತಹ ನಿರುದ್ಯೋಗ ಉಂಟಾಗುತ್ತದೆ. ಉದಾಹರಣೆಗೆ: ಕಂಪ್ಯೂಟರ್‌ಗಳನ್ನು ಬಳಸಿದಾಗ ಅವುಗಳು ನಾಲ್ಕು ಜನರು ಮಾಡುವ ಕೆಲಸವನ್ನು ನಿರ್ವಹಿಸಿದರೆ ಆಗ ಮಾನವ ಶಕ್ತಿಯ ಬಳಕೆ ಕಡಿಮೆಯಾಗಿ ನಿರುದ್ಯೋಗ ಉಂಟಾಗುತ್ತದೆ. ಭೂಮಿಯನ್ನು ಅಗೆಯಲು ಬಳಸುವ ಯಂತ್ರಗಳು,

Digitised by Bharatavani, CIIL

ಭಾರವನ್ನು ಎತ್ತಲು ಬಳಸುವ ಕ್ರೇನ್‌ಗಳು, ರೋಬೋಟ್‌ಗಳು, ಮುಂತಾದವುಗಳಿಂದ ಮನುಷ್ಯರ ಶ್ರಮದ ಬೇಡಿಕೆ ಕಡಿಮೆಯಾಗುತ್ತದೆ.

3. **ಸಂರಚನಾತ್ಮಕ ನಿರುದ್ಯೋಗ:** ಆರ್ಥಿಕ ವ್ಯವಸ್ಥೆಯಲ್ಲಿನ ಮೂಲ ಬದಲಾವಣೆ ಅಥವಾ ಸಂರಚನೆಯ ಬದಲಾವಣೆಯಿಂದ ನಿರುದ್ಯೋಗ ಉಂಟಾಗಬಹುದು. ವಸ್ತುಗಳ ಉತ್ಪಾದನಾ ರೀತಿಗಳಲ್ಲಿ, ಸಾಗಣೆ ವ್ಯವಸ್ಥೆಯಲ್ಲಿ, ಮುಂತಾದವುಗಳಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಮಾಡುವ ಬದಲಾವಣೆಗಳು ನಿರುದ್ಯೋಗಕ್ಕೆ ಕಾರಣವಾಗಬಹುದು. ಇಂತಹ ಬದಲಾವಣೆಗಳಿಂದ ಉಂಟಾಗುವ ನಿರುದ್ಯೋಗವೇ ಭಾರತದಲ್ಲಿ ಮುಖ್ಯವಾಗಿ ಕಂಡುಬರುವ ನಿರುದ್ಯೋಗವಾಗಿದೆ. ಆರ್ಥಿಕ ವ್ಯವಸ್ಥೆಯ ಸಂರಚನೆಯ ಬದಲಾವಣೆ ಮುಂದುವರೆಯುತ್ತಿರುವ ರಾಷ್ಟ್ರಗಳ ಮುಖ್ಯ ಲಕ್ಷಣವಾಗಿರುತ್ತದೆ.

4. **ಹೊಂದಾಣಿಕಾ ದೋಷದಿಂದುಂಟಾಗುವ ನಿರುದ್ಯೋಗ:** ಶ್ರಮದ ಬೇಡಿಕೆ ಮತ್ತು ಪೂರೈಕೆಗಳ ಪ್ರಮಾಣಗಳಲ್ಲಿ ಉಂಟಾಗುವ ಹೊಂದಾಣಿಕೆಯ ದೋಷದಿಂದ ನಿರುದ್ಯೋಗ ಸಮಸ್ಯೆ ತಲೆದೋರಬಹುದು. ಉದಾಹರಣೆಗೆ: ಒಂದು ಕೈಗಾರಿಕೆಯಲ್ಲಿನ ಶ್ರಮದ ಬೇಡಿಕೆಯ ಪ್ರಮಾಣಕ್ಕಿಂತ ಅದರ ಪೂರೈಕೆ ಹೆಚ್ಚಿದಾಗ, ಎಲ್ಲರಿಗೂ ಕೆಲಸ ದೊರಕುವುದಿಲ್ಲ. ಆಗ ಅವರಲ್ಲಿ ನಿರುದ್ಯೋಗ ಉಂಟಾಗುತ್ತದೆ.

5. **ಋತುಮಾನದ ಬದಲಾವಣೆಯಿಂದುಂಟಾಗುವ ನಿರುದ್ಯೋಗ:** ಆರ್ಥಿಕ ಚಟುವಟಿಕೆಯು ಋತುಮಾನಕ್ಕೆ ಅನುಗುಣವಾಗಿ ಬದಲಾವಣೆಯನ್ನು ಹೊಂದುವುದರಿಂದ ಎಲ್ಲಾ ಕಾಲದಲ್ಲೂ ಎಲ್ಲರಿಗೂ ಕೆಲಸವಿಲ್ಲದೆ ಹೋಗಬಹುದು. ಉದಾಹರಣೆಗೆ: ಸಕ್ಕರೆ ಕಾರ್ಖಾನೆಯು ಕಬ್ಬು ದೊರೆಯುವ ಕಾಲದಲ್ಲಿ ಪೂರ್ಣಾವಧಿ ಕೆಲಸವನ್ನು ಮಾಡುತ್ತದೆ. ಆಗ ಕಾರ್ಖಾನೆಯಲ್ಲಿ ಎಲ್ಲರಿಗೂ ಕೆಲಸವಿರುತ್ತದೆ. ಆದರೆ ಕಬ್ಬಿನ ಕಾಲ ಮುಗಿದಮೇಲೆ ಕಾರ್ಖಾನೆಯ ಕೆಲಸ ಸ್ಥಗಿತ ಹೊಂದುವುದರಿಂದ ಕೆಲಸಗಾರರಿಗೆ ಕೆಲಸವಿಲ್ಲದೆ ನಿರುದ್ಯೋಗಿಗಳಾಗುತ್ತಾರೆ. ಮತ್ತೆ ಕಬ್ಬಿನ ಪೂರೈಕೆಯಾದಾಗ ಪುನಃ ಕೆಲಸಗಾರರಿಗೆ ಕೆಲಸ ದೊರಕುತ್ತದೆ. ಇದು ಅನೇಕ ಕ್ಷೇತ್ರಗಳಲ್ಲಿ ಸಾಮಾನ್ಯವಾದ ವಿಷಯವಾಗಿದೆ.

6. **ತಾತ್ಕಾಲಿಕ ನಿರುದ್ಯೋಗ:** ಕಾರ್ಖಾನೆಗಳಲ್ಲಿನ ಮುಷ್ಕರ ಮುಂತಾದ ಘಟನೆಗಳಿಂದ ಕಾರ್ಖಾನೆಗಳು ಮುಚ್ಚಲ್ಪಟ್ಟಾಗ ನಿರುದ್ಯೋಗ ಉಂಟಾಗುತ್ತದೆ. ಮತ್ತೆ ಮುಷ್ಕರ ಮುಗಿದು ಕಾರ್ಖಾನೆ ಪ್ರಾರಂಭವಾದರೆ ಉದ್ಯೋಗ ದೊರಕುತ್ತದೆ. ಹೀಗೆ ಸ್ವಲ್ಪಕಾಲ ನಿರುದ್ಯೋಗ ಒದಗುವುದಕ್ಕೆ ತಾತ್ಕಾಲಿಕ ನಿರುದ್ಯೋಗ ಎನ್ನುವರು.

7. **ವೇಷ ಬದಲಿಸಿಕೊಂಡ ನಿರುದ್ಯೋಗ:** ಇದು ನಿರುದ್ಯೋಗವಾದರೂ ವೇಷ ಬದಲಿಸಿಕೊಂಡು ಉದ್ಯೋಗದಂತೆ ಕಾಣುವುದರಿಂದ ಇದಕ್ಕೆ ವೇಷ ಬದಲಿಸಿಕೊಂಡ ನಿರುದ್ಯೋಗ ಎನ್ನಬಹುದು. ಇದು ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ ಸಾಧ್ಯ. ಉದಾಹರಣೆಗೆ: ಹಳ್ಳಿಯಲ್ಲಿ ತಂದೆ ವ್ಯವಸಾಯ ಮಾಡುತ್ತಿದ್ದಾನೆ. ಅವನ ವಾರ್ಷಿಕ ಸಂಪಾದನೆ 50,000 ರೂಪಾಯಿ. ಈಗ ಅವನ ಮಗನೂ ಅವನೊಂದಿಗೆ ವ್ಯವಸಾಯದಲ್ಲಿ ತೊಡಗುತ್ತಾನೆ. ಆದರೂ ಅವನ ವಾರ್ಷಿಕ ಆದಾಯದಲ್ಲಿ ಏನೂ ಬದಲಾವಣೆಯಾಗದಿದ್ದರೆ, ಅವನ ಮಗ ಹೆಸರಿಗೆ ಮಾತ್ರ ವ್ಯವಸಾಯಗಾರ. ಆದರೆ ಅವನಿಂದ ಸಂಪಾದನೆಯಲ್ಲೇನೂ ಹೆಚ್ಚಳವಾಗಲಿಲ್ಲ. ಇದು ವೇಷ ಬದಲಿಸಿಕೊಂಡ ನಿರುದ್ಯೋಗಕ್ಕೆ ಒಂದು ಉದಾಹರಣೆ. ಇಂತಹ ನಿರುದ್ಯೋಗ ಪಟ್ಟಣ ಪ್ರದೇಶಗಳಲ್ಲಿ ಸಾಧ್ಯವಿಲ್ಲ.

8. **ಗ್ರಾಮಾಂತರ ಪ್ರದೇಶದಲ್ಲಿನ ಅರೆನಿರುದ್ಯೋಗ:** ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗವಿಲ್ಲದೆ ಅರೆನಿರುದ್ಯೋಗವನ್ನೂ ಕಾಣಬಹುದು. ಇದಕ್ಕೆ ಮುಖ್ಯವಾಗಿ ಕಾರಣ ವ್ಯವಸಾಯದ ಕೆಲಸವು ವರ್ಷ ಪೂರ್ತಿ ಇಲ್ಲದೇ ಇರುವುದೇ ಆಗಿದೆ. ಹಳ್ಳಿಯ ಕೆಲಸಗಾರರು ವರ್ಷದಲ್ಲಿ ಕಡೇ ಪಕ್ಷ 270 ದಿನಗಳ ಕಾಲ ಕೆಲಸವನ್ನು ಹೊಂದಿದ್ದರೆ ಅವರು ಪೂರ್ಣ ಉದ್ಯೋಗಿಗಳೆಂದು ಪರಿಗಣಿಸಲಾಗುತ್ತದೆ. ಅದಕ್ಕಿಂತ ಕಡಿಮೆಯಾದರೆ ಅವರನ್ನು ಅರೆನಿರುದ್ಯೋಗಿಗಳು ಎಂದು ಪರಿಗಣಿಸಲಾಗುತ್ತದೆ.

9. **ನಗರ ಪ್ರದೇಶಗಳಲ್ಲಿನ ನಿರುದ್ಯೋಗ:** ಪಟ್ಟಣ ಪ್ರದೇಶಗಳಿಗೆ ಉದ್ಯೋಗಗಳನ್ನು ಹುಡುಕಿಕೊಂಡು ಸುತ್ತ ಮುತ್ತಲ ಪ್ರದೇಶಗಳಿಂದ ಜನರು ಬರುತ್ತಾರೆ. ಆದರೆ ಎಲ್ಲರಿಗೂ ಉದ್ಯೋಗ ದೊರಕುವುದಿಲ್ಲ. ಇದಕ್ಕೆ ಕಾರಣ ಶ್ರಮದ ಬೇಡಿಕೆಯ ಪ್ರಮಾಣಕ್ಕಿಂತ ಅದರ ಪೂರೈಕೆಯ ಪ್ರಮಾಣವು ಹೆಚ್ಚಾಗುವುದೇ ಆಗಿದೆ. ಹೀಗೆ ನಗರ ಪ್ರದೇಶಗಳಲ್ಲಿ ನಿರುದ್ಯೋಗ ಉಂಟಾಗುತ್ತದೆ. ಇದರಲ್ಲಿ ಅರೆ ನಿರುದ್ಯೋಗವೂ ಇರುತ್ತದೆ. ಹಾಗೆಂದರೆ ಕೆಲಸಗಾರರಿಗೆ ದೊರಕಬೇಕಾದ ಸರಿಯಾದ ಕೂಲಿ ದೊರಕದೇ ಇರುವುದು. ಎಂದರೆ ಕಡಿಮೆ ಕೂಲಿಗೆ ಕೆಲಸ ಮಾಡಲು ಕಾರಣವೇನೆಂದರೆ, ಕೆಲಸಗಾರರಿಗೆ ತಮ್ಮ ವೇತನದ ನಿರ್ಧಾರ ಮಾಡುವ ಸ್ವಾತಂತ್ರ್ಯ ಇಲ್ಲದೇ ಇರುವುದು. ಪಟ್ಟಣ ಪ್ರದೇಶಗಳಲ್ಲಿ ಕೈಗಾರಿಕಾ ಕೆಲಸಗಾರರ ನಿರುದ್ಯೋಗ ಇರುತ್ತದೆ ಮತ್ತು ಮಧ್ಯಮ ವರ್ಗದ ವಿದ್ಯಾವಂತರ ನಿರುದ್ಯೋಗವನ್ನೂ ಕಾಣಬಹುದು.

ಭಾರತದಲ್ಲಿನ ನಿರುದ್ಯೋಗ ನಿವಾರಣೆಗೆ ಭಾರತ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿದೆ. ಅವುಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಾವಕಾಶಗಳ ಯೋಜನೆ ಬಹಳ ಮುಖ್ಯವಾದುದು. ಇದನ್ನು 1977ರಲ್ಲಿ ಪ್ರಾರಂಭಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯವಲ್ಲದೆ ಇತರ ಉದ್ಯೋಗಗಳನ್ನು ಸೃಷ್ಟಿಸಿ ನಿರುದ್ಯೋಗಿ ಜನರಿಗೆ ಉದ್ಯೋಗ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಹಳ್ಳಿಗಳಲ್ಲಿ ರಸ್ತೆ, ಕೆರೆ, ಬಾವಿ, ಗಿಡ ನೆಡುವುದು, ಮುಂತಾದ ಕೆಲಸಗಳನ್ನು ಒದಗಿಸುವುದರ ಮೂಲಕ ಜನರಿಗೆ ಉದ್ಯೋಗಗಳನ್ನು ಒದಗಿಸುವುದು ಈ ಯೋಜನೆಯ ಗುರಿ.

ಜವಾಹರ್ ರೋಜ್‌ಗಾರ್ ಯೋಜನೆ ಎಂಬುದನ್ನು ಭಾರತ ಸರ್ಕಾರವು ದಿನಾಂಕ 28, ಏಪ್ರಿಲ್ 1989ರಂದು ಪ್ರಾರಂಭಿಸಿತು. ಇದರಲ್ಲಿ ಮೊದಲು ಪ್ರಾರಂಭಿಸಲಾಗಿದ್ದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯನ್ನೂ ವಿಲೀನಗೊಳಿಸಲಾಯಿತು.

–ಎಚ್.ಎಸ್.ಆರ್.

## ನೈದಾನಿಕ ಪರೀಕ್ಷೆಗಳು

ಒಂದು ರೋಗದ ಕಾರಣ ಮತ್ತು ಸ್ವಭಾವವನ್ನು ಗುರುತಿಸುವ ಪ್ರಕ್ರಿಯೆಗೆ ನೈದಾನಿಕತೆ ಎಂದು ಅರ್ಥ. ಈ ಪದವನ್ನು ಹೆಚ್ಚಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಬಳಸುತ್ತಾರೆ. ಒಬ್ಬ ರೋಗಿಯ ರೋಗದ ಇತಿಹಾಸವನ್ನು ಪ್ರಯೋಗಾಲಯದ ಪರೀಕ್ಷೆಗೆ ಒಳಪಡಿಸಲಾದ ರೋಗಕ್ಕೆ ಸಂಬಂಧಪಟ್ಟ ರೋಗಾಣುಗಳ ಮಾಹಿತಿಗಳನ್ನು ಪರಿಶೀಲಿಸುವ ಒಂದು ಪ್ರಕ್ರಿಯೆ ಎಂದು ಹೇಳಬಹುದು. ಈ ಮಾಹಿತಿಗಳಿಗೆ ಸಂಬಂಧಪಟ್ಟ ಪರಿಶೀಲನೆ ಹಾಗೂ ಮೌಲ್ಯಮಾಪನವನ್ನು ಆಧರಿಸಿ ರೋಗಕ್ಕೆ ಕಾರಣಗಳ ಬಗ್ಗೆ ತಾಳುವ

Digitised by Bharatavani, CIIL

ಅಭಿಪ್ರಾಯವೇ ನೈದಾನಿಕತೆ. ರೋಗಿಯು ವ್ಯಕ್ತಪಡಿಸುವ ರೋಗದ ಚಿಹ್ನೆಗಳನ್ನು ಆಧರಿಸಿ ರೋಗವನ್ನು ಗುರುತಿಸುವ ಒಂದು ಕಾರ್ಯ ಅಥವಾ ಪ್ರಕ್ರಿಯೆಗೆ ನೈದಾನಿಕ ಎಂದು ಕರೆಯುತ್ತಾರೆ. ಈ ಪರಿಕಲ್ಪನೆಯನ್ನು ಶಿಕ್ಷಣ ಕ್ಷೇತ್ರಕ್ಕೆ ಅಳವಡಿಸಿಕೊಂಡು ಶಿಕ್ಷಕರೇ ವೈದ್ಯರಂತೆ ಕಾರ್ಯನಿರ್ವಹಿಸುತ್ತಾರೆ. ವಿದ್ಯಾರ್ಥಿಗಳ ಕಲಿಕೆಯಲ್ಲಿನ ದೌರ್ಬಲ್ಯಗಳನ್ನು ಗುರುತಿಸಿ ಪರಿಹಾರ ಸೂಚಿಸಲು ರಚಿಸಲಾಗುವ ಪರೀಕ್ಷೆಗಳೇ ನೈದಾನಿಕ ಪರೀಕ್ಷೆಗಳು. ತರಗತಿಯ ಕಾರ್ಯ ಚಟುವಟಿಕೆಗಳಲ್ಲಿ ಅವರು ಭಾಗವಹಿಸುವ ಪರಿಯನ್ನೇ ಒಂದು ಪ್ರಯೋಗಾಲಯದ (ವೈದ್ಯಕೀಯ) ಮಾಹಿತಿಗಳಿಗೆ ಹೋಲಿಸಬಹುದಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿಯ ಕಲಿಕೆಗೆ ಎದುರಾದ ತೊಂದರೆಗಳನ್ನು ಹಾಗೂ ಅವುಗಳಿಗೆ ಕಾರಣಗಳನ್ನು ಕಂಡು ಹಿಡಿಯಲಾಗುವುದು. ಈ ಕಾರಣಗಳು ಅನೇಕ ಬಗೆಯಾಗಿರಬಹುದು. ಇಲ್ಲಿ ವೈಯಕ್ತಿಕ ಅಧ್ಯಯನ ಮಾಡಬೇಕಾಗಿರುವುದರಿಂದ ಅದಕ್ಕೆ ಸಂಬಂಧಿಸಿದ ಘಟನೆಗಳು, ದಾಖಲೆಗಳು, ವಿದ್ಯಾರ್ಥಿ ಆರೋಗ್ಯ, ಮನಃಸ್ಥಿತಿ, ಪರಿಸರ, ಮನೆಯ ವಾತಾವರಣ ಇತ್ಯಾದಿಗಳನ್ನು ನೈದಾನಿಕ ಪರೀಕ್ಷೆಯನ್ನು ತಯಾರಿಸಬೇಕಾದಾಗ ಪರಿಗಣಿಸಬೇಕಾಗುತ್ತದೆ.

**ನೈದಾನಿಕ ಪರೀಕ್ಷೆಗಳು:** ವಿದ್ಯಾರ್ಥಿಗಳ ಕಲಿಕೆಯಲ್ಲಿನ ಸಮಸ್ಯೆಗಳನ್ನಾಗಲಿ, ಕುಂದುಕೊರತೆಗಳನ್ನಾಗಲಿ ಕಂಡು ಹಿಡಿಯುವ ಪರೀಕ್ಷೆಯೇ ನೈದಾನಿಕ ಪರೀಕ್ಷೆಯಾಗಿದೆ.

ಕಾರ್ಟರ್ ವಿ. ಗುಡ್ ಪ್ರಕಾರ "ಮಕ್ಕಳ ಕಲಿಕಾ ದೋಷಗಳನ್ನು ಕಂಡು ಹಿಡಿಯುವ ಪರೀಕ್ಷೆಗಳೇ ನೈದಾನಿಕ ಪರೀಕ್ಷೆಗಳು." ಹೆರ್ರಿಮನ್‌ರವರ ಪ್ರಕಾರ "ನೈದಾನಿಕ ಪರೀಕ್ಷೆ ಎಂದರೆ ಮಕ್ಕಳ ಕಲಿಕಾ ದೌರ್ಬಲ್ಯಗಳನ್ನು ಅಥವಾ ತಪ್ಪುಗಳನ್ನು ಗುರುತಿಸುವಲ್ಲಿ ಸಹಾಯಕವಾಗುವ ಪರೀಕ್ಷೆಗಳು."

ಪ್ರತಿಯೊಬ್ಬ ವಿದ್ಯಾರ್ಥಿಯು ಪರಿಣಾಮಕಾರಿಯಾಗಿ ಕಲಿತು, ಉತ್ತಮ ಸಾಧನೆಯನ್ನು ಮಾಡಬೇಕಾಗಿದೆ. ಅಷ್ಟೇ ಅಲ್ಲದೆ ತಾನು ಕಲಿತಂತಹ ವಿಷಯಗಳಲ್ಲಿ ಉನ್ನತ ಪ್ರಭುತ್ವ ಸಾಧಿಸಿ ತನ್ನ ನಿಜ ಜೀವನದಲ್ಲಿ ಅದನ್ನು ಅನ್ವಯಿಸುವಂತಾಗಬೇಕು. ಇದಕ್ಕೆ ಪೂರಕವಾಗಿ ಶಿಕ್ಷಕರು ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಗೆ ಉತ್ಕೃಷ್ಟವಾದ ಹಾಗೂ ಪರಿಣಾಮಕಾರಿಯಾದ ಮಾರ್ಗದರ್ಶನ ನೀಡಬೇಕಾದದ್ದು ಅವರ ಮಹತ್ತರವಾದ ಹೊಣೆಗಾರಿಕೆಯಾಗಿರುತ್ತದೆ.

ಆದ್ದರಿಂದ ವಿದ್ಯಾರ್ಥಿಯ ಕಲಿಕೆಗೆ ಸಹಾಯವಾಗಲು ಅವನಲ್ಲಿರುವ ಕುಂದುಕೊರತೆಗಳನ್ನು ಗುರುತಿಸುವುದು ಹಾಗೂ ಶಕ್ತಿ ಸಾಮರ್ಥ್ಯಗಳನ್ನು ಅರಿತುಕೊಳ್ಳುವುದು ಅತ್ಯವಶ್ಯಕವಾಗಿದೆ. ಇಂತಹ ಕುಂದುಕೊರತೆಗಳನ್ನು ಕಂಡುಕೊಳ್ಳಲು ಸೂಕ್ತಕಾರ್ಯಕ್ರಮ ಹಾಕಿಕೊಳ್ಳುವುದು ಅಗತ್ಯ. ಅಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಾಯ ಮಾಡುವುದೇ ಈ ನೈದಾನಿಕ ಪರೀಕ್ಷೆಗಳು.

**ನೈದಾನಿಕ ಪರೀಕ್ಷೆಗಳನ್ನು ತಯಾರಿಸುವ ಕ್ರಮ:** ಈ ಪರೀಕ್ಷೆಗಳು ವಿದ್ಯಾರ್ಥಿಗಳ ಜ್ಞಾನ, ತಿಳಿವಳಿಕೆಗಳನ್ನು ಅಳೆಯುವುದಕ್ಕಿಂತ ಹೆಚ್ಚಾಗಿ ಅವರು ವಿಷಯದ ಕಲಿಕೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಹಾಗೂ ತೊಂದರೆಗಳನ್ನು ಪತ್ತೆ ಹಚ್ಚುವುದಾಗಿದೆ. ಅವುಗಳಿಗೆ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸುವುದು ಕೂಡ ನೈದಾನಿಕ ಪರೀಕ್ಷೆಗಳ ಉದ್ದೇಶವಾಗಿದೆ. ಇಂತಹ ಪರೀಕ್ಷೆಗಳು ಸಾಧನಾ ಪರೀಕ್ಷೆಗಳಿಗಿಂತ ಭಿನ್ನವಾಗಿರುತ್ತದೆ. ಇಂತಹ ಪರೀಕ್ಷೆಗಳನ್ನು ವಿಷಯಕ್ಕೆ ಸಂಬಂಧಪಟ್ಟ ಶಿಕ್ಷಕರೇ ತಯಾರಿಸಬೇಕು. ಇಂತಹ ಪರೀಕ್ಷೆಗಳ ರಚನೆಯಿಂದ ಕೆಲವೊಮ್ಮೆ ಶಿಕ್ಷಕರು ತಮ್ಮ ಬೋಧನೆಯ ವಿಧಾನದಲ್ಲಿ ಅಗತ್ಯವಾದ ಸಕಾರಾತ್ಮಕ ಮಾರ್ಪಾಡನ್ನು ತಂದುಕೊಳ್ಳಬಹುದು.

ವಿದ್ಯಾರ್ಥಿಗಳ ಗುಣದೋಷಗಳನ್ನು ಮತ್ತು ಅವುಗಳ ಕ್ಲಿಷ್ಟತೆಯ ಮಟ್ಟವನ್ನು ತಿಳಿದು ಪರಿಹಾರವನ್ನು ನೀಡಲು ತಯಾರಿಸುವ ನೈದಾನಿಕ ಪರೀಕ್ಷೆಗಳ ಹಂತಗಳು ಹೀಗಿವೆ;

1. **ಕಲಿಕೆಯಲ್ಲಿನ ದೋಷ ಗುರುತಿಸುವುದು:** ಕಲಿಕೆಯಲ್ಲಿ ತೊಂದರೆ ಇರುವ, ಕಡಿಮೆ ಸಾಧಕ ಮಕ್ಕಳನ್ನು ಗುರುತಿಸುವುದು. ಇದಕ್ಕೆ ಪರೀಕ್ಷೆಗಳಲ್ಲಿ (ಘಟಕ ಪರೀಕ್ಷೆ ಅಥವಾ ಇನ್ನಾವುದೇ ರೀತಿಯ ಶಿಕ್ಷಕ ತಯಾರಿಸಿದ ಪರೀಕ್ಷೆ) ಪಡೆದ ಅಂಕಗಳನ್ನು ಪರಿಗಣಿಸಬಹುದು.ಆ ವಿಷಯಗಳಲ್ಲಿನ ಕಾರ್ಯನಿರ್ವಹಣೆಯ ಗುಣಮಟ್ಟವನ್ನು ವಿಶ್ಲೇಷಿಸಿ ಅದನ್ನೇ ಮಾನದಂಡವಾಗಿ ಪರಿಗಣಿಸಬಹುದು.

2. **ಗುರುತಿಸಿದ ದೋಷಗಳನ್ನು ವಿಶ್ಲೇಷಿಸಿ ಕಾರಣ ಪತ್ತೆಹಚ್ಚುವುದು:** ಅಂಶ ವಿಶ್ಲೇಷಣೆ (Item analysis) ಮಾಡಿ, ಯಾವುದರಲ್ಲಿ ಬಹಳ ತೊಂದರೆಗಳನ್ನು ಎದುರಿಸುತ್ತಿದ್ದಾರೆ, ಎಷ್ಟು ವಿಷಯವನ್ನು/ಪರಿಕಲ್ಪನೆಯನ್ನು ತಪ್ಪಾಗಿ ನಮೂದಿಸಿದ್ದಾರೆ ಎಂದು ಪತ್ತೆ ಹಚ್ಚುವುದು. ನಂತರ ವ್ಯಕ್ತಿಗತವಾಗಿ ವಿದ್ಯಾರ್ಥಿಯನ್ನು ಮೌಖಿಕ ಸಂದರ್ಶನ ಮಾಡಿ ಕಾರಣಗಳನ್ನು ಪತ್ತೆ ಹಚ್ಚುವುದು, ಸಹಪಾಠಿಗಳೊಂದಿಗೆ ಚರ್ಚಿಸಿ ವಿಷಯ ಕ್ರೋಡಿಕರಿಸುವುದು. ತಂದೆ ತಾಯಿ/ಪೋಷಕರೊಂದಿಗೆ ಚರ್ಚಿಸಿ ಕಾರಣ ಪತ್ತೆ ಹಚ್ಚಲು ಪ್ರಯತ್ನಿಸುವುದು. ಕಡೆಯದಾಗಿ ಶಿಕ್ಷಕರು ತಮ್ಮ ಬೋಧನಾ ವಿಧಾನಗಳ ಬಗ್ಗೆ ಸ್ವ–ವಿಶ್ಲೇಷಣೆ ಮಾಡುವುದು. ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಯ ವಿಷಯಕ್ಕೆ ಸಂಬಂಧಿಸಿದ ನೋಟ್ಸ್, ಪುಸ್ತಕಗಳು, ಗೃಹ ಕಾರ್ಯ ಪುಸ್ತಕ, ಆತನ ಬರವಣಿಗೆಯ ಶೈಲಿ, ಇತರ ವಿಷಯಗಳ ಬಗ್ಗೆ ತೋರುವ ಆಸಕ್ತಿ, ಆತನ ಆರೋಗ್ಯ, ಶಾಲಾ ಹಾಜರಿ ಕ್ರಮ, ಅಭ್ಯಾಸ ಮಾಡುವ ಶೈಲಿ ಎಲ್ಲವನ್ನು ಕೂಲಂಕಷವಾಗಿ ಪರಿಶೀಲಿಸಬೇಕು.

3. **ಕಲಿಕೆಯಲ್ಲಿನ ದೋಷಗಳನ್ನು ಪತ್ತೆಹಚ್ಚಿ ಅವುಗಳನ್ನು ವರ್ಗೀಕರಿಸುವುದು:** ಕಲಿಕೆಯಲ್ಲಿನ ದೋಷಗಳಿಗೆ ನಿಖರವಾದ ಕಾರಣಗಳು ತಿಳಿದ ನಂತರ ಆ ಕಲಿಕಾ ತೊಂದರೆಗಳನ್ನು ನಿರ್ದಿಷ್ಟಕಗಳಿಗೆ ಅನುಗುಣವಾಗಿ ವರ್ಗೀಕರಿಸುವುದು. (ಜ್ಞಾನ, ತಿಳುವಳಿಕೆ, ಅನ್ವಯ ಹಾಗೂ ಕೌಶಲ) ಅನಂತರ ಇದಕ್ಕೆ ಸೂಕ್ತ ಪರಿಹಾರ ಕಾರ್ಯಕ್ರಮದ ಯೋಜನೆ ರೂಪಿಸುವುದು. ಈ ಹಂತದಲ್ಲಿ ಮಕ್ಕಳು ಪ್ರಶ್ನೆಗಳಿಗೆ ಉತ್ತರಿಸಿದ ರೀತಿ, ತಪ್ಪಾಗಿ ನಮೂದಿಸಿರುವ ಪರಿಕಲ್ಪನೆಗಳು ಯಾವ ವಲಯಕ್ಕೆ ಸಂಬಂಧಿಸಿವೆ ಎಂದು ಪರಿಶೀಲಿಸಿ ವರ್ಗೀಕರಿಸಬೇಕು.

ಹಂತಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತೆ ಇದೆ:

1. ತಪ್ಪುಗಳ ಪಟ್ಟಿಯನ್ನು ಆಧರಿಸಿ ವಿಷಯ ವಿಶ್ಲೇಷಣೆಯನ್ನು ಮಾಡಬೇಕು.
2. ಸಾಮರ್ಥ್ಯ–ಬೋಧನಾಂಶ–ಕಲಿಕಾಂಶಗಳ ಪಟ್ಟಿ ಮಾಡಬೇಕು.
3. ಈ ಅಂಶಗಳನ್ನು ಸುಲಭದಿಂದ ಕ್ಲಿಷ್ಟತೆಯೆಡೆಗೆ ಜೋಡಿಸಬೇಕು.
4. ಪ್ರತಿಯೊಂದು ಕಲಿಕಾಂಶಕ್ಕೂ ಕನಿಷ್ಠ ಐದು ಪ್ರಶ್ನೆಗಳನ್ನಾದರೂ ರಚಿಸಬೇಕು.
5. ಸುಮಾರು ಎಲ್ಲ ಮಾದರಿಯ ಪ್ರಶ್ನೆಗಳು ಒಳಗೊಂಡಂತೆ ಎಲ್ಲ ಕಲಿಕಾ ದೋಷಗಳನ್ನು ಪತ್ತೆಹಚ್ಚಲು ಪೂರಕವಾದ ಪ್ರಶ್ನೆ ಪತ್ರಿಕೆ ತಯಾರಿಸಬೇಕು.
6. ಉತ್ತರಿಸಲು ಸೂಚನೆಗಳನ್ನು ಸರಿಯಾಗಿ ನೀಡಿ ಸಮಯವನ್ನು ನಿಗದಿ ಪಡಿಸಬೇಕು.

Digitised by Bharatavani, CIIL

7. ನಂತರ ಮೌಲ್ಯಮಾಪನ ನಿರ್ವಹಿಸುವುದು.
8. ಉತ್ತರಗಳ ಕಲಿಕಾ ಮಟ್ಟವನ್ನು ವಿಶ್ಲೇಷಿಸುವುದು.
9. ಪರೀಕ್ಷಾ ಫಲಿತಾಂಶವನ್ನು ಆಧರಿಸಿ ವಿದ್ಯಾರ್ಥಿಗಳನ್ನು ಪರಿಹಾರಾತ್ಮಕ ಕಾರ್ಯಕ್ಕೆ ಸಜ್ಜುಗೊಳಿಸುವುದು.
10. ವಿದ್ಯಾರ್ಥಿಗಳ ಕಲಿಕಾ ದೋಷಗಳ ಅನುಸಾರ ಪರಿಹಾರಾತ್ಮಕ ಬೋಧನೆಯನ್ನು ಯೋಜಿಸುವುದು.

**ನೈದಾನಿಕ ಪರೀಕ್ಷೆಗಳ ಉಪಯೋಗಗಳು**

1. ವಿದ್ಯಾರ್ಥಿಗಳ ಕಲಿಕೆಯಲ್ಲಿನ ದೋಷಗಳನ್ನು ಪತ್ತೆಹಚ್ಚುವುದರ ಜೊತೆಗೆ ಅವರ ಸಾಧನೆ ಹಾಗೂ ಕಲಿಕಾ ಸಾಮರ್ಥ್ಯವನ್ನು ತಿಳಿಯಲು ಸಾಧ್ಯ.
2. ವೈಯಕ್ತಿಕವಾಗಿ ವಿದ್ಯಾರ್ಥಿಗಳ ಕಲಿಕಾ ಸಮಸ್ಯೆಗಳ ಕಡೆ ಗಮನ ಹರಿಸಲು ಸಾಧ್ಯವಾಗುತ್ತದೆ.
3. ವ್ಯಕ್ತಿಗತವಾಗಿ ವಿದ್ಯಾರ್ಥಿಗಳ ಕಲಿಕಾ ವೇಗಕ್ಕೆ ಅನುಗುಣವಾಗಿ ವಿಷಯವನ್ನು ಅರ್ಥೈಸಲು ಸಾಧ್ಯವಾಗುತ್ತದೆ.
4. ವಿದ್ಯಾರ್ಥಿಗಳ ಕಲಿಕಾ ಸಮಸ್ಯೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚಿ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸಬಹುದಾಗಿದೆ.
5. ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಲು ನೆರವಾಗುವುದು.
6. ಶಿಕ್ಷಕರು ತಮ್ಮ ಬೋಧನೆಯ ಕ್ರಮವನ್ನು ಸುಧಾರಿಸಿಕೊಳ್ಳಲು ಅನುವು ಮಾಡುತ್ತದೆ.
7. ಪಠ್ಯವಿಷಯದಲ್ಲಿನ ದೋಷಗಳನ್ನು ಕಂಡುಹಿಡಿಯಲು, ಅವುಗಳನ್ನು ಹೋಗಲಾಡಿಸಲು ನೆರವಾಗುವುದು.
8. ವಿದ್ಯಾರ್ಥಿಗಳಿಗೆ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ತಮ್ಮ ಕಲಿಕೆಯನ್ನು ಸುಧಾರಿಸಿಕೊಳ್ಳಲು ಮತ್ತು ತಮ್ಮ ಸಾಧನೆಯ ಮಟ್ಟ ಸುಧಾರಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.
9. ವಿದ್ಯಾರ್ಥಿಗಳಿಗೆ ಕಲಿಯುವ ಕಡೆ ಆಸಕ್ತಿ ಮೂಡುವಂತೆ ಪ್ರೇರೇಪಿಸುತ್ತದೆ.
10. ಸೂಕ್ತ ಪರಿಹಾರಾತ್ಮಕ ಕಲಿಕಾ ಚಟುವಟಿಕೆಗಳನ್ನು ಯೋಜಿಸಲು ನೆರವಾಗುತ್ತದೆ.

–ಎಂ.ಸ.ಪಾ.

# ಪ

## ಪಠ್ಯಕ್ರಮ – ಅರ್ಥ, ಅಂಗಗಳು

ಇಂಗ್ಲಿಷ್‌ನ ಕರಿಕ್ಯುಲಮ್ (Curriculum) ಗೆ ಸಂವಾದಿಯಾಗಿ 'ಪಠ್ಯಕ್ರಮ' ಪದ ಶಿಕ್ಷಣ ಕ್ಷೇತ್ರದಲ್ಲಿ ಬಳಕೆಯಾಗುತ್ತಿದೆ. ಗ್ರೀಸ್‌ನ 'ರಥ ಓಡಿಸುವ ಪಂದ್ಯ' ಪ್ರಸಿದ್ಧವಾದುದು. ಈ ಪಂದ್ಯದಲ್ಲಿ ಸ್ಪರ್ಧಿಸುವ ರಥಗಳು ಓಡುತ್ತಿದ್ದ ಪಥಕ್ಕೆ ಲ್ಯಾಟಿನ್‌ಭಾಷೆಯಲ್ಲಿ 'ಕರಿಕ್ಯುಲಂ'ಎನ್ನುತ್ತಿದ್ದರು. ಲ್ಯಾಟಿನ್‌ನ ಕತ್ರಿರೆ (currec) ಎಂದರೆ 'ಪಂದ್ಯ'. ಈ ರೀತಿಯಲ್ಲಿ ಬಳಕೆಯಾದ ಪದ ಕರಿಕುಲಮ್‌ನ ಮೂಲ ಕ್ಯುರೆಕ್ ಕ್ರಿ.ಪೂ 4ನೇ ಶತಮಾನದ ಪ್ಲೇಟೋ ಮತ್ತು ಅರಿಸ್ಟಾಟಲ್ಲರು, ಗ್ರೀಕ್ ನಾಗರಿಕತೆಯ ಕಾಲದಲ್ಲಿ ಶಾಲೆಯಲ್ಲಿ ಬೋಧಿಸುತ್ತಿದ್ದ ಸಾಂಪ್ರದಾಯಕ/ಪುರಾತನ ಸಾಹಿತ್ಯ ಸಂಸ್ಕೃತಿಗಳಿಗೆ ಈ ಪದವನ್ನು ಬಳಸಿರುವುದು ಐತಿಹಾಸಿಕ ಸಂಗತಿ.

ಅಂದಿನಿಂದ ಇಂದಿನವರೆಗೆ ಈ ಪದದ ಅರ್ಥ – ವ್ಯಾಪ್ತಿ, ಧ್ಯೇಯಗಳು ವಿಸ್ತೃತವಾಗುತ್ತಾ ಬಂದಿದೆ, ಹಾಗಾಗಿ 'ಪಠ್ಯಕ್ರಮ' ಎಂಬುವುದಕ್ಕೆ 120ಕ್ಕೂ ಹೆಚ್ಚು ವ್ಯಾಖ್ಯೆಗಳನ್ನು ಗುರ್ತಿಸಬಹುದಾಗಿದೆ. ಕೆಲವನ್ನು ಇಲ್ಲಿ ಉಲ್ಲೇಖಿಸಿದೆ.

ಜಾನ್ ಫ್ರಾಂಕ್ಲಿನ್ ಬೊಬ್ಬಿಟ್ (John Franklin Bobbilt) ರವರು ಕರಿಕುಲಮ್ ಬಗ್ಗೆ 1918ರಲ್ಲಿ ತಂದ ಪುಸ್ತಕ ಮೊದಲನೆಯದೆಂದು ಪರಿಗಣಿಸಲಾಗಿದೆ, ಅವರು "ತನ್ನ ಮೂಲವನ್ನು ಗ್ರೀಕ್‌ರಥ ಪಂದ್ಯದಲ್ಲಿ ಕಾಣುವ ಕರಿಕ್ಯುಲಮ್‌ನ ವಿಚಾರ/ಆಲೋಚನೆ (Idea) ಯು 'ಮಕ್ಕಳು ವಯಸ್ಕರಾಗಿ ಆ ಸಮಾಜದಲ್ಲಿ ಯಶಸ್ವಿಯಾಗಲು ಬೇಕಾದ ಕಾರ್ಯಾಚರಣೆ ಹಾಗೂ ಅನುಭವಗಳನ್ನು ಒದಗಿಸುವುದಾಗಿದೆ ಎಂದಿದ್ದಾರೆ. ಸಾಮಾಜಿಕ ತಂತ್ರಗಾರಿಕೆ ಕಲಿಕೆಗೆ ಬೇಕಾದ ಅಖಾಡ (ರಂಗ) ಸ್ಥಳ, ಶಾಲೆಯೆಂದೂ ಇದೊಂದು ಆದರ್ಶವೆಂದು ಕರೆದಿರುವ ಬಾಬೊಬ್ಬಿಟ್‌ರ ವಿಚಾರವು ಸಮಕಾಲೀನ ಪಠ್ಯಕ್ರಮ ವಿಚಾರಧಾರೆಯ ಬೆಳಕಿನಲ್ಲಿ ಚರ್ಚಿತವಾಗುವಂತಹದು.

ಗುಡ್ (1959)ರವರು "ವಿದ್ಯಾರ್ಥಿಗಳು ಯಾವುದಾದರೂ ಔದ್ಯೋಗಿಕ, ವೃತ್ತಿಪರ ಕ್ಷೇತ್ರಕ್ಕೆ ಪ್ರವೇಶ ಪಡೆಯಲು ಅಥವಾ ಸ್ನಾತಕ ಪ್ರವೇಶಕ್ಕೆ ಪ್ರಮಾಣಪತ್ರ ಪಡೆಯಲು ಶಾಲೆಗಳು ಒದಗಿಸುವ ನಿರ್ದಿಷ್ಟ ಅಥವಾ ಸಾಮಾನ್ಯ ಬೋಧನಾ ಕ್ರಮದ ವಿಷಯಗಳ ಒಂದು ಸಾಮಾನ್ಯ ವ್ಯವಸ್ಥೆ ಪಠ್ಯಕ್ರಮ ಎಂದಿದ್ದಾರೆ." ಮಾಧ್ಯಮಿಕ ಶಿಕ್ಷಣ ಆಯೋಗವು (1952–53) ಆಧುನಿಕ ಶೈಕ್ಷಣಿಕ ವಿಚಾರಧಾರೆಯಲ್ಲಿ ಸಾಂಪ್ರದಾಯಿಕವಾಗಿ ಬೋಧಿಸುತ್ತಿದ್ದ ಶೈಕ್ಷಣಿಕ ವಿಷಯಗಳೇ ಅಲ್ಲದೆ, ವಿದ್ಯಾರ್ಥಿಯು ಶಾಲೆ, ತರಗತಿ, ಪ್ರಯೋಗಾಲಯ, ಆಟದ ಮೈದಾನ, ಕಾರ್ಯಾಗಾರ (Work Shop) ಗಳಲ್ಲಿ ಪಡೆಯುವ ವೈವಿಧ್ಯಮಯ ಅನುಭವಗಳ ಜೊತೆಗೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವೆ ಜರುಗುವ ಅನೌಪಚಾರಿಕ ಸಂಪರ್ಕಗಳು ಸೇರಿ, ಅವನ ಸಮತೋಲಿತ ವ್ಯಕ್ತಿತ್ವ ನಿರ್ಮಾಣಕ್ಕೆ ನೆರವಾಗುವುದು ಪಠ್ಯಕ್ರಮ ಎಂಬ ಅರ್ಥ ವ್ಯಕ್ತಪಡಿಸಿದೆ.

ಮ್ಯಾಕ್ ಡೊನಾಲ್ಡ್‌ರವರು (1978) ಪಠ್ಯಕ್ರಮವು ಕಲಿಕೆಗೆ ಬೇಕಾದ ಪ್ರಪಂಚವನ್ನು ರೂಪಿಸಬೇಕಾದುದು ಯಾವುದು ಮತ್ತು ಅದು ಹೇಗೆ ಅದನ್ನು ರೂಪಿಸಬೇಕು. ಒಳ್ಳೆಯ ಜೀವನವೆಂದರೇನು? ಒಳ್ಳೆಯ ವ್ಯಕ್ತಿ ಎಂದರೇನು? ಒಳ್ಳೆಯ ಸಮಾಜವೆಂದರೇನು? ಎಂಬುದರ ಅಧ್ಯಯನ ಎಂದಿದ್ದಾರೆ.

ಗ್ರಂಡೈ (Grundy 1987) ರವರು ಪಠ್ಯಕ್ರಮವು ಒಂದು ಪರಿಕಲ್ಪನೆಯಲ್ಲ, ಅದೊಂದು ಸಾಂಸ್ಕೃತಿಕ ರಚನೆ (Cultural Con-

Digitised by Bharatavani, CIIL

struction) ಅದು ಮಾನವನ ಅನುಭವಗಳ ಹೊರಗೆ ಹಾಗೂ ಅವನಿಗಿಂತ ಪೂರ್ವದಲ್ಲಿ ಸೃಜಿತವಾದ ಅಮೂರ್ತ ಪರಿಕಲ್ಪನೆಯಾಗಿರದೇ ಮಾನವನ ಶೈಕ್ಷಣಿಕ ಅಭ್ಯಾಸಗಳ ಸಮೂಹವನ್ನು ವ್ಯವಸ್ಥಿತಗೊಳಿಸಿರುವ ವಿಧಾನವಾಗಿದೆ ಎಂದಿದ್ದಾರೆ.

ಕ್ಲೀಬಾರ್ಡ್ (Klie Bard - 1992)ರವರು ಪಠ್ಯಕ್ರಮವನ್ನು 'ಸಾಮಾಜಿಕ, ರಾಜತಾಂತ್ರಿಕ, ಆರ್ಥಿಕ ಹಾಗೂ ಬೌದ್ಧಿಕ ಪ್ರಭಾವಗಳಿಂದಾಗಿ ಶಾಲೆಯು ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುವುದರ ಬಗ್ಗೆ ಪ್ರಚಲಿತವಿರುವ ಪರಿಕಲ್ಪನೆಗಳಿಗೂ ಪ್ರಸ್ತುತ ಇರುವ ಸಾಮಾಜಿಕ ಸ್ಥಿತಿಗೂ ನಡುವೆ ನಡೆಯುತ್ತಿರುವ ಪರಸ್ಪರ ಪ್ರಭಾವೀ ಸಂಕೀರ್ಣತೆಗಳ ಸಂದಿಗ್ಧ ಫಲ' ಎಂದಿದ್ದಾರೆ.

ಲಾಂಗ್ ಸ್ಟ್ರೀಟ್ ಹಾಗೂ ಶೇರ್ (1993) ಎಂಬ ತಜ್ಞರು 'ಪಠ್ಯಕ್ರಮ' ಒಂದು ಐತಿಹಾಸಿಕ ಆಕಸ್ಮಿಕ. ಅದು ಒಂದು ನಿರ್ದಿಷ್ಟ ಉದ್ದೇಶಗಳ ಕಾರ್ಯಸಿದ್ಧಿಗಾಗಿ ರೂಪಿತವಾಗದೆ ಶೈಕ್ಷಣಿಕ ನಿರ್ಧಾರಗಳಲ್ಲಿ ಹೆಚ್ಚಿನ (ವಿಸ್ತೃತವಾದ) ಸಂಕೀರ್ಣತೆಗೆ ಧ್ವನಿತವಾಗಿ ವಿಕಸಿತವಾಗಿದೆ ಎಂದಿದ್ದಾರೆ.

ಯುನೆಸ್ಕೋ ಪ್ರಕಾರ 'ನಿರ್ದಿಷ್ಟವಾದ, ಅಪೇಕ್ಷಿತವಾದ ಕಲಿಕಾಫಲವನ್ನು ಪಡೆಯುವುದಕ್ಕಾಗಿ ಕಲಿಕಾ ಸರಣಿಗಳ ವ್ಯವಸ್ಥೆ ಎಂದು ಪಠ್ಯಕ್ರಮವನ್ನು ವ್ಯಾಖ್ಯಾನಿಸಬಹುದಾಗಿದೆ. ಪಠ್ಯಕ್ರಮದ ವಿಕಸನವು ಉತ್ತಮವಾದ 'ಕಾರ್ಯಸಿದ್ಧಿಯ ಅನ್ವೇಷಣೆ (ಶೋಧದಲ್ಲಿ)ಯಲ್ಲಿ ಯೋಜಿತವಾದ ಬದಲಾವಣೆಗಳನ್ನು ಆಚರಣೆಗೆ ತರುವ ಗುರಿಗಾಗಿರುವ ಆಚರಣೆ ಅಭ್ಯಾಸಗಳ ಸಮೂಹ. ಪಠ್ಯಕ್ರಮದ ವಿಕಸನದ ಪರಿಕಲ್ಪನಾತ್ಮಕ ಅರಿವು ಹಾಗೂ ಪಠ್ಯಕ್ರಮದ ಬದಲಾವಣೆಯ ಚಲನಶೀಲತೆ ಹಾಗೂ ನಿರಂತತೆಯ ಸಹಜತೆ, ತತ್ವಶಾಸ್ತ್ರ ಹಾಗೂ ನಿಯಮಗಳನ್ನು ಶ್ಲಾಘಿಸುವುದು ಅವಶ್ಯಕ. ಪಠ್ಯಕ್ರಮವೆಂದರೆ ಶಾಲೆಯು ಕೊಡುವ ಪೂರ್ಣ ವ್ಯಾಸಂಗಯೋಜನೆ. ಪಠ್ಯವಸ್ತು (Syllabus) (ಅಭ್ಯಾಸ ಪತ್ರಿಕೆ) ಎಂದರೆ ಒಂದು ಅಧ್ಯಯನ ವಿಷಯದ ಸ್ಥೂಲ ಚಿತ್ರಣ ಎಂದು ಯುನೆಸ್ಕೊ ಪಠ್ಯಕ್ರಮದ ಬಗ್ಗೆ ಹೇಳಿದೆ.

**ಪಠ್ಯಕ್ರಮದ ಸಿದ್ಧಾಂತ ಹಾಗೂ ಆಚರಣೆಯ 4 ಮಾರ್ಗಗಳೆಂದರೆ**

1. ಜ್ಞಾನ ಸಂವಹನದ ಘಟಕವಾಗಿ ಪಠ್ಯಕ್ರಮ, 2. ವಿದ್ಯಾರ್ಥಿಗಳಲ್ಲಿ ನಿಗದಿತವಾದ ಸಾಧನೆಯನ್ನು ತರುವ ಪ್ರಯತ್ನ ಅರ್ಥಾತ್ ಉತ್ಪಾದನೆಯಾಗಿ ಪಠ್ಯಕ್ರಮ. 3. ಪರಿವರ್ತನೆಯ ಪರಂಪರೆಯಾಗಿ ಪಠ್ಯಕ್ರಮ, 4. ಅಂಗೀಕೃತವಾದ ಪದ್ಧತಿ/ಸಂಪ್ರದಾಯವಾಗಿ ಪಠ್ಯಕ್ರಮ.

**ಪಠ್ಯಕ್ರಮವನ್ನು ವಿನ್ಯಾಸಗೊಳಿಸುವಾಗ ಉತ್ತರಿಸಬೇಕಾದ ನಾಲ್ಕು ಪ್ರಮುಖ ಪ್ರಶ್ನೆಗಳೆಂದರೆ,**

1. ಯಾವ ಶೈಕ್ಷಣಿಕ ಸಂಕಲ್ಪಗಳನ್ನು ಸಾಧಿಸಬೇಕಾಗಿದೆ? 2. ಈ ಸಂಕಲ್ಪಗಳನ್ನು (ಉದ್ದೇಶಗಳನ್ನು) ಸಾಧಿಸಲು ನೆರವಾಗಬಹುದಾದ ಶೈಕ್ಷಣಿಕ ಅನುಭವಗಳು ಯಾವುವು? 3. ಯಾವ ರೀತಿಯಲ್ಲಿ ಇವುಗಳನ್ನು ಪರಿಣಾಮಕಾರಿಯಾಗಿ ವ್ಯವಸ್ಥೆಗೊಳಿಸಬಹುದು? 4. ಈ ಸಂಕಲ್ಪಗಳು ಈಡೇರಿವೆ ಎಂದು ನಿರ್ಧರಿಸುವ ಬಗೆ ಹೇಗೆ? ಎಂದು ಆರ್. ಟೈಲರ್ ಎಂಬ ತಜ್ಞರು (1949) ಸವಾಲು ಹಾಕಿದ್ದಾರೆ. ಡಾ॥ ಡೆಲ್ಲಾಫಿಕ್‌ರವರನ್ನು ಉಲ್ಲೇಖಿಸಿ 2003ರಲ್ಲಿ ಡಾ॥ ಅಂಸ್ಟೈರ್‌ರವರು ಪಠ್ಯಕ್ರಮವನ್ನು ಹಿಮ್ಮುಖವಾಗಿ ವ್ಯಾಖ್ಯಾನಿಸಿರುವುದು ಹೀಗೆ.

- ಯಾವ ಫಲಗಳನ್ನು ನಾವು ಅಪೇಕ್ಷಿಸಿದ್ದೇವೆ?
- ಹಾಗಾಗಿ ಯಾವ ವಿಷಯಗಳು ಅವಶ್ಯಕವಾಗಿದೆ?
- ಅವುಗಳನ್ನು ಬೋಧಿಸುವ ಕಲಿಸುವ ಅತ್ಯುತ್ತಮ ವಿಧಾನ ಯಾವುದು?
- ನಮ್ಮ ಕಾರ್ಯವಿಧಾನವನ್ನು ಮೌಲ್ಯಮಾಪನ ಮಾಡುವ ಕ್ರಮ ಯಾವುದು?

ಭಾರತದಲ್ಲಿ ಶಾಲಾ ಪಠ್ಯಕ್ರಮವನ್ನು ಉತ್ತಮವಾದ ಗುಣಮಟ್ಟದಲ್ಲಿರುವಂತೆ ನಿರಂತರವಾಗಿ ಪರಿಷ್ಕರಿಸುವುದು ಎನ್‌ಸಿಇಆರ್‌ಟಿಯ ಪ್ರಮುಖ ಕಾರ್ಯಗಳಲ್ಲಿ ಸೇರಿದೆ; ಪಠ್ಯಕ್ರಮ ವಿಕಸನ ಕಾರ್ಯಕ್ಕೆ ಅದು ಮಾರ್ಗದರ್ಶಿ ಸೂತ್ರ ನಿಯಮಾವಳಿಗಳನ್ನು ಸೂಚಿಸುತ್ತದೆ.

**ಅವೆಂದರೆ**

1. ಶಾಲೆಯ ಹೊರಗಿನ ಜೀವನಕ್ಕೆ ಜ್ಞಾನವನ್ನು ಜೋಡಿಸುವುದು.
2. ಅಂಧಾನುಕರಣೆಯ ವಿಧಾನದಿಂದ ಕಲಿಕೆಯಾಗುವುದನ್ನು ತಪ್ಪಿಸುವುದು.
3. ಪಠ್ಯಪುಸ್ತಕಗಳಾಚೆಯು ಸಾಗುವಂತೆ ಪಠ್ಯಕ್ರಮವನ್ನು ಸಂಪದ್ಭರಿತವಾಗಿಸುವುದು.
4. ಪರೀಕ್ಷೆಗಳನ್ನು 'ಕಠಿಣ'ವಾಗಿಸದೆ ನಮ್ಯ (Flexible) ವಾಗಿಸುವುದು.

ಶಿಕ್ಷಣದ ಸಾಮಾಜಿಕ ಸಂದರ್ಭ ಒತ್ತಡಗಳ ವಿರುದ್ಧವಾಗಿ ಎಚ್ಚರಿಕೆಯನ್ನು ಅದು ಪ್ರಸ್ತಾಪಿಸುತ್ತದೆ.

ಕೆ.ಜಿ. ಸೈಯುದ್ದೀನ್‌ರವರು ಪಠ್ಯಕ್ರಮವನ್ನು ಮೂಲತಃ ಮಗುವನ್ನು ದೈನಂದಿನ ಕಾರ್ಯಾಚರಣೆಯ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡುವ ಕಾರ್ಯದ ಸಾಧನ ನಂತರದಲ್ಲಿ ಅವನು/ಳು ತನ್ನ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಿಕೊಳ್ಳಬೇಕಾದ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡುವುದು ಎಂದಿದ್ದಾರೆ. ಕನ್ನಿಂಗ್ ಹ್ಯಾಂಮ್‌ರವರು ಕಲಾಮಂದಿರದಲ್ಲಿ ತನ್ನ ಆದರ್ಶಕ್ಕೆ ಅನುಗುಣವಾಗಿ ತನ್ನಲ್ಲಿರುವ ವಸ್ತುವನ್ನು ರೂಪಿಸುವ ಕಲಾಕಾರನ ಕೈಯಲ್ಲಿನ ಸಾಧನ" ಎಂದಿದ್ದಾರೆ. ಇಲ್ಲಿ ಕಲಾಮಂದಿರ – ಶಾಲೆ, ಆದರ್ಶಗಳು – ಶಿಕ್ಷಣದ ಧ್ಯೇಯಗಳು ವಸ್ತು–ವಿದ್ಯಾರ್ಥಿಗಳು ಕಲಾಕಾರ – ಶಿಕ್ಷಣ, ಸಾಧನ–ಪಠ್ಯಕ್ರಮ. ಯಾವುದೇ ಶಾಲೆಯ ಪಠ್ಯಕ್ರಮವಿರಲಿ ಅದು ಕಲಿಯುವವನ ಬೌದ್ಧಿಕ ವೈಯಕ್ತಿಕ, ಸಾಮಾಜಿಕ ಹಾಗೂ ಶಾರೀರಿಕ ವಿಕಸನವನ್ನು ಅಭಿವೃದ್ಧಿಗೊಳಿಸುವ ಸರ್ವಸ್ವವನ್ನೂ ಹೊಂದಿರಬೇಕು. ಸಂವಿಧಾನ ಬದ್ಧವಾದ ಪಠ್ಯಕ್ರಮದ ಉದ್ದೇಶವೆಂದರೆ ಮಕ್ಕಳು ಸಾಫಲ್ಯತೆಯನ್ನು ಹೊಂದಬೇಕು, ಆತ್ಮವಿಶ್ವಾಸ ತಳೆಯಬೇಕು ಮತ್ತು ಜವಾಬ್ದಾರಿಯುತ ಪ್ರಜೆಗಳಾಗಬೇಕು. ನಮ್ಮ ಸಮಾಜದಲ್ಲಿನ ಮೌಲ್ಯಗಳು ಪಠ್ಯಕ್ರಮದಲ್ಲಿ ಪ್ರತಿಫಲಿತವಾಗಬೇಕು, ಮತ್ತು ಅವು ಶಾಲಾ ಕಾರ್ಯಗಳಲ್ಲಿ ಹಾಸು ಹೊಕ್ಕಾಗಬೇಕು, ಮಕ್ಕಳು ಉತ್ತಮ ಮಟ್ಟವನ್ನು ಕಾಯ್ದುಕೊಳ್ಳುವ ಪ್ರಜ್ಞಾವಂತರಾಗಿ ನೆಲೆಯೂರುವಂತಾಗಬೇಕು – ಎಂಬ ಆಶಯದ ಮಾತುಗಳು ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಇವೆ.

ಪಠ್ಯಕ್ರಮವು ಉದ್ದೇಶ (ಉದ್ದಿಷ objective)ಗಳು ವಿಷಯ, ಬೋಧನಾಕ್ರಮ / ಕಲಿಕಾಕ್ರಮ, ಮೌಲ್ಯಮಾಪನವೆಂಬ ಘಟಕಗಳನ್ನು ಹೊಂದಿರಬೇಕು. ಶಿಕ್ಷಣದ ತಾತ್ವಿಕ ಬುನಾದಿಯಿಂದ ಉದ್ದಿಷ್ಟಗಳು, ಬಹುತೇಕ ಪ್ರಭಾವಿತವಾಗಿದ್ದು, ಶಿಕ್ಷಣದ ಧ್ಯೇಯವನ್ನು ಧ್ವನಿಸುತ್ತವೆ, ಇವು ನಿರ್ದಿಷ್ಟ ಕಲಿಕೆಯ/ವರ್ತನೆಯಲ್ಲಿನ ಬದಲಾವಣೆಯನ್ನು ಸೂಚಿಸುತ್ತವೆ.

Digitised by Bharatavani, CIIL

ಕಲಿಯುವವನ ಸಾಮರ್ಥ್ಯ, ಕಲಿತವನ ಸಮಾಜದ ನಿರೀಕ್ಷೆಗಳ ವ್ಯಾಪ್ತಿಯನ್ನು ಹೊಂದಿದ, ವ್ಯವಸ್ಥಿತವಾದ ವಿಷಯಗಳನ್ನು ಭವಿಷ್ಯತ್ತಿನಲ್ಲಿ ಪ್ರಯೋಜನಕಾರಿಯಾಗುವಂತೆ ಆಯ್ಕೆ ಮಾಡುವುದರೊಂದಿಗೆ ಉದ್ದಿಷ್ಟಗಳ ಈ ಡೇರಿಕೆಯಾಗಬೇಕಾಗುತ್ತದೆ. ಉದ್ದಿಷ್ಟ ಹಾಗೂ ವಿಷಯಗಳನ್ನು ಕಲಿಯುವವನಲ್ಲಿ ಮನೋಭಾವಗಳ ಮೇಲೆ ಪರಿಣಾಮ ಬೀರುವ ಹಾಗೂ ವಿದ್ಯಾರ್ಥಿ/ಶಿಕ್ಷಕ/ವಿಷಯಗಳಲ್ಲಿ ಯಾವುದು ಪ್ರಧಾನವೆಂದು ನಿಷ್ಕರ್ಷೆಯಾಗಿರುತ್ತದೋ ಅದಕ್ಕೆ ಅನುಗುಣವಾದ ವಿಷಯಸಂವಹನ ಪ್ರಕ್ರಿಯೆ ಬೋಧನಾ/ಕಲಿಕಾ ಕ್ರಮವಾಗಿರುತ್ತದೆ. ಉದ್ದಿಷ್ಟಕ್ಕೆ ಅನುಗುಣವಾದ, ವಿಷಯಗಳ ಆಯ್ಕೆ ಅದಕ್ಕೆ ಅನ್ವಯವಾಗುವ ಬೋಧನಾಕ್ರಮ ಬಳಸಿದ್ದರಿಂದ ಆಗಿರುವ ಸಾಫಲ್ಯವನ್ನು ಅಳೆಯುವುದು ಮೌಲ್ಯಮಾಪನ ಈ ನಾಲ್ಕು ಪರಸ್ಪರ ಅವಲಂಬಿತವಾಗಿರುತ್ತದೆ. ಪಠ್ಯಕ್ರಮವು ಶಿಕ್ಷಣದ ಪ್ರಕ್ರಿಯೆಯಲ್ಲಿ ಮುಖ್ಯವಾದ ಸಾಮಗ್ರಿ ಇದು ಶೈಕ್ಷಣಿಕ ಗುರಿಯನ್ನು ವಿಷಯ ಹಾಗೂ ಅನುಭವಗಳನ್ನಾಗಿ ಪರಿವರ್ತಿಸುತ್ತದೆ. ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಕ್ರಮ ರಚನೆಯ ಬಗ್ಗೆ ಕೆಲವು ಮಾರ್ಗದರ್ಶಿ ಸೂತ್ರಗಳು, ತತ್ವಗಳು ಹಾಗೂ ವಿನ್ಯಾಸಗಳು ಪ್ರಚಲಿತವಾಗಿವೆ.

**ಪಠ್ಯಕ್ರಮರಚನೆಯ ತತ್ವ/ನಿಯಮಗಳು**

ಪಠ್ಯಕ್ರಮವನ್ನು ರಚಿಸುವಾಗ ಕೆಲವು ಪ್ರಮುಖವಾದ ಮಾರ್ಗದರ್ಶಿ ತತ್ವ/ನಿಯಮಗಳನ್ನು ಗಮನಿಸಬೇಕು.

- ಶಿಕ್ಷಣವು ಶಿಶುಕೇಂದ್ರಿತವಾಗಿರಬೇಕಾದ ತತ್ವದಲ್ಲಿ ಆಯ್ಕೆ ಮಾಡುವ ವಿಷಯ ಹಾಗೂ ಅನುಭವಗಳು ಮಗುವಿನ ವಯಸ್ಸು ಹಾಗೂ ಮಾನಸಿಕ ಮಟ್ಟಕ್ಕೆ ಅನುಗುಣವಾಗಿದ್ದು ಚಟುವಟಿಕೆಗಳಿಂದ ಕೂಡಿದ್ದು, ವಿದ್ಯಾರ್ಥಿಗಳ ವೈವಿಧ್ಯಮಯ ಆಸಕ್ತಿಗಳಿಗೆ ಪೂರಕವಾಗಿರಬೇಕಾಗುತ್ತದೆ.

- ವ್ಯಾಸಂಗದ ಸ್ವರೂಪ ಹಾಗೂ ಉದ್ದಿಷ್ಟಗಳ ತತ್ವದಲ್ಲಿ ವ್ಯಾಸಂಗದ ಅವಧಿ, ಸ್ವರೂಪ ಹಾಗೂ ಉದ್ದಿಷ್ಟಗಳು ಹಾಗೂ ಶಿಕ್ಷಣದ ಮಟ್ಟ ಗಮನದಲ್ಲಿರಬೇಕಾಗುತ್ತದೆ.

- ವಿವಿಧ ವಿಷಯಗಳನ್ನು ಪರಸ್ಪರ ಪೂರಕ ಹಾಗೂ ಸಮನ್ವಯಗೊಳಿಸುವ ತತ್ವವು ವಿಷಯಗಳ ಸಂಬಂಧವನ್ನುಂಟುಮಾಡಿ ಸಮಗ್ರ ಕಲಿಕೆಗೆ ದಾರಿಮಾಡುತ್ತದೆ.

- ಸಂರಕ್ಷಣೆಯ ತತ್ವವು ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯ ಪರಂಪರೆಯನ್ನು ಸಂರಕ್ಷಿಸುವ ಹಾಗೂ ಭವಿಷ್ಯಕ್ಕೆ ಸಂವಹನಗೊಳಿಸುವ ಆಶಯ ಹೊಂದಿದ್ದು ಸಾಮಾಜಿಕ ನ್ಯಾಯ, ರಾಷ್ಟ್ರೀಯ ಪ್ರಜ್ಞೆ ಮುಂತಾದವುಗಳ ಬಗ್ಗೆ ಬದ್ಧತೆಯನ್ನು ಧ್ವನಿಸುತ್ತದೆ.

- ನಮ್ಯತೆ (flexibility) ಯ ತತ್ವವು ಸ್ಥಳ, ಸನ್ನಿವೇಶ (ಸಂದರ್ಭ)ಗಳಿಗೆ ಹೊಂದಾಣಿಕೆ ಮಾಡುವಂತೆ ಮಾರ್ಪಡಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸುತ್ತದೆ.

- ದೂರಗಾಮಿತ್ವ, ದೂರದೃಷ್ಟಿತತ್ವವು ವಿದ್ಯಾರ್ಥಿಯ ವರ್ತಮಾನ ಹಾಗೂ ಭವಿಷ್ಯತ್‌ನ ಅವಶ್ಯಕತೆಗಳನ್ನು ಗಮನಿಸಿ ಅದಕ್ಕನುಗುಣವಾಗಿ ಜ್ಞಾನ, ಕೌಶಲ, ಮನೋಭಾವ ಹಾಗೂ ಮೌಲ್ಯಗಳನ್ನು ಬದಲಾಗುತ್ತಿರುವ ಸಾಮಾಜಿಕ ಹಾಗೂ ತಂತ್ರಜ್ಞಾನೀಯ ಶೋಧಗಳ ಹೊಸ ಸನ್ನಿವೇಶಕ್ಕೂ ಹೊಂದಿಕೊಳ್ಳಲು ಅನುವು ನೀಡುವಂತೆ ಸಂಯೋಜಿಸುವುದಾಗಿದೆ.

- ಸಮಷ್ಟಿ ಪ್ರಜ್ಞೆ/ಸಮುದಾಯಕೇಂದ್ರಿತ ತತ್ವವು (Community Centre) ವ್ಯಕ್ತಿಯ ಬೆಳವಣಿಗೆಯು ಸಮಾಜ/ಸಮುದಾಯದಲ್ಲಿ ಯಶಸ್ವಿಯಾಗಲು ಬೇಕಾದ ಸಾಮಾಜಿಕ ಅಪೇಕ್ಷೆಗಳು, ಆಸಕ್ತಿಗಳು, ಮೌಲ್ಯಗಳು ಹಾಗೂ ಧ್ಯೇಯೋದ್ದೇಶಗಳನ್ನು ಒಳಗೊಂಡಿರುವುದನ್ನು ಪ್ರತಿಪಾದಿಸುತ್ತದೆ.

–ಎನ್.ಕಾ.ರಾ

## ಪಠ್ಯಕ್ರಮಕ್ಕೆ ವ್ಯವಸ್ಥಾ ಉಪಕ್ರಮ

ಆಧುನಿಕ ಯುಗದ ಶಿಕ್ಷಣ ರಂಗದಲ್ಲಿ ಪಠ್ಯಕ್ರಮದ ವಿಕಾಸದಲ್ಲಿ ಉಂಟಾದ ನೂತನ ಆವಿಷ್ಕಾರವೆಂದರೆ ವ್ಯವಸ್ಥಾ ಉಪಕ್ರಮದ ಅಳವಡಿಕೆ. ಇದನ್ನು ವ್ಯವಸ್ಥಾ ಮಾರ್ಗ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಬೋಧನೆ ಮತ್ತು ಕಲಿಕೆಯು ಅತ್ಯಂತ ಪರಿಣಾಮಕಾರಿಯಾಗಿ ಜರುಗುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಇದು ಇಂದಿನ ಯುಗದಲ್ಲಿ ಆಧುನಿಕ ತಂತ್ರಜ್ಞಾನ ಮತ್ತು ವೈಜ್ಞಾನಿಕ ವಿಧಾನಗಳನ್ನೊಳಗೊಂಡು ವ್ಯಕ್ತಿಯ ಮನೋಯೋಜನೆ ವಿಷಯವನ್ನು ಸಾದರಪಡಿಸಲು ಸಹಾಯಕವಾಗುತ್ತದೆ.

ವ್ಯವಸ್ಥಾ ಉಪಕ್ರಮದ ಆಗಮನವು ಎರಡನೇ ಜಾಗತಿಕ ಮಹಾಯುದ್ಧದ ಕಾಲದಲ್ಲಿ ಆಯಿತು. ಇದನ್ನು ಪ್ರಾರಂಭದಲ್ಲಿ ವಿವಿಧ ಬಗೆಯ ಯುದ್ಧ ನೀತಿಯನ್ನು ರೂಪಿಸುವುದಕ್ಕಾಗಿ ಉಪಯೋಗಿಸುತ್ತಿದ್ದರು. ತದನಂತರ ಇದರ ಒಳ್ಳೆಯ ವಿಚಾರಗಳನ್ನು ಔದ್ಯೋಗಿಕ ರಂಗದಲ್ಲಿ ಬಳಸಲಾಯಿತು. ಔದ್ಯೋಗಿಕ ಬೆಳವಣಿಗೆ ಮತ್ತು ವಿವಿಧ ಉದ್ಯಮಗಳ ಸಂರಚನೆ, ನಿರ್ವಹಣೆ ಮುಂತಾದವುಗಳಲ್ಲಿ ವಿವಿಧ ವ್ಯವಸ್ಥೆಗಳನ್ನು ರೂಪಿಸಲಾಯಿತು. ಹೀಗೆಯೇ ವ್ಯವಸ್ಥಾ ಉಪಕ್ರಮವು ವಾಣಿಜ್ಯ ರಂಗದಲ್ಲೂ ಬಳಸಲಾಯಿತು. ಇತ್ತೀಚೆಗೆ ಇದನ್ನು ಶೈಕ್ಷಣಿಕ ರಂಗದಲ್ಲಿ ಅಳವಡಿಸಲಾಗಿದೆ. ಶೈಕ್ಷಣಿಕ ಕಾರ್ಯಕ್ರಮಗಳ ರೂಪುರೇಷೆ, ಸಂಘಟನೆ, ಆಡಳಿತ, ವಿಸ್ತರಣೆ, ಹಾಗೂ ಸಂಶೋಧನೆ ಮೊದಲಾದವುಗಳಿಗಾಗಿ ಇದನ್ನು ಅನುಸರಿಸುತ್ತಿದ್ದಾರೆ. ಹಾಗೂ ಬೋಧನೆ, ಕಲಿಕೆಯನ್ನು ಪರಿಣಾಮಕಾರಿಯಾಗಿಸಲು ಇದನ್ನು ಬಳಸಿಕೊಳ್ಳಲಾಗುತ್ತಿದೆ.

ವ್ಯವಸ್ಥಾ ಉಪಕ್ರಮ (System Approach) ಎಂಬ ಪದವನ್ನು ಮೊದಲ ಬಾರಿಗೆ ಬಳಸಿದ ಕೀರ್ತಿ ಬೆರಡ್ಡಾಲನ್‌ಫಿ ಎಂಬುವವರಿಗೆ ಸಲ್ಲುತ್ತದೆ. ಈ ಪದ ಜೀವಶಾಸ್ತ್ರದ ಮೂಲದಿಂದ ಉತ್ಪತ್ತಿಯಾಗಿದೆ. ವ್ಯವಸ್ಥಾ ಉಪಕ್ರಮವನ್ನು ಈಗಾಗಲೇ ತಿಳಿಸಿರುವಂತೆ ವ್ಯವಸ್ಥಾ ಮಾರ್ಗ, ವ್ಯವಸ್ಥೆಯ ಕ್ರಮ, ವ್ಯವಸ್ಥೆಯ ರೀತಿ, ವ್ಯವಸ್ಥಾ ವಿಶ್ಲೇಷಣೆ, ವ್ಯವಸ್ಥೆಯ ತಾಂತ್ರಿಕತೆ, ಕ್ರಿಯಾತ್ಮಕ ಸಂಶೋಧನಾಕಾರ್ಯ ಎಂದೂ ಹಲವಾರು ರೀತಿಯಲ್ಲಿ ಹೆಸರಿಸಬಹುದಾಗಿದೆ.

'ವ್ಯವಸ್ಥೆ' ಎಂಬ ಪದವು ಪರಸ್ಪರ ಸಂಬಂಧಿತವಾದ ಬಿಡಿ ಬಿಡಿ ಭಾಗಗಳ ಸಮಷ್ಟಿಯನ್ನು ಸೂಚಿಸುತ್ತದೆ. ಈ ಪದದ ಸೂಕ್ತವಾದ ಅರ್ಥವನ್ನು ಈ ಕೆಳಗಿನ ಕೆಲವು ತಜ್ಞರುಗಳು ನೀಡಿರುವ ಹೇಳಿಕೆಗಳಿಂದ ಸ್ಪಷ್ಟಪಡಿಸಬಹುದಾಗಿದೆ.

**ಜಾನ್ಸನ್:–** "ಯೋಜಿಸಿದಂತಹ ಒಂದು ಗುರಿಯನ್ನು ತಲುಪಲು ರೂಪಿಸಿದ ಅನೇಕ ಅಂಶಗಳ ಗುಂಪಿಗೆ ವ್ಯವಸ್ಥೆ (System) ಎನ್ನುವರು."

**ಎ.ಕೆ. ಜಲಾಲುದ್ದೀನ್** (1981) "ಪೂರ್ವಯೋಜಿತ ನಿರ್ದಿಷ್ಟ ಉದ್ದೇಶಗಳ ಸಾಧನೆಗಾಗಿ ಸ್ವಯಂ ನಿಯಾಮಕ ರೀತಿಯಲ್ಲಿ ಪರಸ್ಪರ ಅವಲಂಬಿತ ಅಂಕಗಳನ್ನು ಹೊಂದಿದ ಗತಿಶೀಲಾತ್ಮಕವಾದ ಸಮಷ್ಟಿಯೇ ವ್ಯವಸ್ಥೆಯಾಗಿದೆ". **ಆರ್.ಎಲ್. ಅಕಾಫ್** (1971) "ಪರಸ್ಪರ ಸಂಬಂಧವಿರುವ ಹಾಗೂ ಪರಸ್ಪರ ಅವಲಂಬಿತವಾದ ಅಂಶಗಳ ಗುಂಪೇ ವ್ಯವಸ್ಥೆಯಾಗಿದೆ" ಎಂದಿದ್ದಾರೆ. **ನೆರೂವಿಚ್ ಪ್ರಕಾರ–** "ವಿವಿಧ ಅಂಗಗಳನ್ನು ವ್ಯವಸ್ಥಿತವಾಗಿ

Digitised by Bharatavani, CIIL

ಗುರುತಿನಿಂದ ಕ್ರಮಬದ್ಧಗೊಳಿಸುವ ಹಾಗೂ ಅವುಗಳ ಸಂಬಂಧವನ್ನು ಸಾಮ್ಯತೆಯಿಂದ ಅರ್ಥೈಸುವ ವೈಜ್ಞಾನಿಕ ರೀತಿಯೇ ವ್ಯವಸ್ಥಾ ಉಪಕ್ರಮ"

**ಎ.ಡಿ. ಹಾಲ್ ಮತ್ತು ಆರ್.ಈ. ಫ್ಯಾಗನ್‌ರವರ ಪ್ರಕಾರ** "ವ್ಯವಸ್ಥಾ ಉಪಕ್ರಮವೆಂದರೆ ಘಟಕ ಅಥವಾ ವಸ್ತುಗಳ ಸಮೂಹವಾಗಿದ್ದು ಇಂತಹ ವಸ್ತು ಅಥವಾ ವಸ್ತು ವಿಷಯ ಮತ್ತು ಇತರೇ ಸಂಪರ್ಕ ವಿಷಯಗಳೊಂದಿಗೆ ಇರುವ ಸಂಬಂಧ ತಿಳಿಯಪಡಿಸುವುದೇ ವ್ಯವಸ್ಥಾ ಉಪಕ್ರಮ". ಕ್ರಮಬದ್ಧವಾಗಿ ಜೋಡಿಸಲ್ಪಟ್ಟಿರುವ ವಸ್ತು ವಿಷಯಗಳ ಸಮೂಹವಾಗಿದ್ದು ಒಂದಕ್ಕೊಂದು ಪರಸ್ಪರ ಸಂಬಂಧ ಹೊಂದಿದ್ದು ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸುತ್ತದೆ.

ಈ ಮೇಲಿನ ತಜ್ಞರುಗಳ ವ್ಯಾಖ್ಯಾನಗಳಿಂದ ವ್ಯವಸ್ಥಾ ಉಪಕ್ರಮದ ಲಕ್ಷಣಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದಾಗಿದೆ.

1. ವ್ಯವಸ್ಥೆಯು ಬಿಡಿ ಬಿಡಿ ಅಂಶಗಳ ಮೊತ್ತವಾಗಿರದೆ ಒಂದು ಸಂಕೀರ್ಣ (Complex)ವಾಗಿದೆ.
2. ವ್ಯವಸ್ಥೆಯಲ್ಲಿರುವ ಅಂಶಗಳ ನಡುವೆ ಪರಸ್ಪರ ಸಂಬಂಧವಿದ್ದು ಅವು ಪರಸ್ಪರ ಅವಲಂಬಿಗಳಾಗಿವೆ.
3. ವ್ಯವಸ್ಥೆಯ ಪ್ರತಿಯೊಂದು ಭಾಗಕ್ಕೂ ತನ್ನದೇ ಆದ ಕಾರ್ಯವಿದ್ದು ಅವು ವ್ಯವಸ್ಥೆಯ ಗುರಿ ಸಾಧಿಸಲು ಸಹಾಯಕಾರಿಯಾಗುತ್ತವೆ.
4. ವ್ಯವಸ್ಥೆಯಲ್ಲಿ ಒಂದು ಭಾಗ ವಿಫಲಗೊಂಡರೆ ಸಂಪೂರ್ಣ ವ್ಯವಸ್ಥೆಯೇ ವಿಫಲಗೊಳ್ಳುತ್ತದೆ.
5. ವ್ಯವಸ್ಥೆಯ ಕಾರ್ಯನಿರ್ವಹಿಸಲು ಹಾಕಿಕೊಂಡಿರುವಂತಹ ಉದ್ದೇಶಗಳನ್ನು ಮಾತ್ರ ಸಾಧಿಸುವ ಗುರಿ ಹೊಂದಿರುತ್ತದೆ.

ವ್ಯವಸ್ಥಾ ಉಪಕ್ರಮವು ಪ್ರಮುಖವಾಗಿ ನಾಲ್ಕು ಅಂಶಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ:

1. ಒಳಸೇರುವ ಅಂಶಗಳು ಅಥವಾ ಭರಿತ (Input) 2. ಪ್ರಕ್ರಿಯೆಗಳು (Processes) 3. ಹೊರಬರುವ ಉತ್ಪನ್ನ / ಫಲಿತ (Out put) 4. ಪರಿಸರ ಸಂಬಂಧದ ಅಂಶಗಳು

ಈ ನಾಲ್ಕು ಅಂಶಗಳನ್ನು ಬೋಧನಾ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಒಂದು ಧಾರಾ ಚಿತ್ರದ ಮೂಲಕ ಹೀಗೆ ನಿರೂಪಿಸಬಹುದಾಗಿದೆ.




**ವ್ಯವಸ್ಥಾ ಉಪಕ್ರಮದ ವಿಶ್ಲೇಷಣಾ ಹಂತಗಳು :** ವ್ಯವಸ್ಥಾ ಉಪಕ್ರಮವು ವ್ಯವಸ್ಥಿತವಾದುದರಿಂದ ಅದರ ಜಾರಿ ಮತ್ತು ವಿಶ್ಲೇಷಣೆಯೂ ವ್ಯವಸ್ಥಿತವಾಗಿರಬೇಕಾಗುತ್ತದೆ. ವ್ಯವಸ್ಥಾ ಉಪಕ್ರಮವನ್ನು ಈ ಕೆಳಕಂಡ ಹಂತಗಳ ಮೂಲಕ ವಿಶ್ಲೇಷಣೆ ಮಾಡಬಹುದಾಗಿದೆ.

**1. ವ್ಯವಸ್ಥೆಯ ವಿಶ್ಲೇಷಣೆ:** ಈ ಹಂತದಲ್ಲಿ ವ್ಯವಸ್ಥೆಯನ್ನು ಸರಿಯಾಗಿ ವಿಶ್ಲೇಷಿಸಲಾಗುವುದು. ವಿಶ್ಲೇಷಣೆಯಿಂದ ಕಂಡುಬಂದ ವಿವಿಧ ವಸ್ತುಗಳನ್ನು ಅಂಶಗಳನ್ನು ಸಂಘಟಿಸಿ ಹಂತ ಹಂತವಾಗಿ ಮುಂದುವರಿಯಬೇಕು. ಇದರಿಂದ ವಿಶ್ಲೇಷಣೆಗೆ ಒಳಪಡಿಸಿದಾಗ ಎದುರಾಗುವ ಅಡೆತಡೆಗಳನ್ನು ಎದುರಿಸಲು ಸಾಧ್ಯವಾಗುತ್ತದೆ, ವಿಶ್ಲೇಷಣೆಯಲ್ಲಿ ಒಳಗೊಳ್ಳುವ ವಸ್ತುಗಳ ಕಲ್ಪನೆ ಮತ್ತು ದೊರೆಯಬಹುದಾದ ಉತ್ಪನ್ನದ ಕಲ್ಪನೆ ಸಹ ಮೂಡುತ್ತದೆ.

**2. ವ್ಯವಸ್ಥೆಯ ರೂಪ ಮತ್ತು ಅಭಿವೃದ್ಧಿ:** ಯಾವುದೇ ಒಂದು ವ್ಯವಸ್ಥೆಯ ಅಂಶಗಳನ್ನು ಸರಿಯಾಗಿ ವಿಶ್ಲೇಷಿಸಿದ ನಂತರ ಕ್ರಮಬದ್ಧವಾಗಿ ಸಂಶ್ಲೇಷಿಸುವುದು (ಒಟ್ಟಾಗಿ ಸೇರಿಸುವುದು) ಅತಿ ಮಹತ್ವದ್ದಾಗಿದೆ. ಸಂಶ್ಲೇಷಣೆಯಿಂದ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಮಾರ್ಗ ತಿಳಿಯುತ್ತದೆ. ವ್ಯವಸ್ಥೆಯಲ್ಲಿ ರೂಪಿಸಿಕೊಂಡ ಉದ್ದೇಶಗಳೇನು? ವ್ಯವಸ್ಥೆ ಸಮರ್ಪಕವಾಗಿ ನಡೆಯಬೇಕಾದರೆ ಬಳಸುವ ಸಾಧನಗಳು ಯಾವುವು? ಪದ್ಧತಿಗಳು ಯಾವುವು? ರೂಪಿಸಿದ ತಂತ್ರಗಳು ಯಾವುವು? ಮಾರ್ಗದ ಆಯ್ಕೆ ಹೇಗೆ? ಇವೇ ಮುಂತಾದ ಅಂಶಗಳನ್ನು ಗಮನಿಸಬೇಕು.

**3. ವ್ಯವಸ್ಥೆಯ ಚಾಲನೆ ಮತ್ತು ಮೌಲ್ಯಮಾಪನ:** ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ವಿವಿಧ ವಿಧಾನ ಅನುಸರಿಸಿ ಚಾಲನಾ ಬಲವನ್ನು ನೀಡಬೇಕು. ಬಲ ನೀಡಿದ ನಂತರ ಇರಿಸಿಕೊಂಡ ಉದ್ದೇಶಗಳಿಗೆ ಅನುಗುಣವಾಗಿ ಮೌಲ್ಯಮಾಪನ ಮಾಡಬೇಕು. ಉದ್ದೇಶಗಳಿಗೆ ಅನುಗುಣವಾಗಿ ಮೌಲ್ಯಮಾಪನ ಕ್ರಿಯೆ ನಡೆಯದಿದ್ದರೆ ವ್ಯವಸ್ಥೆಯ ಪ್ರಭಾವಶೀಲತೆ ಗೊತ್ತಾಗುವುದಿಲ್ಲ.

**ವ್ಯವಸ್ಥೆಯಾಗಿ ಪಠ್ಯಕ್ರಮ:** ಪಠ್ಯಕ್ರಮವನ್ನು ಒಂದು ವ್ಯವಸ್ಥೆಯಾಗಿ ಪರಿಗಣಿಸಿದಾಗ ಅದು ಪಠ್ಯಕ್ರಮದ ಅಂಶಗಳು ಶಿಕ್ಷಣದ ಗುರಿಗಳೊಂದಿಗೆ ಸಂಬಂಧ ಹೊಂದಿರುವಂತಹ ಹಾಗೂ ಈ ಗುರಿಗಳು ಪಠ್ಯಕ್ರಮದ ಮೂಲ ಅಂಶಗಳಿಗೆ ಪುನಃ ತಲುಪುವಂತೆ ಜೋಡಿಸುವ ಅಥವಾ ವಿನ್ಯಾಸಗೊಳಿಸಿದ ಒಂದು ಸಂಕೀರ್ಣವಾಗುತ್ತದೆ. ಪಠ್ಯಕ್ರಮವೆಂದರೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಇರುವ ವಿಷಯದ ಕೇಂದ್ರ ವಸ್ತು ಅಥವಾ ವಿವಿಧ ವಿಷಯ ವಸ್ತು ವ್ಯವಸ್ಥೆ ಪರಿಕಲ್ಪನೆಯನ್ನು ಪಠ್ಯಕ್ರಮಕ್ಕೆ ಅನ್ವಯಿಸಿದರೆ ಪಠ್ಯಕ್ರಮವು ತಾಂತ್ರಿಕ ಅಂಶಗಳಿಂದ ಕೂಡಿದ ಪ್ರಕ್ರಿಯೆಯಾಗಿ ಇದರೊಂದಿಗೆ ಬಹಳಷ್ಟು ಉಪಪ್ರಕ್ರಿಯೆಗಳನ್ನು ಹೊಂದುತ್ತದೆ. ಈ ಹಿನ್ನೆಲೆಯಲ್ಲಿ ಪಠ್ಯಕ್ರಮವು ವರ್ಗಾವಣೆ ಅಥವಾ

Digitised by Bharatavani, CIIL

ವಿತರಣೆ ಮಾಡಲ್ಪಟ್ಟಿರುವ ವ್ಯವಸ್ಥೆಯಾಗಿದ್ದು ಕಚ್ಚಾವಸ್ತುಗಳಿಂದ ವಿದ್ಯಾರ್ಥಿಗಳನ್ನು ಉತ್ತಮರನ್ನಾಗಿ ಪರಿವರ್ತಿಸುವ ಉದ್ದೇಶ ಹೊಂದಿದೆ. ಪಠ್ಯವಸ್ತುವಿನ ವ್ಯವಸ್ಥೆ ಕಲಿಕಾ ಅನುಭವಗಳನ್ನು ಹೊಂದಿರುವ ಹಾಗೂ ತನ್ನದೇ ಆದ ವ್ಯವಸ್ಥೆಯನ್ನು ರೂಪಿಸಿಕೊಂಡಿರುವ ಪರಸ್ಪರ ಸಂಬಂಧಿ ಘಟಕಾಂಶಗಳನ್ನು ಹೊಂದಿರುತ್ತದೆ. ಘಟಕಾಂಶಗಳೊಂದಿಗೆ ವರ್ಗದ ಪರಿಣಾಮ ಹೊಂದಲು ಅಥವಾ ಅನ್ಯೋನ್ಯ ಕ್ರಿಯೆ ಪರಿಣಾಮ ಬೀರಲು ಮತ್ತು ಎಲ್ಲಾ ಚಟುವಟಿಕೆಗಳಲ್ಲಿ ಐಕ್ಯತೆ ಅಥವಾ ಸಂಘಟನೆ ತರಲು ಮತ್ತು ಘಟಕಾಂಶಗಳನ್ನು ಪರಸ್ಪರ ಅವಲಂಬನೆ ಮತ್ತು ಉದ್ದೇಶಗಳನ್ನು ಸಾಧಿಸಲು ಸಹಾಯ ಮಾಡುವ ಚಟುವಟಿಕೆಯೇ ಪಠ್ಯಕ್ರಮದ ವ್ಯವಸ್ಥಾ ಉಪಕ್ರಮವಾಗಿದೆ.

**ಒಂದು ವ್ಯವಸ್ಥೆಯಾಗಿ ಪಠ್ಯಕ್ರಮದ ಗುಣಲಕ್ಷಣಗಳು:** ಪಠ್ಯಕ್ರಮ ವ್ಯವಸ್ಥೆಯಾಗಿ ವಿಶಿಷ್ಟ ರೀತಿಯ ಲಕ್ಷಣಗಳನ್ನು ಹೊಂದಿರುತ್ತದೆ. ಅವುಗಳೆಂದರೆ:

1) ಉದ್ದೇಶ 2) ಸಂಘಟನೆ 3) ಪರಸ್ಪರ ಅವಲಂಬನೆ 4) ಐಕ್ಯತೆ

**ಉದ್ದೇಶ :–** ಉತ್ತಮ ಪಠ್ಯಕ್ರಮ ರೂಪುಗೊಳ್ಳಲು ಇರುವ ವ್ಯವಸ್ಥೆಯ ಅಂಶಗಳು ಬೋಧನೆ ಮತ್ತು ಕಲಿಕಾ ಸನ್ನಿವೇಶಕ್ಕೆ ಯೋಜನೆಯನ್ನು ಒದಗಿಸುತ್ತವೆ. ನಿರ್ಣಯ ಕೈಗೊಳ್ಳುವ ಚಟುವಟಿಕೆಯಲ್ಲಿ ವ್ಯವಸ್ಥೆಯ ಅಂಶ ಪ್ರಮುಖವಾಗಿರುತ್ತದೆ. ಇದು ಒಂದು ಶಲೆ ಅಥವಾ ಒಟ್ಟು ಸಮುದಾಯದ ಸಾಮಾನ್ಯ ಮತ್ತು ನಿರ್ದಿಷ್ಟ ಉದ್ದೇಶ ಸಾಧಿಸಲು ನೆರವಾಗುತ್ತದೆ. ವ್ಯವಸ್ಥೆಯ ಮಾರ್ಗವು ಪಠ್ಯಕ್ರಮ ತನ್ನ ದೀರ್ಘಕಾಲೀನ ಗುರಿ, ನಿರ್ದಿಷ್ಟ ಗುರಿ ಅಥವಾ ಅಲ್ಪಕಾಲೀನ ಗುರಿಗಳನ್ನು ತಲುಪಲು ಸಹಾಯ ನೀಡುತ್ತದೆ.

ಪಠ್ಯಕ್ರಮದ ಉದ್ದೇಶ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಕಲಿಕಾರ್ಥಿಗಳನ್ನು ಸ್ವಯಂ ಕಲಿಕಾರ್ಥಿಗಳನ್ನಾಗಿ ಮಾಡುವುದೇ ಆಗಿದೆ. ಈ ಉದ್ದೇಶವು ಪಠ್ಯಕ್ರಮ ಯೋಜನೆಯನ್ನು ವಿವಿಧ ವಿನ್ಯಾಸಗಳಲ್ಲಿ ರೂಪಿಸಲು ಮತ್ತು ಜಾರಿಗೊಳಿಸಲು ಸಹಾಯ ಮಾಡುತ್ತದೆ.

**ಸಂಘಟನೆ:–** ಸಂಘಟನೆ ಎಂದರೆ ಪಠ್ಯವಸ್ತುವಿನಲ್ಲಿರುವ ವಿವಿಧ ಘಟಕಾಂಶಗಳನ್ನು ಒಂದುಗೂಡಿಸಿ ಅದನ್ನು ಅಂತರ್ ಸಂಬಂಧಗೊಳಿಸುವುದು. ಅಂದರೆ ಪಠ್ಯವಸ್ತುವಿನ ಘಟಕಾಂಶಗಳನ್ನು ಅಂತರ್ ಸಂಬಂಧವಾಗಿ ಸಂಘಟಿಸುವುದು ಇದು ಪಠ್ಯಕ್ರಮದ ಉದ್ದೇಶಗಳನ್ನು ಈಡೇರಿಸಲು ಸಹಕಾರಿಯಾಗುತ್ತದೆ. ಸಂಘಟನೆಯಿಂದ ಘಟಕಾಂಶಗಳು ಇಡಿಯಾಗಿ ಸ್ವೀಕೃತಿಗೊಂಡು ವ್ಯವಸ್ಥೆಯನ್ನು ಸಂರಕ್ಷಿಸುತ್ತವೆ. ಮತ್ತು ಅನ್ಯೋನ್ಯ ಕ್ರಿಯಾ ಪ್ರಭಾವ ಬೀರುತ್ತವೆ. ಘಟಕಾಂಶಗಳ ನಡುವೆ ಅನ್ಯೋನ್ಯ ಕ್ರಿಯೆ ಆಗದಿದ್ದರೆ ವ್ಯವಸ್ಥೆ ಸಂಘಟಿತವಾಗುವುದಿಲ್ಲ. ಅದು ಕೇವಲ ಘಟಕಾಂಶಗಳ ಸಂಗ್ರಹವಾಗುತ್ತದೆ. ಘಟಕಾಂಶಗಳ ನಡುವಿನ ಅನ್ಯೋನ್ಯ ಕ್ರಿಯೆಯಿಂದ ಮಾಹಿತಿಗಳ ವಿನಿಮಯ ಸಾಧ್ಯವಾಗುತ್ತದೆ. ಅಂದರೆ ಸಂಪರ್ಕ, ಸಂಭಾಷಣೆ ಸಾಧ್ಯವಾಗುತ್ತವೆ.

**ಪರಸ್ಪರ ಅವಲಂಬನೆ :** ಪಠ್ಯಕ್ರಮದ ಘಟಕಾಂಶಗಳು ಪರಸ್ಪರ ಅವಲಂಬನೆ ಪ್ರಕ್ರಿಯೆಗಳ ಮೇಲೆ ನಿಂತಿವೆ. ಈ ಹಿನ್ನೆಲೆಯಿಂದಲೇ ಪಠ್ಯಕ್ರಮವನ್ನು ಒಂದು ವ್ಯವಸ್ಥೆ ಎಂದು ಹೇಳಲಾಗಿದೆ. ಇದನ್ನು ವಿವಿಧ ಉಪ ವ್ಯವಸ್ಥೆಗಳಾಗಿ ವಿಂಗಡಿಸಲಾಗಿದೆ.

**ಐಕ್ಯತೆ :** ಐಕ್ಯತೆ ಎಂದರೆ ಪಠ್ಯಕ್ರಮದ ವ್ಯವಸ್ಥೆಯಲ್ಲಿನ ಘಟಕಾಂಶಗಳು ಒಟ್ಟಾಗಿ ಇರುವುದು, ಪಠ್ಯಕ್ರಮವನ್ನು ಇಡಿಯಾಗಿ ಪರಿಗಣಿಸಬೇಕು. ಕಲಿಕೆಯಲ್ಲಿನ ಸಮಗ್ರತೆಗೆ ಈ ತತ್ವ ಸಹಾಯ ಮಾಡುತ್ತದೆ. ಪಠ್ಯಕ್ರಮದಲ್ಲಿ ಐಕ್ಯ ಉಂಟಾಗಬೇಕಾದರೆ ಪಠ್ಯಕ್ರಮದ ಎಲ್ಲ ಆಯಾಮಗಳಲ್ಲಿ ಪಠ್ಯಕ್ರಮದ ಎಲ್ಲ ಮಟ್ಟಗಳಲ್ಲಿ ವಿಸ್ತರಣೆ ಸಾಧ್ಯವಾಗಬೇಕು. ಇದು ವಿಷಯ ಪ್ರಸ್ತುತಿಗೆ ಸೀಮಿತಗೊಳ್ಳದೆ ಪಠ್ಯಕ್ರಮದ ವಿನ್ಯಾಸ ಬೋಧನಾ ವಿಧಾನ. ಕಲಿಕಾ ಸಾಮಗ್ರಿಗಳು ಮೌಲ್ಯಮಾಪನ ಹಾಗೂ ಪಠ್ಯಕ್ರಮ ನವೀಕರಣದಲ್ಲೂ ಕಂಡುಬರಬೇಕು.

**ವ್ಯವಸ್ಥಾ ಉಪಕ್ರಮ ಒಳಗೊಳ್ಳುವ ಪ್ರಕ್ರಿಯೆಗಳು:** ಪಠ್ಯಕ್ರಮ ವ್ಯವಸ್ಥಾ ಉಪಕ್ರಮವು ವ್ಯವಸ್ಥಿತವಾಗಿ ರೂಪುಗೊಳ್ಳಬೇಕಾದರೆ ಈ ಕೆಳಗಿನ ಪ್ರಕ್ರಿಯೆಗಳನ್ನು ಒಳಗೊಂಡಿರಬೇಕಾಗುತ್ತದೆ. ಅವುಗಳೆಂದರೆ:

1. ವಿಷಯ ವಸ್ತುವನ್ನು ಗುರುತಿಸುವಿಕೆ 2. ಕಲಿಕಾ ಅನುಭವಗಳನ್ನು ರೂಪಿಸುವುದು 3. ವಿಷಯ ವಸ್ತುವಿಗೆ ಸಂಬಂಧಿಸಿದ ಪರಿಣಾಮಕಾರಿ ಮೌಲ್ಯಮಾಪನ 4. ಕಲಿಕಾ ಅನುಭವಗಳ ಬೆಳವಣಿಗೆಗೆ ಸಹಾಯ ಮಾಡುವುದು.

ಈ ಪ್ರಕ್ರಿಯೆಗಳನ್ನು ಅವುಗಳ ಕಾರ್ಯ ಜವಾಬ್ದಾರಿಯ ಆಧಾರದ ಮೇಲೆ ಈ ಕೆಳಗಿನಂತೆ ಹಂತಹಂತವಾಗಿ ಗುರುತಿಸಬಹುದಾಗಿದೆ.

1. ವ್ಯವಸ್ಥಾ ಉಪಕ್ರಮದಲ್ಲಿ ವಿಷಯ ವಸ್ತುವಿನ ಗುರುತಿಸುವಿಕೆ: ಇದು ಮೊದಲನೇ ಹಂತವಗಿದ್ದು ಈ ಹಂತದಲ್ಲಿ ಪಠ್ಯಕ್ರಮ ವ್ಯವಸ್ಥಾ ಉಪಕ್ರಮವು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿದ್ಯಾರ್ಥಿ, ಪರಿಸರ, ಸನ್ನಿವೇಶವನ್ನು ಆಧಾರವಾಗಿಟ್ಟುಕೊಂಡು ವಿಷಯವಸ್ತುವನ್ನು ಗುರುತಿಸಬೇಕಾಗುತ್ತದೆ. ಹಾಗಾಗಿ ವಿಷಯವಸ್ತುವನ್ನು ಗುರುತಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಎ) ಸ್ಪಷ್ಟವಾದ ಗುರಿ ನಿರ್ಧಾರಕ್ಕೆ ದಾರಿಯಿರಬೇಕು. ಬಿ) ಆಯ್ಕೆ ಮಾಡುವ ವಿಷಯ ವಸ್ತು ವಿದ್ಯಾರ್ಥಿಗಳು ಮುಂದಿನ ಜೀವನದಲ್ಲಿ ತಾನೇನು ಮಾಡಬೇಕೆಂದು ನಿರ್ಧರಿಸಲು ಸಹಾಯಕವಾಗುವಂತಿರಬೇಕು. ಸಿ) ವಿದ್ಯಾರ್ಥಿಗಳ ಹಿನ್ನೆಲೆ, ಆಸಕ್ತಿ, ಮನೋವೃತ್ತಿ, ಬೌದ್ಧಿಕ ಸಾಮರ್ಥ್ಯ ಮತ್ತು ಗ್ರಹಿಕೆಗಳಿಗೆ ಅನುಸಾರವಾಗಿ ವಿಷಯ ವಸ್ತುವನ್ನು ನಿರ್ಧರಿಸಬೇಕು. ಡಿ) ಕಲಿಕಾ ಅನುಭವಗಳನ್ನು ಉಂಟುಮಾಡುವ ಕಲಿಕಾ ಕ್ರಿಯೆಗಳನ್ನು ನಿರ್ಧರಿಸಬೇಕು.

2. ವ್ಯವಸ್ಥಾ ಉಪಕ್ರಮದಲ್ಲಿ ಕಲಿಕಾನುಭವಗಳನ್ನು ರೂಪಿಸುವುದು: ವ್ಯವಸ್ಥಾ ಉಪಕ್ರಮದಲ್ಲಿ ವಿಷಯವಸ್ತುವನ್ನು ಗುರುತಿಸಿದ ನಂತರ ಅದರ ಕಲಿಕೆ ಹೇಗಿರಬೇಕು, ಅದು ಎಷ್ಟರಮಟ್ಟಿಗೆ ವಿದ್ಯಾರ್ಥಿಗಳ ಸಾಮರ್ಥ್ಯಕ್ಕನುಗುಣವಾಗಿರಬೇಕು, ಇದರಿಂದ ವಿದ್ಯಾರ್ಥಿಗಳ ಕಲಿಕಾ ಮಟ್ಟ ಹೆಚ್ಚುತ್ತದೆಯೇ ಎಂದು ತಿಳಿಯಬೇಕಾಗುತ್ತದೆ. ನಂತರ ವಿದ್ಯಾರ್ಥಿಗಳ ಹಿನ್ನೆಲೆಯನ್ನು ಸಂಗ್ರಹಿಸಿ ಅದಕ್ಕೆ ಅನುಗುಣವಾದ ಕಲಿಕಾನುಭವಗಳನ್ನು ರೂಪಿಸಬೇಕು. ಕಲಿಕಾನುಭವಗಳನ್ನು ರೂಪಿಸುವಾಗ ಈ ಕೆಳಕಂಡ ಹಂತಗಳನ್ನು ಗಮನದಲ್ಲಿಡಬೇಕಾಗುತ್ತದೆ.

ಎ) ಸಾಮಾನ್ಯ ಪರಿಸ್ಥಿತಿಯ ಅವಶ್ಯಕತೆಗನುಗುಣವಾದ ವಿಷಯ ವಸ್ತುವಿನ ಆಯ್ಕೆ. ಬಿ) ಕ್ರಮಾನುಗತ ಕಲಿಕೆಯನ್ನು ಗುರುತಿಸುವುದು. ಸಿ) ಕೌಶಲ್ಯ ಸಾಧನೆಯ ಗುರಿ ಸಾಧಿಸುವಂಥ ಬೋಧನಾ ತಂತ್ರಗಳ ನಿರ್ಧಾರ ಡಿ) ಬೋಧನೆ ಮತ್ತು ಕಲಿಕೆಗೆ, ಸೂಕ್ತ ಮಾಧ್ಯಮಗಳನ್ನು ಆಯ್ಕೆ ಮಾಡಿಕೊಳ್ಳುವುದು.

3. ವಿಷಯ ವಸ್ತುವಿಗೆ ಸಂಬಂಧಿಸಿದಂತೆ ಪರಿಣಾಮಕಾರಿ ಮೌಲ್ಯಮಾಪನ : ಯಾವುದೇ ಒಂದು ವಿಷಯದ ಕಲಿಕೆ

Digitised by Bharatavani, CIIL

ಪೂರ್ಣವಾಗಲು ಅದಕ್ಕೆ ಹೆಚ್ಚು ಹೆಚ್ಚು ಮೌಲ್ಯಮಾಪನದ ಅವಶ್ಯಕತೆಯಿರುತ್ತದೆ. ಪಠ್ಯಕ್ರಮ ವ್ಯವಸ್ಥಾ ಉಪಕ್ರಮದಲ್ಲಿಯೂ ವಿಷಯ ವಸ್ತುವನ್ನು ಗುರುತಿಸಿ ಅದರ ಕಲಿಕೆಗೆ ಬೇಕಾದ ಸೂಕ್ತ ಕಲಿಕಾನುಭವಗಳನ್ನು ರೂಪಿಸಿ ಅವುಗಳನ್ನು ಕಾರ್ಯನ್ವಿತಗೊಳಿಸಿದ ಮೇಲೆ ಕಲಿಕೆಯ ಮೌಲ್ಯಮಾಪನ ಅತ್ಯಂತ ಅವಶ್ಯಕವಾಗಿರುತ್ತದೆ. ಆದ್ದರಿಂದ ಅದನ್ನು ಪರಿಣಾಮಕಾರಿಯಾಗಿ ಮಾಡಲು ಈ ಕೆಳಕಂಡಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಯ ನಿರ್ವಹಿಸಬೇಕಾಗುತ್ತದೆ.

ಎ) ಪರೀಕ್ಷೆಯ ಮೌಲ್ಯಮಾಪನ ನಿರ್ಧಾರದ ಅಳತೆಗೋಲು ವಸ್ತು ವಿಷಯ ಸಾಧಿಸಲ್ಪಟ್ಟಿದೆ ಎಂಬುದನ್ನು ಸರಿಯಾಗಿ ಅಳೆಯುವಂತಿರಬೇಕು. ಬಿ) ಮೌಲ್ಯಮಾಪನ ಕ್ರಮ ಬರವಣಿಗೆ, ಸಂದರ್ಶನ, ವೀಕ್ಷಣೆ ಪ್ರಶ್ನಾವಳಿ ಮೊದಲಾದ ತಂತ್ರಗಳನ್ನು ಒಳಗೊಂಡಿರಬೇಕು.

4. ಕಲಿಕಾ ಅನುಭವಗಳ ಪುನರ್ಬಲನ : ವ್ಯವಸ್ಥಾ ಉಪಕ್ರಮದ ಪ್ರಕ್ರಿಯೆಯ ಕೊನೆಯ ಹಂತವೇ ಈ ಕಲಿಕಾ ಅನುಭವಗಳನ್ನು ಪುನರ್ಬಲನ ಮಾಡುವುದಾಗಿದೆ. ಇದು ಅತ್ಯಂತ ಮಹತ್ವದ್ದಾಗಿದ್ದು ಕಲಿಕೆಯ ಯಶಸ್ಸು ಮತ್ತು ಸಾಧಕ, ಬಾಧಕಗಳನ್ನು ತಿಳಿಯಪಡಿಸುತ್ತದೆ. ಇದನ್ನು ಈ ಕೆಳಗಿನ ಅಂಶಗಳ ಸಹಾಯದಿಂದ ಪರಿಣಾಮಕಾರಿಯಾಗಿರಬಹುದಾಗಿದೆ.

ಎ) ಕಲಿಕಾ ಮಾರ್ಗದಲ್ಲಿ ಶಕ್ತಿ ಮತ್ತು ದುರ್ಬಲತೆಗಳನ್ನು ಗುರುತಿಸಿ ನಿರ್ಧರಿಸುವುದು. ಬಿ) ಪರಿಹಾರ ಸಾಧ್ಯವಾದ ದುರ್ಬಲತೆಗಳನ್ನು ಗುರುತಿಸುವುದು. ಸಿ) ಪರಿಹಾರ ಕಾರ್ಯಕ್ರಮದ ನಂತರ ಪುನಃ ಕಲಿಕೆಯನ್ನು ಮೌಲ್ಯ ಮಾಡುವುದು. ಡಿ) ಅವಶ್ಯಕತೆಯಿದ್ದಲ್ಲಿ ಕಲಿಕೆಯ ತಂತ್ರಗಳನ್ನು ಬದಲಾಯಿಸುವುದು. ಈ) ಕಲಿಕಾ ಮಾರ್ಗಗಳಲ್ಲಿನ ತೊಂದರೆಗಳನ್ನು ಪರಿಹರಿಸುವುದು.

ಈ ಮೇಲಿನಂತೆ ಪಠ್ಯಕ್ರಮ ವ್ಯವಸ್ಥಾ ಉಪಶ್ರಮವು ಹಂತಹಂತವಾಗಿ ರೂಪುಗೊಂಡು ತನ್ನದೇ ಆದ ರೀತಿಯಲ್ಲಿ ಉದ್ದೇಶ ಸಾಧನೆ ಮಾಡುತ್ತದೆ.

**ಪಠ್ಯಕ್ರಮದಲ್ಲಿ ವ್ಯವಸ್ಥೆ ಅಳವಡಿಕೆಯ ಮಾದರಿ ನಕ್ಷೆ**




**ಪಠ್ಯಕ್ರಮ ವ್ಯವಸ್ಥಾ ಉಪಕ್ರಮದ ಪ್ರಯೋಜನಗಳು :** 1. ಶೈಕ್ಷಣಿಕ ಸುಧಾರಣಾ ಯೋಜನೆಗೆ ವ್ಯವಸ್ಥಾ ಉಪಕ್ರಮವು ಒಂದು ವ್ಯವಸ್ಥೆಯ ಚೌಕಟ್ಟನ್ನು ಒದಗಿಸುತ್ತದೆ. 2. ಶಿಕ್ಷಣದ ಅವಶ್ಯಕತೆಗಳನ್ನು ಗುರುತಿಸಲು ಸಹಾಯಮಾಡುವುದು ಮತ್ತು ಜೀವನಕ್ಕೆ ಉಪಯುಕ್ತವಾದ ನಿಶ್ಚಿತ ಗುರಿಗಳನ್ನು ಸಾಧಿಸಲು ನೆರವಾಗುತ್ತದೆ. 3. ಉನ್ನತ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವಲ್ಲಿ ಸಾಧನಗಳನ್ನು ಒಟ್ಟಿಗೆ ಸಿದ್ಧಪಡಿಸಿಕೊಳ್ಳಲು, ಮಾಧ್ಯಮಗಳನ್ನು ಉಪಯೋಗಿಸಿ ಸ್ಪಷ್ಟ ಗುರಿಗಳನ್ನು ಸಾಧಿಸಲು ನೆರವಾಗುತ್ತದೆ. 4. ವಿದ್ಯಾರ್ಥಿಗಳ ಕಲಿಕಾವಧಿಯನ್ನು ಯಶಸ್ವಿಗೊಳಿಸಲು ಕ್ರಮಬದ್ಧ ಅವಶ್ಯಕಗಳನ್ನು ನಿರ್ದೇಶಿಸಲು ಅನುವು ಮಾಡಿಕೊಡುತ್ತದೆ. 5. ನಿರಂತರ ಮೌಲ್ಯ ಮಾಪನದ ಕಾರ್ಯಯೋಜನೆಯನ್ನು

Digitised by Bharatavani, CIIL

ಅನುಷ್ಠಾನಗೊಳಿಸುವಲ್ಲಿ ಬರುವ ತೊಂದರೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ.

– ಜಿ.ಶೀ.

## ಪಠ್ಯಕ್ರಮದ ಮೌಲ್ಯಮಾಪನ

ಪಠ್ಯಕ್ರಮವು ಶಿಕ್ಷಣದ ವ್ಯಾಪ್ತಿಯಲ್ಲಿ ಬರುವ ಅತ್ಯಂತ ಮಹತ್ವದ ಅಂಶವಾಗಿದೆ. ಇದೊಂದು ವ್ಯಾಪಕವಾದ ಶೈಕ್ಷಣಿಕ ಚಟುವಟಿಕೆಯಾಗಿದ್ದು ಇದರ ಮೂಲಕ ವಿದ್ಯಾರ್ಥಿಗಳು, ಕಲಿಯುವವರು ತಮ್ಮ ಶೈಕ್ಷಣಿಕ ಗುರಿಗಳನ್ನು ಸಾಧಿಸಿಕೊಳ್ಳುತ್ತಾರೆ. ಶೈಕ್ಷಣಿಕ ಚಟುವಟಿಕೆಗಳಿಗೆ ಪಠ್ಯಕ್ರಮ ಮಾರ್ಗದರ್ಶಿಯಾಗಿದ್ದು, ಆಯಾ ಹಂತದ ಶಿಕ್ಷಣದ ಉದ್ದೇಶಗಳನ್ನು ಗಳಿಸಲು ಸಹಾಯಕಾರಿಯಾಗಿದೆ.

ಪಠ್ಯಕ್ರಮವು ಶೈಕ್ಷಣಿಕ ಪದ್ಧತಿಯ ಅಡಿಪಾಯವಾಗಿದ್ದು, ಸಮಗ್ರ ಶೈಕ್ಷಣಿಕ ಅಡಿಯಲ್ಲಿ ಚಟುವಟಿಕೆಗಳನ್ನು ನಿರ್ದೇಶಿಸುತ್ತದೆ. ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಾಸಗೈಯುವಲ್ಲಿ ಪಠ್ಯಕ್ರಮ ಸಹಾಯಕವಾಗಿದೆ. ಶಿಕ್ಷಣದ ಗುರಿ, ಧ್ಯೇಯ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಶಾಲೆಯ ಕಾರ್ಯಕ್ರಮಗಳನ್ನು ರೂಪಿಸುವ ಕ್ರಮ ರೂಢಿಯಲ್ಲಿದೆ.

ಪಠ್ಯಕ್ರಮ ಶಿಕ್ಷಣದ ಹೃದಯವಾಗಿದ್ದು, ಇದನ್ನು ಶಿಕ್ಷಣ ದರ್ಪಣವೆಂತಲೂ ಕರೆಯುತ್ತಾರೆ. ಪಠ್ಯಕ್ರಮವು ಶಿಕ್ಷಣದ ಗುರಿ ಉದ್ದೇಶಗಳಿಗೆ ನಿಕಟವರ್ತಿಯಾಗಿದ್ದು, ಕಲಿಕೆ ಮತ್ತು ಚಟುವಟಿಕೆಗಳ ಅನುಭವದ ಮೂಲಕ ತನ್ನ ಉದ್ದೇಶಗಳನ್ನು ಸಾಧಿಸುವುದು. ವಿದ್ಯಾರ್ಥಿಗಳ ಜ್ಞಾನ, ಅನುಭವ, ಚಟುವಟಿಕಾ ಪ್ರವೃತ್ತಿ ಮತು ಕೌಶಲ್ಯಗಳನ್ನಾಧರಿಸಿ ಅವರಲ್ಲಡಗಿರುವ ಚೈತನ್ಯಗಳ ಪೂರ್ಣ ಬೆಳವಣಿಗೆ ಮಾಡುವ ಮತ್ತು ಸಮಾಜದ ಉಪಯುಕ್ತ ಸದಸ್ಯರನ್ನಾಗಿ ಮಾಡುವಲ್ಲಿ ಪಠ್ಯಕ್ರಮದ ಪಾತ್ರ ಮಹತ್ವದ್ದು.

**ವ್ಯಾಖ್ಯೆಗಳು: ಕನ್ನಿಂಗ್ ಹ್ಯಾಂರವರ** ಪ್ರಕಾರ: “ಶಾಲೆ ಎಂಬುದು ಒಂದು ಛಾಯಾ ಗ್ರಾಹಕ ಕೊಠಡಿ ಇದ್ದಂತೆ. ಆ ಕೊಠಡಿಯ ಸಾಮಗ್ರಿಗಳೇ ವಿದ್ಯಾರ್ಥಿಗಳು. ತನ್ನ ತತ್ವ, ಧ್ಯೇಯ, ಧೋರಣೆಗೆ ಅನುಗುಣವಾಗಿ ವಿದ್ಯಾರ್ಥಿಗಳೆಂಬ ಜೀವಂತ ಸಾಮಗ್ರಿಗಳನ್ನು ಕಡೆದು ರೂಪಿಸುವ ಕಲಾವಿದನೇ ಶಿಕ್ಷಕ. ಆ ರೀತಿ ಮಾಡಲು ಶಿಕ್ಷಕನಿಗಿರುವ ಸಾಧನವೇ ಪಠ್ಯಕ್ರಮ”. ಮಾಧ್ಯಮಿಕ ಶಿಕ್ಷಣ ಆಯೋಗ (1952–53)ದ ಪ್ರಕಾರ: “ಪಠ್ಯಕ್ರಮವು ಕೇವಲ ಶೈಕ್ಷಣಿಕ ವಿಷಯಗಳನ್ನು ಮಾತ್ರ ಒಳಗೊಂಡಿಲ್ಲ. ಇದು ಒಟ್ಟು ಸಮಗ್ರ ಅನುಭವಗಳನ್ನು ವಿದ್ಯಾರ್ಥಿಯು ತರಗತಿಯಲ್ಲಿ ನಡೆಯುವ ಚಟುವಟಿಕೆಗಳಿಂದ ಪಡೆಯುವ ವಿಷಯಗಳನ್ನು ಒಳಗೊಂಡಿದೆ”.

**ಮೌಲ್ಯಮಾಪನ ಪರಿಕಲ್ಪನೆ:** ಮೌಲ್ಯಮಾಪನವನ್ನು ಮೌಲ್ಯ ನಿರ್ಧಾರ, ಮೌಲ್ಯ ನಿಷ್ಕರ್ಷೆ, ಬೆಲೆಕಟ್ಟುವಿಕೆ ಮುಂತಾದ ಹೆಸರಿನಿಂದ ಕರೆಯುತ್ತೇವೆ. ಮೌಲ್ಯ ಎಂದರೆ ‘ಬೆಲೆ’ ಮಾಪನ ಎಂದರೆ ‘ಅಳತೆ’ ಎಂದರ್ಥ. ಮೌಲ್ಯವನ್ನು ನಿರ್ಧರಿಸುವ ಕ್ರಿಯೆ ಅಥವಾ ಕಾರ್ಯವಿಧಾನವೇ ಮೌಲ್ಯಮಾಪನ.

ಮೌಲ್ಯಮಾಪನ ಎಂದರೆ ವಸ್ತುವೊಂದರ ಯೋಗ್ಯತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಬೆಲೆ ನಿರ್ಧಾರ ಮಾಡುವುದು. ಅಳತೆಗಿಂತ ಭಿನ್ನವಾದದ್ದು ಮೌಲ್ಯಮಾಪನ. ಅಳತೆಯಲ್ಲಿ ಕೇವಲ ಪರಿಮಾಣಕ್ಕೆ ಆದ್ಯತೆ ನೀಡಿದರೆ ಮೌಲ್ಯಮಾಪನದಲ್ಲಿ ಪರಿಮಾಣ ಮತ್ತು ಗುಣಗಳೆರಡಕ್ಕೂ ಆದ್ಯತೆಯಿರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಶಿಕ್ಷಣದ ಉದ್ದೇಶಗಳು ಏನೆ ಇರಲಿ, ಅವು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೆ ಎಂಬುದನ್ನು ನಿರ್ಧರಿಸುವುದು ಮೌಲ್ಯಮಾಪನದ ಪ್ರಧಾನ ಕಾರ್ಯ.

**ಪಠ್ಯಕ್ರಮದ ಮೌಲ್ಯಮಾಪನ:** ಪಠ್ಯಕ್ರಮವು ಅಭಿವೃದ್ಧಿ ಪ್ರಕ್ರಿಯೆಯ ಅವಿಭಾಜ್ಯ ಅಂಗ. ಇಲ್ಲಿ ಮೌಲ್ಯಮಾಪನವು ವಿದ್ಯಾರ್ಥಿಗಳ ಭವಿಷ್ಯಕ್ಕೆ ಹೇಗೆ ಸಹಾಯಕಾರಿಯಾಗಿದ ಹಾಗೂ ತರಗತಿಯಲ್ಲಿ ಹೇಗೆ ಉಪಯೋಗಿಸಲ್ಪಟ್ಟಿದೆ ಎಂಬುದನ್ನು ಒಳಗೊಂಡಿರುತ್ತದೆ.

ವಿದ್ಯಾರ್ಥಿ ವಿಕಸಿಸುತ್ತಿರುವಾಗ ನಿರಂತರವಾಗಿ ನಡೆಯುವ ಮೌಲ್ಯಮಾಪನ, ಅರ್ಥಾತ್ ವಿಕಸಿತ ಅವಧಿಯ ಮೌಲ್ಯಮಾಪನ ಒದಗಿಸುವ ಚಿತ್ರವನ್ನು ಆಧರಿಸಿ ಅಧ್ಯಾಪಕರು ಮತ್ತು ಪೋಷಕರು ವಿಕಾಸವನ್ನು ನಿರ್ದೇಶಿಸಲು ಯುಕ್ತ ಯೋಜನೆಗಳನ್ನು ರೂಪಿಸುವುದಾಗಿದೆ. ಪೋಷಕರಿಗೆ ಅರ್ಥಪೂರ್ಣ ಪ್ರಗತಿ ವರದಿ ಸಲ್ಲಿಸುತ್ತದೆ ಹಾಗೂ ವಿದ್ಯಾರ್ಥಿಗೆ ಕಲಿಕೆಯ ಗುಣಾವಗುಣಗಳನ್ನು ನಿರಂತರವಾಗಿ ತೋರಿಸುವುದರ ಮೂಲಕ ಹೆಚ್ಚಿನ ಕಲಿಕೆಗೆ ಪ್ರೇರಕವಾಗುತ್ತದೆ. ಪಠ್ಯಕ್ರಮ ಮೌಲ್ಯಮಾಪನವು ಒಮ್ಮೆಲೇ ಮಾಡಿ ಮುಗಿಸುವಂತಹ ಕಾರ್ಯವಲ್ಲ, ಇದು ವಿಸ್ತೃತವಾಗಿರುವುದರಿಂದ ಇದನ್ನು ಒಂದು ಪ್ರಕ್ರಿಯೆಯ ರೂಪದಲ್ಲಿ ಮಾಡಿಮುಗಿಸಬೇಕಾಗುತ್ತದೆ. ಅದಕ್ಕಾಗಿ ವಿನ್ಯಾಸಘಟ್ಟ, ಅಭಿವೃದ್ಧಿಘಟ್ಟ, ಅನುಷ್ಠಾನಘಟ್ಟ ಮತ್ತು ಮೌಲ್ಯಮಾಪನಘಟ್ಟ ಎಂಬ ನಾಲ್ಕು ಘಟ್ಟಗಳನ್ನು ಅನುಸರಿಸುತ್ತದೆ. ಇದರಿಂದ ಪಠ್ಯಕ್ರಮದ ಒಂದು ಸಂಪೂರ್ಣವಾದ ಮೌಲ್ಯಮಾಪನ ಸಾಧ್ಯವಾಗುತ್ತದೆ.




### ಪಠ್ಯಕ್ರಮ ಮೌಲ್ಯಮಾಪನದ ಅರ್ಥ

ಶಿಕ್ಷಣ ವ್ಯವಸ್ಥೆಯ ಬಗ್ಗೆ ಯೋಗ್ಯ ಮಾಹಿತಿಯನ್ನು ಶಿಕ್ಷಕರಿಗೆ, ಆಡಳಿತಗಾರರಿಗೆ, ಪಠ್ಯಕ್ರಮ ತಜ್ಞರಿಗೆ ನೀಡಿ ಅಗತ್ಯ ನಿರ್ಧಾರ ಕೈಗೊಳ್ಳಲು ಅನುವು ಮಾಡುವುದೇ ಪಠ್ಯಕ್ರಮ ಮೌಲ್ಯಮಾಪನ.

### ಪಠ್ಯಕ್ರಮ ಮೌಲ್ಯಮಾಪನ ಪ್ರಕ್ರಿಯೆ

ವಿವರಗಳಿಗೆ ಮುಂದಿನ ಪುಟದಲ್ಲಿರುವ ಚಿತ್ರ ನೋಡಿ.

**ಪಠ್ಯಕ್ರಮ ಮೌಲ್ಯಮಾಪನದ ಮಹತ್ವ :** ಪಠ್ಯಕ್ರಮದ ಮೌಲ್ಯಮಾಪನವು ಇಂದು ಬಹಳ ಮಹತ್ವವನ್ನು ಪಡೆದುಕೊಂಡಿದೆ. ನಾವು ಎಂಥ ಬೀಜವನ್ನು

Digitised by Bharatavani, CIIL

ಪಠ್ಯಕ್ರಮ ಮೌಲ್ಯಮಾಪನ ಪ್ರಕ್ರಿಯೆ




Digitised by Bharatavani, CIIL

ಬಿತ್ತುತ್ತೇವೆಯೋ ಅಂತಹ ಪೈರನ್ನು ಪಡೆಯುತ್ತೇವೆ. ಅಂದರೆ ಪಠ್ಯಕ್ರಮವು ಉತ್ತಮ ಸಮಾಜದ ನಿರ್ಮಾಣಕ್ಕೆ ಬುನಾದಿಯನ್ನು ಹಾಕುವಂಥದ್ದು. ಅಲ್ಲ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸುಧಾರಣೆ ಮಾಡಲು, ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ತರಲು ಪಠ್ಯಕ್ರಮದ ಮೌಲ್ಯಮಾಪನವನ್ನು ಆಗಿಂದಾಗ್ಗೆ ಮಾಡಬೇಕಾಗುತ್ತದೆ. ಅದರ ಉದ್ದೇಶಗಳು ಮತ್ತು ಮಹತ್ವ ಪ್ರಮುಖವಾಗಿ ಈ ಕೆಳಗಿನಂತಿವೆ.

* ಹೊಸ ಪಠ್ಯಕ್ರಮ ಅಭಿವೃದ್ಧಿಪಡಿಸುವುದು.
* ಹೊಸ ಪಠ್ಯಕ್ರಮ ಜಾರಿಗೆ ತರುವುದಕ್ಕಾಗಿ ಪುನರಾವಲೋಕಿಸುವುದು.
* ಉಪಯುಕ್ತವಾದ ಉದ್ದೇಶಗಳನ್ನು ಹಾಕಿಕೊಳ್ಳಲು
* ಪ್ರಸ್ತುತ ಪಠ್ಯಕ್ರಮದಲ್ಲಿ ಬೇಡವಾದದ್ದನ್ನು ತೆಗೆದು ಪ್ರಚಲಿತ ಸ್ಥಿತಿ–ಗತಿಗಳಿಗೆ ಅನುಗುಣವಾಗಿ ಹೊಂದಾಣಿಕೆ ಮಾಡಲು.
* ಉಪಯುಕ್ತವಾದ ವಿಷಯ ವಸ್ತುವಿನ ಆಯ್ಕೆಗಾಗಿ.
* ಪಠ್ಯಕ್ರಮದ ಪರಿಣಾಮಕತೆಯನ್ನು ತಿಳಿಯುವುದು.
* ಉತ್ತಮವಾದ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲು
* ಸೂಕ್ತವಾದ ಮೌಲ್ಯಮಾಪನ ತಂತ್ರಗಳನ್ನು ಬಳಸಿಕೊಳ್ಳಲು
* ಮಕ್ಕಳಲ್ಲಿ ನಿರೀಕ್ಷಿತ ಕಲಿಕೆಯನ್ನುಂಟು ಮಾಡಲು.
* ಸಾಮಾಜಿಕ ಬದಲಾವಣೆಗಳಿಗನುಗುಣವಾಗಿ ಪರಿಷ್ಕರಿಸಲು.
* ಮಕ್ಕಳ ಸಾಧನೆಗಳನ್ನು ಹೆಚ್ಚಿಸಲು
* ಪಠ್ಯಕ್ರಮದ ಲೋಪದೋಷಗಳನ್ನು ಗುರ್ತಿಸಲು
* ಭವಿಷ್ಯದ ಉಪಯುಕ್ತತೆಗಾಗಿ
* ಹೊಸ ವಿಷಯವನ್ನು ಅಳವಡಿಸಲು
* ಹಲವಾರು ಚಟುವಟಿಕೆಗಳನ್ನು ಅಳವಡಿಸಲು
* ಮನೋವೈಜ್ಞಾನಿಕವಾಗಿ ರೂಪಿಸಲು

**ಪಠ್ಯಕ್ರಮ ಮೌಲ್ಯಮಾಪನ ಆಧಾರದ ಅಂಶಗಳು : ಉದ್ದೇಶಗಳ ಸಮಂಜಸತೆ :** ಉದ್ದೇಶಗಳು ಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿರಬೇಕು. ಇವು ಮಕ್ಕಳ ವರ್ತನೆಗಳನ್ನು ಪರಿವರ್ತನೆಗೊಳಿಸುವಲ್ಲಿ ಸಹಾಯಕವಾಗಿವೆ. ಉದ್ದೇಶಗಳು ಮಕ್ಕಳ ಅಭಿರುಚಿ, ಆಸಕ್ತಿ ಹಾಗೂ ಸಾಮರ್ಥ್ಯಕ್ಕೆ ಅನುಗುಣವಾಗಿರಬೇಕು ಹಾಗೂ ಮಕ್ಕಳ ನಿತ್ಯಜೀವನವನ್ನಾಧರಿಸಿರಬೇಕು. ಉದ್ದೇಶಗಳು ಕೈಗೂಡಿದರೆ ಮಕ್ಕಳ ಕಲಿಕೆ ಪರಿಪೂರ್ಣವಾದಂತೆಯೇ ಸರಿ. ಕಾರಣ ಮೌಲ್ಯಮಾಪನಕ್ಕೂ ಹಾಗೂ ಉದ್ದೇಶಗಳಿಗೂ ನೇರವಾದ ಸಂಬಂಧವಿದೆ. ಆದ್ದರಿಂದ ಕಲಿಕಾ ಉದ್ದೇಶಗಳು ಸಮಂಜಸತೆಯಿಂದ ಕೂಡಿರುವುದು ಅಗತ್ಯವಾಗಿದೆ.

**ವಿಷಯ ವಸ್ತುಗಳ ಆಯ್ಕೆಯ ಯಥಾವತ್ತತೆ:** ಪಠ್ಯಕ್ರಮದಲ್ಲಿ ವಿಷಯ ವಸ್ತುಗಳು ನೈಜತೆಯಿಂದ ಕೂಡಿರಬೇಕು. ಕೃತ್ರಿಮತೆಗೆ ಅವಕಾಶವಿರಬಾರದು. ಮಕ್ಕಳ ಸಮಸ್ಯೆ ಸಮಸ್ಯೆಯಾಗಿ ಉಳಿಯದೇ ಅದಕ್ಕೆ ಉತ್ತರ ದೊರಕುವಂತಿರಬೇಕು. ಅಂದರೆ ಶಾಲೆಯಲ್ಲಿ ಪಡೆಯುವ ಜ್ಞಾನವು ಜೀವನಕ್ಕೆ ಉಪಯೋಗವಾಗಬೇಕು. ಆದ್ದರಿಂದ ಪಠ್ಯಕ್ರಮದಲ್ಲಿ ವಸ್ತುವಿಷಯ ಯಥಾವತ್ತಾಗಿದ್ದರೆ ಉತ್ತಮ ಬೆಲೆ ನಿರ್ಧಾರಕ್ಕೆ ಅವಕಾಶ ದೊರೆಯುವುದು.

**ಕಲಿಕೆಯ ಚಟುವಟಿಕೆಗಳು:** ಕಲಿಕಾ ಚಟುವಟಿಕೆಗೆ ಮತ್ತು ಉತ್ತಮ ಜ್ಞಾನಕ್ಕೆ ಅವಕಾಶ ಮಾಡಿಕೊಡಬೇಕು. ಚಟುವಟಿಕೆಗಳ ಮೂಲಕ ಕಲಿಕೆ ಬಹಳ ದಿನಗಳವರೆಗೆ ಉಳಿಯುವುದು. ಆಟದ ಮೂಲ ಕಲಿಕೆ, ಅನುಭವದ ಮೂಲಕ ಕಲಿಕೆ, ಕಥಾ ಪದ್ಧತಿ, ಸಮಸ್ಯೆ ಪರಿಹಾರ ಪದ್ಧತಿ, ಪಾತ್ರಾಭಿನಯ ಮತ್ತು ಪಂಚೇಂದ್ರಿಯಗಳ ಮೂಲಕ ಕಲಿಕೆ ಹೀಗೆ ಅವಕಾಶ ಮಾಡಿಕೊಡುವುದರಿಂದ ಉತ್ತಮ ಬೆಲೆ ನಿರ್ಧರಿಸಲು ಸಾಧ್ಯವಾಗುವುದು.

**ಪಠ್ಯಸಾಮಗ್ರಿಗಳ ಬಳಕೆ:** ಕಲಿಕೆ ಪರಿಣಾಮಕಾರಿಯಾಗಲು ಪಠ್ಯಸಾಮಗ್ರಿಗಳು ಅತ್ಯಂತ ಫಲಕಾರಿಯಾಗಿವೆ. ಮಕ್ಕಳಿಗೆ ಕಲಿಕೆಯಲ್ಲಿ ವೈವಿಧ್ಯತೆ ತಂದು ಪರಿಪೂರ್ಣ ವಿಕಾಸಕ್ಕೆ ಅವಕಾಶ ಮಾಡಿಕೊಡುತ್ತದೆ.

ಪಠ್ಯಕ್ರಮದ ಗುರಿ ತಲುಪಲು ಬೋಧನೆ ಮತ್ತು ಕಲಿಕೆಯ ಸನ್ನಿವೇಶಗಳನ್ನು ಕಾಲ ಕಾಲಕ್ಕೆ ಪರಿವೀಕ್ಷಿಸುವುದು ಮೌಲ್ಯಮಾಪನವಾಗಿದೆ. ಇದು ಕೇವಲ ಮಾಪನ ಅಥವಾ ಅಳತೆಯಲ್ಲ, ಮಾಪನದ ಸಮಗ್ರ ಕಲ್ಪನೆಯನ್ನು ಸೂಚಿಸುವ ಪದವಾಗಿದೆ. ಮೌಲ್ಯಮಾಪನವು ವಿಷಯವಸ್ತುವನ್ನು ಅಷ್ಟೇ ಅಲ್ಲದೆ ಸಾಧನೆ, ಅಭಿವ್ಯಕ್ತಿ, ಅಭಿರುಚಿ, ಚಿಂತನೆ, ಕಾರ್ಯಾಭ್ಯಾಸ, ವೈಯಕ್ತಿಕ ಹಾಗೂ ಸಾಮಾಜಿಕ ಹೊಂದಾಣಿಕೆಗಳ ಕಾರ್ಯದ ಮಾಪನವಾಗಿರುತ್ತದೆ.

**ಪಠ್ಯಕ್ರಮ ಮೌಲ್ಯಮಾಪನದ ಚಟುವಟಿಕೆಗಳು ಮತ್ತು ವಿಧಗಳು**

**ಮೌಲ್ಯಮಾಪನ ಚಟುವಟಿಕೆಗಳು**

ಪಠ್ಯಕ್ರಮ ಮೌಲ್ಯಮಾಪನ ಚಟುವಟಿಕೆಯ ಕೆಲವು ಅಂಶಗಳನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬಹುದು.

ಮೌಲ್ಯಮಾಪನ ಪೂರ್ವ ಪರೀಕ್ಷಿಸುವುದು / ನಂತರ ಪರೀಕ್ಷಿಸುವುದು.

ಪೂರ್ವ ಪರೀಕ್ಷೆ Pre - Test $T_1$ → ಪಠ್ಯಕ್ರಮ ಅಳವಡಿಸುವುದು Curriculum Implementation → ಉತ್ತರ ಪರೀಕ್ಷೆ Post - Test $T_2$

**ಮಟ್ಟ ಆಧಾರಿತ ಪರೀಕ್ಷಿಸುವಿಕೆ / ನಿಕಷ ಆಧಾರಿತ ಪರೀಕ್ಷಿಸುವಿಕೆ.**

**ಪಠ್ಯಕ್ರಮ ಮೌಲ್ಯಮಾಪನದ ವಿಧಗಳು:** ಪಠ್ಯಕ್ರಮ ಮೌಲ್ಯಮಾಪನದ ವಿಧಗಳಲ್ಲಿ ವಿಕಸಿತ ಮತ್ತು ಸಂಕಲನಾತ್ಮಕ ಮೌಲ್ಯಮಾಪನ ಎಂದು ಎರಡು ಮುಖ್ಯವಾದ ವಿಧಗಳಿದ್ದು ಅವು ಪಠ್ಯಕ್ರಮದಿಂದ ಸಾಧಿಸಬಹುದಾದ ಉದ್ದೇಶಗಳನ್ನು ಸಾಧಿಸಲು ಸಹಾಯಕವಾಗಿವೆ.

Digitised by Bharatavani, CIIL




**ರೂಪಣ ಮೌಲ್ಯಮಾಪನ**

ವಿದ್ಯಾರ್ಥಿಗಳ ಸಮಗ್ರ ವಿಕಾಸಗೈಯುವಲ್ಲಿ ಈ ರೂಪಕ ಮೌಲ್ಯಮಾಪನ ತುಂಬಾ ಸಹಾಯಕವಾಗಿದೆ. ಇದು ಪಠ್ಯಕ್ರಮದ ವಿವಿಧ ಹಂತಗಳಾದ ಯೋಜನೆ, ಅಭಿವೃದ್ಧಿ, ಅನುಷ್ಠಾನ ಹಾಗೂ ಮೌಲ್ಯಮಾಪನ ಗುರುತಿಸುವುದಾಗಿದೆ. ಇದರಿಂದ ಕಲಿಕೆ ಯಾವ ರೀತಿ ವಿಕಸಿತ ಹೊಂದುತ್ತಲಿದೆ ಎಂಬುದು ಗೊತ್ತಾಗುತ್ತದೆ. ಶಿಕ್ಷಣದ ಗುರಿಗಳತ್ತ ಸಾಗಲು ಸುಲಭವಾಗಿ ನೆರವಾಗುವುದರೊಂದಿಗೆ ಪುಷ್ಟೀಕರಣ, ಪ್ರೇರಣೆ ಮತ್ತು ಪ್ರಚೋದನೆಯನ್ನು ನೀಡುತ್ತದೆ.

**ರೂಪಕ ಮೌಲ್ಯಮಾಪನದ ಅರ್ಥ ಮತ್ತು ವಿಧಗಳು**

ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗಿ ವರ್ಷದ ಕೊನೆಯವರೆಗೂ ಬೋಧನಾ ಅವಧಿಯಲ್ಲಿ ನಿರಂತರವಾಗಿ ಮಾಡುವ ಮೌಲ್ಯಮಾಪನಕ್ಕೆ ರೂಪಕ ಮೌಲ್ಯಮಾಪನ ಎನ್ನುವರು. ವಿದ್ಯಾರ್ಥಿಗಳ ಸಾಧನೆಯನ್ನು ಒಂದು ಶೈಕ್ಷಣಿಕ ವರ್ಷದುದ್ದಕ್ಕೂ ಗುರುತಿಸುವಲ್ಲಿ ಯಾವುದು ಸಹಾಯಕವಾಗುವುದೋ ಅದೇ ರೂಪಕ ಮೌಲ್ಯಮಾಪನ. ಇದರಲ್ಲಿ ಎರಡು ವಿಧಗಳು.

i. ಪ್ರಕ್ರಿಯಾ ಮೌಲ್ಯಮಾಪನ ii) ಉತ್ಪನ್ನ ಮೌಲ್ಯಮಾಪನ

**ಪ್ರಕ್ರಿಯಾ ಮೌಲ್ಯಮಾಪನ:** ಪಠ್ಯಕ್ರಮವನ್ನು ಅನುಸರಣೆ ಮಾಡಿ ಬೆಲೆ ನಿರ್ಧರಿಸುವುದಕ್ಕೆ ಪ್ರಕ್ರಿಯಾ ಮೌಲ್ಯಮಾಪನ ಎನ್ನುವರು. ಇದು : 1. ವಿದ್ಯಾರ್ಥಿಗಳ ಕಾರ್ಯನಿಷ್ಠತೆಯನ್ನು ತಿಳಿಯಲು ಸಹಾಯಕವಾಗಿದೆ. 2. ವಿದ್ಯಾರ್ಥಿಗಳ ಕಲಿಕಾ ದೋಷಗಳನ್ನು ಗುರುತಿಸಿ ಪರಿಹಾರ ನೀಡುವುದು. 3. ಬೋಧನೆಯನ್ನು ಪುನರ್ ವ್ಯವಸ್ಥೆಗೊಳಿಸುತ್ತದೆ. 4. ಪೂರೈಕೆ, ಪ್ರಕ್ರಿಯೆ ಹಾಗೂ ಉತ್ಪನ್ನ ಇವುಗಳ ಬಂಧನ- ಇವುಗಳ ಬಂಧವನ್ನು ಹೆಚ್ಚು ಅರ್ಥಪೂರ್ಣಗೊಳಿಸುತ್ತದೆ. 5. ಕಲಿಕೆಯ ಜಯ ಅಪಜಯಗಳನ್ನು ತಿಳಿಸುತ್ತದೆ.

**ಉತ್ಪನ್ನ ಮೌಲ್ಯಮಾಪನ:** ಪಠ್ಯಕ್ರಮದ ಅನುಸರಣೆಯ ಮೂಲಕ ವರ್ಷದುದ್ದಕ್ಕೂ ಮಕ್ಕಳನ್ನು ಅಳೆಯುವಂತಹ ಮೌಲ್ಯಮಾಪನಕ್ಕೆ ಉತ್ಪನ್ನ ಮೌಲ್ಯಮಾಪನ ಎನ್ನುವರು. ಇದು : 1. ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯ ಕಂಡು ಹಿಡಿಯಲು ಸಹಾಯಕಾರಿಯಾಗಿದೆ. 2. ಶಿಕ್ಷಣದ ಗುರಿಗಳತ್ತ ಸಾಗಲು ನೆರವಾಗುತ್ತದೆ. 3. ಕಲಿಕೆಗೆ ಪ್ರೇರಣೆ ಮತ್ತು ಉತ್ತೇಜನ ದೊರೆಯುತ್ತದೆ. 4. ಪರಿಮಾಣಾತ್ಮಕ ಹಾಗೂ ಗುಣಾತ್ಮಕ ಕಲಿಕೆಗೆ ಅವಕಾಶ ಮಾಡಿಕೊಡುವುದು. 5. ಶಿಕ್ಷಣ ಕ್ಷೇತ್ರವನ್ನು ವ್ಯಾಪಕವಾಗಿ ಅಳೆಯಲು ಅವಶ್ಯ.

**ಸಂಕಲನಾತ್ಮಕ ಮೌಲ್ಯಮಾಪನ:** ರೂಪಣ ಮೌಲ್ಯಮಾಪನವು ಸ್ವಭಾವ ಮತ್ತು ಕಾರ್ಯದಲ್ಲಿ ಬೋಧನಾ ಅವಧಿಯ ಅವಿಭಾಜ್ಯ ಅಂಶವಾದರೆ ಸಂಕಲನಾತ್ಮಕ ಮೌಲ್ಯಮಾಪನವು ಶಿಕ್ಷಣ ಪ್ರಯತ್ನಗಳ ಅಂತಿಮ ಫಲವನ್ನು ಅಳತೆ ಮಾಡುವ ಗುರಿ ಹೊಂದಿದೆ. ಪಠ್ಯಕ್ರಮದ ಮೂಲಕ ಮಕ್ಕಳ ಸಾಧನೆಯನ್ನು ಸಮಗ್ರವಾಗಿ ಅಳೆಯುವಂತಹ ಮೌಲ್ಯಮಾಪನವನ್ನು ಸಂಕಲನಾತ್ಮಕ ಮೌಲ್ಯಮಾಪನ ಎಂದು ಕರೆಯುತ್ತಾರೆ. ಇದನ್ನು ಒಂದು ಶೈಕ್ಷಣಿಕ ವರ್ಷದ ಕೊನೆಯಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಟ್ಟವನ್ನು ನಿರ್ಧರಿಸುವುದಕ್ಕೆ ಬಳಸಲಾಗುತ್ತದೆ. ಇದು : 1. ವಿದ್ಯಾರ್ಥಿಗಳ ವಾರ್ಷಿಕ ಸಾಧನೆಯನ್ನು ಒರೆಗೆ ಹಚ್ಚುವ ಕಾರ್ಯ ಮಾಡುತ್ತದೆ. 2. ವಿದ್ಯಾರ್ಥಿಗಳನ್ನು ಮುಂದಿನ ವರ್ಗಗಳಿಗೆ ಬಡ್ತಿ ನೀಡಲು ಬಳಸಲಾಗುತ್ತದೆ. 3. ವಿದ್ಯಾರ್ಥಿಗಳ ವಿಚಾರಶಕ್ತಿ ಮತ್ತು ನೆನಪಿನ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ. 4. ಸ್ವ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ. 5. ಬೋಧನಾ-ಕಲಿಕ ಪ್ರಕ್ರಿಯೆಯ ಜಯಾಪಜಯಗಳನ್ನು ಒರೆಗೆ ಹಚ್ಚಲು ಇದು ಅವಶ್ಯಕ. 6. ಶೈಕ್ಷಣಿಕ ಪ್ರಗತಿಯನ್ನು ಹೋಲಿಕೆ ಮಾಡಲು ಇದು ಸಹಾಯಕಾರಿಯಾಗಿದೆ.

**ಪಠ್ಯಕ್ರಮ ಮೌಲ್ಯಮಾಪನದ ಮೂಲ ಆಧಾರಗಳು:** ಪಠ್ಯಕ್ರಮದ ಮೌಲ್ಯಮಾಪನವನ್ನು ಹಲವಾರು ಮೂಲ ಆಧಾರಗಳ ಮೇಲೆ ಕೈಗೊಳ್ಳಬೇಕಾಗಿರುತ್ತದೆ. ಇವುಗಳು ಪಠ್ಯಕ್ರಮದ ಸಾಧಕ, ಬಾಧಕಗಳ ಬಗ್ಗೆ ಸಮರ್ಪಕವಾದ ಮಾಹಿತಿಗಳನ್ನು ಒದಗಿಸುತ್ತವೆ. ಅವುಗಳೆಂದರೆ,

**ವಿದ್ಯಾರ್ಥಿಗಳು:** ವಿದ್ಯಾರ್ಥಿಗಳ ಒಂದು ನಿರ್ದಿಷ್ಟವಾದ ಶಿಕ್ಷಣದ ಅಥವಾ ತರಗತಿಗೆ ಅಳವಡಿಸದಂತಹ ಪಠ್ಯಕ್ರಮದ ಬಗ್ಗೆ ಸರಿಯಾದಂತಹ ಮಾಹಿತಿಗಳನ್ನು ಸಂಗ್ರಹಿಸಲು ಶಾಲೆಗಳ ವಿದ್ಯಾರ್ಥಿಗಳು ಒಂದು ವಿಷಯ ಅಥವಾ ಹಲವಾರು ವಿಷಯಗಳ ಮೇಲೆ ತೋರಿದ ಸಾಧನೆಗಳನ್ನು ಮೌಲ್ಯಮಾಪನದ ಮೂಲಕ ಕಂಡುಕೊಂಡು, ಪಠ್ಯಕ್ರಮದ ಯಾವ ಅಂಗದಲ್ಲಿ ದೋಷವಿದೆ, ಅಸಮರ್ಪಕತೆ ಇದೆ ಎಂಬುದನ್ನು ಗುರ್ತಿಸಿ, ಸುಧಾರಣಾ ಯೋಗ್ಯವಾದ ಕ್ರಮಗಳನ್ನು ಕೈಗೊಳ್ಳುವುದು.

**ವಿಷಯಗಳನ್ನು ಬೋಧಿಸುವ ಶಿಕ್ಷಕರು:** ಶಿಕ್ಷಕರು ಪಠ್ಯಕ್ರಮದ ಒಂದು ಭಾಗವಾಗಿ ಪ್ರತಿನಿಧಿಸುತ್ತಾರೆ. ರೂಪಿತವಾದ ಪಠ್ಯಕ್ರಮದಲ್ಲಿ ಶಾಲೆಗಳಲ್ಲಿ ಕಾರ್ಯರೂಪಕ್ಕೆ ತರುವವರು. ಶಿಕ್ಷಕರು, ಪಠ್ಯಕ್ರಮದ ಉದ್ದೇಶಗಳಿಗನುಗುಣವಾಗಿ ರೂಪಿತವಾದಂತಹ ವಿಷಯವಸ್ತುವಿನ ಜ್ಞಾನವನ್ನು ವಿವಿಧ ಬೋಧನಾ ವಿಧಾನಗಳ ಮೂಲಕ ಮಕ್ಕಳಿಗೆ ತಮ್ಮ ಅನುಭವಗಳೊಂದಿಗೆ ವರ್ಗಾಯಿಸುತ್ತಾರೆ, ಮತ್ತು ಮೌಲ್ಯಮಾಪನ ಮಾಡುತ್ತಾರೆ. ವಿದ್ಯಾರ್ಥಿಗಳ ಸಾಧನೆಯ ಆಧಾರದ ಮೇಲೆ ಪಠ್ಯಕ್ರಮದ ಮೌಲ್ಯಮಾಪನ ಮಾಡಿ, ಅದು ಸರಿಯಾದ ಪಠ್ಯಕ್ರಮ ಹೌದೋ ಅಲ್ಲವೋ ಎಂಬುದಕ್ಕೆ ಮಾಹಿತಿ ಒದಗಿಸುತ್ತಾರೆ. ಕೆಲವು ಸಲ ಪಠ್ಯವಸ್ತು ಕಠಿಣವಾಗಿದ್ದರೆ, ಯಾವ ವಿಧಾನವನ್ನು ಬಳಸಿ ಬೋಧನೆ ಮಾಡಿದರೂ ಸಫಲತೆ ದೊರೆಯದಿದ್ದರೆ, ಆ ಪಠ್ಯಕ್ರಮವನ್ನು ಬದಲಿಸಬೇಕಾಗುತ್ತದೆ.

**ವಿಷಯ ಪರಿಣಿತರು:** ರೂಪಿಸಿದಂತಹ ಪಠ್ಯಕ್ರಮವು ಸೂಕ್ತವಾಗಿದೆಯೇ ಅದು ಮಕ್ಕಳಲ್ಲಿ ವಿಶೇಷ ಪರಿಣಿತಿಯನ್ನು ಬೆಳೆಸುತ್ತದೆಯೋ ಹೇಗೆ ಎಂಬುದರ ಬಗ್ಗೆ ವಿವಿಧ ವಿಷಯಗಳಲ್ಲಿ ಪರಿಣಿತರಾದ, ಕಾರ್ಯನಿರತರಾದ, ಸಂಶೋಧನೆಗಳನ್ನು ಕೈಗೊಂಡಂತಹ

Digitised by Bharatavani, CIIL

ಹೆಚ್ಚಿನ ಅನುಭವ ಮತ್ತು ಜ್ಞಾನವನ್ನು ಹೊಂದಿದಂತಹ ವಿಷಯ ಪರಿಣಿತರಿಂದ ಮಾಹಿತಿಗಳನ್ನು ಸಂಗ್ರಹಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಿ, ಪಠ್ಯಕ್ರಮವು ಪರಿಷ್ಕರಣೆಗೆ ಒಳಪಡುವಂತಿದ್ದರೆ ವಿಷಯ ಪರಿಣಿತರ ಸಲಹೆಗಳ ಮೇರೆಗೆ ಅದನ್ನು ಪರಿಷ್ಕರಿಸಬೇಕಾಗುತ್ತದೆ. ಪಠ್ಯಕ್ರಮದ ಮೌಲ್ಯಮಾಪನದಲ್ಲಿ ಇವರು ಮಹತ್ವದ ಪಾತ್ರವನ್ನು ವಹಿಸುತ್ತಾರೆಂದು ಹೇಳಬಹುದು.

**ಪಠ್ಯಕ್ರಮ ಪರಿಣತರು:** ಪಠ್ಯಕ್ರಮದ ಮೌಲ್ಯಮಾಪನದಲ್ಲಿ ಪಠ್ಯಕ್ರಮ ಪರಿಣಿತರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ವಿದ್ಯಾರ್ಥಿಗಳನ್ನು ಮತ್ತು ಸಮಾಜವನ್ನು ಹಾಗೂ ರಾಷ್ಟ್ರವನ್ನು ಅನುಲಕ್ಷಿಸಿ ತ್ವರಿತಗತಿಯಲ್ಲಿ ಬದಲಾವಣೆ ಹೊಂದುತ್ತಿರುವ ಆಧುನಿಕ ತಂತ್ರಜ್ಞಾನವನ್ನು ಅನುಲಕ್ಷಿಸಿ ಈಗಿರುವ ಪಠ್ಯಕ್ರಮದಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಮಾಡಬೇಕು. ಯಾವ ಅಂಶಗಳು ಪ್ರಸ್ತುತ ಸನ್ನಿವೇಶಗಳಿಗೆ ಹೊಂದಾಣಿಕೆಯಾಗಿರುತ್ತವೆ. ಮತ್ತು ರೂಪಿಸುವ ಉದ್ದೇಶಗಳು ಹಾಗೂ ವಿಷಯವಸ್ತು ಬೋಧನಾ ವಿಧಾನಗಳು, ಮೌಲ್ಯಮಾಪನ ತಂತ್ರಗಳು ಹೇಗಿರಬೇಕೆಂಬುದರ ಬಗೆಗೆ ಉತ್ತಮವಾದಂತಹ ಹಾಗೂ ಉಪಯುಕ್ತವಾದಂತಹ ಮಾಹಿತಿಗಳು ಪಠ್ಯಕ್ರಮದ ಪರಿಣಿತರಿಂದ ದೊರೆಯುತ್ತವೆ.

**ನೀತಿ ರೂಪಿಸುವವರು:** ಶಿಕ್ಷಣದ ನೀತಿ ರೂಪಿಸುವ ವಿವಿಧ ನಿಯೋಗಗಳಾದ ಸಿ.ಬಿ.ಎಸ್.ಇ., ಎನ್.ಸಿ.ಇ.ಆರ್.ಟಿ., ಎನ್.ಓ.ಎಸ್., (National Open School), ಡಿ.ಎಸ್.ಇ.ಆರ್.ಟಿ., ಮುಂತಾದವು ಪಠ್ಯಕ್ರಮದ ಮೌಲ್ಯಮಾಪನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ನಿಯೋಗಗಳು ಸಮಾಜದಲ್ಲಾದ ಬದಲಾವಣೆಗಳು, ತಾಂತ್ರಿಕ ಬೆಳವಣಿಗೆಗಳು, ಸರ್ಕಾರಿ ನಿಯಮಗಳಲ್ಲಾದ ಬದಲಾವಣೆಗಳು, ಮುಂತಾದ ಬದಲಾವಣೆಗಳಿಗನುಗುಣವಾದ ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತವೆ. ಪ್ರಸ್ತುತವಿರುವ ಪಠ್ಯಕ್ರಮವನ್ನು ಬದಲಾದ ಸನ್ನಿವೇಶಗಳಿಗನುಗುಣವಾಗಿ ಪರಿಷ್ಕರಿಸಲು ಉತ್ತಮಜ್ಞಾನ ಮತ್ತು ಅನುಭವಗಳನ್ನು ಹೊಂದಿದ ವಿವಿಧ ನಿಯೋಗಗಳಲ್ಲಿ ಕಾರ್ಯಪ್ರವೃತ್ತರಾದ ನೀತಿ ನಿರೂಪಕರು ಸೂಕ್ತವಾದ ಮಾಹಿತಿಗಳನ್ನು ಒದಗಿಸುತ್ತಾರೆ. ಪಠ್ಯಕ್ರಮದ ಮೌಲ್ಯಮಾಪನದಲ್ಲಿ ಇವರ ಕೊಡುಗೆ ಮಹತ್ವದ್ದಾಗಿದೆ.

ಸಮುದಾಯ: ಸ್ಥಳೀಯ ಸಮುದಾಯದಲ್ಲಿರುವಂತಹ ಶಿಕ್ಷಣ ಪಡೆದಿರುವವರು ಉತ್ತಮ ತರಬೇತಿ ಹೊಂದಿದವರು ಪಠ್ಯಕ್ರಮದ ಮೌಲ್ಯ-ಮಾಪನದಲ್ಲಿ ವಿಶಿಷ್ಟವಾದ ಪಾತ್ರವನ್ನು ವಹಿಸುತ್ತಾರೆ. ಇವರು ಸ್ಥಳೀಯ ಸಮುದಾಯದ ರೀತಿ, ನೀತಿ, ಅಗತ್ಯತೆಗಳ ಬಗ್ಗೆ ದೊರೆಯಬಹುದಾದ ಸಂಪನ್ಮೂಲಗಳ ಬಗ್ಗೆ ಸೂಕ್ತವಾದ ಮಾಹಿತಿಯನ್ನು ಒದಗಿಸುತ್ತಾರೆ. ಇದರಿಂದ ಸ್ಥಳೀಯ ಸಮುದಾಯದ ಅಗತ್ಯತೆಗಳಿಗನುಗುಣವಾಗಿ ಪಠ್ಯಕ್ರಮವನ್ನು ರೂಪಿಸಲು ಸಹಾಯಕವಾಗುತ್ತದೆ.

ಶಾಲೆಯಿಂದ ಹೊರಹೋದವರ ಮಾಹಿತಿ:ಒಂದು ನಿರ್ದಿಷ್ಟವಾದ ಶಿಕ್ಷಣ ಅಥವಾ ಒಂದು ತರಗತಿಯಲ್ಲಿ ಅಧ್ಯಯನ ಮಾಡುವಾಗ ಶಾಲೆ ಬಿಟ್ಟು ಹೊರಹೋದ ವಿದ್ಯಾರ್ಥಿಗಳ ಮಾಹಿತಿಯು ಪಠ್ಯಕ್ರಮದ ಮೌಲ್ಯಮಾಪನಕ್ಕೆ ಸಹಾಯಕವಾಗುತ್ತದೆ. ಯಾವ ಕಾರಣಕ್ಕಾಗಿ ವಿದ್ಯಾರ್ಥಿಗಳು ಶಾಲೆ ಬಿಟ್ಟರು ಎಂಬುದನ್ನು ಪರಿಶೀಲಿಸಿದಾಗ ಕೆಲವು ಸಂದರ್ಭಗಳಲ್ಲಿ ಪಠ್ಯಕ್ರಮ ಕಠಿಣತೆಯನ್ನು ಹೊಂದಿರುವುದು ಕಾರಣವಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ನೈದಾನಿಕ ಪರೀಕ್ಷಣಗಳನ್ನು ಅಳವಡಿಸಿ ಪಠ್ಯಕ್ರಮದ ಕಠಿಣತೆಯನ್ನು ತಿಳಿದುಕೊಂಡು ಅದನ್ನು ಸುಧಾರಿಸಲು ಸಹಾಯವಾಗುತ್ತದೆ.

**ಉದ್ಯೋಗಿಗಳು :** ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವಂತಹ ಉದ್ಯೋಗಿಗಳು ಪ್ರಸ್ತುತ ಸಮಾಜಕ್ಕೆ ಯಾವುದು ಅಗತ್ಯ ಇದೆ, ಆ ಅಗತ್ಯತೆಗಳನ್ನು ಪೂರೈಸುವಂತಹ ಪಠ್ಯಕ್ರಮವನ್ನು ಅಪೇಕ್ಷಿಸುತ್ತಾರೆ. ಪಠ್ಯಕ್ರಮವು ಒಳಗೊಂಡಂತಹ ಸಮರ್ಥ ಹಾಗೂ ದುರ್ಬಲ ಅಂಶಗಳನ್ನು ಎತ್ತಿ ಹಿಡಿಯುತ್ತಾರೆ. ಇದರಿಂದ ಪ್ರಸ್ತುತ ಸಮಾಜಕ್ಕೆ ಯಾವುದು ಅಗತ್ಯವಿದೆ ಎಂಬುದರ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ರೀತಿಯಾಗಿ ಪಠ್ಯಕ್ರಮದ ಮೌಲ್ಯಮಾಪನವಾಗಿ ಅದನ್ನೇ ಸುಧಾರಿಸಲು ಸಹಾಯಕವಾಗುತ್ತದೆ.

ಒಟ್ಟಿನಲ್ಲಿ ಪಠ್ಯಕ್ರಮವು ಸಾರ್ವಕಾಲಿಕವಾದುದಲ್ಲ. ಕಾಲ, ಸಮಾಜ, ಹಾಗೂ ತಾಂತ್ರಿಕ ಬೆಳವಣಿಗೆ ಆದಂತೆ ಆಶೆ, ಅಭಿರುಚಿ, ಮನೋವೃತ್ತಿ ಹಾಗೂ ಅಗತ್ಯತೆಗಳೂ ಬದಲಾಗುತ್ತವೆ. ಈ ನಿಟ್ಟಿನಲ್ಲಿ ಈ ಬದಲಾವಣೆಗಳನ್ನು ಅನುಲಕ್ಷಿಸುತ್ತಾ ಪಠ್ಯಕ್ರಮವನ್ನು ಆಗಾಗ ಬದಲಾವಣೆ ಮಾಡಬೇಕಾಗುತ್ತದೆ.

ಪಠ್ಯಕ್ರಮ ಮೌಲ್ಯಮಾಪನದ ಯಶಸ್ಸಿಗೆ ಐದು ಅಂಶಗಳನ್ನು ಅವಲಂಬಿಸಿದೆ.

* **ಪ್ರಯತ್ನ** (Effort): ಪ್ರಯತ್ನ ಮಾಡುವುದರಲ್ಲಿ ಲಭ್ಯವಿರುವ ಸಂಪನ್ಮೂಲಗಳು ಗುಣಾತ್ಮಕ ಹಾಗೂ ಪ್ರಮಾಣದ ಮೇಲೆ ಅವಲಂಬಿಸಿದೆ. ಇದನ್ನು ಒಳಪೂರೈಕೆಯ ಮೌಲ್ಯಮಾಪನವೆಂತಲೂ ತಿಳಿಯಬಹುದು.

* **ಪರಿಣಾಮ** (Effect): ಪರಿಣಾಮವನ್ನು ಉದ್ದೇಶಗಳನ್ನು ಅಳತೆ ಮಾಡುವ ಮೂಲಕ ಪ್ರಯತ್ನದ ಫಲಿತಾಂಶವನ್ನು ಅರಿಯುವ ಇದನ್ನು ಫಲಶ್ರುತಿ ಮೌಲ್ಯಮಾಪನ, ಹೊರಪೂರೈಕೆಯ ಮೌಲ್ಯಮಾಪನವೆಂತಲೂ ತಿಳಿಯಬಹುದು.

**ಸೂಕ್ತತೆ** (Adequacy): ಒಂದು ನಿರ್ದಿಷ್ಟ ಗುಂಪಿಗೆ ಒದಗಿಸಿದ ಕಾರ್ಯಕ್ರಮದ ಉದ್ದೇಶಗಳನ್ನು ಈಡೇರಿಸಲು ಸೂಕ್ತತೆಯು ಪರಿಣಾಮಕತ್ವವನ್ನು ಅವಲಂಬಿಸಿದೆ.

**ಸಮರ್ಥತೆ** (Effeciency): ಎಲ್ಲೆಲ್ಲಿ ಸಾಧ್ಯವಾದ ವೆಚ್ಚ-ಲಾಭ ವಿಶ್ಲೇಷಿಸಿ ಅಳತೆ ಮಾಡುವುದು.

**ಪರಿಷ್ಕರಣೆ** (Process): ಮೌಲ್ಯಮಾಪನದ ಯಾವುದೇ ಕಾರ್ಯಕ್ರಮಗಳು ಹೇಗೆ? ಏಕೆ? ಕಾರ್ಯನಿರ್ವಹಿಸುತ್ತದೆ ಅಥವಾ ನಿರ್ವಹಿಸುವುದಿಲ್ಲವೆಂಬುದರ ಬಗ್ಗೆ ಮೌಲ್ಯಮಾಪಕ ಆಸಕ್ತಿಯನ್ನು ವಹಿಸುತ್ತಾನೆ. ಹಾಗೆಯೇ ನಿರ್ದಿಷ್ಟ ಫಲಿತಾಂಶ ತಲುಪಲು ಒಳಪೂರೈಕೆಯನ್ನು ಬದಲಾವಣೆ ಮಾಡಿಕೊಳ್ಳುತ್ತೇವೆ.

– ಎಸ್.ಎಸ್.ಸ.

## ಪದವಿ–ಪೂರ್ವ ಶಿಕ್ಷಣ

ಶಿಕ್ಷಣ ಕ್ಷೇತ್ರದಲ್ಲಿ ಪದವಿಪೂರ್ವ ಶಿಕ್ಷಣವು ಅತ್ಯಂತ ಪ್ರಮುಖ ಹಾಗೂ ಪ್ರಭಾವಿಯಾಗಿರುವ ಹಂತ. ಪದವಿ-ಪೂರ್ವ ಶಿಕ್ಷಣವು ವಿದ್ಯಾರ್ಥಿಯ ವೈಯಕ್ತಿಕ ಸಾಧನೆ ಮತ್ತು ಅವನ ಶಿಕ್ಷಣದ ಕೇಂದ್ರ ಬಿಂದುವಾಗಿ ಮಾರ್ಪಡುವುದು. ಇದು ವಿದ್ಯಾರ್ಥಿ ಜೀವನದ ಸಂಧಿಕಾಲ ಮತ್ತು ಭಾವೀ ಜೀವನವನ್ನು ರೂಪುಗೊಳ್ಳುವ ಹಂತವಾಗಿದೆ. ಪದವಿ ಪೂರ್ವ ಶಿಕ್ಷಣವು ಸಾಮಾಜಿಕ, ಔದ್ಯೋಗಿಕ, ತಾಂತ್ರಿಕ, ವೈದ್ಯಕೀಯ ಹಾಗೂ ಇತರ ಅಧ್ಯಯನಗಳ ಪೂರ್ವ ಸಿದ್ಧತೆಯನ್ನು ಒದಗಿಸಬೇಕಾಗಿರುವ ಹಂತವಾಗಿದೆ.

ಪದವಿ-ಪೂರ್ವ ಶಿಕ್ಷಣದಿಂದ ಹೊರಬರುವ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರ ಮತ್ತು ಅಂತರ್ ರಾಷ್ಟ್ರ ಮಟ್ಟದಲ್ಲಿ ಸೇವೆಯನ್ನು

Digitised by Bharatavani, CIIL

ಸಲ್ಲಿಸಬೇಕಾಗಿರುತ್ತದೆ. ಈ ವಿದ್ಯಾರ್ಥಿ ಮಿತ್ರರು ರಾಷ್ಟ್ರದ ಸಮಾನ ಯುವ ಸಮುದಾಯದೊಡನೆ ಸ್ಪರ್ಧಿಸಬೇಕಾಗಿದೆ. ಈ ವಿದ್ಯಾರ್ಥಿಗಳ ಜ್ಞಾನ, ತಿಳುವಳಿಕೆ, ಆಸಕ್ತಿ, ಮನೋಭಾವ, ಅಭಿಕ್ಷಮತೆ, ಕೌಶಲ ಇವುಗಳ ಮನೋಬಲವನ್ನು ಅಭಿವೃದ್ಧಿಗೊಳಿಸುವಂತೆ ಮಾಡುವುದಾಗಿದೆ. ಪದವಿ ಪೂರ್ವ–ಶಿಕ್ಷಣದ ಪ್ರಮುಖ ಉದ್ದೇಶವು ಚಲನಶೀಲ ಪ್ರಪಂಚದಲ್ಲಿ ಹೊಸ ಹೊಸ ರೂಪ ರೇಷೆಗಳ ಆವಿಷ್ಕಾರಗಳನ್ನು, ಜ್ಞಾನ ಭಂಡಾರವನ್ನು ಹಾಗೂ ಜೀವನ ಶೈಲಿಗಳನ್ನು ಯುವ ಪೀಳಿಗೆಗೆ ಒಡ್ಡುತ್ತಲೇ ಇರುವುದರಿಂದ ಅವುಗಳನ್ನು ಸಮರ್ಥವಾಗಿ ಎದುರಿಸುವ ಹಾಗೂ ಅಂತರ್ಗತ ಮಾಡಿಕೊಳ್ಳಲು ಅನುಕೂಲವಾದ ಶಿಕ್ಷಣವನ್ನು ಯುವ ಜನಾಂಗಕ್ಕೆ ಪದವಿ ಪೂರ್ವ ಶಿಕ್ಷಣದ ಮಟ್ಟದಲ್ಲಿ ಒದಗಿಸಬೇಕಾಗುತ್ತದೆ.

'ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ'. ಆಧುನಿಕ ಯುಗದಲ್ಲಿ ಬದಲಾಗುವ ಜೀವನಕ್ಕೆ ಶಿಕ್ಷಣದ ಉದ್ದೇಶ ಮತ್ತು ಗುರಿಗಳು ವಿದ್ಯಾರ್ಥಿ ಜೀವನದ ಸಾಮರ್ಥ್ಯ, ಜ್ಞಾನ ಹಾಗೂ ಕೌಶಲಗಳು ಬದಲಾವಣೆಯಾಗಬೇಕಾಗಿದೆ. ಇದಕ್ಕನುಗುಣವಾಗಿ ಪದವಿ–ಪೂರ್ವ ಶಿಕ್ಷಣದ ಬದಲಾವಣೆಯಾಗಿ ಪ್ರಸ್ತುತ ಸ್ಥಿತಿಯಲ್ಲಿ ಶಿಕ್ಷಣದ ಗುಣಮಟ್ಟವನ್ನು ರೀತಿಗಳನ್ನೂ ಬದಲಾಯಿಸಿಕೊಳ್ಳಬೇಕಾಗಿದೆ. ಪ್ರಚಲಿತ ಸಮಸ್ಯೆಗಳನ್ನು ಅಧ್ಯಯನಿಸಿ ಮುಂದಿನ ಯುವ ಪೀಳಿಗೆಗೆ ಯಾವ ರೀತಿಯ ಶಿಕ್ಷಣ ಬೇಕು ಎಂಬುದನ್ನರಿತು ರಾಷ್ಟ್ರದ ತತ್ವಜ್ಞಾನಿಗಳು ಶಿಕ್ಷಣ ತಜ್ಞರ ಸಲಹೆಗಳನ್ನು ಪರಿಗಣನೆಗೆ ತೆಗೆದುಕೊಂಡು ವಿವಿಧ ಕ್ಷೇತ್ರಗಳಿಂದ ಬಂದಿರುವ ಅಭಿಪ್ರಾಯಗಳನ್ನು ಸಮಿತಿ ಸಭೆಯಲ್ಲಿ ಕ್ರೋಡೀಕರಿಸಲಾಗುತ್ತದೆ.

ಈ ನಿಟ್ಟಿನಲ್ಲಿ ಪದವಿ ಪೂರ್ವ–ಶಿಕ್ಷಣದ ಪರಿಷ್ಕರಣೆಯು ಆಗಿಂದಾಗ್ಗೆ ನಡೆಯಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ 2002ರ ಜುಲೈನಲ್ಲಿ ಕಾರ್ಯಕ್ರಮವನ್ನು ಕೈಗೊಂಡು ಪದವಿ ಪೂರ್ವ ಶಿಕ್ಷಣ ಮಟ್ಟದಲ್ಲಿ ಶಿಕ್ಷಣ ರಂಗದಲ್ಲಿ ನುರಿತವರು, ಶಿಕ್ಷಣ ಕ್ಷೇತ್ರದ ವಿದ್ವಾಂಸರು ವಿಷಯ ತಜ್ಞರು ಮತ್ತು ಶಿಕ್ಷಣ ತತ್ವಜ್ಞಾನಿಗಳನ್ನೊಳಗೊಂಡ ಚಾಲನಾ ಸಮಿತಿಯು ಪಠ್ಯಕ್ರಮ ಪರಿಷ್ಕರಣೆಗೆ ಮಾರ್ಗದರ್ಶಿ ಸೂತ್ರವನ್ನು ಈಗಾಗಲೇ ನಿರೂಪಿಸಿದೆ. ವಿವಿಧ ವಿಷಯಗಳಲ್ಲಿ ಪಠ್ಯವಸ್ತು ನಿರೂಪಣಾ ಸಮಿತಿಗಳನ್ನು ನೇಮಿಸಲಾಗಿದ್ದು 10 ತಿಂಗಳ ಅವಧಿಯಲ್ಲಿ ಅನೇಕ ಸಲ ಸಭೆ ಸೇರಿ ಚರ್ಚಿಸಿ ದೀರ್ಘ ಚಿಂತನೆಯ ನಂತರ ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ಉಪಯುಕ್ತವೆನಿಸುವ ಕರಡು ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಈ ಕರಡು ಪಠ್ಯಕ್ರಮವನ್ನು ಅನೇಕ ಸ್ತರಗಳಲ್ಲಿ ಶಿಕ್ಷಣ ವಿದ್ಯಾಲಯಗಳಲ್ಲಿ ಸಾರ್ವಜನಿಕವಾಗಿ ಮುಕ್ತ ಚರ್ಚೆಗೆ ಒಳಪಡಿಸಿ ಬಂದ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಸಕಾರಾತ್ಮಕ ಸಲಹೆಗಳನ್ನು ಅಳವಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಈ ಪಠ್ಯವಸ್ತುವನ್ನು ರಾಷ್ಟ್ರೀಯ ಶಿಕ್ಷಣ ಚೌಕಟ್ಟಿನಲ್ಲಿ ರಚಿಸಲಾಗಿದೆ.

**ಪಠ್ಯಕ್ರಮ ರಚನೆ:** ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಈ ಕೆಳಕಂಡ ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿದೆ.

1. ಪದವಿ–ಪೂರ್ವ ಶಿಕ್ಷಣದ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಲೀ, ಉದ್ಯೋಗದಲ್ಲಾಗಲೀ ಅವಶ್ಯಕವಾದ ಸಂವಹನ ಕೌಶಲ, ಗಣನೆ, ಶಿಕ್ಷಣದ ಕೌಶಲ ಹಾಗೂ ವ್ಯಕ್ತಿ ಕೌಶಲಗಳನ್ನು ಯಾರಿಗೂ ಕಡಿಮೆ ಇಲ್ಲದಂತೆ ಸಾಧಿಸಲು ಸಹಾಯ ಮಾಡಬೇಕು.

2. ಜಾಗತಿಕ ಮಟ್ಟದಲ್ಲಿ ಯಾವುದೇ ದೇಶದ ಸಮವಯಸ್ಕ ಸಮಾನ ಶಿಕ್ಷಿತ ಯುವಜನಾಂಗದೊಡನೆ ಬೌದ್ಧಿಕ ಹಾಗೂ ಕೌಶಲ ಕ್ಷೇತ್ರಗಳಲ್ಲಿ ಸಮ ಸ್ಪರ್ಧಿಗಳಾಗಿ ಯಶಸ್ವಿಯಾಗಲು ಸಮರ್ಥರನ್ನಾಗಿ ಮಾಡಬೇಕು.

3. ಸಿ.ಬಿ.ಎಸ್.ಇ/ಐ.ಸಿ.ಎಸ್.ಇ. ಮತ್ತು ರಾಷ್ಟ್ರದ ಇತರೇ ರಾಜ್ಯಗಳ ಸಮಾನಸ್ತರದ ಪಠ್ಯಕ್ರಮದ ಸೂಕ್ತ ಅಂಶಗಳನ್ನೊಳಗೊಂಡಂತೆ ಸಾಮ್ಯತೆ ಕಾಯ್ದುಕೊಳ್ಳಬೇಕು.

4. ಪದವಿ–ಪೂರ್ವ ಕಾಲೇಜುಗಳಲ್ಲಿ ಅಧ್ಯಯನ ಮಾಡುವ ಸುಮಾರು 7 ಲಕ್ಷಕ್ಕೂ ಮೀರಿದ ವಿದ್ಯಾರ್ಥಿಗಳ ವೈವಿಧ್ಯಗಳು, ಆಸೆ ಆಕಾಂಕ್ಷೆಗಳು, ಅವರ ಪರಿಸರ, ಅವರು ತಲುಪಬೇಕಾದ ಮಟ್ಟವನ್ನು ಪರಿಗಣಿಸಬೇಕು.

ಈ ಮೇಲ್ಕಂಡ ಪರಿಷ್ಕರಣೆಯಲ್ಲಿ ಪರೀಕ್ಷಾ ಪದ್ಧತಿಯನ್ನು ಸಮಗ್ರವಾಗಿ ವಿವೇಚಿಸಿ ಮೌಲ್ಯಮಾಪನದ ವ್ಯವಸ್ಥೆಯಲ್ಲಿ ಏಕರೂಪತೆ ತರುವಂತೆ ಮಾಡುವುದು. ಪದವಿ–ಪೂರ್ವ ಶಿಕ್ಷಣವು ವಿದ್ಯಾರ್ಥಿಗಳಿಗೆ ಪ್ರಮುಖ ಕೊಂಡಿಯಾಗಿದೆ. ತದನಂತರ ವಿದ್ಯಾರ್ಥಿಗಳು ತಮ್ಮ ಭವಿಷ್ಯ ನಿರ್ಮಾಣದ ಹೆಜ್ಜೆ ಇಡಲು ಸಿದ್ಧರಾಗಿರುತ್ತಾರೆ. ಅಂದರೆ ಸಾಮಾನ್ಯ ಶಿಕ್ಷಣ ಪದ್ಧತಿ, ಶಿಕ್ಷಣ ಮ್ಯಾನೇಜ್‌ಮೆಂಟ್ ತರಗತಿಗಳು, ವಾಣಿಜ್ಯೋದ್ಯಮ ತರಗತಿಗಳು ಪದವಿ–ಪೂರ್ವ ಶಿಕ್ಷಣ ಅವಶ್ಯಕತೆಯನ್ನು ಹೊಂದಿವೆ.

ಪದವಿ–ಪೂರ್ವ ಶಿಕ್ಷಣ ಇಲಾಖೆಯು 1995–96 ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ ಪದವಿ ಪೂರ್ವ ತರಗತಿಗಳ ಪಠ್ಯಕ್ರಮ ಪರಿಷ್ಕರಣೆಯನ್ನು 2002–03ರಲ್ಲಿ ಪ್ರಾರಂಭಿಸಿತು. ಪರಿಷ್ಕರಣೆಗೆ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಯಿತು.

1. ಪ್ರಾದೇಶಿಕ ಸಮತೋಲನ
2. ಕನಿಷ್ಠ ಕಲಿಕೆ: ಭಾರತ ದೇಶದ ಯಾವುದೇ ರಾಜ್ಯದ 11–12ನೇ ತರಗತಿಗಳ ವಿದ್ಯಾರ್ಥಿಗಳ ಕನಿಷ್ಠ ಕಲಿಕೆಗಿಂತ ಕಡಿಮೆ ಇರಬಾರದು.
3. ಹೊಸ ಪಠ್ಯಕ್ರಮವು ಕಲಿಕೆಗೆ ಸುಲಭವಾಗಿ ಹೊಂದಿಕೊಳ್ಳಬೇಕು.
4. ಹೆಚ್ಚಿನ ಬೆಳವಣಿಗೆಗಳನ್ನು ಅವುಗಳ ಉಪಯುಕ್ತತೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಬೇಕು.

ದಿನಾಂಕ 11–06–2002ರಲ್ಲಿ ಖ್ಯಾತ ವಿಜ್ಞಾನಿ ಪ್ರೊ. ಯು.ಆರ್. ರಾವ್, ಅಧ್ಯಕ್ಷರು, ಪಿ.ಆರ್.ಎಲ್. ಕೌನ್ಸಿಲ್, ಇಸ್ರೋ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಚಾಲನಾ ಸಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಇಡಿ 110 ಟಿಪಿಯು 2001ರ ಪ್ರಕಾರ ರಚಿಸಲಾಯಿತು. ಮೂರು ಉಪ ಸಮಿತಿಗಳನ್ನೂ ರಚಿಸಲಾಯಿತು.

1. ಟೈಮ್ ಮ್ಯಾನೇಜ್‌ಮೆಂಟ್ ಸಮಿತಿ.
2. ಪರೀಕ್ಷಾ ಸುಧಾರಣಾ ಸಮಿತಿ.
3. ಸಾಮಾನ್ಯ ಅಧ್ಯಯನ ಉಪಸಮಿತಿ.

1) ಟೈಮ್ ಮ್ಯಾನೇಜ್‌ಮೆಂಟ್ ಉಪಸಮಿತಿಗೆ ಸಂಬಂಧಪಟ್ಟಂತೆ, ಪದವಿ ಪೂರ್ವ ಶಿಕ್ಷಣವನ್ನು ಬೋಧನೆ ಮಾಡುವ ಸಮಯ, ಒಟ್ಟು ದಿನಗಳು, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ವೇಳಾಪಟ್ಟಿ, ಪರೀಕ್ಷೆಗಳು, ರಜೆಯ ವ್ಯಾಪ್ತಿ ವಿಷಯಾವಾರು ಸಮಯ, ವೇಳಾಪಟ್ಟಿ ಇವುಗಳನ್ನು ರಾಜ್ಯದ 4 ವಿಭಾಗಗಳ ಕೇಂದ್ರಗಳಿಗೆ ಭೇಟಿ ನೀಡಿ ಪ್ರಿನ್ಸಿಪಾಲ್, ಉಪ ಪ್ರಿನ್ಸಿಪಾಲ್ ಜೊತೆಯಲ್ಲಿ ಚರ್ಚಿಸಿ, ಸಿದ್ಧಪಡಿಸಿರುತ್ತಾರೆ.

2) ಪರೀಕ್ಷಾ ಸುಧಾರಣಾ ಸಮಿತಿ: ಪರೀಕ್ಷಾ ಪದ್ಧತಿ, ಸಮಯ, ಪ್ರಶ್ನೆ ಪತ್ರಿಕೆ ತಯಾರಿಕೆ, ಪರೀಕ್ಷಾ ಸುಧಾರಣಾ ಏಕರೂಪತೆಗಳ ಬಗ್ಗೆ.

3) ಸಾಮಾನ್ಯ ಅಧ್ಯಯನ ಸಮಿತಿ: ನಿಗದಿಪಡಿಸಿದ ವಿಷಯವಲ್ಲದೇ ಬೇರೆ ವಿಷಯಗಳ ಬಗ್ಗೆ ಜ್ಞಾನವನ್ನು ಹೊಂದುವ ಅವಶ್ಯಕತೆಯನ್ನು

Digitised by Bharatavani, CIIL

ಸಮಿತಿಯು ಶಿಫಾರಸ್ಸು ಮಾಡಿದೆ. ಆದ್ದರಿಂದ ಪಠ್ಯಕ್ರಮ ಪರಿಷ್ಕರಣೆಯಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ತುಂಬಬೇಕಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಪಾತ್ರ ಮುಖ್ಯವಾಗಿರುವುದರಿಂದ ಅವರು ಸಹ ಆಸಕ್ತಿಯನ್ನು ಹೊಂದಬೇಕಾಗಿದೆ.

**ಮೌಲ್ಯಮಾಪನ:** ಈಗಾಗಲೇ ಪದವಿ–ಪೂರ್ವ ಶಿಕ್ಷಣದಲ್ಲಿ 2000 ಪ್ರಶ್ನೆಗಳ ಪ್ರಶ್ನಾವಳಿ ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾನಿಲಯ ಶಿಕ್ಷಣ ತಜ್ಞರಿಗೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಿಕೊಟ್ಟು ಮಾಹಿತಿ ಪಡೆಯಲಾಗಿದೆ. ಪದವಿ ಪೂರ್ವ ಶಿಕ್ಷಣದಲ್ಲಿ ವಿಷಯಗಳ ಸೇರ್ಪಡೆಗೆ, ಬೆಂಗಳೂರು, ತುಮಕೂರು, ಧಾರವಾಡ, ಗದಗ, ಹಾವೇರಿ, ಬಿಜಾಪುರ, ಬಳ್ಳಾರಿ, ಮೈಸೂರು ಮೊದಲಾದ ಕಡೆಗಳಲ್ಲಿ ವಿಚಾರಸಂಕಿರಣಗಳನ್ನು ಏರ್ಪಡಿಸಲಾಗಿತ್ತು. ರಾಜ್ಯ ಮಟ್ಟದ ವಿಚಾರಸಂಕಿರಣಗಳಲ್ಲಿ ಪ್ರೊ. ಎಸ್. ರೋಹಿಡೇಕರ್‌ರವರ ಭಾಷಣ ಹಾಗೂ 1500 ಪ್ರಶ್ನೆಗಳಿಂದ ವಿಶ್ಲೇಷಣೆಯನ್ನು ಮಾಡಿಸಲಾಗಿದೆ.

ವಿಷಯ ಸಮಿತಿಗಳಿಗೆ ಪೂರಕ ಮಾಹಿತಿ, ಐ.ಸಿ.ಎಸ್.ಇ., ಸಿ.ಬಿ.ಎಸ್.ಇ. 11–12ನೇ ತರಗತಿಗಳ ಪಠ್ಯಕ್ರಮವನ್ನು ಒದಗಿಸಲಾಗಿದೆ. ಜಿಲ್ಲಾ ಮಟ್ಟದ ಕಮ್ಮಟಗಳಲ್ಲಿ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ 300–400 ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು ಕಾಳಜಿಯನ್ನು ವ್ಯಕ್ತಪಡಿಸಿದರು.

ಮೌಲ್ಯಮಾಪನ: ಅಕ್ಟೋಬರ್ 2003ರಲ್ಲಿ ರಾಜ್ಯದ ಎಲ್ಲೆಡೆಯ 14 ಮೌಲ್ಯಮಾಪನ ಕೇಂದ್ರಗಳಲ್ಲಿ ಸುಮಾರು 10,000 ಉಪನ್ಯಾಸಕರ ಅಭಿಪ್ರಾಯಗಳನ್ನು ಪಡೆಯಲಾಗಿತ್ತು.

**ಪದವಿ–ಪೂರ್ವ ಶಿಕ್ಷಣದಲ್ಲಿರುವ ವಿಷಯಗಳು:** ಎರಡು ವರ್ಷದ ಪದವಿ–ಪೂರ್ವ ಶಿಕ್ಷಣದಲ್ಲಿರುವ ಮೊದಲನೆಯ ಹಾಗೂ ಎರಡನೆಯ ಭಾಗದಲ್ಲಿರುವ ವಿಷಯಗಳು:

ಮೊದಲನೆಯ ಭಾಗದಲ್ಲಿ ವಿದ್ಯಾರ್ಥಿಯು ಆರಿಸಿಕೊಳ್ಳುವ ವಿಷಯಗಳು ಈ ಕೆಳಕಂಡಂತಿವೆ.

1. ಕನ್ನಡ
2. ಇಂಗ್ಲಿಷ್
3. ಹಿಂದಿ
4. ತಮಿಳು
5. ತೆಲುಗು
6. ಮಲೆಯಾಳಂ
7. ಮರಾಠಿ
8. ಉರ್ದು
9. ಸಂಸ್ಕೃತ
10. ಅರೇಬಿಕ್
11. ಫ್ರೆಂಚ್

ಎರಡನೆಯ ಭಾಗದಲ್ಲಿ ವಿದ್ಯಾರ್ಥಿಯು ಆರಿಸಿಕೊಳ್ಳುವ ವಿಷಯಗಳು ಈ ಕೆಳಕಂಡಂತಿವೆ.

**ವಿಜ್ಞಾನ ವಿಭಾಗ**

1. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ.
2. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಎಲೆಕ್ಟ್ರಾನಿಕ್ಸ್.
3. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಗಣಕಯಂತ್ರಶಾಸ್ತ್ರ.
4. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ.
5. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಗೃಹವಿಜ್ಞಾನ.
6. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೂಗರ್ಭಶಾಸ್ತ್ರ.

**ಮಾನವಿಕಶಾಸ್ತ್ರ ವಿಭಾಗ**

1. ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ.
2. ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ರಾಜ್ಯಶಾಸ್ತ್ರ.
3. ಇತಿಹಾಸ, ಅರ್ಥಶಾಸ್ತ್ರ, ತರ್ಕಶಾಸ್ತ್ರ, ರಾಜ್ಯಶಾಸ್ತ್ರ.
4. ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಐಚ್ಛಿಕ ಕನ್ನಡ.
5. ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಐಚ್ಛಿಕ ಕನ್ನಡ.
6. ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಐಚ್ಛಿಕ ಕನ್ನಡ.
7. ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮನೋವಿಜ್ಞಾನ.
8. ಇತಿಹಾಸ, ಶಿಕ್ಷಣ, ಅರ್ಥಶಾಸ್ತ್ರ, ಐಚ್ಛಿಕ ಕನ್ನಡ.
9. ಇತಿಹಾಸ, ಶಿಕ್ಷಣ, ರಾಜ್ಯಶಾಸ್ತ್ರ, ಐಚ್ಛಿಕ ಕನ್ನಡ.
10. ಇತಿಹಾಸ, ಶಿಕ್ಷಣ, ಭೂಗೋಳಶಾಸ್ತ್ರ, ಐಚ್ಛಿಕ ಕನ್ನಡ.
11. ಇತಿಹಾಸ, ಶಿಕ್ಷಣ, ಸಮಾಜಶಾಸ್ತ್ರ, ಐಚ್ಛಿಕ ಕನ್ನಡ.
12. ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ.
13. ಇತಿಹಾಸ, ಸಮಾಜಶಾಸ್ತ್ರ, ಶಿಕ್ಷಣ, ಅರ್ಥಶಾಸ್ತ್ರ.
14. ಇತಿಹಾಸ, ಸಮಾಜಶಾಸ್ತ್ರ, ಶಿಕ್ಷಣ, ರಾಜ್ಯಶಾಸ್ತ್ರ.
15. ಇತಿಹಾಸ, ಸಮಾಜಶಾಸ್ತ್ರ, ಶಿಕ್ಷಣ, ಭೂಗೋಳಶಾಸ್ತ್ರ.
16. ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ತರ್ಕಶಾಸ್ತ್ರ.
17. ಇತಿಹಾಸ, ಅರ್ಥಶಾಸ್ತ್ರ, ಐಚ್ಛಿಕ ಕನ್ನಡ, ಕರ್ನಾಟಕ ಸಂಗೀತ.
18. ಇತಿಹಾಸ, ಅರ್ಥಶಾಸ್ತ್ರ, ಐಚ್ಛಿಕ ಕನ್ನಡ, ಹಿಂದೂಸ್ತಾನಿ ಸಂಗೀತ.
19. ಇತಿಹಾಸ, ಸಮಾಜಶಾಸ್ತ್ರ, ಐಚ್ಛಿಕ ಕನ್ನಡ, ಕರ್ನಾಟಕ ಸಂಗೀತ.
20. ಇತಿಹಾಸ, ಸಮಾಜಶಾಸ್ತ್ರ, ಮನೋವಿಜ್ಞಾನ, ಐಚ್ಛಿಕ ಕನ್ನಡ.
21. ಇತಿಹಾಸ, ಭೂಗೋಳಶಾಸ್ತ್ರ, ಶಿಕ್ಷಣ, ರಾಜ್ಯಶಾಸ್ತ್ರ.
23. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣ, ಸಮಾಜಶಾಸ್ತ್ರ.
24. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣ, ಭೂಗೋಳಶಾಸ್ತ್ರ.
25. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ.
26. ಅರ್ಥಶಾಸ್ತ್ರ, ತರ್ಕಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ.

**ವಾಣಿಜ್ಯ ವಿಭಾಗ**

1. ಇತಿಹಾಸ, ಅರ್ಥಶಾಸ್ತ್ರ, ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ.
2. ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ.
3. ಅರ್ಥಶಾಸ್ತ್ರ, ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ, ಗಣಕಯಂತ್ರ ವಿಜ್ಞಾನ.
4. ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ.
5. ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ, ವ್ಯವಹಾರಿಕ ಗಣಿತ, ಸಂಖ್ಯಾಶಾಸ್ತ್ರ.
6. ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ, ಗಣಕಯಂತ್ರ ವಿಜ್ಞಾನ, ಸಂಖ್ಯಾಶಾಸ್ತ್ರ.
7. ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ.

Digitised by Bharatavani, CIIL

8. ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ, ಅರ್ಥಶಾಸ್ತ್ರ, ವ್ಯವಹಾರಿಕ ಗಣಿತ.

**ವೃತ್ತಿಪರ ಕೋರ್ಸ್‌ಗಳು:**

1. ಎಲೆಕ್ಟ್ರಿಕಲ್
2. ಹೈನುಗಾರಿಕೆ
3. ರೇಷ್ಮೆ ಕೃಷಿ
4. ಕೋಳಿ ಸಾಕಾಣಿಕೆ
5. ಜೇನು ಸಾಕಾಣಿಕೆ
6. ಮೋಟಾರ್ ರೀವೈಡಿಂಗ್
7. ಬಡಿಗತನ
8. ಕ್ಷ–ಕಿರಣ
9. ಲ್ಯಾಬ್ ಟೆಕ್ನಿಷಿಯನ್
10. ಟೈಲರಿಂಗ್

ಪ್ರೌಢಶಾಲಾ ಪಠ್ಯಕ್ರಮ ಹಾಗೂ ದ್ವಿತೀಯ ಪಠ್ಯಕ್ರಮವನ್ನು ರಾಜ್ಯ ಸಂಶೋಧನಾ ತರಬೇತಿ ಸಂಸ್ಥೆಯಲ್ಲಿ ದಿನಾಂಕ: 30–10–2003ರಲ್ಲಿ ಚರ್ಚೆ ಮಾಡಿ ಕಾರ್ಯರೂಪಕ್ಕೆ ತರಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಇಡಿ 56 ಟಿ.ಪಿ.ಯು 2004 ದಿನಾಂಕ: 23–03–04ರ ಪ್ರಕಾರ 2004–2005ನೇ ಸಾಲಿನಿಂದ ಪ್ರ.ಪಿ.ಯು. 2005–06ರಿಂದ ದ್ವಿತೀಯ ಪಿ.ಯು. ತರಗತಿಗಳಿಗೂ ಜಾರಿಗೆ ತರಲಾಗಿದೆ. "ಮೂಲಗಣಿತ (Basic Mathematics)" ವಿಷಯವನ್ನು ಪರಿಚಯಿಸಲಾಗಿದೆ. ಪ್ರೊ. ಯು.ಆರ್. ರಾವ್, ಶ್ರೀ ಎನ್. ವಿಶ್ವನಾಥ, ಶ್ರೀ ಎನ್.ವಿ. ಮೋಹನ್ ಕುಮಾರ್ ಹಾಗೂ ಶ್ರೀ ಡಿ.ಎನ್. ನಾಯರ್ ಇವರುಗಳ ಆಸಕ್ತಿ ಹಾಗೂ ಶ್ರದ್ಧೆಯು ಹೆಚ್ಚಿನ ಮಟ್ಟದಲ್ಲಿ ಪದವಿ ಪೂರ್ವ ಶಿಕ್ಷಣದಲ್ಲಿ ಪ್ರಭಾವ ಬೀರಿದೆ.

ಉನ್ನತ ಶಿಕ್ಷಣದ ಅಭಿವೃದ್ಧಿಗೆ ಉದಾ: ಐ.ಟಿ, ಬಿ.ಟಿ ಜಗತ್ತಿನ ಅತಿ ದೊಡ್ಡ ಉದ್ದಿಮೆಗಳ ತಾಂತ್ರಿಕ ಹಾಗೂ ಕಂಪ್ಯೂಟರ್ ಶಿಕ್ಷಣಗಳು ನೆರವಾಗಿದೆ. ಪದವಿ ಶಿಕ್ಷಣದ ಮಹತ್ವ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯು ಪದವಿ ಶಿಕ್ಷಣದ ಹಂತದಲ್ಲಿ ವೃತ್ತಿ ಕೌಶಲ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು.

ಪದವಿ ಶಿಕ್ಷಣದ ಜೊತೆಯಲ್ಲಿ ಪಿ.ಯು.–ಕಾಲೇಜುಗಳನ್ನು ಸಂಪರ್ಕ ಮಾಡುವುದರಿಂದ ಗ್ರಂಥಾಲಯ, ಪ್ರಯೋಗಶಾಲೆ, ಆಟದ ಮೈದಾನ, ಪಾಠ ಪ್ರವಚನಗಳನ್ನು, ಬಳಕೆಯ ಮೂಲಕ ಹಾಗೂ ಸಹಯೋಗ, ತರಬೇತಿ ಕಾರ್ಯಕ್ರಮಗಳ ಮೂಲಕ ಉದ್ಯೋಗ ಮಾರುಕಟ್ಟೆಯಲ್ಲಿ ಅಗತ್ಯವಿರುವ ಕುಶಲತೆಯನ್ನು ಕಲಿಸಿ ಉದ್ಯೋಗ ಯೋಗ್ಯರನ್ನಾಗಿ ಮಾಡಿಸುವುದು, ಯುಕ್ತ. ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವುದು, ಇದಕ್ಕೆ ಪೂರಕ ಕುಶಲತೆ ತುಂಬುವುದು, ವ್ಯಕ್ತಿ ಸಾಮರ್ಥ್ಯದ ಅರಿವು ಮೂಡಿಸುವುದು ಪ.ಪೂ ಶಿಕ್ಷಣದ ಗುರಿಯಾಗಬೇಕು. ಉದ್ಯೋಗ ಸಮಸ್ಯೆಯನ್ನು ಕುರಿತು ಡಾ. ವಿ. ಕಮಲಮ್ಮ ಅವರ ಪ್ರಕಾರ ಈಗಿನ ವಿಶಾಲ ಮಾರುಕಟ್ಟೆಯಲ್ಲಿ ಸ್ಪರ್ಧೆಗೆ ಯೋಗ್ಯರನ್ನಾಗಿ ಮಾಡುವುದು ಗುರಿಯಾಗಬೇಕಾಗಿದೆ. ಇದರ ಬಗ್ಗೆ ಅನೇಕ ಪ್ರಯೋಗಗಳು ನಡೆಯುತ್ತಲಿವೆ. ಮಾನವನ ಪರಿಪೂರ್ಣ ಬೆಳವಣಿಗೆಗೆ ಅಗತ್ಯವಿರುವ ದೈಹಿಕ, ಬೌದ್ಧಿಕ, ಸಾಮಾಜಿಕ ಪರಿಜ್ಞಾನ, ವಿಶ್ವಮಾನ್ಯ ಮೌಲ್ಯಗಳು ರಾಷ್ಟ್ರೀಯ ಪ್ರಾಮಾಣಿಕ ಜಾತ್ಯತೀತತೆಯ ಮೌಲ್ಯಗಳನ್ನು ಬೆಳೆಸಲು, ಸಮಾಜ ಶಾಸ್ತ್ರ, ಮನೋಶಾಸ್ತ್ರ ಹಾಗೂ ಅಂತರಜಾಲದ ಮಾಹಿತಿ ತಂತ್ರಜ್ಞಾನದ ಅರಿವು, ಇಂಗ್ಲಿಷ್ ಜ್ಞಾನದ ಅರಿವುಗಳು ಅವಶ್ಯಕವಾಗಿವೆ.

–ಎಸ್.ಜಿ.ಶಿ.

## ಪದವಿ ಪೂರ್ವ ಶಿಕ್ಷಣ ಮಂಡಳಿ

ಪದವಿಪೂರ್ವ ಶಿಕ್ಷಣ ಮಂಡಳಿ ಒಂದು ಸ್ವತಂತ್ರ ನಿರ್ದೇಶನಾಲಯವಾಗಿದ್ದು, ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ (ಹನ್ನೊಂದು ಮತ್ತು ಹನ್ನೆರಡನೆಯ ತರಗತಿಗಳಿಗೆ) ಗುಣಾತ್ಮಕ ಶಿಕ್ಷಣವನ್ನು ಕೊಡುವ ಜವಾಬ್ದಾರಿಯನ್ನು ಹೊಂದಿದೆ. ಕರ್ನಾಟಕ ರಾಜ್ಯದಲ್ಲಿರುವ ಪದವಿ ಪೂರ್ವ ಶಿಕ್ಷಣವನ್ನು ಬೋಧಿಸುವ ಎಲ್ಲಾ ಪದವಿಪೂರ್ವ ಕಾಲೇಜುಗಳು ಈ ಇಲಾಖೆಯ ಅಧೀನದಲ್ಲಿ ಬರುತ್ತವೆ. ಪದವಿಪೂರ್ವ ಶಿಕ್ಷಣ ಇಲಾಖೆಯು ಆಡಳಿತ, ಶೈಕ್ಷಣಿಕ ಮತ್ತು ಪರೀಕ್ಷಾ ಜವಾಬ್ದಾರಿಯನ್ನು ನಿರ್ವಹಿಸುತ್ತಿವೆ. ಐದು ರೀತಿಯ ಕಾಲೇಜುಗಳು ಈ ಇಲಾಖೆಯ ವ್ಯಾಪ್ತಿಯಲ್ಲಿರುತ್ತವೆ.

1. ಸರ್ಕಾರಿ ಪದವಿಪೂರ್ವ ಕಾಲೇಜುಗಳು
2. ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳು
3. ಖಾಸಗಿ ಅನುದಾನರಹಿತ ಪದವಿಪೂರ್ವ ಕಾಲೇಜುಗಳು
4. ನಗರಪಾಲಿಕೆ ಪದವಿಪೂರ್ವ ಕಾಲೇಜುಗಳು
5. ಬೇರ್ಪಟ್ಟ ಪದವಿಪೂರ್ವ ಕಾಲೇಜುಗಳು

ಹತ್ತು ವರ್ಷದ ಸಾಮಾನ್ಯ ಶಿಕ್ಷಣವನ್ನು ಪಡೆದ ನಂತರ ವಿದ್ಯಾರ್ಥಿಗೆ ತನ್ನ ಸಾಮರ್ಥ್ಯ, ಆಸಕ್ತಿಗೆ ಅನುಗುಣವಾಗಿ ವಿವಿಧ ಅಧ್ಯಯನ ವಿಷಯಗಳ ಸಂಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇಲ್ಲಿದೆ. ವಿಜ್ಞಾನ ಸಂಯೋಜನೆ, ಕಲಾ ಸಂಯೋಜನೆ ಮತ್ತು ವಾಣಿಜ್ಯ ಸಂಯೋಜನೆಗಳನ್ನು ಪದವಿಪೂರ್ವ ಶಿಕ್ಷಣ ಒಳಗೊಂಡಿರುತ್ತದೆ. ಪದವಿಪೂರ್ವ ಶಿಕ್ಷಣ ಹಂತ ವಿದ್ಯಾರ್ಥಿ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟ ಎಂದು ಗುರುತಿಸಲಾಗಿದೆ. ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ವಿಷಯಗಳನ್ನು ಆಧರಿಸಿ ಅವರ ಭವಿಷ್ಯಕ್ಕೆ ಬುನಾದಿ ಇಲ್ಲಿ ಸಿದ್ಧವಾಗುತ್ತದೆ.

**ಮಂಡಳಿಯ ಕಾರ್ಯಗಳು**

**ಶೈಕ್ಷಣಿಕ ಕಾರ್ಯಗಳು**

1. ಪಠ್ಯಕ್ರಮ ಪರಿಷ್ಕರಿಸಲು ಮತ್ತು ಈ ಕಾರ್ಯಕ್ಕೆ ಆಯವ್ಯಯ ನಿಗದಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
2. ಪಠ್ಯಕ್ರಮ ರಚನೆ ಸಂಬಂಧ ಚಾಲನಾ ಸಮಿತಿ ರಚಿಸಲು ಸರ್ಕಾರಕ್ಕೆ ಪ್ರಸ್ತಾವನೆ.
3. ಚಾಲನಾ ಸಮಿತಿ ರಚನೆ.
4. ವಿವಿಧ ವಿಭಾಗಗಳಲ್ಲಿ ಪಠ್ಯಕ್ರಮ ರಚಿಸಲು ವಿಷಯವಾರು ಪಠ್ಯಕ್ರಮ ಸಮಿತಿಗಳ ರಚನೆ.
5. ಪರಿಷ್ಕೃತ ಪಠ್ಯಕ್ರಮದ ಆಧಾರದ ಮೇಲೆ ಭಾಷಾ ವಿಷಯಗಳಲ್ಲಿ ಪಠ್ಯ ಪುಸ್ತಕ ಸಮಿತಿಯ ರಚನೆ.
6. ಪರಿಷ್ಕರಿಸಿದ ಪಠ್ಯಕ್ರಮದ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ.

Digitised by Bharatavani, CIIL

7. ಸರ್ಕಾರ ಅನುಮೋದಿಸಿದ ಪಠ್ಯಕ್ರಮವನ್ನು ಮುದ್ರಣಕ್ಕೆ ಕಳುಹಿಸಿ ಬಿಡುಗಡೆ ಮಾಡುವುದು.
8. ಭಾಷಾಪಠ್ಯ ಪುಸ್ತಕಗಳ ಮುದ್ರಣಕಾರ್ಯ, ವಿತರಣೆ.
9. ಪಠ್ಯಕ್ರಮದ ಆಧಾರದ ಮೇಲೆ ಪ್ರಾಂಶುಪಾಲರಿಗೆ / ಉಪನ್ಯಾಸಕರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ರಾಜ್ಯ/ಜಿಲ್ಲಾ ಮಟ್ಟದಲ್ಲಿ ಪ್ರಶಿಕ್ಷಣ ಶಿಬಿರಗಳ ಏರ್ಪಾಡು.
10. ಪಠ್ಯಕ್ರಮಕ್ಕೆ ಅನುಗುಣವಾಗಿ ನಿಗದಿಪಡಿಸಿದ ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಮಾರ್ಗಸೂಚಿ ಸಿದ್ಧಪಡಿಸುವುದು.
11. ವಿದ್ಯಾರ್ಥಿಗಳ ದಾಖಲಾತಿ ಅನುಮೋದಿಸಿ ಪ್ರತಿ ವಿದ್ಯಾರ್ಥಿಗೆ ಪ್ರತ್ಯೇಕ ವಿದ್ಯಾರ್ಥಿ ಸಂಖ್ಯೆ ನೀಡುವುದು.
12. ವಿದ್ಯಾರ್ಥಿಗಳಿಗೆ ಕಾಲೇಜು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವುದು. ಕ್ರೀಡಾ ಸ್ಪರ್ಧೆಗಳಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ರಾಷ್ಟ್ರಮಟ್ಟದ ಕ್ರೀಡೆಗಳಿಗೆ ಕಳುಹಿಸುವುದು.
13. ಶೇಕಡ 30 ಕ್ಕಿಂತ ಕಡಿಮೆ ಫಲಿತಾಂಶ ಇರುವ ಕಾಲೇಜುಗಳ ಶೈಕ್ಷಣಿಕಮಟ್ಟ ಅಭಿವೃದ್ಧಿಪಡಿಸಲು ವಿಷಯ ತಜ್ಞರ ತಂಡ ರಚಿಸಿ – ಮಾರ್ಗದರ್ಶನ ನೀಡುವುದು.
14. ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವವರಿಗೆ ತರಬೇತಿ ನೀಡಲು ಮಾದರಿ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಿಕೆ ಕಾರ್ಯಾಗಾರ ಏರ್ಪಡಿಸುವುದು.
15. ಕಡಿಮೆ ಫಲಿತಾಂಶ ಬಂದಿರುವ ಕಾಲೇಜುಗಳ ಪ್ರಾಂಶುಪಾಲರ/ ಉಪನ್ಯಾಸಕರ ಮೇಲೆ ಕ್ರಮ ಜರುಗಿಸುವುದು.
16. ಉತ್ತಮ ಫಲಿತಾಂಶ ಬಂದಿರುವ ಕಾಲೇಜುಗಳಿಗೆ ಅಭಿನಂದನಾ ಪತ್ರ ಕಳುಹಿಸುವುದು.

**ಆಡಳಿತಾತ್ಮಕ ಕಾರ್ಯಗಳು**

1. ಹೊಸ ಸರ್ಕಾರಿ ಮತ್ತು ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
2. ಮಂಜೂರಾದ ಹೊಸ ಪದವಿ ಪೂರ್ವ ಕಾಲೇಜುಗಳಿಗೆ ಶೈಕ್ಷಣಿಕ ಮಾನ್ಯತೆ ನೀಡುವುದು.
3. ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾಡಿಕೊಂಡ ಬೋಧಕ/ಬೋಧಕೇತರರ ಹುದ್ದೆಗಳಿಗೆ ಅನುಮೋದನೆ.
4. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾದ ಬೋಧಕ/ಬೋಧಕೇತರರ ಹುದ್ದೆಗಳಿಗೆ ನೇಮಕಾತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಿಕೆ.
5 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರ/ಉಪನ್ಯಾಸಕರ ರಹಸ್ಯ ವರದಿಗಳ ಪರಿಶೀಲನೆ. ಪ್ರಾಂಶುಪಾಲರ ಆಸ್ತಿ ಮತ್ತು ಋಣಭಾರ ಪರಿಶೀಲನೆ.
6. 10,15,20 ವರ್ಷಗಳ ಸೇವೆ ಸಲ್ಲಿಸಿದ ಪ್ರಾಂಶುಪಾಲರಿಗೆ/ ಉಪನ್ಯಾಸಕರಿಗೆ ಆಯ್ಕೆಕಾಲಿಕ ಸ್ಥಗಿತ ವೇತನ ಬಡ್ತಿ ನೀಡುವುದು. ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ಬಡ್ತಿ ನೀಡಿರುವುದನ್ನು ಅನುಮೋದಿಸುವುದು.
7. ಉಪನ್ಯಾಸಕರ, ಪ್ರಾಂಶುಪಾಲರ, ಉಪ ನಿರ್ದೇಶಕರ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸುವುದು ಮತ್ತು ಅರ್ಹತಾ ದಿನಾಂಕ ನಿಗದಿ ಪಡಿಸುವುದು.
8. ಉಪನ್ಯಾಸಕರಿಗೆ ಪ್ರಾಂಶುಪಾಲರಾಗಿ, ಪ್ರಾಂಶುಪಾಲರಿಗೆ ಉಪ ನಿರ್ದೇಶಕರಾಗಿ, ಉಪನಿರ್ದೇಶಕರಿಗೆ ಸಹ ನಿರ್ದೇಶಕರಾಗಿ, ಸಹ ನಿರ್ದೇಶಕರಿಗೆ ನಿರ್ದೇಶಕರಾಗಿ ಬಡ್ತಿ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಿಕೆ. ಪ್ರಾಂಶುಪಾಲರ, ಉಪ ನಿರ್ದೇಶಕರ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸುವುದು ಮತ್ತು ಅರ್ಹತಾ ದಿನಾಂಕ ನಿಗದಿಪಡಿಸುವುದು.
9. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರೌಢಶಾಲಾ ವಿಭಾಗದಲ್ಲಿ ಸಹ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ಅವರು ಬೋಧನೆ ಮಾಡುವ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅರ್ಹ ಅಭ್ಯರ್ಥಿಗಳಿಗೆ ಜ್ಯೇಷ್ಠತೆ ಆಧಾರದ ಮೇಲೆ ಉಪನ್ಯಾಸಕರಾಗಿ ಬಡ್ತಿ ನೀಡುವುದು.
10. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಬೋಧಕ / ಬೋಧಕೇತರ ಸಿಬ್ಬಂದಿ ವರ್ಗಾವಣೆ ಮಾಡುವುದು.
11. ಗೃಹ ನಿರ್ಮಾಣ, ಸಾಮಾನ್ಯ ಭವಿಷ್ಯನಿಧಿ, ಗಣಕ ಯಂತ್ರ ಖರೀದಿ, ನಿವೇಶನ ಖರೀದಿ ಇತ್ಯಾದಿಗಳಿಗೆ ಅನುಮತಿ ಹಾಗೂ ಮುಂಗಡ ಮಂಜೂರಾತಿ ನೀಡುವುದು.
12. ಕಾರ್ಯದರ್ಶಿಗಳು–ಮೇಲ್ಮನವಿ ಮತ್ತು ಇತರೇ ನ್ಯಾಯಾಲಯಗಳಲ್ಲಿ ಬರುವ ಪ್ರಕರಣಗಳ ಕಾರ್ಯ ನಿರ್ವಹಿಸುವುದು.
13. ಬೋಧಕ/ಬೋಧಕೇತರ ಸಿಬ್ಬಂದಿಯ ಶಿಸ್ತು ಪ್ರಾಧಿಕಾರ.
14. ಬೋಧಕ/ಬೋಧಕೇತರ ಸಿಬ್ಬಂದಿಯ ಗಳಿಕೆ ರಜೆ ನಗದೀಕರಣ/ ವೈದ್ಯಕೀಯ ವೆಚ್ಚ ಮರುಪಾವತಿ, ಸ್ವಗ್ರಾಮ ಪಯಣ, ರಿಯಾಯಿತಿ ರಜೆ, ಸಮವಸ್ತ್ರ ಭತ್ಯೆ ಇತ್ಯಾದಿಗಳಿಗೆ ಮಂಜೂರಾತಿ ನೀಡುವುದು.
15. ಪ್ರಾಂಶುಪಾಲರಿಗೆ/ಉಪನ್ಯಾಸಕರಿಗೆ ವಿದೇಶ ಪ್ರವಾಸ ಮಾಡಲು ಅನುಮತಿ ನೀಡುವುದು.
16. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕವನ್ನು ಕಾಲೇಜುಗಳಿಗೆ ಮರುಪಾವತಿಸುವುದು.
17. ವಿದ್ಯಾರ್ಥಿಗಳಿಗೆ ಕಾಲೇಜು ಬದಲಾವಣೆ, ವಲಸೆ ಪ್ರಮಾಣ ಪತ್ರ, ಸಮಾನತೆ ಅರ್ಹತಾ ಪತ್ರ ನೀಡುವುದು.
18. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಟ್ಟಡ ಕಾಮಗಾರಿಗೆ, ಪೀಠೋಪಕರಣಗಳನ್ನು ಒದಗಿಸುವಿಕೆಗೆ ಹಾಗೂ ಪ್ರಯೋಗಾಲಯಗಳ ಅಭಿವೃದ್ಧಿಪಡಿಸುವಿಕೆಗೆ ಅನುದಾನದ ಬಿಡುಗಡೆ ಮಾಡಲು ಕಾಲೇಜುವಾರು ಪಟ್ಟಿ ಸಿದ್ಧಪಡಿಸುವುದು.
19. ಖಾಸಗಿ ಅನುದಾನ ರಹಿತ ಕಾಲೇಜುಗಳನ್ನು, ಅನುದಾನರಹಿತ ಇರುವ ಕೆಲಸ, ಹುದ್ದೆಗಳನ್ನು ನಿಯಮಾನುಸಾರ ಅನುದಾನಕ್ಕೆ ಒಳಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
20. ಎನ್‌ಎಸ್‌ಎಸ್ ಕಾರ್ಯ ಕಾಲೇಜುಗಳಲ್ಲಿ ಹೊಸ ಯೂನಿಟ್‌ಗಳ ಪ್ರಾರಂಭಕ್ಕೆ ಅನುಮತಿ, ಅನುದಾನದ ಬಿಡುಗಡೆ, ಶಿಬಿರಗಳ

Digitised by Bharatavani, CIIL

ಮೇಲ್ವಿಚಾರಣೆ, ಇತರೆ ಇಲಾಖೆಗಳೊಂದಿಗೆ ಸಮನ್ವಯ, ವಿವಿಧ ಕಾರ್ಯಕ್ರಮದ ಅನುಷ್ಠಾನ.

21. ಇಲಾಖಾ ವಾಹನ, ಗಣಕ ಯಂತ್ರ, ಫ್ಯಾಕ್ಸ್ ಯಂತ್ರ, ಫೋಟೋಪ್ರತಿ ಯಂತ್ರ, ಲಿಸೋಗ್ರಾಫ್ ಯಂತ್ರ ಇತ್ಯಾದಿ ಖರೀದಿ, ನಿರ್ವಹಣೆ ಕಾರ್ಯಗಳು ಹಾಗೂ ರಿಪೇರಿ ಉಸ್ತುವಾರಿ.
22. ರಾಷ್ಟ್ರಮಟ್ಟದ / ರಾಜ್ಯಮಟ್ಟದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರಾಂಶುಪಾಲರ/ ಉಪನ್ಯಾಸಕರ ನಿಯೋಜನೆ.
23. ವಿಧಾನಸಭೆ / ವಿಧಾನ ಪರಿಷತ್ / ಲೋಕಸಭೆ / ರಾಜ್ಯಸಭೆ ಪ್ರಶ್ನೆಗಳಿಗೆ ಉತ್ತರಿಸುವುದು. ವಿಧಾನಸಭೆ / ಪರಿಷತ್ ಪ್ರಶ್ನೆಗಳಿಗೆ ಉತ್ತರ ಸಿದ್ಧಪಡಿಸುವುದು.
24. ಜಿಲ್ಲಾ ಉಪ ನಿರ್ದೇಶಕರುಗಳ ಪ್ರವಾಸ ಕಾರ್ಯಕ್ರಮ ಮತ್ತು ಪ್ರವಾಸ ದಿನಚರಿ ಪರಿಶೀಲನೆ.
25. ಕಾಲೇಜುಗಳಿಗೆ ಭೇಟಿ, ತಪಾಸಣೆ ಮತ್ತು ಜಿಲ್ಲಾ ಉಪ ನಿರ್ದೇಶಕರುಗಳ ಕಚೇರಿ ತಪಾಸಣೆ ಮತ್ತು ಮೇಲ್ವಿಚಾರಣೆ.
26. ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬರುವ ದೂರುಗಳ ವಿಚಾರಣೆ ಮತ್ತು ಕ್ರಮ ವಹಿಸುವ ಬಗ್ಗೆ.
27. ಖಾಸಗಿ ಟ್ಯುಟೋರಿಯಲ್ಸ್‌ರವರಿಗೆ ತರಗತಿಗಳನ್ನು ನಡೆಸಲು ನಿಯಮಾನುಸಾರ ಪರವಾನಗಿ ನೀಡುವುದು.
28. ಸರ್ಕಾರದ ವತಿಯಿಂದ ನಡೆಯುವ ವಿವಿಧ ಸಭೆಗಳಿಗೆ ಮಾಹಿತಿ ಕೊಡುವುದು.
29. ರಾಜ್ಯಪಾಲರ ಭಾಷಣಕ್ಕೆ ಇಲಾಖೆಗೆ ಸಂಬಂಧಿಸಿದ ವರದಿ ಸಿದ್ಧಪಡಿಸುವುದು.
30. ಅನುದಾನಿತ ಕಾಲೇಜುಗಳಲ್ಲಿ ಅನುದಾನ ರಹಿತ ಉಪನ್ಯಾಸಕರುಗಳನ್ನು ಶೇಕಡ 3 ಅನುದಾನಕ್ಕೆ ಒಳಪಡಿಸುವ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸುವಿಕೆ.
31. ವಿಧಾನ ಸಭೆ/ವಿಧಾನ ಪರಿಷತ್ತಿನ ಅರ್ಜಿ ಸಮಿತಿಗೆ ಉತ್ತರ ಸಿದ್ಧಪಡಿಸುವುದು.

**ಪರೀಕ್ಷೆ ಕಾರ್ಯಗಳು**

**ಅ ) ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆ**

1. ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದಲ್ಲಿ ಪರೀಕ್ಷೆ ನಡೆಸುವ ಬಗ್ಗೆ ವೇಳಾ ಪಟ್ಟಿ ಹಾಗೂ ಮಾರ್ಗಸೂಚಿ ಕಳುಹಿಸುವಿಕೆ.
2. ಪ್ರಥಮ ಪಿಯುಸಿ ಪರೀಕ್ಷೆ ನಡೆಯುವಾಗ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಮೇಲ್ವಿಚಾರಣೆ ಮಾಡಲು ಭೇಟಿ ನೀಡುವುದು.
3. ಪ್ರಥಮ ಪಿಯುಸಿ ತರಗತಿಗಳ ಮೌಲ್ಯಮಾಪನ ಮಾಡಿದ ಶೇಕಡ 2 ರಷ್ಟು ಉತ್ತರ ಪತ್ರಿಕೆಗಳನ್ನು ತಜ್ಞ ಸಮಿತಿಯ ಮೂಲಕ ಮರು ಪರಿಶೀಲನೆ.

**ಆ) ದ್ವಿತೀಯ ಪಿಯುಸಿ**

1. ಪ್ರಥಮ ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳ ಪಟ್ಟಿ ಗಣಕೀಕರಣ ಮತ್ತು ಕಾಲೇಜಿಗೆ ಪಟ್ಟಿ ರವಾನೆ.
2. ಕಾಲೇಜುಗಳಿಂದ ಮೇಲಿನ ಪಟ್ಟಿಯಿಂದ ಪರೀಕ್ಷಾ ಶುಲ್ಕ ಕಟ್ಟಿದ ಅರ್ಹ ವಿದ್ಯಾರ್ಥಿಗಳ ಪಟ್ಟಿ ತರಿಸಿಕೊಳ್ಳುವುದು.
3. ಪುನರಾವರ್ತಿತ ವಿದ್ಯಾರ್ಥಿಗಳ ಅರ್ಜಿಗಳನ್ನು ಗಣಕೀಕರಿಸುವುದು.
4. ಖಾಸಗಿ ಅಭ್ಯರ್ಥಿಗಳ ಪಟ್ಟಿಯ ಗಣಕೀಕರಣ.
5. ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲಿರುವ ಅರ್ಹ ವಿದ್ಯಾರ್ಥಿಗಳ ಪಟ್ಟಿ ಆಧಾರದ ಮೇಲೆ ಉತ್ತರ ಪತ್ರಿಕೆಗಳ ಮುದ್ರಣ.
6. ಪರೀಕ್ಷೆ ಅರ್ಜಿ ಪ್ರವೇಶ ಪತ್ರಗಳ ಸಿದ್ಧಪಡಿಸುವಿಕೆ. ಪರೀಕ್ಷಾ ಕೇಂದ್ರಗಳಿಗೆ ಪ್ರಾಯೋಗಿಕ ಪರೀಕ್ಷಾ ಉತ್ತರ ಪತ್ರಿಕೆಗಳ ರವಾನೆ.
7. ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಿಕೆ.
8. ಪರೀಕ್ಷಾ ಕೇಂದ್ರಗಳ ನಿಗದಿ ಹಾಗೂ ಪಟ್ಟಿ ಸಿದ್ಧಪಡಿಸುವುದು.
9. ಪರೀಕ್ಷಾ ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರುಗಳ ನೇಮಕಾತಿ.
10. ವಿಷಯ ಪ್ರಶ್ನೆ ಪತ್ರಿಕಾ ಪಾಲಕರ ಪಟ್ಟಿ ಸಿದ್ಧಪಡಿಸುವುದು.
11. ಸಹ ಮುಖ್ಯ ಅಧೀಕ್ಷಕರು, ಜಿಲ್ಲಾ ಜಾಗೃತ ದಳದ ಸದಸ್ಯರು. ವಿಶೇಷ ಜಾಗೃತದಳದ ಸದಸ್ಯರುಗಳ ನೇಮಕಾತಿ.
12. ಪರೀಕ್ಷಾ ಸಮಯದಲ್ಲಿ ಜಾಗೃತದಳವನ್ನು ರಚಿಸಿ ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಣೆ ನಡೆಸುವುದು.
13. ಮೌಲ್ಯಮಾಪನ ಶಿಬಿರಗಳ ನಿಗದಿ.
14. ಮೌಲ್ಯ ಮಾಪಕರ ಆಯ್ಕೆ.
15. ಪರೀಕ್ಷಾ ಕೇಂದ್ರಗಳಿಗೆ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳ ರವಾನೆ.
16. ಪರೀಕ್ಷಾ ಸಂಬಂಧ ಗೌಪ್ಯತೆಯನ್ನು ಕಾಪಾಡುವ ದೃಷ್ಟಿಯಿಂದ, ಸಂಬಂಧಪಡುವ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಸಹಕಾರ ನೀಡಲು ಕೋರಿಕೆ ಸಲ್ಲಿಕೆ.
17. ಪ್ರಶ್ನೆ ಪತ್ರಿಕೆಗಳನ್ನು ಖಜಾನೆಯಲ್ಲಿ ಸುರಕ್ಷಿತವಾಗಿಡಲು ವಿವಿಧ ಕೇಂದ್ರಗಳಿಗೆ ರವಾನಿಸುವುದು.
18. ಥಿಯರಿ ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷಾ ವೇಳಾಪಟ್ಟಿಯಂತೆ ಆಯಾ ದಿವಸ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳ ವಿತರಣೆ.
20. ಪರೀಕ್ಷೆ ನಡೆಯುವ ಸಮಯದಲ್ಲಿ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ಮತ್ತು ಮೇಲ್ವಿಚಾರಣೆ.
21. ವಿವಿಧ ಜಿಲ್ಲೆಗಳಿಂದ ಪರೀಕ್ಷಾ ಅವ್ಯವಹಾರದಲ್ಲಿ ಭಾಗಿಯಾದ ವಿದ್ಯಾರ್ಥಿಗಳ ಸಂಖ್ಯೆ ಆಯಾ ಪರೀಕ್ಷಾ ದಿನವೇ ತರಿಸಿಕೊಂಡು ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುವುದು.
22. ಮೌಲ್ಯಮಾಪನಯೋಜನೆ ಸಿದ್ಧಪಡಿಸುವಿಕೆ.
23. ಪ್ರಾಯೋಗಿಕ ಪರೀಕ್ಷಾ ಅಂಕಗಳ ಗಣಕೀಕರಣ.
24. ಮೌಲ್ಯಮಾಪನದ ಮೇಲ್ವಿಚಾರಣೆ ಪ್ರತಿ ದಿವಸ ಥಿಯರಿ ಅಂಕಪಟ್ಟಿಗಳ ಗಣಕೀಕರಣ.
25. ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಶಿಬಿರದಿಂದ ಗೋದಾಮಿಗೆ ರವಾನೆ.
26. ಪರೀಕ್ಷಾ ಫಲಿತಾಂಶದ ಪ್ರಕಟಣೆ.

Digitised by Bharatavani, CIIL

27. ಅಂಕಪಟ್ಟಿಗಳ ಮುದ್ರಣ-ರವಾನೆ
28. ಫೋಟೋಪ್ರತಿ ನೀಡುವಿಕೆ, ಮರುಮೌಲ್ಯಮಾಪನ ಮತ್ತು ಮರು ಎಣಿಕೆ ಇವುಗಳಿಗೆ ಅರ್ಜಿಯನ್ನು ಸ್ವೀಕರಿಸಿ ಸಂಬಂಧಪಟ್ಟ ಕಾರ್ಯ ನಿರ್ವಹಿಸುವುದು.
29. ಮರು ಮೌಲ್ಯಮಾಪನ.
30. ಮರು ಮೌಲ್ಯಮಾಪನದ ಫಲಿತಾಂಶ ಪ್ರಕಟಣೆ.
31. ಮರು ಮೌಲ್ಯಮಾಪನದ ಪ್ರಮಾಣ ಪತ್ರ ಅಂಕಪಟ್ಟಿ ಅರ್ಜಿಗಳ ರವಾನೆ.

**ಲೆಕ್ಕ ಪತ್ರ ವಿಭಾಗದ ಕಾರ್ಯಗಳು**

1. ಪದವಿ ಪೂರ್ವ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮತ್ತು ಲೆಕ್ಕ ನಿರ್ವಹಣೆ.
2. ಪದವಿ ಪೂರ್ವ ಶಿಕ್ಷಣ ಮಂಡಳಿ, ಕೇಂದ್ರ ಕಚೇರಿಯ ಲೆಕ್ಕ ಪತ್ರಗಳ ನಿರ್ವಹಣೆ.
3. ಲೆಕ್ಕ ಪತ್ರ ಸಮನ್ವಯ ಕಾರ್ಯಗಳ ಮಾಸಿಕ ಪ್ರಗತಿ ವರದಿ. ಪರೀಕ್ಷಾ/ಶೈಕ್ಷಣಿಕ ಕಾರ್ಯಗಳಲ್ಲಿ ಭಾಗವಹಿಸಿದ ಬೋಧಕ/ಬೋಧಕೇತರ ಸಿಬ್ಬಂದಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಸಂಭಾವನೆ ಬಿಡುಗಡೆ.
4. ವಾರ್ಷಿಕ ಪತ್ರ ಆಯ-ವ್ಯಯ ತಯಾರಿಕೆ, ಮುಂದುವರೆದ ಕಾರ್ಯಕ್ರಮಗಳ ಅನುಮೋದನೆ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
5. ಕಾಲೇಜುಗಳ ಕೊಠಡಿ ನಿರ್ಮಾಣ, ರಿಪೇರಿ, ಪ್ರಯೋಗಾಲಯದ ಉಪಕರಣ ಖರೀದಿ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುವುದು.
6. ಎ.ಸಿ. ಬಿಲ್ಲುಗಳ ಸವಿವರ, ಸಾದಿಲ್ವಾರು ಬಿಲ್ಲು, ಎನ್.ಡಿ.ಸಿ. ಬಿಲ್ಲುಗಳನ್ನು ತಯಾರಿಸುವುದು.
7. ಖಾಸಗಿ ಪದವಿ ಪೂರ್ವ ಕಾಲೇಜುಗಳ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಲೆಕ್ಕಪತ್ರ ತಪಾಸಣೆ.

**ಕರ್ತವ್ಯಗಳು**

1. ಹೊಸ ಕೋರ್ಸ್‌ಗಳು ಅವಶ್ಯಕತೆಗೆ ಅನುಗುಣವಾಗಿ ಇವೆಯೇ ಎಂಬುದನ್ನು ಮನಗಂಡು, ಅದರಂತೆ ಹೊಸ ಕೋರ್ಸ್‌ಗಳನ್ನು ಆರಂಭಿಸಲು ಕ್ರಮ ತೆಗೆದುಕೊಳ್ಳುವುದು.
2. ಮಂಜೂರಾದ ಕೋರ್ಸ್‌ಗಳನ್ನು ಕ್ರಮಬದ್ಧವಾಗಿ ನಡೆಸಲು ಅವಶ್ಯಕ ಸಂಪನ್ಮೂಲಗಳು ಇವೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು.
3. ಉಚ್ಚ ನ್ಯಾಯಾಲಯ / ಕೆ.ಎ.ಟಿ. ಮತ್ತು ಇತರೆ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳಲ್ಲಿ ಸರ್ಕಾರದ ಕಾನೂನು ಮತ್ತು ನಿಯಮಾವಳಿಗಳನ್ನು ಪ್ರತಿಪಾದಿಸುವ ಮೂಲಕ ಕ್ಲುಪ್ತ ಕಾಲದಲ್ಲಿ ನ್ಯಾಯ ಒದಗಿಸಿಕೊಡಲು ಕ್ರಮವಹಿಸುವುದು.
4. ಮಂಡಳಿ ಮತ್ತು ಅದಕ್ಕೆ ಸಂಬಂಧಿಸಿದ ಕಚೇರಿಯ ಸರ್ಕಾರಿ ನೌಕರರಿಗೆ ಕಾಲಕಾಲಕ್ಕೆ ಸಂಬಳ ನೀಡುವುದು, ಭವಿಷ್ಯ ನಿಧಿ, ಮುಂಗಡ ಮಂಜೂರಾತಿ, ವೈದ್ಯಕೀಯ ವೆಚ್ಚ ಮರು ಪಾವತಿ, ಗಳಿಕೆ ರಜೆ ನಗದೀಕರಣ, ಹೆಚ್.ಟಿ.ಸಿ. ಎಲ್.ಟಿ.ಸಿ ಮತ್ತು ಸರ್ಕಾರದಿಂದ ನಿಗದಿಪಡಿಸಿರುವ ಇನ್ನಾವುದೇ ಸವಲತ್ತುಗಳನ್ನು ಕಾಲಮಿತಿಯೊಳಗೆ ನಿಯಮಾನುಸಾರ ಒದಗಿಸುವುದು.
5. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದು ಮಂಡಳಿಯ ಜವಾಬ್ದಾರಿಯಾಗಿರುತ್ತದೆ.
6. ಇಲಾಖಾ ವಾಹನಗಳ ಖರೀದಿ, ರಿಪೇರಿ ಮತ್ತು ಕಚೇರಿಯ ನಿರ್ವಹಣೆಗೆ ಅವಶ್ಯಕವಾಗಿ ಬೇಕಾಗುವ ಎಲ್ಲ ಖರೀದಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸಿ ಹಣಕಾಸು ಅಪವ್ಯಯವಾಗದಂತೆ ನೋಡಿಕೊಳ್ಳುವುದು.
7. ಕಾಲಕಾಲಕ್ಕೆ ಬಿಡುಗಡೆ ಮಾಡುವ ಬೋಧಕರ ವೇತನ ಅನುದಾನ, ಇತರೇ ಅನುದಾನಗಳನ್ನು ಸಕಾಲಕ್ಕೆ ಬಿಡುಗಡೆ ಮಾಡುವುದು.
8. ನಿಯಮಾನುಸಾರ ಪರೀಕ್ಷಾ ಕಾರ್ಯ ಮಾಡಿದವರಿಗೆ ನಿಗದಿತ ಸಂಭಾವನೆ ಮತ್ತು ಭತ್ಯೆಗಳನ್ನು ನೀಡುವುದು.

–ಆರ್.ನ.

## ಪರಸಂಸ್ಕೃತೀಕರಣ (Acculturation)

ಪರಸಂಸ್ಕೃತೀಕರಣ ಎಂಬ ಪರಿಕಲ್ಪನೆ ಮಾನವ ಶಾಸ್ತ್ರೀಯವಾದ ಪ್ರಮುಖ ಪ್ರಕ್ರಿಯೆ. ಒಂದು ಸಾಂಸ್ಕೃತಿಕ ಗುಂಪು ಅದರಲ್ಲೂ ಅಲ್ಪಸಂಖ್ಯಾತ ಗುಂಪು ಬೇರೆ ಬಹುಸಂಖ್ಯಾತರು ಅಳವಡಿಸಿಕೊಳ್ಳುತ್ತಿರುವ ಅಭ್ಯಾಸಗಳು, ಭಾಷೆ ಮತ್ತು ನಡವಳಿಕೆಗಳನ್ನು ಅನುಕರಣೆ ಮಾಡುವ ಒಂದು ಸಾಮಾಜಿಕ ಕ್ರಿಯೆ. ಇದು ಪರಸ್ಪರ ಎರಡು ಗುಂಪುಗಳಿಗೂ ಅನ್ವಯಿಸುವಂತಹದ್ದಾಗಿರುತ್ತದೆ. ಪರ ಸಂಸ್ಕೃತೀಕರಣ ಇಂದು ಜಗತ್ತಿನಾದ್ಯಂತ ಕಂಡುಬರುವಂತಹ ಪ್ರಕ್ರಿಯೆಯಾಗಿದೆ. ಸಾಮಾನ್ಯವಾಗಿ ಎರಡು ವಿಭಿನ್ನ ಸಂಸ್ಕೃತಿಗಳನ್ನು ಯಾವ ಗುಂಪಾದರೂ ಸ್ವೀಕರಿಸಬಹುದಾಗಿದೆ. ಈ ಸಾಂಸ್ಕೃತಿಕ ಸಮೀಕರಣವಾದಾಗ ಒಂದು ಗುಂಪಿನ ಭಾಷೆ, ನಡವಳಿಕೆ, ಮೌಲ್ಯಗಳು ಇನ್ನೊಂದು ಗುಂಪಿನವರ ಪಾಲಾಗಬಹುದು. ಸಂಸ್ಕೃತಿಯ ಪ್ರಮುಖ ಲಕ್ಷಣವೆಂದರೆ ಅದು ಸ್ವ-ಸಂಸ್ಕೃತಿಯಾಗಲಿ, ಪರಸಂಸ್ಕೃತಿಯಾಗಲಿ ಅದರ ಪ್ರಸಾರ ತಲೆಮಾರಿನಿಂದ ತಲೆಮಾರಿಗೆ ನಡೆದೇ ಇರುತ್ತದೆ.

ಈ ಸಾಂಸ್ಕೃತಿಕ ಪ್ರಸರಣ ಕ್ರಿಯೆಯಲ್ಲಿ ಈ ಹಿಂದೆ ಅನುಕರಣೆಯೊಂದೇ ಪ್ರಮುಖ ಪಾತ್ರವಹಿಸಿತ್ತು. ಆದರೆ ಇಂದು ಪುರಾತನ ಸಾಂಸ್ಕೃತಿಕ ಮೌಲ್ಯಗಳ ಜೊತೆಗೆ ಇತಿಹಾಸದುದ್ದಕ್ಕೂ ಹೊಸ ಹೊಸ ಸಾಂಸ್ಕೃತಿಕ ಅಂಶಗಳು ಮಿಳಿತಗೊಂಡು ಸಂಸ್ಕೃತಿಯೂ ಸಂಕೀರ್ಣವಾಗತೊಡಗಿದೆ. ಈ ಬಗೆಯ ಸಂಕೀರ್ಣ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಶಿಕ್ಷಣ ಇಂದು ಹೆಚ್ಚು ಪ್ರಸ್ತುತ. ಶಿಕ್ಷಣವಿಲ್ಲದೆ 'ಸಂಸ್ಕೃತಿ' ಪದದ ಅರ್ಥವನ್ನಾಗಲಿ ಅಥವಾ ಸಾಂಸ್ಕೃತಿಕ ಅಂಶಗಳಾದ ಭಾಷೆ, ಸಾಹಿತ್ಯ, ಸಂಗೀತ ಮುಂತಾದ ಸಾಂಪ್ರದಾಯಿಕ ವಿಚಾರಗಳಾಗಲಿ / ಲೋಕಾರೂಢಿ, ನೈತಿಕ ನಿಯಮ, ಕಲೆ, ಸಾಹಿತ್ಯ ಮುಂತಾದ ಪ್ರಾಚೀನ / ಆಧುನಿಕ ಅಂಶಗಳನ್ನೇ ಆಗಲಿ ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಆದಿವಾಸಿ ಸಮಾಜ ಶಿಕ್ಷಣದ ಕೊರತೆಯಿಂದಾಗಿ ಅನೇಕ ಬಗೆಯ ಕ್ಲಿಷ್ಟ, ಕನಿಷ್ಠ, ಅಪನಂಬಿಕೆಗೊಳಗಾಗುವಂತಹ ಸಂಪ್ರದೀಯ ರೂಢಿ-ನಂಬಿಕೆಗಳನ್ನೆಲ್ಲಾ ಅಳವಡಿಸಿಕೊಂಡು ಅಪರಿಮಿತ ತೊಂದರೆಗೊಳಗಾಗಿದ್ದುದರಲ್ಲಿ ಸಂಶಯವಿಲ್ಲ. ಆದರೆ ಇಂದು ಶಿಕ್ಷಣ ಎಲ್ಲ ಬಗೆಯ ಸಾಂಸ್ಕೃತಿಕ ಪರಂಪರೆಗಳನ್ನು ಅಭ್ಯಾಸ ಮಾಡಿ ಜನತೆಗೆ

Digitised by Bharatavani, CIIL

ಅದರಲ್ಲೂ ಮುಖ್ಯವಾಗಿ ಆದಿವಾಸಿಗಳಿಗೆ ತಿಳುವಳಿಕೆ, ಜ್ಞಾನವನ್ನು ನೀಡುವತ್ತ ಸಾಗಿರುವುದರಲ್ಲಿ ಸಂಶಯವಿಲ್ಲ.

ಶಿಕ್ಷಣವು ಕೇವಲ ಸಾಮಾಜೀಕರಣದ ಸಾಧನೆಯಷ್ಟೇ ಅಲ್ಲದೆ ಸಂಸ್ಕೃತಿಯನ್ನು ಪಸರಿಸುವ ಪ್ರಮುಖ ಸಾಧನವೂ ಆಗಿದೆ. ಶಿಕ್ಷಣವು ಜ್ಞಾನಾರ್ಜನೆಯ ಮೂಲಕ ಪರಂಪರಾಗತವಾದ ಸಾಂಸ್ಕೃತಿಕ ಅಂಶಗಳನ್ನು ಜನರಿಗೆ ಪರಿಚಯಿಸುವ ವಾಹಕವಷ್ಟೇ ಅಲ್ಲ, ಅದು ಜನಜೀವನದ ನಿರಂತರ ಬದುಕಿನ ವಿವಿಧ ಚಿತ್ರಣವನ್ನು ವಿವಿಧ ಸಮಾಜ ಹಾಗೂ ಜನಗಳಿಗೆ ಪರಿಚಯಿಸುವ ಒಂದು ಕಲ್ಪನೆಯೂ ಹೌದು.

ಕೆಲವೊಮ್ಮೆ ಪರಸಂಸ್ಕೃತಿಯಿಂದ ಸ್ವಸಂಸ್ಕೃತಿಯಲ್ಲಿನ ಅನೇಕ ನಕಾರಾತ್ಮಕವಾದ ಅಂಶಗಳನ್ನು ತೊಡೆದು ಹಾಕಬಹುದಲ್ಲದೆ ಪರ ಸ್ವ-ಸಂಸ್ಕೃತಿಗಳೆರಡೂ ಬೆರೆತು ಹೋಗುವ ಅಂಶವೂ ಸಹ ಕಂಡುಬರುತ್ತದೆ. ಕೊಟ್ಟು ಪಡೆದುಕೊಳ್ಳುವ ಸಂಸ್ಕೃತಿಗಳು ಅವುಗಳಲ್ಲಿ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುತ್ತವೆ. ಉದಾ: ಭಾರತೀಯ ಸಂಸ್ಕೃತಿಯನ್ನು ಅಭ್ಯಸಿಸುವ ಹಂತದಲ್ಲಿ ಅನೇಕ ಬಗೆಯ ಹೊಸ ಸಂಸ್ಕೃತಿ ಮೇಳೈಸಿರುವ ಅಂಶಗಳನ್ನು ಕಾಣಬಹುದು. ಭಾರತದ ಸಂಸ್ಕೃತಿಯಲ್ಲಿ ಅದರ ಪ್ರಾಚೀನತೆಯೊಂದಿಗೆ ಅನೇಕ ಸಮೂಹಗಳ, ಪಂಥಗಳ, ಪಂಗಡಗಳ ಮತ ಸಮೂಹಗಳ ಹಾಗೂ ಜೀವನ ಕ್ರಮಗಳು ಸಮ್ಮಿಲನಗೊಂಡಿರುವುದನ್ನು ಕಾಣಬಹುದು. ಇಷ್ಟೊಂದು ಅಂಶಗಳ ಜೊತೆಗೆ ನೂರಾರು ವರ್ಷಗಳ ದಾಸ್ಯತೆಯ ಪ್ರಭಾವ, ಅದರ ಜೊತೆಯಲ್ಲಿ ಬ್ರಿಟಿಷರ ಪ್ರಭಾವ ನಂತರ ಆಧುನಿಕತೆಯ ಪ್ರಭಾವಗಳು ತಮ್ಮ ಮೂಲ ಸ್ವರೂಪವನ್ನು ಬದಲಿಸಿವೆಯೇ ಎನ್ನುವಂತಹ ಪ್ರಶ್ನೆಯೂ ನಮ್ಮನ್ನು ಸದಾ ಕಾಡುತ್ತದೆ. ಈಗ ಕಾಣುತ್ತಿರುವ ಪರ-ಸ್ವ ಹಾಗೂ ಇನ್ನಿತರ ಸಂಸ್ಕೃತಿಯ ಬಗೆಗಳು ನಮ್ಮ ಹಿಂದಿನ ಸಾಂಸ್ಕೃತಿಕ ಸಂಪರ್ಕ, ಸಾಂಸ್ಕೃತಿಕ ಪ್ರಸರಣ, ಸಾಂಸ್ಕೃತಿಕ ಸಂಘರ್ಷ ಹಾಗೂ ಸಾಂಸ್ಕೃತಿಕ ಸಮರಸತೆಗಳ ಫಲಿತಾಂಶವೆಂದರೂ ಇದನ್ನೆಲ್ಲಾ ತಿಳಿದುಕೊಳ್ಳಲು ಬೇಕಾಗುವುದು ಶಿಕ್ಷಣವೇ. ಶಿಕ್ಷಣ ಒಂದು ವಾಹಕವಷ್ಟೇ ಅಲ್ಲ. ಅದು ಈ ಮೇಲ್ಕಂಡ ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಸಮಯಕ್ಕನುಗುಣವಾದ ವಿಶ್ಲೇಷಣೆಯನ್ನು ಮಾಡಿ ಸಮಾಜಕ್ಕನುಗುಣವಾದ ಸಾಂಸ್ಕೃತಿಕ ಮೌಲ್ಯಗಳನ್ನು ಸ್ವೀಕೃತಗೊಳಿಸಿಕೊಳ್ಳುವಂತೆ ವ್ಯಕ್ತಿಗಳನ್ನು ಪ್ರೇರೇಪಿಸುತ್ತದೆ.

ಸಾಮಾನ್ಯವಾಗಿ ಸಂಸ್ಕೃತಿಗೂ ಶಿಕ್ಷಣಕ್ಕೂ ಅತ್ಯಂತ ಹತ್ತಿರದ ಸಂಬಂಧವಿದೆ. ಏಕೆಂದರೆ ಸಾಂಸ್ಕೃತಿಕ ಪರಂಪರೆಯು ನಮ್ಮ ಜೀವನ ಕ್ರಮ, ಜೀವನ ಶೈಲಿ, ನಮ್ಮ ಕಲೆ, ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ನಂಬಿಕೆಗಳು, ರೂಢಿಗಳು, ಸಂಪ್ರದಾಯಗಳು ಮುಂತಾದವುಗಳನ್ನು ಒಳಗೊಂಡಿದೆ. ಈ ಪರಂಪರೆಯು ನಿರಂತರವಾಗಿ, ಅವಿಚ್ಛಿನ್ನವಾಗಿ ಮುಂದುವರೆಯಬೇಕಾದರೆ ಪೀಳಿಗೆಯಿಂದ ಪೀಳಿಗೆಗೆ ಇವುಗಳನ್ನು ಸಾಮಾನ್ಯವಾಗಿ ಆದಿವಾಸಿ ಜನರೇ ವರ್ಗಾಯಿಸಿಕೊಳ್ಳುತ್ತಿದ್ದರು. ಆದರೆ ಈಗ ಶಿಕ್ಷಣದ ಮೂಲಕ ಈ ಪರಂಪರೆಯನ್ನು ಉಳಿಸಿ, ಬೆಳೆಸಿ ಮುಂದಿನ ಜನಾಂಗಕ್ಕೆ ವರ್ಗಾಯಿಸುವ ಜವಾಬ್ದಾರಿಯನ್ನು ಜನರೂ ಹೊರಬೇಕಾಗಿದೆ. ವ್ಯಕ್ತಿಯಲ್ಲಿ ಇಂತಹ ಸಾಂಸ್ಕೃತಿಕ ಮೌಲ್ಯಗಳು ಬೆಳೆದು ಪರಿಪಕ್ವವಾಗಿ ಆತನ ಅಂತರ್‌ಶಕ್ತಿ ವೃದ್ಧಿಸಬೇಕಾದರೆ ಶಿಕ್ಷಣ ಅತ್ಯಂತ ಅನಿವಾರ್ಯ ಹಾಗೂ ಅವಶ್ಯಕ. ಇದರಿಂದ ವ್ಯಕ್ತಿಯ ಆತ್ಮವಿಕಾಸವಾಗುವುದರ ಜೊತೆಗೆ ಬೌದ್ಧಿಕ ಹಾಗೂ ನೈತಿಕಮಟ್ಟ ಹೆಚ್ಚುತ್ತದೆ.

ಪರ-ಸಂಸ್ಕೃತಿ ಎನ್ನುವುದೊಂದು ಸಂಕೀರ್ಣವಾದ ಪರಿಕಲ್ಪನೆ. ಸೊಡೊವಸ್ಕಿ ಮತ್ತು ಫ್ಲೇಕ್‌ರವರು ಪರಸಂಸ್ಕೃತಿಗೆ ಮೂರು ಮೂಲಗಳನ್ನು ತಿಳಿಸುತ್ತಾರೆ. 1. ಸಾಂಸ್ಕೃತಿಕ ಸಂಪರ್ಕ 2. ದ್ವಿಸಾಂಸ್ಕೃತಿಕತೆ (ಎರಡೂ ಸಂಸ್ಕೃತಿಗಳನ್ನು ಅನುಸರಿಸಿ ಬದುಕುವ ಪ್ರಕ್ರಿಯೆ) 3. ಪರಂಪರಾನುಗತವನ್ನು ವೀಕ್ಷಿಸುವುದು ಅಥವಾ ಒಪ್ಪುವುದು. ಇದರಿಂದ ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡು ಪ್ರಧಾನ ಸಂಸ್ಕೃತಿಯ ಪ್ರಭಾವವನ್ನು ತಿರಸ್ಕರಿಸುವುದು. ಆದರೆ ವಿವರಣೆಗಳಿಗೂ ಆಧಾರ ಶಿಕ್ಷಣವೆಂದರೆ ತಪ್ಪಾಗಲಾರದು. ಸಂಸ್ಕೃತಿಗಳ ಸಂಪರ್ಕ ಶಿಕ್ಷಣದ ಮೂಲಕ ಹೇರಳವಾಗಿ ನಡೆಯುತ್ತದೆ. ಸಂಸ್ಕೃತಿಗಳಿಗೆ ಒಪ್ಪಿಕೊಳ್ಳುವ, ಬಿಡುವ ವಿಮರ್ಶೆಗಳಿಗೆ ಪ್ರೋತ್ಸಾಹ ನೀಡುತ್ತದೆ. ಭಾರತೀಯರಿಗೂ ತಮ್ಮ ಸಂಸ್ಕೃತಿ ಯಾವುದು ಪರಸಂಸ್ಕೃತಿ ಯಾವುದು ಎಂದು ತಿಳಿಯುವುದು ತುಂಬಾ ಕಷ್ಟಕರವಾಗಿದೆ. ಈ ನಿಟ್ಟಿನಲ್ಲಿ ಸಮಾಜಶಾಸ್ತ್ರ ವಿದ್ಯಾರ್ಥಿಗಳಿಗೆ ಸಂಸ್ಕೃತಿಯ ಬಗೆಗಿನ ಅರಿವು ಇರುತ್ತದೆ. ಶಿಕ್ಷಣದ ಮುಖಾಂತರ ಅವರು ಅದನ್ನು ತಮ್ಮದನ್ನಾಗಿಸಿಕೊಂಡಿರುತ್ತಾರೆ. ಅದರಲ್ಲೂ ಕೆಲವು ಪರಸಂಸ್ಕೃತಿಗಳಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಧರ್ಮ ಆಯುರ್ವೇದ ಮುಂತಾದವು ಅಡಗಿರುತ್ತವೆ. ಹೀಗೆ ಶಿಕ್ಷಣಪರ ಸಂಸ್ಕೃತಿಯಲ್ಲಿರುವ ನಿಶ್ಚಯಾತ್ಮಕ ಅಂಶಗಳನ್ನು ತನ್ನ ಸಂಸ್ಕೃತಿಗೆ ಅಥವಾ ಮಾನವ ಜನಾಂಗಕ್ಕೆ ಕೊಡುಗೆಯಾಗಿ ನೀಡಬಹುದು.

ಶಿಕ್ಷಣವು ಸಂಸ್ಕೃತಿಯನ್ನು ಸಾಗಿಸುವ ಪ್ರಮುಖ ವಾಹನ. ಶಿಕ್ಷಣದ ಮುಖಾಂತರ ಪರಸಂಸ್ಕೃತಿಯಲ್ಲಿರುವ ಸಾರವನ್ನು ಹೀರಿ ಒಳ್ಳೆಯದನ್ನು ಮಾತ್ರ ಸ್ವೀಕರಿಸುವಂತಹ ವಸ್ತುಸ್ಥಿತಿಗೆ ಪ್ರೋತ್ಸಾಹ ದೊರಕುತ್ತದೆ. ಪಾಶ್ಚಿಮಾತ್ಯರು ನಮ್ಮ ಸಂಸ್ಕೃತಿಯ ಅನೇಕ ಅಂಶಗಳನ್ನು ತಮ್ಮದನ್ನಾಗಿಸಿಕೊಂಡಿದ್ದಾರೆ. ವೇದಾಧ್ಯಯನ, ಶಾಸ್ತ್ರೀಯ ನೃತ್ಯ, ಶಿಲ್ಪಕಲೆ, ಯೋಗಾಭ್ಯಾಸ ಇವು ಇಂದಿನ ಪಾಶ್ಚಿಮಾತ್ಯರನ್ನು ಹೆಚ್ಚು ಹೆಚ್ಚು ಆಕರ್ಷಿಸತೊಡಗಿದೆ. ಈ ಬಗೆಯ ಆಕರ್ಷಣೆ ಅವರಿಗೆ ಪರ ಸಂಸ್ಕೃತಿಯಾಗುತ್ತದೆ. ಇದಕ್ಕೂ ಸಹ ಶಿಕ್ಷಣವೇ ಮೂಲ ಕಾರಣ. ಶಿಕ್ಷಣದಿಂದ ಮಾತ್ರ ಈ ಮೇಲ್ಕಂಡ ವಿದ್ಯೆಗಳನ್ನು ಬೇರೊಬ್ಬರು ಅರಿಯಲು ಸಾಧ್ಯವಾಗುತ್ತದೆ. ಶಿಕ್ಷಣವು ಸಂಸ್ಕೃತಿಯ ಅಂದರೆ ಅದು ಸ್ವ-ಸಂಸ್ಕೃತಿಯಾಗಿರಲಿ, ಪರಸಂಸ್ಕೃತಿಯಾಗಿರಲಿ ಅದರ ವರ್ಗಾವಣೆಯ ಸಾಧನವೆಂದು ತಿಳಿಯಬಹುದು. ಸಂಸ್ಕೃತಿಯ ಕ್ಷೇತ್ರ ಯಾವುದೇ ಆಗಲಿ ಅದು ಅತ್ಯಂತ ವಿಶಾಲವಾದುದಾಗಿರುವುದರಿಂದ ಅದರ ಕಲಿಕೆ, ಗಳಿಕೆ ಮತ್ತು ವರ್ಗಾವಣೆಯ ನಿರಂತರ ಪ್ರಕ್ರಿಯೆ ಶಿಕ್ಷಣದ ಮುಖಾಂತರ ಸಾಧ್ಯವಾಗುತ್ತದೆಂಬುದು ಸತ್ಯದ ಸಂಗತಿ.

ಇಂದು ಭಾರತೀಯ ಸಾಂಸ್ಕೃತಿಕ ಅಂಶಗಳು ತಮ್ಮ ಮೂಲ ಸಂಸ್ಕೃತಿಯ ಅಂಶಗಳ ಕಡೆಗೆ ಹೆಚ್ಚು ಗಮನ ಕೊಡದೆ ವಿವಿಧ ಹೊಸ ಹೊಸ ಪರಸಂಸ್ಕೃತಿಗಳಿಗೆ ಮಾರುಹೋಗಿ ಅವುಗಳನ್ನು ತಮ್ಮ ಸಂಸ್ಕೃತಿಯ ಒಂದು ಅಂಗವೇನೋ ಎನ್ನುವಷ್ಟರಮಟ್ಟಿಗೆ ಪಾಶ್ಚಿಮಾತ್ಯರ ಪ್ರಭಾವಕ್ಕೆ ಒಳಗಾಗಿದ್ದಾರೆ. ನಮ್ಮ ವೇಷಭೂಷಣ ಅದರಲ್ಲೂ ವಿದ್ಯಾವಂತರು ಸಂಪೂರ್ಣವಾಗಿ ಪಾಶ್ಚಿಮಾತ್ಯರ ಪ್ಯಾಂಟು-ಶರ್ಟು, ಕೋಟು-ಬೂಟು, ಹ್ಯಾಟು-ಭಾರತದಲ್ಲಿ ಈ ವೇಷಭೂಷಣಗಳು ಇಂಗ್ಲಿಷ್ ಶಿಕ್ಷಣ ಪಡೆದವರಲ್ಲಿ ಮಾತ್ರ ಕಂಡುಬರುತ್ತಿದ್ದು ಕೋಟ್ಯಂತರ ಗ್ರಾಮೀಣ ಪ್ರದೇಶದ ಜನರು ಅದರಲ್ಲೂ ಶಿಕ್ಷಣದ ಗಂಧವಿಲ್ಲದವರು ಭಾರತೀಯ ಸಾಂಪ್ರದಾಯಿಕ ಉಡಿಗೆ ತೊಡಿಗೆಗಳಲ್ಲೇ ಹೆಚ್ಚು ಆಕರ್ಷಿತರಾಗಿರುವುದನ್ನು ಕಾಣಬಹುದು. ಇದು ಒಂದು ಪರಸಂಸ್ಕೃತಿ ಸ್ಥಳೀಯ ಸಂಸ್ಕೃತಿಯ ಮೇಲೆ ಎಂತಹ ಪ್ರಭಾವವನ್ನು ಬೀರುತ್ತದೆ ಎಂಬುದನ್ನು ತಿಳಿಸುವ ಒಂದು ಅಂಶ. ಇಂತಹ ಅದೆಷ್ಟೋ ನಿಶ್ಚಯಾತ್ಮಕವಾದ ಪರಸಂಸ್ಕೃತಿಯ ಪ್ರಭಾವ ಭಾರತೀಯರ ಮೇಲಾಗಿದೆ. ಇಂತಹದೇ ಉದಾಹರಣೆಗಳನ್ನು ಅಮೆರಿಕದ ಬಿಳಿಯರ ಪ್ರಭಾವ ಕರಿಯರ ಮೇಲೆ ಹಾಗೂ ಹಿಸ್‌ಪ್ಯಾನಿಕ್ಸ್ ಮೇಲೆ, ಫಿಲಿಪಿನೋಸ್‌ಗಳ ಮೇಲೆ, ಅಮೆರಿಕಾದಲ್ಲಿ ನೆಲೆಸಿರುವ ದಕ್ಷಿಣ ಪೂರ್ವ ವಲಸೆಗಾರರ ಮೇಲಿನ ಪ್ರಭಾವವನ್ನು ಅಳೆಯಲು ಪರಸಂಸ್ಕೃತಿಯ ಅಳತೆಯ ಪಟ್ಟಿಯನ್ನೇ ತಯಾರಿಸಿದ್ದಾರೆ ಮಾನವ ಶಾಸ್ತ್ರಜ್ಞರು. ಈ ಬಗೆಯ ವೈಜ್ಞಾನಿಕ ಅಧ್ಯಯನಕ್ಕೆ ಹೆಚ್ಚು ಪ್ರೋತ್ಸಾಹ ನೀಡಿ

Digitised by Bharatavani, CIIL

ಬೆಂಬಲಿಸುತ್ತಿರುವುದು ಶಿಕ್ಷಣವಲ್ಲದೆ ಬೇರ್ಯಾವ ಅಂಶವೂ ಅಲ್ಲ ಎಂದೆನ್ನಬಹುದು.

ಪರಸಂಸ್ಕೃತಿ ಯಾವುದು ಎಂಬುದನ್ನು ನಿರ್ಧರಿಸುವುದೂ ಶಿಕ್ಷಣವೇ. ಕೆಲವೊಮ್ಮೆ ಸ್ಥಳೀಯ ಆದಿವಾಸಿ ಸಂಸ್ಕೃತಿಗಳು ಸಂಸ್ಕೃತಿಯ ಪ್ರಸರಣದ ಮುಖಾಂತರ ಅನುಕರಿಸಲ್ಪಟ್ಟಿರುತ್ತದೆ. ಆದರೆ ಪರಸಂಸ್ಕೃತಿಯ ಅಂಶಗಳನ್ನು ನಮ್ಮ ಸಂಸ್ಕೃತಿಯಲ್ಲಿ ಮೌಲ್ಯಾಧಾರಿತವಾಗಿ ಅಳವಡಿಸಿಕೊಳ್ಳಲು ಪ್ರೇರೇಪಿಸುವ ಅಂಶ ಶಿಕ್ಷಣ ಎಂಬುದನ್ನು ನಿರ್ದಾಕ್ಷಿಣ್ಯವಾಗಿ ಹೇಳಬಹುದು. ಇಂತಹ ಅಧ್ಯಯನಗಳಿಂದಾಗಿಯೆ ಪರ–ಸಂಸ್ಕೃತಿಯನ್ನು ಇಂದು ಅತ್ಯಂತ ಪ್ರಮುಖವಾದುದು ಎಂಬುದನ್ನು ಸಮಾಜವಿಜ್ಞಾನಗಳಲ್ಲಿ, ಅದರಲ್ಲೂ ಮುಖ್ಯವಾಗಿ ಸಮಾಜಶಾಸ್ತ್ರದಲ್ಲಿ, ಮನಃಶಾಸ್ತ್ರದಲ್ಲಿ, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಗುರುತಿಸಬಹುದು. ಪರಸಂಸ್ಕೃತಿಯ ಪ್ರಭಾವವನ್ನು ಅಳೆಯುವ ಮುಖಾಂತರ ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಮೇಲೆ ಅದೆಷ್ಟು ಹಿಡಿತವನ್ನು ಸಾಧಿಸುತ್ತಿದೆ ಎಂಬುದನ್ನು ಕಂಡುಕೊಳ್ಳುವ ಕ್ರಿಯೆಯಾದರೂ ಅದನ್ನು ಶಿಕ್ಷಣದಿಂದ ಯಶಸ್ವಿಯಾಗಿ ನಿರ್ವಹಿಸಿ, ನಿರ್ಣಯಿಸಬಹುದು. ಅಮೆರಿಕಾದಲ್ಲಿರುವ ಚೀನೀಯರು, ಭಾರತೀಯರು ಇಂದು ಬಹುತೇಕ ಅಮೆರಿಕನ್ನರ ಸಂಸ್ಕೃತಿಯನ್ನೇ ತಮ್ಮದನ್ನಾಗಿಸಿಕೊಂಡಿದ್ದಾರೆ. ಹಾಗೆ ಭಾರತದಲ್ಲಿ ವಾಸಿಸುತ್ತಿರುವವರು (ಭಾರತೀಯರು) ಅದೆಷ್ಟು ಪಾಶ್ಚಿಮಾತ್ಯರ ಪ್ರಭಾವಕ್ಕೆ ಒಳಗಾಗಿದ್ದಾರೆಂಬ ಅಂಶ ನಿಜಕ್ಕೂ ಪರಸಂಸ್ಕೃತಿಯನ್ನು ಗುರುತಿಸುವುದೇ ಆಗಿದೆ. ಬೇರೆ ಬೇರೆ ಜನಾಂಗೀಯ ಗುಂಪುಗಳು ಮತ್ತೊಂದು ದೇಶದಲ್ಲಿ ಅಲ್ಲಿನ ಸ್ಥಳೀಯ ಸಂಸ್ಕೃತಿಯಿಂದ ಹೇಗೆ ಪ್ರಭಾವಿತರಾಗಿರುತ್ತಾರೆಂಬ ಅಂಶ ಪರಸಂಸ್ಕೃತಿಯ ಅಧ್ಯಯನದಿಂದ ವ್ಯಕ್ತವಾಗುತ್ತದೆ.

ಪರ ಸಂಸ್ಕೃತಿಯೆಂಬುದು ವ್ಯಕ್ತಿಯ ದೃಷ್ಟಿಯಿಂದ ಸಾಮಾಜಿಕ ಕಲಿಕೆಯ ಪ್ರಕ್ರಿಯೆ ಎಂದೆನ್ನಬಹುದು. ಹಾಗೆಯೇ ಸಾಮಾಜಿಕ ದೃಷ್ಟಿಕೋನದಿಂದ ಇದು ಎಂದರೆ ಪರಸಂಸ್ಕೃತಿಯ ನಿರ್ದಿಷ್ಟ ಮೌಲ್ಯಗಳು, ತಂತ್ರಗಳು ಹಾಗೂ ವಿವಿಧ ಸಂಸ್ಥೆಗಳಲ್ಲಾಗುತ್ತಿರುವ ಬದಲಾವಣೆಗಳು, ಆ ಬದಲಾವಣೆಯನ್ನು ಪ್ರೋತ್ಸಾಹಿಸುತ್ತಿರುವ ಅಂಶಗಳೆಲ್ಲವನ್ನೂ ತಿಳಿಸುತ್ತವೆ ಎನ್ನಬಹುದು.

ಕೆಲವೊಮ್ಮೆ ಪರಸಂಸ್ಕೃತಿಯು ಸಮಾಜದಲ್ಲಿ ಹಾಗೂ ವ್ಯಕ್ತಿಯ ಜೀವನದಲ್ಲಿ ಸಂಘರ್ಷವನ್ನುಂಟುಮಾಡಬಹುದು. ಈ ದಿಕ್ಕಿನಲ್ಲಿ ಅನೇಕ ಉದಾಹರಣೆಗಳನ್ನು ನೋಡಬಹುದು. ಪರಸಂಸ್ಕೃತಿಯ ಪ್ರಭಾವವೇ 'ಕಲ್ಚರ್ ಶಾಕ್' ಎಂದರೆ ಸಾಂಸ್ಕೃತಿಕ ದಿಗ್ಭ್ರಮೆಯನ್ನು ಹುಟ್ಟಿಸಿರಬಹುದು ಎನಿಸುತ್ತದೆ. ನಾವು ಯಾವ ಸಂಸ್ಕೃತಿಯ ಶಿರೋನಾಮೆಯಲ್ಲಿ ಜನ್ಮ ತಾಳುತ್ತೇವೆಯೋ ಅದು ಸಾಮಾನ್ಯವಾಗಿ ನಮ್ಮ ನಡತೆ, ಮೌಲ್ಯಗಳು, ಅಭಿಪ್ರಾಯಗಳು ಹಾಗೂ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ಆದರೆ ಅವುಗಳನ್ನು ಪರಸಂಸ್ಕೃತಿಯ ಪ್ರಭಾವದಿಂದ ಪರಿವರ್ತಿತವಾಗಿಸಲು ಶಿಕ್ಷಣ ಅತ್ಯಂತ ಸಮರ್ಪಕವಾದ ಕೆಲಸ ಮಾಡುತ್ತದೆ. ಹುಟ್ಟಿನಿಂದ ಸಾಯುವವರೆವಿಗೂ ಸಂಸ್ಕೃತಿ ವ್ಯಕ್ತಿಯನ್ನು ನಿಯಂತ್ರಿಸಿ ಅವನ ಜೀವನದ ಆಗುಹೋಗುಗಳನ್ನು ನಿರ್ಧರಿಸುತ್ತದೆ. ಕೆಲವೊಮ್ಮೆ ನಮಗರಿವಿರಲಿ ಇಲ್ಲದಿರಲಿ ಸಂಸ್ಕೃತಿ ನಮ್ಮನ್ನು ನಿರ್ಬಂಧಿಸುತ್ತಲೇ ಇರುತ್ತದೆ. ಆದರೂ ನಾವು 'ಸಂಸ್ಕೃತಿಯ ಬಂಧಿ ಅಥವಾ ಖೈದಿಗಳಲ್ಲಾ ಎಂಬ ಮಾತನ್ನು ಮಾನವ ಸಮಾಜ ಶಾಸ್ತ್ರಜ್ಞರಾದ ಕ್ಲೈಡ್ ಕ್ಲಕ್ಹಾನ್‌ರವರು ತಿಳಿಸಿರುತ್ತಾರೆ.

ಪರಸಂಸ್ಕೃತಿಯು ಅತ್ಯಂತ ಪ್ರಭಾವಿಯುತವಾದ ಒಂದು ಸಮಾಜಶಾಸ್ತ್ರೀಯ ಕಲ್ಪನೆಯಾಗಿ ಸಮಾಜವಿಜ್ಞಾನಗಳಲ್ಲಿ ತನ್ನ ಅಸ್ತಿತ್ವವನ್ನು ಪಡೆದುಕೊಂಡಿದೆ. ಪರಸಂಸ್ಕೃತಿಯು ಎರಡು ವಿಭಿನ್ನ ಸಂಸ್ಕೃತಿಯ ಗುಂಪು ಪರಸ್ಪರ ಹೊಂದಿಕೊಂಡು ಅವುಗಳ ಪ್ರಭಾವಕ್ಕೊಳಗಾಗುವ ಪ್ರಕ್ರಿಯೆ ಎಂಬುದು ಅನೇಕ ಅಧ್ಯಯನಗಳಿಂದ ಸಾಬೀತಾಗಿದೆ. ಸಾಂಸ್ಕೃತಿಕ ಸಮ್ಮಿಲನ ಹಾಗೂ ಪರಸಂಸ್ಕೃತಿಯ ಕಲ್ಪನೆಗಳ ನಡುವಿನ ವ್ಯತ್ಯಾಸವನ್ನು ಕಂಡುಕೊಳ್ಳುವುದು ಕಷ್ಟ. ಆದರೆ ಶಿಕ್ಷಣದ ಮುಖಾಂತರ ಇವೆರಡರ ವ್ಯತ್ಯಾಸಗಳನ್ನು ಬಹಳ ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬಹುದು.

ಶಿಕ್ಷಣವು ಕಾಲದಿಂದ ಕಾಲಕ್ಕೆ, ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿದ್ದರೂ ವ್ಯಕ್ತಿತ್ವದ ವಿಕಾಸಕ್ಕೆ ಹಾಗೂ ಸಂಸ್ಕೃತಿಯ ಪ್ರಸರಣ ಕ್ಷೇತ್ರದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಮಾನವನು ತನ್ನ ಜೀವನದ ಹೋರಾಟದಲ್ಲಿ ಯಶಸ್ವಿಯಾಗಲು ಶಿಕ್ಷಣ ಸಾಮರ್ಥ್ಯ ನೀಡುವುದರ ಜೊತೆ ಜೊತೆಯಲ್ಲಿಯೇ ಸಾಂಸ್ಕೃತಿಕ ಪರಂಪರೆಯನ್ನು ಅದು ಯಾವುದೇ ಬಗೆಯದ್ದಾಗಿರಲೀ, ಜೀವನ ಕ್ರಮವಾಗಲೀ, ಶೈಲಿಯಾಗಲೀ, ಕಲೆ, ಸಾಹಿತ್ಯ, ಸಂಗೀತ, ತತ್ವಶಾಸ್ತ್ರ, ಶಿಲ್ಪಕಲೆ, ನಂಬಿಕೆ, ಕೌಶಲ್ಯಗಳು ಇವೆಲ್ಲವನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ನಿರಂತರವಾಗಿ ಪ್ರವಹಿಸುವಂತೆ ಮಾಡುವುದು.

– ಹೆಚ್.ಎಂ.ವ.

## ಪರಿಕಲ್ಪನಾ ನಕ್ಷೆ

ಒಂದು ವಿಷಯದ ಮೇಲೆ ಕೇಂದ್ರೀಕೃತವಾಗಿ, ಪರಸ್ಪರ ಸಂಬಂಧಿತ ಪರಿಕಲ್ಪನೆಗಳನ್ನು ಚಿತ್ರಿತ ಸ್ವರೂಪದಲ್ಲಿ ಕ್ರೋಡೀಕರಿಸಿ ಪ್ರತಿನಿಧಿಸಿದಾಗ ದೊರಕುವ ದೃಶ್ಯಿಕ ರೂಪವೇ ಪರಿಕಲ್ಪನಾ ನಕ್ಷೆ.

ಪರಿಕಲ್ಪನಾ ನಕ್ಷೆಗಳು ಜ್ಞಾನವನ್ನು ಕ್ರಮಬದ್ಧವಾಗಿ ಯೋಜಿಸಿ ಪ್ರತಿನಿಧಿಸುವ ಸಾಧನ. ಇವುಗಳು ವೃತ್ತ, ದೀರ್ಘ ವೃತ್ತ ಅಥವಾ ಆಯತಗಳಲ್ಲಿ ಬರೆದಿರುವ ಪರಿಕಲ್ಪನೆಗಳನ್ನೂ, ಆ ಪರಿಕಲ್ಪನೆಗಳ ನಡುವಿನ ಸಂಬಂಧವನ್ನು ಸೂಚಿಸುವ ಕೊಂಡಿಗಳನ್ನೂ ಹಾಗೂ ಕೊಂಡಿಪದಗಳನ್ನೂ ಹೊಂದಿರುತ್ತವೆ. ಕೊಂಡಿಗಳಲ್ಲಿರುವ ಕೊಂಡಿ ಪದಗಳು ಎರಡು ಪರಿಕಲ್ಪನೆಗಳ ನಡುವಿನ ಸಂಬಂಧವನ್ನು ಸೂಚಿಸುತ್ತವೆ.

ಪರಿಕಲ್ಪನಾ ನಕ್ಷೆಗಳಲ್ಲಿ ಪರಿಕಲ್ಪನೆಗಳನ್ನು ವ್ಯವಸ್ಥಿತ ಸೋಪಾನಗಳಾಗಿ ಜೋಡಿಸಲಾಗುತ್ತದೆ. ಇವುಗಳಲ್ಲಿ ಸಾಮಾನ್ಯ ಪರಿಕಲ್ಪನೆ (general concept) ಗಳನ್ನು ನಕ್ಷೆಯ ಮೇಲ್ಭಾಗದಲ್ಲೂ, ನಿರ್ದಿಷ್ಟ ಪರಿಕಲ್ಪನೆ (specific concept)ಗಳನ್ನು ಕೆಳಗಿನ ಸೋಪಾನಗಳಲ್ಲಿಯೂ ಜೋಡಿಸಲಾಗುತ್ತದೆ. ಇವುಗಳಲ್ಲದೆ ಪರಿಕಲ್ಪನಾ ನಕ್ಷೆಗಳು ಅಡ್ಡ ಕೊಂಡಿ (cross link) ಗಳನ್ನು ಹೊಂದಿರುತ್ತವೆ. ಪರಿಕಲ್ಪನಾ ನಕ್ಷೆಯ ಭಿನ್ನ ಸೋಪಾನಗಳಲ್ಲಿರುವ ಪರಿಕಲ್ಪನೆಗಳನ್ನು ಜೋಡಿಸಲು ಈ ಅಡ್ಡ ಕೊಂಡಿಗಳು ಬಳಕೆಯಾಗುತ್ತವೆ. ಪರಿಕಲ್ಪನಾ ನಕ್ಷೆಯ ಮತ್ತೊಂದು ಗುಣಲಕ್ಷಣ ಆ ನಕ್ಷೆಯಲ್ಲಿ ಬರುವ ಪರಿಕಲ್ಪನೆಗಳ ಉದಾಹರಣೆಗಳು. ಪರಿಕಲ್ಪನಾ ನಕ್ಷೆಯಲ್ಲಿ ಚರ್ಚಿತ ಪರಿಕಲ್ಪನೆಗಳಿಗೆ ಮೂರ್ತರೂಪ ಕೊಡಲು ಇವುಗಳ ಬಳಕೆಯಾಗುತ್ತದೆ.

ಡೇವಿಡ್ ಅಸುಬೆಲ್‌ರವರ ಅರ್ಥಪೂರ್ಣ ಸ್ವೀಕರಣ ಕಲಿಕಾ ಸಿದ್ಧಾಂತದ ಮೇಲೆ ಆಧಾರಿತವಾಗಿ ಜೋಸೆಫ್ ಡಿ.ನೋವಾಕ್ (1972) ರಿಂದ ಪರಿಚಯಿಸಲ್ಪಟ್ಟ ಈ ಪರಿಕಲ್ಪನಾ ನಕ್ಷೆಯು ಜ್ಞಾನವನ್ನು ಪ್ರತಿನಿಧಿಸುವ ವಿಧಾನಗಳಲ್ಲೊಂದು. ಪರಿಕಲ್ಪನಾ ನಕ್ಷೆಯು ಪರಿಕಲ್ಪನೆಗೆ ಸಂಬಂಧಿಸಿದ ನೆಲೆಗಟ್ಟನ್ನು ಸದೃಢಗೊಳಿಸುತ್ತದೆ. ಜ್ಞಾನದ ವಿವಿಧ ಆಯಾಮಗಳು ಜ್ಞಾನದ ಅಂಶವಾದ ಪರಿಕಲ್ಪನೆಗಳ ಮೂಲಕ ಹೇಗೆ ಪರಸ್ಪರ ಸಂಬಂಧವನ್ನು ಹೊಂದಿವೆ ಎಂಬುದನ್ನು ಪರಿಕಲ್ಪನಾ ನಕ್ಷೆಗಳು ತೋರಿಸುತ್ತವೆ.

Digitised by Bharatavani, CIIL




ಚಿತ್ರ 1: ಪರಿಕಲ್ಪನಾ ನಕ್ಷೆಯ ಪರಿಕಲ್ಪನಾ ನಕ್ಷೆ

ಜ್ಞಾನವನ್ನು ದೃಶ್ಯ ಮಾಧ್ಯಮದ ಮೂಲಕ ತೋರಿಸುವುದರಿಂದ ಆ ಜ್ಞಾನ ಆಯಾಮದ ಪಕ್ಷಿ ನೋಟವನ್ನು ಪಡೆಯುವುದು ಸುಲಭವಾಗುತ್ತದೆ.

**ಪರಿಕಲ್ಪನಾ ನಕ್ಷೆಯ ರಚನೆ**

ಪರಿಕಲ್ಪನಾ ನಕ್ಷೆಯನ್ನು ರಚಿಸುವಾಗ ರಚನಾಕಾರನು ಒಂದು ಪರಿಚಿತ ಜ್ಞಾನ ಆಯಾಮವನ್ನು ತೆಗೆದುಕೊಳ್ಳಬೇಕು. ಬರೆಯಲ್ಪಡುವ ಪರಿಕಲ್ಪನಾ ನಕ್ಷೆಯು ಬರೆದಿರುವ ಸನ್ನಿವೇಶಕ್ಕೆ ಅವಲಂಬಿತವಾಗಿರುವುದರಿಂದ ಚರ್ಚಿತ ವಿಷಯದ ನಿರ್ದಿಷ್ಟ ಘಟಕವನ್ನು ನಕ್ಷೆ ರಚಿಸಲು ಆಯ್ಕೆ ಮಾಡುವುದು ಸೂಕ್ತ. ಇದರಿಂದ ಪರಿಕಲ್ಪನಾ ನಕ್ಷೆಯ ಪರಿಕಲ್ಪನೆಗಳ ಸೋಪಾನಗಳ ಸಂರಚನೆಗೆ ಒಂದು ಸನ್ನಿವೇಶವು ರೂಪುಗೊಳ್ಳುತ್ತದೆ. ಇದರಿಂದಾಗಿ ಪರಿಕಲ್ಪನಾ ನಕ್ಷೆಗೊಂದು ಮಿತಿಯನ್ನು ನಿರ್ಧರಿಸುವುದು ಸಾಧ್ಯವಾಗುತ್ತದೆ. ಈ ಸನ್ನಿವೇಶವನ್ನು ನಿರ್ದಿಷ್ಟಪಡಿಸುವ ಉತ್ತಮ ವಿಧಾನವೆಂದರೆ ಒಂದು 'ಕೇಂದ್ರ ಪ್ರಶ್ನೆ'ಯನ್ನು ರಚಿಸುವುದು. ರಚಿತವಾದ ಪರಿಕಲ್ಪನಾ ನಕ್ಷೆಯು ಈ ಕೇಂದ್ರ ಪ್ರಶ್ನೆಯನ್ನು ಉತ್ತರಿಸುವಂತಿರಬೇಕು. ಉತ್ತಮವಾದ ಕೇಂದ್ರ ಪ್ರಶ್ನೆಯು ಸಂಪನ್ನವಾದ ಪರಿಕಲ್ಪನಾ ನಕ್ಷೆ ತಯಾರಿಕೆಗೆ ದಾರಿ ಮಾಡಿಕೊಡುತ್ತದೆ.

ಮುಂದಿನ ಹಂತ ನಿರ್ಧಾರಿತ ಜ್ಞಾನ ಆಯಾಮಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಗುರುತಿಸುವುದು. ಸಾಮಾನ್ಯವಾಗಿ ಹದಿನೈದರಿಂದ ಇಪ್ಪತ್ತು ಪರಿಕಲ್ಪನೆಗಳನ್ನು ಮೊದಲು ಗುರುತಿಸಬಹುದು. ಈ ರೀತಿ ಪಟ್ಟಿ ಮಾಡಿದ ಪರಿಕಲ್ಪನೆಗಳನ್ನು ಶ್ರೇಣಿ ಕ್ರಮದಲ್ಲಿ ಬರೆಯಬೇಕು. ಈ ರೀತಿ ಶ್ರೇಣಿ ನೀಡುವಾಗ ಹೆಚ್ಚು ಸಾಮಾನ್ಯವಾಗಿರುವ, ಸಮಗ್ರವಾಗಿರುವ ಪರಿಕಲ್ಪನೆಗಳಿಗೆ ಉನ್ನತ ಶ್ರೇಣಿಯನ್ನೂ, ಹೆಚ್ಚು ನಿರ್ದಿಷ್ಟವಾಗಿರುವ ಪರಿಕಲ್ಪನೆಗಳಿಗೆ ಕೆಳಗಿನ ಶ್ರೇಣಿಗಳನ್ನು ನೀಡಬೇಕು.

ಮುಂದಿನ ಹಂತ ಪ್ರಾಥಮಿಕ ಪರಿಕಲ್ಪನಾ ನಕ್ಷೆಯ ರಚನೆ. ಈ ಹಂತದಲ್ಲಿ ಉನ್ನತ ಶ್ರೇಣಿ ಪಡೆದ ಪರಿಕಲ್ಪನೆಗಳನ್ನು ಕೆಳಗಿನ ಶ್ರೇಣಿಗಳ ವಿವಿಧ ಪರಿಕಲ್ಪನೆಗಳ ಜೊತೆಗೆ ಜೋಡಿಸಬೇಕು. ಈ ಹಂತದಲ್ಲಿ ಸೂಕ್ತ ಕೊಂಡಿಗಳ ಬಳಕೆಯಾಗಬೇಕು.

ಪ್ರಾಥಮಿಕ ಪರಿಕಲ್ಪನಾ ನಕ್ಷೆಯ ರಚನೆಯಾದಂತೆ, ಅಡ್ಡ ಕೊಂಡಿಗಳ ಮೂಲಕ ವಿವಿಧ ಹಂತಗಳಲ್ಲಿರುವ, ಬೇರೆ ಬೇರೆ ಕಂಬ ಸಾಲುಗಳಲ್ಲಿರುವ ಪರಿಕಲ್ಪನೆಗಳನ್ನು ಜೋಡಿಸಬೇಕು. ಪರಿಕಲ್ಪನಾ ನಕ್ಷೆಯಲ್ಲಿ ಬರುವ ಪ್ರತಿಯೊಂದು ಪರಿಕಲ್ಪನೆಯೂ ಉಳಿದ ಪ್ರತಿಯೊಂದು ಪರಿಕಲ್ಪನೆಯ ಜೊತೆ ಏನಾದರೊಂದು ಸಂಬಂಧ ಹೊಂದಿರುವುದರಿಂದ ಅಡ್ಡ ಕೊಂಡಿಗಳನ್ನು ಬರೆಯುವಾಗ ಆಯ್ದ ಮುಖ್ಯ ಕೊಂಡಿಗಳನ್ನಷ್ಟೇ ಬಳಸಬೇಕು. ಹಾಗೂ ಈ ಅಡ್ಡ ಕೊಂಡಿಗಳು ಆದಷ್ಟು ಸಂಕ್ಷಿಪ್ತವಾಗಿರಬೇಕು. ಇವುಗಳ ಹೊರತಾಗಿ ವೃತ್ತ / ಆಯತಗಳಲ್ಲಿ ವಾಕ್ಯಗಳನ್ನು ಬರೆಯಬಾರದು.

ಕೊನೆಯ ಹಂತವಾಗಿ ನಕ್ಷೆಯನ್ನು ಪರಿಷ್ಕರಿಸಬೇಕು. ಪರಿಕಲ್ಪನಾ ನಕ್ಷೆಗೆ ಸ್ವಚ್ಛತೆ ಹಾಗೂ ಉತ್ತಮ ಸಂರಚನೆ ಬರುವಂತೆ ಪರಿಕಲ್ಪನೆಗಳನ್ನು ಸೂಕ್ತ ಸ್ಥಳಕ್ಕೆ ಸ್ಥಾನಪಲ್ಲಟಗೊಳಿಸಬಹುದು. ಇದರೊಂದಿಗೆ ಪರಿಕಲ್ಪನಾ ನಕ್ಷೆಯನ್ನು ಅಂತಿಮಗೊಳಿಸಬಹುದು.

ಪರಿಕಲ್ಪನಾ ನಕ್ಷೆಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಬಳಸಬಹುದು.

1. ಹೊಸ ಉಪಾಯಗಳನ್ನು ಕಂಡುಕೊಳ್ಳಲು
2. ಸಂಕೀರ್ಣ ರಚನೆಗಳನ್ನು ವಿನ್ಯಾಸ ಮಾಡಲು
3. ಸಂಕೀರ್ಣ ಪರಿಕಲ್ಪನೆಗಳನ್ನು ಸಂವಹಿಸಲು
4. ಹಳೆಯ (ಈಗಾಗಲೇ ಕಲಿತಿರುವ) ಹಾಗೂ ಹೊಸ (ಈಗ ಕಲಿಯುತ್ತಿರುವ) ಜ್ಞಾನಗಳನ್ನು ಸ್ಪಷ್ಟವಾಗಿ ಒಂದುಗೂಡಿಸಿ ಕಲಿಕೆಗೆ ಸಹಾಯ ಮಾಡಲು
5. ಕಲಿಕೆಯನ್ನು ಮೌಲ್ಯಮಾಪನ ಮಾಡಲು ಹಾಗೂ ತಪ್ಪು ಕಲಿಕೆಯನ್ನು ನೈದಾನಿಸಲು.

ಪರಿಕಲ್ಪನಾ ನಕ್ಷೆಗಳು ಚಿತ್ರಿತ ರೂಪದಲ್ಲಿರುವುದರಿಂದ ಈ ಚಿತ್ರಿತ ಸ್ವರೂಪವನ್ನು ವೇಗವಾಗಿ ಹಾಗೂ ಸುಲಭವಾಗಿ ಗುರುತಿಸಿ ಅರ್ಥೈಸಿಕೊಳ್ಳಬಹುದು. ಪರಿಕಲ್ಪನಾ ನಕ್ಷೆಗಳು ಕನಿಷ್ಠ ಪದಗಳ ಬಳಕೆಮಾಡುವುದರಿಂದ ಪರಿಕಲ್ಪನೆಗಳನ್ನು ಸುಲಭವಾಗಿ ಗುರುತಿಸಬಹುದು. ಚಿತ್ರಿತ ನಿರೂಪಣೆಯು ಕೇವಲ ಪದಗಳು ಕೊಡದಿರುವ, ವಿಷಯದ ಸಮಗ್ರ ಚಿತ್ರಣವು ಬೆಳೆಯಲು ಸಹಾಯ ಮಾಡುತ್ತದೆ.

**ಪರಿಕಲ್ಪನಾ ನಕ್ಷೆಯ ಅನ್ವಯಗಳು**

1. ಸೃಜನಶೀಲ ಸಾಧನ : ಪರಿಕಲ್ಪನಾ ನಕ್ಷೆಯನ್ನು ಬರೆಯುವ ವಿಧಾನವನ್ನು ಮೆದುಳು ಪ್ರಚೋದನೆ (brain-storming)

Digitised by Bharatavani, CIIL




ಚಿತ್ರ 2: ಕಾಲಗಳು – ಒಂದು ಪರಿಕಲ್ಪನಾ ನಕ್ಷೆ

ಅಧಿವೇಶನಗಳಿಗೆ ಹೋಲಿಸಬಹುದು. ಹೊಸ ಅಂಶಗಳನ್ನು, ಸಂಬಂಧಗಳನ್ನು ಯಾವುದೇ ಟೀಕೆಗಳಿಲ್ಲದೆ ಬರೆಯುವಾಗ ಸೃಜನಶೀಲತೆಯನ್ನು ಪ್ರೇರೇಪಿಸುವಂತಹ ಸನ್ನಿವೇಶವಿರುವುದು. ಇದರಿಂದ ನಮ್ಮ ಮನಸ್ಸು ಹೊಸತನವನ್ನು ಸ್ವೀಕರಿಸಲು ಸದಾ ತೆರೆದಿರುತ್ತದೆ. ಹೊಸದನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ.

2. ಕಲಿಕಾ ಸಾಧನ: ಕಲಿಕೆಯು ಪರಿಣಾಮಕಾರಿಯಾಗಲು, ಹೊಸದಾಗಿ ಕಲಿತ ಜ್ಞಾನವನ್ನು ಈಗಾಗಲೇ ಕಲಿತಿರುವ ಜ್ಞಾನದೊಂದಿಗೆ ಒಂದುಗೂಡಿಸುವ ಅಗತ್ಯತೆ ಇದೆಯೆಂದು ರಚನಾತ್ಮಕ ಕಲಿಕಾವಾದವು ಪ್ರತಿಪಾದಿಸುತ್ತದೆ. ಪರಿಕಲ್ಪನಾ ನಕ್ಷೆಯು ಈ ಪ್ರಕ್ರಿಯೆಗೆ ಒಂದು ಸ್ಪಷ್ಟವಾದ ಮೂರ್ತರೂಪವನ್ನು ಕೊಡುತ್ತದೆ. ಕಲಿಕಾರ್ಥಿಯು ಪರಿಕಲ್ಪನೆಗಳ ನಡುವಿನ ಸಂಬಂಧಗಳಿಗೆ ಗಮನವೀಯುವಂತೆ ಮಾಡುತ್ತದೆ. ಪರಿಕಲ್ಪನಾ ನಕ್ಷೆಗಳ ತಯಾರಿಕೆಯ ಮೂಲಕ ಕಲಿತ ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ದೀರ್ಘಕಾಲೀನ ಸ್ಮೃತಿಯನ್ನು ಹೊಂದಿರುವುದನ್ನು ಸಂಶೋಧನೆಗಳು ಎತ್ತಿ ತೋರಿಸಿವೆ. (Novak et.al 1983).

ಶಿಕ್ಷಣದಲ್ಲಿ ಸಮಸ್ಯಾ ಪರಿಹಾರ ಸಾಧನವಾಗಿಯೂ ಪರಿಕಲ್ಪನಾ ನಕ್ಷೆಯು ಜನಪ್ರಿಯತೆಯನ್ನು ಗಳಿಸುತ್ತಿದೆ. ಸಮಸ್ಯಾ ಪರಿಹಾರದ ಸಂದರ್ಭದಲ್ಲಿ ಪರ್ಯಾಯ ಪರಿಹಾರಗಳನ್ನು ಹೆಚ್ಚಿಸಲು ಪರಿಕಲ್ಪನಾ ನಕ್ಷೆಯು ಬಳಸಲ್ಪಡುತ್ತದೆ.

3. ಮೌಲ್ಯಮಾಪನ ಸಾಧನ : ಕಲಿಕಾರ್ಥಿಯ ತಪ್ಪು ಗ್ರಹಿಕೆಗಳನ್ನು ಆತ/ಆಕೆ ಬರೆದ ಪರಿಕಲ್ಪನಾ ನಕ್ಷೆಗಳ ಮೂಲಕ ಸುಲಭವಾಗಿ ಗುರುತಿಸಬಹುದಾದುದರಿಂದ ಪರಿಕಲ್ಪನಾ ನಕ್ಷೆಗಳು ವಿದ್ಯಾರ್ಥಿಗಳ ಮೌಲ್ಯಮಾಪನದಲ್ಲಿಯೂ ಪರಿಣಾಮಕಾರಿಯೆನಿಸಿವೆ. ವಿದ್ಯಾರ್ಥಿಗಳ ಕಲಿಕಾ ಕ್ಲಿಷ್ಟತೆಯನ್ನು ಗುರುತಿಸಿ, ನೈದಾನಿಸುವಲ್ಲಿಯೂ ಪರಿಕಲ್ಪನಾ ನಕ್ಷೆಗಳು ಸಹಕಾರಿಯೆನಿಸಿವೆ.

–ಶ.ಸು.

## ಪರಿಸರ ಶಿಕ್ಷಣ

ಪ್ರತಿವರ್ಷ ಜೂನ್ 5 ರಂದು ವಿಶ್ವಪರಿಸರ ದಿನಾಚರಣೆ. ಅಂದು ವಿದ್ಯಾರ್ಥಿಗಳಿಗೆಲ್ಲ ವಿಶೇಷ ಸಂಭ್ರಮ. ಚಿತ್ರ ವಿಚಿತ್ರ ಮುಖವಾಡಗಳನ್ನು ಧರಿಸಿ ಪರಿಸರಮಾಲಿನ್ಯದ ವಿರುದ್ಧ ವರ್ಣರಂಜಿತ ಮೌನ ಮೆರವಣಿಗೆ ಮಾಡುವುದು, ಸಸ್ಯ ಸಂಪತ್ತಿನ ರಕ್ಷಣೆಯ ಪೋಷಣೆ ಮಾಡುತ್ತಾ "ಜಲರಕ್ಷಣೆ" ಮಾಡಬೇಕೆಂದು ನೀರಿಗಾಗಿ ಓಟ, ಕೆರೆಗಳ ರಕ್ಷಣೆ ಮಾಡಬೇಕೆಂದು ಪರಿಸರದ ಬಗ್ಗೆ ಕಲಾ ಪ್ರದರ್ಶನ, ಬೀದಿ ನಾಟಕ, ಹೊಗೆ ಮಾಲಿನ್ಯದ ಅಪಾಯದ ಬಗ್ಗೆ ಸ್ವಾರಸ್ಯಕರ ಸ್ಲೋಗನ್‌ಗಳನ್ನು ಬರೆದು ಕರಪತ್ರ ಹಂಚುವುದು ಇತ್ಯಾದಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಜಗತ್ತಿನ ಪರಿಸರ ಸಮಸ್ಯೆಗಳು ದಿನದಿನಕ್ಕೆ ತೀವ್ರವಾಗುತ್ತಿವೆ. ಗ್ರಾಮೀಣ ಬದುಕಿಗೆ ಮೂಲಾಧಾರವಾದ ಕೆರೆ, ನದಿ, ಮಣ್ಣು, ಗೋಮಾಳ, ಅಂತರ್ಜಲ, ಕರಾವಳಿ, ಅರಣ್ಯ, ಹುಲ್ಲುಗಾವಲು ನಶಿಸುತ್ತಿವೆ. ಬದುಕಿನ ಹೊಸ ಆಧಾರಗಳನ್ನು ಹುಡುಕುತ್ತಾ ಪಟ್ಟಣಗಳತ್ತ ವಲಸೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಜನರಿಗೆ ಉದ್ಯೋಗ ನೀಡಲೆಂದು ನಾವು ಆರಂಭಿಸುವ ಹೊಸ ಕಾರ್ಖಾನೆಗಳು, ಗಣಿಗಾರಿಕೆ, ಅಣೆಕಟ್ಟು, ವಿದ್ಯುತ್ ಸ್ಥಾವರಗಳು ಇನ್ನಷ್ಟು ಮಾಲಿನ್ಯಕ್ಕೆ ಕಾರಣವಾಗುತ್ತಿವೆ. ಬದುಕನ್ನು ಸುಖಮಯ ಮಾಡಬಲ್ಲ ಯೋಜನೆಗಳು ಹೆಚ್ಚಾದಷ್ಟು ನಮ್ಮ ಬದುಕು ದುರ್ಭರವಾಗುತ್ತ ಹೋಗುತ್ತಿದೆ. ಈ ವಿಷವರ್ತುಲದಿಂದ ಹೊರಬರಲು ನಾವು ಹಿಂದೆಂದಿಗಿಂತಲೂ ಹೆಚ್ಚಿನ ಶ್ರಮ ಹಾಗೂ ಮುತುವರ್ಜಿ ವಹಿಸಬೇಕಾಗುತ್ತದೆ. ಪ್ರಗತಿ ಮತ್ತು ಐಷಾರಾಮಿನ ಜೀವನಕ್ಕಾಗಿ ಪಾಶ್ಚಾತ್ಯ ಜೀವನ ಕ್ರಮವನ್ನು ಅನುಸರಿಸಬಯಸುವ ನಾವು ಪರಿಸರ ರಕ್ಷಣೆಯ ವಿಷಯದಲ್ಲಿ ಅವರ ಮಾರ್ಗವನ್ನೇಕೆ ಅನುಸರಿಸುವುದಿಲ್ಲ? ಇಂದು ಯುರೋಪ್, ಅಮೆರಿಕಾ, ಆಸ್ಟ್ರೇಲಿಯಾ, ಜಪಾನ್‌ಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜನಜಾಗೃತಿಯ ಕಾರ್ಯಕ್ರಮಗಳು ನಡೆಯುತ್ತಿವೆ. ವಿಶ್ವ ಪರಿಸರ ದಿನಾಚರಣೆಯಂತೆಯೇ ಪರಿಸರ ಸಂರಕ್ಷಣೆ ಬಗ್ಗೆ ಏಪ್ರಿಲ್ 22 ರಂದು "ಭೂದಿನ" ಆಚರಿಸಲಾಗುತ್ತಿದೆ. ಏಪ್ರಿಲ್ 26 ರಂದು "ಚರ್ನೋಬಿಲ್ ದಿನ", ಆಗಸ್ಟ್ 6 ರಂದು 'ಹಿರೋಶಿಮಾ ದಿನ", ಡಿಸೆಂಬರ್ 4 ರಂದು "ಭೋಪಾಲ್ ದಿನ"–ಹೀಗೆ ಭೂಮಿಗೆ ಆಪತ್ತು ಬಂದ ದಿನಗಳನ್ನೆಲ್ಲ ನೆನಪಿಸುವ ಹಾಗೂ ಜನರನ್ನು ಜಾಗೃತರನ್ನಾಗಿ ಮಾಡುವ ಕಾರ್ಯ ಸಾಗಿದೆ. ಆದರೆ ನಮ್ಮ ದೇಶದಲ್ಲಿ ಇಂತಹ ಜಾಗೃತಿ ಸಾಕಷ್ಟು ಮೂಡದಿರುವುದು ವಿಪರ್ಯಾಸ.

ಪರಿಸರದ ಬಗ್ಗೆ ಜಾಗೃತಿಯುಂಟು ಮಾಡುವ ಮೊದಲು ಪರಿಸರದ ಬಗ್ಗೆ ತಿಳಿದುಕೊಳ್ಳಬೇಕು. ನಮ್ಮ ಸುತ್ತಮುತ್ತಲಿನ ಪ್ರಕೃತಿಯ ಅಂಶಗಳನ್ನು ಪರಿಸರ ಎನ್ನಬಹುದು. ಇವುಗಳಲ್ಲಿ ಜೈವಿಕ ಘಟಕಗಳು ಇರುತ್ತವೆ ಹಾಗೂ ಅಜೈವಿಕ ಅಂಶಗಳೂ ಇರುತ್ತವೆ. ಇವುಗಳ ವ್ಯವಸ್ಥಿತ ಅಂತರ

Digitised by Bharatavani, CIIL

ಪ್ರಕ್ರಿಯೆಗಳಿಂದಾಗಿ ಪರಿಸರ ವ್ಯವಸ್ಥೆಗಳಾಗಿರುತ್ತವೆ. ಪರಿಸರದ ಸಮತೋಲನದ ಬಗ್ಗೆ ನಾವು ಹೆಚ್ಚು ಗಮನಕೊಡಬೇಕಾಗಿದೆ. ಕೀಟಗಳ ಬಗ್ಗೆ, ಕಪ್ಪೆಗಳ ಬಗ್ಗೆ, ಹೂಗಿಡಗಳು, ಅಲಂಕಾರಿಕ ವೃಕ್ಷಗಳ ಬಗ್ಗೆ ನಾವು ಜಾಗೃತಗೊಳ್ಳಬೇಕು.

ಭಾರತದಲ್ಲೂ ಇಂತಹ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಮಳೆನೀರನ್ನು ನೆಲದೊಳಕ್ಕೆ ಇಂಗಿಸುವಂತಹ ಬಟ್ಟಲು ಗುಂಡಿಗಳನ್ನು ನಿರ್ಮಿಸಬಹುದು. ಕೆರೆಯಂಚಿನ ಎಲ್ಲ ಸಸ್ಯ, ವೃಕ್ಷ, ಜಲಚರ, ಕೀಟ–ಪತಂಗಗಳ ಜೀವ ಗಣತಿ ಮಾಡಬಹುದು. ಬಟ್ಟೆ ತೊಳೆದ, ಸ್ನಾನ ಮಾಡಿದ ನೀರಿನಲ್ಲಿರುವ ಸಸ್ಯ ಪೋಷಕ ರಂಜಕದ ಅಂಶವನ್ನು ನಿರರ್ಥಕವಾಗಿ ಕೆರೆಗೆ ಹರಿಸುವುದು ಸರಿಯಲ್ಲ. ಅದೇ ನೀರನ್ನು ಕೈತೋಟಗಳಿಗೆ ಹರಿಸಿ ಸಸ್ಯ ಸಂವರ್ಧನೆ ಮಾಡಬಹುದು. ಪರಿಸರದ ರಕ್ಷಣೆ ಹಾಗೂ ಸಂರಕ್ಷಣೆ ಒಂದು ದಿನದ ಕೆಲಸವಲ್ಲ. ಇಂದಿನ ಯುವ ಪೀಳಿಗೆಗೆ ಪರಿಸರ ಶಿಕ್ಷಣದ ಬಗ್ಗೆ ಜಾಗೃತಿ ಹಾಗೂ ತಿಳುವಳಿಕೆಯನ್ನು ಮಾಡಿಕೊಡಬೇಕು ಇದು ಆಸಕ್ತಿ, ಶ್ರದ್ಧೆಯಿಂದ ಸಮಾಜ ತೆಗೆದುಕೊಳ್ಳಬೇಕಾದ ಕೆಲಸ.

ಒಂದು ನಿರ್ದಿಷ್ಟ ಪ್ರದೇಶದಲ್ಲಿನ ಗಾಳಿ, ನೀರು, ಭೂಮಿ ಜೊತೆ ಸಸ್ಯ, ಪ್ರಾಣಿ, ಸೂಕ್ಷ್ಮ ಜೀವಿಗಳು ಸಂಘಟಿತ ಮತ್ತು ವ್ಯೂಹಾತ್ಮಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆಂಗ್ಲ ಭಾಷೆಯಲ್ಲಿ ಇದನ್ನು "ಇಕೋ ಸಿಸ್ಟಮ್" ಜೀವ ಪರಿಸರ ವ್ಯವಸ್ಥೆ ಎನ್ನುವರು. ಈ ಶಬ್ದವನ್ನು ಬ್ರಿಟಿಷ್ ವಿಜ್ಞಾನಿ ಎ.ಜಿ. ಟಾನ್ಸ್ಲೆ 1935ರಲ್ಲಿ ಪ್ರಥಮವಾಗಿ ಬಳಸಿದ. ಜೀವರಾಶಿಗಳ ಸ್ವಾವಲಂಬನೆ ಮತ್ತು ಪರಾವಲಂಬನೆ, ಆಹಾರ ಪದ್ಧತಿ, ಪರಿಸರದಲ್ಲಿ ಅವುಗಳ ಪಾತ್ರವನ್ನು ಪರಿಸರ ವ್ಯೂಹ ಬಿಂಬಿಸುತ್ತದೆ. ಪರಿಸರದಲ್ಲಿ ಆಗುವ ಅನೇಕ ಬದಲಾವಣೆಗಳನ್ನು ಈ ಜೀವರಾಶಿಗಳು ಹೇಗೆ ನಿಭಾಯಿಸುತ್ತವೆ ಮತ್ತು ಪರಿಸರ ಸಮತೋಲನ ಹೇಗೆ ಕಾಯ್ದುಕೊಳ್ಳುತ್ತವೆ ಎಂಬುದು ಪರಿಸರ ವ್ಯೂಹದ ಪ್ರಮುಖ ಅಂಶ.

ಜೀವ ಜಗದ ಮುಂದಿನ ಪೀಳಿಗೆಯ ಭಾಗ್ಯೋದಯಕ್ಕೆ ವೈವಿಧ್ಯಮಯವಾಗಿರುವ ಪ್ರಕೃತಿಯ ವಿಶಾಲತೆಯನ್ನು ಸಂರಕ್ಷಿಸಿ ಮನುಕುಲದ ಉಳಿವಿಗಾಗಿ, ಜೀವ ಸಂಕುಲದ ರಕ್ಷಣೆ ಅತ್ಯಗತ್ಯವಾಗಿದೆ. ಕ್ರಿಯೆ–ಪ್ರತಿಕ್ರಿಯೆಗಳಿಂದ ವನ್ಯ ಸಂಕುಲ ಬಹು ಆಪತ್ತಿನಲ್ಲಿ ಸಿಲುಕಿದೆ. ಇಂತಹ ವಿಷಯಗಳತ್ತ ತಜ್ಞರಿಂದ ನಿಖರವಾದ ಅಧ್ಯಯನ ನಡೆಸಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನವಾಗಬೇಕಾಗಿದೆ. ಪ್ರಾಣಿ–ಪಕ್ಷಿ ಮತ್ತು ಸಸ್ಯ ಸಂಕುಲದ ಕ್ಷೇಮಾಭಿವೃದ್ಧಿಯತ್ತ ಆಲೋಚಿಸುವ ಕಾಲ ಇಂದಿನ ಯುವ ಪೀಳಿಗೆಯ ಮುಂದಿದೆ. ಸಸ್ಯ ಮತ್ತು ಪ್ರಾಣಿ ಸಂಗ್ರಹಾಲಯದಂತಹ ಕೇಂದ್ರಗಳನ್ನು ಸ್ಥಾಪಿಸುವ ವಿನೂತನ ಕಾರ್ಯದ ಅಗತ್ಯತೆ ಇದೆ. ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ವನ್ಯ ಸಂಕುಲದ ಯೋಗಕ್ಷೇಮ, ರಕ್ಷಣೆ ಮತ್ತು ಸುರಕ್ಷತೆಗೆ ಸಾಮಾನ್ಯ ತಿಳುವಳಿಕೆ ಮೂಡಿಸುವತ್ತ ಮತ್ತು ಪರಿಸರದ ಸಮತೋಲನೆ ಕಾಪಾಡುವ ನಿಟ್ಟಿನಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ಪಠ್ಯಪುಸ್ತಕಗಳಲ್ಲಿ ಅಳವಡಿಸಿ ಶ್ರಮಿಸಬೇಕಾಗಿದೆ. ಇದರಿಂದ ಮನುಕುಲದ ಸಾಂಸ್ಕೃತಿಕ ಮೌಲ್ಯಗಳು ವನ್ಯಜೀವಿಗಳ ರಕ್ಷಣೆ ಮಾಡಬಹುದು.

ಮನುಷ್ಯನು ತನ್ನ ಅಜ್ಞಾನದಿಂದ, ದುರಾಶೆಯಿಂದ, ಬದುಕಿನ ಒತ್ತಡದಿಂದ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದ್ದಾನೆ.

ಪ್ರತಿಯೊಂದು ಜೀವಿಯೂ ಸಾವಿರಾರು ವರ್ಷಗಳ ವಿಕಸನದಿಂದ ವಂಶಪಾರಂಪರ್ಯವಾಗಿ ಬೆಳೆದು ಬಂದ ಪರಿಸರದ ವ್ಯವಸ್ಥೆಯ ಅವಿಭಾಜ್ಯ ಅಂಗ. ಪ್ರತಿಯೊಂದು ಜೀವಿಗೂ ನಮ್ಮ ಜೊತೆಗೂಡಿ ಬಾಳುವ ಹಕ್ಕಿದೆ. ಅವುಗಳ ಅಸ್ತಿತ್ವ ನಮ್ಮ ಬದುಕಿಗೂ ಅವಶ್ಯವಿದೆ. ಪ್ರಕೃತಿ ವೈವಿಧ್ಯಮಯ ಪ್ರಾಣಿ ಪಕ್ಷಿಗಳನ್ನು ಸುಂದರವಾದ ಫಲಪುಷ್ಪ ಗಿಡಮರಗಳನ್ನು ನಿರ್ಮಲ ಪ್ರಶಾಂತ ಪರಿಸರವನ್ನು ನಮಗಾಗಿ ಸೃಷ್ಟಿಸಿದೆ. ನಮ್ಮ ಪೂರ್ವಜರು ನಮಗಾಗಿ ಸುಂದರ ಪರಿಸರವನ್ನು ಬಿಟ್ಟು ಹೋಗಿದ್ದಾರೆ. ಸಂಪೂರ್ಣ ಸುವ್ಯವಸ್ಥಿತ ಶ್ರೀಮಂತ ಜೀವ ಜಾಲಗಳನ್ನೊಳಗೊಂಡ ಸುಂದರ ಪರಿಸರವೊಂದನ್ನು ಮುಂದಿನ ಪೀಳಿಗೆಯವರಿಗೆ ಹಸ್ತಾಂತರಿಸುವುದು ನಮ್ಮ ಕರ್ತವ್ಯ.

ಪರಿಸರ ವಿಜ್ಞಾನದೊಳಗೆ ವ್ಯಕ್ತಿ ಮತ್ತು ಸಮುದಾಯದ ಎಲ್ಲ ವಾತಾವರಣವನ್ನು ಹಾಗೂ ಪರಿಸರದ ಎಲ ಅಂಶಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡುತ್ತೇವೆ. ಇದರಲ್ಲಿ ಎರಡು ಮುಖಗಳಿವೆ. ಮೊದಲನೆಯದಾಗಿ, 'ಭೌತಿಕ ಸ್ಥಿತಿಗತಿಗಳು' ಅಂದರೆ ನೀರು, ಗಾಳಿ, ಅನಿಲ ಮತ್ತು ಭೂಮಿಯ ಬೇರೆ ಬೇರೆ ಬಗೆಗಳು. ಇವುಗಳಿಂದ ವ್ಯಕ್ತಿಯ ಮೇಲೆ ಅವನ ವಿಕಾಸ ಮತ್ತು ಬೆಳವಣಿಗೆಯ ಮೇಲೆ ಪರಿಣಾಮವಾಗುತ್ತದೆ. ಎರಡನೆಯದಾಗಿ, 'ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು' ಅಂದರೆ ನೀತಿಶಾಸ್ತ್ರ, ಆರ್ಥಿಕ ಮತ್ತು ಸೌಂದರ್ಯ ಶಾಸ್ತ್ರಗಳು ಕೂಡ ವ್ಯಕ್ತಿ ಮತ್ತು ಸಮುದಾಯದ ಜೀವನ ಮತ್ತು ನಡವಳಿಕೆಯಲ್ಲಿ ಪರಿವರ್ತನೆಯನ್ನು ತರುತ್ತವೆ. ಆಧುನಿಕ ಪರಿಸರ ವಿಜ್ಞಾನವು ಬಹುಮುಖಿ ಅಧ್ಯಯನವಾಗಿದೆ.

ಪರಿಸರ ವಿಜ್ಞಾನದ ವಿಷಯ ವಸ್ತುವು ಜೀವಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಗರ್ಭಶಾಸ್ತ್ರ, ಸಂಖ್ಯಾಶಾಸ್ತ್ರ ಮತ್ತು ಇತರ ಸಮಾಜಶಾಸ್ತ್ರಗಳ ಹಿನ್ನೆಲೆಯಲ್ಲಿದೆ.

ಬೆಲ್‌ಗ್ರೇಡ್ ಚಾರ್ಟರ್‌ನ ಪ್ರಕಾರ ಪರಿಸರ ಶಿಕ್ಷಣದ ಗುರಿ ಪ್ರಪಂಚದ ಜನಸಂಖ್ಯೆ, ಪರಿಸರದ ಬಗ್ಗೆ ಜಾಗರೂಕತೆಯನ್ನು ಹೊಂದಿರುವುದು. ಅವುಗಳ ಜೊತೆಗೆ ಸಮಸ್ಯೆಗಳನ್ನು ಅರಿತುಕೊಂಡು ಜ್ಞಾನ, ಕೌಶಲ, ಪ್ರೇರಣೆಯಿಂದ ಮಾಡುವ ಕೆಲಸವನ್ನು ಆಸಕ್ತಿಯಿಂದ ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಒಂದುಗೂಡಿ ದುಡಿದು ಇಂದಿನ ಸಮಸ್ಯೆಗಳನ್ನು ಪರಿಹರಿಸುವುದು ಹಾಗೂ ಬೇರೆ ಸಮಸ್ಯೆಗಳು ಬರದ ಹಾಗೆ ನೋಡಿಕೊಳ್ಳುವುದು.

ಈ ಗುರಿಯ ಪ್ರಕಾರ ಪರಿಸರ ಶಿಕ್ಷಣವನ್ನು ಶಿಕ್ಷಣದ ಒಂದು ಅಂಗವಾಗಿ ಪರಿಗಣಿಸಬೇಕು. ಮತ್ತು ಪರಿಸರದ ಸಮಸ್ಯೆಗಳನ್ನು ಬಗೆಹರಿಸುವಂತಹ ಸನ್ನಿವೇಶ ನಿರ್ಮಾಣವಾಗಬೇಕು. ಪರಿಸರ ಶಿಕ್ಷಣವು ಜೀವನಪರ್ಯಂತ ನಡೆಯುವಂತಹ ಒಂದು ಚಟುವಟಿಕೆ ಆಗಬೇಕು. ಶಾಲೆಗಳಲ್ಲಿ ಪರಿಸರ ಶಿಕ್ಷಣದ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅನುವಾಗುವ ವ್ಯವಸ್ಥೆ ಮಾಡಬೇಕು. ಪರಿಸರಕ್ಕೆ ಸಂಬಂಧಿಸಿದ ಸರಿಯಾದ ವಿಷಯಗಳನ್ನು ಶಾಲೆಯ ಪಠ್ಯಕ್ರಮದ ಮೂಲಕ ಜಾರಿಗೆ ತಂದು ಪರಿಸರ ಶಿಕ್ಷಣದ ಅಧ್ಯಯನವನ್ನು ಜಾರಿಗೆ ತರಬೇಕು. ಪರಿಸರ ವಿಜ್ಞಾನದಲ್ಲಿ ಪೌಷ್ಟಿಕ ಆಹಾರದ ಬಗ್ಗೆ ಸ್ವಚ್ಛ ಪರಿಸರ ಮುಂತಾದವುಗಳ ಮೇಲೆ ಪ್ರಾಥಮಿಕ ಶಾಲೆಗಳು ಹೆಚ್ಚು ಗಮನಹರಿಸಬೇಕು. ಪರಿಸರ ಮತ್ತು ಅನುಭವಗಳು ಶಾಲೆಯ ಹೊರಗೆ ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತವೆ. ಮಕ್ಕಳು ಆಯಾ ಕ್ಷೇತ್ರದಿಂದ ತಮ್ಮ ಅನುಭವಗಳನ್ನು ಪಡೆಯಲು ಅವಕಾಶವಿರಬೇಕು. ಹೀಗೆ ತಮ್ಮ ಜೀವನದ ಅನುಭವದ ಜೊತೆಗೆ ಪರಿಸರದ ಅಧ್ಯಯನವನ್ನು ಮಾಡುವಂತಾಗಬೇಕು.

**ಪರಿಸರ ಶಿಕ್ಷಣದ ಮುಖ್ಯ ಉದ್ದೇಶಗಳು**

1. ಪರಿಸರದ ಬಗ್ಗೆ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ಪರಿಸರ ವಿಜ್ಞಾನ, ಆರ್ಥಿಕ ವ್ಯವಸ್ಥೆ, ರಾಜಕೀಯ ಪರಸ್ಪರ ಆಧಾರಿತ

Digitised by Bharatavani, CIIL

ಕ್ಷೇತ್ರಗಳ ಬಗ್ಗೆ ಜಾಗೃತಿ ಮೂಡಿಸುವುದು, ಪಟ್ಟಣ ಮತ್ತು ಗ್ರಾಮೀಣ ಜನತೆಯ ಬಗ್ಗೆ ಅಲ್ಲಿನ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಜಾಗೃತಿಯುಂಟು ಮಾಡುವುದು.

2. ಪ್ರತಿಯೊಬ್ಬ ಮನುಷ್ಯನಿಗೂ ಪರಿಸರ ಜ್ಞಾನವನ್ನು (ಶಿಕ್ಷಣ) ಕೊಡುವುದು. ಪರಿಸರದ ಬಗ್ಗೆ ಅಭಿರುಚಿ ಹೊಣೆಗಾರಿಕೆ ಬೆಳೆಯುವಂತೆ ಮಾಡುವುದು. ಇದಕ್ಕೆ ಬೇಕಾದ ಕೌಶಲಗಳನ್ನು ಬೆಳೆಸಿ ಪರಿಸರವನ್ನು ಪ್ರಗತಿ ಕಡೆಗೆ ಕೊಂಡೊಯ್ಯುವಂತೆ ಪ್ರೋತ್ಸಾಹಿಸುವುದು.
3. ಪರಿಸರ ಶಿಕ್ಷಣದ ಬಗ್ಗೆ ಜಾಗೃತಿ ಉಂಟು ಮಾಡುವುದು. ಪರಿಸರದ ಬಗ್ಗೆ ಎಲ್ಲ ಬಗೆಯಾದ ಭಾವನೆಗಳನ್ನು ಜಾಗೃತಗೊಳಿಸಿ ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸುವುದು.
4. ಸಾಮೂಹಿಕ ಗುಂಪುಗಳು ಮತ್ತು ವ್ಯಕ್ತಿಗಳಿಗೆ ಪರಿಸರದ ಜ್ಞಾನದ ಬಗ್ಗೆ ಕಾರ್ಯಾನುಭವವನ್ನು ಕೊಡುವುದಕ್ಕೆ ಸಹಾಯ ಮಾಡುವುದು.
5. ರಸಾಯನೀಕರಣಗೊಂಡಿರುವ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವುದು.

ಪರಿಸರ ಶಿಕ್ಷಣದಲ್ಲಿ ಎಲ್ಲರೂ ಭಾಗವಹಿಸುವ ಹಾಗೆ ಮಾಡಬೇಕು. ಇದರಿಂದ ಪರಿಸರ ಸಂರಕ್ಷಣೆಯನ್ನೂ ಕಾರ್ಯರೂಪಕ್ಕೆ ತಂದು, ಪರಿಸರ ಶಿಕ್ಷಣದ ಉದ್ದೇಶಗಳನ್ನು ಮತ್ತು ಗುರಿಗಳನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ.

ಪರಿಸರ ವಿಜ್ಞಾನ ಶಿಕ್ಷಣವನ್ನು ಕೊಡಲು ಬೇರೆಯೇ ಆದ ಪಠ್ಯಕ್ರಮವನ್ನು ನಿರ್ಮಿಸುವುದೇ ಅಥವಾ ಇರುವ ಪಠ್ಯಕ್ರಮಗಳ ವಿಷಯಗಳಲ್ಲೇ ಅದನ್ನು ಹೆಣೆದು ವಿಷಯವನ್ನು ತಿಳಿಸಬೇಕೇ ಎಂಬುದು ಒಂದು ಪ್ರಶ್ನೆಯಾಗಿದೆ.

ಯುನೆಸ್ಕೋ ತರಬೇತಿ ಕಾರ್ಯಾಗಾರದಲ್ಲಿ ಪರಿಸರ ಶಿಕ್ಷಣದ ಬೋಧನೆಯನ್ನು ಮಾಡುವುದಕ್ಕೆ ಎರಡು ವಿಧಾನಗಳ ಪಠ್ಯಕ್ರಮಗಳನ್ನು ಕೊಟ್ಟಿದ್ದಾರೆ. ಮೊದಲನೆಯದು 'ಸಿಂಗಲ್ ಡಿಸಿಪ್ಲಿನರಿ' ಅಂದರೆ ಒಂದೇ ವಿಷಯವಾಗಿ ಬೋಧಿಸುವಂತಹ ವಿಧಿ. ಮತ್ತೊಂದು 'ಮಲ್ಟಿ ಡಿಸಿಪ್ಲಿನರಿ' ಅಂದರೆ ಅನೇಕ ವಿಷಯಗಳ ಮೂಲಕ ಬೋಧಿಸುವ ವಿಧಾನ.

ಭಾರತ ದೇಶದಲ್ಲಿ ಜನ, ಭೂಮಿ, ಪರ್ವತ, ನದಿ, ಕಾಡು ಪ್ರದೇಶ ಇವೆಲ್ಲವೂ ಈಗ ಸುಸ್ಥಿತಿಯಲ್ಲಿಲ್ಲವೆಂದೇ ಹೇಳಬಹುದು. ಪರಿಸರದಲ್ಲಿರುವ ಈ ಅಮೂಲ್ಯ ವಸ್ತುಗಳನ್ನು ಕಾಪಾಡಿಕೊಳ್ಳಬೇಕಾದರೆ ಪರಿಸರ ಸಂರಕ್ಷಣೆಯ ಬಗ್ಗೆ ಜನರನ್ನು ಜಾಗೃತಗೊಳಿಸಿ, ಪರಿಸರ ಶಿಕ್ಷಣವನ್ನು ನೀಡುವುದೇ ಸರಿಯಾದ ಮಾರ್ಗ, ನಮ್ಮ ಮುಂದಿನ ಪೀಳಿಗೆ ಒಂದು ಅರ್ಥಬದ್ಧ ಧ್ಯೇಯಪೂರಿತ, ಶಾಂತಿಯುತ ಬಾಳ್ವೆಯನ್ನು ನಡೆಸುವುದಕ್ಕಾಗಿ ಪ್ರತಿಯೊಬ್ಬನೂ ತನ್ನನ್ನು ಪರಿಸರ ಸಂರಕ್ಷಣೆಯ ಶಿಕ್ಷಣ ನೀಡುವುದರಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಶಾಲಾ ಬಾಲಕರಿಗೆ, ಯುವಕರಿಗೆ ಮತ್ತು ಆಡಳಿತ ವರ್ಗದವರಿಗೆ ಪರಿಸರ ಸಂರಕ್ಷಣೆ ಕುರಿತು ಶಿಕ್ಷಣ ನೀಡಬೇಕಾಗಿದೆ. ವೈಯಕ್ತಿಕವಾಗಿ ಸಂಘಟನೆಗಳ ಮೂಲಕ ಸರಕಾರ ಮತ್ತು ಸುದ್ದಿಮಾಧ್ಯಮಗಳು ಈ ಕುರಿತು ಸಾಕಷ್ಟು ಕೆಲಸ ಮಾಡಬೇಕು.

ಈ ಶಿಕ್ಷಣವನ್ನು ಪರಿಸರ ಸಂರಕ್ಷಣಾ ಶಿಬಿರಗಳನ್ನು ಏರ್ಪಡಿಸಿ ನೀಡಬಹುದು ಅಥವಾ ಪರಿಸರ ಸಂರಕ್ಷಣಾ ಕೇಂದ್ರಗಳನು ಸ್ಥಾಪಿಸಿ ಅಲ್ಲಿ ನೀಡಬಹುದು. ಈಗ ಡೆಂಗೇ, ಮಲೇರಿಯಾ, ಹೆಚ್‌ಐವಿ, ಮುಂತಾದ ಇತರ ಮಾರಕ ರೋಗಗಳ ನಿಯಂತ್ರಣಗಳನ್ನು ಕುರಿತು ಪತ್ರಿಕೆ, ಪ್ರಸಾರ ಮಾಧ್ಯಮಗಳ ಮೂಲಕ ಪರಿಸರ ಶಿಕ್ಷಣ ನೀಡುತ್ತಿವೆ. ಪ್ರಮುಖವಾಗಿ, ಪರಿಸರವನ್ನು ನಾಶಮಾಡುವ ಪ್ರವೃತ್ತಿ ನಿಲ್ಲಬೇಕು. ಜನರಲ್ಲಿ ಪರಿಸರ ಪ್ರಜ್ಞೆ ಬೆಳೆಸಬೇಕು. ಪರಿಸರ ಸಂರಕ್ಷಣೆಯ ಬಗ್ಗೆ ಚಿಂತನೆ ಬೆಳೆಯುವಂತೆ ಪ್ರೇರೇಪಣೆ ನೀಡಬೇಕು. ಇದೇ ಪರಿಸರದ ಶಿಕ್ಷಣದ ಉದ್ದೇಶ. ಈ ರೀತಿಯ ಶಿಕ್ಷಣವನ್ನು ಈಗಲೇ ಅನುಷ್ಠಾನಗೊಳಿಸದಿದ್ದಲ್ಲಿ ಮುಂದಿನ ಜನಾಂಗವು ಪರಿಸರದ ಸಮಸ್ಯೆಗಳನ್ನು ಎದುರಿಸಲು ಅಸಮರ್ಥವಾಗುವುದಲ್ಲದೆ ಅಪಾಯಕಾರಿ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು.

–ವಿ.ಬಿ. ಮೈ

## ಪರಿಹಾರಾತ್ಮಕ ಬೋಧನೆ

ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸುವಿಕೆ ಹಾಗೂ ಅವರ ಕಲಿಯುವಿಕೆಗೆ ಸಂಬಂಧಿಸಿದಂತೆ ಇರುವ ಅವರ ತೊಂದರೆಗಳನ್ನು ತಿಳಿದುಕೊಂಡು ಆ ತೊಂದರೆಯ ಪರಿಹಾರದ ಸಲುವಾಗಿ ಕೈಗೊಳ್ಳುವ ವಿಧಾನವನ್ನು ಪರಿಹಾರಕ್ರಮ ಇಲ್ಲವೇ ಪರಿಹಾರ ಬೋಧನೆ ಎಂದು ಕರೆಯಲಾಗುವುದು. ಪರಿಹಾರ ಬೋಧನೆಯಿಲ್ಲದ ನೈದಾನಿಕ ಪರೀಕ್ಷೆ ವ್ಯರ್ಥ. ವಿದ್ಯಾರ್ಥಿಗಳು ಮಾಡುವ ದೋಷಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪೂರಕವಾಗಿ ಬೋಧನೆಯನ್ನು ರೂಪಿಸಿಕೊಳ್ಳಬೇಕು.

ಮಕ್ಕಳಲ್ಲಿ ಗುರುತಿಸಿದ ನಿರ್ದಿಷ್ಟ ಕ್ಷೇತ್ರದಲ್ಲಿನ ಕಲಿಕೆಯ ದೌರ್ಬಲ್ಯ ಅಥವಾ ನ್ಯೂನತೆಗಳನ್ನು ಹೋಗಲಾಡಿಸಲು ಹಾಕಿಕೊಂಡಿರುವ ಪರಿಣಾಮಕಾರಿ ಯೋಜನೆಯೇ ಪರಿಹಾರಾತ್ಮಕ ಬೋಧನೆ. ಮಕ್ಕಳ ಕಲಿಕೆಯ ನ್ಯೂನತೆಗಳನ್ನು ಗುರುತಿಸಿದ ಮಾತ್ರಕ್ಕೆ ಶಿಕ್ಷಕನ ಕೆಲಸ ಮುಗಿಯಲಾರದು. ಅವುಗಳನ್ನು ನಿವಾರಿಸಲು ಪರಿಹಾರ ಅಥವಾ ಚಿಕಿತ್ಸಾ ಬೋಧನೆ ತೀರಾ ಅಗತ್ಯ. ಬೋಧನಾ ಉದ್ದೇಶ ಸಫಲವಾಗಬೇಕಾದರೆ ಶಿಕ್ಷಕ ತನ್ನ ಬೋಧನಾ ಕ್ರಮದಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳಬೇಕು. ಮಕ್ಕಳು ದೋಷಗಳನ್ನು ಹಲವಾರು ಕಾರಣಗಳಿಂದ ಮಾಡಬಹುದು. ಅಂತಹ ಕಾರಣಗಳನ್ನು ಕಂಡು ಹಿಡಿದು ಪರಿಹರಿಸುವುದು ಶಿಕ್ಷಕನ ಆದ್ಯ ಕರ್ತವ್ಯ.

### ಪರಿಹಾರಾತ್ಮಕ ಬೋಧನೆಯ ಸ್ವರೂಪ

ಮಕ್ಕಳ ಕಲಿಕಾ ತೊಂದರೆಗಳನ್ನು ಅಥವಾ ದೋಷಗಳನ್ನು ನಿವಾರಿಸುವಲ್ಲಿ ದಿವ್ಯೌಷಧವಾಗಿ ಕಾರ್ಯನಿರ್ವಹಿಸುತ್ತದೆ. ಶಿಕ್ಷಕರು ತಮ್ಮ ಬೋಧನಾ ವಿಧಾನವನ್ನು ಕಲಿಕಾ ತೊಂದರೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಯೋಜಿಸಲು ಅನುವು ಮಾಡಿಕೊಡುತ್ತದೆ. ಇದು ವ್ಯಕ್ತಿಗತವಾದ ಬೋಧನಾ ವಿಧಾನವಾಗಿರುತ್ತದೆ. ಒಂದೇ ಪರಿಕಲ್ಪನೆಯನ್ನು ಬೋಧಿಸಲು ಪ್ರತಿ ವಿದ್ಯಾರ್ಥಿಗೂ ಪ್ರತ್ಯೇಕವಾದ ಬೋಧನಾ ವಿಧಾನವನ್ನು ಅನುಸರಿಸಬಹುದಾಗಿದೆ. ಪರಿಹಾರಾತ್ಮಕ ಬೋಧನೆಗೆ ನಿಯಮಿತವಾದ ಕಾಲಾವಧಿ ಇರುವುದಿಲ್ಲ. ಪರಿಹಾರಾತ್ಮಕ ಬೋಧನೆಗೆ ನಿಗದಿತ ಬೋಧನಾ ಕ್ರಮ ಅಥವಾ ನಿಬಂಧನೆಗಳಿಲ್ಲ. ಕಲಿಕಾ ಉದ್ದೇಶಗಳನ್ನು ಸ್ಪಷ್ಟಗೊಳಿಸುವುದು. ಶಿಕ್ಷಕರ ಕಾರ್ಯ ದಕ್ಷತೆಯನ್ನು ಹೆಚ್ಚು ಮಾಡುವುದು. ಮೌಲ್ಯಮಾಪನ ಮಾಡಲು ಸೂಕ್ತವಾದ ತಂತ್ರಗಳನ್ನು ಯೋಜಿಸಲು ಅನುವು ಮಾಡಿಕೊಡುತ್ತದೆ.

**ಪರಿಹಾರಾತ್ಮಕ ಬೋಧನೆಯ ತತ್ವಗಳು:** ಶಿಕ್ಷಕನು ತಾನು ಯಾವುದಾದರೊಂದು ಘಟಕ ಅಥವಾ ಅಧ್ಯಾಯವನ್ನು ಪೂರೈಸಿದ ನಂತರದಲ್ಲಿ ಸೂಕ್ತ ನೈದಾನಿಕ ಪರೀಕ್ಷಣಗಳನ್ನು ಮಾಡಿ ಪರಿಹಾರ ಬೋಧನಾ ಪಾಠವನ್ನು ಆಯೋಜಿಸಬೇಕು. ಪರಿಹಾರ ಬೋಧನೆಯನ್ನು ಕೈಗೊಳ್ಳುವಾಗ ಶಿಕ್ಷಕನು ಸದಾ ಸಂಯಮಿಯೂ, ಪರಿಶ್ರಮಿಯೂ ಆಗಿರಬೇಕಾದದ್ದು ಅವಶ್ಯಕ.

Digitised by Bharatavani, CIIL

ಶಿಕ್ಷಕರು ವಿದ್ಯಾರ್ಥಿಗಳಿಗೆ ಸಹಾನುಭೂತಿಯನ್ನು ತೋರ್ಪಡಿಸಿ ಪ್ರೋತ್ಸಾಹವನ್ನು ಕೊಡುವ ಉದಾತ್ತ ಮನೋಭಾವವನ್ನು ಹೊಂದಿರಬೇಕು. ಶಿಕ್ಷಕನು ಯಾವುದೇ ಪರಿಸ್ಥಿತಿಯಲ್ಲಿಯೂ ವಿದ್ಯಾರ್ಥಿಗಳ ದೋಷಗಳನ್ನು ಎತ್ತಿ ಹಿಡಿದು ಹೀಯಾಳಿಸಬಾರದು. ಪರಿಹಾರಾತ್ಮಕ ಬೋಧನೆಯನ್ನು ಶಾಲಾ ವೇಳೆಯ ನಂತರ ಕೈಗೊಳ್ಳಬೇಕು. ಈ ಪರಿಹಾರಾತ್ಮಕ ಬೋಧನೆಯನ್ನು ವ್ಯಕ್ತಿಗತವಾಗಿ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿ. ದೋಷಗಳಿಗೆ ಹಾಗೂ ಮಾಡಿರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹೆಚ್ಚು ಸಾಮ್ಯತೆ ಇದ್ದಲ್ಲಿ, ಗುಂಪು ಪರಿಹಾರ ಬೋಧನೆಯನ್ನು ಕೈಗೊಳ್ಳಬಹುದು. ಕಲಿಕಾ ದೋಷಗಳಿಗೆ ಸಂಬಂಧಿಸಿದಂತೆ ವಿಭಿನ್ನ ಪರಿಹಾರಾತ್ಮಕ ಕಾರ್ಯವನ್ನು ಕೈಗೊಳ್ಳಬಹುದು. ಈ ಪರಿಹಾರ ಬೋಧನೆಗೆ ನಿಗದಿತ ಕಾಲಾವಧಿ ಇರುವುದಿಲ್ಲ. ವಿದ್ಯಾರ್ಥಿಗಳು ದೋಷ ಮುಕ್ತರಾಗುವವರೆಗೆ ಈ ಬೋಧನೆಯನ್ನು ಕೈಗೊಳ್ಳಬಹುದು. ಪರಿಹಾರ ಬೋಧನೆಯನ್ನು ಶಿಕ್ಷಕರು, ಪೋಷಕರು, ಇತರ ವಿಷಯ ಶಿಕ್ಷಕರು, ಅಗತ್ಯವಿದ್ದಲ್ಲಿ ವೈದ್ಯರ ಸಲಹೆ, ಶಾಲಾ ಮುಖ್ಯಸ್ಥರ ಸಲಹೆ ಹಾಗೂ ಮನೋವಿಜ್ಞಾನಿಗಳ ಸಹಾಯ ಪಡೆದು ಯೋಜಿಸಬಹುದು.

**ಪರಿಹಾರಾತ್ಮಕ ಬೋಧನೆಯ ಕ್ರಮ:** ಪರಿಹಾರ ಬೋಧನೆಯೆಂದರೆ ವಿಷಯದ ಪುನರಾವರ್ತನೆ ಮಾಡುವುದಲ್ಲ. ವಿಷಯ ಬೋಧನೆಗೆ ಇನ್ನಷ್ಟು ಪರಿಶ್ರಮಿಸುವುದು ಎಂದು ಕೂಡ ಅರ್ಥವಲ್ಲ. ಆದರೆ ಇದು ಮಕ್ಕಳ ಕಲಿಯುವಿಕೆಯಲ್ಲಿ ಎದುರಾದ ತೊಂದರೆಗಳನ್ನು ನಿವಾರಣೆ ಮಾಡುವ ಸಲುವಾಗಿ ಅನುಸರಿಸುವ ವಿಶೇಷ ರೀತಿಯ ಬೋಧನೆಯಾಗಿರುತ್ತದೆ. ಮಕ್ಕಳ ಕಲಿಕೆಯಲ್ಲಿನ ಆತಂಕಗಳನ್ನು ಸರಿಪಡಿಸುವ ಒಂದು ಕ್ರಮವಾಗಿದೆ.

ಪರಿಹಾರಾತ್ಮಕ ಬೋಧನೆಯ ಕ್ರಮವನ್ನು ಈ ಕೆಳಗಿನಂತೆ ನಡೆಸಬಹುದು.

1. ನೈದಾನಿಕ ಪರೀಕ್ಷೆಗಳ ಸಹಾಯದಿಂದ ಪತ್ತೆ ಹಚ್ಚಿರುವ ವಿದ್ಯಾರ್ಥಿಗಳನ್ನು ಪಟ್ಟಿ ಮಾಡುವುದು.
2. ಪಟ್ಟಿ ಮಾಡಿದಂತಹ ವಿದ್ಯಾರ್ಥಿಗಳು ಕಲಿಕೆಯಲ್ಲಿ ಮಾಡಿರುವ ದೋಷಗಳನ್ನು ಪಟ್ಟಿ ಮಾಡುವುದು.
3. ಸಾಮಾನ್ಯ ದೋಷಗಳನ್ನು ಮಾಡಿರುವ ವಿದ್ಯಾರ್ಥಿಗಳನ್ನು ಒಂದು ಗುಂಪು ಮಾಡುವುದು. ವ್ಯಕ್ತಿಗತ ದೋಷಗಳನ್ನು ಮಾಡಿರುವ ವಿದ್ಯಾರ್ಥಿಗಳನ್ನು ಮತ್ತೊಂದು ಕಡೆ ಗುಂಪು ಮಾಡುವುದು.
4. ಮಾಡಿರುವ ದೋಷಗಳನ್ನು ನಿರ್ದಿಷ್ಟಕಗಳ ಅನುಸಾರ ವರ್ಗೀಕರಿಸುವುದು.
5. ದೋಷಗಳಿಗೆ ಕಾರಣಗಳನ್ನು ಪತ್ತೆಹಚ್ಚುವುದು.
6. ಈ ಪತ್ತೆ ಹಚ್ಚುವ ಕಾರ್ಯವನ್ನು ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸುವ ಮೂಲಕ ಮಾಡಬೇಕು.




7. ಕೆಲವು ಸಂದರ್ಭಗಳಲ್ಲಿ ನಿರ್ದಿಷ್ಟ ಕಾರಣವನ್ನು ಪತ್ತೆ ಹಚ್ಚಲು ಕಷ್ಟವಾಗಬಹುದು. ಆದರೆ ಹಲವಾರು ಅಂಶಗಳು ಕಲಿಕಾದೋಷಕ್ಕೆ ಕಾರಣವಾಗಬಹುದು. ಮಾಹಿತಿ ಸಂಗ್ರಹಿಸಿದ ನಂತರ, ಅದಕ್ಕೆ ಅನುಗುಣವಾಗಿ ಪರಿಹಾರ ಕಾರ್ಯಕ್ರಮ ಚಟುವಟಿಕೆಗಳನ್ನು ರೂಪಿಸುವುದು.
8. ಪರಿಹಾರ ಚಟುವಟಿಕೆಗಳನ್ನು ಈ ಕೆಳಕಂಡಂತೆ ರೂಪಿಸಬಹುದು.




Digitised by Bharatavani, CIIL

9. ಪರಿಹಾರ ಬೋಧನೆ ಮಾಡಿದ ನಂತರ ಪುನಃ ಸಂಬಂಧಪಟ್ಟ ಪರಿಕಲ್ಪನೆಗಳು ಒಳಗೊಂಡಂತೆ ಪರೀಕ್ಷೆಯನ್ನು ನೀಡುವುದು. ಈ ಪರೀಕ್ಷೆ ನೈದಾನಿಕ ಪರೀಕ್ಷೆಯ ಪುನರಾವರ್ತನೆ ಆಗಿರಬಹುದು.

ನೈದಾನಿಕ ಪರೀಕ್ಷೆ – Pre-test ⟶ ಪರಿಹಾರ ಕಾರ್ಯ ಉತ್ತರ ಪರೀಕ್ಷೆ – Post-test
(ಪೂರ್ವ ಪರೀಕ್ಷೆ) ↑ ↑
Remedial measures ನೈದಾನಿಕ ಪರೀಕ್ಷೆ ಅಥವಾ
ಮತ್ತೊಂದು ಪರೀಕ್ಷೆ. ಪರಿಕಲ್ಪನೆ ಒಳಗೊಂಡಂತೆ

10. ಪರೀಕ್ಷೆ ನಂತರ ಪೂರ್ವ ಪರೀಕ್ಷೆ (Pre-test) ಮತ್ತು ಉತ್ತರ ಪರೀಕ್ಷೆ (Post-test) ಅಂಕಗಳನ್ನು ಪರಿಶೀಲಿಸುವುದು. ಉತ್ತರ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳ ಬದಲಾವಣೆ ಕಂಡು ಬಂದಲ್ಲಿ ನೀಡಿದ ಪರಿಹಾರ ಕಾರ್ಯ ಅಥವಾ ಚಿಕಿತ್ಸೆ ಫಲಕಾರಿಯಾಗಿದೆ ಎಂದರ್ಥ. ಇದನ್ನು ಈ ಕೆಳಕಂಡಂತೆ ದಾಖಲಿಸಬಹುದು:

| ವಿದ್ಯಾರ್ಥಿಯ ಹೆಸರು | ಪೂರ್ವಪರೀಕ್ಷೆಯ ಅಂಕಗಳು | ಉತ್ತರ ಪರೀಕ್ಷೆ ಅಂಕಗಳು | ನಡುವಣ ವ್ಯತ್ಯಾಸ | ಧನಾತ್ಮಕ ಅಥವಾ ಋಣಾತ್ಮಕ ಬದಲಾವಣೆ |
|---|---|---|---|---|

ಫಲಿತಾಂಶದ ಆಧಾರದ ಮೇಲೆ ಶಿಕ್ಷಕರು ನೀಡಿದ ಚಿಕಿತ್ಸಾ ಕಾರ್ಯ ಎಷ್ಟರಮಟ್ಟಿಗೆ ಫಲಕಾರಿಯಾಗಿದೆ ಎಂದು ತಿಳಿಯಬಹುದಾಗಿದೆ.

ಅಂತಿಮವಾಗಿ ಫಲಿತಾಂಶದನ್ವಯ ವಿದ್ಯಾರ್ಥಿಯಲ್ಲಿನ ಕಲಿಕಾ ದೋಷಗಳು ಸುಧಾರಿಸಿರುವುದು ತಿಳಿಯಬಹುದಾಗಿದೆ. ಈ ಫಲಿತಾಂಶವೇ ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವುದು. ಈ ರೀತಿಯಾಗಿ ಪರಿಹಾರಾತ್ಮಕ ಬೋಧನೆ ಒಂದು ನಿರಂತರ ಪ್ರಕ್ರಿಯೆ ಆಗಿದೆ.




**ಪುಷ್ಟೀಕರಣ**

ಪರಿಹಾರಾತ್ಮಕ ಬೋಧನೆಯ ಕ್ರಮದಲ್ಲಿ ಪುಷ್ಟೀಕರಣದ ಪಾತ್ರ ಬಹಳ ಪ್ರಮುಖವಾದದ್ದು. ಪರಿಹಾರಾತ್ಮಕ ಬೋಧನೆ ಹಂತಗಳನ್ನು ನಿರೂಪಿಸುವುದಾದರೆ ವಿದ್ಯಾರ್ಥಿಯ ದೋಷಗಳನ್ನು ನೈದಾನಿಕ ವಿಧಾನದ ಮೂಲಕ ಪತ್ತೆಹಚ್ಚಿ ಅನಂತರ ವಿವಿಧ ಮೂಲಗಳಿಂದ ದೋಷಕ್ಕೆ ಕಾರಣಗಳನ್ನು ಪತ್ತೆ ಹಚ್ಚುವುದು. ಈ ಕಾರಣಗಳನ್ನು ತರ್ಕಬದ್ಧವಾಗಿ ಸಂಬಂಧ ಹೊಂದಿದಂತೆ ಅರ್ಥಪೂರ್ಣವಾಗಿ ವ್ಯವಸ್ಥೆಗೊಳಿಸಲಾಗುವುದು. ಇದರ ವಿವೇಚನೆಯಿಂದ ಸಮಸ್ಯೆಗೆ ನಿಖರವಾದ ಕಾರಣವನ್ನು ಗುರುತಿಸಲಾಗುವುದು. ಮುಂದಿನ ಹಂತ ಸೂಕ್ತ ನಿವಾರಣೋಪಾಯದ

Digitised by Bharatavani, CIIL

ಕಾರ್ಯಾರಂಭ. ಅದನ್ನು ಕಾರ್ಯಗತಗೊಳಿಸಿ ಅದರ ಉಪಯುಕ್ತತೆಯನ್ನು ಮೌಲ್ಯೀಕರಿಸಲಾಗುವುದು.

ಮಾಹಿತಿ ಸಂಗ್ರಹಣೆಗೆ ಹಲವು ಮೂಲಗಳನ್ನು ಆಶ್ರಯಿಸುವುದರಿಂದ ಈ ಎಲ್ಲ ಮೂಲಗಳಿಂದ ಬರುವ ಮಾಹಿತಿಗಳಿಂದ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದು ಶಿಕ್ಷಕರಿಗೆ ಬಹಳ ಪ್ರಯಾಸದ ಕೆಲಸವೇ ಸರಿ. ತದನಂತರ ಈ ಎಲ್ಲ ಮಾಹಿತಿಗಳನ್ನು ಪುನರ್ ಪರಿಶೀಲಿಸುವುದನ್ನು ಬಹಳ ತರ್ಕಬದ್ಧವಾದ ರೀತಿಯಲ್ಲಿ ಮಾಡಬೇಕಾಗುತ್ತದೆ. ಏಕೆಂದರೆ ಪ್ರತಿಯೊಬ್ಬ ವಿದ್ಯಾರ್ಥಿಯ ಗ್ರಹಿಕೆ ಹಾಗೂ ತಿಳುವಳಿಕೆಯ ಮಟ್ಟ ವಿಭಿನ್ನವಾಗಿರುತ್ತದೆ. ಅದಕ್ಕೆ ಅನುಗುಣವಾಗಿ ಪರಿಹಾರಾತ್ಮಕ ಕಾರ್ಯಗಳನ್ನು ರೂಪಿಸಬೇಕಾಗುತ್ತದೆ. ಪ್ರತಿಯೊಂದು ಪರಿಕಲ್ಪನೆಯು ತನ್ನದೇ ಆದ ಪರಿಹಾರಾತ್ಮಕ ಚಟುವಟಿಕೆಗಳನ್ನು ವಿದ್ಯಾರ್ಥಿಯ ಕಲಿಕಾ ದೋಷವನ್ನು ಅವಲಂಬಿಸಿರುತ್ತದೆ.

ಪರಿಹಾರಾತ್ಮಕ ಕಾರ್ಯದ ಪ್ರತಿ ಹಂತದಲ್ಲೂ ಶಿಕ್ಷಕರು ಶ್ರದ್ಧೆಯಿಂದ ಪರಿಶೀಲಿಸಿ ಕಾರ್ಯರೂಪಕ್ಕೆ ತರಬೇಕು. ಸದಾ ವಿದ್ಯಾರ್ಥಿಯೊಂದಿಗೆ ಇದ್ದು ಪ್ರತಿ ಹಂತದಲ್ಲೂ ಆತನ ಆತ್ಮವಿಶ್ವಾಸವನ್ನು ಹೆಚ್ಚಿಸಬೇಕು. ಸೂಕ್ತ ಸಲಹೆ ಸೂಚನೆಗಳನ್ನು ಅಲ್ಲಲ್ಲೇ ನೀಡಬೇಕಾಗುತ್ತದೆ. ಸರಿ ಮಾಡಿದ್ದಲ್ಲಿ ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕು ಹಾಗೂ ತಪ್ಪು ಮಾಡಿದ್ದಲ್ಲಿ ತಿದ್ದಿ ಪ್ರೀತಿಯಿಂದ ಸರಿಪಡಿಸಬೇಕು. ಆತ ತನ್ನ ದೋಷಗಳನ್ನು ಹೇಗೆ ಕಡಿಮೆ ಮಾಡಬಹುದೆಂಬ ಕಲಿಕಾ ವಿಧಾನದ ಬಗ್ಗೆ ಆತನಿಗೆ ಮನವರಿಕೆ ಮಾಡಬೇಕು. ಪರಿಹಾರ ಬೋಧನೆಯ ನಂತರ ಆ ವಿಧಾನವನ್ನೇ ಮುಂದುವರೆಸಲು ಆತನಿಗೆ ಹೇಳಬೇಕು. ಕಲಿಕಾ ಅಭ್ಯಾಸಗಳನ್ನು ಸರಿಪಡಿಸಿಕೊಳ್ಳುವ ಮಾರ್ಗವನ್ನು ಸೂಚಿಸಬೇಕು.

**ಪರಿಹಾರಾತ್ಮಕ ಬೋಧನೆಯಲ್ಲಿ ಶಿಕ್ಷಕರ ಪಾತ್ರ**

ತರಗತಿಯನ್ನು ಪ್ರಾರಂಭಿಸುವಾಗ ವಿದ್ಯಾರ್ಥಿಗಳು ನೈದಾನಿಕ ಪರೀಕ್ಷೆಯಲ್ಲಿ ಮಾಡಿರುವ ದೋಷಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ತರಗತಿಯಲ್ಲಿ ನಡೆಯುವ ಕಲಿಕಾ ಪ್ರಕ್ರಿಯೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಹೆಚ್ಚು ಅವಕಾಶ ಕಲ್ಪಿಸಬೇಕು. ಕಿರು ಪರೀಕ್ಷೆಗಳನ್ನು ಪ್ರತಿ ಘಟಕದಲ್ಲೂ ನಡೆಸಬೇಕು. ಪಾಠ ಪ್ರಾರಂಭಕ್ಕೆ ತಪ್ಪದೇ ಹಿಂದಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಪುನರಾವರ್ತಿಸಬೇಕು. ಶಿಕ್ಷಕ ತರಬೇತಿಯ ಅವಧಿಯಲ್ಲಿ ಕಲಿತಂತಹ ಎಲ್ಲ ಕೌಶಲಗಳ ಸದ್ಬಳಕೆ ಮಾಡಬೇಕು. (ಸಂವಹನ ಹಾಗೂ ಸೂಕ್ಷ್ಮಬೋಧನಾ ಕೌಶಲಗಳು) ಪಾಠ ಯೋಜನೆಯ ಹಂತಗಳನ್ನು ಸರಿಯಾಗಿ ಅನುಸರಿಸಬೇಕು. ಪರಿಹಾರಾತ್ಮಕ ಬೋಧನಾ ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಅಗತ್ಯತೆಗಳಿಗನುಗುಣವಾಗಿ ರಚಿಸಬೇಕು. ದಿನನಿತ್ಯದ ಶಾಲಾ ಕೆಲಸ ಕಾರ್ಯಗಳೊಂದಿಗೆ ಇದನ್ನು ಕಡ್ಡಾಯವೆಂದು ಭಾವಿಸಿ ಯೋಜಿಸಿ ಬೋಧಿಸಬೇಕು. ಪ್ರತಿ ವಿದ್ಯಾರ್ಥಿಯ ಸಾಧನಾ ಮಟ್ಟವನ್ನು ಉತ್ತಮಗೊಳಿಸುವುದೇ ಶಿಕ್ಷಕರ ಗುರಿಯಾಗಿರಬೇಕು. ಪ್ರತಿ ವಿದ್ಯಾರ್ಥಿಯ ಸಮಸ್ಯೆಗಳಿಗೆ ಪ್ರೀತಿ ಹಾಗೂ ವಿಶ್ವಾಸದಿಂದ ಪರಿಹಾರ ನೀಡಬೇಕು.

ಮಕ್ಕಳಲ್ಲಿ ಗುರುತಿಸಿದ ನಿರ್ದಿಷ್ಟ ಕ್ಷೇತ್ರದಲ್ಲಿನ ಕಲಿಕೆಯ ದೌರ್ಬಲ್ಯ ಅಥವಾ ನ್ಯೂನತೆಗಳನ್ನು ಪರಿಣಾಮಕಾರಿಯಾಗಿ ಹೋಗಲಾಡಿಸಲು ಹಾಕಿಕೊಂಡಿರುವ ಯೋಜನೆಯೇ ಪರಿಹಾರಾತ್ಮಕ ಬೋಧನೆ, ಮಕ್ಕಳು ಕಲಿಕೆಯಲ್ಲಿ ದೋಷಗಳನ್ನು ಹಲವಾರು ಕಾರಣಗಳಿಂದ ಮಾಡಬಹುದು. ಅಂತಹ ಕಾರಣಗಳನ್ನು ಕಂಡು ಹಿಡಿದು ಪರಿಹರಿಸುವುದು ಶಿಕ್ಷಕನ ಆದ್ಯ ಕರ್ತವ್ಯ.

–ಎಂ.ಸ.ಪಾ

## ಪರಿಗಣಿತ (ಡೀಮ್ಡ್) ವಿಶ್ವವಿದ್ಯಾನಿಲಯಗಳು – ಕರ್ನಾಟಕ

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕಾಯ್ದೆಯಲ್ಲಿನ ಅನುಚ್ಛೇದ?ಶಿಕ್ಷಣದಲ್ಲಿ ಉನ್ನತ ಮಟ್ಟದ ಗುಣಾತ್ಮಕತೆಯಿಂದ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡಿ ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ಕೊಟ್ಟು ಅವುಗಳನ್ನು ಪರಿಗಣಿತ (ಡೀಮ್ಡ್) ವಿಶ್ವವಿದ್ಯಾನಿಲಯಗಳೆಂದು ಮಾನ್ಯತೆ ನೀಡುವ ಅವಕಾಶ ಕಲ್ಪಿಸಿದೆ. ಇದರ ಅನ್ವಯ ಭಾರತದಲ್ಲಿ ಅನೇಕ ಗುಣಾತ್ಮಕ ಶೈಕ್ಷಣಿಕ ಸಂಸ್ಥೆಗಳು ಡೀಮ್ಡ್ ವಿಶ್ವವಿದ್ಯಾನಿಲಯಗಳಾಗಿ ಯು.ಜಿ.ಸಿ.ಯಿಂದ ಮಾನ್ಯತೆ ಪಡೆದಿವೆ. ಕರ್ನಾಟಕ ರಾಜ್ಯದಲ್ಲೂ ಅನೇಕ ಸಂಸ್ಥೆಗಳು ಡೀಮ್ಡ್ ವಿಶ್ವವಿದ್ಯಾನಿಲಯಗಳಾಗಿ ಮಾನ್ಯತೆ ಪಡೆದಿವೆ. ಅವುಗಳನ್ನು ಮುಂದೆ ವಿವರಿಸಿದೆ.

**೧) ಬಿಜಾಪುರ ಲಿಬರಲ್ ಡಿಸ್ಟ್ರಿಕ್ಟ್ ಅಸೋಸಿಯೇಷನ್ ವಿಶ್ವವಿದ್ಯಾನಿಲಯ (ಬಿ.ಎಲ್.ಡಿ.ಇ.) ಬಿಜಾಪುರ**

1910ರಲ್ಲಿ ಪ್ರಾರಂಭಗೊಂಡ ಈ ಸಂಸ್ಥೆ ನೂರು ವರ್ಷಗಳ ಅವಧಿಯಲ್ಲಿ ಹೆಮ್ಮರದಂತೆ ಬೆಳೆದು ತಂತ್ರಜ್ಞಾನ, ವೈದ್ಯಕೀಯ ಶಿಕ್ಷಣ, ವಿಜ್ಞಾನ, ಕಲೆ, ವಾಣಿಜ್ಯ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಸುಮಾರು 75 ಶಿಕ್ಷಣ ಸಂಸ್ಥೆಗಳು ಈ ವಿಶ್ವವಿದ್ಯಾನಿಲಯಕ್ಕೆ ಸೇರಿವೆ. ಯು.ಜಿ.ಸಿ.ಯ 1956ರ ಕಾಯ್ದೆಯ ಅನ್ವಯ ಇದಕ್ಕೆ ಸ್ವಾಯತ್ತತೆಯನ್ನು ನೀಡಿ ಪರಿಗಣಿತ ವಿಶ್ವವಿದ್ಯಾನಿಲಯವೆಂದು ಘೋಷಿಸಲಾಗಿದೆ.

ಈ ವಿಶ್ವವಿದ್ಯಾನಿಲಯವು ವೈದ್ಯಕೀಯ, ತಂತ್ರಜ್ಞಾನ ಶಿಕ್ಷಣ, ಮುಂತಾದ ಕ್ಷೇತ್ರಗಳಲ್ಲಿ ಸ್ನಾತಕಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ನೀಡುತ್ತದೆ. ಇವಲ್ಲದೆ ಇನ್ನೂ ಅನೇಕ ಶಿಕ್ಷಣ ಶಾಖೆಗಳಲ್ಲಿ ಜ್ಞಾನ ಪ್ರಸಾರದ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಇದರ ಮುಖ್ಯ ಕಾರ್ಯಾಲಯ ಬಿಜಾಪುರದಲ್ಲಿದೆ.

**೨) ಕರ್ನಾಟಕ ಲಿಂಗಾಯತ್ ಎಜುಕೇಷನ್ (ಕೆ.ಎಲ್.ಇ.) ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್**

ಕೆ.ಎಲ್.ಇ. ಸೊಸೈಟಿ 1916ರಲ್ಲಿ ಏಳು ಶ್ರದ್ಧಾವಂತ ಶಿಕ್ಷಕರಿಂದ ಮತ್ತು ಮೂರು ಪೋಷಕರಿಂದ ಸ್ಥಾಪಿತಗೊಂಡಂಥ ಒಂದು ಸಂಸ್ಥೆ. ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶಗಳಲ್ಲಿ ಶಿಕ್ಷಣವನ್ನು ನೀಡಿ ಅವುಗಳನ್ನು ಮುಂದೆ ತರುವಂಥ ಒಳ್ಳೆಯ ಕಾರ್ಯವನ್ನು ಸಂಸ್ಥೆ ಮಾಡಿದೆ. ಸದ್ಯದಲ್ಲಿ ಕೆ.ಎಲ್.ಇ. ಸೊಸೈಟಿ ಸುಮಾರು 205 ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದು ಇವುಗಳ ವ್ಯಾಪ್ತಿ ವೈದ್ಯಕೀಯ ಮಾಹಿತಿ ತಂತ್ರಜ್ಞಾನ, ಕಾನೂನು ಹಾಗೂ ಇನ್ನೂ ಅನೇಕ ಸಾಂಪ್ರದಾಯಿಕ ಶಿಕ್ಷಣ ಶಾಖೆಗಳಲ್ಲಿ ಹರಡಿದೆ.

ಭಾರತ ಸರ್ಕಾರವು ಯು.ಜಿ.ಸಿ.ಯ ಶಿಫಾರಸ್ಸಿನ ಮೇರೆಗೆ 2006, ಏಪ್ರಿಲ್ 16ರಂದು ಕೆ.ಎಲ್.ಇ. ಸೊಸೈಟಿಗೆ ಡೀಮ್ಡ್ ಸ್ಥಾನಮಾನವನ್ನು ಕೊಟ್ಟು ಡೀಮ್ಡ್ ವಿಶ್ವವಿದ್ಯಾನಿಲಯವೆಂದು ಘೋಷಿಸಿತು. ಈ ವಿಶ್ವವಿದ್ಯಾನಿಲಯವು ವೈದ್ಯಕೀಯ, ದಂತವೈದ್ಯ, ಔಷಧವಿಜ್ಞಾನ, ಆಯುರ್ವೇದ, ನರ್ಸಿಂಗ್ ಮುಂತಾದ ಕ್ಷೇತ್ರಗಳಲ್ಲಿ ಸ್ನಾತಕಪದವಿ, ಸ್ನಾತಕೋತ್ತರ ಪದವಿ, ಪೋಸ್ಟ್ ಡಾಕ್ಟರೇಟ್ ಪದವಿಗಳನ್ನು ನೀಡುತ್ತಿದೆಯಲ್ಲದೆ ಕೆಲವು ಸರ್ಟಿಫಿಕೇಟ್ ಕೋರ್ಸುಗಳನ್ನು ನಡೆಸುತ್ತಿದೆ.

ಹೊಸ ಹೊಸ ದಿಗಂತಗಳನ್ನರಸುತ್ತಾ ಶ್ರೇಷ್ಠತೆಯನ್ನು ಹೊಂದುವ, ಉತ್ತಮಗುಣಮಟ್ಟದ ಶಿಕ್ಷಣ ಕಾರ್ಯಕ್ರಮಗಳ ಮುಖಾಂತರ ವ್ಯಕ್ತಿಗಳನ್ನು

Digitised by Bharatavani, CIIL

ಸ್ವಾವಲಂಬಿ ವಿಶ್ವನಾಗರೀಕರನ್ನಾಗಿಸುವ ಉದ್ದೇಶವನ್ನಿಟ್ಟುಕೊಂಡು ಈ ವಿಶ್ವವಿದ್ಯಾನಿಲಯವು ಕಾರ್ಯೋನ್ಮುಖವಾಗಿದೆ.

**೩) ಕ್ರೈಸ್ಟ್ ವಿಶ್ವವಿದ್ಯಾನಿಲಯ, ಬೆಂಗಳೂರು**

ಬೆಂಗಳೂರಿನಲ್ಲಿ ಈ ಹಿಂದೆ ಕ್ರೈಸ್ಟ್ ಕಾಲೇಜು ಎಂದು ಪ್ರಸಿದ್ಧಗೊಂಡಿದ್ದ ಸಂಸ್ಥೆ 2008, ಜುಲೈ 22ರಂದು ಡೀಮ್ಡ್ ವಿಶ್ವವಿದ್ಯಾನಿಲಯವಾಗಿ ಪರಿವರ್ತಿತಗೊಂಡಿತು. ಕುರಿಯ ಕೋಸ್ ಎಲಿಯಾಸ್ ಚವಾರ ಎಂಬುವರು ಈ ಸಂಸ್ಥೆಯ ಸ್ಥಾಪಕರು. ಇದು ಬೆಂಗಳೂರಿನಲ್ಲಿ 1969ರಲ್ಲಿ ಅಸ್ತಿತ್ವಕ್ಕೆ ಬಂದಿತು. ಕರ್ನಾಟಕದಲ್ಲಿ ನ್ಯಾಕ್(NAC) ಸಂಸ್ಥೆಯಿಂದ ಮಾನ್ಯತೆ ಪಡೆದ ಪ್ರಥಮ ಸಂಸ್ಥೆ ಎಂಬ ಹೆಗ್ಗಳಿಕೆ ಇದರದಾಗಿದೆ. ಕಾನೂನು, ಮಾನವಿಕ ಹಾಗೂ ಸಮಾಜವಿಜ್ಞಾನ, ವಾಣಿಜ್ಯ, ಮ್ಯಾನೇಜ್‌ಮೆಂಟ್, ಶಿಕ್ಷಣ, ತಂತ್ರಜ್ಞಾನ ಮುಂತಾದ ಅಧ್ಯಯನ ಶಾಖೆಗಳಲ್ಲಿ ಇದರ ಕಾರ್ಯವ್ಯಾಪ್ತಿ ಹರಡಿದೆ.

**೪) ಮಣಿಪಾಲ್ ವಿಶ್ವವಿದ್ಯಾನಿಲಯ, ಮಣಿಪಾಲ್**

ಐವತ್ತೇಳು ವರ್ಷಗಳಿಂದ ಶಿಕ್ಷಣಕ್ಷೇತ್ರದಲ್ಲಿ ಉತ್ತಮ ಸೇವೆಯನ್ನು ನಡೆಸಿಕೊಂಡು ಬಂದಿರುವ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಡೀಮ್ಡ್ ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ಗಳಿಸಿಕೊಂಡಿದೆ. ಉಡುಪಿಯ ಸಮೀಪದ ಮಣಿಪಾಲಿನಲ್ಲಿ 600 ಎಕರೆಯ ವಿಶಾಲವಾದ ಪ್ರದೇಶದಲ್ಲಿ ನೆಲೆನಿಂತಿರುವ ಈ ಪರಿಗಣಿತ ವಿಶ್ವವಿದ್ಯಾನಿಲಯವು ವಿವಿಧ ಕ್ಷೇತ್ರಗಳಲ್ಲಿ ಸ್ನಾತಕಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಗಳಿಸಲು ಅಧ್ಯಯನ ಮಾಡುತ್ತಿರುವ 20,000 ವಿದ್ಯಾರ್ಥಿಗಳಿಗೆ ನೆಲೆಯಾಗಿದೆ.

ಸಂಶೋಧನೆ ಮತ್ತು ಬೋಧನೆಗಳಲ್ಲಿ ಶ್ರೇಷ್ಠತೆಯನ್ನು ಗಳಿಸಿರುವ ಈ ವಿಶ್ವವಿದ್ಯಾನಿಲಯ ವೈದ್ಯಕೀಯ, ತಂತ್ರಜ್ಞಾನ, ಮಾನವಿಕ ಅಧ್ಯಯನ, ಮ್ಯಾನೇಜ್‌ಮೆಂಟ್, ಮಾಹಿತಿ ತಂತ್ರಜ್ಞಾನ ಇನ್ನೂ ಮುಂತಾದ ಹತ್ತು ಹಲವು ಶಿಕ್ಷಣ ಶಾಖೆಗಳಲ್ಲಿ ಜ್ಞಾನ ಪ್ರಸಾರವನ್ನು ಮಾಡುತ್ತಿದೆ. ಸುಮಾರು ಐದೂವರೆ ದಶಕಗಳ ಹಿಂದೆ ಡಾ॥ ಟಿ.ಎಂ. ಅನಂತ ಪೈರವರ ಶ್ರಮದಿಂದ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ 1993ರಲ್ಲಿ ಡೀಮ್ಡ್ ವಿಶ್ವವಿದ್ಯಾಲಯವಾಗಿ ಪರಿವರ್ತನೆಗೊಂಡಿತು. ಇಂದು ಸುಮಾರು 21 ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಈ ವಿಶ್ವವಿದ್ಯಾನಿಲಯ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಈ ವಿಶ್ವವಿದ್ಯಾಲಯ ಸಿಕ್ಕಿಂನಲ್ಲೂ ತನ್ನ ಕೇಂದ್ರವನ್ನು ಸ್ಥಾಪಿಸಿದೆ.

**೫) ಜೆ.ಎಸ್.ಎಸ್. ವಿಶ್ವವಿದ್ಯಾನಿಲಯ, ಮೈಸೂರು**

ಸುತ್ತೂರಿನ 23ನೇ ಪೀಠಾಧೀಶರಾದ ಜಗದ್ಗುರು ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಮಹಾಸ್ವಾಮಿಗಳು 1954ರಲ್ಲಿ ಜೆ.ಎಸ್.ಎಸ್. ಮಹಾವಿದ್ಯಾಪೀಠವನ್ನು ಸ್ಥಾಪಿಸಿದರು. ತಂತ್ರಜ್ಞಾನ, ವೈದ್ಯಕೀಯ, ಕಲೆ, ಶಿಕ್ಷಣ ಶಾಸ್ತ್ರ, ವಿಜ್ಞಾನ, ಮ್ಯಾನೇಜ್‌ಮೆಂಟ್ ಇತ್ಯಾದಿ ಕ್ಷೇತ್ರಗಳಲ್ಲಿ ಜ್ಞಾನಪ್ರಸಾರ ಮಾಡುತ್ತಿರುವ ಈ ಮಹಾವಿದ್ಯಾಪೀಠವನ್ನು 2008 ಮೇ 28ರಂದು ಡೀಮ್ಡ್ ವಿಶ್ವವಿದ್ಯಾನಿಲಯವೆಂದು ಘೋಷಿಸಲಾಯಿತು. ಇದರ ಕೇಂದ್ರ ಮೈಸೂರಿನಲ್ಲಿದೆ. ಸಂಶೋಧನೆ, ಸ್ನಾತಕಪದವಿ, ಸ್ನಾತಕೋತ್ತರ ಪದವಿಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ಅವಕಾಶವನ್ನಿತ್ತಿರುವ ಈ ವಿಶ್ವವಿದ್ಯಾನಿಲಯ ರಾಜ್ಯದ ಪರಿಗಣಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿದೆ. ಈ ವಿಶ್ವವಿದ್ಯಾನಿಲಯ ಕರ್ನಾಟಕದಲ್ಲಿ ಶಿಕ್ಷಣವನ್ನೊದಗಿಸುತ್ತಿರುವ ಅತಿ ದೊಡ್ಡ ಪರಿಗಣಿತ ವಿಶ್ವವಿದ್ಯಾನಿಲಯವಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಬೆಂಬಲಿಸಲು ವಿದ್ಯಾರ್ಥಿಗಳಲ್ಲಿರುವ ಕೌಶಲ್ಯಗಳನ್ನು ಪೋಷಿಸಿ ಬೆಳೆಸುವುದು ಹಾಗೂ ಪ್ರಾಯೋಗಿಕ ಜ್ಞಾನವನ್ನು ವೃದ್ಧಿಸುವುದು ಈ ವಿಶ್ವವಿದ್ಯಾನಿಲಯದ ಗುರಿಯಾಗಿದೆ. ಡಾ॥ ಬಿ. ಸುರೇಶ್ ಎಂಬುವರು ಇದರ ಪ್ರಥಮ ಕುಲಪತಿಗಳಾಗಿದ್ದಾರೆ.

**೬) ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ, ಬೆಂಗಳೂರು**

ಯೋಗದ ಅಭ್ಯಾಸ ಎಷ್ಟರಮಟ್ಟಿಗೆ ಫಲಕಾರಿಯಾಗುವುದು ಎಂಬುದನ್ನು ಸಂಶೋಧಿಸಿ ಆಧುನಿಕ ಯುಗದಲ್ಲಿ ಮಾನವನು ಎದುರಿಸುತ್ತಿರುವ ಸಂಕಷ್ಟಗಳಿಗೆ ಮಾರ್ಗವನ್ನು ಕಂಡುಹಿಡಿಯುವುದು ಬೆಂಗಳೂರಿನ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದ ಮುಖ್ಯ ಉದ್ದೇಶವಾಗಿದೆ. ಈ ಸಂಸ್ಥೆಯನ್ನು ಪರಿಗಣಿತ ವಿಶ್ವವಿದ್ಯಾನಿಲಯವೆಂದು ಘೋಷಿಸಲಾಗಿದೆ.

ಯೋಗದ ಫಲಗಳನ್ನು ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ತಲುಪುವಂತೆ ಮಾಡುವುದು, ಆಧುನಿಕ ವಿಜ್ಞಾನದ ಸಂಶೋಧನಾ ಪದ್ಧತಿಗಳನ್ನು ಉಪಯೋಗಿಸಿ ಯೋಗವಿಜ್ಞಾನವನ್ನು ಸಾಮಾಜಿಕವಾಗಿ ಸಂಗತವಾದ ವಿಜ್ಞಾನವನ್ನಾಗಿಸುವುದರ ಮೂಲಕ ತನ್ನ ಉದ್ದೇಶವನ್ನು ಸಾಧಿಸಲು ಈ ವಿಶ್ವವಿದ್ಯಾನಿಲಯವು ಶ್ರಮಿಸುತ್ತಿದೆ. ಈ ವಿಶ್ವವಿದ್ಯಾನಿಲಯವು ಭಾರತೀಯ ವೈದ್ಯಕೀಯ ಸಂಶೋಧನಾ ಸಮಿತಿಯಿಂದ ಉನ್ನತ ಸಂಶೋಧನಾ ಕೇಂದ್ರ (Centre of advanced Research)ವೆಂದು ಪರಿಗಣಿಸಲ್ಪಟ್ಟಿದೆ.

ಯೋಗದ ವಿವಿಧ ಕ್ಷೇತ್ರಗಳಲ್ಲಿ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿಗಳನ್ನು ಮತ್ತು ಇನ್ನಿತರ ಅಲ್ಪಕಾಲಾವಧಿ ಕೋರ್ಸುಗಳನ್ನು ಈ ಪರಿಗಣಿತ ವಿಶ್ವವಿದ್ಯಾನಿಲಯ ನೀಡುತ್ತಲಿದೆ. ಪಿಎಚ್.ಡಿ. ಪದವಿಯನ್ನು ಸಹ ವಿದ್ಯಾರ್ಥಿಗಳು ಈ ಸಂಸ್ಥೆಯಿಂದ ಪಡೆಯಬಹುದಾಗಿದೆ.

ಆ ವಿಶ್ವವಿದ್ಯಾನಿಲಯದ "ಆರೋಗ್ಯಧಾಮ" ಎಂಬ ಅಂಗವು ವಿವಿಧ ರೀತಿಯ ರೋಗಗಳಿಗೆ ಯೋಗದ ಮೂಲಕ ಚಿಕಿತ್ಸೆಯನ್ನು ನೀಡುವ ಕಾರ್ಯದಲ್ಲಿ ತೊಡಗಿದೆ. ಇಲ್ಲಿ ನೀಡಲಾಗುವ ಯೋಗ ಚಿಕಿತ್ಸೆ ಯೋಗ, ಆಯುರ್ವೇದ, ಪ್ರಕೃತಿಚಿಕಿತ್ಸೆ ಹಾಗೂ ಆಧುನಿಕ ವೈದ್ಯ ಚಿಕಿತ್ಸೆ, ಇವೆಲ್ಲವನ್ನೂ ಆಧರಿಸಿದ "ಸಮಗ್ರ" (Holistic) ಚಿಕಿತ್ಸೆಯಾಗಿದೆ.

ವಿಶ್ವದಲ್ಲೇ ಯೋಗ ಸಂಶೋಧನಾ ಸಂಸ್ಥೆಗಳಲ್ಲಿ ಪ್ರಮುಖವಾದುದೆಂದು ಪರಿಗಣಿಸಲ್ಪಟ್ಟಿರುವ ಈ ಸಂಸ್ಥೆ ಹಲವಾರು ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ವಿಶ್ವದ ವಿವಿಧೆಡೆಗಳಲ್ಲಿ ಈ ಸಂಸ್ಥೆಯ ಕೇಂದ್ರಗಳು ಯೋಗ ಮತ್ತು ಅದರ ಪ್ರಯೋಜನಗಳನ್ನು ಪ್ರಸಾರ ಮಾಡುವ ಕಾರ್ಯದಲ್ಲಿ ನಿರತವಾಗಿವೆ. ಸಂಸ್ಥೆಯು ಯೋಗಕ್ಕೆ ಸಂಬಂಧಿಸಿದ ಪ್ರಕಟಣೆಗಳನ್ನು ಹೊರತರುತ್ತಿದೆಯಲ್ಲದೆ **ಯೋಗ ಸುಧಾ** ಎಂಬ ಯೋಗ ನಿಯತಕಾಲಿಕೆಯನ್ನು ಸಹ ಹೊರತರುತ್ತಿದೆ.

ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿರುವ ಪ್ರೊ॥ ಎಚ್.ಆರ್. ನಾಗೇಂದ್ರ ಎಂಬುವರು ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿದ್ದಾರೆ. ಇವರು ಈ ಹಿಂದೆ ಅಮೆರಿಕಾದ 'ನಾಸ' (NASA) ಸಂಸ್ಥೆಯಲ್ಲಿ ಸಂಶೋಧನೆ ನಡೆಸುತ್ತಿದ್ದರಲ್ಲದೆ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಕನ್ಸಲ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಈಗ ಈ ವಿಶ್ವವಿದ್ಯಾನಿಲಯದ ಚುಕ್ಕಾಣಿ ಹಿಡಿದು ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ.

Digitised by Bharatavani, CIIL

**೭) ಜವಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ, ಬೆಂಗಳೂರು. (ಜವಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು)**

ಬೆಂಗಳೂರಿನ ಜಕ್ಕೂರಿನಲ್ಲಿರುವ ಈ ಬಹುಶಾಸ್ತ್ರೀಯ (Multidisciplinary) ಸಂಶೋಧನಾ ಸಂಸ್ಥೆ ಒಂದು ಪರಿಗಣಿತ ವಿಶ್ವವಿದ್ಯಾನಿಲಯವಾಗಿದ್ದು ಭಾರತ ಸರ್ಕಾರದ ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆಯಿಂದ ಅನುದಾನಿತಗೊಂಡಿದೆ. ಪಂಡಿತ್ ಜವಹರ್‌ಲಾಲ್ ನೆಹರುರವರ ಜನ್ಮಶತಾಬ್ಧಿಯ ಸ್ಮರಣೆಯಲ್ಲಿ ಭಾರತ ಸರ್ಕಾರ 1989ನೇ ಇಸವಿಯಲ್ಲಿ ಈ ಸಂಸ್ಥೆಯನ್ನು ಪ್ರಾರಂಭಿಸಿತು.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ವಿಶ್ವಮಟ್ಟದ ಸಂಶೋಧನೆ ಮತ್ತು ತರಬೇತಿಗಳನ್ನು ಕೈಗೊಳ್ಳುವ ಧ್ಯೇಯವನ್ನು ಈ ಸಂಸ್ಥೆ ಹೊಂದಿದೆ. ಸುಮಾರು 200 ಸಂಶೋಧಕರು ಸಂಶೋಧನೆಗೆ ಸಕಲ ರೀತಿಯಲ್ಲೂ ಅನುಕೂಲವಾಗಿರುವ ಅಧ್ಯಯನ ಪರಿಸರದಲ್ಲಿ ತಮ್ಮ ಕಾರ್ಯವನ್ನು ಮಾಡುತ್ತಿದ್ದಾರೆ. ಲೋಹವಿಜ್ಞಾನ (Material Science) ದಿಂದ ಹಿಡಿದು ತಳಿಶಾಸ್ತ್ರದ (Genetics) ದ ವರೆಗೆ ಇಲ್ಲಿ ಸಂಶೋಧನೆಗಳು ನಡೆಯುತ್ತಿವೆ.

ಈ ಸಂಸ್ಥೆಯು ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ನೀಡುತ್ತಿದ್ದು ಪಿ.ಎಚ್.ಡಿ. ಪದವಿ ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನು ನೀಡಲು ಸಜ್ಜಾಗಿದೆ. ಪ್ರೊ॥ ಎಂ.ಆರ್.ಎಸ್. ರಾವ್‌ರವರು ಸಂಶೋಧನಾ ಕೇಂದ್ರದ ಅಧ್ಯಕ್ಷರಾಗಿದ್ದಾರೆ.

8) ಅಂತಾರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು (ಇಂಟರ್ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇನ್‌ಫರ್‌ಮೇಷನ್ ಟೆಕ್ನಾಲಜಿ, ಬೆಂಗಳೂರು)

ಪರಿಗಣಿತ ವಿಶ್ವವಿದ್ಯಾನಿಲಯವಾದ ಈ ಸಂಸ್ಥೆ ಶಿಕ್ಷಣ ಮತ್ತು ಸಂಶೋಧನೆ, ಉದ್ಯಮಶೀಲತೆ ಹಾಗೂ ನಾವೀನ್ಯತೆಯ ಮುಖಾಂತರ ಮಾಹಿತಿ ತಂತ್ರಜ್ಞಾನ ಲೋಕಕ್ಕೆ ಕೊಡುಗೆಯನ್ನು ನೀಡುವ ಧ್ಯೇಯವನ್ನಿಟ್ಟುಕೊಂಡು 1999ರಲ್ಲಿ ಸ್ಥಾಪಿತಗೊಂಡಿತು. ಕರ್ನಾಟಕ ಸರ್ಕಾರ ಮತ್ತು ಮಾಹಿತಿ ತಂತ್ರಜ್ಞಾನ ಉದ್ಯಮಗಳಿಂದ ಈ ಸಂಸ್ಥೆ ಬೆಂಬಲಿಸಲ್ಪಟ್ಟಿದೆ.

ಇಂದಿನ ವಿಶ್ವದ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯ ಹಿನ್ನೆಲೆಯಲ್ಲಿ ಭಾರತವೂ ಪ್ರಮುಖ ಪಾತ್ರವನ್ನು ವಹಿಸುವಂತೆ ಮಾಡುವ ಧ್ಯೇಯ ಈ ಸಂಸ್ಥೆಯದಾಗಿದೆ. ಸಂಶೋಧನೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳು, ದೂರಶಿಕ್ಷಣ ಇವುಗಳು ಸಂಸ್ಥೆಯ ಮುಖ್ಯ ಚಟುವಟಿಕೆಗಳಾಗಿವೆ.

ಸದ್ಯದಲ್ಲಿ ಸಂಸ್ಥೆಯು ಒಂದು ಶಾಖೆಯಲ್ಲಿ ಸ್ನಾತಕ ಪದವಿಯನ್ನು, ಎರಡು ಶಾಖೆಗಳಲ್ಲಿ ಸ್ನಾತಕೋತ್ತರ ಪದವಿಯನ್ನು ನೀಡುತ್ತಿದ್ದು ಪಿಎಚ್.ಡಿ. ಪದವಿಯನ್ನೂ ಸಹ ನೀಡುತ್ತಲಿದೆ. ಇದಲ್ಲದೆ ಸಂಸ್ಥೆಯಿಂದ ಸಂಶೋಧನೆಗಳ ಫಲಿತಾಂಶಗಳು ಪ್ರಕಟಿಸಲ್ಪಟ್ಟಿವೆ.

**೯) ಯೇನೋಪೊಯ ವಿಶ್ವವಿದ್ಯಾಲಯ**

1991ರಲ್ಲಿ ಸ್ಥಾಪಿತವಾದ ಯೇನೋಪೊಯ ಸಂಸ್ಥೆ ದಕ್ಷಿಣ ಕನ್ನಡದ ಪ್ರಥಮ ಪರಿಗಣಿತ ವಿಶ್ವವಿದ್ಯಾನಿಲಯ. ಇದು ಪರಿಗಣಿತ ಸ್ಥಾನ ಮಾನವನ್ನು ಫೆಬ್ರವರಿ 27, 2008ರಂದು ಗಳಿಸಿತು. ಈ ವಿಶ್ವವಿದ್ಯಾನಿಲಯವು ವೈದ್ಯಕೀಯ, ದಂತವೈದ್ಯ, ಫಿಸಿಯೋಥೆರಪಿ ಹಾಗೂ ನರ್ಸಿಂಗ್ ಕೋರ್ಸುಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯನ್ನು ನೀಡುತ್ತಿದೆ. ವಿಶ್ವವಿದ್ಯಾನಿಲಯವು ಆಗಾಗ್ಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರಗಳನ್ನು ನಡೆಸಿ ಸಮಾಜದೆಡೆಗೆ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತಿದೆ. ಇದಲ್ಲದೆ ಹತ್ತಿರದ ಎರಡು ಹಳ್ಳಿಗಳನ್ನು ದತ್ತು ತೆಗೆದುಕೊಂಡು ಹಳ್ಳಿಯ ಪೂರ್ಣ ಆರೋಗ್ಯವನ್ನು ನೋಡಿಕೊಳ್ಳುವ ಸತ್ಕಾರ್ಯದಲ್ಲಿ ತೊಡಗಿದೆ.

ಈ ಸಂಸ್ಥೆಯ ಸ್ಥಾಪಕರು ಯೇನೋಪೋಯ ಮೊಯ್‌ದೀನ್ ಕುನ್ಹಿ ಎಂಬುವರು. ಈ ಸಂಸ್ಥೆ "ಭಗವಂತನೇ ನನ್ನ ಜ್ಞಾನವನ್ನು ವೃದ್ಧಿಸು" ಎಂಬ ಧ್ಯೇಯ ವಾಕ್ಯವನ್ನು ಹೊಂದಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ॥ ಅಖಿಲ್ ಅಹಮದ್ ಇವರು ಇದರ ಪ್ರಥಮ ಕುಲಪತಿಗಳು.

**೧೦) ಶ್ರೀ ದೇವರಾಜ ಅರಸು ವಿಶ್ವವಿದ್ಯಾನಿಲಯ, ಕೋಲಾರ**

ಶ್ರೀ ದೇವರಾಜ ಅರಸು ಶಿಕ್ಷಣ ಟ್ರಸ್ಟ್, ಕೋಲಾರ, ಇವರ ಆಶ್ರಯದಲ್ಲಿ ನಡೆಯುತ್ತಿರುವ ಕೋಲಾರದ ಶ್ರೀ ದೇವರಾಜ ಅರಸು ಮೆಡಿಕಲ್ ಕಾಲೇಜು ಮೇ 25, 2007ರಂದು ಪರಿಗಣಿತ ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ಗಳಿಸಿತು. ವೈದ್ಯ ಶಿಕ್ಷಣಕ್ಕೆ ಹೆಚ್ಚು ಗಮನವನ್ನೀಯಲು ಮಾಜಿ ಸಚಿವರಾದ ಶ್ರೀ ಆರ್.ಎಲ್. ಜಾಲಪ್ಪ ಅವರ ಮುಖಂಡತ್ವದಲ್ಲಿ ಹಲವು ಶ್ರದ್ಧಾವಂತ, ದೂರದೃಷ್ಟಿಯುಳ್ಳ ವ್ಯಕ್ತಿಗಳಿಂದ ಶ್ರೀ ದೇವರಾಜ ಅರಸು ಶಿಕ್ಷಣ ಟ್ರಸ್ಟ್ 1984ರಲ್ಲಿ ಸ್ಥಾಪಿತವಾಯಿತು. 1986ರಲ್ಲಿ ಈ ಟ್ರಸ್ಟ್ ಕೋಲಾರದಲ್ಲಿ ಶ್ರೀ ದೇವರಾಜ ಅರಸು ಮೆಡಿಕಲ್ ಕಾಲೇಜನ್ನು ಪ್ರಾರಂಭಿಸಿತು. ಅಂದಿನಿಂದ ಈ ಸಂಸ್ಥೆ ವೈದ್ಯ ಶಿಕ್ಷಣ ಸಂಶೋಧನೆ ಹಾಗೂ ಗ್ರಾಮಾಂತರ ಪ್ರದೇಶದವರಿಗೆ ಆರೋಗ್ಯ ರಕ್ಷಣೆ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ಉತ್ಕೃಷ್ಟ ವಿಶ್ವವಿದ್ಯಾನಿಲಯವಾಗಬೇಕೆಂಬ, ಮುಂದಿನ ಪೀಳಿಗೆಗೆ ಜ್ಞಾನ ಸಂವಹನ ಮಾಡಬೇಕೆಂಬ ಧ್ಯೇಯವನ್ನಿಟ್ಟುಕೊಂಡು ಈ ಸಂಸ್ಥೆ ಕಾರ್ಯೋನ್ಮುಖವಾಗಿದೆ. ಸಂಸ್ಥೆಯು ವೈದ್ಯಕೀಯ ಕ್ಷೇತ್ರದಲ್ಲಿ ಸ್ನಾತಕಪದವಿಯನ್ನು ಹಾಗೂ ವೈದ್ಯಕೀಯ ಕ್ಷೇತ್ರ ಸುಮಾರು 15 ಶಾಖೆಗಳಲ್ಲಿ ಸ್ನಾತಕೋತ್ತರ ಪದವಿಯನ್ನು ನೀಡುತ್ತಿದೆ. ಇದಲ್ಲದೆ ಸ್ನಾತಕೋತ್ತರ ಡಿಪ್ಲೋಮಾಗಳನ್ನು ನಡೆಸುತ್ತಿದೆ. ಇತ್ತೀಚೆಗೆ ಪಿಎಚ್.ಡಿ. ಪದವಿಯನ್ನು ನೀಡಬೇಕೆಂದು ಯೋಜನೆಯನ್ನು ವಿಶ್ವವಿದ್ಯಾನಿಲಯ ಹಾಕಿಕೊಂಡಿದೆ.

–ಬಿ.ಎಂ.ಚಂ

## ಪರ್ಯಾಯ ಶಿಕ್ಷಣ

ಶಾಲಾ ಶಿಕ್ಷಣದಿಂದ ಹೊರಗೆ ಉಳಿದುಕೊಂಡಿರುವ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತಂದು ಶಿಕ್ಷಣವನ್ನು ನೀಡಲು ಕಲ್ಪಿಸಿಕೊಂಡಿರುವ ವ್ಯವಸ್ಥೆಯನ್ನು ಪರ್ಯಾಯಶಿಕ್ಷಣ ಎಂದು ಕರೆಯಲಾಗಿದೆ. ಈ ಪರ್ಯಾಯ ಶಿಕ್ಷಣ ವ್ಯವಸ್ಥೆಯು ಸರ್ವಶಿಕ್ಷಣ ಅಭಿಯಾನ್‌ನ ಅಡಿಯಲ್ಲಿಯೇ ಕಾರ್ಯವನ್ನು ನಿರ್ವಹಿಸುತ್ತದೆ.

ಶಿಕ್ಷಣವನ್ನು ಪಡೆಯುವುದು ಪ್ರತಿ ಮಗುವಿನ ಮೂಲಭೂತ ಹಕ್ಕು. ಗುಣಾತ್ಮಕ ರೀತಿಯ ಶಿಕ್ಷಣವನ್ನು ಮಕ್ಕಳು ಪಡೆಯಲು ಪೋಷಕರು, ಸಮಾಜ ಹಾಗೂ ಸರ್ಕಾರಗಳು ಸಹಕರಿಸಬೇಕು ಇದು ಎಲ್ಲರ ಕರ್ತವ್ಯ ಮತ್ತು ಜವಾಬ್ದಾರಿ ಆಗಿರುತ್ತದೆ.

2008ರಲ್ಲಿ ಸರ್ಕಾರವು ಖಾಸಗಿಯವರ ಸಹಕಾರದೊಂದಿಗೆ 6 ರಿಂದ 14 ವರ್ಷದ ಮಕ್ಕಳೆಷ್ಟು ಮಂದಿ ಶಾಲಾವಾಹಿನಿಯಿಂದ ದೂರದಲ್ಲಿದ್ದಾರೆ ಎಂದು ಸಮೀಕ್ಷೆ ನಡೆಸಿದಾಗ ನಮ್ಮ ರಾಜ್ಯದಲ್ಲಿ ಸುಮಾರು 35,637 ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದು ತಿಳಿದು

Digitised by Bharatavani, CIIL

ಬಂದಿತು. 6 ರಿಂದ 14ರ ವಯೋಮಾನದ ಎಲ್ಲ ಮಕ್ಕಳಿಗೂ ತಾರತಮ್ಯವಿಲ್ಲದೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಒದಗಿಸಲು ಸರ್ಕಾರವು ಬದ್ಧವಾಗಿದೆ. ಈ ದಿಕ್ಕಿನಲ್ಲಿ ಮಕ್ಕಳು ಶಾಲಾ ಶಿಕ್ಷಣದಿಂದ ವಂಚಿತರಾಗಲು ಕಾರಣವೇನು ಎಂದು ಪರಿಶೀಲಿಸಿದಾಗ ತಿಳಿದು ಬಂದ ಅಂಶಗಳೆಂದರೆ ಮಕ್ಕಳಸಂಖ್ಯೆ ನಿರ್ದಿಷ್ಟ ಸ್ಥಳಗಳಲ್ಲಿ ಕಡಿಮೆ ಇರುವುದು ಶಾಲಾ ಸೌಲಭ್ಯಗಳನ್ನು ಒದಗಿಸದಿರುವುದು. ಶಾಲೆಗೆ ಸೇರದೆ ಇರುವುದು, ಶಾಲೆಗೆ ಸೇರಿ ನಂತರ ತೊರೆದಿರುವುದು, ಮಗುವಿಗೆ ಸಂಬಂಧಿಸಿದ ವೈಯಕ್ತಿಕ ಕಾರಣಗಳಾದ ಬಡತನ, ಪೋಷಕರ ನಿರಾಸಕ್ತಿ, ವಲಸೆ, ಶೋಷಣೆ ಮುಂತಾದವು. ಆದರೆ ಇವೆಲ್ಲವೂ ವಿಶೇಷವಾದ ಶಿಕ್ಷಣವನ್ನು ಕಲಿಯಲು ಇರುವ ತೊಂದರೆಗಳೆನಿಸದು.

ಈ ಮಕ್ಕಳಲ್ಲಿ ಆಸಕ್ತಿ, ಸೃಜನಶೀಲತೆಗಳು ಕಡಿಮೆ ಇಲ್ಲ. ಇವರನ್ನು ಅರ್ಥಮಾಡಿಕೊಂಡು ಶಿಕ್ಷಣದ ಮುಖ್ಯ ವಾಹಿನಿಗೆ ಅವರನ್ನು ತರಬೇಕು.

**ಪರ್ಯಾಯ ಶಿಕ್ಷಣದ ವೈಶಿಷ್ಟ್ಯತೆಗಳು**

- ಶಾಲಾಶಿಕ್ಷಣದ ವ್ಯವಸ್ಥೆಯಿಂದ ಹೊರಗುಳಿದ ಎಲ್ಲ ಮಕ್ಕಳನ್ನು ಶಿಕ್ಷಣದ ವಾಹಿನಿಗೆ ಕರೆತರುವುದು.
- ಪರ್ಯಾಯ ಶಿಕ್ಷಣದ ನೀಡುವಿಕೆಯ ವ್ಯವಸ್ಥೆಯ ಮೇಲ್ವಿಚಾರಣೆ ಸರ್ವಶಿಕ್ಷಣ ಅಭಿಯಾನ್‌ನದು.
- ಸರ್ವಶಿಕ್ಷಣ ಅಭಿಯಾನ ವಿವಿಧ ರೀತಿಯ ಶಿಕ್ಷಣ ನೀಡುವಿಕೆಯ ಕಾರ್ಯಕ್ರಮ ರೂಪಿಸುತ್ತದೆ.
- ಪರ್ಯಾಯ ಶಿಕ್ಷಣವನ್ನು ಚಿಣ್ಣರ ಅಂಗಳ ಪೂರಕಶಾಲೆ, ಸಂಚಾರಿಶಾಲೆ, ಗುಡಾರಶಾಲೆ ವಸತಿ ಸಹಿತ ಮತ್ತು ವಸತಿ ರಹಿತ ಶಾಲೆಗಳ ಮುಖಾಂತರ ನೀಡುವುದು.
- ಸರ್ಕಾರದ ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಘ ಸಂಸ್ಥೆಗಳು ಪರ್ಯಾಯ ಶಿಕ್ಷಣ ನೀಡುವಿಕೆಯ ಕಾರ್ಯಗಳನ್ನು ನಿರ್ವಹಿಸುತ್ತವೆ.
- ಮಕ್ಕಳು ಇರುವ ಸ್ಥಳಗಳಿಗೆ ಹೋಗಿ ಅವರ ಪರಿಸ್ಥಿತಿಗನುಸಾರವಾಗಿ ಸೂಕ್ತ ಪರ್ಯಾಯ ಶಿಕ್ಷಣ ನೀಡಲಾಗುತ್ತದೆ.
- ಪರ್ಯಾಯ ಶಿಕ್ಷಣದ ಮೂಲಕ ಶಾಲೆಗಳಿಗೆ ಮಕ್ಕಳನ್ನು ದಾಖಲು ಮಾಡಿ ಕಡ್ಡಾಯ ಶಿಕ್ಷಣದ ಗುರಿ ತಲುಪುವುದು.
- ಕಲಿಕೆಗೆ ಬೇಕಾದ ಅಥವಾ ಅಗತ್ಯವಾದ ಸೌಲಭ್ಯಗಳನ್ನು ಶಿಕ್ಷಣ ಇಲಾಖೆಯು ಒದಗಿಸುವುದು.
- ಮಕ್ಕಳು ಶೈಕ್ಷಣಿಕ ವಿಚಾರಗಳೆಲ್ಲವನ್ನೂ ತೃಪ್ತಿಕರವಾಗಿ ಕಲಿಯುವಂತೆ ಮಾಡುವುದು. ಒಟ್ಟಾರೆ ಪರ್ಯಾಯ ಶಿಕ್ಷಣದ ಮುಖ್ಯ ಉದ್ದೇಶ ಸರ್ವರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವುದು

– ವೈ.ಎನ್.ಶ್ರೀ.

## ಪರೀಕ್ಷೆಗಳ ಮಾನಕೀಕರಣ

ಪರೀಕ್ಷೆಯನ್ನು ನಡೆಸುವ ಹಾಗೂ ಅಂಕಗಳನ್ನು ನೀಡುವ ನಿರ್ದಿಷ್ಟ ವಿಧಾನವನ್ನು ನಿಗದಿಪಡಿಸುವುದು ಹಾಗೆಯೇ ವಯಸ್ಸು, ಶ್ರೇಣಿ ಅಥವಾ ಇತರ ಮಾನಕಗಳಿಗೆ ಅನುಗುಣವಾಗಿ ಮಾನಕಗಳನ್ನು ನಿಗದಿಪಡಿಸುವ ಪ್ರಕ್ರಿಯೆಗೆ ಪರೀಕ್ಷೆಗಳ ಮಾನಕೀಕರಣ ಎಂಬುದಾಗಿ ಮೌಲ್ಯಮಾಪನ ವಿಶ್ವಕೋಶ ವ್ಯಾಖ್ಯಾನಿಸುತ್ತದೆ.

ಮಾನಕೀಕರಿಸಿದ ಪರೀಕ್ಷೆಯು ಏಕರೀತಿಯಾದ ಪರೀಕ್ಷೆ ವಿಧಾನ, ಅಂಕ ನೀಡುವಾಗ ವೈಜ್ಞಾನಿಕ ಅಂಶಗಳ ಆಧಾರದ ಮೇಲೆ ನಡೆಯುವುದೆಂದು ಅನಾಸ್ತಾಸಿ (1958) ಅಭಿಪ್ರಾಯ ಪಡುತ್ತಾ ಪರೀಕ್ಷೆಯ ವೇಳೆಯಲ್ಲಿ ಸಹ ಇವು ಯಾವ ರೀತಿಯಾದ ವಾತಾವರಣ ಹೊಂದಿರಬೇಕೆಂದು ತಿಳಿಸುವುದಲ್ಲದೆ ಏಕರೀತಿಯಾದ ನಿರ್ದೇಶನ ಹಾಗೂ ವಾತಾವರಣ ಕಲ್ಪಿಸುವುದು ಎಂದಿದ್ದಾರೆ.

ಮಾನಕೀಕರಿಸಿದ ಪರೀಕ್ಷೆಗಳು ಒಂದೇ ರೀತಿಯ ಕೆಲಸವನ್ನು ಒಂದೇ ರೀತಿಯ ಪರೀಕ್ಷಾ ವಾತಾವರಣ ಹಾಗೂ ಸಮಯದ ಮಿತಿಯೊಳಗೆ ಪ್ರಯತ್ನಿಸಿದವರೆಲ್ಲರ ಉತ್ತರಗಳಿಗೆ ಒಂದೇ ವಿಧಾನದಲ್ಲಿ ಅಂಕಗಳನ್ನು ನೀಡಲಾದ ಎಲ್ಲ ಪರೀಕ್ಷಾರ್ಥಿಗಳ ಅಂಕಗಳನ್ನು ಹೋಲಿಸುವ ಸಾಧನಗಳಾಗಿವೆ.

**ಪರೀಕ್ಷೆಯ ಮಾನಕೀಕರಣ ಹಂತಗಳು**

**1. ಪರೀಕ್ಷೆಯ ಯೋಜನೆ**

ಮಾನಕೀಕರಿಸಿ ಪರೀಕ್ಷೆಯನ್ನು ತಯಾರಿಸುವ ಆರಂಭದಲ್ಲಿ ಪೂರ್ವ ತಯಾರಿಯಾಗಿ ಪರೀಕ್ಷಾ ರಚನಾಕಾರರು ಈ ಕೆಳಗೆ ತಿಳಿಸಿದ ಅಂಶಗಳ ಕುರಿತು ನಿರ್ಧರಿಸಬೇಕು.

- ಪರೀಕ್ಷೆಯ ಗುರಿ
- ಈಡೇರುವ ಉದ್ದೇಶ
- ಯಾವ ವಾತಾವರಣದಲ್ಲಿ, ಯಾರಿಗೆ ಇದನ್ನು ನಡೆಸಲಾಗುತ್ತದೆ
- ಅಂತಿಮ ಪರೀಕ್ಷೆಯ ನೀಲಿ ನಕಾಶೆ ಹಾಗೂ ವಿನ್ಯಾಸ.

**2. ಪರೀಕ್ಷೆಯ ಮೊದಲ ಕರಡು ಪ್ರತಿ ತಯಾರಿ**

ಈ ಹಂತದಲ್ಲಿ ಪರೀಕ್ಷೆಯ ಉದ್ದೇಶಗಳಿಗೆ ಹಾಗೂ ವಿಧಗಳಿಗೆ ಸಂಬಂಧಿಸಿದಂತೆ ಸಾಕಷ್ಟು ರೀತಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಿ, ಪೂರ್ವ ನಿಗದಿತ ರೀತಿಯಲ್ಲಿ ಪ್ರಶ್ನೆಗಳನ್ನು ರಚಿಸಬೇಕು. ಮಾನಕೀಕರಿಸಲ್ಪಡುವ ಪರೀಕ್ಷೆ ಸಾಧನಾ ಪರೀಕ್ಷೆಯಾಗಿದ್ದಲ್ಲಿ ನೀಲಿ ನಕಾಶೆಯನ್ನು ತಯಾರಿಸಿಕೊಂಡು ಅದರಂತೆ ಪ್ರಶ್ನೆಗಳನ್ನು ರಚಿಸಿ ಪ್ರಶ್ನೆ ಪತ್ರಿಕೆಯನ್ನು ತಯಾರಿಸಬೇಕು. ಇತರೇ ಪರೀಕ್ಷೆಗಳಾಗಿದ್ದಲ್ಲಿ ಪರೀಕ್ಷಿಸಲ್ಪಡುವ ಅಂಶದ ಘಟಕಾಂಶಗಳನ್ನು ಗುರುತಿಸಿಕೊಂಡು, ಅವುಗಳ ಹಂಚಿಕೆಗಳನ್ನು ತೋರಿಸುವ ಪಟ್ಟಿಯನ್ನು ತಯಾರಿಸಿಕೊಳ್ಳಬೇಕು.

**3. ಪ್ರಾಯೋಗಿಕ ಯೋಜನಾ ಪರೀಕ್ಷೆ**

ಇದು ಮಾನಕೀಕರಣ ಪರೀಕ್ಷೆಯನ್ನು ರಚಿಸುವಲ್ಲಿ ಅತ್ಯಂತ ಪ್ರಮುಖವಾದ ಹಂತವಾಗಿದೆ. ಪರೀಕ್ಷೆಯ ಗುಣಮಟ್ಟ ಹಾಗೂ ಗಮನಾರ್ಹವಲ್ಲದ ಪ್ರಶ್ನೆಗಳನ್ನು ತಿಳಿಯಲು ಈ ಪರೀಕ್ಷೆಯು ಸಹಾಯಕವಾಗಿದೆ. ಅಂತಿಮ ಪರೀಕ್ಷೆಯಲ್ಲಿ ಉತ್ತಮ ಪ್ರಶ್ನೆಗಳನ್ನು ರಚಿಸುವಲ್ಲಿ ಪ್ರಾಯೋಗಿಕ ಯೋಜನಾ ಪರೀಕ್ಷೆಯು ಮಹತ್ತರ ಪಾತ್ರವನ್ನು ವಹಿಸುತ್ತದೆ. ಇದರ ಮೂಲಕ ಪ್ರಶ್ನೆಯ ಕಾಠಿಣ್ಯತೆಯ ಪ್ರಮಾಣ ಹಾಗೂ ವ್ಯತ್ಯಾಸಿಸುವ ಶಕ್ತಿಯನ್ನು ತಿಳಿಯುವುದರ ಮೂಲಕ ಅಂಶ ವಿಶ್ಲೇಷಣೆ ಮಾಡಲು ಸಹಾಯವಾಗುತ್ತದೆ.

**ಅಂಶ ವಿಶ್ಲೇಷಣೆ:** ಪ್ರಾಯೋಗಿಕ ಯೋಜನಾ ಪರೀಕ್ಷೆಯ ನಂತರ ನಡೆಸುವ ಕ್ರಿಯೆ ಅಂಶ ವಿಶ್ಲೇಷಣೆ. ಅಂಶ ವಿಶ್ಲೇಷಣೆಯು ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರತಿ ಪ್ರಶ್ನೆಯ ಸಂಖ್ಯಾ ಶಾಸ್ತ್ರೀಯ ಗುಣಗಳನ್ನು

Digitised by Bharatavani, CIIL

ಅಧ್ಯಯನ ಮಾಡುವ ವಿಧಾನ. ಸಾಮಾನ್ಯವಾಗಿ ಆಯ್ಕೆ ಮಾಡುವ ಗುಣಗಳೆಂದರೆ ಪ್ರಶ್ನೆಯ ಕಾಠಿಣ್ಯತೆಯ ಮೌಲ್ಯ ಹಾಗೂ ಹೆಚ್ಚು ಸಾಮರ್ಥ್ಯ ಮತ್ತು ಕಡಿಮೆ ಸಾಮರ್ಥ್ಯವುಳ್ಳ ಪರೀಕ್ಷಾರ್ಥಿಯನ್ನು ವ್ಯತ್ಯಾಸಿಸುವ ಶಕ್ತಿ. ಅಂಶ ವಿಶ್ಲೇಷಣೆಯ ಮೂಲಕ ಪರಿಣಾಮಕಾರಿಯಾದ ಪ್ರಶ್ನೆಗಳನ್ನು ಅಂತಿಮ ಪರೀಕ್ಷೆಗೆ ಹಾಗೆಯೇ ಉಳಿಸಿಕೊಂಡು ಉಳಿದವುಗಳನ್ನು ಅಂಶವಿಶ್ಲೇಷಣೆಗೆ ಆಯ್ಕೆ ಮಾಡಿಕೊಂಡ ವಿಧಾನದಲ್ಲಿ ತಿಳಿಸಿದಂತೆ ಮಾರ್ಪಡಿಸಿಕೊಳ್ಳಬೇಕು ಇಲ್ಲವೇ ಕೈಬಿಡಬೇಕು.

ಅಂಶ ವಿಶ್ಲೇಷಣೆಯಲ್ಲಿ ಅನೇಕ ವಿಧಾನಗಳಿವೆ. ಅವುಗಳಲ್ಲಿ ಡೇವಿಸ್‌ನ ಅಂಶ ವಿಶ್ಲೇಷಣೆಯ ವಿಧಾನ ಹಾಗೂ ಸ್ಟಾನ್ಲಿಯ ಅಂಶ ವಿಶ್ಲೇಷಣೆಯ ವಿಧಾನ ಹೆಚ್ಚು ಜನಪ್ರಿಯವಾಗಿವೆ. ಡೇವಿಸ್‌ನ ವಿಧಾನದಲ್ಲಿ ಮೊದಲಿಗೆ ಪರೀಕ್ಷಾರ್ಥಿಗಳು ಗಳಿಸಿದ ಅಂಕಗಳ ಆಧಾರದಲ್ಲಿ ಉತ್ತರ ಪತ್ರಿಕೆಗಳನ್ನು ಇಳಿಕೆ ಕ್ರಮದಲ್ಲಿ ಜೋಡಿಸಿಕೊಳ್ಳಬೇಕು. ಒಟ್ಟು ಉತ್ತರ ಪತ್ರಿಕೆಗಳ ಶೇ. 27ನ್ನು ಲೆಕ್ಕಾಚಾರ ಮಾಡಬೇಕು. ಬಳಿಕ ಜೋಡಿಸಿದ ಒಟ್ಟು ಉತ್ತರ ಪತ್ರಿಕೆಗಳ ಕೆಳಭಾಗದಿಂದ ಹಾಗೂ ಮೇಲ್ಭಾಗದಿಂದ ಪ್ರತ್ಯೇಕವಾಗಿ ತೆಗೆಯಬೇಕು. ಮೇಲ್ಭಾಗದಿಂದ ತೆಗೆದ ಶೇ. 27 ಉತ್ತರ ಪತ್ರಿಕೆಗಳು ಮೇಲು ಮಟ್ಟದ ಉತ್ತರ ಪತ್ರಿಕೆಗಳೆಂದು ಕರೆಯಲ್ಪಡುತ್ತವೆ. ಕೆಳಭಾಗದಿಂದ ತೆಗೆದ ಶೇ. 27 ಉತ್ತರ ಪತ್ರಿಕೆಗಳು ಕೆಳಮಟ್ಟದ ಉತ್ತರ ಪತ್ರಿಕೆಗಳೆಂದು ಕರೆಯಲ್ಪಡುತ್ತವೆ. ಆ ಬಳಿಕ ಮೇಲು ಮಟ್ಟದ ಹಾಗೂ ಕೆಳಮಟ್ಟದ ಗುಂಪಿನ ಎಷ್ಟು ವಿದ್ಯಾರ್ಥಿಗಳು ಪ್ರತಿ ಪ್ರಶ್ನೆಗೆ ಸರಿಯಾಗಿ ಉತ್ತರಿಸಿದ್ದಾರೆ ಎಂಬುದನ್ನು ಕಂಡು ಹಿಡಿದು ಅದರ ಶೇಕಡಾವಾರನ್ನು ಲೆಕ್ಕಾಚಾರ ಮಾಡಬೇಕು. ನಂತರ ಪ್ರತಿ ಪ್ರಶ್ನೆಯ ಕಾಠಿಣ್ಯತೆಯ ಮೌಲ್ಯ ($D_2$) ವನ್ನು ಹಾಗೂ ವ್ಯತ್ಯಾಸಿಸುವ ಶಕ್ತಿ (($D_P$) ಯನ್ನು ಲೆಕ್ಕಾಚಾರ ಮಾಡಬೇಕು. ಅವುಗಳನ್ನು ಲೆಕ್ಕಾಚಾರ ಮಾಡುವ ಸೂತ್ರಗಳು ಈ ಕೆಳಗಿನಂತಿವೆ.

$$D_V = \frac{P_H + P_L}{2}$$

$$D_p = P_H - P_L$$

ಇಲ್ಲಿ $P_H$ ಮೇಲು ಮಟ್ಟದ ಗುಂಪಿನ ಒಂದು ಪ್ರಶ್ನೆಯ ಸರಿಯಾದ ಉತ್ತರಗಳ ಶೇಕಡಾವಾರು.

$P_L$ ಕೆಳಮಟ್ಟದ ಗುಂಪಿನ ಒಂದು ಪ್ರಶ್ನೆಯ ಸರಿಯಾದ ಉತ್ತರಗಳ ಶೇಕಡಾವಾರು

ಪ್ರತಿ ಪ್ರಶ್ನೆಗೆ ಈ ಎರಡರ ಮೌಲ್ಯಗಳನ್ನು ಲೆಕ್ಕಾಚಾರ ಮಾಡಿದ ಬಳಿಕ ಕೆಳಗೆ ತಿಳಿಸಿದ ಮಾನದಂಡದ ಆಧಾರದಲ್ಲಿ ಪ್ರಶ್ನೆಗಳನ್ನು ಆಯ್ಕೆ ಮಾಡಲಾಗುವುದು ಅಥವಾ ತಿರಸ್ಕರಿಸಲಾಗುವುದು.

- ವ್ಯತ್ಯಾಸಿಸುವ ಶಕ್ತಿಯು ಧನಾತ್ಮಕ ಮೌಲ್ಯವನ್ನು ಹೊಂದಿದ್ದರೆ ಅವುಗಳನ್ನು ಅಂತಿಮ ಪ್ರಶ್ನೆ ಪತ್ರಿಕೆಗೆ ಆಯ್ಕೆ ಮಾಡಲಾಗುತ್ತದೆ. ಋಣಾತ್ಮಕ ಬೆಲೆ ಹಾಗೂ ಸೊನ್ನೆ ಬೆಲೆಯನ್ನು ಹೊಂದಿರುವ ಪ್ರಶ್ನೆಗಳನ್ನು ತಿರಸ್ಕರಿಸಲಾಗುತ್ತದೆ.
- ಅತೀ ಹೆಚ್ಚು ಹಾಗೂ ಅತೀ ಕಡಿಮೆ ಕಾಠಿಣ್ಯತೆಯ ಮೌಲ್ಯವನ್ನು ಹೊಂದಿರುವ ಪ್ರಶ್ನೆಗಳನ್ನು ಸಹ ತಿರಸ್ಕರಿಸಲಾಗುತ್ತದೆ. ಕಾಠಿಣ್ಯತೆಯ ಮೌಲ್ಯದ ವ್ಯಾಪ್ತಿ 0.49 ರಿಂದ 0.70ರ ವರೆಗೆ ಇದ್ದರೆ ಅದನ್ನು ಅಂತಿಮ ಪರೀಕ್ಷೆಗೆ ಆಯ್ಕೆ ಮಾಡಲಾಗುತ್ತದೆ.
- ಪ್ರಶ್ನೆಗಳನ್ನು ಆಯ್ಕೆ ಮಾಡುವಾಗ ಎರಡು ಮೌಲ್ಯಗಳನ್ನು ಜೊತೆಯಾಗಿ ಪರಿಗಣಿಸಲಾಗುತ್ತದೆ. ಆಯ್ಕೆಯ ಅರ್ಹತಾ ಮೌಲ್ಯದ ಸಮೀಪದಲ್ಲಿರುವ ಪ್ರಶ್ನೆಗಳನ್ನು ಅಗತ್ಯವಿದ್ದಲ್ಲಿ ಸೂಕ್ತ ಮಾರ್ಪಾಡಿನೊಂದಿಗೆ ಸೇರ್ಪಡೆ ಮಾಡಿಕೊಳ್ಳಲಾಗುತ್ತದೆ.

### 5. ಅಂತಿಮ ಮಾದರಿಯ ಕರಡು ಪ್ರತಿ ತಯಾರಿ

ಅಂತಿಮ ವಿಶ್ಲೇಷಣೆಯ ಮೂಲಕ ಆಯ್ಕೆ ಮಾಡಲಾದ ಪ್ರಶ್ನೆಗಳನ್ನು ಅಂತಿಮ ಪರೀಕ್ಷೆಯ ನೀಲ ನಕಾಶೆಗನುಗುಣವಾಗಿ ತೆಗೆದುಕೊಂಡು ಅಂತಿಮ ಮಾದರಿಯ ಕರಡು ಪ್ರತಿಯನ್ನು ತಯಾರಿಸಬೇಕು.

ಅಂತಿಮ ಪರೀಕ್ಷೆಯ ಸಮಯವನ್ನು ನಿರ್ಧರಿಸಲು ಪರೀಕ್ಷೆಯನ್ನು ಉತ್ತರಿಸಲು ಪ್ರಾಯೋಗಿಕ ಗುಂಪಿನ ಪ್ರತಿಯೊಬ್ಬ ಪರೀಕ್ಷಾರ್ಥಿಯು ತೆಗೆದುಕೊಳ್ಳುವ ಸಮಯವನ್ನು ದಾಖಲಿಸಿಕೊಂಡು ಈ ಸಮಯದ ಆಧಾರದ ಮೇಲೆ ಪರೀಕ್ಷೆಯ ಪ್ರಾಯೋಗಿಕತೆಯನ್ನು ನಿರ್ಧರಿಸಬೇಕು.

### 6. ಅಂತಿಮ ಮಾದರಿಯ ನಮೂನೆಯ ಆಯ್ಕೆ

ಮಾನಕೀಕರಿಸಿದ ಪರೀಕ್ಷೆಗೆ ಮಾನಕಗಳನ್ನು ನಿಗದಿಪಡಿಸಲು ಸಮುದಾಯದ ಎಲ್ಲ ಭಾಗಗಳನ್ನು ಪ್ರತಿನಿಧಿಸುವ ನಮೂನೆಯನ್ನು ಆಯ್ಕೆ ಮಾಡಬೇಕು. ಸಾಮಾನ್ಯವಾಗಿ ಮಾನಕೀಕರಿಸಿದ ಪರೀಕ್ಷೆಗೆ ನಮೂನೆಯನ್ನು ಯಾದೃಚ್ಛಿಕ ಮಾದರಿಯ ಮೂಲಕ ಆಯ್ಕೆ ಮಾಡಲಾಗುತ್ತದೆ.

### 7. ಪರೀಕ್ಷೆಯ ಮಾನಕೀಕರಣಕ್ಕಾಗಿ ದತ್ತಾಂಶ ಸಂಗ್ರಹ

ಯಾದೃಚ್ಛಿಕ ವಿಧಾನದಲ್ಲಿ ಆಯ್ಕೆ ಮಾಡಿಕೊಂಡ ನಮೂನೆಗೆ ಪರೀಕ್ಷೆ ತಯಾರಕರು ಪರೀಕ್ಷೆಯಲ್ಲಿ ತಿಳಿಸಿದ, ಪರೀಕ್ಷೆಯನ್ನು ಉತ್ತರಿಸುವ ವಾತಾವರಣವನ್ನು ಕಲ್ಪಿಸುವುದರ ಮೂಲಕ ಪರೀಕ್ಷೆಯನ್ನು ನಡೆಸಬೇಕು. ಆ ಮೂಲಕ ಮಾನಕಗಳನ್ನು ನಿಗದಿಪಡಿಸಲು ಬೇಕಾಗುವ ದತ್ತಾಂಶ ಸಂಗ್ರಹಿಸಬೇಕು.

### 8. ಅಂಕ ನೀಡುವಿಕೆ

ಪರೀಕ್ಷೆಯ ವಿಧವನ್ನು ಅವಲಂಬಿಸಿಕೊಂಡು ಅಂಕ ನೀಡುವ ವಿಧಾನವನ್ನು ವಸ್ತುನಿಷ್ಠವಾಗಿ ತಯಾರಿಸಬೇಕು. ಈ ಉತ್ತರ ಪತ್ರಿಕೆಯನ್ನು ಪರೀಕ್ಷೆಯ ತಯಾರಕರು ಪೂರ್ವ ಯೋಜಿತವಾಗಿ ತಯಾರಿಸಿರಬೇಕು.

### 9. ಪರೀಕ್ಷೆಯ ಸಮಂಜಸತೆ: (ಸಿಂಧುತ್ವ) (Validity of Text)

ಒಂದು ಪರೀಕ್ಷೆಯು ಯಾವ ಉದ್ದೇಶದಿಂದ ನಿರ್ಮಿತವಾಗಿದೆಯೋ ಅದರಂತೆ ಅದು ಕಾರ್ಯ ನಿರ್ವಹಿಸದಿದ್ದರೆ, ಅಂದರೆ ನಿರೀಕ್ಷಿತ ಉದ್ದೇಶ ಈಡೇರದಿದ್ದರೆ ಅದರಲ್ಲಿ ಸಮಂಜಸತೆ ಇಲ್ಲ ಎಂದು ಹೇಳಲಾಗುವುದು. ಕರಾರುವಾಕ್ಕಾಗಿ ಹಾಗೂ ನಿಜವಾಗಿ ಅಳೆದಾಗ ಮಾತ್ರ ಪರೀಕ್ಷೆಯು ಸಮಂಜಸತೆಯನ್ನು ಹೊಂದಿದೆ ಎಂದು ಅರ್ಥ.

**ಸಮಂಜಸತೆಯ ವಿಧಗಳು:** ಸಾಮಾನ್ಯವಾಗಿ ಸಮಂಜಸತೆಯನ್ನು ನಿರ್ಧರಿಸಲು ಈ ಕೆಳಗಿನಂತೆ ನಾಲ್ಕು ವಿಧಗಳನ್ನು ಗುರುತಿಸಲಾಗಿದೆ.

**(i) ವಿಷಯ ಸಮಂಜಸತೆ:** ಪರೀಕ್ಷೆಯನ್ನು ಯಾವ ವಿಷಯವನ್ನು ಪರೀಕ್ಷಿಸಬೇಕೆಂದು ತಯಾರಿಸಲಾಗಿದೆಯೋ ಅದನ್ನು ಪರೀಕ್ಷಿಸಿದರೆ ಅಂತಹ ಪರೀಕ್ಷೆಯು ವಿಷಯ ಸಮಂಜಸತೆ ಹೊಂದಿದೆ ಎಂದು ಹೇಳಬಹುದು.

ವಿಷಯ ಸಮಂಜಸತೆಯಲ್ಲಿ ಎರಡು ರೀತಿಯಿದೆ. ಒಂದನೇ ವಿಧಾನವನ್ನು ತೋರಿಕೆಯ ಸಮಂಜಸತೆ ಎನ್ನುವರು. ಇದರಲ್ಲಿ ಪರೀಕ್ಷೆಯು ಬಾಹ್ಯ ರೀತಿಯಲ್ಲಿ ಸರಿ ಅಥವಾ ತೃಪ್ತಿಕರ ಹಾಗೂ ಪರೀಕ್ಷೆಯಲ್ಲಿನ ಪ್ರಶ್ನೆಗಳು ಪರೀಕ್ಷೆಯ ಉದ್ದೇಶಗಳನ್ನು ಈಡೇರಿಸಲು ಸಮರ್ಪಕವಾಗಿದೆ ಎಂಬುದನ್ನು ತಿಳಿಸುತ್ತದೆ.

Digitised by Bharatavani, CIIL

**(ii) ತಾರ್ಕಿಕ ಸಮಂಜಸತೆ:** ವಿಷಯ ಸಮಂಜಸತೆಯ ಎರಡನೇ ವಿಧಾನ. ಇದು ತೋರಿಕೆಯ ಸಮಂಜಸತೆಗಿಂತ ಉತ್ತಮವಾದುದು. ಈ ರೀತಿಯಲ್ಲಿ ವಿಷಯ ಸಮಂಜಸತೆಯನ್ನು ಕಲ್ಪಿಸಲು ಪರೀಕ್ಷೆಯಲ್ಲಿ ಯಾವ ವಿಷಯ / ಗುಣ / ಲಕ್ಷಣವನ್ನು ಅಳೆಯಲಾಗುತ್ತಿದೆಯೋ ಅದರ ವ್ಯಾಖ್ಯೆಯನ್ನು ಸ್ಪಷ್ಟವಾಗಿ ವರ್ತನೆಯ ರೂಪದಲ್ಲಿ ನೀಡಬೇಕು ಹಾಗೂ ಅಳೆಯಲ್ಪಡುವ ಒಟ್ಟು ಕ್ಷೇತ್ರವನ್ನು ಅದರ ಘಟಕಾಂಶಗಳಾಗಿ ವಿಂಗಡಿಸಿ ವ್ಯಾಖ್ಯಾನಿಸಬೇಕು. ಈ ಅಂಶಗಳನ್ನು ಆಧಾರವಾಗಿಟ್ಟುಕೊಂಡು, ಪರೀಕ್ಷೆಯ ಪ್ರತಿಯೊಂದು ಘಟಕಾಂಶವನ್ನು ಅಳೆಯಲು ಸಾಕಷ್ಟು ಸಂಖ್ಯೆಯ ಪ್ರಶ್ನೆಗಳನ್ನು ಒಳಗೊಂಡಿವೆಯೇ ಹಾಗೂ ಆ ಪ್ರಶ್ನೆಗಳು ಆ ಘಟಕಾಂಶದಲ್ಲಿ ತಿಳಿಸಿರುವ ವರ್ತನೆಯನ್ನು ಅಳೆಯಲು ಸಮರ್ಪಕವಾಗಿವೆಯೇ ಎಂಬುದನ್ನು ತಿಳಿಯಬಹುದು. ಸಾಮಾನ್ಯವಾಗಿ ವಿಷಯ ಸಮಂಜಸತೆಯನ್ನು ಮಾಡುವಾಗ ಈ ಎರಡೂ ರೀತಿಯನ್ನು ಜೊತೆಯಾಗಿ ಬಳಸಿಕೊಳ್ಳಲಾಗುತ್ತದೆ.

**(iii) ಪ್ರಾಯೋಗಾತ್ಮಕ ಸಮಂಜಸತೆ:** ಪರೀಕ್ಷೆಯಲ್ಲಿ ಅಳೆಯುವ ವರ್ತನೆ ಹಾಗೂ ಮಾನದಂಡಾಧಾರಿತ ವರ್ತನೆಗಳಿಗಿರುವ ಸಂಬಂಧವನ್ನು ಪ್ರಯೋಗಾತ್ಮಕ ಸಮಂಜಸತೆ ಎಂದು ಹೇಳಲಾಗುತ್ತದೆ. ಇದನ್ನು ಪೂರ್ವಾನುಮಾನ ಸಮಂಜಸತೆ ಹಾಗೂ ಒಮ್ಮತ ಸೂಚಕ ಸಮಂಜಸತೆ ಮೂಲಕ ನಿರ್ಧರಿಸಲಾಗುತ್ತದೆ.

ವ್ಯಕ್ತಿಯೊಬ್ಬನು ಒಂದು ವಿಷಯದಲ್ಲಿ ಪಡೆಯುವ ಅಂಕಗಳು ಅವನ ಸಹಜ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ ಎಂಬುದು ಒಂದು ಸಾಮಾನ್ಯ ತಿಳುವಳಿಕೆ. ಹೀಗೆ ಒಂದು ವಿಷಯದಲ್ಲಿ ಪರೀಕ್ಷಿಸಿದಾಗ ಪರೀಕ್ಷಾರ್ಥಿ ಪಡೆದ ಅಂಕಗಳನ್ನು ಆಧಾರವಾಗಿಟ್ಟುಕೊಂಡು ಮುಂದೆ ವಿವಿಧ ವಿಷಯಗಳಲ್ಲಿ ಪಡೆಯುವ ಅಂಕಗಳ ಬಗ್ಗೆ ಭವಿಷ್ಯತ್ತಿನಲ್ಲಿ ನಿರ್ಧರಿಸುವ ಕ್ರಮವನ್ನೇ ಪೂರ್ವಾನುಮಾನ ಸಮಂಜಸತೆ ಎನ್ನುವರು.

ಮಾನಕೀಕರಿಸಲ್ಪಡುವ ಪರೀಕ್ಷೆಯಲ್ಲಿನ ಅಂಕಗಳು ಪ್ರಚಲಿತವಾಗಿರುವ (ಚಾಲ್ತಿಯಲ್ಲಿರುವ) ಇತರ ಅಳೆಯಲ್ಪಡುವ ಅಂಶಗಳಿಗೆ ಸಂಬಂಧಿಸಿದಂತೆ ಪ್ರಚಲಿತವಾಗಿರುವ ಇತರ ಪರೀಕ್ಷೆಗೆ ಹೇಗೆ ಸಂಬಂಧಿಸಿದೆ ಎಂಬುದನ್ನು ತಿಳಿಸುತ್ತದೆ.

ರಚನಾ ಸಮಂಜಸತೆಯು ಪರೀಕ್ಷಾರ್ಥಿಯು ಎಷ್ಟರಮಟ್ಟಿಗೆ ಮಾನಕೀಕರಿಸಲ್ಪಡುವ ಪರೀಕ್ಷೆಯು ಒಳಗೊಂಡಿದೆಯೆನ್ನಲಾದ ಪ್ರಾಕಲ್ಪನಾತ್ಮಕ ಗುಣ, ಸಾಮರ್ಥ್ಯ ಅಥವಾ ಅಂಶವನ್ನು (ರಚನೆ) ಪಡೆದಿದ್ದಾನೆ/ಳೆ ಎಂಬುದನ್ನು ತಿಳಿಸುತ್ತದೆ.

**iv) ಪಠ್ಯವಸ್ತು ಸಮಂಜಸತೆ:** ಯಾವುದಾದರೂ ನಿರ್ದಿಷ್ಟ ಶೈಕ್ಷಣಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಮೌಲ್ಯಮಾಪನ ಮಾಡಲು ತಯಾರಿಸುವ ಪರೀಕ್ಷೆ. ಈ ರೀತಿಯ ಸಮಂಜಸತೆ ಇರಬೇಕಾಗುತ್ತದೆ. ಈ ಉದ್ದೇಶಕ್ಕೆ ತಯಾರಿಸುವ ಪರೀಕ್ಷಾಂಶಗಳು ಪಠ್ಯವಸ್ತುವಿಗೆ ನೇರವಾಗಿ ಸಂಬಂಧಿಸಿರಬೇಕಾಗುತ್ತದೆ. ಪರೀಕ್ಷಾಂಶಗಳನ್ನು ಸಿದ್ಧಪಡಿಸುವಾಗ ಅವುಗಳ ವ್ಯಾಪ್ತಿ ಪಠ್ಯವಸ್ತುವಿನ ಪರಿಧಿಯೊಳಗೆ ಇರುವಂತೆ ನೋಡಿಕೊಳ್ಳಬೇಕು. ಈ ರೀತಿಯ ಸಮಂಜಸತೆ ಇದೆಯೇ ಇಲ್ಲವೆ ಎಂದು ಪರೀಕ್ಷಿಸಲು ಪ್ರಶ್ನೆಪತ್ರಿಕೆಗಳನ್ನು ಪಠ್ಯವಸ್ತುವಿನ ದೃಷ್ಟಿಯಿಂದ ಪರಿಶೀಲಿಸಲಾಗುತ್ತದೆ.

## 10. ಪರೀಕ್ಷೆಯ ವಿಶ್ವಸನೀಯತೆ (Raliability of Test)

ವಿಶ್ವಸನೀಯತೆಯೆಂಬುದು ಉತ್ತಮ ಪರೀಕ್ಷೆಗಳ ಒಂದು ಪ್ರಮುಖ ಲಕ್ಷಣವಾಗಿದೆ. ಒಂದು ಪರೀಕ್ಷೆಯನ್ನು ಯಾವಾಗ ಬಳಕೆ ಮಾಡಿಕೊಂಡರೂ ಅದು ಒಂದೇ ಮೌಲ್ಯವನ್ನು ನೀಡಿದರೆ ಆ ಪರೀಕ್ಷೆಯು ವಿಶ್ವಸನೀಯವಾಗಿದೆ ಎನ್ನಲಾಗುತ್ತದೆ. ವಿಶ್ವಸನೀಯತೆ ಪರೀಕ್ಷೆಯ ಮೌಲ್ಯಗಳ ಏಕರೂಪತೆಯನ್ನು ತಿಳಿಸುತ್ತದೆ.

ವಿಶ್ವಸನೀಯತೆ ಹೊಂದಿರುವ ಪರೀಕ್ಷೆ ನಂಬಿಕೆಗೆ ಅರ್ಹವಾದುದು. ಇಂತಹ ಗುಣವನ್ನು ಹೊಂದಿರುವ ಪರೀಕ್ಷೆಯು ಅಳೆಯುವ ಮೌಲ್ಯವು ನಿಖರವಾಗಿರುತ್ತದೆ.

### ವಿಶ್ವಸನೀಯತೆಯನ್ನು ದೃಢಪಡಿಸಿಕೊಳ್ಳಬಹುದಾದ ವಿಧಾನಗಳು

**ಪರೀಕ್ಷೆ– ಪುನಃ ಪರೀಕ್ಷಾ ವಿಧಾನ:** ಈ ವಿಧಾನದಲ್ಲಿ ತಯಾರಿಸಲ್ಪಟ್ಟ ಪರೀಕ್ಷೆಯ ಸಾಧನವನ್ನು ಒಂದು ನಿರ್ದಿಷ್ಟ ಗುಂಪಿಗೆ ನೀಡುವುದು ಹಾಗೂ ಪ್ರತಿಯೊಬ್ಬರ ಅಂಕಗಳನ್ನು ಗುರುತಿಸಿಕೊಳ್ಳುವುದು.

ಅದೇ ಪರೀಕ್ಷೆಯನ್ನು ಕಾಲವಿಳಂಬವಾಗದಂತೆ ಮತ್ತೊಮ್ಮೆ ಅದೇ ಗುಂಪಿಗೆ ನೀಡಿ ಪ್ರತಿಯೊಬ್ಬರ ಅಂಕಗಳನ್ನು ಪಟ್ಟಿ ಮಾಡಬೇಕು. ಈ ರೀತಿಯಾಗಿ ದೊರೆತ ಅಂಕಗಳ ನಡುವಿನ ಸಹ ಸಂಬಂಧ ಗುಣಾಂಕವನ್ನು ಕಂಡು ಹಿಡಿಯುವ ಮೂಲಕ ಪರೀಕ್ಷೆಯ ವಿಶ್ವಸನೀಯತೆಯನ್ನು ಕಂಡು ಹಿಡಿಯಬಹುದು.

**ಸಮಾನಾಂತರ ರೂಪ ವಿಧಾನ:** ಈ ರೀತಿಯಲ್ಲಿ ವಿಶ್ವಸನೀಯತೆಯನ್ನು ಕಂಡು ಹಿಡಿಯಲು ಎರಡು ಸಮಾನವಾದ ಪರೀಕ್ಷೆಗಳ ಅಗತ್ಯವಿದೆ. ತಯಾರಿಸಿದ ಎರಡು ಸಮಾನವಾದ ಪರೀಕ್ಷೆಗಳನ್ನು ಒಂದೇ ಗುಂಪಿಗೆ ಒಂದಾದ ನಂತರ ಮತ್ತೊಂದನ್ನು ನೀಡಿ ಪ್ರತಿಯೊಂದರಲ್ಲೂ ದೊರೆತ ಅಂಕಗಳ ನಡುವಿನ ಸಹಸಂಬಂಧ ಗುಣಾಂಕವನ್ನು ಲೆಕ್ಕಾಚಾರ ಮಾಡಿ ಮಾನಕೀಕರಿಸಲ್ಪಡುವ ಪರೀಕ್ಷೆಯ ವಿಶ್ವಸನೀಯತೆಯನ್ನು ಕಂಡು ಹಿಡಿಯಲಾಗುತ್ತದೆ.

**ಅರ್ಧ ವಿಭಜನೆಯ ವಿಧಾನ:** ತಯಾರಿಸಿದ ಪರೀಕ್ಷೆಯ ಸಾಧನವನ್ನು ಎರಡು ಸಮಭಾಗಗಳಾಗಿ ಮಾಡಿ ಒಂದು ಗುಂಪಿಗೆ ಒಂದಾದ ನಂತರ ಮತ್ತೊಂದನ್ನು ನೀಡಿ, ಪ್ರತಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ನಡುವಿನ ಸಹ–ಸಂಬಂಧವನ್ನು ಪಿಯರ್‌ಸನ್ ವಿಧಾನದಲ್ಲಿ ಕಂಡು ಹಿಡಿಯಲಾಗುತ್ತದೆ. ಮಾನಕೀಕರಿಸಲ್ಪಡುವ ಇಡೀ ಪರೀಕ್ಷೆಯ ವಿಶ್ವಸನೀಯತೆಯನ್ನು ಸ್ಪಿಯರ್‌ಮೆನ್ ಬ್ರೌನ್ ಪ್ರೊಪೆಸ್ಸಿ ಸೂತ್ರವನ್ನು ಬಳಸಿ ಕಂಡು ಹಿಡಿಯಲಾಗುತ್ತದೆ.

- ಕುಡರ್ – ರಿಚರ್ಡ್‌ಸನ್ ವಿಧಾನ –

  ಈ ವಿಧಾನದಲ್ಲಿ ಒಳಹರಿವಿನ ಸಹ ಸಂಬಂಧಕ್ಕೆ ಒತ್ತು ನೀಡಲಾಗುತ್ತದೆ. ಇದರಲ್ಲಿ ಪರೀಕ್ಷೆಯ ಸಾಧನವನ್ನು ಒಂದು ಗುಂಪಿಗೆ ನೀಡಲಾಗುತ್ತದೆ. ಹೀಗೆ ನೀಡಲಾದ ಪರೀಕ್ಷೆಯ ಉತ್ತರಗಳಿಗೆ ಅಂಕಗಳನ್ನು ನೀಡಿ ಪ್ರತಿ ಪ್ರಶ್ನೆಯ ಅಂಕವನ್ನು ಗುರುತಿಸಿಕೊಳ್ಳಲಾಗುತ್ತದೆ. ಬಳಿಕ ಕುಡರ್–ರಿಚರ್ಡ್‌ಸನ್ ಸೂತ್ರವನ್ನು ಉಪಯೋಗಿಸಿ ಪಡೆದ ವಿಶ್ವಸನೀಯತೆಯ ಸೂಚಿಯ ಪರೀಕ್ಷೆಯ ಆಧಾರದ ಮೇಲೆ ವಿಶ್ವಸನೀಯತೆಯನ್ನು ನಿರ್ಧರಿಸಲಾಗುತ್ತದೆ.

## 11. ಪರೀಕ್ಷಣದ ಮಾನಕಗಳನ್ನು (Norms) ನಿಗದಿಪಡಿಸುವುದು

ಒಂದು ನಿರ್ದಿಷ್ಟ ಜನ ಸಮುದಾಯಕ್ಕೆ ನಿರ್ದಿಷ್ಟವಾದ ಪರೀಕ್ಷಣದ ಮೇಲೆ ಮಾಡಿರುವ ನಿಗದಿತ ಅಂಕ ಅಥವಾ ಸರಾಸರಿಯೇ ಮಾನಕ. ಮಾನಕಗಳನ್ನು ಕೋಷ್ಟಕದಲ್ಲಿ ನಿಗದಿಪಡಿಸಿದ ಕ್ರಮದಲ್ಲಿ ನೀಡಲಾಗುತ್ತದೆ. ಮಾನಕಗಳನ್ನು ನಿರ್ಧರಿಸುವುದರಿಂದ ಪರೀಕ್ಷೆಗಳ ಫಲಿತಾಂಶಗಳ ಅರ್ಥ ವಿವರಣೆಯಲ್ಲಾಗುವ ತಪ್ಪನ್ನೂ ಕಡಿಮೆಗೊಳಿಸಲಾಗುತ್ತದೆ. ಮಾನಕಗಳು

Digitised by Bharatavani, CIIL

ಪರೀಕ್ಷಾರ್ಥಿಯು ಗಳಿಸಿದ ಮೂಲ ಅಂಕಗಳನ್ನು ಅರ್ಥಪೂರ್ಣವಾಗಿಸುತ್ತದೆ.

**ಮಾನಕಗಳ ವಿಧಗಳು:** ಶತಾಂಶ ಮಾನಕ: ಮಾನಕೀಕರಣದಲ್ಲಿ ಬಳಸಲಾದ ನಮೂನೆಯಲ್ಲಿ ಎಷ್ಟು ಶೇಕಡಾವಾರು ಅಂಕಗಳು ನಿರ್ದಿಷ್ಟ ಮೂಲ ಅಂಕಕ್ಕಿಂತ ಕೆಳಮಟ್ಟದಲ್ಲಿದೆ ಎಂಬುದನ್ನು ತಿಳಿಸುವ ಮೂಲಕ ಶತಾಂಶ ಮಾನಕವು ಮೂಲ ಅಂಕದ ಸ್ಥಾನವನ್ನು ತಿಳಿಸುತ್ತದೆ. ಶತಾಂಶ ಮಾನಕವನ್ನು ಅಂತಿಮ ಪರೀಕ್ಷೆಯಲ್ಲಿ ಪರೀಕ್ಷಾರ್ಥಿಗಳು ಪಡೆದ ಪ್ರತಿಯೊಂದು ಅಂಕಕ್ಕೂ ಲೆಕ್ಕಾಚಾರ ಮಾಡಿ ಕೋಷ್ಟಕದಲ್ಲಿ ನೀಡಲಾಗುತ್ತದೆ.

**ಪ್ರಾಮಾಣೀಕೃತ ಅಂಕ:** (**Standard Score**) ಈ ಮಾನಕದ ಘಟಕಾಂಶಗಳೆಲ್ಲವೂ ಸಮಾನ ಹಾಗೂ ಇದರ ಗಾತ್ರ ಮತ್ತು ವ್ಯಾಪ್ತಿ ಒಂದು ವಿತರಣೆಯಿಂದ ಇನ್ನೊಂದು ವಿತರಣೆಗೆ ಬದಲಾಗುವುದಿಲ್ಲ. ಇಲ್ಲಿ ಮೂಲ ಅಂಕಗಳನ್ನು ಈ ಕೆಳಗಿನ ಸೂತ್ರವನ್ನು ಉಪಯೋಗಿಸಿ ಪ್ರಾಮಾಣೀಕೃತ ಅಂಕಗಳಾಗಿ ಪರಿವರ್ತಿಸಲಾಗುತ್ತದೆ.

$$Z = \frac{(x-m)}{\sigma}$$

Z - ಮಾನಕೀಕೃತ ಅಂಕ ಮಾನಗಳಲ್ಲಿ "σ" ಮಾನಗಳಲ್ಲಿ

X - ಮೂಲ ಅಂಕ

m - ಸರಾಸರಿ

σ = ಅಂಕಗಳ ಮಾನಕ ವಿಚಲನೆ.

ಪ್ರತಿ ಮೂಲ ಅಂಕಗಳ ಪ್ರಾಮಾಣೀಕೃತ ಅಂಕವನ್ನು ಲೆಕ್ಕಾಚಾರ ಮಾಡಿದ ಬಳಿಕ ಅವುಗಳನ್ನು ಪ್ರಾಮಾಣೀಕೃತ ಅಂಕ ಮಾನಕಗಳ ಕೋಷ್ಟಕದಲ್ಲಿ ನೀಡಲಾಗುತ್ತದೆ. ಈ ಮಾನವು ಮೂಲ ಅಂಕವು ಸರಾಸರಿಗಿಂತ ಎಷ್ಟು ದೂರದಲ್ಲಿದೆ ಎಂಬುದನ್ನು ಮಾನಕ ವಿಚಲನೆ ಮಾನದಲ್ಲಿ ತಿಳಿಸುತ್ತದೆ.

**ವಯಸ್ಸಿನ ಮಾನಕ:** ಇದು ಒಂದು ನಿರ್ದಿಷ್ಟ ವಯಸ್ಸಿನವರು ಗಳಿಸಿದ ಸರಾಸರಿಯಾಗಿರುತ್ತದೆ. ವಯಸ್ಸಿನೊಂದಿಗೆ ಹೆಚ್ಚಾಗುತ್ತಾ ಹೋಗುವಂತಹ ಸಾಮರ್ಥ್ಯಗಳಿಗೆ ಇದು ಸೂಕ್ತವಾದ ಮಾನಕ. ಇಲ್ಲಿ ಭಿನ್ನ ವಯಸ್ಸಿನವರು ಗಳಿಸಿದ ಸರಾಸರಿ ಅಂಕಗಳನ್ನು ಲೆಕ್ಕಾಚಾರ ಮಾಡಿ ಕೋಷ್ಟಕದಲ್ಲಿ ಕೊಡಲಾಗುತ್ತದೆ.

**ಶ್ರೇಣಿ ಮಾನಕ:** ಇದು ಪರೀಕ್ಷೆಯಲ್ಲಿ ಒಂದು ನಿರ್ದಿಷ್ಟ ತರಗತಿಯ ವಿದ್ಯಾರ್ಥಿಗಳು ಗಳಿಸಿದ ಸರಾಸರಿಯಾಗಿರುತ್ತದೆ. ಇದರ ಆಧಾರದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಗ್ರೇಡ್ ಸಮಾನಾಂತರವಾಗಿ ವಿಶ್ಲೇಷಣೆ ಮಾಡಬಹುದು. ಶ್ರೇಣಿ ಮಾನಕವು ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳ ಸರಾಸರಿ ಸಾಧನೆಯನ್ನು ತಿಳಿಸುತ್ತದೆ. ಹೀಗಾಗಿ ಮಾನಕೀಕರಿಸಿದ ಪರೀಕ್ಷೆಯ ಶ್ರೇಣಿ ಮಾನಕವನ್ನು ಆಧಾರವಾಗಿರಿಸಿ ವಿದ್ಯಾರ್ಥಿಗಳ ಸಾಧನೆಯ ಮಟ್ಟವನ್ನು ಗ್ರೇಡ್ ಅಥವಾ ಶ್ರೇಣಿಗೆ ಅನುಗುಣವಾಗಿ ವಿಶ್ಲೇಷಣೆ ಮಾಡಬಹುದು.

**ಪರೀಕ್ಷಾ ಕೈಪಿಡಿ (Test Manual) ತಯಾರಿ:** ಕೊನೆಯ ಹಂತವಾಗಿ ಮಾನಕೀಕರಿಸಿದ ಪರೀಕ್ಷೆ ಬಳಕೆಯಾಗಲು ಸಹಕಾರಿಯಾಗುವಂತೆ ಪರೀಕ್ಷೆ ಕೈಪಿಡಿಯನ್ನು ತಯಾರಿಸಲಾಗುತ್ತದೆ. ತಯಾರಿಸಲ್ಪಟ್ಟ ಕೈಪಿಡಿಯು ಬಳಕೆದಾರರಿಗೆ ಸಹಾಯಕವಾಗುವಂತಿರಬೇಕು ಹಾಗೂ ಪರೀಕ್ಷೆಯ ತಾಂತ್ರಿಕಾಂಶಗಳನ್ನು ಸಹ ಒಳಗೊಂಡಿರಬೇಕು. ಈ ಕೆಳಗಿನ ಅಂಶಗಳ ಕುರಿತಾದ ಮಾಹಿತಿಯನ್ನು ಅಗತ್ಯವಾಗಿ ನೀಡಬೇಕು.

- ಪರೀಕ್ಷೆಯ ಚಾರಿತ್ರಿಕ ಹಿನ್ನೆಲೆ ಹಾಗೂ ಯೋಜನೆ.
- ಪರೀಕ್ಷೆಯ ಅವಧಿ
- ಉತ್ತರಗಳು ಹಾಗೂ ಅಂಕಗಳನ್ನು ನೀಡುವ ವಿಧಾನ
- ಮಾನಕೀಕರಣ ಕುರಿತಾದ ಮಾಹಿತಿ
- ಪರೀಕ್ಷೆಯ ಗುಣಗಳು ಹಾಗೂ ಸ್ವರೂಪದ ಸಾರಾಂಶ
- ನಿಗದಿಪಡಿಸಿದ ಮಾನಕಗಳ ಪಟ್ಟಿ

–ವಿ. ಕು.

## ಪಾಠ ವೀಕ್ಷಣೆ

ಪ್ರಶಿಕ್ಷಣದ ಅಭ್ಯಾಸಾರ್ಥ ಬೋಧನೆ ಕಾರ್ಯಕ್ರಮದಲ್ಲಿ ಅದರ ಜೊತೆ ಜೊತೆಗೆ ಸಾಗುವ ಬಹುಮುಖ್ಯವಾದ ಕೆಲಸವೆಂದರೆ ವೀಕ್ಷಣೆ. ಆಡುಮಾತಿನಲ್ಲಿ (ಇದನ್ನು 'ನೋಡು' ಅಥವಾ 'ನೋಡುವಿಕೆ' ಎಂದು ಕರೆಯಲಾಗುತ್ತದೆ).

ಪ್ರಸ್ತುತ ಸಂದರ್ಭದಲ್ಲಿ ನೋಡುವಿಕೆಯನ್ನು ವೀಕ್ಷಣೆ ಎಂಬುದಾಗಿ ಬಳಸಲಾಗುತ್ತಿದ್ದು ಇದರರ್ಥ ಹೀಗಿದೆ.

ಶಾಲೆ ಅಥವಾ ಕಾಲೇಜಿನಲ್ಲಿ 'ರೂಢ ಬೋಧನೆ' ಸಮಯದಲ್ಲಿ ಪ್ರಶಿಕ್ಷಣಾರ್ಥಿಗಳು ಬೋಧಿಸುವುದನ್ನು ಪ್ರಶಿಕ್ಷಕರು ಅಥವಾ ಶಾಲಾ ಶಿಕ್ಷಕರು ಅಥವಾ ಸಹಪಾಠಿಗಳು ನೋಡಿ ಬೋಧನಾ ವಿಧಾನದ ಸುಧಾರಣೆಗಾಗಿ ನೀಡುವ ಸೂಕ್ತ ಸಲಹೆ ಸೂಚನೆಗಳನ್ನು ವೀಕ್ಷಣೆ ಎಂದು ಕರೆಯಲಾಗುತ್ತದೆ.

ನೋಡುತ್ತಿರುವ ಮೇಲ್ವಿಚಾರಕರಾದ ಅನುಭವಿ ಶಾಲಾ ಶಿಕ್ಷಕರು ಅಥವಾ ಕಾಲೇಜಿನ ಶಿಕ್ಷಕರ ನೋಡುವಿಕೆಯನ್ನು ವೀಕ್ಷಣೆ ಎನ್ನಲಾಗುತ್ತದೆ.

### ಪಾಠ ವೀಕ್ಷಣೆಯ ಉದ್ದೇಶಗಳು

ಪಾಠ ವೀಕ್ಷಣೆಯ ಉದ್ದೇಶಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರಬಹುದು. ಅಂತಹ ಕೆಲವು ಉದ್ದೇಶಗಳೆಂದರೆ:

1. ಪ್ರಶಿಕ್ಷಣಾರ್ಥಿಗಳ ಬೋಧನೆಯ ಸುಧಾರಣೆ.
2. ಪ್ರಶಿಕ್ಷಣಾರ್ಥಿಗಳು ಇಟ್ಟುಕೊಂಡ ಉದ್ದೇಶ. ಬೋಧಿಸುತ್ತಿರುವ ವಸ್ತು, ಬಳಸಿದ ಕಲಿಕೆಯ ಉಪಕರಣ. ಅನುಸರಿಸಿದ ತಂತ್ರ/ ಶೈಲಿ, ಕೇಳಿದ ಪ್ರಶ್ನೆಗಳು ಮತ್ತು ಅವುಗಳ ನಮೂನೆಗಳು ಮೌಲ್ಯಮಾಪನ ಮಾಡಿದ ರೀತಿ ಇವುಗಳ ಮಧ್ಯೆ ಸಾಮ್ಯತೆಯಿದೆಯೇ ಹೇಗೆ ಎಂಬುದರ ಪರಿಶೀಲನೆ.
3. ವಿದ್ಯಾರ್ಥಿಯ ಪೂರ್ವಸಿದ್ಧತೆ, ಭಾಷೆಯ ಮೇಲಿನ ಹಿಡಿತ, ವಿಷಯದ ಆಳ ಹರಹನ್ನು ತಿಳಿಯುವುದು.
4. ತರಗತಿಯ ನಿರ್ವಹಣೆ, ಸಮಯ ಪಾಲನೆಯ ಜಾಣ್ಮೆಯನ್ನು ಅರಿಯುವುದು.
5. ವೃತ್ತಿ ಪ್ರವೇಶದ ಆರಂಭಿಕ ಹೆಜ್ಜೆಯಿಡುತ್ತಿರುವ ಪ್ರಶಿಕ್ಷಣಾರ್ಥಿಯ ನೈತಿಕ ಬೆಂಬಲವನ್ನು ಹೆಚ್ಚಿಸಿ, ಅವರಲ್ಲಿ ಆತ್ಮಸ್ಥೈರ್ಯವನ್ನು ತುಂಬುವುದು.
6. ಸಾಧಾರಣ ಬೋಧನೆಯಿಂದ ಅಸಾಧಾರಣ ಬೋಧನೆಯತ್ತ, ಅಸಾಧಾರಣದಿಂದ ಅದ್ವಿತೀಯ ಬೋಧನೆಯತ್ತ ಸಾಗಲು ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡುವುದು.
7. ಬೋಧನಾ ಪ್ರಕ್ರಿಯೆಯಲ್ಲಿ ಎದುರಾದ ಕೆಲವು ಸಾಂದರ್ಭಿಕ ಸಮಸ್ಯೆಗಳನ್ನು, ಸವಾಲುಗಳನ್ನು ಎದುರಿಸುವ ಕೌಶಲವನ್ನು ರೂಢಿಸುವುದು.

Digitised by Bharatavani, CIIL

8. ಸೃಜನಶೀಲ, ದಕ್ಷ, ರಚನಾತ್ಮಕ ಅಂಶಗಳು ಕಂಡುಬಂದಾಗ ಅಂತಹವುಗಳನ್ನು ಗುರುತಿಸಿ ಮುಂದುವರಿಸಿಕೊಂಡು ಹೋಗುವಂತೆ ಪ್ರೋತ್ಸಾಹಿಸುವುದು.
9. ಅಜ್ಞಾನ, ಅರೆಜ್ಞಾನ ಅಥವಾ ಅನಿರೀಕ್ಷಿತವಾದ ಅಡ್ಡಿ ಆತಂಕಗಳು ಎದುರಾದರೆ ಅಧೀರರಾಗದೆ ದಿಟ್ಟತನದಿಂದ ಎದುರಿಸುವ ಸಾಮರ್ಥ್ಯವನ್ನು ಬೆಳೆಸುವುದು.
10. ಇದರ ಜೊತೆಗೆ ಸಹಪಾಠಿಗಳು ವೀಕ್ಷಣೆ ಮಾಡುವ ಸಂದರ್ಭದಲ್ಲಿ, ತಮ್ಮ ಬೋಧನೆಯನ್ನು ಪ್ರಸ್ತುತ ವೀಕ್ಷಣೆಯ ಹಿನ್ನೆಲೆಯಲ್ಲಿ ಹೇಗೆ ಸುಧಾರಿಸಿಕೊಳ್ಳಬಹುದೆಂಬುದನ್ನು ಮನನ ಮಾಡಿಕೊಳ್ಳುವುದು.
11. ಅನುಭವಗಳು ಮತ್ತು ಪರಿಣಿತಿಯ ಹಂಚಿಕೆ ಹಾಗೂ ಚರ್ಚೆಗೆ ಸುಗಮವಾದ ಹಾದಿಯನ್ನು ಕಂಡುಕೊಳ್ಳುವುದು.

**ವೀಕ್ಷಣೆಯ ಮಜಲುಗಳು**

**ವೀಕ್ಷಣೆಯಲ್ಲಿ ಮೂರು ಹಂತಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ:**

1. ವೀಕ್ಷಣಾಪೂರ್ವ ಹಂತ
2. ವೀಕ್ಷಣಾ ಹಂತ
3. ವೀಕ್ಷಣೋತ್ತರ ಹಂತ

**ವೀಕ್ಷಣಾಪೂರ್ವ ಹಂತ**

**ಇಲ್ಲಿ ಮೇಲ್ವಿಚಾರಕರು ಮಾಡಬೇಕಾದ ಕಾರ್ಯಗಳೆಂದರೆ**

1. ಪಾಠ ವೀಕ್ಷಿಸಬೇಕಾದ ಪ್ರಶಿಕ್ಷಣಾರ್ಥಿಯ ಈ ಹಿಂದಿನ ವೀಕ್ಷಣೆಯ ಸೂಕ್ತಾಸೂಕ್ತತೆಯ ಪುನರಾವಲೋಕನ.
2. ಪ್ರಸ್ತುತ ವೀಕ್ಷಣೆಯ ಉದ್ದೇಶ ಮತ್ತು ಕೇಂದ್ರೀಕರಿಸುವ ಅಂಶಗಳ ಬಗೆಗೆ ಒಮ್ಮತ.
3. ವೀಕ್ಷಿಸಲಿರುವ ಪೂರ್ಣಪಾಠ ಅಥವಾ ಭಾಗದ ಬಗೆಗೆ ಒಮ್ಮತ ಮತ್ತು ಸಮ್ಮತಿ.
4. ನಿರ್ಣಾಯಕಗಳು / ಮಾನದಂಡಗಳ ಪರಸ್ಪರ ಅರಿವು ಮತ್ತು ನೀಡುವ ಸಲಹೆಯಿಂದಾಗಬಹುದಾದ ಪ್ರಯೋಜನೆಗಳ ಸ್ಪಷ್ಟ ಮಾಹಿತಿ.

ಈ ಪ್ರಶ್ನೆಗಳನ್ನು ಮೇಲ್ವಿಚಾರಕರು ಪ್ರಶಿಕ್ಷಣಾರ್ಥಿಗೆ ಕೇಳಬಹುದು. ನಾನು ನಿನಗೆ ಹೇಗೆ ಸಹಾಯ ಮಾಡಬಹುದು? ಬೋಧನೆಯ ಯಾವ ಅಂಶವನ್ನು ನೀನು ನೋಡಲು ಇಚ್ಛಿಸುತ್ತೀಯ? ನಿರ್ದಿಷ್ಟ ವಿದ್ಯಾರ್ಥಿ/ ವಿದ್ಯಾರ್ಥಿಗಳೆಡೆಗೆ ನನ್ನ ಕಣ್ಣಿರಿಸಿರಬೇಕೇ? ಯಾರು? ಏಕೆ? ಎಷ್ಟು ಸಮಯ ಪಾಠ ವೀಕ್ಷಿಸಲಿ? ವೀಕ್ಷಣೆಯ ನಂತರದಲ್ಲಿ ಯಾವಾಗ ಚರ್ಚಿಸೋಣ? ಇತ್ಯಾದಿ.

**ವೀಕ್ಷಣಾ ಹಂತ**

1. ಮೇಲ್ವಿಚಾರಕರ ಇರವು ಮತ್ತು ಪ್ರವೇಶವು ಪ್ರಶಿಕ್ಷಣಾರ್ಥಿಯ ಬೋಧನೆಗೆ ತೊಡಕಾಗಬಾರದು. ಅರ್ಥಾತ್ ಬೋಧನೆಯ ಸಮಯದಲ್ಲಿನ ಹಸ್ತಕ್ಷೇಪ ಅಸಾಧು.
2. ಸಕಾರಾತ್ಮಕ ಅಥವಾ ನಕಾರಾತ್ಮಕ ಅಂಶಗಳ ಪುಷ್ಟೀಕರಣಕ್ಕೆ ಆಧಾರಗಳು ಬೇಕು ಮತ್ತು ಇದಕ್ಕಾಗಿ ಸಾಧ್ಯವಾದಷ್ಟು ಗರಿಷ್ಠ ಸಮಯ ವೀಕ್ಷಣೆಯು ಅಪೇಕ್ಷಣೀಯ ಮತ್ತು ಅನುಕೂಲಕರ. ಇದರ ಹಿನ್ನೆಲೆಯಲ್ಲಿ ಪ್ರಗತಿಪರ ಸೂಚನೆಗಳನ್ನು ನೀಡಲು ಸಹಾಯಕ.
3. ಬೋಧಕರ ಪ್ರಸ್ತುತ ಬೋಧನೆಯನ್ನು ಆ ಸಂದರ್ಭದ ಹಿನ್ನೆಲೆಯಲ್ಲಿ ಮಾತ್ರ ನೋಡದೆ, ಅರಿವಿನ ಹಿನ್ನೆಲೆಯಲ್ಲಿ ನೋಡಬೇಕು.
4. ವೀಕ್ಷಣೆಯ ಅಂಶಗಳ ದಾಖಲೀಕರಣ ಮತ್ತು ಟಿಪ್ಪಣಿ ಯೋಗ್ಯವಾದುದು.
5. ದಾಖಲು ಮಾಡಿಕೊಳ್ಳಬಹುದಾದ ಕ್ರಮಕ್ಕೆ ಒಂದು ಆಧಾರಾಂಶಗಳ ಪಟ್ಟಿ ಅಥವಾ ತಾಳೆಪಟ್ಟಿ.

**ವೀಕ್ಷಣೋತ್ತರ ಹಂತ**

ಈ ಹಂತದಲ್ಲಿ ಮೇಲ್ವಿಚಾರಕರಾಗಲೀ, ಪ್ರಶಿಕ್ಷಣಾರ್ಥಿಗಳಾಗಲೀ ಗಮನಿಸಬೇಕಾದ ಅಂಶಗಳೆಂದರೆ,

1. ವೃತ್ತಿ ಸಂಬಂಧವು ಸಕಾರಾತ್ಮಕವಾಗಿಯೂ ಗೌರವಯುತವಾಗಿಯೂ ಇರಬೇಕು.
2. ಚರ್ಚಾ ಸಮಯ ಬದ್ಧತೆ.
3. ಮೇಲ್ವಿಚಾರಕರ ವೀಕ್ಷಣಾಂಶಗಳಿಗೆ, ಅಭಿಪ್ರಾಯಕ್ಕೆ ಅನುಗುಣವಾಗಿ ತನ್ನ ಸಮ್ಮತಿ/ಅಸಮ್ಮತಿಯನ್ನು ಪ್ರಶಿಕ್ಷಣಾರ್ಥಿಯು ತಿಳಿಸಲು ಮುಕ್ತ ಅವಕಾಶವಿರಲಿ.
4. ಮಿತಿಗಳನ್ನಷ್ಟೇ ಬೋಧಕನ ಗಮನಕ್ಕೆ ತರದೆ ಉತ್ತಮಾಂಶಗಳನ್ನು ಹೇಳಬೇಕಲ್ಲದೆ, ಅವುಗಳನ್ನು ಮುಂದುವರಿಸಿಕೊಂಡು ಹೋಗಲು ಪ್ರೋತ್ಸಾಹಿಸಬೇಕು.
5. ಟೀಕೆಟಿಪ್ಪಣಿಗಳಿಗೆ ಸಾಕ್ಷ್ಯಾಧಾರಗಳಿರಬೇಕು ಮತ್ತು ಅದರ ಪ್ರತಿಯನ್ನು ಪ್ರಶಿಕ್ಷಣಾರ್ಥಿಗೆ ಕೊಡಬೇಕು.

ಮೇಲ್ವಿಚಾರಕರು ಕೇಳಬಹುದಾದ ಪ್ರಶ್ನೆಗಳು, ಪಾಠ ಹೇಗನಿಸಿತು? ನಿನ್ನ ಈ ಅನಿಸಿಕೆಗೆ ಕಾರಣಗಳೇನು? ನನ್ನ ಅಭಿಪ್ರಾಯವನ್ನು ನಿನ್ನೊಡನೆ ಹಂಚಿಕೊಳ್ಳಬೇಕೆಂಬ ಅಪೇಕ್ಷೆ ನಿನಗಿದೆಯೇ?

**ವೀಕ್ಷಣೆ ನಿರ್ಣಾಯಕಗಳು**

ಪ್ರಶಿಕ್ಷಣಾರ್ಥಿಯ ಬೋಧನಾ ಸಾಮರ್ಥ್ಯವನ್ನು ಅಳೆಯುವವರು (ಬೋಧಿಸುತ್ತಿರುವ ಪ್ರಶಿಕ್ಷಣಾರ್ಥಿಯಿರಬಹುದು, ಸಹಪಾಠಿಗಳಿರಬಹುದು, ಶಾಲಾ ಶಿಕ್ಷಕರಿರಬಹುದು, ಪ್ರಶಿಕ್ಷಕರಿರಬಹುದು) ಗಮನಿಸಬೇಕಾದ ಅಂಶಗಳು ಅನೇಕ ಇವೆ. ಪಾಠ ಯೋಜನೆಯ ಆರಂಭದಿಂದ ಮೌಲ್ಯಮಾಪನದವರೆಗೆ ಸಾಗಿ ಬರುವ ಹಾದಿ ತುಂಬ ದೂರವಾದುದು. ಈ ದೂರದ ಹಾದಿಯಲ್ಲಿನ ಎಲ್ಲವನ್ನೂ ಲಕ್ಷ್ಯದಲ್ಲಿರಿಸಿಕೊಂಡಾಗ ಬೋಧನೆಯ ಸುಧಾರಣೆಗೆ ಸೂಕ್ತವಾದ ಸಲಹೆಗಳನ್ನು ನೀಡಲು ಸಾಧ್ಯವಾಗುತ್ತದೆ. ಆ ಅಂಶಗಳನ್ನು ಆರು ಶೀರ್ಷಿಕೆಗಳಡಿಯಲ್ಲಿ ಕ್ರೋಡೀಕರಿಸಲಾಗಿದೆ.

1. ಪರಸ್ಪರ ಸಂಬಂಧ ಸಾಮರ್ಥ್ಯ.
2. ಶೈಕ್ಷಣಿಕ ಮತ್ತು ಮನೋವೈಜ್ಞಾನಿಕ ಸಾಮರ್ಥ್ಯ.
3. ಬೋಧನಾ ವಿಷಯ ಮತ್ತು ವಿಧಾನ ಸಾಮರ್ಥ್ಯ.
4. ವ್ಯವಸ್ಥಾ ಸಾಮರ್ಥ್ಯ.

Digitised by Bharatavani, CIIL

5. ಅಂತರ ಸಾಂಸ್ಕೃತಿಕ ಸಾಮರ್ಥ್ಯ.

6. ಇತರೇ ಸಾಮರ್ಥ್ಯ.

ಒಂದೊಂದರ ಅಡಿಯಲ್ಲಿಯೂ ಕೆಲವು ಉಪಸಾಮರ್ಥ್ಯಗಳಿದ್ದು ಅವುಗಳ ಲಭ್ಯತೆ / ಅಲಭ್ಯತೆಗನುಗುಣವಾಗಿ, ಅವುಗಳ ಗುಣಾತ್ಮಕತೆಗನುಸಾರವಾಗಿ ಅಂಕ ಅಥವಾ ಗ್ರೇಡ್ ಕೊಡಬಹುದಾಗಿದೆ.

| ಹೆಚ್ಚು | ಸ್ವಲ್ಪ | ಅಲಭ್ಯ | ಅನ್ವಯವಿಲ್ಲ |
|---|---|---|---|
| 2 | 1 | 0 | – |
| | | | |

**1. ಪರಸ್ಪರ ಸಂಬಂಧ ಸಾಮರ್ಥ್ಯ**

ಶಾಲೆಗೆ ಸಂಬಂಧಿಸಿದ ಎಲ್ಲರೊಡನೆ (ಮಕ್ಕಳು, ಸಹೋದ್ಯೋಗಿಗಳು, ಮುಖ್ಯಸ್ಥರು, ಪೋಷಕರು) ಉತ್ತಮ ಸಂಪರ್ಕ ಮತ್ತು ಸಂವಹನವನ್ನು ಪ್ರಶಿಕ್ಷಣಾರ್ಥಿಯು ಹೊಂದಿರುವುದು.

ಪ್ರಶಿಕ್ಷಣಾರ್ಥಿಯು

1. ಮಕ್ಕಳು ಮತ್ತು ಅವರ ಕಲಿಕೆಯ ಪ್ರಗತಿ ಬಗ್ಗೆ ಸಕಾರಾತ್ಮಕ ಧೋರಣೆ ಹೊಂದಿದ್ದಾರೆ. (ಮಕ್ಕಳ ಸಂಬೋಧನೆ, ಸಲುಗೆ, ಸ್ನೇಹಪರತೆ, ಮೌಖಿಕ ಮತ್ತು ಆಂಗಿಕ ಭಾಷೆಯ ಬಳಕೆ ಹಾಗೂ ಅವೆರಡರ ಸಹಸಂಬಂಧ ಮುಂತಾದವು.)
2. ಬೋಧಕ ವೃತ್ತಿಗೆ ಸಂಬಂಧಿಸಿದ ವಿಶಿಷ್ಟ ಭಾಷಾ ಬಳಕೆ (ಮಾತಿನಲ್ಲಿ ಸ್ಪಷ್ಟತೆ, ನಿಖರತೆ, ಪಾರದರ್ಶಕತೆ ಇತ್ಯಾದಿ)
3. ಮಕ್ಕಳ ವಯಸ್ಸು ಮತ್ತು ಹಂತಕ್ಕನುಗುಣವಾದ ಭಾಷೆಯ ಬಳಕೆ (ಪ್ರಶಿಕ್ಷಣಾರ್ಥಿಯ ಆಲಿಸುವ ಕೌಶಲ, ಬೆಂಬಲ ಪ್ರಶ್ನೆಗಳ ಕೇಳುವಿಕೆ, ಮಕ್ಕಳು ಕೇಳಿದ ಪ್ರಶ್ನೆಗಳಿಗೆ ಸೂಕ್ತ ಪ್ರತಿಕ್ರಿಯೆ.)
4. ಸಹೋದ್ಯೋಗಿಗಳು ಮತ್ತು ಶಾಲೆಗೆ ಸಂಬಂಧವಿರುವ ಇತರರೊಡನೆ ಸಹಕಾರ ಮತ್ತು ಸಂಪರ್ಕ (ನಿಖರತೆ, ಸಹಕಾರಿ ಧೋರಣೆ, ಸಲಹೆ ಸೂಚನೆಗಳ ಸ್ವೀಕಾರ)

**2. ಶೈಕ್ಷಣಿಕ ಮತ್ತು ಮನೋವೈಜ್ಞಾನಿಕ ಸಾಮರ್ಥ್ಯ**

(ಶಿಕ್ಷಣದ ಸಾಮಾಜಿಕ, ಮನೋವೈಜ್ಞಾನಿಕ ಮತ್ತು ಬಹುಸಾಂಸ್ಕೃತಿಕ ವಿಚಾರಗಳ ಬಗ್ಗೆ ಆಳವಾದ ಜ್ಞಾನ, ಮಕ್ಕಳಿಗೆ ಪ್ರೋತ್ಸಾಹವೀಯುವ ಕೌಶಲ, ಇತ್ಯಾದಿ).

1. ಮಕ್ಕಳಿಗೆ ಕಲಿಕೆಯ ವಿಷಯದ ಬಗ್ಗೆ ಪ್ರೇರಣೆ ನೀಡುವ ಸಾಮರ್ಥ್ಯ ಪ್ರಶಿಕ್ಷಣಾರ್ಥಿಗಿರಬೇಕು. (ಪೀಠಿಕೆಯ ಶೈಲಿ, ಬಳಸಿದ ಸಾಮಗ್ರಿ, ಸಂಪನ್ಮೂಲ, ಪ್ರೇರೇಪಿಸಿದ ರೀತಿ, ಪ್ರಸ್ತಾವನೆಯ ಔಚಿತ್ಯದ ಅರಿವು)
2. ವೈಯಕ್ತಿಕ ಮಕ್ಕಳ ಅಗತ್ಯಗಳತ್ತ ಗಮನ (ಪ್ರಶಿಕ್ಷಣಾರ್ಥಿಯು ವಿವಿಧ ತರಗತಿಯ ವಿವಿಧ ಮಕ್ಕಳಿಗೆ ವಿವಿಧ ಸಾಮಗ್ರಿಗಳನ್ನು ಬಳಸುತ್ತಾನೆ).
3. ಶೈಕ್ಷಣಿಕ ಮತ್ತು ಪ್ರಸ್ತುತ ವಿಷಯ ಬೋಧನೋದ್ದೇಶಗಳಿಗನುಗುಣವಾಗಿ ಸಂವಹಿಸುವ, ಸಹಕರಿಸುವ ಸಾಮರ್ಥ್ಯ (ಮಕ್ಕಳಲ್ಲಿ ಪರಸ್ಪರ ಸಮನ್ವಯತೆ ವೃದ್ಧಿ)
4. ಶಾಲೆ ಮತ್ತು ತರಗತಿಯಲ್ಲಿ ಪರಿಣಾಮಕಾರಿಯಾದ ಮತ್ತು ಸುರಕ್ಷಿತವಾದ ಪರಿಸರ ನಿರ್ಮಾಣ (ಪ್ರಶಿಕ್ಷಣಾರ್ಥಿಯು ಮಕ್ಕಳ ಅಭಿಪ್ರಾಯಗಳನ್ನು ಸ್ವೀಕರಿಸುತ್ತಾನೆ, ಅವರ ಕೆಲಸವನ್ನು ಪ್ರೋತ್ಸಾಹಿಸುತ್ತಾನೆ.)

3. **ಬೋಧನಾ ವಸ್ತು ಮತ್ತು ವಿಧಾನಗಳ ಸಾಮರ್ಥ್ಯ:** (ವಸ್ತುವಿನ ಆಳ ಮತ್ತು ಹರಹು, ಬೋಧನಾ ಶೈಲಿಗೆ ಗಮನ) ಈ ಸಾಮರ್ಥ್ಯದ ಮುಖೇನ ತನ್ನ ವಿಷಯದ ಬಗ್ಗೆ ಪ್ರಭುತ್ವ ಪಡೆಯುವುದಲ್ಲದೆ ಅದರ ಉದ್ದೇಶಗಳತ್ತ ಗಮನ ಕೇಂದ್ರೀಕರಿಸಲಾಗುತ್ತದೆ. ತನ್ಮೂಲಕ ಯೋಜನೆ, ನಿರ್ವಹಣೆ, ಮೌಲ್ಯಮಾಪನ ಹೊರಹೊಮ್ಮುತ್ತದೆ.

**ಪ್ರಶಿಕ್ಷಣಾರ್ಥಿಯಲ್ಲಿ**

1. ವಿಷಯದ ಪ್ರಭುತ್ವ (ವ್ಯಾಪಕತೆ ಮತ್ತು ಆಳ) ಕಂಡುಬರುತ್ತದೆ. ವಿಷಯಕ್ಕನುಗುಣವಾದ ಪದಗಳು ಮತ್ತು ಪರಿಕಲ್ಪನೆಗಳ ಬಳಕೆ, ಸೂಕ್ತ ಮತ್ತು ಇತ್ತೀಚಿನ ಆವಿಷ್ಕಾರದ ಅರಿವು.
2. ಸಮರ್ಪಕ ಸಂಶೋಧನೆಯ ಹಿನ್ನೆಲೆಯಲ್ಲಿ ಪಾಠಗಳನ್ನು ವಿಶ್ಲೇಷಿಸುವ ಸಾಮರ್ಥ್ಯ.
3. ಬೋಧನೋದ್ದೇಶಗಳ ಸಾಫಲ್ಯ ಮತ್ತು ಸುಸಂಬದ್ಧ ಮೌಲ್ಯಮಾಪನಾ ತಂತ್ರಗಳ ಬಳಕೆಯ ಸಾಮರ್ಥ್ಯ (ಪ್ರಶಿಕ್ಷಣಾರ್ಥಿಯು ಉದ್ದೇಶಗಳನ್ನು ಸಾಧಿಸಬಲ್ಲ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಲ್ಲ)
4. ಸಂಬಂಧಪಟ್ಟಂತೆ ಸೂಕ್ತ ಬೋಧನಾ ವಿಧಾನಗಳು ಮತ್ತು ಬೆಂಬಲಿತ ಸಾಮಗ್ರಿಗಳನ್ನು ಮತ್ತು ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯ (ಪ್ರಶಿಕ್ಷಣಾರ್ಥಿಯು ಪಾಠವನ್ನು ಸರಿಯಾಗಿ ಯೋಜಿಸಿದ್ದಾನೆ, ಸಾದರಪಡಿಸಿದ್ದಾನೆ. ಮೌಲ್ಯಮಾಪನ ಮಾಡುತ್ತಾನೆ. ವಿಧಾನಗಳು ಮತ್ತು ಸಾಮಗ್ರಿಗಳ ಬಳಕೆಯಲ್ಲಿ ಸೃಜನಶೀಲತೆ, ಸಾಮ್ಯತೆ, ಕಂಡುಬರುತ್ತದೆ.

**4. ವ್ಯವಸ್ಥಾ ಸಾಮರ್ಥ್ಯ**

ಕೆಲಸಕಾರ್ಯ, ಚಟುವಟಿಕೆಗಳು, ಪಾಠಯೋಜನೆ ಮುಂತಾದವುಗಳ ವ್ಯವಸ್ಥೆಗೆ ಸಂಬಂಧಿಸಿದಂತೆ ಬರುವ ಅಂಶಗಳು. ಜೊತೆಗೆ ವಿದ್ಯಾರ್ಥಿಗಳು, ಪೋಷಕರು ಮತ್ತು ಸಹೋದ್ಯೋಗಿಗಳನ್ನು ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಜಾಣ್ಮೆಗೆ ಸಂಬಂಧಿಸಿದಂತೆ.

**ಪ್ರಶಿಕ್ಷಣಾರ್ಥಿಗಳು**

1. ಮಕ್ಕಳ ಕಲಿಕೆಗೆ ಪೂರಕವಾದ ಸಂಪನ್ಮೂಲಗಳು ಮತ್ತು ತರಗತಿ ಪರಿಸರವನ್ನು ಕಾಯ್ದುಕೊಳ್ಳುವ ಮತ್ತು ವೃದ್ಧಿಸುವ ಸಾಮರ್ಥ್ಯ ಹೊಂದಿದ್ದಾರೆ.
2. ಬೋಧನಾ ಸಮಯದ ಪರಿಣಾಮಕಾರಿ ನಿರ್ವಹಣೆ ಸಾಮರ್ಥ್ಯ ಹೊಂದಿದ್ದಾರೆ. (ಕಲಿಕಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆ, ಸಮಯ, ಸಂದರ್ಭಾನುಸಾರ ತನ್ನ ಯೋಜನೆ ಮತ್ತು ಬೋಧನೆಯ ಕ್ರಮವನ್ನು ಬದಲಿಸಿಕೊಳ್ಳುವ ಜಾಣ್ಮೆ)
3. ಮಕ್ಕಳು, ಪೋಷಕರು ಮತ್ತು ಇತರೇ ಶಾಲಾ ಸಂಬಂಧಿಗಳಿಗೆ ಅಗತ್ಯವಾದ ವರದಿಯನ್ನು ಸಾದರಪಡಿಸುವ ಕೌಶಲ ಕರಗತವಾಗಿಸಿಕೊಂಡಿದ್ದಾರೆ (ಶಾಲಾ ನಿಯಮಾನುಸಾರ ಆಡಳಿತಾತ್ಮಕ ಕೆಲಸ ನಿರ್ವಹಣೆ ಮತ್ತು ಯಾವುದೇ ಸಮಯದಲ್ಲಿ ಮಕ್ಕಳ ಕಲಿಕಾ ಪ್ರಗತಿಯನ್ನು ತಿಳಿಸಬಲ್ಲ ಜಾಣ್ಮೆ)
4. ವೃತ್ತಿಬೆಳವಣಿಗೆಗೆ ತನ್ನ ಸಮಯವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವ ಶಕ್ತಿ.

Digitised by Bharatavani, CIIL

**5. ಅಂತರಸಾಂಸ್ಕೃತಿಕ ಸಾಮರ್ಥ್ಯ**

ಜಾಗತೀಕರಣದ ಹಿನ್ನೆಲೆಯಲ್ಲಿ ಇಂದಿನ ಶಿಕ್ಷಕರು ಕೆಲಸ ಮಾಡಬೇಕಾಗಿರುವುದರಿಂದ ಅನ್ಯದೇಶಗಳು, ಅನ್ಯಸಂಸ್ಕೃತಿ, ಅನ್ಯಭಾಷೆಗಳಲ್ಲಿ ಬೋಧಿಸುವ ಸಂದರ್ಭ ಎದುರಾಗಬಹುದು. ಹಾಗಾಗಿ ಅವುಗಳ ನಿಕಟ ಸಂಪರ್ಕವಿರಬೇಕು ಮತ್ತು ಮಕ್ಕಳಲ್ಲಿ ಪ್ರಜಾಸತ್ತಾತ್ಮಕ ಸಾಮಾಜಿಕ ಮೌಲ್ಯಗಳು, ದೇಶದ ವಿಶಿಷ್ಟ ಸಂಪ್ರದಾಯಗಳು ಮತ್ತು ಜಾಗತಿಕ ಮಾನವೀಯ ಮೌಲ್ಯಗಳನ್ನು ರೂಢಿಸಬೇಕು.

ಪ್ರಶಿಕ್ಷಣಾರ್ಥಿಗಳಲ್ಲಿ

1. ವಿಭಿನ್ನ ಸಂಸ್ಕೃತಿಗಳು ಮತ್ತು ಶಿಕ್ಷಣ ವ್ಯವಸ್ಥೆಗಳ ಬಗ್ಗೆ ಮಾಹಿತಿಯಿದೆ.
2. ವಿಭಿನ್ನ ಸಂಸ್ಕೃತಿಗಳು ಮತ್ತು ಭಾಷೆಗಳ ಸಂದರ್ಭದಲ್ಲಿ ಬೋಧನೆ ಹೊಂದಿಸಿಕೊಳ್ಳಬಲ್ಲ ಕೌಶಲವಿದೆ.
3. ಶಿಕ್ಷಣ ಜಾಗತೀಕರಣದ ಅರಿವಿದೆ. (ವಿದ್ಯಾರ್ಥಿಗಳ ಜೊತೆ, ಮೇಲ್ವಿಚಾರಕರ ಜೊತೆ, ಬಹುಸಂಸ್ಕೃತಿಗಳ ಬಗ್ಗೆ ವಿಚಾರ ವಿನಿಮಯ ಮಾಡಬಲ್ಲ ಜಾಣ್ಮೆಯಿದೆ)
4. ಪ್ರಜಾಸತ್ತಾತ್ಮಕ ಸಾಮಾಜಿಕ ಮೌಲ್ಯಗಳ, ವಿಶಿಷ್ಟ ರಾಷ್ಟ್ರೀಯ ಸಂಪ್ರದಾಯಗಳು, ನೆರೆ ಮತ್ತು ದೂರ ದೇಶಗಳ ಸಾಂಸ್ಕೃತಿಕ ವಿಶೇಷತೆಗಳು, ಜಾಗತಿಕ ಮಾನವೀಯ ಮೌಲ್ಯಗಳನ್ನು ಮಕ್ಕಳು ರೂಢಿಸಿಕೊಳ್ಳುವಲ್ಲಿ ನೆರವು ನೀಡುವಷ್ಟು ಸಂಪನ್ಮೂಲ ಮತ್ತು ಮಾಹಿತಿಯಿದೆ.

**6. ಇತರೇ ಸಾಮರ್ಥ್ಯಗಳು**

ಮೇಲೆ ಪಟ್ಟಿ ಮಾಡಿರುವ ಸಾಮರ್ಥ್ಯಗಳಲ್ಲದೆ ಶಿಕ್ಷಕರ ಧ್ವನಿ, ಪ್ರಶ್ನೆ ಕೇಳುವ ಶೈಲಿ, ವಿವರಣಾ ವಿಧಾನ, ಸೃಜನಶೀಲತೆ, ಪ್ರಶಿಕ್ಷಣಾರ್ಥಿಯ ಉಡುಗೆ ತೊಡುಗೆಗಳು, ಹಸನ್ಮುಖತೆ ಮೊದಲಾದವುಗಳನ್ನು ನಿರ್ಣಾಯಕಗಳಾಗಿ ಪರಿಗಣಿಸಬಹುದು.

ಕೊನೆಯಲ್ಲಿ ಮೇಲ್ವಿಚಾರಕರು ಬೋಧನೆಯಲ್ಲಿ ಕಂಡುಬಂದ ಪ್ರಧಾನ ಉತ್ತಮಾಂಶಗಳನ್ನು, ಸುಧಾರಣೆಗೆ ಸಲಹೆಗಳನ್ನು ಲಿಖಿತವಾಗಿ ನೀಡಲು ಮತ್ತು ಚರ್ಚೆ ಮಾಡಲು ಅವಕಾಶವನ್ನು ಕಲ್ಪಿಸಿಕೊಂಡು ವೃತ್ತಿ ಬೆಳವಣಿಗೆಗೆ ಸಹಾಯಕವಾದ ವಿಚಾರಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಮನನ ಮಾಡಿಸಬೇಕು.

–ಲೋಕೇ.

## ಪಾಶ್ಚಿಮಾತ್ಯೀಕರಣ ಮತ್ತು ಶಿಕ್ಷಣ

ಪಾಶ್ಚಿಮಾತ್ಯೀಕರಣ (Westernization)ಎಂಬ ಕಲ್ಪನೆಯನ್ನು ಸಮಾಜಶಾಸ್ತ್ರದ ಇತಿಹಾಸಕ್ಕೆ ಹಾಗೂ ಸಮಾಜ ವಿಜ್ಞಾನಗಳ ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದ ಕೀರ್ತಿ ಎಮ್.ಎನ್. ಶ್ರೀನಿವಾಸ್‌ರವರಿಗೆ ಸಲ್ಲುತ್ತದೆ. ಇಂಗ್ಲೆಂಡ್, ಫ್ರಾನ್ಸ್ ಮುಂತಾದ ಮುಂದುವರಿದ ಯುರೋಪೀಯ ದೇಶಗಳು ಭಾರತ, ಸಿಲೋನ್, ಆಫ್ರಿಕಾಖಂಡದ ಹಿಂದುಳಿದ ದೇಶಗಳಲ್ಲಿ, ದಕ್ಷಿಣ ಅಮೆರಿಕಾದ ಬ್ರಜಿಲ್ ಮುಂತಾದ ದೇಶಗಳಲ್ಲಿ ಸಾಕಷ್ಟು ದೀರ್ಘಕಾಲ ತಮ್ಮ ಆಧಿಪತ್ಯ ಸ್ಥಾಪಿಸಿದುದರಿಂದ ಆ ಮುಂದುವರಿದ ರಾಷ್ಟ್ರಗಳ ಇಂಗ್ಲಿಷ್, ಸ್ಪ್ಯಾನಿಷ್, ಫ್ರೆಂಚ್ ಮುಂತಾದ ಭಾಷೆಗಳ ಹಾಗೂ ಅವರ ಸಾಂಸ್ಕೃತಿಕ ಆಚರಣೆ, ವೇಷಭೂಷಣ ಮುಂತಾದವುಗಳ ಪ್ರಭಾವ ಅಧೀನ ರಾಷ್ಟ್ರಗಳ ಸಮಾಜಗಳ ಮೇಲೆ ಉಂಟಾಗಿ ಆ ಸಮಾಜಗಳು ಪ್ರಭಾವಿತವಾಗಿ ಅವುಗಳನ್ನು ತಮ್ಮ ಜೀವನ ವಿಧಾನದಲ್ಲಿ, ವೇಷ ಭೂಷಣಗಳಲ್ಲಿ ಅಳವಡಿಸಿಕೊಳ್ಳತೊಡಗಿದರು. ಭಾರತದಲ್ಲಿ ಈ ಪ್ರವೃತ್ತಿ ಕಾಣತೊಡಗಿ ಕ್ರಮೇಣ ಹೆಚ್ಚತೊಡಗಿತು. ಗೋವಾದಲ್ಲಿ ಪೋರ್ಚುಗೀಸರ ಪ್ರಭಾವವನ್ನು ಭಾರತದ ನಗರ ಪ್ರದೇಶಗಳಲ್ಲಿ ಇಂಗ್ಲಿಷರ ಜೀವನ ವಿಧಾನಗಳ ಪ್ರಭಾವವನ್ನು ನಿಚ್ಚಳವಾಗಿ ಕಾಣಬಹುದು. ಈ ಪ್ರವೃತ್ತಿಯನ್ನು ವಿವರಿಸಲು ಎಂ.ಎನ್. ಶ್ರೀನಿವಾಸ್ 'ಪಾಶ್ಚಾತ್ತೀಕರಣ' ಎಂಬ ಪರಿಕಲ್ಪನೆಯನ್ನು ರೂಪಿಸಿದ್ದಾರೆ.

'ಪಾಶ್ಚೀಮಾತ್ಯೀಕರಣ ಪ್ರಕ್ರಿಯೆಯು ಸುಮಾರು 150 ವರ್ಷಗಳಿಗೂ ಮಿಗಿಲಾದ ಬ್ರಿಟಿಷ್ ಆಳ್ವಿಕೆಯು ಭಾರತೀಯ ಸಮಾಜ ಮತ್ತು ಸಂಸ್ಕೃತಿಗಳು ಉಂಟು ಮಾಡಿದ ಬದಲಾವಣೆಗಳನ್ನು ಅದರಲ್ಲೂ ಮುಖ್ಯವಾಗಿ ತಾಂತ್ರಿಕತೆಯಲ್ಲಿ, ಸಂಸ್ಥೆಗಳಲ್ಲಿ ತತ್ವಾದರ್ಶದಲ್ಲಿ ಹಾಗೂ ಮೌಲ್ಯಗಳ ಕ್ಷೇತ್ರದಲ್ಲಿ ಆದ ಬದಲಾವಣೆಗಳನ್ನು ಸಂಕೇತಿಸುವುದು. ಬಹುಶಃ ಭಾರತದ 150 ವರ್ಷಗಳ ಹಿಂದಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಭಾರತ ಅತ್ಯಂತ ಹಿಂದುಳಿದ ದೇಶ. ಜಾತಿಪದ್ಧತಿ, ಸಂಪ್ರದಾಯ, ಅನೇಕ ಬಗೆಯ ಕಂದಾಚಾರಗಳು, ಬಾಲ್ಯ ವಿವಾಹ, ಸತಿಸಹಗಮನ ಪದ್ಧತಿ, ಅಸ್ಪೃಶ್ಯತೆ ಮುಂತಾದ ಅನೇಕ ದಾರುಣ ಅಂಶಗಳಿದ್ದುವು. ಎಲ್ಲಕ್ಕಿಂತಲೂ ಮುಖ್ಯವಾಗಿ ಅನಕ್ಷರತೆ ತಾಂಡವವಾಡುತ್ತಿತ್ತು. ಮೇಲ್ಜಾತಿಯವರು ಮಾತ್ರ ಶಿಕ್ಷಣ ಪಡೆಯುವ ಅವಕಾಶ ಹೊಂದಿದ್ದು ಉಳಿದ ಜಾತಿಯವರಿಗೆ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪಾಶ್ಚಿಮಾತ್ಯರು ಭಾರತಕ್ಕೆ ಕಾಲಿಟ್ಟಿದ್ದು ಒಂದು ರೀತಿ ವರವಾಗಿಯೇ ಪರಿಣಮಿಸಿತು. ಭಾರತದೇಶದಲ್ಲಿ ಶಿಕ್ಷಣವು ಸಾರ್ವತ್ರಿಕವಾಗತೊಡಗಿತು. ಹೀಗೆ ಶಿಕ್ಷಣದ ಬೀಜವನ್ನು ಎಲ್ಲ ವರ್ಗಗಳಲ್ಲೂ ಅದರಲ್ಲೂ ಮುಖ್ಯವಾಗಿ ಹೆಣ್ಣು ಮಕ್ಕಳ ವಿಷಯದಲ್ಲಿ ಶಿಕ್ಷಣ ನೀಡಿದ ಕೀರ್ತಿ ಬ್ರಿಟಿಷರಿಗೆ ಸಲ್ಲುತ್ತದೆ. ಪಾಶ್ಚಿಮಾತ್ಯರ ಆಗಮನದಿಂದ ಭಾರತದ ಶೈಕ್ಷಣಿಕ ವ್ಯವಸ್ಥೆ ವ್ಯಾಪಕವಾಗಿ ವಿಸ್ತಾರವಾಗತೊಡಗಿತು.

ಭಾರತದಲ್ಲಿ ತಮ್ಮ ರಾಜಕೀಯ ನೆಲೆಯನ್ನು ಭದ್ರವಾಗಿಸಿಕೊಂಡ ಬ್ರಿಟಿಷರು 19ನೇ ಶತಮಾನದ ಆರಂಭದಿಂದಲೇ ಭಾರತವನ್ನು ಆಧುನಿಕಗೊಳಿಸುವ ತಮ್ಮ ಪ್ರಯತ್ನವನ್ನು ನಡೆಸಿದರು. ಅದರಲ್ಲಿ ಅತ್ಯಂತ ಮಹತ್ವಪೂರ್ಣವಾದ ರೀತಿಯಲ್ಲಿ ಮೊಟ್ಟಮೊದಲಿಗೆ ಇಂಗ್ಲಿಷ್ ಭಾಷೆಯನ್ನು ಭಾಷಾಮಾಧ್ಯಮವಾಗಿ ಭಾರತದಲ್ಲಿ ಪ್ರಸಾರಮಾಡಿದ್ದು ಪಾಶ್ಚಿಮಾತ್ಯರ ವಿಚಾರಗಳಿಂದ ಪ್ರತಿಸ್ಪಂದನೆ ಕಂಡುಬಂದದ್ದು ಇಲ್ಲಿನ ಜಾತಿ ಹಾಗೂ ಆರ್ಥಿಕ ಸ್ತರದಲ್ಲಿ ಮೇಲ್ವರ್ಗದಲ್ಲಿದ್ದ ಗಣ್ಯರ ವರ್ಗದಿಂದ. ಆಧುನಿಕ ಶಿಕ್ಷಣ ಕ್ಷೇತ್ರ ಹಾಗೂ ನ್ಯಾಯಾಲಯಗಳ ಸೇವೆಯಲ್ಲಿದ್ದ ಬ್ರಾಹ್ಮಣ ಹಾಗೂ ಮತ್ತಿತರ ಮೇಲ್ವರ್ಗದ ಜನರು ಬ್ರಿಟಿಷರು ಸ್ಥಾಪಿಸಿದ ವಿವಿಧ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಪಡೆದರಲ್ಲದೆ, ಇಂಗ್ಲಿಷ್ ಭಾಷೆಯನ್ನು ಆಸಕ್ತಿಯಿಂದ ಕಲಿಯಲಾರಂಭಿಸಿದರು. ಭಾಷೆಯು ಸಂಸ್ಕೃತಿಯ ಮಾಧ್ಯಮವಾದುದರಿಂದ ಇಂಗ್ಲಿಷ್ ಭಾಷೆಯ ಮೂಲಕ ಬ್ರಿಟಿಷ್ ಸಂಸ್ಕೃತಿಯ ನೆರಳು ಭಾರತೀಯ ಸಮಾಜದ ಮೇಲೆ ಅಪಾರವಾಗಿ ಬೀಳಲಾರಂಭಿಸಿತು. ಈಗಲೂ ಭಾರತದಲ್ಲಿ ಇಂಗ್ಲಿಷ್ ಪ್ರಭಾವ ವ್ಯಾಪಕವಾಗಿದ್ದು, ಉತ್ತಮ ಶಾಲಾ ಕಾಲೇಜುಗಳಲ್ಲಿ ಇಂಗ್ಲಿಷ್ ಭಾಷೆ ತನ್ನ ಹಿಡಿತವನ್ನು ಮುಂದುವರೆಸಿದೆ.

ಬ್ರಿಟಿಷ್ ಆಳ್ವಿಕೆಯಿಂದಾಗಿ ಭಾರತದಲ್ಲಿ ಆಧುನಿಕ ಶಿಕ್ಷಣ ಪ್ರಸಾರವಾಗತೊಡಗಿತು. ಪರಂಪರಾನುಗತವಾಗಿ, ಮೇಲ್ವರ್ಗದವರಿಗೆ ಮಾತ್ರ ಮೀಸಲಾಗಿದ್ದ ಸಂಸ್ಕೃತ ಭಾಷೆಯ ಶಿಕ್ಷಣ ಅಳಿಸಿಹೋಗುತ್ತಾ ಎಲ್ಲ ಜಾತಿಗಳಿಗೂ, ಎಲ್ಲ ವರ್ಗದ ಜನರಿಗೂ, ಸ್ತ್ರೀಯರಿಗೂ ಮುಕ್ತವಾಗಿ ಅವಕಾಶವೀಯುವ ಹೊಸ ಶಿಕ್ಷಣದ ವ್ಯವಸ್ಥೆಗೆ ದಾರಿಮಾಡಿಕೊಟ್ಟಿತು. ಒಂದು ತೊಡಕೆಂದರೆ ಭಾರತದಲ್ಲಿ ಮೇಲ್ಜಾತಿಯವರು ಇಂಗ್ಲಿಷ್ ಭಾಷೆಯನ್ನು ಕಲಿತಷ್ಟು ಸುಲಭವಾಗಿ ಕೆಳಜಾತಿಯವರು ಕಲಿಯಲಾರದೇ

Digitised by Bharatavani, CIIL

ಹೋದರು. ಇಂದಿಗೂ ಭಾರತದಲ್ಲಿ ಈ ಸಮಸ್ಯೆ ವ್ಯಾಪಕವಾಗಿಯೇ ಇದೆ. ಸ್ವಾತಂತ್ರ್ಯ ಬಂದು 60 ವರ್ಷಗಳೇ ಕಳೆದರೂ ಇಂಗ್ಲಿಷ್ ಭಾಷೆ ಕೆಲವರಿಗಂತೂ ತೊಡಕಾಗಿಯೇ ಇದೆ. ಆದರೂ ಚೀನೀಯರು, ಜಪಾನೀಯರಿಗಿಂತಲೂ ಭಾರತೀಯರು ಇಂಗ್ಲಿಷ್ ಭಾಷೆಯಲ್ಲಿ ಪ್ರಭುತ್ವವನ್ನು ಸಾಧಿಸಿರುವುದು ಇತ್ತೀಚಿನ ಇಂಗ್ಲಿಷ್ ಭಾಷೆಯನ್ನು ಬಲ್ಲವರ ಅಂಕಿಅಂಶಗಳನ್ನು ನೋಡಿದಾಗ ತಿಳಿದುಬರುತ್ತದೆ.

ಭಾರತದಲ್ಲಿ ಹೊಸ ಶಿಕ್ಷಣ ವ್ಯವಸ್ಥೆಯಿಂದ ಪೊಲೀಸ್, ನ್ಯಾಯಾಲಯ, ಬ್ಯಾಂಕ್, ಕಾನೂನು, ವರ್ತಮಾನ ಪತ್ರಿಕೆ, ಮುದ್ರಣಾಲಯ, ಪ್ರಜಾಪ್ರಭುತ್ವ, ಚುನಾವಣೆ ಮುಂತಾದ ಹೊಸಕಲ್ಪನೆಗಳು ಹುಟ್ಟಿಕೊಂಡವು. ಬಹುಶಃ ಪಾಶ್ಚಿಮಾತ್ಯರು ಭಾರತಕ್ಕೆ ಪಾದಾರ್ಪಣೆ ಮಾಡದಿದ್ದಲ್ಲಿ ಇಂದು ಬಳಕೆಯಲ್ಲಿರುವ 'ಆಧುನಿಕ ಇಂಗ್ಲಿಷ್ ಶಿಕ್ಷಣ' ಎಂಬ ಕಲ್ಪನೆ ಭಾರತವನ್ನು ಪ್ರವೇಶಿಸುತ್ತಿರಲಿಲ್ಲ. ಆ ಬಗೆಯ ಇಂಗ್ಲಿಷ್ ಶಿಕ್ಷಣ ಇಂದಿಗೂ ತನ್ನ ವೈಚಾರಿಕತೆಯಿಂದ, ವೈಜ್ಞಾನಿಕತೆಯಿಂದ ಶಿಕ್ಷಣ ಕ್ಷೇತ್ರದ ಪ್ರಗತಿಗೆ ನಾಂದಿ ಹಾಡಿದೆ. ಅನೇಕ ಕ್ರೈಸ್ತ ಪಾದ್ರಿಗಳು ಭಾರತದ ಉದ್ದಗಲಕ್ಕೂ ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಶಿಕ್ಷಣವು ಸಾರ್ವತ್ರಿಕವಾಗಿ ಪ್ರತಿಯೊಬ್ಬರಿಗೂ ತಲುಪುವಂತೆ ಮಾಡಿದ್ದಾರೆ.

ಈ ಬಗೆಯ ಶಿಕ್ಷಣದಿಂದ ಭಾರತದಲ್ಲಿ ಅನೇಕ ಹೊಸ ಬಗೆಯ ವ್ಯವಸ್ಥೆಯುಂಟಾಯಿತು. ಅದರಲ್ಲೂ ಮುಖ್ಯವಾಗಿ ಪಾಶ್ಚಿಮಾತ್ಯೀಕರಣ ಹಾಗೂ ಇಂಗ್ಲಿಷ್ ಶಿಕ್ಷಣದಿಂದ ಹೊಸ ಹೊಸ ಮೌಲ್ಯಗಳು ಅಸ್ತಿತ್ವಕ್ಕೆ ಬಂದವು. ಉದಾಹರಣೆಗೆ, ಮಾನವತಾವಾದ, ವೈಚಾರಿಕತೆ, ವೈಜ್ಞಾನಿಕತೆ, ಸಮಾನತೆ, ಮತಾತೀತತೆ ಮುಂತಾದವು ಅಸ್ತಿತ್ವಕ್ಕೆ ಬಂದವು. ಜಾತಿ, ಮತ, ಪಂಥ, ವಯಸ್ಸು, ಲಿಂಗ, ಆರ್ಥಿಕ ಸ್ಥಾನ ಈ ಯಾವ ಭೇದಭಾವನೆಗಳನ್ನು ಲೆಕ್ಕಿಸದೆ ಸರ್ವರ ಕಲ್ಯಾಣವನ್ನು ಹಾರೈಸುವ ಮೌಲ್ಯವೇ ಮಾನವತಾವಾದ. ಶಿಕ್ಷಣ ಕ್ಷೇತ್ರದ ಅತ್ಯದ್ಭುತವಾದ ಬೆಳವಣಿಗೆ ಮಾನವತಾವಾದವೆಂದರೆ ಆಶ್ಚರ್ಯವಿಲ್ಲ. ಭಾರತದಲ್ಲಿ ಮಾನವತಾವಾದ ಹೊಸದಲ್ಲದಿದ್ದರೂ ಅದನ್ನು ಹೊರಗೆಡವಿ ಪರಿಚಯಿಸಿದ್ದು ಶಿಕ್ಷಣ. ಅದರಲ್ಲೂ ಇಂಗ್ಲಿಷ್ ಶಿಕ್ಷಣ. ಭಾರತದಲ್ಲಿನ ಕಾನೂನು, ರಾಜಕೀಯ, ಶಿಕ್ಷಣ ಮೊದಲಾದವು ಸಾಮಾಜಿಕ ಸಂಸ್ಥೆಗಳಲ್ಲಿ 19–20ನೇ ಶತಮಾನದಲ್ಲಿ ಕಂಡು ಬಂದವು ಎನ್ನುತ್ತಾರೆ ಪ್ರೊ. ಎಂ.ಎನ್. ಶ್ರೀನಿವಾಸ್‌ರವರು. ಪಾಶ್ಚಿಮಾತ್ಯೀಕರಣದಿಂದ ಉದ್ಭವವಾದ ಮಾನವತಾವಾದವು ಭಾರತದಲ್ಲಿ ಹೊಸಬಗೆಯ ಮೌಲ್ಯಗಳನ್ನು, ಹಲವಾರು ಸುಧಾರಣೆಗಳಿಗೆ ಅವಕಾಶ ಮಾಡಿಕೊಟ್ಟಿತು. ಅದರಲ್ಲೂ ಮುಖ್ಯವಾಗಿ ನಾಗರಿಕ ವ್ಯವಸ್ಥೆಗೆ ದಂಡಸಂಹಿತೆ ಮತ್ತು ಕಾನೂನಿಗೆ, ಸಾಮಾಜಿಕ ಜೀವನ ಕ್ಷೇತ್ರದಲ್ಲಿ ಅನೇಕ ಬಗೆಯ ಅಸಮಾನತೆಗಳು ನಿವಾರಣೆಯಾಗಿ ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ತತ್ವದ ಪ್ರತಿಪಾದನೆಗೆ ಜನಸ್ತೋಮ ಹೊಂದಿಕೊಳ್ಳಲಾರಂಭಿಸಿತು. ಈ ಹಿಂದೆ ಇದ್ದ ಮೇಲು–ಕೀಳು, ಉಚ್ಚ–ನೀಚ, ಬಡವ–ಬಲ್ಲಿದ ಮುಂತಾದ ಅಂಶಗಳಿಗೆ ಒಂದು ಅರ್ಥಪೂರ್ಣವಾದ ನೆಲೆಗಟ್ಟನ್ನು ಶಿಕ್ಷಣ ನೀಡಲಾರಂಭಿಸಿತು.

ಭಾರತದ ಹಳ್ಳಿಗಾಡಿನಲ್ಲಿದ್ದ ಜಾತಿ ಪಂಚಾಯಿತಿಗಳ ಬದಲಿಗೆ ಹೊಸ ನ್ಯಾಯಾಲಯದ ವ್ಯವಸ್ಥೆ ರೂಪುಗೊಂಡಿದ್ದೇ ಅಲ್ಲದೆ ಹೊಸ ಬಗೆಯ ಆರ್ಥಿಕ ನೀತಿಗಳು ಅಸ್ತಿತ್ವಕ್ಕೆ ಬಂದವು. ಯಾರು ಏನೇ ಹೇಳಿದರೂ ಪಾಶ್ಚಿಮಾತ್ಯೀಕರಣವು ಭಾರತವನ್ನು ಬದಲು ಮಾಡಿದಷ್ಟು ಬೇರಾವ ಕಲ್ಪನೆಗಳೂ ಬದಲು ಮಾಡಲಿಲ್ಲವೆಂಬುದಂತೂ ಸತ್ಯ.

ಶಿಕ್ಷಣ ಹಾಗೂ ಪಾಶ್ಚಿಮಾತ್ಯೀಕರಣದ ನಿಶ್ಚಯಾತ್ಮಕ ಪ್ರಭಾವಕ್ಕೆ ಒಳಗಾದ ಅನೇಕ ಗಣ್ಯರು ಭಾರತೀಯ ಸಮಾಜದಲ್ಲಿದ್ದ ಬಹುತೇಕ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಲು ಸುಧಾರಣಾ ಕ್ರಮಗಳನ್ನು ಹುಟ್ಟುಹಾಕಿದರು. ರಾಜಾರಾಮ ಮೋಹನರಾಯರವರ ಬ್ರಹ್ಮಸಮಾಜ, ಶ್ರೀ ರಾಮಕೃಷ್ಣ ಮಿಷನ್, ಅ್ಯನಿಬೆಸೆಂಟ್‌ರವರ 'ಥಿಯೋಸಾಫಿಕಲ್ ಸೊಸೈಟಿ' ಮೊದಲಾದವು. ಗುಲಾಮಿಪದ್ಧತಿ, ಸತಿಸಹಗಮನ, ಬಾಲ್ಯವಿವಾಹ, ಅಸ್ಪೃಶ್ಯತೆ, ಪುನರ್‌ವಿವಾಹ ನಿಷೇಧ, ಬಹುಪತ್ನಿತ್ವ, ಸ್ತ್ರೀಯರ ಬಗೆಗಿದ್ದ ಅನೇಕ ಅನಿಶ್ಚಿತ ನಂಬಿಕೆಗಳನ್ನು ಹೊಸ ಬಗೆಯ ಕಾನೂನು ಹಾಗೂ ಜನಾಭಿಪ್ರಾಯಗಳನ್ನು ಕ್ರೋಡೀಕರಣಗೊಳಿಸುವುದರ ಮೂಲಕ ತೊಡೆದುಹಾಕಲು ಶ್ರಮಿಸಿದ್ದು ಪಾಶ್ಚಿಮಾತ್ಯೀಕರಣ ಹಾಗೂ ಶಿಕ್ಷಣ ಇವೆರಡರ ಅತ್ಯದ್ಭುತವಾದ ನಿಶ್ಚಯಾತ್ಮಕವಾದ ಅಂಶ.

ಎಲ್ಲಕ್ಕಿಂತಲೂ ಮಿಗಿಲಾಗಿ ಭಾರತಕ್ಕೆ ಪಾಶ್ಚಿಮಾತ್ಯರ ಪ್ರಮುಖ ಕೊಡುಗೆ ಎಂದರೆ ಕ್ರೈಸ್ತ ಮಿಶನರಿಗಳ ಪಾದಾರ್ಪಣೆ. ಅವರು ಸ್ಥಾಪಿಸಿದ ಶೈಕ್ಷಣಿಕ ಸಂಘ ಸಂಸ್ಥೆಗಳು, ವೈದ್ಯಕೀಯ ಸಂಸ್ಥೆಗಳು ಭಾರತೀಯರಿಗೆ ನೆರವು ನೀಡಿವೆ. ಅನೇಕ ಸ್ತ್ರೀಯರು, ಅನಾಥರು, ಆದಿವಾಸಿಗಳು, ಹರಿಜನರು, ಬಡವರು, ರೋಗಿಗಳು ಮುಂತಾದವರಿಗೆ ದೊರೆತ ಸಕಲ ಸೌಲಭ್ಯಗಳು ಪಾಶ್ಚಿಮಾತ್ಯೀಕರಣದ ಪ್ರಭಾವ. ದೇಶದ ಬಹುತೇಕ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಪರಿಹಾರವಾಗಿ ಕೆಲಸ ಮಾಡಿತು. ಪಾಶ್ಚಾತ್ಯೀಕರಣ ಹಾಗೂ ಶಿಕ್ಷಣ. ಈ ಎರಡು ಕಲ್ಪನೆಗಳು ಭಾರತೀಯರ ಜೀವನದಲ್ಲಿ ಹೊಸ ಬಗೆಯ ಆಶಾಕಿರಣ ಮೂಡಿಸಿವೆ.

ಪಾಶ್ಚಿಮಾತ್ಯೀಕರಣದ ಅತಿ ಪ್ರಮುಖ ನಕಾರಾತ್ಮಕ ಪ್ರಭಾವ ಎಂದರೆ ಭಾರತದಲ್ಲಿ ಕೆಳವರ್ಗದ ಜನರನ್ನು ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಳಿಸುವ ಕ್ರಿಯೆ ಪ್ರಾರಂಭವಾಗಿ ಅನೇಕ ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಸೆಳೆದುಕೊಂಡಿತು. ಮತಾಂತರಗೊಳಿಸುವ ಹುನ್ನಾರದಲ್ಲಿ ಹಾಗೂ ಭಾರತೀಯರ ಸಂಪತ್ತನ್ನು ಕೊಳ್ಳೆಹೊಡೆಯುವ ಆತುರದಲ್ಲಿ ಪಾಶ್ಚಿಮಾತ್ಯರು ಅನೇಕ ಬಗೆಯ ಸಾರ್ವಜನಿಕ ಅನುಕೂಲತೆಗಳನ್ನು ಭಾರತದಲ್ಲಿ ಮಾಡಿದರು. ರೈಲುಮಾರ್ಗದ ಜಾಲವನ್ನು ನಿರ್ಮಿಸಿದರು. ನ್ಯಾಯಾಲಯಗಳ ಸ್ಥಾಪನೆ, ಬೃಹತ್ ಕೈಗಾರಿಕೆಗಳಿಗೆ ಪ್ರೋತ್ಸಾಹ, ದೊಡ್ಡ ದೊಡ್ಡ ರಸ್ತೆಗಳ ನಿರ್ಮಾಣ, ಅಣೆಕಟ್ಟೆಗಳ ನಿರ್ಮಾಣ, ಮುದ್ರಣಾಲಯಗಳು, ವೃತ್ತಪತ್ರಿಕೆ, ಚಲನಚಿತ್ರ ಮೊದಲಾದ ಅನೇಕ ಹೊಸ ಬೆಳವಣಿಗೆಗಳು ಭಾರತದಲ್ಲಿ ಕಂಡು ಬಂದವು. ಪಾಶ್ಚಿಮಾತ್ಯರ ಅನುಕೂಲಕ್ಕಾಗಿ ಮಾಡಿಕೊಂಡ ಸ್ವಾರ್ಥದ ಅನೇಕ ಅಂಶಗಳು ಭಾರತೀಯರಿಗೆ ವರದಾನವಾಗಿ ಪರಿಣಮಿಸಿ ಭಾರತೀಯರ ಆಲೋಚನೆಗಳು ಪಾಶ್ಚಿಮಾತ್ಯರನ್ನು ಮತ್ತಷ್ಟು ಹತ್ತಿರಕ್ಕೆ ತೆಗೆದುಕೊಳ್ಳಲಾರಂಭವಾಯಿತು.

ಬಹುಶಃ ಭಾರತೀಯರು ಶಿಕ್ಷಣ ಪಡೆದ ನಂತರ ಅನೇಕ ಹೊಸ ಬಗೆಯ ಆಲೋಚನೆಗಳಿಗೆ ಪ್ರತಿಕ್ರಿಯಿಸಿದರೆನ್ನಬಹುದು. ಶಿಕ್ಷಣವು ಭಾರತೀಯರ ಜೀವನದಲ್ಲಿ ಹಾಸುಹೊಕ್ಕಾಗಲು ಪಾಶ್ಚಿಮಾತ್ಯರೂ ಸಹ ಶ್ರಮಿಸಿದರು. ಶಿಕ್ಷಣವಿಲ್ಲದ ಬದುಕು ಅಸಹಜ, ಅಸಹನೀಯ ಎಂಬ ಸತ್ಯವನ್ನು ಜನರಿಗೆ ತಿಳಿಸುವಷ್ಟು ಬೃಹತ್ತಾಗಿ ಶೈಕ್ಷಣಿಕ ವ್ಯವಸ್ಥೆ ಬೆಳೆದಿದೆ, ಬೆಳೆಯುತ್ತಿದೆ. ಇದಕ್ಕೆ ಪಾಶ್ಚಿಮಾತ್ಯೀಕರಣ ಬಹಳಷ್ಟು ಕಾರಣ.

ಭಾರತದಲ್ಲಿ ಶಿಕ್ಷಣವು ಒಂದು ಪ್ರಮುಖ ಚಟುವಟಿಕೆಯಾಗಿದ್ದು ಇದರ ಮೂಲಕ ಮಾನವ ತನ್ನ ಬಹುಮುಖ್ಯವಾದ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ಅನೌಪಚಾರಿಕವಾಗಿದ್ದ ಶಿಕ್ಷಣವು ಹೆಚ್ಚು ಔಪಚಾರಿಕವಾಯಿತು. ಇಂದು ಭಾರತದಲ್ಲಿ ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯ ಜೀವನೋಪಾಯಕ್ಕೆ ಅಗತ್ಯವಾಗಿದೆ. ಜ್ಞಾನಸಂಪಾದನೆ, ವಿಚಾರ ವಿನಿಮಯ, ಸಾಂಪ್ರದಾಯಿಕವಾದ ಮನೋಧರ್ಮದಲ್ಲಿ ಬದಲಾವಣೆ, ವೈಜ್ಞಾನಿಕ ಕ್ರಾಂತಿ ಮುಂತಾದವುಗಳತ್ತ ಕೊಂಡೊಯ್ಯುತ್ತಿದೆ. ಇಂದಿನ

Digitised by Bharatavani, CIIL

ಶಿಕ್ಷಣ. ಸಾಮಾಜಿಕ ಶಿಕ್ಷಣ, ವಯಸ್ಕರ ಶಿಕ್ಷಣ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಹೀಗೆ ವೈವಿಧ್ಯಮಯವಾದ ಶೈಕ್ಷಣಿಕ ಕ್ಷೇತ್ರದ ಬೆಳವಣಿಗೆಯು ಭಾರತವನ್ನು ಶೈಕ್ಷಣಿಕ ಕ್ರಾಂತಿಯತ್ತ ಕೊಂಡೊಯ್ಯುತ್ತಿದೆ.

ಪಾಶ್ಚಿಮಾತ್ಯರು ಕೊಡಮಾಡಿದ ಶಿಕ್ಷಣ ಇಂದು ಶಾಶ್ವತವಾದ ನೆಲೆಗಟ್ಟನ್ನು ಭಾರತದಲ್ಲಿ ಹೊಂದಿದ್ದರೂ ಅದರ ವಸ್ತು, ವಿಷಯವನ್ನು ಇಂದು ಪರಾಮರ್ಶಿಸಬೇಕಾದ ಅವಶ್ಯಕತೆ ಇದೆ. ಬದಲಾವಣೆ ಪ್ರಕೃತಿಯ ನಿಯಮ. ಶಿಕ್ಷಣ ಕ್ಷೇತ್ರದ ಬದಲಾವಣೆಗಳು ಮಾನವ ನಿರ್ಮಿತ.

ಈ ನಿಟ್ಟಿನಲ್ಲಿ ಇಂದು ಭಾರತ ಕಂಡುಕೊಂಡಿರುವ ಅನೇಕ ಬದಲಾವಣೆ ಹಾಗೂ ಸುಧಾರಣೆಗಳಿಗೆ ಪಾಶ್ಚಿಮಾತ್ಯೀಕರಣ ಹಾಗೂ ಶಿಕ್ಷಣವೇ ಮೂಲ ಕಾರಣ ಎಂದೆನ್ನಬಹುದು. ಉದಾಹರಣೆಗೆ ಸಾಮಾಜಿಕ ಸಂಸ್ಥೆಗಳಲ್ಲಿ ಹಾಗೂ ವ್ಯಕ್ತಿಗಳ ಮನೋಧರ್ಮದಲ್ಲುಂಟಾದ ಬದಲಾವಣೆ, ಸ್ತ್ರೀಯರ ಸ್ಥಾನಮಾನದಲ್ಲುಂಟಾದ ಸುಧಾರಣಾ ಕ್ರಮಗಳು ಹಾಗೂ ದಿಟ್ಟ ಬದಲಾವಣೆಗಳು. ಭಾರತದ ರಾಜಕೀಯ ಕ್ಷೇತ್ರದಲ್ಲಾದ ಬದಲಾವಣೆ ಪ್ರಮುಖವಾದವು. ಇಂದು ಭಾರತದ ಆಧುನಿಕ ಕುಟುಂಬದ ಮಹಿಳೆಯು ಸುಶಿಕ್ಷಿತಳಾಗಿ, ಸುಸಂಸ್ಕೃತಳಾಗಿ ಉದ್ಯೋಗಸ್ಥಳಾಗಿ ಸ್ವಂತ ಸಂಪಾದನೆ ಮಾಡುವ ಸಾಮರ್ಥ್ಯವನ್ನು ಹೊಂದಿ ಪುರುಷನೊಡನೆ ಸ್ವತಂತ್ರವಾಗಿ, ಸಮಾನ ಹಕ್ಕುಬಾಧ್ಯತೆ, ಜವಾಬ್ದಾರಿಗಳನ್ನು ಹೊಂದಿರುವವಳಾಗಿರುವುದು ಪಾಶ್ಚಿಮಾತ್ಯರ ಪ್ರಭಾವದಿಂದಲೇ. ಇದರಲ್ಲೂ ಕೆಲವು ಸಮಸ್ಯೆಗಳು, ನಕಾರಾತ್ಮಕ ಬೆಳವಣಿಗೆಯೂ ಕಂಡು ಬಂದಿರುವುದು ನಿಜ. ಮಹಿಳೆ ಹಾಗೂ ಪುರುಷರು ವಿದ್ಯಾವಂತರಾದರೆ ಉದ್ಯೋಗ ಪಡೆದು ಒಳ್ಳೆಯ ಅಂತಸ್ತು ಪಡೆಯುತ್ತಾರೆ. ವರದಕ್ಷಿಣೆಯ ಪಿಡುಗು ಕಡಿಮೆಯಾಗುತ್ತದೆ. ಜಾತಿಯಲ್ಲಿರುವ ನಂಬಿಕೆ ಕಡಿಮೆಯಾಗುತ್ತದೆ. ಕೆಲವು ಮಾನವೀಯ ದೌರ್ಬಲ್ಯಗಳು ಅಳಿಸಿಹೋಗುತ್ತವೆ ಎಂಬ ನಂಬಿಕೆಗೆ ಪೆಟ್ಟುಬಿದ್ದಿದೆ. ಇಂದು ವರದಕ್ಷಿಣೆ ಹೆಚ್ಚಿದೆ. ಸ್ವಾರ್ಥಸಾಧನೆ, ಜಾತೀಯತೆ ಹೆಚ್ಚುತ್ತಲ್ಲಿದ್ದು ದಿಗ್ಭ್ರಾಂತಿಯನ್ನುಂಟು ಮಾಡುತ್ತಿದೆ. ಜೊತೆಜೊತೆಯಲ್ಲಿಯೇ ಶಿಕ್ಷಣ ಪಡೆದವರು ಅದರಲ್ಲೂ ಯುವ ಜನಾಂಗ ಮಾದಕ ವಸ್ತು ಸೇವನೆ ಹಾಗೂ ಅಶಾಂತಿ ಹಾಗೂ ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ನೋಡಿದರೆ ಶಿಕ್ಷಣವು ಮಾಡುತ್ತಿರುವ ಆಘಾತವೇ ಇದು ಎನಿಸದಿರದು. ಆದರೂ ಶಿಕ್ಷಣವು ಮಾನವನ ಮನಸ್ಸನ್ನು ನಿಯಂತ್ರಿಸುವ ಪ್ರಮುಖ ಸಾಧನವಾಗಿದೆ. ಹಿಂದೆಂದಿಗಿಂತಲೂ ಇಂದು ಮಹಿಳೆಯರು, ರಾಷ್ಟ್ರ ನಿರ್ಮಾಣದಲ್ಲೂ ಪಾಲುದಾರರಾಗಿರುವುದನ್ನು ನೋಡಿದರೆ ಇನ್ನೂ ಉತ್ತಮ ಶಿಕ್ಷಣವು ಉತ್ತಮ ಸಮಾಜವನ್ನು ನಿರ್ಮಾಣ ಮಾಡುವುದಷ್ಟೇ ಅಲ್ಲದೆ ಒಳ್ಳೆಯ ಗೃಹಿಣಿಯರನ್ನು ನಿರ್ಮಾಣ ಮಾಡಿ ಕುಟುಂಬಗಳು, ಸಮಾಜಗಳು ಸುಸ್ಥಿರವಾಗುವಂತಹ ವಾತಾವರಣವನ್ನು ನಿರ್ಮಾಣ ಮಾಡುತ್ತದೆ.

ಪಾಶ್ಚಿಮಾತ್ಯೀಕರಣರಿಂದ ನಕಾರಾತ್ಮಕವಾದ ಧೋರಣೆಗಳೂ ಪ್ರಸಾರವಾಗಿವೆ ಎಂಬ ಅಂಶವನ್ನೂ ಸಹ ಗಮನಿಸಬೇಕಾಗುತ್ತದೆ. ಒಡೆದು ಆಳುವ ನೀತಿಯ ಬೋಧನೆ. ಧೂಮಪಾನ, ಮಾದಕ ಪದಾರ್ಥಗಳ ಸೇವನೆ, ವೇಷಭೂಷಣಗಳ ಪ್ರಭಾವ, ಭಾರತೀಯ ಸಮಾಜದ ಮೇಲೆ ತನ್ನ ಕರಿನೆರಳನ್ನು ಬೀಳಿಸಿದೆ. ಪಾಶ್ಚಿಮಾತ್ಯರ ಶಿಸ್ತು ನಮ್ಮ ಪಾಲಿಗೆ ಬರದೇ ಇರುವುದು ಆಘಾತಕಾರಿಯಾದ ಅಂಶ. ಹಾಗೆಯೇ ಶಿಸ್ತು, ಸಂಯಮ, ಸಮಯ ಪ್ರಜ್ಞೆ, ಕಾರ್ಯಪ್ರವೃತ್ತಿ, ಪ್ರಾಮಾಣಿಕತೆ ಇವುಗಳನ್ನು ನಾವು ಪಾಶ್ಚಿಮಾತ್ಯರಿಂದ ಸಮರ್ಪಕವಾಗಿ ಕಲಿಯಲಿಲ್ಲ.

ಇಂದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಹಾಗೂ ಶಿಕ್ಷಣದ ಪ್ರಭಾವದಿಂದಾಗಿ ಭಾರತೀಯರ ಜೀವನ ಶೈಲಿಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಾಣಬಹುದಾಗಿದೆ. ಊಟೋಪಚಾರ ಅಭ್ಯಾಸ ಹವ್ಯಾಸಗಳು, ಆಚಾರ-ವಿಚಾರ ಹಾಗೂ ಮನರಂಜನೆ ಮುಂತಾದ ಕ್ಷೇತ್ರಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಊಟದ ಮನೆಯು ಮಕ್ಕಳಿಗಳು ಹಾಗೂ ಎಲೆಯ ಊಟ ಇಂದಿಲ್ಲ. ಮೇಜಿನ ಮೇಲೆ ತಟ್ಟೆ, ಕುರ್ಚಿಯ ಮೇಲೆ ಕುಳಿತುಕೊಂಡು ಊಟ ಮಾಡುವುದಾಗಿದೆ. ಮದ್ಯಮಾಂಸದ ಬಳಕೆ ವ್ಯಾಪಕವಾಗತೊಡಗಿದೆ. ಆಧುನಿಕ ಸಾರಿಗೆ ಸಂಪತ್ತು ಅನೇಕ ಸೌಲಭ್ಯಗಳನ್ನು ತಂದುಕೊಟ್ಟಿದೆ. ಸಮಾಚಾರ ಕ್ಷೇತ್ರದಲ್ಲಿ ವೃತ್ತಪತ್ರಿಕೆ, ನಿಯತಕಾಲಿಕೆಗಳು, ರೇಡಿಯೊ, ಟೆಲಿವಿಷನ್ ಮುಂತಾದವು ಆಕರ್ಷಣೀಯವಾಗತೊಡಗಿವೆ. ಪಾಶ್ಚಾತ್ಯ ಸಂಗೀತ ಮತ್ತು ನೃತ್ಯವನ್ನು ಭಾರತೀಯರು ಅನುಕರಿಸಲಾರಂಭಿಸಿದ್ದಾರೆ. ಕೈಗಾರಿಕೀಕರಣ, ನಗರೀಕರಣ, ಔದ್ಯೋಗಿಕೀಕರಣ ಇವೆಲ್ಲವೂ ಸಹ ಪಾಶ್ಚಿಮಾತ್ಯ ಸಂಸ್ಕೃತಿ ಹಾಗೂ ಶಿಕ್ಷಣ ಇವೆರಡರಿಂದಲೂ ಸಾಧ್ಯವಾಗತೊಡಗಿದೆ. ಗ್ರಾಮಗಳಲ್ಲಿ ಗೃಹ ಕೈಗಾರಿಕೆಗಳು ನಶಿಸತೊಡಗಿ ನಿರುದ್ಯೋಗ ತಲೆದೋರಲಾರಂಭಿಸಿದೆ. ಜಮೀನ್ದಾರಿ ಹಾಗೂ ಜಹಗೀರುದಾರಿ ಪದ್ಧತಿಯ ಭಾರತೀಯ ರೈತರಿಗೆ "ಉಳುವವನೆ ಭೂಮಿಯ ಒಡೆಯ" ಎಂಬ ಕಾನೂನು ಅಸ್ತಿತ್ವಕ್ಕೆ ಬಂದಿರುವುದು ಅತ್ಯಂತ ಸಮಾಧಾನಕರವಾದ ವಿಚಾರ. ಬಡವ-ಬಲ್ಲಿದರ ನಡುವೆ, ಮೇಲ್ಜಾತಿ-ಕೀಳ್ಜಾತಿಗಳ ನಡುವಿನ ಅಂತರ ಕಡಿಮೆಯಾಗಿ ಶಿಕ್ಷಣ ಒಂದು ಹೊಸ ಯುಗಕ್ಕೆ ನಾಂದಿ ಹಾಡಿದೆ.

-ಹೆಚ್.ಎಮ್.ವ.

## ಪಾಶ್ಚಾತ್ಯ ಶಿಕ್ಷಣ ಚಿಂತಕರು ಮತ್ತು ಶಿಕ್ಷಣ

ಶಿಕ್ಷಣದ ಮೂಲ ಉದ್ದೇಶವೇನು? ಅದರ ವಿಷಯ ವಿಧಾನಗಳೇನು? ಅದಕ್ಕೂ ಮಾನವನ ಸಾಂಘಿಕ ಬದುಕಿಗೂ ಇರುವ ಸಂಬಂಧವೇನು? ಅದರಲ್ಲಿ ರಾಜ್ಯದ ಪ್ರಭುತ್ವ ಸೂಕ್ತವೇ? ಶಿಕ್ಷಣವನ್ನು ಕುರಿತ ಈ ಮೂಲಭೂತ ಪ್ರಶ್ನೆಗಳಿಗೆ ಪಾಶ್ಚಾತ್ಯ ದಾರ್ಶನಿಕರು ವಿವಿಧ ರೀತಿಯ ಉತ್ತರಗಳನ್ನು ನೀಡುತ್ತಾರೆ. ಶಿಕ್ಷಣವನ್ನು ಕುರಿತಂತೆ ತಮ್ಮದೇ ಆದ ತಾತ್ತ್ವಿಕ ನಿಲುವನ್ನು ತಳೆದಿದ್ದಾರೆ.

### ಪ್ರಾಕೃತ ಶಿಕ್ಷಣ

ಮೇಲಿನ ಪ್ರಶ್ನೆಗಳಿಗೆ ಪ್ರಾಕೃತ ಶಿಕ್ಷಣದಲ್ಲಿ ಒಂದು ವ್ಯವಸ್ಥಿತವಾದ ಉತ್ತರವು ದೊರೆಯುವುದಿಲ್ಲ. ಏಕೆಂದರೆ ಪಾಶ್ಚಾತ್ಯರ ಪ್ರಕಾರ ಪ್ರಾಚೀನ ಸಮುದಾಯ ಇನ್ನೂ ಒಂದು ವ್ಯವಸ್ಥಿತ ರೂಪವನ್ನು ತಳೆದಿರಲಿಲ್ಲ. ಶಿಕ್ಷಣದ ಉದ್ದೇಶ ಪ್ರಪಂಚದಲ್ಲಿ ಬದುಕುವುದು ಅಥವಾ ಮೂಲಾಗತ್ಯಗಳ ಪೂರೈಕೆಯಷ್ಟೇ ಆಗಿತ್ತು. ಮಾನವನು ಇದನ್ನು ತನ್ನ ಕೌಟುಂಬಿಕ ಎಲ್ಲೆಯೊಳಗೆ, ಅನಂತರ ಅದಕ್ಕೆಂದೇ ಸ್ಥಾಪಿತವಾದ ನಿರ್ದಿಷ್ಟ ಸ್ಥಳಗಳಲ್ಲಿ ಕಲಿತುಕೊಳ್ಳುತ್ತಿದ್ದನು. ಯುವಾವಸ್ಥೆಯು ಕಲಿಕೆಯ ಮುಖ್ಯ ಕಾಲವಾಗಿತ್ತು. ಶಿಕ್ಷಣದ ನಂತರ ಅವನನ್ನು ಪರೀಕ್ಷಿಸಲಾಗುತ್ತಿತ್ತು. ಅದರಲ್ಲಿ ಉತ್ತೀರ್ಣನಾದರೆ ಅವನನ್ನು ಸಮಾಜವು ಪೂರ್ಣ ಸದಸ್ಯನನ್ನಾಗಿ ಸ್ವೀಕರಿಸಿ ಬಹಳ ರಹಸ್ಯವೆನಿಸಿದ ವಿಷಯಗಳನ್ನೂ ಅವನಿಗೆ ತಿಳಿಸುತ್ತಿತ್ತು.

### ಧಾರ್ಮಿಕ ಶಿಕ್ಷಣ

ಪಾಪ ಪ್ರಲೋಭನೆಗಳಿಂದ ಕೂಡಿದ ಈ ಪ್ರಪಂಚದಿಂದ ಮಾನವನು ಮುಕ್ತನಾಗುವುದೇ ಧಾರ್ಮಿಕ ಶಿಕ್ಷಣದ ಗುರಿ. ಶಿಕ್ಷಣವು ಚರ್ಚ್ ಅಥವಾ ಇನ್ನಾವುದೇ ಧಾರ್ಮಿಕ ವ್ಯವಸ್ಥೆಯ ಸಾಧನ. ಅದನ್ನು ದೇವರಸೇವೆಗೆ ಮಾತ್ರ ಬಳಸಬೇಕು. ನಮ್ಮ ಬದುಕಿನ ಪ್ರತಿಯೊಂದು ಅಂಶವನ್ನು ಮತಧರ್ಮವೇ ನಿಯಂತ್ರಿಸಬೇಕು. ಶಿಕ್ಷಣದ ಈ ಧಾರ್ಮಿಕ ಔಚಿತ್ಯವು ಮೊದಲು ನಮಗೆ ಪ್ರಾಚೀನಕಾಲದಲ್ಲಿ ಬಾಲಕನನ್ನು ಸಮಾಜಕ್ಕೆ ಪರಿಚಯಿಸುವಾಗ ಜರುಗುತ್ತಿದ್ದ ವಿಧಿ ವಿಶೇಷಗಳಿಂದ ಸ್ಪಷ್ಟವಾಗುತ್ತದೆ. ನಂತರ ಪ್ರಾಚೀನ ಯಹೂದ್ಯರ ಜೀವನದಿಂದಲೂ ಅದು

Digitised by Bharatavani, CIIL

ಖಚಿತವಾಗುತ್ತದೆ. **ಸಿನೆಗಾಗ್**‌ಗಳೇ ಯಹೂದ್ಯಶಾಲೆಗಳು. ಯಹೂದ್ಯ ಆಚಾರ್ಯರು ಈ ಶಾಲೆಯ ಶಿಕ್ಷಕರು.

ಪ್ರಾಚೀನ ಕ್ರೈಸ್ತರ ಕ್ಯಾಟೆಕ್ಯೂಮೆನಲ್ ಮತ್ತು ಕ್ಯಾಟೆಕೆಟಿಕಲ್ ಶಾಲೆಗಳು ಧಾರ್ಮಿಕ ಶಿಕ್ಷಣಕ್ಕೆ ಇತರ ಉದಾಹರಣೆಗಳು. ಜನರನ್ನು ಕ್ರೈಸ್ತರನ್ನಾಗಿಸುವ ಶಾಲೆಗಳಿಗೆ ಕ್ಯಾಟೆಕ್ಯೂಮೆನಲ್ (Catechumenal) ಶಾಲೆಗಳೆಂದೂ ಮತ್ತು ಹಾಗೆ ಕ್ರೈಸ್ತರಾದವರನ್ನು ಧರ್ಮ ಪ್ರಚಾರಕರನ್ನಾಗಿಸುವ ಶಾಲೆಗಳಿಗೆ ಕ್ಯಾಟೆಕೆಟಿಕಲ್ ಶಾಲೆಗಳೆಂದೂ ಹೆಸರು. ಇಲ್ಲಿ ಶಿಕ್ಷಣವು ಮುಖ್ಯವಾಗಿ ಧಾರ್ಮಿಕ ವ್ಯವಸ್ಥೆ ಕ್ಯಾಟೆಕಿಸಂ (Catechism) ಎಂದರೆ ಪ್ರಶ್ನೋತ್ತರ ವಿಧಾನದ ಮೂಲಕ ನಡೆಯುತ್ತಿತ್ತು. ಈ ಶಾಲೆಗಳಿಂದ ಹೊರಹೊಮ್ಮಿದ ಕ್ರೈಸ್ತ ಸಮರ್ಥಕರು ಆಸಕ್ತರಿಗೆ ಕ್ರೈಸ್ತಧರ್ಮದ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರಷ್ಟೇ ಅಲ್ಲದೇ ಟೀಕಾಕಾರರಿಗೆ ಸೂಕ್ತ ಸಮಾಧಾನಗಳನ್ನೂ ನೀಡುತ್ತಿದ್ದರು. ಅಲೆಕ್ಸಾಂಡ್ರಿಯಾದ **ಕ್ಲೆಮೆಂಟ್** (ಕ್ರಿ.ಶ. 150–220) ಮತ್ತು **ಒರಿಜೆನ್** (ಕ್ರಿ.ಶ. 185–254) ಎಂಬ ದೇವತಾ ಶಾಸ್ತ್ರಜ್ಞರು ಇವರಲ್ಲಿ ಪ್ರಮುಖರು. ಕ್ರಿ.ಶ. 529ರ ವೇಳೆಗೆ ಈ ಕ್ರೈಸ್ತ ಚಳುವಳಿಯು ಎಷ್ಟು ಪ್ರಬಲವಾಯಿತೆಂದರೆ ಜಸ್ಟಿನಿಯನ್ ಚಕ್ರವರ್ತಿಯು ಎಲ್ಲ ಪ್ರಾಕೃತಶಾಲೆಗಳನ್ನು ಮುಚ್ಚಿಸಿ ಕ್ರೈಸ್ತಶಾಲೆಗಳನ್ನು ತೆರೆಯಲು ಆಜ್ಞೆ ಮಾಡಿದನು.

### ವಿಸ್ತೃತ ಪರಿಧಿ

ದಕ್ಷಿಣ ಇಟಲಿಯ ಮೊಂಟ್ ಕ್ಯಾಸಿನೋದ **ಸಂತಬೆನೆಡಿಕ್ಟ್**‌ನ (ಕ್ರಿ.ಶ. 480–543) ಮೊನಾಸ್ಟಿಸಂ ಧಾರ್ಮಿಕ ಶಿಕ್ಷಣಕ್ಕೆ ಇನ್ನೊಂದು ಉದಾಹರಣೆ. ಚರ್ಚ್‌ನ ಕಾರ್ಯಾಚರಣೆ ಸಮಾಜದೊಳಗೆ ನಡೆದರೆ ಮಠದ ಕಾರ್ಯಾಚರಣೆ ಸಮಾಜದ ಹೊರಗಿನ ವಿವಿಕ್ತ ಪ್ರದೇಶಗಳಲ್ಲಿ ನಡೆಯುತ್ತಿತ್ತು. ಇಲ್ಲಿ ಶಿಕ್ಷಣವು ಕಾಯಕ ಮತ್ತು ಅಧ್ಯಯನಗಳೆರಡನ್ನೂ ಒಳಗೊಂಡಿತ್ತು. ಆದರೆ ಶಿಕ್ಷಣದ ವಿಷಯವು ಕೇವಲ ಧರ್ಮಕ್ಕೆ ಸೀಮಿತವಾಗದೇ ಇತರ ವಿಷಯಗಳಿಗೂ ವಿಸ್ತೃತವಾಗಿತ್ತು. ಮೊದಲು ಬೈಬಲ್ ಮುಂತಾದ ಗ್ರಂಥಗಳನ್ನು ಓದಲು ಮತ್ತು ಹಬ್ಬದ ದಿನಗಳನ್ನು ಲೆಕ್ಕ ಮಾಡಲು ಶಿಕ್ಷಣವು ಅಕ್ಷರಜ್ಞಾನ ಮತ್ತು ಮೂಲಗಣಿತಗಳನ್ನು ಮಾತ್ರ ಒಳಗೊಂಡಿತ್ತು. ಆದರೆ ಆರನೇ ಶತಮಾನದ ಅಂತ್ಯದಲ್ಲಿ ಅದರ ಪರಿಧಿಯು ಸಾಕಷ್ಟು ವಿಸ್ತರಿಸಿ ಅದು ವ್ಯಾಕರಣ, ಅಲಂಕಾರ, ತರ್ಕ, ಗಣಿತ, ಜ್ಯಾಮಿತಿ, ಸಂಗೀತ ಮತ್ತು ಖಗೋಳಶಾಸ್ತ್ರಗಳೆಂಬ ಏಳು ಉದಾರಕಲೆಗಳನ್ನೂ (Seven Liberal Arts) ಒಳಗೊಂಡಿತ್ತು. ಪ್ರಾರಂಭದಲ್ಲಿ ಈ ಶಾಲೆಯು ಶಾಶ್ವತವಾಗಿ ಮಠೀಯ ಬದುಕನ್ನು ನಡೆಸುವವರಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಈ ಬದುಕಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಲಾರದವರೂ ಕ್ರಮೇಣ ಈ ಮಠಗಳಲ್ಲಿ ಶಿಕ್ಷಣವನ್ನು ಪಡೆದು ಹೊರಬರುತ್ತಿದ್ದರು. ಮೊದಲನೆಯವರನ್ನು ಪ್ರದೇಶ ನಿರ್ಬಂಧಿಗಳೆಂದು (Interni), ಮತ್ತು ಎರಡನೆಯವರನ್ನು ಪ್ರದೇಶ ಅನಿರ್ಬಂಧಿಗಳೆಂದೂ (Externi) ಕರೆಯಲಾಗುತ್ತಿತ್ತು.

ನಂತರ ರೋಮನ್ ಚಕ್ರವರ್ತಿಯಾದ **ಚಾರ್ಲ್‌ಮೇನ್** ತನ್ನ ಸಾಮ್ರಾಜ್ಯದ ಶಿಕ್ಷಣ ಸುಧಾರಣೆಗೆಂದು ಇಂಗ್ಲೆಂಡಿನ ಯಾರ್ಕ್‌ನ ಮಠೀಯ ಶಾಲೆಯಿಂದ **ಆಲ್ಕ್ವಿನ್** (ಕ್ರಿ.ಶ. 735–804)ನನ್ನು ಕರೆಸಿಕೊಂಡನು. **ಟೂರ್ಸ್**‌ನಲ್ಲಿ ಶಾಲೆಯೊಂದನ್ನು ಸ್ಥಾಪಿಸಿದ ಆಲ್ಕ್ವಿನ್ ತರ್ಕ ವ್ಯಾಕರಣಗಳ ಬಗ್ಗೆ ಅನೇಕ ಪಠ್ಯಗ್ರಂಥಗಳನ್ನು ಮತ್ತು ಮನಃಶಾಸ್ತ್ರದ ಬಗ್ಗೆ ಒಂದು ಕೃತಿಯನ್ನು ರಚಿಸಿದನು. ಈತನಿಂದ ಪ್ರಭಾವಿತರಾದ ಅನೇಕ ರೋಮನ್ ಪಂಡಿತರಲ್ಲಿ **ಜಾನ್ ಸ್ಕಾಟಸ್ ಎರಿಜೆನ** (ಕ್ರಿ.ಶ. 800–877) ಒಬ್ಬ. ಹಾಗೆಯೇ ಪಾಂಡಿತ್ಯವಾದಿಗಳಲ್ಲಿ (Scholastics) ಪ್ರಮುಖನಾದ **ಪೀಟರ್ ಅಬೆಲಾರ್ಡ್** (ಕ್ರಿ.ಶ. 1079–1142) ಚರ್ಚ್‌ನ ಎಲ್ಲ ಸಿದ್ಧಾಂತಗಳಿಗೂ ತಾರ್ಕಿಕ ಮತ್ತು ವೈಜ್ಞಾನಿಕ ಸಮರ್ಥನೆಯನ್ನು ನೀಡಬಹುದೆಂದ. ಆತನು ಪ್ಯಾರಿಸ್‌ನಲ್ಲಿ ತಾನು ಸ್ಥಾಪಿಸಿದ ವಿಶ್ವವಿದ್ಯಾನಿಲಯದಲ್ಲಿ ದೇವತಾಶಾಸ್ತ್ರಕ್ಕೆ ಪ್ರಾಧಾನ್ಯ ನೀಡಿದ. ಆದರೆ ಧಾರ್ಮಿಕ ಶಿಕ್ಷಣದಲ್ಲಿ ಒಂದು ಆಂದೋಲನವನ್ನೇ ಎಬ್ಬಿಸಿದವರು **ಮಾರ್ಟಿನ್ ಲೂಥರ್** (ಕ್ರಿ.ಶ. 1483–1546). ಜರ್ಮನ್ ಪುನರುಜ್ಜೀವನದ ಮತ್ತು ಪ್ರಾಟೆಸ್ಟೆಂಟ್ ಸುಧಾರಣೆಯ ಮುಮ್ಮೊನೆಯಾದ ಅವರು ರೋಮನ್ ಕ್ಯಾಥೋಲಿಕ್ ಚರ್ಚ್‌ನ ಸ್ಥಾನದಲ್ಲಿ ಜನರ ಅಥವಾ ಲುಥೆರನ್ ಚರ್ಚನ್ನು ಇರಿಸಿದರು. ಪ್ರತಿಯೊಬ್ಬನಿಗೂ ತನ್ನ ವಿಚಾರಶಕ್ತಿಗೆ ಅನುಗುಣವಾಗಿ ಬೈಬಲ್ ಅನ್ನು ಓದಿ ವ್ಯಾಖ್ಯಾನಿಸುವ ಅಧಿಕಾರವಿದೆಯೆಂದು ಅವರು ನುಡಿದರು.

### ಸೋಫಿಸ್ಟರು

ಶಿಕ್ಷಣದಲ್ಲಿ ಶುದ್ಧ ಲೌಕಿಕತೆಯ ಪ್ರಭಾವ ಈಚಿನ ಬೆಳವಣಿಗೆಯೇನೂ ಅಲ್ಲ. ಅದು ಅಥೆನ್ಸ್‌ನ ಸೋಫಿಸ್ಟರ ಕಾಲದಲ್ಲೇ (ಕ್ರಿ.ಪೂ. 5ನೇ ಶತಮಾನ) ಪ್ರಚಲಿತವಾಗಿತ್ತು. ಅವರ ಪ್ರಕಾರ ಪರಾವಲಂಬನೆಯಿಲ್ಲದೇ ಮನುಷ್ಯನು ಲೌಕಿಕ ಯಶಸ್ಸನ್ನು ಗಳಿಸುವುದೇ ಶಿಕ್ಷಣದ ಗುರಿ. "ನೀವು ನನ್ನಲ್ಲಿಗೆ ಬಂದ ದಿನವೇ ನೀವು ಬಂದಾಗ ಇದ್ದುದಕ್ಕಿಂತಲೂ ಉತ್ತಮವಾಗಿ ಹಿಂತಿರುಗುವಿರಿ" ಎಂಬುದು **ಪ್ರೊಟಾಗೋರಾಸ್** (ಕ್ರಿ.ಪೂ. 481–411) ಉಕ್ತಿ. ಆದರೆ ಮಾನವನ ಲೌಕಿಕ ಯಶಸ್ಸು ಅವನ ಮಾತುಗಾರಿಕೆಯಲ್ಲಿದೆ. ಆದ್ದರಿಂದ ಒಬ್ಬನು ಬದುಕಿನಲ್ಲಿ ಯಶಸ್ವಿಯಾಗಬೇಕಿದ್ದರೆ ಅವನು ಮಾತುಗಾರಿಕೆಯಲ್ಲಿ ತರಪೇತು ಹೊಂದಿರಬೇಕು, ಒಬ್ಬನ ಶಿಕ್ಷಿತತೆಯು ಅವನ ವಾಚಾಳಿತನದಲ್ಲಿದೆ. ಒಳ್ಳೆಯ ವಾಗ್ಮಿಯೇ ಸುಶಿಕ್ಷಿತ. ಪ್ರತಿವಾದಿಯನ್ನು ಗೆಲ್ಲಲು ಅಭೇದ್ಯವಾದ ತರ್ಕಸರಣಿಯನ್ನು ಮುಂದಿಡುವುದು ಒಬ್ಬನ ಶಿಕ್ಷಣದ ಕುರುಹು. ಶಿಕ್ಷಣವು ತರ್ಕ, ಅಥೆನ್ಸ್ ಕಾನೂನು ಪದ್ಧತಿಗಳು, ಪ್ರಾಚೀನ ಸಾಹಿತ್ಯ ಮತ್ತು ವಾದವನ್ನು ಇನ್ನೊಬ್ಬನು ಒಪ್ಪಿಕೊಳ್ಳುವಂತೆ ಮಾಡಬಲ್ಲ ಒತ್ತಾಯಿಸುವ ಧ್ವನಿ ಮತ್ತು ಸುಲಭಗ್ರಾಹ್ಯವಾದ ಭಾಷೆ – ಇವುಗಳಲ್ಲಿನ ತರಬೇತಿಯನ್ನು ಒಳಗೊಂಡಿತ್ತು.

ಸೋಫಿಸ್ಟರಂತೆ ರೋಮನ್ನರಿಗೂ ನಿರರ್ಗಳತೆಯೇ ಶಿಕ್ಷಣದ ಮುಖ್ಯ ಗುರಿಯಾಗಿದ್ದರೂ ಅವರಿಗೂ ಸಂಭಾವನೆಗಾಗಿ ಬೋಧಿಸುತ್ತಿದ್ದ ಸೋಫಿಸ್ಟರಿಗೂ ಒಂದು ವ್ಯತ್ಯಾಸವಿತ್ತು. ರೋಮನ್ ಶಿಕ್ಷಣದ ಬಗ್ಗೆ ಅಧಿಕಾರಯುಕ್ತ ಜ್ಞಾನವನ್ನು ಪಡೆದಿದ್ದ **ಕ್ವಿಂಟಿಲಿಯನ್** ನಿರರ್ಗಳತೆಗೆ ನೈತಿಕ ಪರಿಶುದ್ಧಿ ಅಗತ್ಯವೆಂದನು. ಮಾತಿನ ಕಲೆಯಲ್ಲಿ ಯಾವ ಅಂಶವನ್ನು ಸೋಫಿಸ್ಟರು ಗೌಣವಾಗಿಸಿದರೋ ಅದಕ್ಕೆ ಕ್ವಿಂಟಿಲಿಯನ್ ಪ್ರಾಧಾನ್ಯ ನೀಡಿ ವಾಗ್ಮಿಯೆನಿಸಿಕೊಂಡವನಿಗೆ ಇರಬೇಕಾದ ನೈತಿಕ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಗುರುತಿಸಿದನು. ಅವನ ಪ್ರಕಾರ ವಾಗ್ಮಿಯಾದವನ ಶೀಲವು ಸಂದೇಹಾತೀತವಾಗಿರಬೇಕು. ಅವನು ನೀತಿಶಾಸ್ತ್ರವನ್ನು ಅಧ್ಯಯನ ಮಾಡಿರಬೇಕು. ಪ್ರಜೆಯಾಗಿ ಶೀಲವನ್ನು ಬೆಳೆಸಿಕೊಂಡವನು, ಸಾರ್ವಜನಿಕ ಹಾಗೂ ಖಾಸಗೀ ವ್ಯವಹಾರಗಳಲ್ಲಿ ಸಮರ್ಥನಾದವನು, ಹಿತೋಕ್ತಿಗಳಿಂದ ಜನರನ್ನು ಆಳುವವನು ಮತ್ತು ಕಾನೂನು ಹಾಗೂ ನ್ಯಾಯ ಮಸೂದೆಗಳ ಮೂಲಕ ಜನರ ಸಮಸ್ಯೆಗಳನ್ನು ಪರಿಹರಿಸುವವನೇ ಕ್ವಿಂಟಿಲಿಯನ್ ಪ್ರಕಾರ ನಿಜವಾದ ವಾಗ್ಮಿ. ನಂತರ ಈ ಯೋಜನೆಯನ್ನು ಬೆಳೆಸಿದ **ಸಿಸೆರೋ** (ಕ್ರಿ.ಪೂ. 106–43) ರೋಮನ್ ವಾಗ್ಮಿಯ ಒಂದು ಉತ್ತಮ ಮಾದರಿಯಾಗಿ ಪರಿಣಮಿಸಿದನು.

### ಸಮಾಜದ ಪಾತ್ರ

ಇನ್ನೊಂದು ವಾದದ ಪ್ರಕಾರ ಶಿಕ್ಷಣದ ಮೂಲ ಉದ್ದೇಶ ಸಮಾಜ ಅಥವಾ ರಾಜ್ಯದ ಸೇವೆ. ಶಿಕ್ಷಣವು ಸಂಪೂರ್ಣವಾಗಿ ರಾಜ್ಯದ ನಿಯಂತ್ರಣಕ್ಕೆ ಒಳಪಟ್ಟಿರಬೇಕು. ಪ್ರಜಾನಿರ್ಮಾಣವೆಂಬುದರ ಹೊರತಾಗಿ ಶಿಕ್ಷಣವು ಇನ್ನಾವ ಉದ್ದೇಶವನ್ನೂ ಹೊಂದಿರಬಾರದು. ರಾಜ್ಯಕ್ಕೆ

Digitised by Bharatavani, CIIL

ನಿಷ್ಠೆಯಿಂದ ಸೇವೆ ಸಲ್ಲಿಸುವವನೇ, ರಾಜನ ಇಚ್ಛೆಗೆ ಅಧೀನವಾಗಿರುವವನೇ ಸತ್ಪ್ರಜೆ.

ಈ ವಾದದ ಉಗ್ರರೂಪವು ಜರ್ಮನಿ, ಇಟಲಿ ಮತ್ತು ಇತರ ಸರ್ವಾಧಿಕಾರದ ರಾಜ್ಯಗಳಲ್ಲಿ ಪ್ರಚಲಿತವಾಗಿತ್ತು. ಆದರೆ ಇದರ ಸೌಮ್ಯರೂಪವು ಮೊಟ್ಟಮೊದಲು ನಮಗೆ **ಸಾಕ್ರಟೀಸನ** (ಕ್ರಿ.ಪೂ. 469–399) ಬೋಧನೆಗಳಲ್ಲಿ ಕಂಡು ಬರುತ್ತದೆ. ಸೋಫಿಸ್ಟರನ್ನು ಖಂಡಿಸಿದ ಸಾಕ್ರಟೀಸನ ಪ್ರಕಾರ ಮನುಷ್ಯನನ್ನು ಉತ್ತಮ ಪ್ರಜೆಯಾಗಿಸುವುದೇ ಶಿಕ್ಷಣದ ಮೂಲ ಉದ್ದೇಶ. ಸೋಫಿಸ್ಟರು ವ್ಯಕ್ತಿಗೆ ಪ್ರಾಧಾನ್ಯ ನೀಡಿದರೆ ಸಾಕ್ರಟೀಸನು ಮಾನವನ ಸಾಂಘಿಕ ಬದುಕಿಗೆ ಪ್ರಾಧಾನ್ಯ ನೀಡಿದನು. ಮಾನವನನ್ನು ಕೇವಲ ವ್ಯಕ್ತಿಯನ್ನಾಗಿ ಪರಿಗಣಿಸದೇ ಗುಂಪಿನ ಸದಸ್ಯನನ್ನಾಗಿ ಕಂಡನು. ಆತನ ಪ್ರಕಾರ ಮಾನವನು ಜೀವನದಲ್ಲಿ ಪಡೆಯಬಹುದಾದ ಅತ್ಯಮೂಲ್ಯ ವಸ್ತುವೆಂದರೆ ಜ್ಞಾನ. ವ್ಯಕ್ತಿಗತ ಭಿನ್ನಾಭಿಪ್ರಾಯಗಳನ್ನು ತೊಡೆದುಹಾಕಿ ಎಲ್ಲರಿಗೂ ಸ್ವೀಕಾರಾರ್ಹವಾದ ಮೂಲತತ್ವಗಳನ್ನು ಕಂಡುಕೊಳ್ಳುವ ಮೂಲಕ ಇದನ್ನು ಪಡೆಯಬಹುದು. ಸಾಕ್ರಟೀಸನ ಬೋಧನೆಯು ಸಾಮಾನ್ಯವಾಗಿ ನಾವು ಬಳಸುವ ನೈತಿಕ ಪದಗಳ ನಿಖರವಾದ ಅರ್ಥವನ್ನು ಕಂಡುಕೊಳ್ಳುವುದರ ಮೇಲೆ ಕೇಂದ್ರೀಕೃತವಾಗಿತ್ತು, ಎಂದರೆ ಆತನ ಶಿಕ್ಷಣ ವಿಷಯವು ಹೆಚ್ಚಾಗಿ ನೀತಿಗೆ ಸಂಬಂಧಿಸಿತ್ತು. ಆತನ ಶಿಕ್ಷಣವಿಧಾನಕ್ಕೆ **ಡೈಲೆಕ್ಟಿಕ್** ಅಥವಾ **ಸೊಕ್ರಾಟಿಕ್** ವಿಧಾನವೆಂದು ಹೆಸರು. ಇದರ ಪ್ರಕಾರ ಒಬ್ಬನು ಒಂದು ಹೇಳಿಕೆಯನ್ನು ಮಂಡಿಸುತ್ತಾನೆ. ಇನ್ನೊಬ್ಬನು ಇದನ್ನು ವಿಶ್ಲೇಷಿಸಿ ಅದರಲ್ಲಿ ಅಸಾಂಗತ್ಯವನ್ನು ಎತ್ತಿ ತೋರಿಸುತ್ತಾನೆ. ನಂತರ ಅವನೇ ಮೊದಲನೆಯವನಿಗೆ ಪ್ರಶ್ನೆಗಳ ಮಾಲೆಯನ್ನು ಹಾಕಿ ಕೊನೆಗೆ ಅವನಿಂದಲೇ ಉತ್ತರವನ್ನು ಹೇಳಿಸುತ್ತಾನೆ.

ಸಾಕ್ರಟೀಸನ ಶಿಷ್ಯನಾದ **ಪ್ಲೇಟೋ** (ಕ್ರಿ.ಪೂ. 427–347) ಶಿಕ್ಷಣವನ್ನು ಕುರಿತಂತೆ ತನ್ನ **ರಿಪಬ್ಲಿಕ್** ಎಂಬ ಮಹಾಸಂವಾದದಲ್ಲಿ ವಿವರಿಸುತ್ತಾನೆ. ಆತನ ಪ್ರಕಾರ ತನ್ನ ಯೋಗ್ಯತೆ ಮತ್ತು ತಾನು ಪಡೆದುಕೊಂಡ ತರಪೇತಿಗೆ ಅನುಸಾರವಾಗಿ ಪ್ರತಿಯೊಬ್ಬನಿಂದಲೂ ನಿರ್ದಿಷ್ಟ ಕೆಲಸವನ್ನು ಮಾಡಿಸುವ ಮೂಲಕ ನ್ಯಾಯಬದ್ಧ ಅಥವಾ ಆದರ್ಶರಾಜ್ಯವನ್ನು ಸ್ಥಾಪಿಸುವುದೇ ಶಿಕ್ಷಣದ ಗುರಿ. ಜನರ ಯೋಗ್ಯತೆಯನ್ನು ಗುರುತಿಸಲು ಪ್ಲೇಟೋ ಒಂದು ಶೈಕ್ಷಣಿಕ ಯೋಜನೆಯನ್ನು ಕೈಗೊಂಡನು. ಇದರ ಪ್ರಕಾರ ಮೊದಲ 18 ವರ್ಷಗಳಲ್ಲಿ ಬಾಲಕನಿಗೆ ದೈಹಿಕ ವ್ಯಾಯಾಮ ಮತ್ತು ಸಂಗೀತ, ಸಾಹಿತ್ಯ ಹಾಗೂ ಕ್ರೀಡೆಗಳಲ್ಲಿ ತರಪೇತನ್ನು ನೀಡಬೇಕು. ಚಿತ್ರಕಲೆ ಮತ್ತು ನಾಟಕಗಳನ್ನು ವಾಸ್ತವತೆಯ ಅನಿಖರ ನಕಲುಗಳೆಂದು ಅಲ್ಲಗಳೆದ ಪ್ಲೇಟೋ ಸಂಗೀತಕ್ಕೆ ಆದ್ಯತೆ ನೀಡಿದುದು ಒಂದು ವಿಶೇಷ. ಆತನು ದೇಹ ಮನಸ್ಸುಗಳ ಸಾಮರಸ್ಯಕ್ಕೆ ಸಂಗೀತ ಮತ್ತು ವ್ಯಾಯಾಮಗಳೆರಡೂ ಅಗತ್ಯವೆಂದನು. ಸಂಗೀತವು ಮನುಷ್ಯನಲ್ಲಿ ಸೂಕ್ಷ್ಮತೆ ಮತ್ತು ಮೃದುತ್ವವನ್ನು ಮೂಡಿಸಿದರೆ ವ್ಯಾಯಾಮವು ದೇಹಕ್ಕೆ ದೃಢತೆಯನ್ನು ನೀಡುತ್ತದೆ. ಬರಿಯ ಸಂಗೀತವು ಮನುಷ್ಯನನ್ನು ದುರ್ಬಲಗೊಳಿಸಿದರೆ ಬರಿಯ ವ್ಯಾಯಾಮವು ಅವನನ್ನು ಪ್ರಾಕೃತಗೊಳಿಸುವ ಸಂಭವವುಂಟು. ಆದ್ದರಿಂದ ದೇಹಮನಸ್ಸುಗಳಲ್ಲಿ ಸಾಮರಸ್ಯವೇರ್ಪಡಲು ಸಂಗೀತ ವ್ಯಾಯಾಮಗಳೆರಡೂ ಅಗತ್ಯ. ನಂತರ ಶಿಕ್ಷಣವನ್ನು ಮುಂದುವರೆಸಲು ಅಸಮರ್ಥರಾದವರು ವ್ಯಾಪಾರ ವೃತ್ತಿಯನ್ನು ಕೈಗೊಳ್ಳಬೇಕು. ಶಿಕ್ಷಣವನ್ನು ಮುಂದುವರೆಸಲು ಇಚ್ಛಿಸುವವರು ಎರಡು ವರ್ಷಗಳ ಕೆಡೆಟ್ (ಸೈನಿಕ) ಪದವಿಯನ್ನು ಪಡೆಯಬೇಕು. ಇವರಿಗೆ ಶಿಕ್ಷಣವನ್ನು ಪುನಃ ಮುಂದುವರೆಸಲು ಅಸಾಧ್ಯವಾದಲ್ಲಿ ಅವರು ದೇಶರಕ್ಷಣೆಗೆ ಸೈನ್ಯವನ್ನು ಸೇರಬೇಕು. ಉಳಿದವರು ತತ್ತ್ವಶಾಸ್ತ್ರ, ಗಣಿತ, ಸಂಗೀತ, ವಿಜ್ಞಾನ ಮತ್ತು ಇತರ ವಿಷಯಗಳಲ್ಲಿ ಆಳವಾದ ತರಪೇತನ್ನು ಹೊಂದಬೇಕು. ಶಿಕ್ಷಣವನ್ನು ಕೊನೆಯವರೆಗೂ ಮುಂದುವರೆಸಿದವರು ತಾತ್ತ್ವಿಕರೆನಿಸಿಕೊಳ್ಳುತ್ತಾರೆ. ಪ್ಲೇಟೋ ಪ್ರಕಾರ ಈ ತಾತ್ತ್ವಿಕರೇ ದೇಶವನ್ನು ಆಳಲು ಯೋಗ್ಯರು. ಹೀಗೆ ಪ್ಲೇಟೋ ಜನರನ್ನು ಅವರ ಅರ್ಹತೆಗೆ ಅನುಸಾರವಾಗಿ ವರ್ತಕ, ಸೈನಿಕ ಹಾಗೂ ತಾತ್ತ್ವಿಕರೆಂದು ಮೂರು ವರ್ಗಗಳಾಗಿ ವಿಭಜಿಸುತ್ತಾನೆ. ಹಾಗೆ ಮಾಡಲು ತನ್ನದೇ ಆದ ಶಿಕ್ಷಣ ವಿಧಾನವನ್ನು ರೂಪಿಸುತ್ತಾನೆ. ಆತನ ಪ್ರಕಾರ ಶಿಕ್ಷಣವು ಮುಖ್ಯವಾಗಿ ರಾಜ್ಯಕ್ಕೆ ಸಂಬಂಧಿಸಿದ ವಿಷಯ. ಒಬ್ಬನು ಯಾವ ವರ್ಗಕ್ಕೆ ಸೇರಬೇಕು ಮತ್ತು ಅವನಿಗೆ ಯಾವ ತರಪೇತನ್ನು ನೀಡಬೇಕೆಂದು ನಿರ್ಧರಿಸುವುದು ತಾತ್ತ್ವಿಕರ ಅಥವಾ ರಾಜ್ಯದ ಕೆಲಸ.

**ಅರಿಸ್ಟಾಟಲ್** ಪ್ರಕಾರ (ಕ್ರಿ.ಪೂ. 384–322) ರಾಜ್ಯವನ್ನು ರಚಿಸಿ ಅದನ್ನು ಉತ್ತಮಗೊಳಿಸುವ ಸಮರ್ಥ ಪ್ರಜೆಗಳನ್ನು ರೂಪಿಸುವುದು ಶಿಕ್ಷಣದ ಉದ್ದೇಶ. ಮೊದಲ ಏಳು ವರ್ಷಗಳವರೆಗೂ ಬಾಲಕನಿಗೆ ದೈಹಿಕ ಶಿಕ್ಷಣವನ್ನು ಮತ್ತು ಅನಂತರ 21 ವರ್ಷದವರೆಗೂ ಔಪಚಾರಿಕ ಶಿಕ್ಷಣವನ್ನು ನೀಡಬೇಕು. ಇಲ್ಲಿ ಬಾಲಕನು ಸಂಗೀತ, ಸಾಹಿತ್ಯ, ವ್ಯಾಯಾಮ ಇವೇ ಮುಂತಾದ ವಿಷಯಗಳನ್ನು ಕಲಿಯುತ್ತಾನೆ. ನಾವು ವೈಯಕ್ತಿಕವೆನ್ನುವ ವಿಷಯಗಳಲ್ಲೂ ರಾಜ್ಯದ ಹಸ್ತಕ್ಷೇಪವಿರುತ್ತದೆ. ಜನಿಸಿದ ನಂತರ ಯಾವ ಮಕ್ಕಳು ಬದುಕಬೇಕು, (ಅಂಗವೈಕಲ್ಯದ ಕಾರಣ) ಯಾವ ಮಕ್ಕಳನ್ನು ನಾಶಮಾಡಬೇಕು ಮತ್ತು ಯೋಗ್ಯ ಸಂತಾನವನ್ನು ಪಡೆಯಲು ಒಬ್ಬನು ಯಾವ ಸ್ತ್ರೀಯನ್ನು ವರಿಸಬೇಕೆಂಬುದನ್ನು ರಾಜ್ಯವೇ ನಿರ್ಧರಿಸುತ್ತದೆ.

ಹಾಗೆಯೇ **ಜೆ.ಜಿ. ಫಿಕ್‌ಟೆ** (ಕ್ರಿ.ಶ. 1762–1814) ಪ್ರಕಾರ ರಾಷ್ಟ್ರದ ಹೆಗ್ಗಳಿಕೆಯನ್ನು ಹೆಚ್ಚಿಸುವುದೇ ಶಿಕ್ಷಣದ ಗುರಿಯಾದರೂ ರಾಷ್ಟ್ರೀಯ ಜೀವನದ ಅರ್ಥಪೂರ್ಣ ಅಂಶಗಳನ್ನು ಪ್ರೀತಿಸಲು ಜನರೇ ಮುಂದಾಗಬೇಕು. ಪ್ರಷ್ಯನ್ ರಾಜ್ಯಜೀವನದ ಕಷ್ಟಕ್ಷಣಗಳಲ್ಲಿ ಜರ್ಮನ್ ರಾಷ್ಟ್ರಕ್ಕೆ ನೀಡಿದ ಸಂದೇಶದಲ್ಲಿ ಫಿಕ್‌ಟೆ ಸಾಮೂಹಿಕ ಐಕಮತ್ಯದ ಅಗತ್ಯವನ್ನು ಒತ್ತಿ ನುಡಿದನು.

ಮನುಷ್ಯನನ್ನು ರಾಜ್ಯದ ಪ್ರಜೆಯಾಗಿಸುವುದೇ **ಥಾಮಸ್ ಹಾಬ್ಸ್** ಎಂಬ ಬ್ರಿಟಿಷ್ ತಾತ್ತ್ವಿಕನ (ಕ್ರಿ.ಶ. 1588–1679) ಪ್ರಕಾರ ಶಿಕ್ಷಣದ ಗುರಿಯಾದರೂ, ಆತನು ರಾಜನಿಗೆ ನೀಡಿದ ವಿಶೇಷ ಬಲಾಧಿಕಾರಗಳು ಆತನನ್ನು ಸಾಕ್ರಟೀಸ್ ಮತ್ತು ಪ್ಲೇಟೋರಿಂದ ಪ್ರತ್ಯೇಕಿಸುತ್ತವೆ. ಇಲ್ಲಿ ಶಿಕ್ಷಣವು ರಾಜನ ಸಾಧನವಾಗುತ್ತದೆ. ಪ್ರಜೆಗಳು ಪಡೆಯಬೇಕಾದ ಶಿಕ್ಷಣದ ಮಾದರಿಯನ್ನು ನಿರ್ಧರಿಸುವವನು ರಾಜನೇ. ಅವನು ರೂಪಿಸಿದ ಶೈಕ್ಷಣಿಕ ವ್ಯವಸ್ಥೆಯನ್ನು ಪ್ರಜೆಗಳು ಮರುಮಾತಿಲ್ಲದೇ ಅಂಗೀಕರಿಸಬೇಕು. ಶಿಕ್ಷಣವು ಸಾರ್ವಭೌಮತ್ವಕ್ಕೆ ಸೇರಿದ ಪರಿಪೂರ್ಣ ಹಕ್ಕುಗಳಲ್ಲಿ ಒಂದು.

### ವೈಜ್ಞಾನಿಕ ಶಿಕ್ಷಣ

ಪ್ರಾಚೀನತೆಯನ್ನು ಕುರಿತ ನಿಷ್ಠೆ ಜನರ ಪುನರ್ವಿಮರ್ಶೆಗೆ ಒಳಗಾದುದು **ಫ್ರಾನ್ಸಿಸ್ ಬೇಕನ್ನನ** ಕಾಲದಲ್ಲಿ (ಕ್ರಿ.ಶ. 1561–1626). ಈತನ ಪ್ರಕಾರ ಒಬ್ಬನು ಪ್ರಕೃತಿಯನ್ನು ಕುರಿತಂತೆ ಸ್ಪಷ್ಟ ಅಥವಾ ಕರಾರುವಾಕ್ಕಾದ ತೀರ್ಮಾನಗಳನ್ನು ಪಡೆಯುವುದೇ ಶಿಕ್ಷಣದ ಗುರಿ. ಶಿಕ್ಷಣವು ವೈಜ್ಞಾನಿಕ ತಳಹದಿಯನ್ನು ಹೊಂದಿರಬೇಕು. ಎಂದರೆ ಅದು ಅವಲೋಕನ ಪ್ರಯೋಗಗಳನ್ನು ಆಧರಿಸಿರಬೇಕು. ಎಲ್ಲ ರೀತಿಯ ಪೂರ್ವಗ್ರಹಗಳಿಂದ ಮುಕ್ತವಾದ ಮನಸ್ಸಿನಿಂದ ಪ್ರಕೃತಿಯ ಘಟನೆಗಳನ್ನು ಜಾಗರೂಕವಾಗಿ ಪರಿಶೀಲಿಸುವುದೇ ಅವಲೋಕನ (Observation). ಅವಲೋಕನವು ಘಟನೆಗಳ ಬಗ್ಗೆ ನೀಡುವ ಮಾಹಿತಿಗಳಿಂದ ನಾವು ಸೂಕ್ತವಾದ ಪ್ರಾಕಲ್ಪನೆಗಳನ್ನು (Hypothesis). ಹೊರಗೆಳೆಯಬೇಕು. ಪ್ರಾಕಲ್ಪನೆಯೆಂದರೆ ಘಟನೆಯೊಂದನ್ನು ಕುರಿತು ನಾವು ಮಾಡುವ ತಾತ್ಕಾಲಿಕ ಊಹೆ. ನಂತರ ಈ ಊಹೆಗೆ ವಸ್ತುಸಾಂಗತ್ಯವಿದೆಯೇ ಎಂಬುದನ್ನು ಪರೀಕ್ಷಿಸಬೇಕು (Verification). ವಸ್ತುಸಾಂಗತ್ಯವಿದ್ದಲ್ಲಿ ನಮ್ಮ ಊಹೆಯು ಸಿದ್ಧಾಂತವೆನಿಸಿಕೊಳ್ಳುತ್ತದೆ

Digitised by Bharatavani, CIIL

(Thesis). ಪ್ರಕೃತಿಯನ್ನು ಕುರಿತ ನಮ್ಮ ಈ ಸಿದ್ಧಾಂತಗಳು ಸಂಖ್ಯೆಯಲ್ಲಿ ಅಧಿಕವಾದಂತೆ ಅವುಗಳನ್ನು ಸಮಾಜದ ತರುಣರಿಗೆ ವರ್ಗಾಯಿಸಬೇಕು. ಇದು ಹಿಂದಿನ ಪೀಳಿಗೆಯಲ್ಲಿ ಅನ್ವೇಷಣೆಯು ಯಾವ ಹಂತಕ್ಕೆ ನಿಂತಿತ್ತೋ ಅಲ್ಲಿಂದ ಅದನ್ನು ತರುಣರು ಮುಂದುವರೆಸಲು ನೆರವಾಗುತ್ತದೆ.

ಹಾಗೆಯೇ ಮನುಷ್ಯನಿಗೆ ಯಾವುದೂ ಅಸಾಧ್ಯವಿಲ್ಲವೆಂದ ಮೊರಾವಿಯನ್ ಬಿಷಪ್ ಹಾಗೂ ಶಿಕ್ಷಕ **ಜೆ.ಎ. ಕೊಮೆನಿಯಸ್** (ಕ್ರಿ.ಶ. 1592–1670) ಮಾನವನ ಬುದ್ಧಿಯನ್ನು ಒಂದು ವಿಶ್ವಕೋಶವನ್ನಾಗಿಸುವ ಕನಸನ್ನು ಕಂಡ. ಕಲಿಕೆಯಲ್ಲಿ ವೈಜ್ಞಾನಿಕತೆಯ ಪಾತ್ರವನ್ನು ಒತ್ತಿನುಡಿದ ಆತನ ಪ್ರಕಾರ ವಿದ್ಯಾರ್ಥಿಯು ತನ್ನನ್ನು ಸುತ್ತಮುತ್ತಲ ಪ್ರಪಂಚಕ್ಕೆ ಪ್ರದರ್ಶಿಸಿಕೊಳ್ಳಬೇಕೆಂಬ ಅರ್ಥದಲ್ಲಿ ಶಿಕ್ಷಣವು ವೈಜ್ಞಾನಿಕ. ಪ್ರಾರಂಭದಲ್ಲಿ ಕಲಿಕೆಯು ಸಾಮಾನ್ಯ, ಅನಿಶ್ಚಿತ ಅಥವಾ ಅಸ್ಪಷ್ಟರೂಪವನ್ನು ತಳೆಯುತ್ತದೆ. ಕ್ರಮೇಣ ಮಗುವಿನ ಬೆಳವಣಿಗೆಗೆ ಅನುಸಾರವಾಗಿ ನಿಖರತೆಯೆಡೆಗೆ ಸಾಗುತ್ತದೆ. ಏಕೆಂದರೆ ಮಗುವು ಬೆಳೆದಂತೆಲ್ಲಾ ಅದರ ಅವಲೋಕನ ಪರಿಧಿಯೂ ವಿಸ್ತಾರ ಹಾಗೂ ಆಳವಾಗುತ್ತಾ ಹೋಗುತ್ತದೆ.

**ಅನುಭವದ ಪಾತ್ರ**

ತನ್ನ ಕಾಲದ ಶಿಕ್ಷಣ ಪದ್ಧತಿಯು ಪ್ರಾಚೀನ ಧಾರ್ಮಿಕ ಗ್ರಂಥಗಳಲ್ಲಿನ ಆಸಕ್ತಿಗಿಂತಲೂ ಹೆಚ್ಚಿನದೇನಲ್ಲವೆಂದು ಟೀಕಿಸಿದ ಇಂಗ್ಲೆಂಡಿನ **ಜಾನ್ ಲಾಕ್** (ಕ್ರಿ.ಶ. 1632–1704) ಶಿಕ್ಷಣದಲ್ಲಿ ಅನುಭವದ ಪಾತ್ರವನ್ನು ಎತ್ತಿಹಿಡಿದನು. ಆತನ ಪ್ರಕಾರ ಶಿಕ್ಷಣವು ವರ್ತಮಾನ ಬದುಕಿನ ಹಿನ್ನೆಲೆಯಲ್ಲಿ ಪ್ರಾಯೋಗಿಕವಾಗಿರಬೇಕು. ಮನುಷ್ಯನನ್ನು ಸದ್ಗುಣವಂತನನ್ನಾಗಿಸುವುದು, ಪರಾವಲಂಬನೆಯಿಲ್ಲದೇ ತನ್ನನ್ನು ರಕ್ಷಿಸಿಕೊಳ್ಳುವಂತೆ ಮಾಡುವುದು ಮತ್ತು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವಷ್ಟು ಪರಿಸರ ಜ್ಞಾನವನ್ನು ಹೊಂದಿಸುವುದು ಶಿಕ್ಷಣದ ಗುರಿ. ಮಾನಸಿಕ ದೃಢತೆಗೆ ದೈಹಿಕ ವ್ಯಾಯಾಮ ಅಗತ್ಯ. ಜ್ಞಾನವೆಂಬುದು ಲಾಕ್, ಜಾನ್ ಹೇಳುವಂತೆ ಅನುಭವಪೂರ್ವವಲ್ಲ (Apriori). ಅದು ಮಾನವನಿಗೆ ಹೊರಗಿನಿಂದ ಬರುವಂತಹುದು. ಹುಟ್ಟಿನಲ್ಲಿ ಮಾನವನ ಮನಸ್ಸು ಶೂನ್ಯಫಲಕ (Tabula rasa). ಆದರೆ ಅದು ಬಾಹ್ಯ ಪ್ರಪಂಚದ ಸಂವೇದನೆಗಳನ್ನು (Sensations) ಸ್ವೀಕರಿಸುವ ಶಕ್ತಿಯನ್ನು ಪಡೆದಿರುತ್ತದೆ. ಮನಸ್ಸು ಮತ್ತು ಹೊರಗಿನ ಜಗತ್ತುಗಳ ನಡುವಣ ಸಂಪರ್ಕದಿಂದ ಮಾನವನಿಗೆ ಜ್ಞಾನವು ಲಭಿಸುತ್ತದೆ. ಆದ್ದರಿಂದ ಒಬ್ಬನು ತನ್ನನ್ನು ಪ್ರಪಂಚಕ್ಕೆ ಪ್ರದರ್ಶಿಸಿಕೊಂಡಷ್ಟೂ ಒಳ್ಳೆಯದು. ಇದು ಅವನು ಬಾಹ್ಯ ಸಂವೇದನೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಪಡೆಯಲು ನೆರವಾಗುತ್ತದೆ. ಈ ಬಾಹ್ಯ ಸಂಪರ್ಕವನ್ನು ಪರ್ಯಟನೆ, ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲುಗೊಳ್ಳುವಿಕೆ, ಖಾಸಗೀ ಶಿಕ್ಷಣ ಇವೇ ಮುಂತಾದ ವಿಧಾನಗಳಿಂದ ಪಡೆಯಬಹುದು.

**ಜೊಹಾನ್ ಫ್ರೆಡ್ರಿಚ್ ಹರ್ಬಾರ್ಟ್**

ಲಾಕ್‌ನ ಅನುಭವವಾದವನ್ನೇ ಅನುಸರಿಸಿದ **ಜೆ.ಎಫ್. ಹರ್ಬಾರ್ಟ್** (ಕ್ರಿ.ಶ. 1776–1841) ಎಂಬ ಜರ್ಮನ್ ಶಿಕ್ಷಣತಜ್ಞನೂ ಕೂಡ ಮಗುವಿನ ಬೆಳವಣಿಗೆಯಲ್ಲಿ ಪರಿಸರದ ಪಾತ್ರವನ್ನು ಎತ್ತಿಹಿಡಿದ. ಒಳ್ಳೆಯ ಪರಿಸರವು ಒಳ್ಳೆಯ ಸಂವೇದನೆಗಳನ್ನು ಒದಗಿಸಿ ಬಾಲಕನನ್ನು ನೈತಿಕವಾಗಿ ಶಕ್ತಿಯುತನನ್ನಾಗಿಸುತ್ತದೆ. ಮಗುವಿಗೆ ಯಾವ ಪರಿಸರವು ಒಳ್ಳೆಯದೆಂದು ನಿರ್ಧರಿಸುವವನು ಶಿಕ್ಷಕ. ಒಳ್ಳೆಯ ಭಾವನೆಗಳನ್ನು ತನ್ಮೂಲಕ ಶೀಲವನ್ನು ಬೆಳೆಸಿಕೊಳ್ಳಲು ನೆರವಾಗುವ ವಾತಾವರಣವನ್ನು ಸೃಷ್ಟಿಸುವುದು ಒಳ್ಳೆಯ ಶಿಕ್ಷಕನ ಲಕ್ಷಣ. ಸಂವೇದನೆಗಳನ್ನು ಸ್ವೀಕರಿಸಲು ಮನಸ್ಸಿಗೆ ಇರುವ ಶಕ್ತಿಯನ್ನು ಗುರುತಿಸುವಲ್ಲಿ ಹರ್ಬರ್ಟ್ ಲಾಕನನ್ನು ಹೋಲಿಕೊಂಡರೂ ಆತನಿಗೂ ಲಾಕನಿಗೂ ಒಂದು ವ್ಯತ್ಯಾಸವಿತ್ತು. ಲಾಕನ ಪ್ರಕಾರ ಮನಸ್ಸಿಗೆ ಸಂವೇದನೆಗಳನ್ನು ಸ್ವೀಕರಿಸುವ ಶಕ್ತಿ ಮಾತ್ರವೇ ಇರುವುದು. ಆ ಸಂವೇದನೆಗಳನ್ನು ವ್ಯವಸ್ಥಿತ ಗೊಳಿಸುವಲ್ಲಿ ಅದಕ್ಕಿರುವ ಭಾವಾತ್ಮಕ ಶಕ್ತಿಯನ್ನು ಲಾಕನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮನಸ್ಸಿನ ಈ ಎರಡನೆಯ ಸಾಮರ್ಥ್ಯವನ್ನು ಗುರುತಿಸುವಲ್ಲಿ ಹರ್ಬರ್ಟನು ಜರ್ಮನಿಯ **ಎಮ್ಯಾನುಯಲ್‌ಕ್ಯಾಂಟ್** (ಕ್ರಿ.ಶ. 1724–1804) ನಿಂದ ಪ್ರಭಾವಿತನಾದನೆನ್ನಬಹುದು. ಕ್ಯಾಂಟನ ಪ್ರಕಾರ ಮನಸ್ಸು ಹೊರಗಿನ ಸಂವೇದನೆಗಳನ್ನು ಅವುಗಳಿದ್ದಂತೆ ನಿಷ್ಕ್ರಿಯವಾಗಿ ತೆಗೆದುಕೊಳ್ಳುವ ಜಡಮೇಣವಲ್ಲ. ಅದು ಸಂವೇದನೆಗಳನ್ನು ಸ್ವೀಕರಿಸುವುದಷ್ಟೇ ಅಲ್ಲ, ಅವುಗಳನ್ನು ವ್ಯವಸ್ಥಿತಗೊಳಿಸುವ ಒಂದು ಕ್ರಿಯಾಶೀಲ ಸಾಧನವೂ ಹೌದು.



**ಎಮ್ಯಾನುಯಲ್ ಕಾಂಟ್**

**ಸಹಜ ಶಿಕ್ಷಣ**

ಶಿಕ್ಷಣವನ್ನು ಕುರಿತಂತೆ ಒಂದು ಕ್ರಾಂತಿಕಾರದ ಸಿದ್ಧಾಂತವನ್ನು ಮಂಡಿಸಿದವನು ಸ್ವಿಡ್ಜರ್ಲೆಂಡಿನ **ಜೆ.ಜೆ. ರೂಸೋ** (ಕ್ರಿ.ಶ. 1712–1778). ಆತನು ತನ್ನ **ಎಮಿಲಿ** ಎಂಬ ಗ್ರಂಥದಲ್ಲಿ ಮಕ್ಕಳ ಶಿಕ್ಷಣದ ಬಗ್ಗೆ ವಿವರಿಸುತ್ತಾನೆ. ಅವನ ಪ್ರಕಾರ ಶಿಶುವಿನ ಸಹಜ ವಿಕಾಸಕ್ಕೆ ಸಾಧನವಾದ ಪ್ರಕ್ರಿಯೆಯೇ ಶಿಕ್ಷಣ. ತನ್ನ ಈ ಸಿದ್ಧಾಂತದ ಹಿನ್ನೆಲೆಯಲ್ಲೇ ರೂಸೋ ಹಾಬ್ಸ್ ಮತ್ತು ಲಾಕರನ್ನು ಖಂಡಿಸಿದುದು. ಆತನ ಪ್ರಕಾರ ಶಿಕ್ಷಣ ವ್ಯವಸ್ಥೆಯ ರಚನೆಯಲ್ಲಿ ಸಮಾಜ ಅಥವಾ ಅದರ ಪ್ರತಿನಿಧಿಯಾದ ರಾಜ ಇವರ ಪಾತ್ರವು ಮನುಷ್ಯನ ಸಹಜ ಸ್ವಭಾವವನ್ನು ಚಿವುಟಿ ಹಾಕಿಬಿಡುತ್ತದೆ. ಬದುಕೆಂಬುದು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ – ಈ ಎಲ್ಲ ರೀತಿಯ ಒತ್ತಡಗಳಿಂದಲೂ ಮುಕ್ತವಾಗಿರಬೇಕು. ಮಗುವು ತನ್ನದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಆಸ್ಪದ ನೀಡಬೇಕು. ಲಾಕನು ಶಿಕ್ಷಣಕ್ಕೆ ಸಾಮಾಜಿಕ ಒತ್ತನ್ನು ನೀಡಿದರೆ ರೂಸೋ ಸಮಾಜವು ಮಗುವಿನ ಮೇಲೆ ಬೀರುವ ಕೆಟ್ಟ ಪರಿಣಾಮವನ್ನು ಪ್ರಮುಖವಾಗಿಸಿದನು. ಮೂಲತಃ ಒಳ್ಳೆಯ ಸ್ವಭಾವದ ಮಗುವಿನ ವ್ಯಕ್ತಿತ್ವವು ಸಮಾಜದಿಂದ ಯಾವುದೇ ರೀತಿ ದಮನವಾಗಲಾರದೆಂದು ಖಾತರಿಯಾಗುವವರೆಗೂ ಅದನ್ನು ಸಮಾಜದಿಂದ ದೂರವಿಡಬೇಕು ಎಂದು ಆತನು ಹೇಳಿದನು.

ಮೊದಲ ನಾಲ್ಕು ವರ್ಷಗಳು ಮಗುವು ದೈಹಿಕ ಶಿಕ್ಷಣವನ್ನು ಪಡೆಯಬೇಕು. ನಂತರ ಹನ್ನೆರಡು ವರ್ಷದವರೆಗೂ ಇಂದ್ರಿಯಪಟುತ್ವವನ್ನು ಬೆಳೆಸಿಕೊಳ್ಳಲು ನಿಸರ್ಗದ ಮಧ್ಯೆ ಇದ್ದು ವಿಷಯಗಳನ್ನು ಅವಲೋಕಿಸಬೇಕು. ಪುಸ್ತಕವೇ ಮುಂತಾದ ಇತರ ವಿಧಾನಗಳ ಮೂಲಕ ಬೌದ್ಧಿಕ ಶಿಕ್ಷಣವು ಹದಿಮೂರನೇ ವಯಸ್ಸಿನಿಂದ ಪ್ರಾರಂಭವಾಗುತ್ತದೆ. ರೂಸೋ ಕಲಿಕೆಯಲ್ಲಿ ಶಿಕ್ಷಕನ ಪಾತ್ರವನ್ನು ಕುಂಠಿತಗೊಳಿಸಿದ. ಒಂದು ಕಡೆ ಅವನು ಶಿಕ್ಷಕರನ್ನು ತೀಕ್ಷ್ಣವಾಗಿ ಟೀಕಿಸುತ್ತಾನೆ. ಮೇರು ಕೃತಿಗಳನ್ನು ನೀಡಿದ ಬೇಕನ್, ಡೆಕಾರ್ಟ್, ನ್ಯೂಟನ್ ಮುಂತಾದ ತಾತ್ತ್ವಿಕರು ಶಿಕ್ಷಕರು ಕೈಗೆ ಸಿಕ್ಕಿಬಿದ್ದಿದ್ದರೆ ಇವರಿಗೆ ತಮ್ಮ

Digitised by Bharatavani, CIIL

ಪ್ರತಿಭೆಯನ್ನು ತೋರಿಸುವುದೇ ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾನೆ. ಅವನ ಪ್ರಕಾರ ಬಾಲಕನು ಕುತೂಹಲದಿಂದ ಸಹಜವಾಗಿ ತಾನೇ ಪ್ರಶ್ನಿಸುವವರೆಗೂ ಅವನಿಗೆ ಏನನ್ನೂ ಬೋಧಿಸಬಾರದು. ಅವನಿಗೆ ಸಮಸ್ಯೆಯ ಅರಿವು ಮೂಡಿದಾಗ ಮಾತ್ರ ಬೋಧಿಸಬೇಕು. ಅಲ್ಲದೇ ಈ ಅವಧಿಯಲ್ಲಿ ಅವನು ಆರ್ಥಿಕ ಸ್ವಾತಂತ್ರ್ಯಗಳಿಸಲು ವ್ಯಾಪಾರ, ವಾಣಿಜ್ಯಗಳನ್ನು ಕಲಿಯುತ್ತಾನೆ. 15–20 ವರ್ಷಗಳ ಅವಧಿಯಲ್ಲಿ ಅವನು ನೈತಿಕ ಶಿಕ್ಷಣವನ್ನು ಪಡೆಯುತ್ತಾನೆ. ತನ್ನ ಒಡನಾಡಿಗಳ ಸಂಪರ್ಕದಲ್ಲಿ ಕರುಣೆ, ಸಾತ್ವಿಕತೆ ಮತ್ತು ಮಾನವಸೇವೆ – ಇವೇ ಮುಂತಾದ ನೈತಿಕ ತತ್ವಗಳನ್ನು ಅರಿತುಕೊಳ್ಳುತ್ತಾನೆ. ಈ ಅವಧಿಯಲ್ಲಿ ರೂಸೋ ಮತಧರ್ಮಕ್ಕೆ ನೀಡುವ ಪ್ರಾಮುಖ್ಯದಿಂದ ಅವನ ಪ್ರಕಾರ ಮತಧರ್ಮವನ್ನು ನೀತಿಯಿಂದ ಬೇರ್ಪಡಿಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ರೂಸೋ ನೈತಿಕ ಶಿಕ್ಷಣವನ್ನು ಇಳಿಯೌವನದಲ್ಲಿ ವಿಧಿಸುವುದು ಒಂದು ವಿಚಿತ್ರ. ಬಾಲ್ಯದಿಂದಲೇ ರೂಢಿಯಾಗದ ಈ ಮೌಲ್ಯಗಳನ್ನು ಒಬ್ಬನು ತನ್ನ ತಾರುಣ್ಯ ಅಮಲಿನಲ್ಲಿ ಅರಿತುಕೊಳ್ಳುವನೇ ಎಂಬುದು ಪ್ರಶ್ನೆ. ಮತ್ತೊಂದು ವಿಚಿತ್ರವೆಂದರೆ ಬಾಲಕರಿಗೆ ಸಹಜ ಶಿಕ್ಷಣವನ್ನು ವಿಧಿಸಿದ ರೂಸೋ ಬಾಲಕಿಯರಿಗೆ ಅದನ್ನು ನಿಷೇಧಿಸಿದನು. ಬಾಲಕಿಯರು ಪುರುಷರ ಸೇವೆಗೆ ಪೂರಕವಾದ ಶಿಕ್ಷಣವನ್ನು ಮಾತ್ರ ಪಡೆಯಬೇಕು. ಬಾಲಕರಿಗೆ ತಮ್ಮ ಆಂತರಿಕ ಸ್ವಭಾವಕ್ಕೆ ಅನುಗುಣವಾಗಿ ಬೆಳೆಯುವ ಸ್ವಾತಂತ್ರ್ಯವಿದ್ದರೆ, ಬಾಲಕಿಯರು ತಮ್ಮ ಸ್ವಭಾವಕ್ಕೆ ವಿರುದ್ಧವಾಗಿ ಪುರುಷರು ನಿರೀಕ್ಷಿಸುವ ಮಾದರಿಯಲ್ಲಿ ಕೃತಕ ಜೀವನವನ್ನು ನಡೆಸಬೇಕು.

**ಶಿಶುಕೇಂದ್ರಿತ ಶಾಲೆ**

**ಜೆ.ಬಿ. ಬೇಸ್‌ಡೋ** (ಕ್ರಿ.ಶ. 1723–1790) ಮತ್ತು **ಜೆ.ಬಿ. ಪೆಸ್ತಲೊಜಿ** (ಕ್ರಿ.ಶ. 1746–1827) ರೂಸೋನ ಪ್ರಭಾವಕ್ಕೆ ಒಳಗಾದವರು. ಜರ್ಮನ್ ಶಿಕ್ಷಣತಜ್ಞನಾದ ಬೇಸ್‌ಡೋ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿ ಅದರಲ್ಲಿ ರೂಸೋನ ಚಿಂತನೆಗಳನ್ನು ಕಾರ್ಯರೂಪಕ್ಕೆ ತರಲೆತ್ನಿಸಿದನು. ಆ ಸಂಸ್ಥೆಯ ಕಾರ್ಯವು ಹೆಚ್ಚಾಗಿ ಮಗುವಿನ ಹಿತಾಸಕ್ತಿಗಳ ಮೇಲೆ ಕೇಂದ್ರೀಕೃತವಾಯಿತು. ಶಿಶುಕೇಂದ್ರಿತ ಶಾಲೆ ಈತನ ಕಾಲದಲ್ಲಿ ಪ್ರಗತಿಪರ ಶಾಲೆಯ ಒಂದು ಮಾದರಿಯೆನಿಸಿತು. ಇದು ಯಾವ ಪರಾಕಾಷ್ಠೆಗೆ ಹೋಯಿತೆಂದರೆ ಶಿಶುವಿನ ಹೊರತಾಗಿ ಇತರರ ಅಗತ್ಯಗಳನ್ನು ಅಲಕ್ಷಿಸಲಾಯಿತು. ಯಾವ ವಿಷಯದಲ್ಲಿ ಮಗುವಿಗೆ ಆಸಕ್ತಿಯಿದೆಯೋ ಅದರಲ್ಲೇ ಬೇಸ್‌ಡೋ ಮಗುವಿಗೆ ಕಲಿಕೆಯನ್ನು ಪ್ರಾರಂಭಿಸಿದನು. ಸಂಭಾಷಣೆ, ಮನರಂಜನೆ ಮತ್ತು ಆಟಗಳ ಮೂಲಕ ಮಕ್ಕಳಿಗೆ ಬೋಧಿಸಲಾಗುತ್ತಿತ್ತು.

ರೂಸೋನ ಇನ್ನೊಬ್ಬ ಪ್ರಾಮಾಣಿಕ ಅನುಚರನಾದ ಜರ್ಮನಿಯ **ಎಫ್. ಡಬ್ಲ್ಯೂ ಎ. ಫ್ರೋಬೆಲ್** (ಕ್ರಿ.ಶ. 1782–1852) ಈಗ ನಮ್ಮಲ್ಲಿ ವ್ಯಾಪಕವಾಗಿರುವ ಕಿಂಡರ್‌ಗಾರ್ಟನ್ ಪದ್ಧತಿಯನ್ನು ರೂಪಿಸಿದವನು. ಕಿಂಡರ್‌ಗಾರ್ಟನ್ ಎಂಬುದು ಫ್ರೋಬೆಲ್ ಮಕ್ಕಳ ಶಾಲೆಗಳಿಗೆ ನೀಡಿದ ಹೆಸರು. ಮಕ್ಕಳ ತೋಟ ಅಥವಾ ಶಿಶುವಿಹಾರ ಎಂಬುದು ಇದರ ಅರ್ಥ. ತೋಟಗಾರನು ತೋಟದಲ್ಲಿ ಹೂಗಿಡಗಳನ್ನು ಬೆಳೆಸುವಂತೆ ಶಿಕ್ಷಕನು ಮಕ್ಕಳ ಸ್ವಂತ ಪ್ರತಿಭೆಗಳ ವಿಕಸನಕ್ಕೆ ನೆರವಾಗಬೇಕೆಂಬುದು ಇದರ ಇಂಗಿತ. ಫ್ರೋಬೆಲ್ ರೂಸೋನ ಅನುಚರನಾದರೂ ರೂಸೋನಿಗಿಂತಲೂ ಒಂದು ಹೆಜ್ಜೆ ಮುಂದೆ ಬಂದನು. ರೂಸೋನ ಸಿದ್ಧಾಂತ ಮಗುವನ್ನು ಸಮಾಜದಿಂದ ಪ್ರತ್ಯೇಕಿಸಿ ಅದನ್ನು ಏಕಾಂಗಿಯಾಗಿಸುವ ಸಂಭವವಿತ್ತು. ಆದರೆ ಫ್ರೋಬೆಲ್ ಮಾನವ ಬದುಕಿನ ವೈಯಕ್ತಿಕ ಹಾಗೂ ಸಾಮಾಜಿಕ ಮುಖಗಳೆರಡನ್ನೂ ಗಣನೆಗೆ ತಂದುಕೊಂಡನು. ಈ ರೀತಿಯ ಮೌಲ್ಯಗಳು ಮನುಷ್ಯನಿಗೆ ಪೂರ್ಣತೆಯನ್ನು ನೀಡುತ್ತದೆಂಬುದನ್ನು ಮನಗಂಡನು. ಈ ಕಾರಣದಿಂದ ಆತನು ಮಗುವನ್ನು ಸಮಾಜದಿಂದ ಪ್ರತ್ಯೇಕಿಸಲು ಇಚ್ಛಿಸಲಿಲ್ಲ. ಮನುಷ್ಯನ ಮೂಲ ಸ್ವಭಾವವು ಯಾವುದೇ ರೀತಿಯ ದಮನಕ್ಕೆ ಒಳಗಾಗಬಾರದಾದರೂ ಅವನನ್ನು ನಾಗರಿಕನನ್ನಾಗಿಸುವಲ್ಲಿ ಸಾಮಾಜಿಕ ಮೌಲ್ಯಗಳ ಪಾತ್ರವನ್ನು ಉಪೇಕ್ಷಿಸಬಾರದು. ಸಮಾಜಕ್ಕೆ ಹೊಂದಿಕೊಳ್ಳುವಂತೆ ಮಗುವಿಗೆ ತರಪೇತನ್ನು ನೀಡಬೇಕು. ಕಿಂಡರ್‌ಗಾರ್ಟನ್ ಶಾಲೆಯ ದಿನಚರಿಯೇ ಫ್ರೋಬೆಲ್‌ನ ಈ ತಾತ್ವಿಕ ನಿಲುವನ್ನು ಸಂಕೇತಿಸುತ್ತದೆ. ದಿನದ ಪ್ರಾರಂಭದಲ್ಲಿ ಮಕ್ಕಳೆಲ್ಲರೂ ಒಂದು ವೃತ್ತದಲ್ಲಿ ಒಬ್ಬರನ್ನೊಬ್ಬರು ಕೈಹಿಡಿದು ನಿಲ್ಲುತ್ತಾರೆ. ನಂತರ ವೃತ್ತವು ಛಿದ್ರವಾಗಿ ಮಕ್ಕಳು ಒಬ್ಬೊಬ್ಬರೇ ಅಥವಾ ಸಣ್ಣ ಸಣ್ಣ ಗುಂಪುಗಳಲ್ಲಿ ಆಟವಾಡುತ್ತಾರೆ. ತರಗತಿಯ ಅಂತ್ಯದಲ್ಲಿ ಪುನಃ ಅವರು ವೃತ್ತದಲ್ಲಿ ನಿಲ್ಲುತ್ತಾರೆ. ಇದು ಮಗುವು ವ್ಯಕ್ತಿಯು ಹೇಗೋ ಹಾಗೆಯೇ ಗುಂಪಿನ ಸದಸ್ಯನೂ ಹೌದೆಂಬುದನ್ನು ಸೂಚಿಸುತ್ತದೆ.

ಶಿಕ್ಷಣ ಕ್ಷೇತ್ರಕ್ಕೆ ಪ್ರಮುಖ ಕೊಡುಗೆಯನ್ನು ನೀಡಿದ **ಜಾನ್ ಡ್ಯೂಯಿ** (ಕ್ರಿ.ಶ. 1859–1952) ಎಂಬ ಅಮೆರಿಕನ್ ತಾತ್ವಿಕನು ಇದೇ ನಿಲುವನ್ನು ಸಮರ್ಥಿಸಿದನು. ಅವನ ಪ್ರಕಾರ ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಅನುಚಿತ ಪ್ರಾಧಾನ್ಯ ನೀಡುವುದು ತಪ್ಪು. ಮಗುವು ನೈಜ ಅರ್ಥದಲ್ಲಿ ಬೆಳೆಯುವುದು ಸಮಾಜದ ಸದಸ್ಯನಾಗಿ. ಸಮಾಜಕ್ಕೋಸ್ಕರ ಮನುಷ್ಯನು ದುಡಿಯಲು ಸಿದ್ಧನಿರಬೇಕೆಂದು ನಿರೀಕ್ಷಿಸುವ ಅಧಿಕಾರ ಸಮಾಜಕ್ಕೆ ಇದೆ. ಆದರೆ ಈ ಉದ್ದೇಶವು ಈಡೇರುವುದು ವ್ಯಕ್ತಿಯ ಪ್ರತಿಭೆಯು ದಮನವಾಗದೇ ಅದು ಸ್ವತಂತ್ರವಾಗಿ ವಿಕಸಿಸಲು ಅವಕಾಶವಿದ್ದಾಗ ಮಾತ್ರ. ಶಿಕ್ಷಣವು ಸಮಾಜದಲ್ಲಿರುವ ಮನುಷ್ಯನಿಗೆ ಸಂಬಂಧಿಸಿದ ವಿಷಯವೇ ಹೊರತು ಸಮಾಜದಿಂದ ಪ್ರತ್ಯೇಕವಾಗಿರುವ ಮನುಷ್ಯನಿಗೆ ಸಂಬಂಧಿಸಿದುದಲ್ಲ. ಆ ರೀತಿಯ ಸಾಮಾಜಿಕ ಪ್ರತ್ಯೇಕತೆಯೂ ಡ್ಯೂಯಿ ಪ್ರಕಾರ ಒಂದು ಮಿಥ್ಯಾಭೂತ ಕಲ್ಪನೆ ಮಾತ್ರ.

ಜಾನ್‌ಡ್ಯೂಯಿ

–ಎಚ್.ಎಲ್.ಚಂ.

## ಪೂರ್ವಗ್ರಹಗಳು

ಒಂದು ಗುಂಪಿನ ವ್ಯಕ್ತಿಗಳ ಬಗ್ಗೆ ಹೊಂದಿರುವ ಋಣಾತ್ಮಕ ಧೋರಣೆ ಅಥವಾ ಪೂರ್ವಕಲ್ಪಿತ ಅಭಿಪ್ರಾಯವನ್ನು ಪೂರ್ವಗ್ರಹ (Prejudices) ಎನ್ನುವರು. ಜನರು ಒಬ್ಬ ವ್ಯಕ್ತಿ ಒಂದು ಗುಂಪು, ರಾಷ್ಟ್ರೀಯತೆ ಅಥವಾ ಜನಾಂಗದ ಬಗ್ಗೆ ತಮ್ಮ ಪೂರ್ವಗ್ರಹ ಪೀಡಿತ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಒಬ್ಬ ವ್ಯಕ್ತಿ ಒಂದು ಗುಂಪಿನ ವಿರುದ್ಧ ಪೂರ್ವಗ್ರಹ ಪೀಡಿತ ಭಾವನೆ ಹೊಂದಿದ್ದಾನೆ ಎಂದರೆ, ಅವನು ಆ ಗುಂಪಿನ ವ್ಯಕ್ತಿಗಳನ್ನು ಋಣಾತ್ಮಕವಾಗಿ ಅಥವಾ ಧನಾತ್ಮಕವಾಗಿ ಮೌಲ್ಯೀಕರಿಸುತ್ತಾನೆ. ಈ ರೀತಿಯ ತೀರ್ಮಾನ ಅವರ ವೈಯಕ್ತಿಕ ಲಕ್ಷಣಗಳು ಅಥವಾ ವರ್ತನೆಗಳನ್ನು ಆಧರಿಸಿರುವುದಿಲ್ಲ. ಅವರ ಕೇವಲ ತಾನು ಇಷ್ಟಪಡದ ಇಷ್ಟಪಡುವ ಗುಂಪಿನಲ್ಲಿದ್ದಾರೆ ಎಂಬ ಕಾರಣಕ್ಕಾಗಿ ಋಣಾತ್ಮಕವಾಗಿ ಧನಾತ್ಮಕವಾಗಿ ನೋಡುತ್ತಾನೆ. ಪೂರ್ವಗ್ರಹಗಳು ಸಾಮಾನ್ಯವಾಗಿ ತಿರಸ್ಕಾರದ ಅಥವಾ ಇಷ್ಟಪಡದಿರುವ ವರ್ತನೆಯನ್ನು, ಋಣಾತ್ಮಕವಾಗಿ ಮೌಲ್ಯೀಕರಿಸುವುದನ್ನು ಸೂಚಿಸುತ್ತವೆ. ಕೆಲವು ಪೂರ್ವಗ್ರಹಗಳು ಇಷ್ಟಪಡುವ ವರ್ತನೆಯ ಮೌಲ್ಯೀಕರಣವನ್ನು ಸೂಚಿಸಬಹುದು.

Digitised by Bharatavani, CIIL

ಪೂರ್ವಗ್ರಹಗಳಲ್ಲಿ ಮೂರು ಪ್ರಮುಖ ಘಟಕಾಂಶಗಳನ್ನು ಕಾಣುತ್ತೇವೆ. ಪೂರ್ವಗ್ರಹಗಳ **ಬೌದ್ಧಿಕ ಘಟಕಾಂಶ** ಒಂದು ಗುಂಪಿನ ವ್ಯಕ್ತಿಗಳ ಬಗ್ಗೆ ನಾವು ಹೊಂದಿರುವ ಸಾಮಾನ್ಯೀಕರಿಸಿದ ನಂಬಿಕೆಗಳು ಮತ್ತು ನಿರೀಕ್ಷೆಗಳನ್ನು ಸೂಚಿಸುತ್ತದೆ. ಇದು ನಾವು ಇತರರ ಬಗ್ಗೆ ಹೇಗೆ ಚಿಂತಿಸುತ್ತೇವೆ ಎಂಬುದಕ್ಕೆ ಸಂಬಂಧಿಸಿದೆ. ಇದು ನಮ್ಮ ರೂಢ ಕಲ್ಪನೆಗಳನ್ನು ಆಧರಿಸಿರುತ್ತದೆ. ರೂಢ ಕಲ್ಪನೆಗಳೆಂದರೆ ವಿವಿಧ ಗುಂಪುಗಳ ಬಗ್ಗೆ ನಾವು ಈಗಾಗಲೇ ರೂಪಿಸಿಕೊಂಡಿರುವ ಅಭಿಪ್ರಾಯಗಳಾಗಿವೆ. ಒಂದು ಗುಂಪಿನಲ್ಲಿರುವ ಎಲ್ಲಾ ವ್ಯಕ್ತಿಗಳನ್ನು ಸಾಮಾನ್ಯವಾಗಿ ಒಂದೇ ರೀತಿಯಲ್ಲಿ ಗ್ರಹಿಸುತ್ತೇವೆ. ಅವರ ನಿರ್ದಿಷ್ಟ ಗುಣಗಳು ಮತ್ತು ಲಕ್ಷಣಗಳನ್ನು ಪರಿಗಣಿಸುವುದಿಲ್ಲ. ರೂಢ ಕಲ್ಪನೆಗಳು ಎಲ್ಲಾ ವ್ಯಕ್ತಿಗಳನ್ನು ವೈಯಕ್ತಿಕವಾಗಿ ಮೌಲ್ಯಮಾಪನ ಮಾಡುವ ಸಮಯ ಮತ್ತು ಪ್ರಯತ್ನವನ್ನು ಉಳಿಸುತ್ತವೆ. ಇದು ನಮ್ಮ ಸಾಮಾಜಿಕ ಪ್ರಪಂಚವನ್ನು ಸರಳಗೊಳಿಸುತ್ತದೆ. ಇದು ಸಾಮಾಜಿಕ ಗುಂಪುಗಳಲ್ಲಿರುವ ಭಿನ್ನತೆಯನ್ನು ಪರಿಗಣಿಸುವುದಿಲ್ಲ. ಆದರೆ ಇದರಿಂದ ಜನರ ಬಗ್ಗೆ ನಮ್ಮ ಗ್ರಹಿಕೆ ಬಹುತೇಕ ನಿಖರವಾಗಿರುವುದಿಲ್ಲ.

ಪೂರ್ವಗ್ರಹಗಳ **ಭಾವನಾತ್ಮಕ ಘಟಕಾಂಶ** ಒಂದು ಜನಾಂಗ, ಧರ್ಮ, ಜಾತಿ, ಪ್ರಾಂತ್ಯ ಅಥವಾ ಸಮುದಾಯ ಇವುಗಳ ಬಗ್ಗೆ ವ್ಯಕ್ತಿ ಹೊಂದಿರುವ ಋಣಾತ್ಮಕ, ಧನಾತ್ಮಕ, ಭಾವನಾತ್ಮಕ ಸ್ಥಿತಿಯನ್ನೂ ಸೂಚಿಸುತ್ತದೆ. ಈ ಭಾವನೆಗಳು ವ್ಯಕ್ತಿಯ ಪೂರ್ವಕಲ್ಪಿತ ನಂಬಿಕೆಗಳು ಮತ್ತು ವೈಯಕ್ತಿಕ ಅನುಭವಗಳನ್ನು ಆಧರಿಸಿರುತ್ತವೆ.

ಪೂರ್ವಗ್ರಹಗಳು ಭಾವನಾತ್ಮಕ ಅಂಶವನ್ನು ಒಬ್ಬ ವ್ಯಕ್ತಿ ಒಂದು ಗುಂಪಿನ ಬಗ್ಗೆ ತೋರುವ ವರ್ತನೆ ಅಥವಾ ಆಚರಣೆಯಲ್ಲಿ ಕಾಣಬಹುದು. ಒಂದು ಗುಂಪಿನ ಜನರಿಂದ ದೂರವಿರುವುದು, ಆ ಗುಂಪಿನ ವಿರುದ್ಧ ವರ್ತಿಸುವುದು ಅಥವಾ ಕೆಲವೊಮ್ಮೆ ಆ ಗುಂಪಿನವರ ಮೇಲೆ ಹಿಂಸಾಚಾರದಲ್ಲಿ ತೊಡಗುವುದು ಕಂಡುಬರುತ್ತದೆ. ಪೂರ್ವಗ್ರಹಗಳು ಧನಾತ್ಮಕ ಅಥವಾ ಋಣಾತ್ಮಕ ವರ್ತನೆಯನ್ನು ಪ್ರೇರೇಪಿಸಬಹುದು.

ಪೂರ್ವಗ್ರಹಗಳು ಬಾಹ್ಯವರ್ತನೆಯಲ್ಲಿ ವ್ಯಕ್ತವಾಗುವುದನ್ನು ಭೇದಭಾವ (Discrimination) ಎನ್ನುವರು. ಕೆಲವೊಮ್ಮೆ ಮಹಿಳೆಯರಿಗೆ ಭೇದಭಾವ ತೋರುವುದನ್ನು ಕಾಣುತ್ತೇವೆ. ಅವರು ಹೆಂಗಸರು ಎಂಬ ಕಾರಣಕ್ಕೆ ಕೆಲವು ಹುದ್ದೆಗಳನ್ನು ನಿರಾಕರಿಸುವುದು, ಕಡಿಮೆ ವೇತನ ನೀಡುವುದು, ದ್ವಿತೀಯ ದರ್ಜೆಯ ನಾಗರೀಕರಾಗಿ ನಡೆಸಿಕೊಳ್ಳುವುದು ಮತ್ತು ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸದಿರುವುದು ಮುಂತಾದ ವರ್ತನೆಗಳನ್ನು ಭೇದಭಾವ ಎನ್ನುತ್ತೇವೆ.

ಪೂರ್ವಗ್ರಹ ಮತ್ತು ಭೇದಭಾವಗಳು ಒಂದಕ್ಕೊಂದು ಸಂಬಂಧ ಹೊಂದಿವೆ. ಆದರೂ ಅವೆರಡೂ ಪ್ರತ್ಯೇಕ ಪರಿಕಲ್ಪನೆಗಳಾಗಿವೆ. ಒಬ್ಬ ವ್ಯಕ್ತಿ 'ಏಡ್ಸ್'ನಿಂದ ಬಳಲುತ್ತಿರುವ ವ್ಯಕ್ತಿಗಳ ಗುಂಪಿನ ಬಗ್ಗೆ ಪೂರ್ವಗ್ರಹ ಪೀಡಿತನಾಗಿರಬಹುದು. ಆದರೆ ಅವನು ಅವನ ವರ್ತನೆಯಲ್ಲಿ ಭೇದಭಾವ ತೋರದಿರಬಹುದು. ಅವನು ಭೇದಭಾವ ತೋರುವುದಿಲ್ಲ ಎಂಬ ಕಾರಣಕ್ಕಾಗಿ ಅವನು ಪೂರ್ವಗ್ರಹ ಪೀಡಿತ ಭಾವನೆ ಹೊಂದಿಲ್ಲ ಎಂದು ಹೇಳಲಾಗದು. ಭೇದಭಾವಗಳು ಕೆಲವೊಮ್ಮೆ ತಾವು ಇರುವ ಸಂಸ್ಥೆಯ ನೀತಿನಿಯಮಗಳನ್ನು ಆಧರಿಸಿರುತ್ತವೆ.

**ಪೂರ್ವಗ್ರಹಗಳ ಮೂಲಗಳು**

ಪೂರ್ವಗ್ರಹಗಳು ಎಲ್ಲ ಸಮಾಜಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅನುಭವಗಳಾಗಿವೆ. ಸಂಶೋಧಕರು ಪೂರ್ವಗ್ರಹಗಳ ಹಲವಾರು ಕಾರಕಾಂಶಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಅಭಿಪ್ರೇರಣಾ ಮತ್ತು ಬೌದ್ಧಿಕ ಮೂಲಗಳನ್ನು ಕಾಣುತ್ತೇವೆ.

**ಅಭಿಪ್ರೇರಣಾ ಮೂಲಗಳು**

ಸ್ವಾರ್ಥಪ್ರೇರಿತ ಪೂರ್ವಗ್ರಗಳನ್ನು ಹೊಂದಿರುವವರು ಇತರರನ್ನು ಕಡೆಗಣಿಸಿ ತನ್ನ ಸ್ಥಾನವನ್ನು ಸಮರ್ಥಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಸಾಮಾಜಿಕವಾಗಿ ವಂಚಿತರಾದವರು (ಸೌಲಭ್ಯ ವಂಚಿತರು) ತಮ್ಮನ್ನು "ಸೋಮಾರಿಗಳು", "ಜವಾಬ್ದಾರಿಯಿಲ್ಲದವರು" ಮತ್ತು "ಆಸೆ-ಆಕಾಂಕ್ಷೆಯಿಲ್ಲದವರು" ಎಂಬ ಗುಣಗಳನ್ನು ವ್ಯಕ್ತಪಡಿಸಿ ತಮ್ಮ ಸ್ಥಾನವನ್ನು ಸಮರ್ಥಿಸಿಕೊಳ್ಳುತ್ತಾರೆ. ಇದು ಸಂಪತ್ತು ಮತ್ತು ಅಧಿಕಾರ ಹೊಂದಿರುವ ಆರ್ಥಿಕ ಮತ್ತು ಸಾಮಾಜಿಕವಾಗಿ ಬಲಿಷ್ಠರಾದವರು ಸಮಾಜದಲ್ಲಿ ಇರುವುದನ್ನು ಸೂಚಿಸುತ್ತದೆ. ಈ ಬೇಧಭಾವ ಸೌಲಭ್ಯ ವಂಚಿತರ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ವಂಚಿತರಾದವರು ಋಣಾತ್ಮಕ ಭಾವನೆಗಳಿಂದ ಕೀಳರಿಮೆ ಬೆಳೆಸಿಕೊಳ್ಳುತ್ತಾರೆ.

**ಒಳಗುಂಪಿನ ಪೂರ್ವಗ್ರಹಗಳು**

ಆಗಾಗ್ಗೆ ಜನರು ನಾವು (ಒಳಗುಂಪು) ಮತ್ತು ಅವರು (ಹೊರಗುಂಪು) ಎಂದು ವರ್ಗೀಕರಿಸುತ್ತಾರೆ ಮತ್ತು ಅದಕ್ಕನುಗುಣವಾಗಿಯೇ ನಡೆದುಕೊಳ್ಳುತ್ತಾರೆ. ಶಾಲೆಗೆ ಹೋಗುವ ಮಕ್ಕಳನ್ನು ಈ ಪಟ್ಟಣದಲ್ಲಿ ನಿಮ್ಮ ಶಾಲೆ ಉತ್ತಮವೋ ಅಥವಾ ಇತರೆ ಶಾಲೆಯೇ ಎಂದು ಕೇಳಿದರೆ ಸಾಮಾನ್ಯವಾಗಿ ವಿದ್ಯಾರ್ಥಿಗಳು ಅವರ ಶಾಲೆಯನ್ನೇ ಗುರುತಿಸುತ್ತಾರೆ. ಇತರರಿಗಿಂತ ನಮ್ಮ ಗುಂಪು ಉತ್ತಮ ಎಂಬ ಭಾವನೆ ಧನಾತ್ಮಕ ಆತ್ಮಾಭಿಮಾನ ಹಾಗೂ ಗುಂಪಿನ ಸದಸ್ಯರ ನಡುವಿನ ವಿಶ್ವಾಸಕ್ಕೆ ಅವಶ್ಯಕವಾದುದು. ಒಬ್ಬ ವ್ಯಕ್ತಿ ಒಂದು ಗುಂಪಿನೊಡನೆ ಪ್ರಬಲವಾಗಿ ಗುರ್ತಿಸಿಕೊಂಡಷ್ಟೂ ಅವನು ಇತರೆ ಗುಂಪಿನ ಬಗ್ಗೆ ಹೊಂದಿರುವ ಪೂರ್ವಗ್ರಹಗಳ ಋಣಾತ್ಮಕ ರೂಢಕಲ್ಪನೆಗಳನ್ನು ಬಲಗೊಳಿಸುತ್ತವೆ. ಕೆಲವೊಮ್ಮೆ ಜನರು ಹತಾಶರಾದಾಗ ಅದಕ್ಕೆ ನಿರ್ದಿಷ್ಟ ಕಾರಣಗಳಿರುವುದಿಲ್ಲ. ಆಗ ಯಾವುದಾದರೂ ಒಬ್ಬ ವ್ಯಕ್ತಿಯನ್ನು ದೂರುತ್ತಾರೆ ಅಥವಾ ತೆಗಳುತ್ತಾರೆ. ಇದನ್ನು ಬಲಿಪಶುವಾಗಿಸುವಿಕೆ ಎನ್ನುವರು. ಆಗ ಆ ವ್ಯಕ್ತಿ ನಾನು ಒಂದು ನಿರ್ದಿಷ್ಟ ಗುಂಪಿಗೆ ಸೇರಿರುವುದರಿಂದ ಬಲಿಪಶುವಾಗಿದ್ದೇನೆ ಎಂದು ಭಾವಿಸುತ್ತಾನೆ. ಸಾಮಾನ್ಯವಾಗಿ ಉದ್ಯೋಗಗಳಿಸಲಾದ ವ್ಯಕ್ತಿಗಳು ತಮ್ಮ ಸೋಲನ್ನು ಧರ್ಮ, ವರ್ಗ ಹಾಗೂ ಜಾತಿಗಳಿಗೆ ಸಂಬಂಧಿಸಿ ಇದೇ ಕಾರಣಕ್ಕೆ ನಮಗೆ ಉದ್ಯೋಗ ದೊರೆಯಲಿಲ್ಲವೆಂದು ಪ್ರತಿಪಾದಿಸುತ್ತಾರೆ ಮತ್ತು ಅವರ ಬಗ್ಗೆ ಋಣಾತ್ಮಕ ಭಾವನೆ ಬೆಳೆಸಿಕೊಳ್ಳುತ್ತಾರೆ.

**ಸಂಜ್ಞಾನಾತ್ಮಕ ಮೂಲಗಳು**

ಪೂರ್ವಗ್ರಹಗಳು ಜನರು, ಜನಾಂಗ ಹಾಗೂ ಇತರೆ ವಸ್ತುಗಳ ಬಗ್ಗೆ ನಾವು ಹೊಂದಿರುವ ನಂಬಿಕೆಗಳಿಗೆ ಸಂಬಂಧಿಸಿವೆ. ವಿಶ್ವದ ಯಾವುದೇ ರಾಷ್ಟ್ರ ಅಥವಾ ಸಮಾಜವು ಪೂರ್ವಗ್ರಹ ಹಾಗೂ ಭೇದಭಾವ ಹೊಂದಿಲ್ಲದೆ ಇಲ್ಲ. ಇವು ಸಮಾಜದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕಂಡುಬರುತ್ತದೆ ಮತ್ತು ಸಮಾಜದಲ್ಲಿನ ಗುಂಪುಗಳ ಮಧ್ಯೆ ಸಂಬಂಧ ಕಲ್ಪಿಸುತ್ತವೆ. ಜನರು ಹೊಂದಿರುವ ಪೂರ್ವಗ್ರಹಗಳು ಅಂತರ್ ಗುಂಪು ಘರ್ಷಣೆಗೆ ಕಾರಣವಾಗುತ್ತವೆ. ವಿಭಿನ್ನ ಧರ್ಮ, ಭಾಷೆಗಳು, ಸಂಪ್ರದಾಯಗಳು, ಜನಾಂಗಗಳು ಹಾಗೂ ಸಂಪನ್ಮೂಲಗಳಿಂದಾಗಿ ಸ್ಪರ್ಧೆಯಲ್ಲಿರುವಂತಹ ಭಾರತೀಯ ಸಮಾಜದಲ್ಲಿ ಅಂತರ್ ಗುಂಪಿನ ಘರ್ಷಣೆಗಳು ಹಾಗೂ ಸಾಮಾಜಿಕ ಉದ್ವೇಗಗಳು ಪ್ರಮುಖ ಸವಾಲುಗಳಾಗಿವೆ.

**ಸಾಮಾಜಿಕ ವಿಭೇಧಿಕರಣ:** ನಾವೆಲ್ಲರೂ ವಿವಿಧ ಸಾಮಾಜಿಕ ಗುಂಪುಗಳು ಅಥವಾ ವಿಭೇಧಗಳ ಸದಸ್ಯರಾಗಿದ್ದೇವೆ. ನಮ್ಮ ಜೀವನದಲ್ಲಿ

Digitised by Bharatavani, CIIL

ಕೆಲವು ಹೆಚ್ಚು ಪ್ರಮುಖವಾಗಿದ್ದರೆ ಮತ್ತು ಕೆಲವು ಅಷ್ಟು ಪ್ರಾಮುಖ್ಯತೆ ಹೊಂದಿರುವುದಿಲ್ಲ. ಲಿಂಗ, ಜಾತಿ, ರಾಷ್ಟ್ರೀಯತೆ ಮತ್ತು ಧರ್ಮಗಳು ಸಮಾಜದ ಸಂಘಟನಾ ತತ್ವಗಳಾಗಿ ಕಾರ್ಯನಿರ್ವಹಿಸುತ್ತವೆ. ಪ್ರತಿಯೊಂದು ವರ್ಗದ ಜನರ ಬಗ್ಗೆ ರೂಢ ಕಲ್ಪನೆಗಳನ್ನು ಬೆಳೆಸಿಕೊಳ್ಳುತ್ತೇವೆ. ಬಹಳ ಜನರ ಅಭಿಪ್ರಾಯದಲ್ಲಿ ಸಾಮಾನ್ಯವಾಗಿ ಗಂಡಸರು ಹೆಚ್ಚಾಗಿ ಆಕ್ರಮಣಶೀಲರೂ ಮತ್ತು ಹೆಂಗಸರು ಹೆಚ್ಚು ಸಂವೇದನಾಶೀಲರು ಎಂಬ ರೂಢ ಕಲ್ಪನೆಗಳನ್ನು ಕಾಣುತ್ತೇವೆ. ಈ ರೀತಿಯ ರೂಢ ಕಲ್ಪನೆಯಿಂದಾಗಿ ಪೂರ್ವಗ್ರಹ ರೂಪುಗೊಳ್ಳುತ್ತದೆ.

**ಅಂತರ್–ಗುಂಪಿನ ಘರ್ಷಣೆಗಳು:** ಜನರು ವಿವಿಧ ಕಾರಣಗಳಿಗಾಗಿ ಗುಂಪುಗಳನ್ನು ಸೇರುತ್ತಾರೆ. ಅವರು ಒಟ್ಟಾಗಿ ಕಾರ್ಯನಿರ್ವಹಿಸುವಾಗ ಸಾಮಾನ್ಯವಾಗಿ ಘರ್ಷಣೆಗೆ ಅವಕಾಶವಿರುತ್ತದೆ. ಇಂತಹ ಘರ್ಷಣೆ ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಹಾಗೂ ಗುಂಪಿನ ನಡುವೆ ಅಥವಾ ಎರಡು ಅಥವಾ ಹೆಚ್ಚು ಗುಂಪುಗಳ ಮಧ್ಯೆ ನಡೆಯುತ್ತದೆ. ಸಾಮಾನ್ಯವಾಗಿ ಘರ್ಷಣೆ ಋಣಾತ್ಮಕ ಪ್ರಭಾವ ಹೊಂದಿರುತ್ತದೆ. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ ಘರ್ಷಣೆ ಒಳ್ಳೆಯದಲ್ಲ ಎಂದು ಹೇಳಲಾಗದು. ಸಾಧಾರಣ ಮಟ್ಟದ ಘರ್ಷಣೆ ಕೆಲವೊಮ್ಮೆ ಗುಂಪಿನ ಸಾಧನೆಯನ್ನು ಹೆಚ್ಚಿಸಲು ನೆರವಾಗುತ್ತದೆ. ಇದು ಹೊಸ ವಿಚಾರಗಳನ್ನು ಉತ್ಪಾದಿಸುತ್ತದೆ, ಸ್ನೇಹಿತರ ಸ್ಪರ್ಧೆಯನ್ನು ಮತ್ತು ಗುಂಪಿನ ಕಾರ್ಯಸಾಧನೆಯನ್ನು ಹೆಚ್ಚಿಸುತ್ತದೆ. ಅನೇಕ ವೇಳೆ ಗುಂಪು ಘರ್ಷನೆಗೆ ಆಯಾ ಗುಂಪು ಮತ್ತೊಂದು ಗುಂಪಿನ ಬಗ್ಗೆ ಹೊಂದಿರುವ ರೂಢಿ ಕಲ್ಪನೆಗಳು ಪೂರ್ವಗ್ರಹಗಳು ಆಧಾರವಾಗಿರುತ್ತವೆ.

## ಪೂರ್ವಗ್ರಹಗಳನ್ನು ಹೋಗಲಾಡಿಸುವ ಕ್ರಮಗಳು

ಪೂರ್ವಗ್ರಹಗಳು ಹಾಗೂ ಬೇಧಭಾವಗಳನ್ನು ಯಾವುದೇ ಸಮಾಜದಿಂದ ಹೇಗೆ ದೂರ ಮಾಡಬೇಕೆಂಬುದೇ ದೊಡ್ಡ ಪ್ರಶ್ನೆಯಾಗಿದೆ. ಜನಾಂಗೀಯ ಪೂರ್ವಗ್ರಹಗಳು ಮಾನವನ ಇತಿಹಾಸದಲ್ಲಿ ದೊಡ್ಡ ದುರಂತಗಳನ್ನೇ ತಂದೊಡ್ಡಿವೆ. ಯಹೂದಿಗಳ ವಿರುದ್ಧದ ಜನಾಂಗೀಯ ಪೂರ್ವಗ್ರಹದಿಂದ ನಾಜಿಗಳು ಎರಡನೇ ಮಹಾಯುದ್ಧದಲ್ಲಿ ಸುಮಾರು 60 ಲಕ್ಷ ಯಹೂದಿಗಳನ್ನು ಕೊಂದು ಹಾಕಿದರು. ಭಾರತ–ಪಾಕಿಸ್ತಾನ ವಿಭಜನೆ ಸಂದರ್ಭದಲ್ಲಿ ಧಾರ್ಮಿಕ ಪೂರ್ವಗ್ರಹದಿಂದ ಲಕ್ಷಾಂತರ ಹಿಂದೂ–ಮುಸ್ಲಿಮರ ಕೊಲೆಯಾಯಿತು. ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ಭಾರತೀಯ ಸಮಾಜದಲ್ಲಿ ಧಾರ್ಮಿಕ ಹಾಗೂ ಜಾತಿ ಪೂರ್ವಗ್ರಹಗಳು ಇನ್ನೂ ಕಂಡುಬರುತ್ತಿವೆ. ಜಾತಿ, ಧರ್ಮ, ಜನಾಂಗ, ರಾಷ್ಟ್ರೀಯತೆ ಇವೆಲ್ಲವುಗಳ ಹೊರತಾಗಿ ಎಲ್ಲರನ್ನೂ ಸಮಾನವಾಗಿ ಕಾಣುವ ಯಾವುದೆ ರೀತಿಯ ಪೂರ್ವಗ್ರಹಗಳಿಲ್ಲದ ಸಮಾಜವೇ ಇಲ್ಲ ಎಂದರೆ ತಪ್ಪಾಗಲಾರದು.

ಪೂರ್ವಗ್ರಹಗಳನ್ನು ಕಡಿಮೆಮಾಡುವ ಅಥವಾ ಹೋಗಲಾಡಿಸುವ ಕೆಲವು ಕ್ರಮಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

### ಅಂತರ್ ಗುಂಪಿನ ಸಂಪರ್ಕಕ್ಕೆ ಅವಕಾಶ ಮಾಡಿಕೊಡುವುದು

ಅಂತರ್ ಗುಂಪಿನ ಘರ್ಷಣೆಯನ್ನು ಕಡಿಮೆ ಮಾಡುವ ಉತ್ತಮ ವಿಧಾನವೆಂದರೆ ವಿವಿಧ ಗುಂಪುಗಳ ಜನರು ನೇರ ಸಂಪರ್ಕಕ್ಕೆ ಬರುವಂತಹ ಮತ್ತು ಪರಸ್ಪರ ಅರ್ಥಮಾಡಿಕೊಳ್ಳಲು ಅವಕಾಶವಿರುವಂತಹ ಸನ್ನಿವೇಶಗಳನ್ನು ಒದಗಿಸಬೇಕು. ಸಮಾನ ಆರ್ಥಿಕ ಮತ್ತು ಸಾಮಾಜಿ ಸ್ಥಿತಿಗತಿ ಹೊಂದಿರುವಂತಹ ಗುಂಪುಗಳ ಮಧ್ಯೆ ಹೆಚ್ಚು ಬೆರೆಯಲು ಅವಕಾಶ ನೀಡಬೇಕು. ಇಲ್ಲದೇ ಹೋದಲ್ಲಿ ಗುಂಪುಗಳ ಮಧ್ಯೆ ಅಪನಂಬಿಕೆ ಮತ್ತು ಅನುಮಾನಗಳು ಹೆಚ್ಚಾಗಿ ಅಂತರ್ ಗುಂಪಿನ ಪೂರ್ವಗ್ರಹಗಳು ಹೆಚ್ಚಾಗಬಹುದು. ಎರಡು ಗುಂಪುಗಳು ಸಂಪರ್ಕಕ್ಕೆ ಬಂದಾಗ ಎರಡೂ ಗುಂಪುಗಳಿಗೆ ಸಮಾನ ಅಧಿಕಾರವಿರಬೇಕು ಮತ್ತು ಸಮಾನ ಅವಕಾಶಗಳನ್ನು ಒದಗಿಸಬೇಕು. ಇಂತಹ ಸನ್ನಿವೇಶ ದೊರೆತಾಗ ಉತ್ತಮ ಅಂತರ್‌ಕ್ರಿಯೆ ಏರ್ಪಟ್ಟು ಎರಡೂ ಗುಂಪುಗಳಲ್ಲಿರುವ ಪೂರ್ವಗ್ರಹಗಳು ಕಡಿಮೆಯಾಗುತ್ತವೆ.

### ಕುಟುಂಬ ಮತ್ತು ಶಾಲೆಯಲ್ಲಿನ ಕಲಿಕೆಯನ್ನು ಪುನರ್ ಸಂಘಟಿಸುವುದು

ಬಾಲ್ಯದಲ್ಲಿ ಮಗುವಿನ ಸಾಮಾಜೀಕರಣ ಪೂರ್ವಗ್ರಹಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ನಿರಂಕುಶ ಪ್ರಭುತ್ವದ ವಾತಾವರಣದಲ್ಲಿ ಬೆಳೆದ ಮಕ್ಕಳು ಸ್ವತಂತ್ರ ಪರಿಸರದಲ್ಲಿ ಬೆಳೆದ ಮಕ್ಕಳಿಗಿಂತ ಹೆಚ್ಚು ಪೂರ್ವಗ್ರಹಗಳನ್ನು ಬೆಳೆಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ಮಕ್ಕಳು ತಮ್ಮ ತಂದೆ–ತಾಯಿಗಳು ಹಾಗೂ ಕುಟುಂಬ ವರ್ಗದವರ ಮನೋಧೋರಣೆಗಳನ್ನು ಹಾಗೂ ರೂಢಕಲ್ಪನೆಗಳನ್ನು ಅಂತರ್ಗತ ಮಾಡಿಕೊಂಡಿರುತ್ತಾರೆ. ಪೋಷಕರು ಮತ್ತು ಶಿಕ್ಷಕರು ಸಾಮಾಜಿಕ ಭಿನ್ನತೆಗಳನ್ನು ಪರಿಗಣಿಸದೆ ಎಲ್ಲರನ್ನು ಸಮಾನವಾಗಿ ಕಂಡರೆ, ಎಲ್ಲಾ ಮಕ್ಕಳಿಗೂ ಒಂದೇ ರೀತಿಯ ಪ್ರೀತಿ–ವಿಶ್ವಾಸ ತೋರಿದರೆ ಅವರಲ್ಲಿ ಪೂರ್ವಗ್ರಹಗಳು ಬೆಳೆಯುವುದಿಲ್ಲ.

ಪೂರ್ವಗ್ರಹಗಳನ್ನು ಕಡಿಮೆ ಮಾಡುವ ಮತ್ತೊಂದು ಪ್ರಮುಖ ಅಂಶವೆಂದರೆ ಸಮೂಹ ಮಾಧ್ಯಮ, ದಿನಪತ್ರಿಕೆಗಳು, ರೇಡಿಯೋ, ದೂರದರ್ಶನ ಇತ್ಯಾದಿಗಳು ಧೋರಣೆ ಹಾಗೂ ಅಭಿಪ್ರಾಯಗಳನ್ನು ರೂಢಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಯಾವುದೇ ಪೂರ್ವ ಗ್ರಹಗಳಿಲ್ಲದ ಉತ್ತಮ ವರದಿ ಸಾಮಾಜಿಕ ಘರ್ಷಣೆಗಳನ್ನು ತಡೆಯುತ್ತವೆ ಮತ್ತು ಮತೀಯ ಸೌಹಾರ್ದತೆಯನ್ನು ಹೆಚ್ಚಿಸಲು ನೆರವಾಗುತ್ತವೆ.

ಇಂದಿನ ದಿನಗಳಲ್ಲಿ ಜನ ಸಾಂದ್ರತೆ ಹೆಚ್ಚಾಗುತ್ತಿದ್ದು, ವಿವಿಧ ಗುಂಪಿನ ಜನರ ಬಗ್ಗೆ ನಾವು ತಾಳ್ಮೆಯನ್ನು ಬೆಳೆಸಿಕೊಳ್ಳಬೇಕಾಗಿದೆ. ಯಾವುದೇ ವ್ಯಕ್ತಿ ಪೂರ್ವಗ್ರಹಗಳನ್ನು ಹೊಂದಿರುವುದು ಉತ್ತಮವಲ್ಲ. ಪೂರ್ವಗ್ರಹ ಹೊಂದಿರುವ ವ್ಯಕ್ತಿಗಳು ಆಗಾಗ್ಗೆ ಉದ್ವೇಗ, ಆತಂಕ, ಭಯ, ಕೋಪ ಮುಂತಾದವುಗಳಿಂದ ಬಳಲುತ್ತಿರುತ್ತಾರೆ. ಇದರಿಂದ ಅವರಿಗೆ ಜೀವನವನ್ನು ಆನಂದಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪೋಷಕರು ಮತ್ತು ಶಿಕ್ಷಕರು ಮಕ್ಕಳ ಆರೋಗ್ಯಕರ ಜೀವನವನ್ನು ಉತ್ತೇಜಿಸಿ ಯಾವುದೇ ರೀತಿಯ ಪೂರ್ವಗ್ರಹಗಳನ್ನು ಮಕ್ಕಳು ಬೆಳೆಸಿಕೊಳ್ಳದಂತೆ ನಡೆದುಕೊಳ್ಳಬೇಕು.

**ಜ್ಞಾನಾತ್ಮಕ ಕ್ರಮಗಳು:** ರೂಢಕಲ್ಪನೆಗಳನ್ನು ಕಡಿಮೆ ಮಾಡಲು ಜನರಲ್ಲಿನ ಪ್ರತ್ಯೇಕ ಗುಂಪುಗಳ ಕಲ್ಪನೆಗಳನ್ನು ದೂರಮಾಡಿ ಜ್ಞಾನಾತ್ಮಕ ಚಿಂತನೆಯನ್ನು ಹೆಚ್ಚಿಸಬೇಕು. ಜನರ ಗುಣಲಕ್ಷಣಗಳಿಗೆ ಗಮನ ನೀಡಬೇಕೆ ಹೊರತು ಅವರು ಸದಸ್ಯತ್ವ ಪಡೆದ ಗುಂಪುಗಳಿಗಲ್ಲ. ವ್ಯಕ್ತಿ ಭಿನ್ನ ಗುಂಪಿನಲ್ಲಿದ್ದಾನೆ ಎಂಬ ಅಂಶವನ್ನು ಪರಿಗಣಿಸದೆ ಅವನ ವ್ಯಕ್ತಿತ್ವವನ್ನು ಪರಿಗಣಿಸಿದಾಗ ಅವನ ಬಗ್ಗೆ ಇರುವ ಪೂರ್ವಗ್ರಹಗಳನ್ನು ತೊಡದುಹಾಕಬಹುದಾಗಿದೆ.

### ಧನಾತ್ಮಕ ಧೋರಣೆಗಳನ್ನು ಬೆಳೆಸುವಿಕೆ

ಧನಾತ್ಮಕ ಧೋರಣೆಗಳನ್ನು ಬೆಳೆಸುವ ಕೆಲವು ಕ್ರಮಗಳನ್ನು ಬಳಸಿಕೊಳ್ಳುವ ಮೂಲಕ ಪೂರ್ವಗ್ರಹಗಳನ್ನು ಕಡಿಮೆ ಮಾಡಬಹುದಾಗಿದೆ. ಕೈಗೊಳ್ಳಬಹುದಾದ ಕೆಲವು ಕ್ರಮಗಳೆಂದರೆ – ಯಾವುದೇ ವಿಷಯದ ಬಗ್ಗೆ ಹೆಚ್ಚಿನ ನಿಜವಾದ ಮಾಹಿತಿ ಒದಗಿಸುವುದು. ಗುಂಪುಗಳ ಬಾಂಧವ್ಯ ಹೆಚ್ಚಿಸುವುದು, ವರ್ತನೆಯಲ್ಲಿ ಮಾರ್ಪಾಟು ತರುವುದು, ಮುಖಾ–ಮುಖಿ ಮನ ಒಲೈಸುವಿಕೆ, ಗುಂಪು ಚರ್ಚೆಗಳು ಮತ್ತು ಪಾತ್ರ ನಿರ್ವಹಣೆ

Digitised by Bharatavani, CIIL

ಇಂತಹ ಕ್ರಮಗಳು ಜನರಲ್ಲಿ ಹಲವಾರು ವಿಷಯಗಳ ಬಗ್ಗೆ ಧನಾತ್ಮಕ ಧೋರಣೆಗಳನ್ನು ಬೆಳೆಸುವ ಮೂಲಕ ಪೂರ್ವಗ್ರಹಗಳನ್ನು ಕಡಿಮೆ ಮಾಡುವಲ್ಲಿ ಸಹಾಯಕವಾಗುತ್ತವೆ.

**ಪೂರ್ವಗ್ರಹಗಳ ಅಳತೆ:** ಪೂರ್ವಗ್ರಹಗಳನ್ನು ಅಳತೆ ಮಾಡುವುದು ಅಷ್ಟು ಸುಲಭವಲ್ಲ. ಸಾಮಾನ್ಯವಾಗಿ ಪೂರ್ವಗ್ರಹಗಳು ವರ್ತನೆಯ ಮೂಲಕ ವ್ಯಕ್ತವಾಗುವುದರಿಂದ ಒಬ್ಬ ವ್ಯಕ್ತಿ ವ್ಯಕ್ತಪಡಿಸುವ ಅಭಿಪ್ರಾಯ, ಹೇಳಿಕೆಗಳು, ತೆಗೆದುಕೊಳ್ಳುವ ತೀರ್ಮಾನಗಳು ಹಾಗೂ ವರ್ತನೆಗಳ ಸೂಕ್ಷ್ಮ ವಿಶ್ಲೇಷಣೆಯಿಂದ ಆ ವ್ಯಕ್ತಿಯ ಪೂರ್ವಗ್ರಹಗಳನ್ನು ತಿಳಿದುಕೊಳ್ಳುವ ಸಾಧ್ಯತೆಯಿದೆ. ಆದರೆ ಇದು ಅಷ್ಟು ನಿಖರವಾದ ಕ್ರಮವೆನ್ನಿಸುವುದಿಲ್ಲ. ಏಕೆಂದರೆ ಸಂದರ್ಭಾನುಸಾರ ವ್ಯಕ್ತಿ ತನ್ನ ಪೂರ್ವಗ್ರಹಗಳನ್ನು ಮರೆಮಾಚಬಹುದು. ಅಭಿಪ್ರಾಯ ಮಾಪನಿಗಳು, ನಿರ್ಧಾರಣ ಮಾಪನಿಗಳು (Rating Scales) ಹಾಗೂ ಪ್ರಕ್ಷೇಪಣ ಪರೀಕ್ಷೆಗಳನ್ನು (Projective Tests) ಉಪಯೋಗಿಸಿ ವ್ಯಕ್ತಿಗಳ ಪೂರ್ವಗ್ರಹಗಳನ್ನು ಅಳತೆ ಮಾಡಬಹುದು.

–ಹೆಚ್.ವಿ. ವಾ.

## ಪ್ರತಿಭಾವಂತ ಮಕ್ಕಳ ಶಿಕ್ಷಣ

ಪ್ರತೀ ದೇಶದ ಅಥವಾ ಸಂಸ್ಕೃತಿಯ ಜನರಲ್ಲಿ ಕಡಿಮೆ ಸಂಖ್ಯೆಯ ವ್ಯಕ್ತಿಗಳು ಹೆಚ್ಚಿನ ಮಾನಸಿಕ ಸಾಮರ್ಥ್ಯ ಹೊಂದಿರುತ್ತಾರೆ. ಆ ದೇಶವು ತನ್ನ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುವುದು ಪ್ರಮುಖವಾಗಿ ಈ ವ್ಯಕ್ತಿಗಳಲ್ಲಿನ ಪ್ರತಿಭೆಗಳನ್ನು ಹೇಗೆ ಪೋಷಿಸಲಾಗುತ್ತದೆ ಎನ್ನುವುದನ್ನು ಅವಲಂಬಿಸಿರುತ್ತದೆ. ಬೌದ್ಧಿಕವಾಗಿ ಸಮರ್ಥರಾದವರನ್ನೇ ಪ್ರತಿಭಾವಂತರು ಎಂದು ಕರೆಯುವುದು ಮತ್ತು ಅವರ ಪ್ರತಿಭೆಗಳು ಅರಳಿ ಸಮಾಜ ಪೂರ್ಣ ಪ್ರಯೋಜನ ಪಡೆಯಲು ಕೊಡಬೇಕಾದ ವಿಶೇಷ ಶಿಕ್ಷಣವೇ ಪ್ರತಿಭಾವಂತರ ಶಿಕ್ಷಣ.

ಸಾಮ್ಯುಯೆಲ್ ಕಿರ್ಕ್ ಪ್ರಕಾರ ಉನ್ನತ ಬೌದ್ಧಿಕ ಸಾಮರ್ಥ್ಯವುಳ್ಳವರಿಗೆ ವಿಶೇಷ ಶಿಕ್ಷಣ ನೀಡಬೇಕೆಂಬ ವಿಚಾರವನ್ನು ಪ್ಲೇಟೋ ಪ್ರಾಚೀನ ಗ್ರೀಸಿನಲ್ಲಿ ಮಂಡಿಸಿದ್ದ. 16ನೆಯ ಶತಮಾನದಲ್ಲಿ ಸುಲೆಮಾನ್‌ರವರು ಪ್ರತಿಭಾವಂತ ಮಕ್ಕಳು ಅಭ್ಯಾಸ ಮಾಡಲು ವಿಶೇಷ ಪ್ರಯತ್ನಗಳನ್ನು ಮಾಡಿದ್ದರು. ಅಮೆರಿಕಾದ ಟರ್ಮನ್ ಅಧ್ಯಯನಗಳು ಪ್ರತಿಭಾವಂತರ ಬಗ್ಗೆ ಇದ್ದ ಮಿಥ್ಯಾಕಲ್ಪನೆಗಳನ್ನು ದೂರಮಾಡಿ ಅವರ ಬಗ್ಗೆ ಒಂದು ಧನಾತ್ಮಕ ಭಾವನೆ ಮೂಡಿಸಿದವು. ಈಗ ಪ್ರತಿಭಾವಂತರ ಆಯ್ಕೆ ಮತ್ತು ಆದ್ಯತೆ ಪ್ರಪಂಚದಾದ್ಯಂತ ಶಿಕ್ಷಣ ತಜ್ಞರ ಗಮನ ಸೆಳೆದಿವೆ.

ಸ್ಟಾನ್‌ಫರ್ಡ್–ಬೀನೆ ಮಾನಕೀಕೃತ ಪರೀಕ್ಷೆಯ ಅಂಕಗಳ ವರ್ಗೀಕರಣದಲ್ಲಿ 151–159 ರವರೆಗಿರುವ ಬುದ್ಧಿ ಸಾಮರ್ಥ್ಯ ಸೂಚ್ಯಂಕ ಹೊಂದಿರುವ ಸುಮಾರು ಪ್ರತಿಶತ 0.2 ವಿದ್ಯಾರ್ಥಿಗಳು (ಐ.ಕ್ಯೂ) ಪ್ರತಿಭಾವಂತರು ಎನ್ನುವ ಮಾನಸಿಕ ಸಾಮರ್ಥ್ಯ ಆಧರಿಸಿದ ಸರಳ ವ್ಯಾಖ್ಯಾನದಿಂದ ಪ್ರಾರಂಭಿಸಿ ವ್ಯಾಖ್ಯಾನಗಳು ಸಂಕೀರ್ಣತೆಯ ದಾರಿ ಹಿಡಿದಿರುವುದು ಈ ಕ್ಷೇತ್ರದಲ್ಲಿ ಆದ ಅಗಾಧ ಸಂಶೋಧನೆಗಳ ಮತ್ತು ಚಿಂತನ ಮಂಥನಗಳ ಪರಿಣಾಮ. ಉನ್ನತ ಮಾನಸಿಕ ಸಾಮರ್ಥ್ಯ ಎನ್ನುವ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತಾ ಹೋದಂತೆ ಏಳುವ ಅನೇಕ ಪ್ರಶ್ನೆಗಳು ಪ್ರತಿಭಾವಂತಿಕೆಯ ವ್ಯಾಖ್ಯಾನವನ್ನು ಹೆಚ್ಚು ಹೆಚ್ಚು ಸಂಕೀರ್ಣತೆಯತ್ತ ಕೊಂಡೊಯ್ದಿವೆ. ಒಂದು ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿದರೆ ಸಾಕೆ? ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಸಾಧನೆ ಮಾಡಿರಬೇಕೆ? ಅದು ಮಾನಸಿಕ ಸಾಮರ್ಥ್ಯವೆ? ಬೌದ್ಧಿಕ ಸಾಮರ್ಥ್ಯವೆ? ಪೂರ್ವ ನಿರ್ಧಾರಿತವೆ? ಅದು ಕಲಿಕೆಯ ಮೂಲಕವೂ ಬರಬಹುದೆ? ಇಂತಹ ಅನೇಕ ಪ್ರಶ್ನೆಗಳನ್ನು ಗಮನದಲ್ಲಿರಿಸಿಕೊಂಡು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ ಹಲವು ಮನೋವಿಜ್ಞಾನಿಗಳು ಕೊಟ್ಟ ವ್ಯಾಖ್ಯೆಗಳ ಸಾರಾಂಶವನ್ನು ಕೆಳಕಂಡಂತೆ ಸಂಗ್ರಹಿಸಬಹುದು.

ಲಿಯೊನಾರ್ಡೊ. ಜೆ. ಲೂಸಿಟೊ "ಸೂಕ್ತವಾದ ಶೈಕ್ಷಣಿಕ ಅನುಭವಗಳನ್ನು ನೀಡಿದರೆ ಭವಿಷ್ಯದಲ್ಲಿ ಸಮಸ್ಯಾ ಪರಿಹಾರಕರಾಗಬಲ್ಲ, ಸಂಶೋಧಕರೂ, ಸಂಸ್ಕೃತಿಯ ಮೌಲ್ಯಮಾಪಕರೂ ಆಗಬಲ್ಲ ಉನ್ನತ ಮಟ್ಟದ ಅಂತಸ್ಥ ಬುದ್ಧಿಶಕ್ತಿಯಿರುವ ಉತ್ಪಾದಕ ಮತ್ತು ಮೌಲ್ಯಮಾಪಕ ಆಲೋಚನೆಗಳುಳ್ಳ ವಿದ್ಯಾರ್ಥಿಗಳನ್ನು ಪ್ರತಿಭಾವಂತರೆಂದು" ಭಾವಿಸುತ್ತಾರೆ.

ಲ್ಯೂಕಿಂಗ್ ಮತ್ತು ಸಂಪ್ಸನ್ "ಪ್ರತಿಭಾವಂತರು ಅತಿ ಉನ್ನತ ಮಟ್ಟದ ಅಮೂರ್ತ ಅಥವಾ ಸೃಜನಶೀಲ ಕಲ್ಪನೆ ಹೊಂದಿ ಅವುಗಳ ಸಮರ್ಪಕ ಬಳಕೆಯಿಂದ ಕಾರ್ಯ ಸಾಧಿಸುವ ಪ್ರಬುದ್ಧರು" ಎಂದು ಭಾವಿಸುತ್ತಾರೆ.

ಸುಮಾರು ಆರೇಳು ದಶಕಗಳಿಂದ ನಡೆದ ಸಂಶೋಧನೆಗಳು ಪ್ರತಿಭಾವಂತರ ಲಕ್ಷಣಗಳನ್ನು ವೈಜ್ಞಾನಿಕವಾಗಿ ಪಟ್ಟಿ ಮಾಡಲು ಸಮರ್ಥವಾಗಿವೆ. ಆ ಲಕ್ಷಣಗಳು ಪ್ರತಿಭಾವಂತರನ್ನು ಗುರುತಿಸಲು ಸಹಾಯ ಮಾಡುತ್ತವೆ.

**ಭೌತಿಕ ಲಕ್ಷಣಗಳು:** ಈ ಮಕ್ಕಳು ಸಾಮಾನ್ಯ ಮಕ್ಕಳಿಗಿಂತ ಉತ್ತಮ ಮಟ್ಟದ ವಿಕಾಸ ಹೊಂದಿರುತ್ತಾರೆ. ಎತ್ತರ, ತೂಕ ಸಾಮಾನ್ಯರಿಗಿಂತ ಹೆಚ್ಚಾಗಿದ್ದು ಹೆಚ್ಚು ಆರೋಗ್ಯವಂತರಾಗಿರುತ್ತಾರೆ. ಇವರಲ್ಲಿ ಮನೋ–ಚಾಲಕ ಸಮನ್ವಯತೆ ಉತ್ತಮವಾಗಿದ್ದು ಇವರಿಗೆ ಸ್ನಾಯುಗಳ ಮೇಲೆ ಉತ್ತಮ ನಿಯಂತ್ರಣವಿರುತ್ತದೆ. ಇಂತಹ ಮಕ್ಕಳಲ್ಲಿ ಶಿಶು ಮರಣ ಸಂಖ್ಯೆ ಕಡಿಮೆಯಿದ್ದು ಇವರು ಸಾಮಾನ್ಯರಿಗಿಂತ ಉತ್ತಮ ಆರೋಗ್ಯ ಹೊಂದಿರುತ್ತಾರೆ ಮತ್ತು ಈ ಆರೋಗ್ಯ ಇವರ ವಯಸ್ಕ ಅವಧಿಯಲ್ಲೂ ಮುಂದುವರಿಯುತ್ತದೆ. ಟರ್ಮನ್ನರ ಪ್ರತಿಭಾವಂತ ಮಕ್ಕಳ ಗುಂಪಿನ ಸುಮಾರು 594 ವಿದ್ಯಾರ್ಥಿಗಳ ಭೌತಿಕ ಅಳತೆಯನ್ನು ಬಾಲ್ಡ್‌ವಿನ್‌ರವರು ಮಾಡಿ ಈ ನಿರ್ಣಯಕ್ಕೆ ಬಂದಿರುತ್ತಾರೆ. ಟರ್ಮನ್ನರ (1925) ರ ಅಧ್ಯಯನ ಈ ಕೆಳಗಿನ ನಿರ್ಣಯಗಳನ್ನು ಕೊಡುತ್ತದೆ. ಈ ಮಕ್ಕಳು ಜನನ ವೇಳೆಯಲ್ಲಿ ಹೆಚ್ಚಿನ ತೂಕ ಹೊಂದಿರುತ್ತಾರೆ (ಸಾಮಾನ್ಯ ಮಕ್ಕಳಿಗಿಂತ).

ಶೀಘ್ರವಾಗಿ ಮಾತನಾಡಲು ಮತ್ತು ನಡೆಯಲು ಕಲಿಯುತ್ತಾರೆ.

ಶೀಘ್ರವಾಗಿ ತಾರುಣ್ಯವನ್ನು ಹೊಂದುತ್ತಾರೆ.

ಜಾಗ್ರತಾಶೀಲರಾಗಿರುತ್ತಾರೆ.

ಸಾಮಾನ್ಯಕ್ಕಿಂತ ಉತ್ತಮ ಆಹಾರ ಸೇವಿಸುತ್ತಾರೆ.

ಎತ್ತರ, ತೂಕ, ಹಿಡಿತ, ಭುಜಗಳ ವೈಶಾಲ್ಯ, ಸ್ನಾಯು ಸಾಮರ್ಥ್ಯಗಳಲ್ಲಿ ಸಾಮಾನ್ಯರಿಗಿಂತ ಉತ್ತಮರಾಗಿರುತ್ತಾರೆ.

**ಮಾನಸಿಕ ಲಕ್ಷಣಗಳು**

ಅವಲೋಕನಾಶೀಲರಾಗಿರುತ್ತಾರೆ

ಅತಿ ಕುತೂಹಲಿಗಳಾಗಿರುತ್ತಾರೆ

ಗಾಢ ಆಸಕ್ತಿಗಳನ್ನು ಹೊಂದಿರುತ್ತಾರೆ

ಅತ್ಯುತ್ತಮ ಸ್ಮರಣ ಶಕ್ತಿ ಹೊಂದಿರುತ್ತಾರೆ

ದೀರ್ಘವಾದ ಅವಧಾನ ಹೊಂದಿರುತ್ತಾರೆ

Digitised by Bharatavani, CIIL

ಉತ್ತಮವಾದ ತರ್ಕ ಸಾಮರ್ಥ್ಯ ಹೊಂದಿರುತ್ತಾರೆ

ಅಮೂರ್ತವಾಗಿ ಚಿಂತಿಸುವ, ಪರಿಕಲ್ಪಿಸುವ, ಸಂಶ್ಲೇಷಿಸುವ ಸಾಮರ್ಥ್ಯ ಹೊಂದಿರುತ್ತಾರೆ.

ಕಲ್ಪನೆ ವಸ್ತು ಮತ್ತು ಮಾಹಿತಿಗಳಲ್ಲಿ ಶೀಘ್ರವಾಗಿ ಮತ್ತು ಸುಲಭವಾಗಿ ಸಂಬಂಧ ಗುರುತಿಸುತ್ತಾರೆ.

ನಿರರ್ಗಳ ಮತ್ತು ನಮ್ಯ ಚಿಂತನೆ ಹೊಂದಿರುತ್ತಾರೆ.

ವ್ಯಾಪಕವಾಗಿ ಮತ್ತು ಸ್ವತಂತವಾಗಿ ಚಿಂತನೆ ಮಾಡುತ್ತಾರೆ.

ಉತ್ತಮ ಸಮಸ್ಯಾ-ಪರಿಹಾರ ಕೌಶಲ ಹೊಂದಿರುತ್ತಾರೆ.

ಶೀಘ್ರವಾಗಿ ಮತ್ತು ಕಡಿಮೆ ಪ್ರಯತ್ನಗಳಲ್ಲಿ ಮತ್ತು ಅಭ್ಯಾಸದಲ್ಲಿ ಕಲಿಯುತ್ತಾರೆ.

ವಿಶಿಷ್ಟ ಮತ್ತು ವೈವಿಧ್ಯಮಯ ಕಲ್ಪನೆ ಹೊಂದಿರುತ್ತಾರೆ.

**ಸಾಮಾಜಿಕ ಮತ್ತು ಭಾವನಾತ್ಮಕ ಲಕ್ಷಣಗಳು**

ತಾತ್ವಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಆಸಕ್ತಿ ತೋರುತ್ತಾರೆ.

ಭಾವನಾತ್ಮಕವಾಗಿ ಮತ್ತು ಶಾರೀರಿಕವಾಗಿ ಸೂಕ್ಷ್ಮ ಪ್ರವೃತ್ತಿ ಹೊಂದಿರುತ್ತಾರೆ.

ನ್ಯಾಯಾನ್ಯಾಯಗಳ ಬಗ್ಗೆ ವಿವೇಚನೆ ಹೊಂದಿರುತ್ತಾರೆ.

ಪರಿಪೂರ್ಣತೆಯ ಬಗ್ಗೆ ಕಾಳಜಿ ಹೊಂದಿರುತ್ತಾರೆ.

ಶಕ್ತಿ ಶಾಲಿಗಳಾಗಿರುತ್ತಾರೆ.

ಉತ್ತಮ ಹಾಸ್ಯ ಪ್ರವೃತ್ತಿ ಹೊಂದಿರುತ್ತಾರೆ.

ಆಂತರಿಕ ಅಭಿಪ್ರೇರಣೆ ಹೊಂದಿರುತ್ತಾರೆ.

ಪೋಷಕರು ಶಿಕ್ಷಕರು ಮತ್ತು ಇತರರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುತ್ತಾರೆ.

**ಭಾಷಾ ಲಕ್ಷಣಗಳು**

ಉತ್ತಮ ಪದಭಂಡಾರವಿರುತ್ತದೆ.

ಶೀಘ್ರವಾಗಿ ಮತ್ತು ಸುಲಭವಾಗಿ ಓದಬಲ್ಲರು.

ನಿರರ್ಗಳವಾಗಿ ಮತ್ತು ವಿಸ್ತೃತವಾಗಿ ಓದುತ್ತಾರೆ.

ಆದರೇನು? ಏಕೆ? ಹೇಗೆ? ಮುಂತಾದ ಪ್ರಶ್ನೆಗಳನ್ನು ಕೇಳುತ್ತಾರೆ

**ಹೆಚ್ಚುವರಿ ಗುಣ ಲಕ್ಷಣಗಳು**

ಹೊಸ ವಿಷಯಗಳನ್ನು ಸಂತಸದಿಂದ ಕಲಿಯುತ್ತಾರೆ.

ಬೌದ್ಧಿಕ ಚಟುವಟಿಕೆಗಳಿಂದ ತೃಪ್ತಿಪಡುತ್ತಾರೆ.

ತಮ್ಮ ವಯಸ್ಸಿಗಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗಿರುವ ಪುಸ್ತಕ, ಪತ್ರಿಕೆಗಳನ್ನು ಆಯ್ದುಕೊಳ್ಳುತ್ತಾರೆ.

ಸಂಶಯವಾದಿಗಳು, ವಿಮರ್ಶಕರು ಮತ್ತು ಉತ್ತಮ ಮೌಲ್ಯಮಾಪಕರು ಆಗಿರುತ್ತಾರೆ.

**ಪ್ರತಿಭಾವಂತ ಮಕ್ಕಳ ಶಿಕ್ಷಣ:** ಪ್ರತಿಭಾವಂತ ಮಕ್ಕಳು ಸಾಮಾನ್ಯ ತರಗತಿಯಲ್ಲಿಯೇ ಶಿಕ್ಷಣ ಪಡೆಯಬಹುದಾದರೂ, ಅವರಿಗೆ ವಿಶೇಷ ಕ್ರಮಗಳ ಮೂಲಕ ಶಿಕ್ಷಣ ನೀಡಬೇಕು ಎಂದು ಟರ್ಮನ್, ಕೋನಾಂಟ್, ಡೇಹಾನ್, ಹ್ಯಾವಿಗ್‌ಹರ್ಸ್ಟ ಮುಂತಾದವರು ಅಭಿಪ್ರಾಯಪಟ್ಟಿದ್ದಾರೆ. ವಿಶೇಷ ಬೋಧನಾ ಕ್ರಮಗಳಿಂದ ಪ್ರತಿಭಾವಂತ ಮಕ್ಕಳ ಬೌದ್ಧಿಕ ಸಾಮರ್ಥ್ಯ ಸಂಪೂರ್ಣವಾಗಿ ಅಭಿವ್ಯಕ್ತಿಗೊಳ್ಳಲು ಸಾಧ್ಯವಾಗುತ್ತದೆ. ಅವರಲ್ಲಿ ಅಂತರ್ನಿಹಿತವಾಗಿರುವ ಸೃಜನಾತ್ಮಕ ಸಾಮರ್ಥ್ಯಗಳನ್ನು ಪತ್ತೆ ಹಚ್ಚಿ ಅವುಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ಇನ್ನೂ ಒಂದು ದೃಷ್ಟಿಯಿಂದ ಪ್ರತಿಭಾವಂತ ಮಕ್ಕಳಿಗೆ ವಿಶೇಷ ಬೋಧನೆ ಮಾಡುವುದು ಅಗತ್ಯವೆನಿಸುತ್ತದೆ. ಈ ಮಕ್ಕಳು ಬೌದ್ಧಿಕವಾಗಿ ತಮ್ಮ ಸಮವಯಸ್ಕರಿಗಿಂತ ಮುಂದಿರುವುದರಿಂದ ಸಾಮಾನ್ಯ ತರಗತಿಯ ಬೋಧನೆ ಅವರಿಗೆ ಸಾಕಾಗುವುದಿಲ್ಲ. ಅದು ಅವರಿಗೆ ನೀರಸಯೆನಿಸುತ್ತದೆ. ಆದ್ದರಿಂದ ಅವರು ಬೋಧನೆಗೆ ಗಮನಕೊಡುವುದಿಲ್ಲ. ಅನೇಕ ಪ್ರಶ್ನೆಗಳನ್ನು ಕೇಳಿ ಬೋಧನೆಗೆ ಅಡ್ಡಿ ಉಂಟುಮಾಡಬಹುದು. ಕೆಲವು ಪ್ರತಿಭಾವಂತ ಮಕ್ಕಳು ಅಧ್ಯಾಪಕರಿಗೆ ಉತ್ತರಿಸಲು ಕಷ್ಟವಾದ ಪ್ರಶ್ನೆಗಳನ್ನು ಕೇಳಿ ಅವರನ್ನು ಪೇಚಿಗೆ ಸಿಕ್ಕಿಸಬಹುದು. ಆದ್ದರಿಂದಲೇ ಪ್ರತಿಭಾವಂತ ಮಕ್ಕಳಿಗೆ ವಿಶೇಷ ಬೋಧನೆ ನೀಡಬೇಕಾಗುತ್ತದೆ. ವಿಶೇಷ ಶಿಕ್ಷಣ ನೀಡಲು ಅನೇಕ ಕ್ರಮಗಳನ್ನು ರೂಪಿಸಿದ್ದಾರೆ.

**ವಿಶೇಷ ತರಗತಿಗಳು:** ಶಾಲೆಯಲ್ಲಿ ಪ್ರತಿಭಾವಂತ ಮಕ್ಕಳನ್ನು ಗುರ್ತಿಸಿ ಅವರನ್ನು ಒಂದು ತರಗತಿಯಲ್ಲಿ ಸೇರಿಸಿ ಅವರಿಗೆ ವಿಶೇಷ ಬೋಧನೆ ನೀಡಬಹುದು. ಆದರೆ ತಾವು ಬೇರೆ ಮಕ್ಕಳಿಗಿಂತ ವಿಶೇಷ ಸವಲತ್ತು ಉಳ್ಳವರು ಎನ್ನುವ ಅಹಂಕಾರ ಅವರಲ್ಲಿ ಮೂಡಬಹುದು. ಬೇರೆ ಮಕ್ಕಳ ಬಗ್ಗೆ ಅವರು ತಿರಸ್ಕಾರ ಮನೋಭಾವದಿಂದ ವರ್ತಿಸಬಹುದು. ಆದ್ದರಿಂದ ಈ ಕ್ರಮ ಅಷ್ಟು ಸೂಕ್ತವಲ್ಲ.

**ವಿಶೇಷ ಶಾಲೆಗಳು:** ಅಮೆರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಪ್ರತಿಭಾವಂತ ಮಕ್ಕಳಿಗೆ ಶಿಕ್ಷಣ ನೀಡುವ ಪ್ರತ್ಯೇಕ ಶಾಲೆಗಳೇ ಇವೆ. ಪ್ರತಿಭಾವಂತ ಮಕ್ಕಳು ಅಂಥ ಶಾಲೆಗಳಲ್ಲಿ ಹೆಚ್ಚಿನ ಮಟ್ಟದ ಪಠ್ಯಕ್ರಮವಿರುವ ಶಿಕ್ಷಣವನ್ನು ಪಡೆಯಬಹುದು. ಅವರ ಸಾಮರ್ಥ್ಯಗಳ ಗರಿಷ್ಠ ಅಭಿವ್ಯಕ್ತಿಗೆ ಬೇಕಾದ ಚಟುವಟಿಕೆಗಳನ್ನು ಅಂಥ ಶಾಲೆಗಳು ಆಯೋಜಿಸುತ್ತವೆ. ಭಾರತದಲ್ಲಿ ಪ್ರತಿಭಾವಂತರಿಗಾಗಿಯೇ ಪ್ರತ್ಯೇಕ ಶಾಲೆಗಳಿಲ್ಲ. ಆದರೆ ಡೆಹರಾಡೂನಿನ ಡೂನ್ ಶಾಲೆ, ನೀಲಗಿರಿಯ ಪಬ್ಲಿಕ್ ಶಾಲೆಗಳ ಪ್ರವೇಶಾರ್ಹತೆಗಳು ಮೇಲ್ಮಟ್ಟದಲ್ಲಿರುವುದರಿಂದ ಅಂಥ ಶಾಲೆಗಳಿಗೆ ಪ್ರವೇಶ ಪಡೆಯಲು ಮೇಲ್ಮಟ್ಟದ ಬುದ್ಧಿಶಕ್ತಿ ಬೇಕಾಗುತ್ತದೆ. ಈ ಶಾಲೆಗಳಿಗೆ ಪ್ರವೇಶ ಪಡೆಯುವ ಅನೇಕ ಮಕ್ಕಳು ಪ್ರತಿಭಾವಂತರಾಗಿರುತ್ತಾರೆ ಎನ್ನಬಹುದು. ಆದಾಗ್ಯೂ ಈ ಶಾಲೆಗಳನ್ನು ಪ್ರತಿಭಾವಂತರ ವಿಶೇಷ ಶಾಲೆ ಎನ್ನುವಂತಿಲ್ಲ. ಕೆಲವು ಪ್ರವೇಶ ಸ್ಥಾನಗಳನ್ನು ಸಾಮಾನ್ಯ ಬುದ್ಧಿಮಟ್ಟದ ಮಕ್ಕಳೂ ಪಡೆಯುವ ಸಾಧ್ಯತೆ ಇದೆ. ಪ್ರತಿಭಾವಂತ ಮಕ್ಕಳಿಗೆ ವಿಶೇಷ ಶಾಲೆ ಪ್ರಜಾಸತ್ತಾತ್ಮಕ ಧೋರಣೆಗೆ ಸರಿಹೊಂದುವುದಿಲ್ಲ.

ಈ ಕ್ರಮಗಳಿಗೆ ಸಂಬಂಧಿಸಿದ ಪರಿವರ್ತಿತ ವಿಶೇಷ ತರಗತಿ ಕ್ರಮದಲ್ಲಿ ಪ್ರತಿಭಾವಂತ ಮಕ್ಕಳನ್ನೂ ಸಾಮಾನ್ಯ ತರಗತಿಗೆ ಸೇರಿಸಲಾಗುತ್ತದೆ. ಆದರೆ ಅವರು ದಿನದ ಸ್ವಲ್ಪ ಸಮಯವನ್ನು ಪ್ರತಿಭಾವಂತರಿಗಾಗಿ ತೆರೆದಿರುವ ವಿಶೇಷ ತರಗತಿಗಳಿಗೆ ಹೋಗಿ ಹೆಚ್ಚಿನ ಬೋಧನೆ ಪಡೆಯುತ್ತಾರೆ. ಶಾಲೆಯ ಉಳಿದ ಎಲ್ಲಾ ಚಟುವಟಿಕೆಗಳಿಗೆ ಇತರ ಮಕ್ಕಳೊಂದಿಗೆ ಸೇರಿಕೊಳ್ಳುತ್ತಾರೆ.

**ಪಠ್ಯಕ್ರಮವನ್ನು ಸಂಪದ್ಭರಿತಗೊಳಿಸುವುದು:** ಈ ಕ್ರಮದಲ್ಲಿ ಪಠ್ಯಕ್ರಮದಲ್ಲಿಯೇ ಕೆಲವು ವಿಷಯಗಳ ಪಠ್ಯವಸ್ತುವನ್ನು ಸಂಪದ್ಭರಿತಗೊಳಿಸಲಾಗುತ್ತದೆ. ಹಾಗೆಯೇ ಕೆಲವು ವಿಶೇಷ ಚಟುವಟಿಕೆಗಳನ್ನು ಪ್ರತಿಭಾವಂತ ಮಕ್ಕಳಿಗಾಗಿ ರೂಪಿಸಲಾಗುತ್ತದೆ. ಉದಾಹರಣೆಗೆ, ಪ್ರತಿಭಾವಂತ ಮಕ್ಕಳು ಗ್ರಂಥಾಲಯದಲ್ಲಿ ಮುಂದುವರಿದ

Digitised by Bharatavani, CIIL

ಗ್ರಂಥಗಳನ್ನು ಅಧ್ಯಯನ ಮಾಡಬಹುದು, ಇಂಟರ್‌ನೆಟ್ ಮೂಲಕ ಕಲಿತುಕೊಳ್ಳಬಹುದು. ಪ್ರಯೋಗಶಾಲೆಯಲ್ಲಿ ಮುಂದುವರಿದ ಪ್ರಯೋಗಗಳನ್ನು ಮಾಡಬಹುದು. ವಿಜ್ಞಾನ ವಿಷಯಗಳು, ಗಣಿತ, ಸಮಾಜ ವಿಜ್ಞಾನ ವಿಷಯಗಳಲ್ಲಿ ಪ್ರತಿಭಾವಂತ ಮಕ್ಕಳು ಸ್ವಇಚ್ಛೆಯಿಂದ ಕಲಿತುಕೊಳ್ಳಬಹುದಾದ ವಿಶೇಷ ಪಠ್ಯವಸ್ತುಗಳ ವ್ಯವಸ್ಥೆ ಇರುತ್ತದೆ. ಈ ವಿಶೇಷ ಪಠ್ಯವಸ್ತುವನ್ನು ಪ್ರತ್ಯೇಕ ಅವಧಿಗಳಲ್ಲಿ ಅಧ್ಯಾಪಕರು ಬೋಧಿಸಲೂಬಹುದು.

**ತ್ವರಿತಗೊಳಿಸುವಿಕೆ:** ಈ ಕ್ರಮದಲ್ಲಿ ಕೆಲವು ತರಗತಿಗಳನ್ನು ದಾಟಿ ಬೇಗ ಬೇಗ ಶೈಕ್ಷಣಿಕ ಹಂತಗಳಲ್ಲಿ ಮೇಲಕ್ಕೆ ಹೋಗಲು ಪ್ರತಿಭಾವಂತ ಮಕ್ಕಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಆರಂಭಿಕ ತರಗತಿಗಳಲ್ಲಿ ಮಗು ಮೂಲಭೂತ ಶೈಕ್ಷಣಿಕ ಕೌಶಲಗಳಾದ ಓದು, ಬರಹ, ಲೆಕ್ಕಾಚಾರಗಳನ್ನು ಚೆನ್ನಾಗಿ ಕಲಿತು ನಂತರ ತ್ವರಿತ ಪ್ರಗತಿಯನ್ನು ತೋರಿಸಿದರೆ ಶಾಲೆಯ ಮುಖ್ಯೋಪಾಧ್ಯಾಯರು ಮಗುವಿನ ಪೋಷಕರು ಮತ್ತು ತರಗತಿಯ ಅಧ್ಯಾಪಕರೊಂದಿಗೆ ಪರಾಮರ್ಶಿಸಿ ಮುಂಚಿತವಾಗಿಯೇ ಒಂದು ಅಥವಾ ಎರಡು ತರಗತಿಗಳನ್ನು ದಾಟಿ ಮುಂದಿನ ತರಗತಿಗೆ ಪ್ರವೇಶ ಪಡೆಯಲು ಪ್ರತಿಭಾವಂತ ಮಗುವಿಗೆ ಅವಕಾಶ ನೀಡಬಹುದು. ಹಾಗೆಯೇ ಸಾರ್ವಜನಿಕ ಪರೀಕ್ಷೆ (SSLC ಇತ್ಯಾದಿ) ಬರೆಯಲು ನಿಗದಿತ ವಯಸ್ಸಿನಿಂದ ಕಡಿಮೆ ವಯಸ್ಸಿನ ಪ್ರತಿಭಾವಂತ ಮಗುವಿಗೆ ಅವಕಾಶ ನೀಡಬಹುದು. ಬೌದ್ಧಿಕ ಪ್ರಖರತೆ ಆಧಾರದ ಮೇಲೆ ತರಗತಿಗಳನ್ನು ಅತಿಕ್ರಮಿಸಲು ಅವಕಾಶ ನೀಡುವ ಈ ಕ್ರಮವನ್ನು ತ್ವರಿತಗೊಳಿಸುವಿಕೆ ಎನ್ನುತ್ತಾರೆ. ಇದನ್ನೇ ಇಂಗ್ಲಿಷಿನಲ್ಲಿ (Acclearation) ಎನ್ನುತ್ತಾರೆ. ಈ ಕ್ರಮ ಅನುಸರಿಸುವಾಗ ಪ್ರತಿಭಾವಂತ ಮಗು ತಾನು ಸೇರುವ ತರಗತಿಯ ತನಗಿಂತ ದೊಡ್ಡವರಾದ ಮಕ್ಕಳೊಂದಿಗೆ ಹೊಂದಿಕೊಳ್ಳಬಲ್ಲದು ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕಾದುದು ಅಗತ್ಯ.

ಈ ವಿಶೇಷ ಕ್ರಮಗಳೇ ಅಲ್ಲದೆ ಸಾಮಾನ್ಯ ತರಗತಿಗಳಲ್ಲೂ ಪ್ರತಿಭಾವಂತ ಮಕ್ಕಳನ್ನು ಗುರ್ತಿಸಿ ಅವರ ಸಾಮರ್ಥ್ಯಗಳ ಅಭಿವ್ಯಕ್ತಿಗೆ ಅವಕಾಶ ನೀಡುವಂತಹ ಅನೇಕ ಕ್ರಮಗಳನ್ನು ಅಧ್ಯಾಪಕರು ಅನುಸರಿಸಬಹುದು. ಅವುಗಳಲ್ಲಿ ಕೆಲವು ಈ ರೀತಿ ಇವೆ.

1) ತರಗತಿಗಳಲ್ಲಿ ಮಕ್ಕಳನ್ನು (ಪ್ರತಿಭಾವಂತರು ಸೇರಿದಂತೆ) ಅವರ ಬೌದ್ಧಿಕ ಮಟ್ಟ, ಆಸಕ್ತಿಗಳ ಆಧಾರದ ಮೇಲೆ ಗುಂಪುಗಳಾಗಿ ಮಾಡಿ ಆಯಾ ಗುಂಪಿನ ಸಾಮರ್ಥ್ಯ ಆಸಕ್ತಿಗೆ ಅನುಗುಣವಾದ ಸಮೂಹ ಕಾರ್ಯವನ್ನು ನಿಯೋಜಿಸಬಹುದು. ಪ್ರತಿಭಾವಂತ ಗುಂಪಿಗೆ ಹೆಚ್ಚು ಸಂಕೀರ್ಣವಾದ, ಕಠಿಣವಾದ ಕಾರ್ಯವನ್ನು ಕೊಡಬಹುದು.

2) ನಿಯೋಜಿತ ಕಾರ್ಯಗಳನ್ನು ಕೊಡುವಾಗ ಪ್ರತಿಭಾವಂತ ಮಕ್ಕಳಿಗೆ ಕಠಿಣತೆಯ ಮಟ್ಟ ಹೆಚ್ಚಾಗಿರುವ ಕಾರ್ಯಗಳನ್ನು ನೀಡಬೇಕು.

3) ಅಲೆಕ್ಸ್ ಆಸ್‌ಬರ್ನ್ ರೂಪಿಸಿದ ವಿಚಾರ ಪ್ರಚೋದನೆಯ (Brain Storming) ತಂತ್ರವನ್ನು ಉಪಯೋಗಿಸಿದಾಗ ಪ್ರತಿಭಾವಂತ ಮಕ್ಕಳಿಗೆ ವಿಚಾರ ಪ್ರಚೋದನೆ ಉಂಟಾಗಿ ತಮ್ಮಲ್ಲಿ ಮೂಡುವ ನವೀನ ವಿಚಾರಗಳನ್ನು ವ್ಯಕ್ತಪಡಿಸಲು, ಗಹನ ರೀತಿಯ ಪ್ರಶ್ನೆಗಳನ್ನು ಕೇಳಲು ಅವಕಾಶ ದೊರೆಯುತ್ತದೆ.

4) ಪ್ರತಿಭಾವಂತ ಮಕ್ಕಳಲ್ಲಿ ಇರಬಹುದಾದ ನಿರ್ದಿಷ್ಟ ಸೃಜನಶೀಲ ಸಾಮರ್ಥ್ಯವನ್ನು (ಚಿತ್ರಕಲೆ, ಸಾಹಿತ್ಯ ಸೃಷ್ಟಿ, ಇತ್ಯಾದಿ) ಅದರ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಬಹುದು.

ಈ ಕೆಲವು ನಿರ್ದಿಷ್ಟ ಕ್ರಮಗಳಿಂದ ಪ್ರತಿಭಾವಂತ ಮಕ್ಕಳಲ್ಲಿ ವಿಚಾರ ಪಟುತ್ವ, ನಿರರ್ಗಳತೆ, ಸಮಸ್ಯೆಗೆ ಸಂವೇದನಾಶೀಲತೆ ಮುಂತಾದ ಸಾಮರ್ಥ್ಯಗಳನ್ನು ಹೆಚ್ಚಿಸಬಹುದು.

**ಮಾಧ್ಯಮಗಳ ಪಾತ್ರ:** ಇತ್ತೀಚಿನ ದಶಕಗಳಲ್ಲಿ ರೇಡಿಯೋ ದೂರದರ್ಶನ ಮತ್ತು ಪತ್ರಿಕೆ ಮುಂತಾದ ಸಮೂಹ ಮಾಧ್ಯಮಗಳು ಪ್ರತಿಭಾವಂತ ಮಕ್ಕಳ ಸಾಮರ್ಥ್ಯಗಳನ್ನು ಬೆಳಕಿಗೆ ತರಲು, ಸಮಾಜಕ್ಕೆ ಇಂಥ ಮಕ್ಕಳ ಕೊಡುಗೆಗಳನ್ನು ತಿಳಿಸಲು, ಪೋಷಕರಿಗೆ ಪ್ರತಿಭಾವಂತ ಮಕ್ಕಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುತ್ತಿವೆ. ದೂರದರ್ಶನ ವಾಹಿನಿಗಳಲ್ಲಿ ನಡೆಯುವ ಸಂಗೀತ ಸ್ಪರ್ಧೆಗಳು, ನಟನೆ, ನೃತ್ಯ ಸ್ಪರ್ಧೆಗಳು, ವಿವಿಧ ಕ್ರೀಡಾ ಸಂಬಂಧಿ ಸ್ಪರ್ಧೆಗಳು ಮಕ್ಕಳ ಪ್ರತಿಭೆಗಳು ಬೆಳಕಿಗೆ ಬರಲು ಅವಕಾಶ ಕಲ್ಪಿಸಿವೆ. ಇಂಥ ಸ್ಪರ್ಧೆಗಳಲ್ಲಿ ಭಾಗವಹಿಸಿ ಯಶಸ್ಸು ಗಳಿಸಿದ ಮಕ್ಕಳು ದೊಡ್ಡವರಾಗಿ ತಮ್ಮ ತಮ್ಮ ವೃತ್ತಿ ಕ್ಷೇತ್ರಗಳಲ್ಲಿ ಸಫಲತಾಪೂರ್ಣ ಕಾರ್ಯ ನಿರ್ವಹಿಸುತ್ತಿರುವುದು ವಿಶೇಷ ಸಂಗತಿಯಾಗಿದೆ. ಮಕ್ಕಳ ಸೃಜನಶೀಲತೆ, ಪ್ರತಿಭೆಯ ಬಗ್ಗೆ ದಶಕಗಳ ಹಿಂದೆ ಇದ್ದ ಪೋಷಕರ ಮನೋಭಾವವೂ ಈಗ ಬದಲಾಗಿದೆ. ಪೋಷಕರು ತಮ್ಮ ಪ್ರತಿಭಾವಂತ ಮಕ್ಕಳ ಬಗ್ಗೆ ಈಗ ಧನಾತ್ಮಕ ಮನೋಭಾವ ಹೊಂದಿ ಅವರಿಗೆ ಎಲ್ಲಾ ವಿಧದ ಪ್ರೋತ್ಸಾಹ ನೀಡುತ್ತಿರುವುದು ಸಂತೋಷದ ವಿಷಯವಾಗಿದೆ.

–ಗೋ.ಕೃ.ಕೊ.

## ಪ್ರತಿಭಾ ಪಲಾಯನ

ಪ್ರತಿಭಾವಂತರು ತಮ್ಮ ದೇಶದಲ್ಲಿ ಗಳಿಸಿದ ಪ್ರತಿಭೆಯನ್ನು ತಮ್ಮ ದೇಶದಲ್ಲಿ ಉಪಯೋಗಿಸುವ ಬದಲು ತಮ್ಮ ದೇಶವನ್ನು ಬಿಟ್ಟು ಬೇರೆ ದೇಶದಲ್ಲಿ ಕೆಲಸ ಮಾಡಲು ಹೋದರೆ, ಅವರೊಂದಿಗೆ ಅವರ ಪ್ರತಿಭೆಯೂ ದೇಶಕ್ಕೆ ದೊರೆಯದೇ ಹೋಗುವುದಕ್ಕೆ 'ಪ್ರತಿಭಾ ಪಲಾಯನ' ಎನ್ನುತ್ತಾರೆ.

ಪ್ರಾಥಮಿಕ ಹಂತದಿಂದ ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿಯನ್ನು ತೋರಿಸುತ್ತಾ ಪದವಿಯನ್ನು ಪಡೆದು, ಒಂದು ಗೊತ್ತಾದ ಕೆಲಸದಲ್ಲಿ ತರಬೇತನ್ನು ಪಡೆದು ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದುವವರು ಪ್ರತಿಭಾವಂತರು ಎನಿಸಿಕೊಳ್ಳುತ್ತಾರೆ. ಅವರಿಗೆ ಕೆಲಸ ದೊರಕುವುದೂ ಕಷ್ಟವಲ್ಲ ಮತ್ತು ಅವರಿಗೆ ಉತ್ತಮ ಮಟ್ಟದ ವೇತನ ಮತ್ತಿತರ ಸೌಲಭ್ಯಗಳೂ ದೊರಕುತ್ತವೆ. ಮುಂದುವರೆದ ರಾಷ್ಟ್ರಗಳು ತಮ್ಮ ಆಧುನಿಕ ಉತ್ಪಾದಕ ಘಟಕಗಳಿಗೆ ಪ್ರತಿಭಾವಂತ ಕೆಲಸಗಾರರನ್ನು ನಿಯಮಿಸಿಕೊಳ್ಳಲು ತುದಿಗಾಲಿನಲ್ಲಿ ನಿಂತಿರುತ್ತವೆ. ಈ ಆಕರ್ಷಣೆ ಸಹಜವಾಗಿ ಪ್ರತಿಭಾವಂತರನ್ನು ಸೆಳೆಯುತ್ತದೆ. ಅವರ ದೇಶದಲ್ಲೇ ಅಂತಹ ವೇತನ, ಕೆಲಸದ ಪರಿಸರ, ಮತ್ತಿತರ ಸೌಲಭ್ಯಗಳು ದೊರಕದಿರುವಾಗ ಪ್ರತಿಭಾವಂತರು ತಾವು ವಿದ್ಯೆಯನ್ನು ಮತ್ತು ತರಬೇತನ್ನು ಪಡೆದ ದೇಶವನ್ನು ಬಿಟ್ಟು, ಬೇರೆ ದೇಶಕ್ಕೆ ಹೋಗಿ ತಮ್ಮ ಪ್ರತಿಭೆಯಿಂದ ಅಲ್ಲಿನ ಆರ್ಥಿಕ ವ್ಯವಸ್ಥೆಯಲ್ಲಿ ಕೆಲಸ ಮಾಡುವುದು ಸರ್ವೇ ಸಾಮಾನ್ಯವಾಗಿವೆ. ಈಗಿನ ಸಂಚಾರ ಸೌಲಭ್ಯಗಳು ಮತ್ತು ಸಂಪರ್ಕ ಸಾಧನಗಳು ವಿಶ್ವವನ್ನೇ ಒಂದು ಚಿಕ್ಕ ಹಳ್ಳಿಯನ್ನಾಗಿ ಪರಿವರ್ತಿಸಿರುವಾಗ, ದೇಶ ಬಿಟ್ಟು ಬೇರೆ ದೇಶಕ್ಕೆ ಹೋಗಿ ಕೆಲಸ ಮಾಡುವುದು ಒಂದು ಸಹಜವಾದ ಪ್ರಕ್ರಿಯೆಯಾಗಿದೆ.

ಇಂತಹ ಪ್ರತಿಭಾ ಪಲಾಯನದಿಂದ ಎರಡು ದೇಶಗಳಿಗೂ ಲಾಭ ಇದೆ ಎನ್ನುವುದು ಈಗಿನ ವಾದ. ಕೆಲಸ ಮಾಡಿಸಿಕೊಂಡು ಲಾಭ ಪಡೆಯುವುದು ಒಂದು ದೇಶವಾದರೆ, ಅಲ್ಲಿ ಸಂಪಾದಿಸಿದ ವಿದೇಶಿ ವಿನಿಮಯದಿಂದ ಮತ್ತೊಂದು ದೇಶವೂ ಲಾಭ ಪಡೆಯುತ್ತದೆ. ಹೀಗೆ

Digitised by Bharatavani, CIIL

ಪ್ರತಿಭೆ ಎರಡು ದೇಶಗಳಿಗೂ ಲಾಭದಾಯಕ. ಇದರಿಂದ ಮಾನವ ಸಂಪನ್ಮೂಲವು ಎಷ್ಟು ಮುಖ್ಯವಾದುದು ಎಂಬುದು ವೇದ್ಯವಾಗುತ್ತದೆ.

1960ರ ದಶಕದಲ್ಲಿ, ಅಮೇರಿಕಾ ದೇಶವು ರಷ್ಯಾದೊಂದಿಗಿನ ಪೈಪೋಟಿಯಿಂದಾಗಿ, ತನ್ನ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಯನ್ನು ಮಾಡಿಕೊಂಡು ರಷ್ಯಾದ "ಸ್ಪುಟ್ನಿಕ್"ಗೆ ಪ್ರತಿಯಾಗಿ ತಾನೂ ಬಾಹ್ಯಾಕಾಶದ ಸಂಶೋಧನೆಗೆ ಸಿದ್ಧವಾಗುವ ಭರದಲ್ಲಿ ಅನೇಕ ವಿಜ್ಞಾನದ ಪ್ರಯೋಗಾಲಯಗಳನ್ನೂ, ಸಂಶೋಧನಾಲಯಗಳನ್ನೂ ಪ್ರಾರಂಭಿಸಿತು. ಇಂತಹ ಸ್ಥಳಗಳಲ್ಲಿ ಕೆಲಸ ಮಾಡಲು ಇನ್ನೂ ಅಭಿವೃದ್ಧಿಯನ್ನು ಹೊಂದುತ್ತಿರುವ ದೇಶಗಳಲ್ಲಿ ದೇಶದ ಪ್ರಗತಿಯ ದೃಷ್ಟಿಯಿಂದ ತಯಾರಾದ ತಾಂತ್ರಿಕ ಪರಿಣತರು ಅಮೇರಿಕಾದಿಂದ ಆಕರ್ಷಿತರಾಗಿ ಅಲ್ಲಿನ ವೈಜ್ಞಾನಿಕ ಪ್ರಯೋಗಾಲಯಗಳಲ್ಲಿ ಕೆಲಸ ಮಾಡಲು ಉತ್ಸುಕರಾಗಿದ್ದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅಮೇರಿಕಾವು ತನ್ನ ವೀಸಾ ನೀತಿಯನ್ನು ಸಡಿಲಿಸಿ, ಬೇರೆ ದೇಶಗಳಿಂದ ಬರುವ ವಲಸಿಗರಿಗೆ ಅನುವು ಮಾಡಿಕೊಟ್ಟಿತು. ಹೀಗೆ ಪ್ರತಿಭಾವಂತರ ವಲಸೆಯ ವಿವಿಧ ದೇಶಗಳಿಂದ ಅಮೇರಿಕಾದೆಡೆಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರಾರಂಭವಾಯಿತು. ಇದೇ ಸಮಯದಲ್ಲಿ ಆರ್ಥಿಕವಾಗಿ ಮುಂದುವರೆಯುತ್ತಿದ್ದ ದೇಶಗಳಲ್ಲಿ, ಆರ್ಥಿಕ ಯೋಜನೆಗಳು ಪ್ರಾರಂಭವಾದುವು. ಅಲ್ಲಿನ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗಾಗಿ ಅಗತ್ಯವಾಗಿದ್ದ ಮಾನವ ಸಂಪನ್ಮೂಲವನ್ನು ತಯಾರಿಸುವ ಕೆಲಸ ಭರದಿಂದ ಸಾಗಿತು. ಅದಕ್ಕಾಗಿ ಅನೇಕ ತಾಂತ್ರಿಕ ಮಹಾವಿದ್ಯಾಲಯಗಳು, ಪ್ರಯೋಗ ಶಾಲೆಗಳು, ಮುಂತಾದವುಗಳು ಉದಯಿಸಿದವು. ಆದರೆ ಅವುಗಳಿಂದ ಹೊರಬಂದ ಪ್ರತಿಭಾವಂತರು ಅಮೇರಿಕಾದ ಆಕರ್ಷಣೆಯಿಂದ ಅಲ್ಲಿಗೆ ವಲಸೆ ಹೋಗಲು ಪ್ರಾರಂಭಿಸಿದರು. ಹೀಗೆ ದೇಶದ ಪ್ರಗತಿಗೆ ಪ್ರತಿಭಾ ಪಲಾಯನ ಸಾಧಕವಾಗುವುದರೊಂದಿಗೆ ಮಾರಕವೂ ಆಯಿತು.

### ಪ್ರತಿಭಾ ಪಲಾಯನದ ಅನುಕೂಲಗಳು

ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಉಳಿದ ಸಂಪನ್ಮೂಲಗಳನ್ನೂ ಉತ್ತಮಪಡಿಸಬಹುದು. ಪೀಟರ್ ಡ್ರಕ್ಕರ್‌ರವರ ಪ್ರಕಾರ ಕೇವಲ ಮಾನವರು ಒಂದು ಸಂಪನ್ಮೂಲವಾಗಲು ಸಾಧ್ಯವಿಲ್ಲ; ಶಿಕ್ಷಣ ಮತ್ತು ತರಬೇತಿಯಿಂದ ಮಾತ್ರ ಮಾನವರು ಒಂದು ಸಂಪನ್ಮೂಲ ಎನಿಸಿಕೊಳ್ಳಲು ಸಾಧ್ಯ. ಆದರೆ ಶಿಕ್ಷಣ ಮತ್ತು ತರಬೇತಿಯನ್ನು ಪಡೆದ ಜನರು, ಬೇರೆ ದೇಶಗಳಿಗೆ ವಲಸೆ ಹೋಗುವುದರಿಂದ ಉಂಟಾಗುವ ಪ್ರತಿಭಾ ಪಲಾಯನದಿಂದಲೂ ಹಲವು ಲಾಭಗಳಿವೆ. ಅವುಗಳು ಯಾವುವೆಂದರೆ:

ವಲಸೆ ಹೋಗಿ ನೆಲಸಿದ ದೇಶದಲ್ಲಿ ಪ್ರತಿಭಾವಂತರಿಂದ ಆಗುವ ಲಾಭವು ಎಲ್ಲರಿಗೂ ಆಗುವ ಲಾಭ ಎಂದು ಪರಿಗಣಿಸಬಹುದು. ಯಾವುದಾದರೂ ರೀತಿಯಲ್ಲಿ ಪ್ರತಿಭಾವಂತರನ್ನು ಕಳೆದುಕೊಂಡ ದೇಶಕ್ಕೂ ಲಾಭವಾಗುತ್ತದೆ. ಅಂತಹ ಪ್ರತಿಭಾವಂತರು ಹಲವು ವರ್ಷಗಳ ಕಾಲ ವಿದೇಶದಲ್ಲಿ ಕೆಲಸಮಾಡಿ ಹಿಂತಿರುಗುವುದರಿಂದ ಅವರ ತಾಯ್ನಾಡಿಗೆ ಭವಿಷ್ಯದಲ್ಲಿ ಸಹಾಯವಾಗುವುದರಲ್ಲಿ ಸಂದೇಹವಿಲ್ಲ. ವಿದೇಶಗಳಲ್ಲಿ ಕೆಲಸ ಮಾಡಿ ತಮ್ಮ ಕುಟುಂಬಗಳಿಗೆ ಹಣ ಕಳುಹಿಸುವುದರ ಮೂಲಕ ದೇಶವು ವಿದೇಶಿ ವಿನಿಮಯಗಳಿಸಲು ಸಹಾಯವಾಗುತ್ತದೆ. ವಿವಿಧ ದೇಶಗಳಿಗೆ ಹೋಗಿ ಬರುವುದರ ಮೂಲಕ ಸಂಸ್ಕೃತಿ ಪ್ರಸಾರವಾಗಿ, ಅಂತಾರಾಷ್ಟ್ರೀಯ ತಿಳಿವಳಿಕೆಗೆ ಸಹಾಯವಾಗುತ್ತದೆ.

ಹೀಗೆ ಪ್ರತಿಭಾ ಪಲಾಯನ ಎನ್ನುವುದು ಪ್ರತಿಭೆಯ ಗಳಿಕೆಯೂ ಆಗಿ ಪರಿವರ್ತನೆಯಾಗಬಹುದು.

### ಪ್ರತಿಭಾ ಪಲಾಯನದ ಸಮಸ್ಯೆಗಳು

ಪ್ರತಿಭಾವಂತರನ್ನು ಕಳೆದುಕೊಳ್ಳುವುದರಿಂದ ದೇಶದ ಆರ್ಥಿಕ ಪ್ರಗತಿ ಕುಂಠಿತಗೊಳ್ಳುತ್ತದೆ. ದೇಶದ ಪ್ರಜೆಗಳ ತೆರಿಗೆ ಹಣದಿಂದ ಶಿಕ್ಷಣವನ್ನು ಪಡೆದು, ಆ ಜನರಿಗೇ ಏನೂ ಉಪಯೋಗವಾಗದೇ ಇರುವುದು ಒಂದು ದೊಡ್ಡ ನಷ್ಟ. ಬೇರೆ ದೇಶಗಳಿಗೆ ವಲಸೆ ಹೋಗುವುದರಿಂದ ಹಲವು ಸಾಂಸಾರಿಕ ಸಮಸ್ಯೆಗಳುಂಟಾಗಬಹುದು. ಮನೆಯ ಸದಸ್ಯರಲ್ಲಿ ಒಡಕು, ವಯಸ್ಸಾದವರನ್ನು ನೋಡಿಕೊಳ್ಳಲು ಯಾರೂ ಇಲ್ಲದಿರುವುದು, ಇತ್ಯಾದಿ. ವಲಸೆ ಹೋದವರ ಮಕ್ಕಳು ಆ ದೇಶಗಳ ಪ್ರಜೆಗಳಾಗುವುದು ಸಹಜ. ಅವರನ್ನು ಬಿಟ್ಟು ಬರಲು ಸಾಧ್ಯವಾಗದೆ ಅವರ ತಂದೆ–ತಾಯಿಯರೂ ಅಲ್ಲೇ ಉಳಿದುಕೊಳ್ಳುವ ಅನಿವಾರ್ಯತೆ ಉಂಟಾಗಬಹುದು.

### ಸಮಸ್ಯೆಯ ನಿವಾರಣೋಪಾಯಗಳು

ಸುಮಾರು ಐದಾರು ದಶಕಗಳಿಂದಲೂ ಪ್ರತಿಭಾ ಪಲಾಯನದಿಂದ ಆರ್ಥಿಕ ವ್ಯವಸ್ಥೆಯಮೇಲಾಗುವ ಪರಿಣಾಮಗಳನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವೇದಿಕೆಗಳ ಮೇಲೆ ಚರ್ಚಿಸಲಾಗುತ್ತಿದೆ. ಎಲ್ಲಾ ದೇಶಗಳಲ್ಲೂ ಸಾರ್ವಜನಿಕರು ಕೊಡುವ ತೆರಿಗೆಯ ಹಣದಿಂದ ದೇಶದ ಒಳಗೆ ಅಥವಾ ಹೊರದೇಶಗಳಲ್ಲಿ ಜನರಿಗೆ ಉನ್ನತ ಶಿಕ್ಷಣವನ್ನು ಒದಗಿಸಲಾಗುತ್ತದೆ. ಇಂತಹ ಸಾರ್ವಜನಿಕ ವೆಚ್ಚವನ್ನು ಸಾರ್ವಜನಿಕರಿಗೆ ಒದಗಿಸುವ ಉತ್ತಮ ಸೌಲಭ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಲಾಗುತ್ತದೆ. ದೇಶದ ಒಟ್ಟು ಆದಾಯವನ್ನು (GNP) ಹೆಚ್ಚಿಸುವ ಗುರಿಯನ್ನು ಇದು ಹೊಂದಿರುತ್ತದೆ. ಹೀಗೆ ಮಾನವ ಸಂಪನ್ಮೂಲದ ಅಭಿವೃದ್ಧಿಗಾಗಿ ಮಾಡುವ ವೆಚ್ಚದಿಂದ ದೇಶದಲ್ಲಿ ಹಲವಾರು ರೀತಿಯಲ್ಲಿ ಜನರ ಯೋಗಕ್ಷೇಮಕ್ಕೂ ಸಹಾಯಕವಾಗುತ್ತದೆ. ಉನ್ನತ ಶಿಕ್ಷಣಕ್ಕಾಗಿ ಹೂಡುವ ಬಂಡವಾಳದಿಂದ ಉತ್ಪಾದನಾಂಗಗಳ ಉತ್ಪಾದಕ ಶಕ್ತಿ ಹೆಚ್ಚುತ್ತದೆ. ಇದರಿಂದಾಗಿ ತೆರಿಗೆಯನ್ನು ವಿಧಿಸುವ ವ್ಯಾಪ್ತಿ ಹೆಚ್ಚುತ್ತದೆ ಮತ್ತು ತೆರಿಗೆಗಳಿಂದ ಬರುವ ಆದಾಯವೂ ಹೆಚ್ಚುತ್ತದೆ. ಹೀಗೆ ಹೆಚ್ಚಿದ ಆದಾಯವು ಮತ್ತಷ್ಟು ಹೆಚ್ಚಿನ ಬಂಡವಾಳ ಹೂಡಿಕೆಗೆ ಸಹಾಯ ಮಾಡುತ್ತದೆ. ಅದರಿಂದಾಗಿ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಯನ್ನು ಕಾಣಬಹುದು. ಇವುಗಳು ದೇಶದ ಆಧುನೀಕರಣಕ್ಕೆ ಸಹಾಯಮಾಡುತ್ತವೆ. ಶಿಕ್ಷಣ ಕ್ಷೇತ್ರದಲ್ಲಿ ಪೈಪೋಟಿಯಿಂದ ಪ್ರತಿಭಾವಂತರು ಮಾತ್ರ ಉನ್ನತ ಶಿಕ್ಷಣ ಪಡೆಯುವುದರಿಂದ ಪ್ರತಿಭಾವಂತರ ಸಂಖ್ಯೆ ಹೆಚ್ಚುತ್ತದೆ.

ರಾಷ್ಟ್ರೀಯ ದೃಷ್ಟಿಕೋನದಿಂದ ಹೇಳುವುದಾದರೆ, ಬೇರೆ ದೇಶಗಳಿಗೆ ವಲಸೆ ಹೋದ ಪ್ರತಿಭಾವಂತರಿಂದ ಅಲ್ಲಿ ಉತ್ಪನ್ನವಾದ ಐಶ್ವರ್ಯದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು, ಅದನ್ನು ಬಡದೇಶಗಳಿಂದ ಶ್ರೀಮಂತ ದೇಶಗಳಿಗೆ ವರ್ಗಾಯಿಸಲ್ಪಟ್ಟ ಐಶ್ವರ್ಯದ ಪ್ರಮಾಣ ಎಂದು ಗುರುತಿಸಲಾಗುತ್ತದೆ. ಅಂತಾರಾಷ್ಟ್ರೀಯಮಟ್ಟದಲ್ಲಿ ಜನರ ಚಲನೆಯೇ ಪ್ರತಿಭಾ ಪಲಾಯನಕ್ಕೆ ಮುಖ್ಯ ಕಾರಣ. ಇಂತಹ ಚಲನೆಯು ಮಾನವಕುಲಕ್ಕೆ ಅಪಾರವಾದ ಲಾಭವನ್ನು ತಂದುಕೊಡುತ್ತದೆ. ಇದಿಲ್ಲದ ಪ್ರಪಂಚದಲ್ಲಿ ಯಾವ ಆಕರ್ಷಣೆಯೂ ಇರುವುದಿಲ್ಲ. ಆದರೆ ಇಂತಹ ಚಲನೆಯು ಒಂದು ಮಿತಿಯಲ್ಲಿರಬೇಕಾದದ್ದು ಅವಶ್ಯಕ. ಆದ್ದರಿಂದ ಇದನ್ನು ಹತೋಟಿಯಲ್ಲಿಡಲು, ಮತ್ತು ಉತ್ತಮವಾದ ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸಲು, ಕೆಲವು ನೀತಿಗಳನ್ನು ರೂಪಿಸುವುದು ಅವಶ್ಯಕ. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

ಒಂದು ಗೊತ್ತಾದ ಪ್ರಮಾಣದಲ್ಲಿ ಮಾತ್ರ ವಿದ್ಯಾರ್ಥಿಗಳು ಮತ್ತು ಕೆಲಸಗಾರರು ವಲಸೆ ಹೋಗಲು ಅಗತ್ಯವಾದ ನಿರ್ಬಂಧಗಳನ್ನು ವಿಧಿಸಬೇಕು.

Digitised by Bharatavani, CIIL

ಸರ್ಕಾರದ ಯೋಜನೆಗಳಲ್ಲಿ ಮತ್ತು ಶೈಕ್ಷಣಿಕ ಯೋಜನೆಗಳಲ್ಲಿ ಹೊಂದಾಣಿಕೆಯನ್ನು ಉಂಟುಮಾಡಿ, ಮಾನವ ಶಕ್ತಿಯ ಬೇಡಿಕೆ ಮತ್ತು ಪೂರೈಕೆಗಳಲ್ಲಿ ಸಮತೋಲನವನ್ನು ತರಬೇಕು.

ಮಿತಿ ಮೀರಿದ ಸಂಖ್ಯೆಯಲ್ಲಿ ಜನರು ವಲಸೆ ಹೋಗುವುದನ್ನು ತಪ್ಪಿಸಲು ಸೂಕ್ತವಾದ ವಲಸೆ ಕಾನೂನುಗಳನ್ನು ರೂಪಿಸಬೇಕು.

ಪ್ರತಿಭಾವಂತರನ್ನು ಕಳೆದುಕೊಳ್ಳುವ ದೇಶಗಳಿಗೆ ಸೂಕ್ತ ಪರಿಹಾರ ಕೊಡುವುದರ ಮೂಲಕ ಅವುಗಳ ಶೈಕ್ಷಣಿಕ ವಲಯದ ಅಸಮತೋಲನವನ್ನು ಸರಿಪಡಿಸಿಕೊಳ್ಳಲು ನೆರವು ನೀಡಬೇಕು.

ವಲಸೆ ನೀತಿಗಳನ್ನು ಬಿಗಿಗೊಳಿಸಿ, ಅದು ಕೇವಲ ಕೆಲವು ಉದ್ಯೋಗಗಳಿಗೆ ಮತ್ತು ಒಂದು ಗೊತ್ತಾದ ಕಾಲದ ಅವಧಿಗೆ ಸೀಮಿತವಾಗಿರುವಂತೆ ಮಾಡಬೇಕು.

ಕೇವಲ ಪ್ರತಿಭಾ ಪಲಾಯನದ ಮೇಲೆ ನಿಯಂತ್ರಣವನ್ನು ಉಂಟು ಮಾಡಿದರೆ ಸಾಲದು. ಅದರಿಂದ ಉಂಟಾಗುವ ದುಷ್ಪರಿಣಾಮಗಳ ಮೇಲೂ ನಿಯಂತ್ರಣವನ್ನು ಹೊಂದಬೇಕು. ಉದಾಹರಣೆಗೆ: ಐಶ್ವರ್ಯದ ಅಸಮಾನ ಹಂಚಿಕೆಯನ್ನು ಸರಿಪಡಿಸುವುದು, ಶಿಕ್ಷಣವನ್ನು ಪಡೆಯುವುದಕ್ಕೆ ಕೆಲವು ಅನುಕೂಲಗಳನ್ನು ಕಲ್ಪಿಸುವುದು, ಇತ್ಯಾದಿ. ಇದರಿಂದ ಕೇವಲ ಕೆಲವು ವರ್ಗದವರು ಮಾತ್ರ ಹೆಚ್ಚು ವೆಚ್ಚವನ್ನು ಮಾಡಿ ಶಿಕ್ಷಣವನ್ನು ಪಡೆದು, ಉಳಿದವರಿಗೆ ಅದು ದೊರಕದೇ ಇರುವುದು, ಮುಂತಾದವುಗಳನ್ನು ತಡೆಯಬಹುದು.

–ಎಚ್.ಎಸ್.ಆರ್.

## ಪ್ರತಿದರ್ಶಚಯನ

ಹೊಸ ಹೊಸ ತತ್ವಗಳನ್ನು ಆವಿಷ್ಕರಿಸಿ ಸಾಮಾನ್ಯೀಕರಣ ಮಾಡುವುದು ಸಂಶೋಧನೆಯ ಮೂಲ ಉದ್ದೇಶವಾಗಿದೆ. ಆದರೆ ಇದು ಪ್ರಾಯೋಗಿಕವಾಗಿ ಇಡೀ ಸಮುದಾಯವನ್ನು ಅಧ್ಯಯನದಲ್ಲಿ ಒಳಗೂಡಿಸುವುದು ಅಸಾಧ್ಯ. ಕೆಲವು ಸಮೂಹಗಳನ್ನು ಪೂರ್ಣವಾಗಿ ಅಧ್ಯಯನ ಮಾಡುವುದು ದುಬಾರಿಯಾಗುತ್ತದೆ. ಅಲ್ಲದೆ ಸಮಯ, ಹಣ, ಶ್ರಮ, ಎಲ್ಲವೂ ಹೆಚ್ಚಾಗುತ್ತವೆ. ಕೆಲವು ಸಮುದಾಯಗಳು ಅಪಾರ ಗಾತ್ರದವಾಗಿದ್ದು ಅಳತೆ ಮಾಡುವ ಮುನ್ನವೇ ಅವುಗಳ ಗುಣಲಕ್ಷಣಗಳು ಬದಲಾಗುವ ಸಂಭವವೂ ಇರುತ್ತದೆ. ಇಂತಹ ಪ್ರಾತಿನಿಧಿಕ ಗುಂಪನ್ನು ಆಯ್ಕೆ ಮಾಡುವ ಕ್ರಮವೇ ಪ್ರತಿದರ್ಶಚಯನ. ಅದೃಷ್ಟವಶಾತ್ ಪ್ರತಿದರ್ಶಚಯನ ವಿಧಾನದಿಂದ ಸಮೂಹವನ್ನು ಪ್ರತಿನಿಧಿಸುವ ಚಿಕ್ಕ ಪ್ರತಿದರ್ಶನವನ್ನು (ಗುಂಪನ್ನು) ಇಡೀ ಸಮೂಹವನ್ನು ಜಾಗರೂಕತೆಯಿಂದ ಅವಲೋಕನ ಮಾಡಿ ಆಯ್ಕೆ ಮಾಡಿಕೊಳ್ಳಬೇಕು. ಅಂತಹ ಸಂದರ್ಭಗಳಲ್ಲಿ ಒಂದು ಜನ ಸಮೂಹದಿಂದ ಒಂದು ಸಣ್ಣ ಗುಂಪನ್ನು ಆಯ್ಕೆ ಮಾಡಿಕೊಂಡು ಅದನ್ನು ಅಧ್ಯಯನ ಮಾಡಬಹುದು. ಹಾಗೆ ಆಯ್ಕೆ ಮಾಡಿಕೊಂಡ ಗುಂಪು ಜನ ಸಮೂಹದ ಲಕ್ಷಣಗಳನ್ನು ಪ್ರತಿನಿಧಿಸುವಂತಿರಬೇಕು.

ಪ್ರತಿದರ್ಶಚಯನವು ವಿಶಾಲ ಹಾಗೂ ಹಿರಿದಾದ ಘಟಕಗಳ ಚಿಕ್ಕ ಪ್ರಾತಿನಿಧಿಕ ಗುಂಪು. ಪ್ರತಿದರ್ಶವು ಅಥವಾ ನಮೂನೆಯು (Sample) ಅವಲೋಕನ ಮತ್ತು ವಿಶ್ಲೇಷಣೆಗಾಗಿ ಆಯ್ಕೆ ಮಾಡಿಕೊಂಡ ಸಮೂಹದ ಒಂದು ಚಿಕ್ಕ ಭಾಗ. ಚಿಕ್ಕ ಪ್ರತಿದರ್ಶವು ಇಡೀ ಗುಂಪನ್ನು ಪ್ರತಿನಿಧಿಸುವ ಒಂದು ಭಾಗವಾಗಿದೆ. ಪ್ರತಿದರ್ಶದ ಗುಣಲಕ್ಷಣಗಳನ್ನು ಅಧ್ಯಯನ ಮಾಡಿ ಇಡೀ ಸಮೂಹದ ಗುಣಲಕ್ಷಣಗಳನ್ನು ವಿಶ್ಲೇಷಣೆ ಮಾಡಲು ಸಾಧ್ಯ.

ಪ್ರತಿದರ್ಶಚಯನ ವಿಧಾನದ ಮೂಲಕ ಚಿಕ್ಕ ಸಂಖ್ಯೆಯ ವ್ಯಕ್ತಿಗಳು, ವಸ್ತುಗಳು ಅಥವಾ ಘಟನಾವಳಿಗಳನ್ನು ಆರಿಸಿ, ವಿಶ್ಲೇಷಿಸಿ ಒಂದು ಸಮೂಹದ ಬಗ್ಗೆ ಸಾಮಾನ್ಯೀಕರಿಸಬಹುದಾಗಿದೆ. ಪ್ರತಿದರ್ಶದ ಆಯ್ಕೆಯು ಒಂದು ಪ್ರದೇಶದ ಜನಸಂಖ್ಯೆಯನ್ನು ಅವಲಂಬಿಸಿರುತ್ತದೆ. ಶೈಕ್ಷಣಿಕ ಸಮಸ್ಯೆಯನ್ನು ಅಧ್ಯಯನ ಮಾಡುವಾಗ ವಿದ್ಯಾರ್ಥಿಗಳನ್ನು ಶಿಕ್ಷಕರನ್ನು ಹಾಗೂ ಪಾಲಕರನ್ನು ಪ್ರತಿದರ್ಶವಾಗಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಪ್ರತಿದರ್ಶವನ್ನು ಆರಿಸುವಾಗ ಸಂಶೋಧಕನಿಗೆ ತಾನು ಅಧ್ಯಯನಕ್ಕಾಗಿ ಆರಿಸಿಕೊಂಡ ವಿಷಯದ ಅರಿವಿನೊಂದಿಗೆ ತನ್ನ ಕಕ್ಷೆಯಲ್ಲಿ ಬರುವ ಕುಟುಂಬ, ವ್ಯಕ್ತಿ ಮತ್ತು ಸಮೂಹಗಳ ಅರಿವು ಸ್ಥಳದ ಹಾಗೂ ಸಮಯದ ಅರಿವು ಇರುವುದು ಅವಶ್ಯಕವಾಗಿದೆ.

ಪ್ರತಿದರ್ಶದ ಆಯ್ಕೆಯ ಸಿದ್ಧಾಂತವು ಅನುಗಮನ ಪದ್ಧತಿಯ ಆಧಾರದ ಮೇಲೆ ನಿಂತಿದೆ. ಆದ್ದರಿಂದ ಇದರ ಆಯ್ಕೆಯ ಪ್ರಕ್ರಿಯೆಯು ನಿರ್ದಿಷ್ಟತೆಯಿಂದ ಸಾಮಾನ್ಯದ ಕಡೆಗೆ ಸಾಗುತ್ತದೆ. ಹಾಗಾಗಿ ಪ್ರತಿದರ್ಶಚಯನದಿಂದ ಸಮಷ್ಟಿಯ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ.

ಒಂದು ಉತ್ತಮ ಪ್ರತಿದರ್ಶದ ಆಯ್ಕೆಯು ಕೆಲವು ನಿರ್ಣಾಯಕಗಳನ್ನು ಹೊಂದಿದ್ದು ಅದನ್ನು ನಿಯಂತ್ರಿತ ಕ್ರಮದಲ್ಲಿ ಆಯ್ಕೆ ಮಾಡಲಾಗುತ್ತದೆ. ಒಂದು ಬೃಹತ್ ಸಮೂಹದಿಂದ ಅದರ ಪ್ರತಿದರ್ಶವನ್ನು ಆಯ್ಕೆ ಮಾಡುವಾಗ ಈ ಕೆಳಕಂಡ ಅಂಶಗಳನ್ನು ಆಧಾರವಾಗಿಟ್ಟು ಕೊಳ್ಳಬಹುದಾಗಿದೆ. ಅವುಗಳೆಂದರೆ,

1. ಸಮಷ್ಟಿಯ (Population) ಆಯ್ಕೆ
2. ಸಮಷ್ಟಿಯ ವ್ಯಾಖ್ಯಾನ
3. ಪ್ರತಿದರ್ಶದ ಗಾತ್ರದ ನಿರ್ಣಯ
4. ಮಾದರಿ ಪ್ರತಿದರ್ಶದ ಆಯ್ಕೆ

1. **ಸಮಷ್ಟಿಯ ಆಯ್ಕೆ:** ಸಂಶೋಧಕ ತನ್ನ ಅಧ್ಯಯನದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳಿಗೆ ಅನುಗುಣವಾದ ಸೂಕ್ತ ಸಮಷ್ಟಿ ಯಾವುದೆಂದು ನಿರ್ಣಯಿಸಿಕೊಳ್ಳಬೇಕು.

2. **ಸಮಷ್ಟಿಯ ವ್ಯಾಖ್ಯಾನ:** ಸಂಶೋಧನಾರ್ಥಿಯು ಅಧ್ಯಯನ ಮಾಡುವ ಸಮುದಾಯವನ್ನು ಖಚಿತವಾಗಿ ವ್ಯಾಖ್ಯಾನಿಸಿ ಕೊಳ್ಳುವುದು ಅಗತ್ಯವಾಗಿದೆ. ಸಮಷ್ಟಿಯು ಮಾನವ ಅಥವಾ ಮಾನವೇತರ ಗುಂಪನ್ನು ನಿರ್ದಿಷ್ಟವಾಗಿ ಪ್ರತಿನಿಧಿಸುತ್ತದಾದ್ದರಿಂದ ಸಮಷ್ಟಿಯು ಸ್ಪಷ್ಟವಾದ ಲಕ್ಷಣಗಳನ್ನೊಳಗೊಂಡಿರುವುದರಿಂದ ಅದರ ವ್ಯಾಖ್ಯಾನವು ಕ್ಲಿಷ್ಟಕರವಾಗಿರುವುದಿಲ್ಲ. ಹಾಗಾಗಿ ಉದ್ದೇಶವು ಸ್ಪಷ್ಟವಿದ್ದಾಗ ಅವುಗಳ ಪ್ರಾಪ್ತಿಯೂ ಕೂಡ ಅಷ್ಟೇ ಶೀಘ್ರ ಮತ್ತು ನಿಖರವಾಗಿರುತ್ತದೆ. ಏಕೆಂದರೆ ಅಂತಹ ಸ್ಥಿತಿಯಲ್ಲಿ ವ್ಯರ್ಥದ ತತ್ವಗಳಿಗೆ ಯಾವ ಸ್ಥಾನವೂ ಇರುವುದಿಲ್ಲ.

3. **ಪ್ರತಿದರ್ಶದ ಗಾತ್ರದ ನಿರ್ಣಯ:** ತನ್ನ ಅಧ್ಯಯನದ ಉದ್ದೇಶಗಳು, ಸಂಶೋಧನೆಗಿರುವ ಕಾಲಮಿತಿ, ಹಣದ ಲಭ್ಯತೆಗಳನ್ನು ಗಮನದಲ್ಲಿ ಇಟ್ಟುಕೊಂಡು ಪ್ರತಿದರ್ಶದ ಗಾತ್ರ ನಿರ್ಧರಿಸಬೇಕು. ಸಂಖ್ಯಾಶಾಸ್ತ್ರದಲ್ಲಿ ಸಾಮಾನ್ಯವಾಗಿ ಪ್ರತಿದರ್ಶದ ಗಾತ್ರ 30ಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಸಣ್ಣ ಪ್ರತಿದರ್ಶ ಎನ್ನಲಾಗುತ್ತದೆ.

4. **ಮಾದರಿ ಪ್ರತಿದರ್ಶದ ಆಯ್ಕೆ:** ಪ್ರತಿದರ್ಶವನ್ನು ಆಯ್ಕೆ ಮಾಡುವ ಮೊದಲು ಸಮಷ್ಟಿಯ ಗಾತ್ರ ಸಂಖ್ಯೆಯನ್ನು ನಿರ್ಧರಿಸಿಕೊಳ್ಳಬೇಕು. ಪ್ರತಿದರ್ಶದ ಗಾತ್ರವು ಆ ಗುಂಪಿನ ಸ್ವರೂಪದ ಆಧಾರದ ಮೇಲೆ ನಿರ್ಧಾರವಾಗುತ್ತದೆ.

Digitised by Bharatavani, CIIL

ಸಮಷ್ಟಿಯ ಬಗ್ಗೆ ಹೆಚ್ಚು ಮಾಹಿತಿಗಳು ಬೇಕಾದಲ್ಲಿ ಅದರ ಬಗ್ಗೆ ನಿಖರವಾದ ತೀರ್ಮಾನಗಳನ್ನು ಕೈಗೊಳ್ಳಬೇಕಾದಲ್ಲಿ ಅದರಿಂದ ಆಯ್ಕೆ ಮಾಡಿಕೊಳ್ಳುವ ಪ್ರತಿದರ್ಶ ಸಾಕಷ್ಟು ದೊಡ್ಡದಾಗಿರಬೇಕಾಗುತ್ತದೆ. ಸ್ಥೂಲವಾದ ಮಾಹಿತಿ ಬೇಕೆಂದಾದಲ್ಲಿ ಚಿಕ್ಕ ಗಾತ್ರದ ಪ್ರತಿದರ್ಶಚಯನವು ಸಾಕಾಗುತ್ತದೆ. ಆದರೆ ಅಂಥ ಪ್ರತಿದರ್ಶದಿಂದ ಪಡೆದ ತೀರ್ಮಾನಗಳ ನಿಖರತೆ ಕಡಿಮೆ ಇರುತ್ತದೆ. ಒಂದು ಉತ್ತಮ ಪ್ರತಿದರ್ಶ ಸಮುದಾಯದ ಗಾತ್ರ, ಗುಂಪು ಅಥವಾ ಜ್ಞಾನದ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಪ್ರತಿದರ್ಶಚಯನದ (ಆಯ್ಕೆಯ) ವಿಧಾನವು ಪ್ರತಿದರ್ಶದ ಪ್ರಾತಿನಿಧಿಕತೆಯನ್ನು ನಿರ್ಣಯಿಸುತ್ತದೆ.

ಪ್ರತಿದರ್ಶವನ್ನು ಆಯ್ಕೆ ಮಾಡಲು ಹಲವಾರು ವಿಧಾನಗಳನ್ನು ಉಪಯೋಗಿಸಬಹುದು. ಪ್ರತಿಯೊಂದು ವಿಧಾನವು ಈ ಕೆಳಗಿನ ಎರಡು ಅಂಶಗಳ ಪೈಕಿ ಯಾವುದಾದರೊಂದರ ಮೇಲೆ ಅವಲಂಬಿತವಾಗಿರುತ್ತದೆ.

ಪ್ರತಿದರ್ಶಚಯನವನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

1. ಅಸಂಭವನೀಯ ಪ್ರತಿದರ್ಶಚಯನ (Non-probability Sampling)
2. ಸಂಭವನೀಯ ಪ್ರತಿದರ್ಶಚಯನ (Probability Sampling)

**I. ಅಸಂಭವನೀಯ ಪ್ರತಿದರ್ಶನ ಚಯನ**

ಯಾವುದೇ ಮಾನದಂಡವನ್ನು ಬಳಸದೆ ಸಂಶೋಧಕ ತನಗೆ ಯಾರು ಮಾಹಿತಿ ನೀಡಲು ಸಿಗುತ್ತಾರೋ ಅವರನ್ನೇ ಪ್ರತಿದರ್ಶವಾಗಿ ತೆಗೆದುಕೊಂಡರೆ ಅದು ಅಸಂಭವನೀಯ ಪ್ರತಿದರ್ಶಚಯನವಾಗುತ್ತದೆ. ಈ ವಿಧದಲ್ಲಿ ಸಮುದಾಯದ ಪ್ರತಿಯೊಬ್ಬ ವ್ಯಕ್ತಿ, ವಸ್ತು ಆಯ್ಕೆಗೊಳ್ಳುವ ಸಂಭವವಿಲ್ಲ. ಇಂತಹ ಪ್ರತಿದರ್ಶದಲ್ಲಿ ವಿಶ್ವಾಸಾರ್ಹತೆಯ ಪ್ರಮಾಣವನ್ನಾಗಲೀ, ಆಗಬಹುದಾದ ತಪ್ಪಿನ ಪ್ರಮಾಣವನ್ನಾಗಲೀ ಅಳೆಯಲು ಬರುವುದಿಲ್ಲ. ಈ ಕ್ರಮದಲ್ಲಿ ಸಂಶೋಧಕ ಯಾವುದೇ ಯೋಜನೆಯಿಲ್ಲದೆ ತನ್ನ ನಿರ್ಧಾರಕ್ಕೆ ಅನುಗುಣವಾಗಿ ತನಗೆ ಸೂಕ್ತ ಕಂಡ ಪ್ರತಿದರ್ಶವನ್ನು ಆಯ್ಕೆ ಮಾಡುತ್ತಾನೆ. ಆದ್ದರಿಂದ ಇದನ್ನು ನಿರ್ಧಾರಾತ್ಮಕ ಪ್ರತಿದರ್ಶಚಯನ ಎಂದು ಕರೆಯುತ್ತೇವೆ.

**ಅಸಂಭವನೀಯ ಪ್ರತಿದರ್ಶ ಚಯನದಲ್ಲಿ ಕೆಲವು ವಿಧಗಳಿವೆ.**

1. **ಉದ್ದೇಶ ಪೂರ್ವಕ ಪ್ರತಿದರ್ಶ ಚಯನ:** ಸಂಶೋಧಕ ಉದ್ದೇಶ ಪೂರ್ವಕವಾಗಿ ಆಯ್ದ ಕೆಲವೇ ಜನರ ಗುಂಪನ್ನು ತನ್ನ ಪ್ರತಿದರ್ಶವಾಗಿ ತೆಗೆದುಕೊಳ್ಳುತ್ತಾನೆ. ಆಯ್ದುಕೊಂಡ ಪ್ರತಿದರ್ಶನ ಸ್ಥಿತಿಯನ್ನು ಅಥವಾ ಸಂದರ್ಭವನ್ನು ಅಧ್ಯಯನ ಮಾಡುತ್ತಾನೆ. ಈ ಗುಂಪಿನಲ್ಲಿ ಆತ ಎಲ್ಲರನ್ನೂ ಸಂದರ್ಶಿಸಬೇಕಾಗಿಲ್ಲ. ಈ ಗುಂಪಿನಲ್ಲಿ ಯಾರನ್ನು ಭೇಟಿ ಮಾಡಲು ಸಾಧ್ಯವಾಗುತ್ತದೆಯೋ ಅವರಿಂದ ಮಾಹಿತಿಯನ್ನು ಪಡೆಯಲು ಆಯ್ಕೆ ಮಾಡಿಕೊಳ್ಳಬಹುದು. ಇದನ್ನು ಉದ್ದೇಶಪೂರ್ವಕ ಪ್ರತಿದರ್ಶಚಯನ ಎಂದು ಕರೆಯಲಾಗುತ್ತದೆ. ಈ ವಿಧಾನದಲ್ಲಿ ಸಂಶೋಧಕ ತನ್ನ ಇಚ್ಛೆಗೆ ಅನುಗುಣವಾಗಿ ಪ್ರತಿದರ್ಶವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಈ ವಿಧಾನಕ್ಕೆ ಸ್ವೈಚ್ಛಿಕ ಪ್ರತಿದರ್ಶಚಯನ (Volunteer Sampling) ಎಂಬ ಹೆಸರೂ ಇದೆ.

2. **ಪ್ರಾಸಂಗಿಕ ಪ್ರತಿದರ್ಶ ಚಯನ:** ಸಂಶೋಧಕನು ತನ್ನ ಕಣ್ಣಿಗೆ ಕಾಣುವ ಹಾಗೂ ಸುಲಭವಾಗಿ ಲಭ್ಯವಿರುವ ವ್ಯಕ್ತಿಗಳನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆಯುತ್ತಾನೆ. ಅಂದರೆ ಒಂದು ಸಮುದಾಯದಿಂದ ಪ್ರಾಸಂಗಿಕವಾಗಿ ಪ್ರತಿದರ್ಶವನ್ನು ಆಯ್ಕೆ ಮಾಡುತ್ತಾನೆ. ಅಂದರೆ ಒಂದು ಪ್ರಸಂಗದಲ್ಲಿ ಅಥವಾ ಘಟನೆಯಲ್ಲಿ ಪಾಲ್ಗೊಂಡಿರುವ ಗುಂಪನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಇಲ್ಲಿ ಪ್ರತಿದರ್ಶ ಮೊದಲೇ ನಿರ್ಧರಿತವಾಗಿರುತ್ತದೆ. ಉದಾಹರಣೆಗೆ, ಒಂದು ಕಾರ್ಯಕ್ರಮಕ್ಕೆ ಹಾಜರಾಗಿರುವ ವ್ಯಕ್ತಿಗಳನ್ನು ಪ್ರತಿದರ್ಶವಾಗಿ ಪರಿಗಣಿಸಿ ಅಧ್ಯಯನ ಮಾಡುವುದು. ವಸ್ತು ಪ್ರದರ್ಶನ ಒಂದಕ್ಕೆ ಪ್ರವೇಶಿಸುವ ವ್ಯಕ್ತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳುವುದು. ಈ ಅಸಂಭವನೀಯ ಪ್ರತಿದರ್ಶಚಯನ ತಂತ್ರವು ಒಟ್ಟಾರೆ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ.

3. **ನಿಯಂತಾಂಶ (ಕೋಟ) ಪ್ರತಿದರ್ಶನ ಚಯನ (Quota Sampling):** ಈ ವಿಧಾನ ಸಂಶೋಧಕ ತನ್ನ ಅನುಕೂಲಕ್ಕೆ ತಕ್ಕಂತೆ ಪ್ರತಿದರ್ಶವನ್ನು ಆಯ್ಕೆ ಮಾಡಿಕೊಳ್ಳುವ ವಿಧಾನವಾಗಿದೆ. ಒಂದು ಸಮೂಹದಲ್ಲಿ ಸಂಶೋಧಕ ಅಧ್ಯಯನ ಮಾಡಬೇಕಾದ ಘಟಕಗಳಲ್ಲಿ ಬೇರೆ ಬೇರೆ ವಿಧಗಳಿದ್ದರೆ ಪ್ರತಿಯೊಂದು ವಿಧವೂ ಪ್ರತಿದರ್ಶನದಲ್ಲಿ ತನ್ನ ನಿಯಂತಾಂಶವನ್ನು ಹೊಂದಿರುವಂತೆ ಪ್ರತಿದರ್ಶವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಉದಾಹರಣೆಗೆ, ಧರ್ಮದ ಬಗೆಗೆ ಜನರ ಅಭಿಪ್ರಾಯವನ್ನು ಅಧ್ಯಯನ ಮಾಡುವಾಗ ಸಮಾಜದಲ್ಲಿರುವ ಎಲ್ಲ ಧರ್ಮಗಳಿಂದಲೂ ಜನರನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಈ ರೀತಿಯ ಆಯ್ಕೆ ಆ ಧರ್ಮಗಳ ಅನುಯಾಯಿಗಳ ಸಂಖ್ಯೆಗೆ ಅನುಪಾತೀಯವಾಗಿರಬೇಕಾಗಿಲ್ಲ. ಸಂಶೋಧಕ ತನ್ನ ಅನುಕೂಲಕ್ಕೆ ತಕ್ಕಂತೆ ಪ್ರತಿದರ್ಶವನ್ನು ಆಯ್ಕೆ ಮಾಡಿಕೊಂಡಿರುತ್ತಾನೆ. ಹೀಗಾಗಿ ಈ ರೀತಿಯ ಆಯ್ಕೆ ಅಷ್ಟೊಂದು ಪ್ರಾತಿನಿಧಿಕವಾಗಿರುವುದಿಲ್ಲ.

4. **ಕ್ಷಿಪ್ರವರ್ಧನ ಪ್ರತಿದರ್ಶಚಯನ (Snow-ball Sampling):** ಈ ವಿಧಾನದಲ್ಲಿ ಮೊದಲು ಕ್ಷೇತ್ರದಿಂದ ನಿರ್ದಿಷ್ಟ ಸಂಶೋಧನ ವಿಷಯದ ಬಗ್ಗೆ ಮಾಹಿತಿಯನ್ನು ಒದಗಿಸಬಲ್ಲ ಮೂಲಗಳನ್ನು ಗುರ್ತಿಸಲಾಗುತ್ತದೆ. ಈ ಮೂಲಗಳು ವ್ಯಕ್ತಿಗಳಾಗಿರಬಹುದು ಅಥವಾ ಸಂಸ್ಥೆಗಳಾಗಿರಬಹುದು. ಸಂಶೋಧಕ ಈ ಮೂಲಗಳಿಗೆ ತನಗೆ ಬೇಕಾದ ಮಾಹಿತಿಯ ಬಗ್ಗೆ ತಿಳುವಳಿಕೆ ನೀಡಿ ನಿರ್ದಿಷ್ಟ ಪ್ರಮಾಣದ ಮಾಹಿತಿಯನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಒದಗಿಸಲು ಕೇಳಿಕೊಳ್ಳುತ್ತಾನೆ. ನಂತರ ಈ ಎಲ್ಲಾ ಮೂಲಗಳು ಒದಗಿಸಿದ ಮಾಹಿತಿಯನ್ನು ಒಟ್ಟು ಸೇರಿಸಿ ವಿಶ್ಲೇಷಣೆ ಮಾಡುತ್ತಾನೆ. ಹೀಗೆ ಒಟ್ಟು ಸೇರಿಸಿದ ಘಟಕಗಳು/ವ್ಯಕ್ತಿಗಳು ಅವನ ಅಧ್ಯಯನದ ಪ್ರತಿದರ್ಶವಾಗುತ್ತಾರೆ. ಉದಾಹರಣೆಗೆ, ಪ್ರಾಥಮಿಕ ಶಾಲೆಗಳಲ್ಲಿ ಸಮಸ್ಯಾತ್ಮಕ ಮಕ್ಕಳನ್ನು ಅಧ್ಯಯನ ಮಾಡಬೇಕಾದಾಗ ಮೊದಲು ಸಂಶೋಧಕ ಬೇರೆ ಬೇರೆ ಕ್ಷೇತ್ರಗಳಲ್ಲಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಆ ಶಾಲೆಗಳಲ್ಲಿ ತನಗೆ ಬೇಕಾದ ಮಾಹಿತಿ ನೀಡಲು ಸ್ವಇಚ್ಛೆಯಿಂದ ಒಪ್ಪಿಕೊಳ್ಳುವ ಅಧ್ಯಾಪಕರನ್ನು ಗುರ್ತಿಸುತ್ತಾನೆ. ಅವರಿಗೆ ಸಮಸ್ಯಾತ್ಮಕ ಮಕ್ಕಳ ಲಕ್ಷಣಗಳನ್ನು ವಿವರಿಸಿ ಪ್ರತಿಯೊಬ್ಬರೂ ಐದೈದು ಮಂದಿ ಸಮಸ್ಯಾತ್ಮಕ ಮಕ್ಕಳನ್ನು ಗುರ್ತಿಸಿ ಅವರ ಲಕ್ಷಣಗಳನ್ನು ವರ್ಣಿಸುವಂತೆ ಸೂಚಿಸುತ್ತಾನೆ. ಅವರಿಗೆ ಕಾಲಮಿತಿ ನೀಡುತ್ತಾನೆ. ಆ ಕಾಲಮಿತಿಯ ನಂತರ ಪ್ರತಿಯೊಬ್ಬ ಅಧ್ಯಾಪಕರನ್ನು ಒದಗಿಸುವ ಮಾಹಿತಿಯನ್ನು ಕಲೆಹಾಕಿ ವಿಶ್ಲೇಷಿಸುತ್ತಾನೆ. ಈ ರೀತಿ 100 ಮಂದಿ ಅಧ್ಯಾಪಕರು 500 ವಿದ್ಯಾರ್ಥಿಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಹಾಗಾಗಿ ಪ್ರತಿದರ್ಶದ ಗಾತ್ರ 500 ವಿದ್ಯಾರ್ಥಿಗಳನ್ನು ಒಳಗೊಳ್ಳುತ್ತದೆ. ಹಿಮದ ಚೆಂಡು

Digitised by Bharatavani, CIIL

ಉರುಳುತ್ತಾ, ಉರುಳುತ್ತಾ ಪ್ರತಿ ಸಲ ದೊಡ್ಡದಾಗುವಂತೆ ಈ ವಿಧಾನದಲ್ಲಿ ಹೆಚ್ಚು ಹೆಚ್ಚು ಅಧ್ಯಾಪಕರು ಮಾಹಿತಿ ಒದಗಿಸಿದಂತೆ ಪ್ರತಿದರ್ಶದ ಗಾತ್ರ ಕ್ರಮೇಣ ದೊಡ್ಡದಾಗುವುದರಿಂದ ಈ ವಿಧಾನಕ್ಕೆ 'ಸ್ನೋಬಾಲ್' ವಿಧಾನ ಎಂಬ ಹೆಸರು ಬಂದಿದೆ.

**I. ಅಸಂಭವನೀಯ ಪ್ರತಿದರ್ಶಚಯನದ ಇತಿಮಿತಿಗಳು**

1. ಆಯ್ದುಕೊಂಡ ಪ್ರತಿದರ್ಶದ ಅಧ್ಯಯನದಿಂದ ಬಂದ ಫಲಿತಾಂಶವನ್ನು ಪೂರ್ಣ ಸಮಷ್ಟಿಗೆ ಸಾಮಾನ್ಯೀಕರಣಗೊಳಿಸಲು ಸಾಧ್ಯವಿಲ್ಲ.
2. ಪ್ರತಿದರ್ಶಚಯನದ ದೋಷ ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ.
3. ಈ ರೀತಿಯ ಪ್ರತಿದರ್ಶಚಯನ ವಿಧಾನವು ಅನಿಯಂತ್ರಿತ ಅಂಶಗಳು ಮತ್ತು ಸಂಶೋಧಕನ ಒಳನೋಟದ ಮೇಲೆ ಆಧಾರವಾಗಿದ್ದು, ಪ್ರತಿದರ್ಶನಚಯನ ದೋಷದ ಮಿತಿಯನ್ನು ಕಂಡು ಹಿಡಿಯಲು ಯಾವುದೇ ಸಂಖ್ಯಾಶಾಸ್ತ್ರೀಯ ತಂತ್ರವಿಲ್ಲ.
4. ಕೆಲವೊಂದು ಸಂದರ್ಭದಲ್ಲಿ ಯಾವುದೇ ರೀತಿಯಲ್ಲೂ ಪ್ರತಿದರ್ಶ ಇಡೀ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ.

**II. ಸಂಭವನೀಯ ಪ್ರತಿದರ್ಶಚಯನ**

ಸಂಭವನೀಯ ಪ್ರತಿದರ್ಶಚಯನದಲ್ಲಿ ಸಂಶೋಧಕನ ಇಚ್ಛೆಗೆ ತಕ್ಕಂತೆ ಪ್ರತಿದರ್ಶಗಳನ್ನು ಆಯ್ಕೆ ಮಾಡಲಾಗುವುದಿಲ್ಲ. ಇಲ್ಲಿ ಹಲವಾರು ನಿರ್ಣಾಯಕಗಳನ್ನು ಅನುಸರಿಸಬೇಕಾಗುತ್ತದೆ. ಇಲ್ಲಿ ಸಮಷ್ಟಿಯ ಪ್ರತಿಯೊಂದು ಘಟಕವೂ (ವ್ಯಕ್ತಿಯೂ) ಪ್ರತಿದರ್ಶಕಕ್ಕೆ ಆಯ್ಕೆಯಾಗುವ ಸಮಾನ ಸಂಭವನೀಯತೆಯನ್ನು ಹೊಂದಿರುತ್ತದೆ. ಈ ರೀತಿಯ ಆಯ್ಕೆಯ ವಿಧಾನಕ್ಕೆ ಯಾದೃಚ್ಛಿಕ ಪ್ರತಿದರ್ಶಚಯನ ಎಂತಲೂ ಕರೆಯುವರು. ಇಲ್ಲಿ ನಿರ್ದಿಷ್ಟ ಯೋಜನೆಗೆ ಅನುಗುಣವಾಗಿ ಸಮುದಾಯದಿಂದ ಪ್ರತಿದರ್ಶವನ್ನು ಆಯ್ಕೆ ಮಾಡಲಾಗುತ್ತದೆ.

ಗುಡ್‌ರವರ ಪ್ರಕಾರ (1966) ಸಂಭವನೀಯ ಪ್ರತಿದರ್ಶಚಯನಗಳು ಈ ಕೆಳಕಂಡಂತೆ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಅವುಗಳೆಂದರೆ,

1. ಸಮಷ್ಟಿಯಲ್ಲಿ ಪ್ರತಿಯೊಂದು ಘಟಕಕ್ಕೂ ಪ್ರತಿದರ್ಶಕಕ್ಕೆ ಆಯ್ಕೆಯಾಗುವ ಸಂಭವನೀಯತೆ ಸಮವಾಗಿರುತ್ತದೆ.
2. ಸಂಭವನೀಯ ಪ್ರತಿದರ್ಶದ ವಿಶ್ಲೇಷಣೆಯು ಉಚಿತವಾದ, ನಿಖರವಾದ ಫಲಿತಾಂಶ ಕೊಡುತ್ತದೆ.
3. ಪ್ರತಿದರ್ಶವನ್ನು ಒಂದು ಹಂತದಲ್ಲಾಗಲಿ ಅಥವಾ ಹೆಚ್ಚಿನ ಹಂತಗಳಲ್ಲಿಯಾಗಲೀ ಆಯ್ಕೆ ಮಾಡಿಕೊಳ್ಳಬಹುದು.

**ಸಂಭವನೀಯ ಪ್ರತಿದರ್ಶಚಯನವನ್ನು ಆಯ್ಕೆ ಮಾಡುವಲ್ಲಿ ಹಲವಾರು ವಿಧಾನಗಳಿವೆ. ಅವುಗಳೆಂದರೆ,**

1. ಯಾದೃಚ್ಛಿಕ ಪ್ರತಿದರ್ಶಚಯನ (Random Sampling)
2. ಬಹು ಹಂತದ ಪ್ರತಿದರ್ಶಚಯನ (Multi stage Sampling)
3. ಗುಚ್ಛ ಕ್ಷೇತ್ರ ಪ್ರತಿದರ್ಶಚಯನ (Cluster Area Sampling)
4. ಭಾಗಶಃ ಸಂಭವನೀಯ ಪ್ರತಿದರ್ಶಚಯನ (Partially Probability Sampling)

**1. ಯಾದೃಚ್ಛಿಕ ಪ್ರತಿದರ್ಶಚಯನ**

ಇದು ಎಲ್ಲ ಪ್ರತಿದರ್ಶಚಯನ ವಿಧಾನಗಳಿಗೆ ಮೂಲವಾಗಿದೆ. ಈ ಪ್ರತಿದರ್ಶಚಯನದಲ್ಲಿ ಸಮಷ್ಟಿಯ ಪ್ರತಿಯೊಬ್ಬ ವ್ಯಕ್ತಿಗೂ ಆಯ್ಕೆಯಾಗುವ ಸಮ ಅವಕಾಶ ಸಂಭವನೀಯತೆ ಉಂಟು. ಯಾದೃಚ್ಛಿಕ ರೀತಿಯಲ್ಲಿ ಯಾವುದೇ ವ್ಯಕ್ತಿನಿಷ್ಠ ಪೂರ್ವನಿಲುವಿಲ್ಲದೆ ಘಟಕಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ರೀತಿಯ ಪ್ರತಿದರ್ಶಚಯನ ವಿಧಾನ ಸಂಶೋಧಕನಿಗೆ ಆಯ್ಕೆಯಲ್ಲಿ ಪಕ್ಷಪಾತ ಉಂಟಾಗದಂತೆ ತಡೆಯುತ್ತದೆ. ಈ ವಿಧಾನದಲ್ಲಿ ಹಲವಾರು ತಂತ್ರಗಳನ್ನು ಅನುಸರಿಸಬಹುದು.

i) ಲಾಟರಿ ವಿಧಾನದಿಂದ ಪ್ರತಿದರ್ಶದ ಆಯ್ಕೆಯನ್ನು ಮಾಡಬಹುದು. ವಿದ್ಯಾರ್ಥಿಗಳ ಒಂದು ಸಮಷ್ಟಿಯಿಂದ 500 ವಿದ್ಯಾರ್ಥಿಗಳ ಹೆಸರುಗಳನ್ನು ಚೀಟಿಯಲ್ಲಿ ಬರೆದು ಒಂದು ಡಬ್ಬಿಯಲ್ಲಿ ಹಾಕಿ ಒಬ್ಬರಿಂದ 100 ಚೀಟಿಗಳನ್ನು ಎತ್ತಿಸಿ ಪ್ರತಿದರ್ಶವನ್ನು ಆಯ್ಕೆ ಮಾಡಬಹುದು. ಇದು ಸರಳವಾದ ಯಾದೃಚ್ಛಿಕತೆಯ ತಂತ್ರ.

ii) ಇನ್ನೊಂದು ಅತ್ಯುತ್ತಮ ವಿಧಾನವೆಂದರೆ ಯಾದೃಚ್ಛಿಕ ತಾಲಿಕೆಗಳನ್ನು ಉಪಯೋಗಿಸಿ ಪ್ರತಿದರ್ಶವನ್ನು ಆಯ್ಕೆ ಮಾಡುವುದು. ಯಾದೃಚ್ಛಿಕ ಸಂಖ್ಯೆಗಳ ತಾಲಿಕೆಗಳನ್ನು **ಕೆಂಡಾಲ್ ಮತ್ತು ಸ್ಮಿಥ್** (1939), **ಫಿಷರ್ ಮತ್ತು ಯೇಟ್ಸ್** (1963) ಸಿದ್ಧಪಡಿಸಿದ್ದಾರೆ. ಸಂಶೋಧಕನು 230 ಶಾಲೆಗಳಲ್ಲಿ 12 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಬೇಕಾದಾಗ **ಯಾದೃಚ್ಛಿಕ ತಾಲಿಕೆಯಲ್ಲಿ (ರ್‍ಯಾಂಡಮ್ ಟೇಬಲ್‌ನಲ್ಲಿ)** 3 ಅಂಕಿಗಳ ಸಂಖ್ಯೆಯನ್ನು ಆಯ್ದುಕೊಳ್ಳುತ್ತಾ ಹೋಗಬೇಕು. ಈ ರೀತಿ ಕಂಬಸಾಲು ಅಥವಾ ಅಡ್ಡಸಾಲುಗಳಲ್ಲಿ ಇರುವ ಸಂಖ್ಯೆ ತೆಗೆದುಕೊಂಡು ಕೊನೆಯ ಮೂರು ಸಂಖ್ಯೆ ನೋಡಲು ಸಾಗಬೇಕು. 230ರ ಒಳಗೆ 12 ಶಾಲೆ ಬರುವವರೆಗೆ ಗುರುತು ಹಾಕಬೇಕು. ಉಳಿದವುಗಳನ್ನು ಹೊಡೆದುಹಾಕಿ 12 ಶಾಲೆಗಳು ಗುರುತು ಆದ ಕೂಡಲೇ ನಿಲ್ಲಿಸಿ ಅಲ್ಲಿಗೆ ಆ 12 ಶಾಲೆಗಳನ್ನು ಪ್ರತಿದರ್ಶವೆಂದು ಆಯ್ಕೆ ಮಾಡಿಕೊಳ್ಳಬೇಕು. ಈ ತಂತ್ರದಿಂದ ಆಯ್ಕೆ ಮಾಡಿದ ಪ್ರತಿದರ್ಶ ಹೆಚ್ಚು ಪ್ರಾತಿನಿಧಿಕವಾಗಿರುತ್ತದೆ.

**iii) ಸ್ತರೀಕೃತ ಯಾದೃಚ್ಛಿಕ ಪ್ರತಿದರ್ಶಚಯನ:** ಈ ವಿಧಾನದಲ್ಲಿ ಸಂಶೋಧಕನು ತಾನು ಮಾಡುವ ಸಂಶೋಧನೆಗೆ ಸಂಬಂಧಪಟ್ಟ ಸಮಷ್ಟಿಯಲ್ಲಿರಬಹುದಾದ ವಿವಿಧ ಸ್ತರಗಳನ್ನು ಅಥವಾ ಶ್ರೇಣೀಕೃತ ಅಂಶಗಳನ್ನು ಅಥವಾ ಲಕ್ಷಣಗಳನ್ನು ಗಣನೆಗೆ ತೆಗೆದುಕೊಂಡು ಅವುಗಳನ್ನು ಪ್ರತಿನಿಧಿಸುವಂತೆ ವಿವಿಧ ಗುಂಪುಗಳನ್ನು ಆಯ್ಕೆ ಮಾಡುತ್ತಾನೆ. ಈ ಗುಂಪುಗಳ ಗಾತ್ರವನ್ನು ಸಮಷ್ಟಿಯಲ್ಲಿ ಆ ಶ್ರೇಣಿಗಳಿರುವ ಅನುಪಾತದಲ್ಲಿ ನಿರ್ಣಯಿಸಿ ಅದಕ್ಕೆ ಅನುಗುಣವಾಗಿ ಪ್ರತಿ ಗುಂಪಿನ ಸಂಖ್ಯೆಯನ್ನು ನಿರ್ಣಯಿಸಿ ಆಯ್ಕೆ ಮಾಡಿಕೊಳ್ಳುತ್ತಾನೆ. ಈ ಎಲ್ಲ ಗುಂಪುಗಳು ಸೇರಿ ಒಟ್ಟು ಪ್ರತಿದರ್ಶವಾಗುತ್ತದೆ. ಉದಾಹರಣೆಗೆ, ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳುವಾಗ ಲಿಂಗ, ವಯಸ್ಸು, ಸಾಮಾಜಿಕ, ಆರ್ಥಿಕ ಸ್ಥಾನಮಾನ, ವಿದ್ಯಾರ್ಹತೆಯ ಮಟ್ಟ, ಸ್ಥಳೀಯತೆ, ವೃತ್ತಿ, ಧರ್ಮ, ಜಾತಿ, ಸಾಮಾನ್ಯ ಬುದ್ಧಿಶಕ್ತಿ, ತರಗತಿ ಹೀಗೆ ವಿವಿಧ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರತಿದರ್ಶವನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಹೀಗೆ ಆಯ್ಕೆ ಮಾಡಿದ ಪ್ರತಿದರ್ಶದಲ್ಲಿ ಸಮಷ್ಟಿಯ ವಿವಿಧ ಸ್ತರಗಳಿಂದ ಘಟಕಗಳನ್ನು ಅನುಪಾತೀಯವಾಗಿ ಆಯ್ಕೆ ಮಾಡುವುದರಿಂದ ಅದು ಹೆಚ್ಚು ಪ್ರಾತಿನಿಧಿಕವಾಗಿರುತ್ತದೆ.

Digitised by Bharatavani, CIIL

iv) **ವ್ಯವಸ್ಥಿತ ಯಾದೃಚ್ಛಿಕ ಪ್ರತಿದರ್ಶಚಯನ:** ಈ ಕ್ರಮದಲ್ಲಿ ಒಂದು ಪಟ್ಟಿ ಅಥವಾ ಸಂಖ್ಯಾ ಕ್ರಮವನ್ನು ತೆಗೆದುಕೊಂಡು ಅದರಲ್ಲಿ ಒಂದು ನಿರ್ದಿಷ್ಟ ಅಂತರ ಗುರುತಿಸಿಕೊಂಡು ಈ ಅಂತರದ ಆಧಾರದ ಮೇಲೆ ಜನರನ್ನು ಆಯ್ಕೆ ಮಾಡುತ್ತಾ ಪ್ರತಿದರ್ಶವನ್ನು ಆಯ್ಕೆ ಮಾಡಲಾಗುತ್ತದೆ. ಉದಾಹರಣೆಗೆ, 1000 ವಿದ್ಯಾರ್ಥಿಗಳ ಸಮೂಹದಿಂದ 100 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕಾದರೆ 1000 ಸಂಖ್ಯೆಗಳಲ್ಲಿ 10ನ್ನು ಅಂತರಕೊಟ್ಟು 10, 20, 30, 40...........100ನೇ ವಿದ್ಯಾರ್ಥಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಹೀಗೆ ಆಯ್ಕೆ ಮಾಡಿದ 100 ವಿದ್ಯಾರ್ಥಿಗಳನ್ನು ಪ್ರತಿದರ್ಶವಾಗಿ ಪರಿಗಣಿಸಲಾಗುತ್ತದೆ.

ಹಾಗೆಯೇ 100 ಶಾಲೆಗಳಲ್ಲಿ 7 ಶಾಲೆಗಳನ್ನು ಈ ಪದ್ಧತಿ ಅನುಸರಿಸಿ ಆಯ್ಕೆ ಮಾಡಬೇಕಾದರೆ ಈ ರೀತಿಯಲ್ಲಿ ಅನುಸರಿಸಬೇಕು. 100/7 ಇದರಲ್ಲಿ ಅಂದರೆ 100 ರಲ್ಲಿ 7ರ 14 ಗುಂಪುಗಳಿರುತ್ತವೆ. ಆದ್ದರಿಂದ ಸಂಶೋಧಕನು ಶಾಲೆಯ ಮೊದಲ ಕ್ರಮಸಂಖ್ಯೆಯಿಂದ 14 ಅಂತರ ಇಟ್ಟುಕೊಂಡು 7 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅಂದರೆ 1, 15, 29, 43, 57, 71, 85ನೇ ಶಾಲೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ರೀತಿ ಯಾದೃಚ್ಛಿಕವಾಗಿ ಆಯ್ಕೆ ಮಾಡುವುದರಿಂದ ಪ್ರತಿದರ್ಶದ ಆಯ್ಕೆಯನ್ನು ಸಂಶೋಧಕನ ವೈಯಕ್ತಿಕ ನಿಲುವುಗಳು ಪ್ರಭಾವಗೊಳಿಸುವುದಿಲ್ಲ.

## 2. ಬಹುಹಂತದ ಪ್ರತಿದರ್ಶಚಯನ

ಈ ವಿಧದ ಪ್ರತಿದರ್ಶಚಯನವನ್ನು ವಿಸ್ತೃತರೂಪದ ಸಮೀಕ್ಷೆ ಇದ್ದಾಗ ಬಳಸುವರು. ಇಲ್ಲಿ ಸಂಶೋಧಕನು 3 ರಿಂದ 4 ಹಂತಗಳಲ್ಲಿ ಪ್ರತಿದರ್ಶವನ್ನು ಆಯ್ಕೆ ಮಾಡುವನು. ಈ ವಿಧಾನದಲ್ಲಿ ಒಂದು ವಿಶಾಲ ಪ್ರದೇಶದಲ್ಲಿ ಹರಡಿರುವ ಬೃಹತ್ ಸಮೂಹವನ್ನು ಪ್ರತಿನಿಧಿಸುವಂಥ ಪ್ರತಿದರ್ಶವನ್ನು ಆಯ್ಕೆ ಮಾಡಲು ಆ ಪ್ರದೇಶವನ್ನು ವಿವಿಧ ಸ್ತರಗಳಾಗಿ ವಿಭಜಿಸಿ ಪ್ರತಿಸ್ತರವನ್ನು ಪ್ರತಿನಿಧಿಸುವಂತೆ ವಿವಿಧ ಹಂತಗಳಲ್ಲಿ ಪ್ರತಿದರ್ಶವನ್ನು ಆಯ್ಕೆ ಮಾಡಬೇಕಾಗುತ್ತದೆ. ಉದಾಹರಣೆಗೆ, ಒಂದು ನಗರದಲ್ಲಿರುವ ಹೈಸ್ಕೂಲ್ ವಿದ್ಯಾರ್ಥಿಗಳನ್ನು ಸಮೀಕ್ಷೆ ಮಾಡಲು ಮೊದಲ ಹಂತದಲ್ಲಿ ನಗರದ ವಾರ್ಡ್‌ಗಳನ್ನು ಆಯ್ಕೆ ಮಾಡಿಕೊಂಡು, ಎರಡನೇ ಹಂತದಲ್ಲಿ ಆಯ್ಕೆಯಾದ ವಾರ್ಡ್‌ಗಳಲ್ಲಿರುವ ಹೈಸ್ಕೂಲ್‌ಗಳಿಂದ ಆಯ್ಕೆ ಮಾಡಿಕೊಂಡು ಆ ಶಾಲೆಗಳ ವಿದ್ಯಾರ್ಥಿಗಳ ಸಮೀಕ್ಷೆ ಮಾಡಲಾಗುತ್ತದೆ. ಇದು ಎರಡು ಹಂತದ ಪ್ರತಿದರ್ಶಚಯನ. ಹೀಗೆಯೇ ಮೂರು, ನಾಲ್ಕು ಹಂತಗಳಲ್ಲಿ ಪ್ರತಿದರ್ಶವನ್ನು ಆಯ್ಕೆ ಮಾಡಬೇಕಾಗಬಹುದು. ಪ್ರತಿಯೊಂದು ಹಂತದಲ್ಲಿಯೂ ಸೂಕ್ತ ವಿಧಾನದಿಂದ ಪ್ರತಿದರ್ಶಚಯನ ಮಾಡಲಾಗುತ್ತದೆ.

ರಾಷ್ಟ್ರೀಯ ಮಟ್ಟದಲ್ಲಿ ಶಾಲೆಗಳ ಶಿಕ್ಷಕರ ಬಗ್ಗೆ ಸಮೀಕ್ಷೆ ಮಾಡಲು NCERT ಸಂಸ್ಥೆಯವರು ಮೊದಲು ಐದು ರಾಜ್ಯಗಳನ್ನು ಗುರುತಿಸಿಕೊಂಡರು. ನಂತರ ಈ ಐದು ರಾಜ್ಯಗಳ ಎಲ್ಲಾ ಜಿಲ್ಲೆಗಳನ್ನು ಪಟ್ಟಿಮಾಡಿಕೊಂಡು ಅದರಲ್ಲಿ ಯಾದೃಚ್ಛಿಕವಾಗಿ 50 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು, ನಂತರ ಆ 50 ಜಿಲ್ಲೆಗಳಲ್ಲಿರುವ ಎಲ್ಲಾ ಶಾಲೆಗಳನ್ನು ಪಟ್ಟಿಮಾಡಿಕೊಂಡು ಪ್ರತಿಯೊಂದು ಜಿಲ್ಲೆಯಿಂದಲೂ 100 ಶಾಲೆಗಳನ್ನು ಆಯ್ಕೆಮಾಡಿಕೊಂಡು ಈ 100 ಶಾಲೆಗಳಲ್ಲಿರುವ ಎಲ್ಲ ಶಿಕ್ಷಕರುಗಳನ್ನು ಆಯ್ಕೆಮಾಡಿಕೊಳ್ಳಲಾಯಿತು. ಹೀಗೆ ರಾಜ್ಯಗಳನ್ನು ನಂತರ ಜಿಲ್ಲೆಗಳನ್ನು, ನಂತರ ಶಾಲೆಗಳನ್ನು ಅನಂತರ ಕೊನೆಯದಾಗಿ ಶಿಕ್ಷಕರನ್ನು ಆಯ್ಕೆ ಮಾಡಲಾಯಿತು.

## 3. ಗುಚ್ಛ (ಕ್ಷೇತ್ರ) ಪ್ರತಿದರ್ಶಚಯನ

ಈ ವಿಧಾನದಲ್ಲಿ ಸಂಶೋಧಕ ಕೆಲವು ಭೌಗೋಳಿಕ ಅಥವಾ ಕಾರ್ಯಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿದರ್ಶವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಪ್ರತಿಯೊಂದು ಕ್ಷೇತ್ರದಿಂದಲೂ ಆಯಾ ಕ್ಷೇತ್ರದ ವಿಸ್ತೀರ್ಣ, ಹರಹು, ಸಂಖ್ಯೆ ಮುಂತಾದ ಅಂಶಗಳ ಆಧಾರದ ಮೇಲೆ ಲಿಂಗ, ವಯಸ್ಸು, ವಿಧ, ಸಾಮಾಜಿಕ, ಆರ್ಥಿಕಮಟ್ಟ ಮುಂತಾದ ಲಕ್ಷಣಗಳ ಆಧಾರದ ಮೇಲೆ ಅವುಗಳನ್ನು ಪ್ರತಿನಿಧಿಸುವಂತೆ ಉಪಸಮೂಹಗಳನ್ನು ಅಥವಾ ಕ್ಲಸ್ಟರ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಪ್ರತಿಯೊಂದು ಉಪಸಮೂಹವೂ ಪ್ರತಿದರ್ಶದಲ್ಲಿ ತನ್ನ ನಿಯಂತಾಂಶವನ್ನು ಪ್ರತಿನಿಧಿಸುತ್ತದೆ. ಈ ಉಪಸಮೂಹಗಳನ್ನು ಯಾದೃಚ್ಛಿಕವಾಗಿ ಆಯ್ಕೆಮಾಡಿಕೊಳ್ಳಲಾಗುತ್ತದೆ. ಉದಾಹರಣೆಗೆ, ಒಂದು ಪ್ರದೇಶ (ಕ್ಷೇತ್ರ)ದಲ್ಲಿರುವ ಶಾಲೆಗಳನ್ನು ಅಧ್ಯಯನ ಮಾಡುವಾಗ ಆ ಪ್ರದೇಶದಲ್ಲಿರುವ ಸರ್ಕಾರಿ, ಅನುದಾನಿತ ಹಾಗೂ ಅನನುದಾನಿತ ಖಾಸಗಿ ಕೇಂದ್ರೀಯ ಶಾಲೆಗಳ ಸಮೂಹದಿಂದ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಆದರೆ ಈ ರೀತಿ ಆಯ್ಕೆಯಾದ ಪ್ರತಿದರ್ಶದ ಪ್ರಾತಿನಿಧ್ಯತೆ ಹೆಚ್ಚಾಗಿರುವುದಿಲ್ಲ. ಈ ವಿಧಾನದ ಪ್ರತಿದರ್ಶಚಯನವನ್ನು ಶಾಲಾ ಸಮೀಕ್ಷೆಗಳಲ್ಲಿ, ಕ್ಷೇತ್ರೀಯ ಸಮೀಕ್ಷೆಗಳಲ್ಲಿ, ಚುನಾವಣೆ ಫಲಿತಾಂಶಗಳ ಸಮೀಕ್ಷೆಗಳಲ್ಲಿ, ಅಭಿಪ್ರಾಯ ಸಮೀಕ್ಷೆಗಳಲ್ಲಿ ಉಪಯೋಗಿಸುತ್ತಾರೆ.

## 4. ಭಾಗಶಃ ಸಂಭವನೀಯ ಪ್ರತಿದರ್ಶಚಯನ

ಯಾವಾಗ ಒಂದು ಭಾಗವು ಗಾತ್ರವನ್ನು ಅವಲಂಬಿಸಿರುತ್ತದೆಯೋ ಆಗ ಮಾತ್ರ ಆ ಗಾತ್ರಕ್ಕೆ ಅನುಗುಣವಾಗಿ ಪ್ರತಿದರ್ಶಚಯನವನ್ನು ಆಯ್ಕೆಮಾಡಿಕೊಳ್ಳಲಾಗುತ್ತದೆ. ಅಂದರೆ ಒಂದು ಶಾಲೆಯ ಆಯ್ಕೆಯ ನಿರ್ಧಾರವಾಗುವುದು ಆ ಶಾಲೆಗೆ ದಾಖಲಾದ ವಿದ್ಯಾರ್ಥಿಗಳ ಆಧಾರದ ಮೇಲೆ. ಆದರೂ ಸಹ ಒಮ್ಮೊಮ್ಮೆ ಶಾಲೆಯಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣವಾಗಿರುತ್ತದೆ. ಅಂದರೆ ಪ್ರತಿದರ್ಶಚಯನದ ಆಯ್ಕೆಯ ಸಂದರ್ಭದಲ್ಲಿ 400 ಮಕ್ಕಳು ದಾಖಲಾಗಿರುತ್ತಾರೆ. ನಂತರ ದತ್ತಾಂಶ ಸಂಗ್ರಹಿಸಲು ಹೋಗುವ ಹೊತ್ತಿಗೆ 800 ವಿದ್ಯಾರ್ಥಿಗಳಾಗಿರುತ್ತಾರೆ. ಇದು ಸಂಭವನೀಯುವಾಗಿರುತ್ತದೆ. ಆಗ ಹೆಚ್ಚಾದ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿದರ್ಶವನ್ನು ಆಯ್ಕೆ ಮಾಡಬೇಕಾಗುತ್ತದೆ. ಆದ್ದರಿಂದ ಈ ರೀತಿಯ ಪ್ರತಿದರ್ಶಚಯನವನ್ನು ಭಾಗಶಃ ಸಂಭವನೀಯ ಪ್ರತಿದರ್ಶಚಯನ ಎಂದು ಕರೆಯುತ್ತೇವೆ.

### ಪ್ರತಿದರ್ಶದ ಗಾತ್ರ

ಆಯ್ಕೆ ಮಾಡಿಕೊಂಡ ಪ್ರತಿದರ್ಶಚಯನದಲ್ಲಿರುವ ವ್ಯಕ್ತಿ, ವಸ್ತು, ಅಥವಾ ಘಟನಾವಳಿಗಳ ಸಂಖ್ಯೆಗೆ ಪ್ರತಿದರ್ಶದ ಗಾತ್ರ ಎಂದು ಕರೆಯುತ್ತೇವೆ. ಪ್ರತಿದರ್ಶದ ಗಾತ್ರವು ಸಂಶೋಧನೆಯ ವಿಧದ ಮೇಲೆ ಆಧಾರವಾಗಿರುತ್ತದೆ. ಸಂಶೋಧನೆಯು ವ್ಯಕ್ತಿ ಅಧ್ಯಯನವಾದರೆ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಹಾಗೆಯೇ ಪ್ರಾಯೋಗಿಕ ಅಧ್ಯಯನವಾದರೆ ಒಂದು ನಮೂನೆಯಲ್ಲಿ ಗಾತ್ರವು 30ಕ್ಕಿಂತ ಹೆಚ್ಚಾಗಿ ಇರುತ್ತದೆ. ಸಮೀಕ್ಷೆ ವಿಧಾನವಾಗಿದ್ದರೆ ಪ್ರತಿದರ್ಶದ ಗಾತ್ರ ಇನ್ನೂ ಹೆಚ್ಚಾಗುತ್ತದೆ (500, 1000). ಹೀಗೆ ಪ್ರತಿದರ್ಶದ ಗಾತ್ರವು ಸಂಶೋಧನೆಯ ವಿಧದ ಮೇಲೆ ಆಧಾರವಾಗಿರುತ್ತದೆ. ಪ್ರತಿದರ್ಶದ ಗಾತ್ರ ಹೆಚ್ಚಾದಷ್ಟು ಫಲಿತಾಂಶಗಳ ನಿಖರತೆ ಹೆಚ್ಚುತ್ತದೆ.

ಇದರ ಜೊತೆಗೆ ನಮ್ಮ ಸಂಶೋಧನೆಗೆ ಇರುವ ಸಮಯ, ಸಂಶೋಧನೆಗೆ ಹಾಕಿಕೊಂಡಿರುವ ಅಂದಾಜು ಖರ್ಚು, ಸಮಯಕ್ಕೆ ಸಿಗುವ ಹಣಕಾಸಿನ ಆಧಾರ ಹಾಗೂ ಆ ಕ್ಷೇತ್ರದಲ್ಲಿ ಹಿಂದೆ ಆದಂತಹ

Digitised by Bharatavani, CIIL

ಅಧ್ಯಯನಗಳು, ಇವೆಲ್ಲವುಗಳ ಆಧಾರದ ಮೇಲೆ ಪ್ರತಿದರ್ಶದ ಗಾತ್ರ ಮತ್ತು ಪ್ರತಿದರ್ಶಚಯನದ ವಿಧಾನ ನಿರ್ಧಾರವಾಗುತ್ತದೆ.

**ಪ್ರತಿದರ್ಶಚಯನದ ದೋಷ (Sampling Error)**

ಪ್ರತಿದರ್ಶವನ್ನು ಆಯ್ಕೆ ಮಾಡುವಾಗ ಆಗುವ ದೋಷಗಳನ್ನು ಪ್ರತಿದರ್ಶಚಯನದ ದೋಷ ಎನ್ನುತ್ತಾರೆ. ಈ ದೋಷಗಳು ಉದ್ದೇಶಪೂರ್ವಕವಾಗಿ ಉಂಟಾಗಬಹುದು. ಸಂಶೋಧಕ ಅರಿವಿದ್ದೇ ಆಯ್ಕೆಯನ್ನು ತನ್ನ ಪೂರ್ವ–ನಿಲುವುಗಳಿಗೆ ತಕ್ಕಂತೆ ಮಾಡಿದಾಗ ಈ ರೀತಿ ದೋಷ ಉಂಟಾಗುತ್ತದೆ. ಅನೇಕ ವೇಳೆ ಸಂಶೋಧಕನ ಅರಿವಿಗೆ ಬರದಂತೆ ದೋಷಗಳು ಉಂಟಾಗಬಹುದು. ಪ್ರತಿದರ್ಶವನ್ನು ಆಯ್ಕೆ ಮಾಡುವಾಗ ಸಮಷ್ಟಿಯ ಕೆಲವು ಲಕ್ಷಣಗಳು ಸಂಶೋಧಕನ ಅರಿವಿಗೆ ಬರದೇ ಹೋಗಬಹುದು. ಆಗ ಆ ಲಕ್ಷಣ ಪ್ರತಿದರ್ಶದಲ್ಲಿ ಪ್ರತಿನಿಧಿತವಾಗುವುದಿಲ್ಲ. ಪ್ರತಿದರ್ಶದ ಗಾತ್ರ ಕಡಿಮೆ ಇದ್ದಲ್ಲಿ ಅದರ ಪ್ರಾತಿನಿಧಿಕತೆ ಕುಂಠಿತವಾಗುವ ದೋಷ ಉಂಟಾಗುತ್ತದೆ. ಸಂಶೋಧನೆ ಮುಂದುವರಿಯುವಾಗ ಒಂದು ಹಂತದಲ್ಲಿ ಪ್ರತಿದರ್ಶದ ಒಂದು ಭಾಗದಿಂದ ಮಾಹಿತಿ ದೊರಕದೆ ಹೋಗಿ ಪ್ರಾತಿನಿಧಿಕತೆ ಕಡಿಮೆಯಾಗುವ ಸಾಧ್ಯತೆ ಇದೆ. ದೀರ್ಘಕಾಲ ಮುಂದುವರಿಯಬೇಕಾದ ಸಂಶೋಧನೆಗಳಲ್ಲಿ (ದೀರ್ಘಕಾಲಿಕ ಅಧ್ಯಯನ) ಪ್ರತಿದರ್ಶದಲ್ಲಿ ಸೇರಿದ ವ್ಯಕ್ತಿಗಳು ಅನೇಕ ಕಾರಣಗಳಿಂದ ಸ್ಥಳಾಂತರಿತಗೊಳ್ಳುವುದರಿಂದ ಪ್ರತಿದರ್ಶದ ಗಾತ್ರ ಕಡಿಮೆಯಾಗಿ ದೋಷ ಉಂಟಾಗಬಹುದು. ವಿಸ್ತೃತ ಸಮೂಹದಿಂದ ಅಂಚೆ ಅಥವಾ ಎಸ್.ಎಂ.ಎಸ್. ಮೂಲಕ ಪ್ರತಿಕ್ರಿಯೆ ಪಡೆಯುವಾಗ ಅನೇಕರು ಉತ್ತರಿಸದೇ ಇರಬಹುದು ಅಥವಾ ಅನೇಕರ ಉತ್ತರಗಳು ಅಸಮರ್ಪಕವಾಗಿದ್ದು ತಿರಸ್ಕೃತಗೊಳ್ಳಬಹುದು. ಹೀಗಾದಾಗ ಪ್ರತಿದರ್ಶದ ಗಾತ್ರ ಕಡಿಮೆಯಾಗುತ್ತದೆ. ಇದರಿಂದಲೂ ಪ್ರತಿದರ್ಶಚಯನದ ದೋಷ ಉಂಟಾಗುತ್ತದೆ. ಅಸಂಭವನೀಯ ಪ್ರತಿದರ್ಶಚಯನ ತಂತ್ರಗಳು ಅಷ್ಟೊಂದು ವ್ಯವಸ್ಥಿತವಾಗಿರುವುದಿಲ್ಲ.

ಪ್ರತಿದರ್ಶಚಯನ ದೋಷಗಳು ಕೆಲವು ವೇಳೆ ವ್ಯವಸ್ಥಿತ ರೀತಿಯಲ್ಲಿ ಫಲಿತಾಂಶದ ಮೇಲೆ ಪ್ರಭಾವ ಬೀರುತ್ತವೆ. ಇನ್ನೂ ಕೆಲವು ವೇಳೆ ಯಾದೃಚ್ಛಿಕ ರೀತಿಯಲ್ಲಿ ಪ್ರಭಾವ ಬೀರುತ್ತವೆ. ಸಂಶೋಧಕ ಪ್ರತಿದರ್ಶವನ್ನು ಆಯ್ಕೆ ಮಾಡಿಕೊಳ್ಳುವಾಗ ವಸ್ತುನಿಷ್ಠ ನಿಲುವು ತಳೆದು, ಸಮಷ್ಟಿಯ ಲಕ್ಷಣಗಳನ್ನು ವಿವರವಾಗಿ ಅಧ್ಯಯನ ಮಾಡಿ ಅವುಗಳನ್ನು ಪ್ರತಿನಿಧಿಸುವಂತೆ ಪ್ರತಿದರ್ಶವನ್ನು ಆಯ್ಕೆ ಮಾಡುವುದರಿಂದ ಪ್ರತಿದರ್ಶಚಯನ ದೋಷಗಳನ್ನು ತಡೆಗಟ್ಟಬಹುದು.

– ಜಿ.ಶೀ.

## ಪ್ರತ್ಯಕ್ಷಾನುಭವ

ಸಂವೇದನೆ ಇಂದ್ರಿಯ ವ್ಯಾಪಾರವಾದರೆ ಪ್ರತ್ಯಕ್ಷಾನುಭವ ಮಾನಸಿಕ ವ್ಯಾಪಾರ. ಕೇಂದ್ರ ನರಮಂಡಲವಾದ ಮೆದುಳಿನಲ್ಲಿ ನಡೆಯುವ ಉನ್ನತ ಮಾನಸಿಕ ಕ್ರಿಯೆ. ಇಂದ್ರಿಯಗಳಿಂದ ಪಡೆದುಕೊಂಡ ಸಂವೇದನೆಗಳನ್ನು ಕೇಂದ್ರ ನರಮಂಡಲ ತನ್ನ ಹಿಂದಿನ ಆಲೋಚನೆ, ವಿವೇಚನೆ, ಅನುಭವದ ಸಾಮರ್ಥ್ಯದಿಂದ ಸಂವೇದನೆಗಳಿಗೆ ಅರ್ಥವನ್ನು ನೀಡುತ್ತದೆ. ಆಗ ನಮಗೆ ವಸ್ತು, ವಿಚಾರ ಏನೆಂಬುದು ಗೊತ್ತಾಗುತ್ತದೆ. ಇದನ್ನೇ ನಾವು 'ಅರ್ಥಾನುಭವ' ಅಥವಾ 'ಗ್ರಹಿಕೆ' ಅಥವಾ 'ಪ್ರತ್ಯಕ್ಷಾನುಭವ' (Perception) ಎನ್ನುತ್ತೇವೆ. ಪ್ರತ್ಯಕ್ಷಾನುಭವದಲ್ಲಿ ಇಂದ್ರಿಯ ಸಂವೇದನೆಗಳನ್ನು ಸಂಘಟಿಸುವ ವ್ಯವಸ್ಥೆ ಮಾಡುವ ಕೆಲಸ ನಡೆಯುತ್ತದೆ. ವಿವಿಧ ಸಂವೇದನೆಗಳ ನಡುವೆ ಇರುವ ಸಂಬಂಧವನ್ನು ನಿಷ್ಕರ್ಷಿಸಲಾಗುತ್ತದೆ. ಒಂದೊಂದು ಸಂವೇದನೆಯೂ ವಿಶಿಷ್ಟ ಮೌಲ್ಯವುಳ್ಳದ್ದಾಗಿದ್ದು ಸಂಘಟಿಸಲ್ಪಟ್ಟಾಗ ಅವುಗಳ ರೂಪ ಬದಲಾಗಿ ಒಟ್ಟು ಚಿತ್ರ ಮೂಡಿಬರುತ್ತದೆ.

**ಅ) ಪ್ರತ್ಯಕ್ಷಾನುಭವದ ಅರ್ಥ:** ಒಂದು ಪ್ರಚೋದನೆಯ ಅರಿವು ಸಂವೇದನೆಯಿಂದ ಆರಂಭಗೊಂಡು, ಅವಧಾನದಿಂದ ಬಲಗೊಂಡು ಪ್ರತ್ಯಕ್ಷಾನುಭವದ ಮೂಲಕ ಅದು ಏನು ಎಂಬುದು ತಿಳಿದು ಬರುತ್ತದೆ. ಆದ್ದರಿಂದ ಪ್ರತ್ಯಕ್ಷಾನುಭವ ಎಂದರೆ ಹೊರಗಿನಿಂದ ಇಂದ್ರಿಯಗಳ ಮೂಲಕ ಬರುತ್ತಿರುವ ಅರ್ಥರಹಿತ ಸಂವೇದನೆಗಳನ್ನು ವಿಶ್ಲೇಷಿಸಿ ಅದರ ಅರ್ಥವನ್ನು ಅರಿತುಕೊಳ್ಳುವಿಕೆ. "ಸಂವೇದನೆಯನ್ನು ಅರ್ಥವಾಗುವಂತೆ, ಉನ್ನತ ಮಾನಸಿಕ ಕ್ರಿಯೆಗಳ ಸಹಾಯದಿಂದ ಅನುವಾದಿಸಿಕೊಳ್ಳುವಿಕೆಗೆ ಪ್ರತ್ಯಕ್ಷಾನುಭವ" ಎನ್ನುವರು.

ಸಂವೇದನೆ + ಹಿಂದಿನ ಅನುಭವಗಳ ಆಧಾರದಿಂದ ಅರ್ಥೈಸುವಿಕೆ = ಪ್ರತ್ಯಕ್ಷಾನುಭವ.

**ಆ) ಪ್ರತ್ಯಕ್ಷಾನುಭವ ವಿಶೇಷತೆಗಳು ಮತ್ತು ಲಕ್ಷಣಗಳು:** ಪ್ರತ್ಯಕ್ಷಾನುಭವ ತನ್ನದೇ ಆದ ಕ್ರಿಯಾ ವಿಶೇಷತೆಯಿಂದ ಕೂಡಿದ್ದು ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಈ ಲಕ್ಷಣಗಳೆಲ್ಲವೂ ಪ್ರತ್ಯಕ್ಷಾನುಭವದ ವಿವಿಧ ಅರ್ಥಗಳನ್ನು ಸೂಚಿಸುತ್ತವೆ. ಕೆಲವು ಮುಖ್ಯ ಲಕ್ಷಣಗಳು ಇಂತಿವೆ.

1) ಸಂವೇದನೆಯ ಅಭಾವದಲ್ಲಿಯೂ ಪ್ರತ್ಯಕ್ಷಾನುಭವ ಕಾರ್ಯ ನಿರ್ವಹಿಸುತ್ತದೆ:–

ಸಂವೇದನೆಗೆ ಮಿತಿ ಇದೆ. ಅದು ಇಂದ್ರಿಯಗಳನ್ನು ಸಂಪೂರ್ಣವಾಗಿ ಅವಲಂಬಿಸಿರುವ ಕಾರಣ ಇಂದ್ರಿಯಗಳು ದೋಷಪೂರಿತವಾಗಿದ್ದರೆ ಅವುಗಳಿಂದ ಸಂವೇದನೆಗಳೂ ಸಹ ದೋಷದಿಂದ ಕೂಡಿರುತ್ತವೆ. ಉದಾ: ದೃಷ್ಟಿ ದೋಷವುಳ್ಳವರು ಸ್ಪಷ್ಟವಾಗಿ ನೋಡಲಾರರು. ನೆಗಡಿಯಾದಾಗ ವಾಸನೆ ಗ್ರಹಿಸಲಾರೆವು. ಆದರೆ ಪ್ರತ್ಯಕ್ಷಾನುಭವಕ್ಕೆ ಈ ಮಿತಿ ಇಲ್ಲ. ಪ್ರತ್ಯಕ್ಷಾನುಭವವು ಸಂವೇದನೆಯನ್ನು ಅವಲಂಬಿಸಿದ್ದರೂ ಸಹ ಈ ಅವಲಂಬನೆಯ ಪ್ರಮಾಣ, ಪ್ರಾಮುಖ್ಯ ತೀರಾ ಕಡಿಮೆ. ಸಂವೇದನೆಯ ಅಭಾವದಲ್ಲಿಯೂ ಸಹ ಪ್ರತ್ಯಕ್ಷಾನುಭವ ಕಾರ್ಯ ನಿರ್ವಹಿಸುತ್ತದೆ.

2) ಅಪೂರ್ಣವಾದ ಸಂವೇದನೆಗಳಿದ್ದರೂ ಸಹ ಪ್ರತ್ಯಕ್ಷಾನುಭವ ವಸ್ತುವಿನ ಇಡೀ ಚಿತ್ರವನ್ನು ಗ್ರಹಿಸಿಕೊಳ್ಳುತ್ತದೆ:

ಸಂವೇದನೆಯ ಮೂಲಕ ಒಂದು ವಸ್ತು, ಸಂಗತಿ ಹೇಗಿದೆಯೋ ಹಾಗೆ ಮೂಡಿ ಬಂದು ಪ್ರತ್ಯಕ್ಷಾನುಭವ ವಸ್ತು ಹೇಗಿರಬೇಕೋ ಹಾಗೆ ಚಿತ್ರಿಸಿಕೊಳ್ಳುತ್ತದೆ. ಅಂದರೆ ಒಂದು ವಸ್ತುವಿಗೆ ಸಂಬಂಧಿಸಿದಂತೆ ಇಂದ್ರಿಯಗಳ ಮೂಲಕ ಬರುವ ಅದರ ಸಂವೇದನೆಗಳು ಎಷ್ಟೇ ಕಡಿಮೆ ಇದ್ದು, ಅಪೂರ್ಣವಾಗಿದ್ದರೂ, ಅಷ್ಟರ ಸಹಾಯದಿಂದಲೇ ಬಿಟ್ಟು ಹೋಗಿರುವ ಸಂವೇದನೆಗಳನ್ನು ಭರ್ತಿ ಮಾಡಿಕೊಂಡು ಸಂಗತಿಯ, ವಸ್ತುವಿನ ಇಡೀ ಚಿತ್ರವನ್ನು ಮೂಡಿಸುತ್ತದೆ. ಉದಾ: ದೂರದಲ್ಲಿ ಬರುತ್ತಿರುವ ವ್ಯಕ್ತಿಯ ಸಂವೇದನೆಗಳು ಅಸ್ಪಷ್ಟವಾಗಿದ್ದರೂ ವ್ಯಕ್ತಿಯನ್ನು ಗುರುತಿಸಲು ನಾವು ಶಕ್ತರಾಗುತ್ತೇವೆ. ಮಾನಸಿಕವಾಗಿ ಮೂಡಿಬರುವಷ್ಟು ವಿವರಗಳೂ, ಸ್ಪಷ್ಟತೆಯೂ, ನಮಗೆ ಒದಗಿಬರುತ್ತಿರುವ ಸಂವೇದನೆಗಳಲ್ಲಿರುವುದಿಲ್ಲ.

3) ಯಾವುದಾದರೂ ಒಂದು ಇಂದ್ರಿಯದಿಂದ ಬರುವ ಸಂವೇದನೆಯಿಂದಲೇ ಸಂಗತಿಯನ್ನು ಸಂಪೂರ್ಣವಾಗಿ ಪ್ರತ್ಯಕ್ಷಾನುಭವ ಮೂಡಿಸಿಕೊಳ್ಳುತ್ತದೆ:

Digitised by Bharatavani, CIIL

ಒಂದು ಸಂಗತಿಯ ಪೂರ್ಣ ಚಿತ್ರ ರೂಪುಗೊಳ್ಳಬೇಕಾದರೆ ಅದರಿಂದ ವಿವಿಧ ಇಂದ್ರಿಯಗಳ ಮೂಲಕ ಬರುವ ಸಂವೇದನೆಗಳು ಸಂಘಟಿತಗೊಳ್ಳಬೇಕು. ಅಂದರೆ ಯಾವುದೇ ಒಂದು ಇಂದ್ರಿಯದಿಂದ ಸಂವೇದನೆ ಬಂದರೆ ಸಾಕು, ಉಳಿದ ಇಂದ್ರಿಯಗಳಿಗೆ ಸಂಬಂಧಿಸಿದ ಆ ಸಂಗತಿಯ ಸಂವೇದನೆಗಳೂ ಅದರ ಜೊತೆಗೆ ಮೂಡಿ ಬಂದು ಆ ಸಂಗತಿಯ ಇಡೀ ಚಿತ್ರ ಮೂಡಿಬರುತ್ತದೆ. ಉದಾ: ಬಂಧುಗಳ ನಿರೀಕ್ಷೆಯಲ್ಲಿದ್ದಾಗ ಅವರು ಬರುವಾಗ ಉಂಟಾಗುವ ಕಾಲಿನ ಸಪ್ಪಳದಿಂದಲೇ ಅಥವಾ ಕೂಗಿದ ಧ್ವನಿಯಿಂದಲೇ ಅವರ ಇಡೀ ಚಿತ್ರವು ನಮ್ಮಲ್ಲಿ ಮೂಡಿಬರುತ್ತದೆ. ಹಾಗೆಯೇ ಅಡಿಗೆ ಮನೆಯ ಹಂಚಿನ ಮೇಲಿನ ಚುಯ್ ಚುಯ್ ಶಬ್ದ ಕೇಳುತ್ತಲೇ ಇಡೀ ದೋಸೆಯ ಹಾಗೂ ಅದರ ರುಚಿಯ ಅನುಭವವು ನಮ್ಮಲ್ಲಿ ಮೂಡಿಬರುತ್ತದೆ.

4) ಪ್ರತ್ಯಕ್ಷಾನುಭವ ಕೇವಲ ಬಿಡಿ ಬಿಡಿ ಸಂವೇದನೆಗಳನ್ನು ವಿಶ್ಲೇಷಿಸುವುದರ ಜೊತೆಗೆ ಬಿಡಿ ಬಿಡಿ ಸಂವೇದನೆಗಳನ್ನು ಸಂಶ್ಲೇಷಿಸಿ, ಸಂಘಟಿಸಿ ಸನ್ನಿವೇಶವನ್ನು ಸಮಗ್ರವಾಗಿ ಪರಿಚಯ ಮಾಡಿಕೊಡುತ್ತದೆ. ಉದಾ: ಕೊಠಡಿಯಲ್ಲಿ ಕುಳಿತಿದ್ದಾಗ ಒಬ್ಬ ವ್ಯಕ್ತಿ ವೇಗವಾಗಿ ಮೋಟಾರ್ ಬೈಕ್‌ನಲ್ಲಿ ಹೋದದ್ದು ಕಾಣಿಸುತ್ತದೆ. ಕೆಲವೇ ಸೆಕೆಂಡುಗಳಲ್ಲಿ ಭಯಂಕರವಾದ ಶಬ್ದ ಕೇಳಿಬರುತ್ತದೆ. ಇಷ್ಟರಿಂದಲೇ ವ್ಯಕ್ತಿ ಆಘಾತಕ್ಕೊಳಗಾದನೆಂದು ಊಹಿಸುವುದಷ್ಟೇ ಅಲ್ಲದೇ, ಅಲ್ಲಿ ಸಂಭವಿಸಿರಬಹುದಾದ ಘಟನೆಗಳ ಚಿತ್ರವೂ ಮನಸ್ಸಿನಲ್ಲಿ ಮೂಡಿ ಬರುತ್ತದೆ.

5) ಪ್ರತ್ಯಕ್ಷಾನುಭವವು ಸಂವೇದನೆಯ ಎಲ್ಲಾ ವಿವರಗಳನ್ನು ಅರ್ಥಗ್ರಹಣಕ್ಕಾಗಿ ಬಳಸುವುದಿಲ್ಲ:

ಒಂದು ಸಂಗತಿಗೆ ಸಂಬಂಧಿಸಿದಂತೆ ವಿವಿಧ ಇಂದ್ರಿಯಗಳಿಂದ ಬರುವ ಸಂವೇದನೆಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಆರಿಸಿಕೊಂಡು ಅವುಗಳಿಗೆ ಆಕರ್ಷಕವಾದ ರೂಪವನ್ನು ಪ್ರತ್ಯಕ್ಷಾನುಭವ ಕೊಡುತ್ತದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಪ್ರತ್ಯಕ್ಷಾನುಭವದ ಅರ್ಥಗಳನ್ನು ಕೆಳಗಿನಂತೆ ನಿರೂಪಿಸಬಹುದು. ಹೊರಗಿನಿಂದ ಮತ್ತು ದೇಹದ ಒಳಗಿನಿಂದ ಬರುವ ಅರ್ಥರಹಿತ ಸಂವೇದನೆಗಳನ್ನು ಹಿಂದಿನ ಅನುಭವ ಮತ್ತು ಇತರ ಉನ್ನತ ಮಾನಸಿಕ ಕ್ರಿಯೆಗಳ ಸಹಾಯದಿಂದ ಅರ್ಥ ಮಾಡಿಕೊಳ್ಳುವುದು ಪ್ರತ್ಯಕ್ಷಾನುಭವ.

ಬಿಡಿ ಬಿಡಿಯಾದ ಮತ್ತು ಅಪೂರ್ಣವಾದ ಸಂವೇದನೆಗಳನ್ನು, ಪ್ರಚೋದನೆಗಳನ್ನು ಅರ್ಥ ಬರುವಂತೆ ಪೂರ್ಣವಾಗಿ ರೂಪಿಸಿಕೊಳ್ಳುವುದು ಪ್ರತ್ಯಕ್ಷಾನುಭವ.

ಒಂದು ಸಂಗತಿಗೆ ಸಂಬಂಧಿಸಿದಂತೆ ಅದರಿಂದ ಬರುತ್ತಿರುವ ಸಂವೇದನೆಯು ಯಾವುದೇ ಒಂದು ಜ್ಞಾನೇಂದ್ರಿಯಕ್ಕೆ ಸಂಬಂಧಿಸಿದ್ದರೂ ಉಳಿದ ಜ್ಞಾನೇಂದ್ರಿಯಗಳು ಕ್ರಿಯಾಶೀಲವಾಗುವಂತೆ ಮಾಡುವುದು ಪ್ರತ್ಯಕ್ಷಾನುಭವ.

### ಇ) ಪ್ರತ್ಯಕ್ಷಾನುಭವದಲ್ಲಿನ ದೋಷಗಳು

ಪ್ರತ್ಯಕ್ಷಾನುಭವದಲ್ಲಿ ಎರಡು ರೀತಿಯ ದೋಷಗಳನ್ನು ಕಾಣುತ್ತೇವೆ.

1. ಭ್ರಮೆಗಳು (Illusions) 2. ವಿಕೃತ ಭ್ರಮೆಗಳು (Delusions) (ವಿಭ್ರಮೆಗಳು)

**1) ಭ್ರಮೆಗಳು:** ಒಂದು ಸಂಗತಿಯನ್ನು ಅದರ ಸಹಜ ರೂಪದಲ್ಲಿ ಅರ್ಥ ಮಾಡಿಕೊಂಡರೆ ಅದು ಪ್ರತ್ಯಕ್ಷಾನುಭವ. ಆದರೆ ಕೆಲವು ವೇಳೆ ನಮಗರಿವಿಲ್ಲದಂತೆ ಸಂಗತಿಯನ್ನು ಅಪಾರ್ಥದಲ್ಲಿ ಅಥವಾ ವಿಕೃತ ರೂಪದಲ್ಲಿ ತಿಳಿದುಕೊಳ್ಳುತ್ತೇವೆ. ಇದನ್ನೇ 'ಭ್ರಮೆ' ಎನ್ನುವರು. ಇದು ಇಂದ್ರಿಯಗಳಲ್ಲಿನ ದೋಷವಿರಬಹುದು, ಮಿದುಳಿನ ಕ್ರಿಯಾ ವಿಶೇಷತೆಗಳ ಸಾಮರ್ಥ್ಯದಲ್ಲಿನ ದೋಷವಿರಬಹುದು. ಭ್ರಮೆಯಲ್ಲಿ ಎರಡು ರೀತಿಗಳಿವೆ. i) ಇಂದ್ರಿಯಜನ್ಯ ಭ್ರಮೆ ಮತ್ತು ii) ಮಾನಸಿಕ ಭ್ರಮೆ.

**i) ಇಂದ್ರಿಯಜನ್ಯ ಭ್ರಮೆ:** ಇಂದ್ರಿಯಜನ್ಯ ಭ್ರಮೆ ನೈಜತೆಯ ಅಥವಾ ಸಂವೇದನೆಯ ತಪ್ಪು ಗ್ರಹಿಕೆ. ಮನಸ್ಸು ಹೊರಗಿನಿಂದ ಬಂದ ಸಂವೇದನೆಗಳನ್ನು ಸರಿಯಾಗಿ ಅರ್ಥಮಾಡದೆ ತಪ್ಪಾಗಿ ಅನುವಾದಿಸಿರುತ್ತದೆ. ಉದಾ: ನೀರಿರುವ ಒಂದು ಪಾತ್ರೆಯಲ್ಲಿ ಕೋಲನ್ನು ಇಟ್ಟಾಗ ಕೋಲು ನೀರಿನಲ್ಲಿ ಬಾಗಿರುವಂತೆ ಕಾಣುತ್ತದೆ. ಇಂತಹ ಸಂಗತಿಗಳನ್ನು ಯಾರೇ ನೋಡಿದರೂ ತಪ್ಪಾಗಿಯೇ ಗ್ರಹಿಸುತ್ತಾರೆ. ಇಂದ್ರಿಯಜನ್ಯ ಭ್ರಮೆ ಅನೇಕ ರೀತಿಯಲ್ಲಿವೆ.

ಉದಾ: 1. ಮುಲ್ಲರ್–ಲೈಯರ್ ಭ್ರಮೆ

A ಮತ್ತು B ಎಂಬ ಒಂದೇ ಉದ್ದದ ಎರಡು ಗೆರೆಗಳಿವೆ. ಯಾರೇ ಇವುಗಳನ್ನು ನೋಡಿದರೂ B, A ಗಿಂತ ಉದ್ದವಾದದ್ದೆಂದು ತಿಳಿಯುವರು. ಆದರೆ ವಾಸ್ತವವಾಗಿ ಅವೆರಡೂ ಒಂದೇ ಅಳತೆಯುಳ್ಳವುಗಳಾಗಿವೆ. ಇಲ್ಲಿ ಭ್ರಮೆಗೆ ಕಾರಣ ಅವುಗಳ ಕೊನೆಯಲ್ಲಿರುವ < > ಆವರಣಗಳೇ ಆಗಿವೆ.

### 1) ಸಮತಳ–ಲಂಬಕ ಗೆರೆಗಳ ಭ್ರಮೆ

ಸಮತಳ ಲಂಬಕ ಗೆರೆಗಳ ಭ್ರಮೆ




ಇದರಲ್ಲಿಯೂ ಚಿತ್ರದಲ್ಲಿ ತೋರಿಸಿರುವಂತೆ A ಗಿಂತ B ಲಂಬರೇಖೆ ಹೆಚ್ಚು ಉದ್ದವಾಗಿರುವಂತೆ ಕಾಣುತ್ತದೆ. ಆದರೆ ಅವೆರಡೂ ಒಂದೇ ಅಳತೆಯವುಗಳು.

### 2) ಮನೋಜನ್ಯ ಭ್ರಮೆ

ಮನೋಜನ್ಯ ಭ್ರಮೆಗೆ ನಮ್ಮ ಮನಸ್ಸೇ ಕಾರಣವಾಗಿದೆ. ಸಂವೇದನೆಗಳು ಇಲ್ಲದಿರುವಾಗ ವ್ಯಕ್ತಿಯ ಮಾನಸಿಕ ತುಮುಲ, ತಳಮಳ, ಭಾವಾವೇಶಗಳು ಭ್ರಮೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಇದು ಕೇವಲ ಸುಳ್ಳು ಗ್ರಹಿಕೆ. ಇದು ಮಾನಸಿಕ ರೋಗಗಳಿಗೆ ಒಳಗಾದವರಲ್ಲಿ, ಹೆಚ್ಚು ಮದ್ಯಸೇವನೆ ಮಾಡಿದವರಲ್ಲಿ, ಮಾದಕ ವಸ್ತುಗಳನ್ನು ಸೇವಿಸಿದವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇಂಥ ಭ್ರಮೆಗಳಿಗೆ ಬಾಹ್ಯ ಪ್ರಚೋದನೆಗಳ ಆಧಾರವಿರುವುದಿಲ್ಲ.

### 3) ವಿಕೃತ ಭ್ರಮೆಗಳು (ವಿಭ್ರಮೆಗಳು) (Delusion)

ಇದು ಕೇವಲ ಮನೋರೋಗಿಗಳಲ್ಲಿ ಮಾತ್ರ ಕಂಡು ಬರುತ್ತದೆ. ವಿಭ್ರಮೆಗೆ ಒಳಗಾದವರು ದೋಷಪೂರ್ಣವಾದ ವಿಕೃತ ವಿಶ್ವಾಸ, ದೃಢನಂಬಿಕೆ ಹೊಂದಿದ್ದು ವಿಚಿತ್ರ ನಡವಳಿಕೆಗಳಲ್ಲಿ ತೊಡಗಿರುತ್ತಾರೆ.

Digitised by Bharatavani, CIIL

ಉದಾ: ತಾನೊಬ್ಬ ನಟನೆಂದು ಭ್ರಮಿಸಿ ನಟನಂತೆ ವರ್ತಿಸುವುದು, ಶ್ರೀಮಂತನೆಂದು ಭ್ರಮಿಸಿ ಶ್ರೀಮಂತನಂತೆ ನಟಿಸುವುದು, ಅಪರಾಧಿ ಎಂದು ಭಾವಿಸಿ ಅಪರಾಧಿಯಂತೆ ನಟಿಸುವುದು, ಇತ್ಯಾದಿ ಲಕ್ಷಣಗಳೆಲ್ಲವೂ ವಿಕೃತ ವಿಶ್ವಾಸಗಳೇ ಆಗಿವೆ, ಪ್ರಚೋದನೆಗಳಿಲ್ಲದಿದ್ದರೂ ವಸ್ತುಗಳನ್ನು, ವ್ಯಕ್ತಿಗಳನ್ನು ಕಾಣುವುದು, ಧ್ವನಿಗಳನ್ನು ಕೇಳುವುದು ಇತ್ಯಾದಿ.

### ಈ) ಗೆಸ್ಟಾಲ್ಟ್ ಪ್ರತ್ಯಕ್ಷಾನುಭವದ ನಿಯಮಗಳು (Gestalt's Laws of Perception)

ಗೆಸ್ಟಾಲ್ಟ್ ಮನೋವಿಜ್ಞಾನಿಗಳು ಪ್ರತ್ಯಕ್ಷಾನುಭವಕ್ಕೆ ಸಂಬಂಧಿಸಿದಂತೆ ಐದು ನಿಯಮಗಳನ್ನು ನಿರೂಪಿಸಿದ್ದಾರೆ.

1) ಸಾಮೀಪ್ಯ ನಿಯಮ

2) ಸಾಮ್ಯತೆ ನಿಯಮ

3) ಸಾತತ್ಯ ನಿಯಮ

4) ಪೂರಕ ನಿಯಮ

5) ಆಕೃತಿ ಮತ್ತು ಹಿನ್ನೆಲೆ ನಿಯಮ

5) ಪ್ರಾಜ್ಞಾನ್ (ಉತ್ತಮ ಆಕೃತಿ) ನಿಯಮ

**1) ಸಾಮೀಪ್ಯ ನಿಯಮ:** ಪ್ರಚೋದನೆಗಳು ಒಂದೇ ಸಮನಿದ್ದು ಒಂದಕ್ಕೊಂದು ಸಮೀಪದಲ್ಲಿದ್ದರೆ ಎಲ್ಲಾ ಬಿಡಿ ಬಿಡಿ ಪ್ರಚೋದನೆಗಳು ಒಂದುಗೂಡಿ ಒಂದು ಗುಂಪು ಅಥವಾ ಆಕೃತಿಯನ್ನು ಹೊಂದುತ್ತವೆ. ಇದನ್ನು ಸಾಮೀಪ್ಯ ನಿಯಮ ಎನ್ನುವರು. ಉದಾ: ಪ್ರತಿಯೊಂದು ಪದವು ಅನೇಕ ಬಿಡಿ ಬಿಡಿ ಅಕ್ಷರಗಳಿಂದ ಕೂಡಿದ್ದರೂ ನಾವು ಬಿಡಿ ಬಿಡಿಯಾಗಿ ನೋಡದೆ ಅವುಗಳಿಂದಾದ ಪದವನ್ನು ಮಾತ್ರ ನೋಡುತ್ತೇವೆ.

```
* * * * * * * *        | | | | | | | |
* * * * * * * *        | | | | | | | |
* * * * * * * *        | | | | | | | |
* * * * * * * *        | | | | | | | |
* * * * * * * *        | | | | | | | |
       ಎ                      ಬಿ
```

ಚಿತ್ರ 'ಎ' ನಲ್ಲಿನ ಚುಕ್ಕೆಗಳು ಅಡ್ಡಗೆರೆಯಂತೆಯೂ 'ಬಿ' ನಲ್ಲಿನ ಗೆರೆಗಳು ಉದ್ದ ಸರಳ ರೇಖೆಗಳಂತೆಯೂ ಕಾಣಿಸುತ್ತವೆ. ಇವುಗಳಿಗೆ ಕಾರಣ ಅವು ಒಂದಕ್ಕೊಂದು ಸಮೀಪದಲ್ಲಿರುವುದೇ ಆಗಿದೆ.

**2) ಸಾಮ್ಯತೆ ನಿಯಮ:** ಪ್ರಚೋದನೆಗಳಲ್ಲಿನ ಸಾಮ್ಯತೆ ಅಂದರೆ ಏಕರೂಪತೆ ಇದ್ದರೆ ಅವುಗಳ ನಡುವೆ ಅಂತರವಿದ್ದರೂ ಸಹ ಅವು ಒಂದು ಆಕಾರಕ್ಕೆ ಬರುತ್ತವೆ. ಒಂದಕ್ಕಿಂತ ಹೆಚ್ಚು ಅಂಶಗಳನ್ನು ಅಥವಾ ವಸ್ತುಗಳನ್ನು ಕೊಟ್ಟಾಗ ಅದರಲ್ಲಿ ಒಂದೇ ತೆರನಾಗಿರುವ ವಸ್ತುಗಳನ್ನೇ ಒಂದು ಗುಂಪಿಗೆ ಸೇರಿಸುವ ಪ್ರವೃತ್ತಿಗೆ ಸಾಮ್ಯತೆಯ ನಿಯಮ ಎನ್ನುವರು.

```
ಉದಾ:    X X X X X X X
        - - - - - - -
        * * * * * * *
        + + + + + + +
```

ಮೇಲಿನ ಚಿತ್ರದಲ್ಲಿ ಪ್ರತಿಯೊಂದು ಅಂಶವೂ ತನ್ನದೇ ಆದ ಗುಂಪಿನಲ್ಲಿ ಗೋಚರಿಸುತ್ತದೆ.

**3) ಸಾತತ್ಯ ನಿಯಮ:** ಪ್ರಚೋದನೆಗಳಲ್ಲಿ ಸಾಮೀಪ್ಯ, ಸಾಮ್ಯತೆಗಳ ಅಂಶಗಳು ಇಲ್ಲದಿದ್ದರೂ ಅವುಗಳಲ್ಲಿ ಅವ್ಯವಸ್ಥೆಯಿರದೆ ಅವು ವ್ಯವಸ್ಥಿತವಾಗಿದ್ದು ಒಂದೇ ದಿಕ್ಕಿನಲ್ಲಿದ್ದರೆ ಅವೆಲ್ಲವೂ ಸೇರಿ ಒಂದಾಗಿ ಕಂಡುಬರುತ್ತವೆ. ಇದನ್ನು ಸಾತತ್ಯ ನಿಯಮ ಎನ್ನುವರು. ಉದಾ: ಆಕಾಶದಲ್ಲಿರುವ ನಕ್ಷತ್ರಗಳಲ್ಲಿ ಸಪ್ತರ್ಷಿ ಮಂಡಲ ಎಲ್ಲರ ಗಮನ ಸೆಳೆಯುತ್ತದೆ.

**4) ಪೂರಕ ನಿಯಮ :** ಸಂವೇದನೆಯ ಅನುಭವಗಳು ಸಂಯೋಜನೆಗೊಂಡು, ಒಟ್ಟುಗೂಡಿ ಪರಿಪೂರ್ಣತೆಯನ್ನು ಪಡೆದ ಒಂದು ಆಕೃತಿಯನ್ನು ಕೊಡುವುದೇ ಪೂರಕ ನಿಯಮ. ಅಂದರೆ ಪ್ರಚೋದನೆಗಳು ಅಪೂರ್ಣವಾಗಿದ್ದರೂ ಸಹ ವಸ್ತು ಹೇಗಿರಬೇಕೋ ಹಾಗೆ ಕಂಡುಬರುತ್ತದೆ. ಇಲ್ಲಿ ಬಿಟ್ಟುಹೋದ ಸಂಗತಿಯ ಭಾಗಗಳನ್ನು ಮನಸ್ಸು ಭರ್ತಿ ಮಾಡಿಕೊಳ್ಳುತ್ತದೆ. ರೈಲುಗಾಡಿಗಳಲ್ಲಿ ಮಧ್ಯೆ ಅಂತರಬಿಟ್ಟು ಬರೆದಿರುವ ಅಕ್ಷರಗಳನ್ನು ಓದಲು ನಮಗೆ ಸಾಧ್ಯವಾಗುತ್ತದೆ.

**5) ಆಕೃತಿ ಮತ್ತು ಹಿನ್ನೆಲೆ ನಿಯಮ:** ನಾವು ಯಾವುದೇ ವಸ್ತುವನ್ನು ಯಾವುದೇ ಸಂದರ್ಭದಲ್ಲಿ ನೋಡುವಾಗಲೂ ಅದಕ್ಕೊಂದು ಹಿನ್ನೆಲೆಯಿದ್ದು ಆ ಹಿನ್ನೆಲೆಯಲ್ಲಿ ವಸ್ತು ಎದ್ದು ಕಾಣುತ್ತದೆ. ಇದರಲ್ಲಿ ವಸ್ತು ಯಾವುದು, ಹಿನ್ನೆಲೆ ಯಾವುದು ಎನ್ನುವುದು ವೀಕ್ಷಿಸುವ ವ್ಯಕ್ತಿಯನ್ನು ಅವಲಂಬಿಸಿರುತ್ತದೆ. ಉದಾ: ಆಕರ್ಷಕವಾದ ಕೆತ್ತನೆ ಕೆಲಸ ಮಾಡಿರುವ ತಟ್ಟೆಯಲ್ಲಿ ಎಲೆ–ಅಡಿಕೆ ಇದ್ದರೆ ಎಲೆ–ಅಡಿಕೆ ಹಾಕುವ ಅಭ್ಯಾಸದವರಿಗೆ ಕೇವಲ ಎಲೆ ಅಡಿಕೆ ಕಂಡು ಬರುತ್ತದೆ. ಅದೇ ಓರ್ವ ಕಲಾಕಾರನಿಗೆ ತಟ್ಟೆಯಲ್ಲಿರುವ ಕೆತ್ತನೆ ಕಂಡು ಬರುತ್ತದೆ. ಇಲ್ಲಿ ಒಂದಕ್ಕೊಂದು ಹಿನ್ನೆಲೆಯಾಗಿ ಕಾರ್ಯ ನಿರ್ವಹಿಸುತ್ತವೆ. ಇದೇ ಕಾರಣದಿಂದಲೇ ಪಕ್ಷಿಗಳು, ಕೋಳಿಗಳು, ನೆಲದ ಮೇಲಿನ ಕಾಳು, ಆಹಾರಗಳನ್ನು ಗುರುತಿಸಲು ಶಕ್ತವಾಗಿವೆ.

ಆಕೃತಿ ಮತ್ತು ಹಿನ್ನೆಲೆಯ ಪ್ರತ್ಯಕ್ಷಾನುಭವದಲ್ಲಿ ಅನೇಕ ವೇಳೆ ಪ್ರತ್ಯಕ್ಷಾನುಭವದ ಕ್ಷೇತ್ರದಲ್ಲಿ ಆಕೃತಿಯಾಗಿದ್ದ ಪ್ರಚೋದನೆಗಳು ಹಿನ್ನೆಲೆಗೂ, ಹಿನ್ನೆಲೆಯಲ್ಲಿದ್ದ ಪ್ರಚೋದನೆಗಳು ಆಕೃತಿಯಾಗಿಯೂ ಪಲ್ಲಟಗೊಳ್ಳಬಹುದು. ಈ ರೀತಿಯ ಪಲ್ಲಟಕ್ಕೆ ಅವಧಾನದ ಆಂತರಿಕ ಅಥವಾ ಬಾಹ್ಯ ನಿರ್ಧಾರಣಾಂಶಗಳು ಕಾರಣವಾಗಬಹುದು. (ನೋಡಿ "ಅವಧಾನ" ಪುಟ 50) ಕೆಲವು ಸಂದರ್ಭಗಳಲ್ಲಿ ಈ ಪಲ್ಲಟ ಅನಿಚ್ಛಾ ಪೂರ್ವಕವಾಗಿಯೂ ಆಗಬಹುದು. ಉದಾಹರಣೆಗೆ, ಅರ್ಧ ತೆರೆದ ಪುಸ್ತಕದ ಚಿತ್ರವು ಅರ್ಧತೆರೆದ, ಅರ್ಧ ಮುಚ್ಚಿದ ಪುಸ್ತಕದಂತೆ ಕಾಣಬಹುದು. ಒಂದೇ ಚಿತ್ರದಲ್ಲಿ ಬೇರೆ ಬೇರೆ ಚಿತ್ರಗಳು ಕಾಣಿಸುವಂತೆ ಕಲಾವಿದರು ಚಿತ್ರಿಸುತ್ತಾರೆ. ಇಂಥ ಚಿತ್ರಗಳನ್ನು ನೀವು ಮನೋವಿಜ್ಞಾನದ ಪಠ್ಯಪುಸ್ತಕಗಳಲ್ಲಿ, ಚಿತ್ರಶಾಲೆಗಳಲ್ಲಿ, ಪತ್ರಿಕೆಗಳಲ್ಲಿ ಕಾಣಬಹುದು.

**6) ಪ್ರಾಗ್ನಾನ್ಜ್ (ಉತ್ತಮ ಆಕೃತಿ) ನಿಯಮ:** ನಾವು ಪ್ರತ್ಯಕ್ಷಾನುಭವ ಮಾಡುವಾಗ ಪ್ರಚೋದನ ಪರಿಸ್ಥಿತಿಯನ್ನು ಎಷ್ಟೇ ಅರ್ಥ ಪೂರ್ಣವಾಗಿ ಗ್ರಹಿಸಬಹುದೋ ಅಷ್ಟು ಅರ್ಥಪೂರ್ಣವಾಗಿ ಗ್ರಹಿಸುತ್ತೇವೆ. ಸಣ್ಣಪುಟ್ಟ ಮಿತಿಗಳು ಆಕೃತಿಯ ಪ್ರತ್ಯಕ್ಷಾನುಭವವನ್ನು ಪ್ರಭಾವಗೊಳಿಸುವುದಿಲ್ಲ.

ಪ್ರತ್ಯಕ್ಷಾನುಭವವು ಕೇವಲ ಸಂವೇದನೆಗಳನ್ನು ಯಾಂತ್ರಿಕವಾಗಿ ಅರ್ಥೈಸುವುದಿಲ್ಲ. ಅದು ವ್ಯಕ್ತಿಯ ವೈಯಕ್ತಿಕ ಅನುಭವ, ವ್ಯಕ್ತಿತ್ವದ

Digitised by Bharatavani, CIIL

ರಚನೆ, ಧೋರಣೆ, ಪರಿಸರ, ಹಿನ್ನೆಲೆ ಮತ್ತು ಸಂದರ್ಭಗಳಿಂದ ನಿರ್ಧರಿಸಲ್ಪಡುತ್ತದೆ.

ಸಂವೇದನೆ ಒಂದು ದೈಹಿಕ ವ್ಯಾಪಾರ. ಇಂದ್ರಿಯಗಳಿಂದ ಭೌತಿಕ ವಿವರಗಳನ್ನು ಪಡೆಯುವ ಕ್ರಿಯೆ. ಶರೀರದ ಅಂಚಿನಲ್ಲಿ ಸಿದ್ಧವಾಗಿರುವ ಇಂದ್ರಿಯಗಳಲ್ಲಿ ಹುಟ್ಟಿದ ಭೌತಿಕ ಸಾಧನಗಳ ಮೂಲಕ ಮೆದುಳಿನ ಐಂದ್ರಿಯ ಕ್ಷೇತ್ರ. ಯಾವುದೇ ಸಂವೇದನೆ ಉಂಟಾಗಬೇಕಾದರೂ ಒಂದು ಕನಿಷ್ಠ ಪ್ರಮಾಣದ ಇಂದ್ರಿಯ ಪ್ರಚೋದನೆ ಇರಲೇಬೇಕು.

ಸಂವೇದನೆ ಹೊರಜಗತ್ತಿನ ಸಂಗತಿಗಳು ಹೇಗಿವೆಯೋ ಹಾಗೆ ಅವುಗಳ ಪಡಿಯಚ್ಚನ್ನು ಬಹಳ ವಿಧೇಯಕವಾಗಿಯೂ, ಯಾಂತ್ರಿಕವಾಗಿಯೂ ಮೆದುಳಿಗೆ ಒದಗಿಸುತ್ತವೆ. ಹೀಗೆ ಒದಗಿದ ಅರ್ಥ ರಹಿತ ಸಂವೇದನೆಗಳನ್ನು ಪ್ರತ್ಯಕ್ಷಾನುಭವವು ಉನ್ನತ ಮಾನಸಿಕ ಕ್ರಿಯೆಗಳಿಗೆ ಒಳಪಡಿಸಿ ಆ ಸಂಗತಿ ಹೇಗಿರಬೇಕೋ ಹಾಗೆ ಅವುಗಳ ಅರ್ಥವನ್ನು ಮೂಡಿಸುತ್ತದೆ.

–ಹೂ.ಗಾ.

## ಪ್ರಾತ್ಯಕ್ಷಿಕೆ ಪಾಠಗಳು

ಪ್ರಾತ್ಯಕ್ಷಿಕೆ ಪರಿಕಲ್ಪನೆಯು ಹೊಸತಲ್ಲ. ತಲತಲಾಂತರದಿಂದಲೂ ಚಾಲ್ತಿಯಲ್ಲಿದೆ. ಹುಟ್ಟಿದ ಮಗುವಿಗೆ ಹಾಲೂಡಿಸುವುದರಿಂದಾರಂಭಗೊಂಡು ಅದರ ಆಟ, ಪಾಠ, ಊಟ, ಉಡುಗೆ, ತೊಡುಗೆಯವರೆಗೆ ಅಂಗಡಿಯಲ್ಲಿ ಸಣ್ಣಪುಟ್ಟ ಸಾಮಗ್ರಿ ಖರೀದಿಸುವಾಗಿನ ಸಂದರ್ಭದಿಂದ ಆಕಾಶದಲ್ಲಿ ಕ್ಷಿಪಣಿ ಉಡಾವಣೆಯವರೆಗೆ ಎಲ್ಲ ರಂಗಗಳಲ್ಲಿ ಎಲ್ಲ ಸಮಯಗಳಲ್ಲಿ ಪ್ರಾತ್ಯಕ್ಷಿಕೆ ನಡೆಯುತ್ತಿರುತ್ತದೆ. ಇದು ಇಲ್ಲದ ಜಾಗವಿಲ್ಲ, ಇದಿಲ್ಲದ ಕಾರ್ಯವಿಲ್ಲ.

ಪ್ರಶಿಕ್ಷಣಾರ್ಥಿಗಳು ರೂಢ ಬೋಧನೆಗಾಗಿ ಶಾಲೆಗಳಿಗೆ ಹೋಗುವ ಪೂರ್ವದಲ್ಲಿ ತಮ್ಮ ತಮ್ಮ ವಿಷಯಗಳಿಗೆ ಸಂಬಂಧಿಸಿದಂತೆ ಅನುಭವಿ ಶಿಕ್ಷಕರು ಮತ್ತು ಅಥವಾ ತಮ್ಮ ಪ್ರಶಿಕ್ಷಕರ ಪಾಠ ವೀಕ್ಷಣೆಯನ್ನು ಮಾಡುವ ಅಗತ್ಯವಿದೆ.

### ಪ್ರಾತ್ಯಕ್ಷಿಕೆಯ ಅರ್ಥ

ನಿಯೋಜಿತ ಪಾಠ ಅಥವಾ ಮಾಡಬೇಕಾಗಿರುವ ಕೆಲಸವನ್ನು ಮಾಡುವ ಕ್ರಮದ ಸಾದರಪಡಿಸುವಿಕೆ ಅಥವಾ ಪ್ರದರ್ಶನವನ್ನು ಪ್ರಾತ್ಯಕ್ಷಿಕೆ ಎನ್ನಲಾಗುತ್ತದೆ.

ಏನು ಬೋಧಿಸಬೇಕು ಎಂಬುದು ವಿಷಯ ವಸ್ತುವಿನತ್ತ ಕೊಂಡೊಯ್ದರೆ ಏಕೆ ಎಂಬುದು ಉದ್ದೇಶಗಳತ್ತ ಮತ್ತು ಹೇಗೆ ಎಂಬುದು ವಿಧಾನ, ತಂತ್ರ, ಶೈಲಿ ಪ್ರಾತ್ಯಕ್ಷಿಕೆಯತ್ತ ಕೊಂಡೊಯ್ಯುತ್ತದೆ.

ಇದನ್ನು ರೇಖಾಚಿತ್ರದ ಮೂಲಕ ಹೀಗೆ ಸೂಚಿಸಬಹುದು.

ಏನು – ವಿಷಯ/ವಸ್ತು

ಏಕೆ – ಉದ್ದೇಶ ಗುರಿಗಳು

ಹೇಗೆ – ವಿಧಾನ ತಂತ್ರ

ಪ್ರಶಿಕ್ಷಣಾರ್ಥಿಯು ಶಾಲೆಗೆ ಹೋಗಿ, ನಿಗದಿಪಡಿಸಿದ ಪಾಠಗಳನ್ನು ಪೂರ್ವನಿರ್ಧಾರಿತ ಕ್ರಮವನ್ನನುಸರಿಸಿ ಬೋಧಿಸಬೇಕಾಗಿರುವ ವಿಧಾನವನ್ನು ಅನುಭವಿ ಶಿಕ್ಷಕರು ಅಥವಾ ಪ್ರಶಿಕ್ಷಕರು ನೈಜ ಸನ್ನಿವೇಶದಲ್ಲಿ ಬೋಧಿಸಿ ತೋರಿಸುವುದೇ "ಪ್ರಾತ್ಯಕ್ಷಿಕೆ".

ಇದನ್ನು ಮಾದರಿ ಪಾಠ ಎಂದೂ ಕರೆಯಬಹುದು.

ಸಿದ್ಧಾಂತಗಳಿಗೆ ಪ್ರಾಯೋಗಿಕ ರೂಪ ಕೊಡುವುದು/ಅಮೂರ್ತಕ್ಕೆ ಮೂರ್ತ ರೂಪ ಕೊಡುವುದು ಇಲ್ಲಿನ ಪ್ರಮುಖ ಕ್ರಿಯೆ.

ಹೀಗೆ ಮಾಡಿ ಎಂದು ಹೇಳುವುದು ಸುಲಭ. ಹೇಳಿದುದನ್ನು ಮಾಡಿ ತೋರಿಸುವುದು ಕಠಿಣ ಸಾಧ್ಯವಾದ ಕೆಲಸ. ಆದಾಗ್ಯೂ ಮಾಡಿ ತೋರಿಸುವುದು ಸಿದ್ಧಾಂತದ ಸಬಲತೆ ದುರ್ಬಲತೆಗಳನ್ನು ಮನನ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಜನಜನಿತವಾಗಿರುವ ತಿಳುವಳಿಕೆ ಎಂದರೆ ವ್ಯಕ್ತಿಯೊಂದಿಗೆ ಕೇಳಿದ್ದು ಮರೆತುಹೋಗುತ್ತದೆ ಎಂಬುದು, ನೋಡಿದ್ದು ನೆನಪಿನಲ್ಲುಳಿಯುತ್ತದೆ. ಮಾಡಿದ್ದು ಶಾಶ್ವತವಾಗಿ ನೆಲೆಯೂರುತ್ತದೆ. ಈ ಕಾರಣಕ್ಕಾಗಿ ಪ್ರಾತ್ಯಕ್ಷಿಕೆ ಪಾಠ ಅವಶ್ಯವಿದೆ.

### ಪ್ರಾತ್ಯಕ್ಷಿಕೆಯ ಉದ್ದೇಶಗಳು

1. ಬೋಧಿಸುವ ವಿಧಿ ವಿಧಾನಗಳನ್ನು ವೀಕ್ಷಿಸಿ ಅರಿಯುವುದು.
2. ಬೋಧನೆಯ ಸಮಯದಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಸವಾಲುಗಳನ್ನು ನಿಭಾಯಿಸುವ ಕೌಶಲವನ್ನು ಕರಗತ ಮಾಡಿಕೊಳ್ಳುವುದು.
3. ತರಗತಿ ನಿರ್ವಹಣೆಯ ಜಾಣ್ಮೆಯನ್ನು ಮನಗಾಣಿಸುವುದು.
4. ಕಲಿಕೆಯ ಉಪಕರಣಗಳ ಬಳಕೆಯ ಸಂದರ್ಭ, ರೀತಿ ನೀತಿಗಳ ರೂಪುರೇಷೆಯನ್ನು ತಿಳಿಯುವುದು.
5. ಮಕ್ಕಳಲ್ಲಿ ಕಲಿಕೆಯ ಬಗೆಗಿನ ಹುದುಗಿರುವ ಆಸಕ್ತಿಯನ್ನು ಹೊರತರುವ ತಂತ್ರಗಾರಿಕೆಯನ್ನು ಗೊತ್ತುಪಡಿಸಿಕೊಳ್ಳುವುದು.
6. ಸೃಜನಶೀಲ ಭಾವನೆಗಳನ್ನು ಹುಟ್ಟುಹಾಕುವುದು.
7. ಪ್ರಜಾಸತ್ತಾತ್ಮಕ ಪರಿಸರವನ್ನು ನಿರ್ಮಾಣ ಮಾಡುವ ಬಗೆಯನ್ನು ತೋರಿಸುವುದು.
8. ಬೋಧನೆಯ ಸಂದರ್ಭದಲ್ಲಿ ಏಕಾಏಕಿ ಎದುರಾಗಬಹುದಾದ ಅನಿರೀಕ್ಷಿತ ಆಕಸ್ಮಿಕಗಳನ್ನು ನಿಭಾಯಿಸುವ ಜಾಣ್ಮೆಯನ್ನು ಪ್ರದರ್ಶಿಸುವುದು.
9. ಬೋಧನೆಯ ಪರಿಮಿತಗಳು, ಪ್ರಾಬಲ್ಯ ಮತ್ತು ದೌರ್ಬಲ್ಯಗಳನ್ನು ಅರಿತು ಸಂದರ್ಭೋಚಿತ ತಂತ್ರಗಾರಿಕೆಯನ್ನು ಹೆಣೆಯುವ ಕೌಶಲ್ಯವನ್ನು ಕರಗತಮಾಡಿಕೊಳ್ಳುವುದು.

ಇದಕ್ಕಾಗಿ ಒಂದು, ಎರಡು ಪಾಠಗಳು ಸಾಕಾಗುವುದಿಲ್ಲ. ಅನೇಕ ಪಾಠಗಳ ಪ್ರಾತ್ಯಕ್ಷಿಕೆಯ ಅಗತ್ಯವಿದೆ.

### ಪ್ರಾತ್ಯಕ್ಷಿಕೆಯ ಹಂತಗಳು

ಪ್ರಾತ್ಯಕ್ಷಿಕೆಯು 40, 45 ನಿಮಿಷಗಳಲ್ಲಿ ಮಾಡಬಹುದಾದ ಬೋಧನೆಯಾದರೂ, ಇದಕ್ಕೆ ಮುನ್ನ ಮತ್ತು ಉತ್ತರೋತ್ತರವಾಗಿ ಮಾಡಬೇಕಾದ ಕೆಲಸ ಕಾರ್ಯಗಳು ಅನೇಕ ಇದ್ದು ಅವುಗಳನ್ನು ನಿಗದಿತ ಕ್ರಮದಲ್ಲಿ ಪಾಲನೆ ಮಾಡುವುದರಿಂದ ನಿರೀಕ್ಷಿತ ಗುರಿ ಮುಟ್ಟುವುದು ಸಾಧ್ಯವಾಗುತ್ತದೆ ಮತ್ತು ಬೋಧನೆ ಫಲಕಾರಿಯಾಗುತ್ತದೆ. ಆ ಕೆಲಸ

Digitised by Bharatavani, CIIL

ಕಾರ್ಯಗಳನ್ನು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸಬಹುದಾಗಿದೆ.

ಪ್ರಾತ್ಯಕ್ಷಿಕೆ–ಪೂರ್ವ ಹಂತ

ಪ್ರಾತ್ಯಕ್ಷಿಕೆ ಹಂತ

ಪ್ರಾತ್ಯಕ್ಷಿಕೋತ್ತರ ಹಂತ

**ಪ್ರಾತ್ಯಕ್ಷಿಕೆ ಪೂರ್ವ ಹಂತ**

1. ಶಿಕ್ಷಣದ ಉದ್ದೇಶಗಳು, ವಿಷಯ (ಇತಿಹಾಸ, ಪೌರನೀತಿ, ವಿಜ್ಞಾನ, ಗಣಿತ ಭಾಷೆ ಇತ್ಯಾದಿ) ಉದ್ದೇಶಗಳು ಹಾಗೂ ಪ್ರಸ್ತುತ ಪಾಠದ ವಿಶಿಷ್ಟ ಉದ್ದೇಶಗಳಿಗಿರುವ ಸಹ ಸಂಬಂಧದ ಅರಿವನ್ನ ಪ್ರಶಿಕ್ಷಕಾರ್ಥಿಗಳಿಗೆ ಮನಗಾಣಿಸುವುದು.
2. ಪ್ರಸ್ತುತ ಬೋಧನಾ ವಸ್ತು, ಚಟುವಟಿಕೆಗಳು, ತಂತ್ರ, ಕೌಶಲ ಮೊದಲಾದವುಗಳಿಗಿರುವ ಸಮೀಪ ಸಂಬಂಧವನ್ನು ಪ್ರಶಿಕ್ಷಣಾರ್ಥಿಗಳಿಗೆ ತಿಳಿಯಹೇಳುವುದು.
3. ಪಾಠ ಕಲಿಕೆಯಿಂದ ವಿದ್ಯಾರ್ಥಿಗಳಿಗಾಗುವ ಪ್ರಯೋಜನಗಳು ಎದುರಾಗಬಹುದಾದ ಸಮಸ್ಯೆಗಳನ್ನು ಪೂರ್ವಭಾವಿಯಾಗಿ ಚರ್ಚಿಸುವುದು.

**ಪ್ರಾತ್ಯಕ್ಷಿಕೆ ಹಂತ**

ಈ ವಿವರಣೆ ನಂತರದಲ್ಲಿ ವಾಸ್ತವವಾಗಿ ಬೋಧಕರು ನೈಜ ಸನ್ನಿವೇಶದಲ್ಲಿ ಬೋಧಿಸುವುದು ಎರಡನೆಯ ಮಹತ್ವಪೂರ್ಣವಾದ ಹಂತ.

1. ಮಾಹಿತಿ ಸಾದರಪಡಿಸುವಿಕೆ. ಅರ್ಥಾತ್ ಬೋಧಕರು ಮಕ್ಕಳಿಗೆ ವಿಷಯವನ್ನು ತಿಳಿಸುವುದು.
2. ಕೌಶಲ, ಅಭಿರುಚಿ, ಆಸಕ್ತಿ ಇವುಗಳ ಬೆಳಸುವಿಕೆ
3. ವಿದ್ಯಾರ್ಥಿಗಳ ಅರಿವನ್ನು ಅಳೆಯುವ ಚಟುವಟಿಕೆಗಳು ಮತ್ತು ಅನ್ಯೋನ್ಯತೆಗಳ ಅರಿವಿನ ಮನವರಿಕೆ

**ಪ್ರಾತ್ಯಕ್ಷಿಕೋತ್ತರ ಹಂತ**

1. ರೂಢ ಬೋಧನೆಗಾಗಿ ಪ್ರಶಿಕ್ಷಣಾರ್ಥಿಗಳನ್ನು ತೊಡಗಿಸುವುದು.
2. ವ್ಯಕ್ತಿಗತ ಅಭ್ಯಾಸ ನಿಯೋಜನ
3. ಶಿಕ್ಷಣದ ಉದ್ದೇಶಗಳು, ವಿಷಯ ಹಾಗೂ ಪ್ರಸ್ತುತ ಪಾಠ ಬೋಧನೋದ್ದೇಶಗಳು ಮತ್ತು ಫಲಾಫಲಗಳ ಪುನಿರ್‌ವಿಶ್ಲೇಷಣೆ.

**ಪ್ರಾತ್ಯಕ್ಷಿಕೆ ಪಾಠದ ಮುನ್ನೆಚ್ಚರಿಕೆಗಳು:**

1. ಬೋಧನೆ ಮಾದರಿಯಾಗಿರಬೇಕು. ಆದರ್ಶತೆಯ ಅಗತ್ಯವಿಲ್ಲ. ವಾಸ್ತವದ ನೆಲೆಗಟ್ಟಿನಲ್ಲಿ ರೂಪಿತವಾಗಿರಬೇಕು.
2. ಎಲ್ಲ ಕೌಶಲಗಳನ್ನು ತಂತ್ರಗಳನ್ನು ಒಂದೆರಡು ಪಾಠಗಳಲ್ಲಿ ತರಲಾಗಿದೆಂಬ ಪ್ರಾಯೋಗಿಕ ಅರಿವು, ವಾಸ್ತವ ಪ್ರಜ್ಞೆ ಬೋಧಕರಿಗೆ ಮತ್ತು ವೀಕ್ಷಕರಿಗೆ ಇದ್ದರೆ ಸಾಕು.
3. ಇದು ಮ್ಯಾಜಿಕ್ ಶೋನಂತಾಗಬಾರದು. ಬೋಧನೆಗೆ ಮುನ್ನ ವೀಕ್ಷಕರಿಗೆ ವಿವರಗಳು ಗೊತ್ತಿದ್ದರೆ ಚರ್ಚೆಗೆ ಸಹಾಯವಾಗುವುದು.
4. ರೂಢ ಬೋಧನೆಯ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳಿಂದ ಪ್ರಶಿಕ್ಷಕರು ಏನನ್ನು ನಿರೀಕ್ಷಿಸುತ್ತಾರೆಯೋ, ಅದೆಲ್ಲವನ್ನೂ ಜಾರಿಗೆ ತರಲು ಪ್ರಯತ್ನಿಸಬೇಕು. ಪಾಠ ಯೋಜನೆ, ಬಳಸುವ ಸಾಮಗ್ರಿಗಳು, ಅನುಸರಿಸುವ ವಿಧಾನ, ಅವಲೋಕನ ಗ್ರಂಥಗಳು ಇತ್ಯಾದಿ.

–ಲೋಕೇ.

## ಪ್ರವೇಶ ಪರೀಕ್ಷೆಗಳು

ಶಿಕ್ಷಣ ರಂಗದಲ್ಲಿ ಪ್ರವೇಶ ಪರೀಕ್ಷೆಗಳನ್ನು ಪ್ರಸಕ್ತ ಶೈಕ್ಷಣಿಕ ವ್ಯವಸ್ಥೆಯ ಅನಿವಾರ್ಯತೆ ಎನ್ನಬಹುದಾಗಿದೆ. ಹೆಚ್ಚುತ್ತಿರುವ ವಿದ್ಯಾವಂತರ ಸಂಖ್ಯೆ ಹಾಗೂ ಶಿಕ್ಷಣದ ಹಲವು ವಿಭಾಗಗಳಿಗೆ ಓದಿಗಾಗಿ ಪೈಪೋಟಿ ಒಂದು ರೀತಿ ಶಿಕ್ಷಣ ವ್ಯವಸ್ಥೆಯ ಆರೋಗ್ಯಕರ ಬೆಳವಣಿಗೆಗೆ ಹಿಡಿದ ಕನ್ನಡಿ ನಿಜ. ಆದರೆ ವಿದ್ಯಾರ್ಥಿಗಳಿಗೆ ವಿದ್ಯೆ ಹಾಗೂ ವಿಭಾಗದ ಆಯ್ಕೆಗೆ (ಓದಿಗಾಗಿ) ಸಾರ್ವತ್ರಿಕವಾಗಿ ಪ್ರವೇಶ ನೀಡದೇ ಪ್ರವೇಶ ಪರೀಕ್ಷೆಗೆ ಅಣಿಗೊಳಿಸುವುದು ಈ ಸ್ಪರ್ಧಾತ್ಮಕ ಯುಗದ ಅನಿವಾರ್ಯತೆಯಾಗಿ ಬಿಟ್ಟಿದೆ.

ಪ್ರವೇಶ ಪರೀಕ್ಷೆಗಳನ್ನು ನಡೆಸಲು ಕಾರಣಗಳನ್ನು ತಿಳಿಯುವುದಾದರೆ ಒಂದು "ಕೋರ್ಸ್"ನ ಪ್ರವೇಶಕ್ಕೆ ಯೋಗ್ಯ ವಿದ್ಯಾರ್ಥಿಯನ್ನು ಆಯ್ಕೆ ಮಾಡುವ ಅನಿವಾರ್ಯತೆ ಇರಬಹುದು. ಅಂತೆಯೇ ವಿಶ್ವವಿದ್ಯಾನಿಲಯಗಳಲ್ಲಿ ಆದಂತಹ ಮೌಲ್ಯಮಾಪನದ ಸಡಿಲತೆಯಿಂದಾಗಿ ವಿದ್ಯಾರ್ಥಿಗಳು ದರ್ಜೆ ಹಾಗೂ ಅಂಕಗಳಿಸುವಿಕೆಯಲ್ಲಿ ಒಂದು ವಿಶ್ವವಿದ್ಯಾನಿಲಯದಿಂದ ಇನ್ನೊಂದು ವಿಶ್ವವಿದ್ಯಾನಿಲಯಕ್ಕೆ ಅಂತರ ಹಾಗೂ ಮೌಲ್ಯೀಕರಿಸಲು ಹೆಚ್ಚಿನ ಏರು–ಪೇರು ಈ ವೈರುಧ್ಯಗಳಿಂದಾಗಿ ಒಂದು ಕೋರ್ಸ್‌ಗೆ ವಿದ್ಯಾರ್ಥಿಯನ್ನು ಆಯ್ಕೆ ಮಾಡಲು ಪ್ರವೇಶ ಪರೀಕ್ಷೆಗಳು ಅನಿವಾರ್ಯವಾದವು.

ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸ್ನಾತಕೋತ್ತರ ಪದವಿಯ ಆಯಾ ವಿಷಯಕ್ಕೆ ಓದಿಗಾಗಿ ವಿದ್ಯಾರ್ಥಿಯನ್ನು ಆಯ್ಕೆ ಮಾಡಲು ಪ್ರವೇಶ ಪರೀಕ್ಷೆಗಳು ನಡೆಯುತ್ತವೆ. ಉದಾ: M.Ed(ಶಿಕ್ಷಣ ಶಾಸ್ತ್ರ), MSW (ಸಮಾಜ ಕಾರ್ಯ).

ಭೌತಶಾಸ್ತ್ರ, ರಸಾಯನಶಾಸ್ತ್ರ, ವಾಣಿಜ್ಯ, ಭಾಷೆಗಳು ಹೀಗೆ ಹಲವು ವಿಷಯಗಳಿಗೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಓದಲು ಪ್ರವೇಶ ಪರೀಕ್ಷೆಗಳಿರುತ್ತವೆ. ಇಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಪದವಿ ಹಾಗೂ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗುವುದು. ಪ್ರವೇಶ ಪರೀಕ್ಷೆಯ ಪಠ್ಯಕ್ರಮವೂ ಸಹ ಆ ವಿದ್ಯಾರ್ಥಿ ತಾನು ಪದವಿಯಲ್ಲಿ ಐಚ್ಛಿಕವಾಗಿ ಪಡೆದ ಆಯಾ ನಿಗದಿತ ವಿಷಯದ ಜ್ಞಾನವನ್ನು ಪರೀಕ್ಷಿಸುವುದು. ಪ್ರಶ್ನೆ ಪತ್ರಿಕೆಯೂ ಸಹ ಬಹು ಆಯ್ಕೆ ಪ್ರಶ್ನೆಗಳು, ಸಂಕ್ಷಿಪ್ತ ಪ್ರಶ್ನೆಗಳು, ವಿಶ್ಲೇಷಣೆ ಪ್ರಶ್ನೆಗಳಿಂದ ಕೂಡಿರುತ್ತದೆ. ಹೀಗೆ ಈ ಪರೀಕ್ಷೆ ಸಹಾಯದಿಂದ ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಗುವುದು. ಅಗತ್ಯವಿದ್ದರೆ ಮೌಖಿಕ ಪರೀಕ್ಷೆಯನ್ನೂ ವಿದ್ಯಾರ್ಥಿಗೆ ನಡೆಸಲಾಗುವುದು.

ರಾಜ್ಯ ಮಟ್ಟದಲ್ಲಿ ನಡೆಯುವಂತಹ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪದವಿ ಪೂರ್ವ ಹಂತ ತೇರ್ಗಡೆ ಹೊಂದಿದ ನಂತರ ಅವರನ್ನು ವೈದ್ಯಕೀಯ ಶಿಕ್ಷಣಕ್ಕೆ ಎಂಜಿನಿಯರಿಂಗ್ ಶಿಕ್ಷಣಕ್ಕೆ, ಪಶುವೈದ್ಯಕೀಯ ಶಿಕ್ಷಣಕ್ಕೆ, ಕೃಷಿ ಶಿಕ್ಷಣಕ್ಕೆ ಹೀಗೆ ಹಲವು ವಿಷಯಗಳ ಓದಿಗಾಗಿ ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು. ಈ ಪರೀಕ್ಷೆಗಳಲ್ಲಿಯೂ ಸಹ ಆಯಾ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಯನ್ನು ರೂಪಿಸಲಾಗುವುದು. ವಿದ್ಯಾರ್ಥಿ ಪಡೆದ ಅಂಕಗಳು / ದರ್ಜೆ ಸಹಾಯಿಂದ ವಿದ್ಯಾಭ್ಯಾಸಕ್ಕೆ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆಮಾಡಲಾಗುವುದು.

Digitised by Bharatavani, CIIL

ರಾಷ್ಟ್ರ ಮಟ್ಟದಲ್ಲಿ ನಡೆಯುವಂತಹ ಮಿಲಿಟರಿ ಪರೀಕ್ಷೆಗಳು ಮತ್ತು GATE ಪರೀಕ್ಷೆಯನ್ನೂ ಸಹ ಪ್ರವೇಶ ಪರೀಕ್ಷೆಗಳಿಗೆ ಉದಾಹರಿಸಬಹುದಾಗಿದೆ. ಅಂತೆಯೇ ಪ್ರಥಮ ದರ್ಜೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಉಪನ್ಯಾಸಕರ ನೇಮಕಕ್ಕೆ ನಡೆಯುವ ಆಯಾ ವಿಷಯಕ್ಕೆ ಸಂಬಂಧಿಸಿದ ರಾಷ್ಟ್ರಮಟ್ಟದ NET (National Eligibility Test) ಮತ್ತು ರಾಜ್ಯಮಟ್ಟದ SLET (State Level Eligibity Test) ಗಳೂ ಪ್ರವೇಶ ಪರೀಕ್ಷೆಗಳಾಗಿದ್ದು ಅವರು ಸ್ನಾತಕೋತ್ತರ ಪದವಿಯನ್ನು ಪಡೆದಂತಹ ವಿಷಯಕ್ಕೆ ಒಂದು ಉನ್ನತ ಮಟ್ಟದ ಪರೀಕ್ಷೆ ಏರ್ಪಡಿಸಿ ಉಪನ್ಯಾಸಕ ವೃತ್ತಿಗೆ ಸಂಶೋಧನೆಗೆ ಅರ್ಹತೆ ಇದೆ ಎಂದು ಹೇಳಲಾಗುವುದು. ಇಲ್ಲಿಯೂ ಕೂಡ ಒಂದು ನಿಗದಿತ ಅಂಕದಿಂದ ಮೇಲ್ಪಟ್ಟ ವಿದ್ಯಾರ್ಥಿಗಳನ್ನು ಅರ್ಹರೆಂದು ಘೋಷಿಸಲಾಗುತ್ತದೆ. ಅದಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಆಯಾ ವಿಷಯದಲ್ಲಿ ಸಂಶೋಧನೆ ಕೈಗೊಳ್ಳಲು ಸರ್ಕಾರ ಗೌರವ ಧನವನ್ನು ನೀಡಿ ಪ್ರೋತ್ಸಾಹಿಸುತ್ತದೆ. ಹೀಗೆ ಪ್ರವೇಶ ಪರೀಕ್ಷೆಗಳು ವಿಶ್ವವಿದ್ಯಾನಿಲಯ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ನಡೆಯುತ್ತವೆ.

ಈ ಪರೀಕ್ಷೆಯಲ್ಲಿಯೂ ಕೂಡ ಪ್ರಶ್ನೆ ಪತ್ರಿಕೆಗಳನ್ನು ಆಯಾ ವಿಷಯಕ್ಕೆ ಅನುಗುಣವಾಗಿ ಬಹು ಆಯ್ಕೆ, ಸಂಕ್ಷಿಪ್ತ ಪ್ರಶ್ನೆ, ಪ್ರಬಂಧ ಮಾದರಿ, ಹೀಗೆ ಪ್ರಶ್ನೆ ಪತ್ರಿಕೆಯನ್ನು ಆಯೋಜಿಸಿ ಪರೀಕ್ಷೆ ನಡೆಸಲಾಗುವುದು. ಮೌಖಿಕ ಪರೀಕ್ಷೆ ಸಹ ಇರಬಹುದು. ಹೀಗೆ ಪ್ರವೇಶ ಪರೀಕ್ಷೆಗಳು ಆಯಾ ಹಂತದಲ್ಲಿ ವಿದ್ಯಾರ್ಥಿಯ ಅರ್ಹತೆಯನ್ನು ಪರೀಕ್ಷಿಸಿ ಮುಂದೆ ಓದಲು ಅವಕಾಶ ಕಲ್ಪಿಸಿಕೊಡಲು ಸಹಕಾರಿಯಾಗಿವೆ ಅಂತೆಯೇ ಶಿಕ್ಷಣ ಕ್ಷೇತ್ರದಲ್ಲಿ ಗುಣಾತ್ಮಕ ಬದಲಾವಣೆ ತರಲು ಪ್ರವೇಶ ಪರೀಕ್ಷೆಗಳು ಅನಿವಾರ್ಯವಾಗಿವೆ.

–ಜಿ.ಎನ್.ಕೆ.

## ಪ್ರಶ್ನೆ ಪತ್ರಿಕೆಗಳ ರಚನೆ

ಶಿಕ್ಷಣದ ಗುಣಮಟ್ಟವು ಅದರ ಧ್ಯೇಯೋದ್ದೇಶಗಳು ಎಷ್ಟರಮಟ್ಟಿಗೆ ಯಾವ ಗುಣದೊಂದಿಗೆ ಈಡೇರಿಸಲ್ಪಟ್ಟಿವೆ ಎಂಬುದನ್ನು ಅವಲಂಬಿಸಿದೆ. ವ್ಯವಸ್ಥಾ ಉಪಕ್ರಮವನ್ನು ಅಳವಡಿಸಿಕೊಂಡು ಶಿಕ್ಷಣ ವ್ಯವಸ್ಥೆಯನ್ನು ಮೌಲ್ಯಮಾಪನ ಮಾಡುವ ಮೂಲಕ ಇದನ್ನು ತಿಳಿದುಕೊಳ್ಳಬಹುದು. ಅದೇ ರೀತಿಯಾಗಿ ಯಾವುದೇ ಹಂತದಲ್ಲಿ ಯಾವುದೇ ವಿಷಯದಲ್ಲಿನ ಸಾಮಾನ್ಯ ಶಿಕ್ಷಣವಿರಲಿ, ವೃತ್ತಿಪರ ಶಿಕ್ಷಣವಿರಲಿ ಶೈಕ್ಷಣಿಕ ಸಾಧನೆಯನ್ನು ಮೌಲ್ಯಮಾಪನದ ಮೂಲಕ ನಿರ್ಧರಿಸಲಾಗುವುದು. ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಪರಿಮಾಣಾತ್ಮಕವಾಗಿ ಹಾಗೂ ಗುಣಾತ್ಮಕವಾಗಿ ಅಳೆಯುವ ಒಂದು ಸುವ್ಯವಸ್ಥಿತವಾದಂತಹ ಪ್ರಕ್ರಿಯೆಯೇ ಮೌಲ್ಯಮಾಪನ.

ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ವಿಶಾಲ ಅರ್ಥದಲ್ಲಿ ಸಾಧನೆ ಎಂದು ಪರಿಗಣಿಸಬಹುದು. ಹೀಗಾಗಿ ವಿದ್ಯಾರ್ಥಿಗಳು ತಾವು ಕಲಿತ ವಿಷಯಗಳಲ್ಲಿ ಎಷ್ಟರ ಮಟ್ಟಿಗೆ ಸಾಧನೆ ಮಾಡಿರುವರೆಂಬುದನ್ನು ಅಳೆಯುವ ಪರೀಕ್ಷೆಯನ್ನು ಸಾಧನಾ ಪರೀಕ್ಷೆಗಳು ಎನ್ನುವರು. ನಿರ್ದಿಷ್ಟ ಅವಧಿಯಲ್ಲಿ ಉದ್ದೇಶಿತ ಗುರಿಗಳು ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿವೆ ಎಂಬುದನ್ನು ನಿರ್ಧರಿಸುವುದು ಇವುಗಳ ಗುರಿ. ಸಾಧನ ಪರೀಕ್ಷೆಯು ಶೈಕ್ಷಣಿಕ ಮೌಲ್ಯ ಮಾಪನದ ಪ್ರಮುಖ ಅಂಗವಾಗಿದೆ. ವಿದ್ಯಾರ್ಥಿಗಳ ಸಾಧನೆಯನ್ನು ಲಿಖಿತ, ಮೌಖಿಕ ಹಾಗೂ ಕಾರ್ಯ ನಿರ್ವಹಣಾ ಪರೀಕ್ಷೆಗಳ ಮೂಲಕ ನಿರ್ಧರಿಸಬಹುದು. ಯಾವ ವಿಧದ ಪರೀಕ್ಷೆಯನ್ನು ಮಾಡಬೇಕು ಎಂಬುದು ಪೂರ್ವನಿಗದಿತ ಕಲಿಕೆಯ ಉದ್ದೇಶಗಳನ್ನು ಅವಲಂಬಿಸಿದೆ. ಸಾಧನೆ ಪರೀಕ್ಷೆಗಳಲ್ಲಿ ಪ್ರಮುಖವಾಗಿರುವ ಲಿಖಿತ ಪರೀಕ್ಷೆಯ ಪರಿಣಾಮಕಾರಿತ್ವವು ಅದರಲ್ಲಿ ಬಳಸುವ ಪ್ರಶ್ನೆ ಪತ್ರಿಕೆಗಳ ಗುಣಮಟ್ಟವನ್ನು ಹೊಂದಿಕೊಂಡಿವೆ. ಹಾಗಾಗಿ ಲಿಖಿತ ಸಾಧನೆ ಪರೀಕ್ಷೆಯ ಉದ್ದೇಶಗಳು ಈಡೇರಬೇಕಾದರೆ ಒಂದು ಸಂತುಲಿತ ಪ್ರಶ್ನೆ ಪತ್ರಿಕೆಯ ಅಗತ್ಯವಿದೆ. ಇಂತಹ ಪ್ರಶ್ನೆ ಪತ್ರಿಕೆಗಳನ್ನು ರಚಿಸುವಾಗ ಕೆಲವು ಹಂತಗಳನ್ನು ಅನುಸರಿಸಬೇಕು.

**ಹಂತ 1: ಪರೀಕ್ಷಾ ಯೋಜನೆ:** ಪ್ರಶ್ನೆ ಪತ್ರಿಕೆಯ ರಚನೆಯ ಮೊದಲ ಹಂತ ಪರೀಕ್ಷೆಯ ವಿನ್ಯಾಸವನ್ನು ರೂಪಿಸಿಕೊಳ್ಳುವುದು. ಈ ವಿನ್ಯಾಸವನ್ನು ರೂಪಿಸುವಾಗ ಮೊತ್ತ ಮೊದಲಿಗೆ ಪರೀಕ್ಷೆಯನ್ನು ನಡೆಸುವ ಉದ್ದೇಶವನ್ನು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು. ಜೊತೆಗೆ ವಿವಿಧ ಬೋಧನಾ ಉದ್ದಿಷ್ಟಗಳಿಗೆ ಬೋಧನಾ ಘಟಕಗಳಿಗೆ ಹಾಗೂ ಪ್ರಶ್ನೆಗಳ ಪ್ರಕಾರಗಳಿಗೆ ಅಂಕಗಳ ರೂಪದಲ್ಲಿ ಎಷ್ಟು ಒತ್ತು ನೀಡಬೇಕೆಂದು ನಿರ್ಧರಿಸಲಾಗುವುದು ಇವುಗಳನ್ನು ಸಂಕ್ಷಿಪ್ತವಾಗಿ ಕೆಳಗೆ ತಿಳಿಸಲಾಗಿದೆ.

- **ಉದ್ದೇಶ ಆಧಾರಿತ ಅಂಕಗಳ ಶೇಕಡಾವಾರು ವಿತರಣೆ**

ಮೌಲ್ಯ ನಿರ್ಧರಿಸಬೇಕಾದ ಕಲಿಕೆಯ ಫಲಿತಗಳನ್ನು ಪಟ್ಟಿ ಮಾಡಿಕೊಂಡು ಅವುಗಳನ್ನು ವಿವಿಧ ಉದ್ದಿಷ್ಟಗಳಾಗಿ ವರ್ಗೀಕರಿಸಿ ಕೊಳ್ಳಬೇಕು. ಬಳಿಕ ಯಾವ ಉದ್ದಿಷ್ಟಗಳಿಗೆ ಎಷ್ಟು ಒತ್ತು ಕೊಡಬೇಕು ಎಂಬುದನ್ನು ಅಂಕಗಳ ಶೇಕಡಾವಾರು ಹಂಚಿಕೆಯ ಮೂಲಕ ನಿರ್ಧರಿಸಿಕೊಳ್ಳಬೇಕು.

- **ವಿಷಯಾಂಶಗಳ ಶೇಕಡಾವಾರು ಅಂಕ ವಿತರಣೆ**

ಪ್ರಶ್ನೆ ಪತ್ರಿಕೆಯನ್ನು ಘಟಕ / ಅರ್ಧವಾರ್ಷಿಕ / ವಾರ್ಷಿಕ ಪರೀಕ್ಷೆಗಾಗಿ ತಯಾರಿಸಲಾಗುತ್ತಿದೆಯೇ ಎಂಬುದನ್ನು ಗಮನದಲ್ಲಿರಿಸಿಕೊಂಡು ಘಟಕ ಪರೀಕ್ಷೆಯಾದರೆ ಕಲಿವಿನಾಂಶಗಳನ್ನು ಪಟ್ಟಿ ಮಾಡಿಕೊಳ್ಳಬೇಕು, ವಾರ್ಷಿಕ ಇಲ್ಲವೇ ಅರ್ಧವಾರ್ಷಿಕ ಪರೀಕ್ಷೆಗಳಾದರೆ ಪರೀಕ್ಷೆಗೆ ಒಳಪಡುವ ಪಠ್ಯಭಾಗದ ಘಟಕಗಳನ್ನು ಪಟ್ಟಿ ಮಾಡಿಕೊಂಡು ಅವುಗಳಲ್ಲಿನ ವಿಷಯದ ಪ್ರಾಮುಖ್ಯತೆಯ ಆಧಾರದ ಮೇಲೆ ಶೇಕಡಾವಾರು ಅಂಕಗಳ ಹಂಚಿಕೆಯನ್ನು ನಿರ್ಧರಿಸಬೇಕು.

- **ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಅಂಕ ವಿತರಣೆ**

ಈ ಹಂತದಲ್ಲಿ ಈಗಾಗಲೇ ಪರೀಕ್ಷಿಸಲು ನಿರ್ಧರಿಸಿರುವ ವಿಷಯಾಂಶಗಳು ಹಾಗೂ ಉದ್ದೇಶಗಳನ್ನು ಯಾವ ಸ್ವರೂಪದ ಪ್ರಶ್ನೆಗಳಿಂದ ಪರೀಕ್ಷಿಸಬಹುದೆಂದು ತೀರ್ಮಾನಿಸಿಕೊಳ್ಳಬೇಕು ಹಾಗೂ ಪ್ರತಿ ಸ್ವರೂಪದ ಪ್ರಶ್ನೆಗಳ ಶೇಕಡಾವಾರನ್ನು ನಿರ್ಧರಿಸಬೇಕು. ಸಾಮಾನ್ಯವಾಗಿ ಪ್ರಶ್ನೆ ಪತ್ರಿಕೆಗಳಲ್ಲಿ ವಸ್ತುನಿಷ್ಠ, ಕಿರು ಉತ್ತರ ಹಾಗೂ ವಿವರಣಾತ್ಮಕ ಮಾದರಿಯ ಪ್ರಶ್ನೆಗಳನ್ನು ಬಳಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವಸ್ತುನಿಷ್ಠ ಮಾದರಿ ಪರೀಕ್ಷೆಯ ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಹೊಂದಿರುವ ಪರೀಕ್ಷೆಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಾಗೂ ಬಹುತೇಕ ಸಾಧನೆ ಪರೀಕ್ಷೆಗಳ ಪ್ರಮುಖ ಭಾಗವಾಗಿದೆ.

ಮೇಲಿನ ಮೂರು ಅಂಶಗಳನ್ನು ನಿರ್ಧರಿಸಿದ ಬಳಿಕ ಪ್ರಶ್ನೆ ಪತ್ರಿಕೆಯಲ್ಲಿ ಕೊಡಬೇಕಾದ ಸಾಮಾನ್ಯ ಸೂಚನೆಗಳು, ಆಯ್ಕೆಯ ಪರಿ, ಪ್ರಶ್ನೆವಾರು ವಿಭಾಗಗಳು ಹಾಗೂ ಅದಕ್ಕೆ ಸೂಚನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು.

**ಹಂತ 2: ನೀಲಿ ನಕ್ಷೆಯ ತಯಾರಿ**

ವಿವಿಧ ಉದ್ದೇಶಗಳು, ವಿಷಯ ಮತ್ತು ವಿವಿಧ ರೀತಿಯ ಪ್ರಶ್ನೆಗಳಿಗೆ ಅಂಕಗಳ ರೂಪದಲ್ಲಿ ನೀಡಿರುವ ಒತ್ತನ್ನು ತೋರಿಸುವ ತ್ರಿಆಯಾಮ ನಕ್ಷೆಯೇ ನೀಲನಕ್ಷೆ. ಇದನ್ನು ಪರೀಕ್ಷಾ ಯೋಜನೆಯ ಕೊನೆಯ ಭಾಗವೆಂತಲೂ ಪರಿಗಣಿಸಬಹುದು.

Digitised by Bharatavani, CIIL

**ಹಂತ 3: ನೀಲಿ ನಕ್ಷೆಯ ಆಧಾರದಲ್ಲಿ ಪ್ರಶ್ನೆಗಳನ್ನು ಸಿದ್ಧಪಡಿಸುವುದು**

ನೀಲಿ ನಕ್ಷೆಯಲ್ಲಿ ತಿಳಿಸಿದಂತೆ ವಿಷಯ, ಪ್ರಶ್ನೆಗಳ ಪ್ರಕಾರಗಳು ಹಾಗೂ ಉದ್ದಿಷ್ಟಗಳನ್ನು ಗಮನದಲ್ಲಿರಿಸಿಕೊಂಡು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಪ್ರತಿಯೊಂದು ಪ್ರಶ್ನೆಯೂ ವಿಷಯ ಸಮಂಜಸತೆ ಹಾಗೂ ವಸ್ತುನಿಷ್ಠತೆಯನ್ನು ಹೊಂದಿರುವಂತೆ ಎಚ್ಚರವಹಿಸಬೇಕು.

**ಹಂತ 4: ಪ್ರಶ್ನೆಗಳನ್ನು ಜೋಡಿಸುವುದು ಹಾಗೂ ಪರೀಕ್ಷಾ ಸೂಚನೆಗಳನ್ನು ನೀಡುವುದು**

ತಯಾರಿಸಿದ ಪ್ರಶ್ನೆಗಳನ್ನು ಪರೀಕ್ಷಾ ವಿನ್ಯಾಸದಲ್ಲಿ ತಿಳಿಸಿದಂತೆ ವಿವಿಧ ವಿಭಾಗಗಳಲ್ಲಿ ಹಾಗೂ ಪ್ರಶ್ನೆಗಳ ಪ್ರಕಾರಗಳ ಆಧಾರದಲ್ಲಿ ವ್ಯವಸ್ಥಿತವಾಗಿ ಜೋಡಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯಲ್ಲಿ ಪರೀಕ್ಷೆಗೆ ಸಂಬಂಧಿಸಿದ ಪರೀಕ್ಷೆಯ ಅವಧಿ, ಗರಿಷ್ಠ ಅಂಕಗಳು, ಉತ್ತರಿಸುವ ಪ್ರಶ್ನೆಗಳ ಸಂಖ್ಯೆ, ಆಯ್ಕೆಯ ಕ್ರಮ, ಪ್ರತಿ ಪ್ರಶ್ನೆಗಳಿಗೆ ನಿಗದಿಪಡಿಸಿದ ಅಂಕಗಳು ಹಾಗೂ ನಿರೀಕ್ಷಿತ ಉತ್ತರದ ಮಿತಿ ಇತ್ಯಾದಿ ಅಂಶಗಳಿಗೆ ಸಂಬಂಧಿಸಿದ ಸೂಚನೆಗಳನ್ನು ನೀಡಬೇಕು.

**ಹಂತ 5: ಮಾದರಿ ಉತ್ತರಗಳ ಕ್ರೋಢೀಕರಣ, ಅಂಕಗಳಿಗೆ ಸೂಚಿ ಹಾಗೂ ಅಂಕಗಳ ವಿತರಣೆ**

ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರ ನೋಡಿ ಅಂಕಗಳನ್ನು ಕೊಡಲು ಉತ್ತರಗಳನ್ನು ಸಿದ್ಧಪಡಿಸಿ ಅಂಕಗಳಿಗೆ ಸೂಚಿಯನ್ನು ನೀಡಬೇಕು. ಇತರ ಮಾದರಿ ಪ್ರಶ್ನೆಗಳಿಗೆ ಮಾದರಿ ಉತ್ತರ ಕೊಡುವುದರೊಂದಿಗೆ ಅಂಕಗಳನ್ನು ನೀಡುವ ವಿಧಾನವನ್ನು ತಿಳಿಸಬೇಕು. ಇದು ಮೌಲ್ಯಮಾಪನ ಏಕಪ್ರಕಾರವಾಗಿ ನಡೆಯಲು ಅತಿ ಅವಶ್ಯವಾಗಿದೆ.

**ಹಂತ 6: ಪ್ರಶ್ನೆ ಪತ್ರಿಕೆಯ ಸಂಪಾದನಾ ಕಾರ್ಯ**

ಇಲ್ಲಿ ಪ್ರಶ್ನೆ ಪತ್ರಿಕೆಯನ್ನು ನೀಲಿ ನಕಾಶೆಯ ಆಧಾರದಲ್ಲಿ ರಚಿತವಾಗಿದೆಯೇ ಎಂಬುದನ್ನು ಪುನಃ ಪರಿಶೀಲನೆ ಮಾಡಿಕೊಂಡು ಪ್ರಶ್ನೆ ಪತ್ರಿಕೆಯಲ್ಲಿ ಸಾಮಾನ್ಯ ಸೂಚನೆಗಳು ವಿಭಾಗಗಳಿಗೆ ಸೂಚನೆಗಳು, ಪ್ರತಿ ಪ್ರಶ್ನೆಗೆ ಇರುವ ಅಂಕಗಳು ಹಾಗೂ ಗರಿಷ್ಠ ಅಂಕಗಳು ಮುಂತಾದ ಅಂಶಗಳು ಸ್ಪಷ್ಟ ಹಾಗೂ ನಿಖರವಾಗಿವೆಯೇ ಎಂದು ಒಟ್ಟಾರೆ ಮತ್ತೊಮ್ಮೆ ಪರಿಶೀಲನೆ ಮಾಡಲಾಗುತ್ತದೆ.

ಸಂಪಾದನಾ ಕಾರ್ಯದಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪ್ರಶ್ನೆಗಳ ಅನುಕ್ರಮ ಸುಲಭದಿಂದ ಕಷ್ಟದ ಕಡೆಗೆ ಇರುವಂತೆ ಪ್ರಶ್ನೆಗಳ ಅಳವಡಿಕೆ ಪ್ರಶ್ನೆ ಪತ್ರಿಕೆಯಲ್ಲಿ ಆಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವುದು.

**ಹಂತ 7: ಪ್ರಶ್ನಾವಾರು ವಿಶ್ಲೇಷಣೆ**

ಮೇಲಿನ ಆರು ಹಂತಗಳನ್ನು ಪೂರೈಸಿದ ಬಳಿಕ ಪ್ರಶ್ನೆ ಪತ್ರಿಕೆಯಲ್ಲಿನ ವಿಶ್ಲೇಷಣೆ ಮಾಡುವುದರಿಂದ ಲೋಪದೋಷಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುವುದಲ್ಲದೆ ಪ್ರಶ್ನೆ ಪತ್ರಿಕೆಯ ಪರಿಷ್ಕರಣೆಗೂ ಸಹಾಯವಾಗುತ್ತದೆ.

–ವಿ.ಕು.

## ಪ್ರಾಚೀನ ಸಾಂಪ್ರದಾಯಿಕ ಕಥೆಗಳಲ್ಲಿ ಶಿಕ್ಷಣ

ಮನುಷ್ಯ ಸಂಸ್ಕಾರಿಯಾಗಲು, ಜ್ಞಾನಿಯಾಗಲು, ಸದ್ಗುಣಿ, ಸನ್ನಡತೆಯುಳ್ಳವನಾಗಲು, ಅಂತರಂಗ ಬಹಿರಂಗ ಶುದ್ಧವಾಗಲು, ಒಟ್ಟಾರೆ ಆತನ ಸರ್ವತೋಮುಖ ಅಭಿವೃದ್ಧಿಯಾಗಲು ಶಿಕ್ಷಣ ಅಗತ್ಯ, ಅನಿವಾರ್ಯ. ಶಿಕ್ಷಣ ಇವೆಲ್ಲದರ ಭದ್ರಬುನಾದಿ. ಇದು ಜಾತಿ, ಮತ, ಲಿಂಗ ಭೇದವಿಲ್ಲದೆ, ಹಿರಿಯ, ಕಿರಿಯ, ಮೇಲು–ಕೀಳು ಎಂಬ ಭೇದವಿಲ್ಲದೆ ಎಲ್ಲರಿಗೂ ಸಂಜೀವಿನಿ. ಹಾಗಾಗಿ ಪ್ರಾಚೀನ ಕಾಲದಿಂದಲೂ ದಾಂಗುಡಿಯಿಡುತ್ತಲೇ ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಲೇ ಬರುತ್ತಿದೆ.

ಪ್ರಾಚೀನ ಕಾಲದಿಂದಲೂ ನೀತಿ, ನ್ಯಾಯ, ತತ್ವ, ಸಿದ್ಧಾಂತ ಮುಂತಾದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವಾಗ ಸಾಮಾನ್ಯವಾಗಿ ಕಥೆಗಳ ಮೂಲಕ ಹೇಳುವ ಪದ್ಧತಿ ರೂಢಿಯಲ್ಲಿತ್ತು. ಅಂತೆಯೇ ಜಾತಕಕಥೆಗಳಿಂದ ಹಿಡಿದು ಅನೇಕ ಕಥೆಗಳು ಸೃಷ್ಟಿಯಾದವು. ಜಾತಕ ಕಾಲೀನ ಸಮಾಜ ವಿದ್ಯೆಯ ಮಹತ್ವವನ್ನು ಎತ್ತಿ ಹಿಡಿದಿದೆ. ಬುದ್ಧನ ಜಾತಕ ಕಥೆಗಳಲ್ಲಿ ಇದು ವ್ಯಾಪಕವಾಗಿರುವುದು ಕಂಡು ಬರುತ್ತದೆ. ಸುಮಾರು 2500 ಪುಟಗಳಲ್ಲಿ ಹರಡಿಕೊಂಡಿರುವ 547 ಬುದ್ಧನ ಜಾತಕ ಕಥೆಗಳಲ್ಲಿ ಅನೇಕ ಸ್ವಾರಸ್ಯಕರ ಅಂಶಗಳ ಮೂಲಕ ಶಿಕ್ಷಣ ಹಾಗೂ ಅದರ ಮಹತ್ವವನ್ನು ಗುರುತಿಸಬಹುದು. ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯಲ್ಲಿ ಹಣ ಸಂಪಾದನೆಗಿಂತ ಹೆಚ್ಚಾಗಿ ಬೌದ್ಧಿಕ ಹಾಗೂ ಆತ್ಮವಿಕಾಸಗಳ ಕಡೆಗೆ ಒತ್ತು ನೀಡಲಾಗುತ್ತಿತ್ತು. ಅಭ್ಯುದಯ ಹಾಗೂ ಯಶಸ್ಸಿದ್ಧಿಗಾಗಿ ಶಿಕ್ಷಣ ನೀಡಲಾಗುತ್ತಿತ್ತು. ಅಂಥ ಶಿಕ್ಷಣ ಮಾನ್ಯತೆ ಪಡೆದಿತ್ತು. ಆಚಾರ್ಯರ ಅಭಿಪ್ರಾಯ ಮತ್ತು ವಿದ್ಯಾರ್ಥಿಯ ಧರ್ಮ ಇವೆ ರೀತಿ ನೀತಿಯಾಗಿದ್ದವು. ಇದೇ ಶಿಕ್ಷಣದ ಮುಖ್ಯ ಉದ್ದೇಶವಾಗಿತ್ತು. ಶಿಕ್ಷಣದ ಸ್ವರೂಪ ಸ್ಥಿರವಾಯಿತು. ಕ್ರಮೇಣ ನಗರಗಳ ವಿಕಾಸವಾಯಿತು. ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದವು. ಅತ್ಯಂತ ಪ್ರಾಚೀನವೆನಿಸುವ ವಿಶ್ವವಿದ್ಯಾನಿಲಯ ತಕ್ಷಶಿಲೆಯೆನಿಸಿತು. ಇದು ಗಾಂಧಾರ ದೇಶದ ರಾಜಧಾನಿಯಾಗಿತ್ತು. ಗಾಂಧಾರ ದೇಶಕ್ಕೆ ಕಾಶ್ಮೀರ ಮತ್ತು ತಕ್ಷಶಿಲೆಯ ಪ್ರದೇಶಗಳು ಸೇರಿದ್ದವು. (ಈಗಿನ ರಾವಲ್ಪಿಂಡಿ ಜಿಲ್ಲೆ, ಪಾಕಿಸ್ಥಾನ) ಅಲ್ಲಿ ಲೋಕ ಪ್ರಸಿದ್ಧ ಆಚಾರ್ಯರಿದ್ದರು. ಹಾಗಾಗಿ ಇದೊಂದು ಅತ್ಯುತ್ತಮ ಶಿಕ್ಷಣ ಕೇಂದ್ರವಾಗಿ ಹತ್ತಿರದ, ದೂರದ ಎಲ್ಲ ವಿದ್ಯಾರ್ಥಿಗಳನ್ನು ಆಕರ್ಷಿಸಿತ್ತು. ಭಾರತದ ನಾನಾ ಭಾಗಗಳಿಂದ ಮಾತ್ರವಲ್ಲದೆ ವಿದೇಶಗಳಿಂದಲೂ ವಿದ್ವಾಂಸರನ್ನು ವಿದ್ಯಾರ್ಥಿಗಳನ್ನು ಆಕರ್ಷಿಸಿತ್ತು. ತ್ಯಾನಾದ ಅಪಲೋನಿಸ್ ಕಥೆಯನ್ನು ನಂಬಬಹುದಾದರೆ ಗ್ರೀಸಿನ ವಿದ್ವಾಂಸರನ್ನು ಕೂಡ ಆಕರ್ಷಿಸಿತ್ತು. ಇಂತಹ ಮಹತ್ವ ವಿದ್ಯಾ ಕೇಂದ್ರದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಕಲಿಸಲಾಗುತ್ತಿತ್ತು. ಇನ್ನೊಂದು ಕಡೆ ವ್ಯಾಕರಣ ಛಂದಸ್ಸು, ನಿರುಕ್ತ, ಜ್ಯೋತಿಷ್ಯ, ಶಿಕ್ಷಣ, ಮೋಕ್ಷ, ಕ್ರಿಯಾವಿಧಿ, ಧನುರ್ವೇದ, ಹಸ್ತ ಶಿಕ್ಷಣ, ಕಾಮತಂತ್ರ, ಲಕ್ಷಣ ಶಾಸ್ತ್ರ, ಪುರಾಣ, ಇತಿಹಾಸ, ನೀತಿ, ತರ್ಕ, ವೈದ್ಯ ಮುಂತಾದುವನ್ನು ಕಲಿಸುತ್ತಿದ್ದ ಉಲ್ಲೇಖಗಳಿವೆ. ಹೀಗೆ ತಕ್ಷಶಿಲೆ ವಿಶ್ವವಿದ್ಯಾನಿಲಯದಲ್ಲಿ ಮಾನವಿಕ, ವಿಜ್ಞಾನ, ಕಲಾ ಮತ್ತು ಕರಕುಶಲ ಶಾಖೆಗಳಲ್ಲಿ ಉನ್ನತ ಶಿಕ್ಷಣ ನೀಡಲಾಗುತ್ತಿತ್ತು. ಇಷ್ಟೇ ಅಲ್ಲದೆ ಗಜಶಾಸ್ತ್ರ, ಬೇಟೆಶಾಸ್ತ್ರ, ಪ್ರಾಣಿಕೂಟನ, ಧನುರ್ವಿದ್ಯೆ, ಕಾನೂನು, ಔಷಧ ಮತ್ತು ಸೈನಿಕ ಶಾಸ್ತ್ರಗಳ ವಿಶೇಷ ಶಾಲೆಗಳೂ ಇದ್ದು ಅವುಗಳಲ್ಲಿ ವಿಶೇಷ ಶಿಕ್ಷಣ ದೊರೆಯುತ್ತಿತ್ತು. ಯೋಗಾಭ್ಯಾಸವನ್ನು ಕಲಿಸುತ್ತಿದ್ದರು.

ಈ ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳಾಗಿ ಬರುತ್ತಿದ್ದವರಿಗೆ ಕೆಲವು ನಿಯಮಗಳಿದ್ದವು. ರಾಜಕುಮಾರರು ಹದಿನಾರು ವರ್ಷದವರಾದಾಗ ಈ ವಿದ್ಯಾಕೇಂದ್ರಕ್ಕೆ ಬಂದು ಕಲಿಯುತ್ತಿದ್ದರು. ಅಂದರೆ ಆಗಿನ ಕಾಲದಲ್ಲಿ ಹದಿನಾರು ವರ್ಷವಾಗಿದ್ದರೆ ಮಾತ್ರ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಲು ಅವಕಾಶ ದೊರೆಯುತ್ತಿತ್ತು. ಅಂತೆಯೇ ಪ್ರಾಪ್ತ ವಯಸ್ಕರಾದ ಮೇಲೆಯೇ ತಕ್ಷಶಿಲೆಗೆ ವಿದ್ಯೆ ಕಲಿಯಲು ಹೋಗುತ್ತಿದ್ದರೆಂಬುದು ಜಾತಕ ಕಥೆಗಳಿಂದ ಸ್ಪಷ್ಟವಾಗುತ್ತದೆ. ಹದಿನಾರು ವರ್ಷದ ಹುಡುಗರು

Digitised by Bharatavani, CIIL

ಗೃಹಸ್ಥರಾಗಬೇಕಾದರೆ ಕನಿಷ್ಠ ಮೂರು ವೇದಗಳನ್ನಾದರೂ ಕಲಿತಿರಬೇಕೆಂಬ ಪದ್ಧತಿ ಇತ್ತೆಂಬುದೂ ಸ್ಪಷ್ಟವಾಗುತ್ತದೆ. ಇವರು ವಿದ್ಯೆ ಕಲಿಯಲು ಆಚಾರ್ಯರಿಗೆ ಒಂದು ಸಾವಿರ ನಾಣ್ಯ (ಕಹಾಪಣ)ಗಳನ್ನು ಗುರುದಕ್ಷಿಣೆಯಾಗಿ ಕೊಡುವ ಪದ್ಧತಿ ಇತ್ತೆಂಬುದನ್ನು ಹಲವಾರು ಜಾತಕ ಕಥೆಗಳಲ್ಲಿ ಹೇಳಲಾಗಿದೆ.

ಹಿಂದಿನ ರಾಜರು ತಮ್ಮ ನಗರದಲ್ಲಿಯೇ ವಿದ್ವಾಂಸರಿದ್ದರೂ ತಮ್ಮ ಮಕ್ಕಳನ್ನು ದೂರ ಪ್ರದೇಶಗಳಿಗೆ ವಿದ್ಯೆ ಕಲಿಯಲು ಕಳುಹಿಸುತ್ತಿದ್ದರು. ಏಕೆಂದರೆ, ಇದರಿಂದಲಾದರೂ ಮಕ್ಕಳ ಅಹಂಕಾರಕ್ಕೆ ಪೆಟ್ಟು ಬೀಳಲಿ, ತಾವು ದೊಡ್ಡವರೆಂಬ ಭ್ರಮೆ ತಗ್ಗಲಿ, ಬಿಸಿಲು-ಚಳಿಯನ್ನು ಸಹಿಸುವ ಸಾಮರ್ಥ್ಯ ಬರಲಿ ಹಾಗೂ ಲೋಕವ್ಯವಹಾರ ಅರ್ಥವಾಗಲಿ ಎಂದು ಮುಂತಾದ ಉದ್ದೇಶಗಳಿಂದ ಹೀಗೆ ಮಾಡುತ್ತಿದ್ದರು. ವಾರಾಣಸಿಯ ರಾಜ ಬ್ರಹ್ಮದತ್ತ ತನ್ನ ಮಗ 16 ವರ್ಷ ವಯಸ್ಸಿನ ಬ್ರಹ್ಮದತ್ತಕುಮಾರನನ್ನು ಕರೆದು ಒಂದೇ ಅಟ್ಟೆಯ ಒಂದು ಜೊತೆ ಮೆಟ್ಟು, ಎಲೆಯ ಕೊಡೆ ಮತ್ತು ಒಂದು ಸಾವಿರ ಚಿನ್ನದ ನಾಣ್ಯಗಳನ್ನು ಕೊಟ್ಟು ತಕ್ಷಶಿಲೆಗೆ ವಿದ್ಯೆ ಕಲಿತು ಬರಲು ಕಳುಹಿಸಿದ ಉಲ್ಲೇಖವಿದೆ. ರಾಜಕುಮಾರ ಗುರುಗಳನ್ನು ಭೇಟಿ ಮಾಡಿ ಗುರುದಕ್ಷಿಣೆ ಕೊಟ್ಟು ವಿದ್ಯೆ ಕಲಿತದ್ದು ಇದರಿಂದ ಕಂಡು ಬರುತ್ತದೆ. ಶ್ರೀಮಂತ ಬಡವರೆಂಬ ಭೇದವಿಲ್ಲದೆ ಈ ವಿದ್ಯಾಕೇಂದ್ರಕ್ಕೆ ವಿದ್ಯಾರ್ಥಿಗಳು ಬಂದು ವಿದ್ಯೆ ಕಲಿಯುತ್ತಿದ್ದರು. ಇಲ್ಲಿ ಎಲ್ಲರಿಗೂ ಮುಕ್ತ ಅವಕಾಶವಿತ್ತು. ಶ್ರೀಮಂತ ವಿದ್ಯಾರ್ಥಿಗಳು ಶಿಕ್ಷಣಾವಧಿಯ ಪೂರ್ಣ ಶುಲ್ಕವನ್ನು ಮುಂಗಡವಾಗಿಯೇ ಕೊಡುತ್ತಿದ್ದರು. ಆಚಾರ್ಯರಿಗೆ ಗುರುದಕ್ಷಿಣೆ ಕೊಟ್ಟು ಯಾವುದೇ ಕೆಲಸ ಮಾಡದೆ ಮನೆಯಲ್ಲಿನ ಜೇಷ್ಠ ಪುತ್ರನಂತೆ ಇದ್ದುಕೊಂಡು ಕೇವಲ ವಿದ್ಯೆಯನ್ನು ಕಲಿಯುತ್ತಿದ್ದರು. ಇಂತಹ ವಿದ್ಯಾರ್ಥಿಗಳಿಗೆ 'ಆಚಾರ್ಯ ಭಾಗದ ವಿದ್ಯಾರ್ಥಿಗಳು' ಎಂದು ಕರೆಯಲಾಗುತ್ತಿತ್ತು. ಗುರುದಕ್ಷಿಣೆ ಕೊಡಲು ಸಾಧ್ಯವಾಗದ ವಿದ್ಯಾರ್ಥಿಗಳು ಹಗಲು ಗುರುಗಳ ಮನೆ ಕೆಲಸ ಮಾಡಿಕೊಟ್ಟು ರಾತ್ರಿ ವೇಳೆ ವಿದ್ಯೆ ಕಲಿಯುತ್ತಿದ್ದರು. ಇಂಥ ವಿದ್ಯಾರ್ಥಿಗಳಿಗೆ 'ಧರ್ಮ ಶಿಷ್ಯರು' ಎಂದು ಕರೆಯಲಾಗುತ್ತಿತ್ತು. ಈ ಎರಡೂ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಕ್ಷಶಿಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದುದರ ಬಗ್ಗೆ ಹಲವಾರು ಜಾತಕ ಕಥೆಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ.

ಜಾತಕ ಕಥೆಗಳ ಪ್ರಕಾರ ವಾರಾಣಸಿ ಇನ್ನೊಂದು ಶಿಕ್ಷಣ ಕೇಂದ್ರವಾಗಿತ್ತು. ಇಲ್ಲಿ ಬೋಧಿಸತ್ವ ಜಗತ್ಪ್ರಸಿದ್ಧ ಆಚಾರ್ಯನೆನಿಸಿಕೊಂಡು ಐನೂರು ಮಂದಿ ಶಿಷ್ಯರಿಗೆ ವಿದ್ಯೆ ಕಲಿಸುತ್ತಿದ್ದ. ಆಗ ವಾರಾಣಸಿಯ ಜನ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟು ವಿದ್ಯೆಗೆ ಅನುಕೂಲ ಮಾಡಿಕೊಡುತ್ತಿದ್ದರು. ಅಂತಹವರಲ್ಲಿ ಮಿತ್ರವಿಂದಕನೆಂಬ ವಿದ್ಯಾರ್ಥಿ ನಿಶ್ಶುಲ್ಕ ಶಿಕ್ಷಣ ಪಡೆದನೆಂಬ ಉಲ್ಲೇಖವಿದೆ. ಕೆಲ ಗೃಹಸ್ಥರು ಪಕ್ಕದ ಶಾಲೆಯ ವಿದ್ಯಾರ್ಥಿಗಳನ್ನು ಊಟಕ್ಕೆ ಕರೆಯುತ್ತಿದ್ದರು. ಇಂಥ ಕರೆಗಳಿಂದ, ಮತ್ತಿತರರಿಂದ ಉತ್ತೇಜನಗೊಂಡು ಶಾಲೆಗಳಿಗೆ ಒಂದು ರೀತಿಯಲ್ಲಿ ಶಾಶ್ವತ ಭೋಜನ ವ್ಯವಸ್ಥೆಯಾಗಿತ್ತು. ಶಾಲೆಗಳಲ್ಲಿ ವಿದ್ಯಾರ್ಥಿಗಳ ಆಹಾರ ತುಂಬ ಸರಳವಾಗಿರುತ್ತಿತ್ತು. ಬೆಳಗಿನ ಉಪಹಾರಕ್ಕೆ ಗುರುಗಳ ಮನೆಯ ದಾದಿಯರು ಅನ್ನದ ಗಂಜಿ ನೀಡುತ್ತಿದ್ದರು. ಆಹ್ವಾನದ ಮೇರೆಗೆ ಹೋದಾಗ ಕಬ್ಬು, ಕಾಕಂಬಿ, ಮೊಸರು, ಹಾಲು ಕೊಡುತ್ತಿದ್ದರೆಂಬುದು ಜಾತಕ ಕಥೆಗಳಿಂದ ತಿಳಿದು ಬರುತ್ತದೆ. ಆ ಕಾಲದಲ್ಲಿ ಕೊಡುಗೈ ದಾನಿಗಳು ಪ್ರತಿದಿನ ಬಡ ಹುಡುಗರಿಗೆ ಉಚಿತ ಆಹಾರ ಒದಗಿಸಿ ಉಚಿತ ಶಿಕ್ಷಣ ಕೊಡಿಸುತ್ತಿದ್ದರು. ತಕ್ಷಶಿಲೆಯಂಥ ದೂರದೂರುಗಳಲ್ಲಿ ಓದಲು ಹೋಗುವ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರಗಳು (ಮಹಾಜನಪದಗಳು) ಶಿಷ್ಯವೇತನ ಕೊಡುತ್ತಿದ್ದವು. ಕೆಲವು ಸಂದರ್ಭಗಳಲ್ಲಿ ರಾಜಕುಮಾರರ ಜೊತೆಯಲ್ಲಿ ಬರುತ್ತಿದ್ದ ವಿದ್ಯಾರ್ಥಿ ರಾಜಕುಮಾರನ ಖರ್ಚಿನಲ್ಲಿ ವಿದ್ಯೆ ಕಲಿಯುತ್ತಿದ್ದುದುಂಟು. ವಾರಾಣಸಿ ಮತ್ತು ರಾಜಗೃಹದ ಪುರೋಹಿತರ ಮಕ್ಕಳು ತಮ್ಮ ತಮ್ಮ ರಾಜ್ಯದ ರಾಜಕುಮಾರರ ಜೊತೆಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದರೆಂಬ ಉಲ್ಲೇಖಗಳು ದೊರೆಯುತ್ತವೆ.

ಶಿಷ್ಯರು ಗುರುಗಳ ಸೇವೆ ಮಾಡುತ್ತಿದ್ದರು. ಆಗ ಶಿಷ್ಯರೇ ಕಾಡಿಗೆ ಹೋಗಿ ಸೌದೆ ತರುತ್ತಿದ್ದರು. ಅಲ್ಲದೆ ಧರ್ಮಶಿಷ್ಯರಾಗಿ ರಾತ್ರಿ ಹೊತ್ತು ಪಾಠ ಹೇಳಿಸಿಕೊಳ್ಳುತ್ತಿದ್ದವರೆಲ್ಲರೂ ಹಗಲಿನಲ್ಲಿ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಆ ಕಾಲದ ಶಾಲೆಗಳಲ್ಲಿ ನಿವಾಸಿ ವಿದ್ಯಾರ್ಥಿಗಳ ಜೊತೆ ಪಾಠ ಕೇಳಲು ಮಾತ್ರ ಬರುತ್ತಿದ್ದ ವಿದ್ಯಾರ್ಥಿಗಳೂ ಇರುತ್ತಿದ್ದರು. ತಕ್ಷಶಿಲೆಯ ಜುಣ್ಣ ಎಂಬ ವಿದ್ಯಾರ್ಥಿ ರಾಜಕುಮಾರ ತಾನೊಂದು ಬೇರೆ ಮನೆ ಮಾಡಿ ವಾಸಿಸುತ್ತಿದ್ದನೆಂದೂ ಉಲ್ಲೇಖವಿದೆ. ಇಂಥವರಲ್ಲಿ ಕೆಲವರು ಮದುವೆಯಾಗಿ ಗೃಹಸ್ಥರಾಗಿದ್ದವರೂ ಇದ್ದರು. ಪತ್ನಿಯರಿಂದ ಶಿಕ್ಷಣಕ್ಕೆ ತೊಂದರೆಯಾದ ಪ್ರಕರಣಗಳೂ ಇಲ್ಲಿವೆ. ಅಂಥವರಲ್ಲಿ ಒಬ್ಬಳಂತೂ ತನ್ನ ಗಂಡ ಶಾಲೆಗೆ ಹೊರಡುವುದರಲ್ಲಿದ್ದಾಗ ಕಾಯಿಲೆಯೆಂದು ನಟಿಸುತ್ತಿದ್ದಳೆಂದಿದೆ. ವಿದ್ಯಾರ್ಥಿಗಳು ಪ್ರತಿನಿತ್ಯ ಬೆಳಗಿನ ಜಾವ (ಬ್ರಾಹ್ಮೀ ಮುಹೂರ್ತ) ಎದ್ದು ಅಧ್ಯಯನ ಮಾಡಲು ಅನುಕೂಲವಾಗುವಂತೆ ಸಮಯವನ್ನರಿತು ಕೂಗುವ ಹುಂಜವನ್ನು ಪ್ರತಿಶಾಲೆಯೂ ಸಾಕಿಕೊಂಡಿತ್ತು. ಆಗಿನ ಕಾಲದಲ್ಲಿ ಹುಂಜಗಳೇ ಅಲಾರಾಮ್ ಕೆಲಸ ಮಾಡುತ್ತಿದ್ದವು. ಹಾಗೆಯೆ ವೇದ ಮಂತ್ರಗಳನ್ನುಚ್ಚರಿಸಿ ಜ್ಞಾಪಕದಲ್ಲಿಟ್ಟುಕೊಳ್ಳಲು ಸಹಾಯಕವಾಗುವಂತೆ ತಿತ್ತಿರಿ ಹಕ್ಕಿಗಳನ್ನೇ ಸಾಕಲಾಗಿತ್ತು. ತಕ್ಷಶಿಲೆಯ ವಿದ್ಯಾಲಯದಲ್ಲಿ ಕ್ಷತ್ರಿಯ, ಬ್ರಾಹ್ಮಣ ವಿದ್ಯಾರ್ಥಿಗಳು ಮಾತ್ರ ವಿದ್ಯೆ ಕಲಿಯುತ್ತಿದ್ದರು. ಅಲ್ಲದೆ ಆ ಕಾಲದಲ್ಲಿ ಸಾರ್ವಜನಿಕ ಶಾಲೆಗಳು ಹಾಗೂ ಜಾತೀಯ ಶಾಲೆಗಳೂ ಇದ್ದವು. ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಾಗಿದ್ದ ಶಾಲೆಗಳ ಅಥವಾ ಬ್ರಾಹ್ಮಣ-ಕ್ಷತ್ರಿಯ ಶಾಲೆಗಳ ಅಥವಾ ರಾಜಕುಮಾರರಿಗೆ ಮಾತ್ರ ಮೀಸಲಾಗಿದ್ದ ಶಾಲೆಗಳ ಉಲ್ಲೇಖಗಳೂ ಕಂಡುಬರುತ್ತವೆ. ಅವುಗಳ ವಿದ್ಯಾರ್ಥಿ ಸಂಖ್ಯಾ ಮಿತಿ ನೂರೊಂದು ಎಂಬ ಮಾಹಿತಿಯೂ ಕಂಡುಬರುತ್ತದೆ.

ಶಾಲಾ ವಿದ್ಯಾರ್ಥಿಗಳ ಸಂಖ್ಯಾಮಿತಿ ಐದುನೂರು ಎಂಬುದು ಕಂಡುಬರುತ್ತದೆ. ಆ ಸಂಖ್ಯೆಯಡಿಯಲ್ಲಿ ಬರುವ ವಿವಿಧ ಸ್ತರಜಾತಿಗಳನ್ನು ಜಾತಕ ಕಥೆಗಳಲ್ಲಿ ಹೇಳಲಾಗಿದೆ. ಬ್ರಾಹ್ಮಣರು, ಕ್ಷತ್ರಿಯರು, ದೂರದ ರಾಜ್ಯಗಳಿಂದ ಬರುವ ರಾಜಕುಮಾರರು, ಉದ್ಯಮಪತಿಗಳ ಸಿರಿವಂತರ ಮಕ್ಕಳು ಅವರಲ್ಲಿ ಕೆಲವರು ಬ್ರಾಹ್ಮಣರ, ವ್ಯಾಪಾರಿಗಳ, ದರ್ಜಿಗಳ, ಬೆಸ್ತರ ಮಕ್ಕಳು ಈ ಎಲ್ಲ ಜಾತಿಗಳವರಿಗೂ ಸಮಾನವಾಗಿ ಪಾಠ ಹೇಳುತ್ತಿದ್ದರು. ಆದರೆ ಚಂಡಾಲರನ್ನು ಮಾತ್ರ ಸೇರಿಸುತ್ತಿರಲಿಲ್ಲ ಎಂಬ ಉಲ್ಲೇಖವಿದೆ. ಆದರೆ ಒಬ್ಬ ಚಂಡಾಲ ಗುರುವಿನಿಂದ ಬ್ರಾಹ್ಮಣನೊಬ್ಬ ವಿದ್ಯೆ ಕಲಿತ ವಿಷಯವೂ ವ್ಯಕ್ತವಾಗಿದೆ. ಚಂಡಾಲನಿಂದ ವಿದ್ಯೆ ಕಲಿತ ಬ್ರಾಹ್ಮಣ ಗುರುವಿನ ಹೆಸರನ್ನು ಮರೆಮಾಚಿ ಆಚಾರ್ಯನಿಂದ ಕಲಿತೆನೆಂದು ಹೇಳಿಕೊಂಡು ಬರುತ್ತಿದ್ದ ಕಾರಣ ಚಂಡಾಲನಿಂದ ವಿದ್ಯೆ ಕಲಿತನೆಂದರೆ ನಾಚಿಕೇಗೇಡು, ನನ್ನನ್ನು ನಿಂದಿಸುವರು ಎಂಬ ಭಾವನೆಯಿಂದ ಹೀಗೆ ನಡೆದುಕೊಂಡದ್ದು ಕಂಡು ಬರುತ್ತದೆ. ಅಂದಿನ ಸಮಾಜದ ಜನರಲ್ಲಿ ಈ ಭಾವನೆಯಿತ್ತು. ಆದರೂ ಉತ್ತಮ ರತ್ನದಂಥ ವಿದ್ಯೆ ಲಭಿಸಿದಾಗ ಅದನ್ನು ಯಾವ ಜಾತಿಯವರು ಹೇಳಿಕೊಟ್ಟರೇನು? ಉತ್ತಮ ರತ್ನ ದೊರೆತಾಗ ಜಾತಿ ಏನು ಮಾಡುತ್ತದೆಂಬ ಸದಾಶಯ ಆ ಸಮಾಜದ ಜಾತ್ಯತೀತ ಭಾವನೆಗೆ ಹಿಡಿದ ಕನ್ನಡಿಯಾಗಿದೆ.

ಆ ಕಾಲದಲ್ಲಿ ವಿಷಯಗಳು ಜಾತಿಯಾಧಾರವಾಗಿರದೆ ಮುಕ್ತವಾಗಿದ್ದದ್ದು ಕಂಡುಬರುತ್ತದೆ- ವರ್ತಕನ ಪುತ್ರ ಗೋಶಾಸ್ತ್ರಜ್ಞನಾಗಿದ್ದ; ಸಾವತ್ತಿಯ ನಿವಾಸಿ ಕುಲಪುತ್ರ ಸಾಲಿತ್ತಕಶಿಲ್ಪದಲ್ಲಿ (ವಿದ್ಯೆಯಲ್ಲಿ) ಪಾರತಗಂನಾಗಿದ್ದ ವಾರಾಣಸಿಯಲ್ಲಿ ಒಬ್ಬ ಗೂನ ಕಲ್ಲೆಸೆಯುವ ಕಲೆಯಲ್ಲಿ

Digitised by Bharatavani, CIIL

ನಿಪುಣನಾಗಿದ್ದ. ಹಳ್ಳಿಯ ಹುಡುಗ–ಹುಡುಗಿಯರ ಮುಂದೆ ವಾರಾಣಸಿಯ ನಗರ ದ್ವಾರದಲ್ಲಿ ನ್ಯಗ್ರೋಧ ವೃಕ್ಷದ ಎಲೆಗಳಿಗೆ ಕಲ್ಲುಬೀರಿ ಬೀರಿ ನಾನಾ ರೀತಿಯ ಆಕಾರಗಳನ್ನು ರೂಪಿಸುತ್ತಿದ್ದ. ಮರದಲ್ಲಿದ್ದ ಎಲ್ಲ ಎಲೆಗಳಲ್ಲೂ (ತೂತು) ರಂಧ್ರಗಳಾಗುತ್ತಿದ್ದವು. ಈ ರೀತಿಯ ಕಲಾಕೌಶಲದ ಉಲ್ಲೇಖಗಳು ಕಂಡುಬರುತ್ತವೆ. ಬೋಧಿಸತ್ವ ಮೂರು ವೇದಗಳು ಮತ್ತು ಹದಿನೆಂಟು ವಿದ್ಯೆಗಳನ್ನು ಕಲಿತಿದ್ದನಲ್ಲದೆ ಅಶ್ವಶಾಸ್ತ್ರ, ಪೃಥ್ವೀಜಯ ಮಂತ್ರ (ಜಪ ಮಂತ್ರ), ಅಂಗ ವಿದ್ಯೆ ಮತ್ತು ಸಂಗೀತ ವಿದ್ಯೆ (ಗಂಧರ್ವ ವಿದ್ಯೆ) ಧನುರ್ವಿದ್ಯೆ, ಎಲ್ಲ ಪ್ರಾಣಿಗಳ ಭಾಷೆಯನ್ನು ಗುರುತಿಸುವ ವಿದ್ಯೆ, ನಾವಿಕ ವಿದ್ಯೆ ಮುಂತಾದ ವಿದ್ಯೆಗಳನ್ನು ಕಲಿತಿದ್ದ ಉಲ್ಲೇಖಗಳಿವೆ. ಬೋಧಿಸತ್ವ ಪ್ರಸಿದ್ಧ ಆಚಾರ್ಯನಾಗಿ ವಾರಾಣಸಿಯಲ್ಲಿ ಅನೇಕ ಕ್ಷತ್ರಿಯ, ಬ್ರಾಹ್ಮಣ ಕುಮಾರರಿಗೆ ವೇದಗಳನ್ನು ಕಲಿಸಿದ ಉಲ್ಲೇಖಗಳು ಅನೇಕ ಜಾತಕ ಕಥೆಗಳಲ್ಲಿ ಕಂಡುಬರುತ್ತವೆ. ಸಂಜೀವಕನೆಂಬ ವಿದ್ಯಾರ್ಥಿಗೆ ಸತ್ತವರನ್ನು ಬದುಕಿಸುವ ವಿದ್ಯೆ ಕಲಿಸಿದ್ದ. ಆದರೆ ಆ ವಿದ್ಯಾರ್ಥಿ ಹೆಣವನ್ನು ಜೀವಂತಗೊಳಿಸುವ ವಿದ್ಯೆಯನ್ನು ಕಲಿತನೇ ಹೊರತು ಪುನಃ ಮಲಗಿಸುವ ವಿದ್ಯೆ ಕಲಿಯಲಿಲ್ಲ ಎಂದೂ ಹೇಳಲಾಗಿದೆ. ಸಾಮಾನ್ಯ ಜನಪದರೂ ಆ ಕಾಲದಲ್ಲಿ ವಿದ್ಯೆ ಕಲಿಯುತ್ತಿದ್ದರು. ಒಬ್ಬ ಜನಪದವಾಸಿ ಮೂರು ವೇದಗಳು, ಹದಿನೆಂಟು ವಿದ್ಯೆಗಳನ್ನು ಬೋಧಿಸತ್ವನಿಂದ ಕಲಿತ. ಹೀಗೆ ಗ್ರಾಮವಾಸಿಗಳೂ ನಗರ ವಾಸಿಗಳಂತೆಯೇ ವಿದ್ಯಾವಂತರಾಗುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಬುದ್ಧ ಮೂರು ಪಿಟಕ, ನಾಲ್ಕು ಧ್ಯಾನಗಳನ್ನು ದೇವದತ್ತನಿಗೂ, ಸಂಗೀತ ಮತ್ತು ವೀಣೆ ನುಡಿಸುವುದನ್ನು ಮುಸಿಲನೆಂಬುವನಿಗೂ ಕಲಿಸಿದ್ದ ಮಾಹಿತಿಗಳು ಇಲ್ಲಿ ದೊರೆಯುತ್ತವೆ. ಅಷ್ಟೇ ಅಲ್ಲದೆ ಬೋಧಿಸತ್ವ ಇಡೀ ಜಂಬೂ ದ್ವೀಪದಲ್ಲೇ ಎಲ್ಲ ಗಂಧರ್ವರಿಗಿಂತ ಶ್ರೇಷ್ಠನೆನಿಸಿದ್ದನಲ್ಲದೆ, ತನ್ನ ವಿಭಾಗದ ಸಂಗೀತ ಕ್ಷೇತ್ರದ ಮಹತ್ವದ ವ್ಯಕ್ತಿಯಾಗಿದ್ದ. ಸಂಗೀತ ನಿಷ್ಣಾತನೊಬ್ಬನ ನೇತೃತ್ವದ ಒಂದು ಸಂಗೀತಶಾಲೆ ಬನಾರಸ್ಸಿನಲ್ಲಿತ್ತು.

ತಕ್ಷಶಿಲೆ, ವಾರಾಣಸಿಗಳಲ್ಲದೆ ವೈಶಾಲಿಯಲ್ಲಿಯೂ ವೈಶಾಲಿಗಳಿಗೆ ಶಿಲ್ಪವಿದ್ಯೆಯನ್ನು ಕಲಿಸಲಾಗುತ್ತಿತ್ತು. ವಿದ್ಯಾಕೇಂದ್ರಗಳಲ್ಲಿ ವಿದ್ಯೆಗಳನ್ನು ಕಲಿತ ಮೇಲೆ ವ್ಯವಹಾರ ಜ್ಞಾನಕ್ಕಾಗಿ ಹೊರಗಡೆ ಹೋಗುತ್ತಿದ್ದರು. ಎಲ್ಲ ಮತಗಳ ವಿದ್ಯೆಗಳು ಮತ್ತು ದೇಶ ವ್ಯವಹಾರಗಳನ್ನು ಕಲಿಯಲೆಂದು ಗ್ರಾಮ ನಗರಗಳಲ್ಲಿ ಸಂಚರಿಸುತ್ತಿದ್ದರು. 'ದೇಶ ತಿರುಗಬೇಕು, ಕೋಶ ಓದಬೇಕು' ಎಂಬ ಗಾದೆ ಮಾತು ಈ ಸಂದರ್ಭಕ್ಕೆ ತಕ್ಕಂತೆ ಇದೆ. ನಿದರ್ಶನಕ್ಕಾಗಿ ಒಂದು ಪ್ರಸಂಗವನ್ನು ಗಮನಿಸಬಹುದು. ಆಚಾರ್ಯರು ಹಿಮಾಲಯದ ಕಾಡೊಂದರಲ್ಲಿ ಐನೂರು ಜನ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸಲು ನಗರದಿಂದ ಅರಣ್ಯಕ್ಕೆ ಕರೆದುಕೊಂಡು ಹೋಗಿ, ಪರ್ಣಶಾಲೆ ಕಟ್ಟಿಕೊಂಡು ವಿದ್ಯೆ ಕಲಿಸುತ್ತಿದ್ದರು. ಆಗ ವಿದ್ಯಾರ್ಥಿಗಳು ಎಳ್ಳು, ಅಕ್ಕಿ, ಎಣ್ಣೆ, ವಸ್ತ್ರಾದಿಗಳನ್ನು ತೆಗೆದುಕೊಂಡು ಅರಣ್ಯಕ್ಕೆ ಹೋಗುತ್ತಿದ್ದರು. ದೇಶವಾಸಿಗಳೂ ಕಾಡಿನಲ್ಲಿ ಇಂಥ ಸ್ಥಾನದಲ್ಲಿ ಪ್ರಸಿದ್ಧ ಆಚಾರ್ಯರು ವಿದ್ಯಾರ್ಥಿಗಳಿಗೆ ವಿದ್ಯಾಧ್ಯಯನ ಮಾಡಿಸುತ್ತಿರುವರೆಂದು ಭಾವಿಸಿ ಅಕ್ಕಿ ಮುಂತಾದುವನ್ನು ತೆಗೆದುಕೊಂಡು ಬರುತ್ತಿದ್ದರು. ಅರಣ್ಯ ಮಾರ್ಗದಲ್ಲಿ ಪಯಣಿಸುತ್ತಿದ್ದವರೂ ಅಕ್ಕಿ ಮುಂತಾದ ವಸ್ತುಗಳನ್ನು ಕೊಡುತ್ತಿದ್ದರು. ಒಬ್ಬ ಮನುಷ್ಯ ಹಾಲು ಕುಡಿಯಲೆಂದು ಕರುಸಹಿತ ಹಸುವನ್ನು ಕೊಟ್ಟ ಉಲ್ಲೇಖವಿದೆ. ಆಚಾರ್ಯರ ಪರ್ಣಶಾಲೆಯ ಬಳಿ ಇದ್ದುಕೊಂಡು ಅವರು ಹೇಳಿಕೊಡುತ್ತಿದ್ದ ಪಾಠವನ್ನು ಗೀಜಗನ ಹಕ್ಕಿಯೊಂದು ಕಲಿತ ಉಲ್ಲೇಖವಿದೆ. ನಿಗ್ರೋಧ ಕುಮಾರ ಮತ್ತು ಆತನ ಸ್ನೇಹಿತರು ತಕ್ಷಶಿಲೆಯಲ್ಲಿ ಎಲ್ಲ ವಿದ್ಯೆ ಕಲಿತು ಹಿಂತಿರುಗುವಾಗ ದೇಶದ ಸಭ್ಯತೆಯ ಜ್ಞಾನ ಪಡೆದ ಉಲ್ಲೇಖವಿದೆ.

ಚಂಡಾಲರು ಬ್ರಾಹ್ಮಣರಿಗೆ ಮಂತ್ರ ವಿದ್ಯೆ ಕಲಿಸಿದ್ದಲ್ಲದೆ ತಮ್ಮ ಕಸುಬಿನ ವಿದ್ಯೆ ಕಲಿತು ಪ್ರದರ್ಶಿಸುತ್ತಿದ್ದರು. ಚಂಡಾಲ ಗ್ರಾಮದಲ್ಲಿ ಚಿತ್ರ–ಸಂಭೂತ ಎಂಬುವರು ತಮ್ಮ ಕುಲದ 'ದೋಷನ ವಿದ್ಯೆ' (ಶಾಸ್ತ್ರೋಕ್ತವಾಗಿ ಸತ್ತ ಪ್ರಾಣಿಯ ಮೂಳೆ ತೊಳೆಯುವ ವಿದ್ಯೆ)ಯನ್ನು ಕಲಿತು ಇಬ್ಬರೂ ಉಜ್ಜಯಿನಿ ನಗರದ ಉತ್ತರ ದ್ವಾರದಲ್ಲೊಬ್ಬ, ಪೂರ್ವ ದ್ವಾರದಲ್ಲೊಬ್ಬ ಇದ್ದುಕೊಂಡು ತಾವು ಕಲಿತ ವಿದ್ಯೆಯನ್ನು ಪ್ರದರ್ಶಿಸುತ್ತ ವಿವರಿಸುತ್ತಿದ್ದರೆಂಬ ದಾಖಲೆ ಇದೆ. ಹೀಗೆ ಎಲ್ಲ ವಿದ್ಯೆಗಳನ್ನು ಎಲ್ಲರೂ ಕಲಿಯಲು ಆ ಕಾಲದಲ್ಲಿ ಮುಕ್ತ ಅವಕಾಶವಿದ್ದುದು ಸ್ಪಷ್ಟವಾಗುತ್ತದೆ.

ಬುದ್ಧನ ಜಾತಕ ಕಥೆಗಳಲ್ಲಿ ಸ್ತ್ರೀ ಶಿಕ್ಷಣದ ಬಗ್ಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ. ಆಗ ಅವರಿಗೆ ವಿದ್ಯೆ ಕಲಿಯಲು ಮುಕ್ತ ಅವಕಾಶವಿತ್ತು. ಎಲ್ಲ ವಿಭಾಗಗಳಲ್ಲೂ ಶಿಕ್ಷಣ ಪಡೆದುಕೊಳ್ಳುವ ಅಧಿಕಾರವನ್ನು ಸ್ತ್ರೀಯರಿಗೆ ಕೊಡಲಾಗಿತ್ತು. ಗುಪ್ತ ವಿದ್ಯೆಯ ಮಹತ್ವವೂ ಅವರಿಗೆ ತಿಳಿದಿತ್ತು. ಅವರು ದೊಡ್ಡ ದೊಡ್ಡ ವಿದ್ವಾಂಸರಾಗಿದ್ದು ತಮ್ಮ ವಿದ್ಯೆಯನ್ನು ಬೆಳಕಿಗೆ ತರಲು ವಿಪುಲವಾದ ಅವಕಾಶಗಳಿದ್ದವು. ಅನೇಕ ವಿದ್ವನ್ಮಣಿ ಸ್ತ್ರೀಯರ ವರ್ಣನೆ ಈ ಜಾತಕ ಕಥೆಗಳಲ್ಲಿ ಬಂದಿರುವುದನ್ನು ಕಾಣುತ್ತೇವೆ. ವೈಶಾಲಿಯಲ್ಲಿ ನಾಲ್ಕು ಜನ ಹೆಣ್ಣು ಮಕ್ಕಳು ಒಂದು ಸಾವಿರ ವಾದಗಳನ್ನು ಕಲಿತುಕೊಂಡು ಶಾಸ್ತ್ರಾರ್ಥಕ್ಕಾಗಿ ಜಂಬೂ ಶಾಖೆಯನ್ನು ಹಿಡಿದುಕೊಂಡು ನಗರ–ನಗರಗಳಲ್ಲಿ ಸುತ್ತಾಡುತ್ತಿದ್ದರು. ಸಾವತ್ತಿಗೆ ಬಂದು ನಗರದಲ್ಲಿ ಪ್ರತಿಸ್ಪರ್ಧಿಗಳಿದ್ದರೆ ನಮ್ಮೊಂದಿಗೆ ವಾದ ಮಾಡಿ ಗೆಲ್ಲಿರಿ ಎಂದು ಸವಾಲು ಹಾಕಿ ನಗರ ದ್ವಾರದಲ್ಲಿ ಆ ಜಂಬೂ ಕೊಂಬೆಯನ್ನು ನೆಲದಲ್ಲಿ ಊರಿದರು (ನೆಟ್ಟರು). ನಂತರ ನಮ್ಮೊಂದಿಗೆ ಶಾಸ್ತ್ರಾರ್ಥ ಮಾಡಬಯಸುವ ಗೃಹಸ್ಥನಾಗಲಿ, ಪರಿವ್ರಾಜಕನಾಗಲಿ ಈ ಮರಳು ಗುಡ್ಡೆಯನ್ನು ಕಾಲಿನಿಂದ ಹರಡಿ ಈ ಜಂಬೂ ಶಾಖೆಯನ್ನು ಕಾಲಿನಿಂದಲೇ ಒಸಗಬೇಕೆಂದು ಆಹ್ವಾನ ಕೊಟ್ಟರು (ಸವಾಲು ಹಾಕಿದ್ದರು). ಈ ರೀತಿ ಆ ಕಾಲದಲ್ಲಿ ವಿದ್ಯಾವಂತ ಸ್ತ್ರೀಯರು ಸ್ವತಂತ್ರವಾಗಿ ತಮ್ಮ ಪ್ರತಿಭೆಯನ್ನು ಮುಕ್ತವಾಗಿ ಪ್ರದರ್ಶಿಸುವ ಅವಕಾಶವಿತ್ತು.

ರಾಜರು ಪುರೋಹಿತರಿಂದ ವಿದ್ಯೆ ಕಲಿಯುತ್ತಿದ್ದರು. ವಾರಾಣಸಿಯ ರಾಜ ಉದ್ಯಾನವನದಲ್ಲಿ ಮಾವಿನ ಮರದ ನೆರಳಲ್ಲಿ ಉನ್ನತ ಸ್ಥಾನದಲ್ಲಿ ಕುಳಿತು ಆಚಾರ್ಯರನ್ನು ನಿಮ್ನಾಸನದಲ್ಲಿ ಕೂರಿಸಿ ವೇದ ಮಂತ್ರಗಳನ್ನು ಕಲಿಯುತ್ತಿದ್ದ. ಆ ಕಾಲದಲ್ಲಿ ವಾಸ್ತು ವಿದ್ಯಾಚಾರ್ಯರು (ಇಂಜಿನಿಯರ್) ಅವರ ವಿದ್ಯೆಯಲ್ಲಿ ಪ್ರವೀಣರಾಗಿದ್ದರು. ಭೂಮಿಯೊಳಗಿನ ಏಳು ರತ್ನಗಳವರೆಗಿನ ದೋಷಗಳನ್ನು ಗುರುತಿಸಬಲ್ಲವರಾಗಿದ್ದರು. ರಾಜವಂಶದ ಅರಮನೆಗಳನ್ನು ಎಲ್ಲಿ ಕಟ್ಟಬೇಕೆಂಬುದರ ಬಗ್ಗೆ ಸ್ಥಳ ಪರಿಶೀಲಿಸುತ್ತಿದ್ದರು. ಇದು ಆ ಕಾಲದ ಸಮಾಜದ ವಾಸ್ತುಶಿಲ್ಪದ ಬಗ್ಗೆ ಬೆಳಕು ಚೆಲ್ಲುತ್ತದೆ.

ವೈದ್ಯ ಶಿಕ್ಷಣದ ಬಗ್ಗೆ ಜಾತಕಗಳಲ್ಲಿ ಹೇಳಿರುವ ಅಂಶಗಳು ಗಮನಾರ್ಹವಾಗಿವೆ. ವೈದ್ಯಕೀಯ ಶಿಕ್ಷಣದ ಅವಧಿ ಏಳು ವರ್ಷಗಳವರೆಗೆ ವಿಸ್ತರಿಸಿತ್ತು. ವೈದ್ಯರು ತಮ್ಮ ವಿದ್ಯೆಯಲ್ಲಿ ನಿಷ್ಣಾತರಾಗಿರುತ್ತಿದ್ದರು. ಜೀವಕನೆಂಬ ವೈದ್ಯ ಮಗಧ ಚಕ್ರವರ್ತಿ ಬಿಂಬಸಾರನ ವೈದ್ಯನಾಗಿದ್ದ. ಆ ಚಕ್ರವರ್ತಿಯಿಂದ ಬುದ್ಧನ ಗೃಹವೈದ್ಯನಾಗಿ ನಿಯುಕ್ತನಾಗಿದ್ದ. ಆತ ಆ ಕಾಲದಲ್ಲಿನ ಅತ್ಯುತ್ತಮ ವೈದ್ಯನೆಂದು ಪರಿಗಣಿಸಲ್ಪಟ್ಟಿದ್ದ. ಆತನ ಆರಂಭದ ಬದುಕು ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಅಂಶ ಇಂತಿದೆ; ಆತ ರಾಜಗೃಹದ ಒಬ್ಬ ಆಸ್ಥಾನಿಕನ ಮಗ. ಈತನ ಹುಟ್ಟು ಅಜ್ಞಾತ. ಒಂದು ತಿಪ್ಪೆಯ ರಾಶಿಯ ಮೇಲೆ ಬಿದ್ದಿದ್ದ ಈ ಮಗುವನ್ನು ಬಿಂಬಸಾರನ ಪುತ್ರ ಕಾಪಾಡಿದ್ದ. ರಾಜಕುಮಾರನಾದ ಅಭಯನೇ ಆ ಮಗುವನ್ನು ಸ್ವಲ್ಪಕಾಲ ಸಾಕಿ, ಅನಿಶ್ಚಿತವಾದ ರಾಜ ಪ್ರೋತ್ಸಾಹವನ್ನು ನೆಚ್ಚಿಕೊಂಡಿರಲು ಬಿಡದೆ ಯಾವುದಾದರೊಂದು ಕಲೆಯಲ್ಲಿ, ವಿದ್ಯೆಯಲ್ಲಿ

Digitised by Bharatavani, CIIL

ಪಾರಂಗತನಾಗಲೆಂಬ ಉದ್ದೇಶದಿಂದ ತಕ್ಷಶಿಲೆಗೆ ಕಳುಹಿಸಿದ. ಅಲ್ಲಿ ಒಬ್ಬ ಪ್ರಸಿದ್ಧ ವೈದ್ಯರ ಬಳಿ ಏಳು ವರ್ಷಗಳವರೆಗೆ ಜೀವಕ ಔಷಧ ವಿಜ್ಞಾನದ ಬಗೆಗೆ ಅಧ್ಯಯನ ಮಾಡಿದ. ವೈದ್ಯನಾಗಿ ಸೇವೆ ಮಾಡಲು ಪರವಾನಗಿ ಪಡೆಯಲು ಗುರುಗಳು ಮಾಡುವ ಪ್ರಾಯೋಗಿಕ ಪರೀಕ್ಷೆಯಲ್ಲಿ ಪಾಸಾಗಿರಬೇಕಾಗಿತ್ತು. ಅವರ ಆದೇಶದಂತೆ ಗುದ್ದಲಿ ತೆಗೆದುಕೊಂಡು ತಕ್ಷಶಿಲೆಯ ಸುತ್ತ ಒಂದು ಯೋಜನದವರೆಗೆ ಎಲ್ಲ ಕಡೆ ಹುಡುಕಬೇಕಾಗಿತ್ತು. ಔಷಧಕ್ಕೆ ಬಾರದ ಯಾವುದಾದರೂ ಸಸ್ಯ ಕಂಡರೆ ಅದನ್ನು ಗುರುಗಳ ಬಳಿಗೆ ತೆಗೆದುಕೊಂಡು ಬರಬೇಕೆಂಬ ನಿಯಮವನ್ನು ಪಾಲಿಸಬೇಕಾಗಿತ್ತು. ಅಂತೆಯೇ ಆತ ದೀರ್ಘ ಕಾಲದವರೆಗೆ ಸಸ್ಯಶೋಧನೆ ಮಾಡಬೇಕಾಯಿತು. ಔಷಧೀಯ ಅಂಶವಿಲ್ಲದ ಯಾವ ಸಸ್ಯವೂ ಅವನಿಗೆ ಸಿಕ್ಕಲಿಲ್ಲ. ಇದರಿಂದ ಸಂತುಷ್ಟರಾದ ಗುರು ವೈದ್ಯರು ವೈದ್ಯಕೀಯ ವೃತ್ತಿಯನ್ನು ಆರಂಭಿಸಲು ಶಿಷ್ಯನಿಗೆ ಸ್ವಲ್ಪ ಹಣಕೊಟ್ಟು ಪರವಾನಗಿ ಕೊಟ್ಟರು. ಅವನಿಗೆ ಕೊಟ್ಟಿದ್ದ ಹಣ ಸಾಕೇತದವರೆಗೆ ಸಾಕಾಯಿತು. ಆಗ ವಿಧಿಯಿಲ್ಲದೆ ಸಾಕೇತದಲ್ಲಿ ಹಣಕ್ಕಾಗಿ ಕೆಲಸ ಮಾಡಬೇಕಾಗಿ ಬಂತು. ಅಲ್ಲಿ ಯಾವ ವೈದ್ಯನಿಂದಲೂ ವಾಸಿಮಾಡಲು ಸಾಧ್ಯವಾಗದಿದ್ದ ಶ್ರೀಮಂತ ಶ್ರೇಷ್ಠಿಯೊಬ್ಬನ ಪತ್ನಿಯ ಕಾಯಿಲೆಯನ್ನು ವಾಸಿಮಾಡುವಂತಹ ಅವಕಾಶ ಸಿಕ್ಕಿತು. ಆಗ ಜೀವಕ ಒಂದು ಹಿಡಿಯಷ್ಟು ತುಪ್ಪಕ್ಕೆ ಅನೇಕ ಬಗೆಯ ಔಷಧಗಳನ್ನು ಬೆರೆಸಿ ರೋಗಿಯ ಮೂಗಿನ ಮೂಲಕ ಕುಡಿಸಿದ ಕೂಡಲೇ ಆ ರೋಗಿ ಗುಣಮುಖಳಾದಳು. ಹೀಗೆ ಯಶಸ್ವಿಯಾಗಿ ರೋಗಿಯನ್ನು ಗುಣಪಡಿಸಿದ್ದರಿಂದ ಎರಡು ಕುದುರೆ, ಇಬ್ಬರು ಸೇವಕರ ಜೊತೆಗೆ ಹದಿನಾರು ಸಾವಿರ ಕಹಾಪಣಗಳ ದೊಡ್ಡ ಮೊತ್ತವನ್ನು ಆಕೆ ಕೊಟ್ಟಳು. ಈ ಗಳಿಕೆಯನ್ನು ತನ್ನನ್ನು ಸಾಕಿದ ರಾಜಕುಮಾರ ಅಭಯನಿಗೆ ಕಳುಹಿಸಿಕೊಟ್ಟ. ಮುಂದೆ ಬಿಂಬಸಾರನಿಗೆ ಚಿಕಿತ್ಸೆ ಮಾಡಿ ಅವನ ಮೂಳೆ ರೋಗವನ್ನು ಗುಣಪಡಿಸಿದ. ಬನಾರಸ್ಸಿನಲ್ಲಿ ಒಬ್ಬ ಶ್ರೇಷ್ಠಿಯ ಮಗ ಅಂಗಸಾಧನೆಯ ಸಮಯದಲ್ಲಿ ಕರುಳನ್ನು ನುಲಿಚಿಕೊಂಡಿದ್ದ. ಜೀವಕನಿಗೆ ಅದು ಶಸ್ತ್ರವೈದ್ಯದ ಸಂಗತಿಯಾಗಿ ಕಂಡಿತು. ಹೊಟ್ಟೆಯ ಚರ್ಮವನ್ನು ಕತ್ತರಿಸಿ ನುಲಿಚಿಕೊಂಡಿದ್ದ ಕರುಳನ್ನು ಹೊರತೆಗೆದು ರೋಗಿಯ ಪತ್ನಿಗೆ ತೋರಿಸಿದ. ಅನಂತರ ಕರುಳಿನ ತೊಡಕುಗಳನ್ನೆಲ್ಲ ಬಿಡಿಸಿ ಮತ್ತೆ ಅವುಗಳನ್ನೆಲ್ಲ ಯಥಾಸ್ಥಾನದಲ್ಲಿರಿಸಿ ಚರ್ಮವನ್ನು ಹೊಲಿದು ಗಾಯದ ಭಾಗದಲ್ಲೆಲ್ಲ ಮುಲಾಮು ಹಚ್ಚಿದ. ಅನತಿ ಕಾಲದಲ್ಲಿಯೇ ರೋಗಿ ಗುಣಮುಖನಾದ. ರೋಗಿಯ ತಂದೆ ವೈದ್ಯ ಶುಲ್ಕವೆಂದು ಹದಿನಾರು ಸಾವಿರ ಕಹಾಪಣಗಳನ್ನು ಕೊಟ್ಟ. ಇದು ತಕ್ಷಶಿಲೆ ವಿಶ್ವವಿದ್ಯಾನಿಲಯದಲ್ಲಿ ದೊರೆಯುತ್ತಿದ್ದ ವೈದ್ಯಕೀಯ ಶಿಕ್ಷಣದ ಸ್ವರೂಪ.

ಮೇಲೆ ಹೇಳಿರುವ ಎಲ್ಲ ವಿದ್ಯೆಗಳೂ 16 ವರ್ಷಗಳಾದ ಅಥವಾ ಪ್ರಾಪ್ತ ವಯಸ್ಕರಾದವರಿಗೆ ಸಂಬಂಧಿಸಿದ ಶಿಕ್ಷಣ. ಆದರೆ ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ವಿದ್ಯಾವಂತರಾದ ಸಂಗತಿಗಳೂ ಕಂಡು ಬರುತ್ತವೆ. ಮಾಂಡವ್ಯ ಕುಮಾರ ಏಳೆಂಟು ವರ್ಷದವನಾಗಿದ್ದಾಗ ಜಂಬೂದ್ವೀಪದ ಉತ್ತಮ ಆಚಾರ್ಯರ ಬಳಿ ಮೂರು ವೇದಗಳನ್ನು ಕಲಿಯುತ್ತಿದ್ದ ಸಂಗತಿ ಈ ಕಥೆಗಳಲ್ಲಿ ಬಂದಿದೆ. ಸಾವತ್ತಿಯ ಗೃಹಸ್ಥನ ಮಗ ಏಳನೇ ವಯಸ್ಸಿನಲ್ಲಿಯೇ ಪದ ಚಿಹ್ನೆಗಳನ್ನು ಗುರುತಿಸುವಲ್ಲಿ ಚತುರನಾಗಿದ್ದ. ಅಲ್ಲದೆ ಚಿಂತಾಮಣಿ ವಿದ್ಯೆಯ ದಾಖಲಾತಿಯೂ ಕಂಡು ಬರುತ್ತದೆ. ಇದರಿಂದ ಹನ್ನೆರಡು ವರ್ಷಗಳ ಹಿಂದೆ ಕದ್ದು ತೆಗೆದುಕೊಂಡು ಹೋದ ವಸ್ತುಗಳನ್ನು ಪದಚಿಹ್ನೆಗಳ ಮೂಲಕ ಕಂಡುಹಿಡಿದು ಕಳ್ಳರನ್ನು, ಕಳ್ಳತನ ಮಾಡಿದ ವಸ್ತುಗಳನ್ನು ಪತ್ತೆ ಹಚ್ಚುತ್ತಿದ್ದರು. ಸಂಭವಕುಮಾರ ಏಳು ವರ್ಷದವನಾಗಿದ್ದಾಗ ಹೆಚ್ಚು ಜ್ಞಾನಿಯಾಗಿದ್ದ. ಅರ್ಥ ಮತ್ತು ಧರ್ಮಗಳ ಬಗೆಗೆ ಅಧಿಕೃತವಾಗಿ ಹೇಳಬಲ್ಲವನಾಗಿದ್ದ. ಆ ಕಾಲದಲ್ಲಿ ಕವಿಗಳು, ಭಾಷಾವಿದ್ವಾಂಸರು ಇರುತ್ತಿದ್ದರು. ಕಟಾಹಕನೆಂಬುವನು ಎರಡು–ಮೂರು ಭಾಷೆಗಳನ್ನು ಕಲಿತಿದ್ದ. ಅನುಕ್ರಮವಾಗಿ ವಚನಕುಶಲಿಯಾಗಿ ಭಾಷಾವಿದನಾಗಿ ಬೆಳೆದಿದ್ದನೆಂದು ತಿಳಿದುಬರುತ್ತದೆ. ರಾಜರ ಆಸ್ಥಾನದಲ್ಲಿ ಚತುರ ಕವಿಗಳು ಪ್ರಸಿದ್ಧರಾಗಿದ್ದರು. ರಾಜ ಅವರನ್ನು ಕರೆಸಿ, ಹೇರಳವಾಗಿ ಹಣ ಕೊಟ್ಟು ಅವರಿಗೆ ತನ್ನ ಮಗಳನ್ನು ತೋರಿಸಿ ಅವಳ ಸೌಂದರ್ಯದ ಬಗ್ಗೆ ಕಾವ್ಯ ರಚನೆ ಮಾಡಿ ಎಂದು ಹೇಳಿದಾಗ ಕವಿಗಳು ಬಹಳ ಸುಂದರವಾಗಿ ಕವನಗಳನ್ನು ರಚಿಸುತ್ತಿದ್ದರು. ನಾಟಕಕಾರರು ಕವಿಗಳಿಂದ ಗೀತೆಗಳನ್ನು ಕಲಿತು ಹಾಡುತ್ತಿದ್ದರು.

ಆ ಕಾಲದಲ್ಲಿ ಪುಸ್ತಕಗಳಿದ್ದವೆಂಬುದರ ಉಲ್ಲೇಖವಿದೆ. ನಿರ್ಣಯಗಳನ್ನು ಪುಸ್ತಕಗಳಲ್ಲಿ ಬರೆಸಿ, ಅ ಪುಸ್ತಕಗಳನ್ನು ನೋಡಿ ಮೊಕದ್ದಮೆಗಳನ್ನು ನಿರ್ಣಯಿಸಬೇಕೆಂದು ಹೇಳಿದೆ. ಇದನ್ನು ಗಮನಿಸಿದರೆ ಆ ಕಾಲಕ್ಕಾಗಲೇ ಪುಸ್ತಕಗಳಿದ್ದದ್ದು ಸ್ಪಷ್ಟವಾಗುತ್ತದೆ. ಬಹುಶಃ, ಕತ್ತೆ (ದಪ್ಪ) ಕಾಗದದ ಮೇಲೆ ಬರೆಯುತ್ತಿದ್ದರೆಂದು ಕಾಣುತ್ತದೆ. ಶ್ರೇಷ್ಠಿಗಳು ಆ ಕಾಲದಲ್ಲಿ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುತ್ತಿರಲಿಲ್ಲವೆಂಬುದು ಕಂಡು ಬರುತ್ತದೆ. ವಿದ್ಯೆ ಕಲಿಯುವುದರಿಂದ ಮಗನಿಗೆ ತೊಂದರೆಯಾಗುವುದೆಂದು ಭಾವಿಸಿದ ಶ್ರೇಷ್ಠಿ ಮಗನಿಗೆ ವಿದ್ಯೆ ಕಲಿಸಲಿಲ್ಲ ಎಂಬುದು ಕಂಡು ಬರುತ್ತದೆ. ವಿದ್ಯಾವಂತರಾಗಿದ್ದರೂ ದುರ್ವ್ಯಸನಿಗಳಾದರೆ ಆ ವಿದ್ಯೆಯಿಂದ ಪ್ರಯೋಜನವಾಗುವುದಿಲ್ಲವೆಂಬುದು ಎಲ್ಲ ಕಾಲಕ್ಕೂ ಸತ್ಯ. ಇದು ಜಾತಕ ಕಾಲಕ್ಕೂ ಹೊರತಲ್ಲ. ಪರಸ್ತ್ರಿ ಗಮನದಲ್ಲಿದ್ದರೆ ಜ್ಞಾನಿಗಳು ವಿದ್ಯಾವಂತರಾಗಿದ್ದರೂ ಚಿತ್ತವ್ಯಾಕುಲವುಂಟಾಗುವುದರಿಂದ ಅರ್ಥ ಮತ್ತು ಧರ್ಮಗಳ ಬಗೆಗೆ ಉತ್ತರಿಸಲಾಗುವುದಿಲ್ಲವೆಂಬುದು ತಿಳಿದು ಬರುತ್ತದೆ. ಒಟ್ಟಾರೆ ಜಾತಕ ಕಾಲದಲ್ಲಿ ತಕ್ಷಶಿಲೆ ವಿಶ್ವವಿದ್ಯಾನಿಲಯದ ಹೆಸರು ಅನೇಕ ಜಾತಕ ಕಥೆಗಳಲ್ಲಿ ಮೇಲಿಂದ ಮೇಲೆ ಉಲ್ಲೇಖಿತಗೊಂಡಿದೆ. ತಕ್ಷಶಿಲೆಯ ಒಳಗೆ ವೈದಿಕ ವಿದ್ಯಾಲಯ, ಅಷ್ಟಾದಶ ವಿದ್ಯಾಲಯ, ಶಿಲ್ಪ ವಿಜ್ಞಾನ ವಿದ್ಯಾಲಯ, ಸೈನಿಕ ವಿದ್ಯಾಲಯ, ಜ್ಯೋತಿಷ್ಯ ವಿದ್ಯಾಲಯ, ಆಯುರ್ವೇದ ವಿದ್ಯಾಲಯ ಮೊದಲಾದ ಅನೇಕ ವಿದ್ಯಾಲಯಗಳಿದ್ದು ಐದೈದು ಸಾವಿರ ವಿದ್ಯಾರ್ಥಿಗಳು ಅವುಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಈ ಸಾವಿರಾರು ವಿದ್ಯಾರ್ಥಿಗಳಲ್ಲಿ ಸಿದ್ಧಾರ್ಥ ಗೋತಮ ಅಥವಾ ನಂತರದ ಬುದ್ಧ ಅತ್ಯುತ್ತಮ ವಿದ್ಯಾರ್ಥಿಯಾಗಿ ಎಲ್ಲ ವಿದ್ಯೆಗಳನ್ನು ಕಲಿತು ಪ್ರಸಿದ್ಧ ಆಚಾರ್ಯನಾಗಿದ್ದದ್ದು ಪ್ರಧಾನವಾಗಿ ಕಂಡುಬರುತ್ತದೆ. ಅಲ್ಲದೆ ಅವರು ವಾರಾಣಸಿ (ಕಾಶಿ)ಗೆ ಹಿಂತಿರುಗಿ ಬಂದು ರಾಜರಿಗೆ ಅರ್ಥಧರ್ಮಾನುಶಾಸಕ ಮಂತ್ರಿಯಾಗಿದ್ದನೆಂಬ ಉಲ್ಲೇಖ ಅನೇಕ ಜಾತಕಗಳಲ್ಲಿ ಬರುತ್ತದೆ.

ಒಟ್ಟಿನಲ್ಲಿ ಬುದ್ಧ ಮಹಾಪುರುಷ, ಮಹಾವ್ಯಕ್ತಿ, ಮಹಾಶಕ್ತಿಯಾಗಿ ಬೆಳೆದಿದ್ದ ಎಂಬುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಆತನೊಬ್ಬ ಪ್ರಶ್ನಾತೀತ ಗುರುವಾಗಿ ಬೆಳೆದಿದ್ದ. ಹಾಗಾಗಿ ಅವನು ಮಹಾಗುರು; ಮನುಷ್ಯರಿಗೆ ಮಾತ್ರವಲ್ಲದೆ ದೇವತೆಗಳಿಗೆ (ದೇವ ಮನುಸ್ಸಾನಾಂ) ಹಾಗೂ ಎಲ್ಲ ಜೀವಿಗಳಿಗೆ ಗುರುವಾಗಿದ್ದ, ಜಗದ್ಗುರು ವಿಶ್ವಗುರು ಎನಿಸಿದ್ದ. ಜಗತ್ತಿಗೆ ಭಾರತ ನೀಡಿದ ಮಹಾನ್ ಕೊಡುಗೆ ಬುದ್ಧ, ಜ್ಞಾನ ಪ್ರಪಂಚದ ಅಧಿಷ್ಠಾತೃ. ಹಾಗಾಗಿ ಅವನು ಹೇಳಿದ ಜಾತಕ (ಹುಟ್ಟು) ಕಥೆಗಳು ಅಗಾಧವಾದ ವಿಶ್ವ. ಅವುಗಳಲ್ಲಿ ಸಮಾಜದ ಎಲ್ಲ ಮಜಲುಗಳನ್ನು ಶಿಕ್ಷಣದ ಎಲ್ಲ ಮಗ್ಗಲುಗಳನ್ನು ಸೂಕ್ಷ್ಮಾತಿ ಸೂಕ್ಷ್ಮ ವಿವರಗಳನ್ನು ತೆರೆದಿಟ್ಟಿದ್ದಾನೆ. ಅದರಿಂದಾಗಿ ಬುದ್ಧ ಹೇಳಿದ ಜಾತಕ ಕಥೆಗಳು, ಜಾತಕ ಕಾಲ ಸಮಾಜದ ಶಿಕ್ಷಣ ವ್ಯವಸ್ಥೆಯ ಸಮಗ್ರ ಚಿತ್ರಣಕ್ಕೆ ಎತ್ತಿ ಹಿಡಿದ ಕನ್ನಡಿಯಾಗಿವೆ.

ಬುದ್ಧನ ಜಾತಕ ಕಥೆಗಳ ನಂತರ ಅತ್ಯಂತ ಹೆಚ್ಚು ಕಾಲಾನಂತರದಲ್ಲಿ ಬಂದ ಕಥಾಗ್ರಂಥವೆಂದರೆ ವಿಷ್ಣುಶರ್ಮನ 'ಪಂಚತಂತ್ರ'. ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯ ಕೊಡುವ ಉದ್ದೇಶದಿಂದಲೇ ಅನೇಕ ರೀತಿಯ ಕಥೆಗಳನ್ನು ಬರೆದು ಮಾಡಿದ ಕಥಾ ಸಂಗ್ರಹವೇ 'ಪಂಚತಂತ್ರ' ಶಿಕ್ಷಣ ಮನುಷ್ಯನಿಗೆ

Digitised by Bharatavani, CIIL

ಎಷ್ಟು ಅನಿವಾರ್ಯ ಎಂಬುದು ಮೇಲೆ ಹೇಳಿರುವ ಜಾತಕ ಕಥೆಗಳಿಂದ ತಿಳಿಯುತ್ತದೆ. ದಕ್ಷಿಣ ದೇಶದಲ್ಲಿ ಮಹಿಲಾರೋಪವೆಂಬ ನಗರವಿತ್ತು. ಅದನ್ನು ಅಮರಶಕ್ತಿಯೆಂಬ ರಾಜ ಆಳುತ್ತಿದ್ದ. ಆತ ವೀರ, ಶೂರ, ಧೀರ ಅಲ್ಲದೆ ದಾನಶೂರನೂ ಆಗಿದ್ದ. ಅವನಲ್ಲಿ ರಾಜನಿಗಿರಬೇಕಾದ ಎಲ್ಲ ಸದ್ಗುಣಗಳೂ ಇದ್ದವು. ವಿಶಾಲವಾದ ಸಾಮ್ರಾಜ್ಯ, ಅಷ್ಟೈಶ್ವರ್ಯಗಳಿಂದ ತುಂಬಿ ತುಳುಕುತ್ತಿದ್ದ ರಾಜ್ಯಕೋಶ ಎಲ್ಲವೂ ಇದ್ದು ಅಜಾತಶತ್ರು ಎನಿಸಿದ್ದ. ಅಲ್ಲದೆ ತಾನು ಸ್ವಾರ್ಥಿಯಾಗಿರದೆ ಆ ಕಾಲಕ್ಕೆ ತನ್ನ ರಾಜ್ಯದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದ. ಪ್ರಜೆಗಳೆಲ್ಲರೂ ಉತ್ತಮ ಶಿಕ್ಷಣ ಪಡೆದು ರಾಷ್ಟ್ರಭಕ್ತಿಯನ್ನು ರೂಢಿಸಿಕೊಂಡು ಸತ್ಪ್ರಜೆಗಳಾಗಿ ಬಾಳಬೇಕೆಂದು ಆಶಿಸುತ್ತಿದ್ದ. ಜ್ಞಾನಾರ್ಜನೆ ಮನುಷ್ಯನಿಗೆ ಅತಿಮುಖ್ಯವೆಂದು ನಂಬಿದ್ದ. ಕಲಿತ ವಿದ್ಯೆಯನ್ನು ಯಾರೂ ಕದಿಯಲಾರರು, ಅಪಹರಿಸಲಾರರು; ಜ್ಞಾನ ಅಕ್ಷಯವಾದದ್ದು ಅದನ್ನು ಎಷ್ಟೆಷ್ಟು ಉಪಯೋಗಿಸಿದರೂ, ಇತರರಿಗೆ ನೀಡಿದರೂ ಕಡಿಮೆಯಾಗುವಂಥದ್ದಲ್ಲ. ಕಲಿಸಿದಷ್ಟೂ ವೃದ್ಧಿಯಾಗುವಂಥದ್ದು ಎಂದು ಹೇಳುತ್ತಿದ್ದ. ಒಬ್ಬ ಸಾಮಾನ್ಯ ವ್ಯಕ್ತಿಕೂಡ ತಾನು ಗಳಿಸಿಕೊಂಡ ಜ್ಞಾನದಿಂದ, ಪಡೆದುಕೊಂಡ ವಿದ್ಯೆಯಿಂದ ಒಬ್ಬ ರಾಜನನ್ನು ಸರಿಗಟ್ಟಬಲ್ಲ. ಒಬ್ಬ ಮಗ ವಿದ್ಯೆ ಕಲಿಯದಿದ್ದರೆ ಅದು ಅಂಧತ್ವಕ್ಕೆ ಸಮ. ನೂರು ಕೆಟ್ಟ ಮಕ್ಕಳಿಗಿಂತ ಒಬ್ಬ ಶಿಕ್ಷಿತ ಉತ್ತಮ ಪುತ್ರ ಲೇಸು. ಏಕೆಂದರೆ ಆಕಾಶದಲ್ಲಿರುವ ಒಬ್ಬ ಚಂದ್ರ ಕತ್ತಲನ್ನು ಹೋಗಲಾಡಿಸುತ್ತಾನೆ. ಆದರೆ ಅದೇ ಕೋಟ್ಯಂತರ ನಕ್ಷತ್ರಗಳಿದ್ದರೂ ಕತ್ತಲೆಯನ್ನು ಹೋಗಲಾಡಿಸಲಾರವು ಎಂದು ಹೇಳುತಿದ್ದ.

ಪಾಲಕರು ತಮ್ಮ ಮಕ್ಕಳಿಗೆ ಕೊಡಬಹುದಾದ ಅತ್ಯಂತ ಉತ್ತಮ ಉಡುಗೊರೆ ಎಂದರೆ ಉತ್ತಮ ಶಿಕ್ಷಣ. ಒಳ್ಳೆಯ ವಿದ್ಯಾಭ್ಯಾಸ ಮಕ್ಕಳ ಜೊತೆ ಕೊನೆಯವರೆಗೂ ಉಳಿದಿರುತ್ತದೆ. ಅದು ಬೆಂಕಿಯಿಂದ ಸುಡುವಂಥದ್ದಲ್ಲ, ಮಳೆಯಿಂದ ನೆನೆಯುವಂಥದ್ದಲ್ಲ, ಗಾಳಿಯಿಂದ ಹಾರಿಹೋಗುವಂಥದ್ದಲ್ಲ, ಕಳ್ಳನಿಗೆ ಸಿಗುವುದಂಥದ್ದಲ್ಲ. ಅಕ್ಷಯವಾಗಿರುವಂಥದ್ದು, ಅಕ್ಷರವಾಗಿರುವಂಥದ್ದು. ಅಂತೆಯೇ ಅದು ಅವರಿಗೆ ಧನ ಸಂಪತ್ತು, ಕೀರ್ತಿ ಗೌರವಗಳನ್ನು ತಂದು ಕೊಡುತ್ತದೆ. ಸಮಾಜದಲ್ಲಿ ಗೌರವದಿಂದ ಬಾಳುವಂತೆ ಮಾಡುತ್ತದೆ. ಇತರರ ಅಭಿಮಾನ ಗೌರವಗಳಿಗೆ ಪಾತ್ರರಾಗುವಂತೆ ಮಾಡುತ್ತದೆ. ಗಣ್ಯಾತಿಗಣ್ಯರ ಮಧ್ಯೆ ಸಮ್ಮಾನದಿಂದ ಕೂರುವಂತೆ ಮಾಡುತ್ತದೆ.

ಒಳ್ಳೆಯ ಗುರು ಮಾತ್ರ ಒಳ್ಳೆಯ ವಿದ್ಯೆ, ಉತ್ತಮ ಮಾರ್ಗದರ್ಶನ ಮಾಡಬಲ್ಲ. ಸದ್ವಿದ್ಯೆ ನೀಡಬಲ್ಲ, ಹೀಗಿರುವಾಗ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸದ, ಶಿಕ್ಷಣ ಕೊಡಿಸದ ತಂದೆ–ತಾಯಿಗಳೇ ಮಕ್ಕಳ ನಿಜವಾದ ಶತ್ರುಗಳು ಎಂದು ಮುಂತಾಗಿ ಯೋಚಿಸುತ್ತಿದ್ದ. ಇಂಥ ಉತ್ತಮ ಶಿಕ್ಷಣ ಕೊಡಿಸುವುದಕ್ಕಾಗಿ ಆ ರಾಜ ತನ್ನ ರಾಜ್ಯದಲ್ಲಿ ಒಳ್ಳೆಯ ವಿದ್ಯಾಶಾಲೆಗಳನ್ನು, ಮಹಾವಿದ್ಯಾಲಯಗಳನ್ನು ನಿರ್ಮಿಸಿ ವಿದ್ಯಾಭ್ಯಾಸಕ್ಕೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದ.

ಇಂಥ ಉದಾತ್ತ ಭಾವನೆಗಳಿಂದ ಉದಾರಗುಣಗಳಿಂದ ಕೂಡಿದ್ದ ರಾಜ ಅಮರಶಕ್ತಿಗೆ ಬಹುಶಕ್ತಿ, ಉಗ್ರಶಕ್ತಿ, ಅನಂತ ಶಕ್ತಿ ಎಂಬ ಹೆಸರಿನ ಮೂರು ಜನ ಮಕ್ಕಳಿದ್ದರು. ಇವರ ಹೆಸರೇನೊ ಅದ್ಭುತವಾಗಿದೆ. ಆದರೇನು ಪ್ರಯೋಜನ? ಈ ಮೂವರು ಮಕ್ಕಳೂ ನೀತಿರಹಿತರು, ನ್ಯಾಯಬಾಹಿರರು, ದುರ್ಮಾರ್ಗಿಗಳು, ಅತ್ಯಾಚಾರಿಗಳು, ವ್ಯಭಿಚಾರಿಗಳು ಮೂರ್ಖರೂ ಆಗಿದ್ದರು. ಮೂವರು ಮಕ್ಕಳಿದ್ದರೂ ರಾಜ್ಯವನ್ನು ನ್ಯಾಯ, ನೀತಿ, ಧರ್ಮ ಮಾರ್ಗದಲ್ಲಿ ನಡೆಸಿಕೊಂಡು ಹೋಗುವಂಥ ವಾರಸುದಾರರಾಗಲಿಲ್ಲವಲ್ಲ ಎಂದು ಕೊರಗುತ್ತಿದ್ದ. ಕೊನೆಗೊಂದು ದಿನ ರಾಜ ತನ್ನ ಮಂತ್ರಿಗಳನ್ನೆಲ್ಲ ಕರೆಸಿ ನನ್ನ ಮಕ್ಕಳು ಅತ್ಯಂತ ಮೂರ್ಖರೆಂಬುದು ನಿಮಗೆಲ್ಲರಿಗೂ ತಿಳಿದ ವಿಷಯ. ಇಷ್ಟೆಲ್ಲ ರಾಜ ವೈಭವವಿದ್ದರೂ ಮನಸ್ಸಿಗೆ ಶಾಂತಿಯಿಲ್ಲ. ಆದುದರಿಂದ ಈ ನನ್ನ ಮಕ್ಕಳು ವಿದ್ಯಾವಂತರೂ ಬುದ್ಧಿವಂತರೂ ಆಗುವ ಮಾರ್ಗವನ್ನು ಸೂಚಿಸಿ ನನ್ನ ರಾಜ್ಯದಲ್ಲಿ ಐನೂರಕ್ಕೂ ಹೆಚ್ಚು ಮಂದಿ ಪಂಡಿತರು ಜ್ಞಾನಿಗಳು ಇದ್ದು ಸರ್ಕಾರದ ರಾಜಕೋಶದಿಂದ ಯೋಗ್ಯ ವೇತನ ಮತ್ತು ಗೌರವವನ್ನು ಪಡೆಯುತ್ತಿದ್ದಾರೆ. ಇವರಲ್ಲಿ ಯಾರೊಬ್ಬ ವಿದ್ವಾಂಸ ಇತ್ತ ಪ್ರವೃತ್ತನಾದರೆ ಸಾಕು. ಅವನಿಗೆ ಯೋಗ್ಯ ಮಾನ, ಮರ್ಯಾದೆ ಮಾಡುತ್ತೇನೆ ಎಂದು ಹೇಳುತ್ತಾನೆ. ಅವರಲ್ಲಿ ಒಬ್ಬ ಮಂತ್ರಿ ಎದ್ದು ನಿಂತು, "ಪ್ರಭು! ವಿದ್ಯಾವಂತರಾಗುವುದು ಅಷ್ಟು ಸುಲಭವಲ್ಲ. ನೀತಿವಂತರಾಗುವುದಂತೂ ಅದಕ್ಕಿಂತ ಕಷ್ಟ. ಅದಕ್ಕಾಗಿ ಹೆಚ್ಚು ಶ್ರಮಪಡಬೇಕು. ಆದರೂ ಸುಲಭ ಸಾಧ್ಯವಲ್ಲ" ಎಂದು ಹೇಳಿ ಕುಳಿತುಕೊಳ್ಳುತ್ತಾನೆ. ನಂತರ ಸುಮತಿ ಎಂಬ ಮಂತ್ರಿ ಎದ್ದು ನಿಂತು 'ಈ ದೇಹ ಅಶಾಶ್ವತ, ಅಲ್ಪಕಾಲಿಕ, ಶಬ್ದಶಾಸ್ತ್ರ ಅಗಾಧ, ಅದನ್ನು ಅಭ್ಯಾಸ ಮಾಡುವುದು ಅಸಾಧ್ಯ. ಆದ್ದರಿಂದ ಸ್ವಲ್ಪ ಕಲಿತರೂ ಸಾಕು, ಅದರಿಂದ ಕೆಲಸ ಸುಯಂತ್ರಿತವಾಗಿ ನಡೆಯುತ್ತದೆ, ಅಷ್ಟನ್ನಾದರೂ ಮಾಡಬೇಕು' ಎಂದು ಹೇಳಿ ಕುಳಿತ. ಮೂರನೆಯ ಮಂತ್ರಿ ಎದ್ದು ನಿಂತು, "ಮಹಾಪ್ರಭು! ಈ ಊರಲ್ಲಿ ವಿಷ್ಣುಶರ್ಮನೆಂಬ ಮಹಾವಿದ್ವಾಂಸನಿದ್ದಾನೆ. ವಿದ್ಯಾರ್ಥಿಗಳಿಗೆ ಕಲಿಸತಕ್ಕ ಶಿಕ್ಷಣ ಪದ್ಧತಿಯನ್ನು ಸಂಪೂರ್ಣವಾಗಿ ಬಲ್ಲವನಾಗಿದ್ದಾನೆ. ನಿಮ್ಮ ಮೂವರು ಮಕ್ಕಳನ್ನು ಅವರಿಗೆ ಒಪ್ಪಿಸಿದರೆ ಅವರು ನಿಜವಾಗಿಯೂ ನಿಮ್ಮ ಮಕ್ಕಳನ್ನು ವಿದ್ವಾಂಸರನ್ನಾಗಿ ಮಾಡಬಲ್ಲರೆಂಬ ಸಂಪೂರ್ಣ ನಂಬಿಕೆ ನನಗಿದೆ' ಎಂದು ಸೂಚಿಸಿದ. ರಾಜ ಕೂಡಲೇ ಪಟ್ಟದಾನೆಯನ್ನು ಕಳುಹಿಸಿ ವಿಷ್ಣುಶರ್ಮರನ್ನು ಕರೆಸಿ, ಬಂದ ಕೂಡಲೇ ಅವರಿಗೆ ನಮಸ್ಕರಿಸಿ, ಗುರುವರ್ಯರೆ! ನನ್ನ ಮಕ್ಕಳು ಮೂರ್ಖರು, ಉದ್ಧಟರು, ಅನೀತಿವಂತರು, ದುರ್ಮಾರ್ಗಿಗಳು ಆಗಿರುವರೆಂಬುದು ಇವರೆಲ್ಲರ ಅಭಿಪ್ರಾಯ. ತಾವು ಈ ಮೂವರನ್ನೂ ಎಲ್ಲ ವಿಷಯಗಳಲ್ಲಿ ವಿದ್ಯಾವಂತರನ್ನಾಗಿ ಮಾಡಿದರೆ ತಮಗೆ ತಕ್ಕಂತೆ ಸನ್ಮಾನಿಸುತ್ತೇನೆ ಎಂದು ಹೇಳುತ್ತಾನೆ.

ರಾಜನ ಮಾತು ಕೇಳಿದ ಗುರುಗಳಿಗೆ ಸಿಟ್ಟುಬಂದರೂ ನಿಗ್ರಹಿಸಿಕೊಂಡು ಶಾಂತಚಿತ್ತದಿಂದ ರಾಜನನ್ನು ಕುರಿತು, ಪ್ರಭೋ! ವಿದ್ಯೆ ಎಂಬುದು ಪೇಟೆಯಲ್ಲಿಟ್ಟು ಮಾರುವಂಥ ಸರಕಲ್ಲ. ಹಾಗಿದ್ದಿದ್ದರೆ ಶ್ರೀಮಂತರು ಮಾತ್ರ ವಿದ್ಯಾವಂತರಾಗಿ ಬುದ್ಧಿವಂತರಾಗಿ ಬಡವರು ವಿದ್ಯೆ ಸಿಗದೆ ದಡ್ಡರಾಗಿಯೇ ಉಳಿದುಬಿಡುತ್ತಿದ್ದರು. ದೇವರ ನಿಯಮ ಹಾಗಿಲ್ಲ, ನಾನು ವಿದ್ಯೆಯನ್ನು ಹಣಕ್ಕಾಗಿ ಮಾರಿಕೊಳ್ಳುವವನಲ್ಲ. ನನಗೆ ನೀವು ಕೊಡುವ ವೇತನ ಬೇಕಾಗಿಲ್ಲ. ಆದರೆ ನಿಮ್ಮ ಮೂವರು ಮಕ್ಕಳನ್ನೂ ಆರು ತಿಂಗಳಲ್ಲಿ ವಿದ್ಯಾವಂತರನ್ನಾಗಿ ಮಾಡಿ ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ. ಮಾತಿಗೆ ತಪ್ಪಿದರೆ ನನ್ನ ಹೆಸರನ್ನೇ ಬಿಟ್ಟು ಬಿಡುತ್ತೇನೆ ಎಂದು ಮಾತು ಕೊಡುತ್ತಾನೆ. ಆತನ ಪ್ರತಿಜ್ಞೆಯಿಂದ ಪ್ರಸನ್ನಗೊಂಡ ರಾಜ ಗುರುಗಳನ್ನು ಸತ್ಕರಿಸಿ ಮಕ್ಕಳನ್ನು ಅವರ ಜೊತೆ ಕಳುಹಿಸುತ್ತಾನೆ.

ರಾಜಪುತ್ರರನ್ನು ಆಶ್ರಮಕ್ಕೆ ಕರೆತಂದ ವಿಷ್ಣುಶರ್ಮ ಅವರಿಗೋಸ್ಕರ ಮಿತ್ರಭೇದ, ಮಿತ್ರಲಾಭ, ಕಾಕೋಲೋಕಿಯ, ಲಬ್ಧ ಪ್ರಣಾಶ, ಅಪರೀಕ್ಷಿತಕಾರಡ ಎಂಬ ಐದು ಪ್ರಕಾರದ ತಂತ್ರ (ಭಾಗ)ಗಳುಳ್ಳ ಕಥೆಗಳನ್ನು ರಚಿಸಿ, ಆ ಒಂದೊಂದು ತಂತ್ರದಡಿಯಲ್ಲಿ ಅದೆಷ್ಟೋ ಕಥೆಗಳನ್ನು ಕೂಡಿಸಿ ಜಗನ್ಮಾನ್ಯವಾದ 'ಪಂಚತಂತ್ರ' ಎಂಬ ಗ್ರಂಥವನ್ನು ರಚಿಸಿ ಅವನ್ನು ರಾಜಕುಮಾರರಿಗೆ ಕಲಿಸಿ ಅವರನ್ನು ವಿದ್ಯಾ ವಿನಯ ಸಂಪನ್ನರನ್ನಾಗಿ ರೂಪಿಸಿ ಕೀರ್ತಿವಂತನಾಗುತ್ತಾನೆ.

ಈ ಪಂಚತಂತ್ರದೊಳಗಿನ ಕಥೆಗಳನ್ನು ಮನಸ್ಸಿಟ್ಟು ಅಭ್ಯಾಸ ಮಾಡಿದವನು ಜೀವನದ ವ್ಯವಹಾರದಲ್ಲಿ ಎಂದಿಗೂ ಮೋಸಹೋಗಲಾರ ಎಂಬುದು ಖಚಿತ. ಈ ಐದು ತಂತ್ರಗಳಲ್ಲಿ ಒಂದನೆಯ ತಂತ್ರದಲ್ಲಿ ಇಪ್ಪತ್ತೆರಡು, ಎರಡನೇ ತಂತ್ರದಲ್ಲಿ ಆರು, ಮೂರನೇ ತಂತ್ರದಲ್ಲಿ ಎಂಟು, ನಾಲ್ಕನೇ ತಂತ್ರದಲ್ಲಿ ಹದಿಮೂರು ಮತ್ತು ಐದನೇ ತಂತ್ರದಲ್ಲಿ ಹದಿನೈದು

Digitised by Bharatavani, CIIL

ಹೀಗೆ ಪಂಚತಂತ್ರದಲ್ಲಿ ಒಟ್ಟು ಅರವತ್ತ ನಾಲ್ಕು ಕಥೆಗಳಿವೆ. ಪ್ರಾಚೀನ ಕಥೆಗಳಲ್ಲಿ ನೀತಿ, ನ್ಯಾಯ, ಧರ್ಮ ಮುಂತಾದವುಗಳನ್ನೊಳಗೊಂಡಂತೆ ಮೌಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ಕೊಡಲಾಗುತ್ತಿತ್ತು. ಸಮಾಜ ಯಾವುದೇ ವ್ಯಕ್ತಿ, ಹೆಣ್ಣಾಗಲಿ, ಗಂಡಾಗಲಿ, ನೀತಿಯನ್ನು ಪಾಲಿಸಬೇಕು, ನ್ಯಾಯದಿಂದ ಬದುಕಬೇಕು. ಧರ್ಮವನ್ನು ನಂಬಿ ಜೀವನ ನಡೆಸಬೇಕು, ನಾಡಿನ ಅಭಿವೃದ್ಧಿಯನ್ನೇ ಸಾಧಿಸಬೇಕಾದರೆ ಈ ಮೌಲ್ಯಗಳನ್ನು ಪಾಲಿಸಬೇಕು ಎಂಬ ನಿಯಮವಿತ್ತು. ಆದರೂ ಅವುಗಳನ್ನು ಉಲ್ಲಂಘಿಸಿ ನಡೆದುಕೊಳ್ಳುವವರೂ ಇದ್ದರು. ಸಮಾಜವೆಂದ ಮೇಲೆ ಎಲ್ಲ ತರಹದ ಜನರೂ ಇದ್ದರು, ಇದ್ದಾರೆ. ಹಾಗಾಗಿ ಸಮಾಜದಲ್ಲಿ ನಾನಾ ರೀತಿಯ ತೊಂದರೆಗಳು, ಇಕ್ಕಟ್ಟುಗಳು, ಧರ್ಮಸಂಕಟ, ಅನ್ಯಾಯ, ಅಧರ್ಮ, ಅನೀತಿ, ಕ್ರೌರ್ಯಗಳು ಇರುತ್ತವೆ. ಉದ್ಧಟರು, ವ್ಯಭಿಚಾರಿಗಳು, ಸಪ್ತವ್ಯಸನಿಗಳು, ನಾಜೂಕಯ್ಯಗಳು, ಇಬ್ಬಂದಿ ಬುದ್ಧಿಯವರು, ಅಸೂಯಾಪರರು, ತುಂಟರು, ಕಳ್ಳರು, ಜೂಜುಕೋರರು ಮುಂತಾದವರು ಇರುತ್ತಾರೆ. ಇಂಥ ಸಂದರ್ಭಗಳಲ್ಲಿ ಮನುಷ್ಯರ ಬದುಕು ದುಸ್ತರ. ಅದಕ್ಕಾಗಿಯೆ ಮೌಲ್ಯಾಧಾರಿತ ಶಿಕ್ಷಣ ಅಗತ್ಯವಾಗಿತ್ತು. ಇಂಥ ಅವಸ್ಥೆಯಿಂದ ಪಾರಾಗಲು ಸಾಮಾನ್ಯವಾಗಿ ರಾಜಕುಮಾರರನ್ನು ಅವರ ಮೌಢ್ಯ ಮುಂತಾದವನ್ನು ಹೋಗಲಾಡಿಸಲು ನಿದರ್ಶನವಾಗಿ ತೆಗೆದುಕೊಂಡು, ಪ್ರಾಣಿಗಳನ್ನು ಆಧಾರವಾಗಿಟ್ಟುಕೊಂಡು ಕಥೆಗಳನ್ನು ಸೃಷ್ಟಿಸಿಕೊಂಡು, ಆ ಮೂಲಕ ದಡ್ಡ ರಾಜಕುಮಾರರಿಗೆ ಕಥೆಗಳ ನೆಪದಲ್ಲಿ ಸಮಾಜದ ದೌರ್ಬಲ್ಯಗಳನ್ನು ಆ ಕಥೆಗಳಲ್ಲಿ ಚಿತ್ರಿಸುತ್ತ ಅವರ ಅಜ್ಞಾನವನ್ನು ದೂರಮಾಡಿ ವಿದ್ಯಾವಂತರನ್ನಾಗಿ, ಬುದ್ಧಿವಂತರನ್ನಾಗಿ ಮಾಡುತ್ತಲೇ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುತ್ತಿದ್ದರು.

ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪಂಚತಂತ್ರ, ಹಿತೋಪದೇಶ, ಈಸೋಪನ ಕಥೆಗಳು, ವೇತಾಳ ಪಂಚವಿಂಶತಿ, ಅರೇಬಿಯನ್ ನೈಟ್ಸ್ ಮುಂತಾದ ಕಥಾ ಸಾಹಿತ್ಯವನ್ನೇ ಸೃಷ್ಟಿ ಮಾಡಿದರು. ಪ್ರಸ್ತುತ ಪಂಚತಂತ್ರದಲ್ಲಿ ಬರುವ ಕಥೆಗಳಲ್ಲಿ ಕ್ರೂರಪ್ರಾಣಿಗಳನ್ನು ನಂಬಬಾರದು (ಬಂಗಾರದ ಬಳೆ), ದುರ್ಜನರ ಸಂಗ ಮಾಡಬಾರದು (ರಣಹದ್ದು ಮತ್ತು ಬೆಕ್ಕು), ಮಾಡಿದ್ದುಣ್ಣೋ ಮಹರಾಯ (ನರಿ), ಯಾವುದೇ ವಸ್ತುವನ್ನು ದೀರ್ಘಕಾಲಕ್ಕೆ ಶೇಖರಿಸಿಟ್ಟುಕೊಳ್ಳಬಾರದು, ಇಟ್ಟುಕೊಂಡವರು ಅದನ್ನು ಅನುಭವಿಸಲಾರರು (ಆಸೆ ಬುರುಕ ನರಿ), ಸಜ್ಜನರ ಸಂಗ ಅಭ್ಯುದಯಕ್ಕೆ ದಾರಿ, ದುರ್ಜನರ ಸಂಗ ಅಧೋಗತಿಗೆ ದಾರಿ (ಆನೆ ಮತ್ತು ನರಿ), ಪೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಲಿರುವ ಒಂದು ಹಕ್ಕಿ ಲೇಸು (ನಾಲ್ವರು ಸ್ನೇಹಿತರು), ಅನ್ಯರ ವಿಷಯದಲ್ಲಿ ಮೂಗು ತೂರಿಸಬಾರದು (ಕತ್ತೆ ಮತ್ತು ನಾಯಿ), ಕರಟಕ–ದಮನಕ ಎಂಬೆರಡು ನರಿಗಳ ಕಪಟವನ್ನು ನಂಬಬಾರದು (ಸಿಂಹ ಮತ್ತು ಗೂಳಿ), ಮೂಢನಂಬಿಕೆ ಕೆಟ್ಟದ್ದು, ಅದರಿಂದ ದೂರವಿದ್ದಷ್ಟೂ ಬಹುಮಾನ ಪ್ರಶಂಸೆ ಕಟ್ಟಿಟ್ಟ ಬುತ್ತಿ (ಸಿಂಹ, ಇಲಿ ಮತ್ತು ಬೆಕ್ಕು), ಒಳ್ಳೆಯ ಸೇವಕ ತನ್ನ ಸೇವೆಯ ಮಹತ್ವವನ್ನು ಲೋಕಕ್ಕೆ ತಿಳಿಸುತ್ತಿರಬೇಕು, ಇಲ್ಲದಿದ್ದರೆ ತನಗೇ ತೊಂದರೆ (ಮಂಗ ಮತ್ತು ಘಂಟೆ), ಜಾಣರು ಶಕ್ತಿಶಾಲಿಗಳು ಆಗಿದ್ದರೂ ವಿವೇಕವಿಲ್ಲದ ಶಕ್ತಿಗೆ ಬೆಲೆಯಿರುವುದಿಲ್ಲ. (ಕಾಗೆಗಳು ಮತ್ತು ನಾಗರ ಹಾವು), ದುರ್ಜನರ ಸಂಗದಿಂದ ನಿರ್ದೋಷಿಗಳು ಕೆಟ್ಟ ಫಲ ಅನುಭವಿಸುತ್ತಾರೆ (ದುರ್ಜನರ ಸಂಗ ಮಾಡಬಾರದು), ಮೂರ್ಖತನ ತನ್ನ ಅಂತ್ಯವನ್ನೇ ಕಾಣಿಸುತ್ತದೆ (ಮೂರ್ಖ ಕತ್ತೆ), ಜಾಣರಿಗೆ ವಿವೇಕಿಗಳಿಗೆ ಸಲಹೆ ನೀಡಬೇಕೇ ಹೊರತು ಮೂರ್ಖರಿಗಲ್ಲ– ಮೂರ್ಖನಾದವನು ತನ್ನವರನ್ನು ಬಿಟ್ಟು ಶತ್ರುಗಳೊಂದಿಗಿದ್ದರೆ ಅವರಿಂದಲೇ ಅವನ ಅಂತ್ಯ ಖಂಡಿತ (ಮೂರ್ಖರಿಗೆ ಸಲಹೆ ಸಲ್ಲ – ನೀಲಿ ಬಣ್ಣದ ನರಿ), ತನ್ನ ಬುದ್ಧಿಶಕ್ತಿಯಿಂದ ರಾಜನನ್ನು ಯುದ್ಧಮಾಡದೆ ಸೋಲಿಸಬಹುದು (ಆನೆಗಳು ಮತ್ತು ಮೊಲ), ಅಪರಿಚಿತರಲ್ಲಿ ಒಳ್ಳೆಯವರು, ಕೆಟ್ಟವರು, ಎರಡೂ ಅಲ್ಲದವರು ಇರುತ್ತಾರೆ. ಇದನ್ನು ಅರಿತುಕೊಂಡು ನಡೆಯಬೇಕು (ವಿಧೇಯ ಸಹಾಯಕ) ಅತಿ ಆಸೆ ಗತಿ ಗೇಡು (ಮೂರ್ಖ ಕ್ಷೌರಿಕ) ಬದುಕುವುದಕ್ಕೆ ಬುದ್ಧಿವಂತಿಕೆ ಇರಬೇಕು (ಮೂರು ಮೀನುಗಳು), ಶತ್ರುಗಳಲ್ಲಿ ನಂಬಿಕೆ ಇಡಬಾರದು (ಕೊಕ್ಕರೆಗಳು ಮತ್ತು ಸರ್ಪ), ಕೆಲವು ಸಾರಿ ಕೆಟ್ಟವರ ಮಾತು ಕೇಳಿ ಒಳ್ಳೆಯವರ ಮನಸ್ಸೂ ಚಂಚಲವಾಗುತ್ತದೆ (ಕಪಟ ಕಾಗೆ); ಶತ್ರುಗಳಲ್ಲಿನ ಅತಿ ವಿಶ್ವಾಸ ಅವನತಿಗೆ ಮೂಲ (ಸರ್ಪ ಮತ್ತು ಕಪ್ಪೆಗಳು); ಅರಿಯದೆ ಆದದ್ದನ್ನು ಅರಿತುಕೊಂಡರೆ ಮೊದಲಿನ ಗೌರವ ಲಭಿಸುತ್ತದೆ (ಬುದ್ಧಿವಂತ ಮಂತ್ರಿ); ಮೂರ್ಖತನ ಮತ್ತು ದುರಾಸೆ ಪ್ರಾಣಕ್ಕೆ ಸಂಚಕಾರ ತರುತ್ತದೆ. (ಮೂರ್ಖ ತೋಳ); ವಂಚಕನಿಗೆ ಪ್ರತಿ ವಂಚನೆಯೆ ಸರಿಯಾದ ಪಾಠ (ಕಪಟ ವ್ಯಾಪಾರಿ); ಹುಚ್ಚ ಗೆಳೆಯನಿಗಿಂತ ಪ್ರಜ್ಞಾವಂತ ವೈರಿ ಮೇಲು (ಪ್ರಜ್ಞೆಯುಳ್ಳ ವೈರಿ); ಪ್ರಜ್ಞಾವಂತ ವೈರಿ ಮೂರ್ಖ ಗೆಳೆಯನಿಗಿಂತ ಉತ್ತಮ (ಮೂರ್ಖ ಮಿತ್ರ); ಹುಲ್ಲು ತಿನ್ನುವ ಟಗರಿಗೆ ಮಾಂಸ ತಿನ್ನುವ ಸಿಂಹ (ಸಿಂಹ ಮತ್ತು ಟಗರು); ಪ್ರತ್ಯಕ್ಷ ಕಾಣದೆ ಹೆದರಿದ್ದು (ಸಿಂಹ ಮತ್ತು ಟಗರು); ಕಿರಿಯರು ಹಿರಿಯರ ಮಾತನ್ನು ಪಾಲಿಸಬೇಕು (ಚಾಣಾಕ್ಷ ಹಂಸ); ಬಿರುಸು ಮಾತನಾಡುವವರು ಕಾಲಕ್ಕೆ ತಕ್ಕದ್ದಲ್ಲದ ಕೆಲಸ ಮಾಡುವವರು, ಗೆಳೆಯರಂತೆ ನಟಿಸುವವರು ದುರ್ಗತಿಯನ್ನು ತರುವರು (ರಾಜಹಂಸ ಮತ್ತು ಗೂಬೆ); ಅಪರಿಚಿತರಿಗೆ ಮನೆಯಲ್ಲಿ ಆಶ್ರಯ ಕೊಡಬಾರದು (ಹೇನು ಮತ್ತು ತಿಗಣೆ), ಪ್ರತ್ಯಕ್ಷ ನೋಡದ ಶಬ್ದಾದಿಗಳಿಗೆ ಹೆದರಬಾರದು (ನರಿ ಮತ್ತು ನಗಾರಿ); ಕೃತಘ್ನರಲ್ಲಿ ಕೃತಘ್ನ ಮನುಷ್ಯ (ಕೃತಘ್ನ ಮನುಷ್ಯ), ಹಾರಲಾಗದ ಸುಂದರ ರೆಕ್ಕೆಗಳಿಂದ ಏನೂ ಪ್ರಯೋಜನವಿಲ್ಲ (ನವಿಲು ಮತ್ತು ಕೊಕ್ಕರೆ); ಸಂಘಟನೆಯಿಂದ ಬದುಕು ವಿಘಟನೆಯಿಂದ ಸಾವು (ಭೇರುಂಡ ಪಕ್ಷಿಗಳು); ಮೂರ್ಖತನ ಕೆಟ್ಟದ್ದು (ಮೂರ್ಖ ನೇಕಾರ)! ಹೀಗೆ ಪಂಚತಂತ್ರಗಳಲ್ಲಿ ಬರುವ ಕಥೆಗಳಲ್ಲಿ ಮೇಲೆ ಹೇಳಿರುವಂತೆ ಬದುಕಿನ ಅನೇಕ ಮುಖಗಳನ್ನುಳ್ಳ ಪ್ರಸಂಗಗಳನ್ನು ಹೇಳುವುದರ ಮೂಲಕ ಋಜು ಮಾರ್ಗದಲ್ಲಿ ನಡೆದುಕೊಳ್ಳುವವರಿಗೆ ಉಂಟಾಗುವ ಅನುಕೂಲ ಹಾಗೂ ವಕ್ರ ಮಾರ್ಗದಲ್ಲಿ ನಡೆದುಕೊಳ್ಳುವವರಿಗೆ ಉಂಟಾಗುವ ಅನಾನುಕೂಲಗಳೇನೆಂಬುದನ್ನು ತಿಳಿಸಲಾಗಿದೆ. ಹಾಗೆ ತಿಳಿಸುವಾಗ ನ್ಯಾಯ, ನೀತಿ, ಶೀಲ, ಧರ್ಮಾದಿಗಳನ್ನು ಸೂಚ್ಯವಾಗಿ ತಿಳಿಸಲಾಗಿದೆ. ಹಾಗೆಯೇ ಅನೀತಿ, ಅನ್ಯಾಯ, ಅಶ್ಲೀಲ, ಅಧರ್ಮಾದಿಗಳನ್ನು ತಿಳಿಸಲಾಗಿದೆ. ಹೀಗೆ ಬದುಕಿನಲ್ಲಿ ಎದುರಾಗುವ ಒಳ್ಳೆಯ ಹಾಗೂ ಕೆಟ್ಟ ಪ್ರಸಂಗಗಳನ್ನು ಚಿತ್ರಿಸುವುದರ ಮೂಲಕ ರಾಜಕುಮಾರರ ಮನಸ್ಸನ್ನು ಜಾಗೃತವಾಗಿಸಿ ಬುದ್ಧಿವಂತರನ್ನಾಗಿ ಮಾಡುವ ಹುನ್ನಾರು ಅಡಕವಾಗಿದ್ದು ಅವರನ್ನು ವಿದ್ವಾಂಸರನ್ನಾಗಿಸಿದ್ದಾರೆ.

ಹಿತೋಪದೇಶ, ಪಂಚತಂತ್ರ ಮತ್ತು ಇತರೇ ಉತ್ತಮಕಥಾ ಗ್ರಂಥಗಳಿಂದ ಆರಿಸಿದ ನೀತಿಕಥೆಗಳ ಸಂಗ್ರಹ. ಹಿತವಾಗಿ ಉಪದೇಶಿಸುವುದು ಹಿತೋಪದೇಶ. 'ಪಂಚತಂತ್ರ'ದಲ್ಲಿನ ಬಹುಪಾಲು ಕಥೆಗಳು ಇಲ್ಲಿ ಪುನರಾವರ್ತನೆಗೊಂಡಿವೆ. ಶೀರ್ಷಿಕೆಗಳಲ್ಲಿ ಮಾತ್ರ ಅಲ್ಪಸ್ವಲ್ಪ ವ್ಯತ್ಯಾಸ ಮಾಡಿಕೊಂಡಿರುವುದನ್ನು ಬಿಟ್ಟರೆ ಕಥೆಗಳಲ್ಲಿನ ತಿರುಳು ಒಂದೇ ಆಗಿದೆ. ಈ ಕಥೆಗಳಲ್ಲಿ ಪ್ರಾಣಿಗಳು ಮನುಷ್ಯರಂತೆ ಮಾತನಾಡುತ್ತವೆ. ಮನುಷ್ಯರಂತೆಯೇ ವರ್ತಿಸುತ್ತವೆ. ಮನುಷ್ಯ ಪ್ರಾಣಿಗಳಿಗಿಂತಲೂ ಶ್ರೇಷ್ಠ ಪ್ರಾಣಿಯಲ್ಲವೇ. ಆದುದರಿಂದ ಮನುಷ್ಯ ಲೋಕದಲ್ಲಿ ನಡೆಯುವ ವ್ಯವಹಾರಗಳನ್ನು ಪ್ರಾಣಿಗಳಲ್ಲಿ ಆರೋಪಿಸಿ ಪ್ರಸಂಗಗಳನ್ನು ಪ್ರಸ್ತಾಪಿಸಿರುವುದು ಔಚಿತ್ಯ ಪೂರ್ಣವೇ ಆಗಿದೆ. ಏಕೆಂದರೆ, ಪ್ರಾಣಿಗಳಲ್ಲಿಯೇ ಇಷ್ಟೊಂದು ಜಾಗೃತಿಯುಂಟಾದರೆ ಅವುಗಳಿಗಿಂತ ಉತ್ತಮವೆನಿಸಿದ ನಮ್ಮಲ್ಲಿ ಜಾಗೃತಿ ಯಾಕಾಗಬಾರದು ಎಂಬ ಹುರುಪು ಬಂದು ಕಲಿಕೆಯಲ್ಲಿ ಹೆಚ್ಚು ಆಸಕ್ತಿ ತೋರಬಹುದಲ್ಲವೆ ಎಂದು ಭಾವಿಸಿ

Digitised by Bharatavani, CIIL

ತಮ್ಮ ಕಥೆಗಳಲ್ಲಿ ಪ್ರಾಣಿಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆಂದು ಭಾವಿಸಬಹುದು. ಅವರ ಈ ರೀತಿಯ ಪ್ರಯತ್ನ ಪ್ರಯೋಗಗಳಿಂದ ಯಶಸ್ಸು ಸಾಧಿಸಿದ್ದಾರೆಂಬುದು ಸಂತಸದ ಸಂಗತಿ.

ಈಸೋಪನ ಕಥೆಗಳಲ್ಲಿಯೂ ಪಂಚತಂತ್ರದ ಕಥೆಗಳಂತೆಯೇ ನೀತಿಯನ್ನು ತಿಳಿಸುವುದರ ಮೂಲಕ ಬದುಕಿನ ಬಹುಮುಖಗಳನ್ನು ಪರಿಚಯಿಸುವ, ಆ ಮೂಲಕ ವಿದ್ಯಾರ್ಜನೆಗೆ ಅನುಕೂಲವಾಗುವಂತಹ ಪದ್ಧತಿಯನ್ನು ಅನುಸರಿಸಲಾಗಿದೆ. ಈ ಜಗತ್ತಿನ ಸೃಷ್ಟಿ ಎಲ್ಲವೂ ಮುಖ್ಯ. ಅಮುಖ್ಯವಾದುದು ಯಾವುದೂ ಇಲ್ಲ. (ಎಲ್ಲವೂ ಮುಖ್ಯವೇ); ದುಷ್ಟರಿಗೆ ಹೇಗೆ ಬುದ್ಧಿ ಕಲಿಸಬೇಕು. ಅದಕ್ಕೆ ಹೇಗೆ ಉಪಾಯ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ (ಸಮಪಾಲು); ದುಷ್ಟತನವನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕು (ವ್ಯಾಪಾರಿ ಮತ್ತು ಒಂಟೆ); ಬುದ್ಧಿವಂತರನ್ನು ಮೂರ್ಖರನ್ನಾಗಿಸುವುದು ಅಷ್ಟು ಸುಲಭವಲ್ಲ (ಜಾಣ ಮೇಕೆಗಳು); ಕೈಕಟ್ಟಿಕುಳಿತರೆ ಪ್ರಯೋಜನವಿಲ್ಲ (ಪ್ರಯತ್ನದಲ್ಲಿ ಫಲವಿದೆ); ಭಿಕ್ಷೆ ಬೇಡುವುದಕ್ಕಿಂತ ಪ್ರಾಮಾಣಿಕವಾಗಿ ದುಡಿದು ಜೀವಿಸುವುದು ಲೇಸು (ಭಿಕ್ಷುಕರು); ಮುಯ್ಯಿಗೆ ಮುಯ್ಯಿ (ಬೆಳ್ಳಿ ಬೀಗದ ಕೈ); ಯಶಸ್ಸು ಪಡೆಯಬೇಕಾದರೆ ಮರಳಿ ಮರಳಿ ಪ್ರಯತ್ನ ಮಾಡುತ್ತಿರಬೇಕು (ರಾಜ ಮತ್ತು ಜೇಡ); ಮೂರ್ಖರನ್ನು ತಿದ್ದುವುದು ಕಷ್ಟ (ಹನ್ನೆರಡು ಜನ ಮೂರ್ಖರು); ದುರಾಸೆ ಬಲು ಕೆಟ್ಟದ್ದು (ಎಲ್ಲಾ ಹೊನ್ನಿನಾಗಿ); ಮೋಸ ಮಾಡಿ ಮೋಸ ಹೋಗುತ್ತಾರೆ (ಮೋಸ ಮಾಡಿ ಮೋಸ ಹೋಗಬೇಡಿ); ದಯಾಳುಗಳು ಮತ್ತು ಮೃದು ಸ್ವಭಾವದವರನ್ನು ದೇವರೇ ರಕ್ಷಿಸುತ್ತಾನೆ (ವ್ಯಾಪಾರಿ ಮತ್ತು ಕಳ್ಳ); ಮಾತು ಮಾತಿಗೂ ಬದಲಾಯಿಸುತ್ತಿರುವ ಚತುರರನ್ನು ನಂಬಬಾರದು (ಮನುಷ್ಯನೂ ದೆವ್ವವೂ), ದುಷ್ಟ ಎಂದೂ ಬದಲಾಗಲಾರ (ರೈತ ಮತ್ತು ಹಾವು); ಜಂಬಗಾರ ಒಂದಲ್ಲ ಒಂದು ದಿನ ಪಾಠ ಕಲಿಯುತ್ತಾನೆ (ಜಂಬದ ಸೊಳ್ಳೆ); ಕೆಲವೊಮ್ಮೆ ದೊಡ್ಡವರೆನಿಸಿಕೊಂಡ ಸ್ನೇಹಿತರು ಚಿಕ್ಕವರಿಗೆ ಕಷ್ಟಗಳನ್ನು ತರುತ್ತಾರೆ (ಎರಡು ಜಾಡಿಗಳು); ನಮ್ಮ ಶಕ್ತಿಯ ಮಿತಿಯರಿತು ನಾವು ಬಾಳಬೇಕು (ಹಾಸಿಗೆ ಇದ್ದಷ್ಟು ಕಾಲು ಚಾಚು); ಸ್ವಾರ್ಥಿಗಳು ತಾವೂ ತಿನ್ನುವುದಿಲ್ಲ. ತಿನ್ನುವವರಿಗೂ ಕೊಡುವುದಿಲ್ಲ (ಗೋದಣಿಗೆಯ ನಾಯಿ); ಮೂರ್ಖರು ತಮಗೆ ಒದಗಿದ ಸದವಕಾಶವನ್ನು ಉಪಯೋಗಿಸಿಕೊಳ್ಳುವುದಿಲ್ಲ (ಮೂರು ವರಗಳು); ಅಪಾಯವಿಲ್ಲದಿದ್ದರೆ ಮಾತ್ರ ತಮಾಷೆ ತಮಾಷೆಯಾಗಿ ಉಳಿಯುತ್ತದೆ (ನರಿ ಮತ್ತು ಕೊಕ್ಕರೆ); ತನ್ನ ಕೈಲಾಗಲಿಲ್ಲವೆಂದು ಇನ್ನೊಬ್ಬರಲ್ಲಿ ದೋಷಗಳನ್ನು ಹುಡುಕಬಾರದು (ನರಿಗೆಟುಕದ ದ್ರಾಕ್ಷಿ); ಕೊಟ್ಟಿದ್ದು ತನಗೆ ಬೈಚಿಟ್ಟದ್ದು ಪರರಿಗೆ (ಜಿಪುಣ); ಅತಿಯಾಸೆ ಗತಿಗೇಡು (ಸಿಂಹ ಮತ್ತು ಮೊಲ); ಇಬ್ಬರ ಜಗಳ ಮೂರನೆಯವನಿಗೆ ಲಾಭ (ಕೋತಿ ಮತ್ತು ಎರಡು ಬೆಕ್ಕುಗಳು), ಅಪಕಾರಿಗಳು ಎಂದೆಂದಿಗೂ ಅಪಕಾರಿಗಳೆ, ಅಪಕಾರಿಗಳಿಗೆ ಉಪಕಾರ ಮಾಡಬಾರದು (ಸನ್ಯಾಸಿ ಮತ್ತು ಇಲಿ); ಮಂತ್ರಕ್ಕೆ ಮಾವಿನ ಕಾಯಿ ಉದುರುವುದೆ (ಕುರುಬನ ಕೊಳಲು); ಅಂಧಾನುಕರಣೆಯಿಂದ ಪ್ರಯೋಜನವಿಲ್ಲ– ಬದಲು ಪ್ರಾಣಕ್ಕೆ ಕುತ್ತು ಬರುತ್ತದೆ (ನರಿ ಮತ್ತು ಹುಂಜ), ಪ್ರಾಮಾಣಿಕ ದುಡಿಮೆಯಿಂದ ಫಲಸಿದ್ಧಿ (ಶ್ರಮದ ಫಲ); ಯಾವ ಹಕ್ಕಿ ಅಥವಾ ಪ್ರಾಣಿಯೂ ಸುಳ್ಳು ಕಲಿತಿರುವುದಿಲ್ಲ, ಮನುಷ್ಯನ ಸಹವಾಸದಿಂದ ಬಂದದ್ದು (ಮನುಷ್ಯನೂ ಸಿಂಹವೂ); ಕೋಪದಿಂದ ತನಗೇ ಕೇಡು (ಕಪ್ಪೆ ಮತ್ತು ಎತ್ತು); ದುರಾಸೆಯಿಂದ ನಿರಾಸೆ (ನಾಯಿಯ ದುರಾಸೆ); ಚಿನ್ನ, ವಜ್ರ ಹಸಿವನ್ನು ಇಂಗಿಸುವುದಿಲ್ಲ (ಹಸಿದ ಹುಂಜ); ಸುಳ್ಳು ಹೇಳುವ ಅಭ್ಯಾಸ ಒಳ್ಳೆಯದಲ್ಲ, ಅದು ಕೆಲವೊಮ್ಮೆ ಪ್ರಾಣಕ್ಕೆ ಕುತ್ತು ತರುತ್ತದೆ (ಸುಳ್ಳಾದ ಸತ್ಯ); ಒಳ್ಳೆಯ ಸಹವಾಸ ತರುವ ಫಲವೂ ಒಳ್ಳೆಯದೆ (ಪ್ರಯಾಣಿಕ); ಎಂದೆಂದಿಗೂ ಸತ್ಯಕ್ಕೇ ಜಯ, ಸತ್ಯ ಜಯಶೀಲ (ಟಿಟ್ಟಿಭಗಳು); ಯಾರಾದರೂ ಆಗಿರಲಿ ಒಂದಲ್ಲ ಒಂದು ದಿನ ಪಾಠ ಕಲಿಯಲೇಬೇಕು (ಕತ್ತೆಯ ನೆರಳು); ಭಯಪಡುವವರನ್ನು ಹೆದರಿಸುವವರೂ ಇರುತ್ತಾರೆ (ಚಿಕ್ಕ ಹುಡುಗ); ದೈನ್ಯದಿಂದ ಎಂಥ ಕೆಲಸವನ್ನಾದರೂ ಸಾಧಿಸಬಹುದು (ಮಾರುತ ಮತ್ತು ಸೂರ್ಯ); ಒಮ್ಮೆ ನೋಡಿದ ಮಾತ್ರಕ್ಕೆ ಅವನು ಇಂಥಿಂಥವನೆಂದು ನಿರ್ಧರಿಸಲಾಗುವುದಿಲ್ಲ (ನರಿ ಮತ್ತು ಸಿಂಹ); ಹೊಗಳಿಕೆ ಎಂಬುದು ಮನುಷ್ಯನ ಶತ್ರು, ಹೊಗಳಿಕೆಗೆ ಬಾಯಿ ಬಿಡಬಾರದು (ಕಾಗೆ ಮತ್ತು ನರಿ); ಎಲ್ಲ ಕಾಲಕ್ಕೂ ದೊಡ್ಡವರೇ, ಬಲಶಾಲಿಗಳೇ ಜಯಶಾಲಿಗಳಾಗಬೇಕೆಂದೇನೂ ಇಲ್ಲ (ಎತ್ತು ಮತ್ತು ಇಲಿ); ವಿವಾದದಿಂದ ವಿನಾಶ (ಕಪ್ಪೆಗಳು ಬಯಸಿದ ರಾಜ); ಮೋಸಗಾರರನ್ನು ಎಂದೂ ನಂಬುವುದಿಲ್ಲ, ನಂಬಬಾರದು, ನಂಬಿದರೆ ತೊಂದರೆ ತಪ್ಪಿದ್ದಲ್ಲ (ಹಕ್ಕಿ ಮತ್ತು ಬೇಟೆಗಾರ); ಅತಿಯಾಸೆ ಗತಿ ಗೇಡು (ಅತಿಯಾಸೆಯ ದಂಪತಿಗಳು–ಚಿನ್ನದ ಮೊಟ್ಟೆ ಇಡುವ ಕೋಳಿ); ದಯೆ ತೋರಿಸಿದವನಿಗೆ ಒಳ್ಳೆಯದಾಗುತ್ತದೆ (ಹದ್ದು ಮತ್ತು ಹಾವು–ಹಾವಿನ ವಿಷ); ನಂಬಿಕೆಗೆ ಅರ್ಹರಲ್ಲದವರು ಶಿಕ್ಷಾರ್ಹರು (ತೋಳಗಳೂ ನಾಯಿಗಳೂ); ಬುದ್ಧಿವಂತನನ್ನು ಮೂರ್ಖನನ್ನಾಗಿಸಲಾಗುವುದಿಲ್ಲ, ಅದು ಬಹಳ ಕಷ್ಟ (ಬಾಲವಿಲ್ಲದ ನರಿ); ಜಂಬಪಟ್ಟುಕೊಳ್ಳುವುದು ಸುಲಭ, ಆದರೆ ಅದಕ್ಕೆ ತಕ್ಕಂತೆ ನಡೆಯುವುದು ಕಷ್ಟ (ಜಂಬಗಾರ); ಧೈರ್ಯಶಾಲಿಗಳಿರಬಹುದು ಆದರೆ ಅದು ದುರ್ಬಲರ ಮೇಲೆ ಪ್ರಯೋಗಿಸುವ ಅಸ್ತ್ರವಾಗಬಾರದು (ಹುಡುಗಾಟದ ಹುಡುಗರು).

ಇಲ್ಲಿ ಬಂದಿರುವ ಒಂದೊಂದು ಕಥೆಯೂ ಒಂದೊಂದು ನೀತಿಯನ್ನು ಬೋಧಿಸುವುದಲ್ಲದೆ ಅವುಗಳ ಜೊತೆ ಜೊತೆಯಲ್ಲಿಯೇ ಪ್ರಪಂಚದಲ್ಲಿ ನಮ್ಮೊಂದಿಗೇ ವಾಸ ಮಾಡುತ್ತಿರುವ ಜನರ ಗುಣ ಲಕ್ಷಣಗಳನ್ನು, ಅವರ ಸ್ವಭಾವ ಸ್ವರೂಪಗಳನ್ನು, ಒಟ್ಟಾರೆ ಬದುಕಿನಲ್ಲಿ ಎಂಥೆಲ್ಲ ಎಷ್ಟೆಲ್ಲ ಜನರ ಭೇಟಿ, ಅವರಿಂದ ಕಲಿಯುವ ಪಾಠ, ಅದರಿಂದ ನಮ್ಮ ಬದುಕನ್ನು ರೂಪಿಸಿ ರೂಢಿಸಿಕೊಳ್ಳಬಹುದಾದ ರೀತಿ ಮುಂತಾದವುಗಳನ್ನು ಕಲಿಯುತ್ತೇವೆ. ಏಕೆಂದರೆ ಲೋಕದಲ್ಲಿರುವ ಜನರೆಲ್ಲರೂ ಒಂದೇ ತೆರನಾಗಿ ಇರುವುದಿಲ್ಲ. ಎಷ್ಟು ತಲೆಗಳಿವೆಯೋ ಅಷ್ಟೆ ಪ್ರಪಂಚಗಳೂ ಇವೆ. ಅಂಥವರ ಸಂಗದಲ್ಲಿ ಯಶಸ್ವಿಯಾಗಿ ಬದುಕಬೇಕಾಗಿದೆ. ಅದಕ್ಕಾಗಿ ವಿಧವಿಧವಾದ ಸಾಧ್ಯವಾದಷ್ಟು ಮನುಷ್ಯರ ಎಲ್ಲ ಸ್ವಭಾವಗಳನ್ನು ಚಿತ್ರಿಸುವ ಕಥೆಗಳನ್ನು ಹೇಳಿದ್ದಾರೆ, ಪುಸ್ತಕ ರೂಪದಲ್ಲಿಯೂ ಕಂಡಿದ್ದಾರೆ. ಇವುಗಳಿಂದ ಪಡೆದುಕೊಳ್ಳುವುದೇ ನೈಜ ವಿದ್ಯೆ, ನೈಜ ಶಿಕ್ಷಣ, ಮೌಲ್ಯಾಧಾರಿತ ಶಿಕ್ಷಣ.

ಅರೇಬಿಯನ್ ನೈಟ್ಸ್ ಕಥೆಗಳು : ಅರೇಬಿಯಾದ ಸಾವಿರದೊಂದು ರಾತ್ರಿಗಳು. ಸಹಸ್ರಾರು ವರ್ಷಗಳ ಹಿಂದೆ ಪರ್ಷಿಯಾದ ರಾಜನಿಗೆ ಷಹರ್‌ಯರ್ ಮತ್ತು ಷಹಜಮಾನ್ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ತಂದೆಯ ಮರಣಾನಂತರ ಹಿರಿಯ ರಾಜಕುಮಾರ ಷಹರ್‌ಯಾರ್ ಸಿಂಹಾಸನವನ್ನೇರುತ್ತಾನೆ. ತಮ್ಮ ಷಹಜಮಾನ್ ಸಮರ್ ಖಂಡದ ರಾಜನಾಗುತ್ತಾನೆ. ಷಹರ್‌ಯಾರ್ ಅತ್ಯಂತ ಬುದ್ಧಿವಂತಿಕೆಯಿಂದ ಸಾಮ್ರಾಜ್ಯವನ್ನಾಳುತ್ತ ಪ್ರಜೆಗಳ ವಿಶ್ವಾಸವನ್ನು ಸಂಪಾದಿಸುತ್ತಾನೆ. ಅವನ ಮಂತ್ರಿ ಸಮರ್ಥನೂ ದಕ್ಷ ಆಡಳಿತಗಾರನೂ ಆಗಿದ್ದ. ಅಣ್ಣ ತಮ್ಮಂದಿರಿಬ್ಬರೂ ಮದುವೆ ಮಾಡಿಕೊಂಡು ಕೆಲಕಾಲ ಸುಖದಿಂದಿರುತ್ತಾರೆ. ದುರದೃಷ್ಟವಶಾತ್ ಷಹರ್‌ಯಾರನಿಗೆ ತನ್ನ ಹೆಂಡತಿ ತನಗೆ ತಕ್ಕವಳಲ್ಲ ಎಂದು ತಿಳಿಯುತ್ತದೆ. ಅವಿಧೇಯಳೆಂದು ಅರಿವಾಗುತ್ತದೆ. ತಮ್ಮನ ಹೆಂಡತಿಯೂ ಇಂಥವಳೇ ಎಂದು ಅವನಿಗೆ ತಿಳಿದಾಗ ಎಲ್ಲ ಹೆಂಗಸರನ್ನು ದ್ವೇಷಿಸುವ ಪ್ರವೃತ್ತಿ ಬೆಳೆಸಿಕೊಂಡು, ತನ್ನ ಸೈನಿಕರನ್ನು ಕರೆದು ಇಬ್ಬರ

Digitised by Bharatavani, CIIL

ತಲೆತೆಗೆಯಬೇಕೆಂದು ಆಜ್ಞೆ ಮಾಡುತ್ತಾನೆ. ಆ ನಿಮಿಷದಿಂದಲೇ ಎಲ್ಲ ಹೆಂಗಸರನ್ನು ದ್ವೇಷಿಸುತ್ತ ತನ್ನ ಮಂತ್ರಿಯನ್ನು ಕರೆದು "ಅಯ್ಯಾ ಮಂತ್ರಿಯೇ, ಇನ್ನು ಮುಂದೆ ನಾನು ಮದುವೆಯಾಗುವ ವಧು ಒಂದು ದಿನದ ಮಟ್ಟಿಗಷ್ಟೇ ನನ್ನ ಹೆಂಡತಿಯಾಗಿರುವಳು. ಮರುದಿನ ಬೆಳಿಗ್ಗೆಯೇ ಅವಳ ಶಿರಚ್ಛೇದನವಾಗಬೇಕು. ಹೀಗಾದರೂ ಇನ್ನಾವ ಹೆಂಗಸೂ ನನ್ನನ್ನು ಮೂರ್ಖನನ್ನಾಗಿಸುವುದಿಲ್ಲ" ಎಂದು ಹೇಳಿದ. ಚಕಿತಗೊಂಡ ಮಂತ್ರಿ ಎಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ.

ವಯಸ್ಸಾದ ಮಂತ್ರಿಗೆ ಇಬ್ಬರು ಸುಂದರವಾದ ಹೆಣ್ಣು ಮಕ್ಕಳಿದ್ದರು. ಮಂತ್ರಿಗೆ ಆ ಮಕ್ಕಳಲ್ಲಿ ಅಪಾರವಾದ ಪ್ರೀತಿ ಇತ್ತು. ಮಕ್ಕಳಿಬ್ಬರೂ ಸುಂದರಿಯರಷ್ಟೇ ಅಲ್ಲದೆ ಬುದ್ಧಿವಂತರಾಗಿದ್ದರು. ಹೆಚ್ಚು ಬುದ್ಧಿವಂತಳಾದ ಹಿರಿಯ ಮಗಳು ತಂದೆಯನ್ನು ಒಪ್ಪಿಸಿ, ತಾನೇ ರಾಜನ ಬಳಿಗೆ ಬಂದು ಅವನನ್ನು ಒಪ್ಪಿಸಿ ಮದುವೆಯಾಗುತ್ತಾಳೆ. ಇಂಥ ಸುಂದರಿಯಾದ ಹೆಂಗಸನ್ನು ರಾಜ ಕಂಡಿರಲೇ ಇಲ್ಲ. ಅವಳನ್ನು ನೋಡಿದಷ್ಟೂ ಮತ್ತೂ ನೋಡಬೇಕೆನಿಸುತ್ತಿತ್ತು. ರಾಜ ತನ್ನ ಈ ಹೊಸ ರಾಣಿ ಸುಂದರಿಯಷ್ಟೇ ಅಲ್ಲ ಯಾವುದೇ ವಿಷಯದ ಬಗ್ಗೆ ಅವಳು ಬುದ್ಧಿವಂತಿಕೆಯಿಂದ ಮಾತಾಡಬಲ್ಲಳು ಎಂಬುದನ್ನು ಕಂಡುಕೊಂಡಿದ್ದ. ಇಂಥ ಹೆಂಡತಿಯನ್ನು ಮಾರನೆಯ ದಿನವೇ ಅಗಲಿರಬೇಕಾಗುವುದಲ್ಲ ಎಂದು ರಾಜನಿಗೆ ಮೊದಲ ಬಾರಿಗೆ ವೇದನೆಯಾಯಿತು.

ಆ ರಾತ್ರಿ ಷಹರಜಾದೆ ಜೋರಾಗಿ ಅಳತೊಡಗಿದಳು. ಆಗ ರಾಜ ಕುತೂಹಲದಿಂದ "ಏನು ವೇದನೆಯಾಯಿತು ನನ್ನ ರಾಣಿ" ಎಂದು ಕೇಳಿದ. ಅದಕ್ಕೆ "ಓ ಉತ್ತಮ ಸ್ವಭಾವದ ನನ್ನ ಪ್ರಭುವೆ, ಈ ಭೂಮಿಯ ಮೇಲೆ ಇದೇ ನನ್ನ ಕೊನೆಯ ರಾತ್ರಿಯಾದುದರಿಂದ ನಾನು ಈ ರಾತ್ರಿಯನ್ನು ನನ್ನ ತಂಗಿಯೊಡನೆ ಕಳೆಯ ಬಯಸುತ್ತೇನೆ" ಎಂದು ಹೇಳಿದಳು. ರಾಜ ಕೂಡಲೇ ಭಟರನ್ನು ಕಳುಹಿಸಿ ದಿನಾರಜಾದೆಯನ್ನು ಕರೆಸುತ್ತಾನೆ. ಆಗ ಅಕ್ಕತಂಗಿಯರಿಬ್ಬರೂ ಪರಸ್ಪರ ಅಪ್ಪಿಕೊಂಡು ಕಣ್ಣೀರು ಸುರಿಸುತ್ತ, ಈ ಮೊದಲೇ ಯೋಚಿಸಿದ್ದಂತೆ, ಅಕ್ಕ ಈ ದೀರ್ಘವಾದ ರಾತ್ರಿಯನ್ನು ಕಳೆಯಲು ಅದ್ಭುತವೂ ರಮ್ಯವೂ ಆದ ಯಾವುದಾದರೂ ಕಥೆಯನ್ನು ಹೇಳು" ಎಂದು ಕೇಳಿದಳು. ಆಗ ಷಹರಜಾದೆ ರಾಜನತ್ತ ನೋಡಿ "ನನ್ನ ಮಹಾಸ್ವಾಮಿ ಒಪ್ಪುವುದಾದರೆ ಆಗಬಹುದು" ಎಂದಳು.

ಕಥೆಗಳನ್ನು ಕೇಳುವುದರಲ್ಲಿ ಆಸಕ್ತಿ ತೋರುತ್ತಿದ್ದ ರಾಜ "ನನ್ನ ರಾಣಿ, ಇದೊಂದು ಒಳ್ಳೆಯ ಕೆಲಸ. ಈ ರೀತಿ ನೀನು ನಮ್ಮ ಮನ ರಂಜಿಸಬಹುದು" ಎಂದ. ರಾಜನ ಮನಸ್ಸಿನಲ್ಲಿದ್ದ ಸ್ತ್ರೀಯರ ಬಗೆಗೆ ತಳೆದಿದ್ದ ಕ್ರೌರ್ಯಭಾವವನ್ನು ಮೃದುಗೊಳಿಸಲೆಂದೇ ಆತನನ್ನು ಮದುವೆಯಾದ ಷಹರಜಾದೆ ಒಂದಾದ ಮೇಲೊಂದು ಕಥೆಯನ್ನು ಹೆಣೆಯತೊಡಗಿದಳು. ಅವಳು ಚತುರಳಾಗಿದ್ದುದರಿಂದ ದಿನ ಮುಗಿಯುತ್ತಿದ್ದ ವೇಳೆಗೆ ಸರಿಯಾಗಿ ಕಥೆಯು ಅತ್ಯಂತ ಕುತೂಹಲದ ಹಂತ ಮುಟ್ಟಿದಾಗ ಕಥೆ ಹೇಳುವುದನ್ನು ನಿಲ್ಲಿಸಿಬಿಡುತ್ತಿದ್ದಳು. ಕಥೆ ಹೇಗೆ ಮುಗಿಯುವುದೋ ಎಂಬುದನ್ನು ತಿಳಿಯಬೇಕೆಂಬ ಕುತೂಹಲದಿಂದ ರಾಜ ರಾತ್ರಿ ಕಥೆ ಕೇಳುವ ಸಲುವಾಗಿ ತನ್ನ ರಾಣಿಯ ತಲೆ ಕತ್ತರಿಸುವ ಕೆಲಸವನ್ನು ಮುಂದಿನ ದಿನಕ್ಕೆ ಮುಂದೂಡುತ್ತಿದ್ದ.

ದಿನಗಳು ಕಳೆದು ವಾರಗಳುರುಳಿ ತಿಂಗಳುಗಳು ಕಳೆದರೂ ಷಹರಜಾದೆ ಮಾತ್ರ ಕಥೆ ಹೇಳುವುದನ್ನು ಮುಂದುವರಿಸುತ್ತಲೇ ಬಂದಳು. ಈ ಕಥೆಗಳ ಒಡಲಲ್ಲಿ ಅಡಗಿರುತ್ತಿದ್ದ ನೀತಿ ನಿಧಾನವಾಗಿ ರಾಜನ ಮನಸ್ಸನ್ನು ಬದಲಾಯಿಸತೊಡಗಿತು. ರಾಜ ಷಹರಜಾದೆಯ ಸೌಂದರ್ಯ, ಚಾತುರ್ಯ, ಬುದ್ಧಿವಂತಿಕೆಗಳಿಂದ ಆಕರ್ಷಿತನಾಗಿದ್ದ. ಅವನು ಅವಳ ತಂಗಿ ದಿನಾರಜಾದೆಯನ್ನು ತನ್ನ ತಮ್ಮ ಷಹಜಮಾನನಿಗೆ ಕೊಟ್ಟು ಮದುವೆ ಮಾಡಿದ. ಅವನ ಮನಸ್ಸಿನಲ್ಲೂ ಈ ಕಥೆಗಳು ನಾಟಿ ನಿಂತವು. ರಾಜನ ಮನಸ್ಸಿನ ಕ್ರೌರ್ಯ ಸಂಪೂರ್ಣವಾಗಿ ನಾಶವಾಗಿ ಮೊದಲಿನಂತೆ ಮೃದು ಸ್ವಭಾವದವನಾಗಿ ಪರಿವರ್ತಿತನಾದ.

ಷಹರಜಾದೆಯು ರಾಜ ಷಹರಯಾರನಿಗೆ ಸಾವಿರದೊಂದು ರಾತ್ರಿ ಹೇಳಿದ ಕಥೆಗಳೇ ಅರೇಬಿಯದ ರಾತ್ರಿಗಳು (ಅರೇಬಿಯನ್ ನೈಟ್ಸ್) ಅಥವಾ ಸಾವಿರದೊಂದು ರಾತ್ರಿ ಎಂದು ಪ್ರಸಿದ್ಧವಾಗಿವೆ. ಇವು ಒಟ್ಟು ಹದಿನಾರು ಸಂಪುಟಗಳಲ್ಲಿ ಸಂಗ್ರಹವಾಗಿವೆ. ಇವುಗಳಲ್ಲಿ 'ಅಲಿಬಾಬ ಮತ್ತು ನಲವತ್ತು ಮಂದಿ ಕಳ್ಳರು,' 'ನಾವಿಕ ಸಿಂದ್‌ಬಾದ್'ನ ಏಳು ಕಡಲ ಯಾನಗಳು, "ಅಲ್ಲಾವುದ್ದೀನ್ ಅದ್ಭುತ ದೀಪ", 'ರಾಜಕುಮಾರ ಅಹಮದ್ ಮತ್ತು ಯಕ್ಷಿಣಿ' ಮುಂತಾದ ಕಥೆಗಳಿವೆ. ಈ ಕಥೆಗಳಲ್ಲಿ ಬರುವ ಚಾತುರ್ಯ, ಕಲಾಕೌಶಲ, ಬುದ್ಧಿವಂತಿಕೆ, ಸಮಯ ಪ್ರಜ್ಞೆ, ಕಡಲ ಸಾಹಸಗಳು ಮುಂತಾದ ಗುಣಗಳು ಅಭಿವ್ಯಕ್ತಗೊಂಡು ಉತ್ತಮ ಶಿಕ್ಷಣದ ಮಾದರಿಗಳಾಗಿವೆ.

–ಬಿ.ನಂ.ಚಂ.

## ಪುನಃಶ್ಚೇತನ ಕಾರ್ಯಕ್ರಮಗಳು

ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ಗುಂಪಿನ ಕಲಿಯುವವರಿಗೆ ಪರಿಣಾಮಕಾರಿಯಾದ ಮತ್ತು ಸಮರ್ಥವಾದ ಸೇವೆ ಸಲ್ಲಿಸಲು ಶಿಕ್ಷಕರಲ್ಲಿ ಹೊಸ ಜ್ಞಾನ / ಕೌಶಲಗಳು ಮತ್ತು ಉತ್ತಮ ಬೋಧನಾ ಪದ್ಧತಿಗಳನ್ನು ಬಳಸುವ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶವನ್ನು ಹೊಂದಿರುವ ವೃತ್ತಿಪರ ಬೆಳವಣಿಗೆ ಕಾರ್ಯಕ್ರಮಗಳನ್ನು **"ಶಿಕ್ಷಕರ ಸೇವಾನಿರತ ತರಬೇತಿ ಕಾರ್ಯಕ್ರಮಗಳು"** ಎನ್ನಬಹುದು. ಶಿಕ್ಷಕ ವೃತ್ತಿಯಲ್ಲಿರುವ ಶಿಕ್ಷಕರಿಗೆ ಅವರ ವೃತ್ತಿದಕ್ಷತೆಯನ್ನು ಮತ್ತು ವೃತ್ತಿ ಬೆಳವಣಿಗೆಯ ಸುಧಾರಣೆಯನ್ನು ಗುರಿಯಿಟ್ಟುಕೊಂಡು ನೀಡುವ ತರಬೇತಿಯೇ **ಸೇವಾವಧಿ** ಅಥವಾ **ಸೇವಾನಿರತ ತರಬೇತಿಯಾಗಿದೆ.** ಸೇವಾನಿರತ ಶಿಕ್ಷಕರ ತರಬೇತಿಗಾಗಿ ಹಮ್ಮಿಕೊಳ್ಳುವ ಹಲವಾರು **ಪುನಃಶ್ಚೇತನ ಕಾರ್ಯಕ್ರಮಗಳಲ್ಲಿ** ಪ್ರಮುಖವಾದವು – ವಿಚಾರ ಸಂಕಿರಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಯೋಜಿತ ಕಾರ್ಯಗಳು ಹಾಗೂ ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ ಕಾರ್ಯಕ್ರಮಗಳು. ಈ ಕಾರ್ಯಕ್ರಮಗಳು ಶಿಕ್ಷಕರ ಜ್ಞಾನವನ್ನು ಪುನಃಶ್ಚೇತನಗೊಳಿಸಲು ಮತ್ತು ದಕ್ಷತೆಯನ್ನು ಹೆಚ್ಚಿಸಲು ಸಹಾಯಕಾರಿಯಾಗಿವೆ. ಶಿಕ್ಷಕರನ್ನು ಸಬಲೀಕರಿಸುವ ಈ ಕಾರ್ಯಕ್ರಮಗಳು ಕಾರ್ಯನಿರ್ವಹಣೆಯಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸಿ ವೃದ್ಧಿಗೊಳಿಸುವುದಲ್ಲದೆ, ಅವರ ಸ್ಥಾನಮಾನವನ್ನು ಹೆಚ್ಚಿಸುತ್ತದೆ.

### ಶಿಕ್ಷಕರ ಸೇವಾನಿರತ ತರಬೇತಿ ಕಾರ್ಯಕ್ರಮಗಳ ಅಗತ್ಯತೆ

ಮ್ಯಾಕ್ ಲೆಟ್ಚೀರವರು, "ಶಿಕ್ಷಕರ ಅರ್ಹತೆ ಅಥವಾ ಅನುಭವ ಅಂತಿಮವಾದ ವಿಷಯವಲ್ಲ. ಒಬ್ಬ ಶಿಕ್ಷಕರಾಗಿ ನೀವು ನಿರಂತರ ಕಲಿಯುವವರಾಗಬೇಕು" ಎಂದಿದ್ದಾರೆ. ನಿರಂತರ ಕಲಿಯುವ ಶಿಕ್ಷಕರು ವೃತ್ತಿಪರವಾಗಿ ಬೆಳವಣಿಗೆ ಹೊಂದುತ್ತಿರುತ್ತಾರೆ. ಇದಕ್ಕೆ ಪೂರಕವಾಗಿಯೇ ವೃತ್ತಿನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರು ಹಾಗೂ ಪ್ರಶಿಕ್ಷಕರು ಮೂಲತಃ ಶಿಕ್ಷಣ ತರಬೇತಿಯನ್ನು ಪಡೆದ ಬಳಿಕ ಯಾವ ಪುನಃಶ್ಚೇತನ ತರಬೇತಿಯನ್ನೂ ಹೊಂದದೆ 15–20 ವರುಷಗಳ ಕಾಲ ಕಾರ್ಯನಿರ್ವಹಿಸಿರುತ್ತಾರೆ. ಈ ಅಂಶವೇ ತರಬೇತಿ ಕಾರ್ಯಕ್ರಮಗಳ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಇದಲ್ಲದೆ ಇನ್ನೂ ಕೆಲವು ಕಾರಣಗಳು ಹೀಗಿವೆ:

Digitised by Bharatavani, CIIL

ಸಾಂಸ್ಥಿಕ ಹಂತಗಳಲ್ಲಿ ಬೆಳವಣಿಗೆಯ ಕಾರ್ಯಗಳಿಗೆ ಹೆಚ್ಚು ಅವಶ್ಯಕತೆಯಿದೆ.

ಬದಲಾಗುತ್ತಿರುವ ಶಿಕ್ಷಣ ನೀತಿಯನ್ನು ಆಧರಿಸಿ ಹೊಸ ಬೋಧನಾ ಪದ್ಧತಿಗಳು ಮತ್ತು ಮೌಲ್ಯಮಾಪನ ವಿಧಾನಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ.

ಉದಾ: 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (NCF 2005)ರ ಪ್ರಕಾರ ರಚನಾತ್ಮಕ ಬೋಧನಾ ಪದ್ಧತಿಗಳನ್ನು ಮತ್ತು ನವೀನ ಮೌಲ್ಯಮಾಪನ ವಿಧಾನಗಳನ್ನು ಅನುಸರಿಸಬೇಕಾಗಿದೆ.

ಬದಲಾಗುತ್ತಿರುವ ಸಾಮಾಜಿಕ ಅಂಶಗಳಿಗೆ ಅನುಗುಣವಾಗಿ ಶಿಕ್ಷಣ ಪದ್ಧತಿಗಳನ್ನು ನವೀಕರಿಸುವ ಹಾಗೂ ಬದಲಾಯಿಸುವ ಅವಶ್ಯಕತೆಯಿದೆ.

ಶಿಕ್ಷಕರನ್ನು ಪ್ರೇರೇಪಿಸಲು, ಅವರ ಸ್ಮರಣೆಯನ್ನು ಪುನಃಶ್ಚೇತನಗೊಳಿಸಲು ಹಾಗೂ ಮನೋಭಾವನೆ ಮಾರ್ಪಡಿಸಲು ಪುನಃಶ್ಚೇತನ ಕಾರ್ಯಕ್ರಮಗಳ ಅಗತ್ಯವಿದೆ.

ಶಿಕ್ಷಣ ಕ್ಷೇತ್ರದಲ್ಲಿರುವ ವಿವಿಧ ವ್ಯಕ್ತಿಗಳ ನಡುವೆ ಸಹಕಾರ ಮತ್ತು ಸಹಯೋಗ ಬೆಳೆಸಲು, ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಮತ್ತು ಪರಸ್ಪರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ತರಬೇತಿ ಕಾರ್ಯಕ್ರಮಗಳ ಅಗತ್ಯವಿದೆ.

ಕೊಠಾರಿ ಶಿಕ್ಷಣ ಆಯೋಗದ ವರದಿಯ ಫಲವಾಗಿ ದೇಶದ ಹಲವಾರು ರಾಜ್ಯಗಳಲ್ಲಿ ಶಾಲಾ ಸಂಕೀರ್ಣಗಳನ್ನು ಸ್ಥಾಪಿಸಲಾಗಿತ್ತು. ಶೈಕ್ಷಣಿಕ ಸಮ್ಮೇಳನ ಮತ್ತು ವಿಚಾರ ಸಂಕಿರಣಗಳಿಗೆ ಹಾಜರಾಗಲು ಸೌಲಭ್ಯಗಳನ್ನು ಒದಗಿಸಲಾಗಿತ್ತು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET), ಪ್ರಶಿಕ್ಷಣ ಅಥವಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE) ಮತ್ತು ಶಿಕ್ಷಣದಲ್ಲಿ ಉನ್ನತ ಅಧ್ಯಯನ ಸಂಸ್ಥೆ (IASE) ಗಳನ್ನು 1986ರ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಕೇಂದ್ರ ಸರ್ಕಾರದ ಶಿಕ್ಷಣ ಧೋರಣೆಯ ಆಧಾರದ ಮೇಲೆ ಸ್ಥಾಪಿಸಲಾಗಿತ್ತು. ಇವುಗಳ ಮೂಲಕ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರು ಹಾಗೂ ಪ್ರಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಯೋಜನೆಗಳನ್ನು ರೂಪಿಸಲಾಗಿದೆ.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (DPEP-1995-2003)ದ ಅಡಿಯಲ್ಲಿ ಬ್ಲಾಕ್ ಸಂಪನ್ಮೂಲ ಕೇಂದ್ರ (BRC) ಮತ್ತು ಕ್ಲಸ್ಟರ್ ಸಂಪನ್ಮೂಲ ಕೇಂದ್ರ (CRC)ಗಳನ್ನು ಸ್ಥಾಪಿಸಿ, ಇವುಗಳ ಮೂಲಕ ಪ್ರಾಥಮಿಕ ಶಿಕ್ಷಕರಿಗೆ ಮಗು–ಕೇಂದ್ರಿತ ಬೋಧನಾ ಪದ್ಧತಿಗಳು ಹಾಗೂ ಇತರೇ ಶೈಕ್ಷಣಿಕ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಸರ್ವಶಿಕ್ಷಣ ಅಭಿಯಾನ (SSA - 2001) ದ ಕಾರ್ಯಕ್ರಮಗಳ ಅಡಿಯಲ್ಲಿ ಸೇವಾನಿರತ ಶಿಕ್ಷಕರಿಗೆ ಪ್ರತಿವರ್ಷ ಕನಿಷ್ಠ 20 ದಿವಸಗಳ ತರಬೇತಿ ನೀಡುವ ಯೋಜನೆ ರೂಪಿಸಲಾಗಿದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF-2005) ಇದರಲ್ಲಿ ಶಿಕ್ಷಕರ ಅಗತ್ಯಗಳಿಗನುಗುಣವಾಗಿ ತರಬೇತಿ ಕಾರ್ಯಕ್ರಮಗಳನ್ನು ಸೇವಾನಿರತ ಶಿಕ್ಷಕರಿಗೆ ಯೋಜಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ.

ವಿವಿಧ ಶಿಕ್ಷಣ ಆಯೋಗಗಳು ಮತ್ತು ನೀತಿಗಳ ಶಿಫಾರಸ್ಸಿನ ಆಧಾರದ ಮೇಲೆ ವಿವಿಧ ಉದ್ದೇಶಗಳನ್ನು ಈಡೇರಿಸುವ ಸೂಕ್ತವಾದ ಪುನಃಶ್ಚೇತನ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಬೇಕೆಂಬುದು ನಿಸ್ಸಂದೇಹವಾಗಿಯೂ ಗಮನಾರ್ಹವಾದುದು. ಶಿಕ್ಷಕರ ಗುಣಮಟ್ಟದ ಸುಧಾರಣೆ ಅವರಿಗೆ ಸೇವಾಪೂರ್ವ ಅವಧಿಯಿಂದ ಆರಂಭಿಸಿ ಸೇವೆಯ ಅಂತಿಮ ಅವಧಿಯವರೆಗೆ ಲಭ್ಯವಾಗುವ ಕಾಲ ಕಾಲದ ಶಿಕ್ಷಣ, ತರಬೇತಿ ಹಾಗೂ ಮತ್ತಿತರ ಪ್ರೇರಕ ಮತ್ತು ಪೂರಕ ಅಂಶಗಳನ್ನು ಅವಲಂಬಿಸಿರುತ್ತದೆ.

**ಸೇವಾನಿರತ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಲು ಮಾರ್ಗಸೂಚಿ**

ಮಾನವ ಸಂಪನ್ಮೂಲ ಬೆಳವಣಿಗೆ ಮಂತ್ರಾಲಯವು (MHRD) ಸೇವಾನಿರತ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಲು ಹಲವಾರು ಮಾರ್ಗಸೂಚಿಗಳನ್ನು ನೀಡಿದೆ. ಅವುಗಳಲ್ಲಿ ಕೆಲವು:

ವಿಷಯಾಧಾರಿತ ಮತ್ತು ಸಾಮಾನ್ಯ ತರಬೇತಿಯನ್ನು ಪ್ರತಿಯೊಬ್ಬ ಶಿಕ್ಷಕನಿಗೆ ವರ್ಷದಲ್ಲಿ 4–5 ಬಾರಿ ಕೊಡುವುದು.

ಪ್ರತಿಯೊಬ್ಬ ಶಿಕ್ಷಕನ ಎಲ್ಲ ತರಬೇತಿ ಅವಶ್ಯಕತೆಗಳನ್ನು ಪೂರೈಸುವ ಕಾರ್ಯಕ್ರಮಗಳ ಮಾಡ್ಯೂಲನ್ನು ತಯಾರಿಸಿ, ಅದನ್ನು ಶಿಕ್ಷಕರಿಗೆ 3–4 ವರುಷಗಳ ಅವಧಿಯಲ್ಲಿ ಒದಗಿಸುವುದು.

ಸಂಬಂಧಪಟ್ಟ ಎಲ್ಲ ಶಿಕ್ಷಕರ ಮತ್ತು ಅಧಿಕಾರಿಗಳ ಜೊತೆ ಆಲೋಚಿಸಿ DIET ಮತ್ತು BRC ಹಂತಗಳಲ್ಲಿ ಮುಂಚಿತವಾಗಿಯೇ ಕಾರ್ಯಕ್ರಮದ ರೂಪುರೇಷೆಗಳನ್ನು ತಯಾರಿಸಿ, ತರಬೇತಿಯ ವೇಳಾಪಟ್ಟಿಯನ್ನು ಶಿಕ್ಷಕರಿಗೆ ಮೊದಲೇ ಒದಗಿಸುವುದು.

ಕಾರ್ಯಕ್ರಮಗಳಿಗೆ ಆದಷ್ಟು ರಜಾವೇಳೆಗಳನ್ನು ಬಳಸುವುದು.

ತರಬೇತಿ ಕಾರ್ಯಕ್ರಮಗಳಲ್ಲಿ ಶಿಕ್ಷಕರ ಭಾಗವಹಿಸುವಿಕೆಗೆ ಹೆಚ್ಚು ಅವಕಾಶ ಕಲ್ಪಿಸಲು ಚರ್ಚೆಗಳು, ಗುಂಪು ಕೆಲಸ, ಪ್ರದರ್ಶನ ಇತ್ಯಾದಿ ತಂತ್ರಗಳನ್ನು ಅಳವಡಿಸಿಕೊಳ್ಳುವುದು.

ತರಬೇತಿ ಕಾರ್ಯಕ್ರಮಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ವ್ಯಕ್ತಿ ಅಧ್ಯಯನ, ಕ್ಷೇತ್ರ, ಭೇಟಿಗಳನ್ನು ಬಳಸುವುದು.

**ಪುನಃಶ್ಚೇತನ ಕಾರ್ಯಕ್ರಮಗಳ ವಿಧಗಳು**

1. **ಸಮ್ಮೇಳನಗಳು:** ಇವು ಶಿಕ್ಷಣ ಕ್ಷೇತ್ರದ ವಿವಿಧ ಆಯಾಮಗಳ ಬಗ್ಗೆ ಉನ್ನತ ಮತ್ತು ಉತ್ತಮ ಅರಿವು ಮೂಡಿಸಲು ಬಳಸುವ ತಂತ್ರವಾಗಿದೆ. ಸಮ್ಮೇಳನಗಳಲ್ಲಿ ಅಂತಾರಾಷ್ಟ್ರೀಯ, ರಾಷ್ಟ್ರೀಯ, ಪ್ರಾಂತೀಯ, ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಸಾಮಾಜಿಕ, ಮನೋವೈಜ್ಞಾನಿಕ, ಆರ್ಥಿಕ, ನೈತಿಕ ಆಯಾಮಗಳನ್ನು ಮತ್ತು ಸಮಸ್ಯೆಗಳನ್ನು ಚರ್ಚಿಸಲು ಶಿಕ್ಷಕರ ಸಭೆ ಸೇರುತ್ತದೆ.

2. **ವಿಚಾರ ಸಂಕಿರಣ / ಗೋಷ್ಠಿಗಳು:** ಇದು ಸಮೂಹ ಚರ್ಚೆಯ ಮಾದರಿಯಾಗಿದೆ. ಒಂದೇ ಕ್ಷೇತ್ರದಲ್ಲಿ ಆಸಕ್ತಿ, ಒಲವು ಹೊಂದಿದವರನ್ನು ಒಂದು ಗುಂಪನ್ನಾಗಿಸಿ ವಿಷಯಕ್ಕೆ ಅಥವಾ ಸಮಸ್ಯೆಗೆ ಸಂಬಂಧಿಸಿದಂತೆ ಪ್ರಬಂಧ ಮಂಡಿಸಿ ತದನಂತರ ವಿಷಯದ ಸಂಕೀರ್ಣ ಅಂಶಗಳನ್ನು ಕುರಿತು ಗುಂಪು ಚರ್ಚೆ ಮಾಡಲಾಗುತ್ತದೆ.

3. **ಕಾರ್ಯಾಗಾರಗಳು:** ಇವು ಸಮ್ಮೇಳನ ಮತ್ತು ವಿಚಾರಗೋಷ್ಠಿ ಗಳಿಗಿಂತ ಹೆಚ್ಚು ಪ್ರಾಯೋಗಿಕ ಹಾಗೂ ವ್ಯಾವಹಾರಿಕ ವಾಗಿರುವುವು. ಕಾರ್ಯಾಗಾರಗಳಲ್ಲಿ ಅನುಭವಸ್ಥ ಸಂಪನ್ಮೂಲ ವ್ಯಕ್ತಿಗಳಿದ್ದು, ಅವರ ಮಾರ್ಗದರ್ಶನದಲ್ಲಿ ತರಬೇತಿ ಹೊಂದುತ್ತಿರುವ ಶಿಕ್ಷಕರು ಸಂಪೂರ್ಣ ಭಾಗವಹಿಸುವಿಕೆಯಿಂದ ವಿಷಯಗಳನ್ನು

Digitised by Bharatavani, CIIL

ಚರ್ಚಿಸಿ ವಸ್ತುಗಳನ್ನು / ವರದಿಗಳನ್ನು ಪಠ್ಯಸಂಚಿಕೆ (Package) ಸಿದ್ಧಪಡಿಸುತ್ತಾರೆ.

4. **ಅಲ್ಪಾವಧಿ ಮತ್ತು ದೀರ್ಘಾವಧಿ ಕೋರ್ಸ್‌ಗಳು:** ನಿರ್ದಿಷ್ಟ ವಿಷಯ, ಕೌಶಲ ಅಥವಾ ಆಸಕ್ತಿಯ ಕ್ಷೇತ್ರದಲ್ಲಿ ಶಿಕ್ಷಕರಿಗೆ ಅಲ್ಪಾವಧಿ / ದೀರ್ಘಾವಧಿ ಕೋರ್ಸ್‌ಗಳನ್ನು ಯೋಜಿಸಬಹುದು. ಅಲ್ಪಾವಧಿ ಎಂದರೆ 4–5 ದಿನಗಳಾದರೆ, ದೀರ್ಘಾವಧಿ 1 ರಿಂದ 3 ತಿಂಗಳ ಕೋರ್ಸ್ ಆಗಬಹುದು. ದೀರ್ಘಾವಧಿ ಕೋರ್ಸ್‌ಗಳ ವೇಳಾಪಟ್ಟಿಯನ್ನು ಮುಂಚಿತವಾಗಿ ಘೋಷಿಸಿದರೆ ಶಿಕ್ಷಕರು ತಮಗೆ ಅವಶ್ಯವಿರುವ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಮುಂಚಿತವಾಗಿ ಭಾಗವಹಿಸುವಿಕೆಯನ್ನು ದೃಢಪಡಿಸಬಹುದು. ಈ ಕೋರ್ಸ್‌ಗಳಲ್ಲಿ ಕೆಲವು ನಿರಂತರವಾಗಿ ನಡೆಯುವುದಾದರೆ, ಕೆಲವನ್ನು ಮಧ್ಯದಲ್ಲಿ ವಿರಾಮವಿರುವ ಹಾಗೆ ಯೋಜಿಸಬಹುದು. ಇಂತಹ ಕೋರ್ಸ್‌ಗಳಿಗೆ ಸರ್ಟಿಫಿಕೇಟ್ ಕೊಡುವುದು ಉತ್ತಮ.

ಇಂತಹ ಪುನಃಶ್ಚೇತನ ಕಾರ್ಯಕ್ರಮಗಳನ್ನು ರಾಷ್ಟ್ರಮಟ್ಟದಲ್ಲಿ NCERT ಮತ್ತು ರಾಜ್ಯಮಟ್ಟದಲ್ಲಿ SCERTಗಳು ಕ್ರಮಬದ್ಧವಾಗಿ ಯೋಜಿಸುತ್ತಾ ಬಂದಿವೆ. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (DSERT) ಸೇವಾನಿರತ ಶಿಕ್ಷಕರ ತರಬೇತಿಗಾಗಿ ಪುನಃಶ್ಚೇತನ ಕಾರ್ಯಕ್ರಮಗಳನ್ನು ಆಯೋಜಿಸಿ ನಡೆಸಿಕೊಡುವ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. DSERTಯ ಕೆಲವು ಪ್ರಮುಖ ಕಾರ್ಯಗಳು:

ಶಿಕ್ಷಕರ ತರಬೇತಿ ಅಗತ್ಯತೆಗಳನ್ನು ಪತ್ತೆಹಚ್ಚುವುದು, ತರಬೇತಿ ಸಂಚಿಕೆಗಳನ್ನು ತಯಾರಿಸುವುದು, ರಾಜ್ಯಮಟ್ಟದ ಮತ್ತು ಜಿಲ್ಲಾಮಟ್ಟದ ಪ್ರಮುಖ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ಕೊಡುವುದು, ಶಿಕ್ಷಕರ ಕೈಪಿಡಿಗಳನ್ನು ತಯಾರಿಸಿ ಹಂಚುವುದು, ಜಿಲ್ಲಾ ಮತ್ತು ಬ್ಲಾಕ್ ಹಂತದ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಶಿಕ್ಷಕರಿಗೆ DSERTಯಲ್ಲಿರುವ ದೂರ ಸಂಪರ್ಕ ಸೌಲಭ್ಯಗಳನ್ನು ಬಳಸಿ ಗೋಷ್ಠಿಯ ಮೂಲಕ ತರಬೇತಿ ನೀಡುವುದು.

ಪುನಃಶ್ಚೇತನ ಕಾರ್ಯಕ್ರಮಗಳು ಶಾಲಾ ಶಿಕ್ಷಕರ ವೃತ್ತಿ ಬೆಳವಣಿಗೆಗೆ ಆವಶ್ಯಕವಾಗಿರುವಂತೆಯೇ, ಕಾಲೇಜು/ವಿಶ್ವವಿದ್ಯಾಲಯಗಳ ಶಿಕ್ಷಕರಿಗೂ ಅಗತ್ಯವೆನಿಸಿವೆ. ಈ ಅಂಶವನ್ನು ರಾಷ್ಟ್ರೀಯ ಶಿಕ್ಷಣ ನೀತಿ (1986) ಗಮನಕ್ಕೆ ತೆಗೆದುಕೊಂಡು ಉನ್ನತ ಶಿಕ್ಷಣ ಸಂಸ್ಥೆಗಳ ಅಧ್ಯಾಪಕರ ವೃತ್ತಿ ಬೆಳವಣಿಗೆಗೆ ಅವಕಾಶ ಕಲ್ಪಿಸಲು ದೇಶಾದ್ಯಂತ ಆಯ್ದ ವಿಶ್ವವಿದ್ಯಾನಿಲಯಗಳಲ್ಲಿ ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳನ್ನು (Academic Staff Colleges) ಆರಂಭಿಸುವಂತೆ ಯು.ಜಿ.ಸಿ.ಗೆ ಶಿಫಾರಸ್ಸು ಮಾಡಿತು. ಈ ಸೂಚನೆಯಂತೆ ಯು.ಜಿ.ಸಿ. ದೇಶಾದ್ಯಂತ 50ಕ್ಕೂ ಹೆಚ್ಚು ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳನ್ನು ಆರಂಭಿಸಿತು. ಈ ಕಾಲೇಜುಗಳು ವೃತ್ತಿ ಆರಂಭಿಸಿ 5–6 ವರ್ಷ ಸೇವೆ ಸಲ್ಲಿಸಿದವರಿಗೆ ಒಂದು ತಿಂಗಳ ಪುನಃಶ್ಚೇತನ ಕೋರ್ಸನ್ನು ನಡೆಸುತ್ತವೆ. ಕೋರ್ಸ್‌ನಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮವಿರುತ್ತದೆ. ಹೆಚ್ಚಿನ ಅವಧಿ ಸೇವೆ ಸಲ್ಲಿಸಿರುವ ಅಧ್ಯಾಪಕರಿಗೂ ಒಂದು ತಿಂಗಳ ಕಾರ್ಯಕ್ರಮವಿರುತ್ತದೆ. ಈ ಕಾರ್ಯಕ್ರಮಗಳು ಬೇರೆ ಬೇರೆ ವಿಷಯಗಳ (ಇತಿಹಾಸ, ಅರ್ಥಶಾಸ್ತ್ರ ಇತ್ಯಾದಿ) ಅಧ್ಯಾಪಕರಿಗೆ ಬೇರೆ ಬೇರೆಯಾಗಿಯೇ ಯೋಜಿಸಲ್ಪಡುತ್ತವೆ. ಇವುಗಳಲ್ಲಿ ಆಯಾ ವಿಷಯ ಕ್ಷೇತ್ರದಲ್ಲಿ ಆಗಿರುವ ಪ್ರಗತಿ, ಸಂಶೋಧನೆ ಬೋಧನ ವಿಧಾನಗಳಲ್ಲಿನ ಬೆಳವಣಿಗೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ತಮ್ಮ ವೃತ್ತಿಯಲ್ಲಿ ಸೇವಾ ಬಡ್ತಿ ಪಡೆಯಲು ಅಧ್ಯಾಪಕರು ನಿಗದಿತ ಸಂಖ್ಯೆಯ ಪುನಃಶ್ಚೇತ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ಯು.ಜಿ.ಸಿ. ಕಡ್ಡಾಯಗೊಳಿಸಿದೆ. ಈ ಪುನಃಶ್ಚೇತನ ಕಾರ್ಯಗಳು ಆಯಾ ಕ್ಷೇತ್ರದ ಪರಿಣತರಿಂದ ಉಪನ್ಯಾಸಗಳ ನೀಡಿಕೆ, ಸಣ್ಣ ಪ್ರಮಾಣದ ಪ್ರಾಯೋಜನೆಗಳನ್ನು ಕೈಗೊಳ್ಳುವುದು, ಭಾಗವಹಿಸುವ ಅಧ್ಯಾಪಕರ ಉಪನ್ಯಾಸದ ಮೌಲ್ಯಮಾಪನ, ಪ್ರಾಯೋಗಿಕ/ಲಿಖಿತ ನಿಯೋಜನ ಕಾರ್ಯಗಳನ್ನು ಒಳಗೊಂಡಿರುತ್ತವೆ.

ಈ ಎಲ್ಲ ಸೇವಾ ನಿರತ ಶಿಕ್ಷಣ ತರಬೇತಿಯನ್ನು ರಾಷ್ಟ್ರದ ಅಭಿವೃದ್ಧಿಗಾಗಿ ರಾಷ್ಟ್ರದ ಮಕ್ಕಳ ಭವಿಷ್ಯಕ್ಕಾಗಿ ಮತ್ತು ರಾಷ್ಟ್ರದ ಶಿಕ್ಷಣ ಗುಣಮಟ್ಟ ಸುಧಾರಣೆಗಾಗಿ ನಡೆಸಲಾಗುತ್ತಿದೆ. ಆದರೆ ಈ ತರಬೇತಿಯ ಲಾಭವು ಶಿಕ್ಷಕರಿಂದ ಪ್ರತಿಯೊಂದು ಹಂತದಲ್ಲಿಯೂ ಪ್ರಾಮಾಣಿಕವಾಗಿ ಅನುಷ್ಠಾನಗೊಂಡಾಗ ಮಾತ್ರ ಕಂಡುಬರುವುದು.

–ಜಿ.ವಿ.ಕು.

## ಪೂರ್ವಗ್ರಹ ಮತ್ತು ಶಿಕ್ಷಣ

ಪೂರ್ವಗ್ರಹವೆಂಬುದು ಒಂದು ಬಗೆಯ ಮಾನಸಿಕ ಸ್ಥಿತಿ ಎನ್ನಬಹುದು ಅಥವಾ ಮನಸ್ಸಿನ ಒಂದು ನಕಾರಾತ್ಮಕ ಅನಿಸಿಕೆ ಎನ್ನಬಹುದು. ಬೇರೊಂದು ವ್ಯವಸ್ಥೆಯನ್ನು, ವ್ಯಕ್ತಿಯನ್ನು ಬೇರೊಂದು ಸ್ಥಿತಿಯನ್ನು ಪೂರ್ವನಿರ್ಧಾರಿತ ಧೋರಣೆಗಳಿಂದ ಇಷ್ಟಪಡದಿರುವುದು. ಪೂರ್ವಗ್ರಹವೆಂದರೆ ಬೇರೆಯವರನ್ನು ಯಾವುದೋ ಕಾರಣಕ್ಕೆ ಇಷ್ಟಪಡದಿರುವುದು ಮತ್ತು ಆ ಕಾರಣವನ್ನೇ ನಂಬಿ ನಿರಂತರವಾಗಿ ಅದನ್ನೇ ಸಮರ್ಥಿಸಿಕೊಳ್ಳುವುದು. ಇದೊಂದು ಬಗೆಯ ಮಾನಸಿಕ ದೌರ್ಬಲ್ಯವೆಂದರೂ ಆಶ್ಚರ್ಯವಿಲ್ಲ.

ಪೂರ್ವಗ್ರಹ ಪ್ರಕ್ರಿಯೆಯಾಗಲಾರದು. ಆದರೆ ಶಿಕ್ಷಣವು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ಸಮಾಜದ ಸಂಸ್ಕೃತಿ, ಪರಂಪರೆ, ಸಂಪ್ರದಾಯ ಮತ್ತು ಚತುರತೆಯನ್ನು ಯುವ ಜನಾಂಗಕ್ಕೆ ವರ್ಗಾಯಿಸಲಾಗುವುದು. ಶಿಕ್ಷಣವು ಮಾನವನ ನಾಗರಿಕತೆಯ ಆಧಾರವಾದರೆ ಪೂರ್ವಗ್ರಹವು ಮಾನವನ ನಾಗರಿಕತೆಗೆ ಮಾರಕವಾದುದಾಗಿದೆ. ಶಿಕ್ಷಣದ ಮುಖಾಂತರ ಮಾನವ ಜೀವನದ ಮರ್ಮಗಳನ್ನು ಅರಿತು ಅದನ್ನು ತನ್ನ ಮುಂದಿನ ಬಾಳಿನಲ್ಲಿ ಒಳ್ಳೆಯ ಮನೋಭಾವನೆಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಆದರೆ ಪೂರ್ವಗ್ರಹ ಇಂತಹ ಯಾವ ಬಗೆಯ ಉನ್ನತ ವ್ಯಕ್ತಿತ್ವದ ಬೆಳವಣಿಗೆಗೆ ಪ್ರೋತ್ಸಾಹಕವಾಗಲಾರದು. ಕಾರಣ ಇಷ್ಟೇ, ಅದು ಒಂದೊಮ್ಮೆ ಒಬ್ಬ ವ್ಯಕ್ತಿಯ ಬಗ್ಗೆ ತಳೆದ ಒಳ್ಳೆಯ ಅಥವಾ ಕೆಟ್ಟ ಗುಣಗಳನ್ನು ನಿರಂತರವಾಗಿ ಸಾಧಿಸುವ ಮನೋಭಾವನೆಗೆ ಪ್ರೋತ್ಸಾಹ ನೀಡುತ್ತದೆ. ಬಹುಶಃ ಈ ಬಗೆಯ ಬಹುತೇಕ ನಕಾರಾತ್ಮಕವಾದ ಬೆಳವಣಿಗೆಗೆ ಶಿಕ್ಷಣವೂ ಕಾರಣವಿರಬಹುದೆನಿಸುತ್ತದೆ. ಶಿಕ್ಷಣವು ಒಳ್ಳೆಯದು ಕೆಟ್ಟದ್ದರ ನಡುವಿನ ವಿಚಾರವನ್ನು ಅತ್ಯಂತ ನಿಶ್ಚಯಾತ್ಮಕವಾದ ರೀತಿಯಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಿಸಲು ಪ್ರಯತ್ನಿಸಿ ಅದು ಎಲ್ಲ ಕಾಲಕ್ಕೂ ಎಲ್ಲರಿಗೂ ಒಪ್ಪುವಂತಹ ತೀರ್ಮಾನವನ್ನು ನೀಡುತ್ತದೆ. ಆದರೆ ಪೂರ್ವಗ್ರಹ ಹಾಗಲ್ಲ. ಒಂದು ಬಗೆಯ ಮೊಂಡುತನದ ಮಾನಸಿಕ ಸ್ಥಿತಿಯನ್ನು ನಕಾರಾತ್ಮಕವಾಗಿ ಪ್ರೋತ್ಸಾಹಿಸುತ್ತದೆ.

ಪೂರ್ವಗ್ರಹ ಬೇರೆ ಬೇರೆ ರೂಪದಲ್ಲಿ ಅಥವಾ ವಿಧಗಳಲ್ಲಿರಬಹುದು. ಅದೆಂದರೆ ಅಮೆರಿಕದಲ್ಲಿ ಬಹಳಷ್ಟು ಶತಮಾನಗಳ ಕಾಲ ಬಿಳಿಯರು ಕರಿಯರನ್ನು ಇಷ್ಟಪಡುತ್ತಿರಲಿಲ್ಲ. ಆದರೆ ಈಗ ಕಾಲ ಬದಲಾಗಿದೆ. ಅಮೆರಿಕಾದ ರಾಜ್ಯಾಂಗವೇ ಕರಿಯರು ಬಿಳಿಯರಷ್ಟೇ ಸಮಾನರೆಂದು ಸಾರಿದೆ. ಆದಾಗ್ಯೂ ಕೆಲ ಬಿಳಿಯರು ಇಂದಿಗೂ ಕರಿಯರನ್ನು ದ್ವೇಷಿಸುವವರಾಗಿದ್ದಾರೆ. ಹಾಗೆಯೇ ಭಾರತದಲ್ಲಿ ಮೇಲ್ವರ್ಗದ ಜನರು ಕೆಳವರ್ಗದ ಜನರನ್ನು ಕೀಳಾಗಿ ಕಾಣುತ್ತಿದ್ದರು. ಆದರೆ ಈಗ

Digitised by Bharatavani, CIIL

ಪ್ರಜಾಪ್ರಭುತ್ವದಲ್ಲಿ ಸಮಾನತೆಗೆ ಅವಕಾಶವಿದ್ದರೂ ಅನೇಕ ಮೇಲ್ವರ್ಗದವರು ಕೆಳಜಾತಿಯವರನ್ನು ಕೀಳಾಗಿ ಕಾಣುವಂತಹ ಮನೋಭಾವನೆ ಇದೆ. ಇದೊಂದು ಬಗೆಯ ಮಾನಸಿಕ ಸ್ಥಿತಿ ಮನುಷ್ಯನ ಮಾನಸಿಕ ದೌರ್ಬಲ್ಯದಿಂದುಂಟಾಗಿದೆ ಎಂದರೂ ತಪ್ಪಾಗಲಾರದು. ಹಾಗೆಯೇ ಕೆಲವು ದೇಶಗಳಲ್ಲಿ ಕುಳ್ಳರನ್ನು, ಗಾತ್ರದವರನ್ನು, ಹೆಣ್ಣುಮಕ್ಕಳನ್ನು ಇಷ್ಟ ಪಡದಿರುವುದು. ಇದು ಬಹಳ ಸೂಕ್ಷ್ಮವಾದ ವಿಚಾರವಾದರೂ ಅತ್ಯಂತ ಹಾನಿಕಾರಕವಾದುದು ಹಾಗೂ ಸಮಾಜದಲ್ಲಿ ಇಂತಹ ನಂಬಿಕೆಗಳಿಗೆ ತಿರುಳಿಲ್ಲದಂತಿರುವುದು. ಬಹುಶಃ ಶಿಕ್ಷಣ ಇವೆಲ್ಲವುಗಳನ್ನೂ ಅತ್ಯಂತ ವಿಮರ್ಶಾತ್ಮಕವಾಗಿ ಪರಿಶೀಲಿಸಿ ಒಳಿತು ಕೆಡಕುಗಳ ನಡುವಿನ ವ್ಯತ್ಯಾಸವನ್ನು ಅತ್ಯಂತ ಸಮರ್ಪಕವಾಗಿ ಪರಿಶೀಲಿಸಿ ಉತ್ತರ ನೀಡುತ್ತದೆ. ಅಷ್ಟೇ ಅಲ್ಲ ಈ ಪೂರ್ವಗ್ರಹ ವಿಚಾರಗಳ ಬಗ್ಗೆ ವೈಜ್ಞಾನಿಕವಾದ ಬೆಳಕನ್ನು ಚೆಲ್ಲಿ ಅದನ್ನು ವ್ಯಕ್ತಿಯ ಮನಸ್ಸಿನಿಂದ ಕಿತ್ತೊಗೆಯಲು ಪ್ರಯತ್ನಿಸುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಬಹುತೇಕ ನಂಬಿಕೆ ಎಂದರೆ ಹೆಣ್ಣುಮಕ್ಕಳ ಬಗೆಗೆ ತಳೆದಿರುವ ನಕಾರಾತ್ಮಕ ಧೋರಣೆ. ಇದು ಅತ್ಯಂತ ಹಾನಿಕಾರಕ ಅಷ್ಟೇ ಅಲ್ಲ, ಹೆಂಗಸರ ಮಾನಸಿಕ ಸ್ಥಿತಿ ಅಧೋಗತಿಗಿಳಿಯಲು ಇಂತಹ ಪೂರ್ವಗ್ರಹಗಳು ಪ್ರೇರೇಪಿಸಿರಬಹುದು. ಆದರೆ ಇಂದಿಗೂ ಪುರುಷರ ನಿಲುವು ಬದಲಾಗುವಷ್ಟು ವೇಗವಾಗಿ ಸ್ತ್ರೀಯರ ನಿಲುವು ಬದಲಾಗುತ್ತಿಲ್ಲ. ಹಾಗೆಂದರೆ ಬದಲಾಗಿಯೇ ಇಲ್ಲವೆಂದಲ್ಲ. ಬದಲಾವಣೆಯ ಗತಿ, ಮಿತಿ, ವೇಗ ಇವುಗಳಿಗೆ ಸ್ವಲ್ಪ ತಡೆಯೊಡ್ಡಿದೆ ಎನ್ನಬಹುದು. ಭಾರತದ ಗ್ರಾಮಗಳಲ್ಲಿ ಇಂದಿಗೂ ಸಹ ಹೆಣ್ಣುಮಕ್ಕಳಿಗೆ ಶಿಕ್ಷಣದ ಸೌಲಭ್ಯ ದೊರೆಯದಿರುವುದು ಇದಕ್ಕೆ ಕಾರಣ. 'ಒಲೆಗೆ ಹೆಂಗಸು, ಹೊಲಕ್ಕೆ ಗಂಡಸೆಂಬ' ನಂಬಿಕೆಯೇ ಪೂರ್ವಗ್ರಹವಿರಬಹುದು.

ಪೂರ್ವಗ್ರಹವೆಂದರೆ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪಿನ ಬಗ್ಗೆ ನಕಾರಾತ್ಮಕವಾದ ಪೂರ್ವನಿರ್ಣಯಗಳನ್ನು ಕೈಗೊಳ್ಳುವುದು. ಯಾವುದೋ ಕಾಲದಲ್ಲಿ ಕುಳ್ಳರೆಲ್ಲಾ ಕಳ್ಳರಾಗಿದ್ದರೆಂಬುದು ಎಷ್ಟು ಸತ್ಯವಾದುದೋ ಅಥವಾ ಎಷ್ಟು ಸುಳ್ಳೋ ಎಂದು ನಿರ್ಧರಿಸುವುದು ಕಷ್ಟವಾದರೂ ಕೆಲವೊಮ್ಮೆ ಕುಳ್ಳರು ಕಳ್ಳರಾಗಿದ್ದುದು ನಿಜ. ಹಾಗೆಯೇ ಎಲ್ಲ ಕುಳ್ಳರು ಕಳ್ಳರೆಂಬುದು ಅನರ್ಥಕಾರಿಯಾದುದೂ ಹೌದು. ಹೀಗೆ ನಕಾರಾತ್ಮಕವಾದ ಪೂರ್ವ ನಿರ್ಧರಿತವಾದ ಅಂಶಗಳೊಂದಿಗೆ ಭಾವನಾತ್ಮಕ ಸಂಬಂಧಗಳು ಬೆಸೆದುಕೊಂಡಿರುವುದು ಸತ್ಯ. ಆದರೆ ಶಿಕ್ಷಣ ಇಂತಹ ಸಂಬಂಧಗಳನ್ನು ತೊಡೆದುಹಾಕಿ ಯಾವ ಕುಳ್ಳರು ಕಳ್ಳರೆಂದು ಕಾನೂನಿನ ಮುಖಾಂತರ ನಿರ್ಣಯಿಸಿ ಕಳ್ಳರಾದ ಕುಳ್ಳರಿಗೆ ಮಾತ್ರ ಶಿಕ್ಷೆ ನೀಡುತ್ತದೆ. ಶಿಕ್ಷಣದಿಂದ ಪೂರ್ವಗ್ರಹ ಮನಃಸ್ಥಿತಿ ಬದಲಾವಣೆಗೊಳ್ಳಲು ಸಾಧ್ಯ. ಹಾಗೆಯೇ ಹಿಂದೊಮ್ಮೆ ಜರ್ಮನರು ಕಷ್ಟಜೀವಿಗಳು ಎಂಬ ಪೂರ್ವಗ್ರಹ, ಫ್ರೆಂಚರು ಅತ್ಯಂತ ರಸಮಯವಾಗಿ ಕಾಲ ಕಳೆಯುತ್ತಾರೆಂಬ ಅಂಶವನ್ನು ಪರಿಶೀಲಿಸಿದಾಗ ಎಲ್ಲ ಜರ್ಮನರು ಕಷ್ಟ ಜೀವಿಗಳಲ್ಲದಿರಬಹುದು. ಹೀಗೆ ಅನೇಕ ದೇಶಗಳ ಬಗ್ಗೆ ಅನೇಕ ಪೂರ್ವಗ್ರಹಗಳಿವೆ. ಆದರೆ ಇಂದು ಶಿಕ್ಷಣದಿಂದ ಈ ಪೂರ್ವಗ್ರಹಗಳೇ ತಮ್ಮ ಅರ್ಥವನ್ನು ಕಳೆದುಕೊಂಡಿವೆ.

ಇಂದು ಶಿಕ್ಷಣದಿಂದ ಮಾನವನ ನಡವಳಿಕೆಯಲ್ಲಿ ಮನೋಭಾವನೆಗಳಲ್ಲಿ, ಸಾಂಪ್ರದಾಯಿಕ ನಿಲುವಿನಲ್ಲಿ ಅಪರಿಮಿತವಾದ ಬದಲಾವಣೆಗಳು ಕಂಡು ಬಂದಿವೆ. ಶಿಕ್ಷಣವು ವ್ಯಕ್ತಿಯಲ್ಲಿ ನಾಜೂಕಾದ, ಸುವ್ಯವಸ್ಥಿತ ಸ್ವಯಂಚಿಂತನೆ, ಸ್ವಯಂ ನಿರ್ಧಾರ ಮತ್ತು ಸ್ವಯಂಕ್ರಿಯಾಶಕ್ತಿಯನ್ನು ಬೆಳೆಸುತ್ತದೆ. ಜನರಲ್ಲಿ ಮೂಢನಂಬಿಕೆ, ಕಂದಾಚಾರ ಮತ್ತು ಸಂಕುಚಿತ ಮನೋಭಾವನೆಯನ್ನು ಹೊರಹಾಕಿ ವೈಚಾರಿಕತೆಯನ್ನು ಬೆಳೆಸುತ್ತದೆ. ಈ ನಿಟ್ಟಿನಲ್ಲಿ ಪೂರ್ವಗ್ರಹವನ್ನು ತೊಡೆದುಹಾಕುವಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯ. ಸುಶಿಕ್ಷಿತರು ಪೂರ್ವಗ್ರಹ ಪೀಡಿತರಲ್ಲ ಎನ್ನಲು ಸಾಧ್ಯವಿಲ್ಲ. ಏಕೆಂದರೆ ಎಲ್ಲ ವಿದ್ಯಾವಂತರೂ ಸುಶಿಕ್ಷಿತರಲ್ಲದೇ ಇರಬಹುದು. ಕೆಲವರು ಶಿಕ್ಷಣವನ್ನು ಉದ್ಯೋಗಕ್ಕಾಗಿ ಬಳಸಿಕೊಳ್ಳಬಹುದು. ಅಂತಹ ವಿದ್ಯಾವಂತರು ಅನೇಕ ಬಗೆಯ ಪೂರ್ವಗ್ರಹಕ್ಕೆ ಒಳಗಾಗಬಹುದು. ಶಿಕ್ಷಣವೆಂದರೇನು? ಅದರ ಕಾರ್ಯಗಳೇನು ? ಎಂಬುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಾಗ ಮಾತ್ರ ಪೂರ್ವಗ್ರಹದಿಂದ ದೂರ ಇರಬಹುದು.

ಪೂರ್ವಗ್ರಹವು ಒಂದು ನಕಾರಾತ್ಮಕವಾದ ಮಾನವನ ಪ್ರವೃತ್ತಿ. ಬೇರೆಯವರನ್ನು ಇಷ್ಟಪಡದಿರುವುದು, ಬೇರೆಯವರಲ್ಲಿ ವ್ಯತ್ಯಾಸ ಕಾಣುವುದು ಅದು ಕೆಲವೊಮ್ಮೆ ಮಾತ್ರ. ಆದರೆ ಅದು ಯಾವಾಗಲೂ ಅಲ್ಲ ಎಂಬುದನ್ನು ತಿಳಿದುಕೊಳ್ಳಬಹುದು.

ಪೂರ್ವಗ್ರಹವು ಅನಿವಾರ್ಯವೆ? ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾದರೂ ಕೆಲವೊಮ್ಮೆ ಅದು ಅನಿವಾರ್ಯವಿರಬಹುದು ಎಂದೂ ಅನಿಸುತ್ತದೆ. ಉದಾಹರಣೆಗೆ 'ಜನಾಂಗೀಯ ಹಾಗೂ ಲಿಂಗಾಧಾರದ ಬಗೆಗಿನ ಪೂರ್ವಗ್ರಹಗಳನ್ನು ಅಭ್ಯಾಸಿಸಿದಾಗ ತಿಳಿದುಬರುತ್ತದೆ. ಪ್ರಪಂಚದ ದೃಷ್ಟಿಯಲ್ಲಿ ಎಲ್ಲ ಜನಾಂಗಗಳೂ ಅಲ್ಪಸಂಖ್ಯಾತರೇ ಆದರೂ ಕೆಲವು ಜನಾಂಗಗಳನ್ನು ಕಂಡರೆ ಕೆಲವರಿಗೆ ಆಗದು. ಉದಾ. ಬಿಳಿಯರಿಗೆ ಕಪ್ಪು ಜನಾಂಗದವರನ್ನು ಕಂಡರಾಗದು ಅಷ್ಟೆ ಅಲ್ಲ, ಒಂದು ಕಾಲದಲ್ಲಿ ಅವರಿಗೆ ಪ್ರತ್ಯೇಕವಾದ ಕಾರು ಬಸ್ಸುಗಳು ಅಮೆರಿಕಾದಲ್ಲಿತ್ತು ಎಂಬುದು ನಿಜ. ಆದರೆ ಇಂದು ಹಾಗಿಲ್ಲ, ಕಳೆದೆರಡು ಶತಮಾನಗಳಿಂದೀಚೆಗೆ 'ಸಾಮಾಜಿಕ ಚಲನೆ' ಹಾಗೂ 'ಭೌಗೋಳಿಕ ವಲಸೆ'ಗಳಿಂದಾಗಿ ಅನೇಕ ಜನಾಂಗಗಳ ನಡುವೆ ಆಂತರಿಕ ಹಾಗೂ ಬಾಹ್ಯ ಸಂಬಂಧಗಳನ್ನು ಇಂದು ಕಾಣಬಹುದಾಗಿದೆ. ಜೊತೆಗೆ 'ಸಾರ್ವತ್ರಿಕ ಶಿಕ್ಷಣ' ಅನೇಕ ಗರಿಷ್ಠ ಭೇದಭಾವನೆಗಳನ್ನು, ವ್ಯತ್ಯಾಸಗಳನ್ನು ತೊಡೆದು ಹಾಕುವಂತೆಯೂ ಮಾಡಿದೆ. ಇಂದು ಬಿಳಿಯರು ಹಾಗೂ ಕರಿಯರ ನಡುವೆ ಉತ್ತಮವಾದ ಬಾಂಧವ್ಯವನ್ನು ಕಾಣುವುದರ ಜೊತೆಗೆ ಅನೇಕರು ವಿವಾಹಗಳನ್ನೂ (ಕರಿ ಹಾಗೂ ಬಿಳಿಯರ ನಡುವೆ) ಮಾಡಿಕೊಂಡಿರುವುದು ಶಿಕ್ಷಣದ ಪ್ರಭಾವದಿಂದಾಗಿ ಎಂದರೆ ತಪ್ಪೇನಿಲ್ಲ. ಜನಾಂಗೀಯ ಪೂರ್ವಗ್ರಹವು ಅಳಿಸಿ ಹೋಗುತ್ತಿದೆಯೇ? ಅಥವಾ ಕಡಿಮೆಯಾಗುತ್ತಿದೆಯೇ? ಎಂಬ ಪ್ರಶ್ನೆಗೆ ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗ್ರಹಿಸಿದಾಗ ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬಹುದು. 1954ರಲ್ಲಿ ಅಮೆರಿಕಾ ಸರ್ಕಾರ ಕರಿಯರಿಗೆ ಪ್ರತ್ಯೇಕ ಶಾಲೆ ಕಾನೂನು ಬಾಹಿರವಾದುದು ಎಂಬ ಕಾಯ್ದೆಯನ್ನು ಸುಪ್ರೀಂಕೋರ್ಟ್ ದಾರಿಗೆ ತಂದಿತು. ಇಂದು ಬಹುತೇಕ ಶಿಕ್ಷಣ ಹಾಗೂ ವೈಜ್ಞಾನಿಕತೆಯಿಂದಾಗಿ ಅಮೆರಿಕಾ ಹಾಗೂ ಕೆನಡಾದಲ್ಲಿ ಜನಾಂಗೀಯ ಪೂರ್ವಗ್ರಹ ಸಂಪೂರ್ಣವಾಗಿ ಇಲ್ಲವಾಗಿದೆ ಎನ್ನಬಹುದು. ಪ್ರಪಂಚದಾದ್ಯಂತ ಬಿಳಿಯರು ಕರಿಯರ ವಿರುದ್ಧ, ಪುರುಷರು ಸ್ತ್ರೀಯರ ವಿರುದ್ಧ, ಯುವಕರು ವೃದ್ಧರ ವಿರುದ್ಧ ಇದ್ದಂತಹ ಪೂರ್ವಗ್ರಹ ವೈರುದ್ಯಗಳು ಶಿಕ್ಷಣದಿಂದಾಗಿ ಇಂದು ಕಡಿಮೆಯಾಗಿದೆ.

ಜನಾಂಗೀಯ ಪೂರ್ವಗ್ರಹಕ್ಕಿಂತ ಲಿಂಗಾಧಾರಿತ ಪೂರ್ವಗ್ರಹ ಅತ್ಯಂತ ಗಂಭೀರವಾದುದೂ ಹಾಗೂ ಪ್ರಚಲಿತವಾದುದೂ ಆಗಿದೆ. ಗಂಡು ಹೆಣ್ಣುಗಳು ಹೇಗೆ ನಡೆದುಕೊಳ್ಳುತ್ತಾರೆ, ಜನರ ನಂಬಿಕೆಗಳು ಹೆಣ್ಣು ಗಂಡುಗಳ ನಡವಳಿಕೆಯಲ್ಲಿನ ಭೇದಭಾವಗಳನ್ನು ಹೇಗೆ ನಿರ್ಧರಿಸುತ್ತವೆ ಎಂಬುದು ಅತ್ಯಂತ ಸೂಕ್ಷ್ಮವಾದ ವಿಚಾರ. ಅನೇಕ ಅಧ್ಯಯನಗಳು ಹೆಣ್ಣು ಗಂಡಿಗಿಂತಲೂ ಹೆಚ್ಚು ಭಾವನಾಜೀವಿ ಎಂದಿವೆ. ಹಾಗೆಯೇ ಹೆಣ್ಣುಮಕ್ಕಳೂ ಇದನ್ನು ಒಪ್ಪಿಕೊಳ್ಳುತ್ತಾರೆ. ಲಿಂಗಾಧಾರಿತ ಭೇದಭಾವಗಳು ದುಡಿಯುವ ಹೆಣ್ಣುಮಕ್ಕಳಿಗೆ ಶಾಪವಾಗಿ ಪರಿಣಮಿಸಿವೆ.

Digitised by Bharatavani, CIIL

ಭಾರತದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹೆಣ್ಣು ಗಂಡುಗಳು ಒಂದೇ ಬಗೆಯ ಕೆಲಸ ಮಾಡಿದರೂ ಹೆಣ್ಣಿಗೆ ಕಡಿಮೆ ಕೂಲಿ ಗಂಡಸಿಗೆ ಹೆಚ್ಚು ಕೂಲಿ ಕಂಡು ಬರುತ್ತದೆ. ಸಮಾನ ಕೆಲಸಕ್ಕೆ ಸಮಾನ ವೇತನ ಕಾಯ್ದೆ ಜಾರಿಯಲ್ಲಿದ್ದರೂ ಹೆಣ್ಣು ಗಂಡುಗಳಲ್ಲಿ ತಾರತಮ್ಯ ತಾಂಡವವಾಡುತ್ತಿದೆ. ಇದು ಹೆಚ್ಚಾಗಿ ಅವಿದ್ಯಾವಂತ, ಅಸಂಘಟಿತ ಸಮೂಹಗಳಲ್ಲಿ ವ್ಯಾಪಕವಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಗಂಡು ಹೆಣ್ಣುಗಳ ನಡುವಿನ ವ್ಯತ್ಯಾಸದಲ್ಲಿ ಅನೇಕ ಪೂರ್ವಗ್ರಹಗಳಿರುವುದನ್ನು ಮನಃಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಅನೇಕ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ ಸಹ ಹೆಣ್ಣು ಗಂಡುಗಳಿಗೆ ಸಂಬಂಧಪಟ್ಟ ಪೂರ್ವಗ್ರಹಗಳನ್ನು ಇಂದಿಗೂ ವ್ಯಾಪಕವಾಗಿ ಕಾಣಬಹುದು ಎಂದಿದ್ದಾರೆ. ಬಹುಶಃ ಶಿಕ್ಷಣ ಈ ತಾರತಮ್ಯದ ಪ್ರಮಾಣವನ್ನು ಕಡಿಮೆಗೊಳಿಸಬಹುದೇ ಹೊರತು ಸಂಪೂರ್ಣವಾಗಿ ಹೋಗಲಾಡಿಸಲು ಸಾಧ್ಯವಿಲ್ಲದಷ್ಟು ಗಾಢವಾಗಿ ಈ ಪೂರ್ವಗ್ರಹ ಬೆಳೆದಿದೆ. ಸಾಮಾಜಿಕ ಅಸಮಾನತೆಗಳು, ಕೀಳು ಮನೋಭಾವನೆ, ಅನಕ್ಷರತೆ, ತಿಳುವಳಿಕೆ ಇಲ್ಲದಿರುವುದು, ಪೂರ್ವಗ್ರಹಗಳ ಹುಟ್ಟಿಗೆ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತವೆ. ಈ ನಕಾರಾತ್ಮಕವಾದ ಧೋರಣೆಗಳನ್ನು ಮಾನವನ ಮನಸ್ಸಿನಿಂದ ದೂರ ತೊಲಗಿಸುವ ಕಾರ್ಯವು ಶಿಕ್ಷಣದಿಂದ ಮಾತ್ರ ಸಾಧ್ಯ. ಪೂರ್ವಗ್ರಹದಿಂದ ದೂರ ಉಳಿಯಲು ಶಿಕ್ಷಣ ಹಾಗೂ ಸಮಾನತೆ, ಬಡತನ ನಿವಾರಣೆ ಮುಂತಾದುವು ಸಹಾಯ ಮಾಡುತ್ತವೆ.

ಪೂರ್ವಗ್ರಹಗಳು ಧಾರ್ಮಿಕ ನಂಬಿಕೆ ಹಾಗೂ ಅಪನಂಬಿಕೆ ಮುಂತಾದ ಅಂಶಗಳಿಂದಲೂ ಪ್ರಭಾವಿತವಾಗುತ್ತವೆ. ಶಿಕ್ಷಣವು ಧರ್ಮದ ಅರ್ಥವನ್ನು ಸಮಗ್ರವಾಗಿ ವಿವರಿಸಿದಾಗ ಪೂರ್ವಗ್ರಹ ಧರ್ಮದಿಂದ ದೂರವಾಗುವುದು ಅಥವಾ ಧರ್ಮ ಪೂರ್ವಗ್ರಹದಿಂದ ದೂರವಾಗುವುದು ತಿಳಿದುಬರುತ್ತದೆ. ಹೀಗೆ ಶಿಕ್ಷಣ ಮನುಷ್ಯನ ಎಲ್ಲ ಅಚಾತುರ್ಯಗಳಿಗೆ ಸಮರ್ಪಕವಾದ ಉತ್ತರವನ್ನು ನೀಡುವುದರಿಂದ ಪೂರ್ವಗ್ರಹಗಳಿಂದ ವ್ಯಕ್ತಿ ದೂರವಿರಬಹುದು. ಶಿಕ್ಷಣದಿಂದ ಜ್ಞಾನಾರ್ಜನೆ, ಸಂಶೋಧನೆ, ಎಲ್ಲ ಕ್ಷೇತ್ರಗಳಲ್ಲೂ ಪ್ರಗತಿ, ಹಾಗೆಯೇ ಸಮೂಹ ಮಾಧ್ಯಮ, ಸುಧಾರಣೆ, ಬದಲಾವಣೆ ಇವೆಲ್ಲವು ಸಾಧ್ಯವಾಗುವುದರಿಂದ ಪೂರ್ವಗ್ರಹಗಳನ್ನು ಬಹಳಷ್ಟು ಮಟ್ಟಿಗೆ ತೊಡೆದು ಹಾಕಬಹುದು ಎನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಬಹುತೇಕ ಮಾನಸಿಕ ವಿಘಟನೆಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಮದ್ದು ಇದೆ ಎಂಬುದಂತ ಸತ್ಯವಾದುದು.

–ಹೆಚ್.ಎಮ್.ವ.

## ಪೌರತ್ವಕ್ಕಾಗಿ ಶಿಕ್ಷಣ

ಶಿಕ್ಷಣವು ಸಮುದಾಯದ ಬೇಡಿಕೆಯ ಮೇಲೆ ಸರಕಾರವು ಸಂಸ್ಥಾಪಿಸಲ್ಪಟ್ಟ ಒಂದು ಸೌಲಭ್ಯವಾಗಿದೆ. ಈ ಶಿಕ್ಷಣ ಸೇವಾ ಸೌಲಭ್ಯವು ಸಮಾಜ ಮತ್ತು ರಾಜ್ಯ ಅಪೇಕ್ಷಿತ ಗುರಿಗಳನ್ನು ಹೊಂದಿದೆ. ಜ್ಞಾನಾರ್ಜನೆಗಾಗಿ ಶಿಕ್ಷಣ, ಚಾರಿತ್ರ್ಯಕ್ಕಾಗಿ ಶಿಕ್ಷಣ, ಸಂಸ್ಕೃತಿಗಾಗಿ ಶಿಕ್ಷಣ, ವೃತ್ತಿಗಾಗಿ ಶಿಕ್ಷಣ, ಮನೋಲ್ಲಾಸಕ್ಕಾಗಿ ಶಿಕ್ಷಣ, ವ್ಯಕ್ತಿತ್ವಕ್ಕಾಗಿ ಶಿಕ್ಷಣ, ರಾಷ್ಟ್ರೀಯತೆಗಾಗಿ ಶಿಕ್ಷಣ, ಅಂತಾರಾಷ್ಟ್ರೀಯತೆಗಾಗಿ ಶಿಕ್ಷಣ, ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಶಿಕ್ಷಣ ಹೀಗೆ ವೈಯಕ್ತಿಕತೆಗಾಗಿ, ಸಾಮಾಜಿಕತೆ ಮತ್ತು ರಾಷ್ಟ್ರೀಯತೆಗಾಗಿ ಶಿಕ್ಷಣದ ಗುರಿಗಳು ನಿಗದಿಯಾಗಿವೆ. 'ಪೌರತ್ವಕ್ಕಾಗಿ ಶಿಕ್ಷಣ' ಎಂಬ ಪರಿಕಲ್ಪನೆಯು ಮಕ್ಕಳನ್ನು ಸಮಾಜಕ್ಕೆ, ರಾಷ್ಟ್ರಕ್ಕೆ ಮತ್ತು ವಿಶ್ವಕ್ಕೆ ಉಪಯುಕ್ತ ನಾಗರಿಕರನ್ನಾಗಿ ಪರಿವರ್ತಿಸುವುದಕ್ಕಾಗಿ ನೀಡುವ ಶಿಕ್ಷಣವಾಗಿದೆ. ಪುರ ಎಂದರೆ ಊರು, ಪೌರ ಎಂದರೆ ಪುರದಲ್ಲಿ ವಾಸಿಸುವ ಸದಸ್ಯ. ಈ ಪೌರರಿಗೆ ಪುರದ ನಡಾವಳಿಗಳಿಗೆ ಅನುಗುಣವಾಗಿ ವ್ಯಕ್ತಿತ್ವ ರೂಪಿಸಿಕೊಳ್ಳುವ ತರಬೇತಿ ನೀಡುವ ಶಿಕ್ಷಣವೇ ಪೌರತ್ವಕ್ಕಾಗಿ ಶಿಕ್ಷಣವಾಗಿದೆ. ಪೌರನಾದ ಪ್ರತಿ ವ್ಯಕ್ತಿಯು ಸಮಾಜೋಪಯುಕ್ತ ಸದಸ್ಯನಾಗಿ ಬಾಳಲು ಎಲ್ಲ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದಕ್ಕಾಗಿ ನೀಡುವ ಶಿಕ್ಷಣವಿದಾಗಿದೆ. ವೈಯಕ್ತಿಕ ವಿಕಾಸ, ಸಾಮಾಜಿಕ ಮತ್ತು ರಾಷ್ಟ್ರೀಯ ಅಭಿವೃದ್ಧಿಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ನೀಡುವ ಸಾಮಾಜೀಕೃತ ಜೀವನ ಪ್ರಕ್ರಿಯೆಯೇ ಪೌರತ್ವಕ್ಕಾಗಿ ಶಿಕ್ಷಣವಾಗಿದೆ.

ಉತ್ತಮ ನೈತಿಕ ಜೀವನ ಮತ್ತು ರಾಜನೀತಿ ಸಂಸ್ಕೃತಿಯ ಸಾಮಾಜೀಕರಣಕ್ಕಾಗಿ ಪೌರತ್ವ ಶಿಕ್ಷಣ ಅವಶ್ಯವಾಗಿದೆ. ಹಿಂದೆ 'ಗ್ರೀಕ್ ನಗರ ರಾಜ್ಯ'ಗಳಲ್ಲಿ ಪೌರತ್ವದ ಪ್ರತಿಜ್ಞೆಯನ್ನು ಪ್ರತಿಯೊಬ್ಬ ನಾಗರಿಕನೂ ಸ್ವೀಕರಿಸುತ್ತಿದ್ದನು. ಪ್ರತಿಯೊಬ್ಬರೂ ಆತ್ಮಾಭಿಮಾನದಿಂದ ಮತ್ತು ಬದ್ಧತೆಯಿಂದ ನಡೆದುಕೊಳ್ಳುತ್ತಿದ್ದರು. ನಾಗರಿಕ ದಕ್ಷತೆ, ಹಕ್ಕು ಮತ್ತು ಕರ್ತವ್ಯಗಳ ತಿಳುವಳಿಕೆ ಹಾಗೂ ಆಚರಣೆ, ತಾಳ್ಮೆ, ಪ್ರಜಾಸತ್ತಾತ್ಮಕ ವಿಶ್ವಾಸ, ಸಾರ್ವಜನಿಕ ಸ್ಫೂರ್ತಿ, ಪ್ರಗತಿಪರ ದೃಷ್ಟಿ, ಸೂಕ್ತ ಜೀವನದ ಗುರಿಗಳು ಮತ್ತು ಜ್ಞಾನ ಇತ್ಯಾದಿ ಮೌಲ್ಯಗಳನ್ನು ಬೆಳೆಸುವ ಉದ್ದೇಶಿತ ಸರ್ವವ್ಯಾಪಿ ಶಿಕ್ಷಣವೇ ಪೌರತ್ವಕ್ಕಾಗಿ ಶಿಕ್ಷಣವಾಗಿದೆ.

### ಪೌರತ್ವಕ್ಕಾಗಿ ಶಿಕ್ಷಣ: ಉದ್ದೇಶಗಳು

- ಜೀವನದ ವಿವಿಧ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ದಕ್ಷತೆ ಬೆಳೆಸುವುದು.
- ಸಮುದಾಯದ ಇತರ ಸದಸ್ಯರ ನಂಬಿಕೆ ಮತ್ತು ಅಭಿಪ್ರಾಯಗಳನ್ನು ಸಹಿಸುವ ಮತ್ತು ಗೌರವಿಸುವಿಕೆಯನ್ನು ಬೆಳೆಸುವುದು.
- ಸಮಾಜದ ಬೃಹದಾಸಕ್ತಿಗಾಗಿ ವೈಯಕ್ತಿಕ ಹಿತವನ್ನು ತ್ಯಾಗ ಮಾಡುವುದು.
- ಪೌರರ ಹಕ್ಕು ಮತ್ತು ಕರ್ತವ್ಯಗಳ ಕುರಿತು ಸರಿಯಾದ ತಿಳುವಳಿಕೆ ಮತ್ತು ಆಚರಣಾ ಮನೋಭಾವವನ್ನು ತರುವುದು.
- ಪ್ರಜಾಸತ್ತೆ ಮತ್ತು ಅದರ ತತ್ವ ಹಾಗೂ ಮೌಲ್ಯಗಳಲ್ಲಿ ನಂಬಿಕೆ ಬೆಳೆಸುವುದು.
- ಸಾರ್ವಜನಿಕ ಹಿತಾಸಕ್ತಿಯ ಚಟುವಟಿಕೆಗಳಲ್ಲಿ ಆಸಕ್ತಿ ಮತ್ತು ಚೇತೋಹಾರಿತನವನ್ನು ಬೆಳೆಸುವುದು.
- ಸಮುದಾಯದ ಅಗತ್ಯತೆಗಳು ಮತ್ತು ಸಮಸ್ಯೆಗಳ ಕುರಿತು ಜಾಗೃತಿ ಮತ್ತು ಸ್ಪಂದನಾ ಮನೋಭಾವ ಬೆಳೆಸುವುದು.
- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ತಿಳಿವಳಿಕೆಯನ್ನುಂಟು ಮಾಡುವುದು.
- ಇತರರೊಂದಿಗೆ ವ್ಯವಹರಿಸುವಲ್ಲಿ ಮತ್ತು ಮತದಾನ ಇತ್ಯಾದಿ ಪ್ರಜೆಗಳ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಬೆಳೆಸುವುದು.
- ಸತ್ಯ, ಅಹಿಂಸೆ, ಸಹಕಾರ, ತಾಳ್ಮೆ, ಸಹಜೀವನ ಇತ್ಯಾದಿ ಮೌಲ್ಯಗಳ ಆಚರಣೆಯನ್ನು ರೂಢಿಸುವುದು. ಉತ್ತಮ ಮಾನವೀಯ ಸಂಬಂಧಗಳ ಬೆಳವಣಿಗೆ.
- ನಿಯಮ ಪಾಲನೆ, ನಾಯಕರ ಮಾರ್ಗದರ್ಶನದ ಅನುಪಾಲನೆ ಮತ್ತು ಧರ್ಮ ಹಾಗೂ ಚಾರಿತ್ರ್ಯಗಳ ಪ್ರಾಮುಖ್ಯತೆಯನ್ನು ಬೆಳೆಸುವುದು.
- ಗುಣಮಟ್ಟದ ಮತ್ತು ಪ್ರಾಮಾಣಿಕ ಮುತ್ಸದಿ ನಾಯಕರುಗಳನ್ನು ಗುರುತಿಸುವ ಬುದ್ಧಿವಂತಿಕೆಯನ್ನು ಬೆಳೆಸುವುದು.

Digitised by Bharatavani, CIIL

• ಪ್ರೊ. ಪ್ರೇಮನಾಥರವರ ನಾಗರಿಕ ಶಿಕ್ಷಣದ ಉದ್ದೇಶಗಳು: ವೈಯಕ್ತಿಕ ಮತ್ತು ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆ ಬೆಳೆಸುವುದು, ಸಮಾಜದ ನೈತಿಕ ಕಾರ್ಯನಿರ್ವಹಿಸುವಿಕೆಯನ್ನು ತಿಳಿಸುವುದು, ಸಹಕಾರ ಮತ್ತು ಸೃಜನಶೀಲತೆಯಿಂದ ಹೊಣೆಗಾರಿಕೆಗಳ ಪೂರೈಕೆ, ಮಾನವಿಕ ಜಾಗತಿಕ ನಾಗರಿಕತ್ವದ ಪ್ರಜ್ಞೆ ಬೆಳೆಸುವುದು, ಆರೋಗ್ಯ ಮತ್ತು ಸ್ವಚ್ಛತೆಯ ಕಲ್ಪನೆ, ಉಪಯುಕ್ತ ಕುಟುಂಬದ ಸದಸ್ಯತ್ವ ಮತ್ತು ನೆರೆಹೊರೆಯ ಸದಸ್ಯತ್ವ, ಜಾಣ್ಮೆಯ ಪಾಲಕತ್ವ, ವೃತ್ತಿದಕ್ಷತೆ, ಬಿಡುವಿನ ಸದುಪಯೋಗ.

**ಪೌರತ್ವಕ್ಕಾಗಿ ಶಿಕ್ಷಣದಲ್ಲಿ ವಿವಿಧ ನಿಯೋಗಗಳ ಪಾತ್ರ ಮತ್ತು ಕ್ರಮಗಳು:**

- ಸ್ಕೌಟ್ಸ್ ಮತ್ತು ಗೈಡ್ಸ್ ಸೇವೆಗಳು.
- ಶಾಲೆಯಿಂದ ಸಾಮುದಾಯಿಕ ಸೇವೆ.
- ಸ್ಥಳೀಯ ಸ್ವಯಂ ಸರಕಾರಗಳ ತಿಳುವಳಿಕೆ.
- ಶಿಬಿರಗಳು ಮತ್ತು ಶೈಕ್ಷಣಿಕ ಪ್ರವಾಸಗಳ ಏರ್ಪಡಿಸುವಿಕೆ.
- ಸಮುದಾಯದ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮಾಡುವಿಕೆ.
- ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ಕಾರ್ಯಕ್ರಮಗಳು.
- ನಾಗರಿಕ ಶಿಕ್ಷಣದ ಕುರಿತು ವಿಶೇಷ ಉಪನ್ಯಾಸಗಳು,
- ವಿದ್ಯಾರ್ಥಿ ಕಲಾಪಗಳ ಚಟುವಟಿಕೆಗಳು. ಅಣಕು ಸಂಸತ್ತು, ಅಣಕು ನ್ಯಾಯಾಲಯ.

ಪ್ರಜಾಸತ್ತೆಯಲ್ಲಿ ನಾಗರಿಕತ್ವವು ಒಂದು ಸವಾಲಿನ ಹೊಣೆಗಾರಿಕೆಯಾಗಿದ್ದು, ಶಿಕ್ಷಣವು ಈ ಹಿನ್ನೆಲೆಯಲ್ಲಿ ಈ ಮೇಲೆ ಹೇಳಲಾದ ಮತ್ತು ಇತರ ಅನುಭವಾತ್ಮಕ ಚಟುವಟಿಕೆಗಳ ಮೂಲಕ ಜಾಗತಿಕವಾಗಿ ಉಪಯುಕ್ತರಾಗುವ ವಿಶಾಲ ತಳಹದಿಯ ತಿಳುವಳಿಕೆಯುಳ್ಳ ಮತ್ತು ಸ್ಥಳೀಯವಾಗಿ ವರ್ತಿಸುವ ನಾಗರಿಕರನ್ನು ಸಿದ್ಧಗೊಳಿಸಲು ಶ್ರಮಿಸಬೇಕಾಗಿದೆ.

–ಎನ್.ಬಿ. ಕೊ

–ಎ.ವಿ.ಕ

## ಪೌರತ್ವ ಶಿಕ್ಷಣ ಶಿಬಿರ

ವ್ಯಕ್ತಿಯೊಬ್ಬನು ಒಬ್ಬ ಪೌರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಬಲ್ಲ ಶಕ್ತಿಯನ್ನು ಅವನಿಗೆ ದೊರಕಿಸುವ ಉದ್ದೇಶದಿಂದ ರೂಪುಗೊಳಿಸಿರುವ ಶಿಕ್ಷಣ ಅಥವಾ ತರಬೇತಿಯೇ ಪೌರತ್ವ ತರಬೇತಿ.

ಮಾನವನು ಸಂಘಜೀವಿ. ಸಮುದಾಯವನ್ನು ತ್ಯಜಿಸಿ ಬದುಕುವುದು ಕಷ್ಟ. ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳುವ, ಸಾಮಾಜಿಕ ಕೌಶಲ ಹಾಗೂ ಮನೋಭಾವಗಳನ್ನು ಬೆಳೆಸಿಕೊಳ್ಳುವಂತೆ ಮಾಡಬೇಕಾಗುವುದು. ಸುಗಮ ಜೀವನಕ್ಕೆ ಬೇಕಾದ ಹಲವಾರು ಪೌರಗುಣಗಳನ್ನು ಕರಗತ ಮಾಡಿಕೊಳ್ಳಬೇಕಾಗುವುದು. ತನ್ನ ಹಕ್ಕುಬಾಧ್ಯತೆಗಳು, ಪಾಲಿಸಬೇಕಾದ ಕರ್ತವ್ಯಗಳು, ಹೊಣೆಗಾರಿಕೆ, ಜವಾಬ್ದಾರಿಗಳನ್ನು ಅರಿತುಕೊಳ್ಳ ಬೇಕಾಗುವುದು. ಇಂತಹ ಗುಣಗಳನ್ನು ಶಾಲಾ ತರಗತಿಯ ಒಳಗೆ ದೊರಕಿಸಿಕೊಡುವುದು ತ್ರಾಸದಾಯಕವಾಗಿದ್ದು ಒದಗಿಸಿದರೂ ನೈಜ ಅನುಭವ ದೊರಕಲಾರದು. ಕೆಲವು ಚಟುವಟಿಕೆಗಳನ್ನು ಶಾಲೆಯ ಹೊರಗೆ ನಡೆಸಬೇಕಾಗುವುದು. ಇವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜ್ಞಾನವನ್ನು ಉತ್ಪತ್ತಿ ಮಾಡುವುದರ ಜೊತೆಗೆ ಹಲವು ಪೌರಗುಣಗಳನ್ನು ಬೆಳೆಸುತ್ತವೆ.

ಪೌರತ್ವ ತರಬೇತಿಗಾಗಿ ಶಿಬಿರದಲ್ಲಿ ಕೈಗೊಳ್ಳಬಹುದಾದ ಕೆಲವು ಪ್ರಮುಖ ಚಟುವಟಿಕೆಗಳೆಂದರೆ; ಶಾಲಾ ಸಭೆ, ವಿದ್ಯಾರ್ಥಿ ಸಲಹಾ ಸಮಿತಿ, ಸಹಕಾರ ಸಂಘಗಳು, ಅಣಕು ಸಂಸತ್, ಅಣಕು ನ್ಯಾಯಾಲಯ, ಶಾಲಾ ಬ್ಯಾಂಕ್, ವಿದ್ಯಾರ್ಥಿಗಳ ಸ್ವಯಂ ಸರ್ಕಾರ, ಧಾರ್ಮಿಕ ಹಾಗೂ ನಾಡ ಹಬ್ಬಗಳ ಆಚರಣೆ, ಪ್ರಥಮ ಚಿಕಿತ್ಸೆ, ನೈಸರ್ಗಿಕ ವಸ್ತುಗಳ ಸಂಗ್ರಹ, ಆರೋಗ್ಯಾಭ್ಯಾಸಗಳು, ಇಂದ್ರಿಯ ತರಬೇತಿ ಆಟಗಳು, ವಾಹನ ಸಂಚಾರ ಸಪ್ತಾಹದಲ್ಲಿ ಭಾಗವಹಿಸುವಿಕೆ, ಜನಪದ ಗೀತೆ, ಜನಪದ ಕುಣಿತ, ಶ್ರಮದಾನ, ನಾಟಕಾಭಿನಯ, ರಾಷ್ಟ್ರ ಧ್ವಜದ ಪರಿಚಯ ಮತ್ತು ಧ್ವಜಾರೋಹಣ ವಿಧಿ ವಿಧಾನಗಳ ಪರಿಚಯ, ಭಜನೆ, ಶಿಬಿರಾಗ್ನಿ, ಮನೋರಂಜನೆಯ ಕ್ರೀಡೆಗಳು, ಪೌರರ ಸಮ್ಮೇಳನ, ಉಪನ್ಯಾಸ ಕಾರ್ಯಕ್ರಮಗಳು, ಜನಜಾಗೃತಿ ಕಾರ್ಯಕ್ರಮಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಭಾವೈಕ್ಯತೆ ಹಾಗೂ ಅರಿವಿನ ಕಾರ್ಯಕ್ರಮಗಳು, ದೇಶಾಭಿಮಾನ ಬೆಳೆಸುವ ಕಾರ್ಯ ಚಟುವಟಿಕೆಗಳು, ಸಂಘ ಜೀವನ ಚಟುವಟಿಕೆ ಇನ್ನು ಮುಂತಾದ ಕಾರ್ಯ ಚಟುವಟಿಕೆಗಳನ್ನು ಪೌರತ್ವ ತರಬೇತಿ ಶಿಬಿರಗಳಲ್ಲಿ ಹಮ್ಮಿಕೊಳ್ಳಬಹುದಾಗಿದೆ.

**ಪೌರತ್ವ ತರಬೇತಿ ಶಿಬಿರದ ಉದ್ದೇಶಗಳು**

1. ಸಾಮಾಜಿಕ ಜಾಗೃತಿ, ಪ್ರಜ್ಞೆಯನ್ನು ಪರಿಣಾಮಕಾರಿಯಾಗಿ ಬೆಳೆಸುವುದು.
2. ನಾಗರಿಕತ್ವದ ಹೊಣೆಗಾರಿಕೆಯ ಅರಿವನ್ನು, ಗುಣಗಳನ್ನು ಬೆಳೆಸುವುದು.
3. ಶಿಸ್ತು, ಶೀಲ, ಶಾಂತಗುಣ, ಕ್ರಮಬದ್ಧತೆ, ಯೋಜನಾ ಬದ್ಧತೆಗಳನ್ನು ಉತ್ತೇಜಿಸುವುದು.
4. ನೈತಿಕ ನಡೆತೆ, ಸದಾಚಾರ, ಆರೋಗ್ಯಕರ ಹವ್ಯಾಸಗಳನ್ನು ಬೆಳೆಸುವುದು.
5. ವೈಯಕ್ತಿಕ ನೈಪುಣ್ಯ ಮತ್ತು ಶೀಲಪೋಷಣೆ ಮಾಡುವುದು.
6. ಪ್ರಜಾಸತ್ತೆಯ ಆದರ್ಶ ಮೌಲ್ಯಗಳನ್ನು ಪರಿಚಯಿಸುವುದು ಹಾಗೂ ಪೋಷಿಸುವುದು.
7. ಸೇವಾ ಮನೋಭಾವ, ಸಾಮಾಜಿಕ ಕೌಶಲ, ಸಾಮಾಜಿಕ ವರ್ತನೆಗಳನ್ನು ಬೆಳೆಸುವುದು.
8. ಸಾಮಾಜಿಕ ಜೀವನ, ಸಂಘಜೀವನ, ತ್ಯಾಗಗಳ ನೈಜ ಅನುಭವ ಒದಗಿಸುವುದು.
9. ಸುಪ್ತ ಪ್ರತಿಭೆ, ಸೂಕ್ಷ್ಮ ದೃಷ್ಟಿಯನ್ನು ಬೆಳೆಸಿಕೊಳ್ಳುವಂತೆ ಪ್ರಚೋದಿಸುವುದು.
10. ಸಮುದಾಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಬೇಕಾದ ಅವಶ್ಯಕ ಗುಣಗಳನ್ನು ಬೆಳೆಸುವುದು.
11. ಸಮರಸ, ಸಾಮಾಜಿಕ ಸಂಬಂಧ ಹಾಗೂ ಸುಸಂಸ್ಕೃತ ಜೀವನಕ್ಕೆ ಅನುವು ಮಾಡಿಕೊಡುವುದು.
12. ಸಹಕಾರ, ಸಹಬಾಳ್ವೆಯ ತತ್ವಗಳನ್ನು ಪಾಲಿಸಿ ಕರ್ತವ್ಯಪರತೆ ಮತ್ತು ಕಾಯಕ ನಿಷ್ಠೆಯನ್ನು ಪೋಷಿಸುವುದು.
13. ವಿರಾಮ ವೇಳೆಯಲ್ಲಿ ಹಿತಕರವಾದ ಚಟುವಟಿಕೆಗಳಲ್ಲಿ ನಿರತರಾಗುವಂತೆ ಮಾಡುವುದು.

Digitised by Bharatavani, CIIL

14. ಸಮಯಪ್ರಜ್ಞೆ, ಕರ್ತವ್ಯ ಪಾಲನೆ ಮತ್ತು ಸಹಬಾಳ್ವೆಯ ಮೂಲೋದ್ದೇಶಗಳ ತಿಳುವಳಿಕೆ ಮತ್ತು ಅನುಸರಣೆ ಮಾಡುವುದು.

**ಸಂಘಟನೆ**

ಶಿಬಿರವನ್ನು ವ್ಯವಸ್ಥಿತವಾಗಿ ಪೂರ್ವಯೋಜಿತ ಚಿಂತನೆಯ ಮೂಲಕ ಸಂಘಟಿಸಬೇಕು. ತರಬೇತಿಯ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಗಳು ಕಡ್ಡಾಯವಾಗಿ ಪೌರತ್ವ ತರಬೇತಿ ಶಿಬಿರದಲ್ಲಿ ಹಾಜರಾಗಬೇಕು. ಅದು ಮೂರು ಅಥವಾ ಐದು ದಿನಗಳವರೆಗೆ ನಡೆಯುವುದು. ಪ್ರಥಮತಃ ಶಿಬಿರದ ಸ್ಥಳವನ್ನು ಆರಿಸಲಾಗುವುದು. ಅದು ಶಾಂತ ಪ್ರದೇಶವಾಗಿದ್ದು ಎಲ್ಲ ಸೌಲಭ್ಯಗಳೂ ಸಮೀಪದಲ್ಲೇ ಇರಬೇಕು. ಒಂದು ವಾರದ ಮೊದಲೇ ಶಿಬಿರಾರ್ಥಿಗಳಿಗೆ ಶಿಬಿರದ ಕುರಿತು ಮಾಹಿತಿ ನೀಡಬೇಕು. ಶಿಬಿರದ ಅಧಿಕಾರಿಗಳಿಂದ ತಮಗೆ ಬೇಕಾದ ಹೆಚ್ಚಿನ ಮಾಹಿತಿಗಳನ್ನು ಶಿಬಿರಾರ್ಥಿಗಳು ಪಡೆದುಕೊಳ್ಳಬಹುದು. ಶಿಬಿರಾರ್ಥಿಗಳನ್ನು ಅವರ ಸಂಖ್ಯೆಗೆ ಅನುಗುಣವಾಗಿ ಕೆಲವೊಂದು ತಂಡಗಳನ್ನಾಗಿ ಮಾಡಲಾಗುವುದು. ಪ್ರಮುಖ ವಿಷಯಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಮಿತಿಗಳನ್ನು ರೂಪಿಸಲಾಗುವುದು. ಶಾಲೆಯಲ್ಲಿನ ಎಲ್ಲರ ಸಹಕಾರ, ಪ್ರೋತ್ಸಾಹವನ್ನು ಪಡೆದುಕೊಳ್ಳಬೇಕು. ಕ್ರಮಬದ್ಧವಾಗಿ ಹಾಗೂ ಯೋಜನಾಬದ್ಧವಾಗಿ ಮಾಡಿದರೆ ಮಾತ್ರ ಇದರ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ವಿದ್ಯಾರ್ಥಿಗಳಲ್ಲಿ ಆತ್ಮಸಂಯಮ ಶಿಸ್ತು, ಸಹಕಾರ, ಸ್ವಾವಲಂಬಿತನಗಳನ್ನು ಬೆಳೆಸಬಹುದು. ಅಲ್ಲದೆ ಉತ್ತಮ ಚಟುವಟಿಕೆಗಳ ಮೂಲಕ ಬೌದ್ಧಿಕಶಕ್ತಿಯನ್ನು ವಿಸ್ತಾರಗೊಳಿಸಿ ಸರಳ ಜೀವನ, ಉನ್ನತ ಚಿಂತನೆ, ಪರಿಶೀಲನ ಶಕ್ತಿ, ವಿಶ್ವಪೌರತ್ವ ಮುಂತಾದವುಗಳ ಬಗೆಗೆ ಅರಿವು ಮೂಡಿಸಬೇಕು. ಕಲಾವಂತಿಕೆ, ಸೌಂದರ್ಯೋಪಾಸನೆ, ಆನಂದೋತ್ಸಾಹ ಗುಣಗಳನ್ನು ಬೆಳೆಸಿ ಅವರಲ್ಲಿನ ಸುಪ್ತಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡಬೇಕು. ಉಳಿದ ಅವಧಿಯಲ್ಲಿ ವಿನೋದಾವಳಿಗಳನ್ನು ನಡೆಸಲಾಗುವುದು. ಹೀಗೆ ಪೌರತ್ವ ತರಬೇತಿ ಶಿಬಿರವು ಪ್ರಶಿಕ್ಷಣಾರ್ಥಿಗಳಿಗೆ ಅತ್ಯುಪಯುಕ್ತವೂ, ಆನಂದದಾಯಕವೂ ಆದ ಅನುಭವವನ್ನು ಒದಗಿಸಬೇಕು. ಶಿಬಿರವನ್ನು ವ್ಯವಸ್ಥಿತವಾಗಿ, ಪೂರ್ವಯೋಜಿತ ಚಿಂತನೆಯ ಮೂಲಕ ಸಂಘಟಿಸಿದರೆ ಶಿಬಿರವು ಯಶಸ್ವಿಯಾಗುವುದರಲ್ಲಿ ಸಂಶಯವೇ ಇಲ್ಲ.

**ಮೌಲ್ಯಮಾಪನ**

1. ಪೌರತ್ವ ತರಬೇತಿ ಶಿಬಿರದ ನಂತರ ವಿದ್ಯಾರ್ಥಿಗಳಲ್ಲಿ ಶಿಸ್ತು, ಶಾಂತಗುಣ, ಕ್ರಮಬದ್ಧತೆ, ಸಂಯಮ ಹೊಂದಿಕೊಂಡು ಬಾಳುವ ಗುಣ ಬೆಳೆದಿರಬೇಕು.
2. ನಾಗರಿಕತ್ವದ ಹೊಣೆಗಾರಿಕೆಯನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಂಡಿರಬೇಕು.
3. ಸದಾಚಾರ ಹಾಗೂ ಆರೋಗ್ಯಕರ ಹವ್ಯಾಸಗಳನ್ನು ಬೆಳೆಸಿಕೊಂಡಿರಬೇಕು.
4. ಸೇವಾಮನೋಭಾವ – ಸಾಮಾಜಿಕ ಕೌಶಲ ಬೆಳೆದಿರಬೇಕು.
5. ವಿದ್ಯಾರ್ಥಿಗಳಲ್ಲಿನ ಸುಪ್ತಪ್ರತಿಭೆ ಎಲ್ಲರ ದೃಷ್ಟಿಗೆ ಗೋಚರವಾಗಬೇಕು.
6. ಸಮಯ ಪ್ರಜ್ಞೆ, ಕರ್ತವ್ಯಪಾಲನೆ ಹಾಗೂ ಸಹಬಾಳ್ವೆಯ ಅಗತ್ಯತೆಯನ್ನು ಅರಿತು ಪಾಲಿಸುವಂತಾಗಬೇಕು.
7. ವಿರಾಮ ವೇಳೆಯನ್ನು ಹಿತಕರವಾದ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಮನೋಭಾವ ಬೆಳೆದಿರಬೇಕು.
8. ಶಿಬಿರಾಗ್ನಿಯ ವಿಧಿವಿಧಾನಗಳನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡಿರಬೇಕು.
9. ಪ್ರಜಾಸತ್ತೆಯ ಆದರ್ಶ ಮೌಲ್ಯಗಳನ್ನು ಅರಿತು, ಅನುಸರಿಸುವಂತಾಗಬೇಕು.

ಈ ಎಲ್ಲ ಅಂಶಗಳೂ ವಿದ್ಯಾರ್ಥಿಗಳಲ್ಲಿ ಮೈಗೂಡಿಸುವುದೇ ಪೌರತ್ವ ತರಬೇತಿ ಶಿಬಿರದ ಪ್ರಮುಖ ಉದ್ದೇಶವಾದುದರಿಂದ ಈ ಉದ್ದೇಶಗಳು ಸರಿಯಾದ ರೀತಿಯಲ್ಲಿ ಈಡೇರಿವೆಯೇ ಎಂಬ ಪ್ರಶ್ನೆಯನ್ನು ವಿದ್ಯಾರ್ಥಿಗಳು ಸ್ವಮೌಲ್ಯಮಾಪನದ ಮೂಲಕ ಅರಿಯಬೇಕು. ಪ್ರತಿ ಹಂತದಲ್ಲೂ ವಿದ್ಯಾರ್ಥಿಗಳಿಗೆ ಉತ್ತಮವಾದ ಅನುಭವ ದೊರಕುತ್ತಿದೆಯೇ ಎಂಬುದನ್ನು ಅಧ್ಯಾಪಕ ವೃಂದದವರೂ ಗಮನಿಸುತ್ತಿರಬೇಕು. ಶಿಕ್ಷಕ ಉತ್ತಮ ಮಾರ್ಗದರ್ಶಕನಂತಿದ್ದು ಎಲ್ಲ ಹಂತದಲ್ಲೂ ವಿದ್ಯಾರ್ಥಿಗಳಿಗೆ ಸಹಾಯ ಸಲ್ಲಿಸಬೇಕು. ಮತ್ತೆ ಮತ್ತೆ ಪುನರಾವಲೋಕನ ಮಾಡಿಕೊಂಡಾಗ ಮಾತ್ರವೇ ಯಾವುದೇ ಕೆಲಸವಾದರೂ ಪೂರ್ಣವಾಗುವುದು ಎಂಬುದನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಿಳಿದು, ಅದರಂತೆ ನಡೆದುಕೊಂಡಾಗ ಪೌರತ್ವ ತರಬೇತಿ ಶಿಬಿರ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

–ಕೆ.ಶ್ಯಾ.ದೇ.

**ಪ್ಲೇಟೋ**

ಪ್ಲೇಟೋ ಅಥೆನ್ಸ್‌ನ ರಾಜಮನೆತನದಲ್ಲಿ ಜನಿಸಿದ ಒಬ್ಬ ತತ್ವಜ್ಞಾನಿ. ಈತನು ಬದುಕಿದ್ದ ಅವಧಿ ಕ್ರಿ.ಪೂ. 428 ರಿಂದ ಕ್ರಿ.ಪೂ. 347. ಈತ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ನ ಶಿಷ್ಯ. ಪ್ರಮುಖ ಶೈಕ್ಷಣಿಕ ಚಿಂತಕರಲ್ಲಿ ಈತ ಮೊದಲಿಗ. ಈತನ ಮೊದಲ ಹೆಸರು ಅರಿಸ್ಟೋಕ್ಲಸ್, ನಂತರದಲ್ಲಿ ಅವನು ಹೊಂದಿದ್ದ ವಿಶಾಲ ಭುಜಗಳ ದೆಸೆಯಿಂದ ಅವನಿಗೆ ಪ್ಲೇಟೋ ಎಂಬ ಹೆಸರು ಬಂತು. ಯೌವ್ವನದಲ್ಲೇ ಎಲ್ಲ ಕ್ಷೇತ್ರಗಳಲ್ಲೂ ಪ್ರತಿಭಾಶಾಲಿಯಾಗಿದ್ದ ಇವನಿಗೆ ಯುದ್ಧದಲ್ಲಿ ತೋರಿದ ಸಾಹಸಕ್ಕಾಗಿ ಶೂರನೆಂಬ ಖ್ಯಾತಿಯೂ ಬಂದಿತ್ತು. ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ಇವನು ಸಾಕ್ರಟಿಸ್‌ನ ಶಿಷ್ಯನಾದ.

ಪ್ಲೇಟೋ

ಕ್ರಿ.ಪೂ. 404ರಲ್ಲಿ ಶ್ರೀಮಂತವರ್ಗದವರಿಗೂ ಪ್ರಜಾಪ್ರಭುತ್ವ ವಾದಿಗಳಿಗೂ ನಡೆದ ಗೃಹಯುದ್ಧದಲ್ಲಿ ಕ್ರಿಟಿಯಾಸ್ ಎಂಬ ತನ್ನ ಹತ್ತಿರದ ಸಂಬಂಧಿಯೊಬ್ಬರ ಸಾವನ್ನು ಪ್ಲೇಟೋ ನೋಡಬೇಕಾಯಿತು. ಪುನಃ ಕ್ರಿ.ಪೂ. 399ರಲ್ಲಿ ತನ್ನ ಪ್ರಿಯ ಗುರುವಾದ ಸಾಕ್ರಟಿಸ್‌ನಿಗೆ ಪ್ರಜಾಪ್ರಭುತ್ವವಾದಿಗಳಿಂದ ಆದ ನಿಂದನೆ ಹಾಗೂ ಮರಣದಂಡನೆಯನ್ನು ಸಹ ಸಹಿಸಬೇಕಾಯಿತು. ಈ ಕಾರಣಗಳಿಂದಾಗಿ ಪ್ರಜಾಪ್ರಭುತ್ವದ ಬಗ್ಗೆ ಭ್ರಮನಿರಸನವನ್ನು ಹೊಂದಿದ ಪ್ಲೇಟೋ ತನ್ನ ಹುಟ್ಟೂರನ್ನು ಬಿಟ್ಟು ಮೆಗರ, ಸಿರೀನ್ ಮತ್ತು ಈಜಿಪ್ಟ್‌ಗಳಲ್ಲಿ ಸಂಚರಿಸಿ ಅಲ್ಪ ಅವಧಿಯಲ್ಲಿ ಪುನಃ ಅಥೆನ್ಸಿಗೆ ಕ್ರಿ.ಪೂ. 395ರಲ್ಲಿ ಹಿಂದಿರುಗಿದ. ಪುನಃ ತನ್ನ ಸಂಚಾರವನ್ನು ಆರಂಭಿಸಿದ ಪ್ಲೇಟೋ ಸಿರಾಕ್ಯೂಸ್‌ನಲ್ಲಿ ಗುಲಾಮನಾಗಿ ಮಾರಲ್ಪಟ್ಟನು. ತನ್ನ ಗೆಳೆಯನೊಬ್ಬನಿಂದ ಹಣವನ್ನು ಎರವಲು ತೆಗೆದುಕೊಂಡು ಆ ಹಣದಿಂದ ತನ್ನ ಸ್ವಾತಂತ್ರ್ಯವನ್ನು ಮರಳಿ ಪಡೆದನು.

ಮೊಟ್ಟಮೊದಲ ವಿಶ್ವವಿದ್ಯಾಲಯವೆಂದು ಹೇಳಬಹುದಾದ "ಅಕಾಡೆಮಿ"ಯನ್ನು ಅಥೆನ್ಸ್‌ನ ಸಮೀಪ ಮನೋಹರವಾದ

Digitised by Bharatavani, CIIL

ದೇವಾಲಯಗಳು ಹಾಗೂ ವಿಗ್ರಹಗಳಿಂದ ಕೂಡಿದ ಉಪವನವೊಂದರಲ್ಲಿ ಆರಂಭಿಸಿದನು. ಇದರ ಉದ್ದೇಶ ಸಾಕ್ರೆಟಿಸ್‌ನ ತತ್ವಗಳನ್ನು ಪ್ರತಿಪಾದಿಸುವುದಾಗಿತ್ತು. ಸ್ತ್ರೀಪುರುಷರಿಬ್ಬರಿಗೂ 'ಅಕಾಡೆಮಿ'ಗೆ ಪ್ರವೇಶವಿದ್ದು ಜ್ಯಾಮಿತಿಯ ಜ್ಞಾನ ಅಗತ್ಯವಾಗಿತ್ತು. ಉನ್ನತ ಗಣಿತ, ಖಗೋಳಶಾಸ್ತ್ರ, ಸಂಗೀತ, ಸಾಹಿತ್ಯ, ಕಾನೂನು, ಇತಿಹಾಸ, ತತ್ವಶಾಸ್ತ್ರ ಇವುಗಳನ್ನು ಅಕಾಡೆಮಿಯಲ್ಲಿ ಬೋಧಿಸಲಾಗುತ್ತಿತ್ತು. ಪ್ಲೇಟೋ ಉಪನ್ಯಾಸದ ಮುಖಾಂತರ ತನ್ನ ವಿಶಾಲ ಜ್ಞಾನ ಭಂಡಾರದಿಂದ ಜ್ಞಾನವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿದ್ದನು. ಸಾಕ್ರಟಿಸ್‌ನ 'ಸಂಭಾಷಣೆಯ ಮೂಲಕ ಚರ್ಚೆ' (Dialogue)ಯ ವಿಧಾನವನ್ನು ವೈಜ್ಞಾನಿಕ ಅನ್ವೇಷಣೆ ಹಾಗೂ ಬೋಧನೆಗಾಗಿ ಅಳವಡಿಸಿಕೊಳ್ಳುತ್ತಿದ್ದನು.

ಪ್ಲೇಟೋ ಸರ್ವಕಾಲಕ್ಕೂ ಬಹುಪ್ರಮುಖ ತತ್ವಜ್ಞಾನಿ ಎಂದು ಪ್ರಸಿದ್ಧಿ ಹೊಂದಿದ್ದಾನೆ. ಇಂದಿಗೂ ಸಾವಿರಾರು ಜನರನ್ನು ಆತನ ತಾತ್ವಿಕ ಹಾಗೂ ಶೈಕ್ಷಣಿಕ ವಿಚಾರಗಳು ಪ್ರಭಾವಿಸುತ್ತಲೇ ಇವೆ. ಶಿಕ್ಷಣ ತಜ್ಞ ವೈಟ್‌ಹೆಡ್ ಪ್ಲೇಟೋವಿನ ನಂತರ ಉದಯಿಸಿದ ಪ್ರತಿಯೊಂದು ತತ್ವಚಿಂತನೆಯೂ ಪ್ಲೇಟೋವಿನ ತತ್ವ ಚಿಂತನೆಗೆ ಅಡಿಟಿಪ್ಪಣಿ (foot note)ಯಂತಿದೆ ಎಂದು ಹೇಳಿರುವುದು ಅತಿಶಯೋಕ್ತಿಯಲ್ಲ.

ಪ್ಲೇಟೋವಿನ ತತ್ವಚಿಂತನೆಯ ಧಾಟಿಯನ್ನು ಅವನು ರಚಿಸಿದ ಹಲವಾರು ಗ್ರಂಥಗಳಿಂದ ತಿಳಿಯಬಹುದು. ಪ್ಲೇಟೋವಿನ 'ರಿಪಬ್ಲಿಕ್' ಎಂಬ ಕೃತಿ ಪ್ರಮುಖವಾದುದು. ಆತನ ತತ್ವ ಚಿಂತನಾ ಪ್ರವಾಹದ ಕೆಲವು ಮುಖಗಳು ಯಾವುವೆಂದರೆ – ತತ್ವಶಾಸ್ತ್ರ, ಜ್ಞಾನ ಮೀಮಾಂಸೆ, ರಾಜನೀತಿ ಹಾಗೂ ನೀತಿಶಾಸ್ತ್ರ. ಪ್ಲೇಟೋವಿನ ಪ್ರಕಾರ ಅಂತಿಮಸತ್ಯ ಅಧ್ಯಾತ್ಮಕ ಗುಣವುಳ್ಳದ್ದು. ಇನ್ನೂ ಸರಳವಾಗಿ ಹೇಳಬೇಕೆಂದರೆ ಅದು ಅಭೌತಿಕವಾದದ್ದು. ಭೌತಿಕವಾದ ಪ್ರತಿಯೊಂದು ವಸ್ತುವಿಗೂ ಮುಂಚಿತವಾಗಿ ಮನಸ್ಸಿನಲ್ಲಿ ಅದನ್ನು ಕುರಿತ ಕಲ್ಪನೆ ಅಥವಾ ರೂಪವನ್ನು ಭಾವಿಸಿಕೊಳ್ಳುವುದು ಅಗತ್ಯ. ಉದಾಹರಣೆಗೆ, ಒಂದು ಮನೆಯು ಅಸ್ತಿತ್ವಕ್ಕೆ ಬರಬೇಕಾದರೆ ಅದರ ಕಲ್ಪನೆ ಮನಸ್ಸಿನಲ್ಲಿ ಬಂದೇ ತೀರಬೇಕು. ಮನುಷ್ಯನು ವ್ಯಕ್ತಿಗತವಾಗಿ ಆತ್ಮವೇ ಆಗಿದ್ದಾನಾದರೂ ಜೀವಾತ್ಮವು ಭೌತಿಕ ಶರೀರಕ್ಕೆ ಬಂಧಿಸಲ್ಪಟ್ಟಿದೆ. ಜೀವಾತ್ಮವು ಮರಣಾನಂತರ ಮುಕ್ತಿಯನ್ನು ಹೊಂದುತ್ತದೆ. ಪ್ರಸ್ತುತ ಜೀವನದಲ್ಲಿ ಆಗುವ ಸಂಕಷ್ಟಗಳು ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕೃತ್ಯಗಳ ಫಲವಾಗಿದೆ. ಮರಣಾನಂತರ ಜೀವಾತ್ಮ ಮತ್ತೊಂದು ದೇಹವನ್ನು, ನಿರ್ದಿಷ್ಟ ಲಕ್ಷ್ಯವನ್ನು ಹೊಂದುತ್ತದೆ.

ಪ್ಲೇಟೋವಿನ ಜ್ಞಾನ–ಮೀಮಾಂಸೆ ಹಲವು ಪರಿಗಣನೆಗಳಿಂದ ಪ್ರಭಾವಿತವಾಗಿದೆ. ಜ್ಞಾನದ ಮೂಲ, ಕಾರಣಕಾರ್ಯ ಸತ್ಯಗಳು, ವಿಚಾರವಾದ, ಪರಮಸತ್ಯ ಹಾಗೂ ಸತ್ಯಪರೀಕ್ಷೆ ಇವೇ ಆ ಪರಿಗಣನೆಗಳು. ಜ್ಞಾನವೆಂದರೆ ಆತ್ಮನಲ್ಲಿ ಸ್ವಾಭಾವಿಕವಾಗಿ ಅಡಗಿರುವ ವಿಚಾರಗಳನ್ನು ಪುನಃ ಸ್ಮರಿಸುವುದೇ ಆಗಿದೆ. ಸಮಸ್ತ ವಿಚಾರಗಳು, ಭಾವನೆಗಳು ಆದ್ಯಂತರಹಿತ ಹಾಗೂ ಸತ್ಯ. ಸಕಲ ಭಾವನೆಗಳು ಅಂತರಾತ್ಮನಲ್ಲೇ ಅಡಗಿವೆಯಾದ್ದರಿಂದ ಜ್ಞಾನಕ್ಕಾಗಿ ಬಾಹ್ಯಪ್ರಪಂಚದ ಘಟನಾವಳಿಗಳನ್ನು ಅನುಭವಿಸಬೇಕಾಗಿಲ್ಲ. ತನ್ನ ಅಂತರಾತ್ಮದೆಡೆಗೆ ತಿರುಗಿ ಇಂದ್ರಿಯಗಳ ಪರಿಮಿತಿಯಿಂದ ಮುಕ್ತನಾಗಿ ಮಾನವ ಜ್ಞಾನದ ಅಧ್ಯಾತ್ಮಿಕ ಮೂಲವನ್ನು ಕಾಣಬಹುದು. ವಿಚಾರವನ್ನು ಬಳಸಿ ಪ್ರತಿಯೊಬ್ಬ ವ್ಯಕ್ತಿಗೂ ಸ್ವಾಭಾವಿಕ ಸತ್ಯಗಳನ್ನು ಕಾಣಲು ಸಾಧ್ಯ. ಸಕಲ ಸತ್ಯಗಳು ಶಾಶ್ವತ ಹಾಗೂ ಪರಿಪೂರ್ಣ. ಇಂದು ಏನು ಸತ್ಯವೋ ಅದು ಎಂದಿಗೂ ಸತ್ಯವೇ. ಮನಸ್ಸಿನ ವಿಷಯವೊಂದು ಶಾಶ್ವತ ವಿಷಯದೊಡನೆ ತಾರ್ಕಿಕವಾಗಿ ಸಾಮಂಜಸ್ಯವನ್ನು ಹೊಂದಿದ್ದರೆ ಅದನ್ನು ಸತ್ಯವೆನ್ನಬಹುದು.

ಪ್ಲೇಟೋ "ನ್ಯಾಯವು" ಒಂದು ಬಹಳ ಮುಖ್ಯ ಸದ್ಗುಣವೆಂದು ಪರಿಗಣಿಸುತ್ತಾನೆ. ನ್ಯಾಯದಿಂದ ಆಳಲ್ಪಟ್ಟ ರಾಜ್ಯದಲ್ಲಿ ಮಾತ್ರ ನ್ಯಾಯವು ಅಸ್ತಿತ್ವದಲ್ಲಿರಲು ಸಾಧ್ಯ. ಪ್ಲೇಟೋವಿನ ಮಾದರಿ ರಾಜ್ಯದ ಲಕ್ಷಣಗಳು ಹೀಗಿವೆ: ಶ್ರೇಷ್ಠರಿಂದ ಆಳ್ವಿಕೆ, ನ್ಯಾಯರಾಜ್ಯದ ಸಂಘಟನೆ, ಸದ್ಗುಣ, ಸದ್ಗುಣಿರಾಜ ಇತ್ಯಾದಿ. ಆಳ್ವಿಕೆಯ ಆಸಕ್ತಿ ಮತ್ತು ಅದಕ್ಕೆ ಅಗತ್ಯವಾದ ಕ್ಷಮತೆಯನ್ನು ಹೊಂದಿರುವ ಸ್ತ್ರೀ ಪುರುಷರು ಪ್ಲೇಟೋವಿನ ಮಾದರಿ ರಾಜ್ಯವನ್ನು ಆಳುವರು. ಪೋಷಕರು, ಯೋಧರು ಹಾಗೂ ಕಾರ್ಮಿಕರು ಈ ಮೂರು ವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ರಾಜ್ಯದ ಸಂಘಟನೆಯಾಗುವುದು. ಈ ಮೂರು ವರ್ಗಗಳಿಗೆ ಕ್ರಮವಾಗಿ ವಿವೇಕ, ಧೈರ್ಯ ಹಾಗೂ ಸಂಯಮ ಅವಶ್ಯವಾದ ಸದ್ಗುಣಗಳು, ರಾಜ್ಯವು ನ್ಯಾಯವಂತವಾಗಿರಬೇಕಾದರೆ ಅದರ ಪ್ರಜೆಗಳಲ್ಲಿ ವಿವೇಕ, ಧೈರ್ಯ ಮತ್ತು ಸಂಯಮಗಳೆಂಬ ಸದ್ಗುಣಗಳಿರಬೇಕು.

ಪ್ಲೇಟೋ ತನ್ನದೇ ಆದ ಶೈಕ್ಷಣಿಕ ತತ್ವಗಳನ್ನು ಮಂಡಿಸಿದ್ದಾನೆ. ಪ್ರತಿ ಬಾಲಕ ಬಾಲಕಿಯರಿಗೆ ಅವರ ಸಾಮರ್ಥ್ಯದ ಪರಿಮಿತಿಗಳವರೆಗೆ ಶಿಕ್ಷಣವನ್ನು ನೀಡಬೇಕೆಂದು ಪ್ಲೇಟೋ ಹೇಳುತ್ತಾನೆ. ಪ್ರತಿಯೊಬ್ಬರಿಗೂ ಶಿಕ್ಷಣವನ್ನು ಪಡೆಯುವ ಹಕ್ಕಿದೆ. ಸ್ತ್ರೀ ಪುರುಷರೆಂಬ ಭೇದವೆಣಿಸದೆ ಶಿಕ್ಷಣವನ್ನು ನೀಡಬೇಕು. ಇವನ ಪ್ರಕಾರ ಶಿಕ್ಷಣದ ಗುರಿಗಳು ಹಲವು. ಒಂದನೆಯದಾಗಿ, ರಾಜ್ಯದ ಭಾವಿ ಸಮರ್ಥ ಸೇವಕರನ್ನು ಉತ್ಪಾದಿಸುವುದು, ಎರಡನೆಯದಾಗಿ, ರಾಜ್ಯದ ಭಾವಿ ಆಡಳಿತಗಾರರನ್ನು ಹೆಚ್ಚು ಸದ್ಗುಣಿಗಳು ಬುದ್ಧಿಜೀವಿಗಳೂ ಆಗುವಂತೆ ಮಾಡುವುದು. ಮೂರನೆಯದಾಗಿ, ಯೋಧರಲ್ಲಿನ ಯುದ್ಧ ಕೌಶಲ್ಯವನ್ನು ಹಾಗೂ ಧೈರ್ಯಸಾಹಸಗಳ ಪ್ರೋತ್ಸಾಹನ ಮತ್ತು ಮಹಿಮಾಸ್ತುತಿ ಅಲ್ಲದೆ, ಯುದ್ಧಕೌಶಲ್ಯವು ಅವರಲ್ಲಿ ಹೆಚ್ಚುವಂತೆ ಮಾಡುವುದು. ನಾಲ್ಕನೆಯದಾಗಿ, ಸಮರ್ಥ, ಆಜ್ಞಾಪಾಲಕ ಹಾಗೂ ಸಂಯಮಶೀಲ ಕಾರ್ಮಿಕರನ್ನು ವಿಕಸನಗೊಳಿಸುವುದು. ಐದನೆಯದಾಗಿ, ಪ್ರಜೆಗಳಲ್ಲಿ ಸಮಾಜಕ್ಕೆ ಸ್ಪಂದಿಸುವಂಥ ಮನೋಧರ್ಮವನ್ನು ಬೆಳೆಸುವುದು. ಕಡೆಯದಾಗಿ, ತನ್ನ ಇಂದ್ರಿಯಗಳನ್ನು ವಿಚಾರಕ್ಕೆ ಅಧೀನಗೊಳಿಸಿ ನಿಮ್ನ ಪ್ರಕೃತಿಯನ್ನು ನಿಯಂತ್ರಣದಲ್ಲಿಡುವಂತೆ ಪ್ರತಿಯೊಬ್ಬ ಪ್ರಜೆಯ ಚಾರಿತ್ರ್ಯವನ್ನು ರೂಪುಗೊಳಿಸುವುದು.

ಪ್ಲೇಟೋ ಪ್ರಕಾರ ರಾಜ್ಯವನ್ನು ಸೃಷ್ಟಿಸಿ ಅದನ್ನು ನ್ಯಾಯಪರಿಪಾಲನೆಗೆ ಒಳಪಡಿಸಬೇಕಾದರೆ ಶಿಕ್ಷಣವೇ ಪ್ರಮುಖ ಸಾಧನ. ಮಕ್ಕಳನ್ನು ಅವರ ಪೋಷಕರಿಂದ ದೂರವಿಟ್ಟು ರಾಜ್ಯದ ಸ್ವಂತ ಮಕ್ಕಳಂತೆ ಭಾವಿಸಿ ಶಿಕ್ಷಣವನ್ನು ನೀಡಬೇಕು ಎನ್ನುವುದು ಶೈಕ್ಷಣಿಕ ವಿಧಾನದ ಚರಮಸೀಮೆಯಂತಿದೆ. ವಿದ್ಯಾರ್ಥಿಗಳಿಗೆ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಶಿಕ್ಷಣವನ್ನು ನೀಡಬೇಕು ಮತ್ತು ಪ್ರತಿಭಾಶಾಲಿಗಳಿಗೆ ಅತ್ಯುನ್ನತ ಶಿಕ್ಷಣದ ಅವಕಾಶವಿರಬೇಕು. ಅಂಥವರು ಮುಂದೆ ರಾಜ್ಯದ ಪೋಷಕರು, ಶಾಸಕರು ಆಗಿ ಅಸಮರ್ಥರ ಪಾಲನೆ ಪೋಷಣೆಯಲ್ಲಿ ಆಸಕ್ತಿವಹಿಸಬೇಕು. ಪ್ರಾಥಮಿಕ ಹಂತದಲ್ಲಿ ನೀಡುವ ಶಿಕ್ಷಣ ವ್ಯಕ್ತಿಯನ್ನು ತನ್ನ ಪರಿಸರಕ್ಕೆ ಸ್ಪಂದಿಸುವಂತೆ ಮಾಡಿದರೆ ಉನ್ನತ ಶಿಕ್ಷಣ ವ್ಯಕ್ತಿಯು ಅಂತಿಮ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಹಕಾರಿಯಾಗುತ್ತದೆ. ಪ್ಲೇಟೋ ಸಹಶಿಕ್ಷಣವನ್ನು ಪ್ರತಿಪಾದಿಸುತ್ತಾನೆ. ವಿದ್ಯಾರ್ಥಿಗಳು ಹದಿನೆಂಟು ವರ್ಷ ವಯಸ್ಸಿನವರೆಗೆ ಗಣಿತ, ಕಾವ್ಯ, ಸಾಹಿತ್ಯ ಮತ್ತು ಸಂಗೀತ ಇವುಗಳಲ್ಲಿ ಶಿಕ್ಷಣವನ್ನು ಪಡೆಯಬೇಕು. ಇವನ ಪ್ರಕಾರ ಈ ಹಂತವು ಪ್ರಾಥಮಿಕ ಹಂತವಾಗುತ್ತದೆ. ವಿದ್ಯಾರ್ಥಿಯ ಮುಂದಿನ ಎರಡು ವರ್ಷಗಳು ಸೈನಿಕ ತರಬೇತಿಯಲ್ಲಿ ಕಳೆಯಬೇಕು. ಈ ದೈಹಿಕ ಶಿಕ್ಷಣದ ಘಟ್ಟ ಕಳೆದ ನಂತರ ಶ್ರೇಷ್ಠ ಯುವಕರನ್ನು ಉನ್ನತ ಶಿಕ್ಷಣಕ್ಕೆ ಆಯ್ದುಕೊಳ್ಳಲಾಗುವುದು. ಇವರು ಮುಂದೆ ರಾಜ್ಯದ ಉತ್ತಮ ಪಾಲಕರಾಗುವರು. ಇಪ್ಪತ್ತರಿಂದ ಮೂವತ್ತೈದು ವಯಸ್ಸಿನ ಅವಧಿಯಲ್ಲಿ ರಾಜ್ಯದ ಭಾವಿ ಆಡಳಿತಗಾರರು ರಾಜ್ಯಭಾರದ

Digitised by Bharatavani, CIIL

ಜವಾಬ್ದಾರಿಯ ನಿರ್ವಹಣೆಗೆ ತಕ್ಕ ಸಿದ್ಧತೆಯನ್ನು ಪಡೆದುಕೊಳ್ಳಲು ಉನ್ನತ ಶಿಕ್ಷಣವನ್ನು ಸ್ವೀಕರಿಸುವರು. ಪಠ್ಯವಸ್ತು ಗಣಿತ, ಸಂಗೀತ ಮತ್ತು ಸಾಹಿತ್ಯವನ್ನು ಒಳಗೊಳ್ಳುವುದು. ಮೂವತ್ತನೆಯ ವಯಸ್ಸಿನಲ್ಲಿ ವಿದ್ಯಾರ್ಥಿಯು ತತ್ವಶಾಸ್ತ್ರದ ಅಧ್ಯಯನಕ್ಕೆ ಅಗತ್ಯವಾದ ಪರಿಪಕ್ವತೆಯನ್ನು ಪಡೆದುಕೊಂಡಿರುವನು. ಮೂವತ್ತೈದರ ವಯಸ್ಸಿನ ಹೊತ್ತಿಗೆ ವಿದ್ಯಾರ್ಥಿಯು ತನ್ನ ಔಪಚಾರಿಕ ಶಿಕ್ಷಣವನ್ನು ಪೂರ್ಣಗೊಳಿಸಿ ಸಣ್ಣಪುಟ್ಟ ಆಡಳಿತಾತ್ಮಕ ಹುದ್ದೆಗಳನ್ನು ಸ್ವೀಕರಿಸುವನು. ಇದರ ನಂತರವೇ ಹೆಚ್ಚಿನ ಜವಾಬ್ದಾರಿಯುಳ್ಳ ಹುದ್ದೆಗಳನ್ನು ನಿರ್ವಹಿಸಲು ಅರ್ಹತೆ ದೊರಕುವುದು.

ಶಿಕ್ಷಣದ ವಿಧಾನ ಆಧಾರ ಚೌಕಟ್ಟಿದ್ದಂತೆ. ಬೋಧನಾ ವಿಧಾನಗಳು ಬಹಳ ಸಹಜತೆಯಿಂದ ಕೂಡಿರಬೇಕು. ಇದು ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಅತ್ಯವಶ್ಯಕ. ಉನ್ನತ ಹಂತದಲ್ಲಿ ವಿದ್ಯಾರ್ಥಿಯ ವಿಚಾರಾತ್ಮಕ ಸಾಮರ್ಥ್ಯವನ್ನು ತರಬೇತುಗೊಳಿಸಿ ಚಿಂತನೆ ಹಾಗೂ ಅಮೂರ್ತ ಕಲ್ಪನೆಯಲ್ಲಿ ತೊಡಗುವ ಸಾಮರ್ಥ್ಯವನ್ನು ಬಲಗೊಳಿಸಬೇಕು. ಪ್ಲೇಟೋವಿನ ಶಿಕ್ಷಣ ಸಮಗ್ರತಾ ದೃಷ್ಟಿಯುಳ್ಳದ್ದು (Holistic). ಶಾರೀರಿಕ, ಮಾನಸಿಕ, ಬೌದ್ಧಿಕ ಹಾಗೂ ಅಧ್ಯಾತ್ಮಿಕ ಮಟ್ಟಗಳಲ್ಲಿ ವ್ಯಕ್ತಿಗೆ ಶಿಕ್ಷಣವು ಅಗತ್ಯ. ಆದ್ದರಿಂದ ಪಠ್ಯಕ್ರಮದಲ್ಲಿ ತಥ್ಯಾಂಶಗಳನ್ನು (facts), ಕೌಶಲ್ಯಗಳು, ದೈಹಿಕಶಿಸ್ತು, ಸಂಗೀತ ಮತ್ತು ಕಲೆ ಇತ್ಯಾದಿಗಳನ್ನು ಸೇರಿಸಬೇಕೆಂಬುದು ಪ್ಲೇಟೋವಿನ ಸಮಗ್ರ ಶಿಕ್ಷಣದ ಅಭಿಪ್ರಾಯ.

ಪ್ರತಿಭೆಯು ಅನುವಂಶಿಕವಾಗಿ ಮಕ್ಕಳಲ್ಲಿ ಕಾಣಲಾಗುವುದಿಲ್ಲ ವಾದ್ದರಿಂದ ಪ್ರತಿಭಾನ್ವಿತ ಮಕ್ಕಳು ಸಮಾಜದ ಯಾವುದೇ ವರ್ಗದಲ್ಲಿ ನಮಗೆ ಸಿಗಬಹುದು. ಪ್ರತಿಭೆ ವರ್ಗಾತೀತವಾದದ್ದು ಎಂದು ಪ್ಲೇಟೋ ನಂಬುತ್ತಾನೆ. ಅನಿರ್ಬಂಧ ಸಾರ್ವಜನಿಕ ಶಿಕ್ಷಣದ ಮುಖಾಂತರ ಶಿಕ್ಷಿತ ಅಲ್ಪಸಂಖ್ಯಾತರು ತಮ್ಮ ಶಿಕ್ಷಣದಿಂದಾಗಿ ಸಾಕಷ್ಟು ಆರೋಗ್ಯಕರ ಆಡಳಿತವನ್ನು ನೀಡಲು ಸಾಧ್ಯ.

ಪ್ಲೇಟೋವಿನ ಪ್ರಕಾರ ಮಾನವ ಜೀವನದ ವ್ಯವಸ್ಥೆಯಲ್ಲಿ ಶಿಕ್ಷಣದಷ್ಟು ಪ್ರಮುಖವಾದುದು ಯಾವುದೂ ಇಲ್ಲ. ಅವನೇ ಹೇಳುವ ಹಾಗೆ "ಶಿಕ್ಷಣ ಒಂದು ಮಹತ್ವಪೂರ್ಣ ವಿಷಯ". ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಈತನು ರಚಿಸಿದ "ರಿಪಬ್ಲಿಕ್" ಎಂಬ ಕೃತಿಯಲ್ಲಿ ಸಿಗುತ್ತವೆ. ಅವನದೇ ಮಾತುಗಳಲ್ಲಿ ಶಿಕ್ಷಣದ ಉದ್ದೇಶವನ್ನು ಹೀಗೆ ಹೇಳಬಹುದು. "ಅಂತರಾತ್ಮದ ದೃಷ್ಟಿಯನ್ನು ಬೆಳಕಿನೆಡೆಗೆ ತಿರುಗಿಸುವುದೇ ಶಿಕ್ಷಣದ ಉದ್ದೇಶ. ಶಿಕ್ಷಣವೆಂಬ ಸಮಗ್ರ ಕಾರ್ಯವು ಜ್ಞಾನವನ್ನು ಅಂತರಾತ್ಮನಲ್ಲಿ ತುಂಬುವುದಾಗಿರದೆ ಅಂತರಾತ್ಮನಲ್ಲಿ ನಿಹಿತವಾಗಿರುವ ಜ್ಞಾನವನ್ನು ಹೊರತರುವುದು ಹಾಗೂ ಹೊರತಂದ ಜ್ಞಾನವನ್ನು ಸೂಕ್ತ ವಸ್ತು ವಿಷಯಗಳೆಡೆಗೆ ತಿರುಗಿಸುವುದು. ಆದ್ದರಿಂದ ಶಿಕ್ಷಣ ಸಮಸ್ಯೆಯೆಂದರೆ ಅದಕ್ಕೆ ಸೂಕ್ತ ಪರಿಸರವನ್ನು ನೀಡುವುದು". ನೈತಿಕ ಶಿಕ್ಷಣ ಅತ್ಯಗತ್ಯವೆಂದು ಪ್ಲೇಟೋವಿನ ಮತ. ಸಮಾಜದ ಸದಸ್ಯರು ತಾವೆಲ್ಲರೂ ಒಂದು ಸಮಾಜದ ಸದಸ್ಯರೆಂದು ತಿಳಿದುಕೊಂಡು ಸಾಮರಸ್ಯದಿಂದಲೂ ಪರಸ್ಪರ ಸಹಕಾರದಿಂದಲೂ ಬಾಳಬೇಕು.

ಪ್ಲೇಟೋವಿನ ಸಿದ್ಧಾಂತ ಕರ್ಮದ ಹಾಗೂ ಚಿಂತನಶೀಲತೆಯ ಆದರ್ಶಗಳ ನಡುವೆ ಹೊಯ್ದಾಡುತ್ತದೆ. ಒಮ್ಮೆ ಗುರಿಯು ಒಳಿತನ್ನು ಸಾಧಿಸುವುದಾದರೆ ಮತ್ತೊಮ್ಮೆ ಗುರಿಯು ಸಮಾಜಸೇವೆಯಾಗಿರುತ್ತದೆ. ಒಮ್ಮೆ ಪೂರ್ಣಸ್ವ ವಿಕಸನವು ಗುರಿಯಾದರೆ ಮತ್ತೊಮ್ಮೆ ಸಾಮಾಜಿಕ ಹೊಂದಾಣಿಕೆ ಗುರಿಯಾಗುತ್ತದೆ. ವ್ಯಕ್ತಿಯು ಸೂಕ್ತ ಸಮಯದಲ್ಲಿ ಸೂಕ್ತ ಪ್ರಮಾಣ ಹಾಗೂ ರೀತಿಯಲ್ಲಿ ಮೇಲೆ ಹೇಳಿದ ಗುರಿಗಳನ್ನು ಸಾಧಿಸಬೇಕು ಎಂಬುದು ಇದರ ಅರ್ಥ.

ಶಿಕ್ಷಣದ ಅನುಕ್ರಮಿಕ ಹಂತಗಳಲ್ಲಿ ಪರಿಸರದ ಪ್ರಾಮುಖ್ಯವಿದೆ ಯೆಂಬುದು, ಈ ಹಂತಗಳು ಸರಳದಿಂದ ಸಂಕೀರ್ಣವಾಗಿರಬೇಕೆಂಬುದು, ಕಲಿಕೆಯ ಪ್ರಕ್ರಿಯೆಯಲ್ಲಿ ಮಗು ಸಕ್ರಿಯ ಪಾತ್ರವನ್ನು ವಹಿಸುವಂತೆ ಸೂಕ್ತ ಅವಕಾಶಗಳನ್ನು ಕಲ್ಪಿಸಬೇಕೆಂಬುದು, ಉನ್ನತ ಹಂತದ ಶಿಕ್ಷಣಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪದ್ಧತಿ ಇರಬೇಕೆಂಬುದು ಪ್ಲೇಟೋವಿನ ಶಿಕ್ಷಣ ಸಿದ್ಧಾಂತದ ಪ್ರಮುಖ ಅಂಶಗಳು.

–ಬಿ.ಎಂ.ಚಂ.

# ಬ

## ಬದಲಾವಣೆಗಳ ನಿರ್ವಹಣೆ

ಬದಲಾವಣೆಯು ಪ್ರತಿಯೊಬ್ಬ ಮಾನವನ ಜೀವನದಲ್ಲಿ ಹಾಗೂ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಮುಖವಾದ ಅಂಶ. ಜಗತ್ತಿನ ಯಾವುದೇ ದೇಶ ಬೆಳೆದು ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಬದಲಾವಣೆಯು ಆಗಲೇಬೇಕು. ಯಾವುದೇ ಒಂದು ಸಮಾಜ ನಿಂತ ನೀರಿನಂತೆ ಇರುವುದಿಲ್ಲ. ಅದು ಸದಾ ಬದಲಾವಣೆಯಾಗುತ್ತಿರುತ್ತದೆ. ಆದ್ದರಿಂದಲೇ ಮಾನವನು ತನ್ನ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಬದಲಾವಣೆ ಪ್ರಕೃತಿ ನಿಯಮ. ನಮಗೆ ಬೇಕಾಗಿರಲಿ ಅಥವಾ ಬೇಡವಾಗಿರಲಿ, ನಾವು ಪ್ರೀತಿಸಲಿ ಅಥವಾ ದ್ವೇಷಿಸಲಿ ಬದಲಾವಣೆ ಉಂಟಾಗುತ್ತದೆ ಎಂಬುದು ನಮಗೆ ತಿಳಿದಿದೆ. ಯಾರೂ ಬದಲಾವಣೆಗಳನ್ನು ಸಂಪೂರ್ಣವಾಗಿ ಅಥವಾ ಶಾಶ್ವತವಾಗಿ ತಡೆಯಲು ಸಾಧ್ಯವಿಲ್ಲ. ಆದರೆ ಮನುಷ್ಯನು ತನ್ನ ವಿವೇಕವನ್ನು ಬಳಸಿ ಬದಲಾವಣೆಯ ದಿಕ್ಕನ್ನು ಬದಲಾಯಿಸಬಹುದು ಮತ್ತು ತನಗೆ ಉಪಯುಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಬದಲಾವಣೆಯು ಸ್ವಾಭಾವಿಕವಾಗಿರಬಹುದು ಅಥವಾ ಮಾನವ ಜೀವಿಗಳಿಂದ ಉಂಟಾದವು ಅಥವಾ ಸೃಷ್ಟಿಸಿದಂತವುಗಳಾಗಿರಬಹುದು. ನಮಗೆ ತಿಳಿದಂತೆ ಈ ಜಗತ್ತಿನಲ್ಲಿ ಯಾವುದು ಸ್ಥಿರ ಅಥವಾ ಶಾಶ್ವತವಾದುದಲ್ಲ. ಆದ್ದರಿಂದ ನಾವು ಅಭಿವೃದ್ಧಿಗಾಗಿ ಬದಲಾವಣೆಯನ್ನು ನಿರ್ವಹಿಸುವುದನ್ನು ಕಲಿಯಬೇಕು. ನಾವು ಬದಲಾವಣೆಯನ್ನು ಸ್ವೀಕರಿಸುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಬಳಕೆಯಲ್ಲಿಲ್ಲದ ಅಸಮಂಜಸ ಅಭ್ಯಾಸಗಳನ್ನು ಕಿತ್ತು ಹಾಕಿದ್ದೇವೆ. ಬದಲಾವಣೆಗಳನ್ನು ಸ್ವೀಕರಿಸುವುದು ಮತ್ತು ಬರುತ್ತಿರುವ ಬದಲಾವಣೆಗಳಿಗೆ ಶೈಕ್ಷಣಿಕ ವ್ಯವಸ್ಥೆಯನ್ನು ಹೊಂದಿಸುವುದು ನಮ್ಮ ವ್ಯವಸ್ಥೆಯ ಕಾರ್ಯನಿರ್ವಹಣೆಯ ಧನಾತ್ಮಕ ಸೂಚಕಗಳಲ್ಲಿ ಒಂದಾಗಿದೆ. ಬದಲಾವಣೆಗಳು ಬೋಧನೆ, ಬೋಧನಾ ವಿಧಾನಗಳು, ಪಠ್ಯವಸ್ತು, ಸಹ ಪಠ್ಯಕ್ರಮ, ನಿರ್ವಹಣೆ, ಅನುದಾನದ ನಮೂನೆ ಮತ್ತು ಸಂಪನ್ಮೂಲಗಳು, ವಿದ್ಯಾರ್ಥಿಗಳ ವಿಕಾಸ, ಪಠ್ಯಪುಸ್ತಕ ಇತ್ಯಾದಿ ಶೈಕ್ಷಣಿಕ ಕ್ಷೇತ್ರಗಳಲ್ಲೂ ಉಂಟಾಗುತ್ತವೆ.

Digitised by Bharatavani, CIIL

ಸಾಮಾನ್ಯವಾಗಿ ಬದಲಾವಣೆ ಎಂದರೆ, ವ್ಯತ್ಯಾಸ ಮಾಡುವುದು ಅಥವಾ ಬೇರೆಯೇ ಆಗುವುದು ಅಥವಾ ಇರುವುದರಲ್ಲಿ ಬೇರೆಯದನ್ನು ಸ್ಥಾಪಿಸುವುದು ಅಥವಾ ಇಡುವುದು ಅಥವಾ ಒಂದು ಸ್ಥಳ ಅಥವಾ ಒಂದು ನಮೂನೆಯಿಂದ ಬೇರೆ ಒಂದಕ್ಕೆ ಬದಲಾಯಿಸುವುದು ಎಂದು ನಾವು ತಿಳಿದಿದ್ದೇವೆ. ಬದಲಾವಣೆಯ ಅರ್ಥ ಯಾವುದೇ ವ್ಯವಸ್ಥೆಯಲ್ಲಿ–ದೈಹಿಕ, ಜೈವಿಕ, ಆರ್ಥಿಕ, ಸಂಘಟನಾತ್ಮಕ, ಸಾಮಾಜಿಕ ಮತ್ತು ವೈಯಕ್ತಿಕ–ಇವುಗಳಲ್ಲಿ ಪರಿವರ್ತನೆ, ವ್ಯತ್ಯಾಸಗಳು ಅಥವಾ ಸುಧಾರಣೆಗಳನ್ನು ತರುವುದಾಗಿದೆ. ಅನ್ವೇಷಣೆಯು ಹೊಸ ವಿಚಾರ ಅಥವಾ ಪರಿಕಲ್ಪನೆ ಅಥವಾ ವರ್ತನೆಯಾಗಿದೆ. ವ್ಯಕ್ತಿಯಿಂದ, ಅನ್ವೇಷಣೆಯಿಂದ ಅಥವಾ ಯಾವುದೇ ವ್ಯವಸ್ಥೆಯಿಂದ ನವೀನವಾದುದನ್ನು ಅಳವಡಿಸಿಕೊಳ್ಳುವುದನ್ನು ಬದಲಾವಣೆ ಎಂದು ಕರೆಯುತ್ತಾರೆ. ಸಮಯ ಕಳೆದಂತೆ ವ್ಯಕ್ತಿ, ವಸ್ತು, ಸನ್ನಿವೇಶ ಮತ್ತು ಸಂಘಟನೆಗಳಲ್ಲಿ ಬದಲಾವಣೆಗಳು ಉಂಟಾಗುತ್ತವೆ. ಬದಲಾವಣೆಯು ಎಲ್ಲ ಕಡೆಯಲ್ಲೂ ಇರುವಂತಹ ಯಾವಾಗಲೂ ಇರುವಂತಹ ಸಂಗತಿಯಾಗಿದೆ. ಗ್ರೀಕ್ ತತ್ವಜ್ಞಾನಿಯಾದ ಹೆರಾಡಿಸ್‌ನು. "ಒಬ್ಬ ವ್ಯಕ್ತಿಗೆ ಒಂದೇ ನದಿಯಲ್ಲಿ (ಅದೇ ನದಿಯಲ್ಲಿ) ಎರಡು ಸಲ ಇಳಿಯುವುದು ಸಾಧ್ಯವಾಗುವುದಿಲ್ಲ" ಎಂದು ಹೇಳಿದ್ದಾನೆ. ಇದು ಸಾಧ್ಯವಿಲ್ಲ. ಏಕೆಂದರೆ ಮೊದಲನೆಯ ಮತ್ತು ಎರಡನೆಯ ಇಳಿಯುವಿಕೆಯ ನಡುವಿನ ಸಮಯದ ಅಂತರದಲ್ಲಿ ನದಿ ಮತ್ತು ಮನುಷ್ಯ ಎರಡರಲ್ಲೂ ಬದಲಾವಣೆಗಳಾಗಿರುತ್ತವೆ. ನದಿಯಾಗಲಿ, ಮನುಷ್ಯನಾಗಲಿ ಒಂದೇ ರೀತಿ ಇರುವುದಿಲ್ಲ. ಇದು ಬದಲಾವಣೆಯ ಸ್ವಭಾವವಾಗಿದೆ. ಈ ಜಗತ್ತಿನಲ್ಲಿ ಯಾವುದೂ ಒಂದೇ ರೀತಿ ಇರುವುದಿಲ್ಲ. ಪ್ರತಿಯೊಂದೂ ಬದಲಾಗುತ್ತಿರುತ್ತದೆ. ಆದರೆ ಬದಲಾವಣೆಯ ದರ ಮತ್ತು ಗತಿಯಲ್ಲಿ ವ್ಯತ್ಯಾಸವಿರಬಹುದು. ಕೆಲವು ರೀತಿಯ ಬದಲಾವಣೆಗಳು ಮಾನವ ಜೀವನದ ಅವಶ್ಯಕ ಅಂಶಗಳಾಗಿವೆ. ಈ ಜಗತ್ತಿನಲ್ಲಿ ವಾಸ್ತವಿಕ ಅಥವಾ ಶಾಶ್ವತತೆಯ ಕೆಲವು ವಸ್ತುಗಳಲ್ಲಿ ಬದಲಾವಣೆಯಾಗುತ್ತದೆ. ನಾವು ಎಲ್ಲ ರೀತಿಯ ಬದಲಾವಣೆಗಳನ್ನು ಅನುಭವಿಸುತ್ತೇವೆ. ಪ್ರಕೃತಿಯಲ್ಲಿ ಬದಲಾವಣೆ, ಋತುಗಳಲ್ಲಿ ಬದಲಾವಣೆ, ಪಠ್ಯವಸ್ತುವಿನಲ್ಲಿ ಬದಲಾವಣೆ, ಉಡುಗೆ–ತೊಡುಗೆ ಶೈಲಿಯಲ್ಲಿ ಬದಲಾವಣೆ, ಫ್ಯಾಷನ್ (ನಮೂನೆ)ಗಳಲ್ಲಿ ಬದಲಾವಣೆ ಹೀಗೆ ಹಲವಾರು ಬದಲಾವಣೆಗಳನ್ನು ನಾವು ಕಾಣುತ್ತೇವೆ. ಸಂಪೂರ್ಣ ಸಮಾಜವು ಒಂದಲ್ಲ ಒಂದು ರೀತಿಯಲ್ಲಿ ಬದಲಾಗುತ್ತಿದೆ. ಅದು ಅಭಿವೃದ್ಧಿಯ ಕಡೆಗಿರಬಹುದು ಅಥವಾ ಅವನತಿಯ ಕಡೆಗಿರಬಹುದು. ಬದಲಾವಣೆಯ ಸಂಗತಿಗಳನ್ನು ಅದರ ಪೂರ್ಣ ರೂಪದಲ್ಲಿ ಗ್ರಹಿಸುವುದು ಕಠಿಣವಾಗಿದೆ.

**ಬದಲಾವಣೆಗೆ ಕೆಲವೊಂದು ಉದಾಹರಣೆಗಳು**

1. ನಿನ್ನೆಯಿಂದ ಇವತ್ತಿಗೆ ತಾಯ್ನಾಡಾದ ಭಾರತ ಬೇರೆಯಾಗಿರುತ್ತದೆ. ಬದಲಾವಣೆಯಿಂದ ನಾಳೆ ಏನಾಗುತ್ತದೆ ಎಂದು ಊಹಿಸುವುದು ಕಠಿಣ.

2. ಇಂದಿನ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರು ಕೆಲವು ವರ್ಷಗಳ ಹಿಂದೆ ಊಹಿಸಲು ಸಾಧ್ಯವಿಲ್ಲದ ಡಿಜಿಟಲ್ ಕ್ಯಾಮರಾಗಳಂತಹ ಸಲಕರಣೆಗಳನ್ನು ಇ–ಮೇಲ್, ಇಂಟರ್‌ನೆಟ್, ವೈಯಕ್ತಿಕ ಕಂಪ್ಯೂಟರ್‌ಗಳು, ವಿ.ಸಿ.ಆರ್.ಗಳು, ಕಾಂಪೆಕ್ಟ್ ಡಿಸ್ಕ್‌ಗಳು, ಜ್ಞಾನ ದರ್ಶನ, ಜ್ಞಾನವಾಹಿನಿಗಳಂತಹ ವಾಹಿನಿಗಳನ್ನು ನೋಡುತ್ತಾರೆ ಮತ್ತು ಬಳಸುತ್ತಾರೆ.

3. ಜಗತ್ತಿನ ಉದ್ಯಮ ಸಂಘಟನೆಗಳಾದ ವರ್ಲ್ಡ್ ಟ್ರೇಡ್ ಆರ್ಗನೈಸೇಷನ್ (WTO) ಸೇವೆಗಳಲ್ಲಿ ಉದ್ಯಮದ ಮೇಲೆ ಸಾಮಾನ್ಯ ಒಪ್ಪಂದ (ಜನರಲ್ ಅಗ್ರಿಮೆಂಟ್ ಇನ್‌ಟ್ರೇಡ್ ಅವರಿಂದ ಸರ್ವೀಸಸ್ (GATS) ಇವು ಶೈಕ್ಷಣಿಕ ಕೋಶವು ಸೇರಿಸಿದಂತೆ ಅನೇಕ ಸೇವಾ ಕ್ಷೇತ್ರಗಳಲ್ಲಿ ಬದಲಾವಣೆ ಉಂಟು ಮಾಡುತ್ತಿವೆ. ಇದರಿಂದ ನಾವು ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣವನ್ನು ಕಾಣುತ್ತಿದ್ದೇವೆ.

4. ಶಿಕ್ಷಣಕ್ಕೆ ಪ್ರತ್ಯೇಕವಾಗಿರುವ EDUSAT ನಂತಹ ಉಪಗ್ರಹದ ಬಿಡುಗಡೆ ಅಥವಾ ಪ್ರಯೋಗಿಸುವಿಕೆ, ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ ವಿನ್ಯಾಸಗಳ ಸಾಧ್ಯತೆಗಳು ಮತ್ತು ಅವಕಾಶಗಳಲ್ಲಿ ಬದಲಾವಣೆಗಳನ್ನು ತಂದಿದೆ.

ನ್ಯೂಸ್ಟ್ರೋಮ್ ಮತ್ತು ಡೇವಿಸ್ (1997) ರವರು 'ಸಂಘಟನೆಯ ಯಾವುದೇ ಭಾಗದಲ್ಲಿ ಆದ ಬದಲಾವಣೆಯು ಒಟ್ಟು ಸಂಘಟನೆಯಲ್ಲಿ ಬದಲಾವಣೆಯನ್ನು ತರುತ್ತದೆ" ಎಂದು ಹೇಳಿದ್ದಾರೆ. ಆದ್ದರಿಂದ ಪರ್ಯಾಯ (ನಂತರದ) ಬದಲಾವಣೆಗಳು ಸಂಘಟನೆಯ ಇತರ ಭಾಗಗಳಲ್ಲಿ ಆಗಬೇಕಾಗುತ್ತದೆ. ನ್ಯೂಸ್ಟ್ರೋಮ್ ಮತ್ತು ಡೇವಿಸ್‌ರವರು ಸಂಘಟನೆಯನ್ನು ಗಾಳಿ ತುಂಬಿದ ಬಲೂನ್‌ಗೆ ಹೋಲಿಸುವುದರ ಮೂಲಕ ನಿರ್ದಶಿಸಿದ್ದಾರೆ. ಸಂಘಟನೆಯನ್ನು ಪ್ರತಿನಿಧಿಸುವ ಬಲೂನಿನ ಒಂದು ಬಿಂದುವಿನಲ್ಲಿ ಬೆರಳನ್ನು (ಬಾಹ್ಯ ಬಲವನ್ನು ಪ್ರತಿನಿಧಿಸುವ) ಒತ್ತಿದಾಗ ಬಲೂನಿನ ಹೊರ ಆಕಾರದಲ್ಲಿ ನೇರವಾಗಿ ತೋರುವಂತಹ ಬದಲಾವಣೆಗಳು ಆಗುತ್ತವೆ. ತಲಗಿದಂತಹ ಬಿಂದುವಿನಲ್ಲಿ ಗುರುತು (ಒತ್ತು) ಉಂಟಾಗುತ್ತದೆ. ಏನೇ ಆಗಲಿ ನಾವು ಸೂಕ್ಷ್ಮವಾಗಿ ನೋಡಿದಾಗ ಬಲೂನಿನ ಸಂಪೂರ್ಣ ಆಕಾರ ಬದಲಾಗಿರುವುದು ಕಂಡು ಬರುತ್ತದೆ. ಇದು ಸ್ವಲ್ಪ ಮಟ್ಟಿಗೆ ಎಳೆದಂತಿರುತ್ತದೆ. ಹೀಗೆ ಅವರು ಸಂಘಟನೆಯ ಯಾವುದೇ ಭಾಗದಲ್ಲಿ ಬದಲಾವಣೆಯಾದರೂ ಸಂಪೂರ್ಣ ಸಂಘಟನೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ತೀರ್ಮಾನಿಸಿದರು.

ಉದ್ದೇಶಪೂರ್ವಕವಾಗಿ ಯೋಜಿಸಿದಾಗ ಬದಲಾವಣೆಯು ಪರಿಣಾಮಕಾರಿ ಮತ್ತು ತಂತ್ರೋದ್ದೇಶದ್ದು ಆಗಿರುತ್ತದೆ. ಇದು ಧನಾತ್ಮಕ, ಶೀಘ್ರ, ದೀರ್ಘಕಾಲ ಬಾಳುವ, ಆರೋಗ್ಯಕರ ಮತ್ತು ಉತ್ಪಾದಕ ಪರಿಣಾಮಗಳನ್ನು ಶೈಕ್ಷಣಿಕ ಸಂಸ್ಥೆಗಳ ಮೇಲೆ ಉಂಟು ಮಾಡುತ್ತದೆ. ಹಾಗಾಗಿ ಪರಿಣಾಮಕಾರಿ ಬದಲಾವಣೆಗಾಗಿ ಆಯೋಜನೆ ಮಾಡುವ ಅಗತ್ಯತೆ ಇದೆ. ಥೋಮ್ಸ್ ಮತ್ತು ಬೆನಿಸ್ (1972)ರು ಯೋಜಿಸಿದ ಬದಲಾವಣೆಯನ್ನು ಈ ಕೆಳಗಿನಂತೆ ನಿರೂಪಿಸಿದ್ದಾರೆ. "ಯೋಜಿಸಿದ ಬದಲಾವಣೆಯು, ರಚನೆಯ ನವೀಕರಣ, ಒಂದು ಹೊಸ ನೀತಿ ಅಥವಾ ಗುರಿ, ತತ್ವಶಾಸ್ತ್ರವನ್ನು ಆಚರಿಸುವಲ್ಲಿನ ಒಂದು ಬದಲಾವಣೆಯ ವಾತಾವರಣ ಅಥವಾ ಶೈಲಿಯ ಉದ್ದೇಶಪೂರ್ವಕ ವಿನ್ಯಾಸವನ್ನು ಅನುಷ್ಠಾನಗೊಳಿಸುವುದಾಗಿದೆ." ನ್ಯೂಟನ್‌ನ ಚಲನೆಯ ಮೊದಲ ನಿಯಮವು ಚಲನೆಯಲ್ಲಿರುವ ಕಾರ್ಯಗಳು ಚಲನೆಯಲ್ಲೇ ಇರುವ ಒಲವು ತೋರುತ್ತವೆ. ವಿಶ್ರಾಂತ ಸ್ಥಿತಿಯಲ್ಲಿರುವ ಕಾರ್ಯಗಳು ವಿಶ್ರಾಂತ ಸ್ಥಿತಿಯಲ್ಲೇ ಉಳಿಯುವ ಒಲವು ತೋರುತ್ತವೆ. ಸಂಘಟನೆಗೆ ಈ ನಿಯಮವನ್ನು ಅನ್ವಯಿಸಿದಾಗ, ಬದಲಾವಣೆ ಪ್ರವೃತ್ತಿ ಇರುವ ಮುಕ್ತ ಮುನ್ನೋಡುವ ಸಂಸ್ಥೆಗಳು ಪ್ರವರ್ಧಮಾನಕ್ಕೆ ಬರುತ್ತವೆ. ಇರುವಂತೆಯೆ ಇರುವ ಪ್ರವೃತ್ತಿಯ ಸಂಘಟನೆಗಳು ಹಾಗೇ ಇರುತ್ತವೆ ಎಂದು ನಾವು ಹೇಳಬಹುದು. ಆದುದರಿಂದ. ಬದಲಾವಣೆಯನ್ನು ಒಂದು ಯೋಜಿಸಿದ ಮತ್ತು ಹಂತ ಹಂತ ರೀತಿಯಲ್ಲಿ ಉಂಟುಮಾಡುವುದು ಸಂಘಟನೆಯನ್ನು ಸಜೀವವಾಗಿರಿಸಲು, ಮುನ್ನೋಡಲು, ಸೂಕ್ತ ಮತ್ತು ನ್ಯಾಯ ಸಮ್ಮತವಾಗಿ ಇಡಲು ಅವಶ್ಯವಾಗಿರುತ್ತದೆ. ಪರಿಣಾಮಕಾರಿ ಬದಲಾವಣೆಯನ್ನು ಯೋಜಿಸುವುದು ಉನ್ನತ ರಚನಾತ್ಮಕ ಮತ್ತು ತಾಂತ್ರಿಕ ಚಟುವಟಿಕೆಯಾಗಿದೆ. ಪರಿಣಾಮಕಾರಿ ಬದಲಾವಣೆಗಾಗಿ ಯೋಜಿಸುವುದು ಸಂಸ್ಥೆಯ ಎಲ್ಲಾ ಉದ್ದೇಶಗಳನ್ನು ಪೂರೈಸಲು ಅಗತ್ಯವಾಗಿದೆ. ಸಂಸ್ಥೆಯ ಕಾರ್ಯಕ್ಕೆ

Digitised by Bharatavani, CIIL

ಪರಿಣಾಮ ಬೀರುವ ಆಂತರಿಕ ಮತ್ತು ಬಾಹ್ಯ ಬಲಗಳಲ್ಲಿನ ಬದಲಾವಣೆಗಳಾಗಿರಬಹುದಾದುದರಿಂದ, ಸಂಸ್ಥೆಯು ಅದರ ಉದ್ದೇಶಗಳನ್ನು ಪೂರೈಸಲು ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

ಬದಲಾವಣೆಯನ್ನು ಒಂದು ಕ್ರಿಯೆಯಾಗಿ ಆರಂಭಿಸಿದಾಗ, ಆಡಳಿತ ವರ್ಗ, ವ್ಯವಸ್ಥಾಪಕರು ಅಲ್ಲದೆ ನೌಕರರಿಂದ ಪ್ರತಿಕ್ರಿಯೆ ಇರುತ್ತದೆಂದು ನಾವು ತಿಳಿದಿದ್ದೇವೆ. ಸಿಬ್ಬಂದಿ ವರ್ಗದ ಮನೋಭಾವನೆ, ಅವರ ಸಿದ್ಧತೆ, ತಿಳುವಳಿಕೆ ಹೊಂದಿಕೊಳ್ಳುವ ಸಾಮರ್ಥ್ಯ ಮುಂತಾದವು ಬದಲಾವಣೆಗೆ ಮಾನವ ಪ್ರತಿಕ್ರಿಯೆಯನ್ನು ತೀರ್ಮಾನಿಸುವಲ್ಲಿ ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತವೆ. ಬದಲಾವಣೆಯ ಪ್ರಮಾಣ ಬದಲಾವಣೆಯ ಪ್ರಭಾವ ಕೂಡ ಬದಲಾವಣೆಗೆ ಮಾನವ ಪ್ರತಿಕ್ರಿಯೆಯನ್ನು ಪ್ರಭಾವಿಸುತ್ತವೆ. ಬದಲಾವಣೆಯನ್ನು ಹೇಗೆ ಗ್ರಹಿಸಲಾಗುವುದು, ವಿಮರ್ಶಿಸಲಾಗುವುದು, ವಿಧಿಸಲಾಗುವುದು, ಪ್ರಕಟಿಸಲಾಗುವುದು ಎಂಬ ಅಂಶಗಳೂ ಪ್ರತಿಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ. ಬದಲಾವಣೆಗೆ ಮಾನವ ಪ್ರತಿಕ್ರಿಯೆ ಮೂರು ರೀತಿಗಳಲ್ಲಿ ಆಗಬಹುದು. 1. ಬದಲಾವಣೆಗೆ ಉಪೇಕ್ಷೆ 2. ಬದಲಾವಣೆಯ ಒಪ್ಪಿಗೆ ಮತ್ತು 3. ಬದಲಾವಣೆಯನ್ನು ವಿರೋಧಿಸುವುದು / ತಿರಸ್ಕರಿಸುವುದು.

ಬದಲಾವಣೆಯನ್ನು ವಿರೋಧಿಸುವುದಕ್ಕೆ ಹಲವಾರು ಕಾರಣಗಳಿರುತ್ತವೆ. ಅವುಗಳನ್ನು ಈ ಕೆಳಗಿನ ನಕ್ಷೆಯ ಮುಖಾಂತರ ತಿಳಿಸಲಾಗಿದೆ.




**ಬದಲಾವಣೆಗಳ ನಿರ್ವಹಣೆ :–** ಸಂಘಟನೆಗಳಲ್ಲಿ ಹೊಸ ರೀತಿಯ ಬದಲಾವಣೆಗಳನ್ನು ವಿರೋಧ ಬರದ ರೀತಿಯಲ್ಲಿ, ಅಡಚಣೆಗಳು ಉಂಟಾಗದ ರೀತಿಯಲ್ಲಿ ನವೀನ ಬದಲಾವಣೆಗಳನ್ನು ತರುವುದು ಸುಲಭದ ಕಾರ್ಯವೇನಲ್ಲ. ಬದಲಾವಣೆಗಳು ಸಂಘಟನೆಯ ಸಂರಚನೆಗೆ, ಉತ್ಪಾದನಾ ಕ್ರಮಕ್ಕೆ, ಕಾರ್ಯಬಲದ ಸಂಖ್ಯೆಗೆ ಸಂಘಟನೆಯಲ್ಲಿನ ಮೂಲಭೂತ ಸೌಕರ್ಯಗಳಿಗೆ ಉತ್ಪಾದನೆಯ ಕಾರ್ಯ ಅವಧಿಗೆ, ಕೆಲಸಗಾರರ ವೇತನ ಮುಂತಾದ ಸೇವಾ ಸವಲತ್ತುಗಳಿಗೆ ಸಂಬಂಧಿಸಿರಬಹುದು. ಯಾವುದೇ ಬದಲಾವಣೆಯನ್ನು ವಿರೋಧವಿಲ್ಲದೆ ಅಥವಾ ಕಡೇ ಪಕ್ಷದಲ್ಲಿ ಕನಿಷ್ಠ ವಿರೋಧದೊಂದಿಗೆ ಜಾರಿಗೆ ತಂದು ಆ ಬದಲಾವಣೆಯನ್ನು ಸಕಾರಾತ್ಮಕ ರೀತಿಯಲ್ಲಿ ದೀರ್ಘಕಾಲ ಉಳಿಸಿಕೊಂಡು ಅದರ ಮೇಲ್ವಿಚಾರಣೆ (ನಿರ್ವಹಣೆ) ಮಾಡಲು ನಿರ್ವಹಣಕಾರ (Manager) ನಲ್ಲಿ ಅದಕ್ಕೆ ಅಗತ್ಯವಾದ ಸಾಮರ್ಥ್ಯಗಳು ಕೌಶಲಗಳು ಮನೋವೈಜ್ಞಾನಿಕ ಒಳನೋಟ, ಜನಗಳನ್ನು ಪ್ರಭಾವಗೊಳಿಸುವ ಸಾಮಾಜಿಕ ಕೌಶಲ ಮುಂತಾದ ಲಕ್ಷಣಗಳು ಇರಬೇಕಾಗುತ್ತದೆ. ಇಂಥ ಸಮರ್ಥ ನಿರ್ವಾಹಕ ಮಾತ್ರ ಬದಲಾವಣೆಗಳನ್ನು ತನ್ನ ಸಂಘಟನೆಯಲ್ಲಿ ವಿರೋಧವಿಲ್ಲದೆ ಸುಲಲಿತ ರೀತಿಯಲ್ಲಿ ಜಾರಿಗೆ ತರಲು ಸಾಧ್ಯವಾಗುತ್ತದೆ.

ನಿರ್ವಹಣಾ ಶಾಸ್ತ್ರದ ಕ್ಷೇತ್ರದಲ್ಲಿ ಸಂಶೋಧಕರು ಬದಲಾವಣೆಗಳ ನಿರ್ವಹಣೆ ಬಗ್ಗೆ ಅನೇಕ ಸಂಶೋಧನೆಗಳನ್ನು ಕೈಗೊಂಡು ಬದಲಾವಣೆಗಳನ್ನು ಸುಗಮ ರೀತಿಯಲ್ಲಿ ತರಲು ಸಹಾಯಕವಾಗುವ ಕ್ರಮಗಳನ್ನು ತತ್ವಗಳನ್ನು ಅದಕ್ಕೆ ಪ್ರಭಾವ ಬೀರುವ ಅಥವಾ ಅಡ್ಡಿ ಪಡಿಸುವ ಅಂಶಗಳನ್ನು ಗುರ್ತಿಸಿದ್ದಾರೆ. ಗ್ರೀನಿಯರ್ ಎಂಬುವನು ಸಂಘಟನೆಗಳಲ್ಲಿ (ಶೈಕ್ಷಣಿಕ ಸಂಸ್ಥೆಗಳೂ ಸೇರಿದಂತೆ) ಬದಲಾವಣೆಗಳನ್ನು ತರಲು ಏಳು ಉಪಕ್ರಮಗಳನ್ನು ಚರ್ಚಿಸಿದ್ದಾನೆ.

1. **ಆದೇಶ ಉಪಕ್ರಮದಲ್ಲಿ** ಸಂಘಟನೆಯ ಮುಖ್ಯಸ್ಥ ತನ್ನ ಅಧಿಕಾರವನ್ನು ಚಲಾಯಿಸಿ ಬದಲಾವಣೆಯನ್ನು ಜಾರಿಗೆ ತರುತ್ತಾನೆ.

2. **ಸ್ಥಾನ ಪಲ್ಲಟ ಉಪಕ್ರಮದಲ್ಲಿ** ಸಂಘಟನೆಯ ಸದ್ಯದಲ್ಲಿರುವ ನಿರ್ವಾಹಕ ಬದಲಾವಣೆಗೆ ವಿರೋಧಿ ಎನ್ನಿಸಿದಲ್ಲಿ ಅವನನ್ನು ಆ ಸ್ಥಾನದಿಂದ ಬದಲಾಯಿಸಿ ಬದಲಾವಣೆ ಬಗ್ಗೆ ಧನಾತ್ಮಕ ಮನೋಭಾವವಿರುವ ವ್ಯಕ್ತಿಯನ್ನು ನೇಮಿಸಲಾಗುತ್ತದೆ.

3. **ಸಂರಚನಾತ್ಮಕ ಉಪಕ್ರಮದಲ್ಲಿ** ಉದ್ದೇಶಿತ ಬದಲಾವಣೆಯ ಅಗತ್ಯಗಳಿಗೆ ಅನುಗುಣವಾಗಿ ಸಂಘಟನೆಯ ಭೌತಿಕ ಸಂರಚನೆಯಲ್ಲಿ ಕಾರ್ಯಬಲದಲ್ಲಿ ಸಂಘಟನೆಯ ವ್ಯವಸ್ಥಾಪಕರ, ಕೆಲಸಗಾರರ ಸಾಮಾಜಿಕ ಸಂಬಂಧಗಳನ್ನು ಬದಲಾವಣೆಗಳನ್ನು ಮೊದಲೇ ಮಾಡಿಕೊಳ್ಳಲಾಗುತ್ತದೆ.

4. **ಸಾಮೂಹಿಕ ತೀರ್ಮಾನದ ಉಪಕ್ರಮದಲ್ಲಿ** ಸಂಘಟನೆಯ ಮುಖ್ಯಸ್ಥರು ಮೇಲ್ವಿಚಾರಕರು ಹಾಗೂ ಕೆಲಸಗಾರರು ಒಟ್ಟಿಗೆ ಸಭೆ ಸೇರಿ ಪ್ರಸ್ತಾವಿತ ನೂತನ ಬದಲಾವಣೆಯ ಬಗ್ಗೆ ಪರಸ್ಪರ ಚರ್ಚಿಸಿ ಬದಲಾವಣೆಗೆ ಒಂದು ಯೋಜನೆಯನ್ನು ರೂಪಿಸಲು ತೀರ್ಮಾನ ಕೈಗೊಳ್ಳುತ್ತಾರೆ.

5. **ದತ್ತಾಂಶ ಚರ್ಚೆ ಉಪಕ್ರಮದಲ್ಲಿ** ಸಂಘಟನೆ ಸಂಬಂಧಿಸಿದವರೆಲ್ಲರೂ ಸಂಘಟನೆಯ ಪ್ರಸ್ತುತ ಸ್ಥಿತಿಗತಿಗಳಲ್ಲಿ ಉತ್ಪಾದನಾ ಸಾಮರ್ಥ್ಯದಲ್ಲಿ ಇರಬಹುದಾದ ಕುಂದು ಕೊರತೆಗಳನ್ನು ದತ್ತಾಂಶಗಳ ವಿಶ್ಲೇಷಣೆಯಿಂದ ಗುರ್ತಿಸಿ, ಪ್ರಸ್ತಾವಿತ ನೂತನ ಬದಲಾವಣೆ ಹೇಗೆ ಆ ಕುಂದು ಕೊರತೆಗಳನ್ನು ನಿವಾರಿಸುತ್ತದೆ ಎಂಬುದನ್ನು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

6. **ಸಮೂಹ ಸಮಸ್ಯಾ ಪರಿಹಾರ ಉಪಕ್ರಮದಲ್ಲಿ** ಸಂಘಟನೆಯ ಉತ್ಪಾದನಾ ಸಾಮರ್ಥ್ಯದ ಗುಣಮಟ್ಟ, ಸಂಘಟನೆಯ ಸಂರಚನೆ, ಕಾರ್ಯವೈಖರಿಯಲ್ಲಿರ ಬಹುದಾದ ಸಮಸ್ಯೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಈ ಸಮಸ್ಯೆಗಳ ಪರಿಹಾರಕ್ಕೆ ಯಾವರೀತಿ ಬದಲಾವಣೆಗಳು ಸೂಕ್ತವೆನಿಸುತ್ತವೆ ಎನ್ನುವುದನ್ನು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

7. **ಟಿ–ಸಮೂಹ ಉಪಕ್ರಮ** ಸಂಘಟನೆಯ ಕೆಲಸಗಾರರ ನಡುವಣ ಸಾಮಾಜಿಕ ಸಂಬಂಧಗಳಿಗೆ ಅವರ ಪಾರಸ್ಪರಿಕ ಅನ್ಯೋನ್ಯತೆಗೆ, ಸಂವಹನಕ್ಕೆ ಸಂಬಂಧಿಸಿದ ಈ ಕ್ರಮದಲ್ಲಿ ಕೆಲಸಗಾರರಲ್ಲಿ ನಂಬಿಕೆಯ ಗುಣಮಟ್ಟ ಶಕ್ತಿ ಸಂತುಲನೆ ಬಗ್ಗೆ ಅವರ ಮನೋಭಾವ, ಆತ್ಮನಿರ್ಭರತೆ, ಸ್ವಯಂ ಸಾಮರ್ಥ್ಯದ ಬಗ್ಗೆ ವಿಶ್ವಾಸ, ಕಾರ್ಯದ ಬಗ್ಗೆ, ಸಂಘಟನೆ ಬಗ್ಗೆ ಧನಾತ್ಮಕ ಮನೋಭಾವ, ಸಹೋದ್ಯೋಗಿಗಳೊಂದಿಗಿನ

Digitised by Bharatavani, CIIL

ಸೌಹಾರ್ದ ಪೂರ್ಣ ಸ್ನೇಹಮಯ ವರ್ತನೆ ಮುಂತಾದ ಗುಣಗಳನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತದೆ.

ಸಂಘಟನೆಗಳಲ್ಲಿ ಬದಲಾವಣೆಗಳನ್ನು ಉಂಟುಮಾಡುವಲ್ಲಿ ಕೆಲವು ಮೂಲಭೂತ ಅವಶ್ಯಕ ಅಂಶಗಳು ಪ್ರಭಾವ ಬೀರುತ್ತವೆ ಎಂದು ಕಂಡು ಬಂದಿದೆ. ಹೊಸ ವಿಚಾರಗಳ ಬಗ್ಗೆ ಮುಕ್ತ ಮನೋಭಾವ, ಹೊಸ ತಂತ್ರಗಳನ್ನು ಪರೀಕ್ಷಿಸುವ ಆವಿಷ್ಕಾರಿ ಆಚರಣೆಗಳು ವಿಕಾಸದ ಗುರಿಯುಳ್ಳ ಸಂಶೋಧನಾ (R&D) ಕಾರ್ಯಗಳು ಸಂಸ್ಥೆಯ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುವ ಇಚ್ಛೆ ಬದಲಾವಣೆ ಬಗ್ಗೆ ಧನಾತ್ಮಕ ಮನೋಭಾವ–ಇವು ಇಂಥ ಕೆಲವು ಅಂಶಗಳಾಗಿವೆ.

ಸಂಘಟನೆಗಳಲ್ಲಿ ಬದಲಾವಣೆಗಳನ್ನು ಜಾರಿಗೆ ತರಲು ಜೆನ್‌ಕಿನ್ಸ್ ನಾಲ್ಕು ಹಂತಗಳನ್ನು ಸೂಚಿಸಿದ್ದಾನೆ (i) ಸಂಘಟನೆಯ (ಸಂಸ್ಥೆಯ) ಇಂದಿನ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದು. (ii) ಆವಶ್ಯಕವೆನಿಸುವ ಬದಲಾವಣೆಗಳನ್ನು ಸ್ವರೂಪವನ್ನು ನಿರ್ಧರಿಸುವುದು. (iii) ಹೀಗೆ ತೀರ್ಮಾನಿಸಿದ ಬದಲಾವಣೆಗಳನ್ನು ಜಾರಿಗೆ ತರುವುದು (iv) ಉಂಟುಮಾಡಿದ ಬದಲಾವಣೆಗಳನ್ನು ದೃಢಗೊಳಿಸಿ ಅವುಗಳನ್ನು ಮುಂದುವರಿಸುವುದು.

ಸಂಘಟನೆಯಲ್ಲಿ ಜಾರಿಗೆ ತಂದ ಬದಲಾವಣೆಗಳನ್ನು ಉಳಿಸಿಕೊಂಡು ಹೋಗಬೇಕಾದರೆ ಅವು ಕೆಲಸಗಾರರ ಮನಸ್ಸಿನಲ್ಲಿ ಆಳವಾಗಿ ಬೇರೂರುವಂತೆ ಮಾಡಬೇಕೆಂದು ಮತ್ತು ಅವುಗಳಿಗೆ ಕೆಲಸಗಾರರ ಸಂಘಟನೆಯ ಬಾಹ್ಯ ಪರಿಸ್ಥಿತಿಯಲ್ಲಿ ಶಕ್ತಿಗಳು ಬದಲಾವಣೆಗಳು ಬೆಂಬಲಿಸುವಂತೆ ನೋಡಿಕೊಳ್ಳಬೇಕೆಂದು ಬ್ರಾಡ್‌ಫೋರ್ಡ್ ಅಭಿಪ್ರಾಯಪಡುತ್ತಾನೆ.

ಸಂಸ್ಥೆಗಳಲ್ಲಿ ಬದಲಾವಣೆಗಳನ್ನು ಸುಲಲಿತ ರೀತಿಯಲ್ಲಿ ಮಾಡಲು ಸಹಾಯಕವಾಗುವ ಕೆಲವು ಮಾರ್ಗದರ್ಶಿ ತತ್ವಗಳು ಹೀಗಿವೆ–

1. ಸಂಘಟನೆಯ (ಸಂಸ್ಥೆಯ) ಉದ್ದೇಶಗಳು, ನೀತಿಗಳು ಸ್ಪಷ್ಟವಾಗಿ, ವಾಸ್ತವಿಕವಾಗಿದ್ದು, ಕೆಲಸಗಾರರು ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಬದಲಾವಣೆಗೆ ಯೋಜನೆಯನ್ನು ಆರಂಭಿಸುವುದು ಹೆಚ್ಚು ಪ್ರಭಾವಪೂರ್ಣವೆನಿಸುತ್ತದೆ.

2. ನೂತನ ಬದಲಾವಣೆ ಯೋಜನೆಯನ್ನು ಎಚ್ಚರಿಕೆಯಿಂದ ರೂಪಿಸಿದ್ದಲ್ಲಿ, ಅದರ ಗುರಿಗಳು ಸ್ಪಷ್ಟವಾಗಿದ್ದಲ್ಲಿ ಮತ್ತು ಆ ಯೋಜನೆಯು ಸಂಸ್ಥೆಯ ಗುರಿಗಳನ್ನು ಸಾಧಿಸುವಲ್ಲಿ ಇರುವ ಸಮಸ್ಯೆಯನ್ನು ಪರಿಹರಿಸುವ ಕಾರ್ಯವಿಧಾನವನ್ನು ಒಳಗೊಂಡಿದ್ದರೆ ಬದಲಾವಣೆಯ ಪ್ರಯತ್ನ ಹೆಚ್ಚು ಪರಿಣಮಾಕಾರಿಯಾಗುತ್ತದೆ.

3. ಬದಲಾವಣೆಗಳಿಂದ ಪ್ರಭಾವಿತಗೊಳ್ಳುವವರನ್ನು ಅಂದರೆ ಕೆಲಸಗಾರರನ್ನು ಬದಲಾವಣೆಯ ಯೋಜನೆ ಮತ್ತು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸೇರಿಸಿಕೊಂಡಿದ್ದರೆ ಅಂಥ ಯೋಜನೆ ಫಲಕಾರಿಯಾಗುತ್ತದೆ.

4. ಬದಲಾವಣೆಯ ಪ್ರಯತ್ನಗಳಿಗೆ ಸೂಕ್ತವಾದ, ವ್ಯವಸ್ಥಿತವಾಗಿ ಮತ್ತು ವ್ಯಾಪಕವಾದ ತಂತ್ರಗಳಿಂದ ಬೆಂಬಲಿತವಾಗಿದ್ದರೆ ಅಂಥ ಪ್ರಯತ್ನಗಳು ಪ್ರಭಾವಯುತವಾಗುತ್ತವೆ.

5. ಬದಲಾವಣೆಯ ಗುರಿಗೂ ಮತ್ತು ಅಂಥ ಬದಲಾವಣೆ ತರುವ ತಂತ್ರಕ್ಕೂ ನಡುವೆ ಸಾಮರಸ್ಯವಿದ್ದಲ್ಲಿ ಬದಲಾವಣೆ ಪ್ರಯತ್ನ ಫಲಕಾರಿಯಾಗುತ್ತದೆ.

6. ಬದಲಾವಣೆಯಿಂದ ಪ್ರಭಾವಿತರಾಗುವ ಗುಂಪುಗಳು (ಕೆಲಸಗಾರರು) ತಮಗೂ, ಬರಲಿರುವ ಬದಲಾವಣೆಗೂ ನಡುವೆ ಸ್ಪರ್ಧೆ ಇಲ್ಲವೆಂಬ ನಿಲುವು ತಳೆದಿದ್ದರೆ ಬದಲಾವಣೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

7. ಯಾವುದೇ ಬದಲಾವಣೆಯ ಪ್ರಯತ್ನ ಅದಕ್ಕೆ ಬೇಕಾಗುವ ಸಮಯ, ಹಣ, ಕೌಶಲ/ಸಾಮರ್ಥ್ಯವಿರುವ ಕೆಲಸಗಾರರು, ಬೇಕಾಗುವ ಶಕ್ತಿ ಮುಂತಾದವುಗಳನ್ನು ಸರಿಯಾದ ರೀತಿಯಲ್ಲಿ ಪರಿಗಣನೆಗೆ ತೆಗೆದುಕೊಂಡಾಗ ಬದಲಾವಣೆ ಪ್ರಯತ್ನ ಹೆಚ್ಚು ಪ್ರಭಾವ ಶಾಲಿಯಾಗುತ್ತದೆ.

8. ತಾಂತ್ರಿಕ ಸ್ವರೂಪದ ಬದಲಾವಣೆಗಳಿಗೆ ಬೇಕಾದ ನೇರ ಅನುಭವ ಮತ್ತು ತಾಂತ್ರಿಕ ನೆರವಿನ ಬೆಂಬಲವಿದ್ದಲ್ಲಿ ಬದಲಾವಣೆ ಪ್ರಯತ್ನ ಫಲಕಾರಿಯಾಗುತ್ತದೆ.

9. ಉದ್ದೇಶಿತ ಬದಲಾವಣೆ ಸದ್ಯದಲ್ಲಿರುವ ಆಚರಣೆಗಳಿಗೆ ತೀರಾ ವಿರುದ್ಧವಾಗದೆ ಅವುಗಳನ್ನು ಇನ್ನೂ ಉತ್ತಮಪಡಿಸುವ ಪ್ರಯತ್ನವಾಗಿದೆ ಎನ್ನುವ ಭಾವನೆ ಕೆಲಸಗಾರರಲ್ಲಿ ಮೂಡಿದರೆ ಬದಲಾವಣೆ ಸುಗಮವಾಗುತ್ತದೆ.

10. ಉದ್ದೇಶಿತ ಬದಲಾವಣೆಯ ಸ್ವರೂಪ ತಮ್ಮ ವೈಯಕ್ತಿಕ ಸಾಮಾಜಿಕ ಸಂಬಂಧಗಳನ್ನು ಸಮಾಜದಲ್ಲಿ, ವೃತ್ತಿ ಕ್ಷೇತ್ರದಲ್ಲಿ, ಉತ್ಪಾದನಾ ಕ್ಷೇತ್ರದಲ್ಲಿ ತಮ್ಮ ಸಂಘಟನೆಯ ಸ್ಥಾನಮಾನವನ್ನು ಇನ್ನೂ ಹೆಚ್ಚಿಸುತ್ತದೆ ಎಂಬ ಭಾವನೆ ಕೆಲಸಗಾರರಲ್ಲಿ ಮೂಡಿದರೆ ಬದಲಾವಣೆಯ ಪರಿಣಾಮಕಾರಿತ್ವ ಹೆಚ್ಚುತ್ತದೆ.

ಸಂಘಟನೆಗಳಲ್ಲಿ (ಸಂಸ್ಥೆಗಳಲ್ಲಿ) ನೂತನ ಬದಲಾವಣೆಗಳನ್ನು ತರುವುದು ಒಂದು ವ್ಯವಸ್ಥಿತವಾದ ಕಾರ್ಯಯೋಜನೆ. ಈ ಯೋಜನೆ ನಿರ್ದಿಷ್ಟ ಹಂತಗಳಿಂದ ಕೂಡಿದ್ದು ಅನೇಕ ಅಂಶಗಳು ಈ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತದೆ. ಬದಲಾವಣೆ ಯೋಜನೆಯ ಮುಖ್ಯ ಘಟ್ಟಗಳನ್ನು ಹೀಗೆ ಚಿತ್ರಿಸಬಹುದು.




2. ಸಂಘಟನೆ (ಸಂಸ್ಥೆ)ಯಲ್ಲಿ ಬದಲಾವಣೆ ಮಾಡಬೇಕಾದ ಕ್ಷೇತ್ರಗಳನ್ನು ಬದಲಾವಣೆಯ ಸ್ವರೂಪವನ್ನು ಗುರ್ತಿಸುವುದು ಎರಡನೇ ಹಂತ. ಬದಲಾವಣೆಯ ಕ್ಷೇತ್ರ ತಾಂತ್ರಿಕವಾಗಿರಬಹುದು. ಉತ್ಪಾದನೆ ಅಥವಾ ಕಾರ್ಯ ವಿನ್ಯಾಸವಾಗಿರಬಹುದು, ಕೆಲಸಗಾರರ ಸಾಮಾಜಿಕ ಸಂಬಂಧಗಳಾಗಿರಬಹುದು, ಕೆಲಸಗಾರರ ತರಬೇತಿಯಾಗಿರಬಹುದು, ಯಾವ ರೀತಿಯ ಬದಲಾವಣೆಗಳನ್ನು ಮಾಡಬೇಕಾಗಿದೆ ಎಂಬುದನ್ನು ಕೂಲಂಕಷವಾಗಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು.

Digitised by Bharatavani, CIIL

3. ಬದಲಾವಣೆ ತರಲು ಯೋಜನೆಯನ್ನು ರೂಪಿಸುವುದು ಮುಂದಿನ ಹಂತ. ಈ ಹಂತದಲ್ಲಿ ಉದ್ದೇಶಿತ ಬದಲಾವಣೆಗೆ ಸಂಸ್ಥೆಯ ನಿರ್ವಹಣ ಸಿಬ್ಬಂದಿಯನ್ನು, ಕೆಲಸಗಾರರನ್ನು ಮಾನಸಿಕ ಮಟ್ಟದಲ್ಲಿ ಸಿದ್ಧಗೊಳಿಸುವುದು ಈ ಹಂತದ ಮುಖ್ಯ ಉದ್ದೇಶ ಅದಕ್ಕಾಗಿ ವಿವಿಧ ತಂತ್ರಗಳನ್ನು ಅನುಸರಿಸಬಹುದು. ಕೆಲಸಗಾರರಿಗೆ ಉದ್ದೇಶಿತ ಬದಲಾವಣೆ ಬಗ್ಗೆ ಶಿಕ್ಷಣ ನೀಡಿ ಅರಿವು ಮೂಡಿಸುವುದು, ಕೆಲಸಗಾರರನ್ನು ಬದಲಾವಣೆ ಬಗ್ಗೆ ಚರ್ಚಿಸಲು ಭಾಗವಹಿಸುವಂತೆ ಮಾಡುವುದು, ಬದಲಾವಣೆಯಲ್ಲಿ ಸ್ವಲ್ಪಮಟ್ಟಿಗೆ ಹಿಂದೆ ಇದ್ದ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು, ಅವಶ್ಯಕತೆ ಇದ್ದಷ್ಟು ಕೆಲಸಗಾರರ ಮೇಲೆ ಒತ್ತಾಯ ತರುವುದು, ಮೇಲ್ಮಟ್ಟದ ನಿರ್ವಹಣೆ ಕರ್ತರನ್ನು (ಅಧಿಕಾರಿಗಳನ್ನು) ಬದಲಾವಣೆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಮುಂತಾದ ತಂತ್ರಗಳನ್ನು ಈ ಹಂತದಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ಈ ಹಂತದಲ್ಲಿಯೇ ಬದಲಾವಣೆಗೆ ಅಡ್ಡಿಯಾಗಬಹುದಾದ ಶಕ್ತಿಗಳನ್ನು ಗುರ್ತಿಸಿ ಅವುಗಳನ್ನು ನಿಯಂತ್ರಿಸುವ / ನಿರ್ವಹಿಸುವ ಬಗ್ಗೆ ಕ್ರಮಗಳನ್ನು ಯೋಚಿಸಬೇಕಾಗುತ್ತದೆ.

4. ಮುಂದಿನ ಹಂತದಲ್ಲಿ ಉದ್ದೇಶಿತ ಬದಲಾವಣೆಯನ್ನು ಜಾರಿಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಬದಲಾವಣೆಯನ್ನು ವ್ಯಕ್ತಿಯ (ಕೆಲಸಗಾರನ) ಮಟ್ಟದಲ್ಲಿ, ಗುಂಪಿನ ಮಟ್ಟದಲ್ಲಿ ಜಾರಿಗೆ ತರಬೇಕಾಗುತ್ತದೆ. ಕೆಲವು ಬದಲಾವಣೆಗಳು ಒಬ್ಬ ಕೆಲಸಗಾರನಿಗೆ ವ್ಯಕ್ತಿಗತ ಮಟ್ಟದಲ್ಲಿ ಸಂಬಂಧಿಸಿರುತ್ತವೆ. ಇನ್ನು ಕೆಲವು ಬದಲಾವಣೆಗಳು ಅನೇಕ ಕೆಲಸಗಾರರಿಗೆ ಗುಂಪಿನ ಮಟ್ಟದಲ್ಲಿ ಸಂಬಂಧಿಸಿರುತ್ತವೆ. ಉತ್ಪಾದನೆಯ ಕ್ರಮ ವಿನ್ಯಾಸದಲ್ಲಿಯೇ ಬದಲಾವಣೆ ಇದ್ದಲ್ಲಿ ಕೆಲಸ ನಡೆಯುವಾಗಲೇ ಕೆಲಸಗಾರರಿಗೆ ಸೂಕ್ತ ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಬೇಕಾಗುತ್ತದೆ. ಬದಲಾವಣೆ ಜಾರಿಗೆ ಬಂದ ಸ್ವಲ್ಪ ಸಮಯದ ನಂತರ ಅದರಲ್ಲಿರಬಹುದಾದ ತೊಂದರೆಗಳ ಬಗ್ಗೆ ಕೆಲಸಗಾರರೊಂದಿಗೆ ಚರ್ಚಿಸಿ ಅವುಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು. ಹೊಸ ಬದಲಾವಣೆ ಬಗ್ಗೆ ಕೆಲಸಗಾರರಲ್ಲಿ ಆಸಕ್ತಿಯನ್ನು ಅದರ ಬಗ್ಗೆ ಬದ್ಧತೆಯನ್ನು ಉಂಟುಮಾಡಿ ಅವುಗಳನ್ನು ಉಳಿಸಿಕೊಂಡು ಹೋಗಲು ಪ್ರೋತ್ಸಾಹಕಗಳನ್ನು ನೀಡುವ ವ್ಯವಸ್ಥೆ ಮಾಡಬೇಕು.

5. ಬದಲಾವಣೆಯ ಮೌಲ್ಯಮಾಪನ ಬದಲಾವಣೆ ಯೋಜನೆಯ ಕೊನೆಯ ಹಂತ ಈ ಹಂತದಲ್ಲಿ ಜಾರಿಗೊಳಿಸಿದ ಬದಲಾವಣೆಯನ್ನು ಎಲ್ಲಾ ಮುಖಗಳಿಂದಲೂ ಮೌಲ್ಯಮಾಪನ ಮಾಡಿ. ಅದರ ಫಲಿತಾಂಶಗಳನ್ನು ಕೆಲಸಗಾರರಿಗೆ ತಿಳಿಸಿ ಚರ್ಚಿಸಬೇಕು. ನಂತರ ಬದಲಾವಣೆಯ ಫಲಿತ ಚೆನ್ನಾಗಿದ್ದಲ್ಲಿ ಅದನ್ನು ಮುಂದುವರಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು.

ಮೇಲೆ ವಿವರಿಸಿದ ಬದಲಾವಣೆಯ ಯೋಜನೆಯ ಪ್ರಕ್ರಿಯೆ ಶಿಕ್ಷಣ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಉತ್ಪಾದನಾ/ಸೇವಾ ಸಂಘಟನೆಗಳು ಉತ್ಪಾದನೆಯ/ಸೇವೆಯ ಕ್ರಮ ಮತ್ತು ಗುಣಮಟ್ಟಕ್ಕೆ ಮಹತ್ವ ನೀಡಿದರೆ, ಶೈಕ್ಷಣಿಕ ಸಂಸ್ಥೆಗಳು ಬದಲಾವಣೆ ಉಂಟುಮಾಡುವಾಗ ಪಠ್ಯಕ್ರಮ, ಬೋಧನಾ-ಕಲಿಕೆ ಪ್ರಕ್ರಿಯೆ, ವಿದ್ಯಾರ್ಥಿಗಳಿಗೆ ಬೆಂಬಲ ಸೇವೆಗಳು, ಶಾಲೆಯ ಪರಿಸರ ಮೂಲಭೂತ ಸೌಕರ್ಯಗಳು, ಅಧ್ಯಾಪಕರ ಬೋಧನೆಯ ದಕ್ಷತೆ ಮಾನವೀಯ ಸಂಬಂಧಗಳು, ಮೌಲ್ಯಮಾಪನ, ಫಲಿತಾಂಶ ಈ ಅಂಶಗಳಿಗೆ ಮಹತ್ವ ನೀಡಬೇಕಾಗುತ್ತದೆ.

–ಸು.ಆರ್.ಮ.

## ಬಂಡವಾಳಶಾಹಿತ್ವ

ಕೈಗಾರಿಕೀಕರಣ ಮತ್ತು ವಾಣಿಜ್ಯೀಕರಣವು ವ್ಯಾಪಕವಾಗಿ ಬೆಳವಣಿಗೆ ಹೊಂದಿದೆ. ಕೈಗಾರಿಕೀಕರಣವು ಯಾಂತ್ರೀಕರಣದ ಫಲ. ಅತ್ಯಾಧುನಿಕ ಯಂತ್ರಗಳು, ವಿದ್ಯುಚ್ಛಕ್ತಿ ಹಾಗೂ ಸೌರಶಕ್ತಿ, ಅಣುಶಕ್ತಿಗಳ ಬಳಕೆಯಿಂದ ಉತ್ಪಾದನಾ ಕ್ಷೇತ್ರವು ನೂರುಪಟ್ಟು ಹೆಚ್ಚಿ, ಹೊಸ ಹೊಸ ಆವಿಷ್ಕಾರಗಳು ಬೆಳಕಿಗೆ ಬಂದವು. ಉತ್ಪಾದನೆ ಮತ್ತು ವ್ಯಾಪಾರ ವಹಿವಾಟಿನಿಂದ ಅಗಾಧವಾದ ಬಂಡವಾಳದ ಸಂಗ್ರಹಣೆಯಾಯಿತು. ಮಧ್ಯವರ್ತಿಗಳ ಪ್ರವೇಶದಿಂದ ದಳ್ಳಾಳಿಗಳ ಬಳಿ ಅಪಾರವಾದ ಧನ ಶೇಖರಣೆಯಾಗಿ ಅವರೇ ಯಂತ್ರಗಳ ಮತ್ತು ಕಚ್ಚಾ ಮಾಲುಗಳ ಮಾಲೀಕರಾಗಿ ವಿತರಣೆ ಹಾಗೂ ವಿನಿಮಯ ಕಾರ್ಯವನ್ನು ಕೈಗೊಂಡು ಕಾರ್ಮಿಕ ವರ್ಗವನ್ನು ಶೋಷಿಸುತ್ತಾ ಅವರೇ ಕೈಗಾರಿಕೆಯ ಮಾಲಿಕರಾದರು. ಆ ಕಾರ್ಖಾನೆಗಳ ಮಾಲಿಕರೇ ಬಂಡವಾಳ ಹಾಕಿ ಉತ್ಪಾದನೆ ಹೆಚ್ಚಿಸಿ ಅತಿಯಾದ ಲಾಭಗಳಿಸಿ ಅಪಾರವಾದ ಹಣವಂತರಾಗಿ ಬಂಡವಾಳಶಾಹಿತ್ವಕ್ಕೆ (Capitalism) ಕಾರಣರಾದರು.

ಜೊತೆಗೆ ಖಾಸಗಿ ಆಸ್ತಿ, ಬೃಹತ್ ಪ್ರಮಾಣದ ಉತ್ಪಾದನೆ. ಲಾಭಗಳಿಸುವುದೇ ಉದ್ದೇಶವಾಗಿಟ್ಟುಕೊಳ್ಳುವುದು, ಜೊತೆಗೆ ಸ್ಪರ್ಧೆ, ಬೇಲೆ ತಂತ್ರ ಎಂದರೆ ಉತ್ತಮಗುಣಮಟ್ಟದ ವಸ್ತುವನ್ನು ಅತಿ ಕಡಿಮೆ ಬೆಲೆಯಲ್ಲಿ ಒದಗಿಸುವುದು, ನೌಕರರ ಶೋಷಣೆ, ಬಂಡವಾಳಗಾರರು ಸಾಲ ಪಡೆಯುವುದು, ಮಾರುಕಟ್ಟೆಯಲ್ಲಿನ ಆರ್ಥಿಕತೆ, ಕಾರ್ಮಿಕ ಸಂಘಟನೆ, ಶ್ರಮವಿಭಜನೆ ಹಾಗೂ ಶ್ರಮ ವಿಶೇಷತೆ ಇವೆಲ್ಲವೂ ಬಂಡವಾಳಶಾಹಿಯ ಲಕ್ಷಣಗಳು.

ಈ ಮೇಲ್ಕಂಡ ಲಕ್ಷಣಗಳನ್ನು ಅರ್ಥಮಾಡಿಕೊಂಡು ಈ ವಿಶೇಷವಾದ ವ್ಯವಸ್ಥೆಗಳಿಗೆ ಸ್ಪಂದಿಸಲು ಶಿಕ್ಷಣ ಅತ್ಯವಶ್ಯಕ. ಶಿಕ್ಷಣ ಹೊಂದಿದವರು ಬಂಡವಾಳಶಾಹಿಯ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಅವಿದ್ಯಾವಂತರಿಗಿಂತಲೂ ವಿದ್ಯಾವಂತರೇ ಇಂದು ಹೆಚ್ಚು ಖಾಸಗಿ ಆಸ್ತಿಯ ಒಡೆಯರಾಗಿರುತ್ತಾರಲ್ಲದೆ ಬೃಹತ್ ಪ್ರಮಾಣದ ಉತ್ಪಾದನಾ ಕ್ಷೇತ್ರದಲ್ಲೂ ಪಾತ್ರ ಅಪಾರವಾದುದು. ಇಂದು ಆಸ್ತಿ ಗಳಿಸುವ ವಿವಿಧ ಮಾದರಿಗಳನ್ನೂ, ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ತಂತ್ರವನ್ನೂ, ಲಾಭಗಳಿಕೆಯಲ್ಲಿನ ವಿವಿಧ ಮಾರ್ಗೋಪಾಯಗಳನ್ನು ಸ್ಪರ್ಧೆಯ ವಿವಿಧ ಪ್ರಾಕಾರಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಮಹತ್ವಪೂರ್ಣವಾದುದು. ಶಿಕ್ಷಣವು ಮಗುವಿನ ನೈತಿಕ ನಿಯಮಗಳನ್ನು ಉದ್ದೀಪನಗೊಳಿಸುವ ಪ್ರಯತ್ನವಾಗಿದ್ದು ಅದು ಅವನಿಗೆ ತರ್ಕಜ್ಞಾನದ ಅರಿವನ್ನು ಮೂಡಿಸುತ್ತದೆ. ಯಾವುದು ಒಳಿತು, ಯಾವುದು ಕೆಟ್ಟದ್ದು ಹಾಗೂ ಯಾವುದನ್ನು ನಂಬಬೇಕು ಯಾವುದನ್ನು ತಿರಸ್ಕರಿಸಬೇಕೆಂಬುದನ್ನು ಶಿಕ್ಷಣವು ಕಲಿಸುವುದಾದರೂ ಇತ್ತೀಚಿನ ದಿನಗಳಲ್ಲಿ ಬಂಡವಾಳಶಾಹಿ ನೀತಿಗೆ ಯಾವ ಅರ್ಥವೂ ಇಲ್ಲವಾಗಿದೆ. ಇದರಿಂದ ಸಮಾಜದ ಪ್ರಗತಿ ಸಾಧ್ಯವಾಗಿರುವುದು ನಿಜವಾಗಿದೆ. ಜೀವನಮಟ್ಟ ಹೆಚ್ಚಾಗಿದೆ. ಸಾಂಸ್ಕೃತಿಕ ವಿನಿಮಯ ಶ್ರೀಮಂತವಾಗುತ್ತಿದೆ. ನಾಗರಿಕತೆಯ ಬೆಳವಣಿಗೆಯಾಗುತ್ತಿದೆ. ಜನಾಂಗೀಯ ಭೇದ ಕಡಿಮೆಯಾಗುತ್ತಿದೆ. ಬಹುಶಃ ಶಿಕ್ಷಣ ಕ್ಷೇತ್ರದ ಬೆಳವಣಿಗೆಯಿಂದಾಗಿಯೇ ಈ ಬಗೆಯ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗಿದೆ ಎನ್ನಬಹುದು.

ಶಿಕ್ಷಣವು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ಸಮಾಜದ ಸಂಸ್ಕೃತಿ, ಪರಂಪರೆ, ಸಂಪ್ರದಾಯ ಮತ್ತು ಚತುರತೆಯನ್ನು ಯಾವ

Digitised by Bharatavani, CIIL

ಜನಾಂಗಕ್ಕೆ ಬೇಕಾದರೂ ವರ್ಗಾಯಿಸಬಹುದು. ಶಿಕ್ಷಣವು ಮಾನವನ ನಾಗರಿಕತೆಗೆ ಆಧಾರವಾಗಿದೆ. ಶಿಕ್ಷಣವು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ, ರಾಜಕೀಯ ಸ್ಥಿರತೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ, ಬೆಳೆಸುವ ಹಾಗೂ ಅದನ್ನು ಮುಂದುವರೆಸುವ ಪ್ರಮುಖ ಸಾಧನವಾಗಿದೆ.

ಶಿಕ್ಷಣವು ಒಂದು ಪ್ರಕ್ರಿಯೆ. ಆ ನಿಟ್ಟಿನಲ್ಲಿ ಬಂಡವಾಳಶಾಹಿತ್ವದ ದಿಕ್ಕಿನಲ್ಲಿ ಆರ್ಥಿಕ ಪ್ರಗತಿಗಾಗಿ, ಸಂಸ್ಕೃತಿಯ ವಿನಿಮಯಕ್ಕಾಗಿ ನಿರಂತರವಾಗಿ ಜನರಿಗೆ ಇದು ಸಹಕಾರವನ್ನು ನೀಡುತ್ತಿದೆ. ಮಾನವ ಸಮಾಜದ ಅನೇಕ ಮೂಲಭೂತ ಚಟುವಟಿಕೆಗಳಲ್ಲಿ ಒಂದಾದ ಶಿಕ್ಷಣವು ಜನಾಂಗೀಯ ಭೇದವನ್ನು ಕಡಿಮೆಗೊಳಿಸುವಲ್ಲಿ ನಿರಂತರವಾಗಿ ಶ್ರಮಿಸಿ ಬಂಡವಾಳಶಾಹಿಯಲ್ಲಿ ತನ್ನದೇ ಆದ ಒಂದು ವ್ಯವಸ್ಥೆಯನ್ನು ಹೊಂದಿದೆ.

ಜೊತೆಗೆ ಶಿಕ್ಷಣದ ವಿವಿಧ ಆಯಾಮಗಳನ್ನು ಅತ್ಯಂತ ವ್ಯವಸ್ಥಿತವಾಗಿ ಅರ್ಥಮಾಡಿಕೊಂಡ ವ್ಯಕ್ತಿಗಳು ಬಂಡವಾಳಶಾಹಿ ವ್ಯವಸ್ಥೆಯಿಂದುಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ, ಸಂಪತ್ತಿನ ಹುಚ್ಚು ಬಂಡವಾಳಶಾಹಿ ವ್ಯವಸ್ಥೆಯ ಅತ್ಯಂತ ಕೆಟ್ಟ ಪ್ರಭಾವ. ಬಹುಶಃ ಶಿಕ್ಷಣದ ಅರ್ಥವನ್ನು ಅತ್ಯಂತ ಯಶಸ್ವಿಯಾಗಿ, ಗಂಭೀರವಾಗಿ ಅರ್ಥಮಾಡಿಕೊಂಡವರು ಆರ್ಥಿಕ ಸಂಪತ್ತು ಹಾಗೂ ಲಾಭಾಂಶಗಳ ಬಗ್ಗೆ ಚಿಂತಿಸಿ ಒಳ್ಳೆಯ ಮಾರ್ಗದಿಂದ ಹಣ ಸಂಪಾದಿಸಬಹುದು. ಅಷ್ಟೇ ಅಲ್ಲ, ಆಧುನಿಕ ಮಾನವ ಈ ಬಂಡವಾಳವಾದದಿಂದ ಧನಪಿಶಾಚಿಯಾಗಿದ್ದವನು ಇಂದು ಹಣದ ದಾಹದಿಂದ ಹೊರಬರಲು ನೆರವಾಗಬಹುದು.

ಶಿಕ್ಷಣದಿಂದ ಜೀವನವನ್ನು ಅರ್ಥಪೂರ್ಣವಾಗಿ, ನೆಮ್ಮದಿಯಿಂದ ಶಾಂತಿಯಿಂದ ಮುನ್ನಡೆಸಬಹುದು ಎಂಬ ದಿಕ್ಕಿನಲ್ಲಿ ಆಲೋಚಿಸಿದಾಗ ಬಂಡವಾಳಶಾಹಿತ್ವದ ಪ್ರಮುಖ ಉದ್ದೇಶವಾದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ದಿಕ್ಕು ಬದಲಾಗಬಹುದೇನೋ ಹಣಗಳಿಸಲು ಇಂದು ಮಾನವ ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಗರಿಷ್ಠ ವಿನಿಯೋಗ ಮಾಡುತ್ತಿರುವ ಕ್ಷೇತ್ರದಲ್ಲಿ, ಶಿಕ್ಷಣವು ಅತ್ಯಂತ ಮಹತ್ವ ಪೂರ್ಣವಾದ ಪಾತ್ರವನ್ನು ವಹಿಸುತ್ತದೆ.

ಇತ್ತೀಚೆಗಂತೂ ನಾಗರಿಕತೆಯ ಬೆಳವಣಿಗೆಯು ಶಿಕ್ಷಣ ಕ್ಷೇತ್ರದ ಅವಿಭಾಜ್ಯ ಅಂಗ ಆಗಿದೆಯೋ ಹಾಗೆಯೇ ಬಂಡವಾಳಶಾಹಿತ್ವವೂ ಸಹ ನಾಗರಿಕತೆಯ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿದೆ. ದುರಂತವೆಂದರೆ ಭಾರತದ ಜನಸ್ತೋಮ ಸಾಕಷ್ಟು ಸುಶಿಕ್ಷಿತರಲ್ಲದಿರುವುದರಿಂದ ನಾಗರಿಕತೆಯ ಬೆಳವಣಿಗೆಯ ಕ್ಷೇತ್ರದಲ್ಲಿ ಪಾಶ್ಚಿಮಾತ್ಯರಷ್ಟು ಪ್ರಬುದ್ಧವಾಗಿ ಭಾರತವು ಬೆಳೆದಿಲ್ಲವೇನೋ ಎನಿಸುತ್ತದೆ.

ಶಿಕ್ಷಣವು ವ್ಯಕ್ತಿಯ ಮನೋಧರ್ಮದಲ್ಲಿ ಬದಲಾವಣೆಯನ್ನು ತರುವುದರ ಜೊತೆಗೆ ಸಾಮಾಜಿಕ ಸಂಸ್ಥೆಗಳಲ್ಲಿ ಬದಲಾವಣೆಗಳನ್ನು ಸಹ ತರುತ್ತದೆ. ಅದೇರೀತಿ ಬಂಡವಾಳಶಾಹಿ ವ್ಯವಸ್ಥೆಯು ವ್ಯಕ್ತಿಪ್ರಾಧಾನ್ಯತೆಯನ್ನು ಮೂಲೆಗೆ ತಳ್ಳಿ ವಸ್ತು ಪ್ರಾಧಾನ್ಯತೆಗೆ ಪ್ರೋತ್ಸಾಹವನ್ನು ಕೊಟ್ಟು ಅನೇಕ ಬಗೆಯ ಆಘಾತಕಾರಿ ಸನ್ನಿವೇಶಗಳ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿದೆ. ಉದಾಹರಣೆಗೆ, ಇಂದಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಧರ್ಮ, ಆಧ್ಯಾತ್ಮಿಕತೆಗೆ ಬೆಲೆ ಇಲ್ಲ. ಹಣವೇ ಸರ್ವಸ್ವ, ವಸ್ತುಗಳೇ ಪ್ರಧಾನ. ಹಣ ಹೇರಳವಾಗಿದ್ದು ವ್ಯಕ್ತಿಯ ಗುಣಕ್ಕೆ ಯಾವ ಬೆಲೆಯೂ ಇಲ್ಲ. ಸಂಪಾದನೆಗಾಗಿ ಅನೇಕ ಬಗೆಯ ವಾಮ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರದ ಬೆಳವಣಿಗೆ ಈ ವಾಮ ಮಾರ್ಗಕ್ಕೆ ತಡೆ ಒಡ್ಡಬಹುದೇನೋ ಎನಿಸುತ್ತದೆ.

ಶಿಕ್ಷಣವು ಜೀವನಾನುಭವಗಳನ್ನು ಕಲಿಸುವ ನಿರಂತರ ಪ್ರಕ್ರಿಯೆ ಎಂದೆನ್ನಬಹುದು. ರಸ್ಕಿನ್‌ರವರು ಶಿಕ್ಷಣದ ಬಗ್ಗೆ "ಜನರನ್ನು ಸಭ್ಯರನ್ನಾಗಿಸಿ, ಜನರು ಏನಾಗಬೇಕೆಂಬುದನ್ನು ನಿರ್ಧರಿಸುವುದೇ ಶಿಕ್ಷಣ" ಎಂದಿದ್ದಾರೆ. ಈ ದಿಕ್ಕಿನಲ್ಲಿ ಆಲೋಚಿಸಿದಾಗ ಬಂಡವಾಳಶಾಹಿ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡರೆ ಬದುಕು ಹಸನಾಗಬಲ್ಲದೇನೊ ಎನಿಸುತ್ತದೆ. ಶಿಕ್ಷಣವು ಮಾನವನ ಮನೋಧರ್ಮದಲ್ಲಿ ನಿಶ್ಚಿತವಾದ ಬದಲಾವಣೆಯನ್ನು ತರಬಹುದು. ಸಮಾಜದಲ್ಲಿ ಉತ್ತಮ ಬದಲಾವಣೆಗಳನ್ನು ತರಬಹುದು. ಉದಾಹರಣೆಗೆ, ಅಸಮಾನತೆ, ದೌರ್ಬಲ್ಯಗಳು, ದಬ್ಬಾಳಿಕೆ ಮುಂತಾದವುಗಳು ಕಡಿಮೆಗೊಳ್ಳುತ್ತವೆ. ಹಾಗಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಂಡು ಬರುವ ಕೃತಕ ಕಪಟ ಮಾನವೀಯತೆಗಿಂತ ಮೊಳ್ಳುಘನತೆಯಿಂದ ಪ್ರಭಾವಿತರಾಗದೆ, ವಿದ್ಯಾವಂತರಾದವರು, ಸುಶಿಕ್ಷಿತರು ಇಂತಹ ಕಪಟ ಕೃತಕ ಕೃತ್ರಿಮಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು ಆ ದಿಕ್ಕಿನಲ್ಲಿ ಕಂಡುಬರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಂಡು ಬರುವ ಸಾಮಾಜಿಕ ಅಸಮತೋಲನ ಹಾಗೂ ಭೋಗ ಪ್ರಾಧಾನ್ಯತೆಯನ್ನು ಶಿಕ್ಷಣದ ಅರ್ಥಪೂರ್ಣವಾದ ಪ್ರಸಾರದಿಂದ ಬಹುತೇಕ ಸಾಮಾಜಿಕ ಸಮತೋಲನ ಹಾಗೂ ಅವಶ್ಯಕವಿರುವ ಭೋಗವನ್ನು ಮಾತ್ರ ಅನುಭವಿಸುವಂತಾಗಬಹುದು. ಬಂಡವಾಳಶಾಹಿ ವ್ಯವಸ್ಥೆಯ ಗಂಭೀರ ಸ್ಥಿತಿಯನ್ನು ತೊಡೆದುಹಾಕುವಲ್ಲಿ ಶಿಕ್ಷಣವು ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತದೆ ಎನ್ನಬಹುದು.

ಶಿಕ್ಷಣವು ಹೆಚ್ಚು ಹೆಚ್ಚು ಪ್ರಬುದ್ಧವಾದಂತೆಲ್ಲಾ ಮಾನವ ಸಮಾಜವು ಚಲನಾತ್ಮಕವಾದುದಾಗಿದೆ. ಸಮಾಜದ ವಿವಿಧ ವ್ಯವಸ್ಥೆಗಳಲ್ಲಿ, ಸಂಘ ಸಂಸ್ಥೆಗಳಲ್ಲಿ, ಅವುಗಳ ರಚನೆ ಮತ್ತು ಕಾರ್ಯಗಳಲ್ಲಿ ನಿರಂತರ ಬದಲಾವಣೆಯನ್ನು ನಿಶ್ಚಯಾತ್ಮಕವಾಗಿ ತರುವ ಶಕ್ತಿ, ಸಾಮರ್ಥ್ಯ ಶಿಕ್ಷಣಕ್ಕಿದೆ. ಇದರಿಂದಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಡಗಿರುವ ಒಳ್ಳೆಯ ಅಂಶಗಳನ್ನು ಸಮಾಜದ ಒಳಿತಿಗಾಗಿ ಬಳಸಿಕೊಂಡು ಆ ವ್ಯವಸ್ಥೆಯಲ್ಲಿರುವ ನಕಾರಾತ್ಮಕ ಅಂಶಗಳನ್ನು ಕೈಬಿಡಲು ಶಿಕ್ಷಣವು ಸಹಾಯ ಮಾಡುತ್ತದೆ.

–ಹೆಚ್.ಎಮ್.ವ.

## ಬಹುವರ್ಗ ಬೋಧನೆ

ಶಿಕ್ಷಣದ ಸಾರ್ವತ್ರೀಕರಣ ಗುರಿಯಪ್ರಕಾರ 6 ರಿಂದ 14 ವರ್ಷದ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕು. ದಾಖಲಾದ ಮಕ್ಕಳೆಲ್ಲರೂ ನಿರಂತರವಾಗಿ ಶಾಲೆಗೆ ಹಾಜರಾಗಬೇಕು. ಎಲ್ಲ ಮಕ್ಕಳಲ್ಲೂ ಅಪೇಕ್ಷಿತ ಕಲಿಕೆಯಾಗಬೇಕು ಎನ್ನುವುದು ಸಾರ್ವತ್ರೀಕರಣದ ಗುರಿ. ಈ ಗುರಿ ಈಡೇರುವ ಹಾಗೂ ಪ್ರಮುಖ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಬಹುವರ್ಗ ಬೋಧನೆಯ ಸನ್ನಿವೇಶವು ಒಂದು. ಶಿಕ್ಷಕ, ಸೀಮಿತ ಸ್ಥಳಾವಕಾಶದಲ್ಲಿ, ಏಕಕಾಲದಲ್ಲಿ ವಿವಿಧ ತರಗತಿಗಳಿಗೆ, ವಿವಿಧ ವಯೋಮಾನದ ಮಕ್ಕಳಿಗೆ, ಕಲಿಕೆಯವೇಗದಲ್ಲಿ ಭಿನ್ನತೆಯಿರುವ ಮಕ್ಕಳಿಗೆ ವಿಷಯಗಳನ್ನು ಬೋಧಿಸುವ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ವ್ಯವಸ್ಥೆಯೇ ಬಹುವರ್ಗ ಬೋಧನೆ.

ಒಂದಕ್ಕಿಂತ ಹೆಚ್ಚು ತರಗತಿಗಳಿಗೆ ಒಬ್ಬರೇ ಶಿಕ್ಷಕರು, ಒಂದೇ ಅವಧಿಯಲ್ಲಿ ಒಂದೇ ಆವರಣದಲ್ಲಿ ಬೋಧಿಸುವ ವ್ಯವಸ್ಥೆಯೇ ಬಹುವರ್ಗ ಬೋಧನೆ. ಇಲ್ಲಿ ವಿವಿಧ ವಯೋಮಾನದ ವಿವಿಧ ಹಂತಗಳಲ್ಲಿ ಕಲಿಯುವ

Digitised by Bharatavani, CIIL

ಮಕ್ಕಳಿಗೆ ವಿವಿಧ ಪಠ್ಯ ಹಾಗೂ ಸಹಪಠ್ಯ ವಿಷಯಗಳನ್ನು ಕಲಿಸುವ ವ್ಯವಸ್ಥೆ ಇರುತ್ತದೆ.

ಬಹುವರ್ಗ ಬೋಧನೆ ಹೊಸ ಪರಿಕಲ್ಪನೆಯಲ್ಲ. ಹಿಂದಿನಿಂದಲೂ ಇರುವಂಥ ಅನಿವಾರ್ಯ ವ್ಯವಸ್ಥೆ. 1990ರ ಯುನೆಸ್ಕೋ ವರದಿಯ ಪ್ರಕಾರ ಅತಿ ಹೆಚ್ಚು ಬೋಧನಾ ಶಾಲೆಗಳು ಚೀನಾ ದೇಶದಲ್ಲಿದ್ದು, ಭಾರತವು ಎರಡನೇ ಸ್ಥಾನದಲ್ಲಿತ್ತು. ಅಭಿವೃದ್ಧಿ ಹೊಂದಿರುವ ದೇಶಗಳಾದ ನೆದರ್‌ಲ್ಯಾಂಡ್ ಹಾಗೂ ಸ್ವಿಡ್ಜರ್ ಲ್ಯಾಂಡ್, ಕೆನೆಡಾ ದೇಶದಲ್ಲಿಯೂ ಪ್ರತಿ ಏಳು ಶಾಲೆಗಳಲ್ಲಿ ಒಂದರಲ್ಲಿ ಬಹುವರ್ಗ ಬೋಧನೆಯ ವ್ಯವಸ್ಥೆ ಇದೆ. ನಮ್ಮ ದೇಶದಲ್ಲಿರುವ ಶಾಲೆಗಳಲ್ಲಿ ಶೇಕಡಾ 85ರಷ್ಟು ಶಾಲೆಗಳಲ್ಲಿ ಬಹುವರ್ಗ ಬೋಧನೆಯ ವ್ಯವಸ್ಥೆ ಇದೆಯೆಂದು 1993ರ 6ನೇ ಶೈಕ್ಷಣಿಕ ವರದಿ ತಿಳಿಸುತ್ತದೆ. ಬಹುವರ್ಗ ಬೋಧನೆಯ ಶಾಲೆಗಳನ್ನು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕಾಣುತ್ತೇವೆ.

**ಬಹುವರ್ಗ ಬೋಧನೆಯು ಅನಿವಾರ್ಯವಾಗಿರಲು ಪ್ರಮುಖ ಕಾರಣಗಳು ಇಂತಿವೆ**

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಗೊಳಿಸುವ ದೃಷ್ಟಿಯಿಂದ ಕನಿಷ್ಠ 15 ಮಕ್ಕಳಿರುವ ಜನವಸತಿ ಪ್ರದೇಶಗಳಲ್ಲಿ ಶಾಲೆ ತೆರೆದಿರುವುದು. ಪ್ರತಿ ಒಂದು ಕಿ.ಮಿ. ವ್ಯಾಪ್ತಿಯಲ್ಲಿ ಶಾಲೆಗಳನ್ನು ತೆರೆದಿದ್ದು ಹೆಚ್ಚಿನ ತರಗತಿಗಳಿರುವುದು. ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಲು ಗುಡ್ಡಗಾಡು ಪ್ರದೇಶಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದರೂ ಶಾಲೆಗಳನ್ನು ತೆರೆದಿರುವುದು. ಎಲ್ಲಾ ತರಗತಿಗಳೂ ಕಾರ್ಯ ನಿರ್ವಹಿಸಬೇಕಾಗಿರುವುದು. ಅನ್ಯಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜಿಸುವುದು. ತರಗತಿವಾರು ಮಕ್ಕಳ ಸಂಖ್ಯೆ ಕಡಿಮೆ ಇರುವುದು. ಸಾಕಷ್ಟು ಸಂಖ್ಯೆಯ ಶಿಕ್ಷಕರು ಇಲ್ಲದಿರುವುದು. ಕೊಠಡಿ ಹಾಗೂ ಇತರೇ ಸೌಲಭ್ಯಗಳ ಕೊರತೆ ಇರುವುದು. ಸರ್ಕಾರಕ್ಕೆ ಹೊಸ ಶಿಕ್ಷಕರನ್ನು ನೇಮಕಾತಿ ಮಾಡಲು ಆರ್ಥಿಕ ಉಳಿತಾಯ ಮಾಡುವ ದೃಷ್ಟಿ ಶಿಕ್ಷಕರು ತಮ್ಮ ರಜಾ ಸೌಲಭ್ಯಗಳನ್ನು ಬಳಸಿಕೊಳ್ಳುವುದು ಪ್ರಾಥಮಿಕ ಹಂತದಲ್ಲಿ ಒಬ್ಬರೇ ಶಿಕ್ಷಕರು ವಿವಿಧ ತರಗತಿ ವಿಷಯಗಳನ್ನು ಕಲಿಸಬೇಕಾದ ಅನಿವಾರ್ಯ ವ್ಯವಸ್ಥೆ ಕಾರಣವಾಗಿದೆ. ಬಹುವರ್ಗ ಬೋಧನೆ ಒಂದು ಸಮಸ್ಯೆಯಲ್ಲ ಇದು ಬಹುವರ್ಗ ಬೋಧನೆ ಒಂದು ಸವಾಲು. ಈ ವಿಧಾನದಲ್ಲಿ ವಿವಿಧ ಚಟುವಟಿಕೆಗಳನ್ನು ರೂಪಿಸುವುದು ಅಗತ್ಯ. ನಿರ್ವಹಣಾ ಕೌಶಲ ಶಿಕ್ಷಕರ ಸಾಮರ್ಥ್ಯವನ್ನಾಧರಿಸಿದೆ. ಧನಾತ್ಮಕವಾಗಿ ಸ್ವೀಕರಿಸಿ, ಕಲಿಕೆಗೆ ಪೂರಕ ಸನ್ನಿವೇಶ ನಿರ್ಮಿಸಬೇಕು. ಮಕ್ಕಳನ್ನು ಹತೋಟಿಯಲ್ಲಿಟ್ಟು ಎಲ್ಲಾ ಮಕ್ಕಳ ಸಾಮರ್ಥ್ಯ ಪ್ರತಿಭೆ, ಕಾಲ ವ್ಯಯವಾಗದಂತೆ ಸೂಚಿತ ಚಟುವಟಿಕೆಯಲ್ಲಿ ತೊಡಗಿಸುವುದಾಗಿದೆ.

**ಬಹುವರ್ಗ ಬೋಧನೆಯಲ್ಲಿ ಎದುರಾಗಬಹುದಾದ ಸವಾಲುಗಳೆಂದರೆ:** ಎಲ್ಲಾ ಮಕ್ಕಳಲ್ಲಿ ನಿರೀಕ್ಷಿತ ಮಟ್ಟದ ಕಲಿಕೆ ಸಾಧಿಸುವುದು. ಎಲ್ಲಾ ಮಕ್ಕಳನ್ನೂ ಏಕಕಾಲದಲ್ಲಿ ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸುವುದು. ಎಲ್ಲಾ ಮಟ್ಟದ ಕಲಿಕೆಗೆ ಚಟುವಟಿಕೆ ರೂಪಿಸುವುದು. ಎಲ್ಲರಿಗೂ ಅನ್ವಯವಾಗುವಂತೆ ಕಲಿಕೋಪಕರಣ ತಯಾರಿಸಿ ಬಳಸುವುದು. ಪಠ್ಯಪುಸ್ತಕದಲ್ಲಿ ನಿಗದಿಪಡಿಸಿದ ಪಾಠಗಳನ್ನು ನಿಗದಿತ ಸಮಯದಲ್ಲಿ ಪೂರೈಸುವುದು. ಕಲಿಕೆಯ ಪ್ರಕ್ರಿಯೆ ನಿಲ್ಲದಂತೆ ನೋಡಿಕೊಳ್ಳುವುದು. ಬಹುವರ್ಗ ಬೋಧನೆಯ ವೇಳಾಪಟ್ಟಿಯಂತೆ ತರಗತಿ ನಿರ್ವಹಿಸುವುದು. ಎಲ್ಲಾ ಮಕ್ಕಳನ್ನು ನಿರಂತರ ಮೌಲ್ಯಮಾಪನಕ್ಕೆ ಒಳಪಡಿಸುವುದು.

**ಈ ವಿಧಾನವನ್ನು ನಿರ್ವಹಿಸುವಲ್ಲಿ ಶಿಕ್ಷಕನು ಅನುಸರಿಸಬೇಕಾದ ಕೆಲವು ಸೂಚನೆಗಳು**

ನಿರ್ದಿಷ್ಟ ಸ್ಥಳಾವಕಾಶದಲ್ಲಿ ಮಕ್ಕಳನ್ನು ತರಗತಿವಾರು ಗುಂಪುಮಾಡುವುದು. ಸಾಮೀಪ್ಯ ಸಾಮರ್ಥ್ಯಕ್ಕೆ ಅನುಸಾರವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು. ಕಲಿಸುವಿಕೆಗೆ ಪೂರಕವಾದ ಸಾಮಗ್ರಿಗಳನ್ನು ತಯಾರಿಸಿಕೊಳ್ಳುವುದು. ತರಗತಿಯ ಸಂಯೋಜನೆಗೆ ಹೊಂದುವ ವೇಳಾಪಟ್ಟಿಯನ್ನು ಸಿದ್ದಪಡಿಸಿಕೊಂಡು ಅನುಸರಿಸುವುದು. ಗುಂಪು ಚಟುವಟಿಕೆಯ ನಿರ್ವಹಣೆಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು. ಕ್ರಿಯಾಶೀಲ ವಿದ್ಯಾರ್ಥಿಗಳನ್ನು ನಾಯಕರನ್ನಾಗಿ ನೇಮಿಸಿ ಎಲ್ಲ ಮಕ್ಕಳ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡುವುದು. ಪಠ್ಯ ವಿಷಯ ಕಲಿಕೆಗೆ ಪೂರಕವಾಗುವಂತಹ ಚಟುವಟಿಕೆಗಳನ್ನು ರೂಪಿಸುವುದು. ಶಿಕ್ಷಕರು ಬೋಧಿಸುವ ವಿಷಯಕ್ಕೆ ಪೂರಕವಾದ ಚಟುವಟಿಕೆಗಳನ್ನು ಇತರ ಗುಂಪಿನ ಮಕ್ಕಳಿಗೆ ಸೂಚಿಸಿದಾಗ ಹೆಚ್ಚು ಅನುಕೂಲವಾಗುತ್ತದೆ. ಒಂದು ಗುಂಪಿಗೆ ಶಿಕ್ಷಕರು ಬೋಧಿಸುತ್ತಿದ್ದಾಗ ಬೇರೆ ಗುಂಪಿನ ಮಕ್ಕಳಿಗೆ ಪೂರಕ ಚಟುವಟಿಕೆಗಳನ್ನು ಸೂಚಿಸುವುದು.

ಬಹುವರ್ಗ ಬೋಧನೆಯ ವ್ಯವಸ್ಥೆಯಲ್ಲಿ ಕೆಲಸಮಾಡುವ ಶಿಕ್ಷಕರು ಪರಿಸರ ಹಾಗೂ ಸೌಲಭ್ಯವನ್ನು ಆಧರಿಸಿ ಇತರ ಚಟುವಟಿಕೆಗಳನ್ನು ರೂಪಿಸಿಕೊಳ್ಳಲು ಅವಕಾಶವಿದೆ. ಬಹುವರ್ಗ ಬೋಧನೆಯ ಶಾಲೆಗಳಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸಿದಾಗ ಮಕ್ಕಳ ಕಲಿಕೆಯು ಸುಗಮವಾಗುತ್ತದೆ. ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ತರಗತಿ ಹೊಂದಾಣಿಕೆ ಮಾಡಿಕೊಳ್ಳಬಹುದು. ಬಹುವರ್ಗ ಬೋಧನೆಯಲ್ಲಿ ಗುಂಪುಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಒಂದೊಂದು ತರಗತಿಯನ್ನು ಒಂದೊಂದು ಗುಂಪಾಗಿ ಕಾಣಬೇಕಾಗುತ್ತದೆ. ಗುಂಪು ರಚನೆ ಕಲಿಕೆಯನ್ನು ಜೀವಂತಗೊಳಿಸುತ್ತದೆ. ನಾಯಕತ್ವ ಬೆಳವಣಿಗೆಗೆ ಅವಕಾಶ ನೀಡುತ್ತವೆ. ಸ್ವಕಲಿಕೆಗೆ ಪೂರಕವಾಗುತ್ತದೆ. ಹಾಗೂ ಭಾಗವಹಿಸಲು ಅವಕಾಶ ಕಲ್ಪಿಸುತ್ತದೆ.

ವಿದ್ಯಾರ್ಥಿಗಳು ತಮ್ಮದೇ ವೇಗದಲ್ಲಿ ಕಲಿಯಲು ಅವಕಾಶ ನೀಡುತ್ತದೆ. ಸುಲಭವಾಗಿ ಮೌಲ್ಯಮಾಪನ ಮತ್ತು ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ. ಗುಂಪು ರಚಿಸುವಾಗ ಈ ಕೆಳಕಂಡಂತೆ ಗುಂಪು ರಚಿಸಬಹುದು.

- ಸಂಪೂರ್ಣ ಶಿಕ್ಷಕರ ಸಹಾಯದ ಗುಂಪು
- ಭಾಗಶಃ ಶಿಕ್ಷಕರ ಸಹಾಯದ ಗುಂಪು
- ಪೂರ್ಣ ನಾಯಕತ್ವದ ಗುಂಪು
- ಭಾಗಶಃ ವಿದ್ಯಾರ್ಥಿ ನೆರವಿನ ಗುಂಪು
- ಸ್ವಯಂ ಅಭ್ಯಾಸದ ಗುಂಪು.

ಸಾಮಾನ್ಯವಾಗಿ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು ಎರಡು ಅಥವಾ ಹೆಚ್ಚು ತರಗತಿಗಳಿಗೆ ಕಲಿಸಬೇಕಾದ ಸಂದರ್ಭಗಳಿರುತ್ತದೆ. ಅದಕ್ಕೆ ಅಗತ್ಯವೆನಿಸುವ ಚಟುವಟಿಕೆ ಆಧಾರಿತ ಬೋಧನಾ ವಿಧಾನಗಳನ್ನು ಅನುಸರಿಸಬೇಕು. ನಿರ್ವಹಣೆ ಉತ್ತಮಗೊಳ್ಳಬೇಕಾದರೆ ವಿವಿಧ ರೀತಿಯ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಸೂಕ್ತ. ಬಹುವರ್ಗ ಬೋಧನಾ ವಿಧಾನದಲ್ಲಿ ಚಟುವಟಿಕೆ ಪ್ರಾಧ್ಯಾನ್ಯತೆ ಇರುವುದಾದರೂ ಸಾಮರ್ಥ್ಯಗಳ ಬೆಳವಣಿಗೆ ಅದರೊಡನೆ ಸಾಗಬೇಕು. ಅನುಭವ, ಚಿಂತನೆ, ಹಾಗೂ ಅಳವಡಿಕೆಯಿಂದ ಕಲಿತ ಫಲಗಳನ್ನಾಧರಿಸಿ ವಿವಿಧ ಚಟುವಟಿಕೆಗಳನ್ನು ರೂಪಿಸಬಹುದು. ಅದು ಶಿಕ್ಷಕರ ದಕ್ಷತೆ, ಕ್ರಿಯಾಶೀಲತೆ,

Digitised by Bharatavani, CIIL

ಆಸಕ್ತಿ ಭಾಗವಹಿಸುವಿಕೆಯನ್ನು ಅವಲಂಬಿಸಿರುತ್ತದೆ. ಇತರ ಶಿಕ್ಷಕರು, ಪೋಷಕರು, ಸಮುದಾಯದ ನೆರವನ್ನು ಪಡೆದು ಈ ಸಮಸ್ಯೆಯನ್ನು ಪರಿಹರಿಸುವುದು ಬಹುವರ್ಗ ಬೋಧನೆಯ ಒಂದು ತಂತ್ರವಾಗಿದೆ.

ಬಹುವರ್ಗ ಬೋಧನೆಯ ಸಂದರ್ಭದಲ್ಲಿ ಶಿಕ್ಷಕರು ನಾಲ್ಕು ತರಗತಿಗಳಿಗೆ ಸಾಮಾನ್ಯವಾಗಿ ಒಂದೇ ವಿಷಯಕ್ಕೆ ಚಟುವಟಿಕೆ ಕೊಡುವುದು ಉತ್ತಮ. ಕನ್ನಡ ವಿಷಯವನ್ನು ನಾಲ್ಕು ಗುಂಪಿಗೆ ನೀಡಿದರೆ ನಾಯಕತ್ವದ ಸಹಾಯ ಒಂದು ಗುಂಪಿನಿಂದ ಇನ್ನೊಂದು ಗುಂಪಿಗೆ ನೆರವು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಸಾಮರ್ಥ್ಯದ ಹೇಳಿಕೆಗಳು ಅಡ್ಡಸಾಲಿನಲ್ಲಿ ಶ್ರೇಣೀಕೃತವಾಗಿಯೂ, ಕಂಬಸಾಲಿನಲ್ಲಿ ಸಮಾನಾಂತರವಾಗಿಯೂ ಜೋಡಿಸಲ್ಪಟ್ಟಿವೆ. ಆದ್ದರಿಂದ ತರಗತಿಯಿಂದ ತರಗತಿಗೆ ಒಂದು ವಿಷಯ ಸಂಬಂಧ ಕಲ್ಪಿಸುತ್ತದೆ ಎನ್ನುವುದನ್ನು ಶಿಕ್ಷಕರು ಗಮನಿಸಬೇಕು. ಇದರಿಂದ ಶಿಕ್ಷಕ ನೇರ ಬೋಧನೆಯ ನಂತರ ಉಳಿದ ತರಗತಿಗಳಿಗೆ ಮಾರ್ಗದರ್ಶನ/ನೆರವು/ನಿರ್ವಹಣೆ ಮಾಡಲು ಸಾಧ್ಯ.

ಸಾಮರ್ಥ್ಯಾಧಾರಿತ ಬೋಧನೆಯು ಕಲಿಕೆಯ ಒಂದು ಮಾರ್ಗ, ಇದು ಒಂದು ನಿರಂತರವಾದ ಪ್ರಕ್ರಿಯೆ. ನಿರಂತರವಾದ ವ್ಯಾಪಕ ಮತ್ತು ನೈದಾನಿಕ ಮೌಲ್ಯಮಾಪನವು ವಿದ್ಯಾರ್ಥಿಗಳಲ್ಲಿ ಕನಿಷ್ಠ ಕಲಿಕೆಯ ಮಟ್ಟಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಸಹಾಯ ಮಾಡುತ್ತದೆ.

ಶಾಲಾ ವೇಳೆಯ ಸ್ವಲ್ಪ ಅವಧಿಯನ್ನು ತರಗತಿಗೆ "ನೇರ ಬೋಧನೆ" ಮಾಡಲು ಮೀಸಲಿಡುವುದು ಅವಶ್ಯಕ. ಹೊಸ ಅಂಶ ಪ್ರಾರಂಭಿಸುವಾಗ, ರಚನಾತ್ಮಕ ಮೌಲ್ಯಮಾಪನ ಮತ್ತು ಪರಿಹಾರ ಬೋಧನೆ ಮಾಡುವಾಗ ಈ ವಿಧಾನ ಬಳಸಬಹುದು. ನೇರ ಬೋಧನೆಯಲ್ಲಿ ವಿಷಯದ ಸ್ಥೂಲ ಪರಿಚಯದೊಂದಿಗೆ ಉತ್ತಮ ಚಟುವಟಿಕೆಯನ್ನು ಅಳವಡಿಸಿಕೊಳ್ಳಬೇಕು. ದೃಶ್ಯ ಶ್ರಾವ್ಯ ಸಾಮಗ್ರಿಗಳು ಹಾಗೂ ಕೆಲವು ಸರಳ ವಿಧಾನಗಳು ಇಲ್ಲಿ ನೆರವಾಗುತ್ತದೆ. ಸಮೀಪದ ಸಾಮರ್ಥ್ಯಗಳನ್ನು ಗುರುತಿಸಿ, ಎರಡು ಅಥವಾ ಹೆಚ್ಚು ಸಾಮರ್ಥ್ಯ ಬೆಳೆಸುವ ಒಂದು ಚಟುವಟಿಕೆಯನ್ನು ಏಕ ಕಾದಲ್ಲಿ ಎರಡೂ ತರಗತಿಗಳಿಗೂ ನೇರವಾಗಿ ಬೋಧಿಸುವುದು. ಒಂದು ತರಗತಿಗೆ ನೇರಬೋಧನೆ ಮಾಡುವಾಗ ಉಳಿದ ತರಗತಿಗಳಿಗೆ ಕಲಿಕೆಯ ವೇಗದಲ್ಲಿ ಮುಂದಿರುವ ವಿದ್ಯಾರ್ಥಿ ಸಹಾಯದಿಂದ ಸ್ವಯಂ ಅಭ್ಯಾಸ ಗುಂಪುಗಳನ್ನು ಮಾಡಬಹುದು.

ತರಗತಿಯಲ್ಲಿ ಕಲಿಕೆಯಲ್ಲಿ ಮುಂದುವರಿದ ವಿದ್ಯಾರ್ಥಿಗಳ ಸಹಾಯದಿಂದ ಕಲಿಸುವಿಕೆಯೇ "ಹಿರೇಮಣಿ ಪದ್ಧತಿ." ಶಿಕ್ಷಕರು ನೀಡುವ ಸೂಚನೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಪಾಲಿಸುವ ಹಾಗೂ ವಿಷಯ ಸಾಮರ್ಥ್ಯವನ್ನು ಪ್ರಭುತ್ವ ಮಟ್ಟದಲ್ಲಿ ಪಡೆದಿರುವ, ಗುಂಪನ್ನು ಹತೋಟಿಯಲ್ಲಿಟ್ಟುಕೊಂಡು ಎಲ್ಲರೊಡನೆ ಸೌಹಾರ್ದತೆಯಿಂದ ಉತ್ತಮ ನಾಯಕತ್ವಗುಣ ಹೊಂದಿರುವ ವಿದ್ಯಾರ್ಥಿಯನ್ನು ನಾಯಕನಾಗಿ ಆಯ್ಕೆ ಮಾಡಬೇಕು. ಆದರೆ ಎಲ್ಲಾ ಕಾರ್ಯಗಳಿಗೂ ಒಬ್ಬರೇ ನಾಯಕರನ್ನು ಆಯ್ಕೆ ಮಾಡುವ ಪದ್ಧತಿ ಸರಿಯಾದುದಲ್ಲ. ಬೇರೆ ಬೇರೆ ಸಾಮರ್ಥ್ಯಗಳ ಗುಂಪುಗಳಿಗೆ ಬೇರೆ ಬೇರೆ ನಾಯಕರನ್ನು ಆಯ್ಕೆ ಮಾಡುವುದು ಉತ್ತಮ.

**ಹಿರೇಮಣಿಯ ಮುಖ್ಯ ಕಾರ್ಯವೆಂದರೆ**

ಶಿಕ್ಷಕನ ಸೂಚನೆಗಳ ಅನುಸಾರವಾಗಿ ಹಲವು ರೀತಿಯಲ್ಲಿ ಸಹಾಯ ಮಾಡುವುದು, ಗುಂಪಿಗೆ ಕಲಿಕೆಯ ಸಾಮಗ್ರಿಯನ್ನು ಒದಗಿಸುವುದು, ಸಹಪಾಠಿಗಳು ಆಟ ಆಡುವಂತೆ ಮತ್ತು ನಿಗದಿತ ಚಟುವಟಿಕೆಗಳನ್ನು ನಿರ್ವಹಿಸುವಂತೆ ಮಾಡುವುದು, ಸಹಪಾಠಿಗಳು ಕೆಲಸದಲ್ಲಿ ತೊಡಗಿದ್ದಾಗ ಮೇಲ್ವಿಚಾರಣೆ ಮಾಡುವುದು ಹಾಗೂ ಗುಂಪು ಕಾರ್ಯನಿರ್ವಹಿಸುವ ಬಗ್ಗೆ ಶಿಕ್ಷಕನಿಗೆ ಮಾಹಿತಿ ಕೊಡುವುದು.

ಮತ್ತೊಂದು ವಿಧಾನವೆಂದರೆ ಸಹಪಾಠಿಗಳೊಂದಿಗೆ ಬೋಧನೆ. ಇಲ್ಲಿ ಒಂದೇ ವಯಸ್ಸಿನ ಮಕ್ಕಳ ಗುಂಪನ್ನು ಶಿಕ್ಷಕನು ಮಾಡಬೇಕು. ಗುಂಪಿನ ಒಬ್ಬ ಸದಸ್ಯ ಅದೇ ಗುಂಪಿನ ಇನ್ನೊಬ್ಬ ಸದಸ್ಯನಿಗೆ ಬೋಧಿಸುತ್ತಾನೆ. ಸಾಮರ್ಥ್ಯಗಳ ಮೇಲೆ ಪ್ರಭುತ್ವ ಸಾಧಿಸಿದ ಒಬ್ಬ ಸದಸ್ಯನು ಅದೇ ಗುಂಪಿನ ಇತರ ಎಲ್ಲಾ ಸದಸ್ಯರಿಗೆ ಬೋಧಿಸುತ್ತಾನೆ. ಅವರವರಲ್ಲೇ ಕಲಿಕೆ ನಡೆದಾಗ ಅದು ಆನಂದದಾಯಕವಾಗಿರುತ್ತದೆ. ಮಕ್ಕಳು ತಮ್ಮ ಸಂದೇಹಗಳನ್ನು ತಮ್ಮ ಸಹಪಾಠಿಗಳಿಂದ ಕೂಡಲೇ ಪರಿಹರಿಸಿಕೊಳ್ಳುತ್ತಾರೆ. ಅಗತ್ಯ ಚಟುವಟಿಕೆಗೆ ವಿವರಣೆ ಪಡೆದು ಚೆನ್ನಾಗಿ ನೆನಪಿಟ್ಟುಕೊಳ್ಳುತ್ತಾರೆ. ಒಂದೇ ವಯಸ್ಸಿನ ಮಕ್ಕಳ ಚಟುವಟಿಕೆಗಳಲ್ಲಿ ಅಂದರೆ ಪ್ರದರ್ಶನ, ಪ್ರವಾಸ, ಪಾತ್ರಾಭಿನಯ, ನಾಟಕಾಭಿನಯ, ಕ್ರೀಡೆ, ಸಂಗೀತ ಇತ್ಯಾದಿಗಳಲ್ಲಿ ಚೆನ್ನಾಗಿ ಭಾಗವಹಿಸುತ್ತಾರೆ.

ವಿದ್ಯಾರ್ಥಿಗಳನ್ನು ಅಭ್ಯಾಸದಲ್ಲಿ ನಿರತರಾಗಿರುವಂತೆ ಮಾಡಲು "ಸ್ವಯಂ ಅಭ್ಯಾಸ" ತಂತ್ರವು ತುಂಬಾ ಉಪಯುಕ್ತವಾದುದು. ಮಕ್ಕಳು ಅಭ್ಯಾಸದಲ್ಲಿ ಗಮನ ಕೇಂದ್ರೀಕರಿಸಲು ಸ್ವಕಲಿಕೆ ಅಭ್ಯಾಸ ಬಹುಮುಖ್ಯ. ಈ ತಂತ್ರಗಳು ಮಕ್ಕಳಲ್ಲಿ ಅಭ್ಯಾಸ, ಪುನರ್ವಿಮರ್ಶೆ ಮತ್ತು ನೆನಪಿಡುವ ಕೌಶಲಗಳನ್ನು ಬೆಳೆಸುತ್ತವೆ. ಉದಾಹರಣೆಗೆ, ಬಣ್ಣಗಳನ್ನು ಬೆರೆಸುವುದು, ವಸ್ತುಗಳನ್ನು ಸಂಗ್ರಹಿಸುವುದು, ಭಾಗಗಳ ಜೋಡಣೆ, ಕಥೆಯನ್ನು ಓದುವುದು, ಪಾಠ ಓದಿದ ನಂತರ ಉತ್ತರಗಳನ್ನು ಬರೆಯುವುದು.

ಪರಿಸರವನ್ನು ಅರ್ಥಮಾಡಿಕೊಳ್ಳಲು "ಹೊರಸಂಚಾರ" ಸಹಾಯವಾಗುತ್ತದೆ. ಕ್ಷೇತ್ರಪ್ರವಾಸದಲ್ಲಿ ನಡೆಸಬೇಕಾದ ಚಟುವಟಿಕೆಗಳ ಪ್ರಕಾರ ಶಿಕ್ಷಕರು ಗುಂಪುಗಳನ್ನು ರಚಿಸುತ್ತಾರೆ. ಏನನ್ನು ವೀಕ್ಷಿಸಬೇಕು. ಹಾಗೂ ಏನನ್ನು ವರದಿ ಮಾಡಬೇಕು ಎಂದು ಸ್ಪಷ್ಟಸೂಚನೆ ಕೊಡುತ್ತಾರೆ. ಮಕ್ಕಳು ಪರಿಸರದಲ್ಲಿ ತಾವು ವೀಕ್ಷಿಸಿದ್ದನ್ನು ದಾಖಲಿಸುತ್ತಾರೆ. ಸಹಪಾಠಿಗಳೊಂದಿಗೆ ಹಿಂತಿರುಗಿ ಬಂದ ನಂತರ ತಮ್ಮ ವೀಕ್ಷಣೆ, ಪರಿಕಲ್ಪನೆ, ಇತ್ಯಾದಿಗಳನ್ನು ಹೋಲಿಸುತ್ತಾರೆ. ಹೊಸ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಶಿಕ್ಷಕರಿಗೆ ಅನುಕೂಲವಾಗುವುದು. ಚಟುವಟಿಕೆಗಳನ್ನು ಆಧರಿಸಿ ಗುಂಪುಗಳನ್ನು ವಿಭಾಗಿಸಬಹುದು. ಕ್ಷೇತ್ರ ಸಂಚಾರದ ಉಪಯೋಗಗಳಲ್ಲಿ ಪ್ರಮುಖವಾದವು.

ನೋಡಿದ ಕಲ್ಪನೆಗಳನ್ನು ಬರೆದಿಡುವುದು, ಕಲ್ಪನೆಗಳನ್ನು ಹೋಲಿಸುವುದು, ಅಭಿಪ್ರಾಯದ ಸಾಧಕ ಬಾಧಕಗಳನ್ನು ನೋಡುವುದು, ಕಾಯ್ದೆಗಳನ್ನು ಮಾಡುವುದು ಮತ್ತು ಅದರ ಸಂಬಂಧವನ್ನು ಕಲ್ಪಿಸುವುದು ಮತ್ತು ತತ್ವನಿರೂಪಣೆ ಮಾಡುವುದು.

ಎಲ್ಲಾ ವರ್ಗದ ಮಕ್ಕಳಿಗೆ ಅನ್ವಯಿಸುವಂತಹ ಕಲಿಕೆಯ ತಂತ್ರಗಳನ್ನು ಕಲಿಕೆಯ ಅನುಭವಗಳನ್ನು ಅಳವಡಿಸಿಕೊಳ್ಳುವುದೇ ಸಮೂಹ ಬೋಧನಾ ವಿಧಾನ. ಇದರಿಂದ ಕ್ಷೇತ್ರ ಪ್ರವಾಸದಲ್ಲಿ ಪರಿಸರದ ಅಧ್ಯಾಯಗಳ ಬಗ್ಗೆ ತಿಳಿಸುವುದು. ನೈತಿಕ ಮೌಲ್ಯಗಳ ಬಗ್ಗೆ ಅವರಿಗೆ ತಿಳಿಸುವುದು, ಆರೋಗ್ಯದ ಅಂಶಗಳನ್ನು ಆರೋಗ್ಯದ ಶಿಕ್ಷಣವನ್ನು ನೀಡುವುದು, ಸಮಾರಂಭಗಳನ್ನು ನಡೆಸುವ ಬಗ್ಗೆ ಅನುಭವವನ್ನು ಕಲಿಸುವುದು. ಮಾತುಗಾರಿಕೆಯ ಕೌಶಲವನ್ನು ವೃದ್ಧಿಸುವುದು, ಶಿಸ್ತನ್ನು ಬೆಳೆಸುವುದು, ಹಾಡು, ಕಥೆ, ಅಭಿನಯ ಮಾಡುವುದು, ಇವೆಲ್ಲವನ್ನು ಕಲ್ಪಿಸುವುದು, ಬರೆಯುವ ಕ್ರಮಗಳ ಬಗ್ಗೆ ತಿಳಿಸುವುದು. ಶ್ರವಣ ಮುದ್ರಿಕೆಗಳನ್ನು ವಿದ್ಯಾರ್ಥಿಗಳು ಆಲಿಸುವಂತೆ ಅಭ್ಯಾಸಮಾಡಿಸುವುದು ಸಾಧ್ಯವಾಗುತ್ತದೆ.

ಬಹುವರ್ಗ ಬೋಧನೆಯ ಶಾಲೆಗಳಲ್ಲಿ ಹಲವು ಚಟುವಟಿಕೆಗಳನ್ನು ಮಾಡಿಸುವುದು. ಉದಾಹರಣೆಗೆ: ಪದ ರಚಿಸುವ ಆಟ. ಮಕ್ಕಳನ್ನು ಒಂದು ವೃತ್ತದಲ್ಲಿ ನಿಲ್ಲಿಸುವುದು. ಎಲ್ಲಾ ಮಕ್ಕಳಿಗೂ ಅಕ್ಷರ ಕಾರ್ಡ್‌ನೀಡುವುದು. ಪದ 'ಕಮಲ' ಎಂದು ಹೇಳಿದಾಗ ಪದಕ್ಕೆ

Digitised by Bharatavani, CIIL

ಸಂಬಂಧಿಸಿದ ಅಕ್ಷರವಿರುವ ಮಕ್ಕಳು ಮಧ್ಯಕ್ಕೆ ಬಂದು ನಿಲ್ಲಬೇಕು. ಉಳಿದ ಮಕ್ಕಳು ಪದ ಓದಬೇಕು. ಈ ರೀತಿ ಪದರಚನೆ ಮಾಡುವ, ಪದಗಳನ್ನು ಓದುವ ಕೌಶಲ ಬೆಳೆಸಬಹುದು.

ಗುಂಪುಗಳಲ್ಲಿ ಮಕ್ಕಳು ಪರಿಣಾಮಕಾರಿಯಾಗಿ ಕಲಿಯುವರು. ಗುಂಪುಗಳನ್ನು ನಿರಂತರವಾಗಿ ಒಂದೇ ರೀತಿಯಲ್ಲಿ ಬಿಡುವುದಕ್ಕಿಂತ ಒಂದು ಗುಂಪಿನಿಂದ ಮಕ್ಕಳನ್ನು ಇನ್ನೊಂದು ಗುಂಪಿಗೆ ವರ್ಗಾಯಿಸಬಹುದು. ಗುಂಪುಗಳಲ್ಲಿ ಕಲಿಕೆ ನಡೆಯುವಾಗ ಮಕ್ಕಳ ಮೇಲೆ ಶಿಕ್ಷಕರು ನಿಗಾವಹಿಸಬೇಕು.

ಅಂತೆಯೇ ಒಂದು ಗುಂಪಿನ ಚಟುವಟಿಕೆಯಿಂದ ಇನ್ನೊಂದು ಗುಂಪಿಗೆ ತೊಂದರೆಯಾಗದಂತೆ ಆಸನ ವ್ಯವಸ್ಥೆ ಮಾಡಬೇಕು. ಅವಶ್ಯಕತೆ ಕಂಡು ಬಂದಲ್ಲಿ, ಅವಕಾಶವಿದ್ದಲ್ಲಿ ತರಗತಿಯ ಕೊಠಡಿಯ ಹೊರಗೂ ಗುಂಪುಗಳನ್ನು ಕೂಡಿಸಬಹುದು. ಶಾಲಾ ಕೊಠಡಿಯ ಗೋಡೆಗಳನ್ನು ಬರವಣಿಗೆಯ ಕೆಲಸಕ್ಕೆ ಬಳಸಬಹುದು.

ಬಹುತರಗತಿ ಬೋಧನೆಯಲ್ಲಿ ದಿನದ ವೇಳಾಪಟ್ಟಿಗಿಂತ ವಾರದ ವೇಳಾಪಟ್ಟಿ ರೂಪಿಸುವುದು ಉತ್ತಮ. ವೇಳಾಪಟ್ಟಿಯಲ್ಲಿ ಒಳಾಂಗಣ ಹೊರಾಂಗಣ ಚಟುವಟಿಕೆಗಳನ್ನು ಸರಿಯಾದ ರೀತಿಯಲ್ಲಿ ನಮೂದಿಸಬೇಕು. ಸಮೀಪ ಸಾಮರ್ಥ್ಯಗಳನ್ನು ಪಟ್ಟಿಮಾಡಿಕೊಂಡು ಒಂದೇ ವೇಳೆಯಲ್ಲಿ ಕಲಿಕೆ ನಡೆಯುವಂತೆ ಯೋಜಿಸಬೇಕು. ಎಂದರೆ ಒಂದೇ ವಿಷಯಕ್ಕೆ ಸಂಬಂಧಿಸಿದ ಶ್ರೇಣೀಕೃತ ಸಾಮರ್ಥ್ಯಗಳು ಒಂದೇ ವೇಳೆಯಲ್ಲಿ ಎಲ್ಲಾ ತರಗತಿಗಳಿಗೂ ನಡೆಯುವಂತೆ ನೋಡಿಕೊಳ್ಳಬೇಕು.

ಬಹುವರ್ಗ ಬೋಧನೆ ಶಿಕ್ಷಕರಿಗೆ ಬೋಧನಾಕಾರ್ಯದಲ್ಲಿ ಒಂದು ಸವಾಲೆನಿಸುತ್ತದೆ. ಒಬ್ಬನೇ ಶಿಕ್ಷಕ ವಿವಿಧ ವಯೋಮಿತಿಯ ಮಕ್ಕಳ ಗುಂಪುಗಳನ್ನು ಕೇಂದ್ರೀಕರಿಸಿ ಪರಿಣಾಮಕಾರಿ ಬೋಧನೆಯನ್ನು ಮಾಡಬೇಕು. ವಿವಿಧ ಗುಂಪುಗಳನ್ನು ವ್ಯವಸ್ಥೆಗೊಳಿಸುವ ತಿಳುವಳಿಕೆ ಇದ್ದರೆ ಬಹುವರ್ಗ ಬೋಧನೆಯ ಸಮಸ್ಯೆಗಳನ್ನು ಯಶಸ್ವಿಯಾಗಿ ನಿರ್ವಹಿಸಬಹುದು.

– ಎಸ್.ಜಿ.

## ಬಹು – ಸಂಸ್ಕೃತಿಯ ಶಿಕ್ಷಣ

ಅಮೆರಿಕಾ, ಭಾರತ ಮುಂತಾದ ರಾಷ್ಟ್ರಗಳಲ್ಲಿ ಅನೇಕ ಸಂಸ್ಕೃತಿಗಳನ್ನು ಹೊಂದಿರುವ ಜನ ಸಮುದಾಯಗಳಿವೆ. ಅಮೆರಿಕಾದಲ್ಲಿ ಅಮೆರಿಕಾದ ಮೂಲ ನಿವಾಸಿಗಳು, ಯೂರೋಪಿನ ಬೇರೆ ಬೇರೆ ದೇಶಗಳಿಂದ ಹಿಂದೆ ವಲಸೆ ಬಂದಿರುವವರು ಚೀನೀಯರು ಭಾರತೀಯರು, ಮುಸ್ಲಿಂ ರಾಷ್ಟ್ರಗಳಿಂದ ಬಂದವರು ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಇದೇ ರೀತಿ ಭಾರತದಲ್ಲಿ ಹಿಂದೂಗಳು, ಮುಸ್ಲಿಮರು, ಜೈನರು, ಬೌದ್ಧರು, ಪಾರ್ಸಿ ಜನಾಂಗದವರು ವಾಸಿಸುತ್ತಿದ್ದಾರೆ. ಈ ಎಲ್ಲಾ ಗುಂಪಿನವರೂ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ್ದಾರೆ. ಆದ್ದರಿಂದಲೇ ಅಮೆರಿಕಾ, ಭಾರತ, ಇಂಗ್ಲೆಂಡ್ ಮುಂತಾದ ದೇಶಗಳು ಬಹು–ಸಂಸ್ಕೃತಿ ದೇಶಗಳೆನಿಸಿವೆ. ಬೇರೆ ಬೇರೆ ಸಂಸ್ಕೃತಿಗೆ ಸೇರಿದ ಮಕ್ಕಳಿಗೆ ಶಿಕ್ಷಣ ಕೊಡುವಾಗ ಒಂದು ಪ್ರಧಾನ ಸಂಸ್ಕೃತಿಗೆ ಮಹತ್ವ ನೀಡಿ ಬೇರೆ ಸಂಸ್ಕೃತಿಗಳನ್ನು ಉಪೇಕ್ಷಿಸುವುದು ಒಳ್ಳೆಯದಲ್ಲ ಎಂಬ ತಿಳಿವು ಬಹು–ಸಂಸ್ಕೃತಿ ರಾಷ್ಟ್ರಗಳಲ್ಲಿ ಕಂಡುಬಂದಿದೆ. ಶಿಕ್ಷಣ ವ್ಯವಸ್ಥೆಯಲ್ಲಿನ ಗುರಿಗಳು, ಪಠ್ಯಕ್ರಮ, ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸುವಾಗ ಆ ದೇಶದಲ್ಲಿ ಕಂಡು ಬರುವ ಎಲ್ಲಾ ಸಂಸ್ಕೃತಿಗಳಿಗೂ ಆದ್ಯತೆ ನೀಡಿ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ. ಇಂಥ ಶಿಕ್ಷಣವನ್ನು ಬಹು–ಸಂಸ್ಕೃತಿ ಶಿಕ್ಷಣ (Multi-cultural Education) ಎಂದು ಹೇಳಲಾಗುತ್ತದೆ.

ಅಮೆರಿಕಾ ಸಂಯುಕ್ತ ಸಂಸ್ಥಾನದ ಶಿಕ್ಷಣದಲ್ಲಿ ಸಿದ್ಧಗೊಳಿಸಿದ ಹಲವಾರು ತಂತ್ರಗಳನ್ನು ಮತ್ತು ವಸ್ತುಗಳನ್ನು ಅಲ್ಲಿಯ ಶಿಕ್ಷಕರು ಪ್ರಜಾಪ್ರಭುತ್ವವನ್ನು ಪೋಷಿಸುವ ದೃಷ್ಟಿಯಿಂದ ಬಳಸಿಕೊಂಡರು. ಇದಕ್ಕೆ ಪ್ರಮುಖ ಕಾರಣವೆಂದರೆ ಅತಿ ಶೀಘ್ರವಾಗಿ ಬದಲಾವಣೆಯನ್ನು ಹೊಂದುತ್ತಿರುವ ಅಲ್ಲಿಯ ಸನ್ನಿವೇಶ ಮತ್ತು ಮಕ್ಕಳು. ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದ ಶಿಕ್ಷಕರು ಸಮಾಜದ ಎಲ್ಲಾ ಸ್ಥಳಗಳಿಂದ ಮತ್ತು ಭಾಷೆ ಸಂಸ್ಕೃತಿಯಿಂದ ಬಂದ ಮಕ್ಕಳನ್ನು ಎದುರಿಸಬೇಕಾಗಿದೆ. ವೈವಿಧ್ಯತೆಯಿಂದ ಕೂಡಿರುವ ಎಲ್ಲಾ ಮಕ್ಕಳಿಗಾಗಿ ಒಂದು ನಿರ್ದಿಷ್ಟ ಶಿಕ್ಷಣವ್ಯವಸ್ಥೆಯನ್ನು ರೂಪಿಸುವುದು ಇದರ ಪ್ರಮುಖ ಉದ್ದೇಶ.

ಬಹು ಸಂಸ್ಕೃತಿಯ ಶಿಕ್ಷಣಕ್ಕೆ ತಜ್ಞರುಗಳು ಶಾಲೆಗಳನ್ನು ಮಾರ್ಪಾಡು ಮಾಡುವುದರ ಮೂಲಕ ಎಲ್ಲರಿಗೂ ಶಾಲೆಗಳಲ್ಲಿ ಸೂಕ್ತ ರೀತಿಯ ಅವಕಾಶಗಳನ್ನು ಕಲ್ಪಿಸಿಕೊಡುವಲ್ಲಿ ಶ್ರಮಿಸುತ್ತಿದ್ದಾರೆ. ಬಹು ಸಂಸ್ಕೃತಿಯ ಶಿಕ್ಷಣವು ಕೆಲವು ಪ್ರಮುಖ ಆಯಾಮಗಳನ್ನು ಒಳಗೊಂಡಿದೆ. ಅವುಗಳೆಂದರೆ,

1. ವಸ್ತು ವಿಷಯದ ಸಂಘಟನೆ
2. ಪೂರ್ವಗ್ರಹಗಳಲ್ಲಿ, ನಂಬಿಕೆಗಳಲ್ಲಿ ಇಳಿಕೆ
3. ಸಮಾನತೆ
4. ಸಹ–ಭ್ರಾತೃತ್ವ ಭಾವನೆಯನ್ನು ಮೂಡಿಸುವುದು.
5. ಶಾಲೆ ಮತ್ತು ಸಮಾಜದ ಸಂಸ್ಕೃತಿಯನ್ನು ಸಬಲಗೊಳಿಸುವುದು.
6. ವ್ಯಾಪಕ ರೀತಿಯ ಜ್ಞಾನಾರ್ಜನೆಯ ಪ್ರಕ್ರಿಯೆ.
7. ಎಲ್ಲಾ ಸಂಸ್ಕೃತಿಗಳ ಸ್ಥೂಲ ಪರಿಚಯ ಮಾಡಿಕೊಡುವುದು.

ಈ ರೀತಿಯ ಬಹು ಸಂಸ್ಕೃತಿಯ ಶಿಕ್ಷಣವನ್ನು ಒದಗಿಸಿಕೊಡುವಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಿವೆ.

### ವಿಮರ್ಶಾತ್ಮಕ ಬಹು–ಸಂಸ್ಕೃತಿಯ ಶಿಕ್ಷಣ

ಇದು ಹಲವಾರು ಅಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ,

1. ಜನಾಂಗ, ವರ್ಗ, ಲಿಂಗ ಇವುಗಳು ಪ್ರತಿನಿಧಿತ್ವ ಅಂದರೆ ಶಿಕ್ಷಣದಲ್ಲಿ ಎಲ್ಲಾ ವರ್ಗದವರಿಗೆ, ಎಲ್ಲಾ ಸಂಸ್ಕೃತಿ ಗುಂಪುಗಳಿಗೆ ಸೂಕ್ತ ಅವಕಾಶ ಸಲ್ಲಿಸುವುದು.
2. ಬಹು–ಸಂಸ್ಕೃತಿಯನ್ನು ಪ್ರತಿನಿಧಿಸುವ ಪಠ್ಯಕ್ರಮದ ರಚನೆ ಮತ್ತು ಅದರ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಕಟ್ಟಳೆಗಳಲ್ಲಿ ಬದಲಾವಣೆಯನ್ನು ಉಂಟುಮಾಡುವುದು.
3. ಅಧಿಕಾರ ಮತ್ತು ಅರ್ಹತೆಯನ್ನು ಹೊಂದುವಲ್ಲಿ ಜನಾಂಗ, ವರ್ಗ, ಲಿಂಗ ಇವುಗಳ ಪಾತ್ರಕ್ಕೆ ಮಹತ್ವ ಕೊಡುವುದು.
4. ಬಹು–ಸಂಸ್ಕೃತಿಯ ಶಿಕ್ಷಣವು ಹಲವು ವ್ಯತ್ಯಾಸಗಳಲ್ಲಿನ ಸಮಗ್ರತೆಯನ್ನು ಸೂಚಿಸುತ್ತದೆ.

ಬಹು ಸಂಸ್ಕೃತಿಯ ಶಿಕ್ಷಣವು ಒಂದು ಇತ್ತೀಚಿನ ಬೆಳವಣಿಗೆ ಯಾಗಿದ್ದು ಅದರ ಮೂಲಕ ಯಾವುದೇ ಒಬ್ಬ ವ್ಯಕ್ತಿಯು ಬೇರೆ ಬೇರೆ ಸಂಸ್ಕೃತಿಗಳಿಂದ ತನ್ನ ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆಯುವ ಮೂಲಕ ತನ್ನನ್ನು ತಾನು ಸರಿಯಾಗಿ ಆ ಸನ್ನಿವೇಶಕ್ಕೆ ಹೊಂದಿಸಿಕೊಳ್ಳಲು ಮತ್ತು ಬೇರೆ ಸಂಸ್ಕೃತಿಯವರೊಂದಿಗೆ ಒಡನಾಡಲು ಸಾಧ್ಯವಿದೆ.

Digitised by Bharatavani, CIIL

ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಬಹು–ಸಂಸ್ಕೃತಿ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಪಠ್ಯಕ್ರಮದಲ್ಲಿ ಪ್ರಮುಖ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಅಂದರೆ ಸಂಸ್ಕೃತಿ, ಧಾರ್ಮಿಕ ನಾಯಕರ ಜೀವನ ಚರಿತ್ರೆ, ಧಾರ್ಮಿಕ ಗುರುಗಳ ಜೀವನ ಚರಿತ್ರೆ, ಪ್ರಮುಖ ಹಬ್ಬ, ಉತ್ಸವಗಳು ಮುಂತಾದವುಗಳ ಬಗ್ಗೆ ಪಠ್ಯಕ್ರಮದಲ್ಲಿ ಮಾಹಿತಿಯನ್ನು ಸೇರಿಸಲಾಗಿದೆ. ಮುಖ್ಯ ಸಾಂಸ್ಕೃತಿಕ ಘಟನೆಗಳಿಗೆ, ಉತ್ಸವಗಳಿಗೆ ರಜೆ ಘೋಷಿಸಲಾಗಿದೆ. ಇತಿಹಾಸ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪಠ್ಯವಸ್ತುವನ್ನು ಸೇರಿಸಲಾಗಿದೆ. ಸಂಸ್ಕೃತಿಗಳ ಅಧ್ಯಾಪಕರು ಬೋಧನೆ ಮಾಡುವಾಗ ಎಲ್ಲಾ ಸಂಸ್ಕೃತಿಗಳು ಸಮಾನ, ಅವುಗಳನ್ನು ಮೇಲು ಕೀಳು ಎಂದು ವರ್ಗೀಕರಿಸುವಂತಿಲ್ಲ, ಎಲ್ಲಾ ಸಂಸ್ಕೃತಿಗಳು ತಮ್ಮದೇ ಆದ ಉತ್ತಮ, ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ ಎನ್ನುವ ಅರಿವನ್ನು ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ ಮೂಡಿಸುವ ಪ್ರಯತ್ನ ಮಾಡಬೇಕು.

–ಎಂ.ಎಸ್.ತ.

## ಬಾಲಕಿಯರ ಶಿಕ್ಷಣ

ಬಾಲಕಿಯರ ಶಿಕ್ಷಣವು ಬಹುದೀರ್ಘಕಾಲದಿಂದ ಹಲವು ಹಂತಗಳ ಮುಖಾಂತರ ಸಾಗುತ್ತಾ ಬಂದಿದೆ. ವೇದಕಾಲದಲ್ಲಿ ಸ್ತ್ರೀಯರ ಸ್ಥಾನಮಾನ ಗೌರವಯುತವಾಗಿತ್ತು. ಆಗಿನ ಕಾಲದಲ್ಲಿ ಸಮಾಜವು ಪುರುಷಪ್ರಧಾನವಾಗಿದ್ದರೂ ಸ್ತ್ರೀಯರಿಗೆ ಸೂಕ್ತ ಶೈಕ್ಷಣಿಕ ಸಮಾನಾವಕಾಶಗಳನ್ನು ನೀಡಲಾಗಿತ್ತು. ಋಗ್ವೇದದ ಕೃತಿ ರಚನೆಯಲ್ಲಿ ಸುಮಾರು 20–27 ಜನ ಬ್ರಹ್ಮವಾದಿನಿಯರು ಸೂತ್ರಗಳನ್ನು ರಚಿಸಿದ್ದಾರೆ. ಉದಾ. ಗೋದಾ, ಘೋಷಾ, ವಿಶ್ವವರಾ ಅಪಲಾ, ಲೋಪಮುದ್ರಾ, ನೀವಾವರಿ ಮೊದಲಾದವರು. ಆಗಿನ ಕಾಲದ ಸ್ತ್ರೀಯರಲ್ಲಿ ಬ್ರಹ್ಮಚಾರಿಣಿಯರಾದ ಬ್ರಹ್ಮವಾದಿನಿಯರು ಗಾರ್ಗಿ, ಆತ್ರೇಯ, ಸುಲಭಾ, ಶಬರಿ ಮೊದಲಾದವರು ಮತ್ತು ಆತ್ಮ ವಿದ್ಯೆಯನ್ನರಿತ ಮೈತ್ರೇಯಿಯಂಥ ಗೃಹಿಣಿಯರು ಇದ್ದರು. ಅಂದಿನ ಮಹಿಳೆಯರಿಗೆ ಲಲಿತಕಲೆಗಳಲ್ಲಿಯೂ ಪ್ರಾಶಸ್ತ್ಯವಿತ್ತು. ಸಂಗೀತ, ನೃತ್ಯ, ವಾದ್ಯಗಳನ್ನು ನುಡಿಸುವಲ್ಲಿ ನೈಪುಣ್ಯವನ್ನು ಹೊಂದಿದ್ದರು. ಸ್ತ್ರೀಯರಿಗೆ ಯುದ್ಧ ಕಲೆಯನ್ನು ಕರಗತ ಮಾಡಿಕೊಳ್ಳಲು ತರಬೇತಿ ನೀಡಲಾಗುತ್ತಿತ್ತು.

ಬೌದ್ಧರ ಕಾಲದಲ್ಲಿಯೂ ಬಾಲಕಿಯರಿಗೆ ಶಿಕ್ಷಣ ಪಡೆಯಲು ಸಮಾನಾವಕಾಶಗಳನ್ನು ಕಲ್ಪಿಸಿಕೊಡಲಾಗಿತ್ತು. ಸ್ತ್ರೀಯರು ಬೌದ್ಧ ಸಂಘಗಳನ್ನು ಸೇರಲು ಭಗವಾನ್ ಬುದ್ಧ ಅನುಮತಿಯನ್ನು ನೀಡಿದನು. ಬೌದ್ಧ ಧರ್ಮವು ಬಹುಸಂಖ್ಯಾತ ಮಹಿಳೆಯರನ್ನು ಆಕರ್ಷಿಸಿತ್ತು. ಅಶೋಕ ಸಾಮ್ರಾಟನ ಹಿರಿಯ ಮಗಳಾದ ಸಂಘಮಿತ್ರೆಯು ಶ್ರೀಲಂಕಾಕ್ಕೆ ಬೌದ್ಧ ಧರ್ಮ ಪ್ರಚಾರಕ್ಕೆ ಹೋಗಿದ್ದಳು. ಶುಭ, ಅನುವಷು, ಸುಮೇಧ ಮುಂತಾದವರು ಬೌದ್ಧ ಧರ್ಮದ ಪ್ರಚಾರದಲ್ಲಿ ಪ್ರಮುಖರು.

ಮುಸ್ಲಿಂರ ಕಾಲದಲ್ಲಿ ಪರದಾ ಪದ್ಧತಿ ಮತ್ತು ಬಾಲ್ಯವಿವಾಹದಂತಹ ಕಟ್ಟುನಿಟ್ಟಿನ ಸಾಮಾಜಿಕ ಪದ್ಧತಿಗಳಿಂದಾಗಿ ಬಾಲಕಿಯರ ಶಿಕ್ಷಣ ಸ್ಥಗಿತಗೊಂಡಿತು. ಸಾಮಾನ್ಯ ಕುಟುಂಬದ ಬಾಲಕಿಯರಿಗೆ ಶಿಕ್ಷಣ ಪಡೆಯಲು ಅವಕಾಶವೇ ಇರಲಿಲ್ಲ. ಆದರೆ ರಾಜಮಹಾರಾಜರ ಮತ್ತು ಶ್ರೀಮಂತ ಕುಟುಂಬಗಳ ಬಾಲಕಿಯರಿಗೆ ತಮ್ಮ ತಮ್ಮ ಮನೆಯಲ್ಲಿಯೇ ಶಿಕ್ಷಣ ದೊರೆಯುತ್ತಿತ್ತು. ಗುಲಬದನ್ ಬೇಗಂ, ಸಲೀಮಾ ಸುಲ್ತಾನಾ, ನೂರಜಹಾನ್, ಮುಮ್ತಾಜ್ ಮಹಲ್ ಮತ್ತು ಜಹನಾರಾ ಬೇಗಮ್ ಮೊದಲಾದ ಪ್ರಸಿದ್ಧ ಮಹಿಳೆಯರು ಉನ್ನತ ಶಿಕ್ಷಣ ಪಡೆದಿದ್ದರು.

ಕರ್ನಾಟಕದ ಬಾದಾಮಿ ಚಾಲುಕ್ಯರ ವಿಜಯಿಕಾ, ಶೀಲ ಭಟ್ಟಾರಿಕಾ, ಸುಗಂಧಾ, ಚಾಲುಕ್ಯರ ಅಕ್ಕಾದೇವಿ, ಮೈಳಾದೇವಿ, ಲಕ್ಷ್ಮೀದೇವಿ, ಗುಜರಾತದ ಕರ್ಣಾದೇವಿ, ಮಹಾರಾಷ್ಟ್ರದ ಅಹಲ್ಯಾದೇವಿ, ತಾರಾಬಾಯಿ, ಝಾನ್ಸಿರಾಣಿ ಲಕ್ಷ್ಮಿಬಾಯಿ, ಕರ್ನಾಟಕದ ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ ಮಂಗಳೂರಿನ ರಾಣಿ ಅಬ್ಬಕ್ಕಾದೇವಿ ಮೊದಲಾದವರು ಶಿಕ್ಷಣ ಪಡೆದಿದ್ದ ಮಹಿಳೆಯರೆಂದು ಹೆಸರುವಾಸಿಯಾಗಿದ್ದರು. ಆದರೆ ಭಾರತೀಯ ಸಮಾಜದ ಸಾಮಾನ್ಯ ವರ್ಗದ ಸ್ತ್ರೀಯರು ಕತ್ತಲೆಯ ಸೆರೆಯಾಳಾಗಿದ್ದರು. ಆದರೆ 12ನೆಯ ಶತಮಾನದಲ್ಲಿ ಬಸವಣ್ಣನವರಂತಹ ಶಿವಶರಣರಿಂದ ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆಯಿತು. ಹೀಗಾಗಿ ಅನೇಕ ಸ್ತ್ರೀಯರು ವಚನಕಾರ್ತಿಯರಾದರು. ಉದಾ: ಅಕ್ಕಮಹಾದೇವಿ, ಮುಕ್ತಾಯಕ್ಕ.

ಬ್ರಿಟಿಷರ ಅವಧಿಯಲ್ಲಿ ಬಾಲಕಿಯರ ಶಿಕ್ಷಣದ ವಿಷಯದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಯಾವುದೇ ಆಸಕ್ತಿಯನ್ನು ತೋರಿಸಲಿಲ್ಲ. ಪ್ರೊಟೆಸ್ಟಂಟ್ ಮತ್ತು ರೋಮನ್ ಕೆಥೊಲಿಕ್ ಮಿಶನರಿಗಳು ಬಾಲಕಿಯರ ಶಿಕ್ಷಣದ ವಿಸ್ತರಣೆಗಾಗಿ ಕೆಲವೊಂದು ಪ್ರಯತ್ನಗಳನ್ನು ಮಾಡಿದವು ಅವುಗಳು ಇಂತಿವೆ:

1. ಕ್ರಿ.ಶ. 1854ರ ವುಡ್ ವರದಿಯ ಪ್ರಕಾರ, ಮದ್ರಾಸಿನ ಶಾಲೆಗಳಲ್ಲಿ 250 ಬಾಲಕಿಯರು, ಮುಂಬಯಿಯಲ್ಲಿ 65 ಬಾಲಕಿಯರು, ಬಂಗಾಳದಲ್ಲಿ 288 ಬಾಲಕಿಯರು ಮತ್ತು ಆಗ್ನೇಯ ಪ್ರಾಂತದಲ್ಲಿ 17 ಬಾಲಕಿಯರು ಶಾಲಾ ದಾಖಲಾತಿ ಪಡೆದಿದ್ದರು.
2. ಕ್ರಿ.ಶ. 1882ರಲ್ಲಿ ಬಾಲಕಿಯರಿಗಾಗಿ 2,600 ಪ್ರಾಥಮಿಕ ಶಾಲೆಗಳು 81 ಮಾಧ್ಯಮಿಕ ಶಾಲೆಗಳು 15 ತರಬೇತಿ ಸಂಸ್ಥೆಗಳು ಮತ್ತು ಒಂದು ಮಹಾವಿದ್ಯಾಲಯ ಇದ್ದುದು ತಿಳಿದು ಬರುತ್ತದೆ.
3. 1882–83ರ ಹಂಟರ ಆಯೋಗವು ಸಾರ್ವಜನಿಕ ನಿಧಿಯ ಬಹುಪಾಲು ಹಣವನ್ನು ಮತ್ತು ಬೇರೆ ರೀತಿಯ ಧನಸಹಾಯವನ್ನು ಸ್ತ್ರೀಶಿಕ್ಷಣದ ಬೆಳವಣಿಗೆಗಾಗಿ ಒದಗಿಸಬೇಕೆಂದು ಶಿಫಾರಸ್ಸು ಮಾಡಿತು.
4. ಬ್ರಹ್ಮಸಮಾಜ, ಪಾರ್ಸಿಗಳು ಮತ್ತು ಭಾರತೀಯ ಕ್ರಿಶ್ಚಿಯನ್‌ರು ಕೂಡಾ ಕೆಲವೊಂದು ಬಾಲಕಿಯರ ಶಾಲೆಗಳನ್ನು ಪ್ರಾರಂಭಿಸಿದರು. ಅವರೆಲ್ಲರ ಹಲವು ಪ್ರಯತ್ನಗಳಿಂದಾಗಿ ಕ್ರಿ.ಶ. 1903ರ ವೇಳೆಗೆ ಬಾಲಕಿಯರ ಶಿಕ್ಷಣ ಸಂಸ್ಥೆಗಳು ಈ ಕೆಳಗಿನಂತಿದ್ದವು.

   ಅ. ಪ್ರಾಥಮಿಕ ಶಾಲೆಗಳು 5650

   ಬ. ಮಾಧ್ಯಮಿಕ ಶಾಲೆಗಳು 408

   ಕ. ಮಹಾವಿದ್ಯಾಲಯಗಳು 12

   ಡ. ತರಬೇತಿ ಸಂಸ್ಥೆಗಳು 45
5. ಮೊಟ್ಟಮೊದಲು ಸ್ತ್ರೀಯರಿಗಾಗಿ ಲೇಡಿ ಹಾರ್ಡಿಂಗ್ ವೈದ್ಯಕೀಯ ಮಹಾವಿದ್ಯಾಲಯ ಇದ್ದಿತು. ಕ್ರಿ.ಶ. 1917ರಲ್ಲಿ ಶ್ರೀಮತಿ ಆ್ಯನಿಬೆಸಂಟ್ ಅವರ ಅಧ್ಯಕ್ಷತೆಯಲ್ಲಿ Womens Indian Association ಅಸ್ತಿತ್ವದಲ್ಲಿತ್ತು. ಬಾಲಕಿಯರ ಶಿಕ್ಷಣವನ್ನು ವ್ಯವಸ್ಥಿತ ರೀತಿಯಲ್ಲಿ ಪ್ರಸಾರ ಮಾಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು.
6. ಕ್ರಿ.ಶ. 1946–47ರ ಹೊತ್ತಿಗೆ ಬಾಲಕಿಯರಿಗಾಗಿ ಅನೇಕ ಶಿಕ್ಷಣ ಸಂಸ್ಥೆಗಳು ಪ್ರಾರಂಭಿಸಲ್ಪಟ್ಟವು. ಅವು ಇಂತಿವೆ.

   ಅ. ಪ್ರಾಥಮಿಕ ಶಾಲೆಗಳು 21479

   ಬ. ಪ್ರೌಢಶಾಲೆಗಳು 2370

   ಕ. ವೃತ್ತಿಪರ ಮತ್ತು ತಾಂತ್ರಿಕ ಸಂಸ್ಥೆಗಳು 288

   ಡ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯಗಳು 59.

Digitised by Bharatavani, CIIL

1947ರಿಂದ ಸ್ವತಂತ್ರ ಭಾರತದಲ್ಲಿ ಬಾಲಕಿಯರ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆಯಲಾರಂಭಿಸಿ ಭಾರತ ಸರಕಾರವು ಪಂಚವಾರ್ಷಿಕ ಯೋಜನೆಗಳ ಮುಖಾಂತರ ಬಾಲಕಿಯರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿತು.

1948–49ರ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ನಿರ್ದಿಷ್ಟವಾಗಿ ವಿಶ್ವವಿದ್ಯಾಲಯ ಶಿಕ್ಷಣ ಕುರಿತು ಅಧ್ಯಯನ ಮಾಡಿ ಕಾಲೇಜುಗಳಲ್ಲಿ ಮಹಿಳೆಯರಿಗೆ ಸಾಮಾನ್ಯ ಸೌಲಭ್ಯಗಳನ್ನು ಸಮಾನವೇತನ, ಶೈಕ್ಷಣಿಕ ಅವಕಾಶ ಮತ್ತು ಮಾರ್ಗದರ್ಶನಗಳನ್ನು ಹೆಚ್ಚಿಸುವುದು, ಶಿಕ್ಷಣದಲ್ಲಿ ಸಮಾನ ಅಂಶಗಳು ಹಾಗೂ ಸಾಮಾನ್ಯ ಮಾನವ ಸ್ಥಾನಮಾನದ ಅವಶ್ಯಕತೆಯನ್ನು ಎತ್ತಿ ಹಿಡಿಯಿತು.

1959ರ ಮಹಿಳೆಯರ ಶಿಕ್ಷಣದ ರಾಷ್ಟ್ರೀಯ ಸಮಿತಿಯು ಬಾಲಕಿಯರಿಗೆ ಸಾರ್ವತ್ರಿಕ ಶಿಕ್ಷಣ, ವಿಚಾರಗೋಷ್ಠಿಗಳು, ಮುಂದುವರೆದ ಶಿಕ್ಷಣ ತಾಂತ್ರಿಕ ಶಿಕ್ಷಣ, ವಿದ್ಯಾರ್ಥಿವೇತನ ನೀಡಬೇಕೆಂದು ಶಿಫಾರಸ್ಸು ಮಾಡಿತು.

1964ರ ಮಹಿಳೆಯ ಶಿಕ್ಷಣದ ರಾಷ್ಟ್ರೀಯ ಸಮಿತಿಯು ಶಾಲಾ ಶಿಕ್ಷಣದ ವಯಸ್ಸಿನ ಬಾಲಕಿಯರ ಹಾಗೂ ವಯಸ್ಕ ಮಹಿಳೆಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ನೀಡಲು ನೇಮಿಸಲ್ಪಟ್ಟಿತು.

ಮಹಿಳೆಯರ ಶಿಕ್ಷಣಕ್ಕಾಗಿ ಶ್ರೀಮತಿ ಹನ್ಸಾ ಮೆಹತಾ ಸಮಿತಿ ಪ್ರಾಥಮಿಕ ಮಟ್ಟದಲ್ಲಿ ಸಹ ಶಿಕ್ಷಣವನ್ನು ಶಿಫಾರಸ್ಸು ಮಾಡಿತಲ್ಲದೆ ಆರಂಭಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಯಾವ ಭೇದವೂ ಇರಬಾರದೆಂದೂ ಶಾಲೆಗಳಲ್ಲಿ ಶಿಕ್ಷಕಿಯರ ಪ್ರಮಾಣ ಹೆಚ್ಚಿಸಬೇಕೆಂದೂ ಶಿಫಾರಸ್ಸು ಮಾಡಿತು.

1963ರ ಭಕ್ತವತ್ಸಲಂ ಸಮಿತಿಯು ಬಾಲಕಿಯರ ಶಿಕ್ಷಣವನ್ನು ಜನಪ್ರಿಯಗೊಳಿಸಲು ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಅವುಗಳಲ್ಲಿ ಬಾಲಕಿಯರಿಗಾಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆದು ಈ ಶಾಲೆಗಳನ್ನು ಪ್ರಾಥಮಿಕ ಶಾಲೆಗಳಿಗೆ ಹೊಂದಿಸಬೇಕೆಂಬುದೂ ಹೆಚ್ಚು ಆಕರ್ಷಕ ಶಾಲಾ ಕಾರ್ಯಗಳನ್ನು ಒದಗಿಸುವುದರ ಜೊತೆಗೆ ಶಿಕ್ಷಕಿಯರನ್ನು ನೇಮಿಸಬೇಕೆಂದು ಶಿಫಾರಸ್ಸು ಮಾಡಿತು.

1964–66ರ ಡಾ. ಕೊಠಾರಿ ಆಯೋಗವು ಶಿಕ್ಷಣದ ವ್ಯಾಪಕತೆ ಹಾಗೂ ಅಭಿವೃದ್ಧಿಗಾಗಿ ಕೈಗೊಳ್ಳುವ ಸಾಮಾನ್ಯ ಕಾರ್ಯಕ್ರಮಗಳಲ್ಲಿ ಎಲ್ಲ ಹಂತಗಳಲ್ಲಿಯೂ, ಎಲ್ಲ ಕ್ಷೇತ್ರಗಳಲ್ಲಿಯೂ ಬಾಲಕಿಯರ ಶಿಕ್ಷಣವು ಅವಿಭಾಜ್ಯ ಅಂಶವಾಗಬೇಕೆಂದು ಒತ್ತಿ ಹೇಳಿದೆ. ವಿಶೇಷ ಯೋಜನೆಗಳು ಹಾಗೂ ವಿಶೇಷ ಕಾರ್ಯಯಂತ್ರಗಳ ಮೂಲಕ ಈಗಿರುವ ಅಂತರವನ್ನು ಸಾಧ್ಯವಾದಷ್ಟು ಬೇಗನೆ ನಿವಾರಿಸಬೇಕೆಂದು ಹೇಳಿದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣವನ್ನು ಸ್ತ್ರೀಯರ ಸ್ಥಾನಮಾನ ಹೆಚ್ಚಿಸಲು ಮತ್ತು ಸ್ತ್ರೀಸಬಲೀಕರಣಕ್ಕಾಗಿ, ಸಮಾನತೆಗಾಗಿ ಶಿಕ್ಷಣವನ್ನು ಒತ್ತಿಹೇಳಿದೆ. ಮಹಿಳಾ ಅಧ್ಯಯನವನ್ನು ಪ್ರೋತ್ಸಾಹಿಸುವುದು ಅನಕ್ಷರತೆಯ ನಿರ್ಮೂಲನೆ ಮತ್ತು ತಾಂತ್ರಿಕ ಹಾಗೂ ಔದ್ಯೋಗಿಕ ಶಿಕ್ಷಣದಲ್ಲಿ ಮಹಿಳೆಯರ ಸಹಭಾಗಿತ್ವಗಳೂ ಅವಶ್ಯವಾಗಿದೆ.

ಇವೆಲ್ಲವುಗಳ ಜೊತೆಗೆ ಬಾಲಕಿಯರ ಶಿಕ್ಷಣವನ್ನು ಉತ್ತೇಜಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ.

ರಾಜ್ಯ ಶಿಕ್ಷಣ ನಿರ್ದೇಶನಾಲಯಗಳೆಲ್ಲ ಬಾಲಕಿಯರ ಶಿಕ್ಷಣ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಪ್ರತ್ಯೇಕ ವಿಭಾಗಗಳು ಇವೆ.

ಬಾಲಕಿಯರಿಗಾಗಿ ಪಾಲಿಟೆಕ್ನಿಕ್‌ಗಳ ಸ್ಥಾಪನೆ ಹಾಗೂ ವೃತ್ತಿಪರ ಕೋರ್ಸ್‌ಗಳನ್ನೂ ಆರಂಭಿಸಲಾಗಿದೆ.

ಬಾಲಕಿಯರ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ನೀಡಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕಿಯರ ವಾಸಕ್ಕಾಗಿ ಗೃಹನಿರ್ಮಾಣ, ಬಾಲಕಿಯರ ವಸತಿನಿಲಯಗಳ ಸ್ಥಾಪನೆ ಮಾಡಲಾಗಿದೆ.

ಬಾಲಕಿಯರ ಶಿಕ್ಷಣದ ಸಮಸ್ಯೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಚರ್ಚಿಸಲು ಬೇರೆ ಬೇರೆ ರಾಜ್ಯಗಳಲ್ಲಿ ವಿಚಾರಗೋಷ್ಠಿಗಳನ್ನು ಏರ್ಪಡಿಸುತ್ತಿದ್ದಾರೆ.

ರಾಷ್ಟ್ರಮಟ್ಟದಲ್ಲಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಆರಂಭವಾಗಿರುವ ಸರ್ವಶಿಕ್ಷಣ ಅಭಿಯಾನದಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳಿಗಾಗಿ ಅದರಲ್ಲೂ ವಿಶೇಷವಾಗಿ ಬಾಲಕಿಯರಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿಯೂ ಈ ದಿಶೆಯಲ್ಲಿ ಒಳ್ಳೆಯ ಪ್ರಗತಿ ಕಂಡು ಬಂದಿದೆ.

### ಬಾಲಕಿಯರ ಶಿಕ್ಷಣದ ಅವಶ್ಯಕತೆ

ಮಾನವ ಸಂಪನ್ಮೂಲಗಳ ಪೂರ್ಣ ವಿಕಾಸಕ್ಕೆ ನಮ್ಮ ಕುಟುಂಬಗಳ ಅಭಿವೃದ್ಧಿಗೆ, ಪ್ರಭಾವಯುತವಾದ ವಯಸ್ಸಿನಲ್ಲಿ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದಕ್ಕೆ ಮಹಿಳೆಯರ ಅಭಿವೃದ್ಧಿ ಮತ್ತು ಶಿಕ್ಷಣವು ಅತ್ಯಂತ ಪ್ರಮುಖವಾದುದು. ಬಾಲಕಿಯರಿಗೆ ಶಿಕ್ಷಣದ ಅವಕಾಶ ಖಚಿತಪಡಿಸುವುದು, ಗುಣಮಟ್ಟ ಉತ್ತಮಪಡಿಸುವುದು, ಮತ್ತು ಅವರ ಸಕ್ರಿಯ ಸಹಭಾಗಿತ್ವದ ಮಾರ್ಗದಲ್ಲಿ ಬರುವ ಪ್ರತಿ ಅಡ್ಡಿ–ಆತಂಕಗಳನ್ನು ನಿವಾರಿಸುವುದು ಅತಿ ತುರ್ತು ಕಾರ್ಯವಾಗಿದೆ.

1989ರಲ್ಲಿ ರೂಪುಗೊಂಡ ಮಕ್ಕಳ ಹಕ್ಕುಗಳ ಸಮಾವೇಶವು ಎಲ್ಲ ಬಾಲಕ–ಬಾಲಕಿಯರಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ಹಕ್ಕನ್ನು ಬೇಡಿತು. ಇದು ಈಗಾಗಲೇ ಈಡೇರಿದೆ. ಭಾರತ ಸಂವಿಧಾನದ 28ನೇ ವಿಧಿಯು ಶಿಕ್ಷಣ ಒಂದು ಹಕ್ಕೆಂದೂ ಸಮಾನ ಅವಕಾಶಗಳ ಆಧಾರದ ಮೇಲೆ ಅದನ್ನು ಸಾಧಿಸಬೇಕೆಂದು ಹೇಳಿದೆ. ಆದರೆ ಇಂದಿಗೂ ಪ್ರಾಥಮಿಕ ಶಿಕ್ಷಣದಿಂದ ಹೊರಗಿರುವ ಮಕ್ಕಳಲ್ಲಿ ಸುಮಾರು 2/3ರಷ್ಟು ಬಾಲಕಿಯರೇ ಇದ್ದಾರೆಂಬುದು ಶೋಚನೀಯ ಸಂಗತಿ.

ಬಾಲಕಿಯರಿಗೆ ಶಿಕ್ಷಣ ಎಂದ ಮೇಲೆ ಅವರು ಬೆಳೆದು ಸ್ತ್ರೀಯರಾದಾಗ ಸಮುದಾಯದಲ್ಲಿ ರಾಜಕೀಯ ಮತ್ತು ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವ ಕ್ರಿಯೆಯಲ್ಲಿ ಭಾಗವಹಿಸುವ ಹಕ್ಕನ್ನು ಚಲಾಯಿಸಲು ಸಮರ್ಥರಾಗುವರು ಅಲ್ಲದೆ ಮನೆಗಳಲ್ಲಿಯೂ ಸಮುದಾಯದಲ್ಲಿಯೂ ಅಭಿವೃದ್ಧಿಯ ಯತ್ನಗಳಲ್ಲಿ ಸಹಭಾಗಿಗಳಾಗುವರು. ಒಬ್ಬ ಸುಶಿಕ್ಷಿತ ಮಹಿಳೆಯು ಹೆಚ್ಚು ಸ್ವತಂತ್ರವಾದ ವೈಯಕ್ತಿಕ ರಾಜಕೀಯ ಮತ್ತು ಆರ್ಥಿಕ ನಿರ್ಧಾರಗಳನ್ನು ಮಾಡುವರು. ಜನಸಂಖ್ಯಾ ಸ್ಫೋಟದಿಂದ ಆಗುವ ಅವಘಡಗಳ್ನು ಅರಿತು ಚಿಕ್ಕ ಗಾತ್ರದ ಕುಟುಂಬ ಹೊಂದಲು ಬಯಸುವರು.

### ಬಾಲಕಿಯರ ಶಿಕ್ಷಣದ ಸಮಸ್ಯೆಗಳು

1. ಭಾರತೀಯರು ಸಂಪ್ರದಾಯ ಶರಣರು. ನಮ್ಮ ಸಂಪ್ರದಾಯಸ್ಥರು ಹೊಂದಿರುವ ಸುಶಿಕ್ಷಿತ ಬಾಲಕಿಯರು ನೀತಿಗೆಡುತ್ತಾರೆ ಎಂಬ ತಪ್ಪು ಕಲ್ಪನೆ, ಪರದಾ ಪದ್ಧತಿ ಹಾಗೂ ಬಾಲ್ಯವಿವಾಹಗಳು ಬಾಲಕಿಯರು ಶಿಕ್ಷಣ ಪಡೆಯಲು ಅಡ್ಡಿಯಾಗಿವೆ.

2. ಅನೇಕ ಪೋಷಕರು ಅಜ್ಞಾನದಿಂದಾಗಿ ಬಾಲಕಿಯರು ಎಷ್ಟೇ ಕಲಿತರೂ ಕೊಟ್ಟ ಮನೆಗೆ ಹೋಗುವವರು ಅವಳಿಂದ ನಮಗೇನು

Digitised by Bharatavani, CIIL

ಲಾಭ ಎಂದು ಕಲಿಸುವುದನ್ನು ನಿಲ್ಲಿಸಿ ಮನೆಗೆಲಸಕ್ಕೆ ಹಚ್ಚುತ್ತಾರೆ ಅಥವಾ ವಿವಾಹ ಮಾಡುತ್ತಾರೆ ಎಂದು ತಿಳಿದಿದ್ದಾರೆ.

3. ಬಡತನವು ಭಾರತಕ್ಕೆ ಅಂಟಿದ ಶಾಪ. ಅಸಂಖ್ಯಾತ ಜನರು ಬಹುಮಟ್ಟಿಗೆ ಆರ್ಥಿಕ ಮುಗ್ಗಟ್ಟಿನಲ್ಲಿ ತೊಳಲಾಡುತ್ತಿರುವರು. ಬಡತನದಿಂದಾಗಿ ತೀರಾ ಕೆಳವರ್ಗದ ಕುಟುಂಬಗಳ ಬಾಲಕಿಯರು ಶಿಕ್ಷಣ ಪಡೆಯಲಾಗಿಲ್ಲ.

4. ಶಿಕ್ಷಣ ಕ್ಷೇತ್ರದಲ್ಲಿ ಸ್ತ್ರೀಯರಿಗೆ ಪ್ರತ್ಯೇಕವಾಗಿ ಶಿಕ್ಷಣ ನೀಡುವ ಶಾಲೆಗಳ ಸಂಖ್ಯೆ ಸಾಕಾಗುವಷ್ಟಿಲ್ಲ. ನಗರ ಪ್ರದೇಶಗಳು ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿವೆಯಾದರೂ ಅಲ್ಲಿಯೂ ಕೂಡಾ ಬಾಲಕಿಯರಿಗಾಗಿ ಹೆಚ್ಚಿನ ಪ್ರತ್ಯೇಕ ಶಾಲೆಗಳಿಲ್ಲ.

5. ಶಿಕ್ಷಕಿಯರ ಕೊರತೆ ಸ್ತ್ರೀಯರ ಜೈವಿಕ ಸಮಸ್ಯೆಗಳನ್ನು ಅರಿಯಲು ಸ್ತ್ರೀಯರೇ ಸೂಕ್ತ. ಆದರೆ ಗ್ರಾಮೀಣ ಮತ್ತು ನಗರ ಪ್ರದೇಶದ ಶಾಲೆಗಳಲ್ಲಿ ಶಿಕ್ಷಕಿಯರ ಕೊರತೆಯಿದೆ.

6. ಸಾಮಾಜಿಕ, ಆರ್ಥಿಕ, ವೈಯಕ್ತಿಕ ಮತ್ತು ಕೌಟುಂಬಿಕ ಕಾರಣಗಳಿಂದಾಗಿ ಬಾಲಕಿಯರ ಶಿಕ್ಷಣ ಕುಂಠಿತಗೊಂಡಿದೆ.

7. ಈಗಿನ ಪಠ್ಯಕ್ರಮವು ಬಾಲಕಿಯರ ಭಾವೀ ಜೀವನಕ್ಕೆ ಹಾಗೂ ಸಾಮಾಜಿಕ, ಆರ್ಥಿಕ ಜೀವನಕ್ಕೆ ಪೂರಕವಾಗಿಲ್ಲ, ಪ್ರಚಲಿತ ಪಠ್ಯಕ್ರಮವು ಬಾಲಕರ ಕೇಂದ್ರಿತ (Boys centred) ಬಾಲಕಿಯರ ಅಗತ್ಯಗಳಿಗೆ ಪಠ್ಯಕ್ರಮದಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲ.

–ಎನ್.ಬಿ.ಕೊ

## ಬಾಲ್ಯಾವಸ್ಥೆಯಲ್ಲಿ ದೈಹಿಕ ಮತ್ತು ಗತ್ಯಾತ್ಮಕ ವಿಕಾಸ

ಬೆಳವಣಿಗೆ ಎಂಬುದೊಂದು ಪರಿಮಾಣಾತ್ಮಕ ಸ್ವರೂಪದ ಬದಲಾವಣೆ ಸೂಚಿಸುತ್ತದೆ. ವಿಕಾಸ ಎಂಬ ಪದ ಗುಣಾತ್ಮಕ ಬದಲಾವಣೆಗಳನ್ನು ಸೂಚಿಸಲು ಬಳಸುವರು. ಹಾಗಾಗಿ ಬೆಳವಣಿಗೆ ವಿಕಾಸದ ಒಂದು ಭಾಗವಾಗಿದ್ದು ಜೀವನಾವಧಿಯ ಹಂತಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

| ಹಂತಗಳು | ವಯಸ್ಸು |
|---|---|
| ಪ್ರಸವ ಪೂರ್ವ | ಗರ್ಭಧಾರಣೆಯಿಂದ ಜನನದವರೆಗೆ |
| ಶೈಶವ | ಜನನದಿಂದ 2 ವಾರದೊಳಗೆ |
| ಹಸುಳೆತನ | 2ನೇ ವಾರದ ಕೊನೆಯಿಂದ 2 ವರ್ಷಗಳವರೆಗೆ |
| ಪೂರ್ವ ಬಾಲ್ಯ | 2ನೇ ವರ್ಷದಿಂದ 6ನೇ ವರ್ಷದವರೆಗೆ |
| ಉತ್ತರ ಬಾಲ್ಯ | 6ನೇ ವರ್ಷದಿಂದ 12ನೇ ವರ್ಷದವರೆಗೆ |
| ಲೈಂಗಿಕ ಪಕ್ವತೆಯ ಕಾಲ | 12ನೇ ವರ್ಷದಿಂದ 13/14ನೇ ವರ್ಷದವರೆಗೆ |
| ತಾರುಣ್ಯ | 13/14ನೇ ವರ್ಷದಿಂದ 18ನೇ ವರ್ಷದವರೆಗೆ |
| ವಯಸ್ಕತನ | 18 ರಿಂದ 40 ವರ್ಷದವರೆಗೆ |
| ಮಧ್ಯವಯಸ್ಸು | 40 ವರ್ಷದಿಂದ 60 ವರ್ಷಗಳವರೆಗೆ |
| ವೃದ್ಧಾಪ್ಯ | 60 ವರ್ಷದಿಂದ ಸಾವಿನವರೆಗೆ |

ವ್ಯಕ್ತಿಯ ಜೀವನದಲ್ಲಿ ಈ ಹತ್ತು ಹಂತಗಳಿದ್ದರೂ ನಾವು ಕೇವಲ ಶಾಲೆಗೆ ಹೋಗುತ್ತಿರುವ ಮಕ್ಕಳ ಅಂದರೆ ಪೂರ್ವ–ಬಾಲ್ಯ ಮತ್ತು ಉತ್ತರ – ಬಾಲ್ಯದ ಮಕ್ಕಳ ಬೆಳವಣಿಗೆ ಮತ್ತು ವಿಕಾಸವನ್ನು ಇಲ್ಲಿ ಚರ್ಚಿಸಬೇಕಿದೆ. ಪ್ರತಿಯೊಂದು ಹಂತದಲ್ಲಿಯೂ ವಿವಿಧ ರೀತಿಯ ವಿಕಾಸಗಳನ್ನು ಅಧ್ಯಯನ ಮಾಡಲಾಗುತ್ತದೆ. ವಿಕಾಸವು ದೈಹಿಕ, ಜ್ಞಾನಾತ್ಮಕ, ಸಾಮಾಜಿಕ, ಸಂವೇಗಾತ್ಮಕ ಹಾಗೂ ನೈತಿಕ ಆಯಾಮಗಳನ್ನು ಒಳಗೊಂಡಿದೆ.

- ಹಸುಳೆತನದ ಶೀಘ್ರಗತಿಯ ಬೆಳವಣಿಗೆ ವೇಗಕ್ಕೆ ಹೋಲಿಸಿದಾಗ ಪೂರ್ವಬಾಲ್ಯದ ಬೆಳವಣಿಗೆ ನಿಧಾನ ಗತಿಯಲ್ಲಿ ಸಾಗುತ್ತದೆ. ಪೂರ್ವ ಬಾಲ್ಯದಲ್ಲಿ ಬೆಳವಣಿಗೆ ವೇಗ ಸಾಮಾನ್ಯವಾಗಿ ಒಂದೇ ದರದಲ್ಲಿರುತ್ತದೆ.

- ಈ ಹಂತದ ಮಕ್ಕಳ ಎತ್ತರದಲ್ಲಿ ಆಗುವ ವಾರ್ಷಿಕ ಸರಾಸರಿ ಹೆಚ್ಚಳ ಸುಮಾರು 3 ಅಂಗುಲಗಳು.

- ತೂಕದಲ್ಲಿ ಆಗುವ ವಾರ್ಷಿಕ ಸರಾಸರಿ ಹೆಚ್ಚಳ ಸುಮಾರು 2 ರಿಂದ 2 $^1/_2$ ಕಿಲೋಗ್ರಾಂಗಳು.

- 5ನೇ ವರ್ಷದ ಕೊನೆಯಲ್ಲಿ ಹುಡುಗಿಯರು ಅದೇ ವಯಸ್ಸಿನ ಹುಡುಗರಿಗಿಂತ ಕಡಿಮೆ ಎತ್ತರ ಮತ್ತು ತೂಕ ಹೊಂದಿರುತ್ತಾರೆ.

- ಮಗು ತನ್ನ ವಯಸ್ಸಿನ ರೀತಿಯ ದೇಹದ ಅಂಗಾಂಗಗಳ ಪ್ರಮಾಣವನ್ನು ಪಡೆಯಲು ಪ್ರಾರಂಭಿಸುತ್ತಾನೆ. ಕಾಲುಗಳ ಬೆಳವಣಿಗೆ ಶೀಘ್ರಗತಿಯಲ್ಲಿರುತ್ತದೆ ಮತ್ತು ಕಾಲುಗಳು ಅವನ ಎತ್ತರದ ಅರ್ಧದಷ್ಟು ಇರುತ್ತವೆ.

- ಶಿರದ ಬೆಳವಣಿಗೆ ನಿಧಾನ ಹಾಗೂ ಮುಂಡದ ಬೆಳವಣಿಗೆ ಮಧ್ಯಮ ವೇಗದಲ್ಲಿರುತ್ತದೆ.

Digitised by Bharatavani, CIIL

- ಈ ಹಂತದಲ್ಲಿ ಸ್ನಾಯುಗಳು ಶೀಘ್ರಗತಿಯಲ್ಲಿ ಬೆಳೆಯುತ್ತವೆ. ದೊಡ್ಡ ಸ್ನಾಯುಗಳು ಚಿಕ್ಕ ಹಾಗೂ ಸೂಕ್ಷ್ಮ ಸ್ನಾಯುಗಳಿಗಿಂತ ಹೆಚ್ಚು ಬೆಳೆಯುತ್ತವೆ. ಉಸಿರಾಟ ಕ್ರಿಯೆ, ಹೃದಯ ಬಡಿತ ಮತ್ತು ರಕ್ತದ ಒತ್ತಡದಂತಹ ಶಾರೀರಿಕ ಬದಲಾವಣೆಯನ್ನು ಕಾಣುತ್ತೇವೆ.

- ಮೆದುಳು ವಯಸ್ಕತನದಲ್ಲಿರುವ ಸಂಪೂರ್ಣ ತೂಕದ ಶೇ. 90 ರಷ್ಟು ಬೆಳವಣಿಗೆಯಾಗಿರುತ್ತದೆ. ಮೆದುಳಿನ ಭಾಗದಲ್ಲಿ ಕಂಡು ಬರುವ ನರಬಳ್ಳಿಗಳು ಈ ಹಂತದ ಕೊನೆಗೆ ಪರಿಪಕ್ವವಾಗುತ್ತವೆ.

- ಪೂರ್ವ–ಬಾಲ್ಯದ ಕೊನೆಯ ವರ್ಷದಲ್ಲಿ ಮಗು ತನ್ನ ಹಾಲು ಹಲ್ಲುಗಳನ್ನು ಕಳೆದುಕೊಳ್ಳುತ್ತಾನೆ ಮತ್ತು ಆ ಜಾಗದಲ್ಲಿ ಶಾಶ್ವತ ಹಲ್ಲುಗಳು ಕಾಣಿಸಿಕೊಳ್ಳುತ್ತವೆ.

- ಅವನು ಶಾಲೆಗೆ ಹೊರಡುವ ಹೊತ್ತಿಗೆ ಒಂದು ಅಥವಾ ಎರಡು ಶಾಶ್ವತ ಹಲ್ಲುಗಳು ಕಾಣಿಸಿಕೊಳ್ಳುತ್ತವೆ.

### ಪೂರ್ವ–ಬಾಲ್ಯದ ಮಕ್ಕಳಲ್ಲಿ ಆಗುವ ಗತ್ಯಾತ್ಮಕ ವಿಕಾಸ

- ಈ ಹಂತದಲ್ಲಿ ಜಿಗಿತ, ನೆಗೆಯುವುದು, ಸುತ್ತುವುದು, ಹಗ್ಗದ ಆಟ, ಬಾಲ್ ಎಸೆಯುವುದು, ಇತ್ಯಾದಿ ಗತ್ಯಾತ್ಮಕ ಚಟುವಟಿಕೆಗಳು ಪ್ರಾರಂಭವಾಗುತ್ತವೆ.

- ಪೂರ್ವ–ಬಾಲ್ಯದ ಮಗು ಆಹಾರ ಸೇವನೆ, ಸ್ವತಃ ಉಡಿಗೆ ಧರಿಸುವುದು, ಸ್ನಾನ ಮಾಡುವುದು, ಹಲ್ಲು ಉಜ್ಜುವುದು, ಗೊಂಬೆಗಳ ಜೊತೆ ಆಟವಾಡುವುದು ಮತ್ತು ಬರವಣಿಗೆಯ ಕೌಶಲಗಳನ್ನು ಬೆಳೆಸಿಕೊಳ್ಳುವುದು.

- ಹೆಚ್ಚು ಕಾಲ ಒಂದೇ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಸಾಮರ್ಥ್ಯ ಬರುತ್ತದೆ.

### ಉತ್ತರ ಬಾಲ್ಯದ ದೈಹಿಕ ವಿಕಾಸ

- ಈ ಹಂತದ ಮಕ್ಕಳ ದೇಹದ ಎಲ್ಲ ಅಂಗಾಂಗಗಳ ಪ್ರಮಾಣಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ.

- ಹಾಲು ಹಲ್ಲುಗಳು ಉದುರಿ ಶಾಶ್ವತ ಹಲ್ಲುಗಳು ಮೂಡುವುದರ ಮೂಲಕ ಮುಖದ ರೂಪ ಬದಲಾಯಿಸುತ್ತದೆ. ಹಣೆ ಚಪ್ಪಟೆಯಾಗುವುದು. ಮೂಗು ಚೂಪಾಗುತ್ತದೆ ಮತ್ತು ಎದೆ ಅಗಲವಾಗುತ್ತದೆ.

- ಉತ್ತರ ಬಾಲ್ಯದ ದೈಹಿಕ ಬೆಳವಣಿಗೆ ನಿಧಾನವಾಗಿ ಹಾಗೂ ಏಕರೂಪವಾಗಿ ಸಾಗುವ ಹಂತ. ಲೈಂಗಿಕ ಪಕ್ವತೆಯ ಬದಲಾವಣೆಗಳು ಪ್ರಾರಂಭವಾದಾಗ ಬೆಳವಣಿಗೆಯ ವೇಗ ಗಣನೀಯವಾಗಿ ಹೆಚ್ಚುತ್ತದೆ.

- ಎತ್ತರದಲ್ಲಿ ಆಗುವ ವಾರ್ಷಿಕ ಸರಾಸರಿ ಹೆಚ್ಚಳ 2 ರಿಂದ 3 ಅಂಗುಲಗಳು.

- ತೂಕದಲ್ಲಿನ ಹೆಚ್ಚಳದಲ್ಲಿ ಎತ್ತರದ ಹೆಚ್ಚಳಕ್ಕಿಂತ ಹೆಚ್ಚು ವ್ಯತ್ಯಾಸಗಳು ಕಂಡು ಬರುತ್ತವೆ. ತೂಕದಲ್ಲಿ ಆಗುವ ವಾರ್ಷಿಕ ಸರಾಸರಿ ಹೆಚ್ಚಳ 2 ರಿಂದ 3 ಕಿಲೋಗ್ರಾಂಗಳು.

- ಈ ಹಂತದ ಕೊನೆಯ ವೇಳೆಗೆ ಹುಡುಗಿಯರು ಅದೇ ವಯಸ್ಸಿನ ಹುಡುಗರಿಗಿಂತ ದೈಹಿಕ ಬೆಳವಣಿಗೆ ಮತ್ತು ವಿಕಾಸದಲ್ಲಿ ಮುಂದಿರುತ್ತಾರೆ. ಶಾರೀರಿಕವಾಗಿ 11ನೇ ವರ್ಷದಲ್ಲಿ ಹುಡುಗಿಯರು ಹುಡುಗರಿಗಿಂತ 1 ವರ್ಷ ದೊಡ್ಡವರಾಗಿ ಕಾಣುತ್ತಾರೆ.

### ಉತ್ತರ ಬಾಲ್ಯದ ಗತ್ಯಾತ್ಮಕ ವಿಕಾಸ

- ಈ ಹಂತದ ಮಕ್ಕಳು ಕೆಲವು ಗತ್ಯಾತ್ಮಕ ಚಟುವಟಿಕೆಗಳ ಮೂಲಕ ಆನಂದಿಸುತ್ತಾರೆ. ಅವುಗಳೆಂದರೆ ಓಡುವುದು, ನೆಗೆಯುವುದು, ಬೆನ್ನಟ್ಟುವ ಆಟ ಹಾಗೂ ಜಾರುವ ಆಟ ಯಾರ ಸಹಾಯವಿಲ್ಲದೆ ಸ್ನಾನ ಮಾಡುವುದು, ಬಟ್ಟೆ ಹಾಕಿಕೊಳ್ಳುವುದು.

- ಚಿಕ್ಕ ಸ್ನಾಯುಗಳ ಸಮನ್ವಯದಿಂದ ಆಡುವ ಆಟಗಳಲ್ಲಿ ಆಸಕ್ತಿ ತೋರುತ್ತಾರೆ. ಉದಾ: ಗೋಲಿ ಆಟ ಮತ್ತು ಚಲಿಸುತ್ತಿರುವ ವಸ್ತುವನ್ನು ಗುರಿಯಿಟ್ಟು ಹೊಡೆಯುವುದು ಇತ್ಯಾದಿ.

- ಬರವಣಿಗೆಯ ಕೌಶಲ ಹೆಚ್ಚಾಗುತ್ತದೆ. ಕಲಿಕೆಗೆ ಅವಕಾಶ ದೊರೆತರೆ ಈಜುವುದು ಮತ್ತು ಸೈಕಲ್ ಸವಾರಿ ಮಾಡುವುದನ್ನು ಕಲಿಯಬಲ್ಲರು.

- ಈ ಹಂತದಲ್ಲಿ ಕಂಡು ಬರುವ ಗಮನಾರ್ಹ ಬದಲಾವಣೆಗಳೆಂದರೆ ಹೆಚ್ಚಾದ ಕರಕುಶಲತೆ, ಹೆಚ್ಚಾದ ಶಕ್ತಿ ಹಾಗೂ ಆಯಾಸಕ್ಕೆ ಪ್ರತಿರೋಧ, ಆಟಗಳಿಗೆ ಸಂಬಂಧಿಸಿದಂತೆ ನಿಖರತೆ ಮತ್ತು ತಾಳ್ಮೆ ಬೆಳೆಸಿಕೊಳ್ಳುತ್ತಾರೆ.

- ಈ ಹಂತದಲ್ಲಿ ಹುಡುಗಿಯರು ತಮ್ಮ ಮೈಮಾಟದ ಬಗ್ಗೆ ಸ್ವಯಂ–ಪ್ರಜ್ಞೆ ಬೆಳೆಸಿಕೊಳ್ಳುತ್ತಾರೆ. ಹಲವು ಮಕ್ಕಳು ಆಟಗಳು ಮತ್ತು ಕ್ರೀಡೆಗಳಲ್ಲಿ ನೇರವಾಗಿ ಪಾಲ್ಗೊಳ್ಳದೆ ಕೇವಲ ಪ್ರೇಕ್ಷಕರಾಗುತ್ತಾರೆ.

–ವೈ.ರಾ.

## ಬಾಲ್ಯಾವಸ್ಥೆ–ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸ

### ಸಂಜ್ಞಾನಾತ್ಮಕ ವಿಕಾಸ

ಬಾಲ್ಯಾವಸ್ಥೆಯಲ್ಲಿ ಮಗುವಿನ ಬೌದ್ಧಿಕ ವಿಕಾಸ ಅಥವಾ ಸಂಜ್ಞಾನಾತ್ಮಕ ವಿಕಾಸ 2 ವರ್ಷಗಳ ವಯಸ್ಸಿನ ನಂತರ ಹೆಚ್ಚು ಚುರುಕಾಗುತ್ತದೆ. ಏಕೆಂದರೆ ಈ ಹಂತದಲ್ಲಿ ಮಗು ತನ್ನ ಪರಿಸರವನ್ನು ಅನ್ವೇಷಿಸಲು ಪ್ರಾರಂಭಿಸುತ್ತದೆ ಮತ್ತು ಹೊಸ ಅನುಭವಗಳನ್ನು ಪಡೆಯುತ್ತದೆ. ಪೂರ್ವಬಾಲ್ಯದ ಮಕ್ಕಳು ಬೌದ್ಧಿಕ ವಿಕಾಸದಲ್ಲಿ ಭೌತಿಕ ಹಾಗೂ ಕೌಟುಂಬಿಕ ಸಂಬಂಧಗಳಂತಹ ಸಾಮಾಜಿಕ ನೈಜತೆಯ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುತ್ತಾರೆ. ಪೂರ್ವಬಾಲ್ಯದ ಅಂತ್ಯದ ವೇಳೆಗೆ ಮಗು ಗಾತ್ರ, ಆಕಾರ, ಬಣ್ಣ, ಸಮಯ ಮತ್ತು ದೂರ ಮುಂತಾದ ಪರಿಕಲ್ಪನೆಗಳನ್ನು ಪ್ರತ್ಯಕ್ಷಾನುಭವಗಳ ಮೂಲಕ ಪಡೆಯುತ್ತದೆ. ಭಾಷಾ ವಿಕಾಸ ತೀವ್ರಗತಿಯಲ್ಲಿರುತ್ತದೆ. ಈ ಹಂತದ ಕೊನೆಯ ವೇಳೆಗೆ ಮಗು ಸುಮಾರು 2500 ಪದಗಳ ಪದ ಸಂಪತ್ತನ್ನು ಹೊಂದಿರುತ್ತದೆ ಹಾಗೂ ಜ್ಞಾಪಕಶಕ್ತಿ ತೀವ್ರಗತಿಯಲ್ಲಿ ಹೆಚ್ಚಾಗುತ್ತದೆ. ಈ ಹಂತದ ಮಕ್ಕಳು ಹೆಚ್ಚಾಗಿ ಕಂಠಪಾಠದ ಮೂಲಕ ಕಲಿಯುತ್ತಾರೆ ಮತ್ತು ನರ್ಸರಿಯ ಪ್ರಾಸಪದ್ಯಗಳನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಬಲ್ಲರು.

ಮಕ್ಕಳಲ್ಲಿ ಸೃಜನಶೀಲತೆ ವಿಕಾಸವಾಗುತ್ತದೆ ಮತ್ತು ಕಲ್ಪನಾಶಕ್ತಿ ವಿಕಸಿಸಲು ಪ್ರಾರಂಭವಾಗುತ್ತದೆ. ಮಕ್ಕಳ ಸೃಜನಶೀಲ ಸಾಮರ್ಥ್ಯಗಳನ್ನು ಅವರ ಆಟಗಳಲ್ಲಿ ಕಾಣಬಹುದು. ಮಕ್ಕಳು ಮಣ್ಣು, ಬಟ್ಟೆ, ಕಡ್ಡಿ ಮತ್ತು ಇಟ್ಟಿಗೆಗಳಿಂದ ಮಾದರಿಗಳನ್ನು ತಯಾರಿಸಬಲ್ಲರು. ಕೆಲವು ಮಕ್ಕಳು ಉತ್ತಮ ಚಿತ್ರರಚನೆಯ ಮೂಲಕ ತಮ್ಮ ಸೃಜನಶೀಲ ಸಾಮರ್ಥ್ಯ

Digitised by Bharatavani, CIIL

ವ್ಯಕ್ತಪಡಿಸಬಲ್ಲರು. ಸರಳ ವಿಷಯಗಳಿಗೆ ಸಂಬಂಧಿಸಿದಂತೆ ಆಲೋಚನೆ ಮತ್ತು ತಾರ್ಕಿಕ ಸಾಮರ್ಥ್ಯ ಬೆಳವಣಿಗೆಯಾಗುತ್ತದೆ ಮತ್ತು ಹೆಚ್ಚುಕಾಲ ಒಂದೇ ಚಟುವಟಿಕೆಯಲ್ಲಿ ತಮ್ಮ ಗಮನ ಕೇಂದ್ರೀಕರಿಸುವ ಹಾಗೂ ಪಾಲ್ಗೊಳ್ಳುವ ಸಾಮರ್ಥ್ಯ ಗಳಿಸಿಕೊಳ್ಳುತ್ತಾರೆ ಹಾಗೂ ಭಾಷೆಯಲ್ಲಿ, ಚಿತ್ರಗಳಲ್ಲಿ, ಸಂಕೇತಗಳಲ್ಲಿ, ಸಾಂಕೇತಿಕ ಆಟಗಳಲ್ಲಿ ಮತ್ತು ಸಮಸ್ಯೆ ಪರಿಹಾರ ಸಂದರ್ಭಗಳಲ್ಲಿ ತಮ್ಮದೇ ಆದ ಸಂಕೇತಗಳನ್ನು ಬಳಸಿಕೊಳ್ಳಬಲ್ಲರು. ಜೊತೆಗೆ ಪರಿಸರಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಶ್ನೆಗಳನ್ನು ಕೇಳುವ ಸಾಮರ್ಥ್ಯ ಬೆಳೆಯುತ್ತದೆ.

ಉತ್ತರ ಬಾಲ್ಯದ ಜ್ಞಾನಾತ್ಮಕ ವಿಕಾಸದಲ್ಲಿ ಮಕ್ಕಳು ತಮ್ಮ ಹಾಗೂ ಹೊರಗಿನ ವಿಶ್ವದ ಮಧ್ಯೆ ಸ್ಪಷ್ಟ ವ್ಯತ್ಯಾಸ ಕಾಣಲು ಪ್ರಾರಂಭಿಸುತ್ತಾರೆ. ತಮ್ಮ ಪರಿಸರದಲ್ಲಿ ನೈಜತೆಯನ್ನು ಕಾಣುತ್ತಾರೆ. ಈ ಹಂತದ ಕೊನೆಯ ವೇಳೆಗೆ ನೈಸರ್ಗಿಕ ನಿಯಮಗಳ ಪರಿಕಲ್ಪನೆ ಸಂಪೂರ್ಣವಾಗಿ ವಿಕಾಸವಾಗುತ್ತದೆ. ಇದು ಶೀಘ್ರಗತಿಯ ಭಾಷಾ ವಿಕಾಸದ ಹಂತ. ಮಕ್ಕಳು ಶಾಲೆಯಲ್ಲಿ ಪುಸ್ತಕ, ಜ್ಞಾನಕೋಶ ಮತ್ತು ಇತರೇ ಮೂಲಗಳನ್ನು ಪರಾಮರ್ಶಿಸಿ ಹಳೆಯ ಪರಿಕಲ್ಪನೆಗಳಿಗೆ ಹೊಸ ಅರ್ಥಗಳನ್ನು ಕಲಿಯುವುದರೊಂದಿಗೆ, ಹಳೆ ಕಲ್ಪನೆಗಳೊಡನೆ ಮಾಡಿರಬಹುದಾದ ತಪ್ಪು ಅರ್ಥಗಳನ್ನು ಸರಿಪಡಿಸಿಕೊಳ್ಳುತ್ತಾರೆ. ಚಲನಚಿತ್ರ, ರೇಡಿಯೋ ಮತ್ತು ದೂರದರ್ಶನಗಳಂತಹ ಸಮೂಹ ಮಾಧ್ಯಮಗಳ ಮೂಲಕ ಹೊಸ ಅರ್ಥಗಳನ್ನು ಕಂಡುಕೊಳ್ಳುತ್ತಾರೆ. ತಾರ್ಕಿಕ ಆಲೋಚನಾ ಸಾಮರ್ಥ್ಯ ಹೆಚ್ಚಾಗುತ್ತದೆ. ಸರಳ ವಿಷಯಗಳಿಗೆ ಸಂಬಂಧಿಸಿದಂತೆ ಜ್ಞಾನಾತ್ಮಕ ಕ್ರಿಯೆಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅಭಿವೃದ್ಧಿಪಡಿಸುವಲ್ಲಿ ಮತ್ತು ಅನ್ವಯಿಸಿಕೊಳ್ಳುವಲ್ಲಿ ಹೆಚ್ಚು ಸಮರ್ಥರಾಗುತ್ತಾರೆ ಹಾಗೂ ಗಣಿತದ ಮೂಲ ಕೌಶಲಗಳಾದ ಕೂಡಿಸುವುದು, ಕಳೆಯುವುದು, ಗುಣಿಸುವುದು, ಭಾಗಿಸುವುದನ್ನು ಕಲಿಯುತ್ತಾರೆ. ಸರಳ ಭಿನ್ನರಾಶಿಗಳನ್ನು ಅರ್ಥಮಾಡಿಕೊಳ್ಳಬಲ್ಲರು ಮತ್ತು ಬಳಸಬಲ್ಲರು. ಈ ಹಂತದಲ್ಲಿ ಕಲ್ಪನಾತ್ಮಕ ಆಟಗಳಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಾರೆ. ಉದಾ: ಚೆಸ್, ಕ್ವಿಜ್, ಪದಬಂಧ, ಪದರಚನೆ ಆಟಗಳು ಇತ್ಯಾದಿ. ಜೊತೆಗೆ ವಿಜ್ಞಾನದ ಕಥೆಗಳು ಮತ್ತು ಯಾಂತ್ರಿಕ ಕ್ರಿಯೆಗಳಲ್ಲಿನ ಆಸಕ್ತಿ ಈ ಹಂತದಲ್ಲಿ ತುಂಬಾ ಹೆಚ್ಚಾಗಿರುತ್ತದೆ. ನೈಜ ಘಟನೆಗಳು, ವೈಜ್ಞಾನಿಕ ಹಾಗೂ ಗಣಿತದ ವಿಷಯ ಮತ್ತು ಸತ್ಯ ಘಟನೆ ಆಧರಿಸಿದ ಕಥೆಗಳನ್ನು ಓದಲು ಇಚ್ಛಿಸುತ್ತಾರೆ. ಸೃಜನಶೀಲತೆ ಮತ್ತು ಕಲ್ಪನಾಶಕ್ತಿ ವಿಕಾಸವಾಗುತ್ತದೆ. ಮಕ್ಕಳು ಚಿತ್ರ ಬರೆಯುವುದು, ಸಣ್ಣ ಕಥೆ ಮತ್ತು ಸರಳ ಪದ್ಯ ಬರೆಯುವುದು ಹಾಗೂ ವೈಜ್ಞಾನಿಕ ಪ್ರದರ್ಶನಗಳಿಗೆ ಮಾದರಿ ತಯಾರಿಸುವುದು ಇತ್ಯಾದಿಗಳಲ್ಲಿ ತಮ್ಮ ಸೃಜನಶೀಲ ಸಾಮರ್ಥ್ಯಗಳನ್ನು ವ್ಯಕ್ತಪಡಿಸುತ್ತಾರೆ. ಸುಮಾರು 10ರಿಂದ 12 ವರ್ಷದ ಮಕ್ಕಳಲ್ಲಿ ಸಾಮಾನ್ಯೀಕರಣಗೊಳಿಸುವ ಸಾಮರ್ಥ್ಯ ಕಂಡುಬರುತ್ತದೆ. ಮಕ್ಕಳು ಪ್ರಸ್ತುತ ಘಟನೆಗಳು ಹಾಗೂ ಕಾರ್ಯಕಾರಣ ಸಂಬಂಧ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ ಹಾಗೂ ಈ ಹಂತದಲ್ಲಿ ಮಕ್ಕಳು ಸಮಸ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲರು ಮತ್ತು ಸಮಸ್ಯೆಯನ್ನು ತಾರ್ಕಿಕವಾಗಿ ವಿಶ್ಲೇಷಿಸಬಲ್ಲರು. ಇವರು ಪರಿಸರದೊಂದಿಗೆ ನಮ್ಯವಾಗಿ, ಸಮರ್ಥವಾಗಿ ಹಾಗೂ ಸಾಂಕೇತಿಕವಾಗಿ ವ್ಯವಹರಿಸಬಲ್ಲರು.

### ಭಾಷಾ ವಿಕಾಸ

ಬಾಲ್ಯಾವಸ್ಥೆಯಲ್ಲಿ ಜೈವಿಕ ಮತ್ತು ಮಾನಸಿಕ ಕಾರಣಗಳಿಂದಾಗಿ ಅಸ್ಪಷ್ಟ ಉಚ್ಚಾರ, ವಾಗ್ದೋಷಗಳು, ತೊದಲುವಿಕೆಯಂತಹ ವಾಗ್ವಿ ಕೃತಿಗಳು ಕಾಣಿಸುವುವು. ಈ ಅವಧಿಯಲ್ಲಿನ ಮಾತುಗಳು ಆತ್ಮನಿಷ್ಠವಾಗಿರುತ್ತವೆ ಮತ್ತು ಅಸ್ಪಷ್ಟವಾಗಿರುತ್ತವೆ. ಸ್ನೇಹಿತರ ಜೊತೆ ಒಡನಾಟ ಹಾಗೂ ಅನುಕರಣೆ ಮೂಲಕ ಉತ್ತಮ ಭಾಷಾಭಿವೃದ್ಧಿಯಾಗುವುದು. ಕುಟುಂಬ, ಶಾಲೆಯ ವಾತಾವರಣ, ಸ್ನೇಹಿತರು ಹಾಗೂ ಸಮೂಹ ಮಾಧ್ಯಮಗಳ ಮೂಲಕ ಮಕ್ಕಳ ಭಾಷಾ ಬೆಳವಣಿಗೆ ಹೆಚ್ಚುವುದು ಮತ್ತು ಶಾಲೆಯಲ್ಲಿ ವಿವಿಧ ವಿಷಯಗಳನ್ನು ಅಭ್ಯಾಸ ಮಾಡುವುದರಿಂದ ಅವರ ಭಾಷೆ ವೃದ್ಧಿಯಾಗುವುದು.

ಪಿಯಾಜೆಯವರು ಮಕ್ಕಳ ಭಾಷಾ ವಿಷಯ ವಸ್ತುವನ್ನು ಎರಡು ರೀತಿಯಾಗಿ ವರ್ಗೀಕರಿಸಿದ್ದಾರೆ.

1. ಆತ್ಮನಿಷ್ಠ ಮಾತುಗಳು 2. ಸಾಮಾಜೀಕೃತ ಮಾತುಗಳು.

ಆತ್ಮನಿಷ್ಠ ಮಾತುಗಳಲ್ಲಿ ಮಗು ತನ್ನ ಸಂತೋಷಕ್ಕಾಗಿಯೇ ಮಾತನಾಡಿಕೊಳ್ಳುವುದು. ಕೇಳುಗನ ಪ್ರತಿಕ್ರಿಯೆಯ ಕಡೆಗೆ ಮಗುವಿಗೆ ಗಮನ ಇರುವುದಿಲ್ಲ. ಈ ಪ್ರವೃತ್ತಿ ಮಗುವಿನ ಪೂರ್ವಬಾಲ್ಯದಲ್ಲಿ ಕಾಣಿಸಿಕೊಳ್ಳುತ್ತದೆ.

ಸಾಮಾಜೀಕೃತ ಮಾತುಗಳು ಎಂದರೆ ಸಾಮಾಜಿಕ ಹೊಂದಾಣಿಕೆಗಾಗಿ ಮಾತನ್ನು ಬಳಸಿಕೊಳ್ಳುವಿಕೆ. ಇವುಗಳನ್ನು ಐದು ಪ್ರಕಾರವಾಗಿ ವಿಭಾಗಿಸಲಾಗಿದೆ. 1) ಸ್ವೀಕೃತ ಮಾಹಿತಿಗಳು 2) ಟೀಕೆ 3) ಬೇಡಿಕೆ, ನಿರ್ದೇಶಿಸುವಿಕೆ, ಬೆದರಿಕೆ 4) ಪ್ರಶ್ನೆಗಳು 5) ಉತ್ತರಗಳು, ಪೋಷಕರು ಶುದ್ಧ ಭಾಷೆಯಿಂದ ಮಗುವಿಗೆ ಮಾರ್ಗದರ್ಶನ ನೀಡಬೇಕು. ಭಾಷೆಯ ಮೂಲಾಕ್ಷರಗಳನ್ನು ಸಂಜ್ಞೆಗಳ ಮೂಲಕ ಕಲಿಯುವಂತೆ ಪ್ರೋತ್ಸಾಹಿಸಬೇಕು. ಇದಕ್ಕಾಗಿ ಪೂರ್ವಪ್ರಾಥಮಿಕ ಶಾಲೆಗಳಿಗೆ ಮಕ್ಕಳನ್ನು ಕಳಿಸುವುದು ಸೂಕ್ತ. ಈ ಶಾಲೆಗಳಲ್ಲಿ ಮಕ್ಕಳು ಹಾಡು ಅಭಿನಯದ ಮೂಲಕ ಭಾಷೆಯನ್ನು ಕಲಿಯುತ್ತಾರೆ.

ಉತ್ತರ ಬಾಲ್ಯದಲ್ಲಿ ಮಕ್ಕಳ ಭಾಷಾ ಬೆಳವಣಿಗೆಯು ತೀವ್ರತರವಾಗಿದ್ದು, ಮಾತನಾಡುವ, ಓದುವ, ಬರೆಯುವ ಕೌಶಲಗಳು ಚೆನ್ನಾಗಿ ವಿಕಾಸ ಹೊಂದುತ್ತವೆ. ಹೊಸ ಹೊಸ ಪದಗಳನ್ನು ಕಲಿಯುವುದರ ಮೂಲಕ ತಮ್ಮ ಪದಸಂಪತ್ತು ಬೆಳೆಸಿಕೊಳ್ಳುವರು. ಈ ವಯಸ್ಸಿನ ಮಕ್ಕಳಲ್ಲಿ ಉಚ್ಚಾರಣೆ ದೋಷಗಳು ಅಷ್ಟಾಗಿ ಕಂಡುಬರುವುದಿಲ್ಲ. ಒಂದು ವೇಳೆ ಇದ್ದರೂ, ಒಂದೆರಡು ಸಲ ಪುನರುಕ್ತಿ ಮಾಡಿದಲ್ಲಿ ಮಾಯವಾಗುತ್ತವೆ. ಉಗ್ಗಿಸುವಿಕೆ ಕಂಡುಬಂದಲ್ಲಿ ಸೂಕ್ತ ಚಿಕಿತ್ಸೆ ಕೊಡಿಸಬೇಕು. ಮಕ್ಕಳ ಸಾಮಾಜಿಕ ಸಂಪರ್ಕಗಳು ಹೆಚ್ಚಿದಂತೆಲ್ಲಾ ಅವರ ಮಾತಿನ ವಿಷಯಗಳು ಹೆಚ್ಚು ಹೆಚ್ಚು ಪರಿಸರದ ಮೇಲೆ ಕೇಂದ್ರಿತವಾಗತೊಡಗುತ್ತವೆ.

### ನೈತಿಕ ವಿಕಾಸ

ನೈತಿಕ ವಿಕಾಸ ವ್ಯಕ್ತಿಯ ಆಂತರಿಕ ಸ್ವರೂಪ ಮತ್ತು ಸಮಾಜ ಒಪ್ಪಿದ ಮೌಲ್ಯಗಳಿಗನುಗುಣವಾಗಿರುವ ವೈಯಕ್ತಿಕ ಗುಣಗಳ ಬೆಳವಣಿಗೆಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಪಿಯಾಜೆ ಮತ್ತು ಕೋಹ್ಲಬರ್ಗ್ (1967)ರವರ ಪ್ರಕಾರ ಮಕ್ಕಳು ತಮ್ಮದೇ ಆದ ನೈತಿಕ ಮಾನಗಳನ್ನು ರೂಪಿಸಿಕೊಳ್ಳುತ್ತಾರೆ. ಈ ನೈತಿಕ ಮಾನಗಳು ಪೋಷಕರು ಅಥವಾ ಸಮವಯಸ್ಕರಿಂದಲೇ ಬರುವ ಅಗತ್ಯವಿಲ್ಲ. ಅವು ಮಕ್ಕಳ ಸಾಮಾಜಿಕ ಪರಿಸರ ಮತ್ತು ಅವರ ಜ್ಞಾನಾತ್ಮಕ ಸಂರಚನೆಯ ಅಂತರ್‌ಕ್ರಿಯೆಯಿಂದ ಉದ್ಭವಿಸುತ್ತವೆ.

ನೈತಿಕ ವಿಕಾಸವೆಂದರೆ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಅನುಗುಣವಾದ ವರ್ತನೆಗಳನ್ನು ಬೆಳೆಸಿಕೊಳ್ಳುವುದು. ಇದು ಪ್ರಾಮಾಣಿಕತೆ, ದಯಾಳುತನ, ದಾನ, ಧರ್ಮ, ಸೇವೆ, ವಿಧೇಯತೆ ಇತ್ಯಾದಿ ಪರಿಕಲ್ಪನೆ ಮತ್ತು ಪ್ರವರ್ತನೆಗಳ

Digitised by Bharatavani, CIIL

ಕಲಿಕೆಯನ್ನೊಳಗೊಂಡಿದೆ. ನೈತಿಕ ವಿಕಾಸ ಯಾವುದು ಸರಿ ಮತ್ತು ಯಾವುದು ತಪ್ಪು ಮತ್ತು ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು ಎಂದು ತಿಳಿಯುವುದಾಗಿದೆ. ಇದು ಆಟಗಳ ನಿಯಮವನ್ನು ಮತ್ತು ಮಕ್ಕಳು ಹಾಗೂ ಅವರ ಸಮವಯಸ್ಕರ ಸಂಬಂಧ, ಮಕ್ಕಳು ಮತ್ತು ಹಿರಿಯರ ಸಂಬಂಧಕ್ಕೆ ಸಂಬಂಧಿಸಿದ ನಿಯಮಗಳನ್ನು ಒಳಗೊಳ್ಳುತ್ತದೆ.

ಪೂರ್ವಬಾಲ್ಯದಲ್ಲಿ ಮಗು ತನ್ನ ಮತ್ತು ಇತರರ ಕ್ರಿಯೆಗಳ ಪರಿಣಾಮಗಳನ್ನು ಆಧರಿಸಿ ಕ್ರಿಯೆಗಳನ್ನು ಸರಿ ತಪ್ಪುಗಳೆಂದು ತೀರ್ಮಾನಿಸುತ್ತದೆ. ಏಕೆಂದರೆ ಈ ಹಂತದಲ್ಲಿ ಮಗು ಇನ್ನೂ ಮಾನಸಿಕ ಪರಿಪಕ್ವತೆಯನ್ನು ಪಡೆಯದೆ ಇರುವುದರಿಂದ, ಯಾವುದೇ ಕೆಲಸವನ್ನು ಏಕೆ ಮಾಡುತ್ತಿದ್ದೇನೆ ಎಂಬುದನ್ನು ತಿಳಿದುಕೊಳ್ಳದೇ ಕೇವಲ ಹೇಗೆ ಮಾಡುವುದು ಎಂಬುದನ್ನು ಮಾತ್ರ ಕಲಿಯುತ್ತದೆ. ಮಗುವಿಗೆ ಏಕೆ ಕೆಲವು ಕ್ರಿಯೆಗಳು ಮಾತ್ರ ಒಳ್ಳೆಯವು ಮತ್ತು ಕೆಲವು ಕೆಟ್ಟವು ಎಂದು ತಿಳಿಯದಿದ್ದರೂ ಸಹ, ಅನುಕರಣೆಯಿಂದ ಕೆಲವು ಒಳ್ಳೆಯವು ಮತ್ತು ಕೆಲವು ಕೆಟ್ಟವು ಎಂದು ತಿಳಿದುಕೊಳ್ಳುತ್ತದೆ. ಈ ಜ್ಞಾನ ಮಗು ಬೆಳೆದ ಹಾಗೆ ತನ್ನ ವರ್ತನೆಯನ್ನು ರೂಪಿಸಿಕೊಳ್ಳಲು ಸಹಾಯಮಾಡುತ್ತದೆ.

ಚಿಕ್ಕ ಮಕ್ಕಳು ಕೆಲವೊಮ್ಮೆ ಒಳ್ಳೆಯ ವರ್ತನೆಗಿಂತ ಸ್ವಚ್ಛಂಧದ ಅವಿಧೇಯತೆಯಿಂದ ಇತರರ ಗಮನ ಸೆಳೆಯಬಹುದೆಂಬುದನ್ನು ಕಲಿಯುತ್ತಾರೆ. ಆದ್ದರಿಂದ ಅವರು ಯಾರಾದರೂ ತಮ್ಮನ್ನು ಕಡೆಗಣಿಸಿದ್ದಾರೆಂದು ಭಾವಿಸಿದಾಗ ತುಂಟಾಟ ಅಥವಾ ಕೀಟಲೆ ಮಾಡುವ ಮೂಲಕ ಪೋಷಕರ ಹಾಗೂ ಇತರರ ಗಮನ ಸೆಳೆಯಲು ಪ್ರಯತ್ನಿಸುತ್ತಾರೆ.

ಶಿಸ್ತು ಪಾಲನಾ ವಿಧಾನಗಳು ಮಗುವಿನ ವರ್ತನೆಯ ಮೇಲೆ ವಿಭಿನ್ನ ಪರಿಣಾಮ ಬೀರುತ್ತವೆ. ನಿರ್ಬಂಧರಹಿತ ಪರಿಸರದಲ್ಲಿ ಬೆಳೆದ ಮಕ್ಕಳು ಸ್ವಾರ್ಥಿಗಳು, ಇತರರ ಹಕ್ಕುಗಳನ್ನು ಮಾನ್ಯ ಮಾಡದವರು, ಆಕ್ರಮಣ ಪ್ರವೃತ್ತಿಯವರು ಆಗಿರುತ್ತಾರೆ ಹಾಗೂ ಸಮ ವಯಸ್ಕರೊಡನೆ ಉತ್ತಮ ಸಂಬಂಧ ಹೊಂದಿರುವುದಿಲ್ಲ.

ಅತಿ ನಿರ್ಬಂಧಿತ ಪರಿಸರದಲ್ಲಿ ಬೆಳೆದ ಮಕ್ಕಳು ಹಿರಿಯರ ಎದುರು ವಿಧೇಯರೂ, ಸಮ ವಯಸ್ಕರೊಡನೆ ಆಕ್ರಮಣಶೀಲರೂ ಆಗಿರುತ್ತಾರೆ. ಆದರೆ ಪ್ರಜಾಸತ್ತಾತ್ಮಕ ಶಿಸ್ತುಪಾಲನ ವಿಧಾನದಲ್ಲಿ ಬೆಳೆದ ಮಕ್ಕಳು ಯಾವುದೇ ಕೆಲಸ ತಪ್ಪು ಎಂದು ತಿಳಿದು ಬಂದಾಗ ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುತ್ತಾರೆ. ಬೇರೆಯವರ ಹಕ್ಕುಗಳನ್ನು ಮಾನ್ಯ ಮಾಡುತ್ತಾರೆ. ಮನೆಯಲ್ಲಿ ಉತ್ತಮ ಸಾಮಾಜಿಕ ವರ್ತನೆ ಹೊಂದಿರುತ್ತಾರೆ ಮತ್ತು ಪೋಷಕರೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುತ್ತಾರೆ.

ಮಗುವಿನ ವ್ಯಕ್ತಿತ್ವದ ಮೇಲೆ ಶಿಸ್ತುಪಾಲನಾ ವಿಧಾನದ ಪ್ರಭಾವ ತುಂಬಾ ಪ್ರಮುಖವಾದುದು. ಅತಿಯಾದ ದೈಹಿಕ ಶಿಕ್ಷೆಗೆ ಗುರಿಯಾದ ಮಕ್ಕಳು ಮುನಿಸು, ಹಠಮಾರಿತನ ಮತ್ತು ಋಣಾತ್ಮಕ ಮನೋಧೋರಣೆಯ ವರ್ತನೆಯನ್ನು ರೂಢಿಸಿಕೊಳ್ಳುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಅತಿ ನಿರ್ಬಂಧಿತ ಶಿಸ್ತು ಇದ್ದರೆ ಅದು ಮಕ್ಕಳಲ್ಲಿ ಅಸಂತೋಷ, ಅಪಸಮಾಯೋಜನೆ ಹಾಗೂ ಬಾಲಾಪರಾಧಿ ವರ್ತನೆಗಳು ಬೆಳೆಯಲು ಕಾರಣವಾಗುತ್ತದೆ.

ಉತ್ತರ ಬಾಲ್ಯದಲ್ಲಿ ವಿಕಾಸವಾಗುವ ನೈತಿಕ ಧೋರಣೆಗಳು ಹಾಗೂ ವರ್ತನೆಗಳ ಮೇಲೆ ಅವನು ಸದಸ್ಯನಾಗಿರುವ ಕೂಟದ ನೀತಿ ಸಂಹಿತೆ ಪ್ರಬಲ ಪ್ರಭಾವ ಬೀರುತ್ತದೆ. ಈ ಹಂತದಲ್ಲಿ ಪ್ರತಿಯೊಂದು ಮಗುವಿಗೂ ಶಿಸ್ತಿನ ಅಗತ್ಯವಿದೆ. ಮಕ್ಕಳು ಇನ್ನೂ ಸಂಪೂರ್ಣ ಮಾನಸಿಕ, ಸಾಮಾಜಿಕ ಪರಿಪಕ್ವತೆ ಪಡೆಯದಿರುವುದರಿಂದ ಮತ್ತು ಅನುಭವಗಳ ಕೊರತೆಯಿರುವುದರಿಂದ ವಯಸ್ಕರ ಮಾರ್ಗದರ್ಶನ ಹಾಗೂ ನಿಯಂತ್ರಣವಿಲ್ಲದೆ ಅವರ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಿಕೊಳ್ಳಲಾರರು ಮತ್ತು ಚಿಕ್ಕವರಿದ್ದಾಗ ಮಕ್ಕಳು ಪೋಷಕರು ಎಲ್ಲ ತಿಳಿದಿದ್ದಾರೆಂದು ಭಾವಿಸುತ್ತಾರೆ. ಉತ್ತರ ಬಾಲ್ಯದ ಕೊನೆಗೆ ವಿವಿಧ ಮಾನದಂಡಗಳ ಅರಿವು ಮತ್ತು ವಿವಿಧ ಶಿಸ್ತಿನ ವಿಧಾನಗಳನ್ನು ಅವರ ಸ್ನೇಹಿತರಿಗೆ ಬಳಸುವುದನ್ನು ತಿಳಿದಾಗ ಇವರು ಪೋಷಕರು ಮತ್ತು ಪೋಷಕರ ಮಾನದಂಡಗಳ ವಿರುದ್ಧ ಪ್ರತಿಭಟಿಸುತ್ತಾರೆ. ಮಕ್ಕಳ ಪಾಪಪುಣ್ಯ ಪ್ರಜ್ಞೆ ಹಾಗೂ ಕ್ಷಮಾದಾನದ ಪರಿಕಲ್ಪನೆ, ಅವರ ಧಾರ್ಮಿಕ ಆಚರಣೆಗಳು ಹಾಗೂ ಅವರು ತಪ್ಪು ಮಾಡಿದಾಗ ಅವರನ್ನು ನಡೆಸಿಕೊಂಡ ರೀತಿಯ ಮೇಲೆ ಅವಲಂಬಿಸಿರುತ್ತವೆ. ಈ ಹಂತದಲ್ಲಿ ಬಾಲಾಪರಾಧಗಳು ಕಂಡುಬರುತ್ತವೆ. ಸಾಮಾಜಿಕ ಅಂಶಗಳ ಕಾರಣದಿಂದ ಹುಡುಗರಲ್ಲಿ ಹುಡುಗಿಯರಿಗಿಂತ ಹೆಚ್ಚು ಬಾಲಾಪರಾಧಗಳು ಕಂಡು ಬರುತ್ತವೆ. ಬಾಲಾಪರಾಧಗಳು ಗ್ರಾಮೀಣ ಪ್ರದೇಶಗಳಿಗಿಂತ ಪಟ್ಟಣ ಪ್ರದೇಶಗಳ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

– ಜಿ.ಶೀ.

## ಬಾಲ್ಯಾವಸ್ಥೆ–ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ

ಹುಟ್ಟಿನಿಂದ ಸಾಯುವವರೆಗಿನ ಮಾನವನ ಜೀವನವನ್ನು ಅಧ್ಯಯನದ ಅನುಕೂಲಕ್ಕಾಗಿ ಶೈಶವ, ಬಾಲ್ಯ, ತಾರುಣ್ಯ, ವಯಸ್ಕತನ, ವೃದ್ಧಾಪ್ಯ ಎಂದು ವಿವಿಧ ಹಂತಗಳಾಗಿ ವಿಂಗಡಿಸಲಾಗಿದೆ. ವಾಸ್ತವವಾಗಿ ಈ ಹಂತಗಳನ್ನು ಬೇರ್ಪಡಿಸಬಲ್ಲ ಖಚಿತ ಸೀಮಾರೇಖೆ ಎಳೆಯುವುದು ಸಾಧ್ಯವಿಲ್ಲ. ಬಾಲ್ಯಾವಸ್ಥೆ ಮಗುವಿನ ಬೆಳವಣಿಗೆ ಹಾಗೂ ವಿಕಾಸದ ಎರಡನೆಯ ಹಂತವಾಗಿದೆ. ಇದು ಮಕ್ಕಳ ಶಾಲಾ ಜೀವನದ ಹಾಗೂ ಉತ್ತಮ ಸಂಸ್ಕಾರ ಹೊಂದುವ ಕಾಲವಾಗಿದೆ. ಮಗುವಿನ ಜೀವನದಲ್ಲಿ ಈ ಅವಧಿ ಮೈಲಿಗಲ್ಲಾಗಿದೆ.

ಹಸುಳೆತನದ ನಂತರ ಯೌವ್ವನಾವಸ್ಥೆಯ ಮಧ್ಯದಲ್ಲಿ ಬರುವ ಅವಸ್ಥೆಯೇ ಬಾಲ್ಯಾವಸ್ಥೆಯಾಗಿದೆ. ಅಂದರೆ 6 ರಿಂದ 12 ವರ್ಷದ ಕೊನೆಯವರೆಗಿನ ಅವಧಿಯನ್ನು ಬಾಲ್ಯಾವಸ್ಥೆ ಎಂದು ಕರೆಯಲಾಗುತ್ತದೆ. ಬಾಲ್ಯಾವಸ್ಥೆ ಮಗುವಿನ ಜೀವನದಲ್ಲಿ ಅತ್ಯಂತ ಮಹತ್ವದ ಕಾಲವಾಗಿದೆ. ಇದು ಶಿಶುವು ಬಾಲಕ ಅಥವಾ ಬಾಲಕಿಯಾಗಿ ರೂಪುಗೊಳ್ಳುವ ಹಂತವಾಗಿದೆ. ಶಿಕ್ಷಣದ ದೃಷ್ಟಿಯಿಂದ ಈ ಕಾಲವನ್ನು ಸುವರ್ಣಕಾಲವೆಂದು ಕರೆಯಲಾಗಿದೆ. ಬಾಲ್ಯಾವಸ್ಥೆಯಲ್ಲಿ ಶೈಶವಾವಸ್ಥೆಗಿಂತ ಮಂದಗತಿಯ ದೈಹಿಕ ಬೆಳವಣಿಗೆ, ಸಾಂಘಿಕ ಪ್ರವೃತ್ತಿ ಒಡಮೂಡುವ, ಭಾಷಾಭಿವೃದ್ಧಿಯಾಗುವ, ಸಂವೇಗಗಳನ್ನು ಹತೋಟಿಯಲ್ಲಿಡುವ ಇವೇ ಮೊದಲಾದ ವರ್ತನೆಗಳು ವಿಕಾಸಗೊಳ್ಳುತ್ತವೆ.

ಮನೋವಿಜ್ಞಾನಿಗಳು ಬಾಲ್ಯಾವಸ್ಥೆಯನ್ನು ಪೂರ್ವಬಾಲ್ಯ ಮತ್ತು ಉತ್ತರಬಾಲ್ಯ ಎಂದು ವಿಂಗಡಿಸಿದ್ದಾರೆ. ಪೂರ್ವಬಾಲ್ಯಾವಸ್ಥೆ ಶಾಲಾ ಶಿಕ್ಷಣಕ್ಕೆ ಯೋಗ್ಯ ಕಾಲವಾದರೆ, ಉತ್ತರ ಬಾಲ್ಯಾವಸ್ಥೆ ಸರಿಯಾದ ರೀತಿಯಲ್ಲಿ ಎಲ್ಲಾ ವರ್ತನೆಗಳನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

2 ರಿಂದ 6ನೇ ವರ್ಷ ವಯಸ್ಸಿನ ಹಂತವನ್ನು ಪೂರ್ವಬಾಲ್ಯಾವಸ್ಥೆ ಎಂದು ಕರೆದಿದ್ದು ಈ ಹಂತದಲ್ಲಿ ಎತ್ತರ, ತೂಕ, ಅಂಗಾಂಗ ಪ್ರಮಾಣ, ಮೂಳೆ ಮತ್ತು ಸ್ನಾಯು ಗಟ್ಟಿಗೊಳ್ಳುವಿಕೆ ಮುಂದುವರಿಯುತ್ತದೆ. ಅಪಘಾತ ಮತ್ತು ರೋಗಕ್ಕೆ ಬಲಿಬೀಳುವಿಕೆ ಸಾಧ್ಯತೆ ಪೂರ್ವಬಾಲ್ಯದಲ್ಲಿ ಹೆಚ್ಚಾಗಿರುತ್ತದೆ. ಆದ್ದರಿಂದ ಮಗುವಿನ ರಕ್ಷಣೆ ಮುಖ್ಯವಾಗುತ್ತದೆ. ಆಹಾರ ಸೇವನೆ, ನಿದ್ರೆ, ಮಲಮೂತ್ರ ವಿಸರ್ಜನೆಯಂತಹ ಮೂಲಭೂತ ದೈಹಿಕ

Digitised by Bharatavani, CIIL

ಕ್ರಿಯೆಗಳು ಸ್ಥಿರಗೊಳ್ಳುತ್ತವೆ. ಹಸುಳೆತನದಲ್ಲಿ ವಿಕಾಸಗೊಳ್ಳಲು ಪ್ರಾರಂಭವಾದ ಕರಕೌಶಲಗಳು ಬಾಲ್ಯಾವಸ್ಥೆಯಲ್ಲಿ ಪರಿಣತಿ ತಲುಪಿ ಕೌಶಲಗಳ ಒಂದು ಭಂಡಾರವನ್ನೇ ಬೆಳೆಸಿಕೊಳ್ಳುವರು.

6 ರಿಂದ 12ನೇ ವರ್ಷ ವಯಸ್ಸಿನ ಹಂತವನ್ನು ಉತ್ತರ ಬಾಲ್ಯಾವಸ್ಥೆ ಎಂದು ಪರಿಗಣಿಸಲಾಗಿದ್ದು ಈ ಹಂತದಲ್ಲಿ ಪ್ರಜ್ಞೆ, ವಿಚಾರಶಕ್ತಿ ಹಾಗೂ ದೂರದೃಷ್ಟಿ ಕಾಣಿಸಿಕೊಳ್ಳುತ್ತವೆ. ಆತುರದ ನಿರ್ಧಾರ ಮತ್ತು ಸಂಕುಚಿತತೆ ಕಡಿಮೆಯಾಗುವ, ಸಾಂಘಿಕ ಪ್ರವೃತ್ತಿ ಅಧಿಕವಾಗಿರುತ್ತದೆ. ಸಂವೇಗಗಳ ಅಭಿವ್ಯಕ್ತಿ ಪರಿಮಾರ್ಜನೆಗೊಳ್ಳುತ್ತದೆ. ಸಮಾಜದೊಡನೆ ಸರಿಯಾದ ಹೊಂದಾಣಿಕೆ ಮಾಡಿಕೊಳ್ಳಲು ಪೋಷಕರು ಮತ್ತು ಶಿಕ್ಷಕರಿಂದ ಉತ್ತಮ ಮಾರ್ಗದರ್ಶನ ಹಾಗೂ ಸಲಹೆಯನ್ನು ಪಡೆಯುವ ಅಗತ್ಯ ಈ ಹಂತದಲ್ಲಿದೆ.

**ಸಾಮಾಜಿಕ ವಿಕಾಸ**

ಸಾಮಾಜಿಕ ವಿಕಾಸವೆಂದರೆ ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ವರ್ತಿಸುವ ಸಾಮರ್ಥ್ಯವನ್ನು ಗಳಿಸುವುದು ಎಂದರ್ಥ. ಸಾಮಾಜಿಕ ಹೊಂದಾಣಿಕೆಗೆ ಸಾಮಾಜಿಕ ವಿಕಾಸದ ಅಗತ್ಯವಿದೆ. ಇದು ಮಾನಸಿಕ ಹೊಂದಾಣಿಕೆಯೊಂದಿಗೆ ಸಂಬಂಧ ಹೊಂದಿದೆ. ಏಕೆಂದರೆ ವ್ಯಕ್ತಿ ತನ್ನ ಸಮಾಜ ಹಾಗೂ ಸಂಸ್ಕೃತಿಯ ಚೌಕಟ್ಟಿಗನುಸಾರವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಸಮಾಜ ಒಪ್ಪಿಕೊಳ್ಳುವುದನ್ನು ಗುರಿಯಾಗಿಟ್ಟುಕೊಂಡು ವ್ಯಕ್ತಿಯು ಅದನ್ನು ಸಾಧಿಸಬೇಕಾಗುತ್ತದೆ.

ಪೂರ್ವಬಾಲ್ಯಾವಸ್ಥೆಯ ಹಂತದಲ್ಲಿರುವ ಮಕ್ಕಳಲ್ಲಿ ಸ್ವಾಯತ್ತತೆಯ ಭಾವನೆ ಬೆಳೆಯುತ್ತದೆ. ಸ್ವತಂತ್ರವಾಗಿ ಅವರು ಪರಿಸರವನ್ನು ಅನ್ವೇಷಿಸಲು ಪ್ರಾರಂಭಿಸುತ್ತಾರೆ. ಸಾಮಾಜಿಕ ಪರಿಸರ ಮನೆಯಿಂದ ಹೊರಗೆ ವಿಸ್ತರಿಸುತ್ತದೆ. ಈ ಹಂತದಲ್ಲಿ ಮಕ್ಕಳು ಲಿಂಗಭೇದವಿಲ್ಲದೆ ಒಟ್ಟಿಗೆ ಆಟವಾಡುತ್ತಾರೆ. ಸಮೂಹ ಆಟಗಳಾದ ಕಣ್ಣುಮುಚ್ಚಾಲೆ, ಲಗೋರಿ, ಅಡಿಗೆ ಆಟ ಮುಂತಾದ ಆಟದ ಚಟುವಟಿಕೆಯಲ್ಲಿ ತೊಡಗುತ್ತಾರೆ ಹಾಗೂ ಮಾಯಾಲೋಕದ ಕಥೆಗಳು, ಹಾಸ್ಯದ ಕಥೆಗಳು ಮತ್ತು ಪ್ರಾಣಿಗಳ ಕಥೆಗಳಲ್ಲಿ ಆಸಕ್ತಿ ತೋರುತ್ತಾರೆ. ಜೊತೆಗೆ ಇತರರೊಡನೆ ಸಹಕರಿಸುವುದನ್ನು ಕಲಿಯುತ್ತಾ ಸಮಾನ ಆಸಕ್ತಿ ಮತ್ತು ಸಮಾನ ವ್ಯಕ್ತಿತ್ವ ಗುಣವುಳ್ಳವರೊಡನೆ ಸ್ನೇಹ ಬೆಳೆಸಿಕೊಳ್ಳುತ್ತಾರೆ.

ಈ ಹಂತದಲ್ಲಿ ಮಗು ಸಾಮಾಜೀಕರಣಗೊಳ್ಳುವುದು ಆಟಗಳ ಮೂಲಕ. ಗುಂಪು ಆಟಗಳ ಕಡೆ ಒಲವು ಹೆಚ್ಚಾಗುತ್ತದೆ. ನರ್ಸರಿ ಶಾಲೆಯ ಪ್ರವೇಶ ಮಕ್ಕಳನ್ನು ತಂದೆ ತಾಯಿಗಳ ಭಾವಬಂಧನದಿಂದ ಬಿಡಿಸಿ ಇತರ ಮಕ್ಕಳ ಜೊತೆ ಬೆರೆಯಲು ಮತ್ತು ಆನಂದಿಸಲು ಅವಕಾಶ ಮಾಡಿಕೊಡುತ್ತದೆ. ಈ ಹಂತದ ಕೊನೆಗೆ ಅಹಂ ಕೇಂದ್ರಿತ ಪ್ರವೃತ್ತಿ ಕಡಿಮೆಯಾಗುತ್ತದೆ ಮತ್ತು ಇತರರ ಭಾವನೆಗಳಿಗೆ ಸಹಾನುಭೂತಿ ಪ್ರಕಟಿಸುವ ಪ್ರವೃತ್ತಿ, ಸಮಾಜಪರ ವರ್ತನೆ ಕಂಡುಬರುತ್ತದೆ ಹಾಗೂ ತನ್ನ ಎಲ್ಲ ಕ್ರಿಯೆಗಳಿಗೂ ಸಾಮಾಜಿಕ ಒಪ್ಪಿಗೆ ಪಡೆಯಲು ಯತ್ನಿಸುತ್ತಾನೆ. ಈ ಹಂತದ ಕೊನೆಗೆ ಆಕ್ರಮಣ ಪ್ರವೃತ್ತಿ, ಜಗಳಗಂಟಿತನ, ವಿರೋಧ ಪ್ರವೃತ್ತಿ ಮುಂತಾದ ಋಣಾತ್ಮಕ ವರ್ತನೆಗಳು ಹೆಚ್ಚಾಗುತ್ತವೆ. ಇವು ಸಾಮಾಜಿಕ ಸನ್ನಿವೇಶದ ಉತ್ಪನ್ನಗಳು. ಹಿರಿಯರ ಹಸ್ತಕ್ಷೇಪ ಹೆಚ್ಚಾದಷ್ಟು ಮಗುವಿನಲ್ಲಿ ಹತಾಶಭಾವನೆ ಹೆಚ್ಚಾಗುತ್ತದೆ ಮತ್ತು ಅದರ ವರ್ತನೆ ಹೆಚ್ಚು ಋಣಾತ್ಮಕವಾಗುವ ಸಾಧ್ಯತೆ ಇದೆ.

ಉತ್ತರ ಬಾಲ್ಯವು ಮಗು ವಯಸ್ಕರ ಪ್ರಪಂಚಕ್ಕೆ ಅಡಿಯಿಡುವ ಕಾಲ. ಏಕೆಂದರೆ ಅವನು ಈ ಹಂತದ ಕೊನೆಗೆ ಸ್ವತಹ ದೈಹಿಕ ಪರಿಪಕ್ವತೆ ಮತ್ತು ಸಂವಹನ ಕೌಶಲಗಳನ್ನು ಪಡೆಯುತ್ತಾನೆ. ಮಗುವಿಗೆ 6 ವರ್ಷಗಳಾದಾಗ ಅವನು ಸ್ವತಂತ್ರವಾಗಿರಲು ಸ್ವತಃ ಆಹಾರ ಸೇವನೆ ಮಾಡಲು ಬಟ್ಟೆ ಹಾಕಿಕೊಳ್ಳಲು ಮತ್ತು ಸ್ನಾನ ಮಾಡಲು ಇಚ್ಛಿಸುತ್ತಾನೆ. ಕುಟುಂಬ ಮತ್ತು ಶಾಲೆಯಲ್ಲಿ ಇತರ ಮಕ್ಕಳೊಡನೆ ಬೆರೆಯುವ ಸಾಮರ್ಥ್ಯ ಗಳಿಸಿಕೊಳ್ಳುತ್ತಾನೆ.

ಬಾಲ್ಯಾವಸ್ಥೆಯನ್ನು 'ಕೂಟಯುಗ' (Gang Age) ಎಂದು ಕರೆಯುತ್ತಾರೆ. ಈ ಹಂತದ ಮಕ್ಕಳು ತಮಗೆ ಇಷ್ಟವಾದ ಹಾಗೂ ತಮ್ಮ ಭಾವನೆಗಳಿಗೆ ಬೆಲೆಕೊಡುವಂತಹ ಸ್ನೇಹಿತರ ಕೂಟವನ್ನು ಸೇರಿಕೊಳ್ಳುತ್ತಾರೆ. ಕೂಟದಲ್ಲಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದನ್ನು ಕಲಿಯುತ್ತಾರೆ. ಸಾಮಾಜಿಕವಾಗಿ ಸಮ್ಮತವೆನಿಸುವ ವರ್ತನೆಯನ್ನು ರೂಢಿಸಿಕೊಂಡು ತಮ್ಮ ಕೂಟಕ್ಕೆ ನಿಷ್ಠರಾಗಿರುತ್ತಾರೆ. ಜೊತೆಗೆ ಸಹಕಾರ ಮನೋಭಾವನೆ ಬೆಳೆಸಿಕೊಂಡು ಕೂಟದ ನಿಯಮಾವಳಿಗೆ ಬದ್ಧರಾಗಿರುತ್ತಾರೆ.

ಈ ಹಂತದಲ್ಲಿ ಮಕ್ಕಳು ತಮ್ಮ ಲಿಂಗದ ಸಮ ವಯಸ್ಕ ಗುಂಪುಗಳನ್ನು ರಚಿಸಿಕೊಳ್ಳುತ್ತಾರೆ ಮತ್ತು ಮನೆಯಿಂದ ಹೊರಗಿರಲು ಅಂದರೆ ಸ್ನೇಹಿತರೊಡನೆ ಹೆಚ್ಚು ಕಾಲ ಕಳೆಯಲು ಬಯಸುತ್ತಾರೆ. ಸಮವಯಸ್ಕ ಗುಂಪು (Peer group) ಈ ಹಂತದ ಸಾಮಾಜೀಕರಣದ ಪ್ರಮುಖ ಮಾಧ್ಯಮ. ಈ ಅವಧಿಯಲ್ಲಿ (ಸಖ ಸಮೂಹ) ಮನೆ ಮತ್ತು ಶಾಲೆಗಳಲ್ಲಿ ನಿಯಮಗಳನ್ನು ಪಾಲಿಸದಿರುವುದು ಮತ್ತು ಅವಿಧೇಯತೆ ಪ್ರದರ್ಶಿಸುವ ಪ್ರಕರಣಗಳೂ ಸಹ ಕಂಡು ಬರುತ್ತವೆ. ಹಿರಿಯರ ಮಾನದಂಡಗಳನ್ನು ತಿರಸ್ಕರಿಸುವ ಪ್ರವೃತ್ತಿ ಕಂಡು ಬರುತ್ತದೆ. ಹೆಚ್ಚು ಬಾಲಾಪರಾಧಗಳು ಈ ಹಂತದಲ್ಲಿ ಪ್ರಾರಂಭವಾಗುತ್ತವೆ.

ಆಟಗಳು ಮತ್ತು ಕ್ರೀಡೆಗಳು ಸಾಮಾಜಿಕ ವಿಕಾಸಕ್ಕೆ ಅತ್ಯುತ್ತಮ ಅವಕಾಶ ಒದಗಿಸುತ್ತವೆ. ಮಕ್ಕಳು ಗುಂಪು ಆಟಗಳಲ್ಲಿ ಆಸಕ್ತರಾಗಿರುತ್ತಾರೆ. ಹುಡುಗರು ಮತ್ತು ಹುಡುಗಿಯರು ಅವರದೇ ಆದ ಗುಂಪುಗಳನ್ನು ರಚಿಸಿಕೊಳ್ಳುತ್ತಾರೆ. ಸಮೂಹ ಪ್ರಜ್ಞೆ ವಿಕಾಸವಾಗುವುದರ ಜೊತೆಗೆ ಮಗುವಿನಲ್ಲಿ ಸ್ವಾರ್ಥತೆ, ಅಹಂ ಪ್ರವೃತ್ತಿ ಮತ್ತು ಆಕ್ರಮಣ ಪ್ರವೃತ್ತಿ ಕಡಿಮೆಯಾಗುತ್ತವೆ. ಇತರರೊಡನೆ ಸ್ಪರ್ಧಿಸಲು ಮತ್ತು ಸಹಕರಿಸಲು ಕಲಿಯುತ್ತಾರೆ. ಹೀಗೆ ಸಾಮಾಜಿಕ ಪ್ರಜ್ಞೆ ತೀವ್ರವಾಗಿ ವಿಕಾಸವಾಗುತ್ತದೆ.

**ಸಂವೇಗಾತ್ಮಕ ವಿಕಾಸ**

ಸಂವೇಗ ಸ್ಥಿತಿಯನ್ನು ದೇಹದ ಆಂತರಿಕ ಹಾಗೂ ಬಾಹ್ಯ ಬದಲಾವಣೆಗಳನ್ನೊಳಗೊಂಡ ವ್ಯಕ್ತಿಯ ಕದಡಿದ ಮನಃಸ್ಥಿತಿ ಎಂದು ಹೇಳಬಹುದಾಗಿದೆ. ಪಿ.ಟಿ. ಯೂಂಗ್‌ರವರು ನೀಡಿರುವ ವ್ಯಾಖ್ಯೆಯ ಪ್ರಕಾರ ಸಂವೇಗವೆಂದರೆ ಒಂದು ಜೀವಿಯ ವಿಚಲಿತ ಸ್ಥಿತಿ ಸ್ವಾಯತ್ತ ನರವ್ಯೂಹದ ಹೆಚ್ಚಾದ ಕ್ರಿಯೆಯಿಂದ ಬಿಡುಗಡೆಯಾಗುವ ರಸವಿಶೇಷಗಳನ್ನು ಇದು ಒಳಗೊಂಡಿರುತ್ತದೆ ಮತ್ತು ಸಂವೇಗ ವ್ಯಕ್ತಿಯ ಮಾನಸಿಕ ಸನ್ನಿವೇಶದಲ್ಲಿಯೇ ಉಗಮವಾಗುತ್ತದೆ. ಇದು ಪ್ರೀತಿ, ಭಯ, ಕೋಪ, ನಗು, ಅಳು ಅಥವಾ ಅಸೂಯೆಯ ಮೂಲಕ ವ್ಯಕ್ತವಾಗುತ್ತದೆ. ಈ ಸ್ಥಿತಿ ಸಂತೋಷದ ಅಥವಾ ಖಿನ್ನತೆಯ ಭಾವನೆ, ಮನಸ್ಸಿನ ಆವೇಗಗಳು (Impulses) ಮತ್ತು ಸಂವೇದನೆಗಳ ಅರಿವನ್ನೂ ಸಹ ಒಳಗೊಳ್ಳುತ್ತದೆ.

ಮೂಲತಃ ಮಾನವರೆಲ್ಲರೂ ಭಾವನಾ ಜೀವಿಗಳು. ವ್ಯಕ್ತಿಯ ಜೀವನದಲ್ಲಿ ಭಾವನೆಗಳು ತುಂಬಾ ಪ್ರಮುಖ ಪಾತ್ರ ವಹಿಸುತ್ತವೆ ಅವು ವೈಯಕ್ತಿಕ ಮತ್ತು ಸಾಮಾಜಿಕ ಹೊಂದಾಣಿಕೆಗೆ ಸಹಾಯ ಮಾಡುತ್ತವೆ. ಸಾಮಾನ್ಯವಾಗಿ ವಯಸ್ಕರಲ್ಲಿರುವ ಎಲ್ಲ ಭಾವನೆಗಳನ್ನು ಚಿಕ್ಕಮಕ್ಕಳೂ ಸಹ ಅನುಭವಿಸುತ್ತಾರೆ. ಆದರೆ ಮಕ್ಕಳಲ್ಲಿ ಭಾವನೆಗಳನ್ನು ಉದ್ದೀಪಿಸುವ ಅಂಶಗಳು ಮತ್ತು ಅವರು ತೋರುವ ಅನುಕ್ರಿಯೆಗಳಲ್ಲಿ ಭಿನ್ನತೆಯಿರುತ್ತದೆ.

Digitised by Bharatavani, CIIL

**ಪೂರ್ವಬಾಲ್ಯದಲ್ಲಿ ಕಂಡುಬರುವ ಸಂವೇಗಗಳ ಗುಣಲಕ್ಷಣಗಳೆಂದರೆ**

- ಸಂವೇಗಗಳು ಸರಳ ವಸ್ತುಗಳಿಗೆ ಸಂಬಂಧಿಸಿದಂತೆ ವ್ಯಕ್ತವಾಗುತ್ತವೆ.

- ಸಂವೇಗಗಳು ತಾತ್ಕಾಲಿಕವಾಗಿರುತ್ತವೆ. ಈ ಹಂತದಲ್ಲಿ ಮಗು ತನ್ನ ಭಾವನೆಗಳನ್ನು ಬಹಳ ಬೇಗ ಬದಲಾಯಿಸುತ್ತದೆ. ಉದಾ: ಅಳುತ್ತಿರುವ ಮೂರು ವರ್ಷದ ಮಗುವಿಗೆ ಚಾಕಲೇಟ್ ಕೊಟ್ಟರೆ ಅದು ಅಳು ನಿಲ್ಲಿಸಿ ಸಂತೋಷಗೊಳ್ಳುತ್ತದೆ.

- ಪೂರ್ವಬಾಲ್ಯದಲ್ಲಿ ಸಂವೇಗಗಳು ಉದ್ದೀಪನದ ತೀವ್ರತೆಗೆ ಅನುಗುಣವಾಗಿರದೆ ಅತಿ ತೀವ್ರವಾಗಿರುತ್ತವೆ ಮತ್ತು ಮಕ್ಕಳಿಗೆ ತಮ್ಮ ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಅವರು ಅಳುವಿಕೆ, ಉಗುರುಕಚ್ಚುವಿಕೆ, ಹೆಬ್ಬೆರಳು ಚೀಪುವಿಕೆ ಮತ್ತು ಮಾತಿನ ತೊಂದರೆ ಮುಂತಾದ ಚಟುವಟಿಕೆಗಳ ಮೂಲಕ ತಮ್ಮ ಸಂವೇಗಗಳನ್ನು ವ್ಯಕ್ತಪಡಿಸುತ್ತಾರೆ.

ಪೂರ್ವಬಾಲ್ಯದ ಮಕ್ಕಳಲ್ಲಿ ಸಾಮಾನ್ಯವಾಗಿ ಈ ಸಂವೇಗಗಳು ಕಂಡುಬರುತ್ತವೆ.

**ಕೋಪ:** ಮಕ್ಕಳ ಆಟಿಕೆಗಳನ್ನು ಇತರರು ತೆಗೆದುಕೊಂಡಾಗ, ಅವರ ಬಯಕೆಗಳು ಈಡೇರದಿದ್ದಾಗ ಅಥವಾ ಇತರ ಮಕ್ಕಳು ಅವರ ಮೇಲೆ ಆಕ್ರಮಣ ಮಾಡಿದಾಗ ಅವರು ಕೋಪಗೊಳ್ಳುತ್ತಾರೆ. ಈ ಉದ್ದೀಪನಗಳಿಗೆ ಅವರು ಅಳುವುದು, ಕೂಗಾಡುವುದು, ಕಿರಿಚುವುದು, ಒಡೆಯುವುದು, ವಸ್ತುಗಳನ್ನು ಬಿಸಾಡುವುದರ ಮೂಲಕ ತಮ್ಮ ಅನುಕ್ರಿಯೆ ತೋರಿಸುತ್ತಾರೆ.

**ಭಯ:** ಅಪರಿಚಿತ ವ್ಯಕ್ತಿಗಳು, ವಸ್ತುಗಳು ಮತ್ತು ಪ್ರಾಣಿಗಳ ಬಗ್ಗೆ ಮಕ್ಕಳು ಭಯಗೊಳ್ಳುತ್ತಾರೆ. ಕೆಲವು ಮಕ್ಕಳು ಕಲ್ಪಿತ ಸೃಷ್ಟಿಗಳು, ದೆವ್ವಗಳು, ಅಪರಾಧಿಗಳ ಬಗ್ಗೆ ಹಾಗೂ ಒಂಟಿಯಾಗಿರಲು ಭಯಗೊಳ್ಳುತ್ತಾರೆ. ಈ ಉದ್ದೀಪನಗಳಿಗೆ ಮಕ್ಕಳು ಅಡಗಿಕೊಳ್ಳುವುದು, ಅಳುವುದು, ಕಿರಿಚುವುದು ಹಾಗೂ ಸನ್ನಿವೇಶದಿಂದ ಹಿಂದೆ ಸರಿಯುವ ಮೂಲಕ ಅನುಕ್ರಿಯೆ ತೋರಿಸುತ್ತಾರೆ.

**ಅಸೂಯೆ:** ತಂದೆ–ತಾಯಿಯರ ಗಮನವನ್ನು ತನ್ನಿಂದ ಕಸಿದುಕೊಳ್ಳಬಲ್ಲ ವ್ಯಕ್ತಿ, ಪ್ರಾಣಿ ಅಥವಾ ವಸ್ತು ಅಸೂಯೆಯ ಉದ್ದೀಪನಗಳು. ಕೆಲವೊಮ್ಮೆ ತನ್ನ ತಮ್ಮ ಅಥವಾ ತಂಗಿ ತಂದೆ ತಾಯಿಯ ಗಮನ ಸೆಳೆದಾಗ ಅವರ ಬಗ್ಗೆಯೂ ಮಕ್ಕಳು ಅಸೂಯೆ ಪಡುತ್ತಾರೆ.

**ಕುತೂಹಲ:** ಮಕ್ಕಳು ಹೊಸ ವಸ್ತುಗಳನ್ನು ಮತ್ತು ತಮ್ಮ ಪರಿಸರವನ್ನು ಅನ್ವೇಷಿಸುವ ಕುತೂಹಲ ಹೊಂದಿರುತ್ತಾರೆ. ಪೋಷಕರಿಗೆ ಹಾಗೂ ಹಿರಿಯರಿಗೆ ಪ್ರಶ್ನೆ ಕೇಳುವುದರ ಮೂಲಕ ತಮ್ಮ ಕುತೂಹಲ ವ್ಯಕ್ತಪಡಿಸುತ್ತಾರೆ.

**ಮತ್ಸರ:** ತನ್ನಲ್ಲಿಲ್ಲದ ವಸ್ತುಗಳು, ಆಟಿಕೆಗಳು ಇತರರ ಹತ್ತಿರ ಇರುವುದು ಅಥವಾ ಅವರು ಹೆಚ್ಚಿನ ಸೌಲಭ್ಯ ಹೊಂದಿರುವುದು ಮತ್ಸರದ ಉದ್ದೀಪಕಗಳು. ಇತರರ ಹತ್ತಿರ ಇರುವ ಆಟಿಕೆಗಳನ್ನು ಕಿತ್ತುಕೊಳ್ಳುವುದು, ಬೇರೆ ಮಕ್ಕಳೊಡನೆ ಜಗಳ ಮಾಡುವುದು ಹಾಗೂ ಹಟಮಾರಿತನ ಮತ್ಸರದ ಅನುಕ್ರಿಯೆಗಳು.

**ಹರ್ಷ (ನಲಿವು):** ದೈಹಿಕ ದೃಢಕಾಯರಾಗಿರುವುದು, ಆರೋಗ್ಯ ಉತ್ತಮವಾಗಿರುವುದು ಮತ್ತು ಅವರ ಅಗತ್ಯತೆಗಳು ಪೂರೈಕೆಯಾಗುವುದು ಅವರ ಹರ್ಷದ ಉದ್ದೀಪಕಗಳು. ಹಾಸ್ಯ ಹಾಗೂ ಇತರರನ್ನು ಅಣಕಿಸುವುದು ಸಹ ಅವರಲ್ಲಿ ನಲಿವನ್ನುಂಟು ಮಾಡುತ್ತದೆ. ನಗು, ಮುಗುಳ್ನಗೆ, ಚಪ್ಪಾಳೆ, ಅಪ್ಪಿಕೊಳ್ಳುವುದು ಹರ್ಷಾನುಕ್ರಿಯೆಗಳು.

**ಪ್ರೀತಿ ಮತ್ತು ವಿಶ್ವಾಸ:** ಮಕ್ಕಳು ತಂದೆ–ತಾಯಿಗಳು, ಹಿರಿಯರು ಮತ್ತು ಸ್ನೇಹಿತರಿಂದ ಪ್ರೀತಿ ಮತ್ತು ವಿಶ್ವಾಸ ಪಡೆಯುತ್ತಾರೆ. ಇವರು ಸಹ ಪೋಷಕರಿಗೆ, ಕುಟುಂಬದ ಹಿರಿಯರಿಗೆ, ಸ್ನೇಹಿತರಿಗೆ, ಸಾಕು ಪ್ರಾಣಿಗಳಿಗೆ ಹಾಗೂ ತಮಗೆ ಸಂತೋಷವನ್ನುಂಟು ಮಾಡುವ ಕೆಲವು ನಿರ್ಜೀವ ವಸ್ತುಗಳಿಗೂ (ಉದಾ: ಟೆಡ್ಡಿ, ಗೊಂಬೆ) ಸಹ ಪ್ರೀತಿ ಮತ್ತು ವಿಶ್ವಾಸ ತೋರುತ್ತಾರೆ.

ಉತ್ತರ ಬಾಲ್ಯದಲ್ಲಿ ಮಗು ಸಂವೇಗಗಳನ್ನು ವ್ಯಕ್ತಪಡಿಸುವಿಕೆಯಲ್ಲಿ ಪೂರ್ವಬಾಲ್ಯಕ್ಕೆ ಹೋಲಿಸಿದಾಗ ಕೆಲವು ಬದಲಾವಣೆ ಕಾಣುತ್ತೇವೆ. ಈ ಹಂತದ ಕೊನೆಯ ವೇಳೆಗೆ ಮಗು ಸಾಮಾಜಿಕ ಸನ್ನಿವೇಶಗಳಲ್ಲಿ ತನ್ನ ಸಂವೇಗಗಳನ್ನು ವ್ಯಕ್ತಪಡಿಸುವುದರ ಮೇಲೆ ಹಿಡಿತ ಸಾಧಿಸುತ್ತದೆ.

ಉತ್ತರ ಬಾಲ್ಯದ ಸಂವೇಗಗಳು ಸಾಂಸರ್ಗಿಕವಾಗಿರುತ್ತವೆ. ಏಕೆಂದರೆ ಈ ಹಂತದ ಮಕ್ಕಳು ಇತರರ ಸಲಹೆ ಕೇಳುವ ಮತ್ತು ಇತರರ ಮೇಲೆ ಅವಲಂಬಿತರಾಗಿರುವ ಪ್ರವೃತ್ತಿಯುಳ್ಳವರಾಗಿರುತ್ತಾರೆ ಹಾಗೂ ಈ ಹಂತದಲ್ಲಿ ಮಕ್ಕಳಲ್ಲಿ ಕೋಪ ಉಂಟಾಗಲು ಕಾರಣಗಳೆಂದರೆ ಆಟಗಳಲ್ಲಿ ಸೋಲುವುದರಿಂದ, ಇತರರು ಅಣಕಿಸುವುದರಿಂದ, ಇತರ ಮಕ್ಕಳೊಡನೆ ಹೋಲಿಸಿದಾಗ ಅವರ ಚಟುವಟಿಕೆಗಳ ಮಧ್ಯೆ ಹಿರಿಯರು ತಲೆ ಹಾಕಿದಾಗ, ಹಿರಿಯರು ಮತ್ತು ಸ್ನೇಹಿತರು ಬಯ್ಯುವುದರಿಂದ ಹಾಗೂ ಇವರನ್ನು ಕಡೆಗಣಿಸುವುದರಿಂದ ಕೋಪ ಉಂಟಾಗುತ್ತದೆ.

ಪೂರ್ವಬಾಲ್ಯದಲ್ಲಿದ್ದಂತೆ ಪ್ರಾಣಿಗಳ ಭಯ, ಎತ್ತರದ ಪ್ರದೇಶದ ಭಯ ಹಾಗೂ ಶಬ್ದಗಳ ಭಯ ಈ ಹಂತದಲ್ಲಿ ಮರೆಯಾಗುತ್ತವೆ. ಆದರೆ ಅಗೋಚರ ವಸ್ತುಗಳ ಭಯ, ಕಲ್ಪಿತ ಭಯ, ಅನುತ್ತೀರ್ಣನಾಗುವ ಭಯ, ಬಯ್ಯಿಸಿಕೊಳ್ಳಬಹುದೆಂಬ ಭಯ, ಕತ್ತಲೆಯ ಭಯ ಹಾಗೂ ಒಂಟಿಯಾಗಿರಲು ಭಯ ಈ ಹಂತದಲ್ಲಿ ಕಾಣಿಸಿಕೊಳ್ಳುತ್ತವೆ.

ತಂದೆ–ತಾಯಿಯರು ಮಕ್ಕಳಲ್ಲಿ ಭೇದ ಭಾವಗಳನ್ನೆಣಿಸುವುದರಿಂದ ಉತ್ತರ ಬಾಲ್ಯದ ಮಕ್ಕಳಲ್ಲಿ ಅಸೂಯೆಗೆ ಕಾರಣವಾಗುತ್ತದೆ. ಜೊತೆಗೆ ಹರ್ಷ, ನಲಿವು, ಪ್ರೀತಿ, ವಿಶ್ವಾಸ ಮತ್ತು ಕುತೂಹಲದ ಸಂವೇಗಗಳು ಸಹ ಈ ಹಂತದಲ್ಲಿ ಕಂಡುಬರುತ್ತವೆ. ಉತ್ತರ ಬಾಲ್ಯದ ಮಗು ಪ್ರೀತಿ ವಿಶ್ವಾಸವನ್ನು ಪಡೆಯುವಲ್ಲಿ ಮತ್ತು ನೀಡುವಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುತ್ತದೆ. ಸ್ನೇಹಿತರಿಂದ ಪಡೆಯುವಷ್ಟು ಪ್ರೀತಿ, ವಿಶ್ವಾಸವನ್ನು ಅವರಿಗೂ ತೋರಿಸುತ್ತದೆ. ಮಕ್ಕಳು ಹರ್ಷ ಮತ್ತು ನಲಿವನ್ನು ವ್ಯಕ್ತಪಡಿಸಲು ಕಾರಣ ಅವರಲ್ಲಿರುವ ಸಾಧನೆಯ ಸಾಮರ್ಥ್ಯ, ಕುತೂಹಲವನ್ನು ಶಿಕ್ಷಕರು, ಪೋಷಕರು ಹಾಗೂ ಸ್ನೇಹಿತರಿಗೆ ಪ್ರಶ್ನೆಗಳನ್ನು ಕೇಳುವ ಮೂಲಕ ವ್ಯಕ್ತಪಡಿಸುತ್ತಾರೆ.

–ಜಿ.ಶೀ.

## ಬ್ರಿಟಿಷರ ಕಾಲದ ಶಿಕ್ಷಣ

ಬ್ರಿಟಿಷರು ಹಲವು ಶತಮಾನಗಳ ಕಾಲ ನಮ್ಮನ್ನು ಆಳಿಹೋದರು. ಅವರಿಂದ ಹೊಸ ಗಾಳಿ ಬೀಸಿ ಶಿಕ್ಷಣ ರಂಗದಲ್ಲಿ ಒಂದು ಕ್ರಾಂತಿಯೇ ಆಯಿತು.

ಮದ್ರಾಸಿನ ಗೌರ್ನರ್ ಆಗಿದ್ದ ಥಾಮಸ್ ಮನ್ರೋರವರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೊದಲು ಒಂದು ಸಮೀಕ್ಷೆಯನ್ನು ನಡೆಸಿದರು. ಇದು ಮದ್ರಾಸ್, ಬೊಂಬಾಯಿ ಮತ್ತು ಬಂಗಾಳದ

Digitised by Bharatavani, CIIL

ಪ್ರದೇಶಗಳಿಗೆ ಸೀಮಿತವಾಗಿದ್ದರೂ ಇದರ ಆಧಾರದ ಮೇಲೆ ಅಂದಿನ ಶಿಕ್ಷಣ ಕ್ರಮವನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳಬಹುದು.

ಮದ್ರಾಸ್ ಪ್ರಾಂತ್ಯದಲ್ಲಿ ಪ್ರಾಥಮಿಕ ಶಾಲೆಗಳು ಬಹಳ ಸಂಖ್ಯೆಯಲ್ಲಿದ್ದೂ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇತ್ತು. ಶಾಲೆಗೆ ಬಂದು ಅಭ್ಯಾಸ ಮಾಡುವುದಕ್ಕಿಂತ ಮನೆಯಲ್ಲಿಯೇ ಶಿಕ್ಷಕರ ನೆರವಿನಿಂದ ಅಭ್ಯಾಸ ಮಾಡುವುದು ಸಾಮಾನ್ಯವಾಗಿತ್ತು.

**ಮೆಕಾಲೆಯವರ ಟಿಪ್ಪಣಿ: (ಮೆಕಾಲೆ ಮಿನಿಟ್ಸ್)**

ಲಾರ್ಡ್ ಮೆಕಾಲೆಯವರು ಉತ್ತಮ ಶಿಕ್ಷಣತಜ್ಞರಾಗಿದ್ದರು. ಅವರು ಭಾರತಕ್ಕೆ 1834ರಲ್ಲಿ ಬಂದರು. ಅವರು ಗವರ್ನರ್ ಜನರಲ್ ಕೌನ್ಸಿಲ್‌ನ ಕಾನೂನು ಸದಸ್ಯ ಆಗಿದ್ದರು. ಲಾರ್ಡ್ ವಿಲಿಯಂ ಬೆಂಟಿಕ್‌ನು ಅವರನ್ನು ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಸಮಿತಿಯ ಅಧ್ಯಕ್ಷರನ್ನಾಗಿ 1834ರಂದು ನೇಮಿಸಿದನು. ಇವರು 1813ರ ರಾಜ ಶಾಸನದ ಪ್ರಕಾರ ದೊರೆಯಲು ಸಿದ್ದವಾದ ಒಂದು ಲಕ್ಷ ರೂ.ಗಳನ್ನು ಭಾರತೀಯ ಶಿಕ್ಷಣ ಪದ್ಧತಿಯ ಮೇಲೆ ಇಲ್ಲವೇ ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಮೇಲೆ ಖರ್ಚು ಮಾಡಬೇಕೆಂದು ನೇಮಕವಾದರು. ಇವರ ವರದಿಯೇ ಮೆಕಾಲೆಯವರ ಟಿಪ್ಪಣಿ ಆಗಿದೆ.

**ಮೆಕಾಲೆಯವರ ಶಿಫಾರಸ್ಸುಗಳು**

1. ಬೋಧನಾ ಮಾಧ್ಯಮವಾಗಿ ಇಂಗ್ಲಿಷ್ ಇರಬೇಕು. ಭಾರತೀಯ ಭಾಷೆಗಳು ಪೂರ್ಣವಾಗಿ ವಿಕಸನ ಹೊಂದಿಲ್ಲ. ಅರೇಬಿಕ್ ಮತ್ತು ಸಂಸ್ಕೃತ ಭಾಷೆಗಳಿಗಿಂತ ಇಂಗ್ಲಿಷ್ ಉನ್ನತವಾಗಿದೆ.
2. ಸೋಸುವಿಕೆ ಸಿದ್ಧಾಂತವನ್ನು ಜಾರಿಗೆ ತಂದರು. ಸೀಮಿತವಾಗಿ ಮೇಧಾವಿಗಳನ್ನು ಆಯ್ಕೆ ಮಾಡಿಕೊಂಡು ಹಲವು ಕಾರಣಗಳಿಂದ ಶಿಕ್ಷಣವನ್ನು ಅವರಿಗೆ ನೀಡುವುದು.
3. ಸಾಹಿತ್ಯವೆಂದರೆ ಇಂಗ್ಲಿಷ್ ಮಾತ್ರ ಆಗಿದೆ. ವಿದ್ಯಾವಂತ ಭಾರತೀಯರೆಂದರೆ ಕೇವಲ ಪೌರ್ವಾತ್ಯ ವಿದ್ಯೆ ಪಡೆದವರಷ್ಟೇ ಅಲ್ಲ. ಲಾಕ್‌ನ ತತ್ವಜ್ಞಾನ ಮತ್ತು ಮಿಲ್ಟನ್‌ನ ಕಾವ್ಯ ಅಭ್ಯಾಸ ಮಾಡಿದವರು.

ಒಟ್ಟಾರೆ ಮೆಕಾಲೆಯ ಪ್ರಮುಖ ಗುರಿಗಳು ಇಂಗ್ಲಿಷ್ ಶಿಕ್ಷಣದ ಪ್ರಸಾರವನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ಮಾಡುವುದು ಆಗಿತ್ತು.

**ಮೆಕಾಲೆ ಟಿಪ್ಪಣಿಯ ಪರಿಣಾಮ**

- ಮೆಕಾಲೆಯವರ ಟಿಪ್ಪಣಿಯು ಸುಮಾರು 100 ವರ್ಷಗಳವರೆಗೆ ಭಾಷೆಯ ಶೈಕ್ಷಣಿಕ ನೀತಿಯ ಮೇಲೆ ತನ್ನ ಪ್ರಭಾವವನ್ನು ತೋರಿತು.

- ಇಂಗ್ಲಿಷ್ ಮಾಧ್ಯಮದ ಮುಖಾಂತರ ಪಾಶ್ವಾತ್ಯ ಸಂಸ್ಕೃತಿ ಹಾಗೂ ಜ್ಞಾನವನ್ನು ವಿಸ್ತಾರ ಮಾಡುವ ಮೆಕಾಲೆಯವರ ಗುರಿ ಭಾರತಕ್ಕೆ ಸಾಕಷ್ಟು ಸಹಾಯ ಮಾಡಿತು.

- ಮೆಕಾಲೆಯವರು ಇಂಗ್ಲಿಷ್ ಭಾಷೆ, ಸಾಹಿತ್ಯ, ವಿಜ್ಞಾನ ಇನ್ನಿತರ ವಿಷಯಗಳನ್ನು ಭಾರತಕ್ಕೆ ಪರಿಚಯಿಸಿದರು.

**ಚಾರ್ಲ್ಸ್‌ವುಡ್ ಪರಿಪತ್ರ (1854)**

20 ವರ್ಷಗಳಿಗೊಮ್ಮೆ ಶಿಕ್ಷಣದ ನಿಯಮಗಳನ್ನು ಬದಲಾಯಿಸುವಂತಹ ವ್ಯವಸ್ಥೆಯನ್ನು ಇಂಗ್ಲಿಷ್ ಸರ್ಕಾರ ಹೊಂದಿತ್ತು. ಅದಕ್ಕೆ ಅನುಗುಣವಾಗಿ ನೇಮಕವಾದ ಈ ಸಮಿತಿಯು ಭಾರತೀಯ ಶಿಕ್ಷಣವನ್ನು ಅಲಕ್ಷಿಸುವುದು ಸಲ್ಲದು ಮತ್ತು ಇವರಿಗೆ ಶಿಕ್ಷಣವನ್ನು ವ್ಯವಸ್ಥೆ ಮಾಡುವುದರಿಂದ ಬ್ರಿಟಿಷ್ ಸರ್ಕಾರಕ್ಕೆ ತೊಂದರೆಯಿಲ್ಲ ಎಂದು ಅಭಿಪ್ರಾಯಪಟ್ಟಿತು.

**ಸಾರಾಂಶ**

ಬ್ರಿಟಿಷ್ ಸರ್ಕಾರದ ಮೇಲೆ ಭಾರತೀಯರಿಗೆ ಶಿಕ್ಷಣ ನೀಡುವ ಜವಾಬ್ದಾರಿಯಿದೆ. ನೈತಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಬೆಳೆಸುವುದು ಶಿಕ್ಷಣದ ಗುರಿ. ಭಾರತೀಯರಿಗೆ ಸಂಸ್ಕೃತ, ಪರ್ಶಿಯನ್ ಮತ್ತು ಅರೇಬಿಕ್ ಭಾಷೆಯಲ್ಲಿ ಶಿಕ್ಷಣ ನೀಡಬೇಕು. ಇಂಗ್ಲಿಷ್ ಮತ್ತು ಭಾರತೀಯ ಭಾಷೆಯಲ್ಲಿ ಶಿಕ್ಷಣ ನೀಡುವುದನ್ನು ಸಹ ಒಪ್ಪಿಕೊಳ್ಳಲಾಯಿತು. ಕೊನೆಗೆ ಮೆಕಾಲೆಯವರಂತೆ ಪಾಶ್ಚಾತ್ಯ ಶಿಕ್ಷಣ ನೀಡಬೇಕೆನ್ನುವುದನ್ನು ಚಾರ್ಲ್ಸ್‌ವುಡ್ ಸಹ ಒಪ್ಪಿಕೊಂಡರು. ದೇಶಿಯ ಭಾಷೆಗಳನ್ನು ಪ್ರೋತ್ಸಾಹಿಸಬೇಕು. ಪ್ರಾಂತೀಯ ಭಾಷೆಗಳಲ್ಲಿ ಪುಸ್ತಕಗಳು ಬರುವವರೆಗೆ ಇಂಗ್ಲಿಷ್ ಬೋಧನಾ ಮಾಧ್ಯಮವಾಗಿರಬೇಕು. ಪ್ರತಿ ಪ್ರಾಂತ್ಯದಲ್ಲಿ ಇಲಾಖೆ ರಚಿಸುವುದು ಮತ್ತು ಡಿ.ಪಿ.ಐ. ಹೆಸರಿನ ಹುದ್ದೆಯ ನಿರ್ಮಾಣ. ಬೊಂಬಾಯಿ, ಕಲ್ಕತ್ತ, ಮದ್ರಾಸ್‌ಗಳಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆ. ನಿಯಮ ಪಾಲಿಸುವ ಶಾಲೆಗಳಿಗೆ ಧನಸಹಾಯ ನೀಡಬೇಕು. ಪ್ರತಿ ಪ್ರಾಂತದಲ್ಲೊಂದು ಶಿಕ್ಷಕರ ತರಬೇತಿ ಸಂಸ್ಥೆ ತೆರೆಯಬೇಕು ಮತ್ತು ಮಹಮದೀಯರ ಹಾಗೂ ಸ್ತ್ರೀಯರ ಶಿಕ್ಷಣ ಪ್ರೋತ್ಸಾಹಿಸಬೇಕು. ಸರ್ಕಾರಿ ಸೇವೆಗೆ ಭಾರತೀಯರಿಗೆ ಆದ್ಯತೆ ನೀಡುವುದು. ಭಾರತೀಯ ಭಾಷೆಯಲ್ಲಿ ಗ್ರಂಥಗಳನ್ನು ಪ್ರಕಟಿಸಬೇಕು ಎಂದು ಹಲವು ಸಲಹೆಗಳನ್ನು ನೀಡಿತು.

1833ರಲ್ಲಿ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ವಿನಿಯೋಗಿಸಲು ಮತ್ತು ವರದಿಯು ಪರಿಪೂರ್ಣವಾಗಿರಲೆಂದು ಹಲವು ಪ್ರಮುಖರನ್ನು ಸೇರಿಸಿಕೊಂಡಿತು. ಟ್ರಾವಿಲನ್ ಸೈರಿ, ಮೆರ್ಸಮ್ಯಾನ್, ವಿಲ್ಸನ್–ಹಾಲಿಡೆ ಕ್ಯಾಮೆರೀನ್ ಮತ್ತು ಡಫ್ ಮುಂತಾದವರ ಸಲಹೆ ವರದಿಯಲ್ಲಿ ಬಹಳ ಮಹತ್ವದ್ದಾಗಿದೆ. ವುಡ್ಸ್ ವರದಿಯ ಮಹತ್ವವನ್ನು ಆಧರಿಸಿ ಇದನ್ನು **'ಶಿಕ್ಷಣದ ಮ್ಯಾಗ್ನಕಾರ್ಟ'** ಎಂದು ಭಾರತದ ಶಿಕ್ಷಣದಲ್ಲಿ ಹೆಸರಿಸಲಾಗಿದೆ.

**ವುಡ್‌ರವರ ವರದಿಯ ಗುಣ ವಿಶೇಷಗಳು**

- ಈ ಪರಿಪತ್ರವು ಮೊಟ್ಟಮೊದಲನೆಯದಾಗಿ ಭಾರತದಲ್ಲಿನ ಶಿಕ್ಷಣದ ಗುರಿಗಳನ್ನು ನಿರ್ಧರಿಸಿತು.

- ಭಾರತದಲ್ಲಿ ಉಚ್ಚ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಆಗಿದೆ ಎಂದು ಅನೇಕ ಉಚ್ಚ ಶಿಕ್ಷಣದ ಸಂಸ್ಥೆಗಳನ್ನು ಸ್ಥಾಪಿಸಲಾಯಿತು.

- ಈ ಪರಿಪತ್ರವು ಶಿಕ್ಷಣದ ಎಲ್ಲಾ ಹಂತಗಳನ್ನು ಬಹುವ್ಯಾಪಕವಾಗಿ ಪರಾಮರ್ಶಿಸಿದೆ. ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಉಚ್ಚ ಶಿಕ್ಷಣ, ಮಹಿಳೆಯರ ಶಿಕ್ಷಣ, ಔದ್ಯೋಗಿಕ ಶಿಕ್ಷಣ, ಶಿಕ್ಷಕರ ತರಬೇತಿ ಮುಂತಾದ ವಿವಿಧ ಹಂತಗಳ ಸಮಸ್ಯೆಗಳನ್ನು ಪರಿಶೀಲಿಸಿ ತನ್ನದೇ ಆದ ಸಲಹೆಗಳನ್ನು ನೀಡಿತು.

- ಪ್ರತಿಯೊಂದು ಪ್ರಾಂತ್ಯದಲ್ಲಿ ಶಿಕ್ಷಣ ಇಲಾಖೆಯೊಂದನ್ನು ತೆರೆಯುವುದರ ಮೂಲಕ ಭಾರತೀಯ ಶೈಕ್ಷಣಿಕ ಇತಿಹಾಸದಲ್ಲೇ ಪ್ರಥಮವಾಗಿ ಶಿಕ್ಷಣಕ್ಕೆ ಒಳ್ಳೆಯ ಸಂಘಟನೆಯ ಮತ್ತು ಅಚ್ಚುಕಟ್ಟಾದ ರೂಪರೇಷೆಗಳನ್ನು ಕೊಡಲಾಯಿತು. ಶಿಕ್ಷಣದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ನಿರ್ದೇಶಕರು, ಸಂದರ್ಶಕರು, ಸಹಾಯಕ ಸಂದರ್ಶಕರುಗಳ ನೇಮಕಾತಿಯ ಮೂಲಕ ಸರ್ಕಾರಕ್ಕೆ ಕೊಡಲಾಯಿತು.

Digitised by Bharatavani, CIIL

ಇದು ಶಿಕ್ಷಣದ ವೈಶಿಷ್ಟವನ್ನು ವರ್ಧಿಸಿತಲ್ಲದೇ ಅದರ ವಿಸ್ತರಣೆಯನ್ನು ಹೆಚ್ಚಿಸಿತು.

- ಶಿಕ್ಷಣದ ಯೋಜನೆಗಳು ವ್ಯವಸ್ಥಿತವಾಗಿ ಕಾರ್ಯಾಚರಣೆಯಲ್ಲಿ ಬರಬೇಕಾದರೆ ಒಂದು ಸುವ್ಯವಸ್ಥಿತವಾದ ಆಡಳಿತ ವ್ಯವಸ್ಥೆ ಬೇಕೆಂಬ ಸಲಹೆಯನ್ನು ನೀಡಿತು.

- ಈ ಪರಿಪತ್ರವು ಅಧೋಮುಖ ಸಿದ್ಧಾಂತವನ್ನು ಕಟುವಾಗಿ ಖಂಡಿಸಿತು. ಬ್ರಿಟಿಷ್ ಸಾಮ್ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಇದು ನಿಜವಾಗಿಯೂ ಕ್ರಾಂತಿಕಾರಕ ಹೆಜ್ಜೆ.

- ಶಿಕ್ಷಕ ತರಬೇತಿ ವಿದ್ಯಾರ್ಥಿಗಳಿಗೂ ಮತ್ತು ಶಿಕ್ಷಕರಿಗೂ ವಿದ್ಯಾರ್ಥಿ ವೇತನ, ಇವು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ತಂದವು.

ಧನ ಸಹಾಯ ಯೋಜನೆಯು ಶಿಕ್ಷಣದ ವಿಸ್ತರಣೆಗೆ ಬಹಳ ಪ್ರೋತ್ಸಾಹವನ್ನು ಕೊಟ್ಟಿತು. ಈ ಮೊದಲು ಕೊರತೆಯಲ್ಲಿದ್ದ ಖಾಸಗಿ ಶೈಕ್ಷಣಿಕ ಪ್ರಯತ್ನಗಳು ಧನ ಸಹಾಯ ಯೋಜನೆಯ ಪರಿಣಾಮವಾಗಿ ಸ್ಫೂರ್ತಿ ಪಡೆದು ಶಿಕ್ಷಣ ಕ್ಷೇತ್ರವನ್ನು ಆವರಿಸಿದವು.

### ವುಡ್ ವರದಿಯ ದೋಷಗಳು

1. ಶಿಕ್ಷಣದ ಉದ್ದೇಶವು– ಪುಸ್ತಕಗಳನ್ನು ಓದುವುದು, ಪರೀಕ್ಷೆ ಪಾಸಾಗುವುದು ಮತ್ತು ಸರ್ಕಾರಿ ಹುದ್ದೆಗಳಿಗಾಗಿ ಪರದಾಡುವುದು ಎಂದು ಮಾತ್ರ ಆಗಿದೆ.

2. ಈ ವರದಿಯು ಶಿಕ್ಷಣಕ್ಕೆ ಸರ್ಕಾರದ ಜವಾಬ್ದಾರಿಯನ್ನು ಗುರ್ತಿಸಿತು ನಿಜ. ಆದರೆ ಶ್ರೇಷ್ಠ ಕಾರ್ಯಗಳಿಗೆ ಅಡ್ಡಿ ತರುವ ಸರ್ಕಾರಿ ಧೋರಣೆ, ಶಿಕ್ಷಣ ಸಹಜವಾದ ಅಡತಡೆ ಇಲ್ಲದ ಬೆಳವಣಿಗೆಗೆ ಭಯಂಕರ ಅಘಾತವನ್ನುಂಟುಮಾಡಿತು. ಇದರ ವಿಸ್ತರಣೆಯನ್ನು ಕಳಚಿತು. ರಾಜಕೀಯ ಜಾಗೃತಿಯ ಪುನರುತ್ಥಾನದ ಜೊತೆಗೆ ಬ್ರಿಟಿಷ್ ಸರ್ಕಾರವು ಶಿಕ್ಷಣ ಕ್ಷೇತ್ರದಲ್ಲಿ ತೀವ್ರತರವಾದ ಆಪಾದನೆಗೆ ಗುರಿಯಾಯಿತು.

3. ಸ್ಥಾಪಿಸಬೇಕೆಂದಿರುವ ವಿಶ್ವವಿದ್ಯಾಲಯಗಳು ಸಂಪೂರ್ಣವಾಗಿ ಪರದೇಶಿಯವಾಗಿದ್ದವು. ಅಲ್ಲದೆ ವಿಶ್ವವಿದ್ಯಾಲಯಗಳ ಸೆನೆಟ್ ಸಮಿತಿಗೆ ಸದಸ್ಯರಾಗಿ ನಾಮಕರಣ ಮಾಡಲ್ಪಡುವ ಬಹಳಷ್ಟು ಜನರು ಶಿಕ್ಷಣದ ಸಮಸ್ಯೆಗಳ ಗಂಧವನ್ನು ಅರಿಯದವರಾಗಿದ್ದರು.

4. ಶಿಕ್ಷಣ ಪಡೆದವರಿಗೆ ಸರ್ಕಾರದ ಹುದ್ದೆಗಳನ್ನು ಕೊಡುವ ಆಕರ್ಷಣೆಯ ಮೂಲಕ ಜನರನ್ನು ಮರಳು ಮಾಡಿ ಇದು ಪರದೇಶದ ಶಿಕ್ಷಣವನ್ನು ಪ್ರೋತ್ಸಾಹಿಸಿತು.

5. ಸಮಾಜದಲ್ಲಿ ಮುಂದಾಳುಗಳನ್ನು ನಿರ್ಮಿಸಲು ಭಾರತದಲ್ಲಿ ಶಿಕ್ಷಣವನ್ನು ಪುನರುಜ್ಜೀವನಗೊಳಿಸಲು, ಮಾತೃಭೂಮಿಯ ರಕ್ಷಣೆಗಾಗಿ ಶಿಕ್ಷಣದ ಉದ್ದೇಶವನ್ನು ಇಟ್ಟುಕೊಳ್ಳಲಿಲ್ಲ.

### ವಿಲಿಯಂ ಹಂಟರ್ ಆಯೋಗ (1882)

ವೈಸ್‌ರಾಯ್ ಸಮಿತಿಯ ಸದಸ್ಯರಾದ ವಿಲಿಯಂ ಹಂಟರ್‌ರವರನ್ನು ಅಧ್ಯಕ್ಷರನ್ನಾಗಿ ಈ ಸಮಿತಿಗೆ ನೇಮಿಸಲಾಯಿತು. ಈ ಸಮಿತಿಯ 21 ಸದಸ್ಯರಲ್ಲಿ 7 ಜನ ಭಾರತೀಯರಿದ್ದರು. ಬಿ.ಎಲ್. ರೈಸ್‌ರವರು ಈ ಸಮಿತಿಯ ಕಾರ್ಯದರ್ಶಿಗಳಾಗಿದ್ದರು. 1854ರಲ್ಲಿ ವುಡ್ ಮಾಡಿದ ಸಲಹೆಯನ್ನು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತರಲಾಯಿತು ಎಂದು ಪರಿಶೀಲಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ದೇಶದ ಎಲ್ಲಾ ಕಡೆ ಹರಡುವಂತೆ ಮಾಡುವ ಉದ್ದೇಶದಿಂದ ವಿಲಿಯಂ ಹಂಟರ್ ಆಯೋಗ ಸೀಮಿತವಾದದ್ದನ್ನು ಸ್ಮರಿಸಬಹುದು.

ಆಯೋಗದ ಉದ್ದೇಶಗಳು: ಹಂಟರ್ ವರದಿಯ ಪ್ರಮುಖವಾದ ಉದ್ದೇಶವೇನೆಂದರೆ ಸರ್ಕಾರದ ಉನ್ನತ ಕ್ಷೇತ್ರದಲ್ಲಿಯ ಹಲವಾರು ಪ್ರಯತ್ನಗಳು ಸಾಮಾನ್ಯ ಜನರನ್ನು ಪ್ರಾಥಮಿಕ ಶಿಕ್ಷಣ ಕಡೆಗೆ ಹೊರಳಿಸುವುದಾಗಿತ್ತು. ಆದರೂ ಸಾರ್ವಜನಿಕರು ಸರ್ಕಾರದ ಪ್ರಾಥಮಿಕ ಶಿಕ್ಷಣದ ವಿಸ್ತರಣೆಯ ಬಗೆಗೆ ಇರುವ ಸಮಕಾಲೀನ ಧೋರಣೆಯ ವಿಷಯವಾಗಿ ಅಸಮಾಧಾನಗೊಂಡರು. ಇಂಗ್ಲೆಂಡಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲು ಪ್ರಾಯೋಗಿಕ ಶಿಕ್ಷಣ ಕಾಯ್ದೆ ಪಾಸು ಮಾಡಲಾಗಿತ್ತು. ಆದರೆ ಆಯೋಗವು ಪ್ರಾಥಮಿಕ ಶಿಕ್ಷಣದ ವಿಷಯವಾಗಿ ತನಿಖೆ ನಡೆಸುವುದಕ್ಕೆ ಪ್ರಾಶಸ್ತ್ಯ ಕೊಟ್ಟಿತು. ಈ ಆಯೋಗವು ವಿಚಾರಣೆ ಮಾಡುವಾಗ ತನ್ನ ಅಧ್ಯಯನದ ಚೌಕಟ್ಟಿನಲ್ಲಿ ಕೆಳಗೆ ನಮೂದಿಸಲ್ಪಟ್ಟ ಸಂಗತಿಗಳನ್ನು ಧ್ಯೇಯಗಳನ್ನಾಗಿರಿಸಿಕೊಂಡಿತು.

1. ಪ್ರಾಥಮಿಕ ಶಿಕ್ಷಣದ ವಸ್ತು ಸ್ಥಿತಿ ಮತ್ತು ಪ್ರಾಥಮಿಕ ಶಿಕ್ಷಣದ ವಿಸ್ತರಣಾ ಕ್ರಮಗಳ ಮೇಲ್ವಿಚಾರಣೆ.

2. ಪ್ರಾಂತೀಯ ಸಂಸ್ಥೆಗಳ ಸ್ಥಿತಿಗತಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವುಗಳ ಪಾತ್ರ.

3. ಭಾರತೀಯ ಶಿಕ್ಷಣದ ಸಾಮಾನ್ಯ ಯೋಜನೆಯಲ್ಲಿ ಸಂಸ್ಥೆಗಳ ಪಾತ್ರ.

4. ಖಾಸಗಿ ಸಂಸ್ಥೆಗಳತ್ತ ಸರ್ಕಾರದ ಧೋರಣೆ

5. ಅನುದಾನ ಸಂಹಿತೆ.

ಈ ಆಯೋಗದ ಪ್ರಾಥಮಿಕ ಸಭೆಯು ಕಲ್ಕತ್ತಾದಲ್ಲಿ 2 ತಿಂಗಳ ಕಾಲ ನಡೆಯಿತು ನಂತರ 8 ತಿಂಗಳ ಕಾಲ ಭಾರತದ ಎಲ್ಲ ಕಡೆ ಸಂಚರಿಸಿ 600 ಪುಟದ ಪ್ರಥಮ ವರದಿಯನ್ನು ಸಿದ್ಧಪಡಿಸಲಾಯಿತು.

### ಲಾರ್ಡ್ ಕರ್ಜನ್‌ರವರ ಶಿಕ್ಷಣ ನೀತಿ / ಭಾರತ ಸರ್ಕಾರದ ಗೊತ್ತುವಳಿ (1904)

1882ರಿಂದ 1885ರವರೆಗೆ ಏಷ್ಯಾದಲ್ಲಿ ಪ್ರವಾಸ ಮಾಡಿ ಭಾರತವನ್ನು ಮತ್ತು ಇಲ್ಲಿನ ಶಿಕ್ಷಣವನ್ನು ಪರಿಚಯಿಸಿಕೊಂಡಿದ್ದ ಲಾರ್ಡ್ ಕರ್ಜನ್‌ರವರು ಭಾರತದ ಗೌರ್ನರ್ ಜನರಲ್ ಆಗಿ ಬಂದರು. ಬರುವಾಗಲೇ ಭಾರತದ ಶಿಕ್ಷಣದಲ್ಲಿ ಮಾರ್ಪಾಡು ತರಲು ಬಯಸಿದ್ದರು. ಹಲವು ದಶಕಗಳಲ್ಲಿ ಆಗಬಹುದಾದಂತಹ ಬೃಹತ್ ಕಾರ್ಯಗಳನ್ನು ಕೇವಲ 7 ವರ್ಷಗಳಲ್ಲಿ ವ್ಯವಸ್ಥೆಗೊಳಿಸಿದರು. ಈ ಹಿಂದೆ 1897 ರಿಂದ 1902ರವರೆಗೆ ಯಾವುದೇ ಪ್ರಗತಿ ಕಾರ್ಯ ಶೈಕ್ಷಣಿಕವಾಗಿ ಭಾರತದಲ್ಲಿ ಕೈಗೊಂಡಿರಲಿಲ್ಲ. ಶ್ರೀ ಶಾರದಾನಂದರಂತಹ ವ್ಯಕ್ತಿಗಳು ಭಾರತದ ಮೇಲೆ ಪಾಶ್ಚಾತ್ಯ ಶಿಕ್ಷಣವು ಪ್ರಾಚೀನ ಪರಂಪರೆಯ ಮೇಲೆ ಪ್ರಭಾವ ಬೀರದಿರಲೆಂದು ರಾಷ್ಟ್ರೀಯ ಶಿಕ್ಷಣ ನೀತಿಗಾಗಿ ಹೋರಾಡುತ್ತಿದ್ದರು. ಜೊತೆಗೆ 1885ರ ವೇಳೆಗೆ ಭಾರತೀಯ ಕಾಂಗ್ರೆಸ್ ಸಂಸ್ಥೆ ಸ್ಥಾಪನೆಯಾಯಿತಲ್ಲದೆ ರಾಷ್ಟ್ರೀಯ ಶಿಕ್ಷಣ ಕ್ರಮಕ್ಕೆ ಅದು ಸಹ ಒತ್ತಾಯಿಸಿತು.

1901ರಲ್ಲಿ ಗುಪ್ತವಾಗಿ ಸಿಮ್ಲಾದಲ್ಲಿ ನಡೆದ ಶಿಕ್ಷಣ ಸಮ್ಮೇಳನದಲ್ಲಿ 15 ದಿನಗಳ ಕಾಲ ಶಿಕ್ಷಣದ ಪ್ರತಿಯೊಂದು ಅಂಶವನ್ನು ಚರ್ಚಿಸಲಾಯಿತು. ಈ ಸಮ್ಮೇಳನಕ್ಕೆ ಪ್ರಾಂತೀಯ ಶಿಕ್ಷಣ ನಿರ್ದೇಶಕರು ಮತ್ತು ಕ್ರೈಸ್ತ ಧರ್ಮ ಪ್ರಚಾರ–ಸಂಸ್ಥೆಗಳ ಪ್ರತಿನಿಧಿಗಳನ್ನು ಮಾತ್ರ ಆಹ್ವಾನಿಸಿದ್ದರು.

Digitised by Bharatavani, CIIL

ಯಾವುದೇ ಭಾರತೀಯನಿಗೂ ಇಲ್ಲಿಗೆ ಪ್ರವೇಶ ನೀಡಿರಲಿಲ್ಲ. ಸಿಮ್ಲಾದ ಶಿಕ್ಷಣ ಸಮ್ಮೇಳನದ ನಂತರ ಶಿಕ್ಷಣ ನೀತಿಯನ್ನು ಪ್ರಚಾರಕ್ಕೆ ಲಾರ್ಡ್ ಕರ್ಜನ್ ತಂದರು. ಇದರ ಸಾರಾಂಶ ಈ ರೀತಿಯಿದೆ:

ಬ್ರಿಟಿಷ್ ಸರ್ಕಾರವು ಮೂಲೆ ಮೂಲೆಯಲ್ಲಿನ ಶಿಕ್ಷಣವನ್ನು ನಿಯಂತ್ರಿಸುವುದು ಮತ್ತು ನಿಯಂತ್ರಣವನ್ನು ಮುಂದುವರಿಸಿಕೊಂಡು ನಿರ್ದೇಶಿಸುವುದು. ಅಗತ್ಯವಿರುವೆಡೆ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಖಾಸಗಿಯವರಿಗೆ ಮಾದರಿಯಾಗುವುದು. ಬ್ರಿಟಿಷ್ ಸರ್ಕಾರವು ಶಿಕ್ಷಣದ ಮೇಲೆ ಹೆಚ್ಚು ಹಣ ಖರ್ಚು ಮಾಡುವುದಿಲ್ಲ ಎಂದು ತಿಳಿದು ಬಂತು.

## 1902ರ ರ್‍ಯಾಲೆ ನೇತೃತ್ವದ ಆಯೋಗ

1902ರಲ್ಲಿ ಕರ್ಜನ್ ಶಿಕ್ಷಣ ವ್ಯವಸ್ಥೆಯ ಉತ್ತಮತೆಗಾಗಿ ಅಧ್ಯಯನ ಮಾಡಲು ರ್‍ಯಾಲೆ ನೇತೃತ್ವದಲ್ಲಿ ಒಂದು ಆಯೋಗ ರಚಿಸಿದರು. ವಿಶ್ವವಿದ್ಯಾಲಯಗಳು ಬೋಧನಾ ಕಾರ್ಯವನ್ನು ತೆಗೆದುಕೊಳ್ಳಬೇಕು. ಅಲ್ಲದೆ ಅವುಗಳ ಅಧಿಕಾರ ವ್ಯಾಪ್ತಿಯನ್ನು ಸ್ಪಷ್ಟಪಡಿಸಬೇಕು. ಸೆನೆಟ್ ಸಿಂಡಿಕೇಟ್‌ಗಳನ್ನು ಪುನರ್ ರಚಿಸಿ ಮೊದಲಿಗಿಂತ ಹೆಚ್ಚು ಪ್ರಾತಿನಿಧ್ಯ ಕೊಡುವುದು. ತನ್ನ ವ್ಯಾಪ್ತಿಗೊಳಪಟ್ಟ ಕಾಲೇಜುಗಳಲ್ಲಿ ಉಸ್ತುವಾರಿ–ಪಠ್ಯಕ್ರಮ, ಪರೀಕ್ಷಾ ವಿಧಾನ, ವಿದ್ಯಾಭ್ಯಾಸದ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗಲು ಬೇಕಾದ ಸೂಕ್ತ ಕ್ರಿಯೆ ಕೈಗೊಳ್ಳಬೇಕು ಮೊದಲಾದ ಶಿಫಾರಸ್ಸುಗಳನ್ನು ಆಯೋಗ ಮಾಡಿತು.

ರ್‍ಯಾಲೆ ಆಯೋಗ ಮಾಡಿದ ಶಿಫಾರಸ್ಸುಗಳನ್ನು ಅಂಗೀಕರಿಸಿದ ಸರ್ಕಾರ 1904ರಲ್ಲಿ ಗೊತ್ತುವಳಿಯನ್ನು ಜಾರಿಗೆ ತಂದಿತು. ಭಾರತೀಯ ವಿಶ್ವವಿದ್ಯಾನಿಲಯಗಳ ಮೇಲೆ ಬೆಳಕು ಬೀರಿತು. ಇದು ನಂತರ ಕಾಯ್ದೆಯಾಯಿತು. ಪರೀಕ್ಷೆಯ ಮೇಲೆ ಮತ್ತು ನೌಕರಿಯ ಮೇಲಿರುವ ಪ್ರಭುತ್ವವನ್ನು ಇದು ಕಟುವಾಗಿ ಟೀಕಿಸಿದೆ. ವೈಜ್ಞಾನಿಕ ಶಿಕ್ಷಣಕ್ಕೆ ಅವಕಾಶ ಇಲ್ಲದಿರುವುದನ್ನು ಮತ್ತು ಇಂಗ್ಲಿಷ್ ಭಾಷೆಗೆ ಬಹಳ ಪ್ರಾಮುಖ್ಯತೆ ಇರುವುದರಿಂದ ಪುಸ್ತಕಗಳನ್ನು ಭಾರತೀಯ ಭಾಷೆಗಳಲ್ಲಿ ನಿರೀಕ್ಷಿಸಿದೆ. ಇದು ಇಂದಿಗೂ ಆಗಬೇಕಾದ ಕಾರ್ಯ.

## ಗೋಖಲೆಯ ಬಿಲ್ (1910-1912)

ಸ್ವದೇಶಿ ಚಳುವಳಿಯಿಂದ ಉದ್ಭವಿಸಿದ ರಾಜಕೀಯ ಪ್ರಜ್ಞೆಯು ಜನಸಾಮಾನ್ಯರಿಗೂ ಓದು ಬರಹದಲ್ಲಿ ಅಭಿರುಚಿಯನ್ನು ಬೆಳೆಸಿತು. 1904ರ ಸರ್ಕಾರದ ಶೈಕ್ಷಣಿಕ ನೀತಿಯ ಫಲವಾಗಿ ಪ್ರಾಥಮಿಕ ಶಿಕ್ಷಣ ವ್ಯಾಪಿಸುತ್ತಿದ್ದರೂ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದ ಜನಸಂಖ್ಯೆಗೆ ಅದು ಸಾಲದಾಗಿತ್ತು. ಹೀಗಿರುವುದರಿಂದ ಗೋಪಾಲಕೃಷ್ಣ ಗೋಖಲೆ ರಾಷ್ಟ್ರದಲ್ಲಿ ತಾಂಡವ ಆಡುತ್ತಿದ್ದ ಅನಕ್ಷರತೆ ಸಮಸ್ಯೆಯನ್ನು ಮನಗಾಣಿಸುವಂತೆ ಮಾಡಿ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕೆಂಬ ನೀತಿಯನ್ನು ಸರ್ಕಾರದ ಮುಂದಿಟ್ಟರು.

ಗೋಖಲೆ ಬಿಲ್ಲಿನಲ್ಲಿ ಈ ಕೆಳಗಿನ ಅಂಶಗಳಿದ್ದವು.

1. ಬಾಲಕ ಬಾಲಕಿಯರು ಯಾವ ಸ್ಥಳಗಳಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಈಗಾಗಲೇ ಶಾಲೆಯಲ್ಲಿ ಇರುವರೋ ಅಲ್ಲಿ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಬೇಕು. ಈ ಪ್ರಮಾಣವನ್ನು ಗವರ್ನರ್ ಜನರಲ್ ಗೊತ್ತು ಮಾಡಬೇಕು.
2. ಸರಕಾರದ ಅನುಮತಿ ಪಡೆದು ಸ್ಥಳೀಯ ಸಂಸ್ಥೆಗಳು ಆ ಯೋಜನೆಯನ್ನು ಜಾರಿಗೆ ತರಬೇಕು ಅವು ಸ್ಥಳೀಯ ಮೇಲ್ತೆರಿಗೆಯಿಂದ ಹಣ ಒದಗಿಸಿಕೊಳ್ಳಬಹುದೆಂದು ವಿವರಣೆ ಕೊಡಲಾಗಿತ್ತು.
3. 6 ರಿಂದ 10 ವರ್ಷದ ಬಾಲಕನನ್ನು ಶಾಲೆಗೆ ಸೇರಿಸುವುದು ಪಾಲಕರ ಮೂಲ ಕರ್ತವ್ಯ. ಇಲ್ಲದಿದ್ದರೆ ಅವರು ಶಿಕ್ಷಾರ್ಹರು.
4. ಸ್ಥಳೀಯ ಸಂಸ್ಥೆಗಳಿಗೆ ಈ ಯೋಜನೆಗಾಗಿ ಪ್ರಾಂತ್ಯ ಸರ್ಕಾರ ನೀಡಬೇಕಾದ ಧನ ಸಹಾಯವನ್ನು ಕ್ರೋಢೀಕರಿಸಿತು.
5. ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಕಾಲಾನುಕ್ರಮದಲ್ಲಿ ಹೆಣ್ಣು ಮಕ್ಕಳಿಗೂ ವಿಸ್ತರಿಸಬೇಕು.
6. ಯಾವ ಪಾಲಕರ ಮಾಸಿಕ ಆದಾಯವು 10 ರೂಪಾಯಿಗಿಂತ ಕಡಿಮೆ ಇದೆಯೋ ಅಂತಹವರ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು.
7. ಕಡ್ಡಾಯ ಶಿಕ್ಷಣಕ್ಕೆ ಬೇಕಾಗುವ ಮೊತ್ತವನ್ನು ಸ್ಥಾನಿಕ ಸಂಸ್ಥೆಗಳು ಮತ್ತು ಸರಕಾರವು 1:2 ಪ್ರಮಾಣದಲ್ಲಿ ವಹಿಸಬೇಕು.

## ಕಲ್ಕತ್ತಾ ವಿಶ್ವವಿದ್ಯಾಲಯ ಆಯೋಗ 1917 (ಸ್ಯಾಡ್ಲರ್ ಆಯೋಗ)

ಕಲ್ಕತ್ತಾ ವಿಶ್ವವಿದ್ಯಾಲಯ ಆಯೋಗವು ಬ್ರಿಟಿಷ್ ಕಾಲದ ಭಾರತ ಶಿಕ್ಷಣ ಇತಿಹಾಸದಲ್ಲಿ ಉಚ್ಚ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಒಂದು ಮೈಲುಗಲ್ಲಾಗಿ ನಿಂತಿದೆ. ಆಯೋಗವು 1917ರಲ್ಲಿ ಲೀಡ್ಸ ವಿಶ್ವವಿದ್ಯಾಲಯದ ಉಪಕುಲಪತಿಯಾದ ಸರ್ ಮೈಕಲ್ ಸ್ಯಾಡ್ಲರ್‌ರವರ ಅಧ್ಯಕ್ಷತೆಯಲ್ಲಿ ಬ್ರಿಟಿಷ್–ಭಾರತ ಸರ್ಕಾರದಿಂದ ನೇಮಿಸಲ್ಪಟ್ಟಿತು.

ಈ ಆಯೋಗವು ಕಲ್ಕತ್ತಾ ವಿಶ್ವವಿದ್ಯಾಲಯದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅದರ ಕಾರ್ಯ ವೈಖರಿಯನ್ನು ಪರಿಶೀಲಿಸಿ ಗುಣಾತ್ಮಕವಾದ ಸುಧಾರಣೆಯನ್ನು ತರುವ ಉದ್ದೇಶದಿಂದ ಜನಿಸಿತು. ಇದು ಮುಖ್ಯವಾಗಿ ಉಚ್ಚ ಶಿಕ್ಷಣ ಹಂತವಲ್ಲದೆ ಮಾಧ್ಯಮಿಕ ಶಿಕ್ಷಣ, ಶಿಕ್ಷಕರ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ ಕುರಿತು ಅವಲೋಕಿಸಿದ್ದು ಗಮನಾರ್ಹವಾಗಿದೆ.

**ಶಿಫಾರಸ್ಸುಗಳು:**

1. ಪ್ರತ್ಯೇಕವಾದ ಬೋಧನ ಮತ್ತು ವಸತಿ ಸೌಲಭ್ಯದ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು.
2. ಕಲ್ಕತ್ತ ನಗರದಲ್ಲಿ ಬೋಧನಾ ಸಂಪನ್ಮೂಲಗಳನ್ನು ಒಟ್ಟುಗೂಡಿಸುವ ಸಲುವಾಗಿ ಒಂದು ಬೋಧನಾ ವಿಶ್ವವಿದ್ಯಾಲಯ ಆಗುವಂತೆ ಮಾಡಬೇಕು.
3. ಗ್ರಾಮಾಂತರ ಪ್ರದೇಶಗಳಲ್ಲಿದ್ದ ಕಾಲೇಜುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಸೂಕ್ತವಾದ ಸ್ಥಳಗಳಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಬೇಕು.

## ಹಾರ್ಟಾಗ್ ಆಯೋಗ : (1929)

ದೇಶಾದ್ಯಂತ ಶಿಕ್ಷಣ ಪ್ರಸಾರವಾದಂತೆಲ್ಲಾ ಸಮಸ್ಯೆಗಳು ಉದ್ಭವವಾದವು. ಭಾರತದಲ್ಲಿ ಆಚರಣೆಗೆ ತಂದಿದ್ದ ದ್ವಿಪ್ರಭುತ್ವ (Dyarchy) ಸರ್ಕಾರದ ರಾಜಕೀಯ– ಸಾಮಾಜಿಕ ಆರ್ಥಿಕ ಅಭಿವೃದ್ಧಿಯನ್ನು ರಾಜ್ಯಾಂಗ ರಚನೆಯ ಪರಿಣಾಮಗಳನ್ನು ಪರಿಶೀಲಿಸಲು 1927ರಲ್ಲಿ ಸರ್ ಸೈಮನ್ ಆಯೋಗವನ್ನು ನೇಮಿಸಲಾಯಿತು. ಈ ಸಮಿತಿ ಶಿಕ್ಷಣದ ಪರಿಸ್ಥಿತಿಯನ್ನು ಪರಿಶೀಲಿಸಿ ಒಂದು ವರದಿಯನ್ನು ಸಿದ್ಧಪಡಿಸಲು ಒಂದು ಸಹಾಯಕ ಸಮಿತಿಯನ್ನು ಸರ್ ಫಿಲಿಪ್ ಹಾರ್ಟಾಗರ ಅಧ್ಯಕ್ಷತೆಯಲ್ಲಿ ನೇಮಿಸಿತು.

**ವರದಿಯ ಸಾರಾಂಶ :** ಪ್ರಾಥಮಿಕ ಶಾಲೆಯಲ್ಲಿ ಹೆಚ್ಚಿನ ಜನ ಶಾಲೆಯ ಒಂದು ಹಂತವನ್ನು ಪೂರ್ಣವಾಗಿ ಮುಗಿಸದೆ ಮಧ್ಯದಲ್ಲಿಯೇ

Digitised by Bharatavani, CIIL

ಬಿಟ್ಟು ಹೋಗುವುದನ್ನು (ಅಪವ್ಯಯವನ್ನು) ಕಡಿಮೆ ಮಾಡಬೇಕು. ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣದ ಪ್ರಗತಿಗೆ ಅನಾನುಕೂಲವಾಗುವ ಈ ಅಪವ್ಯಯವನ್ನು ಕಡಿಮೆ ಮಾಡಿಸಬೇಕೆಂದು ಹೇಳಿದೆ. ಪ್ರೌಢಶಾಲೆಯು ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಸಿದ್ಧಗೊಳಿಸುತ್ತದೆಯೇ ವಿನಃ ಜೀವನಕ್ಕಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಮೆಟ್ರಿಕ್ಯುಲೇಷನ್‌ನಲ್ಲಿ ಮತ್ತು ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುತ್ತಿರುವರು ಎಂದಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳ ವಿಸ್ತರಣೆ ಸರಿಯಾಗಿ ಆಗಿಲ್ಲ. ಇದು ಗ್ರಾಮಾಂತರ ಸಮಸ್ಯೆ ಎಂದು ಹೇಳಿದೆ. ಹಲವು ಅಂಶಗಳನ್ನು ಇದು ಜನತೆಯ ಬಡತನ, ಸಂಪ್ರದಾಯಬದ್ಧ ಮನೋಭಾವನೆ ಮತ್ತು ಅನಕ್ಷರತೆಯ ಕಾರಣದಿಂದ ಶಿಕ್ಷಣದ ಉಪಯುಕ್ತತೆಯನ್ನು ಗುರ್ತಿಸಿಲ್ಲ. ಮಕ್ಕಳನ್ನು ಶಾಲೆಗೆ ಕಳುಹಿಸುವುದರ ಬದಲು ಗದ್ದೆಗಳಿಗೆ ದುಡಿಯಲು ಪೋಷಕರು ಕರೆದುಕೊಂಡು ಹೋದರೆ ಆರ್ಥಿಕ ಲಾಭವಿದೆಯೆಂದು ನಂಬಿದ್ದು, ಮುಖ್ಯವಾಗಿ ಶಾಲೆಗಳು ನಡೆಯುತ್ತಿರಲಿಲ್ಲ ಮತ್ತು ಬೋಧನೆಯ ಕ್ರಮ ಆಕರ್ಷಕವಾಗಿರಲಿಲ್ಲ. ಶಿಕ್ಷಕರ ಗುಣಮಟ್ಟ ಉತ್ತಮವಾಗಿರಲಿಲ್ಲ. ಅಂತಹ ಶಾಲೆಗಳ ಹಂಚಿಕೆ ಪ್ರಾಂತೀಯ ಅವಶ್ಯಕತೆಯನ್ನು ಆಧರಿಸಿರಲಿಲ್ಲ ಎಂದು ಹಲವು ದೋಷಗಳನ್ನು ಗುರ್ತಿಸಿತು.

### ಸರ್ ಜಾನ್ ಸಾರ್ಜೆಂಟ್ ಆಯೋಗ (1944)

ಯುದ್ಧಾನಂತರ ಶೈಕ್ಷಣಿಕ ಯೋಜನೆ ಎಂದು ಸರ್ ಜಾನ್ ಸಾರ್ಜೆಂಟ್‌ನ ವರದಿಯನ್ನು ಇಂಗ್ಲೆಂಡಿನಲ್ಲಿ 40 ವರ್ಷಗಳಲ್ಲಿ ಶಿಕ್ಷಣದಲ್ಲಿ ಸಾಧಿಸಿದ್ದನ್ನು ಭಾರತದಲ್ಲಿಯೂ ತರುವ ದೃಷ್ಟಿಯಿಂದ ಈ ಆಯೋಗವನ್ನು ನೇಮಿಸಲಾಯಿತು. ಇದನ್ನು 1994ರ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ವರದಿ ಎಂದೂ ಕರೆಯುತ್ತಾರೆ. ಇದು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾಲಯದವರೆಗೆ ತನ್ನ ಸಲಹೆಯನ್ನು ನೀಡಿದೆ. ಹೀಗೆ ಶಿಕ್ಷಣದ ವ್ಯವಸ್ಥೆ, ಅನಾನುಕೂಲಗಳು, ಬೋಧನಾ ಪದ್ಧತಿಯ ಬಗ್ಗೆ ಅಂದಿನ ದಿನಗಳಿಗೆ ಸಲಹೆ ನೀಡಿದೆ. ಬಹಳ ಸೂಕ್ಷ್ಮವಾಗಿ ಮತ್ತು ವಿವರವಾಗಿ ಭಾರತದ ಶಿಕ್ಷಣವನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಮೊದಲ ವರದಿಯು ಎಂಬ ಹೆಗ್ಗಳಿಕೆಗೆ ಈ ಆಯೋಗ ಪಾತ್ರವಾಗಿದೆ. ಪ್ರೌಢಶಾಲೆಗಳಲ್ಲಿ ವಿಜ್ಞಾನದ ಜೊತೆಗೆ ಕಲೆಯನ್ನೂ ಸಹ ಬೋಧಿಸಬೇಕು ಎಂದಿರುವರು.

**ಸಲಹೆ:** 3–6 ವರ್ಷದವರಿಗೆ ಪ್ರಾಥಮಿಕ ಪೂರ್ವದ ಶಿಕ್ಷಣವನ್ನು ನೀಡುವುದರಿಂದ ಮಾತ್ರ ರಾಷ್ಟ್ರೀಯ ಶಿಕ್ಷಣ ಕಾರ್ಯಕ್ರಮ ವ್ಯವಸ್ಥೆಗೊಳಿಸುವುದು ಅಗತ್ಯವೆಂದಿದೆ. ಹಿರಿಯ ಮೂಲಶಿಕ್ಷಣದ ಜೊತೆಗೆ ಇಂತಹ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸೇರಿಸಿದರೆ ಪಟ್ಟಣಗಳಲ್ಲಿ ಇವು ಪ್ರತ್ಯೇಕವಾಗಿರಬೇಕು. 6 ರಿಂದ 14 ವರ್ಷದವರೆಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಮೂಲ ಶಿಕ್ಷಣವಿರಬೇಕು. ಕರಕುಶಲತೆಯ ಆಧಾರದ ಮೇಲೆ ಈ ಶಿಕ್ಷಣವಿರಬೇಕು. 6 ರಿಂದ 11 ವರ್ಷದ ಶಿಕ್ಷಣ ಕಿರಿಯ ಮೂಲ ಶಿಕ್ಷಣವಾಗಿರಬೇಕು. 1–14ರವರೆಗಿನ ಶಿಕ್ಷಣದಲ್ಲಿ ಇಂಗ್ಲಿಷ್ ಭಾಷೆ ಇರಬೇಕು. ತರಗತಿ ಬೋಧನೆಯಲ್ಲಿ 40 ಹುಡುಗರಿಗೆ ಒಬ್ಬ ಶಿಕ್ಷಕರಿರಬೇಕು. ಹಿರಿಯ, ಕಿರಿಯ ಮೂಲ ಶಿಕ್ಷಣ ಎಂದು ಗುರ್ತಿಸಲಾಗಿದ್ದಲ್ಲಿ ಇವೆರಡೂ ಹಂತಗಳಲ್ಲಿ ಆಂತರಿಕ ಪರೀಕ್ಷೆ ಇರಬೇಕೇ ವಿನಃ ಬಾಹ್ಯ ಪರೀಕ್ಷೆಗಳು ಅಲ್ಲ. ಹಿರಿಯ ಮೂಲ ಶಿಕ್ಷಣದಲ್ಲಿ 25 ಜನ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಿರಬೇಕು ಎಂಬ ಸಲಹೆ ನೀಡಿತು.

11–16 ವರ್ಷದಲ್ಲಿ ಪ್ರೌಢಶಾಲೆಯಲ್ಲಿ ಅಭ್ಯಸಿಸುವರು. ಇವರಲ್ಲಿ ಪ್ರತಿಭಾವಂತರು ಮಾತ್ರ ಉನ್ನತ ಶಿಕ್ಷಣಕ್ಕೆ ಹೋಗಬೇಕು. 11 ವರ್ಷದ ಮೊದಲು ಪ್ರವೇಶ ನೀಡಬಾರದು. ಪ್ರವೇಶ ನೀಡುವಾಗ ವಿದ್ಯಾರ್ಥಿಯ ಆಸಕ್ತಿ, ಅಭಿರುಚಿಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಇವರಿಂದ ಸಾಧಾರಣ ರೀತಿಯ ಫೀ ಪಡೆಯಬೇಕು. ಆದರೂ 50 ಜನರಿಗಷ್ಟಾದರೂ ಉಚಿತ ಶಿಕ್ಷಣವಿರಬೇಕು. ವಿದ್ಯಾರ್ಥಿ ಸೌಲಭ್ಯಗಳಿರಬೇಕು. ಶಾಲೆಗಳಲ್ಲಿ ವ್ಯಕ್ತಿಯನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು. ಮಾತೃಭಾಷೆಯಲ್ಲಿ ಬೋಧನೆ ನಡೆಯಬೇಕು, ಆದರೂ ಇಂಗ್ಲಿಷ್ ಭಾಷೆ ಎರಡನೆಯ ಭಾಷೆಯಾಗಿರಬೇಕು. ಈ ಆಯೋಗ ವಿಶ್ವವಿದ್ಯಾನಿಲಯದ ಶಿಕ್ಷಣ ಸ್ನಾತಕೋತ್ತರ ಶಿಕ್ಷಣವನ್ನು ಒಳಗೊಂಡು ಶೈಕ್ಷಣಿಕ ಸಂಶೋಧನೆಗೆ ಅವಕಾಶ ಕಲ್ಪಿಸಿಕೊಡಬೇಕು, ಇದರಲ್ಲಿ ಸರಿಯಾದ ಆಯ್ಕೆ ನಡೆಯಬೇಕು ಎಂದಿದೆ.

ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರೌಢಶಾಲೆ ಶಿಕ್ಷಣದ ಪುನರ್ ವ್ಯವಸ್ಥೆ, ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಸೌಲಭ್ಯ– ಧನ ಸಹಾಯ ಇಂಟರ್ ಮೀಡಿಯಟ್ ಹಂತದ ರದ್ದು, ಉತ್ತಮ ಶಿಕ್ಷಣವನ್ನು ಟ್ಯುಟೋರಿಯಲ್ ಶಿಕ್ಷಣ ಪದ್ಧತಿಯ ಅಭಿವೃದ್ಧಿಗೆ ಅವಕಾಶ ಕಲ್ಪಿಸಿದೆ.

10–40 ವರ್ಷದೊಳಗಿನ ವಯಸ್ಸಿನವರಿಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸೂಕ್ತ ಶಿಕ್ಷಣ ಸೌಲಭ್ಯ ಕಲ್ಪಿಸಬೇಕು ಅವರಿಗೂ ಸಾಮಾನ್ಯ ಹಾಗೂ ವಾಣಿಜ್ಯ ಶಿಕ್ಷಣ ಸೌಲಭ್ಯ ಕಲ್ಪಿಸಬೇಕು.

ಪ್ರತಿ ಪ್ರಾಂತ್ಯದಲ್ಲೂ ಸುವ್ಯವಸ್ಥಿತ ಶಿಕ್ಷಣ ಶಾಖೆಗಳು ಸ್ಥಾಪಿತವಾಗಿ ಅಲ್ಲಿ ಶಿಕ್ಷಣತಜ್ಞರಿರಬೇಕು. ವಿಶ್ವವಿದ್ಯಾನಿಲಯ ಹೊರತಾಗಿ ಮಿಕ್ಕೆಲ್ಲ ಶಿಕ್ಷಣ, ಪ್ರಾಂತೀಯ ಶಿಕ್ಷಣ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರಬೇಕು. ವಿಶ್ವವಿದ್ಯಾನಿಲಯ ಶಿಕ್ಷಣ ಅಖಿಲ ಭಾರತ ವ್ಯಾಪ್ತಿ ಪಡೆಯುವ ವ್ಯವಸ್ಥೆಯಾಗಬೇಕು. ದಕ್ಷ ಅಧ್ಯಾಪಕರನ್ನು ಆಕರ್ಷಿಸಲು ವಿಶ್ವವಿದ್ಯಾನಿಲಯದ ಪ್ರಾಂತೀಯ ಪ್ರಾಧ್ಯಾಪಕರಿಗೆ ಭತ್ಯೆ, ಸಾರಿಗೆ ಮುಂತಾದವು ಉತ್ತಮಗೊಳ್ಳಬೇಕು. ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣಕ್ಕೆ ಪ್ರೋತ್ಸಾಹ, ಸೂಕ್ತ ವ್ಯವಸ್ಥೆ ಏರ್ಪಡಬೇಕು ಎಂದು ಸೂಚಿಸಿದೆ.

ಇದರ ಬಗ್ಗೆ ಮೆಚ್ಚುಗೆಯನ್ನು ಕೆಲವರು ಸೂಚಿಸಿದ್ದರೂ ಕೆಲವರು ಇದು ಮೂಲಭೂತವಾಗಿ ವರದಿಯೇ ಅಲ್ಲ, ವಾರ್ಧಾ ಶಿಕ್ಷಣದ ಪಡಿಯಚ್ಚು. ಇದು ಇಂಗ್ಲಿಷ್ ಶಿಕ್ಷಣದ ಅನುಕರಣೆಯೆಂದು ಅಭಿಪ್ರಾಯ ನೀಡಿದ್ದಾರೆ. ಇದು ಭಾರತೀಯ ಶಿಕ್ಷಣದ ಪ್ರಮುಖ ಸಮಸ್ಯೆಗಳಾದ ಮಹಿಳಾ ಶಿಕ್ಷಣ, ಧಾರ್ಮಿಕ ಶಿಕ್ಷಣಗಳ ಬಗ್ಗೆ ಒತ್ತುಕೊಟ್ಟಿಲ್ಲ. 1945ರಲ್ಲಿ ಈ ಯೋಜನೆಯನ್ನು ಅಂಗೀಕರಿಸಿ ಪಂಚವಾರ್ಷಿಕ ಯೋಜನೆಗಳಿಗೆ ಅವಕಾಶವಾಯಿತು. ಅದಕ್ಕೆ ಕೇಂದ್ರದ ಪ್ರೋತ್ಸಾಹ, ಸಹಾಯ ಸಿಕ್ಕಿತು. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ, ಧನಸಹಾಯ ಆಯೋಗ ಮುಂತಾದವು ಈ ಯೋಜನೆಯನ್ನು ಅನುಕರಣೀಯ ಎಂದು ಹೇಳಿದವು.

–ಮ.ದ.

## ಬುದ್ಧಿಶಕ್ತಿ ಮಾಪನ

ವೈಜ್ಞಾನಿಕವಾಗಿ ಬುದ್ಧಿಶಕ್ತಿಯನ್ನು ಅಳೆಯುವ ಪ್ರಯತ್ನ ಮಾಡಿದ ಮೊದಲಿಗರೆಂದರೆ ಫ್ರಾನ್ಸ್‌ರ ಆಲ್‌ಫ್ರೆಡ್ ಬೀನೆಯವರು. ವಿಶ್ವದಲ್ಲಿ ಪ್ರಪ್ರಥಮ ಬುದ್ಧಿಶಕ್ತಿ ಪರೀಕ್ಷೆ (1905)ಯನ್ನು ರೂಪಿಸಿದ ಕೀರ್ತಿ ಬೀನೆ ಮತ್ತು ಅವರ ಸಹಯೋಗಿ ಥಿಯೋಡರ್ ಸೈಮನ್‌ಗೆ ಸಲ್ಲುತ್ತದೆ. ಇವರನ್ನು ಆಧುನಿಕ ಬುದ್ಧಿಶಕ್ತಿ ಪರೀಕ್ಷೆಗಳ ಪಿತಾಮಹನೆಂದು ಕರೆಯುತ್ತಾರೆ. ಬೀನೆ–ಸೈಮನ್ನರ ಪ್ರಯತ್ನದ ನಂತರ ಸ್ಟಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ ಎಲ್.ಎಂ. ಟರ್ಮನ್‌ರವರು (1916) ಅಮೆರಿಕಾದ ಮಕ್ಕಳ ಬುದ್ಧಿಶಕ್ತಿಯನ್ನು ಮಾಪನ ಮಾಡಲು ಬೀನೆ ಪರೀಕ್ಷೆಯನ್ನು

Digitised by Bharatavani, CIIL

ಆಲ್‌ಫ್ರೆಡ್ ಬೀನೆ



ಥಿಯೊಡರ್ ಸೈಮನ್

ಆಧಾರವಾಗಿಟ್ಟುಕೊಂಡು ಸ್ಟ್ಯಾನ್‌ಫರ್ಡ್ ಬೀನೆ ಬುದ್ಧಿಶಕ್ತಿ ವಾಹಿನಿಯನ್ನು ಸಿದ್ಧಪಡಿಸಿದರು. ಇದನ್ನು 1936ರಲ್ಲಿ 1975 ಪುನಃ ಪರಿಷ್ಕರಿಸಲಾಗಿದೆ. 1930ರ ನಂತರ ವಿಶ್ವದೆಲ್ಲೆಡೆ ಹಲವಾರು ಬುದ್ಧಿಶಕ್ತಿ ಪರೀಕ್ಷೆಗಳು ರೂಪುಗೊಂಡಿರುವುದನ್ನು ನಾವು ಕಾಣಬಹುದಾಗಿದೆ. ಭಾರತದಲ್ಲಿಯೂ ಸಹ ಡಾ. ರೈಸ್‌ರವರ ಪ್ರಾರಂಭಿಕ ಪ್ರಯತ್ನದ ನಂತರ ಅನೇಕ ಬುದ್ಧಿಶಕ್ತಿ ಪರೀಕ್ಷೆಗಳು ರೂಪುಗೊಂಡಿವೆ. ಬೀನೆಯವರು ಮಾನಸಿಕ ವಯಸ್ಸಿನ ಆಧಾರದ ಮೇಲೆ ಬುದ್ಧಿಶಕ್ತಿಯನ್ನು ಅಳೆಯುವ ವಿಧಾನವನ್ನು ಪರಿಚಯಿಸಿದರು.

### ಮಾನಸಿಕ ವಯಸ್ಸಿನ ಪರಿಕಲ್ಪನೆ (M.A.)

ಮಾನಸಿಕ ವಯಸ್ಸು ಯಾವುದೇ ಒಂದು ವಯೋಮಾನದಲ್ಲಿ ವ್ಯಕ್ತಿ ತೋರುವ ಸಾಧನೆಯ ಮಟ್ಟವನ್ನು ಸೂಚಿಸುತ್ತದೆ. ಮತ್ತು ವಯಸ್ಸು ಒಂದು ನಿರ್ದಿಷ್ಟ ವಯೋಮಾನದಲ್ಲಿ ವ್ಯಕ್ತಿಯ ಜ್ಞಾನಾತ್ಮಕ ವಿಕಾಸದ ಮಟ್ಟವನ್ನು ಅಳೆಯುತ್ತದೆ. ಮಾನಸಿಕ ವಯಸ್ಸಿನ ಪರಿಕಲ್ಪನೆಯನ್ನು ಮೊಟ್ಟ ಮೊದಲು ತಮ್ಮ ಪರೀಕ್ಷೆಗಳಲ್ಲಿ ಪರಿಚಯಿಸಿದವರು ಆಲ್‌ಫ್ರೆಡ್ ಬೀನೆ, 10 ವರ್ಷಗಳ ಮಾನಸಿಕ ವಯಸ್ಸನ್ನು ಹೊಂದಿರುವ ಮಗು ಸರಾಸರಿ 10 ವರ್ಷದ ಮಕ್ಕಳಿಗಾಗಿ ಇರುವ ಬುದ್ಧಿಶಕ್ತಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ತೋರುತ್ತಾನೆ ಎಂಬುದನ್ನು ತಿಳಿಸುತ್ತದೆ. ಮಾನಸಿಕ ವಯಸ್ಸು ಮಗು ನಿರ್ದಿಷ್ಟ ವಯೋಮಾನದಲ್ಲಿ ಸಾಧಿಸಿದ ಪರಿಪಕ್ವನ ಮಟ್ಟವನ್ನು ಸೂಚಿಸುತ್ತದೆ. ಮಗುವಿನ ಮಾನಸಿಕ ವಯಸ್ಸನ್ನು ಅವರ ದೈಹಿಕ ವಯಸ್ಸಿನೊಂದಿಗೆ ಹೋಲಿಸುವ ಮೂಲಕ ಅವನು ಸಾಮಾನ್ಯ ಅಥವಾ ಕಡಿಮೆ ಅಥವಾ ಹೆಚ್ಚಿನ ಬುದ್ಧಿಶಕ್ತಿ ಹೊಂದಿದ್ದಾನೆ ಎಂಬುದನ್ನು ತಿಳಿಯಬಹುದು.

ಉದಾಹರಣೆಗೆ, 8 ವರ್ಷ ದೈಹಿಕ ವಯಸ್ಸು ಹೊಂದಿರುವ ಮಗುವಿನ ಮಾನಸಿಕ ವಯಸ್ಸು 10 ವರ್ಷಗಳಾಗಿದ್ದರೆ ಅವನು ಸರಾಸರಿಗಿಂತ ಹೆಚ್ಚು ಬುದ್ಧಿ ಶಕ್ತಿ ಹೊಂದಿದ್ದಾನೆ ಎಂದರ್ಥ. ಅವನ ಮಾನಸಿಕ ವಯಸ್ಸು ಸಹ 8 ವರ್ಷಗಳಾಗಿದ್ದರೆ ಅವನು ಸಾಧಾರಣ ಬುದ್ಧಿಶಕ್ತಿ ಹೊಂದಿದ್ದಾನೆ ಎಂದು ಹೇಳಬಹುದು ಅಥವಾ ಅವನ ಮಾನಸಿಕ ವಯಸ್ಸು 6 ವರ್ಷಗಳಾಗಿದ್ದರೆ ಅವನು ಸರಾಸರಿಗಿಂತ ಕಡಿಮೆ ಬುದ್ಧಿಶಕ್ತಿ ಹೊಂದಿದ್ದಾನೆ ಎಂದು ತಿಳಿದುಬರುತ್ತದೆ.

8 ವರ್ಷ ದೈಹಿಕ ವಯಸ್ಸಿನ ಮಗುವಿನ ಮಾನಸಿಕ ವಯಸ್ಸು 10 ವರ್ಷವಾಗಿದೆ ಎಂದರೆ 8 ವರ್ಷದ ಮಗು 10 ವರ್ಷದ ಮಕ್ಕಳಿಗಾಗಿ ರೂಪಿತವಾಗಿರುವ ಪರೀಕ್ಷಾಂಶಗಳನ್ನು ಬಿಡಿಸುವ ಸಾಮರ್ಥ್ಯ ಹೊಂದಿದ್ದಾನೆ ಎಂದು ತಿಳಿಯಬಹುದು.

ಬೀನೆಯವರ ಪ್ರಕಾರ ಯಾರ ಮಾನಸಿಕ ವಯಸ್ಸು ಅವರ ದೈಹಿಕ ವಯಸ್ಸಿಗಿಂತ ಹೆಚ್ಚಾಗಿದೆಯೋ ಅವರನ್ನು ಬುದ್ಧಿವಂತರೆಂದು (MA > CA), ಯಾರ ಮಾನಸಿಕ ವಯಸ್ಸು ಅವರ ದೈಹಿಕ ವಯಸ್ಸಿಗಿಂತ ಕಡಿಮೆಯಿದೆಯೋ ಅವರನ್ನು ಕಡಿಮೆ ಬುದ್ಧಿಶಕ್ತಿಯುಳ್ಳವರೆಂದು (MA < CA), ಮತ್ತು ಯಾರ ಮಾನಸಿಕ ಮತ್ತು ದೈಹಿಕ ಮನಸ್ಸು ಒಂದೇಯಾಗಿರುತ್ತವೆಯೋ (MA = CA) ಅವರನ್ನು ಸರಾಸರಿ ಬುದ್ಧಿಶಕ್ತಿಯುಳ್ಳವರೆಂದು ತೀರ್ಮಾನಿಸಲಾಗಿದೆ.

ವ್ಯಕ್ತಿ ದೈಹಿಕವಾಗಿ ವಿಕಾಸ ಹೊಂದಿದಂತೆ, ಮಾನಸಿಕ ವಯಸ್ಸೂ ಸಹ ಹೆಚ್ಚಾಗುತ್ತಾ ಹೋಗುತ್ತದೆ. ವ್ಯಕ್ತಿಗೆ ದೈಹಿಕವಾಗಿ 16 ವರ್ಷ ತುಂಬಿದಾಗ ಅದು ತನ್ನ ಗರಿಷ್ಠ ಮಿತಿಯನ್ನು ತಲುಪುತ್ತದೆ.

### ಬುದ್ಧಿಶಕ್ತಿ ಸೂಚ್ಯಂಕ (I.Q.)

ಮಾನಸಿಕ ವಯಸ್ಸಿನ ಪರಿಕಲ್ಪನೆಯಿಂದ ಒಬ್ಬ ವ್ಯಕ್ತಿ ತನ್ನ ಗುಂಪಿನಲ್ಲಿ ಎಷ್ಟು ಬುದ್ಧಿವಂತನಾಗಿದ್ದಾನೆ ಎಂಬುದನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಉದಾ: 8 ಮತ್ತು 10ನೇ ವಯಸ್ಸಿನ ಇಬ್ಬರು ಮಕ್ಕಳು ಸಹ 10 ವರ್ಷ ಮಾನಸಿಕ ವಯಸ್ಸನ್ನು ಹೊಂದಿದ್ದರೆ, ಮಾನಸಿಕ ವಯಸ್ಸು ಇವರಲ್ಲಿ ಯಾರು ಹೆಚ್ಚು ಬುದ್ಧಿವಂತರು ಎಂಬುದನ್ನು ತಿಳಿಸುವುದಿಲ್ಲ. ಆದ್ದರಿಂದ ಬುದ್ಧಿಶಕ್ತಿಯನ್ನು ಅಳೆಯಲು ಬಳಸಬಹುದಾದ ಸೂಕ್ತ ವಿಧಾನವೆಂದರೆ ಬುದ್ಧಿಶಕ್ತಿ ಸೂಚ್ಯಂಕವನ್ನು (I.Q.) ಕಂಡು ಹಿಡಿಯುವುದು.

ಬುದ್ಧಿಶಕ್ತಿ ಸೂಚ್ಯಂಕದ ಪರಿಕಲ್ಪನೆಯನ್ನು ಪರಿಚಯಿಸಿದವರು ಜರ್ಮನ್ ಮನೋವಿಜ್ಞಾನಿ ವಿಲಿಯಂ ಸ್ಟರ್ನ್ (1912)ರವರು. ಮಾನಸಿಕ ವಯಸ್ಸನ್ನು ದೈಹಿಕ ವಯಸ್ಸಿನಿಂದ ಭಾಗಿಸುವುದರ ಮೂಲಕ ಬುದ್ಧಿಶಕ್ತಿ ಸೂಚ್ಯಂಕವನ್ನು ಕಂಡು ಹಿಡಿಯಲಾಗುವುದು. ಈ ಕೆಳಗಿನ ಸೂತ್ರವನ್ನು ಬಳಸಿಕೊಂಡು ಬುದ್ಧಿಶಕ್ತಿ ಸೂಚ್ಯಂಕವನ್ನು ಲೆಕ್ಕ ಮಾಡಲಾಗುವುದು.

$$\text{ಬುದ್ಧಿಶಕ್ತಿ ಸೂಚ್ಯಂಕ} = \frac{\text{ಮಾನಸಿಕ ವಯಸ್ಸು (MA)} \times 100}{\text{ದೈಹಿಕ ವಯಸ್ಸು (CA)}}$$

ಬುದ್ಧಿಶಕ್ತಿ ಸೂಚ್ಯಂಕವು ಮಾನಸಿಕ ವಯಸ್ಸು ಮತ್ತು ದೈಹಿಕ ವಯಸ್ಸುಗಳಿಗಿರುವ ಅನುಪಾತವಾಗಿದೆ. ಈ ರೀತಿ ಪಡೆದ ಅನುಪಾತವನ್ನು 100 ರಿಂದ ಗುಣಿಸುವುದರ ಮೂಲಕ ದಶಾಂಶಗಳನ್ನು ಬಿಡಲಾಗುವುದು. ಉದಾ: 12 ವರ್ಷ ಮಾನಸಿಕ ವಯಸ್ಸು ಹೊಂದಿರುವ ಮಗುವಿನ ದೈಹಿಕ ವಯಸ್ಸು 10 ವರ್ಷಗಳಾಗಿದ್ದರೆ ಅವನ ಬುದ್ಧಿಶಕ್ತಿ ಸೂಚ್ಯಂಕ 120 ಆಗುವುದು.

$$\text{I.Q} = \frac{12}{10} \times 100 = 120$$

ಇನ್ನೊಂದು ಮಗುವಿನ ಮಾನಸಿಕ ವಯಸ್ಸು 8 ವರ್ಷಗಳಾಗಿದ್ದು ಅವನ ದೈಹಿಕ ವಯಸ್ಸು 10 ವರ್ಷಗಳಾಗಿದ್ದರೆ ಅವನ ಐ.ಕ್ಯೂ. 80 ಆಗುತ್ತದೆ.

$$\text{I.Q} = \frac{08}{10} \times 100 = 80$$

ಇದರಿಂದ ಇಬ್ಬರೂ ಒಂದೇ ದೈಹಿಕ ವಯಸ್ಸನ್ನು ಹೊಂದಿದ್ದರೂ ಸಹ ಮೊದಲನೆಯ ಮಗು ಎರಡನೆಯವನಿಗಿಂತ ಬುದ್ಧಿವಂತ ಎಂದು ತಿಳಿದುಬರುತ್ತದೆ.

ಮಾನಸಿಕ ವಯಸ್ಸು ವ್ಯಕ್ತಿಯ ಬೌದ್ಧಿಕ ವಿಕಾಸದ ಅಥವಾ ಸಾಧನೆಯ ಮಟ್ಟವನ್ನು ಅಳೆಯಲು ಸಹಾಯ ಮಾಡುತ್ತದೆ. ಆದರೆ ಬುದ್ಧಿಶಕ್ತಿ ಸೂಚ್ಯಂಕ ಒಂದು ಮಗುವನ್ನು ಅದೇ ವಯಸ್ಸಿನ ಇನ್ನೊಂದು ಮಗುವಿನೊಡನೆ ಹೋಲಿಸಲು ಬಳಸುವ ಬುದ್ಧಿಶಕ್ತಿಯ ಸೂಚಿಯಾಗಿದೆ. ಇದು ಸಾಪೇಕ್ಷ ಬುದ್ಧಿಶಕ್ತಿಯನ್ನು ನಿರೂಪಿಸುವ ವಿಧಾನವಾಗಿದೆ. ಮಗು

Digitised by Bharatavani, CIIL

ದೈಹಿಕವಾಗಿ ಬೆಳೆಯುತ್ತಾ ಹೋದಂತೆ ಮಾನಸಿಕ ವಯಸ್ಸಿನಲ್ಲಿಯೂ ಹೆಚ್ಚಳ ಕಂಡುಬರುತ್ತದೆ. ಆದರೆ ಮಾನಸಿಕ ವಯಸ್ಸು ಮತ್ತು ದೈಹಿಕ ವಯಸ್ಸುಗಳ ಅನುಪಾತ ಹೆಚ್ಚು ಕಡಿಮೆ ಸ್ಥಿರವಾಗಿರುತ್ತದೆ. ಇದನ್ನೇ ಬುದ್ಧಿಶಕ್ತಿ ಸೂಚ್ಯಂಕದ ಸ್ಥಿರತೆ ಎಂದು ಕರೆಯುವರು.

### ಬುದ್ಧಿಶಕ್ತಿ ಪರೀಕ್ಷೆಗಳ ವಿಧಗಳು

ಬುದ್ಧಿಶಕ್ತಿ ಪರೀಕ್ಷೆಗಳನ್ನು ಪರೀಕ್ಷೆ ನೀಡುವಿಕೆಯನ್ನು ಆಧರಿಸಿ ಪ್ರಮುಖವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ವೈಯಕ್ತಿಕ ಪರೀಕ್ಷೆಗಳು ಮತ್ತು ಸಮೂಹ ಪರೀಕ್ಷೆಗಳು. ಮನೋವಿಜ್ಞಾನಿಗಳು ಮತ್ತು ಶಿಕ್ಷಕರು ಒಬ್ಬ ವ್ಯಕ್ತಿಗೆ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ನೀಡಬೇಕಾದಾಗ ಬುದ್ಧಿಶಕ್ತಿ ಪರೀಕ್ಷೆಗಳನ್ನು ಸಮರ್ಥವಾಗಿ ಬಳಸಿಕೊಂಡು ವ್ಯಕ್ತಿಯ ಸಮಸ್ಯೆಗಳನ್ನು ಪರಿಹರಿಸುತ್ತಾರೆ. ಇಂತಹ ಉಪಯೋಗಗಳಿಗೆ ಒಬ್ಬ ವ್ಯಕ್ತಿಗೆ ಬಳಸುವ ಪರೀಕ್ಷೆಗಳನ್ನು ವೈಯಕ್ತಿಕ ಬುದ್ಧಿಶಕ್ತಿ ಪರೀಕ್ಷೆಗಳೆನ್ನುವರು. ಪ್ರಾರಂಭದಲ್ಲಿ ರೂಪಿತವಾದ ಹೆಚ್ಚಿನ ಪರೀಕ್ಷೆಗಳು ವೈಯಕ್ತಿಕ ಪರೀಕ್ಷೆಗಳಾಗಿದ್ದವು. ಈ ಪರೀಕ್ಷೆಗಳ ಬಳಕೆ ಹೆಚ್ಚಾದಂತೆ, ಹೆಚ್ಚು ಜನರ ಮೇಲೆ ಒಂದೇ ಬಾರಿ ಬಳಸುವ ಪರೀಕ್ಷೆಗಳ ಅಗತ್ಯತೆ ಕಂಡು ಬಂದಿತು. ಮನೋವಿಜ್ಞಾನ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಉಪಯೋಗಗಳಿಗಾಗಿ ಸಮೂಹ ಬುದ್ಧಿಶಕ್ತಿ ಪರೀಕ್ಷೆಗಳನ್ನು ಬಳಸಲಾಗುತ್ತಿದೆ.

ವೈಯಕ್ತಿಕ ಪರೀಕ್ಷೆಗಳು ಶಾಬ್ದಿಕ, ಅಶಾಬ್ದಿಕ ಮತ್ತು ಕಾರ್ಯಾತ್ಮಕ ಪರೀಕ್ಷೆಗಳನ್ನೊಳಗೊಂಡಿರುತ್ತವೆ. ಸಮೂಹ ಬುದ್ಧಿಶಕ್ತಿ ಪರೀಕ್ಷೆಗಳು ಕೇವಲ ಬರಹ ಮಾದರಿಯ ಶಾಬ್ದಿಕ ಮತ್ತು ಅಶಾಬ್ದಿಕ ಪರೀಕ್ಷಾಂಶಗಳನ್ನೊಳಗೊಂಡಿರುತ್ತವೆ. ಸಮೂಹ ಪರೀಕ್ಷೆಗಳು ಸಾಮಾನ್ಯವಾಗಿ ನಿರ್ದಿಷ್ಟ ಸಮಯದಲ್ಲಿ ಉತ್ತರಿಸಬೇಕಾದ ವೇಗದ ಪರೀಕ್ಷೆಗಳಾಗಿರುತ್ತವೆ. ಆದರೆ ವೈಯಕ್ತಿಕ ಪರೀಕ್ಷೆಗಳು ಹೆಚ್ಚು ಕ್ಲಿಷ್ಟವಾದ ಕಾರ್ಯಾತ್ಮಕ ಪರೀಕ್ಷೆಗಳನ್ನು ಸಹ ಒಳಗೊಂಡಿರುತ್ತವೆ.




ಪರೀಕ್ಷೆಗಳಲ್ಲಿ ಬಳಸಿರುವ ವಿಷಯವಸ್ತು ಮತ್ತು ಸಾಧನಗಳ ಆಧಾರದ ಮೇಲೆ ಬುದ್ಧಿಶಕ್ತಿ ಪರೀಕ್ಷೆಗಳನ್ನು ಶಾಬ್ದಿಕ, ಅಶಾಬ್ದಿಕ ಮತ್ತು ಕಾರ್ಯಾತ್ಮಕ ಪರೀಕ್ಷೆಗಳೆಂದು ವಿಂಗಡಿಸಲಾಗಿದೆ.

ಶಾಬ್ದಿಕ ಪರೀಕ್ಷೆಗಳು : ಶಾಬ್ದಿಕ ಬುದ್ಧಿಶಕ್ತಿ ಪರೀಕ್ಷೆಗಳು ಸಾಮಾನ್ಯವಾಗಿ ಓದು–ಬರಹ ಬಲ್ಲವರಿಗೆ ಮಾತ್ರ ನೀಡಬಹುದಾದ ಬರವಣಿಗೆಯ ಪರೀಕ್ಷೆಗಳಾಗಿರುತ್ತವೆ. ಶಾಬ್ದಿಕ ಪರೀಕ್ಷೆಗಳು ಸಮಾನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು, ವಾಕ್ಯ ಪೂರೈಕೆ, ಅಂಕಿ – ಸಂಕೇತಗಳ ಬದಲಾವಣೆ, ಶಾಬ್ದಿಕ ಸಾದೃಶ್ಯಗಳು, ಸರಳ ಅಂಕಗಣಿತದ ಸಮಸ್ಯೆಗಳು, ಗುಂಪಿಗೆ ಸೇರದ ಪದಗಳನ್ನು ಪತ್ತೆ ಹಚ್ಚುವುದು, ವರ್ಗೀಕರಣ ಮುಂತಾದ ಪರೀಕ್ಷಾಂಶಗಳನ್ನು ಒಳಗೊಂಡಿರುತ್ತವೆ. ಇಲ್ಲಿ ನಿರ್ದೇಶನಗಳನ್ನು ನೀಡಲು ಮತ್ತು ಉತ್ತರ ಪಡೆಯಲು ಭಾಷೆಯ ಬಳಕೆ ಪ್ರಮುಖವಾಗಿರುತ್ತದೆ. ಇಲ್ಲಿ ಪರೀಕ್ಷಾರ್ಥಿಗಳ ಉತ್ತರಿಸುವಿಕೆ ಕೆಲವೊಮ್ಮೆ ಅವರ ಭಾಷಾ ಸಾಮರ್ಥ್ಯದ ಮೇಲೆ ಅವಲಂಬಿಸಿರುತ್ತದೆ. ಈ ಪರೀಕ್ಷೆಗಳಲ್ಲಿ ವಸ್ತುಗಳ ಮಧ್ಯೆ ಇರುವ ಸ್ಥಳಾವಕಾಶ ಸಂಬಂಧಗಳನ್ನು ಪರೀಕ್ಷಿಸಲು ಸಾಧ್ಯವಾಗುವುದಿಲ್ಲ.

ಉದಾ: ಅಹುಜಾರವರ ಸಮೂಹ ಬುದ್ಧಿಶಕ್ತಿ ಪರೀಕ್ಷೆ, ಓಟಿಸ್‌ರವರ ಮಾನಸಿಕ ಸಾಮರ್ಥ್ಯದ ಸಮೂಹ ಪರೀಕ್ಷೆ, ಜಲೋಟಾರವರ ಮಾನಸಿಕ ಸಾಮರ್ಥ್ಯದ ಸಮೂಹ ಪರೀಕ್ಷೆ, ವೆಷ್ಲರ್‌ರವರ ವಯಸ್ಕರ ಬುದ್ಧಿಶಕ್ತಿ ಮಾಪನ ಇತ್ಯಾದಿ.

### ವೆಷ್ಲರ್‌ರವರ ವಯಸ್ಕರ ಬುದ್ಧಿಶಕ್ತಿ ಮಾಪನ

ಈ ಬುದ್ಧಿಶಕ್ತಿ ಮಾಪನದ ಶಾಬ್ದಿಕ ಮಾಪನದಲ್ಲಿ 6 ಉಪ ಪರೀಕ್ಷೆಗಳಿವೆ. ಅವುಗಳಲ್ಲಿರುವ ಕೆಲವು ಪರೀಕ್ಷಾಂಶಗಳು ಈ ಕೆಳಕಂಡಂತಿವೆ.

| | | |
|---|---|---|
| 1. | ಸಾಮಾನ್ಯ ಮಾಹಿತಿ ಪರೀಕ್ಷೆ: | ಉದಾ: ಒಂದು ವರ್ಷದಲ್ಲಿ ಎಷ್ಟು ವಾರಗಳಿರುತ್ತವೆ? |
| 2. | ಅರ್ಥಗ್ರಹಿಕೆ ಪರೀಕ್ಷೆ: | ಉದಾ: ವಿದ್ಯುತ್ ತಂತಿಗಳಲ್ಲಿ ತಾಮ್ರವನ್ನು ಏಕೆ ಬಳಸುತ್ತಾರೆ? |
| 3. | ಅಂಕಗಣಿತ ಪರೀಕ್ಷೆ: | ಉದಾ: ಮೂರು ಜನರು ಒಂದು ಮನೆಗೆ ಬಣ್ಣ ಬಳಿಯಲು 9 ದಿವಸ ತೆಗೆದುಕೊಂಡರೆ, 3 ದಿನಗಳಲ್ಲಿ ಬಣ್ಣ ಬಳಿಯಲು ಎಷ್ಟು ಜನ ಬೇಕಾಗುತ್ತದೆ? |
| 4. | ಅಂಕಿಗಳ ಪುನರುಚ್ಚಾರ: | ಅಂಕಿಗಳನ್ನು ನೇರವಾಗಿ ಪುನರುಚ್ಚರಿಸಿ 1–3–7–2–5–4,<br>ಅಂಕಿಗಳನ್ನು ತಿರುಗಿಸಿ ಪುನರುಚ್ಚರಿಸಿ 5–8–2–4–0–6 |
| 5. | ಹೋಲಿಕೆಗಳ ಪರೀಕ್ಷೆ: | ವೃತ್ತ ಮತ್ತು ತ್ರಿಭುಜಗಳು ಯಾವ ರೀತಿಯಲ್ಲಿ ಒಂದೇ ಆಗಿವೆ? |
| 6. | ಪದ ಸಂಪತ್ತು ಪರೀಕ್ಷೆ: | 'ವಜ್ರ' ಎಂದರೇನು? |

Digitised by Bharatavani, CIIL

**ಅಶಾಬ್ದಿಕ ಪರೀಕ್ಷೆಗಳು**

ಅಶಾಬ್ದಿಕ ಪರೀಕ್ಷೆಗಳು ಸಹ ಬರವಣಿಗೆಯ ಪರೀಕ್ಷೆಗಳಾಗಿರುತ್ತವೆ. ಈ ಪರೀಕ್ಷೆಗಳು ವ್ಯಕ್ತಿಯ ತಕ್ಷಣದ ವೀಕ್ಷಣಾ ಸಾಮರ್ಥ್ಯ ಮತ್ತು ಆಲೋಚನಾ ಸಾಮರ್ಥ್ಯಗಳನ್ನು ಅಳೆಯುತ್ತವೆ. ಅಶಾಬ್ದಿಕ ಪರೀಕ್ಷೆಗಳು ರೇಖಾ ಚಿತ್ರಗಳು, ವಿನ್ಯಾಸಗಳು, ಮಾತೃಕೆಗಳು (Matrics) ದರ್ಪಣದ ಪ್ರತಿಬಿಂಬಗಳು, ಚಿತ್ರ ಸಾದೃಶ್ಯಗಳು, ಹುದುಗಿರುವ ಚಿತ್ರಗಳನ್ನು ಪತ್ತೆ ಹಚ್ಚುವುದು, ಚಿತ್ರ ಪೂರ್ರೈಕೆ, ಪ್ರಾಣಿ ಅಥವಾ ಮಾನವ ಚಿತ್ರಗಳನ್ನು ಒಳಗೊಂಡಿರುತ್ತದೆ. ಪರೀಕ್ಷಾರ್ಥಿ ಸಮಸ್ಯೆ ಪರಿಹರಿಸಲು ಅಥವಾ ಸಮರ್ಪಕವಾಗಿ ಉತ್ತರಿಸಲು ಚಿತ್ರಗಳನ್ನು ಹೋಲಿಸಬೇಕಾಗುತ್ತದೆ, ವರ್ಗೀಕರಿಸಬೇಕಾಗುತ್ತದೆ, ಕ್ರೋಡೀಕರಿಸಬೇಕಾಗುತ್ತದೆ ಅಥವಾ ಚಿತ್ರಪೂರ್ರೈಕೆ ಮಾಡಬೇಕಾಗುತ್ತದೆ. ಈ ಪರೀಕ್ಷೆಗಳನ್ನು ಅನಕ್ಷರಸ್ಥರಿಗೆ ಹಾಗೂ ಅನ್ಯ ಭಾಷೆಯ ಮಕ್ಕಳಿಗೂ ನೀಡಬಹುದಾಗಿದೆ. ಮೌಖಿಕ ಅಥವಾ ಬರಹ ರೂಪದಲ್ಲಿ ನಿರ್ದೇಶನಗಳನ್ನು ನೀಡಲು ಮಾತ್ರ ಭಾಷೆ ಬಳಸಲಾಗುತ್ತದೆ.

ಉದಾ: ರೇವನ್‌ರವರ ಪ್ರೊಗ್ರೆಸಿವ್ ಮ್ಯಾಟ್ರಿಸಸ್ ಪರೀಕ್ಷೆ, ಕೆಟೆಲ್‌ರವರ ಕಲ್ಚರ್‌ಫ್ರೀ ಪರೀಕ್ಷೆ, ಪ್ರೇಮಲತಾರವರ ಅಶಾಬ್ದಿಕ ಬುದ್ಧಿಶಕ್ತಿ ಪರೀಕ್ಷೆ.

**ಸ್ಟಾಂಡರ್ಡ್ ಪ್ರೋಗ್ರೆಸಿವ್ ಮ್ಯಾಟ್ರಿಸಸ್ ಪರೀಕ್ಷೆ (Standard Progressive Matrices)**

ಇಂಗ್ಲೆಂಡಿನ ಜೆ.ಸಿ. ರೇವನ್‌ರವರು ರೂಪಿಸಿದ ಈ ಪರೀಕ್ಷೆ ವೈಯಕ್ತಿಕವಾಗಿ ಅಥವಾ ಸಮೂಹಕ್ಕೆ ನೀಡಬಹುದಾದ ಅಶಾಬ್ದಿಕ ಪರೀಕ್ಷೆಯಾಗಿದೆ. ಪ್ರಗತಿಶೀಲ ಮಾತೃಕೆಗಳ ಈ ಪರೀಕ್ಷೆಯಲ್ಲಿ ಪರೀಕ್ಷಾರ್ಥಿಗಳ




ಹೋಲಿಸುವ ಸಾಮರ್ಥ್ಯ, ಸಾದೃಶ್ಯಗಳ ಮೂಲಕ ತರ್ಕಿಸುವ ಸಾಮರ್ಥ್ಯ, ಸ್ಥಳಾವಕಾಶ, ಸಂಬಂಧಗಳನ್ನು ಗ್ರಹಿಸಿ ಸಮಪಾರ್ಶ್ವ ಪೂರ್ಣತೆಯನ್ನು ಸಂಘಟಿಸುವುದು ಮುಂತಾದವುಗಳನ್ನು ಅಳೆಯುತ್ತದೆ. ಇಲ್ಲಿ ವಿದ್ಯಾರ್ಥಿಗೆ ಚಿತ್ರದ ಒಂದು ವಿನ್ಯಾಸವನ್ನು ನೀಡಿ ಅದರಲ್ಲಿ ಬಿಟ್ಟು ಹೋಗಿರುವ ಭಾಗವನ್ನು ಉತ್ತರಗಳಲ್ಲಿ ಕೊಟ್ಟಿರುವ 6 ಭಿನ್ನ ವಿನ್ಯಾಸಗಳಲ್ಲಿ ಸರಿಯಾದುದನ್ನು ಗುರ್ತಿಸಿ ವಿನ್ಯಾಸವನ್ನು ಪೂರ್ಣಗೊಳಿಸಬೇಕು. ಈ ಪರೀಕ್ಷೆ 60 ಪರೀಕ್ಷಾಂಶಗಳನ್ನು ಹೊಂದಿದ್ದು ತಲಾ 12 ರಂತೆ ಎ.ಬಿ.ಸಿ.ಡಿ.ಇ. ಎಂದು 5 ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ಪರೀಕ್ಷೆಯನ್ನು ಉತ್ತರಿಸಲು ಸಾಮಾನ್ಯವಾಗಿ 20 ರಿಂದ 30 ನಿಮಿಷಗಳು ಬೇಕಾಗುತ್ತವೆ. ಈ ಪರೀಕ್ಷೆಯಲ್ಲಿ ಪಡೆದ ಅಂಕಗಳ ಸಹಾಯದಿಂದ ವಿದ್ಯಾರ್ಥಿಯು ಪಡೆದ ಶತಾಂಕಗಳನ್ನು ಗುರುತಿಸಿಕೊಂಡು ಮಾನಸಿಕ ಸಾಮರ್ಥ್ಯದ 5 ದರ್ಜೆಗಳಲ್ಲಿ ಅವನು/ಅವಳು ಯಾವ ದರ್ಜೆಯಲ್ಲಿದ್ದಾನೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

**ಕಾರ್ಯಾತ್ಮಕ ಪರೀಕ್ಷೆಗಳು**

ಕಾರ್ಯಾತ್ಮಕ ಪರೀಕ್ಷೆಗಳಲ್ಲಿ ಪರೀಕ್ಷೆ ತೆಗೆದುಕೊಳ್ಳುವ ವ್ಯಕ್ತಿಯು ಭಾಷೆಯನ್ನು ಬಳಸದೇ ಸರಳ ವಸ್ತುಗಳೊಂದಿಗೆ ಕ್ರಿಯಾ ಕೌಶಲ್ಯವನ್ನು ತೋರಿಸುವ ಮೂಲಕ ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ. ಕಾರ್ಯಾತ್ಮಕ ಪರೀಕ್ಷೆಗಳು ಮರದ ಘನಗಳು, ಯಾಂತ್ರಿಕ ಒಗಟುಗಳು, ಚಿತ್ರದ ಭಾಗಗಳು, ಚಿತ್ರ ರಚನೆ, ಚಿತ್ರಗಳು ಮತ್ತು ಇದೇ ರೀತಿಯ ಕೆಲವು ಸಾಮಗ್ರಿಗಳನ್ನು ಒಳಗೊಂಡಿರುತ್ತವೆ. ಈ ಪರೀಕ್ಷೆಗಳಲ್ಲಿ ಪರೀಕ್ಷಾರ್ಥಿಯು ತನ್ನ ಕರಕೌಶಲದ ಸಹಾಯದೊಂದಿಗೆ ಹಲವಾರು ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ.

ಕಾರ್ಯಾತ್ಮಕ ಪರೀಕ್ಷೆಗಳು ಕೇವಲ ಒಬ್ಬ ವ್ಯಕ್ತಿಗೆ ಮಾತ್ರ ಒಮ್ಮೆಗೆ ನೀಡಬಹುದಾದ ವೈಯಕ್ತಿಕ ಪರೀಕ್ಷೆಗಳಾಗಿರುತ್ತವೆ. ಈ ಪರೀಕ್ಷೆಗಳು ಶ್ರವಣದೋಷವುಳ್ಳ, ವಾಗ್ದೋಷವುಳ್ಳ ಮಕ್ಕಳಿಗೆ, ಅನಕ್ಷರಸ್ಥರಿಗೆ, ನಾಚಿಕೆ ಸ್ವಭಾವದವರು ಹಾಗೂ ಹಿಂಜರಿಯುವ ಪ್ರವೃತ್ತಿಯವರಿಗೆ, ಶೈಕ್ಷಣಿಕ ಕೊರತೆಯಿರುವವರಿಗೆ ಮತ್ತು ವಿದೇಶಿ ಮಕ್ಕಳಿಗೆ ಸಹ ಬಳಸಲು ಉಪಯುಕ್ತವಾಗಿವೆ.

**ಉದಾ:** ಭಾಟಿಯಾರವರ ಕಾರ್ಯಾತ್ಮಕ ಬುದ್ಧಿಶಕ್ತಿ ಮಾಪನ, ವೆಷ್ಲರ್‌ರವರ ಕಾರ್ಯ ನಿರ್ವಹಣಾ ಮಾಪನ, ಕೋಹ್‌ನ ಘನವಿನ್ಯಾಸ ರಚನೆ ಪರೀಕ್ಷೆ, ಅಲೆಗ್ಸಾಂಡರ್‌ರವರ ಪಾಸ್ – ಅಲಾಂಗ್ (ಸರಿಸುವ) ಪರೀಕ್ಷೆ ಇತ್ಯಾದಿ.

**ಭಾಟಿಯಾರವರ ಬುದ್ಧಿಶಕ್ತಿಯ ಕಾರ್ಯ ನಿರ್ವಹಣಾ ಪರೀಕ್ಷಾ ಸಮೂಹ**

ಶಾಲಾ ಮಕ್ಕಳಿಗೆ ಮತ್ತು ಅನಕ್ಷರಸ್ಥರಿಗೆ ನೀಡಬಹುದಾದ ಕಾರ್ಯ ನಿರ್ವಹಣಾ ಪರೀಕ್ಷೆಗಳನ್ನು ರೂಪಿಸಿ ಪ್ರಮಾಣ ಬದ್ಧಗೊಳಿಸಿದವರು ಡಾ. ಚಂದ್ರಮೋಹನ್ ಭಾಟಿಯಾರವರು. ಇದು ವೈಯಕ್ತಿಕ ಪರೀಕ್ಷೆಯಾಗಿದ್ದು 5 ಉಪಪರೀಕ್ಷೆಗಳನ್ನೊಳಗೊಂಡಿದೆ. ತಕ್ಷಣದ ಸ್ಮೃತಿಯ ಉಪಪರೀಕ್ಷೆಯನ್ನು ಹೊರತುಪಡಿಸಿ ಉಳಿದ ನಾಲ್ಕು ಉಪಪರೀಕ್ಷೆಗಳು ಅಶಾಬ್ದಿಕವಾಗಿವೆ ಮತ್ತು ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಉಪಪರೀಕ್ಷೆಗಳು ಈ ಕೆಳಕಂಡಂತಿವೆ.

1) **ಕೋಹ್‌ರವರ ಬ್ಲಾಕ್ ಡಿಸೈನ್ ಪರೀಕ್ಷೆ:** ಭಾಟಿಯಾರವರ ಕಾರ್ಯಾತ್ಮಕ ಪರೀಕ್ಷಾ ಸಮೂಹದಲ್ಲಿ ಕೋಹ್ ರವರ ಬ್ಲಾಕ್ ಡಿಸೈನ್ ಪರೀಕ್ಷೆಯ 10 ಪರೀಕ್ಷಾಂಶಗಳನ್ನು ಬಳಸಿ ಕೊಳ್ಳಲಾಗಿದೆ. ಪ್ರತಿಯೊಂದು ಕಾರ್ಡಿನ ಮೇಲೆ ಒಂದೊಂದು ಬಣ್ಣದ ಮುದ್ರಿತ ವಿನ್ಯಾಸದ ಚಿತ್ರವಿರುತ್ತದೆ. ಈ ಚಿತ್ರವನ್ನು ನೋಡಿ ಪರೀಕ್ಷಾರ್ಥಿಯು ತನಗೆ ಕೊಟ್ಟಿರುವ ಮರದ ಘನಾಕೃತಿಗಳಿಂದ ಆ ಚಿತ್ರದಲ್ಲಿರುವ ವಿನ್ಯಾಸವನ್ನು ನಿಗದಿತ ಸಮಯದಲ್ಲಿ ರಚಿಸಬೇಕು. ಪ್ರತಿಯೊಂದು ಘನಾಕೃತಿಗೂ ಅದರ ಒಂದು ಮುಖಕ್ಕೆ ಕೆಂಪು ಬಣ್ಣವನ್ನು

Digitised by Bharatavani, CIIL

ಅದರ ವಿರುದ್ಧ ಮುಖಕ್ಕೆ ಬಿಳಿ ಬಣ್ಣವನ್ನು, ಮತ್ತೊಂದು ಮುಖಕ್ಕೆ ಹಳದಿ ಬಣ್ಣವನ್ನು, ಅದರ ವಿರುದ್ಧ ಮುಖಕ್ಕೆ ನೀಲಿ ಬಣ್ಣವನ್ನು ಉಳಿದ ಎರಡು ಮುಖಗಳಲ್ಲಿ ಒಂದಕ್ಕೆ ಅರ್ಧಕ್ಕೆ ಬಿಳಿ, ಅರ್ಧಕ್ಕೆ ಕೆಂಪು, ಮತ್ತೊಂದು ಮುಖಕ್ಕೆ ಅರ್ಧ ನೀಲಿ, ಅರ್ಧ ಹಳದಿ ಬಣ್ಣ ಬಳಿಯಲಾಗಿದೆ. ಈ ಘನ (ಬ್ಲಾಕ್)ಗಳನ್ನು ಸೂಕ್ತ ರೀತಿಯಲ್ಲಿ ತಿರುಗಿಸಿಕೊಂಡು ಕಾರ್ಡಿನಲ್ಲಿರುವಂತೆಯೇ ವಿನ್ಯಾಸ ರಚಿಸಬೇಕು.

2) **ಅಲೆಗ್ಸಾಂಡರ್‌ರವರ ಪಾಸ್ ಅಲಾಂಗ್ (ಸರಿಸುವ) ಪರೀಕ್ಷೆ:** ಭಾಟಿಯಾರವರ ಕಾರ್ಯಾತ್ಮಕ ಪರೀಕ್ಷಾ ಸಮೂಹವು ಅಲೆಗ್ಸಾಂಡರ್‌ರವರು ರೂಪಿಸಿದ ಪಾಸ್ ಅಲಾಂಗ್ ಪರೀಕ್ಷೆಯ



ಕೆಲವು ಅಂಶಗಳನ್ನು ಒಳಗೊಂಡಿದೆ. ಇದರಲ್ಲೂ ಸಹ 8 ಕಾರ್ಡ್‌ಗಳಲ್ಲಿ ಕೆಲವು ಮುದ್ರಿತ ಚಿತ್ರಗಳಿವೆ. ಇಲ್ಲಿ ಪರೀಕ್ಷಾರ್ಥಿ ತೆರೆದ ಪೆಟ್ಟಿಗೆಯಾಕಾರದ ರಚನೆಯಲ್ಲಿರುವ ಬಣ್ಣದ ಭಾಗಗಳನ್ನು ಪೆಟ್ಟಿಗೆಯೊಳಗೆ ಚಲಿಸುವ ಮೂಲಕ ಕಾರ್ಡ್‌ನಲ್ಲಿರುವಂತಹ ಚಿತ್ರವನ್ನು ನಿಗದಿತ ಸಮಯದಲ್ಲಿ ರಚಿಸಬೇಕಾಗಿರುತ್ತದೆ. ಪೆಟ್ಟಿಗೆಯೊಳಗಿನ ಬ್ಲಾಕ್‌ಗಳು ಕೆಂಪು ಮತ್ತು ನೀಲಿ ಬಣ್ಣ ಹೊಂದಿದ್ದು ಕೆಲವು ಆಯತಾಕಾರವಾಗಿಯೂ (ಉದ್ದದಲ್ಲಿ) ಇನ್ನು ಕೆಲವು ಚೌಕಾಕೃತಿಯಲ್ಲೂ ಇವೆ. ವಿನ್ಯಾಸ ರಚಿಸುವಾಗ ಬ್ಲಾಕ್‌ಗಳನ್ನು ಪೆಟ್ಟಿಗೆಯಿಂದ ಹೊರಗೆ ತೆಗೆಯುವಂತಿಲ್ಲ.

3) **ವಿನ್ಯಾಸ ಚಿತ್ರಣ ಪರೀಕ್ಷೆ:** ಈ ಪರೀಕ್ಷೆಯನ್ನು ಡಾ. ಭಾಟಿಯಾರವರೇ ಸ್ವತಃ ರೂಪಿಸಿದ್ದಾರೆ. ಇದರಲ್ಲಿ 8 ಕಾರ್ಡ್‌ಗಳಿದ್ದು ಪ್ರತಿಯೊಂದರ ಮೇಲೂ ಒಂದು ನಿರ್ದಿಷ್ಟ ವಿನ್ಯಾಸವಿದೆ. ಪರೀಕ್ಷಾರ್ಥಿ ಕಾರ್ಡ್‌ನಲ್ಲಿರುವ ವಿನ್ಯಾಸವನ್ನು ನೋಡಿ ಅದೇ ರೀತಿಯ ನಿರ್ದಿಷ್ಟ ವಿನ್ಯಾಸದ ಚಿತ್ರವನ್ನು ನಿಗದಿತ ಸಮಯದಲ್ಲಿ ಬರೆಯಬೇಕಾಗುತ್ತದೆ. ಈ ಪರೀಕ್ಷಾಂಶಗಳಲ್ಲಿ ವಿನ್ಯಾಸವನ್ನು ಚಿತ್ರಿಸುವಾಗ ಬರೆಯಲು ಪ್ರಾರಂಭಿಸಿದ ನಂತರ ಚಿತ್ರಪೂರ್ಣಗೊಳ್ಳುವವರೆಗೂ ಕೈ ಎತ್ತದೇ ನಿರಂತರವಾಗಿ ಏಕಮುಖವಾಗಿಯೇ ಬರೆಯಬೇಕು ಮತ್ತು ಒಂದು ಗೆರೆಯ ಮೇಲೆ ಮತ್ತೊಮ್ಮೆ ಗೆರೆ ಎಳೆಯಲು ಅವಕಾಶವಿರುವುದಿಲ್ಲ.



4) **ತಕ್ಷಣದ ಸ್ಮೃತಿ ಪರೀಕ್ಷೆ:** ಈ ಉಪಪರೀಕ್ಷೆಯಲ್ಲಿ ಸಂಖ್ಯೆಗಳು ಅಥವಾ ಅಕ್ಷರಗಳನ್ನು ಬಳಸಲಾಗಿದೆ. 2 ರಿಂದ 9 ಸಂಖ್ಯೆಗಳನ್ನು ಅಥವಾ ಅಕ್ಷರಗಳನ್ನು ಪರೀಕ್ಷಕ ಅನುಕ್ರಮವಾಗಿ ಹೇಳುತ್ತಾ ಹೋಗುತ್ತಾನೆ. ಪರೀಕ್ಷಾರ್ಥಿ ಅವುಗಳನ್ನು ಅದೇ ಕ್ರಮದಲ್ಲಿ ಅಥವಾ ವಿರುದ್ಧ ಕ್ರಮದಲ್ಲಿ ತಕ್ಷಣ ಪುನರಾವರ್ತಿಸಬೇಕು. ಪರೀಕ್ಷಾರ್ಥಿಯ ಸ್ಮೃತಿ ಸಾಮರ್ಥ್ಯವನ್ನು ಅಳೆಯಲು ಇದು ನೆರವಾಗುತ್ತದೆ.

**ಉದಾ: ಸಂಖ್ಯೆಗಳು: ನೇರವಾಗಿ ಪುನರುಚ್ಚರಿಸಲು**

ಎರಡು ಸಂಖ್ಯೆ: 4–78, 6–3, 5–8

ಮೂರು ಸಂಖ್ಯೆ: 6–4–1, 3–5–2, 8–3–7

ನಾಲ್ಕು ಸಂಖ್ಯೆ: 4–7–2–9, 3–8–5–2, 7–2–6–1

ಐದು ಸಂಖ್ಯೆ: 3–1–8–5–9, 4–8–4–7–2, 9–6–1–8–3

ಆರು ಸಂಖ್ಯೆ: 4–7–3–8–5–9

ಏಳು ಸಂಖ್ಯೆ: 5–3–4–7–9–2–6

ಎಂಟು ಸಂಖ್ಯೆ: 7–2–5–9–4–8–3–6

ಒಂಬತ್ತು ಸಂಖ್ಯೆ: 4–9–6–1–3–8–2–7–4

**ಸಂಖ್ಯೆಗಳು: ತಿರುಗಿಸಿ ಪುನರುಚ್ಚರಿಸಲು**

ಮೂರು ಸಂಖ್ಯೆ: 7–3–5, 5–3–7

ನಾಲ್ಕು ಸಂಖ್ಯೆ: 8–5–2–6

ಐದು ಸಂಖ್ಯೆ: 8–1–3–7–9

ಆರು ಸಂಖ್ಯೆ: 9–2–7–3–1–4

5) **ಚಿತ್ರ ಪೂರೈಕೆ ಪರೀಕ್ಷೆ:** ಈ ಉಪ ಪರೀಕ್ಷೆಯಲ್ಲಿ 5 ಪರೀಕ್ಷಾಂಶಗಳಿವೆ. ಗ್ರಾಮೀಣ ಜೀವನವನ್ನು ಪ್ರತಿಬಿಂಬಿಸುವ ಚಿತ್ರಗಳನ್ನೊಳಗೊಂಡ ಕಾರ್ಡ್‌ಬೋರ್ಡ್‌ನ್ನು 2, 4, 6, 8 ಮತ್ತು 12 ಭಾಗಗಳನ್ನಾಗಿ ವಿಭಜಿಸಲಾಗಿದೆ. ಒಂದು ಚಿತ್ರದ ಭಾಗಗಳನ್ನು ಪರೀಕ್ಷಾರ್ಥಿಗಳಿಗೆ ನೀಡಿದಾಗ ಅವನು ಅವುಗಳನ್ನು ಕ್ರಮಬದ್ಧವಾಗಿ ಜೋಡಿಸುವ ಮೂಲಕ ಚಿತ್ರ ಪೂರೈಸುತ್ತಾನೆ.



Digitised by Bharatavani, CIIL

ಈ ಐದು ಉಪಪರೀಕ್ಷೆಗಳನ್ನು ಪರೀಕ್ಷಾರ್ಥಿಗೆ ನೀಡಿ ಅವರ ಉತ್ತರಗಳಿಗೆ ಅಂಕ ಸೂಚಿಯ ಸಹಾಯದಿಂದ ಅಂಕಗಳನ್ನು ನೀಡಿ ಆ ಅಂಕಗಳಿಗೆ ಪರೀಕ್ಷಾ ಕೈಪಿಡಿಯ ಸಹಾಯದಿಂದ ಬುದ್ಧಿಶಕ್ತಿ ಸೂಚ್ಯಂಕವನ್ನು ಕಂಡುಕೊಳ್ಳಬಹುದು. ತಕ್ಷಣದ ಸ್ಮೃತಿ ಪರೀಕ್ಷೆಯ ಅಂಕಗಳನ್ನು ಹೊರತುಪಡಿಸಿ ಉಳಿದ ನಾಲ್ಕು ಉಪಪರೀಕ್ಷೆಗಳಲ್ಲಿ ದೊರೆತ ಅಂಕಗಳ ಸಹಾಯದಿಂದ ವ್ಯಕ್ತಿಯ ಕಾರ್ಯಸಾಧನಾ ಸೂಚ್ಯಂಕ (ಪಿ.ಕ್ಯೂ)ವನ್ನು ಸಹ ಕಂಡು ಹಿಡಿಯಬಹುದಾಗಿದೆ.

– ಎಚ್.ವಿ.ವಾ.

## ಬುದ್ಧಿಶಕ್ತಿ ಸಿದ್ಧಾಂತಗಳು

ಬುದ್ಧಿಶಕ್ತಿ ಎಂಬ ಪದವನ್ನು ದೈನಂದಿನ ಜೀವನದಲ್ಲಿ ಜನಪ್ರಿಯವಾಗಿ ಬಳಸುವುದರ ಜೊತೆಗೆ, ಅದು ಮನೋವಿಜ್ಞಾನ, ಶಿಕ್ಷಣ ಮತ್ತು ಮಕ್ಕಳ ವಿಕಾಸ ಮುಂತಾದ ಕ್ಷೇತ್ರಗಳಲ್ಲಿನ ಸಂಶೋಧಕರ ಗಮನವನ್ನು ಸೆಳೆದಿದೆ. ನಿಘಂಟುಗಳನ್ನು ಅವಲೋಕಿಸಿದಾಗ ಬುದ್ಧಿಶಕ್ತಿ ಎಂಬ ಪದವನ್ನು ವಿಶಾಲವಾದ ಅರ್ಥದಲ್ಲಿ ಬಳಸಿರುವುದು ಕಂಡುಬರುತ್ತದೆ. ಬುದ್ಧಿಶಕ್ತಿ ಎಂಬ ಪದಕ್ಕೆ ಮುಂದೆ ಸೂಚಿಸಿರುವ ಹಲವಾರು ಅರ್ಥಗಳನ್ನು ಕಾಣುತ್ತೇವೆ. ತಿಳಿವಳಿಕೆಯ ಸಾಮರ್ಥ್ಯ, ತರ್ಕಿಸುವ ಮತ್ತು ಗ್ರಹಣ ಸಾಮರ್ಥ್ಯ, ವೇಗವಾಗಿ ಕಲಿಯುವಿಕೆ, ಮಾನಸಿಕ ಜಾಗ್ರತೆ, ಸಂಬಂಧಗಳನ್ನು ಗ್ರಹಿಸುವ ಸಾಮರ್ಥ್ಯ ಇತ್ಯಾದಿ. ಸಾಮರ್ಥ್ಯ, ಪ್ರತಿಭೆ, ಅಭಿಕ್ಷಮತೆ, ಪ್ರಾಜ್ಞತೆ, ಜಾಣ್ಮೆ, ಚತುರತೆ ಮುಂತಾದ ಪದಗಳನ್ನು ಬುದ್ಧಿಶಕ್ತಿಗೆ ಸಮಾನಾರ್ಥಕವಾಗಿ ಬಳಸಲಾಗುತ್ತಿದೆ.

ಒಬ್ಬ ವ್ಯಕ್ತಿ ಸಮಸ್ಯೆಯನ್ನು ವೇಗವಾಗಿ ಮತ್ತು ನಿಖರವಾಗಿ ಬಿಡಿಸಿದರೆ ಅಥವಾ ಸಂಭಾಷಣೆಯಲ್ಲಿ ವಿವೇಕ ಮತ್ತು ಚತುರತೆಯನ್ನು ತೋರಿಸಿದರೆ ಅವನನ್ನು ಬುದ್ಧಿವಂತನೆಂದು ಕರೆಯುತ್ತೇವೆ. ಒಬ್ಬ ವ್ಯಕ್ತಿ ವಿಜ್ಞಾನ ಕ್ಷೇತ್ರದಲ್ಲಿ ಯಾವುದೇ ಸಾಧನೆ ಮಾಡಿದ್ದಾನೆ ಅಥವಾ ಅನ್ವೇಷಿಸಿದ್ದಾನೆ ಎಂದು ಕೇಳಿದಾಗ ಅವನನ್ನು ಬುದ್ಧಿವಂತನೆನ್ನುತ್ತೇವೆ. ವ್ಯಕ್ತಿಯು ಸಾಮರ್ಥ್ಯ ಅಥವಾ ಸಾಧನೆಯನ್ನು ಸೂಚಿಸುವಂತಹ ನಿರ್ದಿಷ್ಟ ವರ್ತನೆಯನ್ನು ತೋರಿದಾಗ ಅವನು ಹೆಚ್ಚು ಬುದ್ಧಿಶಕ್ತಿ ಹೊಂದಿದ್ದಾನೆ ಎಂದು ಹೇಳುತ್ತೇವೆ. ಆದ್ದರಿಂದ ಸರಳ ಪದಗಳಲ್ಲಿ ಬುದ್ಧಿಶಕ್ತಿಯನ್ನು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಪರಿಹರಿಸಿಕೊಳ್ಳುವ ಸಾಮರ್ಥ್ಯ ಎಂದು ಹೇಳಬಹುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಈ ಸಾಮರ್ಥ್ಯವನ್ನು ಕಾಣುತ್ತೇವೆ. ಆದರೆ ಇದು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಪ್ರಮಾಣದಲ್ಲಿ ಭಿನ್ನವಾಗಿರುತ್ತದೆ.

ಮನೋವಿಜ್ಞಾನ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಬುದ್ಧಿಶಕ್ತಿ ಎಂಬ ಪದ ಸಾಕಷ್ಟು ಬಳಕೆಯಲ್ಲಿದೆ. ಹಲವಾರು ಮನೋವಿಜ್ಞಾನಿಗಳು 'ಬುದ್ಧಿಶಕ್ತಿ'ಗೆ ವಿವಿಧ ರೀತಿಯ ವ್ಯಾಖ್ಯೆಗಳನ್ನು ನೀಡಿರುತ್ತಾರೆ. ಕೆಲವು ಪ್ರಮುಖ ವ್ಯಾಖ್ಯೆಗಳನ್ನು ಇಲ್ಲಿ ನೀಡಲಾಗಿದೆ.

**ಬೀನೆ ಮತ್ತು ಸೈಮನ್ (1905)** ರವರ ಪ್ರಕಾರ "ಉತ್ತಮವಾಗಿ ನಿರ್ಣಯ ಕೈಗೊಳ್ಳುವ, ಉತ್ತಮವಾಗಿ ಸನ್ನಿವೇಶವನ್ನು ಗ್ರಹಿಸುವ ಮತ್ತು ಉತ್ತಮವಾಗಿ ತರ್ಕಿಸುವ ವ್ಯಕ್ತಿಯ ಸಾಮರ್ಥ್ಯವೇ ಬುದ್ಧಿಶಕ್ತಿಯಾಗಿದೆ". ಇವರ ಪ್ರಕಾರ ಬುದ್ಧಿಶಕ್ತಿಗೆ ಪ್ರಮುಖವಾಗಿ ನಾಲ್ಕು ಮುಖ್ಯ ಅಂಶಗಳ ಅಗತ್ಯತೆಯಿದೆ.

1) ಉದ್ದೇಶಿತ ಗುರಿ ಅಥವಾ ಗುರಿ ರೂಪಿಸಿಕೊಳ್ಳುವ ಸಾಮರ್ಥ್ಯ ಮತ್ತು ಅದರ ಕಾರ್ಯ ಸಾಧನೆಯೆಡೆಗೆ ಕಾರ್ಯಪ್ರವೃತ್ತರಾಗುವುದು.

2) ಮಾರ್ಪಾಟು ಅಥವಾ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾದ ಹೊಂದಾಣಿಕೆ ಮಾಡಿಕೊಳ್ಳುವ ಸಾಮರ್ಥ್ಯ.

3) ಗ್ರಹಣ ಸಾಮರ್ಥ್ಯ ಅಥವಾ ಸಮಸ್ಯೆಯ ಮೂಲ ಸ್ವರೂಪವನ್ನು ಅರಿತುಕೊಳ್ಳುವ ಸಾಮರ್ಥ್ಯ.

4) ಸ್ವಯಂ ಮೌಲ್ಯಮಾಪನ ಅಥವಾ ಸಮಸ್ಯೆಯನ್ನು ಸರಿಯಾಗಿ ಪರಿಹರಿಸಲು ಸಾಧ್ಯವಾಗುತ್ತದೆಯೋ ಎಂಬುದರ ಅರಿವು.

**ಡೇವಿಡ್ ವೆಶ್ಲರ್ (1939)** ರವರು ನೀಡಿದ ಬುದ್ಧಿಶಕ್ತಿಯ ವ್ಯಾಖ್ಯೆ ಹೆಚ್ಚು ಜನಪ್ರಿಯವಾಗಿದೆ. ಇವರ ಪ್ರಕಾರ – "ವ್ಯಕ್ತಿಯು ಉದ್ದೇಶಪೂರ್ವಕವಾಗಿ ವರ್ತಿಸಲು, ತರ್ಕಬದ್ಧವಾಗಿ ಆಲೋಚಿಸಲು ಮತ್ತು ಪರಿಸರದೊಂದಿಗೆ ಸಮರ್ಪಕವಾದ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಅಗತ್ಯವಾದ ಒಟ್ಟು ಸಾಮರ್ಥ್ಯವನ್ನು ಅಥವಾ ಸಾಮರ್ಥ್ಯದ ಸಮಷ್ಟಿಯೇ ಬುದ್ಧಿಶಕ್ತಿ".

**ಸ್ಟಡ್ಡಾರ್ಡ್‌ರವರ ಪ್ರಕಾರ** "ಈ ಕೆಳಕಂಡ ಲಕ್ಷಣಗಳನ್ನೊಳಗೊಂಡ ಚಟುವಟಿಕೆಗಳನ್ನು ಕೈಗೊಳ್ಳಲು ಇರುವ ಸಾಮರ್ಥ್ಯ– ಕ್ಲಿಷ್ಟತೆ, ಸಂಕೀರ್ಣತೆ, ಅಮೂರ್ತತೆ, ಮಿತವ್ಯಯ, ಗುರಿಸಾಧನೆಗೆ ಸೂಕ್ತ ಮಾರ್ಪಾಡು ಮಾಡಿಕೊಳ್ಳುವುದು, ಸಾಮಾಜಿಕ ಮೌಲ್ಯ ಮತ್ತು ಮೌಲಿಕ ವಿಚಾರಗಳ ಉಗಮ ಮತ್ತು ಶಕ್ತಿಯನ್ನು ಕೇಂದ್ರೀಕರಿಸಬೇಕಾದ ಮತ್ತು ಸಂವೇಗಾತ್ಮಕ ಒತ್ತಡಗಳನ್ನು ಪ್ರತಿರೋಧಿಸಬೇಕಾದ ಸನ್ನಿವೇಶಗಳಲ್ಲಿ ಕೂಡ ಇಂತಹ ಚಟುವಟಿಕೆಗಳಲ್ಲಿ ಮುಂದುವರಿಯುವ ಸಾಮರ್ಥ್ಯವೇ ಬುದ್ಧಿಶಕ್ತಿ".

**ಹೋವರ್ಡ್ ಗಾರ್ಡ್‌ನರ್ (1986) ರವರ ಪ್ರಕಾರ** –"ಒಂದು ಅಥವಾ ಹೆಚ್ಚಿನ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಮೌಲ್ಯವುಳ್ಳ ವಸ್ತುಗಳನ್ನು ರೂಪಿಸುವ ಅಥವಾ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಅಥವಾ ಕೌಶಲವೇ ಬುದ್ಧಿಶಕ್ತಿ".

**ರಾಬರ್ಟ್ ಸ್ಟರ್ನ್ ಬರ್ಗ್ (1997)ರವರ ಪ್ರಕಾರ** "ಬುದ್ಧಿಶಕ್ತಿಯು ಸೂಕ್ತ ಹೊಂದಾಣಿಕೆ ಮಾಡಿಕೊಳ್ಳಲು, ಸೂಕ್ತ ಪರಿಸರವನ್ನು ಆಯ್ದುಕೊಳ್ಳಲು ಮತ್ತು ರೂಪಿಸಿಕೊಳ್ಳಲು ಅಗತ್ಯವಾದ ಮಾನಸಿಕ ಸಾಮರ್ಥ್ಯಗಳನ್ನೊಳಗೊಂಡಿದೆ".

ಮೇಲ್ಕಂಡ ಬುದ್ಧಿಶಕ್ತಿಯ ವ್ಯಾಖ್ಯೆಗಳನ್ನು ಸಾರಾಂಶಿಸಿದಾಗ ಕಂಡು ಬರುವ ಪ್ರಮುಖ ಲಕ್ಷಣಗಳೆಂದರೆ ಹೊಸ ಸನ್ನಿವೇಶಗಳೊಂದಿಗೆ ಹೊಂದಾಣಿಕೆ, ಹಿಂದಿನ ಅನುಭವಗಳಿಂದ ಕಲಿಯುವಿಕೆ, ಅಮೂರ್ತ ಚಿಂತನೆ, ಉದ್ದೇಶಪೂರ್ವಕ ವರ್ತನೆ, ಸಾಧನೆಗಳ ಮಿತವ್ಯಯ ಮತ್ತು ದಕ್ಷತೆ, ಹಿಂದೆ ಪಡೆದ ಜ್ಞಾನವನ್ನು ಉಳಿಸಿಕೊಳ್ಳುವ ಮತ್ತು ಪುನಸ್ಮರಣೆಗೆ ಮಾಡಿಕೊಳ್ಳುವ ಸಾಮರ್ಥ್ಯ.

ಬುದ್ಧಿಶಕ್ತಿಯ ಸಮಕಾಲೀನ ಸಿದ್ಧಾಂತಗಳ ದೃಷ್ಟಿಕೋನದಿಂದ ನೋಡಿದಾಗ ಬುದ್ಧಿಶಕ್ತಿ ಎಂಬುದು ಕೇವಲ ಹೊಂದಾಣಿಕೆ ಸಾಮರ್ಥ್ಯಕ್ಕೆ ಮಾತ್ರ ಸೀಮಿತವಾದುದಲ್ಲ. ಹೊಂದಾಣಿಕೆ ಸಾಧ್ಯವಾಗದ ಸಂದರ್ಭಗಳಲ್ಲಿ ಬುದ್ಧಿವಂತನಾದ ವ್ಯಕ್ತಿ ತನ್ನ ಪರಿಸರವನ್ನೇ ಸ್ವಲ್ಪಮಟ್ಟಿಗೆ ಬದಲಾಯಿಸಿಕೊಳ್ಳುವ ಅಥವಾ ಅವನಿಗೆ ಸೂಕ್ತವಾದ ಪರಿಸರವನ್ನು ರೂಪಿಸಿಕೊಳ್ಳುವ ಶಕ್ತಿ ಹೊಂದಿದ್ದಾನೆ ಎಂದು ಅರ್ಥೈಸಬಹುದಾಗಿದೆ.

**ಬುದ್ಧಿಶಕ್ತಿಯ ವಿಧಗಳು:** ಥಾರ್ನ್‌ಡೈಕ್‌ರವರು ಬುದ್ಧಿಶಕ್ತಿಯನ್ನು ಪ್ರಮುಖವಾಗಿ 3 ವಿಧಗಳಾಗಿ ವಿಂಗಡಿಸಿರುತ್ತಾರೆ. ಅವುಗಳೆಂದರೆ ಮೂರ್ತ, ಅಮೂರ್ತ ಮತ್ತು ಸಾಮಾಜಿಕ ಬುದ್ಧಿಶಕ್ತಿ.

**ಮೂರ್ತ ಬುದ್ಧಿಶಕ್ತಿ:** ಮೂರ್ತ ಬುದ್ಧಿಶಕ್ತಿಯೆಂದರೆ ಮೂರ್ತ ವಸ್ತುಗಳೊಡನೆ ಸಂಬಂಧವನ್ನು ಕಲ್ಪಿಸುವುದಾಗಿದೆ. ಒಬ್ಬ ವ್ಯಕ್ತಿ ಜೀವನದ ನೈಜ ಸನ್ನಿವೇಶಗಳನ್ನು ಗ್ರಹಿಸಿ ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವಾಗಿದೆ. ಮೂರ್ತ ಬುದ್ಧಿಶಕ್ತಿಯು ದೈನಂದಿನ ಜೀವನದ

Digitised by Bharatavani, CIIL

ಹಲವಾರು ಚಟುವಟಿಕೆಗಳಲ್ಲಿ ಕಂಡುಬರುತ್ತದೆ. ಇಂತಹ ಬುದ್ಧಿಶಕ್ತಿಯನ್ನು ಕಾರ್ಯಾತ್ಮಕ ಪರೀಕ್ಷಣಗಳು ಮತ್ತು ಚಿತ್ರದ ಮಾದರಿಯ ಪರೀಕ್ಷೆಗಳ ಮೂಲಕ ಅಳೆಯಬಹುದಾಗಿದೆ.

**ಅಮೂರ್ತ ಬುದ್ಧಿಶಕ್ತಿ:** ಇದು ಪದಗಳು, ಸಂಖ್ಯೆಗಳು ಮತ್ತು ವಿಚಾರಗಳಿಗೆ ಪ್ರತಿಕ್ರಿಯಿಸುವ ಸಾಮರ್ಥ್ಯವಾಗಿದೆ. ಅಮೂರ್ತ ಬುದ್ಧಿಶಕ್ತಿ ಪರೀಕ್ಷೆಗಳು ಸಾಂಕೇತಿಕವಾಗಿ ನಿರ್ವಹಣಾ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಇದು ಶಾಲಾ ವಿಷಯಗಳ ಕಲಿಕೆಗೆ ಅಗತ್ಯವಾದ ಅಂಶ. ಇದು ಗಣಿತದ ತರ್ಕ ಸಾಮರ್ಥ್ಯ ಮತ್ತು ತಾರ್ಕಿಕ ಚಿಂತನೆಯಲ್ಲಿ ಕಂಡುಬರುತ್ತದೆ.

**ಸಾಮಾಜಿಕ ಬುದ್ಧಿಶಕ್ತಿ:** ದಿನನಿತ್ಯದ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಯು ಪ್ರತಿಕ್ರಿಯಿಸುವ ಸಾಮರ್ಥ್ಯ. ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅವರೊಂದಿಗೆ ವರ್ತಿಸುವ ಸಾಮರ್ಥ್ಯ. ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಯ ಸಮರ್ಪಕ ಹೊಂದಾಣಿಕೆ ಸಾಮಾಜಿಕ ಬುದ್ಧಿಶಕ್ತಿಯ ಸೂಚಕವಾಗಿದೆ.

**ಸ್ಪಿಯರ್ಮನ್**

**ಥರ್ಸ್ಟನ್**

**ಬುದ್ಧಿಶಕ್ತಿಯ ಸಿದ್ಧಾಂತಗಳು**

ಮನೋವಿಜ್ಞಾನಿಗಳು ಬುದ್ಧಿಶಕ್ತಿಯ ಸ್ವರೂಪವನ್ನು ಕುರಿತು ಹಲವಾರು ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಬುದ್ಧಿಶಕ್ತಿಯ ಸಿದ್ಧಾಂತಗಳನ್ನು ಸಾಂಪ್ರದಾಯಿಕ ಸಿದ್ಧಾಂತಗಳು ಮತ್ತು ಸಮಕಾಲೀನ ಸಿದ್ಧಾಂತಗಳು ಎಂದು ಎರಡು ರೀತಿಯಲ್ಲಿ ವಿಂಗಡಿಸಬಹುದಾಗಿದೆ. ಚಾರ್ಲ್ಸ್ ಸ್ಪಿಯರ್‌ಮನ್, ಥಾರ್ನ್‌ಡೈಕ್, ಥರ್ಸ್ಟನ್, ಥಾಂಸನ್, ಜೆ.ಪಿ. ಗಿಲ್‌ಫರ್ಡ್, ಕೆಟೆಲ್ ಮುಂತಾದವರ ಸಿದ್ಧಾಂತಗಳನ್ನು ಸಾಂಪ್ರದಾಯಿಕ ಸಿದ್ಧಾಂತಗಳೆನ್ನುವರು. ಹೋವರ್ಡ್‌ಗಾರ್ಡ್‌ನರ್ (1983), ರಾಬರ್ಟ್ ಸ್ಟರ್ನ್‌ಬರ್ಗ್ (1985) ಮತ್ತು ಜೆ.ಪಿ. ದಾಸ್ (1994) ಮುಂತಾದವರ ಸಿದ್ಧಾಂತಗಳನ್ನು ಸಮಕಾಲೀನ ಸಿದ್ಧಾಂತಗಳೆನ್ನುವರು. ಕೆಲವು ಪ್ರಮುಖ ಸಿದ್ಧಾಂತಗಳನ್ನು ಇಲ್ಲಿ ಚರ್ಚಿಸಲಾಗಿದೆ.

**I ಬುದ್ಧಿಶಕ್ತಿಯ ಸಾಂಪ್ರದಾಯಿಕ ಸಿದ್ಧಾಂತಗಳು**

**1. ಬುದ್ಧಿಶಕ್ತಿಯ ದ್ವಿಕಾರಕ ಸಿದ್ಧಾಂತ**

ಬ್ರಿಟಿಷ್ ಮನೋವಿಜ್ಞಾನಿ ಚಾರ್ಲ್ಸ್ ಸ್ಪಿಯರ್‌ಮನ್‌ರವರು 1927ರಲ್ಲಿ ಬುದ್ಧಿಶಕ್ತಿಯ ದ್ವಿಕಾರಕ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇವರ ಪ್ರಕಾರ ಬುದ್ಧಿಶಕ್ತಿ ಎರಡು ಕಾರಕಗಳಿಂದ ಕೂಡಿದೆ. ಒಂದು 'g'ಕಾರಕ ಎಂದು ಕರೆಯಲ್ಪಡುವ ಸಾಮಾನ್ಯ ಮಾನಸಿಕ ಸಾಮರ್ಥ್ಯ ಮತ್ತು ಇನ್ನೊಂದು 's' ಕಾರಕ ಎಂದು ಗುರುತಿಸಲ್ಪಡುವ ನಿರ್ದಿಷ್ಟ ಮಾನಸಿಕ ಸಾಮರ್ಥ್ಯಗಳು. ಈ ಸಿದ್ಧಾಂತದ ಪ್ರಕಾರ ನಮ್ಮ ಎಲ್ಲಾ ಬೌದ್ಧಿಕ ಚಟುವಟಿಕೆಗಳು 'g'ಎಂದು ಗುರುತಿಸಲ್ಪಡುವ ಒಂದು ಸಾಮಾನ್ಯ ಕಾರಕವನ್ನು ಒಳಗೊಂಡಿರುತ್ತವೆ. ಅದನ್ನು ಮಾನಸಿಕ ಶಕ್ತಿ ಎಂದು ಕರೆಯುವರು. ಮಾನವನ ವಿವಿಧ ಚಟುವಟಿಕೆಗಳ ಮಧ್ಯೆ ಸಂಬಂಧ ಕಲ್ಪಿಸುವುದೇ 'g' ಕಾರಕ, ಯಾವುದೇ ಎರಡು ಬೌದ್ಧಿಕ ಚಲಕಗಳ ಮಧ್ಯೆ ಧನಾತ್ಮಕ ಸಹಸಂಬಂಧವನ್ನು ಸೂಚಿಸುವುದೇ 'g' ಕಾರಕ. ಈ ಸಿದ್ಧಾಂತದಲ್ಲಿ ಪ್ರತಿಪಾದಿತವಾಗಿರುವ ಮತ್ತೊಂದು ಅಂಶ 's' ಕಾರಕ ಎಂದು ಗುರುತಿಸಲ್ಪಡುವ ಹಲವಾರು ನಿರ್ದಿಷ್ಟ ಕಾರಕಗಳು. ಪ್ರತಿಯೊಂದು ನಿರ್ದಿಷ್ಟಕಾರಕ ಒಂದು ನಿರ್ದಿಷ್ಟ ಸಾಮರ್ಥ್ಯವಾಗಿದ್ದು ನಿರ್ದಿಷ್ಟ ಕ್ರಿಯೆಗೆ ಕಾರಣವಾಗುತ್ತದೆ.

'g' ಮತ್ತು 's' ಕಾರಕಗಳಿಗಿರುವ ಸಂಬಂಧವನ್ನು ಈ ಕೆಳಗಿನ ಚಿತ್ರದಲ್ಲಿ ಕಾಣಬಹುದಾಗಿದೆ.




**'g' ಮತ್ತು 's' ಕಾರಕಗಳ ನಡುವಿನ ಸಂಬಂಧ ಸೂಚಿಸುವ ಚಿತ್ರ**

**2. ಪ್ರಾಥಮಿಕ ಮಾನಸಿಕ ಸಾಮರ್ಥ್ಯಗಳ ಸಿದ್ಧಾಂತ ಅಥವಾ ಬುದ್ಧಿಶಕ್ತಿಯ ಸಮೂಹ ಕಾರಕ ಸಿದ್ಧಾಂತ**

ಅಮೆರಿಕನ್ ಮನೋವಿಜ್ಞಾನಿ ಲೂಯಿಸ್ ಥರ್ಸ್ಟನ್‌ರವರು 1938 ರಲ್ಲಿ ಬುದ್ಧಿಶಕ್ತಿಯ ಏಳು ಪ್ರಮುಖ ಅಂಶಗಳನ್ನೊಳಗೊಂಡ ಪ್ರಾಥಮಿಕ, ಮಾನಸಿಕ ಸಾಮರ್ಥ್ಯಗಳ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇವರ ಪ್ರಕಾರ ಬುದ್ಧಿಶಕ್ತಿ ಕೇವಲ 'g' ಎಂಬ ಸಾಮಾನ್ಯ ಮಾನಸಿಕ ಸಾಮರ್ಥ್ಯವನ್ನು ಹೊಂದಿರದೆ, ಅಷ್ಟೇ ಪ್ರಮುಖವಾದಂತಹ ಹಲವಾರು ಕಾರಕಗಳು ಅಥವಾ ಸಹಜ ಸಾಮರ್ಥ್ಯವನ್ನು ಹೊಂದಿರದೆ, ಅಷ್ಟೇ ಪ್ರಮುಖವಾದಂತಹ ಹಲವಾರು ಕಾರಕಗಳು ಅಥವಾ ಸಹಜ ಸಾಮರ್ಥ್ಯಗಳನ್ನೊಳಗೊಂಡಿದೆ. ಥರ್ಸ್ಟನ್‌ರವರು ಕಾರಕಗಳ ವಿಶ್ಲೇಷಣೆಯ ಆಧಾರದ ಮೇಲೆ ಏಳು ಪ್ರಾಥಮಿಕ ಮಾನಸಿಕ ಸಾಮರ್ಥ್ಯಗಳನ್ನು ಗುರ್ತಿಸಿರುತ್ತಾರೆ. ಈ ಏಳು ಸಾಮರ್ಥ್ಯಗಳು ಸಾಪೇಕ್ಷವಾಗಿ ಉಳಿದವುಗಳಿಂದ ಸ್ವತಂತ್ರವಾದ ಸಾಮರ್ಥ್ಯಗಳಾಗಿದ್ದು ಉಪ ಸಾಮರ್ಥ್ಯವನ್ನು ಹೊಂದಿವೆ ಎಂದು ಪ್ರತಿಪಾದಿಸಿದ್ದಾರೆ. ಆದ್ದರಿಂದ ಇದನ್ನು ಸಮೂಹ ಕಾರಕ ಸಿದ್ಧಾಂತ ಎಂದೂ ಸಹ ಕರೆಯಲಾಗುತ್ತದೆ. ಇವರು ಗುರ್ತಿಸಿದ ಏಳು ಪ್ರಾಥಮಿಕ ಮಾನಸಿಕ ಸಾಮರ್ಥ್ಯಗಳು ಈ ಕೆಳಕಂಡಂತಿವೆ.

Digitised by Bharatavani, CIIL

| | | |
|---|---|---|
| 1 | ಸಂಖ್ಯಾ ಸಾಮರ್ಥ್ಯ (N) | ಸಂಖ್ಯೆಗಳನ್ನು ವೇಗವಾಗಿ ಮತ್ತು ನಿಖರವಾಗಿ ಲೆಕ್ಕಾಚಾರ ಮಾಡುವ ಸಾಮರ್ಥ್ಯ |
| 2 | ಶಾಬ್ದಿಕ ಸಾಮರ್ಥ್ಯ (V) | ಶಬ್ದಗಳ ಅರ್ಥ ಗ್ರಹಣ ಸಾಮರ್ಥ್ಯ |
| 3 | ಸ್ಥಳಾವಕಾಶ ಸಂಬಂಧ (S) | ಆಕೃತಿ ಮತ್ತು ಅವಕಾಶ ಸಂಬಂಧಗಳನ್ನು ಮನಃಪಟಲದಲ್ಲಿ ಮೂಡಿಸಿಕೊಳ್ಳುವ ಸಾಮರ್ಥ್ಯ |
| 4 | ಸ್ಮೃತಿ (M) | ಸ್ಮೃತಿ ಪಟಲದಲ್ಲಿ ಸಂಗ್ರಹಿಸಿಕೊಂಡು ಅಗತ್ಯವಾದಾಗ ಪುನಃಸ್ಮರಿಸುವ ಸಾಮರ್ಥ್ಯ |
| 5 | ಪದಗಳ ನಿರರ್ಗಳತೆ (W) | ಪದಗಳನ್ನು ನಿರರ್ಗಳವಾಗಿ ಹೇಳುವ ಸಾಮರ್ಥ್ಯ |
| 6 | ತಾರ್ಕಿಕತೆ (R) | ವ್ಯಕ್ತಿಯು ತತ್ವ ಅಥವಾ ನಿಯಮಗಳನ್ನು ಪತ್ತೆ ಹಚ್ಚುವ ಸಾಮರ್ಥ್ಯ |
| 7 | ಪ್ರತ್ಯಾಕ್ಷಾನುಭವದ ವೇಗ (P) | ವಸ್ತುಗಳನ್ನು ನಿಖರವಾಗಿ ಗ್ರಹಿಸುವ ಸಾಮರ್ಥ್ಯ |

### 6) ಪ್ರತಿದರ್ಶಚಯನ ಸಿದ್ಧಾಂತ (Sampling Theory)

ಬ್ರಿಟಿಷ್ ಮನೋವಿಜ್ಞಾನಿ ಜಿ.ಹೆಚ್. ಥಾಮ್ಸನ್‌ರವರು 1939ರಲ್ಲಿ ಬುದ್ಧಿಶಕ್ತಿಯ ಚಯನ (Sampling) ಸಿದ್ಧಾಂತವನ್ನು ಪ್ರತಿಪಾದಿಸಿದರು. ಈ ಸಿದ್ಧಾಂತದ ಪ್ರಕಾರ ಮನಸ್ಸು ಹಲವಾರು ಸ್ವತಂತ್ರವಾದ ಮೂಲಾಂಶಗಳು ಅಥವಾ ಬಂಧಗಳಿಂದ ರಚಿಸಲ್ಪಟ್ಟಿದೆ. ಯಾವುದೇ ಒಂದು ನಿರ್ದಿಷ್ಟ ಪರೀಕ್ಷೆ ಅಥವಾ ಚಟುವಟಿಕೆಯಲ್ಲಿ ಹಲವಾರು ಬಂಧಗಳನ್ನು ಕಾಣಬಹುದು. ಎರಡು ಅಥವಾ ಹೆಚ್ಚಿನ ಪರೀಕ್ಷೆಗಳಲ್ಲಿ ಒಂದೇ ರೀತಿಯ ಬಂಧಗಳು ಬಳಕೆಯಾಗಿರುವುದನ್ನು ಕಾಣಬಹುದು ಮತ್ತು ಇವುಗಳಲ್ಲಿ ಒಂದು ಸಾಮಾನ್ಯ ಕಾರಕಾಂಶ ಇರುವುದು ಕಂಡು ಬರುತ್ತದೆ. ಕೆಲವು ಪರೀಕ್ಷೆಗಳಲ್ಲಿ ವಿವಿಧ ಬಂಧಗಳನ್ನು ಬಳಸಿರುವ ಸಾಧ್ಯತೆಯೂ ಇದೆ. ಇಂತಹ ಪರೀಕ್ಷೆಗಳಲ್ಲಿ ಸಾಮಾನ್ಯ ಅಂಶಗಳಿಗಿಂತ ನಿರ್ದಿಷ್ಟ ಅಂಶಗಳು ಕಂಡುಬರುತ್ತವೆ. ಈ ಸಿದ್ಧಾಂತದ ಪ್ರಕಾರ ಬೌದ್ಧಿಕ ಸಾಮರ್ಥ್ಯಗಳು ನಿರ್ದಿಷ್ಟ ಗುಂಪುಗಳಿಗೆ ಸಂಬಂಧಿಸಿರುತ್ತದೆ ಮತ್ತು ಬೌದ್ಧಿಕ ಸಾಮರ್ಥ್ಯಗಳು ಒಂದು ಸಾಮರ್ಥ್ಯದ ಮೇಲೆ ಅವಲಂಬಿಸಿರದೆ, ಸಮೂಹ ಸಾಮರ್ಥ್ಯಗಳ ಮೇಲೆ ಅವಲಂಬಿಸಿರುತ್ತದೆ.

ಈ ಚಯನ ಸಿದ್ಧಾಂತದಲ್ಲಿ ಥಾಮ್ಸನ್‌ರವರು ಹಲವಾರು ಸಿದ್ಧಾಂತಗಳ ದೃಷ್ಟಿಕೋನವನ್ನು ಒಟ್ಟುಗೂಡಿಸಿದ್ದಾರೆ. ಇದು ಮೇಲ್ನೋಟಕ್ಕೆ ಥಾರ್ನ್‌ಡೈಕ್‌ರವರ ಬಹುಕಾರಕ ಸಿದ್ಧಾಂತದಂತೆ ಕಂಡು ಬಂದರೂ ಸಹ ಸಾಮಾನ್ಯ ಕಾರಕದ ಪ್ರಾಯೋಗಿಕ ಉಪಯುಕ್ತತೆಗೆ ಹೆಚ್ಚು ಒತ್ತು ನೀಡುತ್ತದೆ.

ಜೆ.ಪಿ. ಗಿಲ್‌ಫೋರ್ಡ್

ಹೋವರ್ಡ್‌ಗಾರ್ಡನರ್

### ಬುದ್ಧಿಶಕ್ತಿಯ ಸಂರಚನಾ ಮಾದರಿ ಅಥವಾ ಮೂರು ಆಯಾಮಗಳ ಸಿದ್ಧಾಂತ

ಈ ಸಿದ್ಧಾಂತವನ್ನು ಜೆ.ಪಿ. ಗಿಲ್‌ಫರ್ಡ್‌ರವರು 1966ರಲ್ಲಿ ಸುಮಾರು 2 ದಶಕಗಳ ಕಾಲ ಅವರು ಕಂಡುಕೊಂಡಂತಹ ಬುದ್ಧಿಶಕ್ತಿಯ

ಸ್ಟರ್ನ್‌ಬರ್ಗ್



ರೇಮಂಡ್ ಕೆಟಲ್

ಕಾರಕಗಳ ವಿಶ್ಲೇಷಣೆಯ ಸಂಶೋಧನೆಯನ್ನಾಧರಿಸಿ ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಬುದ್ಧಿಶಕ್ತಿ ಮೂರು ಪ್ರಮುಖ ಆಯಾಮಗಳನ್ನು ಒಳಗೊಂಡಿದೆ. ಈ ಸಿದ್ಧಾಂತದ ಪ್ರಕಾರ ಅನೇಕ ನಿರ್ದಿಷ್ಟ ಬೌದ್ಧಿಕ ಸಾಮರ್ಥ್ಯಗಳ ವಿಶಿಷ್ಟ ಸಂಘಟನೆಯೇ ಬುದ್ಧಿಶಕ್ತಿ. ಇವರು ಪ್ರತಿಪಾದಿಸಿದ ಘನಾಕೃತಿ ಸಂರಚನಾ ಮಾದರಿಯಲ್ಲಿ ಬೌದ್ಧಿಕ ಸಾಮರ್ಥ್ಯಗಳ ಸಂಕ್ರಿಯೆಗಳು, (operative) ವಿಷಯ ವಸ್ತುಗಳು, (content) ಮತ್ತು ಉತ್ಪನ್ನಗಳು (product) ಎಂಬ ಮೂರು ಆಯಾಮಗಳನ್ನು ಕಾಣುತ್ತೇವೆ. ಈ ಸಿದ್ಧಾಂತ ಬೌದ್ಧಿಕ ಗುಣ ಲಕ್ಷಣಗಳನ್ನು ಮೂರು ಆಯಾಮಗಳಲ್ಲಿ ವ್ಯವಸ್ಥೆಗೊಳಿಸುತ್ತದೆ. ವ್ಯಕ್ತಿ ಯಾವ ರೀತಿ ಪ್ರತಿಕ್ರಿಯಿಸುತ್ತಾನೆ ಎಂಬುದನ್ನು ಸಂಕ್ರಿಯೆಗಳು ಪ್ರತಿನಿಧಿಸಿದರೆ, ಯಾವುದರ ಮೇಲೆ ಪ್ರತಿಕ್ರಿಯಿಸುತ್ತಾನೆ ಎಂಬುದು ವಸ್ತುವಿನ ಸ್ವರೂಪವನ್ನು ವಿಷಯ ವಸ್ತುಗಳು ಪ್ರತಿನಿಧಿಸುತ್ತವೆ. ಪ್ರತಿಕ್ರಿಯಿಸುವವರಿಂದ ಮಾಹಿತಿ ಹೇಗೆ ಸಂಸ್ಕರಿಸಲ್ಪಟ್ಟು ಫಲಿತಗೊಳ್ಳುತ್ತದೆ ಎಂಬುದನ್ನು ಉತ್ಪನ್ನಗಳು ಪ್ರತಿನಿಧಿಸುತ್ತವೆ.

ಸಂಕ್ರಿಯೆಗಳ ಆಧಾರದ ಮೇಲಿನ ವರ್ಗೀಕರಣದಲ್ಲಿ ಆರು ಪ್ರಮುಖ ಬೌದ್ಧಿಕ ಸಾಮರ್ಥ್ಯಗಳ ಗುಂಪುಗಳನ್ನು ಕಾಣುತ್ತೇವೆ. ಅವುಗಳೆಂದರೆ – ಜ್ಞಾನ ಗ್ರಹಿಕೆ, ಸ್ಮೃತಿ (ದಾಖಲೆ), ಸ್ಮೃತಿ (ಧಾರಣೆ), ಬಹುಮುಖಿ ಚಿಂತನೆ, ಏಕಮುಖ ಚಿಂತನೆ ಮತ್ತು ಮೌಲ್ಯ ನಿರ್ಧಾರಗಳು. ವಿಷಯ ವಸ್ತುವಿನ ಆಧಾರದ ಮೇಲೆ ದೃಶ್ಯರೂಪ, ಶ್ರವಣರೂಪ, ಸಾಂಕೇತಿಕ ರೂಪ, ಶಬ್ದಾರ್ಥರೂಪ ಮತ್ತು ವರ್ತನಾರೂಪ ಎಂಬ ಐದು ಅಂಶಗಳನ್ನು ಕಾಣುತ್ತೇವೆ. ಒಂದು ನಿರ್ದಿಷ್ಟ ಸಂಕ್ರಿಯೆಯನ್ನು ಒಂದು ನಿರ್ದಿಷ್ಟ ವಿಷಯ ವಸ್ತುವಿಗೆ ಅನ್ವಯಿಸಿದಾಗ ಆರು ರೀತಿಯ ಉತ್ಪನ್ನಗಳು ಕಂಡು ಬರುತ್ತವೆ. ಉತ್ಪನ್ನದ ಆರು ಅಂಶಗಳೆಂದರೆ– ಘಟಕಗಳು, ವರ್ಗಗಳು, ಸಂಬಂಧಗಳು, ವ್ಯವಸ್ಥೆಗಳು, ಪರಿವರ್ತನೆಗಳು ಮತ್ತು ನಿಹಿತಾರ್ಥಗಳು.

ಈ ಮಾದರಿಯಲ್ಲಿ ಸೂಚಿಸಿರುವಂತೆ ಗಿಲ್‌ಫರ್ಡ್‌ರವರ ವರ್ಗೀಕರಣದಲ್ಲಿ 6x 5 x6 ವರ್ಗಕೋಣೆಗಳನ್ನು ಕಾಣುತ್ತೇವೆ.

Digitised by Bharatavani, CIIL




ಬುದ್ಧಿಶಕ್ತಿಯೆಂಬುದು 6x5 x6 = 180 ನಿರ್ದಿಷ್ಟ ಬೌದ್ಧಿಕ ಸಾಮರ್ಥ್ಯಗಳ ಸಂಘಟನೆಯಾಗಿದೆ ಎಂದು ಪ್ರತಿಪಾದಿಸಿದ್ದಾರೆ.

**II ಬುದ್ಧಿಶಕ್ತಿಯ ಸಮಕಾಲೀನ ಸಿದ್ಧಾಂತಗಳು**

ಬುದ್ಧಿಶಕ್ತಿಯ ಸಮಕಾಲೀನ ಸಿದ್ಧಾಂತಗಳನ್ನು ಪ್ರತಿಪಾದಿಸಿದವರು ಬುದ್ಧಿಶಕ್ತಿಯನ್ನು ಒಂದು ಸೂಚ್ಯಂಕದಿಂದ ಅಳೆಯಬಹುದಾದ ಬೌದ್ಧಿಕ ಸಾಮರ್ಥ್ಯವೆಂಬುದನ್ನು ಒಪ್ಪುವುದಿಲ್ಲ. ಇವರು ಬುದ್ಧಿಶಕ್ತಿಯಲ್ಲಿನ ಹಲವಾರು ರೀತಿಯ ಬೌದ್ಧಿಕ ಸಾಮರ್ಥ್ಯಗಳನ್ನು ಪ್ರತಿಪಾದಿಸುತ್ತಾರೆ. ಇಂತಹ ವಿವಿಧ ರೀತಿಯ ಬುದ್ಧಿಶಕ್ತಿಗಳನ್ನು ಜನರು ತಮ್ಮ ದಿನನಿತ್ಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಬಳಸಿಕೊಳ್ಳುವುದನ್ನು ಕಾಣಬಹುದಾಗಿದೆ.

**ಬಹು ಬುದ್ಧಿಶಕ್ತಿಯ ಸಿದ್ಧಾಂತ (Theory of Multiple Intelligence)**

ಹೋವರ್ಡ್ ಗಾರ್ಡ್‌ನರ್ (1983) ರವರು ಮೂರು ಪ್ರಮುಖ ತತ್ವಗಳನ್ನಾಧರಿಸಿ ಬಹು ಬುದ್ಧಿಶಕ್ತಿಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಆ ತತ್ವಗಳೆಂದರೆ,

1) ಬುದ್ಧಿಶಕ್ತಿ ಎಂಬುದು ಒಂದು ಸಾಮರ್ಥ್ಯದಿಂದ ಕೂಡಿರುವುದಿಲ್ಲ, ಆದರೆ ಬಹು ಬುದ್ಧಿಶಕ್ತಿಗಳು ಕಂಡುಬರುತ್ತವೆ.
2) ಈ ಎಲ್ಲಾ ಬುದ್ಧಿಶಕ್ತಿಗಳು ಒಂದು ಇನ್ನೊಂದರಿಂದ ಸ್ವತಂತ್ರವಾಗಿರುತ್ತವೆ. ಅಂದರೆ ಒಬ್ಬ ವ್ಯಕ್ತಿ ಒಂದು ರೀತಿಯ ಬುದ್ಧಿಶಕ್ತಿಯಲ್ಲಿ ಉತ್ತಮವಾಗಿದ್ದರೆ, ಇನ್ನೊಂದು ರೀತಿಯ ಬುದ್ಧಿಶಕ್ತಿಯಲ್ಲಿಯೂ ಸಹ ಉತ್ತಮವಾಗಿರುತ್ತಾನೆಂದು ಹೇಳಲು ಸಾಧ್ಯವಿಲ್ಲ.
3) ವಿವಿಧ ರೀತಿಯ ಬುದ್ಧಿಶಕ್ತಿಗಳಲ್ಲಿ ಅನ್ಯೋನ್ಯ ಕ್ರಿಯೆಯನ್ನು ಕಾಣಬಹುದು. ಒಂದು ಸಮಸ್ಯೆಗೆ ಪರಿಹಾರ ವಿವಿಧ ರೀತಿಯ ಬುದ್ಧಿಶಕ್ತಿಗಳ ಅನ್ಯೋನ್ಯ ಕ್ರಿಯೆಯಿಂದ ದೊರೆಯಬಹುದು.

ಗಾರ್ಡ್‌ನರ್‌ರವರು 8 ರೀತಿಯ ಬುದ್ಧಿಶಕ್ತಿಗಳನ್ನು ಪ್ರತಿಪಾದಿಸಿದ್ದಾರೆ. ಆದರೆ ಎಲ್ಲಾ ವ್ಯಕ್ತಿಗಳಲ್ಲಿ ಈ ಬುದ್ಧಿಶಕ್ತಿಗಳು ಒಂದೇ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಒಂದು ನಿರ್ದಿಷ್ಟ ಸನ್ನಿವೇಶ ಅಥವಾ ಸಂದರ್ಭದಲ್ಲಿ ಒಂದು ಬುದ್ಧಿಶಕ್ತಿ ಇತರೇ ಬುದ್ಧಿಶಕ್ತಿಗಳಿಗಿಂತ ಪ್ರಧಾನವಾಗಿರುವುದು ಕಂಡುಬರುತ್ತದೆ.

**ಗಾರ್ಡ್‌ನರ್ ಪ್ರತಿಪಾದಿಸಿದ 8 ಬುದ್ಧಿಶಕ್ತಿಗಳು ಈ ಕೆಳಕಂಡಂತಿವೆ**

- **ಭಾಷಾ ಬುದ್ಧಿಶಕ್ತಿ:** ಇದು ಓದುವಿಕೆ, ಬರೆಯುವಿಕೆ, ಆಲಿಸುವಿಕೆ, ಮಾತನಾಡುವಿಕೆ, ಅರಿತುಕೊಳ್ಳುವಿಕೆ, ಇತ್ಯಾದಿಗಳಿಗೆ ಸಂಬಂಧಿಸಿದೆ. ಕವಿಗಳಲ್ಲಿ ಲೇಖಕರಲ್ಲಿ ಇತರೆಯವರಿಗಿಂತ ಈ ಸಾಮರ್ಥ್ಯ ಹೆಚ್ಚಾಗಿ ವ್ಯಕ್ತವಾಗುತ್ತದೆ.
- **ತಾರ್ಕಿಕ – ಗಣಿತದ ಬುದ್ಧಿಶಕ್ತಿ:** ಈ ರೀತಿಯ ಬುದ್ಧಿಶಕ್ತಿ ಗಣಿತದ ಸಮಸ್ಯೆ ಬಿಡಿಸುವಲ್ಲಿ ಅಮೂರ್ತ ಚಿಂತನೆ ಮತ್ತು ಸಂಕೇತಗಳ ಬಳಕೆಯ ಸಾಮರ್ಥ್ಯವನ್ನು ಒಳಗೊಳ್ಳುತ್ತದೆ. ವೈಜ್ಞಾನಿಕ ಕಾರ್ಯಗಳಲ್ಲಿ ಈ ಸಾಮರ್ಥ್ಯ ವ್ಯಕ್ತವಾಗುತ್ತದೆ.
- **ಅವಕಾಶೀಯ ಸಂಬಂಧದ ಬುದ್ಧಿಶಕ್ತಿ:** ಈ ರೀತಿಯ ಬುದ್ಧಿಶಕ್ತಿ ಅವಕಾಶೀಯ ಸಂಬಂಧಗಳನ್ನು ಕಲ್ಪಿಸಿಕೊಳ್ಳುವಲ್ಲಿ, ಮಾನಸಿಕ ಚಿತ್ರಣಗಳನ್ನು ರೂಪಿಸಿಕೊಳ್ಳುವಿಕೆ, ವರ್ಗಾವಣೆ ಮತ್ತು ಬಳಸಿಕೊಳ್ಳುವಿಕೆಯಲ್ಲಿ, ಅಂತರಿಕ್ಷಯಾನದಲ್ಲಿ ಕಂಡುಬರುತ್ತದೆ. ನಾವಿಕರು, ಇಂಜಿನಿಯರುಗಳು. ಶಸ್ತ್ರ ಚಿಕಿತ್ಸಾ ತಜ್ಞರು, ವಿಮಾನ ಚಾಲಕರು, ಶಿಲ್ಪಿಗಳು, ಕಲಾವಿದರು ಮುಂತಾದವರಲ್ಲಿ ಈ ರೀತಿಯ ಬುದ್ಧಿಶಕ್ತಿ ಉತ್ತಮವಾಗಿ ಬೆಳವಣಿಗೆಯಾಗಿರುವುದನ್ನು ಕಾಣಬಹುದು.
- **ಸಂಗೀತದ ಬುದ್ಧಿಶಕ್ತಿ:** ಈ ಬುದ್ಧಿಶಕ್ತಿ ಹೊಂದಿರುವ ವ್ಯಕ್ತಿಗಳು ಹಾಡುವಿಕೆಗೆ ಅಗತ್ಯವಾದ ರಾಗ, ತಾಳ ಮತ್ತು ಲಯಗಳು, ಸಂಗೀತದ ವಾದ್ಯಗಳನ್ನು ನುಡಿಸುವಿಕೆ, ರಾಗ ಸಂಯೋಜನೆ ಮತ್ತು ಸಂಗೀತದ ಪ್ರಶಂಸೆ ಮುಂತಾದವುಗಳಿಗೆ ಸಂವೇದನಾಶೀಲತೆಯನ್ನು ವ್ಯಕ್ತಪಡಿಸುತ್ತಾರೆ.
- **ದೈಹಿಕ–ಗತಿಸಂವೇದನಾತ್ಮಕ ಬುದ್ಧಿಶಕ್ತಿ:** ಈ ಬುದ್ಧಿಶಕ್ತಿಯು ನಾಟ್ಯ, ಕ್ರೀಡೆ, ಶಸ್ತ್ರ ಚಿಕಿತ್ಸೆ, ಕರ–ಕುಶಲತೆ ಮುಂತಾದ ಸಮನ್ವಯದಿಂದ ಕೂಡಿದ ಗತಿಶೀಲನಾ ಚಟುವಟಿಕೆಗಳಿಗೆ ಅಗತ್ಯವಾದ ಕೌಶಲಗಳು ಮತ್ತು ನೈಪುಣ್ಯತೆಯನ್ನು ಹೊಂದಿರುತ್ತದೆ.
- **ಅಂತರ ವ್ಯಕ್ತಿ ಸಂಬಂಧದ ಬುದ್ಧಿಶಕ್ತಿ:** ಇತರರ ಭಾವನೆಗಳು, ಪ್ರೇರಣೆಗಳು ಹಾಗೂ ವರ್ತನೆಗಳನ್ನು ಅರ್ಥ ಮಾಡಿಕೊಳ್ಳುವಿಕೆಯನ್ನು ಒಳಗೊಳ್ಳುತ್ತದೆ. ಇಂತಹ ಅಂತರ ವ್ಯಕ್ತಿ ಸಂಬಂಧದ ಸಾಮಾಜಿಕ ಬುದ್ಧಿಶಕ್ತಿ ಶಿಕ್ಷಕರು, ಮನೋತಜ್ಞರು, ರಾಜಕಾರಣಿಗಳು, ವ್ಯಾಪಾರಿಗಳು ಮತ್ತು ಧಾರ್ಮಿಕ ನಾಯಕರುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
- **ವ್ಯಕ್ತಿಯಂತರ್ಗತ ಬುದ್ಧಿಶಕ್ತಿ:** ಈ ಬುದ್ಧಿಶಕ್ತಿ ವ್ಯಕ್ತಿ ತನ್ನನ್ನು ತಾನು ಅರ್ಥಮಾಡಿಕೊಳ್ಳುವಿಕೆ ಮತ್ತು ಅನನ್ಯತೆಯನ್ನು ರೂಪಿಸಿಕೊಳ್ಳುವಿಕೆಗೆ ಸಂಬಂಧಿಸಿದೆ.
- **ನೈಸರ್ಗಿಕ ಬುದ್ಧಿಶಕ್ತಿ:** ಹೊರಗಿನ ಪ್ರಪಂಚದಲ್ಲಿರುವ ವ್ಯತ್ಯಾಸಗಳನ್ನು ಗುರುತಿಸುವಿಕೆ ಮತ್ತು ಪರಿಸರದಲ್ಲಿರುವ ಪ್ರಾಣಿ ಹಾಗೂ ಸಸ್ಯ ಪ್ರಭೇದಗಳನ್ನು ಗುರುತಿಸುವ ಸಾಮರ್ಥ್ಯಗಳನ್ನು ಒಳಗೊಳ್ಳುತ್ತದೆ. ನೈಸರ್ಗಿಕ ಬುದ್ಧಿಶಕ್ತಿ ಹೆಚ್ಚಾಗಿ ಬೇಟೆಗಾರರು, ರೈತರು ಪ್ರವಾಸಿಗರು ಮತ್ತು ಜೀವ ವಿಜ್ಞಾನದ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತದೆ.

**ಬುದ್ಧಿಶಕ್ತಿಯ ತ್ರಿ ಕವಲುಗಳ ಸಿದ್ಧಾಂತ (Triarchic Theory of Intelligence)**

ರಾಬರ್ಟ್ ಜೆ. ಸ್ಟರ್ನ್‌ಬರ್ಗ್ ರವರು 1985ರಲ್ಲಿ ಈ ಸಿದ್ಧಾಂತವನ್ನು ಪ್ರತಿಪಾದಿಸಿದರು. ಈ ಸಿದ್ಧಾಂತವು ಸಮಸ್ಯಾ ಪರಿಹಾರದಲ್ಲಿ ಒಳಗೊಳ್ಳುವ

Digitised by Bharatavani, CIIL

ಬೌದ್ಧಿಕ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಈ ಸಿದ್ಧಾಂತದ ಪ್ರಕಾರ ಬುದ್ಧಿಶಕ್ತಿಯು ಮೂರು ಉಪ ಘಟಕಾಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ, ಘಟಕಾಂಶಾಧಾರಿತ ಉಪಘಟಕ, ಅನುಭವಾಧಾರಿತ ಉಪಘಟಕ ಮತ್ತು ಸನ್ನಿವೇಶಾಧಾರಿತ ಉಪಘಟಕ.

1) **ಘಟಕಾಂಶಧಾರಿತ ಉಪಘಟಕ:** ಈ ಉಪಘಟಕ ಬುದ್ಧಿವಂತಿಕೆಯ ವರ್ತನೆಗೆ ಕಾರಣವಾದ ಆಂತರಿಕ ಮಾನಸಿಕ ಪ್ರಕ್ರಿಯೆಗಳನ್ನು ಅಥವಾ ಘಟಕಾಂಶಗಳನ್ನು ಒಳಗೊಳ್ಳುತ್ತದೆ. ಬುದ್ಧಿಶಕ್ತಿಯ ಈ ಘಟಕಾಂಶಗಳು ಮೂರು ರೀತಿಯ ಅಂಶಗಳನ್ನೊಳಗೊಂಡ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತವೆ.

- **ಅನನ್ಯ ಘಟಕಾಂಶಗಳು:** ಅನನ್ಯ ಘಟಕಾಂಶಗಳು ಕಾರ್ಯನಿರ್ವಾಹಕ ಪ್ರಕ್ರಿಯೆಗಳಾಗಿದ್ದು, ಯೋಜನೆಯ ವಿಧಾನಗಳನ್ನು ಪ್ರಗತಿಯ ನಿರ್ವಹಣೆ ಮತ್ತು ಸಮಸ್ಯಾ ಪರಿಹಾರಕ್ಕೆ ಅಗತ್ಯವಾದ ಆಂತರಿಕ ಮತ್ತು ಬಾಹ್ಯ ಸಂಪನ್ಮೂಲಗಳನ್ನು ಒಳಗೊಳ್ಳುತ್ತವೆ.

- **ಕಾರ್ಯಕ್ಷಮತೆಯ ಘಟಕಾಂಶಗಳು:** ಒಂದು ಸಮಸ್ಯೆ ಪರಿಹರಿಸುವಲ್ಲಿ ಅಥವಾ ಕಾರ್ಯ ನಿರ್ವಹಿಸುವಲ್ಲಿ ಬಳಕೆಯಾಗುವ ಪ್ರಕ್ರಿಯೆಗಳನ್ನು ಕಾರ್ಯಕ್ಷಮತೆಯ ಘಟಕಾಂಶಗಳು ಎನ್ನುವರು. ಈ ಘಟಕಾಂಶಗಳನ್ನು ಪ್ರಸ್ತುತ ಇರುವ ಬುದ್ಧಿಶಕ್ತಿ ಪರೀಕ್ಷೆಗಳ ಸಹಾಯದಿಂದ ಅಳೆಯಬಹುದಾಗಿದೆ.

- **ಜ್ಞಾನ ಗಳಿಕೆಯ ಘಟಕಾಂಶಗಳು:** ವ್ಯಕ್ತಿಯ ಕಲಿಕೆಯಲ್ಲಿ ಬಳಕೆಯಾಗುವ ಪ್ರಕ್ರಿಯೆಗಳನ್ನು ಒಳಗೊಳ್ಳುತ್ತವೆ.

2) **ಅನುಭವಾಧಾರಿತ ಉಪಘಟಕ:** ವ್ಯಕ್ತಿಯ ಆಂತರಿಕ ಮಾನಸಿಕ ಜಗತ್ತು ಮತ್ತು ಹೊರಗಿನ ಬಾಹ್ಯ ಜಗತ್ತಿನೊಡನೆ ಸಂಬಂಧ ಕಲ್ಪಿಸುತ್ತದೆ. ಈ ಉಪಘಟಕದಲ್ಲಿ ಒಬ್ಬ ವ್ಯಕ್ತಿ ಅನುಭವ ಪಡೆಯುವಲ್ಲಿ ಬುದ್ಧಿಶಕ್ತಿಯ ಪ್ರಭಾವ ಮತ್ತು ಬುದ್ಧಿಶಕ್ತಿಯ ಮೇಲೆ ವ್ಯಕ್ತಿಯ ಪರಿಸರದೊಂದಿಗಿನ ಅನ್ಯೋನ್ಯ ಕ್ರಿಯೆಯ ಪ್ರಭಾವವನ್ನು ಕಾಣಬಹುದು. ಈ ಘಟಕ ಬುದ್ಧಿಶಕ್ತಿಯ ಪರಿಕಲ್ಪನೆಗೆ ಸೃಜನಶೀಲತೆಯ ಅಂಶವನ್ನು ಸೇರಿಸುತ್ತದೆ. ಒಬ್ಬ ಸೃಜನಾತ್ಮಕ ಬುದ್ಧಿವಂತ ವ್ಯಕ್ತಿ ಒಂದು ಬುದ್ಧಿಶಕ್ತಿ ಪರೀಕ್ಷೆಯಲ್ಲಿ ಉತ್ತಮ ಕಾರ್ಯ ಸಾಧನೆ ತೋರಿಸದಿರಬಹುದು. ಆದರೆ ತನ್ನ ಅನುಭವಗಳನ್ನು ಕ್ರೋಡೀಕರಿಸಿ ಹೊಸದಾದ ಮೂಲ ವಿಚಾರಗಳನ್ನು ಉತ್ಪಾದಿಸಿ ಮುನ್ನಡೆಯಬಲ್ಲ.

ಇನ್ನೊಂದು ಅನುಭವಾಧಾರಿತ ಬುದ್ಧಿಶಕ್ತಿಯ ಅಂಶವೆಂದರೆ ನಿಯತ ಕ್ರಮದ ಅಥವಾ ದಿನನಿತ್ಯದ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಾಮರ್ಥ್ಯ. ಓದುವಿಕೆಯಲ್ಲಿ ಹೆಚ್ಚಿನ ತೊಂದರೆಯಿಲ್ಲದೆ ನಿರಂತರವಾಗಿ ಓದುವುದು, ಅನುಭವದ ಆಧಾರದ ಮೇಲೆ ಸಂಗೀತದ ವಾದ್ಯಗಳನ್ನು ನುಡಿಸುವುದು, ಇತ್ಯಾದಿ ಈ ರೀತಿಯ ಚಟುವಟಿಕೆಗಳಿಗೆ ಉದಾಹರಣೆಗಳಾಗಿವೆ.

3) **ಸನ್ನಿವೇಶಾಧಾರಿತ ಉಪಘಟಕ:** ಈ ಉಪಘಟಕವು ಜನರು ತಮ್ಮ ಪರಿಸರವನ್ನು ಪರಿಣಾಮಕಾರಿಯಾಗಿ ರೂಪಿಸಿಕೊಳ್ಳುವಿಕೆಯನ್ನು ವಿವಿಧ ಸನ್ನಿವೇಶಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವಿಕೆಯನ್ನು ಮತ್ತು ತಮ್ಮಲ್ಲಿ ದೊರೆಯುವ ಸಂಪನ್ಮೂಲಗಳನ್ನು ಬಳಕೆ ಮಾಡಿಕೊಳ್ಳುವಿಕೆಯನ್ನು ಒಳಗೊಳ್ಳುತ್ತದೆ. ಸನ್ನಿವೇಶಾಧಾರಿತ ಬುದ್ಧಿಶಕ್ತಿ 'ಸನ್ನಿವೇಶಕ್ಕನುಗುಣವಾಗಿ ಚಾಕಚಕ್ಯತೆ ತೋರುವವರು' ಅಥವಾ 'ಚುರುಕು ಬುದ್ಧಿ'ಯವರನ್ನು ಪ್ರತಿನಿಧಿಸುತ್ತದೆ. ಇದು ವ್ಯಕ್ತಿಯ ಪರಿಣಾಮಕಾರಿಯಾದ ಸ್ವಯಂ ನಿರ್ವಹಣೆ ಮತ್ತು ಅವನ ದೈನಂದಿನ ಜೀವನದ ವ್ಯವಹಾರಗಳ ಪ್ರಾಯೋಗಿಕ ನಿರ್ವಹಣೆಯನ್ನು ಸೂಚಿಸುತ್ತದೆ. ಸನ್ನಿವೇಶಾಧಾರಿತ ಬುದ್ಧಿಶಕ್ತಿಯನ್ನು ಹೆಚ್ಚಾಗಿ ಹೊಂದಿರುವ ಜನರು ಹೆಚ್ಚಾಗಿ ಪ್ರಾಯೋಗಿಕವಾಗಿರುತ್ತಾರೆ ಮತ್ತು ಜೀವನದ ಯಾವುದೇ ಸನ್ನಿವೇಶಗಳಿಗೆ ತಕ್ಷಣ ಹೊಂದಾಣಿಕೆ ಮಾಡಿಕೊಳ್ಳಬಲ್ಲರು. ಇಂತಹ ವ್ಯಕ್ತಿಗಳು ಯೋಜನೆಯ ಅನುಷ್ಠಾನ, ಬಳಕೆ, ಅನ್ವಯ ಮತ್ತು ಸಂಬಂಧಗಳನ್ನು ಕಂಡುಕೊಳ್ಳುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ.




**ಚಿತ್ರ: ಸ್ಟರ್ನ್‌ಬರ್ಗ್‌ರವರ ತ್ರಿ ಕವಲುಗಳ ಬುದ್ಧಿಶಕ್ತಿ ಸಿದ್ಧಾಂತ**

Digitised by Bharatavani, CIIL




### ಕೆಟೆಲ್‌ರವರ ಬುದ್ಧಿಶಕ್ತಿ ಸಿದ್ಧಾಂತ

ರೇಮಂಡ್ ಕೆಟೆಲ್‌ರವರು 1963ರಲ್ಲಿ ತಮ್ಮ ಬುದ್ಧಿಶಕ್ತಿ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇವರು ಸ್ಪಿಯರ್‌ಮನ್‌ರವರ ಸಾಮಾನ್ಯ ಬುದ್ಧಿಶಕ್ತಿ (g) ಯನ್ನು ಎರಡು ವಿಭಿನ್ನ ಉಪವಿಧಗಳಾಗಿ ವಿಂಗಡಿಸಿದ್ದಾರೆ. ಆದರೆ ಇವುಗಳ ಮಧ್ಯೆ 0.50 ಸಹಸಂಬಂಧವನ್ನು ಕಾಣಬಹುದಾಗಿದೆ. ಇವುಗಳನ್ನು ಕೆಟೆಲ್‌ರವರು (gf) ಪ್ರವಹಿಸುವ ಬುದ್ಧಿಶಕ್ತಿ ಮತ್ತು gc ಸ್ಫಟಿಕಗೊಂಡ ಬುದ್ಧಿಶಕ್ತಿ ಎಂದು ಗುರುತಿಸಿದ್ದಾರೆ.

### ಪ್ರವಹಿಸುವ ಬುದ್ಧಿಶಕ್ತಿ (gf) (Fluid Intelligence)

ಪ್ರವಹಿಸುವ ಬುದ್ಧಿಶಕ್ತಿ, ಸೃಜನಾತ್ಮಕ ಆಲೋಚನಾ ಸಾಮರ್ಥ್ಯ, ಅಮೂರ್ತ ಚಿಂತನಾ ಸಾಮರ್ಥ್ಯ, ದತ್ತಾಂಶಗಳನ್ನು ಅರ್ಥೈಸುವುದು ಮತ್ತು ಸಂಬಂಧಗಳನ್ನು ಅರ್ಥಮಾಡಿಕೊಳ್ಳುವಿಕೆಯನ್ನು ಒಳಗೊಳ್ಳುತ್ತದೆ. ಇದನ್ನು ಸಾದೃಶ್ಯ ಮಾದರಿ ಮತ್ತು ವರ್ಗೀಕರಣ ಮಾದರಿ ಸಮಸ್ಯೆಗಳಿಂದ ಅಳೆಯಬಹುದು. ಇದು ಅನುವಂಶೀಯತೆಯಿಂದ ಪ್ರಭಾವಿತವಾಗಿರುತ್ತದೆ. ನಾವೀನ್ಯವಾದ ಸಮಸ್ಯಾ ಪರಿಹಾರ ಸನ್ನಿವೇಶಗಳನ್ನು ಯಶಸ್ವಿಯಾಗಿ ನಿಭಾಯಿಸುವ ಸಾಮರ್ಥ್ಯವನ್ನು ಪ್ರವಹಿಸುವ ಬುದ್ಧಿಶಕ್ತಿ ಎನ್ನುವರು. ಇಂತಹ ಸನ್ನಿವೇಶಗಳಲ್ಲಿ ಅವರ ಹಿಂದಿನ ಅನುಭವ ಯಾವುದೇ ರೀತಿಯ ಪರಿಹಾರವನ್ನು ನೀಡುವುದಿಲ್ಲ. ಈ ಬುದ್ಧಿಶಕ್ತಿ ಕ್ರಿಯಾತ್ಮಕ ಅಲ್ಪಕಾಲದ ಸ್ಮೃತಿಯ ಮೇಲೆ ಅವಲಂಬಿಸಿರುತ್ತದೆ.

### ಘನೀಕೃತ ಬುದ್ಧಿಶಕ್ತಿ (Cg) (Crystallized Intelligence)

ಘನೀಕೃತ ಬುದ್ಧಿಶಕ್ತಿ ವ್ಯಕ್ತಿಯು ಕಲಿತ ಮತ್ತು ಅನುಭವದಿಂದ ಪಡೆದ ಅಂಶಗಳನ್ನು ಒಳಗೊಳ್ಳುತ್ತದೆ. ಇದು ಪರಿಸರದಿಂದ ಹೆಚ್ಚಾಗಿ ಪ್ರಭಾವಿತವಾಗುತ್ತದೆ. ಪ್ರಸ್ತುತ ಸಮಸ್ಯೆಗಳಿಗೆ ಹಿಂದೆ ಪಡೆದ ಜ್ಞಾನವನ್ನು ಅನ್ವಯಿಸಿಕೊಳ್ಳುವ ಸಾಮರ್ಥ್ಯವನ್ನು ಘನೀಕೃತ ಬುದ್ಧಿಶಕ್ತಿ ಎನ್ನುವರು.

ಈ ಬುದ್ಧಿಶಕ್ತಿಯನ್ನು ಪದಸಂಪತ್ತಿನ ಪರೀಕ್ಷೆ ಮತ್ತು ಸಾಮಾನ್ಯ ಮಾಹಿತಿ ಪರೀಕ್ಷಿಸುವ ಅಂಶಗಳ ಸಹಾಯದಿಂದ ಅಳೆಯಬಹುದಾಗಿದೆ. ಘನೀಕೃತ ಬುದ್ಧಿಶಕ್ತಿ ಹಿಂದೆ ಕಲಿತಂತಹ ಮಾಹಿತಿ ಮತ್ತು ದೀರ್ಘಕಾಲದ ಸ್ಮೃತಿಯಲ್ಲಿ ಶೇಖರಣೆಗೊಂಡಿರುವ ಅಂಶಗಳನ್ನು ಜ್ಞಾಪಿಸಿಕೊಳ್ಳುವ ಅಥವಾ ಪುನಃ ಸ್ಮರಣೆಗೆ ತಂದುಕೊಳ್ಳುವ ಸಾಮರ್ಥ್ಯದ ಮೇಲೆ ಅವಲಂಬಿಸಿದೆ.

ನಾವು ಬಾಲ್ಯದಲ್ಲಿ ಹೆಚ್ಚಾಗಿ ಸನ್ನಿವೇಶಗಳನ್ನು ಮೊದಲನೇ ಬಾರಿ ಎದುರಿಸುವ ಸಂದರ್ಭದಲ್ಲಿ ಪ್ರವಹಿಸುವ ಬುದ್ಧಿಶಕ್ತಿಯನ್ನು ಬಳಸಿಕೊಳ್ಳುತ್ತೇವೆ. ಕ್ರಮೇಣ ಅನುಭವಗಳು, ಜ್ಞಾನಾರ್ಜನೆ ಹೆಚ್ಚಾದಂತೆ ಅವುಗಳನ್ನು ದೀರ್ಘಕಾಲದ ಸ್ಮೃತಿಯಲ್ಲಿ ಶೇಖರಿಸಿಕೊಳ್ಳುತ್ತಾ ಹೋದಂತೆ ಜೀವನದ ನಂತರದ ಸನ್ನಿವೇಶಗಳಲ್ಲಿ ಸಮಸ್ಯಾ ಪರಿಹಾರಕ್ಕೆ ಘನೀಕೃತ ಬುದ್ಧಿಶಕ್ತಿಬಳಸಿಕೊಳ್ಳುತ್ತೇವೆ. ವ್ಯಕ್ತಿಯಲ್ಲಿರುವ ಘನೀಕೃತ ಬುದ್ಧಿಶಕ್ತಿಗಿಂತ ಮೊದಲೇ ಪ್ರವಹಿಸುವ ಬುದ್ಧಿಶಕ್ತಿ ಕ್ಷೀಣಿಸುತ್ತಾ ಬರುತ್ತದೆ. ಆದರೆ 70ನೇ ವಯಸ್ಸಿನ ನಂತರ ಎರಡೂ ಕ್ರಮೇಣ ಕ್ಷೀಣಿಸುವುದನ್ನು ಕಾಣಬಹುದಾಗಿದೆ.

– ಎಚ್.ವಿ.ವಾ.

### ಬೆಳವಣಿಗೆ ಮತ್ತು ವಿಕಾಸ

ವ್ಯಕ್ತಿಯ ವ್ಯಕ್ತಿತ್ವದ ವಿವಿಧ ಹಂತಗಳಲ್ಲಾಗುವ ಬದಲಾವಣೆಗಳಲ್ಲಿ ಎರಡು ವಿಧ: ಪರಿಮಾಣಾತ್ಮಕ ಮತ್ತು ಗುಣಾತ್ಮಕ ಬದಲಾವಣೆಗಳು, ದೇಹದ ಎತ್ತರ, ಗಾತ್ರ, ತೂಕ ಮೊದಲಾದವುಗಳಲ್ಲಾಗುವ ಬದಲಾವಣೆಯನ್ನು ಬೆಳವಣಿಗೆ ಎನ್ನುವರು. ಈ ಬೆಳವಣಿಗೆಯೊಂದಿಗೆ ಅವುಗಳ ಕಾರ್ಯ ಸಾಮರ್ಥ್ಯಗಳ ಗುಣಮಟ್ಟದಲ್ಲಾಗುವ ಪರಿವರ್ತನೆಯನ್ನು ವಿಕಾಸ ಎನ್ನುವರು. ಪರಿಪಕ್ವನ ಮತ್ತು ಅನುಭವಗಳ ಪರಿಣಾಮವಾಗಿ ಉಂಟಾಗುವ ಪ್ರಗತಿಪರ ಸರಣೀಕೃತ ಬದಲಾವಣೆಗಳನ್ನು ವಿಕಾಸ ಎನ್ನುವರು. ಅರ್ನಾಲ್ಡ್ ಗೆಸ್ಸೆಲ್ "ಬೆಳವಣಿಗೆಯಲ್ಲಿ ದೈಹಿಕ ಬದಲಾವಣೆಗಳು ಅತಿ ಪ್ರಮುಖ. ಪೂರ್ವನಿರ್ಧಾರಿತವಾಗಿ ರೂಪಿತವಾದಂತೆ ಹಸುಳೆತನದಿಂದ ಹದಿಹರೆಯದವರೆಗೆ ಆಗುವ ದೈಹಿಕ ಬದಲಾವಣೆಗಳು ಅನುವಂಶೀಯ ಗುಣಗಳಿಂದ ಹತೋಟಿಯಲ್ಲಿಡಲ್ಪಡುತ್ತದೆ. ಪರಿಪಕ್ವನವು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯಗಳನ್ನು ಸ್ವಾಭಾವಿಕವಾಗಿ ಹೊರಗೆಡವಬಹುದಾಗಿದೆ. ಮಾನವನು ಹಸುಳೆತನದಲ್ಲಿ ತೆವಳುವುದು, ಕುಳಿತುಕೊಳ್ಳುವುದು ಮತ್ತು ನಡೆಯುವುದು ಮುಂತಾದವುಗಳಲ್ಲಿ ವಿಕಾಸವು ಪರಿಪಕ್ವನದ ಪರಿಣಾಮವಾಗಿ ಕಂಡುಬರುತ್ತದೆ. ಉದಾಹರಣೆಗೆ, ಮಗುವು 4ನೇ ತಿಂಗಳಿನಲ್ಲಿ ಆಧಾರದಿಂದ ಕುಳಿತುಕೊಳ್ಳುತ್ತಾನೆ. ಕ್ರಮೇಣ ಅಭ್ಯಾಸವಾಗಿ 6ನೇ ತಿಂಗಳಿಗೆ ಆಧಾರವಿಲ್ಲದೆ ಕುಳಿತುಕೊಳ್ಳ ಬಲ್ಲವನಾಗುತ್ತಾನೆ. 10ನೇ ತಿಂಗಳಿನಲ್ಲಿ ಆಧಾರದಿಂದ ನಿಂತುಕೊಳ್ಳ ಬಲ್ಲವನಾಗುತ್ತಾನೆ. ಈ ಕ್ರಿಯೆಗಳ ಕಲಿಕೆಯಲ್ಲಿ ವಿಶೇಷ ತರಬೇತಿ ಅಗತ್ಯವಿಲ್ಲ, ಆದರೆ ಪರಿಸರದ ಪ್ರಭಾವಗಳನ್ನು ನಿಯಂತ್ರಿಸಿ ಅವಕಾಶಗಳನ್ನು ಕಡಿಮೆ ಮಾಡಿದಾಗ ವಿಕಾಸ ನಿಧಾನವಾಗಬಹುದು. ಪರಿಪಕ್ವತೆಯು ವ್ಯಕ್ತಿಯನ್ನು ಸಿದ್ಧಗೊಳಿಸುತ್ತದೆ ಹಾಗೂ ಅವನ ವರ್ತನೆಯ ವಿನ್ಯಾಸಗಳನ್ನು ಮತ್ತು ಕ್ರಮಬದ್ಧತೆಯನ್ನು ನಿರ್ಧರಿಸುತ್ತದೆ. ಮಗು ತನ್ನ ಸುತ್ತಮುತ್ತಲಿನ

Digitised by Bharatavani, CIIL

ಪರಿಸರದೊಂದಿಗೆ ಅನ್ಯೋನ್ಯ ಕ್ರಿಯೆಯಿಂದ ಪಡೆಯುವ ಒಟ್ಟು ಕಲಿಕಾ ಅನುಭವಗಳನ್ನು ವಿಕಾಸ" ಎನ್ನುತ್ತಾರೆ. ಎಲಿಜಬೆತ್ ಬಿ. ಹರಲಾಕ್, (1975) ರವರು ಬೆಳೆವಣಿಗೆಯನ್ನು 'ಮೂಲತಃ ಪರಸ್ಪರ ವಿರುದ್ಧವಾದ ಎರಡು ಪ್ರಕ್ರಿಯೆಗಳು ಜೀವನದುದ್ದಕ್ಕೂ ಏಕಕಾಲದಲ್ಲಿ ಮಾನವನ ವಿಕಾಸದಲ್ಲಿ ನಡೆಯುತ್ತಾ ಇರುತ್ತದೆ. ಇದೇ ಬೆಳೆವಣಿಗೆ ಮತ್ತು ಕ್ಷಯಿಸುವಿಕೆ. ಎಂದು ವ್ಯಾಖ್ಯಾನಿಸಿದ್ದಾರೆ.

ಹರ್ಲಾಕ್‌ರವರು 'ವ್ಯಕ್ತಿಯ ಹೊಸ ಸಾಮರ್ಥ್ಯಗಳು ಮತ್ತು ಹೊಸ ಲಕ್ಷಣಗಳು ರೂಪುಗೊಳ್ಳಲು ಕಾರಣವಾಗುವ ಪಕ್ವತೆಯನ್ನು ಸಾಧಿಸುವತ್ತ ಆಗುವ ಬದಲಾವಣೆಗಳ ಸರಣಿಯೇ ವಿಕಾಸ' ಎಂದು ಹೇಳಿದ್ದಾರೆ. ಫ್ರಾಂಕ್‌ರವರು ಬೆಳೆವಣಿಗೆ ಮತ್ತು ವಿಕಾಸವನ್ನು 'ಕೋಶಗಳ ಸಂಖ್ಯೆಯ ಹೆಚ್ಚಳ ಬೆಳೆವಣಿಗೆ, ಜೀವಿಯಲ್ಲಾಗುವ ಸಮಗ್ರ ಬದಲಾವಣೆಯೇ ವಿಕಾಸ' ಎಂದಿದ್ದಾರೆ.

ಗೆಸೆಲ್‌ರವರು 'ಯಾವುದೇ ವ್ಯಕ್ತಿಯಲ್ಲಿ ಸುವ್ಯವಸ್ಥಿತ ಹಾಗೂ ಸುಸಂಬದ್ಧವಾದ ರೀತಿಯಲ್ಲಿ ಉಂಟಾಗುವ ಪರಿವರ್ತನೆ ಸರಣಿಗೆ ವಿಕಾಸ' ಎಂದು ವ್ಯಾಖ್ಯಾನಿಸಿದ್ದಾರೆ.

| ಬೆಳೆವಣಿಗೆ | ವಿಕಾಸ |
|---|---|
| • ಪರಿಮಾಣಾತ್ಮಕ ಬದಲಾವಣೆ | • ಗುಣಾತ್ಮಕ ಬದಲಾವಣೆ. |
| • ಪ್ರಾರಂಭದಲ್ಲಿ ಶೀಘ್ರ ಗತಿ, ಅನಂತರ ನಿಧಾನಗತಿಯ ಬದಲಾವಣೆ | • ಪ್ರೌಢಾವಸ್ಥೆಯಲ್ಲಿ ಶೀಘ್ರಗತಿಯಲ್ಲಿ ಸಾಗಿ ನಂತರ ಸ್ಥಿರವಾಗುತ್ತದೆ. |
| • ಜೀವನದುದ್ದಕ್ಕೂ ಸಾಗುವ ಪ್ರಕ್ರಿಯೆ ಅಲ್ಲ. | • ನಿರಂತರ ಬದಲಾವಣೆ |
| • ಎಲ್ಲಾ ಕಾಲಕ್ಕೂ ಸಮನಾಗಿಲ್ಲ. | • ನಿರ್ದಿಷ್ಟ ವ್ಯತ್ಯಾಸಗಳು ಕಂಡುಬರುತ್ತದೆ. |
| • ಬೆಳೆವಣಿಗೆ ಆದಂತೆ ವಿಕಾಸ ಆಗಬಹುದು ಆಗದೆಯೂ ಇರಬಹುದು. | • ಬೆಳೆವಣಿಗೆ ಆಗದಿದ್ದರೂ ವಿಕಾಸ ಮುಂದುವರೆಯುತ್ತದೆ. |
| • ತರಬೇತಿಯಿಂದ ಬದಲಾವಣೆ ಸಾಧ್ಯವಿಲ್ಲ. | • ತರಬೇತಿಯಿಂದ ಇಚ್ಛಿತ ರೀತಿಯ ವಿಕಾಸ ಪಡೆಯಬಹುದು. |
| • ಅಳತೆ ಮಾಪನದಿಂದ ಅಳೆಯಬಹುದು. | • ಅಳತೆಯ ಮಾಪನದಿಂದ, ವಿಕಾಸವನ್ನು ಅಳೆಯಲು ಸಾಧ್ಯವಿಲ್ಲ. |
| • ಬೆಳೆವಣಿಗೆ ನಿಯಂತ್ರಿಸಲು ಸಾಧ್ಯವಿಲ್ಲ, ಗರಿಷ್ಠ ಮಟ್ಟ ತಲುಪುತ್ತಾನೆ. | • ಪರಿಸರದ ಪ್ರಭಾವದಿಂದ ವಿಕಾಸವನ್ನು ನಿಯಂತ್ರಿಸಬಹುದು. |

ಪಿಯಾಜೆರವರು ಬೆಳೆವಣಿಗೆ ಮತ್ತು ವಿಕಾಸವು ಪ್ರಮುಖವಾಗಿ 4 ಮೂಲ ಅಂಶಗಳನ್ನು ಒಳಗೊಂಡಿದೆ ಎಂದು ವ್ಯಾಖ್ಯಾನಿಸಿದ್ದಾರೆ. ಅವುಗಳೆಂದರೆ;

- ಪರಿಪಕ್ವತೆ
- ಅನುಭವ
- ಸಾಮಾಜಿಕ ಸಂವಹನ (ಭಾಷೆ ಮೂಲಕ ಕಲಿಕೆ, ಪೋಷಕರಿಂದ ತರಬೇತಿ ಅಥವಾ ಶಾಲಾ ಶಿಕ್ಷಣ ನೀಡುವುದು)
- ಹೊಂದಾಣಿಕೆ

ಬೆಳೆವಣಿಗೆಯು ವ್ಯಕ್ತಿಯ ವಯಸ್ಸು, ಅಭಿರುಚಿ ಮತ್ತು ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ವ್ಯಕ್ತಿಯ ವಿಕಾಸ ಮತ್ತು ಬೆಳೆವಣಿಗೆಯ ಅನುವಂಶೀಯತೆ ಮತ್ತು ಪರಿಸರವನ್ನು ಅವಲಂಬಿಸಿರುತ್ತದೆ. ವ್ಯಕ್ತಿಯ ಸಾಮರ್ಥ್ಯದ ವಿಕಾಸಕ್ಕೆ ಪರಿಸರ ಸೂಕ್ತ ವೇದಿಕೆಯಾಗಿದೆ. ಬಾಲಿಶ ಹಂತದಿಂದ ಪರಿಪಕ್ವತೆಯೆಡೆಗೆ ವಿಕಾಸ ಹೊಂದುತ್ತಾ ಹೋಗುತ್ತದೆ. ಪ್ರತಿಯೊಂದು ಜೀವಿಯು ಒಂದು ನಿರ್ದಿಷ್ಟ ಅವಧಿಯಲ್ಲಿ, ಒಂದು ನಿರ್ದಿಷ್ಟ ವರ್ತನೆ, ಸಹಜ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವಂತೆ ಮಾನವನು ಸಹ ಸಹಜ ಪ್ರಕ್ರಿಯೆಯನ್ನು ವ್ಯಕ್ತಪಡಿಸುತ್ತಾನೆ.

**ವಿಕಾಸದ ಹಂತಗಳು:** ಪ್ರತಿಯೊಬ್ಬರೂ ವಿಕಾಸದ ಸರಣೀಕೃತ ಹಂತಗಳ ಮೂಲಕ ವಿವಿಧ ವಯೋಮಾನಗಳಲ್ಲಿ ವಿವಿಧ ವೇಗಗಳಲ್ಲಿ ಸಾಗುತ್ತಾರೆ. ಬೆಳೆವಣಿಗೆಯಲ್ಲಿ ಬದಲಾವಣೆಯ ಕ್ರಮವನ್ನು ಆಧರಿಸಿ ಜೀವನವನ್ನು ವಿವಿಧ ಅವಸ್ಥೆಗಳಾಗಿ (ಎಲಿಜಬೆತ ಬಿ. ಹರಲಾಕ್ –1975) ವಿಭಜಿಸಿದ್ದಾರೆ. ಪ್ರಸವ ಪೂರ್ವ, ಶೈಶವ, ಹಸುಳೆತನ, ಪೂರ್ವಬಾಲ್ಯ, ಲೈಂಗಿಕ ಪಕ್ವತೆಯ ಕಾಲ, ತಾರುಣ್ಯ, ವಯಸ್ಕತನ, ಮಧ್ಯ ವಯಸ್ಸು, ವೃದ್ಧಾಪ್ಯ ಅವಸ್ಥೆಗಳೆಂದು ವಿಂಗಡಣೆ ಮಾಡಿದ್ದಾರೆ.

| **ಅವಸ್ಥೆಯ ಹೆಸರು** | **ವಯಸ್ಸು** |
|---|---|
| ಪ್ರಸವ ಪೂರ್ವ | ಗರ್ಭಧಾರಣೆಯಿಂದ ಜನನದವರೆಗೆ |
| ಶೈಶವ | ಜನನದಿಂದ 2 ವಾರ |
| ಹಸುಳೆತನ | 2ನೇ ವಾರದಿಂದ–2ನೇ ವರ್ಷ |
| ಪೂರ್ವಬಾಲ್ಯ | 2ನೇ ವರ್ಷದಿಂದ – 6ನೇ ವರ್ಷ |
| ಉತ್ತರ ಬಾಲ್ಯ | 6ನೇ ವರ್ಷದಿಂದ 10ನೇ ವರ್ಷ |
| ಲೈಂಗಿಕ ಪಕ್ವತೆಯ ಕಾಲ | 10–12ನೇ ವರ್ಷದಿಂದ 13–14ನೇ ವರ್ಷ |
| ತಾರುಣ್ಯ | 13–14ನೇ ವರ್ಷದಿಂದ–18ನೇ ವರ್ಷ |
| ವಯಸ್ಕತನ | 18ನೇ ವರ್ಷದಿಂದ 40ನೇ ವರ್ಷ |
| ಮಧ್ಯವಯಸ್ಸು | 40ನೇ ವರ್ಷದಿಂದ 60ನೇ ವರ್ಷ |
| ವೃದ್ಧಾಪ್ಯ | 60ನೇ ವರ್ಷದಿಂದ – ಸಾವಿನವರೆಗೆ |

Digitised by Bharatavani, CIIL

ವ್ಯಕ್ತಿಯ ಜೀವಮಾನದಲ್ಲಿ ಬೆಳೆವಣಿಗೆ ಮತ್ತು ವಿಕಾಸವು ದೈಹಿಕ ಗತಿ, ಬೌದ್ಧಿಕ, ಸಂವೇಗಾತ್ಮಕ, ಸಾಮಾಜಿಕ, ನೈತಿಕ ಬದಲಾವಣೆಗಳೊಂದಿಗೆ ವಿವಿಧ ವಿಧಗಳಲ್ಲಿ ನಡೆಯುತ್ತವೆ.

- ದೈಹಿಕ ಬೆಳೆವಣಿಗೆ ಮತ್ತು ಗತಿ ವಿಕಾಸ ಒಂದಕ್ಕೊಂದು ಸಂಬಂಧ ಹೊಂದಿವೆ.

- ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ವರ್ತಿಸುವ ಸಾಮರ್ಥ್ಯ ಗಳಿಸುವುದು – ಸಾಮಾಜಿಕ ವಿಕಾಸ.

- ಹೊಸ ಪರಿಕಲ್ಪನೆಗಳು ರೂಪಿತವಾಗುವುವು, ತಾರ್ಕಿಕ ಆಲೋಚನೆ, ಚಿಂತನೆ–ಬೌದ್ಧಿಕ ವಿಕಾಸ.

- ದೇಹದ ಆಂತರಿಕ ಹಾಗೂ ಬಾಹ್ಯ ಬದಲಾವಣೆಗಳನ್ನೊಳಗೊಂಡ ವ್ಯಕ್ತಿಯ ಕಲಕಿದ ಮನಸ್ಥಿತಿಯೇ ಸಂವೇಗಗಳು. ಇವು ವೈಯಕ್ತಿಕ ಹಾಗೂ ಸಾಮಾಜಿಕ ಹೊಂದಾಣಿಕೆಗೆ ಸಹಾಯ ಮಾಡುತ್ತವೆ. ಭಾವನಾತ್ಮಕ / ಸಂವೇಗಾತ್ಮಕ ವಿಕಾಸ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು (ಪ್ರಾಮಾಣಿಕತೆ, ದಯಾಳುತನ, ದಾನ, ಧರ್ಮ, ಸೇವಾ ಮನೋಭಾವ, ವಿಧೇಯತೆ ಇತ್ಯಾದಿ) ಮೈಗೂಡಿಸಿಕೊಳ್ಳುವುದು – ನೈತಿಕ ವಿಕಾಸ. ವ್ಯಕ್ತಿಯ ಜೀವನದಲ್ಲಿ ತಾರುಣ್ಯಕ್ಕೆ ಪ್ರಮುಖ ಸ್ಥಾನವಿದೆ. ಈ ಹಂತದಲ್ಲಿ ಬಾಲ್ಯ ಸಹಜವಾದ ಮನೋಭಾವನೆಗಳು, ನಡೆನುಡಿಗಳು ಪರಿವರ್ತನೆ ಹೊಂದಿ ಪ್ರೌಢ ಜೀವನಕ್ಕೆ ಸಹಜವಾದ ಮನೋಭಾವ, ನಡೆನುಡಿಗಳು ಬೆಳೆಯುತ್ತವೆ. ವ್ಯಕ್ತಿಯ ಕರ್ತವ್ಯ, ಜವಾಬ್ದಾರಿ, ಹಕ್ಕು ಬಾಧ್ಯತೆಗಳು ಮತ್ತು ಸಾಮಾಜಿಕ ಸಂಬಂಧಗಳಲ್ಲಿ ಬದಲಾವಣೆಗಳನ್ನು ಈ ಹಂತದಲ್ಲಿ ಕಾಣುತ್ತೇವೆ. ಮನೋವಿಜ್ಞಾನಿಗಳು ತಾರುಣ್ಯದಲ್ಲಿ ವ್ಯಕ್ತಿಯ ಲೈಂಗಿಕ ಸಾಮರ್ಥ್ಯಕ್ಕಿಂತ ಹೆಚ್ಚಾಗಿ ಮಾನಸಿಕ, ಸಾಮಾಜಿಕ, ಬೌದ್ಧಿಕ ಮತ್ತು ಭಾವನಾತ್ಮಕ ಬೆಳೆವಣಿಗೆ ಮತ್ತು ಅವುಗಳ ವರ್ತನೆಯ ಬಗ್ಗೆ ವಿಶೇಷ ಪ್ರಾಮುಖ್ಯ ಕೊಟ್ಟಿದ್ದಾರೆ.

**ವಿಕಾಸದ ತತ್ವಗಳು :** ಪ್ರತಿಯೊಬ್ಬ ವ್ಯಕ್ತಿಯಲ್ಲಿ ನಡೆಯುವ ದೈಹಿಕ ಮತ್ತು ಮಾನಸಿಕ ವಿಕಾಸವು ಕೆಲವು ನಿಯಮಗಳಿಗೆ ಒಳಪಟ್ಟು ವ್ಯವಸ್ಥಿತವಾಗಿ ನಡೆಯುತ್ತದೆ.

1. **ವಿಕಾಸವು ನಿರಂತರವಾದುದು:** ಬೆಳೆವಣಿಗೆಯ ಹಂತದಲ್ಲಿ ಬದಲಾವಣೆಯ ಕ್ರಮವನ್ನು ಅನುಸರಿಸಿ ವಿವಿಧ ಅವಸ್ಥೆಗಳಾಗಿ ವಿಂಗಡಿಸಲಾಗಿದೆಯೇ ಹೊರತು ಬೆಳೆವಣಿಗೆಯಲ್ಲಿ ಯಾವುದೇ ಖಚಿತವಾದ ಸೀಮಾ ರೇಖೆಯಿಲ್ಲ. ವಿಕಾಸವು ಒಂದು ಅಖಂಡ ನಿರಂತರ ಪ್ರಕ್ರಿಯೆಯಾಗಿದೆ. ಅಂಡಾಣುವು ಗರ್ಭಧಾರಣೆಯಾದ ಕ್ಷಣದಿಂದ ಆರಂಭವಾಗಿ ಮರಣದತನಕ ವ್ಯಕ್ತಿಯ ಜೀವನ ಪರ್ಯಂತ ವಿಕಾಸ ಪ್ರಕ್ರಿಯೆ ನಡೆಯುತ್ತಿರುತ್ತದೆ. ಆದರೆ ವಿಕಾಸವು ಯಾವಾಗಲೂ ಒಂದೇ ವೇಗದಲ್ಲಿ ನಡೆಯುವುದಿಲ್ಲ. ಮಕ್ಕಳ ದೈಹಿಕ ಬೆಳೆವಣಿಗೆ ಹಾಗೂ ಮಾನಸಿಕ ಕಾರ್ಯಗಳಲ್ಲಿ ಶೀಘ್ರ ಬದಲಾವಣೆಗಳನ್ನು ಕಾಣಬಹುದು. ಬಾಲ್ಯದಲ್ಲಿ ಎತ್ತರ ಮತ್ತು ತೂಕಗಳ ಹೆಚ್ಚಳ. ಶಾಲಾ ಪೂರ್ವ ಹಂತದಲ್ಲಿ ಪದಸಂಪತ್ತಿನ ಹೆಚ್ಚಳ, ತಾರುಣ್ಯದಲ್ಲಿ ಸಮಸ್ಯಾ ಪರಿಹಾರ ಸಾಮರ್ಥ್ಯಗಳಲ್ಲಿ ಶೀಘ್ರ ಪ್ರಗತಿ ಕಂಡುಬರುತ್ತದೆ.

2. **ಅನುವಂಶೀಯತೆ ಮತ್ತು ಪರಿಸರಗಳ ನಡುವಿನ ಅನ್ಯೋನ್ಯ ಕ್ರಿಯೆಯ ಫಲಿತವೇ ವಿಕಾಸ :** ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಅನುವಂಶೀಯ ಅಂಶಗಳು ಮತ್ತು ಪರಿಸರದ ಅಂಶಗಳು ವ್ಯಕ್ತಿಯ ವಿಕಸನದ ಮೇಲೆ ಪ್ರಭಾವ ಬೀರುತ್ತದೆ. ವ್ಯಕ್ತಿಯ ವಿಕಸನವು ವ್ಯಕ್ತಿ ಹಾಗೂ ಅವನ ಪರಿಸರದ ನಿರಂತರ ಅಂತರಕ್ರಿಯೆಯ ಉತ್ಪನ್ನವಾಗಿದೆ. ಅನುವಂಶೀಯ ಅಂಶಗಳು ಮತ್ತು ಪರಿಸರದ ಅಂಶಗಳು ವ್ಯಕ್ತಿಯ ವಿಕಾಸದ ಮೇಲೆ ಪ್ರಭಾವ ಬೀರುತ್ತವೆ. ಇವೆರಡರ ಪ್ರಭಾವವನ್ನು ಪ್ರತ್ಯೇಕಿಸುವುದು ಕಷ್ಟ.

3. **ವಿಕಾಸವು ಒಂದು ಅನಿವಾರ್ಯ ಸೃಜನಾತ್ಮಕ ಪ್ರಕ್ರಿಯೆ :** ಪ್ರತಿಯೊಂದು ಜೀವಿ ಅರಿವಿದ್ದೋ ಇಲ್ಲದೆಯೋ ತನ್ನ ವರ್ತನೆ ಬದಲಿಸಿಕೊಳ್ಳುತ್ತದೆ ಮತ್ತು ವರ್ತನೆಯ ವಿವಿಧತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಜೀವಿ ಬಯಸದೇ ಇದ್ದರೂ ದೇಹದಲ್ಲಿ ಬದಲಾವಣೆ ಆಗಿಯೇ ಆಗುವ ಈ ವಿಕಾಸವು ಒಂದು ಅನಿವಾರ್ಯ ಪ್ರಕ್ರಿಯೆ. ವರ್ತನೆಯ ವಿವಿಧತೆಯಿಂದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆ ಆಗುತ್ತದೆ. ಆದ್ದರಿಂದ ವಿಕಾಸ ಒಂದು ಸೃಜನಾತ್ಮಕ ಪ್ರಕ್ರಿಯೆ.

4. **ವಿಕಾಸದ ವಿವಿಧ ಆಯಾಮಗಳು ಒಂದಕ್ಕೊಂದು ಅಂತರ ಸಂಬಂಧ ಹೊಂದಿವೆ :** ವ್ಯಕ್ತಿಯ ವಿಕಾಸದ ಅನುಕ್ರಮವಾದ ಮತ್ತು ನಿರಂತರ ಪ್ರಕ್ರಿಯೆಯು ಇತರ ಅಂಶಗಳ ಮೇಲೆ ಪ್ರಭಾವ ಬೀರುತ್ತದೆ. ಆರೋಗ್ಯವಂತ ದೇಹದ ಬೆಳವಣಿಗೆಯಿಂದ ಮಾನಸಿಕ ಬೆಳವಣಿಗೆ ನಿರೀಕ್ಷಿತ ಮಟ್ಟದಲ್ಲಿ ಉಂಟಾಗಿ, ಸಾಮಾಜಿಕ ಜಾಗೃತಿಯುಳ್ಳ ಮತ್ತು ಭಾವಾನಾತ್ಮಕವಾಗಿ ಸ್ಥಿರತೆಯುಳ್ಳ ವ್ಯಕ್ತಿತ್ವ ವಿಕಾಸವಾಗುತ್ತದೆ. ಮುಂದೆ ಈ ಬೆಳೆವಣಿಗೆಯು ಜ್ಞಾನಾತ್ಮಕ ವಿಕಾಸದ ಮೇಲೆ ಧನಾತ್ಮಕವಾಗಿ ಪ್ರಭಾವ ಬೀರುತ್ತದೆ. ಆದ್ದರಿಂದ ವಿಕಾಸದ ವಿವಿಧ ಅಂಶಗಳು ಒಂದಕ್ಕೊಂದು ಪೂರಕವಾಗಿವೆ ಮತ್ತು ಅಂತರ ಸಂಬಂಧ ಹೊಂದಿವೆ.

5. **ವಿಕಾಸವು ಒಂದು ಕ್ರಮಬದ್ಧ ವಿನ್ಯಾಸಕ್ಕೆ ಅನುಗುಣವಾಗಿ ನಡೆಯುತ್ತದೆ**

   **ಶಿರೋಪಾದಾಭಿಮುಖ ವಿನ್ಯಾಸ** – ವಿಕಾಸವು ಯಾವಾಗಲೂ ತಲೆಯ ಕಡೆಯಿಂದ ಪ್ರಾರಂಭಿಸಿ ಕಾಲುಗಳ ಕಡೆಗೆ ಸಾಗುತ್ತದೆ. ಗರ್ಭಾವಸ್ಥೆಯ ಭ್ರೂಣದ ತಲೆಭಾಗ ಅದರ ಕಾಲುಗಳಿಗಿಂತ ಮೊದಲು ಬೆಳೆವಣಿಗೆಯಾಗುತ್ತದೆ.

   ಹಾಗೆಯೇ ಮಗುವಿನಲ್ಲಿ ನಿಲ್ಲುವ ಅಥವಾ ನಡೆಯುವ ಕೌಶಲಕ್ಕಿಂತ ಮೊದಲು ಶಿರದ ಚಲನೆಯ ಮೇಲೆ ನಿಯಂತ್ರಣ ಕಂಡುಬರುತ್ತದೆ.

   **ಕೇಂದ್ರ ಪರಿಧಿ ಅಭಿಮುಖ ವಿನ್ಯಾಸ** – ವಿಕಾಸವು ದೇಹದ ಕೇಂದ್ರ ಭಾಗದಿಂದ ಪ್ರಾರಂಭಿಸಿ ಪರಿಧಿಯ ಕಡೆಗೆ ಸಾಗುತ್ತದೆ. ಮಗು ಮೊದಲು ಭುಜ ಹಾಗೂ ಕೈಗಳನ್ನು ಬಳಸಿ ನಂತರ ತನ್ನ ಮಣಿಕಟ್ಟು ಹಾಗೂ ಕೈಬೆರಳುಗಳನ್ನು ಬಳಸುತ್ತಾನೆ.

   ಚಲನೆಯ ವಿಕಾಸದ ಕಾಲವು ಒಬ್ಬರಿಂದ ಒಬ್ಬರಿಗೆ ವ್ಯತ್ಯಾಸವಾದರೂ ಚಲನೆಯ ವಿಕಾಸವು ಒಂದೇ ಅನುಕ್ರಮದಲ್ಲಿ ಉಂಟಾಗುತ್ತದೆ. ಚಲನೆಯಲ್ಲಿ ಕಂಡುಬರುವ ಅನುಕ್ರಮ ಹಂತಗಳು – ತೆವಳುವುದು, ಅಂಬೆಗಾಲಿಡುವುದು ಮತ್ತು ನಡೆಯುವುದು.

6. **ವಿಕಾಸವು ಯಾವಾಗಲೂ ಸಾಮಾನ್ಯತೆಯಿಂದ ನಿರ್ದಿಷ್ಟತೆಯೆಡೆಗೆ ಸಾಗುತ್ತದೆ:** ಮಗುವಿನ ಬೆಳೆವಣಿಗೆಯ ಎಲ್ಲಾ ಹಂತಗಳಲ್ಲಿ ಮೊದಲು ಸಾಮಾನ್ಯ ಚಟುವಟಿಕೆ ಕಂಡುಬರುತ್ತದೆ. ನಂತರ ಗುರಿಯೆಡೆಗೆ ಸಾಗುತ್ತ ನಿರ್ದಿಷ್ಟ ಅನುಕ್ರಿಯೆಗಳನ್ನು ಕಲಿಯುತ್ತದೆ. ಜನಿಸಿದ ಮಗುವು ಮೊದಲು ತನ್ನ ಇಡೀ ದೇಹವನ್ನು ಅಳುವ ಕ್ರಿಯೆಯಲ್ಲಿ ತೊಡಗಿಸಿ ಕ್ರಮೇಣ ಬೆಳೆವಣಿಗೆಯಾದಂತೆ ಧ್ವನಿ ಪೆಟ್ಟಿಗೆ, ಮುಖದ ಭಾವನೆ ವ್ಯಕ್ತಪಡಿಸುವುದು, ಕಣ್ಣುಗಳಿಗೆ ಸೀಮಿತಗೊಳಿಸುವುದು. ಮಗುವಿನ ಭಾಷಾ ಬೆಳೆವಣಿಗೆಯು ಸಾಮಾನ್ಯ ಅನುಕ್ರಿಯೆಯಾಗಿ ಜನನದ ಅಳುವಿನಿಂದ ಪ್ರಾರಂಭವಾಗುತ್ತದೆ. ಈ ಅನುಕ್ರಿಯೆಯಿಂದ

Digitised by Bharatavani, CIIL

ವಿಭೇದೀಕರಣ ಪ್ರಾರಂಭವಾಗಿ ಮಗು ಹಲವು ಪದಗಳನ್ನು ಕಲಿಯುತ್ತಾನೆ. ನಂತರ ಸಂವಹನ ಕೌಶಲ ವಿಕಾಸವಾಗುತ್ತದೆ.

7. **ವಿಕಾಸದ ದಿಶೆಯನ್ನು ಪೂರ್ವಭಾವಿಯಾಗಿ ತಿಳಿಯಬಹುದು :** ಮಗುವಿನ ಇಂದಿನ ಮಾನಸಿಕ ಸಾಮರ್ಥ್ಯದ ಜ್ಞಾನದಿಂದ ಮುಂದಿನ ಮಾನಸಿಕ ವಿಕಾಸ ತಿಳಿಸಬಹುದಾಗಿದೆ. ಮಗುವಿನಲ್ಲಿ ಒಂದು ನಿರ್ದಿಷ್ಟ ಹಂತದ ಬೆಳೆವಣಿಗೆ ಮತ್ತು ವಿಕಾಸದಿಂದ ಮಗುವಿನ ಮುಂದಿನ ಸ್ವಭಾವ ಮತ್ತು ನಡೆವಳಿಕೆಯನ್ನು ನಿರ್ಧರಿಸಬಹುದು.

8. **ವಿಕಾಸವು ಸುರುಳಿ ಆಕಾರದಲ್ಲಿ ಉಂಟಾಗುತ್ತದೆ :** ಮಗುವಿನ ವಿಕಾಸದ ಹಾದಿಯು ನೇರವಾಗಿ ಲಂಬವಾಗಿ ನಿರ್ದಿಷ್ಟ ಗತಿಯಲ್ಲಿ ಸಾಗುವುದಿಲ್ಲ. ಮಗುವಿನ ವಿಕಾಸವು ನಿಗದಿತ ಹಂತಕ್ಕೆ ಒಂದು ಸಂಚಯಿತ ಸ್ಥಿತಿಗೆ ಬಂದು ಬೆಳೆವಣಿಗೆಯಾದಾಗ ವಿಕಾಸವು ಮುಂದುವರೆಯುವುದಕ್ಕೆ ಬದಲಾಗಿ ಹಿಂತಿರುಗಿ ನಂತರ ಸುರುಳಿಯಂತೆ ಸಾಗುತ್ತದೆ.

9. **ವಿಕಾಸದ ದರ ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಬದಲಾಗಿರುತ್ತದೆ:** ಬೆಳೆವಣಿಗೆಯ ದರವು ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಬೇರೆ ಬೇರೆಯಾಗಿರುತ್ತದೆ. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಬೇಗ ಪ್ರೌಢಾವಸ್ಥೆಗೆ ಬರುತ್ತಾರೆ. ಹದಿಹರೆಯದ ವಯಸ್ಸಿಗೆ ತಲುಪುವ ಮೊದಲು ಹೆಣ್ಣುಮಕ್ಕಳು ಗಂಡು ಮಕ್ಕಳಿಗಿಂತ ತೂಕ ಮತ್ತು ಎತ್ತರದಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದು ಹದಿಹರೆಯದ ಕೊನೆಯಲ್ಲಿ ಗಂಡುಮಕ್ಕಳು ತೂಕ ಮತ್ತು ಎತ್ತರದಲ್ಲಿ ಹೆಣ್ಣು ಮಕ್ಕಳಿಗಿಂತ ಹೆಚ್ಚಿನ ಪ್ರಮಾಣ ಹೊಂದುತ್ತಾರೆ.

10. **ಬೆಳೆವಣಿಗೆ ಮತ್ತು ವಿಕಾಸದಲ್ಲಿ ವ್ಯಕ್ತಿ ವ್ಯತ್ಯಾಸವಿರುತ್ತದೆ:** ಎಲ್ಲ ವ್ಯಕ್ತಿಗಳಲ್ಲಿ ಬೆಳೆವಣಿಗೆ ಮತ್ತು ವಿಕಾಸ ಪ್ರಗತಿಶೀಲವಾಗಿ ಮುಂದುವರಿಯುವುದಾದರೂ ಅದರ ವೇಗ, ಗುಣಲಕ್ಷಣಗಳಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಕಾಣಬಹುದು. ಕೆಲವು ಮಕ್ಕಳಲ್ಲಿ ಅನೇಕ ಕಾರಣಗಳಿಂದ ಬೆಳೆವಣಿಗೆ ವಿಕಾಸ ಕುಂಠಿತಗೊಳ್ಳಬಹುದು. ಕೆಲವು ಮಕ್ಕಳು ತ್ವರಿತಗತಿಯಿಂದ ವಿಕಾಸಗೊಳ್ಳಬಹುದು. ಬೆಳೆವಣಿಗೆ ಮತ್ತು ವಿಕಾಸದ ಜ್ಞಾನ ಪೋಷಕರಿಗೆ, ಅಧ್ಯಾಪಕರಿಗೆ, ಮಾರ್ಗದರ್ಶಕರಿಗೆ ಮತ್ತು ಸಮಾಲೋಚಕರಿಗೆ (ಕೌನ್ಸಿಲರ್) ಉಪಯುಕ್ತವೆನಿಸುತ್ತದೆ. ವ್ಯಕ್ತಿಗಳ ಬೆಳವಣಿಗೆ ಮತ್ತು ವಿಕಾಸದ, ದಿಶೆ, ವೇಗವನ್ನು ತಿಳಿದು ಸೂಕ್ತ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ. (ನೋಡಿ– ಆನುವಂಶೀಯತೆ ತಂತ್ರ, ಮೆಂಡಲನ ನಿಯಮಗಳು, ಪ್ರತಿಭಾವಂತ ಮಕ್ಕಳು.)

–ಎನ್.ಗೀ.

## ಬೋಧನಾ ತಂತ್ರಗಳು

ಬೋಧನಾ ಕಲಿಕಾ ಪ್ರಕ್ರಿಯೆಯು ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಪ್ರಕ್ರಿಯೆಯಾಗಿದ್ದು ಇಡೀ ಶಿಕ್ಷಣ ವ್ಯವಸ್ಥೆಯ ಹೃದಯಭಾಗವಾಗಿದೆ. ಈ ಪ್ರಕ್ರಿಯೆಯು ಅತ್ಯಂತ ಪರಿಣಾಮಕಾರಿಯಾಗಿ ಘಟಿಸಲು ಮತ್ತು ಅದರಿಂದ ಉತ್ತಮವಾದ ಶ್ರೇಷ್ಠವಾದ ಕಲಿಕಾ ಫಲಗಳನ್ನು ಪಡೆಯಲು, ಶಿಕ್ಷಕರು ಅನೇಕ ರೀತಿಯ ಬೋಧನಾ ವಿಧಾನಗಳನ್ನು ಬೋಧನಾ ತಂತ್ರಗಳನ್ನು ಬಳಸುತ್ತಾರೆ. ಬೋಧನಾ ತಂತ್ರಗಳು ಶಿಕ್ಷಕರಲ್ಲಿ ಹೆಚ್ಚು ದಕ್ಷತೆಯನ್ನು ಮತ್ತು ಪರಿಣಾಮಕಾರಿತ್ವವನ್ನೂ ತಂದು ಕೊಡುತ್ತದೆ. ಬೋಧನಾ ತಂತ್ರಜ್ಞಾನವನ್ನು ಹೀಗೆ ವ್ಯಾಖ್ಯಾನಿಸಲಾಗಿದೆ.

"ಖಚಿತವಾದ ಧನಾತ್ಮಕವಾದ ಕಲಿಕಾ ಪರಿಣಾಮಗಳನ್ನು ಪಡೆಯುವುದಕ್ಕಾಗಿ, ಸಂಕೀರ್ಣವಾದ ಬೋಧನಾ ಪ್ರಕ್ರಿಯೆಯನ್ನು ಪ್ರಸ್ತುತಪಡಿಸುವಾಗ ಶೈಕ್ಷಣಿಕ ತಂತ್ರಜ್ಞಾನದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಬೆಂಬಲವನ್ನು ಹೊಂದಿದ್ದು, ಪ್ರಬಲವಾದ ಬೌದ್ಧಿಕ ಯೋಜನೆಯಿಂದ ಪ್ರಕಟಗೊಳ್ಳುವ ತಂತ್ರಗಳೇ ಬೋಧನಾ ತಂತ್ರಗಳು."

- ಖಚಿತವಾಗಿ ಒಂದು ಗುರಿಯನ್ನು ತಲುಪುವ ಉದ್ದೇಶದಿಂದ ಬೌದ್ಧಿಕವಾಗಿ ರಚಿತವಾಗುವ ಒಂದು ಕಾರ್ಯವ್ಯೂಹದ ಕ್ರಿಯಾ ಯೋಜನೆಯೇ ತಂತ್ರ.

- ತಂತ್ರಗಳೆಂದರೆ, ಕಲಿಕಾ ಉದ್ದೇಶಗಳನ್ನು ಸಾಧಿಸಲು ಬಳಸಲ್ಪಡುವ ಸಾಧನಗಳು. ಶಿಕ್ಷಕರು ಅನೇಕ ರೀತಿಯ ತಂತ್ರಗಳನ್ನು ಬಳಸುವರು. ಅವುಗಳಲ್ಲಿ ಹೆಸರಿಸಬಹುದಾದ ಕೆಲವೆಂದರೆ, ಅನುಗಮನ ನಿಗಮ ವಿಶ್ಲೇಷಣೆ ಮತ್ತು ಸಂಶ್ಲೇಷಣೆ ಇತ್ಯಾದಿ.

1. **ಅನುಗಮನ ತಂತ್ರ:–** ಅನುಗಮನವೆಂಬುದು ಒಂದು ಕ್ರಮಬದ್ಧವಾಗಿ, ವಿಷಯದ ವರ್ಗಾವಣೆಯನ್ನು ಅಥವಾ ವಿದ್ಯಾರ್ಥಿಗಳು ಕಲಿಯಬೇಕಾಗಿರುವ ಪಠ್ಯಾಂಶದ ವರ್ಗಾವಣೆಯನ್ನು ನಡೆಸುವ ಪ್ರಕ್ರಿಯೆಯಾಗಿದೆ. ಸಾಮಾನ್ಯವಾಗಿ ಜೀವ ವಿಜ್ಞಾನಗಳಲ್ಲಿ ಬರುವ ಸಾರ್ವತ್ರೀಕರಣಗಳನ್ನು ಬೋಧಿಸುವಾಗ, ನೇರವಾಗಿ ಅದನ್ನೇ ಬೋಧಿಸದೇ, ಅದಕ್ಕಾಗಿ ಒಂದು ಕಲಿಕಾ ವಾತಾವರಣವನ್ನು ಸೃಷ್ಟಿಗೊಳಿಸಿ, ನಂತರ ಒಂದೊಂದಾಗಿ ಕಲಿಕಾ ಅನುಭವಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುವುದು. ಇಂತಹ ವಿವಿಧ ಅನುಭವಗಳನ್ನು ಒಂದಾದ ಮೇಲೆ ಒಂದರಂತೆ ಪಡೆಯುತ್ತಾ ಸಾಗುವ ವಿದ್ಯಾರ್ಥಿಗೆ, ಅವುಗಳಲ್ಲಿನ ಒಂದು ಸಾಮಾನ್ಯ ತಂತು ಅಥವಾ ಸಾಮಾನ್ಯ ಎಳೆ ದೊರಕುವುದು–ಕೊನೆಗೆ ಇದೇ ತಾನು ಕಲಿಯಬೇಕಾಗಿದ್ದ ಗಮ್ಯಸ್ಥಾನದಲ್ಲಿರುವ ಸಾಮಾನ್ಯೀಕರಣವೆಂಬುದು ತಿಳಿಯುವುದು. ಸರಳವಾಗಿ ಹೇಳಬೇಕೆಂದರೆ ಅನೇಕ ಉದಾಹರಣೆ ಮತ್ತು ನಿದರ್ಶನಗಳ ಮೂಲಕ ಒಂದು ಸಾರ್ವತ್ರೀಕರಣಕ್ಕೆ ತಲುಪುವುದೇ ಅನುಗಮನ. ಇದೊಂದು ಅತ್ಯುತ್ತಮ ಬೋಧನಾ ತಂತ್ರವಾಗಿ ಶಿಕ್ಷಕರಿಂದ ಬಳಸಲ್ಪಡುವುದು. ಇಲ್ಲಿ ಕಲಿಕಾರ್ಥಿಯು ಮೂರ್ತ ಕಲಿಕೆಯಿಂದ ಅಮೂರ್ತ ಕಲಿಕೆಯೆಡೆಗೆ ಸಾಗುವನು.

**ಉದಾಹರಣೆಗೆ:**

- ದಾಸವಾಳದ ಗಿಡವು ಒಂದು ದ್ವಿದಳ ಸಸ್ಯವಾಗಿದ್ದು ಅದರ ಎಲೆಗಳು ಬಲೆರೂಪದ ನಾಳ ರಚನೆಯನ್ನು ಹೊಂದಿದೆ.

- ಗುಲಾಬಿ ಗಿಡವು ಒಂದು ದ್ವಿದಳ ಸಸ್ಯವಾಗಿದ್ದು ಅದರ ಎಲೆಗಳು ಬಲೆರೂಪದ ನಾಳರಚನೆಯನ್ನು ಹೊಂದಿದೆ.

- ಬೇವಿನ ಗಿಡವು ಒಂದು ದ್ವಿದಳ ಸಸ್ಯವಾಗಿದ್ದು ಅದರ ಎಲೆಗಳೂ ಬಲೆರೂಪದ ನಾಳರಚನೆಯನ್ನು ಹೊಂದಿದೆ.

**ಸಾಮಾನ್ಯೀಕರಣ:–** ದ್ವಿದಳ ಸಸ್ಯಗಳ ಎಲೆಗಳು ಬಲೆರೂಪದ ನಾಳರಚನೆಯನ್ನು ಹೊಂದಿರುತ್ತವೆ.

ಹೀಗೆ ಅನುಗಮನ ತಂತ್ರದಲ್ಲಿ ಅನೇಕ ಉದಾಹರಣೆಗಳ ಮತ್ತು ನಿದರ್ಶನಗಳ ಮೂಲಕ ಒಂದು ಸಾರ್ವತ್ರೀಕರಣವನ್ನು ಕಂಡುಕೊಳ್ಳಲಾಗುವುದು. ಪರಸ್ಪರ ಸಂಬಂಧವಿರುವ ತಥ್ಯಗಳು ಮತ್ತು ಪರಿಕಲ್ಪನೆಗಳು ಒಟ್ಟಾಗಿ ಸೇರಿದಾಗ ಸಾರ್ವತ್ರಿಕಗಳು ಪ್ರಕಟವಾಗುತ್ತವೆ.

Digitised by Bharatavani, CIIL

2. **ನಿಗಮನ ತಂತ್ರ** :– ನಿಗಮನವು ಅನುಗಮನ ತಂತ್ರಕ್ಕೆ ವಿರುದ್ಧವೆಂಬಂತೆ ತೋರಿಬರುವುದು. ಅಂದರೆ ಇಲ್ಲಿ ಮೊದಲು ಬೋಧನೆಯು ಒಂದು ಸಾಮಾನ್ಯೀಕರಣದಿಂದಲೇ ಪ್ರಾರಂಭವಾಗುವುದು. ಇದೂ ಕೂಡ ಶುದ್ಧ ತರ್ಕದ ಇನ್ನೊಂದು ಮುಖ. ಆದ್ದರಿಂದಲೇ ಮೇಲ್ನೋಟಕ್ಕೆ ಇದು ಅನುಗಮನಕ್ಕೆ ವಿರುದ್ಧದಂತೆ ತೋರಿದರೂ, ವಾಸ್ತವವಾಗಿ ಹಾಗೆ ಅಲ್ಲ. ಬದಲಿಗೆ ಅನುಗಮನ ಮತ್ತು ನಿಗಮನವು ಒಂದಕ್ಕೊಂದು ಪರಸ್ಪರ ಪೂರಕವಾಗಿರುತ್ತವೆ. ಇಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಯು ಒಂದು ಸಾಮಾನ್ಯೀಕರಣದಿಂದ ವಿಶಿಷ್ಟವಾದ, ನಿರ್ದಿಷ್ಟಕಗಳೆಡೆಗೆ ಸಾಗುವುದು.

ಒಂದು ಬೋಧನಾ – ಕಲಿಕಾ ಸಂದರ್ಭದಲ್ಲಿ ಮೊದಲು ಸಾಮಾನ್ಯೀಕರಣವನ್ನು ನೀಡಿ, ನಂತರ ಇದಕ್ಕೆ ಬೆಂಬಲ ನೀಡುವಂತಹ ಉದಾಹರಣೆಗಳನ್ನು, ನಿದರ್ಶನಗಳನ್ನು ನೀಡಿದರೆ, ಆಗ ಅದನ್ನು ನಿಗಮನ ತಂತ್ರವೆಂದು ಕರೆಯಲಾಗುವುದು.

**ಉದಾಹರಣೆ :**

- ಆಮ್ಲಗಳು ಪ್ರತ್ಯಾಮ್ಲಗಳ ಜೊತೆಯಲ್ಲಿ ವರ್ತಿಸಿದಾಗ ಲವಣ ಮತ್ತು ನೀರನ್ನು ಬಿಡುಗಡೆ ಮಾಡುತ್ತವೆ.
- ಹೈಡ್ರೋಕ್ಲೋರಿಕಾಮ್ಲವು ಸೋಡಿಯಂಹೈಡ್ರಾಕ್ಸೈಡ್‌ನೊಡನೆ (ಪ್ರತ್ಯಾಮ್ಲ) ವರ್ತಿಸಿ ಸೋಡಿಯಂ ಕ್ಲೋರೈಡ್ (ಲವಣ) ಮತ್ತು ನೀರನ್ನು ಬಿಡುಗಡೆ ಮಾಡುವುದು.
- ಸಲ್ಫ್ಯೂರಿಕಾಮ್ಲವು ಪೊಟ್ಯಾಸಿಯಂ ಹೈಡ್ರಾಕ್ಸೈಡ್‌ನೊಡನೆ (ಪ್ರತ್ಯಾಮ್ಲ) ವರ್ತಿಸಿ ಪೊಟಾಸಿಯಂ ಸಲ್ಫೇಟನ್ನು(ಲವಣ) ಮತ್ತು ನೀರನ್ನು ಬಿಡುಗಡೆ ಮಾಡುವುದು.
- ನೈಟ್ರಿಕಾಮ್ಲವು ಕ್ಯಾಲ್ಸಿಯಂ ಹೈಡ್ರಾಕ್ಸೈಡ್‌ನೊಡನೆ (ಪ್ರತ್ಯಾಮ್ಲ) ವರ್ತಿಸಿ ಕ್ಯಾಲ್ಸಿಯಂ ನೈಟ್ರೇಟ್ (ಲವಣ) ಮತ್ತು ನೀರನ್ನು ಬಿಡುಗಡೆ ಮಾಡುವುದು.

ಹೀಗೆ ಒಂದು ಸಾರ್ವತ್ರೀಕರಣವನ್ನು ಮೊದಲು ಪ್ರಸ್ತುತಪಡಿಸಿ ನಂತರ ಅದಕ್ಕೆ ಹೊಂದಿಕೆಯಾಗುವಂತಹ ಉದಾಹರಣೆಗಳನ್ನು, ನಿದರ್ಶನಗಳನ್ನು ನಿಗಮನ ತಂತ್ರದಲ್ಲಿ ನೀಡಲಾಗುವುದು.

3. **ವಿಶ್ಲೇಷಣಾ ತಂತ್ರ**:– ಒಂದು ಇಡಿಯಾದ ವಿಷಯವನ್ನು, ಅದರ ಉಪವಿಭಾಗಗಳಾಗಿ ವಿಭಜಿಸಿ, ಒಂದೊಂದಾಗಿ ಈ ವಿಭಜಿಸಲ್ಪಟ್ಟ ವಿಚಾರಗಳನ್ನು ಬೋಧಿಸುವ ತಂತ್ರವನ್ನೇ ವಿಶ್ಲೇಷಣಾ ತಂತ್ರವೆನ್ನಬಹುದು. ಈ ಒಂದು ತಂತ್ರದಲ್ಲಿ,
   1. ಉಪ ಘಟಕಾಂಶಗಳ ವಿಶ್ಲೇಷಣೆ
   2. ಅವುಗಳಲ್ಲಿ ಕಂಡುಬರುವ ಪರಸ್ಪರ ಸಂಬಂಧದ ವಿಶ್ಲೇಷಣೆ
   3. ಈ ರೀತಿಯಾಗಿ ವಿಭಜನೆಗೊಂಡು ಘಟಕಾಂಶಗಳು ಒಟ್ಟಾಗಿ ಸಂಘಟನೆಯಾಗಿ ಒಂದು ಇಡಿಯಾದ ವಿಷಯವಾಗಲು ಕಾರಣವಾಗುವ ತತ್ವಗಳ ವಿಶ್ಲೇಷಣೆ ಎಂಬ ಮೂರು ವಿಧದ ವಿಶ್ಲೇಷಣೆಯನ್ನು ಕಾಣಬಹುದಾಗಿದೆ.

**ಉದಾಹರಣೆಗೆ:** ನಮ್ಮ ದೇಶವು ಪ್ರಜಾಪ್ರಭುತ್ವ ಸರಕಾರವನ್ನು ಹೊಂದಿದೆ. ಇದು ಒಂದು ವಿಷಯದ ಇಡಿಯಾದ ಭಾಗ. ಇದನ್ನು ಬೋಧಿಸುವಾಗ ಅಂದರೆ ಹೇಗೆ ನಮ್ಮ ಸರಕಾರವು ಕಾರ್ಯನಿರ್ವಹಿಸುತ್ತದೆ ಎಂದು ವಿವರಿಸುವಾಗ, ಕಾರ್ಯಾಂಗ, ಶಾಸಕಾಂಗ ಮತ್ತು ಕಾರ್ಯ ವೈಖರಿಯನ್ನು ತಿಳಿಸುತ್ತಾ ನಮ್ಮ ಪ್ರಜಾಪ್ರಭುತ್ವ ಸರಕಾರದ ಬಗ್ಗೆ ಬೋಧಿಸುವುದು. ಹೀಗೆ ಬಳಸಲ್ಪಡುವ ತಂತ್ರವೇ ವಿಶ್ಲೇಷಣಾ ತಂತ್ರವಾಗಿದೆ.

4. **ಸಂಶ್ಲೇಷಣೆ ತಂತ್ರ**:– ವಿವಿಧ ಭಾಗಗಳನ್ನು ಒಟ್ಟುಗೂಡಿಸುವ ತಂತ್ರವೇ ಸಂಶ್ಲೇಷಣೆ, ಒಂದು ಇಡೀ ವಿಚಾರವನ್ನು ಸೃಷ್ಟಿಮಾಡುವಾಗ, ಅದರ ಉಪವಿಭಾಗಗಳನ್ನು ಸಂಕಲನಗೊಳಿಸಿ, ಅದಕ್ಕೊಂದು ಸಂರಚನೆಯನ್ನು ನೀಡುವುದೇ ಸಂಶ್ಲೇಷಣೆ ಇದರಲ್ಲಿ ಅನೇಕ ವಿವಿಧವಾದ ಉಪವಿಚಾರಗಳು ಸಂಕ್ಷಿಪ್ತಗೊಂಡು, ತುಂಬಾ ಮುಖ್ಯವಾಗಿರುವ ಅಗತ್ಯವಾಗಿರುವ ಅಂಶಗಳು ಒಟ್ಟಾಗಿ ಸೇರಿಕೊಳ್ಳುತ್ತಾ ಒಂದು ಪೂರ್ಣವನ್ನು ಉಂಟುಮಾಡುತ್ತವೆ. ಇದು ಸಂಶ್ಲೇಷಣೆಯ ಮುಖ್ಯ ಲಕ್ಷಣ. ಮುಖ್ಯವಾಗಿ ಒಂದು ವಿಚಾರದ ಬೋಧನೆಯನ್ನು ಮಾಡುವಾಗ, ಅದರ ಸಂಕೀರ್ಣತೆಯ ಮಟ್ಟವನ್ನು ಆಧರಿಸಿ ಆ ವಿಚಾರದ ವಿಶ್ಲೇಷಣೆಗೆ ಅನುವು ಮಾಡಿಕೊಡುತ್ತಾರೆ. ನಂತರ ಸಂಶ್ಲೇಷಣಾ ಕಾರ್ಯವು ನಡೆಯುವುದು. ಹೀಗೆ ಮಾಡುವುದರಿಂದ ಭಾಗಗಳ ಕಲಿಕೆಯಿಂದ ಪೂರ್ಣದ ಕಲಿಕೆಯೆಡೆಗೆ ವಿದ್ಯಾರ್ಥಿಯು ಸಾಗುವನು. ಹೀಗೆ ಸಂಶ್ಲೇಷಣೆಗೊಂಡು ಪೂರ್ಣವಾಗಿ ವ್ಯಕ್ತವಾಗುವ ಕಲಿಕೆಯು ಈ ಕೆಳಕಂಡ ರೀತಿಯಲ್ಲಿ ತೋರಿಬರಬಹುದು.

1. ಒಂದು ವಿಶಿಷ್ಟ ರೀತಿಯ ಸಂವಹನವಾಗಿರಬಹುದು (ಅಂದರೆ, ಲಿಖಿತರೂಪ ಅಥವಾ ಮೌಖಿಕರೂಪ, ಇತ್ಯಾದಿ)
2. ಮುಂದೆ ನಡೆಸಬಹುದಾದ ಯಾವುದಾದರೂ ಕಾರ್ಯದ ಕುರಿತು ರಚಿಸಲ್ಪಡುವ ಒಂದು ಕ್ರಿಯಾಯೋಜನೆಯಾಗಿರಬಹುದು. ಅಥವಾ ಸಂಭವನೀಯ ಕಾರ್ಯವನ್ನು ಕುರಿತ ಯೋಜನೆಯಾಗಿರಬಹುದು.
3. ಸಾಕಷ್ಟು ವಿಚಾರ ಮಂಥನಕ್ಕೊಳಪಟ್ಟ ನಂತರ, ವ್ಯಕ್ತವಾಗುವ ಅಮೂರ್ತ ಪರಿಕಲ್ಪನೆಗಳಿರಬಹುದು.

ಈ ರೀತಿಯಾಗಿ ಶಿಕ್ಷಕರು ತಮಗೆ ಮತ್ತು ತಾವು ಬೋಧಿಸಬೇಕಾದ ವಿಚಾರಕ್ಕೆ ಸರಿಹೊಂದುವಂತಹ ತಂತ್ರಗಳನ್ನು ಬಳಸಿಕೊಳ್ಳುತ್ತಾರೆ. ಅದು ಅನುಗಮನ, ನಿಶ್ಲೇಷಣೆ ಅಥವಾ ಸಂಶ್ಲೇಷಣೆ– ಯಾವುದಾದರೂ ಆಗಬಹುದು. ಅಷ್ಟೇ ಅಲ್ಲದೆ, ಈ ತಂತ್ರಗಳನ್ನು ಬೇರೆ ಬೇರೆಯಾಗಿಯೂ, ಒಂದರ ಜೊತೆ ಇನ್ನೊಂದನ್ನು ಸೇರಿಸಿಕೊಂಡೂ ಬಳಸಬಹುದಾಗಿದೆ. ಒಟ್ಟಾರೆ ಈ ರೀತಿಯ ಬೋಧನಾ ತಂತ್ರಗಳ ಬಳಕೆಯಿಂದ ಶಿಕ್ಷಕರು ಹೆಚ್ಚು ದಕ್ಷರಾಗಿಯೂ ಪರಿಣಾಮ ಬೀರುವವರಾಗಿಯೂ ಕಂಡುಬರುವರು. ಇದರಿಂದಾಗಿ ವಿದ್ಯಾರ್ಥಿಗಳ ಕಲಿಕೆಯಲಿಯೂ ಹೆಚ್ಚಳವನ್ನು ಕಾಣಬಹುದಾಗಿದೆ.

–ಸಿ.ಎನ್.ಸು.

## ಬೋಧನಾ ಪ್ರಭಾವಶೀಲತೆ

ಶಿಕ್ಷಣ ಕ್ಷೇತ್ರದಲ್ಲಿನ ಒಂದು ಮುಖ್ಯ ಸಮಸ್ಯೆ ಅಧ್ಯಾಪಕ ಪ್ರಭಾವಶೀಲತೆಯನ್ನು ಗುರುತಿಸುವುದು. ತರಗತಿಯ ಕಲಿಕೆಯಲ್ಲಿ ಶಿಕ್ಷಕನ ಪಾತ್ರ ಬಹಳ ಮುಖ್ಯವಾದದ್ದು. ಶೈಕ್ಷಣಿಕ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳ ನಡುವೆ ಅಧ್ಯಾಪಕ ಕೊಂಡಿಯಾಗಿ ವರ್ತಿಸುತ್ತಾನೆ. ಹೀಗಾಗಿ ಯಾವುದೇ ಶೈಕ್ಷಣಿಕ ಕಾರ್ಯಕ್ರಮದ ಪ್ರಭಾವವು ಶಿಕ್ಷಕನನ್ನು ಅವಲಂಬಿಸಿರುತ್ತದೆ. ಆದುದರಿಂದ ಯಾವುದೇ ಶಾಲೆಯಲ್ಲಿನ ಬೋಧನೆಯ ಪ್ರಭಾವಶೀಲತೆಯು ನೇರವಾಗಿ ಅಲ್ಲಿನ ಅಧ್ಯಾಪಕರ ಬೋಧನಾ ಸಾಮರ್ಥ್ಯ ಹಾಗೂ ಬೋಧನೆಯ ವಿಧಾನವನ್ನು ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದ ಅಧ್ಯಾಪಕರ ಬೋಧನಾ ಪ್ರಭಾವಶೀಲತೆಯನ್ನು ಗರಿಷ್ಠಗೊಳಿಸುವುದೇ ಅಧ್ಯಾಪಕ ಶಿಕ್ಷಣದ ಪ್ರಮುಖ ಗುರಿ.

Digitised by Bharatavani, CIIL

## ಬೋಧನಾ ಪ್ರಭಾವಶೀಲತೆ

ಒಬ್ಬ ಅಧ್ಯಾಪಕ ತನ್ನ ಬೋಧನೆಯಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಉಂಟುಮಾಡುವ ಪರಿಣಾಮಗಳು ಅಥವಾ ಕೆಲವು ನಿರ್ದಿಷ್ಟ ಶೈಕ್ಷಣಿಕ ಗುರಿಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೋರಿಸುವ ಪ್ರಗತಿಯ ಮಟ್ಟವನ್ನು ಸೂಚಿಸುವುದೇ 'ಬೋಧನಾ ಪ್ರಭಾವಶೀಲತೆ'. ವಿದ್ಯಾರ್ಥಿಗಳ ಕಲಿಕಾ ವರ್ತನೆಯ ಆಧಾರದ ಮೇಲೆ ಮಾತ್ರ ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನ ಮಾಡಲು ಸಾಧ್ಯ. ಬೋಧನಾ ಪ್ರಭಾವಶೀಲತೆಯನ್ನು ಅಧ್ಯಾಪಕನ ಒಂದು ಸ್ಥಿರ ಗುಣಲಕ್ಷಣವೆಂದು ಪರಿಗಣಿಸಲಾಗುವುದಿಲ್ಲ. ಅಧ್ಯಾಪಕನು ಕೆಲಸ ಮಾಡುವ ಸನ್ನಿವೇಶಕ್ಕೆ ತಕ್ಕಂತೆ ಬದಲಾಗುವ ಅಂಶಗಳು ಮತ್ತು ನಿರ್ದಿಷ್ಟ ಶಿಕ್ಷಕ ಗುಣಲಕ್ಷಣಗಳ ನಡುವಿನ ಅನ್ಯೋನ್ಯಕ್ರಿಯೆಯ ಪರಿಣಾಮವನ್ನು ಬೋಧನಾ ಪ್ರಭಾವಶೀಲತೆಯೆಂದು ಪರಿಗಣಿಸಬಹುದು.

ಬೋಧನಾ ಪ್ರಭಾವಶೀಲತೆ ಪದದ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳಲು ನಾವು ಎರಡು ಮುಖ್ಯ ಪದಗಳಾದ 'ಅಧ್ಯಾಪಕ ಕಾರ್ಯಾಚರಣೆ' ಮತ್ತು 'ಅಧ್ಯಾಪಕ ದಕ್ಷತೆ'ಗಳ ಅರ್ಥಗಳನ್ನು ತಿಳಿದುಕೊಳ್ಳಬೇಕು. ಒಬ್ಬ ಅಧ್ಯಾಪಕ ತರಗತಿಯಲ್ಲಿ ಬೋಧಿಸುವಾಗ ತೋರಿಸುವ ವರ್ತನೆಗೆ ಅಧ್ಯಾಪಕ ಕಾರ್ಯಾಚರಣೆ ಎನ್ನುತ್ತೇವೆ. ಇದಕ್ಕೂ ಬೋಧನಾ ಪ್ರಭಾವಶೀಲತೆಗೂ ವ್ಯತ್ಯಾಸವಿದೆ. ಅಧ್ಯಾಪಕ ವರ್ತನೆಗಳು ಅಥವಾ ಅಧ್ಯಾಪಕ ಏನನ್ನು ಮಾಡುತ್ತಾನೋ ಅದರ ಆಧಾರದ ಮೇಲೆ ಅಧ್ಯಾಪಕ ಕಾರ್ಯಾಚರಣೆಯು ನಿರ್ಧರಿಸಲ್ಪಡುತ್ತದೆ. ಆದರೆ ಬೋಧನಾ ಪ್ರಭಾವಶೀಲತೆ ವಿದ್ಯಾರ್ಥಿಗಳು ಅಧ್ಯಾಪಕನ ಬೋಧನೆಯಿಂದ ಎಷ್ಟರಮಟ್ಟಿಗೆ ಕಲಿತಿದ್ದಾರೋ ಅಥವಾ ಏನನ್ನು ಸಾಧನೆ ಮಾಡಿದ್ದಾರೋ ಅದರ ಆಧಾರದ ಮೇಲೆ ನಿರ್ಧರಿಸಲ್ಪಡುತ್ತದೆ. ಆದಾಗ್ಯೂ ಅಧ್ಯಾಪಕನ ಕಾರ್ಯಾಚರಣೆಯ ಆಧಾರದ ಮೇಲೆ ಸಾಮಾನ್ಯವಾಗಿ ಬೋಧನಾ ಪ್ರಭಾವಶೀಲತೆಯನ್ನು ಊಹಿಸಲು ಸಾಧ್ಯವಿದೆ.

ಅಧ್ಯಾಪಕನು ಹೊಂದಿರುವ ಸಾಮರ್ಥ್ಯಗಳು, ಜ್ಞಾನಾಂಶಗಳು, ಬೋಧನೆ ಬಗ್ಗೆ ಇರುವ ಗ್ರಹಿಕೆಗಳು, ಬೋಧನಾ ಸನ್ನಿವೇಶಗಳಲ್ಲಿ ಉಪಯೋಗಿಸುವ ವಿವಿಧ ತಂತ್ರಗಳು ಇವೆಲ್ಲವನ್ನು ಒಟ್ಟಾಗಿ 'ಅಧ್ಯಾಪಕ ದಕ್ಷತೆ' ಎನ್ನುತ್ತೇವೆ. ಅಧ್ಯಾಪಕ ದಕ್ಷತೆಯು ಅಧ್ಯಾಪಕ ಕಾರ್ಯಾಚರಣೆ ಮತ್ತು ಬೋಧನಾ ಪ್ರಭಾವಶೀಲತೆಗಿಂತ ಭಿನ್ನವಾಗಿದೆ. ಹೇಗೆಂದರೆ ಅಧ್ಯಾಪಕ ದಕ್ಷತೆಯು ಅಧ್ಯಾಪಕನ ಗುಣಲಕ್ಷಣವಾಗಿದ್ದು ಅವು ಅಧ್ಯಾಪಕನು ಒಂದು ಸನ್ನಿವೇಶದಿಂದ ಮತ್ತೊಂದಕ್ಕೆ ಹೋದಾಗ ಹೆಚ್ಚು ಬದಲಾವಣೆಯಾಗದಿರಬಹುದು. ಆದರೂ ಕೆಲವು ಮಿತಿಗಳೊಳಗೆ ಒಬ್ಬ ಅಧ್ಯಾಪಕ ಅನುಭವದ ಆಧಾರದ ಮೇಲೆ ತನ್ನ ಬೋಧನಾ ದಕ್ಷತೆಯನ್ನು ಇನ್ನೂ ಉತ್ತಮಪಡಿಸಿಕೊಳ್ಳಬಹುದು.

ರೆಯಾನ್ಸ್ ಅವರ ಪ್ರಕಾರ ಅಧ್ಯಾಪಕನು ವಿದ್ಯಾರ್ಥಿಗಳಲ್ಲಿ ಮೂಲ ಕೌಶಲಗಳು, ತಿಳುವಳಿಕೆ, ಕೆಲಸದ ರೂಢಿ, ಅಪೇಕ್ಷಿತ ಮನೋಭಾವನೆಗಳು ಮತ್ತು ವೈಯಕ್ತಿಕ ಸಮಾಯೋಜನೆಯನ್ನು ಬೆಳೆಸಲು ಸೂಕ್ತವಾದ ರೀತಿಯಲ್ಲಿ ವರ್ತಿಸಿದರೆ ಬೋಧನೆಯು ಪರಿಣಾಮಕಾರಿಯಾಗಿರುತ್ತದೆ. ಅಧ್ಯಾಪಕನ ಈ ಪ್ರಭಾವವನ್ನೇ ಬೋಧನಾ ಪ್ರಭಾವಶೀಲತೆ ಎನ್ನಲಾಗಿದೆ.

ಕೋಮ್ಸ್ ಅವರ ಪ್ರಕಾರ ಯಾವ ಅಧ್ಯಾಪಕ ತನ್ನನ್ನು ತಾನೇ ಒಂದು ಪರಿಣಾಮಕಾರಿಯಾದ ಸಾಧನವನ್ನಾಗಿ ಉಪಯೋಗಿಸಿಕೊಳ್ಳಲು ಕಲಿತಿದ್ದಾನೋ ಅವನೇ ಉತ್ತಮ ಅಧ್ಯಾಪಕ.

ಪ್ರತಿದಿನದ ಬೋಧನಾ ಕಲಿಕಾ ಸನ್ನಿವೇಶದಲ್ಲಿ ಅಧ್ಯಾಪಕನು ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ಕಾರ್ಯಕ್ಷಮತೆಯನ್ನು ಪ್ರದರ್ಶಿಸಿದರೆ ಆತನ ಬೋಧನೆಯು ಪರಿಣಾಮಕಾರಿಯಾಗಿರುತ್ತದೆ. ಅವುಗಳೆಂದರೆ 1. ಅನುದೇಶದ ತಂತ್ರಗಳು 2. ತರಗತಿಯ ನಿರ್ವಹಣೆ 3. ವೈಯಕ್ತಿಕ ಪ್ರವೃತ್ತಿ ಮತ್ತು ಮನೋಧರ್ಮ 4. ಮೌಲ್ಯಮಾಪನ ಮತ್ತು ಪುನರ್ಬಲನ 5. ಅಂತರ್ ವ್ಯಕ್ತೀಯ ಸಂಬಂಧಗಳು 6. ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದು 7. ಉತ್ಸಾಹ 8. ವೃತ್ತಿ ಮೌಲ್ಯಗಳು ಮತ್ತು 9. ನಾವೀನ್ಯತೆ.

### ಬೋಧನಾ ಪ್ರಭಾವಶೀಲತೆಯ ಅಂಗಗಳು

ಬೋಧನಾ ಪ್ರಭಾವಶೀಲತೆಯ ಪರಿಕಲ್ಪನೆಯು ಒಂದು ಸಂಕೀರ್ಣ ಪರಿಕಲ್ಪನೆಯಾಗಿದ್ದು, ಅದು ಅನೇಕ ಅಂತರ್‌ಸಂಬಂಧಿತ ಪರಿಕಲ್ಪನೆಗಳನ್ನು ಒಳಗೊಂಡಿದೆ. ಬೋಧನಾ ಪ್ರಭಾವಶೀಲತೆಯು ಕನಿಷ್ಠ ಒಂಬತ್ತು ವಿವಿಧ ಅಂಶಗಳ ಮೇಲೆ ಅವಲಂಬಿತವಾಗಿದೆ. ಈ ಎಲ್ಲಾ ಅಂಶಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಬಹಳ ಮುಖ್ಯ.

1. **ಪೂರ್ವಸ್ಥಿತ ಅಧ್ಯಾಪಕ ಲಕ್ಷಣಗಳು:** ಅಧ್ಯಾಪಕರು ಹೊಂದಿರುವ ಲಕ್ಷಣಗಳಿಗೆ ಪೂರ್ವಸ್ಥಿತ ಅಧ್ಯಾಪಕ ಲಕ್ಷಣಗಳೆನ್ನುತ್ತೇವೆ. ಉದಾಹರಣೆಗೆ, ಹೊಂದಿಕೊಳ್ಳುವ ಸ್ವಭಾವ, ಅನುಕಂಪ ಮನೋಭಾವ, ಉತ್ಸಾಹ, ಪ್ರಾಮಾಣಿಕತೆ, ಲವಲವಿಕೆ, ಸ್ನೇಹಪರತೆ, ಉತ್ತಮ ತೀರ್ಮಾನ ಕೈಗೊಳ್ಳುವಿಕೆ ಮತ್ತು ನಿಷ್ಪಕ್ಷಪಾತ ವರ್ತನೆ.
2. **ಅಧ್ಯಾಪಕ ದಕ್ಷತೆಗಳು:** ಒಬ್ಬ ಅಧ್ಯಾಪಕನಲ್ಲಿರುವ ಜ್ಞಾನ, ಕೌಶಲಗಳು ಮತ್ತು ಗ್ರಹಿಕೆಗಳು ಅಧ್ಯಾಪಕ ದಕ್ಷತೆಗಳು.
3. **ಅಧ್ಯಾಪಕ ಕಾರ್ಯಾಚರಣೆ:** ಅಧ್ಯಾಪಕನು ತರಗತಿಯಲ್ಲಿ ಬೋಧಿಸುವಾಗ ತೋರಿಸುವ ವರ್ತನೆಯೇ ಅಧ್ಯಾಪಕ ಕಾರ್ಯಾಚರಣೆ.
4. **ವಿದ್ಯಾರ್ಥಿ ಕಲಿಕಾನುಭವಗಳು:** ಬೋಧನೆ–ಕಲಿಕೆ ಪ್ರಕ್ರಿಯೆ ಸಂದರ್ಭದಲ್ಲಿ ಅಧ್ಯಾಪಕನು ವಿದ್ಯಾರ್ಥಿಗಳಲ್ಲಿ ಉಂಟುಮಾಡುವ ಕಲಿಕಾ ಅನುಭವಗಳೇ ವಿದ್ಯಾರ್ಥಿ ಕಲಿಕಾನುಭವಗಳು.
5. **ವಿದ್ಯಾರ್ಥಿ ಕಲಿಕಾ ಫಲಿತಗಳು:** ಜ್ಞಾನದಲ್ಲಿ ವೃದ್ಧಿ, ತಿಳುವಳಿಕೆ ಮತ್ತು ಕೌಶಲಗಳ ವಿಕಾಸ, ಭಾವನೆಗಳಲ್ಲಿ ಮತ್ತು ಸಂವೇಗಗಳಲ್ಲಿ ಬದಲಾವಣೆ ಇವೆಲ್ಲವೂ ವಿದ್ಯಾರ್ಥಿಯಲ್ಲಿ ಕಲಿಕೆಯಿಂದಾಗುವ ಫಲಿತಗಳು.
6. **ಅಧ್ಯಾಪಕ ತರಬೇತಿ:** ಅಧ್ಯಾಪಕ ತರಬೇತಿಯು ಅಧ್ಯಾಪಕನಿಗೆ ಈಗಾಗಲೇ ತನ್ನಲ್ಲಿರುವ ದಕ್ಷತೆಗಳ ಜೊತೆಗೆ ಇನ್ನಿತರ ದಕ್ಷತೆಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ.
7. ಬಾಹ್ಯ ಸಂದರ್ಭ ಅಂಶಗಳು: ಇವು ಅಧ್ಯಾಪಕನು ಕೆಲಸ ಮಾಡುವ ಶಾಲೆಯ ಲಕ್ಷಣಗಳಾಗಿದ್ದು ಈ ಲಕ್ಷಣಗಳು ಅಧ್ಯಾಪಕನ ದಕ್ಷತೆಗಳೊಂದಿಗೆ ಅನ್ಯೋನ್ಯಕ್ರಿಯಿಸಿ ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಅಧ್ಯಾಪಕ ಹೇಗೆ ಕಾರ್ಯಾಚರಣೆ ಮಾಡುತ್ತಾನೆಂಬುದನ್ನು ನಿರ್ಧರಿಸುತ್ತವೆ. ಶಾಲೆಯ ಭೌತಿಕ ಸೌಲಭ್ಯಗಳು, ಅಧ್ಯಾಪಕನಿಗೆ ಲಭ್ಯವಿರುವ ಮಾಧ್ಯಮಗಳು ಮತ್ತು ಸಾಮಗ್ರಿಗಳು, ತರಗತಿಯ ಗಾತ್ರ ಪ್ರಮುಖ ಬಾಹ್ಯ ಸಂದರ್ಭ ಅಂಶಗಳಾಗಿವೆ.
8. ಆಂತರಿಕ ಸಂದರ್ಭ ಅಂಶಗಳು: ಇವು ಅಧ್ಯಾಪಕನು ಬೋಧಿಸುತ್ತಿರುವ ತರಗತಿಗೆ ಸಂಬಂಧಿಸಿದ ಅಂಶಗಳಾಗಿದ್ದು, ಈ ಲಕ್ಷಣಗಳು ಅಧ್ಯಾಪಕ ಕಾರ್ಯಾಚರಣೆಯೊಂದಿಗೆ ಅನ್ಯೋನ್ಯಕ್ರಿಯಿಸಿ ತರಗತಿಯಲ್ಲಿ ವಿದ್ಯಾರ್ಥಿಗಳ ಕಲಿಕಾ ಅನುಭವಗಳನ್ನು ನಿರ್ಧರಿಸುತ್ತವೆ. ಉದಾಹರಣೆಗೆ ತರಗತಿಯ ಸರಾಸರಿ ಸಾಮರ್ಥ್ಯ, ವಿದ್ಯಾರ್ಥಿಗಳ ವಿವಿಧ ಸಾಮಾಜಿಕ ಹಿನ್ನೆಲೆ, ವಿದ್ಯಾರ್ಥಿಗಳ ನಡುವಿನ

Digitised by Bharatavani, CIIL

ಸಂಬಂಧಗಳು ಇವುಗಳೆಲ್ಲವೂ ಪ್ರಮುಖ ಆಂತರಿಕ ಸಂದರ್ಭ ಅಂಶಗಳಾಗಿವೆ.

9. ವಿದ್ಯಾರ್ಥಿಯ ವ್ಯಕ್ತಿಗತ ಲಕ್ಷಣಗಳು: ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯದಲ್ಲಿ, ಆಸಕ್ತಿಗಳಲ್ಲಿ ಮತ್ತು ಮೌಲ್ಯಗಳಲ್ಲಿ ವ್ಯತ್ಯಾಸ ಹೊಂದಿರುವುದರಿಂದ ಒಂದೇ ತರಹದ ಕಲಿಕಾ ಅನುಭವಗಳಿಂದ ಬೇರೆ ಬೇರೆ ರೀತಿಯಲ್ಲಿ ಪ್ರಭಾವಿತರಾಗಬಹುದು.

ಈ ಎಲ್ಲಾ ಅಂಶಗಳು ಯಾವುದೇ ಬೋಧನೆ–ಕಲಿಕೆ ಸನ್ನಿವೇಶವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿಸುವಲ್ಲಿ ಮಹತ್ವವಾದ ಪಾತ್ರವನ್ನು ನಿರ್ವಹಿಸುತ್ತವೆ.

## ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನದ ಅವಶ್ಯಕತೆ

ಅಧ್ಯಾಪಕರ ಸಾಧನೆಯ ಗುಣಮಟ್ಟವನ್ನು ನಿಗದಿಗೊಳಿಸಲು ಅವರ ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಬೇಕಾದ ಅವಶ್ಯಕತೆಯಿದೆ. ಬೋಧನಾ ದಕ್ಷತೆ ಮತ್ತು ಬೋಧನಾ ಕಾರ್ಯಕ್ಷಮತೆಗೆ ಸಂಬಂಧಿಸಿದಂತೆ ಅಧ್ಯಾಪಕರ ನಡುವೆ ಬಹಳಷ್ಟು ವ್ಯತ್ಯಾಸವಿರುತ್ತದೆ. ಇದರಿಂದಾಗಿ ಅಧ್ಯಾಪಕರ ಬೋಧನಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಲವರ ಬೋಧನೆ ಪರಿಣಾಮಕಾರಿಯಾಗಿರುತ್ತದೆ ಮತ್ತೆ ಕೆಲವರದು ಪರಿಣಾಮಕಾರಿಯಾಗಿರುವುದಿಲ್ಲ. ಆದ್ದರಿಂದ ಪರಿಣಾಮಕಾರಿಯಾಗಿಲ್ಲದ ಅಧ್ಯಾಪಕರನ್ನು ಗುರುತಿಸಿ ಅವರ ಬೋಧನಾ ದಕ್ಷತೆ ಮತ್ತು ಬೋಧನಾ ಕಾರ್ಯಕ್ಷಮತೆಗಳನ್ನು ಉತ್ತಮಗೊಳಿಸಿಕೊಳ್ಳುವ ಅವಶ್ಯಕತೆಯಿದೆ. ಈ ಕಾರಣಗಳಿಂದಾಗಿ ಅಧ್ಯಾಪಕರ ಸಾಧನೆಯ ಗುಣಮಟ್ಟವನ್ನು ನಿಗದಿಗೊಳಿಸಲು ಅವರ ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಬೇಕಾದ ಅವಶ್ಯಕತೆಯಿದೆ.

ಅಧ್ಯಾಪಕರು ತಮ್ಮ ಬೋಧನೆಯನ್ನು ಉತ್ತಮಪಡಿಸಿಕೊಳ್ಳಲು ನೆರವಾಗಲು ಅವರ ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಬೇಕಾದ ಅವಶ್ಯಕತೆಯಿದೆ. ವಿದ್ಯಾರ್ಥಿಗಳ ಕಲಿಕಾ ಫಲಿತಗಳನ್ನು ಮೌಲ್ಯಮಾಪನ ಮಾಡುವ ರೀತಿಯಲ್ಲೇ ಅಧ್ಯಾಪಕರುಗಳ ಬೋಧನಾ ಪ್ರಭಾವಶೀಲತೆಯನ್ನೂ ಮೌಲ್ಯಮಾಪನ ಮಾಡಬೇಕು. ಈ ರೀತಿಯ ಮೌಲ್ಯಮಾಪನವು ಅಧ್ಯಾಪಕರಿಗೆ ಅವರ ಬೋಧನಾ ದಕ್ಷತೆಯ ಬಗ್ಗೆ ತಿಳುವಳಿಕೆ ನೀಡಲು ಮತ್ತು ಆ ಮೂಲಕ ಅವರು ತಮ್ಮ ಬೋಧನಾ ಶೈಲಿಯನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನ ಮಾಡಲು ನೆರವಾಗುತ್ತದೆ.

ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನವು ಬಡ್ತಿ ನೀಡಲು ನಿರ್ಧಾರಗಳನ್ನು ಕೈಗೊಳ್ಳಲು ನೆರವಾಗುತ್ತದೆ. ಬೋಧನಾ ಪ್ರಭಾವ ಶೀಲತೆಯ ವಾಸ್ತವ ಮೌಲ್ಯಮಾಪನದ ಆಧಾರದ ಮೇಲೆ ಅಧ್ಯಾಪಕರನ್ನು ಹೆಚ್ಚು ಅಥವಾ ಕಡಿಮೆ ಪರಿಣಾಮಕಾರಿ ಅಧ್ಯಾಪಕರೆಂದು ಗುರುತಿಸಲು ಸಾಧ್ಯವಾಗುತ್ತದೆ. ಹೆಚ್ಚು ಪರಿಣಾಮಕಾರಿಯಾದ ಅಧ್ಯಾಪಕರಿಗೆ ಉತ್ತೇಜಕಗಳನ್ನು ನೀಡಬೇಕಾದ ಅವಶ್ಯಕತೆಯಿದೆ. ಅದು ಬಹುಮಾನ, ಪ್ರಮಾಣಪತ್ರ ಅಥವಾ ಬಿರುದಿನ ರೂಪದಲ್ಲಿ ಇರಬಹುದು. ಸರ್ಕಾರಿ ಹಾಗೂ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ದಕ್ಷ ಹಾಗೂ ಪ್ರಭಾವಶಾಲಿ ಅಧ್ಯಾಪಕರಿಗೆ ಬಡ್ತಿಯನ್ನು ನೀಡುವ ಪರಿಪಾಠವಿದೆ. ಉತ್ತಮ ಅಧ್ಯಾಪಕರಿಗೆ ಹೆಚ್ಚಿನ ಸಂಬಳವನ್ನೂ ಸಹ ನೀಡುವ ಸಾಧ್ಯತೆಯಿದೆ.

## ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನದ ಹಂತಗಳು

ಬೋಧನಾ ಪ್ರಭಾವಶೀಲತೆಯನ್ನು ಮೂರು ಹಂತಗಳಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಅವುಗಳೆಂದರೆ ಪ್ರಕ್ರಿಯಾ ಪೂರ್ವಭಾವಿ, ಪ್ರಕ್ರಿಯೆ ಮತ್ತು ಉತ್ಪನ್ನ ಹಂತ.

1. **ಪ್ರಕ್ರಿಯಾ ಪೂರ್ವಭಾವಿ ಹಂತ:** ಅಧ್ಯಾಪಕನು ತರಗತಿಯನ್ನು ಪ್ರವೇಶಿಸುವ ಮೊದಲೇ ಅವನ ಬೋಧನೆ ಬಗ್ಗೆ ಮಾಡುವ ಮೌಲ್ಯಮಾಪನಕ್ಕೆ ಪ್ರಕ್ರಿಯಾ ಪೂರ್ವಭಾವಿ ಮೌಲ್ಯಮಾಪನವೆನ್ನುತ್ತೇವೆ. ಈ ಹಂತದಲ್ಲಿ ಅಧ್ಯಾಪಕನ ಶೈಕ್ಷಣಿಕ ಹಿನ್ನೆಲೆ ಮತ್ತು ವ್ಯಕ್ತಿಗತ ಲಕ್ಷಣಗಳ ಬಗ್ಗೆ ಮೌಲ್ಯಮಾಪನ ಮಾಡಲಾಗುತ್ತದೆ. ಈ ಹಂತದ ಮೌಲ್ಯಮಾಪನಕ್ಕೆ ಮಹತ್ವ ನೀಡುವವರ ಪ್ರಕಾರ ಅಧ್ಯಾಪಕನ ಬೌದ್ಧಿಕ ಸಾಮರ್ಥ್ಯಗಳು, ಆತನ ಶಿಕ್ಷಣ ಮಟ್ಟ ಮತ್ತು ಆತ ಪಡೆದಿರುವ ತರಬೇತಿಯನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ಆತನ ಬೋಧನಾ ಪ್ರಭಾವಶೀಲತೆಯನ್ನು ಅಳೆಯಬಹುದು. ಬೋಧನಾ ಪ್ರಭಾವಶೀಲತೆಯನ್ನು ಕಾಲೇಜು ದಾಖಲೆಗಳು ಮತ್ತು ಪರೀಕ್ಷಾ ಅಂಕಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವ ಮೂಲಕ ಸ್ಥೂಲವಾಗಿ ಅಳೆಯಬಹುದು. ಆದರೆ ಈ ಕ್ರಮ ಅಷ್ಟೊಂದು ನಿಖರವಾಗಿರುವುದಿಲ್ಲ.

2. **ಪ್ರಕ್ರಿಯೆ ಹಂತ:** ಅಧ್ಯಾಪಕನು ಬೋಧನೆ ಮಾಡುವಾಗ ಆತನ ಕಾರ್ಯಾಚರಣೆ ಮತ್ತು ವರ್ತನೆ, ವಿದ್ಯಾರ್ಥಿಗಳ ವರ್ತನೆ ಮತ್ತು ತರಗತಿಯಲ್ಲಿ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ನಡುವಿನ ಅನ್ಯೋನ್ಯಕ್ರಿಯೆ ಇವುಗಳನ್ನು ಈ ಹಂತದಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಈ ರೀತಿಯ ಮೌಲ್ಯಮಾಪನಕ್ಕೆ ಮಹತ್ವ ನೀಡುವವರ ಪ್ರಕಾರ ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಲು ಇರುವ ಹೆಚ್ಚು ನಿಖರತೆಯಿಂದ ಕೂಡಿದ ಏಕೈಕ ಮಾರ್ಗವೆಂದರೆ ತರಗತಿಯಲ್ಲಿ ಅಧ್ಯಾಪಕನ ಮತ್ತು ವಿದ್ಯಾರ್ಥಿಗಳ ಕಾರ್ಯವನ್ನು ಮತ್ತು ಇವರಿಬ್ಬರ ನಡುವಿನ ಅನ್ಯೋನ್ಯಕ್ರಿಯೆಯ ರೀತಿಯನ್ನು ಮೌಲ್ಯಮಾಪನ ಮಾಡುವುದು. ವಿದ್ಯಾರ್ಥಿಗಳು ಅಧ್ಯಾಪಕರ ಬಗ್ಗೆ ತೋರಿಸುವ ಪ್ರೀತಿಪೂರ್ವಕ ವರ್ತನೆ, ತರಗತಿಯಲ್ಲಿ ಅವರು ತೋರುವ ಗಮನ ಮತ್ತು ಆಸಕ್ತಿ, ಶಿಸ್ತಿಗೆ ಬದ್ಧರಾಗಿರುವುದು, ಪ್ರಶ್ನೆಗಳಿಗೆ ಉತ್ತರಿಸುವ ರೀತಿ, ಪ್ರಶ್ನಿಸುವ ಶೈಲಿ ಇವುಗಳ ಆಧಾರದ ಮೇಲೆ ವಿದ್ಯಾರ್ಥಿಗಳ ವರ್ತನೆಯನ್ನು ಮೌಲ್ಯಮಾಪನ ಮಾಡಲಾಗುತ್ತದೆ.

3. **ಉತ್ಪನ್ನ ಹಂತ:** ವಿದ್ಯಾರ್ಥಿಗಳು ಕಲಿತಿರುವುದರ ಅಥವಾ ಬೋಧನೆ–ಕಲಿಕೆ ಪ್ರಕ್ರಿಯೆಯ ಫಲಿತಗಳನ್ನು ಮೌಲ್ಯಮಾಪನ ಮಾಡುವುದೇ "ಉತ್ಪನ್ನ ಮೌಲ್ಯಮಾಪನ". ವಿದ್ಯಾರ್ಥಿಗಳ ವರ್ತನೆಯಲ್ಲಿನ ಬದಲಾವಣೆ, ಬೆಳವಣಿಗೆ ಮತ್ತು ಕಲಿಕೆ ಇವು ಬೋಧನಾ ಪ್ರಭಾವಶೀಲತೆಯ ಸೂಕ್ತ ಮಾನದಂಡಗಳೆಂಬುದು ಶಿಕ್ಷಣ ತಜ್ಞರ ನಂಬಿಕೆ. ವಿದ್ಯಾರ್ಥಿಗಳ ಗಳಿಕೆ, ಬೆಳವಣಿಗೆ ಮತ್ತು ಅವರ ವರ್ತನೆಯಲ್ಲಿನ ಬದಲಾವಣೆಗಳನ್ನು ಮೌಲ್ಯಮಾಪನ ಮಾಡುವ ಮೂಲಕ ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಬೇಕೆಂಬುದು ಶಿಕ್ಷಣ ತಜ್ಞರಾದ ಟ್ರವರ್ಸ್, ರೈಯಾನ್ಸ್ ಮತ್ತು ರೋಬಿನೋವಿಟ್ಸ್ ಅವರ ನಿಲುವಾಗಿದೆ. ವಿದ್ಯಾರ್ಥಿಗಳ ಫಲಿತಗಳ ಆಧಾರದ ಮೇಲೆ ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಿದರೆ ಅದು ದೋಷದಿಂದ ಕೂಡಿರಬಹುದಾದ ಸಾಧ್ಯತೆಯಿದೆ. ಅಧ್ಯಾಪಕನ ಕಾರ್ಯಾಚರಣೆಗೆ ಸಂಬಂಧಿಸಿಲ್ಲದ ಕೆಲವು ಅಂಶಗಳು ಮಧ್ಯೆ ಬಂದು ವಿದ್ಯಾರ್ಥಿಗಳ ವರ್ತನೆಯ ಮೇಲೆ ಪ್ರಭಾವ ಬೀರಬಹುದು. ತರಗತಿಯ ಸ್ಥಿತಿಗಳು, ವಿದ್ಯಾರ್ಥಿಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿ ಮತ್ತು ಸಾಮಗ್ರಿಗಳ ಲಭ್ಯತೆ ಇವುಗಳು ಸಹ ವಿದ್ಯಾರ್ಥಿಗಳ ಫಲಿತಗಳ ಮೇಲೆ ಪ್ರಭಾವ ಬೀರಬಹುದು. ಈ ಎಲ್ಲ ಸಮಸ್ಯೆಗಳ ಹೊರತಾಗಿಯೂ, ವಿದ್ಯಾರ್ಥಿಗಳ ಸಾಧನೆಯ ಪ್ರಮಾಣ ಮತ್ತು ಮಟ್ಟ ಬೋಧನಾ ಪ್ರಭಾವಶೀಲತೆಯ ಉತ್ತಮ ಸೂಚಕಗಳಾಗಿವೆ.

Digitised by Bharatavani, CIIL

**ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನವನ್ನು ಯಾರು ಮಾಡಬೇಕು ?**

ಬೋಧನಾ ಪ್ರಭಾವಶೀಲತೆಯನ್ನು ಅಧ್ಯಾಪಕರು ಸ್ವತಃ ತಾವೇ ಮೌಲ್ಯಮಾಪನ ಮಾಡಿಕೊಳ್ಳಬಹುದು. ಇದಕ್ಕೆ ಸ್ವ-ಮೌಲ್ಯಮಾಪನವೆನ್ನುತ್ತೇವೆ. ಇದಲ್ಲದೆ ಅಧ್ಯಾಪಕನ ಸಹವರ್ತಿಗಳು, ಮೇಲ್ವಿಚಾರಕರು ಮತ್ತು ವಿದ್ಯಾರ್ಥಿಗಳು ಸಹ ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನವನ್ನು ಮಾಡಬಹುದು.

1. **ಸ್ವ-ಮೌಲ್ಯಮಾಪನ:** ಅಧ್ಯಾಪಕರು ತಮ್ಮ ಬೋಧನಾ ವರ್ತನೆಯನ್ನು ಶಿಸ್ತುಬದ್ಧವಾಗಿ ಮೌಲ್ಯಮಾಪನ ಮಾಡಿಕೊಳ್ಳಬೇಕಾದ ಅವಶ್ಯಕತೆಯಿದೆ. ತಮ್ಮ ಬೋಧನಾ ಸಾಮರ್ಥ್ಯದ ಬಗ್ಗೆ ತಿಳಿದುಕೊಳ್ಳಲು ಅಧ್ಯಾಪಕರು ಸ್ವ-ಮೌಲ್ಯಮಾಪನ ಮಾಡಿಕೊಳ್ಳಲು ಸೈದ್ಧಾಂತಿಕವಾಗಿ ಸಿದ್ಧರಿದ್ದರೂ ಕೆಲವೇ ಕೆಲವು ಅಧ್ಯಾಪಕರು ತಮ್ಮ ಬೋಧನೆಯ ಪರಿಣಾಮವಾದ ವಿದ್ಯಾರ್ಥಿಗಳ ಕಲಿಕಾ ವರ್ತನೆಯ ಆಧಾರದ ಮೇಲೆ ತಮ್ಮ ವರ್ತನೆಯ ಮೌಲ್ಯಮಾಪನ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಅಧ್ಯಾಪಕರು ಏನನ್ನು ಸಾಧನೆ ಮಾಡಬೇಕೆಂದು ನಿರ್ಧರಿಸಿರುತ್ತಾರೋ ಮತ್ತು ಅವರು ನಿಜವಾಗಿಯೂ ಏನನ್ನು ಸಾಧನೆ ಮಾಡುತ್ತಿದ್ದಾರೋ ಇವೆರಡರ ನಡುವಿನ ವ್ಯತ್ಯಾಸವನ್ನು ಗುರುತಿಸದ ಹೊರತು ಅವರು ತಮ್ಮ ಬೋಧನಾ ಶೈಲಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ಅಧ್ಯಾಪಕರಿಗೆ ತಮ್ಮ ಬೋಧನೆಯ ಸ್ವ-ಮೌಲ್ಯಮಾಪನಕ್ಕೆ ನೆರವಾಗಲು ಆಡಿಯೊ ಮತ್ತು ವೀಡಿಯೊ ರೆಕಾರ್ಡಿಂಗ್ ಸೌಲಭ್ಯ ಒದಗಿಸುವ ಅವಶ್ಯಕತೆ ಇದೆ. ಹೀಗೆ ಮಾಡುವುದರಿಂದ ಅಧ್ಯಾಪಕರು ತಮ್ಮ ಬೋಧನಾ ಕಾರ್ಯ ಮುಗಿದ ಬಳಿಕೆ, ಬಿಡುವಿನ ವೇಳೆಯಲ್ಲಿ ತಮ್ಮ ಬೋಧನೆಯನ್ನು ತಾವೇ ಸ್ವತಃ ವೀಕ್ಷಿಸಿಕೊಳ್ಳಬಹುದು. ಅಧ್ಯಾಪಕರು ತಮ್ಮ ಬೋಧನೆಯನ್ನು ತಾವೇ ವೀಕ್ಷಿಸಿಕೊಳ್ಳುವುದರ ಮೂಲಕ ತಮ್ಮ ಮನೋಭಾವನೆಗಳಲ್ಲಿ ಮತ್ತು ವರ್ತನೆಗಳಲ್ಲಿ ನಿರೀಕ್ಷಿತ ಬದಲಾವಣೆಗಳನ್ನು ತರಲು ಸಾಧ್ಯವಿದೆ ಎಂಬುದು ಸಂಶೋಧಕರ ಅಭಿಮತವಾಗಿದೆ. ಇದು ಸಾಧ್ಯವಾಗಬೇಕಾದರೆ ಅಧ್ಯಾಪಕರಿಗೆ ಇಚ್ಛಿತ ಗುಣಮಟ್ಟಕ್ಕಿಂತ ಅವರ ಸಾಧನೆ ಎಷ್ಟರ ಮಟ್ಟಿಗೆ ಭಿನ್ನವಾಗಿದೆ ಎಂಬುದರ ಬಗ್ಗೆ ಅರಿವು ಮೂಡಿಸಬೇಕಾದ ಅವಶ್ಯಕತೆಯಿದೆ.

2. **ಮೇಲ್ವಿಚಾರಕರಿಂದ ಮೌಲ್ಯಮಾಪನ:** ಬೋಧನಾ ವರ್ತನೆಗಳನ್ನು ದಾಖಲಿಸಲು ಮತ್ತು ವಿಶ್ಲೇಷಿಸಲು ನಿಯಮಬದ್ಧವಾದ ವೀಕ್ಷಣೆಯು ಉಪಯುಕ್ತವಾಗಿದೆ. ಮೇಲ್ವಿಚಾರಕರ ನಿಯಮಬದ್ಧ ವೀಕ್ಷಣೆಯಿಂದ ದೊರೆಯುವ ಮಾಹಿತಿಯು ಬದಲಿ ಬೋಧನಾ ತಂತ್ರಗಳನ್ನು ಅಳವಡಿಸಿಕೊಳ್ಳಲು ಮತ್ತು ಈ ಹಿಂದೆ ಗಮನ ನೀಡದ ಬೋಧನಾ ಉದ್ದೇಶಗಳ ಕಡೆ ಗಮನಹರಿಸಲು ಸಾಧ್ಯವಾಗುತ್ತದೆ. ಬೋಧನೆಯಿಂದಾಗಿ ವಿದ್ಯಾರ್ಥಿಗಳ ನಿರ್ದಿಷ್ಟ ವರ್ತನೆಗಳಲ್ಲಿ ಯಾವ ರೀತಿಯ ಬದಲಾವಣೆ ಉಂಟಾಗಿದೆ ಎಂಬುದರ ಆಧಾರದ ಮೇಲೆ ಬೋಧನಾ ದಕ್ಷತೆಯನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

3. **ಸಹೋದ್ಯೋಗಿಗಳಿಂದ ಮೌಲ್ಯಮಾಪನ:** ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನವನ್ನು ಅಧ್ಯಾಪಕರ ಸಹೋದ್ಯೋಗಿಗಳೂ ಮಾಡಬಹುದು. ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಲು ಸಂಸ್ಥೆಯ ಮುಖ್ಯಸ್ಥರು ಮತ್ತು ಸಹೋದ್ಯೋಗಿಗಳು ಸಾಮಾನ್ಯವಾಗಿ ದರ್ಜಾ ಮಾಪನಿಗಳನ್ನು ಸಾಧನವನ್ನಾಗಿ ಬಳಸುತ್ತಾರೆ. ಕೆಲವೊಮ್ಮೆ ಈ ದರ್ಜಾಮಾಪನಿಗಳಲ್ಲಿರುವ ಬಹಳಷ್ಟು ಅಂಶಗಳು ಸ್ಪಷ್ಟವಾಗಿಲ್ಲದ ಕಾರಣ ವೀಕ್ಷಕರಿಗೆ ಅಧ್ಯಾಪಕರ ವರ್ತನೆಯನ್ನು ನಿಖರವಾಗಿ ತೀರ್ಮಾನಿಸಲು ಸಾಧ್ಯವಾಗುವುದಿಲ್ಲ. ಅಧ್ಯಾಪಕರ ವರ್ತನೆಯ ಆಯ್ಕೆಯಲ್ಲಿನ ನಿಯಂತ್ರಣದ ಕೊರತೆ, ಅಧ್ಯಾಪಕರ ಕಾರ್ಯಾಚರಣೆಯ ಮೇಲೆ ವೀಕ್ಷಕರ ಪ್ರಭಾವ, ವೀಕ್ಷಕರ ಪಕ್ಷಪಾತ ದೃಷ್ಟಿಕೋನ ಇವುಗಳೆಲ್ಲವೂ ಸಹೋದ್ಯೋಗಿಗಳ ಮೌಲ್ಯಮಾಪನದ ಮಿತಿಗಳಾಗಿದ್ದು ಅಧ್ಯಾಪಕ ಪ್ರಭಾವಶೀಲತೆಯ ವಸ್ತುನಿಷ್ಠ ಮೌಲ್ಯಮಾಪನಕ್ಕೆ ಅಡ್ಡಿ ಬರುತ್ತವೆ.

4. **ವಿದ್ಯಾರ್ಥಿಗಳಿಂದ ಮೌಲ್ಯಮಾಪನ:** ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಮುಖ್ಯವಾದದ್ದು. ಕೆಳ ಹಂತದ ವಿದ್ಯಾರ್ಥಿಗಳಿಂದ ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನ ಮಾಡಲು ಕಷ್ಟವಾಗುತ್ತದೆ. ಆದರೆ ಕಾಲೇಜು ಹಂತದ ವಿದ್ಯಾರ್ಥಿಗಳಿಂದ ಇದು ಸಾಧ್ಯವಾಗುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಾಮಾನ್ಯವಾಗಿ ಅಧ್ಯಾಪಕರಿಗೆ ಬಡ್ತಿ ನೀಡುವ ಮೊದಲು ಅಧ್ಯಾಪಕರು ವಿದ್ಯಾರ್ಥಿಗಳಿಂದ ಮೌಲ್ಯಮಾಪನಕ್ಕೆ ಒಳಪಡಬೇಕಾದ ನಿಯಮವಿದೆ. ಈ ರೀತಿಯ ಮೌಲ್ಯಮಾಪನ ಔಪಚಾರಿಕವಾಗಿ ಬರವಣಿಗೆ ಮೂಲಕ ದಾಖಲಿಸುವುದರ ಜೊತೆಗೆ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರೊಂದಿಗಿನ ಚರ್ಚೆಗಳನ್ನು ಒಳಗೊಂಡಿರುತ್ತದೆ. ವಿದ್ಯಾರ್ಥಿಗಳು ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಸಾಮಾನ್ಯವಾಗಿ ಪ್ರಶ್ನಾವಳಿಯನ್ನು ಉಪಯೋಗಿಸಲಾಗುತ್ತದೆ. ವಿದ್ಯಾರ್ಥಿಗಳು ಅಧ್ಯಾಪಕರ ವಿವಿಧ ಬೋಧನಾ ವರ್ತನೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗುತ್ತದೆ. ಸಲಹೆಗಳನ್ನು ನೀಡಲು ಕೆಲವೊಮ್ಮೆ ಅವಕಾಶ ಮಾಡಿಕೊಡಲಾಗುತ್ತದೆ. ವಿದ್ಯಾರ್ಥಿಗಳು ಪೂರ್ವಗ್ರಹಪೀಡಿತರಾಗಿದ್ದರೆ, ಪಕ್ಷಪಾತ ಧೋರಣೆಯುಳ್ಳವರಾಗಿದ್ದರೆ ಮತ್ತು ಸರಿಯಾದ ತೀರ್ಮಾನ ತೆಗೆದುಕೊಳ್ಳಲು ಅಶಕ್ತರಾಗಿದ್ದರೆ ಅವರ ಮೌಲ್ಯಮಾಪನದಿಂದ ಪಡೆದ ಮಾಹಿತಿಯು ಪ್ರಯೋಜನಕಾರಿಯಾಗುವುದಿಲ್ಲ.

**ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನದ ವಿಧಾನಗಳು**

ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡಲು ಮುಖ್ಯವಾಗಿ ಮೂರು ವಿಧಾನಗಳನ್ನು ಬಳಸಲಾಗುತ್ತದೆ.

1. **ವೃತ್ತಿ ತೀರ್ಪು:** ಶಿಕ್ಷಕರ ಗುಣಾತ್ಮಕ ದರ್ಜಾವಾರು ವಿಂಗಡಣೆಯು ತೀರ್ಪು ವಿಧಾನದ ವಿಶಿಷ್ಟತೆಯಾಗಿದೆ. ಒಳ್ಳೆಯ ಅಧ್ಯಾಪಕನನ್ನು ಒಳ್ಳೆಯ ಅಧ್ಯಾಪಕನೆಂದು ಗುರುತಿಸುತ್ತೇವೆ. ಇದಕ್ಕೆ ಕಾರಣ ಅವನು ಒಳ್ಳೆಯ ವ್ಯಕ್ತಿಯಾಗಿರುತ್ತಾನೆ, ಬೇರೆಯವರೊಂದಿಗೆ ಸ್ನೇಹಪರನಾಗಿರುತ್ತಾನೆ, ವಿದ್ಯಾರ್ಥಿಗಳೊಂದಿಗೆ ಪ್ರೀತಿಯಿಂದ ವರ್ತಿಸುತ್ತಾನೆ, ಕಷ್ಟಪಟ್ಟು ಬೋಧನೆ ಮಾಡುತ್ತಾನೆ ಮತ್ತು ಸಮಯಪ್ರಜ್ಞೆ ಉಳ್ಳವನಾಗಿರುತ್ತಾನೆ. ಅದೇ ರೀತಿಯಲ್ಲಿ ಒಬ್ಬ ಅಧ್ಯಾಪಕನ ಸಾಮಾನ್ಯ ವರ್ತನೆ ಮತ್ತು ಜೀವನ ಶೈಲಿಯು ಶಾಲೆಯ ಮತ್ತು ಸಮುದಾಯದ ಮೌಲ್ಯಗಳು ಮತ್ತು ನಿರೀಕ್ಷೆಗಳಿಗೆ ಹೊಂದುವಂತಿದ್ದರೆ ಆತನನ್ನು ಒಳ್ಳೆಯ ಅಧ್ಯಾಪಕನೆಂದು ಭಾವಿಸಲಾಗುತ್ತದೆ.

2. **ವೀಕ್ಷಣೆ:** ಈ ವಿಧಾನದಲ್ಲಿ ವಿದ್ಯಾರ್ಥಿ ಬೆಳವಣಿಗೆಗೆ ಸಂಬಂಧಿಸಿದ ವೈವಿಧ್ಯಮಯ ಮತ್ತು ನಿರ್ದಿಷ್ಟ ಅಧ್ಯಾಪಕ ವರ್ತನೆಗಳನ್ನು ವೀಕ್ಷಣೆಯ ಮೂಲಕ ನಿಯಮಬದ್ಧವಾಗಿ ದಾಖಲಿಸಲಾಗುತ್ತದೆ. ಅಧ್ಯಾಪಕ ವರ್ತನೆಗಳನ್ನು ವೀಕ್ಷಿಸಿ ದಾಖಲಿಸಿದ ನಂತರ, ವಿದ್ಯಾರ್ಥಿ ಬದಲಾವಣೆ ಸೂಚಕಗಳೊಂದಿಗೆ ಹೋಲಿಸಿ ಅಧ್ಯಾಪಕ ಕಾರ್ಯಾಚರಣೆಯ ಮಹತ್ವವನ್ನು ಗುರುತಿಸಲಾಗುತ್ತದೆ.

3. **ಪ್ರಾಯೋಗಿಕ ಅಧ್ಯಯನಗಳು:** ಪ್ರಾಯೋಗಿಕ ವಿಧಾನ ಬೋಧನಾ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡುವಲ್ಲಿ ಅತ್ಯಂತ ನಿಖರವಾದ ವಿಧಾನವಾಗಿದೆ. ಪ್ರಾಯೋಗಿಕ ವಿಧಾನವು ಸಂಶೋಧಕನಿಗೆ ಕಾರಣ

Digitised by Bharatavani, CIIL

ಮತ್ತು ಪರಿಣಾಮಗಳ ನಡುವಿನ ಸಂಬಂಧಗಳನ್ನು ಪತ್ತೆಹಚ್ಚಲು ನೆರವಾಗುವುದರಿಂದ ಬೋಧನಾ ಪ್ರಭಾವಶೀಲತೆಯ ಮೌಲ್ಯಮಾಪನದ ಒಂದು ಮುಖ್ಯ ವಿಧಾನವಾಗಿದೆ. ಪ್ರಾಯೋಗಿಕ ಮಾರ್ಗೋಪಾಯವನ್ನು ಬಳಸಿ ಸಂಶೋಧಕನು ಅಧ್ಯಯನಕ್ಕೆ ಒಳಪಟ್ಟ ಅಧ್ಯಾಪಕ ದಕ್ಷತೆಗಳೇ ಅಳೆಯಲ್ಪಡುತ್ತಿರುವ ವಿದ್ಯಾರ್ಥಿ ಫಲಿತಗಳನ್ನು ಉಂಟುಮಾಡಿವೆಯೇ ಎಂಬುದನ್ನು ನಿಖರವಾಗಿ ತೀರ್ಮಾನಿಸಲು ಸಾಧ್ಯವಾಗುತ್ತದೆ.

–ಆರ್.ನಾ.ಕು

## ಬೋಧನಾ ಶೈಲಿ

ಬೋಧನಾ ವಿಧಾನ ಮತ್ತು ಬೋಧನಾ ತಂತ್ರಗಳನ್ನು ಒಳಗೊಂಡಿರುವ ಪ್ರಕ್ರಿಯೆಯೇ ಬೋಧನಾಶೈಲಿ ಎಂದು ಹೇಳಬಹುದು.

ಬೋಧನಾ ಶೈಲಿಯನ್ನು ಹೀಗೆ ಎಂದು ನಿರ್ದಿಷ್ಟವಾಗಿ ನಿರೂಪಿಸುವ ವ್ಯಾಖ್ಯೆಗಳಿಲ್ಲ. ಹಾಗಾಗಿ ಬೋಧನಾಶೈಲಿಯು ಶೈಕ್ಷಣಿಕ ವಿಷಯ, ತರಗತಿ ಗಾತ್ರ, ಬೋಧಕರ ಆದ್ಯತೆಗನುಸಾರವಾಗಿ ಬದಲಾಗುತ್ತದೆ.

ಗ್ಯಾಲ್ವನ್ (1980) "ಬೋಧನಾ ತಂತ್ರಗಳ ಗಣವೇ ಬೋಧನಾ ಶೈಲಿ ಎಂದು ಹೇಳುತ್ತಾರೆ.

ಸೈಡೆನ್‌ಟಾಪ್ (1991) "ಶಿಕ್ಷಣದಲ್ಲಿ ನಿರ್ದಿಷ್ಟವಾದ ತಂತ್ರಗಳ ಗಣವನ್ನು ಉಪಯೋಗಿಸಿ ರಚಿಸಿದ ಸಾಮಾನ್ಯ ಬೋಧನಾ ವಿನ್ಯಾಸವನ್ನು ಬೋಧನಾ ಶೈಲಿ ಎಂದು ಪರಿಗಣಿಸುತ್ತಾರೆ."

ಬೋಧಿಸಬೇಕಾಗಿರುವ ಯೋಜಿತ ವಿಷಯ ವಸ್ತುವನ್ನು ಪ್ರಸ್ತುತಪಡಿಸುವ ವಿಧಾನವೇ ಬೋಧನಾ ಶೈಲಿಯಾಗಿದೆ.

ಬೋಧಕನ ಅನುಭವದೊಂದಿಗೆ ಅವನ ತರಬೇತಿ, ವ್ಯಕ್ತಿತ್ವ ಮತ್ತು ನಂಬಿಕೆಯ ಸುಯೋಗವು ಬೋಧನಾಶೈಲಿಗೆ ಕಾರಣವಾಗುತ್ತದೆ. ಇದು ಉತ್ತಮ ಬೋಧನೆಯ ಘಟಕಾಂಶಗಳು. ಯಾವುವು ಬೋಧಕರ ವೈಯಕ್ತಿಕ ಆದ್ಯತೆ, ಅದರ ಸಾಮರ್ಥ್ಯಗಳು ಮತ್ತು ನಿರ್ದಿಷ್ಟ ವಸ್ತುವಿನ ಮಾನಕಗಳ್ಯಾವುವು ಎಂಬ ಬೋಧಕರ ನಂಬಿಕೆಗಳ ಆಧಾರದ ಮೇಲೆ ಅಭಿವೃದ್ಧಿಯಾದ ಅಂಶವಾಗಿದೆ. ಅಂದರೆ ಬೋಧನಾಶೈಲಿಯು ಬೋಧಕನ ಜ್ಞಾನ, ದಕ್ಷತೆ, ಆಸಕ್ತಿ, ಮನೋಭಾವವನ್ನು ಅವಲಂಬಿಸಿರುತ್ತದೆ. ದಕ್ಷ, ಉತ್ತಮ ಬೋಧಕನ ವಿಷಯ ಮಂಡನೆ ವಿಧಾನ ಉತ್ತಮವಾಗಿರುತ್ತದೆ. ಹಾಗೆಯೇ ವಿಜ್ಞಾನ, ಕಲೆ, ಭಾಷೆ, ಗಣಿತ ವಿಷಯಗಳಲ್ಲಿನ ಬೋಧನಾ ಶೈಲಿಯು ಒಂದರಿಂದ ಒಂದು ಭಿನ್ನವಾಗಿರುತ್ತದೆ.

**ಸ್ವರೂಪ:** ಬೋಧನಾ ಶೈಲಿಯು

- ವಿಷಯ ವಸ್ತುವಿನ ಸ್ವರೂಪಕ್ಕನುಗುಣವಾಗಿ ನಿರ್ಧರಿತ ವಾಗುತ್ತದೆ.
- ಪ್ರಧಾನ ಉಪಕ್ರಮಗಳನ್ನು ಅನುಸರಿಸಲಾಗುತ್ತದೆ.
- ವಿಷಯ ವಸ್ತುವಿನ ಪ್ರಾವೀಣ್ಯವೇ ಮೌಲ್ಯಮಾಪನದ ಪ್ರಮುಖ ಮಾನಕವಾಗಿರುತ್ತದೆ.
- ಬೋಧನೆಯನ್ನು ಕಲೆಯೆಂದು ಪರಿಗಣಿಸುತ್ತದೆ.
- ಬೋಧನಾ ಉದ್ದೇಶಗಳಿಗಿಂತ ಪರಿಣಾಮಕಾರಿ ಮಂಡನೆಯೇ ಪ್ರಮುಖವಾಗಿರುತ್ತದೆ.

### ಬೋಧನಾ ಶೈಲಿಯ ವಿಧಗಳು

ಬೋಧನಾ ಶೈಲಿಯನ್ನು ಪ್ರಮುಖವಾಗಿ 4 ವಿಧಗಳಾಗಿ ವಿಂಗಡನೆ ಮಾಡಲಾಗಿದೆ.

- ಆಜ್ಞಾಪೂರ್ವಕ
- ನಿರ್ದೇಶನಾತ್ಮಕ
- ಅನುಮೋದನಾತ್ಮಕ
- ನಿರ್ಲಿಪ್ತಾತ್ಮಕ

### ಆಜ್ಞಾಪೂರ್ವಕ ಬೋಧನಾ ಶೈಲಿ

ಈ ವಿಧಾನದ ಬೋಧನಾಶೈಲಿಯಲ್ಲಿ ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತದೆ.

- ಬೋಧಕನು ವಿದ್ಯಾರ್ಥಿಗಳಿಗೆ ಒತ್ತಾಸೆ ನೀಡಿದರೂ, ಪುನರ್ಬಲನವನ್ನು ನೀಡುವುದು ಅಪರೂಪ ಮತ್ತು ಬಹು ಬೇಗ ಕೋಪಾವೇಶಕ್ಕೆ ಒಳಗಾಗುತ್ತಾನೆ.
- ವಿದ್ಯಾರ್ಥಿಗಳು ಇವರನ್ನು ಕಿರುಚಾಡುವ ಬೋಧಕರೆಂದು ವಿವರಿಸುತ್ತಾರೆ.

ಇವರು ಶಿಸ್ತಿಗಾಗಿ ವಿದ್ಯಾರ್ಥಿಗಳನ್ನು ನಿಂದಿಸುತ್ತಾರೆ.

ಬೋಧಕರ ಭಯದ ಕಾರಣದಿಂದಾಗಿ ವಿದ್ಯಾರ್ಥಿಗಳು ವಿಧೇಯರಾಗಿರುತ್ತಾರೆ. ವಿದ್ಯಾರ್ಥಿಗಳ ಆತಂಕವನ್ನು ನಿವಾರಿಸುವಲ್ಲಿ ಬೋಧಕರು ಪರಿಣಾಮಕಾರಿ ಪಾತ್ರ ನಿರ್ವಹಿಸುವುದಿಲ್ಲ.

ಒಟ್ಟಾರೆಯಾಗಿ ಆಜ್ಞಾಪೂರ್ವಕ ಬೋಧನಾಶೈಲಿಯು ವಿದ್ಯಾರ್ಥಿಗಳ ವರ್ತನಾ ಬದಲಾವಣೆಯುಂಟುಮಾಡುವುದು ಬಹಳ ಅಪರೂಪ.

### 2. ನಿರ್ದೇಶನಾತ್ಮಕ ಬೋಧನಾ ಶೈಲಿ

ಬೋಧಕನು ಧನಾತ್ಮಕ ಭಾವನೆ ಹೊಂದಿದ್ದು, ವಿದ್ಯಾರ್ಥಿಗಳಿಗೆ ಒತ್ತಾಸೆ ನೀಡುವ ಮತ್ತು ಕರುಣೆಯನ್ನು ತೋರುವಂತಹವನಾಗಿರುತ್ತಾನೆ. ಪರಿಣಾಮಕಾರಿಯಾದ ಶಿಸ್ತಿನ ಯೋಜನೆ ಮತ್ತು ತರಗತಿ ವ್ಯವಸ್ಥೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾನೆ.

ವಿದ್ಯಾರ್ಥಿಗಳು ಇವರಲ್ಲಿ ನಂಬಿಕೆ ಮತ್ತು ಗೌರವವನ್ನು ಹೊಂದಿರುತ್ತಾರೆ. ಬೋಧಕನು ಹೆಚ್ಚಿನ ಸಮಯವನ್ನು ಶೈಕ್ಷಣಿಕ ವಿಷಯಗಳಿಗೆ ನೀಡುತ್ತಾನೆ. ಬೋಧಕನು ಉತ್ಸುಕನು, ಸಬಲನು ಆಗಿರುತ್ತಾನೆ ಮತ್ತು ತನ್ನ ವಿದ್ಯಾರ್ಥಿಗಳಲ್ಲಿ ಧನಾತ್ಮಕವಾದ ಬೆಳವಣಿಗೆಯನ್ನು ನಿರೀಕ್ಷಿಸುತ್ತಾನೆ. ವಿದ್ಯಾರ್ಥಿಗಳು ಸುರಕ್ಷತೆ ಭಾವನೆ ಮತ್ತು ಸಮರ್ಥರು ಎಂಬ ಮನೋಭಾವನೆಯನ್ನು ಅಭಿವೃದ್ಧಿ ಗೊಳಿಸಿಕೊಳ್ಳಲು ನೆರವಾಗುತ್ತವೆ.

ನಿರ್ದೇಶನಾತ್ಮಕ ಬೋಧನಾಶೈಲಿಯು ವಿದ್ಯಾರ್ಥಿಗಳಲ್ಲಿ ವರ್ತನಾ ಪರಿವರ್ತನೆಯುಂಟು ಮಾಡುವಲ್ಲಿ ಪರಿಣಾಮಕಾರಿಯಾಗಿದ್ದು ಇದನ್ನು ಅನುಕೂಲಕರ ಬೋಧನಾ ಶೈಲಿಯೂ ಎಂದು ಕರೆಯಲ್ಪಡುತ್ತದೆ. ಇದರರ್ಥ ಈ ವಿಧಾನದಲ್ಲಿ ಬೋಧಕನು ವಿದ್ಯಾರ್ಥಿಗಳಿಗೆ ಅನುಕೂಲಕಾರಿಯಾಗಿ, ಸ್ನೇಹಿತನಂತೆ ಕಾರ್ಯ ನಿರ್ವಹಿಸುತ್ತಾನೆ.

### 3. ಅನುಮೋದನಾತ್ಮಕ ಬೋಧನಾ ಶೈಲಿ

ಬೋಧಕನು ಒತ್ತಾಸೆ ನೀಡುವ, ಸ್ನೇಹಿತನಂತೆ ವಿದ್ಯಾರ್ಥಿಗಳೊಡನೆ ವರ್ತಿಸಿದರೂ ಮಿತಗಳನ್ನು ನಿರ್ಧರಿಸುವಲ್ಲಿ ವಿಫಲನಾಗಿರುತ್ತಾನೆ.

Digitised by Bharatavani, CIIL

ವಿದ್ಯಾರ್ಥಿಗಳಲ್ಲಿ ಗುಣಾತ್ಮಕ ಉತ್ಪಾದಕತೆಯನ್ನು ಉಂಟು ಮಾಡುವುದಕ್ಕೆ ಪ್ರಾಮುಖ್ಯ ನೀಡುವುದು. ಉದಾಸೀನ ಮನೋಭಾವ ಹೊಂದಿದ್ದು, ತರಗತಿಯ ನಿಯಂತ್ರಣ ಸಡಿಲವಾಗಿರುತ್ತದೆ. ರಚನಾತ್ಮಕವಾದ ಕಲಿಕೆಯುಂಟಾಗುವುದಿಲ್ಲ ಮತ್ತು ವಿದ್ಯಾರ್ಥಿಗಳು ಇವರನ್ನು ಸರಳ ಶಿಕ್ಷಕರೆಂದು ಕರೆಯುತ್ತಾರೆ. ಆದರೆ ಸಮಸ್ಯಾತ್ಮಕ ಸನ್ನಿವೇಶಗಳನ್ನು ನಿಭಾಯಿಸುವುದು ಕಷ್ಟವಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಬೋಧಕರನ್ನು ವಿಶ್ವಾಸವಿಡುವುದಿಲ್ಲ. ಅನುಬೋಧನಾತ್ಮಕ ಬೋಧನಾ ಶೈಲಿಯಲ್ಲಿ ಬೋಧಕನು ಉತ್ತಮನಾಗಿದ್ದರೂ ಪರಿಣಾಮಕಾರಿಯಾಗಿರುವುದಿಲ್ಲ.

### 4. ನಿರ್ಲಿಪ್ತತಾತ್ಮಕ

ಬೋಧಕರು ನಿರ್ಲಿಪ್ತ ಮನೋಭಾವದವರಾಗಿರುತ್ತಾರೆ. ಯಾವುದೇ ರೀತಿಯ ಎಚ್ಚರಿಕೆಯನ್ನು ವಹಿಸುವುದಿಲ್ಲ. ಶಿಸ್ತಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸ್ಪಂದಿಸುವುದಿಲ್ಲ. ವಿದ್ಯಾರ್ಥಿಗಳಿಗೆ ಭಾವನಾತ್ಮಕ ಒತ್ತಾಸೆಯನ್ನು ಒದಗಿಸುವುದಿಲ್ಲ. ವಿದ್ಯಾರ್ಥಿಗಳ ವರ್ತನಾ ಪರಿವರ್ತನೆ ಉಂಟು ಮಾಡಲು ಪ್ರಯತ್ನಿಸುವುದಿಲ್ಲ. ಮೇಜಿನ ಹಿಂದೆ ಕುಳಿತು ಕೇವಲ ತನ್ನ ಕೆಲಸವನ್ನು ತಾನು ಮಾಡಿಕೊಂಡು ಹೋಗುವ ಮನೋಭಾವದವರಾಗಿರುತ್ತಾರೆ. ತರಗತಿಯ ಮೇಲೆ ಯಾವುದೇ ರೀತಿಯ ನಿಯಂತ್ರಣವಿರುವುದಿಲ್ಲ.

ನಿರ್ಲಿಪ್ತತಾತ್ಮಕ ಬೋಧನಾ ಶೈಲಿಯು ವಿದ್ಯಾರ್ಥಿಗಳ ವರ್ತನೆಯಲ್ಲಿ ಬದಲಾವಣೆ ಮಾಡುವಲ್ಲಿ ವಿಫಲವಾಗುತ್ತದೆ. ಬೋಧಕರು ಉದಾಸೀನ ಮನೋಭಾವವನ್ನು ಹೊಂದಿರುತ್ತಾರೆ.

ಎಲ್ಲ ರೀತಿಯ ಬೋಧನಾ ಶೈಲಿಗಳನ್ನು ಪರಿಗಣಿಸಿದಾಗ ನಿರ್ದೇಶನಾತ್ಮಕ ಬೋಧನಾ ಶೈಲಿಯು ಪರಿಣಾಮಕಾರಿಯಾಗಿದ್ದು, ಮಾದರಿ ಬೋಧನಾ ಶೈಲಿಯಾಗಿರುತ್ತದೆ. ಇಂತಹ ಬೋಧನಾ ಶೈಲಿಯನ್ನು ಅನುಸರಿಸುವುದು ಸಾಧಿಸುವುದು ಬಹಳ ಶ್ರಮದಾಯಕವಾದುದು.

–ಎಂ.ಪು.

## ಬೋಧನಾ ಸೂತ್ರಗಳು

"ಬೋಧನಾ ಕ್ರಮದ ಸೂತ್ರಗಳು" ಅಥವಾ "ಬೋಧನಾ ಸೂತ್ರಗಳು (Maxima of Teaching)" – ಬೋಧನಾ ಕಾರ್ಯದಲ್ಲಿ ಅಧ್ಯಾಪಕರು ಗಮನದಲ್ಲಿಡಬೇಕಾದ ಸಾರ್ವತ್ರಿಕ ನಿಯಮಗಳು ಅಥವಾ ತತ್ವಗಳಾಗಿರುತ್ತವೆ. ಈ ಶತಮಾನದ ಆದಿಯಲ್ಲಿ ಅಧ್ಯಾಪಕರ ಪ್ರಶಿಕ್ಷಣ ಕಾಲೇಜುಗಳು ಈ ಸೂತ್ರಗಳನ್ನು ಪ್ರಧಾನವಾಗಿ ಬೋಧಿಸುತ್ತಿದ್ದವು. ಆದರೆ ಇತ್ತೀಚಿನ ಬದಲಾದ ಸನ್ನಿವೇಶಗಳ ಹಿನ್ನೆಲೆಯಲ್ಲಿ ಇವುಗಳ ಸ್ಥಾನ ಅಷ್ಟಾಗಿ ಇರುವುದಿಲ್ಲ. ಬೋಧನೆಯೆಂದರೆ "ಬೋಧಕರ ಕೆಲಸ" ಎಂದು ಭಾವಿಸಿ ಕಲಿಯಲು ಸಹಾಯ ಮಾಡುವುದು, ಜ್ಞಾನ ನೀಡುವುದು, ತರಬೇತಿಗೊಳಿಸುವುದು ಎಂದರ್ಥ ಕಲ್ಪಿಸಲಾಗಿದೆ, ಬೋಧನೆ ಎಂದರೆ ಪ್ರಮುಖ ಶಿಕ್ಷಣ ತಜ್ಞರ ಪ್ರಕಾರ–ಚಟುವಟಿಕೆಗಳನ್ನು ವಿನ್ಯಾಸಗೊಳಿಸಿ ವಿದ್ಯಾರ್ಥಿಗಳ ವರ್ತನೆಯ ಬದಲಾವಣೆಗೆ ನೆರವಾಗುವುದೆಂದು, ಬೋಧನೆಯು "Mode" ಎಂಬ ಲ್ಯಾಟೀನ್ ಭಾಷೆಯ ಪದ. ಅಂದರೆ ದಾರಿ ಅಥವಾ ಕ್ರಮ ಎಂಬುದಾಗಿದೆ. ಆದ್ದರಿಂದಲೇ ಶಿಕ್ಷಕರನ್ನು ದಾರಿತೋರಿಸುವವನು, ಮಾರ್ಗದರ್ಶಿ, ಕಲಿಕೆಯ ಸಹಾಯಕ ಎಂದು ಕರೆಯಲಾಗಿದೆ. ಬಹು ಹಿಂದೆ ಬೋಧನಾ ಕ್ರಿಯೆಗಳು ಚರ್ಚೆ, ಸಂಭಾಷಣೆ, ಕಂಠಪಾಠ, ವಿಧಾನಗಳಲ್ಲಿ ಜರುಗುತ್ತಿದ್ದವು. ನಿಯಮಗಳು ಅಥವಾ ತತ್ವಗಳನ್ನು ದೃಷ್ಟಾಂತಗಳ ಮೂಲಕ, ಕಥೆಗಳ ಮೂಲಕ, ಅನುಭವಗಳ ಮೂಲಕ ಸಾದರಪಡಿಸಿ ಆ ಸಾರ್ವತ್ರಿಕ ನಿಯಮಗಳನ್ನು ಸ್ಪಷ್ಟಪಡಿಸಲಾಗುತ್ತಿತ್ತು. ಪಠಣ, ಮನನ ಹಾಗೂ ನಿದಿಧ್ಯಾಸನ ಎಂಬ ಮೂರು ಹಂತಗಳನ್ನು ವಿದ್ಯೆಯ ಅವಧಿಯಲ್ಲಿ ಕಡ್ಡಾಯಗೊಳಿಸಲಾಗಿತ್ತು. ಓದಬೇಕು, ಓದಿದ್ದನ್ನು ಮನಸ್ಸಿನಲ್ಲಿ ಮೂಡಿಸಬೇಕು, ಮೂಡಿಸಿದ ಅಂಶಗಳನ್ನು ಸದಾ ಧ್ಯಾನಿಸಬೇಕು ಎಂಬುದು ಇದರ ಅರ್ಥ. ಹಿಂದಿನ ಆ ಅಧ್ಯಾಪಕ ವರ್ಗ ಸದಾ ಸಿದ್ಧರಾಗಿರುತ್ತಿದ್ದರು. ಯಾವ ಕಾಲದಲ್ಲಿ ಸಂಪರ್ಕಿಸಿದರೂ ಕೂಡ ಪ್ರಭುತ್ವವುಳ್ಳ ಮಾರ್ಗದರ್ಶನ ನೀಡುತ್ತಿದ್ದರು. ಅನಂತರದ ಅವಧಿಯಲ್ಲಿ ಬಂದ ಅಧ್ಯಾಪಕ ವರ್ಗ ಸಮಯೋಚಿತ ಹಾಗೂ ಸಂದರ್ಭೋಚಿತ ಮಾರ್ಗದರ್ಶನ ನೀಡುತ್ತಿದ್ದರು. ಆದರೆ ಈಗ ಸೇವಾಮನೋಭಾವವನ್ನು ಆರ್ಥಿಕತೆಯ ಹಿನ್ನೆಲೆಯಲ್ಲಿ ವಿಸ್ತರಿಸಲಾಗುತ್ತಿದೆ. ಅದಕ್ಕಾಗಿಯೇ ಹಿಂದಿನ ಅಧ್ಯಾಪಕರನ್ನು ಕುರಿತು ಹೇಳುವಾಗ "Teachers are born, but not made" ಆದರೆ ಈಗ "teachers are born, but made" ಎಂಬುದಾಗಿ ವಾಕ್ಯವನ್ನು ಪರಿವರ್ತಿಸಲಾಗಿದೆ. ಅದು ಏನೇ ಇರಲಿ ಬೋಧನೆಯು ಬೇರೆ ರೀತಿಯ ಕಸಬು ಅಥವಾ ಕೆಲಸದಂತಿರದೆ ತಾಂತ್ರಿಕ ವೃತ್ತಿಯಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಆಯಾಯ ಕಾಲದ ಗುಣಧರ್ಮ, ವಿಚಾರ, ಚಿಂತನ–ಮಂಥನ ಆಧರಿಸಿ ಬೋಧನೆಯ ಮಾರ್ಗ, ವಿನ್ಯಾಸ ಹಾಗೂ ಕಾರ್ಯ ಸಾಗಬೇಕು. ಅಧ್ಯಾಪಕರಾಗಿ ಸೇವೆಗೆ ಸೇರಬಹುದು ಆದರೆ ಎಲ್ಲರೂ ಉತ್ತಮ ಅಧ್ಯಾಪಕರಾಗಲು ಸಾಧ್ಯವಿಲ್ಲ. "When all the doors are closed, then knock the door of Teaching" ಎಂಬುದಾಗಿದೆ. ವೃತ್ತಿಯಲ್ಲಿ ಬೋಧನಾ ವೃತ್ತಿಯು ಕೊನೆಯ ಅವಕಾಶ ಎಂದು ಭಾವಿಸಬಾರದು. (ವೃತ್ತಿಗೆ ಬಂದ ನಂತರ ವೃತ್ತಿಯ ಗುಣಧರ್ಮಗಳನ್ನು ಅರಿಯಬೇಕಲ್ಲವೆ) ಸೇರಿದ ವೃತ್ತಿಯನ್ನು ಪ್ರೀತಿಯಿಂದ ಪ್ರೇಮದಿಂದ ನೋಡಬೇಕು. ಶಾಲೆಯ ಮಕ್ಕಳನ್ನು ಪ್ರೇಮದಿಂದ ಕಾಣಬೇಕು. ಅದಕ್ಕಾಗಿ ವಿದ್ವಾಂಸರು ಹೇಳುತ್ತಾರೆ– "Teaching is human relationship based on mutual love". ಉತ್ತಮ ಅಧ್ಯಾಪಕ ಮಗುವನ್ನು ಅರ್ಥಮಾಡಿಕೊಳ್ಳುತ್ತಾನೆ. ಬೋಧನೆಯು ಕೌಶಲ್ಯಯುತ ವೃತ್ತಿ. ಆದಕಾರಣ ಈ ವೃತ್ತಿಯ ಎಲ್ಲಾ ಮಜಲುಗಳನ್ನು ಅಧ್ಯಾಪಕನಾದವನು ಅರಿಯಬೇಕಾಗುತ್ತದೆ. ವಿವಿಧ ವಿಷಯಗಳ ಬೋಧನಾ ತಂತ್ರಗಳನ್ನು, ಬೋಧನಾ ತತ್ವಗಳನ್ನು ಪರಿಚಯಿಸಿಕೊಳ್ಳಬೇಕಾಗುತ್ತದೆ. ಬೋಧನಾ ಸಂದರ್ಭಗಳಲ್ಲಿ ಬೋಧನಾ ಕ್ರಮದ ಸೂತ್ರಗಳನ್ನು ಅಳವಡಿಸಿಕೊಂಡು ಬೋಧಿಸಿದಾಗ ಯಾವುದೇ ಪಾಠದ ಕ್ಲಿಷ್ಟ ಸಂದರ್ಭವು ವಿದ್ಯಾರ್ಥಿಗಳಿಗೆ ಸುಲಲಿತವಾಗಿ ಅರ್ಥವಾಗುತ್ತದೆ. ಅಂದಾಕ್ಷಣ ನಾವು ಬೋಧನಾ ತತ್ವಗಳ ಗುಲಾಮರೆಂದು ಭಾವಿಸಬಾರದು. ಪ್ರತಿ ಪಾಠ, ಪ್ರತಿ ಅಧ್ಯಾಪಕರು ಬೇರೆ ಬೇರೆ ಎಂಬುದನ್ನು ಮರೆಯಬಾರದು. ಸಾಮಾನ್ಯವಾಗಿ ವಿಷಯ ಬೋಧನೆಯಲ್ಲಿ ಬಳಸುವ ಬೋಧನಾ ತತ್ವಗಳು ಅಥವಾ ಬೋಧನಾ ಕ್ರಮದ ಸೂತ್ರಗಳನ್ನು ಈ ಮುಂದೆ ಪರಿಚಯಿಸಲಾಗಿದೆ.

### 1. ಜ್ಞಾತದಿಂದ ಅಜ್ಞಾತದ ಕಡೆಗೆ ಸಾಗುವುದು (Proceed from known to unknown)

ಇದನ್ನು ಗೊತ್ತಿರುವುದರಿಂದ ಗೊತ್ತಿಲ್ಲದ ಕಡೆಗೆ ನಡೆಯುವುದು ಎಂದು ಹೇಳುತ್ತಾರೆ. ಅಧ್ಯಾಪಕನು ತಾನು ಪ್ರಾರಂಭಿಸುವ ಪ್ರತಿ ದಿನದ ಪಾಠವನ್ನು ವಿದ್ಯಾರ್ಥಿಗಳು ಈ ಹಿಂದೆ ಏನನ್ನು ಕಲಿತಿದ್ದಾರೆ? ಎಂಬ ಪೂರ್ವಜ್ಞಾನದ ಅನುಭವ/ ಜ್ಞಾನ ಆಧಾರದ ಮೇಲೆ ಗೊತ್ತಿಲ್ಲದ ವಿಷಯದ ಕಡೆಗೆ ಕರೆದೊಯ್ಯಬೇಕು. ಈ ತತ್ವವು ಅಧ್ಯಾಪಕನು ತಾನು ಬೋಧಿಸುವ ವಿಷಯವನ್ನು ಅಡ್ಡಾದಿಡ್ಡಿಯಾಗಿ ಕೊಂಡೊಯ್ಯದೆ ಸಮರ್ಪಕವಾದ ಹಳಿಯ ಮೇಲೆ ನೇರದಾರಿಯಲ್ಲಿ ಗುರಿ ತಲುಪಿಸುವ ಉದ್ದೇಶ ಆತನದ್ದಾಗಿರಬೇಕೆಂದು ಒತ್ತಿ ಹೇಳುತ್ತದೆ.

Digitised by Bharatavani, CIIL

ಉದಾ: "ಉಭಯ ಜೀವಿಗಳು" ಎಂಬ ಪಾಠ ಮಾಡುವಾಗ "ಉಭಯ ಜೀವಿಗಳು" ಎಂಬ ಪರಿಕಲ್ಪನೆಯನ್ನು ಕೇವಲ ವಿವರಿಸುವುದರಿಂದ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಲು ಸಾಧ್ಯವಿಲ್ಲ. ಆದುದರಿಂದ ವಿದ್ಯಾರ್ಥಿಗಳಿಗೆ ಅಧ್ಯಾಪಕರ ಪ್ರಶ್ನೋತ್ತರ ವಿಧಾನದಿಂದ ಈ ವಿಷಯ ತಿಳಿಸಲು ಸಾಧ್ಯ.

ಶಿಕ್ಷಕ: ಈ ಜಗತ್ತು ಪ್ರಾಣಿ–ಪಕ್ಷಿ (ಜೀವಿಗಳು), ಗಿಡ–ಮರ, ಹಳ್ಳ–ಕೊಳ್ಳ, ಸಾಗರ, ಸಮುದ್ರ, ಬೆಟ್ಟ, ಗುಡ್ಡಗಳಿಂದಾಗಿವೆ ಎಂದು ಪ್ರಸ್ತಾಪಿಸಿ ನಿಮಗೆ ತಿಳಿದಿರುವ ಜೀವಿಗಳು, ಕ್ರಿಮಿ ಕೀಟಗಳನ್ನು ಹೆಸರಿಸಿ?

ವಿದ್ಯಾರ್ಥಿ: ನಾಯಿ, ಬೆಕ್ಕು, ಕುದುರೆ, ಹಾವು, ಹುಲಿ, ಸಿಂಹ, ಹಸು, ಚಿಟ್ಟೆ, ಜೀರುದುಂಬಿ, ಕಪ್ಪೆ, ಜಿರಲೆ, ಇತ್ಯಾದಿ

ಶಿ: ನೀರಿನಲ್ಲಿ ವಾಸಿಸುವ ಜೀವಿಗಳು ಯಾವುವು?

ವಿ: ಕಪ್ಪೆ, ಮೊಸಳೆ, ಹಾವು, ನೀರಾನೆ, ಆಮೆ ಇತ್ಯಾದಿ.

ಶಿ: ಕೆಲವು ಜೀವಿಗಳು ನೀರು ಹಾಗೂ ಭೂಮಿಯ ಮೇಲೆ ವಾಸಿಸುವುದರಿಂದ ಅವುಗಳನ್ನು ಏನೆಂದು ಕರೆಯುತ್ತೇವೆ? ಉದಾಹರಣೆ ಕೊಡಿ.

ವಿ: ಉಭಯ ಜೀವಿಗಳು ಎನ್ನುತ್ತಾರೆ. ಕಪ್ಪೆ, ಆಮೆ, ಮೊಸಳೆ ಇತ್ಯಾದಿ.

ಶಿ: ಹಾಗಾದರೆ ಉಭಯ ಜೀವಿ ಎಂದರೇನು?

ವಿ: ಭೂಮಿಯ ಮೇಲೆ ಹಾಗೂ ನೀರಿನ ಮೇಲೆ ಎರಡರಲ್ಲೂ ವಾಸಿಸುವ ಜೀವಿಗೆ "ಉಭಯ ಜೀವಿ" ಎನ್ನುತ್ತೇವೆ. (Known truth)

ಉದಾ: 3) "ಸೂರ್ಯನ ಉದಯಿಸುವಿಕೆ ಹಾಗೂ ಮುಳುಗುವಿಕೆ" ಎಂಬ ಪರಿಕಲ್ಪನೆಯನ್ನು ತಿಳಿಸುವಾಗ ವಿದ್ಯಾರ್ಥಿಗಳಿಗೆ ಪ್ರತಿದಿನ ಸೂರ್ಯ ಉದಯಿಸುವ ದಿಕ್ಕು ಹಾಗೂ ಮುಳುಗುವ ದಿಕ್ಕನ್ನು ಗುರುತಿಸಲು ಹೇಳುವುದು. ವಾರಾಂತ್ಯದಲ್ಲಿ ವಿದ್ಯಾರ್ಥಿಗಳೇ ತಮ್ಮ ಸ್ವ–ಅನುಭವದ ಹಿನ್ನೆಲೆಯಲ್ಲಿ "ಸೂರ್ಯನು ಪೂರ್ವದಲ್ಲಿ ಉದಯಿಸುವನು ಹಾಗೂ ಪಶ್ಚಿಮದಲ್ಲಿ ಮುಳುಗುತ್ತಾನೆ" ಎಂಬುದನ್ನು ನಿರ್ಣಯಿಸುವರು.

ಉದಾ: 4) ವಿದ್ಯಾರ್ಥಿಗಳಿಗೆ "ತಾಜ್‌ಮಹಲ್" ಪಾಠವನ್ನು ಬೋಧಿಸುವಾಗ ಅಧ್ಯಾಪಕ ಭಾರತದ ಭೂಪಟದಲ್ಲಿ ಬರುವ ವಿವಿಧ ಐತಿಹಾಸಿಕ ಸ್ಥಳಗಳ ಬಗ್ಗೆ ಪ್ರಶ್ನಿಸಿ ಆಗ್ರಾ ಪಟ್ಟಣದ ಪ್ರಾಮುಖ್ಯತೆ ಬಗ್ಗೆ ಅವರಿಗಿರುವ ಜ್ಞಾನವನ್ನು ಪರೀಕ್ಷಿಸಬೇಕು. ನಂತರ ಷಹಜಹಾನ್ ಹಾಗೂ ಆತನ ಪ್ರೀತಿಯ ಹೆಂಡತಿ ಮಮ್ತಾಜ್‌ಳ ಹೆಸರಿನಲ್ಲಿ ಕಟ್ಟಿಸಿದ "ತಾಜ್‌ಮಹಲ್" ಎಂಬ ವಿಶ್ವಪ್ರಸಿದ್ಧ ಸ್ಥಳದ ಬಗ್ಗೆ ತಿಳಿಯಲು ಸಹಕರಿಸಬಹುದು.

ಈ ರೀತಿಯ ಬೋಧನಾ ತತ್ವದಿಂದ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ತಿಳಿಯಬಹುದಲ್ಲದೆ ಹೊಸ ವಿಷಯಗಳನ್ನು ತಿಳಿದ ವಿಷಯಗಳ ಹಾದಿಯಲ್ಲಿ ಕಲಿಯುವಂತೆ ಪ್ರೇರೇಪಿಸಬಹುದು. ಓದೆಂದರೆ ಹೇಗೆ ಓದಲು ಸಾಧ್ಯ. ಹಂತ ಹಂತವಾಗಿ ಕಲಿಸಿದರೆ ಎಲ್ಲವೂ ಓದಲು ಆದೀತು ಹಾಗೂ ಕಲಿಯಲು ಆದೀತು.

### 2. ಇಡಿಯಿಂದ ಬಿಡಿಯ ಕಡೆಗೆ ಸಾಗುವುದು (Proceed from Whole to Parts)

ವಿಷಯ ಬೋಧನೆಯು ಕ್ಲಿಷ್ಟವಾಗಿದ್ದಾಗ ಮನೋವಿಜ್ಞಾನಿ E.L. ಥಾರನ್‌ಡೈಕ್‌ರ ಪ್ರಕಾರ ನಿರ್ದಿಷ್ಟ ಸನ್ನಿವೇಶದಲ್ಲಿ ವಿಷಯದ ಅಂಶಗಳನ್ನು ವಿಭಜಿಸಿ ಬೋಧಿಸಲಾಗುತ್ತದೆ. ವಿಷಯಗಳು ಸರಳವಾಗಿದ್ದಾಗ ವಿಭಜನೆ ಅನಗತ್ಯ.

ಪೂರ್ಣ (Gestalt ಕಲ್ಪನೆಯಂತೆ) ಬಿಡಿ ಎಂದರೆ ಭಾಗ (Thorndike ಕಲ್ಪನೆಯಂತೆ) ವಿವೇಚಿಸಲಾಗಿದೆ.

ಉದಾ: 1) ವಿದ್ಯಾರ್ಥಿಗಳನ್ನು ಮರದ ಮುಂದೆ ನಿಲ್ಲಿಸಿ ಮರ ಹೇಗೆ ಆಗಿದೆ? ಎಂದರೆ ಬೇರು, ರೆಂಬೆ, ಕಾಂಡ, ಎಲೆ, ಹೂವು, ಹಣ್ಣು ಎಂಬುದಾಗಿ ಹೇಳಿಸಬಹುದು (ಅದು ಮರದ ಪೂರ್ಣ ಚಿತ್ರಣಕ್ಕೆ ಸಂಬಂಧಿಸಿದಂತಾದರೆ– ಇಡೀ ಕಲ್ಪನೆ). ಇದರಲ್ಲಿ ಎಲೆಯ ಕಾರ್ಯವೊಂದನ್ನೇ ತೆಗೆದುಕೊಂಡು ಎಲೆ ಹೇಗಾಯಿತು? ಎಲೆಯ ಬಣ್ಣ ಹಸಿರು ಏಕೆ? ಎಲೆಯ ಕಾರ್ಯವೇನು? ಇತ್ಯಾದಿಯನ್ನು ಬಿಡಿಯಾಗಿ ತಿಳಿಸಬಹುದು.

ಉದಾ: 2) ವಿದ್ಯಾರ್ಥಿಗಳಿಗೆ ಭಾಷೆಯನ್ನು ಬೋಧಿಸುವಾಗ ಸಾಂಪ್ರದಾಯಿಕವಾಗಿ ಅಕ್ಷರ ಕಲಿಸಬೇಕು, ನಂತರ ಪದಗಳನ್ನು ರಚಿಸಬೇಕು, ಅನಂತರ ವಾಕ್ಯ ರಚಿಸಬೇಕು. ಅನಂತರ ವಾಕ್ಯದಿಂದಾದ ಪುಟಗಳ ಬಗ್ಗೆ ತಿಳಿಸಬೇಕು. ಅದನ್ನು ಹೊರತುಪಡಿಸಿ ನೇರವಾಗಿ ಏನೂ ತಿಳಿಯದ ವಿದ್ಯಾರ್ಥಿಗೆ ಪುಸ್ತಕ ಗೊತ್ತಿರುವ ಅಥವಾ ಗೋಚರ ಅಂಶಗಳನ್ನು ಆಧಾರವಾಗಿರಿಸಿ ಗೊತ್ತಿಲ್ಲದ ಅಥವಾ ಅಗೋಚರ ಸತ್ಯದ ಅರಿವು ಮೂಡಿಸುವುದು ಸಾಧ್ಯ. ಆದುದರಿಂದ ಮೇಲ್ಕಂಡ ಪರಿಕಲ್ಪನೆಯನ್ನು ಈ ರೀತಿ ಈ ತತ್ವದ ಮೂಲಕ ದೃಢೀಕರಿಸಬಹುದು.

### 3. ನಿರ್ದಿಷ್ಟದಿಂದ ಸಾಮಾನ್ಯದ ಕಡೆಗೆ ಸಾಗುವುದು (Proceed from Particular to the General)

ವಿಷಯ ಬೋಧಿಸುವಾಗ ನಿರ್ದಿಷ್ಟವಾದ ಅಂಶಗಳನ್ನು, ಉದಾಹರಣೆಗಳನ್ನು ನೀಡಿ ಅವುಗಳಲ್ಲಿ ಅಡಗಿಸುವಂತಹ ಸಾಮಾನ್ಯ ಗುಣ/ಆದರ್ಶ/ನಿಯಮ/ತತ್ವವನ್ನು ತದನಂತರ ತಿಳಿಹೇಳಬೇಕು. ಏಕೆಂದರೆ ನಿರ್ದಿಷ್ಟ ಅಂಶಗಳನ್ನು ವಿದ್ಯಾರ್ಥಿಗಳು ಗ್ರಹಿಸಲು ಸಾಧ್ಯ. ನಿರ್ದಿಷ್ಟವು ತುಂಬಾ ನೇರವಾಗಿ ಅರ್ಥವಾಗುವಂತಿರುತ್ತದೆ. ಆದರೆ ಸಾಮಾನ್ಯ ಆದರ್ಶ/ತತ್ವವು ಅಗೋಚರ ಸಂಗತಿಗಳ ಸಾದೃಶ್ಯವನಿಸಿರುತ್ತದೆ.

ಹಾಗೆಯೇ ಉದಾ 1: "ಮಾನವರೆಲ್ಲಾ ಶಾಶ್ವತರಲ್ಲ" ಎಂಬುದನ್ನು ಸಾದರಪಡಿಸಬಹುದು.

ಉದಾ: 3) $(a + b)^2 = a^2 + b^2 + 2ab$ ಎಂಬುದನ್ನು ಎಲ್ಲಾ ವಿದ್ಯಾರ್ಥಿಗಳಿಂದ ಹೇಳಿಸುತ್ತೇವೆ. ಆದರೆ ಇದು ಹೇಗೆ ನಿರೂಪಿಸಲ್ಪಟ್ಟಿದೆ? ಎಂಬುದು ಮುಖ್ಯ ಸಂಗತಿ. ಕೇವಲ ಉರು ಹೊಡೆಸುವುದರಿಂದ ಇದನ್ನು ನಿರೂಪಿಸಲಾಗುವುದಿಲ್ಲ. ಇಲ್ಲಿ ಪ್ರಶ್ನೋತ್ತರ ವಿಧಾನ ಅನುಸರಿಸಬಹುದು.

ಶಿಕ್ಷಕ a ನ ವರ್ಗ ಎಷ್ಟು?

ವಿದ್ಯಾರ್ಥಿ: $a^2$

ಶಿ : b ನ ವರ್ಗ ಎಷ್ಟು?

ವಿ : $b^2$

ಶಿ : ab ಯ ವರ್ಗವೆಷ್ಟು?

Digitised by Bharatavani, CIIL

ವಿ : $a^2 b^2$

ಶಿ : $(P+Q)$ನ ವರ್ಗ ಎಷ್ಟು?

ವಿ : $(P+Q)^2$

ಶಿ : $(x+y)$ ನ ವರ್ಗ ಎಷ್ಟು?

ವಿ : $(x+y)^2$

**ಹಾಗೆಯೇ** ಶಿ : $(a+b)$ ನ ವರ್ಗ ಎಷ್ಟು?

ವಿ : $(a+b)^2$

ಶಿ : $(a+b)^2$ ನ ವಿಸ್ತರಣೆ ಎಷ್ಟು?

ವಿ : $a^2+b^2+2ab$

**ಹಾಗೆಯೇ** ಶಿ : $(P+Q)^2$ ನ ವಿಸ್ತರಣೆ ಎಷ್ಟು?

ವಿ : $p^2+q^2+2pq$

ಶಿ : $(x+y)^2$ ನ ವಿಸ್ತರಣೆ ಎಷ್ಟು?

ವಿ : $x^2+y^2+2xy$

ಶಿ : ಈ ರೀತಿಯ ವಿಸ್ತರಣೆಯಿಂದ ತಿಳಿದು ಬರುವ ಸಾಮಾನ್ಯ ಅಂಶ / ತತ್ವವೇನು?

ವಿ : ಎರಡು ಬೀಜ ಪದಗಳನ್ನು ಗುಣಿಸಿ ವಿಸ್ತರಿಸಿದಾಗ (ಮೊದಲನೇ ಪದ + ಎರಡನೇ ಪದ)$^2$ = (ಮೊದಲನೇ ಪದ)$^2$ + (ಎರಡನೇ ಪದ)$^2$ + 2 (ಮೊದಲನೇ ಪದ) (ಎರಡನೆ ಪದ) ಬರುತ್ತದೆ.

ಉದಾ: 4): "ಗುಪ್ತರ ಕಾಲವನ್ನು ಭಾರತದ ಇತಿಹಾಸದಲ್ಲಿ ಸುವರ್ಣ ಯುಗ ಎಂದು ಕರೆಯುವರು ಎಂಬ ಸಾಮಾನ್ಯ ತತ್ವವನ್ನು ನಿರೂಪಿಸಬಹುದು. ಗುಪ್ತ ಸಾಮ್ರಾಜ್ಯದಲ್ಲಿ ಹಲವು ರಾಜರು ಆಳ್ವಿಕೆ ನಡೆಸಿ ತಮ್ಮ ಕಾಲದಲ್ಲಿ ಕಲೆ, ಸಾಹಿತ್ಯ ಜನಜೀವನ, ಸಂಸ್ಕೃತಿ, ಶಿಲಾ ಶಾಸನಗಳು, ನಾಣ್ಯಗಳು ಮೊದಲಾದವುಗಳ ಮೂಲಕ ಪ್ರಸಿದ್ಧಿ ಪಡೆದಿದ್ದರು. ಇದನ್ನು ಕಂಡ ಪಾಶ್ಚಾತ್ಯ ವಿದ್ವಾಂಸರು, ನಮ್ಮ ದೇಶದ ಇತಿಹಾಸಕಾರರು, ಬೇರೆ ರಾಜರುಗಳ ಆಳ್ವಿಕೆಗಿಂತ ಗುಪ್ತರು ವಿಭಿನ್ನರಾಗಿದ್ದ ಕಾರಣ ಈ ಗುಪ್ತರ ಕಾಲವನ್ನು ಸುವರ್ಣ ಯುಗ ಎಂದು ಕರೆದರು. ಈ ರೀತಿಯ ಬೋಧನಾ ತತ್ವಗಳಿಂದ ಭಾಷೆ/ಗಣಿತ/ವಿಜ್ಞಾನ/ ಕಲೆಯ ವಿಷಯದ ಸಾರ್ವತ್ರಿಕ ಅಂಶಗಳನ್ನು ನಿಯಮಗಳ ರೂಪದಲ್ಲಿ ನಿರೂಪಿಸಬಹುದು.

### 4. ಸುಲಭತೆಯಿಂದ ಕ್ಲಿಷ್ಟತೆ ಕಡೆಗೆ ಸಾಗುವುದು (Proceed from Easy to Difficult)

ಯಾವುದೇ ಪಾಠ, ವಿಚಾರ ಅಧ್ಯಾಪಕರಿಗೆ ಸುಲಭ, ವಿದ್ಯಾರ್ಥಿಗಳಿಗೆ ಕಷ್ಟ, ಹಾಗೆಯೇ ಪುಸ್ತಕದಲ್ಲಿನ ಎಲ್ಲಾ ವಿಷಯಗಳು ಸುಲಭವಲ್ಲ ಹಾಗೂ ಕಷ್ಟವಲ್ಲ. ತಿಳಿಯುವ ವಿಧಾನದ ಮೇಲೆ ಎಲ್ಲವೂ ನಿಂತಿದೆ. ಈ ರೀತಿಯ ಬೋಧನಾ ತತ್ವ ಅಥವಾ ವಿಧಾನ ಅನುಸರಿಸುವುದರಿಂದ ಕ್ಲಿಷ್ಟವಾದ ವಿಷಯವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅಂದರೆ ವಿದ್ಯಾರ್ಥಿಯ ಮಾನಸಿಕ ವಿಚಾರಗಳಾದ ಆಸಕ್ತಿ, ಕಲಿಕೆಯ ವೃದ್ಧಿ, ಕಲಿಕೆಯ ಸಾಮರ್ಥ್ಯ, ಅಭಿರುಚಿ, ಇವುಗಳು ಮಗುವಿನ ಕಲಿಕೆಗೆ ಪ್ರೇರಣೆ ನೀಡುತ್ತವೆ. ಹುಟ್ಟಿದ ಮಗು ಒಂದೇ ಬಾರಿಗೆ ಓಡಲು ಸಾಧ್ಯವಿಲ್ಲ. ಬಿದ್ದು, ಎದ್ದು, ಗೋಡೆ ಹಿಡಿದು ನಡೆದು ವರ್ಷಕಳೆದಂತೆ ಓಡುವುದನ್ನು ಕಲಿಯುತ್ತದೆ. ಅಂತೆಯೇ ಗಣಿತ, ಭಾಷೆ, ವಿಜ್ಞಾನ, ಕಲಾ ವಿಷಯಗಳನ್ನು ನಿಧಾನವಾಗಿ, ತದನಂತರ ವೇಗವಾಗಿ ಕಲಿಯುತ್ತದೆ. ಹತ್ತನೇ ಅಂತಸ್ತನ್ನು ಒಂದೇ ಬಾರಿಗೆ ಏರಲು ಸಾಧ್ಯವಿಲ್ಲ. ಒಂದು-ಎರಡು-ಮೂರು ಅಂತಸ್ತುಗಳನ್ನು ಹತ್ತಿ ಮುಂದೆ ಸಾಗಿದಾಗ ಹತ್ತನೇ ಅಂತಸ್ತು ಏರಬಹುದು. ವಿದ್ಯಾರ್ಥಿಗಳಿಗೆ ಕೂಡುವ ಅಥವಾ ಕಳೆಯುವ ವಿಷಯ ತಿಳಿಸುವಾಗ ಅತಿ ಹೆಚ್ಚಿನ ಸಂಖ್ಯೆಗಳನ್ನು ನೀಡಿದಾಗ ಅವರಿಗೆ ಕಷ್ಟವೆನಿಸುತ್ತದೆ. ಚಿಕ್ಕ ಚಿಕ್ಕ ಸಂಖ್ಯೆಗಳ ಕೂಡುವ ಅಥವಾ ಕಳೆಯುವ ಕ್ರಿಯೆಗಳನ್ನು ಮಾಡಿಸಿ ಅದನ್ನು ಅರಿಯುವಂತೆ ಮಾರ್ಗದರ್ಶಿಸಿ ನಂತರ ದೊಡ್ಡ ಸಂಖ್ಯೆಗಳನ್ನು ಈ ಕ್ರಿಯೆಗಳಿಗೆ ಅಳವಡಿಸಿದಂತೆ ಅವರಿಗೆ ಕಷ್ಟವೆನಿಸುವುದಿಲ್ಲ. "ನೀರಿಳಿಯದ ಗಂಟಲೊಳ್ ಕಡುಬು ತುರುಕಿದಂತಾಯ್ತು" ಎಂಬ ಕವಿವಾಣಿಯಂತೆ ಸ್ವಲ್ಪ ಸ್ವಲ್ಪವೇ ತಿಳಿಸುತ್ತಾ ವಿಷಯವ್ಯಾಪ್ತಿಯನ್ನು ಹೆಚ್ಚು ಮಾಡಬಹುದು.

### 5. ಮನೋವೈಜ್ಞಾನಿಕ ಆಧಾರದಿಂದ ತಾರ್ಕಿಕತೆಯ ಕಡೆಗೆ ಸಾಗುವುದು (Proceed from Psychological base to Logical side)

ಮನೋವೈಜ್ಞಾನಿಕ ವಾದದ ಪ್ರಕಾರ ಯಾವುದೇ ವಿಷಯವನ್ನು ಬೋಧಿಸುವಾಗ ವಿದ್ಯಾರ್ಥಿಗಳ ಮನಸ್ಸು, ವಯಸ್ಸು, ಬುದ್ಧಿಶಕ್ತಿ, ಅಭಿರುಚಿ, ಸಾಮರ್ಥ್ಯ, ಮನೋಭಾವ, ಆಸಕ್ತಿ, ಕಲಿಕೆಗೆ ಸಂಬಂಧಿಸಿದ ಸಿದ್ಧತೆ ಇವುಗಳನ್ನು ಗಮನಿಸಬೇಕು.

ಉದಾ 1: "ಶಿವಾಜಿಯ ಜೀವನ ಹಾಗೂ ಸಾಧನೆ" ಕುರಿತಂತೆ ಪ್ರಾಥಮಿಕ, ಮಾಧ್ಯಮಿಕ, ಉನ್ನತ ಶಿಕ್ಷಣ ಹಂತಗಳಲ್ಲಿ ಬೋಧಿಸಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಕೇವಲ ಒಂದು ಅವಧಿಯಲ್ಲಿ ಸಂಕ್ಷಿಪ್ತವಾಗಿ ಶಿವಾಜಿಯ ಬಾಲ್ಯ ಜೀವನ, ಆತನ ಸಾಧನೆಗಳನ್ನು ತಿಳಿಸಲಾಗುತ್ತದೆ. ನಂತರ ಮಾಧ್ಯಮಿಕ ಹಂತದಲ್ಲಿ ಶಿವಾಜಿಯ ಜೀವನ ಕುರಿತಂತೆ ಐದಾರು ಅವಧಿಯಲ್ಲಿ ವಿವರಿಸಲಾಗುತ್ತದೆ. ಹಾಗೆಯೇ ಕಾಲೇಜು ಹಂತಕ್ಕೆ ಬಂದಾಗ ವಿದ್ಯಾರ್ಥಿಗಳಿಗೆ ಸವಿಸ್ತಾರವಾಗಿ ಹತ್ತಾರು ಅವಧಿಗಳಲ್ಲಿ ಮಾರ್ಗದರ್ಶನ ನೀಡಲಾಗುತ್ತದೆ. ಅಂದರೆ ಆಯಾಯ ಹಂತದಲ್ಲಿ ವಿದ್ಯಾರ್ಥಿಗಳ ಮನೋಭಾವ, ವಯಸ್ಸು, ಬುದ್ಧಿಶಕ್ತಿ ಅನುಸರಿಸಿ ವಿಷಯ ವಸ್ತುವನ್ನು ವಿಸ್ತರಿಸಿ ತಿಳಿಸಲಾಗುತ್ತದೆ. ಈ ಮನೋವೈಜ್ಞಾನಿಕ ವಾದದಿಂದ ತತ್ವ, ಆದರ್ಶ, ನಿಯಮಗಳನ್ನು ತರ್ಕಬದ್ಧವಾಗಿ ತಿಳಿಸಲಾಗುತ್ತದೆ. ತಾರ್ಕಿಕತೆ ಎಂಬುದು ಪ್ರತಿಪಾದನೆಯ ಒಂದು ವಿಧ. ವಿಷಯವನ್ನು ಯಾವ ಆಧಾರದ ಮೇಲೆ ನಿರೂಪಿಸಿದರೆ ಅರ್ಥವಾದೀತು ಎಂಬುದರ ಹಿನ್ನೆಲೆಯಿಂದ ಕಲಿತ ವಿಷಯಗಳ ಆಧಾರದ ಮೇಲೆ ಮುಂದಿನದನ್ನು ಕಲಿಯುವುದು.

"ನಿನ್ನೆಯ ದಿನವನ್ನು ಕಂಡಿದ್ದೇವೆ. ಇವತ್ತಿನದನ್ನು ನೋಡುತ್ತಿದ್ದೇವೆ, ನಾಳೆಯದನ್ನು ನೋಡುತ್ತೇವೆ." ಅಂದರೆ ನಿನ್ನೆ, ಈ ದಿನ ಹಾಗೂ ನಾಳೆ ಇವುಗಳಿಗಿರುವ ಅನ್ಯೋನ್ಯತೆಯೇ ತಾರ್ಕಿಕತೆ.

ಒಬ್ಬ ತಮಾಷೆಗಾಗಿ ಒಂದು ಪ್ರಸಂಗ ತಿಳಿಸಿದ.... ಇಬ್ಬರು ಸ್ನೇಹಿತರು ಒಂದು ಮರದ ರಂಬೆಯ ಮೇಲೆ ಗಿಣಿಯೊಂದು ಕುಳಿತಿರುವಂತಿರುವ ಚಿತ್ರಪಟ ನೋಡಿ ಸಂಭಾಷಿಸುತ್ತಿದ್ದರಂತೆ.

ಒಬ್ಬ : ಗಿಣಿ ಮರದ ಮೇಲಿದೆಯೇ ಅಥವಾ ಭೂಮಿಯ ಮೇಲಿದೆಯೇ?

ಇನ್ನೊಬ್ಬ : ಭೂಮಿಯ ಮೇಲಿದೆ.

ಒಬ್ಬ : ತಪ್ಪು, ಅದು ಮರದ ರೆಂಬೆ ಮೇಲಿದೆ.

ಇನ್ನೊಬ್ಬ : ತಪ್ಪು, ಅದು ಭೂಮಿಯ ಮೇಲೇ ಇದೆ.

ಒಬ್ಬ : ಅದು ಹೇಗೆ ಹೇಳುವೆ?

Digitised by Bharatavani, CIIL

ಇನ್ನೊಬ್ಬ : ಭೂಮಿ/ನೆಲ ಇಲ್ಲದಿದ್ದರೆ ಮರ ಬೆಳೆಯಲು ಹೇಗೆ ಸಾಧ್ಯ. ಮರವಿಲ್ಲದೆ ರೆಂಬೆ ಬರಲು ಹೇಗೆ ಸಾಧ್ಯ. ರೆಂಬೆ ಇಲ್ಲದೆ ಗಿಣಿ ಕೂರಲು ಹೇಗೆ ಸಾಧ್ಯ ಎಂದು ಸಮರ್ಥಿಸಿದ.

ಒಬ್ಬ : ನೀನು ತಿಳಿಸಿದ ಸಮರ್ಥನೆ ಸರಿ. ನಾನೂ ಕೂಡ ನೀನು ತಿಳಿಸಿದಂತೆ ಗಿಣಿ ಮರದ ಮೇಲಿಲ್ಲ ಭೂಮಿಯ ಮೇಲೆ ಇದೆ ಎಂದು (ತಾರ್ಕಿಕ ವಾದದ ನೆಲೆಗಟ್ಟಿನಲ್ಲಿ) ಒಪ್ಪುತ್ತೇನೆ.

ಹೀಗೆ ತಾರ್ಕಿಕತೆಯ ಪ್ರತಿ ವಿಷಯದ ಸಮರ್ಥನೆಯಲ್ಲಿ ನೆರವಾಗುತ್ತದೆ ಎಂಬುದನ್ನು ಒಪ್ಪುತ್ತೇನೆಂದು, ಜೊತೆಗೆ ನಮ್ಮ ಮನೋವೈಜ್ಞಾನಿಕ ನೆಲೆಗಟ್ಟು ಕೂಡ ಮುಖ್ಯ. ಸಮರ್ಥ ಸ್ಪಷ್ಟತೆ ನೀಡಲು ವಯಸ್ಸು, ಬುದ್ಧಿಶಕ್ತಿ, ಸಾಮರ್ಥ್ಯ ಕೂಡ ಮುಖ್ಯ ಎಂಬುದು ಒಪ್ಪಲೇಬೇಕು, ಮನೆಯ ಗೋಡೆಯ ನಿರ್ಮಾಣವು ಹೇಗೆ ಇಟ್ಟಿಗೆ, ಕಲ್ಲು, ಮರಳು, ಜಲ್ಲಿ, ಸಿಮೆಂಟು, ನೀರಿನಿಂದ ಸಾಧ್ಯವೋ ಹಾಗೆಯೇ ಪ್ರತಿವಿಷಯದ ಸಮರ್ಥನೆಯು ನಿಯಮ, ತತ್ವ, ಆದರ್ಶ, ಸ್ವಯಂಸಿದ್ಧ, ಪ್ರಮೇಯ, ವ್ಯಾಖ್ಯೆ, ಸೂತ್ರ, ಸಮೀಕರಣ ಮುಂತಾದವುಗಳ ಮೇಲೆ ನಿಂತಿರುವುದನ್ನು ಮರೆಯಬಾರದು.

### 6. ಮೂರ್ತದಿಂದ ಅಮೂರ್ತದೆಡೆಗೆ ಸಾಗುವುದು (Proceed from Concrete to Abstract)

ಮನುಷ್ಯ ತನ್ನ ಕಣ್ಣಿನಿಂದ ನೋಡಿದ್ದು, ತನಗೆ ಇದು ಸರಿ ಎಂಬುದು ತನ್ನ ಅರಿವಿಗೆ ಬಂದರೆ ಮಾತ್ರ ಅದನ್ನು ಒಪ್ಪುತ್ತಾನೆ, ತನಗೆ ಕಾಣದಿರುವ ಹಾಗೂ ತನಗೆ ಯಾರೋ ಹೇಳಿದ ಯಾವುದೇ ವಿಷಯವನ್ನು ಒಪ್ಪುವುದಿಲ್ಲ. ಹಾಗೆಯೇ ವಿದ್ಯಾರ್ಥಿಗಳೂ ಕೂಡ ತಮ್ಮ ಸ್ಪರ್ಶೇಂದ್ರಿಯಗಳ ಮೂಲಕ ಒಪ್ಪಿಕೊಳ್ಳುವ ಮೂರ್ತ ವಿಷಯಗಳ ಸಹಾಯದಿಂದ ಅಗೋಚರ ಹಾಗೂ ಸತ್ಯಸಂದವಾದ ವಿಷಯಗಳನ್ನು ತಿಳಿದುಕೊಳ್ಳುವಂತೆ ಪ್ರೇರೇಪಿಸಬಹುದು. ಸ್ಪೆನ್ಸರ್ ಎಂಬ ವಿದ್ವಾಂಸ ಹೇಳುತ್ತಾರೆ – "Our lessons should start from the concrete and end in the abstract" ಎಂಬುದು ಅರ್ಥಪೂರ್ಣ.

ಉದಾ: 1) ವಿದ್ಯಾರ್ಥಿಗೆ "ಬೆಂಕಿಗೆ ಕೈ ಬೆರಳನ್ನು ಸೋಕಿಸಿದರೆ ಅದು ಸುಡುತ್ತದೆಂದು'' –ಹಲವು ಬಾರಿ ತಿಳಿಸಿದರೆ ಪ್ರಯೋಜನವಾಗುವುದಿಲ್ಲ. "ಬೆಂಕಿ" ಹಾಗೂ "ಸುಡುತ್ತದೆ" ಈ ಪದಗಳು ಜೊತೆಯಲ್ಲೇ ಇರುತ್ತದೆ. "ಬೆಂಕಿಯನ್ನು" ನೋಡುತ್ತೇವೆ (ಮೂರ್ತ) ಆದರೆ "ಸುಡುತ್ತದೆ" ಎಂಬುದರ ಅರಿವು (ಅಮೂರ್ತ) ಕೇವಲ ಮಾತುಗಳಿಂದ ಆಗಲು ಸಾಧ್ಯವಿಲ್ಲ. ಶಿಕ್ಷಕ ಆ ಸಂದರ್ಭದಲ್ಲಿ ಉರಿಯುತ್ತಿರುವ ಗಂಧದ ಕಡ್ಡಿಯ ತುದಿಗೂ ಅಥವಾ ಉರಿಯುತ್ತಿರುವ ಮೇಣದ ಬತ್ತಿಗೆ ಕೈ ಬೆರಳನ್ನು ತಾಗಿಸುವಂತೆ ತಿಳಿಸಬೇಕು. ಪ್ರತ್ಯಕ್ಷಗೊಳಿಸಿ ಅನುಭವ ಪಡೆದುಕೊಂಡ ವಿದ್ಯಾರ್ಥಿ ಇನ್ನೊಮ್ಮೆ ಬೆಂಕಿಗೆ ಕೈ ಬೆರಳನ್ನು ತಾಕಿಸುವುದೇ ಇಲ್ಲ.

ಉದಾ: 2) 2 ಎಂಬ ಸಂಖ್ಯೆಗೆ 3 ಎಂಬ ಸಂಖ್ಯೆಯನ್ನು ಕೂಡಿದಾಗ ಮೊತ್ತ 5 ಬರುತ್ತದೆ. (ಮೂರ್ತ ಸಂದರ್ಭ) ಹಾಗೆಯೇ $5a + 4a = 9a$ ಇಲ್ಲಿ 'a' ಎಂಬುದು ಅಮೂರ್ತ ಸಂದರ್ಭ 'a' ಗೆ ನಿರ್ದಿಷ್ಟ ಅರ್ಥವಿಲ್ಲ. ಅದು ಪೆನ್ನು, ಕಡ್ಡಿ, ಹಣ್ಣು, ಮಣಿ ಅಥವಾ ಏನನ್ನಾದರೂ ಊಹಿಸಬಹುದು.

ಉದಾ: 3) ವಿದ್ಯಾರ್ಥಿಗೆ "ಬೆಕ್ಕಿನ" ಬಗೆಗೆ ತಿಳಿಸಬೇಕೆಂದು ಆಲೋಚಿಸಿದಾಗ ವಿದ್ಯಾರ್ಥಿಗೆ ಬೆಕ್ಕಿನ ಪರಿಕಲ್ಪನೆಯೇ ಗೊತ್ತಿರುವುದಿಲ್ಲ. ಆಗ ಮಗುವಿಗೆ ನಿಜವಾದ ಬೆಕ್ಕನ್ನು ತೋರಿಸುವ ಮೂಲಕ, ಚಿತ್ರಗಳ ಮೂಲಕ, ಅದರ ಬಾಹ್ಯಗುಣ ಲಕ್ಷಣಗಳ ಮೂಲಕ ಪ್ರತಿಪಾದಿಸಬಹುದು. ಅದರ ಆಕಾರ, ಬಣ್ಣ, ಅದರ ಮಿಂಯಾವ್ ಶಬ್ದದ ಮೂಲಕ, ಅದು ಇಲಿ ಹಿಡಿಯುವ ವಿಧಾನ, ಇತ್ಯಾದಿಗಳ ಮೂಲಕ ಪರಿಚಯಿಸಬಹುದು. ಈ ರೀತಿಯ ಉದಾಹರಣೆಗಳು ವಿದ್ಯಾರ್ಥಿಗೆ ತನ್ನ ವಿಮೋಚನೆಗೆ ನಿಲುಕುವ ಹಾಗೂ ತಿಳುವಳಿಕೆಯ ಗಡಿಯನ್ನು ಸಮೀಪಿಸುವಂತಿರಬೇಕು. ಆತನಲ್ಲಿ ಶಿಕ್ಷಕ ತಿಳಿಸುವ ವಿಚಾರಗಳನ್ನು ನೈಜತೆ ಇರುವ ಬಗ್ಗೆ ಸ್ಪಷ್ಟತೆ ಕಾಣುವಂತಿರಬೇಕು. ಬಲವಂತದಿಂದ ಯಾವುದನ್ನು ಒಪ್ಪಿಸಲು ಸಾಧ್ಯವಿಲ್ಲ ಎಂಬುದು ಇಲ್ಲಿ ಅರ್ಥಗರ್ಭಿತ.

### 7. ನೈಜತೆಯಿಂದ ಪ್ರಾತಿನಿಧ್ಯದ ಕಡೆಗೆ/ಸಾಗುವುದು (Proceed from Actual to Representative)

ನೈಜ, ಸ್ವಾಭಾವಿಕ, ಸಹಜ ವಸ್ತುಗಳು ಎಲ್ಲರನ್ನೂ ಆಕರ್ಷಿಸುತ್ತದೆ. ಬೋಧನೆಯು "ಸತ್ಯಂ, ಶಿವಂ, ಸುಂದರಂ" ಎಂಬ ಮೂರು ಅಂಶಗಳ ಮೇಲೆ ನಿಂತಿರುವುದು ಎಲ್ಲರಿಗೂ ತಿಳಿದ ವಿಷಯ. ತರಗತಿಯಲ್ಲಿ ಹೇಳಿದ ಎಲ್ಲಾ ಹೇಳಿಕೆಗಳು ನಿಜ ಜೀವನದಲ್ಲಿ ನಿಸರ್ಗದ ನಿಯಮದಂತೆ ಸಾರ್ಥಕತೆ ಕಾಣಬೇಕು. ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕಲಿಸುವ ವಿಷಯಗಳಲ್ಲಿನ ದೋಷದ ಅರಿವು ಉಂಟಾಗಿ ನಮ್ಮನ್ನು ದೂಷಿಸುವ ಸಾಧ್ಯತೆಗಳುಂಟು.

ಉದಾ: 1) ಒಂದು ಕೆ.ಜಿ. ಸಕ್ಕರೆಗೆ 10 ರೂ. ಆದರೆ, 5 ಕೆ.ಜಿ. ಸಕ್ಕರೆ ಬೆಲೆ ಎಷ್ಟು?

ಉದಾ: 2) ಒಬ್ಬ ಸೈಕಲ್ ಸವಾರನು ಗಂಟೆಗೆ 20 ಮೈಲಿ ವೇಗದಲ್ಲಿ ಚಲಿಸುವನು. 10 ಗಂಟೆಗಳಲ್ಲಿ ಆತನು ಕ್ರಮಿಸಿದ ದೂರವೆಷ್ಟು?

ಈ ಎರಡು ಉದಾಹರಣೆಗಳು ಗಣಿತದಲ್ಲಿ ಬರುವ ಲೆಕ್ಕಗಳ ರೂಪದಲ್ಲಿರುವುದು ಸರಿಯಷ್ಟೆ. ಸುಲಭವಾಗಿ ಉತ್ತರಿಸಲು ಆಗುತ್ತದೆ, ಆದರೆ ಇಂದಿನ ಸನ್ನಿವೇಶದಲ್ಲಿ 10 ರೂ.ಗೆ ಸಕ್ಕರೆ ಸಿಗುವುದೆ! ಗಂಟೆಗೆ ಸೈಕಲ್ ನೂರ ಇಪ್ಪತ್ತು ಮೈಲಿ ಕ್ರಮಿಸಲು ಸಾಧ್ಯವೇ! ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳು ಶಿಕ್ಷಕರನ್ನು ಒಪ್ಪಿಕೊಳ್ಳುವುದಿಲ್ಲ. ಕೇವಲ ಜ್ಞಾನ ತುಂಬಿ ಪುಸ್ತಕೀಯ ಬುದ್ಧಿವಂತರೆನಿಸಿದರೆ ಸಾಲದು ನೈಜ ವಾತಾವರಣ ರೂಪಿಸಲ್ಪಡಬೇಕು. ಅವರಿಗೆ ಅದನ್ನು ನಿತ್ಯ ಜೀವನದಲ್ಲಿ ಕಾಣುವಂತೆ ಬಳಸುವಂತೆ ಪ್ರೇರೇಪಿಸಬೇಕು.

### 8. ವಿಶ್ಲೇಷಣೆಯಿಂದ ಸಂಶ್ಲೇಷಣೆ ಕಡೆಗೆ ಸಾಗುವುದು (Proceed from Analysis to Synthesis)

"ವಿಶ್ಲೇಷಣೆ" ಎಂದರೆ ಕೊಟ್ಟ ದತ್ತಾಂಶಗಳನ್ನು ವಿಂಗಡಿಸಿ ಇಡುವುದು ಎಂದರ್ಥ. ವಿಭಜಿಸುವುದು, ಬೇರ್ಪಡಿಸುವುದು ಎಂಬುದು ಇದರ ಸಮಾನಾರ್ಥ. ಸಮಸ್ಯೆ ನೀಡಿದಾಗ, ಸಮಸ್ಯೆಯನ್ನು ಸರಿಯಾಗಿ ವಿಂಗಡಿಸುತ್ತಾ ಹೋದಾಗ ಗೊತ್ತಿದ್ದ ಸಂಗತಿಗಳ ಸಹಾಯದಿಂದ ಪರಿಹಾರ ಕಂಡುಹಿಡಿಯಲಾಗುತ್ತದೆ. ಹಾಗೆಯೇ "ಸಂಶ್ಲೇಷಣೆ" ಅಂದರೆ ವಿಂಗಡಿಸಿದ ಅನೇಕ ಭಾಗಗಳನ್ನು ಒಟ್ಟಿಗೆ ಕೂಡಿ ಹಾಕುವುದು. ಅಂದರೆ ತಿಳಿದಿರುವ ತರ್ಕಬದ್ಧವಾದ ತತ್ವಗಳನ್ನು ಒಟ್ಟಿಗೆ ಸೇರಿಸಿ ಅವುಗಳಿಂದ ಹೊಸ ವಿಷಯವನ್ನು ಕಂಡು ಹಿಡಿಯುವ ಕ್ರಮಗಳ ಸಂಯೋಜನೆ ಅಥವಾ ಸಂಶ್ಲೇಷಣೆ ಎನ್ನುವರು. ವಿಶ್ಲೇಷಣೆ ಹಾಗೂ ಸಂಶ್ಲೇಷಣೆಗಳೆರಡೂ ಸಮಸ್ಯೆಯನ್ನು ಬಿಡಿಸಲು ಬೇಕಾಗುತ್ತದೆ.

ಉದಾ: 1) $\frac{a}{b} = \frac{c}{d}$ ಆದರೆ $\frac{ac - 2b^2}{b} = \frac{c^2-2bd}{d}$ ಎಂದು ಸಾಧಿಸಿ

1) ವಿಶ್ಲೇಷಣೆಗೆ ಒಳಪಡಿಸಿದಾಗ

Digitised by Bharatavani, CIIL

1) ಉತ್ತರದಿಂದ ಪ್ರಾರಂಭಿಸಬೇಕು

$$\frac{ac - 2b^2}{b} = \frac{c^2 - 2bd}{d}$$

2) ಅಡ್ಡ / ಓರೆ ಗುಣಾಕಾರ ಮಾಡಿದಾಗ $bc^2 - 2b^2d = acd - 2b^2d$

3) $-2b^2$ನ್ನು ಎರಡು ಕಡೆಯೂ ತೆಗೆದರೆ

$bc^2 = acd$ ಬರುತ್ತದೆ

4) c ಯಿಂದ ಎರಡು ಕಡೆ ಭಾಗಿಸಿದರೆ

$bc = ad$ ಅಥವಾ

5) $\frac{a}{b} = \frac{c}{d}$ ಬರುತ್ತದೆ (ಪ್ರಶ್ನೆ ಬರುತ್ತದೆ)

**2) ಸಂಶ್ಲೇಷಣೆಗೆ ಒಳಪಡಿಸಿದಾಗ**

1. $\frac{a}{b} = \frac{c}{d}$ (ಪ್ರಶ್ನೆಯಿಂದ ಪ್ರಾರಂಭಿಸಬೇಕು)

ಓರೆ ಗುಣಾಕಾರ ಮಾಡಿದಾಗ $ad = bc$

2. C ನಿಂದ ಗುಣಿಸಿದಾಗ

$adc = bc^2$ ಬರುತ್ತದೆ.

3. $2b^2d$ ನಿಂದ ಎರಡೂ ಕಡೆ ಕಳೆದಾಗ

4. $adc - 2b^2d = bc^2 - 2b^2d$ ಬರುತ್ತದೆ.

5. ಅಂದರೆ $\frac{ac - 2b^2}{b} = \frac{c^2 - 2bd}{d}$ ಬರುತ್ತದೆ.

(ಉತ್ತರ ಬರುತ್ತದೆ)

### 9. ಅನುಭವದಿಂದ ತಿಳಿವಳಿಕೆಯ ಕಡೆಗೆ ಸಾಗುವುದು (Proceed from Empirical to Rational)

ಕೆಲವೊಮ್ಮೆ ಕಡಿಮೆ ಸಾಮಾನ್ಯ ನಿಯಮಗಳಿಂದ ಅಧಿಕ ಸಾಮಾನ್ಯ ನಿಯಮಗಳತ್ತ ತಿರುವನ್ನು ವಿಶೇಷ ಸಂದರ್ಭದಲ್ಲಿ ತೆಗೆದುಕೊಳ್ಳುತ್ತೇವೆ. ಇದನ್ನೇ ನಾವು ಅನುಭವದಿಂದ/ತಿಳುವಳಿಕೆಯ ಬಳಕೆಯ ಕಡೆಗೆಂದು ಹೇಳುವುದುಂಟು. ವೀಕ್ಷಣೆ ಹಾಗೂ ಪ್ರತ್ಯಕ್ಷ ಅನುಭವದಿಂದ ಸ್ವಾನುಭವವನ್ನು ಹೊಂದುತ್ತೇವೆ (Empirical Knowledge). ಇಲ್ಲಿ ಕೇವಲ ಕಾರಣ ನೀಡುವುದಷ್ಟೇ ಉದ್ದೇಶವಾಗಿರುವುದಿಲ್ಲ.

ಉದಾ 1: ನೀರು ಪಾತ್ರೆಯ ಆಕಾರವನ್ನು ಹೊಂದುತ್ತದೆ ಎಂಬುದು ಸಾಮಾನ್ಯ ನಿಯಮ. ಈ ನಿಯಮವನ್ನು ವೀಕ್ಷಣೆ ಹಾಗೂ ಪ್ರತ್ಯಕ್ಷ ಅನುಭವದಿಂದ ತಿಳಿಯುತ್ತೇವೆ. ಅದು ಲೋಟದ ಆಕಾರವೂ ಆಗಬಹುದು, ತಟ್ಟೆಯ ಆಕಾರವೂ ಆಗಬಹುದು, ದೊಡ್ಡ ಕೊಳಗದ ಆಕಾರವನ್ನೂ ಹೊಂದಬಹುದು. ಇಲ್ಲಿ ಏಕೆ ಆ ರೀತಿಯ ಆಕಾರ ಪಡೆಯುತ್ತದೆ? ಎಂಬುದನ್ನು ಯೋಚಿಸಲಾಗುವುದಿಲ್ಲ. ಆದರೆ ಬಳಕೆಯ ಕಡೆಯಿಂದ (Rational Knowledge) ನೋಡಿದಾಗ ಯಾವುದೇ ಸಾಮಾನ್ಯ ನಿಯಮವನ್ನು ಉರು ಹೊಡೆದು ಹೇಳಬಹುದು. ಆದರೆ ಆ ನಿಯಮ ಎಷ್ಟರಮಟ್ಟಿಗೆ ಬಳಕೆಯಾಗಿದೆ ಎಂಬುದು ಮುಖ್ಯ. ನೀರು ದ್ರವ್ಯ ಪದಾರ್ಥವಾಗಿರುವ ಕಾರಣ, ನಿರ್ದಿಷ್ಟ ಆಕಾರ ಇಲ್ಲದ ಕಾರಣ ತಾನು ಯಾವ ಆಕಾರದ ಪಾತ್ರೆ (Container)ಗೆ ವರ್ಗಾಯಿಸುವುದೋ ಅದೇ ಆಕಾರ ಹೊಂದುತ್ತದೆ ಎಂಬ ಸತ್ಯ ಸಂಗತಿಯನ್ನು ವೈಜ್ಞಾನಿಕ ಕಾರಣದೊಂದಿಗೆ ಸಮರ್ಥಿಸಬೇಕು. ಅನುಭವದ ವಿಧಾನ ಶೋಧನೆಯ ಚೈತನ್ಯವನ್ನು ಪ್ರತಿಬಿಂಬಿಸುತ್ತದೆ. ಅದರ ಜೊತೆಯಲ್ಲಿ ಸಕಾರಣ, ಸಾಮಾನ್ಯೀಕರಿಸುವಿಕೆ ಹಾಗೂ ವಿವರಿಸುವಿಕೆಯ ಅಗತ್ಯವೂ ಇದೆ. ಪ್ರಯೋಗ ಮಾಡಿ ಅನುಭವತೀತವಾದ ಸಂಗತಿಯನ್ನು ಸಂಗ್ರಹಿಸಬಹುದು. ಮಗುವು ಪ್ರಾರಂಭದಲ್ಲಿ ಆಟಿಕೆಗಳು, ಆಟಗಳ ಮೂಲಕ ಅನುಭವ ಪಡೆಯುತ್ತದೆ. ನಂತರ ಆ ಅನುಭವಗಳನ್ನು ತಾರ್ಕಿಕ ವಿಶ್ಲೇಷಣೆ ಮೂಲಕ ಸಾದರಪಡಿಸುತ್ತದೆ. ಉದಾ2: ಮರದಿಂದ ಹಣ್ಣು/ಎಲೆ ಕೆಳಗೆ ಬೀಳುವುದನ್ನು ಮಗು ನೋಡುತ್ತದೆ. ಚೆಂಡು, ಕಲ್ಲು ಎಂಬ ವಸ್ತುಗಳನ್ನು ಎಸೆಯುತ್ತಾ ಅದು ಕೆಳಗೆ ಬೀಳುವುದನ್ನು ಗಮನಿಸಿ ಆನಂದಿಸುತ್ತದೆ (Empirical Knowledge). ಆದರೆ ಆ ವಸ್ತುಗಳು ಯಾಕೆ ಮೇಲೆ ಹೋಗದೆ ಕೆಳಗೆ ಬೀಳುತ್ತದೆ ಎಂಬ ಕಾರಣ ತಿಳಿಯುವುದಿಲ್ಲ. ಮಗು ಬೆಳೆದು ಅದೇ ಭೂಮಿಯ ಆಕರ್ಷಣ ಗುಣ ಗೊತ್ತಾದಾಗ ತಿಳುವಳಿಕೆ (Rational Knowledge) ಹೆಚ್ಚಾಗುತ್ತದೆ. ಈ ತಿಳುವಳಿಕೆಯನ್ನೇ ನಾವು ಗ್ರಹಿಕೆ, ಅನ್ವಯ, ಕೌಶಲ್ಯ, ಪ್ರತಿಭೆ ಎಂದು ವರ್ಗೀಕರಿಸುತ್ತೇವೆ.

### 10. ಸರಳತೆಯಿಂದ ಸಂಕೀರ್ಣದ ಕಡೆಗೆ ಸಾಗುವುದು (Proceed from Simple to Complex)

ಪಠ್ಯ ವಿಷಯಗಳು ಸುಲಭವಿದ್ದಾಗ ಕಲಿಯಲು ಸುಲಭ, ಹಾಗೆಯೇ ಪಠ್ಯವಿಷಯಗಳು ಕ್ಲಿಷ್ಟ ಹಾಗೂ ಜಟಿಲವಿದ್ದಾಗ (ಅಥವಾ ಸಂಕೀರ್ಣವಿದ್ದಾಗ) ಕಲಿಯಲು ಕ್ಲಿಷ್ಟ. ಸಂಗ್ರಹಿಸಿದ ವಿಷಯಗಳನ್ನು ಸರಳ–ಸಾಧಾರಣ–ಕ್ಲಿಷ್ಟ (ಸಂಕೀರ್ಣ) ಹಂತಗಳಲ್ಲಿ ಜೋಡಿಸಬೇಕಾಗುತ್ತದೆ. ಉದಾಹರಣೆಗೆ, ನಮಗೆ ಕಥೆ, ಕಾವ್ಯ, ಕಾದಂಬರಿ, ಪುಸ್ತಕಗಳೆಂದರೆ ಓದಲು ತುಂಬಾ ಖುಷಿ. ಅದರಲ್ಲಿನ ಪ್ರಸಂಗಗಳು ನಮ್ಮನ್ನು ಆಕರ್ಷಿಸುತ್ತವೆ. ಜೀವನದ ಸನ್ನಿವೇಶಗಳೊಂದಿಗೆ ಸಂಬಂಧವಿದ್ದು ಓದಲು ಪ್ರೇರೇಪಿಸುತ್ತದೆ. ಹಾಗಾಗಿ ಬಸ್‌ನಿಲ್ದಾಣ, ರೈಲ್ವೆ ನಿಲ್ದಾಣ, ಮನೆ, ಎಲ್ಲಿ ಬೇಕಾದರೂ ಅದು ಓದಿಸಿಕೊಂಡು ಹೋಗುತ್ತದೆ. ಏಕೆಂದರೆ ಅದು ಸುಲಭ ಹಾಗೂ ಸರಳತೆಯಿಂದ ನಮ್ಮನ್ನು ಆಕರ್ಷಿಸುತ್ತದೆ. ಅದೇ ಪುಸ್ತಕದ ಬದಲಿಗೆ ರಸಾಯನಶಾಸ್ತ್ರ ಅಥವಾ ಭೌತಶಾಸ್ತ್ರ ಅಥವಾ ತತ್ತ್ವಶಾಸ್ತ್ರ ಪುಸ್ತಕವನ್ನು ನೀಡಿದರೆ ಬಿಸಾಡುತ್ತೇವೆ. ಏಕೆಂದರೆ ಇವುಗಳಲ್ಲಿನ ವಿಷಯಗಳು ನೇರವಾಗಿ ಜೀವನಕ್ಕೆ ಸಂಬಂಧವಿದ್ದರೂ ಅರ್ಥವಾಗದೆ ನಮ್ಮ ಮನಸ್ಸನ್ನು ಮುಟ್ಟಲು ಶ್ರಮಪಡಬೇಕಾಗುತ್ತದೆ. ಮೇಲಿಂದ ಮೇಲೆ ಅಭ್ಯಾಸ ಬಯಸುತ್ತದೆ. ನಮ್ಮ ಶಿಕ್ಷಣ ತಜ್ಞರ ಅಭಿಪ್ರಾಯದಂತೆ ಸರಳ ವಿಷಯಗಳನ್ನು ಮೊದಲು ಕಲಿಸಿ, ನಂತರ ಹಂತ ಹಂತವಾಗಿ ಆ ವಿಷಯದ ಸಂಕೀರ್ಣತೆಯನ್ನು ತಿಳಿಸಿರೆಂದು. ಕೇವಲ ಬೋಧನೆಯಿಂದ ವಿಷಯಗಳು ಸುಲಭವಾದರೆ ಸಾಲದು, ಅದು ಪಠ್ಯಕ್ರಮ ರಚನೆಯಲ್ಲಿ ಹಾಗೂ ಅದನ್ನು ಕಲಿಸಿಕೊಡುವುದರಲ್ಲಿಯೂ ಇರಬೇಕು.

ಉದಾ: 1) ಬೆಳಕಿಗೆ ಸಂಬಂಧಿಸಿದಂತೆ ವಿವರಿಸುವಾಗ, ಬೆಳಕು ಎಂದರೇನು? ಬೆಳಕಿನ ಉಗಮ ಹೇಗೆ? ಬೆಳಕಿನ ಪರಿಣಾಮಗಳೇನು? ಬೆಳಕಿನ ಉಪಯೋಗಗಳೇನು? ಇತ್ಯಾದಿ ರೀತಿಯಲ್ಲಿ ಶ್ರೇಣೀಕರಣ ಮಾಡಬೇಕು.

ಉದಾ: 2) ಗಣ ಎಂದರೇನು? ಗಣ ಗಣಾಂಶಗಳನ್ನು ಬರೆಯುವ ಪದ್ಧತಿಗಳಾವುವು? ಗಣದ ಪ್ರಕಾರಗಳಾವುವು? ಜಾನ್ ವೆನ್ ಯಾರು? ವೆನ್ ನಕ್ಷೆಗಳು ಎಂದರೇನು? ಛೇದನ ಗಣ ಎಂದರೇನು? ಗಣದ ವ್ಯತ್ಯಾಸ ಎಂದರೇನು? ಇತ್ಯಾದಿಯಾಗಿ.

ಉದಾ: 3) ಭಾಷೆಯಲ್ಲಿ ವ್ಯಾಕರಣ ತಿಳಿಸುವಾಗ ಅಕ್ಷರಾಭ್ಯಾಸ, ವಾಕ್ಯರಚನೆ, ಸಮಾಸ, ಸಂಧಿ, ವಿಗ್ರಹ ವಾಕ್ಯ ಹೀಗೆ ಅದರ ಬಗೆಗಳನ್ನು ತಿಳಿಸಿ ನಂತರ ವಿಷಯದ ರಚನೆ ಹಾಗೂ ಬಳಕೆ ತಿಳಿಸಿ ಮುಂದುವರಿಸಬೇಕು.

Digitised by Bharatavani, CIIL

ಹೀಗೆ ವಿಷಯಗಳನ್ನು ಸರಳತೆಯಿಂದ ಪ್ರಾರಂಭಿಸಿ ಸಂಕೀರ್ಣ ವಿಷಯ ತಿಳಿಯುವಂತೆ ಪ್ರೇರೇಪಿಸಬೇಕು. ಸಂಕೀರ್ಣ ಮನೋಭಾವ ಬೆಳೆಯಲು ಆಸಕ್ತಿ, ಅಭಿರುಚಿ, ಸತತ ಪ್ರಯತ್ನ, ಏಕಾಗ್ರತೆ, ವಿಶೇಷ ಬುದ್ಧಿಶಕ್ತಿ ಬೆಳೆಸಿಕೊಳ್ಳಬೇಕು.

–ಕೆ.ರ

## ಬೋಧನೆಗೆ ಯೋಜನೆ

ಬೋಧನೆಯು ಒಂದು ಸಂಕೀರ್ಣಕಾರ್ಯ. ಈ ಕಾರ್ಯದಲ್ಲಿ ಯಶಸ್ವಿಯಾಗಬೇಕಾದರೆ ಕ್ರಮಬದ್ಧ, ವ್ಯವಸ್ಥಿತವಾದ, ಪೂರ್ವನಿಯೋಜಿತವಾದ ಯೋಜನೆಯು ಅಗತ್ಯವಾಗಿದೆ. ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ಗೊತ್ತುಪಡಿಸಿರುವ ಅವಧಿಯಲ್ಲಿ ಸಾಧಿಸಲು ಯೋಜನೆಯು ಅಗತ್ಯ. ಬೋಧನೆಯಲ್ಲಿ ಯೋಜನೆಯು ಶಿಕ್ಷಕನ ಸಮಯ, ಶ್ರಮದಲ್ಲಿ ಮಿತವ್ಯಯಸಾಧನೆ, ಆತ್ಮವಿಶ್ವಾಸ, ಆತ್ಮಸ್ಥೈರ್ಯ ಹೆಚ್ಚಿಸಿ ವಿದ್ಯಾರ್ಥಿಗಳ ಕಲಿಕೆಯನ್ನು ಪರಿಪೂರ್ಣಗೊಳಿಸುವೆಡೆಗೆ ಕಾರ್ಯ ಪ್ರವೃತ್ತರಾಗುವಂತೆ ಮಾಡುತ್ತದೆ.

### ಅರ್ಥ ಮತ್ತು ವ್ಯಾಖ್ಯೆಗಳು

ಯಾವುದೇ ಒಂದು ಕಾರ್ಯವನ್ನು ಮಾಡುವ ಪೂರ್ವದಲ್ಲಿ ಅದರ ಬಗ್ಗೆ ಚಿಂತನೆ ಮಾಡುವ ಪ್ರಕ್ರಿಯೆಯೇ ಯೋಜನೆಯಾಗಿದೆ. ನಿರ್ದಿಷ್ಟ ಗುರಿ ಅಥವಾ ಉದ್ದೇಶಗಳನ್ನು ಈಡೇರಿಸಲು ಪೂರ್ವನಿರ್ಧರಿಸಿದ ಕ್ರಿಯೆಗಳ ಒಂದು ಮಾರ್ಗದರ್ಶಿಯಾಗಿದೆ. ಇದು ಕೆಲವು ಸಾಧನಗಳ ಮುಖಾಂತರ ಭವಿಷ್ಯದಲ್ಲಿ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಒಂದು ಕಾರ್ಯಕ್ರಮಗಳ ಪಟ್ಟಿಯಾಗಿದೆ. ಶಿಕ್ಷಕರು ಯಾವ ಪಾಠ ಬೋಧಿಸಬೇಕು. ಹೇಗೆ ಬೋಧಿಸಬೇಕು, ಯಾವಾಗ ಬೋಧಿಸಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡುವ ನೀಲನಕ್ಷೆಯೇ ಬೋಧನೆಯ ಯೋಜನೆಯಾಗಿದೆ.

ರಸ್ಸೆಲ್ ಆ್ಯಕೋಪ್‌ರವರ ಪ್ರಕಾರ "ಯಾವುದೇ ಕಾರ್ಯವನ್ನು ನಿರ್ವಹಿಸುವ ಪೂರ್ವದಲ್ಲಿ ಯಾವ ಕಾರ್ಯಮಾಡಬೇಕು, ಹೇಗೆ ಮಾಡಬೇಕು. ಎಂಬುದರ ಬಗ್ಗೆ ಪೂರ್ವಭಾವಿಯಾಗಿ ನಿರ್ಣಯಿಸುವುದೇ ಯೋಜನೆಯಾಗಿದೆ."

ಆಲ್ಫೋರ್ಡ್ ಮತ್ತು ಬೆಟ್ಟಿಯರವರು "ಯೋಜನೆಯು ಸಂಘಟಿತ ಮುಂದಾಲೋಚನೆ, ದೂರದೃಷ್ಟಿ, ಅನುಭವ, ಬುದ್ಧಿವಂತಿಕೆ ಮುಂತಾದವುಗಳನ್ನೊಳಗೊಂಡ ಒಂದು ಚಿಂತನಾತ್ಮಕ ಪ್ರಕ್ರಿಯೆಯಾಗಿದೆ" ಎಂದಿದ್ದಾರೆ.

1. ಯೋಜನೆಯು ಬೋಧನೆಗೆ ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸಲು ಸಹಾಯ ಮಾಡುತ್ತದೆ. ಶಿಕ್ಷಕರು ವಿಷಯದ ಹೊರಗೆ ಹೋಗದಂತೆ ಮತ್ತು ಸಮಯದ ಅಪವ್ಯಯವಾಗದಂತೆ ತಡೆಯುತ್ತದೆ. ಬೋಧನೆ ಮಾಡುವ ಮೊದಲು ಉದ್ದೇಶಗಳನ್ನು ಹೇಗೆ ಸಾಧಿಸಬಹುದು ಎಂಬುದನ್ನು ತಿಳಿಸುತ್ತದೆ. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ನಿರಂತರತೆಯನ್ನು ತರುವ ದೃಷ್ಟಿಯಿಂದ ಕಲಿಕಾ ಸಾಮಗ್ರಿಗಳು ಮತ್ತು ಕಲಿಕಾ ಸಹಾಯಕಗಳನ್ನು ವ್ಯವಸ್ಥಿತವಾಗಿ ಸಂಘಟಿಸಲು ಸಹಾಯಕವಾಗುತ್ತದೆ. ಯೋಜನೆಯು ಶಿಕ್ಷಕರಿಗೆ ಆತ್ಮವಿಶ್ವಾಸವನ್ನು ಮೂಡಿಸುವುದಲ್ಲದೆ ಬೋಧನೆಯನ್ನು ಆಸಕ್ತಿದಾಯಕ ಮತ್ತು ಅಭಿಪ್ರೇರಕವನ್ನಾಗಿ ಮಾಡಲು ಸಹಾಯಕವಾಗುತ್ತದೆ. ವಿದ್ಯಾರ್ಥಿಗಳ ಹಿಂದಿನ ಜ್ಞಾನದೊಂದಿಗೆ ಶಿಕ್ಷಕರ ಹೊಸ ಜ್ಞಾನವನ್ನು ಸೇರಿಸಲು ಸಹಾಯಕವಾಗುತ್ತದೆ.

ಬೋಧನೆಯ ಕಲಿಕಾ ಫಲಿತಾಂಶವನ್ನು ಪರೀಕ್ಷಿಸಲು ಬೋಧನೆಗೆ ಯೋಜನೆಯು ಅತ್ಯಂತ ಅವಶ್ಯಕವಾಗಿದೆ.

ಹೀಗೆ ಬೋಧನೆಯ ಯೋಜನೆ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ನಿರ್ವಹಿಸುವ ಕಾರ್ಯಗಳನ್ನು ಪೂರ್ವಭಾವಿಯಾಗಿ ನಿರ್ಧರಿಸುವ ಪ್ರಾಥಮಿಕ ಸಿದ್ಧತೆಯಾಗಿದೆ.

ಬೋಧನೆಗೆ ಅನುಕೂಲವಾಗುವಂತೆ ಈ ಕೆಳಕಂಡಂತೆ ಯೋಜನೆಗಳನ್ನು ರೂಪಿಸಿಕೊಳ್ಳಬಹುದಾಗಿದೆ.

**ವಾರ್ಷಿಕ ಯೋಜನೆ:** ಒಂದು ಶೈಕ್ಷಣಿಕ ವರ್ಷದಲ್ಲಿ ಅಧ್ಯಾಪಕನು ತಾನು ಮಾಡಬೇಕಾಗಿರುವ ಪಾಠಗಳನ್ನು ಒದಗಿಸಲಾಗಿರುವ ಕಾಲಾವಧಿಗಳಿಗೆ ತಕ್ಕಂತೆ ಸೂಕ್ತವಾಗಿ ಹಂಚಿಕೆ ಮಾಡಿಕೊಳ್ಳುವುದನ್ನು ಸೂಚಿಸುವ ಯೋಜನೆಯನ್ನು ವಾರ್ಷಿಕ ಯೋಜನೆ ಎಂದು ಕರೆಯುತ್ತೇವೆ. ಇಲ್ಲಿ ಅಧ್ಯಾಪಕನು ತಾನು ಬೋಧಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ಇಂತಹ ವಾರ್ಷಿಕ ಯೋಜನೆಯನ್ನು ಪ್ರತಿವರ್ಷವೂ ಶಾಲೆಗಳು ಆರಂಭಗೊಳ್ಳುವುದಕ್ಕೆ ಮುಂಚೆಯೇ ತಯಾರಿಸಿಟ್ಟುಕೊಳ್ಳಬೇಕು. ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ಒದಗಿಸುವ ಶಾಲಾ ವಿಷಯಗಳ ಪಠ್ಯವಸ್ತುವಿನ ವಿವರಗಳನ್ನು ಆಧರಿಸಿ ಇದನ್ನು ಯೋಜಿಸಬಹುದು. ಪಾಠಗಳ ಹಂಚಿಕೆಯನ್ನು ಸೂಚಿಸುವುದರ ಜೊತೆಗೆ ಆಯಾ ಘಟಕಗಳಲ್ಲಿ ಒತ್ತು ಕೊಡಬೇಕಾದ ಬೋಧನಾ ಉದ್ದೇಶಗಳು, ಗೃಹಕಾರ್ಯ ಅಥವಾ ನಿಯೋಜಿತ ಕಾರ್ಯದ ವಿವರಗಳು, ನಡೆಸಬೇಕಾದ ಕಿರು ಪರೀಕ್ಷೆ, ಘಟಕ ಪರೀಕ್ಷೆಗಳ ಸಂಖ್ಯೆ ಮತ್ತು ದಿನಾಂಕಗಳು, ಮಧ್ಯಂತರ ಮತ್ತು ವಾರ್ಷಿಕ ಪರೀಕ್ಷೆಗಳ ಅಂದಾಜು ದಿನಗಳು ಇವೇ ಮೊದಲಾದ ವಿವರಗಳನ್ನು ಸ್ಥೂಲವಾಗಿ ವಾರ್ಷಿಕ ಯೋಜನೆಯಲ್ಲಿ ಸೂಚಿಸಬೇಕು. ಇದರ ರಚನೆಯಲ್ಲಿ ಶಾಲಾ ಪಂಚಾಂಗವು ಶಿಕ್ಷಕರಿಗೆ ನೆರವಾಗುತ್ತದೆ.

ಶಿಕ್ಷಕರು ವಾರ್ಷಿಕ ಯೋಜನೆಯನ್ನು ತಯಾರಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಬೇಕು.

1. ಶಾಲೆಯು ನಡೆಯುವ ಕೆಲಸದ ದಿನಗಳನ್ನು ಗುರ್ತಿಸಿಕೊಳ್ಳಬೇಕು.
2. ಮಧ್ಯಂತರ ರಜೆಯ ದಿನಗಳು, ಶೈಕ್ಷಣಿಕ ವರ್ಷದ ಮೊದಲ ಹಾಗೂ ಎರಡನೆಯ ಅವಧಿಗಳ ಕೆಲಸದ ದಿನಗಳು, ಹಬ್ಬ-ಹರಿದಿನಗಳ ರಜೆಗಳು, ಪರೀಕ್ಷೆ ಹಾಗೂ ಕಿರು ಪರೀಕ್ಷೆಗಳ ವೇಳಾಪಟ್ಟಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು.
3. ವಾರವೊಂದಕ್ಕೆ ತಾವು ಬೋಧಿಸುವ ವಿಷಯಕ್ಕೆ ನಿಗದಿಗೊಳಿಸಿರುವ ಅವಧಿಗಳೆಷ್ಟು ಎಂದು ಗಮನಿಸಿಕೊಂಡು ಅವುಗಳನ್ನು ಉಪ ವಿಷಯಗಳಿಗನುಗುಣವಾಗಿ ಸೂಕ್ತವಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕು.
4. ಪಠ್ಯ ವಸ್ತುವನ್ನು ಸೂಕ್ತ ಬೋಧನಾ ಘಟಕ ಹಾಗೂ ಉಪಘಟಕಗಳನ್ನಾಗಿ ವಿಂಗಡಿಸಿಕೊಳ್ಳಬೇಕು ಮತ್ತು ಅವಧಿಗಳನ್ನು ಹಂಚಬೇಕು. ಈ ಕಾರ್ಯದಲ್ಲಿ ಶಿಕ್ಷಣ ಇಲಾಖೆಯ ಅಭ್ಯಾಸ ಪತ್ರಿಕೆ ಮತ್ತು ನಿರ್ದೇಶನಗಳು ನೆರವಿಗೆ ಬರುತ್ತವೆ.
5. ನಡೆಸಬೇಕಾದ ಸಹ ಪಠ್ಯ ಚಟುವಟಿಕೆಗಳು, ಯೋಜಿತ ಕಾರ್ಯಗಳು ಮುಂತಾದವುಗಳನ್ನು ಸ್ಥೂಲವಾಗಿ ಸೂಚಿಸಬೇಕಾಗುತ್ತದೆ.
6. ಶಿಕ್ಷಕರು ಪ್ರತಿಯೊಂದು ತರಗತಿಗೆ ಹಾಗೂ ವಿಷಯಕ್ಕೆ ಪ್ರತ್ಯೇಕವಾಗಿ ವಾರ್ಷಿಕ ಯೋಜನೆಯನ್ನು ತಯಾರಿಸಿಕೊಳ್ಳುವುದು ಅತ್ಯಂತ

Digitised by Bharatavani, CIIL

ಆವಶ್ಯಕವಾಗಿದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಾರ್ಷಿಕ ಯೋಜನೆಯನ್ನು ರೂಪಿಸುವುದರಿಂದ ವರ್ಷದ ಕೊನೆಯಲ್ಲಿ ಉಂಟಾಗುವ ಗಡಿಬಿಡಿ, ಗೊಂದಲ ಮತ್ತು ಅನಿಶ್ಚಿತತೆಗಳನ್ನು ಹೋಗಲಾಡಿಸಬಹುದಾಗಿದೆ.

**ವಾರ್ಷಿಕ ಯೋಜನೆಯ ಅನುಕೂಲಗಳು**

1. ಶೈಕ್ಷಣಿಕ ವರ್ಷವೊಂದರಲ್ಲಿ ನಡೆಯುವ ಕಾರ್ಯಚಟುವಟಿಕೆಯನ್ನು ಸೂಚಿಸುತ್ತದೆ.
2. ವ್ಯವಸ್ಥಿತವಾಗಿ ಕ್ರಮಬದ್ಧವಾಗಿ ಕಾರ್ಯಗಳನ್ನು ಕೈಗೊಳ್ಳಲು ಸಹಾಯಕವಾಗುವುದು.
3. ಘಟಕ ಯೋಜನೆ ಹಾಗೂ ಪಾಠಯೋಜನೆಯನ್ನು ತಯಾರಿಸಲು ನೆರವಾಗುತ್ತದೆ.
4. ಒಂದು ವರ್ಷದಲ್ಲಿ ಬೋಧಿಸಬೇಕಾದ ಪಾಠಗಳ ಕಾಲಾವಧಿ ವಿತರಣೆಯ ಸ್ಪಷ್ಟ ಚಿತ್ರಣ ನೀಡುತ್ತದೆ.
5. ಶಿಕ್ಷಕರ ಕಾರ್ಯಚಟುವಟಿಕೆಗಳ ಬಗೆಗೆ ನಿರ್ದೇಶನ ನೀಡುವುದು.
6. ನಿರ್ದಿಷ್ಟ ಪಡಿಸಿದ ಕಾರ್ಯಚಟುವಟಿಕೆಗಳನ್ನು ನಿಗದಿತ ಕಾಲಾವಧಿಯಲ್ಲಿ ಮುಗಿಯುವಂತೆ ಮಾಡಬಹುದಾಗಿದೆ.
7. ಶಿಕ್ಷಕನಿಗೆ ತಾನು ನಿರ್ವಹಿಸಬೇಕಾದ ಕಾರ್ಯವ್ಯಾಪ್ತಿಯ ಅರಿವನ್ನುಂಟು ಮಾಡುವುದು.
8. ನಿರಂತರತೆ ಮತ್ತು ಶಿಸ್ತುಬದ್ಧತೆಯನ್ನು ಪ್ರೋತ್ಸಾಹಿಸುತ್ತದೆ.

**ಸಂಪನ್ಮೂಲ ಘಟಕ ಯೋಜನೆ**

ಪರಿಣಾಮಕಾರಿ ಬೋಧನೆಯು ಉತ್ತಮ ಪೂರ್ವಸಿದ್ಧತೆಯಿಂದ ಮಾತ್ರ ಸಾಧ್ಯವಾಗುತ್ತದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸಬೇಕಾದ ವಿಷಯಗಳನ್ನು ಕೇವಲ ನಿಗದಿಪಡಿಸಿರುವ ಪಠ್ಯಪುಸ್ತಕಗಳಿಂದ ಪರಿಣಾಮಕಾರಿಯಾಗಿ ತಿಳಿಸಲು ಸಾಧ್ಯವಾಗದು. ಅಂತಹ ಸಂದರ್ಭದಲ್ಲಿ ಆ ಘಟಕಕ್ಕೆ ಸಂಬಂಧಿಸಿದಂತೆ ಕ್ರಮಬದ್ಧವಾಗಿ ವಿವಿಧ ಮೂಲಗಳಿಂದ ಮಾಹಿತಿಯನ್ನು ಕಲೆಹಾಕಿ ವ್ಯವಸ್ಥಿತವಾಗಿ ಜೋಡಿಸಿಕೊಂಡು ಸಂಪನ್ಮೂಲ ಘಟಕಯೋಜನೆಯನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ.

ಸಂಪನ್ಮೂಲ ಘಟಕ ಅಧ್ಯಾಪಕರು ತಮ್ಮ ಉಪಯೋಗಕ್ಕಾಗಿ ಒಂದು ಸಂಪೂರ್ಣ ಘಟಕದ ಬೋಧನೆಗಾಗಿ ಸಿದ್ಧಪಡಿಸಿರುವ ಕ್ರಿಯಾತ್ಮಕ ಯೋಜನೆ. ಕಾರ್ಟರ್ ವಿ. ಗುಡ್‌ರವರು "ಸಂಪನ್ಮೂಲ ಘಟಕ ಯೋಜನೆಯು ಒಂದು ಘಟಕದ ಸುತ್ತಲೂ ಜೋಡಿಸಲ್ಪಟ್ಟ ಬೋಧನಾ ಕಲಿಕಾ ಚಟುವಟಿಕೆಗಳ ಸಾಮಗ್ರಿಗಳ ಬೋಧನಾ ವಿಧಾನಗಳ ಮತ್ತು ಉಲ್ಲೇಖಗಳ ವ್ಯಾಪಕ ಸಂಗ್ರಹವಾಗಿದೆ. ಇದನ್ನು ತಮ್ಮ ತಮ್ಮ ತರಗತಿಗಳಿಗೆ ಬೋಧನಾ ಘಟಕಗಳನ್ನು ಮತ್ತು ಪಾಠಗಳನ್ನು ಯೋಜಿಸಿಕೊಳ್ಳಲು ಶಿಕ್ಷಕರಿಗೆ ಉಪಯುಕ್ತವಾಗಲಿ ಎಂದು ಜೋಡಿಸಿಕೊಳ್ಳಲಾಗುವುದು" ಎಂದು ಅರ್ಥೈಸಿದ್ದಾರೆ.

ಎನ್.ಸಿ.ಇ.ಆರ್.ಟಿ. ಪ್ರಕಾರ "ಸಂಪನ್ಮೂಲ ಘಟಕವೆಂದರೆ ತಮ್ಮ ತರಗತಿಗೆ ಯುಕ್ತವಾದ ಸ್ವಂತ ಬೋಧನಾ ಘಟಕಗಳನ್ನು ಬೆಳೆಸುವುದರಲ್ಲಿ ಶಿಕ್ಷಕರಿಗೆ ನೆರವಾಗುವ ರೀತಿಯಲ್ಲಿ ವಿನ್ಯಾಸಗೊಳಿಸಲ್ಪಟ್ಟ ಏಕ ಪ್ರಕರಣ ಅಥವಾ ಕಲಿಯುವವನ ಸಮಸ್ಯೆಯ ಸುತ್ತ ವ್ಯವಸ್ಥಿತಗೊಳಿಸಲ್ಪಟ್ಟ ಸಂಚಿತ ಕಲಿಕೆ ಮತ್ತು ಬೋಧನಾ ಚಟುವಟಿಕೆಗಳು, ಬೋಧನಾ ವಿಧಾನಗಳು, ವಸ್ತುಗಳು, ಆಕರಗಳ ವಿಸ್ತಾರ ಸಂಗ್ರಹಣೆ."

ಸಂಪನ್ಮೂಲ ಘಟಕವು ಸಮಸ್ಯೆಯೊಂದನ್ನು ಬಿಡಿಸುತ್ತಿರುವ ವಿದ್ಯಾರ್ಥಿಗಳ ಕಲಿವನ್ನು ಸೂಕ್ತ ರೀತಿಯಲ್ಲಿ ನಿರ್ದೇಶಿಸಲು ನೆರವಾಗುವಂತೆ ವಸ್ತು, ಚಟುವಟಿಕೆ, ಅನುಭವ, ಆಧಾರಗ್ರಂಥ ಇವುಗಳನ್ನು ಕುರಿತ ಸಲಹೆಗಳ ಸಂಗ್ರಹ. ಈ ಅರ್ಥದಲ್ಲಿ ಬೋಧನಾ ಘಟಕದ ರೂಪವನ್ನೇ ಅದು ತಾಳುತ್ತದೆ.

ಒಂದು ನಿರ್ದಿಷ್ಟ, ಬೋಧನೆಯ ಘಟಕಕ್ಕೆ ಸಂಬಂಧಿಸಿದಂತೆ ಸಂಪನ್ಮೂಲಗಳು, ವಿಷಯಾಂಶಗಳು, ಸಮಸ್ಯೆಗಳು, ಅಂಕಿ-ಅಂಶಗಳು ಚಟುವಟಿಕೆಗಳು, ಪಾಠೋಪಕರಣಗಳು, ಕಲಿಕೋಪಕರಣಗಳು ಮತ್ತು ಅನುಭವಗಳನ್ನು ಕ್ರಮಬದ್ಧವಾಗಿ ಸಂಗ್ರಹಿಸಿ ಯೋಜಿಸಿರುವ ಒಂದು ದಾಖಲೆಯೇ ಸಂಪನ್ಮೂಲ ಘಟಕ.

**ಸಂಪನ್ಮೂಲ ಘಟಕ ಯೋಜನೆಯ ಉಪಯೋಗಗಳು ಮತ್ತು ಮಹತ್ವ**

ಸಂಪನ್ಮೂಲ ಘಟಕವೆನ್ನುವುದು ಶಿಕ್ಷಣ ತಂತ್ರಗಳ, ಸಾಧನ ಸೌಲಭ್ಯಗಳ ಒಂದು ಆಕರವಾಗಿದ್ದು ಇನ್ನಾವುದೇ ರೀತಿಯ ಬೋಧನಾ ಯೋಜನೆಯನ್ನು ತಯಾರಿಸಬೇಕಾದರೂ ಅತ್ಯಗತ್ಯ ಮಾಹಿತಿಯ ಸಹಾಯವನ್ನು ಮಾಡುತ್ತದೆ. ಸಂಪನ್ಮೂಲ ಘಟಕ ಯೋಜನೆಯು ಈ ಉಪಯೋಗಗಳನ್ನು ಹೊಂದಿದೆ:

- ಘಟಕವೊಂದರ ಸಮಗ್ರ ಹಾಗೂ ಪರಿಪೂರ್ಣ ಮಾಹಿತಿಯನ್ನು ಒದಗಿಸುವುದು.
- ಶಿಕ್ಷಕರಲ್ಲಿ ಸೃಜನಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಬೆಳೆಸುವುದಲ್ಲದೆ ಬೋಧನೆಯ ನವೀನ ತಂತ್ರ, ವಿಧಾನಗಳನ್ನು ಬಳಸಲು ಅವಕಾಶ ನೀಡುವುದು.
- ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಆಸಕ್ತಿಯನ್ನುಂಟು ಮಾಡುವುದಲ್ಲದೆ ಬೋಧನೆಯಲ್ಲಿ ವೈವಿಧ್ಯತೆಯನ್ನು ತರುವಲ್ಲಿ ನೆರವಾಗುವುದು.
- ಸ್ವಯಂ ಅಧ್ಯಯನ ಹಾಗೂ ಮೌಲ್ಯಮಾಪನಕ್ಕೆ ಉಪಯುಕ್ತವಾಗುವುದು.
- ಬೋಧನೆಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ಸೂಚಿಸುವುದು.
- ಘಟಕದ ಬಗೆಗೆ ವಿಸ್ತೃತ ಮಾಹಿತಿ, ಜ್ಞಾನಾಂಶಗಳನ್ನು ಒದಗಿಸುವುದಲ್ಲದೆ ಶಿಕ್ಷಕರ ಶ್ರಮ ಮತ್ತು ವೇಳೆಯ ಉಳಿತಾಯ ಮಾಡುವುದು.
- ಶಿಕ್ಷಕರಿಗೆ ಆಧಾರ ಗ್ರಂಥವಾಗಿ ಉಪಯುಕ್ತವಾಗುವುದಲ್ಲದೆ ಶೀಘ್ರವಾಗಿ ಪಾಠ ಯೋಜನೆ ಮತ್ತು ಘಟಕ ಯೋಜನೆಯನ್ನು ಸಿದ್ಧಪಡಿಸಲು ಸಹಾಯಕವಾಗಿದೆ.
- ಬೋಧನಾ-ಕಲಿಕಾ ಪ್ರಕ್ರಿಯೆಯನ್ನು ವ್ಯವಸ್ಥಿತಗೊಳಿಸಿ ಸಂಪನ್ಮೂಲಗಳನ್ನು ಪರಿಪೂರ್ಣವಾಗಿ ಬಳಸಿಕೊಳ್ಳುವಂತೆ ಮಾಡುವುದು.
- ಬೋಧನೆಯಲ್ಲಿ ನಿರಂತರತೆಯನ್ನು ತಂದು ಶಿಕ್ಷಕನಿಗೆ ಬೋಧನೆಯಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದು.

**ಸಂಪನ್ಮೂಲ ಘಟಕ ಯೋಜನೆಯ ಹಂತಗಳು**

- ಘಟಕದ ಶಿರೋನಾಮೆ
- ಘಟಕದ ಮಹತ್ವ ಮತ್ತು ವ್ಯಾಪ್ತಿ

Digitised by Bharatavani, CIIL

- ಘಟಕದ ಪ್ರಧಾನ ಪರಿಕಲ್ಪನೆಗಳು
- ಬೋಧನೋದ್ದೇಶಗಳು ಮತ್ತು ನಿರ್ದಿಷ್ಟಕಗಳು
- ಪಾಠೋಪಕರಣಗಳು
- ವಿಷಯ ವಿಶ್ಲೇಷಣೆ – ಘಟಕದ ವಸ್ತು ವಿಷಯ, ಪರಿಕಲ್ಪನೆ, ಉಪ ಪರಿಕಲ್ಪನೆ, ನಿಯಮ, ಕೌಶಲಗಳ ವಿಶ್ಲೇಷಣೆ.

ಕಲಿಕೆಯ ಚಟುವಟಿಕೆಗಳು, ಆರಂಭಿಕ ಚಟುವಟಿಕೆಗಳು, ಬೆಳವಣಿಗೆಯ ಚಟುವಟಿಕೆಗಳು, ಮುಕ್ತಾಯ ಚಟುವಟಿಕೆಗಳು, ಮೌಲ್ಯಮಾಪನ, ಸೂಚಿತ ಚಟುವಟಿಕೆಗಳು, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಪರಾಮರ್ಶನ ಗ್ರಂಥಗಳು.

**ಘಟಕ ಯೋಜನೆ**

ಕಲಿಕೆಯು ಮನೋವೈಜ್ಞಾನಿಕ ನಿಯಮಗಳ ಪ್ರಕಾರ ಕಲಿಸಬೇಕಾದ ವಿಷಯವನ್ನು ಬಿಡಿಬಿಡಿಯಾಗಿ ಕಲಿಸದೆ ಸಮಗ್ರವಾಗಿ ಕಲಿಸಿದಾಗ ಕಲಿಕೆ ಅರ್ಥಪೂರ್ಣಗೊಳ್ಳುವುದು. ಈ ಹಿನ್ನೆಲೆಯಲ್ಲಿ ಮೂಡಿ ಬಂದುದೇ ಘಟಕ ಯೋಜನೆಯಾಗಿದೆ. ಘಟಕ ಯೋಜನೆ ಎಂಬ ಪರಿಕಲ್ಪನೆಯನ್ನು ಮೊದಲು ಅಮೆರಿಕಾದ ಹೆನ್ರಿ ಮಾರಿಸನ್ ಎಂಬುವವನು 1928ರಲ್ಲಿ ಪ್ರಚುರಪಡಿಸಿದನು.

ನಿರ್ಧಾರಿತ ಕಾಲಾವಧಿಯಲ್ಲಿ ಬೋಧಿಸಲು ಅನುಕೂಲವಾಗುವ ಮತ್ತು ಸಂಬಂಧಿಸಿದ ವಿಷಯಗಳಿಂದ ಕೂಡಿದ ಪಠ್ಯವಸ್ತುವಿನ ಒಂದು ತುಣುಕನ್ನು 'ಘಟಕ' (Unit) ಎಂದು ಕರೆದಿದ್ದಾರೆ. ಘಟಕ ಯೋಜನೆಯು ಪಾಠ ಯೋಜನೆಗಿಂತ ವ್ಯಾಪಕವಾದ ಹಾಗೂ ಸಂಪನ್ಮೂಲ ಘಟಕ ಯೋಜನೆ ವ್ಯಾಪ್ತಿಗಿಂತ ಸಂಕುಚಿತವಾಗಿದುದಾಗಿದೆ. ಘಟಕ ಯೋಜನೆಯನ್ನು ಶಿಕ್ಷಕರು ಸರಳವಾಗಿ, ಮಹತ್ವಪೂರ್ಣ ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸಲು, ಬೋಧನಾ ಚಟುವಟಿಕೆಗಳನ್ನು ಮತ್ತು ಸಾಮಗ್ರಿಗಳನ್ನು ಕಲಿಕೆಗೆ ಸಮಗ್ರ ರೀತಿಯಲ್ಲಿ ವ್ಯಾಖ್ಯಾನಿಸುವುದಾಗಿದೆ.

ಸ್ಯಾಮ್ ಫೋರ್ಡ್‌ರವರು 'ವಿದ್ಯಾರ್ಥಿಗಳ ಅಗತ್ಯ ಮತ್ತು ಆಸಕ್ತಿಗಳಿಗೆ ಸಂಬಂಧಿಸಿದ್ದಂತೆ ಪ್ರತ್ಯೇಕಗೊಳಿಸಿದ ಒಂದು ವಿಸ್ತೃತ ಮತ್ತು ಸಂಬಂಧಿತ ವಸ್ತು ವಿಷಯವೇ ಘಟಕ' ಎಂದು ವ್ಯಾಖ್ಯಾನಿಸಿದ್ದಾರೆ.

ಕಾರ್ಟರ್ ವಿ. ಗುಡ್‌ರವರು ಪ್ರಕಾರ, 'ಒಂದು ನಿರ್ದಿಷ್ಟ ಘಟಕದ ಸುತ್ತಲೂ ಜೋಡಿಸಲ್ಪಟ್ಟ ಕಲಿಕಾ ಚಟುವಟಿಕೆಗಳು, ಸಾಮಗ್ರಿಗಳು, ವಿಧಾನಗಳು ಮತ್ತು ಉಲ್ಲೇಖಗಳ ವ್ಯಾಪಕ ಸಂಗ್ರಹವೇ ಘಟಕ ಯೋಜನೆ ಎಂದಿದ್ದಾರೆ.

ಶಿಕ್ಷಕರು ತಮ್ಮ ಉಪಯೋಗಕ್ಕಾಗಿ ಒಂದು ಘಟಕಕ್ಕೆ ತಾವೇ ತಯಾರು ಮಾಡಿಕೊಳ್ಳುವ ಅಧ್ಯಾಯಕ್ಕೆ ಸಂಬಂಧಿಸಿದ ಅನೇಕ ಪಾಠಯೋಜನೆಗಳ ಮೊತ್ತವೇ ಘಟಕ ಯೋಜನೆ ಎಂದು ಹೇಳಬಹುದು.

**ಉತ್ತಮ ಘಟಕ ಯೋಜನೆಯ ಲಕ್ಷಣಗಳು**

- ಕಲಿಕೆಯ ಮನೋವೈಜ್ಞಾನಿಕ ನಿಯಮಗಳಿಗನು ಸಾರವಾಗಿರಬೇಕು.
- ಬೋಧನೆಯ ಗುರಿ – ಉದ್ದೇಶಗಳು ಸ್ಪಷ್ಟವಾಗಿ ವ್ಯಾಖ್ಯಾನಿಸಲ್ಪಟ್ಟಿರಬೇಕು.
- ನಿರ್ದಿಷ್ಟ ಘಟಕದ ಹಲವಾರು ಪಾಠಗಳ ಸಂಗ್ರಹವಾಗಿರಬೇಕು.
- ಅಂತಿಮ ಹಂತದವರೆಗೂ ವಿದ್ಯಾರ್ಥಿಗಳ ಆಸಕ್ತಿಯನ್ನು ಗಮನದಲ್ಲಿಟ್ಟಿರಬೇಕು.
- ವ್ಯಕ್ತಿ ವ್ಯತ್ಯಾಸಗಳನ್ನು ಪರಿಗಣಿಸಿ ಸಿದ್ಧಪಡಿಸಿರಬೇಕು.
- ವಿದ್ಯಾರ್ಥಿಗಳ ಹಿನ್ನೆಲೆ ಮತ್ತು ಪೂರ್ವಜ್ಞಾನವನ್ನು ಗಮನದಲ್ಲಿಟ್ಟುಕೊಂಡಿರಬೇಕು.
- ಮುಂದೆ ಕೈಗೊಳ್ಳುವ ಹೊಸ ಅನುಭವಗಳಿಗೆ ಅವಕಾಶ ನೀಡಿರಬೇಕು.
- ವಿದ್ಯಾರ್ಥಿಗಳಿಗೆ ಹಲವಾರು ಚಟುವಟಿಕೆಗಳನ್ನು ಒದಗಿಸಬೇಕು.
- ಯೋಜನೆಯು ನಮ್ಯತೆಯ ಗುಣವನ್ನು ಹೊಂದಿರಬೇಕು.
- ದಿನನಿತ್ಯದ ಪಾಠ ಯೋಜನೆಯ ತಯಾರಿಕೆಗೆ ನೆರವು ನೀಡುವಂತಿರಬೇಕು.
- ಬೋಧಿಸುವ ವಿಷಯಗಳ ನಡುವೆ ಸಹ ಸಂಬಂಧ ಹೊಂದಿರಬೇಕು.
- ಪಾಠಗಳ ನಡುವೆ ಸಮಗ್ರತೆಯುನ್ನುಂಟುಮಾಡಿ ಉಪಯೋಗಿಸಲ್ಪಡುವ ಸಾಮಗ್ರಿಗಳ ಸ್ಪಷ್ಟ ಮಾಹಿತಿಯನ್ನು ಒಳಗೊಂಡಿರಬೇಕು.

**ಘಟಕ ಯೋಜನೆಯ ಉದ್ದೇಶಗಳು**

1. ದೈನಂದಿನ ಪಾಠಯೋಜನೆ ತಯಾರಿಕೆಗೆ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಹಾಯಕವಾಗುವುದು.
2. ಶ್ರಮ ಮತ್ತು ಸಮಯವನ್ನು ಉಳಿತಾಯ ಮಾಡುವುದಲ್ಲದೆ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಕೆರಳಿಸುವುದು.
3. ವಿದ್ಯಾರ್ಥಿಗಳ ಅಗತ್ಯತೆ, ಸಾಮರ್ಥ್ಯಗಳನ್ನು ಪರಿಗಣಿಸುವುದು.
4. ಅವ್ಯವಸ್ಥಿತ ಬೋಧನೆಯನ್ನು ತಡೆಯುವುದು.
5. ಬೋಧನೆಯಲ್ಲಿ ನಮ್ಯತೆಗೆ ಅವಕಾಶ ಕಲ್ಪಿಸುವುದು.
6. ಘಟಕದ ಸಮಗ್ರ ವಿಷಯದ ತಿಳುವಳಿಕೆ ನೀಡುವುದು.
7. ಪಾಠಗಳ ನಡುವೆ ನಿರಂತರತೆಯನ್ನು ತರುವುದು.
8. ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು.
9. ಅಖಂಡ ಹಾಗೂ ಅರ್ಥಪೂರ್ಣ ಕಲಿಕೆಗೆ ಆದ್ಯತೆ ನೀಡುವುದು.
10. ಕಲಿಕೆಯ ತೊಂದರೆಗಳನ್ನು ಶೀಘ್ರವಾಗಿ ಪತ್ತೆಹಚ್ಚಿ ಪರಿಹಾರ ನೀಡಲು ಉಪಯುಕ್ತವಾಗುತ್ತದೆ.

ಹೀಗೆ ಘಟಕ ಯೋಜನೆಯು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಬ್ಬರಿಗೂ ನೆರವಾಗುವುದಲ್ಲದೆ ಪರಸ್ಪರಲ್ಲಿ ಉತ್ತಮ ಬಾಂಧವ್ಯ ಏರ್ಪಡಿಸುವುದು.

**ಘಟಕ ಯೋಜನೆಯ ಹಂತಗಳು**

ಘಟಕ ಯೋಜನೆಯನ್ನು ಸಿದ್ಧಪಡಿಸುವಾಗ ಈ ಕೆಳಕಂಡ ಹಂತಗಳನ್ನು ಅನುಸರಿಸಬೇಕಾಗುತ್ತದೆ.

Digitised by Bharatavani, CIIL

1. ಸಿದ್ಧತೆಯ ಹಂತ :– ಬೋಧನೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಮಾನಸಿಕವಾಗಿ ಸಿದ್ಧಪಡಿಸಬೇಕಾಗುವುದು ಹಾಗೂ ಘಟಕದ ಕೊನೆಯವರೆಗೂ ಅಭಿಪ್ರೇರಿತರಾಗಿರುವಂತೆ ಮಾಡಬೇಕು ಮತ್ತು ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದಕ್ಕಾಗಿ ವಿವಿಧ ಬಗೆಯ ಪ್ರಶ್ನೆಗಳನ್ನು ರೂಪಿಸಿಕೊಳ್ಳಬೇಕು.
2. ಪ್ರಸ್ತುತೀಕರಣ : ಘಟಕ ಯೋಜನೆಯ ಅತಿ ಮುಖ್ಯವಾದ ಹಂತ ಇದಾಗಿದ್ದು ಇಲ್ಲಿ ವಿಷಯದ ಬಗೆಗೆ ವಿದ್ಯಾರ್ಥಿಗಳಿಗೆ ಹೊಸ ಜ್ಞಾನ, ಅನುಭವಗಳನ್ನು ಒದಗಿಸಲು ಸೂಕ್ತವಾದ ಕಾರ್ಯಚಟುವಟಿಕೆಗಳನ್ನು ವಿವರಿಸಬೇಕು.
4. ಕಲಿಕೆಯ ಸಂಘಟನೆ : ಮೌಖಿಕ ಅಥವಾ ಲಿಖಿತ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ಈಗಾಗಲೇ ತಿಳಿದುಕೊಂಡಿರುವ ಕಲಿಕೆಯ ಜೊತೆಗೆ ಹೊಸ ಕಲಿಕೆಯನ್ನು ಸಮನ್ವಯಗೊಳಿಸಲು ವಿವಿಧ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.
5. ಸಾರಾಂಶೀಕರಣ : ಘಟಕದ ಅಂತಿಮ ಭಾಗದಲ್ಲಿ ಎಲ್ಲಾ ವಿಷಯಗಳನ್ನು ಸಾರಾಂಶೀಕರಣ ಮಾಡಿಕೊಳ್ಳಬೇಕು ಹಾಗೂ ವಿದ್ಯಾರ್ಥಿಗಳಿಗೆ ವಿಷಯವನ್ನು ಹಂತ ಹಂತವಾಗಿ ಕ್ರಮಬದ್ಧ ಹಾಗೂ ವ್ಯವಸ್ಥಿತವಾಗಿ ತಿಳಿಸಿ ಘಟಕವನ್ನು ಹೇಗೆ ಮುಕ್ತಾಯಮಾಡುವುದು ಎಂಬುದನ್ನು ತೀರ್ಮಾನಿಸಬೇಕು.
6. ಪುನರಾವರ್ತನೆ : ಬೋಧಿಸಿದ ವಿಷಯವನ್ನು ದೃಢಗೊಳಿಸಲು ಮತ್ತೊಮ್ಮೆ ಪುನರಾವರ್ತಿಸಲು ಪ್ರಶ್ನೆಗಳನ್ನು ರೂಪಿಸಿಕೊಳ್ಳಬೇಕು.
7. ಮೌಲ್ಯಮಾಪನ : ಘಟಕದ ಉದ್ದೇಶಗಳ ಸಫಲತೆ ಹಾಗೂ ವಿಫಲತೆಯನ್ನು ಅರಿಯಲು ಅಂತಿಮ ಹಂತದಲ್ಲಿ ವಿವಿಧ ಮೌಲ್ಯಮಾಪನ ತಂತ್ರಗಳನ್ನು ಬಳಸಿ ಮೌಲ್ಯಮಾಪನ ಮಾಡಲಾಗುವುದು. ಇದಕ್ಕಾಗಿ ಘಟಕ ಯೋಜನೆಯಲ್ಲಿ ಘಟಕ ಪರೀಕ್ಷೆಯನ್ನು ರಚಿಸಿಕೊಳ್ಳಬೇಕು.

**ಪಾಠ ಯೋಜನೆ:** ಇದು ತರಗತಿಯಲ್ಲಿ ನಿರ್ವಹಿಸಬೇಕಾದ ಬೋಧನೆಯ ವಿವಿಧ ಹಂತಗಳ ವಿವರವಾದ ರೂಪುರೇಷೆಯಾಗಿದೆ. ಬೋಧಿಸಬೇಕಾದ ವಿಚಾರಗಳ ಬಗೆಗೆ ಸ್ಪಷ್ಟ ಮಾಹಿತಿಯನ್ನು ಹಾಗೂ ಚೌಕಟ್ಟನ್ನು ಒದಗಿಸುವುದು ನಿರ್ದಿಷ್ಟಪಡಿಸಿದ ಉದ್ದೇಶಗಳನ್ನು, ನಿರ್ದಿಷ್ಟ ಕಾರ್ಯ ಚಟುವಟಿಕೆಗಳ ಮೂಲಕ ನಿರ್ದಿಷ್ಟ ಕಾಲಾವಧಿಯಲ್ಲಿ ಸಾಧಿಸಲು ನೆರವಾಗುವುದೇ ಪಾಠ ಯೋಜನೆಯ ಗುರಿ.

ಕಾರ್ಟರ್‌ರವರ ಪ್ರಕಾರ ಪಾಠ ಯೋಜನೆಯು ಪಾಠದ ಮುಖ್ಯ ಅಂಶಗಳನ್ನು ಬೋಧಿಸುವ ಕ್ರಮಬದ್ಧವಾದ ರೂಪುರೇಷೆಯಾಗಿದ್ದು, ಉದ್ದೇಶಗಳು, ಕೇಳಬಹುದಾದ ಅಂಶಗಳು, ಪರಾಮರ್ಶನ ಸಾಮಗ್ರಿಗಳು ಹಾಗೂ ನಿಯೋಜಿತ ಕಾರ್ಯಗಳನ್ನು ಒಳಗೊಂಡಿರುತ್ತದೆ.

ಲೆಸ್ಟರ್, ಬಿ. ಸ್ಟಾಂಡ್ಸ್‌ರವರ ಪ್ರಕಾರ "ಪಾಠಯೋಜನೆಯು ಒಂದು ಕ್ರಿಯಾಯೋಜನೆ. ಶಿಕ್ಷಕನ ಕಾರ್ಯಜ್ಞಾನ, ತಾತ್ವಿಕಜ್ಞಾನ, ವಿದ್ಯಾರ್ಥಿಗಳ ಸಾಮರ್ಥ್ಯದ ತಿಳುವಳಿಕೆ, ಶಿಕ್ಷಣದ ಉದ್ದೇಶಗಳ ಅರಿವು, ತಾನು ಬೋಧಿಸುವ ವಿಷಯದ ಜ್ಞಾನ ಮತ್ತು ಪರಿಣಾಮಕಾರಿಯಾಗಿ ಬೋಧನಾ ಪದ್ಧತಿಗಳನ್ನು ಉಪಯೋಗಿಸುವ ಸಾಮರ್ಥ್ಯಗಳನ್ನು ಒಳಗೊಂಡಿದೆ."

ಮಹಾಬಲೇಶ್ವರರಾವ್‌ರವರ ಪ್ರಕಾರ "ಪಾಠ ಯೋಜನೆಯೆಂದರೆ ಅಧ್ಯಾಪಕರು ರೂಪಿಸುವ ತರಗತಿಯ ಅನುಭವಗಳ ಮಾನಸಿಕ ಹಾಗೂ ಭಾವನಾತ್ಮಕ ಕಾಣ್ಕೆ. ಅದು ಬೋಧನಾ ಕ್ರಿಯೆಯ ಮಾನಸಿಕ ತಾಲೀಮು; ಪರಿಣಾಮಕಾರಿ ಬೋಧನೆಯ ಹೃದಯ; ಬೋಧನೆಯ ಒಂದು ಅನುಭವ. ಅದೊಂದು ಬಗೆಯ ಮುನ್ನೋಟ"

ತರಗತಿಗೆ ನಿರ್ದಿಷ್ಟ ವಿಷಯವೊಂದನ್ನು ನಿರ್ದಿಷ್ಟ ಕಾಲಾವಧಿಯಲ್ಲಿನ ಬೋಧನೆಗೆ ಸಂಬಂಧಿಸಿದಂತೆ ಶಿಕ್ಷಕರು ಸಿದ್ಧಪಡಿಸಿಕೊಳ್ಳುವ ವಿಷಯವೊಂದರ ಪೂರ್ವಯೋಜಿತ ಕಾರ್ಯಚಟುವಟಿಕೆಗಳ ಯೋಜನೆಯೇ ಪಾಠಯೋಜನೆ.

**ಉತ್ತಮ ಪಾಠಯೋಜನೆಯ ಲಕ್ಷಣಗಳು**

- ಸಾಮಾನ್ಯ ಮತ್ತು ನಿರ್ದಿಷ್ಟ ಉದ್ದೇಶಗಳನ್ನು ಸ್ಪಷ್ಟವಾಗಿ ರೂಪಿಸಿರಬೇಕು.
- ವಿದ್ಯಾರ್ಥಿಗಳ ಪೂರ್ವಜ್ಞಾನದ ಜೊತೆ ಸಂಬಂಧ ಕಲ್ಪಿಸಲು ಸೂಕ್ತ ಹೇಳಿಕೆಗಳು / ಪ್ರಶ್ನೆಗಳಿರಬೇಕು.
- ಬೋಧನೆಯಲ್ಲಿ ಬಳಸುವ ವೈವಿಧ್ಯಮಯ ಹಾಗೂ ಆಕರ್ಷಕ ಕಲಿಕಾ ಚಟುವಟಿಕೆಗಳನ್ನು ಮತ್ತು ಕಲಿಕೋಪಕರಣಗಳನ್ನು ತಿಳಿಸಿರಬೇಕು.
- ನಿರೀಕ್ಷಿತ ಕಲಿಕಾ ಫಲಿತಗಳನ್ನು ಸ್ಪಷ್ಟವಾಗಿ ವರ್ತನಾ ರೂಪದಲ್ಲಿ ನಮೂದಿಸಿರಬೇಕು
- ಆಧಾರ ಗ್ರಂಥ ಅಥವಾ ಪರಾಮರ್ಶನ ಗ್ರಂಥಗಳನ್ನೂ ತಿಳಿಸಿರಬೇಕು.
- ತರಗತಿ ಹಾಗೂ ಪಾಠಕ್ಕೆ ದೊರೆಯುವ ಕಾಲವನ್ನು ಪರಿಗಣಿಸಿ ಪಾಠ ಯೋಜನೆಯನ್ನು ಸಿದ್ಧಪಡಿಸಬೇಕು.
- ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನಕ್ಕೆ ಪ್ರಶ್ನೆಗಳನ್ನೂ, ಚಟುವಟಿಕೆಗಳನ್ನೂ ಒಳಗೊಂಡಿರಬೇಕು.
- ಪುನರಾವರ್ತನೆಯ ಪ್ರಶ್ನೆಗಳು ಹಾಗೂ ಸಾರಾಂಶವನ್ನು ಒಳಗೊಂಡಿರಬೇಕು.
- ಬೋಧನೆಯಲ್ಲಿ ಬಳಸುವ ತಂತ್ರ, ವಿಧಾನಗಳು, ವ್ಯೂಹಗಳ ಬಗೆಗೆ ವಿವರಗಳಿರಬೇಕು.
- ಕಲಿಕೆಯ ಮನೋವೈಜ್ಞಾನಿಕ ನಿಯಮಗಳಿಗೆ ಅನುಗುಣವಾಗಿ ಪಾಠದ ವಿಷಯವನ್ನು ಕ್ರಮಾಗತಗೊಳಿಸಿರಬೇಕು.
- ವ್ಯಕ್ತಿ ಭಿನ್ನತೆಯನ್ನು ನಿರ್ವಹಿಸಲು ಯೋಜನೆಯಲ್ಲಿ ಅವಕಾಶವಿರಬೇಕು.
- ವಿದ್ಯಾರ್ಥಿಗಳಿಗೆ ನೀಡುವ ನಿಯೋಜಿತ ಚಟುವಟಿಕೆಗಳ ಬಗೆಗೆ ತಿಳಿಸಿರಬೇಕು.

**ಪಾಠಯೋಜನೆಯ ಮಹತ್ವ**

ಶಿಕ್ಷಕರು ಎಷ್ಟೇ ಅನುಭವಿ ಮತ್ತು ಸಮರ್ಥರಾಗಿದ್ದರೂ ಮೂಲ ಸಿದ್ಧತೆಗಳಿಲ್ಲದೆ ಪಾಠ ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಬೋಧನೆಗೆ ಪಾಠ ಯೋಜನೆಯು ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಪಾಠಯೋಜನೆಯ ಮಹತ್ವವನ್ನು ಈ ಕೆಳಕಂಡಂತೆ ಸಮರ್ಥಿಸಬಹುದು.

- ತರಗತಿಯಲ್ಲಿ ಶಿಕ್ಷಕ ಸಾಧಿಸಬೇಕಾದ ಗುರಿ ಉದ್ದೇಶಗಳನ್ನು ತಿಳಿಸುತ್ತದೆ.
- ಅನಾವಶ್ಯಕ ಪುನರಾವರ್ತನೆಯನ್ನು ತಡೆಯುವುದಲ್ಲದೆ ಕಾಲದ ಅಪವ್ಯಯವನ್ನು ತಪ್ಪಿಸುವುದು.

Digitised by Bharatavani, CIIL

- ಬೋಧನಾ ಪ್ರಕ್ರಿಯೆಗೆ ವ್ಯವಸ್ಥಿತ, ಕ್ರಮಬದ್ಧವಾದ ಚೌಕಟ್ಟನ್ನು ಒದಗಿಸುವುದು.

- ಶಿಕ್ಷಕರು ವಿಷಯ ಸಂಘಟನೆ ಮಾಡಿಕೊಂಡು ಕಲಿಕೋಪಕರಣ ಹಾಗೂ ಬೋಧನಾ ಚಟುವಟಿಕೆಗಳ ಬಗೆಗೆ ಸ್ಪಷ್ಟ ಮಾರ್ಗದರ್ಶನ ನೀಡುವುದು.

- ಬೋಧನೆಯ ಸಂದರ್ಭದಲ್ಲಿ ಉದ್ಭವಿಸಬಹುದಾದ ಸಂದಿಗ್ಧತೆಗಳನ್ನು ತೊಡೆದುಹಾಕುವುದಲ್ಲದೆ ಶಿಕ್ಷಕರಲ್ಲಿ ಆತ್ಮವಿಶ್ವಾಸ ಮತ್ತು ಮನೋಸ್ಥೈರ್ಯ ಬೆಳೆಸುವುದು.

- ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆಗೆ ಸಹಾಯಕವಾಗುವುದಲ್ಲದೆ ಕಲಿಕೆಯನ್ನು ಮೌಲ್ಯಮಾಪನಮಾಡಿ ಪ್ರತಿಪುಷ್ಟಿ ನೀಡಲು ಸಾಧ್ಯವಾಗುತ್ತದೆ.

- ಬೋಧನೆಯಲ್ಲಿ ವಿವಿಧ ಕೌಶಲ ಹಾಗೂ ವಿಧಾನಗಳ ಬಳಕೆಗೆ ಅವಕಾಶ ಕಲ್ಪಿಸಿಕೊಡುವುದಲ್ಲದೆ ಬೋಧನೆಗೆ ನಿರಂತರತೆಯನ್ನು ಒದಗಿಸಿ ಕಲಿಕೆಯಲ್ಲಿ ಆಸಕ್ತಿ ಮೂಡಿಸುವುದು.

**ಪಾಠಯೋಜನೆಯ ಹಂತಗಳು**

ಜರ್ಮನಿಯ ತತ್ವಜ್ಞಾನಿ ಹಾಗೂ ಶಿಕ್ಷಣ ತಜ್ಞನಾದ ಜಾನ್ ಫ್ರೀಡ್ರಿಕ್ ಹರ್ಬಾರ್ಟ್ ಎಂಬುವನು ಕಲಿಕೆಯ ಮನೋವೈಜ್ಞಾನಿಕ ನಿಯಮಗಳಿಗೆ ಅನುಗುಣವಾಗಿ ಪಾಠ ಯೋಜನೆಯು ಐದು ಹಂತಗಳಲ್ಲಿ ಸಾಗಬೇಕೆಂದು ಸೂಚಿಸಿದನು. ಈ ಐದು ಹಂತಗಳನ್ನು ಬೋಧನೆಯಲ್ಲಿ ಹರ್ಬಾರ್ಟನ ಪಂಚಸೋಪಾನಗಳೆಂದು ಕರೆಯಲಾಗಿದೆ. ಅವುಗಳೆಂದರೆ,

1. ಪೂರ್ವಸಿದ್ಧತೆ, 2. ಪ್ರಸ್ತುತೀಕರಣ, 3. ಸಮನ್ವಯ ಮತ್ತು ತುಲನೆ, 4. ಸಾಮಾನ್ಯೀಕರಣ, 5. ಅನ್ವಯ

ಭಾರತದ ಬಹುತೇಕ ಶಾಲೆಗಳಲ್ಲಿ ಹರ್ಬಾರ್ಟನ ಪಂಚ ಸೋಪಾನಗಳ ಮಾದರಿಯನ್ನೇ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಅಳವಡಿಸಿಕೊಳ್ಳಲಾಗಿದೆ. ಅವುಗಳು ಈ ಕೆಳಕಂಡಂತಿವೆ.

**ಪೀಠಿಕೆ**

ವಿದ್ಯಾರ್ಥಿಗಳನ್ನು ಕಲಿಕೆಯ ಕಡೆಗೆ ಪ್ರಚೋದಿಸಲು ಹಾಗೂ ಗಮನ ಸೆಳೆಯಲು ಪೂರ್ವಜ್ಞಾನವನ್ನು ಪರೀಕ್ಷಿಸಬೇಕು. ಪೂರ್ವಜ್ಞಾನದ ಜೊತೆಗೆ ಹೊಸ ಜ್ಞಾನವನ್ನು ಸಮ್ಮಿಲನಗೊಳಿಸಬೇಕಾಗುವುದು. ಇದನ್ನು ಪೂರ್ವಸಿದ್ಧತೆಯ ಹಂತವೆಂತಲೂ ಕರೆಯುವರು. ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನುಂಟು ಮಾಡಲು ಉದಾಹರಣೆ, ಪ್ರಶ್ನೆ, ನಿದರ್ಶನ, ಚಿತ್ರಪಟ, ಹೇಳಿಕೆ ಮುಂತಾದವುಗಳನ್ನು ಪೀಠಿಕೆಯಲ್ಲಿ ಬಳಸಿಕೊಳ್ಳಬಹುದು. ಮಾನಸಿಕವಾಗಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು ಪೀಠಿಕೆಯ ಉದ್ದೇಶವಾಗಿದೆ.

- **ಬೆಳವಣಿಗೆ :** ಬೋಧಿಸಬೇಕಾದ ವಿಚಾರಗಳು, ವಿಷಯವಸ್ತುಗಳನ್ನು ಈ ಹಂತದಿಂದ ಪ್ರಾರಂಭಿಸಿ ಬೋಧಿಸಲಾಗುವುದು. ಬೋಧನೆಯ ನಿರ್ದಿಷ್ಟ ಉದ್ದೇಶಗಳನ್ನು ಸಾಧಿಸಲು ಈ ಹಂತದಲ್ಲಿ ಅವುಗಳಿಗೆ ಸಂಬಂಧಿಸಿದಂತೆ ಬೋಧನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಶಿಕ್ಷಕರು ಬೋಧನೆಯ ವಿವಿಧ ಸಾಧನ, ತಂತ್ರಪದ್ಧತಿಗಳನ್ನು ಬಳಸಿಕೊಂಡು ಬೋಧಿಸಬೇಕಾಗುವುದು. ವಿವಿಧ ಬಗೆಯ ಪ್ರಶ್ನೆಗಳು, ನಿದರ್ಶನಗಳು, ಉದಾಹರಣೆಗಳು, ಕಲಿಕೋಪಕರಣಗಳು ಮುಂತಾದವುಗಳನ್ನು ಶಿಕ್ಷಕರು ಬಳಸಿಕೊಂಡು ಪರಿಣಾಮಕಾರಿಯಾಗಿ ಬೋಧಿಸಬೇಕು

- **ನಿಯಮದ ಸಾಮಾನ್ಯೀಕರಣ** : ವಿವರಗಳ ಆಧಾರದ ಮೇಲೆ ಪರಿಕಲ್ಪನೆ, ಜ್ಞಾನಾಂಶಗಳನ್ನು ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ತುಲನೆ ಮಾಡಿ, ಸಾಮಾನ್ಯ ತತ್ವಗಳನ್ನು ರೂಪಿಸಲಾಗುವುದು. ಜ್ಞಾನಾಂಶಗಳನ್ನು ಜ್ಞಾನದ ಗಳಿಕೆಯು ಈ ಹಂತದಲ್ಲಾಗುತ್ತದೆ.

- **ಪುನರಾವಲೋಕನ** : ಪಾಠಬೋಧನೆಯ ಕೊನೆಯಲ್ಲಿ ಕಲಿತಂತಹ ಎಲ್ಲಾ ವಿಚಾರಗಳನ್ನು ಮತ್ತೊಮ್ಮೆ ಸ್ಥೂಲವಾಗಿ ಅವಲೋಕನ ಮಾಡಲಾಗುವುದು. ಬೋಧನಾ ವಿಚಾರಗಳು ಎಷ್ಟರಮಟ್ಟಿಗೆ ವಿದ್ಯಾರ್ಥಿಗಳಿಗೆ ಅರ್ಥವಾಗಿವೆ ಎಂಬುದನ್ನು ತಿಳಿಯಲಾಗುವುದು. ಇಡೀ ಅವಧಿಯ ಬೋಧನಾ ವಿಚಾರಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಕೇಳಲಾಗುವುದು. ಪ್ರಶ್ನೆಗಳಿಗೆ ಬಂದ ಉತ್ತರವನ್ನು ಕಪ್ಪು ಹಲಗೆಯ ಮೇಲೆ ಸಾರಾಂಶ ರೂಪದಲ್ಲಿ ಬರೆಯಲಾಗುವುದು. ಬೋಧಿಸಿದ ವಿಚಾರಗಳು ಕ್ರಿಯಾಶೀಲವಾಗುವಂತೆ ಮಾಡಲು ವಿದ್ಯಾರ್ಥಿಗಳಿಗೆ ಮನೆಗೆಲಸವನ್ನು ನೀಡಲಾಗುವುದು.

- **ಅನ್ವಯ** : ತಾನು ಪಡೆದಂತಹ ಹೊಸ ಜ್ಞಾನವನ್ನು ಹೊಸ ಸನ್ನಿವೇಶದಲ್ಲಿ ಬಳಕೆ ಮಾಡಿದಾಗ ಮಾತ್ರ ಅದು ಉಪಯುಕ್ತವಾಗುವುದು. ಪದೇ ಪದೇ ಈ ಪ್ರಕ್ರಿಯೆ ನಡೆಸಿದಾಗ ವಿದ್ಯಾರ್ಥಿಗಳು ಕಲಿತ ವಿಚಾರಗಳು ಶಾಶ್ವತವಾಗಿ ನೆನಪಲ್ಲಿರುತ್ತವೆ.

ಈ ಮೇಲಿನ ಎಲ್ಲಾ ಹಂತಗಳನ್ನು ಅನುಸರಿಸಿ ಎಲ್ಲಾ ವಿಷಯಗಳನ್ನು ಬೋಧಿಸಬೇಕೆಂದಿಲ್ಲ. ವಿಷಯಗಳು, ಪಾಠದ ಸ್ವರೂಪವನ್ನು ಆಧರಿಸಿ ಪಾಠ ಯೋಜನೆಯ ನಮೂನೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬಹುದು.

**ಪಾಠ ಯೋಜನೆಯ ಪರಿಮಿತಿಗಳು**

- ಕೇವಲ ಒಂದೇ ಅವಧಿಗೆ ಮಾತ್ರ ಬಳಕೆಯಾಗುವುದು.
- ಬೋಧನೆಗೆ ಯಾಂತ್ರಿಕತೆ ಹಾಗೂ ಕೃತಕತೆಯನ್ನು ತಂದು ಕೊಡುತ್ತದೆ.
- ನಿಗದಿತ ಸಮಯದಲ್ಲಿ ಪಾಠವು ಮುಗಿಯದೆ ಹೋಗಬಹುದು.

ಬೋಧನೆಗೆ ಯೋಜನೆಯನ್ನು ಮಾಡಿಕೊಳ್ಳುವುದರಿಂದ ಶಿಕ್ಷಕರಲ್ಲಿ ಆತ್ಮವಿಶ್ವಾಸ, ರಕ್ಷಣಾಭಾವ, ಆತ್ಮಸ್ಥೈರ್ಯ ಹಾಗೂ ದಕ್ಷತೆ ಹೆಚ್ಚುತ್ತದೆ. ವಿದ್ಯಾರ್ಥಿಗಳನ್ನು ಸಮಗ್ರವಾಗಿ ಮತ್ತು ನಿರಂತರವಾಗಿ ಮೌಲ್ಯಮಾಪನ ಮಾಡಲು ಹಾಗೂ ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯಕವಾಗುತ್ತದೆ.

–ಮಂ.ಎನ್.ಡಿ.

## ಬೋಧನೆಯ ಪರಿಕಲ್ಪನೆ

ಬೋಧನೆಯ ಸ್ವರೂಪ ಬೋಧನೆಯ ವ್ಯಾಖ್ಯಾನಗಳು ಮತ್ತು ಅವುಗಳ ವಿಶ್ಲೇಷಣೆ ಹಾಗೂ ಲಕ್ಷಣಗಳನ್ನು ತಿಳಿದಾಗ ಮಾತ್ರ ಪರಿಪೂರ್ಣವಾಗುತ್ತದೆ. ಬೋಧನಾ ಪರಿಕಲ್ಪನೆಯನ್ನು ಅರ್ಥೈಸುವಲ್ಲಿ ಇದರ ವ್ಯಾಖ್ಯೆಗಳು ಮತ್ತು ಅದರ ವಿಶ್ಲೇಷಣೆ ಹಾಗೂ ಬೋಧನೆಯ ವಿವಿಧ ವ್ಯಾಖ್ಯಾನಗಳು ಮತ್ತು ಸ್ವರೂಪವನ್ನು ಪರಿಗಣಿಸಬೇಕಾಗುತ್ತದೆ.

**ವ್ಯಾಖ್ಯೆಗಳು**

ಹೆನ್ರಿ ಸಿ. ಮಾರಿಸನ್ (1934) ಕಡಿಮೆ ಪರಿಪಕ್ವತೆ ಹೊಂದಿರುವ ವ್ಯಕ್ತಿಯ ಶಿಕ್ಷಣಕ್ಕಾಗಿ ವಿನ್ಯಾಸಗೊಂಡ ಹೆಚ್ಚಿನ ಪರಿಪಕ್ವ ವ್ಯಕ್ತಿತ್ವ ಮತ್ತು

Digitised by Bharatavani, CIIL

ಕಡಿಮೆ ಪರಿಪಕ್ವತೆ ಹೊಂದಿರುವ ವ್ಯಕ್ತಿಗಳ ನಡುವಿನ ನಿಕಟ ಸಂಬಂಧವೇ ಬೋಧನೆ.

ಕ್ಲಾರ್ಕ್ (1970) "ವಿದ್ಯಾರ್ಥಿಯ ವರ್ತನೆಯಲ್ಲಿ ಬದಲಾವಣೆ ತರಲು ವಿನ್ಯಾಸಗೊಂಡಿರುವ ಚಟುವಟಿಕೆಗಳೇ ಬೋಧನೆ".

ಸ್ಮಿತ್ ಬಿ.ಓ. (1960) "ಕಲಿಕೆಯನ್ನುಂಟು ಮಾಡುವ ಉದ್ದೇಶ ಹೊಂದಿರುವ ಕ್ರಿಯೆಗಳ ವ್ಯವಸ್ಥೆಯೇ ಬೋಧನೆ".

ಥಾಮಸ್ ಎಫ್ ಗ್ರೀನ್ (1971) "ಮಗುವಿನ ಅಭಿವೃದ್ಧಿಗಾಗಿ ಶಿಕ್ಷಕ ನಿರ್ವಹಿಸುವ ಕಾರ್ಯವೇ ಬೋಧನೆ".

ಮೇಲಿನ ವ್ಯಾಖ್ಯಾನಗಳನ್ನು ವಿಶ್ಲೇಷಿಸಿದಾಗ ಕಂಡುಬರುವ ಅಂಶಗಳೆಂದರೆ,

1. ಬೋಧನೆ ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಪ್ರಕ್ರಿಯೆ ಮತ್ತು ಇದರಲ್ಲಿ ಒಬ್ಬ ಪರಿಪಕ್ವ ವ್ಯಕ್ತಿತ್ವ ಹೊಂದಿದ್ದರೆ ಇನ್ನೊಬ್ಬ ಕಡಿಮೆ ಪಕ್ವತೆಯನ್ನು ಹೊಂದಿರುತ್ತಾನೆ. ಬೋಧಕ ತನ್ನ ಸ್ಥಾನ, ಜ್ಞಾನ, ಅನುಭವಗಳಿಂದ ಕಡಿಮೆ ಅನುಭವ ಹೊಂದಿದ ವ್ಯಕ್ತಿಗಳನ್ನು ಪ್ರಭಾವಿಸುತ್ತಾನೆ. ಬೋಧನೆಯು ಕೇವಲ ಬೋಧಕನ ಬೋಧನೆಗೆ ಸೀಮಿತವಾಗಿದ್ದು ವಿದ್ಯಾರ್ಥಿಗಳು ಜಡ ಕೇಳುಗರಾಗಿರುತ್ತಾರೆ.
2. ಬೋಧನೆಯೆಂದರೆ ವಿದ್ಯಾರ್ಥಿಗಳ ವರ್ತನೆಯಲ್ಲಿ ಬದಲಾವಣೆಯನ್ನು ತರಲು ರೂಪಿಸುವ ಚಟುವಟಿಕೆಗಳ ಗಣ.
3. ವಿದ್ಯಾರ್ಥಿಗಳು ಕಲಿಯಲು ಸಹಾಯಕವಾಗುವಂತೆ ಚಟುವಟಿಕೆಗಳನ್ನು ರೂಪಿಸಿ ಸಂಘಟಿಸುವುದೇ ಬೋಧನೆ. ಕಲಿಕೆಯನ್ನುಂಟು ಮಾಡುವ ಎಲ್ಲ ಚಟುವಟಿಕೆಗಳು ಬೋಧನೆಯಾಗುತ್ತದೆ. ಅಂದರೆ ಬೋಧಕನ ಪಾತ್ರವನ್ನು ಇಲ್ಲಿ ಪುಸ್ತಕ, ಪರಿಸರ ಯಂತ್ರ ಇತ್ಯಾದಿ ನಿರ್ವಹಿಸುತ್ತದೆ/ತುಂಬುತ್ತದೆ. ಇಲ್ಲಿ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ.
4. ಬೋಧನೆಯು ವಿದ್ಯಾರ್ಥಿ ಮತ್ತು ಬೋಧಕರ ನಡುವೆ ಅಂತರವ್ಯಕ್ತಿ ಸಂಬಂಧವನ್ನು ಉಂಟುಮಾಡುವ ಪ್ರಕ್ರಿಯೆಯಾಗಿದೆ. ಇದರಿಂದ ವಿದ್ಯಾರ್ಥಿಯ ವರ್ತನೆಯಲ್ಲಿ ಬದಲಾವಣೆ/ಮಾರ್ಪಾಟನ್ನು ತರಬಹುದು.
5. ವಿದ್ಯಾರ್ಥಿಯ ಅಭಿವೃದ್ಧಿಗಾಗಿ ಬೋಧಕ ನಿರ್ವಹಿಸುವ ಎಲ್ಲ ಕಾರ್ಯಗಳು ಬೋಧನೆಯಾಗುತ್ತದೆ.

ಈ ಮೇಲಿನ ಅಂಶಗಳನ್ನು ಗಮನಿಸಿದರೆ ಯಾವುದೇ ವ್ಯಾಖ್ಯೆಯು ಬೋಧನೆಯ ಪರಿಪೂರ್ಣ ಪರಿಕಲ್ಪನೆ/ಅರ್ಥವನ್ನು ನೀಡುವುದಿಲ್ಲ. ಹಾಗಾಗಿ ಒಂದು ಉತ್ತಮ ಬೋಧನಾ ವ್ಯಾಖ್ಯೆಯು ಬೋಧನೆಯು ಒಂದು ಪ್ರಕ್ರಿಯೆಯೇ ಅಥವಾ ಉತ್ಪನ್ನವೇ, ಅದರ ಘಟಕಾಂಶಗಳು, ಉದ್ದೇಶಗಳು ಹಾಗೂ ರಚನಾತ್ಮಕ ಆಯಾಮವನ್ನು ಸೂಚಿಸುವಂತಿರಬೇಕು. ಆದ್ದರಿಂದ ಬೋಧನೆಯ ಸಮಗ್ರ ವ್ಯಾಖ್ಯೆಯನ್ನು ಕೆಳಗಿನಂತೆ ನೀಡಬಹುದು.

"ವಿದ್ಯಾರ್ಥಿಯ ವರ್ತನೆಯಲ್ಲಿ ಪರಿವರ್ತನೆಯುಂಟು ಮಾಡುವ ಉದ್ದೇಶದಿಂದ ರೂಪಿತವಾದ ಚಟುವಟಿಕೆಗಳು, ವಿದ್ಯಾರ್ಥಿ ಮತ್ತು ಬೋಧಕರನ್ನು ಒಳಗೊಂಡಿರುವ ಪ್ರಮುಖ ಪ್ರಕ್ರಿಯೆಯೇ ಬೋಧನೆ".

**ಸ್ವರೂಪ**

ಬೋಧನೆಯನ್ನು ಪ್ರಮುಖವಾಗಿ ಐದು ಅಂಶಗಳಿಗೆ (Notions) ಅನುಗುಣವಾಗಿ ವ್ಯಾಖ್ಯಾನಿಸಬಹುದು.

1. ಬೋಧನೆಯ ವಿವರಣಾತ್ಮಕ ವ್ಯಾಖ್ಯಾನ – ಈ ರೀತಿಯ ವ್ಯಾಖ್ಯಾನದಲ್ಲಿ ಬೋಧನೆಯನ್ನು ಅದರ ಶಬ್ದದ ಉತ್ಪತ್ತಿಯ ಆಧಾರದ ಮೇಲೆ ವ್ಯಾಖ್ಯಾನಿಸಲಾಗುತ್ತದೆ.
2. ಸಫಲತೆಯ ರೂಪದಲ್ಲಿ ಬೋಧನೆ – ಅಂದರೆ ಯಾವುದು ಕಲಿಕೆಯನ್ನುಂಟು ಮಾಡಲು ಯಶಸ್ವಿಯಾಗುತ್ತದೆಯೋ ಅದನ್ನು ಮಾತ್ರ ಬೋಧನೆ ಎಂದು ಕರೆಯಬಹುದು.
3. ಬೋಧನೆಯು ಉದ್ದೇಶಪೂರ್ವ ಚಟುವಟಿಕೆ – ಬೋಧನೆಯು ಉದ್ದೇಶವನ್ನು ಆಧರಿಸಿ (ಇಲ್ಲಿ ಕಲಿಕೆಯನ್ನುಂಟು ಮಾಡುವುದು ಉದ್ದೇಶ) ನಡೆಯುತ್ತದೆ.
4. ಬೋಧನೆಯು ಕೆಲವೊಂದು ಮಾನಕಗಳ (ನೀತಿ ನಿಯಮಾವಳಿಗೆ) ಆಧಾರಿತವಾಗಿ ನಡೆಯುತ್ತದೆ.
5. ಬೋಧನೆಯನ್ನು ನಾವು ವೈಜ್ಞಾನಿಕ ಸಮೀಕರಣದ ರೂಪದಲ್ಲಿಯೂ ವ್ಯಾಖ್ಯಾನಿಸಬಹುದು.

**ಲಕ್ಷಣಗಳು**

ಬೋಧನೆಯು ಕೆಳಗಿನ ಗುಣಲಕ್ಷಣಗಳನ್ನು ಹೊಂದಿದೆ.

1. ಸಂಕೀರ್ಣ ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಸಾಮಾಜಿಕ ಅಂಶಗಳ ಪ್ರಭಾವಕ್ಕೊಳಗಾಗುತ್ತದೆ.
2. ಇದು ಕಲೆಯೂ ಹೌದು, ವಿಜ್ಞಾನವೂ ಹೌದು.
3. ವೃತ್ತಿಪರ ಚಟುವಟಿಕೆಯಾಗಿದ್ದು, ವಿದ್ಯಾರ್ಥಿ ಮತ್ತು ಶಿಕ್ಷಕರನ್ನು ಒಳಗೊಂಡಿರುತ್ತದೆ.
4. ಬೋಧಕರಿಂದ ಹೊರಹೊಮ್ಮಲ್ಪಡುವಂತಹದ್ದು, ಹಾಗಾಗಿ ವಿದ್ಯಾರ್ಥಿಯಲ್ಲಿ ಕಲಿಕೆಯುಂಟು ಮಾಡುತ್ತದೆ.
5. ವಿಷಯ ವಸ್ತು ಮತ್ತು ವಿದ್ಯಾರ್ಥಿ ವರ್ತನೆಗೆ ಸಂಬಂಧಿಸಿದ ಚಟುವಟಿಕೆಗಳ ವ್ಯವಸ್ಥೆಯಾಗಿದೆ.
6. ವೈಜ್ಞಾನಿಕ ವಿಶ್ಲೇಷಣೆ ಮತ್ತು ವೀಕ್ಷಣೆಗೆ ಒಳಪಡಿಸಬಹುದು.
7. ಸಂವಹನ ಕೌಶಲ ಪ್ರಮುಖವಾದುದು.
8. ನಿರ್ದಿಷ್ಟ ಉದ್ದೇಶಗಳ ಸಾಧನೆಗಾಗಿ ನಡೆಯುವ ಅನ್ಯೋನ್ಯ ಕ್ರಿಯೆ.

**ಬೋಧನೆ, ಸೂಚನೆ (ಅನುದೇಶ) ಮತ್ತು ಕಲಿಕೆ**

ಬೋಧನೆಯು ಸೂಚನೆ ಮತ್ತು ಕಲಿಕೆಯೊಡನೆ ಹೊಂದಿರುವ ಸಂಬಂಧವನ್ನು ಕೆಳಗಿನ ಕೋಷ್ಟಕದಲ್ಲಿ ಗಮನಿಸಬಹುದು.

Digitised by Bharatavani, CIIL

| ಸೂಚನೆ (ಅನುದೇಶ) | ಬೋಧನೆ |
|---|---|
| • ಒಂದು ವಸ್ತು ವ್ಯವಸ್ಥೆ ಕುರಿತು ಜ್ಞಾನ ಮತ್ತು ತಿಳುವಳಿಕೆ ಅಭಿವೃದ್ಧಿ. | • ಜ್ಞಾನ ಮತ್ತು ತಿಳುವಳಿಕೆ ಬೋಧನಾ ಉದ್ದೇಶಗಳಲ್ಲಿ ಒಂದು |
| • ಮನೋಭಾವನಾತ್ಮಕ ಮತ್ತು ಮನೋಜನ್ಮ ಕ್ರಿಯಾ ವಲಯಗಳ ಪ್ರಾಮುಖ್ಯತೆ ನೀಡುವುದು. | • ಬೋಧನೆಯ ಜ್ಞಾನ ಮತ್ತು ತಿಳುವಳಿಕೆ ಪಡೆಯುವ ಪ್ರಕ್ರಿಯೆ ಗಿಂತ ಮಿಗಿಲಾದುದು. |
| • ಕೇವಲ ಬೌದ್ಧಿಕ ಅಭಿವೃದ್ಧಿಗೆ ಒತ್ತು. | • ಬೋಧನೆ ಸೂಚನೆಯನ್ನು ಒಳಗೊಂಡಿದೆ. |
| • ಬೋಧನೆಯ ಒಂದು ಭಾಗ ಮಾತ್ರ. | • ಶಿಕ್ಷಕ – ವಿದ್ಯಾರ್ಥಿ ನಡುವೆ ಮುಖಾಮುಖಿ ಕ್ರಿಯೆ ಅವಶ್ಯಕ. |
| • ಗಣಕಯಂತ್ರ, ಬೋಧನಾ ಯಂತ್ರ, ಕಾರ್ಯಾನುಗತ ಬೋಧನೆ ಶಿಕ್ಷಕನ ಸ್ಥಾನವನ್ನು ಆವರಿಸುತ್ತದೆ. | • ಶಿಕ್ಷಕ ಬೋಧನೆಯಲ್ಲಿ ಈ ಉಪಕರಣಗಳನ್ನು ಉಪಯೋಗಿಸಿ ಕೊಳ್ಳುತ್ತಾನೆ. |

### ಬೋಧನೆ ಮತ್ತು ಕಲಿಕೆ

ನಮಗೆಲ್ಲ ತಿಳಿದಿರುವಂತೆ ಕಲಿಕೆಯೆಂದರೆ ವರ್ತನೆಯಲ್ಲಿ ಬದಲಾವಣೆಯನ್ನು ತರುವುದಾಗಿದೆ. ಇಲ್ಲಿ ಬೋಧನೆಯ ಉದ್ದೇಶವು ಸಹ ವರ್ತನ ಪರಿವರ್ತನೆಯನ್ನುಂಟು ಮಾಡುವುದು. ಹಾಗಾಗಿ ಬೋಧನೆಯು ಬದಲಾವಣೆಯುಂಟು ಮಾಡಲು ಹಲವಾರು ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಈ ಅಂಶಗಳನ್ನು ಗಮನಿಸಿದಾಗ ನಮಗೆ ಕೆಲವು ಪ್ರಶ್ನೆಗಳು ಎದುರಾಗಬಹುದು. ಅವುಗಳೆಂದರೆ;

ಎಲ್ಲ ಬೋಧನೆಯ ಕಲಿಕೆಯಲ್ಲಿ ಅಂತ್ಯವಾಗಬೇಕೇ? ಮತ್ತು ಕಲಿಕೆಯು ಬೋಧನೆಯಿಂದಲೇ ಉಂಟಾಗಬೇಕೇ?

ಆದರೆ ಇದು ಖಂಡಿತವಾಗಿಯೂ ಅವಶ್ಯಕವಾಗಿಲ್ಲ. ಅಂದರೆ, ಬೋಧನೆ ಮತ್ತು ಕಲಿಕೆಯ ನಡುವೆ ಇಂತಹ ಕಾರ್ಯ–ಕಾರಣ ಸಂಬಂಧವಿಲ್ಲ. ಇದರರ್ಥ ಬೋಧನೆಯು ಕಲಿಕೆಯಲ್ಲಿ ಅಂತ್ಯವಾಗಬೇಕಿಲ್ಲ. ಎಲ್ಲ ಕಲಿಕೆಯು ಬೋಧನೆಯಿಂದಲೇ ಉಂಟಾಗುವುದಿಲ್ಲ.

ಕಲಿಕೆಯನ್ನುಂಟು ಮಾಡುವ ಬೋಧನೆಯ ಉದ್ದೇಶ ಸಂಪೂರ್ಣವಾಗಿ ಈಡೇರಬೇಕಾಗಿಲ್ಲ. ಅದೇ ರೀತಿ ಕಲಿಕೆಯಾಗಲು ಬೋಧನೆ ಅವಶ್ಯಕವಲ್ಲ. ಅನುಭವ, ಸ್ವ ಅಧ್ಯಯನ, ಸ್ವ–ಕಲಿಕೆ ಮೂಲಕವೂ ಕಲಿಕೆಯಾಗಬಹುದು.

ಆದರೆ ಬೋಧನೆಯೆಂಬುದು ಬೋಧಕ ಮತ್ತು ವಿದ್ಯಾರ್ಥಿಗಳ ನಡುವೆ ನಡೆಯುವ ಸಂವಹನ ಪ್ರಕ್ರಿಯೆಯಾದರೆ, ಕಲಿಕೆಯ ಏಕಮುಖ ಚಟುವಟಿಕೆಯಾಗಿದ್ದು ಸಂವಹನದ ಅಗತ್ಯವಿರುವುದಿಲ್ಲ. ಆದರೆ ಉತ್ತಮ ಫಲಿತಾಂಶಕ್ಕಾಗಿ ಬೋಧನೆ ಮತ್ತು ಕಲಿಕೆ ಎರಡೂ ಅವಶ್ಯಕ. ಎರಡೂ ಪ್ರಕ್ರಿಯೆಗಳು ವರ್ತನಾ ಪರಿವರ್ತನೆಯ ಉದ್ದೇಶವನ್ನು ಹೊಂದಿದೆ.

ಆದ್ದರಿಂದ ನಮ್ಮ ಬೋಧನಾ ಪ್ರಕ್ರಿಯೆಯು ಬೋಧನಾ–ಕಲಿಕಾ ಪ್ರಕ್ರಿಯೆ ಎಂದು ಕರೆಯಲ್ಪಡುತ್ತಿದೆ.

### ಬೋಧನಾ ಸಿದ್ಧಾಂತಗಳು

ಬೋಧನಾ ವರ್ತನೆಯಲ್ಲಿ ಅಡಕವಾಗಿರುವ ಚಲಕಗಳು, ಅವುಗಳ ಅಸ್ತಿತ್ವ ಮತ್ತು ಅಂತರ್ ಸಂಬಂಧವನ್ನು ವಿವರಿಸುವ ಪ್ರಯತ್ನವೇ ಬೋಧನಾ ಸಿದ್ಧಾಂತ.

ಬಿ.ಓ ಸ್ಮಿತ್ (1963) ರವರು, ಬೋಧನಾ ಸಿದ್ಧಾಂತವು ಬೋಧನಾ ವರ್ತನೆಯಲ್ಲಿರುವ ವಿವಿಧ ಚಲಕಗಳ ವಿವರಣೆ, ಅವುಗಳ ಸಂಬಂಧ ಮತ್ತು ಬೋಧನೆಯ ಪರಿಣಾಮವನ್ನು ಊಹಿಸುವಂತೆ ಇರಬೇಕೆಂದು ತಿಳಿಸಿದ್ದಾರೆ.

ಎನ್.ಎಲ್. ಗೇಜ್ (1964)ರವರು "ಬೋಧಕ ಹೇಗೆ ವರ್ತಿಸುತ್ತಾನೆ, ಯಾಕೆ ಹಾಗೆ ವರ್ತಿಸುತ್ತಾನೆ ಮತ್ತು ಅದರ ಪರಿಣಾಮಗಳೇನು ಎಂಬ ಪ್ರಶ್ನೆಗಳಿಗೆ ಉತ್ತರಿಸುವುದೇ ಬೋಧನಾ ಸಿದ್ಧಾಂತ" ಎನ್ನುತ್ತಾರೆ.

### ಸ್ವರೂಪ

1. ಬೋಧನಾ ಸಿದ್ಧಾಂತವು ಮನೋವಿಜ್ಞಾನಕ್ಕೆ ಸಂಬಂಧಿಸಿದೆ, ಆದರೆ ಕಲಿಕಾ ಸಿದ್ಧಾಂತದ ಆಧಾರದ ಮೇಲೆ ರೂಪಿತವಾಗಿದೆ.
2. ತರಗತಿಯಲ್ಲಿ ಬೋಧಕರ ವರ್ತನೆಯನ್ನು ವಿವರಿಸುತ್ತದೆ.
3. ಕಲಿಕ ಸಿದ್ಧಾಂತಕ್ಕಿಂತ ಹೆಚ್ಚು ಮೌಲ್ಯಯುತವಾಗಿದೆ.
4. ಸಾಮಾಜಿಕ ಸ್ವರೂಪವನ್ನು ಹೊಂದಿದೆ.
5. ಬೋಧನಾ ಚಲಕಗಳ (ವಿದ್ಯಾರ್ಥಿ, ಶಿಕ್ಷಕ, ವಿಷಯ) ಸಂಬಂಧದ ವ್ಯವಸ್ಥಿತ ದೃಷ್ಟಿಕೋನವನ್ನು ಹೊಂದಿದೆ.
6. ಬೋಧಕರಿಗೆ ಸರಿಯಾದ ಸೈದ್ಧಾಂತಿಕ ಹಿನ್ನೆಲೆ ಮತ್ತು ತರಬೇತಿ ನೀಡುತ್ತದೆ.
7. ಬೋಧನೆಯ ಯೋಜನೆ, ನಿಯಂತ್ರಣಕ್ಕೆ ಸಂಬಂಧಿಸಿದಂತೆ ಬೋಧನಾ ನಿರ್ವಹಣೆಗೆ ಉಪಯೋಗಿಸಲಾಗುತ್ತದೆ.
8. ಬೋಧನಾ ಪ್ರಕ್ರಿಯೆಯ ಚಲಕಗಳು ಮತ್ತು ಘಟಕಾಂಶಗಳ ಮಾರ್ಪಾಟಿಗೆ ಸೂಕ್ತ ಮಾರ್ಗಗಳನ್ನು ಸೂಚಿಸುತ್ತದೆ.
9. ಒಂದೇ ರೀತಿಯ ಬೋಧನಾ ಸಿದ್ಧಾಂತ ಎಲ್ಲ ಬೋಧನಾ ಸನ್ನಿವೇಶಗಳಿಗೆ ಸೂಕ್ತವಾಗುವುದಿಲ್ಲ.
10. ಬೋಧಕನ ವರ್ತನೆ, ಕಾರಣಗಳು ಮತ್ತು ಪರಿಣಮಗಳ ಕುರಿತಂತೆ ಮಾಹಿತಿ ಒದಗಿಸುತ್ತದೆ.

### ಔಪಚಾರಿಕ ಬೋಧನಾ ಸಿದ್ಧಾಂತಗಳು

ಈ ಬೋಧನಾ ಸಿದ್ಧಾಂತವು ತತ್ವಶಾಸ್ತ್ರೀಯ ಚಿಂತನೆಗಳು, ಜ್ಞಾನದ ವಿಜ್ಞಾನ, ತತ್ವಶಾಸ್ತ್ರದ ತತ್ವಗಳ ಆಧಾರದ ಮೇಲೆ ರೂಪಿತವಾಗಿದೆ. ಇದರಲ್ಲಿ ಪ್ರಮುಖವಾಗಿ ನಾಲ್ಕು ಸಿದ್ಧಾಂತಗಳಿವೆ.

### ಮಿಯಾಟಿಕ್ ಬೋಧನಾ ಸಿದ್ಧಾಂತ (Maieutic Theory of Teaching)

ಗ್ರೀಕ್ ತತ್ವಜ್ಞಾನಿ ಸಾಕ್ರಟೀಸ್, ಪ್ಲೇಟೋ ಮತ್ತು ಸ್ವಾಮಿ ವಿವೇಕಾನಂದ, ಗಾಂಧೀಜಿಯವರ ಶೈಕ್ಷಣಿಕ ತತ್ವಶಾಸ್ತ್ರವನ್ನು ಇದು ಪ್ರತಿನಿಧಿಸುತ್ತದೆ.

Digitised by Bharatavani, CIIL

ಇದರ ಪ್ರಮುಖ ಸಾರಾಂಶವೆಂದರೆ ಮಗುವಿನಲ್ಲಿ ಜ್ಞಾನವೆಂಬದು ಮೊದಲೇ ಇರುತ್ತದೆ. ಆ ಜ್ಞಾನವನ್ನು ಹೊರಗೆಳೆಯುವುದೇ ಬೋಧನೆ. ಕುಶಲ ವೈದ್ಯ ಸುಖ ಪ್ರಸವಕ್ಕೆ ನೆರವಾಗಿ ಮಗುವಿನ ಜನನವಾಗುವಂತೆ ಮಾಡುವಂತೆ ಕುಶಲ ಶಿಕ್ಷಕ ಶಿಷ್ಯನಲ್ಲಿ ಹುದುಗಿರುವ ಜ್ಞಾನವನ್ನು ಪ್ರಕಟಿಸಬೇಕು.

ಮಗುವಿನಲ್ಲಿರುವ ಉತ್ತಮ ಅಂಶಗಳನ್ನು ಹೊರಗೆಳೆಯುವುದೇ ಬೋಧಕರ ಕಾರ್ಯವಾಗಿದೆ. ಜ್ಞಾನವು ಮಗುವಿನಲ್ಲಿ ಮರೆತ ರೂಪದಲ್ಲಿರುತ್ತದೆ. ಅದನ್ನು ಪುನರ್ಮನನ ಮಾಡಿಕೊಳ್ಳಲು ಬೋಧಕರು ಮಕ್ಕಳಿಗೆ ನೆರವಾಗಬೇಕು. ಈ ಸಿದ್ಧಾಂತವು ಅನುವಂಶೀಯ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ.

**ಸಂವಹನ ಬೋಧನಾ ಸಿದ್ಧಾಂತ (Communication Theory of Teaching)**

ಇದು ಮಿಯಾಟಿಕ್ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಇದರ ಪ್ರಕಾರ ಮಗುವಿನಲ್ಲಿ ಜ್ಞಾನ ಅಥವಾ ಸಾಮರ್ಥ್ಯ ಎಂಬುದು ಮರೆತ ರೂಪದಲ್ಲಿ ಇರುವುದಿಲ್ಲ. ಆದ್ದರಿಂದ ಮಗುವಿಗೆ ದೊರೆಯಬೇಕಾಗಿರುವ ಜ್ಞಾನ, ಕೌಶಲ್ಯ, ಮನೋಭಾವಗಳು, ಆಸಕ್ತಿಗಳು ಬಾಹ್ಯ ಅಂದರೆ ಪರಿಸರದ ಪ್ರಭಾವಕ್ಕೆ ಒಳಗಾಗುತ್ತವೆ. ಬೋಧಕರು ಮಗುವಿನಲ್ಲಿ ಸಾಮರ್ಥ್ಯಗಳನ್ನು ಮೂಡಿಸಲು ಮೊದಲೇ ಜ್ಞಾನ, ಕೌಶಲಗಳಿಂದ ಸಿದ್ಧರಾಗಿರಬೇಕು. ವಿದ್ಯಾರ್ಥಿಗಳ ಒಳಿತಿಗಾಗಿ ಮತ್ತು ವಿಕಾಸಕ್ಕಾಗಿ ವಿವರಣೆ, ನಿದರ್ಶನ, ಪ್ರಯೋಗ ಇತ್ಯಾದಿ ವಿಧಾನಗಳನ್ನು ಉಪಯೋಗಿಸಿ, ಪರಿಣಾಮಕಾರಿ ಸಂವಹನವನ್ನು ಮಾಡಬೇಕಾಗುತ್ತದೆ.

ಈ ಸಿದ್ಧಾಂತವು ಬೋಧನೆಯನ್ನು ಒಂದು ಪರಿಣಾಮಕಾರಿ ಸಂವಹನ ಎಂದು ಪರಿಗಣಿಸುತ್ತದೆ.

**ಪರಿವರ್ತನಾ ಸಿದ್ಧಾಂತ (Moulding Theory of Teaching)**

ವರ್ತನಾ ಪಂಥದ ಚಿಂತನೆಗಳ ಪ್ರತಿಫಲವೇ ಈ ಸಿದ್ಧಾಂತ.

ಇದು ಬೋಧನೆಯನ್ನು ವರ್ತನಾ ಪರಿವರ್ತನೆ ಅಂದರೆ ವಿದ್ಯಾರ್ಥಿಗಳ ವ್ಯಕ್ತಿತ್ವ ಮತ್ತು ವರ್ತನೆಯನ್ನು ಇಚ್ಛಿತ ರೀತಿಯಲ್ಲಿ ಪರಿವರ್ತಿಸುವ ಪ್ರಕ್ರಿಯೆ ಎಂದು ಪರಿಗಣಿಸುತ್ತದೆ.

ಇದು ಪ್ರಚೋದನೆ – ಪ್ರತಿಕ್ರಿಯೆ ಸಿದ್ಧಾಂತ ಮತ್ತು ಕ್ರಿಯಾಜನ್ಯ ಅನುಬಂಧ ಕಲಿಕೆಯ ತತ್ವಗಳನ್ನು ಒಳಗೊಂಡಿದೆ. ವ್ಯಕ್ತಿತ್ವದ ಬದಲಾವಣೆಗೆ ತತ್‌ಕ್ಷಣದ ಪುನರ್ಬಲನ ಅವಶ್ಯಕವೆಂದು ಹೇಳುತ್ತದೆ. ಆದ್ದರಿಂದ ಸೂಕ್ತವಾದ ಬೋಧನಾ ಪರಿಸರದ ಮತ್ತು ಕಲಿಕಾ ಸನ್ನಿವೇಶಗಳ ಸಂಘಟನೆ, ಮಗುವಿನ ಸಾಮರ್ಥ್ಯ ಅಭಿವೃದ್ಧಿಗೆ ಸ್ವಾತಂತ್ರ್ಯ ಒದಗಿಸುವುದೇ ಶಿಕ್ಷಕರ ಪ್ರಮುಖ ಕರ್ತವ್ಯವಾಗಿರುತ್ತದೆ. ಮಗುವಿನ ವ್ಯಕ್ತಿತ್ವ ಪರಿವರ್ತನೆಯಲ್ಲಿ ಪರಿಸರದ ಅಂಶಗಳು ಪ್ರಮುಖ ಪಾತ್ರ ವಹಿಸುತ್ತದೆಂದು ಇದು ಪರಿಗಣಿಸುತ್ತದೆ.

**ಪರಸ್ಪರ ಅನುಶೀಲನ ಸಿದ್ಧಾಂತ (Mutual enquiry Theory of Teaching)**

ಮಗು ಸ್ವಾಭಾವಿಕವಾಗಿ ಕುತೂಹಲಭರಿತ ಪ್ರಶ್ನೆಗಳ ಮೂಲಕ ಜ್ಞಾನ ಪಡೆಯುವ ಹವ್ಯಾಸ ಹೊಂದಿರುತ್ತದೆ. ಇದರ ಪ್ರಕಾರ ಬೋಧನೆಯು ಒಂದು ಸಹಕಾರಯುತ ಪ್ರಕ್ರಿಯೆಯಾಗಿದ್ದು ಇದರಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿ ಇಬ್ಬರೂ ತೊಡಗಿಸಿಕೊಂಡು ಇಚ್ಛಿತ ಬೋಧನಾ ಉದ್ದೇಶಗಳನ್ನು ಸಾಧಿಸುತ್ತಾರೆ.

ಹಾಗಾಗಿ ಜ್ಞಾನವನ್ನು ಸ್ವತಃ ವಿದ್ಯಾರ್ಥಿಗಳು ತಾವೇ ಅನ್ವೇಷಿಸುವುದಕ್ಕೆ ಸಹಾಯಕವಾಗುವಂತಹ ಕಲಿಕಾ ಸನ್ನಿವೇಶಗಳ ಜೋಡಣೆ ಶಿಕ್ಷಕರ ಪ್ರಮುಖ ಕರ್ತವ್ಯವಾಗಿರುತ್ತದೆ. ಮಗುವಿನ ಸ್ವಭಾವ, ಆಸಕ್ತಿ, ಮೂಲ ಸಾಮರ್ಥ್ಯ, ವಿಷಯವಸ್ತು ಇವುಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕಲಿಕಾ ಸನ್ನಿವೇಶಗಳನ್ನು ರೂಪಿಸಬೇಕಾಗುತ್ತದೆ. ಶಿಕ್ಷಕರ ಸೀಮಿತ ಮಾರ್ಗದರ್ಶನದೊಂದಿಗೆ ಸೂಕ್ತವಾದ ಸಂದರ್ಭಗಳ ಮುಖಾಂತರ ವಿದ್ಯಾರ್ಥಿಗಳು ಜ್ಞಾನ ಪಡೆಯುತ್ತಾರೆ.

ಸಂಶೋಧನೆ, ವಿಚಾರಣೆ, ಅನ್ವೇಷಣಾ ಪ್ರವೃತ್ತಿಯನ್ನು ಉತ್ತೇಜಿಸುವ ವಿಧಾನಗಳನ್ನು ಬೋಧನೆಯಲ್ಲಿ ಉಪಯೋಗಿಸುವಂತೆ ಇದು ಶಿಫಾರಸ್ಸು ಮಾಡುತ್ತದೆ.

ಮನೋವೈಜ್ಞಾನಿಕ ಸಿದ್ಧಾಂತಗಳು ಈ ಸಿದ್ಧಾಂತಗಳು ಕಲಿಕೆಯ ಮನೋವೈಜ್ಞಾನಿಕ ತತ್ವಗಳ ಆಧಾರದ ಮೇಲೆ ರೂಪಿತವಾಗಿವೆ.

**ಗ್ಯಾನೇರವರ ಶ್ರೇಣಿಯುತ ಬೋಧನಾ ಸಿದ್ಧಾಂತ (Gagne's Hierarchial Theory of Teaching)**

ಇದು ಕಲಿಕಾ ವಿಧಾನಗಳು, ಕಲಿಕಾ ಫಲಗಳು ಮತ್ತು ಷರತ್ತುಗಳ ಚಿಂತನೆಗೆ ಅನುಗುಣವಾಗಿ ರೂಪಿತವಾಗಿದೆ.

ಈ ಸಿದ್ಧಾಂತದ ಪ್ರಕಾರ ಬೋಧಕ ತನ್ನ ಬೋಧನೆಯನ್ನು ಸರಳತೆಯಿಂದ ಸಂಕೀರ್ಣತೆಯೆಡೆ ಸಾಗುವ ಎಂಟು ರೀತಿಯ ಕಲಿಕೆಗಳು (ಸಂಕೇತ, ಪ್ರಚೋದಕ–ಪ್ರತಿಕ್ರಿಯೆ, ಸರಪಳಿ, ಶಾಬ್ದಿಕ ಸಂಬಂಧ, ವಿಭೇದಿಕರಣ, ಪರಿಕಲ್ಪನೆ, ನಿಯಮ ಮತ್ತು ಸಮಸ್ಯೆ ಪರಿಹಾರ, ಕಲಿಕೆ), ಐದು ಕಲಿಕಾ ಪ್ರತಿಫಲಗಳು (ಚಲನ ಕೌಶಲಗಳು, ಶಾಬ್ದಿಕ ಮಾಹಿತಿ, ಬೌದ್ಧಿಕ ಕೌಶಲಗಳು, ಮನೋಭಾವಗಳು ಮತ್ತು ಸಂಜ್ಞಾನಾತ್ಮಕ ತಂತ್ರಗಳು) ಹಾಗೂ ಕಲಿಕಾ ಷರತ್ತುಗಳು (ಪ್ರೇರಣೆ, ಅರ್ಜನೆ, ಧಾರಣೆ, ಸ್ಮರಣೆ, ಸಾಮಾನ್ಯೀಕರಣ, ನಿರ್ವಹಣೆ, ಪುಷ್ಟೀಕರಣ) ಇವುಗಳಿಗೆ ಅನುಗುಣವಾಗಿ ರಚಿಸಿಕೊಳ್ಳಬೇಕು.

**ಅಟ್ಕಿನ್‌ಸನ್‌ನ ಉತ್ತಮ/ಗರಿಷ್ಠ ಕಲಿಕಾ ಬೋಧನಾ ಸಿದ್ಧಾಂತ**

ಈ ಸಿದ್ಧಾಂತವು ಬ್ಲೂಮ್‌ನ ಪ್ರಾವೀಣ್ಯ ಕಲಿಕೆ ಹಾಗೂ ರಾಬರ್ಟ್ ಗ್ಲೇಸರ್‌ನ ವೈಯಕ್ತಿಕ ಬೋಧನೆಯನ್ನು ಒಳಗೊಂಡಿದೆ. ಇದರ ಪ್ರಕಾರ ಬೋಧನೆಯು ಕೆಳಗಿನ ಹಂತಗಳನ್ನು ಹೊಂದಿರಬೇಕು.

1. ವರ್ತನಾ ರೂಪದಲ್ಲಿ ಬೋಧನಾ ಉದ್ದೇಶಗಳ ನಿರ್ದಿಷ್ಟಪಡಿಸುವಿಕೆ.
2. ಅವಶ್ಯಕ ಬೋಧನಾ ಕಲಿಕಾ ಚಟುವಟಿಕೆಗಳನ್ನು ನಿರ್ದಿಷ್ಟಪಡಿಸಿ ಬೋಧನಾ ವಿಧಾನವನ್ನು ಯೋಜಿಸುವುದು.
3. ಸೂಕ್ತ ಮಾಪನವನ್ನು ವಿನ್ಯಾಸಗೊಳಿಸಿ ಬೋಧನೋದ್ದೇಶ ಸಾಧನೆಯನ್ನು ಅಳತೆ ಮಾಡುವುದು.

**ಬ್ರೂನರ್‌ನ ಸಂಜ್ಞಾನಾತ್ಮಕ ಬೋಧನಾ ಸಿದ್ಧಾಂತ**

ಈ ಸಿದ್ಧಾಂತವು ಬ್ರೂನರ್‌ನ ಕಲಿಕೆ, ಸಂಜ್ಞಾನಾತ್ಮಕ ಪ್ರಕ್ರಿಯೆ, ಕುತೂಹಲದ ಮೂಲಕ ಜ್ಞಾನ ಪಡೆಯುವಿಕೆ, ಕಲಿಕೆಯಲ್ಲಿ ಪರಿಕಲ್ಪನೆ ಮತ್ತು ವರ್ಗೀಕರಣವೇ ಪ್ರಥಮ ಹಂತ. ಸಂಜ್ಞಾನಾತ್ಮಕ ಸಾಮರ್ಥ್ಯದ ಬೆಳವಣಿಗೆಯು ನಿರಂತರ ಮತ್ತು ವ್ಯವಸ್ಥಿತ ಪ್ರಕ್ರಿಯೆ. ಹಾಗೂ ಸ್ವತಂತ್ರ ಕಲಿಕೆ, ಜ್ಞಾನಾರ್ಜನೆ ಮಾರ್ಗದಲ್ಲಿ ಪ್ರಾವೀಣ್ಯತೆ ಎಂಬ ಚಿಂತನೆಗಳನ್ನು ಆಧರಿಸಿದೆ.

Digitised by Bharatavani, CIIL

ಹಾಗಾಗಿ ಬೋಧಕನು ಬೋಧನೆಯನ್ನು ರೂಪಿಸುವಾಗ ಈ ಕೆಳಗೆ ನಮೂದಿಸಿರುವ ಅಂಶಗಳಿಗೆ ಪ್ರಾಮುಖ್ಯತೆಯನ್ನು ನೀಡಬೇಕು.

ಮಗುವಿನ ಕುತೂಹಲ ಮತ್ತು ಸಹಜ ಆಸಕ್ತಿಯನ್ನು ಉತ್ತಮವಾಗಿ ಬಳಸಿಕೊಳ್ಳಲು ಪ್ರಯತ್ನಿಸಬೇಕು.

ಸ್ವತಂತ್ರವಾಗಿ ಚಿಂತಿಸಲು ಮತ್ತು ಕಲಿಯಲು ಉತ್ತೇಜನ ಬೇಕು.

ಮಗುವಿನಲ್ಲಿ ಆಸಕ್ತಿ ಹೆಚ್ಚಿಸುವ, ಬೋಧನೋದ್ದೇಶ ಸಾಧಿಸಲು ಸಹಾಯಕವಾಗುವ ಕಲಿಕಾ ಸಂದರ್ಭಗಳನ್ನು ಒದಗಿಸಬೇಕು.

ಜ್ಞಾನಾರ್ಜನೆಯ ಮಾರ್ಗ ಹಾಗೂ ವಸ್ತುಗಳು, ಘಟನೆಗಳನ್ನು ಗುರುತಿಸಿ ವರ್ಗೀಕರಿಸಲು ಸಹಾಯ ಮಾಡಬೇಕು.

ಸೂಕ್ತ ಆಂತರಿಕ ಅಭಿಪ್ರೇರಣೆ ಅಥವಾ ಸ್ವ-ಪುರಸ್ಕಾರಕ್ಕೆ ಗಮನ ನೀಡಿ, ವಿದ್ಯಾರ್ಥಿಗಳ ಕಲಿಕಾ ವರ್ತನೆಯನ್ನು ಪುನರ್ಬಲನ ಗೊಳಿಸಬೇಕು.

**ಮಾನಕಾತ್ಮಕ ಸಿದ್ಧಾಂತ (Normative Theories of Teaching)**

ಇವು ಬೋಧನಾ ಚಲಕಗಳ ಕುರಿತಾದ ಮಾಹಿತಿಯನ್ನು ಒದಗಿಸುತ್ತವೆ. ಬೋಧನಾ ಉದ್ದೇಶಗಳನ್ನು ಸಾಧಿಸಲು ಸಹಾಯಕವಾಗುವ ಮಾನಕಗಳನ್ನು ಈ ಸಿದ್ಧಾಂತಗಳು ಒದಗಿಸುತ್ತವೆ.

**ಗೇಜ್‌ನ ಸಂಜ್ಞಾನಾತ್ಮಕ ಸಿದ್ಧಾಂತ**

ಎನ್.ಎಲ್.ಗೇಜ್ ಪ್ರತಿಪಾದಿಸಿದ ಸಿದ್ಧಾಂತವು ಬೋಧನೆ ಕೇವಲ ಪ್ರಚೋದನೆ-ಪ್ರತಿಕ್ರಿಯಾ ತಂತ್ರವಲ್ಲ. ಬೋಧಕರು ಬೋಧನೆಯಲ್ಲಿ ಸಂಜ್ಞಾನಾತ್ಮಕ ಕಲಿಕಾ ತತ್ವಗಳನ್ನು ಉಪಯೋಗಿಸಿಕೊಳ್ಳಬೇಕು.

ಇದರ ಪ್ರಕಾರ ಬೋಧನೆಯನ್ನು ಕೆಳಗಿನಂತೆ ವಿವರಿಸಬಹುದು.

ವಿಷಯ ವಸ್ತುವಿನ ಅರ್ಥಪೂರ್ಣ ಕಲಿಕೆಗೆ ಸಹಾಯ ಮಾಡುವುದೇ ಬೋಧನಾ ಕಾರ್ಯ.

ಸಂಜ್ಞಾನಾತ್ಮಕ ತತ್ವಗಳನ್ನು ಆಧರಿಸಿ ವಿಷಯವಸ್ತುವನ್ನು ಸಂಘಟಿಸಿ, ಪ್ರಸ್ತುತಪಡಿಸಿದರೆ ಸರಿಯಾಗಿ ಅರ್ಥೈಸಲು ಸಾಧ್ಯ.

ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಶಿಕ್ಷಕ ನಿರ್ವಹಿಸಬೇಕಾದ ವಿವಿಧ ಪಾತ್ರಗಳು (ತತ್ವಜ್ಞಾನಿ, ಪ್ರೇರಕ, ಸಲಹೆಗಾರ ಇತ್ಯಾದಿ), ಶೈಕ್ಷಣಿಕ ಉದ್ದೇಶಗಳು ಹಾಗೂ ಕಲಿಕಾ ಹಂತಗಳು, ಕಲಿಕಾ ವಿಧಾನಗಳಿಗೆ ಅನುಸಾರವಾಗಿ ಯೋಜಿಸಿ, ಸಂಘಟಿಸಬೇಕು.

2. ರೇಯನ್‌ನ ಬೋಧನಾ ವರ್ತನೆಯ ಸಿದ್ಧಾಂತ (Ryan's Teacher behaviour Teaching Theory)

ಬೋಧಕರ ವರ್ತನೆಯ ಆಧಾರದ ಮೇಲೆ ಡಿ.ಸಿ. ರೇಯಾನ್ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇದರ ಪ್ರಕಾರ ಬೋಧನೆಯ ಮೇಲೆ ಬೋಧಕನ ಶಾಬ್ದಿಕ ಮತ್ತು ಅಶಾಬ್ದಿಕ ವರ್ತನೆಯು ಪ್ರಭಾವ ಬೀರುತ್ತದೆ. ಹಾಗಾಗಿ ಬೋಧನೆಯ ಸುಧಾರಣೆಯು ಬೋಧಕರ ವರ್ತನೆಯ ಗುಣಾತ್ಮಕತೆಯನ್ನು ಅವಲಂಬಿಸಿರುತ್ತದೆ. ಇದರ ಪ್ರಕಾರ,

1. ಸೂಕ್ತ ಬೋಧನಾ ವರ್ತನೆಯನ್ನು ನಿರ್ವಹಿಸಲು ಸಹಾಯಕವಾಗುವ ಬೋಧನಾ ಕಲಿಕಾ ಸನ್ನಿವೇಶಗಳನ್ನು ವಿನ್ಯಾಸಗೊಳಿಸಬೇಕು.
2. ಬೋಧನೆಗೆ ಸಹಾಯಕವಾಗುವ ಅಪೇಕ್ಷಿತ ವರ್ತನೆ ಮತ್ತು ವೈಯಕ್ತಿಕ ಗುಣಗಳನ್ನು ಬೋಧಕರು ಆಯ್ಕೆ ಮಾಡಿಕೊಳ್ಳಬೇಕು.
3. ಸೇವಾನಿರತ ಮತ್ತು ಸೇವಾಪೂರ್ವ ಬೋಧನಾ ತರಬೇತಿ ನೀಡಲು ಬೋಧನಾ ವರ್ತನೆಯನ್ನು ಮಾಪನ ಮಾಡುವ ತಂತ್ರಗಳನ್ನು ಉಪಯೋಗಿಸಿಕೊಳ್ಳಬೇಕು. ಬೋಧಕರು ಸಹ ಸ್ವಮೌಲ್ಯಮಾಪನ ವನ್ನು ಅಳವಡಿಸಿಕೊಳ್ಳಬೇಕು.

**ಮಿತ್ರರವರ ಮನೋವೈಜ್ಞಾನಿಕ ಬೋಧನಾ ಸಿದ್ಧಾಂತ (Mitra's Psychological Theory of Teaching)**

ಎನ್.ಸಿ.ಇ.ಆರ್.ಟಿ.ಯ ನಿರ್ದೇಶಕರಾಗಿದ್ದ ಎಸ್.ಕೆ. ಮಿತ್ರಾರವರು ಬೋಧನೆಗೆ ಮನೋವೈಜ್ಞಾನಿಕ ತತ್ವಗಳ ಅನ್ವಯನ ಮಾಡುವ ಪ್ರಯತ್ನದ ಮೂಲಕ ಸಿದ್ಧಾಂತವನ್ನು ರೂಪಿಸಿದ್ದಾರೆ. ಇದರ ಪ್ರಮುಖ ಚಿಂತನೆಗಳೆಂದರೆ;

1. ಬೋಧನೆಯು ಔಪಚಾರಿಕ ಸನ್ನಿವೇಶಕ್ಕೆ ಮಾತ್ರ ಸೀಮಿತವಾಗಿರ ಬೇಕು.
2. ಬೋಧನೆಯಾಗಲು ಕನಿಷ್ಠ ಇಬ್ಬರು ವ್ಯಕ್ತಿಗಳ ಅವಶ್ಯಕ. ವಿದ್ಯಾರ್ಥಿ ಮತ್ತು ಬೋಧಕನ ನಡುವೆ ಪರಸ್ಪರ ಸಂಬಂಧವಿರಬೇಕು. ಮತ್ತು ವಿದ್ಯಾರ್ಥಿಗಳ ವರ್ತನೆಯು ಪರಿವರ್ತನೆ ಮಾಡುವುದು ಬೋಧಕನ ಜವಾಬ್ದಾರಿ.
3. ಬೋಧನಾ ಕಾರ್ಯವನ್ನು ವೈಯಕ್ತಿಕ ಭಿನ್ನತೆ, ಕಲಿಕೆ, ಬುದ್ಧಿಶಕ್ತಿ, ಆಸಕ್ತಿ, ವ್ಯಕ್ತಿತ್ವ, ಸಾಧನೆ, ಅಭಿಕ್ಷಮತೆ ಇವುಗಳನ್ನು ಮನೋವಿಜ್ಞಾನದ ತತ್ವಗಳ ಆಧಾರದ ಮೇಲೆ ರೂಪಿಸಬೇಕು.

**ಕ್ಲಾರ್ಕ್‌ನ ಸಾಮಾನ್ಯ ಬೋಧನಾ ಸಿದ್ಧಾಂತ**

ಎಸ್.ಸಿ.ಟಿ. ಕ್ಲಾರ್ಕ್ (1970)ನು ಬೋಧನೆಯು ಸಾಮಾನ್ಯ ಸ್ವರೂಪದ ಚಟುವಟಿಕೆ ಎಂದು ಪರಿಗಣಿಸಿ ಸಿದ್ಧಾಂತವನ್ನು ರೂಪಿಸಿದ್ದಾನೆ. ಇದರ ಪ್ರಕಾರ,

ಬೋಧನೆ ಒಂದು ಸಾಮಾನ್ಯವಾದ ಪ್ರಕ್ರಿಯೆ ಮತ್ತು ವಿದ್ಯಾರ್ಥಿಯ ವರ್ತನೆಯಲ್ಲಿ ಬದಲಾವಣೆ ತರುವ ಉದ್ದೇಶದಿಂದ ವಿನ್ಯಾಸಗೊಂಡ ಚಟುವಟಿಕೆಗಳು.

ಬೋಧನೆಯು ಬೋಧಕ, ವಿದ್ಯಾರ್ಥಿ ಮತ್ತು ಬೋಧನಾ ಕಲಿಕಾ ಸನ್ನಿವೇಶಗಳು, ಪಠ್ಯಕ್ರಮ ಬೋಧನಾ ಉಪಕರಣಗಳು, ಮೌಲ್ಯಮಾಪನ ಇತ್ಯಾದಿ ಅನುಕ್ರಮವಾಗಿ ಸ್ವತಂತ್ರ, ಪರತಂತ್ರ ಮತ್ತು ಮಧ್ಯವರ್ತಿ ಎಂಬ ಚಲಕಗಳನ್ನು ಒಳಗೊಂಡಿದೆ.

ಬೋಧನೆ ಪ್ರಕ್ರಿಯೆಯು ಬೋಧನಾ ಸಿದ್ಧಾಂತ, ನೈಜ ಬೋಧನೆ ಮತ್ತು ಮೌಲ್ಯಮಾಪನ ಎಂಬ ಮೂರು ಹಂತಗಳನ್ನು ಒಳಗೊಂಡಿದೆ.

–ಎಂ.ಪು.

## ಬೋಧನೆಯ ವ್ಯಕ್ತೀಕರಣ

ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚಿನ ಅನ್ವೇಷಣೆಗಳಲ್ಲಿ ಕ್ರಿಯಾಶೀಲವಾದ ಕ್ಷೇತ್ರವೆಂದರೆ ಬೋಧನೆಯ ವ್ಯಕ್ತೀಕರಣ. ಕಲಿಕಾರ್ಥಿಗಳ ವೈಯಕ್ತಿಕ ಭಿನ್ನತೆಗಳಿಗನುಗುಣವಾಗಿ ವೈವಿಧ್ಯಮಯವಾದ ತಂತ್ರಗಳ ಅಭಿವೃದ್ಧಿಯೇ ಬೋಧನಾ ವ್ಯಕ್ತೀಕರಣದ ಪ್ರಮುಖ ತಿರುಳಾಗಿದೆ. ಬೋಧನಾ

Digitised by Bharatavani, CIIL

ವ್ಯಕ್ತೀಕರಣದಲ್ಲಿ ಕೇವಲ ಒಂದೇ ಒಂದು ತಂತ್ರ ಸೂಕ್ತವೆನಿಸುವುದಿಲ್ಲ. ಹಾಗಾಗಿ ಬೋಧನಾ ವ್ಯಕ್ತೀಕರಣಕ್ಕಾಗಿ ಹಲವಾರು ತಂತ್ರಗಳನ್ನು ಅನುಸರಿಸಲಾಗುತ್ತದೆ.

**ಬೋಧನಾ ವ್ಯಕ್ತೀಕರಣದ ಕೆಲವು ಪ್ರಮುಖ ತಂತ್ರಗಳೆಂದರೆ**

- ಡಾಲ್ಟನ್ ಯೋಜನೆ (Dolton Plan)
- ವಿನ್ನೆಂಟ್ಕಾ ಯೋಜನೆ (Winnetka Plan)
- ಬೋಧನೆಯ ವ್ಯಕ್ತಿಗತ ವ್ಯವಸ್ಥೆ (Personalized System of Instruction)
- ಮಾಡ್ಯೂಲರ್ ಉಪಕ್ರಮ (Modular Approach)
- ಕಾರ್ಯಾನುಗತ (ಯೋಜನಾಬದ್ಧ) ಬೋಧನೆ (Programmed Instruction)

**ಡಾಲ್ಟನ್ ಯೋಜನೆ**

ಹೆಲೆನ್ ಪಾರ್ಕ್‌ಹರ್ಸ್ಟ್

ಪಠ್ಯಕ್ರಮವನ್ನು ಶೈಕ್ಷಣಿಕ ವಿಷಯಗಳು ಹಾಗೂ ಔದ್ಯೋಗಿಕ, ಸಾಮಾಜಿಕ ಮತ್ತು ಭೌತಿಕ ಚಟುವಟಿಕೆಗಳಾಗಿ ವಿಭಾಗಿಸಿ, ಶೈಕ್ಷಣಿಕ ವಿಷಯಗಳನ್ನು ವೈಯಕ್ತಿಕವಾಗಿ ಮತ್ತು ಇತರೆ ಕಾರ್ಯಗಳನ್ನು ತರಗತಿ ಸಮೂಹದಲ್ಲಿ ಕಲಿಯುವಂತೆ ನೀಡುವ ವ್ಯವಸ್ಥೆಯೇ ಡಾಲ್ಟನ್ ಯೋಜನೆ.

ಇದನ್ನು ಹೆಲೆನ್ ಪಾರ್ಕ್‌ಹರ್ಸ್ಟ್ ಎಂಬುವವರು ಅಭಿವೃದ್ಧಿಪಡಿಸಿದರು. ಡಾಲ್ಟನ್ ಯೋಜನೆಯು 1920ರಿಂದಲೇ ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡ್‌ಗಳಲ್ಲಿ ಪ್ರಖ್ಯಾತಿಯನ್ನು ಪಡೆದಿದೆ.

**ಲಕ್ಷಣಗಳು**

1. ಶೈಕ್ಷಣಿಕ ವಿಷಯಗಳನ್ನು ಸುಸಂಬದ್ಧವಾಗಿ ಸಂಘಟಿಸಿ ವ್ಯಕ್ತಿಗತವಾಗಿ ಕಲಿಯಲು ಅವಕಾಶವಿರುತ್ತದೆ.
2. ಔದ್ಯೋಗಿಕ ವಿಷಯಗಳನ್ನು ಗುಂಪುಗಳನ್ನಾಗಿ ಮಾಡಿ ವಿದ್ಯಾರ್ಥಿಗಳು ತರಗತಿಯ ಗುಂಪಿನಲ್ಲಿ ಕಲಿಯಲು ಅವಕಾಶ ನೀಡಲಾಗುತ್ತದೆ.
3. ವಿದ್ಯಾರ್ಥಿಗಳಿಗೆ ತನ್ನದೇ ಆದ ವೇಗದಲ್ಲಿ ಕಲಿಯಲು ಸ್ವಾತಂತ್ರ್ಯವಿರುತ್ತದೆ.
4. ಸಾಂಪ್ರದಾಯಿಕ ಬೋಧನಾ ವಿಧಾನ ಮತ್ತು ಸಂಘಟನೆಗೆ ಹೋಲಿಸಿದರೆ ಈ ಯೋಜನೆಯು ಶಾಲಾ ದಕ್ಷತೆಯನ್ನು ಹೆಚ್ಚಿಸುತ್ತದೆ.
5. ಶಾಲೆಯಲ್ಲಿ ಸಮುದಾಯದ ತತ್ವಗಳು ಮತ್ತು ರೂಢಿಗಳನ್ನು ಪರಿಚಯಿಸುತ್ತದೆ.
6. ಔಪಚಾರಿಕ ತರಗತಿಯ ಪಾಠಗಳಿಗೆ ಹೋಲಿಸಿದರೆ, ಸ್ವಾತಂತ್ರ್ಯ, ಅಭಿವ್ಯಕ್ತತೆ ಮತ್ತು ಸಾಮಾಜಿಕ ಸಹಕಾರಗಳ ಬಗೆಗೆ ಹೆಚ್ಚಿನ ಕಾಳಜಿ ವಹಿಸುತ್ತದೆ.
7. ವ್ಯಕ್ತಿಗಳು ಸ್ವತಂತ್ರ ಮುಕ್ತ ಮನಸ್ಸಿನ, ಉದ್ಯಮಶೀಲ, ಜವಾಬ್ದಾರಿಯುತ ವ್ಯಕ್ತಿಗಳಾಗಿ ಜೀವನಕ್ಕೆ ಸಿದ್ಧರಾಗುವ ಅನುಕೂಲಕರ ವಾತಾವರಣವನ್ನು ಒದಗಿಸುತ್ತದೆ.
8. ಕಲಿಕೆಯ ಜೊತೆಗೆ ಸಾಮಾಜಿಕ ಅನುಭವ, ಸ್ವಯಂಶಿಸ್ತು, ನಿರ್ಣಯ ಸಾಮರ್ಥ್ಯ, ಅನುಭವಗಳನ್ನು ಸಹ ಒದಗಿಸುತ್ತದೆ.

ಒಟ್ಟಾರೆಯಾಗಿ ಡಾಲ್ಟನ್ ಯೋಜನೆಯು ಶಾಲೆಯನ್ನು ಸಮುದಾಯವಾಗಿ ಪುನರ್ ಸಂಘಟಿಸುವುದಕ್ಕೆ ಪ್ರಾಮುಖ್ಯ ನೀಡುತ್ತದೆ.

**ಡಾಲ್ಟನ್ ಯೋಜನೆಯ ರಚನೆ**

ಯೋಜನೆಯ ರಚನೆಯನ್ನು ಕೆಳಗಿನಂತೆ ವಿವರಿಸಬಹುದು. ಶಾಲಾ ಪಠ್ಯಕ್ರಮ ನಿರ್ಧಾರಿತವಾದ ಮೇಲೆ ವಿದ್ಯಾರ್ಥಿಗಳನ್ನು ತರಗತಿಗಳಿಗೆ ನಿಯೋಜಿಸಲಾಗುತ್ತದೆ. ಶಾಲಾ ಪ್ರಾರಂಭದಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ 12 ತಿಂಗಳಿಗೆ ಕೆಲಸವನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳು ಪ್ರತಿ ತಿಂಗಳಿಗೆ ನೀಡಿದ ಕಾರ್ಯವನ್ನು ಒಪ್ಪಿಕೊಂಡು ಅದನ್ನು ಪೂರ್ಣಗೊಳಿಸಿದ ನಂತರ ಶಿಕ್ಷಕರಿಗೆ ಹಿಂದಿರುಗಿಸುತ್ತಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪಠ್ಯಕ್ರಮವನ್ನು ಗಣಿತ, ಇತಿಹಾಸ, ವಿಜ್ಞಾನ, ಇಂಜಿನಿಯರಿಂಗ್, ಭೂಗೋಳ, ವಿದೇಶಿ ಭಾಷೆ ಇವುಗಳನ್ನು ಕಡಿಮೆ ಪ್ರಾಧಾನ್ಯತೆಯ ವಿಷಯಗಳೆಂದು ಮತ್ತು ಸಂಗೀತ, ಕಲೆ, ಕಸೂತಿ, ಗೃಹ ವಿಜ್ಞಾನ ಇವುಗಳನ್ನು ಪ್ರಧಾನ ವಿಷಯಗಳೆಂದು ವಿಭಾಗಿಸಲಾಗಿರುತ್ತದೆ. ವಿದ್ಯಾರ್ಥಿಗಳು ತಮ್ಮದೇ ವೇಗದಲ್ಲಿ ತಮಗೆ ಉತ್ತಮವೆನಿಸಿದ ವಿಧಾನದಲ್ಲಿ ಕಾರ್ಯವನ್ನು ಸಂಘಟಿಸುತ್ತಾರೆ. ಇದು ವಿದ್ಯಾರ್ಥಿಗಳಲ್ಲಿ ಉದ್ದೇಶ ಮತ್ತು ಜವಾಬ್ದಾರಿ ಪ್ರಜ್ಞೆ ನಿರ್ಮಿಸುತ್ತದೆ. ಪ್ರತಿ ಪಠ್ಯ ವಿಷಯಕ್ಕೂ ವಿಶೇಷ ಶಿಕ್ಷಕರನ್ನು ಹೊಂದಿರುವ ಪ್ರಯೋಗಾಲಯವಿರುತ್ತದೆ. ವೇಳಾಪಟ್ಟಿಯ ಗೊಡವೆಯಿಲ್ಲದೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ಕಲಿಯಲು ಅವಕಾಶವಿರುತ್ತದೆ. ಬರಹ ರೂಪದ ನಿಯೋಜಿತ ಕಾರ್ಯಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ. ವಿದ್ಯಾರ್ಥಿಗಳ ಪ್ರಗತಿಯನ್ನು ಗ್ರಾಫ್‌ನಲ್ಲಿ ದಾಖಲು ಮಾಡಿ, ನಿರಂತರವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದ ಪುನರ್ ಪರಿಶೀಲನೆಗೆ ಒಳಪಡಿಸಲಾಗುತ್ತದೆ.

ಡಾಲ್ಟನ್ ಯೋಜನೆಯಲ್ಲಿ ಶಾಲಾ ದಿನವನ್ನು ಕೆಳಗಿನಂತೆ ರೂಪಿಸಲಾಗಿರುತ್ತದೆ. ವಿದ್ಯಾರ್ಥಿಗಳು ತಮಗೆ ನಿಯೋಜಿಸಿದ ಕಾರ್ಯವನ್ನು ಮಾಡಲು ಬೆಳಗಿನ 8.45 ರಿಂದ 12.00 ರವರೆಗೆ, 12.30 ರಿಂದ ವಿದ್ಯಾರ್ಥಿಗಳ ಅಸೆಂಬ್ಲಿ ಮತ್ತು ಬೋಧಕ ಸಿಬ್ಬಂದಿ ಸಭೆಗೆ ಹಾಗೂ ವಿದ್ಯಾರ್ಥಿಗಳ ಪ್ರಗತಿ ಪರಿಶೀಲನೆಗೆ 1.00ರ ತನಕ ಮತ್ತು ಮಧ್ಯಾಹ್ನದ ಅವಧಿಯನ್ನು ಔದ್ಯೋಗಿಕ ಮತ್ತು ಮನರಂಜನ ಚಟುವಟಿಕೆಗಳಿಗೆ ಸಮಯವನ್ನು ನಿಗದಿಪಡಿಸಲಾಗಿರುತ್ತದೆ.

**ವಿನ್ನೆಟ್ಕಾ ಯೋಜನೆ (Winnetka Plan)**

ನ್ಯೂಯಾರ್ಕ್‌ನ ಶಾಲೆಯ ಕಾರ್ಲ್‌ಟನ್ ವಾಶ್‌ಬರ್ನ್ ಎಂಬುವರು 1919–1943ರಲ್ಲಿ ರೂಪಿಸಿದರು. 1920ರಿಂದಲೂ ಈ ಯೋಜನೆಯು ಪ್ರಾಮುಖ್ಯತೆಯನ್ನು ಪಡೆದಿದೆ.

"ಶಿಕ್ಷಣದ ವೈಜ್ಞಾನಿಕ ಅಧ್ಯಯನ ಮತ್ತು ವೈಯುಕ್ತಿಕ ಭಿನ್ನತೆಗಳಿಗನುಗುಣವಾಗಿ ಪಠ್ಯವಸ್ತುವನ್ನು ಸಂಘಟನೆ ಮಾಡುವ ಯೋಜನೆಯೇ ವಿನ್ನೆಟ್ಕಾ ಯೋಜನೆ".

ಶಾಲೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ಸಂಶೋಧನೆ ಮತ್ತು ಪ್ರಯೋಗದ ಅಳವಡಿಕೆ, ಪಠ್ಯವಸ್ತುವಿನ ಮೂಲ ವಿಷಯಗಳ ಬೋಧನೆಗೆ ವ್ಯಕ್ತಿಗತ ಬೋಧನೆ ಹಾಗೂ ಇತರೆ ವಿಷಯ ಕ್ಷೇತ್ರಗಳಿಗೆ ಗುಂಪು ಮತ್ತು ಸೃಜನಶೀಲ ಚಟುವಟಿಕೆಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗುತ್ತದೆ.

Digitised by Bharatavani, CIIL

ವಾರ್ಶ್‌ಬರ್ನ್ ಹೇಳುವಂತೆ ಈ ಯೋಜನೆಯಲ್ಲಿ ಶಾಲಾ ಪಠ್ಯಕ್ರಮವನ್ನು ಎರಡು ಭಾಗಗಳಾಗಿ ವರ್ಗೀಕರಣ ಮಾಡಲಾಗಿರುತ್ತದೆ. ಅವುಗಳೆಂದರೆ;

1. ಮೂಲ ವಿಷಯ – ಅಂಕಗಣಿತ, ಓದುಗಾರಿಕೆ, ಭಾಷಾಕಲೆ (ಇಂಗ್ಲಿಷ್, ವ್ಯಾಕರಣ) ವಿಜ್ಞಾನ, ಸಮಾಜ ವಿಜ್ಞಾನ ಇವುಗಳನ್ನು ಬೆಳಗಿನ ವೇಳೆಯಲ್ಲಿ ವಿದ್ಯಾರ್ಥಿಗಳು ತಮ್ಮದೇ ವೇಗದಲ್ಲಿ ವ್ಯಕ್ತಿಗತವಾಗಿ ಅಂದರೆ ಸ್ವ–ಭೋಧನೆ, ಸ್ವ–ತಿದ್ದುಪಡಿ, ನೈದಾನಿಕ ಪರೀಕ್ಷೆಗಳೆಂಬ ತಂತ್ರಗಳನ್ನು ಉಪಯೋಗಿಸಿ ಅಧ್ಯಯನ ಮಾಡುತ್ತಾರೆ.
2. ಸೃಜನಶೀಲ ಕಲೆ, ದೈಹಿಕ ಶಿಕ್ಷಣ, ಪ್ರಶಂಸೆ, ಜ್ಞಾನ, ಇಚ್ಛಿತ ಮನೋಭಾವ, ಆಸಕ್ತಿ, ವೈಯಕ್ತಿಕ, ಸಾಮಾಜಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಗುಂಪು ಮತ್ತು ಸೃಜನಶೀಲ ಚಟುವಟಿಕೆಗಳ ಮೂಲಕ ಮಧ್ಯಾಹ್ನದ ವೇಳೆಯಲ್ಲಿ ಕಲಿಯಲು ಅವಕಾಶ ನೀಡಲಾಗುತ್ತದೆ. ಇದು ಕಾರ್ಯಕ್ರಮದ ಪ್ರಮುಖ ಹಾಗೂ ಅತ್ಯವಶ್ಯಕ ಭಾಗವಾಗಿದೆ.

ತರಗತಿಯ ಪ್ರತಿ ಮಗುವಿನ ಸಾಮರ್ಥ್ಯಗಳನ್ನು ಯೋಜನಾ ಕಾರ್ಯ, ಕೃಷಿ ಕಾರ್ಯ, ಕಲೆ, ಸಂಗೀತ, ಶಾಲಾ ವಿದ್ಯಾರ್ಥಿ ಮಂಡಳಿ, ಶಾಲಾ ಪತ್ರಿಕೋದ್ಯಮ, ಶಾಲಾ ಕ್ಲಬ್ ಇತ್ಯಾದಿ ಚಟುವಟಿಕೆಗಳ ಮೂಲಕ ಅಭಿವೃದ್ಧಿಗೊಳಿಸಬೇಕಾಗುತ್ತದೆ.

ಈ ಯೋಜನೆಯ ಅವಧಿ ಒಂದು ತಿಂಗಳಿಂದ 4–5 ತಿಂಗಳು ಅಥವಾ ಪ್ರತಿ ಶಾಲಾ ದಿನದಲ್ಲಿ 2 ಗಂಟೆಯಂತೆ 5 ತಿಂಗಳವರೆಗೆ ಇರಬಹುದು.

ಪ್ರತಿ ವಿದ್ಯಾರ್ಥಿಯ ಮೂಲ ವಿಷಯಗಳಲ್ಲಿನ ಕಲಿಕೆ, ಜ್ಞಾನ ಹಾಗೂ ಕೌಶಲಗಳ ಪ್ರಾವೀಣ್ಯತೆಯ ಪ್ರಗತಿಯನ್ನು ಪರೀಕ್ಷಿಸಲು ಸಾಧನಾ ಪರೀಕ್ಷೆ ಮತ್ತು ನೈದಾನಿಕ ಪರೀಕ್ಷೆಯನ್ನು ಉಪಯೋಗಿಸಿಕೊಳ್ಳಲಾಗುತ್ತದೆ.

ಗುಂಪು ಚಟುವಟಿಕೆಯಲ್ಲಿ ಯಾವುದೇ ನಿರ್ದಿಷ್ಟ ಕೌಶಲವನ್ನು ಕಲಿಸಲು ಪ್ರಯತ್ನಿಸಲಾಗುವುದಿಲ್ಲ. ಸೃಜನಶೀಲತೆ, ಸಹಕಾರ ಹಾಗೂ ಶಾಲೆಯ ಕಾರ್ಯಗಳ ಎಲ್ಲ ಆಯಾಮಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ವಿದ್ಯಾರ್ಥಿಯ ಜ್ಞಾನ ಮತು ಅನುಭವದ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ.

ಒಟ್ಟಾರೆಯಾಗಿ ವಿನೆಟ್ಕಾ ಯೋಜನೆಯಲ್ಲಿ ಪಠ್ಯಕ್ರಮವನ್ನು ಮಗುವಿನ ಮಾನಸಿಕ ವಯಸ್ಸು ಮತ್ತು ಅನುಭವದ ಹಿನ್ನೆಲೆಯ ಜ್ಞಾನಕ್ಕೆ ಅನುಗುಣವಾಗಿ ಜೋಡಣೆ ಮಾಡಲಾಗಿರುತ್ತದೆ. ಸಂಶೋಧನೆ ಮತ್ತು ಬೋಧನಾ ಸಾಮಗ್ರಿಗಳ ತಯಾರಿಯಲ್ಲಿ ಶಿಕ್ಷಕರ ಪಾಲ್ಗೊಳ್ಳುವಿಕೆ ಇದರ ಪ್ರಮುಖ ಉದ್ದೇಶವಾಗಿದೆ.

**ಬೋಧನೆಯ ವ್ಯಕ್ತಿಗತ ವ್ಯವಸ್ಥೆ**

1960ರಲ್ಲಿ ಫ್ರೆಡ್ ಕೆಲ್ಲರ್ ಎಂಬ ಮನೋವಿಜ್ಞಾನಿ ಕಾಲೇಜು ಹಂತದ ಬೋಧನೆಯಲ್ಲಿ ಉಪಯೋಗಿಸಿದ ವ್ಯಕ್ತಿಗತ ಬೋಧನಾ ವಿಧಾನವಾಗಿದೆ. ಇದನ್ನು ಮೊದಲಿಗೆ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಮನೋವಿಜ್ಞಾನವನ್ನು ಬೋಧಿಸಲು ಉಪಯೋಗಿಸಿಕೊಳ್ಳಲಾಯಿತು. ಈ ಯೋಜನೆಯು ಬಿ.ಎಫ್. ಸ್ಕಿನ್ನರರ ಕಾರ್ಯಾನುಗತ ಬೋಧನೆಯ ಪ್ರಭಾವಕ್ಕೆ ಒಳಗಾಗಿ ರೂಪಿತವಾದುದಾಗಿದೆ. ಇದನ್ನು ಕೆಲ್ಲರ್ ಯೋಜನೆ ಎಂತಲೂ ಕರೆಯುತ್ತಾರೆ.

ಬೋಧನೆಯನ್ನು ಸ್ವೀಕರಿಸುವ ವ್ಯಕ್ತಿ ಅಂದರೆ ಕಲಿಕಾರ್ಥಿಯೇ ಪ್ರಧಾನವಾಗಿರುವ ಮತ್ತು ಆತನ ಅವಶ್ಯಕತೆ, ಆಸಕ್ತಿ ಮತು ಸಾಮರ್ಥ್ಯಗಳಿಗನುಗುಣವಾಗಿ ನಡೆಯುವ ವ್ಯಕ್ತಿಗತ ಬೋಧನಾ ವಿಧಾನವೇ ಬೋಧನೆಯ ವೈಯಕ್ತೀಕರಣ.

**ಗುಣಲಕ್ಷಣಗಳು**

ಸಾಂಪ್ರದಾಯಿಕ ಬೋಧನಾ ವಿಧಾನಗಳಿಗಿಂತ ಬೋಧನೆಯ ವೈಯಕ್ತೀಕರಣವು ಕೆಳಗಿನ ಲಕ್ಷಣಗಳಿಂದ ವಿಭಿನ್ನವಾಗಿದೆ.

1. ಪ್ರಾವೀಣ್ಯತೆ – ಕಲಿಕಾರ್ಥಿಯು ವಿಷಯ ವಸ್ತುವಿನ ಮೇಲೆ ಪ್ರಾವೀಣ್ಯತೆಯನ್ನು ಸಾಧಿಸಬೇಕು. ಆತನ ನಿರ್ವಹಣೆಯನ್ನು ಇತರ ವಿದ್ಯಾರ್ಥಿಗಳ ನಿರ್ವಹಣೆಗಳೊಂದಿಗೆ ಹೋಲಿಸುವುದಿಲ್ಲ.
2. ಕಲಿಕಾರ್ಥಿಯು ತನ್ನ ಅವಶ್ಯಕತೆಗಳು ಮತ್ತು ಆಸಕ್ತಿಗನುಗುಣವಾಗಿ ಕಲಿಯಲು ಅವಕಾಶವಿರುತ್ತದೆ.
3. ಕಲಿಕಾರ್ಥಿಯು ಸ್ವತಂತ್ರವಾಗಿ ಕೆಲಸ ಮಾಡುವ ಮತ್ತು ತನ್ನದೇ ವೇಗದಲ್ಲಿ ಪ್ರಗತಿ ಹೊಂದಲು ಅವಕಾಶವಿರುತ್ತದೆ.
4. ವಿದ್ಯಾರ್ಥಿಗಳನ್ನು ಉತ್ತೇಜಿಸಿ, ಪ್ರೇರೇಪಿಸಲು ಕೆಲವೇ ಉಪನ್ಯಾಸಗಳಿರುತ್ತವೆ.
5. ವಿಷಯ ವಸ್ತುವನ್ನು ತಾರ್ಕಿಕವಾಗಿ ದೊಡ್ಡ ಘಟಕಗಳಾಗಿ ವಿಂಗಡಿಸಲಾಗಿರುತ್ತದೆ.
6. ಸಾಮಾನ್ಯ ತರಗತಿ ಸೌಲಭ್ಯಗಳೊಂದಿಗೆ ನಿರ್ವಹಿಸಬಹುದು.

ವಿಷಯ ವಸ್ತುವಿನ ಪ್ರಾವೀಣ್ಯತೆ ಸಾಧಿಸಿದ ಸಮರ್ಥ ವಿದ್ಯಾರ್ಥಿಗಳನ್ನು ತರಬೇತುಗೊಳಿಸಿ ಪ್ರಾವೀಣ್ಯತೆ ಸಾಧಿಸಿದ ತಮ್ಮ ಸಹಪಾಠಿಗಳನ್ನು ಮಾರ್ಗದರ್ಶಿಸಲು ಮತ್ತು ಮೇಲ್ವಿಚಾರಣೆ ಮಾಡಲು ಉಪಯೋಗಿಸಿಕೊಳ್ಳಬಹುದು. ಅಂದರೆ ವಿದ್ಯಾರ್ಥಿ Proctors ಆಗಿ ಮೌಲ್ಯಮಾಪನ ಮಾಡುತ್ತಾರೆ.

**ಉದ್ದೇಶಗಳು:** ಬೋಧನೆಯ ವೈಯಕ್ತೀಕರಣ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

1. ಬೋಧಕ – ವಿದ್ಯಾರ್ಥಿ ನಡುವೆ ಉತ್ತಮ ವೈಯಕ್ತಿಕ ಸಾಮಾಜಿಕ ಸಂಬಂಧ ಸ್ಥಾಪಿಸಲು ಸಹಾಯಕವಾಗುವುದು.
2. ವ್ಯಕ್ತಿಗತ ಅವಧಾನ ನೀಡಲು ಸಹಾಯಕ.
3. ತನ್ನದೇ ವೇಗದಲ್ಲಿ ವಿಷಯ ವಸ್ತುವಿನ ಮೇಲೆ ಪ್ರಾವೀಣ್ಯತೆ ಪಡೆಯಲು ಸಹಾಯ ಮಾಡುವುದು.
4. ಪುನರ್ಬಲನವನ್ನು ಒದಗಿಸುವುದು.
5. ಬಹುಮಾಧ್ಯಮ ವಿಧಾನದ ಮುಖಾಂತರ ಮಾಹಿತಿ ಪಡೆಯಲು ಅವಕಾಶ ಒದಗಿಸುತ್ತದೆ.
6. ಬೋಧಕನು ಮಾಹಿತಿ ಪ್ರಸಾರಕ ಪಾತ್ರದಿಂದ ವಿದ್ಯಾರ್ಥಿಗಳ ಕಲಿಕೆಯು ಇಂಜಿನಿಯರ್ ಆಗಿ ಪಾತ್ರ ನಿರ್ವಹಿಸಲು ಸಹಾಯಕವಾಗುತ್ತದೆ.
7. ವಿಷಯ ವಸ್ತು ಮತು ಬೋಧನಾ ವಿಧಾನದಲ್ಲಿ ಅರ್ಥಪೂರ್ಣ ಪರಿಷ್ಕರಣೆ ಹಾಗೂ ಬೋಧಕರಿಗೆ ಸೂಕ್ತ ಪುಷ್ಟೀಕರಣ ನೀಡಲು ಸಹಾಯಕವಾಗಿದೆ.

Digitised by Bharatavani, CIIL

**ಕಾರ್ಯ ವಿಧಾನ :** ಈ ವಿಧಾನವು ಕೆಳಗಿನ ಹಂತಗಳನ್ನು ಒಳಗೊಂಡಿದ್ದು ಇತರೇ ಕೋರ್ಸ್‌ಗಳಿಂದ ವಿಭಿನ್ನವಾಗಿದೆ.

1ನೇ ಹಂತ : ವಿಷಯವನ್ನು ಸರಿಯಾದ ಘಟಕಗಳಾಗಿ ವಿಭಾಗಿಸುವುದು. ಇದನ್ನು ಪಠ್ಯಪುಸ್ತಕಗಳನ್ನು ಪಾಠಗಳಿಗೆ ಸಂಬಂಧೀಕರಿಸಬಹುದು.

2ನೇ ಹಂತ: ಕಲಿಕಾರ್ಥಿಗೆ ಸೂಕ್ತ ಕಲಿಕಾ ವಸ್ತು, ಅಧ್ಯಯನ ಮಾರ್ಗದರ್ಶಿ, ಕಲಿಕಾ ಸಹಾಯಕಗಳು ಮತ್ತು ಕಲಿಕಾ ಪರಿಸರವನ್ನು ಒದಗಿಸುವುದು. ಅಧ್ಯಯನ ಮಾರ್ಗದರ್ಶಿಯು ಘಟಕದ ಉದ್ದೇಶಗಳು, ಅಧ್ಯಯನ ವಿಧಾನಗಳು ಮತ್ತ ಅಭ್ಯಾಸ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

3ನೇ ಹಂತ : ಕಲಿಕಾರ್ಥಿಯು ತನಗೆ ನಿಗದಿಯಾದ ಘಟಕವನ್ನು ಕಲಿಯಲು ಸೂಚಿಸಲಾಗುತ್ತದೆ. ಶಾಲೆ, ಮನೆ, ಗ್ರಂಥಾಲಯ ಪ್ರಯೋಗಾಲಯ ಎಲ್ಲಿಯಾದರೂ ಕಲಿಯುವ ಸ್ವಾತಂತ್ರ್ಯ ನೀಡಲಾಗುತ್ತದೆ.

4ನೇ ಹಂತ : ಪ್ರತಿ ವಿದ್ಯಾರ್ಥಿಯು ನಿಗದಿಪಡಿಸಿದ ಘಟಕದಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಬೇಕು. ಮುಂದಿನ ಘಟಕಕ್ಕೆ ಮುಂದುವರಿಯಲು ಪರೀಕ್ಷೆಯನ್ನು ತೆಗೆದುಕೊಂಡು ಮೊದಲನೇ ಘಟಕದಲ್ಲಿ ತನ್ನ ಪ್ರಾವೀಣ್ಯತೆಯನ್ನು ಪ್ರದರ್ಶಿಸಬೇಕು. ಇಲ್ಲಿ ಉತ್ತೀರ್ಣತೆ, ಅನುತ್ತೀರ್ಣತೆ ಎಂದು ಪರಿಗಣಿಸದೆ ಕೇವಲ ಕಲಿಕಾರ್ಥಿ ಪ್ರಾವೀಣ್ಯತೆ ಪಡೆದಿದ್ದಾನೆಯೇ ಇಲ್ಲವೇ ಎಂದು ಪರೀಕ್ಷಿಸಲಾಗುತ್ತದೆ. ಪ್ರಾವೀಣ್ಯತೆ ಪಡೆದ ನಂತರವೇ ಮುಂದಿನ ಘಟಕವನ್ನು ಕಲಿಯಲು ಅಧ್ಯಯನ ಸಾಮಗ್ರಿಯನ್ನು ಒದಗಿಸಲಾಗುತ್ತದೆ.

5ನೇ ಹಂತ : ಎಲ್ಲ ಘಟಕಗಳಲ್ಲಿ ಪ್ರಾವೀಣ್ಯತೆ ಪಡೆದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ Proctors ಪಾತ್ರ ನಿರ್ವಹಿಸಲು ತರಬೇತಿ ನೀಡಲಾಗುತ್ತದೆ. ಈ proctors ಇತರೇ ಕಲಿಕಾರ್ಥಿಗಳು ಪ್ರಾವೀಣ್ಯತೆ ಪಡೆಯಲು ನೆರವಾಗುತ್ತಾರೆ.

6ನೇ ಹಂತ : ಅಂತ್ಯದಲ್ಲಿ ಎಲ್ಲ ಘಟಕಗಳಲ್ಲಿ ಪ್ರಾವೀಣ್ಯತೆ ಪಡೆದ ವಿದ್ಯಾರ್ಥಿಗಳಿಗೆ ಶ್ರೇಣಿಗಳನ್ನು ನೀಡಲು ಅಂತಿಮ ಪರೀಕ್ಷೆ ನೀಡಲಾಗುತ್ತದೆ. ಇಲ್ಲಿ ವಿದ್ಯಾರ್ಥಿಯನ್ನು ಪುನರ್ಬಲನಗೊಳಿಸಲು ಮತ್ತು ಮುಂದಿನ ಕಲಿಕೆಗೆ ಪ್ರೇರೇಪಿಸಲು ಶ್ರೇಣಿಯನ್ನು ನೀಡಲಾಗುತ್ತದೆ.

ಕೆಲ್ಲರ್ ಯೋಜನೆಯ ಅನುಷ್ಠಾನದಲ್ಲಿ ಬೋಧಕರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಬೋಧಕರು ವಿಷಯವಸ್ತುವನ್ನು ಆಯ್ಕೆ ಮಾಡಿ, ಸಂಘಟಿಸಿ, ಪರೀಕ್ಷೆಗಳನ್ನು ರಚಿಸುತ್ತಾರೆ. ಅಲ್ಪ ಪ್ರಮಾಣದ ಉಪನ್ಯಾಸ ಮತ್ತು ನಿದರ್ಶನವನ್ನು ನೀಡುತ್ತಾರೆ. ಆದರೆ ಉಪನ್ಯಾಸ ಕಡ್ಡಾಯವಾಗಿರುವುದಿಲ್ಲ. ಮತ್ತು ಇದರ ಆಧಾರದ ಮೇಲೆ ಪರೀಕ್ಷೆ ರಚಿಸುವುದಿಲ್ಲ. ಸಿದ್ಧತಾ ಪರೀಕ್ಷೆಗಳನ್ನು ತೃಪ್ತಿಕರ ಅಥವಾ ಅತೃಪ್ತಿಕರ ಎಂದು ಮೌಲ್ಯಮಾಪನ ಮಾಡಲಾಗುತ್ತದೆ. ಪರಿಹಾರ ಬೋಧನೆ ಮತ್ತು ಉತ್ತೇಜನ ನೀಡಲಾಗುತ್ತದೆ.

### ಮಾಡ್ಯೂಲರ್ ಉಪಕ್ರಮ (Modular Approach)

ಸ್ವಭಾವತಃ ಕಲಿಕಾರ್ಥಿಗಳು ವೈಯಕ್ತಿಕ ಭಿನ್ನತೆಯುಳ್ಳವರಾಗಿದ್ದು ತಮ್ಮದೇ ವೇಗದಲ್ಲಿ ಕಲಿಯುತ್ತಾರೆ. ಕಾರ್ಯಕ್ರಮಾನುಗತ ಬೋಧನೆಯು ಈ ರೀತಿ ಕಲಿಕೆಗೆ ಸಾಮಗ್ರಿಯನ್ನು ಒದಗಿಸುತ್ತದೆ. ಹಾಗಾಗಿ ಇಂತಹ ಸ್ವ ಅಧ್ಯಯನ ಸಾಮಗ್ರಿಯನ್ನು ರಚಿಸುವಾಗ ಇಡೀ ಪಠ್ಯಕ್ರಮವನ್ನು ಅರ್ಥಪೂರ್ಣ ಘಟಕಗಳಾಗಿ ವಿಂಗಡಿಸಬೇಕಾಗುತ್ತದೆ. ಈ ರೀತಿಯಾಗಿ ವಿಂಗಡಿಸಲ್ಪಟ್ಟ ಅರ್ಥಪೂರ್ಣ ಘಟಕಗಳೇ ಮಾಡ್ಯೂಲ್ಸ್ ಎಂದು ಸರಳವಾಗಿ ಹೇಳಬಹುದು. ಇದನ್ನು ಇಂಡೋನೇಷ್ಯಾದ ಪ್ರಯೋಗ ಶಾಲೆಗಳಲ್ಲಿ ಅಭಿವೃದ್ಧಿಪಡಿಸಲಾಯಿತು.

ಮಾಡ್ಯೂಲನ್ನು ಈ ರೀತಿಯಾಗಿ ವ್ಯಾಖ್ಯಾನಿಸಬಹುದು.

"ನಿರ್ಧರಿತ ಉದ್ದೇಶಗಳನ್ನು ವಿದ್ಯಾರ್ಥಿಗಳು ಸಾಧಿಸಲು ಸಹಾಯಕವಾಗುವ ಉದ್ದೇಶದಿಂದ ರೂಪಿತವಾದ ಚಟುವಟಿಕೆಗಳ ಗಣವೇ ಮಾಡ್ಯೂಲ್".

ಇದು ಒಂದು ಬೋಧನಾ ಕಾರ್ಯಕ್ರಮ ಅಥವಾ ಪಠ್ಯಕ್ರಮದ ಉಪ ವ್ಯವಸ್ಥೆ ಅಥವಾ ಉಪಭಾಗವಾಗಿದೆ. ಕಲಿಕಾರ್ಥಿಗಳಿಗೆ ಇದು ಸ್ವ ಅಧ್ಯಯನ ಸಾಮಗ್ರಿ ಮತ್ತು ಇಚ್ಛಿತ ಕಲಿಕಾನುಭವಗಳನ್ನು ಒದಗಿಸುತ್ತದೆ.

ಮಾಡ್ಯೂಲ್ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

1. ಬೋಧನಾ ಉದ್ದೇಶಗಳು.
2. ಕಲಿಕಾ ಅನುಭವಗಳು ಅಥವಾ ಪರಿವಿಡಿ.
3. ವ್ಯವಸ್ಥಿತವಾಗಿ ಮಂಡಿಸಿದ ವಿಷಯ ವಸ್ತು.
4. ಮೌಲ್ಯಮಾಪನ ವ್ಯವಸ್ಥೆ.

1. ಪೂರ್ವಪರೀಕ್ಷೆ: ಘಟಕದ ಕಲಿಕೆಗೆ ಅವಶ್ಯಕವಾಗಿರುವ ಕೌಶಲ್ಯಗಳ ಪ್ರಾವೀಣ್ಯತೆಯನ್ನು ತಿಳಿಯಲು ವಿದ್ಯಾರ್ಥಿಯನ್ನು ಪರೀಕ್ಷೆ ಮಾಡಲಾಗುತ್ತದೆ.
2. ಪೂರ್ವ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ವಿದ್ಯಾರ್ಥಿಯು ಮುಂದಿನ ಘಟಕವನ್ನು ಕಲಿಯಲು ಸಿದ್ಧನಾಗಿದ್ದಾನೆಯೇ ಇಲ್ಲವೇ ಎಂದು ನಿರ್ಧರಿಸಲಾಗುತ್ತದೆ. ಸಿದ್ಧರಾಗಿರುವ ವಿದ್ಯಾರ್ಥಿಗಳು ಹೊಸ ಘಟಕವನ್ನು ಕಲಿಯಲು ಪ್ರಾರಂಭಿಸುತ್ತಾರೆ. ಹಾಗೆಯೇ ಸಿದ್ಧರಾಗಿರದ ವಿದ್ಯಾರ್ಥಿಗಳಿಗೆ ಕೌಶಲಗಳಿಗೆ ಸಂಬಂಧಿಸಿದಂತೆ ಪರಿಹಾರ ಕಾರ್ಯವನ್ನು ನೀಡಲಾಗುತ್ತದೆ. ಅವರು ಸಿದ್ಧರಾದ ನಂತರ ಹೊಸ ಘಟಕ ಕಲಿಯಲು ಪ್ರಾರಂಭಿಸುತ್ತಾರೆ.

   ಇಡೀ ಘಟಕದ ಉದ್ದಕ್ಕೂ ವಿದ್ಯಾರ್ಥಿಗಳು ತಮ್ಮ ಪ್ರಗತಿಯನ್ನು ಸ್ವತಃ ಮೌಲ್ಯಮಾಪನ ಮಾಡಿಕೊಂಡು, ಅರ್ಥವಾಗದ ವಿಷಯಗಳಲ್ಲಿ ಸಹಾಯವನ್ನು ಪಡೆಯುತ್ತಾರೆ. ಇದು ಸ್ವ ಬೋಧನೆ, ಗುಂಪು ಚಟುವಟಿಕೆ ಹಾಗೂ ಉಪನ್ಯಾಸಗಳನ್ನು ಒಳಗೊಂಡಿರಬಹುದು. ತರಗತಿಯ ಇತರೇ ಸಹಪಾಠಿಗಳಿಗಿಂತ ವೇಗವಾಗಿ ಘಟಕವನ್ನು ಪೂರೈಸಿದ ವಿದ್ಯಾರ್ಥಿಗಳಿಗೆ ಸಂಪದ್ಭರಿತ ಚಟುವಟಿಕೆಗಳನ್ನು ನೀಡಲಾಗುತ್ತದೆ.
3. ಘಟಕದ ಅಂತ್ಯದಲ್ಲಿ ಘಟಕದ ಉದ್ದೇಶಗಳಲ್ಲಿ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಪ್ರಾವೀಣ್ಯತೆ ಪಡೆದಿದ್ದಾರೆ ಎಂದು ಮೌಲ್ಯಮಾಪನ ಮಾಡಲಾಗುತ್ತದೆ.

   ಪ್ರಾವೀಣ್ಯತೆ ಪಡೆಯದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆಯನ್ನು ಮತ್ತು ಪ್ರಾವೀಣ್ಯತೆ ಪಡೆದ ವಿದ್ಯಾರ್ಥಿಗಳಿಗೆ ಸಂಪದ್ಭರಿತ ಚಟುವಟಿಕೆಗಳನ್ನು ನೀಡಲಾಗುತ್ತದೆ. ಪರಿಹಾರ ಬೋಧನೆ ಪಡೆಯುವ ಗುಂಪು ಪ್ರಾವೀಣ್ಯತೆ ಸಾಧಿಸಿದ ನಂತರವೇ ಹೊಸ ಘಟಕವನ್ನು ಇಡೀ ತರಗತಿಯು ಕಲಿಯಲು ಪ್ರಾರಂಭಿಸುತ್ತದೆ.

Digitised by Bharatavani, CIIL

### ಕಾರ್ಯಾನುಗತ (ಯೋಜಿತ) ಬೋಧನೆ

ಕಾರ್ಯಾನುಗತ ಬೋಧನೆಯು ಬೋಧನಾ ಕಲಿಕಾ ಪ್ರಕ್ರಿಯೆಯ ಒಂದು ಪರಿಣಾಮಕಾರಿ ಅನ್ವೇಷಣೆಯಾಗಿದೆ. ಸ್ವ ಕಲಿಕೆ ಮತ್ತು ತರಗತಿ ಬೋಧನೆಗೆ ಉಪಯುಕ್ತವಾದ, ವ್ಯವಸ್ಥಿತವಾದ ವ್ಯಕ್ತಿಗತ ಬೋಧನಾ ತಂತ್ರವಾಗಿದೆ. ಇದನ್ನು ಶಿಕ್ಷಕರ ವರ್ತನಾ ಮಾರ್ಪಾಟಿಗೆ ಪುಷ್ಟೀಕರಣ ನೀಡಲು ಮತ್ತು ಬೋಧನಾ ದಕ್ಷತೆ ಸುಧಾರಿಸಲು ಉಪಯೋಗಿಸಿಕೊಳ್ಳಲಾಗುತ್ತದೆ.

ಕಾರ್ಯಾನುಗತ ಬೋಧನೆಯು ಸ್ಕಿನ್ನರನ ಕ್ರಿಯಾಜನ್ಯ ಅನುಬಂಧನ ಕಲಿಕಾ ತತ್ವಗಳಿಗೆ ಅನುಗುಣವಾಗಿ ರೂಪಿಸಿದ ಬೋಧನಾ ಕಲಿಕಾ ಮಾದರಿಯಾಗಿದೆ. ಇದು ಉನ್ನತ ಮಟ್ಟದ ಉದ್ದೀಪನ ನಿಯಂತ್ರಣ ಮತ್ತು ತಕ್ಷಣದ ಪುನರ್ಬಲನವನ್ನು ನೀಡುವ ತತ್ವಕ್ಕೆ ಅನುಗುಣವಾಗಿ ರಚನೆಯಾಗಿದೆ. ಇದು ಚಿಕ್ಕ ಹಂತಗಳು, ಕ್ರಿಯಾಶೀಲ, ಪ್ರತಿಕ್ರಿಯೆ, ತಕ್ಷಣ ಪುನರ್ಬಲನ ಸ್ವ-ವೇಗ ಮತ್ತು ವಿದ್ಯಾರ್ಥಿ ಪರೀಕ್ಷೆಗಳೆಂಬ ತತ್ವಗಳನ್ನು ಒಳಗೊಂಡಿದೆ.

ಇದರಲ್ಲಿ ಪ್ರಮುಖವಾಗಿ ಮೂರು ವಿಧಗಳನ್ನು ಕಾಣಬಹುದು. ಅವುಗಳೆಂದರೆ ರೇಖಾತ್ಮಕ, ಶಾಖೀಕೃತ ಮತ್ತು ಮೆಥೆಟಿಕ್ಸ್ ಕಾರ್ಯಾನುಗತ ಬೋಧನೆ.

ಸ್ಕಿನ್ನರನ ಮೂಲಭೂತ ಕಾರ್ಯಾನುಗತ ಬೋಧನೆಯಲ್ಲಿ ಮಾರ್ಪಾಟುಗಳಾಗಿದ್ದರೂ, ಎಲ್ಲ ರೀತಿಯ ಕಾರ್ಯಾನುಗತ ಬೋಧನೆಯು ಮೂರು ಅವಶ್ಯಕ ಲಕ್ಷಣಗಳನ್ನು ಉಳಿಸಿಕೊಂಡಿದೆ. ಅವುಗಳೆಂದರೆ:

1. ಅಂಶಗಳ ಕ್ರಮಾನುಗತ ಜೋಡಣೆ. ಈ ಅಂಶಗಳು ಪ್ರಶ್ನೆಗಳು ಅಥವಾ ಹೇಳಿಕೆಗಳ ರೂಪದಲ್ಲಿರಬಹುದು. ಈ ಪ್ರಶ್ನೆಗಳಿಗೆ ವಿದ್ಯಾರ್ಥಿ ಪ್ರತಿಕ್ರಿಯಿಸಬೇಕಾಗುತ್ತದೆ.
2. ವಿದ್ಯಾರ್ಥಿಯ ಪ್ರತಿಕ್ರಿಯೆಯು ಖಾಲಿ ಸ್ಥಳ ತುಂಬುವುದು. ಪ್ರಶ್ನೆಗೆ ಉತ್ತರವನ್ನು ಪುನರ್ ಸ್ಮರಿಸುವುದು. ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡುವುದು, ಸಮಸ್ಯೆ ಪರಿಹರಿಸುವುದು ಯಾವುದೇ ರೂಪದಲ್ಲಿ ಇರಬಹುದು.
3. ತಕ್ಷಣದ ಪುನರ್ಬಲನಕ್ಕೆ ಅವಕಾಶವನ್ನು ನೀಡುವುದು.

ಒಟ್ಟಾರೆಯಾಗಿ ಕಾರ್ಯಾನುಗತ ಬೋಧನೆಯು ಪುನರ್ಬಲನದ ಮತ್ತು ಕ್ರಿಯಾಜನ್ಯ ಅನುಬಂಧ ಕಲಿಕಾ ತತ್ವಗಳ ಆಧಾರದ ಮೇಲೆ ವಿಷಯ ವಸ್ತುವನ್ನು ಚಿಕ್ಕ ಕ್ರಮಾನುಗತ ತಾರ್ಕಿಕ ಭಾಗಗಳಾಗಿ ವಿಂಗಡಿಸಿ ವಿದ್ಯಾರ್ಥಿಗೆ ವ್ಯಕ್ತಿಗತವಾಗಿ ಕಲಿಯಲು ನೀಡುವ ವ್ಯವಸ್ಥಿತವಾಗಿ ಯೋಜಿತವಾದ, ಅನುಭವಾತ್ಮಕವಾಗಿ ಸ್ಥಾಪಿತವಾದ ಮತ್ತು ಪರಿಣಾಮಕಾರಿ ನಿಯಂತ್ರಿತ ಸ್ವ-ಬೋಧನಾ ತಂತ್ರವಾಗಿದೆ ಎಂದು ಹೇಳಬಹುದು.

–ಎಂ.ಪು.

## ಬೋಧನೆಯಲ್ಲಿ ಗ್ರಂಥಾಲಯಗಳ ಪಾತ್ರ

ಶಿಕ್ಷಣ ಸಮಾಜದ ಸಂಸ್ಕೃತಿಯ ಪ್ರತೀಕ. ಸಮಾಜದಲ್ಲಿ ಶಿಕ್ಷಣವಿಲ್ಲದ ವ್ಯಕ್ತಿ ಪಶುವಿಗೆ ಸಮಾನವೆಂಬ ಅಭಿಪ್ರಾಯವಿದೆ. ಆದ್ದರಿಂದ ಸಮಾಜದ ಪ್ರತಿಯೋರ್ವ ವ್ಯಕ್ತಿಯನ್ನು ಸುಶಿಕ್ಷಿತರನ್ನಾಗಿಸಬೇಕಾಗಿದೆ. ಶಿಕ್ಷಣ ಯಶಸ್ವಿಯಾಗಲು ಹತ್ತು ಹಲವಾರು ಸಂಗತಿಗಳು ಅಗತ್ಯ. ಅವುಗಳಲ್ಲಿ ಗ್ರಂಥಾಲಯವೂ ಒಂದಾಗಿದೆ. ಶಿಕ್ಷಣ ಮತ್ತು ಗ್ರಂಥಾಲಯಗಳೆರಡೂ ಬೇರ್ಪಡಿಸಲಾರದ ಅವಿನಾಭಾವ ಸಂಬಂಧವನ್ನು ಹೊಂದಿವೆ. ಶಿಕ್ಷಣವಿಲ್ಲದೆ ಗ್ರಂಥಾಲಯವಿಲ್ಲ. ಅಂತೆಯೇ ಗ್ರಂಥಾಲಯಗಳಿಲ್ಲದೆ ಶಿಕ್ಷಣ ಸಾಧ್ಯವಿಲ್ಲ. ಗ್ರಂಥಾಲಯಗಳ ಅಸ್ತಿತ್ವವಿಲ್ಲದೆ ಶಿಕ್ಷಣ ಉಳಿಯಲಾರದು, ಹಾಗೆಯೇ ಗ್ರಂಥಾಲಯ ಶಿಕ್ಷಣವನ್ನು ನೀಡದಿದ್ದಲ್ಲಿ ಅದಕ್ಕೆ ಅರ್ಥವೇ ಇಲ್ಲವೆಂದು ಶಿಕ್ಷಣ ತಜ್ಞರು ಅಭಿಪ್ರಾಯಿಸಿದ್ದಾರೆ.

ಒಂದು ಉತ್ತಮ ಸುಸಜ್ಜಿತ ಗ್ರಂಥಾಲಯ ಸಮಾಜದ ಜನತೆಯನ್ನು ಬೌದ್ಧಿಕವಾಗಿ ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಮುಗಿಲೆತ್ತರಕ್ಕೆ ತೆಗೆದುಕೊಂಡು ಹೋಗುವ ಕೆಲಸ ಮಾಡುವುದು. ಈ ಹಿನ್ನೆಲೆಯಲ್ಲಿಯೇ ಎನ್ಕೆ ಅವರು ಈ ಮುಂದಿನಂತೆ ತಿಳಿಸಿರುವರು.

"ಗ್ರಂಥಾಲಯಗಳು ಸರ್ವತೋಮುಖವಾಗಿ ಬೆಳೆಯುತ್ತಿರುವ ಜಗತ್ತಿನ ಜ್ಞಾನಕೋಶಗಳು: ಜೀವನಾಡಿಗಳು: ಗ್ರಂಥಾಲಯಗಳಿರದ ದೇಶವುಂಟೇ? ಹಾಗೇನಾದರೂ ಇದ್ದರೆ ಅದು ಜೀವಂತ ಇದ್ದಿರಲಾರದು. ಯಾವುದೇ ಸರ್ಕಾರಕ್ಕೆ ಕೇಂದ್ರ ಗ್ರಂಥಾಲಯಗಳೆಂದರೆ ಆಯಾ ಸರ್ಕಾರದ ಸಾಂಸ್ಕೃತಿಕ ಮೌಲ್ಯಮಾಪನ ಮಾಡುವ ಅಳತೆಗೋಲುಗಳಿದ್ದಂತೆ.

ಸಮಾಜದಲ್ಲಿ ಜ್ಞಾನ ಹಾಗೂ ತಿಳಿವಳಿಕೆಯನ್ನು ಬಯಸಿದ ವ್ಯಕ್ತಿಗಳಿಗೆ ಅದನ್ನು ಸುರಿಯುವ ಕಾಲವೊಂದಿತ್ತು. ಆದರೆ ಇಂದು ನಾವು ಬದಲಾಗುತ್ತಿರುವ ಆಧುನಿಕ ಕಾಲ ವ್ಯವಸ್ಥೆಯಲ್ಲಿದ್ದು ವಿದ್ಯಾರ್ಥಿಗಳಿಗೆ ಯಾವುದೇ ವಿಷಯವನ್ನು ಬೋಧಿಸುವ ಪೂರ್ವ ಏನು ಮತ್ತು ಹೇಗೇ ಎಂಬ ಪ್ರಶ್ನೆಗಳನ್ನು ಅಧ್ಯಾಪಕರು ಸ್ವತಃ ತಾವೇ ಹಾಕಿಕೊಂಡು ಬೋಧಿಸಬೇಕಾದ ಸನ್ನಿವೇಶವೊದಗಿದೆ. ಬದಲಾವಣೆಯು ಜಗದ ನಿಯಮ. ಬದಲಾದ ಕಾಲಕ್ಕೆ ಅನುಗುಣವಾಗಿ ಬೋಧನಾ ಕಾರ್ಯವು ಸುಧಾರಿಸಬೇಕಾಗಿದೆ.

ಬೋಧನೆ ಒಂದು ಕಲೆ. ಆ ಬೋಧನೆಯು ಯಶಸ್ವಿಯಾಗಿ ಸಾಗಲು ಅದಕ್ಕೆ ಅನೇಕ ಪೂರಕವಾದಂತಹ ಅಂಶಗಳಿವೆ. ಯಶಸ್ವಿ ಬೋಧನೆಗೆ ಪ್ರಮುಖವಾಗಿ ಭಾಷೆ, ವಿಷಯ, ಸಮರ್ಥ ಸಂವಹನ ಕಲೆ, ಹಾವ-ಭಾವಗಳು ಧ್ವನಿಯ ಏರಿಳಿತ, ಪೂರಕ ಸಾಮಗ್ರಿಗಳಾದ ಸಿ.ಡಿ, ಡಿ.ವಿಡಿ, ಎಲ್.ಸಿ.ಡಿ ಪ್ರೊಜೆಕ್ಟರ್, ಗಣಕ ಯಂತ್ರ, ಉತ್ತಮ ಪರಿಸರ ಮತ್ತು ಕೇಳುವಂತಹ ಆಸಕ್ತಿಪೂರಿತ ವಿದ್ಯಾರ್ಥಿಗಳಿರಬೇಕು. ಇವೆಲ್ಲಕ್ಕಿಂತಲೂ ಮಿಗಿಲಾಗಿ ಬೋಧನಾ ಕಾರ್ಯಕ್ಕೆ ಸಿದ್ಧತೆ ಮಾಡಿಕೊಳ್ಳಲು ಸುಸಜ್ಜಿತ ಗ್ರಂಥಾಲಯವಿರಬೇಕು. ಇದು ಬೋಧನೆಗೆ ಬೇಕಾದ ಸರ್ವರೀತಿಯ ಮಾಹಿತಿ ನೀಡಿ ಜ್ಞಾನ ವಿಸ್ತಾರವಾಗುವಂತೆ ಮಾಡುತ್ತದೆ.

### ಬೋಧನೆಯ ಅರ್ಥ

ಬೋಧನೆಯು ಹಲವಾರು ಅರ್ಥಗಳನ್ನು ಹೊಂದಿದೆ ಕಲಿಯುವಂತಹ ಅಪೇಕ್ಷೆಯುಳ್ಳ ವಿದ್ಯಾರ್ಥಿಗೆ ಪ್ರೋತ್ಸಾಹಿಸಲು ಶಿಕ್ಷಕನು ನೀಡುವ ಮಾರ್ಗದರ್ಶನ, ನಿರ್ದೇಶನ ಹಾಗೂ ಪ್ರಚೋದನೆಯನ್ನು ಬೋಧನೆ ಎನ್ನುವರು.

### ಗ್ರಂಥಾಲಯವೆಂದರೆ ಮುಖ್ಯವಾಗಿ

1. ಅಧ್ಯಯನ, ಸಂಶೋಧನೆ, ಪರಾಮರ್ಶನೆ ಮತ್ತು ಮನರಂಜನೆಗಾಗಿ ಇರುವ ಪುಸ್ತಕಗಳ ಸಂಗ್ರಹ

ಬೋಧನೆಗೂ ಮತ್ತು ಗ್ರಂಥಾಲಯಕ್ಕೂ ಅತ್ಯಂತ ನಿಕಟವಾದಂತಹ ಸಂಬಂಧವಿದೆ. ಶತಶತಮಾನಗಳನ್ನು ಸೇರಿಸುವ ಸೇತುವೆಗಳೆಂದರೆ ಗ್ರಂಥಾಲಯಗಳು ಬುದ್ಧಿಶಕ್ತಿಯ ಅಭಿವೃದ್ಧಿಯ ಸಾಧನಗಳೆಂದರೆ ಗ್ರಂಥಗಳು, ಇವು ಬೋಧನಾ ಕಾರ್ಯದಲ್ಲಿ ತೊಡಗಿರುವ ಶಿಕ್ಷಕರ ಅರಿವು ಮತ್ತು

Digitised by Bharatavani, CIIL

ಆಲೋಚನೆಗಳನ್ನು ಹೊರಹೊಮ್ಮಿಸುತ್ತವೆ. ಅವರ ಜ್ಞಾನ ಕೋಶದ ವಿಸ್ತಾರ ಹೆಚ್ಚುವಂತೆ ಮಾಡುತ್ತವೆ. ಬೋಧನಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕರ ಸತತ ಗ್ರಂಥಾಭ್ಯಾಸದಿಂದ ಅವರ ಬುದ್ಧಿಶಕ್ತಿ ಚುರುಕಾಗಿ, ಅಂತರಾಳ ಗಾಢವಾಗಿ ಇದರ ಬೋಧನೆಯ ಲಾಭ ವಿದ್ಯಾರ್ಥಿಗಳಿಗಾಗುತ್ತದೆ. ಈ ಹಿನ್ನೆಲೆಯಿಂದಾಗಿ ಗ್ರಂಥ/ಗ್ರಂಥಾಲಯಗಳು ಶಿಕ್ಷಕರ ಬೋಧನೆಯ ಬೆಳಕಾಗಿವೆ. ಹಾಗೆಯೇ ಇವು ಪರಿಣಾಮಕಾರಿ ಬೋಧನೆಗೆ ಅಸ್ತ್ರಗಳಿದ್ದಂತೆ. ಗ್ರಂಥಾಲಯಗಳ ಸಹಾಯವಿಲ್ಲದೆ ಬೋಧನಾ ಕಾರ್ಯ ಅಪೂರ್ಣವೆಂದೇ ಭಾವಿಸಬೇಕಾಗುತ್ತದೆ.

**ಯಶಸ್ವಿ ಬೋಧನಾ ಕಾರ್ಯಕ್ಕೆ ಗ್ರಂಥಾಲಯಗಳಲ್ಲಿ ದೊರೆಯುವ ಸಾಮಗ್ರಿಗಳು**

ಗ್ರಂಥಾಲಯಗಳಲ್ಲಿ ಹತ್ತು ಹಲವಾರು ರೀತಿಯ ಸಾಮಗ್ರಿಗಳು ದೊರೆಯುವುವು. ಅವುಗಳಲ್ಲಿ ಪ್ರಮುಖವಾದವು ಈ ಮುಂದಿನಂತಿವೆ.

1. ಹಲವಾರು ರೀತಿಯ ಗ್ರಂಥಗಳು
2. ನಿಯತ ಕಾಲಿಕೆಗಳು
3. ಸಂಶೋಧನಾ ಕೃತಿಗಳು
4. ದಿನ ಪತ್ರಿಕೆ, ವಾರ ಪತ್ರಿಕೆ, ಮಾಸಿಕ, ತ್ರೈಮಾಸಿಕ ಪತ್ರಿಕೆ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪತ್ರಿಕೆಗಳು.
5. ವೈವಿಧ್ಯಮಯ ಭೂಪಟಗಳು, ಅಟ್ಲಾಸ್‌ಗಳು, ಗೋಳಗಳು
6. ಚಿತ್ರ ಪಟಗಳು, ರೇಖಾ ನಕ್ಷೆಗಳು ಮತ್ತು ಕಾಲ ರೇಖಾ ಪಟಗಳು
7. ತಾಳೆಗರಿಗಳು, ತಾಮ್ರಪತ್ರಗಳು ಶಾಸನ ಪ್ರತಿ, ದಾನ ಪತ್ರ ಮತ್ತು ಹಸ್ತಪತ್ರಿಗಳು.
8. ಮೈಕ್ರೋಫಿಲ್ಮ್, ಮೈಕ್ರೋಫಿಶ್ (micro fiche), ಸಿ.ಡಿ, ಡಿ.ವಿ.ಡಿ, ವೀಡಿಯೋ ಟೇಪ್, ಗಣಕ ಯಂತ್ರ ಮತ್ತು ಎಲ್.ಸಿ. ಡಿಪ್ರೊಜೆಕ್ಟರ್, ಇಂಟರ್ನೆಟ್ ಸೌಲಭ್ಯ ಮತ್ತು ಅದೃಶ್ಯ ಗ್ರಂಥಾಲಯ (ಡಿಜಿಟಲ್ ಲೈಬ್ರರಿ).
9. ವಿಶ್ವಕೋಶ, ಶಬ್ದ ಕೋಶ/ನಿಘಂಟು
10. ಪೂರಕ ಮತ್ತು ಸಹಾಯಕ ವಾಚನ ಸಾಮಗ್ರಿಗಳು – ಇತ್ಯಾದಿಗಳು.

ಗ್ರಂಥಗಳು ಜ್ಞಾನಭಂಡಾರದ ದೇಗುಲಗಳಿದ್ದಂತೆ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಮಾಹಿತಿಗಳನ್ನೊಳಗೊಂಡಂತೆ ಬೋಧನೆಗೆ ಬೇಕಾದ ಸಂಪೂರ್ಣ ಮಾಹಿತಿಯನ್ನು ಇವು ನೀಡುವುದು. ಈ ಮಾಹಿತಿಗಳನ್ನು ಶಿಕ್ಷಕರು ಜಾಣ್ಮೆಯಿಂದ ಆಯ್ದುಕೊಳ್ಳಬೇಕು. ಗ್ರಂಥಗಳನ್ನು ಆಯ್ಕೆಮಾಡಿಕೊಳ್ಳುವಾಗ ಲೇಖಕರ ಹೆಸರು ಗೊತ್ತಿದ್ದರೆ ಅವರ ಹೆಸರು, ಆಧಾರಿತ ಗ್ರಂಥಗಳನ್ನು, ಕೃತಿಯ ಶಿರೋನಾಮೆ ಗೊತ್ತಿದ್ದರೆ ಕೃತಿಯ ಶಿರೋನಾಮೆ ಆಧಾರಿತ ಗ್ರಂಥಗಳನ್ನು ಕ್ಯಾಟಲಾಗುಗಳಿಂದ ಆಯ್ಕೆ ಮಾಡಿಕೊಂಡು ಸುಲಭವಾಗಿ ಅಧ್ಯಯನ ಮಾಡಬಹುದಾಗಿದೆ.

ಬೋಧನೆಗೆ ಗ್ರಂಥಾಲಯದಲ್ಲಿ ದೊರೆಯುವ ಎಲೆಕ್ಟ್ರಾನಿಕ್ ಮಾಧ್ಯಮಗಳೂ ಸಾಕಷ್ಟು ಅನುಕೂಲಗಳನ್ನು ಕಲ್ಪಿಸಿವೆ ಎಂದರೆ ಅತಿಶಯೋಕ್ತಿಯಲ್ಲ. ಕಾರಣ ಬದಲಾದ ಕಾಲಕ್ಕೆ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ಅನುಗುಣವಾಗಿ ಪ್ರತಿದಿನ ಪಠ್ಯವಸ್ತುವಿನ ವಿಷಯದಲ್ಲಿ ಬದಲಾವಣೆಗಳಾಗುತ್ತಿರುತ್ತವೆ. ಅಲ್ಲಿಯ ನೂತನ ಸಂಗತಿಗಳಿಗೆ ಸಂಬಂಧಿಸಿದಂತೆ ಎಲೆಕ್ಟ್ರಾನಿಕ್ ಮಾಧ್ಯಮದಿಂದ ಬಿತ್ತರವಾಗುವ ಪಾಠಗಳನ್ನು ವೀಕ್ಷಿಸಿ ಮತ್ತು ಆಲಿಸಿ ಬೋಧನೆಯನ್ನು ಪರಿಣಾಮಕಾರಿಯಾಗಿಸಿಕೊಳ್ಳಬಹುದಾಗಿದೆ. ಸರ್ಕಾರ ಶಿಕ್ಷಣದ ಪಾಠಗಳನ್ನು ಬಿತ್ತರಿಸುವುದಕ್ಕಾಗಿಯೇ ವಿಶೇಷ ಚಾನಲ್ಲುಗಳನ್ನು ಜಾರಿಗೆ ತಂದಿದೆ.

ಇಂಟರ್‌ನೆಟ್ ಮತ್ತು ವಿದ್ಯುನ್ಮಾನ (ಡಿಜಿಟಲ್ ಲೈಬ್ರರಿ) ಬಳಕೆ ಮಾಡಿಕೊಂಡು ಯಶಸ್ವಿ ಬೋಧನೆಗೆ ಬೇಕಾದ ಅಂತರ್‌ಜಾಲದ ಮೂಲಕ ಸರ್ವರೀತಿಯ ಜ್ಞಾನ ಕೌಶಲಗಳನ್ನು ಪಡೆಯಬಹುದಾಗಿದೆ. ಇದರ ಸಹಾಯದಿಂದ ನೂತನ ಪುಸ್ತಕಗಳು, ಹೊಸ ಮತ್ತು ಹಳೆಯ ನಿಯತಕಾಲಿಕೆಗಳು, ಸಂಶೋಧನಾ ಕೃತಿಗಳು ಮುಂತಾದವುಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ಶಿಕ್ಷಕರ ಯಶಸ್ವಿ ಬೋಧನಾ ಸಿದ್ಧತೆಗೆ ಗ್ರಂಥಾಲಯಗಳ ಸಂಪರ್ಕದಿಂದ ಆಗುವ ಅನುಕೂಲಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಸಂಪನ್ಮೂಲಗಳ ಹುಡುಕಾಟದಿಂದ ಮುಕ್ತಿ ದೊರೆಯುವುದು.
2. ಸಮಯದ ಉಳಿತಾಯವಾಗುತ್ತದೆ.
3. ಪೂರ್ಣ ಪ್ರಮಾಣದಲ್ಲಿ ಸಿದ್ಧತೆಗೆ ಅವಕಾಶವಾಗುವುದು.
4. ಹಣದ ಮಿತವ್ಯಯವಾಗುವುದು:
5. ವಿವಿಧ ಲೇಖಕರ ಕೃತಿಗಳು ಏಕ ಕಾಲಕ್ಕೆ ದೊರೆಯುತ್ತವೆ:
6. ವಿವಿಧ ಲೇಖಕರ ಕೃತಿಗಳು ಏಕ ಕಾಲಕ್ಕೆ ದೊರೆಯುವುದರಿಂದ ಅವುಗಳ ಪರಾಮರ್ಶೆ ಮಾಡಿ ಸೂಕ್ತ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಸಹಾಯಕವಾಗುವುದು.
7. ವಿಷಯವನ್ನು ತಾರ್ಕಿಕವಾಗಿ, ಮನೋವೈಜ್ಞಾನಿಕವಾಗಿ ಮತ್ತು ಕಾಲಾನುಕ್ರಮಕ್ಕೆ ಅನುಗುಣವಾಗಿ ಸಂಘಟನೆ ಮಾಡಿಕೊಳ್ಳಲು ಸಹಾಯಕವಾಗಿದೆ.
8. ವಿವಿಧ ವಿಷಯಕ್ಕೆ ಪೂರಕ ಸಾಮಗ್ರಿಗಳ ಜ್ಞಾನ ದೊರೆಯುತ್ತದೆ.
9. ಮಾನಸಿಕ ನೆಮ್ಮದಿ ಮತ್ತು ದೃಢ ವಿಶ್ವಾಸ ಮೂಡುವುದು.
10. ವೈವಿಧ್ಯಮಯ ಬೋಧನಾ ವಿಧಾನ ಮತ್ತು ತಂತ್ರಗಳನ್ನು ತಿಳಿಯಲು ಸಹಾಯಕವಾಗಿದೆ.
11. ಶಿಕ್ಷಕರ ಆಚಾರ, ವಿಚಾರ ಮತ್ತು ಉಚ್ಚಾರದಲ್ಲಿ ಸುಧಾರಣೆಯಾಗಿ ಯಶಸ್ವಿ ಬೋಧನೆಗೆ ಸಹಾಯಕವಾಗಿದೆ.
12. ಶಿಕ್ಷಕರ ಯಶಸ್ವಿ ಬೋಧನಾ ಸಿದ್ಧತೆಯು ಉತ್ತಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಾಯಕವಾಗಿದೆ.

ಬೋಧನಾ ಕಾರ್ಯ ಅತ್ಯಂತ ಪವಿತ್ರವಾದುದು. ಬೋಧನಾ ಕಾರ್ಯಕ್ಕೆ ತೊಡಗಿಸಿಕೊಳ್ಳುವ ವ್ಯಕ್ತಿಯು ಶ್ರದ್ಧೆ, ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಕಾರ್ಯ ನಿರ್ವಹಿಸಬೇಕಾಗಿದೆ. ಅವರ ಈ ಪವಿತ್ರ ಕಾರ್ಯ ಯಶಸ್ವಿಯಾಗಿ ಸಾಗಲು ಶಿಕ್ಷಕರಿಗೆ ಗ್ರಂಥಾಲಯಗಳ ಸಂಪರ್ಕ ಅತ್ಯಗತ್ಯ. ಆದ್ದರಿಂದ ಶಿಕ್ಷಣ ಮತ್ತು ಗ್ರಂಥಾಲಯಗಳು ಯಶಸ್ವಿ ಬೋಧನೆಗೆ ಸಂಪರ್ಕ ಸೇತುವೆಯಾಗಿದೆ.

–ಎಂ.ಸಿ. ಮೂ

## ಬೋಧನೋದ್ದೇಶಗಳ ವರ್ಗೀಕರಣ

ದಿನನಿತ್ಯದ ಕೆಲಸಗಳನ್ನು ಕೈಗೊಳ್ಳುವಾಗ ಅವುಗಳ ಉದ್ದೇಶದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ. ಕೆಲಸದ ಪರಿಣಾಮ ಉದ್ದೇಶದ ಸ್ಪಷ್ಟತೆಯನ್ನು ಅವಲಂಬಿಸಿರುತ್ತದೆ. ಹಾಗೆಯೇ, ಶಿಕ್ಷಣ ಕ್ಷೇತ್ರದಲ್ಲಿಯೂ ಅದರ ಗುರಿಗಳು ಹಾಗೂ ಉದ್ದೇಶಗಳ ಸ್ಪಷ್ಟ ಅರಿವು ಅಗತ್ಯ. ಶಿಕ್ಷಣ

Digitised by Bharatavani, CIIL

ಧ್ಯೇಯವು ಪ್ರತಿಯೊಬ್ಬರಲ್ಲಿಯೂ ಪರಿಪೂರ್ಣತೆಯನ್ನು ಸಾಧಿಸುವಂತೆ ಮಾಡಿ ಜೀವನದ ಪ್ರತಿಯೊಂದು ಹಂತದಲ್ಲಿಯೂ ಸಫಲತೆಯನ್ನು ಪಡೆಯುವುದಾಗಿದೆ. 'ಶಿಕ್ಷಣದ ಮುಖಾಂತರ ವ್ಯಕ್ತಿಯಲ್ಲಿ ಯಾವುದೆಲ್ಲಾ ಅಪೇಕ್ಷಿತ ಬದಲಾವಣೆಗಳನ್ನು ತರಲು ಪ್ರಯತ್ನಿಸಬಹುದೋ ಅಂತಹ ಬದಲಾವಣೆಗಳೇ ಶೈಕ್ಷಣಿಕ ಉದ್ದೇಶಗಳು' ಎಂದಿದ್ದಾರೆ ಪ್ರಸ್ಟ್‌ರವರು. ಬ್ಲೂಮ್‌ರವರ ಪ್ರಕಾರ, ಶೈಕ್ಷಣಿಕ ಉದ್ದೇಶಗಳೆಂದರೆ ವಿದ್ಯಾರ್ಥಿಗಳಲ್ಲಿ ಕಲಿಕೆಯ ನಂತರ ಕಂಡು ಬರುವ ವಿಶಿಷ್ಟ ಬದಲಾವಣೆ ಹಾಗೂ ಅವಶ್ಯಕವಾಗಿ ಆಗಬೇಕಾದ ಬದಲಾವಣೆಗಳು. ಇವು ಅವರ ವರ್ತನೆ, ಸಾಧನೆ, ವಿಚಾರಧಾರೆ, ಅನಿಸಿಕೆ, ಸ್ವಭಾವ ಮತ್ತು ಸಂದರ್ಭಗಳಲ್ಲಿ ಎದ್ದು ಕಾಣುತ್ತವೆ. ಬೋಧನೋದ್ದೇಶಗಳು ಬೋಧನೆಯ ಮೂರ್ತ ಹೇಳಿಕೆಗಳಾಗಿದ್ದು ಗುರಿಯೆಡೆಗೆ ನಿರ್ದೇಶಿತವಾಗಿವೆ. ಶೈಕ್ಷಣಿಕ ಉದ್ದೇಶಗಳು ಹೇಳಿಕೆಗಳಾಗಿದ್ದು ವಿಶಾಲವಾದವು ಹಾಗೂ ತಾತ್ವಿಕವಾದವು. ಬೋಧನಾ ಉದ್ದೇಶಗಳು ನಿರ್ದಿಷ್ಟವಾದವು ಮತ್ತು ಮನೋವೈಜ್ಞಾನಿಕ ಸ್ವಭಾವವುಳ್ಳವು. ಬೋಧನೋದ್ದೇಶಗಳನ್ನು ಶೈಕ್ಷಣಿಕ ರಂಗದಲ್ಲಿ 'ಆದರ್ಶಗಳು' ಎನ್ನಲಾಗುವುದು. ಸರಳತೆಯಿಂದ ಕ್ಲಿಷ್ಟತೆಗೆ ಹಾಗೂ ಮೂರ್ತದಿಂದ ಅಮೂರ್ತದೆಡೆಗೆ ವಿವಿಧ ಗುಂಪುಗಳಾಗಿ ವರ್ಗೀಕರಿಸಬಹುದಾಗಿದೆ.

### ಬೋಧನೋದ್ದೇಶಗಳ ವರ್ಗೀಕರಣ

ಬೋಧನೆಯು ಫಲಪ್ರದವಾಗಲಿಕ್ಕೆ ಸೂಕ್ತ ಬೋಧನೋದ್ದೇಶಗಳು ಅಗತ್ಯವೇ ಸರಿ. ಈ ನಿಟ್ಟಿನಲ್ಲಿ ಅಮೆರಿಕಾದ ಬೋಸ್ಟನ್ ನಗರದಲ್ಲಿ ಶಿಕ್ಷಣತಜ್ಞರ ಔಪಚಾರಿಕ ಸಭೆಯಲ್ಲಿ ವರ್ಗೀಕರಣ ಪ್ರಸ್ತಾಪ 1948ರಲ್ಲಿ ಆಯಿತು. ನಂತರದಲ್ಲಿ ಯಶಸ್ಸು ಕಂಡವರು ಅಮೆರಿಕದವರೇ ಆದ ಬೆಂಜಮಿನ್ ಎಸ್. ಬ್ಲೂಮ್ ಮತ್ತು ಇತರೇ ಮನೋವಿಜ್ಞಾನಿಗಳು ಹಾಗೂ ಶಿಕ್ಷಣ ತಜ್ಞರು. ಬ್ಲೂಮ್‌ನ ವರ್ಗೀಕರಣವು 1956ರಲ್ಲಿ ಮೊದಲಬಾರಿಗೆ ಪ್ರಕಟವಾಯಿತು. ಇದು ಸುಮಾರು 20 ಭಾಷೆಗಳಿಗೆ ಅನುವಾದವಾಗಿದೆ. ಇಂದಿಗೂ ಇದನ್ನು ಪಠ್ಯವಸ್ತುವನ್ನು ಪ್ರಭಾವಿಸುವ ಗುರುತರ ಬರವಣಿಗೆಯೆಂದು ಕರೆಯಲಾಗುತ್ತದೆ.

ಬೆಂಜಮಿನ್ ಎಸ್. ಬ್ಲೂಮ್

ಬೆಂಜಮಿನ್ ಎಸ್. ಬ್ಲೂಮ್ (1913–99) 1935ರಂದು ಪೆನ್ಸಿಲ್ವಿನಿಯಾ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದರು. 1940ರಲ್ಲಿ ಚಿಕಾಗೋ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗಕ್ಕೆ ಸೇರಿದರು. 1942ರಲ್ಲಿ ಪಿಹೆಚ್.ಡಿ. ಪದವಿಯನ್ನು ಪಡೆದರು. ಆಗಲೇ ಪರೀಕ್ಷೆಗೆ ಸಂಬಂಧಿಸಿದಂತೆ ವಿಶಿಷ್ಟ ಅಧ್ಯಯನ ಮಾಡಿದರು. ಅವರ ಗುರು ರಾಲ್ಫ್‌ಟೈಲರ್ ಜೊತೆಗೂಡಿ ಬೋಧನಾ ನಿರ್ದಿಷ್ಟತೆಗಳನ್ನು ವ್ಯವಸ್ಥೆಗೊಳಿಸಲಿಕ್ಕೆ ಪ್ರಯತ್ನಿಸಿದರು. ಬರೀ ಮಾಹಿತಿಯ, ಸತ್ಯಾಂಶಗಳ ವರ್ಗಾವಣೆ ಹಾಗೂ ಸ್ಮರಣೀಯವನ್ನಷ್ಟೇ ಮಾಡದೆ ಪ್ರಾವೀಣ್ಯತೆಗೆ ಗಮನಹರಿಸಲಿಕ್ಕೆ ಪ್ರಯತ್ನಿಸಿದರು. ಬ್ಲೂಮ್‌ಗೆ ಶೈಕ್ಷಣಿಕ ಉದ್ದೇಶಗಳ ವರ್ಗೀಕರಣ ಕಲ್ಪನೆ 1950ರಲ್ಲಿಯೇ ಮೂಡಿತ್ತು.

ಬ್ಲೂಮ್‌ನ ವರ್ಗೀಕರಣವು ಬೋಧನೋದ್ದೇಶಗಳನ್ನು ಮೂರು ವಲಯಗಳಾಗಿ ವರ್ಗೀಕರಿಸುತ್ತದೆ. ಅವುಗಳೆಂದರೆ, ಸಂಜ್ಞಾನಾತ್ಮಕ ವಲಯ, ಭಾವನಾತ್ಮಕ ವಲಯ ಹಾಗೂ ಮನೋಕ್ರಿಯಾಜನ್ಯವಲಯ. ಬ್ಲೂಮ್‌ನ ಬೋಧನೋದ್ದೇಶಗಳನ್ನು ಆಧುನಿಕ ಭಾಷೆಗೆ ಹೊಂದುವ ಹಾಗೆ ಎಲ್ಲರ ಗ್ರಹಿಕೆಗೆ ಅನುಕೂಲವಾಗುವಂತೆ ಈ ಕೆಳಗೆ ಕೊಡಲಾಗಿದೆ.

| ಅ) ಸಂಜ್ಞಾನಾತ್ಮಕ ವಲಯ | ಆ) ಸಂವೇಗಾತ್ಮಕ ವಲಯ | ಇ) ಮನೋಗತ್ಯಾತ್ಮಕ ವಲಯ |
|---|---|---|
| ಜ್ಞಾನ | ಸ್ವೀಕರಿಸುವಿಕೆ | ಅನುಕರಣೆ |
| ಗ್ರಹಿಕೆ | ಅನುಕ್ರಿಯಿಸುವಿಕೆ | ಕೈಚಳಕ |
| ಅನ್ವಯಿಸುವಿಕೆ | ಮೌಲ್ಯೀಕರಣ | ಖಚಿತತೆ |
| ವಿಶ್ಲೇಷಿಸುವಿಕೆ | ಸಂಘಟನೆ | ಸ್ಪಷ್ಟೋಚ್ಚಾರಣೆ |
| ಸಂಶ್ಲೇಷಿಸುವಿಕೆ | ಗುಣ ನಿರ್ಧರಿಸುವಿಕೆ | ಸ್ವಾಭಾವಿಕತೆ |
| ಮೌಲ್ಯಮಾಪನ | | |

### ಅ) ಸಂಜ್ಞಾನಾತ್ಮಕ ವಲಯ

ಬೌದ್ಧಿಕ ಸಾಮರ್ಥ್ಯ, ಜ್ಞಾನ ಅಥವಾ ಆಲೋಚನೆ.

ಸಂಜ್ಞಾನಾತ್ಮಕ ವಲಯಕ್ಕೆ ಸಂಬಂಧಿಸಿದ ಶೈಕ್ಷಣಿಕ ಉದ್ದೇಶಗಳ ವಿಂಗಡಣೆಯನ್ನು 1956ರಲ್ಲಿ ಬೆಂಜಮಿನ್ ಎಸ್.ಬ್ಲೂಮ್‌ರವರು ನೀಡಿದರು. ಶಿಕ್ಷಣದ ದೃಷ್ಟಿಯಿಂದ ಈ ವರ್ಗೀಕರಣ ಅತ್ಯಂತ ಮುಖ್ಯವಾದುದು. ಇದರಲ್ಲಿ ಮೂರ್ತದಿಂದ ಅಮೂರ್ತಕ್ಕೆ ಸಾಗುವ 6 ಅಂಶಗಳಿವೆ.

| ಉದ್ದೇಶಗಳು | ಮಾನಸಿಕ ಪ್ರಕ್ರಿಯೆ ಅಥವಾ ವರ್ತನೆಗಳು |
|---|---|
| **ಜ್ಞಾನ**<br>ಮೊದಲ ಮಟ್ಟವಾಗಿದ್ದು ಜ್ಞಾನ ಸಂಗ್ರಹಣೆಗೆ ಸಂಬಂಧಿಸಿದೆ. | ಸ್ಮರಿಸುವುದು ಮತ್ತು ಗುರುತಿಸುವುದು |
| **ಗ್ರಹಿಕೆ**<br>ಸಂಗ್ರಹಿಸಿದ ಮಾಹಿತಿಯು ಗ್ರಹಿಸಲ್ಪಟ್ಟು ಮುಂದಿನ ಬೌದ್ಧಿಕ ಕಾರ್ಯಗಳಿಗೆ ಪೂರಕ | ಹೆಸರಿಸುವುದು, ವಿವರಿಸುವುದು, ವರ್ಗೀಕರಿಸುವುದು, ಆರಿಸಿಕೊಳ್ಳುವುದು, ಹೋಲಿಸುವುದು, ಸಮರ್ಥಿಸುವುದು, ಪರಿವರ್ತಿಸುವುದು ಇತ್ಯಾದಿ. |

Digitised by Bharatavani, CIIL

| | |
|---|---|
| **ಅನ್ವಯಿಸುವಿಕೆ**<br>ಗ್ರಹಿಸಿದ ಜ್ಞಾನವು ದಿನನಿತ್ಯದ ಹಲವು ಸನ್ನಿವೇಶಗಳಿಗೆ ಅನ್ವಯವಾಗಬೇಕು. ಆಗಲೇ ಅದು ಉಪಯುಕ್ತವೆಂದು ಪರಿಗಣಿಸಲ್ಪಡುತ್ತದೆ. ಇದು ಉನ್ನತ ಮಟ್ಟದ ಅರಿವನ್ನು ನಿರೀಕ್ಷಿಸುತ್ತದೆ. | ನಿರ್ವಹಿಸುವುದು, ಅಂದಾಜು ಮಾಡುವುದು, ಆರಿಸುವುದು, ಶೋಧಿಸುವುದು, ವಿವರಣೆ ಮಾಡುವುದು, ಪರಿವರ್ತಿಸುವುದು, ಊಹಿಸುವುದು, ಪ್ರದರ್ಶಿಸುವುದು, ಬಿಡಿಸುವುದು, ಉಪಯೋಗಿಸುವುದು ಇತ್ಯಾದಿ. |
| **ವಿಶ್ಲೇಷಿಸುವಿಕೆ**<br>ಸೂಕ್ತ ಘಟಕಗಳಾಗಿ ವಿಭಜನೆ, ಸೂಕ್ತ ನಿರ್ಧಾರ ನಿರ್ಣಯಿಸಲಿಕ್ಕೆ ಸಹಾಯಕ. | ಜೋಡಿಸುವುದು, ತೀರ್ಮಾನಿಸುವುದು, ವಿಮರ್ಶಿಸುವುದು, ತುಲನೆ ಮಾಡುವುದು, ಸಮರ್ಥಿಸುವುದು, ವಿಭಜಿಸುವುದು ಇತ್ಯಾದಿ. |
| **ಸಂಶ್ಲೇಷಿಸುವಿಕೆ**<br>ಒಗ್ಗೂಡುವಿಕೆಯ ಹಂತ. ವಿವಿಧ ಮಾಹಿತಿಯ ಘಟಕಗಳನ್ನು ಕ್ರೋಡೀಕರಿಸಿ ಸಮಗ್ರವಾಗಿಸುವುದು. | ನಿರೂಪಿಸುವುದು, ಪ್ರತಿಶೋಧಿಸುವುದು, ಸಂಘಟಿಸುವುದು, ಸಂಕ್ಷೇಪಿಸುವುದು, ಸಾಮಾನ್ಯೀಕರಿಸುವುದು, ಜೋಡಿಸುವುದು, ವ್ಯವಸ್ಥಿಗೊಳಿಸುವುದು ಇತ್ಯಾದಿ. |
| **ಮೌಲ್ಯಮಾಪನ**<br>ಬೆಲೆ ಕಟ್ಟುವಿಕೆ, ಮೌಲ್ಯನಿರ್ಧಾರ ಇಂತಹ ಕಾರ್ಯ ಸಾಗುತ್ತದೆ. | ಅರಿತುಕೊಳ್ಳುವುದು, ವಿವರಿಸುವುದು, ಮೌಲ್ಯಮಾಡುವುದು, ಸಂಬಂಧಿಸುವುದು, ಸಮಾಪ್ತಿಗೊಳಿಸುವುದು, ವಿಮರ್ಶಿಸುವುದು, ಇತ್ಯಾದಿ. |

19ನೇ ಶತಮಾನದ ಮಧ್ಯದಲ್ಲಿ ಬ್ಲೂಮ್‌ನ ವಿದ್ಯಾರ್ಥಿಯಾದ ಲಾರೆನ್ಸ್ ಅಂಡರ್‌ಸನ್ ಎರಡು ಗುರುತರ ಮಾರ್ಪಾಡುಗಳನ್ನು ಸಂಜ್ಞಾನಾತ್ಮಕ ವಲಯದಲ್ಲಿ ತಂದನು. ಈ ಪಂಗಡದಲ್ಲಿ ಬಳಸಿದ್ದ ನಾಮಪದಕ್ಕೆ ಬದಲಾಗಿ ಕ್ರಿಯಾಪದಗಳನ್ನು ತಂದನು ಮತ್ತು ಹಂತಗಳಲ್ಲಿ ನಿಖರತೆ ತರಲು ಸಂಶ್ಲೇಷಣೆ ಹಾಗೂ ಮೌಲ್ಯಮಾಪನ ಹಂತಗಳನ್ನು ಪರಸ್ಪರ ಬದಲಾಯಿಸಿದ. ಹಾಗಾಗಿ ಸಂಶ್ಲೇಷಣೆ ಕೊನೆಯ ಹಂತವಾಯ್ತು. ನಂತರ ಆಂಡರ್‌ಸನ್ ಹಾಗೂ ಕ್ರಥ್ವಾಲ್ (2001) ಕೆಲವೇ ಕೆಲವು ಸಣ್ಣ ಆದರೆ ಗುರುತರ ಮಾರ್ಪಾಡುಗಳನ್ನು ಮಾಡಿದ್ದಾರೆ. ಅವು ಹೀಗಿವೆ:

| ಕ್ರಮ ಸಂಖ್ಯೆ | ಉದ್ದೇಶಗಳು | ಮಾನಸಿಕ ಪ್ರಕ್ರಿಯೆ ಅಥವಾ ವರ್ತನೆಗಳು |
|---|---|---|
| 1. | **ನೆನಪಿಸಿಕೊಳ್ಳುವುದು**<br>ಮಾನಸಿಕ ಸಾಮರ್ಥ್ಯಗಳ ಮಾಹಿತಿ ನೆನಪಿಸಿಕೊಳ್ಳುವುದು | ಗುರುತಿಸುವುದು, ಮರುಕಳಿಸುವುದು, ಹೆಸರಿಸುವುದು, ಹುಡುಕುವುದು ಇತ್ಯಾದಿ. |
| 2. | **ಅರಿಯುವುದು**<br>ಪರಿಕಲ್ಪನೆಗಳನ್ನು ವಿವರಿಸುವುದು | ಅರ್ಥ ನಿರೂಪಣೆ, ಸಾರಾಂಶೀಕರಣ, ವರ್ಗೀಕರಿಸುವುದು, ವಿವರಿಸುವುದು ಇತ್ಯಾದಿ. |
| 3. | **ಅನ್ವಯಿಸುವುದು**<br>ಗೊತ್ತಾದ ಸನ್ನಿವೇಶದಲ್ಲಿ ಮಾಹಿತಿಯನ್ನು ಬಳಕೆ ಮಾಡುವುದು | ಬಳಸುವುದು, ಕಾರ್ಯ ನಿರ್ವಹಿಸುವುದು, ಉಪಯೋಗಿಸುವುದು ಇತ್ಯಾದಿ. |
| 4. | **ವಿಶ್ಲೇಷಿಸುವುದು**<br>ಅರಿವು ಹಾಗೂ ಸಂಬಂಧಗಳನ್ನು ಹುಡುಕಲಿಕ್ಕಾಗಿ ಮಾಹಿತಿಯನ್ನು ಭಾಗಗಳಾಗಿ ಬಿಡಿಸುವುದು. | ಹೋಲಿಸುವುದು, ವ್ಯವಸ್ಥಿಗೊಳಿಸುವುದು, ರಚಿಸುವಿಕೆ, ಪುನರ್ ರಚನೆ, ಆರೋಪಿಸುವುದು, ಸ್ಥೂಲನಕ್ಷೆ ರಚಿಸುವುದು, ಪತ್ತೆಹಚ್ಚುವುದು. ರಚಿಸುವುದು ಹಾಗೂ ಸಮಗ್ರಗೊಳಿಸುವುದು ಇತ್ಯಾದಿ. |
| 5. | **ಮೌಲ್ಯೀಕರಿಸುವುದು**<br>ಒಂದು ಕ್ರಿಯೆಯ ಅಥವಾ ನಿರ್ಧಾರದ ಬಗ್ಗೆ ತೀರ್ಮಾನಿಸುವುದು | ತಪಾಸಣೆ ಮಾಡುವುದು, ಪರಿಹಾರಗಳನ್ನು ಹುಡುಕುವುದು, ಪ್ರಯೋಗಗಳನ್ನು ಹುಡುಕುವುದು, ಪ್ರಯೋಗ ಮಾಡುವುದು, ತೀರ್ಮಾನಿಸುವುದು, ಪರೀಕ್ಷಿಸುವುದು, ಪತ್ತೆ ಹಚ್ಚುವುದು, ಗಮನವಿಟ್ಟು ಕಾಯುವುದು ಇತ್ಯಾದಿ. |
| 6. | **ಸೃಷ್ಟಿಸುವುದು**<br>ವಸ್ತುಗಳನ್ನು ನೋಡುವ ರೀತಿ ಅಥವಾ ಹೊಸ ಕಲ್ಪನೆ ಹೊಸ ಉತ್ಪಾದನೆ ಹೊಂದುವುದು | ಯೋಜಿಸುವಿಕೆ, ಉತ್ಪಾದಿಸುವಿಕೆ, ಅನ್ವೇಷಿಸುವಿಕೆ, ರಚಿಸುವಿಕೆ, ನಿರ್ವಹಿಸುವಿಕೆ ಇತ್ಯಾದಿ. |

Digitised by Bharatavani, CIIL

### ಆ) ಸಂವೇಗಾತ್ಮಕ ವಲಯ

ಭಾವನೆಗಳು, ಸಂವೇಗಗಳು ಮತ್ತು ವರ್ತನೆ ಅಂದರೆ ಮನೋಧೋರಣೆ ಹಾಗೂ ಭಾವ ಇವು ಸಂವೇಗಾತ್ಮಕ ವಲಯದ ಕೌಶಲಗಳು. ಜನರು ಸಂವೇಗಗಳಿಗೆ ಪ್ರತಿಕ್ರಿಯಿಸುವುದನ್ನು ವಿವರಿಸುತ್ತವೆ. ಈ ವಲಯದಲ್ಲಿ ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಸಾಗುವ 5 ಕ್ರಮಬದ್ಧ ಹಂತಗಳಿವೆ.

| ಕ್ರಮ ಸಂಖ್ಯೆ | ಉದ್ದೇಶಗಳು | ಮಾನಸಿಕ ಪ್ರಕ್ರಿಯೆ ಅಥವಾ ವರ್ತನೆಗಳು |
|---|---|---|
| 1. | **ಸ್ವೀಕರಿಸುವಿಕೆ**<br>ಇದು ಮೊದಲ ಹಾಗೂ ಕೆಳಮಟ್ಟದ ಹಂತ. ಗಮನಹರಿಸುವಿಕೆ ಅಗತ್ಯ. | ಕೇಳುವಿಕೆ, ಒಪ್ಪಿಕೊಳ್ಳುವಿಕೆ, ಅನುಸರಿಸುವಿಕೆ, ನಿರೀಕ್ಷಿಸುವಿಕೆ, ಆಯ್ಕೆ ಮಾಡುವಿಕೆ ಇತ್ಯಾದಿ. |
| 2. | **ಅನುಕ್ರಿಯಿಸುವಿಕೆ**<br>ಸಕ್ರಿಯ ಪಾಲ್ಗೊಳ್ಳುವಿಕೆ. ಉದ್ದೀಪಕ ಗಮನಿಸಿ ಅನುಕ್ರಿಯಿಸುವುದು | ಉತ್ತರಿಸುವಿಕೆ, ಹೆಸರಿಸುವಿಕೆ, ಬರೆದುಕೊಳ್ಳುವಿಕೆ, ಒಪ್ಪಿಗೆ ಸೂಚಿಸುವಿಕೆ, ದೇಹದ ಅಂಗಾಂಗಗಳನ್ನು ಬಳಸಿ ಸಂಜ್ಞೆಗಳನ್ನು ಮಾಡುವಿಕೆ. |
| 3. | **ಮೌಲ್ಯ ನಿರ್ಣಯಿಸುವಿಕೆ**<br>ಪಡೆದಂತಹ ವಸ್ತು, ಸನ್ನಿವೇಶ, ಪ್ರಕ್ರಿಯೆ, ಮಾಹಿತಿ ತುಣುಕಿಗೆ ಮೌಲ್ಯವನ್ನು ಆರೋಪಿಸುವುದು, ಹೀಗೆಯೇ ಇರಬೇಕೆಂಬ ಪ್ರಜ್ಞೆ ಬೆಳೆಸಿಕೊಳ್ಳುವುದು. | ಪ್ರತ್ಯೇಕಿಸುವಿಕೆ, ಗುರುತಿಸುವಿಕೆ, ಭಾಗವಹಿಸುವಿಕೆ, ತೀರ್ಮಾನಿಸುವನು, ಒಪ್ಪಿಕೊಳ್ಳುವನು, ನವೀಕರಿಸುವಿಕೆ ಇತ್ಯಾದಿ. |
| 4. | **ಸಂಘಟಿಸುವಿಕೆ**<br>ಹಲವು ಮೌಲ್ಯಗಳು ಮಾಹಿತಿ ಹಾಗೂ ಕಲ್ಪನೆಗಳನ್ನು ಒಟ್ಟಾಗಿಸಿ ತನ್ನ ಮನೋ ರಚನೆಯಲ್ಲಿ ಹೊಂದಿಸಿಕೊಳ್ಳುವುದು, ಕಲಿತಿದ್ದರ ಹೋಲಿಸುವಿಕೆ. ಸಂಬಂಧಿಸುವಿಕೆ ಮತ್ತು ವಿಶದಿಸುವಿಕೆಯನ್ನು ಕೈಗೊಳ್ಳುತ್ತಾನೆ. | ಪಾಲ್ಗೊಳ್ಳುವಿಕೆ, ಸಂಪರ್ಕಿಸುವಿಕೆ, ಸಂಬಂಧಿಸುವಿಕೆ, ನಿಯೋಜಿಸುವಿಕೆ, ತೀರ್ಮಾನಿಸುವಿಕೆ ಇತ್ಯಾದಿ. |
| 5. | **ಗುಣ ನಿರ್ಧರಿಸುವಿಕೆ**<br>ಒಂದು ನಂಬಿಕೆ ಅಥವಾ ಮೌಲ್ಯ ವ್ಯಕ್ತಿಯನ್ನು ಹೆಚ್ಚು ಪ್ರಭಾವಿಸುವುದರ ಮೂಲಕ ಒಂದು ಗುಣವೇ ಆಗಿಬಿಡುತ್ತದೆ. | ತುಲನೆ ಮಾಡುವಿಕೆ, ಪ್ರಯೋಗಿಸುವಿಕೆ, ಗುರುತಿಸುವಿಕೆ, ಒಪ್ಪಿಕೊಳ್ಳುವಿಕೆ, ನವೀಕರಿಸುವಿಕೆ ಇತ್ಯಾದಿ. |

### ಇ) ಮನೋಗತ್ಯಾತ್ಮಕ ವಲಯ

ಬ್ಲೂಮ್ ಮತ್ತು ಸಂಗಡಿಗರು ಈ ವಲಯವನ್ನು ರಚಿಸಲಿಲ್ಲ. ಹಾರೋ (1972), ಸಿಂಪ್ಸನ್ (1972) ಮತ್ತು ದವೆ (1975) ಅವರು ಈ ಪ್ರಯತ್ನ ಮಾಡಿದರು. ಈ ಮನೋಗತ್ಯಾತ್ಮಕ ವಲಯ ಒಂದು ಉಪಕರಣ ಹಾಗೂ ಸಾಧನ ಬಳಕೆಯ ದೈಹಿಕ ಕೌಶಲದ ಸಾಮರ್ಥ್ಯವನ್ನು ವಿವರಿಸುತ್ತದೆ. ಇದು ಆಧುನಿಕ ಜಗತ್ತಿನ ವಿದ್ಯಮಾನಗಳನ್ನು ಸರಿದೂಗಿಸಲಿಕ್ಕೆ ವ್ಯಕ್ತಿ ಕಲಿಯಲೇಬೇಕಾದ ಕೆಲಸಗಳ ಹಾಗೂ ಸಂವಹನದಂತಹ ಕೌಶಲಗಳನ್ನು ಬಳಸಿಕೊಳ್ಳುತ್ತದೆ. ಉದಾಹರಣೆಗೆ, ದೂರವಾಣಿ ಸಂಭಾಷಣೆ, ಕೀಬೋರ್ಡ್ ಕೌಶಲಗಳು ಅಥವಾ ಸಾರ್ವಜನಿಕ ಮಾತುಗಾರಿಕೆಯಾಗಬಹುದು. ಸುತ್ತಲಿನ ಪರಿಸರವು ಸಂಜ್ಞಾನಾತ್ಮಕ ಹಾಗೂ ಸಂವೇಗಾತ್ಮಕ ವಲಯಗಳಿಂದ ಸಂಬಂಧಿಸಿದಂತೆ ಕಂಡರೂ ಈ ವಲಯವನ್ನು ವ್ಯಕ್ತಿ ರೂಢಿಸಿಕೊಳ್ಳಲೇಬೇಕಾದ ಅಗತ್ಯ ಇಂದಿನ ಪ್ರಾಧ್ಯಾನ್ಯತೆ. ಇದು ಸಾಂಪ್ರದಾಯಿಕವಾಗಿ ದೈಹಿಕ ಹಾಗೂ ಯಾಂತ್ರಿಕ ಕೌಶಲಗಳನ್ನಷ್ಟೇ ಒಳಗೊಳ್ಳದೆ ವ್ಯಾಪಕವಾಗಿದೆ. ಮಾನಸಿಕ ಕ್ರಿಯೆಯಿಂದ ಪ್ರೇರಿತನಾದ ವ್ಯಕ್ತಿ ಅಂಗಾಂಗಗಳ ಚಲನೆಯಿಂದ ಕಾರ್ಯ ಸಾಧಿಸಲು ಯತ್ನಿಸುತ್ತಾನೆ. ಇಂತಹ ನಿರ್ದಿಷ್ಟ ಚಲನೆಗಳ ಪರಿಣತಿಯನ್ನು ಕೌಶಲ ಎನ್ನಬಹುದು. ಇಲ್ಲಿ ದವೆ (1975)ಯವರು ನೀಡಿದ ಮಾದರಿ ಇಂತಿದೆ.

| ಕ್ರಮ ಸಂಖ್ಯೆ | ಉದ್ದೇಶಗಳು | ಮಾನಸಿಕ ಪ್ರಕ್ರಿಯೆ ಅಥವಾ ವರ್ತನೆಗಳು |
|---|---|---|
| 1. | **ಅನುಕರಣೆ**<br>ಅನುಕರಣೆಯು ಮಾನಸಿಕ ಕ್ರಿಯಾವರ್ತನೆಯಲ್ಲಿ ಕೆಳಮಟ್ಟದ್ದು. ಇದಕ್ಕೆ ವ್ಯಕ್ತಿಯ ಆಂತರಿಕ ಅಭಿಪ್ರೇರಣೆಯುಂಟಾಗಿ ಪುನರುತ್ಪಾದನೆಗೆ ಕಾರ್ಯೋನ್ಮುಖನಾಗುವಂತೆ ಮಾಡುತ್ತದೆ. | ಇನ್ನೊಬ್ಬರ ವರ್ತನೆ ವೀಕ್ಷಿಸುವುದು, ಅದನ್ನು ವಿನ್ಯಾಸಗೊಳಿಸುವುದು. ಉದಾ: ಒಂದು ಕಲೆಯ ಕೆಲಸವನ್ನು ಪಡಿಯಚ್ಚು ಮಾಡುವುದು. |

Digitised by Bharatavani, CIIL

| | | |
|---|---|---|
| 2. | **ಕೈಚಳಕ**<br>ಅನುಕರಣೆಯ ಸತ್ಯತೆಯನ್ನರಿತು ಕೌಶಲಪೂರ್ಣದಿಂದ ಹಸ್ತಾಂತರಿಸುವುದು. | ಸೂಕ್ತ ರೀತಿಯ ಸೂಚನೆ ಅಭ್ಯಾಸದ ಸಹಾಯವನ್ನು ಅನುಸರಿಸುವ ಮೂಲಕ ಕೆಲವು ಕ್ರಿಯೆಗಳನ್ನು ನಿರ್ವಹಿಸಲು ಸಮರ್ಥರಾಗುವುದು.<br>ಉದಾ : ಸ್ವಂತವಾಗಿ ಏನನ್ನಾದರೂ ನಿರ್ವಹಿಸುವುದು. |
| 3. | **ಖಚಿತತೆ**<br>ಪರಿಷ್ಕರಿಸುವಿಕೆ ಮತ್ತು ನಿಖರವಾಗಿರುವಿಕೆಯಲ್ಲಿ ಕೆಲವೇ ತಪ್ಪುಗಳ ಸಾಧ್ಯತೆ | ಕಾರ್ಯನಿರ್ವಹಣೆಯಲ್ಲಿ ರೂಢಿಯುಂಟಾಗಿ ವೇಗದಿಂದ ಪರಿಷ್ಕರಣೆ ಹೊಂದುತ್ತದೆ. ಉದಾಹರಣೆಗೆ, ಒಂದು ಕಾರ್ಯವನ್ನು ಕೈಗೊಂಡು ಮತ್ತೆ ಮತ್ತೆ ಸುಧಾರಣೆ, ಹಾಗಾಗಿ ಅದನ್ನು ಸರಿಪಡಿಸುವುದು. |
| 4. | **ಸ್ಪಷ್ಟೋಚ್ಚಾರಣೆ**<br>ವಿವಿಧ ಸರಣಿಯ ಕ್ರಿಯೆಗಳನ್ನು ಸಮನ್ವಯಗೊಳಿಸಿ ಏಕತೆ ಹೊಂದುವುದರ ಮೂಲಕ ಆಂತರಿಕ ನಿರಂತರತೆ ಹೊಂದುವುದು. | ಕಾರ್ಯ ನಿರ್ವಹಣೆಯಲ್ಲಿ ನಿಖರತೆ, ಹಿಡಿತ, ವೇಗ ಮತ್ತು ವೇಳೆಯು ಪರಿಗಣಿಸಲ್ಪಡುತ್ತದೆ. |
| 5. | **ಸ್ವಾಭಾವಿಕತೆ**<br>ಉನ್ನತಮಟ್ಟದ ಕಾರ್ಯನಿರ್ವಹಣೆಯ ಸ್ವಾಭಾವಿಕವೆನಿಸುವುದು | ಕೌಶಲ ನಿರ್ವಹಣೆಯು ಸ್ವಾಭಾವಿಕವೆನಿಸುವುದು. ಅದರ ಬಗ್ಗೆ ಹೆಚ್ಚಿನ ಆಲೋಚನೆಯ ಅಗತ್ಯ ಕಂಡು ಬರುವುದಿಲ್ಲ.<br>ಉದಾ: ಪರಿಣತಿ ಹೊಂದಿದ ನಾಟ್ಯಕಲೆ, ಕ್ರೀಡೆ, ಟೈಪಿಂಗ್ ಪ್ರಿಂಟಿಂಗ್, ಬಟ್ಟೆ ಹೊಲೆಯುವುದು, ಓದುಗಾರಿಕೆ, ತಪ್ಪಿಲ್ಲದೇ ಬರೆಯುವಿಕೆ ಇತ್ಯಾದಿ. |

ಹೀಗೆ ಬೋಧನೋದ್ದೇಶಗಳ ಸಹಾಯದಿಂದ ಸೂಕ್ತ ಬೋಧನೆಯನ್ನು ಸೂಕ್ತ ಕಲಿಕಾ ಪ್ರಕ್ರಿಯೆಗಳನ್ನು ನೀಡುವುದರ ಮೂಲಕ ಇಚ್ಛಿತ ವರ್ತನೆಯನ್ನು ವಿದ್ಯಾರ್ಥಿಗಳಲ್ಲಿ ತರಲಿಕ್ಕೆ ಸಾಧ್ಯತೆ ಇದೆ. ಆದ್ದರಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಬೋಧನೋದ್ದೇಶಗಳು ಅಗತ್ಯ ಹಾಗೂ ಪ್ರಮುಖ ಸ್ಥಾನವನ್ನು ಹೊಂದಿವೆ. ಹಾಗಾಗಿ ಶಿಕ್ಷಕರು ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲರೂ ಅವಶ್ಯಕವಾಗಿ ಅರಿಯಲೇಬೇಕಾದವು ಇವು.

–ಎಸ್.ಗೀ

## ಬೋಧನೋದ್ದೇಶಗಳು–ಸಂವೇಗಾತ್ಮಕ ವಲಯ

ಒಂದು ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವೆಂದರೆ ಪಠ್ಯಕ್ರಮ. ತರಗತಿಯ ಕೋಣೆಯಲ್ಲಿ ಬೋಧನಾ–ಕಲಿಕಾ ಪ್ರಕ್ರಿಯೆಗಳ ಮೂಲಕ ಮಕ್ಕಳಿಗೆ ವರ್ಗಾಯಿಸಲ್ಪಡುವುದು ಈ ಪಠ್ಯಕ್ರಮವೇ. ಉತ್ತಮ ಪಠ್ಯಕ್ರಮವು ಒಂದು ಶಿಕ್ಷಣ ವ್ಯವಸ್ಥೆಯ ಚೌಕಟ್ಟನ್ನು ರೂಪಿಸುತ್ತದೆ. ಆದ್ದರಿಂದ ಈ ಪಠ್ಯಕ್ರಮ ರಚನೆ ಹೇಗಾಗಬೇಕು? ಇದರಲ್ಲಿ ಯಾವ ಯಾವ ಪಠ್ಯಾಂಶಗಳಿರಬೇಕು? ಇಂತಹ ಪ್ರಶ್ನೆಗಳು ಮುಖ್ಯವಾಗುತ್ತವೆ. ಈ ಪ್ರಶ್ನೆಗಳಿಗೆ ಉತ್ತರದ ರೂಪದಲ್ಲಿ ಹುಟ್ಟಿಕೊಂಡಿರುವುದೇ ಶೈಕ್ಷಣಿಕ ಗುರಿ ಹಾಗೂ ಉದ್ದೇಶಗಳು. ಶಿಕ್ಷಣ ವ್ಯವಸ್ಥೆಯ ರೂಪು ರೇಷೆಗಳನ್ನು ರಚಿಸಿ ಅದಕ್ಕೊಂದು ವಿನ್ಯಾಸ ಕೊಟ್ಟಿರುವುದೇ ಅದರ ಗುರಿಗಳು ಹಾಗೂ ಉದ್ದೇಶಗಳು.

ಶಿಕ್ಷಣವು ವಿಶಾಲವಾದ ಅರ್ಥವನ್ನು ಹೊಂದಿರುವ ಪರಿಕಲ್ಪನೆಯಾದರೆ ಬೋಧನೆಯು ಅದರ ಕಾರ್ಯಾಂಶಗಳಲ್ಲಿ ಒಂದು; ನಿಗದಿತ ಸಂದರ್ಭದಲ್ಲಿ ಬೋಧನೆ ಹಾಗೂ ತತ್‌ಸಂಬಂಧಿತ ಒಳಹರಿವುಗಳ ಬಳಕೆಯಿಂದ ಸಾಧಿಸಲು ಅಪೇಕ್ಷಿಸುವ ಅಂತಿಮ ವರ್ತನೆಗಳೇ ಬೋಧನೋದ್ದೇಶಗಳು.

ಶಿಕ್ಷಣದ ಧ್ಯೇಯ ವಿದ್ಯಾರ್ಥಿಯ 'ಸರ್ವತೋಮುಖ ಬೆಳವಣಿಗೆ' ಎಂದಾದರೆ ಅಂತಹ ಬೆಳವಣಿಗೆಗೆ ಪೂರಕವಾಗುವ ಕಾರಕಗಳ ಸಾಧನೆಯೇ ಗುರಿಗಳಾಗುತ್ತವೆ. ಈ ಗುರಿಗಳನ್ನು ತಲುಪುವ ಮಾರ್ಗವೇ ಅದರ ಉದ್ದೇಶವಾಗುತ್ತದೆ. ಉದಾಹರಣೆಗೆ 'ಸ್ಥಳೀಯ ಭಾಷೆಯಲ್ಲಿ (ಕನ್ನಡ) ಉತ್ತಮ ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು' ಮೇಲೆ ಹೇಳಿದ ಧ್ಯೇಯದ ಒಂದು ಅಂಗವಾಗಿರುವುದರಿಂದ ಅದನ್ನು ಆ ಧ್ಯೇಯದ ಗುರಿಗಳಲ್ಲೊಂದಾಗಿ ಪರಿಗಣಿಸಬಹುದು. ಇದನ್ನು ಸಾಧಿಸಲು ಈ ಕೆಳಕಂಡ ಮಾರ್ಗಗಳನ್ನು ಅನುಸರಿಸಬಹುದು; 1) ಸ್ಥಳೀಯ ಭಾಷೆಯ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವುದು 2) ಭಾಷಾಭ್ಯಾಸಕ್ಕೆ ಸಂಬಂಧಿಸಿದ ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುವುದು. 3) ಸ್ಥಳೀಯ ಭಾಷೆಯಲ್ಲಿ ಆಯ್ದ ವಿಷಯಗಳಿಗೆ ಲೇಖನಗಳನ್ನು ಬರೆಯುವುದು 4) ಇತ್ಯಾದಿ. ಇವು ಆ ಗುರಿಯ ಸಾಧನೆಯ ಉದ್ದೇಶಗಳಾಗುತ್ತವೆ. ಹೀಗೆ ಶಿಕ್ಷಣದ ಧ್ಯೇಯ ತಲುಪಲು ಸಾಧಿಸಬೇಕಾದ ಗುರಿಗಳೆಲ್ಲವನ್ನೂ ಅದಕ್ಕೆ ಸಂಬಂಧಪಟ್ಟ ಉದ್ದೇಶಗಳ ಸಾಧನೆಯ ಮುಖಾಂತರವೇ ಸಾಧಿಸಲು ಸಾಧ್ಯವಾಗುತ್ತದೆ.

ಮನುಷ್ಯನ ವ್ಯಕ್ತಿತ್ವದ ಮೂರು ಆಯಾಮಗಳನ್ನು ಮೂರು ವಲಯಗಳನ್ನಾಗಿ ಪರಿಗಣಿಸಲಾಗಿದೆ. ಅವು ಜ್ಞಾನವಲಯ, ಸಂವೇಗಾತ್ಮಕವಲಯ, ಮನೋಜನ್ಯ ವಲಯ. ವ್ಯಕ್ತಿತ್ವ ವಿಕಾಸವಾದಾಗ ಈ ಮೂರು ಆಯಾಮಗಳಲ್ಲೂ ಬೆಳವಣಿಗೆಯಾಗುತ್ತವೆ. ಅಂದರೆ ಜ್ಞಾನವಲಯದಲ್ಲಿ ಬುದ್ಧಿಶಕ್ತಿ, ಬೌದ್ಧಿಕ ಕಸರತ್ತುಗಳ ಬೆಳವಣಿಗೆಯಾಗಿ ಅಭಿವ್ಯಕ್ತಿಯಾಗುತ್ತದೆ. ಭಾವನಾತ್ಮಕ ವಲಯದಲ್ಲಿ ಭಾವನೆಗಳು, ದೃಷ್ಟಿಕೋನ, ಮೌಲ್ಯಗಳು ಬೆಳವಣಿಗೆಯಾಗಿ ಅಭಿವ್ಯಕ್ತಿಯಾಗುತ್ತದೆ. ಮನೋಜನ್ಯ ವಲಯದಲ್ಲಿ ಕೌಶಲ ಪೂರಿತ ಬರಹ, ಕ್ರಿಯಾತ್ಮಕ

Digitised by Bharatavani, CIIL

ನಿರೂಪಣೆಗಳು, ಅನೇಕ ಭಾವ ಮುದ್ರೆಗಳು ಬೆಳವಣಿಗೆಯಾಗಿ ಅಭಿವ್ಯಕ್ತವಾಗುತ್ತವೆ. (ಹಾಗಾಗಿ ಶಿಕ್ಷಣವು ಮೂರು ವಲಯಗಳಲ್ಲೂ ಬೆಳವಣಿಗೆ ತರುವ ವ್ಯವಸ್ಥೆಯಾಗಿರಬೇಕು) ಶಿಕ್ಷಣ ವ್ಯವಸ್ಥೆಯು, ಮಾನವನ ವ್ಯಕ್ತಿತ್ವ ವಿಕಾಸದ ಬಹುಮುಖ್ಯ ಆಯಾಮವಾದ 'ಭಾವನೆಗಳನ್ನು' ಬಹಳ ಕಾಲದವರೆಗೆ ಗಣನೆಗೆ ತಂದುಕೊಂಡಿರಲಿಲ್ಲ. ಜ್ಞಾನವಲಯದತ್ತಲೇ ಶಿಕ್ಷಣದ ಸಂಪನ್ಮೂಲ ಹಾಗೂ ಪ್ರಯತ್ನಗಳನ್ನು ಕೇಂದ್ರೀಕರಿಸಲಾಗಿತ್ತು. ಇಂತಹ ಸನ್ನಿವೇಶ ಗಮನಿಸಿಯೇ ರಾಷ್ಟ್ರೀಯ ಶಿಕ್ಷಣ ನೀತಿ (NPE)–1986 ಹಾಗೂ ಅದರ ಸುಧಾರಿತ ರೂಪ (1992)ವು 'ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಶೈಕ್ಷಣೀಕೇತರ' ಕ್ಷೇತ್ರಗಳ ಮೌಲ್ಯಮಾಪನಕ್ಕೆ ವಿಶೇಷ ಒತ್ತು ನೀಡಿದೆ.

ಸಂವೇಗಾತ್ಮಕವಲಯವು ಬಹಳ ಪ್ರಭಾವಶಾಲೀ ವಲಯವಾಗಿವೆ. ಏಕೆಂದರೆ ಈ ವಲಯದ ಬೆಳವಣಿಗೆಯು ನಮ್ಮೆಲ್ಲಾ ಸುಧಾರಿತ ವರ್ತನೆಗಳಿಗೆ ಮೂಲವಾಗಿದೆ. ನಮ್ಮಲ್ಲಿ ಅಡಕವಾಗಿರುವ ಮನೋಧೋರಣೆ, ದೃಷ್ಟಿಕೋನ ಹಾಗೂ ಮೌಲ್ಯಗಳೇ ನಮ್ಮ ವರ್ತನೆಗಳಾಗಿ ಅಭಿವ್ಯಕ್ತೀಕರಣಗೊಳ್ಳುತ್ತವೆ. ಅಭಿವ್ಯಕ್ತಿಗೊಂಡ ವರ್ತನೆ ಸಮಾಜದ ದೃಷ್ಟಿಯಿಂದ ಅಪೇಕ್ಷಣೀಯವಾಗಿಯೂ ಮೌಲ್ಯಾಧಾರಿತವಾಗಿಯೂ ಇರಬೇಕು. ಸಂವೇಗಾತ್ಮಕ ವಲಯದ ಬೆಳವಣಿಗೆ ಇಂತಹ ಸುಧಾರಿತ ಮನೋಧೋರಣೆ ಹಾಗೂ ಮೌಲ್ಯಗಳ ಸಂಕೇತವಾಗಿರುತ್ತವೆ.

ವಿದ್ಯಾರ್ಥಿಯ ಸಂವೇಗಾತ್ಮಕವಲಯದಲ್ಲಾಗುವ ಬೆಳವಣಿಗೆಯನ್ನು ಶಿಕ್ಷಣವು ಪರಿಗಣಿಸಲು ಮತ್ತೊಂದು ಮುಖ್ಯ ಕಾರಣ ಇದೆ. ಮಗುವಿನ 'ಬೌದ್ಧಿಕ' ಭಾವನಾತ್ಮಕ ಹಾಗೂ ಮನೋಜನ್ಯ ವಲಯಗಳೆಲ್ಲದರ ಒಟ್ಟಾರೆ ಬೆಳವಣಿಗೆಯೇ ಮಗುವಿನ ಸಂತುಲಿತ ವ್ಯಕ್ತಿತ್ವ ವಿಕಾಸವೆನಿಸುತ್ತದೆ. ಆದರೆ ಈ ಎಲ್ಲಾ ವಲಯಗಳ ಬೆಳವಣಿಗೆಯು ಬೇರೆ ಬೇರೆಯಾಗಿ ಆಗುವುದಿಲ್ಲ. ಬದಲಾಗಿ ಸಮಗ್ರವಾಗಿರುತ್ತದೆ (integrated). ಒಂದು ವಲಯ (ಉದಾ: ಜ್ಞಾನ ವಲಯ)ದಲ್ಲಿ ಬೆಳವಣಿಗೆ ತರುವ ಉದ್ದೇಶವಿಟ್ಟು ಬೋಧಿಸಿದಾಗ ಆ ಪ್ರಯತ್ನ ಮತ್ತೊಂದು ವಲಯದಲ್ಲಿಯೂ (ಉದಾ: ಸಂವೇಗಾತ್ಮಕ ವಲಯ) ಬೆಳವಣಿಗೆ ತರಲು ಸಾಧ್ಯವಿದೆ. ಹೀಗೆ, ಒಂದರಲ್ಲಾದ ಬೆಳವಣಿಗೆ ಮತ್ತೊಂದು ಆಯಾಮದ ಬೆಳವಣಿಗೆಗೂ ಪೂರಕವಾಗಬಹುದು. ಅಂದ ಮೇಲೆ ಮಗುವಿನ ಸರ್ವತೋಮುಖ ಬೆಳವಣಿಗೆಯ ಯತ್ನ ನಡೆದಿರುವಾಗ ಸಂವೇಗಾತ್ಮಕ ವಲಯವನ್ನು ಕಡೆಗಣಿಸಲು ಸಾಧ್ಯವಿಲ್ಲ. ಉದಾ: ಭಾಷಾ ಸಾಮರ್ಥ್ಯ ಹೆಚ್ಚಿಸಲು ವಿದ್ಯಾರ್ಥಿಗೆ ನೀಡಿದ ಚಟುವಟಿಕೆಯೊಂದು 'ಅಹಿಂಸೆ'ಯ ಸಂದೇಶ ಹೊತ್ತಿರುವ 'ಪಠ್ಯಾಂಶ ಓದುವಿಕೆ' ಎಂದಾದರೆ, ಅದನ್ನು ಓದಿದ ನಂತರ ವಿದ್ಯಾರ್ಥಿಯ ಅಂತರಾಳಕ್ಕಿಳಿದ ಈ ಸಂದೇಶ ಅವನ ಮನೋಧೋರಣೆ ಹಾಗೂ ಮೌಲ್ಯಗಳನ್ನು ಸ್ವಲ್ಪಮಟ್ಟಿಗೆ ಸುಧಾರಿಸಿದ್ದೇ ಆದರೆ ಈ ಬೆಳವಣಿಗೆ ಗಮನಾರ್ಹವಾದದ್ದೇ. ಸಂವೇಗಾತ್ಮಕ ವಲಯದಲ್ಲಿ ಹಲವಾರು ಸನ್ನಿವೇಶಗಳಲ್ಲಿ ಇಂತಹ 'ಆಕಸ್ಮಿಕ ಕಲಿಕೆ' ಸಾಧ್ಯವಾದ್ದರಿಂದ ಈ ವಲಯದಲ್ಲಾಗುವ, ಕೆಲವು ಕಲಿಕೆಯನ್ನಾದರೂ 'ಆಕಸ್ಮಿಕಕ್ಕೆ ಬಿಡದೇ' 'ಯೋಜಿತ ಕಲಿಕೆ'ಯನ್ನಾಗಿ ಮಾಡಬೇಕಾಗಿದೆ. ಅಂದರೆ ಸಂವೇಗಾತ್ಮಕ ಬೆಳವಣಿಗೆ ಉದ್ದೇಶಪೂರ್ವಕವಾಗಿಯೇ ಆಗುವಂತೆ ಮಾಡಬೇಕಾಗಿದೆ.

ಈ ವಲಯದಲ್ಲಿ ವೈವಿಧ್ಯಮಯವಾದ ಭಾವನೆಗಳು (ದೇಶ, ವ್ಯಕ್ತಿ, ವಸ್ತು, ಘಟನೆಗಳು, ಇತ್ಯಾದಿಗಳ ಬಗ್ಗೆ) ಕಂಡುಬರುತ್ತವೆ. ಅಭಿವ್ಯಕ್ತಗೊಂಡ ವರ್ತನೆ ಯಾವ ಭಾವನೆಯಿರಬಹುದು ಎಂದು ನಿಖರವಾಗಿ ಹೇಳುವುದು ಕಷ್ಟವೇ. ಆದ್ದರಿಂದಲೇ ಶೈಕ್ಷಣಿಕ ಉದ್ದೇಶಗಳನ್ನು ಈ ವಲಯಕ್ಕೆ ಸೂಕ್ಷ್ಮವಾಗುವಂತೆ ವರ್ಗೀಕರಣ ಮಾಡುವುದು ಅಷ್ಟೇನೂ ಸರಳವಲ್ಲ. ಆದಾಗ್ಯೂ ಈ ವಲಯವನ್ನು ಸೂಕ್ಷ್ಮವಾಗಿ ಅಭ್ಯಸಿಸಿ ವರ್ಗೀಕರಣ ಮಾಡಿದ ಖ್ಯಾತಿ ಡೇವಿಡ್ ಆರ್. ಕ್ರಾಥ್‌ವೋಲ್ ಮತ್ತು ಸಹಚರರಿಗೆ ಸಲ್ಲತಕ್ಕದ್ದು. ಈ ವರ್ಗೀಕರಣದಲ್ಲಿರುವ ಹಂತಗಳು ಪರಸ್ಪರ ಪೂರಕವಾಗಿದ್ದು ಏರಿಕೆಯ ಶ್ರೇಣಿಯಲ್ಲಿ ಜೋಡಣೆಯಾಗಿದೆ. ಪ್ರತಿ ಹಂತದ ಸಾಧನೆ ಅದರ ಕೆಳಗಿನ ಹಂತದ ಉದ್ದೇಶಗಳ ಸಾಧನೆಯಾಗದ ಹೊರತು ಸಾಧ್ಯವಾಗಲಾರದು. ಇಷ್ಟೆಲ್ಲಾ ಪ್ರಯತ್ನಗಳ ಮಧ್ಯೆಯೂ, ಜ್ಞಾನವಲಯದ ಉದ್ದೇಶಗಳಂತೆ, ಈ ವಲಯದ ಉದ್ದೇಶಗಳು / ವರ್ತನೆಗಳೆಲ್ಲವೂ ಅಭಿವ್ಯಕ್ತಿಗೊಂಡಾಗ ಅದೇ ನಿಖರತೆಯನ್ನು ಉಳಿಸಿಕೊಳ್ಳದೆ ಸ್ವಲ್ಪಮಟ್ಟಿನ ಅಮೂರ್ತತೆ (abstractness)ಯನ್ನು ಹೊಂದಿರುತ್ತವೆ.

ಕ್ರಾಥ್‌ವೋಲ್ ವರ್ಗೀಕರಣದ ಪ್ರಕಾರ, ಈ ವಲಯದಲ್ಲಿ ಬರುವ ಮುಖ್ಯ ವಿಭಾಗಗಳು ಎಂದರೆ,

➢ ಸ್ವೀಕರಿಸುವಿಕೆ

↓

➢ ಸ್ಪಂದಿಸುವಿಕೆ

↓

➢ ಮೌಲ್ಯ ನಿರ್ಣಯಿಸುವಿಕೆ

↓

➢ ಸಂಘಟಿಸುವಿಕೆ

↓

➢ ಮೌಲ್ಯ ಅಥವಾ ಮೌಲ್ಯ ಸಂಕೀರ್ಣದಿಂದ ವ್ಯಕ್ತಿತ್ವ ನಿರ್ಮಾಣ

ಈ ಚಿಹ್ನೆಯು ಈ ಹಂತಗಳ ಪರಸ್ಪರ ಪೂರಕಾಂಶವನ್ನು ಸೂಚಿಸುತ್ತವೆ.

1. **ಸ್ವೀಕರಿಸುವಿಕೆ:** ಈ ವಲಯದ ಅತ್ಯಂತ ಕನಿಷ್ಠ ಮಟ್ಟದಲ್ಲಿ ಬರುವ ವಿಭಾಗ ಇದಾಗಿದೆ. ಈ ವಿಭಾಗದಲ್ಲಿ ಇರುವ ವರ್ತನೆಗಳನ್ನು ಅರ್ಥೈಸಲು ಸಹಾಯವಾಗುವಂತೆ ಇದನ್ನು ಇನ್ನಷ್ಟು ಸೂಕ್ಷ್ಮ ಸ್ಥರಗಳಾಗಿ ವಿಭಜಿಸಲಾಗಿದೆ. ಪ್ರತಿಯೊಂದು ವಿಭಜನೆಯೂ ಒಂದಕ್ಕೊಂದು ಪೂರಕವಾಗಿರುವುದನ್ನು ಚಿತ್ರದಲ್ಲಿ ಸೂಚಿಸಿದೆ.




ಎ) **ಅರಿವು**

ವಿದ್ಯಾರ್ಥಿಗಳು ಪ್ರಭಾವಕ್ಕೆ ಒಳಗಾಗಲು ಸಾಕಷ್ಟು ಪ್ರಚೋದನೆಗಳಿದ್ದಾಗ್ಯೂ ನಿರ್ದಿಷ್ಟ ಘಟನೆ, ಸನ್ನಿವೇಶ ಅಥವಾ ಕಾರ್ಯಕ್ರಮದ ಬಗೆಗಿನ ಮಾಹಿತಿಯ ಅರಿವು ಇರುವ ಮನೋಸ್ಥಿತಿಯನ್ನು (state of mind) ಸೂಚಿಸುತ್ತದೆ.

ಉದಾ:

1) ರೇಡಿಯೋದಲ್ಲಿ ಬರುವ ಪ್ರಕಟಣೆಗಳನ್ನು ಕೇಳುವಾಗ, ಅಲ್ಲಲ್ಲಿ ಏನು ಸಭೆ ಸಮಾರಂಭಗಳು ನಡೆಯಲಿವೆ, ಎಂಬುವುದರ ಬಗ್ಗೆ ಪ್ರಕಟಣೆಗಳು ಅನೇಕ ಪ್ರಚೋದನೆಗಳಾಗಿ ವಿದ್ಯಾರ್ಥಿಯ

Digitised by Bharatavani, CIIL

ಮುಂದಿದ್ದರೂ, ಅದರಲ್ಲಿನ ಒಂದು ಪ್ರಕಟಣೆಯಾದ ಶಾಸ್ತ್ರೀಯ ನೃತ್ಯದ ಕಾರ್ಯಕ್ರಮದ ವಿವರಗಳನ್ನು ಮಿದುಳಿನಲ್ಲಿ ದಾಖಲು ಮಾಡಿಕೊಳ್ಳುವುದು.

2) ಶಿಕ್ಷಕರು ಪಾಠಮಾಡುವಾಗ ವಿವಿಧ ಹಂತಗಳಲ್ಲಿ ವಿವಿಧ ಸಂದೇಶಗಳನ್ನು ಪ್ರಚೋದನೆಗಳನ್ನು ನೀಡಿದ್ದರೆಂದುಕೊಂಡರೆ ಅವೆಲ್ಲವನ್ನು ಅರ್ಥಮಾಡಿಕೊಂಡರೂ, ಮನಸ್ಸಿನಲ್ಲಿ ಕೆಲವನ್ನು ಗಟ್ಟಿಯಾಗಿ ಮಾಡಿಸಿಕೊಳ್ಳುವುದು. (ದೈಹಿಕ ಆರೋಗ್ಯಕ್ಕೆ ಶಿಕ್ಷಕರು ಒದಗಿಸುವ tips ಎಲ್ಲವೂ ಅರ್ಥವಾದರೂ, ಎಲ್ಲೆಂದರಲ್ಲಿ ಸಿಗುವ ನೀರನ್ನು ಕುಡಿಯಬಾರದು ಎಂಬುದು ಮಾತ್ರ ಮನಸ್ಸಿನಲ್ಲಿ ಮುದ್ರಿಸಲ್ಪಡುತ್ತದೆ).

ಬಿ) **ಸ್ವೀಕರಿಸಲು ಇಚ್ಛೆ ಪಡುವುದು.**

ವಿದ್ಯಾರ್ಥಿಗೆ 'ಅರಿವು' ಉಪವಿಭಾಗದ ಉದ್ದೇಶ ಈಡೇರಿದ್ದರೆ ಮಾತ್ರ ಆತ ತನಗೆ ಅರಿವಾದದ್ದನ್ನು ಸ್ವೀಕರಿಸಲು ಇಚ್ಛೆಪಡುತ್ತಾನೆ.

ಉದಾ:

1) ರೇಡಿಯೋದಲ್ಲಿ ಪ್ರಕಟಣೆ ಕೇಳಿ ಅರಿವಿಗೆ ಬಂದ ಶಾಸ್ತ್ರೀಯ ನೃತ್ಯ ಕಾರ್ಯಕ್ರಮ ವೀಕ್ಷಿಸಲು ಇಚ್ಛೆ ವ್ಯಕ್ತಪಡಿಸುವುದು.

2) ಶಿಕ್ಷಕರ ಪಾಠ ಕೇಳುವುದರಿಂದ ಅರಿವಿಗೆ ಬಂದ ಸಂದೇಶವೊಂದನ್ನು ಸೂಕ್ತ ಸಂದರ್ಭಗಳಲ್ಲಿ ಬಳಸಲು ಇಚ್ಛೆ ಪಡುವುದು (ಮನೆಯವರಿಗೆ / ಇತರರಿಗೆ ಎಲ್ಲೆಂದರಲ್ಲಿ ಸಿಗುವ ನೀರನ್ನು ಕುಡಿಯಬಾರದು ಎಂಬ ಸಂದೇಶ ತಿಳಿಸಲು ಮುಂದಾಗುವುದು).

ಸಿ) **ಆಯ್ದ ಉದ್ದೀಪನಕ್ಕೆ ಪ್ರತಿಕ್ರಿಯಿಸುವುದು.**
(Controlled or selected response)

ಅನೇಕ ಪ್ರಚೋದನೆಗಳಿದ್ದಾಗ್ಯೂ ಒಂದು ನಿರ್ದಿಷ್ಟ ಪ್ರಚೋದನೆಯೆಡೆಗೆ ಕ್ರಿಯಾತ್ಮಕವಾಗಿ ಗಮನಹರಿಸುವುದು.

ಉದಾ:

1) ವಸ್ತು ಪ್ರದರ್ಶನದಲ್ಲಿ ನಡೆಯುವ ಅನೇಕ ಆಕರ್ಷಕ ಕಾರ್ಯಕ್ರಮಗಳೆಲ್ಲವುದರ ನಡುವೆಯೂ ಶಾಸ್ತ್ರೀಯ ನೃತ್ಯ ನಡೆಯುವ ದಿವಸ ಬಿಡುವು ಮಾಡಿಕೊಂಡು ಟಿಕೆಟ್ ಪಡೆದು ಕಾರ್ಯಕ್ರಮ ವೀಕ್ಷಿಸುವುದು.

2) ಶಿಕ್ಷಕರಿಂದ ಅರಿವಿಗೆ ಬಂದಿದ್ದ ಸಂದೇಶವೊಂದನ್ನು ಸೂಕ್ತ ಸಂದರ್ಭದಲ್ಲಿ ಬಳಸುವುದು (ಮನೆಯಿಂದ ಹೊರಗೆ ಹೊರಟಾಗೆಲ್ಲ ಎಲ್ಲೆಂದರಲ್ಲಿ ಸಿಗುವ ನೀರು ಕುಡಿಯುವುದು ಬೇಡ ಎಂದು ಮನೆಯಲ್ಲಿರುವ ಬಾಟಲ್‌ಗಳಲ್ಲಿ ನೀರು ತುಂಬಿಸಿ ತೆಗೆದುಕೊಂಡು ಹೋಗುವುದು)

**2. ಸ್ಪಂದಿಸುವಿಕೆ:** ಇದು 'ಸ್ವೀಕರಿಸುವಿಕೆ'ಯ ನಂತರದ ಸ್ಥರ. ಇದರಲ್ಲಿ ವಿದ್ಯಾರ್ಥಿಯ ಪ್ರಜ್ಞಾಪೂರ್ವಕ 'ಭಾಗವಹಿಸುವಿಕೆ'ಯು ಅಭಿವ್ಯಕ್ತವಾಗುತ್ತದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ನಿರಂತರ ಪ್ರಚೋದನೆ ನೀಡುತ್ತಾ ಬೋಧಿಸುವರು. ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸುತ್ತಾ ವಿದ್ಯಾರ್ಥಿಗಳು ಕಲಿಯುವರು. ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎನ್ನುವುದಕ್ಕೆ ಅವರ ಈ ಸ್ಪಂದನೆಯೇ ಮೊದಲ 'ಸಾಕ್ಷಿ'.

ವಿದ್ಯಾರ್ಥಿಯೊಬ್ಬನು ಮೂರು ವಿಧಗಳಲ್ಲಿ ಸ್ಪಂದಿಸಲು ಸಾಧ್ಯವಿದೆ.

1) ಮೌನವಾಗಿ ಅಥವಾ ವಿರೋಧಿಸದೆ ಸಮ್ಮತಿಸುವಿಕೆ
(Silently without protesting)

2) ಸ್ಪಂದಿಸಲು ಇಚ್ಛೆ ವ್ಯಕ್ತಪಡಿಸುವಿಕೆ
(Willingness to respond)

3) ಸ್ಪಂದಿಸುವುದರಲ್ಲಿ ತೃಪ್ತಿಪಡುವಿಕೆ
(Satisfaction in response)

1) ಮೌನವಾಗಿ ಅಥವಾ ವಿರೋಧಿಸದೆ ಸಮ್ಮತಿಸುವಿಕೆ: ಉದಾ: ಓದುವ ಹವ್ಯಾಸ ಬೆಳೆಸಿಕೊಳ್ಳಬೇಕೆನಿಸಿದ ವಿದ್ಯಾರ್ಥಿಯೊಬ್ಬ ಯಾವ ಮಟ್ಟದ / ಶೈಲಿಯ / ವಿಷಯ ಇರುವ ಪುಸ್ತಕದಿಂದ ಆರಂಭ ಮಾಡಬೇಕೆಂಬ ಗೊಂದಲದಲ್ಲಿದ್ದಾಗ ಶಿಕ್ಷಕರು ತನಗಾಗಿ ನಿರ್ಧರಿಸಿದ ಮಟ್ಟದ / ಶೈಲಿಯ / ವಿಷಯ ವಸ್ತು ಇರುವ ಪುಸ್ತಕ ಓದಲು ತಕ್ಷಣ ಸಮ್ಮತಿ ಸೂಚಿಸುವುದು.

2) ಸ್ಪಂದಿಸಲು ಇಚ್ಛೆ ವ್ಯಕ್ತಪಡಿಸುವಿಕೆ: ಉದಾ: ಶಿಕ್ಷಕರು ಮಂಡಿಸಿದ ವಿಚಾರವೊಂದರ ಬಗ್ಗೆ ತಾನೂ ಅದಕ್ಕೆ ಪೂರಕವಾಗಿ ಭಾಗವಹಿಸಲು ಸ್ವ–ಇಚ್ಛೆಯಿಂದ ಮುಂದಾಗುವುದು.

3) ಸ್ಪಂದಿಸುವುದರಲ್ಲಿ ತೃಪ್ತಿಪಡುವಿಕೆ:

ಉದಾ:

ಅ) ಗಣಿತದ ಸಮಸ್ಯೆಯೊಂದನ್ನು ಬಗೆಹರಿಸಲು ಸಣ್ಣ ತೊಡಕು ಉಂಟಾಗಿದ್ದ ವಿದ್ಯಾರ್ಥಿಯೊಬ್ಬ, ಶಿಕ್ಷಕರು ಆ ತೊಡಕನ್ನು ಬಿಡಿಸಿದಾಗ ತಾನೆಲ್ಲಿ ಎಡವಿದ್ದೆ ಎಂಬ ಅರಿವಾಗಿ, ತಲೆ ಅಲ್ಲಾಡಿಸುತ್ತಾ ಕೃತಜ್ಞತಾ ಭಾವದಿಂದ ತೃಪ್ತಿ ವ್ಯಕ್ತಪಡಿಸುವುದು.

ಆ) ವಿದ್ಯಾರ್ಥಿಯೊಬ್ಬ ಚರ್ಚಾಗೋಷ್ಠಿಯಲ್ಲಿ ಕೇಳುಗನಾಗಿದ್ದಾಗ, ಬೇರೊಬ್ಬ ವಿದ್ಯಾರ್ಥಿ ಮಂಡಿಸಿದ ವಾದ ತನ್ನ ಅಂತರಾಳದ ಧಾಟಿಯಲ್ಲಿಯೇ ಇದೆ ಎನಿಸಿ ಸಂತೋಷದಿಂದ ತಲೆದೂಗುವುದು / ಚಪ್ಪಾಳೆ ಹೊಡೆಯುವುದು.

**3. ಮೌಲ್ಯ ನಿರ್ಣಯಿಸುವಿಕೆ:** ಬೋಧನೆಯು ಕಲಿಕೆಯಲ್ಲಿ ಅವಸಾನಗೊಳ್ಳಬೇಕಾದರೆ, ಶಿಕ್ಷಕರು ಉದ್ದೇಶಪೂರ್ವಕವಾಗಿ ಕೆಲವು ಕಲಿಕಾ ಸನ್ನಿವೇಶಗಳನ್ನು ಸೃಷ್ಟಿ ಮಾಡಿ ಅವುಗಳಲ್ಲಿರುವ ವಿಚಾರ (ಕಲಿಕಾಂಶ)ಗಳನ್ನು ವಿದ್ಯಾರ್ಥಿಗಳು ತಮ್ಮ ಇಂದ್ರಿಯಗಳ ಮುಖೇನ ಸ್ವಾಂಗೀಕರಣವಾಗುವಂತೆ ಮಾಡಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿ, ಶಿಕ್ಷಕ ಹಾಗೂ ಕಲಿಕಾನುಭವಗಳ ನಡುವೆ ಅಂತರಕ್ರಿಯೆ ನಡೆಯಬೇಕಾದದ್ದು ಸಾಂಪ್ರದಾಯಿಕ ಕಲಿಕೆಗೆ ಕಡ್ಡಾಯವಾದದ್ದು. ಕೆಲವೊಮ್ಮೆ ಇಂತಹ ನಿರ್ದಿಷ್ಟ ಅಂತರ್‌ಕ್ರಿಯೆ ವಿದ್ಯಾರ್ಥಿಯ ಮೇಲೆ ಪ್ರಭಾವ ಬೀರಿ ಹಲವಾರು ಮೌಲ್ಯಗಳನ್ನು ಗ್ರಹಿಸುವುದು ಮಾತ್ರವಲ್ಲದೆ ಅವು ಅವರ ಆಂತರ್ಯಕ್ಕೆ ಒಗ್ಗಿಕೊಳ್ಳುತ್ತವೆ.

ಮೌಲ್ಯೀಕರಿಸುವಿಕೆ ಮೂರು ಸ್ತರಗಳಲ್ಲಿ ನಡೆಯುವ ಪ್ರಕ್ರಿಯೆ

ಎ) ಮೌಲ್ಯವನ್ನು ಒಪ್ಪಿಕೊಳ್ಳುವುದು.

ಬಿ) ಮೌಲ್ಯಕ್ಕೆ ಪ್ರಾಮುಖ್ಯ ನೀಡುವುದು.

ಸಿ) ಮೌಲ್ಯವನ್ನು ಒಪ್ಪಿಕೊಂಡು, ಅದಕ್ಕೆ ಬದ್ಧನಾಗುವುದು.

ಉದಾ: "ಅಂದಿನ ಕೆಲಸವನ್ನು ಅಂದೇ ಪೂರೈಸಬೇಕು" ಎಂಬ

Digitised by Bharatavani, CIIL

ನಾಣ್ಣುಡಿಯನ್ನು ಶಿಕ್ಷಕರಿಂದ ಕೇಳಿ ಹೌದು (ಮೌಲ್ಯವನ್ನು ಒಪ್ಪಿಕೊಳ್ಳುವುದು), ಎನಿಸಿದ್ದಲ್ಲದೆ ಇದರ ಲಾಭದ ಪ್ರತ್ಯಕ್ಷ ಅನುಭವವೂ ಒಂದೆರಡು ಬಾರಿ ಆದಾಗ (ಮೌಲ್ಯಕ್ಕೆ ಪ್ರಾಮುಖ್ಯತೆ ನೀಡುವುದು) ವಿದ್ಯಾರ್ಥಿ ಈ ನಾಣ್ಣುಡಿಯನ್ನು ತನ್ನ ಜೀವನದ ಎಲ್ಲ ಸಮಯದಲ್ಲೂ ಅಳವಡಿಸಿಕೊಂಡು ಜೀವನದಲ್ಲಿ ಶಿಸ್ತನ್ನು ಕಾಪಾಡಿಕೊಳ್ಳುತ್ತಾನೆ. (ಒಪ್ಪಿಕೊಂಡು, ಪ್ರಾಮುಖ್ಯತೆ ನೀಡಿದ ಮೌಲ್ಯಕ್ಕೆ ಬದ್ಧನಾಗಿರುವುದು).

4. **ಸಂಘಟನೆ:** ಶಾಲೆಯ ಒಳಗೂ ಹೊರಗೂ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವ ಅನುಭವಗಳು ಹಲವಾರು ಇದ್ದು, ಅನೇಕ ಮೌಲ್ಯಗಳನ್ನು ರೂಪಿಸಿಕೊಳ್ಳುವ ಸಾಧ್ಯತೆ ಇದೆ. ಇದರಿಂದ ಅವನ ವ್ಯಕ್ತಿತ್ವ ವಿಕಾಸಗೊಳ್ಳುತ್ತವೆ. ಅಂದರೆ ಒಂದು ಸಂತುಲಿತ ವ್ಯಕ್ತಿತ್ವ ನಿರ್ಮಾಣವಾಗಬೇಕಾದರೆ ಹಲವಾರು ಮೌಲ್ಯಗಳು ವ್ಯಕ್ತಿತ್ವದಲ್ಲಿ ಅಳವಡಿಕೆಯಾಗುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಾಗುತ್ತಿರುತ್ತದೆ. ಹೀಗೆ ವಿವಿಧ ಮೂಲಗಳಿಂದ ಅನೇಕ ಮೌಲ್ಯಗಳು ಅಂತರಾಳದಲ್ಲಿ ಬೇರೂರಿದಾಗ ಮೌಲ್ಯ–ಮೌಲ್ಯಗಳ ನಡುವೆ ಸಂಘರ್ಷ ನಡೆಯುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ. ಆಗ ವಿದ್ಯಾರ್ಥಿಯು ಮೌಲ್ಯಗಳನ್ನು ಹೋಲಿಸಿ, ಪರಸ್ಪರ ಸಂಬಂಧ ಕಲ್ಪಿಸಿ, ಅವುಗಳಲ್ಲಿ ಕೆಲವನ್ನು ತೆಗೆದುಹಾಕಿ ಮತ್ತೆ ಕೆಲವನ್ನು ಒಗ್ಗೂಡಿಸಿ ಸಂಶ್ಲೇಷಿಸುತ್ತಾನೆ. ಒಂದು ವಿಶಾಲವಾದ ಮೌಲ್ಯವ್ಯೂಹ ರಚಿಸುತ್ತಾನೆ. ಈ ಹಂತದಲ್ಲಿ ಒಂದೇ ಸ್ವರೂಪದ ಮೌಲ್ಯಗಳು ಒಟ್ಟಾರೆ ಸೇರಿ ಅವುಗಳ ಸೂಕ್ಷ್ಮತೆಗೆ ಅನುಗುಣವಾಗಿ ವ್ಯವಸ್ಥಿತ ಜೋಡಣೆಯಾಗಿ ಮೌಲ್ಯವ್ಯೂಹದ ರಚನೆಯಾಗುತ್ತದೆ. ಇದರಂತೆ ರಚನೆಯಾದ ಅನೇಕ ಮೌಲ್ಯವ್ಯೂಹಗಳು ಮಿದುಳಿನಲ್ಲಿ ಮೌಲ್ಯವ್ಯೂಹಗಳ ವ್ಯವಸ್ಥೆಯೊಂದು ಸಂಘಟನೆಯಾಗಲು ನಾಂದಿಯಾಗುತ್ತವೆ. ಮೌಲ್ಯ ವ್ಯವಸ್ಥೆಯೊಂದರ ಚಿತ್ರ ಕೆಳಕಂಡಂತಿವೆ.




ಈ ರೀತಿಯ ಮೌಲ್ಯ ವ್ಯವಸ್ಥೆಯ ಸಂಘಟನೆ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ವಿದ್ಯಾರ್ಥಿಯು ಇದರ ದೆಸೆಯಿಂದ ತನ್ನದೇ ಅಭಿಪ್ರಾಯ, ಮನೋಧೋರಣೆ / ಮನೋಧರ್ಮ, ಜೀವನವನ್ನು ಅರ್ಥೈಸುವ ಬಗೆ ಮುಂತಾದವುಗಳನ್ನು ಬೆಳೆಸಿಕೊಳ್ಳುತ್ತಾನೆ.

ಧನಾತ್ಮಕವಾಗಿ ಮೌಲ್ಯ ವ್ಯವಸ್ಥೆ ಸಂಘಟನೆಯಾಗುವಂತೆಯೇ ಋಣಾತ್ಮಕವಾಗಿಯೂ ಮೌಲ್ಯವ್ಯವಸ್ಥೆ ಸಂಘಟನೆಯಾಗಬಹುದು. ಇದು ವಿದ್ಯಾರ್ಥಿಯೊಬ್ಬನಿಗೆ ಸಿಕ್ಕುವ ಅಸಂಖ್ಯಾತ ಅನುಭವಗಳ 'ಸ್ವಭಾವ' (ಅಪೇಕ್ಷಣೀಯ/ಅನಪೇಕ್ಷಣೀಯ) ಹಾಗೂ ಅದಕ್ಕೆ ಅವನು ಪ್ರತಿಕ್ರಿಯಿಸುವ ಬಗೆ ಇವುಗಳನ್ನವಲಂಬಿಸುತ್ತದೆ. ಇದಕ್ಕೆ ಒಂದು ಉದಾಹರಣೆ ಎಂದರೆ 'ಭಯೋತ್ಪಾದನೆ–ಋಣಮೌಲ್ಯವಾಗಿ'

5. **ಮೌಲ್ಯ ಅಥವಾ ಮೌಲ್ಯ ಸಂಕೀರ್ಣದಿಂದ ವ್ಯಕ್ತಿತ್ವ ಚಿತ್ರಣ:** ಮೌಲ್ಯಾಧಾರಿತ ವ್ಯಕ್ತಿಗಳು ಎಂದು ಗುರುತಿಸಲ್ಪಟ್ಟವರ ವ್ಯಕ್ತಿತ್ವವನ್ನು, ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಗೊತ್ತಾಗುವ ಅಂಶವೆಂದರೆ ಇವರಲ್ಲಿ ಅನೇಕರು ಕೇವಲ ಒಂದು ನಿರ್ದಿಷ್ಟ ಮೌಲ್ಯಕ್ಕಾಗಿ ತಮ್ಮ ಜೀವನ

Digitised by Bharatavani, CIIL

ಮುಡುಪಾಗಿಟ್ಟರೆ (ಉದಾ: ಮಹಾತ್ಮ ಗಾಂಧೀಜಿ, ಸತ್ಯ ಹರಿಶ್ಚಂದ್ರ, ಮದರ್ ಥೆರೇಸಾ, ನೆಲ್ಸನ್ ಮಂಡೇಲಾ) ಮತ್ತೆ ಕೆಲವರು ಮೌಲ್ಯಾಧಾರಿತ ವ್ಯಕ್ತಿಗಳೆನಿಸಿಕೊಂಡರೂ ಯಾವುದಾದರೊಂದು ನಿರ್ದಿಷ್ಟ ಮೌಲ್ಯದಿಂದ ಗುರುತಿಸಲ್ಪಡುವುದಿಲ್ಲ. ಈ ಎರಡು ಗುಂಪಿನವರಲ್ಲೂ ಮೌಲ್ಯಗಳು ಅವರ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿರುತ್ತವೆ. ಅವರನ್ನು ಗುರುತಿಸುವುದೇ ಅವರಲ್ಲಿ ಅಡಕವಾಗಿರುವ ಮೌಲ್ಯಗಳಿಂದ. ಅಂದರೆ ಅಂತಹ ವ್ಯಕ್ತಿಗಳ ಬಗ್ಗೆ ತಮ್ಮಲ್ಲಿ ಅಡಕವಾಗಿರುವ ಮೌಲ್ಯಗಳ ಬಗ್ಗೆ ಸಾರ್ವತ್ರೀಕರಿಸಿದ ನಿಲುವು ತಾಳಲು ಸಾಧ್ಯವಿದೆ.

ಉದಾಹರಣೆ: ಸತ್ಯ ಹರಿಶ್ಚಂದ್ರ ಎಂತಹ ಸನ್ನಿವೇಶದಲ್ಲೂ ಸತ್ಯವನ್ನೇ ನುಡಿದಿದ್ದು ಸತ್ಯವನ್ನಾಡುವುದರ ಬಗ್ಗೆ ಅವನ ಸಾರ್ವತ್ರೀಕರಿಸಿದ ನಿಲುವುಗಳನ್ನು ಸಾಬೀತುಪಡಿಸುತ್ತದೆ.

ಗಾಂಧೀ ತತ್ವ ಪಾಲಿಸುವ ವ್ಯಕ್ತಿಯೊಬ್ಬ ಸ್ವದೇಶಿ ವಸ್ತುಗಳನ್ನು ಮಾತ್ರ ಬಳಸುವ ಮೌಲ್ಯಗಳ ಬಗ್ಗೆ ಸಾರ್ವತ್ರೀಕರಿಸಿದ ನಿಲುವು ಹೊಂದಿರುತ್ತಾನೆ.

ಮೌಲ್ಯಾಧಾರಿತ ವ್ಯಕ್ತಿಗಳಲ್ಲಿ ಮೌಲ್ಯಗಳು ವ್ಯಕ್ತಿತ್ವದ ಮೂಲ ಆಧಾರಗಳಾಗಿ ಅವುಗಳ ಸಂಘಟನಾ ಶಕ್ತಿಯ ಫಲವಾಗಿ ಮೌಲ್ಯಾಧಾರಿತ ವ್ಯಕ್ತಿತ್ವ ಹೊರಹೊಮ್ಮುತ್ತದೆ. ಹಾಗಾಗಿಯೇ ವ್ಯಕ್ತಿಯ ನಂಬಿಕೆ, ಮನೋಧೋರಣೆ, ಅಭಿಪ್ರಾಯಗಳು ಎಲ್ಲವು ಸುಧಾರಿತವಾಗಿ ಅಭಿವ್ಯಕ್ತಿಗೊಳ್ಳುತ್ತ ವ್ಯಕ್ತಿಯ ಒಂದು ಜೀವನ ತತ್ವವನ್ನು ರೂಪಿಸುತ್ತವೆ. ಆ ವ್ಯಕ್ತಿಯ ವ್ಯಕ್ತಿ ಚಿತ್ರ ನಿರ್ಮಾಣವಾಗುತ್ತದೆ. ಮೌಲ್ಯಗಳ ಬಗ್ಗೆ ಅಂತಹ ವ್ಯಕ್ತಿಗಳಲ್ಲಿರುವ ಸಾರ್ವತ್ರೀಕರಿಸಿದ ನಿಲುವು ಅವರಲ್ಲಿ ಅಚಲತೆಯನ್ನು ತುಂಬುತ್ತದೆ.

ಹೀಗೆ ಅನೇಕ ಸಂಕೀರ್ಣತೆಗಳಿಂದ ಕೂಡಿರುವ ಈ ವಲಯದ ವರ್ತನೆಗಳು ಅಭಿವ್ಯಕ್ತಿಗೊಳ್ಳಲು ಸ್ವಲ್ಪ ಮಟ್ಟಿನ ಅಮೂರ್ತತೆಯನ್ನು ಬಿಟ್ಟು ಕೊಡದೆ ಜ್ಞಾನವಲಯ ವರ್ತನೆಗೆ ಹೋಲಿಸಿದಂತೆ ನಿಖರತೆಯನ್ನು ಕಡಿಮೆಗೊಳಿಸುತ್ತವೆ.

–ಬಿ.ಎನ್. ಆ

## ಬೋಧನೋದ್ದೇಶಗಳು–ಸಂಜ್ಞಾನಾತ್ಮಕ ವಲಯ

ಆಂಗ್ಲಭಾಷೆಯ 'ಕಾಗ್‌ನಿಷನ್' (Cognition) ಪದದ ಅರ್ಥವು ಜ್ಞಾನ, ಅರಿವು ಎಂದಾಗಿದೆ. ವೈಯಕ್ತಿಕ ಅನುಭವದಿಂದ ಒಂದು ಪದಾರ್ಥದ ಪರಿಜ್ಞಾನ ಪಡೆಯುವ ಕಾರ್ಯ ಎಂದಾಗುತ್ತದೆ. ಇದು ಸಂಜ್ಞಾನಾತ್ಮಕ ಎಂದಾಗಿದ್ದು ಜ್ಞಾನ ಸಂಪಾದನೆಗಾಗಿ ನಡೆಯುವ ಮನೋವ್ಯಾಪಾರಗಳನ್ನು ಒಳಗೊಂಡಿದೆ.

ಜ್ಞಾನಗ್ರಹಿಕೆ ಪಂಥದವರ ಪ್ರಕಾರ ಪ್ರಪಂಚದ ಅನುಭವಗಳನ್ನು ಅರ್ಥನಿರೂಪಣೆ ಮಾಡುವ ಮೂಲಕ ಕಲಿಯುವವನಿಂದ ಜ್ಞಾನವು ವೈಯಕ್ತಿಕವಾಗಿ ರಚಿಸಲ್ಪಡುತ್ತದೆ. ಬ್ರೂನರ್, ಅಸುಬೆಲ್ ಹಾಗೂ ಜೀನ್ ಪಿಯಾಜೆ ಮೊದಲಾದ ಮನೋವಿಜ್ಞಾನಿಗಳು ಈ ಜ್ಞಾನ ಗ್ರಹಿಕೆ ಪಂಥಕ್ಕೆ ಸೇರಿದವರು. ಇವರು ಕಲಿಯುವವನ ಸ್ವತಃ ಚಿಂತಿಸುವ, ರಚನಾತ್ಮಕವಾಗಿರುವ, ಸ್ವತಂತ್ರ ತೀರ್ಮಾನ ಕೈಗೊಳ್ಳುವಂತೆ ಅನುವು ಮಾಡುವ ಪಠ್ಯವಸ್ತು ಹಾಗೂ ಬೋಧನಾವಿಧಾನಕ್ಕೆ ಸಲಹೆ ನೀಡುತ್ತಾರೆ.

ಮಾನವನು ಆಲೋಚನೆ ಹಾಗೂ ಪಶ್ಚಾವಲೋಚನೆಯಂತಹ ಉನ್ನತ ಸಾಮರ್ಥ್ಯಗಳನ್ನು ಹೊಂದಿರುವುದರಿಂದ ಉಳಿದೆಲ್ಲ ಜೀವಿಗಳಿಗಿಂತ ಉತ್ಕೃಷ್ಟನೆನಿಸಿದ್ದಾನೆ. ಮಾನವ ಶಕ್ತಿಯು ವಿಶಾಲವಾದ ಸಂಸ್ಕೃತಿ, ವಿಜ್ಞಾನ ಹಾಗೂ ಜ್ಞಾನದ ವ್ಯವಸ್ಥೆಯನ್ನು ಉತ್ಪಾದಿಸಿದೆ. ಇದು ಸಾಮಾಜಿಕ ಒಳಿತಿಗೆ ಅಗತ್ಯ ಹಾಗೂ ಅನಿವಾರ್ಯವೂ ಹೌದು. ಆದ್ದರಿಂದ ಶಿಕ್ಷಣದ ಮೂಲಕ ಉದ್ದೇಶವು ಮಕ್ಕಳಲ್ಲಿ ಸ್ವತಂತ್ರ ಚಿಂತನೆಯನ್ನು ರೂಢಿಸುವುದೇ ಆಗಿದೆ.

ಆಲೋಚನೆಯ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು.




ಶಿಕ್ಷಣ ತಜ್ಞ ಬೆಂಜಮಿನ್ ಬ್ಲೂಮ್ (1956) ರಚಿಸಿದ ಸಂಜ್ಞಾನಾತ್ಮಕ ವಲಯವು ಗುಣಾತ್ಮಕವಾದ ಹಲವು ರೀತಿಯ ಆಲೋಚನೆಗಳನ್ನು ಹೊರಹೊಮ್ಮಿಸಿದ ವರ್ಗೀಕರಣ ಪದ್ಧತಿ. ಇದು ವಿಶ್ವದಾದ್ಯಂತ ಒಪ್ಪಿಕೊಂಡ ಮಾದರಿ. ಆಲೋಚನೆಗೆ ಸಂಬಂಧಿಸಿದ ಕೌಶಲಗಳನ್ನು ತಳಮಟ್ಟದಿಂದ ಆರಂಭಿಸಿ ಉನ್ನತ ಮಟ್ಟದವರೆಗೆ ವ್ಯವಸ್ಥೆಗೊಳಿಸಿದ ರೀತಿಯನ್ನು ಇದು ಸೂಚಿಸುತ್ತದೆ. ನಂತರ ಆತನ ವಿದ್ಯಾರ್ಥಿಗಳಾದ ಆಂಡರ್‌ಸನ್ ಹಾಗೂ ಕ್ರಥ್ವಾಲ್ ಪರಿಷ್ಕರಿಸಿದ ಮಾದರಿಯನ್ನು ನೀಡಿದರು. (2001)

ಇದು ಉದ್ದೇಶಕ್ಕೆ ಸಂಬಂಧಿಸಿದ ಎರಡು ಆಯಾಮಗಳನ್ನು ಒಳಗೊಂಡಿದೆ 1. ಕಲಿಕೆಗೆ ಬೇಕಾದ ವಿಷಯ (ಜ್ಞಾನ)ಕ್ಕೆ ಸಂಬಂಧಿಸಿದ ನಾಮಪದಗಳು ಹಾಗೂ 2. ಆ ವಿಷಯ ಕಲಿಯುವಾಗ ವಿದ್ಯಾರ್ಥಿಗಳು ಏನು ಮಾಡುತ್ತಾರೆ ಎಂದು ವಿವರಿಸುವ ಕ್ರಿಯಾಪದಗಳು. ಅಂದರೆ ಜ್ಞಾನ ಸಂಗ್ರಹಣೆಗೆ ಬಳಸುವ ಪ್ರಕ್ರಿಯೆ.

I. **ಜ್ಞಾನದ ಆಯಾಮ** : ಇದು ನಾಲ್ಕು ಪಂಗಡಗಳನ್ನು ಹೊಂದಿದೆ. ಅವುಗಳೆಂದರೆ,

ಅ) **ಸತ್ಯಾಂಶಗಳ ಜ್ಞಾನ** : ಒಂದು ವಿಷಯದ ಜ್ಞಾನ ಹಾಗೂ ಸಮಸ್ಯೆ ಪರಿಹಾರಕ್ಕೆ ಅಗತ್ಯವಾದ ಮೂಲ ಘಟಕಾಂಶಗಳು

1. ಪದಗಳ ಜ್ಞಾನ
2. ನಿರ್ದಿಷ್ಟ ವಿವರಗಳ ಹಾಗೂ ಘಟಕಾಂಶಗಳ ಜ್ಞಾನ.

ಆ) **ಸಂಪ್ರತ್ಯಯ ಜ್ಞಾನ** : ವಿಶಾಲ ವಿಷಯ ಕ್ಷೇತ್ರದಲ್ಲಿನ ಮೂಲ ಘಟಕಾಂಶಗಳ ನಡುವೆ ಪರಸ್ಪರ ಸಂಬಂಧ.

1. ವರ್ಗೀಕರಣ ಹಾಗೂ ಪಂಗಡಗಳ ಜ್ಞಾನ
2. ತತ್ವಗಳು ಹಾಗೂ ಸಾಮಾನ್ಯೀಕರಣಗಳ ಜ್ಞಾನ.
3. ಸಿದ್ಧಾಂತ, ಮಾದರಿ ಹಾಗೂ ರಚನೆಗಳ ಜ್ಞಾನ.

Digitised by Bharatavani, CIIL

ಇ) **ಕಾರ್ಯರೀತಿ ಜ್ಞಾನ :** ಕಾರ್ಯಕೈಗೊಳ್ಳುವ ಕ್ರಮ–ವಿಧಾನ, ಕೌಶಲ, ತಂತ್ರ, ಹಾಗೂ ತಂತ್ರಜ್ಞಾನದ ಬಳಕೆ

1. ವಿಷಯ ನಿರ್ದಿಷ್ಟವಾದ ಕೌಶಲಗಳು
2. ವಿಷಯ ನಿರ್ದಿಷ್ಟವಾದ ತಂತ್ರಗಳು ಹಾಗೂ ವಿಧಾನಗಳ ಜ್ಞಾನ
3. ಸೂಕ್ತ ಕ್ರಮಗಳನ್ನು / ವಿಧಾನಗಳನ್ನು ಪತ್ತೆ ಮಾಡುವ ಲಕ್ಷಣಗಳ ಜ್ಞಾನ

ಈ) **ಸ್ವಸಂಜ್ಞಾತ್ಮಕ ಜ್ಞಾನ :** ತನ್ನ ಜ್ಞಾನದ ಬಗ್ಗೆ ಜ್ಞಾನ ಹಾಗೂ ಸಾಮಾನ್ಯ ಸಂಜ್ಞಾನದ ಮೇಲಿನ ಜ್ಞಾನ

1. ಕ್ರಮಯುಕ್ತ ಜ್ಞಾನ
2. ಸಂಜ್ಞಾನಾತ್ಮಕ ಕೆಲಸಗಳ ಬಗ್ಗೆ ಜ್ಞಾನ, ಸೂಕ್ತ ಸಾಂದರ್ಭಿಕ ಹಾಗೂ ಅನುಬಂಧಿತ ಜ್ಞಾನ ಸೇರಿದಂತೆ.
3. ಸ್ವಜ್ಞಾನ.

## II. ಪ್ರಕ್ರಿಯೆ ಆಯಾಮ

**ನವಪದಗಳು**

**ಅಂಡರ್‌ಸನ್ ಮತ್ತು ಕ್ರಥಾಲ್ (2001)**

| |
|---|
| **ಸೃಷ್ಟಿಸುವಿಕೆ**<br>ಹೊಸಕಲ್ಪನೆ, ಉತ್ಪಾದನೆ ಅಥವಾ ವಸ್ತುಗಳನ್ನು ನೋಡುವ ರೀತಿ, ವಿನ್ಯಾಸಗೊಳಿಸುವಿಕೆ ಹಾಗೂ ಆವಿಷ್ಕರಿಸುವಿಕೆ. |
| **ಮೌಲ್ಯೀಕರಿಸುವಿಕೆ**<br>ಒಂದು ನಿರ್ಧಾರದ ಅಥವಾ ಕಾರ್ಯದ ರೀತಿಯನ್ನು ತೀರ್ಮಾನಿಸುವಿಕೆ. ತಪಾಸಣೆಗೊಳಿಸುವಿಕೆ. ಪ್ರಾಕಲ್ಪಿಸುವಿಕೆ. ರಚಿಸುವಿಕೆ, ಟೀಕಿಸುವಿಕೆ ಪ್ರಾಯೋಗಿಸುವಿಕೆ ಹಾಗೂ ತೀರ್ಮಾನಿಸುವಿಕೆ. |
| **ವಿಶ್ಲೇಷಿಸುವಿಕೆ**<br>ಗ್ರಹಿಕೆಗೆ ಸಂಬಂಧಗಳನ್ನು ಹುಡುಕಲಿಕ್ಕೆ ಮಾಹಿತಿಯನ್ನು ಪರಿಚಿತ ಹಾಗೂ ಅಪರಿಚಿತ ಸನ್ನಿವೇಶದಲ್ಲಿ ಬಳಸುವಿಕೆ, ಕಾರ್ಯರೂಪಕ್ಕೆ ತರುವಿಕೆ, ಕೈಗೊಳ್ಳುವಿಕೆ ಮತ್ತು ಉಪಯೋಗಿಸುವಿಕೆ. |
| **ಗ್ರಹಿಸುವಿಕೆ**<br>ಕಲ್ಪನೆಗಳನ್ನು ಹಾಗೂ ಪರಿಕಲ್ಪನೆಗಳನ್ನು ವಿವರಿಸುವುದು, ಅರ್ಥನಿರೂಪಿಸುವಿಕೆ, ಸಾರಾಂಶಿಸುವಿಕೆ, ವರ್ಗೀಕರಿಸುವಿಕೆ, ಪುನರ್ ಪೋಷಿಸುವಿಕೆ. |
| **ಸ್ಮರಿಸುವಿಕೆ**<br>ಮಾಹಿತಿಯನ್ನು ಸ್ಮರಿಸುವಿಕೆ. ಗುರುತಿಸುವಿಕೆ, ಪತ್ತೆಮಾಡುವಿಕೆ, ವಿಶದೀಕರಿಸುವಿಕೆ, ಮರುಕಳಿಕೆ ಹಾಗೂ ಹೆಸರಿಸುವಿಕೆ. |

| | **ಸಂಜ್ಞಾನಾತ್ಮಕ ವಲಯ – ವಿವರಣೆ** | |
|---|---|---|
| **ಹಂತಗಳು** | **ಕ್ರಿಯೆಗಳು** | **ಉತ್ಪನ್ನಗಳು** |
| ಅ) ಸ್ಮರಿಸುವಿಕೆ | ಪುನಃವ್ಯವಸ್ಥಿಸುವಿಕೆ<br>ಪಟ್ಟಿಮಾಡುವಿಕೆ<br>ವಿವರಿಸುವಿಕೆ<br>ಗುರುತಿಸುವಿಕೆ<br>ಮರುಕಳಿಕೆ<br>ಹೆಸರಿಸುವಿಕೆ<br>ನೆಲೆಗುರುತಿಸುವಿಕೆ<br>ಕಂಡು ಹಿಡಿಯುವಿಕೆ | ರಸಪ್ರಶ್ನೆ<br>ವ್ಯಾಖ್ಯೆ<br>ಸತ್ಯಾಂಶ<br>ಕಾರ್ಯಹಾಳೆ<br>ಪರೀಕ್ಷೆ<br>ಹೆಸರಿಸು<br>ಪಟ್ಟಿ<br>ಕಾರ್ಯ ಪುಸ್ತಕ<br>ಪುನರ್ ಉತ್ಪಾದನೆ |

Digitised by Bharatavani, CIIL

| | | |
|---|---|---|
| ಆ) ಅರಿಯುವಿಕೆ | ಅರ್ಥ ನಿರೂಪಿಸುವಿಕೆ<br>ವಿನಾಯಿತಿಸುವಿಕೆ<br>ಸಾರಾಂಶೀಕರಿಸುವಿಕೆ<br>ಅನುಮಿತಿಸುವಿಕೆ<br>ಪುನರ್ ಪೋಷಿಸುವಿಕೆ<br>ವರ್ಗೀಕರಿಸುವಿಕೆ<br>ಹೋಲಿಸುವಿಕೆ<br>ವಿವರಿಸುವಿಕೆ | ಕಂಠಪಾಠ<br>ಸಾರಾಂಶ<br>ಸಂಗ್ರಹ<br>ವಿವರಣೆ<br>ಪ್ರದರ್ಶನ<br>(ಹೇಳುವಿಕೆ)<br>ಉದಾಹರಣೆ<br>ರಸಪ್ರಶ್ನೆ<br>ಪಟ್ಟಿಮಾಡು |

| ಹಂತಗಳು | ಕ್ರಿಯೆಗಳು | ಉತ್ಪನ್ನಗಳು |
|---|---|---|
| ಇ. ಅನ್ವೇಷಿಸುವಿಕೆ | ಹೋಲಿಕೆ<br>ವ್ಯವಸ್ಥೀಕರಿಸುವಿಕೆ<br>ಪುನರ್ ರಚಿಸುವಿಕೆ<br>ವರ್ಗಲಕ್ಷಿಸುವಿಕೆ<br>ಸ್ಥೂಲವಿವರಿಸುವಿಕೆ<br>ನಿರ್ಮಿತಿಸುವಿಕೆ<br>ಸಮಗ್ರಿಸುವಿಕೆ | ಗುರುತಿಸುವಿಕೆ<br>ಸ್ಥೂಲವಿವರ<br>ಕಾರ್ಯ ಪುಸ್ತಕ<br>ಪುನರ್ ಉತ್ಪಾದನೆ<br><br>ಸರ್ವೇಕ್ಷಣೆ<br>ಡೇಟಾಬೇಸ್<br>ಮೊಬೈಲ್<br>ಅಮೂರ್ತ ವರದಿ<br>ನಕ್ಷೆ<br>ಸ್ಪ್ರೇಡ್ ಶೀಟ್<br>ತಾಳೆ ಪಟ್ಟಿ<br>ತಖ್ತೆ<br>ಸ್ಥೂಲ ವಿವರ |
| ಈ. ಅನ್ವಯಿಸುವಿಕೆ | ಕಾರ್ಯರೂಪಿಸುವಿಕೆ<br>ಕೈಗೊಳ್ಳುವಿಕೆ<br>ಉಪಯೋಗಿಸುವಿಕೆ<br>ಕಾರ್ಯ ನಿರ್ವಹಿಸುವಿಕೆ | ಉದಾಹರಣೆ ಸಹಿತ ವಿವರಣೆ<br>ಸಿಮುಲೇಷನ್<br>ಶಿಲ್ಪಕಲೆ<br>ಪ್ರಾತ್ಯಕ್ಷಿಕೆ<br>ಪ್ರೆಸೆಂಟೇಶನ್<br>ಸಂದರ್ಶನ<br>ಕಾರ್ಯನಿರ್ವಹಣೆ<br>ದಿನಚರಿ ಪುಸ್ತಕ<br>ಪತ್ರಿಕೆ |
| ಉ.ಮೌಲ್ಯೀಕರಿಸುವಿಕೆ | ತಪಾಸಿಸುವಿಕೆ<br>ಪ್ರಾಕಲ್ಪಿಸುವಿಕೆ<br>ಟೀಕಿಸುವಿಕೆ<br>ಪ್ರಾಯೋಗಿಸುವಿಕೆ<br>ತೀರ್ಪಿಸುವಿಕೆ<br>ಕಂಡುಹಿಡಿಯುವಿಕೆ<br>ನಿಯಂತ್ರಿಸುವಿಕೆ | ಚರ್ಚೆ<br>ಚರ್ಚಾಗೋಷ್ಠಿ<br>ವರದಿ<br>ಮೌಲ್ಯಮಾಪನ<br>ಅನ್ವೇಷಣೆ<br>ತೀರ್ಪು<br>ಸಮಾಪ್ತಿ<br>ಪಟ್ಟು ಹಿಡಿಯುವಿಕೆ<br>ಮಾತುಗಾರಿಕೆ |

Digitised by Bharatavani, CIIL

| ಉಓ. ಸೃಷ್ಟಿಸುವಿಕೆ | ವಿನ್ಯಾಸಗೊಳಿಸುವಿಕೆ<br>ರಚಿಸುವಿಕೆ<br>ಯೋಜಿಸುವಿಕೆ<br>ಉತ್ಪಾದಿಸುವಿಕೆ<br>ಆವಿಷ್ಕರಿಸುವಿಕೆ<br>ಕಂಡುಹಿಡಿಯುವಿಕೆ<br>ನೋಡುವಿಕೆ | ಸಿನಿಮಾ (ಚಲನಚಿತ್ರ)<br>ಕತೆ<br>ಯೋಜನೆ<br>ಹೊಸ ಆಟ<br>ಹಾಡು<br>ಮಾಧ್ಯಮ ಉತ್ಪಾದನೆ<br>ಜಾಹೀರಾತು<br>ಬಣ್ಣ ಹಚ್ಚುವಿಕೆ |
|---|---|---|

ಬ್ಲೂಮನ ಪರಿಷ್ಕರಿಸಿದ ವರ್ಗೀಕರಣದ ಸಂಜ್ಞಾನಾತ್ಮಕ ವಲಯದ ಉದಾಹರಣೆ – ಬ್ಯಾಟರಿಗಳು

| ಹಂತಗಳು | ಉದಾಹರಣೆಯ ವರ್ತನೆಗಳು |
|---|---|
| 1. ಸ್ಮರಿಸುವಿಕೆ | –ಮನೆಯಲ್ಲಿ ಬಳಸುವ ಬ್ಯಾಟರಿಗಳ ಉಪಯೋಗಗಳನ್ನು ಮತ್ತು ತಿಳಿದುದೆಲ್ಲವನ್ನು ಪಟ್ಟಿಮಾಡುವುದು.<br>–ನಿಮಗೆ ತಿಳಿದ ವಿವಿಧ ಗಾತ್ರದ ಬ್ಯಾಟರಿಗಳನ್ನು ಹೆಸರಿಸುವುದು.<br>–ನೀವು ಬ್ಯಾಟರಿಗಳನ್ನು ಕೊಳ್ಳಬಹುದಾದ ಎಲ್ಲ ಸ್ಥಳಗಳನ್ನು ಹೆಸರಿಸುವುದು.<br>–ಅಂಗಡಿ ಸಾಮಾನಿನ ದರ ಪಟ್ಟಿಯನ್ನು ನೋಡಿ ಎಲ್ಲ ರೀತಿಯ ಬ್ಯಾಟರಿಗಳ ದರಗಳನ್ನು ಪಟ್ಟಿಮಾಡುವುದು. |
| 2. ಅರಿಯುವಿಕೆ | ಒಂದು ಬ್ಯಾಟರಿ ರಚನೆ ವಿವರಿಸುವುದು.<br>ಒಂದು ಬ್ಯಾಟರಿಯ ಚಿತ್ರ ಬರೆದು ಭಾಗಗಳನ್ನು ಗುರುತಿಸುವುದು.<br>ಬ್ಯಾಟರಿಯು ಕಾರ್ಯ ನಿರ್ವಹಿಸುವುದನ್ನು ವಿವರಿಸುವುದು. |
| 3. ಅನ್ವಯಿಸುವಿಕೆ | ಒಂದು ಸರಣಿಯ ಚಿತ್ರವನ್ನು ಬರೆಯುವುದು ಹಾಗೂ ಪ್ರಾತ್ಯಕ್ಷಿಕೆ ನೀಡುವುದು.<br>ಬ್ಯಾಟರಿಗಳನ್ನು ಟಾರ್ಚ್, ಟೇಪ್‌ರೆಕಾರ್ಡ್‌ರ್, ಅಲಾರಾಂ ಗಡಿಯಾರಕ್ಕೆ ಹೇಗೆ ಅಳವಡಿಸುವುದೆಂದು ಉದಾಹರಣೆಸಹಿತ ವಿವರಿಸುವುದು. |
| 4. ವಿಶ್ಲೇಷಿಸುವಿಕೆ | ಆಟಿಕೆ, ಪುಟ್ಟ ಉಪಕರಣಗಳು ಹಾಗೂ ಸ್ವಾಸ್ಥ್ಯ ಉಪಕರಣಗಳು ಮುಂತಾದ ಪ್ರಕ್ರಿಯೆಗಳಲ್ಲಿ ಬ್ಯಾಟರಿಗಳು ಹೇಗೆ ಬದಲಾವಣೆಯನ್ನು ತಂದಿವೆ ಎಂಬುದನ್ನು ಕಂಡುಹಿಡಿಯುವುದು. |
| 5. ಮೌಲೀಕರಿಸುವಿಕೆ | ಒಂದು ನಿಗದಿತ ಮಾದರಿಯ ಬ್ಯಾಟರಿಯನ್ನು ಮೌಲೀಕರಿಸಲು ಗುಣಲಕ್ಷಣಗಳನ್ನು ನಿಗದಿ ಪಡಿಸುವುದು. ಅವುಗಳನ್ನು ಮುಂದಿನ ಬ್ಯಾಟರಿಗಳನ್ನು ಕೊಳ್ಳುವಾಗ ಬಳಸುವುದು. |
| 6. ಸೃಷ್ಟಿಸುವಿಕೆ | ಬ್ಯಾಟರಿ ಬಳಸಿ ಕಾರ್ಯನಿರ್ವಹಿಸುವ ಒಂದು ಆಟಿಕೆಯನ್ನು ಆವಿಷ್ಕರಿಸಿ. ಎಲ್ಲಿ ಹಾಗೂ ಯಾವ ಬ್ಯಾಟರಿಯನ್ನು ಬಳಸಬೇಕೆಂಬುದಕ್ಕೆ ಒಂದು ವಿನ್ಯಾಸವನ್ನು ರಚಿಸುವುದು. |

ಹೀಗೆ ಸಂಜ್ಞಾನಾತ್ಮಕ ವಲಯವು ಅತಿ ಮುಖ್ಯವಾದ ವಲಯವಾಗಿದ್ದು ವಿದ್ಯಾರ್ಥಿಗಳು ಅಗತ್ಯವಾಗಿ ಬೆಳೆಸಿಕೊಳ್ಳಬೇಕಾದ ವರ್ತನೆಗಳನ್ನು ಕ್ರಮವಾಗಿ ಸೂಚಿಸುತ್ತದೆ.

ಬ್ಲೂಮನಿಂದ ನೀಡಲ್ಪಟ್ಟ ಹಾಗೂ ಆತನ ವಿದ್ಯಾರ್ಥಿಗಳಿಂದ ಪರಿಷ್ಕರಿಸಲ್ಪಟ್ಟ ಹಂತಗಳು ಜ್ಞಾನ ಹಾಗೂ ಆಲೋಚನೆ ವಿಕಾಸಕ್ಕೆ ಸೂಕ್ತವಾಗಿ ವಿವರಿಸಲ್ಪಟ್ಟಿವೆ ಮತ್ತು ಮಾನವನ ಆಲೋಚನಾ ವೃದ್ಧಿಗೆ ಸಹಾಯಕವಾಗಿವೆ.

–ಎಸ್. ಗೀ

Digitised by Bharatavani, CIIL

# ಭ

## ಭಾರತದ ಮುಕ್ತ ವಿಶ್ವವಿದ್ಯಾನಿಲಯಗಳು

ಭಾರತದಲ್ಲಿ ಪ್ರಸ್ತುತ ಒಂದು ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಹನ್ನೆರಡು ರಾಜ್ಯ ಮಟ್ಟದ ಮುಕ್ತ ವಿಶ್ವವಿದ್ಯಾನಿಲಯಗಳಿವೆ, ಇವಲ್ಲದೆ ಭಾರತದ ಅನೇಕ ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ದೂರಶಿಕ್ಷಣ ನಿರ್ದೇಶನಾಲಯಗಳನ್ನು (Directorate of Distance Education) ಆರಂಭಿಸಿ ದೂರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿವೆ. ಈ ನಿರ್ದೇಶನಾಲಯಗಳು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಸಮಿತಿಯ (Distance Education Council) ನಿಯಮಗಳಿಗೆ ಅನುಗುಣವಾಗಿ ನಡೆಸಲ್ಪಡುತ್ತವೆ.

### ೧. ಡಾ. ಬಿ.ಆರ್. ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ, ಹೈದರಾಬಾದ್ (ಆಂಧ್ರಪ್ರದೇಶ)

ಡಾ. ಬಿ.ಆರ್. ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ (BRAOU) ಹಿಂದೆ ಆಂಧ್ರಪ್ರದೇಶ ಮುಕ್ತ ವಿಶ್ವವಿದ್ಯಾನಿಲಯ ಎಂದು ಕರೆಯಲ್ಪಡುತ್ತಿತ್ತು. ಇದು 26 ಆಗಸ್ಟ್ 1982ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ಭಾರತದಲ್ಲಿಯೇ ಮೊಟ್ಟ ಮೊದಲನೆಯ ಮುಕ್ತ ವಿಶ್ವವಿದ್ಯಾನಿಲಯವಾಗಿದ್ದು ಭಾರತೀಯ ಶಿಕ್ಷಣ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯವನ್ನು ಪ್ರಾರಂಭಿಸಿತು. ಡಾ.ಬಿ.ಆರ್. ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ ಹೊಸ ಮಾರ್ಗದ ಪ್ರವರ್ತಕ ಎಂದು ಕರೆಯಲ್ಪಡಬಹುದಾದ ಕಾರಣ ಅದರ ನಂತರ ಇನ್ನೂ ಅನೇಕ ಮುಕ್ತ ವಿಶ್ವವಿದ್ಯಾನಿಲಯಗಳು ಭಾರತದಲ್ಲಿ ಅಸ್ತಿತ್ವಕ್ಕೆ ಬಂದವು.

1982 ರಲ್ಲಿ ಆಂಧ್ರಪ್ರದೇಶ ಸರ್ಕಾರವು ಪ್ರೊ. ಜಿ. ರಾಮರೆಡ್ಡಿ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಿ, ಆ ರಾಜ್ಯದಲ್ಲಿ ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದರ ಕುರಿತು ವರದಿ ನೀಡುವಂತೆ ಹೇಳಿತು. ಈ ವರದಿ ಆಧಾರದ ಮೇಲೆ (ಆಂಧ್ರ ಪ್ರದೇಶ ಸರ್ಕಾರಿ ವರದಿ 1982) ಆಂಧ್ರಪ್ರದೇಶ ಶಾಸಕಾಂಗ ಒಂದು ಕಾಯ್ದೆಯ ಮೂಲಕ ಈ ವಿಶ್ವವಿದ್ಯಾನಿಲಯವನ್ನು ಆಗಸ್ಟ್ 26, 1982ರಲ್ಲಿ ಪ್ರಾರಂಭ ಮಾಡಿತು. (ಆಂಧ್ರಪ್ರದೇಶ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ 1982).

### ೨. ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ (IGNOU) ನವದೆಹಲಿ

ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯವನ್ನು 1985ರಲ್ಲಿ ಸಂಸತ್ತಿನ ಅನ್ವಯ, ಸೆಪ್ಟಂಬರ್ 25, 1985ರಲ್ಲಿ ನವದೆಹಲಿಯಲ್ಲಿ ಸ್ಥಾಪಿಸಲಾಯಿತು. ಇದನ್ನು ಲಂಡನ್ನಿನ ಬ್ರಿಟಿಷ್ ಮುಕ್ತ ವಿಶ್ವವಿದ್ಯಾನಿಲಯದ ಮಾದರಿಯ ಆಧಾರದ ಮೇಲೆ ಸ್ಥಾಪಿಸಲಾಯಿತು.

ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಬೋಧನಾ ವಿಧಾನಗಳು, ಕಲಿಕೆಯ ಸ್ಥಾನ, ಕೋರ್ಸ್‌ಗಳ ಜೊತೆಗೆ ಪ್ರವೇಶಾರ್ಹತೆಗಳು, ಪ್ರವೇಶ ಮೌಲ್ಯಮಾಪನ ಇತ್ಯಾದಿ ವಿಷಯಗಳಲ್ಲಿ ಉನ್ನತ ಶಿಕ್ಷಣದಲ್ಲಿ ನಮ್ಯತೆ ಇರುವ ಮುಕ್ತ ಶಿಕ್ಷಣ ವ್ಯವಸ್ಥೆಯನ್ನು ಅನುಸರಿಸುತ್ತದೆ. ಇದಕ್ಕಾಗಿ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಸಮಗ್ರ ಬೋಧನೆ ತಂತ್ರವನ್ನು ಅನುಸರಿಸುತ್ತಿದೆ. ಇದು ಬೋಧನಾ ತಂತ್ರ, ಮುದ್ರಿತ ಸಾಮಗ್ರಿಗಳು, ಆಡಿಯೋ ಮತ್ತು ವೀಡಿಯೋ ಕ್ಯಾಸೆಟ್‌ಗಳು, ರೇಡಿಯೋ ಪ್ರಸಾರ, ಶೈಕ್ಷಣಿಕ ದೂರದರ್ಶನ ವಾಹಕಗಳು, ದೂರ ಸಮ್ಮೇಳನದ ವೀಡಿಯೋ ಸಮ್ಮೇಳನ, ಮುಖಾಮುಖಿ ಸಮಾಲೋಚನೆ, ವಿಸ್ತೃತ ಸಂಪರ್ಕ ಕಾರ್ಯಕ್ರಮಗಳನ್ನು ಒಳಗೊಳ್ಳುತ್ತದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅಧ್ಯಯನ ಕೇಂದ್ರಗಳನ್ನು ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲಾಗಿದೆ. ನಿರಂತರ ಮೌಲ್ಯಮಾಪನ ಮತ್ತು ಅಂತಿಮ ಪರೀಕ್ಷೆಯನ್ನು ಜಾರಿಗೊಳಿಸುತ್ತದೆ. ಶಿಕ್ಷಣವನ್ನು ಪ್ರಭಾವಯುತವಾಗಿಸಲು ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಶಿಕ್ಷಣ ನೀಡಲು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು ಯಥೇಚ್ಛವಾಗಿ ಬಳಸಿಕೊಳ್ಳುತ್ತಿದೆ.

ತನ್ನ ಜ್ಞಾನವಾಣಿ (ಎಫ್.ಎಂ. ರೇಡಿಯೋ) ಮತ್ತು ಜ್ಞಾನದರ್ಶನ ಎನ್ನುವ ದೂರದರ್ಶನ ವಾಹಿನಿ ಮೂಲಕ ಪಾಠಗಳನ್ನು ಬಿತ್ತರಿಸುತ್ತದೆ. ಸದ್ಯದಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಸುಮಾರು 50 ಶೈಕ್ಷಣಿಕ ಕಾರ್ಯಕ್ರಮಗಳನ್ನು ನೀಡುತ್ತಿದೆ. ಇವುಗಳಲ್ಲಿ ಸ್ನಾತಕೋತ್ತರ ಮತ್ತು ಸ್ನಾತಕ ವಿಧದ ಕಾರ್ಯಕ್ರಮಗಳು, ಅನೇಕ ಸ್ನಾತಕೋತ್ತರ ಡಿಪ್ಲೊಮಾ ಕಾರ್ಯಕ್ರಮಗಳು ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳು ಸೇರಿವೆ. ಇವಲ್ಲದೆ ಡಾಕ್ಟರೇಟ್ (ಪಿಹೆಚ್.ಡಿ) ಕಾರ್ಯಕ್ರಮವನ್ನು ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ನೀಡುತ್ತಿದೆ.

1987 ರಿಂದ 2000ದ ವರ್ಷದವರೆಗಿನ ಕೋರ್ಸ್ ಹಾಗೂ ಕಾರ್ಯಕ್ರಮಗಳು ಮತ್ತು ವಿದ್ಯಾರ್ಥಿ ಪ್ರವೇಶಾತಿಗೆ ಸಂಬಂಧಿಸಿದ ಅಂಕಿ ಅಂಶಗಳು ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಇದುವರೆಗೆ ಮಾಡಿದ ಪ್ರಗತಿಯನ್ನು ತೋರಿಸುತ್ತದೆ. 1987ರಲ್ಲಿ ಇದ್ದ ಎರಡು ಕಾರ್ಯಕ್ರಮಗಳು 2000 ಹೊತ್ತಿಗೆ 50ಕ್ಕೆ ಏರಿದೆ. ಇದೇ ರೀತಿಯಲ್ಲಿ 1987 ರಲ್ಲಿ ಇದ್ದ ವಿದ್ಯಾರ್ಥಿ ಸಂಖ್ಯೆ 1521 ರಿಂದ 2000ನೇ ವರ್ಷಕ್ಕೆ 1965ಕ್ಕೆ ಏರಿದೆ. ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ದೇಶಾದ್ಯಂತ ಇರುವ ಪ್ರಾದೇಶಿಕ ಮತ್ತು ಅಧ್ಯಯನ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ವೈವಿಧ್ಯಪೂರ್ಣವಾದ ಬೆಂಬಲ ಸೇವೆಗಳನ್ನು ಒದಗಿಸುತ್ತಿದೆ.

ದೂರ ಶಿಕ್ಷಣ ಮೂಲಕ ದೇಶದ ಮುಕ್ತ ದೂರ ಶಿಕ್ಷಣ ವ್ಯವಸ್ಥೆಗಳನ್ನು ಸಂಯೋಜಿಸಿ ಅವುಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಸೇರಿದಂತೆಯೇ ದೂರಶಿಕ್ಷಣ ಸಮಿತಿಯನ್ನು (Distance Education Council) ಸ್ಥಾಪಿಸಲಾಗಿದೆ. ಇದು ದೂರಶಿಕ್ಷಣ ವ್ಯವಸ್ಥೆಗೆ ಮತ್ತು ಮುಕ್ತ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅನುಸರಿಸಬೇಕಾದ ಮಾನಕಗಳನ್ನು (Standard) ನಿರ್ಧರಿಸುವುದಲ್ಲದೆ ದೂರ ಶಿಕ್ಷಣ ಸಂಸ್ಥೆಗಳಿಗೆ ತಾಂತ್ರಿಕ ಸಲಕರಣೆಗಳನ್ನು, ಸಾಂಸ್ಥಿಕ ಸುಧಾರಣೆ, ವೃತ್ತಿಪರ ಸಿಬ್ಬಂದಿಯ ವಿಕಾಸ ಮತ್ತು ತರಬೇತಿ, ವಿದ್ಯಾರ್ಥಿ ಬೆಂಬಲ ಸೇವೆಗಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಕಂಪ್ಯೂಟರೀಕರಣ ಮತ್ತು ಅಂತರ್‌ಜಾಲ ವ್ಯವಸ್ಥೆ ಮುಂತಾದವುಗಳಿಗೆ ಧನ ಸಹಾಯ ನೀಡುತ್ತದೆ. ಈ ಧನ ಸಹಾಯ ಮುಕ್ತ ವಿಶ್ವವಿದ್ಯಾನಿಲಯದ ಜೊತೆಗೆ ದೂರ ಶಿಕ್ಷಣ ನಿರ್ದೇಶನಾಲಯಗಳಿಗೆ ಲಭ್ಯವಿದೆ.

ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಇತರ ಮುಕ್ತ ವಿಶ್ವವಿದ್ಯಾನಿಲಯಗಳೊಂದಿಗೆ ಸಹಯೋಗವನ್ನು ಹೊಂದಿದೆ.

Digitised by Bharatavani, CIIL

ಸ್ಥಾಪನೆಯಾದ ಆರಂಭಿಕ ವರ್ಷಗಳಲ್ಲಿ ಬ್ರಿಟಿಷ್ ಮುಕ್ತ ವಿಶ್ವವಿದ್ಯಾನಿಲಯ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಸಿಬ್ಬಂದಿ ವಿಕಾಸಕ್ಕೆ ನೆರವು ನೀಡಿತ್ತು. ಈ ಸಹಯೋಗ ಇಂದಿಗೂ ಮುಂದುವರೆಯುತ್ತಿದೆ.

**೩. ನಳಂದ ಮುಕ್ತ ವಿಶ್ವವಿದ್ಯಾನಿಲಯ : ಪಾಟ್ನಾ (ಬಿಹಾರ)**

ನಳಂದ ಮುಕ್ತ ವಿಶ್ವವಿದ್ಯಾನಿಲಯ ಮಾರ್ಚ 1987ರಲ್ಲಿ ಬಿಹಾರ್ ವಿಧಾನಸಭೆಯು ಅನುಮೋದಿಸಿದ ಒಂದು ಸುಗ್ರೀವಾಜ್ಞೆಯ ಮೂಲಕ ಅಸ್ತಿತ್ವಕ್ಕೆ ಬಂದಿತು. ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಇರುವ ಈ ವಿಶ್ವವಿದ್ಯಾನಿಲಯಕ್ಕೆ ಹಿಂದೆ ಬಿಹಾರದಲ್ಲಿ ಇದ್ದ ಪ್ರಸಿದ್ಧ ಹಾಗೂ ಪ್ರಾಚೀನವಾದ ನಳಂದ ಬೌದ್ಧ ವಿಶ್ವವಿದ್ಯಾನಿಲಯದ ನೆನಪಿಗಾಗಿ "ನಳಂದ ಮುಕ್ತ ವಿಶ್ವವಿದ್ಯಾನಿಲಯ" ಎಂದು ನಾಮಕರಣ ಮಾಡಲಾಗಿದೆ. ನಂತರ 1995ರಲ್ಲಿ ನಳಂದ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆಯು ಜಾರಿಗೆ ಬಂದು ಈ ಕಾಯ್ದೆಯ ವ್ಯಾಪ್ತಿಯಲ್ಲಿ ವಿಶ್ವವಿದ್ಯಾನಿಲಯ ಸೇರಿಕೊಂಡಿತು. ವಿಶ್ವವಿದ್ಯಾನಿಲಯವು ಬಿಹಾರ ರಾಜ್ಯದಲ್ಲಿ ಉನ್ನತ ಶಿಕ್ಷಣದಿಂದ ವಂಚಿತವಾಗಿರುವ ವರ್ಗಗಳಿಗೆ ದೂರ ಹಾಗೂ ಮುಕ್ತ ಶಿಕ್ಷಣದ ಮೂಲಕ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದೆ. ವಿಶ್ವವಿದ್ಯಾನಿಲಯವು ಇತರ ಮುಕ್ತ ವಿಶ್ವವಿದ್ಯಾನಿಲಯಗಳಂತೆ ಪ್ರವೇಶ ಅರ್ಹತೆ, ಪ್ರವೇಶ ಮತ್ತು ಕಾರ್ಯಕ್ರಮಗಳ ಸಂರಚನೆಯಲ್ಲಿ ನಮ್ಯತೆಯ ತತ್ತ್ವವನ್ನು ಅನುಸರಿಸುತ್ತದೆ. ವಿಶ್ವವಿದ್ಯಾನಿಲಯ ಸ್ನಾತಕ ಪದವಿಗಳನ್ನು ಹಾಗೂ ಅನೇಕ ವಿಷಯಗಳಲ್ಲಿ ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ನೀಡುತ್ತದೆ. ಬಿಹಾರದ ಮುಖ್ಯ ಪಟ್ಟಣಗಳಾದ ಜೆಮ್‌ಷೆಡ್‌ಪುರ, ರಾಂಚಿ, ಕಟಿಹಾರ್, ಬಿತ್ತೀಯ ಮುಂತಾದ ನಗರದಲ್ಲಿ ಇರುವ ತನ್ನ 28 ಅಧ್ಯಯನ ಕೇಂದ್ರಗಳ ಮೂಲಕ ವಿಶ್ವವಿದ್ಯಾನಿಲಯ ಕಾರ್ಯ ನಿರ್ವಹಿಸುತ್ತದೆ.

**೪. ಯಶವಂತರಾವ್ ಚವ್ಹಾಣ್ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾನಿಲಯ, ನಾಸಿಕ್ (ಮಹಾರಾಷ್ಟ್ರ)**

ಮಹಾರಾಷ್ಟ್ರ ರಾಜ್ಯದಲ್ಲಿ ದೂರ ಶಿಕ್ಷಣ ಮಾಧ್ಯಮದ ಮೂಲಕ ಗುಣಮಟ್ಟದ ಉನ್ನತ ಶಿಕ್ಷಣವನ್ನು ನೀಡಲು ಮಹಾರಾಷ್ಟ್ರ ಸರ್ಕಾರ ನಾಸಿಕ್‌ನಲ್ಲಿ ಯಶವಂತರಾವ್ ಚವ್ಹಾಣ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾನಿಲಯವನ್ನು 1989ರಲ್ಲಿ ಆರಂಭಿಸಿತು. ಈಗ ಅದು ಈ ನಿಟ್ಟಿನಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಇದನ್ನು ಸಮೂಹ ವಿಶ್ವವಿದ್ಯಾನಿಲಯ ಅಥವಾ ಲೋಕ ವಿದ್ಯಾಪೀಠ ಎಂದೂ ಕರೆಯುತ್ತಾರೆ. ಈ ವಿಶ್ವವಿದ್ಯಾನಿಲಯವು ಮೊಟ್ಟಮೊದಲ ಬಾರಿಗೆ ಕೃಷಿ, ತಾಂತ್ರಿಕ ಶಿಕ್ಷಣ ಹಾಗೂ ಕಂಪ್ಯೂಟರ್ ಶಿಕ್ಷಣ ಮತ್ತು ಸಂಶೋಧನೆ ಇವುಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಒಟ್ಟಿಗೆ ಆರಂಭಿಸಿತು.

**೫. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ (BAOU), ಅಹಮದಾಬಾದ್ (ಗುಜರಾತ್)**

ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಗುಜರಾತ್ ರಾಜ್ಯದ ಅಹಮದಾಬಾದ್‌ನಲ್ಲಿ 1994ರಲ್ಲಿ ಸ್ಥಾಪಿಸಲಾಯಿತು. ಈ ವಿಶ್ವವಿದ್ಯಾನಿಲಯಕ್ಕೆ ದಲಿತ ನಾಯಕ "ಡಾ. ಬಾಬಾಸಾಹೇಬ್ ಅಂಬೇಡ್ಕರ್" ಹೆಸರು ನೀಡಬೇಕೆಂದು ತೀರ್ಮಾನಿಸಲಾಯಿತು. ಆದರೆ ಈ ಹಿಂದೆ ಆಂಧ್ರಪ್ರದೇಶದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ ಹೆಸರು ಇದ್ದುದರಿಂದ ವ್ಯತ್ಯಾಸ ಕಲ್ಪಿಸುವ ದೃಷ್ಟಿಯಿಂದ ಗುಜರಾತಿನ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಂಬೇಡ್ಕರ್ ಪೂರ್ಣ ಹೆಸರಿನಿಂದ ಕರೆಯಲಾಗಿದೆ. ಈ ವಿಶ್ವವಿದ್ಯಾನಿಲಯವು ಸಾಮಾನ್ಯ ಜನರಿಗೆ ಉನ್ನತ ಶಿಕ್ಷಣದ ಅವಕಾಶವನ್ನು ವಿಸ್ತರಿಸುವ ಗುರಿಯನ್ನು ಹೊಂದಿದೆ. ವಿಶ್ವವಿದ್ಯಾನಿಲಯದ ಸ್ಥಾಪನೆಯಿಂದ ಉನ್ನತ ಶಿಕ್ಷಣದಿಂದ ವಂಚಿತರಾಗಿರುವ ಸಮಾಜದ ವರ್ಗಗಳಿಗೆ ವರದಾನವೆನಿಸಿವೆ. ಈ ವಿಶ್ವವಿದ್ಯಾನಿಲಯ ಇತರ ಮುಕ್ತ ವಿಶ್ವವಿದ್ಯಾನಿಲಯಗಳಂತೆ ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ಹಿಂದಿ, ಇಂಗ್ಲಿಷ್ ಮತ್ತು ಗುಜರಾತಿ ಮಾಧ್ಯಮಗಳಲ್ಲಿ ನೀಡುತ್ತಿದೆ. ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಉತ್ತಮ ಪೋಷಕತ್ವ, ಸಂಪ್ರದಾಯಿಕ ಪ್ರಸೂತಿ, ದಾದಿಯರು, ಪರಿಸರ ಪ್ರಜ್ಞೆ, ಮುಂತಾದವುಗಳಲ್ಲಿ ಸರ್ಟಿಫಿಕೇಟ್ ಕೋರ್ಸುಗಳನ್ನು ನೀಡುತ್ತಿರುವುದು ಈ ವಿಶ್ವವಿದ್ಯಾನಿಲಯದ ವಿಶಿಷ್ಟತೆ ಎನಿಸಿದೆ.

**೬. ವರ್ಧಮಾನ್ ಮಹಾವೀರ ಮುಕ್ತ ವಿಶ್ವವಿದ್ಯಾನಿಲಯ, ಕೋಟಾ (ರಾಜಸ್ಥಾನ)**

ರಾಜಸ್ಥಾನದ ಕೋಟಾದಲ್ಲಿ 1987ರಲ್ಲಿ ಕೋಟಾ ಮುಕ್ತ ವಿಶ್ವವಿದ್ಯಾನಿಲಯ ಎಂಬ ಹೆಸರಿನಿಂದ ಆರಂಭವಾದ ವಿಶ್ವವಿದ್ಯಾನಿಲಯಕ್ಕೆ ನಂತರದಲ್ಲಿ ಜೈನಧರ್ಮದ ಸ್ಥಾಪಕ ಆದಿ ತೀರ್ಥಂಕರ ವರ್ಧಮಾನ ಮಹಾವೀರರ ನೆನಪಿಗಾಗಿ ವರ್ಧಮಾನ್ ಮಹಾವೀರ್ ಮುಕ್ತ ವಿಶ್ವವಿದ್ಯಾನಿಲಯ (ವಿ.ಎಂ.ಓ.ಯು) ಎಂದು ನಾಮಕರಣ ಮಾಡಲಾಯಿತು. ಈ ವಿಶ್ವವಿದ್ಯಾನಿಲಯ ತನ್ನ ಆರು ಪ್ರಾದೇಶಿಕ ಕೇಂದ್ರಗಳು ಹಾಗೂ 24 ಅಧ್ಯಯನ ಕೇಂದ್ರಗಳ ಮೂಲಕ ಕಾರ್ಯ ನಿರ್ವಹಿಸುತ್ತಿದೆ. ದೆಹಲಿಯಲ್ಲಿಯೂ ಇದರ ಒಂದು ಕೇಂದ್ರವಿದೆ. ಈ ವಿಶ್ವವಿದ್ಯಾನಿಲಯ ಕೇವಲ ಸಾಂಪ್ರದಾಯಿಕ ಕಲಿಕಾ ವಿಧಾನಕ್ಕೆ ಒತ್ತುಕೊಡದೆ ವಿದ್ಯಾರ್ಥಿಗಳಿಗೆ ಹೊಸ ವಿಧಾನಗಳಿಂದ ಕಲಿಯಲು ದೂರದರ್ಶನ ಹಾಗೂ ಇತರ ವಿಧಾನಗಳಿಗೂ ಒತ್ತು ಕೊಟ್ಟಿದೆ. ಇದರ ಅಧ್ಯಯನ ಕೇಂದ್ರಗಳು ರಜಾ ದಿನಗಳಂದು ಹಾಗೂ ರವಿವಾರವೂ ಸಹ ಕೆಲಸ ಮಾಡುತ್ತವೆ. ಇತರ ಮುಕ್ತ ವಿಶ್ವವಿದ್ಯಾನಿಲಯಗಳಂತೆ ಈ ಮುಕ್ತ ವಿಶ್ವವಿದ್ಯಾನಿಲಯವು ಅನೇಕ ಸ್ನಾತಕ, ಸ್ನಾತಕೋತ್ತರ ಮತ್ತು ಸೇವಾವಧಿ ಅಧ್ಯಾಪಕರಿಗೆ ಬಿ.ಎಡ್. ಎಂ.ಎಡ್. ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

**೭. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU) ಮೈಸೂರು**

ಇದರ ವಿವರಣೆಯನ್ನು ಸಂಪುಟ-2ರಲ್ಲಿ ಸೇರಿಸಿದೆ.

**೮. ನೇತಾಜಿ ಸುಭಾಷ್ ಮುಕ್ತ ವಿಶ್ವವಿದ್ಯಾನಿಲಯ (NSOU) ಕೋಲ್ಕತ್ತಾ (ಪಶ್ಚಿಮ ಬಂಗಾಳ)**

20 ಆಗಸ್ಟ್ 1997 ರ ಕಾಯ್ದೆ ಅನ್ವಯ ಇದು ಸ್ಥಾಪಿಸಲ್ಪಟ್ಟಿತು. ಇದಕ್ಕೆ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ "ನೇತಾಜಿ ಸುಭಾಷ್ ಚಂದ್ರಬೋಸ"ರ ನೆನಪಿಗಾಗಿ ಅವರ ಹೆಸರನ್ನು ಇಡಲಾಗಿದೆ. ಈ ವಿಶ್ವವಿದ್ಯಾನಿಲಯ ಕೋಲ್ಕತ್ತಾದಲ್ಲಿ ಇರುವ ತನ್ನ 4 ಕಚೇರಿಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ. ಇದು ಪಶ್ಚಿಮ ಬಂಗಾಳ ರಾಜ್ಯಾದ್ಯಂತ ಗುರುತಿಸಲಾಗಿರುವ ತನ್ನ ಅನೇಕ ಅಧ್ಯಯನ ಕೇಂದ್ರಗಳ ಮೂಲಕ ರಾಜ್ಯದ ವಂಚಿತ ಸಮೂಹಗಳು ಮತ್ತು ಅಭಾವ ಪೀಡಿತ ವರ್ಗಗಳಿಗೆ ಉನ್ನತ ಶಿಕ್ಷಣವನ್ನು ನೀಡುತ್ತಿದೆ. ಸದ್ಯದಲ್ಲಿ ಇದು 145 ಅಧ್ಯಯನ ಕೇಂದ್ರಗಳನ್ನು ಹೊಂದಿದ್ದು, ಇನ್ನೂ ಅನೇಕ ಅಧ್ಯಯನ ಕೇಂದ್ರಗಳನ್ನು ಪ್ರಾರಂಭಿಸುವ ಯೋಜನೆ ಹೊಂದಿದೆ. ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 95,000ಕ್ಕೆ ಏರಿದೆ. ಈ ವಿಶ್ವವಿದ್ಯಾನಿಲಯ ಪಿಹೆಚ್.ಡಿ. ವಿಜ್ಞಾನ, ಗಣಿತಶಾಸ್ತ್ರ, ಪರಿಸರ ವಿಜ್ಞಾನ, ಸಂಪೂರ್ಣ ವಿಜ್ಞಾನ ಮುಂತಾದ ವೈಜ್ಞಾನಿಕ ವಿಷಯಗಳ ಜೊತೆಗೆ ನಿರ್ವಹಣಾಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ ಮುಂತಾದ ಅನೇಕ ವಿಷಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡುತ್ತಿದೆ.

Digitised by Bharatavani, CIIL

**೯. ಉತ್ತರ ಪ್ರದೇಶ್ ರಾಜರ್ಷಿ ಟಂಡನ್ ಮುಕ್ತ ವಿಶ್ವವಿದ್ಯಾನಿಲಯ (UPROU), ಅಲಹಾಬಾದ್ (ಉತ್ತರ ಪ್ರದೇಶ)**

ಉತ್ತರ ಪ್ರದೇಶ ರಾಜ್ಯದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು 1999 ರಲ್ಲಿ ಅಲಹಾಬಾದ್‌ನಲ್ಲಿ ಸ್ಥಾಪಿಸಲಾಯಿತು.ದೂರ ಹಳ್ಳಿಗಳಲ್ಲಿ ವಾಸಿಸುವವರಿಗೆ, ಗೃಹಿಣಿಯರಿಗೆ ಮತ್ತು ವೃತ್ತಿಪರರಿಗೆ ಉನ್ನತ ಶಿಕ್ಷಣವನ್ನು ಒದಗಿಸುವುದು ಈ ಮುಕ್ತ ವಿಶ್ವವಿದ್ಯಾನಿಲಯದ ಗುರಿಯಾಗಿದೆ. ಈ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ಉತ್ತಮ ಮಟ್ಟದ ಸಮಾಲೋಚನೆ ಮತ್ತು ಮಾರ್ಗದರ್ಶನ ನೀಡುತ್ತದೆ. ಈ ವಿಶ್ವವಿದ್ಯಾನಿಲಯಕ್ಕೆ ಉತ್ತರ ಪ್ರದೇಶದ ಪ್ರಸಿದ್ಧ ವಿದ್ವಾಂಸರು ಹಾಗೂ ರಾಜ ಋಷಿ ಎಂದು ಹೆಸರು ಪಡೆದಿದ್ದ ಟಂಡನ್‌ರವರ ಹೆಸರನ್ನು ಇಡಲಾಯಿತು. ಈ ವಿಶ್ವವಿದ್ಯಾನಿಲಯ ವೈವಿಧ್ಯಪೂರ್ಣ ಸ್ನಾತಕ, ಸ್ನಾತಕೋತ್ತರ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ನೀಡುತ್ತಿದೆ.

**೧೦. ಭೋಜ್ ಮುಕ್ತ ವಿಶ್ವವಿದ್ಯಾನಿಲಯ (MPBOU), ಭೂಪಾಲ್ (ಮಧ್ಯಪ್ರದೇಶ)**

ಮಧ್ಯಪ್ರದೇಶ ಭೋಜ್ ಮುಕ್ತ ವಿಶ್ವವಿದ್ಯಾನಿಲಯವನ್ನು ಮಧ್ಯಪ್ರದೇಶ ಸರ್ಕಾರ 1999 ರಲ್ಲಿ ಜಾರಿಗೊಳಿಸಿದ ಒಂದು ಕಾಯ್ದೆಯ ಅನ್ವಯ ಭೂಪಾಲ್ ನಗರದಲ್ಲಿ ಸ್ಥಾಪಿಸಲಾಯಿತು. ಈ ವಿಶ್ವವಿದ್ಯಾನಿಲಯಕ್ಕೆ ಹಿಂದೆ ಮಧ್ಯಪ್ರದೇಶದಲ್ಲಿ ಪ್ರಸಿದ್ಧವಾಗಿದ್ದ ರಾಜ ಭೋಜನ ಹೆಸರನ್ನು ಇಡಲಾಗಿದೆ. ಇದು ಭಾರತದ 2ನೇ ದೊಡ್ಡ ಮುಕ್ತ ವಿಶ್ವವಿದ್ಯಾನಿಲಯವೆನಿಸಿದೆ. ಈ ವಿಶ್ವವಿದ್ಯಾನಿಲಯವು ಇತರ ಮುಕ್ತ ವಿಶ್ವವಿದ್ಯಾನಿಲಯಗಳಂತೆ ಸಮಾಜದಲ್ಲಿ ಉನ್ನತ ಶಿಕ್ಷಣದಿಂದ ವಂಚಿತವಾಗಿರುವ ಸಮೂಹಗಳಿಗೆ ದೂರ ಶಿಕ್ಷಣದ ಮೂಲಕ ಉನ್ನತ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಿದೆ. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿಯೂ ಅಧ್ಯಯನ ಕೇಂದ್ರಗಳನ್ನು ಹೊಂದಿದೆ. ಈ ವಿಶ್ವವಿದ್ಯಾನಿಲಯವು ಮೂಲ ವಿಜ್ಞಾನಗಳು, ಆರೋಗ್ಯ ವಿಜ್ಞಾನಗಳು, ಮಾಹಿತಿ ತಂತ್ರಜ್ಞಾನ, ಬಹುಮಾಧ್ಯಮ ಶಿಕ್ಷಣ, ವಿಶೇಷ ಶಿಕ್ಷಣ, ಪರಂಪರೆಯ ನಿರ್ವಹಣೆ ಮತ್ತು ನಿರ್ವಹಣಾ ಶಾಸ್ತ್ರಗಳ ವಿಭಾಗಗಳನ್ನು ಹೊಂದಿದೆ. ಈ ವಿಶ್ವವಿದ್ಯಾನಿಲಯವು ಅನೇಕ ವಿಷಯಗಳಲ್ಲಿ (ವಿಜ್ಞಾನವು ಸೇರಿದಂತೆ) ಸ್ನಾತಕೋತ್ತರ ಪದವಿಗಳನ್ನು, ಸ್ನಾತಕ ಪದವಿಗಳನ್ನು, ಸ್ನಾತಕೋತ್ತರ ಡಿಪ್ಲೋಮಾ ಮತ್ತು ಇತರ ಡಿಪ್ಲೋಮಾ ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ನೀಡುತ್ತಿದೆ. ಈ ಕಾರ್ಯಕ್ರಮಗಳಲ್ಲಿ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಯೋಗ ಕ್ಷೇಮ ಸಚಿವಾಲಯದ ಧನಸಹಾಯದೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ವೈದ್ಯಕೀಯ ಸಿಬ್ಬಂದಿಗಳ ಜ್ಞಾನ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು ಹೊಂದಿದೆ. ಅಲ್ಲದೆ ಅಸಮರ್ಥತೆಯುಳ್ಳ ಮಕ್ಕಳ ಶಿಕ್ಷಣದ ಬಗ್ಗೆಯೂ ಒಂದು ಕಾರ್ಯಕ್ರಮವನ್ನು ನಡೆಸುತ್ತಿದೆ. ಹೊರಗಿನ ಪ್ರಸಿದ್ಧ ಸಂಸ್ಥೆಗಳಿಂದ ಭಾರತೀಯ ಪುನರ್ ವಸತಿ ಸಮಿತಿ, ನವದೆಹಲಿ, ಭಾರತೀಯ ಪ್ರವಾಸೋದ್ಯಮ ಹಾಗೂ ಪ್ರವಾಸ ನಿರ್ವಹಣೆ ಸಂಸ್ಥೆ, ಭಾರತೀಯ ಸಾಮಗ್ರಿ ನಿರ್ವಹಣಾ ಸಂಸ್ಥೆ ಮುಂತಾದವುಗಳೊಂದಿಗೆ ಸಹಯೋಗವನ್ನು ಹೊಂದಿದೆ.

**೧೧. ತಮಿಳುನಾಡು ಮುಕ್ತ ವಿಶ್ವವಿದ್ಯಾನಿಲಯ (TNOU), ಚೆನ್ನೈ (ತಮಿಳುನಾಡು)**

ತಮಿಳುನಾಡಿನ ಚೆನ್ನೈಯಲ್ಲಿ ರಾಜ್ಯ ಮಟ್ಟದ ಮುಕ್ತ ವಿಶ್ವವಿದ್ಯಾನಿಲಯವನ್ನು ತಮಿಳುನಾಡು ಸರ್ಕಾರ ಒಂದು ಕಾಯ್ದೆ ಮೂಲಕ 2002 ಇಸವಿಯಲ್ಲಿ ಆರಂಭಿಸಿದೆ. ಈ ವಿಶ್ವವಿದ್ಯಾನಿಲಯ ತನ್ನ ವೈವಿಧ್ಯಪೂರ್ಣ ಕಾರ್ಯಕ್ರಮಗಳ ಮೂಲಕ ವಂಚಿತ ಸಮೂಹಗಳಿಗೆ ಮತ್ತು ಉನ್ನತ ಶಿಕ್ಷಣ ದೊರಕದವರಿಗೆ ಉನ್ನತ ಶಿಕ್ಷಣವನ್ನು ಒದಗಿಸುತ್ತದೆ. ಅನೇಕ ವಿಷಯಗಳಲ್ಲಿ ವೃತ್ತಿಪರ ಡಿಪ್ಲೋಮಾಗಳನ್ನು ಮತ್ತು ಬೋಧನೆಯಲ್ಲಿ ಅನೇಕ ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ಒದಗಿಸುತ್ತಿರುವುದು ಈ ಮುಕ್ತ ವಿಶ್ವವಿದ್ಯಾನಿಲಯದ ವಿಶೇಷತೆಯಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಎಂ.ಎಡ್., ಪಿಹೆಚ್.ಡಿ. ಕಾರ್ಯಕ್ರಮ, ಶಿಕ್ಷಣ ಶಾಸ್ತ್ರ, ಕಂಪ್ಯೂಟರ್ ವಿಜ್ಞಾನಗಳು, ಸಾಮಾಜಿಕ ವಿಜ್ಞಾನಗಳು, ಆರೋಗ್ಯ ವಿಜ್ಞಾನಗಳು, ನಿರ್ವಹಣಾ ಅಧ್ಯಯನಗಳು, ತಮಿಳು ಹಾಗೂ ಸಾಂಸ್ಕೃತಿಕ ಅಧ್ಯಯನಗಳು, ಮಾನವಿಕ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸಂಸ್ಥೆ (ಶಾಲೆ)ಯನ್ನು ಹೊಂದಿದ್ದು ಪ್ರತಿಯೊಂದು ಸಂಸ್ಥೆಯು ತನ್ನದೇ ಆದ ಕಾರ್ಯಕ್ರಮಗಳನ್ನು ನೀಡುತ್ತಿದೆ. ತಮಿಳುನಾಡಿನಾದ್ಯಂತ ಇರುವ ಕೊಯಮತ್ತೂರು, ಮಧುರೈ, ಗಾಂಧಿ ಗ್ರಾಮ, ತಿರುನಲ್‌ವೇಲಿ ಮುಂತಾದ ಕಡೆಗಳಲ್ಲಿ ಇರುವ ತನ್ನ 34 ಸಮಾಲೋಚನ ಹಾಗೂ ಅಧ್ಯಯನ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ನೇರ ಪ್ರವೇಶ ನೀಡುತ್ತದೆ.

**೧೨. ಪಂಡಿತ್ ಸುಂದರ್‌ಲಾಲ್‌ಶರ್ಮ ಮುಕ್ತ ವಿಶ್ವವಿದ್ಯಾನಿಲಯ (PSSOU), ಬಿಲಾಸ್‌ಪುರ, ಛತ್ತೀಸ್‌ಘಡ್**

ಈ ವಿಶ್ವವಿದ್ಯಾನಿಲಯವನ್ನು 2005ರಲ್ಲಿ ಛತ್ತೀಸಘಡ್ ಸರ್ಕಾರ ತನ್ನ ಒಂದು ಕಾಯ್ದೆ ಮೂಲಕ ಬಿಲಾಸ್‌ಪುರದಲ್ಲಿ ಸ್ಥಾಪಿಸಿದೆ. ಇದು ಈ ವಿಶ್ವವಿದ್ಯಾನಿಲಯಕ್ಕೆ ತಮ್ಮ ರಾಷ್ಟ್ರಭಕ್ತಿ, ದಲಿತೋದ್ಧಾರ ಮುಂತಾದ ಸಮಾಜಪರ ಕಾರ್ಯಗಳಿಂದ ಛತ್ತೀಸ್‌ಘಡ್ ಗಾಂಧಿ ಮಹಾತ್ಮ ಎಂದು ಪ್ರಸಿದ್ಧರಾಗಿದ್ದ "ಪಂಡಿತ ಸುಂದರಲಾಲ್‌ಶರ್ಮ"ರವರ ಹೆಸರನ್ನು ಇಡಲಾಗಿದೆ. ಸಮಾಜದ ಹಿಂದುಳಿದ ವರ್ಗಗಳಿಗೆ ಮತ್ತು ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದವರಿಗೆ ಉನ್ನತ ಶಿಕ್ಷಣದ ಅವಕಾಶ ಕಲ್ಪಿಸಿ ಅದನ್ನು ಪ್ರಜಾಸತ್ತಾತ್ಮಕಗೊಳಿಸುವ ಉನ್ನತ ಗುರಿಯನ್ನು ಹೊಂದಿದೆ. ಈ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳೊಂದಿಗೆ ಉತ್ತಮ ರೀತಿಯಲ್ಲಿ ಸಂಪರ್ಕ ಹೊಂದಲು ತಂತ್ರಜ್ಞಾನವನ್ನು ಚೆನ್ನಾಗಿ ಬಳಸಿಕೊಂಡಿದೆ. ಮುಕ್ತ ವಿಶ್ವವಿದ್ಯಾನಿಲಯಗಳು ನೀಡುವ ಶೈಕ್ಷಣಿಕ ಕಾರ್ಯಕ್ರಮಗಳ ಜೊತೆಗೆ ಈ ವಿಶ್ವವಿದ್ಯಾನಿಲಯ ಭಾರತೀಯ ಸಂಪ್ರದಾಯಕ್ಕೆ ಅನುಗುಣವಾಗಿ ಜ್ಯೋತಿಷ್ಯಶಾಸ್ತ್ರ ಮತ್ತು ವಾಸ್ತುಶಾಸ್ತ್ರದಲ್ಲಿಯೂ ಕಾರ್ಯಕ್ರಮಗಳನ್ನು ನೀಡುತ್ತಿದೆ.

**೧೩. ಉತ್ತರಾಂಚಲ ಮುಕ್ತ ವಿಶ್ವವಿದ್ಯಾನಿಲಯ, ನೈನಿತಾಲ್ (ಉತ್ತರಾಖಂಡ್)**

ಈ ವಿಶ್ವವಿದ್ಯಾನಿಲಯವನ್ನು ಉತ್ತರಾಂಚಲ ಸರ್ಕಾರ 2006ನೇ ಇಸವಿಯಲ್ಲಿ ಉತ್ತರಾಂಚಲದ ಪರ್ವತ ಪ್ರದೇಶ ವಿಶ್ರಾಂತಿ ತಾಣವಾದ ನೈನಿತಾಲ್‌ನಲ್ಲಿ ಆರಂಭಿಸಿತು. ಇದು ಭಾರತದ 13ನೇ ಮುಕ್ತ ವಿಶ್ವವಿದ್ಯಾನಿಲಯವಾಗಿದೆ. ಭಾರತದ ರಮ್ಯ ಪರ್ವತ ಪ್ರದೇಶದಲ್ಲಿ ಈ ಮುಕ್ತ ವಿಶ್ವವಿದ್ಯಾನಿಲಯ ಇರುವುದರಿಂದ ಅನೇಕ ವಿದ್ಯಾರ್ಥಿಗಳನ್ನು ಇದು ಆಕರ್ಷಿಸುತ್ತಿದೆ. ಈ ವಿಶ್ವವಿದ್ಯಾನಿಲಯಕ್ಕೆ ಉತ್ತರಾಂಚಲ ಎಂದು ಹೆಸರಿಟ್ಟರೂ, ಈಗ ಆ ರಾಜ್ಯದ ಹೆಸರನ್ನು ಉತ್ತರಾಖಂಡ ಎಂದು ಬದಲಾಯಿಸಲಾಗಿದೆ. ಈ ಮುಕ್ತ ವಿಶ್ವವಿದ್ಯಾನಿಲಯವು ಅನೇಕ ಕಾರ್ಯಕ್ರಮಗಳನ್ನು ನೀಡುತ್ತಿದೆ. ವಿಶೇಷವಾಗಿ ಈ ವಿಶ್ವವಿದ್ಯಾನಿಲಯ ನೀಡುತ್ತಿರುವ ಪ್ರಾಕೃತಿಕ ಸಂಪನ್ಮೂಲಕ್ಕೆ ವಿಕಾಸ, ಅರಣ್ಯಶಾಸ್ತ್ರ, ಪ್ರವಾಸೋದ್ಯಮ ಹಾಗೂ ಹೋಟೆಲ್ ನಿರ್ವಹಣೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಹೆಚ್ಚು ಜನಪ್ರಿಯವಾಗಿವೆ.

Digitised by Bharatavani, CIIL

## ೧೪. ಕೆ.ಕೆ. ಹಂಡಿಕ್ ಮುಕ್ತ ವಿಶ್ವವಿದ್ಯಾನಿಲಯ, ಗೌಹಾತಿ (ಅಸ್ಸಾಂ)

ಈ ವಿಶ್ವವಿದ್ಯಾನಿಲಯವನ್ನು 1995 ರಲ್ಲಿ ಸ್ಥಾಪಿಸಲಾಗಿದ್ದರೂ ಅದನ್ನು 2006 ರಲ್ಲಿ ವಿದ್ಯಾರ್ಥಿಗಳಿಗೆ ಮುಕ್ತಗೊಳಿಸಲಾಯಿತು. ಈ ವಿಶ್ವವಿದ್ಯಾನಿಲಯ ದೂರ ಶಿಕ್ಷಣ ಸಮಿತಿಯಿಂದ (ಡಿ.ಇ.ಸಿ.) ಅಂಗೀಕೃತಗೊಂಡಿದೆ. ಇದು ಪೂರ್ವೋತ್ತರ ಭಾರತದ ಪ್ರಥಮ ಮುಕ್ತ ವಿಶ್ವವಿದ್ಯಾನಿಲಯ ಮತ್ತು ಭಾರತದ 14ನೇ ಮುಕ್ತ ವಿಶ್ವವಿದ್ಯಾನಿಲಯವಾಗಿದೆ. ಈ ವಿಶ್ವವಿದ್ಯಾನಿಲಯಕ್ಕೆ ಅಸ್ಸಾಂ ರಾಜ್ಯದ ಸುಪ್ರಸಿದ್ಧ ವಿದ್ವಾಂಸರಾಗಿದ್ದ ಪಂಡಿತ್ ಕೃಷ್ಣಕಾಂತ ಹಂಡಿಕರವರ ಹೆಸರನ್ನು ಇಡಲಾಗಿದೆ. ಎಲ್ಲ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳಂತೆ ಈ ಮುಕ್ತ ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇವುಗಳಲ್ಲದೆ ಅನೇಕ ವಿಷಯಗಳಲ್ಲಿ ಡಿಪ್ಲೋಮಾ ಕಾರ್ಯಕ್ರಮಗಳನ್ನು ನೀಡುತ್ತಿರುವುದು ಈ ವಿಶ್ವವಿದ್ಯಾನಿಲಯದ ವಿಶೇಷತೆಯಾಗಿದೆ. ಉದಾ: ಪ್ರವಾಸೋದ್ಯಮ, ಚಹ ನಿರ್ವಹಣೆ, ರೇಷ್ಮೆ ಉದ್ಯಮ ಮತ್ತು ಮತ್ಸೋದ್ಯಮ, ಅಣಬೆ ಉತ್ಪತ್ತಿ, ಹಣ್ಣುಗಳ ಸಂಸ್ಕರಣೆ ಮತ್ತು ವ್ಯಾಪಾರ ಮುಂತಾದ ವಿಷಯಗಳಲ್ಲಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್‌ಗಳನ್ನು ಈ ವಿಶ್ವವಿದ್ಯಾನಿಲಯದಿಂದ ಪಡೆಯಬಹುದು.

–ಎಸ್.ಸು.

## ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆ

ಶಿಕ್ಷಣದ ಪರಿಕಲ್ಪನೆಯು ಮಾನವನ ಸಂಸ್ಕೃತಿಯಷ್ಟೇ ಹಳೆಯದಾದುದು ಎನ್ನಬಹುದು. ಪ್ರಾಚೀನ ಭಾರತದಲ್ಲಿ ಇವತ್ತಿನ ಹಾಗೆ ಇದೊಂದು ಉದ್ಯೋಗ ಆಗಿರಲಿಲ್ಲ. ಆದರೆ ಶಿಕ್ಷಣ ಕೊಡುವುದು ಪಂಡಿತರ ಅದರಲ್ಲೂ ಬ್ರಾಹ್ಮಣರ ಒಂದು ಕರ್ತವ್ಯವಾಗಿತ್ತು. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧವು ತಂದೆ ಮಗನ ಸಂಬಂಧದಂತಿತ್ತು. ಆಶ್ರಮಗಳು ಕಲಿಕಾ ಕೇಂದ್ರಗಳಾಗಿದ್ದವು ಮತ್ತು ಹೆಚ್ಚಾಗಿ ಈ ಆಶ್ರಮಗಳು ಶಿಕ್ಷಕರ ಮನೆಗಳಲ್ಲಿ ಇರುತ್ತಿದ್ದವು. ಅವುಗಳನ್ನು 'ಗುರುಕುಲ'ಗಳೆಂದು ಕರೆಯಲಾಗುತ್ತಿತ್ತು.

ಪ್ರಾಚೀನ ಭಾರತದಲ್ಲಿ ತಕ್ಷಶಿಲಾ, ನಳಂದಾ, ವಿಕ್ರಮಶಿಲಾ, ನಾದಿಯಾ, ವಲ್ಲಬಿ ಮುಂತಾದವು ಉನ್ನತ ಶಿಕ್ಷಣ ಕೇಂದ್ರಗಳಾಗಿದ್ದವು. ಈ ಕೇಂದ್ರಗಳು ಜ್ಞಾನಕ್ಕಾಗಿ ಜಗತ್ತಿನ ನಾನಾ ಪಂಡಿತರನ್ನು ಆಕರ್ಷಿಸಿದವು. ಉನ್ನತ ಜ್ಞಾನಾತ್ಮಕ ವಾತಾವರಣವನ್ನು ಪ್ರಮುಖವಾಗಿ ಈ ಕೇಂದ್ರಗಳು ಹೊಂದಿದ್ದವು. ಕೆಲವು ವಸತಿ ಕೇಂದ್ರಗಳೂ ಆಗಿದ್ದವು. ಅವುಗಳಲ್ಲಿ ನಳಂದವು ಒಂದು. ಇಲ್ಲಿ ಸುಮಾರು 4 ಸಾವಿರದಷ್ಟು ವಿದ್ಯಾರ್ಥಿಗಳು ಅಲ್ಲಿಯೇ ಇದ್ದುಕೊಂಡು ಜ್ಞಾನವನ್ನು ಪಡೆಯುತ್ತಿದ್ದರು. ಆದರೆ ಬಹಳಷ್ಟು ಕೇಂದ್ರಗಳು ಮುಸ್ಲಿಂ ದೊರೆಗಳ ದಾಳಿಗೆ ಸಿಲುಕಿ ನಾಶವಾದವು. ಮುಸ್ಲಿಂ ಅರಸರು ಭಾರತವನ್ನು ಆಳಲು ಆರಂಭಿಸಿದ ನಂತರ ಅವರು ತಮ್ಮದೇ ಆದ ಕಲಿಕಾ ಕೇಂದ್ರಗಳನ್ನು ಆರಂಭಿಸಿದರು. ಅವುಗಳಿಗೆ ಮದ್ರಸಾಗಳು ಎಂದು ಕರೆಯುತ್ತಿದ್ದರು.

1817ರಲ್ಲಿ ರಾಜಾರಾಮ ಮೋಹನರಾಯರು ತಮ್ಮ ಸ್ನೇಹಿತ ಡೇವಿಡ್ ಹಾರೆ ಜೊತೆ ಕೂಡಿಕೊಂಡು ಕಲ್ಕತ್ತಾದಲ್ಲಿ ಹಿಂದೂ ಕಾಲೇಜನ್ನು ಆರಂಭಿಸುವುದರೊಂದಿಗೆ ಆಧುನಿಕ ಭಾರತದಲ್ಲಿ ಉನ್ನತ ಶಿಕ್ಷಣ ಪ್ರಾರಂಭವಾಯಿತೆನ್ನಬಹುದು. ಈಸ್ಟ್ ಇಂಡಿಯಾ ಕಂಪನಿಯು ಒಂದು ವ್ಯಾಪಾರಿ ಸಂಸ್ಥೆಯಾಗಿದ್ದರಿಂದ ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಷ್ಟೇನೂ ಆಸಕ್ತಿ ಹೊಂದಿರಲಿಲ್ಲ. ಆದರೆ 1824ರಲ್ಲಿ ಕಂಪನಿಯು ಕಲ್ಕತ್ತಾದಲ್ಲಿ ಸಂಸ್ಕೃತ ಕಾಲೇಜನ್ನು ಆರಂಭಿಸಿತು. ನಂತರ 1834ರಲ್ಲಿ ಎಲ್ಫಿನ್‌ಸ್ಟೆನ್ ಕಾಲೇಜನ್ನು ಬಾಂಬೆಯಲ್ಲಿ ಮತ್ತು 1837ರಲ್ಲಿ ಮದ್ರಾಸದಲ್ಲಿ ಕ್ರಿಶ್ಚಿಯನ್ ಕಾಲೇಜನ್ನು ಆರಂಭಿಸಲಾಯಿತು.

ಬ್ರಿಟಿಷ್ ಪ್ರಣೀತ ಶಾಸನಬದ್ಧ ಶಿಕ್ಷಣವು 1857ರಿಂದ ಪ್ರಾರಂಭವಾಯಿತೆನ್ನಬಹುದು. 1854ರ ವುಡ್ ವರದಿಯ ಶಿಫಾರಸ್ಸಿನಂತೆ ಮುಂಬಯಿ, ಮದ್ರಾಸ್, ಕಲ್ಕತ್ತಾಗಳಲ್ಲಿ ಏಕಕಾಲಕ್ಕೆ ಮೂರು ವಿಶ್ವವಿದ್ಯಾನಿಲಯಗಳು ಸ್ಥಾಪಿತವಾದವು. ಅವುಗಳ ಮುಖ್ಯ ಧ್ಯೇಯವು ಬ್ರಿಟಿಷ್ ಆಡಳಿತಕ್ಕೆ ಬೇಕಾದ ಕಾರಕೂನರನ್ನು ನಿರ್ಮಿಸುವುದಾಗಿತ್ತು. ಆದ್ದರಿಂದ ಬ್ರಿಟಿಷರು ಅದಕ್ಕನುಗುಣವಾದ ಅಭ್ಯಾಸ ಕ್ರಮವನ್ನು ರೂಪಿಸಿದರು.

1884ರಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಕಾಯಿದೆಯು ಅಂಗೀಕೃತವಾಯಿತು. ಈ ಕಾಯಿದೆಯನ್ವಯ ಕಲ್ಕತ್ತಾ, ಬಾಂಬೆ, ಮದ್ರಾಸ್ ವಿಶ್ವವಿದ್ಯಾಲಯಗಳು ಎಲ್.ಎಲ್.ಡಿ. ಗೌರವ ಪದವಿಯನ್ನು ದಯಪಾಲಿಸುವ ಅಧಿಕಾರವನ್ನು ಪಡೆದವು.

1882ರಲ್ಲಿ ವಿಶೇಷ ಸಂಘ ಸ್ಥಾಪನಾ ಕಾಯಿದೆಯನ್ವಯ ಪಂಜಾಬ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಟ್ಟಿತು.

1887ರಲ್ಲಿ ಇನ್ನೊಂದು ವಿಶೇಷ ಕಾಯಿದೆಯಿಂದ 5ನೆಯ ವಿಶ್ವವಿದ್ಯಾಲಯ ಅಲಹಾಬಾದದಲ್ಲಿ ಸ್ಥಾಪಿಸಲ್ಪಟ್ಟಿತು.

1882ರ ಮತ್ತು 1902ರ ಆಯೋಗಗಳು ಉಚ್ಚ ಶಿಕ್ಷಣ ವಿಷಯದ ಬಗ್ಗೆ ಪೂರ್ಣ ನ್ಯಾಯವನ್ನು ನೀಡಲಿಲ್ಲ. ಏಕೆಂದರೆ ಒಂದನೆಯದು ವಿಶ್ವವಿದ್ಯಾಲಯಗಳ ಬಗ್ಗೆ ವರದಿ ಸಲ್ಲಿಸಲು ನಿರ್ಬಂಧಿಸಿತ್ತು. 2ನೆಯದು ಮಾಧ್ಯಮಿಕ ಶಿಕ್ಷಣವನ್ನು ಕುರಿತು ಅಭ್ಯಾಸಿಸಲು ಪ್ರತಿಬಂಧಿಸಲ್ಪಟ್ಟಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಕಲಕತ್ತಾ ವಿಶ್ವವಿದ್ಯಾಲಯವು ಮಾಧ್ಯಮಿಕ ಶಿಕ್ಷಣದ ಸಮಸ್ಯೆಗಳನ್ನು ಮತ್ತು ವಿಶ್ವವಿದ್ಯಾನಿಲಯ ಬೋಧನೆಯ ಸಮಸ್ಯೆಗಳನ್ನು ಅಭ್ಯಾಸಿಸಿತು. ಏಕೆಂದರೆ ಮಾಧ್ಯಮಿಕ ಶಿಕ್ಷಣದ ಸುಧಾರಣೆಯು ವಿಶ್ವವಿದ್ಯಾಲಯ ಶಿಕ್ಷಕ ಸಿಬ್ಬಂದಿಯ ಸುಧಾರಣೆಯ ತಳಪಾಯವೆಂದು ಅದು ತಿಳಿದಿತ್ತು.

21ನೇ ಫೆಬ್ರುವರಿ 1913ರ ಸರಕಾರಿ ನಿರ್ಣಯ ಮತ್ತು ಕಲಕತ್ತಾ ವಿಶ್ವವಿದ್ಯಾಲಯ ಆಯೋಗದ 1917–19ರ ವರದಿ ಇವು 1917–22ರ ಅವಧಿಯಲ್ಲಿ ಅನೇಕ ಹೊಸ ವಿಶ್ವವಿದ್ಯಾನಿಲಯಗಳ ನಿರ್ಮಾಣಕ್ಕೆ ಕಾರಣವಾದವು. 1887ರಲ್ಲಿ ಸ್ಥಾಪಿತವಾದ ಅಲಹಾಬಾದ್ ವಿಶ್ವವಿದ್ಯಾನಿಲಯದ ನಂತರ ಭಾರತದಲ್ಲಿ 1916ರ ವರೆಗೆ ಯಾವ ಹೊಸ ವಿಶ್ವವಿದ್ಯಾಲಯವು ಸ್ಥಾಪಿತವಾಗಲಿಲ್ಲವೆಂಬುದನ್ನು ಮತ್ತು ಈ ಮೂವತ್ತು ವರ್ಷಗಳ ಅವಧಿಯಲ್ಲಿ ಉಚ್ಚ ಶಿಕ್ಷಣ ಸಂಸ್ಥೆಗಳ ಸಂಖ್ಯೆಯಲ್ಲಿ ಮತ್ತು ಅವುಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಅತ್ಯಂತ ಅಧಿಕ ಪ್ರಮಾಣದ ಹೆಚ್ಚಳವಾಗಿತ್ತೆಂಬುದನ್ನು ಗಮನಿಸಬಹುದು. ಆದುದರಿಂದ ಅಸ್ತಿತ್ವದಲ್ಲಿದ್ದ ವಿಶ್ವವಿದ್ಯಾನಿಲಯಗಳ ಕೆಲಸವು ಗಮನಾರ್ಹವಾಗಿ ಹೆಚ್ಚಾಗಿತ್ತು. ಜನತೆಯ ಪ್ರಯತ್ನದ ಫಲವಾಗಿ, 1916ರಲ್ಲಿ ಕೇವಲ 5 ಇದ್ದ ವಿಶ್ವವಿದ್ಯಾಲಯಗಳ ಸಂಖ್ಯೆಯು 1921–22ರಲ್ಲಿ ಹನ್ನೆರಡಕ್ಕೆ ಏರಿತು. ಅಲ್ಲದೆ ದಿಲ್ಲಿಯಲ್ಲಿ ವಿಶ್ವವಿದ್ಯಾಲಯ ಕಾಯಿದೆಯು ಮಾರ್ಚ್ 1922ರಲ್ಲಿ ಸ್ವೀಕೃತವಾಯಿತು. ಹೀಗೆ ಸ್ಥಾಪಿತವಾದ ವಿಶ್ವ ವಿದ್ಯಾಲಯಗಳೆಂದರೆ ಮೈಸೂರು (1916) ಪಾಟ್ನಾ (1916) ಬನಾರಸ (1917). ಅಲಿಘರ್ (1920), ಡಾಕಾ (1926) ಲಖನೌ (1920), ಉಸ್ಮಾನಿಯಾ (1918).

ಮೇಲೆ ಹೇಳಿದ 7 ವಿಶ್ವವಿದ್ಯಾಲಯಗಳ ಸ್ಥಾಪನೆಯಲ್ಲದೆ ಸರಕಾರವು 1921ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯವನ್ನು ಢಾಕಾ ವಿಶ್ವವಿದ್ಯಾಲಯದ ಮಾದರಿಯ ಮೇಲೆ ಪುನರ್‌ರಚಿಸಿತು.

Digitised by Bharatavani, CIIL

ಲಾರ್ಡ್ ಕರ್ಜನನು ಪ್ರಥಮ ಸಲ ವಿಶ್ವವಿದ್ಯಾಲಯಗಳಿಗೆ ಮತ್ತು ಉಚ್ಚ ಶಿಕ್ಷಣಕ್ಕೆ ವರ್ಷಕ್ಕೆ 5 ಲಕ್ಷ ರೂಪಾಯಿಗಳಂತೆ 5 ವರ್ಷಗಳ ವರೆಗೆ ಮಾತ್ರ ಸಹಾಯಧನವನ್ನು ನೀಡಿದನು. ಈ ಸಹಾಯಧನವು ಮುಂದೆ ಶಾಶ್ವತವಾದ ಆವರ್ತ ಸಹಾಯಧನವಾಯಿತು. 1921–22ರಲ್ಲಿ ವಿಶ್ವವಿದ್ಯಾಲಯಗಳಿಗೆ ಕೊಡಲ್ಪಟ್ಟ ಸರಕಾರಿ ಧನಸಹಾಯವು 20,54,000/– ರೂಪಾಯಿಗಳಿದ್ದರೆ ಅವುಗಳ ಒಟ್ಟು ವೆಚ್ಚ 74,13,000/– ರೂಪಾಯಿಗಳಿದ್ದಿತು.

ವಿಶ್ವವಿದ್ಯಾಲಯಗಳಿಗೆ ಸರಕಾರದಿಂದ ದೊಡ್ಡ ಪ್ರಮಾಣದ ಆರ್ಥಿಕ ನೆರವು ದೊರೆತದ್ದರಿಂದ ಅವು ಕಟ್ಟಡ ಕಟ್ಟಿಕೊಳ್ಳಲು, ಗ್ರಂಥಾಲಯ, ಪ್ರಯೋಗಾಲಯಗಳನ್ನು ಸ್ಥಾಪಿಸಲು ಮತ್ತು ಬೋಧನೆಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಶಕ್ತವಾದವು. 1921ರಲ್ಲಿ ಅಸ್ತಿತ್ವದಲ್ಲಿದ್ದ 12 ವಿಶ್ವವಿದ್ಯಾಲಯಗಳಲ್ಲಿ 5 ವಿಶ್ವವಿದ್ಯಾಲಯಗಳು ಕೇವಲ ಬೋಧನೆ ಮಾಡುತ್ತಿದ್ದವು. ಅಲಹಾಬಾದ್ ವಿಶ್ವವಿದ್ಯಾಲಯವು ಬೋಧನೆಯ ಮತ್ತು ಮನ್ನಣೆ ಕೊಡುವ ವಿಶ್ವವಿದ್ಯಾಲಯವಾಗಿತ್ತು. ಉಳಿದ 6 ವಿಶ್ವವಿದ್ಯಾಲಯಗಳು ಸ್ವಲ್ಪ ಬೋಧನೆಯ ಕಾರ್ಯವನ್ನು ಮಾಡುತ್ತಿದ್ದರೂ ಮುಖ್ಯವಾಗಿ ಮನ್ನಣೆ ಕೊಡುವ ಮಾದರಿಯವಾಗಿದ್ದವು.

### 1905 ಮತ್ತು 1921ರ ಅವಧಿಯಲ್ಲಿ ಸಾಮಾನ್ಯ ಶಿಕ್ಷಣದ ಕಾಲೇಜುಗಳ ಅಭಿವೃದ್ಧಿ

1904ರ ಭಾರತೀಯ ವಿಶ್ವವಿದ್ಯಾಲಯಗಳ ಕಾಯಿದೆಯನ್ವಯ ಉಚ್ಚ ಶಿಕ್ಷಣ ಸುಧಾರಣೆಯು ಪ್ರಾರಂಭವಾಯಿತು. ಶತಮಾನದ ಆರಂಭದ 2 ದಶಕಗಳಲ್ಲಿ ವಿಶ್ವವಿದ್ಯಾನಿಲಯ ಹಂತದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅತ್ಯಂತ ಶೀಘ್ರವಾಗಿ ಹೆಚ್ಚಾಯಿತು. ಉದಾ: 1901–02ರಲ್ಲಿ 138 ಹೊರತು ಪಡಿಸಿದರೆ 30 ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು 17,000 ಇದ್ದಿತೆಂದು ಹೇಳಲಾಗುತ್ತದೆ. 1921–22ರಲ್ಲಿ ಬ್ರಿಟಿಷ್ ಭಾರತದಲ್ಲಿ ಮಾತ್ರ ಇದ್ದ ಸಾಮಾನ್ಯ ಶಿಕ್ಷಣದ ಕಾಲೇಜುಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು 45.418 ಇದ್ದರೆ ಇಡೀ ಭಾರತದಲ್ಲಿದ್ದ ಕಾಲೇಜುಗಳಲ್ಲಿ ಓದುತ್ತಿದ್ದವರ ಸಂಖ್ಯೆಯು 54,473 ಆಗಿತ್ತು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಭಾರತೀಯ ವಿಶ್ವ ವಿದ್ಯಾಲಯಗಳ ಜ್ಞಾನ, ಕಲಾ (ಆರ್ಟ್ಸ್) ಮತ್ತು ವಿಜ್ಞಾನ ವ್ಯಾಸಂಗಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು 20 ವರ್ಷಗಳಲ್ಲಿ ಶೇಕಡಾ 20ಕ್ಕಿಂತ ಹೆಚ್ಚಾಯಿತು.

1921 ಮತ್ತು 1937ರ ಮಧ್ಯಂತರದ 16 ವರ್ಷಗಳ ಅವಧಿಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ದೊಡ್ಡ ಪ್ರಗತಿಯೇ ಕಂಡು ಬಂದಿತು. ಅಖಿಲಭಾರತ ವಿಶ್ವವಿದ್ಯಾನಿಲಯಗಳ ಸಮ್ಮೇಳನವು 1924ರಲ್ಲಿ ಶಿಮ್ಲಾದಲ್ಲಿ ಜರುಗಿತು ಮತ್ತು ಅಂತರ ವಿಶ್ವವಿದ್ಯಾಲಯಗಳ ಸಮಿತಿಯು ಸ್ಥಾಪಿಸಲ್ಪಟ್ಟಿತು. ಈ ಸಮಿತಿಯಲ್ಲಿ ಭಾರತದ ಎಲ್ಲ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳಿದ್ದು, ಅದು 1925ರಿಂದ ಪ್ರತಿವರ್ಷ ವಿವಿಧ ವಿಶ್ವವಿದ್ಯಾಲಯಗಳ ಕೇಂದ್ರಗಳಲ್ಲಿ ವಾರ್ಷಿಕ ಸಭೆಗಳನ್ನು ನಡೆಸುತ್ತಿದೆ. ಈ ಅವಧಿಯಲ್ಲಿ 5 ಹೊಸ ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿ ಬಂದವು. ಕೇಂದ್ರಾಡಳಿತ ಪ್ರದೇಶವಾದ ದಿಲ್ಲಿ ಪ್ರಾಂತದಲ್ಲಿ ದಿಲ್ಲಿ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಟ್ಟಿತು. ಮಧ್ಯ ಪ್ರಾಂತಗಳು ಮತ್ತು ಬಿಹಾರದ ಸಲುವಾಗಿ ನಾಗಪೂರ ವಿಶ್ವವಿದ್ಯಾಲಯವು ಸ್ಥಾಪಿತವಾಯಿತು. ಮದ್ರಾಸ್ ಪ್ರಾಂತದ ತೆಲಗು ಮಾತನಾಡುವ ಪ್ರದೇಶಗಳ ಸಲುವಾಗಿ ಆಂಧ್ರ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಟ್ಟಿತು. ಸಂಯುಕ್ತ ಪ್ರಾಂತಗಳು, ಮಧ್ಯಭಾರತ ಮತ್ತು ಗ್ವಾಲ್ಹೇರ ಇವುಗಳ ಸಲುವಾಗಿ ಆಗ್ರಾ ವಿಶ್ವವಿದ್ಯಾಲಯವು ಮಾನ್ಯತೆಯೀಯುವ ವಿಶ್ವವಿದ್ಯಾನಿಲಯವೆಂದು ಸ್ಥಾಪಿತವಾಯಿತು. ಕೊನೆಯದಾಗಿ ಮದ್ರಾಸ್ ಪ್ರಾಂತದಲ್ಲಿ ಚಿದಂಬರಮ್‌ನಲ್ಲಿ ಬೋಧಕ ಮತ್ತು ಗುರುಕುಲ ಪದ್ಧತಿಯ ವಿಶ್ವವಿದ್ಯಾನಿಲಯವು ಸ್ಥಾಪಿಸಲ್ಪಟ್ಟಿತು. ಈ ವಿಶ್ವವಿದ್ಯಾಲಯಕ್ಕೆ ದೊಡ್ಡ ಪ್ರಮಾಣದ ದೇಣಿಗೆಯನ್ನು ಕೊಟ್ಟ ರಾಜಾ ಸರ್ ಅಣ್ಣಾಮಲಾಯಿ ಚೆಟ್ಟಿಯಾರ ಅವರ ಹೆಸರನ್ನು ಇಡಲಾಯಿತು.

ಮಾನ್ಯತೆಯೀಯುವ ಹಳೆಯ ವಿಶ್ವವಿದ್ಯಾಲಯಗಳಲ್ಲಿ ಬದಲಾವಣೆ ಸಮೀಕ್ಷೆಯ ಈ ಅವಧಿಯಲ್ಲಿ ಭಾರತದಲ್ಲಿದ್ದ ಅನೇಕ ಹಳೆಯ ವಿಶ್ವವಿದ್ಯಾಲಯಗಳು ಮಹತ್ವದ ಬದಲಾವಣೆಯನ್ನು ಹೊಂದಿದ್ದವು. ಮದ್ರಾಸ್ ವಿಶ್ವವಿದ್ಯಾಲಯ ಘಟನೆಯು 1923 ಮತ್ತು 1929ರ ತಿದ್ದುಪಡಿ ಕಾಯಿದೆಯನ್ವಯ ಮತ್ತು ಮುಂಬೈ ವಿಶ್ವವಿದ್ಯಾಲಯ ಮತ್ತು ಪಾಟ್ನಾ ವಿಶ್ವವಿದ್ಯಾಲಯದ ಘಟನೆಗಳು ಅನುಕ್ರಮವಾಗಿ 1928 ಮತ್ತು 1932ರ ಕಾಯಿದೆಗಳ ಅನ್ವಯ ಬದಲಾವಣೆ ಹೊಂದಿದವು. ಈ ಎಲ್ಲ ಕಾಯಿದೆಗಳ ಉದ್ದೇಶವು ಉಚ್ಚ ಶಿಕ್ಷಣಕ್ಕೆ ಮತ್ತು ಸಂಶೋಧನೆಗಾಗಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವಂತೆ ವಿಶ್ವವಿದ್ಯಾಲಯಗಳ ಆಡಳಿತವನ್ನು ಸುಧಾರಿಸುವುದಾಗಿತ್ತು. ಈ ಅವಧಿಯಲ್ಲಿ ಅಲಹಾಬಾದ ವಿಶ್ವವಿದ್ಯಾಲಯ, ಕಲಕತ್ತಾ ವಿಶ್ವವಿದ್ಯಾಲಯ ಮತ್ತು ಪಂಜಾಬ ವಿಶ್ವವಿದ್ಯಾಲಯಗಳು ವಿಸ್ತೃತವಾಗಿ ಬೋಧನೆಯ ಕಾರ್ಯವನ್ನು ಕೈಗೊಂಡವು. ವಿಶ್ವವಿದ್ಯಾಲಯದಲ್ಲಿರುವ ಇಲಾಖೆಗಳು ಮತ್ತು ಅಂಗ ಅಥವಾ ಮಾನ್ಯತೆ ಪಡೆದ ಕಾಲೇಜುಗಳ ಸಂಖ್ಯೆಯು 1921–22ರಲ್ಲಿ 207 ಇದ್ದುದು 1936–37ರಲ್ಲಿ 446ಕ್ಕೆ ಏರಿತು ಮತ್ತು ಅವುಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು 66,258 ರಿಂದ 1,26,228ಕ್ಕೆ ಏರಿತು. ಸಮೀಕ್ಷೆಯ ಈ ಅವಧಿಯಲ್ಲಿ ಭಾರತದ ಎಲ್ಲ ವಿಶ್ವವಿದ್ಯಾಲಯಗಳು ಸಂಶೋಧನೆಗೆ ಅನುಕೂಲತೆಗಳನ್ನು ಒದಗಿಸಿದುದು ಅತ್ಯಂತ ಮಹತ್ವದ ವೈಶಿಷ್ಟ್ಯವಾಗಿದೆ. 1896ರಲ್ಲಿ ನಿರ್ಮಿಸಿದ ಭಾರತೀಯ ಶಿಕ್ಷಣ ಸೇವೆಯನ್ನು 1924ರಲ್ಲಿ ರದ್ದುಗೊಳಿಸಲಾಯಿತು. ಅದರ ಬದಲು ಹೊಸ ಪ್ರಾಂತೀಯ ಸೇವೆಯನ್ನು ಸಂಘಟಿಸಲಾಯಿತು.

### ವಿಶ್ವವಿದ್ಯಾನಿಲಯ ಶಿಕ್ಷಣ ವಿಸ್ತರಣೆ (1937–47)

ಈ ಅವಧಿಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ಹೆಚ್ಚಿನ ವಿಸ್ತರಣೆಯಾಯಿತು. 1936–37ರಲ್ಲಿ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು (ಈಗ ಪಾಕಿಸ್ತಾನದಲ್ಲಿರುವ ವಿಶ್ವ ವಿದ್ಯಾಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನೊಳಗೊಂಡು) 1,26,228 ಇದ್ದರೆ ಅದು 1946–47ರಲ್ಲಿ (ಈಗ ಪಾಕಿಸ್ತಾನದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಬಿಟ್ಟು) 2,41,784ರಷ್ಟು ಇತ್ತು.

ಭಾರತದಲ್ಲಿಯ ವಿಶ್ವವಿದ್ಯಾಲಯ ಶಿಕ್ಷಣದ ಅನೇಕ ಮಹತ್ವದ ಅಂಶಗಳನ್ನು ಕುರಿತು ವರದಿ ಸಲ್ಲಿಸುವ ಸಲುವಾಗಿ ಕೇಂದ್ರ ಸರಕಾರವು 1948ರಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಆಯೋಗವನ್ನು ನೇಮಿಸಿತು. ಡಾ. ಎಸ್. ರಾಧಾಕೃಷ್ಣನ್ನರು ಅದರ ಅಧ್ಯಕ್ಷರಾಗಿದ್ದರು. ಆಗಸ್ಟ್ 1949ರಲ್ಲಿ ಸಲ್ಲಿಸಿದ ಅದರ ವರದಿಯು ಮಹತ್ವದ ದಾಖಲೆಯಾಗಿದೆ. ಅದು ವಿಶ್ವವಿದ್ಯಾನಿಲಯ ಹಂತದ ಎಲ್ಲ ಶಿಕ್ಷಣ ಸಮಸ್ಯೆಗಳನ್ನು ವಿವೇಚಿಸುತ್ತದೆ.

### ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಶಿಕ್ಷಣ

1947ರಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಭಾರತದ ಶಿಕ್ಷಣ ಇತಿಹಾಸದಲ್ಲಿ ಹೊಸ ಯುಗವು ಆರಂಭವಾಯಿತು. ಸ್ವಾತಂತ್ರ್ಯದ ಹೊಸ್ತಿಲಲ್ಲಿ ಭಾರತದಲ್ಲಿ 19 ವಿಶ್ವವಿದ್ಯಾಲಯಗಳಿದ್ದವು. ದ್ವಿತೀಯ ಯೋಜನೆಯ ಕೊನೆಗೆ ಅವುಗಳ ಸಂಖ್ಯೆ 45ಕ್ಕೆ ಏರಿತು. 1946–47ರಲ್ಲಿ 297 ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳು, 199 ಪೂರ್ವ ಸ್ನಾತಕ ಕಾಲೇಜುಗಳು ಮತ್ತು 140 ವೃತ್ತಿಮೂಲ ಮತ್ತು ತಾಂತ್ರಿಕ ಶಿಕ್ಷಣ ಕಾಲೇಜುಗಳಿದ್ದವು.

Digitised by Bharatavani, CIIL

1961ರಲ್ಲಿ 462 ವಿಶ್ವವಿದ್ಯಾಲಯ ವಿದ್ಯಾಂಗಗಳಿದ್ದವು. 238 ಅಂಗ ಕಾಲೇಜುಗಳು, 1316 ಮಾನ್ಯತೆ ಪಡೆದ ಕಾಲೇಜುಗಳು ಮತ್ತು 83 ಮನ್ನಣೆ ಹೊಂದಿದ ಸಂಶೋಧನಾ ಸಂಸ್ಥೆಗಳಿದ್ದವು.

ರಾಧಾಕೃಷ್ಣನ್ ಆಯೋಗದ ಶಿಫಾರಸ್ಸುಗಳನ್ವಯ ಸರಕಾರಿ ಆಜ್ಞೆಗೆ ಅನುಸಾರವಾಗಿ 1953ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ನೇಮಿಸಲ್ಪಟ್ಟಿತು. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಕಾಯಿದೆಯಂತೆ ಒಂದು ಕಾಯಿದೆಬದ್ಧ ಸಮಿತಿಯು 1956ರಲ್ಲಿ ಸ್ಥಾಪಿಸಲ್ಪಟ್ಟಿತು. ಡಾ. ಸಿ.ಡಿ. ದೇಶಮುಖ್ ಅವರು ಅದರ ಪ್ರಥಮ ಚೇರಮನ್ನರಾಗಿದ್ದರು.

12 ವರ್ಷಗಳ ಶಾಲಾ ವ್ಯಾಸಂಗದ ನಂತರ 3 ವರ್ಷಗಳ ವ್ಯಾಸಂಗ ಇರಬೇಕೆಂಬ ರಾಧಾಕೃಷ್ಣನ್ ಆಯೋಗದ ಮೂಲ ಶಿಫಾರಸ್ಸಿನಂತೆ ಮೂರು ವರ್ಷಗಳ ಪದವಿ ವ್ಯಾಸಂಗವನ್ನು ಪ್ರಾರಂಭಿಸಲಾಯಿತು.

1966ರ ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಭಾರತದ ಎಲ್ಲಾ ರಾಜ್ಯಗಳು ಸರ್ವಾನುಮತದಿಂದ 10+1+3 ಶಿಕ್ಷಣ ಪದ್ಧತಿಯನ್ನು ನಡೆಸಿಕೊಂಡು ಬರಬೇಕೆಂದು ತಿಳಿಸಲಾಯಿತು. ಆದರೆ 1968ರಲ್ಲಿ ರಚಿತವಾದ ರಾಷ್ಟ್ರೀಯ ಶಿಕ್ಷಣ ನೀತಿಯ ಮೇಲೆ ಸುದೀರ್ಘ ಚರ್ಚೆ ನಡೆದು 10+2+3 ವಿಧಾನವೇ ಯೋಗ್ಯವೆಂದು ತೀರ್ಮಾನಿಸಲಾಯಿತು.

ಡಾ. ರಾಧಾಕೃಷ್ಣನ್ನರ ಸಮಿತಿಯು ಮಾಡಿದ ಶಿಫಾರಸ್ಸುಗಳಲ್ಲಿ ಯು.ಜಿ.ಸಿ. ಸ್ಥಾಪನೆ ಶಿಫಾರಸ್ಸು ಇದ್ದು ಇದು ಸರ್ವೋತ್ಕೃಷ್ಟ ಶಿಫಾರಸ್ಸಾಗಿದೆ. ಕಳೆದ 5 ದಶಕಗಳಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ಒಂದು ನಿರ್ದಿಷ್ಟ ರೂಪದಲ್ಲಿ ಉಂಟಾಗಿದ್ದರೆ ಅದು ಕೇವಲ ಯು.ಜಿ.ಸಿ. ಪ್ರಯತ್ನದಿಂದ ಮಾತ್ರ ಎಂದು ಹೇಳಬಹುದು. ಸಂಶೋಧನಾ ಅಧ್ಯಯನಗಳನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಲು ಅನೇಕ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಪ್ರಾಧ್ಯಾಪಕರ ವೇತನದಲ್ಲಿ ಏಕರೂಪತೆಯನ್ನು ತರಲು ಪ್ರಯತ್ನಿಸಲಾಗಿದೆ.

ಇಂದು ಭಾರತದ ಉನ್ನತ ಶಿಕ್ಷಣ ತನ್ನ ಗಾತ್ರ ಹಾಗೂ ವೈವಿಧ್ಯತೆಯಿಂದಾಗಿ ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿ ಇದೆ. ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲಿ ಇದರ ವ್ಯಾಪ್ತಿ ತುಂಬಾ ಕಡಿಮೆಯಿತ್ತು. ಆದರೆ ಸ್ವಾತಂತ್ರ್ಯದ ನಂತರ ಇದರ ವಿಸ್ತಾರ ಅಗಾಧವಾಗಿದೆ. ವಿಶ್ವವಿದ್ಯಾಲಯಗಳ ಸಂಖ್ಯೆ 18 ಸಲದಷ್ಟು ಹೆಚ್ಚಾದರೆ, ಕಾಲೇಜುಗಳು 35 ಸಲದಷ್ಟು ಹಾಗೂ ದಾಖಲಾತಿ 10 ಸಲದಷ್ಟು (ಎಂ.ಎಚ್.ಆರ್.ಡಿ. 2006–07ರ ವಾರ್ಷಿಕ ವರದಿ) ಹೆಚ್ಚಾಗಿದೆ. 40%ರಷ್ಟು ದಾಖಲಾತಿ ಕೆಳ ಸಾಮಾಜಿಕ – ಆರ್ಥಿಕ ಕುಟುಂಬದಿಂದ ಬಂದವರಾಗಿದ್ದರೆ, 35% ದಾಖಲಾತಿ ಮಹಿಳೆಯರನ್ನು ಹೊಂದಿದ್ದು ಬಿಂಬಿಸುತ್ತದೆ. (Tilak 2004). ಕೋಷ್ಟಕ –1, 1950–51 ರಿಂದ 2004–05ರವರೆಗಿನ ಸಾಮಾನ್ಯ ಶಿಕ್ಷಣ, ವೃತ್ತಿ ಶಿಕ್ಷಣ ಮತ್ತು ವಿಶ್ವ ವಿದ್ಯಾಲಯಗಳ ಬೆಳವಣಿಗೆಯನ್ನು ಬಿಂಬಿಸುತ್ತದೆ. ಕೋಷ್ಟಕ–2, 2004–05 ಉನ್ನತ ಶಿಕ್ಷಣದಲ್ಲಿನ ದಾಖಲಾತಿಯನ್ನು ಪ್ರತಿಬಿಂಬಿಸುತ್ತದೆ.

**ಕೋಷ್ಟಕ–1, 1950–51 ರಿಂದ 2004–05ರವರೆಗಿನ ಸಾಮಾನ್ಯ ಶಿಕ್ಷಣ, ವೃತ್ತಿ ಶಿಕ್ಷಣ ಮತ್ತು ವಿಶ್ವವಿದ್ಯಾಲಯಗಳ ಬೆಳವಣಿಗೆ.**

| ವರ್ಷ | ಸಾಮಾನ್ಯ ಶಿಕ್ಷಣದ ಕಾಲೇಜುಗಳು | ವೃತ್ತಿ ಶಿಕ್ಷಣದ ಕಾಲೇಜುಗಳು | ವಿಶ್ವವಿದ್ಯಾಲಯಗಳು |
|---|---|---|---|
| 1950–51 | 370 | 208 | 27 |
| 1955–56 | 466 | 218 | 31 |
| 1960–61 | 967 | 852 | 45 |
| 1965–66 | 1536 | 770 | 64 |
| 1970–71 | 2285 | 992 | 82 |
| 1975–76 | 3667 | 3276** | 101 |
| 1980–81 | 3421 | 3542** | 110 |
| 1985–86 | 4067 | 1533** | 126 |
| 1990–91 | 4862 | 886 | 184 |
| 1991–92 | 5058 | 950 | 196 |
| 1992–93 | 5334 | 989 | 207 |
| 1993–94 | 5639 | 1125 | 213 |
| 1994–95 | 6089 | 1230 | 219 |
| 1995–96 | 6569 | 1354 | 226 |
| 1996–97 | 6759 | 1770 | 228 |
| 1997–98 | 7199 | 2075 | 229 |
| 1998–99 | 7494 | 2113 | 237 |
| 1999–00 | 7782 | 2124 | 244 |
| 2000–01 | 7929 | 2223 | 254 |
| 2001–02 | 8737 | 2409 | 272 |
| 2002–03 | 9166 | 2610 | 304 |
| 2003–04 | 9427 | 2751 | 304 |
| 2004–05 | 10377 | 3201 | 364 |

** ಮ್ಯಾಟ್ರಿಕ್ ಪೂರ್ವ ಕೋರ್ಸುಗಳ ಸಂಸ್ಥೆಗಳನ್ನೊಳಗೊಂಡು.
ಆಕರ : ಶೈಕ್ಷಣಿಕ ಸಂಖ್ಯಾಶಾಸ್ತ್ರ 2004–05. MHRD 2007.

Digitised by Bharatavani, CIIL

**ಕೋಷ್ಟಕ–2, 2004–05ರ ಉನ್ನತ ಶಿಕ್ಷಣದಲ್ಲಿನ ದಾಖಲಾತಿ**

| ಅ.ನಂ | ಶಿಕ್ಷಣ ಹಂತಗಳು | ಹುಡುಗರು | ಹುಡುಗಿಯರು | ಒಟ್ಟು |
|---|---|---|---|---|
| 01 | Ph. D./D.Sc./D.Phill | 32526 | 22826 | 55352 |
| 02 | M.A. | 250546 | 218765 | 469291 |
| 03 | M.Sc | 107841 | 90878 | 198719 |
| 04 | M.Com | 80616 | 41641 | 122257 |
| 05 | B.A./B.A.Hons | 2117637 | 1654579 | 3772216 |
| 06 | B.Sc/.B.Sc.Hons | 910440 | 580345 | 1490785 |
| 07 | B.Com/B.Com.Hons | 928181 | 536847 | 1465028 |
| 08 | B.E./B.Sc.Engg/B.Arch | 531207 | 165402 | 696609 |
| 09 | M.B.B.S./B.D.S/Pharmacy Nursing/Aur/Homeopathy | 167696 | 89052 | 256748 |
| 10 | B.Ed/B.T | 87143 | 68049 | 155192 |
| 11 | Others* | 1921887 | 1173212 | 3095099 |
| 12 | Total | 7135720 | 4641576 | 11777296 |

Others* ಮುಕ್ತ ಹಾಗೂ ದೂರ ಕಲಿಕಾ ಸಂಸ್ಥೆಗಳು.
ಆಕರ: ಶೈಕ್ಷಣಿಕ ಸಂಖ್ಯಾಶಾಸ್ತ್ರ 2004–05. MHRD 2007.

ಉನ್ನತ ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಯು.ಜಿ.ಸಿ.ಯು. 2 (ಎಫ್) ಮತ್ತು 12 (ಬಿ) ಅಡಿ ಕೆಲವು ನಿಯಮಗಳನ್ನು ಅನುಸರಿಸುತ್ತದೆ. ಈ ಎರಡು ನಿಯಮಗಳ ಅಡಿ ಗುಣಾತ್ಮಕತೆಯನ್ನು ಕಾಯ್ದುಕೊಳ್ಳುವ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ಯು.ಜಿ.ಸಿ.ಯು ಅನುದಾನವನ್ನು ಬಿಡುಗಡೆ ಮಾಡುತ್ತದೆ. ಅಲ್ಲದೆ ಯು.ಜಿ.ಸಿ.ಯು 1994ರಲ್ಲಿ ನ್ಯಾಕ್ ಸ್ಥಾಪಿಸುವುದರ ಮೂಲಕವೂ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಗುಣಾತ್ಮಕತೆಯನ್ನು ಕಾಪಾಡುವುದರತ್ತ ಹೆಜ್ಜೆ ಇರಿಸಿದೆ.

–ಅ.ಷ್ಟಿ.ಬ.

## ಭಾರತೀಯ ತತ್ತ್ವಶಾಸ್ತ್ರದಲ್ಲಿ ಕೆಲವು ಶೈಕ್ಷಣಿಕ ಪರಿಕಲ್ಪನೆಗಳು

ಭಾರತೀಯ ಸಂಸ್ಕೃತಿ ಹಾಗೂ ಸಂಸ್ಕೃತದಲ್ಲಿ ತತ್ತ್ವಶಾಸ್ತ್ರ ಎಂಬ ಪದವು ಬಳಕೆಯಾಗುವ ಮುನ್ನ ಅರ್ವಾಚೀನಕಾಲದಿಂದಲೂ ಧರ್ಮ, ದರ್ಶನ ಎಂಬ ಪದಗಳೇ ರೂಢಿಯಲ್ಲಿರುವುದು ಕಾಣುತ್ತದೆ. ಸತ್ಯದ ಮೂಲವನ್ನು ಅರಸುತ್ತಾ ಹೊರಟ ಪ್ರಾಚೀನ ಭಾರತೀಯರು ಸತ್ಯದರ್ಶನವನ್ನು ಮಾಡಿಕೊಂಡರು. ಜೀವನದ ಪರಮೋದ್ದೇಶದ ವಿಷಯದಲ್ಲಿ ತರ್ಕವನ್ನೂ ಮೀರಿದ ಸ್ವಾನುಭವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ. ಇಲ್ಲಿ ಬೆಳೆದು ಬಂದ ಚಿಂತನಾ ವಿಧಾನಗಳು, ತರ್ಕಗಳು, ಪ್ರಮಾಣಗಳು ಮನುಷ್ಯನನ್ನು ಹೆಚ್ಚು ಹೆಚ್ಚು ವಿಚಾರಗಳ ಒರೆಗಲ್ಲಿಗೆ ಹಚ್ಚಿ, ಜೀವನ ವಿಧಾನದಲ್ಲಿ ಮಾರ್ಪಾಟುಗಳನ್ನು ತಂದಿತು. ಜೀವನ ವಿಧಾನವು ಹೆಚ್ಚು ಹೆಚ್ಚು ಅಚ್ಚುಕಟ್ಟಾಗಲು, ಶಿಸ್ತುಬದ್ಧ ಜೀವನ ನಡೆಸಲು ಸಹಕಾರಿಯಾದವು. ಅನೇಕಾನೇಕ ಸದ್ಗುಣ ಸಂಪಾದನೆಗೆ ಒತ್ತು ನೀಡಿದವು. ತ್ಯಾಗ ಮತ್ತು ವೈರಾಗ್ಯಗಳಿಗೆ ಹೆಚ್ಚಿನ ಮಹತ್ವ ನೀಡಿದವು. ಆಶ್ರಮಧರ್ಮಗಳು ಚಾಲನೆಗೆ ಬಂದವು. ಶಿಕ್ಷಣಕ್ಕೂ ಮಹತ್ವ ದೊರೆಯಿತು. ಗುರುಕುಲಗಳು ತೆರೆದುಕೊಂಡವು. ಜೀವನದ ಆದರ್ಶಗಳನ್ನು ಎತ್ತಿ ಹಿಡಿದರು. ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಗಳು ಸಮಾಜದ ಆಧಾರಸ್ತಂಭಗಳಾದವು. ಅನೇಕ ತಾತ್ವಿಕ ಪರಿಕಲ್ಪನೆಗಳು ರೂಪುಗೊಂಡವು. ಇಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಅನ್ವಯವಾಗುವ ಕೆಲವು ಪರಿಕಲ್ಪನೆಗಳನ್ನು ವಿವರಿಸಲಾಗಿದೆ.

**ಗುರುವಿನ ಪರಿಕಲ್ಪನೆ:** ಭಾರತೀಯ ಪರಂಪರೆಯಲ್ಲಿ ಗುರುವಿಗೆ ಅತ್ಯುನ್ನತ ಸ್ಥಾನವಿದೆ. ಗುರು ಸದ್ಗುಣವಂತನೂ, ಶೀಲವಂತನೂ, ಸದಾಚಾರ ಸಂಪನ್ನನೂ, ಶಾಸ್ತ್ರ ಸಂಪತ್ತುಳ್ಳವನೂ ಆಗಿರಬೇಕು. ಗುರುವಿನ ಸ್ಥಾನಕ್ಕೆ ಯಾವ ವ್ಯಕ್ತಿಯಾದರೂ ಸರಿ, ತನ್ನ ಗುರುವಿನ ಕೃಪಾಕಟಾಕ್ಷ ಪಡೆದು ಸದ್ವಿದ್ಯೆಯನ್ನು ಪಡೆದಿರಬೇಕು. ಜೀವನದ ಪರಮಗುರಿಗೆ ಸಾಧನವಾಗಿರುವ ಉತ್ಕೃಷ್ಟ ವಿದ್ಯೆಯನ್ನೂ ಪಡೆದಿರುವುದಲ್ಲದೇ, ಶಿಷ್ಯರಿಗೆ ಸಂಪೂರ್ಣವಾಗಿ ಧಾರೆ ಎರೆದು ಕೊಡುವ ಸಾಮರ್ಥ್ಯವನ್ನು ಪಡೆದಿರಬೇಕು. ತಾನು ಬೋಧಿಸುವ ಶಾಸ್ತ್ರ ಹಾಗೂ ಬೋಧಿಸುವ ಶಾಸ್ತ್ರಕ್ಕೆ ಪೂರಕವಾದ ಶಾಸ್ತ್ರಗಳ ಸಂಪೂರ್ಣ ಜ್ಞಾನವಿರಬೇಕು. ಪ್ರವಚನಮಾಡುವ ವಿಶೇಷ ಗುಣವನ್ನು ಹೊಂದಿರಬೇಕು. ತಾನು ಬೋಧಿಸುವ ವಿಷಯದಲ್ಲಿ ಸಂಪೂರ್ಣ ಜ್ಞಾನವಲ್ಲದೇ ದೃಢನಂಬಿಕೆಯೂ ಇರಬೇಕು. ಎಂತಹ ಸಂದರ್ಭ ಬಂದರೂ ತನ್ನ ಕರ್ತವ್ಯದಿಂದ ವಿಮುಖನಾಗದೇ ಶಿಷ್ಯನಿಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿ ಹೇಳುವ ಚಾಣಾಕ್ಷತನವಿರಬೇಕು.

ಶಿಷ್ಯನ ಕಲಿಕಾಮಟ್ಟವನ್ನು ಅರಿತುಕೊಂಡು ಅವನಲ್ಲಿರುವ ಅಜ್ಞಾನವೆಂಬ ಕತ್ತಲನ್ನು ಹೋಗಲಾಡಿಸುವ ಜ್ಞಾನದ ದೀಪವನ್ನು ಅವನಲ್ಲಿ ಹಚ್ಚಿಡಬೇಕು. ಗುರುವು ಜ್ಯೋತಿರ್ಮಯನಾಗಿದ್ದು, ಆತ್ಮಪ್ರಕಾಶಕನಾಗಿರಬೇಕು. ಜೀವ ಮತ್ತು ಈಶ್ವರ ಇವರುಗಳ ನಡುವೆ ಇರುವ ಮಧ್ಯವರ್ತಿಯಾಗಿರಬೇಕು. ಶಿಷ್ಯರ ಸಕಲ ಸಂಶಯ ನಿವಾರಣೆ ಮಾಡುವ, ಶಿಷ್ಯನಲ್ಲಿರುವ ದೋಷಗಳನ್ನು ಸರಿಪಡಿಸುವ ಸಾಮರ್ಥ್ಯವನ್ನು ಪಡೆದಿರಬೇಕು. ಶಿಷ್ಯನನ್ನು ಸರಿದಾರಿಗೆ ಕರೆದೊಯ್ದು ಗುರಿ ಮುಟ್ಟುವವರೆವಿಗೂ ಮಾರ್ಗದರ್ಶನ ನೀಡುವ ಶಕ್ತಿಯನ್ನು ಪಡೆದಿರಬೇಕು. ಬೋಧಿಸುವವನು ಆಶ್ಚರ್ಯವನ್ನು ಉಂಟು ಮಾಡುವವನಾಗಿರಬೇಕು.

ಯಾರು ತನ್ನಲ್ಲಿರುವ ಎಲ್ಲಾ ಶಕ್ತಿಗಳನ್ನೂ ಸರಿಯಾದ ಶಿಷ್ಯನಿಗೆ ಸರಿಯಾದ ಕಾಲದಲ್ಲಿ ಸರಿಮಾರ್ಗಗಳ ಮೂಲಕ ಸರಿಪ್ರಮಾಣದಲ್ಲಿ

Digitised by Bharatavani, CIIL

ನೀಡಬಲ್ಲ ಸಾಮರ್ಥ್ಯವುಳ್ಳವನೋ, ಅವನೇ ಗುರು. ಈ ಮಾರ್ಗಗಳು ಅನೇಕ. ಗುರು ತನ್ನ ಸಾಮೀಪ್ಯದ ಮೂಲಕ, ತನ್ನ ಉದಾಹರಣೆಯ ಮೂಲಕ, ಸ್ಪರ್ಶದ ಮೂಲಕ, ದೃಷ್ಟಿಯ ಮೂಲಕ, ಶಬ್ದದ ಮೂಲಕ, ವಿಚಾರದ ಮೂಲಕ, ಇಚ್ಛಾಶಕ್ತಿಯ ಮೂಲಕ ವಿದ್ಯೆಯನ್ನು ಶಿಷ್ಯನಿಗೆ ವರ್ಗಾವಣೆ ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು. ನಿರಹಂಕಾರಿಯಾಗಿ, ನಿಸ್ವಾರ್ಥಿಯಾಗಿ, ಶಿಷ್ಯ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಶಿಷ್ಯನಿಗೆ ಶಾಂತಿ–ಸಮಾಧಾನಗಳನ್ನು ನೀಡುವವನೇ ಗುರು.

ತ್ರಿಮೂರ್ತಿಗಳ ಸ್ವರೂಪವೇ ಗುರು. ಧ್ಯಾನಕ್ಕೆ ಅರ್ಹನಾಗಿರುವವನು ಗುರು. ಪೂಜೆಗೆ ಅರ್ಹನಾಗಿರುವವನು ಗುರು. ಸಾಕ್ಷಾತ್ ಪರಬ್ರಹ್ಮನು ಗುರುವಾಗಿದ್ದಾನೆ. ಮಂತ್ರಮೂಲವೇ ಗುರು. ಮೋಕ್ಷ ಮೂಲನೇ ಗುರು. ಚಿತ್ ಸ್ವರೂಪವೇ ಗುರು. ಆನುವ ಸ್ವರೂಪವೇ ಗುರು. ಚೈತನ್ಯದಾಯಕನೇ ಗುರು. ಜ್ಞಾನಶಕ್ತಿಯನ್ನು ನೀಡುವವನು ಗುರು. ಭಗವಂತನೇ ನಿಜವಾದ ಗುರುವು.

ವ್ಯಾಸರ ನಿಜವಾದ ಗುರುಗಳು. ಋಷಿಮುನಿಗಳು ಗುರುಗಳು. ಆಚಾರ್ಯರುಗಳು ಗುರುಗಳು. ಸಂನ್ಯಾಸಿಗಳು ಗುರುಗಳು. ಸಾಧುಸಂತರುಗಳು ಗುರುಗಳು. ಗುರುಗಳಿಗೆ ಆಚಾರ್ಯರು, ಉಪಾಧ್ಯಾಯರು, ಅಧ್ಯಾಪಕರು ಹೀಗೆ ಬೇರೆ ಬೇರೆ ನಾಮಗಳಿವೆ. ಈ ನಾಮಗಳಿಗೆ ಅರ್ಥಗಳೂ ಬೇರೆ ಬೇರೆ ಇವೆ. ಮನುಷ್ಯನಿಗೆ ಪಾಠ ಕಲಿಸುವ ಸಮಸ್ತ ವಿಶ್ವವೂ ಗುರುವೇ ಆಗಿವೆ. ದತ್ತಾತ್ರೇಯರು ಲೋಕದ ಗುರುಗಳು. ಇವರು ಸರಸ್ವತಿ–ಲಕ್ಷ್ಮಿ–ಪಾರ್ವತಿಯರು ಹಾಗೂ ಬ್ರಹ್ಮ–ವಿಷ್ಣು–ಮಹೇಶ್ವರರ ಅಂಶ. ಇವರು ಮಹಾಜ್ಞಾನಿಗಳು. ಯದುರಾಜ ಒಮ್ಮೆ ದತ್ತಾತ್ರೇಯರ ಬಳಿಗೆ ಹೋದಾಗ ತಮ್ಮ 24 ಗುರುಗಳನ್ನು ಅವರು ರಾಜನಿಗೆ ಪರಿಚಯಿಸಿದ ರೀತಿ ಹೀಗಿದೆ.

1. ತಾಳ್ಮೆ ಮತ್ತು ಪರೋಪಕಾರಕ್ಕೆ ಭೂಮಿಯೇ ಗುರು.
2. ಶುಚಿತ್ವಕ್ಕೆ ನೀರು ಗುರು. ಈ ಗುರುವಿನಿಂದಾಗಿ ಸ್ವಾರ್ಥ, ಕಾಮ, ಅಹಂಕಾರ, ಕ್ರೋಧ, ಲೋಭ, ಮೋಹಗಳೆಂಬ ಕೊಳೆಗಳು ನಾಶವಾಗಿ ಮನುಷ್ಯ ಪರಿಶುದ್ಧವಾಗುತ್ತಾನೆ.
3. ವಿರಕ್ತಿಗೆ ಗಾಳಿಯೇ ಗುರು. ಯಾವುದಕ್ಕೂ ಅಂಟಿಕೊಳ್ಳದಿರುವುದು.
4. ಸುಡುವ ಕ್ರಿಯೆಗೆ ಅಗ್ನಿಯೇ ಗುರು. ಕೆಟ್ಟದ್ದೆಲ್ಲವನ್ನೂ ಸುಡುವುದು.
5. ನಿರ್ಲಿಪ್ತತಾ ಸೂಚಕವಾಗಿ ಆಕಾಶವು ಗುರು.
6. ಪೂರ್ಣತ್ವ ಪ್ರಕಾಶಕ್ಕೆ, ಮತ್ತೊಬ್ಬರಿಂದ ತಾನು ಪ್ರಕಾಶಿಸಲು ಚಂದ್ರನು ಗುರು.
7. ಭೂಲೋಕದಲ್ಲಿ ಸಮಸ್ತ ಜೀವಕೋಟಿಯ ಆಧಾರನಾಗಿ ಸ್ವಯಂಪ್ರಕಾಶಿಸುವ ಸೂರ್ಯನು ಗುರು.
8. ಮೋಹವೇ ಬಂಧನಕ್ಕೆ ಕಾರಣ ಎಂದು ಸೂಚಿಸುವ ಪಾರಿವಾಳವು ಗುರು.
9. ಇದ್ದಷ್ಟಕ್ಕೆ ತೃಪ್ತಿಪಡುವ ಅಜಗರವೂ ಗುರು.
10. ನಿಶ್ಚಿಂತತಾಸೂಚಕ ಸಾಗರವೂ ಗುರು.
11. ವಿಷಯಾಸಕ್ತಿಯು ನಾಶಕ್ಕೆ ಮೂಲ ಎಂದು ಸಾರುವ ಪತಂಗವೂ ಗುರು.
12. ಪರೋಪಕಾರ ಸೂಚಕವಾಗಿ ದುಂಬಿಯೂ ಗುರು.
13. ಸಂಗ್ರಹ ಬುದ್ಧಿ ಬೇಡವೆಂದು ಸೂಚಿಸುವ ಜೇನ್ನೊಣವೂ ಗುರು.
14. ಆಸೆಯಿಂದ ಬಂಧನ ಎಂದು ತಿಳಿಸುವ ಖೆಡ್ಡಾದಲ್ಲಿ ಬಂಧಿಯಾಗುವ ಗುಣವೇ ಗುರು.
15. ಯಾವುದಕ್ಕೂ ಮಾರು ಹೋಗಬಾರದೆಂದು ತಿಳಿಸುವ ಚಿಗುರೆಯೂ ಗುರು.
16. ಜಿಹ್ವಾ ಚಾಪಲ್ಯದಿಂದ, ಬಲೆಗೆ ಸಿಕ್ಕಿ ಪ್ರಾಣ ಕಳೆದುಕೊಳ್ಳುವ ಮೀನು ಸಹ ಗುರು.
17. ಕಾಮಪಿಪಾಸ ಸರ್ವನಾಶಕ್ಕೆ ನಾಂದಿ ಎಂದು ಸಾರಿ ಹೇಳುವ ನರ್ತಕಿ ಹಾಗೂ ವೇಶ್ಯೆ ಪಿಂಗಾಳಾರ ಗುರು.
18. ಯಾವುದರ ಬೆನ್ನತ್ತಿ ಹೋಗಬಾರದೆಂದು ಸೂಚಿಸುವ ಕಾಗೆಯೂ ಗುರು.
19. ಜಗಳ, ಭಿನ್ನಾಭಿಪ್ರಾಯ ಮತ್ತು ವೈಮನಸ್ಸು ಬಿಡಬೇಕೆಂದು ತಿಳಿಸುವ ಏಕಾಂತವಾಸಿ ಕನ್ಯೆಯೂ ಗುರು.
20. ಏಕಾಗ್ರತಾ ಸೂಚಕವಾಗಿ ಬೇಡನೂ ಗುರು.
21. ತನ್ನ ಬಲೆಯಲ್ಲಿ ತಾನೇ ಬಂಧಿಯಾಗುವ ಜೇಡವು, ವ್ಯಕ್ತಿಯ ಬಂಧನಕ್ಕೆ ಅವನ ಕರ್ಮವೇ ಕಾರಣವೆಂದು ಸೂಚಿಸುವ ಗುರುವಾಗಿದೆ.
22. ಸ್ವಂತದ್ದೇನೂ ಆವಶ್ಯಕವಿಲ್ಲವೆಂದು ಸೂಚಿಸುವ ಸರ್ಪವೂ ಗುರು.
23. ಮುಗ್ಧತೆ ಹಾಗೂ ಪ್ರಸನ್ನತೆಯ ಸೂಚಕವಾಗಿ ಮಗುವೂ ಗುರು.
24. ಶರೀರ ಭಾವನೆ ಬೇಡವೆಂದು ಹೇಳುವ ಕಣಜವೂ ಗುರು.

ಈ ರೀತಿ ಸೃಷ್ಟಿಯ ಪ್ರತಿಯೊಂದರಲ್ಲೂ ಗುರುವನ್ನು ಕಾಣುವವನು ಆನಂದಮಯಿಯಾಗಿರುತ್ತಾನೆ.

ಸದ್ಗುರುವನ್ನು ಪಡೆಯಲು ಎಲ್ಲರೂ ಸತತವಾಗಿ ಪ್ರಯತ್ನಿಸಬೇಕು. ಶಿಕ್ಷಣ ನೀಡುವ ಗುರುಗಳು ಶಿಕ್ಷಾಗುರುಗಳಾಗಿಯೂ, ಪವಿತ್ರ ದೀಕ್ಷೆಯನ್ನು ನೀಡುವ ಗುರುಗಳು ದೀಕ್ಷಾಗುರುಗಳಾಗಿಯೂ ಆಗಿರುತ್ತಾರೆ.

**ಕರ್ಮದ ಪರಿಕಲ್ಪನೆ**

'ಕೃಞ್' ಎಂಬುದು ಮೂಲಧಾತು. 'ಕರಣ' ಎಂಬ ಅರ್ಥದಲ್ಲಿ ಈ ಧಾತುವಿನ ಪ್ರಯೋಗವಿದೆ. ಕರಣ ಎಂದರೆ 'ಮಾಡು' ಎಂದರ್ಥ. ಆದ್ದರಿಂದ ಕರ್ಮ್ ಎಂಬುದು ಕರ್ತೃವಿಗೆ ಇಷ್ಟತಮವಾದುದನ್ನೂ ಸೂಚಿಸುತ್ತದೆ. ಪ್ರಸ್ತುತ ವಿಶ್ವದಲ್ಲಿ ನಡೆದಿರುವ, ನಡೆಯುತ್ತಿರುವ ಮತ್ತು ನಡೆಯಬಹುದಾದ ಸಮಸ್ತ ಕಾರ್ಯಗಳು, ಕಾರ್ಯಗಳ ಫಲಗಳೂ ಸಹ ಕರ್ಮಪದದಿಂದಲೇ ವ್ಯವಹರಿಸಲ್ಪಡುತ್ತದೆ. ಹಾಗೆಯೇ ಬ್ರಾಹ್ಮಣ ಗ್ರಂಥಗಳಲ್ಲಿ ಬೋಧಿಸಿರುವ ಮತ್ತು ಕಲ್ಪ ಸೂತ್ರಗಳಲ್ಲಿ ಕ್ರಮಗೊಳಿಸಲ್ಪಟ್ಟ ವಿಧಿಗಳೂ ಕರ್ಮ ಎನಿಸಿಕೊಳ್ಳುತ್ತವೆ. ಈ ವಿಧಿಗಳಿಗೆ ಸಂಬಂಧಿಸಿದ ಸಮಸ್ತ ಚಟುವಟಿಕೆಗಳೂ ಕರ್ಮಪದದಿಂದಲೇ ವ್ಯವಹಾರವಾಗುತ್ತಿದೆ. ಜ್ಞಾನಾರ್ಜನೆಗಾಗಿ ಸತತವಾಗಿ ಮಾಡುವ ಕೆಲಸಕಾರ್ಯಗಳೂ ಕರ್ಮಗಳೇ ಆಗಿವೆ. ಅಧ್ಯಯನ, ಸ್ವಾಧ್ಯಾಯ ಹಾಗೂ ಪ್ರವಚನಗಳು ಕರ್ಮಗಳೇ ಆಗಿವೆ.

ಭಾರತೀಯ ತತ್ತ್ವ ಶಾಸ್ತ್ರಜ್ಞರು ಕರ್ಮದ ಬಗ್ಗೆ ಒಂದೇ ರೀತಿಯ ಅಭಿಪ್ರಾಯವನ್ನು ಹೊಂದಿಲ್ಲ. ಆದ್ದರಿಂದ ಕರ್ಮಕ್ಕೆ ಬೇರೆ ಬೇರೆ ಅರ್ಥಗಳು ಇವೆ. ವಸ್ತುಗಳ ಸ್ವಭಾವಜನ್ಯ ಧರ್ಮವೂ ಕರ್ಮವೇ ಆಗಿದೆ. ಒಂದು ವಸ್ತುವು ತನ್ನ ಧರ್ಮವನ್ನು ಬಿಟ್ಟು ಬೇರೆ ವಸ್ತುವಿನ ಧರ್ಮವನ್ನು ತೋರಿದರೆ ಆಗ ಅದು ವಿರುದ್ಧ ಕರ್ಮವಾಗುತ್ತದೆ. ಉದಾಹರಣೆಗೆ,

Digitised by Bharatavani, CIIL

ನೀರಿಗೆ ತೋಯಿಸುವ ಧರ್ಮವೂ, ಅಗ್ನಿಗೆ ಸುಡುವ ಧರ್ಮವೂ ಇದೆ. ಒಂದು ವೇಳೆ ನೀರು ದಹಿಸಲು ಪ್ರಾರಂಭಿಸಿ, ಅಗ್ನಿಯು ತೋಯಿಸಲು ಪ್ರಾರಂಭಿಸಿದರೆ ಆಗ ಅದು ವಿರುದ್ಧ ಕರ್ಮವಾಗುತ್ತದೆ. ವಿರುದ್ಧ ಕರ್ಮವು ಭಯಾನಕವಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ತನ್ನ ತನ್ನ ಧರ್ಮಕ್ಕನುಸಾರವಾದ ಕರ್ಮವನ್ನು ಆಚರಿಸಬೇಕು. ಉದಾಹರಣೆಗೆ, ಗಂಡನು ಸ್ತ್ರೀಧರ್ಮವನ್ನನುಸರಿಸಿ ಕರ್ಮ ಮಾಡುವುದು, ಸ್ತ್ರೀಯು ಪುರುಷ ಧರ್ಮವನ್ನನುಸರಿಸಿ ಕಾರ್ಯ ಮಾಡುವುದು ಸರಿಯಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮಗಳನ್ನು ಯಾವಾಗಲೂ ಮಾಡುತ್ತಲೇ ಇರಬೇಕೆಂದು ಕೆಲವರು ಹೇಳಿದರೆ, ಜ್ಞಾನ ಉದಿಸಿದ ಮೇಲೆ ಕರ್ಮದ ಆವಶ್ಯಕತೆಯಿಲ್ಲವೆಂದು ಕೆಲವರು ಹೇಳುತ್ತಾರೆ. ಪರಮಾತ್ಮ ಪ್ರೀತ್ಯರ್ಥ ಮಾಡುವ ಕರ್ಮಗಳು ಚಿತ್ತಶುದ್ಧಿ ಮಾಡಿ, ಜ್ಞಾನೋತ್ಪತ್ತಿಗೆ ಸಹಾಯಮಾಡುತ್ತವೆ ಎಂದು ಎಲ್ಲರೂ ಹೇಳುತ್ತಾರೆ.

ಕರ್ಮಕ್ಕೆ ಉತ್ಪತ್ತಿ, ಸಂಸ್ಕಾರ, ವಿಕಾರ ಮತ್ತು ಆಸ್ತಿ ಎಂಬ ನಾಲ್ಕು ರೀತಿಯ ಫಲ ನೀಡುವ ಶಕ್ತಿ ಇದೆ. ವ್ಯಕ್ತಿ ಮಾಡುವ ಕ್ರಿಯೆಗಳಿಂದ ಕರ್ಮ ಜನಿಸುತ್ತದೆ. ಶಾಸ್ತ್ರವಿಹಿತ ರೀತಿಯ ಕೆಲಸಗಳಿಂದ ಸಂಸ್ಕಾರ ದೊರೆಯುತ್ತದೆ. ಶಾಸ್ತ್ರವಿರುದ್ಧ ವಚನಗಳ ಪಾಲನೆಯಿಂದ ವಿಕಾರವೂ ಏರ್ಪಡುತ್ತವೆ. ಕರ್ಮಕ್ಕೆ ಆಸ್ತಿ ಎಂದರೆ ಮುಕ್ತನಾದ ಫಲ ಲಭ್ಯವಾಗುತ್ತದೆ. ವಿಶ್ವಸೃಷ್ಟಿಯು ಕರ್ಮದ ಉತ್ಪತ್ತಿಗೆ ಉದಾಹರಣೆ. 40 ರೀತಿಯ ಸಂಸ್ಕಾರಗಳು ಧರ್ಮಶಾಸ್ತ್ರಗಳು ವಿಧಿಸುತ್ತವೆ. ಈ ಸಂಸ್ಕಾರಗಳಿಂದ ಮನುಷ್ಯನು ಸುಸಂಸ್ಕೃತನಾಗುತ್ತಾನೆ. ಸೃಷ್ಟಿಯಲ್ಲಿರುವ ಸ್ವಾಭಾವಿಕ ದುರ್ಘಟನೆಗಳು ವಿಕಾರಗಳು ವ್ಯಕ್ತಿಯು ಮೋಕ್ಷ ಪಡೆಯುವುದೇ ಆಸ್ತಿ.

ವ್ಯಕ್ತಿಯು ತನ್ನನ್ನು ತಾನು ಸತತವಾಗಿ ಸತ್ಕಾರ್ಯಕ್ಕೆ ತೊಡಗಿಸಿಕೊಳ್ಳುವುದು ಕರ್ಮಯೋಗ. ಇದು ಸಾಮಾಜಿಕ ಕರ್ತವ್ಯಗಳನ್ನು ನಿರ್ವಹಿಸಲು ತಳೆಯುವ ನಿಷ್ಠೆ. ಕರ್ಮಯೋಗಿಗೆ ಕರ್ಮವೇ ಗುರಿ. ಕರ್ಮಯೋಗಿಯು ನೈತಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಪರಿಶುದ್ಧನಾಗಿರುತ್ತಾನೆ. ಕರ್ಮ ಸಿದ್ಧಾಂತದಲ್ಲಿ ಋತದ ಕಲ್ಪನೆಯಿದೆ. ಬೌದ್ಧರು, ಜೈನರು, ಸಾಂಖ್ಯರು, ಯೋಗದರ್ಶನಕಾರರು, ನೈಯಾಯಿಕರು, ವೈಶೇಷಿಕರು, ಮೀಮಾಂಸಕರು ಹಾಗೂ ವೇದಾಂತಿಗಳು ಕರ್ಮ ಸಿದ್ಧಾಂತವನ್ನು ಒಪ್ಪುತ್ತಾರೆ.

ಮನುಷ್ಯನ ಶರೀರವು ಭೋಗ ಹಾಗೂ ಕರ್ಮಭೂಮಿಯಾಗಿದೆ. ಈ ಕರ್ಮ ಭೂಮಿಯಲ್ಲಿ ಆಚರಿಸಬೇಕಾದ ಧರ್ಮಗಳ ಬಗ್ಗೆ ಶ್ರೀಧರಭಟ್ಟ ಪ್ರಣೀತವಾದ ನ್ಯಾಯಕುಂದಲೀ ವ್ಯಾಖ್ಯಾನಸಹಿತವಾದ ಪ್ರಶಸ್ತವಾದ ಭಾಷ್ಯದಲ್ಲಿ 13 ಗುಣಗಳೂ, ಮನುಸ್ಮೃತಿಯ ಆರನೇ ಅಧ್ಯಾಯದ 92ನೇ ಶ್ಲೋಕದಲ್ಲಿ 10 ಗುಣಗಳೂ, ಯಾಜ್ಞವಲ್ಕ್ಯ ಸ್ಮೃತಿಯ ಐದನೇ ಅಧ್ಯಾಯದ 122ನೇ ಶ್ಲೋಕದಲ್ಲಿ 8 ಗುಣಗಳೂ, ಪಾತಂಜಲ ದರ್ಶನದಲ್ಲಿ ಯಮ ಮತ್ತು ನಿಯಮಗಳನ್ನು ಹೇಳಿದ್ದಾರೆ.

ಭಗವದ್ಗೀತಾಶಾಸ್ತ್ರದಲ್ಲಿ ಕರ್ಮ, ವಿಕರ್ಮ, ಅಕರ್ಮ ಮತ್ತು ನಿಷ್ಕಾಮಕರ್ಮಗಳು ಉಕ್ತವಾಗಿವೆ. ಶಾಸ್ತ್ರವಿಹಿತವಾದದ್ದು ಕರ್ಮ. ಇದರಿಂದ ಚಿತ್ತ ಶುದ್ಧಿಯಾಗುತ್ತದೆ. ಬಾಹ್ಯಕರ್ಮಗಳಲ್ಲಿ ಮನಸ್ಸು ಸೇರಿಕೊಂಡರೆ ವಿಕರ್ಮವಾಗುತ್ತದೆ. ಇದರಿಂದ ಮನ ಶುದ್ಧಿಯಾಗಿ, ಆಂತರಿಕ ಪರಿಶುದ್ಧತೆಯುಂಟಾಗುತ್ತದೆ. ಸತತ ಕಾರ್ಯಗಳು ನಡೆಯುತ್ತಿದ್ದರೂ, ಅದರ ಗುರುತ್ವ ಅನುಭವಕ್ಕೆ ಬಾರದಿದ್ದಾಗ ಅಕರ್ಮವಾಗುತ್ತದೆ. ಅಕರ್ಮಕ್ಕೆ ಆಯಾಸವೆಂಬುದೇ ಇಲ್ಲ. ಅರ್ಥಾತ್ ಕರ್ಮ ಮತ್ತು ವಿಕರ್ಮಗಳ ಪರಿಚಾರವೇ ಅಕರ್ಮ. ಅಕರ್ಮಿಯು ಫಲಾಪೇಕ್ಷಿಯಾಗಿಲ್ಲದಿದ್ದರೆ ಅಂತಹ ಅಕರ್ಮವೇ ನಿಷ್ಕಾಮಕರ್ಮ ವಾಗುತ್ತದೆ. ಇದೇ ನೀತಿರ್ಪಕರ್ಮ.

ಆಗಾಮಿಕರ್ಮ, ಸಂಚಿತಕರ್ಮ ಮತ್ತು ಪ್ರಾರಬ್ಧಕರ್ಮ ಎಂಬುದಾಗಿ ಕರ್ಮವು ಮೂರು ರೀತಿಯದಾಗಿದೆ. ಜ್ಞಾನೋತ್ಪತ್ತಿಯಾದ ಮೇಲೆ ಜ್ಞಾನಿಗೆ ಅವನು ಈ ಹಿಂದೆ ಮಾಡಿದ್ದ ಪುಣ್ಯಪಾಪ ರೂಪವಾದ ಕರ್ಮವೇ **ಆಗಾಮಿಕರ್ಮ**. ಜ್ಞಾನಪ್ರಾಪ್ತಿಯಾದ ನಂತರ ಜ್ಞಾನಿಗೆ ಆಗಾಮಿಕರ್ಮನ ಲವ-ಲೇಶವೂ ಅಂಟುವುದಿಲ್ಲ. ಈ ಜ್ಞಾನಿಯನ್ನೂ ಸೇವಿಸುವ ಕರ್ತೃವಿಗೆ ಪುಣ್ಯಗಳು, ಜ್ಞಾನಿಗೆ ಹಿಂಸೆ ನೀಡುವವನಿಗೆ ಪಾಪಗಳೂ ವರ್ಗಾವಣೆಯಾಗಿ ಬಿಡುತ್ತವೆ. ಬೀಜರೂಪದಲ್ಲಿರುವ ಪೂರ್ವ ಜನ್ಮಗಳಿಂದ ಪ್ರಸ್ತುತ ಜನ್ಮಕ್ಕೆ ಬಂದಿರುವ ಕರ್ಮವೇ ಸಂಚಿತಕರ್ಮ. ನಾನೇ ಬ್ರಹ್ಮ, ಬ್ರಹ್ಮವೇ ನಾನು ಎಂಬ ನಿಶ್ಚಯಜ್ಞಾನ ಬಂದಾಗ ಸಂಚಿತಕರ್ಮ ನಾಶವಾಗುತ್ತದೆ. ಈ ಶರೀರದಲ್ಲಿ ಅನುಭವಿಸುವ ಸುಖದುಃಖಗಳೇ ಪ್ರಾರಬ್ಧಕರ್ಮ. ಈ ದೇಹವಿರುವವರೆವಿಗೂ ಇದನ್ನು ಅನುಭವಿಸಿಯೇ ತೀರಬೇಕು.

ಕಾಮ್ಯ ಕರ್ಮ, ವಿಹಿತಕರ್ಮ, ನಿತ್ಯಕರ್ಮ, ನೈಮಿತ್ತಿಕ ಕರ್ಮ, ನಿಷಿದ್ಧ ಅಥವಾ ಪ್ರತಿಷಿದ್ಧ ಕರ್ಮ ಎಂಬುದಾಗಿಯೂ ಕರ್ಮದ ಪ್ರಕಾರಗಳಿವೆ. ಫಲವನ್ನು ಉದ್ದೇಶಿಸಿ ಮಾಡುವ ಕರ್ಮವೇ ಕಾಮ್ಯಕರ್ಮ. ಶಾಸ್ತ್ರದಲ್ಲಿ ಹೇಳಿರುವ ಕರ್ಮ ವಿಹಿತಕರ್ಮ. ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿನಿತ್ಯವೂ ಹೊಂದಲೇಬೇಕಾದ ಕರ್ಮವೇ ನಿತ್ಯಕರ್ಮ. ಯಾವುದಾದರೂ ನಿಮಿತ್ತದಿಂದ ಮಾಡುವ ಕರ್ಮ ನೈಮಿತ್ತಿಕ ಕರ್ಮ. ವ್ಯಕ್ತಿಯು ಮಾಡಲೇಬಾರದ ಕರ್ಮವು ನಿಷಿದ್ಧ ಅದು ಪ್ರತಿಷಿದ್ಧ ಕರ್ಮವಾಗಿದೆ.

## ಅಧ್ಯಯನ, ಸ್ವಾಧ್ಯಾಯ ಮತ್ತು ಪ್ರವಚನ

ಕಲಿಯುವವನು ವಿದ್ಯಾರ್ಥಿ. ಇದಕ್ಕೆ ವಯೋಭೇದವಾಗಲೀ, ಲಿಂಗಭೇದವಾಗಲೀ ವರ್ಣಭೇದವಾಗಲಿ, ಕುಲಭೇದವಾಗಲೀ ಕಾಲಭೇದವಾಗಲೀ, ದೇಶಭೇದವಾಗಲೀ ಯಾವುದೂ ಇರುವುದಿಲ್ಲ. ಜನನಪೂರ್ವಕ್ಕಿಂತ ಮರಣದವರೆವಿಗೂ ನಡೆಯುವ ವಿರಾಮರಹಿತ ಕ್ರಿಯೆಯೇ ಅಧ್ಯಯನ. ಅಧ್ಯಯನಕ್ಕೆ ಚತುರನಾದ ವ್ಯಕ್ತಿ ಇರಬೇಕು. ಶ್ರವಣ, ದರ್ಶನ, ಮನನ, ನಿದಿಧ್ಯಾಸನಾದಿಗಳು ವ್ಯಕ್ತಿಗೆ ಜ್ಞಾನಸಾಧನಗಳಾಗಬೇಕು. ಈ ಜನ್ಮದಲ್ಲಿ ಅಥವಾ ಪೂರ್ವಜನ್ಮದಲ್ಲಿ ನಂಬಿಕೆಯಿರುವಂತಹವರಿಗೆ ಆ ಜನ್ಮಗಳಲ್ಲಿ ಮಾಡಿದ್ದ ನಿತ್ಯ ಹಾಗೂ ನೈಮಿತ್ತಿಕ ಕರ್ಮಗಳಿಂದ ಪ್ರಾಪ್ತವಾಗಿರುವ, ಶಾಸ್ತ್ರ ಹಾಗೂ ದರ್ಶನ ಗ್ರಂಥಗಳಲ್ಲಿ ಹೇಳಿರುವಂತೆ ಬಾಹ್ಯ ಪ್ರಪಂಚದಲ್ಲಿ ಜರುಗುವ ಪ್ರತಿಯೊಂದು ರೀತಿಯ ಮಾನವ ಚಟುವಟಿಕೆಗಳ ಫಲಾ-ಫಲಗಳನ್ನು ಚೆನ್ನಾಗಿ ಪರೀಕ್ಷೆ ಮಾಡಿ, ಇವುಗಳ ಸಾರ-ಅಸಾರಗಳನ್ನು ಮನದಟ್ಟು ಮಾಡಿಕೊಂಡು ಯಾವ ಯಾವ ಕರ್ಮಗಳನ್ನು, ಯಾವ ಯಾವ ಕಾಲಗಳಲ್ಲಿ ಹೇಗೆ ಮಾಡಬೇಕೆಂಬುದನ್ನು ಅರಿಯಲು ಏಕಾಗ್ರಚಿತ್ತನಾಗಿ, ಅಂತರ್ಮುಖಿಯಾಗಿ ಚಿಂತನೆ ಮಾಡುವುದೇ ಅಧ್ಯಯನ. ಕಲಿಯುವವನು ತನ್ನ ಈ ರೀತಿಯ ಉದ್ದೇಶ ಸಾಧನೆಗೆ ಸಮರ್ಥ ಗುರುವನ್ನೂ ಆರಿಸಿಕೊಂಡು, ಪರಮಾತ್ಮನಲ್ಲಿ ಅಥವಾ ವ್ಯಕ್ತಿ ನಂಬುವ ತತ್ತ್ವದಲ್ಲಿ ಯಾವ ರೀತಿಯ ಶ್ರೇಷ್ಠವಾದ ಭಕ್ತಿಭಾವನೆಯಿರುತ್ತದೆಯೋ, ಅಂತಹುದೇ ಭಕ್ತಿಭಾವನೆಯನ್ನು ಗುರುವಿನಲ್ಲಿರಿಸಿ, ನಿಷ್ಕಾಮ ಬುದ್ಧಿಯಿಂದ ಗುರುವಿನ ಸೇವೆ ಮಾಡುವುದು ಅಧ್ಯಯನಕ್ಕೆ ಸಾಧನವಾಗುತ್ತದೆ.

ಅಧ್ಯಯನವು ಗುರು-ಶಿಷ್ಯರಿಬ್ಬರಿಗೂ ಸಮಾನವಾದುದು. ಹಾಗಾಗಿಯೇ ಅಧ್ಯಯನದ ಪ್ರಾರಂಭದಲ್ಲಿ ಗುರು-ಶಿಷ್ಯರಿಬ್ಬರೂ ಸಹ "ಓಂ ಸಹನಾವವತು, ಸಹನೌಭುನಕ್ತು, ಸಹ ವೀರ್ಯಂ ಕರವಾವಹೈ, ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ, ಓಂ ಶಾಂತಿಃ, ಶಾಂತಿಃ ಶಾಂತಿಃ" ಶಾಂತಿ ಮಂತ್ರ ಪಠಣ ಮಾಡಬೇಕು. ನಾವಿಬ್ಬರೂ (ಗುರು-ಶಿಷ್ಯರಿಬ್ಬರೂ / ಒಟ್ಟಿಗೆ ರಕ್ಷಿಸಲ್ಪಡಲಿ, ನಾವಿಬ್ಬರೂ ಒಟ್ಟಿಗೆ ಪೋಷಿಸಲ್ಪಡಲಿ, ಕೆಲಸ-ಕಾರ್ಯಗಳನ್ನು ನಾವಿಬ್ಬರೂ ಒಟ್ಟಾಗಿ ಮಾಡೋಣ, ನಾವಿಬ್ಬರೂ

Digitised by Bharatavani, CIIL

ಜ್ಞಾನಿಗಳಾಗಿ, ತೇಜಸ್ವಿಗಳಾಗಿ ಪರಸ್ಪರ ಒಬ್ಬರನ್ನೊಬ್ಬರು ದ್ವೇಷಿಸದಂತಾಗಲಿ. ನಮ್ಮಿಬ್ಬರ ಅಧ್ಯಯನಕ್ಕೆ ಬಂದೊದಗುವ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ತಾಪತ್ರಯಗಳು ಬರದಿರಲಿ.

ಅಧ್ಯಯನ ಮಾಡುವ ಶಿಷ್ಯನು ಶ್ರವಣ, ಮನನ, ನಿದಿಧ್ಯಾಸನ ಮತ್ತು ಧ್ಯಾನಗಳನ್ನೂ ಅಳವಡಿಸಿಕೊಳ್ಳಬೇಕಾಗಿತ್ತು. ವೇದಾಧ್ಯಯನವಾದರೆ ಮಂತ್ರಗಳನ್ನು ಸ್ವರಸಹಿತವಾಗಿ ಗುರುಮುಖೇನ ಕಲಿತು ಉಚ್ಚರಿಸಬೇಕು. ಇರುವೆಗಳು ನಿಧಾನವಾಗಿ ಮುಂದೆ ಮುಂದೆ ಹೋಗುವಂತೆ, ತ್ವರೆ ಮಾಡದೆ, ತಲೆ ಅಲ್ಲಾಡಿಸದೆ, ತನ್ನದೇ ಆದ ಸಂಗೀತವನ್ನು ಅಳವಡಿಸದೆ, ತಪ್ಪಿಲ್ಲದೆ, ಸ್ಫುಟವಾಗಿ, ಸ್ಥಾನಾದಿಗಳ ಸ್ವಭಾವಕ್ಕೆ ಅನುಗುಣವಾಗಿ ಪಠಿಸಬೇಕು. ಪಾಪತ್ರಯದಲ್ಲಿ ಸಂಹಿತಾಪಾಠ, ಪದಪಾಠ, ಕ್ರಮಪಾಠ, ಜಟಾಪಾಠ ಹಾಗೂ ಘನಪಾಠವೆಂದು, ಒಂದೇ ಮಂತ್ರವನ್ನು ಹೇಳುವ ಪರಿಪಾಠವಿದೆ.

ಸಾಮಾನ್ಯ ಅಧ್ಯಯನಕ್ರಮದಲ್ಲಿ ಶಿಷ್ಯನಿಗೆ ಐದು ಪ್ರಮುಖ ಗುಣಗಳು ಬೇಕು. ಕಲಿಕೆಯ ಹಸಿವು, ಗುರುವಿನಲ್ಲಿ ದೃಢವಿಶ್ವಾಸ ಅಥವಾ ಅಚಲನಂಬಿಕೆ, ಯಾವಾಗಲೂ ಅಧ್ಯಯನ ಮಾಡಬೇಕೆಂಬ ದೃಢ ನಿರ್ಧಾರ, ಏಕಾಗ್ರತೆ ಮತ್ತು ಜೀವನದಲ್ಲಿ ಮಹತ್ವದ ಆಸೆ. ಅಧ್ಯಯನ ಕಾಲದಲ್ಲಿ ಶಿಷ್ಯನು ಬ್ರಹ್ಮಚರ್ಯವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಶಿಸ್ತುಬದ್ಧ ಜೀವನಕ್ರಮವಿಲ್ಲದಿದ್ದರೆ ಅಧ್ಯಯನ ಸಾಧ್ಯವಿಲ್ಲ.

ಅಧ್ಯಯನ ಮಾಡಿದ್ದನ್ನು ರೂಢಿಯಲ್ಲಿಟ್ಟುಕೊಳ್ಳುವುದೇ ಸ್ವಾಧ್ಯಾಯ. ಇದಕ್ಕೆ ಪುನಃ ಪಠಣ ಅತ್ಯಗತ್ಯ. ಶಿಷ್ಯನಾಗಿ ತಾನು ಕಲಿತದ್ದನ್ನು ಯಾವ ಕಾರಣಕ್ಕೂ ಮರೆಯದೇ ತನ್ನ ಜೀವನದಲ್ಲಿ ಅಳವಡಿಸಿಕೊಂಡರೆ ಅಧ್ಯಯನಕ್ಕೆ ಮಹತ್ವ ಬರುತ್ತದೆ. ಜೊತೆಜೊತೆಗೆ ತಾನು ಕಲಿತಿದ್ದನ್ನೂ ಮತ್ತೊಬ್ಬರಿಗೆ ಕಲಿಸಿದರೆ ಪ್ರವಚನವಾಗುತ್ತದೆ. ಪ್ರವಚನಕಾರರು ಸ್ವಾಧ್ಯಾಯದ ರಕ್ಷಣೆಗೆ ಪರಿಶುದ್ಧ ಹೃದಯವಂತನಾಗಿರಬೇಕು. ಮೇಧಾವಿಯಾಗಿರಬೇಕು, ಚಾರಿತ್ರ್ಯವಂತನಾಗಿರಬೇಕು. ಪ್ರವಚನಕಾರನಲ್ಲಿ 18 ವಿಧವಾದ ದೋಷಗಳು ಕಾಣಬಹುದು ಎಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಿದೆ. ಅವು ಯಾವುವೆಂದರೆ, ಶಂಕೆ (ಪಾಠ ಮಾಡಲು ಆಗುವುದೋ ಇಲ್ಲವೋ ಎಂಬ ಶಂಕೆ), ಹೆದರಿಕೆ, ಬಹಳ ಜೋರಾಗಿ ಹೇಳುವುದು, ಹೇಳಲು ತೋರದಿರುವುದು, ಮೂಗಿನಲ್ಲಿ ಹೇಳುವುದು, ಅಪಸ್ವರ (ಉಚ್ಚಾರವು ಸರಿಯಾಗಿಲ್ಲದಿರುವುದು) 'ರಸಪೂರ್ಣತೆಯಿಂದ ಕೂಡಿಲ್ಲದಿರುವುದು, ವಿಷಯಗಳು ಒಂದಕ್ಕೊಂದು ಹೊಂದಿಕೊಳ್ಳದಿರುವುದು, ಗಡಸುಸ್ವರ, ಒಂದೇ ರೀತಿಯಲ್ಲಿ ಹೇಳುವುದು, ಚಿಂತೆಗೆ ಒಳಗಾಗಿರುವುದು, ಎಲ್ಲವನ್ನೂ ಹಾಡುತ್ತಾ ಹೇಳುವುದು, ತಲೆ ಅಲ್ಲಾಡಿಸುತ್ತಾ ಹೇಳುವುದು, ಕೀರಲು ಧ್ವನಿಯಲ್ಲಿ ಹೇಳುವುದು, ಯಾರಿಗೂ ಏನೂ ತಿಳಿಯದಂತೆ ಹೇಳುವುದು, ಹೇಳುವುದನ್ನು ಬಿಟ್ಟು ಬೇರೆ ಬೇರೆ ವಿಷಯಗಳನ್ನು ಹೇಳುವುದು, ಪದೇ ಪದೇ ಓಡಾಡುತ್ತಾ ಹೇಳುವುದು, ವಿದ್ಯಾರ್ಥಿಗಳನ್ನು ಗಮನಿಸದೇ ಹೇಳುವುದು.

ಪಾಠ ಓದುವವನಿಗೆ ಪ್ರವಾಚಕನು ಬಹಳ ಮುಖ್ಯ. ಪ್ರವಾಚಕನಲ್ಲಿ ದೋಷಗಳಿಲ್ಲದಿದ್ದರೆ ಅಧ್ಯಯನ ಸುಲಲಿತ. ಅಧ್ಯಯನ ಸುಲಲಿತವಾದರೆ ಸ್ವಾಧ್ಯಾಯ ಸುಲಲಿತ.

**ಅಂತಃಕರಣ**

ಜ್ಞಾನ ಸಾಧನೆಗೆ ಇರುವ ಮಧ್ಯವರ್ತಿಯೇ ಅಂತಃಕರಣ. ಬುದ್ಧಿಯು ಅಂತಃಕರಣೇಂದ್ರಿಯ ಮನಸ್ಸೂ ಅಂತಃಕರಣೇಂದ್ರಿಯ. ಅಂತಃ ಎಂದರೆ ಒಳಗಡೆ, ಕರಣ ಎಂದರೆ ಮಾಡುವುದು. ಅರ್ಥಾತ್ ಮನಸ್ಸಿನಲ್ಲಿ ಅಥವಾ ಬುದ್ಧಿಯಲ್ಲಿ ಆಗುವುದು. ಪತಂಜಲಿ ಮಹರ್ಷಿಗಳ ಪ್ರಕಾರ ಪ್ರಮಾಣ, ವಿಪರ್ಯಾಯ, ವಿಕಲ್ಪ, ನಿದ್ರೆ ಸ್ಮೃತಿರೂಪಗಳು ಅಂತಃಕರಣ ವೃತ್ತಿಗಳು. ಇವುಗಳಲ್ಲಿ ಜ್ಞಾನಕ್ಕೆ ವಿಷಯವಾದದ್ದು ಪ್ರಮಾಣ ಅಥವಾ ಪ್ರಮಾ (ಬುದ್ಧಿ) ಜನಕವಾದದ್ದು ಪ್ರಮಾಣ. ವಿಷಯಗಳಲ್ಲಿ ನೆಲೆಸಿರುವ ಮಿಥ್ಯಾಜ್ಞಾನವೇ ವಿಪರ್ಯಯ. ಹಗ್ಗದಲ್ಲಿ ಹಾವು ಕಾಣುವುದು ವಿಪರ್ಯಯ. ಪದಾರ್ಥವಿಲ್ಲದಿದ್ದರೂ ಶಬ್ದವನ್ನು ಅವಲಂಬಿಸಿ ಬರುವ ಜ್ಞಾನವೇ ವಿಕಲ್ಪ. ತಮಸ್ಸನ್ನು ಅವಲಂಬಿಸಿರುವುದು ನಿದ್ರೆ. ಅನುಭವಿಸಿರುವ ವಿಷಯವನ್ನು ಮರೆಯದಿರುವುದೇ ಸ್ಮೃತಿ.

ನಕುಲೀಶ ಪಾಶುಪತ ದರ್ಶನದಲ್ಲಿ ಅಂತಃಕರಣವು 13 ಕಲೆಗಳನ್ನೂ ಹೊಂದಿದೆ– 5 ಜ್ಞಾನೇಂದ್ರಿಯಗಳು; 5 ಕರ್ಮೇಂದ್ರಿಯಗಳು, ನಿಶ್ಚಯ, ಅಭಿಮಾನ ಮತ್ತು ಸಂಕಲ್ಪದಿಂದ ಕೂಡಿರುವ ಬುದ್ಧಿ, ಅಹಂಕಾರ ಮತ್ತು ಮನಸ್ಸು. ಕೆಲವರ ಪ್ರಕಾರ ಭೂಮಿ, ನೀರು, ಬೆಂಕಿ, ವಾಯು ಮತ್ತು ಆಕಾಶಗಳ ಸತ್ವಾಂಶಗಳು ಸೇರಿಕೊಂಡು ಮನಸ್ಸು, ಅಹಂಕಾರ, ಬುದ್ಧಿ ಮತ್ತು ಚಿತ್ತಗಳೆಂಬ ನಾಲ್ಕು ಬಗೆಯ ಅಂತರಿಂದ್ರಿಯಗಳು ರೂಪುಗೊಂಡಿವೆ. ಸಾಂಖ್ಯರ ಪ್ರಕಾರ ಅಂತಃಕರಣದಲ್ಲಿ ಸುಖ, ದುಃಖಗಳಿವೆ. ಅಂತಃಕರಣದ ಈ ಸುಖ, ದುಃಖಗಳನ್ನು ಆತ್ಮನಿಗೆ ಆರೋಪಮಾಡಿ, ಆತ್ಮನು ಸುಖಿ, ಆತ್ಮನು ದುಃಖಿ ಎಂಬ ವ್ಯವಹಾರಗಳಿವೆ. ಪ್ರಕೃತಿ–ಪುರುಷರ ವಿವೇಕ ಜ್ಞಾನದಿಂದ ಬುದ್ಧಿನಾಶವಾದಾಗ, ಈ ಸುಖ, ದುಃಖಗಳು ನಾಶವಾಗಿ, ಆತ್ಮನು ಶುದ್ಧಾವಸ್ಥೆಯನ್ನು ಹೊಂದುತ್ತಾನೆ.

ಅಂತರಿಂದ್ರಿಯವು ಬಾಹ್ಯವಿಷಯದ ಸಂಪರ್ಕವನ್ನು ಕಳೆದುಕೊಂಡಾಗ, ಬಾಹ್ಯವಿಷಯಗಳ ಸಂಪರ್ಕವೂ ಜ್ಞಾನೇಂದ್ರಿಯಗಳಿಗೆ ಇದ್ದರೂ ಗೊತ್ತಾಗುವುದಿಲ್ಲ. ಉದಾಹರಣೆಗೆ, ನಾವು ಯಾವುದೋ ಕೆಲಸದಲ್ಲಿ ತಲ್ಲೀನರಾಗಿರುತ್ತೇವೆ. ಆಪ್ತರೊಬ್ಬರು ಬರುತ್ತಾರೆ. ಅವರನ್ನೂ ನೋಡುತ್ತೇವೆ. ಆದರೆ ಅವರು ಬಂದಿರುವುದು ನಮಗೆ ತಿಳಿಯುವುದೇ ಇಲ್ಲ. ಶಬ್ದವೊಂದು ಕಿವಿಯ ಮೇಲೆ ಬೀಳುತ್ತಿದ್ದರೂ, ಅದು ಕೇಳಿಸಿರುವುದೇ ಇಲ್ಲ. ಇಂತಹ ಸಂದರ್ಭಗಳಲ್ಲಿ ಅಂತರಿಂದ್ರಿಯಕ್ಕೂ ಬಾಹ್ಯೇಂದ್ರಿಯಕ್ಕೂ ಸಂಪರ್ಕ ಕಡಿದುಹೋಗಿರುತ್ತದೆ.

ಜೀವ ಮತ್ತು ಈಶ್ವರನಿಗೆ ವ್ಯತ್ಯಾಸ ತೋರದಿರಲು ಅಂತಃಕರಣೇಂದ್ರಿಯವು ಬೇಕು. ಬಾಹ್ಯೇಂದ್ರಿಯಗಳು ಜೀವ ಮತ್ತು ಈಶ್ವರನನ್ನೂ ನೋಡಲಾರವು. ನಾನು ಬ್ರಹ್ಮ ಎಂಬ ಜ್ಞಾನ ಬಂದೊಡನೆ ಜೀವ ಮತ್ತು ಈಶ್ವರನ ಐಕ್ಯವಾಗುತ್ತದೆ. ಅಂತರ್ದರ್ಶನವಾಗುತ್ತದೆ. ಸ್ಥೂಲ, ಸೂಕ್ಷ್ಮ, ಕಾರಣಶರೀರಗಳಿಗಿಂತ ಬೇರೆಯಾದ, ಪಂಚಕೋಶಗಳಿಗಿಂತ ಬೇರೆಯಾದ ಅವಸ್ಥಾತ್ರಯಿಗೆ ಆಧಾರಭೂತವಾದ ಸಚ್ಚಿದಾನುಭವ ಸ್ವರೂಪನಾದ ಆತ್ಮನ ಸಾಕ್ಷಾತ್ಕಾರಕ್ಕೆ ಅಂತಃಕರಣವು ಬೇಕು.

**ಅನುಬಂಧ ಚತುಷ್ಟಯ**

ಅನು ಉಪಸರ್ಗಪೂರ್ವಕ ಬಂಧ ಎಂಬುದರಿಂದ ಅನುಬಂಧ ಎಂಬ ಪದವಾಗಿದೆ. ಬಂಧ ಎಂದರೆ ಕೂಡಿರುವುದು. ಅನುಬಂಧ ಚತುಷ್ಟಯ ಎಂದರೆ ನಾಲ್ಕು ಸಾಧನಗಳಿಂದ ಕೂಡಿರುವುದು. **ವಿಷಯ, ಅಧಿಕಾರಿ, ಸಂಬಂಧಿ ಮತ್ತು ಪ್ರಯೋಜನಗಳು** ಪರಸ್ಪರ ಒಂದಕ್ಕೊಂದು ಪೂರಕವಾಗಿ ಹೊಂದಿಕೊಂಡಿರುವುದು ಅನುಬಂಧ ಚತುಷ್ಟಯಗಳು. ಯಾವುದೇ ಶಾಸ್ತ್ರದ ಅಧ್ಯಯನಕ್ಕೆ ಪೂರ್ವಭಾವಿಯಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಇದು ಚೆನ್ನಾಗಿ ಮನದಟ್ಟಾಗಿರಬೇಕು. ಹಾಗಿಲ್ಲದಿದ್ದರೆ ಅಧ್ಯಯನ ಮಾಡುವ ವಿಷಯ ಯಾವುದು. ಈ ಅಧ್ಯಯನಕ್ಕೆ ನಿಜವಾದ ಅಧಿಕಾರಿ ಯಾರು? ಕಲಿಯುವವನಿಗೆ ಗ್ರಂಥಧಾರಣ ಸಾಮರ್ಥ್ಯವಿದೆಯೇ? ಅಧ್ವೇತೃವು ಯುಕ್ತಾಯುಕ್ತ ವಿಚಾರ ಕುಶಲನೇ? ಬೋಧ್ಯ ಬೋಧಕಸಂಬಂಧವು ಯಾವುದು? ಅಥವಾ ಪ್ರತಿಪಾದ್ಯ–ಪ್ರತಿಪಾದಕ ಸಂಬಂಧ ಯಾವುದು? ಈ ವಿಷಯ ಅಧ್ಯಯನದಿಂದ ಏನಾದರೂ ಪ್ರಯೋಜನವಿದೆಯೇ? ಹಾಗೇ ಪ್ರಯೋಜನವಿದ್ದರೆ, ಅಪ್ರಯೋಜನವು

Digitised by Bharatavani, CIIL

ಯಾವುದು? ಏಕೆಂದರೆ ಪ್ರಯೋಜನವಿಲ್ಲದಿದ್ದರೆ ಮೂರ್ಖನೂ ಸಹ ಕಾರ್ಯಪ್ರವೃತ್ತನಾಗುವುದಿಲ್ಲ. ಹೀಗಿರುವಾಗ ಕುಶಲಿಯಾದ ಶಿಷ್ಯನು ಅಧ್ಯಯನ ಮಾಡಬೇಕಾದರೆ ಪ್ರಯೋಜನವಿಲ್ಲದೇ ಕಾರ್ಯಪ್ರವೃತ್ತನಾಗುವನೇ? ಇಂತಹ ಸ್ವಾಭಾವಿಕ ಪ್ರಶ್ನೆಗಳು ಹಾಗೂ ಕಲಿಯುವವನ ಕುತೂಹಲಗಳನ್ನು ತಣಿಸಲೋಸುಗವಾಗಿಯೇ ಅನುಬಂಧ ಚತುಷ್ಟಯಗಳಿವೆ.

ಉದಾಹರಣೆಗೆ, ವೇದಾಂತದ ಒಂದು ಭಾಗವಾದ ಕಾಡಕೋಪನಿಷತ್ತಿನ ಪ್ರಾರಂಭದಲ್ಲಿ ಶ್ರೀಶಂಕರ ಭಗವತ್ಪಾದರು ಕೊಟ್ಟಿರುವ ಅನುಬಂಧ ಚತುಷ್ಟಯ ಈ ರೀತಿ ಇದೆ. ಕಠೋಪನಿಷತ್ ಎಂಬುದು ಬ್ರಹ್ಮವಿದ್ಯೆ. ಆಕಾಂಕ್ಷಿಯು ಈ ವಿದ್ಯೆಯನ್ನು ಪಡೆಯಲು ಹೊರಟಾಗ ಈ ವಿದ್ಯೆಯೇ ವಿಷಯವಾಗಿರುತ್ತದೆ. ಅರ್ಥಾತ್ ಸಚ್ಚಿದಾನಂದ ಸ್ವರೂಪನಾದ, ಸಾಮಾನ್ಯರಿಗೆ ಅಜ್ಞಾತವಾಗಿರುವ ವಿಶ್ವದ ಆತ್ಮನೇ ಪರಬ್ರಹ್ಮ. **ಪರಬ್ರಹ್ಮವೇ ವಿಷಯ.** ಈ ವಿಷಯವನ್ನು ಕಲಿಯಲೇಬೇಕೆಂಬ ದೃಢನಿಶ್ಚಯವುಳ್ಳವನು **ಅಧಿಕಾರಿ.** ಇವನು ಬ್ರಹ್ಮವಿದ್ಯಾ ಜಿಜ್ಞಾಸು. ಇವನು ಸಾಧನಾ ಚತುಷ್ಟಯಗಳಿಂದ ಕೂಡಿರಬೇಕು. ನಿತ್ಯಾನಿತ್ಯ ವಸ್ತು ವಿವೇಕ, ಇಹಾಮುತ್ರಾರ್ಥಭೋಗವಿದ್ಯಾಗ, ಶಮಾದಿಷಟ್ ಸಂಪತ್ತಿ ಮತ್ತು ಮುಮುಕ್ಷುತ್ವ ಈ ನಾಲ್ಕು ಸಾಧನ ಚತುಷ್ಟಯಗಳು. ಇವುಗಳಲ್ಲಿ ಪರಬ್ರಹ್ಮವಸ್ತುವು ನಿತ್ಯವಾದುದು. ತೋರಿಕೆಯ ಸಮಸ್ತಪ್ರಪಂಚವೂ ಅನಿತ್ಯವು. ಈ ಲೋಕದಲ್ಲಿ ಹೂ, ಗಂಧ, ಹೆಣ್ಣು, ಹೊನ್ನು ಇತ್ಯಾದಿಗಳು ಕ್ಷಣಿಕ ಸುಖವನ್ನುಂಟುಮಾಡುವ ವಸ್ತುಗಳು, ಸ್ವರ್ಗಾದಿಗಳೂ ಸಹ ಕ್ಷಣಿಕ ಸುಖವನ್ನು ಕೊಡುವಂತಹವುಗಳು. ಆದ್ದರಿಂದ ಹೂ, ಗಂಧ, ಹೆಣ್ಣು, ಹೊನ್ನು ಸ್ವರ್ಗಾದಿಗಳಲ್ಲಿ ಆಸೆ ಇಲ್ಲದಿರುವಿಕೆಯು ಇಹಾಮಾತ್ರ ಫಲಭೋಗ ವಿರಾಗವು. ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನಗಳು, ಶಮಾದಿಷಟ್ಕಸ್ತುತ್ತಿಯು ಮನಸ್ಸನ್ನು ಸ್ವೇಚ್ಛೆಯಾಗಿ ಬಿಡದೆ ಹತೋಟಿಯಲ್ಲಿಟ್ಟುಕೊಳ್ಳುವುದು. ಶಮವು ಪಂಚೇಂದ್ರಿಯಗಳನ್ನು ನಿಗ್ರಹಿಸುವುದು ದಮವು. ಕಾಮ್ಯ ಕರ್ಮಗಳನ್ನೂ, ನಿಷಿದ್ಧ ಕರ್ಮಗಳನ್ನೂ ಮಾಡದೇ ಇರುವುದು ಉಪರತಿಯು. ಛಳಿ, ಸೆಕೆ, ಸುಖ, ದುಃಖ ಮೊದಲಾದುವುಗಳನ್ನು ತಡೆದುಕೊಳ್ಳುವುದು ತಿತಿಕ್ಷೆ. ಇಲ್ಲಿ ವೇದಾಂತಶಾಸ್ತ್ರ (ಉಪನಿಷತ್ತು ಅಥವಾ ಶ್ರುತಿ) ಪರಬ್ರಹ್ಮ ಇವೆರಡಕ್ಕೂ ಪ್ರತಿಪಾದಕ–ಪ್ರತಿಪಾದ್ಯ **ಸಂಬಂಧವಿದೆ.** ಜ್ಞಾನ ಮತ್ತು ಮೋಕ್ಷಗಳಿಗೆ, ಸಾಧನ–ಸಾಧ್ಯ ಸಂಬಂಧವಿದೆ. ಮುಮುಕ್ಷುವಿಗೆ ಮೋಕ್ಷ ಲಭಿಸುವುದೇ **ಪ್ರಯೋಜನ.** ಜ್ಞಾನಾಕಾಂಕ್ಷಿಗೆ ಸಂಸಾರ ಬೀಜನಾಶವಾಗಿ ಜ್ಞಾನಲಭಿಸುವುದೇ ಪ್ರಯೋಜನ. ಈ ರೀತಿಯ ಅನುಬಂಧ ಚತುಷ್ಟಯಗಳನ್ನು ಆಧುನಿಕ ಶಿಕ್ಷಣಪದ್ಧತಿಯಲ್ಲಿ ಎಲ್ಲಾ ಶಾಸ್ತ್ರಗಳಿಗೂ ಆಶ್ರಯಿಸಿಕೊಂಡರೆ ಕಲಿಕೆಯಲ್ಲಿ ಸುಧಾರಣೆಗಳು ಆಗುತ್ತವೆ.

ಆಧುನಿಕ ಶಿಕ್ಷಣಕ್ಕೆ ಅನ್ವಯಿಸಿದಂತೆ ಹೇಳುವುದಾದರೆ, ವಿದ್ಯಾರ್ಥಿ ಉನ್ನತಶಿಕ್ಷಣ ಮಟ್ಟದಲ್ಲಿ, ಸಂಶೋಧನೆ ಮಟ್ಟದಲ್ಲಿ ಈ ನಾಲ್ಕು ಅಸಂಬಂಧ ಚತುಷ್ಟಯಗಳ ಬಗ್ಗೆ ಆಳವಾಗಿ ಚಿಂತಿಸಬೇಕಾಗುತ್ತದೆ. ಅವುಗಳ ಸರಿಯಾದ ಅರಿವು ವಿದ್ಯಾರ್ಥಿಗೆ ಆಸಕ್ತಿ ಉಂಟಾಗಿ ಹೆಚ್ಚಿನ ಮಟ್ಟದ ಸಾಧನೆ ಮಾಡಲು ಸಾಧ್ಯವಾಗುತ್ತದೆ ವಿದ್ಯಾರ್ಥಿ ತಾನು ಅಧ್ಯಯನ ಮಾಡುತ್ತಿರುವ, ಸಂಶೋಧಿಸುತ್ತಿರುವ ವಿಷಯದ ಸಾರವೇನು, ಗುರಿಗಳೇನು ಮತ್ತು ಮಹತ್ವವೇನು ಎನ್ನುವುದನ್ನು ಚೆನ್ನಾಗಿ ತಿಳಿದುಕೊಂಡಾಗ ಆ ವಿಷಯದಲ್ಲಿ ಆಳವಾದ ಆಸಕ್ತಿ ಮೂಡುತ್ತದೆ. ವಿದ್ಯಾರ್ಥಿ ತಾನು ಅಧ್ಯಯನ ಮಾಡಬೇಕಾದ ವಿಷಯವನ್ನು ಅರ್ಥ ಮಾಡಿಕೊಳ್ಳಲು, ಜೀರ್ಣಿಸಿಕೊಳ್ಳಲು ಆವಶ್ಯಕವಾದ ಅರ್ಹತೆಗಳು, ಬೌದ್ಧಿಕ ಸಾಮರ್ಥ್ಯಗಳು ತನ್ನಲ್ಲಿ ಇವೆಯೇ ಅಥವಾ ಅವುಗಳನ್ನು ತಾನು ಪಡೆದುಕೊಳ್ಳಲು ಸಾಧ್ಯವೇ ಎಂದು ಯೋಚಿಸಬೇಕು. ಅಂದರೆ ಆ ವಿಷಯದ ಅಧ್ಯಯನಕ್ಕೆ ತಾನು ಯೋಗ್ಯ ಅಧಿಕಾರಿಯೇ ಎಂದು ಚಿಂತಿಸಬೇಕು. ನಂತರ ವಿದ್ಯಾರ್ಥಿ ಒಂದು ವಿಷಯವನ್ನು ಕಲಿಯುವಾಗ ತನ್ನ ಮತ್ತು ಶಿಕ್ಷಕರ ನಡುವಣ ಸಂಬಂಧ ಅವರೊಂದಿಗಿನ ಅನ್ಯೋನ್ಯಕ್ರಿಯೆ ಹೇಗಿರಬೇಕು, ತಾನು ಶಿಷ್ಯನಾಗಿ ಗುರುವಿನೊಂದಿಗೆ ಹೇಗೆ ವರ್ತಿಸಬೇಕು, ಕಲಿಕಾ ಸಂದರ್ಭಗಳಲ್ಲಿ ಯಾವ ನಿಯಮಗಳನ್ನು ಪಾಲಿಸಬೇಕು ಎನ್ನುವುದನ್ನು ತಿಳಿದು ಅದರಂತೆ ನಡೆದುಕೊಳ್ಳಲು ಸಿದ್ಧನಾಗಬೇಕು. ಕೊನೆಯದಾಗಿ, ತಾನು ಅಧ್ಯಯನ ಮಾಡುತ್ತಿರುವ ವಿಷಯದಿಂದ ತನಗೆ ಮತ್ತು ಸಮಾಜಕ್ಕೆ ಯಾವ ಪ್ರಯೋಜನವಿದೆ ತಾನು ಕಲಿತ ವಿದ್ಯೆಯ ಮೂಲಕ ಸಮಾಜಕ್ಕೆ ಯಾವರೀತಿ ಸೇವೆ ಸಲ್ಲಿಸಲು ಹಾಗೂ ತನ್ನ ವ್ಯಕ್ತಿತ್ವವನ್ನು ಸಕಾರಾತ್ಮಕ ದಿಶೆಯಲ್ಲಿ ಹೇಗೆ ರೂಪಿಸಿಕೊಳ್ಳಲು ಹೇಗೆ ಸಾಧ್ಯ ಎನ್ನುವುದನ್ನು ಕುರಿತು ಪೂರ್ವಭಾವಿಯಾಗಿಯೇ ಚಿಂತಿಸಬೇಕು. ಹೀಗೆ ಉಪನಿಷದ್ ಕಾಲದ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಿದ್ದ ಅನುಬಂಧ ಚತುಷ್ಟಯಗಳು ಇಂದಿನ ಆಧುನಿಕ ವಿದ್ಯೆಯ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿವೆ.

–ಸಿ.ಗು.ಮೂ.

## ಭಾರತದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ

ಭಾರತದಲ್ಲಿ ತಾಂತ್ರಿಕ ಶಿಕ್ಷಣ ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಆರಂಭಗೊಂಡಿತು. ಯುರೋಪಿನಲ್ಲೂ ಹೆಚ್ಚುಕಡಿಮೆ ಇದೇ ಸಮಯದಲ್ಲಿ ತಾಂತ್ರಿಕ ಶಿಕ್ಷಣದ ಆರಂಭವಾಯಿತು. 1757ರ ಪ್ಲಾಸಿ ಕದನದ ನಂತರ ಕೇವಲ ವ್ಯಾಪಾರಿಗಳಾಗಿದ್ದ ಆಂಗ್ಲರು ವಸಾಹತುಶಾಹಿಗಳಾದ್ದರಿಂದ ಅವರಿಗೆ ದೇಶದ ಭೂಲಕ್ಷಣ ಮತ್ತು ಪ್ರಕೃತಿಸಂಪತ್ತಿನ ತಿಳಿವಳಿಕೆ ಅಗತ್ಯವಾಯಿತು. ಭೂಸಮೀಕ್ಷೆಯಿಂದ ಇದು ಸಾಧ್ಯವಿದ್ದುದರಿಂದ ಸ್ಥಳೀಯ ಭಾರತೀಯರಿಗೆ ಆಧುನಿಕ ಭೂ ಸಮೀಕ್ಷೆ (ಸರ್ವೇ)ಯನ್ನು ಕುರಿತ ಜ್ಞಾನವನ್ನು ನೀಡಲು ಮದ್ರಾಸ್ (ಈಗಿನ ಚೆನ್ನೈ) ನಲ್ಲಿ 1794ರಲ್ಲಿ ಸರ್ವೇ ಶಾಲೆಯೊಂದನ್ನು ಪ್ರಾರಂಭಿಸಿದರು. ಅಂದಿನಿಂದ ವಸಾಹತು ಸರ್ಕಾರದ ಆಳ್ವಿಕೆಯಿರುವವರೆಗೂ ಆಡಳಿತಕ್ಕೆ ಅಗತ್ಯವಾದ ಕಟ್ಟಡಗಳು, ರಸ್ತೆಗಳು, ಕಾಲುವೆಗಳು, ಬಂದರುಗಳು, ರೈಲ್ವೇ ಇತ್ಯಾದಿಗಳಿಗೆ ಅಗತ್ಯವಾದ ತಾಂತ್ರಿಕ ಸಿಬ್ಬಂದಿಗಳನ್ನು ಒದಗಿಸಲು ತಾಂತ್ರಿಕ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಭೂಸೇನೆ, ಜಲಸೇನೆ ಹಾಗೂ ಇನ್ನಿತರ ತಾಂತ್ರಿಕ ಸ್ಥಾಪನೆಗಳಿಗೆ ಅವಶ್ಯವಿದ್ದ ಕಾರ್ಮಿಕರು ಹಾಗೂ ಕುಶಲಕರ್ಮಿಗಳನ್ನು ಒದಗಿಸಲು ಸಹ ತಾಂತ್ರಿಕ ಶಿಕ್ಷಣ ಕೇಂದ್ರಗಳು ಆರಂಭಗೊಂಡವು.

1854ರ 'ವುಡ್ಸ್ ಡಿಸ್‌ಪ್ಯಾಚ್' ಎಂಬ ವರದಿಯಲ್ಲಿ ವೃತ್ತಿ ಶಿಕ್ಷಣದ ಅಗತ್ಯವನ್ನು ಒತ್ತಿಹೇಳಲಾಗಿತ್ತು. ಇದಕ್ಕಿಂತ ಬಹು ಹಿಂದೆಯೇ, ಅಂದರೆ 1825ರಲ್ಲಿಯೇ ಕುಶಲಕರ್ಮಿಗಳ ತರಬೇತಿಗಾಗಿ ಮದ್ರಾಸ್ ಹಾಗೂ ಕಲ್ಕತ್ತಾಗಳಲ್ಲಿ ತಾಂತ್ರಿಕ ಸಂಸ್ಥೆಗಳಿದ್ದವು ಎಂಬ ಸೂಚನೆಗಳು ದೊರೆತಿವೆ. ಗನ್ ಕ್ಯಾರಿಯೇಜ್ (Gun Carriage)ಫ್ಯಾಕ್ಟರಿಗೆ ಸೇರಿದಂತೆ ಇರುವ ಕೈಗಾರಿಕಾ ಶಾಲೆಯನ್ನು 1842ರಲ್ಲಿ ಮದ್ರಾಸಿನ ಗಿಂಡಿ ಎಂಬಲ್ಲಿ ಸ್ಥಾಪಿಸಲಾಯಿತು ಎಂಬುದಕ್ಕೆ ಅಧಿಕೃತ ದಾಖಲೆಗಳಿವೆ. ಪುಣೆಯಲ್ಲೂ ಮೇಲ್ವಿಚಾರಕ(overseers)ರುಗಳ ತರಬೇತಿಗೆಂದು 1854ರಲ್ಲಿ ಶಾಲೆಯೊಂದನ್ನು ತೆರೆಯಲಾಯಿತು. ಹೆಚ್ಚು ಕಡಿಮೆ ಇದೇ ಸಮಯದಲ್ಲಿ ರೂರ್ಕಿಯಲ್ಲಿ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಪ್ರಾವೀಣ್ಯತೆಯನ್ನು ನೀಡಲು ಪ್ರಪ್ರಥಮ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲಾಯಿತು. ವುಡ್ಸ್ ಡಿಸ್‌ಪ್ಯಾಚ್ ವರದಿಯ ಸಲಹೆಯಂತೆ ಇನ್ನೂ ಮೂರು ಇಂಜಿನಿಯರಿಂಗ್ ಕಾಲೇಜುಗಳನ್ನು ಬಂಗಾಳ, ಮದ್ರಾಸ್ ಹಾಗೂ ಮುಂಬಯಿಗಳಲ್ಲಿ ತೆರೆಯಲಾಯಿತು. ಇವೇ ನಂತರ ಕ್ರಮವಾಗಿ ಬೆಂಗಾಲ್, ಗಿಂಡಿ ಹಾಗೂ

Digitised by Bharatavani, CIIL

ಬಾಂಬೆ ಇಂಜಿನಿಯರಿಂಗ್ ಕಾಲೇಜುಗಳೆನಿಸಿಕೊಂಡವು. ಅಲ್ಲದೆ, ಸಿವಿಲ್ ಶಾಖೆಯಲ್ಲಿ ಸ್ನಾತಕ ಪದವಿಯನ್ನು ನೀಡಲು ಸಮರ್ಥವಾದವು.

"ವುಡ್ಸ್ ಡಿಸ್‌ಪ್ಯಾಚ್' ವರದಿಯನಂತರ ಭಾರತದಲ್ಲಿ ಶಿಕ್ಷಣದ ಸಮಸ್ಯೆಯನ್ನು ಪರೀಕ್ಷಿಸಲು ವಸಾಹತು ಸರ್ಕಾರ ಹಲವಾರು ಕಮಿಟಿಗಳನ್ನು ರಚಿಸಿತು. 19ನೇ ಶತಮಾನದ ಅಂತಹ ಕೆಲವು ವರದಿಗಳಲ್ಲಿ ಬಹುಶಃ ಹಂಟರ್‌ಕಮೀಷನ್ (1880–1882) ಬಹು ಮುಖ್ಯವಾದುದು. ಈ ವರದಿಯಲ್ಲಿ ವಸಾಹತುಶಾಹಿ ಆಳ್ವಿಕೆ ಮತ್ತು ಇಂಗ್ಲೆಂಡಿನ ಕೈಗಾರಿಕಾ ಸಮಾಜವನ್ನು ಬೆಂಬಲಿಸುವಂತಿರುವ ನುರಿತ ಮಾನವ ಸಂಪನ್ಮೂಲವನ್ನು ಉತ್ಪಾದಿಸಲು ಅನುಕೂಲವಾಗುವಂತೆ ತಾಂತ್ರಿಕ ಶಿಕ್ಷಣ ಹಾಗೂ ತರಬೇತಿ ಪದ್ಧತಿಯನ್ನು ವಿನ್ಯಾಸಗೊಳಿಸಲಾಗಿತ್ತು. ಆದ್ದರಿಂದ ಹಂಟರ್ ವರದಿಯನ್ನು ಬದಿಗಿಡಲಾಯಿತು. ಆ ಸಮಯದಲ್ಲಿ ಭಾರತಕ್ಕೆ ಅಗತ್ಯವಿದ್ದುದು ದೇಶದ ಕೈಗಾರಿಕಾ ಸಮಾಜವನ್ನು ಸಮರ್ಥವಾಗಿ ಮುನ್ನಡೆಸುವಂಥ ಮಾನವ ಸಂಪನ್ಮೂಲದ ಬೆಳವಣಿಗೆ. ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ತಾಂತ್ರಿಕ ಶಿಕ್ಷಣ, ವೃತ್ತಿಶಿಕ್ಷಣ ಹಾಗೂ ತರಬೇತಿಯ ಬೆಳವಣಿಗೆ ಹಾಗೂ ವಿಕಾಸವನ್ನು ಈ ದೃಷ್ಟಿಕೋನದಿಂದ ನೋಡಬೇಕು.

1887ರಲ್ಲಿ ವಿಕ್ಟೋರಿಯಾ ರಾಣಿಯ ಭಾರತದ ಆಳ್ವಿಕೆಯ ವಜ್ರಮಹೋತ್ಸವದ ನೆನಪಿನಲ್ಲಿ ವಿಕ್ಟೋರಿಯಾ ಜುಬಿಲಿ ಟೆಕ್ನಿಕಲ್ ಇನ್ಸ್ಟಿಟ್ಯೂಟ್ (VJTI) ಎಂಬ ತಾಂತ್ರಿಕ ಸಂಸ್ಥೆಯನ್ನು ಮುಂಬಯಿಯಲ್ಲಿ ಸ್ಥಾಪಿಸಲಾಯಿತು. 19ನೇ ಶತಮಾನದಲ್ಲಿ ಭಾರತದಲ್ಲಿ ಕೈಗಾರಿಕಾ ಅಭಿವೃದ್ಧಿ ಬಹಳ ಮಂದಗತಿಯಲ್ಲಿ ಸಾಗಿದ್ದರಿಂದ ತಾಂತ್ರಿಕಶಿಕ್ಷಣ ಹಾಗೂ ತರಬೇತಿಯೂ ಅಷ್ಟೇ ಮಂದಗತಿಯಲ್ಲಿ ಸಾಗಿತು. ಇದಕ್ಕೆ ಆಂಗ್ಲರ ಸ್ವಾರ್ಥಪೂರಿತ ಆರ್ಥಿಕನೀತಿಗಳೇ ಕಾರಣ.

ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ದೇಶದ ಪ್ರಗತಿ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಯಿಂದ ಸಾಧ್ಯವೆಂಬುದನ್ನು ಕೆಲವು ರಾಷ್ಟ್ರೀಯತಾವಾದಿಗಳು ಮನಗಂಡರು. ಇದರ ಫಲವಾಗಿ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕೆಲವು ರಾಷ್ಟ್ರೀಯತಾವಾದಿಗಳು "ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನ್'ನ ಆಶ್ರಯದಲ್ಲಿ ಬಂಗಾಳದ ಜಾಧವ್‌ಪುರ್‌ನಲ್ಲಿ ಇಂಜಿನಿಯರಿಂಗ್ ಕಾಲೇಜೊಂದನ್ನು ತೆರೆದರು. ಇಲ್ಲಿ ಮೆಕ್ಯಾನಿಕಲ್ ಹಾಗೂ ಕೆಮಿಕಲ್ ಇಂಜಿನಿಯರಿಂಗ್‌ನಲ್ಲಿ ತರಬೇತಿಯನ್ನು ನೀಡಲಾಗುತ್ತಿತ್ತು. ಕೈಗಾರಿಕೋದ್ಯಮಿ ಹಾಗೂ ಶ್ರದ್ಧಾವಂತ ರಾಷ್ಟ್ರವಾದಿ ಸರ್ ಜೆಮ್‌ಷೆಡ್‌ಜಿ ಟಾಟಾ ಅವರು ಬ್ರಿಟಿಷ್ ರಾಜ್ಯದ ಇಚ್ಛೆಗೆ ವಿರುದ್ಧವಾಗಿ ಬೆಂಗಳೂರಿನಲ್ಲಿ 1909ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸಿದರು. ಬನಾರಸ್ ಹಿಂದೂ ವಿಶ್ವವಿದ್ಯಾಲಯವನ್ನು ಆರಂಭಿಸಿದ ಪಂಡಿತ್ ಮದನ ಮೋಹನ ಮಾಳವೀಯರವರು ಇಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಶಾಖೆಗಳು ಸೇರಿದಂತೆ ಸಂಯುಕ್ತ ಕೋರ್ಸ್‌ನಲ್ಲಿ ಸ್ನಾತಕೋತರ ಪದವಿಯನ್ನು ನೀಡುವ ಕಾಲೇಜೊಂದನ್ನು 1917ರಲ್ಲಿ ಆರಂಭಿಸಿದರು.

ಸಾವಿರದ ಒಂಬೈನೂರ ಇಪ್ಪತ್ತು ಹಾಗೂ ಮೂವತ್ತರ ದಶಕದಲ್ಲಿ ದೇಶದ ಕೈಗಾರಿಕಾ ಘಟಕಗಳಿಗೆ ಸರ್ಕಾರದಿಂದ ಪ್ರೋತ್ಸಾಹ ಲಭ್ಯವಾದರೂ ಈ ಘಟಕಗಳು ಮುಖ್ಯವಾಗಿ ಹತ್ತಿ ನೂಲುವುದು, ನೇಯ್ಗೆ ಹಾಗೂ ಇನ್ನಿತರ ವಸ್ತ್ರೋದ್ಯಮ ಸಂಬಂಧಿತ ಸರಕುಗಳ ಉತ್ಪಾದನೆಗೆ ಸೀಮಿತವಾಗಿದ್ದವು. ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಭಾರೀ ಹಾಗೂ ಮೂಲವಸ್ತು (Capital goods)ಗಳ ಕೈಗಾರಿಕೆಗಳು ಅತಿ ಕಡಿಮೆ ಸಂಖ್ಯೆಯಲ್ಲಿದ್ದುವು. ವಿದ್ಯುಚ್ಛಕ್ತಿ ಉತ್ಪಾದನೆಯಲ್ಲೂ ಭಾರತ ಹಿಂದೆ ಬಿದ್ದಿತ್ತು. ಈ ಎಲ್ಲ ಕಾರಣಗಳಿಂದಾಗಿ ವಸ್ತ್ರೋದ್ಯಮವನ್ನು ಹೊರತುಪಡಿಸಿ, ತಾಂತ್ರಿಕ ವೃತ್ತಿಗಳು ಇನ್ನಾವ ಕ್ಷೇತ್ರದಲ್ಲೂ ಲಭ್ಯವಿರಲಿಲ್ಲವಾಗಿ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಯೂ ಈ ಕಾಲಮಾನದಲ್ಲಿ ಉಂಟಾಗಲಿಲ್ಲ. 1930 ರ ದಶಕದ ಅಂತ್ಯದಲ್ಲಿ ಸಮಸ್ತ ಭಾರತದಲ್ಲಿ ಸಿವಿಲ್ ಇಂಜಿನಿಯರಿಂಗ್ ಶಾಖೆಯಲ್ಲಿ ತರಬೇತಿಯನ್ನು ನೀಡುವ ಹತ್ತು ಕಾಲೇಜುಗಳು ಮಾತ್ರ ಅಸ್ತಿತ್ವದಲ್ಲಿದ್ದವು. ಇತರ ಶಾಖೆಗಳಲ್ಲೂ ಈ ಸಂಸ್ಥೆಗಳು ತರಬೇತಿಯನ್ನು ನೀಡುತ್ತಿದ್ದರೂ ತರಬೇತಿ ಸೌಕರ್ಯಗಳು ಅತ್ಯಲ್ಪ ಪ್ರಮಾಣದಲ್ಲಿದ್ದವು. ವಸ್ತ್ರೋದ್ಯಮ, ಲೆದರ್, ಸಕ್ಕರೆ ತಂತ್ರಜ್ಞಾನ ಮುಂತಾದುವುಗಳ ಸ್ಥಿತಿಯೂ ವಿಷಾದಕರವಾಗಿತ್ತು, ಬೆರಳೆಣಿಕೆಯಷ್ಟು ತಾಂತ್ರಿಕ ಸಂಸ್ಥೆಗಳು ಈ ಕ್ಷೇತ್ರಗಳಲ್ಲಿ ಪ್ರಾವೀಣ್ಯತೆಯನ್ನು ಒದಗಿಸುತ್ತಿದ್ದವು. ಆದರೆ ಇವು ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸೇರ್ಪಡದೆ ಸರ್ಕಾರದ ಕೈಗಾರಿಕಾ ವಿಭಾಗದಿಂದ ನಿಯಂತ್ರಿಸಲ್ಪಡುತ್ತಿದ್ದವು.

ಹಡಗು ನಿರ್ಮಾಣ, ವಿಮಾನತಯಾರಿಕೆ, ಕೆಮಿಕಲ್ ಇಂಡಸ್ಟ್ರಿ, ಮಿಲಿಟರಿ ಇಂಡಸ್ಟ್ರಿ ಇತ್ಯಾದಿ ಕೈಗಾರಿಕೆಗಳನ್ನು ಆರಂಭಿಸಿ ಕೈಗಾರಿಕೆಗಳನ್ನು ವೈವಿಧ್ಯೀಕರಣಗೊಳಿಸುವ ಅವಶ್ಯಕತೆಯಿದೆಯೆಂದೂ ಹಾಗೂ ಭಾರತದ ಸ್ವಸ್ಥ ಆರ್ಥಿಕ ನೀತಿಗೆ ಈ ಕ್ರಮದ ಅಗತ್ಯವಿದೆಯೆಂದೂ 1935ರ ಸಪ್ರು ಕಮಿಟಿ ಅಭಿಪ್ರಾಯಪಟ್ಟಿತು. ಅಲ್ಲದೆ ಈ ಕೈಗಾರಿಕೆಗಳಿಗೆ ಬೇಕಾದ ಮಾನವ ಸಂಪನ್ಮೂಲಗಳನ್ನು ಸಹ ತರಬೇತಿಗೊಳಿಸಬೇಕು ಎಂಬುದು ಕಮಿಟಿಯ ಅಭಿಪ್ರಾಯವಾಗಿತ್ತು. ಆದರೆ ದೇಶದ ಭಾವಿ ಆರ್ಥಿಕ ಸ್ಥಿತಿಗತಿ ಮತ್ತು ಕೈಗಾರಿಕಾ ಅಭಿವೃದ್ಧಿಯ ಬಗ್ಗೆ ಯಾವುದೇ ಖಚಿತ ನೀತಿಯನ್ನು ಹೊಂದಿರದ ಆಂಗ್ಲ ಸರ್ಕಾರ ಕಮಿಟಿಯ ಅಭಿಪ್ರಾಯಗಳನ್ನು ನಿರ್ಲಕ್ಷಿಸಿತು.

ಹಲವಾರು ಇಂಜಿನಿಯರಿಂಗ್ ಪದವೀಧರರು ತಮ್ಮ ನೈಪುಣ್ಯತೆಗೆ ತಕ್ಕ ಉದ್ಯೋಗವನ್ನು ಪಡೆಯಲಾರದೆ ನಿರುದ್ಯೋಗಿಗಳಾಗಿದ್ದರು. ಈ ಪರಿಸ್ಥಿತಿ ರಾಜಕೀಯ ಅಸ್ಥಿರತೆಗೆ ದಾರಿಮಾಡಬಹುದೆಂದು ಭಾವಿಸಿ ಸರ್ಕಾರ ಅಬಾಟ್ ಮತ್ತು ವುಡ್ ಕಮಿಟಿಯನ್ನು ರಚಿಸಿ ಇದಕ್ಕೆ ಪರಿಹಾರವನ್ನು ಸೂಚಿಸುವಂತೆ ಕೋರಿತು. ಸಾಮಾನ್ಯ ಶಿಕ್ಷಣಕ್ಕೆ ಸಮನಾಂತರವಾಗಿ (ಸಂವಾದಿಯಾಗಿ) ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣದ ಸಂಪೂರ್ಣ ಶ್ರೇಣೀ ಬದ್ಧ ವ್ಯವಸ್ಥೆಯ ಅಗತ್ಯವಿದೆಯೆಂದು ಈ ಸಮಿತಿ ಸಲಹೆ ಮಾಡಿತು. ಈ ಸಲಹೆಯಂತೆ ದೆಹಲಿಯಲ್ಲಿ ಡೆಲ್ಲಿ ಪಾಲಿಟೆಕ್ನಿಕ್ ಎಂಬ ಮಾದರಿ ಸಂಸ್ಥೆಯನ್ನು ತೆರೆಯಲಾಯಿತು. ಈ ಸಂಸ್ಥೆಯೇ ಈಗ ಡೆಲ್ಲಿ ಕಾಲೇಜ್ ಆಫ್ ಇಂಜಿನಿಯರಿಂಗ್ ಎನಿಸಿಕೊಂಡಿದೆ.

1882ರಿಂದ ಎರಡನೇ ಮಹಾಯುದ್ಧದವರೆಗಿನ ಅವಧಿಯಲ್ಲಿ ವಿವಿಧ ಸಲಹಾ ಸಮಿತಿಗಳು ತಾಂತ್ರಿಕಶಿಕ್ಷಣದ ಪುರೋಗತಿಯನ್ನು ಕುರಿತು ನೀಡಿದ ಸಲಹೆಗಳನ್ನು ಆಂಗ್ಲ ಸರ್ಕಾರ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಆದರೆ 1939ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾದಾಗ ಸ್ಥಳೀಯ ತಾಂತ್ರಿಕ ಮಾನವ ಸಂಪನ್ಮೂಲವಿಲ್ಲದೆ ಸಮರ ಪ್ರಯತ್ನಗಳು ಸಫಲವಾಗುವುದಿಲ್ಲವೆಂದು ಆಂಗ್ಲಸರ್ಕಾರ ಮನಗಂಡಿತು. ಈ ಕಾರಣದಿಂದಾಗಿ ಸರ್ಕಾರವು ಸಮರ ತಂತ್ರಜ್ಞರ ತರಬೇತಿಯೋಜನೆ" (War Technicians Training Scheme) ಎಂಬ ಬೃಹತ್ ಕಾರ್ಯಕ್ರಮವನ್ನು ರಾಷ್ಟ್ರಮಟ್ಟದಲ್ಲಿ 1940ರಲ್ಲಿ ಆರಂಭಿಸಿತು. ಕಾರ್ಯಕ್ರಮದ ಮೂಲಕರ್ತೃ ಅರ್ನೆಸ್ಟ್ ಬೆವಿನ್ ಎಂಬ ಆಂಗ್ಲ ಮಂತ್ರಿಯಾದ್ದರಿಂದ ಈ ಕಾರ್ಯಕ್ರಮದಲ್ಲಿ ತರಬೇತಿಗೊಂಡವರಿಗೆ "ಬೆವಿನ್ ಬಾಯ್ಸ್' ಎಂಬ ಹೆಸರು ಬಂದಿತು. ಇದು ಭಾರತದ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣ ಇತಿಹಾಸಕ್ಕೆ ತಿರುವಾಗಿ ಪರಿಣಮಿಸಿತು. ಈ ಕಾರ್ಯಕ್ರಮವು ಶ್ರೇಣೀಬದ್ಧ ತಾಂತ್ರಿಕ ಶಿಕ್ಷಣ ಪದ್ಧತಿಗೆ ತಳಹದಿಯಾಗಿ ಪರಿಣಮಿಸಿತು.

Digitised by Bharatavani, CIIL

1944ರಲ್ಲಿ ಭಾರತಸರ್ಕಾರ ಯೋಜನೆ ಹಾಗೂ ಅಭಿವೃದ್ಧಿ ವಿಭಾಗವನ್ನು ಅರ್ಧಶೀರ್ ದಲಾಲ್‌ರವರ ಮಾರ್ಗದರ್ಶನದಲ್ಲಿ ಆರಂಭಿಸಿತು. ಭಾರತದ ಸಾಂಪ್ರದಾಯಿಕ ಜೀವನವು ಬದಲಾವಣೆಗೊಂಡು ವಿಜ್ಞಾನ ಹಾಗೂ ತಂತ್ರಜ್ಞಾನ, ತಂತ್ರಜ್ಞರು ಹಾಗೂ ವಿಜ್ಞಾನಿಗಳ ಸೇವೆ–ಇವುಗಳ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕು ಎಂದು ದಲಾಲ್‌ರವರು ಅಭಿಪ್ರಾಯಪಟ್ಟರು. ಪರಿಣಾಮವಾಗಿ, 1944ರಲ್ಲಿ ಪ್ರಥಮಬಾರಿಗೆ ದೇಶದಲ್ಲಿ ತಾಂತ್ರಿಕ ಶಿಕ್ಷಣ ಮತ್ತು ತರಬೇತಿ ಹಾಗೂ ವೈಜ್ಞಾನಿಕ ಸಂಶೋಧನೆಗಳ ಯೋಜಿತ ವಿಕಾಸಕ್ಕೆ ತಳಹದಿಯನ್ನು ಹಾಕುವಂತಾಯಿತು. ವೈಜ್ಞಾನಿಕ ಸಂಶೋಧನೆ ಹಾಗೂ ತಾಂತ್ರಿಕ ಶಿಕ್ಷಣದ ಬೆಳವಣಿಗೆಯ ಸಲುವಾಗಿ ಕೆಲವು ಕ್ರಮಗಳನ್ನು ಸರ್ಕಾರವು ಕೈಗೊಂಡಿತು. ಅವುಗಳಲ್ಲಿ ಮುಖ್ಯವಾದ ಎರಡು ಕ್ರಮಗಳೆಂದರೆ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ವಿಭಾಗದ ಸ್ಥಾಪನೆ ಮತ್ತು ಎನ್.ಆರ್. ಸರ್ಕಾರ್ ಅವರ ನೇತೃತ್ವದಲ್ಲಿ ಉನ್ನತ ತಾಂತ್ರಿಕ ಶಿಕ್ಷಣದ ವಿಕಾಸಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಲು ಸಮಿತಿಯ ರಚನೆ. ಇದಲ್ಲದೆ, ವಿಜ್ಞಾನಿಗಳು ಮತ್ತು ತಂತ್ರಜ್ಞರನ್ನು ವಿದೇಶದಲ್ಲಿ ತರಬೇತಿಗೊಳಿಸಲು ವಿದ್ಯಾರ್ಥಿವೇತನದ ವ್ಯವಸ್ಥೆಯನ್ನು ಮಾಡಲಾಯಿತು. ತಾಂತ್ರಿಕ ಶಿಕ್ಷಣ ಮತ್ತು ತರಬೇತಿಯ ವ್ಯವಸ್ಥಿತ ಬೆಳವಣಿಗೆಗಾಗಿ ರಾಷ್ಟ್ರಮಟ್ಟದಲ್ಲಿ ಎರಡು ಸಲಹಾ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಅವು ಕ್ರಮವಾಗಿ ಅಖಿಲಭಾರತ ತಾಂತ್ರಿಕ ಶಿಕ್ಷಣ ಸಮಿತಿ (ಆಲ್ ಇಂಡಿಯ ಕೌನ್ಸಿಲ್ ಆಫ್ ಟೆಕ್ನಿಕಲ್ ಎಜುಕೇಷನ್ AICTE) ಮತ್ತು ತಾಂತ್ರಿಕ ತರಬೇತಿ ಸಲಹಾ ಸಮಿತಿ (ಅಡ್ವೈಸರಿ ಕಮಿಟಿ ಆನ್ ಟೆಕ್ನಿಕಲ್ ಟ್ರೈನಿಂಗ್ ACTT). 1956ರಲ್ಲಿ ACTT ನ್ಯಾಷನಲ್ ಕೌನ್ಸಿಲ್ ಫಾರ್ ಟ್ರೈನಿಂಗ್ ಇನ್ ವೊಕೇಷನಲ್ ಟ್ರೇಡ್ಸ್ NCTVT). ಎಂಬ ಸಂವಿಧಾನ ಬದ್ಧ ಸಂಸ್ಥೆಯಾಗಿ ಪರಿವರ್ತನೆಗೊಂಡಿತು. ಈಗ ಇದನ್ನು ಎನ್.ಸಿ.ವಿ.ಟಿ. ಅಂದರೆ ನ್ಯಾಷನಲ್ ಕೌನ್ಸಿಲ್ ಫಾರ್ ವೊಕೇಷನಲ್ ಟ್ರೈನಿಂಗ್ ಎಂಬ ಹೆಸರಿನಿಂದ ಕರೆಯುತ್ತಾರೆ.

ಭಾರತವು 1947ರಲ್ಲಿ ಸ್ವತಂತ್ರಗೊಂಡಾಗ ಇಡೀ ದೇಶದಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಸ್ನಾತಕ ಪದವಿಯನ್ನು ನೀಡುವ 38 ಶಿಕ್ಷಣ ಸಂಸ್ಥೆಗಳು ಹಾಗೂ ತಾಂತ್ರಿಕ ಪರಿಣತಿಯನ್ನು ನೀಡುವ 53 ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ಇವುಗಳೂ ದೇಶದ ಪ್ರಮುಖ ಸ್ಥಳಗಳಲ್ಲಿ ಮಾತ್ರ ತೆರೆಯಲ್ಪಟ್ಟಿದ್ದವು. ಸ್ವಾತಂತ್ರ್ಯಪೂರ್ವದಲ್ಲಂತೂ ಸ್ನಾತಕೋತ್ತರ ಮಟ್ಟದಲ್ಲಿ ಸಂಶೋಧನೆಗೆಂದು ಯಾವುದೇ ಸೌಲಭ್ಯಗಳಿರಲಿಲ್ಲ. ಭಾರತವು ಸ್ವತಂತ್ರಗೊಂಡಾಗ ದೇಶದ ಭವಿಷ್ಯದ ಸವಾಲುಗಳನ್ನು ಸಮರ್ಪಕವಾಗಿ ಎದುರಿಸಲು 1947ರಲ್ಲಿ ಶಾಂತಿಸ್ವರೂಪ ಭಟ್‌ನಾಗರ್ ಅವರ ನೇತೃತ್ವದಲ್ಲಿ ಸೈಂಟಿಫಿಕ್ ಮ್ಯಾನ್‌ಪವರ್ ಕಮಿಟಿಯನ್ನು ನೇಮಿಸಲಾಯಿತು. ಸ್ವತಂತ್ರ ಭಾರತವು 1947 ರಿಂದ 1957ರವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ ಹಮ್ಮಿಕೊಂಡ ಅಭಿವೃದ್ಧಿ ಯೋಜನೆಗಳನ್ನು ಪೂರೈಸಲು ವೈಜ್ಞಾನಿಕ ಹಾಗೂ ತಾಂತ್ರಿಕ ಮಾನವ ಸಂಪನ್ಮೂಲಗಳ ಅಗತ್ಯವನ್ನು ಈ ಕಮಿಟಿಯು ಅಂದಾಜು ಮಾಡಿತು. ಇದೇ ಸಮಯದಲ್ಲಿ (1948–49) ರಾಧಾಕೃಷ್ಣನ್ ಕಮೀಷನ್ (ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ) ಕೂಡ ದೇಶದ ತಾಂತ್ರಿಕ ಶಿಕ್ಷಣದ ಸ್ಥಿತಿಗತಿಗಳ ನಿರ್ಣಾಯಕ ಅಧ್ಯಯನವನ್ನು ಕೈಗೊಂಡು ಅದರ ಪುರೋಗತಿಗೆಂದು ಹಲವಾರು ಸೂಕ್ತ ಸಲಹೆಗಳನ್ನು ನೀಡಿತು.

ಭಾರತ ಸರ್ಕಾರದ ಉದ್ದೇಶಪೂರ್ವಕ ಪ್ರಯತ್ನಗಳಿಂದಾಗಿ 1947ರಿಂದ 1967–68ರ ಅವಧಿಯಲ್ಲಿ ತಾಂತ್ರಿಕ ಶಿಕ್ಷಣದ ಅಭಿವೃದ್ಧಿ ಸ್ಥಿರಗತಿಯಿಂದ ಸಾಗಿತು. ಎ.ಐ.ಸಿ.ಟಿ.ಇ.ಯು ನಾಲ್ಕು ಪ್ರಾಂತೀಯ ಉನ್ನತ ತಾಂತ್ರಿಕ ಸಂಸ್ಥೆಗಳನ್ನು ತೆರೆದು ಅವುಗಳ ಮೂಲಕ ಉತ್ತಮಗುಣಮಟ್ಟದ ತಂತ್ರಜ್ಞರನ್ನು ತಯಾರುಮಾಡಬೇಕೆಂಬ ಸಲಹೆಯನ್ನು ನೀಡಿತು. ಈ ಸಲಹೆಯಂತೆ ಖರಗ್‌ಪುರ್ (1951) ಮುಂಬಯಿ (1958) ಮದ್ರಾಸ್ (1959) ಹಾಗೂ ಕಾನ್ಪುರ್ (1959) ಈ ಸ್ಥಳಗಳಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜೀಸ್ (I.I.Ts) ಗಳನ್ನು ಸ್ಥಾಪಿಸಲಾಯಿತು. ನಂತರ ವಾರಾಣಸಿ (1971) ದೆಹಲಿ (1963)ಗಳಲ್ಲೂ ಐ.ಐ.ಟಿಗಳನ್ನು ತೆರೆಯಲಾಯಿತು. ಇದರ ನಂತರ ಗೌಹಾಟಿ (1994)ರಲ್ಲಿ ಮತ್ತೊಂದು ಐ.ಐ.ಟಿ. ಸ್ಥಾಪನೆಯಾಯಿತು. 2001 ರಿಂದ ಇದುವರೆಗೆ ಒಂಬತ್ತು ಐ.ಐ.ಟಿ.ಗಳನ್ನು ದೇಶದ ವಿವಿಧ ಸ್ಥಳಗಳಲ್ಲಿ ತೆರೆಯಲಾಗಿದೆ. ಈ ಸಂಸ್ಥೆಗಳನ್ನು ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳೆಂದು ಕರೆಯುತ್ತಾರೆ.

1967–68ರ ಅವಧಿಯಲ್ಲಿ ದೇಶದಲ್ಲಿ 35 ತಂತ್ರಜ್ಞಾನ ಶಾಖೆಗಳಲ್ಲಿ ಸ್ನಾತಕಪದವಿಯನ್ನು ನೀಡುವ 135 ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ಒಟ್ಟಾರೆ 25,000 ವಿದ್ಯಾರ್ಥಿಗಳ ವಾರ್ಷಿಕ ದಾಖಲಾತಿಯಾಗುತ್ತಿತ್ತು. ಇದೇ ಅವಧಿಯಲ್ಲಿ 280 ಪಾಲಿಟೆಕ್ನಿಕ್‌ಗಳು ಸ್ಥಾಪಿತಗೊಂಡಿದ್ದವು. ಇದಲ್ಲದೆ ಕೈಗಾರಿಕಾ ತರಬೇತಿ ನೀಡುವ ಸಂಸ್ಥೆಗಳು ಐ.ಟಿ.ಐ. ಚಾಲ್ತಿಯಲ್ಲಿದ್ದವು. ಇದೇ ಸಮಯದಲ್ಲಿ ಭಾರತವು ಎರಡು ಯುದ್ಧಗಳಲ್ಲಿ (1962 ಹಾಗೂ 1965ರಲ್ಲಿ) ತೊಡಗಬೇಕಾಗಿ ಬಂದಿದ್ದರಿಂದ ದೇಶದ ಆರ್ಥಿಕ ಸ್ವರೂಪ ಬದಲಾವಣೆಗೊಂಡಿತು. ಸರ್ಕಾರದ ಕೆಲವು ನೀತಿಗಳಿಂದ ತಾಂತ್ರಿಕಶಿಕ್ಷಣ ಪಡೆದವರು ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಯಿತು. ಆದ್ದರಿಂದ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿಯು ಇಳಿಮುಖಗೊಂಡಿತು. 1966ರಿಂದ 1974–75ರವರೆಗೆ ತಾಂತ್ರಿಕ ಶಿಕ್ಷಣದ ಬೆಳವಣಿಗೆ ಗಮನಾರ್ಹ ಗತಿಯಲ್ಲಿ ಸಾಗಲಿಲ್ಲ. ಆದರೆ 1974–75ರಿಂದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಆರಂಭಗೊಂಡವು. ಇವುಗಳನ್ನು ಕ್ಯಾಪಿಟೇಷನ್ ಸಂಸ್ಥೆಗಳು ಅಥವಾ ಅನುದಾನರಹಿತ ಸಂಸ್ಥೆಗಳು ಎಂದು ಕರೆಯಲಾಗುತ್ತಿತ್ತು. ರಾಜ್ಯ ಸರ್ಕಾರಗಳ ಪ್ರೋತ್ಸಾಹದಿಂದ ಈ ಸಂಸ್ಥೆಗಳು ತೆರೆಯಲ್ಪಟ್ಟವು.

ಕಳೆದ ಮೂರು ದಶಕಗಳಲ್ಲಿ ತಾಂತ್ರಿಕ ಶಿಕ್ಷಣದ ಪುರೋಗತಿಗೆ ಹಲವು ಸಮಿತಿಗಳನ್ನು ರಚಿಸಲಾಗಿದೆ. ನಾಯುಡಮ್ಮ ಸಮಿತಿ (1979–80, 1986), ಪಿ. ರಾಮರಾವ್ ಸಮಿತಿ (1995)ಆರ್. ಎ. ಮಶಲೇಕರ್ ಸಮಿತಿ (1998) ಯು.ಆರ್.ರಾವ್ ಸಮಿತಿ (2003) ವಿ.ಪಿ. ರಾಮರಾವ್ ಸಮಿತಿ (2004) ಮುಖ್ಯವಾದವು. ಕಳೆದ ಎರಡು ದಶಕಗಳಲ್ಲಿ ತಾಂತ್ರಿಕಶಿಕ್ಷಣ ತೀವ್ರಗತಿಯಲ್ಲಿ ಸಾಗಿಬಂತು. 1997ರಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಸ್ನಾತಕಪದವಿಗೆ 1.15 ಲಕ್ಷದಷ್ಟು ದಾಖಲಾಗಿದ್ದು 2007ರಲ್ಲಿ ಈ ಸಂಖ್ಯೆ 5.51 ಲಕ್ಷಕ್ಕೆ ಏರಿತು. ಕಳೆದ ಹತ್ತು ವರ್ಷಗಳಲ್ಲಿ ತಂತ್ರಜ್ಞಾನದಲ್ಲಿ ಸ್ನಾತಕ ಪದವಿಯನ್ನು ನೀಡುವ 1121ಕ್ಕೂ ಹೆಚ್ಚು ಸಂಸ್ಥೆಗಳು ತೆರೆಯಲ್ಪಟ್ಟಿವೆ.

ಐ.ಐ.ಟಿ.ಗಳ ಮಾದರಿಯಲ್ಲೇ 1959 ರಿಂದ 1965ರ ಅವಧಿಯಲ್ಲಿ ಭಾರತದಲ್ಲಿ 14 ಪ್ರಾಂತೀಯ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲಾಯಿತು. ಹಾಗೆಯೇ 1967, 1970 ಮತ್ತು 1990ರಲ್ಲಿ ಇನ್ನೂ ಮೂರು ಅಂತಹ ಪ್ರಾಂತೀಯ ಕಾಲೇಜುಗಳನ್ನು ಸ್ಥಾಪಿಸಲಾಯಿತು. 2003ರಲ್ಲಿ ಭಾರತ ಸರ್ಕಾರವು ಈ ಸಂಸ್ಥೆಗಳನ್ನು "ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" (NIT)ಗಳಾಗಿ ಪರಿವರ್ತಿಸಿತು. ಈ ಸಂಸ್ಥೆಗಳು ಐ.ಐ.ಟಿ. ಮಾದರಿಯಲ್ಲೇ ಕೆಲಸ ಮಾಡುವುದರಿಂದ ಉತ್ತಮ ಗುಣಮಟ್ಟದ ತಾಂತ್ರಿಕ ಶಿಕ್ಷಣ ಇವುಗಳಿಂದ ಲಭ್ಯವಾಗುತ್ತಿದೆ. 2006ರಲ್ಲಿ ಬಿಹಾರ್ ಇಂಜಿನಿಯರಿಂಗ್ ಕಾಲೇಜು (110 ವರ್ಷ ಹಳೆಯದು) ಗವರ್ನ್‌ಮೆಂಟ್ ಇಂಜಿನಿಯರಿಂಗ್ ಕಾಲೇಜು (ರಾಯ್‌ಪುರ) ಹಾಗೂ ತ್ರಿಪುರ ಇಂಜಿನಿಯರಿಂಗ್ ಕಾಲೇಜು (ಅಗರ್ತಲ) ಈ ಮೂರು ಸಂಸ್ಥೆಗಳನ್ನು ಎನ್.ಡಿ.ಟಿ.ಗಳಾಗಿ ಪರಿವರ್ತಿಸಲಾಯಿತು. ಇತ್ತೀಚೆಗೆ ಭಾರತ ಸರ್ಕಾರವು ಇಪ್ಪತ್ತು ಎನ್.ಐ.ಟಿ.ಗಳನ್ನು ಪೂರ್ಣರೂಪದ ತಾಂತ್ರಿಕ ವಿಶ್ವವಿದ್ಯಾಲಯಗಳನ್ನಾಗಿ ಪರಿವರ್ತಿಸಬೇಕೆಂದು ಆಲೋಚಿಸುತ್ತಿದೆ. ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಕೆಲವು ಸಂಸ್ಥೆಗಳಿಗೆ

Digitised by Bharatavani, CIIL

ಪಠ್ಯಕ್ರಮ ಹಾಗೂ ಪರೀಕ್ಷೆಗಳನ್ನು ನಡೆಸುವ ವಿಷಯಗಳಲ್ಲಿ ಸರ್ಕಾರವು ಸ್ವಾಯತ್ತತೆಯನ್ನು ನೀಡುತ್ತಿದೆ. ಆದರೆ ಇವುಗಳು ಯಾವುದಾದರೂ ವಿಶ್ವವಿದ್ಯಾಲಯಕ್ಕೆ ಸೇರಿರುತ್ತವೆ. ಮತ್ತೊಂದು ರೀತಿಯ ಸಂಸ್ಥೆಗಳೆಂದರೆ "ಮಾನ್ಯತೆ' (Deamed Status)ಪಡೆದಿರುವ ಸಂಸ್ಥೆಗಳು. ಯುನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ಉತ್ತಮ ರೀತಿಯಲ್ಲಿ ನಡೆಯುತ್ತಿರುವ ಸಂಸ್ಥೆಗಳಿಗೆ "ಡೀಮ್ಡ್ ವಿಶ್ವವಿದ್ಯಾಲಯ"ವೆಂಬ ಸ್ಥಾನವನ್ನು ನೀಡುತ್ತದೆ. ಈ ಸಂಸ್ಥೆಗಳು ಸಂಪೂರ್ಣರೀತಿಯಲ್ಲಿ ಸ್ವಾಯತ್ತತೆಯನ್ನು ಹೊಂದಿರುವುದರಿಂದ ತಾವೇ ಸ್ನಾತಕ ಪದವಿಯನ್ನು ನೀಡುವ ಅಧಿಕಾರವನ್ನು ಹೊಂದಿರುತ್ತವೆ.

ಭಾರತದಲ್ಲಿ ತಾಂತ್ರಿಕ ಶಿಕ್ಷಣ ಸಾಕಷ್ಟು ಅಭಿವೃದ್ಧಿಯಾಗುತ್ತಿದ್ದರೂ ಸಂಶೋಧನಾ ಕ್ಷೇತ್ರದಲ್ಲಿ ಪಾಶ್ಚಾತ್ಯದೇಶಗಳ ಮಟ್ಟಕ್ಕೆ ಬಂದಿಲ್ಲ. ಈ ದಿಶೆಯಲ್ಲಿ ಕೈಗಾರಿಕೆಗಳು ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳು ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಭಾರತದಲ್ಲಿ ಸಂಶೋಧನಾಕ್ಷೇತ್ರದಲ್ಲಿ ಮುಂದಾಳತ್ವ ವಹಿಸುವ ಶಕ್ತಿಯಿದೆಯಾದ್ದರಿಂದ ಅದನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು ಅಗತ್ಯವಾದ ಯೋಜನೆಗಳನ್ನು ಸರ್ಕಾರ, ಕೈಗಾರಿಕೆಗಳು ಹಾಗೂ ಶಿಕ್ಷಣಸಂಸ್ಥೆಗಳು ಹಮ್ಮಿಕೊಳ್ಳಬೇಕು. ಮತ್ತು ಅದನ್ನು ಕಾರ್ಯರೂಪಕ್ಕೆ ತರಬೇಕು. ಉನ್ನತ ತಾಂತ್ರಿಕ ಶಿಕ್ಷಣ ಹಾಗೂ ವೈಜ್ಞಾನಿಕ ಶಿಕ್ಷಣ ಪದ್ಧತಿಯನ್ನು ಆಗಿಂದಾಗ್ಗೆ ಪರಿಶೀಲಿಸುವಂತಹ ತಜ್ಞರ ತಂಡವೊಂದರ ಅಗತ್ಯವಿದೆ. ಇದರಿಂದ ಉನ್ನತ ತಾಂತ್ರಿಕ ಶಿಕ್ಷಣಕ್ಕೆ ಸೂಕ್ತ ಮಾರ್ಗದರ್ಶನವು ಲಭ್ಯವಾಗುತ್ತದೆ.

–ಬಿ.ಎಂ.ಚಂ.

## ಭಾರತದಲ್ಲಿ ಮಾಧ್ಯಮ ಶಿಕ್ಷಣದ ಬೆಳವಣಿಗೆ

ಮಾಧ್ಯಮಗಳು ಜಗತ್ತಿನ ಎಲ್ಲೆಡೆ ಕ್ರಾಂತಿಕಾರಕ ರೀತಿಯಲ್ಲಿ ಬೆಳೆದಿವೆ. ಸಂವಹನ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಉಂಟಾಗಿರುವ ವಿಸ್ಮಯಕಾರಿ ಬೆಳವಣಿಗೆಗಳಿಂದಾಗಿ ಇಂದು ಇಡೀ ಜಗತ್ತು ಒಂದು ಪುಟ್ಟ 'ಜಾಗತಿಕ ಹಳ್ಳಿ'ಯಾಗಿ ಪರಿವರ್ತನೆಗೊಂಡಿದೆ. ಪತ್ರಿಕೋದ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೇ ಆಧಾರಸ್ತಂಭವೆಂದು ಪಂಡಿತರು ಬಣ್ಣಿಸಿದ್ದಾರೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ವಿಮರ್ಶಿಸಿ ಸರಿದಾರಿಗೆ ತರುವ ವಿಶೇಷ ಹೊಣೆಗಾರಿಕೆಯನ್ನುಳ್ಳ ಪತ್ರಿಕೋದ್ಯಮವನ್ನು ಜನಹಿತವನ್ನು ಕಾಯುವ 'ಕಾವಲುನಾಯಿ' ಎಂದು ಗೌರವಪೂರ್ವಕವಾಗಿ ಬಣ್ಣಿಸಲಾಗಿದೆ. ಪತ್ರಿಕೋದ್ಯಮವು ಮನುಷ್ಯ ಪರವಾಗಿ ರೂಪುಗೊಂಡಾಗ ಮಾತ್ರ ಅದಕ್ಕೆ ನಿಜವಾದ ಸಾಮಾಜಿಕ ಮನ್ನಣೆ ಲಭಿಸುತ್ತದೆ. ಪತ್ರಿಕೆಗಳು ಸಮೂಹ ಮಾಧ್ಯಮಗಳಲ್ಲಿ ಅತ್ಯಂತ ಹಳೆಯದಾದ ಮಾಧ್ಯಮವಾಗಿವೆ. ಪತ್ರಿಕೆಗಳಲ್ಲಿ ದಿನ ಪತ್ರಿಕೆಗಳು, ಸಾಮಾನ್ಯ ನಿಯತಕಾಲಿಕೆಗಳು, ವಿಶೇಷ ನಿಯತಕಾಲಿಕೆಗಳು, ವೃತ್ತಿಪರ ನಿಯತಕಾಲಿಕೆಗಳು, ಸುದ್ದಿ ಪತ್ರಿಕೆಗಳು, ಸಾಂಸ್ಥಿಕ ಪ್ರಕಟಣೆಗಳು ಇವೇ ಮೊದಲಾದವುಗಳನ್ನು ಕಾಣಬಹುದಾಗಿದೆ.

ಬ್ರಿಟಿಷರ ಬಂದೂಕು ಶಕ್ತಿಯ ವಿರುದ್ಧ ರಾಷ್ಟ್ರನಾಯಕರಾದ ಗಾಂಧೀಜಿ, ನೆಹರು, ತಿಲಕ್, ಅಂಬೇಡ್ಕರ್ ಮೊದಲಾದವರು ತಮ್ಮ ಲೇಖನಿ ಶಕ್ತಿಯನ್ನು ಬಳಸಿಕೊಂಡು ಪತ್ರಿಕೋದ್ಯಮದ ಮೂಲಕ ರಾಷ್ಟ್ರಕ್ಕೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮೊದಲಾದವುಗಳನ್ನು ದೊರಕಿಸಿಕೊಟ್ಟಿದ್ದಾರೆ. ಭಾರತವು ವಿಶ್ವದಲ್ಲೇ ಬೃಹತ್ ಪ್ರಜಾಪ್ರಭುತ್ವವಾದಿ ರಾಷ್ಟ್ರವೆಂದೇ ಹೆಸರುವಾಸಿಯಾಗಿದೆ. ಭಾರತದಲ್ಲಿ ಸುಮಾರು 178 ಭಾಷೆಗಳಿದ್ದು 554 ಉಪಭಾಷೆಗಳಿವೆ. ಭಾರತದ ರಾಜ್ಯಾಂಗವು 14 ಭಾಷೆಗಳನ್ನು ಆಡುವ ಭಾಷೆಗಳೆಂದು ಮಾನ್ಯಮಾಡಿದೆ. ಭಾರತದಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡ 52ರಷ್ಟಿದೆ. ಈಗ ಸಾಕ್ಷರತೆಯ ಬೆಳವಣಿಗೆಗಾಗಿ ರಾಷ್ಟ್ರದಾದ್ಯಂತ ಸಾಕ್ಷರತಾ ಆಂದೋಲನಗಳನ್ನು ರೂಪಿಸಲಾಗುತ್ತಿದೆ. ಭಾರತೀಯ ಪತ್ರಿಕೋದ್ಯಮವು ಸ್ವಾತಂತ್ರ್ಯ ಚಳುವಳಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಸ್ವಾತಂತ್ರ್ಯಾ ನಂತರ ಪತ್ರಿಕೋದ್ಯಮ ಕ್ಷೇತ್ರವು ಬೇರೆ ಕ್ಷೇತ್ರಗಳಂತೆ ತ್ವರಿತಗತಿಯಲ್ಲಿ ಮುನ್ನಡೆಯುತ್ತಿದೆ. ಆಂಗ್ಲಭಾಷಾ ಪತ್ರಿಕೋದ್ಯಮ ಮತ್ತು ಭಾರತೀಯ ಭಾಷಾ ಪತ್ರಿಕೋದ್ಯಮವು ಸ್ವಾತಂತ್ರ್ಯಾನಂತರದಲ್ಲಿ ವ್ಯಾಪಕವಾಗಿ ಬೆಳೆದಿವೆ.

ಆಧುನಿಕ ಸಮಾಜದಲ್ಲಿ ಪತ್ರಿಕೋದ್ಯಮ ಶಿಕ್ಷಣ ವ್ಯಾಪ್ತಿಯನ್ನು ಗಣನೀಯವಾಗಿ ವಿಸ್ತರಿಸಿ 'ಮಾಧ್ಯಮ ಶಿಕ್ಷಣ'ವೆಂದು ವ್ಯಾಖ್ಯಾನಿಸಲಾಗಿದೆ. ಮಾಧ್ಯಮ ಶಿಕ್ಷಣದ ವ್ಯಾಪ್ತಿಗೆ ಪತ್ರಿಕೋದ್ಯಮ, ಬಾನುಲಿ, ದೂರದರ್ಶನ, ಚಲನಚಿತ್ರ, ಜಾಹೀರಾತು, ಸಾರ್ವಜನಿಕ ಸಂಪರ್ಕ, ಮಾಧ್ಯಮ ಕಾನೂನು, ಮಾಧ್ಯಮ ನಿರ್ವಹಣೆ, ಮಾಧ್ಯಮ ಬರವಣಿಗೆ, ಹವ್ಯಾಸಿ ಪತ್ರಿಕೋದ್ಯಮ, ಛಾಯಚಿತ್ರ ಪತ್ರಿಕೋದ್ಯಮ, ವೆಬ್ ಪತ್ರಿಕೋದ್ಯಮ, ಮಾಧ್ಯಮ ಸಂಶೋಧನೆ, ಮಾಧ್ಯಮ ವಿಮರ್ಶೆ ಇವೇ ಮೊದಲಾದ ಪ್ರಮುಖ ಕಾರ್ಯಕ್ಷೇತ್ರಗಳು ಮತ್ತು ವಿಷಯಗಳು ಸೇರ್ಪಡೆಗೊಂಡಿವೆ. ಆಧುನಿಕ ಸಮಾಜದಲ್ಲಿ ನೀತಿನಿರೂಪಕರು, ಆಡಳಿತಗಾರರು, ಮಾಧ್ಯಮ ಶಿಕ್ಷಕರು, ಮಾಧ್ಯಮ ಸಿಬ್ಬಂದಿ, ಸಂಶೋಧಕರು ಮೊದಲಾದವರು ಒಟ್ಟುಗೂಡಿ ಭಾರತೀಯ ಮಾಧ್ಯಮ ಶಿಕ್ಷಣದ ಪ್ರಗತಿಗೆ ಅವಶ್ಯಕ ಭೂಮಿಕೆಯನ್ನು ಸಿದ್ಧಪಡಿಸುವ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿದ್ದಾರೆ. ಭಾರತದ ರಾಷ್ಟ್ರೀಯ ಅಭಿವೃದ್ಧಿ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿ ಮಾಧ್ಯಮ ಶಿಕ್ಷಣ ಇತ್ತೀಚಿನ ವರ್ಷಗಳಲ್ಲಿ ಬೆಳೆದಿರುವುದು ಗಮನಾರ್ಹ ಸಂಗತಿಯಾಗಿದೆ.

### ಭಾರತೀಯ ಮಾಧ್ಯಮ ಶಿಕ್ಷಣದ ಆರಂಭ

ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಪತ್ರಿಕೋದ್ಯಮ ಶಿಕ್ಷಣವನ್ನು ಪ್ರಾರಂಭಿಸಿದ ಖ್ಯಾತಿ ಡಾ. ಅನಿಬೆಸೆಂಟ್‌ರಿಗೆ ಸಲ್ಲುತ್ತದೆ. ಅವರು 1910ರಲ್ಲಿ ಮದ್ರಾಸಿನ ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಔಪಚಾರಿಕವಾಗಿ ಪತ್ರಿಕೋದ್ಯಮ ಶಿಕ್ಷಣ ಸೇವೆಯನ್ನು ಆರಂಭಿಸಿದರು. ಇವರಿಂದ ಪ್ರೇರಣೆ ಪಡೆದ ಗುರುದೇವ ರವೀಂದ್ರನಾಥ ಠಾಗೂರ್ ಮತ್ತು ಶ್ರೀ ಸಿ.ಪಿ. ರಾಮಸ್ವಾಮಿ ಅಯ್ಯರ್ ಮದ್ರಾಸಿನ ಅಡಿಯಾರ್‌ನಲ್ಲಿ ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಅವಶ್ಯಕ ಪ್ರೋತ್ಸಾಹ ನೀಡಿದರು. ಅಂದು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ 'ನ್ಯೂ ಇಂಡಿಯಾ' ಪತ್ರಿಕೆಯಲ್ಲಿ ವೃತ್ತಿಪರ ತರಬೇತಿ ನೀಡಲಾಗುತ್ತಿತ್ತು. ಅಂದು ಪತ್ರಿಕೋದ್ಯಮವನ್ನು ಕಲಾವಿಭಾಗದ ವ್ಯಾಪ್ತಿಗೆ ತಂದು ಪತ್ರಿಕೋದ್ಯಮ ಇತಿಹಾಸ, ಪತ್ರಿಕಾ ಶಾಸನಗಳು, ಸಂಪಾದಕೀಯ ವಿಭಾಗದ ತರಬೇತಿ, ಸುದ್ದಿ ಬರೆಯುವಿಕೆ, ಪತ್ರಿಕಾ ಆಡಳಿತ ಮುಂತಾದ ವಿಷಯಗಳನ್ನು ಸುಮಾರು 3 ವರ್ಷಗಳ ಅವಧಿಯ ಪದವಿ ಮಟ್ಟದ ಶಿಕ್ಷಣದಲ್ಲಿ ಜೆ.ಎಚ್. ಕಸಿನ್ಸ್‌ರವರ ನೇತೃತ್ವದಲ್ಲಿ ಒದಗಿಸಲಾಗುತ್ತಿತ್ತು. ಡಾ. ಅನಿಬೆಸೆಂಟ್‌ರು ಭಾರತೀಯ ಪತ್ರಿಕೋದ್ಯಮ ಶಿಕ್ಷಣದ ಪ್ರವರ್ತಕರೆಂದು ನಾಡಿಗ ಕೃಷ್ಣಮೂರ್ತಿ ಅಭಿಮಾನ ಪೂರ್ವಕವಾಗಿ ದಾಖಲಿಸಿದ್ದಾರೆ.

1936ರಲ್ಲಿ ಬೊಂಬಾಯಿ ನಗರದಲ್ಲಿ ಬಿ.ಜಿ. ಹಾರ್ನಿಮನ್ ಪತ್ರಿಕೋದ್ಯಮ ಕಾಲೇಜನ್ನು ಆರಂಭಿಸಲಾಯಿತು. 1938ರಲ್ಲಿ ಉತ್ತರ ಭಾರತದ ಆಲಿಘಡ್ ಮುಸ್ಲಿಂ ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ವಿಷಯದಲ್ಲಿ ಡಿಪ್ಲೋಮ ತರಗತಿಯನ್ನು ಅಂದು ಫೆಡರಲ್ ನ್ಯಾಯಾಧೀಶರಾಗಿದ್ದ ಸರ್ ಷಾ ಮಹಮ್ಮದ್ ಸುಲೇಮಾನ್‌ರವರ ಮಾರ್ಗದರ್ಶನದಲ್ಲಿ ಪ್ರಾರಂಭಿಸಿತು. ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ವ್ಯವಸ್ಥಿತ ಹಾಗೂ ವೃತ್ತಿಪರ ಪತ್ರಿಕೋದ್ಯಮ ಶಿಕ್ಷಣವನ್ನು ಲಾಹೋರಿನ ಪಂಜಾಬ್ ವಿಶ್ವವಿದ್ಯಾನಿಲಯದ ಪ್ರೊ. ಪ್ರಿಥಿಪಾಲ್‌ಸಿಂಗ್‌ರವರ ನೇತೃತ್ವದಲ್ಲಿ 1941ರಲ್ಲಿ ಪ್ರಾರಂಭಿಸಲಾಯಿತು. ಪ್ರತಿ ವರ್ಷ ಸುಮಾರು 30 ವಿದ್ಯಾರ್ಥಿಗಳಿಗೆ ಡಿಪ್ಲೊಮ ಮಟ್ಟದಲ್ಲಿ ಪತ್ರಿಕೋದ್ಯಮ ತರಬೇತಿಯನ್ನು

Digitised by Bharatavani, CIIL

ನೀಡಲಾಗುತ್ತಿತ್ತು. 1946ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯ ಮತ್ತು 1950ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯಗಳಲ್ಲಿ ಡಿಪ್ಲೊಮಾ ತರಗತಿಗಳನ್ನು ಆರಂಭಿಸಲಾಯಿತು. 1947ರಲ್ಲಿ ಜರುಗಿದ ರಾಷ್ಟ್ರವಿಭಜನೆ ಮತ್ತು ಸ್ವಾತಂತ್ರ್ಯದ ನಂತರ ಪತ್ರಿಕೋದ್ಯಮ ವಿಭಾಗವನ್ನು ದೆಹಲಿಯಲ್ಲಿ ಮುಂದುವರೆಸಲಾಯಿತು. ಇದೇ ವಿಭಾಗವನ್ನು 1962ರಲ್ಲಿ ಪಂಜಾಬ್ ರಾಜ್ಯದ ಚಂಡಿಘಡ ನಗರಕ್ಕೆ ಸ್ಥಳಾಂತರಿಸಲಾಯಿತು.

ಸ್ವಾತಂತ್ರ್ಯಾನಂತರದಲ್ಲಿ ಮದ್ರಾಸ್, ಕಲ್ಕತ್ತಾ, ಮೈಸೂರು, ನಾಗಪುರ ಮತ್ತು ಉಸ್ಮಾನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಮಟ್ಟದ ಪತ್ರಿಕೋದ್ಯಮ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಕನ್ನಡ ಪತ್ರಿಕೋದ್ಯಮದ ಪಿತಾಮಹನೆಂದೇ ಗೌರವಿಸಲ್ಪಟ್ಟಿರುವ ಎಂ. ವೆಂಕಟಕೃಷ್ಣಯ್ಯನವರು ಪ್ರತಿಭಾವಂತ ಯುವಕರಿಗೆ ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿ ಸೌಲಭ್ಯಗಳನ್ನು ಅವರ ಪತ್ರಿಕಾ ಕಛೇರಿಯಲ್ಲೇ ಒದಗಿಸಿದರು. 1921ರಲ್ಲಿ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಆರಂಭಿಸಲು ಎರಡು ಸಾವಿರ ರೂಪಾಯಿಗಳನ್ನು ದಾನವಾಗಿ ನೀಡಿದ್ದರು. ಆದರೆ ಸುಮಾರು 30 ವರ್ಷಗಳ ನಂತರ (1951) ಮೈಸೂರಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಪತ್ರಿಕೋದ್ಯಮ ಪದವಿ ಮಟ್ಟದ ಶಿಕ್ಷಣ ಸೇವೆಯನ್ನು ಹೆಸರಾಂತ ಪತ್ರಿಕೋದ್ಯಮ ಶಿಕ್ಷಣತಜ್ಞ ದಿ.ನಾಡಿಗ ಕೃಷ್ಣಮೂರ್ತಿಯವರ ಸಾರಥ್ಯದಲ್ಲಿ ಪ್ರಾರಂಭಿಸಲಾಯಿತು. ಅಂದು ಸಾಧ್ವಿ ಪತ್ರಿಕೆಯ ಸಂಪಾದಕರಾಗಿದ್ದ ಅಗರಂ ರಂಗಯ್ಯ ಮದ್ರಾಸಿನಲ್ಲಿ ಪತ್ರಿಕೋದ್ಯಮ ಶಿಕ್ಷಣದಲ್ಲಿ ಪದವಿಗಳಿಸಿದ ಮೊಟ್ಟಮೊದಲ ಕನ್ನಡಿಗರೆಂಬ ಹೆಗ್ಗಳಿಕೆ ಹೊಂದಿದ್ದರು. ಅವರು ಪತ್ರಿಕೋದ್ಯಮ ಶಿಕ್ಷಣದ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಯುವಪೀಳಿಗೆಗೆ ತಮ್ಮ ಪತ್ರಿಕಾಲಯದಲ್ಲೇ ವೃತ್ತಿಪರ ತರಬೇತಿ ನೀಡಿದರು.

1952ರಲ್ಲಿ ನಾಗಪುರದ ಹಿಸ್ಲೋಪ್ ಕಾಲೇಜಿನಲ್ಲಿ ಹೆಸರಾಂತ ಅಮೇರಿಕಾದ ಪತ್ರಿಕೋದ್ಯಮ ಶಿಕ್ಷಕರಾದ ರೋಲ್ಯಾಂಡ್ ಇ.ವೂಲ್‌ಸ್ಲೆ, ಇ.ಎವರ್ಟ್ ಫ್ಲಾಯ್ಡ್ ಬಾಸ್ಕೆಟ್ ಮತ್ತು ವಿಲಿಯಂ ಎ. ಡಡ್ಡಿರವರ ಕ್ರಿಯಾಶೀಲ ಸಹಭಾಗಿತ್ವದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಇದೇ ಸಂಸ್ಥೆಯಲ್ಲಿ ಹಿರಿಯ ಪತ್ರಿಕೋದ್ಯಮ ಪ್ರಾಧ್ಯಾಪಕ ದಿ.ಕೆ.ಇ. ಈಪನ್‌ರವರು ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದರು. ಪ್ರೊ. ಸಿಂಗ್‌ರವರು ನಾಡಿಗ ಕೃಷ್ಣಮೂರ್ತಿಯವರ ಜೊತೆಗೂಡಿ ಭಾರತೀಯ ಪತ್ರಿಕೋದ್ಯಮ ಶಿಕ್ಷಣಕ್ಕೆ ಭದ್ರ ಬುನಾದಿ ಒದಗಿಸಿದರು. 1961ರಲ್ಲಿ ಮುಂಬಯಿ ನಗರದಲ್ಲಿ ಭಾರತೀಯ ವಿದ್ಯಾಭವನ ಸಂಸ್ಥೆ ಪತ್ರಿಕೋದ್ಯಮ ಶಿಕ್ಷಣವನ್ನು ವ್ಯವಸ್ಥಿತವಾಗಿ ಪ್ರಾರಂಭಿಸಿತು. ಈ ಸಂಸ್ಥೆಯನ್ನು ಇಂದಿಗೂ ಸಹ ರಾಜೇಂದ್ರ ಪ್ರಸಾದ್ ಇನ್‌ಸ್ಟಿಟ್ಯೂಟ್ ಆಫ್ ಮೇನೇಜ್‌ಮೆಂಟ್ ಎಂದು ಕರೆಯಲಾಗುತ್ತಿದೆ. ನ್ಯಾಯಮೂರ್ತಿ ರಾಜ್ಯಾಧ್ಯಕ್ಷ ನೇತೃತ್ವದ ಭಾರತದ ಮೊಟ್ಟಮೊದಲ ಪತ್ರಿಕಾ ಆಯೋಗ (1952–54) ಭಾರತದಲ್ಲಿ ತರಬೇತಿ ಹೊಂದಿದ ಪತ್ರಕರ್ತರ ಅವಶ್ಯಕತೆಯನ್ನು ತನ್ನ ಶಿಫಾರಸಿನಲ್ಲಿ ಪ್ರಧಾನವಾಗಿ ಮಂಡಿಸಿತು. ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ನವದೆಹಲಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಹೆಸರಾಂತ ಪತ್ರಕರ್ತ ಚಂಚಲ ಸರ್ಕಾರ್ ಈ ಸಂಸ್ಥೆಯ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿರುವುದು ವಿಶೇಷ ಸಂಗತಿಯಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಅರ್ಥಪೂರ್ಣ ಸೈದ್ಧಾಂತಿಕ ಭೂಮಿಕೆಯನ್ನು ಸಿದ್ಧಪಡಿಸಿದವರಲ್ಲಿ ಪ್ರೊ. ಕಾಟ್ಜ್‌ರವರು ಪ್ರಮುಖರು. 1965ರಲ್ಲಿ ಫೋರ್ಡ್ ಫೌಂಡೇಶನ್ ಸಂಸ್ಥೆಯ ವತಿಯಿಂದ ಅಂತರರಾಷ್ಟ್ರೀಯ ಖ್ಯಾತಿಯ ಸಂವಹನ ತಜ್ಞ ವಿಲ್‌ಬರ್ ಶ್ರಾಮ್ ನೇತೃತ್ವದ ಅಧ್ಯಯನ ಸಮಿತಿ ಭಾರತ ಸರ್ಕಾರಕ್ಕೆ ವಾರ್ತಾ ಮತ್ತು ಪ್ರಸಾರ ಇಲಾಖೆ ಹಾಗೂ ಮಾಧ್ಯಮ ವೃತ್ತಿಪರರಿಗೆ ರಾಷ್ಟ್ರಮಟ್ಟದ ತರಬೇತಿ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಸಲಹೆ ನೀಡಿತು. ಅದರಂತೆ 1965ರಲ್ಲಿ ಭಾರತದ ರಾಜಧಾನಿ ದೆಹಲಿಯಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಯುನೆಸ್ಕೊ ಸಂಸ್ಥೆ ಪತ್ರಿಕಾ ಶಿಕ್ಷಣಕ್ಕೆ ಮನ್ನಣೆ ನೀಡಿ ಅನೇಕ ಉಪಯುಕ್ತ ಗ್ರಂಥಗಳು ಮತ್ತು ವರದಿಗಳನ್ನು ಪ್ರಕಟಿಸಿತೆಂದು ದಿ. ನಾಡಿಗ ಕೃಷ್ಣಮೂರ್ತಿ (1981) ದಾಖಲಿಸಿದ್ದಾರೆ.

## ಭಾರತದಲ್ಲಿ ಪತ್ರಿಕೋದ್ಯಮ ಶಿಕ್ಷಣದ ಬೆಳವಣಿಗೆ

1970ರ ದಶಕದಲ್ಲಿ ಪೂನಾ, ಕೇರಳ, ಕಲ್ಲಿಕೋಟೆ, ಗೌಹಾಟಿ ಮತ್ತು ಬರ್ಹಾಂಪುರ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಯಿತು. ಕರ್ನಾಟಕದ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಗಳು ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ಸೌಲಭ್ಯಗಳನ್ನು ಯುವಪೀಳಿಗೆಗೆ ಒದಗಿಸಿದವು. 1960–80ರ ಅವಧಿಯಲ್ಲಿ ಸುಮಾರು 20ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳು ಪತ್ರಿಕೋದ್ಯಮ ಶಿಕ್ಷಣದ ಮುಖಾಂತರ ದೇಶದ ಮಾಧ್ಯಮ ಸಂಸ್ಥೆಗಳಿಗೆ ಸುಶಿಕ್ಷಿತ ವೃತ್ತಿಪರರನ್ನು ಒದಗಿಸಿದವೆಂದು ಪ್ರೊ. ಉಷಾರಾಣಿ (1988) ತಿಳಿಸುತ್ತಾರೆ.

1980ರ ದಶಕದಲ್ಲಿ ಭಾರತೀಯ ಪತ್ರಿಕೋದ್ಯಮ ಹಾಗೂ ಪತ್ರಿಕೋದ್ಯಮ ಶಿಕ್ಷಣ ಕ್ಷೇತ್ರಗಳಲ್ಲಿ ಗಣನೀಯ ಸುಧಾರಣೆ ಮತ್ತು ಬೆಳವಣಿಗೆಗಳು ಕಂಡುಬಂದವು. ದೆಹಲಿಯಲ್ಲಿ ಜಾಮಿಯ ಮಿಲಿಯ ಇಸ್ಲಾಮಿಯಾ ಎಂಬ ಕೇಂದ್ರ ವಿಶ್ವವಿದ್ಯಾಲಯದಲ್ಲಿ ಸಮೂಹ ಮಾಧ್ಯಮ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ಕಾರ್ಯಗಳನ್ನು ವೈಜ್ಞಾನಿಕವಾಗಿ ಪ್ರಾರಂಭಿಸಲಾಯಿತು. ಅನೇಕ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣವನ್ನು ಒದಗಿಸಿದವು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1971ರಲ್ಲಿ ದಿ.ನಾಡಿಗ್ ಕೃಷ್ಣಮೂರ್ತಿಯವರ ಸಾರಥ್ಯದಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣವನ್ನು ಪ್ರಾರಂಭಿಸಲಾಯಿತು. 1979ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಸದಾಶಿವನ್‌ರ ನೇತೃತ್ವದಲ್ಲಿ ಪತ್ರಿಕೋದ್ಯಮ ಮತ್ತು ಸಂಪರ್ಕ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಆರಂಭಿಸಲಾಯಿತು.

1964–84 ಅವಧಿಯಲ್ಲಿ ಭಾರತದಲ್ಲಿ ಸುಮಾರು 23 ವಿಶ್ವವಿದ್ಯಾನಿಲಯಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ಸೇವಾ ಸೌಲಭ್ಯಗಳನ್ನು ಒದಗಿಸಿದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ– ಪಾಟಿಯಾಲದ ಪಂಜಾಬ್ ವಿಶ್ವವಿದ್ಯಾನಿಲಯ, ಮಧುರೈನ ಕಾಮರಾಜ್ ವಿಶ್ವವಿದ್ಯಾನಿಲಯ, ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾನಿಲಯ, ಪುಣೆ ವಿಶ್ವವಿದ್ಯಾನಿಲಯ, ಗೌಹಾಟಿಯ ಅಸ್ಸಾಂ ವಿಶ್ವವಿದ್ಯಾನಿಲಯ, ಇಂದೂರಿನ ದೇವಿ ಅಹಲ್ಯ ವಿಶ್ವವಿದ್ಯಾನಿಲಯ, ಲೂಧಿಯಾನದ ಕೃಷಿ ವಿಶ್ವವಿದ್ಯಾನಿಲಯ, ರಾಯಪುರದ ರವಿಶಂಕರ್ ವಿಶ್ವವಿದ್ಯಾನಿಲಯ, ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾನಿಲಯ, ಬನಾರಸ್ಸಿನ ಹಿಂದೂ ವಿಶ್ವವಿದ್ಯಾನಿಲಯ, ಅಲಿಘಡದ ಕೇಂದ್ರ ಮುಸ್ಲಿಂ ವಿಶ್ವವಿದ್ಯಾನಿಲಯ, ರಾಜಕೋಟದ ಸೌರಾಷ್ಟ್ರ ವಿಶ್ವವಿದ್ಯಾನಿಲಯ, ಒರಿಸ್ಸಾದ ಬರ್ಹಾಂಪುರ ವಿಶ್ವವಿದ್ಯಾನಿಲಯ, ಶ್ರೀನಗರ ವಿಶ್ವವಿದ್ಯಾನಿಲಯ, ಜೈಪುರ ವಿಶ್ವವಿದ್ಯಾನಿಲಯ, ಧಾರವಾಡದ ಕರ್ನಾಟಕದ ವಿಶ್ವವಿದ್ಯಾನಿಲಯ,

Digitised by Bharatavani, CIIL

ಅಲಹಾಬಾದ್ ವಿಶ್ವವಿದ್ಯಾನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಇತ್ಯಾದಿ ವಿಶ್ವವಿದ್ಯಾನಿಲಯಗಳಲ್ಲಿ ಡಿಪ್ಲೊಮ, ಪದವಿ, ಸ್ನಾತಕೋತ್ತರ ಪದವಿ, ಎಂ.ಫಿಲ್ ಹಾಗೂ ಪಿಎಚ್.ಡಿ. ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ಸೇವಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಅನೇಕ ವಿಶ್ವವಿದ್ಯಾನಿಲಯಗಳು ದೂರಶಿಕ್ಷಣ ವ್ಯವಸ್ಥೆಯ ಮೂಲಕ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ವಿಷಯಗಳಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣ ಸೇವಾ ಸೌಲಭ್ಯಗಳನ್ನು ಒದಗಿಸುತ್ತಿವೆ. ಜೈಪುರದ ರಾಜಾಸ್ತಾನ್ ವಿಶ್ವವಿದ್ಯಾನಿಲಯ, ಹೈದರಾಬಾದಿನ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೊದಲಾದವು ದೂರಶಿಕ್ಷಣ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ನೀಡಿ ಪಾರಂಪರಿಕ ವಿಶ್ವವಿದ್ಯಾನಿಲಯಗಳಿಗೆ ತೀವ್ರ ಪೈಪೋಟಿ ನೀಡುತ್ತಿವೆ.

1984ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಇಡೀ ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಏಕರೂಪದ ಪಠ್ಯಕ್ರಮ, ತರಬೇತಿ ಸೌಲಭ್ಯಗಳು ಮತ್ತು ಸಂಶೋಧನಾ ಕಾರ್ಯಚಟುವಟಿಕೆಗಳು ಬೇಕೆಂದು ಸಲಹೆ ನೀಡಿತು. ಬಹಳಷ್ಟು ವಿಶ್ವವಿದ್ಯಾನಿಲಯಗಳು ಪಠ್ಯಕ್ರಮದಲ್ಲಿ ಏಕರೂಪತೆಯನ್ನು ಕಾಯ್ದುಕೊಂಡು ಬಂದಿವೆ. ಬಹಳಷ್ಟು ವಿಮರ್ಶಕರು ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಲ್ಲಿ ಪತ್ರಿಕೋದ್ಯಮವನ್ನು ಬೋಧಿಸುವ ಶಿಕ್ಷಕರ ಕೊರತೆ ಇದೆಯೆಂದು ಅಭಿಪ್ರಾಯಪಟ್ಟಿದ್ದಾರೆ.

**ಸಮಕಾಲೀನ ಮಾಧ್ಯಮ ಶಿಕ್ಷಣ**

21ನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ಸುಮಾರು 70ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳು, 30 ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು 100ಕ್ಕೂ ಹೆಚ್ಚು ಖಾಸಗಿ ಸಂಸ್ಥೆಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಶಿಕ್ಷಣ ಸೇವೆಗಳನ್ನು ಒದಗಿಸುತ್ತಿವೆ. ಪ್ರತಿವರ್ಷ ಸುಮಾರು 6000ಕ್ಕೂ ಹೆಚ್ಚು ಮಾಧ್ಯಮ ಶಿಕ್ಷಣ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರನ್ನು ಭಾರತದಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳು ತರಬೇತಿಗೊಳಿಸುತ್ತಿವೆ.

ಭಾರತದ ಮಾಧ್ಯಮ ಶಿಕ್ಷಣವು ಮಾಧ್ಯಮ ಸಂಸ್ಥೆಗಳ ಸ್ವರೂಪ, ಕಾರ್ಯಾಚರಣೆ ಮತ್ತು ಬೇಡಿಕೆಗಳಿಗೆ ಅನುಸಾರವಾಗಿ ಲಭಿಸುತ್ತಿರುವುದು ವಿಶೇಷ ಸಂಗತಿಯಾಗಿದೆ. ಇಡೀ ದೇಶದಲ್ಲಿ ಏಕರೂಪ ಮಾಧ್ಯಮ ಶಿಕ್ಷಣ ದೊರೆಯುತ್ತಿದ್ದು ಏಷ್ಯಾಖಂಡದಲ್ಲೇ ಭಾರತ ಅತ್ಯಧಿಕ ಪ್ರಮಾಣದಲ್ಲಿ ಮಾಧ್ಯಮ ವೃತ್ತಿಪರರನ್ನು ರೂಪಿಸುವ ರಾಷ್ಟ್ರವಾಗಿ ಬೆಳೆದಿದೆ.

ಸಂವಹನ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉಂಟಾಗಿರುವ ಕ್ರಾಂತಿಕಾರಕ ಬದಲಾವಣೆಗಳಿಂದ ಸಂವಹನ ಮತ್ತು ಪತ್ರಿಕೋದ್ಯಮ ಸೇವಾ ಸೌಲಭ್ಯಗಳ ಕ್ರಾಂತಿಕಾರಕ ವಿಸ್ತರಣೆ ಮತ್ತು ಅಭಿವೃದ್ಧಿ ಸಾಧ್ಯವಾಯಿತು. ಆಧುನಿಕ ಸಮಾಜವನ್ನು 'ಮಾಹಿತಿ ಸಮಾಜ'ವೆಂದೂ, ಪತ್ರಿಕೋದ್ಯಮ ಶಿಕ್ಷಣವನ್ನು 'ಮಾಧ್ಯಮ ಶಿಕ್ಷಣ'ವೆಂದೂ ಬಣ್ಣಿಸಲಾಗಿದೆ. ನೂತನ ಸಂವಹನ ತಂತ್ರಜ್ಞಾನಗಳಲ್ಲಿ ಉಂಟಾಗಿರುವ ಗಣನೀಯ ಪ್ರಗತಿಯಿಂದಾಗಿ ವಿದ್ಯುನ್ಮಾನ ಮಾಧ್ಯಮ ಕೇಂದ್ರಿತ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ಸೇವಾ ಸೌಲಭ್ಯಗಳು ಇಂದು ದೇಶದ ಎಲ್ಲೆಡೆ ಲಭಿಸುತ್ತಿವೆ. ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಪದವೀಧರರನ್ನು ಮತ್ತು ಸ್ನಾತಕೋತ್ತರ ಪದವೀಧರರನ್ನು ವಿವಿಧ ಹುದ್ದೆಗಳಿಗೆ ನೇಮಿಸಿಕೊಂಡು ತಮ್ಮ ಕಾರ್ಯವ್ಯಾಪ್ತಿ, ಪ್ರಭಾವ ಮತ್ತು ಸ್ಥಾನಮಾನಗಳನ್ನು ವಿಸ್ತರಿಸಿಕೊಳ್ಳುತ್ತಿವೆ.

ಆಧುನಿಕ ಸಮಾಜದಲ್ಲಿ ಪತ್ರಿಕೋದ್ಯಮ ಒಂದು ಬೃಹತ್ ಉದ್ದಿಮೆಯಾಗಿ ಬೆಳೆದಿದೆ. ಸುಮಾರು 14,000 ಕೋಟಿ ರೂಪಾಯಿಗಳನ್ನು ಭಾರತೀಯ ಪತ್ರಿಕೋದ್ಯಮದಲ್ಲಿ ತೊಡಗಿಸಲಾಗಿದೆಯೆಂದು ಅಂದಾಜು ಮಾಡಲಾಗಿದೆ. ಭಾರತದಲ್ಲಿ ಸುಮಾರು 62,483 ಪತ್ರಿಕೆಗಳು ಪ್ರಕಟಗೊಳ್ಳುತ್ತಿವೆ. ಭಾಷಾ ಪತ್ರಿಕೆಗಳು ಆಂಗ್ಲ ಭಾಷಾ ಪತ್ರಿಕೆಗಳಿಗಿಂತ ಹೆಚ್ಚಿನ ಪ್ರಸಾರ ಹೊಂದಿವೆ. ಇವುಗಳಲ್ಲದೆ ಸುಮಾರು 5,500 ನಿಯತಕಾಲಿಕೆಗಳು ಹಿಂದಿ, ಇಂಗ್ಲಿಷ್ ಮತ್ತು ಪ್ರಾಂತೀಯ ಭಾಷೆಗಳಲ್ಲಿ ಪ್ರಕಟಗೊಳ್ಳುತ್ತಿವೆ. ವಿಶೇಷ ನಿಯತಕಾಲಿಕೆಗಳು ಸಹ ವಿಭಿನ್ನ ಓದುಗ ವರ್ಗವನ್ನು ಪರಿಣಾಮಕಾರಿಯಾಗಿ ತಲುಪುತ್ತಿವೆ. ಇಂದಿನ ಇಂಟರ್‌ನೆಟ್ ಯುಗದಲ್ಲಿಯೂ ಭಾರತದಲ್ಲಿ ಪತ್ರಿಕಾ ಪ್ರಸಾರ ಗಣನೀಯವಾಗಿ ಹೆಚ್ಚುತ್ತಿದೆ. ಅವುಗಳಲ್ಲಿ 2130 ದಿನಪತ್ರಿಕೆಗಳು ಮತ್ತು 942 ಭಾಷಾ ದಿನಪತ್ರಿಕೆಗಳಿವೆ. ಬಹಳಷ್ಟು ಪತ್ರಿಕೆಗಳು ಸಣ್ಣ ಪತ್ರಿಕೆಗಳಾಗಿವೆ.

ಭಾರತವು ವಿಶ್ವದಲ್ಲೇ ಅತ್ಯಂತ ಬೃಹತ್ ಪ್ರಮಾಣದ ಬಾನುಲಿ ಜಾಲವನ್ನು ಹೊಂದಿದ್ದು ಆಕಾಶವಾಣಿ ಮತ್ತು ಇತರ ಖಾಸಗಿ ಬಾನುಲಿ ಕೇಂದ್ರಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಕೇಂದ್ರಗಳ ಮುಖಾಂತರ ಅತ್ಯಧಿಕ ಸಂಖ್ಯೆಯ ಜನರನ್ನು ತಲುಪುತ್ತಿವೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಬಾನುಲಿ ಸೇವೆ ಶೇ. 95ರಷ್ಟು ಭೌಗೋಳಿಕ ಪ್ರದೇಶ ಮತ್ತು ಶೇ. 98ರಷ್ಟು ಜನಸಂಖ್ಯೆಯನ್ನು ತಲುಪುತ್ತಿದೆ. ಭಾರತವು ವಿಶ್ವದಲ್ಲೇ ಎರಡನೇ ಬೃಹತ್ ದೂರದರ್ಶನ ಜಾಲವನ್ನು ಹೊಂದಿರುವ ದೇಶವೆಂಬ ಹೆಗ್ಗಳಿಕೆ ಹೊಂದಿದೆ. ದೂರದರ್ಶನ ಸೇವೆ ದೇಶದ ಶೇ. 75ರಷ್ಟು ಭೌಗೋಳಿಕ ಪ್ರದೇಶ ಮತ್ತು ಶೇ. 85ರಷ್ಟು ಜನಸಂಖ್ಯೆಯನ್ನು ಸುಮಾರು 22ಕ್ಕೂ ಹೆಚ್ಚು ದೂರದರ್ಶನ ಕೇಂದ್ರಗಳ ಮೂಲಕ ತಲುಪುತ್ತಿದೆಯೆಂದು ಇತ್ತೀಚಿನ ಅಂಕಿಅಂಶ ತಿಳಿಸುತ್ತದೆ. ಭಾರತವು ಜಗತ್ತಿನಲ್ಲೇ ಅತ್ಯಧಿಕ ಸಂಖ್ಯೆಯ ಸುದ್ದಿ ಚಿತ್ರ, ಸಾಕ್ಷ್ಯ ಚಿತ್ರ ಮತ್ತು ಚಲನಚಿತ್ರಗಳನ್ನು ನಿರ್ಮಿಸುವ ದೇಶವೆಂಬ ಖ್ಯಾತಿಯನ್ನು ಹೊಂದಿದೆ. ನೂತನ ಸಂವಹನ ತಂತ್ರಗಳಾದ ದೂರಸಂಪರ್ಕ ಸಂವಹನ, ಉಪಗ್ರಹ ಸಂವಹನ ಮತ್ತು ಗಣಕ ಯಂತ್ರ ಸಂವಹನಗಳಲ್ಲಿ ಭಾರತವು ಜಗತ್ತಿನ ಮುಂಚೂಣಿ ರಾಷ್ಟ್ರಗಳಲ್ಲೊಂದಾಗಿದೆ. ಆಧುನಿಕ ಸಮಾಜದಲ್ಲಿ ಭಾರತದ ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು ಸೇವಾ ಸೌಲಭ್ಯಗಳು ವಿಶ್ವದಲ್ಲಿ ಮನ್ನಣೆ ಗಳಿಸಿವೆ. ಭಾರತೀಯ ಪತ್ರಿಕೋದ್ಯಮ ಅರ್ಥಪೂರ್ಣವಾಗಿ ಬೆಳೆದು ಜಾಗತಿಕ ಮನ್ನಣೆ ಗಳಿಸುವಲ್ಲಿ ಪತ್ರಿಕೋದ್ಯಮ ಶಿಕ್ಷಣ ನಿರ್ಣಾಯಕ ಪಾತ್ರವಹಿಸಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಭಾರತೀಯ ಪತ್ರಿಕೋದ್ಯಮ ಶಿಕ್ಷಣ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಭಾರತದ ಮಾಧ್ಯಮ ಮತ್ತು ಮನರಂಜನೆ ಉದ್ಯಮ ಕ್ಷೇತ್ರಗಳಲ್ಲಿ 200 ಬಿಲಿಯನ್ ಡಾಲರ್ಸ್ ಹೂಡಿಕೆ ಮಾಡಲಾಗಿದೆ.

ಆಧುನಿಕ ಸಮಾಜದಲ್ಲಿ ಮುದ್ರಣ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ, ನೂತನ ಸಂವಹನ ತಂತ್ರಜ್ಞಾನಗಳು, ಜಾಹೀರಾತು, ಸಾರ್ವಜನಿಕ ಸಂಪರ್ಕ, ಮಾಧ್ಯಮ ಕಾನೂನುಗಳು, ಮಾಧ್ಯಮ ನಿರ್ವಹಣೆ, ಛಾಯಾಚಿತ್ರ ಪತ್ರಿಕೋದ್ಯಮ, ಹವ್ಯಾಸಿ ಪತ್ರಿಕೋದ್ಯಮ, ಮಾಧ್ಯಮ ಬರವಣಿಗೆ, ಮಾಧ್ಯಮ ಸಂಶೋಧನೆ, ಮಾಧ್ಯಮ ಸಿದ್ಧಾಂತ ಇವೇ ಮೊದಲಾದ ವಿಷಯಗಳನ್ನು ಕುರಿತು ಪದವಿ ಮತ್ತು ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಸುಧಾರಿತ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಪರಿಣತ ಶಿಕ್ಷಕರನ್ನು

Digitised by Bharatavani, CIIL

ನೇಮಿಸಿಕೊಳ್ಳಲು ಅವಶ್ಯಕ ಸೌಲಭ್ಯಗಳನ್ನು ಒದಗಿಸುತ್ತಿದೆ. ವಿವಿಧ ವಿಭಾಗಗಳಲ್ಲಿ ಬಾನುಲಿ ಮತ್ತು ದೂರದರ್ಶನ ಪ್ರಯೋಗಶಾಲೆ, ಸುಸಜ್ಜಿತ ತರಗತಿ, ಗಣಕಯಂತ್ರ ಪ್ರಯೋಗಶಾಲೆ, ಛಾಯಚಿತ್ರ ಪತ್ರಿಕೋದ್ಯಮ ವ್ಯವಸ್ಥೆ, ಗ್ರಂಥಾಲಯ ಮೊದಲಾದ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಧನಸಹಾಯ ಆಯೋಗ ಆರ್ಥಿಕ ನೆರವು ನೀಡುತ್ತದೆ. ಬಹಳಷ್ಟು ವಿಶ್ವವಿದ್ಯಾನಿಲಯಗಳಲ್ಲಿ ಸ್ವಸಹಾಯ ವ್ಯವಸ್ಥೆಯ ಮೂಲಕ ವಿವಿಧ ರಾಜ್ಯಗಳು ಮತ್ತು ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಮತ್ತು ತರಬೇತಿ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಿದೆ.

ಮಾಧ್ಯಮ ಕ್ಷೇತ್ರದ ವಿವಿಧ ಪರಿಣತರನ್ನು ನೇಮಿಸಿಕೊಂಡು ವಿದ್ಯಾರ್ಥಿಗಳಿಗೆ ಸುಧಾರಿತ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ಸೇವೆ ಒದಗಿಸಲು ಇಂದು ಸಾಧ್ಯವಾಗಿದೆ. ಮಾಧ್ಯಮ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ಪತ್ರಿಕೋದ್ಯಮ ವಿಭಾಗಗಳ ನಡುವೆ ಅರ್ಥಪೂರ್ಣ ಸಹಕಾರ ಮತ್ತು ಸಂಯೋಜನೆ ಸೌಲಭ್ಯಗಳಿಗೆ ಇಂದು ಹೆಚ್ಚಿನ ಮಹತ್ವ ನೀಡಲಾಗಿದೆ. ಮಾಧ್ಯಮ ಕ್ಷೇತ್ರಗಳಿಗೆ ಪರಿಣತರನ್ನು ಒದಗಿಸುವ, ಉತ್ತಮ ಮಾನವ ಸಂಪನ್ಮೂಲಗಳನ್ನು ಒದಗಿಸುವ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯಗಳು ಹೊಂದಿವೆ. ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಮಾಧ್ಯಮ ಸಂಸ್ಥೆಗಳು ನೇರವಾಗಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಓದುತ್ತಿರುವಾಗಲೇ ವಿದ್ಯಾರ್ಥಿಗಳು ಮಾಧ್ಯಮ ಸಂಸ್ಥೆಗಳಲ್ಲಿ ವೃತ್ತಿಪರ ತರಬೇತಿ ಪಡೆಯುವ ಸೌಲಭ್ಯವನ್ನೂ ಕಲ್ಪಿಸಲಾಗಿದೆ.

ಭಾರತೀಯ ಪತ್ರಿಕೋದ್ಯಮ ಶಿಕ್ಷಣ ಕ್ಷೇತ್ರದಲ್ಲಿ ಪ್ರಸ್ತುತ ಲಭಿಸುತ್ತಿರುವ ಪದವಿಗಳು ಮತ್ತು ವಸ್ತುಸ್ಥಿತಿಯನ್ನು ಪ್ರದ್ಯುಮಾನ್ ಮಹೇಶ್ವರಿ (2009) ಹೀಗೆ ತಿಳಿಸುತ್ತಾರೆ. 1) "ಡಿಪ್ಲೊಮಾ ಇನ್ ಜರ್ನಲಿಸಮ್ ಅಂಡ್ ಮಾಸ್ ಕಮ್ಯುನಿಕೇಷನ್, 2) ಡಿಪ್ಲೊಮಾ ಇನ್ ಪ್ರಿಂಟಿಂಗ್ ಟೆಕ್ನಾಲಜಿ, 3) ಡಿಪ್ಲೊಮಾ ಇನ್ ವೀಡಿಯೋ ಪ್ರೊಡಕ್ಷನ್, 4) ಡಿಪ್ಲೊಮಾ ಇನ್ ಫಿಲಂ ಅಪ್ರಿಸಿಯೇಷನ್, 5) ಡಿಪ್ಲೊಮಾ ಇನ್ ಅಡ್ವರ್ಟೈಸಿಂಗ್ ಅಂಡ್ ಪಬ್ಲಿಕ್ ರಿಲೇಷನ್ಸ್, 6) ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಜರ್ನಲಿಸಮ್ ಅಂಡ್ ಮಾಸ್ ಕಮ್ಯುನಿಕೇಷನ್, 7) ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಅಡ್ವರ್ಟೈಸಿಂಗ್ ಅಂಡ್ ಪಬ್ಲಿಕ್ ರಿಲೇಷನ್ಸ್, 8) ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ವೀಡಿಯೋ ಪ್ರೊಡಕ್ಷನ್, 9) ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಡೆವಲಪ್‌ಮೆಂಟ್ ಕಮ್ಯುನಿಕೇಷನ್, 10) ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಕಾರ್ಪೊರೇಟ್ ಕಮ್ಯುನಿಕೇಷನ್, 11) ಮಾಸ್ಟರ್ ಆಫ್ ಆರ್ಟ್ಸ್ ಇನ್ ಮಾಸ್ ಕಮ್ಯೂನಿಕೇಷನ್ ಅಂಡ್ ಜರ್ನಲಿಸಮ್, 12) ಮಾಸ್ಟರ್ ಆಫ್ ಸೈನ್ಸ್ ಇನ್ ಕಮ್ಯುನಿಕೇಷನ್, 13) ಮಾಸ್ಟರ್ ಆಫ್ ಅಡ್ವರ್ಟೈಸಿಂಗ್ ಅಂಡ್ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್, 14) ಮಾಸ್ಟರ್ ಆಫ್ ಫಿಲಾಸಪಿ ಇನ್ ಜರ್ನಲಿಸಮ್ ಅಂಡ್ ಮಾಸ್ ಕಮ್ಯುನಿಕೇಷನ್ ಮತ್ತು 15) ಡಾಕ್ಟರೇಟ್ ಆಫ್ ಫಿಲಾಸಫಿ ಇನ್ ಜರ್ನಲಿಸಮ್ ಅಂಡ್ ಮಾಸ್ ಕಮ್ಯುನಿಕೇಷನ್ ಇತ್ಯಾದಿ. ಪತ್ರಿಕೋದ್ಯಮ ಶಿಕ್ಷಣ ಅವಧಿ, ಪತ್ರಿಕೋದ್ಯಮ ಶಿಕ್ಷಣ ವಿಷಯಗಳು, ಪತ್ರಿಕೋದ್ಯಮ ಶಿಕ್ಷಣ ಕೌಶಲ್ಯವೃದ್ಧಿ, ಪ್ರಮುಖ ಮಾಧ್ಯಮ ಸಂಸ್ಥೆಗಳು ಮತ್ತು ವ್ಯವಹಾರಗಳ ಬಗ್ಗೆ ಅರಿವು ಮತ್ತು ಪೂರ್ಣಕಾಲಿಕ ಸಮರ್ಥ ಬೋಧನಾ ಸಿಬ್ಬಂದಿ ವಿಚಾರಗಳಲ್ಲಿ ಭಾರತೀಯ ಪತ್ರಿಕೋದ್ಯಮ ಶಿಕ್ಷಣ ಹಿಂದೆ ಬಿದ್ದಿದೆ.

### ಭಾರತದಲ್ಲಿ ಮಾಧ್ಯಮ ಶಿಕ್ಷಣ ಸವಾಲುಗಳು

ಪ್ರೈಸ್ ವಾಟರ್‌ಹೌಸ್ ಕೂಪರ್ಸ್ ಸಂಸ್ಥೆ (2010) ವರದಿ ಮಾಡಿರುವ ಹಾಗೆ ಭಾರತದಲ್ಲಿ ಇನ್ನು 5 ವರ್ಷಗಳಲ್ಲಿ ಮಾಧ್ಯಮ ಕ್ಷೇತ್ರ ಸುಮಾರು 40 ಸಾವಿರ ಕೋಟಿಗೂ ಹೆಚ್ಚು ಬಂಡವಾಳವನ್ನು ತೊಡಗಿಸಿ ಅಸಂಖ್ಯಾತ ಮಂದಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸಿ ರಾಷ್ಟ್ರೀಯ ಅಭಿವೃದ್ಧಿಗೆ ನಿರ್ಣಾಯಕ ಕೊಡುಗೆ ನೀಡಬಲ್ಲ ಸಾಮರ್ಥ್ಯ ಹೊಂದಿದೆ.

ಬಹಳಷ್ಟು ವಿಶ್ವವಿದ್ಯಾನಿಲಯಗಳಲ್ಲಿ ಮಾಧ್ಯಮ ಪಠ್ಯ ವಿಷಯಗಳನ್ನು ಸಮಕಾಲೀನ ಮಾಧ್ಯಮ ಸಂಸ್ಥೆಗಳ ಅಗತ್ಯಗಳಿಗನುಸಾರವಾಗಿ ನವೀಕರಣಗೊಳಿಸಿಲ್ಲವೆಂದು ಮಾಧ್ಯಮ ತಜ್ಞ ಜೆ.ಸಿ. ಅಗರ್‌ವಾಲ್ (2000) ಗುರುತಿಸಿದ್ದಾರೆ. ವಿವಿಧ ವಿಷಯಗಳಲ್ಲಿ ಪರಿಣತಿ ಹೊಂದಿರುವ ಶಿಕ್ಷಕರು ಮತ್ತು ತಂತ್ರಜ್ಞರನ್ನು ಬಹಳಷ್ಟು ವಿಶ್ವವಿದ್ಯಾನಿಲಯಗಳು ವಿವಿಧ ಕಾರಣಗಳಿಗಾಗಿ ಹೊಂದಿರುವುದಿಲ್ಲ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅವಶ್ಯಕವಾದ ಕೊಠಡಿಗಳ ಆಧುನೀಕರಣ, ಮುದ್ರಣ ತಂತ್ರಜ್ಞಾನ, ವಿದ್ಯುನ್ಮಾನ ತಂತ್ರಜ್ಞಾನ, ಗಣಕಯಂತ್ರ ತಂತ್ರಜ್ಞಾನ, ಮೊದಲಾದ ಮೂಲಭೂತ ಸೌಕರ್ಯಗಳಿಂದ ಬಹಳಷ್ಟು ವಿಶ್ವವಿದ್ಯಾನಿಲಯಗಳು ವಂಚಿತವಾಗಿವೆ. ಹೆಚ್ಚಿನ ಶಿಕ್ಷಕರಿಗೆ ವಿವಿಧ ವಿಷಯಗಳಲ್ಲಿ ಪರಿಣತಿ ಗಳಿಸುವ ಮತ್ತು ಕೌಶಲ್ಯ ವೃದ್ಧಿಗೊಳಿಸುವ ತರಬೇತಿ ಅವಕಾಶಗಳನ್ನು ವಿಶ್ವವಿದ್ಯಾನಿಲಯಗಳು ಅವಶ್ಯಕ ಪ್ರಮಾಣದಲ್ಲಿ ಕಲ್ಪಿಸಿಕೊಡುತ್ತಿಲ್ಲ. ವಿವಿಧ ದೇಶಗಳಿಗೆ ಭೇಟಿ ಕೊಟ್ಟು ವೃತ್ತಿಪರ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಪ್ರಸ್ತುತ ಲಭ್ಯವಿರುವ ಸ್ಕಾಲರ್‌ಷಿಪ್, ಫೆಲೋಶಿಪ್, ವಿನಿಮಯ ಕಾರ್ಯಕ್ರಮ ಮೊದಲಾದ ಸೌಲಭ್ಯಗಳು ಅಲ್ಪವೆಂದೇ ಹೇಳಬಹುದು.

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ 2001 ರಿಂದ ಸೆಮಿಸ್ಟರ್ ಪದ್ಧತಿಯನ್ನು ರೂಪಿಸಿ ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ವಿಶೇಷ ಆಯಾಮವನ್ನು ನೀಡಿದೆ. ಪ್ರೊ. ಎಂ.ಆರ್. ದುವಾರವರ ನೇತೃತ್ವದಲ್ಲಿ ಪಠ್ಯಕ್ರಮವನ್ನು ಆಧುನೀಕರಣಗೊಳಿಸುವ ಕೆಲಸವನ್ನು ಮಾಡಲಾಯಿತು. ಹಿಂದೆ ಮುದ್ರಣ ಮಾಧ್ಯಮ ಕೇಂದ್ರಿತ ಪತ್ರಿಕೋದ್ಯಮ ಶಿಕ್ಷಣವಷ್ಟೆ ದೇಶದಲ್ಲಿ ಪ್ರಧಾನವಾಗಿತ್ತು. ತದನಂತರ ವಿದ್ಯುನ್ಮಾನ ಮಾಧ್ಯಮ ಮತ್ತು ನೂತನ ಸಂವಹನ ತಂತ್ರಜ್ಞಾನಗಳನ್ನು ಕೇಂದ್ರೀಕರಿಸಿದ ಪತ್ರಿಕೋದ್ಯಮ ಶಿಕ್ಷಣವನ್ನು ಒದಗಿಸಲಾಯಿತೆಂದು ಪ್ರೊ. ವಿ.ಎಲ್. ಧಾರೂರ್‌ಕರ್ (2008) ತಿಳಿಸುತ್ತಾರೆ. ಮಾಧ್ಯಮ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಅವಶ್ಯಕ ತರಬೇತಿ ನೀಡಲು ಮುಂದೆ ಬಂದಿರುವುದು ಶ್ಲಾಘನೀಯ ಸಂಗತಿಯಾಗಿದೆ. ಆದರೆ ಮಾಧ್ಯಮ ಸಂಸ್ಥೆಗಳು ಮತ್ತು ಪತ್ರಿಕೋದ್ಯಮವನ್ನು ಬೋಧಿಸುವ ವಿಭಾಗಗಳ ನಡುವೆ ನಿರಂತರ ಸಂಪರ್ಕ, ಅನುಭವ ವಿನಿಮಯ, ಪ್ರಾಯೋಗಿಕ ತರಬೇತಿ, ಸಲಹಾ ಸೇವೆ ಮೊದಲಾದವುಗಳು ಇಲ್ಲದಿರುವುದು ಮಾಧ್ಯಮ ಶಿಕ್ಷಣದ ಬಹುದೊಡ್ಡ ಕೊರತೆಯಾಗಿದೆ. ಭಾರತದಲ್ಲಿ ಲಭಿಸುತ್ತಿರುವ ಮಾಧ್ಯಮ ಶಿಕ್ಷಣ ವೃತ್ತಿಪರ ಶ್ರೇಷ್ಠತೆ ಮತ್ತು ಗುಣಾತ್ಮಕ ದೃಷ್ಟಿಕೋನವನ್ನು ಗಳಿಸುವ ನಿಟ್ಟಿನಲ್ಲಿ ಬಹುದೂರ ಸಾಗಬೇಕಿದೆಯೆಂದು ಮಾಧ್ಯಮ ತಜ್ಞ ಕೇವಲ್ ಜೆ. ಕುಮಾರ್ (2007) ಅಭಿಪ್ರಾಯಪಟ್ಟಿದ್ದಾರೆ.

ತರಗತಿಗಳಲ್ಲಿ ವಿಶೇಷವಾಗಿ ಸೈದ್ಧಾಂತಿಕ ಅಂಶಗಳ ಚರ್ಚೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಆದರೆ ಯುವಪೀಳಿಗೆಯ ಮಾಧ್ಯಮ ವೃತ್ತಿಪರರನ್ನು ಅರ್ಥಪೂರ್ಣವಾಗಿ ಮಾಧ್ಯಮ ಸಂಸ್ಥೆಗಳಲ್ಲಿ ಪ್ರಾಯೋಗಿಕ ತರಬೇತಿ ಸೌಲಭ್ಯ ಗಳಿಸಲು ಅವಶ್ಯಕ ಪರಿಸರವನ್ನು ನಿರ್ಮಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯಗಳು ಮತ್ತು ಮಾಧ್ಯಮ ಸಂಸ್ಥೆಗಳು ವ್ಯಕ್ತಪಡಿಸಿರುವ ಕಾಳಜಿ ನಿರೀಕ್ಷಿತ ಪ್ರಮಾಣದಲ್ಲಿಲ್ಲ. ಬದಲಾಗುತ್ತಿರುವ ಮಾಧ್ಯಮ ಪರಿಸರ, ತಂತ್ರಜ್ಞಾನ, ಕಾರ್ಯಾಚರಣೆ ಮತ್ತು ಅವಶ್ಯಕತೆಗಳಿಗನುಸಾರವಾಗಿ ವಿದ್ಯಾರ್ಥಿಗಳನ್ನು ತಯಾರು ಮಾಡುವ ನಿಟ್ಟಿನಲ್ಲಿ ಕಾಳಜಿ ಮತ್ತು

Digitised by Bharatavani, CIIL

ಸಂಯೋಜನೆಯ ಕೊರತೆಗಳು ಬಹಳಷ್ಟಿವೆ. "ವಿಶ್ವವಿದ್ಯಾನಿಲಯಗಳು ಮತ್ತು ಮಾಧ್ಯಮ ಸಂಸ್ಥೆಗಳ ನಡುವೆ ನಿರಂತರ ಸಂಪರ್ಕ, ಸಹಕಾರ ಮತ್ತು ಅನುಭವ ವಿನಿಮಯ ಕಾರ್ಯಕ್ರಮಗಳಿಂದ ಭಾರತೀಯ ಪತ್ರಿಕೋದ್ಯಮ ಶಿಕ್ಷಣ ನಿಶ್ಚಿತವಾಗಿಯೂ ಪ್ರಗತಿಸಾಧಿಸಬಲ್ಲದೆಂದು" ಮೊಹಮ್ಮದ್ ಖೋಸ್ಲಾ (2008) ಸಲಹೆ ನೀಡಿದ್ದಾರೆ.

ರಾಷ್ಟ್ರೀಯ ಸಂಸ್ಥೆಗಳ ರೀತಿ ಇಂಡಿಯನ್ ಕೌನ್ಸಿಲ್ ಫಾರ್ ಮಾಸ್ ಕಮ್ಯೂನಿಕೇಷನ್ ಎಜುಕೇಷನ್ ಎಂಬ ರಾಷ್ಟ್ರಮಟ್ಟದ ಸಂಸ್ಥೆ ಮಾಧ್ಯಮ ಶಿಕ್ಷಣವನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ವ್ಯವಸ್ಥೆ ಭಾರತದಲ್ಲಿ ಅತ್ಯವಶ್ಯಕ.

ಬದಲಾಗುತ್ತಿರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳನ್ನು ಅರ್ಥಪೂರ್ಣವಾಗಿ ಅರ್ಥೈಸುವ ಮತ್ತು ನಿರ್ವಹಿಸುವ ಸಾಮರ್ಥ್ಯವುಳ್ಳ ಮಾಧ್ಯಮ ವೃತ್ತಿಪರರನ್ನು ತಯಾರಿಸುವ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳು ಹೊಂದಿವೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯಗಳ ನೀತಿನಿರೂಪಕರು, ಆಡಳಿತಗಾರರು, ಬೋಧಕರು ಮತ್ತು ಮಾಧ್ಯಮ ಸಿಬ್ಬಂದಿ ಗಂಭೀರವಾದ ಅವಲೋಕನ ನಡೆಸಿ ಸೂಕ್ತ ಕಾರ್ಯತಂತ್ರಗಳನ್ನು ರೂಪಿಸುವುದು ಸಮಕಾಲೀನ ಸಂದರ್ಭದಲ್ಲಿ ಅನಿವಾರ್ಯವಾಗಿದೆ.

"ಭಾರತೀಯ ಸಂದರ್ಭದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ವಕ್ತಾರರಂತೆ ಕರ್ತವ್ಯ ನಿರ್ವಹಿಸುವ ಮಾಧ್ಯಮ ಸಿಬ್ಬಂದಿಯನ್ನು ರೂಪಿಸುವುದಕ್ಕಿಂತ ಮಾಧ್ಯಮ ಸೇವಾಸೌಲಭ್ಯಗಳನ್ನು ವಿಮರ್ಶಾತ್ಮಕ ದೃಷ್ಟಿಕೋನದಿಂದ ಅಧ್ಯಯನ ನಡೆಸುವ ಮತ್ತು ಬದಲಾದ ಸಾಮಾಜಿಕ–ಆರ್ಥಿಕ ಪರಿಸರದಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಮೈಗೂಡಿಸಿಕೊಂಡು ಸಾರ್ವಜನಿಕ ಹಿತವನ್ನು ರಕ್ಷಿಸುವ ಬದ್ಧತೆಯುಳ್ಳ ಮಾಧ್ಯಮ ಸಿಬ್ಬಂದಿಯನ್ನು ರೂಪಿಸುವುದು ಮಾಧ್ಯಮ ಶಿಕ್ಷಣ ಸಂಸ್ಥೆಗಳ ಪ್ರಧಾನ ಆದ್ಯತೆಯಾಗಬೇಕು" ಎಂದು ಹಿರಿಯ ಸಂಪಾದಕ ಮತ್ತು ಮಾಧ್ಯಮ ತಜ್ಞ ಬಿ.ಜಿ. ವರ್ಗೀಸ್ (1999) ಎಚ್ಚರಿಸಿದ್ದಾರೆ.

**ಭಾರತೀಯ ಮಾಧ್ಯಮ ಶಿಕ್ಷಣ ಅಭಿವೃದ್ಧಿಗೆ ಸಲಹೆಗಳು**

ಹಲವಾರು ಇತಿಮಿತಿಗಳ ನಡುವೆಯೂ ಭಾರತೀಯ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ದೇಶದಲ್ಲಿ ಗಮನಾರ್ಹವಾಗಿ ಬೆಳೆದಿದೆ. ಭಾರತೀಯ ಮಾಧ್ಯಮ ಸಂಸ್ಥೆಗಳಿಗೆ ಅರ್ಹರು, ಅನುಭವಿಗಳು, ಪರಿಣತರು ಮತ್ತು ಸಮರ್ಥ ಸಿಬ್ಬಂದಿ ವರ್ಗವನ್ನು ರೂಪಿಸುವ ಸಾಮಾಜಿಕ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವ ನಿಟ್ಟಿನಲ್ಲಿ ಕೆಳಕಂಡ ಸಲಹೆಗಳನ್ನು ಮಂಡಿಸಲಾಗಿದೆ. ನೀತಿ ನಿರೂಪಕರು ಮತ್ತು ಶೈಕ್ಷಣಿಕ ಆಡಳಿತಗಾರರು ಇವುಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿ ಭಾರತೀಯ ಪತ್ರಿಕೋದ್ಯಮ ಶಿಕ್ಷಣಕ್ಕೆ ಹೊಸ ದಿಕ್ಕನ್ನು ನೀಡುವುದು ಇಂದು ಅತ್ಯವಶ್ಯಕ.

1. ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಯಾಂತ್ರೀಕರಣ ಮೊದಲಾದ ಪ್ರಕ್ರಿಯೆಗಳಿಗೆ ಪೂರಕವಾದ ಮಾಧ್ಯಮ ಸಿಬ್ಬಂದಿಯನ್ನು ರೂಪಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳು ನುರಿತ ಶಿಕ್ಷಕರು, ಸಂಶೋಧಕರು, ತಾಂತ್ರಿಕ ಸಿಬ್ಬಂದಿ, ಮೂಲಭೂತ ಸೌಕರ್ಯಗಳು, ಆಧುನಿಕ ತಂತ್ರಜ್ಞಾನಗಳು, ಅವಶ್ಯಕ ಸಂಪನ್ಮೂಲಗಳು, ಶಿಕ್ಷಣ ಸಾಹಿತ್ಯ, ವಿಸ್ತರಣಾ ಸೇವೆ, ಸಲಹಾ ಸೇವೆ, ಪ್ರಾಯೋಗಿಕ ತರಬೇತಿ ಮೊದಲಾದವುಗಳನ್ನು ಆದ್ಯತೆಯ ಮೇರೆಗೆ ಒದಗಿಸಬೇಕು.
2. ರಾಷ್ಟ್ರಮಟ್ಟದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಕಾಯಕಲ್ಪ ನೀಡಿ ಅರ್ಥಪೂರ್ಣ ಮಾರ್ಗದರ್ಶನ, ಸಲಹಾ ಸೇವೆ ಮತ್ತು ನಿಯಂತ್ರಣ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಭಾರತೀಯ ಮಾಧ್ಯಮ ಶಿಕ್ಷಣ, ತರಬೇತಿ ಮತ್ತು ಸಂಶೋಧನಾ ಮಂಡಳಿಯನ್ನು ಸ್ಥಾಪಿಸಬೇಕು.
3. ಪತ್ರಿಕೋದ್ಯಮ ಶಿಕ್ಷಣದ ಸ್ವರೂಪದಲ್ಲಿ ಬದಲಾವಣೆಯಾಗಬೇಕು. ತಾತ್ವಿಕ ವಿಚಾರಗಳು ಮತ್ತು ಪ್ರಾಯೋಗಿಕ ವಿಚಾರಗಳನ್ನು ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳು ಶೇ. 25:75 ಅನುಪಾತದಲ್ಲಿ ಕಡ್ಡಾಯವಾಗಿ ಬೋಧಿಸುವಂತಾಗಬೇಕು.
4. ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳು ನಿರಂತರವಾಗಿ ಮಾಧ್ಯಮ ಸಂಸ್ಥೆಗಳಿಂದ ವಿವಿಧ ವಿಷಯಗಳು ಮತ್ತು ಕ್ಷೇತ್ರಗಳ ಪರಿಣತರನ್ನು ಆಹ್ವಾನಿಸಿ ವಿಶೇಷ ಉಪನ್ಯಾಸಗಳು ಮತ್ತು ಅಲ್ಪಾವಧಿಯ ತರಬೇತಿ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವಂತಾಗಬೇಕು.
5. ಮಾಧ್ಯಮ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ನಿರಂತರವಾಗಿ ತರಬೇತಿ ಗಳಿಸುವ ಅವಕಾಶವನ್ನು ಮಾಧ್ಯಮ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳು ಸೃಷ್ಟಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ಪ್ರಾಯೋಗಿಕ ಪತ್ರಿಕೆ, ಸುದ್ದಿ ಚಿತ್ರ, ಸಾಕ್ಷ್ಯ ಚಿತ್ರ, ಬಾನುಲಿ ಬರವಣಿಗೆ, ದೂರದರ್ಶನ ಬರವಣಿಗೆ, ವಿದ್ಯುನ್ಮಾನ ಕಾರ್ಯಕ್ರಮ ತಯಾರಿಕೆ, ಮಾಧ್ಯಮ ವಿಮರ್ಶೆ, ಮಾಧ್ಯಮ ಸಂಶೋಧನೆ ಮೊದಲಾದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.
6. ಮೂಲಭೂತ ವಿಷಯಗಳನ್ನು ಬೋಧಿಸುವ ಮತ್ತು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ನಡೆಸುವ ಕಾರ್ಯವನ್ನು ಶಿಕ್ಷಕರು ನಿರ್ವಹಿಸಿದರೆ, ಅನ್ವಯಿಕ/ ಪ್ರಾಯೋಗಿಕ ವಿಷಯಗಳನ್ನು ಬೋಧಿಸುವ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಮೌಲ್ಯಮಾಪನ ನಡೆಸುವ ಕಾರ್ಯವನ್ನು ಮಾಧ್ಯಮ ಸಿಬ್ಬಂದಿ ನಿರ್ವಹಿಸುವುದು ಪತ್ರಿಕೋದ್ಯಮ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಬಲ್ಲದು.

ಭಾರತವು ವಿವಿಧ ಧರ್ಮಗಳು, ಸಂಸ್ಕೃತಿಗಳು, ಜನಾಂಗಗಳು, ಭಾಷೆಗಳು ಮೊದಲಾದ ವೈವಿಧ್ಯತೆಗಳನ್ನು ಒಳಗೊಂಡಿರುವ ದೇಶವಾಗಿದೆ. ಇಂಡಿಯಾ ಮತ್ತು ಭಾರತವೆಂಬ ಎರಡು ಧ್ರುವಗಳನ್ನು ಒಂದುಗೂಡಿಸುವ, ಬಡವ–ಬಲ್ಲಿದ ಎಂಬ ಎರಡು ವರ್ಗಗಳ ನಡುವಿನ ಕಂದಕವನ್ನು ಮುಚ್ಚುವ, ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸಿ ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಮತ್ತು ಪ್ರಗತಿಪರ ಮಾಧ್ಯಮ ಸೇವಾ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಭಾರತೀಯ ಪತ್ರಿಕೋದ್ಯಮ ಶಿಕ್ಷಣ ಸುಧಾರಣೆಯಾಗಬೇಕು. ಆಂಗ್ಲ ಭಾಷಾ ಮಾಧ್ಯಮದಲ್ಲಿ ಪತ್ರಿಕೋದ್ಯಮ ಶಿಕ್ಷಣ ಲಭಿಸಿದರೂ ಸಹ ಭಾರತೀಯ ಭಾಷೆಗಳಲ್ಲಿ ವಿದ್ಯಾರ್ಥಿಗಳು ಸಮರ್ಥವಾಗಿ ಪರೀಕ್ಷೆಗಳಲ್ಲಿ ಉತ್ತರಿಸುವ ಸೌಲಭ್ಯ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಲಭಿಸಬೇಕು. ಭಾರತೀಯ ಭಾಷೆಗಳಲ್ಲಿ ಬೋಧನಾ ಸಾಮಗ್ರಿಗಳು ಅವಶ್ಯಕ ಪ್ರಮಾಣದಲ್ಲಿ ತಯಾರಾಗಬೇಕು. ಸ್ಥಳೀಯ, ಪ್ರಾದೇಶಿಕ ಹಾಗೂ ರಾಷ್ಟ್ರಮಟ್ಟಗಳಲ್ಲಿ ಪತ್ರಿಕೋದ್ಯಮ ಶಿಕ್ಷಣ ಸುಧಾರಣೆಗೆ ಸೂಕ್ತ ವೇದಿಕೆಗಳು, ಕಾರ್ಯತಂತ್ರಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.

–ಮ. ಬಿ.ಪಿ.

–ಲೋ. ಜಿ.

Digitised by Bharatavani, CIIL

## ಭಾರತದಲ್ಲಿ ಲಲಿತ (ಪ್ರದರ್ಶಕ) ಕಲೆಗಳ ಶಿಕ್ಷಣದ ಬೆಳವಣಿಗೆ

ಭಾರತ ದೇಶದಲ್ಲಿ ಪ್ರದರ್ಶಕ ಕಲೆಗಳ ಬೆಳವಣಿಗೆ ಬಹಳ ಉತ್ಕೃಷ್ಟ ಮಟ್ಟದಲ್ಲಿ, ಮೌಲ್ಯಯುತವಾಗಿ ವ್ಯಾಪಕವಾಗಿದೆ. ಶಾಸ್ತ್ರೀಯ ಕಲೆಗಳು ರೂಪಾಂತರರೂಪದಲ್ಲಿ ಅನೇಕ ವೈವಿಧ್ಯಗಳಲ್ಲಿ ಹರಡುತ್ತಿವೆ. ಲಘು ಸಂಗೀತ, ಲಘು ಶಾಸ್ತ್ರೀಯ ಸಂಗೀತ, ಸಿನಿಮಾ ಸಂಗೀತ, ಜಾನಪದ ನೃತ್ಯ, ಬ್ಯಾಲೆ, ರಂಗ ಸಂಗೀತ, ಸಿನಿಮಾ ನೃತ್ಯ, ನಾಟಕದಲ್ಲೂ ಅನೇಕ ಬದಲಾವಣೆ, ಚಿತ್ರ, ಶಿಲ್ಪ, ವಾಸ್ತುಶಿಲ್ಪ ಇದರಲ್ಲೂ ಅನೇಕ ಮಾರ್ಪಾಡುಗಳಾಗಿ ವ್ಯಾಪಕವಾಗಿವೆ.

ಕಲೆಯ ಸಂಪ್ರದಾಯ ಶುದ್ಧತೆಯ ಬೆಳವಣಿಗೆಯು ಬೋಧನೆಯಿಂದ ಮಾತ್ರ ಉಳಿಯಬೇಕಾಗಿದೆ. ಶಾಸ್ತ್ರ ರೀತ್ಯಾ ಬೋಧಿಸಿ ಶಿಕ್ಷಣ ನೀಡಿದಾಗ ಅದರ ಬಗ್ಗೆ ತಿಳುವಳಿಕೆಯುಂಟಾಗಿ ಎಲ್ಲರಲ್ಲೂ ವಿಷಯದ ಅರಿವು ಮೂಡುತ್ತದೆ. ಕಲೆ ಅನ್ನುವುದು ಮನುಷ್ಯನ ಜೀವನದ ಒಂದು ಅವಿಭಾಜ್ಯ ಅಂಗ. ಪ್ರತಿ ಮನುಷ್ಯನು ಒಂದಿಲ್ಲೊಂದು ಕಲಾ ಪ್ರಕಾರಕ್ಕೆ ಅಂಟಿಕೊಂಡಿರುತ್ತಾನೆ. ಇದರಿಂದ ಅವನ ಜೀವನಶೈಲಿಯಲ್ಲಿ ಶಿಸ್ತು ಮತ್ತು ನಿಯಂತ್ರಣವು ಏರ್ಪಡುತ್ತದೆ. ಕಲೆ ಎನ್ನುವುದು ಕೇವಲ ಮನರಂಜನೆಗೆ ಮಾತ್ರವಾಗಿರದೆ ಮಾನಸಿಕ ಸ್ವಾಸ್ಥ್ಯಕ್ಕೂ ಸಹಕಾರಿ. ಕಲೆಯ ಗಂಧವಿಲ್ಲದವನ ಜೀವನ ಬರಡು. ಲಲಿತ ಕಲೆಗಳಲ್ಲಿ ಸಂಗೀತಕ್ಕೆ ಆದ್ಯ ಸ್ಥಾನವಿದೆ. ಸಂಗೀತ ಉಳಿದು ಬೆಳೆದಿರುವುದು, ಬೆಳೆಯುತ್ತಿರುವುದು ಶಿಕ್ಷಣದಲ್ಲಿ ಮತ್ತು ಸಭಾಗಾನದಲ್ಲಿ. ಸೌಂದರ್ಯಾನುಭೂತಿಯು ಅದರಲ್ಲೂ ಸಾಮಾಜಿಕ, ಶೈಕ್ಷಣಿಕ ಮೌಲ್ಯವನ್ನುಳಿಸಿಕೊಂಡು ಭಾವೈಕ್ಯತೆಯನ್ನು ಕೂಡಿಕೊಂಡು ಬರುತ್ತದೆ.

ಸಂಗೀತಾದಿ ಕಲೆಗಳು ಪ್ರಪಂಚದಾದ್ಯಂತ ವ್ಯಕ್ತಿಗತವಾಗಿ ಬೋಧಿಸಲ್ಪಡುತ್ತಿವೆ. ಸಾವಿರಾರು ಕಲಾ ಶಿಕ್ಷಕರು ಖಾಸಗಿಯಾಗಿ ಶಾಲೆಗಳನ್ನು ನಡೆಸಿ ಸಂಗೀತ, ನೃತ್ಯ ಕಲೆಯನ್ನು ಬೋಧಿಸಿ ಕಲೆಯ ಬೆಳವಣಿಗೆಗೆ ಸಹಕರಿಸುತ್ತಿದ್ದಾರೆ. ಭಾರತದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಲಲಿತ (ಪ್ರದರ್ಶಕ) ಕಲೆಗಳನ್ನು ಒಂದು ಮುಖ್ಯ ವಿಷಯವನ್ನಾಗಿ ಬೋಧಿಸಲಾಗುತ್ತಿದೆ. ಇದರ ಜೊತೆಗೆ ಕಲೆಗಳ ಸಂಶೋಧನೆಗೂ (Ph.D) ಅವಕಾಶವಿದೆ. ಹೀಗೆ ಪದವಿಗಳಲ್ಲಿ ಒಟ್ಟಾಗಿ ಕಲಿಯುವುದರಲ್ಲಿ ಅನುಕೂಲಗಳು ಇವೆ. ಒಳ್ಳೆಯ ಶಿಸ್ತು ಉಂಟಾಗಿ, ಅಧ್ಯಾಪಕರು ಬೋಧಿಸಿದುದು ಅರ್ಥವಾಗದಿದ್ದರೂ ಸಹಪಾಠಿಗಳೊಂದಿಗೆ ಚರ್ಚಿಸಿ ಕಲಿತು ಒಪ್ಪಿಸಬಹುದು. ಶಾಲಾ ಕಾಲೇಜುಗಳಲ್ಲಿ ನಿಗದಿತ ಪಠ್ಯವಸ್ತುವಿದ್ದು, ನಿಗದಿತ ಸಮಯದಲ್ಲಿ ಮುಗಿಸಬೇಕೆಂಬ ನಿಯಮವಿದ್ದು ಎಲ್ಲವೂ ನಿಯಮಬದ್ಧವಾಗಿ ನಡೆಯುತ್ತದೆ. ವಿದ್ಯಾರ್ಥಿಗೆ ಗ್ರಹಿಣಶಕ್ತಿ ಚೆನ್ನಾಗಿದ್ದು, ಸೃಜನಶಕ್ತಿಯೂ ಇದ್ದಾಗ, ಕಡಿಮೆ ಸಮಯದಲ್ಲಿ ಹೆಚ್ಚು ಕಲಿತು ಉನ್ನತ ಮಟ್ಟಕ್ಕೇರುವುದರಲ್ಲಿ ಸಂದೇಹವಿಲ್ಲ. ಶಾಸ್ತ್ರಬದ್ಧ ಪಾಠವಾಗುತ್ತದೆ. ಸಂಗೀತ ಕಲಿಯುವುದೇ ಅಲ್ಲದೆ ಅದರ ಶಾಸ್ತ್ರವನ್ನು ಅರಿತುಕೊಳ್ಳುತ್ತಾರೆ. ಖಾಸಗಿಯಾಗಿ ಕಲಿಯುವುದರಲ್ಲಿ ಶಾಸ್ತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುವುದಿಲ್ಲ. ಕಾಲೇಜುಗಳಲ್ಲಿ ಎಲ್ಲ ವರ್ಗದವರೂ ಬರುತ್ತಾರೆ.

ಎಲ್ಲಾ ಕಲಾ ಪ್ರಕಾರಗಳೂ ಮುಂದುವರಿಯುತ್ತಲೇ ಇವೆ. ಕಲಾವಿದರಿಗೆ ಸರ್ಕಾರ, ಅನೇಕ ಸಂಸ್ಥೆಗಳು ಅವರನ್ನು ಗುರುತಿಸಿ ಸನ್ಮಾನಿಸುವುದಿಲ್ಲ, ಪುರಸ್ಕಾರಗಳನ್ನು ನೀಡುವುದು ಕಲಾವಿದರ ಉತ್ಸಾಹವನ್ನು ಹೆಚ್ಚಿಸುತ್ತದೆ. ಹೀಗೆ ಕಲಾವಿದರು ಕಲಾವಾಹಕರಾಗಿದ್ದಾರೆ. ಯಾವುದೇ ಸಭೆ, ಸಮಾರಂಭಗಳಲ್ಲಿ ಸಂಗೀತ ಇದ್ದೇ ಇರುತ್ತದೆ. ಕೆಲವೊಮ್ಮೆ ವಿಶೇಷ ಕಾರ್ಯಕ್ರಮವಾಗಿ ನಾಟ್ಯವೂ ಇರುತ್ತದೆ. ಸಂಗೀತ, ನೃತ್ಯ ಕಲೆಗಳು ಕಾಲೇಜಿನಲ್ಲಿಯಾದರೂ ಕಲಿತಿರಬಹುದು ಅಥವಾ ಒಬ್ಬ ಹಿರಿಯ ಗುರುಗಳಿಂದ ಕಲಿತಿರಲೂಬಹುದು. ಅದನ್ನು ಬೆಳೆಸುವುದರಲ್ಲಿ ಕಲಿತವರೂ ಕೈಜೋಡಿಸಬಹುದು. ತಮಗೆ ಬಂದಿರುವ ವಿದ್ಯೆಯನ್ನು ನಾಲ್ಕಾರು ಜನಕ್ಕೆ ಪಾಠ ಮಾಡಿ ಮುಂದುವರಿಸಬಹುದು. ಇದು ಇಂದಿಗೂ ನಡೆಯುತ್ತಿದೆ. ಕೆಲವರು ಇದನ್ನೇ ವೃತ್ತಿಯನ್ನಾಗಿಯೂ ಇಟ್ಟುಕೊಂಡಿರುತ್ತಾರೆ. ಮತ್ತೆ ಕೆಲವರು ಪ್ರವೃತ್ತಿಯಾಗಿಟ್ಟುಕೊಂಡಿರುತ್ತಾರೆ. ಕಾಲೇಜುಗಳಲ್ಲಿ ಓದುವವರು ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲಾ ಅಧ್ಯಾಯಗಳನ್ನು ಓದಿ ತಿಳಿದುಕೊಂಡಿರುತ್ತಾರೆ. ಆದರೆ ಹಿರಿಯ ಕಲಾವಿದರ ಬಳಿ ಕಲಿತಾಗ ಅವರು ಶಾಸ್ತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದಿಲ್ಲ. ಜೊತೆಗೆ ಲಕ್ಷ್ಯಭಾಗವು ಹೆಚ್ಚೇ ಇರುತ್ತದೆ.

ಭಾರತದಲ್ಲಿ ಪ್ರದರ್ಶಕ ಕಲೆಯ ಬೆಳವಣಿಗೆಗಾಗಿ ಎಲ್ಲಾ ರಾಜ್ಯಗಳಲ್ಲೂ ವಿದ್ಯಾಸಂಸ್ಥೆಗಳು ಇವೆ. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕಾಲೇಜುಗಳು, ಸರ್ಕಾರಿ ಕಾಲೇಜುಗಳು, ಅನುದಾನಿತ ಕಾಲೇಜುಗಳು ಹಾಗೂ ವ್ಯಕ್ತಿಗತವಾಗಿ ಹೇಳಿಕೊಡುವ ಕಲಾಶಾಲೆಗಳು ಅಸಂಖ್ಯವಾಗಿವೆ.

ಮುಖ್ಯವಾದ ಕೆಲವು ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಪಟ್ಟಿಯನ್ನು ಗಮನಿಸೋಣ–

1. ಅಕ್ಯಾಡೆಮಿ ಆಫ್ ಆರ್ಟ್ಸ್ ಆಫ್ ಇಂಡಿಯಾ, ಚೆನ್ನೈ, ತಮಿಳುನಾಡು
2. ಸಂಗೀತ ವಿಭಾಗ, ದೆಹಲಿ ವಿಶ್ವವಿದ್ಯಾಲಯ
3. ಅ) ಸಂಗೀತ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
   ಆ) ಮಹಾರಾಣಿ ಕಲಾ ಕಾಲೇಜು, ಬೆಂಗಳೂರು
   ಇ) ಆಚಾರ್ಯ ಪಾಠಶಾಲೆ, ಬೆಂಗಳೂರು
   ಈ) ಕೇಶವ ಕಾಲೇಜ್ ಆಫ್ ಮ್ಯುಸಿಕ್ ಮತ್ತು ಡಾನ್ಸ್, ಬೆಂಗಳೂರು
   ಉ) ಹಂಸಲೇಖ ಕಾಲೇಜ್ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್, ಬೆಂಗಳೂರು
   ಊ) ಚಿತ್ರಕಲಾ ಪರಿಷತ್
4. ಅ) ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಮೈಸೂರು
   ಆ) ಮಹಾರಾಣಿ ಕಲಾ ಕಾಲೇಜು, ಮೈಸೂರು
   ಇ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು
   ಈ) ರಂಗಾಯಣ, ಮೈಸೂರು
   ಉ) ಚಾಮರಾಜೇಂದ್ರ ದೃಶ್ಯ ಶ್ರಾವ್ಯ ಅಕ್ಯಾಡೆಮಿ, ಮೈಸೂರು
5. ಅ) ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ, ತಿರುಪತಿ, ಆಂಧ್ರಪ್ರದೇಶ
   ಆ) ಪದ್ಮಾವತಿ ಮಹಿಳಾ ವಿಶ್ವವಿದ್ಯಾಲಯ, ತಿರುಪತಿ
   ಇ) ಡಾ. ಬಿ.ಆರ್. ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಹೈದರಾಬಾದ್, ಆ.ಪ್ರ.
   ಈ) ಸಂಗೀತ ವಿಭಾಗ, ಹೈದರಾಬಾದ್, ಆಂಧ್ರಪ್ರದೇಶ
6. ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲ್, ಮೀರಜ್, ಮಹಾರಾಷ್ಟ್ರ
7. ಅಲಹಾಬಾದ್ ವಿಶ್ವವಿದ್ಯಾಲಯ, ಫ್ಯಾಕಲ್ಟಿ ಆಫ್ ಆರ್ಟ್ಸ್, ಅಲಹಾಬಾದ್ (ಉ.ಪ್ರ)

Digitised by Bharatavani, CIIL

8. ಅಣ್ಣಾಮಲೈ ವಿಶ್ವವಿದ್ಯಾಲಯ, ತಮಿಳುನಾಡು
9. ಫ್ಯಾಕಲ್ಟಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್, ಬನಾರಸ್ ಹಿಂದು ವಿಶ್ವವಿದ್ಯಾಲಯ, ವಾರಣಾಸಿ (ಉ.ಪ್ರ)
10. ಸೆಂಟರ್ ಫಾರ್ ಇಂಡಿಯನ್ ಕ್ಲಾಸಿಕಲ್ ಡ್ಯಾನ್ಸಸ್, ನವದೆಹಲಿ
11. ಚಿಲ್ಡ್ರನ್ಸ್ ಲಿಟಲ್ ಥಿಯೇಟರ್, ಕೋಲ್ಕತ್ತಾ (ಪ.ಬಂ.)
12. ಕಾಲೇಜ್ ಆಫ್ ಆರ್ಟ್ಸ್ ಅಂಡ್ ಕ್ರಾಫ್ಟ್ಸ್, ಚೆನ್ನೈ, ತಮಿಳುನಾಡು
13. ಸಂಗೀತ ವಿಭಾಗ, ಕೇರಳ ವಿಶ್ವವಿದ್ಯಾಲಯ, ತಿರುವನಂತಪುರ
14. ಗೋವಾ ಕಾಲೇಜ್ ಆಫ್ ಆರ್ಟ್ಸ್, ಪಣಜಿ
15. ಸಂಗೀತ ವಿಭಾಗ, ಹಿಮಾಚಲ ಪ್ರದೇಶ್ ವಿಶ್ವವಿದ್ಯಾಲಯ, ಶಿಮ್ಲಾ (ಹಿ.ಪ್ರ)
16. ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಕ್ರಾಫ್ಟ್ ಅಂಡ್ ಡಿಸೈನ್, ಜೈಪುರ್, (ರಾಜಾಸ್ತಾನ್)
17. ಇನ್ಸ್‌ಟಿಟ್ಯೂಟ್ ಆಫ್ ಮ್ಯೂಸಿಕ್ ಅಂಡ್ ಫೈನ್ ಆರ್ಟ್ಸ್, ಶ್ರೀನಗರ (ಜಮ್ಮು ಅಂಡ್ ಕಾಶ್ಮೀರ್)
18. ಕುರುಕ್ಷೇತ್ರ ವಿಶ್ವವಿದ್ಯಾಲಯ, ಕುರುಕ್ಷೇತ್ರ, ಹರಿಯಾಣ
19. ಮಹರ್ಷಿ ದಯಾನಂದ ವಿಶ್ವವಿದ್ಯಾಲಯ, ರೋಟಕ್ (ಹರಿಯಾಣ)
20. ಎಂ.ಎಸ್. ವಿಶ್ವವಿದ್ಯಾಲಯ ಬರೋಡ, ಫ಼ಾಕಲ್ಟಿ ಆಫ್ ಫೈನ್ ಆರ್ಟ್ಸ್, ವಡೋದರ, ಗುಜರಾತ್
21. ನಳಂದ ಡ್ಯಾನ್ಸ್ ರಿಸರ್ಚ್ ಸೆಂಟರ್, ವಿಲೆಪರ್ಲೆ(ಪ), ಮುಂಬಯಿ, ಮಹಾರಾಷ್ಟ್ರ
22. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ, ನವದೆಹಲಿ
23. ನೂಪುರ, ಇನ್ಸ್‌ಟಟ್ಯೂಟ್ ಆಫ್ ಮೋಹಿನಿ ಆಟ್ಟಂ, ತಿರುವನಂತಪುರ, ಕೇರಳ
24. ಪಾಟ್ನ ವಿಶ್ವವಿದ್ಯಾಲಯ, ಬಿಹಾರ್
25. ಫೈನ್ ಆರ್ಟ್ಸ್ ಕಾಲೇಜ್, ಪುಣೆ

ಮೇಲೆ ಹೇಳಿದ ಎಲ್ಲ ಕೇಂದ್ರಗಳಲ್ಲೂ ಪದವಿ, ಸ್ನಾತಕೋತ್ತರ ಪದವಿ, ಪಿ.ಹೆಚ್‌ಡಿ. ಕೋರ್ಸ್‌ಗಳಿವೆ. ಕೆಲವು ಕಡೆ ಎಂ.ಫಿಲ್ ಕೋರ್ಸ್ ಇದೆ. ಇಷ್ಟೇ ಅಲ್ಲದೆ ಕಲೆಯ ಬೆಳವಣಿಗೆ ಖಾಸಗಿ ಕಾಲೇಜುಗಳಲ್ಲೂ ನಡೆಯುತ್ತಿದೆ. ಶಿಕ್ಷಣದ ಗುಣಮಟ್ಟವು ಉತ್ತಮ ಮಟ್ಟದಲ್ಲಿದೆ. ಅನುದಾನಿತ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಕಲಾ ಶಿಕ್ಷಣಕ್ಕೆ ಶ್ರಮಿಸುತ್ತಿವೆ.

ಇಂದಿನ ಸಂಗೀತ ಶಿಕ್ಷಣದಲ್ಲಿ ಎಲ್ಲ ಆಯಾಮಗಳಿಂದಲೂ ಬೋಧಿಸಲಾಗುತ್ತಿದೆ. ಲಕ್ಷ್ಯ(practical) ವನ್ನು ಪಾಠ ಮಾಡುತ್ತಾ ಅದರ ಲಕ್ಷಣ, ಇನ್ನಿತರ ವಿಚಾರಗಳನ್ನೂ ವಿವರವಾಗಿ ತಿಳಿಸಲಾಗುತ್ತದೆ. ಆ ರಾಗದ ಬಗ್ಗೆ ವಿವರವಾದ ಜ್ಞಾನ, ರಾಗದ ಸ್ವರ ಸಂಚಾರಗಳ ಬಗೆಗೆ, ತಾಳದ ಬಗೆಗೆ, ಸಾಹಿತ್ಯದ ಬಗೆಗೂ ಪಾಠ ಮಾಡಲಾಗುತ್ತದೆ. ಸಂಗೀತ ಲಿಪಿಯ ಬಗ್ಗೆಯೂ ತಿಳಿಸಿಕೊಡಲಾಗುವುದು. ಇದರಿಂದ ಮುಂದೆ ಅವರೇ ಸ್ವಂತವಾಗಿ ಬೇರೆ ಬೇರೆ ಕೀರ್ತನೆಗಳನ್ನು ಕಲಿಯಲು ಅನುಕೂಲ. ಹಿಂದೂಸ್ತಾನಿ ಸಂಗೀತ ಕಲಿಯುವವರು ತಬಲ ವಾದ್ಯದ ಜೊತೆಯಲ್ಲಿ ಅಭ್ಯಾಸ ಮಾಡಬೇಕಾದುದು ಕ್ರಮ.

ಕಲಾ ಶಿಕ್ಷಣದ ಬೆಳವಣಿಗೆಗೆ ಸಂಬಂಧಪಟ್ಟಂತೆ ಅನೇಕ ಗ್ರಂಥಗಳು ಪ್ರಕಟವಾಗಿವೆ. ಅವುಗಳನ್ನು ಅಧ್ಯಯನ ಮಾಡಿ ಜ್ಞಾನ ವೃದ್ಧಿ ಮಾಡಿಕೊಳ್ಳಬಹುದು. ಹಾಗೆಯೆ ತಮಗೆ ತಿಳಿದ ವಿಚಾರಗಳನ್ನು ಇತರರಿಗೂ ತಿಳಿಯಪಡಿಸಬಹುದು.

ಕಲಾ ಶಿಕ್ಷಣಕ್ಕೆ ಪೂರಕವಾಗಿ ಕೆಲವು ಕಲಾ ಸಂಸ್ಥೆಗಳು ವಿಚಾರ ಸಂಕಿರಣ, ಪ್ರಬಂಧ ಮಂಡನಾ ಕಾರ್ಯಕ್ರಮ ಮತ್ತು ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುತ್ತಾ ಬಂದಿವೆ. ಇದರಿಂದ ಶ್ರದ್ಧೆ, ಉತ್ಸಾಹಗಳು ಎಲ್ಲರಲ್ಲೂ ಉಂಟಾಗಿ ಕಲೆಯು ಬೆಳೆಯಲು ಅನುಕೂಲವಾಗುತ್ತದೆ.

ಶಾಸ್ತ್ರೀಯ ಸಂಗೀತವು ಆಕಾಶವಾಣಿ, ದೂರದರ್ಶನದಿಂದಲೂ ಪ್ರಸಾರವಾಗುತ್ತಿದೆ. ಸಿ.ಡಿ. ಕ್ಯಾಸೆಟ್‌ಗಳು ಮುಖ್ಯವಾಗಿವೆ.

ಭಾರತದಲ್ಲಿ ಕಲೆಯ ಶಿಕ್ಷಣದ ಬೆಳವಣಿಗೆಯು ಹರಿಯುವ ನೀರಿನಂತೆ ಮುಂದುವರಿಯುತ್ತಲೇ ಇದೆ. ದೂರದರ್ಶನದಲ್ಲಿ ರಿಯಾಲಿಟಿ ಶೋಗಳು ಆರಂಭವಾದ ಮೇಲಂತೂ ಸಂಗೀತ, ನೃತ್ಯ ಕಲೆಗೆ ಹೆಚ್ಚಿನ ಆದ್ಯತೆ ಉಂಟಾಗಿದೆ. ಸಂಗೀತ ಶಿಕ್ಷಣದಲ್ಲೂ ಬದಲಾವಣೆಗಳಾಗಿವೆ. ಹಾಗೆಯೆ ವಾದ್ಯದಲ್ಲೂ ಹೊಸ ಹೊಸ ಅವಿಷ್ಕಾರಗಳಾಗಿವೆ. ಉದಾ: ಪಾಶ್ಚಾತ್ಯ ವಾದ್ಯವಾದ ಸ್ಯಾಕ್ಸೊಫೋನ್ ವಾದ್ಯದಲ್ಲಿ ಕರ್ನಾಟಕ ಸಂಗೀತವನ್ನೂ ನುಡಿಸುವ ಪ್ರಯೋಗವಾಗಿ ಅದರಲ್ಲಿ ಪರಿಪೂರ್ಣತೆಯನ್ನು ಪಡೆದಿದ್ದಾರೆ. ಹಾಗೆಯೆ ಮ್ಯಾಂಡೊಲಿನ್ ವಾದ್ಯ. ಪಾಶ್ಚಾತ್ಯ ಆನದ್ಧ ಅಥವಾ ಅವನದ್ಧ (percussion) ವಾದ್ಯಗಳು ಕರ್ನಾಟಕ ಸಂಗೀತದಲ್ಲಿ ಬಳಕೆಗೆ ಬಂದಿವೆ. ಅದನ್ನು ಕಲಿಸುವವರೂ ಕಲಿಯುವವರೂ ಬಹಳಷ್ಟು ವಿದ್ವಾಂಸರಿದ್ದಾರೆ.

ಆಕಾಶವಾಣಿಯಲ್ಲಿ ಗಾನವಿಹಾರ, ರಾಗೋಲ್ಲಾಸ ಎಂಬ ಹೊಸ ಹೊಸ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತವೆ. ಗಾನವಿಹಾರದಲ್ಲಿ ಹಿರಿಯ ವಿದ್ವಾಂಸರು ಒಬ್ಬ ವಿದ್ಯಾರ್ಥಿಗೆ ಸಂಗೀತ ರಚನೆಗಳ ಪಾಠ ಹೇಳುವುದು, ರಾಗೋಲ್ಲಾಸದಲ್ಲಿ ಹೊಸ ಹೊಸ ರಾಗಗಳ, ಸಮೀಪ ರಾಗಗಳ ಪರಿಚಯ ಮಾಡುವುದು. ಇದೂ ಸಂಗೀತ ಕಲೆಯ ಬೆಳವಣಿಗೆಗೆ ಸಹಕಾರಿಯಾಗಿದೆ.

ಮಾರುಕಟ್ಟೆಯಲ್ಲಿ ಪ್ರದರ್ಶಕ ಕಲೆಗಳನ್ನು ಪಾಠಮಾಡುವ ಡಿವಿಡಿಗಳು ಲಭ್ಯವಾಗಿವೆ. ಇದರಿಂದಲೂ ಕೆಲವರು ಕಲಿಯಬಹುದಾಗಿದೆ. ಕೆಲವರು ಮನೆಯಲ್ಲಿ ತಂದೆ ತಾಯಿಯವರಿಗೆ ದೂರ ದೂರಿಗೆ ವರ್ಗವಾಗಿ ಹೋಗಬೇಕಾದ ಸಂದರ್ಭದಲ್ಲೂ ಈಗ ಹಿಂದಿನ ಗುರುವಿನಲ್ಲಿಯೆ ಮುಂದುವರಿಸಲು ಕಷ್ಟವಿಲ್ಲ. ತಾಂತ್ರಿಕ ಮಟ್ಟ ಬಹಳ ಮುಂದುವರೆದಿದೆ. ಇಂಟರ್‌ನೆಟ್ ಮೂಲಕ ಪಾಠವನ್ನು ಮಾಡಿಸಿಕೊಳ್ಳಬಹುದಾಗಿದೆ.

–ಶ್ರೀ ಆರ್.ಎನ್.

## ಭಾರತದಲ್ಲಿ ಸೈನಿಕ ಶಾಲೆಗಳು

ಭಾರತದಲ್ಲಿ 1961ರಲ್ಲಿ ಸೈನಿಕ ಶಾಲೆಗಳು ಪ್ರಾರಂಭವಾದವು. ಸೈನಿಕ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ವ್ಯವಸ್ಥಿತವಾದ ವಿದ್ಯಾಭ್ಯಾಸ, ದೈಹಿಕ ಶಿಕ್ಷಣ ಮತ್ತು ಮಾನಸಿಕ ಶಿಕ್ಷಣ ನೀಡಿ ಮುಂದೆ ಭಾವಿ ಸೈನಿಕರಾಗಲು ರಾಷ್ಟ್ರೀಯ ರಕ್ಷಣಾ ಅಕಾಡೆಮಿಗೆ (National Defence Academy) ಸೇರಲು ಸಿದ್ಧಪಡಿಸುವುದು ಈ ಶಾಲೆಗಳ ಮುಖ್ಯ ಉದ್ದೇಶವಾಗಿದೆ. ಈ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಎಲ್ಲ ವಿದ್ಯಾರ್ಥಿಗಳೂ ಸೈನ್ಯಕ್ಕೆ ಸೇರಲೇಬೇಕೆಂಬ ನಿಯಮವಿಲ್ಲ.

### ಉದ್ದೇಶಗಳು

1) ಭಾರತದಲ್ಲಿರುವ ಎಲ್ಲ ಕಡೆಗಳಿಂದಲೂ ತರುಣರನ್ನು ದೇಶ ರಕ್ಷಣಾ ಸೇವೆ ಮಾಡಲು ಸಿದ್ಧಗೊಳಿಸುವುದು.

Digitised by Bharatavani, CIIL

2) ತರುಣರನ್ನು ಮಾನಸಿಕವಾಗಿ, ದೈಹಿಕವಾಗಿ ದೇಶದ ಒಳ್ಳೆಯ ನಾಗರಿಕರನ್ನಾಗಿ ಮಾಡುವುದು.

3) ಸಾಮಾನ್ಯ ವಿದ್ಯಾರ್ಥಿಗಳೂ ಸೇರಿದಂತೆ ರಕ್ಷಣಾ ಸೇವೆ ಮಾಡಬೇಕೆಂದಿರುವ ವಿದ್ಯಾರ್ಥಿಗಳಿಗೆ ಉತ್ತಮ ಮಟ್ಟದ ಶಿಕ್ಷಣ ಒದಗಿಸಲು ವಸತಿ ಶಾಲೆಗಳನ್ನು ಒದಗಿಸುವುದು.

4) ಸೈನ್ಯಕ್ಕೆ ಸೇರಿ ಉತ್ತಮ ರೀತಿಯಲ್ಲಿ ರಕ್ಷಣಾ ಸೇವೆ ಮಾಡಲು ಅವಶ್ಯಕವಾದ ವ್ಯಕ್ತಿತ್ವ ಲಕ್ಷಣಗಳನ್ನು ವಿದ್ಯಾರ್ಥಿಗಳಲ್ಲಿ ರೂಪಿಸುವುದು.

5) ರಕ್ಷಣಾ ಸೇವೆಯಲ್ಲಿ ಇರುವ ಉನ್ನತ ಅಧಿಕಾರಿಗಳ ನೇಮಕಾತಿಯಲ್ಲಿ ಇರಬಹುದಾದ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವುದು.

6) ಉತ್ತಮಮಟ್ಟದ ಶಿಕ್ಷಣ ಒದಗಿಸುವ ಪಬ್ಲಿಕ್ ಶಾಲೆಗಳಿಗೆ ಸೇರಲು ಸಾಮಾನ್ಯ ಜನತೆಗೂ ಅವಕಾಶ ಕಲ್ಪಿಸುವುದು.

**ಸಂಘಟನೆ ಮತ್ತು ಆಡಳಿತ**

1) ಸೈನಿಕ ಶಾಲೆಗಳ ಸಂಸ್ಥೆ ದೇಶದಲ್ಲಿರುವ ಎಲ್ಲ ಸೈನಿಕ ಶಾಲೆಗಳನ್ನು ಮುನ್ನಡೆಸುತ್ತದೆ.

2) ಈ ಸಂಸ್ಥೆಯ ಆಡಳಿತವು ದೇಶದ ರಕ್ಷಣಾ ಸಚಿವರ ಕೈಯಲ್ಲಿರುತ್ತದೆ.

3) ಈ ಸಂಸ್ಥೆಯನ್ನು ಮುನ್ನಡೆಸುವ ಮತ್ತು ಅಭಿವೃದ್ಧಿಗೊಳಿಸುವ ಜವಾಬ್ದಾರಿಯು ಕೇಂದ್ರ ರಕ್ಷಣಾ ಕಾರ್ಯದರ್ಶಿಯ ಹಿಡಿತದಲ್ಲಿರುತ್ತದೆ.

**ಹಿನ್ನೆಲೆ**

ಬ್ರಿಟಿಷರ ಆಡಳಿತಾವಧಿಯಲ್ಲಿ ಜಾರಿಗೆ ಬಂದ ಭಾರತ ಸರ್ಕಾರ ಕಾಯ್ದೆ 1935ಕ್ಕೆ ಮೊದಲು ಮತ್ತು ಎರಡನೇ ವಿಶ್ವ ಮಹಾಯುದ್ಧದ ಸಮಯದಲ್ಲಿದ್ದ ಬೇಡಿಕೆಯ ಅವಧಿಯಲ್ಲಿ ಭಾರತದ ಸೈನ್ಯದಲ್ಲಿ ಅಧಿಕಾರಿಗಳ ಹುದ್ದೆ ಬ್ರಿಟಿಷರಿಗೆ ಮಾತ್ರ ಸೀಮಿತವಾಗಿತ್ತು. ಅಪರೂಪಕ್ಕೆ ರಾಜಮನೆತನಕ್ಕೆ ಸೇರಿದ ಕೆಲವರಿಗೆ ಸೈನ್ಯದಲ್ಲಿ ಅಧಿಕಾರಿಗಳಾಗುವ ಅವಕಾಶ ನೀಡಲಾಗಿತ್ತು. ನಂತರದ ಅವಧಿಯಲ್ಲಿ ಸೈನ್ಯದಲ್ಲಿ ಅಧಿಕಾರ ಸ್ಥಾನವನ್ನು ಪಡೆಯುವ ಅವಕಾಶ ಹೊಡೆದಾಡುವ ಗುಣ ಹೊಂದಿದ್ದ ಕುಲಗಳಲ್ಲಿ ಹುಟ್ಟಿದವರಿಗೆ, ದುಬಾರಿಯಾದ, ಶಿಷ್ಟ ವರ್ಗಕ್ಕೆ ಸೀಮಿತವಾಗಿದ್ದ ಡೆಹರಾಡೂನಿನ ಊಟಿಯ ಪಬ್ಲಿಕ್ ಶಾಲೆಗಳಲ್ಲಿ ಅಧ್ಯಯನ ಮಾಡಿರುವವರಿಗೆ ಮಾತ್ರ ಲಭ್ಯವಿತ್ತು. 1947ರ ನಂತರ ಡೆಹರಾಡೂನಿನಲ್ಲಿ ರಾಷ್ಟ್ರೀಯ ಮಿಲಿಟರಿ ಅಕಾಡೆಮಿಯನ್ನು ಸ್ಥಾಪಿಸಲಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ಸೈನ್ಯದಲ್ಲಿ ನಿಜವಾದ ಅಖಿಲ ಭಾರತೀಯ ಬಿಂಬದ, ಲಕ್ಷಣದ, ಮನೋಭಾವದ ಅಭಾವ ಕಂಡುಬರುತ್ತಿತ್ತು. ಈ ಕೊರತೆಯನ್ನು ನಿವಾರಿಸಿ ಸೈನಿಕರನ್ನು ಭಾರತೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಯುವಕ/ಯುವತಿಯರನ್ನು ರಕ್ಷಣಾ ಸೇವೆಗೆ ಸಿದ್ಧಪಡಿಸಲು ಖಡಕ್‌ವಾಸ್ಲಾ (ಮಹಾರಾಷ್ಟ್ರ)ನಲ್ಲಿ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯನ್ನು (National Defence Academy-NDA) ಜನವರಿ 1, 1949ರಲ್ಲಿ ಆರಂಭಿಸಲಾಯಿತು.

ಈ ಅಕಾಡೆಮಿಗೆ ಸೇರಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಪಬ್ಲಿಕ್ ಶಾಲೆಗಳಲ್ಲಿ ದೊರೆಯುವ ರೀತಿಯ ಉತ್ತಮ ಶಾಲಾ ಶಿಕ್ಷಣವನ್ನು ನೀಡಲು ಹಿಂದೆ ರಕ್ಷಣಾ ಸಚಿವರಾಗಿದ್ದ ವಿ.ಕೆ. ಕೃಷ್ಣಮೆನನ್ನರ ಸಲಹೆಯಂತೆ ಪಬ್ಲಿಕ್ ಶಾಲೆಗಳ ಮಾದರಿಯಲ್ಲಿಯೇ ಸೈನಿಕ ಶಾಲೆಗಳನ್ನು ಆರಂಭಿಸಲಾಯಿತು. ಈ ಸಲಹೆಯನ್ನು ಪಂಜಾಬ್ ರಾಜ್ಯ ಮೊದಲು ಒಪ್ಪಿಕೊಂಡಿತು. ಆದರೆ ಸತಾರಾದಲ್ಲಿ ಮೊಟ್ಟಮೊದಲಿಗೆ ಸೈನಿಕ ಶಾಲೆಯನ್ನು ಜನವರಿ 23, 1961ರಲ್ಲಿ ಆರಂಭಿಸಿದ ಕೀರ್ತಿ ಮಹಾರಾಷ್ಟ್ರ ಸರ್ಕಾರಕ್ಕೆ ಸಲ್ಲುತ್ತದೆ. ಇದಾದ ನಂತರ ಇತರ ರಾಜ್ಯಗಳೂ ಈ ಸಲಹೆಯ ಮೇರೆಗೆ ಸೈನಿಕ ಶಾಲೆಗಳನ್ನು ಆರಂಭಿಸಿದವು. ಇತ್ತೀಚಿನ ವರ್ಷಗಳಲ್ಲಿ ಆರಂಭವಾದ ಸೈನಿಕಶಾಲೆಗಳೆಂದರೆ 12 ಅಕ್ಟೋಬರ್, 2003 ಬಿಹಾರದ ನಳಂದ ಮತ್ತು ಗೋಪಾಲಗಂಜ್‌ನ ಸೈನಿಕ ಶಾಲೆಗಳು, 12 ಏಪ್ರಿಲ್ 2007ರಲ್ಲಿ ಆರಂಭವಾದ ನಾಗಾಲ್ಯಾಂಡಿನ ಪಹಲ್ ಗಾಮ್‌ನ ಶಾಲೆ ಮತ್ತು 2007 ಅಕ್ಟೋಬರ್‌ನಲ್ಲಿ ಆರಂಭವಾದ ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಸೈನಿಕ ಶಾಲೆ. ಈಗ ಭಾರತದಲ್ಲಿ ಒಟ್ಟು 22 ಸೈನಿಕ ಶಾಲೆಗಳು ಇವೆ. ಕರ್ನಾಟಕ ಮತ್ತು ಬಿಹಾರ ರಾಜ್ಯಗಳಲ್ಲಿ ಎರಡು ಸೈನಿಕ ಶಾಲೆಗಳಿವೆ. ಈ ಶಾಲೆಗಳಿರುವ ಸ್ಥಳ ಹಾಗೂ ರಾಜ್ಯಗಳ ವಿವರ ಈ ರೀತಿ ಇದೆ.

ಸತಾರಾ (ಮಹಾರಾಷ್ಟ್ರ), ಕುಂಜಪುರ (ಹರಿಯಾಣ), ಕಪೂರ್‌ತಲ (ಪಂಜಾಬ್), ಬಾಲಾಚಾಡಿ (ಗುಜರಾತ್), ಚಿತ್ತೋರ್‌ಗಡ್ (ರಾಜಸ್ಥಾನ), ಕೋರುಕೊಂಡ (ಆಂಧ್ರಪ್ರದೇಶ), ಕಳಕೂಟ್ಟಂ (ಕೇರಳ), ಪುರುಲಿಯ (ಪಶ್ಚಿಮ ಬಂಗಾಳ), ಭುವನೇಶ್ವರ (ಒರಿಸ್ಸಾ), ಅಮರಾವತಿ ನಗರ (ತಮಿಳುನಾಡು), ರೇವಾ (ಮಧ್ಯಪ್ರದೇಶ), ತಿಲಯ್ಯ (ಝಾರ್‌ಖಂಡ್), ಬಿಜಾಪುರ (ಕರ್ನಾಟಕ), ಗೋಪಾಲ ಪಾರ (ಅಸ್ಸಾಂ), ಘೋರಾಕಲ್ (ಉತ್ತರಾಂಚಲ್), ನಗ್ರೋತ (ಜಮ್ಮು ಮತ್ತು ಕಾಶ್ಮೀರ), ಇಂಫಾಲ (ನಾಗಾಲ್ಯಾಂಡ್), ಸುಬ್ರಾನ್ ಪುರ್ ತೀರ (ಹಿಮಾಚಲ ಪ್ರದೇಶ), ನಾಲಂದ (ಬಿಹಾರ), ಗೋಪಾಲಗಂಜ್ (ಬಿಹಾರ), ಪಂಗಲ್ವ (ನಾಗಾಲ್ಯಾಂಡ್), ಮಡಿಕೇರಿ (ಕರ್ನಾಟಕ).

**ಪ್ರವೇಶ ವಿಧಾನ**

1) ಆರನೇ ತರಗತಿಗೆ ಪ್ರವೇಶವನ್ನು ಭಾರತಾದ್ಯಂತ ನಡೆಸಲಾಗುವ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಶಗಳ ಆಧಾರದ ಮೇಲೆ ನೀಡಲಾಗುತ್ತದೆ. ಈ ಪರೀಕ್ಷೆಯಲ್ಲಿ ಗಣಿತ, ವಿಜ್ಞಾನ, ಇಂಗ್ಲಿಷ್ ಮತ್ತು ಸಮಾಜ ವಿಜ್ಞಾನದ ಅಂಶಗಳಿರುತ್ತವೆ. ಜೊತೆಗೆ ಸಂದರ್ಶನ, ವೈದ್ಯಕೀಯ ಪರೀಕ್ಷೆಯೂ ಇರುತ್ತದೆ.

2) ಪ್ರವೇಶಕ್ಕಾಗಿ 6ನೇ ತರಗತಿಗೆ ಮತ್ತು 9ನೇ ತರಗತಿಗೆ ಪರೀಕ್ಷೆಯನ್ನು ಆಯೋಜಿಸಲಾಗುತ್ತದೆ.

3) 9ನೇ ತರಗತಿಗೆ 1. ಗಣಿತ ಮತ್ತು ವಿಜ್ಞಾನ 2. ಇಂಗ್ಲಿಷ್ ಮತ್ತು ಸಮಾಜ ವಿಜ್ಞಾನ ವಿಷಯಗಳಾಗಿರುತ್ತವೆ. ಈ ಮೇಲೆ ವಿವರಿಸಿದಂತೆ ಅಭ್ಯರ್ಥಿಗಳು ಕಡ್ಡಾಯವಾಗಿ ಪಾಸಾದ ನಂತರ ಶಾಲೆಯಿಂದ ಹಮ್ಮಿಕೊಳ್ಳುವ ಸಂದರ್ಶನ ಹಾಗೂ ಜಿಲ್ಲಾ ಆಸ್ಪತ್ರೆಯಿಂದ ಹಮ್ಮಿಕೊಳ್ಳಲಾಗುವ ಆರೋಗ್ಯ ತಪಾಸಣೆಯಲ್ಲಿ ಕಡ್ಡಾಯವಾಗಿ ಪಾಸಾಗಿರಬೇಕು.

**ವಯೋಮಿತಿ ಈ ಕೆಳಗಿನಂತಿವೆ–**

1. ಆರನೇ ಕ್ಲಾಸಿಗೆ – 10 ರಿಂದ 11 ವರ್ಷದವರಾಗಿರಬೇಕು – (1 ಜುಲೈ ಪ್ರತಿವರ್ಷ).

2. 9ನೇ ಕ್ಲಾಸಿಗೆ – 13 ರಿಂದ 14 ವರ್ಷದವರಾಗಿರಬೇಕು – (1 ಜುಲೈ ಪ್ರತಿವರ್ಷ).

3. 11ನೇ ಕ್ಲಾಸಿಗೆ ಪ್ರವೇಶ ಬಯಸುವವರಿಗೆ ಈ ಮೇಲೆ ವಿವರಿಸಿದ ಪರೀಕ್ಷೆಯನ್ನು ಏರ್ಪಡಿಸಲಾಗುವುದಿಲ್ಲ. ಅಂತಹ ಅಭ್ಯರ್ಥಿಗಳಿಗೆ ನೇರವಾಗಿ ಪ್ರವೇಶವನ್ನು ಕೊಡಲಾಗುವುದು.

Digitised by Bharatavani, CIIL

ಸೈನಿಕ ಶಾಲೆಗಳಲ್ಲಿ ಶೇ. 67ರಷ್ಟು ಸ್ಥಾನಗಳನ್ನು ಆಯಾ ರಾಜ್ಯದ ವಿದ್ಯಾರ್ಥಿಗಳಿಗೆ ಕಾಯ್ದಿರಿಸಲಾಗಿದೆ. ಉಳಿದ ಶೇ. 33ರಷ್ಟು ಸ್ಥಾನಗಳು ಇತರ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮಕ್ಕಳಿಗೆ ಲಭ್ಯವಿವೆ. ಈ ವಿಭಜನೆಯಡಿಯಲ್ಲಿಯೇ ಶೇ. 25ರಷ್ಟು ಸ್ಥಾನಗಳನ್ನು ಭಾರತೀಯ ಸೇನೆಯಲ್ಲಿರುವವರ ಮತ್ತು ಸೇನೆಯಿಂದ ನಿವೃತ್ತರಾಗಿರುವವರ ಮಕ್ಕಳಿಗೂ ಶೇ. 15ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೂ ಶೇ. 7 $^1/_2$ ಸ್ಥಾನಗಳನ್ನು ಪರಿಶಿಷ್ಟ ಬುಡಕಟ್ಟಿನವರಿಗೂ ಕಾಯ್ದಿರಿಸಲಾಗಿದೆ. ಆರಂಭದ ವರ್ಷಗಳಲ್ಲಿ ಸೈನಿಕ ಶಾಲೆಗಳಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಸ್ಕೂಲ್ ಎಜುಕೇಷನ್ (ICSE) ಪಠ್ಯಕ್ರಮ ವಿನ್ಯಾಸವನ್ನು ಅನುಸರಿಸಲಾಗುತ್ತಿತ್ತು. ಆನಂತರ 1972ರಿಂದ ಕೇಂದ್ರೀಯ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (CBSE) ಪಠ್ಯಕ್ರಮ ವಿನ್ಯಾಸವನ್ನು ಅನುಸರಿಸಲಾಗುತ್ತಿದೆ. ಆರಂಭದಲ್ಲಿ ಈ ಶಾಲೆಗಳಲ್ಲಿ 5 ರಿಂದ 9ನೇ ತರಗತಿವರೆಗಿನ ಅವಕಾಶವಿದ್ದಿತು. 1978 ರಿಂದ 6 ರಿಂದ 12 (10+2)ರ ವರೆಗಿನ ತರಗತಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

- ಸೈನಿಕ ಶಾಲೆಗಳು ಇಂಗ್ಲೆಂಡಿನಲ್ಲಿರುವಂಥ ಸಾರ್ವಜನಿಕ ಶಾಲೆಗಳಿಗೆ ಹೋಲುವಂಥ ವ್ಯವಸ್ಥೆ ಭಾರತದಲ್ಲಿ ಪ್ರಾರಂಭವಾಗಿದೆ.
- ಸೈನಿಕ ಶಾಲೆಗಳು ಭಾರತೀಯ ರಕ್ಷಣಾ ಖಾತೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತವೆ.
- ಪ್ರತಿ ಸೈನಿಕ ಶಾಲೆಗೆ ತನ್ನದೇ ಆದ ಆಡಳಿತ ಮಂಡಳಿ ಇರುತ್ತದೆ. ಈ ಮಂಡಳಿಯಲ್ಲಿ ರಕ್ಷಣಾ ಖಾತೆ ಮಂತ್ರಿ, ರಾಜ್ಯ ಸರಕಾರದ ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರು ಇದರ ಸದಸ್ಯರಾಗಿರುತ್ತಾರೆ.
- ಶಾಲೆಯ ಸ್ಥಾನಿಕ ಆಡಳಿತ ಮಂಡಳಿಯಲ್ಲಿ ಹಾಲಿ ಇರತಕ್ಕಂಥ ಕಾರ್ಯ ನಿರ್ವಹಿಸುವ ಸೇನಾಧಿಕಾರಿಗಳು ಇದರ ಚೇರಮನ್ ಮತ್ತು ಆಯಾ ಜಿಲ್ಲಾಧಿಕಾರಿಗಳು, ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ಸ್ಥಳೀಯ ಶಾಸಕರು ಹಾಗೂ ಸಂಸದರು ಮತ್ತು ಶಾಲೆಯ ಪ್ರಾಂಶುಪಾಲರು, ಹೆಡ್ ಮಾಸ್ಟರ್, ಕುಲಸಚಿವರು ಹಾಗೂ ಪಾಲಕ ಸಂಘದ ಪ್ರತಿನಿಧಿ ಈ ಮಂಡಳಿಯ ಸದಸ್ಯರಾಗಿರುತ್ತಾರೆ.
- ಇದು ವರ್ಷದಲ್ಲಿ ಎರಡು ಬಾರಿ ಮೀಟಿಂಗನ್ನು ರಾಜ್ಯದ ರಾಜಧಾನಿಯಲ್ಲಿ ಏರ್ಪಡಿಸುತ್ತದೆ.
- ಶಾಲೆಯ ನಿರ್ವಹಣೆಗಾಗಿ ರಾಜ್ಯಸರ್ಕಾರವು ರಕ್ಷಣಾ ಖಾತೆಗೆ ಸ್ಥಳ, ಶಿಷ್ಯವೇತನ ಹಾಗೂ ಕಟ್ಟಡಗಳ ನಿರ್ವಹಣೆಗಾಗಿ ಧನ ಸಹಾಯವನ್ನು ಒದಗಿಸುತ್ತದೆ. ಇದರ ವ್ಯವಹಾರ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಒಳ ಒಪ್ಪಂದಕ್ಕೆ ಸೇರಿರುತ್ತದೆ.

**ಪಠ್ಯಕ್ರಮ**

ಎಲ್ಲ ಸೈನಿಕ ಶಾಲೆಗಳು ಕೇಂದ್ರೀಯ ಸೆಕೆಂಡರಿ ಶಿಕ್ಷಣ ಮಂಡಳಿ (CBSE)ಗೆ ಸಂಯೋಜಿತವಾಗಿರುವುದರಿಂದ, ಆ ಮಂಡಳಿ ನಿಗದಿಪಡಿಸಿದ ಪಠ್ಯಕ್ರಮವನ್ನು ಅನುಸರಿಸುತ್ತವೆ. ಶಾಲೆಗಳಲ್ಲಿ ಪಠ್ಯಕ್ರಮ ನಿರ್ವಹಣೆ ಅಂದರೆ ಬೋಧನೆ ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ನಡೆಯುತ್ತದೆ. ಸಿ.ಬಿ.ಎಸ್.ಇ. ಪಠ್ಯಕ್ರಮ ರಾಜ್ಯಗಳ ಸೆಕೆಂಡರಿ ಶಾಲಾಮಟ್ಟದ ಪಠ್ಯಕ್ರಮಕ್ಕೆ ಹೋಲಿಸಿದರೆ ಹೆಚ್ಚು ಸಮೃದ್ಧವಾಗಿದ್ದು ಮೇಲ್ಮಟ್ಟದ್ದಾಗಿರುತ್ತದೆ. ಪಠ್ಯ ವಸ್ತುವಿನ ಬೋಧನೆಗೆ ಅವಶ್ಯಕವಾಗಿ ಬೇಕಾದ ಸುಸಜ್ಜಿತವಾದ ಪ್ರಯೋಗಶಾಲೆಗಳು, ಕಂಪ್ಯೂಟರ್ ಪ್ರಯೋಗಾಲಯಗಳು ಮತ್ತು ಗ್ರಂಥಾಲಯಗಳನ್ನು ಎಲ್ಲ ಸೈನಿಕ ಶಾಲೆಗಳು ಹೊಂದಿರುತ್ತವೆ.

**ಪಠ್ಯೇತರ ಚಟುವಟಿಕೆಗಳು**

ಭಾವಿ ಸೈನಿಕರನ್ನು, ಸೇನಾಧಿಕಾರಿಗಳನ್ನು ರೂಪಿಸುವ ಉದ್ದೇಶದಿಂದ ಸೈನಿಕ ಶಾಲೆಗಳು ವೈವಿಧ್ಯಪೂರ್ಣವಾದ, ಪಠ್ಯೇತರ ಚಟುವಟಿಕೆಗಳನ್ನು ಸಂಘಟಿಸುತ್ತವೆ. ಮಕ್ಕಳಲ್ಲಿ ಸಾಹಸ ಪ್ರವೃತ್ತಿ, ಕಷ್ಟ ಸಹಿಷ್ಣುತೆ, ಧೈರ್ಯ, ಪಟ್ಟು ಸಾಧಿಸುವ ಪ್ರವೃತ್ತಿ ಮುಂತಾದ ವಿವೇಚಿತ ಗುಣಗಳನ್ನು ಬೆಳೆಸುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಈ ಚಟುವಟಿಕೆಗಳು ರೂಪಿತವಾಗುತ್ತವೆ. ದೈಹಿಕ ತರಬೇತಿ ಕ್ರೀಡೆಗಳು, ಕುದುರೆ ಸವಾರಿ, ಬಾಕ್ಸಿಂಗ್ ಮುಂತಾದ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುತ್ತಾರೆ.

ಸೈನಿಕ ಶಾಲೆಗಳ ಅಧ್ಯಾಪಕರನ್ನು ಆಯ್ಕೆ ಮಾಡುವಾಗ ಕಠಿಣ ನಿರ್ಣಾಯಕಗಳನ್ನು ಅನುಸರಿಸುವುದರಿಂದ ಉತ್ತಮ ಮಟ್ಟದ ಅರ್ಹತೆಗಳುಳ್ಳ ಅಧ್ಯಾಪಕರು ಆಯ್ಕೆಯಾಗುತ್ತಾರೆ. ಆದ್ದರಿಂದ ಈ ಶಾಲೆಗಳ ಮಕ್ಕಳಿಗೆ ಒಳ್ಳೆಯ ಬೋಧನೆ ದೊರಕುತ್ತದೆ. ಸೈನಿಕ ಶಾಲೆಗಳು ಮಕ್ಕಳ ಶೈಕ್ಷಣಿಕ ಸಾಧನೆಯಲ್ಲಿ ಉತ್ತಮ ಫಲಿತಾಂಶ ತೋರಿಸುತ್ತಿವೆ. ಈ ಶಾಲೆಗಳಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಸೈನ್ಯದಲ್ಲಿ ಹಾಗೂ ಇತರ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ.

– ಕೆ.ದ.ಮೂ

## ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಮಿಶನರಿಗಳ ಕೊಡುಗೆ

ಮಿಶನರಿಗಳು ಭಾರತದಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತಿದ್ದರು. 1813ರ ಸನ್ನದ ಕಾಯಿದೆಯು ಭಾರತವನ್ನು ಮಿಶನರಿ ಸಂಘಗಳಿಗೆ ಮುಕ್ತ ಮಾಡಿತು. ಆದುದರಿಂದ 1813–1833ರ ಅವಧಿಯು ಕಂಪನಿಯವರ ವಶದಲ್ಲಿದ್ದ ಪ್ರದೇಶಗಳ ಎಲ್ಲ ಭಾಗಗಳಲ್ಲಿ ಮಿಶನರಿಗಳ ದೊಡ್ಡ ಚಟುವಟಿಕೆಯ ಕಾಲವಾಗಿತ್ತು. ಭಾರತದಲ್ಲಿ ಆ ಮೊದಲೇ ಕೆಲಸ ಮಾಡುತ್ತಿದ್ದ ಮಿಶನರಿ ಸಂಘಗಳು ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿದವು ಮತ್ತು ಹೊಸ ಸಂಘಗಳು ರಂಗಭೂಮಿಯ ಮೇಲೆ ಕಾಣಿಸಿಕೊಂಡವು. ಕೊನೆಯ ಸಂಘಗಳಲ್ಲಿ ಅಂದರೆ ಹೊಸದಾಗಿ ಬಂದ ಸಂಘಗಳಲ್ಲಿ ಜನರಲ್ ಬ್ಯಾಪ್ಟಿಸ್ಟ್ ಮಿಶನ್ ಸೊಸೈಟಿ (General Baptist Mission Society) ಲಂಡನ್ ಮಿಶನರಿ ಸಂಘ (London Missionary Society), ಚರ್ಚ್ ಮಿಶನರಿ ಸಂಘ (The Church Missionary Society), ವೆಸ್ಲಿಯನ್ ಮಿಶನ್ (The Wesleyan Mission) ಮತ್ತು ಸ್ಕಾಚ್ ಮಿಶನರಿ ಸಂಘ (Scotch Missionary Society) ಇವುಗಳನ್ನು ವಿಶೇಷವಾಗಿ ಉಲ್ಲೇಖಿಸಬಹುದು.

ಮಿಶನರಿಗಳ ಶೈಕ್ಷಣಿಕ ಕೆಲಸದ ಬಗೆಗೆ ಮೂರು ವೈಶಿಷ್ಟ್ಯಗಳು ಗಮನಾರ್ಹವಾಗಿವೆ. ಮೊದಲನೆಯದಾಗಿ, ಶಿಕ್ಷಣವು ಎಂದೂ ಮಿಶನರಿಗಳ ಮುಖ್ಯ ಉದ್ದೇಶವಾಗಿರಲಿಲ್ಲ. ಅವರು ಮತಾಂತರದ ಗುರಿ ಇಟ್ಟುಕೊಂಡಿದ್ದರು ಮತ್ತು ಮತಾಂತರ ಹೊಂದಿದ ಜನರ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಶಿಕ್ಷಣದ ಕಾರ್ಯವನ್ನು ಕೈಗೊಂಡರು. ಹೆಚ್ಚಾಗಿ ತಮ್ಮ ಮತಾಂತರಗೊಳಿಸುವ ಚಟುವಟಿಕೆಗಳಲ್ಲಿ ಭಾರತೀಯ ಸಹಾಯಕರನ್ನು ತರಬೇತಿಗೊಳಿಸುವುದಕ್ಕಾಗಿ ಶೈಕ್ಷಣಿಕ ಕಾರ್ಯವನ್ನು ಕೈಗೊಂಡರು. ಎರಡನೆಯದಾಗಿ, ಆರಂಭದ ಮಿಶನರಿಗಳು ಆಧುನಿಕ ಭಾರತೀಯ ಭಾಷೆಗಳ ಅಭ್ಯಾಸಕ್ಕೆ ಕೊಟ್ಟ ಮಹತ್ವವು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ. ಅವರು ಸಮಾಜದ ತೀರ ಕೆಳಗಿನ ವರ್ಗಗಳ ಜನರೊಡನೆ ಕೆಲಸ ಮಾಡಬೇಕಾಗಿತ್ತು. ಆ ಜನರಿಗೆ ತಮ್ಮ ಭಾಷೆಯ ಹೊರತು ಅನ್ಯಭಾಷೆಯು ಗೊತ್ತಿರಲಿಲ್ಲ. ಆದಕಾರಣ ಮಿಶನರಿಗಳು ಭಾರತೀಯ ಭಾಷೆಗಳನ್ನು ನಿಷ್ಠೆಯಿಂದ ಕಲಿತರು. ಅರ್ಥಕೋಶಗಳನ್ನು, ನಿಘಂಟುಗಳನ್ನು

Digitised by Bharatavani, CIIL

ತಯಾರಿಸಿದರು. ವ್ಯಾಕರಣ ಗ್ರಂಥಗಳನ್ನು ಬರೆದರು. ಬೈಬಲ್‌ಗಳನ್ನು ಆ ಭಾಷೆಗಳಲ್ಲಿ ಅನುವಾದಿಸಿದರು. ಆರಂಭದ ಅನೇಕ ಮಿಶನ್ ಶಾಲೆಗಳು ವಿದ್ಯಾರ್ಥಿಗಳ ಮಾತೃಭಾಷೆಯ ಮುಖಾಂತರ ಶಿಕ್ಷಣವನ್ನು ಕೊಟ್ಟರು. ಭಾರತೀಯ ಮಿಶನರಿಗಳಿಗೆ "ದೇಶೀಯರಲ್ಲಿ ಸಾಮಾನ್ಯವಾಗಿ ಮಾತನಾಡುವ ಭಾಷೆಗಳು ಪಾಮರವಾಗಿರುವವೆಂದೂ, ಯಾವುದೇ ಮಹತ್ವದ ಕೃತಿಯನ್ನು ಅವುಗಳಲ್ಲಿ ಅನುವಾದಿಸಲು ಸಾಧ್ಯವೆಂದೂ ತೋಚಲಿಲ್ಲ." ಈ ಹೇಳಿಕೆಯ ಸತ್ಯವನ್ನು ಕಂಪೆನಿಯ ಅಧಿಕಾರಿಗಳು ಸಂಪೂರ್ಣ ಅರಿತುಕೊಂಡರು. ಆದುದರಿಂದ ಭಾರತೀಯ ಭಾಷೆಗಳಲ್ಲಿ ಪ್ರಪ್ರಥಮ ಶಾಲಾ ಪಠ್ಯ ಪುಸ್ತಕಗಳನ್ನು ರಚಿಸಿದ ಶ್ರೇಯಸ್ಸು ಮಿಷನರಿಗಳಿಗೆ ಸಲ್ಲುತ್ತದೆ.

ಮೂರನೆಯದಾಗಿ, ಮಿಶನರಿಗಳು ಈ ಅವಧಿಯಲ್ಲಿದ್ದ ಅಧಿಕಾರಿಗಳೂ ಹೆಜ್ಜೆಯಿಡಲು ನಿರಾಕರಿಸಿದ "ಗಂಡಾಂತರ ಕ್ಷೇತ್ರ"ವೆನಿಸಿದ್ದ 'ಸ್ತ್ರೀ ಶಿಕ್ಷಣ' ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಕೆಲಸವನ್ನು ಮಾಡಿದರು. ಮಿಶನರಿ ವ್ಯಕ್ತಿಗಳ ಹೆಂಡಂದಿರು ಮತ್ತು ಕೆಲವು ಮಿಶನ್ ಸ್ತ್ರೀ ಕಾರ್ಯಕರ್ತೆಯರು ಈ ವಿಷಯದಲ್ಲಿ ಮುಂದಾದರು ಮತ್ತು ಹೆಣ್ಣು ಮಕ್ಕಳಲ್ಲಿ ಶಿಕ್ಷಣ ಪ್ರಸಾರ ಮಾಡಹತ್ತಿದರು. ಇದು ಮೂರು ತರಹದ ಚಟುವಟಿಕೆಗಳಿಂದ ನಡೆಯಿತು.

ಅ) ಭಾರತೀಯ ಬಾಲಿಕೆಯರ ಸಲುವಾಗಿ ಹಗಲು ಶಾಲೆಗಳನ್ನು ತೆರೆಯುವುದು.

ಬ) ಅನಾಥ ಗೃಹಗಳನ್ನು ಸ್ಥಾಪಿಸುವುದು.

ಕ) ಗೃಹ ಶಿಕ್ಷಣ ಅಥವಾ ಮಧ್ಯಮ ವರ್ಗದ ಮತ್ತು ಉಚ್ಚವರ್ಗಗಳ ಮನೆತನಗಳಲ್ಲಿ ಝನಾನಾ (Zenana) ಶಿಕ್ಷಣ ಪಡೆಯುವುದು. ಕಂಪೆನಿಯವರು ಮಿಷನರಿಗಳ ಶೈಕ್ಷಣಿಕ ಕೆಲಸದ ಉಪಯುಕ್ತತೆಯನ್ನು ಗುರುತಿಸಿದ್ದಲ್ಲದೆ ಅವರ ಆ ಕೆಲಸಕ್ಕೆ ಕೆಲವು ಸಲ ಸಹಾಯಧನದ ಮಂಜೂರಾತಿ ನೀಡಿದರು. ಭಾರತೀಯರಲ್ಲಿ ಶಿಕ್ಷಣ ಪ್ರಸಾರ ಮಾಡುವ ಸಲುವಾಗಿ ಸ್ಥಾಪಿತವಾದ ಮಿಶನರಿಗಳ ಸಂಘಗಳ ಜೊತೆಗೆ ಕಂಪೆನಿಯ ಅಧಿಕಾರಿಗಳು ಆಗಾಗ್ಗೆ ಕೆಲಸ ಮಾಡಿದರು.

ಸುಮಾರು ಇದೇ ಸಮಯದಲ್ಲಿ ಇತರ ದೇಶಗಳ ಮಿಶನರಿಗಳು ರಂಗಭೂಮಿಯ ಮೇಲೆ ಬಂದರು. ಇವುಗಳಲ್ಲಿ ಜರ್ಮನ್ ಮತ್ತು ಅಮೆರಿಕನ್ ಮಿಷನ್‌ಗಳು ಮುಖ್ಯವಾದವು. ಬಾಸೆಲ್ ಮಿಷನ್ ಸೊಸೈಟಿಯು 1834ರಲ್ಲಿ ಮಂಗಳೂರಿನಲ್ಲಿ ತನ್ನ ಕಾರ್ಯವನ್ನು ಆರಂಭಿಸಿತು ಮತ್ತು ಶೀಘ್ರದಲ್ಲಿಯೇ ತನ್ನ ಚಟುವಟಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಕನ್ನಡ ಮತ್ತು ಮಲಯಾಳಿ ಪ್ರದೇಶಗಳಲ್ಲಿ ವಿಸ್ತರಿಸಿತು. 1836ರಲ್ಲಿ ಡ್ರೆಸ್ಡೇನದಲ್ಲಿ ಪ್ರೊತೆಸ್ತಾಂತ ಲುಥೆರಾನ ಮಿಶನರಿ ಸೊಸೈಟಿಯು ಸ್ಥಾಪಿತವಾಯಿತು. ಅದರಂತೆ 'Women's Association of Females in the orient' ಎಂಬ ಇನ್ನೊಂದು ಸಂಘವು 1842ರಲ್ಲಿ ಬರ್ಲಿನ್‌ನಲ್ಲಿ ಸ್ಥಾಪಿತವಾಯಿತು. ಈ ಎರಡು ಸಂಘಗಳು ಭಾರತದಲ್ಲಿ ಗಣನೀಯ ಮಿಶನರಿ ಕಾರ್ಯವನ್ನು ಮಾಡಿದವು.

1833 ಮತ್ತು 1853ರ ಅವಧಿಯಲ್ಲಿ ಆಂಗ್ಲ ಭಾಷೆಯ ಮುಖಾಂತರ ಕಲಿಸುವ ಮಾಧ್ಯಮಿಕ ಶಾಲೆಗಳತ್ತ ಹಾಗೂ ಕಾಲೇಜುಗಳತ್ತ ಮಿಶನರಿಗಳು ಹೆಚ್ಚು ಗಮನವಿತ್ತರು. ಎರಡು ಕಾರಣಗಳಿಂದ ಈ ಬದಲಾವಣೆಯನ್ನು ಅವರು ಮಾಡಬೇಕಾಯಿತು. ಈಗಾಗಲೇ ಹೇಳಿದಂತೆ ಪಾಶ್ಚಿಮಾತ್ಯ ವಿಜ್ಞಾನ ಮತ್ತು ಸಾಹಿತ್ಯದ ಅಭ್ಯಾಸವು ಕ್ರೈಸ್ತಧರ್ಮದ ಮತಾಂತರಕ್ಕೆ ಕರೆದೊಯ್ಯುವುದು ಒಂದನೆಯ ಕಾರಣವಾಗಿದ್ದಿತು. ಸಮಾಜದ ಮೇಲಿನ ವರ್ಗಗಳ ಜನರನ್ನು ಬದಲಾಯಿಸಬೇಕೆಂಬ ಇಚ್ಛೆಯು ಎರಡನೆಯ ಕಾರಣ. ಮೇಲಿನ ವರ್ಗದವರು ಆಂಗ್ಲ ಭಾಷೆಯನ್ನು ಲೌಕಿಕ ಲಾಭಗಳಿಗಾಗಿ ಕಲಿಯಲು ಇಚ್ಛಿಸುವರೆಂಬುದು ಮಿಶನರಿಗಳಿಗೆ ಗೊತ್ತಿತ್ತು ಮತ್ತು ಇಂಗ್ಲಿಷ್ ಅಧ್ಯಯನದ ಸಲುವಾಗಿ ಮಿಶನ್ ಶಾಲೆಗಳಲ್ಲಿ ಪ್ರವೇಶಿಸಲು ಅನುಮಾನಿಸುವುದಿಲ್ಲವೆಂಬುದೂ ಅವರಿಗೆ ತಿಳಿದಿತ್ತು. ಮಿಶನ್ ಶಾಲೆಯಲ್ಲಿ ಬಾಯ್ಬಲನ್ನು ಕಡ್ಡಾಯವಾಗಿ ಕಲಿಸುತ್ತಿದ್ದುದರಿಂದ ಇದು ಮಿಶನರಿಗಳಿಗೆ ಉಚ್ಚಜಾತಿಗಳ ಬಾಲಕ-ಬಾಲಿಕೆಯರೊಡನೆ ಸಂಪರ್ಕ ಬೆಳೆಸುವ ಅತ್ಯುತ್ತಮ ಅವಕಾಶ ಒದಗಿಸಿತು. ಇದರಿಂದ ಕ್ರೈಸ್ತ ಧರ್ಮೋಪದೇಶವನ್ನು ಬೋಧಿಸಲು ಅನುಕೂಲವಾಯಿತು. ಈ ಅವಧಿಯ ಶ್ರೇಷ್ಠ ಮಿಶನರಿಯಾದ ಮತ್ತು 1830ರಲ್ಲಿ ಕಲ್ಕತ್ತಾದಲ್ಲಿ ಸ್ವಂತ ಆಂಗ್ಲ ಶಾಲೆಯನ್ನು ಪ್ರಾರಂಭಿಸಿದ ಅಲೆಕ್ಝಾಂಡರ್ ಡಫನ್ ಇದರ ನಾಯಕತ್ವವನ್ನು ವಹಿಸಿದನು.

ಆಂಗ್ಲ ಶಿಕ್ಷಣದಲ್ಲಿ ಮತಾಂತರಗೊಳಿಸುವ ಶಕ್ತಿಯು ಅದ್ಭುತವಾಗಿದೆಯೆಂದು ಡಫ್‌ನು ನಂಬಿದ್ದನು. 1830ರ ನಂತರ ಮಿಷನರಿಗಳಿಂದ ನಡೆಸಲ್ಪಡುತ್ತಿದ್ದ ಇಂಗ್ಲಿಷ್ ಶಾಲೆಗಳ ಸಂಖ್ಯೆಯು ಶೀಘ್ರಗತಿಯಿಂದ ಬೆಳೆಯಹತ್ತಿತು. ಆಗ ಭಾರತೀಯ ವಿದ್ಯಾರ್ಥಿಗಳು ಮಿಶನರಿ ಶಾಲೆಗಳಿಗೆ ಧಾರ್ಮಿಕ ಬೋಧೆಗಾಗಿ ಹೋಗುತ್ತಿರಲಿಲ್ಲವೆಂದೂ ಆದರೆ ಸರ್ಕಾರದಲ್ಲಿ ನೌಕರಿಗಳನ್ನು ಪಡೆಯುವುದಕ್ಕಾಗಿ ಹೋಗುತ್ತಿದ್ದರೆಂದೂ ತಿಳಿದುಬರುತ್ತದೆ. ಆದರೆ ಮಿಶನರಿ ಜೀವಾಳದ ಅನಂತ ಸಹನೆ ಮತ್ತು ಅವಿನಾಶಿಯಾದ ಆಶಾವಾದದಿಂದ ಭಾರತೀಯ ಮಿಶನರಿಗಳು ಆಂಗ್ಲ ಶಾಲೆಗಳಲ್ಲಿ "ಏನಿಲ್ಲೆಂದರೂ ಕೆಲವು ಬೀಜಗಳಾದರೂ ಅಂಕುರಿಸಬಹುದು" ಎಂಬ ಆಶೆಯಿಂದ ಬಹಳ ಪರಿಶ್ರಮ ಪಟ್ಟರು.

1830-57ರ ಕಾಲು ಶತಮಾನವು '**ಮಿಶನ್ ಶಾಲಾಯುಗ**'ವೆಂದು ಹೆಸರಾಗಿದೆ. ಲಾರ್ಡ್ ಎಲ್ಫಿನ್‌ಸ್ಟನ್‌ನು ಮೂರುವರ್ಷಗಳವರೆಗೆ ಗವರ್ನರ್ ಜನರಲ್ ಆಗಿದ್ದನು. ಆತನು ಹಿಂದೂಗಳ ಶಿಕ್ಷಣದಿಂದ ಆಂಗ್ಲ ಅಧಿಕಾರದ ರಾಜಕೀಯ ವಿನಾಶವು ಆಗುವುದೆಂದು ಭಾವಿಸಿದ್ದನು. ಆದುದರಿಂದ ಆ ಸಮಯದಲ್ಲಿ ಮಿಶನ್ ಶಾಲೆಯು ಭಾರತೀಯ ವಿಚಾರಸರಣಿಯ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದ್ದಿತು. ಮುಂಬೈಯಲ್ಲಿ ಡಾ. ಜೋಸೆಫ್ ವಿಲ್ಸನ್‌ನು ಆ ಕಾಲದ (ಡಫ್‌ನ) ತರುವಾಯ ಅತ್ಯಂತ ಪ್ರತಿಭಾಶಾಲಿಯಾದ ಸ್ಕಾಚ್ ಮಿಶನರಿ ಒಂದು ಭವ್ಯವಾದ ಕಾಲೇಜನ್ನು ಸ್ಥಾಪಿಸಿದನು. ಮುಂದೆ ಆ ಕಾಲೇಜಿಗೆ ಅವನ ಹೆಸರನ್ನೇ ಇಡಲಾಯಿತು. ಮದ್ರಾಸಿನಲ್ಲಿ ಎಂಡರಸನ್ ಮತ್ತು ಬ್ರೇಡವುಡ ಅವರು 1837ರಲ್ಲಿ ಜನರಲ್ ಅಸೆಂಬ್ಲಿ ಶಾಲೆಯನ್ನು ಪ್ರಾರಂಭಿಸಿದರು. ಮುಂದೆ ಇದು ಅತ್ಯಂತ ಹೆಸರಾಂತ ಶೈಕ್ಷಣಿಕ ಮಿಶನರಿಯಾದ ಡಾ. ಮಿಲ್ಲರನ ಶ್ರೇಷ್ಠ ಮಾರ್ಗದರ್ಶನದಲ್ಲಿ "ಕ್ರಿಶ್ಚಿಯನ್ ಕಾಲೇಜ್" ಎಂದು ಹೆಸರುವಾಸಿಯಾಯಿತು. ಮಧ್ಯ ಹಿಂದೂಸ್ಥಾನದ ನಾಗಪುರದಲ್ಲಿ ಸ್ಟೀಫನ್ ಹಿಶಾಪ್‌ನು 1844ರಲ್ಲಿ ತನ್ನ ಸಂಘದ ನಾಲ್ಕನೆಯ ಕಾಲೇಜನ್ನು ತೆರೆದನು. ಚರ್ಚ್ ಮಿಶನರಿ ಸೊಸೈಟಿಯು 1853ರಲ್ಲಿ ಆಗ್ರಾದಲ್ಲಿ ಸೇಂಟ್ ಜಾನ್ಸ್ ಕಾಲೇಜನ್ನು ಪ್ರಾರಂಭಿಸಿತು. ಭಾವೀ ಬಿಷಪ್ ಫ್ರೆಂಚನು ಈ ಕಾಲೇಜಿನ ಪ್ರಥಮ ಪ್ರಿನ್ಸಿಪಾಲನಾಗಿದ್ದನು. ರಾಬರ್ಟ್ ನೋಬಲ್ಲನು ಮಚಲೀಪಟ್ಟಣದಲ್ಲಿ 1841ರಲ್ಲಿ "ನೋಬಲ್" ಕಾಲೇಜನ್ನು ಪ್ರಾರಂಭಿಸಿದನು. ಡಾ. ಡಫ್‌ನ ನೇರವಾದ ಪ್ರಭಾವ ಹಾಗೂ ಪ್ರೇರಣೆಗಳಿಂದ ದೇಶದ ದೂರ ದೂರದ ಪ್ರದೇಶಗಳಲ್ಲಿ ಮೇಲೆ ವಿವರಿಸಿದ ಹೆಸರಾಂತ ಕಾಲೇಜುಗಳು ಕಟ್ಟಲ್ಪಟ್ಟವು. ಸ್ಕಾಟ್‌ಲೆಂಡನ ನ್ಯಾಶನಲ್ ಚರ್ಚ್‌ರವರು ಕಲ್ಕತ್ತಾ, ಮದ್ರಾಸು ಮತ್ತು ಮುಂಬಯಿಯಲ್ಲಿ ಅನೇಕ ಕಾಲೇಜುಗಳನ್ನು ಸ್ಥಾಪಿಸಿದರು.

ಮಿಶನರಿ ಚಟುವಟಿಕೆಗೆ ಸಂಬಂಧಿಸಿದ ನಿಖರವಾದ ಅಂಕೆ ಸಂಖ್ಯೆಗಳು ದೊರೆಯುವುದು ವಿರಳ. ಪ್ರೊತೆಸ್ಟಂಟ್ ಸಂಘಟನೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಮಿಶನ್ ಶೈಕ್ಷಣಿಕ ಚಟುವಟಿಕೆಯು ಸರ್ಕಾರಿ ಪ್ರಯತ್ನಕ್ಕೆ ಸಮನಾಗಿತ್ತೆಂದು ಈ ಅಂಕೆ-ಸಂಖ್ಯೆಗಳಿಂದ ತಿಳಿದು

Digitised by Bharatavani, CIIL

ಬರುತ್ತದೆ. ಮಿಶನ್ ಚಟುವಟಿಕೆಯಲ್ಲಿ 1474 ಸಂಸ್ಥೆಗಳು ಮತ್ತು 67,569 ವಿದ್ಯಾರ್ಥಿಗಳಿದ್ದರು. ಪ್ರೊಟೆಸ್ಟಂಟ್ ಮತ್ತು ರೋಮನ್ ಕ್ಯಾಥೋಲಿಕ್ ಎರಡು ಸಂಘಟನೆಗಳಿಗೆ ಒಳಪಟ್ಟ ಒಟ್ಟು ಮಿಶನ್ ಚಟುವಟಿಕೆಯು ಸರಕಾರೀ ಪ್ರಯತ್ನವನ್ನು ಮೀರುತ್ತಿತ್ತು. ಆದುದರಿಂದ 1854ರಲ್ಲಿ ಭಾರತದಲ್ಲಿಯ ಶೈಕ್ಷಣಿಕ ಸಾಹಸದ ಬಹುಭಾಗವು ಕಂಪನಿಯವರಿಗಿಂತ ಮಿಶನರಿಗಳಿಗೆ ಹೆಚ್ಚಾಗಿ ಸಲ್ಲುವದೆಂದು ಹೇಳುವುದು ಸಮಂಜಸ ವೆನಿಸುವುದು. ಮಿಶನ್ ಚಟುವಟಿಕೆಯು ಮದ್ರಾಸಿನಲ್ಲಿ ಹೆಚ್ಚು ವ್ಯಾಪಕವಾಗಿತ್ತು.

ಮಿಶನ್ ಶಾಲೆಗಳ ಸಲುವಾಗಿ ಕಂಪೆನಿಯು ಅಪರೂಪವಾಗಿ ಧನ ಸಹಾಯ ಮಾಡುತ್ತಿತ್ತು. ಭಾರತದಲ್ಲಿ ಭಾರತೀಯ ಶಿಕ್ಷಣದಲ್ಲಿ ಮಿಶನರಿಗಳ ಶೈಕ್ಷಣಿಕ ಪ್ರಯತ್ನವು ದ್ವಿತೀಯ ಸ್ಥಾನವನ್ನು ಪಡೆಯುತ್ತದೆ. ಮಿಷನರಿಗಳ ಹೃದಯಕ್ಕೆ ಧಾರ್ಮಿಕ ಶಿಕ್ಷಣವು ಅತ್ಯಂತ ಪ್ರಿಯವಾಗಿತ್ತು. ಮಿಶನರಿಗಳು, ಸರ್ಕಾರಿ ಧನಸಹಾಯವನ್ನು ಪಡೆದರೂ, ತಮ್ಮ ಶಾಲೆಗಳಿಗೆ ಪ್ರವೇಶ ಪಡೆಯಬಹುದಾದ ಎಲ್ಲ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಬಾಯ್ಬಲನ್ನು ಕಲಿಸಲು ಪೂರ್ಣ ಸ್ವತಂತ್ರರಿರಬೇಕು ಎಂಬ ವಿಷಯವನ್ನು ಮಂಡಿಸುತ್ತಿದ್ದರು. 1902ರ ಸಮಯಕ್ಕೆ ಮಿಶನರಿಗಳು ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಕೆಲವೇ ಶಿಕ್ಷಣ ಸಂಸ್ಥೆಗಳನ್ನು ಸಾಧ್ಯವಿದ್ದಷ್ಟು ಅತ್ಯುತ್ತಮ ಸ್ಥಿತಿಯಲ್ಲಿ ನಡೆಸುವ ಧೋರಣೆಗೆ ಸೀಮಿತಗೊಳಿಸಿದರು.

ಕ್ರೈಸ್ತ ಮಿಷನರಿಗಳು, ಸಾರ್ವಜನಿಕ ಶಿಕ್ಷಣ ಪದ್ಧತಿ ಹಾಗೂ ಆಧುನಿಕ ಶಿಕ್ಷಣ ಪದ್ಧತಿಯನ್ನು ಭಾರತಕ್ಕೆ ತಂದರು. ಭಾರತದಲ್ಲಿ ಪ್ರಾಟೆಸ್ಟೆಂಟ್ ಕ್ರೈಸ್ತ ಮಿಷನರಿಗಳು ಶಿಕ್ಷಣ ರಂಗದಲ್ಲಿ ಪುರೋಗಾಮಿ ಕೆಲಸ ಮಾಡಿರುವರೆಂದೂ ಹಾಗೂ ಭಾರತದ ಆಧುನಿಕ ಶಿಕ್ಷಣಕ್ಕೆ ಅಡಿಪಾಯ ಹಾಕಿರುವರೆಂದೂ ಹೇಳಿದರೆ ಅತಿಶಯೋಕ್ತಿಯಾಗಲಾರದು.

18ನೇ ಶತಮಾನದಲ್ಲಿ, ಭಾರತದ ಶಿಕ್ಷಣ ರಂಗದಲ್ಲಿ ಪ್ರೊತೆಸ್ತಾಂತ ಮಿಷನರಿಗಳು ಮಾಡಿದ ಪ್ರಪ್ರಥಮ ಪ್ರಯತ್ನದ ಶ್ರೇಯಸ್ಸು 1706ರಲ್ಲಿ ಭಾರತಕ್ಕೆ ಬಂದ ಡೇನಿಷ್ ಹಲ್ಲೆ ಮಿಷನ್ನಿಗೆ ಸಲ್ಲುತ್ತದೆ. ಈ ಮಿಷನ್ನಿನ ಪುರೋಗಾಮಿ ಮಿಷನರಿಗಳಾದ ಬಾರ್ತಲೋಮಾಯ ಝಿಗನಬಾಲ್ಗ ಹಾಗೂ ಹೆನ್ರಿ ಪ್ಲೂಚೊ ಎಂಬ ಇಬ್ಬರು ಜರ್ಮನ್ ಮಿಷನರಿಗಳು ಎಸ್.ಪಿ.ಸಿ.ಕೆ.ಯ ಆಶ್ರಯದಲ್ಲಿ ತಮಿಳು ಹಾಗೂ ಪೋರ್ಚುಗೀಸ ಮಕ್ಕಳಿಗಾಗಿ ಕುಡ್ಡಲೋರದಲ್ಲಿ ಉಚಿತ ವಿದ್ಯಾದಾನ ಮಾಡುವ ಶಾಲೆಗಳನ್ನು ತೆರೆದರು. 1727ರಲ್ಲಿ ಎಸ್.ಪಿ.ಸಿ.ಕೆ.ಯಿಂದ ನೇಮಿಸಲ್ಪಟ್ಟ ಮತ್ತೊಬ್ಬ ಮಿಷನರಿಯಾದ ಶೂಲ್ಜೆ ಎಂಬುವನು ಮದ್ರಾಸ್, ತಂಜಾವೂರು, ಕುಡ್ಡಲೋರ, ಪಾಲಂಕೋಟ್ಟ ಹಾಗೂ ತಿರುಚನಾಪಳ್ಳಿಗಳಲ್ಲಿ ಶಾಲೆಗಳನ್ನು ಸ್ಥಾಪಿಸಿದನು. 1760ರಲ್ಲಿ ಭಾರತಕ್ಕೆ ಬಂದ ಕ್ರಿಷ್ಚಿಯನ್ ಫೆಡ್ರಿಕ್ಸ್ ಸ್ವಾರ್ಟನು ತಂಜಾವೂರಿನಲ್ಲಿ ಉಚ್ಚಜಾತಿಯ ಯುವಕರಿಗಾಗಿ ಇಂಗ್ಲಿಷ್ ಶಾಲೆಯನ್ನು ತೆರೆದನು.

ಹೀಗೆ ಪ್ರೊತೆಸ್ತಾಂತ ಮಿಷನರಿಗಳ ಆರಂಭದ ಶೈಕ್ಷಣಿಕ ಪ್ರಯತ್ನಗಳು ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ, ಬ್ರಿಟಿಷರ ಆಶ್ರಯದಲ್ಲಿ ಜರ್ಮನ್ ಮಿಷನರಿಗಳಿಂದ ನಡೆದವು. ಶೈಕ್ಷಣಿಕ ಕಾರ್ಯವು ಅಂದಿನ ಮಿಷನರಿ ಕೆಲಸದ ಒಂದು ಅಂಗವಾಗಿತ್ತು.

19ನೇ ಶತಮಾನದಲ್ಲಿ ನಡೆದ ಕ್ರೈಸ್ತ ಮಿಷನರಿಗಳ ಶೈಕ್ಷಣಿಕ ಚಟುವಟಿಕೆಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ, ಎ) ಪ್ರಾಥಮಿಕ ಶಿಕ್ಷಣದ ಕಾಲ ಬಿ) ಇಂಗ್ಲಿಷ್ ಇಲ್ಲವೇ ಉನ್ನತ ಶಿಕ್ಷಣದ ಕಾಲ ಸಿ) ಪುನಃ ಪ್ರಾಥಮಿಕ ಶಿಕ್ಷಣದ ಕಾಲಗಳೆಂದು ಕರೆಯಲಾಗಿದೆ.

ಎ) **ಪ್ರಾಥಮಿಕ ಶಿಕ್ಷಣದ ಕಾಲ:** 1833ರ ಹಿಂದಿನ ಕಾಲವನ್ನು ಪ್ರಾಥಮಿಕ ಶಿಕ್ಷಣದ ಇಲ್ಲವೇ ಪ್ರಾಥಮಿಕ ಶಾಲೆಗಳ ಕಾಲವೆಂದು ಹೇಳಲಾಗಿದೆ. ಏಕೆಂದರೆ ಈ ಕಾಲದಲ್ಲಿ ಭಾರತಕ್ಕೆ ಬಂದ ಮಿಷನರಿ ಸಂಘಗಳೆಲ್ಲಾ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ಅವುಗಳಲ್ಲಿ ಭಾರತೀಯ ಭಾಷೆಗಳನ್ನೇ ಅಂದರೆ ಮಕ್ಕಳ ಮಾತೃಭಾಷೆಗಳನ್ನೇ ಮಾಧ್ಯಮವನ್ನಾಗಿ ಉಪಯೋಗಿಸಿ ಶಿಕ್ಷಣ ಕೊಟ್ಟರು.

ಸೆರಾಂಪೂರದಲ್ಲಿ ಬ್ಯಾಪ್ಟಿಸ್ಟ ಮಿಷನರಿಯಾಗಿದ್ದ ವಿಲಯಮ್ ಕೇರಿಯು ಭಾರತದ ಇತರ ಭಾಗಗಳಲ್ಲಿರುವಂತೆ ಬಂಗಾಳದಲ್ಲಿಯೂ ಬಹುಸಂಖ್ಯಾತ ಭಾರತೀಯರು ಕಡುಬಡವರೂ, ಅನಕ್ಷರಿಗಳೂ ಹಾಗೂ ಅಜ್ಞಾನಿಗಳೂ ಆಗಿದ್ದರೆಂಬುದನ್ನು ಕಂಡುಕೊಂಡನು. ಭಾರತದಲ್ಲಿದ್ದ ಅಜ್ಞಾನ, ಮೂಢನಂಬಿಕೆ ಹಾಗೂ ಬಡತನ ಹೋಗಬೇಕಾದರೆ ಶಿಕ್ಷಣವೊಂದೇ ಮಾರ್ಗ ಎಂದು ನಿರ್ಧರಿಸಿ ತನ್ನ ಜೊತೆ ಸೇವಕರಾಗಿದ್ದ ಜೋಶುವಾ ಮಾರ್ಷಮನ್ ಹಾಗೂ ವಿಲಿಯಮ್ ವಾರ್ಡರವರೊಂದಿಗೆ ಸೇರಿಕೊಂಡು ತಮ್ಮ ಎಲ್ಲಾ ಸೇವಾಕ್ಷೇತ್ರಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವ ಯೋಜನೆ ಹಾಕಿಕೊಂಡನು. 1800 ಜನವರಿ 1ರಂದು ಸೆರಾಂಪೂರಿನಲ್ಲಿ ಬಾಲಕರಿಗೆ ಒಂದು ಪ್ರಾಥಮಿಕ ಶಾಲೆಯನ್ನು ತೆರೆದರು. ನಂತರ ಎಲ್ಲೆಲ್ಲಿ ತಮ್ಮ ಸಭೆಗಳನ್ನು ಸ್ಥಾಪಿಸಿದರೋ ಅಲ್ಲೆಲ್ಲಾ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದರು. 1818ರಲ್ಲಿ ಸೆರಾಂಪೂರ ಮಿಷನು ಸುಮಾರು 120 ಶಾಲೆಗಳನ್ನು ಹೊಂದಿದ್ದು ಅವುಗಳಲ್ಲಿ ಸುಮಾರು 10,000 ವಿದ್ಯಾರ್ಥಿಗಳು ಕಲಿಯುತ್ತಿದ್ದರೆಂದು ಹೇಳಿದೆ. ಆರಂಭದಿಂದಲೇ ಕೇರಿಯು ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡಬೇಕೆಂಬುದನ್ನು ಒತ್ತಿ ಹೇಳಿದನು. ಆದುದರಿಂದ ಬಂಗಾಳಿ ಜನರ ಮಾತೃಭಾಷೆಯಾದ ಬಂಗಾಳಿ ಭಾಷೆಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿಟ್ಟುಕೊಂಡರು. ಬಹುಸಂಖ್ಯಾತ ಬಡವರಿಗೆ ಶಿಕ್ಷಣ ಕೊಡುವುದರಿಂದ ಶಿಕ್ಷಣ ಶುಲ್ಕವನ್ನು ಬಹಳ ಕಡಿಮೆ ಮಾಡಿದ್ದರು. ಪ್ರಾಥಮಿಕ ಶಿಕ್ಷಣದ ಆಧುನಿಕ ಪದ್ಧತಿಯನ್ನು ಮೊಟ್ಟಮೊದಲು ಭಾರತದಲ್ಲಿ ನಿರೂಪಿಸಿದವರು ಸೆರಾಂಪೂರ ತ್ರಿಮೂರ್ತಿಗಳೇ. 1818ರಲ್ಲಿ ಸೆರಾಂಪೂರ ಕಾಲೇಜನ್ನು ಸ್ಥಾಪಿಸಿ, ಕಲಾ ವಿಭಾಗ, ವಾಣಿಜ್ಯ ವಿಭಾಗ ಹಾಗೂ ವಿಜ್ಞಾನ ವಿಭಾಗಗಳ ಮೂಲಕ ಉಚ್ಚ ಶಿಕ್ಷಣವನ್ನು ಆರಂಭಿಸಿದಾಗಲೂ ಅವರು ಬಂಗಾಳಿ ಭಾಷೆಯನ್ನೇ ಮಾಧ್ಯಮವಾಗಿಟ್ಟುಕೊಂಡರು. ಭಾರತದಲ್ಲಿ ವಿಜ್ಞಾನ ವಿಷಯವನ್ನು ಭಾರತೀಯ ಭಾಷೆಯಲ್ಲಿ ಮೊದಲು ಕಲಿಸಿದ ಕೀರ್ತಿಯು ಸೆರಾಂಪೂರ ಮಿಷನರಿಗಳಿಗೇ ಸಲ್ಲುತ್ತದೆ. ಉನ್ನತ ಶಿಕ್ಷಣವನ್ನು ಭಾರತೀಯ ಭಾಷೆಯಲ್ಲಿ ಮೊದಲು ಕೊಟ್ಟ ಗೌರವವೂ ಅವರಿಗೇ ಸಲ್ಲುತ್ತದೆ.

ಬಿ) **ಇಂಗ್ಲಿಷ್ ಇಲ್ಲವೇ ಉನ್ನತ ಶಿಕ್ಷಣದ ಕಾಲ (1833–1857):** 1833ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಬೇರೆ ದೇಶಗಳಿಂದ ಕ್ರೈಸ್ತ ಮಿಷನರಿಗಳು ಭಾರತಕ್ಕೆ ಬಂದು ತಮ್ಮ ಕೆಲಸವನ್ನು ಆರಂಭಿಸುವುದಕ್ಕೆ ಅವಕಾಶ ಮಾಡಿಕೊಟ್ಟಿತು. 1830ರಲ್ಲಿ ಅಲೆಕ್ಸಾಂಡರ್ ಡಫ್‌ನು ಚರ್ಚ್ ಆಫ್ ಸ್ಕಾಟಲೆಂಡ್ ಪ್ರೆಸ್ಬಿಕೇರಿಯನ್ ಮಿಷನರಿಯಾಗಿ ಭಾರತಕ್ಕೆ ಇಂಗ್ಲಿಷ್ ಶಿಕ್ಷಣವನ್ನು ತಂದನು. ವಿಲ್ಬರ ಪೋರ್ಸ್, ಗ್ರ್ಯಾಂಟ ಮೆಕಾಲೆ, ಮಿಲ್ಸ್ ಹಾಗೂ ಟ್ರೆವರ್ಲಿನ್ ಇವರೆಲ್ಲರೂ ಇಂಗ್ಲಿಷ್ ಮಾಧ್ಯಮದ ಶಿಕ್ಷಣಕ್ಕಾಗಿ ಸರಕಾರದೊಂದಿಗೆ ಮಾಡುತ್ತಿದ್ದ ಹೋರಾಟವನ್ನು ಮುಂದುವರಿಸಿ ಇಂಗ್ಲಿಷ್ ಭಾಷೆಯ ಮಾಧ್ಯಮದ ಶಿಕ್ಷಣದ ಮೂಲಕ ಮಾತ್ರವೇ ಇಡೀ ಭಾರತೀಯ ಸಮಾಜವು ಸುಧಾರಿಸಬಲ್ಲದು ಎಂದು ಪ್ರತಿಪಾದಿಸಿದರು. 1830ರಲ್ಲಿ 21ವರ್ಷ ಪ್ರಾಯದ ಅಲೆಕ್ಸಾಂಡರ್ ಡಫ್‌ನು ಕಲ್ಕತ್ತಾಕ್ಕೆ ಬಂದ

Digitised by Bharatavani, CIIL

ಮೇಲೆ ಇಂಗ್ಲಿಷ್ ಮಾಧ್ಯಮದ ಶಿಕ್ಷಣದ ಹೋರಾಟಕ್ಕೆ ಬಲ ಸಿಕ್ಕಿತ್ತು. ಡಫ್‌ನನ್ನು ಭಾರತದ ಉಚ್ಚ ಶಿಕ್ಷಣದ ಅಪೋಸ್ತಲನೆಂದೂ ಕರೆಯಲಾಗಿದೆ. ಬ್ರಾಹ್ಮಣ ಯುವಕರಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಯಬೇಕೆಂಬ ಅತೀವ ಆಸಕ್ತಿ ಹೆಬ್ಬಯಕೆಯನ್ನು ಡಫ್‌ನು ಕಂಡು ಈ ಪರಿಸ್ಥಿತಿಯ ಸದುಪಯೋಗವನ್ನು ತಾನು ಪಡೆಯಲೇಬೇಕೆಂದು ನಿರ್ಧರಿಸಿ ಉಚ್ಚ ಜಾತಿಯವರನ್ನು ಕ್ರಿಸ್ತನಿಗಾಗಿ ಗೆದ್ದುಕೊಳ್ಳಬೇಕಾದರೆ ಇಂಗ್ಲಿಷ್ ಶಿಕ್ಷಣವೊಂದೇ ಉತ್ತಮ ಮಾರ್ಗವೂ ಸಾಧನವೂ ಎಂದು ತಿಳಿದು ದೇಶೀಯ ಭಾಷೆಯಲ್ಲಿ ಶಿಕ್ಷಣವನ್ನು ಕೊಡಬೇಕೆಂಬ ನೀತಿಯನ್ನು ತ್ಯಜಿಸಿ, ಇಂಗ್ಲಿಷ್ ಭಾಷೆಯ ಮಾಧ್ಯಮದ ಮೂಲಕ ಶಿಕ್ಷಣ ಕೊಡಬೇಕು ಮತ್ತು ಆ ಮೂಲಕ ಒಂದು ಹೊಸ ನಾಗರಿಕತೆಯನ್ನು ಹಾಗೂ ಸಂಸ್ಕೃತಿಯನ್ನು ಭಾರತದಲ್ಲಿ ಪರಿಚಯಿಸಬೇಕು ಎಂದು ಹೇಳಿದ.

ಜುಲೈ 12, 1830ರಂದು ಡಫ್‌ನು ಕಲ್ಕತ್ತಾದಲ್ಲಿ ಒಂದು ಶಾಲೆಯನ್ನು ತೆರೆದನು. ಶಾಲೆಗೆ ಸ್ಥಳದ ವ್ಯವಸ್ಥೆ ಹಾಗೂ ಆರಂಭದ ಐದು ವಿದ್ಯಾರ್ಥಿಗಳನ್ನು ತಂದವನು ಬ್ರಹ್ಮೋಸಮಾಜದ ಸ್ಥಾಪಕ ಹಾಗೂ ಭಾರತದ ಇರಾಸ್ಮಸ್ ಎಂಬುದಾಗಿ ಕರೆಯಲ್ಪಟ್ಟ ರಾಜಾರಾಮ್ ಮೋಹನ್‌ರಾಯನು. ಡಫ್‌ನು ಸ್ಥಾಪಿಸಿದ ಶಾಲೆಯಲ್ಲಿ ಇಂಗ್ಲಿಷ್ ವ್ಯಾಕರಣ, ಗಣಿತ, ವಿಜ್ಞಾನ ಹಾಗೂ ಇತರ ವಿಷಯಗಳನ್ನು ಕಲಿಸುವುದರೊಂದಿಗೆ ಸತ್ಯವೇದದ ಹಾಗೂ ಕ್ರೈಸ್ತ ಬೋಧನೆಗಳ ಅಧ್ಯಯನವೂ ನಡೆಯುತ್ತಿತ್ತು. ಡಫ್‌ನ ಕೆಲಸದ ಪ್ರಭಾವದಿಂದ ಕೆಲವು ಉಚ್ಚಶಿಕ್ಷಣದ ಸಂಸ್ಥೆಗಳು ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದವು.

1832ರಲ್ಲಿ ಜಾನ್ ವಿಲ್ಸನ್ ಎಂಬುವನು ಮುಂಬಯಿಯಲ್ಲಿ ಒಂದು ಶಾಲೆಯನ್ನು ತೆರೆದನು. ಈಗ ಅದು ಒಂದು ಪ್ರಸಿದ್ಧ ಕಾಲೇಜಾಗಿ ಅವನ ಹೆಸರಿನಲ್ಲೇ ಕರೆಯಲ್ಪಡುತ್ತಿದೆ. 1837ರಲ್ಲಿ ಜಾನ್ ಆ್ಯಂಡರ್‌ಸನ್ ಮದ್ರಾಸ್ (ಚೆನ್ನೈ)ನಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದನು. ಅದೇ ಈಗ ಪ್ರಸಿದ್ಧ ಮದ್ರಾಸ್ ಕ್ರಿಶ್ಚಿಯನ್ ಕಾಲೇಜು. 1844ರಲ್ಲಿ ಸ್ಟೀಫನ್ ಹಿಸ್ಲಪ್ ಎಂಬುವನು ನಾಗಪುರದಲ್ಲಿ ಒಂದು ಕಾಲೇಜನ್ನು ತೆರೆದನು. ಅದು ಕೂಡ ಹಿಸ್ಲಪ್ ಕಾಲೇಜ್ ಆಗಿ ಪರಿವರ್ತನೆಗೊಂಡಿತು. ಚರ್ಚ್ ಆಫ್ ಸ್ಕಾಟಲಂಡ್ ಮಿಷನು ತೋರಿಸಿದ ಮಾದರಿಯನ್ನು ಅನುಸರಿಸಿ ಇತರ ಮಿಷನುಗಳು ಸಹ ತಮತಮಗೆ ಅನುಕೂಲವಾದ ಸ್ಥಳಗಳಲ್ಲಿ ಇಂತಹ ಶಾಲೆಗಳನ್ನು ತೆರೆದರು. 1834ರಲ್ಲಿ ಚರ್ಚ್ ಮಿಷನರಿ ಸೊಸೈಟಿಯ ರಾಬರ್ಟ್ ನೋಬಲ್ ಮಚಲೀ ಪಟ್ಟಣದಲ್ಲಿ ಸ್ಥಾಪಿಸಿದ ಶಾಲೆಯು ಮುಂದೆ ನೋಬೆಲ್ ಕಾಲೇಜ್ ಆಗಿಯೂ ಹಾಗೂ ಆಗ್ರಾದಲ್ಲಿ ಥಾಮಸ್ ಫ್ರೆಂಚ್ ಸ್ಥಾಪಿಸಿದ ಶಾಲೆಯು ಮುಂದೆ ಸೈಂಟ್ ಜಾನ್ ಕಾಲೇಜ್ ಆಗಿಯೂ ಪರಿವರ್ತನೆಗೊಂಡು ಈಗಲೂ ನಡೆಯುತ್ತಿವೆ. ಮಾರ್ಚ್ 7, 1835ರಂದು ಆಗ ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಮ್ ಬೆಂಟಿಂಕನು ಒಂದು ಶಾಸನವನ್ನು ಹೊರಡಿಸಿ ಈವರೆಗೆ ಶಿಕ್ಷಣಾರ್ಥವಾಗಿ ಮೀಸಲಾಗಿಡುತ್ತಿದ್ದ ಹಣವನ್ನು ಇನ್ನು ಮುಂದೆ ಭಾರತದಲ್ಲಿ ಇಂಗ್ಲಿಷ್ ಮಾಧ್ಯಮದ ಮೂಲಕ ಇಂಗ್ಲಿಷ್ ಸಾಹಿತ್ಯ ಹಾಗೂ ವಿಜ್ಞಾನ ವಿಷಯಗಳನ್ನು ಕಲಿಸುವುದಕ್ಕಾಗಿ ಬಳಸಲಾಗುವುದೆಂದು ಸಾರಿದನು. ಬೆಂಟಿಂಕನ ಈ ಶಾಸನಕ್ಕೆ ನಿಜವಾಗಿಯೂ ಡಫ್‌ನೇ ಕಾರಣ.

ಜುಲೈ 19, 1854ರಲ್ಲಿ ಸರ್ ಚಾರ್ಲ್ಸ್‌ವುಡ್ ಎಂಬುವನು ಹೊರಡಿಸಿದ ಪ್ರಸಿದ್ಧ "ಶೈಕ್ಷಣಿಕ ವರದಿ", ಭಾರತದ ಶೈಕ್ಷಣಿಕ ನೀತಿಯಲ್ಲಿ ಸರಕಾರವು ತೆಗೆದುಕೊಂಡ ಎರಡನೇ ಹೆಜ್ಜೆಯಾಗಿದೆ. ಈ ವರದಿಯ ಮೂಲಕ ಸಾರ್ವಜನಿಕ ಶಿಕ್ಷಣದ ರೂಪರೇಷೆಗಳನ್ನೊಳಗೊಂಡ ಆಧುನಿಕ ಶಿಕ್ಷಣ ಪದ್ಧತಿಗೆ ಅವನು ಅಡಿಪಾಯ ಹಾಕಿದನು. ಇದಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ಸರಕಾರವು ಕೊಡುವ "ಸಹಾಯಧನ" (Grant-in-Aid) ಪದ್ಧತಿಯನ್ನು ಅವನು ಜಾರಿಗೆ ತಂದನು. ಆ ವರದಿಯ ಪ್ರಕಾರ ಪ್ರತಿಯೊಂದು ಪ್ರಾಂತದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ (Department of Public Instruction) ಸ್ಥಾಪನೆಯಾಗಬೇಕು. ಪ್ರಧಾನ ಪಟ್ಟಣಗಳಲ್ಲಿ ವಿಶ್ವವಿದ್ಯಾನಿಲಯಗಳಿರಬೇಕು. ಇವುಗಳಿಗೆ ಹೊಂದಿಕೊಂಡು ಶಾಲೆಗಳಿರಬೇಕು ಎಂದಿತ್ತು.

ಅದೊಂದು ಚಾರಿತ್ರಿಕ ವರದಿಯಾಗಿದ್ದು ಅದರ ಪರಿಣಾಮವಾಗಿ ಸಾರ್ವಜನಿಕ ಶಿಕ್ಷಣದ ಇಲಾಖೆಗಳು ಪ್ರತಿಯೊಂದು ಪ್ರಾಂತದಲ್ಲಿ ಸ್ಥಾಪನೆಗೊಂಡವು. ಲಂಡನ್ ವಿಶ್ವವಿದ್ಯಾಲಯದ ಮಾದರಿಯಲ್ಲಿ 1857ರಲ್ಲಿ ಮೂರು ವಿಶ್ವವಿದ್ಯಾಲಯಗಳನ್ನು ಭಾರತದ ಪ್ರಮುಖ ಪಟ್ಟಣಗಳಾದ ಕಲ್ಕತ್ತಾ, ಮುಂಬಯಿ ಮತ್ತು ಮದ್ರಾಸ್‌ಗಳಲ್ಲಿ ಸ್ಥಾಪಿಸಲಾಯಿತು. 1882ರಲ್ಲಿ ಲಾಹೋರದಲ್ಲಿಯೂ ಹಾಗೂ 1887ರಲ್ಲಿ ಅಲಹಾಬಾದದಲ್ಲಿಯೂ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ಡಫ್‌ನ 'ಸಾರ್ವಜನಿಕ ಶಿಕ್ಷಣ ಇಲಾಖೆಗಳು' ಈಗಲೂ ಅಸ್ತಿತ್ವದಲ್ಲಿರುವುದನ್ನು ನೋಡುವಾಗ ಶಿಕ್ಷಣ ಕ್ಷೇತ್ರದಲ್ಲಿ ಡಫ್‌ನ ಕೊಡುಗೆಯು ಎಷ್ಟು ಗಾಢವಾದುದೆಂದು ಗ್ರಹಿಸಿಕೊಳ್ಳಬಹುದು.

1857ರಲ್ಲಾದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಸರಕಾರವು ಕ್ರೈಸ್ತರ ಶೈಕ್ಷಣಿಕ ಕಾರ್ಯಗಳಿಗೆ ಮಾಡುತ್ತಿದ್ದ ಧನ ಸಹಾಯವನ್ನು ನಿಲ್ಲಿಸಿ ಬಿಟ್ಟಿತು. ಮಾತ್ರವಲ್ಲದೆ ಖಾಸಗಿ ಶಾಲೆಗಳ ಮೇಲೆ ಹೊಸ ನಿರ್ಬಂಧಗಳನ್ನು ಹಾಕಿತು. 1860ರಲ್ಲಿ ಸರಕಾರದ ಪದ್ಧತಿಯಿಂದ ತಮ್ಮ ಶಾಲೆಗಳನ್ನು ಹಿಂತೆಗೆದುಕೊಂಡರೂ 1860ರ ನಂತರ ಅನೇಕ ಮಿಷನುಗಳು ಇಂಗ್ಲಿಷ್ ಶಾಲೆಗಳನ್ನು ಕೈಬಿಟ್ಟು ಹಳ್ಳಿಯ ಶಾಲೆಗಳನ್ನು ಸ್ಥಾಪಿಸುವುದಕ್ಕೆ ಹೆಚ್ಚು ಗಮನ ಕೊಡುವವರಾದರು. ಹೆಚ್ಚಿನ ಮಿಷನುಗಳು ಪ್ರಾಥಮಿಕ ಶಾಲೆಗಳನ್ನು ತೆರೆಯುವುದರ ಕಡೆಗೆ ತಮ್ಮ ಗಮನಹರಿಸಿದವು. ನೂರಾರು ಪ್ರಾಥಮಿಕ ಶಾಲೆಗಳು ಹಳ್ಳಿಪಳ್ಳಿಗಳಲ್ಲಿ ಮೈದಾಳಿದವು. ಅವುಗಳಲ್ಲಿ ಶಿಕ್ಷಕರ ಕೊರತೆಯಿದ್ದುದರಿಂದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ತರಬೇತು ಮಾಡುವ ಅನೇಕ ಶಾಲೆ ಕಾಲೇಜುಗಳು ಅಸ್ತಿತ್ವಕ್ಕೆ ಬಂದವು.

1920ರ ನಂತರ ಅನೇಕ ರೋಮನ್ ಕಥೋಲಿಕ್ ಶಾಲೆಗಳು ಕಾಲೇಜುಗಳು ಗಣನೀಯವಾಗಿ ವೃದ್ಧಿಗೊಂಡವು. 1932ರಲ್ಲಿ ಕ್ರೈಸ್ತ ಉಚ್ಚ ಶಿಕ್ಷಣದ ಕೇಂದ್ರ ಮಂಡಳಿಯನ್ನು ಭಾರತೀಯ ರಾಷ್ಟ್ರೀಯ ಕ್ರೈಸ್ತ ಕೂಟದ ಅಧೀನದಲ್ಲಿ ಸ್ಥಾಪಿಸಲಾಯಿತು. ವಿವಿಧ ಪ್ರೊತೆಸ್ತಾಂತ ಕಾಲೇಜುಗಳ ಚಟುವಟಿಕೆಗಳನ್ನು ಕ್ರೋಡೀಕರಿಸುವುದೇ ಇದರ ಉದ್ದೇಶವಾಗಿತ್ತು. 1966ರಲ್ಲಿ ರೋಮನ್ ಕಥೋಲಿಕ್ ಹಾಗೂ ಪ್ರೊತೆಸ್ತಾಂತ ಕಾಲೇಜುಗಳ ಪ್ರಾಂಶುಪಾಲರೆಲ್ಲರೂ ಮದ್ರಾಸಿನಲ್ಲಿರುವ ತಾಂಬರಮ್‌ನಲ್ಲಿ ಕ್ರೈಸ್ತ ಉಚ್ಚ ಶಿಕ್ಷಣದ ರಾಷ್ಟ್ರೀಯ ಮಂಡಳಿಯನ್ನು ಸ್ಥಾಪಿಸಿದರು. ಬೆಳೆಯುತ್ತಿರುವ ರಾಷ್ಟ್ರದಲ್ಲಿ ರಾಷ್ಟ್ರನಿರ್ಮಾಣ ಚಟುವಟಿಕೆಯಲ್ಲಿ ಸಹಾಯ ಮಾಡುವುದೇ ಕ್ರೈಸ್ತ ಶಿಕ್ಷಣ ಕಾರ್ಯದ ಗುರಿಯಾಗಿತ್ತು. ಭಾರತದಾದ್ಯಂತ ಪ್ರಾಥಮಿಕ ಶಾಲೆಗಳನ್ನು ಹಾಗೂ ಕಾಲೇಜುಗಳನ್ನು ಸ್ಥಾಪಿಸಿ ದೇಶೀಯ ಭಾಷೆಗಳ ಹಾಗೂ ಇಂಗ್ಲಿಷ್ ಭಾಷೆಯ ಮಾಧ್ಯಮದ ಮೂಲಕ ಭಾರತೀಯರಿಗೆ ಶಿಕ್ಷಣ ನೀಡಿದರು. ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿಪಳ್ಳಿಗಳಲ್ಲಿಯೂ ನೂರಾರು ಶಾಲೆಗಳನ್ನು, ಹೈಸ್ಕೂಲುಗಳನ್ನು ಸ್ಥಾಪಿಸಿದರು. ವಿದ್ಯಾಭ್ಯಾಸವು ಮೇಲ್ಜಾತಿಯವರಿಗೂ, ಪುರುಷ ವರ್ಗಕ್ಕೂ ಸೀಮಿತವಾಗಿದ್ದ ಆ ಕಾಲದಲ್ಲಿ ಜಾತಿಭೇದ, ಲಿಂಗಭೇದವಿಲ್ಲದೆ ಶಿಕ್ಷಣದ ಅವಕಾಶವನ್ನು ಎಲ್ಲಾ ವರ್ಗದವರಿಗೂ ಲಭ್ಯವಾಗುವಂತೆ ಮಾಡಿದ್ದು ನಮ್ಮ ರಾಷ್ಟ್ರದ ಚರಿತ್ರೆಯಲ್ಲಿ ಒಂದು ಹೊಸ ಆಯಾಮವನ್ನು ನಿರ್ಮಿಸಿತು. ಹೀಗೆ ಪ್ರೊತೆಸ್ತಾಂತ ಕ್ರೈಸ್ತ ಮಿಷನರಿಗಳು ನಮ್ಮ ದೇಶದಲ್ಲಿ ಆಧುನಿಕ ಶಿಕ್ಷಣದ ಭದ್ರವಾದ

Digitised by Bharatavani, CIIL

ಅಸ್ತಿಭಾರವನ್ನು ಹಾಕಿದರು. ಭಾರತೀಯ ಧರ್ಮದ, ಸಂಸ್ಕೃತಿಯ ಹಾಗೂ ಶಾಸ್ತ್ರಗಳ ಆಳವಾದ ಅಧ್ಯಯನ ಮಾಡುವಂತೆ ಪ್ರೇರೇಪಿಸಿತು. ಇದರ ಪರಿಣಾಮವೇ ಭಾರತದ ಧಾರ್ಮಿಕ ಹಾಗೂ ಸಂಸ್ಕೃತಿಯ ಪರಂಪರೆಯ ಹೊಸ ಶೋಧ. ಇದರ ಪರಿಣಾಮವಾಗಿ ಭಾರತೀಯರಲ್ಲಿ ತಮ್ಮ ಪುರಾತನ ಸಂಸ್ಕೃತಿಯ ಪರಂಪರೆಯ ಬಗ್ಗೆ ಹೆಮ್ಮೆಯನ್ನುಂಟು ಮಾಡಿತು. ಇದರಿಂದ ರಾಜಕೀಯ ಪ್ರಜ್ಞೆಯುಂಟಾಗಿ ಭಾರತೀಯರಲ್ಲಿ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ ಹುಟ್ಟಿಕೊಂಡು ಸ್ವಾತಂತ್ರ್ಯ ಚಳುವಳಿಗೆ ನಾಂದಿಯಾಯಿತು. ಸಾಂಸ್ಕೃತಿಕ ಪುನರುಜ್ಜೀವನವಾಗಲೀ ದೇಶಭಕ್ತಿಯಾಗಲೀ ಮೊದಲು ಉಂಟಾದದ್ದು ಬಂಗಾಳದಲ್ಲಿ. ಪಾಶ್ಚಾತ್ಯ ಶಿಕ್ಷಣ ಆರಂಭವಾದದ್ದು ಅಲ್ಲೇ. ಒಟ್ಟಿನಲ್ಲಿ ಈ ಶಿಕ್ಷಣವು ಭಾರತೀಯ ವಿಚಾರಧಾರೆಯನ್ನೂ ಅದರ ಭವಿಷ್ಯವನ್ನೂ ಬದಲಾಯಿಸಿದೆ.

### ಸ್ತ್ರೀಯರಿಗೆ ಶಿಕ್ಷಣ ಮತ್ತು ಸಮಾಜದ ಮೇಲೆ ಅದರ ಪ್ರಭಾವ

ಒಬ್ಬ ಹಿಂದೂ ತಂದೆ ಒಬ್ಬ ಕ್ರೈಸ್ತ ಮಿಷನರಿಗೆ ಹೇಳಿದಂತೆ ಈ ಮುಂದಿನ ಮಾತು ಸ್ತ್ರೀಯರ ಕಡೆಗೆ ಇದ್ದ ಭಾರತೀಯರ ಅಂದಿನ ಮನೋಭಾವನೆಯನ್ನು ಎತ್ತಿ ತೋರಿಸುವ ಒಂದು ಲಾಕ್ಷಣಿಕ ಉದಾಹರಣೆಯಾಗಿದೆ. "ನನ್ನ ಗಂಡು ಮಕ್ಕಳಿಗೆ ಶಿಕ್ಷಣ ಕೊಡಿರಿ ಹಾಗೂ ಅವರಿಗೆ ಜ್ಞಾನದ ಭಂಡಾರವನ್ನು ತೆರೆಯಿರಿ. ಆದರೆ ನನ್ನ ಹೆಣ್ಣು ಮಕ್ಕಳನ್ನು, ನಿಮ್ಮ ಉದ್ದೇಶವು ಎಷ್ಟೇ ಒಳ್ಳೆಯದಾಗಿದ್ದರೂ, ನೀವು ಅವರನ್ನು ಸಂಧಿಸಬಾರದು. ನನ್ನ ಕುಟುಂಬದ ಗೌರವಕ್ಕೆ ಅವರ ಅಜ್ಞಾನ ಹಾಗೂ ಪ್ರತ್ಯೇಕತೆ ಅತಿ ಅವಶ್ಯವಾದದ್ದು. ಅವರ ಜ್ಞಾನದ ಬೆಳವಣಿಗೆಯ ಲಾಭಕ್ಕಿಂತಲೂ ಕುಟುಂಬದ ಗೌರವ ನನಗೆ ಅತ್ಯಂತ ಹೆಚ್ಚಿನ ಸಂಗತಿ. ನಿಮ್ಮ ಶಿಕ್ಷಣದ ಯೋಜನೆಗಳು ಆರಂಭವಾಗುವ ಪೂರ್ವದ ವಯಸ್ಸಿನಲ್ಲಿಯೇ ಅವರು ವಿವಾಹವಾಗಬೇಕು" ಎಂಬುದೇ ಆಗಿತ್ತು ಆಗ 'ಅಜ್ಞಾನವೇ' ಸ್ತ್ರೀಯರ ಸದ್ಗುಣ ಎಂದು ಹೇಳಲಾಗುತ್ತಿತ್ತು. ಶಿಕ್ಷಣವು ಪುರುಷ ವರ್ಗಕ್ಕೆ ಸೀಮಿತವಾಗಿದ್ದ ಆ ಕಾಲದ ಸಾಮಾಜಿಕ ಪರಿಸ್ಥಿತಿಯಲ್ಲಿ ಸ್ತ್ರೀಯರಿಗೆ ಶಿಕ್ಷಣ ಕೊಡಲು ಮುಂದೆ ಬಂದದ್ದು ಕ್ರೈಸ್ತ ಮಿಷನರಿಗಳ ಸಾಹಸ ಕಾರ್ಯವೇ ಆಗಿತ್ತು.

ಈ ದಿಸೆಯಲ್ಲಿ ಧೈರ್ಯದಿಂದ ಪ್ರಥಮ ಹೆಜ್ಜೆ ಇಟ್ಟವಳು ಸರಾಂಪೂರಿನ ಹನ್ನಾ ಮಾರ್ಶಮನ. (ಜೋಶುವಾ ಮಾರ್ಶಮನ್‌ನ ಹೆಂಡತಿ) ಸ್ತ್ರೀಯರ ಶಿಕ್ಷಣದಲ್ಲಿ ಆಕೆ ಬಹಳ ಆಸಕ್ತಿಯನ್ನು ತೆಗೆದುಕೊಂಡಳು. ಆರಂಭದಲ್ಲಿ ಹುಡುಗರೊಂದಿಗೆ ಹುಡುಗಿಯರಿಗೆ ಶಿಕ್ಷಣ ಕೊಟ್ಟಳು. ನಂತರ ಒಂದೇ ಕೋಣೆಯಲ್ಲಿ ಹುಡುಗಿಯರನ್ನು ಪ್ರತ್ಯೇಕವಾಗಿ ಕೂಡ್ರಿಸಲಾಯಿತು. ಹುಡುಗಿಯರಿಗಾಗಿ ಪ್ರತ್ಯೇಕ ಶಾಲೆಯನ್ನೇ ತೆರೆಯಬೇಕೆಂದು ನಿರ್ಣಯಿಸಲಾಯಿತು. ಈ ಮಧ್ಯೆ ಹನ್ನಾ ಮಾರ್ಶಮನ್‌ಳ ಪ್ರೇರಣೆಯಿಂದ ಹಾಗೂ ಒತ್ತಾಯದಿಂದ ಕಲ್ಕತ್ತಾದಲ್ಲಿದ್ದ ಮಿಷನರಿಗಳ ಪತ್ನಿಯರು ಮುಂದೆ ಬಂದು ಏಪ್ರಿಲ್ 1819ರಲ್ಲಿ ಬಂಗಾಳಿ ಸ್ತ್ರೀಯರ ಶಾಲೆಗಳನ್ನು ಸ್ಥಾಪಿಸುವುದಕ್ಕಾಗಿ 'ದಿ ಫೀಮೇಲ್ ಜುವೆನೈಲ್ ಸೊಸೈಟಿ'ಯನ್ನು ಸ್ಥಾಪಿಸಿದರು. ಈ ಸಂಘದ ಶ್ರೀಮತಿ ಪಿಯರ್ಸ್ ಹಾಗೂ ಶ್ರೀಮತಿ ಲಾಸನ್ ಮೇಜೂನ 1819ರಲ್ಲಿ ಪ್ರಥಮ ಸ್ತ್ರೀಯರ ಶಾಲೆಯನ್ನು ಕಲ್ಕತ್ತಾದಲ್ಲಿ ಸ್ಥಾಪಿಸಿದರು. ಇಲ್ಲಿ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದೊಂದಿಗೆ ಹೆಣ್ಣಿಗೆ ತರಬೇತಿಯನ್ನು ಕೊಡಲಾಯಿತು. 1824ರಲ್ಲಿ ಈ ಸಂಘವು ಕಲ್ಕತ್ತಾದಲ್ಲಿ ಆರು ಶಾಲೆಗಳನ್ನು ತೆರೆಯಿತು ಮತ್ತು ಅವುಗಳಲ್ಲಿ 160 ವಿದ್ಯಾರ್ಥಿನಿಯರಿದ್ದರು. ನಂತರ ಹನ್ನ ಮಾರ್ಶಮನ್ ವಿಲಿಯಮ್ ವಾರ್ಡ್ ಮತ್ತು ಜಾನ್ ಮ್ಯಾಕ್ ಅವರ ಸಹಾಯದಿಂದ 1821ರಲ್ಲಿ ಸೆರಾಂಪೂರಿನಲ್ಲಿ ಅನೇಕ ಸ್ತ್ರೀಯರ ಶಾಲೆಗಳನ್ನು ತೆರೆದಳು. ಸೆರಾಂಪೂರಿನ ಹೊರಗಿನ ಪ್ರದೇಶಗಳಾದ ಢಾಕಾ, ಬೀರಾಭುಮ್, ಚಿತ್ತಗಾಂಗ, ಬನಾರಸ, ಅಲಹಾಬಾದ್, ಜನ್ಪೂರ್, ಆಕಿಯಬ ಮುಂತಾದ ಪ್ರಮುಖ ಸ್ಥಳಗಳಲ್ಲಿಯೂ ಸ್ತ್ರೀಯರಿಗಾಗಿ ಶಾಲೆಗಳನ್ನು ಸೆರಾಂಪೂರ್ ಮಿಷನ್ ಪ್ರಾರಂಭಿಸಿತು. 1822ರಲ್ಲಿ ಸೆರಾಂಪೂರ ಮಿಷನ್ ಭಾರತದಲ್ಲಿ ಸುಮಾರು 33 ಸ್ತ್ರೀಯರ ಶಾಲೆಗಳನ್ನು ಹೊಂದಿತ್ತು. ಹೀಗೆ ಸೆರಾಂಪೂರ ಮಿಷನ್ ಹನ್ನಾ ಮಾರ್ಶಮನ್‌ಳ ನಾಯಕತ್ವದಲ್ಲಿ ಸ್ತ್ರೀಯರ ಮಧ್ಯೆ ಆಧುನಿಕ ಶಿಕ್ಷಣದ ಅಸ್ತಿಭಾರ ಹಾಕಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಪ್ರಾರಂಭಿಸಿತು.

ಸೆರಾಂಪೂರ ಮಿಷನನ್ನು ಹಿಂಬಾಲಿಸಿ ಲಂಡನ್ ಮಿಷನರಿ ಸಂಘದವರು ಚಿಂಚುರಾ, ಬೆಹರಾಮಪುರಗಳಲ್ಲಿಯೂ ಹಾಗೂ ಚರ್ಚ್ ಮಿಷನರಿ ಸಂಘದವರು ಬರ್ದಮಾನ, ಕುಲ್ನಾ, ಕೃಷ್ಣಾಪುರಗಳಲ್ಲಿಯೂ ಸ್ತ್ರೀಯರಿಗಾಗಿ ಶಾಲೆಗಳನ್ನು ತೆರೆದರು.

ಚರ್ಚ್ ಆಫ್ ಸ್ಕಾಟಲಂಡ್ ಮಿಷನರಿಯಾಗಿ ಮುಂಬಯಿಗೆ ಬಂದ ಜಾಜ್ ವಿಲ್ಸನ್ ಅವರ ಪತ್ನಿ ಶ್ರೀಮತಿ ವಿಲ್ಸನ್ 1829ರಲ್ಲಿ ಆರು ಶಾಲೆಗಳನ್ನು ತೆರೆದಳು. ಅದರಲ್ಲಿ 120 ವಿದ್ಯಾರ್ಥಿನಿಯರು ಕಲಿಯುತ್ತಿದ್ದರು. ಶ್ರೀಮತಿ ವಿಲ್ಸನಳ ಪ್ರಯತ್ನಕ್ಕೆ ಪ್ರೋತ್ಸಾಹ ನೀಡಿದವರು ಮುಂಬೈನ ಪಾರ್ಸಿಯರು ಮತ್ತು ಮರಾಠರು.

ದಕ್ಷಿಣ ಭಾರತದಲ್ಲಿಯೂ ಸ್ತ್ರೀಯರಿಗಾಗಿ ಶಾಲೆಗಳು ತೆರೆಯಲ್ಪಟ್ಟವು. 1916ರಲ್ಲಿ ಚರ್ಚ್ ಮಿಷನರಿ ಸಂಘದ ಶ್ರೀಮತಿ ಬಾಲ್ಡಿ ಎಂಬ ಮಹಿಳೆ ಕೊಟ್ಟಾಯಂನಲ್ಲಿ ಒಂದು ಸಣ್ಣ ಶಾಲೆ ಆರಂಭಿಸಿದಳು. 1823ರಲ್ಲಿ ಅದೇ ಮಿಷನಿನ ಶ್ರೀಮತಿ ರೇನಿಯಸ್ ಎಂಬುವಳು ಪಾಲಯಂಕೊಟ್ಟೈ ಎಂಬಲ್ಲಿ ಸ್ತ್ರೀಯರಿಗಾಗಿ ಒಂದು ಶಾಲೆಯನ್ನು ತೆರೆದಳು. 1832ರಲ್ಲಿ ಲಂಡನ್ ಮಿಷನರಿ ಸಂಘದ ಶ್ರೀಮತಿ ಡ್ರ್ಯೂ ಎಂಬುವಳು ಮದ್ರಾಸಿನಲ್ಲಿರುವ ವೇಪರಿ ಎಂಬ ಸ್ಥಳದಲ್ಲಿ ಬಾಲಕಿಯರಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದಳು. ಈಗ ಅದು ಬೆಂಟಿಂಕ ಸ್ಕೂಲ್ ಆಗಿ ಬೆಳವಣಿಗೆ ಹೊಂದಿದೆ. 1835ರಲ್ಲಿ ಮಧುರಾ ಮಿಷನಿನ ಶ್ರೀಮತಿ ಎಬಾರ್ಡ ಎಂಬುವಳು ಒಂದು ಶಾಲೆಯನ್ನು ಹಾಗೂ ಲಂಡನ್ ಮಿಷನಿನ ಶ್ರೀಮತಿ ಸ್ಟೇಲ್ ಎಂಬುವಳು ಬೆಂಗಳೂರಿನಲ್ಲಿ ಒಂದು ಶಾಲೆಯನ್ನು ಬಾಲಕಿಯರಿಗಾಗಿ ಸ್ಥಾಪಿಸಿದರು. 1849ರಲ್ಲಿ ಜರ್ಮನ್ ಲೂಥರನ್ ಮಿಷನವರು ಪುರುಸುವಲ್ಕಮ್ (ಮದ್ರಾಸ್)ನಲ್ಲಿ ಬಾಲಕಿಯರಿಗಾಗಿ ಶಿಕ್ಷಣ ಆರಂಭಿಸಿದರು. ಈಗ ಅದು ದೊಡ್ಡ ಶಾಲೆಯಾಗಿ ಬೆಳೆದಿದೆ.

1934ರಲ್ಲಿ ದಕ್ಷಿಣ ಭಾರತಕ್ಕೆ ಬಂದ ಬಾಸೆಲ್ ಮಿಷನರಿಗಳು ತಮ್ಮ ಸೇವಾಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ಶಿಕ್ಷಣ ಕೊಡುವುದರಲ್ಲಿ ಪುರೋಗಾಮಿಗಳಾಗಿದ್ದಾರೆ. ಅವರು ತಮ್ಮ ಸಭೆಗಳಲ್ಲಿದ್ದ ಎಲ್ಲ ಬಾಲಕಿಯರಿಗೆ ಶಿಕ್ಷಣವನ್ನು ಕಡ್ಡಾಯ ಮಾಡಿದ್ದರು. ತಮ್ಮ ಕ್ಷೇತ್ರಗಳಲ್ಲಿರುವ ಎಲ್ಲ ಪ್ರಮುಖ ಸ್ಥಳಗಳಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಂಗಳೂರು, ಮುಲ್ಕಿ, ಉಡುಪಿ, ಕಾರ್ಕಳ, ಕುಂದಾಪುರ, ಮೂಡಬಿದ್ರೆ, ಕಾಸರಗೂಡು (ಈಗ ಕೇರಳ ರಾಜ್ಯದಲ್ಲಿದೆ), ಕೊಡಗು ಜಿಲ್ಲೆಯಲ್ಲಿರುವ ಮಡಿಕೇರಿ ಮತ್ತು ಆನಂದಪುರಗಳಲ್ಲಿ, ಹುಬ್ಬಳ್ಳಿ, ಧಾರವಾಡ, ಬೆಟಗೇರಿ, ಗುಳೇದಗುಡ್ಡ ಮುಂತಾದ ಕಡೆಗಳಲ್ಲಿ ಬಾಲಕಿಯರಿಗಾಗಿ ಶಾಲೆಗಳನ್ನು ತೆರೆದರು.

ಕಲ್ಕತ್ತೆಯ ಈಶ್ವರಚಂದ್ರ ವಿದ್ಯಾಸಾಗರರು ಸರಕಾರಿ ಶಿಕ್ಷಣಖಾತೆಯಲ್ಲಿ ಪ್ರಮುಖನಾಗಿದ್ದ ಡ್ರಿಂಕ್ ವಾಟರ್ ಬೆಥೂನ್ ಎಂಬುವನ ಸಹಾಯದಿಂದ 1851ರಲ್ಲಿ 'ಹಿಂದೂ ಬಾಲಿಕಾ ವಿದ್ಯಾಲಯ' ಸ್ಥಾಪಿಸಿದರು. ಬೆಥೂನ್‌ನ ನಿಧನದ ನಂತರ ಈ ಶಾಲೆಯೇ 'ಬೆಥೂನ್ ಮಹಿಳಾ ವಿದ್ಯಾಲಯ' ಆಯಿತು.

ಭಾರತೀಯ ಸ್ತ್ರೀಯರೂ ಸಹ ಉಚ್ಚ ಶಿಕ್ಷಣದ ಲಾಭ ಪಡೆಯಬೇಕೆಂದು ಬಯಸಿ ಪ್ರೊತೆಸ್ತಾಂತ ಕ್ರೈಸ್ತ ಮಿಷನರಿಗಳು ಅವರಿಗೆ

Digitised by Bharatavani, CIIL

ಉಚ್ಚ ಶಿಕ್ಷಣದ ವ್ಯವಸ್ಥೆಯನ್ನು ಮಾಡಿ ಆ ಮೂಲಕ ಅವರನ್ನು ಪುರುಷರ ಸವಾನ ತರಲಿಕ್ಕೆ ಮಾಡಿದ ಪ್ರಯತ್ನ ನಿಜವಾಗಿಯೂ ಶ್ಲಾಘನೀಯವಾದದ್ದು.

ಅಮೆರಿಕೆಯ ಮೆಥೊಡಿಸ್ಟ್ ಎಪಿಸ್ಕೋಪಲ್ ಚರ್ಚ್‌ನವರು ಭಾರತಕ್ಕೆ ಕಳುಹಿಸಿದ ಇಜಬೆಲ್ಲಾ ಥೋಬರ್ನ್ ಎಂಬುವಳು 1870ರಲ್ಲಿ ಲಖನೌಗೆ ಬಂದು ಅಲ್ಲಿ ಸ್ತ್ರೀಯರಿಗಾಗಿ ಒಂದು ಶಾಲೆಯನ್ನು ನಂತರ ಒಂದು ಬೋರ್ಡಿಂಗ್ ಹೋಮ್ ಶಾಲೆಯನ್ನು ಕೊನೆಗೆ 1887ರಲ್ಲಿ ಒಂದು ಕಾಲೇಜನ್ನೂ ಸ್ಥಾಪಿಸಿದಳು. ಅದಕ್ಕೆ ಇಬಬೆಲ್ಲಾ ಥೋಬರ್ನ್ ಕಾಲೇಜು ಎಂದು ನಾಮಕರಣ ಮಾಡಲಾಯಿತು. ಇಡೀ ಭಾರತದಲ್ಲಿಯೇ ಇದು ಎರಡನೆಯ ಮಹಿಳಾ ಕಾಲೇಜು ಆಗಿದೆ. ಬೆಥೂನ್ ಮಹಿಳಾ ಕಾಲೇಜು ಮೊದಲನೆಯ ಮಹಿಳಾ ಕಾಲೇಜು. ಆದರೆ ಇಡೀ ಏಷ್ಯಾದಲ್ಲಿಯೇ ಇಜಬೆಲ್ಲಾ ಥೋಬರ್ನ್ ಕಾಲೇಜು ಮೊಟ್ಟ ಮೊದಲನೆಯ ಕ್ರೈಸ್ತ ಮಹಿಳಾ ಕಾಲೇಜು ಎಂಬ ಕೀರ್ತಿಯನ್ನು ಪಡೆದಿದೆ.

–ಆ.ಕೈ.

## ಭಾರತೀಯ ಭಾಷಾ ವಿಶ್ವವಿದ್ಯಾನಿಲಯಗಳು

### ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಕರ್ನಾಟಕ (1991)

ಕನ್ನಡ ವಿಶ್ವವಿದ್ಯಾನಿಲಯ ಕಾಯ್ದೆ 1991ರ ಮೂಲಕ ಕರ್ನಾಟಕ ಸರ್ಕಾರವು 1991ರಲ್ಲಿ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿತು. 1991ರಲ್ಲಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದರೂ, ಸುಮಾರು 1980ರ ದಶಕದಿಂದಲೇ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಬೇಡಿಕೆಯಿತ್ತು. ಆ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಸದಾಶಿವ ಒಡೆಯರ್‌ರವರ ನೇತೃತ್ವದಲ್ಲಿ ಆಯೋಗವನ್ನು ನೇಮಿಸಿತು. ಈ ಸಮಿತಿಯು ಬುದ್ಧಿ–ಜೀವಿಗಳು, ಶಿಕ್ಷಣ ತಜ್ಞರು, ರಾಜಕೀಯ ಚಿಂತಕರು, ಸಾಮಾಜಿಕ ಕಾರ್ಯಕರ್ತರು, ಸಾಹಿತಿಗಳು ಹಾಗೂ ವಿಷಯಾಸಕ್ತರ ಅಭಿಪ್ರಾಯಗಳನ್ನು ಸಂಗ್ರಹಿಸಿ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಶಿಫಾರಸ್ಸು ಮಾಡಿತು. ಇಂದು ಕನ್ನಡ ಶಾಸ್ತ್ರೀಯ ಸ್ಥಾನಮಾನವನ್ನು ದೊರಕಿಸಿಕೊಡುವಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಪರಿಶ್ರಮ ಶ್ಲಾಘನೀಯ.

ಕನ್ನಡ ವಿಶ್ವವಿದ್ಯಾನಿಲಯವು ಪುರಾಣ ಪ್ರಸಿದ್ಧವಾದ ಹಾಗೂ ಐತಿಹಾಸಿಕ ತಾಣವಾದ ಹಂಪಿಯ ಸಮೀಪದಲ್ಲಿ ಸ್ಥಾಪಿತವಾಗಿದೆ. ಶಿಲಾಯುಗದ ಕಾಲದಿಂದಲೂ ಇಲ್ಲಿ ಜನವಸತಿಯಿತ್ತೆಂಬುದಕ್ಕೆ ಇಲ್ಲಿನ ಗುಹೆಗಳಲ್ಲಿನ ಚಿತ್ರಣಗಳು ಸಾಕ್ಷಿಯಾಗಿವೆ. ಅಲ್ಲದೇ ಇಲ್ಲಿ ಬೌದ್ಧ, ಜೈನ, ವೀರಶೈವ, ವೈಷ್ಣವ, ಇಸ್ಲಾಂ ಧರ್ಮಗಳು ಚಾಲ್ತಿಯಲ್ಲಿದ್ದು, ಇನ್ನಿತರ ಧಾರ್ಮಿಕ ಸಂಸ್ಕೃತಿಗಳಾದ ಹುಲಿಗೆಮ್ಮ, ಗೆಳೆಮ್ಮ, ಮೈಲಾರಲಿಂಗ, ಬಾಲಬಸವಗಳು ಇಂದಿಗೂ ಪ್ರಚಲಿತವಾಗಿವೆ. ಈ ಸ್ಥಳವು ಹೊಯ್ಸಳ, ಸಿಂಧು, ಕಪಿಲ ಹಾಗೂ ವಿಜಯನಗರ ಸಾಮ್ರಾಜ್ಯಗಳ ಔನ್ನತ್ಯಕ್ಕೆ ಕಾರಣವಾಗಿದೆ. ವಿಜಯನಗರ ಸಾಮ್ರಾಜ್ಯವು ಕನ್ನಡ ಭಾಷೆಯ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿದ್ದಲ್ಲದೇ, ಕರ್ನಾಟಕ ಏಕೀಕರಣ ಚಳುವಳಿಗೆ ಪ್ರೋತ್ಸಾಹಿಸುವ ಏಕೀಕೃತ ಕರ್ನಾಟಕದ ಸಾಂಕೇತಿಕತೆಯನ್ನು ಪ್ರದರ್ಶಿಸಿದೆ ಎಂದರೆ ತಪ್ಪಾಗಲಾರದು. ಹಂಪಿಯು ಕನ್ನಡದ ಪ್ರಸಿದ್ಧ ಕವಿಗಳಾದ ಹರಿಹರ, ರಾಘವಾಂಕ, ಕುಮಾರವ್ಯಾಸ ಹಾಗೂ ಪುರಂದರರ ಆಶ್ರಯತಾಣವಾಗಿತ್ತು. ಹಂಪಿಯು ಭಾರತೀಯ ವಾಸ್ತುಶಿಲ್ಪದ ಗುಡಾಣವೆಂದು ಪರಿಗಣಿಸಲ್ಪಟ್ಟಿದೆ ಹಾಗೂ ಯುನೆಸ್ಕೋ ಸಂಸ್ಥೆಯು ಹಂಪಿಯನ್ನು ವಿಶ್ವ ಪಾರಂಪರಿಕ ತಾಣವೆಂದು ಘೋಷಿಸಿ ಅದರ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ.

ಕನ್ನಡ ವಿಶ್ವವಿದ್ಯಾನಿಲಯ ಮೊದಲು ಸ್ಥಾಪಿಸಲ್ಪಟ್ಟಿದ್ದ ಶಿಲಾಮಂಟಪದಿಂದ ವಿದ್ಯಾರಣ್ಯ ಎಂಬ ಹೊಸ ಹಾಗೂ ಪ್ರಸ್ತುತವಿರುವ ಆವರಣಕ್ಕೆ 1994ರಲ್ಲಿ ಸ್ಥಳಾಂತರಿಸಲ್ಪಟ್ಟಿತು. ಇದಲ್ಲದೇ ಐತಿಹಾಸಿಕ ಸ್ಥಳವಾದ ಬಾದಾಮಿಯಲ್ಲಿ ಶಿಲ್ಪಕಲೆ ಹಾಗೂ ದೃಶ್ಯಕಲಾ ವಿಭಾಗ ಮತ್ತು ಕುವೆಂಪುರವರ ಜನ್ಮಸ್ಥಳವಾದ ಕುಪ್ಪಳ್ಳಿಯಲ್ಲಿ ಸ್ಥಾಪಿತವಾಗಿರುವ ಕುವೆಂಪು ಅಧ್ಯಯನ ಕೇಂದ್ರಗಳ ಮೂಲಕ ಎರಡು ಉಪ ಕೇಂದ್ರಗಳನ್ನು ಹೊಂದಿದೆ. ಕನ್ನಡ ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡಗಳು ಈ ರೀತಿಯಾಗಿವೆ.

### ವಿದ್ಯಾರಣ್ಯ (ಜ್ಞಾನ ಕಾನನ)

700 ಎಕರೆಗಳ ಗುಡ್ಡ ಬೆಟ್ಟಗಳ ವನರಾಜಿ ಹಾಗೂ ಸುಂದರ ಸರೋವರಗಳ ವಿಹಂಗಮ ಪ್ರಕೃತಿಯ ನಡುವೆ ಕನ್ನಡ ವಿಶ್ವವಿದ್ಯಾನಿಲಯವು ಕಾರ್ಯ ನಿರ್ವಹಿಸುತ್ತಿದೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ 'ಗುರು–ವಿದ್ಯಾರಣ್ಯ'ರ ಹೆಸರಿನಲ್ಲಿ ಈ ಆವರಣವು ಹೆಸರಿಸಲ್ಪಟ್ಟಿದೆ ಮತ್ತು ಆ ಪದವನ್ನು 'ಜ್ಞಾನ ಕಾನನ'ವೆಂದೂ ಅರ್ಥೈಸಬಹುದಾಗಿದೆ. ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡಗಳೂ ಹಂಪಿಯ ಐತಿಹಾಸಿಕ ನಿರ್ಮಾಣಗಳಿಗೆ ಪೂರಕವಾಗಿದೆ.

### ಅಕ್ಷರ

ಇದು ಕನ್ನಡ ವಿಶ್ವವಿದ್ಯಾನಿಲಯ ಅಧ್ಯಯನ–ಅಧ್ಯಾಪನ–ಸಂಶೋಧನಾ ಚಟುವಟಿಕೆಗಳಿಗೆ ಇಂಬು ನೀಡುತ್ತಿರುವ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವಾಗಿದೆ.

### ಸರ್ವಜ್ಞ

ಇದು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ನೆರವಿನಿಂದ ಸ್ಥಾಪಿತವಾಗಿರುವ ಮತ್ತೊಂದು ಗ್ರಂಥಾಲಯವಾಗಿದ್ದು, ಇಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಲವಾರು ಗ್ರಂಥಗಳಿವೆ.

### ಕ್ರಿಯಾಶಕ್ತಿ

ಇದು ವಿಜಯನಗರ ಸಾಮ್ರಾಜ್ಯದ ಮತ್ತೊಬ್ಬ ಗುರುವಿನ ಸ್ಮರಣೆಯಲ್ಲಿ ಗೌರವಪೂರ್ವಕವಾಗಿ ಸ್ಥಾಪಿಸಲ್ಪಟ್ಟಿರುವ ಆಡಳಿತ ಕೇಂದ್ರವಾಗಿದೆ.

Digitised by Bharatavani, CIIL

**ಪಂಪ ಸಭಾಂಗಣ**

ಕನ್ನಡ ಸಾಹಿತ್ಯದ ಆದಿಕವಿಯೆಂದು ಪ್ರಸಿದ್ಧನಾಗಿರುವ ಪಂಪನ ಹೆಸರಿನಲ್ಲಿರುವ ಸಭಾಂಗಣವಾಗಿದ್ದು, ವರ್ಷವಿಡೀ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳಿಗೆ ಪೂರಕವಾದ ಕಮ್ಮಟಗಳು, ವಿಚಾರಗೋಷ್ಠಿಗಳು, ಕಾರ್ಯಾಗಾರಗಳು ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತವೆ.

**ನವರಂಗ**

ಇದು ಸರೋವರದ ದಡದಲ್ಲಿ ಗ್ರೀಕ್ ರಂಗಮಂಟಪದ ವಾಸ್ತುವಿನಲ್ಲಿ ನಿರ್ಮಾಣಗೊಂಡಿರುವ ಬಯಲು ರಂಗಮಂದಿರವಾಗಿದೆ.

**ಗಿರಿಸೀಮೆ (ಬುಡಕಟ್ಟು ಗ್ರಾಮ)**

ಇದು ಬುಡಕಟ್ಟು ಸಂಸ್ಕೃತಿಯ ಅಧ್ಯಯನ ಕೇಂದ್ರವಾಗಿದ್ದು, ಇಲ್ಲಿ ಕರ್ನಾಟಕದ ವಿವಿಧ ಬುಡಕಟ್ಟು ಜನಾಂಗದ ಜನರು ವಾಸಿಸುವ ಗುಡಿಸಲುಗಳ ಮಾದರಿಯನ್ನು ನಿರ್ಮಿಸಿದ್ದು, ಆಯಾ ಜನಾಂಗದ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಅನುವು ಮಾಡಿಕೊಡಲಾಗಿದೆ.

**ವಿವಿಧ ಅಧ್ಯಯನ ವಿಷಯಗಳು**

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯವು ಹಲವು ವಿಷಯಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ಪದವಿಗಳ ಅಧ್ಯಯನಕ್ಕೆ ರೆಗ್ಯುಲರ್ ಹಾಗೂ ದೂರಶಿಕ್ಷಣ ವ್ಯವಸ್ಥೆಯ ಮೂಲಕ ಅನುವು ಮಾಡಿಕೊಡಲಾಗಿದ್ದು, ಇದಕ್ಕಾಗಿ ಕರ್ನಾಟಕ ರಾಜ್ಯದಾದ್ಯಂತ ಹಲವಾರು ಅಧ್ಯಯನ ಕೇಂದ್ರಗಳನ್ನು ತೆರೆಯಲಾಗಿದೆ.

ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಭಾಷಾ ವಿಭಾಗ, ಲಲಿತಾ ಕಲಾ ವಿಭಾಗ, ಸಮಾಜವಿಜ್ಞಾನ ವಿಭಾಗ ಮತ್ತು ವಿಜ್ಞಾನ ಎಂಬ ಪ್ರಮುಖ ವಿಭಾಗಗಳಿದ್ದು, ಇಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ಚಟುವಟಿಕೆಗಳು ನಡೆಯುತ್ತವೆ.

**ದೂರಶಿಕ್ಷಣ ತರಗತಿಗಳು**

ಕನ್ನಡ ವಿಶ್ವವಿದ್ಯಾನಿಲಯ ಹಲವಾರು ವಿಷಯಗಳಲ್ಲಿ ದೂರಶಿಕ್ಷಣವನ್ನು ನೀಡುತ್ತಿದೆ. ಆ ವಿಷಯಗಳು ಹೀಗಿವೆ:

- **ಸ್ನಾತಕೋತ್ತರ ಡಿಪ್ಲೋಮಾ:** ಭಾಷಾಶಾಸ್ತ್ರ, ಕ್ರಿಯಾತ್ಮಕ ಕನ್ನಡ, ದಲಿತ ಅಧ್ಯಯನ, ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಮಹಿಳಾ ಅಧ್ಯಯನ, ಕರ್ನಾಟಕ ಅಧ್ಯಯನ, ದ್ರಾವಿಡ ಅಧ್ಯಯನ.

- **ಮೆಟ್ರಿಕ್ ನಂತರದ ಡಿಪ್ಲೋಮಾ:** ಅಭಿವೃದ್ಧಿ ಸಂವಹನ, ಕರಕುಶಲ ಕಲೆಗಳು, ಜನಪದ ಸಂಗೀತ, ನಾಟಕ ಕಲೆ, ಪಾರಂಪರಿಕ ಜ್ಞಾನ.

- **ಸರ್ಟಿಫಿಕೇಟ್ ತರಬೇತಿ:** ಸಂಶೋಧನಾ ವಿಧಾನ, ತೆಲುಗು, ತಮಿಳು, ಮಲಯಾಳಂ.

- **ಕನ್ನಡ ವಿಶ್ವವಿದ್ಯಾನಿಲಯ ನಿಯತಕಾಲಿಕೆಗಳು:** ಇಲ್ಲಿನ ಪ್ರಸಾರಾಂಗ ವಿಭಾಗವು ಕನ್ನಡ ಅಧ್ಯಯನ, ಮಹಿಳಾ ಅಧ್ಯಯನ, ಜನಪದ ಕರ್ನಾಟಕ, ಬುಡಕಟ್ಟು ಕರ್ನಾಟಕ, ಅಧ್ಯಯನ ಹಾಗೂ ನಮ್ಮ ಕನ್ನಡ ಎಂಬ ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ.

ಈ ನಿಯತಕಾಲಿಕೆಗಳು ಪ್ರಸ್ತುತ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಶೋಧಕರು ತಮ್ಮ ಸಂಶೋಧನಾ ಕಿರುಪ್ರಬಂಧಗಳನ್ನು ಪ್ರಕಟಿಸುವ ಉತ್ತಮ ವೇದಿಕೆಯಾಗಿದೆ. ಅಲ್ಲದೇ `Journal of Karnataka Studies' ಎಂಬ ಆಂಗ್ಲ ನಿಯತಕಾಲಿಕೆಯನ್ನು ಸಹ ಪ್ರಕಟಿಸುತ್ತಿದೆ. ಇದಲ್ಲದೇ ವಿಜ್ಞಾನ ಸಂಗಾತಿ, ಪುಸ್ತಕ ಮಾಹಿತಿ ಹಾಗೂ ಚೆಲುವ ಕನ್ನಡ ಎಂಬ ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ.

ಆಧುನಿಕ ತಂತ್ರಜ್ಞಾನ ಕ್ಷೇತ್ರದ ತಂತ್ರಾಂಶವಾದ 'ಕುವೆಂಪು ಕನ್ನಡ ತಂತ್ರಾಂಶ 1.0' ಆವೃತ್ತಿಯನ್ನು ಇತ್ತೀಚೆಗೆ ಕನ್ನಡ ವಿಶ್ವವಿದ್ಯಾನಿಲಯವು ರೂಪಿಸಿರುವುದು, ಈ ವಿಶ್ವವಿದ್ಯಾನಿಲಯವು ಆಧುನಿಕ ಅಗತ್ಯಗಳಿಗೆ ಸ್ಪಂದಿಸುವ ವಿಶಿಷ್ಟ ಗುಣವನ್ನು ತೋರ್ಪಡಿಸುವುದಾಗಿದೆ.

**ತಮಿಳು ವಿಶ್ವವಿದ್ಯಾನಿಲಯ, ತಂಜಾವೂರು (1981)**

ದಕ್ಷಿಣ ಭಾರತದ ತಮಿಳು ಭಾಷೆಯು ತನ್ನ ಪ್ರಾಚೀನತೆಗೆ ಹಾಗೂ ಅಗಾಧ ಸಾಹಿತ್ಯಿಕ ಮೌಲ್ಯಗಳಿಗೆ ಹೆಸರಾದ ಭಾಷೆಯಾಗಿದ್ದು, ಇಂದು ಶಾಸ್ತ್ರೀಯ ಸ್ಥಾನಮಾನವನ್ನು ಪಡೆದಿದೆ. ಜಗತ್ತಿನ ಪ್ರಾಚ್ಯ ಸಂಶೋಧನಾಕಾರರೆಂದು ಹೆಸರಾಗಿದ್ದ ಮ್ಯಾಕ್ಸ್ ಮುಲ್ಲರ್, ಕೀಥ್ ಹಾಗೂ ಎಡ್ವಿನ್ ಆರ್ನಾಲ್ಡ್ ಮೊದಲಾದವರು ಭಾರತೀಯ ಸಾಹಿತ್ಯವೆಂದರೆ ಸಂಸ್ಕೃತ ಮಾತ್ರ ಎಂದೇ ವಾದಿಸಿದ್ದ ಪರಿಣಾಮವಾಗಿ ಹಿಂದಿನ ಕಾಲದಿಂದಲೂ ತಮಿಳು ಭಾಷೆಯ ಸಾಹಿತ್ಯ ಶ್ರೀಮಂತಿಕೆಗಳು ತಿಳಿದಿರಲಿಲ್ಲ. ಬ್ರಿಟಿಷರ ಕಾಲದ ಭಾರತದಲ್ಲಿ ತಮಿಳು ಭಾಷೆಯ ಉಪೇಕ್ಷೆಯಿಂದಾಗಿ ತಂಜಾವೂರಿನ ತಮಿಳು ಸಾಹಿತಿಗಳು 1925ರ ಆಗಸ್ಟ್ 23ರಲ್ಲಿಯೇ ತಮಿಳು ಭಾಷೆಯ ಅಭಿವೃದ್ಧಿಯ ಸಲುವಾಗಿ ತಮಿಳು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಅಗತ್ಯವನ್ನು ಮನಗಂಡಿದ್ದರು. ಅದಕ್ಕೆಂದೇ ಅವಶ್ಯಕವಾಗಿದ್ದ ನಿಧಿಯನ್ನು ಸಂಗ್ರಹಿಸಿ ತಿರುಚಿನಾಪಳ್ಳಿಯ ಇಂಪೀರಿಯಲ್ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯಲಾಗಿತ್ತು. ಆದರೆ ಅಂದಿನ ಸರ್ಕಾರದ ಅಧಿಕಾರಿಗಳ ಅಸಹಕಾರದಿಂದಾಗಿ ತಮಿಳು ವಿಶ್ವವಿದ್ಯಾನಿಲಯ ಸ್ಥಾಪನೆಯ ವಿಚಾರ ಕಾರ್ಯಗತವಾಗಲಿಲ್ಲ ಎಂಬುದು ಖೇದನೀಯ.

ಅಂದಿನಿಂದ ನಡೆಸಿದ ಅವಿರತ ಪರಿಶ್ರಮ ಹಾಗೂ ತಮಿಳು ಸಾಹಿತಿಗಳ ಒತ್ತಡದಿಂದಾಗಿ ತಮಿಳುನಾಡು ರಾಜ್ಯ ಸರ್ಕಾರವು 1981 ಸೆಪ್ಟೆಂಬರ್ ತಿಂಗಳಿನಲ್ಲಿ ತಮಿಳು ವಿಶ್ವವಿದ್ಯಾನಿಲಯ ಕಾಯ್ದೆ 1981ರ ಮೂಲಕ ತಮಿಳು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ನಿರ್ಧರಿಸಿತು. 1983ರಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಇದಕ್ಕೆ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ನೀಡಿತು.

ತಮಿಳು ವಿಶ್ವವಿದ್ಯಾನಿಲಯವನ್ನು ತಂಜಾವೂರಿನ ಹೊರವಲಯದಲ್ಲಿ ಸ್ಥಾಪಿಸಲು ನಿರ್ಧರಿಸಲಾಯಿತು. ಚೋಳ ಸಾಮ್ರಾಜ್ಯದ ರಾಜಧಾನಿಯಾಗಿದ್ದು, ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದ್ದ ಈ ಸ್ಥಳದಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಗೆ ತಮಿಳುನಾಡಿನ ಎಲ್ಲೆಡೆಯಿಂದ ಪ್ರೋತ್ಸಾಹ ದೊರೆಯಿತು. ಅಂತಿಮವಾಗಿ 1981ರ ಸೆಪ್ಟೆಂಬರ್ ಎರಡನೇ ವಾರದಲ್ಲಿ ವಿಶ್ವವಿದ್ಯಾನಿಲಯ ಅಧಿಸೂಚನೆ ಹೊರಬಿದ್ದಿತು.

ತಮಿಳು ವಿಶ್ವವಿದ್ಯಾನಿಲಯವು ತಂಜಾವೂರಿನ 800 ಎಕರೆಗಳ ವಿಸ್ತೀರ್ಣದಲ್ಲಿ ನೆಲೆಗೊಂಡಿದ್ದು, ವಿಶಾಲ ಕಟ್ಟಡದಲ್ಲಿರುವ ವಿವಿಧ ವಿಭಾಗಗಳನ್ನು ಒಳಗೊಂಡಿದೆಯಲ್ಲದೇ, ತಮಿಳು ಸಾಹಿತ್ಯಕ್ಕೆ ಸಂಬಂಧಿಸಿದ ಅಸಂಖ್ಯಾತ ಗ್ರಂಥಗಳನ್ನೊಳಗೊಂಡ, ನವದೆಹಲಿಯ ಪಾರ್ಲಿಮೆಂಟ್ ಭವನವನ್ನು ಹೋಲುವಂತಿರುವ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಹಾಗೂ ವಿಶ್ವ ತಮಿಳು ಸಮ್ಮೇಳನದ ಸಂದರ್ಭದಲ್ಲಿ ನಿರ್ಮಿಸಿದ ಸುಮಾರು

Digitised by Bharatavani, CIIL

2000 ಮಂದಿ ಕುಳಿತುಕೊಳ್ಳಬಹುದಾದ ಕಾರಿಕಾಲನ್ ಗ್ಯಾಲರಿ ಮತ್ತು ಪ್ರತ್ಯೇಕ ಬಯಲು ರಂಗಮಂದಿರ ಇಲ್ಲಿವೆ.

ತಮಿಳು ಭಾಷೆ ಹಾಗೂ ಸಾಹಿತ್ಯದ ಅಧ್ಯಯನ, ಭಾಷಾಶಾಸ್ತ್ರ, ಪದಕೋಶ, ಸಂಗೀತ, ನೃತ್ಯ, ಹಸ್ತಪ್ರತಿಗಳ ಅಧ್ಯಯನ, ರಚನೆ ಹಾಗೂ ಮರು ವಿಮರ್ಶೆಗಳನ್ನು ಮುಖ್ಯ ಧ್ಯೇಯವನ್ನಾಗಿ ಹೊಂದಿರುವ ಈ ತಮಿಳು ವಿಶ್ವವಿದ್ಯಾನಿಲಯವು 1981ರಲ್ಲಿ ಕಾರ್ಯಾರಂಭ ಮಾಡಿತು. ಮೊದಲಿಗೆ ಕೇವಲ ಸಂಶೋಧನೆಗೆ ಮೀಸಲಾಗಿದ್ದ ಈ ವಿಶ್ವವಿದ್ಯಾನಿಲಯ 1992ರಲ್ಲಿ ತನ್ನ ಸಂಶೋಧನಾ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿದ ಪರಿಣಾಮವಾಗಿ ತಮಿಳು ಭಾಷೆ–ಸಾಹಿತ್ಯ ಭಾಷಾಂತರ, ವಾಸ್ತುಶಿಲ್ಪ, ಇತಿಹಾಸ ಹಾಗೂ ಶಿಲಾಶಾಸ್ತ್ರ ವಿಷಯಗಳಲ್ಲಿ ಪಿಹೆಚ್.ಡಿ ಹಾಗೂ ಎಂ.ಫಿಲ್. ಅಧ್ಯಯನ ವಿಭಾಗಗಳನ್ನು ತೆರೆಯಿತು. ಸಾರ್ವಜನಿಕ ಒತ್ತಾಯದ ಮೇರೆಗೆ ಜೂನ್ 2003ರ ಶೈಕ್ಷಣಿಕ ವರ್ಷದಿಂದ ಈ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿಯ ಅಧ್ಯಯನಕ್ಕೂ ಅವಕಾಶ ನೀಡಲಾಯಿತು.

**ತಮಿಳು ವಿಶ್ವವಿದ್ಯಾನಿಲಯದ ವಿಭಾಗಗಳು:** ಇಲ್ಲಿ ಪ್ರಮುಖವಾದ ಐದು ವಿಭಾಗಗಳಿದ್ದು, ಇದರಲ್ಲಿ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನಾ ಚಟುವಟಿಕೆಗಳು ಅವಿರತವಾಗಿ ನಡೆಯುತ್ತಿವೆ. ಈ ಐದು ವಿಭಾಗಗಳೆಂದರೆ,

1. **ಭಾಷಾ ಕೇಂದ್ರ:** ಇಲ್ಲಿ ಸಾಹಿತ್ಯ ವಿಭಾಗ, ಭಾಷಾಶಾಸ್ತ್ರ ವಿಭಾಗ, ಜನಪದ ಶಾಸ್ತ್ರ ವಿಭಾಗ, ಭಾರತೀಯ ಭಾಷಾ ವಿಭಾಗ, ತತ್ವಶಾಸ್ತ್ರ ಹಾಗೂ ಬುಡಕಟ್ಟು ಅಧ್ಯಯನ ವಿಭಾಗಗಳಿವೆ.
2. **ಹಸ್ತಪ್ರತಿ ಕೇಂದ್ರ:** ಇಲ್ಲಿ ಕಾಗದ ಹಸ್ತಪ್ರತಿ ವಿಭಾಗ, ತಾಳೆಗರಿ ಹಸ್ತಪ್ರತಿ ವಿಭಾಗ ಹಾಗೂ ಶಿಲಾಶಾಸನ ವಿಭಾಗಗಳಿವೆ.
3. **ಲಲಿತ ಕಲಾ ಕೇಂದ್ರ:** ಇಲ್ಲಿ ನಾಟಕ, ನೃತ್ಯ ಹಾಗೂ ಶಿಲ್ಪ ವಿಭಾಗಗಳಿವೆ.
4. **ವಿಜ್ಞಾನ ಕೇಂದ್ರ:** ಇದು ಸಿದ್ಧ ಔಷಧ ವಿಭಾಗ, ಪ್ರಾಚೀನ ಹಾಗೂ ಭೂ ವಿಜ್ಞಾನ ವಿಭಾಗ, ವಾಸ್ತುಶಿಲ್ಪ ವಿಭಾಗ ಹಾಗೂ ಗಣಕ ವಿಜ್ಞಾನ ವಿಭಾಗಗಳನ್ನೊಳಗೊಂಡಿದೆ.
5. **ಅಭಿವೃದ್ಧಿ ಶೀಲ ತಮಿಳು ಕೇಂದ್ರ:** ಇದು ವಿದೇಶಗಳಲ್ಲಿ ತಮಿಳು ಅಧ್ಯಯನ ವಿಭಾಗ, ಭಾಷಾಂತರ, ಭಾಷಾಕೋಶ ರಚನೆ, ಸಮಾಜಶಾಸ್ತ್ರ ಮತ್ತು ವೈಜ್ಞಾನಿಕ ತಮಿಳು ವಿಭಾಗಗಳನ್ನು ಒಳಗೊಂಡಿದೆ.

**ತಮಿಳು ವಿಶ್ವವಿದ್ಯಾನಿಲಯ ಪ್ರಕಟಣೆಗಳು:** ಕಳೆದ ಸುಮಾರು ಮೂರು ದಶಕಗಳಿಂದ ಕಾರ್ಯ ನಿರ್ವಹಿಸುತ್ತಿರುವ ತಮಿಳು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೆರವಿನಿಂದ ವಿವಿಧ ವಿಷಯಗಳಲ್ಲಿ ವಿಶ್ವಕೋಶ, ಪದಕೋಶ ಸಾಹಿತ್ಯ ಸಂಹಿತೆಗಳನ್ನು ರಚಿಸಿದೆ. ಅವುಗಳೆಂದರೆ,

- ಮಾನವಿಕ ವಿಶ್ವಕೋಶ
- ವಿಜ್ಞಾನ ವಿಶ್ವಕೋಶ– 8 ಭಾಗಗಳು
- ತಮಿಳುನಾಡಿನ ದೇವಾಲಯಗಳ ವಿಶ್ವಕೋಶ – 3 ಭಾಗಗಳು
- ನಾಟಕ ವಿಶ್ವಕೋಶ – 3 ಭಾಗಗಳು
- ತಮಿಳು ಪದ ವಿವರಣ ಕೋಶ – 4 ಭಾಗಗಳು
- ಸಂಗಂ ತಮಿಳು ಸಾಹಿತ್ಯದ ಪದಕೋಶ
- ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಪಠ್ಯವಸ್ತುಗಳ ಭಾಷಾಂತರ
- ಸಂಗಂ ಸಾಹಿತ್ಯ ಸಂಹಿತೆ (ಇಂಗ್ಲಿಷ್ ಅನುವಾದದೊಂದಿಗೆ)

ಅಲ್ಲದೇ ವಿಶ್ವವಿದ್ಯಾನಿಲಯ ಪ್ರಕಟಣೆ ಸುಮಾರು 450 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದೆಯಲ್ಲದೇ, ಅಲ್ಲಿನ ಸಂಶೋಧಕರು ರಚಿಸಿದ ಭಾಷಾಂತರ ಸಾಹಿತ್ಯಗಳನ್ನು ಮುದ್ರಿಸುವ ಕಾರ್ಯದಲ್ಲಿ ತೊಡಗಿದೆ. 'ತಮಿಳು ಕಲೈ' ಹಾಗೂ 'ತಮಿಳು ಸಿವಿಲೈಜೇಷನ್' ಎಂಬ ಎರಡು ತ್ರೈಮಾಸಿಕ ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ.

ತಮಿಳು ವಿಶ್ವವಿದ್ಯಾನಿಲಯವು ಹಲವಾರು ದಾನಿಗಳು ನೀಡಿರುವ ದತ್ತಿಗಳು ಹಾಗೂ ತಮಿಳುನಾಡು ಸರ್ಕಾರವು ನೀಡಿರುವ ಕೋಟ್ಯಾಂತರ ರೂ.ಗಳ ಸಹಾಯಧನದೊಂದಿಗೆ ಹಿಂದು ತತ್ವಶಾಸ್ತ್ರ ಹಾಗೂ ತಮಿಳು ಭಾಷಾ ಸಾಹಿತ್ಯದ ಹಲವು ಮಜಲುಗಳನ್ನು ಕುರಿತು ವಿಚಾರಗೋಷ್ಠಿಗಳನ್ನು ಹಾಗೂ ಸಾಹಿತ್ಯ ಸಮ್ಮೇಳನಗಳನ್ನು ನಿರಂತರವಾಗಿ ಸಂಘಟಿಸಿರುತ್ತದೆ.

**ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾನಿಲಯ, ಹೈದರಾಬಾದ್ (1985)**

1985ರ ಡಿಸೆಂಬರ್ 2ರಂದು ಆಂಧ್ರಪ್ರದೇಶ ಸರ್ಕಾರದ ತೆಲುಗು ವಿಶ್ವವಿದ್ಯಾನಿಲಯ ಕಾಯ್ದೆ 1985ರ ಪ್ರಕಾರ ಹೈದರಾಬಾದ್‌ನಲ್ಲಿ ಕಾರ್ಯಾರಂಭ ಮಾಡಿದ ಈ ತೆಲುಗು ವಿಶ್ವವಿದ್ಯಾನಿಲಯ ಶ್ರೀ ಶೈಲಂ ಹಾಗೂ ರಾಜಮಂಡ್ರಿಯಲ್ಲಿ ಎರಡು ಪ್ರತ್ಯೇಕ ಕೇಂದ್ರಗಳನ್ನು ಹೊಂದಿದೆ. ಮುಂದೆ 1989ರಲ್ಲಿ ಕೂಚಿಪುಡಿಯ ಸಿದ್ಧೇಂದ್ರ ಕಲಾಕ್ಷೇತ್ರಂ ವಿಶ್ವವಿದ್ಯಾನಿಲಯದೊಂದಿಗೆ ವಿಲೀನಗೊಂಡು ಇನ್ನಷ್ಟು ವಿಸ್ತಾರವನ್ನು ಹೊಂದಿತು. 1994ರಲ್ಲಿ ಜಾನಪದ ಹಾಗೂ ಬುಡಕಟ್ಟು ಅಧ್ಯಯನ ಕೇಂದ್ರವನ್ನು ವಾರಂಗಲ್‌ನಲ್ಲಿ ಪ್ರಾರಂಭಿಸಿತು.

ರಾಜ್ಯ ಹಾಗೂ ಹೊರರಾಜ್ಯದಲ್ಲಿರುವ ತೆಲುಗು ಜನರ ಹಾಗೂ ಸಂಸ್ಕೃತಿಯ ಅಭಿವೃದ್ಧಿಯನ್ನು ಮುಖ್ಯಧ್ಯೇಯವನ್ನಾಗಿಸಿಕೊಂಡ ವಿಶ್ವವಿದ್ಯಾನಿಲಯವು ಅದಕ್ಕಾಗಿಯೇ ಸಾಹಿತ್ಯ, ಸಂಗೀತ, ನಾಟಕ, ನೃತ್ಯ ಹಾಗೂ ಲಲಿತಕಲಾ ಅಕಾಡೆಮಿಗಳು, ಅಂತರರಾಷ್ಟ್ರೀಯ ತೆಲುಗು ಸಂಸ್ಥೆ ಹಾಗೂ ತೆಲುಗು ಭಾಷಾ ಸಮಿತಿಯನ್ನು ತೆಲುಗು ವಿಶ್ವವಿದ್ಯಾನಿಲಯದೊಡನೆ ವಿಲೀನಗೊಳಿಸಿಕೊಂಡು, ತೆಲುಗು ಭಾಷೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಲಲಿತಕಲೆ ಹಾಗೂ ಪ್ರದರ್ಶನ ಕಲೆ, ಧರ್ಮ ಮತ್ತು ತತ್ವಶಾಸ್ತ್ರಗಳ ಅಧ್ಯಯನಕ್ಕೆ ಮೀಸಲಾದ ಏಕೈಕ ಕೇಂದ್ರವಾಗಿ ಬೆಳೆಯಿತು. ನಂತರ 1998ರಲ್ಲಿ ತೆಲುಗು ವಿಶ್ವವಿದ್ಯಾನಿಲಯವನ್ನು ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾನಿಲಯವೆಂದು ಕರೆಯಲಾಯಿತು. 1990ರ ಮೇ 2 ರಿಂದ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗವು ಈ ವಿಶ್ವವಿದ್ಯಾನಿಲಯಕ್ಕೆ ಧನಸಹಾಯವನ್ನು ನೀಡುವ ಮೂಲಕ ಮಾನ್ಯತೆ ನೀಡಿತು.

**ವಿಶ್ವವಿದ್ಯಾನಿಲಯದ ವಿವಿಧ ಕೇಂದ್ರಗಳು**

ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾನಿಲಯವು ಐದು ವಿವಿಧ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಅವುಗಳೆಂದರೆ ಹೈದರಾಬಾದ್, ರಾಜಮುಂಡ್ರಿ, ಶ್ರೀಶೈಲಂ, ವಾರಂಗಲ್ ಹಾಗೂ ಕೂಚಿಪುಡಿ ಕೇಂದ್ರಗಳು.

Digitised by Bharatavani, CIIL

**ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು**

ಸದರಿ ವಿಶ್ವವಿದ್ಯಾನಿಲಯವು ಒಂಬತ್ತು ವಿವಿಧ ವಿಭಾಗಗಳನ್ನು ಒಳಗೊಂಡಿದ್ದು ಅವುಗಳ ವಿವರ ಈ ರೀತಿಯಿದೆ:

1. **ಭಾಷಾ ಅಭಿವೃದ್ಧಿ ಶಾಲೆ:** ಇದರಲ್ಲಿ ಭಾಷಾಶಾಸ್ತ್ರ ವಿಭಾಗವಿದೆ.
2. **ಲಲಿತಾ ಕಲಾ ಶಾಲೆ:** ಇದರಲ್ಲಿ ಸಂಗೀತ, ನೃತ್ಯ, ಜನಪದ ಕಲೆ, ರಂಗಕಲೆ, ಶಿಲ್ಪಕಲೆ ಮತ್ತು ವರ್ಣಕಲೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವಿಭಾಗಗಳಿವೆ.
3. **ಸಾಮಾಜಿಕ ಮತ್ತು ಇತರ ವಿಜ್ಞಾನ ಶಾಲೆ:** ಇಲ್ಲಿ ಸಂವಹನ ಮತ್ತು ಪತ್ರಿಕೋದ್ಯಮ ಹಾಗೂ ಜ್ಯೋತಿಷ್ಯ ಮತ್ತು ವಾಸ್ತು ವಿಭಾಗಗಳಿವೆ.
4. **ತೌಲನಿಕ ಅಧ್ಯಯನ ಶಾಲೆ**ಯು ತೌಲನಿಕ ಅಧ್ಯಯನ ವಿಭಾಗವನ್ನೊಳಗೊಂಡಿದೆ.
5. **ಸಾಹಿತ್ಯ ಶಾಲೆ**ಯು ತೆಲುಗು ಸಾಹಿತ್ಯ ಅಧ್ಯಯನ ವಿಭಾಗವನ್ನು ಹೊಂದಿದೆ.
6. **ಇತಿಹಾಸ, ಸಂಸ್ಕೃತಿ ಹಾಗೂ ವಾಸ್ತುಶಿಲ್ಪ ಶಾಲೆ:** ಇದರಲ್ಲಿ ತೆಲುಗು ಜನರ ಇತಿಹಾಸ ಮತ್ತು ಸಂಸ್ಕೃತಿ ವಿಭಾಗ, ಶಿಲಾಶಾಸನ ವಿಭಾಗ ಹಾಗೂ ವಾಸ್ತುಶಿಲ್ಪ ವಿಭಾಗಗಳಿವೆ.
7. **ಜನಪದ ಮತ್ತು ಬುಡಕಟ್ಟು ಶಾಲೆ:** ಇಲ್ಲಿ ತೆಲುಗು ರಾಜ್ಯದ ಜನಪದ ಕಲೆ ಮತ್ತು ಸಂಸ್ಕೃತಿ ಹಾಗೂ ಬುಡಕಟ್ಟು ಸಂಸ್ಕೃತಿ ಅಧ್ಯಯನ ವಿಭಾಗವಿದೆ.
8. **ಶ್ರೀ ಸಿದ್ಧೇಂದ್ರ ಯೋಗಿ ಕಲಾ ಪೀಠಂ:** ಇಲ್ಲಿ ತೆಲುಗು ಕಲಾ ಪ್ರಪಂಚವನ್ನು ಪರಿಚಯಪಡಿಸುವ ವಿಭಾಗವಿದೆ.
9. **ದೂರಶಿಕ್ಷಣ ವಿಭಾಗ:** ಇದು ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾನಿಲಯ ದೂರಶಿಕ್ಷಣ ಕೇಂದ್ರವಾಗಿದ್ದು, ಇದರಲ್ಲಿ ತೆಲುಗು ಸಾಹಿತ್ಯ ಹಾಗೂ ಅಧ್ಯಯನಕ್ಕೆ ಸಂಬಂಧಿಸಿದಂತೆ ಸ್ನಾತಕ, ಸ್ನಾತಕೋತ್ತರ, ಡಿಪ್ಲೋಮೋ ತರಗತಿಗಳಿಗೆ ಸಂಬಂಧಿಸಿದಂತೆ ತರಬೇತಿ ಶಿಕ್ಷಣವನ್ನು ನೀಡುತ್ತಿದೆ.

**ವಿಶ್ವವಿದ್ಯಾನಿಲಯ ಪ್ರಕಟಣೆಗಳು**

ವಿಶ್ವವಿದ್ಯಾನಿಲಯ ಪ್ರಕಟಣಾ ವಿಭಾಗವು ತೆಲುಗು ಸಾಹಿತ್ಯ, ಲಲಿತಕಲೆ, ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಗ್ರಂಥಗಳು, ವಿಶ್ವಕೋಶಗಳು, ಪದವಿವರಣ ಕೋಶಗಳು ಹಾಗೂ ಸಂಹಿತೆಗಳನ್ನು ಪ್ರಕಟಿಸಿದೆ. ಇದರ ಪ್ರಮುಖ ನಿಯತಕಾಲಿಕೆಯಾದ "ತೆಲುಗುವಾಣಿ"ಯು ಜನಪ್ರಿಯವಾದ ತ್ರೈಮಾಸಿಕ ನಿಯತಕಾಲಿಕೆಯಾಗಿದ್ದು, ಇದು ತೆಲುಗು ಭಾಷಾ ಸಾಹಿತ್ಯದ ಹಲವಾರು ಮಜಲುಗಳನ್ನು ಪರಿಚಯಿಸುವ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುತ್ತಿದೆ.

**ಮಹಾತ್ಮಾಗಾಂಧಿ ಅಂತಾರಾಷ್ಟ್ರೀಯ ಹಿಂದಿ ವಿಶ್ವವಿದ್ಯಾನಿಲಯ, ವಾರ್ಧಾ (1997)**

ಮಹಾತ್ಮಗಾಂಧಿ ಅಂತರರಾಷ್ಟ್ರೀಯ ಹಿಂದಿ ವಿಶ್ವವಿದ್ಯಾನಿಲಯವು 1997ರ ಜನವರಿ 8 ರಂದು ಮಹಾರಾಷ್ಟ್ರದ ವಾರ್ಧಾ ನಗರದಲ್ಲಿ ಸ್ಥಾಪಿತವಾಯಿತು. ಹಿಂದಿ ಭಾಷೆ ಹಾಗೂ ಸಾಹಿತ್ಯವನ್ನು ಬೋಧನೆ ಹಾಗೂ ಸಂಶೋಧನೆಯ ಮೂಲಕ ಇನ್ನಷ್ಟು ಕ್ರಿಯಾತ್ಮಕವನ್ನಾಗಿಸಿ ಅಂತರರಾಷ್ಟ್ರೀಯ ಭಾಷೆಯ ಸ್ಥಾನಮಾನವನ್ನು ನೀಡುವ ಸದುದ್ದೇಶವನ್ನು ಈ ವಿಶ್ವವಿದ್ಯಾನಿಲಯವು ಹೊಂದಿದೆ.

**ವಿಶ್ವವಿದ್ಯಾನಿಲಯದ ಪ್ರಮುಖ ಉದ್ದೇಶಗಳು**

1) ಹಿಂದಿ ಭಾಷೆ ಹಾಗೂ ಸಾಹಿತ್ಯದ ಅಭಿವೃದ್ಧಿ ಹಾಗೂ ಹಿಂದಿ ಭಾಷೆಯ ಅಭಿವೃದ್ಧಿಗೆ ಪೂರಕವಾದ ವಾತಾವರಣ ಸೃಷ್ಟಿಸುವುದು ಮತ್ತು ಹಿಂದಿ ಭಾಷೆಯ ಅಧ್ಯಯನ ಮತ್ತು ಸಂಶೋಧನೆಗೆ ಅನುವು ಮಾಡಿಕೊಡುವುದು.
2) ಹಿಂದಿ ಭಾಷೆಯನ್ನು ಇತರ ಭಾರತೀಯ ಭಾಷೆಗಳೊಂದಿಗೆ ತೌಲನಿಕ ಅಧ್ಯಯನ ಹಾಗೂ ಸಂಶೋಧನಾ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವುದು.
3) ದೂರ ಶಿಕ್ಷಣ ವ್ಯವಸ್ಥೆಯ ಮೂಲಕ ಹಿಂದಿ ಭಾಷೆಯನ್ನು ಜನಪ್ರಿಯಗೊಳಿಸುವುದು.

**ಹಿಂದಿ ವಿಶ್ವವಿದ್ಯಾನಿಲಯದ ವಿಭಾಗಗಳು:** ಮಹಾತ್ಮಗಾಂಧಿ ಅಂತಾರಾಷ್ಟ್ರೀಯ ಹಿಂದಿ ವಿಶ್ವವಿದ್ಯಾನಿಲಯದ ಪ್ರಮುಖ ವಿಭಾಗಗಳು ಹೀಗಿವೆ:

1) ಭಾಷಾ ವಿದ್ಯಾಪೀಠ
2) ಸಾಹಿತ್ಯ ವಿದ್ಯಾಪೀಠ
3) ಸಂಸ್ಕೃತಿ ವಿದ್ಯಾಪೀಠ
4) ಭಾಷಾಂತರ ವಿದ್ಯಾಪೀಠ

**ಹಿಂದಿ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸುಗಳು:** ಈ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಹಾಗೂ ಸಂಶೋಧನೆಗೆ ಅನುವು ಮಾಡಿಕೊಡುವ ಹಲವಾರು ಕೋರ್ಸುಗಳಿದ್ದು, ಅವು ಜನಪ್ರಿಯವಾಗಿದೆ.

**ಡಿಪ್ಲೋಮಾ:** ತಮಿಳು, ಸ್ಪಾನಿಷ್, ಮರಾಠೀ, ಚೀನೀ, ಉರ್ದು, ಫ್ರೆಂಚ್ ವಿಷಯಗಳಲ್ಲಿ ಡಿಪ್ಲೋಮಾ ತರಗತಿಗಳನ್ನು ನಡೆಸಲಾಗುತ್ತದೆ.

ಅಲ್ಲದೆ ಹಿಂದಿ (ಭಾಷಾ ತಂತ್ರಜ್ಞಾನ) ಹಿಂದಿ– (ತೌಲನಿಕ ಸಾಹಿತ್ಯ)

ಹಿಂದಿ (ಭಾಷಾಂತರ ತಂತ್ರಜ್ಞಾನ), ಅಹಿಂಸಾ ಮತ್ತು ಶಾಂತಿ ಅಧ್ಯಯನ.

ಮಹಿಳಾ ಅಧ್ಯಯನ, ಸಮೂಹ ಮಾಧ್ಯಮ ಮತ್ತು ಸಂವಹನ,

ದಲಿತ ಹಾಗೂ ಬುಡಕಟ್ಟು ಅಧ್ಯಯನ, ನಾಟಕ ಮತ್ತು ಚಲನಚಿತ್ರ ಅಧ್ಯಯನ,

ಇನ್‌ಫರ್‌ಮೆಟಿಕ್ ಮತ್ತು ಲ್ಯಾಂಗವೇಜ್ ಇಂಜಿನಿಯರಿಂಗ್ ಹಾಗೂ ಸಮಾಜ ಕಾರ್ಯ.

ಈ ವಿಷಯಗಳಲ್ಲಿ ಸ್ನಾತಕೋತ್ತರ, ಎಂ.ಫಿಲ್. ಹಾಗೂ ಪಿಹೆಚ್.ಡಿ.

ಅಧ್ಯಯನಕ್ಕೆ ಅನುವು ಮಾಡಿಕೊಡಲಾಗಿದೆ.

**ಸಂಸ್ಕೃತ ವಿಶ್ವವಿದ್ಯಾನಿಲಯಗಳು**

**1. ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯ, ವಾರಣಾಸಿ (1958)**

ಸಂಸ್ಕೃತವು ಅತಿ ಪ್ರಾಚೀನತಮವಾದ ಹಾಗೂ ಜಗತ್ತಿನ ಇತರ ಭಾಷೆಗಳಿಗಿಂತಲು ಸೃಜನಶೀಲ ಭಾಷೆಯಾಗಿದ್ದು, ಇದು ಭಾರತೀಯ ಸಂಸ್ಕೃತಿ ಹಾಗೂ ಚಿಂತನೆಯ ಸಂಕೇತವಾಗಿದೆ. ಇಂತಹ ಮಹಾನ್

Digitised by Bharatavani, CIIL

ಭಾಷೆಯ ಸಂಶೋಧನೆ, ಅಧ್ಯಯನ ಹಾಗೂ ಸಾಹಿತ್ಯಿಕ ಅಂಶಗಳನ್ನು ಜನಪ್ರಿಯಗೊಳಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಸ್ಥಾಪನೆಯನ್ನು ಮನಗಂಡು 1958ರ ಮಾರ್ಚ್ 22ರಂದು 'ವಾರಣಾಸಿಯ ಸಂಸ್ಕೃತ ವಿಶ್ವವಿದ್ಯಾನಿಲಯ'ವನ್ನು ಚಾಲನೆಗೊಳಿಸಲಾಯಿತು. ನಂತರ 1973ರ ಉತ್ತರಪ್ರದೇಶ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯನ್ವಯ 1974ರ ಡಿಸೆಂಬರ್ 16ರಂದು 'ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯ'ವೆಂದು ಮರುನಾಮಕರಣ ಮಾಡಲಾಯಿತು. ಈ ವಿಶ್ವವಿದ್ಯಾನಿಲಯವು ಹಿಂದಿನ ವಾರಣಾಸಿಯ 'ಸರ್ಕಾರಿ ಸಂಸ್ಕೃತ ಕಾಲೇಜಿ'ನ ಹಿನ್ನೆಲೆಯೊಂದಿಗೆ ಸುಮಾರು 250 ವರ್ಷಗಳ ಇತಿಹಾಸವನ್ನು ಹೊಂದಿ ಸ್ವತಂತ್ರ ಭಾರತದಲ್ಲಿ ಸ್ಥಾಪನೆಗೊಂಡ ಸಂಸ್ಕೃತ ವಿಶ್ವವಿದ್ಯಾನಿಲಯಗಳಲ್ಲಿ ಅತಿ ಪುರಾತನವಾಗಿದೆ.

**ಹಿನ್ನೆಲೆ :** 1791ರಲ್ಲಿ ಲಾರ್ಡ್ ಕಾರ್ನ್‌ವಾಲಿಸರ ಅನುಮೋದನೆಯೊಂದಿಗೆ ಬನಾರಸ್‌ನಲ್ಲಿ ಸಂಸ್ಕೃತ ಕಾಲೇಜು ಪ್ರಾರಂಭವಾಯಿತು. ಅಂದಿಗೆ ಅಲ್ಲಿ ವೇದ, ವೇದಾಂತ, ಪುರಾಣ, ಆಯುರ್ವೇದ, ಸಾಹಿತ್ಯ, ಜ್ಯೋತಿಶಾಸ್ತ್ರ, ಮೀಮಾಂಸಾ, ನ್ಯಾಯ, ವೈಶೇಷಿಕ, ವ್ಯಾಕರಣ– ಇವೇ ಮೊದಲಾದ ವಿಷಯಗಳನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಯಿತು. ಮೊದಲಿಗೆ ಕೇವಲ ಮೌಖಿಕ ಪರೀಕ್ಷೆಗೆ ಸೀಮಿತವಾಗಿದ್ದ ಇಲ್ಲಿನ ಅಧ್ಯಯನ ಕ್ರಮವು 1916ರಲ್ಲಿ ಲಿಖಿತ ಪರೀಕ್ಷೆಗೆ ಬದಲಾಯಿತು. ನಂತರದ ದಿನಗಳಲ್ಲಿ ಇಲ್ಲಿ ಪ್ರಕಟಣಾ ಕೇಂದ್ರವು ಸ್ಥಾಪನೆಗೊಂಡು ಸಂಸ್ಕೃತ ಸಾಹಿತ್ಯ ಗ್ರಂಥಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಕಾರ್ಯಗಳು ಪ್ರಾರಂಭವಾಗಿ, ಹಸ್ತಪ್ರತಿಗಳ ಸಂಶೋಧನೆಗೆ ಅನುವು ಮಾಡಿಕೊಡುವ ಸಲುವಾಗಿ 'ಸರಸ್ವತಿ ಭವನ' ವೆಂಬ ಜಗದ್ವಿಖ್ಯಾತ ಗ್ರಂಥಾಲಯ ಪ್ರಾರಂಭವಾಯಿತು. 1923ರಿಂದ 'ಸರಸ್ವತಿ ಭವನ' ಮಾಲಿಕೆ' ಎಂಬ ಹೆಸರಿನಲ್ಲಿ ಸಂಶೋಧನಾ ಸಾಹಿತ್ಯದ ಪ್ರಕಟಣೆಗಳು ಆರಂಭಗೊಂಡವು. ನಂತರ ಭಾಷಾಂತರ ಕಾರ್ಯಗಳೂ ಭರದಿಂದ ಸಾಗಿದವು. ಇವೆಲ್ಲದರ ಫಲವಾಗಿ ಬನಾರಸ್‌ನ 'ಸಂಸ್ಕೃತ ಕಾಲೇಜ್' ವಿಶ್ವವಿದ್ಯಾನಿಲಯದ ಮನ್ನಣೆಗೆ ಪಾತ್ರವಾಗಿ 1956ರಲ್ಲಿ 'ವಾರಣಾಸಿಯ ಸಂಸ್ಕೃತ ವಿಶ್ವವಿದ್ಯಾನಿಲಯ' ಎಂದು ಕರೆಯಲ್ಪಟ್ಟಿತು. ಆ ಕಾಲಕ್ಕೆ ಉತ್ತರ ಪ್ರದೇಶದಲ್ಲಿದ್ದ 1441 ಸಂಖ್ಯೆಯ ಕಾಲೇಜುಗಳು ಇದರ ಸಂಯೋಜನೆಗೊಳಪಟ್ಟು, ವಿಶ್ವವಿದ್ಯಾನಿಲಯವು ತನ್ನ ವಿಸ್ತೀರ್ಣವನ್ನು ಹೆಚ್ಚಿಸಿಕೊಂಡಿತು. ಅಂತಿಮವಾಗಿ 1974ರಲ್ಲಿ 'ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯ'ವೆಂಬ ಹೆಸರಿನಿಂದ ಜನಪ್ರಿಯವಾಯಿತು.

## 2. ಶ್ರೀ ಜಗನ್ನಾಥ ಸಂಸ್ಕೃತ ವಿಶ್ವವಿದ್ಯಾನಿಲಯ, ಪುರಿ (1991)

1981ರ ಜುಲೈ 7ರ ಹೀರಾಪಂಚಮಿಯ ಶುಭದಿನದಂದು ಒರಿಸ್ಸಾ ರಾಜ್ಯದ ಉನ್ನತ ಶಿಕ್ಷಣ ವಲಯದಲ್ಲಿ ಸ್ವರ್ಣಾಕ್ಷರಗಳಲ್ಲಿ ದಾಖಲಿಸುವ ದಿನವಾಗಿತ್ತು. ಅದು ಕೇವಲ ಒರಿಸ್ಸಾ ರಾಜ್ಯಕ್ಕಷ್ಟೇ ಅಲ್ಲದೇ ಇಡೀ ರಾಷ್ಟ್ರದ ಜನತೆಗೆ ಅವಿಸ್ಮರಣೀಯ ದಿನವಾಗಿತ್ತು ಎಂದರೆ ತಪ್ಪಾಗಲಾರದು. ಅಂದರೆ ಆ ದಿನ ವೇದ ಮಂತ್ರ ಘೋಷದೊಡನೆ, ಘಂಟಾನಾದದೊಂದಿಗೆ–ಶಂಖಾರವದೊಂದಿಗೆ ಶ್ರೀ ಜಗನ್ನಾಥ ಸಂಸ್ಕೃತ ವಿಶ್ವವಿದ್ಯಾನಿಲಯ ವಿದ್ಯುಕ್ತವಾಗಿ ಕಾರ್ಯಾರಂಭವಾಯಿತು. ಇದು ರಾಷ್ಟ್ರದ ಮೂರನೇ ಸಂಸ್ಕೃತ ವಿಶ್ವವಿದ್ಯಾನಿಲಯ ಹಾಗೂ ಒರಿಸ್ಸಾ ರಾಜ್ಯದ ಐದನೇ ವಿಶ್ವವಿದ್ಯಾನಿಲಯವಾಗಿ ಕಾರ್ಯೋನ್ಮುಖವಾಯಿತು.

ಈ ವಿಶ್ವವಿದ್ಯಾನಿಲಯವು ಸಂಸ್ಕೃತ ಭಾಷೆ, ಸಾಹಿತ್ಯ, ಪಾರಂಪರಿಕ ಅಧ್ಯಯನ ಕ್ಷೇತ್ರದಲ್ಲಿ ಒರಿಸ್ಸಾದ ಪರಂಪರಾಗತ ಇತಿಹಾಸವನ್ನು ಪುನರ್‌ರೂಪಿಸುವ ಉದ್ದೇಶವನ್ನು ಹೊಂದಿದೆ. ಈ ವಿಶ್ವವಿದ್ಯಾನಿಲಯವು ಪ್ರಾರಂಭವಾದಂದಿನಿಂದಲೂ ಸಂಸ್ಕೃತ ಸಾಹಿತ್ಯ ಅಧ್ಯಯನ ಹಾಗೂ ಸಂಶೋಧನೆಗೆ ನೆರವಾಗುತ್ತಿದೆ ಹಾಗೂ ಅವಿರತವಾಗಿ ಶ್ರಮಿಸುತ್ತಿದೆ.

ಸದರಿ ವಿಶ್ವವಿದ್ಯಾನಿಲಯವು ಸಂಸ್ಕೃತ ಸಾಹಿತ್ಯದ ವಿವಿಧ ಪ್ರಾಕಾರಗಳ ಅಧ್ಯಯನ ಹಾಗೂ ಸಂಶೋಧನೆಗೆ ಅನುವು ಮಾಡಿಕೊಡುವಂತೆಯೇ ರಾಜ್ಯದ ಸುಮಾರು 200ಕ್ಕೂ ಹೆಚ್ಚು ಕಾಲೇಜುಗಳನ್ನು ಸಂಯೋಜನೆಗೊಳಿಸಿದೆ. ರಾಜ್ಯ ಸರ್ಕಾರದ ಅನುದಾನದೊಡನೆ ಯು.ಜಿ.ಸಿ.ಯ ಅನುದಾನವನ್ನು ಪಡೆದು ತನ್ನ ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಿದೆ.

## 3. ಕವಿಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾನಿಲಯ, ರಾಮ್‌ಟೆಕ್ (1997)

1997ರ ಸೆಪ್ಟೆಂಬರ್ 18ರಂದು ಮಹಾರಾಷ್ಟ್ರದ ನಾಗಪುರ ಜಿಲ್ಲೆಯ ರಾಮ್‌ಟೆಕ್‌ನಲ್ಲಿ ಕವಿಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾನಿಲಯದ ಸ್ಥಾಪನೆಯಾಯಿತು. ವಿಶ್ವದ ಉತ್ತಮ ಕವಿಯಾಗಿದ್ದ ಕಾಳಿದಾಸನು ವಕಟಕರ ರಾಜ್ಯಸಭೆಯ ಆಸ್ಥಾನ ಕವಿಯಾಗಿದ್ದು, ಇದೇ ಪ್ರದೇಶದಲ್ಲಿದ್ದುಕೊಂಡು ಆತನು 'ಮೇಘದೂತಂ' ಎಂಬ ಮಹಾಕಾವ್ಯವನ್ನು ರಚಿಸಿದ್ದನೆಂಬ ಐತಿಹ್ಯವಿದ್ದುದರಿಂದ ರಾಮ್‌ಟೆಕ್ ನಗರದಲ್ಲಿ ಕಾಳಿದಾಸನ ಸಂಸ್ಮರಣೆಯಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು.

ಮಹಾರಾಷ್ಟ್ರದ ಕವಿಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾನಿಲಯವು ರಾಷ್ಟ್ರದ ಇತರ ಸಂಸ್ಕೃತ ವಿಶ್ವವಿದ್ಯಾನಿಲಯಗಳಿಗಿಂತಲೂ ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತಿದೆ. ಇತರ ಸಂಸ್ಕೃತ ವಿಶ್ವವಿದ್ಯಾನಿಲಯಗಳು ವೇದ, ವೇದಾಂತ, ವ್ಯಾಕರಣ, ನ್ಯಾಯ, ಮೀಮಾಂಸ, ಧರ್ಮಶಾಸ್ತ್ರ ಹಾಗೂ ಇನ್ನಿತರ ವಿಷಯಗಳ ಬೋಧನೆ ಹಾಗೂ ಸಂಶೋಧನೆಗೆ ಮೀಸಲಾಗಿದ್ದರೆ, ಈ ವಿಶ್ವವಿದ್ಯಾನಿಲಯವು ಹೊಸ ಆವಿಷ್ಕೃತ ತಂತ್ರಜ್ಞಾನ ಹಾಗೂ ಶಾಸ್ತ್ರೀಯ ಭಾಷೆಯ ಪರಂಪರೆ– ಇವೆರಡನ್ನೂ ಒಳಗೊಂಡ ಪಠ್ಯವಸ್ತು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ನೀಡುತ್ತಿದೆ. ವಿಶ್ವವಿದ್ಯಾನಿಲಯವು ಪ್ರಾಚೀನ ಭಾರತದಲ್ಲಿ ಪ್ರಚಲಿತವಾಗಿದ್ದ ವಿಜ್ಞಾನ ಹಾಗೂ ತಂತ್ರಜ್ಞಾನಗಳನ್ನು ಇಂದಿನ ಜಗತ್ತಿನ ಬದಲಾವಣೆಗಳಿಗೆ ಪೂರಕವಾಗುವಂತೆ ಬೋಧಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿದೆ.

## 4. ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾನಿಲಯ, ಜುನಾಗಢ (2005)

ಗುಜರಾತ್ ರಾಜ್ಯವು ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾನಿಲಯ ಕಾಯಿದೆ 2005ನ್ನು ಸದನದಲ್ಲಿ ಮಂಡಿಸುವ ಮೂಲಕ ಗುಜರಾತ್ ರಾಜ್ಯದಲ್ಲಿ ಸಂಸ್ಕೃತ ಭಾಷಾ ಬೋಧನೆ, ಅಧ್ಯಯನ ಹಾಗೂ ಸಂಶೋಧನೆಗೆ ನೆರವಾಗುವ ದೃಷ್ಟಿಯಿಂದ 2005ರ ಏಪ್ರಿಲ್ 12ರಂದು ಜುನಾಗಢ ಜಿಲ್ಲೆಯ ಸೋಮನಾಥ–ವೀರವಲ್ ಎಂಬಲ್ಲಿ ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ರಾಜ್ಯದ ಜನತೆಗೆ ಸಮರ್ಪಿಸಿತು.

## 5. ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ಡೀಮ್ಡ್ ವಿಶ್ವವಿದ್ಯಾನಿಲಯ, ನವದೆಹಲಿ (1970)

ರಾಷ್ಟ್ರದಾದ್ಯಂತ ಸಂಸ್ಕೃತ ಭಾಷೆಯನ್ನು ಜನಪ್ರಿಯಗೊಳಿಸುವ ಸಲುವಾಗಿ 1970ರ ಅಕ್ಟೋಬರ್ 15ರಂದು ಸ್ವಾಯತ್ತ ಸಂಸ್ಥೆಯಾಗಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವನ್ನು ಸ್ಥಾಪಿಸಲಾಯಿತು. ಭಾರತ ಸರ್ಕಾರದ ಧನಸಹಾಯದೊಡನೆ ಪ್ರಾರಂಭವಾದ ಈ ಡೀಮ್ಡ್ ವಿಶ್ವವಿದ್ಯಾನಿಲಯ ಸಂಸ್ಕೃತ ಭಾಷೆಯ ಅಧ್ಯಯನವನ್ನು ಉತ್ತೇಜಿಸುವುದಕ್ಕೆ ಅಗತ್ಯವಾದ ಹಲವಾರು ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ರೂಪಿಸುವ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯಕ್ಕೆ ನೆರವಾಗುತ್ತಿದೆ.

Digitised by Bharatavani, CIIL

ಸಂಸ್ಕೃತ ಭಾಷೆಯ ಹಿರಿಮೆ-ಗರಿಮೆಗಳನ್ನು ಮನಗಂಡು ಕೇಂದ್ರ ಸರ್ಕಾರವು 1956ರಲ್ಲಿ ಕೇಂದ್ರೀಯ ಸಂಸ್ಕೃತ ಸಮಿತಿಯನ್ನು ಸ್ಥಾಪಿಸಿ, ಅದರ ಅನುಮೋದನೆಯಂತೆ 1970ರಲ್ಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವನ್ನು ಸ್ಥಾಪಿಸಲಾಯಿತು. ಅಲ್ಲದೇ ಈ ಸಂಸ್ಥೆಗೆ ಸ್ವಾಯತ್ತ ಮಾನ್ಯತೆಯನ್ನು ನೀಡಲಾಯಿತು. ಈ ಸಂಸ್ಥೆಯು ನವದೆಹಲಿಯ ಜನಕಪುರಿಯ ಸಾಂಸ್ಥಿಕ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಸಂಸ್ಕೃತ ವಿಶ್ವವಿದ್ಯಾನಿಲಯಗಳ ಸಾಮಾನ್ಯ ಉದ್ದೇಶಗಳು**

1. ಸಂಸ್ಕೃತ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆಗೆ ಮೀಸಲಿರಿಸಿದ ಅಂತಾರಾಷ್ಟ್ರೀಯ ಕೇಂದ್ರವನ್ನು ಸ್ಥಾಪಿಸುವುದು.
2. ಭಾರತದ ಪ್ರಾಚೀನ ಪರಂಪರೆಯನ್ನು ಸಂರಕ್ಷಿಸುವುದು.
3. ಪ್ರಾಚೀನ ಭಾರತದ ಪ್ರಚಲಿತ ಭಾಷೆಗಳಾಗಿದ್ದ ಪಾಲಿ, ಪ್ರಾಕೃತ, ಅರ್ಧಮಾಗಧಿ ಭಾಷೆಗಳ ಅಧ್ಯಯನ ಹಾಗೂ ಸಂಶೋಧನೆಗೆ ಅವಕಾಶ ಕಲ್ಪಿಸುವುದು.
4. ಇತರ ಭಾರತೀಯ ಭಾಷೆಗಳೊಡನೆ ತೌಲನಿಕ ಅಧ್ಯಯನವನ್ನು ಕೈಗೊಳ್ಳುವುದು.
5. ಹೊಸ ವೈದ್ಯಕೀಯ ವಿಧಾನಗಳನ್ನು ಆಯುರ್ವೇದ ಶಾಸ್ತ್ರದೊಡನೆ, ನವೀನ ವಾಸ್ತುಶಾಸ್ತ್ರ ವಿಧಾನಗಳನ್ನು ಪ್ರಾಚೀನ ವಾಸ್ತುಶಾಸ್ತ್ರದೊಡನೆ, ಅರ್ಥಶಾಸ್ತ್ರದ ಅಂಶಗಳನ್ನು ಹೊಸ ಆರ್ಥಿಕ ಸಿದ್ಧಾಂತ ಹಾಗೂ ರಾಜ್ಯಶಾಸ್ತ್ರ ಚಿಂತನೆಯೊಡನೆ, ವ್ಯಾಕರಣಾಂಶಗಳನ್ನು ಹೊಸ ಭಾಷಾಶಾಸ್ತ್ರ ವಿಧಾನಗಳೊಡನೆ ತೌಲನಿಕವಾಗಿ ಸಂಶೋಧನೆಯನ್ನು ಕೈಗೊಂಡು, ಅಧ್ಯಯನ ಮಾಡಲು ಅನುವು ಮಾಡಿಕೊಡುವುದು.
6. ಸಂಸ್ಕೃತ ಭಾಷೆಯನ್ನು ಕಲಿಯಲು ಆಸಕ್ತರಾಗಿರುವ ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಸಂಸ್ಕೃತ ಸಂಭಾಷಣಾ ಶಿಬಿರಗಳು ಹಾಗೂ ಕಲಿಕಾ ಕೇಂದ್ರಗಳನ್ನು ನಡೆಸುವುದರ ಮೂಲಕ ಸಂಸ್ಕೃತ ಭಾಷೆಯನ್ನು ಜನಪ್ರಿಯಗೊಳಿಸುವುದು.
7. ವೇದ, ದರ್ಶನ, ಪೌರಾತ್ಯ ತತ್ವಶಾಸ್ತ್ರ ಹಾಗೂ ವೈಜ್ಞಾನಿಕ ಅಂಶಗಳಲ್ಲಿ ಪರಿಣತರಾದ ಆಚಾರ್ಯರ ಸಮೂಹವನ್ನು ಸೃಷ್ಟಿಸಿ ತನ್ಮೂಲಕ ಭಾರತೀಯ ಸಂಸ್ಕೃತಿಯನ್ನು ಜಗತ್ತಿಗೆ ಪ್ರಚುರಪಡಿಸುವುದು.
8. ಸಂಸ್ಕೃತ ಗ್ರಂಥಾಲಯಗಳು, ಹಸ್ತಪ್ರತಿಗಳ ಸಂಗ್ರಹಾಗಾರಗಳನ್ನು ಸ್ಥಾಪಿಸುವ ಹಾಗೂ ಅಪೂರ್ವ ಕೃತಿಗಳ ಪ್ರಕಟಣೆಗೆ ಸಹಾಯ ಮಾಡುವುದು.
9. ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದ ಅಪೂರ್ವ ಕೃತಿಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಸಂಕಲಿಸಿ ಪ್ರಕಟಿಸುವುದು.
10. ಗುಣಮಟ್ಟದ ಬೋಧನೆ, ಉದ್ಯೋಗಾವಕಾಶಗಳು, ಸಂಶೋಧನೆಯ ಮೂಲಕ ಸಂಸ್ಕೃತ ಭಾಷಾ ಅಧ್ಯಯನವನ್ನು ಪ್ರೋತ್ಸಾಹಿಸುವುದು.

**ಸಂಸ್ಕೃತ ವಿಶ್ವವಿದ್ಯಾನಿಲಯಗಳ ಭಾಷಾ ಬೋಧನೆಯ ವಿಷಯ ವಿಭಾಗಗಳು**

ದೇಶದ ಎಲ್ಲ ಸಂಸ್ಕೃತ ವಿಶ್ವವಿದ್ಯಾನಿಲಯಗಳು ಸಾಮಾನ್ಯವಾದ ಬೋಧನಾ ವಿಷಯ ವಿಭಾಗಗಳನ್ನು ಒಳಗೊಂಡಿವೆ. ಅವುಗಳೆಂದರೆ:

1. ಸಂಸ್ಕೃತ ಭಾಷಾ ಮತ್ತು ಸಾಹಿತ್ಯ ವಿಭಾಗ
2. ಭಾರತೀಯ ಸಂಸ್ಕೃತಿ ಹಾಗೂ ಲಲಿತ ಕಲಾ ವಿಭಾಗ
3. ಪ್ರಾಚೀನ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ
4. ಪ್ರಾಚ್ಯ ಅಧ್ಯಯನ ಹಾಗೂ ಸಂಶೋಧನಾ ವಿಭಾಗ
5. ಆಧುನಿಕ ವಿಜ್ಞಾನ ಹಾಗೂ ಪ್ರಾಕ್ತನ ಶಾಸ್ತ್ರ ವಿಭಾಗ

ಈ ವಿಭಾಗಗಳಲ್ಲಿ ಅಲ್ಪಾವಧಿ ತರಬೇತಿಯಿಂದ ಹಿಡಿದು ಪಿಹೆಚ್.ಡಿ. ನಂತರದ ಸಂಶೋಧನೆಯವರೆಗೂ ಸಂಸ್ಕೃತ ವಿಷಯದಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿವೆ.

ಈ ಎಲ್ಲ ಸಂಸ್ಕೃತ ವಿಶ್ವವಿದ್ಯಾನಿಲಯಗಳು ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು, ಕಾರ್ಯಾಗಾರ - ಕಮ್ಮಟಗಳನ್ನು ಏರ್ಪಡಿಸುವ ಮೂಲಕ ಸಂಸ್ಕೃತವನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ದೃಢ ಹೆಜ್ಜೆಯನ್ನಿರಿಸಿವೆ. ಪ್ರಾಚೀನ ಗ್ರಂಥಗಳಲ್ಲಿರುವ ವೈಜ್ಞಾನಿಕ ಹಾಗೂ ತಾಂತ್ರಿಕ ಅಂಶಗಳನ್ನು ಸಂಶೋಧಿಸಿ ಅದಕ್ಕೆ ಸಂಬಂಧಿಸಿದಂತೆ ಹಲವಾರು ಉದ್ಗ್ರಂಥಗಳನ್ನು ರಚಿಸಿ ಪ್ರಕಟಿಸಿವೆ. ಹಾಗೆಯೇ, ಹಲವಾರು ದತ್ತಿಗಳನ್ನು ಸ್ಥಾಪಿಸಿ, ಸಂಸ್ಕೃತ ಭಾಷೆಯ ಅಭಿವೃದ್ಧಿಗೆ ದುಡಿದ ಸಂಶೋಧಕರನ್ನು ಗುರ್ತಿಸಿ ರಾಷ್ಟ್ರೀಯ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ.

– ಎಂ.ಗೋ.

– ಎಸ್.ಎನ್.ಕು.

## ಭಾರತೀಯ ಮೌಲ್ಯ ವ್ಯವಸ್ಥೆ

**ಪುರುಷಾರ್ಥಗಳು**

ಭಾರತೀಯ ಪರಂಪರೆಯಲ್ಲಿ ಮೌಲ್ಯಗಳನ್ನು ಚತುರ್ವಿಧ ಪುರುಷಾರ್ಥಗಳೆಂದು ಪರಿಗಣಿಸಲಾಗಿದೆ. ಪ್ರತಿಯೊಬ್ಬ ಮಾನವನು ಪುರುಷಾರ್ಥಗಳೆಂಬ ಮಾರ್ಗದ ಮೂಲಕ ಕೊನೆಗೆ ಜೀವನದ ಗುರಿಯಾದ ಮೋಕ್ಷವನ್ನು ಸೇರಬೇಕೆಂದು ಆಸೆ ಪಡುತ್ತಾನೆ.

ಪುರುಷಾರ್ಥಗಳು ಯಾವುವೆಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ.

ಧರ್ಮದ ಮೂಲಕ ಮಾನವನು ತನ್ನ ಜೀವನ ಸಾಗಿಸಲು ಅರ್ಥದ ಸಂಪಾದನೆ ಮಾಡಬೇಕು. ಅನ್ಯಾಯದ ಮಾರ್ಗದಲ್ಲಿ ಅರ್ಥಸಂಪಾದನೆಯು ನಿಷಿದ್ಧ. ಸಂಪಾದನೆ ಮಾಡಿದ ಅರ್ಥವನ್ನು ತನ್ನ ಜೀವನೋಪಾಯಕ್ಕೆ ಎಷ್ಟು ಬೇಕೋ ಅಷ್ಟನ್ನು ಬಳಸಿಕೊಂಡು ಉಳಿದುದನ್ನು ದಾನ ಧರ್ಮಗಳ ಮೂಲಕ ವಿನಿಯೋಗಿಸಬೇಕು. ಕಾಮವೆಂಬುದರ ಅರ್ಥ ತನ್ನ ಅಗತ್ಯಕ್ಕೆ ಬೇಕಾದ ವಸ್ತುಗಳನ್ನು ಹೊಂದಿಸಿಕೊಂಡು ಸರಳ ಜೀವನವನ್ನು ಸಮಾಜದಲ್ಲಿ ನಡೆಸುವುದೆಂಬ ಅರ್ಥ ಬರುತ್ತದೆ. ಸರಳಜೀವನದ ಮುಖಾಂತರ ಉಚ್ಚವಿಚಾರಗಳನ್ನು ಮಾಡುವುದರ ಮೂಲಕ ಕೊನೆಗೆ ಮೋಕ್ಷದ ಸಾಧನೆ ಅಥವಾ ಮುಕ್ತಿ ಹೊಂದುವುದು.

ಇಲ್ಲಿ ಗುರಿಗಿಂತಲೂ ಅದನ್ನು ಸಾಧಿಸುವ ಮಾರ್ಗವೇ ಪ್ರಧಾನ. ಗುರಿಯು ನಮಗೆ ಗೋಚರವಾಗದಿರಬಹುದು. ಆದರೆ ಮಾರ್ಗವು ನಮ್ಮ ಕಣ್ಣಿನ ಎದುರಿಗೆ ಗೋಚರಿಸುತ್ತದೆ. ಮಾರ್ಗ ಸರಿಯಾಗಿದ್ದರೆ ಗುರಿ ತಲುಪುವುದರಲ್ಲಿ ಸಂದೇಹವಿಲ್ಲ. ಆದುದರಿಂದ ನೈತಿಕತೆಯನ್ನು ತ್ಯಜಿಸಿದ ಮೌಲ್ಯಗಳನ್ನು ಸಾಧಿಸಬೇಕಾದುದು ಮಾನವನ ಕರ್ತವ್ಯ. ಪುರುಷಾರ್ಥಗಳ ಸಾಧನೆ ಎಂದರೆ ಮಾನವೀಯ ಮೌಲ್ಯಗಳನ್ನು ಹೊಂದಿರುವುದು ಮತ್ತು ದೈನಂದಿನ ಜೀವನದಲ್ಲಿ

Digitised by Bharatavani, CIIL

ಅನುಷ್ಠಾನಗೊಳಿಸುವುದು. ಈ ರೀತಿಯ ಪುರುಷಾರ್ಥಗಳು ಕ್ರಮೇಣವಾಗಿ ಅನುಷ್ಠಾನದಿಂದ ದೂರಸರಿಯುತ್ತಿರುವುದು ದುರಂತವೇ ಸರಿ.

**ಸತ್ಯಂ, ಶಿವಂ, ಸುಂದರಮ್**

ಈ ಮೂರು ಮೌಲ್ಯಗಳ ಸಮಷ್ಟಿಗೆ ಭಾರತೀಯ ಮೌಲ್ಯ ವ್ಯವಸ್ಥೆಯಲ್ಲಿ ಬಹಳ ಮಹತ್ವದ ಸ್ಥಾನವಿದೆ. ಇವುಗಳ ನಡುವೆ ಪರಸ್ಪರ ಸಂಬಂಧವಿರುವುದರಿಂದ ಇವುಗಳನ್ನು ಯಾವಾಗಲೂ ಒಟ್ಟಾಗಿಯೇ ಪರಿಗಣಿಸಲಾಗುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಈ ಮೌಲ್ಯಗಳ ಸ್ವರೂಪವನ್ನು ಬಹಳ ಚೆನ್ನಾಗಿ ವಿವರಿಸಲಾಗಿದೆ.

ಸತ್ಯವೆಂದರೆ ಬದಲಾವಣೆ ಹೊಂದದ, ಅವಿನಾಶಿಯಾದ ಸಂಪೂರ್ಣ ಅಂತಿಮ ವಾಸ್ತವಿಕತೆ ಉಳಿದೆಲ್ಲವೂ ಈ ಅಂತಿಮ ವಾಸ್ತವಿಕತೆಯಾದ ಬ್ರಹ್ಮನ್ (ಪೂರ್ಣ ಪ್ರಜ್ಞೆಯಿಂದ) ಪ್ರಕಟಿತವಾಗಿರುವಂತಹದು. ಪ್ರತಿಯೊಂದು ಆತ್ಮವೂ ಆ ಅಖಂಡ ಸತ್ಯದ ಒಂದು ಅಂಶ ಮಾತ್ರ. ಈ ಅವಿನಾಶಿಯಾದ ಸತ್ಯವನ್ನು ತಿಳಿದುಕೊಳ್ಳುವುದು, ಅನುಭವಕ್ಕೆ ತಂದುಕೊಳ್ಳುವುದೇ ಭಾರತೀಯರಿಗೆ ಸಾಧಿಸಬೇಕಾದ ಸರ್ವೋಚ್ಚ ಮೌಲ್ಯವೆನಿಸಿದೆ. ಈ ಪೂರ್ಣ ಸತ್ಯವೇ ಚೈತನ್ಯ ಸ್ವರೂಪವಾದುದು. ಆನಂದಮಯವಾದುದು. ಆದ್ದರಿಂದಲೇ ಅದು ಸತ್‌ಚಿತ್ ಆನಂದ ಸ್ವರೂಪದ್ದು. ಶಿವಂ ಎಂದರೆ ಮಂಗಳಕರವಾದದ್ದು ಎಂದರ್ಥ. ಸತ್ಯವಾದುದು ಮಂಗಳಕರವಾಗಿಯೂ ಇರಬೇಕು. ಅಮಂಗಳವನ್ನು ಮಾಡುವ ಯಾವುದೇ ಕಾರ್ಯ ಸತ್ಯವಾಗಿರಲು ಸಾಧ್ಯವೇ ಇಲ್ಲ. ಮಂಗಳಕರವಾದುದಕ್ಕೆ ಭಾರತದಲ್ಲಿ ಯಾವಾಗಲೂ ಹೆಚ್ಚಿನ ಮೌಲ್ಯವಿದೆ. ಸತ್ಯವಾಗಿರುವುದು, ಮಂಗಳಕರವಾಗಿರುವುದು ಸುಂದರವಾಗಿಯೂ ಇರಬೇಕಾಗುತ್ತದೆ. ಆದ್ದರಿಂದಲೇ ಸೌಂದರ್ಯವೂ ಭಾರತದಲ್ಲಿ ಒಂದು ಮೌಲ್ಯವೆನಿಸಿದೆ. ಸುಂದರವಾದುದೆಲ್ಲವೂ ಮನಸ್ಸಿಗೆ, ಹೃದಯಕ್ಕೆ ಶಾಂತಿಯ ಆನಂದದ ಅನುಭಾವವನ್ನು ಕೊಡುತ್ತದೆ. ಆದ್ದರಿಂದಲೇ ನಮ್ಮ ಎಲ್ಲ ವರ್ತನೆಗಳು, ಕಾರ್ಯಗಳು ಸತ್ಯಮಾರ್ಗದಲ್ಲಿರಬೇಕು, ಸುಂದರವಾಗಿರಬೇಕು. ಮಂಗಳಕರವಾಗಿರಬೇಕು.

**ಅಹಿಂಸೆ**

ಭಾರತೀಯ ಮೌಲ್ಯ ವ್ಯವಸ್ಥೆಯಲ್ಲಿ ಅಹಿಂಸೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಹಿಂದೂಧರ್ಮವಲ್ಲದೆ, ಜೈನ ಮತ್ತು ಬೌದ್ಧ ಧರ್ಮಗಳಲ್ಲಿ ಅಹಿಂಸೆಗೆ ಕೇಂದ್ರ ಸ್ಥಾನ ನೀಡಲಾಗಿದೆ. ಪತಂಜಲಿ ತನ್ನ ಯೋಗಪಾತ್ರಗಳಲ್ಲಿ ಅಹಿಂಸೆಗೆ ಒತ್ತು ಕೊಟ್ಟಿದ್ದಾನೆ. ಮತ್ತೊಂದು ಜೀವಿಗೆ ತೊಂದರೆಯನ್ನು ಕೊಡದಿರುವುದು, ಹಿಂಸಿಸದಿರುವ ಮನೋಭಾವವೇ ಅಹಿಂಸೆ.

ಅಹಿಂಸೆಗೆ ವಿಶ್ವದಾದ್ಯಂತ ಒಪ್ಪಿಗೆ ಇದೆ. ಎಲ್ಲಾ ಮಹಾ ಪುರುಷರು ಅಹಿಂಸೆಗೆ ಮನ್ನಣೆ ನೀಡಿದ್ದಾರೆ. ಯೇಸುಕ್ರಿಸ್ತ ಅಹಿಂಸೆಯನ್ನು ಬೋಧಿಸಿದ್ದಾನೆ. ಹಿಂಸಾಚಾರಗಳಿಂದ ಕೂಡಿದ ಇಂದಿನ ಪ್ರಪಂಚದಲ್ಲಿ ಅಹಿಂಸೆಯ ಆಚರಣೆ ಅತ್ಯಂತ ಆವಶ್ಯಕವೆನಿಸುತ್ತದೆ. ಅಹಿಂಸಾ ತತ್ವ ಎಲ್ಲರಿಗೂ ಶ್ರೇಯಸ್ಕರವಾದುದು. ಏಕೆಂದರೆ ನಮಗೆ ಯಾರೂ ಹಿಂಸೆ ಕೊಡಬಾರದೆಂದು ನಾವು ಅಪೇಕ್ಷಿಸಿದರೆ ನಾವೂ ಬೇರೆಯವರಿಗೆ ಹಿಂಸೆ ಕೊಡಬಾರದು ಎಂಬುದೇ ಸಹಜವಾದ ನಿಯಮವಾಗುತ್ತದೆ. ಭಾರತದ ಎಲ್ಲ ಸಾಧು-ಸಂತರು ಅಹಿಂಸಾ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ. ಇತ್ತೀಚಿನ ದಶಕಗಳಲ್ಲಿ ಮಹಾತ್ಮ ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಹಿಂಸಾ ಚಳುವಳಿಗೆ ಮಹತ್ವ ನೀಡಿದ್ದಾರೆ. ಕರುಣೆ ಮತ್ತು ದಯೆಯ ಮೌಲ್ಯಗಳು ಅಹಿಂಸಾ ಮೌಲ್ಯಗಳಿಗೆ ನಿಕಟವಾಗಿ ಸಂಬಂಧಿಸಿವೆ.

**ಪ್ರೇಮ**

ಪ್ರೇಮ ಮಾನವ ಜನಾಂಗದಲ್ಲಿ ಒಂದು ಶ್ರೇಷ್ಠ ಮೌಲ್ಯವೇ ಅಲ್ಲದೆ, ಬೇರೆಯವರ ಹೃದಯ ಪರಿವರ್ತನೆ, ಮಾಡುವ ಶಾಂತಿ ಮತ್ತು ಸಾಮರಸ್ಯತೆಯನ್ನು ಉಂಟುಮಾಡುವ ಪ್ರಬಲವಾದ ಅಧ್ಯಾತ್ಮಿಕ ಶಕ್ತಿಯೆನಿಸಿದೆ. ಮಾನವರನ್ನೇ ಅಲ್ಲದೆ ಪ್ರಾಣಿಗಳ ಬಗ್ಗೆಯೇ ಪ್ರೇಮಪೂರ್ಣ ವರ್ತನೆ ತೋರಿಸುವುದು ಭಾರತದ ಒಂದು ಶ್ರೇಷ್ಠ ಮೌಲ್ಯವಾಗಿದೆ. ಪ್ರೇಮ ವಿವಿಧ ರೀತಿಗಳಲ್ಲಿ ನಮ್ಮ ವರ್ತನೆಗಳಲ್ಲಿ ವ್ಯಕ್ತವಾಗುತ್ತದೆ. ಪ್ರೀತಿಯಿಂದ ಆಲಂಗಿಸುವುದು, ಮೈದಡವುವುದು, ಪ್ರೀತಿಯಿಂದ ಮಾತನಾಡಿಸುವುದು, ಹಂಚಿಕೊಳ್ಳುವುದು, ಅನುಕರಣೆ ತೋರಿಸುವುದು, ಇವೆಲ್ಲವೂ ಪ್ರೇಮವನ್ನು ಅಭಿವ್ಯಕ್ತಗೊಳಿಸುವ ಮಾರ್ಗಗಳಾಗಿವೆ. ಶುದ್ಧ ಭಕ್ತಿಯೇ ಪ್ರೇಮವಾಗಿ ವ್ಯಕ್ತವಾಗುತ್ತದೆ. ಭಕ್ತನಾದವನು ಎಲ್ಲರೊಡನೆಯೂ ಪ್ರೇಮದಿಂದ ವ್ಯವಹರಿಸುತ್ತಾನೆ. ಪ್ರೇಮಕ್ಕೆ ಎಲ್ಲರನ್ನೂ ಒಟ್ಟು ಸೇರಿಸುವ ಶಕ್ತಿಯಿದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಮೌಲ್ಯವಿರುವುದು.

**ತ್ಯಾಗ**

ತ್ಯಾಗಕ್ಕೆ ಭಾರತದ ಮೌಲ್ಯ ವ್ಯವಸ್ಥೆಯಲ್ಲಿ ಮಹತ್ವದ ಸ್ಥಾನವಿದೆ. ಈಶಾವಾಸ್ಯ ಉಪನಿಷತ್ತಿನಲ್ಲಿ ತ್ಯಾಗದಿಂದಲೇ ಅಮರತ್ವ ದೊರೆಯುತ್ತದೆ- "ತ್ಯಾಗೇನೈಕೇನೈವ ಅಮೃತತ್ವಮಾನಶುಃ" ಎಂದು ಘೋಷಿಸಲಾಗಿದೆ. ತ್ಯಾಗ ಎಂದರೆ ಯಾವುದೇ ವ್ಯಕ್ತಿ ವಸ್ತುವನ್ನು ನನ್ನದಲ್ಲವೆಂದು ಬಿಡುವುದು, ಅವುಗಳ ಬಗ್ಗೆ ಅನಾಸಕ್ತಿಯ ಮನೋಭಾವವನ್ನು ಹೊಂದುವುದು. ತ್ಯಾಗ ವರ್ತನೆಯ ಮಟ್ಟದಲ್ಲಿ ವ್ಯಕ್ತವಾಗುವುದಲ್ಲದೆ ಮನಸ್ಸಿನ ಮಟ್ಟದಲ್ಲಿಯೂ ವ್ಯಕ್ತವಾಗಬೇಕು. ಒಂದು ವಸ್ತು ನನಗೆ ಬೇಡ ಎಂದು ಹೇಳಿದರೆ ಸಾಲದು. ಅದರ ಬಗ್ಗೆ ಮನಸ್ಸಿನಲ್ಲಿಯೂ ಚಿಂತಿಸಬಾರದು. ನಮ್ಮ ಬಹಳಷ್ಟು ಮೌಲ್ಯಗಳು ತ್ಯಾಗದ ಆಧಾರದ ಮೇಲೆ ನಿಂತಿವೆ. ತ್ಯಾಗದ ಮೌಲ್ಯ ಸಾಮಾನ್ಯ ವ್ಯಕ್ತಿಗಳ ಮಟ್ಟದಿಂದ ಸಂನ್ಯಾಸಿಗಳವರೆಗೂ ವಿವಿಧ ರೀತಿಗಳಲ್ಲಿ ಕಂಡು ಬರಬಹುದು. ಸಾಮಾನ್ಯ ಗೃಹಸ್ಥರು ತಮ್ಮ ಜೀವನದಲ್ಲಿ ದಾನ-ಧರ್ಮಗಳಿಗಾಗಿ ಸ್ವಲ್ಪಮಟ್ಟಿಗೆ ತ್ಯಾಗ ಮಾಡಲು ಸಿದ್ಧರಿರಬೇಕು. ಸಂಪೂರ್ಣವಾಗಿ ಪ್ರಪಂಚವನ್ನು ಬಿಡುವುದೇ ಸಂನ್ಯಾಸವೆನಿಸುತ್ತದೆ. ತ್ಯಾಗ ಬುದ್ಧಿಯಿಂದ, ನಿಸ್ವಾರ್ಥತೆಯಿಂದ ಕೈಗೊಳ್ಳುವ ಕಾರ್ಯಕ್ಕೆ ಹೆಚ್ಚಿನ ಮಹತ್ವವಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಕರ್ಮಫಲವನ್ನು ತ್ಯಾಗ ಮಾಡುವಂತೆ ಉಪದೇಶಿಸಿದ್ದಾನೆ.

**ಲೋಕ ಸಂಗ್ರಹ**

ಸಮಾಜದ ಒಳಿತಿಗಾಗಿ, ಲೋಕ ಕಲ್ಯಾಣಕ್ಕಾಗಿ ನಿಸ್ವಾರ್ಥತೆಯಿಂದ, ತ್ಯಾಗಮನೋಭಾವದಿಂದ ಕೆಲಸ ಮಾಡುವ ಪ್ರವೃತ್ತಿಯೇ ಲೋಕಸಂಗ್ರಹದ ಮೌಲ್ಯವಾಗಿದೆ. ಕರ್ಮಯೋಗಿಯಾದವನಿಗೆ ಲೋಕಸಂಗ್ರಹದ ಪ್ರವೃತ್ತಿ ಇರಬೇಕೆಂದು ಭಗವದ್‌ಗೀತೆ ಹೇಳುತ್ತದೆ. ಈ ಮನೋಭಾವದಿಂದ ಸಮಾಜದಲ್ಲಿ ಕಾರ್ಯಪ್ರವೃತ್ತನಾದ ಕರ್ಮಯೋಗಿಗೆ ಕರ್ಮದ ಬಂಧನವಿರುವುದಿಲ್ಲ. ಈ ರೀತಿ ಕೆಲಸ ಮಾಡುವ ವ್ಯಕ್ತಿಯಲ್ಲಿ ಸ್ವಾರ್ಥ ಭಾವನೆ ಇಲ್ಲದಿರುವುದರಿಂದ ಅವನ ಕೆಲಸಗಳಿಂದ ಸಮಾಜಕ್ಕೆ ಒಳ್ಳೆಯದೇ ಆಗುತ್ತದೆ. ಈ ಭಾವನೆಯಿಂದ ಕರ್ತವ್ಯ ನಿರ್ವಹಿಸುವ ವ್ಯಕ್ತಿ ಸಮಾಜವನ್ನು ಒಗ್ಗೂಡಿಸುವ ಸಾಮರ್ಥ್ಯ ಹೊಂದಿರುತ್ತಾನೆ. ಇಂಥ ವ್ಯಕ್ತಿ ಸಮಾಜಕ್ಕೆ ಮಾದರಿಯಾಗುತ್ತಾನೆ.

**ಅಪರಿಗ್ರಹ**

ವ್ಯಕ್ತಿ ತನ್ನ ಆವಶ್ಯಕತೆಗೆ ಎಷ್ಟು ಬೇಕೋ ಅಷ್ಟನ್ನು ಸಂಪಾದಿಸಿ, ಸ್ವೀಕರಿಸಿ ಸಂಗ್ರಹಿಸುವ ಮನೋಭಾವವೇ ಅಪರಿಗ್ರಹ. ಇದೂ ಭಾರತೀಯ

Digitised by Bharatavani, CIIL

ಮೌಲ್ಯವ್ಯವಸ್ಥೆಯಲ್ಲಿ ಒಂದು ಮೌಲ್ಯವೆನಿಸಿದೆ. ಯೋಗ ಸಾಧನೆಯಲ್ಲಿ ನಿರತರಾದವರಿಗೆ ಅಪರಿಗ್ರಹದ ಮೌಲ್ಯ ಮುಖ್ಯವೆಂದು ಪತಂಜಲಿ ಯೋಗ ಸೂತ್ರಗಳು ಹೇಳುತ್ತವೆ. ಆವಶ್ಯಕತೆಗಿಂತ ಹೆಚ್ಚಾಗಿ ಸ್ವೀಕರಿಸುವುದು, ಸಂಗ್ರಹಿಸಿ ಇಟ್ಟುಕೊಳ್ಳುವುದು, ಕಳ್ಳತನವಾಗುತ್ತದೆ ಎಂದು ಭಗವದ್ಗೀತೆ ಹೇಳುತ್ತದೆ. ತಮಗೆ ಬೇಕಾದುದಕ್ಕಿಂತ ಎಷ್ಟೋ ಪಾಲು ಹೆಚ್ಚಾಗಿ ಕೂಡಿಟ್ಟುಕೊಳ್ಳುವ ಕೆಟ್ಟ ಪ್ರವೃತ್ತಿ ತಾಂಡವವಾಡುತ್ತಿರುವ ಇಂದಿನ ಸಮಾಜದಲ್ಲಿ ಅಪರಿಗ್ರಹದ ಮೌಲ್ಯವನ್ನು ಜನರು ತಮ್ಮ ಜೀವನದಲ್ಲಿ ಸ್ವಲ್ಪ ಮಟ್ಟಿಗಾದರೂ ಅನುಸರಿಸಿದರೆ ಸಮಾಜಕ್ಕೆ ಎಷ್ಟೋ ಒಳ್ಳೆಯದಾಗುತ್ತದೆ.

### ಭಾರತದ ಸಮಕಾಲೀನ ಮೌಲ್ಯಗಳು

ಭಾರತದ ಮೌಲ್ಯ ವ್ಯವಸ್ಥೆಯಲ್ಲಿ ಇಂದೂ ಸಹ ಮೇಲೆ ವಿವರಿಸಿದ ಐತಿಹಾಸಿಕವಾಗಿ, ಪಾರಂಪರಿಕವಾಗಿ ಉಳಿದುಕೊಂಡು ಬಂದಿರುವ ಸನಾತನ ಮೌಲ್ಯಗಳು ಸ್ವಲ್ಪ ಮಟ್ಟಿಗಾದರೂ ಉಳಿದುಕೊಂಡು ಬಂದಿವೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಾವು ಪ್ರಜಾಸತ್ತೆಯನ್ನು ರಾಷ್ಟ್ರದ ಆಡಳಿತಕ್ಕೆ ಸಾಮಾಜಿಕ ವ್ಯವಸ್ಥೆಗೆ ಮಾದರಿಯಾಗಿ ಆಯ್ಕೆ ಮಾಡಿಕೊಂಡಿದ್ದೇವೆ. ಕಳೆದ ಆರು ದಶಕಗಳಲ್ಲಿ ಭಾರತೀಯ ಸಮಾಜದಲ್ಲಿ ಅನೇಕ ಸಮಕಾಲೀನ ಮೌಲ್ಯಗಳು ರೂಪುಗೊಂಡಿವೆ. ಈ ಮೌಲ್ಯಗಳ ಆಧುನಿಕ ಸಮಾಜಕ್ಕೆ ಸ್ವತಂತ್ರ ಭಾರತದ ಸಮಾಜವಾದಿ ಮಾದರಿಯ ಪ್ರಜಾಸತ್ತಾತ್ಮಕ ಸಮಾಜಕ್ಕೆ (ಪಂಡಿತ್ ನೆಹರೂರವರ ಪರಿಕಲ್ಪನೆಯಂತೆ), ಸ್ವತಂತ್ರ ಭಾರತ ರಾಷ್ಟ್ರಕ್ಕೆ ಆವಶ್ಯಕವಾದ ಮೌಲ್ಯಗಳಾಗಿವೆ. ಭಾರತೀಯ ಸಂವಿಧಾನದಲ್ಲಿ ಈ ಮೌಲ್ಯಗಳಿಗೆ ಒತ್ತು ಕೊಡಲಾಗಿದೆ. ಶಾಲೆಗಳು ಮಕ್ಕಳಲ್ಲಿ ಈ ಸಮಕಾಲೀನ ಮೌಲ್ಯಗಳನ್ನು ಬೆಳೆಸಬೇಕಾದ ಅಗತ್ಯವಿದೆ. ಭಾರತದ ಮೌಲ್ಯ ವ್ಯವಸ್ಥೆಯಲ್ಲಿ ಸೇರಬೇಕಾದ ಸಮಕಾಲೀನ ಮೌಲ್ಯಗಳು ಈ ಕೆಳಕಂಡಂತಿವೆ.

1. **ಪ್ರಜಾಸತ್ತೆ:** ಸಮಾಜದ ಸದಸ್ಯರು ಪರಸ್ಪರ ವಿಚಾರ ವಿನಿಮಯದಿಂದ ತಮ್ಮನ್ನು ತಾವು ಮೇಲ್ವಿಚಾರಣೆ ಮಾಡಿಕೊಳ್ಳುವ ಸಮಾಜ ವ್ಯವಸ್ಥೆಯೇ ಪ್ರಜಾಸತ್ತೆ ಎನಿಸುತ್ತದೆ. ಪ್ರಜಾಸತ್ತೆಯ ತತ್ವಗಳನ್ನು ಆಧಾರವಾಗಿ ರೂಪಿತವಾದ ಆಡಳಿತ ವ್ಯವಸ್ಥೆ ಪ್ರಜಾ ಪ್ರಭುತ್ವವೆನಿಸುತ್ತದೆ. ಇದು ಅಬ್ರಹಾಂ ಲಿಂಕನ್ ವ್ಯಾಖ್ಯಾನಿಸಿದಂತೆ ಜನರಿಂದ, ಜನರಿಗಾಗಿ, ಜನರೇ ನಡೆಸುವ ಆಡಳಿತ ವ್ಯವಸ್ಥೆಯಾಗಿದೆ. ಭಾರತದಲ್ಲಿ ಸ್ವತಂತ್ರ ಪಡೆದ ನಂತರ ಪ್ರಜಾಸತ್ತೆಯನ್ನು ಸಾಮಾಜಿಕ ಪುನರ್ ನಿರ್ಮಾಣದ ಆಧಾರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಜಾಪ್ರಭುತ್ವವನ್ನು ಸರ್ಕಾರದ ಮಾದರಿಯಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಆದ್ದರಿಂದ ಪ್ರಜಾಸತ್ತಾತ್ಮಕ ಮನೋಭಾವ ಒಂದು ಮೌಲ್ಯವಾಗಿ ರೂಪುಗೊಂಡಿದೆ. ವಾಸ್ತವವಾಗಿ ಭಾರತಕ್ಕೆ ಪ್ರಜಾಸತ್ತೆ ಹೊಸದೇನಲ್ಲ. ಅಧ್ಯಾತ್ಮಿಕ ಮಟ್ಟದಲ್ಲಿ ಎಲ್ಲರೂ ಸಮಾನರು ಎಂಬ ಭಾವನೆ ಹಾಸುಹೊಕ್ಕಾಗಿದೆ ಇಂದು ಮಕ್ಕಳಲ್ಲಿ ಪ್ರಜಾಸತ್ತೆಯ ಮೌಲ್ಯವನ್ನು ಬೆಳೆಸಬೇಕಾದ ಅಗತ್ಯವಿದೆ. ಶಿಕ್ಷಣವನ್ನು ಎಲ್ಲಾ ಮಟ್ಟಗಳಲ್ಲಿಯೂ ಪ್ರಜಾಸತ್ತಾತ್ಮಕಗೊಳಿಸಬೇಕಾಗಿದೆ. ಪ್ರಜಾಸತ್ತೆಯ ಮೌಲ್ಯ ಈ ಮುಂದಿನ ತತ್ವಗಳನ್ನು ಒಳಗೊಂಡಿದೆ–ವ್ಯಕ್ತಿಗೆ ಗೌರವ, ಸಮಾನತೆ, ಭ್ರಾತೃತ್ವ, ಬೆಳವಣಿಗೆಯ ಸ್ವಾತಂತ್ರ್ಯ, ಅಭಿವ್ಯಕ್ತಿಯ ಸ್ವಾತಂತ್ರ್ಯ, ಸಹಕಾರ, ಹಂಚಿಕೆ, ಅಭಿಪ್ರಾಯ ಭಿನ್ನತೆಗೆ ಮಾನ್ಯತೆ ಉತ್ತಮ ಪೌರತ್ವ ಈ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು.

### ವೈಜ್ಞಾನಿಕ ಮನೋಭಾವ

ಇಂದಿನ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಸಮಾಜದಲ್ಲಿ ವೈಜ್ಞಾನಿಕ ಮನೋಭಾವ ಒಂದು ಮುಖ್ಯ ಮೌಲ್ಯವಾಗಿದೆ. ವಸ್ತುನಿಷ್ಠವಾಗಿ ಪ್ರಾಕೃತಿಕ, ಸಾಮಾಜಿಕ ಘಟನೆಗಳನ್ನು ವೀಕ್ಷಿಸಿ, ವಿಶ್ಲೇಷಿಸಿ, ಮೌಲ್ಯಮಾಪನ ಮಾಡಿ ತೀರ್ಮಾನ ಕೈಗೊಳ್ಳುವ ಕ್ರಮಕ್ಕೆ ವೈಜ್ಞಾನಿಕ ವಿಧಾನ ಎಂದು ಹೆಸರು. ಈ ವರ್ತನೆಗೆ ಹಿಂದೆ ಕೆಲಸ ಮಾಡುವ ಮನೋಭಾವವೇ ವೈಜ್ಞಾನಿಕ ಮನೋಭಾವ. ಇದು ಮಕ್ಕಳಲ್ಲಿ ವಸ್ತುನಿಷ್ಠ ನಿಲುವು, ಪ್ರಯೋಗಶೀಲತೆ, ಅನುಶೀಲನೆ, ಆವಿಷ್ಕಾರ, ತರ್ಕಬದ್ಧ ಆಲೋಚನೆ, ತಾರ್ಕಿಕ ತೀರ್ಮಾನ ಮುಂತಾದ ಲಕ್ಷಣಗಳನ್ನು ಬೆಳೆಸುತ್ತದೆ. ವೈಜ್ಞಾನಿಕ ಮನೋಭಾವ ಸಮಾಜದ ತಪ್ಪು ಕಲ್ಪನೆಗಳನ್ನು, ಆಚರಣೆಗಳನ್ನು, ಸಂಪ್ರದಾಯಗಳನ್ನು ಅತಾರ್ಕಿಕ ತೀರ್ಮಾನಗಳನ್ನು, ಮೂಢನಂಬಿಕೆಗಳನ್ನು ತೊಡೆದು ಹಾಕಲು ಸಹಾಯ ಮಾಡುತ್ತದೆ. ಆದ್ದರಿಂದ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಒಂದು ಮೌಲ್ಯವಾಗಿ ಬೆಳೆಸಬೇಕು.

### ಪರಿಸರ ಪ್ರಜ್ಞೆ

ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಇದುವರೆಗೆ ಉಂಟಾಗಿರುವ ಆವಿಷ್ಕಾರಗಳು, ರೂಪಿತವಾಗಿರುವ ತಂತ್ರಗಳು ಮಾನವನ ಜೀವನವನ್ನು ಸುಖಮಯವಾಗಿಸಿದೆ ಎನ್ನುವುದು ನಿಜವಾದರೂ ಇವುಗಳಿಂದಲೇ ಪರಿಸರ ಮಾಲಿನ್ಯ ಹೆಚ್ಚಾಗಿ, ಪರಿಸರದ ಶೋಷಣೆ ಮಿತಿಮೀರಿ ಮಾನವನ ಮುಂದೆ ಅನೇಕ ಸಮಸ್ಯೆಗಳು ಎದುರಾಗಿವೆ. ಮಾನವ ಪರಿಸರವನ್ನು ಅಳತೆ ಮೀರಿ ನಿಯಂತ್ರಿಸಲು, ಉಪಯೋಗಿಸಿಕೊಳ್ಳಲು ತೊಡಗಿದ್ದಾನೆ. ಇದರಿಂದಾಗಿ ನೈಸರ್ಗಿಕ ಪರಿಸರ ಹಾಳಾಗುತ್ತಿದೆ. ಕಡಿಮೆಯಾಗುತ್ತಿದೆ. ಮಾನವ ನಿರ್ಮಿತ ಪ್ರಗತಿಯ ಅಂಶಗಳು (ಕಾರ್ಖಾನೆಗಳು, ವಾಹನಗಳು, ರಾಸಾಯನಿಕಗಳು, ತ್ಯಾಜ್ಯಗಳು, ಜನಸಂದಣಿ, ನಗರೀಕರಣ) ಪರಿಸರವನ್ನು ಮಲಿನಗೊಳಿಸುತ್ತಿವೆ. ಇದರಿಂದಾಗಿ ಒಂದೆಡೆ ಪರಿಸರ ಹಾಳಾಗುತ್ತಿದ್ದರೆ, ಮತ್ತೊಂದೆಡೆ ಮಾನವನಿಗೆ ಅನೇಕ ಸಮಸ್ಯೆಗಳು ಉಂಟಾಗುತ್ತಿವೆ. ಈಗ ಪರಿಸರವನ್ನು ಉಳಿಸಿಕೊಂಡು ಸಂರಕ್ಷಿಸದಿದ್ದಲ್ಲಿ, ತನ್ನ ಅಸ್ತಿತ್ವಕ್ಕೆ ತೊಂದರೆಯಾಗುತ್ತಿದೆ ಎಂಬ ಅರಿವು ಮಾನವನಿಗೆ ಮೂಡಿದೆ. ಆದ್ದರಿಂದ ವಿಶ್ವದಾದ್ಯಂತ ಎಲ್ಲಾ ರಾಷ್ಟ್ರಗಳು ಪರಿಸರವನ್ನು ಉಳಿಸಿಕೊಳ್ಳುವುದರ ಕಡೆಗೆ ಗಮನಹರಿಸುತ್ತಿವೆ. ಪರಿಸರ ಪ್ರಜ್ಞೆ, ಅದರ ಬಗ್ಗೆ ಕಾಳಜಿ ಒಂದು ಆಧುನಿಕ ಮೌಲ್ಯವಾಗಿ ರೂಪುಗೊಂಡಿದೆ. ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಬೆಳೆಸಿ, ಅವರಲ್ಲಿ ತಮ್ಮ ಪರಿಸರವನ್ನು ಸಂರಕ್ಷಿಸುವ ವರ್ತನೆಯನ್ನು ಬೆಳೆಸುವುದು ಶಾಲೆಯ ಮತ್ತೊಂದು ಗುರಿಯಾಗಿದೆ. ಇಂದು ಭಾರತದಾದ್ಯಂತ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಪರಿಸರ ಪ್ರಜ್ಞೆ ಬೆಳೆಸಲು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

### ಜಾತ್ಯತೀತತೆ

ಭಾರತದಲ್ಲಿ ಅನೇಕ ಧರ್ಮಗಳನ್ನು ಅನುಸರಿಸುವವರಿದ್ದಾರೆ. ಅನೇಕ ಉಪ–ಸಂಸ್ಕೃತಿಗಳು, ಭಾಷೆಗಳು, ಸಂಪ್ರದಾಯಗಳು ಭಾರತದಲ್ಲಿ ಕಂಡು ಬರುತ್ತವೆ. ಭಾರತದ ಈ ರೀತಿಯ ವಿವಿಧತೆಯಲ್ಲಿ ಐಕ್ಯತೆ ಕಂಡುಬರುತ್ತದೆ. ಆದ್ದರಿಂದ ಸ್ವತಂತ್ರ ಭಾರತದ ಸಂವಿಧಾನವನ್ನು ರಚಿಸುವಾಗ ವಿವಿಧತೆಯಲ್ಲಿ ಐಕ್ಯತೆಯನ್ನು ಉಳಿಸಿಕೊಳ್ಳಲು ಎಲ್ಲಾ ಧರ್ಮಗಳನ್ನು ಭಾಷೆ, ಸಂಸ್ಕೃತಿಗಳನ್ನು ಸಮಾಧಾನ ದೃಷ್ಟಿಯಿಂದ ಪರಿಗಣಿಸುವುದಕ್ಕಾಗಿ ಭಾರತವನ್ನು ಜಾತ್ಯತೀತ ರಾಷ್ಟ್ರವಾಗಿ ಘೋಷಿಸಲಾಯಿತು. ಜಾತ್ಯತೀತ ಎಂದರೆ ಎಲ್ಲಾ ಧರ್ಮಗಳು, ಸಂಸ್ಕೃತಿಗಳು ಸಮಾನವೆಂದು ಪರಿಗಣಿಸುವ ಮನೋಭಾವ. ರಾಜಕೀಯವಾಗಿ ಜಾತ್ಯತೀತತೆ ಎಂದರೆ ಆಡಳಿತ ವಿಷಯಗಳಲ್ಲಿ ಯಾವುದೇ ಒಂದು ಧರ್ಮ, ಸಂಸ್ಕೃತಿ ಸರ್ವೋಪರಿಪಾತ್ರ ವಹಿಸದಂತೆ ನೋಡಿಕೊಳ್ಳುವುದು, ಎಲ್ಲಾ ಧರ್ಮಗಳನ್ನು, ಭಾಷೆಗಳನ್ನು, ಸಂಸ್ಕೃತಿಗಳನ್ನು ಸಮಾನ ದೃಷ್ಟಿಯಿಂದ ನೋಡಿಕೊಳ್ಳುವುದು, ಸಂರಕ್ಷಿಸುವುದು, ಅವುಗಳ ವಿಕಾಸಕ್ಕೆ ಸಮಾನ ಅವಕಾಶಗಳನ್ನು ಒದಗಿಸುವುದು. ಇಂದು ಜಾತ್ಯತೀತತೆ ಒಂದು ಪ್ರಮುಖ

Digitised by Bharatavani, CIIL

ಮೌಲ್ಯವಾಗಿ ಹೊರಹೊಮ್ಮಿದೆ. ಮಕ್ಕಳಲ್ಲಿ ಜಾತ್ಯತೀತತೆಯ ಮನೋಭಾವವನ್ನು ಬೆಳೆಸಬೇಕಾದ ಅಗತ್ಯವಿದೆ. ಈ ಮನೋಭಾವ ಮಕ್ಕಳ ವರ್ತನೆಗಳಲ್ಲಿ ವ್ಯಕ್ತವಾಗಿ ಜಾತ್ಯತೀತ ಅನುಸರಿಸಬೇಕಾದ ಒಂದು ಆದರ್ಶ ಮೌಲ್ಯವಾಗಬೇಕಾಗಿದೆ. (ನೋಡಿ: ಜಾತ್ಯತೀತತೆ ಮತ್ತು ಶಿಕ್ಷಣ)

**ಸ್ವಾತಂತ್ರ್ಯ**

ಸ್ವಾತಂತ್ರ್ಯ ಪ್ರಜಾಸತ್ತಾತ್ಮಕ ಸಮಾಜದ ಕೇಂದ್ರೀಯ ಮೌಲ್ಯವಾಗಿದೆ, ಸ್ವಾತಂತ್ರ್ಯವೆಂದರೆ ಏನು ಬೇಕಾದರೂ ಮಾಡಲು ವ್ಯಕ್ತಿಗೆ ಅವಕಾಶವಿರುವುದು, ತನ್ನ ಇಷ್ಟದಂತೆ ವರ್ತಿಸಲು ಅವಕಾಶವಿರುವುದು. ಆದರೆ ಈ ರೀತಿಯ ನಿರಪೇಕ್ಷ ಸ್ವಾತಂತ್ರ್ಯ ಮಾನವ ಸಮಾಜದಲ್ಲಿ ಸಾಧ್ಯವಿಲ್ಲ. ಏಕೆಂದರೆ ನಮ್ಮ ವರ್ತನೆ ಬೇರೆಯವರ ಮೇಲೆ ಪರಿಣಾಮ ಬೀರುತ್ತದೆ. ಹಾಗೆಯೇ ಬೇರೆಯವರ ವರ್ತನೆ ನಮ್ಮ ಮೇಲೆ ಪರಿಣಾಮ ಬೀರುತ್ತದೆ. ಇಂಥ ಸ್ವಾತಂತ್ರ್ಯ ಬೇಕಾದ್ದು ಮಾಡುವ ನಿರಂಕುಶ ರೀತಿಯ ಪರವಾನಿಗೆ (Liscence) ಆಗಿ ಸಮಾಜದಲ್ಲಿ ಅವ್ಯವಸ್ಥೆಯನ್ನು ಉಂಟುಮಾಡುತ್ತದೆ. ಆದ್ದರಿಂದ ಸ್ವಾತಂತ್ರ್ಯವೆಂದರೆ ಸಮಾಜದ ಮೌಲ್ಯಗಳ ಚೌಕಟ್ಟಿನಲ್ಲಿ ಬೇರೆಯವರ ಹಿತಕ್ಕೆ, ಇರುವಿಕೆಗೆ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗದಂತೆ ನಮ್ಮನ್ನು ನಾವು ಅಭಿವ್ಯಕ್ತಿಗೊಳಿಸುವ ಅವಕಾಶಕ್ಕೆ ಸ್ವಾತಂತ್ರ್ಯ ಎನ್ನಬೇಕು. ತಿಲಕರು ಹೇಳುವಂತೆ ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಅಧಿಕಾರ. ಆದ್ದರಿಂದಲೇ ಎಲ್ಲಾ ಸಮಾಜಗಳಲ್ಲೂ ಸ್ವಾತಂತ್ರ್ಯಕ್ಕೆ ಮನ್ನಣೆ ಇದೆ. ಮೌಲ್ಯವಿದೆ.

ಸ್ವಾತಂತ್ರ್ಯದ ಮೌಲ್ಯವನ್ನು ನಾಲ್ಕು ಅರ್ಥಗಳಲ್ಲಿ ವ್ಯಾಖ್ಯಾನಿಸಬಹುದು. ಮೊದಲನೆಯದಾಗಿ, ನಮ್ಮ ಆಂತರಿಕ ಸಾಮರ್ಥ್ಯಗಳನ್ನು, ಅನಿಸಿಕೆಗಳನ್ನು ಯಾವುದೇ ಅಡಚಣೆ ಇಲ್ಲದಿರುವುದು ವೈಯಕ್ತಿಕ ಸ್ವಾತಂತ್ರ್ಯವೆನಿಸುತ್ತದೆ. ಎರಡನೆಯದಾಗಿ, ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಇರುವ ಅವಕಾಶಗಳು. ಮೂರನೆಯದಾಗಿ, ಸ್ವಾತಂತ್ರ್ಯ ನಮ್ಮ ಇಚ್ಛೆಯ ಅಭಿವ್ಯಕ್ತಿಯಾದುದರಿಂದ ನಮ್ಮ ಅಭಿಪ್ರಾಯಗಳನ್ನು ಸತ್ಯವಾಗಿ ವ್ಯಕ್ತಪಡಿಸುವ ಅವಕಾಶವೇ ಸ್ವಾತಂತ್ರ್ಯ. ಈ ಅರ್ಥದಲ್ಲಿ ಸ್ವಾತಂತ್ರ್ಯ ಒಂದು ನೈತಿಕ ಮೌಲ್ಯವಾಗುತ್ತದೆ. ನಾಲ್ಕನೆಯದಾಗಿ, ಅಧ್ಯಾತ್ಮಿಕ ಮಟ್ಟದಲ್ಲಿ ವ್ಯಕ್ತಿ ಪ್ರಾಪಂಚಿಕ ಮೋಹ ಇತ್ಯಾದಿ ಬಂಧನಗಳಿಂದ ಮುಕ್ತನಾಗಿ ಮೇಲ್ಮಟ್ಟದ ಆತ್ಮಿಕ ಆನಂದದ ಹಂತವನ್ನು ತಲುಪಲು ಇರುವ ಮುಕ್ತ ಅಂಶಗಳ ಸಾಧ್ಯತೆಯೇ ಸ್ವಾತಂತ್ರ್ಯ. ಇದು ಅಂತಿಮ ಮಟ್ಟದ ಅಧ್ಯಾತ್ಮಿಕ ಸ್ವಾತಂತ್ರ್ಯವಾಗುತ್ತದೆ.

ಈ ಎಲ್ಲಾ ಅರ್ಥಗಳ ದೃಷ್ಟಿಯಿಂದಲೂ ಮಕ್ಕಳಲ್ಲಿ ಸ್ವಾತಂತ್ರ್ಯದ ಮೌಲ್ಯವನ್ನು ಬೆಳೆಸುವುದು ಶಿಕ್ಷಣದ ಉದ್ದೇಶಗಳಲ್ಲಿ ಒಂದಾಗಿದೆ.

**ಜವಾಬ್ದಾರಿ**

ಪ್ರಜಾಸತ್ತಾತ್ಮಕ ಸಮಾಜದಲ್ಲಿ ಎಲ್ಲಾ ಸದಸ್ಯರು ತಮ್ಮ ತಮ್ಮ ಕರ್ತವ್ಯಗಳನ್ನು ನಿಭಾಯಿಸಿದರೆ, ಕೆಲಸಗಳನ್ನು ಮಾಡಿದರೆ ಸಮಾಜ ಅಭಿವೃದ್ಧಿ ಹೊಂದುತ್ತದೆ. ಅಂದರೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಬೇಕು. ಪ್ರಜಾಪ್ರಭುತ್ವ ಸರ್ಕಾರದ ಸಫಲತೆಯಲ್ಲಿ ಎಲ್ಲಾ ಅಧಿಕಾರಿಗಳು, ಪ್ರಜೆಗಳು ತಮ್ಮ ಜವಾಬ್ದಾರಿಗಳನ್ನು ನಿಭಾಯಿಸುವುದನ್ನು ಅವಲಂಬಿಸಿದೆ. ಇದು ಉತ್ತಮ ಪೌರತ್ವದ ಮುಖ್ಯ ಲಕ್ಷಣವಾಗಿದೆ. ಮಕ್ಕಳಲ್ಲಿ ಮೊದಲಿನಿಂದಲೂ ಕರ್ತವ್ಯ ನಿಷ್ಠತೆಯನ್ನು ಬೆಳೆಸಬೇಕಾದುದು ಅಗತ್ಯ. ಇಂದಿನ ಮಕ್ಕಳೇ ನಾಳಿನ ಪೌರರಾಗುವುದರಿಂದ ಮಕ್ಕಳ ಕರ್ತವ್ಯನಿಷ್ಠತೆ (ಜವಾಬ್ದಾರಿ)ಯ ಮೌಲ್ಯ ರಾಷ್ಟ್ರನಿರ್ಮಾಣಕ್ಕೆ ಸಹಾಯಕವಾಗುತ್ತದೆ.

–ವೈ.ಎನ್.ಶ್ರೀ

## ಭಾಷಾ ಆರ್ಜನೆ – ನೋಮ್ ಚೋಮ್‌ಸ್ಕಿಯ ವಿಚಾರಗಳು

ಭಾಷೆಯ ಹೊರತಾಗಿ ನಮ್ಮ ದೈನಂದಿನ ಜೀವನ ಸುಸೂತ್ರವಾಗಿರದು. ಇತರರೊಂದಿಗಿನ ನಮ್ಮ ಸಾಮಾಜಿಕ ಅನ್ಯೋನ್ಯ ಕ್ರಿಯೆಗಳಿಗೆ ನಾವು ಅತಿ ಹೆಚ್ಚಾಗಿ ಭಾಷೆಯನ್ನು ಅವಲಂಬಿಸಿದ್ದೇವೆ. ಜ್ಞಾನವು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಭಾಷೆಯ ರೂಪದಲ್ಲಿಯೇ ನೀಡಲ್ಪಡುವುದರಿಂದ ನಾವು ಹಿಂದಿನ ಪೀಳಿಗೆಗಳಿಗಿಂತ ಹೆಚ್ಚು ತಿಳಿದಿದ್ದೇವೆ. ಇತರ ಪ್ರಾಣಿ ವರ್ಗಕ್ಕಿಂತ ನಮಗೆ ಹೆಚ್ಚು ಅನುಕೂಲವಾಗಿರುವುದು ಭಾಷೆಯಿಂದಲೇ.

ಮಾನವರ ಎಲ್ಲ ಚಟುವಟಿಕೆಗಳಿಗೂ ಭಾಷೆಯೇ ಆಧಾರ. ಚಕ್ರ ಅಥವಾ ಗಾಲಿಯ ರಚನೆ ಹೇಗೆ ಮಾನವ ಇತಿಹಾಸದಲ್ಲಿ ಒಂದು ರೀತಿಯ ಕ್ರಾಂತಿಯನ್ನುಂಟು ಮಾಡಿತೋ ಹಾಗೆಯೇ ಭಾಷೆಯ ಸೃಷ್ಟಿ ಬೆಳವಣಿಗೆಗಳು ಇನ್ನೂ ಹೆಚ್ಚು ಕ್ರಾಂತಿಕಾರಿಯಾಗಿ ಪರಿಣಮಿಸಿವೆ. ಭಾಷೆಗಳು ರಾಷ್ಟ್ರಗಳ ಸಂಪತ್ತು.

ಚೋಮ್‌ಸ್ಕಿ

ಭಾಷೆಯ ಉಗಮದ ಬಗ್ಗೆ ಬಹಳಷ್ಟು ಊಹೆಗಳು, ವಾದಗಳು ಇವೆ. ಆದರೆ ಇವೆಲ್ಲವೂ ಭಾಗಶಃ ಒಪ್ಪಬಹುದಾಗಿವೆ. ಇದೇ ರೀತಿಯ ವಾದಗಳು, ಮೊದಲ ಭಾಷೆಯ ಆರ್ಜನೆಯ ಬಗೆಗೂ ಇವೆ.

ಮಗು ತನ್ನ ಮೊದಲ ಎರಡು ಮೂರು ವರ್ಷಗಳಲ್ಲಿ ಭಾಷೆ ಬಳಸುವ ಇತರರೊಂದಿಗೆ ನಡೆಸುವ ಅನ್ಯೋನ್ಯಕ್ರಿಯೆಯ ಮೂಲಕ ಭಾಷೆಯನ್ನು ಕಲಿಯಲು ಸಾಧ್ಯವಾಗುತ್ತದೆ. ಭಾಷೆ ಆಲಿಸಲಾಗದ ಮತ್ತು ಭಾಷೆ ಬಳಸದಂತೆ ನಿಬಂರ್ಧಿಸಲ್ಪಟ್ಟ ಮಗು, ಯಾವುದೇ ಭಾಷೆ ಕಲಿಯಲು ಸಾಧ್ಯವಿಲ್ಲ. ಹಾಗೆಯೇ ಮಗು ಕಲಿಯುವ ಭಾಷೆ ಅನುವಂಶೀಯ ಜೈವಿಕ ತಳಿಗಳ ಮೂಲಕ ಲಭಿಸುವುದಿಲ್ಲ. ಅದು ಮಗುವಿನ ಭಾಷಾ ಬಳಕೆಯ ಪರಿಸರದಿಂದ ಮಾತ್ರ ಒದಗುತ್ತದೆ. ದೈಹಿಕವಾಗಿ ಮಗುವಿಗೆ ಭಾಷೆಯ ಶಬ್ದಸಂಜ್ಞೆ (Sound signals)ಗಳನ್ನು ಕಳುಹಿಸುವ ಮತ್ತು ಪಡೆಯುವ ಸಾಮರ್ಥ್ಯವಿರಬೇಕು. ಬಹುಮುಖ್ಯವಾಗಿ ಭಾಷೆಯ ಮೂಲಕ ಇತರರೊಡನೆ ಅನ್ಯೋನ್ಯಕ್ರಿಯಿಸುವ ಅವಕಾಶಗಳಿರಬೇಕು.

ನೋಮ್‌ಚೋಮ್‌ಸ್ಕಿ ಇಪ್ಪತ್ತನೆಯ ಶತಮಾನದ ವಿಶಿಷ್ಟ ಚಿಂತಕರು, ಇವರ ಚಿಂತನೆಗಳು ಭಾಷಾಶಾಸ್ತ್ರ ತತ್ವಶಾಸ್ತ್ರ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವ್ಯಾಪಿಸಿವೆ. ಎಪ್ಪತ್ತರ ದಶಕದವರೆಗಿನ ಭಾಷೆಯ ಬಗೆಗಿನ ಮುಖ್ಯ ಗ್ರಹಿಕೆಯನ್ನು ಬದಲಾಯಿಸಿ, ಭಾಷಾ ವಿಜ್ಞಾನಕ್ಕೆ ಒಂದು ನವೀನ ಚಲನಶೀಲತೆಯನ್ನು ಚೋಮ್‌ಸ್ಕಿ ಒದಗಿಸಿದರು. ಭಾಷೆ ಎನ್ನುವುದು ಕಲಿತ ಕ್ರಿಯೆ ಎಂಬುದು ಅಲ್ಲಿಯವರೆಗಿನ ಸಿದ್ಧಾಂತವಾಗಿತ್ತು.

ಅವರಾಂ ನೋಮ್ ಚೋಂಸ್ಕಿಯವರು 1928ರಲ್ಲಿ ಅಮೆರಿಕಾದ ಫಿಲಡಲ್ಫಿಯಾದಲ್ಲಿ ಜನಿಸಿದರು. ಇವರು ಪ್ರಸಿದ್ಧ ಭಾಷಾಶಾಸ್ತ್ರಜ್ಞರಾಗಿದ್ದುದಲ್ಲದೆ, ರಾಜಕೀಯ ಕ್ರಿಯಾವಾದಿಯೂ ಆಗಿದ್ದರು. ಮೆಸಾಸುಸೆಟ್ಸ್‌ನ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಭಾಷಾಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಇವರು ಭಾಷಾ ಕಲಿಕೆಯ ಬಗ್ಗೆ ಹೊಸ ಸಿದ್ಧಾಂತವನ್ನು ಮಂಡಿಸಿ, ಅದುವರೆಗೆ ಭಾಷಾಕಲಿಕೆಯ ಬಗ್ಗೆ ಪ್ರಚಲಿತವಾಗಿದ್ದ ಸ್ಕಿನ್ನರನ ಅನುಬಂಧನ (conditioning) ಆಧಾರಿತ ಸಿದ್ಧಾಂತವನ್ನು ಖಂಡಿಸಿದರು.

Digitised by Bharatavani, CIIL

ಚೋಂಸ್ಕಿನ್ನಯೇ ಅಲ್ಲದೆ ಇತರ ಅನೇಕ ಭಾಷಾಶಾಸ್ತ್ರಜ್ಞರು ಎರಡು ರೀತಿಯ ಸಂರಚನೆಗಳನ್ನು (structure) ಗುರ್ತಿಸುತ್ತಾರೆ– ಅವೆಂದರೆ ಮೇಲ್ಮಟ್ಟದ ಸಂರಚನೆ (surface structure). ಇದು ಯಾವುದೇ ಭಾಷೆಯ ವ್ಯಾಕರಣಬದ್ಧ ರಚನೆಯನ್ನು ತೋರಿಸುತ್ತದೆ. ಶಬ್ದಗಳ ಸರಿಯಾದ ಸ್ಥಾನೀಕರಣ, ವ್ಯಾಕರಣದ ನಿಯಮಗಳ ಪಾಲನೆ, ವಾಕ್ಯರಚನೆ ಭಾಷೆಯ ಮೇಲ್ಮಟ್ಟದ ಸಂರಚನೆಗೆ ಸಂಬಂಧಿಸಿದೆ. ಮತ್ತೊಂದು ಗಹನ ಸಂರಚನೆ (deep structure). ಭಾಷೆಯ ಯಾವುದೇ ವಾಕ್ಯ ಒಳಗೊಂಡಿರುವ ಅರ್ಥ, ಉದ್ದೇಶ, ಇಚ್ಛೆಯನ್ನು ಧ್ವನಿಸುವುದಕ್ಕೆ ಸಂಬಂಧಿಸಿದೆ. ಎರಡು ವಾಕ್ಯಗಳು ಮೇಲ್ಮಟ್ಟದ ಸಂರಚನೆಯಲ್ಲಿ ಒಂದೇ ರೂಪದಲ್ಲಿರಬಹುದು. ಆದರೆ ಅವುಗಳ ಗಹನ ಸಂರಚನೆ– ಅವು ಸಂವಹಿಸುವ ಅರ್ಥ ಬೇರೆ ಬೇರೆಯಾಗಿರಬಹುದು. ಅದೇ ರೀತಿ ಒಂದು ವಾಕ್ಯವನ್ನು ಬೇರೆ ಬೇರೆ ಸಂವೇಗ ಸ್ಥಿತಿಗಳಲ್ಲಿ ಅಭಿವ್ಯಕ್ತಗೊಳಿಸಿದಾಗ ಅದರ ಸಂವಹಿಸುವ ಅರ್ಥ ಬೇರೆಯಾಗುತ್ತದೆ. ಉದಾಹರಣೆಗೆ Harry is Willing to help (ಹ್ಯಾರಿ ಸಹಾಯ ಮಾಡಲು ಸಿದ್ಧನಿದ್ದಾನೆ) ಮತ್ತು Harry is difficult to help (ಹ್ಯಾರಿಗೆ ಸಹಾಯ ಮಾಡುವುದು ಕಷ್ಟ) – ಈ ಎರಡೂ ವಾಕ್ಯಗಳು ಮೇಲ್ನೋಟಕ್ಕೆ ಒಂದೇ ರೀತಿಯ ಸಂರಚನೆಯನ್ನು ಹೊಂದಿವೆ. ಪ್ರತಿಯೊಂದರಲ್ಲೂ ಕರ್ತೃಪದ, ಕ್ರಿಯಾಪದ ಮತ್ತು ಕರ್ಮಪದಗಳಿವೆ. ಆದರೆ ಅವುಗಳ ಗಹನ ಸಂರಚನೆ ಬೇರೆ ಬೇರೆ ಅರ್ಥಗಳನ್ನು ಧ್ವನಿಸುತ್ತವೆ. ಮೊದಲನೇ ವಾಕ್ಯದಲ್ಲಿ Harry ಕರ್ತೃವಾಗಿ ಸಹಾಯ ಮಾಡುವವನೆಂಬ ಅರ್ಥ ಬರುತ್ತದೆ. ಎರಡನೇ ವಾಕ್ಯದಲ್ಲಿ Harry ಸಹಾಯ ಪಡೆಯುವವನಾಗಿದ್ದು 'Help' ಕ್ರಿಯಾಪದದ ಕರ್ಮಪದವಾಗುತ್ತಾನೆ. ಹೀಗೆ ಮೇಲ್ಮಟ್ಟದ ಭಾಷಾ ಸಂರಚನೆ ವ್ಯಾಕರಣದ ನಿಯಮಗಳಿಗೆ ಸಂಬಂಧಿಸಿದ್ದು, ಭಾಷೆಯ ಗಹನ ಸಂರಚನೆ ಒಂದು ವಾಕ್ಯದಲ್ಲಿ ಬಳಕೆಯಾಗಿರುವ ಪರಿಕಲ್ಪನೆಗಳ (ಪದಗಳ) ಸಂಬಂಧವನ್ನು ತೋರಿಸುತ್ತದೆ. ಚೋಂಸ್ಕಿಯ ಪ್ರಕಾರ ಮಕ್ಕಳು ಅಪ್ರಜ್ಞಾಪೂರ್ವಕವಾಗಿಯೇ, ಜನ್ಮಜಾತ ಸಾಮರ್ಥ್ಯಗಳಿಂದ ಭಾಷೆಯ ಈ ಸಂರಚನೆಗಳನ್ನು ಗ್ರಹಿಸಲು ಶಕ್ತರಾಗುತ್ತಾರೆ.

ಆದರೆ ಚೋಂಸ್ಕಿಯ ಮೇರೆಗೆ ಭಾಷೆಯ ಕಲಿಕೆಯು ಜೈವಿಕ ಸಹಜ ಕ್ರಿಯೆಯೇ ಹೊರತು ಕಲಿತ ಕ್ರಿಯೆ ಅಲ್ಲ ಮಾನವನ, ಮೆದುಳಿನ ನೈಸರ್ಗಿಕ ರಚನೆಯು ಕಾರ್ಯನಿರ್ವಹಿಸುವುದರಿಂದಲೇ ಭಾಷೆಯ ಸಾಧ್ಯತೆ ಉಂಟಾಗಿದೆ. ಈ "ಸಾಮರ್ಥ್ಯದ" ಪ್ರಾಯೋಗಿಕ ಬಳಕೆಯು "ಆಚರಣೆಗೆ" ಸಂಬಂಧಿಸಿದ್ದು. ರೂಪಾಂತರ ವ್ಯಾಕರಣವಾಗಿ" (Transformational Grammar) ಪ್ರಸಿದ್ಧಿಗೊಂಡಿತು. ಉತ್ಪಾದಕ ರೂಪಾಂತರ ವ್ಯಾಕರಣವು ಅದುವರೆಗಿನ ವರ್ಣನಾತ್ಮಕ ವ್ಯಾಕರಣ (Descriptive Grammar) ಕ್ಕಿಂತ ಭಿನ್ನವಾಗಿ ಒಂದು ಹೊಸ ಆಯಾಮವನ್ನೇ ಸೃಷ್ಟಿಸಿತು.

**ಭಾಷಾ ಆರ್ಜನೆಯ ಸಾಧನ (Language Acquisition Device)**

ಈ ಪರಿಕಲ್ಪನೆಯನ್ನು ಮೊಟ್ಟಮೊದಲಿಗೆ ಪ್ರತಿಪಾದಿಸಿದವರು ನೋಮ್ ಚೋಮ್‌ಸ್ಕಿ. ಇದು ಭಾಷೆಯ ಬಗೆಗಿನ ಜನ್ಮಜಾತ (Nativist) ಸಿದ್ಧಾಂತದ ಒಂದು ಭಾಗ. ಸಾಂಕೇತಿಕ ಭಾಷೆ. (ಭಾಷೆಯ ಆರ್ಜನೆ)ಯನ್ನು ಕಲಿಯಲು ಮಿದುಳಿನಲ್ಲಿ ಕಾರ್ಯನಿರ್ವಹಿಸುವ ಒಂದು ಉತ್ಪಾದಕ "ಅಂಗ" – ಹುಟ್ಟಿನಿಂದ ಇರುವಂತಹುದು. ಈ ಸಿದ್ಧಾಂತದ ಮೇರೆಗೆ ಮಾನವರಿಗೆ ಭಾಷೆ ಕಲಿಯುವ ಸಹಜ ಸಾಮರ್ಥ್ಯವಿದೆ.

ವಿಲ್ಹೆಲ್ಮ್ ಹವ್‌ಬೋಲ್ಟ್‌ನು ಸೂಚಿಸಿದ "ಸೀಮಿತ ಮಾರ್ಗಗಳಿರದಂತಹ ಬಳಕೆಗಳ" ವಿಚಾರದಿಂದ ಭಾಷಾ ಆರ್ಜನೆಯ ಕಠಿಣ ಜಟಿಲತೆಯನ್ನು ಮನಗಂಡ ಚೋಮ್‌ಸ್ಕಿಯು (Language Acquisition Device LAD) ಪ್ರಾಕ್ಕಲ್ಪನೆಯನ್ನು (hypothesis) ಪ್ರತಿಪಾದಿಸಿದನು. ಅದನ್ನು ಪ್ರತಿಪಾದಿಸಿದಾಗ (1957–65) ಅದು ಭಾಷಾ ಕಲಿಕೆಯ ಬಗ್ಗೆ ಸ್ಕಿನ್ನರನ ವರ್ತನಾವಾದ ಮತ್ತು ಅನುಕರಣ ಪ್ರವೃತ್ತಿಯ ಸಿದ್ಧಾಂತವನ್ನು ವಿರೋಧಿಸಿತು. ಮುಂದೆ ಬ್ರೂನರ್ ಪಿಯಾಜೆಯವರು ಮತ್ತು ವೈಗಾಸ್ಕಿ ಭಾಷಾ ಆರ್ಜನೆಯ ಜೈವಿಕ ಮತ್ತು ಸಾಮಾಜಿಕ ಅಂಶಗಳ ಅನ್ಯೋನ್ಯಕ್ರಿಯೆಯನ್ನು ಒತ್ತಿಹೇಳಿದರು.

1965ರಲ್ಲಿ ಚಾಮ್‌ಸ್ಕಿ ಒಂದು ಭಾಷೆಯ ಅಂತಸ್ಥ (Innate) ಆಕೃತಿಕಲ್ಪ (Schema) ವನ್ನೇ ಪ್ರತಿಪಾದಿಸಿದರು. ಇದರ ಆಧಾರದ ಮೇಲೆ ಪ್ರಾಥಮಿಕ ಭಾಷಾ ಮಾಹಿತಿ (Primary Linguistic Data) ಸೀಮಿತವಾಗಿದ್ದಾಗ್ಯೂ, ಆರ್ಜನೆಯ ಪ್ರಕ್ರಿಯೆಯು ನಡೆಯುತ್ತದೆ. ಇದಕ್ಕಾಗಿ ಒಳಬಂದ ಸಂಜ್ಞೆಗಳನ್ನು ಪ್ರತಿನಿಧಿಸಲು, ಮಗುವಿಗೆ ಅಗತ್ಯವಾದ ಒಂದು ತಂತ್ರಬೇಕು. ಅವುಗಳು ರಚನಾತ್ಮಕ ಮಾಹಿತಿಯನ್ನು ಪ್ರತಿನಿಧಿಸಲು ಸಾಧ್ಯವಾಗಬೇಕು. ಭಾಷಾ ರಚನೆಯ ಪ್ರಾಕಲ್ಪನೆಗಾಗಿ ಪ್ರತಿ ವಾಕ್ಯದ ಬಗ್ಗೆ ಏನು ತಿಳಿಸುವವೆಂದು ನಿರ್ಧರಿಸಲು ಒಂದು ವಿಧಾನ ಬೇಕು.

ಈ ತಳಹದಿಯ ಮೇರೆಗೆ ಜನ್ಮಜಾತ 'ಭಾಷಾ ಆರ್ಜನೆಯ ಸಾಧನ'ದ (Language Acquisition Device LAD) ಮೂಲಕ ಪ್ರಥಮ ಭಾಷೆಯ ಆರ್ಜನೆಯನ್ನು ಕೆಳ ಹಂತಗಳಲ್ಲಿ ವಿವರಿಸಬಹುದು.

1. ಭಾಷಾ ಆರ್ಜನೆಯ ಸಾಧನವು (LAD) ಭಾಷಾ ರಚನಾ ಪ್ರಾಕ್ಕಲ್ಪನೆಗಳ ವರ್ಗವನ್ನು ಹುಡುಕಿ ಒಳಬಂದ ಸಂಜ್ಞೆ ಮತ್ತು ಪ್ರಾಥಮಿಕ ಭಾಷಾ ಮಾಹಿತಿಯಿಂದ (PLD) ಒದಗಿಸಿದ ರಚನಾ ಮಾಹಿತಿಗೆ ಹೊಂದುವ ವರ್ಗವನ್ನು ಆಯ್ಕೆ ಮಾಡುತ್ತದೆ.
2. ವಾಕ್ಯಗಳಿಗೆ ಹೊಂದುವ ಪ್ರಾಕ್ಕಲ್ಪನೆಗಳನ್ನು ಪರೀಕ್ಷಿಸುವುದು.
3. ಮಗುವಿನ ಭಾಷಾ ರಚನೆ ವಿನ್ಯಾಸಕ್ಕೆ ಅಥವಾ "ವ್ಯಾಕರಣ"ಕ್ಕೆ ಹೊಂದುವ ಪ್ರಾಕ್ಕಲ್ಪನೆಯನ್ನು ಆರಿಸುವುದು.
4. ಈ ವ್ಯಾಕರಣವು ವಾಕ್ಯಗಳನ್ನು ಅರ್ಥೈಸುವ ಒಂದು ವಿಧಾನವನ್ನು ಭಾಷಾ ಆರ್ಜನೆಯ ಸಾಧನಕ್ಕೆ ಹೊಂದುವ ಪ್ರಾಕ್ಕಲ್ಪನೆಗೆ ನೀಡುತ್ತದೆ.

ಈ ಪ್ರಕ್ರಿಯೆಯ ಮೂಲಕ ಚೋಂಸ್ಕಿಯು ಭಾಷೆಯ ಒಂದು ಸಿದ್ಧಾಂತವನ್ನೇ ರಚಿಸುತ್ತಾರೆ. ಪ್ರಾಥಮಿಕ ಭಾಷಾ ಮಾಹಿತಿ (PLD)ಯು ಇದರ ಒಂದು ಉದಾಹರಣೆ ಮಾತ್ರ. ಈ ಮೂಲಕ ಮಗು ತಾನು ಕಲಿತದ್ದಕ್ಕಿಂತ ಹೆಚ್ಚಾಗಿ ಭಾಷೆಯ ಬಗ್ಗೆ ಜ್ಞಾನ ಪಡೆಯುತ್ತದೆ. ಕೆಲವರ ಅಭಿಪ್ರಾಯಗಳ ಮೇರೆಗೆ ಮಗು ಬೆಳೆದಂತೆ ಭಾಷಾ ಆರ್ಜನೆ ಸಾಧನದ (LAD) ಲಭ್ಯತೆ ನಿಂತು ಹೋಗುತ್ತದೆ.

**ಅಂತಸ್ಥ ಸಿದ್ಧಾಂತ ಬೆಂಬಲಿಸುವ ರುಜುವಾತುಗಳು**

ಮಾನವರು ಧ್ವನಿ ನಾಳ (Vocal Tract)ವನ್ನು ರೂಪಿಸಿಕೊಂಡಿದ್ದಾರೆ. ಬಹಳಷ್ಟು ಶಬ್ದಗಳನ್ನು ಇದು ಉತ್ಪತ್ತಿಗೊಳಿಸಬಲ್ಲದು. ಅಲ್ಲದೇ ನಮ್ಮ ಮೆದುಳಿನಲ್ಲಿ ವಿಶಿಷ್ಟ ಭಾಷಾ ಕಾರ್ಯಗಳನ್ನು ನಿರ್ವಹಿಸುವ ನಿರ್ದಿಷ್ಟ ಕ್ಷೇತ್ರಗಳಿವೆ.

ಭಾಷಾ ಶಾಸ್ತ್ರಜ್ಞ ಡೆರೆಕ್ ಬಿಕರ್ಟನನು ಸುರಿನಾಂನಲ್ಲಿ ಡಚ್–ಆಧಾರದ ಕ್ರಯೋಲ್ ಭಾಷೆಯ ರೂಪಗೊಳ್ಳುವಿಕೆಯನ್ನು ಅಧ್ಯಯನ ಮಾಡಿದನು. ವಿವಿಧ ಭಾಷಾ ಗುಂಪುಗಳ, ಪಲಾಯನ ಮಾಡಿದ ಗುಲಾಮರು, ಒಟ್ಟಾಗಿ ಬದುಕಬೇಕಾದ ಸನ್ನಿವೇಶದಲ್ಲಿ, ತಮ್ಮ ಸೀಮಿತ ಡಚ್ ಭಾಷೆಯಲ್ಲಿ ವ್ಯವಹರಿಸಬೇಕಾಯಿತು. ಇದರ ಪರಿಣಾಮವೇ ಸೀಮಿತ ಭಾಷೆಯಾದ ಪಿಡ್ಜಿನ್, ಈ ಗುಲಾಮರ ಮಕ್ಕಳು "ಪಿಡ್ಜಿನ್"

Digitised by Bharatavani, CIIL

ಭಾಷೆಯನ್ನು ಪೂರ್ಣ ಪ್ರಮಾಣದ ಕ್ರೆಯೋಲ್ ಭಾಷೆಯನ್ನಾಗಿ ಪರಿವರ್ತಿಸಿದರು.

ಕಿವುಡರು ಬಳಸುವ ಸಂಜ್ಞಾ ಭಾಷೆಗಳ ಅಧ್ಯಯನಗಳಿಂದ ಈ ಭಾಷೆಗಳು ಜಟಿಲ ಮತ್ತು ಪೂರ್ಣ ಪ್ರಮಾಣದ ವ್ಯಾಕರಣ ಭಾಷೆಗಳೆಂದು ನಿರೂಪಿಸಲ್ಪಟ್ಟಿವೆ.

ಚೋಂಸ್ಕಿಯ ನಂತರ ಸ್ಲೇಬಿನ್ (1979) ಭಾಷಾ ಕಲಿಕೆಯಲ್ಲಿ ಜನ್ಮಜಾತ ವ್ಯವಸ್ಥೆ ಮತ್ತು ಕಲಿಕೆ – ಈ ಎರಡೂ ಅಂಶಗಳಿಗೆ ಮಹತ್ವ ನೀಡುವ ಭಾಷಾ ಕಲಿಕೆಯ ಸಂಜ್ಞಾನಾತ್ಮಕ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಮಕ್ಕಳು ಕೆಲವು ಜನ್ಮಜಾತ ಮಾಹಿತಿ–ಸಂಸ್ಕರಣ ವ್ಯವಸ್ಥೆ (ತಂತ್ರ)ಗಳನ್ನು ಹೊಂದಿದ್ದು ಅವುಗಳನ್ನು ಭಾಷಾ ಕಲಿಕೆಯಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಇವುಗಳನ್ನು ಸಂಕ್ರಿಯಾತ್ಮಕ ನಿಯಮಗಳು (Operating Principles) ಎಂದು ಕರೆಯಲಾಗಿದೆ. ಇವು ಬಹುಶಃ ಜನ್ಮಜಾತವಾಗಿರುತ್ತವೆ ಅಥವಾ ಬಹಳ ಬೇಗ "ಕಲಿಯಲ್ಪಡುತ್ತವೆ". ಉದಾಹರಣೆಗೆ, "ಪದಗಳ ಅಂತ್ಯಭಾಗಕ್ಕೆ ಗಮನ ಕೊಡಿ" ಎನ್ನುವುದು ಇಂತಹ ಒಂದು ಸಂಕ್ರಿಯಾತ್ಮಕ ನಿಯಮವಾಗಿದೆ.

### ಚಾಮ್‌ಸ್ಕಿಯ ಸಿದ್ಧಾಂತದ ಮಿತಿಗಳು

ಭಾಷೆಯ ಬಗೆಗಿನ ಚಾಮ್‌ಸ್ಕಿಯ ಅಧ್ಯಯನ ಸೈದ್ಧಾಂತಿಕವಾದುದು, ವ್ಯಾಕರಣದ ಬಗ್ಗೆ ಹೆಚ್ಚಿನ ಒಲವಿದ್ದುದರಿಂದ, ವ್ಯಾಕರಣ ನಿಯಮಗಳ ಜಟಿಲ ವಿವರಗಳನ್ನೇ ಇಲ್ಲಿ ನಾವು ಹೆಚ್ಚಾಗಿ ಕಾಣುತ್ತೇವೆ, ಮಕ್ಕಳ ನೈಜ ಅಧ್ಯಯನವನ್ನು ಚೋಮ್‌ಸ್ಕಿ ಮಾಡಲಿಲ್ಲ. ಮಕ್ಕಳು ಮತ್ತು ಅವರ ಪಾಲಕರ ನಡುವಣ ಅನ್ಯೋನ್ಯಕ್ರಿಯೆಗೆ ಮಹತ್ವ ನೀಡಲಿಲ್ಲ. ಈ ಸಿದ್ಧಾಂತವು ಮಗುವಿಗೆ ಮಾತಾಡಬೇಕೆನಿಸಲು ಇರುವ ಕಾರಣಗಳನ್ನು ಗುರುತಿಸುವುದಿಲ್ಲ.

–ಡಿ.ಹ.ರಾ.

## ಭಾಸಿತ ಕಲಿವಿನ ಪರಿಸರ

ಭಾಸಿತ ಕಲಿವಿನ ಪರಿಸರ (Virtual Learning Environment) ತಂತ್ರಾಂಶ ವ್ಯವಸ್ಥೆಯ ಯೋಜನೆಯಾಗಿದ್ದು ಇದು ಶಿಕ್ಷಣವ್ಯವಸ್ಥೆಯಲ್ಲಿ ಬೋಧನೆ ಹಾಗೂ ಕಲಿಕೆಗೆ ಆಸರೆಯಾಗಿದೆ. ಇದು ನಿರ್ವಹಣಾ ಕಲಿಕಾ ಪರಿಸರಕ್ಕಿಂತ ಭಿನ್ನವಾಗಿದ್ದು ಸಾಮಾನ್ಯವಾಗಿ ಅಂತರ್ಜಾಲದಲ್ಲಿ ಕಾರ್ಯನಿರ್ವಹಿಸುತ್ತದಲ್ಲದೆ ಮೌಲ್ಯಮಾಪನದ ಸಾಧನಗಳ ಸಂಗ್ರಹವನ್ನು ಒದಗಿಸುತ್ತದೆ (ಸಾಮಾನ್ಯವಾಗಿ ಬಹುಆಯ್ಕೆ ಪ್ರಶ್ನೆಗಳ ಮೂಲಕ ಮೌಲ್ಯಮಾಪನ ಮಾಡುತ್ತದೆ). ಸಂವಹನ, ವಿಷಯದ ಮೇಲ್‌ಹೊರೆ, ವಿದ್ಯಾರ್ಥಿಗಳ ಕೆಲಸಗಳನ್ನು ಹಿಂದಿರುಗಿಸುವುದು, ಸಮಾನ ದರ್ಜೆಯವರ ಮೌಲ್ಯಮಾಪನ ಮಾಡುವುದು, ವಿದ್ಯಾರ್ಥಿಗಳ ಗುಂಪಿನ ನಿರ್ವಹಣೆ ಮಾಡುವುದು, ವಿದ್ಯಾರ್ಥಿಗಳ ದರ್ಜೆಗಳನ್ನು ಸಂಗ್ರಹಿಸುವುದು ಹಾಗೂ ಕ್ರಮಾನುಸಾರಗೊಳಿಸುವುದು, ಪ್ರಶ್ನಾವಳಿಗಳು, ಜಾಡುಹಿಡಿಯುವ ಸಾಧನಗಳು ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ. ಈ ವ್ಯವಸ್ಥೆಯಲ್ಲಿ ಹೊಸ ಮುಖ್ಯ ಭಾಗಗಳೆಂದರೆ ವಿಕೀಸ್, ಬ್ಲಾಗ್ಸ್, RSS ಹಾಗೂ 3D ಭಾಸಿತ ಕಲಿಕೆಯ ಕ್ಷೇತ್ರಗಳು.

ಇದನ್ನು ಮೂಲವಾಗಿ ದೂರ ಶಿಕ್ಷಣಕ್ಕಾಗಿ ಸೃಷ್ಟಿಸಿದರು. ಈ ರೀತಿಯ ಕಲಿಕೆಯು ಹಲವಾರು ಅಂಶಗಳಲ್ಲಿ ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ಕಲಿಕಾ ಪರಿಸರವನ್ನು ಹೋಲುತ್ತದೆ ಅಥವಾ ಅದರಂತೆ ಭಾಸವಾಗುತ್ತದೆ. ಹಾಗಾಗಿ ಈ ಕಲಿಕಾ ಸನ್ನಿವೇಶದ ಪರಿಸರವನ್ನು 'ಭಾಸಿತ ಕಲಿಕಾ ಪರಿಸರ' ಎಂದು ಅರ್ಥೈಸಿಕೊಳ್ಳಲಾಗಿದೆ. ಭಾಸಿತ ಕಲಿವಿನ ಪರಿಸರ ಇಂದು ಹೆಚ್ಚಾಗಿ ಬಳಕೆಯಲ್ಲಿರುವ ಸಾಂಪ್ರದಾಯಕ ಮುಖಾ–ಮುಖಿ ತರಗತಿಯಲ್ಲಿನ ಚಟುವಟಿಕೆಗಳಿಗೆ ಪೂರಕವಾಗಿದೆ. ಇದನ್ನು ಹದವಾದ ಮಿಶ್ರಿತ (Well Blended) ಕಲಿಕೆಯೆಂದು ಕರೆಯುತ್ತಾರೆ. ಈ ವ್ಯವಸ್ಥೆಗಳನ್ನು ಗಣಕಯಂತ್ರದ ಸರ್ವರ್‌ಗಳ ಮೂಲಕ ಬಳಸಲಾಗುತ್ತದೆ. ಇದನ್ನು ವಿದ್ಯಾರ್ಥಿಗಳ ಕೋರ್ಸ್ ಆಧಾರಿತವಾದ ಬಹು–ಮಾಧ್ಯಮ ಮತ್ತು ಅಂತರ್ಜಾಲದಲ್ಲಿ ಬಳಸಲಾಗುತ್ತದೆ. ಇದನ್ನು ಒಂದು ಪುಸ್ತಕ ಹಾಗೂ ಡಿ.ವಿ.ಡಿ.ಗಳ ರೂಪದಲ್ಲಿ ಶಾಲೆಗಳಿಗೆ ಉಚಿತವಾಗಿ ಹಂಚಲಾಗುತ್ತದೆ. ಹೊಸ ತಲೆಮಾರಿನ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಆಧಾರಿತವಾಗಿಟ್ಟುಕೊಂಡು ಕಲಿಕೆಯನ್ನು ವಿಂಗಡಿಸಲಾಗಿರುತ್ತದೆ. ಭಾಸಿತ ಕಲಿವಿನ ವಾತಾವರಣವು ಯಾವುದೇ ಒಂದು ಕಟ್ಟಡ, ಸ್ಥಳಕ್ಕೆ ಸೀಮಿತವಾದುದಲ್ಲ.

ಭಾಸಿತ ಕಲಿವಿನ ವಾತಾವರಣವು ಗಣಕಯಂತ್ರದ ಯೋಜನೆಯಾಗಿದ್ದು, ಇದು ವಿದ್ಯುನ್ಮಾನ ಕಲಿಕೆ (ಇ–ಕಲಿಕೆ)ಯನ್ನು ಸುಲಭಗೊಳಿಸಿದೆ. 'ಇ–ಕಲಿಕೆ'ಯನ್ನು ಕೆಲವೊಮ್ಮೆ ಕಲಿಕಾ ನಿರ್ವಹಣಾ ವ್ಯವಸ್ಥೆ, ಪಠ್ಯ ನಿರ್ವಹಣಾ ವ್ಯವಸ್ಥೆ, ಕಲಿಕಾ ಪಠ್ಯ ನಿರ್ವಹಣಾ ವ್ಯವಸ್ಥೆ, ನಿರ್ವಹಣಾ ಕಲಿಕಾ ವಾತಾವರಣ, ಕಲಿಕಾ ಪೂರಕ ವ್ಯವಸ್ಥೆ, ಆನ್‌ಲೈನ್ ಕಲಿಕಾ ಆಧಾರಿತ, ಮುಕ್ತ ಕೋರ್ಸ್‌ವೇರ್ ಕಲಿಕಾ ಪ್ರದೇಶ ಎನ್ನುವರು. ಇದು ಶಿಕ್ಷಣವನ್ನು ಗಣಕಯಂತ್ರದ ಮಧ್ಯಸ್ಥಿಕೆ–ಸಂವಹನ ಅಥವಾ ಆನ್‌ಲೈನ್ ಮೂಲಕ ಶಿಕ್ಷಣವನ್ನು ಒದಗಿಸುವುದು. ಕಲಿಕೆಯ ಭಾಸಿತ ಪರಿಸರ ಎಂಬುದು ಭಾಸಿತ ಕಲಿವಿನ ಪರಿಸರ ಪದಕ್ಕಿಂತ ಹೆಚ್ಚು ಸೂಕ್ತವಾಗಿದೆ. ಇದು ಭಾಸಿತವಾಗಿರುವುದು ಪರಿಸರವೇ ಹೊರತು ಕಲಿಕೆಯಲ್ಲ ಎಂಬ ಸ್ಪಷ್ಟತೆಯನ್ನು ಮೂಡಿಸುತ್ತದೆ. ಭಾಸಿತ ಎಂಬ ಪದವು ಕಲಿಕೆಯು ನೈಜವಾಗಿಲ್ಲವೆಂಬ ಗೊಂದಲವನ್ನುಂಟು ಮಾಡುವುದರಿಂದ "ಕಲಿಕೆಯ ಭಾಸಿತ ಪರಿಸತ" ಎಂದು ಕರೆಯುವುದೇ ಹೆಚ್ಚು ಸೂಕ್ತ.

ಅಮೆರಿಕಾ ದೇಶದಲ್ಲಿ ಪಠ್ಯನಿರ್ವಹಣಾ ವ್ಯವಸ್ಥೆ ಹಾಗೂ ಕಲಿಕಾ ನಿರ್ವಹಣಾ ವ್ಯವಸ್ಥೆ ಎಂಬ ಪದಗಳನ್ನು ಹೆಚ್ಚಾಗಿ ಬಳಸುತ್ತಾರೆ. ಆದರೂ ಕಲಿಕಾ ನಿರ್ವಹಣಾ ವ್ಯವಸ್ಥೆಯು ಕಾರ್ಪೋರೇಟ್ ತರಬೇತಿ ಯೋಜನೆಯಲ್ಲಿ ತಂತ್ರಾಂಶದೊಂದಿಗೆ ನಿರ್ವಹಿಸಲು ಹೆಚ್ಚಾಗಿ ಬಳಕೆಯಲ್ಲಿದ್ದು ಅತೀ ಕಡಿಮೆ ಪ್ರಮಾಣದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಬಳಕೆಯಾಗುತ್ತಿದೆ.

ಇಂಗ್ಲೆಂಡ್ ದೇಶದಲ್ಲಿ ಹಾಗೂ ಹಲವು ಯುರೋಪ್ ದೇಶಗಳಲ್ಲಿ ಭಾಸಿತ ಕಲಿವಿನ ವಾತಾವರಣ ಹಾಗೂ ನಿರ್ವಾಹಿತ ಕಲಿವಿನ ವಾತಾವರಣ ಪದಗಳನ್ನು ಹೆಚ್ಚಾಗಿ ಬಳಸುತ್ತಾರೆ. ಆದರೆ ಇವೆರಡೂ ಬೇರೆಬೇರೆಯಾಗಿದ್ದು, ಭಾಸಿತ ಕಲಿವಿನ ವಾತಾವರಣ ಎಂಬುದು ನಿರ್ವಾಹಿತ ಕಲಿವಿನ ವಾತಾವರಣದ ಉಪಭಾಗವಾಗಿದೆ. ನಿರ್ವಾಹಿತ ಕಲಿವಿನ ವಾತಾವರಣ ಎಂಬುದು ವಿಸ್ತಾರವಾದ ಅರ್ಥ ಹೊಂದಿದ್ದು ಇದು ಮಾಹಿತಿ ತಂತ್ರಜ್ಞಾನದ ಸಂಘಟನೆಯಾಗಿದ್ದು ಇ–ಕಲಿಕೆಯನ್ನು ಸುಲಭಗೊಳಿಸಿದೆ.

ಬೆಕ್ಟ (Becta) ಎಂಬುದು ಇಂಗ್ಲೆಂಡಿನ ನಗರವಾಗಿದ್ದು ಇಲ್ಲಿ ಭಾಸಿತ ಕಲಿವಿನ ವಾತಾವರಣಕ್ಕೆ "ಕಲಿವಿನ ವೇದಿಕೆ" (Learning Platform) ಎಂದು ನಾಮಕರಣ ಮಾಡಿದ್ದಾರೆ. ಕಲಿವಿನ ಪ್ಲಾಟ್‌ಫಾರಂ ಎಂಬುದು ವಿಸ್ತಾರವಾದ ಮಾಹಿತಿ–ಸಂವಹನ, ತಂತ್ರಜ್ಞಾನದ ವ್ಯವಸ್ಥೆಯನ್ನು ಒದಗಿಸುವ ಕಲಿಕೆಯಾಗಿದೆ. ಇದರಿಂದ ಯಂತ್ರಾಂಶ, ತಂತ್ರಾಂಶ ಹಾಗೂ ಪೂರಕ ಸೇವೆಗಳನ್ನು ಒಗ್ಗೂಡಿಸಿ ಪರಿಣಾಮಕಾರಿ ವಿಧಾನದಿಂದ ಶಾಲೆಯ ಒಳಗೂ–ಹೊರಗೂ ಕಲಿವಿನ ವಾತಾವರಣವನ್ನು ಸೃಷ್ಟಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಯಾವುದೇ

Digitised by Bharatavani, CIIL

ಸ್ಥಳ, ಸಮಯದ ಸಮಸ್ಯೆಯಿಲ್ಲದೆ ಅಂತರ್ಜಾಲದಲ್ಲಿ ಹಲವಾರು ಇ–ಸಂಪನ್ಮೂಲಗಳು, ಸಹಯೋಗಿಗಳೊಂದಿಗೆ ಸಂವಹನ ಮಾಡಲು ಹಾಗೂ ವಿದ್ಯಾರ್ಥಿಗಳ ಕಲಿಕೆಯನ್ನು ಕಂಡುಹಿಡಿಯಲು ಸಹಾಯಕಾರಿಯಾಗಿದೆ.

**ಅನುಕೂಲಗಳು**

ಭಾಸಿತ ಕಲಿವಿನ ಪರಿಸರವು ಕೋರ್ಸ್‌ನ್ನು ವಿನ್ಯಾಸಗೊಳಿಸಲು, ವಿದ್ಯಾರ್ಥಿಗಳಿಗೆ ಪ್ರಸ್ತುತಿಗೊಳಿಸಲು, ಪ್ರತ್ಯೇಕ ವ್ಯವಸ್ಥಿತ ಸಂಪರ್ಕ ಏರ್ಪಡಿಸಲು ಸಾಧ್ಯವಾಗಿಸಿದೆ. ಒಂದು ಕೋರ್ಸಿನ ಶಿಕ್ಷಣ ತರಬೇತಿಯ ಎಲ್ಲಾ ಅಂಶಗಳನ್ನು ಒದಗಿಸುವ ಸಾಮರ್ಥ್ಯ ಹೊಂದಿದೆ. ತಾರ್ಕಿಕವಾಗಿ ಇದೆಲ್ಲ ಅವಶ್ಯಕವಾಗಿರದಿದ್ದರೂ, ವಾಸ್ತವಿಕವಾಗಿ ಭಾಸಿತ ಕಲಿವಿನ ಪರಿಸರಕ್ಕೆ ಗಣಕಯಂತ್ರ ಹಾಗೂ ಅಂತರ್ಜಾಲವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಭಾಸಿತ ಕಲಿವಿನ ವಾತಾವರಣವನ್ನು ಕೆಳಕಂಡಂತೆ ಉಪಯೋಗಿಸಬಹುದು.

ಒಂದು ಕೋರ್ಸಿನ ಪಠ್ಯಕ್ರಮ ನಿರ್ಮಿಸಲು ಬಳಸಬಹುದು.

ಮಾಹಿತಿಯನ್ನು ನಿರ್ವಹಿಸಲು ಸ್ಥಳ, ಅವಶ್ಯಕತೆಗಳು, ಸಹ–ಅವಶ್ಯಕತೆ, ಸಹಾಯ ಇತ್ಯಾದಿ.

ಕೋರ್ಸಿನ ಮಾಹಿತಿಯನ್ನು ಪ್ರಕಟಣ ಫಲಕದಲ್ಲಿ ಪರಿಷ್ಕರಿಸಲು ಬಳಸಬಹುದು.

ವಿದ್ಯಾರ್ಥಿಗಳ ದಾಖಲಾತಿ ಹಾಗೂ ಜಾಡು ಸವಲತ್ತುಗಳಿಂದ ಅವಶ್ಯಕವಾದರೆ ಹಣ ಸಂಗ್ರಹಿಸುವುದು.

ಮೂಲ ಕಲಿಕಾ ಸಾಮಗ್ರಿಗಳು ಬಳಸಲು ಉಪಯುಕ್ತ.

ಹೆಚ್ಚುವರಿ ಸಂಪನ್ಮೂಲ ಕಲಿಕಾ ಸಾಮಗ್ರಿಗಳನ್ನು ಅಂತರ್ಜಾಲದಲ್ಲಿ ಬಳಸಬಹುದು.

ಸ್ವ–ಮೌಲ್ಯಮಾಪನಕ್ಕೆ ರಸ–ಪ್ರಶ್ನೆಗಳನ್ನು ಬಳಸಬಹುದು.

ಇ–ಮೇಲ್, ಚಾಟಿಂಗ್ ಹಾಗೂ ಇನ್ನಿತರ ಅವಕಾಶ ಕಲ್ಪಿಸಬಹುದು.

ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಪ್ರತ್ಯೇಕವಾಗಿ ಪ್ರವೇಶ ಒದಗಿಸಬಹುದು.

ದಾಖಲೆಗಳು ಹಾಗೂ ಅಂಕಿ ಅಂಶಗಳನ್ನೂ ಕೋರ್ಸಿಗೆ ಅನುಗುಣವಾಗಿ ಉತ್ಪಾದಿಸಿ ಸಂಸ್ಥೆಯ ಆಡಳಿತ ಹಾಗೂ ಗುಣಮಟ್ಟವನ್ನು ಕಾಪಾಡಬಹುದು.

**ವಿಶ್ವವಿದ್ಯಾನಿಲಯ ಹಾಗೂ ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಈ ಕೆಳಕಂಡಂತೆ ಭಾಸಿತ ಕಲಿವಿನ ವಾತಾವರಣವನ್ನು ಬಳಸಬಹುದು**

ಬೋಧಕ ಸಿಬ್ಬಂದಿಯ ಸಮಯವನ್ನು ಹಿಡಿತದಿಂದ ಬಳಸಲು ಉಪಯುಕ್ತ. ವಿಶೇಷವಾಗಿ ಅವರು ಸಂಶೋಧನೆ ಹಾಗೂ ಆಡಳಿತದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆ ಕಡಿಮೆ ಸಮಯದಲ್ಲಿ ದಕ್ಷ ಫಲಿತಾಂಶ ಹೊರಹಾಕಲು ಪ್ರಯೋಜಕಾರಿಯಾಗಿದೆ.

ಅಂತರ್ಜಾಲದ ಮೂಲಕ ಸಂಪನ್ಮೂಲ ಮಾಹಿತಿಯನ್ನು ಪಡೆಯಲು ವಿದ್ಯಾರ್ಥಿಗಳಿಗೆ ಸಹಾಯಕವಾಗಿದೆ.

ಅವಶ್ಯಕವಾದ ಮಾಹಿತಿಯನ್ನು ಸಂಗ್ರಹಿಸಲು ಪ್ರಮಾಣಕ ವಾಹನವನ್ನು (ಸ್ಟ್ಯಾಂಡರ್ಡ್ ವೆಹಿಕಲ್) ಗುಣಮಟ್ಟ ಕಾಪಾಡಲು ಬಳಸಲಾಗುತ್ತದೆ.

ವಿದ್ಯಾಸಂಸ್ಥೆ ಆವರಣ–ಆಧಾರಿತ ಕಲಿಕೆ ಹಾಗೂ ದೂರಶಿಕ್ಷಣವನ್ನು ಸಮಗ್ರಗೊಳಿಸಲು ಉಪಯುಕ್ತವಾಗಿದೆ.

ಆನ್‌ಲೈನ್ ಕಲಿಕೆಯನ್ನು ಹಲವಾರು ಕಾಲೇಜುಗಳು, ವಿಶ್ವವಿದ್ಯಾಲಯಗಳು ನಿರ್ವಹಿಸುತ್ತಿದ್ದು ಇವು ವಿದ್ಯಾರ್ಥಿಗಳಿಗೆ ಪದವಿಗಳನ್ನು ವಿತರಿಸುವುದಲ್ಲದೆ ಶಿಕ್ಷಕರ ತರಬೇತಿಯನ್ನು ನೀಡುತ್ತವೆ. ಇದಕ್ಕೆ ಉದಾಹರಣೆಯಾಗಿ ಇಂಗ್ಲೆಂಡ್‌ನ ಚಾಪ್‌ಮ್ಯಾನ್ ಕಾಲೇಜ್ ವಿಶ್ವವಿದ್ಯಾಲಯ, ಟಾರೋ ವಿಶ್ವವಿದ್ಯಾಲಯ ಹಾಗೂ ಆಡಮ್ಸ್ ಸ್ಟೇಟ್ ಕಾಲೇಜ್‌ಗಳನ್ನು ಹೆಸರಿಸಬಹುದು.

**ಭಾಸಿತ ಪ್ರಪಂಚದ ಕಲಿಕಾ ಪರಿಸರಗಳು**

ಸ್ಲೂಡಲ್ (Sloodle), ಮೂಡಲ್ (Moddle)ನ ದ್ವಿತೀಯ ಪೀಳಿಗೆಯ ಉದಯೋನ್ಮುಖ ತಂತ್ರಜ್ಞಾನಗಳು ಭಾಸಿತ ಪ್ರಪಂಚ ಮತ್ತು ಕೋರ್ಸ್‌ನ ನಿರ್ವಹಣೆಯನ್ನು ಒಳಗೊಂಡಿರುತ್ತವೆ. ಈ ರೀತಿಯ ಬೆಳವಣಿಗೆಯು ಸಾಮಾಜಿಕವಾಗಿ, ಅಂತರ್ ಕ್ರಿಯಾತ್ಮಕ ರೀತಿಯಲ್ಲಿ ಕಲಿಕೆಯನ್ನು ಉಂಟು ಮಾಡಲು, ಹೊಸ ರೀತಿಯಲ್ಲಿ ಕಲಿಯಲು ಸಹಾಯ ಮಾಡುತ್ತವೆ. ಎಜುಸಿಮ್ (Edusim) ಮತ್ತೊಂದು 3D ಭಾಸಿತ ಕಲಿಕಾ ಪರಿಸರವಾಗಿದ್ದು, ಇದು 3D ಭಾಸಿತ ವಸ್ತುಗಳನ್ನು ನೇರವಾಗಿ ಅಂತರ್ ಕ್ರಿಯಾತ್ಮಕ ಬಿಳಿ–ಹಲಗೆಯ ಮೇಲೆ ಬೇಕಾದ ರೀತಿಯಲ್ಲಿ ಮೂಡಿಸಿಕೊಳ್ಳಲು ಸಹಾಯಕವಾಗಿದೆ.

– ಕೆ.ಬಿ.ಪ್ರ.

## ಭೂಗೋಳಶಾಸ್ತ್ರದ ಬೋಧನೆ

ಭೂಗೋಳಶಾಸ್ತ್ರದ ಇತಿಹಾಸವು ಬಹು ಪುರಾತನವಾದುದು. ಮನುಷ್ಯನು ತಾನು ವಾಸಿಸುವ ಜಗತ್ತಿನ ಪರಿಕಲ್ಪನೆಯ ಪರಿಧಿಯು ವಿಸ್ತರಿಸಿದಂತೆಲ್ಲಾ ಭೌಗೋಳಿಕ ವಿಜ್ಞಾನದ ಎಲ್ಲೆಯೂ ವಿಸ್ತರಿಸಿದೆ. ಕ್ರಿ.ಪೂ 2000 ಕ್ಕಿಂತಲೂ ಹೆಚ್ಚು ಸುದೀರ್ಘವಾದ ಮಾನವನ ಭೌಗೋಳಿಕ ಜ್ಞಾನದ ವಿಕಾಸ, ಅನ್ವೇಷಣೆ ಹಾಗೂ ಸಂಶೋಧನೆಗಳ ಫಲಶ್ರುತಿಗಳನ್ನು ಇದು ಒಳಗೊಂಡಿದೆ. ಇದರ ಬೆಳವಣಿಗೆಯ ಮಾರ್ಗವನ್ನು ಅವಲೋಕಿಸಿದಾಗ ಒಂದೊಂದು ಅವಧಿಯಲ್ಲಿ ಒಂದೊಂದು ಬಗೆಯ ಅಂದರೆ ಪ್ರಾಕೃತಿಕ, ಪ್ರಾದೇಶಿಕ ಅಥವಾ ಮಾನಸಿಕ ಮುಂತಾದ ವಿವಿಧ ಬಗೆಯ ವಿಚಾರಧಾರೆಗಳ ಪ್ರಾಮುಖ್ಯ ಪಡೆದಿರುವುದನ್ನು ಕಾಣಬಹುದು.

ಅರ್ಥ : ಭೂಗೋಳಶಾಸ್ತ್ರ (Geography) ಎಂಬ ಪದವು ಗ್ರೀಕ್ ಭಾಷೆಯ "ಜಿಯೋ" (Geo) ಎಂದರೆ ಭೂಮಿ ಹಾಗೂ "ಗ್ರಫಿಯಾ" ಎಂದರೆ ವಿವರಣೆ ಎಂದು ಅರ್ಥ ಕೊಡುವ ಎರಡು ಪದಗಳಿಂದ ರೂಪಿತವಾಗಿದೆ. ಇದರ ಪದಶಃ ಅರ್ಥವೆಂದರೆ ಭೂಮಿಯ ಮೇಲ್ಮೈಯ ವಿವರಣೆ ಈ ಎರಡು ಪದಗಳನ್ನು ಮೊದಲ ಬಾರಿಗೆ ಸೇರಿಸಿ "Geography" ಎಂಬ ಪದವನ್ನು ಬಳಸಿದವನು ಅಲೆಗ್ಸಾಂಡ್ರಿಯಾದ ಎರಶಾಸ್ತನೀಸ್.

ಕ್ರಿ.ಪೂ. 8ನೇ ಶತಮಾನದಲ್ಲಿ ಮಾನವನ ಭೌಗೋಳಿಕ ಜ್ಞಾನವು ಮೆಡಿಟರೇನಿಯನ್ ಸಮುದ್ರದ ಸುತ್ತಲಿನ ಪ್ರದೇಶಗಳು ಹಾಗೂ ಪಶ್ಚಿಮ ಏಷ್ಯಾ ಭಾಗದವರೆಗೆ ಮಾತ್ರ ಸೀಮಿತಗೊಂಡಿದ್ದಿತು. ಭೂ ಮೇಲ್ಮೈಯಲ್ಲಿ ಕಂಡು ಬರುವ ವಿವಿಧ ಭೌಗೋಳಿಕ ವೈಚಿತ್ರಗಳನ್ನು ನೆನಪಿನಲ್ಲಿರಿಸಿ ಕೊಳ್ಳಲು ಭೌಗೋಳಿಕ ಜ್ಞಾನವನ್ನು ಬಳಸಲಾಗುತ್ತಿತ್ತು. ನದಿಗಳು ಪರ್ವತಗಳು ಸಮುದ್ರಗಳು, ಸರೋವರಗಳ ಪಟ್ಟಿಯನ್ನು ಭೂಗೋಳಶಾಸ್ತ್ರವೆಂದು ಪರಿಗಣಿಸಲಾಗುತ್ತಿತ್ತು. ಈಗ ಅದನ್ನು "ಗೆಝುಟಿಯರ್ ಭೂಗೋಳಿ" (Gagetteea Geography) ಎಂದು ಕರೆಯುವರು. ಕಾಲಾಂತರದಲ್ಲಿ

Digitised by Bharatavani, CIIL

ಮನುಷ್ಯರು ಪ್ರಪಂಚದ ಇತರ ಪ್ರದೇಶಗಳನ್ನು ತಿಳಿದಂತೆ ಆ ಪ್ರದೇಶಗಳನ್ನು ಮೋಜಣಿ (Survey) ಮಾಡುವುದು, ಅವುಗಳ ನಕ್ಷೆ ತಯಾರಿಸುವುದು ಭೂಗೋಳಶಾಸ್ತ್ರದ ಮುಖ್ಯ ಉದ್ದೇಶವಾಯಿತು.

**ಭೂಗೋಳಶಾಸ್ತ್ರದ ಸ್ವರೂಪ**

ಭೂಗೋಳಶಾಸ್ತ್ರವು ಪ್ರಾಕೃತಿಕ ವಿಜ್ಞಾನ ಎಂದು ನಿರ್ಣಯವಾಗಿದೆ. ಇದು "ಎಲ್ಲ ವಿಜ್ಞಾನಗಳ ಜನನಿ"ಯಾಗಿದೆ. ಇಂದು ಭೂಗೋಳಶಾಸ್ತ್ರವು ಕೇವಲ ಮಾನವಿಕ ಶಾಸ್ತ್ರವಾಗಿರದೆ ವಿಜ್ಞಾನಗಳ ಗುಂಪಿಗೆ ಸೇರುವ ವಿಷಯವಾಗಿದೆ. ಈ ಮಾತನ್ನು ಅರ್ಥೈಸಿಕೊಳ್ಳಬೇಕಾದರೆ ಇದರ ಸ್ವರೂಪದಲ್ಲಿನ ವೈಶಿಷ್ಟ್ಯಪೂರ್ಣ ಅಂಶಗಳನ್ನು ಅಭ್ಯಸಿಸಬೇಕಾಗುತ್ತದೆ.

ಭೂಗೋಳಶಾಸ್ತ್ರವು ಒಂದು ಪರಿಸರ ವಿಜ್ಞಾನ : ಭೂಗೋಳ ಶಾಸ್ತ್ರವು ಇಂದು ಭೂಮಿಯ ಮೇಲಿನ ಮಾನವ ಮತ್ತು ಪರಿಸರದ ನಡುವಿನ ಸಂಬಂಧವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತದೆ. ಅಂದರೆ ಮಾನವನ ಸುತ್ತಮುತ್ತಲಿನ ಲಭ್ಯವಿರುವ ಎಲ್ಲವನ್ನು ಪರಿಸರ ಎನ್ನುತ್ತೇವೆ. ಪರಿಸರವನ್ನು ಪ್ರಾಕೃತಿಕ ಪರಿಸರ ಮತ್ತು ಸಾಂಸ್ಕೃತಿಕ ಪರಿಸರ ಎಂದು ವಿಭಾಗಿಸಬಹುದಾಗಿದೆ.

ಪ್ರಾಕೃತಿಕ ಪರಿಸರ ಜೈವಿಕ ಪರಿಸರದ ಅಂಶಗಳ ಜೊತೆಗೆ ಪರ್ವತಗಳ ಪ್ರಸ್ಥಭೂಮಿಗಳು, ಬೆಟ್ಟಗುಡ್ಡಗಳು ಮೈದಾನಗಳು, ನದಿ, ಸರೋವರಗಳು, ಉಷ್ಣಾಂಶ, ಒತ್ತಡ ಮಳೆ ಹಂಚಿಕೆ, ಮಣ್ಣು, ಶಿಲೆಗಳು, ಖನಿಜಗಳು ಮೊದಲಾದ ಅಂಶಗಳನ್ನು ಒಳಗೊಂಡಿರುತ್ತದೆ.

ಸಾಂಸ್ಕೃತಿಕ ಪರಿಸರವು ಮಾನವ ನಿರ್ಮಿತ ಪರಿಸರವಾಗಿದೆ. ಇಲ್ಲಿ ವ್ಯಕ್ತಿ ಕುಟುಂಬ, ಸಂಸಾರ, ಸಾಹಿತ್ಯ, ಕಲೆ, ಸಾರಿಗೆ, ಸರ್ಕಾರ, ಕೈಗಾರಿಕೆ, ವ್ಯವಸಾಯ, ಉದ್ಯೋಗ, ಧರ್ಮ, ಸಂಪ್ರದಾಯ, ರೀತಿ ನೀತಿಗಳೆಲ್ಲವೂ ಸೇರಿಕೊಂಡಿರುತ್ತದೆ.

ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಪರಿಸರಗಳು ಪರಸ್ಪರ ಸಂಬಂಧವುಳ್ಳವುಗಳಾಗಿವೆ. ಇವುಗಳ ಸಹ ಸಂಬಂಧದಿಂದಾಗಿ ಒಂದು ನಿರ್ದಿಷ್ಟ ಪ್ರದೇಶದ ಜನರ ಜೀವನದ ವಿಧಾನಗಳು ಏಕರೂಪವಾಗಿರುತ್ತವೆ. ಇವು ಒಂದನ್ನು ಬಿಟ್ಟು ಇನ್ನೊಂದಿಲ್ಲ.

ಪರಿಸರದಲ್ಲಿನ ಅಂಶಗಳಾದ ಭೌತಿಕ ಲಕ್ಷಣಗಳು, ವಾಯುಗುಣ, ಸಸ್ಯವರ್ಗ ಮುಂತಾದ ಎಲ್ಲಾ ಅಂಶಗಳು ಭೂಮಿಯ ಮೇಲೆ ವಾಸಿಸುವ ಮಾನವನ ಚಟುವಟಿಕೆಗಳನ್ನು ನಿರ್ಧರಿಸುತ್ತವೆ. ಮಾನವನ ಆಹಾರ, ಉಡುಪು, ಸರ್ಕಾರ, ಧರ್ಮ, ಉದ್ಯೋಗ, ವಸತಿ ಎಲ್ಲವನ್ನೂ ಪರಿಸರ ನಿಯಂತ್ರಿಸುತ್ತದೆ. ಆದುದರಿಂದ ಈ ಎರಡೂ ವಿಷಯಗಳ ಬಗ್ಗೆ ತಿಳಿಸುವ ಆಯಾಮವನ್ನು ಭೂಗೋಳಶಾಸ್ತ್ರದ ಸ್ವರೂಪದಲ್ಲಿ ಕಾಣಬಹುದು.

ಭೂಗೋಳಶಾಸ್ತ್ರವು ಪ್ರಾಕೃತಿಕವಾಗಿ ಕಂಡು ಬರುವ ವಿವಿಧ ಲಕ್ಷಣಗಳನ್ನು ಅಭ್ಯಸಿಸುವ ವಿಜ್ಞಾನವಾಗಿದೆ. ಅಂದರೆ ಇದರ ಅರ್ಥ ಕೇವಲ ಹೊರಗಿನ ವೈಶಿಷ್ಟ್ಯಗಳನ್ನು ಮಾತ್ರ ಅಧ್ಯಯನ ಮಾಡುತ್ತದೆ. ಎಂದರ್ಥವಲ್ಲ. ಇಡೀ ಭೂಮಂಡಲದ ಬಗ್ಗೆ, ಅಂದರೆ ಭೂಮೇಲ್ಮೈನಿಂದ ಆರಂಭವಾದ ಅಧ್ಯಯನ ಭೂಮಿಯ ಅಂತರಾಳದವರೆಗೂ ವಿಸ್ತರಿಸುತ್ತದೆ. ಭೂಗೋಳಶಾಸ್ತ್ರದ ವಿಷಯಗಳಾದ ಸೂರ್ಯ, ಚಂದ್ರ, ಮತ್ತಿತರ ಆಕಾಶಕಾಯಗಳನ್ನು ಇದು ಒಳಗೊಂಡಿದೆ.

ಭೂಗೋಳಶಾಸ್ತ್ರವು ಭೂಮಿಯಲ್ಲಿ ಕಂಡು ಬರುವ ಪರ್ವತಗಳು, ಮೈದಾನಗಳು, ಪ್ರಸ್ಥಭೂಮಿಗಳು, ಬಯಲುಗಳು, ಜ್ವಾಲಾಮುಖಿ, ಭೂಕಂಪ, ಶಿಲೆಗಳು, ಸುನಾಮಿ, ಮಣ್ಣು, ಭೂಮಿಯ ಹುಟ್ಟು, ಬೆಳವಣಿಗೆ, ವಿಕಾಸ, ಭೂಖಂಡ ಚಲನೆ, ಭೂ ಅಂತರ್ಜಲ, ಗಾಳಿ, ಹಿಮ, ನದಿ ಮುಂತಾದವುಗಳ ಕಾರ್ಯಚಟುವಟಿಕೆಗಳು ವಾಯುಮಂಡಲಕ್ಕೆ ಸೇರಿದ ಮತ್ತು ಸಾಗರಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳ ವೈಜ್ಞಾನಿಕ ಅಂಶಗಳನ್ನು ಅಭ್ಯಸಿಸುತ್ತದೆ.

ಭೂಗೋಳಶಾಸ್ತ್ರದ ವೈಶಿಷ್ಟ್ಯವನ್ನು ನೋಡಿದಾಗ ಯಾವುದೇ ವಸ್ತುಗಳನ್ನು ತೆಗೆದುಕೊಂಡರೆ ಅಥವಾ ಯಾವುದೇ ಬೆಳೆಗಳನ್ನು ನೋಡಿದರೆ ಅಥವಾ ಜನರ ಬೆಳವಣಿಗೆ, ರೀತಿ–ನೀತಿ, ಸಂಪ್ರದಾಯ ಹಾಗೂ ಇನ್ನಿತರ ಅಂಶಗಳನ್ನು ವೀಕ್ಷಿಸಿದರೆ ವೈವಿಧ್ಯಮಯವಾಗಿ ಹಂಚಿಕೆಯಾಗಿರುವುದನ್ನು ನೋಡುತ್ತೇವೆ. ಈ ಹಂಚಿಕೆಯಲ್ಲಿ ವ್ಯತ್ಯಾಸಗಳಿರುವುದನ್ನು ಕಾಣಬಹುದು. ಈ ಸ್ಥಿತಿಗತಿಗಳೆಲ್ಲವೂ ಪ್ರಕೃತಿದತ್ತವಾಗಿ ಬಂದಿರುವ ಭೌತಿಕ ಪರಿಸರವನ್ನು ಅವಲಂಬಿಸಿರುತ್ತದೆ ಎಂಬುದನ್ನು ಮರೆಯಬಾರದು. ಅಂದರೆ ನಂಬಿಕೆಯ ಕೆಲವು ಸ್ಥಿತಿಗತಿಗಳಲ್ಲಿ ಕೆಲವನ್ನು ಮಾನವನು ನಿಯಂತ್ರಿಸಿದರೆ ಅಥವಾ ನಿರ್ಧರಿಸಿದರೆ ಕೆಲವನ್ನು ಪ್ರಕೃತಿಯು ನಿಯಂತ್ರಿಸುತ್ತದೆ ಅಥವಾ ನಿರ್ಧರಿಸುತ್ತದೆ. ಆದುದರಿಂದ ಭೂಗೋಳಶಾಸ್ತ್ರದ ಸ್ವರೂಪದಡಿಯಲ್ಲಿ ವೈಶಿಷ್ಟ್ಯ ಪೂರ್ಣವಾದ ಹಂಚಿಕೆಯ ಅಂಶಗಳು ಅಡಕವಾಗಿರುತ್ತದೆ.

ಭೂಗೋಳಶಾಸ್ತ್ರದ ವೈಶಿಷ್ಟ್ಯವನ್ನು ನೋಡಿದಾಗ ಭೌತಿಕ ಪರಿಸರದ ಅಂಶಗಳೆಲ್ಲವೂ ತನ್ನದೇ ಆದ ರೀತಿಯಲ್ಲಿ ವೈಜ್ಞಾನಿಕ ತತ್ವದ ಅಂಶಗಳನ್ನು ಒಳಗೊಂಡಿರುತ್ತದೆ. ಉದಾ: ಭೂಮಿ ದುಂಡಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದೇವೆ. ಇದನ್ನು ಸಮರ್ಥಿಸಬೇಕಾದರೆ ಹಲವು ಸ್ಪಷ್ಟವಾದ ನಿದರ್ಶನಗಳನ್ನು ನೀಡುತ್ತೇವೆ. ಈ ರೀತಿಯ ನಿದರ್ಶನಗಳಿಂದಾಗಿ ಖಂಡಿತವಾಗಿ ಭೂಮಿದುಂಡಾಗಿದೆ. (ಗೋಲಾಕಾರವಾಗಿದೆ) ಎಂದು ಒಪ್ಪಿಕೊಳ್ಳುತ್ತೇವೆ. ಅಂದರೆ ಈ ರೀತಿಯ ನಿರ್ಧಾರಗಳಿಗೆ ವೈಜ್ಞಾನಿಕವಾದ ಅಂಶಗಳು ತಳಹದಿಯಾಗಿರುತ್ತದೆ ಎಂಬುದನ್ನು ಮರೆಯಬಾರದು.

ಮಾನವನ ಬುದ್ಧಿಶಕ್ತಿಯ ವಿಕಾಸ ಮತ್ತು ವೈಜ್ಞಾನಿಕತೆಯ ಪ್ರಗತಿಯಿಂದಾಗಿ ಪ್ರಕೃತಿಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಉತ್ತಮ ಜೀವನವನ್ನು ಸಾಗಿಸುವ ಸ್ಥಿತಿಗೆ ಬಂದಿದ್ದಾನೆ. ಈ ರೀತಿ ಪರಿವರ್ತನಶೀಲ ಪರಿಸರ ಮತ್ತು ಕ್ರಿಯಾಶೀಲವಾದ ಮಾನವನ ಪರಸ್ಪರ ಸಂಬಂಧ ಸೇತುವೆಯಾಗಿರುವುದೇ ಭೂಗೋಳಶಾಸ್ತ್ರದ ವಿಶಿಷ್ಟ ಸ್ವರೂಪ. ಇದನ್ನು ಗಮನದಲ್ಲಿಟ್ಟುಕೊಂಡು ಕುಮಾರಿ ಹೆಲೆನ್ ಸೆಂಪಲ್ "ಅವಿರತ ಮಾನವ ಮತ್ತು ಅಸ್ಥಿರವಾದ ಪೃಥ್ವಿಗಳ ನಡುವಣ ಬದಲಾಗುವ ಪರಿಸ್ಥಿತಿಯ ಅಧ್ಯಯನವೇ ಭೂಗೋಳಶಾಸ್ತ್ರ" ಎಂದಿದ್ದಾಳೆ. ಅಂದರೆ ಪರಿವರ್ತನಾಶೀಲ ಪೃಥ್ವಿಯೊಂದಿಗೆ ಕ್ರಿಯಾಶೀಲನಾದ ಮಾನವನ ಸಂಬಂಧವಿದೆ. ಅಂದ ಮೇಲೆ ಭೂಗೋಳಶಾಸ್ತ್ರದ ಸ್ವರೂಪವು ಗತಿಶೀಲವಾದುದು.

**ಭೂಗೋಳಶಾಸ್ತ್ರದ ಪ್ರಾಮುಖ್ಯ**

ಆಧುನಿಕ ಪ್ರಪಂಚದಲ್ಲಿ ಜೀವನದ ಪ್ರತಿಯೊಂದು ಚಟುವಟಿಕೆಗಳಲ್ಲಿ ಭೂಗೋಳಶಾಸ್ತ್ರದ ಜ್ಞಾನ ಬಹಳ ಉಪಯುಕ್ತವಾಗಿರುವುದರಿಂದ ಅದು ಬಹು ಪ್ರಮುಖ ಸ್ಥಾನವನ್ನು ಹೊಂದಿದೆ. ಭೂಗೋಳಶಾಸ್ತ್ರವು "ಎಲ್ಲಾ ಕಲೆಗಳಿಗೆ ತಂದೆ ಮತ್ತು ಎಲ್ಲಾ ವಿಜ್ಞಾನಗಳಿಗೆ ತಾಯಿ" (Father of Arts and Mother of all Seiences) ಇದ್ದಂತೆ. ಇದು ಭೌತಿಕ ವಿಜ್ಞಾನಗಳು ಮತ್ತು ಸಾಮಾಜಿಕ ವಿಜ್ಞಾನಗಳ ನಡುವೆ ಸಂಬಂಧವನ್ನು ಏರ್ಪಡಿಸುವ ಒಂದು ಕೊಂಡಿಯಾಗಿದೆ. ಇದು ಕಾರಣ ಮತ್ತು ಪರಿಣಾಮ ಸಂಬಂಧದ ಅಧ್ಯಯನವಾಗಿದೆ. ಆಧುನಿಕ ಕಾಲದಲ್ಲಿ ಭೂಗೋಳಶಾಸ್ತ್ರವು ಅನೇಕ ವಿಷಯಗಳ ಬೆಳವಣಿಗೆಗೆ ಸಹಾಯಕವಾಗಿದೆ. ಸಾಹಿತ್ಯ, ಇತಿಹಾಸ, ಸಮಾಜಶಾಸ್ತ್ರ, ಮುಂತಾದ ಮಾನಸಿಕ ವಿಷಯಗಳಿಗೆ ಭೂಗೋಳ ಶಾಸ್ತ್ರವು ಹಿನ್ನೆಲೆಯನ್ನು ಒದಗಿಸುತ್ತದೆ. ಅದೇ ರೀತಿ ವಿಜ್ಞಾನ ವಿಷಯಗಳ ಬೆಳವಣಿಗೆಗೆ

Digitised by Bharatavani, CIIL

ಸಹಾಯಕವಾಗಿದೆ. ಆದ್ದರಿಂದ ಶಾಲಾ ಪಠ್ಯಕ್ರಮದಲ್ಲಿ ಭೂಗೋಳಶಾಸ್ತ್ರವು ಬಹು ಮುಖ್ಯವಾದ ಸ್ಥಾನವನ್ನು ಆಕ್ರಮಿಸಿದೆ.

ಮಾನವ ಜೀವನ ಮತ್ತು ಇತರ ಅಂಶಗಳು ಭೂಗೋಳಶಾಸ್ತ್ರದಿಂದ ಪ್ರಭಾವಿತಗೊಳ್ಳುತ್ತವೆ. ಮಾನವ ಜನಾಂಗದ ಸಾಂಸ್ಕೃತಿಕ ಬೆಳವಣಿಗೆಯನ್ನು ಪ್ರಭಾವಗೊಳಿಸುವುದು ಭೂಗೋಳಶಾಸ್ತ್ರ. ಭೂಗೋಳಶಾಸ್ತ್ರದ ಜ್ಞಾನವಿಲ್ಲದೆ ಇತರ ವಿಷಯಗಳ ಜ್ಞಾನವು ಪೂರ್ಣವಾಗುವುದಿಲ್ಲ. ಆದುದರಿಂದ ಪ್ರತಿಯೊಬ್ಬರಿಗೂ ಭೂಗೋಳಶಾಸ್ತ್ರದ ಜ್ಞಾನ ಅವಶ್ಯಕ. ಮಾನವನ ಚಟುವಟಿಕೆ ಮತ್ತು ಪರಿಸರವನ್ನು ತಿಳಿಯಲು, ರಾಷ್ಟ್ರೀಯ ರಕ್ಷಣೆಗೆ ಸಹಾಯವಾಗುವುದು, ರಾಜಕಾರಣಿಗಳಿಗೆ ಮತ್ತು ಆಡಳಿತಗಾರರಿಗೆ, ಪ್ರಾದೇಶಿಕ ಯೋಜನೆಯಲ್ಲಿ, ಕೈಗಾರಿಕೋದ್ಯಮಿಗಳಿಗೆ ಮತ್ತು ವಾಣಿಜ್ಯೋದ್ಯಮಿಗಳಿಗೆ, ಪಟ್ಟಣ ಮತ್ತು ನಗರಗಳ ಯೋಜನೆ, ಕೃಷಿಕರಿಗೆ, ಆರ್ಥಿಕ ಸಂಪನ್ಮೂಲಗಳ ರಕ್ಷಣೆ, ಪ್ರವಾಸಿಗಳ ಮಾರ್ಗದರ್ಶಿಯಾಗಿ ರಾಷ್ಟ್ರೀಯತೆಯನ್ನು ಬೆಳೆಸಲು ಸಾರಿಗೆ ಸಂಪರ್ಕ ಸಾಧನಗಳ ಅಭಿವೃದ್ಧಿಯಲ್ಲಿ, ಇತರ ಶಾಲಾ ವಿಷಯಗಳ ಪೂರ್ಣವಾದ ಜ್ಞಾನ ಪಡೆಯಲು, ಸಮುದಾಯ ಪರಿಸ್ಥಿತಿ ವಿಜ್ಞಾನ, ಮುಂತಾದ ವಿಷಯಗಳ ಅಧ್ಯಯನಕ್ಕೆ ಉಪಯುಕ್ತವಾಗಿದೆ.

**ಭೂಗೋಳಶಾಸ್ತ್ರದ ಬೋಧನಾ ವಿಧಾನಗಳು**

ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಜ್ಞಾನಾರ್ಜನೆಯನ್ನು ಮಾಡುವ ಕಾರ್ಯವು ಮೊದಲಿನಷ್ಟು ಕಷ್ಟವಲ್ಲದಿದ್ದರೂ ಔಪಚಾರಿಕ ವ್ಯವಸ್ಥೆಯಲ್ಲಿ ಶಿಕ್ಷಕನ ಪಾತ್ರವು ಕಡಿಮೆಯಾಗಿದೆ ಎಂದರೆ ಉತ್ಪ್ರೇಕ್ಷೆಯಾದೀತು. ಏಕೆಂದರೆ ಜ್ಞಾನದ ಸ್ಫೋಟವಾದಂತೆ ಅದನ್ನು ತಿಳಿಸುವ ಕಾರ್ಯವನ್ನು ಸಮೂಹ ಮಾಧ್ಯಮಗಳು ಮಾಡಿದರೂ ಅವರ ಪಾತ್ರ ಹೆಚ್ಚಿಲ್ಲ. ಈ ಕಾರ್ಯವನ್ನು ಶಿಕ್ಷಕನು ಮಾಡಿದಷ್ಟು ಯಶಸ್ವಿಯಾಗಿ ಯಾರೂ ಮಾಡುತ್ತಿಲ್ಲ. ಈ ದೃಷ್ಟಿಯಿಂದ ಭೂಗೋಳಶಾಸ್ತ್ರದ ವಸ್ತುವಿಷಯದ ಬಗ್ಗೆ ಮನನ ಮಾಡಿಸಲು ಹಲವಾರು ವಿಧಾನಗಳನ್ನು ತಂತ್ರಗಳನ್ನು ಹಾಗೂ ಕ್ರಮಗಳನ್ನು ಶಿಕ್ಷಕನು ತರಗತಿಯಲ್ಲಿ ಅಳವಡಿಸಬಹುದಾಗಿದೆ.

ವರ್ತನೆಯಲ್ಲಿ ಬದಲಾವಣೆಯನ್ನುಂಟು ಮಾಡುವ ಒಂದು ನಿರ್ದಿಷ್ಟವಾದ ಉದ್ದೇಶಪೂರ್ವಕ ಕ್ರಿಯೆಯೇ ಬೋಧನೆ. ಶಿಕ್ಷಕರು ಹೇಳಿದ್ದೆಲ್ಲ ಬೋಧನೆ ಎನಿಸಿಕೊಳ್ಳಲಾರದು. ವಿದ್ಯಾರ್ಥಿಗಳಿಗೆ ಯಾಂತ್ರಿಕವಾಗಿ ವಿಷಯಗಳನ್ನು ಕಲಿಸುವುದು ಕೂಡ ಬೋಧನೆಯಾಗುವುದಿಲ್ಲ. ಅದೊಂದು ಸಂಕೀರ್ಣ ಕೌಶಲ ಹಾಗೂ ಕಲೆಯಾಗಿದೆ. ಆದರೆ ಈ ಕಲೆ ಜನ್ಮತಃ ಸಿದ್ಧಿಸುವುದಿಲ್ಲ. ಬೋಧನಾ ವಿಧಾನಗಳ ಬಗೆಗೆ ಅರಿಯುವುದರ ಮೂಲಕ ರೂಢಿಸಿಕೊಳ್ಳುವಂತಹದು. ಎಷ್ಟು ಬೋಧಿಸಿದೆವು ಎನ್ನುವುದಕ್ಕಿಂತ ಹೇಗೆ ಬೋಧಿಸಿದೆವು ಎನ್ನುವುದು ಮುಖ್ಯವಾದರೆ, ಹೇಗೆ ಬೋಧಿಸಿದೆವು ಎನ್ನುವುದಕ್ಕಿಂತ ವಿದ್ಯಾರ್ಥಿಗಳು ಹೇಗೆ ಕಲಿತಿದ್ದಾರೆ, ವರ್ತನೆಯಲ್ಲಿ ಏನು ಬದಲಾವಣೆಗಳುಂಟಾಗಿದೆ. ಎಂಬುದು ಅತೀ ಮುಖ್ಯ.

ಆಂಗ್ಲ ಭಾಷೆಯ 'Method' ಎಂಬ ಪದವು ಲ್ಯಾಟೀನ್ ಭಾಷೆಯ 'Mode' ಎಂಬ ಪದದಿಂದ ನಿಷ್ಪಗೊಂಡಿದೆ. ಇದರರ್ಥ "ದಾರಿ" "ಕ್ರಮ" ಎಂಬುದಾಗಿದೆ. ಒಟ್ಟಿನಲ್ಲಿ ಕಲಿಸುವಿಕೆಯ ಗುರಿ ಉದ್ದೇಶಗಳ ಸಾಧನೆ ಅಥವಾ ವರ್ತನೆಯ ಬದಲಾವಣೆಯ ಕ್ರಮ ಅಥವಾ ದಾರಿಗಳೇ ಬೋಧನಾ ವಿಧಾನ ಅಥವಾ ಪದ್ಧತಿ.

ಭೂಗೋಳಶಾಸ್ತ್ರ ಪಠ್ಯ ಸೂಚಿಯನ್ನು ನಿರ್ಧರಿಸಿದ ಮೇಲೆ ನಾವು ಅದನ್ನು ಹೇಗೆ ಕಲಿಸಬೇಕು? ಯಾವ ವಿಧಾನದಲ್ಲಿ ಬೋಧನೆಯನ್ನು ಮಾಡಬೇಕು? ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಮಕ್ಕಳ ಮುಂದೆ ನಾವು ಕಲಿಕಾ ವಿಷಯಗಳನ್ನು ಮಂಡಿಸಬೇಕಾಗಿ ಬಂದಾಗ ಅದನ್ನು ಯಾವ ರೀತಿ ಇಡಬೇಕು? ಯಾವ ವಿಧಾನದಲ್ಲಿ ವಿಷಯಗಳನ್ನು ಅವರ ಮುಂದಿಡಬೇಕು? ಎಂಬ ಪ್ರಶ್ನೆ ಬರುತ್ತದೆ. ಕಲಿಕೆಯನ್ನು ಸುಲಭ ಮತ್ತು ಪರಿಣಾಮಕಾರಿಯಾಗಿ ಮಾಡಲು ಶಿಕ್ಷಕನು ಅನುಸರಿಸುವ ಕ್ರಮವೇ ನಿಧಾನ ಇದು ಶಿಕ್ಷಕನಿಂದ ತಾರ್ಕಿಕವಾಗಿ ಮತ್ತು ವ್ಯವಸ್ಥಿತವಾಗಿ ವ್ಯವಸ್ಥೆಗೊಳಿಸಿದ ಹಲವಾರು ಕ್ರಮಗಳಿಂದ ಕೂಡಿರುತ್ತದೆ. ಬೋಧನೆಯಲ್ಲಿ ಹೇಗೆ ಮುಂದುವರಿಯಬೇಕು ಎಂಬುದನ್ನು ತಿಳಿಸುವುದೇ ಬೋಧನಾ ವಿಧಾನ.

ಭೂಗೋಳಶಾಸ್ತ್ರವೆಂದರೆ ಕೇವಲ ವೈಜ್ಞಾನಿಕವಾದ ಮಾಹಿತಿಗಳನ್ನು ಬೋಧಿಸುವುದು ಎಂದರ್ಥವಲ್ಲ. ಆದಕಾರಣ ಶಿಕ್ಷಕ ಭೂಗೋಳಶಾಸ್ತ್ರ ಕಲಿಕೆಯ ಧ್ಯೇಯೋದ್ದೇಶಗಳೇನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿರ ಬೇಕಾಗುತ್ತದೆ. ಅಲ್ಲದೆ, ಈ ಧ್ಯೇಯಗಳನ್ನು ವಿದ್ಯಾರ್ಥಿಗಳು ಹೊಂದುವಂತೆ ಮಾಡಲು ಅವರಲ್ಲಿ ಸೂಕ್ತರೀತಿಯ ಕಲಿಕೆಯ ಅನುಭವಗಳುಂಟಾಗುವಂತೆ ಮಾಡುವ ಗುರುತರ ಜವಾಬ್ದಾರಿ ಶಿಕ್ಷಕನ ಮೇಲಿದೆ. ಆದಕಾರಣ ಈ ಜವಾಬ್ದಾರಿಯನ್ನು ನಿಭಾಯಿಸಲು ಶಿಕ್ಷಕನು ವಿದ್ಯಾರ್ಥಿಗಳಲ್ಲಿ ಅಪೇಕ್ಷಿತವಾದ ಬದಲಾವಣೆಯನ್ನುಂಟು ಮಾಡಲು ಹಲವಾರು ಕ್ರಮ, ತಂತ್ರಗಳನ್ನು ಉಪಯೋಗಿಸಿಕೊಂಡು ಬೋಧನೆ ಮಾಡಬೇಕಾಗುತ್ತದೆ. ಈ ರೀತಿಯಾಗಿ ಶಿಕ್ಷಕನು ವಿದ್ಯಾರ್ಥಿಗಳಿಗೆ ಬೋಧಿಸಲು ಅನುಸರಿಸುವ (ಉಪಯೋಗಿಸುವ) ಮಾರ್ಗಕ್ಕೆ ಬೋಧನಾರೀತಿ ಅಥವಾ ಬೋಧನಾ ವಿಧಾನಗಳೆನ್ನುವುದು.

ಸಾಮಾನ್ಯ ಅರ್ಥದಲ್ಲಿ "ಬೋಧನಾ ವಿಧಾನ" ವೆಂದರೆ ಮಕ್ಕಳ ಸಮೂಹದೊಂದಿಗೆ ಯೋಜನೆ, ಮಾರ್ಗದರ್ಶನ, ಪಾಲುಗಾರಿಕೆ ಹಾಗೂ ಕಲಿಕೆಯನ್ನು ಮೌಲ್ಯಮಾಪನ ಮಾಡುವ ಪ್ರಕ್ರಿಯೆ ಎನ್ನಬಹುದು. ಆದಕಾರಣ ಬೋಧನಾ ವಿಧಾನವು ಶಿಕ್ಷಣದ ಅತ್ಯಂತ ಮೂಲಭೂತವಾದ ಅಂಶಗಳಲ್ಲಿ ಒಂದಾಗಿರುವುದು.

ಬೋಧನಾ ವಿಧಾನವು ಬೋಧನೆಯ ಕೇಂದ್ರಬಿಂದುವಾಗಿದೆ.

ಬೋಧನಾವಿಧಾನಗಳು ಒಂದು ರೀತಿಯಲ್ಲಿ ಗುರಿ ಮತ್ತು ಉದ್ದೇಶಗಳು ಹಾಗೂ ಫಲಿತಾಂಶಗಳು ಮತ್ತು ಮೌಲ್ಯಗಳ ನಡುವಿನ ಕೊಂಡಿಯಾಗಿದೆ.

ಇದೇ ಅತ್ಯುತ್ತಮ ಎಂದು ಹೇಳುವ ಬೋಧನಾ ವಿಧಾನವಿಲ್ಲ. ಶಿಕ್ಷಕರು ವಿದ್ಯಾರ್ಥಿಗಳ ವಯಸ್ಸು, ಸಾಮರ್ಥ್ಯ, ಶಿಕ್ಷಣದ ಹಂತ ಮತ್ತು ಭೌತಿಕ ಪರಿಸರಕ್ಕೆ ಅನುಗುಣವಾಗಿ ಬೋಧನಾ ವಿಧಾನವನ್ನು ಆಯ್ಕೆ ಮಾಡಿಕೊಳ್ಳಬೇಕು.

ಬೋಧನಾ ವಿಧಾನ ನಮ್ಯತೆಯಿಂದ ಮತ್ತು ಕಾರ್ಯಾತ್ಮಕತೆಯಿಂದ ಕೂಡಿರಬೇಕು. ವಿದ್ಯಾರ್ಥಿಗಳ ಬೆಳವಣಿಗೆ ಮತ್ತು ವಿಕಾಸದ ಫಲಿತಾಂಶದ ಆಧಾರದ ಮೇಲೆ ಬೋಧನಾ ವಿಧಾನದ ಯಶಸ್ಸನ್ನು ತೀರ್ಮಾನಿಸಬಹುದು. ಉತ್ತಮ ಬೋಧನಾ ವಿಧಾನವನ್ನು ಅನುಸರಿಸುವುದು ಕಲಿಕೆ. ಆಸಕ್ತಿದಾಯಕವೂ ಸುಲಭವಾಗಿ ಗ್ರಹಿಸುವಂತಹದೂ, ಕಾರ್ಯಾತ್ಮಕವೂ ನಿರಂತರವೂ ಆಗುತ್ತದೆ.

ಸೆಕೆಂಡರಿ ಶಿಕ್ಷಣ ಆಯೋಗ (1952) ಪ್ರಕಾರ "ಉತ್ತಮರಲ್ಲದ ಶಿಕ್ಷಕರಿಂದ ಸರಿಯಾದ ಬೋಧನಾ ವಿಧಾನ ಅನುಸರಿಸದಿದ್ದರೆ ಉತ್ತಮವಾದ ಪಠ್ಯಕ್ರಮ ಮತ್ತು ಹೆಚ್ಚು ನಿರ್ದಿಷ್ಟವಾದ ಪಠ್ಯಸೂಚಿ ನಿರುಪಯುಕ್ತವಾಗಿ ಉಳಿಯುತ್ತದೆ. ಕೆಲವು ವೇಳೆ ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ, ಅಭಿಸಾಮರ್ಥ್ಯ ಮತ್ತು ತಿಳುವಳಿಕೆಯ

Digitised by Bharatavani, CIIL

ಸಾಮರ್ಥ್ಯಕ್ಕನುಗುಣವಾಗಿ ಬೋಧಿಸುವ ಪ್ರತಿಭಾವಂತ ಶಿಕ್ಷಕರಿಂದ ಅತೃಪ್ತಿಕರ ಪಠ್ಯ ಕ್ರಮವೂ ಸಹ ಉತ್ತಮ ಫಲಿತಾಂಶವನ್ನು ಕೊಡುತ್ತದೆ."

ಬೋಧನೆಯು ಶೈಕ್ಷಣಿಕ ಗುರಿ–ಉದ್ದೇಶಗಳಿಗೂ, ಪ್ರತಿಫಲ ಮತ್ತು ಮೌಲ್ಯಗಳಿಗೂ ಬೋಧನಾಕ್ರಮವು ಸಂಬಂಧವನ್ನು ಕಲ್ಪಿಸುತ್ತದೆ. ಎಲ್ಲಾ ಭೌಗೋಳಿಕ ವಿಷಯಗಳಿಗೂ ಒಂದೇ ರೀತಿಯ ಬೋಧನಾ ವಿಧಾನಗಳನ್ನು ಅಳವಡಿಸಲು ಸಾಧ್ಯವಿಲ್ಲ. ವಿಷಯದಿಂದ ವಿಷಯಕ್ಕೆ ಘಟಕದಿಂದ ಘಟಕಕ್ಕೆ ಶಿಕ್ಷಕನಿಂದ ಶಿಕ್ಷಕನಿಗೆ ಕೆಲವೊಮ್ಮೆ ಬೋಧನೆಯಲ್ಲಿ ಬದಲಾವಣೆ ಮಾಡಬಹುದು. ಇದು ಶಿಕ್ಷಕರು ವಿಷಯದ ಮೇಲೆ ಸಾಧಿಸಿರುವ ಪಾಂಡಿತ್ಯವನ್ನು ಮತ್ತು ಪ್ರಭುತ್ವವನ್ನು ತೋರಿಸುತ್ತದೆ. ಬೋಧನೆ ಮಾಡುವಾಗ ವಿದ್ಯಾರ್ಥಿಯ ಕಲಿಕೆ, ಆಸಕ್ತಿ, ವಯೋಮಾನ, ಸಾಮಾಜಿಕ ಸ್ಥಿತಿಗತಿ, ಶಾಲಾ ಪರಿಸರ ಮುಂತಾದವುಗಳನ್ನು ಗಮನಿಸಬೇಕು ಭೂಗೋಳ ಬೋಧನೆಗೆ ಶಿಕ್ಷಕನು ತಿಳಿದ ಎಲ್ಲಾ ಬೋಧನಾ ವಿಧಾನಗಳನ್ನು ಅಳವಡಿಸಲು ಸಾಧ್ಯವಿಲ್ಲ. ಸಂದರ್ಭಕ್ಕೆ, ಸಮಯಕ್ಕೆ ಪರಿಸ್ಥಿತಿಗಳನ್ನು ಅನುಸರಿಸಿ ಸೂಕ್ತ ವಿಧಾನಗಳನ್ನು ಅಳವಡಿಸುವುದು ಶಿಕ್ಷಕನ ಸಾಮರ್ಥ್ಯವನ್ನು ತೋರಿಸುತ್ತದೆ.

ಭೂಗೋಳಶಾಸ್ತ್ರ ಬೋಧನೆಯಲ್ಲಿ ಸಾಮಾನ್ಯವಾಗಿ ಈ ವಿಧಾನಗಳನ್ನು ಉಪಯೋಗಿಸುತ್ತಾರೆ.

**ಪ್ರವಾಸ ವಿಧಾನ**

ಭೂಗೋಳಶಾಸ್ತ್ರವು ಹೆಚ್ಚಾಗಿ ಶಾಲೆಯ ಹೊರಗಿನ ಪರಿಸರಕ್ಕೆ ಸಂಬಂಧಿಸಿದ ವಿಷಯ. ಶಾಲೆಯಲ್ಲಿನ ಇತರ ಎಲ್ಲಾ ಪಠ್ಯ ವಿಷಯಗಳಿಗಿಂತ ಹೆಚ್ಚಾಗಿ ಭೂಗೋಳಶಾಸ್ತ್ರವು ತರಗತಿಯಿಂದ ಹೊರಗಿನ ಅಧ್ಯಯನಕ್ಕೆ ಹೆಚ್ಚು ಅವಕಾಶವನ್ನು ಹೊಂದಿರುತ್ತದೆ. ಆದುದರಿಂದ ಶಾಲೆಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಭೂಗೋಳವನ್ನು ಕಲಿಸುವುದಕ್ಕಿಂತ ಶಾಲೆಯ ಹೊರಗೆ ನೈಜ ಸನ್ನಿವೇಶದಲ್ಲಿ ಮಕ್ಕಳು ನೇರ ಅನುಭವದ ಮೂಲಕ ಕಲಿಯುವಂತಹ ಸನ್ನಿವೇಶವನ್ನು ಒದಗಿಸಬೇಕು. ಹೀಗೆ ಮಾಡುವಲ್ಲಿ ಅತ್ಯಂತ ಹೆಚ್ಚು ಉಪಯುಕ್ತವಾದ ಪರಿಣಾಮಕಾರಿ ವಿಧಾನವೆಂದರೆ ಪ್ರವಾಸ ವಿಧಾನ.

**ಯೋಜನಾ ವಿಧಾನ**

ಶಿಕ್ಷಣ ಕ್ಷೇತ್ರಕ್ಕೆ ಯೋಜನಾ ಪದ್ಧತಿಯ ಬೋಧನಾವಿಧಾನವು ಒಂದು ಆಧುನಿಕ ಕೊಡುಗೆಯಾಗಿದೆ. ಈ ಪದ್ಧತಿಯು ವಿದ್ಯಾರ್ಥಿಗಳನ್ನು ಕೇಂದ್ರವಾಗಿಟ್ಟುಕೊಂಡು ಅನೇಕ ಪದ್ಧತಿಯಲ್ಲಿ ಮೂಲತಃ ವಿಚಾರಕ್ಕಿಂತಲೂ ಆಚರಣೆಗೆ ಮಹತ್ವ ಕೊಡುತ್ತದೆ. ಕ್ರಿಯೆಗೆ ಅಲ್ಲಿ ಅಗ್ರಪೂಜೆಯು ಇದೆ. ಅದು ಒಂದು ದೃಷ್ಟಿಯಲ್ಲಿ ಕ್ರಿಯೆ ವಿಚಾರಗಳ ಸಂಗಮವೆಂದೇ ಹೇಳಬೇಕು. ಈ ಪದ್ಧತಿಯ ಪ್ರಕಾರ ಮಕ್ಕಳನ್ನು ಶಿಕ್ಷಕರು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸುವರು. ವ್ಯಾವಹಾರಿಕವಾದವು ಪಠ್ಯಕ್ರಮವನ್ನು ವಿವಿಧ ವಿಷಯಗಳಾಗಿ ಹಂಚಿಕೆ ಮಾಡಿ ಮಕ್ಕಳನ್ನು ಚಟುವಟಿಕೆಗಳಲ್ಲಿ ತೊಡಗಿಸುತ್ತದೆ. ಈ ದಿಸೆಯಲ್ಲಿ ಯೋಜನಾ ಪದ್ಧತಿಯಲ್ಲಿ ನೈರ್ಸಗಿಕ ಪರಿಸರದಲ್ಲಿ ಮಕ್ಕಳ ಶಿಕ್ಷಣ ಜರುಗಿದರೆ ಉತ್ತಮವೆಂಬ ಭಾವನೆ ಹೊರಹೊಮ್ಮಿದೆ. ಈ ಪದ್ಧತಿಯ ಪ್ರಕಾರ ಕಲಿತ ಮಕ್ಕಳು ತಮ್ಮ ಅಭ್ಯಾಸವನ್ನು ವ್ಯವಸ್ಥಿತ ರೀತಿಯಲ್ಲಿ ಯೋಜಿಸುವುದನ್ನು ಕಲಿಯುತ್ತಾರೆ. ಹೊಸ ವಿಷಯಗಳ ಸಂಗ್ರಹ ದೃಷ್ಟಿಯಿಂದಲೂ ಇದು ಮಹತ್ವದ್ದಾಗಿದೆ.

**ಪ್ರಯೋಗ ಶಾಲಾ ವಿಧಾನ**

ಭೂಗೋಳಶಾಸ್ತ್ರವು ಒಂದು ವಿಜ್ಞಾನವಾಗಿದೆ. ಅಂದ ಮೇಲೆ ಆ ವಿಜ್ಞಾನವನ್ನು ಅಧ್ಯಯನ ಮಾಡಲು ಚಟುವಟಿಕೆಯಲ್ಲಿ ತೊಡಗುತ್ತಾರೆ. ಮಕ್ಕಳು ತಾವೇ ಉಪಕರಣಗಳನ್ನು ಉಪಯೋಗಿಸಿ ಪ್ರಯೋಗಗಳನ್ನು ಕೈಗೊಳ್ಳುತ್ತಾರೆ. ಈ ಪದ್ಧತಿಯಲ್ಲಿ ಮಗು ಸ್ವಂತ ಪ್ರಯೋಗಗಳಲ್ಲಿ ತೊಡಗುತ್ತದೆ. ಆದುದರಿಂದ ಇದು ಶಿಶು ಕೇಂದ್ರೀಕೃತವಾಗಿದೆ. ಮಕ್ಕಳು ಸ್ವಂತ ಅನುಭವ ಪಡೆಯುವುದರಿಂದ ಇದು ಅವರ ಮನದಲ್ಲಿ ಬಹುಕಾಲ ಉಳಿಯುವುದು. ಇನ್ನೊಬ್ಬರು ಮಾಡುವುದನ್ನು ನೋಡುವುದಕ್ಕಿಂತ ತಾವೇ ಮಾಡುವುದು ಮಕ್ಕಳ ಮನದಲ್ಲಿ ದೃಢವಾಗಿ ಉಳಿಯುವುದು.

**ವಿವರಣೆ ಅಥವಾ ವರ್ಣನಾ ವಿಧಾನ**

ಭೂಗೋಳಶಾಸ್ತ್ರ ಬೋಧನೆಯಲ್ಲಿ ವಿವರಣೆ ಅಥವಾ ವರ್ಣನಾಪದ್ಧತಿಯು ಒಂದು ಮುಖ್ಯವಾದ ವಿಧಾನ. ಇದು ಸುಲಭವೂ ಉಪಯುಕ್ತವೂ ಆಗಿದೆ. ವಿವರಣೆ ಎಂದರೆ "ಕೆಲವು ಅಂತರ್ ಸಂಬಂಧಿತ ಅಂಶಗಳ ಸಮರ್ಪಕ ಹೇಳಿಕೆಯಾಗಿದೆ." ವಿವರಣಾ ಕೌಶಲ ಎಂದರೆ ವಿದ್ಯಾರ್ಥಿಗಳು ಅಪೇಕ್ಷಿತ ಪರಿಕಲ್ಪನೆಗಳು, ವಿಧಾನಗಳು ಅಥವಾ ತತ್ವಗಳನ್ನು ತಿಳಿದುಕೊಳ್ಳುವಂತೆ ಮಾಡಲು ಶಿಕ್ಷಕನು ಅಂತರ್ ಸಂಬಂಧಿತ ಸಮರ್ಪಕ ಹೇಳಿಕೆಗಳನ್ನು ಉಪಯೋಗಿಸಲು ಕಲಿಯುವ ಕಲೆಯಾಗಿದೆ."

**ಪರಿಸರದ ಅಧ್ಯಯನ ವಿಧಾನ**

ಪರಿಸರ ಅಧ್ಯಯನ ಬೋಧನಾವಿಧಾನವು ಮಗುವಿನಲ್ಲಿ ತನ್ನ ಸಮೀಪದ ಮತ್ತು ಅತಿದೂರದ ಭೌತಿಕ ಮತ್ತು ಸಾಮಾಜಿಕ ಪರಿಸರದ ಬಗ್ಗೆ ಜಾಗೃತಿಯನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಪರಿಸರ ಅಧ್ಯಯನದ ಮೂಲಕ ಮಗುವು ಪ್ರಾಥಮಿಕ ಹಂತದಲ್ಲಿ ತನ್ನ ಪರಿಸರದೊಂದಿಗೆ ಪ್ರತಿಕ್ರಿಯಿಸುವಂತಾಗಬೇಕು ಮತ್ತು ಅವನು ಪರಿಸರದಲ್ಲಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಘಟನೆಗಳೊಂದಿಗೆ ತನ್ನ ಕರ್ತವ್ಯಗಳನ್ನು ಅರಿಯುವಂತಾಗಬೇಕು. ಮಗುವಿನ ಸುತ್ತಲಿನ ಪರಿಸರವು ಕಲಿಯುವಿಕೆಗೆ ಅಗತ್ಯವಾದ ಉತ್ತೇಜನವನ್ನು ಕೊಡುತ್ತದೆ. ಹಾಗೂ ಅದರ ಫಲವಾಗಿ ಕಲಿಯುವಿಕೆಯನ್ನು ಪರಿಸರ ಅಧ್ಯಯನದ ಕಡೆಗೆ ತಿರುಗಿಸುತ್ತದೆ.

**ಚರ್ಚಾ ವಿಧಾನ**

ಚರ್ಚಾ ವಿಧಾನವೆಂದರೆ ಗುರು–ಶಿಷ್ಯರಲ್ಲಿಯ ಸಂಭಾಷಣೆಯು ಆಗಿದೆ. ಈ ಸಂಭಾಷಣೆಯ ಉದ್ದೇಶವೆಂದರೆ, ಮಕ್ಕಳ ಕಲಿಯುವ ಕಾರ್ಯವನ್ನು ಒಂದು ನಿರ್ದಿಷ್ಟ ವಿಷಯಕ್ಕೆ ವರ್ಗಾಯಿಸಿ ಅಲ್ಲಿ ಅವರು ತಮ್ಮ ಅನುಭವ ಮತ್ತು ಚಟುವಟಿಕೆಗಳ ಮುಖಾಂತರ ಕಲಿಯುವಂತೆ ಮಾಡುವುದು. ಈ ರೀತಿ ಮಾಡಿದ್ದಾರೆ. ಅವರು ಚೆನ್ನಾಗಿ ತಿಳಿದು ಕೊಳ್ಳುತ್ತಾರೆ. ಮನನ ಮಾಡಿಕೊಳ್ಳುತ್ತಾರೆ. ಮತ್ತು ಈ ವಿಚಾರಗಳು ಅವರ ಮನದಲ್ಲಿ ಸಾಮಾನ್ಯ ತತ್ವಗಳಾಗಿ ಅನುಗಾಲವೂ ಉಳಿದುಕೊಳ್ಳುತ್ತದೆ. ಈ ವಿಧಾನದಲ್ಲಿ ಮಕ್ಕಳು ವಿಚಾರ ಮಾಡುವುದನ್ನು ಉಳಿದ ಮಕ್ಕಳೊಡನೆ ಹೊಂದಿಕೊಂಡು ಸಾಮೂಹಿಕ ಕೆಲಸ ಕಾರ್ಯ ಮಾಡುವುದನ್ನು ಈ ಬೋಧನೆ ಕ್ರಮವು ಮಕ್ಕಳಿಗೆ ಕಲಿಸುತ್ತದೆ.

**ಅನುಗಮನ ಮತ್ತು ನಿಗಮನ ವಿಧಾನ**

1. **ಅನುಗಮನ ಪದ್ಧತಿ :** ಈ ಪದ್ಧತಿಯಲ್ಲಿ ಭೂಗೋಳ ವಿಷಯವನ್ನು ಬೋಧಿಸುವಾಗ ಈ ಕ್ರಮವು ವ್ಯಕ್ತಿಯನ್ನು ವಾಸ್ತವ ವಿಚಾರದಿಂದ

Digitised by Bharatavani, CIIL

ಸಾಮೂಹಿಕಕ್ಕೆ ಕೊಂಡೊಯ್ಯುತ್ತದೆ. ಒಂದೊಂದು ಉದಾಹರಣೆಗಳ ಮುಖಾಂತರ ಮುಖ್ಯ ವ್ಯಾಖ್ಯೆಗೆ ಬರಲಾಗುತ್ತದೆ. ಈ ಪದ್ಧತಿಯನ್ನು ಯಾವುದೇ ಒಂದು ಸೂತ್ರ ಅಥವಾ ಸಾಮಾನೀಕರಣವನ್ನು ನಿರ್ಮಿಸುವಾಗ ಉಪಯೋಗಿಸಬಹುದು.

2. **ನಿಗಮನ ಪದ್ಧತಿ :** ಇದು ಮಕ್ಕಳ ವೈಚಾರಿಕ ಪ್ರಗತಿಗೆ ಅನುಗಮನ ಪದ್ಧತಿಯಂತೆ ನಿಗಮನವೂ ಶಕ್ತಿವಂತ ಪೂರಕ ಸಾಧನವಾಗಿದೆ. ನಿಗಮನದಲ್ಲಿ ನಾವು ಈಗಾಗಲೇ ಕಂಡುಕೊಂಡ ಸತ್ಯದ ಆಧಾರದ ಮೇಲೆ ಬಿಡಿಯಾದ ಸನ್ನಿವೇಶಗಳನೂ ವಿಷಯಗಳನ್ನು ಪರೀಕ್ಷಿಸುವುದೇ ಆಗಿದೆ. ಭೂಮಿತಿಯಲ್ಲಿ ಒಂದು ವ್ಯಾಖ್ಯೆಯನ್ನು ತೆಗೆದುಕೊಂಡು ಅದರ ಸಹಾಯದಿಂದ ಬಿಡಿ ವಿಷಯಗಳನ್ನು ನಾವು ಪರೀಕ್ಷೆಗೆ ಗುರಿಪಡಿಸುತ್ತೇವೆ.

### ತೌಲನಿಕ ವಿಧಾನ

ಎರಡು ಭೌಗೋಳಿಕ ವಿಷಯಗಳ ನಡುವೆ ಇರುವ ಸಾಮಾನ್ಯ ಅಂಶಗಳನ್ನು ಪರಸ್ಪರ ಹೋಲಿಕೆ ಮಾಡಿ ಸಾಮಾನೀಕರಿಸುವುದು ಈ ವಿಧಾನದ ವೈಶಿಷ್ಟ್ಯವಾಗಿದೆ. ಭೂಗೋಳಶಾಸ್ತ್ರದ ಜ್ಞಾನ ಮಗುವಿಗೆ ಪ್ರಾಥಮಿಕ ಹಂತದಿಂದಲೇ ತಿಳಿದಿರುವುದರಿಂದ ಹಿಂದೆ ಕಲಿತ ವಿಷಯದ ಜೊತೆ ಈಗ ಕಲಿಯುವ ಹೊಸ ವಿಷಯದ ಜೊತೆ ಹೋಲಿಕೆ ಮಾಡುವುದರಿಂದ ಸುಲಭವಾಗಿ ಅರ್ಥವಾಗುತ್ತದೆ. ಆದುದರಿಂದ ಮಗುವಿನ ಕಲಿಕಾ ಆಸಕ್ತಿ ಜಾಸ್ತಿಯಾಗುವುದರಿಂದ ಹೊಸ ಹೊಸ ಭೌಗೋಳಿಕ ಪರಿಕಲ್ಪನೆಗಳನ್ನು ಮೂಡಿಸುವುದು ಸುಲಭ.

### ಭೂಗೋಳಶಾಸ್ತ್ರದ ಬೋಧನಾ ಸಾಧನಗಳು

ಭೂಗೋಳಶಾಸ್ತ್ರ ಪಠ್ಯವಸ್ತುವನ್ನು ಆಯ್ಕೆ ಮಾಡಿ ಅದಕ್ಕೆ ಸೂಕ್ತವಾದ ಬೋಧನಾ ವಿಧಾನವನ್ನು ಆಯ್ಕೆ ಮಾಡಿದ ಮೇಲೆ ವಿದ್ಯಾರ್ಥಿಗಳಿಗೆ ಅದನ್ನು ಯಾವ ರೀತಿ ತಲುಪಿಸಬೇಕು ಅಥವಾ ಭೂಗೋಳಶಾಸ್ತ್ರಕ್ಕೆ ಸಂಬಂಧಿಸಿದ ಜ್ಞಾನ, ಕೌಶಲ್ಯ ಮನೋಭಾವ ಈ ಮೂರೂ ವಲಯಗಳ ಉದ್ದೇಶಗಳನ್ನು ಯಾವ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳುವಂತೆ ಮಾಡಬೇಕು ಎಂಬುದನ್ನು ನಿರ್ಧರಿಸ ಬೇಕಾಗುತ್ತದೆ.

ಬೋಧನೆಯಲ್ಲಿ ಹೊಸ ಆವಿಷ್ಕಾರಗಳಾಗುತ್ತಿದ್ದಂತೆ ಭೂಗೋಳಶಾಸ್ತ್ರದ ಬೋಧನೆಯಲ್ಲಿ ಸಂಪನ್ಮೂಲಗಳ ಬಳಕೆ ಹೆಚ್ಚಾಯಿತು. ಇದರಿಂದಾಗಿ ಭೂಗೋಳ ಶಿಕ್ಷಕನು ಹಲವಾರು ಮಾರ್ಪಾಡುಗಳನ್ನು ತನ್ನ ಬೋಧನೆಯಲ್ಲಿ ಅಳವಡಿಸಿಕೊಳ್ಳುವಂತೆ ಮಾಡಿತು. ಭೂಗೋಳ ಶಾಸ್ತ್ರ ಬೋಧನೆಯನ್ನು ಮಾಡಲು ಶಿಕ್ಷಕನಿಗೆ ಹಲವಾರು ಸಂಪನ್ಮೂಲಗಳು ಲಭ್ಯವಾಯಿತು. ಈ ಸಂಪನ್ಮೂಲಗಳು ಒಂದಲ್ಲ ಒಂದು ರೀತಿಯಲ್ಲಿ ಶಿಕ್ಷಕನು ತನ್ನ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಹಾಗೂ ಮಗುವಿನ ಕಲಿಕಾ ಮಟ್ಟವನ್ನು ಗರಿಷ್ಠ ಮಟ್ಟಕ್ಕೆ ಕೊಂಡೊಯ್ಯಲು ಸಹಾಯ ಮಾಡುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಮಗುವಿನ ಕಲಿಕೆಗೆ ಎಷ್ಟೇ ಬೋಧನಾ ಸಾಮಾಗ್ರಿಗಳಿದ್ದರೂ ಸಹ ಸಾಲುವುದಿಲ್ಲ. ಶಿಕ್ಷಕನ ಬೋಧನೆಗೆ ಮತ್ತು ಮಗುವಿನ ಕಲಿಕೆಗೆ ಒಂದು ಕಡೆ ಮುದ್ರಿತ ಸಾಮಾಗ್ರಿಗಳು ಸಹಾಯ ಮಾಡಿದರೆ ಇನ್ನೊಂದು ಕಡೆಯಲ್ಲಿ ಪಾಠೋಪಕರಣಗಳು ಹೆಚ್ಚಿನ ಪರಿಣಾಮವನ್ನು ಬೀರುತ್ತದೆ. ಅಂದರೆ ಇಬ್ಬರಿಗೂ ಸಹ ಮುದ್ರಿತ ಸಾಮಾಗ್ರಿಗಳು ಮತ್ತು ಪಾಠೋಪಕರಣಗಳು ಒಂದು ನಾಣ್ಯದ ಎರಡು ಮುಖದಂತೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜ್ಞಾನಾರ್ಜನೆಗೆ ಸಹಾಯ ಮಾಡುತ್ತಿದೆ.

ಮುದ್ರಿತ ಸಾಮಗ್ರಿಗಳಲ್ಲಿ ಪ್ರಮುಖವಾದವುಗಳೆಂದರೆ ಪಠ್ಯ ಪುಸ್ತಕ (Text Books) ಕಾರ್ಯಪುಸ್ತಕಗಳು (Work Books) ಉಪಾಧ್ಯಾಯರ ಕೈಪಿಡಿ (Teacher's Mannual) ಪರಾಮರ್ಶನ ಗ್ರಂಥಗಳು (Reference Books).

ಭೂಗೋಳಶಾಸ್ತ್ರದ ಬೋಧನೆಗೆ ಅನೇಕ ಉಪಕರಣಗಳನ್ನು ಉಪಯೋಗಿಸುತ್ತಾರೆ. ದೃಕ್ – ಶ್ರವಣೋಪಕರಣಗಳು (Audio - Visual Aids).

ದೃಕ್ – ಶ್ರವಣ ಉಪಕರಣಗಳು ನಮ್ಮಲ್ಲಿ ಜ್ಞಾನೇಂದ್ರಿಯಗಳನ್ನು ಅಂದರೆ ಕಿವಿ ಮತ್ತು ಕಣ್ಣುಗಳನ್ನು ಬೋಧನಾ ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸುವ ಬೋಧನಾ ಸಾಧನ ದೃಕ್–ಶ್ರವಣ ಉಪಕರಣಗಳು ಶಿಕ್ಷಣಕ್ಕೆ ಪ್ರತ್ಯೇಕವಾದ, ವಿಶಿಷ್ಟವಾದ, ನಿರ್ದಿಷ್ಟವಾದ ಮತ್ತು ಬದಲಿ ಇಲ್ಲದ ಸೇವೆಯನ್ನು ಒದಗಿಸುತ್ತದೆ. ಈ ಉಪಕರಣಗಳು ಬೌದ್ಧಿಕ ಮತ್ತು ಭಾವನಾತ್ಮಕ ಅಂಶಗಳನ್ನು ಪ್ರಚೋದಿಸುತ್ತದೆ. ಇದೇ ಅಲ್ಲದೆ ನಮ್ಮ ಕಲಿಕೆಯನ್ನು ಸರಿಸುಮಾರು 85%ರಷ್ಟು ನೋಡುವಿಕೆ ಮತ್ತು ಕೇಳುವಿಕೆಯಿಂದ ಸಾಧ್ಯವಾಗುತ್ತದೆ. ದೃಕ್ ಶ್ರವಣೋಪಕರಣಗಳು ಪರಿಕಲ್ಪನಾ ಯೋಜನೆಗೆ ಮೂರ್ತ ಆಧಾರಗಳನ್ನು ಒದಗಿಸುತ್ತದೆ ಮತ್ತು ಪ್ರಥಮ (ನೇರ) ಅನುಭವಗಳನ್ನು ಒದಗಿಸಿ ಕಲಿಕೆಯನ್ನು ಆಸಕ್ತಿದಾಯಕವಾಗಿ ಉಪಯುಕ್ತವಾಗಿ ದೀರ್ಘಕಾಲಕ್ಕೂ ಉಳಿಯುವಂತೆ ಮಾಡುತ್ತದೆ. ಚೀನಾದೇಶದ ನಾಣ್ಣುಡಿ "ಒಂದು ಚಿತ್ರವು ಸಾವಿರ ಪದಗಳಿಗೆ ಸಮ" ಎಂಬುದನ್ನು ಇಲ್ಲಿ ಸ್ಮರಿಸಬಹುದು. ಅನೇಕ ದಾರ್ಶನಿಕರು ಮತ್ತು ತಜ್ಞರು ಈ ಮಾತನ್ನು ಪುಷ್ಟೀಕರಿಸುತ್ತಾರೆ.

ದೃಕ್ – ಶ್ರವಣೋಪಕರಣಗಳೆಂದರೆ – ಸ್ವಾಭಾವಿಕ / ನೈಜ ವಸ್ತುಗಳು, ಮಾದರಿಗಳು, ಗೋಳ (Globe) ಅಟ್ಲಾಸ್ (Atlas) ಭೂಪಟಗಳು (Maps), ಆಲೇಖಗಳು (Graph,) ಚಿತ್ರಗಳು ಮತ್ತು ರೇಖಾ ಚಿತ್ರಗಳು, ಪ್ರಕ್ಷೇಪಣಗಳು ಸ್ಲೈಡ್‌ಗಳು, ಚಿತ್ರ ಸುರುಳಿ, ಪ್ರಕ್ಷೇಪಕ, ನೆತ್ತಿಯ ಮೇಲಿನ ಪ್ರಕ್ಷೇಪಕ (Over 04p Head Projector OHD) ಬಾನುಲಿ ಅಥವಾ ರೇಡಿಯೋ, ಧ್ವನಿ ಮುದ್ರಕ (Tape Recorder) ದೂರದರ್ಶನ (T.V.) ಕಂಪ್ಯೂಟರ್, ಸಮುದಾಯ ಸಂಪನ್ಮೂಲಗಳು ಮುಂತಾದ ಪ್ರಮುಖವಾದ ಸಾಧನಗಳನ್ನು ಬಳಸಬಹುದು.

### ಭೂಗೋಳಶಾಸ್ತ್ರ ಶಿಕ್ಷಕ

ಭೂಗೋಳಶಾಸ್ತ್ರವು ಬಹು ಪ್ರಕಾರದ ಮೌಲ್ಯವನ್ನು ಹೊಂದಿರುವುದರಿಂದ ಇಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣದಲ್ಲಿ ಒಂದು ಕಡ್ಡಾಯ ವಿಷಯವಾಗಿದೆ. ಆದಕಾರಣ ಭೂಗೋಳಶಾಸ್ತ್ರದ ಯಶಸ್ವಿ ಹಾಗೂ ಪರಿಣಾಮಕಾರಿ ಬೋಧನೆಗೆ ಸುಸಜ್ಜಿತವಾದ ಆಧುನಿಕ ಪ್ರಯೋಗಾಲಯಗಳು ಬೇಕಾಗುತ್ತದೆ. ಅಲ್ಲದೆ ಅದಕ್ಕಿಂತ ಹೆಚ್ಚಾಗಿ ಭೂಗೋಳಶಾಸ್ತ್ರದ ಸಮರ್ಥ ಬೋಧನೆಗೆ ಅರ್ಹ ಶಿಕ್ಷಕರು ಬೇಕಾಗುತ್ತಾರೆ.

ಭೂಗೋಳ ಶಿಕ್ಷಕನು ಉತ್ಸಾಹಿಯೂ, ದಯಾಳುವೂ, ಒಪ್ಪಿಕೊಳ್ಳುವಂತಹ ಹೊಂದಿಕೊಳ್ಳುವಂತಹ ಗುಣವುಳ್ಳವನೂ, ಸಹಕಾರಿಯೂ, ತಾಳ್ಮೆಯುಳ್ಳವನೂ, ರೂವಾರಿಯೂ, ಪ್ರೋತ್ಸಾಹಿಸುವವನೂ ಚತುರನೂ ಸ್ಪಷ್ಟ ವಿಚಾರಿಯೂ, ವಿನಯಶೀಲನೂ, ಸಹಾನುಭೂತಿಯುಳ್ಳವನೂ ತನ್ನ ವಿಷಯವನ್ನು ತಿಳಿದವನೂ, ತನ್ನ ಜವಾಬ್ದಾರಿಯನ್ನು ಅರಿತವನೂ, ಸಮಯ ನಿಷ್ಠನೂ, ಪ್ರಾಮಾಣಿಕನೂ, ಧೈರ್ಯಶಾಲಿಯೂ ಆಗಿರುವನು. ಹಾಗೂ ವೃತ್ತಿ ನೀತಿ ಸಂಹಿತೆಯನ್ನು ಪಾಲಿಸಬೇಕು.

Digitised by Bharatavani, CIIL

ಶಿಕ್ಷಕನ ವೃತ್ತಿಯು ನಿರಂತರ ಬದಲಾವಣೆಗೆ ಒಳಗಾಗುವಂತಹುದು. ಈ ವೃತ್ತಿ ಕ್ಷೇತ್ರದಲ್ಲಿ ಹಲವಾರು ತಂತ್ರಗಳು. ಕೌಶಲ್ಯಗಳು ಹೊಸ ಜ್ಞಾನಗಳು ಬೆಳೆಯುತ್ತವೆ. ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಭೂಗೋಳ ಶಿಕ್ಷಕ ನಿರಂತರ ಬದಲಾವಣೆಯನ್ನು ಹೊಂದಬೇಕಾಗುವುದು.

ಭೂಗೋಳ ಶಿಕ್ಷಕ ವೃತ್ತಿ ಬೆಳವಣಿಗೆಗೆ ಸಹಾಯಕವಾಗುವ ಹಲವಾರು ಕಾರ್ಯಕ್ರಮಗಳನ್ನು ಶಾಲಾ ಸಂಘ ಸಂಸ್ಥೆಗಳು, ಶಿಕ್ಷಕರ ಸಂಘಗಳು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿ, ರಾಜ್ಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿ ಮುಂತಾದ ಸಂಘ ಸಂಸ್ಥೆಗಳು ಶಿಕ್ಷಕನ ಗುಣಾತ್ಮಕ ಬೆಳವಣಿಗೆಗಾಗಿ ಅನೇಕ ಕಾರ್ಯ ಕ್ರಮಗಳಲ್ಲಿ ಪಾಲುಗೊಂಡು ವೃತ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಅವುಗಳೆದರೆ ವಿಚಾರಗೋಷ್ಠಿ (Seminars) ಕಾರ್ಯಾಗಾರಗಳು (Work shope), ಪುನಶ್ಚೇತನ ಕಾರ್ಯಕ್ರಮಗಳು (Refresher Courses), ಪ್ರಾತ್ಯಕ್ಷಿಕೆಗಳು (Demonstrations), ವಿಸ್ತರಣಾ ಉಪನ್ಯಾಸಗಳು, (Extertion Leetures) ತಂಡ ಚರ್ಚೆಗಳು (Panel Discussion) ಪ್ರಕಟಣೆಗಳು (Publication) ಇವುಗಳಲ್ಲದೆ ಬೇಸಿಗೆಯ ಶಿಬಿರಗಳು, ಉನ್ನತ ಪದವಿ ವ್ಯಾಸಂಗ, ಬೇರೆ ಶಾಲೆಗಳಿಗೆ ಸಂದರ್ಶನ ನೀಡುವುದು. ತಂಡ ಕಾರ್ಯಗಳನ್ನು ಕೈಗೊಳ್ಳುವುದು, ಶಿಕ್ಷಕರ ವಿನಿಮಯ ಕಾರ್ಯಕ್ರಮಗಳು, ಸಂಶೋಧನಾ ಕಾರ್ಯಗಳಲ್ಲಿ ತೊಡಗುವುದು, ರೇಡಿಯೋ, ದೂರದರ್ಶನ, ಅಂತರ್ಜಾಲಗಳ ಅವಲೋಕನ ಮಾಡುವುದರಿಂದ ಶಿಕ್ಷಕನು ತನ್ನ ವೃತ್ತಿಯ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳಲು ಸಹಾಯ ದೊರೆಯುತ್ತದೆ.

–ಎಸ್.ವಿ.ಕು.

## ಬೇಸಿಗೆ ಶಿಬಿರಗಳು

ಬೇಸಿಗೆ ಬಂದಕೂಡಲೇ ಗಿಡಮರಗಳಲ್ಲಿ ಬಣ್ಣ ಬಣ್ಣದ ಹೂಗಳು ಕಾಣಿಸುವ ಹಾಗೆ, ರಸ್ತೆ ಅಕ್ಕಪಕ್ಕ ಆಕರ್ಷಣೀಯ ಫಲಕಗಳು ತಲೆಯೆತ್ತುತ್ತವೆ. ಪ್ರತಿಫಲಕವೂ, ಮಕ್ಕಳಿಗೆ ಏನೇನನ್ನು ಕಲಿಸುತ್ತೇವೆ ಅಂತ ತಿಳಿಸುತ್ತವೆ. ಈ ರಜೆಯ ಕಾಲಿಕಾ ಕೇಂದ್ರಗಳೇ 'ಬೇಸಿಗೆ ಶಿಬಿರಗಳು' ಅಥವಾ 'ಸಮ್ಮರ್ ಕ್ಯಾಂಪ್'.

ಬೇಸಿಗೆ ಶಿಬಿರಗಳನ್ನು ಹವ್ಯಾಸಿ ಕೇಂದ್ರಗಳು, ಶೈಕ್ಷಣಿಕ ಕಾರ್ಯಾಗಾರಗಳು ಎಂದೂ ಹೇಳುತ್ತಾರೆ. ಬಿಡುವಿನ ವೇಳೆಯಲ್ಲಿ ಆಸಕ್ತಿಯಿರವುದನ್ನು ಕಲಿಯುವುದು ಇಂದಿನ ಮಕ್ಕಳಿಗೆ ಅಗತ್ಯ ಏಕೆಂದರೆ ಇದು ಸ್ಪರ್ಧಾ ಪ್ರಪಂಚ. ಮಾಹಿತಿ ಸಂಗ್ರಹ ಯುಗ. ಬಿಡುವಿನ ವೇಳೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಲು, ಕಾಲವನ್ನು ಸದುಪಯೋಗಪಡಿಸಿಕೊಳ್ಳಲು ಬೇಸಿಗೆಗಿಂತ ಉತ್ತಮ ವೇಳೆ ಬೇರೊಂದಿಲ್ಲ. ಇಷ್ಟವಾದದ್ದನ್ನು ಕಲಿಯುವುದನ್ನು ಸಾಮಾನ್ಯವಾಗಿ 'ಹವ್ಯಾಸ' ಎನ್ನುತ್ತಾರೆ. ಹವ್ಯಾಸ ಎಂದರೆ, 'ಬಿಡುವಿನ ವೇಳೆಯಲ್ಲಿ ಆಸಕ್ತಿಯಿದ್ದದ್ದನ್ನು ಕಲಿತು ಮನೋಲ್ಲಾಸ ಮತ್ತು ಲಾಭವನ್ನೂ ಪಡೆಯುವ ಚಟುವಟಿಕೆ' ಎನ್ನುತ್ತೆ ವಿಶ್ವಕೋಶ. ಶಾಲೆಯ ಪಠ್ಯ ವಿಷಯಗಳ ಹಾಗೆ ಇಷ್ಟವಿರಲಿ, ಇಷ್ಟವಿಲ್ಲದಿರಲಿ, ಕಡ್ಡಾಯವಾಗಿ, ನಿಯಮಿತ ವೇಳೆಯಲ್ಲಿ ಕಲಿಯುವುದು ಹವ್ಯಾಸಿ ಕೇಂದ್ರಗಳಲ್ಲಿ ಪಠ್ಯೇತರ ವಿಷಯಗಳನ್ನು ವಿದ್ಯಾರ್ಥಿಗಳ ಇಷ್ಟಕ್ಕೆ ಅನುಸಾರವಾಗಿ ಹೇಳಿಕೊಡವವರಿದ್ದಾರೆ.

ರಜೆಯ ಮಜಾದೊಂದಿಗೇ ಬೇಸಿಗೆ ಶಿಬಿರ ಸೇರಿ ತಮ್ಮ ಜಾಣ್ಮೆ, ಕೌಶಲ ಹೆಚ್ಚಿಸಿಕೊಳ್ಳಲು ಮಕ್ಕಳು ಅಣಿಯಾಗುತ್ತಾರೆ. ಮಕ್ಕಳ ಬುದ್ಧಿಗೆ ಸಾಣೆ ಹಿಡಿಯುವ, ಅವರ ವ್ಯಕ್ತಿತ್ವ ವಿಕಾಸಕ್ಕೆ ಅನುವಾಗುವ ಬಗೆ ಬಗೆಯ ಚಟುವಟಿಕೆಗಳನ್ನು ರೂಪಿಸುವ ಸಂಘ–ಸಂಸ್ಥೆಗಳೂ ಸಾಕಷ್ಟು ಸಂಖ್ಯೆಯಲ್ಲಿ ಇವೆ.

ಪಾಶ್ಚಿಮಾತ್ಯ ನೃತ್ಯ, ಸಂಗೀತ, ಚಿತ್ರಕಲೆ, ಶೈಕ್ಷಣಿಕ ಕ್ವಿಜ್, ಆಟದಿಂದ ಪಾಠ, ವ್ಯಕ್ತಿತ್ವ ವಿಕಸನ, ಮಲ್ಟಿಮೀಡಿಯಾ, ಗ್ರಾಮೀಣ ಪರಿಸರದ ಜೀವನ ವಿಧಾನ, ಸಂಸ್ಕೃತಿ, ಕಲೆ, ಗುಡಿ ಕೈಗಾರಿಕೆ, ಪ್ರದರ್ಶನ ಕಲೆಗಳ ಪ್ರಾತ್ಯಕ್ಷಿಕೆ, ಜನಪದ ಕ್ರೀಡೆಗಳು, ಜನಪದ ರಂಗಭೂಮಿ ಮುಂತಾದ ವಿಷಯಗಳನ್ನು ಪರಿಚಯಿಸುವ ಶಿಬಿರಗಳಲ್ಲಿ ಖ್ಯಾತ ಗಾಯಕರು, ನೃತ್ಯ ನಿರ್ದೇಶಕರು, ಕಲಾವಿದರು ಮಕ್ಕಳೊಂದಿಗೆ ಬೆರೆತು ತರಬೇತಿ ನೀಡುತ್ತಾರೆ.

ರಜೆಯ ದಿನಗಳಲ್ಲಿ ನಡೆಯುವ ಶಿಬಿರಗಳು, ಪ್ರವಾಸಗಳು 'ಅರಿವು' ಪಡೆಯುವದಕ್ಕೆ ಕಾರಣವಾಗುತ್ತವೆ. ಹೊರಗಿನ ಸುತ್ತಾಟ, ಹೊಸಬರ ಪರಿಚಯ–ವಿಚಾರ ವಿನಿಮಯಗಳು ಚಿಂತನೆಯ ಹಲವು ಧಾಟಿಗಳನ್ನು ಪರಿಚಯಿಸುತ್ತವೆ. ಹೊಸ ಹುಮ್ಮಸ್ಸು, ಜೀವನೋತ್ಸಾಹ ಮೂಡಿಸಲು ಕಾರಣವಾಗುತ್ತವೆ.

ಬಾಹ್ಯ ಜಗತ್ತಿನ ಅರಿವು–ತಿಳುವಳಿಕೆ, ಚಿತ್ರ– ವಿಚಿತ್ರ, ರಂಗುರಂಗಾದ, ವಿಭಿನ್ನ ವಿಶಿಷ್ಟ ಜಗತ್ತನ್ನು ಅರಿಯುವ ಆ ಮೂಲಕ ತಿಳುವಳಿಕೆಯನ್ನು ಹಿಗ್ಗಿಸಿಕೊಳ್ಳುವುದಕ್ಕೆ ರಜಾದಿನಗಳು ಅವಕಾಶ ಕಲ್ಪಿಸುತ್ತವೆ.

ಮಕ್ಕಳ ಭಾಷಾ ಸಾಮರ್ಥ್ಯ ಹೆಚ್ಚಿಸುವ ಸೃಜನಾತ್ಮಕ ಕಾರ್ಯಾಗಾರ ನಕ್ಷತ್ರ ವೀಕ್ಷಣೆ, ಪವಾಡ ಬಯಲು, ಜನಪ್ರಿಯ ವಿಜ್ಞಾನಗಳನ್ನು ಅರಿಯುವ, ಮಕ್ಕಳ ಚಲನಚಿತ್ರ ಪ್ರದರ್ಶನಗಳಂತಹ ಪಠ್ಯಪೂರಕ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಬೇಸಿಗೆಯ ರಜೆಗಳನ್ನು ಭೌದ್ಧಿಕ ಮಟ್ಟದ ವಿಕಾಸಕ್ಕೆ ಬಳಸಿಕೊಳ್ಳಬಹುದು.

ಈ ನಿಟ್ಟಿನಲ್ಲಿ ತಡವಾಗಿಯಾಗಿಯಾದರೂ ಕಂಪ್ಯೂಟರ್ ಮೂಲಕ 'ಸೃಜನಶೀಲ' ಚಟುವಟಿಕೆಗಳನ್ನು ನಡೆಸುವ–ಪರಿಚಯಿಸುವ ಅನನ್ಯ ಕಾರ್ಯಗಳಲ್ಲಿ ಕೆಲ ಸಂಘಟನೆ ಮಾಡುತ್ತಿರುವುದು ಮಕ್ಕಳು ರಜಾದಿನಗಳಲ್ಲಿ ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವವನ್ನು ಪಾಲಕರು ಬೆಳೆಸುವ ಅಗತ್ಯ ಇದೆ.

ಸಮಯ ಕಳೆಯುವುದಕ್ಕೆ ಸಾಧನಗಳಾಗಿರುವ ದೂರದರ್ಶನ–ಕಂಪ್ಯೂಟರ್ ಗೇಮ್‌ಗಳು ಮಕ್ಕಳ ಕಾಲ್ಪನಿಕ ಸಾಮರ್ಥ್ಯಕ್ಕೆ ಬಲವಾದ ಕೊಡಲಿ ಪೆಟ್ಟು ಹಾಕುತ್ತಿವೆ. ಕಥೆ ಹೇಳುವ–ಕೇಳುವ ಸಂಪ್ರದಾಯ ಬಹುತೇಕ ನಶಿಸಿ ಹೋಗಿದೆ. ಕಥೆ ಪುಸ್ತಕಗಳನ್ನು ಮತ್ತು ಕಾಮಿಕ್ಸ್ ಪುಸ್ತಕಗಳನ್ನು ರಜೆಯಲ್ಲಿ ಓದಲು ಮಕ್ಕಳಿಗೆ ತಿಳಿವಳಿಕೆ ನೀಡಬೇಕು. ಓದಿನ ಮೂಲಕ ದೊರೆಯುವ ಜ್ಞಾನ, ವ್ಯಕ್ತಿಯ ಕಾಲ್ಪನಿಕ–ಅರ್ಥ ಮಾಡಿಕೊಳ್ಳುವ–ಸಾಧ್ಯತೆಗಳನ್ನು ಊಹಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.

ರಜಾದಿನಗಳ ಓದು ಮಾಮೂಲಿ ಶಾಲೆಯ ಪಠ್ಯಗಳ ಓದಿಗಿಂತ ಭಿನ್ನವಾಗಿರುವುದರಿಂದ ಮತ್ತು ಅದನ್ನು ಪರೀಕ್ಷೆಯ ಅನಿವಾರ್ಯತೆಯಿಂದ ಓದಲೇಬೇಕಾದ ಒತ್ತಡ ಇಲ್ಲದಿರುವುದರಿಂದ 'ಓದನ್ನು' ಸಮಯ ಕಳೆಯುವುದಕ್ಕಾಗಿಯೂ ಬಳಸಿಕೊಳ್ಳಬಹುದು.

ವಿಜ್ಞಾನಿಗಳ, ಕಲಾವಿದರ, ಸಾಹಿತಿಗಳ, ಸಮಾಜ ಸೇವಕರ, ಅನನ್ಯ ಸಾಧನೆಗೈದ ಗಣ್ಯರ ಜೀವನ ಚರಿತ್ರೆಗಳನ್ನು ಓದುವುದರಿಂದ ಅವರು 'ಸಾಧನೆ' ಮಾಡುವುದಕ್ಕಾಗಿ ನಡೆಸಿದ ಹೋರಾಟ–ಸಾಗಿಬಂದ ದಾರಿಗಳ ಪರಿಚಯವಾಗುತ್ತದೆ. ಅದು ದಾರಿ ದೀಪವೂ, ಮಾರ್ಗಸೂಚಿಯೂ ಆಗಿ ನಾವು ನಡೆಯಬೇಕಾದ, ಸೃಷ್ಟಿಸಿಕೊಳ್ಳಬೇಕಾದ ನಮ್ಮದೇ ಆದ ಮಾರ್ಗಸೃಷ್ಟಿಗೆ ಪ್ರೇರಣೆ ನೀಡುತ್ತದೆ. ಜೀವನ ಚರಿತ್ರೆಗಳು ಈಗ ಕಾಮಿಕ್ಸ್‌ನಲ್ಲಿಯೂ ದೊರೆಯುವುದರಿಂದ ಮಕ್ಕಳಿಗೆ ಆಸಕ್ತಿ ಹುಟ್ಟುವಂತೆ ತಿಳಿಯಪಡಿಸುವುದು ಸುಲಭವಾಗಿದೆ.

Digitised by Bharatavani, CIIL

ಬೇಸಿಗೆ ರಂಗಶಿಬಿರಗಳಲ್ಲಿ ನೀಡಲಾಗುವ ನಾಟಕ, ನೃತ್ಯ, ಸಂಗೀತ, ಅಭಿನಯ, ಮೂಕಾಭಿನಯ, ಚಿತ್ರಕಲೆ, ಬೊಂಬೆಯಾಟ, ಮುಖವಾಡಗಳ ತಯಾರಿಕೆ ಸೇರಿದಂತೆ ವಿವಿಧ ರಂಗಭೂಮಿ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ಗಾಳಿಪಟ ಹಾರಿಸಿ ಅದು ಏರುವ ಸೊಬಗು ಸವಿಯುವ ಮಕ್ಕಳ ಸಂಖ್ಯೆ ಕಡಿಮೆಯೇನಿಲ್ಲ. ಚೆಂಡು-ಲಗೋರಿ, ಬುಗುರಿಗಳೆಲ್ಲ ಕಾಲನ ಮನೆ ಸೇರಿ ನಗರದ ಮಕ್ಕಳಿಗೆ ಅವುಗಳ ಹೆಸರೂ ಗೊತ್ತಿಲ್ಲದೆ, ಟಿ.ವಿ.ಯಲ್ಲಿ ಬರುವ ಕ್ರಿಕೆಟ್ ಮಾತ್ರ ಆಟ ಎನ್ನುವ ಮನೋಭಾವ ಸಾರ್ವತ್ರಿಕವಾಗಿದೆ. ಆಡುವ ಮೂಲಕ ಕಲಿಯುವ, ವಿಕಾಸಕ್ಕೆ ನೆರವು ನೀಡುವ ಕ್ರೀಡೆಗಳು ರಜಾದಿನ ಕಳೆಯುವುದಕ್ಕೆ ಉತ್ತಮ ಮಾರ್ಗಗಳು.

ನಾಯಕತ್ವ, ಸಂಘಟನೆ, ಸಂವಹನ, ಕ್ರಿಯಾಶೀಲತೆ, ಸಾಮಾಜಿಕ ಬದ್ಧತೆ, ಮನೋವಿಕಾಸ, ವ್ಯಕ್ತಿತ್ವ ವಿಕಸನ, ಸೃಜನಶೀಲತೆ, ಪ್ರತಿಭಾ ಅಭಿವ್ಯಕ್ತಿ, ಸಮುದಾಯದೊಂದಿಗೆ ಸಂಪರ್ಕ, ಪರಿಸರದೊಡನೆ ಬದುಕು, ಭಾವನೆಗಳ ನಿಯಂತ್ರಣ ಮತ್ತು ಅಭಿವ್ಯಕ್ತಿ ಬೆಳೆಸುವ ಉದ್ದೇಶವನ್ನು ಹೊಂದಿರುವ ಶಿಬಿರಗಳಲ್ಲಿ ಸೌಂದರ್ಯ ಪ್ರಜ್ಞೆ, ಏಕಾಗ್ರತೆ, ಪರಿಣಾಮಕಾರಿ ಗ್ರಹಿಕೆ, ಆಸುಪಟುತ್ವ ಮೊದಲಾದವುಗಳನ್ನು ಬೆಳೆಸಲಾಗುತ್ತದೆ.

ಯೋಗ-ಧ್ಯಾನ, ರಂಗ ಕ್ರೀಡೆಗಳು, ಮೂಕಾಭಿನಯ, ಚಿತ್ರಕಲೆ, ಲಯ ಪರಿಚಯ, ಜನಪದ ನೃತ್ಯ, ಕತೆ, ಶಿಶುಪ್ರಾಸ, ಶುಭಾಶಯ ಪತ್ರ ತಯಾರಿಕೆ, ಹಾಡುಗಳ ರಚನೆ, ಹಾಡುಗಾರಿಕೆ, ಕುಶಲ ಕಲೆ, ಮುಖವಾಡಗಳ ತಯಾರಿಕೆ, ಭಾಷಣಕಲೆ, ಪ್ರಥಮ ಚಿಕಿತ್ಸೆ, ರಂಗತರಬೇತಿ ಇವೇ ಮೊದಲಾದವುಗಳ ಬಗ್ಗೆ ಬೇಸಿಗೆ ಶಿಬಿರಗಳಲ್ಲಿ ತರಬೇತಿ ನೀಡಲಾಗುತ್ತದೆ. ಏಕಕಾಲಕ್ಕೆ ಹಲವಾರು ರೀತಿಯ ಶಿಬಿರಗಳು ನಡೆಯುತ್ತಿರುತ್ತವೆ. ತಮ್ಮ ಮಗುವಿನ ಆಸಕ್ತಿ, ಅಭಿರುಚಿಗಳನ್ನು ಪರಿಗಣಿಸಿ ಯಾವ ವಿಷಯದ ಶಿಬಿರಕ್ಕೆ ಕಳುಹಿಸಿದರೆ ಒಳ್ಳೆಯದು ಎಂಬುದನ್ನು ಪಾಲಕರು ಮುಂಚೆಯೇ ನಿರ್ಧರಿಸಿದರೆ ಒಳ್ಳೆಯದು.

ಮಕ್ಕಳಿಗೆ ಪರಿಸರದ ಜೊತೆಗಿನ ಒಡನಾಟ ದೊರಕಿಸುವ, ಪ್ರಾಣಿ-ಪಕ್ಷಿಗಳನ್ನು ಪರಿಚಯಿಸುವ ಶಿಬಿರಗಳಿಗೇನು ಕೊರತೆಯಿಲ್ಲ. ಇಂತಹ ಶಿಬಿರಗಳಲ್ಲಿ ಹಾವು-ಮೊಲ-ನರಿಗಳಂತಹ ಪ್ರಾಣಿಗಳನ್ನು ಮಕ್ಕಳು ಮುಟ್ಟಿ ನೋಡಿ ಅವುಗಳ ಜೀವನ, ನಡವಳಿಕೆಯನ್ನು ಕುತೂಹಲದಿಂದ ಕೇಳಿ ಪಡೆಯುವ ಅವಕಾಶ ದೊರೆಯುತ್ತದೆ.

ಯೋಗ ಮತ್ತು ವೇದ ಗಣಿತವನ್ನು ಕಲಿಸುವುದಕ್ಕಾಗಿಯೇ ಕೆಲ ಶಿಬಿರಗಳು ಮೀಸಲಾಗಿರುತ್ತವೆ. ವೇದ ಗಣಿತದಲ್ಲಿ ಮಾದರಿಗಳನ್ನು ಬಳಸಿ ಸುಲಭವಾಗಿ ಗಣಿತವನ್ನು ಕಲಿಯುವ – ಅದನ್ನು ತರಗತಿಯಲ್ಲಿ ಕಲಿಯುವ ಗಣಿತಕ್ಕೆ ಹೋಲಿಸಿ ಅದನ್ನೂ ಸರಳಗೊಳಿಸುವ ಅಪರೂಪದ ಸಾಧ್ಯತೆಗಳನ್ನೂ ಬೇಸಿಗೆ ಶಿಬಿರಗಳು ದೊರಕಿಸುತ್ತವೆ.

ಮಕ್ಕಳಿಗೆ ಬೇಸರವಾಗಬಾರದು ಅನ್ನುವ ಕಾರಣಕ್ಕಾಗಿ ವಿವಿಧ ಆಟಗಳನ್ನಾಡಲು ಅವಕಾಶವಿರುತ್ತದೆ. ಬೌದ್ಧಿಕ ಸಾಮರ್ಥ್ಯ ಹೆಚ್ಚಿಸುವ ಕ್ವಿಜ್, ತಮ್ಮ ಬಗ್ಗೆಯೇ ವಿವರವಾಗಿ ಮಾತನಾಡುವುದು, ಹೇಳಿಕೊಳ್ಳುವುದಕ್ಕೆ ಅವಕಾಶ ಕೊಡುವುದರಿಂದ ಅಭಿವ್ಯಕ್ತಿಯ ಸಾಮರ್ಥ್ಯ ಹೆಚ್ಚುತ್ತದೆ. ಶಿಬಿರದ ಕೊನೆಯ ದಿನ ನಾಟಕದ ಪ್ರದರ್ಶನ ಏರ್ಪಡಿಸುವುದರಿಂದ ಎಲ್ಲೆಡೆ ಸಂಭ್ರಮದ ವಾತಾವರಣ ರೂಪುಗೊಂಡಿರುತ್ತದೆ. ನಾಟಕ ತರಬೇತಿ ಪಡೆದವರಿಗೆ ಟಿ.ವಿ. ಮಾಧ್ಯಮದಲ್ಲಿ ನಟಿಸಲು ಹೆಚ್ಚು ಅವಕಾಶಗಳು ದೊರೆಯುತ್ತಿರುವ ಹಿನ್ನೆಲೆಯಲ್ಲಿ ಮಧ್ಯ, ವರ್ಗದ ಕಲಾಸಕ್ತ ಪಾಲಕರು ನಾಟಕ ತರಬೇತಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಸಾಧ್ಯ.

ಚಿತ್ರಕಲಾ ಶಿಬಿರಗಳನ್ನು ಅನುಭವಿ ಕಲಾವಿದರು ಮಕ್ಕಳಿಗೆ ಮೊದಲ ಎರಡು ದಿನ ಖಾಲಿ ಪೇಪರ್ ಮನಸ್ಸಿಗೆ ಬಂದಂತೆ ಗೀಚಲು ಹೇಳುತ್ತಾರೆ. ಅಡ್ಡಾದಿಡ್ಡಿಯಾಗಿ ಗೆರೆ ಎಳೆಯುವ ಮೂಲಕ ಮಕ್ಕಳ ಕೈ ಸರಾಗವಾಗಿ ಆಡಿಸಲು ಬರುತ್ತದೆ. ಇದರ ಜೊತೆಗೆ ಮಕ್ಕಳನ್ನು ನಾಲ್ಕಾರು ಗುಂಪುಗಳಾಗಿ ವಿಂಗಡಿಸಿ ಸಣ್ಣ ಪುಟ್ಟ ವಿವರಗಳನ್ನು ಸೂಚಿಸಿ ಅವುಗಳನ್ನು ಚಿತ್ರಕ್ಕೆ ಅಳವಡಿಸಲು ಹೇಳಲಾಗುತ್ತದೆ. ಮಕ್ಕಳು ಬರೆದ ಚಿತ್ರಗಳಿಗೆ ಬದಲಾವಣೆ ಸೂಚಿಸಿ ತುಂಬಬಹುದಾದ ಬಣ್ಣಗಳ ಬಗ್ಗೆ ತಜ್ಞರು ವಿವರಿಸಿ ಹೇಳುತ್ತಾರೆ.

ಇದಲ್ಲದೆ ಬೆಂಡೆಕಾಯಿ, ಬದನೆಕಾಯಿಗಳನ್ನು ಕತ್ತರಿಸಿ ತುಣುಕನ್ನು ಬಣ್ಣದಲ್ಲಿ ಅದ್ದಿ ಪೇಪರ್ ಮೇಲೆಮುದ್ರಿಸಿ ಮೊನೊಪ್ರಿಂಟ್ ತೆಗೆಯಲು ಕಲಿಸಲಾಗುತ್ತದೆ. ಡ್ರಾಯಿಂಗ್ ಮಾಡಲು ಯಾವ ರೀತಿಯ ಪೆನ್ಸಿಲ್ ಬಳಸಬೇಕು ಎನ್ನುವುದು ಸೇರಿದಂತೆ ಟ್ರೇಸ್ ಮಾಡಲು ಎಚ್ ಸರಣಿಯ, ಡ್ರಾಯಿಂಗ್ ಮಾಡಲು ಎಚ್.ಬಿ. ಶೆಟ್ ಮಾಡಲು 4-6 ಪೆನ್ಸಿಲ್ ಬಳಸಬೇಕು ಎಂದು ವಿವರಿಸಲಾಗುತ್ತದೆ.

ವಾಟರ್ ಕಲರ್, ಆಯಿಲ್ ಕಲರ್, ಪೇಸ್ಟಲ್ ಎಂದರೆ ಏನು ಎಂಬ ತಾಂತ್ರಿಕ ವಿವರಗಳನ್ನು ಹೇಳಿಕೊಡಲಾಗುತ್ತದೆ. ಬಣ್ಣ ಬಳಸಿ ಗ್ರೀಟಿಂಗ್ಸ್ ಮಾಡುವುದು. ಹಳೆಯ ಬಣ್ಣದ ಕಾಗದ ಬಳಸಿ ಮರ, ಮನೆ, ಮತ್ತಿತರ ವಸ್ತುಗಳನ್ನು ಚಿತ್ರಿಸುವ 'ಕೊಲಾಜ್' ಕೂಡ ಕಲಿಸಲಾಗುತ್ತದೆ.

ಶಿಬಿರದಲ್ಲಿ ತಮಾಷೆಯಾಗಿ ಕಲಿಯಲು ಸಾಧ್ಯವಿರುತ್ತದೆ, ಶಿಬಿರದಲ್ಲಿ ಹೋಂ ವರ್ಕ್ ನೀಡದಿದ್ದರೂ ಮಕ್ಕಳು ಖುಷಿಯಿಂದ ಕಲಿತದ್ದನ್ನೆಲ್ಲ ಮನೆಯಲ್ಲಿ ಕುಳಿತು ಬರೆದು ತೋರಿಸುತ್ತಾರೆ.

ಬೇಸಿಗೆ ಶಿಬಿರಗಳೆಲ್ಲ ಸದುದ್ದೇಶದಿಂದಲೇ ನಡೆಯುತ್ತವೆ ಎಂದೇನೂ ಇಲ್ಲ. ಒಳ್ಳೆಯ ಉದ್ದೇಶದಿಂದ ಪ್ರಾರಂಭವಾಗುವ ಎಲ್ಲ ಹೊಸ ವಿಚಾರಗಳು 'ಲಾಭಾಪೇಕ್ಷೆ' ಯಿಂದ ಕೆಲಸ ಮಾಡುವವರ ಕೈಯಲ್ಲಿ ಸಿಕ್ಕಿ ದಂಧೆಯಾಗುವ ಹಾಗೆ ಬೇಸಿಗೆ ಶಿಬಿರಗಳು ಕೂಡ ಇತ್ತೀಚಿನ ದಿನಗಳಲ್ಲಿ ಹಣ ಗಳಿಕೆಯ, ಲಾಭದ ಉದ್ಯಮವಾಗಿ ಪರಿಣಮಿಸಿದೆ.

ಹೆಣ್ಣು ಮಕ್ಕಳು ಟಿ.ವಿ.ಗೆ ಅಂಟಿಕೊಳ್ಳುವುದನ್ನೂ, ಗಂಡುಮಕ್ಕಳು ಬೀದಿ ಸುತ್ತುವುದನ್ನೂ ತಪ್ಪಿಸಲು ಸಮ್ಮರ್ ಕ್ಯಾಂಪ್ ಪರ್ಯಾಯ ವ್ಯವಸ್ಥೆ ಎಂದು ಪೋಷಕರು ಖಂಡಿತಾ ಭಾವಿಸಬಾರದು. ಹಾಡು, ಚಿತ್ರಕಲೆ, ನಾಟಕ, ನೃತ್ಯ, ಮಣ್ಣಿನ ಆಟಿಕೆ ತಯಾರಿಕೆ ಇಂಥವುಗಳಿಂದ ಮನಸ್ಸು ಪ್ರಫುಲ್ಲವಾಗುತ್ತದೆ ಎನ್ನುವ ಅರಿವು ದೊಡ್ಡವರಿಗೆ ಮೊದಲು ಬರಬೇಕು ಮತ್ತು ಇಂಥವನ್ನು ಸಾವಧಾನವಾಗಿ ಖುಷಿಯನ್ನು ಅನುಭವಿಸುತ್ತಾ ಕಲಿಯುವ ವ್ಯವಧಾನ ಇಂದಿನ ಶಾಲಾ ಶಿಕ್ಷಣ ಕ್ರಮದಲ್ಲಿ ಸಾಧ್ಯವಿಲ್ಲ ಎನ್ನುವ ಸತ್ಯವೂ ಹಿರಿಯರಿಗೆ ತಿಳಿದಿರಬೇಕು.

ಶಿಬಿರಗಳು ವಸತಿ ಸಹಿತವೇ ಆಗಿರಬೇಕು. ಆಗಲೇ ಮಕ್ಕಳಿಗೆ ಒಂದು ಭಿನ್ನ ಅನುಭವ ನೀಡಲು ಸಾಧ್ಯ. ನಡೆಸುವವರು ಮುಕ್ತ ಮನಸ್ಸಿನಿಂದ ಮಕ್ಕಳನ್ನು ಸಹಿಸಬೇಕು. ಮಕ್ಕಳೊಂದಿಗೆ ತಾವೂ ಮಕ್ಕಳಾಗಿ ಬೆರೆಯಬೇಕು. ಆಗಮಾತ್ರ ಆ ಶಿಬಿರ ಅರ್ಥಪೂರ್ಣವಾಗುತ್ತದೆ.

ಬೇಸಿಗೆ ಶಿಬಿರಗಳು ಕ್ರಿಯಾಶೀಲ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿಕೊಡುವಂತಿರಬೇಕು. ಇವು ರಜಾ ಕಾಲದ ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ನೆರವಾಗುತ್ತವೆ. ಮಕ್ಕಳ, ವಿದ್ಯಾರ್ಥಿಗಳ ಮನೋವಿಕಾಸಕ್ಕೆ, ಬೌದ್ಧಿಕ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುತ್ತವೆ. ಮನರಂಜನೆ ಜೊತೆಗೆ ಶಾಲೆಯಲ್ಲಿ ಕಲಿಯಲಾಗದ ವಿಷಯಗಳನ್ನು ಶಿಬಿರಗಳಲ್ಲಿ ಕಲಿಯುವ ಹಾಗೂ ಅರಿಯುವ ಅವಕಾಶ ದೊರೆಯುತ್ತದೆ.

Digitised by Bharatavani, CIIL

ಮೂಲ ಶಿಕ್ಷಣಕ್ಕೆ ಪೂರಕವಾಗಿ ಮಾರ್ಪಾಡಾಗುತ್ತಿರುವ ಶಿಬಿರಗಳು ಸಾಂಸ್ಕೃತಿಕ ಸ್ವರೂಪದಿಂದ ಔದ್ಯಮಿಕ ರೂಪ ಪಡೆಯುತ್ತಿವೆ. ಕಲೆ, ವ್ಯಕ್ತಿತ್ವ ವಿಕಸನ ತರಬೇತಿ, ಕೌಶಲ ತರಬೇತಿ ಇನ್ನಿತರ ವಿಷಯಗಲಲ್ಲಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳು, ಕೆಲವು ಶಾಲೆಗಳು, ಪ್ಲೇ ಹೋಂಗಳು, ಇನ್ನೂ ಕೆಲವರು ಮನೆಯಲ್ಲಿ, ಇತ್ತೀಚೆಗೆ ಕಂಟೆಂಪರರಿ ಫ್ರೀ ಸ್ಟೈಲ್ ಡ್ಯಾನ್ಸ್ ಕಲಿಸಲು ಆರಂಭಿಸಿರುವ ಕೇಂದ್ರಗಳು., ಹೀಗೆ ಹತ್ತು ಹಲವು ರೀತಿಯ ಸಂಸ್ಥೆಘಳು ಈ ಉದ್ಯಮದಲ್ಲಿ ತೊಡಗಿವೆ. ಹಾಗೆ ನೋಡಿದರೆ ನೈಜ ಶೈಕ್ಷಣಿಕ ಆಸಕ್ತಿ ಮಕ್ಕಳಿಗೆ ರಜೆಯಲ್ಲಿ ಅಗತ್ಯವಿರುವ ನಿಜವಾದ ಮನೋರಂಜನೆ ಮನಸ್ಸಿಗೆ ಆಹ್ಲಾದಕ ರೀತಿಯಲ್ಲಿ ಅಥವಾ ವೃತ್ತಿಪರ ಸ್ಪರ್ಶ ನೀಡಿ ಸಮ್ಮರ್ ಕ್ಯಾಂಪ್ ನಡೆಸುವ ಸಂಸ್ಥೆಗಳು ಬೆರಳೆಣಿಕೆಯಷ್ಟು ಮಾತ್ರ.

ಸಾಂಪ್ರದಾಯಿಕ ಕರಕುಶಲ ಕಲೆ ಜೊತೆಗೆ ನಾಯಕತ್ವ, ವ್ಯಕ್ತಿತ್ವ ನಿರ್ಮಾಣ ಮುಂತಾದ ವಿಷಯಗಳಿಗೆ ಈಗ ಬೇಡಿಕೆ ಹೆಚ್ಚಾಗುತ್ತಿದೆ. ಕರ್ನಾಟಕದಾದ್ಯಂತ ಅನೇಕ ಬೇಸಿಗೆ ಶಿಬಿರಗಳು ಉನ್ನತ ಸಂಸ್ಥೆಗಳ ಅಡಿಯಲ್ಲಿ ನಡೆಯುತ್ತಿದ್ದು, ಸೇರುವ ಚಿಣ್ಣರಿಗೆ ಅವರ ಪ್ರತಿಭೆಗಳಿಗೆ ದಾರಿದೀಪಗಳೂ ಆಗಿವೆ. ಉದಾಹರಣೆಗೆ : ಮೈಸೂರಿನ ರಂಗಾಯಣದ 'ಚಿಣ್ಣರ ಮೇಳ.' ಮಂಡ್ಯ ರಮೇಶ್ ನಡೆಸಿಕೊಡುತ್ತಿರುವ 'ರಜಾ ಮಜಾ', ಹುಬ್ಬಳ್ಳಿ ದಾರವಾಡ ನಗರಗಳ 'ಶಿಬಿರ ಸಂಸ್ಕೃತಿ', ಸಹಾರ ಎ ಹಿಂದ್ ಸಂಸ್ಥೆಯ 'ಬಾಲ ಬಳಗ', ರಾಜನ್ ದೇಶಪಾಂಡೆಯವರ ಶಿಬಿರಗಳು, ಕ್ರಿಕೆಟ್ ಶಿಬಿರಗಳು, ಹುಬ್ಬಳ್ಳಿಯ ಸ್ಪೋರ್ಟ್ಸ್ ಕ್ಲಬ್ ನಡೆಸುವ ಶಿಬಿರಗಳು, ಬಿಡಿಕಿ ಕ್ರೀಡಾ ಪ್ರತಿಷ್ಠಾನ ನಡೆಸುವ ಶಿಬಿರಗಳು, ವಸಂತ್ ಮುರ್ಡೇಶ್ವರ ಕ್ರಿಕೆಟ್ ಅಕಾಡೆಮಿ ನಡೆಸುವ ಶಿಬಿರಗಳು, ಕರ್ನಾಟಕದ ರಾಜ್ಯ ಕ್ರಿಕೆಟ್ ಸಂಸ್ಥೆಗಳು ನಡೆಸುವ ಶಿಬಿರಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು, ಭಾರತೀಯ ಕ್ರೀಡಾ ಪ್ರಾಧಿಕಾರಗಳು ನಡೆಸುವ, ಕರ್ನಾಟಕದ ರೋಲರ್ ಸ್ಕೇಟಿಂಗ್ ಸಂಸ್ಥೆ ನಡೆಸುವ ಶಿಬಿರಗಳು ತಮ್ಮದೇ ಆದ ಸಾಧನೆಯನ್ನು ಮಾಡಿಕೊಂಡು ಬಂದಿವೆ. ಮಂಗಳೂರಿನ ಕಲಾವಿದ ಗೋಪಾಟ್ಕರ್ ನಡೆಸುವ ಶಿಬಿರಗಳು, ಕಡಲ ಕಿನಾರೆಯಲ್ಲಿ "ಟೀಂ ಮಂಗಳೂರು" ನಡೆಸುವ ಶಿಬಿರಗಳು, ಬಸವನಗುಡಿಯಲ್ಲಿ 'ಶ್ರೀವತ್ಸ' ನಡೆಸುವ ಶಿಬಿರಗಳು, ಶಾಂತಿಯವರು ನಡೆಸುವ ಕಳರಿ ಮತ್ತು ಕಂಟೆಂಪರರಿ ನೃತ್ಯಕ್ಕೆ ಮೀಸಲಾಗಿರುವ 'ಅಟ್ಟಕಲರಿ ಸೆಂಟರ್ ಫಾರ್ ಮೂವ್‌ಮೆಂಟ್,' ರಶ್ಮಿಯವರು ನಡೆಸುತ್ತಿರುವ 'ಇವಾಲ್ವ್' ಸಂಸ್ಥೆಯ ಕೆಲವು ಚಟುವಟಿಕೆಗಳು, ಬೆಂಗಳೂರು ವಿಜಯನಗರದ ದುಂದುಬಿ ನಡೆಸುವ ಶಿಬಿರಗಳು, ಮೈಸೂರಿನ ಸುತ್ತೂರಿನಲ್ಲಿ ಜೆಎಸ್‌ಎಸ್ ಸಂಸ್ಥೆ ವತಿಯಿಂದ ನಡೆಸುವ ಬೇಸಿಗೆ ಶಿಬಿರ, ಬೆಳಗಾಂನಲ್ಲಿ ನಡೆಸುವ ಕೆಲವು ಶಿಬಿರಗಳು, ಚಿತ್ರದುರ್ಗ ಹಾಗೂ ದಾವಣಗೆರೆಯಲ್ಲಿ ಕೆಲವು ಸಂಸ್ಥೆಗಳು ನಡೆಸುವ ಸಾಹಸ ಕ್ರೀಡಾ ಶಿಬಿರಗಳು, ಹೀಗೆ ಕೆಲವು ಶಿಬಿರಗಳು ತಮ್ಮದೇ ಆದ ಧ್ಯೇಯೋದ್ದೇಗಳನ್ನು ಹೊಂದಿ ಮಕ್ಕಳಿಗೆ ಬೇಸಿಗೆ ಶಿಬಿರಗಳ ಮೂಲಕ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುತ್ತಿವೆ.

ರಜೆ ಸಮಯದಲ್ಲಿ ಆಟ ಆಡಿಕೊಂಡು ಇರಬೇಕಾದ ಮಕ್ಕಳನ್ನು ಇಂತಹ ಶಿಬಿರಗಳಿಗೆ ಬಲವಂತವಾಗಿ ತಳ್ಳುವ ಕೆಲಸವೂ ನಡೆದಿದೆ. ತಮ್ಮ ಮಕ್ಕಳು ಮತ್ತಷ್ಟು ಕಲಿಯಲಿ, ಸದಾ ಪುಸ್ತಕದ ಹುಳುವಾಗಿದ್ದು ಸಾಕಾಗಿದೆ, ಒಂದಷ್ಟು ರಿಲಾಕ್ಸ್ ಸಿಗಲಿ, ಕ್ರೀಡೆ ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಎಂಬ ಸದುದ್ದೇಶದಿಂದಲೂ ಬೇಸಿಗೆ ಶಿಬಿರಗಳಿಗೆ ಕಳುಹಿಸುವವರು ಇದ್ದಾರೆ. ಸದಾ ನಾಲ್ಕು ಗೋಡೆಗಳ ಮಧ್ಯೆಯೇ ಕಾಲ ಕಳೆದು ಸಾಕಾಗಿದ್ದ ಮಕ್ಕಳಿಗೆ ಶಿಬಿರಗಳು ಖುಷಿಯನ್ನೂ ಕೊಟ್ಟಿವೆ. ಕೆಲಸಕ್ಕೆ ಹೋಗುವ ಅಪ್ಪ-ಅಮ್ಮಂದಿರಿಗೆ ಮಕ್ಕಳನ್ನು ನೋಡಿಕೊಳ್ಳುವ ಆಶ್ರಯ ತಾಣಗಳೂ ಆಗಿವೆ.

ಒಳಿತು-ಕೆಡುಕು ಏನೇ ಇರಲಿ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ಸಿಕ್ಕಿದೆ. ಕ್ರೀಡೆ, ಇತರ ಸಾಹಸಗಳಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮದೇ ಲೋಕದಲ್ಲಿ ವಿಹರಿಸುತ್ತಾರೆ. ಕುಣಿದು ಕುಪ್ಪಳಿಸುತ್ತಾರೆ. ಶಾಲೆಗಳಲ್ಲಿ ಸಿಗದ ಸಂತೋಷವನ್ನು ಶಿಬಿರಗಳಲ್ಲಿ ಕಾಣುತ್ತಾರೆ. ಕೋಲಿಡಿದು ಹೊಡೆಯುವ ಮಾಸ್ತರೂ ಇಲ್ಲ. ತಪ್ಪಿಗೆ ಶಿಕ್ಷೆಯೂ ಇಲ್ಲ. ಕಟ್ಟಿ ಹಾಕಿದ್ದ ಮನಸ್ಸುಗಳು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

-ಎಂ.ಸಿ.ಎ.

# ಮ

## ಮಂಡಳಿ ಚರ್ಚೆ

ಆಯ್ಕೆ ಮಾಡಿಕೊಂಡ ಒಂದು ನಿರ್ದಿಷ್ಟ ವಿಷಯಕ್ಕೆ ಅಥವಾ ಸಮಸ್ಯೆಗೆ ಸಂಬಂಧಿಸಿದಂತೆ ಅದರ ವಿವಿಧ ಮುಖಗಳ ಬಗ್ಗೆ 4 ಅಥವಾ 5 ಪರಿಣಿತರ ಮಂಡಳಿ ಚರ್ಚೆಮಾಡಿ ವಿಚಾರ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಗೆ ಮಂಡಳಿ ಚರ್ಚೆ (Panel Discussion) ಎನ್ನುತ್ತಾರೆ. ಮಂಡಳಿ ಚರ್ಚೆಎಂದರೆ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಒಬ್ಬರ ನಂತರ ಒಬ್ಬರು ವಿಷಯಗಳನ್ನು ಮಂಡಿಸುವುದಾಗಿದೆ. ಕೆಲವರು ಅದನ್ನು ಖಂಡಿಸಲೂಬಹುದು.

ಮಂಡಳಿ ಚರ್ಚೆ ತಂತ್ರವನ್ನು ಉನ್ನತ ಶಿಕ್ಷಣ ತರಗತಿಗಳಲ್ಲಿ ಒಂದು ಬೋಧನಾ ತಂತ್ರವಾಗಿ ಬಳಸಲಾಗುವುದೇ ಮಂಡಳಿ ಚರ್ಚೆ ಉದ್ದೇಶ ವಿದ್ಯಾರ್ಥಿಗಳಿಗೆ ತಮ್ಮ ವಿಚಾರಗಳನ್ನು ಅಭಿವ್ಯಕ್ತಪಡಿಸಲು ಅವಕಾಶಗಳನ್ನು ಒದಗಿಸುವುದಾಗಿದೆ. ಚರ್ಚೆಯು ಪ್ರೇಕ್ಷಕರ ದೃಷ್ಟಿಯಿಂದ ಬುದ್ಧಿ ಚಾತುರ್ಯ ಹಾಗೂ ವಿಚಾರ ಮಂಡನೆಯ ಕ್ರಿಯೆಯಾಗಿದೆ. ಚರ್ಚಾಕೂಟಗಳನ್ನು ಕಾಲೇಜುಗಳಲ್ಲಿ ಮೇಲಿಂದ ಮೇಲೆ ಏರ್ಪಡಿಸುವುದರಿಂದ ವಿದ್ಯಾರ್ಥಿಗಳು ಭಾಷಾ ಪ್ರಭುತ್ವ, ಶಬ್ದದ ಉಚ್ಚಾರಣೆ, ಧೈರ್ಯ, ಸಾಂದರ್ಭಿಕ ವಿಚಾರ ಶಕ್ತಿಯನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಚರ್ಚೆಗಳು ಅಧ್ಯಯನ ಪ್ರವೃತ್ತಿಯನ್ನು ಹೆಚ್ಚಿಸುತ್ತವೆಯಲ್ಲದೆ ಸಭಾಕಂಪನ, ಲಜ್ಜಾ ಸ್ವಭಾವವನ್ನು ಕಡಿಮೆ ಮಾಡುತ್ತವೆ.

ಮಂಡಳಿ ಚರ್ಚೆ ಅತ್ಯುತ್ತಮವಾಗಿ ಸಾಗಲು ಹಾಗೂ ಉಪಯುಕ್ತ ಉತ್ಪಾದನೆ ನೀಡಲು ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕು.

1. ಮಂಡಳಿಯ ಪ್ರತಿ ಸದಸ್ಯರೂ ಸ್ನೇಹದಿಂದಿರಬೇಕು.
2. ಮಂಡಳಿಯ ಪ್ರತಿ ಸದಸ್ಯನೂ ತನ್ನ ಸಾಮರ್ಥ್ಯಕ್ಕನುಗುಣವಾದ ಕೊಡುಗೆ ನೀಡಬೇಕು.
3. ಮಂಡಳಿ ಸದಸ್ಯರಿಗೆ ನಿಗದಿ ಪಡಿಸಿದ ಸಮಯದ ಬಗ್ಗೆ ಅರಿವು ಇರಬೇಕು.

Digitised by Bharatavani, CIIL

4. ಪ್ರತಿಯೊಬ್ಬ ಸದಸ್ಯನಿಗೆ ತನ್ನದೇ ಆದ ವಿಚಾರಗಳನ್ನು ತಿಳಿಯಲು ಮುಕ್ತ ಅವಕಾಶ ನೀಡಬೇಕು ಮತ್ತು ಆತನು ಇತರ ಸದಸ್ಯರ ವಿಚಾಗಳನ್ನೂ ಗೌರವಿಸಬೇಕು.

5. ಪ್ರತಿ ಸದಸ್ಯನನ್ನೂ ಗೌರವಿಸಬೇಕು ಹಾಗೂ ಒಬ್ಬ ಸದಸ್ಯನು ಇತರ ಸದಸ್ಯರ ಪ್ರತಿ ಗೌರವವಾಗಿ ವರ್ತಿಸಬೇಕು.

ಈ ಮೇಲಿನ ನಿಯಮಗಳನ್ನು ಮಂಡಳಿ ಚರ್ಚೆಯಾಗುವುದಕ್ಕಿಂತ ಮುಂಚೆ ಪ್ರತಿ ಸದಸ್ಯನಿಗೆ ಮನವರಿಕೆ ಮಾಡಿಕೊಡಬೇಕು. ಹಾಗೂ ಸದಸ್ಯರಲ್ಲಿನ ತಪ್ಪು ಭಾವನೆಗಳನ್ನು ಹೋಗಲಾಡಿಸಬೇಕು.

ಎಲ್ಲಾ ರಂಗಗಳಲ್ಲೂ ಮಂಡಳಿ ಚರ್ಚೆಯನ್ನು ಇಂದು ನಾವು ಕಾಣುತ್ತೇವೆ. ಅದರೆ ಈ ಪ್ರಕ್ರಿಯೆಯ ಶಿಕ್ಷಣ ರಂಗದಲ್ಲಿ ಹೆಚ್ಚು ಪ್ರಚಲಿತವಿದೆ. ಈ ವಿಧಾನವನ್ನು ಒಂದು ಸಹ–ಪಠ್ಯ ಚಟುವಟಿಕೆ ಎಂದೂ, ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸುವ ಒಂದು ತಂತ್ರವಾಗಿ ಬಳಸುವರು. ಮಂಡಳಿ ಚರ್ಚೆಯು ಅನೇಕ ಪ್ರಯೋಜನಗಳನ್ನು ಹೊಂದಿದೆ.

ಮಂಡಳಿ ಚರ್ಚೆಯಿಂದ ಹೊಸ ವಿಚಾರಗಳು ಹೊರಬರುತ್ತವೆ. ಹೊಸ ವಿಚಾರಗಳನ್ನು ಹಂಚಿಕೊಳ್ಳಬಹುದು. ಹೊಸ ವಿಚಾರಗಳನ್ನು ಅನ್ವಯಿಸಬಹುದು. ಬೋಧನಾ ಕೌಶಲ್ಯಗಳು ಹೆಚ್ಚುತ್ತವೆ. ಗುಂಪಿನೊಂದಿಗೆ ಉತ್ತಮ ಕಾರ್ಯವನ್ನು ಮಾಡುವ ಕೌಶಲ್ಯ ಪ್ರತಿ ಸದಸ್ಯನಲ್ಲಿ ಬೆಳೆಯುತ್ತದೆ. ಮಂಡಳಿ ಚರ್ಚೆಯಲ್ಲಿ ಭಾಗವಹಿಸುವ ಸದಸ್ಯರು ಈ ಕೆಳಗಿನ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸುವರು.

1. ಮಂಡಳಿ ಚರ್ಚೆ ಪ್ರಾರಂಭಿಸುವವರು

ಮಂಡಳಿ ಚರ್ಚೆಗೆ ಉತ್ತಮ ಅಡಿಪಾಯ ಹಾಕಿ ಚರ್ಚೆ ಪ್ರಾರಂಭಿಸುವವನು.

2. ವಿಷಯ ಗ್ರಹಿಸುವವರು

ಚರ್ಚೆಯ ವಿಷಯಕ್ಕೆ ಸಂಬಂದಿಸಿದಂತೆ ಸೂಕ್ತ ಪ್ರಶ್ನೆಗಳನ್ನು ಮಾಡುತ್ತಾ ವಿಷಯಗಳನ್ನು ಸ್ಪಷ್ಟಪಡಿಸುತ್ತಾರೆ.

3. ಕ್ರಮವನ್ನು ಸುಗಮಗೊಳಿಸುವವನು.

ಚರ್ಚೆ ಸುಸೂತ್ರವಾಗಿ ನಡೆಯಲು ಬೇಕಾಗುವ ಸೂಚನೆಗಳನ್ನು ಒದಗಿಸುವವನು.

4. ಅಭಿಪ್ರಾಯ ಸಂಗ್ರಹಿಸುವವನು

ಪ್ರೇಕ್ಷಕರನ್ನು ಮಾತನಾಡಲು ಪ್ರೇರೇಪಿಸಿ ಅವರಿಂದ ಉತ್ತಮ ಅಂಶಗಳನ್ನು ಹೊರತರಲು ಪ್ರಯತ್ನಿಸುವವನು.

5. ಅಭಿಪ್ರಾಯ ನೀಡುವವನು

ಗುಂಪಿನಲ್ಲಿ ತನ್ನ ವಿಚಾರಗಳನ್ನು ಹಾಗೂ ಅಭಿಪ್ರಾಯಗಳನ್ನು ಹಂಚಿಕೊಳ್ಳುವವನು.

6. ಸ್ಪಷ್ಟೀಕರಣ ನೀಡುವವರು.

ಚರ್ಚೆಯು ಸುಸುತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಸಾಗುವಾಗ ಸದಸ್ಯರಿಗೆ ಪ್ರೇಕ್ಷಕರಿಗೆ ಉಂಟಾಗುವ ಸಂಶಯಗಳನ್ನು ಸ್ಪಷ್ಟಗೊಳಿಸಿಸಿ ನಿವಾರಿಸುವವನು.

7. ಸಾರಾಂಶೀಕರಿಸಿ ವರದಿ ತಯಾರಿಸುವವನು

ಚರ್ಚೆಯ ಮುಖ್ಯ ಅಂಶಗಳನ್ನು ಕ್ರೋಡೀಕರಿಸಿ ಸಾರಾಂಶಿಸಿ ವರದಿ ತಯಾರಿಸುವನು ಹಾಗೂ ಕೊನೆಗೆ ಸಾರಾಂಶವನ್ನು ಪ್ರಸ್ತುತಪಡಿಸುವವನು.

**ಮಂಡಳಿ ಚರ್ಚೆಗೆ ವಿರುದ್ಧವಾದ ವರ್ತನೆಗಳು**

ಮಂಡಳಿ ಚರ್ಚೆಗೆ ವಿರುದ್ಧವಾದ ಕೆಲವು ವರ್ತನೆಗಳನ್ನು ನಿಯಂತ್ರಿಸಬೇಕು. ಅಂಥ ವರ್ತನೆಗಳೆಂದರೆ :

1. ಮಂಡಳಿ ಸದಸ್ಯನಲ್ಲದವನು ಅನಧಿಕೃತವಾಗಿ ಪಾಲ್ಗೊಳ್ಳುವುದು

ಯಾರೇ ಆಗಲಿ ಅನಧಿಕೃತವಾಗಿ ಚರ್ಚೆಯಲ್ಲಿ ಭಾಗವಹಿಸಬಾರದು. ಹಾಗೆ ಮಾಡಿದಲ್ಲಿ ಚರ್ಚೆಗೆ ಇರುಸುಮುರುಸು ಉಂಟಾಗುವುದು/ವ್ಯತ್ಯಯ ಉಂಟಾಗುವುದು.

2. ದಬ್ಬಾಳಿಕೆ ಸ್ವಭಾವದವನು

ಮಂಡಳಿಯ ಇತರ ಸದಸ್ಯರ ವಿಚಾರಕ್ಕೆ ಯಾವಾಗಲೂ ವಿರೋಧಿಸುವುದು ಹಾಗೂ ತನ್ನ ನಿಲುವೇ ಮಾತ್ರ ಸರಿಯಾದದ್ದು ಎಂದು ವಾದಿಸುವುದು.

3. ಪ್ರಭುತ್ವತೆ ತೋರಿಸುವವನು

ಕೆಲವು ಸದಸ್ಯರು ತಾವೇ ಹೆಚ್ಚು ಮಾತನಾಡುವುದರ ಮೂಲಕ, ಇನ್ನೊಬ್ಬರು ಮಾತನಾಡುವಾಗ ಮಧ್ಯ ಪ್ರವೇಶಿಸುವುದರ ಮೂಲಕ ತಾವೇ ಈ ಚರ್ಚೆಯ ಮುಖ್ಯವಾದಿ ಎಂದು ಭಾವಿಸಿ ಗುಂಪು ಚರ್ಚೆಗೆ ಅಡ್ಡಿಉಂಟುಮಾಡುವುದು.

4. ಡಂಬಾಚಾರ ಮಾಡುವುದು.

ತನ್ನ ಪ್ರತಿಷ್ಠೆ ತೋರಲು ಅನಾವಶ್ಯಕ ಮಧ್ಯೆ ಪ್ರವೇಶಿಸುವುದು ಚರ್ಚೆಯನ್ನು ಲಘುವಾಗಿ ತೆಗೆದುಕೊಳ್ಳುವುದು ಅಸಭ್ಯ ವರ್ತನೆಯನ್ನು ಪ್ರದರ್ಶಿಸುವುದು.

ಮಂಡಳಿ ಚರ್ಚೆ ಆಯೋಜಿಸುವ ವ್ಯಕ್ತಿ ಈ ರೀತಿಯ ಸಂದರ್ಭಗಳ ಉಂಟಾಗದಂತೆ ಎಚ್ಚರವಹಿಸಬೇಕು.

– ಆ.ಪ್ರೆ.

## ಮನೋಪ್ರಚೋದಕ ಔಷಧಿಗಳು

ಒಂದಲ್ಲಾ ಒಂದು ಕಾರಣದಿಂದ ನಿತ್ಯ ನಮಗೆ ಬೇಸರ, ದುಃಖವಾಗಬಹುದು; ಆತಂಕ, ಭಯ ಉಂಟಾಗಬಹುದು. ನಮ್ಮ ಮೇಲೆ, ಇತರರ ಮೇಲೆ ಸಿಟ್ಟು ಕೋಪ ಬರಬಹುದು. ಬಯಸಿದ್ದು ನಮಗೆ ಸಿಗದೆ ನಿರಾಶೆಯುಂಟಾಗಬಹುದು. ನಮ್ಮ ಅಗತ್ಯಗಳು ಪೂರೈಕೆಯಾಗದೇ ಮನಸ್ಸಿಗೆ ನೋವು, ಹಿಂಸೆಯುಂಟಾಗಬಹುದು. ಈ ಬೇಸರ, ದುಃಖ, ಆತಂಕ, ಭಯ, ಸಿಟ್ಟು, ಕೋಪ, ನೋವು, ನಿರಾಶೆ ಜಿಗುಪ್ಸೆಗಳಿಂದ ಬಿಡುಗಡೆ ಹೊಂದಲು ನಾವು ತವಕಿಸುತ್ತೇವೆ. ಹಾಗೆಯೇ ಖುಷಿ, ಉಲ್ಲಾಸ, ಸಂಭ್ರಮ, ಸಂತೋಷದ ಭಾವನೆಗಳನ್ನು ಅನುಭವಿಸಲು ಎದುರು ನೋಡುತ್ತೇವೆ. ಇದಕ್ಕಾಗಿ ಸಂಗೀತ ಕೇಳುತ್ತೇವೆ ಅಥವಾ ನಾವೇ ಹಾಡಿಕೊಳ್ಳುತ್ತೇವೆ, ನೃತ್ಯಮಾಡುತ್ತೇವೆ. ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸಹೋಗುತ್ತೇವೆ. ಆಟಗಳನ್ನಾಡುತ್ತೇವೆ. ಪೂಜಾಸ್ಥಳಗಳಿಗೆ ಹೋಗಿ ದೇವರ ಪ್ರಾರ್ಥನೆ ಮಾಡುತ್ತೇವೆ. ಬೆಟ್ಟ, ಗುಡ್ಡ, ನದಿ ಕಾಡಿರುವಲ್ಲಿಗೆ ಹೋಗಿ ಸುತ್ತಾಡುತ್ತೇವೆ. ಸ್ನೇಹಿತರೊಂದಿಗೆ ಹರಟೆ ಹೊಡೆಯುತ್ತೇವೆ. ಜೊತೆಗೆ ಹಲವಾರು ವಸ್ತುಗಳನ್ನು ಸೇವಿಸುತ್ತೇವೆ. ಆದರೆ ಈ ಆರೋಗ್ಯಕರ ಅಭ್ಯಾಸಗಳಿಗೆ ಬದಲಾಗಿ ಕೆಲವರು ಮಾನಸಿಕ/ದೈಹಿಕ ಆರೋಗ್ಯಕ್ಕೆ ಹಾನಿಕಾರಕವಾದ ಮನೋಪ್ರಚೋದಕ, ಮನೋಲ್ಲಾಸಕರ ಪಾನೀಯಗಳು, ಔಷಧಿಗಳನ್ನು ಸೇವಿಸುತ್ತೇವೆ. ಚಟಕ್ಕೆ ಒಳಗಾಗುತ್ತೇವೆ, ಅವುಗಳಲ್ಲಿ ಮುಖ್ಯವಾದವು:

Digitised by Bharatavani, CIIL

1. ಕಾಫೀ, ಟೀ, ಕೋಲಾಗಳು
2. ಧೂಮಪಾನ (ಬೀಡಿ, ಸಿಗರೇಟು, ಚುಟ್ಟ)
3. ಆಲ್ಕೋಹಾಲ್ ಪಾನೀಯಗಳು (ಬೀರ್, ಬ್ರಾಂದಿ, ವಿಸ್ಕಿ, ರಮ್, ಜಿನ್, ವೋಡ್ಕಾ, ಸಾರಾಯಿ, ಹೆಂಡ)
4. ಗಾಂಜಾ, ಭಂಗಿ, ಹಶೀಷ್, ಚರಸ್
5. ಜಗಿಯುವ ಹೊಗೆಸೊಪ್ಪು (ಗುಟ್ಕಾ, ಖೈನಿ, ಪಾನ್‌ಮಸಾಲಗಳು)
6. ಅಫೀಮು, ಬ್ರೌನ್‌ಶುಗರ್, ಹೆರಾಯಿನ್
7. ನೋವು ನಿವಾರಕ ಮಾತ್ರೆ, ಇಂಜೆಕ್ಷನ್‌ಗಳು (ಪ್ರಾಕ್ಸಿವಾನ್, ಟಿಡಿಜೆಸಿಕ್ ಪೆಥೆಡಿನ್, ಮಾರ್ಫಿನ್ ಇಂಜೆಕ್ಷನ್)
8. ನಿದ್ರಾಕಾರಕ / ಶಮನಕಾರಿ ಮಾತ್ರೆಗಳು, ಫಿನೋ ಬಾರ್ಬಿಟೋನ್, ಡೈಜಿಪಾಂ ನೈಟ್ರಜೆಪಾಮ್, ಆಲ್‌ಪ್ರೊಜೆಲಾಮ್ ಇತ್ಯಾದಿ
9. ಆಂಫಿಟಮಿನ್ಸ್, ಡೈಕ್ಸಿಡ್ರಿನ್
10. ಕೊಕೇನ್, ಎಲ್.ಎಸ್.ಡಿ., ಭ್ರಮಾಜನಕಗಳು
11. ಇತರೆ: ಕೆಮ್ಮಿನ ಔಷಧಿಗಳು, ಉಗುರಿನಬಣ್ಣವನ್ನು ತೆಗೆಯುವ ದ್ರವ, ಕ್ಲೀರಾಕ್ಸ್ ಇಂಕ್, ಐಯೋಡೆಕ್ಸ್, ಪೆಟ್ರೋಲ್, ವಿಷಕಾರಿ ಅಣಬೆಗಳು ಇತ್ಯಾದಿ

**1. ಕಾಫಿ, ಟೀ, ಕೋಲಾಗಳು:** ಈ ಪಾನೀಯಗಳಲ್ಲಿರುವ 'ಕೆಫಿನ್' ಎಂಬ ಮಿಥೈಲ್ ಕ್ಯಾಂಲೇನ್ ಎಂಬ ರಾಸಾಯನಿಕ ವಸ್ತು ಮಿದುಳು–ಮನಸ್ಸಿಗೆ ಪ್ರಚೋದಕವಾಗಿ ಕೆಲಸ ಮಾಡುತ್ತದೆ. ಕೆಫಿನ್ ಮಿದುಳಿನ ನರವಾಹಕಡೋಪಮಿನ್ ಮತ್ತು ನಾರ್ ಅಡ್ರಿ ನರ್ಜಿಕ್ ನರಕೋಶಗಳ ಮೇಲೆ ಪರಿಣಾಮ ಬೀರುತ್ತದೆ. ತತ್ಪರಿಣಾಮವಾಗಿ ನಾವು ಒಂದು ಹಿತಕರವಾದ ಅನುಭವವನ್ನು ಖುಷಿಯನ್ನು ಪಡೆಯುತ್ತೇವೆ. ಮೈಮನಸ್ಸು ಚುರುಕುಗೊಳ್ಳುತ್ತವೆ. ತೂಕಡಿಕೆ (ಮಂಪರು) ಹೋಗುತ್ತದೆ. ನಿದ್ರೆ ದೂರವಾಗುತ್ತದೆ. ಹೀಗಾಗಿ ರಾತ್ರಿ ಹೊತ್ತು ಎಚ್ಚರವಾಗಿರಲು ವಿದ್ಯಾರ್ಥಿಗಳು, ರಾತ್ರಿ ಪಾಳಿಯ ಕೆಲಸಗಾರರು, ವಾಹನ ಚಾಲಕರು ಕಾಫಿ, ಟೀಗಳ ಮೊರೆ ಹೋಗುತ್ತಾರೆ. ಕ್ರಮೇಣ ಕಾಫಿ, ಟೀ, ಕೋಲಾಗಳಿಗೆ ಅವಲಂಬನೆಯನ್ನು ಬೆಳೆಸಿಕೊಳ್ಳುತ್ತಾರೆ. ಅವಧಿಗೊಮ್ಮೆ ಕಡ್ಡಾಯವಾಗಿ ಸೇವನೆ ಮಾಡಲೇಬೇಕಾದಂತಹ ಸ್ಥಿತಿಯನ್ನು ತಲುಪುತ್ತಾರೆ. ನಿಗದಿತ ವೇಳೆಗೆ ಕಾಫಿ, ಟೀ, ಕೋಲಾ, ಕುಡಿಯದಿದ್ದರೆ ತಲೆನೋವು, ಸುಸ್ತು, ಆಯಾಸ, ಚಡಪಡಿಕೆ, ಏಕಾಗ್ರತೆ ಇಲ್ಲದೆ ಕೆಲಸದಲ್ಲಿ ಮನಸ್ಸನ್ನು ತೊಡಗಿಸಲಾರದೇ ಕಷ್ಟಪಡುತ್ತಾರೆ. ಕಾಫಿ, ಟೀ, ಕೋಲಾ ಕುಡಿಯುತ್ತಿದ್ದಂತೆ ಚೇತರಿಸಿಕೊಳ್ಳುತ್ತಾರೆ. ಉಲ್ಲಾಸ ಮತ್ತು ಸಮಾಧಾನವನ್ನು ಅನುಭವಿಸುತ್ತಾರೆ. ಕಾಫಿ, ಟೀ, ಕೋಲಾಗಳು ಇಂದು ಅತ್ಯಂತ ಜನಪ್ರಿಯ ಪೇಯಗಳಾಗಿವೆ. ಮಕ್ಕಳಿಂದ ಮುದುಕರವರೆಗೆ ಹಳ್ಳಿ ಪಟ್ಟಣಗಳಲ್ಲಿ ಎಲ್ಲ ವರ್ಗದ ಜನ ಸೇವಿಸುತ್ತಾರೆ. ನಮ್ಮಲ್ಲಿ ಸಾಮಾನ್ಯವಾಗಿ ಕಾಫಿ, ಟೀ ಮತ್ತು ಹಾಲು ಸಕ್ಕರೆಯೊಂದಿಗೆ ಬೆರೆಸಿ ಕುಡಿಯುತ್ತೇವೆ. ಅತಿಥಿ ಸತ್ಕಾರಕ್ಕೆ ಅವನ್ನು ಧಾರಾಳವಾಗಿ ಬಳಸುತ್ತೇವೆ. ಕೆಲಸವಿಲ್ಲದಿದ್ದಾಗ ಕಾಲ ಕಳೆಯಲು, ಹರಟೆ ಹೊಡೆಯಲು, ಕಾಫಿ, ಟೀ ಸೇವನೆ ಮಾಡುತ್ತೇವೆ. ಹಾಲು ಸಕ್ಕರೆಯಿಂದಾಗಿ ಕೆಲೋರಿ ಹೆಚ್ಚಿ ದೇಹದ ತೂಕವನ್ನು ಹೆಚ್ಚಿಸುತ್ತದೆ. ಸರಾಸರಿ ದಿನಕ್ಕೆ ಐದರಿಂದ ಹತ್ತು ಲೋಟಗಳನ್ನು ಕಾಫಿ, ಟೀ, ಐದಾರು ಬಟ್ಟಲುಗಳಷ್ಟು ಕೋಲಾಗಳನ್ನು ಕುಡಿಯುವ ಅಭ್ಯಾಸಮಾಡಿಕೊಳ್ಳುವ ಜನರಿದ್ದಾರೆ. ಕೆಫಿನ್ ಜಠರವನ್ನು ಪ್ರಚೋದಿಸಿ ಹೆಚ್ಚು ಹೈಡ್ರೋಕ್ಲೋರಿಕ್ ಆಮ್ಲವನ್ನು ಉತ್ಪತ್ತಿ ಮಾಡುತ್ತದೆ. ಅಧಿಕ ಆಮ್ಲಸ್ಥಿತಿ (ಅಸಿಡಿಟಿ) ಹಾಗೂ ಜಠರದ ಹುಣ್ಣಿಗೆ ದಾರಿಮಾಡಿಕೊಡುತ್ತದೆ. (ಪೆಪ್ಟಿಕ್ ಅಲ್ಸರ್) ಈ ಎಲ್ಲ ದೃಷ್ಟಿಯಿಂದ ಕಾಫಿ, ಟೀ, ಕೋಲಾಗಳ ಸೇವನೆಯನ್ನು ಇತಿಮಿತಿಯಲ್ಲಿಡಬೇಕು. ಕಡಿಮೆ ಪ್ರಮಾಣದಲ್ಲಿ ದಿನಕ್ಕೆ 2 ಅಥವಾ 3 ಸಲಕ್ಕೆ ಸೀಮಿತಗೊಳಿಸಬೇಕು. ಮಕ್ಕಳಿಗೆ ಈ ಚಟ ಬೆಳೆಯದಹಾಗೆ ನೋಡಿಕೊಳ್ಳಬೇಕು. ರಾತ್ರಿ 8 ಗಂಟೆಯ ನಂತರ ಕಾಫಿ, ಟೀ, ಕೋಲಾಗಳ ಸೇವನೆಯನ್ನು ಮಾಡದಿರುವುದೇ ಕ್ಷೇಮ. ಇಲ್ಲದಿದ್ದರೆ ನಿದ್ರೆ ಬರದಿರುವುದು, ನಿದ್ರೆಯಿಂದ ಎಚ್ಚರವಾಗುವುದು, ನಿದ್ರೆಯಿಂದ ತೃಪ್ತಿ ದೊರೆಯದಿರುವುದು ಇತ್ಯಾದಿ ಸಮಸ್ಯೆಗಳುಂಟಾಗಬಹುದು.

**2. ಧೂಮಪಾನ :** ಬೀಡಿ, ಸಿಗರೇಟ್, ಚುಟ್ಟಾ (ಸಿಗಾರ್) ಸೇವನೆ ಪ್ರಪಂಚದಾದ್ಯಂತ ಕಂಡುಬರುತ್ತದೆ. ಹರೆಯದವರು, ತಾವಿನ್ನು ಮಕ್ಕಳಲ್ಲ ದೊಡ್ಡವರಾಗುತ್ತಿದ್ದೇವೆ ಎಂಬುದನ್ನು ತೋರಿಸಲು ಧೂಮಪಾನವನ್ನು ಶುರುಮಾಡುತ್ತಾರೆ. ಆಧುನಿಕ ಜೀವನ ಶೈಲಿಯ ಒಂದು ಭಾಗವಾಗಿ "ಸ್ಟೈಲಿಶ್ ಲೈಫ್"ನ ಸೂಚಕವಾಗಿ ಸಿಗರೇಟ್ ಸೇವನೆಯನ್ನು ಎಳೆಯರ ಮುಂದೆ, ಸಿಗರೇಟ್ ಕಂಪನಿಗಳು ಬಿಂಬಿಸುತ್ತಾರೆ. "ಏಕಾಗ್ರತೆ ಹೆಚ್ಚಿಸುತ್ತದೆ. ಸ್ಫೂರ್ತಿಯನ್ನು ತುಂಬುತ್ತದೆ. ಆಲೋಚನೆ, ಚಿಂತನೆ, ಸೃಜನ ಶೀಲತೆಯನ್ನು ಹೆಚ್ಚಿಸುತ್ತದೆ" ಎಂದು ಅವರನ್ನು ಮರುಳು ಮಾಡಲಾಗುತ್ತದೆ. ಆದರೆ ಧೂಮಪಾನ ಎಷ್ಟು ಅಪಾಯಕಾರಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಮೆರಿಕಾದಲ್ಲಿ ಸಿಗರೇಟ್ – ಸಿಗಾರ್ ಸೇವನೆಯು 25% ಸಾವಿಗೆ ಕಾರಣವಾಗುತ್ತದೆ. ಪ್ರತಿವರ್ಷ ಆ ದೇಶದಲ್ಲಿ 4 ಲಕ್ಷ ಜನ ತಮ್ಮ ಆಯಸ್ಸು ತೀರುವ ಮೊದಲೇ (Premature) ಸಾಯುತ್ತಿದ್ದಾರೆ. ದೀರ್ಘಕಾಲದ ಶ್ವಾಸನಾಳದುರಿತ (Chronic Bronchitis) ಎಂಫೈಸೀಮಾ, ಕ್ಯಾನ್ಸರ್, ಹೃದಯಾಘಾತಗಳು, ಮಿದುಳಿನ ರಕ್ತನಾಳಗಳಲ್ಲಿ ಅಪಘಾತಗಳು, ಶ್ವಾಸನಾಳ ಕೋಶಗಳ ಕಾಯಿಲೆಗಳು ಈ ಎಲ್ಲ ಸಾವಿಗೆ ಕಾರಣವಾಗುತ್ತಿವೆ. ಹೊಗೆಯಲ್ಲಿರುವ ನಿಕೋಟಿನ್ ಮತ್ತು 300ಕ್ಕೂ ಹೆಚ್ಚು ಬಗೆಯ ವಿಷವಸ್ತುಗಳು ಈ ಎಲ್ಲ ಅನಾರೋಗ್ಯ ಮತ್ತು ಜೈವಿಕ ಹಾನಿಗೆ ಕಾರಣವಾಗುವುದನ್ನು ಜನ ಗಮನಿಸಬೇಕು.

ಧೂಮಪಾನ ಮಾಡಿದಾಗ, ಕೇವಲ 15 ಸೆಕೆಂಡುಗಳಲ್ಲಿ ನಿಕೋಟಿನ್ ಮಿದುಳನ್ನು ತಲುಪುತ್ತದೆ. 'ಡೋಪಮಿನರ್ಜಿಕ್ ಪಾಸ್‌ವೇ'ಯನ್ನು ಪ್ರಚೋದಿಸುತ್ತದೆ. ನಾರ್‌ಎಪಿನೆಫ್ರಿನ್ ಮತ್ತು ಎಪಿನ್‌ಫ್ರಿನ್, ವೇಸೋಪ್ರೆಸಿನ್, ಬೀಟ್ ಎಂಡಾಫೀನ್ ಹಾಗೂ ಕಾರ್ಟಿಸಾಲ್ ಹಾರ್ಮೋನುಗಳ ಪ್ರಮಾಣವನ್ನು ಹೆಚ್ಚಿಸಿ, ನರಮಂಡಲವನ್ನು ಪ್ರಚೋದಿಸುತ್ತದೆ. ವ್ಯಕ್ತಿ ಧೂಮಪಾನದಿಂದ ಉಂಟಾಗುವ 'ಆನಂದ', 'ಖುಷಿಯ' ಅನುಭವ ಪಡೆಯುತ್ತಾನೆ.

ಸಹವಯಸ್ಕರ ಪ್ರೇರಣೆ, ಒತ್ತಡ, ಸಿನಿಮಾ ಮತ್ತಿತರ ದೃಶ್ಯಮಾಧ್ಯಮಗಳಲ್ಲಿ ತೋರಿಸುವ ಧೂಮಪಾನ ಉತ್ತೇಜಕ ದೃಶ್ಯಗಳು, ಸಿಗರೇಟು ಕಂಪನಿಗಳ ಆಕರ್ಷಕ ಜಾಹೀರಾತುಗಳು, ಸಮಾಜದಲ್ಲಿ ಧೂಮಪಾನದ ಬಗ್ಗೆ ಹಾಗೂ ಅದರ ಪ್ರಚೋದಕ ಗುಣಗಳ ಬಗ್ಗೆ ಇರುವ ಜನಪ್ರಿಯ ನಂಬಿಕೆಗಳು, ಜನ ಮುಖ್ಯವಾಗಿ ಯುವ ಜನ ಧೂಮಪಾನ ಮಾಡಲು ಪ್ರೇರೇಪಿಸುತ್ತವೆ. ನಿಕೋಟಿನ್, ಮಿದುಳಿನ ನರಕೋಶಗಳ ಮೇಲೆ ಪರಿಣಾಮ ಬೀರಿ ದೈಹಿಕ ಮತ್ತು ಮಾನಸಿಕ ಅವಲಂಬನೆಯನ್ನು ಬೆಳೆಸುತ್ತದೆ. ಒಂದು ಬೀಡಿ ಒಂದು ಸಿಗರೇಟಿನಿಂದ ಶುರುವಾದ ಪ್ರಕ್ರಿಯೆ ದಿನಕ್ಕೆ 20 ಅಥವಾ 30 ಬೀಡಿ ಸಿಗರೇಟು ಸೇವನೆಯಲ್ಲಿ (ಚೈನ್ ಸ್ಮೋಕಿಂಗ್‌ನಲ್ಲಿ) ಕೊನೆಗೊಳ್ಳುತ್ತದೆ.

ಒಂಟಿಯಾಗಿದ್ದಾಗ, ಜನರ ಸಂಪರ್ಕದಲ್ಲಿದ್ದಾಗ ಬಿಗಿತ, ಒತ್ತಡ ಜಾಸ್ತಿಯಾದಾಗ, ಸಮಾರಂಭ ಪಾರ್ಟಿಗಳಲ್ಲಿ ಭಾಗವಹಿಸಿದಾಗ, ಬೇಸರ, ದುಃಖವಾದಾಗ, ಕೀಳರಿಮೆ ಕಾಡಿದಾಗ, ನಿದ್ರೆ ಬರದಿದ್ದಾಗ ಹೀಗೆ ಹಲವು ಸಬೂಬುಗಳನ್ನು ಹೇಳುತ್ತಾ ವ್ಯಕ್ತಿ ಧೂಮಪಾನ ಮಾಡತೊಡಗುತ್ತಾನೆ.

Digitised by Bharatavani, CIIL

ಧೂಮಪಾನದ ಚಟ ಶುರುವಾದಾಗ ಧೂಮಪಾನ ಮಾಡದೇ, ಕೆಲವೇ ನಿಮಿಷಗಳಲ್ಲಿ ಅಥವಾ ಒಂದೇ ಗಂಟೆಯಲ್ಲಿ ಹಿಂದೆಗೆತದ ಚಿನ್ಹೆಗಳು ಕಾಣಿಸಿಕೊಳ್ಳುತ್ತವೆ. ಸೇದಲೇಬೇಕೆಂಬ ತೀವ್ರ ಬಯಕೆ, ಏನೋ ಕಳೆದುಕೊಂಡಂತಹ ಅಹಿತ ಅನುಭವ ಸಿಟ್ಟು, ಸಿಡುಕುತನ, ಚಡಪಡಿಕೆ ಏಕಾಗ್ರತೆ ಇಲ್ಲದಿರುವುದು, ನಿದ್ರೆ ಬಂದಂತಾಗುವುದು. ಆದರೆ ನಿದ್ರೆ ಮಾಡಲಾಗದಿರುವುದು, ತಗ್ಗಿದ ಹೃದಯ ಮತ್ತು ನಾಡಿಬಡಿತ ಹಾಗೂ ರಕ್ತದೊತ್ತಡ ಹಸಿವು ಕಡಿಮೆಯಾಗುವುದು, ಸ್ನಾಯುಗಳ ಬಿಗಿತ ನೋವು ಕಾಣಿಸಿಕೊಳ್ಳುತ್ತವೆ. ಒಂದು ದಮ್ ಎಳೆಯುತ್ತಿದ್ದಂತೆ ಈ ಚಿನ್ಹೆಗಳು ಮರೆಯಾಗುತ್ತವೆ. ಹೀಗಾಗಿ ವ್ಯಕ್ತಿ ನಾನು ಸಿಗರೇಟು ಸೇದುವುದಿಲ್ಲ, ಧೂಮಪಾನ ನಿಲ್ಲಿಸುತ್ತೇನೆ ಎಂದು ವಾಗ್ದಾನ ಮಾಡಿದವನು, ಅದನ್ನು ಮರೆತು ಸಿಗರೇಟ್ ಹತ್ತಿಸುತ್ತಾನೆ!

**ಚಿಕಿತ್ಸೆ**

ಸಿಗರೇಟ್ ಧೂಮಪಾನದ ಅಪಾಯವನ್ನು ವ್ಯಕ್ತಿ ಅರಿಯುವಂತೆ ಮಾಡಬೇಕು. ಸಿಗರೇಟ್ ಅಥವಾ ಯಾವುದೇ ರೀತಿಯ ಧೂಮಪಾನದ ಕ್ಷಣಿಕ ಆನಂದ ಮತ್ತು ಅನುಕೂಲತೆಗಳನ್ನು ಗಮನಿಸದೇ ದೀರ್ಘಕಾಲದ ದುಷ್ಪರಿಣಾಮಗಳನ್ನು ಗಮನಿಸುವಂತೆ ಮಾಡಬೇಕು. ಧೂಮಪಾನ ನಿಲ್ಲಿಸಲು ದೃಢವಾದ ನಿರ್ಧಾರಮಾಡುವಂತೆ ಪ್ರಚೋದಿಸಬೇಕು. ಹೆಚ್ಚಿನ ವೈದ್ಯರು ಮತ್ತು ಧೂಮಪಾನ ವ್ಯಸನಿಗಳು ಧೂಮಪಾನವನ್ನು ಥಟ್ಟನೆ ನಿಲ್ಲಿಸಲು ಇಷ್ಟಪಡುತ್ತಾರೆ. ಕೆಲವರು ಕ್ರಮೇಣ ಸೇವನೆಯ ಪ್ರಮಾಣವನ್ನು ತಗ್ಗಿಸಿ ನಿಲ್ಲಿಸಲು ಇಚ್ಛಿಸುತ್ತಾರೆ. ಯಾವುದು ಸರಿ ಹೆಚ್ಚು ಪರಿಣಾಮಕಾರಿ ಎಂಬುದನ್ನು ಹೇಳುವುದು ಕಷ್ಟ.

ಯಾವ ಸನ್ನಿವೇಶ, ಯಾರು, ಯಾವ ಸಮಸ್ಯೆ, ಯಾವ ಭಾವನೆ ಧೂಮಪಾನ ಪ್ರಚೋದನೆಯನ್ನು ನೀಡುತ್ತದೋ ಅದನ್ನು ನಿವಾರಿಸಿಕೊಳ್ಳಬೇಕು. ಹತ್ತಿರದಲ್ಲಿ ಸಿಗರೇಟ್, ಬೀಡಿ ಇಲ್ಲದಂತೆ ನೋಡಿಕೊಳ್ಳಬೇಕು. ಧೂಮಪಾನಿಗಳ ಪಕ್ಕದಲ್ಲಿ ಕೂರಬಾರದು. ಧೂಮಪಾನಕ್ಕೆ ಅವಕಾಶ ಪ್ರಚೋದನೆ ನೀಡುವ ಸ್ಥಳದಿಂದ ದೂರವಿರಬೇಕು.

ನಿಕೋಟಿನ್ ಪ್ಯಾಚ್/ಗಮ್: ವ್ಯಕ್ತಿಗೆ ನಿಕೋಟಿನ್ ಅನ್ನು ಪೂರೈಸುವ ಮಾತ್ರೆ, ಗಮ್‌ಗಳನ್ನು, ನಿಕೋಟಿನ್ ಸ್ಪ್ರೇಗಳನ್ನು ಬಳಸುವುದು (ವೈದ್ಯರ ಮಾರ್ಗದರ್ಶನದ ನಿಕೋಟಿನ್ ಬಯಕೆಯನ್ನು ತಗ್ಗಿಸುವ ಔಷಧಿಗಳನ್ನು (ಬುಪೊಪ್ರಿಯಾನ್, ಕ್ಲೊನಿಡಿನ್) ಸೇವಿಸುವುದು ಮತ್ತು ಧೂಮಪಾನ ಬೇಡ ಎನ್ನಲು ಬೇಕಾದ ಆತ್ಮವಿಶ್ವಾಸ ಗಳಿಸಲು ಮನೋಚಿಕಿತ್ಸೆಯನ್ನು ಪಡೆಯುವುದು ಅಗತ್ಯವಾಗುತ್ತದೆ.

**3. ಆಲ್ಕೋಹಾಲ್ ಪಾನೀಯಗಳು:** 'ಗುಂಡಿನ ಮತ್ತೇ ಗಮ್ಮತ್ತು' ಎಂದು ಹೇಳಿಕೊಂಡು ಗುಂಡು ಹಾಕುವ ಜನರ ಸಂಖ್ಯೆ ದಿನೇ ದಿನೇ ಏರುತ್ತಿದೆ. ಬೀರ್, ಬ್ರಾಂದಿ, ವಿಸ್ಕಿ, ರಮ್, ಜಿನ್, ವೋಡ್ಕಾ, ಹೆಂಡ, ಸಾರಾಯಿ ಹೀಗೆ ವಿವಿಧ ರೂಪ/ಹೆಸರಿನಲ್ಲಿ ದೊರೆಯುವ ಮದ್ಯಸಾರಕ್ಕೆ ಬಹಳ ಜನ ಮಾರುಹೋಗುತ್ತಿದ್ದಾರೆ. ಕುಡಿಯುವುದು, ಕುಡಿಸುವುದು 'ಫ್ಯಾಶನ್' ಆಗುತ್ತಿದೆ. ಯುವಕ, ಯುವತಿಯರಲ್ಲಿ, ಕಾರ್ಮಿಕರಲ್ಲಿ, ವ್ಯಾಪಾರ, ವಹಿವಾಟು ಮಾಡುವವರಲ್ಲಿ, ಬ್ಲೂಕಾಲರ್/ವೈಟ್‌ಕಾಲರ್ ಉದ್ಯೋಗಿಗಳಲ್ಲಿ, ಬುದ್ಧಿಜೀವಿಗಳಲ್ಲಿ, ಅಧಿಕಾರ ಸ್ಥಾನ ಮಾನಗಳನ್ನು ಹೊಂದಿರುವವರಲ್ಲಿ, ಆಟಗಾರರಲ್ಲಿ, ಕಲಾವಿದರಲ್ಲಿ, ಒಂಟಿಯಾಗಿ ಜೀವಿಸುವವರಲ್ಲಿ ಯಾವುದೇ ಸಂತೋಷಕೂಟಗಳಲ್ಲಿ ಭಾಗವಹಿಸುವವರಲ್ಲಿ 'ಮದ್ಯಪಾನ' ವ್ಯಾಪಕವಾಗಿ ಹರಡುತ್ತಿದೆ. ಸಂತೋಷ (ಖುಷಿಗಾಗಿ ಕುಡಿಯುತ್ತಾರೆ) ನೋವು, ದುಃಖ ಮರೆಯಲು ಕುಡಿಯುತ್ತಾರೆ. ಸಿಟ್ಟು, ಕೋಪ ತೋರಿಸಲು ಕುಡಿಯುತ್ತಾರೆ. ಜಗಳ ಮಾಡುವ ಮೊದಲ ಹೋರಾಟಕ್ಕೆ ಅಣಿಯಾಗುವಾಗ ಕುಡಿಯುತ್ತಾರೆ! ಊಟಕ್ಕೆ ಮೊದಲು, ಮೈಥುನಕ್ಕೆ ಮೊದಲು, ನಿದ್ದೆ ಮಾಡಲು ಕುಡಿಯುತ್ತಾರೆ. ಕುಡಿಯಲು ಹಿಂಜರಿಯುತ್ತಿದ್ದ ಮಹಿಳೆಯರೂ ಈಗ ಕುಡಿಯಲು ತನ್ಮೂಲಕ ಸಮಾನತೆಯನ್ನು ಸಾಧಿಸಲು ಕುಡಿಯುತ್ತಿದ್ದಾರೆ. ಹೀಗೆ ಎಲ್ಲರನ್ನೂ ಆಕರ್ಷಿಸಿ ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತಿರುವ ಆಲ್ಕೋಹಾಲ್‌ನಲ್ಲಿ ಅಂಥಾದ್ದೇನಿದೆ?

ಸಕ್ಕರೆಯ ದ್ರಾವಣದಲ್ಲಿ, ಗಾಳಿಯ ಸಹಾಯವಿಲ್ಲದೆ, ಈಸ್ಟ್ ಬೆಳೆದಾಗ ಸಕ್ಕರೆಯು ಕಾರ್ಬನ್ ಡೈಆಕ್ಸೈಡ್ ಮತ್ತು ಈಥೈಲ್ ಆಲ್ಕೋಹಾಲ್ (ಮದ್ಯಸಾರ) ಆಗಿ ಪರಿವರ್ತನೆಯಾಗುತ್ತದೆ. ಮದ್ಯಸಾರದ ಜೊತೆಗೆ, ಗಾಳಿ ಮಿಶ್ರಿತ ನೀರು (ಏರೇಟೆಡ್ ವಾಟರ್) ಮಿಶ್ರಿತ ಅಮೈನೋ ಆಮ್ಲಗಳು, ಖನಿಜಗಳು ಸೇರಿ ಮದ್ಯಪಾನೀಯಗಳನ್ನು ತಯಾರಿಸಲಾಗುತ್ತದೆ. ಬೀರ್‌ನಲ್ಲಿ ಪ್ರತಿಶತ 4 ರಿಂದ 8 ಭಾಗ ಆಲ್ಕೋಹಾಲ್ ಇದ್ದರೆ ಬ್ರಾಂದಿ, ವಿಸ್ಕಿ, ರಮ್, ಜಿನ್‌ಗಳಲ್ಲಿ ಅದರ ಪ್ರಮಾಣ 40ಕ್ಕೆ ಏರುತ್ತದೆ.

ಸಾಧಾರಣವಾಗಿ ಒಂದು ಅಳತೆ (360 ಮಿಲಿ ಬೀರ್) ಕುಡಿದಾಗ, 60 ಕಿಲೋ ತೂಗುವ ವ್ಯಕ್ತಿಯಲ್ಲಿ ಒಂದು ಗಂಟೆಯ ನಂತರ, ಅವನ ರಕ್ತದಲ್ಲಿ ಪ್ರತಿ 100 ಮಿಲಿಯಲ್ಲಿ 30 ಗ್ರಾಂ ಮದ್ಯಸಾರವಿರುತ್ತದೆ. ಎರಡು ಅಳತೆ ಕುಡಿದಾಗ 50 ಗ್ರಾಂ, ಮೂರು ಅಳತೆ ಕುಡಿದಾಗ 80 ಗ್ರಾಂ, ನಾಲ್ಕು ಅಳತೆ ಕುಡಿದಾಗ 100 ಗ್ರಾಂ ಮದ್ಯಸಾರವಿರುತ್ತದೆ. ಮದ್ಯಸಾರದ ಪ್ರಮಾಣದ ಮೇಲೆ, ವ್ಯಕ್ತಿಯ ಮೇಲೆ ಪರಿಣಾಮಗಳುಂಟಾಗುತ್ತವೆ.

| ಮದ್ಯಸಾರದ ಪ್ರಮಾಣ | ವ್ಯಕ್ತಿಯ ಮೇಲಾಗುವ ಪರಿಣಾಮ |
|---|---|
| 40 ಮಿಗ್ರಾಂ | ಆರಾಮ, ತಾನು ಚೆನ್ನಾಗಿದ್ದೇನೆ ಎನ್ನುವ ಭ್ರಮೆ. ಹೆಚ್ಚುಮಾತು. |
| 60 ಮಿಗ್ರಾಂ | ವಿಷಯ/ಸನ್ನಿವೇಶದ ವಿಶ್ಲೇಷಣೆ ಮಾಡಲಾಗುವುದಿಲ್ಲ.<br>ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಲಾಗುವುದಿಲ್ಲ. |
| 80 ಮಿಗ್ರಾಂ | ದೇಹದ ಅಂಗಾಂಗಗಳ ಹೊಂದಾಣಿಕೆ ಚಲನೆ ಇರುವುದಿಲ್ಲ.<br>ತೊದಲು ಮಾತು, ನೇರವಾಗಿ ನಡೆಯಲಾಗುವುದಿಲ್ಲ. |
| 100 ಮಿಗ್ರಾಂ | ದೇಹ ಮತ್ತು ಮನಸ್ಸಿನ ಮೇಲಿನ ಹತೋಟಿ ತಪ್ಪುತ್ತದೆ.<br>ಕುಡಿಯುವ ಪ್ರಮಾಣದ ಮೇಲಿನ ಹತೋಟಿಯೂ ತಪ್ಪುತ್ತದೆ. |
| 120 ಮಿಗ್ರಾಂ | ಬಡಬಡಿಸುತ್ತಾನೆ. ಮಾತುಗಳಲ್ಲಿ ಅರ್ಥವಿರುವುದಿಲ್ಲ, ವಾಂತಿಯಾಗಬಹುದು. |
| 150 ಮಿಗ್ರಾಂ | ಬೀಳುತ್ತಾನೆ, ಅರೆ ಪ್ರಜ್ಞಾವಸ್ಥೆಗೆ ಜಾರುತ್ತಾನೆ. |
| 300 ಮಿಗ್ರಾಂ | ಪ್ರಜ್ಞಾಹೀನನಾಗುತ್ತಾನೆ. |


Digitised by Bharatavani, CIIL

ಮದ್ಯಪಾನವನ್ನು ಪ್ರಾರಂಭಿಸುವ ಜನರಲ್ಲಿ ಹಲವು ವರ್ಷಗಳ ಅವಧಿಯಲ್ಲಿ ಶೇಕಡಾ 20 ರಷ್ಟು ಮಂದಿ ಚಟಕ್ಕೆ ಬೀಳುತ್ತಾರೆ. ಚಟದ ಲಕ್ಷಣಗಳಿವು–

- ಆಲ್ಕೋಹಾಲ್ ಸೇವನೆಯ ಪ್ರಮಾಣವನ್ನು ಹೆಚ್ಚಿಸುತ್ತಾ ಹೋಗುವುದು.

- ನಿತ್ಯ ಕುಡಿಯುವುದು, ಬೆಳಿಗ್ಗೆ ಎದ್ದಕೂಡಲೇ ಅಥವಾ ಹಗಲಿನಲ್ಲಿ ಕುಡಿಯುವುದು.

- ಕೆಲಸ ಕರ್ತವ್ಯ ಇತರ ಮನರಂಜನಾ ಚಟುವಟಿಕೆಗಳನ್ನು ಬದಿಗೊತ್ತಿ ಕುಡಿಯುವುದು.

- ಆಲ್ಕೋಹಾಲು ಸಂಪಾದಿಸಲು ಮತ್ತು ಕುಡಿದ ಅಮಲಿನಲ್ಲೇ ಇರಲು ಹೆಚ್ಚಿನ ಸಮಯವನ್ನು ವಿನಿಯೋಗಿಸುವುದು. ಹಣಕ್ಕಾಗಿ ಮನೆಯ ಬೆಲೆಬಾಳುವ ವಸ್ತುಗಳನ್ನು ಮಾರುವುದು. ಸುಳ್ಳುಹೇಳುವುದು. ಕಳ್ಳತನ ಮಾಡುವುದು. ಅಪರಾಧ ಮಾಡುವುದು.

- ಅನಾರೋಗ್ಯ ಬಂದು, ವೈದ್ಯರು ಕುಡಿಯಬೇಡ, ಅಪಾಯ ಎಂದರೂ ಕೇಳದೇ ಕುಡಿಯುವುದು, ಕದ್ದು ಮುಚ್ಚಿ ಕುಡಿಯುವುದು.

- ಕುಡಿದು ವಾಹನ ಚಾಲನೆಮಾಡಿ ಅಪಘಾತಕ್ಕೆ ಒಳಗಾಗುವುದು ಅಥವಾ ಜಗಳವಾಡಿ ಗಾಯಗೊಳ್ಳುವುದು.

- ಕುಡಿಯದಿದ್ದರೆ ಅಥವಾ ಕುಡಿತದ ಪ್ರಮಾಣವನ್ನು ತಗ್ಗಿಸಿದರೆ, ಹಿಂದೆಗೆತದ ಚಿಹ್ನೆಗಳು ಕಾಣಿಸಿಕೊಳ್ಳುವುದು. ಕೈಕಾಲು ನಡುಕ, ನಿದ್ರಾಹೀನತೆ, ಚಡಪಡಿಕೆ, ಭ್ರಮೆಗಳು, ಫಿಟ್ಸ್ ಇತ್ಯಾದಿ, ಕುಡಿದರೆ ಈ ಚಿಹ್ನೆಗಳು ಮರೆಯಾಗುವುದು.

- ಕುಡಿಯದೇ ಬದುಕಲಾರೆ ಎಂಬ ಸ್ಥಿತಿಯಲ್ಲಿರುವುದು.

**ಚಿಕಿತ್ಸೆ:** ಆಲ್ಕೋಹಾಲ್ ಚಟ (ಅಥವಾ ಇನ್ನಾವುದೇ ಮಾದಕ ವಸ್ತು ಸೇವನೆಯ ಚಟ)ಕ್ಕೆ ಚಿಕಿತ್ಸೆ ನಾಲ್ಕು ಹಂತಗಳಲ್ಲಿ ನಡೆಯುತ್ತದೆ.

**1ನೇ ಹಂತ :** ಥಟ್ಟನೆ ಆಲ್ಕೋಹಾಲ್ ಸೇವನೆಯನ್ನು ನಿಲ್ಲಿಸುವುದು. ಆಗ ಕಾಣಿಸಿಕೊಳ್ಳುವ ಹಿಂದೆಗೆತದ ಚಿಹ್ನೆಗಳ ನಿವಾರಣೆಗೆ ಶಮನಕಾರಿ ಔಷಧಿಗಳನ್ನು ನೀಡುವುದು.

**2ನೇ ಹಂತ :** ವ್ಯಕ್ತಿಗೆ ಚಟ ಬೆಳೆಯಲು ಏನು ಕಾರಣ, ದೇಹ ಮತ್ತು ಮನಸ್ಸಿನ ಅಸ್ವಸ್ಥತೆಗಳಾವುವು ಎಂಬುದನ್ನು ಅರಿತು ಅದಕ್ಕೆ ಪರಿಹಾರೋಪಾಯಗಳನ್ನು ಹುಡುಕುವುದು, ನ್ಯೂನತೆಗಳನ್ನು ಸರಿಪಡಿಸುವುದು.

**3ನೇ ಹಂತ :** ವ್ಯಕ್ತಿಯ ವ್ಯಕ್ತಿತ್ವದಲ್ಲಿರುವ ನ್ಯೂನತೆಗಳು, ಆತನ ಜೀವನ ಕೌಶಲಗಳಲ್ಲಿರುವ ಕೊರತೆಗಳನ್ನು ಸರಿಪಡಿಸಲು ಸಲಹೆ ತರಬೇತಿ.

**4ನೇ ಹಂತ :** ವ್ಯಕ್ತಿ ಮತ್ತೆ ಆಲ್ಕೋಹಾಲ್ ಸೇವನೆಯನ್ನು ಪ್ರಾರಂಭಿಸದಿರಲು ಏನೇನು ಮಾಡಬೇಕು, ಜೀವನ ಶೈಲಿ ಮತ್ತು ಪರಿಸರದಲ್ಲಿ ಏನೇನು ಬದಲಾವಣೆಗಳನ್ನು ಮಾಡಬೇಕು ಎಂದು ತಿಳಿಸಿ ಅದನ್ನು ಪಾಲಿಸಲು ವ್ಯಕ್ತಿಗೆ ಒತ್ತಾಯ–ಒತ್ತಾಸೆ ನೀಡುವುದು. ವ್ಯಕ್ತಿ ಉದ್ಯೋಗ–ಸಂಪಾದನೆ ಮಾಡಿ ಸ್ವಾವಲಂಬಿಯಾಗಿ ಬದುಕಲು ಅವಕಾಶ ಮಾಡಿಕೊಡುವುದು

ಚಿಕಿತ್ಸೆಯನ್ನು ಹೊರರೋಗಿ ವಿಭಾಗದಲ್ಲಿ ಪಡೆದು ವ್ಯಕ್ತಿ ಮನೆಯಲ್ಲಿಯೇ ಇರಬಹುದು ಅಥವಾ ಒಳರೋಗಿಯಾಗಿ ಆಸ್ಪತ್ರೆಯಲ್ಲಿ 3 ಅಥವಾ 4 ವಾರಗಳ ಕಾಲ ಇರಬಹುದು. ಚಿಕಿತ್ಸೆಯಿಂದ ಶೇಕಡಾ 60 ರಷ್ಟು ಮಂದಿ ಚಟ ಮುಕ್ತರಾಗುತ್ತಾರೆ. ಉಳಿದವರಲ್ಲಿ ಚಟ ಮರು ಕಳಿಸಬಹುದು. ಆಗ ಮತ್ತೆ ಚಿಕಿತ್ಸೆಯನ್ನು ಪ್ರಾರಂಭಿಸಬೇಕು. ಚಟ ಮುಕ್ತನಾಗಬೇಕು ಎಂದು ವ್ಯಕ್ತಿ ಪ್ರಾಮಾಣಿಕವಾಗಿ ಬಯಸಿದರೆ ಮಾತ್ರ ಚಿಕಿತ್ಸೆ ಯಶಸ್ವಿಯಾಗುವ ಸಂಭವ ಹೆಚ್ಚುತ್ತದೆ. ಆ ಮನೋಭಾವ ವ್ಯಕ್ತಿಗೆ ಬರುವಂತೆ ಮನೆಯವರು, ಬಂಧು–ಮಿತ್ರರು, ಪ್ರೀತಿಯಿಂದ ಮತ್ತೆ, ಮತ್ತೆ ಹೇಳಬೇಕು, ಒತ್ತಾಯ ಮಾಡಬೇಕು.

4. **ಗಾಂಜಾ, ಭಂಗಿ ಹಶೀಷ್, ಚರಸ್, ಮಾರಿಹೋನ:** 'ಕೆನಾಬಿಸ್ ಸಟೈವ' ಎಂಬ ಗಿಡದಿಂದ (ಎಲೆ, ಹೂವು, ಅಂಟು) ಬರುವ ಗಾಂಜಾ, ಭಂಗಿ ಸೊಪ್ಪು ನಮ್ಮಲ್ಲಿ ಬಹಳ ಹಿಂದಿನ ಕಾಲದಿಂದಲೂ ಮನಸ್ಸಿನ ಪ್ರಚೋದಕ ಹಾಗೂ ವಿಚಿತ್ರ ಅನುಭವ ಕೊಡುವ ವಸ್ತುವಾಗಿ ಬಳಸಲ್ಪಡುತ್ತದೆ. ಅನೇಕ ಮಠ, ದೇವಸ್ಥಾನಗಳಲ್ಲಿ ಸಾಧು ಸನ್ಯಾಸಿಗಳು ಮತ್ತು ಅವರ ಜೊತೆ ಜನ ಸಾಮಾನ್ಯರೂ ಸೇರಿಕೊಂಡು ಸಾಮೂಹಿಕವಾಗಿ ಗಾಂಜಾ ಸೇದುತ್ತಾರೆ. ರಾಮರಸವನ್ನು ಕುಡಿಯುತ್ತಾರೆ. ಕೊಳವೆ ಅಥವಾ ಸಿಗರೇಟಿನ ಜೊತೆಗೆ ಸೇರಿಸಿ 'ದಮ್' ಎಳೆಯುತ್ತಾರೆ. ಗಿಡದ ಅಂಟಿನಿಂದ ಮಾದಕವನ್ನು ಪ್ರತ್ಯೇಕಿಸಿ ಹಶೀಷ್/ಚರಸ್/ಮಾರಿಹೋನ ಎಂದು ದುಬಾರಿಬೆಲೆಗೆ ಮಾರಲಾಗುತ್ತದೆ. ಗಾಂಜಾ ಸೇದುವುದರಿಂದ, ರಾಮರಸವನ್ನು ಕುಡಿಯುವುದರಿಂದ ಏಕಾಗ್ರತೆ ಹೆಚ್ಚುತ್ತದೆ. ಮೈಮನಸ್ಸುಗಳು ಉಲ್ಲಾಸ, ರೋಮಾಂಚನವನ್ನು ಅನುಭವಿಸುತ್ತವೆ. ಸಾಮಾನ್ಯ ಸ್ಪರ್ಶ, ಧ್ವನಿ, ನೋಟಗಳು, ತೀವ್ರ ಸಂವೇದನೆಯನ್ನುಂಟುಮಾಡುತ್ತವೆ. ವ್ಯಕ್ತಿಗೆ ಹಿತ ಮತ್ತು ಅಹಿತವನ್ನುಂಟುಮಾಡುವ ಕಲ್ಪನೆ, ಭ್ರಮೆಗಳುಂಟಾಗುತ್ತವೆ. ಆತ ಕಾಲ, ಸ್ಥಳದ ಪರಿವೆ ಇಲ್ಲದೆ, ವಾಸ್ತವಿಕತೆಯನ್ನು ಮರೆಯುವಂತಾಗುತ್ತದೆ ಎಂದು ಹೇಳಲಾಗುತ್ತದೆ. ವ್ಯಕ್ತಿಯ ಸೃಜನಶೀಲತೆ ಹೆಚ್ಚುತ್ತದೆ ಎಂದು ನಂಬಲಾಗುತ್ತದೆ. ಹೀಗಾಗಿ ಅನೇಕ ಸಂಗೀತಗಾರರು, ಕಲಾಕಾರರು, ಗಾಂಜಾ ನಶೆಯಲ್ಲಿರುವುದು, ಸ್ಫೂರ್ತಿಗಾಗಿ ಗಾಂಜಾವನ್ನು ಅವಲಂಬಿಸುವುದು ಕಂಡುಬರುತ್ತದೆ, ದೀರ್ಘಕಾಲದ ಸೇವನೆಯಿಂದ 'ಸ್ಕಿಜೋಫ್ರೀನಿಯಾ ರೋಗ'ವನ್ನು ಹೋಲುವ ಮಾನಸಿಕ ಕಾಯಿಲೆ ಬರುತ್ತದೆ. ಸಂಶಯ, ಆಕ್ರಮಣಶೀಲತೆ, ಸಿಟ್ಟು, ಚಡಪಡಿಕೆ ಹಾಗೂ ಭ್ರಮೆಗಳು ಮುಖ್ಯ ರೋಗಲಕ್ಷಣಗಳಾಗಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಶಾಲಾ ಕಾಲೇಜುಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ, ಕ್ಲಬ್‌ಗಳು, ರೇಸಾರ್ಟ್‌ಗಳಲ್ಲಿ, ಜೈಲಿನಲ್ಲಿ ಗಾಂಜಾ ಸೇವನೆ ವ್ಯಾಪಕವಾಗಿ ಹೆಚ್ಚುತ್ತಿರುವುದು ಆತಂಕಕಾರಿ.

ಚಿಕಿತ್ಸೆಯಲ್ಲಿ ಮುಖ್ಯವಾಗಿ ಆರೋಗ್ಯ ಶಿಕ್ಷಣ, ಮನೋ ಚಿಕಿತ್ಸೆ ಮತ್ತು ಪರಿಸರದ ಬದಲಾವಣೆ, ಗಾಂಜಾ, ಭಂಗಿಯನ್ನು ಉಪಯೋಗಿಸದಿರಲು ತರಬೇತಿಯನ್ನು ನೀಡಲಾಗುತ್ತದೆ.

5. **ಜಗಿಯುವ ಹೊಗೆಸೊಪ್ಪು (Chewing tobacco):** ಕಡ್ಡಿಪುಡಿ, ಗುಟ್ಕಾ, ಖೈನಿ, ಪಾನ್‌ಮಸಾಲಗಳ ರೂಪದಲ್ಲಿ ಹೊಗೆಸೊಪ್ಪನ್ನು ಜಗಿಯುವ ಹವ್ಯಾಸ ವ್ಯಾಪಕವಾಗಿ ಕಂಡುಬರುತ್ತಿದೆ. ಯುವಕರಲ್ಲಿ, ಶ್ರಮಜೀವಿಗಳಲ್ಲಿ, ಕಾರ್ಮಿಕರಲ್ಲಿ ಇದು ಹೆಚ್ಚು. ಹೊಗೆಸೊಪ್ಪಿನಿಂದ ಹಲ್ಲು ನೋವು ನಿವಾರಣೆಯಾಗುತ್ತದೆ, ಬಾಯಿಯ ದುರ್ಗಂಧ ತಪ್ಪುತ್ತದೆ, ಮನಸ್ಸಿಗೆ ಖುಷಿ ನೆಮ್ಮದಿ ಸಿಗುತ್ತದೆ ಎಂದು ಜನ ಹೊಗೆಸೊಪ್ಪನ್ನು ಜಗಿಯಲು ಪ್ರಾರಂಭಿಸಿ ಕ್ರಮೇಣ ಹೊಗೆಸೊಪ್ಪಿನ ಪ್ರಮಾಣವನ್ನು ಹೆಚ್ಚಿಸುತ್ತಾ

Digitised by Bharatavani, CIIL

ಹೋಗುತ್ತಾರೆ. ಒಂದು ಪಾಕೆಟ್ಟಿನಿಂದ 40 ಅಥವಾ 50 ಪಾಕೆಟ್ ಹೊಗೆಸೊಪ್ಪನ್ನು ವ್ಯಕ್ತಿ ಜಗಿಯಬಹುದು.

ಜಗಿಯುವ ಹೊಗೆಸೊಪ್ಪಿನಿಂದ ಬಾಯಿಯ ಕ್ಯಾನ್ಸರ್ ಬರುತ್ತದೆ ಎಂಬುದು ಈಗ ಸ್ಪಷ್ಟವಾಗಿ ಸಾಬೀತಾಗಿದೆ. ಆದ್ದರಿಂದ ಜಗಿಯುವ ಹೊಗೆಸೊಪ್ಪನ್ನು ಉಪಯೋಗಿಸದಿರುವುದೇ ಕ್ಷೇಮ.

**6. ಅಫೀಮು ಮತ್ತು ಅದರ ವಿಧಗಳು:** ಅಫೀಮಿಗೆ 3500 ವರ್ಷಗಳ ಇತಿಹಾಸವಿದೆ. ಅಫೀಮು ನೋವು ನಿವಾರಕವೂ ಹೌದು, ಮನಸ್ಸಿನ ಪ್ರಚೋದಕವಾಗಿಯೂ ಬಳಸಲ್ಪಡುತ್ತಿದೆ. 1806ರಲ್ಲಿ ಅಫೀಮಿನಿಂದ 'ಮಾರ್ಫಿನ್'ನ್ನನ್ನು ಪ್ರತ್ಯೇಕಿಸಲಾಯಿತು. ಅದು ಇಂದಿಗೂ ಅತಿ ಪರಿಣಾಮಕಾರಿ ನೋವು ನಿವಾರಕ. ಶಸ್ತ್ರ ಚಿಕಿತ್ಸೆಯಾದ ನಂತರದ ನೋವಿಗೆ ಅಥವಾ ತಡೆಯಲಸಾಧ್ಯವಾದ ದೇಹದ ಯಾವುದೇ ಭಾಗದ ನೋವಿಗೆ ರಾಮ ಬಾಣದಂತೆ ಕೆಲಸ ಮಾಡುತ್ತದೆ. ಹಾಗೆಯೇ ನಮ್ಮ ಮಿದುಳಿನಲ್ಲಿ 'ಎಂಡಾರ್ಫಿನ್ಸ್' ಎಂಬ ರಾಸಾಯನಿಕ ನರವಾಹಕವು ಉತ್ಪತ್ತಿಯಾಗುತ್ತದೆ. ಅದು ಅಫೀಮನ್ನೇ ಹೋಲುತ್ತದೆ. ಯಾರಲ್ಲಿ ಎಂಡಾರ್ಫಿನ್ಸ್ ಹೆಚ್ಚಿರುತ್ತದೋ ಅವರು ನೋವನ್ನು ನಗುನಗುತ್ತಲೇ ಅನುಭವಿಸಬಲ್ಲರು.

ಅಫೀಮನ್ನು ಭಾರತೀಯರೂ ಸೇರಿದಂತೆ ಅನೇಕ ಜನಾಂಗದವರು ನೋವು ನಿವಾರಣೆಗಾಗಿ, ಮನಸ್ಸಿನ ಪ್ರಚೋದಕವಾಗಿ ಬಳಸಿದ್ದಾರೆ.

ಈಗ ಅಫೀಮಿನ ಶುದ್ಧರೂಪ ಹಾಗೂ ಅತ್ಯಂತ ತೀವ್ರವಾಗಿ ಪರಿಣಾಮ ಬೀರುವ ಹೆರಾಯಿನ್ ಜಾಗತಿಕ ಮಟ್ಟದಲ್ಲಿ ಅತ್ಯಂತ ಅಪಾಯಕಾರಿಯಾದ ಮಾದಕವಸ್ತುವಾಗಿ ಹೊರಹೊಮ್ಮಿದೆ. ಒಂದು ಕಿಲೋ ಹೆರಾಯಿನ್ ಬೆಲೆ ಒಂದು ಕೋಟಿ ರೂಪಾಯಿಗೂ ಹೆಚ್ಚು. ಹೆರಾಯಿನ್ ಉತ್ಪಾದನೆ/ಸಾಗಾಣಿಕೆ ದೊಡ್ಡ ದಂಧೆಯಾಗಿ ಪಾತಕಿಗಳ ಮುಖ್ಯ ಉದ್ಯೋಗವಾಗಿ ಬೆಳೆದಿದೆ. ಹೆರಾಯಿನ್‌ಅನ್ನು ಸುಟ್ಟು ಹೊಗೆ ಸೇವಿಸುವುದು (ಚೇಸಿಂಗ್) ಅಥವಾ ಇನ್‌ಜೆಕ್ಷನ್ ಮೂಲಕ ರಕ್ತನಾಳದೊಳಕ್ಕೆ ತೆಗೆದುಕೊಳ್ಳುವುದು ಹೆರಾಯಿನ್ ಬಳಕೆಯ ವಿಧಾನಗಳಾಗಿವೆ. ಅತ್ಯಂತ ವೇಗವಾಗಿ ಅತ್ಯಲ್ಪಕಾಲದಲ್ಲಿ ಹೆರಾಯಿನ್‌ಗೆ ಚಟ-ಅವಲಂಬನೆ ಬೆಳೆಯುತ್ತದೆ. ಹೆರಾಯಿನ್‌ನ ಅಶುದ್ಧರೂಪ ಬ್ರೌನ್‌ಶುಗರ್, ಅಫೀಮಿನ ಇನ್ನೊಂದು ಅವತಾರ. ಕೊಡೀನ್ ಅನ್ನು ಕೆಮ್ಮನ್ನು ನಿಲ್ಲಿಸಲು ಬಳಸಲಾಗುತ್ತದೆ. ಹೀಗಾಗಿ ಕೆಮ್ಮಿನ ಸಿರಪ್ಪನ್ನು ಸೇವಿಸುವ ಚಟ ಎಲ್ಲೆಡೆ ಕಂಡುಬರುತ್ತಿದೆ. ಮಾರ್ಫಿನ್ ಇಂಜೆಕ್ಷನ್ ಹಾಗೂ ಫೆಥಿಡಿನ್ ಇಂಜೆಕ್ಷನ್ (ಕೃತಕ ಮಾರ್ಫಿನ್) ವೈದ್ಯರು, ವೈದ್ಯ ಸಿಬ್ಬಂದಿಯಲ್ಲಿ ಅಥವಾ ರೋಗಿಗಳಲ್ಲಿ ಚಟವಾಗಿ ರೂಪುಗೊಳ್ಳುತ್ತದೆ.

5. ಗ್ರಾಂ ಮಾರ್ಫಿನ್‌ನಿಂದ ಅವಲಂಬನೆ ಕೆಲವೇ ದಿನಗಳಲ್ಲಿ ಅಥವಾ ವಾರಗಳಲ್ಲಿ 300 ಗ್ರಾಂಗೆ ಬೆಳೆಯಬಹುದು ಎಂಬುದು ಗಮನಾರ್ಹ. ಹೆರಾಯಿನ್ (ಮಾರ್ಫಿನ್), ಕೊಡೀನ್ ಚಟದಿಂದ ಬರುವ ಹಿಂದೆಗೆತದ ಲಕ್ಷಣಗಳು ತೀವ್ರ ಸ್ವರೂಪದಲ್ಲಿದ್ದು ವ್ಯಕ್ತಿಗೆ ಅತೀವ ಯಾತನೆಯನ್ನು ಕೊಡುತ್ತವೆ.

- ತೀವ್ರ ಬೇಸರ, ದುಃಖ, ಚಡಪಡಿಕೆ, ಭಯ
- ವಾಕರಿಕೆ ಮತ್ತು ವಾಂತಿ
- ಮಾಂಸಖಂಡಗಳ ವಿಪರೀತ ನೋವು / ಸೆಳೆತ
- ವಿಪರೀತ ಬೆವರು, ಆಕಳಿಕೆ
- ಕಣ್ಣೀರು ಮತ್ತು ಮೂಗಿನಲ್ಲಿ ನೀರು
- ಜ್ವರ ಮತ್ತು ನಿದ್ರಾಹೀನತೆ

ಈ ತೊಂದರೆಗಳಿಂದ ಪಾರಾಗಲು ಅಫೀಮನ್ನು ಪಡೆದು ಸೇವಿಸಲು ವ್ಯಕ್ತಿ ಹಾತೊರೆಯುತ್ತಾನೆ. ಅತ್ಯಂತ ಹೀನಾಯ ಕೃತ್ಯಗಳನ್ನು ಮಾಡಲೂ ಸಿದ್ಧನಾಗುತ್ತಾನೆ.

ಭ್ರಾಮಕ ಸುಖಾನುಭವದ ಆಸೆಯಿಂದ, ವಾಸ್ತವಿಕ ಕಟು ಸತ್ಯ ನೋವುಗಳಿಂದ ಬಿಡುಗಡೆಹೊಂದಲು, ಹೆರಾಯಿನ್, ಬ್ರೌನ್‌ಶುಗರ್ ಮಾರ್ಫಿನ್, ಫೆಥಿಡಿನ್, ಕೊಡೀನನ್ನು ಪ್ರಾರಂಭಿಸಿದ ವ್ಯಕ್ತಿ, ಮತ್ತೆ ಭ್ರಾಮಕ ಸ್ಥಿತಿ / ತೀವ್ರ ಹಿಂಸೆ / ನೋವನ್ನು ಅನುಭವಿಸುವ ಸ್ಥಿತಿಗೆ ಒಳಗಾಗಿ ತನಗೆ, ಎಲ್ಲರಿಗೆ ಮತ್ತು ಸಮಾಜಕ್ಕೆ ಅಪಾಯಕಾರಿಯಾಗುತ್ತಾನೆ. ಈ ವಸ್ತುಗಳ ಸಂಪಾದನೆಗಾಗಿ ಎಂತಹ ಕೆಟ್ಟ ಅಪರಾಧವನ್ನು ಮಾಡಲೂ ಸಿದ್ಧನಾಗುತ್ತಾನೆ. ಸಮಾಜಕ್ಕೆ ಅಪಾಯಕಾರಿಯಾಗುತ್ತಾನೆ.

ಇಂಜೆಕ್ಷನ್ ಮೂಲಕ ಅಫೀಮನ್ನು ಬಳಸುವ ವ್ಯಕ್ತಿಗಳು ಅಪಾಯಕಾರಿ ಎಚ್.ಐ.ವಿ. ಸೋಂಕು, ಏಡ್ಸ್, ಇತರ ಲೈಂಗಿಕ ರೋಗಗಳು, ಲಿವರ್ ಉರಿಯೂತ, ಹೆಪಟೈಟಿಸ್ ಬಿ ಸೋಂಕು, ಷಂಡತನ, ಬಂಜೆತನ ಇತ್ಯಾದಿ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾರೆ.

**'ಡಿ ಅಡಿಕ್ಷನ್' ಚಿಕಿತ್ಸೆ (ಚಟವಿಮುಕ್ತಿ ಚಿಕಿತ್ಸೆ):** ಸಾಮಾನ್ಯವಾಗಿ ಈ ಚಿಕಿತ್ಸೆ ಒಳರೋಗಿ ಘಟಕದಲ್ಲಿ ನಡೆಯುವುದು ಕ್ಷೇಮ. ಆನಂತರ ಓಪಿಯಂ ರಿಪ್ಲೇಸ್‌ಮೆಂಟ್ (ಅಫೀಮು ಬದಲಿ) ಚಿಕಿತ್ಸೆಯಾಗಿ ಮೆಥಡೋನ್ / ನಾಲ್‌ಟ್ರಾಕ್ಸೋನ್‌ನನ್ನು ಹಲವಾರು ವರ್ಷಗಳ ಕಾಲ ಸೇವಿಸಬೇಕು. ಬುಪ್ರೆನಾರ್ಫಿನ್ ಮಾತ್ರೆಯ ಸೇವನೆಯಿಂದ ಅಫೀಮಿನ ಬಳಕೆ ತಗ್ಗುತ್ತದೆ. ಮನೋಚಿಕಿತ್ಸೆ, ನಡೆವಳಿಕೆ (ವರ್ತನೆ) ಚಿಕಿತ್ಸೆ, ರಕ್ಷಿತ ಹಾಸ್ಟೆಲ್ ಮನೆಗಳಲ್ಲಿ ವಾಸ ಮತ್ತೆ ಅವರು ಅಫೀಮಿನ ದುರುಪಯೋಗ ಮಾಡದಂತೆ ಕಟ್ಟೆಚ್ಚರದ ವಾತಾವರಣದಿಂದ ಉಪಯೋಗವಿದೆ. ಆದರೂ ಚಟದ ಮರುಕಳಿಕೆ ಸಾಮಾನ್ಯ ಅಫೀಮನ್ನು ಸೇವಿಸದಂತೆ ಮುಂಜಾಗ್ರತೆ ಕ್ರಮವೇ ಅತ್ಯಂತ ಪರಿಣಾಮಕಾರಿ.

**7. ನೋವು ನಿವಾರಕಗಳು :** ನೋವು ನಿವಾರಕ ಮಾತ್ರೆಯನ್ನು ಬಳಸದ ವ್ಯಕ್ತಿಯೇ ಇಲ್ಲ ಎನ್ನಬಹುದು. ಆಸ್ಪ್ರೋ, ಅನಾಸಿನ್, ಸಾರಿಡಾನ್, ಕ್ರೋಸಿನ್‌ನಿಂದ ಹಿಡಿದು ಬೂಫೆನ್, ನೈಸ್, ವೊವೆರಾನ್, ಪ್ರಾಕ್ಸಿವಾನ್‌ವರೆಗೆ ಅನೇಕ ರೀತಿಯ ನೋವು ನಿವಾರಕ ಮಾತ್ರೆಗಳು ಭರದಿಂದ ಮಾರಾಟವಾಗುತ್ತವೆ ಮತ್ತು ಸೇವಿಸಲ್ಪಡುತ್ತವೆ. ಟಿಡಿಜೆಸಿಕ್, ಮಾರ್ಫಿನ್, ಫೆಥಿಡಿನ್ ಇಂಜೆಕ್ಷನ್‌ಗಳೂ ವೈದ್ಯರಿಂದ ಬಳಸಲ್ಪಟ್ಟು ಆನಂತರ ರೋಗಿಗಳು ಸ್ವಯಂ ತಾವೇ ಅವುಗಳ ದುರುಪಯೋಗ ಮಾಡಲು ಪ್ರಾರಂಭಿಸುತ್ತಾರೆ. ಮೊದಲು ನೋವು ನಿವಾರಕವಾಗಿ, ಆನಂತರ ಅಮಲು, ಮನೋಪ್ರಚೋದಕವಾಗಿ ಬಳಸಲು ಪ್ರಾರಂಭಿಸುತ್ತಾರೆ. ದೀರ್ಘಕಾಲ ನೋವಿನಿಂದ ನರಳುವವರು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಮಾತ್ರೆಗಳನ್ನು ಬಳಸಿ, ಅವುಗಳ ಮೇಲೆ ಅವಲಂಬಿತರಾಗುತ್ತಾರೆ. ನೋವನ್ನು ಶಮನ ಮಾಡುವ ಮಾತ್ರೆಗಳನ್ನು ಬಳಸುವಾಗ ಎಚ್ಚರಿಕೆಯಿಂದ, ಬಳಸಬೇಕು.

**8. ನಿದ್ರಾಜನಕ ಹಾಗೂ ಶಮನಕಾರಿ ಮಾತ್ರೆಗಳು :** ಶೇಕಡಾ 80 ರಷ್ಟು ಜನರು ಒಂದಲ್ಲ ಒಂದು ದಿನ ನಿದ್ರಾಹೀನತೆಯಿಂದ ಬಳಲುತ್ತಾರೆ. ಚಿಂತೆಯಿಂದಲೋ, ಒತ್ತಡದಿಂದಲೋ, ನೋವು, ಅಪಮಾನಗಳಿಂದಲೋ, ಶಾರೀರಕ ನೋವುಗಳಿಂದಲೋ ಅರಕ್ಷಿತ ಭಾವನೆಗಳಿಂದಲೋ, ಭಾವೋದ್ವೇಗಗಳಿಂದಲೋ ನಿದ್ರೆ ಬರುವುದಿಲ್ಲ ಅಥವಾ ಬಂದರೂ ಬೇಗ, ಮಧ್ಯೆ ಮಧ್ಯೆ ಎಚ್ಚರವಾಗಿ ಹಿಂಸೆಯಾಗುತ್ತದೆ. ಬೆಳಿಗ್ಗೆ ಉಲ್ಲಾಸ ಉತ್ಸಾಹಗಳಿರುವುದಿಲ್ಲ. ಹೀಗಾಗಿ ನಿದ್ರೆಗಾಗಿ ಮಾತ್ರೆ ಔಷಧಿಗಳ ಮೊರೆ ಹೋಗುವವರ ಸಂಖ್ಯೆ ಹೆಚ್ಚತೊಡಗಿದೆ. ಯಾವುದೇ ಶಾರೀರಕ ಮತ್ತು ಮಾನಸಿಕ ಕಾಯಿಲೆಯಲ್ಲಿ ನಿದ್ರಾಭಂಗವಿರುತ್ತದೆ. ವೈದ್ಯರು ಬಹುತೇಕ


Digitised by Bharatavani, CIIL

ಜನರಿಗೆ ಇತರ ಔಷಧಿಗಳ ಜೊತೆಜೊತೆಗೆ ನಿದ್ರಾಮಾತ್ರೆಗಳನ್ನೂ ಬರೆದು ಕೊಡುತ್ತಾರೆ.

ಉದಾ :

1. ಫೀನೋಬಾರ್ಬಿಟೋನ್
2. ಡೈಜಿಪಾಂ
3. ನೈಟ್ರಜೆಪಾಂ
4. ಲೊರಾಜೆಪಾಂ
5. ಕ್ಲೋರ್‌ಡಯಾಜಿಪಾಕ್ಸೈಡ್
6. ಆಲ್ಪ್ರೊಜೊಲಾಮ್ ಇತ್ಯಾದಿ

ಅವಲಂಬನೆ ಬೆಳೆಯುವ ಗುಣ ಉಳ್ಳವರು, ಸದಾ ಒತ್ತಡ ದಲ್ಲಿರುವವರು, ಆತಂಕ/ಖಿನ್ನತೆ ರೋಗದಿಂದ ಬಳಲುವವರು, ಜೀವನ ಕೌಶಲ ಕಡಿಮೆ ಇದ್ದು ನಿದ್ದೆ ಮಾಡಿ ಸಮಸ್ಯೆಗಳಿಂದ ದೂರವಿರ ಬಯಸುವವರು, ನೋವು ನಿರಾಶೆಗಳನ್ನು ಮರೆಯಬಯಸುವವರು ನಿದ್ರಾ ಮಾತ್ರೆಗಳಿಗೆ ದಾಸರಾಗುತ್ತಾರೆ. ಮಾತ್ರೆಯನ್ನು ವರ್ಷಾನುಗಟ್ಟಳೆ ಬಿಡದೇ ಸೇವಿಸುತ್ತಾರೆ ಅಥವಾ ಸೇವಿಸುವ ಪ್ರಮಾಣವನ್ನು ಹೆಚ್ಚಿಸುತ್ತಾ ಹೋಗುತ್ತಾರೆ. ದಿನಕ್ಕೆ 50 ಅಥವಾ 60 ಮಾತ್ರೆಗಳನ್ನು ಸೇವಿಸಿಯೂ ನಿದ್ರೆ ಬರುವುದಿಲ್ಲ ಎನ್ನುತ್ತಾರೆ. ಸ್ತ್ರೀಯರು ಹೆಚ್ಚಾಗಿ ಈ ಸಮಸ್ಯೆಗೆ ಒಳಗಾಗುತ್ತಾರೆ. (ಗಂಡಸರು ನಿದ್ರೆಗಾಗಿ ಹೆಚ್ಚು ಆಲ್ಕೋಹಾಲನ್ನು ಬಳಸುತ್ತಾರೆ!)

**ಚಿಕಿತ್ಸೆ:** ಥಟ್ಟನೆ ಮಾತ್ರೆಯನ್ನು ನಿಲ್ಲಿಸುವುದು, ನಿದ್ರೆಗಾಗಿ ಇತರ ಸುರಕ್ಷಿತ ಔಷಧಿಯನ್ನು (ಉದಾ : ಖಿನ್ನತೆ ನಿವಾರಕ – ಅಮಿಟ್ರಿಪ್ಟಲಿನ್ ಮಾತ್ರೆ) ನೀಡುವುದು. ಆತಂಕ, ಖಿನ್ನತೆಗೆ ಚಿಕಿತ್ಸೆ, ಮಾನಸಿಕ ಒತ್ತಡವನ್ನು ನಿವಾರಿಸಿಕೊಳ್ಳುವ ವಿಧಿ ವಿಧಾನ ಹಾಗೂ ಮನಸ್ಸನ್ನು ಪ್ರಶಾಂತ ವಾಗಿಟ್ಟುಕೊಳ್ಳಲು ಸಲಹೆಗಳು ಪ್ರಯೋಜನಕಾರಿ.

**9. ಆಂಫಿಟಮಿನ್ಸ್ ಡೆಕ್ಸಿಡ್ರಿನ್ :** ನಿದ್ರೆ ದೂರವಾಗಿಸಲು, ಹಸಿವನ್ನು ಕಡಿಮೆ ಮಾಡಲು ಬಳಸಲ್ಪಡುತ್ತಿದ್ದ 'ಡೆಕ್ಸಿಡ್ರಿನ್' ಮಾತ್ರೆಯ ಉತ್ಪಾದನೆಯನ್ನು ನಿಲ್ಲಿಸಲಾಗಿದೆ. ಇದು ಚಟವನ್ನುಂಟುಮಾಡುವ ಔಷಧಿಯಾಗಿ ಮಾರ್ಪಾಟಾಯಿತು. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳು ಬೊಜ್ಜು, ಹೆಚ್ಚುವರಿ ತೂಕದಿಂದ ಮುಕ್ತಿ ಪಡೆಯಲು ಈ ಮಾತ್ರೆಯನ್ನು ಬಳಸಿ, ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತಿದ್ದರು. ಆಂಫಿಟಮಿನ್ ದುರ್ಬಳಕೆಯಿಂದ ಚಿತ್ತವಿಕಲತೆ ತೀವ್ರ ರೀತಿಯ ಮಾನಸಿಕ ಕಾಯಿಲೆ ಬರಬಹುದು.

**10 ಕೊಕೇನ್ :** ದಕ್ಷಿಣ ಅಮೆರಿಕೆಯಲ್ಲಿ ಸ್ಥಳೀಯ ಜನ ಮನೋಲ್ಲಾಸ ಪಡೆಯಲು ಕೋಕಾಗಿಡದ ಎಲೆಗಳನ್ನು ತಿನ್ನುತ್ತಿದ್ದರು. 1890ರಲ್ಲಿ ಕೊಕೇನ್ ಆಲ್ಕಲಾಯಿಡನ್ನು ಈ ಗಿಡದಿಂದ ಪ್ರತ್ಯೇಕಿಸಿ, ಸ್ಥಳೀಯ ಅರಿವಳಿಕೆ ಔಷಧಿಯಾಗಿ (Local Anesthesia) ಕಣ್ಣು, ಮೂಗು, ಗಂಟಲ ಶಸ್ತ್ರಕ್ರಿಯೆಯಲ್ಲಿ ಬಳಸಲಾಯಿತು. ಆನಂತರ ಕೊಕೇನ್ ಪ್ರಚೋದಕ ಮಾದಕ ವಸ್ತುವಾಗಿ ದುರ್ಬಳಕೆಗೆ ಈಡಾಗಿದೆ. ಯುವಕರು ಕೊಕೇನ್ (ಕ್ರಾಕ್) ಅನ್ನು ಹೆಚ್ಚು ಬಳಸುತ್ತಾರೆ. ಇಂಜೆಕ್ಷನ್ ರೂಪದಲ್ಲಿ ಏಕಾಗ್ರತೆಯ ಹೆಚ್ಚಳ. ಖುಷಿ, ನಾನು ಚೆನ್ನಾಗಿದ್ದೇನೆಂಬ ಭ್ರಮೆ. ಹಸಿವು, ನಿದ್ರೆ ಕಡಿಮೆಯಾಗುವುದು. ಚುರುಕುತನ ಈ ಮದ್ದಿನಿಂದ ಬರುತ್ತದೆ ಎಂದು ಹೇಳಲಾಗಿದೆ. ಕೊಕೇನ್ ಪುಡಿಯನ್ನು ನಶ್ಯದ ಹಾಗೆ ಮೂಗಿಗೆ ಏರಿಸುತ್ತಾರೆ. (ಸ್ನಾರ್ಟಿಂಗ್ ಅಥವಾ ಟೂಟಿಂಗ್) ಅಥವಾ ಇಂಜೆಕ್ಷನ್ ಮುಖಾಂತರ ಚರ್ಮದೊಳಕ್ಕೆ ಅಥವಾ ರಕ್ತನಾಳದೊಳಕ್ಕೆ ಚುಚ್ಚಿಕೊಳ್ಳುತ್ತಾರೆ ಅಥವಾ ಸುಟ್ಟು ಹೊಗೆಯನ್ನು ಸೇವಿಸುತ್ತಾರೆ. (ಫ್ರೀ ಬೇಸಿಂಗ್).

ಕೊಕೇನ್ ಚಟದಿಂದ ಬರುವ ಹಿಂದೆಗೆತದ ಚಿಹ್ನೆಗಳು ಹೀಗಿವೆ. ಬೇಸರ, ದುಃಖ, ಯಾವುದರಿಂದಲೂ ಸಂತೋಷವಿಲ್ಲದಿರುವುದು. ಆತಂಕ, ಭಯ, ಸಿಟ್ಟು, ವಿಪರೀತ ಆಯಾಸ, ದಣಿವು, ಚಡಪಡಿಕೆ ಮತ್ತು ಅತಿ ನಿದ್ರೆ ಮಾಡುವುದು. ಕೆಲವರಲ್ಲಿ ಆತ್ಮಹತ್ಯಾ ಆಲೋಚನೆ ಮತ್ತು ಪ್ರಯತ್ನ ಕಂಡುಬರುವುದು.

**ಚಿಕಿತ್ಸೆ:** ನಿರ್ದಿಷ್ಟ ಪ್ರತಿ ಔಷಧವಿಲ್ಲ. ಡಿಟಾಕ್ಸಿಫಿಕೇಶನ್ (ವಿಷಪ್ರಭಾವ ತೆಗೆಯುವುದು) ಮತ್ತು ಮನೋಚಿಕಿತ್ಸೆ, ಪುನರ್ವಸತಿ, ಮುಂಜಾಗ್ರತಾ ಕ್ರಮಗಳು ಲಾಭಕಾರಿ.

**ಭ್ರಮಾಜನಕಗಳು (ಸೈಕೆಡಿಲಿಕ್ಸ್)**

ದೃಶ್ಯ ಭ್ರಮೆ, ಧ್ವನಿ ಭ್ರಮೆ ಮತ್ತು ವಿವಿಧ ವಿಚಿತ್ರ ಭ್ರಮೆಗಳನ್ನುಂಟುಮಾಡುವ ಅನೇಕ ವಸ್ತುಗಳನ್ನು ಮನುಷ್ಯ ಬಳಸುತ್ತಿದ್ದಾನೆ.

ಉದಾಹರಣೆಗೆ ನೈಸರ್ಗಿಕಮೂಲ : ಕೆಲವು ಬಗೆಯ ಅಣಬೆಗಳನ್ನು ತಿನ್ನುವುದು (ಸೈಲೋಸೈಬಿನ್), ಕಳ್ಳಿ–ಮೆಸ್ಕಲಿನ್, ಹರ್ಮಿನ್, ಕೃತಕ ತಯಾರಿಕೆಗಳಾದ ಎಲ್‌ಎಸ್‌ಡಿ (ಲೈಸರ್ಜಿಕ್ ಆಸಿಡೈಡ್ ಈಥೈಲ್‌ಮೈಡ್), ಆಂಫಿಟಮಿನ್ಸ್

**ಇತರೆ i) ಫೆನ್‌ಸೈಕ್ಲಿಡಿನ್, PCP ಏಂಜಲ್ ಡಸ್ಟ್**

ಅರಿವಳಿಕೆ ಔಷಧಿಯಾಗಿ ಬಳಕೆಗೆ ಬಂದ ಫೆನ್ ಸೈಕ್ಲಿಡಿನ್ ಆನಂತರ ಮನೋಪ್ರಚೋದಕ ಔಷಧಿಯಾಗಿ ದುರ್ಬಳಕೆಗೆ ಈಡಾಗಿದೆ. ರಕ್ತನಾಳದೊಳಕ್ಕೆ ಸೇರಿಸುವುದು ಅಥವಾ ಹೊಗೆ ರೂಪದಲ್ಲಿ ಸೇವಿಸುವುದು. ವಿವಿಧ ಕಲ್ಪನೆಗಳು, ಭ್ರಮೆಗಳು, ಹಿತಕರವಾದ ಅನುಭವಗಳಿಂದ ವ್ಯಕ್ತಿ ಸುಖಿಸುತ್ತಾನೆ.

ii) ಕೆಟಮಿನ್: ಇದು ಕೂಡ ಅರಿವಳಿಕೆ ಔಷಧಿ

iii) ಉಗುರಿನ ಬಣ್ಣವನ್ನು ತೆಗೆಯುವ ದ್ರವವನ್ನು ಮೂಸುವುದು.

iv) ಜೆರಾಕ್ಸ್ ಇಂಕನ್ನು ಮೂಸುವುದು

v) ಪೆಟ್ರೋಲನ್ನು ಬಟ್ಟೆಯ ಮೇಲೆ ಹಾಕಿ ಮೂಸುವುದು.

vi) ಐಯೋಡೆಕ್ಸನ್ನು ಬ್ರೆಡ್‌ಗೆ ಹಚ್ಚಿ ತಿನ್ನುವುದು.

vii) ಕೆಲವು ಬಗೆಯ ಹಾವುಗಳಿಂದ ಕಚ್ಚಿಸಿಕೊಳ್ಳುವುದು ಇತ್ಯಾದಿ.

ಮನೋಪ್ರಚೋದಕ ಔಷಧಿಗಳನ್ನು ಬಳಸುವವರು ಯಾರು? ಅವುಗಳಿಂದ ಚಟವನ್ನು ಬೆಳೆಸಿಕೊಳ್ಳುವವರು ಯಾರು? ಅವರಲ್ಲಿ ಚಟ ಏಕೆ ಬೆಳೆಯುತ್ತದೆ?

- ಪ್ರೀತಿ ವಿಶ್ವಾಸಗಳಿಂದ ವಂಚಿತರಾದವರು, ಬಾಲ್ಯದಲ್ಲಿ ತಂದೆತಾಯಿಗಳ ತಿರಸ್ಕಾರ ಮತ್ತು ಕೋಪಕ್ಕೆ ಒಳಗಾದವರು, ಅತಿಯಾದ ಪ್ರೀತಿ/ಶಿಕ್ಷೆಗೆ ಒಳಗಾದವರು.
- ಅನಾರೋಗ್ಯಕರ, ಅಪನಂಬಿಕೆಯ ವಾತಾವರಣದಲ್ಲಿ ಬೆಳೆದವರು.
- ಶಾಲೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ ಅವಮಾನಕ್ಕೆ ಒಳಗಾದವರು. ಶಾಲೆ –ಕಾಲೇಜನ್ನು ಬಿಟ್ಟು, ವಿದ್ಯಾಭ್ಯಾಸವನ್ನು ನಿಲ್ಲಿಸಿದವರು
- ಅಪಕ್ವ ವ್ಯಕ್ತಿತ್ವ ಉಳ್ಳವರು. ಜೀವನದ ಕಷ್ಟ, ನಷ್ಟ, ಸೋಲು, ನಿರಾಶೆಗಳನ್ನು ನಿಭಾಯಿಸಲು ಬೇಕಾದ ಕೌಶಲ ಇಲ್ಲದವರು.

Digitised by Bharatavani, CIIL

- ಸುಲಭಕ್ಕೆ ಭಾವೋದ್ವೇಗಕ್ಕೆ ಒಳಗಾಗುವವರು, ಪದೇ ಪದೇ ನಿರಾಶೆಗೆ ಒಳಗಾಗುವವರು.
- ಕೀಳರಿಮೆಯಿಂದ ಬಳಲುವವರು.
- ತತ್‌ಕ್ಷಣದ ಖುಷಿ, ಲಾಭಕ್ಕೆ ಮಾರುಹೋಗುವ ಸ್ವಾಭಾವದವರು.
- ಖಿನ್ನತೆ, ಆತಂಕ ಇತ್ಯಾದಿ ಮಾನಸಿಕ ಅಸ್ವಸ್ಥತೆಯಿಂದ ಬಳಲುವವರು.
- ಅನುವಂಶೀಯವಾಗಿ ಯಾವುದೇ ಔಷಧಿ ವಸ್ತುವಿಗೆ ಅವಲಂಬನೆ/ಚಟ ಬೆಳೆಯುವ ದುರ್ಬಲತೆ ಇರುವವರು.
- ಸಾಮಾಜಿಕ ಆಸರೆ ಕಡಿಮೆ ಇದ್ದು ಒಂಟಿತನವನ್ನು ಅನುಭವಿಸುವವರು.
- ಸಮೀಪದಲ್ಲೇ ಈ ಔಷಧಿ/ವಸ್ತುಗಳು ಸುಲಭವಾಗಿ ಸಿಗುವ ಅವಕಾಶವಿರುವವರು.
- ಈ ಔಷಧಿ, ವಸ್ತುವನ್ನು ಸೇವಿಸುವ ವ್ಯಕ್ತಿಗಳ ಅಥವಾ ಗುಂಪಿನ ಸಂಪರ್ಕವಿದ್ದು ಸೇವಿಸಲು ಒತ್ತಡಕ್ಕೆ ಒಳಗಾಗುವವರು.
- ಇತರ ಮನರಂಜನಾ ಚಟುವಟಿಕೆ/ಹವ್ಯಾಸ ಇಲ್ಲದವರು.
- ಒತ್ತಡದ ಜೀವನ ಶೈಲಿಯಲ್ಲಿ ಬದುಕುತ್ತಿರುವವರು.

ಚಟ ಬೆಳೆಸುವ ಗುಣ ಒಂದು ಔಷಧದಿಂದ ಮತ್ತೊಂದು ಔಷಧದಲ್ಲಿ ಭಿನ್ನವಾಗಿರುತ್ತದೆ. ಅತ್ಯಂತ ತೀವ್ರ ರೀತಿಯಲ್ಲಿ, ಅತ್ಯಂತ ವೇಗ ಮತ್ತು ಅತ್ಯಲ್ಪಕಾಲದಲ್ಲಿ ಚಟ ಬೆಳೆಸುವ ಗುಣ ಅಫೀಮಿನಲ್ಲಿದೆ ಎಂಬುದು ಗಮನಾರ್ಹ.

**ಮುಂಜಾಗ್ರತೆ ಮತ್ತು ನಿವಾರಣಾ ಕ್ರಮಗಳು**

ಮನೋಪ್ರಚೋದಕ ಔಷಧಿಗಳಿಗೆ ಅವಲಂಬನೆ ಮತ್ತು ಚಟವನ್ನು ಬೆಳೆಸಿಕೊಂಡು ಅದರಿಂದ ಉಂಟಾಗುವ ದುಷ್ಪರಿಣಾಮಗಳಿಂದ ಬಳಲುವ ಬದಲು, ಚಿಕಿತ್ಸೆಗಾಗಿ ಪರದಾಡುವ ಬದಲು ಈ ಔಷಧಿ ವಸ್ತುವನ್ನು ಉಪಯೋಗಿಸದೇ ಇರುವುದು ಜಾಣತನ ಮತ್ತು ಕ್ಷೇಮಕರ. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೆ ಈ ಔಷಧಿಯನ್ನು ಬಳಸುವುದರ ವಿರುದ್ಧ ಎಚ್ಚರಿಕೆ ಮತ್ತು ತಿಳಿವಳಿಕೆ ನೀಡಬೇಕಾಗುತ್ತದೆ. ಈ ಆರೋಗ್ಯಶಿಕ್ಷಣ ಎಲ್ಲೆಡೆ ಹಾಗೂ ಸತತವಾಗಿ ನಡೆಯಬೇಕು.

- ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಮಾಹಿತಿ.
- ಶಾಲಾ-ಕಾಲೇಜುಗಳ ಶಿಕ್ಷಕರಿಗೆ ಮಾಹಿತಿ ಮತ್ತು ಮನೋಪ್ರಚೋದಕ ಔಷಧಿ-ವಸ್ತುಗಳನ್ನು ಬಳಸುತ್ತಿರುವವರನ್ನು ಪತ್ತೆಮಾಡಿ ಅವರಿಗೆ ಇವುಗಳನ್ನು ಉಪಯೋಗಿಸದಂತೆ ತಿಳಿಸುವುದು, ಆಪ್ತಸಲಹೆ, ಸಮಾಧಾನ ನೀಡುವುದು.
- ವಿವಿಧ ಕ್ಷೇತ್ರಗಳಲ್ಲಿ, ಉದ್ಯೋಗಗಳಲ್ಲಿ ಸಂಸ್ಥೆಗಳಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಮಾಹಿತಿ ಆರೋಗ್ಯ ಶಿಕ್ಷಣ.
- ಒತ್ತಡವನ್ನುಂಟುಮಾಡುವ ಉದ್ಯೋಗ – ವ್ಯವಹಾರಗಳಲ್ಲಿರುವವರಿಗೆ ಮಾಹಿತಿ.
- ಆರೋಗ್ಯಕರ ಮನರಂಜನಾ ವಿಧಾನಗಳನ್ನು, ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹ ಮತ್ತು ಅವಕಾಶಗಳು.
- ಮಾಧ್ಯಮಗಳಲ್ಲಿ ಧೂಮಪಾನ, ಮದ್ಯಪಾನ ದೃಶ್ಯಗಳು, ಜಾಹೀರಾತುಗಳು ಬರದಂತೆ ನೋಡಿಕೊಳ್ಳುವುದು.
- ಸಮಾಜದ ಗಣ್ಯರು, ಜನಪ್ರಿಯ ವ್ಯಕ್ತಿಗಳು, ಕ್ರೀಡೆ ಮತ್ತು ಸಿನಿಮಾ ಸ್ಟಾರ್‌ಗಳು ಬಹಿರಂಗವಾಗಿ ಈ ವಸ್ತುಗಳನ್ನು ಉಪಯೋಗಿಸದಿರುವುದು.
- ಗಾಂಜಾ ಅಫೀಮನ್ನು ನಿಷೇಧಿಸಿದಂತೆ ಹೊಗೆಸೊಪ್ಪು/ಮದ್ಯಸಾರವನ್ನು ನಿಷೇಧಿಸುವುದು ಅಥವಾ ಬಹಿರಂಗ ಬಳಕೆಗೆ ನಿಷೇಧವನ್ನು ಜಾರಿಗೆ ತರುವುದು.
- ಮಾದಕ ವಸ್ತುಗಳ ಉತ್ಪಾದನೆ, ಮಾರಾಟ, ಬಳಕೆಯ ವಿರುದ್ಧ ಇರುವ ಕಾನೂನು ಕ್ರಮಗಳನ್ನು ಬಿಗಿಯಾಗಿ ಅನುಷ್ಠಾನಕ್ಕೆ ತರುವುದು.
- ಮಾನಸಿಕ ಆರೋಗ್ಯವರ್ಧನೆಗೆ ಪ್ರಯತ್ನಿಸುವುದು.

ಜೀವನದಲ್ಲಿ ಬರುವ ಒತ್ತಡ ಸಮಸ್ಯೆಗಳನ್ನು ಚಿಂತೆಯನ್ನು ತಾತ್ಕಾಲಿಕವಾಗಿ ನಿವಾರಿಸಿಕೊಳ್ಳಲು, ತಾತ್ಕಾಲಿಕವಾದ ಆನಂದ ಪಡೆಯಲು ಮಾದಕ ವಸ್ತುಗಳಿಗೆ ಶರಣು ಹೋಗುವುದರಿಂದ ಅವುಗಳ ಸೇವನೆಯ ಚಟಕ್ಕೆ ಬಲಿಯಾಗುವುದಲ್ಲದೆ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಬದಲಾಗಿ ಕೆಲವು ಸಕಾರಾತ್ಮಕವಾದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅವುಗಳಿಗನುಗುಣವಾಗಿ ಜೀವನವನ್ನು ರೂಪಿಸಿಕೊಂಡರೆ ನಮ್ಮ ದೈಹಿಕ ಆರೋಗ್ಯ ಉತ್ತಮಗೊಳ್ಳುವುದಲ್ಲದೆ ಮಾನಸಿಕ ಆರೋಗ್ಯ ಲಭಿಸುತ್ತದೆ. ಮಾನಸಿಕ ಆರೋಗ್ಯ ವರ್ಧನೆಗೆ ಅನುಕೂಲಕರವಾದ 12 ಸೂತ್ರಗಳನ್ನು ಈ ಕೆಳಗೆ ಪಟ್ಟಿಮಾಡಿದೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಎಲ್ಲರೂ ಮಾಡುವುದು ಶ್ರೇಯಸ್ಕರ.

**ಮಾನಸಿಕ ಆರೋಗ್ಯವರ್ಧನೆಗೆ 12 ಸೂತ್ರಗಳು**

- ನಿಮ್ಮ ಅಗತ್ಯಗಳನ್ನು ತಗ್ಗಿಸಿ ಸರಳ, ತೃಪ್ತ ಜೀವನ ಮಾಡಿ ಹಣವನ್ನು ವಿವೇಚನೆಯಿಂದ ಸಂಪಾದಿಸಿ ಮತ್ತು ಬಳಸಿ. ಆದಾಯಕ್ಕಿಂತ ಖರ್ಚು ಹೆಚ್ಚುವುದು ಬೇಡ.
- ಇತರರ ಬಗ್ಗೆ ನಿರೀಕ್ಷೆಗಳನ್ನು ಕಡಿಮೆ ಮಾಡಿ. ಅವರು ನಿಮ್ಮೊಂದಿಗೆ ಹೊಂದಿಕೊಳ್ಳಲು ಅವಕಾಶಕೊಡಿ. ಎಲ್ಲರೊಡನೆ ಸ್ನೇಹದಿಂದಿರಿ. ಅವರನ್ನು ಅರ್ಥಮಾಡಿಕೊಳ್ಳಿ.
- ನಿರಾಶಾವಾದ ಬೇಡ. ಒಳ್ಳೆಯದಾಗುತ್ತದೆ ಎಂಬ ಭರವಸೆ ಇರಲಿ. ಎಲ್ಲರಲ್ಲಿ ಮತ್ತು ಎಲ್ಲದರಲ್ಲಿ ಒಳ್ಳೆಯದನ್ನು ನೋಡಿ.
- ವರ್ತಮಾನ ಮುಖ್ಯ. ನಿನ್ನೆ ಮತ್ತು ನಾಳೆಯ ಬಗ್ಗೆ ಚಿಂತೆ ಬೇಡ.
- ವಾಸ್ತವಿಕತೆಯನ್ನು ಒಪ್ಪಿಕೊಳ್ಳಿ ಮತ್ತು ಅದಕ್ಕೆ ಹೊಂದಿಕೊಳ್ಳಿ. ನಿಮ್ಮನ್ನು, ಇತರರನ್ನು ಶ್ಲಾಘಿಸಿ.
- ಒಂಟಿಯಾಗಿರಬೇಡಿ. ಜನರೊಂದಿಗೆ ಬೆರೆಯಿರಿ. ಸಂಘ ಸಂಸ್ಥೆಗಳ ಸದಸ್ಯರಾಗಿ, ಧಾರ್ಮಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಿ.
- ಸೃಜನಶೀಲ ಚಟುವಟಿಕೆಗಳು, ಸಂಗೀತ, ಸಾಹಿತ್ಯ, ಯೋಗ, ಧ್ಯಾನ, ಕ್ರೀಡೆಗಳಿಗೆ ದಿನವೂ ಒಂದು ಗಂಟೆ ಮೀಸಲಿಡಿ.
- ನಿಮ್ಮ ಭಾವನೆ, ಅನಿಸಿಕೆಗಳನ್ನು ಆತ್ಮೀಯರೊಂದಿಗೆ ಹೇಳಿಕೊಳ್ಳಿ, ನಿಮ್ಮ ಪರಿಸರವನ್ನು ಚೆನ್ನಾಗಿಟ್ಟುಕೊಳ್ಳಿ.


Digitised by Bharatavani, CIIL

- ಸದಾ ಚಟುವಟಿಕೆಯಿಂದಿರಿ. ನೀವು ಮಾಡುವ ಕೆಲಸಗಳಿಂದ ಸಂತೋಷಪಡಿ.
- ನಿಮ್ಮ ಜ್ಞಾನ ಕೌಶಲಗಳನ್ನು ಉತ್ತಮಪಡಿಸಿಕೊಳ್ಳಿ, ಜೀವನ ಘಟನೆಗಳಿಗೆ ಪೂರ್ವಸಿದ್ಧತೆ ಮಾಡಿ, ಸರಿಯಾಗಿ ನಿಭಾಯಿಸಿ.
- ಪಾಲಿಗೆ ಬಂದದ್ದನ್ನು ಸ್ವೀಕರಿಸಿ. ಹಲವು ಸಮಸ್ಯೆಗಳಿದ್ದಾಗ, ಒಂದೊಂದು ಸಮಸ್ಯೆಯನ್ನೂ ಇತರರ ನೆರವಿನೊಂದಿಗೆ ನಿಭಾಯಿಸಿ. ಸಾಧಿಸಬಹುದಾದ ಗುರಿಗಳಿರಲಿ.
- ಸೊಪ್ಪು, ತರಕಾರಿ, ಹಾಲು, ಹಣ್ಣು ಇರುವ ಆಹಾರವನ್ನು ಹಿತಮಿತವಾಗಿ, ವೇಳೆ ವೇಳೆಗೆ ಸರಿಯಾಗಿ ಸೇವಿಸಿ. ಸ್ವಚ್ಛತೆ ಬಗ್ಗೆ ಗಮನ ಕೊಡಿ. ನಿತ್ಯ ವ್ಯಾಯಾಮ, ನಡಿಗೆ ಮಾಡಿ. ಒಬ್ಬ ವೈದ್ಯರ ಮಾರ್ಗದರ್ಶನದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳಿ.

–ಸಿ.ಆರ್.ಚಂ.

## ಮನೋರೋಗಗಳು

ಮನಸ್ಸೆಂದರೆ ದೇಹದೊಳಗಿರುವ ಚೇತನ. ಮನಸ್ಸೇ ನಮ್ಮೆಲ್ಲ ನಡೆ, ನುಡಿ, ಆಸೆ, ಭಾವನೆಗಳು, ಚಟುವಟಿಕೆಗಳು, ನೆನಪು, ಆಲೋಚನೆಗಳನ್ನು ನಿರ್ದೇಶಿಸುತ್ತದೆ. ಈ ಮನಸ್ಸು ಎಲ್ಲಿದೆ ಎಂದರೆ, ಅದು ನಮ್ಮ ಮಿದುಳಿನಲ್ಲಿದೆ. ಮಿದುಳೊಂದು ಅದ್ಭುತವಾದ ಅಂಗ, ಹತ್ತು ಸಾವಿರ ಕೋಟಿ ನರಕೋಶಗಳು ಕೆಲಸಮಾಡುವ ಒಂದು ವಿಸ್ಮಯ. ಮಿದುಳಿನ ಮುಂಭಾಗ ನಮ್ಮ ಆಲೋಚನೆಗಳಿಗೆ, ಸಾಮಾಜಿಕ ನಡೆವಳಿಕೆ, ವಿಷಯ ವಿಶ್ಲೇಷಣೆಗೆ, ಚಿಂತನೆಗೆ ಕಾರಣವಾದರೆ ಮಿದುಳಿನ ಹಿಂಭಾಗ ನೋಡಿದ್ದೆಲ್ಲವನ್ನೂ ಅರ್ಥೈಸಿ ದಾಖಲಿಸುತ್ತದೆ. ಕಪೋಲಭಾಗ ಕೇಳುವ ಧ್ವನಿಗಳನ್ನು ಗ್ರಹಿಸಿ ದಾಖಲಿಸುತ್ತದೆ. ಪಾರ್ಶ್ವಭಾಗ ವಿವಿಧ ಕೆಲಸ ಕಾರ್ಯಗಳನ್ನು ನಿರ್ದೇಶಿಸುತ್ತದೆ.

ಮಿದುಳಿನ ಲಿಂಬಿಕ್ ವ್ಯವಸ್ಥೆಯು ನಮ್ಮ ಆಹಾರ ಸೇವನೆ, ನೀರಡಿಕೆ, ಲೈಂಗಿಕ ಕ್ರಿಯೆ ಹಾಗೂ ಭಾವನೆಗಳನ್ನು ನೋಡಿಕೊಳ್ಳುತ್ತದೆ. ಹಾಗೆಯೇ ಅಮಿಗ್ಡಿಲಾ, ಹಿಪೋಕಾಂಪಸಿ ಅಲ್ಪಕಾಲೀನ ನೆನಪಿನ ಶಕ್ತಿಗೆ ಕಾರಣವಾಗುತ್ತದೆ. ಅಲ್ಲಿಂದ ಮಾಹಿತಿ ಮಿದುಳಿನ ಮೇಲ್ಮೈಗೆ ಹೋಗಿ, ದೀರ್ಘಕಾಲೀನ ನೆನಪಿನ ಉಗ್ರಾಣಕ್ಕೆ ಹೋಗುತ್ತದೆ. ಅಸಿಸ್ಟಲ್ ಕೋಲಿನ್ ಎಂಬ ನರವಾಹಕವು ಮಾಹಿತಿಯನ್ನು ನರಕೋಶಗಳಲ್ಲಿ ಮುದ್ರಿಸಲು ನೆರವಾಗುತ್ತದೆ.




ಮಿದುಳಿನ ಮೇಲ್ಮೈ




ಲಿಂಬಿಕ್ ವ್ಯವಸ್ಥೆ

ಮಿದುಳಿನ ಮುಂಭಾಗದ ಚಲನ ಕ್ಷೇತ್ರವು ದೇಹದ ಅಂಗಾಂಗಗಳ ಚಲನೆಯನ್ನು ಪ್ರಾರಂಭಿಸಿದರೆ, ಉಪಮಸ್ತಿಷ್ಕವು ಚಲನೆಯ ಸಮತೋಲನವನ್ನು ನೋಡಿಕೊಳ್ಳುತ್ತದೆ. ನಾವು ತಾಯಿಗರ್ಭದಲ್ಲಿದ್ದಾಗಲೇ ಮಿದುಳಿನ ರಚನೆ ಪ್ರಾರಂಭವಾಗುತ್ತದೆ. ಹೆರಿಗೆಯಾದಾಗ ಮಿದುಳಿನ ಶೇಕಡಾ 60 ಭಾಗ ಬೆಳೆದಿರುತ್ತದೆ ಹಾಗೂ ಮಿದುಳಿನ ತೂಕ 350 ಗ್ರಾಂ ಗಳಿರುತ್ತವೆ. ಹುಟ್ಟಿದ ನಂತರ ಐದು ವರ್ಷಗಳಲ್ಲಿ ಮಿದುಳಿನ ಬೆಳವಣಿಗೆ ಪೂರ್ಣಗೊಳ್ಳುತ್ತದೆ. ವಯಸ್ಕರ ಮಿದುಳಿನ ತೂಕ 1250 ಗ್ರಾಂಗಳು

ಅನುವಂಶೀಯತೆ, ತಾಯಿಯ ಆರೋಗ್ಯ, ಆಕೆಯ ಪೌಷ್ಠಿಕತೆ, ಹುಟ್ಟಿದ ನಂತರ ಮಗುವಿನ ಪರಿಸರ, ತಂದೆತಾಯಿಗಳ ಲಾಲನೆ, ಪಾಲನೆ ಪ್ರಚೋದನೆಗಳು, ಶಿಕ್ಷಣ, ಅನಾರೋಗ್ಯ ಸಮಸ್ಯೆಗಳು, ಸಾಮಾಜಿಕ ವಾತಾವರಣ ಎಲ್ಲವೂ ವ್ಯಕ್ತಿಯ ಮಿದುಳು ಮತ್ತು ಮನಸ್ಸಿನ ವಿಕಾಸವನ್ನು ನಿರ್ಧರಿಸುತ್ತವೆ.

### ಕಾರ್ಯಘಟಕ: ನರಕೋಶ

ಹತ್ತು ಸಾವಿರ ಕೋಟಿ ನರಕೋಶಗಳು ಸದಾ ಚಟುವಟಿಕೆಯಿಂದ ಇದ್ದು ಮನಸ್ಸಿನ ಹಾಗೂ ಮಿದುಳಿನ ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತವೆ. ನರಗಳ ತುದಿಯಲ್ಲಿ ನರವಾಹಕಗಳಿದ್ದು ಅವು ಸಂದೇಶ ಸಾಗಾಟದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ನರವಾಹಕಗಳ (ನ್ಯೂರೋ ಟ್ರಾನ್ಸ್‌ಮಿಟರ್ಸ್) ಕೊರತೆ ಮತ್ತು ಹೆಚ್ಚಳ ಅಥವಾ ಅಸಮರ್ಪಕ ಕಾರ್ಯ ನಿರ್ವಹಣೆಯಿಂದ ಮನೋರೋಗಗಳು ಕಾಣಿಸಿಕೊಳ್ಳುತ್ತವೆ.

ಉದಾಹರಣೆಗೆ, ಡೋಪಮಿನ್ ಮತ್ತು ಸರೋಟೋನಿನ್ ನರವಾಹಕಗಳ ಪ್ರಮಾಣ ಕಡಿಮೆಯಾದಾಗ ಖಿನ್ನತೆ ರೋಗ ಕಂಡು ಬರುತ್ತದೆ. ಡೋಪಮಿನ್ ಹೆಚ್ಚಾದಾಗ ಅಥವಾ ಅತಿ ಸೂಕ್ಷ್ಮ ಸಂವೇದಿಯಾದಾಗ ಸ್ಕಿಜೊಫ್ರೀನಿಯಾ ಅಥವಾ ಮನಿಯಾ ರೋಗ ಬರಬಹುದು. ಅಸಿಟೈಲ್ ಕೋಲಿನ್ ಕಡಿಮೆಯಾದಾಗ ಮರೆವಿನಕಾಯಿಲೆ 'ಡೆಮೆನ್ಷಿಯ' ಕಾಣಿಸಿಕೊಳ್ಳುತ್ತದೆ.

Digitised by Bharatavani, CIIL

**ನರಕೋಶ**




ಮೂಲ: Hilgard Eri Atkineon RC and Atkonson R.L. (6th Edition), Introduction to Psychology, Osford and IBH Publishing Co., New Delhi, (1975), P. 33




ಸೈನಾಪ್ಸ್2

**ಮಾನಸಿಕ ಕಾಯಿಲೆಗಳು**

ಮಾನಸಿಕ ಕಾಯಿಲೆಯ ಸಾಮಾನ್ಯ ಲಕ್ಷಣಗಳೆಂದರೆ:

- ನಕಾರಾತ್ಮಕ ಭಾವನೆಗಳು ವಿಪರೀತ ಅಥವಾ ಕಾರಣವಿಲ್ಲದೆಯೇ ಅಥವಾ ಅಸಂಬದ್ಧವಾಗಿ ಭಯ, ದುಃಖ, ಕೋಪ, ಜಿಗುಪ್ಸೆ, ಮತ್ಸರಗಳು ಕಂಡು ಬರುವುದು.

- ನಕಾರಾತ್ಮಕ / ವಿಚಿತ್ರವಾದ / ಅಸಂಬದ್ಧವಾದ ಆಲೋಚನೆಗಳು, ನಂಬಿಕೆಗಳು, ಅವಾಸ್ತವಿಕ ವಿಚಾರಗಳು.

- ಮಾತು ತೀರಾ ಕಡಿಮೆ ಅಥವಾ ತೀರಾ ಹೆಚ್ಚು, ಮಾತಿನಲ್ಲಿ ಅರ್ಥವಿಲ್ಲ, ತರ್ಕವಿಲ್ಲ, ಸಮಯ, ಸನ್ನಿವೇಶಕ್ಕೆ ಹೊಂದುವುದಿಲ್ಲ.

- ವರ್ತನೆ ಮತ್ತು ನಿಷ್ಕ್ರಿಯತೆ ಅಥವಾ ವಿಪರೀತ ಅನಗತ್ಯ ಚಟುವಟಿಕೆ, ಇತರರಿಗೆ ತೊಂದರೆ ಮುಜುಗರವನ್ನುಂಟು ಮಾಡುವ ಅಥವಾ ಅಪಾಯಕಾರಿ ವರ್ತನೆಗಳು, ಅಸಮರ್ಪಕ, ಅಸಂಬದ್ಧ ವರ್ತನೆ, ಆತ್ಮಹತ್ಯೆ ಅಥವಾ ಆಕ್ರಮಣಕಾರಿ (ಹಿಂಸಾಚಾರದು ವರ್ತನೆ.

- ದೇಹದ ಪ್ರಾಥಮಿಕ ಕೆಲಸ ಕಾರ್ಯಗಳು ಏರುಪೇರಾಗುವುದು. ಆಹಾರ ಸೇವನೆ, ನಿದ್ರೆ, ಮೈಥುನ, ಮಲ-ಮೂತ್ರ ವಿಸರ್ಜನೆ ಹೆಚ್ಚು ಕಡಿಮೆಯಾಗುವುದು ಅಥವಾ ವ್ಯಕ್ತಿ ಇವನ್ನು ನಿರ್ಲಕ್ಷ್ಯ ಮಾಡುವುದು ಅಥವಾ ವಿಪರೀತವಾಗಿ ಮಾಡುವುದು

  - ಏಕಾಗ್ರತೆ, ಕಲಿಕೆ, ನೆನಪು ಕಡಿಮೆಯಾಗುವುದು. ಸರಿ ನಿರ್ಧಾರಗಳನ್ನು ಕೈಗೊಳ್ಳದಿರುವುದು, ಕಾರ್ಯಕಾರಣಗಳನ್ನು ಅರ್ಥಮಾಡಿಕೊಳ್ಳದಿರುವುದು.

  - ಸಾಮಾಜಿಕ ಸಂಬಂಧಗಳು / ನಡವಳಿಕೆಗಳು ಹಾಳಾಗುವುದು, ನೀತಿ ನಿಯಮಗಳನ್ನು ಪಾಲನೆ ಮಾಡದಿರುವುದು, ನೈತಿಕ ಪ್ರಜ್ಞೆ ಇಲ್ಲದಿರುವುದು, ಸ್ವಾರ್ಥಿಯಾಗಿ ಅಪರಾಧಗಳನ್ನು ಮಾಡುವುದು, ಕೆಲಸ ಕರ್ತವ್ಯಗಳನ್ನು ನಿರ್ಲಕ್ಷ್ಯ ಮಾಡುವುದು, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು.

- ದೇಹದಲ್ಲಿ ಯಾವ ಕಾಯಿಲೆ ಇಲ್ಲದಿದ್ದರೂ ವಿವಿಧ ಭಾಗಗಳಲ್ಲಿ ನೋವು, ಸುಸ್ತು, ನಿಶ್ಶಕ್ತಿ, ವಿಚಿತ್ರ ಸಂವೇದನೆಗಳನ್ನು ಅನುಭವಿಸುವುದು ಇತ್ಯಾದಿ

- ಕಲಿಕೆ, ನೆನಪು, ಬುದ್ಧಿಶಕ್ತಿ ಕ್ಷೀಣಿಸುವುದು.

**ಮಾನಸಿಕ ಕಾಯಿಲೆಗಳಿಗೆ ಕಾರಣ:** ಒಂದಕ್ಕಿಂತ ಹೆಚ್ಚಿನ ಅಥವಾ ಹಲವು ಕಾರಣಗಳು ಸೇರಿ ಮಾನಸಿಕ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ.

**ಉದಾ:–**

1. ಅನುವಂಶೀಯತೆ
2. ಮಿದುಳಿನ ಅಪಕ್ವ ಬೆಳವಣಿಗೆ/ಪೆಟ್ಟು
3. ಬಾಲ್ಯದ ಅಹಿತಕಾರಿ ಅನುಭವಗಳು, ಪ್ರೀತಿ, ವಿಶ್ವಾಸ, ಶಿಸ್ತು, ಶಿಕ್ಷೆಗಳು ಹೆಚ್ಚಾಗಿರುವುದು ಅಥವಾ ಕಡಿಮೆಯಾಗಿರುವುದು.
4. ತರಬೇತಿ/ಶಿಕ್ಷಣ/ಮಾರ್ಗದರ್ಶನದ ಕೊರತೆ, ಅಪೂರ್ಣತೆ.
5. ಬಡತನ, ಸಂಪನ್ಮೂಲಗಳ ಕೊರತೆ
6. ಕಷ್ಟ, ನಷ್ಟ, ಸೋಲು, ನಿರಾಸೆ, ಚಿಂತೆ, ವ್ಯಥೆ, ಗೊಂದಲದಂತಹ ಒತ್ತಡ ಜನಕ ಅಂಶಗಳು.
7. ದೀರ್ಘಕಾಲದ ಅನಾರೋಗ್ಯ, ಪ್ರಾಣಭಯ ತರುವ ಕಾಯಿಲೆಗಳು
8. ನಂಜು ವಸ್ತುಗಳ ಸೇವನೆ (ಹೊಗೆಸೊಪ್ಪು/ಮದ್ಯ/ಮಾದಕ ವಸ್ತುಗಳು, ಪರಿಸರದಲ್ಲಿ ನಂಜುವಸ್ತುಗಳು (ಕಾರ್ಬನ್, ಪಾದರಸ)
9. ತಲೆಗೆ ತನ್ಮೂಲಕ ಮಿದುಳಿಗೆ ತೀವ್ರ ಪೆಟ್ಟು
10. ಮಿದುಳಿನಲ್ಲಿ ಸೋಂಕು, ಗೆಡ್ಡೆ, ನರಕೋಶಗಳು ನಶಿಸುವುದು.
11. ಮಿದುಳು ಮೇಲ್ನೋಟಕ್ಕೆ ಚೆನ್ನಾಗಿದ್ದರೂ ನರಕೋಶಗಳ ಮಧ್ಯದಲ್ಲಿ ನರವಾಹಕಗಳ ಏರುಪೇರು
12. ಕೆಲವು ದೈಹಿಕ ಕಾಯಿಲೆಗಳು: ಉದಾಹರಣೆ ಥೈರಾಕ್ಸಿನ್ ಹಾರ್ಮೋನು ಕೊರತೆ-ಹೆಚ್ಚಳ, ಸಿಹಿಮೂತ್ರರೋಗ, ಅಧಿಕ


Digitised by Bharatavani, CIIL

ರಕ್ತದೊತ್ತಡ ಕಾಯಿಲೆಗಳಲ್ಲಿ ಮಿದುಳಿನಲ್ಲಿ ಸಣ್ಣ ಅಥವಾ ದೊಡ್ಡ ಪ್ರಮಾಣದಲ್ಲಿ ರಕ್ತಸ್ರಾವವಾಗುವುದು. ಲಿವರ್, ಮೂತ್ರಪಿಂಡಗಳ ಸೋಲುವಿಕೆಯಿಂದ ರಕ್ತದಲ್ಲಿ ನಂಜುವಸ್ತುಗಳು ಹೆಚ್ಚಾಗುವುದು.

**ಯಾರಿಗೆ ಮಾನಸಿಕ ಕಾಯಿಲೆ ಬರುವ ಸಂಭವ ಹೆಚ್ಚು**

ಪ್ರಪಂಚದಾದ್ಯಂತ ನಡೆದಿರುವ ಸರ್ವೇಕ್ಷಣೆಗಳ ಪ್ರಕಾರ ಮಾನಸಿಕ ಕಾಯಿಲೆಗಳ ಪ್ರಮಾಣ ಇವರಲ್ಲಿ ಹೆಚ್ಚು.

- ಸ್ತ್ರೀಯರಲ್ಲಿ
- ಮಕ್ಕಳು ಮತ್ತು ಹದಿವಯಸ್ಸಿನವರಲ್ಲಿ
- ಇಳಿವಯಸ್ಸಿನವರಲ್ಲಿ
- ಒಂಟಿಯಾಗಿ ಜೀವಿಸುವವರಲ್ಲಿ
- ವಲಸಿಗರಲ್ಲಿ
- ವಿಪರೀತ ಒತ್ತಡವಿರುವ ಉದ್ಯೋಗದಲ್ಲಿರುವವರಲ್ಲಿ (ಸೈನ್ಯ, ಪೋಲೀಸ್, ಲಾರಿ/ಬಸ್ ಡ್ರೈವರ್, ಸರ್ಜನ್ಸ್, ಲಾಯರ್‌ಗಳು, ಉನ್ನತಾಧಿಕಾರದಲ್ಲಿರುವವರು, ಗಣಿ ಕಾರ್ಮಿಕರು)
- ಜೈಲು, ಅನಾಥಾಶ್ರಮದಲ್ಲಿರುವವರು.
- ಜನಸಂದಣಿ ಹೆಚ್ಚಿರುವ ಪ್ರದೇಶದಲ್ಲಿರುವವರು
- ಮದ್ಯ, ಮಾದಕ ವಸ್ತುಗಳನ್ನು ಸೇವಿಸುವವರು.

**ಚಿಕಿತ್ಸೆ:** 'ಮನೋರೋಗಕ್ಕೆ ಮದ್ದಿಲ್ಲ', 'ಹುಚ್ಚು ವಾಸಿಯಾಗುವುದಿಲ್ಲ' ಎಂಬ ನಾಣ್ನುಡಿಗಳು ಈಗ ಸುಳ್ಳಾಗಿವೆ. ಕಳೆದ ಐವತ್ತು ವರ್ಷಗಳ ಸಂಶೋಧನೆ ಮತ್ತು ಆವಿಷ್ಕಾರಗಳಿಂದಾಗಿ ಅನೇಕ ಬಗೆಯ ಚಿಕಿತ್ಸಾ ವಿಧಾನಗಳು ಲಭ್ಯವಿದ್ದು ಅವುಗಳಿಂದ ಮಾನಸಿಕ ಕಾಯಿಲೆಗಳು ಗುಣವಾಗುತ್ತವೆ ಅಥವಾ ಹತೋಟಿಗೆ ಬರುತ್ತವೆ.

1. **ಔಷಧಿಗಳು :** ಖಿನ್ನತೆ ನಿವಾರಕಗಳು, ಆತಂಕ ಭಯವನ್ನು ತಗ್ಗಿಸುವ ಹಾಗೂ ಭಾವೋದ್ವೇಗಗಳನ್ನು ಹತೋಟಿಯಲ್ಲಿಡುವ, ಭ್ರಮೆಗಳನ್ನು ದೂರ ಮಾಡುವ ಔಷಧಿಗಳು ಲಭ್ಯವಿದೆ. ಹೆಚ್ಚಿನವು ಸಣ್ಣಪುಟ್ಟ ಅಡ್ಡಪರಿಣಾಮಗಳನ್ನು ಬಿಟ್ಟರೆ ಸುರಕ್ಷಿತ ಔಷಧಿಗಳಾಗಿವೆ. ಮೂರು ತಿಂಗಳಿನಿಂದ ಹಿಡಿದು ಹಲವಾರು ವರ್ಷಗಳ ಕಾಲ ಔಷಧಿಯನ್ನು ಸೇವಿಸಬೇಕಾಗುತ್ತದೆ. ಔಷಧಿಯ ಪ್ರಮಾಣ ಮತ್ತು ಎಷ್ಟು ಕಾಲ ಸೇವಿಸಬೇಕೆಂಬುದನ್ನು ವೈದ್ಯರು ನಿರ್ಧರಿಸುತ್ತಾರೆ.

2. **ವಿದ್ಯುತ್ ಕಂಪನ ಚಿಕಿತ್ಸೆ :** ಅತಿ ಸಣ್ಣ ಪ್ರಮಾಣದ ವಿದ್ಯುತ್ತನ್ನು (100 ವೋಲ್ಟ್) ಮಿದುಳಿಗೆ ಹಾಯಿಸಿ ಮಿದುಳಿನಲ್ಲಿ ಕಂಪನವನ್ನುಂಟು ಮಾಡಿ ನರವಾಹಕ ವ್ಯವಸ್ಥೆಯನ್ನು ಸರಿಪಡಿಸುವ ಚಿಕಿತ್ಸೆ (E.C.T.). ಇದನ್ನು ಐದರಿಂದ ಹತ್ತು ಬಾರಿ ನೀಡುತ್ತಾರೆ. ಸಂಪೂರ್ಣ ಸುರಕ್ಷಿತ ಚಿಕಿತ್ಸೆ ಇದು.

3. **ಮನೋಚಿಕಿತ್ಸೆ – ನಡೆವಳಿಕೆ ಚಿಕಿತ್ಸೆ:** ಆಪ್ತಸಲಹೆ, ಸಮಾಧಾನ ಮಾಡುವುದು, ವ್ಯಕ್ತಿಯ ಸಮಸ್ಯೆಗಳು ಆತನ ನಿರ್ವಹಣಾ ಸಾಮರ್ಥ್ಯದಲ್ಲಿ ಕೊರತೆಗಳು, ಪರಿಸರದ ಒತ್ತಡಗಳನ್ನು ಅಧ್ಯಯನಮಾಡಿ ಸಮಸ್ಯೆಯನ್ನು ನಿವಾರಿಸಲು ಅಥವಾ ಅದರೊಂದಿಗೆ ಹೊಂದಿಕೊಳ್ಳಲು ತರಬೇತಿ ನೀಡುವುದು ಚಿಕಿತ್ಸೆಯ ಮುಖ್ಯತಿರುಳು. ಈ ಚಿಕಿತ್ಸೆಯನ್ನು ಮನೋವೈದ್ಯರು, ಮನಶಾಸ್ತ್ರಜ್ಞರು, ಆಪ್ತಸಮಾಲೋಚಕರು ನೀಡುತ್ತಾರೆ.

4. **ಉದ್ಯೋಗ ಚಿಕಿತ್ಸೆ :** ಮನೋ ರೋಗಿಗೆ ತರಬೇತಿ ನೀಡಿ ಉದ್ಯೋಗ ಮಾಡಲು ಸ್ವಾವಲಂಬಿಯಾಗಲು ಪ್ರೇರಣೆ ನೀಡುವುದು.

5. **ವಿರಮಿಸುವ ಚಿಕಿತ್ಸೆ :** (Relaxation Therapy) ಸಂಗೀತ, ನೃತ್ಯ, ಚಿತ್ರಕಲೆ, ಯೋಗ, ಧ್ಯಾನ, ಪ್ರಾಣಾಯಾಮಗಳ ಮುಖಾಂತರ ವಿರಮಿಸಲು ವ್ಯಕ್ತಿಗೆ ತರಬೇತಿ ನೀಡಲಾಗುತ್ತದೆ.

**ಪ್ರಮುಖ ಮಾನಸಿಕ ಕಾಯಿಲೆಗಳು**

**1. ಸ್ಕಿಜೋಫ್ರೇನಿಯಾ (Schizophrenia)**

ಪ್ರತಿ ಒಂದು ಸಾವಿರ ಜನಸಂಖ್ಯೆಯಲ್ಲಿ ಒಬ್ಬಿಬ್ಬರಿಗೆ ಇರುವ ಈ ವಿಚಿತ್ರ ಕಾಯಿಲೆ ಬಡವ, ಶ್ರೀಮಂತರೆನ್ನದೆ, ಗ್ರಾಮೀಣ ಪಟ್ಟಣವಾಸಿಗಳೆನ್ನದೆ ಯಾರನ್ನಾದರೂ ಕಾಡಬಲ್ಲದು. ಸಾಮಾನ್ಯವಾಗಿ 15 ರಿಂದ 30 ವರ್ಷ ವಯಸ್ಸಿನವರಲ್ಲಿ ನಿಧಾನವಾಗಿ ಅಥವಾ ಥಟ್ಟನೆ ಪ್ರಾರಂಭವಾಗಬಲ್ಲದು. ವ್ಯಕ್ತಿಯ ಆಲೋಚನೆ, ಮಾತು, ವಿಚಾರ, ನಡೆವಳಿಕೆ ಅಸಂಬದ್ಧವಾಗುತ್ತದೆ. ವಿವಿಧ ರೀತಿಯ ಭ್ರಮೆಗಳು, ಸಂಶಯಗಳು ಮನಸ್ಸನ್ನು ಆವರಿಸುತ್ತವೆ. ನಾಲ್ಕು ಬಗೆಯಲ್ಲಿ ಸ್ಕಿಜೋಫ್ರೇನಿಯಾ ಕಾಣಿಸಿಕೊಳ್ಳುತ್ತದೆ.

1. ಅದುವರೆಗೆ ಚುರುಕಾಗಿ ಚಟುವಟಿಕೆಯಿಂದ ಇದ್ದ ವ್ಯಕ್ತಿ ಕ್ರಮೇಣ ಮಂಕಾಗುತ್ತಾನೆ. ಎಲ್ಲದರಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. ಏನೂ ಮಾಡದೇ 'ಸೋಮಾರಿ'ಯಂತೆ ಕಾಲ ಕಳೆಯುತ್ತಾನೆ. ವಿದ್ಯಾರ್ಥಿಯಾದರೆ, ಶಾಲೆ ಕಾಲೇಜಿಗೆ ಹೋಗುವುದಿಲ್ಲ. ಹೋದರೂ ಏನನ್ನೂ ಕಲಿಯುವುದಿಲ್ಲ. ಸ್ನೇಹಿತರೊಡನೆ ನೆಂಟರಿಷ್ಟರೊಡನೆ ಮಾತು ಕಡಿಮೆ ಮಾಡಿ, ಕೊನೆಗೆ ನಿಲ್ಲಿಸುತ್ತಾನೆ. ತನ್ನ ಅಲಂಕಾರ ಬೇಕು, ಬೇಡಗಳನ್ನು ನಿರ್ಲಕ್ಷಿಸುತ್ತಾನೆ.

2. ಸಂಶಯಪೀಡಿತ : ತನ್ನ ಮನೆಯವರ ಮೇಲೆ ಬಂಧುಮಿತ್ರ ಸಹೋದ್ಯೋಗಿಗಳ ಮೇಲೆ ಸಂಶಯ. ಎಲ್ಲರೂ ತನ್ನ ವಿರುದ್ಧವಾಗಿದ್ದಾರೆ, ತನಗೆ ಹಾನಿಯನ್ನುಂಟುಮಾಡಲು ಸಂಚುಮಾಡುತ್ತಿದ್ದಾರೆ, ತನ್ನ ಆಸ್ತಿ ಪಾಸ್ತಿಯ ಮೇಲೆ ಕಣ್ಣಿಟ್ಟಿದ್ದಾರೆ, ತನಗೆ ಅಪಮಾನ ಮಾಡಲು ಪ್ರಯತ್ನಿಸುತ್ತಾರೆ, ತನ್ನ ಮೇಲೆ ಸುಳ್ಳು ಆರೋಪ ಅಪವಾದಗಳನ್ನು ಹೊರಿಸಿ ಶಿಕ್ಷಿಸುತ್ತಾರೆ, ಇತ್ಯಾದಿ ಅನುಮಾನಗಳಿಂದ ಎಲ್ಲರಿಂದ ದೂರವಾಗಬಹುದು, ಅಥವಾ ಯಾರ ಮೇಲೆ ಸಂಶಯವೋ ಅವರನ್ನು ದಂಡಿಸಬಹುದು. ತಾನೇ ಹೋಗಿ ಪೊಲೀಸರಿಗೆ ಕಂಪ್ಲೇಂಟು ಕೊಡಬಹುದು.

3. ಭ್ರಮಾಧೀನ : ಸ್ಕಿಜೋಫ್ರೇನಿಯರೋಗದ ಅತ್ಯಂತ ವಿಚಿತ್ರ ರೋಗಲಕ್ಷಣವೆಂದರೆ ಶೂನ್ಯದಲ್ಲಿ ರೋಗಿಗೆ ಯಾರೋ ಮಾತಾಡಿದಂತೆ, ಶಬ್ದಕೇಳಿಸಿದಂತೆ ಅಥವಾ ಹಲವರು ತಮ್ಮೊಳಗೆ ಮಾತಾಡಿಕೊಂಡಂತೆ, ವ್ಯಕ್ತಿಯ ಬಗ್ಗೆ ಟೀಕೆ ಮಾಡಿದಂತೆ ಕೇಳಿಸತೊಡಗುತ್ತದೆ. ರೋಗಿಗೆ ಹೀಗೆ ಮಾಡು, ಹಾಗೆ ಮಾಡಬೇಡ ಎಂದು ಆಜ್ಞೆಮಾಡುವ ಧ್ವನಿಗಳು, ಹೆದರಿಸುವ, ಬೆದರಿಸುವ ಧ್ವನಿಗಳು ಕೇಳಿಸತೊಡಗುತ್ತವೆ. ಸುತ್ತಮುತ್ತ ಯಾರು ಇಲ್ಲದಿದ್ದರೂ ಯಾರೋ ಇದ್ದಂತೆ, ಹಿಂಬಾಲಿಸಿದಂತೆ ದೃಶ್ಯ–ಧ್ವನಿಗಳಿಂದ ಭಾಸವಾಗತೊಡಗುತ್ತದೆ. ಕೆಟ್ಟ, ಒಳ್ಳೆಯ ವಾಸನೆಯ ಅನುಮಾನವಾಗುತ್ತದೆ. ಯಾರದೋ ಹೆಜ್ಜೆ ಶಬ್ದ ಕೇಳಿದರೆ ಪೊಲೀಸರು ಅಥವಾ ತನ್ನ ಶತ್ರುಗಳು ತನ್ನನ್ನು ಹಿಡಿಯಲು, ಸಾಯಿಸಲು ಬರುತ್ತಿದ್ದಾರೆ ಎಂದು ಭಯಭೀತನಾಗಬಹುದು. ತನ್ನ ಹೃದಯ ಸುಟ್ಟುಹೋಗಿದೆ, ತನ್ನ ಮಿದುಳು ಮಾಯವಾಗಿದೆ, ತನ್ನ ಜಠರ ಕರುಳು ಕೊಳೆಯುತ್ತಿವೆ ಎಂದು ರೋಗಿಗೆ ಅನಿಸಬಹುದು. ತನ್ನ ಆಹಾರದಲ್ಲಿ ವಿಷ ಬೆರೆಸಲಾಗಿದೆ, ವಿಷ

Digitised by Bharatavani, CIIL

ದೇಹದ ಮೂಲೆ ಮೂಲೆ ಸೇರಿ, ತನ್ನ ದೇಹವೆಲ್ಲ ಸವೆದು ಹೋಗುತ್ತಿದೆ ಎನ್ನಬಹುದು. ಭ್ರಮಾಧೀನವಾಗಿ ರೋಗಿ ಆತ್ಮ ಹತ್ಯೆಗೆ ಅಥವಾ ಇತರರ ಮೇಲೆ ಆಕ್ರಮಣವಾಡಲು ಸಜ್ಜಾಗಬಹುದು. ಮನೆಬಿಟ್ಟು ಓಡಿ ಹೋಗಬಹುದು.

4. ವಿಪರೀತ ಮಾತನಾಡುತ್ತಾ ಅಸಭ್ಯವಾಗಿ ನಡೆದುಕೊಳ್ಳುತ್ತಾ, ಊರೆಲ್ಲ ಗೊತ್ತು ಗುರಿ ಇಲ್ಲದೆ ಅಲೆಯುತ್ತಾ, ರಸ್ತೆಯಲ್ಲಿ ಬಿದ್ದಿರುವ ಕಸ-ಚಿಂದಿಯನ್ನು ಅತ್ಯಮೂಲ್ಯವಾದ ವಸ್ತುಗಳೆಂದು ಹೆಕ್ಕಿ ಗಂಟು ಕಟ್ಟಿಕೊಂಡು ತನ್ನ ಬಳಿಇಟ್ಟುಕೊಳ್ಳಬಹುದು. ಅತ್ಯಂತ ಕೊಳಕಾಗಿ ದಿನಗಳು ಕಳೆದರೂ ಸ್ನಾನಮಾಡದೇ ಗಲೀಜು ಬಟ್ಟೆಗಳನ್ನು ಧರಿಸಿ ಎಲ್ಲೆಂದರೆ ಅಲ್ಲಿ ಮಲ-ಮೂತ್ರ ವಿಸರ್ಜಿಸುತ್ತಾ ಇತರರಿಗೆ ಅಸಹ್ಯ ಬರುವಂತೆ ವರ್ತಿಸಬಹುದು. ಪರಿಚಯದವರನ್ನು ಗುರುತಿಸದೇ ಅಪರಿಚಿತರೊಂದಿಗೆ ಸಲಿಗೆಯಿಂದ ವರ್ತಿಸಬಹುದು. ಯಾವುದೇ ಸಾಮಾಜಿಕ ಸಭ್ಯ ನಡವಳಿಕೆಯನ್ನು ತೋರಿಸದೇ ಎಲ್ಲರಿಗೂ ಇರಿಸು ಮುರಿಸನ್ನುಂಟುಮಾಡಬಹುದು. ಆಗ ಜನ ರೋಗಿಯನ್ನು ಹುಚ್ಚ/ಹುಚ್ಚಿ ಎಂದು ಕರೆಯುತ್ತಾರೆ.

ಮಿದುಳಿನ ಅಸಂಖ್ಯಾತ ನರಕೋಶಗಳಲ್ಲಿ ಡೋಪಮಿನ್ ಗ್ಲುಟಮೇಟ್ ಇತ್ಯಾದಿ ನರವಾಹಕ ವಸ್ತುಗಳು ಏರುಪೇರಾಗುವುದು ಸ್ಕಿಜೋಫ್ರೇನಿಯಾ ರೋಗಕ್ಕೆ ಕಾರಣ ಎಂದು ಹೇಳಲಾಗುತ್ತದೆ. ಶೇಕಡಾ 10 ರಿಂದ 15 ಪ್ರಕರಣಗಳಲ್ಲಿ ಸ್ಕಿಜೋಫ್ರೇನಿಯಾ ಆನುವಂಶೀಯವಾಗಿ ಬರಬಹುದು. ಅತಿ ಜನಸಾಂದ್ರತೆ, ಮೇಲಿಂದ ಮೇಲೆ ಬರುವ ಕಷ್ಟ, ನಷ್ಟ, ನಿರಾಶೆಗಳು ಸ್ಕಿಜೋಫ್ರೇನಿಯಾ ಪ್ರಕಟವಾಗಲು ಪ್ರೇರಣೆ ನೀಡುತ್ತವೆ ಎನ್ನಲಾಗಿದೆ. ಏನೇ ಆದರೂ ಸ್ಕಿಜೋಫ್ರೇನಿಯಾ ಏತಕ್ಕೆ ಬರುತ್ತದೆ ಎಂಬುದು ಇನ್ನೂ ಸ್ಪಷ್ಟವಿಲ್ಲ. ಹಲವಾರು ವರ್ಷಗಳಿಂದ ಕಾಯಿಲೆ ಇರುವ ರೋಗಿಯ ಮಿದುಳು ಸವೆಯುತ್ತದೆ ಎಂಬುದೂ ಗಮನಾರ್ಹ.

ಸ್ಕಿಜೋಫ್ರೇನಿಯಾಗೆ ಈಗ ಪರಿಣಾಮಕಾರಿ ಔಷಧಿಗಳಿವೆ. ಕ್ಲೋರ್‌ಪ್ರೊಮಜೀನ್ ಮೊದಲ ಔಷಧವಾದರೂ ಈಗಲೂ ಬಳಕೆಯಲ್ಲಿದೆ. ಇತ್ತೀಚಿನ ಔಷಧಿಗಳಾದ ರಿಸ್ಪರಿಡಾನ್, ಓಲಾಂಜೆಪಿನ್, ಅರಿಪಿಪ್ರಜೋಲ್, ಕ್ವೆಟಿಪಿನ್, ಅಮಿಸಲಾಪ್ರೈಡ್‌ಗಳು ಈಗ ಬಳಕೆಯಲ್ಲಿವೆ. 15 ದಿನಗಳಿಗೊಮ್ಮೆ ಕೊಡಬಹುದಾದಂತಹ ಫ್ಲೂಯಾಂಕ್ಸಾಲ್ ಅಥವಾ ಕೋಪಿಕ್ಸಾಲ್ ಇನ್‌ಜೆಕ್ಷನ್‌ಗಳಿವೆ. ಒಂದೆರಡು ವರ್ಷ ಅಥವಾ ಹಲವಾರು ವರ್ಷಗಳ ಕಾಲ ಔಷಧಿ ಸೇವನೆ ಮಾಡಬೇಕು. ರೋಗಿ ಏನಾದರೂ ಕೆಲಸ ಕಾರ್ಯಮಾಡಿ, ಉಪಯುಕ್ತವಾಗಿ ಜೀವನ ಮಾಡುವಂತೆ ಮಾಡಬೇಕು. ಪ್ರೀತಿ, ವಿಶ್ವಾಸ, ಆಸಕ್ತಿಯಿಂದ ರೋಗಿಗಳು ಉತ್ತಮರಾಗುತ್ತಾರೆ. ಶೇಕಡಾ 70ರಷ್ಟು ಪ್ರಕರಣಗಳಲ್ಲಿ ಕಾಯಿಲೆ ಗುಣವಾಗುತ್ತದೆ ಎಂಬುದು ಗಮನಾರ್ಹ.

### ದ್ವಿಧ್ರುವೀಯ ಸಂವೇಗಾತ್ಮಕ ರೋಗ (Bipolar Affective Disorder BPAD)

ಒಂದು ಅವಧಿಯಲ್ಲಿ ಖಿನ್ನತೆ (Depression) ಮತ್ತೊಂದು ಅವಧಿಯಲ್ಲಿ ಅತಿ ಸಂತೋಷ / ಕೋಪವನ್ನು ವ್ಯಕ್ತಪಡಿಸುವ ಉನ್ಮಾದ (Mania-ಮೇನಿಯಾ). ಇದು BPAD ಕಾಯಿಲೆಯ ವೈಶಿಷ್ಟ್ಯತೆ. ಪ್ರತಿ ಒಂದು ಸಾವಿರ ಜನಸಂಖ್ಯೆಯಲ್ಲಿ ಐದಾರು ಮಂದಿಗೆ ಇರುವ ಈ ಕಾಯಿಲೆ ಸಾಮಾನ್ಯವಾಗಿ ಮೂವತ್ತು ವರ್ಷ ವಯಸ್ಸಿನ ನಂತರ ಕಾಣಿಸಿಕೊಳ್ಳುತ್ತದೆ. ಖಿನ್ನತೆ ಕಾಯಿಲೆಯಲ್ಲಿ ಕಾರಣವಿಲ್ಲದೆ ಚಿಂತೆ, ವ್ಯಥೆ, ದುಃಖ ಪಡುವುದು, ಪ್ರತಿಯೊಂದು ಚಟುವಟಿಕೆಯಲ್ಲಿ ನಿರಾಸಕ್ತಿ, ನಿಧಾನಗತಿ, ಅಸಹಾಯಕತೆ, ನಿದ್ರಾಹೀನತೆ, ಊಟ-ತಿಂಡಿ ಅಲಂಕಾರದಲ್ಲೂ ಆಸಕ್ತಿಯನ್ನು ಕಳೆದುಕೊಳ್ಳುವುದು, ಮಾಡಬೇಕಾದ ಕೆಲಸ ಕರ್ತವ್ಯಗಳನ್ನು ಮಾಡದಿರುವುದು, ನಿಷ್ಕ್ರಿಯನಾಗಿ ಜಡನಾಗಿ ಮನೆಯೊಳಗೇ ಉಳಿಯುವುದು, ನಿರಾಶಾವಾದ, ಜೀವಿಸುವುದು ಏತಕ್ಕೆ, ಸಾಯುವುದು ಮೇಲು ಎನ್ನುವುದು, ಆತ್ಮಹತ್ಯೆಗೆ ಪ್ರಯತ್ನಮಾಡುವುದು, ಸುಸ್ತು, ನಿಶ್ಶಕ್ತಿ, ತಲೆನೋವು, ಮೈಕೈನೋವು ಎಂದು ದೂರುವುದು, ಆದರೆ ಚಿಕಿತ್ಸೆ ಪಡೆಯಲು ನಿರಾಕರಿಸುವುದು ಖಿನ್ನತೆಯ ವಿಶಿಷ್ಟ ಲಕ್ಷಣಗಳು. ಈ ಲಕ್ಷಣಗಳು ಒಂದರಿಂದ ಐದಾರು ತಿಂಗಳು ಕಾಲ ಇರಬಹುದು. ತದನಂತರ ಖಿನ್ನತೆ ಕಡಿಮೆಯಾಗಿ ರೋಗಿ ಯಥಾಸ್ಥಿತಿಗೆ ಬರಬಹುದು. ಸ್ವಲ್ಪ ಕಾಲಾನಂತರ ಖಿನ್ನತೆ ಪುನರಾವರ್ತನೆಯಾಗಬಹುದು ಅಥವಾ ಉನ್ಮಾದ (ಮೇನಿಯಾ) ಕಾಯಿಲೆ ಕಾಣಿಸಿಕೊಳ್ಳಬಹುದು. ತಡೆ ಇಲ್ಲದ ಮಾತು, ಅನಿಯಂತ್ರಿತ ಚಟುವಟಿಕೆ ವರ್ತನೆ, ಒಂದೇಸಲ ಅನೇಕ ಕೆಲಸ ಮಾಡಲು ಶುರುಮಾಡಿ ಯಾವುದನ್ನೂ ಮುಗಿಸದೇ ಮತ್ತೊಂದನ್ನು ಪ್ರಾರಂಭಿಸುವುದು, ಅಗತ್ಯ ಇರಲಿ ಇಲ್ಲದಿರಲಿ ಇತರರೊಡನೆ ವಾದ ವಿವಾದ ಜಗಳಕ್ಕೆ ಇಳಿಯುವುದು, ಧ್ವನಿ ಎತ್ತರಿಸಿ ಮಾತಾಡುವುದು, ವಿಪರೀತ ಖರ್ಚು ಮಾಡುವುದು, ಉದಾರವಾಗಿ ದಾನ ಧರ್ಮ ಮಾಡುವುದು, ತಾನೇ ಸರಿ ಎಂಬ ಅಹಂ ಪ್ರಕಟಿಸುವುದು, ತಾನೊಬ್ಬ ಮಹಾನ್‌ವ್ಯಕ್ತಿ, ಅತಿ ಬುದ್ಧಿವಂತ, ಶಕ್ತಿಯುತ-ದೊಡ್ಡ ವ್ಯಕ್ತಿಗಳ ಪರಮಸ್ನೇಹಿತ ಎಂದು ಜಂಬ ಕೊಚ್ಚುವುದು, ಸಿನಿಮಾ ನಟ/ನಟಿಯಂತೆ ಅಲಂಕಾರ ಮಾಡಿಕೊಳ್ಳುವುದು, ಮನೆಯವರಾಗಲೀ ಇತರರಾಗಲೀ ಹಾಗಲ್ಲ ಹೀಗೆ, ನೀನು ಹೇಳುವುದು ಮಾಡುವುದು ಸರಿಯಲ್ಲ ಎಂದರೆ ಆಕ್ರಮಣ ಮಾಡಿ, ಹಿಂಸಾಚಾರಕ್ಕೆ ಇಳಿಯುವುದು ಕಂಡುಬರುತ್ತದೆ. ಉನ್ಮಾದದ ವ್ಯಕ್ತಿಯನ್ನು ನಿಭಾಯಿಸುವುದು ಮನೆಯವರಿಗೆ ಬಂಧುಮಿತ್ರರಿಗೆ ಕಷ್ಟವಾಗುತ್ತದೆ. ಸಾಮಾನ್ಯವಾಗಿ ಮೇನಿಯಾ ಮೂರು ಅಥವಾ ನಾಲ್ಕು ತಿಂಗಳ ಕಾಲ ಇರುತ್ತದೆ. ಹೀಗೆ ಮೇನಿಯಾ ಮತ್ತು ಖಿನ್ನತೆ ಅವಧಿಗೊಂದಾವರ್ತಿ ಬರುತ್ತಾ ರೋಗಿಯನ್ನು ಕಾಡಿಸುತ್ತವೆ.

ಕೆಲವರಲ್ಲಿ ಮೇನಿಯಾ ಮತ್ತು ಖಿನ್ನತೆ ಒಂದು ವರ್ಷ ಅಥವಾ ಎರಡು ವರ್ಷಕೊಮ್ಮೆ ಕಾಣಿಸಿಕೊಂಡರೆ ಕೆಲವರಲ್ಲಿ ಪ್ರತಿತಿಂಗಳೂ ಕಾಣಿಸಿಕೊಳ್ಳಬಹುದು. ವರ್ಷಕ್ಕೆ ನಾಲ್ಕು ಅಥವಾ ಹೆಚ್ಚುಕಾಲ ಕಾಣಿಸಿಕೊಂಡರೆ ಅದನ್ನು ತೀವ್ರಗತಿಯ ರ್‍ಯಾಪಿಡ್ ಸೈಕ್ಲಿಂಗ್ BPAD ಎನ್ನುತ್ತಾರೆ.

ಮಿದುಳಿನಲ್ಲಿ ನರವಾಹಕ ವಸ್ತುವಾದ ಡೋಪಮಿನ್ ಪ್ರಮಾಣ ಹೆಚ್ಚಾದಾಗ ಮೇನಿಯಾ ಕಡಿಮೆಯಾದಾಗ ಖಿನ್ನತೆ ಬರುತ್ತದೆ. BPAD ಕಾಯಿಲೆ ಕೆಲವರಲ್ಲಿ ಆನುವಂಶೀಯವಾಗಿ ಕಾಣಿಸಿಕೊಳ್ಳುತ್ತದೆ. ತಂದೆತಾಯಿ ಇಬ್ಬರಲ್ಲೂ ಅಥವಾ ಎರಡೂ ಕಡೆಯವರಲ್ಲಿ BPAD ಇದ್ದರೆ ಶೇಕಡಾ 50 ರಷ್ಟು ಮಕ್ಕಳಿಗೆ ಕಾಯಿಲೆ ಬರುವ ಸಂಭವ ಇರುತ್ತದೆ.

ಖಿನ್ನತೆ ಇದ್ದಾಗ ಖಿನ್ನತೆ ನಿವಾರಕ ಔಷಧಿಗಳು, ಉನ್ಮಾದ ಇದ್ದಾಗ ಉನ್ಮಾದ ನಿರೋಧಕ ಪ್ರಧಾನ ಶಮನಕಾರಿ ಮಾತ್ರೆಗಳನ್ನು ಸೇವಿಸಬೇಕು. ಕನಿಷ್ಠ ಆರು ತಿಂಗಳ ಕಾಲ ಔಷಧಿ ಸೇವನೆ ಮುಂದುವರೆಯಬೇಕು. ಖಿನ್ನತೆ ಶುರುವಾಗುತ್ತಿದ್ದಂತೆ ಮೇನಿಯಾ ಶುರುವಾಗುತ್ತಿದ್ದಂತೆ ನಿರ್ದಿಷ್ಟ ಔಷಧವನ್ನು ಪ್ರಾರಂಭಿಸಬೇಕು.

ಖಿನ್ನತೆ - ಉನ್ಮಾದ ಬರುವುದನ್ನು ತಡೆಗಟ್ಟುವ ಔಷಧಿಗಳೂ ಈಗ ಲಭ್ಯವಿವೆ. ಮೂಡ್‌ಸ್ಟೆಬಿಲೈಸರ್ಸ್ ಎಂದು ಕರೆಯಲಾಗುವ ಲಿಥಿಯಾ ಲವಣ, ಕಾರ್ಬಮಜೇಪೆನ್, ಸೋಡಿಯವಾಲ್ ಪ್ರೊಯೇಟ್‌ಗಳನ್ನು ಹಲವಾರು ವರ್ಷಗಳ ಕಾಲ ಅಗತ್ಯಬಿದ್ದರೆ ಜೀವನಪರ್ಯಂತ ಸೇವಿಸಬೇಕಾದೀತು. ರಕ್ತಪರೀಕ್ಷೆ ಮಾಡಿಸಿ ಆಗಾಗ ರಕ್ತದಲ್ಲಿ ಲಿಥಿಯಂ ಅಥವಾ ವಾಲ್‌ಪ್ರೋಯೆಲೇಟ್ ಪ್ರಮಾಣ ಸರಿಯಾಗಿದೆಯೇ ನೋಡಬೇಕು. ಸಾಮಾನ್ಯವಾಗಿ ಈ ಔಷಧಗಳು ಸುರಕ್ಷಿತ. ಏನಾದರೂ


Digitised by Bharatavani, CIIL

ಅಡ್ಡಪರಿಣಾಮವಾದಲ್ಲಿ ಥೈರಾಯಿಡ್, ಮೂತ್ರಪಿಂಡದ ವೈಫಲ್ಯತೆ ಕಂಡು ಬಂದಲ್ಲಿ ವೈದ್ಯರು ಚಿಕಿತ್ಸೆಯಲ್ಲಿ ಮಾರ್ಪಾಟು ಮಾಡುತ್ತಾರೆ.

ಖಿನ್ನತೆ – ಉನ್ಮಾದ ಕಾಯಿಲೆ ಇದ್ದಾಗ, ರೋಗಿ ದೊಡ್ಡ ನಿರ್ಧಾರಗಳನ್ನು ಹಾಗೂ ದೊಡ್ಡ ಮೊತ್ತದ ಹಣವನ್ನು ವಿನಿಯೋಗಿಸುವ ಕೆಲಸ ಮಾಡಬಾರದು. ಮನೆಯವರು ರೋಗಿಯ ಪರವಾಗಿ ನಿರ್ಧಾರ ಮಾಡುವುದೇ ಒಳ್ಳೆಯದು.

**ಡಿಮೆನ್‌ಷಿಯಾ (Dementia)**

ಕನ್ನಡದಲ್ಲಿ ಇದನ್ನು ಬುದ್ಧಿ ಕೌಶಲ ಕ್ಷೀಣಿಸುವ ಹಾಗೂ ಮರೆವು ಹೆಚ್ಚುವ ಕಾಯಿಲೆ ಎನ್ನಬಹುದು. ವ್ಯಕ್ತಿಗೆ 50 ವರ್ಷವಾದ ನಂತರ ಕಾಣಿಸಿಕೊಳ್ಳಬಹುದಾದ ಈ ಕಾಯಿಲೆ 60 ವರ್ಷ ವಯಸ್ಸಿನವರ ಶೇಕಡಾ 10 ರಷ್ಟು ಜನರಲ್ಲಿ 70 ವರ್ಷ ವಯಸ್ಸಿನವರ ಶೇಕಡಾ 20 ರಷ್ಟು ಜನರಲ್ಲಿ 85 ವರ್ಷಕ್ಕೂ ಮೇಲ್ಪಟ್ಟವರಲ್ಲಿ ಶೇಕಡಾ 50 ರಷ್ಟು ಜನರಲ್ಲಿ ಕಾಣಿಸಿಕೊಳ್ಳುತ್ತದೆ. ದೀರ್ಘಾಯಸ್ಸು ಒಂದು ವರವಲ್ಲ, ಶಾಪ ಎಂದ ಮಹಾಭಾರತದ ಭೀಷ್ಮ. ಡಿಮೆನ್‌ಷಿಯಾ ಬಂದರೆ ಅದು ವ್ಯಕ್ತಿಗೂ, ಅವರ ಮನೆಯವರಿಗೂ ಒಂದು ಶಾಪವೇ ಸರಿ

ಈ ಕಾಯಿಲೆಯ ಪ್ರಮುಖ ಲಕ್ಷಣವೆಂದರೆ ಜ್ಞಾಪಕ ಶಕ್ತಿ ತಗ್ಗಿ ಮರೆವು ಹೆಚ್ಚುತ್ತಾ ಹೋಗುತ್ತದೆ. ಈ ಬೆಳಿಗ್ಗೆ ಏನು ತಿಂದೆ, ನಿನ್ನೆ ನನ್ನನ್ನು ನೋಡಲು ಬಂದದ್ದು ಯಾರು, ನಿನ್ನೆ ಯಾರಿಗೆ ಎಷ್ಟು ಹಣ ಕೊಟ್ಟೆ ಮೊದಲಾದ ವಿಷಯಗಳು ನೆನಪಿಗೆ ಬರುವುದಿಲ್ಲ. ಕ್ರಮೇಣ ವ್ಯಕ್ತಿಗೆ ತನ್ನ ಮಕ್ಕಳ ಮೊಮ್ಮಕ್ಕಳ ಹೆಸರು ಜ್ಞಾಪಕಕ್ಕೆ ಬರುವುದಿಲ್ಲ. ತನ್ನ ಮನೆಯ ಅಡ್ರೆಸ್ ಗೊತ್ತಾಗುವುದಿಲ್ಲ. ಬಸವನಗುಡಿಗೆ ಹೋಗುವ ಬಸ್ ಹತ್ತಿದ್ದರೆ ಎಲ್ಲಿಗೆ ಟಿಕೀಟು ತೆಗೆದುಕೊಳ್ಳಬೇಕು ಗೊತ್ತಿಲ್ಲ. ಎಲ್ಲಿ ಇಳಿಯಬೇಕು, ಇಳಿದಮೇಲೆ ಮಗಳ ಮನೆಗೆ ಹೋಗಲು ಬಲಕ್ಕೆ ತಿರುಗಿ ನಡೆಯಬೇಕಾ, ಎಡಕ್ಕೆ ತಿರುಗಿ ನಡೆಯಬೇಕಾ ಗೊಂದಲ. ಮನೆಯೊಳಗೇ ಅಡುಗೆಮನೆ ಯಾವ ದಿಕ್ಕಿನಲ್ಲಿದೆ, ಸ್ನಾನದ ಮನೆ ಯಾವ ದಿಕ್ಕಿನಲ್ಲಿದೆ ತಿಳಿಯುವುದಿಲ್ಲ. ಅಕೌಂಟ್ಸ್‌ನಲ್ಲಿ ಎಕ್ಸ್‌ಪರ್ಟ್ ಆಗಿದ್ದ ವ್ಯಕ್ತಿಗೆ ಈಗ ಸರಳ ಕೂಡಿ ಕಳೆಯುವ ಲೆಕ್ಕ ಬರುವುದಿಲ್ಲ. ಅಂಗಿಯನ್ನು ಹಾಕಿಕೊಳ್ಳಲು ಸರಿಯಾಗಿ ಗುಂಡಿಹಾಕಲು ಆಗುವುದಿಲ್ಲ. ಪ್ಯಾಂಟಿನ ಜಿಪ್ ಎಳೆಯಲು ಮರೆತೇ ಹೋಗುತ್ತದೆ. ಬಂದ ನೆಂಟರಿಷ್ಟರ ಹೆಸರು ಸಂಬಂಧ ತಿಳಿಯುವುದಿಲ್ಲ. ಪೂರ್ಣ ಪರಾವಲಂಬಿತನ ಆವರಿಸಿಕೊಳ್ಳುತ್ತದೆ. ವ್ಯಕ್ತಿತ್ವದಲ್ಲೂ ಬದಲಾವಣೆ ಕಾಣತೊಡಗುತ್ತದೆ. ಅತಿ ಜುಗ್ಗ ಉದಾರಿಯಾಗಬಹುದು. ಶಾಂತಮೂರ್ತಿ ರುದ್ರಮೂರ್ತಿಯಾಗಬಹುದು. ಏಕಪತ್ನಿವ್ರತಸ್ಥನಾದವನು ಕಂಡ ಹೆಂಗಸರನ್ನು ಕಾಮದೃಷ್ಟಿಯಿಂದ ಕುಚೇಷ್ಟೆ ಮಾಡಬಹುದು. ಎಲ್ಲರೆದುರೇ ಹೆಂಡತಿಯನ್ನು ಕೂಡಲು ರೂಮಿಗೆ ಕರೆಯಬಹುದು.

ಮಿದುಳಿನ ನರಕೋಶಗಳಲ್ಲಿ ಅಸಿಟೈಲಕೋಲಿನ್ ನರವಾಹಕದ ಪ್ರಮಾಣ ತಗ್ಗುವುದು. ಮಿದುಳಿನ ಮುಂಭಾಗ ಕಪಾಲಭಾಗ ಮತ್ತು ಪಾರ್ಶ್ವಭಾಗ ಹೆಚ್ಚು ಸವೆಯುವುದು. ರಕ್ತನಾಳಗಳು ಕಟ್ಟಿಕೊಂಡು ಅಥವಾ ಒಡೆದು ರಕ್ತಸ್ರಾವವಾಗುವುದು. ಡಿಮೆನ್ಷಿಯಾ ರೋಗ ಬರಲು ಕಾರಣಗಳು ಅನೇಕ. ಇತರ ಕಾಯಿಲೆಗಳು ಡಿಮೆನ್ಷಿಯ ಬರಲು ಕಾರಣವಾಗುತ್ತವೆ.

- ರಕ್ತನಾಳಗಳು ಗಟ್ಟಿಯಾಗಿ ಕಟ್ಟಿಕೊಳ್ಳುವುದು, ಅತಿ ಕೊಲೆಸ್ಟರಾಲ್.
- ಹತೋಟಿಯಲ್ಲಿಲ್ಲದ ಸಿಹಿಮೂತ್ರರೋಗ, ಅಧಿಕ ರಕ್ತದೊತ್ತಡ ಕಾಯಿಲೆಯಲ್ಲಿ ರಕ್ತನಾಳಗಳು ಸವೆದು, ಸಣ್ಣ ಸಣ್ಣ ರಕ್ತಸ್ರಾವವಾಗುವುದು (ಹೆಮೋರೇಜ್)
- ಮಿದುಳು ಅಥವಾ ಮಿದುಳು ಪೊರೆಯ ಸೋಂಕು: ಕ್ಷಯ ರೋಗಾಣುಗಳಿಂದ, ಸಿಫಿಲಿಸ್ ರೋಗಾಣುಗಳಿಂದ ಏಡ್ಸ್ ವೈರಸ್‌ನಿಂದ
- ಪದೇ ಪದೇ ರಕ್ತದಲ್ಲಿ ಗ್ಲೂಕೋಸ್ ಪ್ರಮಾಣ ಪ್ರತಿ 100 ಮಿಲಿಯಲ್ಲಿ 60 ಮಿಗ್ರಾಂಗಿಂತ ಕಡಿಮೆಯಾಗುವುದು.
- ಮಿದುಳಿನ ನರಕೋಶಗಳು ನಶಿಸಿಹೋಗುವಂತೆ ಮಾಡುವ ನರರೋಗಗಳಾದ ಆಲ್‌ಜೈಮರನ ಕಾಯಿಲೆ, ಪಾರ್ಕಿನ್‌ಸನ್ ಕಾಯಿಲೆ.
- ಮಿದುಳಿನ ಮುಂಭಾಗ ಅಥವಾ ಇತರ ಭಾಗಗಳಲ್ಲಿ ಗೆಡ್ಡೆ ಬೆಳೆದುಕೊಳ್ಳುವುದು.
- ಮಿದುಳಿನ ದ್ರವದಲ್ಲಿ ಒತ್ತಡ ಹೆಚ್ಚುವುದು (Intra Cranial pressure - Hydro Cephalus)
- ಆಲ್ಕೋಹಾಲ್, ಸೀಸ, ಪಾದರಸದಂತಹ ವಿಷವಸ್ತುಗಳಿಂದ ಮಿದುಳಿಗೆ ಹಾನಿಯುಂಟಾಗುವುದು.
- ಅಪೌಷ್ಟಿಕತೆ, ವಿಟಮಿನ್ $B_{12}$ ಕೊರತೆ ಇತ್ಯಾದಿ.

ಚಿಕಿತ್ಸೆಗೆ ಒಳಪಡುವ ಕಾಯಿಲೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ಕೊಟ್ಟು ಡಿಮೆನ್‌ಷಿಯ ಮತ್ತಷ್ಟು ಜಾಸ್ತಿಯಾಗದಂತೆ ನೋಡಿಕೊಳ್ಳಬೇಕು. ಭಾವೋದ್ವೇಗಗಳು, ವರ್ತನೆಯ ವ್ಯತ್ಯಾಸಗಳಿಗೆ ನಿದ್ರಾಹೀನತೆಯ ಔಷಧಿಯನ್ನು ಕೊಡಬಹುದು. ಅಸಿಟೈಲ್‌ಕೋಲಿನ್ ಪ್ರಮಾಣವನ್ನು ಸ್ವಲ್ಪ ಹೆಚ್ಚಿಸಬಲ್ಲ ಡೆನೆಪಿಜಿಲ್, ಮೆಮಂಟಿನ್ ಮಾತ್ರೆಗಳನ್ನು ಕೊಡುವುದು ಹಾಗೂ ವ್ಯಕ್ತಿಯನ್ನು ಜತನದಿಂದ ನೋಡಿಕೊಳ್ಳುವುದು ಚಿಕಿತ್ಸೆಯ ಮುಖ್ಯತಿರುಳು. ಡಿಮೆನ್ಷಿಯಾ ಹೆಚ್ಚಿನ ಪ್ರಕರಣಗಳಲ್ಲಿ ನಿಧಾನವಾಗಿ, ಕೆಲವು ಪ್ರಕರಣಗಳಲ್ಲಿ ವೇಗವಾಗಿ ತೀವ್ರವಾಗುತ್ತಾ ಹೋಗುತ್ತದೆ. ಡಿಮೆನ್ಷಿಯಾ ರೋಗಿಗಳನ್ನು ಜೋಪಾನಮಾಡಿ. ಒಳ್ಳೆಯ ಶುಶ್ರೂಷೆ ಕೊಟ್ಟು, ಬದುಕಿರುವತನಕ ನೋಡಿಕೊಳ್ಳಬೇಕು. ಡಿಮೆನ್ಷಿಯಾವನ್ನು ವಾಸಿಮಾಡಬಲ್ಲ ಔಷಧಿ ಅಥವಾ ಇನ್ಯಾವುದೇ ಚಿಕಿತ್ಸೆ ಬೇಗ ಆವಿಷ್ಕಾರವಾಗಲಿ ಎಂದು ನಾವು ನೀವೆಲ್ಲ ಹಾರೈಸೋಣ.

**ಗೀಳು ಮನೋರೋಗ (Obsessive Compulsive Disorder-OCD)**

ಕನ್ನಡದಲ್ಲಿ ಈ ಕಾಯಿಲೆಗೆ ಗೀಳು ಮನೋರೋಗ ಎನ್ನುತ್ತಾರೆ. ಇದೊಂದು ವಿಚಿತ್ರ ಅನುಭವ ಕೊಡುವ, ಸಾಕಷ್ಟು ಮನಸ್ಸಿಗೆ ಹಿಂಸೆ ನೀಡುವ ಮಾನಸಿಕ ಕಾಯಿಲೆ. ಒಂದು ಅರ್ಥವಿಲ್ಲದ, ಅಸಂಬದ್ಧ ಹಾಗೂ ಬೇಡದ ಆಲೋಚನೆ, ವಿಚಾರ, ಚಿತ್ರ ಮನಸ್ಸಿನೊಳಕ್ಕೆ ಬರುತ್ತಿರುತ್ತದೆ. ಹಾಗೂ ಪುನರಾವರ್ತನೆ ಆಗುತ್ತಲೇ ಇರುತ್ತದೆ. ಉದಾಹರಣೆಗೆ, ದೇವರ ಪೂಜೆ ಮಾಡುವಾಗ ದೇವರ ಬಗ್ಗೆ ಕೆಲವು ಯೋಚನೆಗಳು ಮನಸ್ಸಿನೊಳಕ್ಕೆ ಬರುತ್ತಿರುತ್ತವೆ. ಕೈ ಸ್ವಚ್ಛವಾಗಿದ್ದರೂ, ಕೈ ಕೊಳೆಯಾಗಿದೆ ಎನಿಸಲು ಶುರುವಾಗುತ್ತದೆ. ಯಾವುದೋ ವ್ಯಕ್ತಿಯನ್ನು ನೋಡಿದಾಗ ಆತ/ಆಕೆಯ ನಗ್ನ ಶರೀರ ಕಣ್ಣ ಮುಂದೆ ಬರಬಹುದು. ಊಟಮಾಡಲು ಕುಳಿತಾಗ, ಮಲ–ಮೂತ್ರದಂತಹ ಕೊಳೆವಸ್ತುಗಳು ಕಾಣಿಸಿಕೊಳ್ಳಬಹುದು. ಈ ಆಲೋಚನೆ, ವಿಚಾರ, ಚಿತ್ರವನ್ನು ನಿಲ್ಲಿಸಲು ಆಗುವುದಿಲ್ಲ. ಹಾಗೆಯೇ ಈ ಕಾಯಿಲೆಯಲ್ಲಿ ಕೆಲವು ಚಟುವಟಿಕೆಗಳನ್ನು ಮತ್ತೆ ಮತ್ತೆ ಮಾಡಲೇಬೇಕೆನಿಸುತ್ತದೆ. ಉದಾಹರಣೆಗೆ, ಬಾಗಿಲು ಚಿಲಕ ಹಾಕಿದೆಯೋ ಇಲ್ಲವೋ ಮತ್ತೆ ಮತ್ತೆ ಚೆಕ್‌ಮಾಡಬೇಕೆನಿಸುತ್ತದೆ. ಗೀಜರ್ ಸ್ವಿಚ್ಚನ್ನು ಆಫ್ ಮಾಡಿದೆನೋ ಇಲ್ಲವೋ ಎಂದು ಮತ್ತೆ ಮತ್ತೆ ನೋಡಬೇಕೆನಿಸುತ್ತದೆ. ಪ್ಯಾಂಟ್ ಜಿಪ್ಪನ್ನು ಹಾಕಿದ್ದೇನೋ ಅಥವಾ ಹಾಕಿಲ್ಲವೋ ಎಂದು ಮನಸ್ಸು ನೋಡಬಯಸುತ್ತದೆ. ಟಾಯ್ಲೆಟ್ಟಿನ ಅಥವಾ ಬಾತ್‌ರೂಮಿನ ನೆಲ

Digitised by Bharatavani, CIIL

ಗೋಡೆಗಳನ್ನು ಬಹಳಷ್ಟು ನೀರು ಹಾಕಿ ಸ್ವಚ್ಛಮಾಡಬೇಕೆನಿಸುತ್ತದೆ. ರಸ್ತೆಯಲ್ಲಿ ಹೋಗುವಾಗ ಪ್ರತಿ ಲೈಟು ಕಂಬ ಅಥವಾ ಜಾಹೀರಾತಿನ ಫಲಕವನ್ನು ಮುಟ್ಟಬೇಕೆನಿಸುತ್ತದೆ. ಮುಟ್ಟದೇ ಮುಂದಕ್ಕೆ ಹೋದರೆ ವಾಪಸ್ ಬಂದು ಮುಟ್ಟಿಹೋಗುವಂತಾಗುತ್ತದೆ. ಈ ರೀತಿಯ ಆಲೋಚನೆಗಳು ಚಟುವಟಿಕೆಗಳು ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವುದರಿಂದ, ವ್ಯಕ್ತಿಯ ದೈನಂದಿನ ಕೆಲಸ ಕರ್ತವ್ಯಗಳಿಗೆ ಚ್ಯುತಿಯುಂಟಾಗುತ್ತದೆ. ರೋಗಿ ಹೆಚ್ಚಿನ ಸಮಯವನ್ನು ಗೀಳು ಚಿಂತನೆ ಚಟುವಟಿಕೆ ಮಾಡಲು ವಿನಿಯೋಗಿಸಬೇಕಾಗುತ್ತದೆ. ಜೊತೆಗೆ ಮಾನಸಿಕ ಹಿಂಸೆ ಮುಜುಗರ ಇತರ ನಿರ್ಲಕ್ಷ್ಯ, ಕೋಪ, ತಾಪ, ಶಿಕ್ಷೆ, ಪರಿಹಾಸ್ಯಗಳನ್ನು ಅನುಭವಿಸಬೇಕಾಗುತ್ತದೆ. ಗೀಳು ಮನೋರೋಗದಲ್ಲಿ ಏಳು ಬಗೆಯ ರೋಗ ಲಕ್ಷಣಗಳಿವೆ.

1. ಅತಿ ಅಚ್ಚುಕಟ್ಟುತನ, ಪ್ರತಿಯೊಂದು ಚಟುವಟಿಕೆಯನ್ನು ಹೀಗೇ ಮಾಡಬೇಕು, ಪ್ರತಿಯೊಂದು ವಸ್ತು ಇಂಥಲ್ಲೇ ಇರಬೇಕೆನಿಸುತ್ತದೆ. ವ್ಯವಸ್ಥೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ವ್ಯಕ್ತಿ ಚಡಪಡಿಸಿಬಿಡುತ್ತಾನೆ. ಅದನ್ನು ಸರಿಪಡಿಸುವತನಕ ಆತನಿಗೆ ನೆಮ್ಮದಿ ಇರುವುದಿಲ್ಲ.
2. ಅರ್ಥವಿಲ್ಲದ, ಮೂರ್ಖತನ ಎನಿಸುವ ಅಥವಾ ಕೆಟ್ಟ ಕೊಳಕು ಯೋಚನೆಗಳು, ಲೈಂಗಿಕ ವಿಚಾರಗಳು, ಚಿತ್ರಗಳು ಮತ್ತೆ ಮತ್ತೆ ಮನಸ್ಸಿನೊಳಕ್ಕೆ ಬರುತ್ತಿರುತ್ತವೆ.
3. ಅನುಮಾನಗಳು ದ್ವಂದ್ವಗಳು: ಸರಿಯಾಗಿ ಮಾಡಿದ್ದೇನೋ ಇಲ್ಲವೋ, ಈಗ ಮಾಡಲೋ ಆಮೇಲೆ ಮಾಡಲೋ, ಲೆಕ್ಕ ಸರಿಹೋಯಿತೋ, ಇಲ್ಲವೋ ಎಂಬ ದ್ವಂದ್ವ ಅನುಮಾನ ಮೇಲಿಂದ ಮೇಲೆ ಕಾಡುವುದು.
4. ಭಯಗಳು: ಚಾಕು, ಚೂರಿ, ಕತ್ತರಿ, ಸೂಜಿ ಇತ್ಯಾದಿ ಅಪಾಯಕಾರಿ ವಸ್ತುವನ್ನು ಕಂಡಾಗ ಅದರಿಂದ ತನಗೆ ಅಥವಾ ಇತರರಿಗೆ ಹಾನಿಯುಂಟುಮಾಡುತ್ತೇನೇನೋ ಎಂಬ ಭಯ. ಚಲಿಸುವ ರೈಲು ಬಸ್ಸಿನಿಂದ ಕೆಳಕ್ಕೆ ಹೊರಕ್ಕೆ ಜಿಗಿಯುತ್ತೇನೆ ಎಂಬ ಭಯ.
5. ಪದೇ ಪದೇ ಕೈ ತೊಳೆಯುವ, ಹೆಚ್ಚು ನೀರು ಬಳಸಿ ಸ್ನಾನ ಮಾಡುವ, ಮನೆಯನ್ನು ಸ್ವಚ್ಛಮಾಡುವ, ಕೊಳೆಯಾಗಿದೆ ಎಂದು ಕಾಗದದ ನೋಟುಗಳನ್ನು ಸೋಪು ಹಚ್ಚಿ ತೊಳೆಯುವ ಗೀಳು.
6. ಒಂದು ಚಟುವಟಿಕೆ ಮಾಡದಿದ್ದರೆ ಏನೋ ಅನಾಹುತ ವಾಗುವುದೆಂಬ ದಿಗಿಲು. ಉದಾಹರಣೆಗೆ, ಪ್ರತಿ ಮನೆಯ ಗೋಡೆಯನ್ನು ಮುಟ್ಟಬೇಕು. ಇಲ್ಲದಿದ್ದರೆ ತನಗೆ ಅಥವಾ ಆ ಮನೆಯವರಿಗೆ ಅನಾಹುತವಾಗಬಹುದೆಂಬ ಆಲೋಚನೆ.
7. ಉತ್ತರವಿಲ್ಲದ ಪ್ರಶ್ನೆಗಳನ್ನೆತ್ತಿಕೊಂಡು ಉತ್ತರಕ್ಕಾಗಿ ಚಡಪಡಿಸುವುದು. ಉದಾ: ಸೂರ್ಯನೇಕೆ ಪೂರ್ವದಲ್ಲೇ ಹುಟ್ಟಿ ಪಶ್ಚಿಮದಲ್ಲಿ ಮುಳುಗಬೇಕು? ಬೆಂಕಿ ಏಕೆ ಸುಡಬೇಕು? ಪ್ರತಿಯೊಂದು ಪ್ರಾಣಿ/ಜೀವಿ ಏಕೆ ಹುಟ್ಟುತ್ತದೆ ಇತ್ಯಾದಿ. OCD ಬರಲು ಕಾರಣ ಸ್ಪಷ್ಟವಿಲ್ಲ. ಆನುವಂಶೀಯತೆ, ಮಿದುಳಿನ ನರಕೋಶಗಳಲ್ಲಿ ಸೆರೋಟೋನಿನ್ ನರವಾಹಕದ ಕೊರತೆಯೇ OCD ಬರಲು ಕಾರಣ ಎಂದು ನಂಬಲಾಗಿದೆ.

OCD ಗೆ ಚಿಕಿತ್ಸೆ ಇದೆ. ಮಿದುಳಿನಲ್ಲಿ ಸೆರೋಟೆನಿನ್ ಅಂಶವನ್ನು ಹೆಚ್ಚಿಸುವ ಔಷಧಿಗಳಾದ ಫ್ಲೂಯಾಕ್ಸೆಟಿನ್, ಎಸ್‌ಸಿಟಲೋ ಪ್ರಾಂ ಫ್ಲೂವಾಕ್ಸಮಿನ್, ಕ್ಲೊಮಿಪ್ರಮಿನ್, ಕ್ಲೋನಾಜೆಪಾಂ, ರಿಸ್ಪೆರಿಡಾನ್ ಮಾತ್ರೆಯನ್ನು ಹಲವಾರು ವರ್ಷಗಳ ಕಾಲ ಬಿಡದೇ ಸೇವಿಸಬೇಕು. ಈ ಔಷಧಿಗಳಿಂದ ಸಣ್ಣಪುಟ್ಟ ಅಡ್ಡಪರಿಣಾಮ ಬಿಟ್ಟರೆ ಬೇರಾವ ಗಮನಾರ್ಹ ತೊಂದರೆ ಇಲ್ಲ. ಮಾತ್ರೆಗಳನ್ನು ಕ್ರಮವಾಗಿ ಸೇವಿಸಬೇಕು.

**ನಡೆವಳಿಕೆ (ವರ್ತನ) ಚಿಕಿತ್ಸೆ:** ಗೀಳು ಚಟುವಟಿಕೆಯನ್ನು ಪ್ರಚೋದಿಸುವ ಸನ್ನಿವೇಶಕ್ಕೆ ವ್ಯಕ್ತಿ ತನ್ನನ್ನು ತಾನೇ ಒಡ್ಡಿಕೊಂಡು, ಗೀಳು ಚಟುವಟಿಕೆಯನ್ನು ಮಾಡದಿರುವುದು. ಇದಕ್ಕೆ Exposure and Response Preventive Therapy (ERP) ಎನುತ್ತಾರೆ. ಉದಾ: ಕೊಳಕಾದ ಸ್ಥಳದಲ್ಲಿದ್ದು ಅಥವಾ ಕೊಳಕಾದ ವಸ್ತುವನ್ನು ಮುಟ್ಟಿ ಕೈತೊಳೆಯದೆ, ಮೈ ತೊಳೆಯದೇ ಇರುವುದು.

ನೆನಪಿಡಿ: ಗೀಳು ಮನೋರೋಗ ವಾಸಿಯಾಗುವಂತಹ ಕಾಯಿಲೆ. ದೀರ್ಘ ಕಾಲದ ಕ್ರಮವಾದ ಚಿಕಿತ್ಸೆ ಅಗತ್ಯ.

### ಆತಂಕ ಮನೋರೋಗ (Anxiety Disorder)

ಶೇಕಡಾ 10 ರಷ್ಟು ಜನ ಈ ಕಾಯಿಲೆಯಿಂದ ಬಳಲುತ್ತಾರೆ. ವಿದ್ಯಾರ್ಥಿಗಳಲ್ಲಿ ಹೆಚ್ಚು. ಹೆಚ್ಚಿನ ಕರ್ತವ್ಯ, ಜವಾಬ್ದಾರಿಯುತ ಉದ್ಯೋಗಿಗಳಲ್ಲಿ, ಆತ್ಮವಿಶ್ವಾಸ ಕಡಿಮೆ ಇರುವವರಲ್ಲಿ, ಸೀಮಿತ ಸಂಪನ್ಮೂಲ ಮತ್ತು ಸಮಯವಿರುವವರಲ್ಲಿ, ಅಪಾಯದ ಸನ್ನಿವೇಶ ಸ್ಥಳಗಳಲ್ಲಿ ಕೆಲಸ ಮಾಡುವವರಲ್ಲಿ, ವಿಪರೀತ ನೋವು, ಅಂಗ ವೈಕಲ್ಯವನ್ನುಂಟುಮಾಡುವ, ಪ್ರಾಣಭಯವನ್ನುಂಟುಮಾಡುವ ಕಾಯಿಲೆಗಳಿಂದ ನರಳುವವರಲ್ಲಿ ಆತಂಕ ಮನೋರೋಗ ಕಾಣಿಸಿಕೊಳ್ಳುತ್ತದೆ

### ಪ್ರಮುಖ ಲಕ್ಷಣಗಳು

- ಆತಂಕ, ಭಯ, ಕಳವಳ, ಏನೋ ಕೆಟ್ಟದ್ದಾಗುತ್ತದೆ, ನಾನು ಸುರಕ್ಷಿತವಾಗಿಲ್ಲ ಎಂಬ ಭಾವನೆ, ಅದರೊಂದಿಗೆ ಬರುವ ಚಡಪಡಿಕೆ.
- ಎದೆ ಬಡಿತ, ಉಸಿರಾಟದ ವೇಗ ಹೆಚ್ಚುತ್ತದೆ. ಬೆವರು, ಮಲ ಮೂತ್ರ ವಿಸರ್ಜನೆ ಹೆಚ್ಚಾಗುತ್ತದೆ. ಮೈ, ಕೈ, ನೋವು, ಸುಸ್ತು, ದಣಿವು, ನಿಶ್ಶಕ್ತಿ ಇರುತ್ತದೆ.
- ಏಕಾಗ್ರತೆಯ ಕೊರತೆ, ಕಲಿಕೆ ಕಷ್ಟವಾಗುವುದು, ನೆನಪಿನ ಶಕ್ತಿ ಕುಗ್ಗುವುದು. ಮನಸ್ಸಿನಲ್ಲಿ ಗೊಂದಲ ದ್ವಂದ್ವ ಹೆಚ್ಚುತ್ತದೆ. ವ್ಯಕ್ತಿಯ ಸಾಮರ್ಥ್ಯ ತಗ್ಗುತ್ತದೆ.
- ಆಹಾರ ಸೇವನೆ ನಿದ್ರೆ – ಲೈಂಗಿಕ ಕ್ರಿಯೆಯ ತೊಂದರೆಗಳು ಕಾಣಿಸಿಕೊಳ್ಳುತ್ತವೆ.
- ವ್ಯಕ್ತಿಯ ನಿರ್ವಹಣಾ ಸಾಮರ್ಥ್ಯ ತಗ್ಗಿ, ಕೀಳರಿಮೆ ಆವರಿಸುತ್ತದೆ.

ಚಿಕಿತ್ಸೆ: ವಿರಮಿಸುವ ಚಟುವಟಿಕೆಗಳು ಮತ್ತು ಔಷಧಿಗಳು (ಪ್ರೊಪ್ರೆನಲಾಲ್, ಬಸ್ಪಿರೋನ್, ಕ್ಲೋನಜೆಪಾಮ್, ಲೊರಾಜೆಪಾಮ್, ಫ್ಲೂಯಾಕ್ಸಿಟಿನ್, ಪ್ಯಾರಾಕ್ಸಿಟಿನ್ ಇತ್ಯಾದಿ) ಆತಂಕವನ್ನು ಹತೋಟಿಯಲ್ಲಿಡಲು ತರಬೇತಿ ಸಹಾಯಕವಾಗುತ್ತವೆ.

### ಮಕ್ಕಳಲ್ಲಿ ಕಂಡು ಬರುವ ಮುಖ್ಯ ಮಾನಸಿಕ ತೊಂದರೆಗಳು

1. **ಬುದ್ಧಿಮಾಂದ್ಯತೆ:** ಶೇಕಡಾ 3ರಷ್ಟು ಮಕ್ಕಳಿಗೆ ಸ್ವತಂತ್ರವಾಗಿ ಜೀವನ ಮಾಡುವುದಕ್ಕೆ ಹಾಗೂ ಕಲಿಕೆಗೆ ಬೇಕಾದ ಬುದ್ಧಿ ಸಾಮರ್ಥ್ಯ ಇರುವುದಿಲ್ಲ. ಬುದ್ಧಿಶಕ್ತಿಸೂಚ್ಯಂಕ (I.Q) 70ಕ್ಕಿಂತ ಕಡಿಮೆ ಇರುತ್ತದೆ. ಮಿದುಳಿನ ಅಪಕ್ವ ಬೆಳವಣಿಗೆ ಅಥವಾ ಮಿದುಳಿಗೆ ಆದ ಹಾನಿಯೇ ಬುದ್ಧಿಮಾಂದ್ಯತೆಗೆ ಕಾರಣ. ಇರುವ ಬುದ್ಧಿಯನ್ನು ಉಪಯೋಗಿಸಲು ನಿತ್ಯ ಜೀವನಕ್ಕೆ ಬೇಕಾದ ಕೌಶಲಗಳನ್ನು


Digitised by Bharatavani, CIIL

ಕಲಿಯುವ ಸತತ ಹಾಗೂ ನಿರಂತರ ತರಬೇತಿಯೇ ಇರುವ ಚಿಕಿತ್ಸೆ. ಔಷಧಿ/ಟಾನಿಕ್‌ಗಳಿಂದ ಪ್ರಯೋಜನವಿಲ್ಲ.

2. **ಅತಿ ಚಂಚಲತೆ:** (ಅತಿ ತೀಟೆಯ ತೊಂದರೆ) (Attention Deficit Hyperactive Disorder - ADHD) :

ಏಕಾಗ್ರತೆ ಬಹಳ ಕಡಿಮೆ. ಚಂಚಲ ಚಿತ್ತತೆ. ಒಂದು ಕಡೆ ಒಂದೆರಡು ನಿಮಿಷವೂ ಸುಮ್ಮನೆ ಕೂತು ಕೊಳ್ಳಲಾಗದಷ್ಟು ಅತಿ ಚಟುವಟಿಕೆ ಈ ಸ್ಥಿತಿಯ ಲಕ್ಷಣ. ಶಮನಕಾರಿ ಔಷಧಿಗಳು ಏಕಾಗ್ರತೆಯನ್ನು ಹೆಚ್ಚಿಸುವ ಚಟುವಟಿಕೆಗಳೇ ಚಿಕಿತ್ಸೆ.

3. **ಹಾಸಿಗೆ, ಬಟ್ಟೆಯಲ್ಲಿ ಮೂತ್ರ ಮಾಡಿಕೊಳ್ಳುವುದು:** ಸಾಮಾನ್ಯವಾಗಿ ನಾಲ್ಕೈದು ವರ್ಷ ವಯಸ್ಸಿಗೆ ಮಕ್ಕಳು ಮಲಮೂತ್ರ ವಿಸರ್ಜನೆಯಲ್ಲಿ ಹತೋಟಿಯನ್ನು ಸಾಧಿಸುತ್ತಾರೆ. ಕೆಲವರು ಇದರಲ್ಲಿ ವಿಫಲರಾಗುತ್ತಾರೆ. ಮೂತ್ರ ವಿಸರ್ಜನೆಯ ಮೇಲೆ ಹತೋಟಿ ಸಾಧಿಸಲು ತರಬೇತಿ ಹಾಗೂ ರಾತ್ರಿ ವೇಳೆ ನೀರಿನಂಶ ಇರುವ ಆಹಾರ ಸೇವನೆಯನ್ನು ವರ್ಜಿಸುವುದೇ ಚಿಕಿತ್ಸೆ.

4. **ಅವಿಧೇಯತನ – ಹಠಮಾರಿತನ, ಆಕ್ರಮಣಶೀಲ ನಡೆವಳಿಕೆ:** ಮಿದುಳಿಗೆ ಸಣ್ಣ ಪ್ರಮಾಣದ ಹಾನಿ, ತಂದೆ – ತಾಯಿಗಳ ತಪ್ಪು ಲಾಲನೆ ಪಾಲನಾ ವೈಖರಿ, ಅರಕ್ಷಿತ ಭಾವನೆಯನ್ನುಂಟುಮಾಡುವ ಪರಿಸರ ಈ ಸಮಸ್ಯೆಗೆ ಕಾರಣವಾಗಬಹುದು. ತರಬೇತಿ, ನಡೆವಳಿಕೆ ಚಿಕಿತ್ಸೆಯಿಂದ ಉತ್ತಮವಾಗುತ್ತದೆ.

5. **ನಡೆವಳಿಕೆಯ ಅವ್ಯವಸ್ಥೆಗಳು(Conduct Disorder)**

ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ನೀತಿನಿಯಮಗಳನ್ನು ಪಾಲನೆ ಮಾಡದಿರುವುದು, ಇತರರಿಗೆ ನೋವನ್ನುಂಟುಮಾಡಿ ಖುಷಿಪಡುವುದು, ಶಾಲೆಗೆ ಚಕ್ಕರ್ ಹೊಡೆಯುವುದು, ಅಪರಾಧಗಳನ್ನು ಮಾಡುವುದು ಈ ಸ್ಥಿತಿಯ ಮುಖ್ಯಲಕ್ಷಣಗಳು. ಒಡೆದ ಕುಟುಂಬ ತಂದೆ – ತಾಯಿಗಳ ವಿರಸ. ಪರಿಸರದಿಂದ ಕಂಡು ಬರುವ ಈ ತೊಂದರೆಗೆ ನಡೆವಳಿಕೆ ಚಿಕಿತ್ಸೆ ಹಾಗೂ ಒಳ್ಳೆಯ ಪರಿಸರವೇ ಮದ್ದು.

6. **ಆಟಿಸಮ್ :** ಎರಡು ಅಥವಾ ಮೂರನೇ ವರ್ಷ ವಯಸ್ಸಿನಲ್ಲಿ ಪ್ರಾರಂಭವಾಗುವ ಈ ರೋಗದಲ್ಲಿ ಮಗು ಮಾತಾಡುವುದಿಲ್ಲ. ಯಾವುದೇ ರೀತಿಯ ಸಂವಹನದಲ್ಲಿ ತೊಡಗುವುದಿಲ್ಲ. ತಂದೆ ತಾಯಿ ಸೋದರ ಸೋದರಿಯರು ಸೇರಿದಂತೆ ಯಾರೊಂದಿಗೂ ಬೆರೆಯುವುದಿಲ್ಲ. ತನ್ನದೇ ಆದ ಲೋಕದಲ್ಲಿ ಒಂಟಿಯಾಗಿರುತ್ತದೆ. ಈ ಕಾಯಿಲೆಗೆ ಕಾರಣ ಗೊತ್ತಿಲ್ಲ. ತರಬೇತಿಯ ಮೂಲಕ ಮಗುವಿನಲ್ಲಿ ಸಂವಹನ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಪ್ರಾರಂಭಿಸಬೇಕು.

7. **ಡಿಸ್‌ಲೆಕ್ಸಿಯಾ / ನಿರ್ದಿಷ್ಟ ಕಲಿಕೆಯ ಸಮಸ್ಯೆಗಳು:** ಮಗುವಿಗೆ ಓದಲು, ಬರೆಯಲು, ಗಣಿತ ಅಥವಾ ವಿಜ್ಞಾನ ಭಾಷೆಯನ್ನು ಕಲಿಯುವ ಸಾಮರ್ಥ್ಯ ಕಡಿಮೆ. ಉಳಿದಂತೆ ಸಾಮಾನ್ಯ ಮಗುವಂತೆಯೇ ಇರುತ್ತದೆ. ನಿಧಾನವಾಗಿ, ಪ್ರೀತಿಯಿಂದ ಒತ್ತಡಹೇರದೆ ಕಲಿಸಬೇಕು. ಮಗುವಿನ ಸೃಜನಶೀಲತೆಯನ್ನು ಹೆಚ್ಚಿಸುವುದೇ ಚಿಕಿತ್ಸೆ.

– ಸಿ.ಆರ್.ಚಂ.

## ಮನೋವಿಜ್ಞಾನದ ಅಧ್ಯಯನ ವಿಧಾನಗಳು

ಮನೋವಿಜ್ಞಾನವು ತನ್ನ ಅಧ್ಯಯನದ ಸನ್ನಿವೇಶ, ಉದ್ದೇಶ, ಮತ್ತು ಅಗತ್ಯಗಳಿಗೆ ಸಂಬಂಧಿಸಿದಂತೆ ಅನುರೂಪವಾದ ವಿಧಾನ ಅಥವಾ ವಿಧಾನಗಳನ್ನು ಆಯ್ಕೆ ಮಾಡುತ್ತದೆ. ಪ್ರತಿ ವಿಧಾನವೂ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿದೆ. ಹಾಗೆಯೇ ಕೆಲವು ಮಿತಿಗಳನ್ನು ಹೊಂದಿದೆ. ಮನೋವಿಜ್ಞಾನದ ಕೆಲವು ಅಧ್ಯಯನ ವಿಧಾನಗಳನ್ನು ಈ ಕೆಳಗೆ ವಿವರಿಸಲಾಗಿದೆ.

### ಅವಲೋಕ ವಿಧಾನ

ಇದು ಬಹಳ ಹಿಂದಿನಿಂದಲೂ ಬಳಸುತ್ತಿರುವ ಒಂದು ಜನಪ್ರಿಯ ವಿಧಾನವಾಗಿದೆ. ಅವಲೋಕನ ಎಂದರೆ 'ಗಮನಿಸುವುದು', 'ಅವಲೋಕಿಸುವುದು' ಅಥವಾ 'ವೀಕ್ಷಿಸುವುದು' ಎಂದು ಅರ್ಥ. ಈ ವಿಧಾನದಲ್ಲಿ ಜೀವಿಯು ಯಾವುದೇ ಒಂದು ಸನ್ನಿವೇಶದಲ್ಲಿ ಪ್ರಕಟಪಡಿಸುವ ಬಾಹ್ಯ ವರ್ತನೆಗಳನ್ನು ವಿವಿಧ ಕೋನಗಳಿಂದ ಜ್ಞಾನೇಂದ್ರಿಯಗಳ ಮೂಲಕ ಸಂಗ್ರಹಿಸುವುದಕ್ಕೆ ಅವಲೋಕನ ವಿಧಾನ ಎನ್ನುತ್ತಾರೆ. ವಿಷಯವನ್ನು ಸಂಗ್ರಹಿಸುವುದರಲ್ಲಿ ಇದು ಮೂಲಭೂತವಾದ ಹಾಗೂ ನೇರವಾದ ವಿಧಾನವಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿ, ಅರ್ಥೈಸಲಾಗುತ್ತದೆ.

ಪೂರ್ವನಿರ್ಧಾರಿತ ಕ್ರಮದಲ್ಲಿ ಕೈಗೊಳ್ಳುವ ಅವಲೋಕನಕ್ಕೆ 'ವ್ಯವಸ್ಥಿತ ಅವಲೋಕನ' ಎನ್ನುತ್ತಾರೆ. ಈ ವಿಧಾನದಲ್ಲಿ ಅವಲೋಕನದ ಉದ್ದೇಶಕ್ಕೆ ಅನುಗುಣವಾಗಿ ಸನ್ನಿವೇಶಗಳು, ಅವಧಿ ಮಧ್ಯಂತರ ಅವಧಿ, ದಾಖಲಿಸುವ ವಿಧಾನ ಮುಂತಾದವುಗಳನ್ನು ಮುಂದಾಗಿಯೇ ನಿರ್ಧರಿಸಿ, ಅದಕ್ಕೆ ಅನುಗುಣವಾಗಿ ಅವಲೋಕನವನ್ನು ಕೈಗೊಳ್ಳಲಾಗುತ್ತದೆ. ಕೆಲವು ಸಲ ಯಾವುದೇ ಪೂರ್ವನಿಯೋಜಿತವಾದ ಯೋಜನೆ ಇಲ್ಲದೆಯೇ ತತ್‌ಕ್ಷಣದ ಅವಲೋಕನದಿಂದ ವಿಷಯಗಳನ್ನು ದಾಖಲಿಸಿಕೊಳ್ಳಬಹುದಾಗಿದೆ.

ಅಗತ್ಯಕ್ಕೆ ಅನುಗುಣವಾಗಿ ಜೀವಿಯು ವರ್ತನೆಯನ್ನು, ಸಂಪೂರ್ಣವಾಗಿ ನಿಯಂತ್ರಿತ ಸನ್ನಿವೇಶದಲ್ಲಿ ಅಥವಾ ಭಾಗಶಃ ನಿಯಂತ್ರಿತ ಸನ್ನಿವೇಶದಲ್ಲಿ ಅಥವಾ ಸನ್ನಿವೇಶದ ಮೇಲೆ ಯಾವುದೇ ನಿಯಂತ್ರಣವನ್ನು ಇಟ್ಟುಕೊಳ್ಳದೆ ಅವಲೋಕನವನ್ನು ಕೈಗೊಳ್ಳಬಹುದಾಗಿದೆ. ಇಷ್ಟಲ್ಲದೆ ಸನ್ನಿವೇಶವನ್ನು ಘಟಿಸುವಂತೆ ಏರ್ಪಾಡು ಮಾಡಿ, ಅದರಲ್ಲಿ ಜೀವಿಯು ಪ್ರಕಟಪಡಿಸುವ ವರ್ತನೆಗಳನ್ನು ಅವಲೋಕನ ಮಾಡಬಹುದಾಗಿದೆ ಅಥವಾ ಅಗತ್ಯವಾದ ಸನ್ನಿವೇಶವು ಘಟಿಸುವವರೆವಿಗೆ ಕಾದಿದ್ದು ಅವಲೋಕನ ನಡೆಯಿಸಬಹುದಾಗಿದೆ, ಹೀಗೆ ಸ್ವಾಭಾವಿಕ ಸನ್ನಿವೇಶದಲ್ಲಿ ಜೀವಿಯು ಪ್ರಕಟಪಡಿಸುವ ವರ್ತನೆಗಳು ಸಹಜವಾಗಿರುವುದರಿಂದ ಹೆಚ್ಚು ವಿಶ್ವಾಸಾರ್ಹವಾಗಿರುತ್ತವೆ. ಅವಲೋಕನವನ್ನು ಜೀವಿಯ ಅರಿವಿಗೆ ಬರುವಂತೆ ತಿಳಿಸಿ, ನೇರವಾಗಿ ವೀಕ್ಷಣೆ ಮಾಡಬಹುದಾಗಿದೆ ಅಥವಾ ಜೀವಿಗೆ ಗೊತ್ತಿಲ್ಲದಂತೆ ಸಹಜ ವರ್ತನೆಗಳನ್ನು ನೋಡಬಹುದಾಗಿದೆ. ಈ ವಿಧಾನದಿಂದ ಜೀವಿಯು ವರ್ತನೆಯುನ್ನು ಒಂದು ಸಮೂಹದಲ್ಲಿದ್ದಾಗಲೂ ಸಹ ಗಮನಿಸಬಹುದಾಗಿದೆ. ಅಧ್ಯಯನದ ಉದ್ದೇಶಗಳಿಗೆ ಸರಿಹೊಂದುವಂತಹ ವರ್ತನೆಯ ಸಮರ್ಪಕವಾದ ಚಿತ್ರಣವನ್ನು ಪಡೆಯಲು ಅನುರೂಪವಾದ ಅವಲೋಕನಾ ವಿಧಾನವನ್ನು ಆಯ್ಕೆ ಮಾಡಬಹುದು.

ತಂತ್ರಜ್ಞಾನದ ಸಹಾಯದಿಂದ ಅವಲೋಕನಾ ವಿಧಾನವನ್ನು ಹೆಚ್ಚು ನಿಖರವಾಗಿ, ಯಶಸ್ವಿಯಾಗಿ ಕೈಗೊಳ್ಳಬಹುದಾಗಿದೆ. ಕ್ಯಾಮರಾ, ಟೇಪ್

Digitised by Bharatavani, CIIL

ರೆಕಾರ್ಡರ್, ಟೆಲಿವಿಷನ್, ಏಕಮುಖ ಪಾರದರ್ಶಕ ಪರದೆ ಮುಂತಾದವುಗಳ ಸಹಾಯದಿಂದ ಘಟನೆಗಳನ್ನು ಸ್ಥಳದಲ್ಲಿಯೇ ತತ್‌ಕ್ಷಣವೇ ದಾಖಲಿಸಬಹುದಾಗಿದೆ. ಹೀಗೆ ಮಾಡುವುದರಿಂದ, ಸನ್ನಿವೇಶಕ್ಕೆ ಧಕ್ಕೆಯಾಗದಂತೆ ದಾಖಲಿಸಲು ಸಾಧ್ಯವಾಗುವುದಲ್ಲದೆ, ಮರೆವಿನಿಂದ ಆಗುವ ದೋಷಗಳನ್ನು ನಿವಾರಿಸಬಹುದಾಗಿದೆ. ಸಂಗ್ರಹಿಸಿದ ಮಾಹಿತಿಯು ನಿಖರವಾಗಿರುತ್ತದೆ. ಅಲ್ಲದೆ, ಪೂರ್ವಗ್ರಹ ಪೀಡಿತ ಮತ್ತು ಪಕ್ಷಪಾತದಂತಹ ಭಾವನೆಗಳಿಗೆ ಸಿಲುಕದೆ ಮುಕ್ತವಾಗಿ ವಿಷಯ ಸಂಗ್ರಹಣೆ ಮಾಡಲು ಸಾಧ್ಯವಾಗುತ್ತದೆ.

ಈ ವಿಧಾನವು ಯಶಸ್ವಿಯಾಗಬೇಕಾದರೆ, ಅವಲೋಕಿಸಬೇಕಾದ ವಿಷಯದ ಉದ್ದೇಶಗಳನ್ನು ಮನಗಂಡು ಅದಕ್ಕೆ ಅನುಗುಣವಾದ ವೀಕ್ಷಣಾ ವಿಧಾನ, ಬಳಸುವ ವಿವಿಧ ಸಾಧನಗಳ ವಿವರ, ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು ಮುಂತಾದವುಗಳನ್ನು ಮುಂದಾಗಿಯೇ ಸ್ಪಷ್ಟಗೊಳಿಸಿ ಕೊಳ್ಳಬೇಕಾದ ಅಗತ್ಯವಿದೆ. ಇಷ್ಟೇ ಅಲ್ಲದೆ ಅವಲೋಕಿಸುವವರಿಗೆ ಅವಲೋಕಿಸುವ ವಿಷಯದ ಕುರಿತು ಅರಿವಿರಬೇಕಲ್ಲವೆ, ಅವರು ಸಾಕಷ್ಟು ಬುದ್ಧಿವಂತರೂ ಹಾಗೂ ಸಮರ್ಥರೂ ಆಗಿರಬೇಕು. ಎಲ್ಲ ವಿವರಗಳನ್ನು ನಿರ್ದಿಷ್ಟವಾಗಿ, ನಿಖರವಾಗಿ, ವಿವರವಾಗಿ, ಗಮನವನ್ನು ಸಂಪೂರ್ಣವಾಗಿ ವಿಷಯದ ಮೇಲೆ ಕೇಂದ್ರೀಕರಿಸಿಕೊಂಡು ಸ್ಪಷ್ಟವಾಗಿ ದಾಖಲಿಸಿದಾಗ ಈ ವಿಧಾನವು ಉತ್ತಮ ಫಲಿತಾಂಶಗಳನ್ನು ನೀಡುತ್ತದೆ.

ಅವಲೋಕನ ವಿಧಾನವು ಅತ್ಯಂತ ಸರಳವಾದ ಹೆಚ್ಚು ಖರ್ಚುವೆಚ್ಚಗಳಿಲ್ಲದೆ ಸುಲಭವಾಗಿ ಕೈಗೊಳ್ಳಬಹುದಾದ ವಿಧಾನವಾಗಿದೆ. ಈ ವಿಧಾನದಿಂದ ಜೀವಿಯ ಸಹಜವಾದ ವರ್ತನೆಗಳನ್ನು ಸಹಜವಾದ ಸನ್ನಿವೇಶಗಳಲ್ಲಿ ಪರಿಶೀಲಿಸಬಹುದಾಗಿದೆ. ವಿವರಗಳನ್ನು ತತ್‌ಕ್ಷಣವೇ ಸ್ಥಳದಲ್ಲಿಯೇ ದಾಖಲಿಸುವುದರಿಂದ ಅಗತ್ಯವಾದಾಗ, ಅಗತ್ಯವಾದ ಮಾಹಿತಿಯನ್ನು ಪಡೆಯಬಹುದು. ಇಷ್ಟೇ ಅಲ್ಲದೆ ಅಧ್ಯಯನದ ಉದ್ದೇಶ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಅಪೇಕ್ಷಿತ ವರ್ತನೆಯನ್ನು ಪ್ರಕಟಗೊಳಿಸುವಂತೆ ಕೃತಕ ಸನ್ನಿವೇಶಗಳನ್ನು ಸೃಷ್ಟಿಸಬಹುದು ಅಥವಾ ಸನ್ನಿವೇಶಗಳನ್ನು ಮಾರ್ಪಡಿಸಿಕೊಂಡು ಮಾಹಿತಿಯನ್ನು ಪಡೆಯಬಹುದಾಗಿದೆ. ಈ ವಿಧಾನದಿಂದ ಜೀವಿಯ ವರ್ತನೆಯನ್ನು ಪ್ರತ್ಯೇಕವಾಗಿ ಗಮನಿಸುವುದಲ್ಲದೆ, ಸಮೂಹದಲ್ಲಿ ಜೀವಿಯ ವರ್ತನೆ ಮತ್ತು ಸಮೂಹದ ಇತರ ಸದಸ್ಯರ ದೃಷ್ಟಿಕೋನದಿಂದ ಸಹ ಪರಿಶೀಲಿಸಬಹುದು. ವಿವಿಧ ಜನರ ಅವಲೋಕನದ ಫಲಿತಾಂಶವು ಹೆಚ್ಚು ವಿಶ್ವಾಸಾರ್ಹ ಹಾಗೂ ನಿರ್ದಿಷ್ಟವಾಗಿರುವ ಸಾಧ್ಯತೆಗಳಿವೆ. ಇದರಿಂದ ವರ್ತನೆಯ ಸಮಗ್ರ ಚಿತ್ರಣವೂ ದೊರೆಯುತ್ತದೆ. ಮನೋರೋಗದಿಂದ ಬಳಲುವವರು ಹಾಗೂ ಚಿಕ್ಕಮಕ್ಕಳನ್ನು ಪರೀಕ್ಷಿಸುವುದರಲ್ಲಿ ಈ ವಿಧಾನವು ಹೆಚ್ಚು ಉಪಯುಕ್ತವಾಗಿದೆ. ಅವಲೋಕನ ಮಾಡುವವರಿಗೆ ಹೆಚ್ಚಿನ ತರಬೇತಿಯ ಅಗತ್ಯವಿರುವುದಿಲ್ಲ, ಯಾರು ಬೇಕಾದರೂ, ಎಲ್ಲಿ ಬೇಕಾದರೂ ಈ ವಿಧಾನವನ್ನು ಬಳಸಬಹುದು.

ಅವಲೋಕನ ವಿಧಾನವು ಅನೇಕ ಉತ್ತಮ ಗುಣಗಳನ್ನು ಹೊಂದಿದ್ದರೂ ದೋಷಗಳಿಂದ ಮುಕ್ತವಾಗಿಲ್ಲ. ಅದರ ಕೆಲವು ದೋಷಗಳು ಹೀಗಿವೆ– ಯಾವುದೇ ಜೀವಿಯ ಬಾಹ್ಯವರ್ತನೆಯನ್ನು ಒಂದು ಸನ್ನಿವೇಶದಲ್ಲಿ ಅವಲೋಕಿಸಿ, ಅದರ ಆಧಾರದ ಮೇಲೆ ಅಂತಿಮ ತೀರ್ಮಾನಗಳನ್ನು ಕೈಗೊಳ್ಳಲಾಗುವುದಿಲ್ಲ. ಏಕೆಂದರೆ, ಆಗ ಉಂಟಾಗುವ ಎಲ್ಲ ವರ್ತನೆಗಳನ್ನು ಸಂಪೂರ್ಣವಾಗಿ ಪರಿಶೀಲಿಸುವುದು ಅಸಾಧ್ಯ. ಇದು ಅನಾವಲೋಕನದ ದೋಷ, ಬೇರೆ ಬೇರೆ ವೀಕ್ಷಕರಿಂದ ಇದು ಕಡಿಮೆ ಆಗುತ್ತದೆ. ಅವಲೋಕಿಸುವಾಗ ಹಲವು ಮುಖ್ಯವಾದ ಅಂಶಗಳನ್ನು ಅಲಕ್ಷಿಸುವ, ಕೆಲವು ವರ್ತನೆಗಳನ್ನು ತಪ್ಪಾಗಿ ಗ್ರಹಿಸುವ ಅಥವಾ ಅರ್ಥೈಸುವ ಹಾಗೂ ದಾಖಲಿಸುವ ಸಾಧ್ಯತೆಗಳೂ ಇವೆ. ಅಂದರೆ, ಅವಲೋಕನ ಮಾಡುವವನ ದೃಷ್ಟಿಕೋನವು, ಅವಲೋಕಿತ ಜೀವಿಯ ಉದ್ದೇಶಗಳಿಗಿಂತ ತೀರ ಭಿನ್ನವಾಗಿರುವ ಸಾಧ್ಯತೆಗಳಿವೆ. ವಿವಿಧ ಕಾರಣಗಳಿಂದ ಜೀವಿಯು ಸಹಜ ವರ್ತನೆಯನ್ನು ತೋರಿಸದೆ ಇರಬಹುದು. ವೀಕ್ಷಕನ ಪೂರ್ವಗ್ರಹ ಪೀಡಿತ, ಪಕ್ಷಪಾತ ಭಾವನೆಗಳು ಅವಲೋಕಿತ ವಿವರಗಳನ್ನು ದೋಷಪೂರಿತವಾಗಿಸುವ ಸಾಧ್ಯತೆ ಇದೆ. ಇಷ್ಟೇ ಅಲ್ಲದೆ, ಒಟ್ಟು ವಿಷಯದಿಂದ ಮುಖ್ಯವಾದ ವಿಷಯವನ್ನು ಬೇರ್ಪಡಿಸುವುದು ಕಷ್ಟಸಾಧ್ಯ. ಇದು ಅಪಾವಲೋಕನದ ದೋಷ. ಅವಲೋಕನ ಮಾಡುವವನು ತರಬೇತಿ ಇಲ್ಲದಿದ್ದರೂ, ಸಾರವನ್ನು ಗ್ರಹಿಸುವ ಶಕ್ತಿ, ಸೂಕ್ಷ್ಮಮತೆ, ಹೆಚ್ಚಿನ ಬುದ್ಧಿಸಾಮರ್ಥ್ಯಗಳೊಂದಿಗೆ ಸನ್ನಿವೇಶದ ಸಂಪೂರ್ಣ ಅರಿವು ಉಳ್ಳವನಾಗಿರಬೇಕಾಗುತ್ತದೆ. ಇಲ್ಲದಿದ್ದರೆ, ಮುಖ್ಯವಾದ ಅಂಶಗಳು ಅವಲೋಕನದಿಂದ ನುಸುಳಿ ಹೋಗುವ ಸಾಧ್ಯತೆ ಇರುತ್ತದೆ.

ಅವಲೋಕನ ವಿಧಾನವು ಉತ್ತಮವಾದ ಫಲಿತಾಂಶವನ್ನು ನೀಡಬೇಕಾದರೆ, ಅವಲೋಕನದ ಉದ್ದೇಶಗಳನ್ನು ಸ್ಪಷ್ಟಗೊಳಿಸಿಕೊಳ್ಳಬೇಕು, ಘಟನೆ ನಡೆಯಬೇಕಾದ ಸನ್ನಿವೇಶ, ಅವಲೋಕನದ ಅವಧಿ, ದಾಖಲೆಗಳನ್ನಿಡಲು ಅನುಸರಿಸುವ ವಿಧಾನ, ಇತರರ ಸಹಕಾರ, ಅಗತ್ಯವಾದ ಸಾಧನಗಳು, ತಂತ್ರಗಳನ್ನು ಮುಂದಾಗಿಯೇ ಸಿದ್ಧ ಮಾಡಿಕೊಂಡಿರಬೇಕು.

### ಅಂತರಾವಲೋಕನ

ಅಂತರಾವಲೋಕನ ವಿಧಾನವು ಇನ್ನೊಂದು ವಿಧದ ಅವಲೋಕನ ವಿಧಾನವಾಗಿದೆ. ಈ ವಿಧಾನವು ಮಾನವನೊಂದಿಗೇ ಪ್ರಾರಂಭವಾದ ಬಹಳ ಜನಪ್ರಿಯವಾದ ವಿಧಾನವಾಗಿದೆ. ಅಂತರಾವಲೋಕನ ಎಂದರೆ, ನಮ್ಮೊಳಗೆ ಆಗುವ ಮಾನಸಿಕ ವ್ಯವಹಾರಗಳನ್ನು ನಾವೇ ಅವಲೋಕಿಸುವುದು ಅಥವಾ ವೀಕ್ಷಿಸುವುದು ಎಂದು ಅರ್ಥ. ಆದ್ದರಿಂದ ಇದನ್ನು 'ಸ್ವವೀಕ್ಷಣೆ', 'ಅಂತರ್ ವೀಕ್ಷಣೆ' ಎಂದೂ ಹೇಳುತ್ತಾರೆ. ನಮ್ಮಲ್ಲಿ ಮೂಡುವ ಆಲೋಚನೆಗಳು, ಸಂವೇಗಗಳು, ಅಭಿಪ್ರಾಯಗಳು, ಅನುಭವಗಳು ಇತ್ಯಾದಿಗಳನ್ನು ಗಮನಿಸಿ ನಂತರ ಇವುಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅಂತಿಮ ತೀರ್ಮಾನಗಳನ್ನು ಕೈಗೊಳ್ಳುವುದನ್ನು ಈ ವಿಧಾನವು ಒಳಗೊಂಡಿದೆ. ಹೀಗೆ ಮಾಡಿದಾಗ ಜೀವಿಯು ತನ್ನನ್ನು ತಾನೇ ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ.

ಅನುಭವಗಳನ್ನು ಅನುಭವಿಸುತ್ತಿರುವ ಜೀವಿಯೇ ನೇರವಾಗಿ ಪರೀಕ್ಷಿಸಿಕೊಳ್ಳುವುದರಿಂದ ವಿಶ್ಲೇಷಣೆಯು ಹೆಚ್ಚು ಕ್ಲಿಷ್ಟವಾಗಿರುವುದಿಲ್ಲ. ಈ ವಿಧಾನವನ್ನು ಯಾವಾಗ ಬೇಕಾದರೂ, ಯಾರು ಬೇಕಾದರೂ, ಎಲ್ಲಿ ಬೇಕಾದರೂ ಇತರರ ಅರಿವಿಗೆ ಬಾರದಂತೆ ಸುಲಭವಾಗಿ ಕೈಗೊಳ್ಳಬಹುದಾಗಿದೆ. ತರಬೇತಿ ಪಡೆದ ಸಿಬ್ಬಂದಿಯ ಅವಶ್ಯಕತೆ ಇರುವುದಿಲ್ಲ. ಏನೂ ಖರ್ಚು ಮಾಡುವ ಅಗತ್ಯ ಇರುವುದಿಲ್ಲ. ಜೀವಿಯು ಯಥಾರ್ಥವಾಗಿ ತನ್ನ ವರ್ತನೆಗಳನ್ನು ತಾನೇ ಅವಲೋಕಿಸಿ ಸರಿಪಡಿಸಿಕೊಳ್ಳುವ ಅವಕಾಶ ದೊರೆಯುತ್ತದೆ. ಮಾನಸಿಕ ವ್ಯವಹಾರಗಳನ್ನು ಅನುಭವಿಸುವವರು ತಕ್ಷಣ ಮತ್ತು ಆದಷ್ಟು ನಿಖರವಾಗಿ ವಿಷಯಗಳನ್ನು ಅರ್ಥೈಸಿಕೊಳ್ಳಬಹುದು ಹಾಗೂ ಪರಿಹಾರಗಳನ್ನು ಕಂಡು ಹಿಡಿಯಬಹುದು. ಇತರರಿಗೆ ಗೊತ್ತಾಗದಂತೆ ದೋಷಗಳನ್ನು ಸರಿಪಡಿಸಿಕೊಳ್ಳಬಹುದು. ಇದು ಒಂದು ರೀತಿಯ ಆತ್ಮಾವಲೋಕನ. ಸಂರಚನಾ ತಂಡದ ಪ್ರವರ್ತಕ ಜರ್ಮನಿಯ ವಿಲ್‌ಹೆಲ್ಮ್ ಉಂಟ್ ಪ್ರಜ್ಞಾ ಪ್ರವಾಹವನ್ನು ಅಧ್ಯಯನ ಮಾಡಲು ಅಂತರಾವಲೋಕನಕ್ಕೆ ಮಹತ್ವ ನೀಡಿದ್ದನು.

ಅಂತರಾವಲೋಕನ ವಿಧಾನವು ಹಲವಾರು ದೋಷಗಳನ್ನು ಹೊಂದಿದೆ, ಮುಖ್ಯವಾಗಿ ಜೀವಿಯು ತನ್ನಲ್ಲಿ ಮನೋವ್ಯವಹಾರಗಳು ನಡೆಯುತ್ತಿರುವಾಗಲೇ ಅವುಗಳನ್ನು ವಿಮರ್ಶಾತ್ಮಕವಾಗಿ ಅವಲೋಕನ


Digitised by Bharatavani, CIIL

ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಘಟನೆಗಳು, ಘಟಿಸಿದ ತರುವಾಯ ಅವುಗಳನ್ನು ಕುರಿತು ಯೋಚಿಸಿದಾಗ ಅದು ಒಂದು ವರದಿ ಮಾತ್ರವಾಗುತ್ತದೆ ಹೊರತಾಗಿ ವಸ್ತುನಿಷ್ಠ ಅವಲೋಕನವಾಗುವುದಿಲ್ಲ. ಮರೆವಿನಿಂದ ವರದಿಯಲ್ಲಿ ಅನೇಕ ಅಂಶಗಳು ಕೈಬಿಟ್ಟು ಹೋಗುವ ಸಂಭವ ಇದೆ. ಉದಾಹರಣೆಗೆ ಜೀವಿಗೆ ಕೋಪ ಬಂದಾಗ, ತನ್ನನ್ನು ತಾನೇ ಅವಲೋಕಿಸಿಕೊಳ್ಳಲು ಸಾಧ್ಯವಾಗುವುದಿಲ್ಲ, ಒಂದು ವೇಳೆ ಅವಲೋಕಿಸಲು ಪ್ರಾರಂಭಿಸಿದರೆ, ಕೋಪದ ಭಾವನೆಯೇ ಮಾಯವಾಗುತ್ತದೆ, ಆಗ ಅವಲೋಕಿಸುವವನು ಅನುಭವವನ್ನು ಕೇವಲ ನೆನಪಿನ ಸಹಾಯದಿಂದ ವರದಿ ಮಾಡಬಹುದಷ್ಟೆ. ಹೀಗೆ ದೊರೆತ ಮಾಹಿತಿಯು ಅಷ್ಟು ಸಮಂಜಸವಾಗಿರುವುದಿಲ್ಲ. ಇಷ್ಟೇ ಅಲ್ಲದೆ, ಆಲೋಚನೆಗಳು, ಸಂವೇಗಗಳು, ಆಸೆಗಳು, ರುಚಿಗಳು ಬದಲಾವಣೆ ಹೊಂದುವುದರಿಂದ ಇವುಗಳಲ್ಲಿ ಸ್ಥಿರತೆ ಇರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಪರಿಶೀಲನೆ ವ್ಯತಿರಿಕ್ತ ಫಲಿತಾಂಶಗಳನ್ನು ನೀಡುತ್ತದೆ. ಇದರಿಂದ ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲಾಗುವುದಿಲ್ಲ. ಇಷ್ಟೇ ಅಲ್ಲದೆ ಯಾವುದೇ ಜೀವಿಯು ತಮ್ಮ ಕುರಿತಾಗಿ ಪ್ರಾಮಾಣಿಕ ವರದಿ ಮಾಡದೆ ಇರುವುದಲ್ಲದೆ. ತಮ್ಮ ವರ್ತನೆಗಳನ್ನು ಸಮರ್ಥಿಸಿಕೊಳ್ಳುವ ಸಾಧ್ಯತೆಗಳಿವೆ. ಇದು ಮಾನವ ಸಹಜ ಗುಣವಾಗಿರುವುದರಿಂದ ವಿಷಯಗಳು ಸ್ಪಷ್ಟವಾಗದೆ ಹೋಗುವ ಸಾಧ್ಯತೆಗಳಿವೆ. ತಮ್ಮ ಕುರಿತಾಗಿ ಇರುವ ತಪ್ಪು ಅಭಿಪ್ರಾಯಗಳು ಹಾಗೂ ಪೂರ್ವಗ್ರಹ ಪೀಡಿತ ಭಾವನೆಗಳು ಅಂತರಾವಲೋಕನದ ವರದಿಯನ್ನು ದೋಷಪೂರಿತವಾಗಿಸುತ್ತವೆ. ಪ್ರಜ್ಞಾಹೀನ ಹಾಗೂ ಅರೆಪ್ರಜ್ಞಾವಸ್ಥೆಯಲ್ಲಿರುವಾಗ ಈ ವಿಧಾನವು ಪ್ರಯೋಜನವಾಗುವುದಿಲ್ಲ. ಚಿಕ್ಕ ಮಕ್ಕಳು ಹಾಗೂ ಮಾನಸಿಕವಾಗಿ ಅಸ್ವಸ್ಥವಾಗಿರುವವರಿಗೆ ಈ ವಿಧಾನವನ್ನು ಬಳಸಲು ಸಾಧ್ಯವಾಗುವುದಿಲ್ಲ.

### ಪ್ರಾಯೋಗಿಕ ವಿಧಾನ

ಹೆಸರೇ ಸೂಚಿಸುವಂತೆ ಈ ವಿಧಾನದಲ್ಲಿ ಪ್ರಯೋಗವೇ ಪ್ರಮುಖವಾಗಿದೆ. ಇಲ್ಲಿ ವರ್ತನೆಯನ್ನು ವೈಜ್ಞಾನಿಕವಾಗಿ, ವಸ್ತುನಿಷ್ಠವಾಗಿ, ಸುವ್ಯವಸ್ಥಿತವಾಗಿ ಪೂರ್ವಯೋಜಿತ ರೀತಿಯಲ್ಲಿ, ನಿಯಂತ್ರಿತ ಸನ್ನಿವೇಶಗಳಲ್ಲಿ ನಿಖರವಾಗಿ ಅಧ್ಯಯನ ಮಾಡಲಾಗುತ್ತದೆ.

ಪ್ರಾಯೋಗಿಕ ವಿಧಾನವು ನಿಯಂತ್ರಿತ ಸನ್ನಿವೇಶದಲ್ಲಿ ಕೈಗೊಳ್ಳುವ ಒಂದು ಉದ್ದೇಶಪೂರ್ವಕವಾದ ಅವಲೋಕನವಾಗಿದೆ. ಇಲ್ಲಿ ಸನ್ನಿವೇಶಗಳನ್ನು ನಿಯಂತ್ರಿಸಿ ಅಧ್ಯಯನವನ್ನು ಕೈಗೊಳ್ಳಲಾಗುತ್ತದೆ. ಅಧ್ಯಯನದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ನಿಯಂತ್ರಣ ಮಾಡಲಾಗುತ್ತದೆ.

'ಪ್ರಯೋಗ'ದ ಇಂಗ್ಲಿಷ್ ಭಾಷೆಯ ಪರ್ಯಾಯ ಪದವಾದ 'ಎಕ್ಸಪೆರಿಮೆಂಟ್' ಎಂಬ ಪದವು ಲ್ಯಾಟಿನ್ ಭಾಷೆಯ 'ಎಕ್ಸಪೆರಿಮೆಂಟಮ್' ಎಂಬ ಪದದಿಂದ ಬಂದಿದೆ, ಇದರ ಅರ್ಥ 'ಪರೀಕ್ಷೆ' ಎಂದು ಆಗುತ್ತದೆ. ಈ ವಿಧಾನದಲ್ಲಿ ಒಂದು ವಿಷಯ ಅಥವಾ ಘಟನೆಯನ್ನು ಪರೀಕ್ಷೆಗೆ ಅಂದರೆ ಪ್ರಯೋಗಕ್ಕೆ ಒಳಪಡಿಸಿ, ಅದರ ಸತ್ಯಾಸತ್ಯತೆಗಳನ್ನು ಒರೆಹಚ್ಚಿ ಪರೀಕ್ಷಿಸುವುದಲ್ಲದೆ, ಕಾರ್ಯಕಾರಣ ಸಂಬಂಧಗಳನ್ನು ಗುರುತಿಸಲಾಗುತ್ತದೆ. ಇಷ್ಟೇ ಅಲ್ಲದೆ, ಘಟನೆಗಳು ಅಥವಾ ಸನ್ನಿವೇಶಗಳನ್ನು ಕೃತಕವಾಗಿ ಸೃಷ್ಟಿಸಿ, ಅವುಗಳಲ್ಲಿ ಜೀವಿಯು ವರ್ತನೆಗಳನ್ನು ಪ್ರಕಟಗೊಳಿಸುವಂತೆ ಪ್ರೇರಣೆ ನೀಡಿ ಅಧ್ಯಯನಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ.

ಪ್ರಾಯೋಗಿಕ ವಿಧಾನವು ಕ್ರಮಬದ್ಧವಾಗಿರುವುದರಿಂದ ಇದನ್ನು ಹಲವು ನಿರ್ದಿಷ್ಟ ಹಂತಗಳ ಮೂಲಕ ನಡೆಯಿಸಲಾಗುತ್ತದೆ. ಪ್ರಾಯೋಗಿಕ ವಿಧಾನದ ಹಂತಗಳನ್ನು ಮುಂದೆ ವಿವರಿಸಲಾಗಿದೆ.

#### ಸಮಸ್ಯೆಯ ಗುರುತಿಸುವಿಕೆ, ಆಯ್ಕೆ ಹಾಗೂ ನಿರೂಪಣೆ

ಈ ಹಂತವು ಪ್ರಮುಖವಾದದ್ದು. ಏಕೆಂದರೆ ಈ ಹಂತದಲ್ಲಿ ಆಗುವ ತಪ್ಪುಗಳು ಇಡೀ ಅಧ್ಯಯನದ ಉದ್ದಕ್ಕೂ ಗೊಂದಲ ಉಂಟುಮಾಡಿ ಅಧ್ಯಯನವು ನಿರೀಕ್ಷಿತ ಫಲ ನೀಡದೆ ಹೋಗುವ ಸಾಧ್ಯತೆ ಇದೆ. ಆದ್ದರಿಂದ ವ್ಯಾಪಕವಾದ ಸಂಬಂಧಿತ ಸಾಹಿತ್ಯಾವಲೋಕನ, ಮುಕ್ತ ಚರ್ಚೆ ಹಾಗೂ ಸಾಧ್ಯವಾದ ಎಲ್ಲ ಮೂಲಗಳಿಂದ ಮಾಹಿತಿ ಸಂಗ್ರಹಿಸಿ, ವಿಮರ್ಶಾತ್ಮಕವಾಗಿ ಅವಲೋಕಿಸಿದ ತರುವಾಯ ಹೊಸದಾದ, ಆಸಕ್ತಿಯುತವಾದ, ಅಗತ್ಯವಾದ ನಿಭಾಯಿಸಬಲ್ಲಂತಹ ಸಮಸ್ಯೆಯನ್ನು ಆಯ್ಕೆ ಮಾಡಬೇಕು. ನಂತರ ಆಯ್ಕೆ ಮಾಡಿದ ಸಮಸ್ಯೆಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವುದಲ್ಲದೆ ಅದನ್ನು ಸಮರ್ಥಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಅಧ್ಯಯನದ ಉದ್ದೇಶಗಳನ್ನು ನಿರ್ದಿಷ್ಟವಾಗಿ ರೂಪಿಸಿ, ಅದಕ್ಕೆ ಅನುಗುಣವಾಗಿ ಅಧ್ಯಯನವನ್ನು ಸುಲಲಿತವಾಗಿ ಕೈಗೊಳ್ಳಲು ಸಾಧ್ಯವಾಗುತ್ತದೆ.

#### ಪ್ರಾಕ್ಕಲ್ಪನೆಗಳ ಅಥವಾ ತಾತ್ಕಾಲಿಕ ಉತ್ತರಗಳ ರಚನೆ

ಸಮಸ್ಯೆಯ ಆಯ್ಕೆಯ ತರುವಾಯ, ಆ ಸಮಸ್ಯೆಯ ಪರಿಹಾರದ ಕುರಿತು ತರ್ಕಬದ್ಧವಾದ, ಬುದ್ಧಿವಂತಿಕೆಯಿಂದ ಕೂಡಿದ ಹಾಗೂ ಎಚ್ಚರಿಕೆಯಿಂದ ಮಾಡಿದ ಊಹೆಗಳನ್ನು ಮಾಡಬೇಕು, ಇವುಗಳನ್ನು ಪ್ರಾಕ್ಕಲ್ಪನೆಗಳು ಎನ್ನುತ್ತಾರೆ. ಪ್ರಾಯೋಗಿಕ ಅಧ್ಯಯನಗಳಲ್ಲಿ ಇದು ಮಹತ್ವದ ಹಂತವಾಗಿದೆ. ಏಕೆಂದರೆ, ಇದು ಅಧ್ಯಯನದ ಗುರಿಗಳನ್ನು ಸ್ಪಷ್ಟಪಡಿಸಿ ಅಧ್ಯಯನಕ್ಕೆ ಮಾರ್ಗದರ್ಶಿಯಾಗುತ್ತದೆ. ಅಧ್ಯಯನದ ವಿವಿಧ ಅಂಶಗಳ ನಡುವಣ ಸಂಬಂಧಗಳನ್ನು ತಿಳಿದುಕೊಳ್ಳಲು ಸಹಾಯ ನೀಡುವುದಲ್ಲದೆ, ಅಧ್ಯಯನಕ್ಕೆ ಅಗತ್ಯವಾದ ಸಾಧನಗಳು ಹಾಗೂ ತಂತ್ರಗಳನ್ನು ಆಯ್ಕೆ ಮಾಡುವುದಕ್ಕೆ ನೆರವು ನೀಡುತ್ತದೆ. ಅನಗತ್ಯ ಅಂಶಗಳನ್ನು ಬೇರ್ಪಡಿಸಲು ಹಾಗೂ ಅಂತಿಮವಾಗಿ ಸರಿಯಾದ ತೀರ್ಮಾನಗಳನ್ನು ಕೈಗೊಳ್ಳಲು ಅನುವು ಮಾಡಿಕೊಡುತ್ತದೆ.

#### ಚರಗಳನ್ನು ಅಥವಾ ಪರಿವರ್ತ್ಯಗಳನ್ನು ಗುರುತಿಸುವುದು ಮತ್ತು ನಿಯಂತ್ರಿಸುವುದು

ಚರಗಳನ್ನು ಚಲಕಗಳು ಎಂದು ಸಹ ಹೇಳುತ್ತಾರೆ. ಚರಗಳೆಂದರೆ ಬದಲಾಯಿಸುವಂತಹ, ನಿಯಂತ್ರಿಸುವಂತಹ ಗುಣಲಕ್ಷಣಗಳು ಅಥವಾ ಅಂಶಗಳು. ಬದಲಾವಣೆಗಳು ಪರಿಮಾಣಾತ್ಮಕವಾಗಿರಬಹುದು ಅಥವಾ ಗುಣಾತ್ಮಕವಾಗಿರಬಹುದು. ಅಧ್ಯಯನದ ಮೇಲೆ ಚರಗಳ ಪ್ರಭಾವಗಳನ್ನು ನಿಯಂತ್ರಿಸುವ ಅಗತ್ಯವಿರುತ್ತದೆ. ಇನ್ನೊಂದು ಚರದ ಮೇಲೆ ಅವಲಂಬಿಸಿ ವ್ಯತ್ಯಾಸಗೊಳ್ಳುವ ಅವಲಂಬಿ ಚರಗಳನ್ನು (ಪರತಂತ್ರ ಚಲಕ) ಮತ್ತು ಇಷ್ಟ ಬಂದ ರೀತಿಯಲ್ಲಿ ಬದಲಾಯಿಸಬಹುದಾದ ಸ್ವತಂತ್ರ ಚರಗಳನ್ನು ಅಧ್ಯಯನದ ಅಗತ್ಯಕ್ಕೆ ಅನುಗುಣವಾಗಿ ಗುರುತಿಸಿಕೊಳ್ಳುವುದು ಅಗತ್ಯವಾಗಿದೆ. ಪ್ರಯೋಗದ ಯಶಸ್ಸು ಚರಗಳ ನಿಯಂತ್ರಣದ ಸಮರ್ಪಕತೆಯ ಮೇಲೆ ಅವಲಂಬಿಸಿರುತ್ತದೆ. ಪ್ರಯೋಗಕ್ಕೆ ಸಂಬಂಧಿಸಿದಂತೆ ಚರಗಳನ್ನು ಅಗತ್ಯಕ್ಕೆ ತಕ್ಕಂತೆ ರಚನಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗುವಂತೆ ರೂಪಿಸುವುದು ಪ್ರಾಯೋಗಿಕ ಅಧ್ಯಯನದ ಯಶಸ್ಸನ್ನು ನಿರ್ಧರಿಸುತ್ತದೆ. ಆದ್ದರಿಂದ ಇವುಗಳ ಆಯ್ಕೆ ಹಾಗೂ ನಿಯಂತ್ರಣ ಈ ಅಧ್ಯಯನ ವಿಧಾನದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

#### ಮಾಹಿತಿ ಸಂಗ್ರಹಕ್ಕಾಗಿ ತಂತ್ರಗಳ ಆಯ್ಕೆ

ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ವಿವಿಧ ಸಾಧನಗಳು ಹಾಗೂ ತಂತ್ರಗಳ ಮೂಲಕ ಪಡೆಯಬೇಕಾಗುತ್ತದೆ. ಆದ್ದರಿಂದ ಸೂಕ್ತ ಹಾಗೂ ಅವಶ್ಯಕವಾದ ತಂತ್ರಗಳನ್ನು ಅವುಗಳ ಉಪಯುಕ್ತತೆ ಹಾಗೂ

Digitised by Bharatavani, CIIL

ಮಿತಿಗಳ ಆಧಾರದ ಮೇಲೆ ಜಾಗರೂಕತೆಯಿಂದ ಆಯ್ಕೆ ಮಾಡಬೇಕಾಗುತ್ತದೆ. ಪ್ರತಿ ಒಂದು ಅಳತೆಯ ತಂತ್ರ ವಿಶ್ವಾಸಾರ್ಹವಾಗಿರಬೇಕು. ಸಾಮಂಜಸ್ಯತೆ ಹೊಂದಿರಬೇಕು, ಉಪಯೋಗಿಸಲು / ಪ್ರಸ್ತುತಪಡಿಸಲು ಸಾಧ್ಯವಾಗುವಂತಿರಬೇಕು. ಸೂಕ್ತವಾದ ಅಳತೆ ಮಾಪನಿಗಳು ಅಲಭ್ಯವಾದರೆ, ಹೊಸದಾಗಿ ತಯಾರಿಸಿಕೊಳ್ಳಬಹುದು ಅಥವಾ ಅಸ್ತಿತ್ವದಲ್ಲಿರುವಂತಹವುಗಳನ್ನು ಅನುಕೂಲಕ್ಕೆ ತಕ್ಕಂತೆ ಮಾರ್ಪಾಟು ಮಾಡಿಕೊಳ್ಳಬಹುದು. ಅಗತ್ಯವಾದಾಗ ಒಂದಕ್ಕಿಂತ ಹೆಚ್ಚು ತಂತ್ರಗಳು ಅಥವಾ ಸಾಧನಗಳನ್ನು ಬಳಸಬಹುದು. ಒಟ್ಟಿನಲ್ಲಿ ಸೂಕ್ತವಾದ ಮಾಹಿತಿಯನ್ನು ಪಡೆಯುವುದು ಇಲ್ಲಿ ಮುಖ್ಯ ಉದ್ದೇಶವಾಗಿರುತ್ತದೆ.

**ಮಾಹಿತಿ ಸಂಗ್ರಹಣೆ**

ಈಗಾಗಲೇ ರೂಪಿಸಿಕೊಂಡ ಉದ್ದೇಶಗಳು ಹಾಗೂ ಪ್ರಾಕ್ಕಲ್ಪನೆಗಳಿಗೆ ಅನುಗುಣವಾಗಿ, ಆಯ್ಕೆ ಮಾಡಿದ ಪ್ರತಿದರ್ಶಕ್ಕೆ (Sample) ಆಯ್ದ ಸಾಧನ ಹಾಗೂ ತಂತ್ರಗಳನ್ನು ಪ್ರಸ್ತುತಪಡಿಸುವುದರ ಮೂಲಕ ಆಧಾರಾಂಶಗಳನ್ನು ಅಥವಾ ದತ್ತಾಂಶಗಳನ್ನು ಸಂಗ್ರಹಿಸಬೇಕಾಗುತ್ತದೆ.

ಸಂಗ್ರಹಿಸಿದ ಮಾಹಿತಿಯನ್ನು ಅಗತ್ಯಕ್ಕೆ ಅನುಗುಣವಾಗಿ ಪರೀಕ್ಷಿಸಿ, ಉಪಯುಕ್ತ ಮಾಹಿತಿಯನ್ನು ಅನುಪಯುಕ್ತ ಮಾಹಿತಿಯಿಂದ ಬೇರ್ಪಡಿಸಿ, ವರ್ಗೀಕರಿಸಿ, ವಿಶ್ಲೇಷಣೆಗೆ ವ್ಯವಸ್ಥೆಗೊಳಿಸುವುದು ಈ ಹಂತದಲ್ಲಿ ಕೈಗೊಳ್ಳಬೇಕಾದ ಕಾರ್ಯಗಳಾಗಿವೆ.

**ಮಾಹಿತಿಯ ವಿಶ್ಲೇಷಣೆ**

ವ್ಯವಸ್ಥೀಕರಣಗೊಳಿಸಿರುವ ಮಾಹಿತಿಯನ್ನು ಈ ಹಂತದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಪ್ರಾಯೋಗಿಕ ಸಮೂಹದ ವರ್ತನೆಗಳನ್ನು ನಿಯಂತ್ರಿತ ಸಮೂಹದ ವರ್ತನೆಗಳೊಂದಿಗೆ ಹೋಲಿಸಿ ಅಥವಾ ಪೂರ್ವಪರೀಕ್ಷಣಾ ಫಲಿತಾಂಶಗಳನ್ನು ನಂತರದ ಪರೀಕ್ಷಣೆಯ ಮೌಲ್ಯಗಳೊಂದಿಗೆ ಹೋಲಿಸಿ ನೋಡಬೇಕಾಗುತ್ತದೆ. ಹೀಗೆ ಸಮರ್ಥವಾಗಿ ಹೋಲಿಸಿ ನೋಡಲು ವ್ಯವಸ್ಥೀಕರಣಗೊಳಿಸಿದ ಮಾಹಿತಿಯನ್ನು ವಿವರಣಾತ್ಮಕ ಹಾಗೂ ಸೂಕ್ತವಾದ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಗಳಿಗೆ ಒಳಪಡಿಸಿ, ದೊರೆತ ಫಲಿತಾಂಶಗಳ ಆಧಾರದ ಮೇಲೆ ಅಂತಿಮ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ.

**ಫಲಿತಾಂಶಗಳು ಹಾಗೂ ಅವುಗಳ ಅರ್ಥೈಸುವಿಕೆ**

ಮಾಹಿತಿಯ ವಿಶ್ಲೇಷಣೆಯಿಂದ ದೊರೆತ ಫಲಿತಾಂಶಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಿ ಅರ್ಥೈಸಬೇಕಾಗುತ್ತದೆ. ಹೀಗೆ ಮಾಡುವಾಗ ಸಮಸ್ಯೆಯನ್ನು ಸಮಗ್ರವಾಗಿ ಗಮನಿಸುವ ಅಗತ್ಯವಿರುತ್ತದೆ. ಸಾಧನಗಳು ಹಾಗೂ ತಂತ್ರಗಳ ಮಿತಿಗಳನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇಷ್ಟೇ ಅಲ್ಲದೆ, ಅಧ್ಯಯನದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆಗ ಫಲಿತಾಂಶಗಳ ವಿಶ್ವಸನೀಯತೆಯು ಹೆಚ್ಚಾಗುತ್ತದೆ. ಈ ಹಿನ್ನೆಲೆಯಲ್ಲಿ ದೊರೆತ ಫಲಿತಾಂಶಗಳನ್ನು ಅರ್ಥೈಸಿದಾಗ, ಎಲ್ಲೆಡೆಗೆ ಹೊಂದುವಂತಹ, ಪರೀಕ್ಷಿಸಲು ಸಾಧ್ಯವಾಗುವಂತಹ ಸರಳವಾದ, ಸತ್ಯವಾದ, ನಿಖರವಾದ, ಸ್ಪಷ್ಟವಾದ ಹೇಳಿಕೆಗಳನ್ನು ತತ್ವದ ಅಥವಾ ನಿಯಮದ ರೂಪದಲ್ಲಿ ನೀಡಲು ಸಾಧ್ಯವಾಗುತ್ತದೆ.

ಪ್ರಾಯೋಗಿಕ ವಿಧಾನವು ವೈಜ್ಞಾನಿಕವಾದ ಹಾಗೂ ಅತ್ಯಂತ ವ್ಯವಸ್ಥಿತವಾಗಿ ಕಾರ್ಯಗತಗೊಳಿಸುವ ವಿಧಾನವಾಗಿದೆ. ಪ್ರಯೋಗಗಳನ್ನು ನಿಯಂತ್ರಿತ ಸನ್ನಿವೇಶದಲ್ಲಿ ಕೈಗೊಳ್ಳುವುದರಿಂದ ವಾಸ್ತವಿಕವಾದ, ನಂಬಲರ್ಹವಾದಂತಹ ನಿಖರವಾದ ಫಲಿತಾಂಶಗಳು ದೊರೆಯುತ್ತವೆ. ಪ್ರಯೋಗಗಳು ವಸ್ತುನಿಷ್ಠವಾದ ಫಲಿತಾಂಶಗಳನ್ನು ನೀಡುವುದರಿಂದ ಹೆಚ್ಚು ಮೌಲ್ಯಯುತವಾಗಿರುತ್ತವೆ. ಹೊಸ ತತ್ವಗಳು, ನಿಯಮಗಳು ಹಾಗೂ ಸಿದ್ಧಾಂತಗಳನ್ನು ಒರೆಹಚ್ಚಿ ನೋಡುವುದರಲ್ಲಿ ಈ ವಿಧಾನ ಸಹಾಯಕವಾಗಿದೆ. ಪ್ರಾಯೋಗಿಕ ವಿಧಾನದಿಂದ ದೊರೆತ ಫಲಿತಾಂಶಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಬಹುದಾಗಿದೆ. ಫಲಿತಾಂಶಗಳಿಗೆ ವಿವರಣೆಗಳನ್ನು ನೀಡುವುದಕ್ಕೆ ಸಂಖ್ಯಾಶಾಸ್ತ್ರದ ಬೆಂಬಲ ಪಡೆಯಲಾಗುತ್ತದೆ. ಫಲಿತಾಂಶಗಳನ್ನು ಸಾಮಾನ್ಯೀಕರಣಗೊಳಿಸ ಬಹುದಾಗಿದೆ. ಪ್ರಯೋಗಗಳಿಂದ ದೊರೆತ ಜ್ಞಾನವನ್ನು ಮುಂದಿನ ಅಧ್ಯಯನಗಳಿಗೆ ಆಧಾರವಾಗಿ ಬಳಸಬಹುದು ಮತ್ತು ವಿವಿಧ ತತ್ವಗಳು, ನಿಯಮಗಳು ಹಾಗೂ ಸಿದ್ಧಾಂತಗಳನ್ನು ಸಾರ್ವತ್ರೀಕರಣಗೊಳಿಸಬಹುದು.

ಅನೇಕ ಉತ್ತಮ ಗುಣಗಳಿದ್ದರೂ ಪ್ರಾಯೋಗಿಕ ವಿಧಾನವು ದೋಷಗಳಿಂದ ಮುಕ್ತವಾಗಿಲ್ಲ. ಒಂದು ಅಧ್ಯಯನಕ್ಕೆ ಸಂಬಂಧಿಸಿದಂತೆ ಪರಿಣಾಮ ಬೀರುವಂತಹ ಎಲ್ಲ ಚರಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಜೀವಿಗಳು ಪ್ರದರ್ಶಿಸುವ ಎಲ್ಲ ವರ್ತನೆಗಳನ್ನು ಪ್ರಾಯೋಗಿಕವಾಗಿ ಅಧ್ಯಯನ ಮಾಡಲು ಸಾಧ್ಯವಿಲ್ಲ ಏಕೆಂದರೆ ಅವು ಬದಲಾವಣೆಗೆ ಒಳಪಡುವ ಸಂಭವವಿರುತ್ತದೆ. ಈ ವಿಧಾನದಲ್ಲಿ ಪ್ರಯೋಗ ಕೈಗೊಳ್ಳುವ ವ್ಯಕ್ತಿಯು ಹೆಚ್ಚಿನ ಪರಿಣತಿ ಹಾಗೂ ತರಬೇತಿ ಪಡೆದಿರಬೇಕಾದ ಅವಶ್ಯಕತೆ ಇದೆ. ಅಧ್ಯಯನ ಕೈಗೊಳ್ಳಲು ಹೆಚ್ಚಿನ ಸಮಯ ಹಾಗೂ ಹೆಚ್ಚು ಖರ್ಚಾಗುತ್ತದೆ. ಈ ವಿಧಾನದಲ್ಲಿ ವ್ಯಕ್ತಿಗೆ ಪ್ರಯೋಗದ ಅರಿವು ಇರುವುದರಿಂದ ವರ್ತನೆಗಳು ಕೃತಕವಾಗಿರುವ ಸಂಭವವಿದೆ. ಇಷ್ಟೇ ಅಲ್ಲದೆ ಯಾವುದೇ ಜೀವಿಯ ಆಂತರಿಕ ಮನೋವ್ಯಾಪಾರಗಳನ್ನು ಗುರುತಿಸುವುದು ಕಷ್ಟಸಾಧ್ಯವಾದ ಕಾರ್ಯ. ಜೀವಿಯ ವರ್ತನೆಗಳನ್ನು ಪರಿಮಾಣಾತ್ಮಕವಾಗಿ ಅಳತೆ ಮಾಡಿ ನಿರ್ಧರಿಸುವುದಕ್ಕೆ ಸಾಧ್ಯವಿಲ್ಲ. ಬಳಸಿದ ಸಾಧನಗಳು ಹಾಗೂ ತಂತ್ರಗಳು ತಮ್ಮದೇ ಆದ ಮಿತಿಗಳನ್ನು ಹೊಂದಿರುವುದರಿಂದ ಮಾಪನವು ಸರಿಯಾಗದೇ ಇರಬಹುದು.

ಇಷ್ಟೆಲ್ಲ ದೋಷಗಳಿದ್ದರೂ ಪ್ರಾಯೋಗಿಕ ವಿಧಾನವು ಒಂದು ಉತ್ತಮವಾದ ವಿಧಾನವೆಂದು ಪರಿಗಣಿತವಾಗಿದೆ ಹಾಗೂ ಅನೇಕ ಕ್ಷೇತ್ರಗಳಲ್ಲಿ ಈ ವಿಧಾನವನ್ನು ಯಶಸ್ವಿಯಾಗಿ ಬಳಸಲಾಗುತ್ತಿದೆ.

**ವ್ಯಕ್ತಿ ಅಧ್ಯಯನ ವಿಧಾನ**

ವ್ಯಕ್ತಿ ಅಧ್ಯಯನ ವಿಧಾನವು ಒಂದು ನೈಜವಾದ ಹಾಗೂ ವ್ಯಾಪಕವಾದ ಪರಿಧಿಯನ್ನು ಹೊಂದಿದ ಅಧ್ಯಯನವಾಗಿದೆ. ಹೆಸರೇ ಸೂಚಿಸುವಂತೆ ಇಲ್ಲಿ ಒಬ್ಬ ವ್ಯಕ್ತಿಯ ಸಂಕೀರ್ಣ ಸ್ವಭಾವದ ಆಳವಾದ ಸಂಪೂರ್ಣವಾದ ಹಾಗೂ ಸವಿಸ್ತಾರವಾದ ಅಧ್ಯಯನವನ್ನು ಕೈಗೊಂಡು ವ್ಯಕ್ತಿಯ ನಿರ್ದಿಷ್ಟ ಸಮಸ್ಯೆಗಳು ಹಾಗೂ ವರ್ತನಾ ದೋಷಗಳಿಗೆ ಕಾರ್ಯಕಾರಣ ಸಂಬಂಧಗಳನ್ನು ಗುರುತಿಸಿ ಅವುಗಳಿಗೆ ಪರಿಹಾರೋಪಾಯ ಕಾರ್ಯಕ್ರಮಗಳನ್ನು ಸೂಚಿಸುವುದಲ್ಲದೆ ನಂತರ ಅನುಸರಣ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ವ್ಯಕ್ತಿ ಅಧ್ಯಯನ ವಿಧಾನದಲ್ಲಿ ಸಮಸ್ಯಾತ್ಮಕ ವರ್ತನೆಗೆ ಒಳಪಟ್ಟ ವ್ಯಕ್ತಿಯ ಬಗ್ಗೆ ಎಲ್ಲ ಮುಖಗಳಿಂದಲೂ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಸಮಗ್ರವಾಗಿ ಪರಿಶೀಲಿಸಲಾಗುತ್ತದೆ. ಇದರಿಂದ ಸಮಸ್ಯೆಯ ಮೂಲವನ್ನು ಗುರುತಿಸಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ ಈ ವಿಧಾನದಲ್ಲಿ ವ್ಯಕ್ತಿಯ ಸಂಪೂರ್ಣವಾದ ಚರಿತ್ರೆಯನ್ನು ಪಡೆಯುವುದರಿಂದ ಇದನ್ನು 'ವ್ಯಕ್ತಿ ಚರಿತ್ರೆಯ ವಿಧಾನ' ಎಂದೂ ಮತ್ತು ವೈದ್ಯಕೀಯ ವಿಧಾನದಲ್ಲಿರುವಂತೆ


Digitised by Bharatavani, CIIL

ಚರಿತ್ರೆ ಆಧಾರದ ಮೇಲೆ ಚಿಕಿತ್ಸೆ ನೀಡುವುದರಿಂದ ಇದನ್ನು ಚಿಕಿತ್ಸಕ (Clinical) ವಿಧಾನ ಎಂದೂ ಸಹ ಗುರುತಿಸುತ್ತಾರೆ.

ವ್ಯಕ್ತಿ ಅಧ್ಯಯನವನ್ನು ಹಲವು ಹಂತಗಳಲ್ಲಿ ಕೈಗೊಳ್ಳಲಾಗುತ್ತದೆ. ಅಧ್ಯಯನ ಮಾಡಬೇಕಾದ ವ್ಯಕ್ತಿಯ ಕುರಿತು ಮಾಹಿತಿಯನ್ನು ಜನನ ಪೂರ್ವದಿಂದ ಪ್ರಸ್ತುತ ಸಮಯದವರೆವಿಗೆ ಎಲ್ಲ ಮೂಲಗಳಿಂದಲೂ ಸೂಕ್ತವಾದ ಸಾಧನಗಳು ಹಾಗೂ ತಂತ್ರಗಳ ಮೂಲಕ ಸಂಗ್ರಹಿಸಲಾಗುತ್ತದೆ.

ಪ್ರಥಮವಾಗಿ ಸಂಗ್ರಹಿಸಿದ ಪರಿಚಯಾತ್ಮಕ ಮಾಹಿತಿಯಲ್ಲಿ ವ್ಯಕ್ತಿಯ ಹೆಸರು, ಲಿಂಗ, ವಯಸ್ಸು, ಜಾತಿ, ಮತ, ದೈಹಿಕ ವಿವರಗಳು ಹಾಗೂ ವೈಶಿಷ್ಟ್ಯಗಳು, ಮೇಲ್ನೋಟಕ್ಕೆ ತೋರುವ ವರ್ತನಾ ವಿವರಗಳನ್ನು ದಾಖಲಿಸಿಕೊಳ್ಳಲಾಗುತ್ತದೆ. ತದನಂತರ, ವ್ಯಕ್ತಿತ್ವದ ಮಾಹಿತಿಯನ್ನು ದಾಖಲಿಸಿಕೊಳ್ಳಲಾಗುತ್ತದೆ. ಇದರಲ್ಲಿ ವ್ಯಕ್ತಿಯ ಭಾವನೆಗಳು ಮನೋಧೋರಣೆಗಳು, ಆಸೆ, ಆಕಾಂಕ್ಷೆ, ನಿರೀಕ್ಷೆಗಳು, ವಿವಿಧ ಸಾಮರ್ಥ್ಯಗಳು, ಹವ್ಯಾಸಗಳು ಅಲ್ಲದೆ ಭಯ, ಘರ್ಷಣೆಗಳು, ತುಮುಲಗಳು ಮುಂತಾದವುಗಳನ್ನು ದಾಖಲಿಸಲಾಗುತ್ತದೆ. ವ್ಯಕ್ತಿಯು ವಿವಿಧ ರಂಗಗಳಲ್ಲಿ ಅನುಭವಿಸಿದ ಸೋಲು, ಗೆಲುವುಗಳು, ಸಾಧನೆಗಳು, ಪಡೆದ ಪ್ರಶಸ್ತಿಗಳು ಇತ್ಯಾದಿಗಳ ಕುರಿತು ಮಾಹಿತಿಯನ್ನು ಅವಶ್ಯವಾಗಿ ಪಡೆಯಬೇಕಾಗುತ್ತದೆ.

ವ್ಯಕ್ತಿಯ ಆರೋಗ್ಯದ ಬಗ್ಗೆ ಜನನಪೂರ್ವದಿಂದ ಮಾಹಿತಿಯನ್ನು ಸಂಗ್ರಹಿಸಬೇಕು. ಅನುವಂಶಿಕ ಗುಣಲಕ್ಷಣಗಳು ಹಾಗೂ ಕಾಯಿಲೆಗಳು, ದೈಹಿಕ ನ್ಯೂನತೆಗಳು ಹಾಗೂ ಬಲಾಬಲಗಳನ್ನು ಪತ್ತೆಮಾಡಬೇಕು. ಪ್ರಸ್ತುತ ಆರೋಗ್ಯ ಕುರಿತು ವಿವರಗಳನ್ನು ಪರಿಣಿತರಿಂದ ಪಡೆಯಬೇಕು ಮತ್ತು ದಾಖಲಿಸಬೇಕು. ವ್ಯಕ್ತಿಯು ಆಘಾತಗಳು ಹಾಗೂ ಅಪಘಾತಗಳಿಗೆ ಒಳಗಾಗಿದ್ದರೆ ಅವುಗಳ ವಿವರಗಳನ್ನು ದೃಢಪಡಿಸಿಕೊಂಡು ದಾಖಲಿಸುವ ಅಗತ್ಯವಿದೆ. ಇಷ್ಟೇ ಅಲ್ಲದೆ, ವ್ಯಕ್ತಿಯು ಪ್ರಕಟಪಡಿಸಿದ ಎಲ್ಲ ವಿಶೇಷವಾದ ವರ್ತನೆಗಳ ವಿವರಗಳನ್ನು ದಾಖಲಿಸಬೇಕು.

ವ್ಯಕ್ತಿಯ ಬೆಳವಣಿಗೆಯ ವಿವಿಧ ಮುಖಗಳ ಕುರಿತಾದ ವಿವರಗಳನ್ನು ತಂದೆ, ತಾಯಿ, ಪೋಷಕರು, ಕುಟುಂಬದ ಇತರ ಸದಸ್ಯರು, ಬಂಧುಗಳು, ಸುಖ–ಸಮೂಹ, ನೆರೆ–ಹೊರೆಯವರು, ಸಹಪಾಠಿಗಳು, ವೈದ್ಯರು, ಧರ್ಮಗುರುಗಳು, ವಿದ್ಯಾರ್ಥಿಯಾಗಿದ್ದರೆ ಅಧ್ಯಾಪಕರು, ಶಾಲಾ ಸಿಬ್ಬಂದಿ, ವೃತ್ತಿಯಲ್ಲಿದ್ದರೆ, ಸಹೋದ್ಯೋಗಿಗಳು, ಮೇಲಧಿಕಾರಿಗಳು, ಹಿರಿಯರು ಮುಂತಾದವರಿಂದ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಿ ದಾಖಲಿಸಲಾಗುತ್ತದೆ.

ಸಂಗ್ರಹಿಸಿದ ಹಾಗೂ ದಾಖಲಿಸಿದ ವಿವರಗಳನ್ನು ಅರ್ಥಪೂರ್ಣವಾಗಿ ವ್ಯವಸ್ಥೆಗೊಳಿಸಬೇಕು, ಹೀಗೆ ಮಾಡಿದಾಗ ವ್ಯಕ್ತಿಯ ಸಂಪೂರ್ಣವಾದ ಚಿತ್ರಣ ದೊರೆತು ಅವನ ಜೀವನ ಚರಿತ್ರೆಯನ್ನು ನಿರೂಪಿಸಲು ಸಾಧ್ಯವಾಗುತ್ತದೆ.

ಅರ್ಥಪೂರ್ಣವಾದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಮುಂದಿನ ಹಂತವಾಗಿದೆ. ವರ್ತನಾ ದೋಷಗಳ ಸ್ವರೂಪವನ್ನು ಅದರ ಇರುವ ಕಾರ್ಯಕಾರಣ ಸಂಬಂಧಗಳನ್ನು ತರ್ಕಬದ್ಧವಾಗಿ ಊಹಿಸಿ, ಪರಿಣಿತರಿಂದ ದೃಢಪಡಿಸಿಕೊಂಡು, ವಿವಿಧ ಸಾಧನ ಹಾಗೂ ತಂತ್ರಗಳಿಂದ ಪರೀಕ್ಷಿಸಿ, ಕ್ರೋಢಿಕರಿಸಿ ಒರೆಹಚ್ಚಿ ನೋಡಿದ ತರುವಾಯ ಕಾರ್ಯಕಾರಣ ಸಂಬಂಧಗಳನ್ನು ಸ್ಪಷ್ಟಪಡಿಸಿಕೊಳ್ಳಲಾಗುತ್ತದೆ.

ವರ್ತನಾ ಸಮಸ್ಯೆಗಳಿಗೆ ಕಾರಣಗಳನ್ನು ಸ್ಪಷ್ಟಗೊಳಿಸಿಕೊಂಡ ನಂತರ ಅವುಗಳಿಗೆ ಯುಕ್ತ ಪರಿಹಾರೋಪಾಯಗಳನ್ನು ಯೋಜಿಸಲಾಗುತ್ತದೆ. ಸುಸಜ್ಜಿತವಾಗಿ ಎಚ್ಚರಿಕೆಯಿಂದ ಸಂಯೋಜಿಸಿದ ನಿವಾರಣೋಪಾಯಗಳನ್ನು ವ್ಯಕ್ತಿಗೆ ಕ್ರಮಾನುಗತವಾಗಿ ತಿಳಿಸಿದ ತರುವಾಯ ಅವುಗಳ ಫಲಿತಾಂಶಗಳನ್ನು ಪರಿಶೀಲಿಸಬೇಕು. ಮುಂದಿನ ಹಂತದಲ್ಲಿ ಅನುಸರಣ ಕಾರ್ಯವನ್ನು ಕೈಗೊಳ್ಳಲಾಗುತ್ತದೆ, ಆಗ ಅಗತ್ಯವೆನಿಸಿದರೆ, ಕಾರ್ಯಕ್ರಮವನ್ನು ಅವಶ್ಯಕತೆಗೆ ಅನುಗುಣವಾಗಿ ಚಿಕಿತ್ಸೆಯನ್ನು ಬದಲಾಯಿಸಬಹುದು ಅಥವಾ ಅದೇ ಚಿಕಿತ್ಸೆಯನ್ನೇ ಮುಂದುವರಿಸಬಹುದು.

ವ್ಯಕ್ತಿ ಅಧ್ಯಯನಗಳು ವೈಜ್ಞಾನಿಕವಾಗಿದ್ದು, ಸುವ್ಯವಸ್ಥಿತವಾಗಿ ಕ್ರಮಾನುಗತವಾಗಿ ನಡೆಯಿಸಲ್ಪಡುತ್ತವೆ. ಪ್ರತಿ ಒಂದು ಹಂತದಲ್ಲಿ ಜಾಗರೂಕತೆಯಿಂದ ವಿವರವಾದ ಹಾಗೂ ನಿಖರವಾದ ದಾಖಲೆಗಳನ್ನು ಇಡಲಾಗುತ್ತದೆ. ವ್ಯಕ್ತಿ ಅಧ್ಯಯನದಲ್ಲಿ ವಿವಿಧ ಸಾಧನಗಳು ಹಾಗೂ ತಂತ್ರಗಳನ್ನು ಬಳಸುವುದರಿಂದ ಅವುಗಳ ಉಪಯುಕ್ತತೆ ಹಾಗೂ ಗುಣದೋಷಗಳ ಸಂಪೂರ್ಣ ಅರಿವು ವ್ಯಕ್ತಿ ಅಧ್ಯಯನ ಕೈಗೊಳ್ಳುವವರಿಗೆ ಇರಬೇಕಾಗುತ್ತದೆ. ಇಷ್ಟಲ್ಲದೆ, ಅಗತ್ಯವಾದ ಸಂದರ್ಭಗಳಲ್ಲಿ ಪರಿಣಿತರ ಅಭಿಪ್ರಾಯಗಳನ್ನು ಪಡೆದು ಮುಂದುವರಿಯಬೇಕಾಗುತ್ತದೆ. ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವಾಗ ಹೆಚ್ಚಿನ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಆದ್ದರಿಂದ ವ್ಯಕ್ತಿ ಅಧ್ಯಯನ ಕೈಗೊಳ್ಳುವವರು ಬುದ್ಧಿವಂತರೂ ಚತುರರೂ ವಿಶೇಷ ತರಬೇತಿ ಹೊಂದಿದವರೂ ಆಗಿರಬೇಕಾದ ಅವಶ್ಯಕತೆ ಇದೆ.

ವ್ಯಕ್ತಿಯ ಅಧ್ಯಯನವನ್ನು ಆಳವಾಗಿ, ವಿವರವಾಗಿ ಮತ್ತು ಸಂಪೂರ್ಣವಾಗಿ ಮಾಡುವುದರಿಂದ, ದೊರೆತ ಫಲಿತಾಂಶಗಳು ಹೆಚ್ಚು ನಿಖರವಾಗಿಯೂ ಹಾಗೂ ವಿಶ್ವಾಸಾರ್ಹವಾಗಿಯೂ ಇರುತ್ತವೆ. ಮಾಹಿತಿಯನ್ನು ವಿವಿಧ ಮುಖಗಳಿಂದ ಪಡೆದು, ವಿವಿಧ ದೃಷ್ಟಿಕೋನದಿಂದ ಪರಿಶೀಲಿಸಿ, ನಿರ್ಧಾರಗಳನ್ನು ಕೈಗೊಳ್ಳುವುದರಿಂದ ಅವು ಹೆಚ್ಚು ಮೌಲ್ಯವುಳ್ಳದ್ದಾಗಿರುತ್ತವೆ. ಇದರಿಂದ ಚಿಕಿತ್ಸೆಯು ಉತ್ತಮವಾದ ಫಲಿತಾಂಶಗಳನ್ನು ನೀಡಲು ಸಾಧ್ಯವಾಗುತ್ತದೆ. ಅಧ್ಯಯನವನ್ನು ಹಂತಹಂತವಾಗಿ ಸುವ್ಯವಸ್ಥಿತವಾಗಿ ವಿವಿಧ ಸಾಧನ ತಂತ್ರಗಳನ್ನು ಬಳಸಿ ಕೈಗೊಳ್ಳುವುದರಿಂದ ಹೆಚ್ಚು ಪ್ರಮಾಣ ಪೂರಿತವಾಗಿ ಯಥಾರ್ಥವಾಗಿರುತ್ತವೆ. ಪ್ರತಿ ಹಂತದಲ್ಲಿಯೂ ದಾಖಲೆಗಳನ್ನು ಇಡುವುದರಿಂದ ಫಲಿತಾಂಶಗಳನ್ನು ಪುನರ್‌ಪರಿಶೀಲಿಸಲು ಸಾಧ್ಯವಾಗುತ್ತದೆ. ಈ ವಿಧಾನದಿಂದ ವ್ಯಕ್ತಿಯ ಸಮಸ್ಯೆಯ ಬಗ್ಗೆ ಒಳನೋಟವಲ್ಲದೆ, ಅದರ ಸಮಗ್ರ ಸ್ವರೂಪದ ಅರಿವು ಮೂಡುತ್ತದೆ. ತೀವ್ರವಾದ ವರ್ತನಾ ಸಮಸ್ಯೆಗಳಿಗೆ, ಹೊಂದಾಣಿಕ ಸಮಸ್ಯೆ ಇರುವವರಿಗೆ ಸೂಕ್ತ ಚಿಕಿತ್ಸೆ ನೀಡಲು ವ್ಯಕ್ತಿ ಅಧ್ಯಯನ ಉಪಯುಕ್ತವಾದ ಆಧಾರ ಒದಗಿಸುತ್ತದೆ.

ಮಾಹಿತಿಯನ್ನು ಸಂಗ್ರಹಿಸುವಾಗ ಸಿಗುವ ವಿವರಣೆಗಳು ಉತ್ಪ್ರೇಕ್ಷೆ ಅಥವಾ ಪೂರ್ವಗ್ರಹ ಪೀಡಿತವಾಗಿರುವ ಸಂಭವ ಇರುತ್ತದೆ. ಅಲ್ಲದೆ ವಿಷಯಗಳು ಮರೆವಿನಿಂದ ಕೈಬಿಟ್ಟು ಹೋಗುವ ಸಾಧ್ಯತೆ ಇರುತ್ತದೆ. ವಿವರಗಳನ್ನು ತಪ್ಪಾಗಿ ಗ್ರಹಿಸಬಹುದಾಗಿದೆ. ವ್ಯಕ್ತಿ ಅಧ್ಯಯನಕ್ಕೆ ದೀರ್ಘ ಕಾಲಾವಧಿ ಬೇಕಾಗುತ್ತದೆ ಮತ್ತು ವಿವಿಧ ಸಾಧನ ಹಾಗೂ ತಂತ್ರಗಳನ್ನು ಬಳಸುವುದರಿಂದ ವೆಚ್ಚದಾಯಕವಾಗಿದೆ. ವಿಷಯಗಳನ್ನು ಅರ್ಥೈಸುವಾಗ ಹೆಚ್ಚು ಕಡಿಮೆಯಾಗುವ ಸಂಭವ ಇದೆ. ಪರಿಣತರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿದಾಗ ತೀವ್ರವಾದ ಭಿನಾಭಿಪ್ರಾಯಗಳಿಂದ ವ್ಯಕ್ತಿ ಚರಿತ್ರೆಯನ್ನು ರೂಢಿಸುವುದರಲ್ಲಿ ಸಮಸ್ಯೆ ತಲೆದೋರಬಹುದು. ವ್ಯಕ್ತಿ ಅಧ್ಯಯನವನ್ನು ಕೈಗೊಳ್ಳಲು ಬುದ್ಧಿವಂತರಾದ ತರಬೇತಿ ಪಡೆದ ಸಿಬ್ಬಂದಿಯ ಅಗತ್ಯವಿದೆ. ಎಲ್ಲ ವಿಧದ ಸಮಸ್ಯೆಗಳಿಗೂ ಈ ವಿಧಾನದಿಂದ ಪರಿಹಾರ ಕಂಡುಹಿಡಿಯಲು ಸಾಧ್ಯವಿಲ್ಲ. ಫಲಿತಾಂಶಗಳನ್ನು ಸಾಮಾನ್ಯೀಕರಣ ಗೊಳಿಸಲು ಸಾಧ್ಯವಾಗುವುದಿಲ್ಲ. ಈ ಅಂಶಗಳು ವ್ಯಕ್ತಿ ಅಧ್ಯಯನ ವಿಧಾನದ ಕೆಲವು ಮಿತಿಗಳಾಗಿವೆ.

Digitised by Bharatavani, CIIL

**4. ಸಮೀಕ್ಷಾ (ಸರ್ವೇಕ್ಷಣ) ವಿಧಾನ** : ವಿಸ್ತೃತ ಜನಸಮುದಾಯದಲ್ಲಿ ಮಾನಸಿಕ ಲಕ್ಷಣಗಳು, ಮಾನಸಿಕ ಪ್ರವೃತ್ತಿಗಳು, ಆಸಕ್ತಿಗಳು, ಮನೋಭಾವಗಳು, ಅಭಿಪ್ರಾಯ ಮುಂತಾದವುಗಳ ಪ್ರವೃತ್ತಿಯ, ದಿಶೆ, ಅವುಗಳ ಮಟ್ಟವನ್ನು ಅಳತೆ ಮಾಡಿ ಅಧ್ಯಯನ ಮಾಡುವ ವಿಧಾನವನ್ನು ಸಮೀಕ್ಷೆ ಅಥವಾ ಸರ್ವೇಕ್ಷಣ (Surve) ಎನ್ನುತ್ತಾರೆ. ಈ ವಿಧಾನ ಸಮಾಜಶಾಸ್ತ್ರ ಕ್ಷೇತ್ರದಲ್ಲಿ ಹೆಚ್ಚು ವ್ಯಾಪಕವಾಗಿ ಪ್ರಚಲಿತವಾದುದಾಗಿದೆ. ರಾಜಕೀಯ ಅಭಿಪ್ರಾಯಗಳನ್ನು ಚುನಾವಣೆಗಳಲ್ಲಿ ಮತದಾರರ ಒಲವನ್ನು ಅಧ್ಯಯನ ಮಾಡಲು ಸಮೀಕ್ಷಾ ವಿಧಾನವನ್ನು ಬಳಸುತ್ತಾರೆ. ಮನೋವಿಜ್ಞಾನದಲ್ಲೂ ಈ ವಿಧಾನ ಬಳಕೆಯಲ್ಲಿದೆ. ಸಮೀಕ್ಷೆ ನಡೆಸುವಾಗ ಸಮೀಕ್ಷೆ ಮಾಡಬೇಕಾದ ಲಕ್ಷಣವನ್ನು ನಿರ್ಧರಿಸಿಕೊಳ್ಳಲಾಗುತ್ತದೆ. ಆನಂತರ ಸಮೀಕ್ಷೆ ಮಾಡಬೇಕಾದ ಸಮುದಾಯದ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಇಡೀ ಸಮುದಾಯವನ್ನು ಸಮೀಕ್ಷೆ ಮಾಡಲಾಗುತ್ತದೆ. ಆದರೆ ಸಾಮಾನ್ಯವಾಗಿ ಸಮೀಕ್ಷೆ ಮಾಡಲು ವಿಶಾಲ ಸಮೂಹದಿಂದ ಒಂದು ಪ್ರತಿದರ್ಶ ಅಥವಾ ನಮೂನೆಯನ್ನು (Sample) ಸಮೂಹದ ಎಲ್ಲಾ ಲಕ್ಷಣಗಳನ್ನು ಪ್ರತಿನಿಧಿಸುವ ರೀತಿಯಲ್ಲಿ ಆಯ್ಕೆ ಮಾಡಿಕೊಳ್ಳುತ್ತೇವೆ. ಈ ಪ್ರತಿದರ್ಶದ ಗಾತ್ರ ಸಾಕಷ್ಟು ದೊಡ್ಡದಾಗಿರಬೇಕು. 500–1000 ಅಥವಾ ಇನ್ನು ಹೆಚ್ಚು ಪ್ರತಿದರ್ಶದ ಆಯ್ಕೆಯ ನಂತರ ಸಮೀಕ್ಷೆ ಮಾಡಬೇಕಾದ ಲಕ್ಷಣವನ್ನು ಅಳತೆ ಮಾಡಲು ಸೂಕ್ತವಾದ ಪರೀಕ್ಷೆಯನ್ನಾಗಲಿ, ಪ್ರಶ್ನಾವಳಿಯನ್ನಾಗಲಿ ಮಾಪನಿಯನ್ನಾಗಲಿ ಆಯ್ಕೆ ಮಾಡಿಕೊಳ್ಳಬೇಕು. ಮುಂದಿನ ಹಂತದಲ್ಲಿ ಪರೀಕ್ಷೆ ಸಾಧನವನ್ನು ಉಪಯೋಗಿಸಿ ಪ್ರತಿದರ್ಶದಿಂದ ಮಾಹಿತಿಯನ್ನು ಸಂಗ್ರಹಿಸಬೇಕು ಹೀಗೆ ಸಂಗ್ರಹಿಸಿದ ಮಾಹಿತಿ/ಅಂಕಿ – ಅಂಶಗಳನ್ನು ವ್ಯವಸ್ಥಿತವಾಗಿ ವಿಶ್ಲೇಷಣೆ ಮಾಡಿ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ. ಸಮೀಕ್ಷೆಗಳನ್ನು ಅವುಗಳ ಉದ್ದೇಶದ ಆಧಾರದ ಮೇಲೆ ಆದರ್ಶಾತ್ಮಕ (Normative), ವಿಶ್ಲೇಷಣಾತ್ಮಕ (Analytical), ವಿವರಣಾತ್ಮಕ (Descritive) ಸಮೀಕ್ಷೆಗಳು, ಉದ್ಯೋಗ ಸಮೀಕ್ಷೆ, ಶಾಲಾ ಸಮೀಕ್ಷೆ ಮತ್ತು ಕುಲಸಂಬಂಧಿ ಸಮೀಕ್ಷೆ (Enthnographic Scurvey) ಎಂದು ಬೇರೆ ಬೇರೆಯಾಗಿ ಹೆಸರಿಸಲಾಗಿದೆ. ಸಾಮಾಜಿಕ ಮನೋವಿಜ್ಞಾನ, ಶೈಕ್ಷಣಿಕ ಮನೋವಿಜ್ಞಾನಗಳಲ್ಲಿ ಸಮೀಕ್ಷಾ ವಿಧಾನವನ್ನು ಉಪಯೋಗಿಸುತ್ತಾರೆ.

–ಹೆಚ್.ಬಿ. ಉ

## ಮನೋವಿಜ್ಞಾನದ ಪಂಥಗಳು

### ಸಂರಚನಾವಾದೀ ಪಂಥ

ಪ್ರಜ್ಞಾಯುಕ್ತ ಮಾನಸಿಕ ಜೀವನವನ್ನು ಅರ್ಥಾತ್ ಅನುಭವವನ್ನು, ಸಂಕೀರ್ಣ ಮನಃಸಂರಚನೆಗಳನ್ನು ರೂಪಿಸಬಲ್ಲ ಮೂಲ ಘಟಕಗಳಾಗಿ ವಿಶ್ಲೇಷಿಸಲು ಸಾಧ್ಯ ಎಂಬ ನಂಬಿಕೆ ಸಂರಚನಾವಾದೀ ಪಂಥದ ತಳಪಾಯ. ಅನುಭವ ಅಥವಾ ಪ್ರಜ್ಞೆಯ ಕುರಿತಂತೆ 'ಏನು' ಎಂಬುದು ಅನುಭವದ ವಿಷಯ ಮತ್ತು ಅದರ ವಿಶ್ಲೇಷಣೆಯ ಸಮಸ್ಯೆಗಳಿಗೆ, ವಿವಿಧ ಮಾನಸಿಕ ಪ್ರಕ್ರಿಯೆಗಳ ನಡುವಿನ ಪರಸ್ಪರ ಸಂಬಂಧಗಳ ಅನ್ವೇಷಣೆಯನ್ನು 'ಹೇಗೆ' ಎಂಬುದು, ಮಾನಸಿಕ ಪ್ರಕ್ರಿಯೆಗಳ ನಡುವಿನ ಕಾರಣ – ಪರಿಣಾಮ ಸಂಬಂಧಗಳ ಮತ್ತು ಅನುಭವ ಹಾಗೂ ತತ್ಸಂಬಂಧದ ನರಮಂಡಲದಲ್ಲಿ ಆಗುವ ಶರೀರಕ್ರಿಯೆಗಳ ನಡುವಿನ ಸಂಬಂಧಗಳ ಅನ್ವೇಷಣೆಗೆ 'ಏಕೆ' ಎಂಬುದು ಒತ್ತು ನೀಡುತ್ತದೆ. ಪ್ರಜ್ಞೆಯನ್ನು ಅದರ ಅಂಗಭಾಗಗಳಾಗಿ ವಿಶ್ಲೇಷಿಸುವ ಪ್ರಯತ್ನದ ಫಲಿತವೇ ಸಂವೇದನೆಗಳು (ಸೆನ್ಸೇಷನ್ಸ್), ಬಿಂಬಗಳು (ಇಮೇಜಸ್) ಮತ್ತು ಭಾವನೆಗಳು ಹಾಗೂ ಸಂವೇಗಗಳು (ಫೀಲಿಂಗ್ಸ್) ಎಂಬ ಮೂರು ಘಟಕಗಳು. ಇವನ್ನು ಅಂತಃವೀಕ್ಷಣೆಯಿಂದ ಇನ್ನೂ ಸರಳೀಕರಿಸಲಾಗುವುದಿಲ್ಲ. ಈ ಪ್ರತಿಯೊಂದನ್ನೂ 'ಗುಣ'(ಕ್ವಾಲಿಟಿ), 'ತೀವ್ರತೆ' (ಇಂಟೆನ್ಸಿಟಿ) ಮತ್ತು 'ಕಾಲಾವಧಿ' (ಡ್ಯೂರೇಶನ್) ಎಂಬ ವೈಶಿಷ್ಟ್ಯಗಳ ನೆರವಿನಿಂದ ವಿವರಿಸಬಹುದು. ಒಂದು ಅನುಭವಕ್ಕೆ ಅದರದ್ದೇ ಆದ ಅದ್ವಿತೀಯ ವಿಶಿಷ್ಟತೆಯಿದ್ದು ಅದನ್ನು ಇತರ ಅನುಭವಗಳಿಂದ ಪ್ರತ್ಯೇಕಿಸಲು ನೆರವಾಗುತ್ತದೆ 'ಗುಣ'. ಉದಾ: ಸಿಹಿ ರುಚಿ ಹುಳಿಯಿಂದ ಭಿನ್ನ, ಕೆಂಪು ಬಣ್ಣ ಹಳದಿಯಿಂದ ಭಿನ್ನ ಅನುಭವದ ಪರಿಮಾಣಾತ್ಮಕ ಆಯಾಮವನ್ನು ಸೂಚಿಸುತ್ತದೆ 'ತೀವ್ರತೆ.' ಉದಾ: ಹುಳಿ–ಕೊಂಚ ಹುಳಿ, ಗಾಢ ನೀಲಿ–ನಸು ನೀಲಿ, ಎಷ್ಟು ಕಾಲ ಅನುಭವದ ಬಿಂಬ ಮನಸ್ಸಿನಲ್ಲಿ ಉಳಿದಿರುತ್ತದೆ ಎಂಬುದನ್ನು ಸೂಚಿಸುತ್ತದೆ 'ಕಾಲಾವಧಿ.'

ವಿಲ್‌ಹೆಲ್ಮ್‌ವುಂಟ್

ಎಡ್ವರ್ಡ್‌ಟಿಚ್ನರ್

ಸಂರಚನಾವಾದೀ ಪಂಥದ ನಂಬಿಕೆಯನ್ನು ಪ್ರಾಯೋಗಿಕ ಮನೋವಿಜ್ಞಾನದ ಜನಕ **ವಿಲ್‌ಹೆಲ್ಮ್ ವೂಂಟ್** (1832–1920)ಪ್ರಯೋಗ ಮುಖೇನ ಸಾಬೀತುಪಡಿಸಲು ಪ್ರಯತ್ನಿಸಿದ. ಸಂಕೀರ್ಣ ಸಂಯುಕ್ತಗಳನ್ನು ಅಣುಗಳಾಗಿ, ಸಂಕೀರ್ಣ ಅಣುಗಳನ್ನು ಪರಮಾಣುಗಳಾಗಿ ವಿಶ್ಲೇಷಿಸುವುದರ ಮೂಲಕ ಭೌತ ಮತ್ತು ರಸಾಯನ ಶಾಸ್ತ್ರಗಳು ತೀವ್ರಗತಿಯಿಂದ ಮುಂದುವರಿಯುತ್ತಿದ್ದ 19ನೇ ಶತಮಾನದ ಮಧ್ಯಭಾಗದಲ್ಲಿ ಸಂಕೀರ್ಣ ಮಾನಸಿಕ ಅನುಭವಗಳನ್ನು ಮೂಲ ಘಟಕಗಳಾಗಿ ವಿಶ್ಲೇಷಿಸಲು ಮನೋವಿಜ್ಞಾನಿಗಳು ಪ್ರಯತ್ನಿಸಿದ್ದರಲ್ಲಿ ಅಚ್ಚರಿ ಏನಿಲ್ಲ. ರಸಾಯನ ಶಾಸ್ತ್ರಜ್ಞ ಜಲಜನಕ ಮತ್ತು ಆಮ್ಲಜನಕಗಳಾಗಿ ನೀರನ್ನು ವಿಶ್ಲೇಷಿಸಿ ಮುನ್ನಡೆಯಬಲ್ಲನಾದರೆ ಒಂದು ಗ್ರಹಿಕೆಯನ್ನು (ಪರ್ಸೆಪ್ಷನ್), ಉದಾಹರಣೆಗೆ, ನಿಂಬೆ ಷರಬತ್ತಿನ ರುಚಿಯನ್ನು – ಪ್ರಜ್ಞಾಪೂರ್ವಕ ಅನುಭವದ ಒಂದು 'ಅಣು' ಎಂದು ಪರಿಗಣಿಸಿದರೆ ಅದರ ಘಟಕಾನುಭವಗಳನ್ನು ಸಿಹಿ, ಹುಳಿ, ಕಹಿ, ತಣ್ಣನೆ, ತುಸು ಬಿಸಿ ಇತ್ಯಾದಿ ಅಂತಃವೀಕ್ಷಣೆಯಿಂದ ವಿಶ್ಲೇಷಿಸಲು ಸಾಧ್ಯ ಎಂಬುದು ಸಂರಚನಾವಾದೀ ಪಂಥೀಯರ ಅಂಬೋಣ. ಜಲಜನಕ ಮತ್ತು ಆಮ್ಲಜನಕಗಳು ಹೇಗೆ ನೀರಿನ ಸಂರಚನೆಗಳು ಆಗಿವೆಯೋ ಅಂತೆಯೇ ಸಂವೇದನೆಗಳು ಮತ್ತು ಆಲೋಚನೆಗಳು ಮನಸ್ಸಿನ ಸಂರಚನೆಗಳು.

ವೂಂಟ್‌ನಿಂದ ತರಬೇತಿ ಪಡೆದು ಕಾರ್ನೆಲ್ ವಿಶ್ವವಿದ್ಯಾನಿಲಯದಲ್ಲಿ ವೃತ್ತಿನಿರತನಾಗಿದ್ದ ಮನೋವಿಜ್ಞಾನಿ **ಎಡ್ವರ್ಡ್ ಬ್ರಾಡ್‌ಫರ್ಡ್ ಟಿಚನರ್** (1867–1927) ಕಟ್ಟಾ ಸಂರಚನಾವಾದಿ ಪಂಥೀಯ ಸಂರಚನಾವಾದೀ ಪಂಥ (ಸ್ಟ್ರಕ್ಚರಲಿಸಮ್) ಎಂಬ ಪದ ಟಂಕಿಸಿದವನೇ ಟಿಚನರ್, ಮನಸ್ಸಿನ ಮೂಲ ಅಂಗಭಾಗಗಳ ಸ್ವರೂಪವನ್ನು ನಿಷ್ಕೃಷ್ಟವಾಗಿ ನಿರೂಪಿಸಿ ವರ್ಗೀಕರಿಸಬಹುದು ಎಂದೂ ತನ್ಮೂಲಕ ಉನ್ನತ ಸ್ತರದ ಚಿಂತನ ಸಾಮರ್ಥ್ಯವನ್ನೂ ಒಳಗೊಂಡಂತೆ ಎಲ್ಲ ಮಾನಸಿಕ ಪ್ರಕ್ರಿಯೆಗಳ ಸಂರಚನೆಯನ್ನು ನಿರ್ಧರಿಸಬಹುದು ಎಂಬುದೂ ಅವನ ನಂಬಿಕೆ.

Digitised by Bharatavani, CIIL

ಪ್ರಜ್ಞೆಯ ಸಂರಚನೆಯನ್ನು ನಿರ್ಧರಿಸಲು ಟಿಚನರ್ ಉಪಯೋಗಿಸುತ್ತಿದ್ದ ಪ್ರಧಾನ ಸಾಧನ ವೂಂಟ್ ಉಪಯೋಗಿಸುತ್ತಿದ್ದ ಅಂತಃವೀಕ್ಷಣೆ (ಇಂಟ್ರಾಸ್ಪೆಕ್ಷನ್). ಪ್ರಜ್ಞಾಯುತ ಅನುಭವದ ಅವಧಿಯಲ್ಲಿ ವ್ಯಕ್ತಿ ತನ್ನ ಅಂತರಂಗದಲ್ಲಿ ಆಗುತ್ತಿದ್ದ ಮೂಲ ಗ್ರಹಿಕೆಗಳನ್ನು ತಾನೇ ವೀಕ್ಷಿಸಿ ವರದಿ ಮಾಡುವ ವಿಧಾನವೇ ಅಂತಃವೀಕ್ಷಣೆ. ಉದಾಹರಣೆಗೆ, ಕಿತ್ತಲೆ ಹಣ್ಣನ್ನು ನೋಡಿದಾಗ ಮನಸ್ಸಿನಲ್ಲಿ ಉದ್ಭವಿಸುವ ಭಾವನೆಗಳನ್ನೂ ಆಲೋಚನೆಗಳನ್ನೂ ಅಂತಃವೀಕ್ಷಕ ವರದಿ ಮಾಡಬೇಕು 'ಇದು ಕಿತ್ತಲೆ ಹಣ್ಣು' ಎಂಬ ಒಟ್ಟಾರೆ ಗ್ರಹಿಕೆಯನ್ನು ಅಲ್ಲ. ಅಂತಃವೀಕ್ಷಣೆ ಮಾಡಿಕೊಳ್ಳುವ ವ್ಯಕ್ತಿಗೆ ವೂಂಟ್ ನೀಡುತ್ತಿದ್ದುದಕ್ಕಿಂತ ಹೆಚ್ಚು ನಿಖರವಾದ ಮಾರ್ಗದರ್ಶೀ ಸೂಚನೆಗಳನ್ನು ಟಿಚನರ್ ನೀಡುತ್ತಿದ್ದ.

ಅಂತಃವೀಕ್ಷಣೆಯಿಂದ ಲಭಿಸುವ ಮಾಹಿತಿಯು ವ್ಯಕ್ತಿನಿಷ್ಠ ವಾದದ್ದರಿಂದ ಅದರ ವಿಶ್ವಸನೀಯತೆಯನ್ನು ಸಾಬೀತುಗೊಳಿಸುವುದು ಹೆಚ್ಚುಕಮ್ಮಿ ಅಸಾಧ್ಯ ಎಂಬ ಅಂಶವೇ ಈ ಪಂಥದ ದೌರ್ಬಲ್ಯ. ಮಾಹಿತಿಯ ವಿಶ್ವಸನೀಯತೆಯೇ ಪ್ರಶ್ನಾರ್ಹ ಅಂದ ಮೇಲೆ ಅದನ್ನು ಆಧರಿಸಿದ ತೀರ್ಮಾನಗಳು ವಿಶ್ವಾಸಾರ್ಹವಾಗುವುದು ಹೇಗೆ? ಸಂರಚನಾವಾದೀ ಪಂಥವನ್ನು ಪ್ರಬಲವಾಗಿ ವಿರೋಧಿಸಿದ್ದು ವರ್ತನಾವಾದಿಗಳು. ಅವೀಕ್ಷಣೀಯವೂ ಅಮೂರ್ತವೂ ಆದ ಮಾನಸಿಕ ಪ್ರಕ್ರಿಯೆಗಳು ವರ್ತನಾವಾದಿಗಳ ಪ್ರಕಾರ ಮನೋವಿಜ್ಞಾನಕ್ಕೆ ಅಧ್ಯಯನಯೋಗ್ಯ ವಿಷಯವೇ ಅಲ್ಲ ಎಂಬುದು ವರ್ತನಾವಾದಿಗಳ ಅಭಿಮತ. ಆದರೂ ಮುಂದೆ ಜ್ಞಾನಾತ್ಮಕ ಮನೋವಿಜ್ಞಾನ ಈ ವಿಷಯಗಳನ್ನು ಅಧ್ಯಯನಯೋಗ್ಯ ಎಂದು ಪರಿಗಣಿಸಿದ್ದು ಗಮನಾರ್ಹ. ಸಂರಚನಾವಾದೀ ಪಂಥೀಯರು ಬಲು ಸೀಮಿತ ವ್ಯಾಪ್ತಿ ಉಳ್ಳ ವಿಷಯವನ್ನು ಅಧ್ಯಯನಯೋಗ್ಯ ಎಂದು ಪರಿಗಣಿಸಿದ್ದರು. ಅವರು ಗಮನ ಕೇಂದ್ರೀಕರಿಸಿದ್ದು ಸಾಮಾನ್ಯ ಗ್ರಹಿಕೆಯ ಮೇಲೆ. ಅಪಸಾಮಾನ್ಯರ ವರ್ತನೆ, ಕನಸುಗಳು, ಶೈಶವ ಮತ್ತು ಬಾಲ್ಯಾವಧಿಯ ವರ್ತನೆ ಇವೇ ಮೊದಲಾದುವನ್ನು ಅವರು ನಿರ್ಲಕ್ಷಿಸಿದ್ದರು.

### ಗೆಸ್ಟಾಲ್ಟ್ ಪಂಥ

ವರ್ತನೆ ಮತ್ತು ಅನುಭವ ಅಥವಾ ವರ್ತನೆ ಮತ್ತು ಮನಸ್ಸು ಇವೆರಡನ್ನೂ ಒಟ್ಟಾಗಿ ಒಂದು ಘಟಕ ಎಂದು ಪರಿಗಣಿಸಿ ಅಧ್ಯಯಿಸಬೇಕು ಅನ್ನುವ ಪಂಥ ಗೆಸ್ಟಾಲ್ಟ್ ಪಂಥ. ಇದರ ಪ್ರಕಾರ ಮಿದುಳು ಒಂದು ಸಮಗ್ರ ಅಂಗ. ಅರ್ಥಾತ್ ಅದು ಅದರ ಭಾಗಗಳ ಮೊತ್ತಕ್ಕಿಂತ ಮಿಗಿಲಾದದ್ದು ಹಾಗೂ ಸ್ವಸಂಘಟನಾ ಪ್ರವೃತ್ತಿ ಉಳ್ಳದ್ದು. 'ಇರುವುದು ಪೂರ್ಣಗಳು ಮಾತ್ರ. ಅವುಗಳ ಘಟಕಾಂಶಗಳ ಅಥವಾ ಬಿಡಿ ಭಾಗಗಳ ವರ್ತನೆಯು ಪೂರ್ಣಗಳ ವರ್ತನೆಯನ್ನು ನಿರ್ಧರಿಸುವುದಿಲ್ಲ. ಬದಲಾಗಿ, ಪೂರ್ಣದ ಅಂತಸ್ಥ ಸ್ವರೂಪವು ಬಿಡಿ ಭಾಗಗಳ ಪ್ರಕ್ರಿಯೆಗಳನ್ನು ನಿರ್ಧರಿಸುತ್ತದೆ. ಆದ್ದರಿಂದ ಇಂತಹ ಪೂರ್ಣಗಳ ಸ್ವರೂಪವನ್ನು ನಿರ್ಧರಿಸಬೇಕೆನ್ನುವುದು ಗೆಸ್ಟಾಲ್ಟ್ ಪಂಥದ ಆಶಯ'–ಗೆಸ್ಟಾಲ್ಟ್ ಪಂಥದ ಪ್ರಧಾನ ಪ್ರವರ್ತಕ **ಮ್ಯಾಕ್ಸ್ ವರ್ಧೈಮರ್**ನ (1880–1943) ಈ ಹೇಳಿಕೆ (1924) ಗೆಸ್ಟಾಲ್ಟ್ ಪಂಥದ ತಿರುಳನ್ನು ಪ್ರತಿಬಿಂಬಿಸುತ್ತದೆ. ಎಂದೇ, 'ಇಡಿ' ಅದರ 'ಬಿಡಿ'ಗಳ ಮೊತ್ತಕ್ಕಿಂತ ದೊಡ್ಡದು ಎಂಬ ಉಕ್ತಿಯಿಂದ ಗೆಸ್ಟಾಲ್ಟ್ ಪಂಥದ ತಿರುಳನ್ನು ತಿಳಿಸುವುದೂ ಉಂಟು. 'ಅಸ್ತಿತ್ವವುಳ್ಳದ್ದರ (ಎನ್‌ಟಿಟಿ) ಪೂರ್ಣರೂಪದ ಆಕಾರ ಅಥವಾ ಸಾರ'–ಇದೇ ಜರ್ಮನ್ ಭಾಷೆಯ ಪದ 'ಗೆಸ್ಟಾಲ್ಟ್'ನ ಅರ್ಥ. ಆಕಾರ ರೂಪಿಸಿಕೊಳ್ಳುವ ನಮ್ಮ ಜ್ಞಾನೇಂದ್ರಿಯಗಳ ಸಾಮರ್ಥ್ಯವನ್ನು, ವಿಶೇಷತಃ, ದತ್ತ ಆಕೃತಿಯನ್ನು ರೇಖೆಗಳು ಮತ್ತು ವಕ್ರಗಳ ಸಂಗ್ರಹ ಮಾತ್ರ ಎಂದು ಗ್ರಹಿಸುವುದಕ್ಕೆ ಬದಲಾಗಿ ಅದರ ಪೂರ್ಣ ರೂಪವನ್ನು ನೋಡಿ ಗುರುತಿಸಲು ಇರುವ ಸಾಮರ್ಥ್ಯವನ್ನು ಗೆಸ್ಟಾಲ್ಟ್ ಪರಿಣಾಮ ಅನ್ನುವುದೂ ಉಂಟು.

ಅಧ್ಯಯಿಸಬೇಕಾದ ವಸ್ತುವಿನ ಸಂಕೀರ್ಣತೆಯನ್ನು ಕಡಿಮೆ ಮಾಡಲೋಸುಗ ಅದರ ಘಟಕಾಂಶಗಳನ್ನು ವಿಶ್ಲೇಷಿಸಿ ಪ್ರತೀ ಘಟಕಾಂಶವನ್ನು ಅಧ್ಯಯಿಸುವ ತಂತ್ರ 20ನೇ ಶತಮಾನದ ಆದಿಭಾಗದಲ್ಲಿ ಜನಪ್ರಿಯವಾಗಿದ್ದ ವೈಜ್ಞಾನಿಕ ವಿಧಾನ. ಇದಕ್ಕೆ ವಿರುದ್ಧವಾಗಿ ಗೆಸ್ಟಾಲ್ಟ್ ಪಂಥ ಮನೋವೈಜ್ಞಾನಿಕ ಸಂಶೋಧನೆಗಳಲ್ಲಿ ಅನುಸರಿಸಬೇಕಾದ ಉಪಕ್ರಮವನ್ನು ಪುನಾರೂಪಿಸಲು ಪ್ರಯತ್ನಿಸಿತು.

ವರ್ದಿಮೀರ್

ಕೊಹ್ಲರ್

ಕುರ್ಟ್‌ಕೊಫ್ತ

ಟೋಲ್‌ಮನ್

ಈ ಪ್ರಯತ್ನದ ಸೈದ್ಧಾಂತಿಕ ಬುನಾದೀ ತತ್ವಗಳು ಇವು. 1. ಪೂರ್ಣತೆಯ ಅಥವಾ ಸಮಷ್ಟಿಯ (ಟೋಟ್ಯಾಲಿಟಿ) ತತ್ವ: ವ್ಯಕ್ತಿಯ ಎಲ್ಲ ಭೌತಿಕ ಮತ್ತು ಮಾನಸಿಕ ಆಯಾಮಗಳನ್ನು ಏಕಕಾಲದಲ್ಲಿ ಗಮನದಲ್ಲಿ ಇಟ್ಟುಕೊಂಡು ಪ್ರಜ್ಞಾಯುತ ಅನುಭವವನ್ನು ಒಟ್ಟಾರೆಯಾಗಿಯೇ ಅಧ್ಯಯಿಸಬೇಕು. ಮನಸ್ಸಿನ ಪ್ರತಿ ಘಟಕಾಂಶವೂ ಚಲನಶೀಲ ಸಂಬಂಧಗಳುಳ್ಳ ವ್ಯವಸ್ಥೆಯ ಅಥವಾ ವ್ಯೂಹದ ಭಾಗವಾಗಿರುತ್ತವೆಯೇ ವಿನಾ ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದಿಲ್ಲ. 2. ಮನೋಭೌತಿಕ ಸಮರೂಪತೆಯ (ಸೈಕೋಫಿಸಿಕಲ್ ಐಸೋಮಾರ್ಫಿಸಮ್) ತತ್ವ ಪ್ರಜ್ಞಾಯುತ ಅನುಭವಕ್ಕೂ ಮಿದುಳಿನ ಚಟುವಟಿಕೆಗಳಿಗೂ ನಡುವೆ ಸಹಸಂಬಂಧ ಅಥವಾ ಅನ್ಯೋನ್ಯ ಸಂಬಂಧವಿದೆ ಎನ್ನುತ್ತದೆ.

ನಮೂದಿಸಿದ ಸೈದ್ಧಾಂತಿಕ ತತ್ವಾಧಾರಿತ ವಿಧಾನಶಾಸ್ತ್ರೀಯ ತತ್ವಗಳು ಇವು – 1. ಇಂದ್ರಿಯಗ್ರಾಹ್ಯ-ವಿಷಯ ಪ್ರಾಯೋಗಿಕ ವಿಶ್ಲೇಷಣೆ (ಫ಼ಿನಾಮಿನನ್ ಎಕ್ಸ್‌ಪೆರಿಮೆಂಟಲ್ ಅನ್ಯಾಲಿಸಿಸ್) ಯಾವುದೇ ಮನೋವೈಜ್ಞಾನಿಕ ಸಂಶೋಧನೆಯ ಆರಂಭಿಕ ಬಿಂದು ಅಧ್ಯಯಿಸಬೇಕಾದ

Digitised by Bharatavani, CIIL

ಇಂದ್ರಿಯಗ್ರಾಹ್ಯ ವಿಷಯವಾಗಿರಬೇಕೇ ವಿನಾ ಅದರ ಘಟಕಾಂಶಗಳಾದ ಸಂವೇದನಗಳ ಗುಣಗಳಲ್ಲ. 2. ನಿರ್ದಿಷ್ಟ ಜೀವನಶೈಲಿಯ (ಬೈಆಟಿಕ್) ಪ್ರಯೋಗ ಪ್ರಯೋಗಪಶುವಿಗೆ ರೂಢಿಯಾಗಿರುವ ವರ್ತನೆಯ ಪ್ರಾಮಾಣಿಕ ಪುನರುತ್ಪಾದನೆ ಆಗಬೇಕಾದರೆ ಪ್ರಯೋಗಗಳು ಸ್ವಾಭಾವಿಕ ಸನ್ನಿವೇಶಗಳಲ್ಲಿ, ನೈಜ ಪರಿಸ್ಥಿತಿಯಲ್ಲಿ ಜರುಗಬೇಕೇ ವಿನಾ ಅಭಿಜಾತ ಪ್ರಯೋಗಗಳು ಜರಗುವ ಪ್ರಯೋಗಶಾಲಾ ಸನ್ನಿವೇಶಗಳಲ್ಲಿ ಅಲ್ಲ.

ಪ್ರತ್ಯಕ್ಷಜ್ಞಾನ ಅಥವಾ ಪ್ರತ್ಯಕ್ಷಾನುಭವದ ಅಧ್ಯಯನಕ್ಕೆ (ಪರ್ಸೆಪ್ಷನ್) ಗೆಸ್ಟಾಲ್ಟ್ ಪಂಥೀಯರು ಒತ್ತು ನೀಡಿದ್ದರ ಫಲಿತವೇ ಪ್ರಾಗನಾನ್ಜ಼ ನಿಯಮ. ಈ ನಿಯಮದ ಪ್ರಕಾರ ನಾವು ನಮ್ಮ ಅನುಭವವನ್ನು ಸರ್ವಾಂಗಸಮವೂ, ಕ್ರಮಬದ್ಧ ಜೋಡಣೆ ಉಳ್ಳದ್ದೂ, ಸಮ್ಮಿತೀಯವೂ ಆಗಿರುವಂತೆ ವ್ಯವಸ್ಥೆಗೊಳಿಸುವ ಒಲವು ತೋರುತ್ತೇವೆ. ಸಂವೇದನಗಳ ಅರ್ಥೈಸುವಿಕೆಯ ವಿಧಾನಗಳ ನಿಖರ ತಿಳಿಯುವಿಕೆಯನ್ನು ಅನುಕೂಲಿಸಲು ಪ್ರಾಗನಾನ್ಜ಼ ನಿಯಮಕ್ಕೆ ಉಪನಿಯಮಗಳನ್ನೂ ಗೆಸ್ಟಾಲ್ಟ್ ಪಂಥೀಯರು ರೂಪಿಸಿದ್ದಾರೆ. ಅವು ಇಂತಿವೆ – 1. ಮುಚ್ಚುವಿಕೆ (ಕ್ಲೋಷರ್) ನಿಯಮ : ಸಂವೇದನಗಳ ಮೂಲಕ ಗ್ರಹಿಸಲು ಆಗದ ಘಟಕಾಂಶಗಳನ್ನು ಮಾನಸಿಕವಾಗಿ ಗ್ರಹಿಸಿ, ಅರ್ಥಾತ್ ಕಲ್ಪಿಸಿಕೊಂಡು ಕ್ರಮಬದ್ಧ ಪೂರ್ಣವನ್ನು ಮನಸ್ಸು ಅನುಭವಿಸುತ್ತದೆ. 2. ಸಾದೃಶ್ಯ (ಸಿಮಿಲ್ಯಾರಿಟಿ) ನಿಯಮ: ಮನಸ್ಸು ಆಕಾರ, ಬಣ್ಣ, ಗಾತ್ರ, ಉಜ್ವಲತೆ ಇವೇ ಮೊದಲಾದವನ್ನು ಆಧರಿಸಿ ಸದೃಶ ಘಟಕಾಂಶಗಳನ್ನು ಸಮೂಹಗಳಾಗಿ ಒಗ್ಗೂಡಿಸಿ ಗ್ರಹಿಸುತ್ತದೆ. 3. ಸಾಮೀಪ್ಯ (ಪ್ರಾಕ್ಸಿಮಿಟಿ) ನಿಯಮ: ದೈಶಿಕ ಅಥವಾ ಕಾಲಿಕ ಸಾಮೀಪ್ಯ ಇರುವ ಘಟಕಾಂಶಗಳನ್ನು ಒಂದು ಸಮೂಹವಾಗಿ ಮನಸ್ಸು ಗ್ರಹಿಸುತ್ತದೆ. 4 ಸಮ್ಮಿತಿ (ಸಿಮಿಟ್ರಿ) ನಿಯಮ : ದೈಹಿಕ ಸಾಮೀಪ್ಯ ಇಲ್ಲದೇ ಇದ್ದಾಗ್ಯೂ ಮನಸ್ಸು ಸಮ್ಮಿತೀಯ ಬಿಂಬಗಳನ್ನು ಒಗ್ಗೂಡಿಸಿ ಗ್ರಹಿಸುತ್ತದೆ. 5. ನೈರಂತರ್ಯ (ಕನ್‌ಟಿನ್ಯೂಇಟಿ) ನಿಯಮ: ಸ್ವಲ್ಪಕಾಲ ಸಂವೇದನಾನುಭವ ಆದ ಬಳಿಕ ಸಂವೇದನೋದ್ದೀಪನ ಇಲ್ಲದೇ ಇದ್ದರೂ ದೃಶ್ಯ, ಶ್ರಾವ್ಯ ಮತ್ತು ಚಲನೆಯ ಪ್ರರೂಪಗಳನ್ನು ಮನಸ್ಸು ಗ್ರಹಿಸುವುದನ್ನು ಮುಂದುವರಿಸುತ್ತದೆ. 6. ಸಾಮಾನ್ಯ ವಿಧಿ (ಕಾಮನ್ ಫೇಟ್) ನಿಯಮ: ಒಂದೇ ದಿಶೆಯಲ್ಲಿ ಚಲಿಸುತ್ತಿರುವಂತೆ ಅಥವಾ ಜೋಡಿಸಿ ಇಟ್ಟಂತೆ ಗೋಚರಿಸುವ ಘಟಕಾಂಶಗಳನ್ನು ಒಗ್ಗೂಡಿಸಿ ಒಂದು ಸಮೂಹದಂತೆ ಮನಸ್ಸು ಗ್ರಹಿಸುತ್ತದೆ.

ಗೆಸ್ಟಾಲ್ಟ್ ವ್ಯವಸ್ಥೆಗಳ ಪ್ರತ್ಯಕ್ಷಾನುಭವದಲ್ಲಿ ಅಥವಾ ಗ್ರಹಿಕೆಯಲ್ಲಿ ಪ್ರಾಗನಾನ್ಜ಼ ನಿಯಮವಲ್ಲದೇ ಹೊರಹೊಮ್ಮುವಿಕೆ (ಎಮರ್ಜೆನ್ಸ್), ಮೂರ್ತೀಕರಣ (ರಿಇಫ್ಲಿಕೇಶನ್,) ಬಹುಸುಭದ್ರತೆ (ಮಲ್ಟಿಸ್ಟೆಬಿಲಿಟಿ) ಅಪರಿಣಾಮಿತ್ವ (ಇನ್‌ವೇರಿಅನ್ಸ್) ಎಂಬ ಲಕ್ಷಣಗಳನ್ನೂ ಗಮನಿಸಬಹುದು. ವಸ್ತುವನ್ನು 'ಇಡಿ'ಯಾಗಿ ಗುರುತಿಸುವಿಕೆಯೇ ಹೊರಹೊಮ್ಮುವಿಕೆ. ಉದಾ: ನಾಯಿಯ ಚಿತ್ರ ನೋಡಿದಾಗ ನಾಯಿಯನ್ನು ಸಮಗ್ರವಾಗಿ ಗ್ರಹಿಸುತ್ತೇವೆಯೇ ವಿನಾ ಅದರ ಅಂಗಗಳನ್ನು ಮೊದಲು ಗುರುತಿಸಿ ತದನಂತರ ಅದು ನಾಯಿ ಎಂದು ತೀರ್ಮಾನಿಸುವುದಿಲ್ಲ. ಪ್ರತ್ಯಕ್ಷಾನುಭವಕ್ಕೆ ರಚನಾತ್ಮಕ ಅಥವಾ ಉತ್ಪಾದಕ ಆಯಾಮವೂ ಇರುವುದರಿಂದ ಸಂವೇದನಾನುಭವದಲ್ಲಿ ಇದ್ದ ದೈಶಿಕ ಮಾಹಿತಿಗಿಂತ ಹೆಚ್ಚು ಸ್ಪಷ್ಟ ಮಾಹಿತಿ ಪ್ರತ್ಯಕ್ಷಾನುಭವದಲ್ಲಿ ಇರುತ್ತದೆ. ಇದೇ ಮೂರ್ತೀಕರಿಸುವಿಕೆ. ಉದಾ: ಒಂದು ತ್ರಿಕೋನದ ಮೂರು ಶೃಂಗಮೂಲೆಗಳನ್ನು ಮಾತ್ರ ನೋಡಿ ಅದು ತ್ರಿಕೋನಾಕೃತಿ ಎಂದು ತೀರ್ಮಾನಿಸುವುದು. ಅನೇಕಾರ್ಥ ಇರುವ ಅಥವಾ ಅಸ್ಪಷ್ಟ ಅನಿಶ್ಚಿತ ಪ್ರತ್ಯಕ್ಷಾನುಭವದಲ್ಲಿ ಎರಡು ಅಥವಾ ಹೆಚ್ಚು ಅರ್ಥಗಳು ಪರ್ಯಾಯವಾಗಿ ಮನಃಪಟಲದಲ್ಲಿ ಮಾಡುವ ವಿದ್ಯಮಾನವೇ ಬಹುಸುಭದ್ರತೆ. ಅನಿಶ್ಚಿತ ಆಕೃತಿ–ಹಿನ್ನೆಲೆ ಸಂಬಂಧವಿರುವ ಚಿತ್ರಗಳಲ್ಲಿ ಈ ಲಕ್ಷಣ ಸುಲಭವೇದ್ಯ. ಸರಳ ಜ್ಯಾಮಿತೀಯ ವಸ್ತುಗಳನ್ನು ಅವು ಯಾವ ಅಥವಾ ಎಂಥ ಸ್ಥಿತಿಯಲ್ಲಿ ಇದ್ದರೂ ಸರಿಯಾಗಿ ಗುರುತಿಸುವ ವಿದ್ಯಮಾನವೇ ಅಪರಿಣಾಮಿತ್ವ ಲಕ್ಷಣ.

ಗೆಸ್ಟಾಲ್ಟ್ ಸಿದ್ಧಾಂತಗಳಿಗೆ ಗಮನಾರ್ಹ ಕೊಡುಗೆ ನೀಡಿದ್ದಷ್ಟೇ ಅಲ್ಲದೇ ಕಲಿಕೆಗೆ ಸಂಬಂಧಿಸಿದಂತೆ 'ಚಿಕ್ಕವಯಸ್ಸಿನಲ್ಲಿ ಜರ ಗುವ ಬಹುಪಾಲು ಕಲಿಕೆ ಸಂವೇದನಾ – ಗತಿ (ಸೆನ್ಸಾರಿ ಮೋಟಾರ್) ಕಲಿಕೆ ಆಗಿರುತ್ತದೆ, ಬಹಳಷ್ಟು ಕಲಿಕೆ ಅನುಕರಣೆಯಿಂದ ಆಗುತ್ತದೆ. ಭಾಷೆಯ ನೆರವಿನಿಂದ ಜರ ಗುವ ಭಾವಕಲ್ಪನಾ (ಐಡಿಏಷನಲ್) ಕಲಿಕೆಯೇ ಅತ್ಯುನ್ನತ ಸ್ತರದ ಕಲಿಕೆ. ವಾಸ್ತವವಾಗಿ ಚಲನೆಯಿಲ್ಲದಿದ್ದರೂ ತೋರಿಕೆಯ ಚಲನೆಯ ಪ್ರತ್ಯಕ್ಷಾನುಭವಕ್ಕೆ ಸಂಬಂಧಿಸಿದಂತೆ ಪ್ರಯೋಗಮಾಡಿ ಗೆಸ್ಟಾಲ್ಟ್ ತತ್ತ್ವವನ್ನು ಪ್ರತಿಪಾದಿಸಿದ್ದು ಮೊದಲಾದ ಅಭಿಪ್ರಾಯಗಳನ್ನೂ ಪ್ರಕಟಿಸಿದ **ಕರ್ಟ್ ಕಾಫ್ಕ** (1886–1941), ಒಳನೋಟದಿಂದ ಕಲಿಕೆಯಿಂದ (ಲರ್ನಿಂಗ್ ಬೈ ಇನ್‌ಸೈಟ್) ಸಮಸ್ಯೆ ಪರಿಹರಿಸುವಿಕೆ ವರ್ತನೆಯನ್ನು ಪ್ರಾಯೋಗಿಕವಾಗಿ ಅಧ್ಯಯಿಸಿ ಫಲಿತಾಂಶಗಳನ್ನು 'ಮೆಂಟಾಲಿಟಿ ಆಫ್ ಏಪ್ಸ್' ಎಂಬ ಕೃತಿ ರೂಪದಲ್ಲಿ ಪ್ರಕಟಿಸಿ (1917) ಖ್ಯಾತನಾದ **ವೂಲ್ಫ್‌ಗ್ಯಾಂಗ್ ಕಾಯ್ಲರ್** (1887–1967) ಇತರ ಉಲ್ಲೇಖಾರ್ಹ ಗೆಸ್ಟಾಲ್ಟ್ ಪಂಥೀಯರು.

ಪ್ರತ್ಯಕ್ಷಾನುಭವಕ್ಕೆ ಸಂಬಂಧಿತ ಗೆಸ್ಟಾಲ್ಟ್ ಸಿದ್ಧಾಂತಗಳು ವರ್ಣನಾತ್ಮಕವಾಗಿ ಇವೆಯೇ ವಿನಾ ವಿವರಣಾತ್ಮಕವಾಗಿ ಇಲ್ಲ ಎಂಬುದು ಬಲು ಪ್ರಮುಖ ಟೀಕೆ. ಆದರೂ ಪ್ರತ್ಯಕ್ಷಾನುಭವದ ಮತ್ತು ಸಮಸ್ಯೆ ಪರಿಹರಿಸುವಿಕೆ ವರ್ತನೆಯ ಅಧ್ಯಯನಕ್ಕೆ ಗೆಸ್ಟಾಲ್ಟ್ ಪಂಥೀಯರ ಕೊಡುಗೆ ಗಮನಾರ್ಹ. ಆಧುನಿಕ ಗಣಕಗಳ (ಕಂಪ್ಯೂಟರ್) 'ಬಳಕೆದಾರ ಅಂತರ್‌ಕ್ರಿಯೆ ನಡೆಸುವ ಸಾಧನದ ವಿನ್ಯಾಸದಲ್ಲಿ (ಯೂಸರ್ ಇಂಟರ್‌ಫೇಸ್ ಡಿಸೈನ್') ಮನುಷ್ಯರು ಏನನ್ನು 'ನೋಡುತ್ತಾರೋ' ಅದನ್ನೇ ಗಣಕಗಳೂ ನೋಡುವಂತೆ ಮಾಡಲು ಪ್ರಯತ್ನಿಸಲಾಗುತ್ತಿರುವ 'ಗಣಕ ದೃಷ್ಟಿ (ಕಂಪ್ಯೂಟರ್ ವಿಶನ್)' ಕಾರ್ಯಕ್ರಮದಲ್ಲಿ ಗೆಸ್ಟಾಲ್ಟ್ ನಿಯಮಗಳ ಅನ್ವಯ ಉಂಟು.

## ವರ್ತನವಾದಿ ಪಂಥ

ಅಮೂರ್ತವೂ ಸೈದ್ಧಾಂತಿಕವೂ ಆದ ಯಾವುದೇ ಮಾನಸಿಕ ಸಂರಚನೆಗಳಿಗೇ ಆಗಲಿ ಅಥವಾ ಪ್ರಜ್ಞೆಗೇ ಆಗಲಿ ತಳುಕು ಹಾಕಿಕೊಳ್ಳದ ವೀಕ್ಷಣೀಯ ವರ್ತನೆ ಮನೋವಿಜ್ಞಾನದ ಅಧ್ಯಯನ ವಿಷಯವಾಗಿರಬೇಕು ಎಂಬ ನಂಬಿಕೆಯಿಂದ ಉದಯಿಸಿದ ಪಂಥವೇ ವರ್ತನವಾದೀ ಪಂಥ. ಅಪೇಕ್ಷಿತ ರೀತಿಯಲ್ಲಿ ವರ್ತನೆಯನ್ನು ಬದಲಿಸುವಿಕೆ, ನಿರ್ದಿಷ್ಟ ಸನ್ನಿವೇಶಗಳಲ್ಲಿ ಪ್ರಕಟವಾಗಬಹುದಾದ ವರ್ತನೆಯನ್ನು ಮುಂದಾಗಿಯೇ ತಿಳಿಯುವಿಕೆ ಇವು ವರ್ತನ ಮನೋವಿಜ್ಞಾನದ ಗುರಿಗಳು. ಎಂದೇ, ಎಲ್ಲ ವರ್ತನೆಗಳೂ ಸೋಪಾಧಿಕಗೊಳಿಸುವಿಕೆ ಪ್ರಕ್ರಿಯೆ ಮುಖೇನ ಆರ್ಜಿತ ವರ್ತನೆಗಳು ಎಂಬ ನಂಬಿಕೆ ಆಧಾರಿತ ಕಲಿಕೆಯ ಸಿದ್ಧಾಂತವೇ ವರ್ತನವಾದೀ ಪಂಥ ಎಂದು ವ್ಯಾಖ್ಯಾನಿಸುವುದೂ ಉಂಟು. ಭಾಗಶಃ ಪ್ರಯೋಗಶಾಲಾ ಸ್ಥಿತ ಪ್ರಾಣಿಪ್ರಯೋಗಗಳ ಜನಪ್ರಿಯತೆ, ಭಾಗಶಃ ಸಿಗ್ಮಂಡ್ ಫ್ರಾಯ್ಡ್‌ನ (1856–1939) ಮನೋಚಲನಶಾಸ್ತ್ರಕ್ಕೆ (ಸೈಕೋಡೈ ನೆಮಿಕ್ಸ್) ಪ್ರತಿಕ್ರಿಯೆಯಾಗಿ, ಭಾಗಶಃ ವಿಲ್‌ಹೆಲ್ಮ್ ವೂಂಟ್ (1832–1920) ಮಾನಸಿಕ ಪ್ರಕ್ರಿಯೆಗಳ ಅಧ್ಯಯನಕ್ಕೆ ಉಪಯೋಗಿಸುತ್ತಿದ್ದ ಅಂತಃವೀಕ್ಷಣೆ ವಿಧಾನದ ವ್ಯಕ್ತಿನಿಷ್ಠತೆಯನ್ನು ವಿರೋಧಿಸಲೋಸುಗ ಜನ್ಮ ತಾಳಿದ ಪಂಥ ಇದು. 'ಆರೋಗ್ಯವಂತರೂ, ಸದೃಢರೂ ಆದ ಒಂದು ಡಜನ್ ಶಿಶುಗಳನ್ನೂ ಅವನ್ನು ಬೆಳೆಸಲೋಸುಗ ನಾನು ಸ್ಪಷ್ಟವಾಗಿ ನಮೂದಿಸುವ ಜಗತ್ತನ್ನೂ ಕೊಡಿ. ಅವುಗಳ ಪೈಕಿ ಯಾವುದನ್ನಾದರೂ ಯಾದೃಚ್ಛಿಕವಾಗಿ ಆಯ್ದು, ಅದರ ವಿಶೇಷ ಪ್ರತಿಭೆ, ಒಲವು, ಸಾಮರ್ಥ್ಯ, ಕುಲ ಏನೇ ಇರಲಿ,

Digitised by Bharatavani, CIIL

ನಾನು ಬಯಸುವ ಯಾವುದೇ ವಿಶೇಷಜ್ಞ – ವಕೀಲ, ವೈದ್ಯ, ವ್ಯಾಪಾರಿ, ಕಲಾವಿದ, ಅಷ್ಟೇ ಏಕೆ, ಭಿಕ್ಷುಕ ಅಥವಾ ಕಳ್ಳನಾಗಿ ಕೂಡ ಆಗುವಂತೆ ತರಬೇತಿ ನೀಡಬಲ್ಲೆ ಎಂದು ಖಾತರಿ ನೀಡುತ್ತೇನೆ' ಎಂದು ಘೋಷಿಸಿದ (1930), ಬಲು ವಿವಾದ ಹುಟ್ಟುಹಾಕಿದ 'ಲಿಟಲ್ ಆಲ್ಬರ್ಟ್' ಪ್ರಯೋಗಗಳನ್ನು ಮಾಡಿದ (1920) **ಜಾನ್ ಬ್ರಾಡಸ್ ವಾಟ್ಸನ್** (1878–1958) ವರ್ತನವಾದೀ ಪಂಥದ ಜನಕ. ಈತ ಪ್ರವರ್ತಿಸಿದ ವರ್ತನವಾದವನ್ನು 'ವಿಧಾನಶಾಸ್ತ್ರೀಯ' (ಮೆತಡಲಾಜಿಕಲ್) ವರ್ತನಮಾನ ಎಂದೂ ಉಲ್ಲೇಖಿಸುವುದುಂಟು.



**ಜೆ. ಬಿ. ವಾಟ್ಸನ್**



**ಪಾವಲೊವ್**

**ಸ್ಕಿನ್ನರ್**

**ಥಾರಂಡೈಕ್**

ವರ್ತನವಾದೀ ಪಂಥದ ವಿಕಾಸದ ಪ್ರಮುಖ ಘಟ್ಟಗಳು ಇಂತಿವೆ: ಕೇಂದ್ರೀಯ ನರಮಂಡಲಕ್ಕೆ ಸಂಬಂಧಿಸಿದಂತೆ ಅವರೋಧಕ (ಇನ್‌ಹಿಬಿಟರಿ)ಅನುಕ್ರಿಯೆಗಳ ಪರಿಕಲ್ಪನೆಯನ್ನು ಪರಿಚಯಿಸಿದ **ಐವಾನ್ ಮಿಖೈಲೊವಿಚ್ ಪ್ಯಾವಲೋವ್** (1829–1905) 'ರಿಫ್ಲೆಕ್ಸಸ್ ಆಫ್ ದಿ ಬ್ರೇಯ್ನ್' ಗ್ರಂಥ ಪ್ರಕಟಿಸಿದ್ದು (1863), ಐವಾನ್ ಪೆಟ್ರೋವಿಚ್ ಪಾವಲ (1849–1936) ಅಭಿಜಾತ ಸೋಪಾಧಿಗೊಳಿಸುವಿಕೆಯ (ಕ್ಲಾಸಿಕಲ್ ಕಂಡೀಶನಿಂಗ್) ಆವಿಷ್ಕಾರಕ್ಕೆ ಕಾರಣವಾದ ಅನುವರ್ತನಗಳ (ರಿಫ್ಲೆಕ್ಸ್) ಪ್ರಯೋಗಾತ್ಮಕ ಅಧ್ಯಯನ ಆರಂಭಿಸಿದ್ದು (1900), ವಾಟ್ಸನ್‌ನ 'ಸೈಕಾಲಜಿ ಆ್ಯಸ್ ಎ ಬಿಹೇವಿಯರಿಸ್ಟ್ ವ್ಯೂಸ್ ಇಟ್' ಪ್ರಕಟಣೆ (1913,) ವಾಟ್ಸನ್ ತನ್ನ ಸಹಾಯಕಿ ರೋಸಾಲಿ ರೇಯ್‌ನರ್‌ನೊಡಗೂಡಿ ಖ್ಯಾತ 'ಲಿಟಲ್ ಆಲ್ಬರ್ಟ್ ಪ್ರಯೋಗಗಳನ್ನು ಮಾಡಿದ್ದು (1920), ಪಾವಲೋವ್‌ನ ಅಭಿಜಾತ ಸೋಪಾಧಿಕಗೊಳಿಸುವಿಕೆಯಿಂದ ಭಿನ್ನವಾದ ಕ್ರಿಯಾಜನ್ಯ ಸೋಪಾಧಿಕಗೊಳಿಸುವಿಕೆ (ಆಪರೆಂಟ್ ಕಂಡೀಶನಿಂಗ್) ಆವಿಷ್ಕರಿಸುವುದರ ಮುಖೇನ ಶಿಕ್ಷಣ ಕ್ಷೇತ್ರಕ್ಕೆ ಬಲು ಉಪಯುಕ್ತವಾದ 'ಪುಷ್ಟೀಕರಣ ಅಥವಾ ಪುನರ್ಬಲನ (ರಿಇನ್‌ಫೋರ್ಸ್‌ಮೆಂಟ್)' ಪರಿಕಲ್ಪನೆಯನ್ನೂ 'ವರ್ತನೆಯನ್ನು ರೂಪಿಸುವಿಕೆ (ಶೇಪಿಂಗ್ ದಿ ಬಿಹೇವ್ಯರ್)' ಪರಿಕಲ್ಪನೆಯನ್ನೂ 'ಕಾರ್ಯಕ್ರಮದನ್ವಯ ಬೋಧನೆ (ಪ್ರೋಗ್ರ್ಯಾಮ್ಡ್ ಇನ್ಸ್‌ಟ್ರಕ್ಷನ್)' ಪರಿಕಲ್ಪನೆಗಳನ್ನೂ ಒದಗಿಸಿದ ತೀವ್ರಸುಧಾರಿತ (ರ್ಯಾಡಿಕಲ್) ವರ್ತನವಾದ ಎಂದು ಉಲ್ಲೇಖಿಸುತ್ತಿರುವ ವರ್ತನವಾದದ ಮತ್ತು 'ವರ್ತನೆಯ ಪ್ರಾಯೋಗಿಕ ವಿಶ್ಲೇಷಣೆ' ಎಂಬ ಹೆಸರಿನ ಪ್ರಾಯೋಗಿಕ ಸಂಶೋಧನ ಮನೋವಿಜ್ಞಾನ ಶಾಖೆಯ ಜನಕ **ಬರ್ಹಸ್ ಫ್ರೆಡ್ರಿಕ್ ಸ್ಕಿನ್ನರ್‌**ನ (1904–1990) ಪ್ರಥಮ ಕೃತಿ 'ದಿ ಬಿಹೇವ್ಯರ್ ಆಫ್ ಆರ್ಗ್ಯಾನಿಸಮ್ಸ್: ಆ್ಯನ್ ಎಕ್ಸ್‌ಪೆರಿಮೆಂಟಲ್ ಅನ್ಯಾಲಿಸಿಸ್'' ಪ್ರಕಟಣೆ ಆದದ್ದು (1938,) ಕಲಿಕೆ ಮತ್ತು ಅಭಿಪ್ರೇರಣೆಯನ್ನು ಗಣಿತೀಯ ಸೂತ್ರ ರೂಪೀ ನಿಯಮಗಳ ಮುಖೇನ ವಿವರಿಸಲು ಪ್ರಯತ್ನಿಸಿದ **ಕ್ಲಾರ್ಕ್ ಲಿಯೋನಾರ್ಡ್ ಹಲ್** (1884–1952) 'ಮ್ಯಾತಮೇಟಿಕೊ–ಡಿಡಕ್ಟಿವ್ ಥಿಯರಿ ಆಫ್ ಲರ್ನಿಂಗ್ (1940) ಮತ್ತು 'ಪ್ರಿನ್ಸಿಪಲ್ಸ್ ಆಫ್ ಬಿಹೇವ್ಯರ್' (1943) ಕೃತಿಗಳನ್ನು ಪ್ರಕಟಿಸಿದ್ದು, ಸಂಕೀರ್ಣ ಶಾಬ್ದಿಕ ವರ್ತನೆಯನ್ನು ತನ್ನ ಸಿದ್ಧಾಂತದ ನೆರವಿನಿಂದ ವಿವರಿಸಲು ತಾನು ಮಾಡಿದ ಅಧ್ಯಯನಗಳನ್ನು ಆಧರಿಸಿ ಸ್ಕಿನ್ನರ್ 'ವರ್ಬಲ್ ಬಿಹೇವ್ಯರ್' ಕೃತಿ ಪ್ರಕಟಿಸಿದ್ದು (1957), ಸ್ಕಿನ್ನರ್‌ನ ವರ್ತನವಾದವನ್ನು ಖಂಡಿಸಿ ಆ್ಯವ್ರಮ್ ನೋಮ್ ಚೋಮ್‌ಸ್ಕಿ (1928) 'ರಿವ್ಯೂ ಆಫ್ ವರ್ಬಲ್ ಬಿಹೇವ್ಯರ್' ಪ್ರಕಟಿಸಿದ್ದು (1959), 'ಬಿಯಾಂಡ್ ಫ್ರೀಡಮ್ ಆ್ಯಂಡ್ ಡಿಗ್ನಿಟಿ' ಎಂಬ ಕೃತಿಯಲ್ಲಿ ಸ್ವತಂತ್ರ ಸಂಕಲ್ಪಶಕ್ತಿ ಎಂಬುದು ಒಂದು ಭ್ರಮೆ ಎಂದು ಸ್ಕಿನ್ನರ್ ವಾದಿಸಿದ್ದು (1971).

ಖ್ಯಾತ 'ಕಲಿಕೆಯ ನಿಯಮ'ಗಳನ್ನು ರೂಪಿಸಿದ **ಎಡ್ವರ್ಡ್ ಲೀ ತಾರ್ನ್‌ಡೈಕ್** (1879–1949). ಏಕ–ಪ್ರಯತ್ನ (ಒನ್ ಟ್ರಯಲ್) ಸಿದ್ಧಾಂತ, ಅಪುನರ್ಬಲನ (ನಾನ್‌ರಿಇನ್ ಫೋರ್ಸ್‌ಮೆಂಟ್) ಹಾಗೂ ಸಂಸ್ಪರ್ಶ (ಕಾನ್‌ಟಿಗ್ಯೂಇಟಿ) ಕಲಿಕೆ ಪ್ರವರ್ತಿಸಿದ **ಎಡ್ವಿನ್ ರೇ ಗತ್ರಿ** (1886–1959) ಮತ್ತು ಮುಂದೆ ಜ್ಞಾನಾತ್ಮಕ ಮನೋವಿಜ್ಞಾನ ವಿಕಸಿಸಲು ಭೂಮಿಕೆ ಸಿದ್ಧಪಡಿಸಿದ 'ಸಂಕೇತ ಕಲಿಕೆ (ಸೈನ್ ಲರ್ನಿಂಗ್)' ಸಿದ್ಧಾಂತ ಪ್ರವರ್ತಿಸಿದ **ಎಡ್ವರ್ಡ್ ಚೇಸ್ ಟಾಲ್‌ಮನ್** (1886–1959) ಇವರೂ ಉಲ್ಲೇಖಾರ್ಹ ವರ್ತನವಾದಿಗಳು.

**ಕ್ಲಾರ್ಕ್‌ಹಲ್**

**ಇ. ಆರ್. ಗುತ್ರಿ**

ವರ್ತನವಾದವು ವೀಕ್ಷಣೀಯ ವರ್ತನೆಗಳನ್ನು ಆಧರಿಸಿರುವುದರಿಂದ ಸಂಶೋಧನೆಗಳಿಗೋಸ್ಕರ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸುವುದೂ ಪರಿಮಾಣೀಕರಿಸುವುದೂ ಸುಲಭ. ಇಂದು ವ್ಯಾಪಕವಾಗಿ ಬಳಕೆಯಲ್ಲಿ ಇರುವ ತೀವ್ರ ವರ್ತನಾ ಮಧ್ಯಪ್ರವೇಶಗಳು. ಸಾಂಕೇತಿಕ ಮಿತವ್ಯಯದಂಥ (ಟೋಕನ್ ಇಕಾನೊಮೀಸ್), ವರ್ತನ ಪರಿವರ್ತನೆಯ ತಂತ್ರಗಳು (ಬಿಹೇವ್ಯರ್ ಮಾಡಿಫ಼ಿಕೇಶನ್). ವರ್ತನ ವಿಶ್ಲೇಷಣೆಯ ವಿಭಿನ್ನ ತಂತ್ರಗಳು ವರ್ತನವಾದದ ಕೊಡುಗೆಗಳು. ಅಪಸಮಾಯೋಜಿತ ಹಾಗೂ ಹಾನಿಕಾರಕ ವರ್ತನ ಪ್ರರೂಪಗಳನ್ನು ಬದಲಿಸಲು ವರ್ತನವಾದದ ಕೊಡುಗೆಗಳಾದ ಈ ಉಪಕ್ರಮಗಳು ಬಲು ಉಪಯುಕ್ತವಾಗಿದೆ. ಸ್ವಯಂಬೋಧನೆಯ ತಂತ್ರಗಳ ರೂಪಣೆಯಲ್ಲಿ ವರ್ತನವಾದದ ಕೊಡುಗೆ ಅಪಾರ.

Digitised by Bharatavani, CIIL

ವರ್ತನೆಯನ್ನು ಏಕಮುಖಿಯಾಗಿ ಅಧ್ಯಯಿಸುವ ಉಪಕ್ರಮ, ಸ್ವತಂತ್ರ ಸಂಕಲ್ಪದ ಪ್ರಭಾವವನ್ನೇ ಆಗಲಿ ಭಾವನೆಗಳ, ಆಲೋಚನೆಗಳ ಹಾಗೂ ಚಿತ್ತಸ್ಥಿತಿಯ ಪ್ರಭಾವಗಳನ್ನೇ ಆಗಲಿ ಪರಿಗಣಿಸದಿರುವುದು ವರ್ತನವಾದದ ಬಲು ದೊಡ್ಡ ಕೊರತೆ. ಪುನರ್ಬಲನಗಳ ಪ್ರಯೋಗ ಇಲ್ಲದೇ ಜರುಗುವ ಇತರ ವಿಧದ ಕಲಿಕೆಗಳನ್ನು ಸಮರ್ಪಕವಾಗಿ ವಿವರಿಸದಿರುವುದೂ ವರ್ತನವಾದದ ಕೊರತೆಗಳಲ್ಲಿ ಒಂದು. ಯುಕ್ತ ನೂತನ ಮಾಹಿತಿ ಲಭ್ಯವಾದಾಗ ವ್ಯಕ್ತಿ ಈಗಾಗಲೇ ಪುನರ್ಬಲನ ಪ್ರಯೋಗದ ಮೂಲಕ ಸ್ಥಾಪಿತವಾದ ವರ್ತನೆಗಳನ್ನೂ ಬದಲಿಸಿಕೊಳ್ಳುವ ವಿದ್ಯಮಾನವನ್ನು ವರ್ತನವಾದ ಸಮರ್ಪಕವಾಗಿ ವಿವರಿಸುವುದಿಲ್ಲ. ಅಂದ ಮಾತ್ರಕ್ಕೆ, ವರ್ತನವಾದದ ತತ್ವಗಳು ನಿರುಪಯುಕ್ತ ಎಂದು ನಿರ್ಲಕ್ಷಿಸುವಂತೆಯೂ ಇಲ್ಲ. ಅದೊಂದು ಪರಿಪೂರ್ಣ ಸಿದ್ಧಾಂತ ಅಲ್ಲ ಎಂದು ಮಾತ್ರ ತೀರ್ಮಾನಿಸಬಹುದು.

### ಮನೋವಿಶ್ಲೇಷಣ ಪಂಥ

ಸಿಗ್ಮಂಡ್‌ಫ್ರಾಯ್ಡ್

ಆಲ್‌ಫ್ರೆಡ್ ಲಿಡ್ಲರ್



ಸಿ. ಜಿ. ಯೂಂಗ್

ನರವಿಜ್ಞಾನಿ, ವೈದ್ಯ ಸಿಗ್ಮಂಡ್ ಫ್ರಾಯ್ಡ್ (1856–1939) ಮನೋರೋಗ ಚಿಕಿತ್ಸೆಗೆ ಮನೋವಿಶ್ಲೇಷಣೆ ಎಂಬ ವಿಶಿಷ್ಟ ಚಿಕಿತ್ಸಾ ಕ್ರಮಗಳನ್ನು ರೂಪಿಸುವಾಗ ಹುಟ್ಟಿಕೊಂಡ ಅದ್ವಿತೀಯ ಮನೋವಿಜ್ಞಾನ ಜ್ಞಾನ ಸಂಚಯವೇ ಮನೋವಿಶ್ಲೇಷಣೆ ಪಂಥ. ಈ ಪಂಥದ ವಿಕಾಸದಲ್ಲಿ ಫ್ರಾಯ್ಡ್‌ನ ಸಹೋದ್ಯೋಗಿಗಳಾಗಿದ್ದರೂ ಆತನ ಸಿದ್ಧಾಂತಗಳನ್ನು ಸಂಪೂರ್ಣವಾಗಿ ಒಪ್ಪದೆಯೇ ಪಂಥದಿಂದ ಹೊರಬಂದು 'ವ್ಯಷ್ಟಿ ಮನೋವಿಜ್ಞಾನ ಎಂಬ ಶಾಖೆ ಉದಯಿಸಲು ಕಾರಣನಾದ ಆಲ್‌ಫ್ರೆಡ್ ಆ್ಯಡ್ಲರ್‌ನ (1870–1937) ಮತ್ತು 'ವಿಶ್ಲೇಷಣಾತ್ಮಕ ಮನೋವಿಜ್ಞಾನ; ಎಂಬ ತನ್ನದೇ ಆದ ಮನೋವಿಜ್ಞಾನ ಶಾಖೆಯನ್ನು ಬೆಳೆಸಿದ ಕಾರ್ಲ್‌ಗುಸ್ತಾಫ್ ಯೂಂಗ್ (1875–1961)ನ ಕೊಡುಗೆಗಳೂ ಇದೆ. ಫ್ರಾಯ್ಡ್‌ನ ಸಿದ್ಧಾಂತಗಳನ್ನು ಭಾಗಶಃ ಬದಲಿಸಿ, ಸುಧಾರಿಸಿದವರ ಪೈಕಿ ಲ್ಯಕಾನಿಯನ್ ಸಿದ್ಧಾಂತ ಎಂಬ ಸುಧಾರಿತ ರೂಪಾಂತರದ ಸೃಷ್ಟಿಕರ್ತ ಜ್ಯಾಕ್ವಿಸ್, ಮಾರಿ, ಎಮಿಲ್, ಲ್ಯಾಕನ್ (1901–1981). 'ವಸ್ತು ಸಂಬಂಧಗಳ ಸಿದ್ಧಾಂತ (ಅಬ್ಜೆಕ್ಟ್ ರಿಲೇಷನ್ಸ್ ಥಿಯರಿ)' ಎಂಬ ರೂಪಾಂತರದ ಸೃಷ್ಟಿಕರ್ತ ವಿಲಿಯಮ್ ರೊನಾಲ್ಡ್ ಡಾಡ್ಸ್ ಫೇರ್‌ಬೇಯ್ರ್‌ನ್ (1884–1964). ಮೆಲನಿ ಕ್ಲೈನ್ (1882–1960). ಡೊನಾಲ್ಡ್ ವುಡ್ಸ್ ವಿನ್ನಿಕಾಟ್ (1896–1971) ಮತ್ತು ಹ್ಯಾರಿ ಗನ್‌ಟ್ರಿಫ್ (1901–1975) ಉಲ್ಲೇಖಾರ್ಹರು. ಪ್ರಚಲಿತ ಮನೋವಿಶ್ಲೇಷಣ ಪಂಥವನ್ನು ಮನೋವಿಶ್ಲೇಷಣ ಮತ್ತು ಮನೋಚಲನ (ಸೈಕೋಡೈನಾಮಿಕ್) ಮನೋಚಿಕಿತ್ಸೆಯ ಬುನಾದಿಯಾಗಿರುವ ಮತ್ತು ಅದನ್ನು ನಿರ್ದೇಶಿಸುತ್ತಿರುವ ವ್ಯಕ್ತಿತ್ವ ವಿಕಾಸದ ಸಿದ್ಧಾಂತ ಎಂದು ವ್ಯಾಖ್ಯಾನಿಸಬಹುದು. ಇತರ ಸಿದ್ಧಾಂತಗಳಿಗೆ ಹೋಲಿಸಿದಾಗ ಹೆಚ್ಚು ಸಂಸಕ್ತತೆ ಇರುವ ಸಿದ್ಧಾಂತವೂ ಇದಾಗಿದೆ.

**ಫ್ರಾಯ್ಡ್‌ನ ಮನೋವಿಶ್ಲೇಷಣ ಸಿದ್ಧಾಂತದ ಮುಖ್ಯಾಂಶಗಳು ಇಂತಿವೆ–**

1. ಮನಸ್ಸು ಕಾರ್ಯನಿರ್ವಹಿಸುವಂತೆ ಮಾಡಲು ಪ್ರೇರೇಪಿಸಲು ಒಂದು ಅಭಿಪ್ರೇರಣಾ ಶಕ್ತಿಯ (ಮೋಟಿವೇಶನಲ್ ಎನರ್ಜಿ) ಅಥವಾ ಅತೀಂದ್ರಿಯ ಶಕ್ತಿಯ (ಸೈಕಿಕ್ ಎನರ್ಜಿ) ಅವಶ್ಯಕತೆ ಇದೆ. ಈ ಶಕ್ತಿಯನ್ನು ಅಭಿವ್ಯಕ್ತಿಗೊಳಿಸಬಹುದೇ ವಿನಾ ನಾಶ ಪಡಿಸಲು ಸಾಧ್ಯವಿಲ್ಲ. ಯೋಜಿಸುವಿಕೆ, ಆಲೋಚಿಸುವಿಕೆ, ಜ್ಞಾಪಿಸಿಕೊಳ್ಳುವಿಕೆ, ಸಂವೇಗಾನುಭವ ಇವೇ ಮೊದಲಾದ ಮನೋವ್ಯಾಪಾರಗಳು ಈ ಶಕ್ತಿಯಿಂದಲೇ ಜರುಗುತ್ತವೆ. ಉಳಿವು ಮತ್ತು ಲೈಂಗಿಕತೆಗೆ ಸಂಬಂಧಿಸಿದ ಸಹಜ ಪ್ರವೃತ್ತಿ ಅನ್ನಬಹುದಾದ 'ಕಾಮ ಅಥವಾ ಭೋಗಾಪೇಕ್ಷೆ (ಈರಾಸ್ ಅಥವಾ ಲಿಬೀಡೋ)' ಮತ್ತು ಅಳಿವು ಅಥವಾ ಸಾಯುವಿಕೆಗೆ ಸಂಬಂಧಿಸಿದ ಸಹಜ ಪ್ರವೃತ್ತಿ ಅನ್ನಬಹುದಾದ ಮೃತ್ಯು ಅಥವಾ ಆಕ್ರಮಣ (ಥ್ಯಾನಟಾಸ್)' ಈ ಶಕ್ತಿಯ ಮೂಲಗಳು. ಈ ಶಕ್ತಿಯ ಪರಿಮಾಣ ಪರಿಮಿತವಲ್ಲ. ಎಂದೇ, ಇರುವ ಶಕ್ತಿಯು ಅಹಿತಾನುಭವ ಉಂಟುಮಾಡುವ ನೆನಪುಗಳನ್ನು ದಮನ ಮಾಡಲು ಅಥವಾ ಮನಸ್ಸಿನ ಕಳವಳಗಳನ್ನು ನಿಭಾಯಿಸಲು ಉಪಯೋಗವಾಗುತ್ತಿದ್ದರೆ ಸೃಜನಶೀಲ ಅಥವಾ ಉತ್ಪಾದನಾಶೀಲ ಚಟುವಟಿಕೆಗಳಿಗೆ ಲಭ್ಯವಿರುವ ಪರಿಮಾಣ ನಗಣ್ಯ ಅನ್ನಬಹುದಾದಷ್ಟು ಕಮ್ಮಿ ಆಗುತ್ತದೆ ಎಂಬ ಸಂಶಯವೂ ಇದೆ. ಆದ್ದರಿಂದ ಖಿನ್ನತೆಯಿಂದ ಕೂಡಿದ ಮನೋವ್ಯಾಧಿಗಳನ್ನು ಪರಿಹರಿಸಿದರೆ ಫಲದಾಯಕ ಕಾರ್ಯಗಳನ್ನು ಮಾಡಲು ಪೂರ್ಣ ಶಕ್ತಿ ಲಭ್ಯವಾಗುತ್ತದೆ ಎಂಬುದು ಫ್ರಾಯ್ಡ್‌ನ ಅಭಿಮತ.

2. ವ್ಯಕ್ತಿಯ ಮನಸ್ಸಿನಲ್ಲಿ ನಡೆಯುವ ಪ್ರತಿ ಚಟುವಟಿಕೆಗೂ, ಬಾಹ್ಯ ಜಗತ್ತಿನಲ್ಲಿ ವ್ಯಕ್ತಿ ಮಾಡುವ ಪ್ರತಿ ಕಾರ್ಯಕ್ಕೂ ಗುರುತಿಸಬಹುದಾದ ಒಂದು ನಿರ್ದಿಷ್ಟ ಕಾರಣ ಇದ್ದೇ ಇರುತ್ತವೆ. ಇದನ್ನು 'ಇಂದ್ರಿಯಾತೀತ ನಿಯಂತ್ರಣವಾದ (ಸೈಕಿಕ್ ಡಿಟರ್ಮಿನಿಸಮ್)' ಎಂದು ಉಲ್ಲೇಖಿಸುವುದೂ ಉಂಟು. ಮನಸ್ಸಿನಾಳದಲ್ಲಿ ಹುದುಗಿರುವ ಕಾರಣಗಳನ್ನು ಹೆಕ್ಕಿ ಹೊರಗೆಳೆದು ಜಾಗೃತ ಅರಿವಿಗೆ ತಂದು ತನ್ಮೂಲಕ ದೊರೆಯುವ ಒಳನೋಟದಿಂದ ತೊಂದರೆ ಮಾಡುತ್ತಿರುವ ಕಾರಣವನ್ನು ನಿವಾರಿಸುವುದು ಮನೋವಿಶ್ಲೇಷಣೆಯ ಉದ್ದೇಶ.

3. ವರ್ತನೆಯನ್ನು ನಿರ್ಧರಿಸುವುದರಲ್ಲಿ ಸುಪ್ತ ಅಥವಾ ಅಜಾಗೃತ (ಅನ್‌ಕಾನ್‌ಶಿಯಸ್) ಮನಸ್ಸಿನ ಪಾತ್ರ ಹಿರಿದು. ಬಹುತೇಕ ಬಯಕೆಗಳು, ಅಭಿಪ್ರೇರಣೆಗಳು ಮತ್ತು ಅಂತಸ್ತುಮುಲಗಳು ಮನಸ್ಸಿನ ಜಾಗೃತ ಸ್ತರಕ್ಕಿಂತ ಕೆಳಗೆ, ಅರ್ಥಾತ್ ಅಜಾಗೃತ ಸ್ತರದಲ್ಲಿ 'ಕುದಿ'ಯುತ್ತಿರುತ್ತವೆ – ಇದು ಫ್ರಾಯ್ಡ್‌ನ ಉಪಕ್ರಮದಾದ್ಯಂತ ವ್ಯಾಪಿಸಿರುವ ಸಂಗತಿ. ಸುಪ್ತ, ಮೃಗೀಯ (ಆ್ಯನಿಮಲಿಸ್ಟಿಕ್), ಸಹಜ – ಪ್ರವೃತ್ತಿಯ ಉತ್ಕಟೇಚ್ಛೆಗಳು ವಿಶೇಷತಃ ಭೋಗಾಪೇಕ್ಷೆ (ಈರಾಸ್) ಮತ್ತು ಆಕ್ರಮಣ (ಥ್ಯಾನಟಾಸ್) ಎಲ್ಲರಲ್ಲಿಯೂ ಇರುವ ಮೂಲಾಧಾರ ಪ್ರೇರಣೆಗಳು. ಇವುಗಳ ಈಡೇರಿಕೆಗೆ ಸಂಬಂಧಿಸಿದಂತೆ ಸಮಾಜ ಕೆಲವು ಕಟ್ಟುಪಾಡುಗಳನ್ನು


Digitised by Bharatavani, CIIL

ವಿಧಿಸುವುದರಿಂದ ಇವಕ್ಕೂ ಸಮಾಜದ ಬೇಡಿಕೆಗಳಿಗೂ ಆಗಾಗ್ಗೆ ಸಂಘರ್ಷ ಉಂಟಾಗುತ್ತದೆ. ಮನೋಲೈಂಗಿಕ ಸುಖಕ್ಕಾಗಿ ಹಾತೊರೆಯುವಿಕೆಗೆ ಒತ್ತು ನೀಡಿರುವುದು ಫ್ರಾಯ್ಡ್‌ನ ಮನೋವಿಶ್ಲೇಷಣ ಸಿದ್ಧಾಂತದ ವಿಶೇಷತೆ.

4. ನೀರ್ಗಲ್ಲ ಬಂಡೆಯ ರೂಪಕದ ನೆರವಿನಿಂದ ಮನಸ್ಸಿನ ಅಂಗವಿನ್ಯಾಸವನ್ನು (ಟಪಾಗ್ರಫಿ) ವರ್ಣಿಸಿರುವುದೂ ಒಂದು ವಿಶಿಷ್ಟತೆ. ನೀರ್ಗಲ್ಲ ಬಂಡೆಯ ಬಹುಭಾಗ ನೀರಿನೊಳಗಿರುವುದರಿಂದ ಅಗೋಚರ. ಅದೇ ರೀತಿ ಮನಸ್ಸಿನ ಬಹುಭಾಗ ಅಗೋಚರ, ಎಂದೇ, ಸುಪ್ತ ಅಥವಾ ಅಜಾಗೃತ. ನೀರ್ಗಲ್ಲ ಬಂಡೆಯ ಅಲ್ಪ ಭಾಗ ನೀರಿನ ಮೇಲೆ ಗೋಚರ. ಅಂತೆಯೇ ಮನಸ್ಸಿನ ಅಲ್ಪ ಭಾಗ ನಮ್ಮ ಅರಿವಿಗೆ ಬರುವ ಜಾಗೃತ ಭಾಗ. ನೀರಿನ ಮೇಲ್ಮೆಗೆ ತಾಗಿಕೊಂಡಿರುವ ನೀರ್ಗಲ್ಲ ಬಂಡೆಯ ನೀರೊಳಗಿನ ಭಾಗ ಅಸ್ಪಷ್ಟವಾಗಿ ಗೋಚರಿಸುತ್ತದೆ. ಅಂತೆಯೇ ಮನಸ್ಸಿನ ಅಜಾಗೃತ ಮತ್ತು ಜಾಗೃತ ಭಾಗಗಳ ನಡುವಿನ ಸೀಮಾರೇಖೆಗೆ ತಾಗಿಕೊಂಡಿರುವ ಭಾಗವೇ ಜಾಗೃತಿ – ಪೂರ್ವ (ಪ್ರಿಕಾನ್‌ಶಿಯಸ್) ಭಾಗ. ಈ ಭಾಗದಲ್ಲಿ ನಡೆಯುವ ಘಟನಾವಳಿಗಳ ಅರಿವು ಅಸ್ಪಷ್ಟ. ಜಾಗೃತ ಮನಸ್ಸಿಗೆ ಸಹಿಸಲಸಾಧ್ಯವಾದ ವೇದನೆ ಉಂಟು ಮಾಡುವ ಮಾಹಿತಿ ಮತ್ತು ಅನುಭವಗಳನ್ನು ಮನಸ್ಸಿನ ಅಜಾಗೃತ ಭಾಗಕ್ಕೆ 'ಅನೈಚ್ಛಿಕ ದಮನ (ರಿಪ್ರೆಷನ್)' ಎಂಬ ರಕ್ಷಣ ತಂತ್ರವು ತಳ್ಳುತ್ತದೆ ಎಂಬುದು ಫ್ರಾಯ್ಡ್‌ನ ಅಂಬೋಣ.

5. ಪ್ರತ್ಯೇಕ ಅಭಿಪ್ರೇರಣೆಗಳು ಇರುವ ಮೂರು ಭಾಗಗಳಿಂದ ಕೂಡಿದ ಸಂರಚನೆಯೂ ಮನಸ್ಸಿಗೆ ಇದೆ. ತರ್ಕಬಾಹಿರವೂ ಭಾವನಾತ್ಮಕವೂ ಆದ ಪ್ರಕೃತಿದತ್ತ ಪ್ರವೃತ್ತಿ ಪ್ರಧಾನವಾದ ಭಾಗ 'ಇದ್,' ವಾಸ್ತವಿಕತೆ ಕೇಂದ್ರಿತವೂ ತರ್ಕಬದ್ಧವೂ ಆದ 'ಅಹಂ' (ಈಗೋ), ನೈತಿಕತೆಗೆ ಒತ್ತು ನೀಡುವ ಅಧ್ಯಹಂ (ಸೂಪರ್‌ಈಗೋ) ಇವೇ ಮನಸ್ಸಿನ ಮೂರು ಭಾಗಗಳು. ಇದ್ ಬಹುತೇಕ ಮನಸ್ಸಿನ ಅಜಾಗೃತ ಭಾಗದಲ್ಲಿಯೂ, ಅಹಂ ಜಾಗೃತ ಭಾಗದಲ್ಲಿಯೂ ಅಧ್ಯಹಂ ಎಲ್ಲ ಭಾಗಗಳಲ್ಲಿಯೂ ಕಾರ್ಯ ನಿರ್ವಹಿಸುತ್ತವೆ.

6. ಮನಸ್ಸಿನ ಅಜಾಗೃತ ಭಾಗದಲ್ಲಿ ಜರುಗುವ ಇದ್, ಅಹಂ ಮತ್ತು ಅಧ್ಯಹಂಗಳ ನಡುವಿನ ಸಂಘರ್ಷಗಳನ್ನು ವ್ಯಕ್ತಿ ಪರಿಹರಿಸುವ ವಿಧಾನಗಳು ಆ ವ್ಯಕ್ತಿಯ ವ್ಯಕ್ತಿತ್ವ ಲಕ್ಷಣಗಳನ್ನು ನಿರ್ಧರಿಸುತ್ತವೆ. ವ್ಯಕ್ತಿ ತನ್ನ ಬಾಲ್ಯಾವಧಿಯ ವಿಭಿನ್ನ ಮನೋಲೈಂಗಿಕ ಹಂತಗಳನ್ನು – ಬಾಯಿಯ ಹಂತ (0–2ವ), ಮಲದ್ವಾರದ ಹಂತ (2–3/4ವ), ಶೈಶ್ನಿಕ ಹಂತ (3/4–6/7ವ), ಗುಪ್ತ ಸ್ಥಿತಿಯ (ಲೇಟೆಂಟ್) ಹಂತ (6/7–10/11ವ), ಜನನಾಂಗ ಹಂತ (11+ವ) – ನಿಭಾಯಿಸಲು ಅನುಸರಿಸುವ ವಿಧಾನಗಳಿಂದ ಇದು ವಿಕಸಿಸುತ್ತದೆ. ಎಂದೇ, ಜೀವನಾರಂಭ ಕಾಲದ ಅನುಭವಗಳು ವ್ಯಕ್ತಿತ್ವ ರೂಪಣೆಯ ಮೇಲೆ ಪ್ರಬಲ ಪ್ರಭಾವ ಬೀರುತ್ತವೆ. ಬಾಲ್ಯದ ಆದಿ ಭಾಗದ ಅನುಭವಗಳ ಪ್ರಾಮುಖ್ಯಕ್ಕೆ ಒತ್ತು ನೀಡಿದವರ ಪೈಕಿ ಮೊದಲಿಗನೆಂಬ ಖ್ಯಾತಿ ಫ್ರಾಯ್ಡ್‌ನಿಗೆ ಸಲ್ಲುತ್ತದೆ. ಮನೋಲೈಂಗಿಕ ಭೋಗಾಭಿಲಾಷೆಯನ್ನು ವ್ಯಕ್ತಿಯ ಮಟ್ಟಿಗೆ ನಿಭಾಯಿಸಬಲ್ಲ ವಿಶಿಷ್ಟ ಲಾಕ್ಷಣಿಕ ಅನ್ಯೋನ್ಯಕ್ರಿಯಾ ಪ್ರರೂಪಗಳನ್ನು ಅವನ ಇದ್, ಅಹಂ ಮತ್ತು ಅಧ್ಯಹಂಗಳು ವಿಕಸಿಸಿಕೊಳ್ಳುತ್ತವೆ. ವ್ಯಕ್ತಿಗೆ ಯಾವುದೋ ಒಂದು ಹಂತ ಸಮರ್ಪಕವಾಗಿ ನಿಭಾಯಿಸಲು ಸಾಧ್ಯವಾಗದೇ ಇದ್ದಾಗ ಮುಂದೆ ಆ ಹಂತದಲ್ಲಿಯೇ 'ಸಿಕ್ಕಿಹಾಕಿಕೊಂಡ' ಲಕ್ಷಣ ಇರುವ ವಯಸ್ಕ ವ್ಯಕಿತ್ವ ರೂಪುಗೊಳ್ಳುತ್ತದೆ. ಇದಕ್ಕೆ ಅನುಗುಣವಾಗಿ ಇದ್, ಅಹಂ ಮತ್ತು ಅಧ್ಯಹಂಗಳ ಪೈಕಿ ಒಂದು ವ್ಯಕ್ತಿಯ ಜೀವನದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಮಾನಸಿಕ ಸಂಘರ್ಷಗಳು ಎಷ್ಟು ಪರಿಣಾಮಕಾರಿಯಾಗಿ ಪರಿಹರಿಸಲ್ಪಟ್ಟಿವೆ ಎಂಬುದು ವ್ಯಕ್ತಿಯ ಮಾನಸಿಕ ಆರೋಗ್ಯದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಮನಸ್ಸಿನಲ್ಲಿ ಸದಾ ಕಾರ್ಯಪ್ರವೃತ್ತವಾಗಿರುವ ಬಲಗಳು ಸಂತುಲಿತವಾಗಿದ್ದರೆ ಮಾತ್ರ ಉತ್ತಮ ಮಾನಸಿಕ ಆರೋಗ್ಯ ಇರುತ್ತದೆ. ಸದಾ ಚಲನೆಯಲ್ಲಿ ಇರುವ ಪ್ರಕ್ರಿಯೆಗಳ ಚಲನಶೀಲ ಗುಣ, ಅರ್ಥಾತ್ ಮನೋಚಲನಶೀಲ (ಸೈಕೋಡೈನಾಮಿಕ್) ಎಂಬ ವ್ಯಕ್ತಿತ್ವವನ್ನು ಫ್ರಾಯ್ಡ್ ಪರಿಗಣಿಸುತ್ತಾನೆ. ಎಂದೇ, ಮನೋವ್ಯಾಪಾರಗಳ ಆಳವಾದ ಒಳನೋಟ ಗಳಿಸಿ ವಯಸ್ಕ ವ್ಯಕ್ತಿತ್ವದ ಲಕ್ಷಣವನ್ನು ಬದಲಿಸಲು ಸಾಧ್ಯ ಎಂಬುದು ಅವನ ಅಭಿಮತ.

7. ಮಾನವನ ಜೀವನದಲ್ಲಿ ಮಾನಸಿಕ ರಕ್ಷಣ ತಂತ್ರಗಳು ಪ್ರಮುಖ ಪಾತ್ರ ವಹಿಸುತ್ತವೆ. ಮನುಷ್ಯನ ಭೋಗಾಭಿಲಾಷೆ ಮತ್ತು ಆಕ್ರಮಣಾಭಿಲಾಷೆಗಳಿಂದಾಗಿ ಸಹಿಸಲಾಗದ ವೇದನಾನುಭವ ವಾಗುವುದು ಅನಿವಾರ್ಯ. ಆದ್ದರಿಂದ ಇಂಥ ಅನುಭವಗಳನ್ನೂ ತೊಳಲಾಟಗಳನ್ನೂ ರಕ್ಷಣ ತಂತ್ರಗಳು ಮನಸ್ಸಿನ ಅಜಾಗೃತ ಭಾಗಕ್ಕೆ ತಳ್ಳಿ ಗುಪ್ತವಾಗಿರಿಸುತ್ತವೆ. ಇಂತು ಮನಸ್ಸಿನಾಳದಲ್ಲಿ ಹುದುಗಿರುವ ಸಂಘರ್ಷಗಳು ಜಾಗೃತಾನುಭವದ ವರ್ತನೆಗಳು, ವಿಶೇಷತಃ ಅಸಂಗತ ಅತಾರ್ಕಿಕ ವರ್ತನೆಗಳ ಮೂಲ ಎಂಬುದು ಫ್ರಾಯ್ಡ್‌ನ ಅಭಿಮತ.

8. ಮನಸ್ಸಿನ ಅಜಾಗೃತ ಭಾಗದ ಚಲನಶೀಲತೆ, ಅಲ್ಲಿರುವ ಮಾನಸಿಕ ಶಕ್ತಿ ಎಲ್ಲಿಯಾದರೂ ಹೊರಹೊಮ್ಮಬೇಕಾದ ಅನಿವಾರ್ಯತೆ ಮತ್ತು ಇಂದ್ರಿಯಾತೀತ ನಿಯಂತ್ರಣದ ಪರಿಣಾಮ ವರ್ತನೆಯ ಮೇಲೆ ಆಗುವುದು ಮಾತ್ರವಲ್ಲದೆ ಮನೋದೈಹಿಕ ರೋಗಗಳ ರೂಪ ತಾಳಬಹುದು, ಕನಸುಗಳ ರೂಪ ತಾಳಬಹುದು. ಮನಸ್ಸಿನ ಜಾಗೃತಿ–ಪೂರ್ವ ಭಾಗಕ್ಕೆ ಸೋರಿಕೆ ಆಗಲೂಬಹುದು.

9. ಮನಸ್ಸಿನಾಳದಲ್ಲಿ ಹುದುಗಿರುವ ವಿಶೇಷತಃ ಮನೋಲೈಂಗಿಕ ಹಂತಗಳಲ್ಲಿ ಆದ ಋಣಾತ್ಮಕ ಕಲಿಕೆಯ ಅನುಭವಗಳಿಗೆ ಸಂಬಂಧಿಸಿದ ಸಂಘರ್ಷಗಳನ್ನು ಮನಸ್ಸಿನ ಜಾಗೃತ ಭಾಗಕ್ಕೆ ತರಲು ವ್ಯಕ್ತಿಗೆ ಸಹಾಯ ಮಾಡುವುದರ ಮೂಲಕ ಅವುಗಳ ದುಷ್ಪರಿಣಾಮಗಳನ್ನು ನಿವಾರಿಸುವುದು ಸಾಧ್ಯ. ಅರ್ಥಾತ್, ಸ್ವ–ಒಳನೋಟದಗಳಿಕೆ ಬಲು ಮುಖ್ಯ. ಕಷ್ಟಗಳ ಬಗ್ಗೆ ಮುಕ್ತವಾಗಿ ಮಾತನಾಡುವುದು ಬಲು ಉಪಯುಕ್ತ ಎಂದು ಮೊಟ್ಟಮೊದಲು ಸಾಬೀತುಪಡಿಸಿದ ಖ್ಯಾತಿ ಮನೋವಿಶ್ಲೇಷಣ ಚಿಕಿತ್ಸಾಪದ್ಧತಿಗೆ ಸಲ್ಲುತ್ತದೆ. ಎಂದೇ, ಇದನ್ನು **'ಮಾತನಾಡು ಚಿಕಿತ್ಸೆ (ಟಾಕ್ ತೆರಪಿ)'** ಎಂದೂ ಉಲ್ಲೇಖಿಸುವುದುಂಟು. ಆ ಪದ್ಧತಿಯಲ್ಲಿ ಪ್ರೇಕ್ಷೇಪಣ ತಂತ್ರಗಳ ಬಳಕೆಯೂ ಉಂಟು.

ಫ್ರಾಯ್ಡ್‌ನ ಸಿದ್ಧಾಂತವನ್ನೇ ಆಧಾರವಾಗಿಟ್ಟುಕೊಂಡು ಆ್ಯಡ್ಲೆರ್ ಮತ್ತು ಯೂಂಗನ ನಂತರ ಕೆಲವು ಮನೋವಿಜ್ಞಾನಿಗಳು ಮನೋಚಲನಾತ್ಮಕ / ಮನೋವಿಶ್ಲೇಷಣಾತ್ಮಕ ನಿಲುವಿನ ವ್ಯಾಪ್ತಿಯಲ್ಲಿಯೇ ತಮ್ಮದೇ ಆದ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಇವರನ್ನು ಒಟ್ಟಾಗಿ ನವಫ್ರಾಯ್ಡ್ ವಾದಿಗಳು (ನಿಯೋ ಫ್ರಾಯಿಡಿಯನ್ಸ್) ಎಂದು ಹೆಸರಿಸಲಾಗಿದೆ. ಫ್ರಾಯ್ಡ್‌ನ ಮಗಳು ಅನ್ನಾ ಫ್ರಾಯ್ಡ್, ಎರಿಕ್ ಎರಿಕ್‌ಸನ್, ಒಟ್ಟೋ ರ್‍ಯಾಂಕ್, ಎರಿಚ್ ಫ್ರಾಂ, ಸಲ್ಲಿವಸ್, ಕ್ಯಾರೆನ್ ಹಾರ್ನೆ ಮುಖ್ಯರಾಗಿದ್ದಾರೆ.

Digitised by Bharatavani, CIIL

ಕಾರೆನ್ ಹಾರ್ನೆ


ಎರಿಕ್ ಫ್ರೋಮ್

ಎರಿಚ್ಎರಿಕ್ಸನ್

ಅನ್ನಾ ಫ್ರಾಯ್ಡ್

ಈ ಕ್ರಾಂತಿಕಾರೀ ಸಿದ್ಧಾಂತ ಬಲು ಜನಪ್ರಿಯವಾಗಿದ್ದು ಇಂದಿನ ತನಕವೂ ಸುಧಾರಿತ ರೂಪದಲ್ಲಿ ಜೀವಂತವಾಗಿ ಉಳಿದಿರುವುದೇ ಅದರ ಉಪಯುಕ್ತತೆಗೆ ಸಾಕ್ಷ್ಯಾಧಾರ. ಅಂದ ಮಾತ್ರಕ್ಕೆ ಅದು ಟೀಕೆಗಳಿಂದ ಮುಕ್ತವಾಗಿಲ್ಲ. ಭೋಗಾಭಿಲಾಷೆಗೆ, ಲೈಂಗಿಕತೆಗೆ ಫ್ರಾಯ್ಡ್ ಅತಿ ಮಹತ್ವ ನೀಡಿದ್ದಾರೆ ಎಂಬುದೇ ಮೊದಲನೇ ಟೀಕೆ. ಮನೋರೋಗಿಗಳಿಂದ ಸಂಗ್ರಹಿಸುವ ಮಾಹಿತಿಯ ವಿಶ್ವಾಸಾರ್ಹತೆಯೇ ಪ್ರಶ್ನಾರ್ಹ. ಅಂದಮೇಲೆ, ಮನೋರೋಗಿಗಳಿಂದ ಮಾತ್ರ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿರುವ ಈ ಸಿದ್ಧಾಂತದ ಸಮಂಜಸತೆಯನ್ನು ಸಾಬೀತುಪಡಿಸಲು ಸಾಧ್ಯವಿಲ್ಲ ಎಂಬ ಟೀಕೆಯೂ ಇದೆ. ಮನೋವಿಶ್ಲೇಷಣ ಚಿಕಿತ್ಸಾಪದ್ಧತಿಯಿಂದ ಲಭಿಸುವ ಮಾಹಿತಿಯನ್ನು ನಿಖರವಾಗಿ ಅರ್ಥೈಸಲು ಅಗತ್ಯವಾದ ಮಾರ್ಗದರ್ಶಿ ಸಾರ್ವತ್ರಿಕ ನಿಯಮಗಳೇ ಇಲ್ಲ ಅಂದಾದಮೇಲೆ ಇದೊಂದು ವೈಜ್ಞಾನಿಕ ಪದ್ಧತಿಯೇ ಅಲ್ಲ ಎಂಬ ಟೀಕೆಯೂ ಇದೆ. ಅದೇನೇ ಇರಲಿ, ಇದೊಂದು ಬಲು ವ್ಯಾಪಕ ವ್ಯಾಪ್ತಿಯುಳ್ಳ ವ್ಯಕ್ತಿತ್ವ ಸಿದ್ಧಾಂತ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಅಷ್ಟೇ ಅಲ್ಲ. ಮನೋವಿಜ್ಞಾನದ ಅಧ್ಯಯನ ವಿಷಯದ ವ್ಯಾಪ್ತಿಯನ್ನು ವೀಕ್ಷಣೀಯ ಹಾಗೂ ಅನುಮಾನಿಸಬಹುದಾದ ವರ್ತನೆಗಳಿಂದ ಅವೀಕ್ಷಣೀಯ ಗುಪ್ತ ಮನೋವ್ಯಾಪಾರಗಳ ತನಕ ವಿಸ್ತರಿಸಿದ ಖ್ಯಾತಿಯೂ ಇದಕ್ಕೆ ಸಲ್ಲುತ್ತದೆ. ಫ್ರಾಯ್ಡ್‌ನ ಮನೋವಿಶ್ಲೇಷಣೆ ಪರಿಕಲ್ಪನೆಗಳು ಕಲೆ, ಸಾಹಿತ್ಯ, ಚಲನಚಿತ್ರ ಇತ್ಯಾದಿ ಕ್ಷೇತ್ರಗಳ ಮೇಲೂ ತಮ್ಮ ಪ್ರಭಾವ ಬೀರಿದ್ದವು ಎನ್ನುವುದು ಗಮನಾರ್ಹ.

## ಮಾನವತಾವಾದಿ ಪಂಥ

ವರ್ತನೆಯನ್ನು ಪ್ರೇರೇಪಿಸುವ ಅಜ್ಞಾತ ಅಭಿಪ್ರೇರಣೆಗಳನ್ನು ತಿಳಿಯಲು ಪ್ರಯತ್ನಿಸುವ ಮನೋವಿಶ್ಲೇಷಣ ಪಂಥ ಮತ್ತು ಅಪೇಕ್ಷಿತ ವರ್ತನೆಗಳನ್ನು ಉತ್ಪಾದಿಸಬಲ್ಲ ಸೋಪಾಧಿಕಗೊಳಿಸುವಿಕೆ ಪ್ರಕ್ರಿಯೆಗಳನ್ನು ಅಧ್ಯಯಿಸಲು ಪ್ರಯತ್ನಿಸುತ್ತಿದ್ದ ವರ್ತನವಾದೀ ಪಂಥ ಇದಕ್ಕೆ ಪ್ರತಿಕ್ರಿಯೆಯಾಗಿ 1950ರ ದಶಕದಲ್ಲಿ ಹೊರಹೊಮ್ಮಿದ ಮಾನವತಾವಾದೀ ಪಂಥವು ವ್ಯಕ್ತಿಯ ಅದ್ವಿತೀಯತೆ, ವ್ಯಕ್ತಿನಿಷ್ಠ ಅನುಭವಗಳ ಸಮಂಜಸತೆ, ವೈಯಕ್ತಿಕ ಆಯ್ಕೆ-ಸ್ವಾತಂತ್ರ್ಯ, ವ್ಯಕ್ತಿಯ ಸಂಭಾವ್ಯ ಸಾಮರ್ಥ್ಯಗಳು. ಸ್ವ-ವಿಕಾಸಕ್ಕೆ ಮತ್ತು ಆತ್ಮ-ವಾಸ್ತವೀಕರಣಕ್ಕೆ (ಸೆಲ್ಫ್-ಆ್ಯಕ್ಚುಅಲೈಸೇಷನ್) ವ್ಯಕ್ತಿ ಪಡುವ ಶ್ರಮ ಇವೇ ಮೊದಲಾದ ಮಾನವ ಪ್ರಕ್ರಿಯೆಗಳಿಗೆ ಒತ್ತು ನೀಡುತ್ತದೆ. ಅತ್ಯಂತ ಹೃದಯವಿದ್ರಾವಕ ಸಂವೇಗಗಳ ಮೇಲೆ ತಮ್ಮ ಅವಧಾನವನ್ನು ನಾಭಿಸ್ಥಗೊಳಿಸುವುದರಿಂದ, ಆಯ್ಕೆ ಮಾಡಲು ವ್ಯಕ್ತಿಗೆ ಇರುವ ಸ್ವಾತಂತ್ರ್ಯವನ್ನು ನಿರ್ಲಕ್ಷಿಸುವುದರಿಂದ ಮನೋವಿಶ್ಲೇಷಣೆ ಮತ್ತು ವರ್ತನವಾದೀ ಪಂಥಗಳು ಅತಿ ಹತಾಶ ಮನೋಭಾವದವು ಎಂದು ಮಾನವತಾವಾದಿಗಳು ಭಾವಿಸಿದ್ದರಿಂದ ಉತ್ಪತ್ತಿ ಆದ ಜ್ಞಾನಸಂಚಯ ಇದು.

ಎಲ್ಲರಲ್ಲಿಯೂ 'ಒಳ್ಳೆಯತನ' ಜನ್ಮತಃ ಅಂತಸ್ಥವಾಗಿರುತ್ತದೆ. ಈ ಸ್ವಾಭಾವಿಕ ಪ್ರವೃತ್ತಿಯಿಂದ ವಿಪಥವಾದಾಗ ಮಾನಸಿಕ ಮನೋವಿಶ್ಲೇಷಣವಾದಿ ಪಂಥಗಳಿಗೆ ಸ್ಪರ್ಧಿಯಾಗಬಲ್ಲ ಮನೋವಿಜ್ಞಾನದ

ಕಾರ್ಲ್ ರೋಜರ್ಸ್

ಅಬ್ರಹಾಮ್ ಮ್ಯಾಸ್ಲೊ

'ಮೂರನೇ ಬಲ (ತರ್ಡ್ ಫೋರ್ಸ್)'ಮಾನವತಾವಾದ ಎಂಬ ಘೋಷಣೆ ಇರುವ ಅಬ್ರಾಹಂ ಮ್ಯಾಸ್ಲೋನ (1908-1970) ಪುಸ್ತಕ 'ಟುವರ್ಡ್ ಎ ಸೈಕಾಲಜಿ ಆಫ್ ಬೀಇಂಗ್' ಪ್ರಕಟವಾದದ್ದು (1962). ಅವನಿಗೆ ಈ ಪಂಥದ ಆದ್ಯ ಪ್ರವರ್ತಕ ಎಂಬ ಸ್ಥಾನ ಗಳಿಸಿಕೊಟ್ಟಿತು. 'ಮಾನವನ ಅವಶ್ಯಕತೆಗೆ ಕ್ರಮಬದ್ಧಶ್ರೇಣಿ'ಯ ವಿವರಣೆ ಈತನ ವಿಶಿಷ್ಟ ಕೊಡುಗೆ. ಸ್ವ-ಪರಿಕಲ್ಪನೆಯ ವಿಕಾಸ 'ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿ'ಯ ಪರಿಕಲ್ಪನೆಗಳನ್ನು ಮಾನವತಾವಾದೀ ಪಂಥದ ಜ್ಞಾನಸಂಚಯಕ್ಕೆ ಕೊಡುಗೆಯಾಗಿ ನೀಡಿದ ಕಾರ್ಲ್ ರೋಜರ್ಸ್ (1902-1987) ಈ ಪಂಥದ ಮತ್ತೊಬ್ಬ ಆದ್ಯ ಪ್ರವರ್ತಕ 'ಸಲಹಾರ್ಥಿ (ಕ್ಲೈಎಂಟ್) ಕೇಂದ್ರಿತ ಚಿಕಿತ್ಸೆ ಮತ್ತು 'ವಿದ್ಯಾರ್ಥಿ' ಕೇಂದ್ರಿತ ಕಲಿಕೆಗಳ ವಿಕಾಸದಲ್ಲಿ ಕಾರ್ಲ್ ರೋಜರ್‌ನ ಸಿದ್ಧಾಂತಗಳ ಅನ್ವಯವಿದೆ. 'ಜರ್ನಲ್ ಆಫ್ ಹ್ಯೂಮನಿಸ್ಟಿಕ್ ಸೈಕಾಲಜಿ'ಯ ಸ್ಥಾಪನೆ (1961), 'ಅಮೆರಿಕನ್ ಅಸೋಸಿಯೇಷನ್ ಆಫ್ ಹ್ಯೂಮನಿಸ್ಟಿಕ್ ಸೈಕಾಲಜಿ'ಯ ಸ್ಥಾಪನೆ (1962), ಮಾನವತಾವಾದೀ ಮನೋವಿಜ್ಞಾನವನ್ನು ತನ್ನ ತೆಕ್ಕೆಗೆ ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್ ತೆಗೆದುಕೊಂಡದ್ದು (1971) ಈ ಪಂಥದ ವಿಕಾಸದ ಇತರ ಪ್ರಮುಖ ಘಟ್ಟಗಳು.

ವೈಯಕ್ತಿಕ ಅನುಭವಗಳಿಗೆ ಪ್ರಾಧಾನ್ಯ ನೀಡುವುದರಿಂದ ಮಾನವತಾವಾದಿಗಳ ಅಧ್ಯಯನಗಳು ಬಲು ವ್ಯಕ್ತಿನಿಷ್ಠವಾಗಿರುತ್ತವೆ ಎಂಬುದೇ ಈ ಪಂಥದ ವಿರುದ್ಧ ಇರುವ ಪ್ರಮುಖ ಟೀಕೆ. ಈ ಅಧ್ಯಯನಗಳಲ್ಲಿ ಮಾಡುವ ವೀಕ್ಷಣೆಗಳನ್ನೇ ಆಗಲಿ, ಸಂಗ್ರಹಿಸಿದ

Digitised by Bharatavani, CIIL
Comp 1 / KSOU Education Final Articles V32-11 Book3

ಮಾಹಿತಿಯನ್ನೇ ಆಗಲಿ ಸರಿಯಾಗಿದೆಯೇ ಎಂದು ಇತರರು ಖಚಿತಪಡಿಸಿಕೊಳ್ಳುವುದು ಕಷ್ಟವಾಗಿರುವುದೇ ಇದಕ್ಕೆ ಕಾರಣ.

ತಮ್ಮ ಮಾನಸಿಕ ಆರೋಗ್ಯಸ್ಥಿತಿಯನ್ನು ನಿರ್ಧರಿಸುವುದರಲ್ಲಿ, ನಿಯಂತ್ರಿಸುವುದರಲ್ಲಿ ಆಯಾ ವ್ಯಕ್ತಿಗಳದ್ದೇ ಪ್ರಮುಖ ಪಾತ್ರ ಎಂದು ಮಾನ್ಯ ಮಾಡಿರುವುದು, ವ್ಯಕ್ತಿಯ ಅನುಭವಗಳ ಮೇಲೆ ಪರಿಸರದ ಪ್ರಭಾವಕ್ಕೆ ಯುಕ್ತ ಪ್ರಾಮುಖ್ಯ ನೀಡಿರುವುದು ಈ ಪಂಥದ ವಿಶಿಷ್ಟತೆಗಳು.

ಮಾನವತಾವಾದಿ ಪಂಥ ಇತ್ತೀಚೆಗೆ ತನ್ನ ಅಧ್ಯಯನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ವ್ಯಕ್ತಿಪರ (ಟ್ರಾನ್ಸ್‌ಪರ್ಸನಲ್) ಸ್ವರೂಪದ ಇಂದ್ರಿಯಾತೀತ ಅನುಭವಗಳ ಅಧ್ಯಯನವನ್ನು ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿದೆ. ಭಾರತೀಯ ತತ್ವಶಾಸ್ತ್ರದಲ್ಲಿ ನಿಹಿತವಾಗಿರುವ ಪರಾ ಮಾನಸಿಕ ಅನುಭವಗಳು, ಪರಾಪ್ರಜ್ಞೆ (ಸೂಪರ್ ಕಾನ್ಸಿಯಸ್‌ನೆಸ್), ಸಮಾಧಿ ಸ್ಥಿತಿಯ ಸ್ವರೂಪ ಮುಂತಾದ ವಿಷಯಗಳ ಬಗ್ಗೆ ವ್ಯಕ್ತೇತರ ಮನೋವಿಜ್ಞಾನ (ಟ್ರಾನ್ಸ್ ಪರ್ಸನಲ್ ಸೈಕಾಲಜಿ) ಸಂಶೋಧನಾಸಕ್ತಿ ತೋರಿಸತೊಡಗಿದೆ.

–ಎ.ವಿ.ಗೋ.

## ಮನೋವಿಜ್ಞಾನ – ಪರಿಭಾಷೆ, ವಿಕಾಸಪಥ, ವ್ಯಾಪ್ತಿ

ಮಾನವ ವರ್ತನೆಯ ವಿವಿಧ ಮುಖಗಳ ವೈಜ್ಞಾನಿಕ ಅಧ್ಯಯನ ಮನೋವಿಜ್ಞಾನ. 20ನೇ ಶತಮಾನದ ಪೂರ್ವಾರ್ಧದಲ್ಲಿ ಪ್ರಚಲಿತವಾಗಿದ್ದ 'ಮಾನವವರ್ತನೆಯನ್ನು ತನ್ನ ಅಧ್ಯಯನ ವಿಷಯವಾಗಿ ಇರಿಸಿಕೊಂಡ ಪ್ರಕೃತಿವಿಜ್ಞಾನ ಶಾಖೆಯೇ ಮನೋವಿಜ್ಞಾನ' (1919, ಜಾನ್ ಬ್ರಾಡಸ್ ವಾಟ್ಸನ್ 1878–1958) ಎಂಬ ಮನೋವಿಜ್ಞಾನಿಯ ವ್ಯಾಖ್ಯಾನದಂತೆ ಇದು ಕಂಡುಬಂದರೂ ವರ್ತನೆ ಅನ್ನುವ ಪದದ ಅರ್ಥವ್ಯಾಪ್ತಿ ಇಂದು ಅಂದಿಗಿಂತ ವಿಸ್ತಾರವಾಗಿದೆ. ಮಾನವ ಬಾಹ್ಯ ಜಗತ್ತಿನಲ್ಲಿ ಪ್ರದರ್ಶಿಸುತ್ತಿದ್ದ ವರ್ತನೆಯ, ಅರ್ಥಾತ್ ಹಾವಭಾವಗಳು, ಮಾತು, ದೈಹಿಕ ಬದಲಾವಣೆಗಳು ಇವೇ ಮೊದಲಾದ ವೀಕ್ಷಣೀಯ ವರ್ತನ ಪ್ರಕ್ರಿಯೆಗಳ ಅಧ್ಯಯನಕ್ಕೆ ಅಂದು ಸೀಮಿತವಾಗಿದ್ದ ಮನೋವಿಜ್ಞಾನ ಇಂದು ಅವೀಕ್ಷಣೀಯ ಆಂತರಿಕ ವರ್ತನೆಗಳು ಎಂಬ ಹೆಸರಿನಿಂದ 'ಆಲೋಚಿಸುವಿಕೆ, ತರ್ಕಿಸುವಿಕೆ, ಕನಸುಗಳು ಇವೇ ಮೊದಲಾದ ಅನುಮಿತ' (1961, ಕೆನ್ನೆತ್ ಕ್ಲಾರ್ಕ್ 1914–2005) ವ್ಯಕ್ತಿನಿಷ್ಠ ಮಾನಸಿಕ ಪ್ರಕ್ರಿಯೆಗಳನ್ನೂ ಅಧ್ಯಯಿಸುತ್ತದೆ. ನಿರ್ದಿಷ್ಟ ನಿಯಮಗಳಿಗೆ ಬದ್ಧನಾಗಿ ಮಾನವ ವರ್ತಿಸುತ್ತಾನೆ ಎಂಬ ನಂಬಿಕೆಯಿಂದ ವಿವಿಧ ಸನ್ನಿವೇಶಗಳಲ್ಲಿ ವಿವಿಧ ಉದ್ದೀಪಕಗಳಿಗೆ ಮಾನವ ತೋರುವ ಅನುಕ್ರಿಯೆಗಳನ್ನು ವೀಕ್ಷಿಸಿ ವರ್ತನೆಯ ನಿರ್ಧಾರಕ ನಿಯಮಗಳನ್ನು ಆವಿಷ್ಕರಿಸುವುದು, ವರ್ತನೆಯ ಎಷ್ಟು ಭಾಗ ಸ್ವನಿರ್ಧಾರಿತ ಎಷ್ಟು ಭಾಗ ಅನುವಂಶೀಯತೆ ನಿರ್ಧಾರಿತ ಅಥವಾ ವರ್ತನೆಯ ಎಷ್ಟು ಭಾಗ ಅನುವಂಶೀಯತೆ ಪ್ರಭಾವಿತ ಎಷ್ಟು ಭಾಗ ಪರಿಸರ ಪ್ರಭಾವಿತ, ಎಷ್ಟುಭಾಗ ಪೂರ್ವಾನುಭವ ಪ್ರಭಾವಿತ, ಎಷ್ಟು ಭಾಗ ಪ್ರಸ್ತುತಾನುಭವ ಪ್ರಭಾವಿತ ಎಂಬುದನ್ನು ನಿರ್ಧರಿಸುವುದು ಈ ಅಧ್ಯಯನಗಳ ಗುರಿ.

ಈ ಗುರಿ ಸಾಧನೆಗಾಗಿ ಮನೋವಿಜ್ಞಾನಿಗಳು ಅಧ್ಯಯನ ವಿಷಯವನ್ನು ವಿಭಿನ್ನ ಮಾರ್ಗಗಳಿಂದ ಉಪಕ್ರಮಿಸುತ್ತಾರೆ. ಮಿದುಳು ಮತ್ತು ನರಮಂಡಲದ ಕ್ರಿಯೆಗಳು ಮಾನವವರ್ತನೆಯ ಪ್ರಮುಖ ನಿರ್ಧಾರಕ ಎಂಬ ನಂಬಿಕೆಯಿಂದ ಶರೀರಕ್ರಿಯಾ ವಿದ್ಯಾಮಾನಗಳ ಮತ್ತು ಮನೋವ್ಯಾಪಾರಗಳ ನಡುವಿನ ಸಂಬಂಧಗಳನ್ನು ಅಧ್ಯಯಿಸುವ ನರ–ಜೈವಿಕ (ನ್ಯೂರೋಬಯಲಾಜಿಲ್) ಉಪಕ್ರಮ, ವೀಕ್ಷಣೀಯ ಉದ್ದೀಪಕ –ಅನುಕ್ರಿಯೆಗಳ ಸಂಬಂಧ ಸ್ಥಾಪನೆ ಆಗುವ ವಿಧಾನವನ್ನು ಅಭ್ಯಸಿಸುವ ಮುಖೇನ ವರ್ತನೆಯನ್ನು ಅಧ್ಯಯಿಸುವ ವರ್ತನ (ಬಿಹೇವ್ಯರಲ್) ಉಪಕ್ರಮ, ಅನುಕ್ರಿಯೆ ಪ್ರಕಟಿಸುವ ಮುನ್ನ ಉದ್ದೀಪಕ ಒದಗಿಸುವ ಮಾಹಿತಿಯನ್ನು ಸಂಸ್ಕರಿಸುವ ಮಾನಸಿಕ ಪ್ರಕ್ರಿಯೆಗಳ ಅಧ್ಯಯನಕ್ಕೆ ಒತ್ತು ನೀಡುವ ಜ್ಞಾನಾತ್ಮಕ (ಕಾಗ್ನಿಟಿವ್) ಉಪಕ್ರಮ, ಮನಸ್ಸಿನ ಅಜಾಗ್ರತ ಭಾಗದಲ್ಲಿ ಜರುಗುವ ಪ್ರಕ್ರಿಯೆಗಳನ್ನು ಅಧ್ಯಯಿಸುವುದಕ್ಕೆ ಪ್ರಾಧಾನ್ಯ ನೀಡುವ ಮನೋವಿಶ್ಲೇಷಣ (ಸೈಕೋಆ್ಯನಲಿಟಿಕ್) ಉಪಕ್ರಮ, ಬಾಹ್ಯಪ್ರಪಂಚದ ಆಗುಹೋಗುಗಳನ್ನು ವ್ಯಕ್ತಿ ಹೇಗೆ ಅರ್ಥೈಸುತ್ತಾನೆ ಎಂಬುದಕ್ಕೆ ಒತ್ತು ನೀಡುವುದರ ಮೂಲಕ ವ್ಯಕ್ತಿಯ ಸ್ವ–ಅರಿವಿನ ಮಟ್ಟ, ಆಯ್ಕೆಯ ಸ್ವಾತಂತ್ರ್ಯಾನುಭವ, ವೈಯಕ್ತಿಕ ಮೌಲ್ಯವ್ಯವಸ್ಥೆ, ಜ್ಞಾನ ಗಳಿಸುವ ಹಾಗೂ ಅಧ್ಯಾತ್ಮಿಕವಾಗಿ ವಿಕಸಿಸಲು ಇರುವ ಬಯಕೆ ಇವೇ ಮೊದಲಾದುವನ್ನು ಅಭ್ಯಸಿಸಲು ಯತ್ನಿಸುವ ಮಾನವತಾ (ಹ್ಯೂಮನಿಸ್ಟಿಕ್) ಅಥವಾ ದೃಶ್ಯತ್ವ ವಾದದ (ಫ್ಲಿನಾಮಿನಲಾಜಿಕಲ್) ಉಪಕ್ರಮ, ಈಗಾಗಲೇ ನಮೂದಿಸಿದ ವಿಭಿನ್ನ ಉಪಕ್ರಮಗಳನ್ನು ಸಂದರ್ಭೋಚಿತವಾಗಿ ಅಳವಡಿಸಿಕೊಂಡು ವಿಷಯಾಧ್ಯಯಿಸುವ ಸಾರ ಸಂಗ್ರಹೀ (ಇಕ್ಲೆಕ್ಟಿಕ್) ಉಪಕ್ರಮ–ಇವು ಪ್ರಮುಖ ಉಪಕ್ರಮಗಳು.

'ಆತ್ಮ (ಗ್ರೀಕ್ ಮೂಲದ ಸೈಕಿ)'ವನ್ನು ಅಧ್ಯಯಿಸುವ ಶಾಸ್ತ್ರವಾಗಿ ತತ್ವಶಾಸ್ತ್ರದಿಂದ ಮೂಡಿ ಬಂದ ಈ ಶಾಸ್ತ್ರ ಮೊದಲು 'ಮಾನಸಿಕ ಜೀವನವನ್ನು ಅಧ್ಯಯಿಸುವ ಶಾಸ್ತ್ರ'ವಾಗಿಯೂ (1890, ವಿಲಿಯಮ್ ಜೇಮ್ಸ್ 1842–1910) ಆನಂತರ 'ಎಲ್ಲೆಡೆ ಇರುವ ಎಲ್ಲ ಪ್ರಜ್ಞೆ, ಸಾಮಾನ್ಯ ಅಥವಾ ಅಸಾಮಾನ್ಯ ಪ್ರಜ್ಞೆ, ಮಾನವನ ಅಥವಾ ಪ್ರಾಣಿಯ ಪ್ರಜ್ಞೆಯನ್ನು ಅಧ್ಯಯಿಸುವ ಶಾಸ್ತ್ರ'ವಾಗಿಯೂ (1910, ಜೇಮ್ಸ್ ಆರ್ ಎಂಜೆಲ್ 1869–1949) ತದನಂತರ 'ವೀಕ್ಷಣೀಯ ಮಾನವ ವರ್ತನೆಯನ್ನು ಅಧ್ಯಯಿಸುವ ಶಾಸ್ತ್ರ'ವಾಗಿಯೂ ರೂಪಾಂತರಗೊಂಡು ಕ್ರಮೇಣ ಆಧುನಿಕ ರೂಪ ತಳೆಯಿತು. ಅಧ್ಯಾತ್ಮಶಾಸ್ತ್ರ, ತತ್ವಶಾಸ್ತ್ರಗಳು ಅಧ್ಯಯನಕ್ಕೆ ಉಪಯೋಗಿಸುವ ವಿಧಾನಗಳನ್ನು ಬದಿಗೊತ್ತಿ ಭೌತ ವಿಜ್ಞಾನ, ಪ್ರಕೃತಿ ವಿಜ್ಞಾನಗಳು ಉಪಯೋಗಿಸುವ 'ವೈಜ್ಞಾನಿಕ ವಿಧಾನಗಳು' ಎಂದು ಕರೆಯಲಾಗುತ್ತಿರುವ ವಿಧಾನಗಳಿಗೆ ಪ್ರಾಧಾನ್ಯ ನೀಡುವ ಇಂದಿನ 'ಮನೋವಿಜ್ಞಾನ' ಜನಿಸಿದ್ದು ವಿಲ್‌ಹೆಲ್ಮ್ ವೂಂಟ್ (1832–1920) ಲೀಪ್‌ಜಿಗ್ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಿದ ಮನೋವೈಜ್ಞಾನಿಕ ಅಧ್ಯಯನಗಳಿಗಾಗಿ ಮೀಸಲಾದ ಪ್ರಯೋಗಶಾಲೆಯಲ್ಲಿ (1879).

ಅಧ್ಯಯಿಸುವ ವಸ್ತುವಿನ ಸಂಕೀರ್ಣತೆ ಮತ್ತು ಕಾರ್ಯಕ್ಷೇತ್ರದ ವಿಶಾಲತೆಯಿಂದಾಗಿ ಆಧುನಿಕ ಮನೋವಿಜ್ಞಾನದ ಬೇರುಗಳನ್ನು ಪ್ರಾಚೀನ ತತ್ವಶಾಸ್ತ್ರ, ಅಧ್ಯಾತ್ಮಶಾಸ್ತ್ರ, ಜೀವವಿಜ್ಞಾನ, ಭೌತವಿಜ್ಞಾನ, ವೈದ್ಯಕೀಯ ವಿಜ್ಞಾನ, ಧರ್ಮಗ್ರಂಥಗಳು ಇವೇ ಮೊದಲಾದವುಗಳಲ್ಲಿ ಕಾಣಬಹುದು. ದೇಹದಿಂದ ಭಿನ್ನವಾದ ಅಗೋಚರ ವಿಶಿಷ್ಟ ಘಟಕವೊಂದು – ಆತ್ಮ (ಹಿಂದೂ), ನೆಫ್ಶ್ (ಹೀಬ್ರೂ), ಸೈಕಿ (ಗ್ರೀಕ್), ಸ್ಪಿರಿಟ್ (ಕ್ರಿಶ್ಚಿಯನ್) – ವರ್ತನೆಯನ್ನು ನಿಯಂತ್ರಿಸುತ್ತದೆ ಎಂಬ ನಂಬಿಕೆ ಹೆಚ್ಚುಕಡಿಮೆ ಎಲ್ಲ ಧರ್ಮಗ್ರಂಥಗಳಲ್ಲಿ ಕಂಡುಬರುತ್ತದೆ. ಅನೇಕ ಧರ್ಮಗ್ರಂಥಗಳಲ್ಲಿ ಈ ಅಗೋಚರ ಘಟಕದ ಹಾಗೂ ಇದಕ್ಕೂ ದೇಹಕ್ಕೂ ಇರುವ ಸಂಬಂಧದ ಕುರಿತಾದ ವಿಶ್ಲೇಷಣೆಯೂ ಇದೆ. ಉದಾ: ಆತ್ಮ ರಥಿ, ಶರೀರ ರಥ, ಬುದ್ಧಿ ಸಾರಥಿ, ಮನಸ್ಸು ಲಗಾಮು, ಇಂದ್ರಿಯಗಳು ಕುದುರೆಗಳು, ವಿಷಯಗಳೇ ಮಾರ್ಗ (ಕಠೋಪನಿಷತ್). ನ್ಯೂಮ ಅಥವಾ ಸ್ಪಿರಿಟ್, ದೈವಸ್ಫುರಿತ ತತ್ವ, ಸೋಲ್ ಅಥವಾ ಸೈಕಿ, ಸ್ಪಿರಿಟ್ ಅಭಿವ್ಯಕ್ತಿಗೊಳ್ಳುವ

Digitised by Bharatavani, CIIL

ಮಾನವ ಜೀವನ, ಸೋಮ ಅಥವಾ ದೇಹ ಸ್ವೈಕಿಚಾಲಿತ ಯಂತ್ರ (ಸಂತ ಪಾಲ್). 'ಅತಿ ಸೂಕ್ಷ್ಮವಾದ ನಯವಾದ, ಸದಾ ಚಲಿಸುತ್ತಿರುವ ಭೌತಕಣಗಳಿಂದ ನಿರ್ಮಿತವಾದ ಆತ್ಮವು ವ್ಯಕ್ತಿ ಸತ್ತಾಗ ಚೆದುರಿ ಹೋಗುತ್ತದೆ. (ಡೆವಾಕ್ರಿಟಸ್ 460–370)' ಎಂದು ಆತ್ಮದ ಶಾಶ್ವತತೆಯನ್ನು ಅಲ್ಲಗಳೆಯುವ ವಾದವೂ ಇತ್ತು. ಪ್ಲೇಟೋ (428/427–348/347) ಮತ್ತು ಅನಂತರದ ದಾರ್ಶನಿಕರ ಕೃತಿಗಳಲ್ಲಿ ಆಧುನಿಕ ಮನೋವಿಜ್ಞಾನದ ವಿಚಾರಧಾರೆಗಳ ತುಣುಕುಗಳನ್ನು ಕಾಣಬಹುದು. ಉದಾ: ಅಗ್ರಿಗೆಂಟಮ್‌ನ ಎಂಪಿಡೋಕ್ಲಿಸ್‌ನ (495/490–435/430) 'ಒಂದು ವಸ್ತು ತನ್ನಂತೆಯೇ ಇರುವ ಸಜಾತೀಯ ವಸ್ತುವನ್ನು ಗ್ರಹಿಸುತ್ತದೆ' ಎಂಬ ಹೇಳಿಕೆ ಆ್ಯಬ್ಡೆರದ ಡೆಮೋಕ್ರಿಟಸ್‌ನ (460–370) 'ಪ್ರತಿಯೊಂದು ಜ್ಞಾನೇಂದ್ರಿಯಕ್ಕೂ ತನ್ನದೇ ಆದ ವಿಶಿಷ್ಟ ಬಹಿಃಪ್ರವಾಹಗಳನ್ನು ಸ್ವೀಕರಿಸುವ ಸಾಮರ್ಥ್ಯವಿದೆ' ಎಂಬ ಹೇಳಿಕೆ. ಕ್ಲಾಝೋಮಿನೇನ್‌ನ ಅನಕ್ಸಗೋರಸ್‌ನ (500/499–428) 'ಪ್ರತ್ಯಕ್ಷಾನುಭವ ವೈದೃಶ್ಯ ಉದ್ದೀಪಕಗಳಿಂದ ಪ್ರಭಾವಿತವಾಗುತ್ತದೆ' ಎಂಬ ಹೇಳಿಕೆ. ಆ್ಯಬ್ಡೆರದ ಪ್ರೋಟಗೋರಸ್‌ನ (490/488–420/411) 'ಸಂವೇದನೆಗಳ ಉತ್ಪನ್ನವೇ ವ್ಯಕ್ತಿತ್ವ' ಎಂಬ ಹೇಳಿಕೆ.

ಸಾಕ್ರಟಿಸ್ (470/469–399), ಪ್ಲೇಟೋ ಮತ್ತು ಅರಿಸ್ಟಾಟಲ್ (384–322) ಇವರು ಪ್ರತಿಪಾದಿಸಿದ ದರ್ಶನ ತತ್ವಗಳಲ್ಲಿ ಮನೋವಿಜ್ಞಾನ ವಿಷಯ ಸಂಬಂಧೀ ಜಿಜ್ಞಾಸೆ ವಿಪುಲವಾಗಿದೆ. ಪ್ರಶ್ನೆಗಳನ್ನು ಕೇಳುವುದರ ಮೂಲಕ, ಪ್ರಶ್ನೆಗಳಿಗೆ ಮರುಪ್ರಶ್ನೆಗಳನ್ನು ಹಾಕುವುದರ ಮೂಲಕ ವ್ಯಕ್ತಿಗೆ ಸತ್ಯದರ್ಶನ ಮಾಡಿಸುವ ಸಾಕ್ರಟಿಸ್‌ನ ತಂತ್ರವೇ ಮುಂದೆ ಸಿಗ್ಮಂಡ್ ಫ್ರಾಯ್ಡ್ (1856–1939) ಬಳಸಿದ ಮನೋವಿಶ್ಲೇಷಣ ತಂತ್ರದ, ಕಾರ್ಲ್ ರೋಜರ್ಸ್ (1902–1987) ರೂಪಿಸಿದ ರೋಗಿಕೇಂದ್ರಿತ ಚಿಕಿತ್ಸಾವಿಧಾನದ ಮೂಲ. 'ಸಂಚಿತ ಅಜಾಗೃತ' ಮನಸ್ಸಿನ ಪರಿಕಲ್ಪನೆ ಕಾರ್ಲ್ ಗಸ್ಟಾವ್ ಯೂಂಗ್ (1871–1961) ಪ್ರತಿಪಾದಿಸಿದ ವಿಶ್ಲೇಷಣಾ ಮನೋವಿಜ್ಞಾನದ ಅಡಿಗಲ್ಲು. ಇದರ ಮೂಲವನ್ನು ಸಾಕ್ರಟಿಸ್‌ನ ಜಿಜ್ಞಾಸೆಗಳಲ್ಲಿ ಕಾಣಬಹುದು. ವ್ಯಕ್ತಿತ್ವ ಸಂರಚನೆ, ವ್ಯಕ್ತಿವ್ಯತ್ಯಾಸಗಳು, ಕನಸುಗಳ ಅರ್ಥನಿರೂಪಣೆ, ಜೆನೆಟಿಕ್ ಮನೋವಿಜ್ಞಾನ, ಅಜಾಗ್ರತ ಅಭಿಪ್ರೇರಣೆ, ಆಲೋಚನೆಗಳ ಸಾಹಚರ್ಯ, ಪ್ರತ್ಯಕ್ಷಾನುಭವ ಇಂತಹ ಅನೇಕ ಮನೋವಿಜ್ಞಾನ ಸಂಬಂಧಿತ ವಿಷಯಗಳ ಜಿಜ್ಞಾಸೆಯನ್ನು ಪ್ಲೇಟೋನ ಕೃತಿಗಳಲ್ಲಿ ಕಾಣಬಹುದು. ಆತ್ಮದ ಪರಿಕಲ್ಪನೆಯ ವ್ಯಾಖ್ಯಾನ, ಆತ್ಮ–ವಾಸ್ತವೀಕರಣ (ಸೆಲ್ಫ್‌ಆ್ಯಕ್ಚುವಲೈಸೇಶನ್) ಅಥವಾ ಆತ್ಮ–ಸಾಕ್ಷಾತ್ಕಾರ (ಸೆಲ್ಫ್‌ರಿಯಲೈಸೇಶನ್), ಸಂವೇದನೆ ಮತ್ತು ಪ್ರತ್ಯಕ್ಷಾನುಭವ, ಜ್ಞಾಪಿಸಿಕೊಳ್ಳುವಿಕೆ, ಅನುಕ್ರಿಯೆ ತೋರುವಿಕೆ, ಆಲೋಚಿಸುವಿಕೆ ಮೊದಲಾದ ಮನೋವ್ಯಾಪಾರಗಳ ಅಧ್ಯಯನದ ಮತ್ತು ಪ್ರಾಣಿವರ್ತನೆಯನ್ನು ವಿಷಯನಿಷ್ಠವಾಗಿ ವೀಕ್ಷಿಸಿ ಅರ್ಥೈಸುವ ಪ್ರಯತ್ನಗಳ ಮೂಲವನ್ನು ಅರಿಸ್ಟಾಟಲ್‌ನ ಕೃತಿಗಳಲ್ಲಿ ಕಾಣಬಹುದು. ಸಾಮಾಜಿಕ ಮನೋವಿಜ್ಞಾನ, ವೈದ್ಯಕೀಯ ಮನೋವಿಜ್ಞಾನದ ಅನೇಕ ಪರಿಕಲ್ಪನೆಗಳ ಜಿಜ್ಞಾಸೆಯ ಮೂಲವನ್ನು ಇವನ ಕೃತಿಗಳಲ್ಲಿ ಕಾಣಬಹುದು. ಪ್ರಾಣಿ ಮನೋವಿಜ್ಞಾನ ಅಥವಾ ತೌಲನಿಕ ಮನೋವಿಜ್ಞಾನದ ಮತ್ತು ಪ್ರಯೋಜನಾರ್ಥಕ (ಫಂಕ್ಷನಲ್) ಮನೋವಿಜ್ಞಾನದ ಜನಕ ಎಂದೂ ಅರಿಸ್ಟಾಟಲ್‌ನನ್ನು ಉಲ್ಲೇಖಿಸುವುದುಂಟು. ಪ್ಲೇಟೋ ಸ್ಥಾಪಿಸಿದ ಅಕ್ಯಾಡೆಮಿಯನ್ನು ಕ್ರಿ.ಶ. 529ರಲ್ಲಿ ಜಸ್ಟೀನಿಯನ್ (483–565) ಮುಚ್ಚಿದಂದಿನಿಂದ 12ನೇ ಶತಮಾನದ ವಿಶ್ವವಿದ್ಯಾಲಯಗಳ ಉದಯದ ತನಕ ಈ ವಿಷಯಗಳಿಗೆ ಸಂಬಂಧಿಸಿದಂತೆ ಗಮನಾರ್ಹ ಪ್ರಗತಿ ಆಗಲಿಲ್ಲ. ಅರಿಸ್ಟಾಟಲ್‌ನ ಬೋಧನೆಗಳನ್ನು ಪುನರುಜ್ಜೀವನಗೊಳಿಸಿದ ಥಾಮಸ್ ಅಕ್ವಿನಾಸ್ (1255–1274) ಈ ಅವಧಿಯ ಬಳಿಕ ಉಲ್ಲೇಖಾರ್ಹ ವ್ಯಕ್ತಿ. ತದನಂತರ ದೇಹ–ಆತ್ಮಗಳ ನಡುವಣ ಸಂಬಂಧ, ಸಂವೇದನೆಗಳು, ಪ್ರತ್ಯಕ್ಷಾನುಭವ, ಸಂಕಲ್ಪಶಕ್ತಿ ಸ್ಮೃತಿ ಇವೇ ಮೊದಲಾದುವುಗಳ ಅಧ್ಯಯನಕ್ಕೆ ಕಾಣಿಕೆ ಸಲ್ಲಿಸುವುದರ ಮೂಲಕ ಶರೀರಕ್ರಿಯಾ (ಫಿಸಿಯಲಾಜಿಕಲ್) ಮನೋವಿಜ್ಞಾನದ ಜನಕ ಎನ್ನಲಾಗಿರುವ ರೆನೆ ಡೆಕಾರ್ಟೆ (1596–1650), ವ್ಯಕ್ತಿತ್ವವನ್ನು ಜ್ಯಾಮಿತಿಯ ಮೂಲಕ ಅಧ್ಯಯನ ಮಾಡಲು ಪ್ರಯತ್ನಿಸುವುದರ ಜೊತೆಗೆ ಮನೋಭೌತಿಕ ಸಿದ್ಧಾಂತ ಮಂಡಿಸಿದ ಬೆನೆಡಿಕ್ಟ್ ಸ್ಪಿನೋಜ಼ಾ (1632–1677), ದೇಹ – ಮನಸ್ಸು ಸಂಬಂಧದ ಕುರಿತು ತನ್ನದೇ ಆದ ಪೂರ್ವಸ್ಥಾಪಿತ ಸಾಮರಸ್ಯ ಸಿದ್ಧಾಂತ ಮಂಡಿಸಿದ ಜಿ ಡಬ್ಲ್ಯೂ ಲೈಬ್ನಿಜ್ (1646–1716), ಸಂಕಲ್ಪಶಕ್ತಿಯ ಕುರಿತಾದ ಜಿಜ್ಞಾಸೆ ಮಾಡಿದ ಇಮ್ಯಾನ್ಯುಯಲ್ ಕಾಂಟ್ (1724–1894) ಉಲ್ಲೇಖಾರ್ಹರು.

'ವಶೀಕರಣ' (ಮೆಸ್ಮರಿಸಮ್) ಎಂದು ಫ್ರಾಂಜ಼್ ಆ್ಯಂಟನ್ ಮೆಸ್ಮರ್ (1734–1815) ಆವಿಷ್ಕರಿಸಿ ಹೆಸರಿಸಿದ, ಹಾಲಿ 'ಸಂಮೋಹನ' (ಹಿಪ್ನಾಸಿಸ್) ಎಂದು ಗುರುತಿಸಲಾಗುತ್ತಿರುವ ತಂತ್ರದಿಂದ ಕೆಲವು ಮನೋರೋಗಗಳನ್ನು ಗುಣಪಡಿಸುವ ವಿಧಾನಗಳನ್ನು ವಿವರಿಸಿದ್ದು (1774), ಬಂಧನದಲ್ಲಿ ಇರುತ್ತಿದ್ದ ಮನೋರೋಗಿಗಳನ್ನು ಬಿಡುಗಡೆ ಮಾಡುವುದರ ಮುಖೇನ (1793) ಮನೋರೋಗಿಗಳಿಗೆ ಮಾನವೀಯವಾಗಿ ಚಿಕಿತ್ಸೆ ನೀಡುವ ಆಂದೋಲನವನ್ನು ಫಿಲಿಪ್ಪೆ, ಪೈನೆಲ್ (1745–1826) ಹುಟ್ಟುಹಾಕಿದ್ದು, ಫ್ರ್ಯಾಂಜ಼್ ಜೋಸೆಫ್ ಗಾಲ್ (1758–1828) ಎಂಬಾತ 'ಕಪಾಲ ಸಾಮುದ್ರಿಕ' (ಫ್ರಿನಾಲಜಿ) ಕುರಿತಾಗಿ ಬರೆದದ್ದು (1808), ವೆಬರ್–ಫ್ಲೆಚ್‌ನರ್ ನಿಯಮ ಎಂದು ಇಂದು ಉಲ್ಲೇಖಿಸುತ್ತಿರುವ ನಿಯಮದ ಮೂಲವಾದ 'ಸರಿಯಾಗಿ ಸುಲಭಗೋಚರ ವ್ಯತ್ಯಾಸ' ಎಂಬ ಪ್ರತ್ಯಕ್ಷಾನುಭವ ಸಿದ್ಧಾಂತವನ್ನು ಅರ್ನ್‌ಸ್ಟ್ ಹೈನ್‌ರಿಚ್ ವೆಬರ್ (1795–1878) ಪ್ರಕಟಿಸಿದ್ದು (1834), ಮಿದುಳಿನ ಒಂದು ನಿರ್ದಿಷ್ಟ ಪ್ರದೇಶ ವ್ಯಕ್ತಿತ್ವ ರೂಪಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ ಎಂಬ ಸುಳಿವು ನೀಡಿದ ಫೈನಿಯಾಸ್ ಪಿ ಗ್ಯಾಜ್ (1823–1860) ಎಂಬಾತನ ಮಿದುಳಿನ ಮೂಲಕ ಕಬ್ಬಿಣದ ಸಲಾಕೆ ತೂರಿದ ಅಪಘಾತ (1848,) ಚಾರ್ಲ್ಸ್ ರಾಬರ್ಟ್ ಡಾರ್ವಿನ್ (1809–1882) ಜೀವವಿಕಾಸ ಕುರಿತಾದ ತನ್ನ ಅಭಿಪ್ರಾಯಗಳನ್ನು 'ಆನ್ ದಿ ಆರಿಜಿನ್ ಆಫ್ ಸ್ಪೀಸೀಸ್' ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು (1859), ಮಿದುಳಿನ ಎಡ ಮುಂಭಾಗದ ಹಾಲೆ ವ್ಯಕ್ತಿಯ ಭಾಷಾವಿಕಾಸದಲ್ಲಿ ಪ್ರಮುಖ ನಿರ್ವಹಿಸುತ್ತದೆ ಎಂಬುದನ್ನು ಪಿಯರೆ ಪಾಲ್ ಬ್ರೋಕಾ (1824–1880) ಆವಿಷ್ಕರಿಸಿದ್ದು (1861), ಚಾರ್ಲ್ಸ್ ಡಾರ್ವಿನ್‌ನ ವಿಕಾಸವಾದದಿಂದ ಪ್ರಭಾವಿತನಾದ ಸರ್ ಫ್ರಾನ್ಸಿಸ್ ಗಾಲ್ಟನ್ (1822–1911) ಬೌದ್ಧಿಕ ಸಾಮರ್ಥ್ಯಗಳು ಜೈವಿಕ ಸ್ವರೂಪದವು ಎಂಬ ತನ್ನ ಅಭಿಪ್ರಾಯವನ್ನು ಪುಷ್ಟೀಕರಿಸುವ 'ಹಿರೆಡಿಟರಿ ಜೀನಿಅಸ್' ಪುಸ್ತಕ ಪ್ರಕಟಿಸಿದ್ದು (1869), ಮಿದುಳಿನ ಮುಂಭಾಗದ ಹಾಲೆಯ ನಿರ್ದಿಷ್ಟ ಭಾಗಗಳಿಗೆ ಆಗುವ ಹಾನಿ, ಭಾಷೆಯನ್ನು ಅರ್ಥಮಾಡಿಕೊಳ್ಳುವ ಹಾಗೂ ಉತ್ಪಾದಿಸುವ ಸಾಮರ್ಥ್ಯಕ್ಕೆ ಉಂಟುಮಾಡುವ ಹಾನಿಯ ಕುರಿತಾದ ತನ್ನ ಸಂಶೋಧನಾ ಕಾರ್ಯದ ವಿವರಗಳನ್ನು ಕಾರ್ಲ್ ವರ್ನಿಕ್ (1848–1905) ಪ್ರಕಟಿಸಿದ್ದು (1874), ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಶನ್ ಸ್ಥಾಪಿಸಿದ (1892) ಗ್ರ್ಯಾನವಿಲ್ ಸ್ಟ್ಯಾನ್ಲಿ ಹಾಲ್ (1844–1924) ಹಾರ್ವರ್ಡ್ ವಿಶ್ವವಿದ್ಯಾನಿಲಯದಿಂದ ಮನೋವಿಜ್ಞಾನದಲ್ಲಿ ಮೊದಲನೇ ಅಮೆರಿಕನ್ ಪಿಎಚ್.ಡಿ. ಪದವಿ ಗಳಿಸಿದ್ದು (1878)– ಇವನ್ನು ಆಧುನಿಕ 'ಮನೋವಿಜ್ಞಾನ'ದ ಜನನಪೂರ್ವದ ಇತಿಹಾಸದ ಮೈಲಿಗಲ್ಲುಗಳು ಎಂದು ಪರಿಗಣಿಸಬಹುದು.

ಈ ಮೊದಲೇ ಉಲ್ಲೇಖಿಸಿದಂತೆ 'ವೈಜ್ಞಾನಿಕ ವಿಧಾನಗಳು' ಎಂದು ಕರೆಯಲಾಗುತ್ತಿರುವ ವಿಧಾನಗಳಿಗೆ ಪ್ರಾಧಾನ್ಯ ನೀಡುವ ಇಂದಿನ 'ಮನೋವಿಜ್ಞಾನ' ಲೀಪ್‌ಜಿಗ್ ವಿಶ್ವವಿದ್ಯಾಲಯದ ಪ್ರಯೋಗಶಾಲೆಯಲ್ಲಿ


Digitised by Bharatavani, CIIL

(1879) ಜನಿಸಿದ ಬಳಿಕ ತನ್ನ ಗುರಿ ಸಾಧನೆಯತ್ತ ಕ್ಷಿಪ್ರಗತಿಯಲ್ಲಿ ಮುನ್ನಡೆದಿದೆ. ಆಧುನಿಕ ಮನೋವಿಜ್ಞಾನದ ಮುನ್ನಡೆಯ ಮೈಲಿಗಲ್ಲುಗಳು ಇವು: ಅಮೆರಿಕದ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಮನೋವಿಜ್ಞಾನ ಪ್ರಯೋಗಾಲಯ ಸ್ಥಾಪನೆ (1883), ಸ್ಮೃತಿ ಪ್ರಕ್ರಿಯೆಗಳ ಅಧ್ಯಯನದಲ್ಲಿ ಅರ್ಥವಿಹೀನ ಪದಭಾಗಗಳನ್ನು ಹರ್ಮನ್ ಎಬ್ಬಿಂಗ್ಹಾಸ್ (1850–1909) ಉಪಯೋಗಿಸಿ ಮಾಡಿದ ಪ್ರಯೋಗಾಧಾರಿತ ಆವಿಷ್ಕಾರಗಳ ಪ್ರಕಟಣೆ (1885), ಅದ್ವಿತೀಯ ವ್ಯಕಿತ್ವ ಸಿದ್ಧಾಂತ ಮಂಡನೆಗೆ ಅಗತ್ಯವಾದ ಮಾಹಿತಿ ಪೂರೈಸಿದ ಚಿಕಿತ್ಸಾಪದ್ಧತಿಯನ್ನು ಸಿಗ್ಮಂಡ್ ಫ್ರಾಯ್ಡ್ (1856–1939) ಅನುಸರಿಸಲು ಆರಂಭಿಸಿದ್ದು (1886), ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಜೇಮ್ಸ್ ಮ್ಯಾಕ್ಕೀನ್ ಕ್ಯಾಟ್ಟೆಲ್‌ನಿಂದ (1860–1944) ‘ಮಾನಸಿಕ ಪರೀಕ್ಷೆಗಳು’ ಎಂಬ ಪದಪುಂಜ ರೂಪಣೆಯೊಂದಿಗೆ (1890) ಮತ್ತು ‘ಮನೋವೈಜ್ಞಾನಿಕ ಮೌಲ್ಯನಿರ್ಧಾರ (ಸೈಕಲಾಜಿಕಲ್ ಅಸೆಸ್‌ಮೆಂಟ್)’ ಎಂಬ ವಿಶೇಷ ಪಾಂಡಿತ್ಯ ಕ್ಷೇತ್ರಾರಂಭ, ಬುದ್ಧಿಶಕ್ತಿ ಸಂಬಂಧಿತ ಅಧ್ಯಯನಗಳಲ್ಲಿ ಅಂತರ್–ಸಂಬಂಧಗಳನ್ನು ಸರಿಯಾಗಿ ತಿಳಿಯಲೋಸುಗ ‘ಸಹ–ಸಂಬಂಧ ಅಥವಾ ಅನ್ಯೋನ್ಯಾವಲಂಬನ’ ತಂತ್ರವನ್ನು ಸರ್ ಫ್ರಾನ್ಸಿಸ್ ಗಾಲ್ಟನ್ (1822–1911) ವಿಕಸಿಸಿದ್ದು (1890), ಮುಂದೆ ಪ್ರಯೋಜನಾರ್ಥಕ ಸಿದ್ಧಾಂತದ (ಫಂಕ್‌ಷನಲಿಸಮ್) ವಿಕಾಸಕ್ಕೆ ಅಡಿಗಲ್ಲು ಹಾಕಿದ ‘ಪ್ರಿನ್ಸಿಪಲ್ಸ್ ಆಫ್ ಸೈಕಾಲಜಿ’ ಗ್ರಂಥವನ್ನು ವಿಲಿಯಮ್ ಜೇಮ್ಸ್ (1842–1910) ಪ್ರಕಟಿಸಿದ್ದು (1890), ಬಡ ಮನೋರೋಗಿಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ದಾಖಲಿಸುವಂತೆ ವಿಧೇಯಕವೊಂದನ್ನು ನ್ಯೂಯಾರ್ಕ್ ರಾಜ್ಯ ಜಾರಿಗೊಳಿಸುವುದರ (1890) ಮುಖೇನ ಮನೋವೈದ್ಯಕೀಯ ಸಂಶೋಧನೆಗಳಿಗೆ ಮೀಸಲಾದ ಮೊದಲನೇ ಸಂಸ್ಥೆಯ ಬೆಳವಣಿಗೆಗೆ ಕಾರಣವಾದದ್ದು, ಗ್ರ್ಯಾನ್ವಿಲ್ಲೆ ಸ್ಟ್ಯಾನ್ಲಿ ಹಾಲ್‌ನ (1844–1924) ಅಧ್ಯಕ್ಷತೆಯಲ್ಲಿ 42 ಮಂದಿ ಸದಸ್ಯರಿದ್ದ ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್ ಸ್ಥಾಪನೆ (1892), ಮನೋನಿದಾನದ (ಸೈಕೋಡೈಅಗ್ನೋಸಿಸ್) ಮೊದಲನೇ ಪ್ರಯೋಗಾಲಯವನ್ನು ಅಲ್‌ಫ್ರೆಡ್ ಬೀನೆ (1857–1911) ಸ್ಥಾಪಿಸಿದ್ದು (1895), ಜಾನ್ ಡ್ಯೂಯಿ ತನ್ನ ಲೇಖನಗಳ ಮುಖೇನ ಪ್ರಯೋಜನಾರ್ಥಕ ಸಿದ್ಧಾಂತ ಪಂಥವನ್ನು ಪ್ರಾರಂಭಿಸಿದ್ದು (1859–1952), ವೈದ್ಯಕೀಯ ಮನೋವಿಜ್ಞಾನ ಎಂಬ ಶಾಖೆಯು ಹುಟ್ಟಿಗೆ ಕಾರಣವಾದ ಮನೋವೈಜ್ಞಾನಿಕ ವೈದ್ಯಾಲಯವನ್ನು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯ ಆರಂಭಿಸಿದ್ದು (1896), ‘ಪರಿಣಾಮ ನಿಯಮ’ ಎಂಬ ಖ್ಯಾತ ನಿಯಮವನ್ನು ಎಡ್ವರ್ಡ್ ಲೀ ಥಾರ್ನ್‌ಡೈಕ್ (1874–1949) ಪ್ರಕಟಿಸಿದ್ದು (1898), ಮನೋವಿಶ್ಲೇಷಣಾ ಪಂಥದ ಉದಯಕ್ಕೆ ನಾಂದಿ ಅನ್ನಬಹುದಾದ ‘ಇಂಟರ್‌ಪ್ರಿಟೇಷನ್ ಆಫ್ ಡ್ರೀಮ್ಸ್’ ಎಂಬ ಗ್ರಂಥವನ್ನು ಸಿಗ್ಮಂಡ್ ಫ್ರಾಯ್ಡ್ (1856–1939) ಪ್ರಕಟಿಸಿದ್ದು (1900), ಬ್ರಿಟಿಷ್ ಸೈಕಲಾಜಿಕಲ್ ಸೊಸೈಟಿಯ ಸ್ಥಾಪನೆ (1901), ಅಮೆರಿಕನ್ ಸೈಕಲಾಜಿಕಲ್ ಸೊಸೈಟಿಯ ಪ್ರಥಮ ಮಹಿಳಾ ಅಧ್ಯಕ್ಷರಾಗಿ ಮೇರಿ ವೈಟನ್ ಕಾಕಿನ್ಸ್ (1863–1930) ಆಯ್ಕೆ ಆದದ್ದು (1905), ಫ್ರಾನ್ಸ್‌ನಲ್ಲಿ ಅಲ್‌ಫ್ರೆಡ್ ಬೀನೆ (1857–1911) ರೂಪಿಸಿದ ಬುದ್ಧಿಶಕ್ತಿ ಪರೀಕ್ಷೆ ಪ್ರಕಟವಾದದ್ದು (1905), ‘ದಿ ಜರ್ನಲ್ ಆಫ್ ಅಬ್‌ನಾರ್ಮಲ್ ಸೈಕಾಲಜಿ’ಯನ್ನು ಮಾರ್ಟನ್ ಹೆನ್ರಿ ಪ್ರಿನ್ಸ್ (1854–1929) ಪ್ರಕಟಿಸಲು ಆರಂಭಿಸಿದ್ದು (1906), ಅಭಿಜಾತ ಸೋಪಾಧಿಕಗೊಳಿಸುವಿಕೆ ಕುರಿತಾದ ಅಧ್ಯಯನಗಳನ್ನು ಐವಾನ್ ಪೆಟ್ರೋವಿಚ್ ಪಾವ್‌ಲೋ (1849–1936) ಪ್ರಕಟಿಸಿದ್ದು (1906), ಕಾರ್ಲ್ ಗಸ್ಟಾವ್ ಯೂಂಗ್ ‘ದಿ ಸೈಕಾಲಜಿ ಆಫ್ ಡಿಮೆನ್ಷಿಆ ಪ್ರೀಕಾಕ್ಸ್’ ಎಂಬ ಗ್ರಂಥ ಪ್ರಕಟಿಸಿದ್ದು (1907), ತನ್ನದೇ ಬಾಲ್ಯಜೀವನವನ್ನು ಆಧರಿಸಿ ತನ್ನ ಸಿದ್ಧಾಂತವನ್ನು ಫ್ರಾಯ್ಡ್ ರೂಪಿಸಿದ್ದಷ್ಟೇ ಅಲ್ಲದೇ ಲೈಂಗಿಕತೆಗೆ ಅತಿ ಪ್ರಾಶಸ್ತ್ಯ ನೀಡಿದ್ದಾನೆ ಎಂದು ಆಪಾದಿಸಿ ಅಲ್‌ಫ್ರೆಡ್ ಆ್ಯಡ್ಲರ್ (1870–1937) ಫ್ರಾಯ್ಡ್‌ನ ಮನೋವಿಶ್ಲೇಷಣಾ ಪಂಥದಿಂದ ವಿಮುಖನಾಗಿ ವ್ಯಷ್ಟಿಮನೋವಿಜ್ಞಾನ ವಿಚಾರಧಾರೆಯನ್ನು ಹುಟ್ಟುಹಾಕಿದ್ದು (1911), ಕ್ರಿಯಾಜನ್ಮ ಅನುಬಂಧನಕ್ಕೆ ಪ್ರೇರಕ ಅನ್ನಬಹುದಾದ ಪ್ರಾಣಿ ಬುದ್ಧಿಶಕ್ತಿ ಕುರಿತಾದ ಮೊದಲನೇ ಲೇಖನವನ್ನು ಎಡ್ವರ್ಡ್ ಥಾರ್ನ್‌ಡೈಕ್ ಪ್ರಕಟಿಸಿದ್ದು (1911), ಬೀನೆ ಬುದ್ಧಿಶಕ್ತಿ ಪರೀಕ್ಷೆಗಳು ಒದಗಿಸುವ ಅಂಕಗಳನ್ನು ಅಧ್ಯಯಿಸಿ ಬುದ್ಧಿಶಕ್ತಿ ಸೂಚ್ಯಂಕದ ಪರಿಕಲ್ಪನೆಯನ್ನು ವಿಲಿಯಮ್ ಲ್ಯೂಯಿಸ್ ಸ್ಟರ್ನ್ (1871–1938) ರೂಪಿಸಿದ್ದು (1912), ಗೆಸ್ಟಾಲ್ಟ್ ಮನೋವಿಜ್ಞಾನದ ಆರಂಭಸೂಚಕ ಅನ್ನಬಹುದಾದ ಚಲನೆಯ ಗ್ರಹಿಕೆಯ ಕುರಿತು ತಾನು ಮಾಡಿದ ಸಂಶೋಧನೆಗಳನ್ನು ಮ್ಯಾಕ್ಸ್ ವರ್ದೈಮರ್ (1880–1943) ಪ್ರಕಟಿಸಿದ್ದು (1912), ವರ್ತನ ಮನೋವಿಜ್ಞಾನದ ಆರಂಭಸೂಚಕ ಅನ್ನಬಹುದಾದ ಗ್ರಂಥ ‘ಸೈಕಾಲಜಿ ಆ್ಯಸ್ ಎ ಬಿಹೇವಿಯರಿಸ್ಟ್ ವ್ಯೂಸ್ ಇಟ್’ ಅನ್ನು ಜಾನ್ ಬಿ ವಾಟ್ಸನ್ ಪ್ರಕಟಿಸಿದ್ದು (1913), ಮತ ಮತ್ತು ಆಧ್ಯಾತ್ಮಿಕತೆಯನ್ನು ಫ್ರಾಯ್ಡ್ ನಿರ್ಲಕ್ಷಿಸಿದ್ದಾನೆ ಎಂದು ಆಪಾದಿಸಿ ಅವನ ಪಂಥದಿಂದ ವಿಮುಖನಾಗಿ ಯೂಂಗ್ ವಿಶ್ಲೇಷಣಾತ್ಮಕ ಮನೋವಿಜ್ಞಾನ ಎಂಬ ಹೊಸ ವಿಚಾರಧಾರೆಯನ್ನು ಆರಂಭಿಸಿದ್ದು(1913), ಅನೈಚ್ಛಿಕ ದಮನ ಕುರಿತಾದ ತಾನು ಮಾಡಿದ್ದ ಸಂಶೋಧನೆಗಳನ್ನು ಫ್ರಾಯ್ಡ್ ಪ್ರಕಟಿಸಿದ್ದು (1915), ಅಮೆರಿಕಾದಲ್ಲಿ ಸ್ಟ್ಯಾನ್‌ಫರ್ಡ್ ಬೀನೆ ಬುದ್ಧಿಶಕ್ತಿ ಪರೀಕ್ಷೆಯ ಪ್ರಕಟಣೆ (1916,) ರಾಬರ್ಟ್ ಯರ್ಕ್ಸ್ (1876–1956) ‘ಆರ್ಮಿ ಆಲ್‌ಫಾ ಮತ್ತು ಬೀಟಾ ಎಂಬ ಸಮೂಹ ಬುದ್ಧಿಶಕ್ತಿ ಪರೀಕ್ಷೆಗಳನ್ನು ಪ್ರಕಟಿಸಿದ್ದು (1917) ಮತ್ತು ಒಂದು ವರ್ಷದ ಬಳಿಕ ಸೇನೆ ಅದನ್ನು ಅಧಿಕೃತವಾಗಿ ಉಪಯೋಗಿಸಲು ಆರಂಭಿಸಿದ್ದು, ಜಾನ್ ಬಿ ವಾಟ್ಸನ್ ತನ್ನ ವಿದ್ಯಾರ್ಥಿ ಸಹಾಯಕಿ ರೋಸಾಲಿ ರೇಯ್‌ನರ್ ಒಡಗೂಡಿ ಭಯವನ್ನು ಅಭಿಜಾತ ಸೋಪಾಧಿಕಗೊಳಿಸುವಿಕೆ ಕುರಿತಂತೆ ಮಾಡಿದ ವಿವಾದಾತ್ಮಕ ಪ್ರಯೋಗಗಳನ್ನು ‘ಲಿಟಲ್ ಆಲ್ಬರ್ಟ್ ಎಕ್ಸ್‌ಪೆರಿಮೆಂಟ್ಸ್’ ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು (1920), ಮನೋವೈಜ್ಞಾನಿಕ ಪರೀಕ್ಷೆಗಳನ್ನು ವಾಣಿಜ್ಯೀಕರಿಸಲೋಸುಗ ಅಮೆರಿಕಾದಲ್ಲಿ ಸೈಕಲಾಜಿಕಲ್ ಕಾರ್ಪೊರೇಷನ್ ಸ್ಥಾಪನೆ (1921), ಗೆಸ್ಟಾಲ್ಟ್ ಪಂಥದ ಪ್ರಧಾನ ಭಾಗವಾದ ‘ದಿ ಮೆಂಟಾಲಿಟಿ ಆಫ್ ಏಪ್ಸ್’ ಕೃತಿಯನ್ನು ವೂಲ್‌ಫ್‌ಗ್ಯಾಂಗ್ ಕಾಯ್ಲರ್ (1887–1967) ಪ್ರಕಟಿಸಿದ್ದು (1925), ಮಕ್ಕಳ ಚಿಕಿತ್ಸೆ ಕುರಿತಂತೆ ಫ್ರಾಯ್ಡ್‌ನ ಆಲೋಚನೆಗಳನ್ನು ವಿಸ್ತರಿಸಿ ಆತನ ಮಗಳು ಅನ್ನಾ ಫ್ರಾಯ್ಡ್ (1895–1982) ತನ್ನ ಮೊದಲನೇ ಪ್ರಬಂಧ ಮಂಡಿಸಿದ್ದು(1927), ಗೆಸ್ಟಾಲ್ಟ್ ಮನೋವಿಜ್ಞಾನ ಕುರಿತಂತೆ ತನ್ನ ಪ್ರಕಟಣೆಯಲ್ಲಿ ವರ್ತನವಾದವನ್ನು ಕಾಯ್ಲರ್ ತೀವ್ರವಾಗಿ ಟೀಕಿಸಿದ್ದು (1929), ಜ್ಞಾನಾತ್ಮಕ ವಿಕಾಸ ಕುರಿತಂತೆ, ಮುಂಚೂಣಿಯಲ್ಲಿರುವ ಸಿದ್ಧಾಂತಿ ಎಂಬ ಖ್ಯಾತಿ ಲಭಿಸಲು ಕಾರಣವಾದ ‘ದಿ ಮೋರಲ್‌ಜಡ್ಜ್‌ಮೆಂಟ್ ಆಫ್ ಚಿಲ್ಡ್ರನ್’ ಎಂಬ ಕೃತಿಯನ್ನು ಜೀನ್ ಪಿಯಾಜೆ (1896–1980) ಪ್ರಕಟಿಸಿದ್ದು (1932), ದೇಹ ಕ್ರಿಯೆಗಳ ಸಂತುಲನ (ಹೋಮಿಆಸ್ಟ್ಯಾಸಿಸ್) ಎಂಬ ಪದ ಠಂಕಿಸಿ ‘ಹೋರಾಡು ಅಥವಾ ಪಲಾಯನ ಮಾಡು’ ವಿದ್ಯಮಾನದ ಕುರಿತಾದ ಸಂಶೋಧನೆಗಳನ್ನು ವಾಲ್ಟರ್ ಬ್ರಾಡ್‌ಫರ್ಡ್ ಕ್ಯಾನನ್ (1871–1945) ಆರಂಭಿಸಿದ್ದು (1932), ಹೆನ್ರಿ ಅಲೆಕ್ಸಾಂಡರ್ ಮರ್ರೆ (1893–1988) ‘ಥಿಮೇಟಿಕ್ ಅಪ್ಪರ್‌ಸೆಪ್ಷನ್’ ಪರೀಕ್ಷೆಗಳನ್ನು ಪ್ರಕಟಿಸಿದ್ದು (1935), ಮಿದುಳಿನ ಮುಂಹಾಲೆಯ ಶಸ್ತ್ರಕ್ರಿಯೆಯಿಂದ ಮನೋರೋಗ ಚಿಕಿತ್ಸೆ ಮಾಡುವ ಕುರಿತಂತೆ ತಾನು ಮಾಡಿದ ಸಂಶೋಧನೆಗಳನ್ನು ಎಗಾಸ್ ಮೋನಿಸ್ (1874–1955) ಪ್ರಕಟಿಸಿದ್ದು (1936), ಮನಃಕುಸಿತಕ್ಕೆ (ಡಿಪ್ರೆಷನ್) ಚಿಕಿತ್ಸೆಗಾಗಿ ವಿದ್ಯುದಾಘಾತದಿಂದ ಸೆಳವು ಬರಿಸುವ ಚಿಕಿತ್ಸಾ ಪದ್ಧತಿಯನ್ನು ಅರ್ಥಾತ್ ವಿದ್ಯುದಾಘಾತ ಚಿಕಿತ್ಸಾ ಪದ್ಧತಿಯನ್ನು ಮಾನವ ರೋಗಿಯ

Digitised by Bharatavani, CIIL

ಮೇಲೆ ಮೊಟ್ಟಮೊದಲು ಪ್ರಯೋಗಿಸಿದ್ದು (1938), ಬಹು ಜನಪ್ರಿಯವಾದ ವೆಷ್ಲರ್ ಬೆಲೆವ್ಯೂ ಬುದ್ಧಿಶಕ್ತಿ ಪರೀಕ್ಷೆ ಪ್ರಕಟಿಸಿದ್ದು (1939), ಕೆನೆಡಿಯನ್ ಸೈಕಲಾಜಿಕಲ್ ಅಸೋಸಿಯೇಷನ್‌ನ ಸ್ಥಾಪನೆ (1939), ಗೌರವಯುಕ್ತ ಅ–ವಿಮರ್ಶಾತ್ಮಕ ಮಾರ್ಗಾನುಸರಣೆ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಪರಿಣಾಮಕಾರೀ ಚಿಕಿತ್ಸೆ ನೀಡುವುದರ ಅಡಿಪಾಯ ಎಂದು ಸೂಚಿಸುವ 'ಕೌನ್ಸಿಲಿಂಗ್ ಆ್ಯಂಡ್ ಸೈಕೋತೆರಪಿ' ಪುಸ್ತಕವನ್ನು ಕಾರ್ಲ್ ರೋಜರ್ಸ್ (1902–1987) ಪ್ರಕಟಿಸಿದ್ದು (1942), ಜ್ಞಾನಾತ್ಮಕ ವಿಕಾಸಕ್ಕೆ ಸಂಬಂಧಿಸಿದಂತೆ ತಾನು ರೂಪಿಸಿದ ಸಿದ್ಧಾಂತಗಳನ್ನು ವಿವರಿಸುವ 'ಸೈಕಾಲಜಿ ಆಫ್ ಇಂಟೆಲಿಜೆನ್ಸ್' ಗ್ರಂಥವನ್ನು ಜೀನ್ ಪಿಯಾಜೆ ಪ್ರಕಟಿಸಿದ್ದು (1942), ವ್ಯಾಪಕ ಸಂಶೋಧನೆಗಳಿಗೆ ಒಳಪಟ್ಟಿರುವ ಮತ್ತು ವ್ಯಾಪಕವಾಗಿ ಬಳಕೆ ಆಗುತ್ತಿರುವ ಮಿನ್ನೆಸೋಟ ಮಲ್ಟಿಫೇಸಿಕ್ ಪರ್ಸನಾಲಿಟಿ ಇನ್ವೆಂಟರಿ' ರೂಪುಗೊಂಡಿದ್ದು (1942), ವೈದ್ಯಕೀಯ ವಿಜ್ಞಾನದಂತೆ ಮನೋವಿಜ್ಞಾನವೂ ಒಂದು ಕಾರ್ಯತಃ ನಡೆಸಬಹುದಾದ ರಕ್ಷಿತ ವೃತ್ತಿ ಎಂದು ವಿಧಿವತ್ತಾಗಿ ಘೋಷಿಸಿ ಮನೋವಿಜ್ಞಾನಿಗಳಿಗೆ ವೃತ್ತಿ ಪರವಾನಗಿ ನೀಡುವುದಕ್ಕೆ ಸಂಬಂಧಿಸಿದಂತೆ ವಿಧೇಯಕವನ್ನು ಕನ್ನೆಕ್ಟಿಕಟ್ ಪ್ರಾಂತ್ಯ ಮೊಟ್ಟಮೊದಲ ಬಾರಿ ಜಾರಿಗೊಳಿಸಿದ್ದು (1945), 'ದಿ ಜರ್ನಲ್ ಆಫ್ ಕ್ಲಿನಿಕಲ್ ಸೈಕಾಲಜಿ'ಯ ಜನನ (1945), ಸ್ತ್ರೀಸಮಾನತಾವಾದದ ಜನನ ಸೂಚಕ ಎಂದು ಪರಿಗಣಿಸಬಹುದಾದ ಮನೋವಿಶ್ಲೇಷಣಾ ಸಿದ್ಧಾಂತದ ಕುರಿತಾದ ಸ್ತ್ರೀಸಮಾನತಾವಾದಿಗಳ ದೃಷ್ಟಿಕೋನಗಳನ್ನು ಕರೇನ್ ಹಾರ್ನಿ (1885–1952) ಪ್ರಕಟಿಸಿದ್ದು (1945), ವೈದ್ಯಕೀಯ ಪದವಿ 'ಎಮ್.ಡಿ.' ಮತ್ತು ಸಂಶೋಧನ ಪದವಿ 'ಪಿಎಚ್.ಡಿ'ಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವೈದ್ಯಕೀಯ ಮನೋವಿಜ್ಞಾನದ ವೃತ್ತಿನಿರತ ಮನೋವಿಜ್ಞಾನಿಗಳಿಗೆ ಮಾದರಿಯ ರೂಪುರೇಷೆಗಳನ್ನು ಕೊಲೆರಾಡೋದ ಬೌಲ್ಡರ್‌ನಲ್ಲಿ ನಡೆದ ಬೌಲ್ಡರ್ ಸಮ್ಮೇಳನ ರೂಪಿಸಿದ್ದು (1949), ಫ್ರಾಯ್ಡ್ ರೂಪಿಸಿದ್ದ ವ್ಯಕ್ತಿತ್ವವಿಕಾಸದ ಸಿದ್ಧಾಂತಕ್ಕೆ ಸಾಮಾಜಿಕ ಆಯಾಮಗಳನ್ನು ಸೇರಿಸಿ ಆ ಸಿದ್ಧಾಂತವನ್ನು ವಿಸ್ತರಿಸಿದ ಕೃತಿ 'ಚೈಲ್ಡ್‌ಹುಡ್ ಆ್ಯಂಡ್ ಸೊಸೈಟಿ' ಅನ್ನು ಎರಿಕ್ ಎರಿಕ್ಸನ್ (1902–1994) ಪ್ರಕಟಿಸಿದ್ದು (1950), ಮನಶ್ಚಿಕಿತ್ಸೆಯ (ಸೈಕೋತೆರಪಿ) ಪರಿಣಾಮಕಾರಿತ್ವದ ಕುರಿತು ತಾನು ನಡೆಸಿದ ಅಧ್ಯಯನಗಳನ್ನು ಆಧರಿಸಿ ಪ್ರಕಟಿಸಿದ ಲೇಖನದಲ್ಲಿ (1952) ಮನಶ್ಚಿಕಿತ್ಸೆ ಹೆಚ್ಚುಕಡಿಮೆ ನಿಷ್ಪ್ರಯೋಜಕ ಎಂದು ಸೂಚಿಸಿದ್ದರ ಪರಿಣಾಮವಾಗಿ ಅಸಂಖ್ಯ ಅಧ್ಯಯನಗಳು ನಡೆದು ಮನೋರೋಗಗಳಿಗೆ ಅದೊಂದು ಉತ್ತಮ ಚಿಕಿತ್ಸಾವಿಧಾನ ಎಂದು ಸಾಬೀತಾಗಲು ಹ್ಯಾನ್ಸ್ ಐಸೆಂಕ್ (1916–1997) ಕಾರಣನಾದದ್ದು, ಮನೋರೋಗಗಳ ಆಧುನಿಕ ವರ್ಗೀಕರಣಕ್ಕೆ ನಾಂದಿಯಾದ 'ಡೈಅಗ್ನೋಸ್ಟಿಕ್ ಆ್ಯಂಡ್ ಸ್ಟ್ಯಾಟಿಸ್ಟಿಕಲ್ ಮ್ಯಾನ್ಯುಅಲ್ ಆಫ್ ಮೆಂಟಲ್ ಡಿಸ್‌ಆರ್ಡರ್ಸ್' ಅನ್ನು ಅಮೆರಿಕನ್ ಸೈಕೈಆಟ್ರಿಕ್ಸ್ ಅಸೋಸಿಯೇಷನ್ ಪ್ರಕಟಿಸಿದ್ದು (1952), ಯುಕ್ತಸಮಯದಲ್ಲಿ ಯುಕ್ತ ಪುನರ್ಬಲನ ಅಥವಾ ಪುಷ್ಟೀಕರಣಗಳ ನೀಡುವಿಕೆಯನ್ನು ಆಧರಿಸಿದ ವರ್ತನ ಚಿಕಿತ್ಸಾವಿಧಾನದ ರೂಪುರೇಷೆಯನ್ನು ಬರ್ಹಸ್ ಫ್ರೆಡ್ರಿಕ್ ಸ್ಕಿನ್ನರ್ (1904–1990) 'ಸೈನ್ಸ್ ಆ್ಯಂಡ್ ಹ್ಯೂಮನ್ ಬಿಹೇವ್ಯರ್' ಪುಸ್ತಕದಲ್ಲಿ ವಿವರಿಸಿದ್ದು (1953), ಮನೋವಿಜ್ಞಾನಿಗಳಿಗಾಗಿ ನೀತಿಸಂಹಿತೆಯೊಂದನ್ನು ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್ ರೂಪಿಸಿದ್ದು (1953), ಖ್ಯಾತ 'ಅವಶ್ಯಕತೆಗಳ ಕ್ರಮಬದ್ಧ ಶ್ರೇಣಿ'ಯನ್ನು ರೂಪಿಸಿದ (1943) ಅಬ್ರಾಹಮ್ ಹೆರಾಲ್ಡ್ ಮ್ಯಾಸ್‌ಲೊ (1908–1970) ಮಾನವತಾ ಮನೋವಿಜ್ಞಾನವನ್ನು ಹುಟ್ಟುಹಾಕಲು ನೆರವು ನೀಡಿದ್ದು (1954), ಸಾಮಾಜಿಕ ಮನೋವಿಜ್ಞಾನ ಕ್ಷೇತ್ರದಲ್ಲಿ ಬಲು ಪ್ರಭಾವೀ ವ್ಯಕ್ತಿ ಲಿಯೋನ್ ಫೆಸ್ಟಿಂಗರ್ (1919–1989) 'ಜ್ಞಾನಾತ್ಮಕ ಅಸಾಮರಸ್ಯ (ಕಾಗ್ನಿಟಿವ್ ಡಿಸನನ್ಸ್)' ಸಿದ್ಧಾಂತವನ್ನು ಪ್ರತಿಪಾದಿಸಿದ್ದು (1957), ಬಟ್ಟೆಯ ಬದಲಿ ತಾಯಿಯಿಂದ ದೊರೆಯುವ ಸ್ಪರ್ಶಸುಖವು ತಂತಿ ಬದಲಿ ತಾಯಿಯಿಂದ ದೊರೆಯುವ ಆಹಾರಕ್ಕಿಂತ ಮುಖ್ಯ ಎಂದು ರೀಸಸ್ ಕೋತಿಗಳ ಪ್ರಯೋಗಗಳಿಂದ ಸಾಬೀತುಪಡಿಸಿದ ಹ್ಯಾರಿ ಫ್ರೆಡ್ರಿಕ್ ಹಾರ್ಲೊ (1905–1981) ಪ್ರಕಟಿಸಿದ (1958) 'ದಿ ನೇಚರ್ ಆಫ್ ಲವ್' ಪುಸ್ತಕದಲ್ಲಿ 'ಮನುಷ್ಯ ಕೇವಲ ಹಾಲಿನಿಂದ ಬದುಕಲಾರ' ಎಂದು ಘೋಷಿಸಿದ್ದು, ಇಂಟರ್‌ನ್ಯಾಶನಲ್ ಜರ್ನಲ್ ಆಫ್ ಸೈಕೊ ಅ್ಯನಾಲಿಸಿಸ್‌ನಲ್ಲಿ 'ಅಗಲಿಕೆ ವ್ಯಾಕುಲತೆ' ಲೇಖನವನ್ನು ಜಾನ್ ಬೌಲ್‌ಬೈ (1907–1990) ಪ್ರಕಟಿಸಿದ್ದು (1958), ಯೂಂಗ್ ತನ್ನ ಆತ್ಮಚರಿತ್ರೆ 'ಮೆಮರೀಸ್, ಡ್ರೀಮ್ ರಿಫ್ಲೆಕ್ಷನ್ಸ್' ಪ್ರಕಟಿಸಿದ್ದು (1961), ವಿಭಿನ್ನ ಸಾಂಸ್ಕೃತಿಕ ಸಂಶೋಧನೆಗಳ ಪ್ರಾಮುಖ್ಯವನ್ನು ಪರಿಚಯಿಸುವುದರ ಮುಖೇನ ಮನೋವೈಜ್ಞಾನಿಕ ಸಂಶೋಧನೆಗಳ ಮುಂಚೂಣೆಯಲ್ಲಿ ವೈವಿಧ್ಯ ಇರುವಂತೆ ಜಾನ್ ವಿಡ್ಡಪ್ ಬೆರ್ರಿ (1939ಜ) ಮಾಡಿದ್ದು (1961), ಮನೋರೋಗ ಚಿಕಿತ್ಸೆಯ ವಿವಾದಾಂಶಗಳ ಬಗೆಹರಿಸುವಿಕೆಯಲ್ಲಿ ಬಲು ಪ್ರಭಾವ ಬೀರಿದ ಪುಸ್ತಕ 'ಆನ್ ಬಿಕಮಿಂಗ್ ಎ ಪರ್ಸನ್' ಅನ್ನು ಕಾರ್ಲ್ ರೋಜರ್ಸ್ ಪ್ರಕಟಿಸಿದ್ದು (1961), ವ್ಯಕ್ತಿತ್ವ ವಿಕಾಸದಲ್ಲಿ ವೀಕ್ಷಣಾತ್ಮಕ ಕಲಿಕೆಯ ಪಾತ್ರವನ್ನು ಆಲ್ಬರ್ಟ್ ಬಂಡೂರ (1925 ಜ) ಪರಿಚಯಿಸಿದ್ದು (1963), ನೈತಿಕತೆಯ ವಿಕಾಸದ ಕ್ರಮಾನುಗತಿಯ ಕುರಿತಾದ ತನ್ನ ಆಲೋಚನೆಗಳನ್ನು ಲಾರೆನ್ಸ್ ಕೋಲ್ ಬರ್ಗ್ (1927–1987) ಪರಿಚಯಿಸಿದ್ದು (1963), 'ಬಿಹೇವ್ಯರಲ್ ಸ್ಟಡಿ ಆಫ್ ಒಬೀಡಿಅನ್ಸ್' ಎಂಬ ಲೇಖನದಲ್ಲಿ ತಾನು ಮಾಡಿದ 'ಮಿಲ್‌ಗ್ರ್ಯಾಮ್ ಪ್ರಯೋಗಗಳು' ಎಂದು ಖ್ಯಾತವಾಗಿರುವ ಬಲು ವಿವಾದ ಹುಟ್ಟು ಹಾಕಿದ ಪ್ರಯೋಗಗಳನ್ನು ಸ್ಟ್ಯಾನ್ಲಿ ಮಿಲ್‌ಗ್ರ್ಯಾಮ್ (1933–1984) ಪ್ರಕಟಿಸಿದ್ದು (1963), ಮನಃಕುಸಿತ (ಡಿಪ್ರೆಶನ್) ಮನೋರೋಗದ ವಿಕಾಸದಲ್ಲಿ ಆಲೋಚನೆಗಳು ವಹಿಸುವ ಗಮನಾರ್ಹ ಪಾತ್ರದ ಕಡೆಗೆ ಗಮನ ಸೆಳೆಯುವ ಮನಃಕುಸಿತದ ಮನೋವೈಜ್ಞಾನಿಕ ಮಾದರಿಯೊಂದನ್ನು ಜ್ಞಾನಾತ್ಮಕ ಚಿಕಿತ್ಸಾ ವಿಧಾನವನ್ನು ಆವಿಷ್ಕರಿಸಿದ ಆರನ್ ಟೆಮ್ಕಿನ್ ಬೆಕ್ (1921 ಜ) ಪ್ರಕಟಿಸಿದ್ದು (1967), 'ಡೈಅಗ್ನೋಸ್ಟಿಕ್ ಆ್ಯಂಡ್ ಸ್ಟ್ಯಾಟಿಸ್ಟಿಕಲ್ ಮ್ಯಾನ್ಯುಅಲ್ ಆಫ್ ಮೆಂಟಲ್ ಡಿಸ್‌ಆರ್ಡರ್ಸ್ 2' ಅನ್ನು ಅಮೆರಿಕನ್ ಸೈಕೈಆಟ್ರಿಕ್ಸ್ ಅಸೋಸಿಯೇಷನ್ ಪ್ರಕಟಿಸಿದ್ದು (1968), ವೈದ್ಯಕೀಯ ಮನೋವಿಜ್ಞಾನದಲ್ಲಿ ಡಾಕ್ಟರ್ ಆಫ್ ಸೈಕಾಲಜಿ (ಸೈ ಡಿ) ಪದವಿ ಕಾರ್ಯಕ್ರಮವನ್ನು ಮೊಟ್ಟಮೊದಲು ಇಲ್ಲಿನಾಯಿಸ್ ವಿಶ್ವವಿದ್ಯಾಲಯ ಆರಂಭಿಸಿದ್ದು (1968), ಜೋಸೆಫ್ ವೋಲಪೆ (1915–1997) 'ದಿ ಪ್ರ್ಯಾಕ್ಟೀಸ್ ಆಫ್ ಬಿಹೇವ್ಯರಲ್ ತೆರಪಿ' ಗ್ರಂಥ ಪ್ರಕಟಿಸಿದ್ದು (1969), ಜಾನ್ ಬೌಲ್‌ಬೈ (1907–1990) 'ಅಟ್ಯಾಚ್‌ಮೆಂಟ್ ಆ್ಯಂಡ್ ಲಾಸ್ –ಭಾಗ 1' ಪ್ರಕಟಿಸಿದ್ದು (1969), ಮೊದಲನೇ 'ಸೈ ಡಿ' ಪದವಿ ಪ್ರದಾನ (1971), 'ಸೈ ಡಿ' ಪದವಿಯನ್ನು ವೃತ್ತಿಪರ ಪದವಿ ಎಂದು ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಶನ್ ಮಾನ್ಯ ಮಾಡಿದ್ದು (1973), ಸ್ಟ್ಯಾನ್ಲಿ ಮಿಲ್‌ಗ್ರ್ಯಾಮ್ 'ಒಬೀಡಿಅನ್ಸ್ ಟು ಅಥಾರಿಟಿ' ಪುಸ್ತಕ ಪ್ರಕಟಿಸಿದ್ದು (1974), ಮಾರ್ಗರೆಟ್ ಶಾನ್‌ಬರ್ಗರ್ ಮಾಯ್ಲರ್ (1897–1985) 'ದಿ ಸೈಕಲಾಜಿಕಲ್ ಬರ್ತ್ ಆಫ್ ದಿ ಹ್ಯೂಮನ್ ಇನ್‌ಫ್ಯಾಂಟ್; ಸಿಮ್‌ಬಯಾಸಿಸ್ ಆ್ಯಂಡ್ ಇನ್‌ಡಿವಿಜುಏಶನ್' ಪ್ರಕಟಿಸಿದ್ದು (1975), 'ಡೈಅಗ್ನೋಸ್ಟಿಕ್ ಆ್ಯಂಡ್ ಸ್ಟ್ಯಾಟಿಸ್ಟಿಕಲ್ ಮ್ಯಾನ್ಯುಅಲ್ ಆಫ್ ಮೆಂಟಲ್ ಡಿಸ್‌ಆರ್ಡರ್ಸ್ 3' ಅನ್ನು ಅಮೆರಿಕನ್ ಸೈಕೈಆಟ್ರಿಕ್ಸ್ ಅಸೋಸಿಯೇಷನ್ ಪ್ರಕಟಿಸಿದ್ದು (1980), ಹೋವರ್ಡ್ ಅರ್ಲ್ ಗಾರ್ಡ್‌ನರ್ (1943ಜ) ಬುದ್ಧಿಶಕ್ತಿಯ ಪರಿಕಲ್ಪನೆಯನ್ನು ಮನುಷ್ಯನ ಜೀವನವನ್ನು ಉತ್ತಮಗೊಳಿಸಲೋಸುಗ ಉಪಯೋಗಿಸಬೇಕೇ ವಿನಾ ಅಳತೆ ಮಾಡಿ

Digitised by Bharatavani, CIIL

ಪರಿಮಾಣೀಕರಿಸಲೋಸುಗ ಅಲ್ಲ ಎಂದು ವಾದಿಸಿ ತನ್ನ ಬಹುಬುದ್ಧಿಶಕ್ತಿ ಸಿದ್ಧಾಂತವನ್ನು ಪರಿಚಯಿಸಿದ್ದು (1983), ಸ್ಟೀಫೆನ್ ಮಿಚೆಲ್ (1946–2000) ಮತ್ತು ಮನೋವಿಜ್ಞಾನ ವಿದಾರ್ಥಿಗಳು ಓದಲೇಬೇಕಾದ 'ಅಬ್ಜೆಕ್ಟ್ ರಿಲೇಷನ್ಸ್ ಇನ್ ಸೈಕೋಎನಲಿಟಿಕ್ ತಿಯರಿ' ಪುಸ್ತಕವನ್ನು ಜೆ ಆರ್ ಗ್ರೀನ್‌ಬರ್ಗ್ (ಹಾಲಿ ಅಮೆರಿಕದ ವಿಲಿಯಮ್ ಆ್ಯಲನ್‌ಸನ್ ವೈಟ್ ಇನ್‌ಸ್ಟಿಟ್ಯೂಟ್ ಆಫ್ ಸೈಕೈಆಟ್ರಿ, ಸೈಕೋನಾಲಿಸಿಸ್ ಆ್ಯಂಡ್ ಸೈಕಾಲಜಿಯ ತರಬೇತಿ ಕಾರ್ಯಕ್ರಮ ವಿಭಾಗದ ಬೋಧಕ ಸದಸ್ಯ) ಸಹಯೋಗದಲ್ಲಿ ಪ್ರಕಟಿಸಿದ್ದು (1983), ಮಾರ್ಗರೆಟ್ ಶಾನ್‌ಬರ್ಗರ್ ಮಾಯ್ಲರ್‌ಳ ಶಿಶು ವಿಕಾಸದ ಮನೋವಿಶ್ಲೇಷಣ ಸಿದ್ಧಾಂತದ ಪ್ರಾಬಲ್ಯವನ್ನು ಕಡಿಮೆ ಮಾಡಿದ ಗ್ರಂಥ 'ದಿ ಇಂಟರ್‌ಪರ್‌ಸನಲ್ ವರ್ಲ್ಡ್ ಆಫ್ ಇನ್‌ಫೆಂಟ' ಅನ್ನು ಡೇನಿಯಲ್ ಎನ್ ಸ್ಟರ್ನ್ (1934ಜ) ಪ್ರಕಟಿಸಿದ್ದು (1985), ಅಮೆರಿಕನ್ ಸೈಕಲಾಜಿಕಲ್ ಸೊಸೈಟಿಯ ಸ್ಥಾಪನೆ(1988), 'ಡೈಅಗ್ನೋಸ್ಟಿಕ್ ಆ್ಯಂಡ್ ಸ್ಟ್ಯಾಟಿಸ್ಟಿಕಲ್ ಮ್ಯಾನುಅಲ್ ಆಫ್ ಮೆಂಟಲ್ ಡಿಸ್‌ಆರ್ಡರ್ಸ್ 4' ಅನ್ನು ಅಮೆರಿಕನ್ ಸೈಕೈಅಟ್ರಿಕ್ಸ್ ಅಸೋಸಿಯೇಷನ್ ಪ್ರಕಟಿಸಿದ್ದು (1994), ಅಮೆರಿಕದ ಸೈನ್ಯದ ಮನೋಔಷಧವಿಜ್ಞಾನ ಕಾರ್ಯಕ್ರಮದ ಮುಖೇನ ಮನೋವಿಜ್ಞಾನಿಗಳು ಔಷಧ ಚಿಕಿತ್ಸೆಯ ಅನುಶಾಸನ ಮಾಡಲು ತೊಡಗಿದ್ದು (1999), ವಿದುನ್ಮಾನ–ಚಿಕಿತ್ಸೆಯನ್ನು ('ಇ–ತೆರಪಿ') ಅಳವಡಿಸಿಕೊಂಡು ಆಧುನಿಕ ತಾಂತ್ರಿಕಯುಗವನ್ನು ಮನೋವಿಜ್ಞಾನ ಪ್ರವೇಶಿಸಿದ್ದು (1998).

ಇಷ್ಟು ಸುದೀರ್ಘ ಕಾಲ ವಿಕಸಿಸಿರುವ ಇಂದಿನ ಮನೋವಿಜ್ಞಾನದ ಅಧ್ಯಯನಕ್ಷೇತ್ರದ ವ್ಯಾಪ್ತಿಯೂ ಬಲು ವಿಶಾಲವಾದದ್ದು. ಎಂದೇ, ಮನೋವಿಜ್ಞಾನದಲ್ಲಿ ಅನೇಕ ಶಾಖೋಪಶಾಖೆಗಳು ಇವೆ. ಇವುಗಳ ಪೈಕಿ ಕೆಲವು ಶಾಖೆಗಳ ಕಾರ್ಯಗಳನ್ನು ಪರಿಶೀಲಿಸಿದರೆ ವ್ಯಾಪ್ತಿಯ ಹರಿವಿನ ಅಗಾಧತೆಯ ಅರಿವು ಮೂಡುತ್ತದೆ. ಜ್ಞಾನಾತ್ಮಕ ಮನೋವಿಜ್ಞಾನವು ಮಾನವ ಜ್ಞಾನವನ್ನು ಹೇಗೆ ಗಳಿಸಿ, ಸಂಸ್ಕರಿಸಿ ದಾಸ್ತಾನು ಮಾಡುತ್ತಾನೆ ಎಂಬುದಕ್ಕೆ ಒತ್ತು ನೀಡುವುದರ ಜೊತೆಗೆ ಮನಸ್ಸಿನ ಆಂತರಿಕ ಪ್ರಕ್ರಿಯೆಗಳಾದ ಸಮಸ್ಯೆ ಪರಿಹರಿಸುವಿಕೆ, ಸ್ಮೃತಿ, ಸಂವಹನ, ಕಲಿಯುವಿಕೆ ಇವೇ ಮೊದಲಾದುವನ್ನು ಅಧ್ಯಯಿಸುತ್ತದೆ. ಜೀವಿತಾವಧಿಯಲ್ಲಿ ವ್ಯಕ್ತಿ ಹೇಗೆ ಮತ್ತು ಏಕೆ ಬದಲಾಗುತ್ತಾನೆ ಎಂಬುದನ್ನು ವಿಕಾಸ ಮನೋವಿಜ್ಞಾನ ಅಧ್ಯಯಿಸುತ್ತದೆ. ಮನೋರೋಗಗಳು ಮತ್ತು ಅಪಸಾಮಾನ್ಯ ವರ್ತನೆಗಳು ಅಪಸಾಮಾನ್ಯ ಮನೋವಿಜ್ಞಾನದ ಅಧ್ಯಯನ ವಸ್ತುಗಳು. ವಿಕಸನದ (ಎವಲ್ಯೂಷನ್) ಅವಧಿಯಲ್ಲಿ ಮಾಡಿಕೊಳ್ಳಬೇಕಾದ ಹೊಂದಾಣಿಕೆಗಳು ವರ್ತನೆಯ ಮೇಲೆ ಬೀರುವ ಪ್ರಭಾವದತ್ತ ಅವಧಾನ ಕೇಂದ್ರೀಕರಿಸುತ್ತದೆ ವಿಕಸನ ಮನೋವಿಜ್ಞಾನ (ಎವಲ್ಯೂಷನರಿ ಸೈಕಾಲಜಿ). ವ್ಯಕ್ತಿ ಮತ್ತು ಸಮೂಹಗಳ ನಡುವಿನ ಅನ್ಯೋನ್ಯಕ್ರಿಯೆ ಮತ್ತು ಪರಸ್ಪರ ಪ್ರಭಾವಗಳು ಸಾಮಾಜಿಕ ಮನೋವಿಜ್ಞಾನದ ಅವಧಾನ ಕೇಂದ್ರ, ಮನೋರೋಗ ನಿದಾನ, ಚಿಕಿತ್ಸೆ ಮತ್ತು ಮಾನಸಿಕ ಆರೋಗ್ಯ ಸಂರಕ್ಷಣೆಯ ವಿಧಾನಗಳು ವೈದ್ಯಕೀಯ ಮನೋವಿಜ್ಞಾನದ ಅಧ್ಯಯನ ವಿಷಯಗಳು. ಔದ್ಯಮಿಕ ಕ್ಷೇತ್ರದ ಕಾರ್ಯಕರ್ತರ ವರ್ತನೆಯ ವಿಶಿಷ್ಟ ನಿರ್ಧಾರಕಗಳು ಔದ್ಯಮಿಕ ಮನೋವಿಜ್ಞಾನದ ಅಧ್ಯಯನ ವಿಷಯ. ಶೈಕ್ಷಣಿಕ ಸನಿವೇಶಗಳಲ್ಲಿ ವ್ಯಕಿಗಳು ಏನನ್ನು ಹೇಗೆ ಕಲಿಯುತ್ತಾರೆ ಎಂಬುದರ ಅನ್ವೇಷಣೆ ಶೈಕ್ಷಣಿಕ ಮನೋವಿಜ್ಞಾನದ ಕಾರ್ಯ, ಪ್ರಾಣಿಗಳ ವರ್ತನೆ ಮತ್ತು ಮನೋವ್ಯಾಪಾರಗಳನ್ನು ಅಧ್ಯಯಿಸುತ್ತದೆ ತೌಲನಿಕ ಮನೋವಿಜ್ಞಾನ. ಮನಸ್ಸಿನ ಅಜಾಗೃತ ಭಾಗದಲ್ಲಿ ಜರುಗುವ ಪ್ರಕ್ರಿಯೆಗಳ ಹಾಗೂ ವರ್ತನೆಯ ಮೇಲೆ ಅವುಗಳ ಪ್ರಭಾವದ ಅಧ್ಯಯನ ನಿಗೂಢ ಮನೋವಿಜ್ಞಾನದ (ಡೆಪ್ತ್ ಸೈಕಾಲಜಿ) ಕಾರ್ಯ. ವ್ಯಕ್ತಿತ್ವ ಮತ್ತು ವ್ಯಷ್ಟಿ ವ್ಯತ್ಯಾಸಗಳನ್ನು ಅಧ್ಯಯಿಸುತ್ತದೆ ವ್ಯಕ್ತಿತ್ವ ಮನೋವಿಜ್ಞಾನ. ಅರ್ಥಾತ್, ಮಾನವ ವರ್ತನೆಯ ಎಲ್ಲ ಮುಖಗಳೂ ಮನೋವಿಜ್ಞಾನದ ಅಧ್ಯಯನ ವ್ಯಾಪ್ತಿಯಲ್ಲಿ ಇವೆ.

– ಎ.ವಿ.ಗೋ.

## ಮನೋವಿಜ್ಞಾನದ ಶಾಖೆಗಳು

ಮನೋವಿಜ್ಞಾನಕ್ಕೆ ಆಂಗ್ಲಭಾಷೆಯಲ್ಲಿ 'ಸೈಕಾಲಜಿ' ಎಂದು ಹೆಸರು. ಗ್ರೀಕ್ ಮೂಲದ ಈ ಪದದ ನಿಜವಾದ ಅರ್ಥ 'ಆತ್ಮವಿಜ್ಞಾನ' ಆತ್ಮವನ್ನು ಅಧ್ಯಯನ ಮಾಡುವ ಶಾಸ್ತ್ರವಾಗಿ ತತ್ವಶಾಸ್ತ್ರದಿಂದ ಮೂಡಿಬಂದ ಈ ಶಾಸ್ತ್ರ ಕ್ರಮೇಣ ಮನಸ್ಸನ್ನು ಅಧ್ಯಯನ ಮಾಡುವ ಶಾಸ್ತ್ರವಾಗಿ ರೂಪಾಂತರಗೊಂಡಿತು. ನಂತರ ಮಾನವನ ವರ್ತನೆಯನ್ನು ಅಧ್ಯಯನ ಮಾಡುವ ವಿಜ್ಞಾನದ ಶಾಖೆಗೆ ಮನೋವಿಜ್ಞಾನವೆಂದು ಹೇಳಲಾಯಿತು. ಅಂದರೆ ಮನುಷ್ಯನ ನಡೆ, ನುಡಿ, ಹಾವಭಾವ ಮುಂತಾದ 'ವೀಕ್ಷಣೀಯ' ವರ್ತನೆಗಳು ಮತ್ತು ಆಲೋಚಿಸುವಿಕೆ, ತರ್ಕಿಸುವಿಕೆ, ಸ್ಮರಿಸುವಿಕೆ ಮುಂತಾದ ಅಂತರಿಕ (ಅರ್ಥಾತ್ ಮಾನಸಿಕ) ವರ್ತನೆಗಳು ಮನೋವಿಜ್ಞಾನಿಯ ಅಧ್ಯಯನ ವಸ್ತುಗಳು ಎಂದು ಹೇಳಬಹುದು. ಮನೋವಿಜ್ಞಾನದ ಕಾರ್ಯಕ್ಷೇತ್ರದ ಬಹುಭಾಗ ಅಮೂರ್ತ, ಸಂಕೀರ್ಣ, ಮತ್ತು ಅಪರಿಮಿತ. ಅಧ್ಯಯನಕ್ಕೆ ಅನುಕೂಲ ಆಗಲಿ ಎಂದು ಮನೋವಿಜ್ಞಾನದಲ್ಲಿ ಅನೇಕ ಶಾಖೆಗಳಾಗಿ ಗುರ್ತಿಸಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಒಂದು ಕ್ಷೇತ್ರದ ಜ್ಞಾನ ಮತ್ತೊಂದು ಕ್ಷೇತ್ರದಲ್ಲಿ ಬಳಕೆಯಾಗುವುದು ಸರ್ವೇಸಾಮಾನ್ಯವಾಗಿದೆ. ಯಾವುದೇ ಒಂದು ವಿಜ್ಞಾನದಲ್ಲಿರುವ ವಿವಿಧ ರೀತಿಯ ಶಾಖೆಗಳ ಆಧಾರದ ಮೇಲೆ ಅದರ ವ್ಯಾಪ್ತಿ ಮತ್ತು ಉಪಯುಕ್ತತೆಯನ್ನು ಗುರ್ತಿಸಲಾಗುತ್ತದೆ. ಇಂದು ಮನೋವಿಜ್ಞಾನದ ಪ್ರಭಾವವಿಲ್ಲದೆ ಇರುವ ಕ್ಷೇತ್ರವೇ ಅಪರೂಪ. ಮನೋವಿಜ್ಞಾನವು ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಮನೋವಿಜ್ಞಾನದ ಜ್ಞಾನವು ವೈದ್ಯಕೀಯ, ಸಮಾಜಶಾಸ್ತ್ರ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ವಿಶೇಷವಾಗಿ ಬಳಕೆಯಾಗುತ್ತಿರುವುದು ಕಂಡುಬರುತ್ತಿದೆ. ಮನೋವಿಜ್ಞಾನದ ಕ್ಷೇತ್ರದಲ್ಲಿ ಹಲವಾರು ಅಧ್ಯಯನಗಳು ನಡೆದ ಪರಿಣಾಮವಾಗಿ ಅದು ತನ್ನ ಜ್ಞಾನವನ್ನು ವೃದ್ಧಿಸಿಕೊಂಡು ಹಲವಾರು ಶಾಖೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಈ ಶಾಖೆಗಳನ್ನು ಶುದ್ಧ ಮನೋವಿಜ್ಞಾನ (Pure Psychology) ಮತ್ತು ಅನ್ವಯಿಕ ಮನೋವಿಜ್ಞಾನ(Applied Psychology) ಶಾಖೆಗಳೆಂದು ವರ್ಗೀಕರಿಸಲಾಗಿದೆ.

## ಶುದ್ಧ ಮನೋವಿಜ್ಞಾನ ಶಾಖೆಗಳು

ಶುದ್ಧ ಮನೋವಿಜ್ಞಾನ ಶಾಖೆಗಳು ಮನೋವಿಜ್ಞಾನದ ಮೂಲತತ್ವಗಳನ್ನು ಅಭ್ಯಸಿಸಲು, ಅವಕಾಶ ಮಾಡಿಕೊಡುತ್ತವೆ. ಇವು ವರ್ತನೆಗೆ ಸಂಬಂಧಿಸಿದ 'ಏನು', 'ಏಕೆ', ಮತ್ತು 'ಹೇಗೆ' ಎಂಬ ಮೂಲ ಪ್ರಶ್ನೆಗಳಿಗೆ ಸರ್ವಸಮ್ಮತ ಉತ್ತರ ನೀಡಲು ಪ್ರಯತ್ನಿಸುತ್ತವೆ. ಈ ಶಾಖೆಯಲ್ಲಿ ನಡೆದಿರುವ ಅಧ್ಯಯನಗಳಿಂದ ಮನೋವೈಜ್ಞಾನಿಕ ಜ್ಞಾನದ ಅಭಿವೃದ್ಧಿಯಾಗಿವೆ. ಜೀವಿಗಳ ವರ್ತನೆಗಳನ್ನು ಅಧ್ಯಯನ ಮಾಡಿ ಸೂಕ್ತ ಸಿದ್ಧಾಂತಗಳನ್ನು, ತತ್ವಗಳನ್ನು ಅಥವಾ ನಿಯಮಗಳನ್ನು ರೂಪಿಸುವುದು ಈ ಶಾಖೆಗಳ ಮೂಲ ಗುರಿಯಾಗಿದೆ. ಶುದ್ಧ ಮನೋವಿಜ್ಞಾನದಡಿಯಲ್ಲಿ ಈ ಮುಂದೆ ವಿವರಿಸುವ ಶಾಖೆಗಳು ಸೇರುತ್ತವೆ.

Digitised by Bharatavani, CIIL

### ಸಾಮಾನ್ಯ ಮನೋವಿಜ್ಞಾನ

ಈ ಶಾಖೆ ವರ್ತನೆಯ ವಿವಿಧ ಆಯಾಮಗಳಾದ ಬುದ್ಧಿಶಕ್ತಿ, ವ್ಯಕ್ತಿತ್ವ, ಸ್ಮರಣೆ, ಚಿಂತನೆ, ಸಮಸ್ಯೆ ಪರಿಹಾರ, ಮನೋಭಾವ, ಅಭಿಸಾಮರ್ಥ್ಯ ಮುಂತಾದವುಗಳಿಗೆ ಸಂಬಂಧಿಸಿದ ಮೂಲಭೂತ ಪರಿಕಲ್ಪನೆಗಳನ್ನು ಮತ್ತು ಸಿದ್ಧಾಂತಗಳನ್ನು ಅಧ್ಯಯನ ಮಾಡುತ್ತದೆ. ಮಾನವನ ವರ್ತನೆಯ ಮೇಲೆ ಅನುವಂಶೀಯತೆ ಮತ್ತು ಪೋಷಣೆಗಳ ಪ್ರಭಾವ, ಮನೋವಿಜ್ಞಾನದಲ್ಲಿ ಬಳಸುವ ವಿಧಾನ ಮತ್ತು ತಂತ್ರಗಳು, ಸಂವೇಗಗಳು ಮತ್ತು ಅಭಿಪ್ರೇರಣೆಗಳ ಅಧ್ಯಯನ, ಕಲಿಕೆ, ಭಾಷೆ, ಸಮೂಹಗತಿಶಾಸ್ತ್ರ ಮುಂತಾದ ವಿಷಯಗಳ ಪರಿಚಯಾತ್ಮಕ ಅಧ್ಯಯನವೂ ಈ ಶಾಖೆಯಲ್ಲಿ ಸೇರುತ್ತವೆ. ಮನೋವಿಜ್ಞಾನದ ಇತರ ಮುಂದುವರಿದ ಶಾಖೆಗಳಲ್ಲಿ ಪರಿಣತಿ ಪಡೆಯಲು ಸಾಮಾನ್ಯ ಮನೋವಿಜ್ಞಾನದ ಅಧ್ಯಯನ ಅತ್ಯಾವಶ್ಯಕವಾಗುತ್ತದೆ.

### ಅಪಸಾಮಾನ್ಯ ಮನೋವಿಜ್ಞಾನ

'ಅಪಸಾಮಾನ್ಯ' ಎನ್ನುವ ಪದ ಸಾಪೇಕ್ಷವಾದುದು. ಯಾವ ವರ್ತನೆ ಒಂದು ವಯಸ್ಸು ಅಥವಾ ಸಂಸ್ಕೃತಿಯಲ್ಲಿ ಅಪಸಾಮಾನ್ಯವೆಂದು ಪರಿಗಣಿತವಾಗುವುದೋ ಅಂಥ ವರ್ತನೆ ಮತ್ತೊಂದು ವಯಸ್ಸು ಅಥವಾ ಸಂಸ್ಕೃತಿಯಲ್ಲಿ ಸಾಮಾನ್ಯವಾದುದೆನಿಸಬಹುದು. ಮಾನಸಿಕ ರೋಗಗಳಿಂದ ಬಳಲುತ್ತಿರುವವರ ಲಕ್ಷಣಗಳು, ಅವರ ವರ್ತನೆ ವೈಪರೀತ್ಯಗಳು ಹಾಗೂ ಮಾನಸಿಕ ಅನಾರೋಗ್ಯದ ಕಾರಣಗಳು, ಜೊತೆಗೆ ಮಾನಸಿಕ ಅವ್ಯವಸ್ಥೆಗಳೆನಿಸಿದ ವಿಷಾದ, ಸೀಳು ವ್ಯಕ್ತಿತ್ವ (ಸ್ಕಿಜೋಫ್ರಿನಿಯಾ) ಅತಿಯಾದ ಭೀತಿ (ಫೋಬಿಯಾ) ಮುಂತಾದ ಸಾಮಾನ್ಯವಾಗಿ ಅಪಸಾಮಾನ್ಯ ವರ್ತನ ವಿನ್ಯಾಸಗಳೆಂದು ಗುರ್ತಿಸಲ್ಪಡುವ ವರ್ತನ ಸಮಸ್ಯೆಗಳು ಅಪಸಾಮಾನ್ಯ ಮನೋವಿಜ್ಞಾನದ ಅಧ್ಯಯನ ವಿಷಯಗಳಾಗುತ್ತವೆ. ಅಪಸಾಮಾನ್ಯ ಮನೋವಿಜ್ಞಾನದಿಂದ ಮಾನಸಿಕ ರೋಗಗಳ ಸ್ವರೂಪ, ಲಕ್ಷಣಗಳು, ಕಾರಣಗಳು ತಿಳಿಯುತ್ತವೆ.

### ಶಿಶು/ವಿಕಾಸಾತ್ಮಕ ಮನೋವಿಜ್ಞಾನ

ಈ ಶಾಖೆ ಮಕ್ಕಳು, 'ಕಿಶೋರರು ಮತ್ತು ವಯಸ್ಕರ ಬೆಳವಣಿಗೆ ಮತ್ತು ವಿಕಾಸಕ್ಕೆ ಸಂಬಂಧಪಟ್ಟ ಪರಿಕಲ್ಪನೆಗಳನ್ನು, ಸಿದ್ಧಾಂತಗಳನ್ನು ಅಧ್ಯಯನ ಮಾಡುತ್ತದೆ. ಇದು ವ್ಯಕ್ತಿಯ ವಿಕಾಸದ ವಿವಿಧ ಹಂತಗಳನ್ನು ಅಧ್ಯಯನ ಮಾಡುತ್ತದೆ. ಮಕ್ಕಳ ಮನೋವಿಜ್ಞಾನದಲ್ಲಿ ಮಗುವಿನ ಬೆಳವಣಿಗೆ ಮತ್ತು ವಿಕಾಸ, ಸಾಮರ್ಥ್ಯಗಳ ವಿಕಾಸದಲ್ಲಿ ಅನುವಂಶೀಯತೆ ಮತ್ತು ಪರಿಸರಗಳ ಪ್ರಭಾವ, ಅವರ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಸಂವೇಗಾತ್ಮಕ ಕ್ಷೇತ್ರಗಳಲ್ಲಿ ಕಂಡುಬರುವ ವಿಕಾಸವನ್ನು ಅಧ್ಯಯನ ಮಾಡುತ್ತದೆ ಆರ್ನಾಲ್ಡ್ ಗೆಸೆಲ್, ಸ್ಟ್ಯಾನ್ಲೆ ಹಾಲ್, ಜೀನ್‌ಪಿಯಾಜೆ, ಅನ್ನಾ ಫ್ರಾಯ್‌ಡಿ, ಎರಿಕ್‌ಸನ್ ಮುಂತಾದವರು ವಿಕಾಸ ಮನೋವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡಿರುವ ಪ್ರಸಿದ್ಧ ಮನೋವಿಜ್ಞಾನಿಗಳಾಗಿದ್ದಾರೆ. ಗರ್ಭಪೂರ್ವ ಹಂತದಿಂದ ಉತ್ತರ ಬಾಲ್ಯಾವಸ್ಥೆವರೆಗಿನ ವಿಕಾಸ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವ ಶಾಖೆಯನ್ನು ಶಿಶು ಮನೋವಿಜ್ಞಾನವೆಂದೂ, ಕಿಶೋರಾವಸ್ಥೆಯನ್ನು ಅಧ್ಯಯನ ಮಾಡುವ ಶಾಖೆಯನ್ನು ಕಿಶೋರ ಮನೋವಿಜ್ಞಾನವೆಂದೂ, ವೃದ್ಧಾವಸ್ಥೆಯನ್ನು ಅಧ್ಯಯನ ಮಾಡುವ ಶಾಖೆಯನ್ನು ವೃದ್ಧಾನಸ್ಥೆ ಮನೋವಿಜ್ಞಾನವೆಂದೂ ಹೇಳಲಾಗುತ್ತದೆ. ಇತ್ತೀಚೆಗೆ ವಯಸ್ಕಾವಸ್ಥೆ ಮತ್ತು ವಿಜ್ಞಾನ ಪ್ರತ್ಯೇಕ ಶಾಖೆಯಾಗಿ ವಿಕಸಿತಗೊಂಡಿದೆ. ಜೀವನಪರ್ಯಂತ ವಿಕಾಸವನ್ನು ಅಧ್ಯಯನ ಮಾಡುವ ಶಾಖೆ ವಿಕಾಸ ಮನೋವಿಜ್ಞಾನವೆನ್ನಿಸುತ್ತದೆ. ಈ ಶಾಖೆಯ ತತ್ವಗಳು / ನಿಯಮಗಳು ಶಿಶುಗಳನ್ನು ಬೆಳೆಸುವುದರಲ್ಲಿ ಮಾರ್ಗದರ್ಶನ ನೀಡುವುದರಲ್ಲಿ ಬಳಕೆಗೆ ಬಂದಿವೆ. ಈ ಶಾಖೆಯನ್ನು ಇತ್ತೀಚೆಗೆ ಜೀವಿತಾವಧಿ ವಿಕಾಸ ಮನೋವಿಜ್ಞಾನ (Lifespan Psychology) ಎಂದು ಹೇಳುತ್ತಾರೆ.

### ವಿಭೇದಾತ್ಮಕ ಮನೋವಿಜ್ಞಾನ

ಮಾನವರಲ್ಲಿ ಕಂಡುಬರುವ ವೈಯಕ್ತಿಕ ಭಿನ್ನತೆಗಳ ಸ್ವರೂಪ, ಅದನ್ನು ಅಳತೆ ಮಾಡುವ ವಿಧಾನಗಳು ಮತ್ತು ಅವುಗಳ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ ಈ ಶಾಖೆ ಅಧ್ಯಯನ ಮಾಡುತ್ತದೆ. ಬುದ್ಧಿಶಕ್ತಿ, ಆಸಕ್ತಿ, ಮನೋಧೋರಣೆಗಳು, ಸಂವೇಗಗಳು ಮುಂತಾದ ವಿವಿಧ ಕ್ಷೇತ್ರಗಳಲ್ಲಿನ ವ್ಯಕ್ತಿಗತ ವ್ಯತ್ಯಾಸಗಳನ್ನು ಅಧ್ಯಯನ ಮಾಡುವುದು ಈ ಶಾಖೆಯ ಕಾರ್ಯವಾಗಿದೆ.

### ಸಾಮಾಜಿಕ ಮನೋವಿಜ್ಞಾನ

ಈ ಶಾಖೆ ಸಾಮಾಜಿಕ ಸಂದರ್ಭಗಳಲ್ಲಿ ವ್ಯಕ್ತಿಯ ವರ್ತನೆಗಳನ್ನು ಅಧ್ಯಯನ ಮಾಡುತ್ತದೆ. ಮಾನವ ಸಾಮಾಜಿಕ ಜೀವಿ. ಮಾನವನ ಅನೇಕ ವರ್ತನೆಗಳು ಅವನು ಜೀವಿಸುವ ಸಾಮಾಜಿಕ ಪರಿಸರದಲ್ಲಿ ಉಂಟಾಗುತ್ತವೆ ಮತ್ತು ಅದರಿಂದ ಪ್ರಭಾವಿತವಾಗುತ್ತವೆ. ಸಾಮಾಜೀಕರಣ, ಪ್ರಚಾರ, ಅಂತರ ಸಾಮಾಜಿಕ ಘರ್ಷಣೆಗಳು, ಜನಾಂಗೀಯ ಪೂರ್ವಗ್ರಹಗಳು, ಸಾಮಾಜಿಕ ಪ್ರತ್ಯಕ್ಷಾನುಭವ, ವಿವಿಧ ರೀತಿಯ ಸಾಮಾಜಿಕ ಪ್ರಕ್ರಿಯೆಗಳು ಮುಂತಾದವುಗಳ ಅಧ್ಯಯನ ಈ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಸಾಮಾಜಿಕ ಮನೋವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಪ್ರಸಿದ್ಧ ಹೆಸರುಗಳೆಂದರೆ ಆಲ್‌ಪೋರ್ಟ್, ಈಲಿಯಟ್' ಅರಾನ್‌ಸನ್ ಮುಂತಾದವರು.

### ಶಾರೀರಿಕ ಮನೋವಿಜ್ಞಾನ

ಈ ಶಾಖೆ, ಮಾನವ ವರ್ತನೆಗಳ ದೈಹಿಕ ಮತ್ತು ಶಾರೀರಿಕ (Phisiological) ಆಧಾರಗಳನ್ನು ಅಧ್ಯಯನ ಮಾಡುತ್ತದೆ. ಅನೇಕ ಅಂಗಾಂಗಗಳು ಮತ್ತು ಅಂಗಾಂಗಗಳ ವ್ಯವಸ್ಥೆಗಳನ್ನು ಹೊಂದಿರುವ ಮಾನವ ದೇಹ ವರ್ತನೆಗಳ ಒಂದು ಪ್ರಮುಖ ಆಧಾರವಾಗಿದೆ. ಪ್ರಧಾನವಾಗಿ ಈ ಶಾಖೆ ಮಿದುಳು ಮತ್ತು ನರಮಂಡಲದ ಕಾರ್ಯವಿಧಾನಗಳು, ನರಮಂಡಲದ ಮೂಲಲಕ್ಷಣಗಳು, ಬಾಹ್ಯಜಗತ್ತಿನ ಮತ್ತು ಆಂತರಿಕ ಸುದ್ದಿಯನ್ನು ಮಿದುಳು ಪಡೆಯುವಿಕೆ, ಸಂವೇದನೆ, ಅರಿವು, ಅಭಿಪ್ರೇರಣೆ, ಸಂವೇಗ, ಕಲಿಕೆ ಇಂತಹ ಕ್ರಿಯೆಗಳಿಗೆ ನರಮಂಡಲದಲ್ಲಿ ಆಗುವ ಬದಲಾವಣೆಗಳ ಸ್ವರೂಪವೇ ಈ ಶಾಖೆಯ ಅಧ್ಯಯನ ವಸ್ತು. ಅಂತಸ್ರಾವ ಗ್ರಂಥಿಗಳು ಸ್ರವಿಸುವ ಹಾರ್ಮೋನುಗಳು, ಎನ್ಜೈಮುಗಳು (ಕಿಣ್ವಗಳು) ಮುಂತಾದ ರಾಸಾಯನಿಕ ದ್ರವ್ಯಗಳು ವರ್ತನೆಯ ಮೇಲೆ ಬೀರುವ ಪ್ರಭಾವವೂ ಈ ಶಾಖೆಯ ಅಧ್ಯಯನಕ್ಕೆ ಒಳಪಡುತ್ತವೆ.

### ಪ್ರಾಯೋಗಿಕ ಮನೋವಿಜ್ಞಾನ

ಪ್ರಾಣಿಗಳ ಮತ್ತು ಮಾನವರ ಮಾನಸಿಕ ಪ್ರಕ್ರಿಯೆ ಮತ್ತು ವರ್ತನೆಗಳನ್ನು ಪ್ರಯೋಗಶಾಲೆ ಅಥವಾ ನಿಯಂತ್ರಿತ ಸನ್ನಿವೇಶಗಳಲ್ಲಿ ವೈಜ್ಞಾನಿಕ ಪ್ರಯೋಗಗಳ ಮೂಲಕ ಅಧ್ಯಯನ ಮಾಡುವುದೇ ಮನೋವಿಜ್ಞಾನದ ಈ ಶಾಖೆಯ ಪ್ರಮುಖ ಕಾರ್ಯ. ಪ್ರಾಯೋಗಿಕ ಮನೋವಿಜ್ಞಾನಿಗಳು ರೂಪಿಸಿದ ಮನೋವೈಜ್ಞಾನಿಕ ನಿಯಮಗಳನ್ನು ಅನ್ವಯಿಕ ಕ್ಷೇತ್ರದಲ್ಲಿ ಉಪಯೋಗಿಸುತ್ತಾರೆ.


Digitised by Bharatavani, CIIL

**ತೌಲನಿಕ ಮನೋವಿಜ್ಞಾನ/ಪ್ರಾಣಿಮನೋವಿಜ್ಞಾನ**

ಮನೋವಿಜ್ಞಾನ ಬಹುತೇಕ ಮಾನವನ ವರ್ತನೆಯನ್ನು ಅಭ್ಯಸಿಸುವ ವಿಜ್ಞಾನವಾಗಿದ್ದರೂ ಅದು ತನ್ನ ವ್ಯಾಪ್ತಿಯನ್ನು ಎಲ್ಲ ಜೀವಿಗಳ ಸ್ವಭಾವವನ್ನು ಅಭ್ಯಸಿಸಲು ವಿಸ್ತರಿಸಿತು. ಪ್ರಾಣಿಮನೋವಿಜ್ಞಾನ ಎಷ್ಟರಮಟ್ಟಿಗೆ ಪ್ರಾಮುಖ್ಯವನ್ನು ಪಡೆದುಕೊಂಡಿದೆಯೆಂದರೆ ಮಾನವನ ಸ್ವಭಾವದ ಅರಿವಿಗೆ ಪ್ರಾಣಿಗಳ ಮೇಲೆ ನಡೆಸಿರುವ ಪ್ರಯೋಗಗಳು, ಅವುಗಳಿಂದ ನಿರ್ಣಯಿಸಲ್ಪಟ್ಟ ತತ್ವಗಳು ತಳಹದಿಯೂ ಮತ್ತು ಪ್ರಮಾಣವೂ ಆಗಿವೆ. ಪ್ರಾಣಿಯ ವರ್ತನೆಯ ಮೂಲಕ ಮನುಷ್ಯನ ವರ್ತನೆಯ ತಿಳುವಳಿಕೆ ನೀಡುವುದರೊಂದಿಗೆ ಮಾನವ ಹೇಗೆ ಪ್ರಾಣಿಗಿಂತ ಭಿನ್ನ ಎಂಬುದನ್ನು ಈ ಶಾಖೆ ತಿಳಿಸಿಕೊಡುತ್ತದೆ.

**ಅನ್ವಯಿಕ ಮನೋವಿಜ್ಞಾನ ಶಾಖೆಗಳು**

ಶುದ್ಧ ಮನೋವಿಜ್ಞಾನದ ವಿವಿಧ ಶಾಖೆಗಳು ರೂಪಿಸುವ ಸಿದ್ಧಾಂತಗಳನ್ನು ತತ್ವಗಳನ್ನು ಮತ್ತು ನಿಯಮಗಳನ್ನು ಜೀವನರಂಗದ ವಿವಿಧ ಕ್ಷೇತ್ರಗಳಿಗೆ ಅನ್ವಯಿಸಿ ಮಾನವ ಕುಲದ ಸುಧಾರಣೆಗೆ ಯತ್ನಿಸುವ ಮನೋವಿಜ್ಞಾನಕ್ಕೆ ಅನ್ವಯಿಕ ಮನೋವಿಜ್ಞಾನ ಎಂದು ಹೇಳಲಾಗುತ್ತದೆ. ಅನ್ವಯಿಕ ಮನೋವಿಜ್ಞಾನದಲ್ಲಿ ಕಂಡುಬರುವ ಕೆಲವು ಪ್ರಮುಖ ಶಾಖೆಗಳನ್ನು ಮುಂದೆ ವಿವರಿಸಿದೆ.

**ಶೈಕ್ಷಣಿಕ ಮನೋವಿಜ್ಞಾನ**

ಶೈಕ್ಷಣಿಕ ಮನೋವಿಜ್ಞಾನವು ಮನೋವಿಜ್ಞಾನದ ಒಂದು ಮುಖ್ಯ ಅನ್ವಯಿಕ ಶಾಖೆಯಾಗಿದೆ. ಮನೋವಿಜ್ಞಾನದ ವಿವಿಧಶಾಖೆಗಳಲ್ಲಿ ಲಭ್ಯವಿರುವ ಶಿಕ್ಷಣ ಕ್ಷೇತ್ರಕ್ಕೆ ಉಪಯುಕ್ತವಾದ ತತ್ವಗಳನ್ನು ಬಳಸಿಕೊಂಡು ಶಿಕ್ಷಣದ ಗುರಿಗಳ ಸಾಧನೆಗೆ ಇದು ಸಹಾಯ ಮಾಡುತ್ತದೆ. ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕೆ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಯೋಜಿಸಲು ಮತ್ತು ನಿರ್ದೇಶಿಸಲು ಅಗತ್ಯವಾದ ಮನೋವೈಜ್ಞಾನಿಕ ತತ್ವಗಳನ್ನು ಹಾಗೂ ತಂತ್ರಗಳನ್ನು ಅನ್ವಯಿಸಿಕೊಳ್ಳಲು ಇದು ಸಹಾಯ ಮಾಡುತ್ತದೆ. ಶೈಕ್ಷಣಿಕ ಮನೋವಿಜ್ಞಾನದ ಪ್ರಮುಖ ಕಾರ್ಯವೆಂದರೆ ಶೈಕ್ಷಣಿಕ ಪ್ರಕ್ರಿಯೆಯ ತಾತ್ವಿಕ ಮತ್ತು ಕ್ರಿಯಾತ್ಮಕ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರು ಮತ್ತು ಶಿಕ್ಷಣ ಪ್ರಕ್ರಿಯೆಯಲ್ಲಿ ತೊಡಗಿರುವವರಿಗೆ ಸಹಾಯ ಮಾಡುವುದಾಗಿದೆ.

**ಚಿಕಿತ್ಸಕ ಮನೋವಿಜ್ಞಾನ**

ಇದು ಮನೋವಿಜ್ಞಾನದ ಅತಿದೊಡ್ಡ ಮತ್ತು ಜನಪ್ರಿಯ ಕ್ಷೇತ್ರ. ಚಿಕಿತ್ಸಕ ಮನೋವಿಜ್ಞಾನಿಗಳು ಮಾನಸಿಕ ಸಮಸ್ಯೆಗಳನ್ನು ವ್ಯಕ್ತಿಗಳ ಸಮಸ್ಯೆಗಳ ಕಾರಣಗಳ ವಿಶ್ಲೇಷಣೆ (ನಿದಾನ) ಚಿಕಿತ್ಸೆ ಮತ್ತು ನಿವಾರಣ ಕ್ರಮಗಳ ಬಗ್ಗೆ ವ್ಯವಹರಿಸುತ್ತಾರೆ. ಚಿಕಿತ್ಸಕ ಮನೋವಿಜ್ಞಾನಿಗಳು ಅತಿಭೀತಿ (ಅತಾರ್ಕಿಕ ಭೀತಿ), ಉನ್ಮಾದ-ವಿಷಾದದ ಅವ್ಯವಸ್ಥೆಗಳು ಮತ್ತು ಸೀಳು ವ್ಯಕ್ತಿತ್ವ ಮುಂತಾದ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ.

**ಔದ್ಯೋಗಿಕ ಮನೋವಿಜ್ಞಾನ**

ಯಾವುದೇ ಉದ್ಯೋಗಕ್ಕೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿದಾಗ ಮಾತ್ರ ಉತ್ಪಾದನೆ ಹೆಚ್ಚಾಗಲು ಸಾಧ್ಯ ಮತ್ತು ಇದರಿಂದ ಉದ್ಯೋಗಿಗೂ ಸಹ ವೃತ್ತಿಯಲ್ಲಿ ತೃಪ್ತಿ ದೊರೆಯುತ್ತದೆ. ಯಾವ ಉದ್ಯೋಗಕ್ಕೆ ಎಂತಹ ವ್ಯಕ್ತಿಯನ್ನು ಆಯ್ಕೆ ಮಾಡಬೇಕು? ಉದ್ಯೋಗಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಹೇಗೆ? ಕಾರ್ಯನಿರತರಾಗಿರುವ ಉದ್ಯೋಗಿ ಸದಾ ಕಾರ್ಯನಿಷ್ಠರಾಗಿರುವಂತೆ ಮಾಡುವುದು ಹೇಗೆ? ಇಂತಹ ಪ್ರಶ್ನೆಗಳನ್ನು ಉತ್ತರಿಸುವುದು ಮತ್ತು ತತ್ಸಬಂದದ ಕಾರ್ಯವಿಧಾನ ರೂಪಿಸುವುದು ಈ ಶಾಖೆಯ ಪ್ರಮುಖ ಕಾರ್ಯವಾಗಿದೆ.

ಈ ಎಲ್ಲ ಶಾಖೆಗಳ ಕೊಡುಗೆ ಅಪಾರವಾದುದು. ಒಂದು ಶಾಖೆಯ ವಿಷಯ ಮತ್ತೊಂದು ಶಾಖೆಯ ವಿಷಯದೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿದೆ. ಮನೋವಿಜ್ಞಾನದ ಶಾಖೆಗಳಲ್ಲಿ ಈ ರೀತಿ ಪರಸ್ಪರ ಸಂಬಂಧವಿರುವುದರಿಂದಲೇ ಮನೋವಿಜ್ಞಾನವು ಸರ್ವವ್ಯಾಪಿಯಾಗಿ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ.

ಇತ್ತೀಚಿನ ದಶಕಗಳಲ್ಲಿ ಮನೋವಿಜ್ಞಾನದಲ್ಲಿ ಅನೇಕ ಬೆಳವಣಿಗೆಗಳಾಗಿದ್ದು ಅನೇಕ ನೂತನ ಅನ್ವಯಿಕ ಕ್ಷೇತ್ರಗಳು ಬೆಳೆದಿವೆ. ಇದರಿಂದಾಗಿ ಮನೋವಿಜ್ಞಾನದ ವ್ಯಾಪ್ತಿ ಇನ್ನೂ ವಿಶಾಲವಾಗಿದೆ. ಇಂಥ ಮನೋವಿಜ್ಞಾನದ ಹೊಸ ಶಾಖೆಗಳನ್ನು ಈ ಮುಂದೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಸಮಾಲೋಚನ ಮನೋವಿಜ್ಞಾನ (Counselling Psychology)**

ಇದು ಮನೋವಿಜ್ಞಾನದ ಮುಖ್ಯ ಮತ್ತು ಜನಪ್ರಿಯ ಕ್ಷೇತ್ರಗಳಲ್ಲಿ ಒಂದಾಗಿದೆ. ಸಮಾಲೋಚನ ಮನೋವಿಜ್ಞಾನಿಗಳು ದಿನನಿತ್ಯದ ಒತ್ತಡಗಳಿಗೆ ಒಳಗಾಗುವಿಕೆ, ಉದ್ಯೋಗ ಯೋಜಿಸುವಿಕೆ, ಶೈಕ್ಷಣಿಕ ಕಾರ್ಯಾಚರಣೆ ವಿವಾಹ ಹಾಗೂ ಕುಟುಂಬದ ತೊಂದರೆಗಳು ಇತ್ಯಾದಿಗಳೊಂದಿಗೆ ವ್ಯವಹರಿಸುತ್ತಾರೆ. ವಿವಿಧ ಸಮಸ್ಯೆಗಳನ್ನು ಸಮಾಲೋಚಕರು (Counsellor) ವ್ಯವಸ್ಥಿತವಾಗಿ ಅಧ್ಯಯನ ಮಾಡಿ ಅವುಗಳ ಕಾರಣಗಳನ್ನು ಪತ್ತೆ ಮಾಡಿ ಸೂಕ್ತ ಸಮಾಧಾನ ಸಲಹೆ ನೀಡುತ್ತಾರೆ. ಸಮಾಲೋಚನ ಮನೋವಿಜ್ಞಾನ ಇತ್ತೀಚಿಗೆ ಹೆಚ್ಚು ಜನಪ್ರಿಯತೆ ಪಡೆಯುತ್ತಿದೆ.

**ಜಾಹೀರಾತು ಮನೋವಿಜ್ಞಾನ (Advertising Psychology) –**

ಒಂದು ಕೈಗಾರಿಕೆಯಲ್ಲಿ ಏನನ್ನೇ ಉತ್ಪಾದಿಸಿದರೂ ಅದನ್ನು ಸಾರ್ವಜನಿಕರಿಗೆ ಮಾರಾಟ ಮಾಡಬೇಕು. ಜಾಹೀರಾತು ತಯಾರಿಸುವುದೇ ಒಂದು ದೊಡ್ಡ ಉದ್ಯೋಗ. ಆಕರ್ಷಕ ಶೀರ್ಷಿಕೆಗಳು ಮಾರಾಟಕ್ಕೆ ಪುಷ್ಟಿ ನೀಡುತ್ತವೆ. ಮನೋವಿಜ್ಞಾನಿಗಳ ಗಮನಾರ್ಹ ಕೊಡುಗೆಯು ಜಾಹೀರಾತು ಮತ್ತು ಮಾರಾಟ ವ್ಯವಸ್ಥೆ ಕ್ಷೇತ್ರಗಳಲ್ಲಿ ಉಂಟಾಗಿದೆ. ಪ್ರತ್ಯಕ್ಷಾನುಭವ, ಅವಧಾನ, ಆಸಕ್ತಿಗಳು ಮತ್ತು ಮಾನವರ ಅಗತ್ಯಗಳ ಮನೋವೈಜ್ಞಾನಿಕ ತತ್ವಗಳನ್ನು ಈ ಕ್ಷೇತ್ರದಲ್ಲಿ ಉಪಯೋಗಿಸಿಕೊಳ್ಳುತ್ತಾರೆ.

**ಸಂಘಟನಾತ್ಮಕ ಮನೋವಿಜ್ಞಾನ (Organisational Psychology)**

– ಈ ಶಾಖೆ ಮಾನವನ ಉದ್ಯಮಗಳು, ಕಾರ್ಯಕ್ಷೇತ್ರಗಳು ಮತ್ತು ಕೈಗಾರಿಕೆಗಳ ಸಂದರ್ಭಗಳಲ್ಲಿ ಮಾನವನ ವರ್ತನೆಯನ್ನು ಅಧ್ಯಯನ ಮಾಡುತ್ತದೆ. ಕಾರ್ಯವರ್ತನೆ, ಕಾರ್ಯೋತ್ಪಾದನೆ, ಕಾರ್ಯತೃಪ್ತಿ, ಸಿಬ್ಬಂದಿ ವರ್ಗದವರ ಬೇಸರಿಕೆ (Burnout), ನಿವೃತ್ತಿ, ಕೆಲಸದ ಒತ್ತಡ, ವಸ್ತುಗಳ ಉಪಭೋಗ, ಸಂಘಟನಾತ್ಮಕ ನಾಯಕತ್ವ, ಮನೋಪರೀಕ್ಷಣಗಳ ವಿಕಾಸ, ಕಾರ್ಯವಿಶ್ಲೇಷಣೆ, ಕಾರ್ಯಾಚರಣೆ, ಮೌಲ್ಯಮಾಪನ ಮುಂತಾದ ವಿಷಯಗಳ ಅಧ್ಯಯನದ ಬಗ್ಗೆ ಈ ಶಾಖೆ ಗಮನಹರಿಸುತ್ತದೆ. ಸಂಘಟನೆಯಲ್ಲಿ ಕೆಲಸ ಮಾಡುವವರ ಮನೋವಿಜ್ಞಾನವನ್ನು ವಿಶ್ಲೇಷಿಸಿ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಶಾಖೆಯ ಮನೋವಿಜ್ಞಾನಿಗಳು ಕೆಲಸ ಮಾಡುತ್ತಾರೆ.

**ಸ್ವಯಂ ಮತ್ತು ವ್ಯಕ್ತಿತ್ವ ಮನೋವಿಜ್ಞಾನ (Self and Personality Psychology)** – ವ್ಯಕ್ತಿ ತನ್ನ ಬಗ್ಗೆ ಹೊಂದಿರುವ ಪರಿಕಲ್ಪನೆಯನ್ನು ಸ್ವಯಂ ಎನ್ನುತ್ತೇವೆ. ವ್ಯಕ್ತಿ ನಿಜವಾಗಿ ಹೇಗಿದ್ದಾನೆ ಎನ್ನುವುದೇ ಅವನ

Digitised by Bharatavani, CIIL

ಸ್ವಯಂ ಆಗಿರುತ್ತದೆ. ಇದಕ್ಕೂ, ವ್ಯಕ್ತಿಯು ತನ್ನ ಬಗ್ಗೆ ಹೊಂದಿರುವ ಸ್ವಯಂನ ಪರಿಕಲ್ಪನೆಗೂ ವ್ಯತ್ಯಾಸವಿರುತ್ತದೆ. ಸ್ವಯಂ ವ್ಯಕ್ತಿತ್ವದ ಕೇಂದ್ರವಾಗಿರುತ್ತದೆ. ಸ್ವಯಂ ಮತ್ತು ವ್ಯಕ್ತಿತ್ವವನ್ನೇ ವಿವರವಾಗಿ ಅಧ್ಯಯನ ಮಾಡುವ ಈ ಶಾಖೆ ತನ್ನದೇ ಆದ ಪ್ರತ್ಯೇಕ ಅಸ್ತಿತ್ವವನ್ನು ಪಡೆದುಕೊಂಡಿದೆ.

**ನರಕೋಶಾತ್ಮಕ ಮನೋವಿಜ್ಞಾನ (Neuro Psychology)** – ಮಾನವನ ಮೆದುಳಿನ ರಚನೆ, ಕಾರ್ಯಗಳಿಗೂ, ವರ್ತನೆಗೂ ನಿಕಟವಾದ ಸಂಬಂಧವಿದೆ. ಮೆದುಳಿನಲ್ಲಿ ಯಾವುದೇ ರೀತಿಯ ತೊಂದರೆಗಳುಂಟಾದಲ್ಲಿ ಅವು ವರ್ತನೆಯಲ್ಲಿ ಪ್ರತಿಫಲಿತವಾಗುತ್ತವೆ. ಮಾನವನ ಬಹಳಷ್ಟು ವರ್ತನೆ ಸಮಸ್ಯೆಗಳು, ನಿರ್ದಿಷ್ಟ ಕಲಿಕಾ ತೊಂದರೆಗಳು, ಸಂವೇಗಾತ್ಮಕ ಸಮಸ್ಯೆಗಳಿಗೆ ಮೂಲತಃ ಮೆದುಳಿನ ದೋಷಗಳು ಕಾರಣವಾಗಿರುತ್ತವೆ. ಮೆದುಳು ಮತ್ತು ವರ್ತನೆಗೆ ಇರುವ ಸಂಬಂಧವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಹೊಸ ಶಾಖೆಯೇ ನರಕೋಶಾತ್ಮಕ ಮನೋವಿಜ್ಞಾನ. ಮೆದುಳಿನ ಕಾರ್ಯಗಳನ್ನು ನಿಖರವಾಗಿ ಅಳತೆ ಮಾಡುವ ಕ್ಯಾಟ್ ಸ್ಕ್ಯಾನ್, ಸೋನೋಗ್ರಫ಼ಿ ಮೆದುಳು ಅಲೆಗಳ ದಾಖಲೆ (EEG) ಮುಂತಾದ ವಿಧಾನಗಳನ್ನು ಕಂಡುಹಿಡಿದಿರುವುದರಿಂದ ಈ ಶಾಖೆಗೆ ಮಹತ್ವ ಬಂದಿದೆ. ಇದರಲ್ಲಿ ಅನೇಕ ಉಪಶಾಖೆಗಳು ಬೆಳೆದಿವೆ.

**ಸಂಜ್ಞಾನಾತ್ಮಕ ಮನೋವಿಜ್ಞಾನ (Cognitive Psychology)**

ಪ್ರತ್ಯಕ್ಷಾನುಭವ, ಚಿಂತನ ಕೌಶಲ್ಯಗಳು, ಮೇಲ್ಮಟ್ಟದ ಅರಿವು ಪಡೆಯುವುದು (ಪರಾ–ಸಂಜ್ಞಾನ) ಪ್ರಜ್ಞೆಯ ಮೇಲ್ಮಟ್ಟದ ಸ್ತರಗಳು, ಮೇಲ್ಮಟ್ಟದ ಮಾನಸಿಕ ಸಾಧನೆಗಳು ಮುಂತಾದ ಪ್ರಜ್ಞೆಗೆ ಸಂಬಂಧಿಸಿದ ಮನೋವೈಜ್ಞಾನಿಕ ವಿಷಯಗಳನ್ನು ಅಧ್ಯಯನ ಮಾಡುವ ಶಾಖೆಯೇ ಸಂಜ್ಞಾನಾತ್ಮಕ ಮನೋವಿಜ್ಞಾನವಾಗಿದೆ.

**ಆರೋಗ್ಯ ಮನೋವಿಜ್ಞಾನ (Health Psychology )**

ಮಾನವನ ದೈಹಿಕ ಆರೋಗ್ಯದ ಮೇಲೆ ದೈಹಿಕ, ಜೈವಿಕ ಅಂಶಗಳು ಪ್ರಭಾವಬೀರುವಂತೆ ಮಾನಸಿಕ ಅಂಶಗಳೂ ಪ್ರಭಾವ ಬೀರುತ್ತವೆ ಎನ್ನುವುದು ಅಧ್ಯಯನಗಳಿಂದ ಕಂಡು ಬಂದಿದೆ. ವ್ಯಕ್ತಿಯ ನಂಬಿಕೆಗಳು, ಸಾಂಪ್ರದಾಯಿಕ ಔಷಧಗಳು ಮತ್ತು ಚಿಕಿತ್ಸಾಕ್ರಮಗಳು, ನಂಬಿಕೆ ಆಧಾರಿತ ಚಿಕಿತ್ಸೆ, ಹಿಂದಿನಿಂದ ಫಲಪ್ರದವಾಗಿ ಅನುಸರಿಸಿಕೊಂಡು ಬಂದಿರುವ ಆಹಾರ ಸೇವನೆ ಕ್ರಮಗಳು–ಈ ಎಲ್ಲಾ ಅಂಶಗಳು ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಈ ಎಲ್ಲಾ ಅಂಶಗಳನ್ನು ಆರೋಗ್ಯ ಮನೋವಿಜ್ಞಾನ ಅಧ್ಯಯನ ಮಾಡುತ್ತದೆ.

**ಪರಿಸರ ಮನೋವಿಜ್ಞಾನ (Environmental Psychology)**

ಈ ಶಾಖೆ ಪರಿಸರಕ್ಕೂ ಮಾನವ ಜೀವನಕ್ಕೂ ಇರುವ ಸಂಬಂಧಗಳನ್ನು, ಅಂತರ್‌ಕ್ರಿಯೆಗಳನ್ನು ಮನೋವೈಜ್ಞಾನಿಕ ನಿಲುವಿನಿಂದ ಅಧ್ಯಯನ ಮಾಡುತ್ತದೆ. ಪರಿಸರ ಸಂಕೀರ್ಣವಾಗುತ್ತಾ ಬಂದು ಅನೇಕ ಮಲಿನತೆಗಳಿಗೆ ಒಳಗಾಗಿ ಮಾನವ ಜೀವನಕ್ಕೆ ಸಮಸ್ಯೆ ಒಡ್ಡುತ್ತಿರುವುದರಿಂದ ಈ ಶಾಖೆಗೆ ಮಹತ್ವ ಬಂದಿದೆ.

**ಧನಾತ್ಮಕ ಮನೋವಿಜ್ಞಾನ (Positive Psychology)**

ಜೀವನದಲ್ಲಿನ ಸಂತೋಷ, ತೃಪ್ತಿ, ಧನಾತ್ಮಕ ಅನುಭವಗಳು, ಮೇಲ್ಮಟ್ಟದ ಅನುಭವಗಳು, ಮೌಲ್ಯಗಳು, ಚಾರಿತ್ರ್ಯದ ಬಲ, ಧನಾತ್ಮಕ ಆಸಕ್ತಿಗಳು, ಸಾಮರ್ಥ್ಯಗಳು ಅಪೇಕ್ಷಿತ ಸಾಧನೆಗಳು ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ, ಭಕ್ತಿ, ಧ್ಯಾನ, ವ್ಯಾಯಾಮ, ಧನಾತ್ಮಕ ಉತ್ತಮ ಯೋಚನೆಗಳು ಇವೇ ಮುಂತಾದ ಸಕಾರಾತ್ಮಕ ಅಥವಾ ಧನಾತ್ಮಕ ಅಂಶಗಳನ್ನು ಈ ಶಾಖೆ ಅಧ್ಯಯನ ಮಾಡುತ್ತದೆ. ಮ್ಯಾಸ್ಲೋ ರೋಜರ್ಸ್ ಮುಂತಾದವರು ಈ ಕ್ಷೇತ್ರದಲ್ಲಿ ಪ್ರಸಿದ್ಧರೆನಿಸಿದ್ದಾರೆ.

**ಸಾಂಸ್ಕೃತಿಕ ಮತ್ತು ದೇಶೀಯ ಮನೋವಿಜ್ಞಾನ (Cultural and Indigenous Psychology)** – ಮನೋವಿಜ್ಞಾನದ ಈ ಶಾಖೆ ವಿವಿಧ ಸಂಸ್ಕೃತಿಗಳನ್ನು, ಬೇರೆ ದೇಶಗಳಲ್ಲಿ ಪ್ರಚಲಿತವಿರುವ ಮನೋವಿಜ್ಞಾನದ ಸ್ವರೂಪವನ್ನು ಅಧ್ಯಯನ ಮಾಡುತ್ತದೆ.

**ಮಹಿಳಾ ಮನೋವಿಜ್ಞಾನ (Feministic Psychology)**

ಮಹಿಳೆಯರ ಮನೋವಿಜ್ಞಾನ, ಸ್ತ್ರೀವಾದಿ ಆಂದೋಲನ, ಮಹಿಳೆಯರ ಸ್ಥಾನಮಾನ ಮುಂತಾದವುಗಳು ಈ ಶಾಖೆಯ ವ್ಯಾಪ್ತಿಯಲ್ಲಿ ಬರುತ್ತವೆ. ಮಹಿಳೆಯರ ಸ್ಥಾನಮಾನಗಳನ್ನು ಪುನರ್‌ರಚಿಸಿ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸುವ ಉದ್ದೇಶ ಈ ಶಾಖೆಗಿರುವುದರಿಂದ ಇದನ್ನು ಸಾಮಾಜಿಕ ಪುನರ್‌ರಚನಾ ಮನೋವಿಜ್ಞಾನ ಎಂದೂ ಹೇಳಬಹುದು.

**ಸಮುದಾಯ ಮನೋವಿಜ್ಞಾನ (Community Psychology)**

ಈ ಶಾಖೆ ಮಾನವ ಸಮುದಾಯಗಳ ಸಾಮಾಜಿಕ ಮನೋವಿಜ್ಞಾನವನ್ನು ವ್ಯಕ್ತಿಗೂ ಅವನ ಸಮುದಾಯಕ್ಕೂ ಇರುವ ಸಂಬಂಧವನ್ನು ಸಮುದಾಯದ ಮನೋಭಾವ, ಪೂರ್ವಗ್ರಹ ಆಸಕ್ತಿಗಳನ್ನು ಪರಿವರ್ತಿಸುವ ತಂತ್ರಗಳನ್ನು ಅಧ್ಯಯನ ಮಾಡುತ್ತದೆ.

**ಭಾರತೀಯ ಮನೋವಿಜ್ಞಾನ (Indian Psychology)**

ಇತ್ತೀಚೆಗೆ ಭಾರತೀಯ ತತ್ವಶಾಸ್ತ್ರ ಪಂಥಗಳಲ್ಲಿ ಅಂತರ್ ನಿಹಿತವಾಗಿರುವ ಪ್ರಜ್ಞೆ, ಸಿದ್ಧಿಗಳು, ಪ್ರಮಾಣಗಳು, ಪುನರ್ಜನ್ಮ, ಪ್ರಜ್ಞೆಯ ಮೇಲ್ಮಟ್ಟಗಳು ಧ್ಯಾನ, ಯೋಗ ಮುಂತಾದ ವಿಷಯಗಳನ್ನು ವೈಜ್ಞಾನಿಕ ವಿಧಾನಗಳಿಂದ ಅಧ್ಯಯನ ಮಾಡಲಾಗುತ್ತಿದೆ. ಪಾಶ್ಚಾತ್ಯ ಮನೋವಿಜ್ಞಾನಿಗಳು ಈ ವಿಷಯಗಳ ಬಗ್ಗೆ ಆಸಕ್ತಿವಹಿಸಿ ಅಧ್ಯಯನ ಮಾಡುತ್ತಿದ್ದಾರೆ. ಮನೋವಿಜ್ಞಾನದಲ್ಲಿ ಒಂದು ಪ್ರತ್ಯೇಕ ಶಾಖೆಯಾಗಿ ಭಾರತೀಯ ಮನೋವಿಜ್ಞಾನವನ್ನು ಗುರ್ತಿಸುವ ಪ್ರಯತ್ನವನ್ನು ಅನೇಕ ಭಾರತೀಯ ಮನೋವಿಜ್ಞಾನಿಗಳು ಕೈಗೊಂಡಿದ್ದಾರೆ.

–ಎಂ.ಜಾ.

## ಮರಿಯಾ ಮಾಂಟೆಸ್ಸೂರಿ

ಮಾಂಟೆಸ್ಸೂರಿ

ವಿಶ್ವದಾದ್ಯಂತ ‘ಮಾಂಟೆಸ್ಸೂರಿ ಪದ್ಧತಿ’ (1870–1952) ಎಂದೇ ಖ್ಯಾತವಾಗಿರುವ ‘ಶಿಕ್ಷಣ ಪದ್ಧತಿ’ಯ ಜನನಿ ಜನ್ಮ ತಳೆದದ್ದು ಇಟಲಿ ದೇಶದ ಅಂಕೋನಾ (Ancona) ಪ್ರಾಂತ್ಯದ ಚೈರವಲ್ಲೆ (Chairavalle) ಯಲ್ಲಿ. ಅಲೆಕ್ಸಾಂಡ್ರೋ ಮಾಂಟೆಸ್ಸೂರಿ ಮತ್ತು ರೆನ್ನೈಲ್ ಡಿಸ್ಟೊಪ್ಪಾನ್ನಿಯವರ ಮಗಳಾಗಿ 1870 ಆಗಸ್ಟ್ 31ರಂದು ಇಟಲಿ ದೇಶದಲ್ಲಿ ‘ವೈದ್ಯ ಪದವೀಧರೆ’ಯಾದ ‘ಪ್ರಪ್ರಥಮ ಮಹಿಳೆ’. ದಾರ್ಶನಿಕಳೂ ಮಾನವೀಯ ಮೌಲ್ಯಗಳನ್ನು ಮತ್ತು ಕ್ಯಾಥೋಲಿಕ್ ಧಾರ್ಮಿಕತೆಯನ್ನು ತಳೆದಿದ್ದರೂ ಮೌಢ್ಯ ಹಾಗೂ ಅಂಧಾನುಕರಣೆಗಳಿಗೆ ಪ್ರತಿಭಟಿಸುವ ಈ ದಿಟ್ಟ ಮಹಿಳೆ ‘ಅಲ್–ಬಾಯ್ ಟೆಕ್ನಿಕಲ್ ಸ್ಕೂಲ’ನ್ನು 13ನೇ ವಯಸ್ಸಿನಲ್ಲಿ ಸೇರಿದ್ದು ಆ ಕಾಲಕ್ಕೆ ಅತ್ಯಂತ ಕ್ರಾಂತಿಕಾರಕ ಸಂಗತಿ. ಇಂಜಿನಿಯರ್ ಆಗುವ ಆಶಯದಿಂದ ಸೇರಿದ್ದರೂ,


Digitised by Bharatavani, CIIL

ಅಲ್ಲಿ ಸಾಂಪ್ರದಾಯಿಕ ಕ್ರಮಕ್ಕೆ 'ಪ್ರತಿಭಟನೆ'ಯ ಅಡಿಪಾಯ ಹಾಕಿದರು. ಇಂಜಿನಿಯರಿಂಗ್‌ನಿಂದ ಜಿಗಿದು ಮೆಡಿಕಲ್‌ಗೆ ಸೇರಿ 1894ರಲ್ಲಿ ಇಟಲಿಯ ಪ್ರಥಮ ಮಹಿಳಾ ವೈದ್ಯೆ 'ಡಾಕ್ಟರ್ ಆಫ್ ಮೆಡಿಸನ್' ಪದವಿ ಪಡೆದರು. ಹುಟ್ಟಿನಿಂದ ಹದಿಹರೆಯದವರೆಗಿನ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಮೂಲ್ಯ ಕೊಡುಗೆ ನೀಡಿದ ಮಾಂಟೆಸ್ಸೂರಿ ಅತ್ಯಂತ ಸ್ಫುರದ್ರೂಪಿಯಾಗಿದ್ದರು.

ನಿಕೋಲ್ ಮಾಂಟೆಸ್ಸೂರಿ ಮಗ ಅಲೆಗ್ಸಾಂಡ್ರೋ, ಸೈನ್ಯದಲ್ಲಿದ್ದು, ಅಲ್ಲಿನ ಶಿಸ್ತನ್ನು ರೂಢಿ ಮಾಡಿಕೊಂಡವರು. ನಂತರ ನಾಗರಿಕಸೇವಾ ವಿಭಾಗಕ್ಕೆ ಬಂದರು. ಆ ಕಾಲದ ಪ್ರಖ್ಯಾತ ಭೂವಿಜ್ಞಾನಿಯ ಸೋದರ ಸಂಬಂಧಿ ಹಾಗೂ ಭೂಮಾಲೀಕರ ಮಗಳಾದ ತನಗಿಂತ 8 ವರ್ಷ ಕಿರಿಯವಳಾದ ರಿನ್ನೆಲ್ ಡಿ ಸ್ಟೊಪಾನ್ನಿಯನ್ನು ವಿವಾಹವಾದರು (1866). ರಿನ್ನೆಲ್‌ರ ಸಹಜ ಸೌಂದರ್ಯರ ಬಗ್ಗೆ ಅಲೆಗ್ಸಾಂಡ್ರೋಗೆ ಹೆಮ್ಮೆ ಇತ್ತು. ಗಾಜು, ಸೆರಾಮಿಕ್ ಮುಂತಾದ ಕಾರ್ಖಾನೆಗಳಲ್ಲಿನ ಉದ್ಯೋಗದಿಂದಾಗಿ ಅಲೆಗ್ರಾಂಡ್ರೋಗೆ ವರ್ಗಾವಣೆಯಾಗುತ್ತಿರುತ್ತಿತ್ತು. ರಿನ್ನೆಲ್‌ಗೆ ದೈವದಲ್ಲಿ ನಂಬಿಕೆ ಇದ್ದಿತಾದರೂ, ಅಂಧಶ್ರದ್ಧೆಯಿರಲಿಲ್ಲ; ಆ ಕಾಲಕ್ಕೆ ಹೆಚ್ಚೆನಿಸುವಷ್ಟು ವಿದ್ಯಾವಂತಳಾಗಿದ್ದರಲ್ಲದೆ ಪರೋಪಕಾರವನ್ನೂ ಮೈಗೂಡಿಸಿಕೊಂಡಿದ್ದರು. ಅದಕ್ಕಾಗಿ ಹೆಣಿಗೆ (Kniting) ಮಾಡುತ್ತಿದ್ದರು. ಅದರ ಗಳಿಕೆಯನ್ನು ಅಸಹಾಯಕರ ನೆರವಿಗೆ ಬಳಸುತ್ತಿದ್ದರು.

ಮರಿಯಾ ಹುಟ್ಟಿದಾಗ ಎಸಿನೇ ನದಿಯ ತಟದ ಕಣಿವೆ ಪ್ರದೇಶದಲ್ಲಿ ತಂಬಾಕು, ದ್ರಾಕ್ಷಿ, ಆಲಿವ್ ಬೆಳೆಗಳ, ಗಾಜು, ಸೆರಾಮಿಕ್, ಚರ್ಮ ಕಾರ್ಖಾನೆಗಳ ಪ್ರದೇಶವಾದ ಚೈರವಲ್ಲೇಯಲ್ಲಿದ್ದ ಅಲೆಗ್ಸಾಂಡರ್ ವರ್ಗವಾಗಿ ಫ್ಲೋರೆನ್ಸ್‌ಗೆ, ನಂತರ ಅಲ್ಲಿಂದ ಅವಳು ಐದು ವರ್ಷದವಳಿದ್ದಾಗ ಹೆಚ್ಚಿನ ವೇತನದೊಂದಿಗೆ ರೋಮ್‌ಗೆ ತೆರಳಿ, 1880ರಲ್ಲಿ ಉನ್ನತ ಹುದ್ದೆ ಹೊಂದಿ 1890ರಲ್ಲಿ ಅಂದರೆ ಮರಿಯಾ 20ರ ವಯಸ್ಸಿನಲ್ಲಿದ್ದಾಗ ನಿವೃತ್ತರಾದರು.

ಬುದ್ಧಿವಂತಳು, ವಿಚಾರವಂತಳು ಆದ ತಾಯಿಯ ಪ್ರೋತ್ಸಾಹದಿಂದ ತಂದೆಗೆ ಇಷ್ಟವಿಲ್ಲದಿದ್ದರೂ ಬಾಲಕರ ಶಾಲೆಯಲ್ಲಿ ಇಂಜಿನಿಯರಿಂಗ್‌ಗೆ ಸೇರಿ, ಅದನ್ನು ಬಿಟ್ಟು ವೈದ್ಯ ಶಿಕ್ಷಣ ಸೇರಿದ ಮರಿಯಾ ಕಲಿಕೆಯಲ್ಲಿ ಹಿಂದೆ ಬೀಳಲಿಲ್ಲ. ರೋಮ್ ವಿಶ್ವವಿದ್ಯಾಲಯ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಆಗಿ, ನಂತರ ಶಿಕ್ಷಣ ಸಚಿವರಾದವರು ಗೈಡೋ ಬ್ಯಾಸೆಲ್ಲಿಯವರು (Guido Baccelli). ಅವರ ಶಿಷ್ಯೆಯಾದ ಮರಿಯಾ ಧೈರ್ಯದಿಂದ ಮುನ್ನಡೆದು ವಿಶ್ವಮಾನ್ಯರಾದರು. ವಿಶ್ವವಿದ್ಯಾಲಯದ ಸೈಕಿಯಾಟ್ರಿಕ್ ಕ್ಲಿನಿಕ್ ಕ್ಲಬ್‌ನ ಸದಸ್ಯೆಯಾಗಿ ರೋಮ್‌ನಗರದಲ್ಲಿನ ಕಲಿಕೆಯ ಸಮಸ್ಯೆಯನ್ನು ಹೊಂದಿದ್ದ 'ಅಸಂತುಷ್ಟ ಮಕ್ಕಳಿಗೆ' ಶಿಕ್ಷಣ ನೀಡುವ ಪ್ರಯತ್ನದ ಕಾರ್ಯದಲ್ಲಿ ನಿರತರಾದರು. 1896ರಲ್ಲಿ ಇಟಲಿಯ ಮಹಿಳೆಯರ ಪ್ರತಿನಿಧಿಯಾಗಿ ಬರ್ಲಿನ್ ಹಾಗೂ ಲಂಡನ್‌ನಲ್ಲಿ ನಡೆದ ಸಮಾವೇಶಗಳಲ್ಲಿ ಭಾಗಿಯಾಗಿ ಪುರುಷರಂತೆ ಮಹಿಳೆಯರಿಗೂ ಅವಕಾಶ ಸಿಗಬೇಕೆಂಬ ವಿಚಾರವನ್ನು ಸಮರ್ಥವಾಗಿ ತಿಳಿಸಿದರು. 1899ರಲ್ಲಿ ಟ್ಯೂರಿನ್‌ದಲ್ಲಿ ಶಿಕ್ಷಣ ಸಮಾವೇಶದಲ್ಲಿ ವಿಕಲಾಂಗರ ತರಬೇತಿ ಬಗ್ಗೆ ನೀಡಿದ ಉಪನ್ಯಾಸದ ವಿಚಾರಧಾರೆಗೆ ಮನಸೋತ ಶಿಕ್ಷಣ ಸಚಿವರು ಮರಿಯಾರವರನ್ನು ಮಾನಸಿಕ ಅಸ್ವಸ್ಥರ ಪಾಲನೆ, ಶಿಕ್ಷಣ ಹಾಗೂ ನಿಗಾ ವಹಿಸುವ ಸಂಸ್ಥೆಯಾದ Scuola Ortoflenicaದ ನಿರ್ದೇಶಕಿಯನ್ನಾಗಿ ನೇಮಿಸಿದರು. 1896 ರಿಂದ 1906ರ ವರೆಗೆ ರೋಮ್‌ನ ಮಹಿಳಾ ಕಾಲೇಜಿನ ಆರೋಗ್ಯ ವಿಭಾಗದ ಮುಖ್ಯಸ್ಥರಾದರು. ಸಹ ಸಂಶೋಧಕರಾದ ಗೈಸೆಪ್ಪೆ ಮಾಂಟೆಸ್ಸಾನೋರವರೊಂದಿಗೆ ಮರಿಯಾರ ಪ್ರೇಮಾಂಕುರವಾಗಿ, ಮರಿಯಾ ಅವರೊಂದಿಗೆ ವಿವಾಹವಾಗಿ 1898ರಲ್ಲಿ ಗಂಡು ಮಗುವಿಗೆ ಜನ್ಮದಾತೆಯಾದರು. ಮರಿಯೋ ಮಾಂಟೆಸ್ಸೂರಿ ಎಸ್‌ಆರ್ (Sr. ಸೀನಿಯರ್) ಎಂದು ಹೆಸರಿಟ್ಟರು. ಇಟಲಿಯ ಗ್ರಾಮಾಂತರ ಪ್ರದೇಶದಲ್ಲಿ ಮಗುವಿನ ಬಾಲ್ಯದ ಪಾಲನೆ-ಪೋಷಣೆಗೆ ಏರ್ಪಾಡು ಮಾಡಿದರು. ಬುದ್ಧಿಮಾಂದ್ಯ ಮಕ್ಕಳ ಪಾಲನೆಯ ಜವಾಬ್ದಾರಿ ಹಾಗೂ ಶಿಕ್ಷಣದ ಸಂಸ್ಥೆಯ ನಿರ್ದೇಶಕಿಯಾಗಿ ತನ್ನ ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಉತ್ಸುಕರಾದ ಮರಿಯಾರವರು ಆ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡಿದರು. 8 ವರ್ಷ ವಯೋಮಾನದ ಇಂಥ ಅನೇಕ ಮಕ್ಕಳು ರಾಜ್ಯಮಟ್ಟದ ಓದುವ ಮತ್ತು ಬರೆಯುವ ಪರೀಕ್ಷೆಯನ್ನು ತೆಗೆದುಕೊಳ್ಳುವಂತೆ ಮಾಡಿದ್ದು ಆಕೆಯ "ಪ್ರಪ್ರಥಮ ಸಾಧನೆ"ಗಳಲ್ಲಿ ಒಂದು. ಈ ವಿಕಲಚೇತನರು ಉತ್ತೀರ್ಣರಾದದ್ದು ಮಾತ್ರವಲ್ಲ, ಸರಾಸರಿಗಿಂತ ಹೆಚ್ಚು ಅಂಕ ಪಡೆದಿದ್ದರು; ಈ ಸಾಧನೆಯನ್ನು ಮರಿಯಾ ಮಾಂಟೆಸ್ಸೂರಿಯವರ 'ಪ್ರಥಮ ಪವಾಡ'ವೆಂದು ವರ್ಣಿಸಲಾಯಿತು.

1899ರಲ್ಲಿ ಟ್ಯುರಿನ್‌ನಲ್ಲಿ ನಡೆದ ಶೈಕ್ಷಣಿಕ ಸಮಾವೇಶದಲ್ಲಿ ವಿಕಲಚೇತನರ ಶಿಕ್ಷಣದ ರೂಪುರೇಷೆಗಳನ್ನು ಮಂಡಿಸಿದರು. ಇವೆಲ್ಲವುಗಳಿಂದ ಮಾನಸಿಕ ಅಸ್ವಸ್ಥ ಮಕ್ಕಳನ್ನು ಸಾಮಾನ್ಯ ಮಕ್ಕಳ ಮಟ್ಟಕ್ಕೆ ತರುವುದು ಸಾಧ್ಯವಾಗುವುದಾದರೆ, ಸಾಮಾನ್ಯ ಮಕ್ಕಳ ಅಂತಃಸತ್ವವೆಷ್ಟು ಎಂಬುದನ್ನು ಅಧ್ಯಯನ ಮಾಡಲು ಪ್ರಚೋದಿತರಾದರು.

ಲಂಡನ್‌ನಲ್ಲಿ ಜರುಗಿದ ಮಹಿಳಾಪರ ಸಮಾವೇಶದಲ್ಲಿ (1900) ಭಾಗವಹಿಸಿ ಸಿಸಿಲಿಯ ಮೈನ್ಸ್‌ನಲ್ಲಿ ಶೋಷಣೆಗೆ ಒಳಗಾಗಿದ್ದ ಮಕ್ಕಳ ಬಗ್ಗೆ ಪ್ರಸ್ತಾಪಿಸಿದ ಮರಿಯಾರವರು 1901ರಲ್ಲಿ ರೋಮ್ ವಿಶ್ವವಿದ್ಯಾನಿಲಯದಲ್ಲಿ ಮನೋವಿಜ್ಞಾನ ಹಾಗೂ ತತ್ವಶಾಸ್ತ್ರದ ವಿದ್ಯಾರ್ಥಿನಿಯಾದರು, 1904–08 ಮಾನವಶಾಸ್ತ್ರ (ಆಂತ್ರೋಪಾಲಜಿ)ದ ಪ್ರೊಫೆಸರ್ ಆಗಿ ಶೈಕ್ಷಣಿಕ ಮಾನವಶಾಸ್ತ್ರ (Pedogogical Anthropology) ಪ್ರಕಟಿಸಿದರು. ರೋಮ್‌ನ ಗುಂಪು ಮನೆಗಳಲ್ಲಿ (ಕ್ವಾರ್ಟರ್), ಅವುಗಳ ರಿಪೇರಿ ಮಾಡಿಸಿ, 3 ರಿಂದ 6 ವಯೋಮಾನದ ಮಕ್ಕಳಿಗೆ ಶಿಕ್ಷಣ ನೀಡುವ ಯೋಜನೆ ರೂಪುಗೊಂಡು, ಮಾಂಟೆಸ್ಸೂಯವರನ್ನು ಅದರ ಜವಾಬ್ದಾರಿ ಹೊರಲು ಆಹ್ವಾನಿಸಲಾಯಿತು. ಇಂತಹ ಜವಾಬ್ದಾರಿಯನ್ನು ಹೊತ್ತು ಹೊಸರೀತಿಯ ಶಾಲೆ, ಅಂದರೆ 'ವಸತಿ ಶಾಲೆ'ಯನ್ನು CASA-DIE-BAMBINE ಎಂಬ ನಾಮಕರಣದೊಂದಿಗೆ 1907ರ ಜನವರಿ 6ರಂದು ಪ್ರಾರಂಭಿಸಿದರು. ಆ ದಿನ ಕ್ರೈಸ್ತ ಸಮುದಾಯದಲ್ಲಿ ಮಕ್ಕಳ ಹಬ್ಬದ ದಿನ. ಆ ದಿನ ಕಸ–ಡಿ–ಬಾಮ್‌ಬಿನೆ (Children's Home) "ಮಕ್ಕಳ ಮನೆ" ಉದ್ಘಾಟಿಸಿ, ಮರಿಯಾರವರು ನೀಡಿದ ಉಪನ್ಯಾಸ ಶಿಕ್ಷಣಕ್ಷೇತ್ರದ ಅಮೂಲ್ಯ ದಾಖಲೆಗಳಲ್ಲಿ ಒಂದಾಗಿದೆ. ಈ ಉಪನ್ಯಾಸದಲ್ಲಿ ರೋಮ್‌ನಲ್ಲಿರುವ ಸ್ಯಾನ್ ಲೊರೆನ್‌ಜೋ ಕ್ವಾರ್ಟರ್‌ನ ನಂ. 53, ವೈಯ ಡೈ ಮಾರ್ಸಿ (San Lorenzo Quarter,Via dei Marsi)ಯಲ್ಲಿ ಪ್ರಾರಂಭವಾದ ಈ ಪರಿತ್ಯಕ್ತ ಮಕ್ಕಳ ಭವಿಷ್ಯಕ್ಕೆ ರೂಪಿತವಾಗಿರುವ "ಮಕ್ಕಳ ಮನೆ" ಹೊಸ "ಜೆರೂಸಲೆಮ್" ಆಗಿ ಮಕ್ಕಳ ಶಿಕ್ಷಣಕ್ಕೆ ಬೆಳಕನ್ನು ತರುವುದು ಎಂದು ಸಾರಿದರು. ಅದನ್ನು ಪತ್ರಿಕೆಗಳು ಈಗಷ್ಟೇ ಉಗಮವಾಗುತ್ತಿರುವ ಚಿಕ್ಕ ಸಾಹಸಕ್ಕೆ ಇಂತಹ ದೊಡ್ಡ ಮಾತೇ ಎಂದು ವಿಶ್ಲೇಷಿಸಿದ್ದವು. ರೋಮ್‌ನ ಸಮೂಹ ಕಟ್ಟಡಗಳಲ್ಲಿ ಪ್ರಾರಂಭವಾದ "ಮಕ್ಕಳ ಮನೆ" ಇಂದಿನ ಸಹಸ್ರಾರು 'ಮಕ್ಕಳ ಮನೆ'ಗಳಿಗೆ ನಾಂದಿಯಾಗಿ ದೃಢವಾಗಿ ನಿಂತಿರುವುದು ಗಮನಾರ್ಹ. ಮಕ್ಕಳ ಮನೆಯ ವೈಶಿಷ್ಟ್ಯವೆಂದರೆ ಮಕ್ಕಳಿಗೆ 'ಕೌಶಲ'ಗಳನ್ನು ತಮ್ಮದೇ ಆದ ವೇಗದಲ್ಲಿ ಕಲಿಯುವ ಅವಕಾಶ, ಮಕ್ಕಳ ಆಸಕ್ತಿ ಮತ್ತು ಇಂದ್ರಿಯಾನುಭವಗಳನ್ನು ನಿರ್ದೇಶಿಸಲು ಹಾಗೂ ವಿಕಸನಗೊಳಿಸಲು ವಿಶೇಷ ರೀತಿಯಲ್ಲಿ ವಿನ್ಯಾಸಗೊಂಡ ಉಪಕರಣಗಳ ಬಳಕೆ, ಹೊಸ ಕಾರ್ಯ (Task) ತೆಗೆದುಕೊಳ್ಳಲು ಮಗು ಸಿದ್ಧವಾದಾಗ ಪ್ರಾಥಮಿಕ ಆದ್ಯತೆ ಮತ್ತು ಸಾಧ್ಯತೆಯನ್ನು ಗುರ್ತಿಸಿ ಮಾರ್ಗದರ್ಶನ ಮಾಡುವುದನ್ನು ಮತ್ತು

Digitised by Bharatavani, CIIL

ವ್ಯರ್ಥ ಪ್ರಯತ್ನ ಹಾಗೂ ತಪ್ಪು ಅಭ್ಯಾಸಗಳನ್ನು ನಿಯಂತ್ರಿಸುವುದನ್ನು ಅಳವಡಿಸಿಕೊಂಡು ಪರಿಮಾಣ (ಕ್ವಾಂಟಿಟಿ)ಕ್ಕಿಂತ ಗುಣಾತ್ಮಕತೆ (ಕ್ವಾಲಿಟಿ)ಗೆ ಒತ್ತು ಕೊಟ್ಟು ಕಲಿಸುವ ಕಾರ್ಯಾಚರಣೆ ಮಾಡಿದರು.

ಈ ಶಾಲೆಯಲ್ಲಿನ ಕಾರ್ಯಾಚರಣೆಯನ್ನು 1909ರಲ್ಲಿ 'The Method of Scientific Pedogogy as applied to infant Education in Children's Houses' (ಮಕ್ಕಳ ಮನೆಯ ಶಿಶುಗಳ ಶಿಕ್ಷಣಕ್ಕೆ ಅನ್ವಯಿಸಿದ ವೈಜ್ಞಾನಿಕ ಶಿಕ್ಷಣ ಶಾಸ್ತ್ರದ ವಿಧಾನ) ಪ್ರಕಟವಾಯಿತು. 'ಮಕ್ಕಳಮನೆ'ಗಳಲ್ಲಿನ ಸಾಧನೆ, ಸಫಲತೆಗಳು ವಿಶ್ವದಾದ್ಯಂತ ತಜ್ಞರ, ಆಸಕ್ತರ ಗಮನ ಸೆಳೆಯಿತು. ತತ್ಪರಿಣಾಮವಾಗಿ ಅಂತರರಾಷ್ಟ್ರೀಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು 1913ರಲ್ಲಿ ನಡೆಸಿದ ಮರಿಯಾ, 1914ರಲ್ಲಿ ಥಾಮಸ್ ಆಲ್ವ ಎಡಿಸನ್‌ರ ಅತಿಥಿಯಾಗಿ ಅಮೆರಿಕಾದ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ನೀಡಿ, ಅಲ್ಲಿ ಅಲೆಗ್ಝಾಂಡರ್ ಗ್ರಹಾಂ ಬೆಲ್‌ರ ಅಧ್ಯಕ್ಷತೆಯಲ್ಲಿ ಅಮೆರಿಕನ್ ಮಾಂಟೆಸ್ಸೂರಿ ಸೊಸೈಟಿ ಸ್ಥಾಪನೆಗೆ ಕಾರಣರಾದರು. 1917ರ ವೇಳೆಗೆ ಮಾಂಟೆಸ್ಸೂರಿ ವಿಧಾನಕ್ಕೆ ವಿಶೇಷ ಆಸಕ್ತಿ ಕಂಡು ಬಂದಿತಾದರೂ ಜಾನ್ ಡ್ಯೂಯಿಯ ಅನುಯಾಯಿ ವಿಲಿಯಂ ಎಚ್. ಕಿಲ್‌ಪ್ಯಾಟ್ರಿಕ್‌ರು ಪ್ರಕಟಿಸಿದ 'ದಿ ಮಾಂಟೆಸ್ಸೂ ಸಿಸ್ಟಮ್–ಎಕ್ಸಾಮಿನ್ಡ್'‌ನಿಂದಾಗಿ ಭಾರಿ ಹಿನ್ನಡೆ ಹೊಂದಿ, ಸ್ಥಗಿತವಾಯಿತು. ಪುನಃ 1960ರಲ್ಲಿ ನ್ಯಾನ್ಸಿ ಎಂಬುವರು 'ಅಮೆರಿಕನ್ ಮಾಂಟೆಸ್ಸೂರಿ ಸೊಸೈಟಿ'ಯನ್ನು ಪುನರಾರಂಭಿಸಿದರು.

ಲಂಡನ್ ಎಜುಕೇಷನ್ ಸೊಸೈಟಿಯು ಶ್ರೀಮತಿ ಹಚಿಸನ್‌ರವರನ್ನು 1918ರಲ್ಲಿ ತರಬೇತಿ ಪಡೆಯಲು ಮಾಂಟಿಸ್ಸೂರಿಯವರಲ್ಲಿಗೆ ಕಳುಹಿಸಿತು. ಮತ್ತು 1919ರಲ್ಲಿ ಲಂಡನ್‌ಗೆ ಭೇಟಿ ನೀಡಿದ ಮಾಂಟೆಸ್ಸೂರಿಯವರಿಗೆ ರಾಜ ಮರ್ಯಾದೆಯೊಂದಿಗೆ ಭವ್ಯಸ್ವಾಗತ ನೀಡಿತು. 1922ರಲ್ಲಿ ಇಟಲಿ ಸರ್ಕಾರದಿಂದ ಮಾಂಟೆಸ್ಸೂರಿ ಶಾಲಾ ತನಿಖಾಧಿಕಾರಿಯಾದರು. ಹೆಲ್ಸಿಂಕಿಯಲ್ಲಿ ಅಂತರರಾಷ್ಟ್ರೀಯ ಮಾಂಟೆಸ್ಸೂರಿ ಕಾಂಗ್ರೆಸ್ ನಡೆಯಿತು. 1929ರಲ್ಲಿ ಅಸೋಸಿಯೇಷನ್ ಮಾಂಟೆಸ್ಸೂರಿ ಇಂಟರ್‌ನ್ಯಾಷನಲ್ (AMI) ಆಮ್ಸ್ಟರ್ ಡ್ಯಾಮ್‌ನಲ್ಲಿ ಪ್ರಾರಂಭವಾಯಿತು. 1932ರಲ್ಲಿ ಯುರೋಪ್‌ನಲ್ಲಿ ಅಂತರರಾಷ್ಟ್ರೀಯ ಸಮಾವೇಶ ಜರುಗಿತು. ಇಟಲಿಯ ಸರ್ವಾಧಿಕಾರಿ ಮುಸಲೋನಿಯವರ ಮಾತಿನಂತೆ ಮಕ್ಕಳನ್ನು ಯುದ್ಧ ಮನಸ್ಕರನ್ನಾಗಿಸಲು ಒಪ್ಪದಿದ್ದಾಗ ಮರಿಯಾರವರು ಇಟಲಿಯನ್ನು ತೊರೆಯಬೇಕಾಯಿತು. 1936ರಲ್ಲಿ ಸ್ಪೈನ್‌ಗೆ, 1939ರಲ್ಲಿ ನೆದರ್‌ಲ್ಯಾಂಡಿಗೆ ಹೋದ ಮರಿಯಾ ಮಾಂಟೆಸ್ಸೂರಿಯವರನ್ನು ಅದೇ ವರ್ಷ 'ಥಿಯಾಸೊಫಿಕಲ್ ಸೊಸೈಟಿ ಆಫ್ ಇಂಡಿಯಾ'ವು ಭಾರತಕ್ಕೆ ಆಹ್ವಾನಿಸಿತು. ಈ ಆಹ್ವಾನವನ್ನು ಸ್ವೀಕರಿಸಿದ ಮರಿಯಾ ಮಾಂಟೆಸ್ಸೂರಿಯವರು ತನ್ನ ಮಗನೊಂದಿಗೆ ಭಾರತಕ್ಕೆ ಆಗಮಿಸಿ 1947ರವರೆಗೆ ಭಾರತವನ್ನು ತನ್ನ ಮನೆಯನ್ನಾಗಿಸಿಕೊಂಡು, ತಮಿಳುನಾಡಿನ ಈಗಿನ ಚೆನ್ನೈನ ಅಡಿಯಾರ್‌ನಲ್ಲಿ ನೆಲೆಯಾದರು. 16 ತಂಡಗಳಿಗೆ ಮಾಂಟೆಸ್ಸೂರಿ ವಿಧಾನದಲ್ಲಿ ಅವರು ನೀಡಿದ ಸತ್ವಪೂರ್ಣ ತರಬೇತಿಯು ಒಂದು ಆಂದೋಲನವನ್ನೇ ಭಾರತದಲ್ಲಿ ಉಂಟು ಮಾಡಿತು. ಕರ್ನಾಟಕದ ಬೆಂಗಳೂರಿನ (ಮಲ್ಲೇಶ್ವರಂ) ಹಿಮಾಂಶು ಮಾಂಟೆಸ್ಸೂರಿ ಶಾಲೆಯ ಸಂಸ್ಥಾಪಕರು ತಮ್ಮ ಶಾಲೆಗಾಗಿ ತರಬೇತಿಗೊಳ್ಳಲು ಏರ್ಪಾಡು ಮಾಡಿದರು. 1947ರಲ್ಲಿ ಇಟಲಿಯ ರೋಮ್‌ನಲ್ಲಿ ಅಪೇರ ಮಾಂಟೆಸ್ಸೂರಿ ಪುನರ್ ಸ್ಥಾಪನೆಯಾಯಿತು. 1948ರಲ್ಲಿ ಮರಿಯಾ ಭಾರತಕ್ಕೆ ಪುನರಾಗಮಿಸಿದರು. 1949ರಲ್ಲಿ ಆಲ್ಬರ್ಟ್ ವ್ಯಾಕ್ಟ್ ಜೂಸ್ಟೀನ್‌ರನ್ನು ಭಾರತದಲ್ಲಿ ತರಬೇತಿದಾರರನ್ನಾಗಿ ನೇಮಿಸಿದರು. ಪಾಕಿಸ್ತಾನದಲ್ಲಿ 'ಮಾಂಟಿಸ್ಸೂರಿ ತರಬೇತಿ' ಕೋರ್ಸ್ ನಡೆಸಿದರು. 1951ರಲ್ಲಿ ಲಂಡನ್‌ನಲ್ಲಿ ಅಂತಾರಾಷ್ಟ್ರೀಯ ತರಬೇತಿ ಶಿಬಿರವನ್ನು ನಡೆಸಿದರು. 1950–53ರವರೆಗೆ ಮೂರುಬಾರಿ ನೋಬೆಲ್ ಪಾರಿತೋಷಕಕ್ಕೆ ಮರಿಯಾ ಮಾಂಟೆಸ್ಸೂರಿಯವರ ಹೆಸರು ಶಿಫಾರಸ್ಸು ಪಡೆಯಿತಾದರೂ ಆ ಗೌರವಕ್ಕೆ ಅವರು ಭಾಜನರಾಗಲಿಲ್ಲ. 1952ರ ಮೇ 6ರಂದು ಮರಿಯಾ ನೆದರ್‌ಲ್ಯಾಂಡಿನ ನೂರ್‌ಡ್ವಿಜ್ಕ್ (Noordwijk) ನಲ್ಲಿ ನಿಧನರಾಗಿ ಚಿರಶಾಂತಿ ಹೊಂದಿದರು. ಅಲ್ಲೇ ಅವರ ಸಮಾಧಿ ಲಾಯಿತು.

2007ರಲ್ಲಿ "ಮಕ್ಕಳ ಮನೆ"ಯ ಶತಮಾನೋತ್ಸವ ವಿಶ್ವದಾದ್ಯಂತ ನಡೆಯಿತು. ಅವರ ಶಿಕ್ಷಣ ಕ್ರಮದ ಅನುಷ್ಠಾನವು ಒಂದುನೂರಾ ಹತ್ತು ರಾಷ್ಟ್ರಗಳಲ್ಲಿ ಇಪ್ಪತ್ತೆರಡು ಸಾವಿರ ಮಾಂಟೆಸ್ಸೂರಿ ಕೇಂದ್ರಗಳಲ್ಲಿ ನಡೆಯುತ್ತಿದೆ. ಅವರ ಬಗ್ಗೆ ಚಲನಚಿತ್ರವೂ ಬಂದಿದೆ. -The Greatest Women of the World. ಅಸೋಸಿಯೇಷನ್ ಮಾಂಟಿಸ್ಸೂರಿ ಇಂಟರ್‌ನ್ಯಾಷನಲ್ (AMI) (ಅಂತಾರಾಷ್ಟ್ರೀಯ ಮಾಂಟೆಸ್ಸೂರಿ ಸಂಸ್ಥೆಯು), ಆಮ್‌ಸ್ಟರ್‌ಡ್ಯಾಂನ ತನ್ನ ಕೇಂದ್ರ ಕಚೇರಿಯ ಮೂಲಕ ಅವರ ಶೈಕ್ಷಣಿಕ ಸಿದ್ಧಾಂತ ಹಾಗೂ ಅನುಷ್ಠಾನವನ್ನು ಜೀವಂತವಾಗಿರಿಸಿದೆ.

### ಮಾಂಟೆಸ್ಸೂರಿಯವರ ವಿಧಾನದಲ್ಲಿನ ತತ್ವಗಳು

ಶಿಕ್ಷಣವು ಆಂತರಿಕ ಬೆಳವಣಿಗೆಯ ಕ್ರಮ. ಈ ಕ್ರಮವನ್ನು ಹತ್ತಿಕ್ಕಬಾರದು, ಮುಕ್ತ ಅವಕಾಶ ದೊರೆತು ದೈಹಿಕ, ಆಂತರಿಕ ಹಾಗೂ ಸಾಮಾಜಿಕ ವಿಕಸನ / ಬೆಳವಣಿಗೆ ಮಾಡುವುದರಿಂದ ಮಗುವಿನ ವ್ಯಕ್ತಿತ್ವವು ಅನಾವರಣಗೊಂಡು, 'ಶಿಕ್ಷಣ'ದಿಂದ 'ಯೋಗ್ಯ ವ್ಯಕ್ತಿತ್ವ' ರೂಪಿತವಾಗುತ್ತದೆ. "ಮಗುವನ್ನು ವೈಜ್ಞಾನಿಕವಾಗಿ ಅಭ್ಯಸಿಸಬೇಕಾದರೆ ಶಾಲೆಯು ಆ ಮಗುವನ್ನು ಮುಕ್ತ ವಾತಾವರಣದಲ್ಲಿರಲು ಬಿಡಬೇಕು" ಎನ್ನುವ ಮಾಂಟೆಸ್ಸೂರಿಯವರು ಮಗುವಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡುವುದು ಒಳ್ಳೆಯದಷ್ಟೇ ಅಲ್ಲ, ಸಂಪೂರ್ಣ ನ್ಯಾಯಯುತವಾದುದು ಎಂದಿದ್ದಾರೆ. ಅವಕಾಶಗಳು ಸಮರ್ಪಕವಾಗಿ ದೊರೆತರೆ ಮಗುವಿನ ಆಂತರಿಕ ಸಾಮರ್ಥ್ಯಗಳು ಸಂಪೂರ್ಣವಾಗಿ ವಿಕಸನವಾಗಲು ಸಾಧ್ಯವಾಗುತ್ತದೆ. ಜ್ಞಾನೇಂದ್ರಿಯಗಳು ಜ್ಞಾನದ ಹೆಬ್ಬಾಗಿಲು (Senses are the gateways of knowledge). ಇವುಗಳ ತರಬೇತಿಯು ಶಿಕ್ಷಣದ ಮುಖ್ಯ ಕ್ರಮವಾಗಬೇಕು. 3 ರಿಂದ 7 ವಯೋಮಾನದಲ್ಲಿ ಜ್ಞಾನೇಂದ್ರಿಯಗಳು ಅತಿ ಚುರುಕಾಗಿರುತ್ತವೆ. ಕಲಿಕೆಯ ಬಹುಭಾಗ ಈ ಅವಧಿಯದು. ಜ್ಞಾನೇಂದ್ರಿಯಗಳ ತರಬೇತಿಯು ಮಗುವಿನ ಬೌದ್ಧಿಕ ವಿಕಸನಕ್ಕೆ ದಾರಿ ಮಾಡುತ್ತದೆ. ಸ್ವಯಂ ಕಲಿಕೆಗೆ ಹೆಚ್ಚಿನ ಅವಕಾಶಗಳಿರಬೇಕು, 'ಕಲಿಸುವುದಕ್ಕಿಂತ' 'ಕಲಿಯುವುದಕ್ಕೆ' ಪ್ರಾಧಾನ್ಯತೆ ಇದ್ದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಸ್ಫೂರ್ತಿಯಿಂದ ಕಲಿಯಲು ಸಾಧ್ಯ. ಸ್ನಾಯುಗಳಿಗೆ ತರಬೇತಿ ನೀಡುವ ಚಟುವಟಿಕೆಗಳಿಂದ ಮಕ್ಕಳ ಚಲನಾತ್ಮಕ ಸಾಮರ್ಥ್ಯಗಳಲ್ಲಿನ (Mover abilities) ವೈಯಕ್ತಿಕ ಭಿನ್ನತೆಯನ್ನು ಪರಿಗಣನೆಗೆ ತೆಗೆದುಕೊಂಡು ಶಿಕ್ಷಣ ನೀಡುವುದು ಅತಿ ಮುಖ್ಯವಾದರೂ ಮಕ್ಕಳು ಗುಂಪಿನಲ್ಲಿದ್ದು ಪರಸ್ಪರ ಸಹಕರಿಸುವುದನ್ನು ಕಲಿಯುವುದರಿಂದ ಸಾಮಾಜಿಕ ಬೆಳವಣಿಗೆಯು ರೂಪಿತವಾಗುತ್ತದೆ.

### ಬೋಧನಾ ಕ್ರಮ

ವೈಯಕ್ತಿಕ ಬೋಧನಾಕ್ರಮಕ್ಕೆ ಮರಿಯಾ ಆದ್ಯತೆ ನೀಡುತ್ತಾರೆ. ಅದಕ್ಕಾಗಿ ಕೆಲಸಗಳು (Tasks) ಹಾಗೂ ಪ್ರಬೋಧಕ ಉಪಕರಣಗಳ (Didactic Apparatus) ಬಳಕೆ. ಸ್ವಯಂಶಿಸ್ತಿನ ಮಾಂಟೆಸ್ಸೂರಿ ಪದ್ಧತಿಯ ವೈಶಿಷ್ಟ್ಯಗಳು.


Digitised by Bharatavani, CIIL

3 ರಿಂದ 7ರ ಮಕ್ಕಳಿಗೆ 'ಮಕ್ಕಳ ಮನೆಯಲ್ಲಿ' ವ್ಯಾಸಂಗದ ದೊಡ್ಡ ಕೊಠಡಿ, ಇತರ ಕೆಲಸಗಳಿಗೆ ಚಿಕ್ಕ ಕೊಠಡಿಗಳು, ಆ ಕೊಠಡಿಗಳಲ್ಲಿ ಆ ವಯಸ್ಸಿನ ಮಕ್ಕಳಿಗೆ ಅನುಗುಣವಾಗಿ ಚಿಕ್ಕಮೇಜು, ಕುರ್ಚಿ, ಇತರೇ ಆಟದ ಸಾಮಾನುಗಳು, ಚಿಕ್ಕ ಚಿಕ್ಕ ಅಳತೆಯ ಕಪ್ಪುಹಲಗೆಗಳು, ಚಿತ್ರಗಳ ಫಲಕಗಳು ಇರುವುದಲ್ಲದೆ 'ಶಾಲಾವನ'ವೂ ಇರುತ್ತದೆ. ಮಕ್ಕಳು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಲು (ಕರ್ಮೇಂದ್ರಿಯ ಸಂಸ್ಕಾರ) ಪ್ರೋತ್ಸಾಹಿಸಲಾಗುತ್ತದೆ. ಕೈಕಾಲು ಮುಖ ತೊಳೆದುಕೊಳ್ಳುವುದು, ಬಟ್ಟೆಹಾಕಿಕೊಂಡು ಗುಂಡಿಹಾಕಿಕೊಳ್ಳುವುದು, ತಲೆಬಾಚಿಕೊಳ್ಳುವುದು, ಪೀಠೋಪಕರಣಗಳನ್ನು ಸರಿಯಾದ ರೀತಿಯಲ್ಲಿಡುವುದು, ಕೊಠಡಿ ಸ್ವಚ್ಛತೆ, ಅಲ್ಲಿನ ವಸ್ತುಗಳನ್ನು ವ್ಯವಸ್ಥಿತವಾಗಿ ಜೋಡಿಸುವುದು, ವಯೋಮಾನಕ್ಕೆ ಅನುಗುಣವಾಗಿ ದೈಹಿಕ ವ್ಯಾಯಾಮಗಳನ್ನು ಮಾಡುವುದು ಇತ್ಯಾದಿಗಳನ್ನು ಮಕ್ಕಳೇ ಮಾಡಿಕೊಳ್ಳುತ್ತಾರೆ. ಇವುಗಳಿಗೆ ಶಿಕ್ಷಕರ / ಹಿರಿಯರ ಮಾರ್ಗದರ್ಶನವಿರುತ್ತದೆಯೇ ವಿನಃ ಅವರ ಆಟ-ಕೆಲಸಗಳಲ್ಲಿ ಯಾರೂ ಮಧ್ಯೆ ಪ್ರವೇಶಿಸುವಂತಿಲ್ಲ. ಕಾರ್ಯಾಚರಣೆಯನ್ನು ಅವಲೋಕಿಸಬಹುದು. ಅಡೆತಡೆಗಳನ್ನು ಅವಶ್ಯಕವಿದ್ದಾಗ ನಿವಾರಿಸಬಹುದು.

ವಸ್ತುಗಳ ಆಕಾರ, ಸ್ಥಿತಿ, ತೂಕ, ಧ್ವನಿ ಮತ್ತು ಉಷ್ಣತೆಯ ಪರಿಕಲ್ಪನೆ ಅನುಭವಗಳನ್ನು ಪ್ರಚೋದಕ ಉಪಕರಣಗಳಿಂದ ಒದಗಿಸುವುದು ಮಾಂಟೆಸ್ಸೂರಿ ವಿಧಾನದ ವಿಶಿಷ್ಟ ಅಂಶವಾಗಿದೆ. ಮರದ, ತಗಡಿನಿಂದ ಮಾಡಿದ ಬೇರೆ ಬೇರೆ ಆಕಾರದ ಗೋಳ, ಸಿಲಿಂಡರ್, ಆಯತ, ತ್ರಿಭುಜ, ಗೋಪುರಗಳು, ಅವುಗಳಲ್ಲಿ ಚಿಕ್ಕವು, ದೊಡ್ಡವು, ಬೇರೆ ಬೇರೆ ತೂಕದವು, ಬೇರೆ ಬೇರೆ ಬಣ್ಣದವು, ಅಷ್ಟೇ ಅಲ್ಲದೆ ಮೃದುವಾದ, ಕಠಿಣವಾದ (ಉಣ್ಣೆ, ಬಟ್ಟೆ) ಪದಾರ್ಥಗಳ ವಸ್ತುಗಳು ಪ್ರಚೋದಕ ಉಪಕರಣಗಳ ಪೆಟ್ಟಿಗೆಯಲ್ಲಿರುತ್ತವೆ. ಇವುಗಳಿಂದ ಆಕಾರ, ಗಾತ್ರ, ಬಣ್ಣ, ತೂಕ, ಸ್ಪರ್ಶಗಳ ತರಬೇತಿ ದೊರೆಯುತ್ತದೆ.

ಮಣ್ಣಿನ ಆಟಿಕೆ ತಯಾರಿಕೆ, ನಿಸರ್ಗ ಅಭ್ಯಾಸಗಳು ಇದ್ದರೂ ಅವುಗಳಿಗೆ ಅಷ್ಟೊಂದು ಮಹತ್ವ ಇಲ್ಲ. ಅಭ್ಯಾಸದ ಕೊಠಡಿಯಲ್ಲಿ ಅವರಿಗೆ ನಿಲುಕುವ ಎತ್ತರದಲ್ಲಿ ಸುತ್ತಲೂ ಕರಿ ಹಲಗೆಗಳು ಇದ್ದು ಅವುಗಳ ಮೇಲೆ ಚಿತ್ರ, ಅಕ್ಷರ ಬರೆಯಲು ಅವಕಾಶ, ತಮ್ಮ ಎತ್ತರ, ತೂಕ ನೋಡಿಕೊಳ್ಳಲು ಅನುಕೂಲಕರ ಉಪಕರಣಗಳಿರುತ್ತವೆ. 'ಸ್ವಯಂಶಿಸ್ತ'ನ್ನು ಪ್ರಚೋದಿಸುವ ಹಾಗೂ ಅದನ್ನು ಕಾರ್ಯಗತವಾಗಿಸುವ ಕ್ರಮ ಇಲ್ಲಿನ ಮತ್ತೊಂದು ಪ್ರಮುಖ ಅಂಶವಾಗಿದೆ. ಸದಾ ಚಟುವಟಿಕೆಯಿಂದ ಇರಲು ಅವಕಾಶವಿರುವಂತೆ ಹಾಗೂ 'ಅಭಿವೃದ್ಧಿ'ಯು ಶಿಕ್ಷಣವೆಂಬ ಆಶಯಕ್ಕೆ ಪೂರಕವಾಗಿ ವಿಶ್ರಾಂತಿ ಪಡೆಯಲು, ಬೇಸರ ನೀಗಿಕೊಳ್ಳಲು ಶಾಲಾವನವು ಬಳಕೆಯಾಗುತ್ತದೆ.

ಶಿಕ್ಷಕ/ಮಾರ್ಗದರ್ಶಿಯು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಆಸೆ-ಆಕಾಂಕ್ಷೆ, ಒಲವು-ಅಭಿರುಚಿ, ಇಚ್ಛೆ, ಕಲಿಕೆಯ ಗತಿಗೆ (Speed of learning) ಅನುಗುಣವಾಗಿ ಅವಕಾಶಗಳನ್ನು ಒದಗಿಸುವ, ಅಡೆತಡೆ ನಿವಾರಿಸುವ, ಅವರನ್ನು ಪ್ರೋತ್ಸಾಹಿಸುವ ನಿರ್ದೇಶಕನಾಗಿರಬೇಕು.

**ಮಾಂಟೆಸ್ಸೂರಿ ಶಿಕ್ಷಣ ಕ್ರಮ**

ಮಗುವಿನ ನೈಜ ಹಾಗೂ ಸ್ವಾಭಾವಿಕ ಲಕ್ಷಣವನ್ನು (The child's true normal nature) ಆಧರಿಸಿ ಅನ್ವೇಷಕ ವಿಧಾನವನ್ನು ಪ್ರಾಯೋಗಿಕ ಕಾರ್ಯಾಚರಣೆಯಿಂದ ರೂಪಿಸುವ ಆಧಾರದ ಮೇಲೆ ತಮ್ಮ ವಿಧಾನದ ಭದ್ರಬುನಾದಿಯನ್ನು ಕಟ್ಟಿದ ಮಾಂಟೆಸ್ಸೂರಿಯವರಿಗೆ ಡಾ. ಇಟಾರ್ಡ್‌ರ ಪ್ರಭಾವ ಹಾಗೂ ಸೆಗ್ವಿನ್‌ರವರ "ಬುದ್ಧಿಮಾಂದ್ಯತೆ ವೈದ್ಯಕೀಯ ದೋಷವಲ್ಲ, ಅದು ಶಿಕ್ಷಣದ ಸಮಸ್ಯೆ". ಲೇಖನಗಳು, ರೂಸೋ, ಪೆಸ್ಟಾಲಝಿ, ಫ್ರೊಬೆಲ್‌ರ ವಿಚಾರಧಾರೆ ಹಾಗೂ ಕಾರ್ಯಾಚರಣೆಗಳು ಪ್ರಚೋದನೆ / ಪ್ರಭಾವ ಬೀರಿದ್ದರೂ ಅವರ 'ಅನುಭವ'ಗಳು, ಪ್ರಯೋಗಶೀಲತೆ ಹೆಚ್ಚು ಪ್ರಬಲವೆನಿಸುತ್ತವೆ.

ಮಕ್ಕಳು 'ಸ್ವತಂತ್ರ'ವಾಗಿರಬೇಕು. ಹೀಗಿರುವುದರಿಂದ ಅವರ ನೈಸರ್ಗಿಕ ಸ್ವಭಾವವನ್ನು ಸಂರಕ್ಷಿಸಲು ಹಾಗೂ ಸಂಪೋಷಿಸಲು ಮತ್ತು ಮಗು ಆಂತರಿಕವಾಗಿ ಸ್ವಯಂ ಮಾರ್ಗದರ್ಶನ ಪಡೆದುಕೊಂಡು ಪೂರ್ಣ ವಿಕಾಸ ಹೊಂದಲು ಸಾಧ್ಯವಾಗುತ್ತದೆ ಎಂದು ಮನಗಂಡಿದ್ದ ಮಾಂಟೆಸ್ಸೂರಿಯವರು ಶಿಕ್ಷಕರನ್ನು ಮಾರ್ಗದರ್ಶಿ / ನಿರ್ದೇಶಕನಾಗಿ ಕಾರ್ಯನಿರ್ವಹಿಸಬೇಕಾದವರೆಂದು ಮತ್ತು ಅವರ ಕಾರ್ಯವು ಮಕ್ಕಳಿಗೆ ಒದಗುವ ಅಡೆತಡೆಗಳನ್ನು ನಿವಾರಿಸುವ, ಅವರ ಸ್ವಾತಂತ್ರ್ಯಕ್ಕೆ ಭಂಗಬಾರದಂತೆ 'ಪರಿಸರ' ಒದಗಿಸುವುದೆಂದು ಸ್ಪಷ್ಟಪಡಿಸುತ್ತಾರೆ. ತಮ್ಮ ಶಿಕ್ಷಣ ಕ್ರಮ 'ವೈಜ್ಞಾನಿಕ ವಿಧಾನ'ವೆಂದು ಕರೆದಿರುವರು. ಅವರ ಶಿಕ್ಷಣ ಕ್ರಮದ ಶಿಕ್ಷಣ ತತ್ವಗಳು (Philosophy of Education) ಒಂದಿಷ್ಟು ಅಪೂರ್ಣ ಹಾಗೂ ಸಂದಿಗ್ಧ (ಗೊಂದಲಮಯ) ವಾಗಿವೆ. ಏಕೆಂದರೆ 1907ರ ಅವರ ಕಾರ್ಯಾಚರಣೆ ಹಾಗೂ ಮಕ್ಕಳ ಮೇಲಾದ ಪ್ರಭಾವವು ಸಂಪೂರ್ಣವಾಗಿ ತನಗೆತಾನೇ ಒದಗಿ ಬಂದದ್ದು, ಉದ್ದೇಶಪೂರ್ವಕವಾಗಿ ಘಟಿಸಿದುದಲ್ಲ ಎಂಬ ವಾದವಿದೆ. ಇದನ್ನೇ ಮುಂದುವರೆಸಿ 'ಮಾಂಟೆಸ್ಸೂರಿಯವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಅನ್ವೇಷಣೆ / ಸಂಶೋಧನೆಯಿಂದ ರೂಪಿತವಾದ ವಿಧಾನದ ಬಗ್ಗೆ ತಮ್ಮ ಉಪನ್ಯಾಸ ಹಾಗೂ ಲೇಖನಗಳಲ್ಲಿ ಎಲ್ಲಿಯೂ ವಿವರಿಸುವುದಿಲ್ಲ. ಬದಲಾಗಿ ಆ ವಿಧಾನದ ಕಾರ್ಯಾಚರಣೆಗೆ ಕೈಗೊಂಡ ಪ್ರಯತ್ನಗಳು, ವಿಧಾನದ ಬಳಕೆಯಿಂದ ಮಕ್ಕಳ ಕಲಿಕೆಯಲ್ಲಾದ ಸಾಫಲ್ಯತೆಯನ್ನು ಪ್ರಸ್ತಾಪಿಸಿದ್ದಾರೆ ಎಂದು ವಿಮರ್ಶಿಸಲಾಗಿದೆ. 1907ರಲ್ಲಿ ಇಟಲಿಯಲ್ಲಿದ್ದ ಪರಿಸ್ಥಿತಿ ಹಾಗೂ ಆಗಿನ ಸಾಂಪ್ರದಾಯಿಕ ಚಿಂತನೆ, ಅಲ್ಲಿನ ಸಂಸ್ಕೃತಿಯ ವಲಯದಲ್ಲಿ ಮಾಂಟೆಸ್ಸೂರಿಯವರ ವೈಯಕ್ತಿಕ ಪರಿಶ್ರಮ, ಪ್ರಭಾವ ಹಾಗೂ ಅವರ ಸಹಚರರ ಹೊಂದಾಣಿಕೆಯಿಂದಾಗಿ ಅವರ ವಿಧಾನ ನೀಡಿದ ಫಲವು ಭಾರತಕ್ಕೆ ಹೊಂದಬೇಕೆಂದೇನಿಲ್ಲ. ಅಂದರೆ ಆಯಾ ದೇಶ, ಸನ್ನಿವೇಶಗಳಲ್ಲಿ ವ್ಯಕ್ತಿ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿಸರ್ಗದ ಅಗಣಿತ ನಿಯಮಗಳ ಕಾರಣಗಳಿಂದಾಗಿ ಪ್ರತಿಫಲಿತವಾಗುವ ರೀತಿಗೆ ಅನುಗುಣವಾಗಿ 'ಮಾಂಟೆಸ್ಸೂರಿ ವಿಧಾನ' ರೂಪುಗೊಂಡಿದೆ ಎಂದು ಹೇಳಬಹುದು.

'ಮಾಂಟೆಸ್ಸೂರಿ; ದಿ ಸೈನ್ಸ್ ಬಿಹೈಂಡ್ ದಿ ಜೀನಿಯಸ್' (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ 2005, Award winning Book-by Angelive stoll Lillard) ಪುಸ್ತಕದಲ್ಲಿ ಅದರ ಲೇಖಕಿ ಸಾಂಪ್ರದಾಯಿಕ ಹಾಗೂ ಮಾಂಟೆಸ್ಸೂರಿ ವಿಧಾನದ ಅಧ್ಯಯನದಲ್ಲಿ ಮಾಂಟೆಸ್ಸೂರಿ ವಿಧಾನವು ಮನೋವಿಜ್ಞಾನದ ಅಧ್ಯಯನವು ಮಾನವ ವಿಕಾಸದ ಬಗ್ಗೆ ಕಂಡುಕೊಂಡಿರುವ ಸತ್ಯಕ್ಕೆ ಸಮರ್ಪಕವಾಗಿದೆ ಹಾಗೂ ಈ ಬಗ್ಗೆ ಇನ್ನೂ ವ್ಯಾಪಕ ಅಧ್ಯಯನವಾಗಬೇಕು ಎಂದಿದ್ದಾರೆ. 2006ರ "ಸೈನ್ಸ್" ಪತ್ರಿಕೆಯಲ್ಲಿ 5-12 ವಯೋಮಾನದ ಮಾಂಟೆಸ್ಸೂರಿ ಶಾಲೆಯ ಮಕ್ಕಳು ಇತರೆ ಶಾಲೆಗಳ ಮಕ್ಕಳಿಗಿಂತ ಉತ್ತಮ ಸಾಧನೆ ಮಾಡಿದ್ದಾರೆ ಎಂಬ ಅಧ್ಯಯನ ವರದಿ ಪ್ರಕಟವಾಗಿದೆ. ತತ್ವಶಾಸ್ತ್ರಕ್ಕಿಂತ ಕಾರ್ಯಾಚರಣೆ, ಅದರ ಫಲಶ್ರುತಿ ಮಾಂಟೆಸ್ಸೂರಿ ಪದ್ಧತಿಯಲ್ಲಿನ ಗಮನಾರ್ಹ ಅಂಶವಾಗಿವೆ. ಅಭಿಪ್ರಾಯ ಭೇದಗಳೇನೇ ಇದ್ದರೂ, ಮರಿಯಾ ಮಾಂಟೆಸ್ಸೂರಿಯವರು ಶಿಕ್ಷಣ ಕ್ಷೇತ್ರದ ಅಷ್ಟೇ ಏಕೆ ವಿಶ್ವದ ಮಹೋನ್ನತ ಮಹಿಳೆಯರಲ್ಲಿ ಅಗ್ರಮಾನ್ಯರು.

-ಎನ್.ಕಾ.ರಾ

Digitised by Bharatavani, CIIL

## ಮಹಾತ್ಮ ಗಾಂಧೀಜಿ

ಭಾರತದ ಪಿತಾಮಹ, ಯುಗಪುರುಷ, ಸ್ವಾತಂತ್ರ್ಯದ ಹೋರಾಟಗಾರ, ಶ್ರೇಷ್ಠ ಶಿಕ್ಷಣ ತಜ್ಞ, ಆದರ್ಶವಾದಿ, ದಾರ್ಶನಿಕ, ಸತ್ಯ ಮತ್ತು ಅಹಿಂಸೆಯೇ ಜೀವನದ ಮೂಲವಾಗಿಟ್ಟುಕೊಂಡಿದ್ದ ಜಗದ್ವಿಖ್ಯಾತಿಯನ್ನು ಪಡೆದ ಮಹಾನ್ ವ್ಯಕ್ತಿಯೇ ಗಾಂಧೀಜಿ (1869–1948). ಈ ಗುಣಗಳಿಂದಲೇ ಲೋಕಕ್ಕೇ "ಮಹಾತ್ಮ" ಎನಿಸಿಕೊಂಡರು.


ಮಹಾತ್ಮ ಗಾಂಧಿ

ಇವರು ಹಿಂದೂಧರ್ಮಕ್ಕೆ ಸೇರಿದ ಕಿರಾಣಿ ವರ್ತಕ ವೃತ್ತಿ ನಡೆಸುತ್ತಿದ್ದ ವೈಶ್ಯಮತಕ್ಕೆ ಸೇರಿದ ವಂಶದಲ್ಲಿ ಹುಟ್ಟಿದವರು. ಇವರ ಹಿಂದಿನ ಎರಡು ತಲೆಮಾರಿನವರು ಕಾಥೇವಾಡದ ಸಂಸ್ಥಾನಗಳಲ್ಲಿ ದಿವಾನರಾಗಿ ಕೆಲಸ ಮಾಡಿದ್ದರು. ಗಾಂಧೀಜಿ ತಾತ ಉತ್ತಮಚಂದ ಗಾಂಧಿ, ಮೊದಲು ಪೋರ್‌ಬಂದರಿನಲ್ಲಿ ನಂತರ ಜುನಾಗಢದಲ್ಲಿ ದಿವಾನರಾಗಿದ್ದರು. ಇವರ ತಂದೆ ಕರಮಚಂದಗಾಂಧಿಯವರಿಗೆ ಮೂವರು ಮಡದಿಯರು ತೀರಿಕೊಂಡ ಮೇಲೆ ಪುತಲೀಬಾಯಿಯೊಂದಿಗೆ ನಾಲ್ಕನೇ ಮದುವೆ ಆಯಿತು. ಅವರಿಗೆ ಒಂದು ಹೆಣ್ಣು, ಮೂರು ಗಂಡು ಮಕ್ಕಳಾದವು. ಅವರಲ್ಲಿ ಕೊನೆಯವರೇ ಮೋಹನದಾಸ.

ಮೋಹನದಾಸ ಗಾಂಧಿ ಎಂಬ ಹೆಸರಿನಿಂದ 1869 ಅಕ್ಟೋಬರ್ 2 ರಂದು ಗುಜರಾತಿನ ಕರಾವಳಿಯ ಪೋರ್ ಬಂದರ್ (ಅಥವಾ ಸುಧಾಮಪುರಿ) ಎಂಬಲ್ಲಿ ಕರಮಚಂದ ಹಾಗೂ ಪುತಲಿಬಾಯಿ ಇವರ ನಾಲ್ಕನೇ ಮಗನಾಗಿ ಹುಟ್ಟಿದವರೇ ಮುಂದೆ "ಮಹಾತ್ಮ ಗಾಂಧಿ" ಎಂಬ ಹೆಸರಿನಿಂದ ಪ್ರಖ್ಯಾತರಾದರು. ಪ್ರಾಮಾಣಿಕತೆ, ಸತ್ಯಕ್ಕೋಸ್ಕರ ಹೋರಾಡುವ ಕೆಚ್ಚೆದೆಯ ಬಾಲಕನೇ ಈ ಗಾಂಧಿ. ಪ್ರಾಥಮಿಕ ಶಿಕ್ಷಣ ಎರಡು ವರ್ಷಗಳು ಪೋರ್ ಬಂದರಿನಲ್ಲಿ ಕಳೆದು ನಂತರ ಪ್ರೌಢಶಾಲಾ ವಿದ್ಯಾಭ್ಯಾಸದವರೆಗೂ ರಾಜಕೋಟೆಯಲ್ಲಿ ಕಳೆದರು. ತಂದೆಯನ್ನು ನೋಡಲು ಬರುತ್ತಿದ್ದ ಧರ್ಮಗುರುಗಳು ಮತ್ತು ಪಂಡಿತರ ನಡುವಿನ ಚರ್ಚೆ ತಂದೆಯ ಕಾಲನ್ನು ಒತ್ತುತ್ತಾ ಮೋಹನದಾಸ ಅತೀವ ಶ್ರದ್ಧೆಯಿಂದ ಕೇಳುತ್ತಿದ್ದ. ರಾಮಾಯಣ, ಮಹಾಭಾರತಗಳ ಪಠಣ ತಂದೆಯ ಸಮ್ಮುಖದಲ್ಲಿ ನಡೆಯುತ್ತಿತ್ತು. "ಶ್ರವಣನ ಪಿತೃಭಕ್ತಿ" ಮತ್ತು "ಹರಿಶ್ಚಂದ್ರ" ನಾಟಕಗಳು ಮೋಹನದಾಸನ ಜೀವನದಲ್ಲಿ ಹೆಚ್ಚು ಪ್ರಭಾವ ಬೀರಿದವು. ಬಾಲ್ಯದಲ್ಲಿ ಕಲಿತ ರಾಮನಾಮ ಮುಂದೆ ಜೀವನಪರ್ಯಂತ ರಕ್ಷಾಮಂತ್ರವಾಯಿತು. ಕ್ರಿ.ಶ. 1887ರಲ್ಲಿ ಮೋಹನದಾಸರು ಮೆಟ್ರಿಕ್ಯುಲೇಷನ್ ಪಾಸು ಮಾಡಿದ. ಅದೇ ವರ್ಷ ಮೋಹನದಾಸನಿಗೆ 18 ವರ್ಷ ವಯಸ್ಸಾಗಿದ್ದಾಗಲೇ ಕಸ್ತೂರಿಬಾರೊಂದಿಗೆ ಇವರ ವಿವಾಹವಾಯಿತು. ಇವರಿಗೆ 4 ಜನ ಗಂಡು ಮಕ್ಕಳು. ಇವರು ಇಂಗ್ಲೆಂಡಿಗೆ 19ನೇ ವಯಸ್ಸಿನಲ್ಲಿ ಕಾನೂನು ಪದವಿ ಪಡೆಯಲು ಹೊರಡುವ ಹೊತ್ತಿಗೆ ಹರಿಲಾಲ ಗಾಂಧೀ ಇಲ್ಲಿಯೇ ಹುಟ್ಟಿದ್ದ. 1888ನೇ ಸೆಪ್ಟೆಂಬರ್ 4ರಂದು ಹಡಗು ಹತ್ತಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಇಂಗ್ಲೆಂಡಿನಲ್ಲಿ ಮಣಿಲಾಲ್ ಎಂಬ ಇನ್ನೊಬ್ಬ ಗಂಡು ಮಗ ಜನಿಸಿದ. ಮುಂದೆ ದಕ್ಷಿಣ ಆಫ್ರಿಕಾದಲ್ಲಿ ಲಾಯರ್ ವೃತ್ತಿ ನಡೆಸುವಾಗ ರಾಮದಾಸ್ ಮತ್ತು ದೇವದಾಸ್ ಎಂಬ ಇನ್ನಿಬ್ಬರು ಮಕ್ಕಳು ಜನಿಸಿದರು.

ಮೋಹನದಾಸ್ ಎರಡು ಮಹಾನ್ ಕೃತಿಗಳನ್ನು ರಚಿಸಿದರು.

1. "ಹಿಂದೂ ಸ್ವರಾಜ್" – ಇದರಲ್ಲಿ ಆದರ್ಶ ಭಾರತದ ಬಗ್ಗೆ ಸಂಪೂರ್ಣವಾದ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿರುವರು.
2. "ಸತ್ಯದೊಂದಿಗೆ ನನ್ನ ಪ್ರಯೋಗಗಳು" – ಇದು ಗಾಂಧೀಜಿಯವರ ಆತ್ಮ ಚರಿತ್ರೆ. ಇದರಲ್ಲಿ ಸ್ವಾತಂತ್ರ್ಯದ ಚಳುವಳಿವರೆಗೂ ತಮ್ಮ ಜೀವನ ಚರಿತ್ರೆ ನೀಡಿರುವರು. ಇದರಲ್ಲಿ ಟಾಲ್‌ಸ್ಟಾಯ್ ಫಾರ್ಮದಲ್ಲಿ ಅವರು ಕೈಗೊಂಡ ಶೈಕ್ಷಣಿಕ ಪ್ರಯೋಗಗಳ ವರ್ಣನೆಗಳೂ ಸಹ ಒಳಗೊಂಡಿವೆ.

**ಗಾಂಧೀಜಿಯ ಶೈಕ್ಷಣಿಕ ತತ್ವಗಳು ಇಂತಿವೆ:** ಶಿಕ್ಷಕನ ವ್ಯಕ್ತಿತ್ವಕ್ಕೆ ಗಾಂಧೀಜಿ ಹೆಚ್ಚಿನ ಮಹತ್ವ ನೀಡಿದ್ದರು. ಸಾಮಾಜಿಕ, ನೈತಿಕ, ರಾಜಕೀಯ ಹಾಗೂ ಆರ್ಥಿಕ ವಿಕಾಸಗಳನ್ನು ಸಾಧಿಸುವಲ್ಲಿ ಶಿಕ್ಷಣ ಪ್ರಮುಖವಾದದ್ದು ಎಂದು ನಂಬಿದ್ದರು. ಇವರು ಭಾವನಾತ್ಮಕ ಆದರ್ಶವಾದಿಗಳೂ ಆಗಿದ್ದು ವಾಸ್ತವಾಂಶಗಳನ್ನು ಪ್ರಮಾಣೀಕರಿಸಿ ನೋಡುವವರೂ ಆಗಿದ್ದಾರೆ.

1. ಪ್ರಾಥಮಿಕ ಶಿಕ್ಷಣ ಉಚಿತ ಹಾಗೂ ಕಡ್ಡಾಯವಾಗಿಯೂ ಕೊಡಬೇಕು.
2. ಶಿಕ್ಷಣವು ಉತ್ಪಾದಕವಾದ ಕೈಕೆಲಸಗಳಲ್ಲಿ ಕೇಂದ್ರೀಕೃತವಾಗಿರಬೇಕು.
3. ಸ್ವಾವಲಂಬನೆ ಹಾಗೂ ಉದ್ಯೋಗ ಪ್ರಧಾನ ಶಿಕ್ಷಣಕ್ಕೆ ಪ್ರಾಶಸ್ತ್ಯವಿರಬೇಕು.
4. ಶಿಕ್ಷಣವನ್ನು ಮಾತೃಭಾಷೆಯಲ್ಲಿ ಕೊಡಬೇಕು.
5. ಅಹಿಂಸೆಯು ಶಿಕ್ಷಣದ ತಳಹದಿಯಾಗಬೇಕು.
6. ಶಿಕ್ಷಣವು ವ್ಯಕ್ತಿ ಚಾರಿತ್ರ್ಯವನ್ನು ರೂಪಿಸಬೇಕು.
7. ಭಾರತದ ಸಂಸ್ಕೃತಿಯ ಆಧಾರದ ಮೇಲೆ ಶಿಕ್ಷಣ ಪದ್ಧತಿ ರೂಪಿಸಬೇಕು.

ಈ ಶಿಕ್ಷಣ ತತ್ವಗಳ ಆಧಾರದ ಮೇಲೆ ಕ್ರಿ.ಶ. 1935ರಲ್ಲಿ ಗಾಂಧೀಜಿಯವರು ಸಾಬರಮತಿ ಎಂಬ ಸ್ಥಳದಲ್ಲಿ 'ಮೂಲಶಿಕ್ಷಣ' ವ್ಯವಸ್ಥೆಯನ್ನು ರೂಪಿಸಿದರು. ಇದನ್ನು 'ವಾರ್ಧಾ ಯೋಜನೆ' ಅಥವಾ 'ಮೂಲ ಶಿಕ್ಷಣ' ಎಂದು ಕರೆದರು. ಇದು ನವೀನವಾಗಿದ್ದುದರಿಂದ ಇದನ್ನು ನಯೀ ತಾಲೀಂ (ನವೀನ ಶಿಕ್ಷಣ) ಎಂದು ಕರೆಯುತ್ತಾರೆ.

**ಮೂಲಶಿಕ್ಷಣ:** ದಕ್ಷಿಣ ಆಫ್ರಿಕಾದಲ್ಲಿದ್ದ ಅವಧಿಯಲ್ಲಿ ಟಾಲ್‌ಸ್ಟಾಯ್ ಫಾರಂನಲ್ಲಿ ಅಭ್ಯಾಸ ಮಾಡುತ್ತಿದ್ದ ಮಕ್ಕಳ ಜವಾಬ್ದಾರಿ ಇವರ ಮೇಲೆ ಬಿದ್ದಿತ್ತು. ಈ ಮಕ್ಕಳು ಸ್ವಾವಲಂಬಿಯಾಗುವಂತೆ ಕೃಷಿ ಹಾಗೂ ಕೈಗಾರಿಕೆಗಳ ತರಬೇತಿಯನ್ನು ನೀಡಲಾಗುತ್ತಿತ್ತು. ಭಾರತಕ್ಕೆ ಗಾಂಧೀಜಿ ಹಿಂದಿರುಗಿದ ಮೇಲೆ ಸಾಬರಮತಿ ಎಂಬಲ್ಲಿ ತಮ್ಮ ಶೈಕ್ಷಣಿಕ ತತ್ವಗಳನ್ನು ಪ್ರಯೋಗಿಸಲು ಮೂಲಶಿಕ್ಷಣ (ಬೇಸಿಕ್ ಎಜುಕೇಷನ್) ಯೋಜನೆ ಪ್ರಾರಂಭಿಸಿದರು. "ಮೂಲ ಶಿಕ್ಷಣ" ಎಂದು ಕರೆಯಲು ಕೆಲವು ಕಾರಣಗಳನ್ನು ಗಾಂಧೀಜಿ ನೀಡುವರು. 1) ಶಿಕ್ಷಣ ಕಾರ್ಯದಲ್ಲಿ ಪ್ರಥಮವಾಗಿ ಬರುವುದು. 2) ಈ ಪದ್ಧತಿ ಭಾರತದ ಶಿಕ್ಷಣ ಪದ್ಧತಿಗೆ ತಳಹದಿಯಾಗಿದೆ. 3) ಗೃಹ ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡುವುದರಿಂದ ಪ್ರತಿಯೊಬ್ಬನೂ ಸ್ವಾವಲಂಬಿಯಾಗಲು ಸಹಾಯ ಮಾಡುವುದು. 4) ಜೀವನಕ್ಕೆ ಬೇಕಾದ ಅತ್ಯವಶ್ಯಕ ಕಲೆಗಳನ್ನು ಬೆಳೆಸಿಕೊಳ್ಳುವುದು 5) ಇದು ಸಾಮಾಜಿಕ ಕ್ರಾಂತಿಗೆ ನಾಂದಿಯಾಗುವುದು.

**ಧಾರ್ಮಿಕ ಶಿಕ್ಷಣ:** ಪಾಶ್ಚಾತ್ಯ ತತ್ವಜ್ಞಾನಿ ಪ್ಲೇಟೋನಿಂದ ಪ್ರಭಾವಿತರಾದ ಗಾಂಧೀಜಿ ಧಾರ್ಮಿಕ ಶಿಕ್ಷಣಕ್ಕೆ ಮಹತ್ವ ನೀಡಿದ್ದರು. ಇವರ ದೃಷ್ಟಿಯಲ್ಲಿ ಧರ್ಮವು ಅನೇಕ ಭಾವನೆಗಳನ್ನು ಒಳಗೊಂಡಿದೆ.


Digitised by Bharatavani, CIIL

ಅ) 'ಧರ್ಮ'ವೆಂದರೆ ಸತ್ಯ, ಪ್ರೀತಿ, ನ್ಯಾಯ, ಅಹಿಂಸೆಯ ಮಾರ್ಗ.

ಆ) ವೈಯಕ್ತಿಕ ಅನುಭವವೇ ಧರ್ಮ, – ಅದೇ ಸತ್ಯ, ಸತ್ಯವೇ ದೇವರು.

ಇ) ಧರ್ಮವಿಲ್ಲದ ಜೀವನ ತತ್ವರಹಿತವಾದ ಜೀವನ. ಇದು ಚುಕ್ಕಾಣಿ ಇಲ್ಲದ ಹಡಗು ಇದ್ದಂತೆ.

ಈ) ಧಾರ್ಮಿಕ ಶಿಕ್ಷಣವನ್ನು ಶಾಲೆಗಳಲ್ಲಿ ನೀಡಬೇಕು. ಆದರೆ ಯಾವುದೇ ವಿಶಿಷ್ಟವಾದ ಧರ್ಮಕ್ಕೆ ಮಹತ್ವ ನೀಡಬಾರದು. ಮಕ್ಕಳಲ್ಲಿ ಸರ್ವ ಧರ್ಮಗಳ ಮೂಲತತ್ವಗಳ ಅರಿವನ್ನು ಮೂಡಿಸುವುದು ಅಗತ್ಯ. ಈ ರೀತಿಯ ಶಿಕ್ಷಣದಿಂದ ಮಕ್ಕಳಲ್ಲಿ ಪರಧರ್ಮಗಳ ಸಹಿಷ್ಣುತೆ ಹಾಗೂ ಪರಧರ್ಮ ಗೌರವ ಗುಣಗಳು ಬೆಳೆದು ಮುಂದೆ ಸಮಾಜದಲ್ಲಿ ಶಾಂತಿ ನೆಲೆಸಲು, ರಾಷ್ಟ್ರವನ್ನು ಪ್ರೇಮಿಸಲು ಹಾಗೂ ಪರರಾಷ್ಟ್ರಗಳೊಡನೆ ಅನ್ಯೋನ್ಯತೆ ಬೆಸೆಯಲು ಸಹಕಾರಿಯಾದ ಬೀಜವಾಗುವುದು.

**ಸ್ತ್ರೀ ಶಿಕ್ಷಣ:** ಗಾಂಧೀಜಿಯವರು ಸ್ತ್ರೀಯರ ಬಗ್ಗೆ ತುಂಬಾ ಆದರಾಭಿಮಾನ ಹಾಗೂ ಗೌರವ ಭಾವನೆಗಳನ್ನು ಬೆಳೆಸಿಕೊಂಡಿದ್ದರು. ತಾಯಿಯು ಮೊದಲ ಗುರು ಎಂದು ಹೇಳಿದರು. ಸ್ತ್ರೀ ಸುಶಿಕ್ಷಿತಳಾದರೆ ಇಡೀ ಸಮಾಜವೇ ಸುಶಿಕ್ಷಿತವಾಗಿದ್ದು ರಾಷ್ಟ್ರವು ಉನ್ನತ ಮಟ್ಟಕ್ಕೆ ಏರಲು ಸಹಾಯವಾಗುತ್ತದೆ. ಸ್ತ್ರೀ ಶಿಕ್ಷಣದ ಬಗ್ಗೆ ಅವರ ವಿಚಾರಗಳು ಹೀಗಿವೆ;

ಅ) ಪುರುಷರಿಗೆ ಇರುವಷ್ಟು ಶಿಕ್ಷಣದ ಹಕ್ಕು ಸ್ತ್ರೀಯರಿಗೂ ಇರಬೇಕು.

ಆ) ಸ್ತ್ರೀಯರ ಸಾಮರ್ಥ್ಯಗಳಿಗೆ ಅನುಗುಣವಾಗಿ ಹಾಗೂ ಅವರ ಬೇಕುಬೇಡಗಳಿಗೆ ಅನುಗುಣವಾಗಿ ಶಿಕ್ಷಣವನ್ನು ನೀಡಬೇಕು.

ಇ) ಮಕ್ಕಳಿಗೆ ಶಿಕ್ಷಕರಿಗಿಂತ ಶಿಕ್ಷಕಿಯರು ನೀಡಿದ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾದದ್ದು.

ಈ) ಸ್ತ್ರೀ ಶಿಕ್ಷಣದಲ್ಲಿ ಗೃಹ ವಿಜ್ಞಾನಕ್ಕೆ ಯೋಗ್ಯ ಸ್ಥಾನವಿರಬೇಕು.

ಉ) ಸ್ತ್ರೀ ಶಿಕ್ಷಣದಿಂದ ಭಾರತದ ಧರ್ಮ, ಸಂಸ್ಕೃತಿ, ಸಂಸ್ಕಾರಗಳನ್ನು ಎತ್ತಿ ಹಿಡಿಯಲು ಸಾಧ್ಯ.

ಊ) ಮಕ್ಕಳಿಗೆ ಹದಿನಾರು ವರ್ಷದವರೆಗೆ ಸಹ ಶಿಕ್ಷಣ ನೀಡುವುದು ಯೋಗ್ಯ.

ಋ) ಸ್ತ್ರೀ ಶಿಕ್ಷಣದ ಮೇಲೆ ಆ ದೇಶದ ಉನ್ನತಿ ಅವಲಂಬಿಸಿರಲು ಸಾಧ್ಯ.

ಎ) ಹೆಣ್ಣು ಮಕ್ಕಳಿಗಾಗಿ ಗೃಹ ವಿಜ್ಞಾನವನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು.

ಗಾಂಧೀಜಿಯವರು ತಮ್ಮ ಶಿಕ್ಷಣ ತತ್ವಗಳ ಆಧಾರದ ಮೇಲೆ ಕ್ರಮಬದ್ಧವಾಗಿ ನಡೆಸುವ ಜೀವನವೇ ಶಿಸ್ತು ಎಂದರು. ಅದು ಶಾಲೆಯಲ್ಲಿನ ಶಿಸ್ತು ಆಗಿರಬಹುದು, ಆಡಳಿತದಲ್ಲಿನ ಶಿಸ್ತು ಆಗಿರಬಹುದು. ವ್ಯವಸ್ಥೆಯಲ್ಲಿನ ಶಿಸ್ತು ಆಗಿರಬಹುದು ಆರ್ಥಿಕ ಶಿಸ್ತು ಆಗಿರಬಹುದು. ಸಾಮಾಜಿಕ ಶಿಸ್ತು ಆಗಿರಬಹುದು, ಒಟ್ಟಾರೆ ಬೇರೊಬ್ಬರಿಗೆ ತೊಂದರೆಯಾಗದ ರೀತಿ ವ್ಯಕ್ತಿಯು ಚಿಂತನಾಶೀಲನಾಗಿ ನಡೆಸುವ ಜೀವನಶೈಲಿ 'ಶಿಸ್ತು' ಎಂಬ ಅಭಿಪ್ರಾಯ ಅವರದಾಗಿತ್ತು.

ಅ) ಶಿಸ್ತು ಆಂತರಿಕವಾಗಿ ಬರಬೇಕೇ ವಿನಃ ಬಾಹ್ಯರೀತಿಯಿಂದ ಹೇರಬಾರದು.

ಆ) ಸ್ವಾರ್ಥ, ತ್ಯಾಗದಿಂದ, ಸದ್ಗುಣಗಳಿಂದ ಸ್ವಯಂ ಶಿಸ್ತು ಹೊರ ಹೊಮ್ಮುವುದು.

ಇ) ಪವಿತ್ರ ಜೀವನದಿಂದ ಶಿಸ್ತು ಉಗಮಿಸುವುದು.

ಈ) ತಾಳ್ಮೆಯಿಂದ–ಅಹಿಂಸಾಮಾರ್ಗ, ಅಹಿಂಸೆಯಿಂದ ಆತ್ಮಸಂಯಮ, ಆತ್ಮ ಸಂಯಮದಿಂದ ಸ್ವಯಂ ಶಿಸ್ತನ್ನು ಪಡೆಯಬಹುದು.

ಉ) ಸಹಕಾರ ಮನೋಭಾವನೆಯು ಮಕ್ಕಳಲ್ಲಿ ಶಿಸ್ತನ್ನು ಮೂಡಿಸುವುದು. ಕೈಕಸಬು ಕೇಂದ್ರಿತ ಶಿಕ್ಷಣವು ಸಹಕಾರ ಮನೋಭಾವನೆ ಪ್ರಚೋದಿಸುವುದು. ಇದರ ಪರಿಣಾಮ ಶಿಸ್ತು ಸ್ವಯಂ ಪ್ರೇರಣೆಯಿಂದ ಬರುವುದು. ಇದಕ್ಕೆ 'ಸಾಮಾಜಿಕ ಶಿಸ್ತು' ಎಂದು ಕರೆದರು.

**ಏಳು ಸಾಮಾಜಿಕ ಪಾಪಗಳು** (Seven Social Sins): ಗಾಂಧೀಜಿ ಏಳು ಸಾಮಾಜಿಕ ಪಾಪಗಳನ್ನು ಹೇಳಿ, ಅವುಗಳಿಂದ ದೂರವಿರುವಂತೆ ಮಕ್ಕಳಿಗೆ ತಿಳಿಯ ಹೇಳಬೇಕೆಂದು ಹೇಳುತ್ತಿದ್ದರು.

1. ತತ್ವರಹಿತ ರಾಜಕೀಯ (Politics without Principles)
2. ದುಡಿಮೆ ಇಲ್ಲದ ಸಂಪತ್ತು (Wealth without Work)
3. ನೀತಿಹೀನ ವಾಣಿಜ್ಯ (Commerce without Morality)
4. ಶೀಲವಿಲ್ಲದ ಶಿಕ್ಷಣ (Eucation without Character)
5. ಆತ್ಮಸಾಕ್ಷಿರಹಿತ ಭೋಗ (Pleasure without Conscience)
6. ಮಾನವತಾ ಶೂನ್ಯ ವಿಜ್ಞಾನ (Science without Humanity)
7. ತ್ಯಾಗವಿಲ್ಲದ ಪೂಜೆ (Worship without Sacrifice)

ಮಗುವಿಗೆ ಸೂಕ್ತ ಶಿಕ್ಷಣ ನೀಡುವುದರಿಂದ ಈ ಏಳು ಮಹಾಪಾಪಗಳನ್ನು ಸಮಾಜದಲ್ಲಿ ತಡೆಗಟ್ಟಬಹುದು ಎಂದು ಪ್ರತಿಪಾದಿಸಿದರು.

ಗಾಂಧೀಜಿಯವರ ವಿಚಾರಧಾರೆಯಲ್ಲಿನ ಕೆಲವು ಅಂಶಗಳು ಇಂದಿನ ಗಣಕ ಯಂತ್ರ ಯುಗದಲ್ಲಿ ಅಪ್ರಸ್ತುತವೆಂದು ತಪ್ಪಾಗಿ ತಿಳಿದು ಅದರ ಅಂಶಗಳನ್ನು ಗಾಳಿಗೆ ತೂರಿ ಬಿಡಲಾಗಿದೆ ಮತ್ತೆ ಕೆಲವನ್ನು ತಿರುಚಲಾಗಿವೆ ಎಂದರೂ ತಪ್ಪಾಗಲಾರದು. ನಾಗಾಲೋಟದಲ್ಲಿ ಓಡುತ್ತಿರುವ ಪ್ರಜಾಸಂಖ್ಯೆ ಹಾಗೂ ಗಣಕಯಂತ್ರ ಯುಗದಲ್ಲಿ ಮೂಲಶಿಕ್ಷಣ ಎಷ್ಟರ ಮಟ್ಟಿಗೆ ಪ್ರಸ್ತುತ ಎಂಬುದು ಪ್ರಶ್ನಾರ್ಹ. ಆದರೆ ವೈಜ್ಞಾನಿಕ ಪದ್ಧತಿಯ ವ್ಯವಸಾಯ, ಗೃಹ ಕೈಗಾರಿಕೆ ಇಂದಿಗೂ ಅವಶ್ಯಕ. ಸ್ತ್ರೀ ಶಿಕ್ಷಣವು ಅವರ ನಿರೀಕ್ಷೆಗೂ ಮೀರಿ ಹೋಗಿದ್ದರೂ ನೈತಿಕತೆಯಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಸಹಶಿಕ್ಷಣವನ್ನು ಪಾಲಿಸುತ್ತಿದ್ದರೂ ಸೂಕ್ತ ಮಾರ್ಗದರ್ಶನವಿಲ್ಲದೆ ಯುವಕ, ಯುವತಿಯರು ದಾರಿ ತಪ್ಪುತ್ತಿದ್ದಾರೆ. ಸಮಾಜದಲ್ಲಿ ಗಾಂಧೀಜಿಯವರು ಹೇಳುತ್ತಿದ್ದ ಏಳು ಸಾಮಾಜಿಕ ಪಾಪಗಳ ಘಟನೆಗಳು ಹೆಚ್ಚುತ್ತಿವೆ. ಈ ರೀತಿಯ ಮೌಲ್ಯ ಸಂದಿಗ್ಧತೆಯ ಇಂದಿನ ಸಂದರ್ಭದಲ್ಲಿ ಗಾಂಧೀಜಿಯವರು ಹೇಳುತ್ತಿದ್ದ ಸರಳ ಜೀವನ, ಸತ್ಯಪ್ರಿಯತೆ, ಪ್ರಾಮಾಣಿಕತೆ, ಮೌಲ್ಯಾಧಾರಿತ, ರಾಜಕೀಯ, ಸಾಮಾಜಿಕ ಜೀವನದಲ್ಲಿ ಧರ್ಮದರ್ಶಿತ್ವದ ಭಾವನೆ, ಸ್ವದೇಶೀ ಪ್ರಿಯತೆ, ಮಾತೃಭಾಷಾ ಶಿಕ್ಷಣ, ಕೃಷಿ, ಕರಕುಶಲತೆ ಆಧಾರಿತ ಶಿಕ್ಷಣ ಮುಂತಾದ ವಿಚಾರಗಳು ಹೆಚ್ಚು ಹೆಚ್ಚು ಅವಶ್ಯಕ, ಸಾಂದರ್ಭಿಕ ಎನ್ನಿಸುತ್ತದೆ.

Digitised by Bharatavani, CIIL

ಗಾಂಧೀಜಿಯವರ ಶೈಕ್ಷಣಿಕ ಗುರಿಗಳು ಅವರಿಗಿದ್ದ ಭಾರತದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ತತ್ವಗಳ ಆಧಾರದಿಂದ ಹೊರಹೊಮ್ಮಿದೆ. ಅವು ಇಂತಿವೆ:

1) **ಉದರ ನಿರ್ವಹಣೆಯ ಗುರಿ:** ಪ್ರತಿಯೊಬ್ಬ ವ್ಯಕ್ತಿಗೆ ಸ್ವಾವಲಂಬನೆಯ ತರಬೇತಿ ಕೊಡುವುದೇ ಶಿಕ್ಷಣದ ಧ್ಯೇಯ. ಕಲಿಯುತ್ತಿರುವಾಗಲೇ ದುಡಿಯಬೇಕು, ದುಡಿಯುತ್ತಿರುವಾಗಲೇ ಕಲಿಯಬೇಕು ಎಂಬ ಮೂಲ ತತ್ವದ ಆಧಾರದ ಮೇಲೆ "ಜೀವನಕ್ಕಾಗಿ ಶಿಕ್ಷಣ ಹಾಗೂ ಜೀವನದ ಮುಖಾಂತರ ಶಿಕ್ಷಣ" ಎಂಬುದು ಅವರ ಶೈಕ್ಷಣಿಕ ಗುರಿಯಾಗಿತ್ತು.

2) **ಸಾಂಸ್ಕೃತಿಕ ಗುರಿ:** ಸಂಸ್ಕೃತಿ ವ್ಯಕ್ತಿತ್ವವನ್ನು ಪರಿಶುದ್ಧಗೊಳಿಸುತ್ತದೆ ಎಂಬುದು ಅವರ ಅಭಿಮತ. ಶಿಕ್ಷಣವು ಆಯಾ ದೇಶಗಳ ಸಂಸ್ಕೃತಿಯಿಂದಲೇ ಮೂಡಿ ಬರಬೇಕು. ಮಕ್ಕಳು ತಮ್ಮ ಸಂಸ್ಕೃತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿ ಅರಿತುಕೊಂಡು ಅದನ್ನು ಉಳಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವ ಸಾಮರ್ಥ್ಯವೇ ಶಿಕ್ಷಣದ ಗುರಿ ಎಂದು ನಂಬಿದ್ದರು.

3) **ಸಾಮಾಜಿಕ ಗುರಿಗಳು:** ಮನುಷ್ಯನು ಸಮಾಜ ಜೀವಿಯಾದುದರಿಂದ ಸಮಾಜದಲ್ಲಿ ಹೇಗೆ ಬದುಕಬೇಕೆಂಬುದನ್ನು ಶಾಲೆಯ ಮುಖಾಂತರವೇ ಕಲಿಯಬೇಕು. ಸಾಮಾಜಿಕ ಪ್ರಜ್ಞೆ ಬೆಳೆದು ವ್ಯಕ್ತಿ ಸರ್ವರ ಕಲ್ಯಾಣಕ್ಕೋಸ್ಕರ ಬಾಳುವ ಶಿಕ್ಷಣವು ಮಗುವಿಗೆ ತರಬೇತಿ ನೀಡಬೇಕಾಗಿದೆ. ಪ್ರೀತಿ, ಅನುಕಂಪ, ಸಹಾನುಭೂತಿ, ಸಹಕಾರ, ಕಾರ್ಯಗೌರವ, ಸೌಹಾರ್ದತೆ ಮುಂತಾದ ಸದ್ಗುಣಗಳನ್ನು ಮಕ್ಕಳು ಶಾಲೆಯಲ್ಲಿ ಅರಿತು ಅಳವಡಿಸಿಕೊಂಡು ಬಾಳುವುದನ್ನು ಅಭ್ಯಸಿಸಲು ಪ್ರೇರೇಪಿಸಬೇಕು.

4) **ನೈತಿಕ ಗುರಿ:** ಜೀವನದಲ್ಲಿ ನೈತಿಕತೆ ರೂಪಿಸಿಕೊಳ್ಳುವುದೇ ಶಿಕ್ಷಣದ ಪರಮ ಗುರಿ ಎಂದು ನಂಬಿದ್ದ ಗಾಂಧೀಜಿ ನಡತೆಯನ್ನು ಕಳೆದುಕೊಂಡರೆ ಎಲ್ಲವನ್ನು ಕಳೆದುಕೊಂಡಂತೆ" ಎಂಬ ನಾಣ್ಣುಡಿಯನ್ನು ಶಾಲಾಶಿಕ್ಷಣ ಪ್ರತಿಪಾದಿಸುವಂತಿರಬೇಕು ಎನ್ನುತ್ತಾರೆ.

5) **ಸರ್ವತೋಮುಖವಾದ ವ್ಯಕ್ತಿತ್ವ ವಿಕಾಸದ ಗುರಿ:** ಗಾಂಧೀಜಿಯವರ ಪ್ರಕಾರ "ಮಗುವಿನ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಶಕ್ತಿಗಳ ಪೂರ್ಣ ವಿಕಾಸವನ್ನು ಏಕಕಾಲದಲ್ಲಿ ಮಾಡುವುದೇ ಶಿಕ್ಷಣದ ಗುರಿ" ಎಂಬುದಾಗಿತ್ತು. ಇದರ ಆಧಾರದ ಮೇಲೆ ಶಿರ, ಉರ, ಕರ (ಹೆಡ್, ಹಾರ್ಟ್, ಹ್ಯಾಂಡ್) ತರಬೇತಿಗೆ ಹೆಚ್ಚಿನ ಮಹತ್ವ ಹಾಗೂ ಪ್ರಾಶಸ್ತ್ಯ ನೀಡಿದರು. ಇವರು ಒಬ್ಬ ಶಿಕ್ಷಣ ತಜ್ಞರು ಅಲ್ಲದೆ ಒಬ್ಬ ಉತ್ತಮ ಮನಃಶಾಸ್ತ್ರಜ್ಞರೂ ಆಗಿದ್ದರು.

ಮೂಲ ಶಿಕ್ಷಣದ ಪಠ್ಯ ಕ್ರಮವು ಗಾಂಧೀಜಿಯವರು ಸ್ವತಃ ತಾವೇ ಪ್ರತಿಪಾದಿಸಿದ ಶೈಕ್ಷಣಿಕ ತತ್ವಗಳು ಹಾಗೂ ಗುರಿಗಳ ಆಧಾರದ ಮೇಲೆ ರೂಪಗೊಂಡಿದೆ. ಪಠ್ಯಕ್ರಮ 1) ಪರಿಸರಕ್ಕೆ ಸಂಬಂಧಪಟ್ಟಿರಬೇಕು 2) ಮಾತೃಭಾಷೆ ಮೂಲಕ ಶಿಕ್ಷಣವಾಗಬೇಕು 3) ಸಾಮಾಜಿಕ ಅಭ್ಯಾಸಗಳಿಗೆ ಪೂರಕವಾಗಿರಬೇಕು 4) ಸಾಮಾನ್ಯ ವಿಜ್ಞಾನ, ವ್ಯವಹಾರಿಕ ಜ್ಞಾನ, ಕಲೆ ಹಾಗೂ ಸಂಗೀತ, ಗೃಹವಿಜ್ಞಾನಕ್ಕೆ ಹೆಚ್ಚು ಮಹತ್ವ ನೀಡುವ ಪಠ್ಯಕ್ರಮ ಅತ್ಯವಶ್ಯಕ ಎಂದು ಸಾರಿದರು.

– ಜಿ.ಎಂ.ಸೋ.

## ಮಾದಕ ದ್ರವ್ಯ ವ್ಯಸನ ಮತ್ತು ಶಿಕ್ಷಣ

ವಿಶಾಲವಾದ ಅರ್ಥದಲ್ಲಿ ಇದೊಂದು ರಾಸಾಯನಿಕ ವಸ್ತು. ಇದನ್ನು ಸೇವಿಸಿದಾಗ ಮಾನವ ದೇಹವು ಇದನ್ನು ಹೀರಿಕೊಂಡು, ತನ್ನ ನಿಶ್ಚಿತ ಕ್ರಿಯೆಯನ್ನು ಬದಲಾಯಿಸುವುದು. ಈ ಮಾದಕ ದ್ರವ್ಯಕ್ಕೆ ಭಿನ್ನ ಅರ್ಥಗಳೂ ಇವೆ. ಮುಖ್ಯವಾಗಿ ಮಾದಕ ದ್ರವ್ಯ (Drug) ಎಂಬ ಶಬ್ದ ಮೂಲತಃ ಫ್ರೆಂಚ್ ಭಾಷೆಯ "DROGVE" ಎಂಬ ಪದದಿಂದ ಬಂದಿದ್ದು, ಬಳಿಕ "DROGE-VATE"ಎಂದು ಡಚ್ ಪ್ರಾಂತ್ಯದ ಮಧ್ಯಭಾಗದವರು ಕರೆದ ಆಧಾರಗಳು ದೊರಕುತ್ತವೆ. ಮಾದಕ ದ್ರವ್ಯವನ್ನು ಔಷಧ ಎಂದು ಕರೆಯುವ ರೂಢಿಯೂ ಇದೆ. ಇದು ಬಾಯಿಗೆ ಹಾಕಿಕೊಳ್ಳುವುದಿರಬಹುದು, ಮಾಂಸಖಂಡಗಳಿಗೆ ಚರ್ಮ, ರಕ್ತನಾಳಗಳಿಗೆ ಚುಚ್ಚಿಸಿಕೊಳ್ಳುವುದಿರಬಹುದು. ಇದು ಕೆಲವು ಸಂದರ್ಭಗಳಲ್ಲಿ ರೋಗದಲ್ಲಿ ಆರೈಕೆ ರೂಪವಿರಬಹುದು ಅಥವಾ ಆರೋಗ್ಯವನ್ನು ನಿಭಾಯಿಸಿಕೊಳ್ಳುವ ದೃಷ್ಟಿಯಿಂದಲೂ ಇದರ ಉಪಯೋಗ ಇರಬಹುದು.

ವಿಶ್ವ ಆರೋಗ್ಯ ಸಂಸ್ಥೆ (WHO) 1983ರಲ್ಲಿ ಯಾವುದೇ ವಸ್ತು ಸಜೀವಿಯೊಂದರ ದೇಹವನ್ನು ಪ್ರವೇಶಿಸಿದಾಗ, ದೇಹದ ಒಂದು ಅಥವಾ ಹಲವು ಕ್ರಿಯೆಯನ್ನು ಬದಲಾಯಿಸುವುದನ್ನು ಮಾದಕ ದ್ರವ್ಯ ಎಂದು ಕರೆದಿದೆ. ಔಷಧ ಶಾಸ್ತ್ರದ ಪ್ರಕಾರ ಮಾದಕ ದ್ರವ್ಯವೆಂದರೆ ಒಂದು ರಾಸಾಯನಿಕ ವಸ್ತು, ಇದನ್ನು ರೋಗದ ಚಿಕಿತ್ಸೆಗೆ ಗುಣಪಡಿಸಲು, ತಡೆಯಲು ಮನಸ್ಸು ಅಥವಾ ದೇಹಕ್ಕೆ ನೀಡುವಂತಹುದಾಗಿದೆ.

ಮನರಂಜನಾತ್ಮಕ ಮಾದಕದ್ರವ್ಯಗಳು ಒಂದು ವಿಧದ ರಾಸಾಯನಿಕ ದ್ರವ್ಯಗಳು. ಅವು ಕೇಂದ್ರೀಯ ನರವ್ಯವಸ್ಥೆಯನ್ನು ಪ್ರಭಾವಗೊಳಿಸುತ್ತದೆ. ಇವುಗಳನ್ನು ಗ್ರಹಿಕೆ, ವ್ಯಕ್ತಿತ್ವ, ವರ್ತನೆ, ಪ್ರಜ್ಞೆಗಳ ಹಿತಕರವಾದ ಪರಿಣಾಮಗಳನ್ನು ತಿಳಿಯಲೂ ಬಳಸಲಾಗುತ್ತದೆ. ಕೆಲವು ದ್ರವ್ಯಗಳು ವ್ಯಕ್ತಿಯನ್ನು ಮಾದಕ ವ್ಯಸನಿಯನ್ನಾಗಿಸುತ್ತವೆ. ವ್ಯಕ್ತಿಯ ದೈಹಿಕ, ಮಾನಸಿಕ ಅಥವಾ ಜೀವ ರಾಸಾಯನಿಕ ಬದಲಾವಣೆಗಾಗಿ ಬಳಸಲಾಗುವ ನೈಸರ್ಗಿಕ ವಸ್ತುವನ್ನೂ ಮಾದಕ ದ್ರವ್ಯವೆಂದು ಕರೆಯಬಹುದು. ಹೀಗೆ ಮಾದಕ ದ್ರವ್ಯಗಳು ದೇಹದ ಸ್ಥಿತಿಯೊಂದಿಗೆ ಮೆದುಳಿನ ಸಹಜ ಕ್ರಿಯೆಯನ್ನೂ ಬದಲಾಯಿಸುತ್ತವೆ. ಕೆಲವು ಬಾರಿ ಈ ಫಲಿತಾಂಶವು ಹಿತವಾಗಿರುತ್ತದೆ.

ಮಾದಕ ದ್ರವ್ಯಗಳಲ್ಲಿ ಅಡಕವಾಗಿರುವ ಮೂಲಭೂತ ಔಷಧಗಳನ್ನೂ "ಮನೋಕ್ರಿಯಾತ್ಮಕ" ಮಾದಕದ್ರವ್ಯ ಎನ್ನಲಾಗುತ್ತದೆ. ಇದರಲ್ಲಿ 5 ವಿಧಗಳಿವೆ. ಅವುಗಳೆಂದರೆ, ಒಂದು, ಅರಿವಳಿಕೆ ನೀಡುವ ಹಾಗೂ ಮನಸ್ಸನ್ನು ಪ್ರಶಾಂತಗೊಳಿಸುವಂತಹದು. ಉದಾಹರಣೆಗೆ, ಹೊಗೆಸೊಪ್ಪಿನಲ್ಲಿರುವ ಒಂದು ವಿಧದ ವಿಷ ಪದಾರ್ಥ ಹಾಗೂ ಸಾರಾಯಿ. ಎರಡನೆಯದು, ಕೇಂದ್ರೀಯ ನರಮಂಡಲವನ್ನು ಉತ್ತೇಜಿಸುವ ಮಾದಕ ದ್ರವ್ಯಗಳು. ಮೂರು, ಕೇಂದ್ರೀಯ ನರಮಂಡಲದ ವ್ಯವಸ್ಥೆಯನ್ನು ಕುಂಠಿತಗೊಳಿಸುವ ಮಾದಕ ದ್ರವ್ಯಗಳು ವೇದನಾರೋಧಕಗಳು. ನಾಲ್ಕು, ಕೇಂದ್ರೀಯ ನರಮಂಡಲದ ವ್ಯವಸ್ಥೆಯನ್ನು ಹಾಗೂ ನೋವನ್ನು ಕುಂಠಿತಗೊಳಿಸುವಂಥದ್ದು. ಐದು, ಮನೋವಿಕಾರಗೊಳಿಸುವ ಮಾದಕ ದ್ರವ್ಯಗಳು– ಇವು ವಿಶೇಷವಾಗಿ ಮೆದುಳನ್ನು ವಿಕೃತಗೊಳಿಸುತ್ತವೆ. ಅದರ ಜಾಗೃತಾವಸ್ಥೆಯನ್ನು ನಿಶ್ಚೇತನಗೊಳಿಸುತ್ತವೆ.

– ಈ ಮೇಲ್ಕಂಡ ಮನೋಕ್ರಿಯಾತ್ಮಕ ಮಾದಕ ದ್ರವ್ಯಗಳ ವಿಧಗಳಿದ್ದರೂ ಇವುಗಳ ಗುರಿ–ಉದ್ದೇಶಗಳನ್ನೂ ಇತಿಮಿತಿಗಳನ್ನು ಅವಲೋಕಿಸಿದಾಗ ನಿರ್ದಿಷ್ಟವಾಗಿ ಮಾದಕ ದ್ರವ್ಯಗಳನ್ನು ಹೀಗೆಯೇ ಎಂದು ವರ್ಗೀಕರಿಸಲಾಗುವುದಿಲ್ಲ.

Digitised by Bharatavani, CIIL

ಮಾದಕ ದ್ರವ್ಯಗಳನ್ನು ಅವುಗಳ ಪರಿಣಾಮದ ಆಧಾರದಿಂದಲೂ ವರ್ಗೀಕರಿಸಲಾಗುತ್ತದೆ.

ಪ್ರಚೋದಕಗಳು: ಉದಾ: ಕೋಕೇನ್. ಇವುಗಳು ಜನರನ್ನು ಬಹಳ ಬಲಶಾಲಿಗಳಾಗಿಸುತ್ತವೆ.

ಉಪಶಾಮಕಗಳು: ಉದಾ: ಹೆರಾಯ್ನ್. ಇವುಗಳು ಮನುಷ್ಯರನ್ನು ಸಂಪೂರ್ಣ ವಿಶ್ರಾಂತಗೊಳಿಸುತ್ತವೆ.

ಭ್ರಾಮಕಗಳು: ಉದಾ. ಎಲ್.ಎಸ್.ಡಿ. ಇವುಗಳು ಯಾವುದನ್ನೇ ಆಗಲಿ ಕಣ್ಣೆದುರು ಕಂಡಂತೆ, ಅನುಭವಿಸಿದಂತೆ, ಯಾರದೋ ಧ್ವನಿಯನ್ನು ಸಹಜವಾಗಿ ಆಲಿಸಿದ ಅನುಭವ ನೀಡುತ್ತವೆ.

ಪ್ರಚೋದಕಗಳು, ನರಮಂಡಲದ ಶಕ್ತಿಯನ್ನು ಕ್ಷೀಣಗೊಳಿಸುತ್ತವೆ. ಇವುಗಳನ್ನು ಮೂರು ದ್ರವ್ಯಗಳಾಗಿ ವರ್ಗೀಕರಿಸಲಾಗುತ್ತದೆ:

1) **ಬಹಳಷ್ಟು ಹಾನಿಕಾರಕ:** ಹೆರಾಯ್ನಿ, ಮಾರ್ಫಿನ್, ಅಫೀಮು ಮೊದಲಾದ ಮತ್ತುಕಾರಕಗಳು. ಕೊಕೇನ್ ಎಂಬುದು ಅಪಾಯಕಾರಿ ಪ್ರಚೋದಕ. ಸಿರಿಂಜಿನ ಮುಖಾಂತರ ದೇಹವನ್ನು ಪ್ರವೇಶಿಸುವ ಮೆಥೆಡ್ರಿನ್, ಭ್ರಮೆಯನ್ನು ಹುಟ್ಟಿಸುವ ಮೆಸ್ಕಾಲಿನ್ ಮತ್ತು ಎಲ್.ಎಸ್.ಡಿ. ಈ ಗುಂಪಿಗೆ ಸೇರುತ್ತವೆ.

2) **ಕಡಿಮೆ ಹಾನಿಕಾರಕ:** ಕೊಡೈನ್ ಮತ್ತು ಕೆನಾಬಿಸ್‌ನಂಥ ಮತ್ತುಕಾರಕಗಳು, ಬೆನ್ಜೆಡ್ರಿನ್‌ನಂಥ ಪ್ರಚೋದಕಗಳು ಮತ್ತು ಉಪಶಾಮಕಗಳು ಈ ಗುಂಪಿಗೆ ಸೇರುತ್ತವೆ.

3) **ಅತಿಕಡಿಮೆ ಹಾನಿಕಾರಕ:** ಸೂಜಿಗಳ ಮೂಲಕ ದೇಹದ ಒಳಸೇರುವ ಅತಿಕಡಿಮೆ ಪರಿಣಾಮ ಉಂಟುಮಾಡುವ ಮಾದಕ ದ್ರವ್ಯಗಳು. "ಡಿಸೈನರ್ ಮಾದಕ ದ್ರವ್ಯಗಳು" ಇದಕ್ಕೆ ಉತ್ತಮ ಉದಾಹರಣೆ. ಇದು ಸೂಜಿ, ಸಿರಿಂಜುಗಳ ಮೂಲಕ ದೇಹವನ್ನು ಪ್ರವೇಶಿಸುವ ಮಾದಕ ದ್ರವ್ಯವನ್ನು ಸ್ವಲ್ಪಮಟ್ಟಿಗೆ ಬದಲಿಸಿ ತಯಾರಿಸಿರುವಂಥದ್ದು. ಕೆಲವು ಸಂದರ್ಭದಲ್ಲಿ ಇವುಗಳು ಮನುಷ್ಯನನ್ನು ಹುಚ್ಚನನ್ನಾಗಿಸುತ್ತವೆ.

ಮಾದಕ ವ್ಯಸನದ ವರ್ಗೀಕರಣ, ಮತ್ತುಕಾರಕಗಳಾದ ಉಪಶಾಮಕಗಳು, ಪ್ರಚೋದಕಗಳು, ಖಿನ್ನತೆಕಾರಕಗಳು ದ್ರವ್ಯದ ದುರುಪಯೋಗ– ಇವುಗಳೆಲ್ಲದರ ಪರಿಣಾಮಗಳ ಆಧಾರದಿಂದ ಮಾದಕ ದ್ರವ್ಯವನ್ನು ಮತ್ತೊಂದು ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ.

1. **ಮತ್ತುಕಾರಕ ಉಪಶಾಮಕಗಳು:** ಇವುಗಳು ನೋವು ನಿವಾರಕಗಳು. ಉದಾ: ಅಫೀಮು. ಇದರ ಮೂಲಾಂಶಗಳು ಮಾರ್ಫಿನ್, ಕೊಡೈನ್. ಅಫೀಮನ್ನು ಬಾಯಿಯ ಮೂಲಕವೂ ಶ್ವಾಸದ ಮೂಲಕವೂ ತೆಗೆದುಕೊಳ್ಳಲಾಗುತ್ತದೆ. ಮೋರ್ಫೈನನ್ನು ಸಿರಿಂಜ್‌ಗಳ ಮೂಲಕವೂ ದೇಹಕ್ಕೆ ಕೊಡಬಹುದು. ಹೆರಾಯಿನನ್ನು ಬಾಯಿಯ ಮೂಲಕ ಹಾಗೂ ಶ್ವಾಸೋಚ್ಛ್ವಾಸದ ಮೂಲಕವೂ ಪಡೆಯಬಹುದು. ಇದು ತಾತ್ಕಾಲಿಕವಾಗಿ ಈ ಕೆಳಕಂಡ ಪರಿಣಾಮವನ್ನುಂಟು ಮಾಡುತ್ತದೆ. ತೂಕಡಿಕೆ, ಹಸಿವು, ನೋವಿಲ್ಲದಿರುವಿಕೆ, ಇತ್ಯಾದಿ. ಆದರೆ ಹೆರಾಯಿನ್ನನ್ನು ಹೆಚ್ಚು ತೆಗೆದುಕೊಳ್ಳುವುದರಿಂದ ಜನರಿಗೆ ಮೂರ್ಛಾವಸ್ಥೆ ಹಾಗೂ ಸಾವು ಬರುತ್ತದೆ. ಬಹಳಕಾಲ ಈ ಮತ್ತುಕಾರಕಗಳನ್ನು ತೆಗೆದುಕೊಂಡರೆ ಮಾನಸಿಕ ಅಸ್ಥಿರತೆ, ಅಜೀರ್ಣವುಂಟಾಗುತ್ತದೆ.

2. **ಪ್ರಚೋದಕಗಳು:** ಇವುಗಳ ಪ್ರಭಾವದಿಂದ ಕೇಂದ್ರೀಯ ನರಮಂಡಲದ ಕಾರ್ಯ ಹೆಚ್ಚು ಚುರುಕಾಗುತ್ತದೆ. ಇದರಲ್ಲಿ ಕೊಕೈನ್ ಹಾಗೂ ಎಂಫೆಟಮೈನ್ಸ್ ಮುಖ್ಯವಾಗಿದೆ. ಎಂಫೆಟಮೈನನ್ನು ಬಾಯಿಯ ಮೂಲಕ ತೆಗೆದುಕೊಳ್ಳಬಹುದು. ಇದನ್ನು ಸ್ವಲ್ಪ ಸಮಯ ಪಡೆಯುವುದರಿಂದ ಜಾಗ್ರತಾವಸ್ಥೆ ಉಂಟಾಗುತ್ತದೆ. ನಡಿಗೆ ಹಾಗೂ ಮಾತು ಚುರುಕಾಗುತ್ತದೆ. ಹೆಚ್ಚಿನ ದೈಹಿಕ ಶಕ್ತಿ ಬರುತ್ತದೆ. ಬಹಳ ಕಾಲ ಸೇವಿಸುವುದರಿಂದ ನಿದ್ರೆ ಹೆಚ್ಚು ಬರುತ್ತದೆ. ಲಹರಿ ಬದಲಾಗುತ್ತಾ ಇರುತ್ತದೆ. ಹೃದಯದ ಬಡಿತದಲ್ಲಿ ವ್ಯತ್ಯಾಸ ಉಂಟಾಗುತ್ತದೆ.

3. **ಖಿನ್ನತೆ ಉಂಟು ಮಾಡುವಂತಹವುಗಳು:** ಈ ಮಾದಕ ದ್ರವ್ಯವನ್ನು ತೆಗೆದುಕೊಳ್ಳುವುದರಿಂದ ಖಿನ್ನತೆ ಉಂಟಾಗುತ್ತದೆ. ಕೇಂದ್ರೀಯ ನರಮಂಡಲದ ವ್ಯವಸ್ಥೆಯ ಕಾರ್ಯವು ನಿಧಾನವಾಗುತ್ತದೆ. ಇವುಗಳಲ್ಲಿ ಮುಖ್ಯವಾದವು ಸಾರಾಯಿ, ಮತ್ತೇರಿಸಿ ನಿದ್ರೆಬರಿಸುವ ವಸ್ತುಗಳು. ಉದಾಹರಣೆಗೆ– ಬಾರ್ ಬಿಟುರೇಟ್ಸ್. ಇವನ್ನು ಸ್ವಲ್ಪ ಸಮಯ ತೆಗೆದುಕೊಂಡರೆ ಮಾನಸಿಕ ಒತ್ತಡ ಕಡಿಮೆಗೊಳ್ಳುತ್ತದೆ. ಏಕಾಗ್ರತೆ ಕುಂಠಿತಗೊಳ್ಳುತ್ತದೆ. ದೃಷ್ಟಿಮಾಂದ್ಯ, ಮಾತಿನಲ್ಲಿ ತೊಡಕು ಉಂಟಾಗುತ್ತದೆ. ಬಹಳ ಸಮಯ ಇಂಥ ಮಾದಕ ದ್ರವ್ಯಗಳನ್ನು ಸ್ವೀಕರಿಸುವುದರಿಂದ ಖಿನ್ನತೆ, ಉಚ್ಛ್ವಾಸ, ನಿಶ್ವಾಸಗಳ ಅಸಮತೋಲನ, ಏಕಾಗ್ರಚಿತ್ತತೆಯ ಕೊರತೆಯಾಗುತ್ತದೆ. ತೀರ್ಮಾನ ತೆಗೆದುಕೊಳ್ಳುವಿಕೆ ಹಾಗೂ ಸ್ಮರಣಶಕ್ತಿ ಕುಂಠಿತಗೊಳ್ಳುತ್ತವೆ.

4. **ಭ್ರಾಂತಿಕಾರಕಗಳು:** ಇವು ಗ್ರಹಿಕೆ, ಭಾವೋದ್ವೇಗ ಹಾಗೂ ಮಾನಸಿಕ ಪ್ರಕ್ರಿಯೆಯ ಮೇಲೆ ಪರಿಣಾಮವನ್ನುಂಟುವಮಾಡುತ್ತದೆ. ಉದಾಹರಣೆಗೆ, ಎಲ್.ಎಸ್.ಡಿ. ಇವು ಬಾಯಿಯ ಮೂಲಕ ತೆಗೆದುಕೊಳ್ಳುವ ಮಾತ್ರೆಗಳಾಗಿವೆ. ಪಿ.ಸಿ.ಪಿ.ಗಳನ್ನು ಸೇದುವುದರಿಂದ ಸ್ವೀಕರಿಸಬಹುದಾಗಿದೆ. ಮೆಸ್ಕಾಲಿನ್ ನುಂಗುವ ಮಾತ್ರೆಗಳಾಗಿವೆ. ಇವುಗಳನ್ನು ಸ್ವಲ್ಪ ಸಮಯ ತೆಗೆದುಕೊಳ್ಳುವುದರಿಂದ ಲಹರಿಯಲ್ಲಿ ಬದಲಾವಣೆಯಾಗುತ್ತದೆ. ದೂರ, ಸಮಯ, ದಿಕ್ಕುಗಳನ್ನು ತಿಳಿಯುವಲ್ಲಿ ವಿಕಲತೆಯುಂಟಾಗುತ್ತದೆ. ಹೆಚ್ಚು ಸಮಯ ಈ ಭ್ರಾಂತಿಕಾರಕಗಳನ್ನು ತೆಗೆದುಕೊಳ್ಳುವುದರಿಂದ ಪ್ರೇರೇಪಣಾ ಶಕ್ತಿ ಕಡಿಮೆಯಾಗುತ್ತದೆ.

5. **ಗಾಂಜಾ:** (ಭಂಗಿ ಗಿಡ) ಇದನ್ನು ಒಂದು ವಿಶೇಷ ವಿಧದ ಗಿಡದಿಂದ ಪಡೆಯಬಹುದು. ಇವುಗಳು ಗಾಂಜಾ, ಚಂಪಾ, ಹಶೀಶ್ ಎಣ್ಣೆ ಮೊದಲಾದವು. ಇವೆಲ್ಲವನ್ನು ಸೇದುವುದರಿಂದ ಅವು ದೇಹದ ಒಳಗೆ ಪರಿಣಾಮವನ್ನುಂಟು ಮಾಡುತ್ತವೆ. ಇವುಗಳನ್ನು ಸ್ವಲ್ಪ ಸಮಯ ತೆಗೆದುಕೊಂಡರೆ ಕಣ್ಣು ಕೆಂಪಾಗುತ್ತದೆ. ಅಲ್ಪ ಕಾಲದ ಮರೆವು ಉಂಟಾಗುತ್ತದೆ. ಸಂಕೀರ್ಣವಾದ ಕಾರ್ಯ ಮಾಡಲು ಅಸಾಧ್ಯವಾಗುತ್ತದೆ. ಬಹು ಕಾಲ ತೆಗೆದುಕೊಂಡರೆ ಶ್ವಾಸೋಚ್ಛ್ವಾಸ ಕ್ರಿಯೆಯಲ್ಲಿ ತೊಂದರೆ ಉಂಟಾಗುತ್ತದೆ. ಪ್ರೇರೇಪಣಾ ಕುಂಠಿತತೆ ನಡೆಯುತ್ತದೆ.

6. **ಬಹುಬೇಗ ಕರಗುವಂಥವುಗಳು:** ಬಹುಬೇಗ ಕರಗುವ ಹೈಡ್ರೋಕಾರ್ಬನ್‌ಗಳು ಪೆಟ್ರೋಲಿಯಂ ಉತ್ಪನ್ನಗಳು. ಇವುಗಳನ್ನು ಆಘ್ರಾಣಿಸುವುದರ ಮೂಲಕ ಸ್ವೀಕರಿಸಲಾಗುತ್ತದೆ. ಇದನ್ನು ಸ್ವಲ್ಪ ಸಮಯ ತೆಗೆದುಕೊಳ್ಳುವುದರಿಂದ ಮಾತಿನಲ್ಲಿ ನ್ಯೂನತೆ ಯೋಚನೆಯಲ್ಲಿ ಅಸ್ಪಷ್ಟತೆ ಉಂಟಾಗುತ್ತದೆ. ಹೆಚ್ಚು ಕಾಲ ಈ ದ್ರವ್ಯಗಳನ್ನು ತೆಗೆದುಕೊಳ್ಳುವುದರಿಂದ ಹೃದಯ, ಮೂತ್ರಜನಕಾಂಗ, ಪಿತ್ತಜನಕಾಂಗಗಳು ಹಾನಿಗೊಳಗಾಗುತ್ತವೆ. ಮೆದುಳಿಗೆ ಶಾಶ್ವತವಾಗಿ ಹಾನಿಯಾಗುತ್ತದೆ. ಕೊನೆಗೆ ಸಾವು ಸಂಭವಿಸಬಹುದು.

Digitised by Bharatavani, CIIL

7. **ವೈದ್ಯಕೀಯ ಕ್ಷೇತ್ರದಲ್ಲಿ ಬಳಸಿಕೊಳ್ಳುವ ಇತರ ಮಾದಕ ದ್ರವ್ಯಗಳು:** ಇವು ನೋವುನಿವಾರಕವಾಗಿದೆ. ಮಾಂಸಖಂಡಗಳ ಕಾರ್ಯವನ್ನು ಉತ್ತಮಗೊಳಿಸಿಕೊಳ್ಳಲು ಇವುಗಳನ್ನು ಬಳಸಲಾಗುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿ ಬಳಸಲಾಗುವ ಮಾದಕ ದ್ರವ್ಯಗಳನ್ನು ಮಾತ್ರ ಸಿರಿಂಜ್‌ಗಳ ಮೂಲಕ ದೇಹಕ್ಕೆ ಒದಗಿಸಲಾಗುವುದು. ಈ ಮಾದಕದ್ರವ್ಯಗಳ ಸೇವನೆಯಿಂದ ಮನೋವೈಜ್ಞಾನಿಕ ಸಮಸ್ಯೆ, ಬೌದ್ಧಿಕ ಅಸಮತೋಲನ ಉಂಟಾಗಬಹುದು.

### ಮಾದಕ ದ್ರವ್ಯಗಳ ದುಷ್ಪರಿಣಾಮಗಳು

ಮಾದಕ ದ್ರವ್ಯಗಳ ಸೇವನೆಯಿಂದ ಹಲವಾರು ದುಷ್ಪರಿಣಾಮಗಳು ಉಂಟಾಗುತ್ತವೆ. ಇವುಗಳನ್ನು ನಿರಂತರವಾಗಿ ತೆಗೆದುಕೊಳ್ಳುವುದರಿಂದ ಲಹರಿಗಳಲ್ಲಿ ಭಾವೋದ್ವೇಗಗಳಲ್ಲಿ ಅಥವಾ ಜಾಗ್ರತಾವಸ್ಥೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಈ ದ್ರವ್ಯಗಳನ್ನು ರೋಗದ ಚಿಕಿತ್ಸೆಗಾಗಿ ಉಪಯೋಗಿಸಿದಾಗ ಆಗಲೀ, ರೋಗವನ್ನು ತಡೆಯುವಲ್ಲಿ ಬಳಸಿದಾಗ ಅಥವಾ ಆರೋಗ್ಯವನ್ನು ಸುಧಾರಿಸುವಲ್ಲಿ ಉಪಯೋಗಿಸಿದಾಗ ಮಾತ್ರ ಇವುಗಳು ಉಪಯೋಗಕರವೆನ್ನಿಸುತ್ತವೆ. ಈ ಉಪಯೋಗಗಳನ್ನು ಹೊರತುಪಡಿಸಿ ಬಳಸಿದಾಗ, ಅವು ದೇಹ ಹಾಗೂ ಮನಸ್ಸಿನ ಕಾರ್ಯಗಳ ಮೇಲೆ ಕೆಟ್ಟ ಪರಿಣಾಮವನ್ನು ಉಂಟುಮಾಡುತ್ತವೆ.

### ಮಾದಕ ವ್ಯಸನ (ಚಟ) (Drug Addiction)

ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರ ಸಮಿತಿಯು 1957ರಲ್ಲಿ ಮಾದಕ ದ್ರವ್ಯದ ದುರುಪಯೋಗವನ್ನು "ಮಾನಸಿಕ ಅವಲಂಬನೆ ಅಥವಾ ದೈಹಿಕ ಅವಲಂಬನೆ" ಅಥವಾ ಇವೆರಡೂ ಎಂದು ಕರೆದಿದೆ. ಇವುಗಳ ದೀರ್ಘಕಾಲೀನ ಬಳಕೆಯಿಂದ ವ್ಯಕ್ತಿಯೊಬ್ಬ ಅಂತಿಮವಾಗಿ ಮಾದಕ ವ್ಯಸನಿಯಾಗುತ್ತಾನೆ. ಇಂಥಾ ಮಾದಕ ವ್ಯಸನಿಗಳಲ್ಲಿ ಎರಡು ಗುಂಪುಗಳಿವೆ.

1. **ದೈಹಿಕ ವ್ಯಸನಿಗಳು:** ಮಾದಕ ದ್ರವ್ಯವನ್ನು ತಕ್ಷಣವೇ ವ್ಯಸನಿಯೊಬ್ಬ ನಿಲ್ಲಿಸಿದರೆ, ಅವನು ವಾಂತಿ, ತಲೆಸುತ್ತುವುದು, ಹೊಟ್ಟೆತೊಳೆಸುವುದು ಮೊದಲಾದ ವ್ಯಾಧಿಗೆ ಒಳಗಾಗುವನು.

2. **ಮಾನಸಿಕ ವ್ಯಸನಿಗಳು:** ಇಂಥ ವ್ಯಸನಿಗಳಿಗೆ ಮಾದಕ ದ್ರವ್ಯವು ನಿರಂತರವಾಗಿ ಬೇಕಾಗುತ್ತದೆ. ಇಂಥವರು ಮಾದಕ ದ್ರವ್ಯವನ್ನು ತಕ್ಷಣ ಕೈ ಬಿಟ್ಟಲ್ಲಿ ಅವರಿಗೆ ಉದ್ವೇಗ, ಖಿನ್ನತೆ ಹಾಗೂ ಕಿರಿಕಿರಿ ಎನಿಸುತ್ತದೆ.

ಬ್ರಿಟಿಷ್ ಕಾಯಿದೆಯನ್ವಯ ಹೆಚ್ಚಿನ ದ್ರವ್ಯಗಳು ಕಾನೂನು ಬಾಹಿರವಾಗಿವೆ. ಏನಿದ್ದರೂ ಕೆಲವು ದ್ರವ್ಯಗಳು ಕಾನೂನಿನ ಚೌಕಟ್ಟಿಗೆ ಒಳಪಟ್ಟಿದೆ. ಉದಾ: ಕೆಫೀನ್, ಸರಾಯಿ ಹಾಗೂ ಸಿಗರೇಟ್ ಕಾನೂನಿನಿಂದ ಈ ದ್ರವ್ಯಗಳು ಸಮ್ಮತವೆಂದೆನಿಸಿದರೂ ಅವುಗಳೇನೂ ದೇಹಕ್ಕೆ ಹಾನಿಕಾರಕವಲ್ಲವೆಂದು ಹೇಳಲಾಗದು. ಇಂಗ್ಲೆಂಡ್‌ನಲ್ಲಿ ಕಾನೂನು ಬಾಹಿರ ಮಾದಕ ದ್ರವ್ಯಗಳಿಂದ ಮರಣ ಹೊಂದುವವರ ಸಂಖ್ಯೆಗಿಂತ ಸಿಗರೇಟ್ ಹಾಗೂ ಸರಾಯಿಗಳಿಂದ ಮರಣ ಹೊಂದುವವರ ಸಂಖ್ಯೆ ಹೆಚ್ಚಿರುತ್ತದೆ ಎಂದು ಕಂಡುಬಂದಿದೆ.

ವೈದ್ಯರು ನೀಡುವ ಔಷಧಗಳು, ಉದಾಹರಣೆಗೆ, ನೋವು ನಿವಾರಕಗಳು ಅಥವಾ ಉಪಶಾಮಕಗಳನ್ನು ಕೆಲವೊಮ್ಮೆ ಜನರು ಬೇಕಾಬಿಟ್ಟಿ ಬಳಸುತ್ತಾರೆ. ಇದರಿಂದ ಅವರ ಲಹರಿಯ ಪರಿಣಾಮದಲ್ಲಿ ಬದಲಾವಣೆಯಾಗುತ್ತದೆ. ವೈದ್ಯರು ಹೆಚ್ಚಿನ ಸಂದರ್ಭದಲ್ಲಿ ನೀಡುವ ಮೋರ್ಫಿನ್ ಅಥವಾ ಮೆಥಾಡನ್ ಕಾನೂನು ಬಾಹಿರವಾಗಿರುತ್ತವೆ. ಇವುಗಳ ಉಪಯೋಗ ಅಧಿಕೃತವಾಗಿರುವುದಿಲ್ಲ.

ಮಾದಕ ದ್ರವ್ಯ ವ್ಯಸನವೆಂಬುದು ಅಪಾಯಕಾರಿ ಹಾಗೂ ಆರೋಗ್ಯಕ್ಕೂ ತುಂಬಾ ಹಾನಿಕಾರಕವಾಗಿದೆ. ಇದು ದೈಹಿಕ ಹಾಗೂ ಮನೋವೈಜ್ಞಾನಿಕ ನೆಲೆಯಲ್ಲಿಯೂ ವ್ಯಕ್ತಿಯೊಬ್ಬನಿಗೆ ತುಂಬಾ ತೊಂದರೆಯನ್ನುಂಟು ಮಾಡುತ್ತದೆ. ಉದಾ: ಕೊಕೇನ್‌ನಿಂದ ಹೃದಯಾಘಾತವಾಗುತ್ತದೆ. ಹೆರಾಯ್ನ್ ಸೇವನೆಯಿಂದ ಶ್ವಾಸಕೋಶಕ್ಕೆ ತೊಂದರೆಯುಂಟಾಗುತ್ತದೆ. ಒಬ್ಬ ವ್ಯಕ್ತಿಯು ಮಾದಕ ದ್ರವ್ಯವನ್ನು ಅವನೇ ಸ್ವತಃ ತನ್ನ ದೇಹದೊಳಕ್ಕೆ ಸಿರಿಂಜಿನ ಮೂಲಕ ಸೇರಿಸುವ ಪ್ರಯತ್ನ ಮಾಡಿದಾಗ ಕೆಲವು ಬಾರಿ ರಕ್ತದಿಂದ ಹರಡುವ ಕಾಯಿಲೆಯನ್ನೂ ಅವನು ಪಡೆಯುತ್ತಾನೆ. ಉದಾ: ಹೆಚ್.ಐ.ವಿ. ಅಥವಾ ಹೆಪೆಟೈಟಿಸ್ ಸಿ. ಇಂಗ್ಲೆಂಡಿನ ಆರೋಗ್ಯ ಇಲಾಖೆಯ ಅಂದಾಜಿನ ಪ್ರಕಾರ ಸಿರಿಂಜಿನ ಮೂಲಕ ಮಾದಕ ದ್ರವ್ಯವನ್ನು ಪಡೆಯುವುದರಿಂದ 90% ಜನರು ಹೆಪೆಟೈಟಿಸ್.ಸಿ. ಹಾಗೂ 6% ಜನರು ಹೆಚ್.ಐ.ವಿ. ಪೀಡಿತರಾಗಿದ್ದದ್ದು ಕಂಡುಬಂದಿದೆ.

ಈ ಮೇಲಿನ ಅಂಶಗಳು ಮಾದಕ ದ್ರವ್ಯಗಳ ಅಪಾಯಕಾರಿ ಪರಿಣಾಮಗಳನ್ನು ತಿಳಿಸುತ್ತವೆ. ಈ ದುಷ್ಪರಿಣಾಮಗಳ ಅರಿವು ಪ್ರೌಢಾವಸ್ಥೆಯ ಮಕ್ಕಳು ಹಾಗೂ ವಯಸ್ಕರಿಗೆ ಅವಶ್ಯಕವಾದುದಾಗಿದೆ. ವಿದ್ಯಾರ್ಥಿಗಳು ವಯೋಸಹಜ ಕುತೂಹಲದಿಂದಾಗಲೀ, ಮಾದಕ ದ್ರವ್ಯ ಸೇವನೆಗೆ ತುತ್ತಾದ ಹಿರಿಯ ವಿದ್ಯಾರ್ಥಿಗಳ ಸಹವಾಸದಿಂದಾಗಲೀ ಈ ಮಾದಕ ದ್ರವ್ಯಗಳನ್ನು ಪ್ರಚೋದಕ ಉಪಶಾಮಕ ಮತ್ತು ಭ್ರಾಮಕ ಅನುಭವ ಹೊಂದಲು ಸೇವಿಸುವ ಅಪಾಯವಿದೆ. ಶಿಕ್ಷಕರು ಸೂಕ್ತವಾಗಿ ಪಠ್ಯ ಮತ್ತು ಪಠ್ಯೇತರ ಸನ್ನಿವೇಶಗಳನ್ನು ಬಳಸಿಕೊಂಡು ಮಾದಕಗಳ ದುಷ್ಪರಿಣಾಮಗಳನ್ನು ಅವುಗಳ ತೀವ್ರತೆಯನ್ನು ಮನದಟ್ಟು ಮಾಡಬೇಕು. ವಿಜ್ಞಾನ ತರಗತಿಗಳನ್ನು ಇದಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಕಿರು ನಾಟಕಗಳ ಮೂಲಕ ಸೂಕ್ತ ಅರಿವು ಮಾಡಿಸಬಹುದು. ವಾರಾಂತ್ಯದಲ್ಲಿ ಕಿಶೋರರಿಗಾಗಿ ಪ್ರಸಾರವಾಗುವ ಬಾನುಲಿಯ ವಿಶೇಷ ಕಾರ್ಯಕ್ರಮಗಳನ್ನು ಧ್ವನಿ ಮುದ್ರಿಸಿಕೊಂಡು ತರಗತಿಯಲ್ಲಿ ಬಳಸಿ ಕೊನೆಯಲ್ಲಿ ವಿದ್ಯಾರ್ಥಿಗಳು ಚರ್ಚಿಸುವಂತೆ ಮಾಡಬಹುದು. ವೈದ್ಯ ಅತಿಥಿಗಳನ್ನು ಆಹ್ವಾನಿಸಿ ಉಪನ್ಯಾಸಗಳನ್ನು ದೃಷ್ಟಾಂತ ಸಹಿತ ನೀಡಲು ಕೇಳಬಹುದು. ಈ ಕುರಿತ ಶೈಕ್ಷಣಿಕ ವಸ್ತು ಪ್ರದರ್ಶನ ಏರ್ಪಡಿಸಬಹುದು. ಮಾದಕ ದ್ರವ್ಯ ಸೇವನಾ ವಿರೋಧಿ ದಿನಾಚರಣೆ ಆಚರಿಸಬಹುದು.

–ಪ್ಲಾ.ಡಿ.

## ಮಾನವ ಹಕ್ಕುಗಳು ಮತ್ತು ಶಿಕ್ಷಣ

ಸಮಾಜದ ಅಭಿವೃದ್ಧಿ ಆ ಸಮಾಜದಲ್ಲಿ ನೆಲೆಸಿರುವ ಸುಶಿಕ್ಷಿತ ಜನರನ್ನು ಅವಲಂಬಿಸಿರುತ್ತದೆ. ಅಂದರೆ ಸುಶಿಕ್ಷಿತ ವ್ಯಕ್ತಿ ತನ್ನ ಸಮಾಜದ ಶುದ್ಧತೆಗೆ, ಅಭಿವೃದ್ಧಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತನ್ನ ಕೊಡುಗೆ ನೀಡುತ್ತಾನೆ. ಇದು ಪ್ರಾಚೀನ ನಾಗರಿಕತೆ ಕಾಲದಿಂದಲೂ ಬೆಳೆದು ಬಂದಿದೆ ಮತ್ತು ಸಮಾಜದಲ್ಲಿ ನೆಲೆಸಿರುವ ಮಾನವ ತನ್ನದೇ ಆದ ಮೂಲಭೂತ ಹಕ್ಕುಗಳನ್ನು ಹೊಂದಿದ್ದು ಅದನ್ನು ಉಳಿಸಿ ಬೆಳೆಸುವ ಪ್ರಯತ್ನ ಎಲ್ಲಾ ಕಾಲದಲ್ಲೂ ನಡೆಯುತ್ತಾ ಬಂದಿದೆ. ಆದರೆ ಅದು ಕೆಲವೊಂದು ಸಂದರ್ಭಗಳಲ್ಲಿ ಬದಲಾಗಲೂಬಹುದಾಗಿದೆ. ಆದರೆ ಮಾನವನ ಘನತೆ ಹಾಗೂ ಅದರ ಸಂರಕ್ಷಣೆಯೇ ಮಾನವ ಹಕ್ಕುಗಳ ಪರಿಕಲ್ಪನೆಯ ತಿರುಳು ಎಂಬ ಗ್ರಹಿಕೆ ಮಾತ್ರ ಹಾಗೇ ಉಳಿದುಕೊಂಡು ಬಂದಿದೆ. ಆದ್ದರಿಂದ ಮಾನವನ ಗೌರವ ಹಾಗೂ ಅದನ್ನು ಉಳಿಸುವ ಹಕ್ಕುಗಳು ಶಾಶ್ವತವಾದವು ಎಂಬ ಅಂಶ ಪ್ರತಿಯೊಬ್ಬರಿಗೂ ತಿಳಿದಿರಬೇಕು.


Digitised by Bharatavani, CIIL

ಈ ಬಗ್ಗೆ ಎಲ್ಲ ಕಾಲ ಮತ್ತು ನಾಗರಿಕತೆಗಳ ಸಂದರ್ಭದಲ್ಲಿ ಆಲೋಚನೆಗಳು ನಡೆದಿರುವುದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಉದಾ: ವಿಶ್ವದ ವಿವಿದೆಡೆ ನಡೆದಿರುವ ದಂಗೆಗಳು ಕ್ರಾಂತಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಳು, ಮಹಾಯುದ್ಧಗಳು. ಇವೆಲ್ಲದರ ಪರಿಣಾಮ ಒಂದನೇ ಜಾಗತಿಕ ಯುದ್ಧದ ನಂತರ ಲೀಗ್ ಆಫ್‌ನೇಷನ್ಸ್‌ನ ಪ್ರಯತ್ನದ ಫಲವಾಗಿ 1941ರ ಜನವರಿ 6ರಂದು ಅಮೇರಿಕಾದ ಅಧ್ಯಕ್ಷ ರೂಸ್‌ವೆಲ್ಟ್‌ರವರು ಅಲ್ಲಿನ ಕಾಂಗ್ರೆಸ್ಸನ್ನು ಉದ್ದೇಶಿಸಿ ಮಾಡಿದ ಭಾಷಣ ಮಾನವ ಹಕ್ಕುಗಳ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲು. ಅನಂತರ ಎರಡನೇ ಜಾಗತಿಕ ಯುದ್ಧದ ನಂತರ ರಾಷ್ಟ್ರಗಳ ಒಕ್ಕೂಟ ರಾಷ್ಟ್ರಗಳು ತಮ್ಮ ಮತ್ತು ಇತರ ದೇಶಗಳಲ್ಲಿ ಮಾನವ ಹಕ್ಕುಗಳನ್ನು ಸಂರಕ್ಷಿಸುವ ಪಣತೊಟ್ಟವು. ಇದರ ಪರಿಣಾಮ ಸಂಯುಕ್ತ ರಾಷ್ಟ್ರಗಳು 1945ರಲ್ಲಿ ಜಾತಿ, ಮತ, ಭೇದವಿಲ್ಲದೆ ಮೂಲಭೂತ ಸ್ವಾತಂತ್ರ್ಯ ಹಾಗೂ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸಿ ಉಳಿಸುವ ಪ್ರಯತ್ನಕ್ಕೆ ಇತರ ರಾಷ್ಟ್ರಗಳು ಸಹಕರಿಸಬೇಕೆಂದು ಕರೆಕೊಟ್ಟವು.

ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಾನವಹಕ್ಕುಗಳ ಪರಿಕಲ್ಪನೆಯ ಜ್ಞಾನ ಸಮಾಜದಲ್ಲಿನ ಪ್ರತಿಯೊಬ್ಬರಿಗೂ ಅಗತ್ಯ. ಇದು ಮಾನವ ತನ್ನ ಸಮಾಜದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ತಿಳಿಸಿಕೊಡುತ್ತದೆ. ಇದರಿಂದ ಮಾನವ ತನ್ನ ಸಮಾಜದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ತಿಳಿಸಿಕೊಡುತ್ತದೆ. ಇದರಿಂದ ಮಾನವ ತನ್ನ ಜೀವನದಲ್ಲಿ ಉನ್ನತವಾದುದನ್ನು ಸಾಧಿಸುವ ಹಕ್ಕು ಇದೆ ಎಂಬ ಅರಿವನ್ನು ಪಡೆಯಲು ಸಾಧ್ಯ. ಇಂತಹ ಅವಕಾಶಗಳನ್ನು ಅರ್ಥಮಾಡಿಕೊಳ್ಳಲು ಮತ್ತು ವೈಯಕ್ತಿಕ ಹಾಗೂ ಸಾಮಾಜಿಕ ಉನ್ನತಿಗೆ ಅವುಗಳನ್ನು ಬಳಸಿಕೊಳ್ಳಲು ಮಾನವ ಹಕ್ಕುಗಳ ಶಿಕ್ಷಣ ಸಹಾಯ ಮಾಡುತ್ತದೆ.

ಇತ್ತೀಚಿನ ದಿನಗಳಲ್ಲಿ ಎಲ್ಲಾ ಹಂತಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮಾನವ ಶೋಷಣೆಗೆ ಒಳಪಡುತ್ತಿದ್ದು, ಇದರ ನಿವಾರಣೆಗೆ ಮಾನವ ಹಕ್ಕುಗಳ ಶಿಕ್ಷಣ ಅಗತ್ಯವಾಗಿದೆ.

ಮಾನವ ಹಕ್ಕುಗಳ ಪರಿಕಲ್ಪನೆ ಹೊಸದೇನೂ ಅಲ್ಲ. ಪ್ರಾಚೀನ ರೋಮ್ ಗ್ರೀಕ್ ನಾಗರಿಕತೆಗಳಲ್ಲಿ ಇದರ ಉಲ್ಲೇಖವಿದೆ. ಕ್ರಿ.ಶ. 1215ರ **"ಇಂಗ್ಲೆಂಡಿನ ಮ್ಯಾಗ್ನಕಾರ್ಟ್"**, 1689ರ **"ಬಿಲ್ ಆಫ್‌ರೈಟ್ಸ್ ಮತ್ತು ಟಾನ್‌ಲಾರ್ಡ್"**ನ ವಿಚಾರಧಾರೆಗಳು ಮಾನವ ಹಕ್ಕುಗಳ ಪರಿಕಲ್ಪನೆಯನ್ನು ಸ್ಪಷ್ಟಗೊಳಿಸಿವೆ.

ಮಾನವ ಜೀವನಕ್ಕೆ ಅಗತ್ಯವಾದ ಅನೇಕ ಮೂಲಭೂತ ತತ್ವಗಳು ಪ್ರಪಂಚದ ಪ್ರತಿಯೊಂದು ಸಂಸ್ಕೃತಿ, ನಾಗರಿಕತೆ, ಧರ್ಮ ಹಾಗೂ ತಾತ್ವಿಕ ಚಿಂತನೆಗಳಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿದೆ. ಮಾನವನ ಹಕ್ಕುಗಳು ಇತರರು ಕೊಡುವುದಿಲ್ಲ ಅಥವಾ ದಯಪಾಲಿಸುವುದಿಲ್ಲ. ಬದಲಿಗೆ ಅದು ಜನ್ಮಜಾತವಾಗಿ ಪಡೆಯುವಂತಹದ್ದು. ಪ್ರತಿಯೊಬ್ಬ ವ್ಯಕ್ತಿ ತಾನು ಹುಟ್ಟುವಾಗಲೇ ಮಾನವ ಹಕ್ಕುಗಳನ್ನು ಸಹಜವಾಗಿ ಪಡೆದಿರುತ್ತಾನೆ. ಆದ್ದರಿಂದ ಪ್ರತಿಯೊಂದು ರಾಷ್ಟ್ರವೂ ಈ ಹಕ್ಕುಗಳನ್ನು ರಕ್ಷಣೆ ಮಾಡಬೇಕು.

**"ವಿಶ್ವದ ಪ್ರತಿಯೊಬ್ಬ ಮಾನವನು ಯಾವುದೇ ಜಾತಿ, ಮತ, ವರ್ಣ, ಲಿಂಗ, ಭಾಷೆ, ಧರ್ಮ, ಸಿರಿತನ, ಬಡತನ, ಸಾಮಾಜಿಕ ಸ್ಥಾನಮಾನ, ಸಿದ್ಧಾಂತ, ಭೇದಭಾವವಿಲ್ಲದೆ ದೈಹಿಕ, ಮಾನಸಿಕ, ಆರ್ಥಿಕ, ಸಾಂಸ್ಕೃತಿಕ, ಸಂತೃಪ್ತಿ, ಸಂತೋಷದ ಜೀವನ ನಡೆಸುವಂತೆ ತೊಟ್ಟ ಸಂಕಲ್ಪವೇ ಮಾನವ ಹಕ್ಕು"** ಎಂಬುದು ಸಾಮಾನ್ಯ ಅರ್ಥ.

"ಒಬ್ಬ ವ್ಯಕ್ತಿ ಭೂಮಿಯ ಮೇಲೆ ಹುಟ್ಟುವಾಗಲೇ ಹಕ್ಕುಗಳನ್ನು ಸಹಜವಾಗಿ ಪಡೆಯುತ್ತಾನೆ. ಒಂದು ಪ್ರಾಂತ್ಯದ, ರಾಜ್ಯದ ಅಸ್ತಿತ್ವವನ್ನು ಹಾಗೂ ಅಂತಸ್ತನ್ನು ಅದು ತನ್ನ ಸಮುದಾಯದ ಜನಕ್ಕೆ ಒದಗಿಸುವ ಹಲವಾರು ಹಕ್ಕುಗಳ ಮೂಲಕ ಗುರುತಿಸಬಹುದು" ಎಂದು **ಪ್ರೊ. ಹೆರಾಲ್ಡ್ ಲಾಸ್ಕಿ** ಅಭಿಪ್ರಾಯಿಸಿದ್ದಾರೆ.

**ಆಕ್ಸ್‌ಫರ್ಡ್ ವರ್ಡ್‌ಪವರ್ ಡಿಕ್ಷನರಿ (1993):** "ಪ್ರತಿಯೊಬ್ಬರೂ ಅತ್ಯಗತ್ಯವಾಗಿ ಹೊಂದಿರುವ ಮೂಲಭೂತ ಸ್ವಾತಂತ್ರ್ಯಗಳೇ ಮೂಲಭೂತ ಹಕ್ಕುಗಳು."

**ಅರ್ಜುನ ದೇವ:** "ಯಾವ ಹಕ್ಕುಗಳು ಪ್ರತಿಯೊಬ್ಬರು ಸುಖ ಅನುಭವಿಸಲು ಮತ್ತು ಸಂರಕ್ಷಿಸಲು ಅರ್ಹತೆ ನೀಡುತ್ತವೆಯೋ ಅವೇ ಮಾನವ ಹಕ್ಕುಗಳು".

**ಭಾರತ ಸಂವಿಧಾನ:** "ಸ್ವಾಭಾವಿಕ ಹಕ್ಕುಗಳೇ ಮಾನವ ಹಕ್ಕುಗಳು. ಭಾರತದ ಸಂವಿಧಾನ ಅವುಗಳನ್ನು ಮೂಲಭೂತ ಹಕ್ಕುಗಳೆಂದು ಘೋಷಿಸಿದೆ".

### ಅಮೇರಿಕಾದ ಸ್ವಾತಂತ್ರ್ಯ ಘೋಷಣೆ

ಜುಲೈ 14, 1776ರಲ್ಲಿ ಸ್ವಾತಂತ್ರ್ಯ ಘೋಷಣೆಯಾದ ಸಂದರ್ಭದಲ್ಲಿ **"ಸರ್ವರೂ ಸಮಾನರು"** ಎಂದು ವಿವರಿಸಲಾಗಿದೆ.

ಫ್ರಾನ್ಸ್‌ನ ರಾಷ್ಟ್ರೀಯ ಅಸೆಂಬ್ಲಿ **"ಮಾನವ ಹಕ್ಕುಗಳು ಹಾಗೂ ನಾಗರಿಕ"** ಎಂಬ ಘೋಷಣೆಯನ್ನು ಆಗಸ್ಟ್ 26, 1789ರಂದು ಸ್ವೀಕರಿಸಿ ಈ ಕೆಳಕಂಡ ಹಕ್ಕುಗಳನ್ನು ಅಂಗೀಕರಿಸಿತು.

1) ಸ್ವತಂತ್ರತೆ ಮತ್ತು ಸಮಾನತೆ
2) ಸ್ವಾಭಾವಿಕ ಹಕ್ಕುಗಳ ಸಂರಕ್ಷಣೆ
3) ದೇಶದ ಸಾರ್ವಭೌಮತ್ವ
4) ಸ್ವಾತಂತ್ರ್ಯ
5) ಕಾನೂನಿನ ವ್ಯಾಪ್ತಿಯಲ್ಲಿನ ಯೋಗ್ಯ ಕಾರ್ಯಗಳು
6) ಸರ್ವರಿಗೂ ಒಂದೇ ಕಾನೂನು
7) ಕಾನೂನು ಬಾಹಿರವಾಗಿ ಯಾರನ್ನೂ ದೋಷಾರೋಪಣೆ ಮಾಡುವುದು, ಬಂಧಿಸುವುದು ಅಥವಾ ಕಾರಾಗೃಹದಲ್ಲಿರಿಸುವುದು ಮುಂತಾದವುಗಳನ್ನು ಮಾಡಕೂಡದು.
8) ಕಾನೂನನ್ನು ಹೊರತುಪಡಿಸಿ ಯಾರನ್ನೂ ಶಿಕ್ಷಿಸಕೂಡದು.
9) ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು
10) ಸಂವಹನದ ಸ್ವಾತಂತ್ರ್ಯ
11) ಸಾರ್ವಜನಿಕ ಸೇವೆಗಳು
12) ಪ್ರತಿಯೊಬ್ಬ ಸಾರ್ವಜನಿಕ ನಿಯೋಗಿಯು ಹೊಣೆಗಾರನಾಗಿರುವುದು
13) ಆಸ್ತಿಯ ಹಕ್ಕು
14) ಅಪರಾಧಿ ಎಂದು ಸಾಬೀತಾಗುವವರೆಗೆ ಆತ ನಿರಪರಾಧಿ ಇನ್ನೂ ಮುಂತಾದವು.

'ಟಾಮ್‌ಪೇನ್'ರ ಮಾನವ ಹಕ್ಕು, 'ಜೆಫರ್‌ಸನ್‌ರ' ಹಕ್ಕುಗಳ ಉದ್ಘೋಷಣೆ, ರೂಸೋರ "ಫ್ರೆಂಚ್‌ರ ಕ್ರಾಂತಿ," ವಿಶ್ವಸಂಸ್ಥೆಯ

Digitised by Bharatavani, CIIL

ಉದ್ಘೋಷಣೆಯಾದ 'ಮಾನವ ಹಕ್ಕುಗಳು' ಹಾಗೂ ಇನ್ನಿತರ ಚಿಂತನೆಗಳು ಮಾನವನು ಕೆಲ ನೈಸರ್ಗಿಕ ಮತ್ತು ಪರಭಾರೆ ಮಾಡಲಾಗದ ಹಕ್ಕುಗಳನ್ನು ಹೊಂದಿರುತ್ತಾನೆ. ಅವುಗಳನ್ನು ರಕ್ಷಿಸುವ ಕರ್ತವ್ಯವು ರಾಜ್ಯಗಳ ಹೊಣೆಯಾಗಿರುತ್ತದಲ್ಲದೆ, ಅಂತಹ ಹಕ್ಕುಗಳನ್ನು ರಕ್ಷಿಸಿ, ಗುರ್ತಿಸಿ ಅವುಗಳನ್ನು ಮಾನವ ಸ್ವತಂತ್ರವಾಗಿ ಅನುಭವಿಸಲು ಅನುಕೂಲ ಮಾಡಿಕೊಡಬೇಕು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಅಂತಹ ಮೂಲಭೂತ ಹಕ್ಕುಗಳನ್ನು ತ್ವರಿತವಾಗಿ ಹಾಗೂ ಸುಲಭವಾಗಿ ವ್ಯಕ್ತಿ ಪಡೆಯಬಲ್ಲಂತಹ ಕ್ರಮಕೈಗೊಳ್ಳಬೇಕು.

ವಿಶ್ವದ ಬಹುತೇಕ ಎಲ್ಲ ಲಿಖಿತ ಸಂವಿಧಾನಗಳು ಒಂದಲ್ಲಾ ಒಂದು ರೀತಿಯಲ್ಲಿ ಮೂಲಭೂತ ಹಕ್ಕುಗಳನ್ನು ಘೋಷಿಸಿ ಖಚಿತಪಡಿಸಿವೆ. ಮೂಲಭೂತ ಹಕ್ಕುಗಳು ಕಾರ್ಯಾಂಗ ಮತ್ತು ಶಾಸಕಾಂಗಗಳ ಮೇಲೆ ಮಿತಿ ಹೇರಿದವುಗಳಾಗಿವೆ. ಆದರೆ ಒಬ್ಬ ವ್ಯಕ್ತಿಯ ಖಾಸಗಿ ನಡತೆ ಮತ್ತೊಬ್ಬನಿಗೆ ಚ್ಯುತಿ ತರುವಂಥದ್ದನ್ನು ಮೂಲಭೂತ ಹಕ್ಕಿನ ಹೆಸರಿನಲ್ಲಿ ರಕ್ಷಿಸಲಾಗುವುದಿಲ್ಲ. ಬದಲಿಗೆ ಬೇರೆಯವರಿಗೆ ಧಕ್ಕೆಯಾಗದಂತೆ ಸಂವಿಧಾನ ಹಕ್ಕುಗಳನ್ನು ಚಲಾಯಿಸುವುದನ್ನು ಖಚಿತಪಡಿಸಬಹುದಾಗಿದೆ.

### ಭಾರತದ ಸಂವಿಧಾನ ಮತ್ತು ಮಾನವ ಹಕ್ಕುಗಳು

ಪ್ರತಿಯೊಂದು ರಾಷ್ಟ್ರವೂ ತನ್ನ ರಾಜಕೀಯ ಒಡಂಬಡಿಕೆಯ ಪ್ರಕಾರ ಮಾನವ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ. ಭಾರತದ ಸನ್ನಿವೇಶದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂವಿಧಾನ ಒಪ್ಪಿಕೊಂಡಿರುವ ಹಕ್ಕುಗಳು ಕೇವಲ ಅಲಂಕಾರಿಕ ಒಪ್ಪಂದವಾಗಿರದೆ, ಸಾಮಾಜಿಕ ರಚನೆಯಿಂದಾಗಿ ಈ ದೇಶದ ಜನಸಂಖ್ಯೆಯ ಬಹುದೊಡ್ಡಭಾಗ ಇನ್ನೂ ಅರೆ ಮಾನವೀಯ ಪರಿಸ್ಥಿತಿಯಲ್ಲೇ ಬದುಕು ನಡೆಸುತ್ತಿದೆ. ಈ ದಿಸೆಯಲ್ಲಿ ಸಾಮಾಜಿಕ ನ್ಯಾಯದ ಸನ್ನಿವೇಶದಲ್ಲಿ ರಾಜಾರಾಂ ಮೋಹನ್‌ರಾಯರ ಕಾಲದಿಂದ ಅಂಬೇಡ್ಕರ್‌ರವರೆಗೆ 1990ರ ಮಂಡಲ್ ಚಳುವಳಿ ಹಾಗೂ ಇತ್ತೀಚಿನ ಬೆಳವಣಿಗೆಗಳನ್ನು ಒಳಗೊಂಡಂತೆ ಸಮಾಜ ಸುಧಾರಣೆಯ ಚರಿತ್ರೆಯನ್ನು ಗಮನದಲ್ಲಿರಿಸಬೇಕು.

ಬ್ರಿಟಿಷರ ಕಾಲದಲ್ಲಿ ರಾಜಾರಾಂ ಮೋಹನ್‌ರಾಯರಿಂದ ಮಾನವ ಹಕ್ಕುಗಳ ರಕ್ಷಣೆಯನ್ನು ಕುರಿತ ಮೊದಲ ಪ್ರಯತ್ನ ನಡೆಯಿತು. ಸಾಮಾಜಿಕ ಅಥವಾ ಧಾರ್ಮಿಕ ಪುನರ್ ರಚನೆಗೆ ಜನಗಳ ಮನವೊಲಿಸಬೇಕೆಂಬುದು ಅವರ ನಂಬಿಕೆಯಾಗಿದ್ದು ಆ ಪ್ರಕಾರ ಜನಗಳಿಗೆ ಶಿಕ್ಷಣ ನೀಡಲು ಪ್ರಯತ್ನಿಸಿದರು. ಅಲ್ಲದೆ ಶಿಕ್ಷಣವಿಲ್ಲದೇ ಕೇವಲ ಕಾನೂನುಗಳ ಹೇರಿಕೆ ಈ ವಿಷಯದಲ್ಲಿ ಫಲಕಾರಿಯಾಗದೆಂಬ ಅರಿವು ಹೊಂದಿದ್ದರು. ಮುಂದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮದ್ರಾಸಿನಲ್ಲಿ ತನ್ನ 42ನೆಯ ಅಧಿವೇಶನದಲ್ಲಿ ಮೊದಲಬಾರಿಗೆ ಮಾನವ ಹಕ್ಕುಗಳ ರಕ್ಷಣೆಯತ್ತ ಗಮನಹರಿಸಿತು. ಭಾರತದ ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರ ಭವಿಷ್ಯವನ್ನು ಕುರಿತ ನಿರ್ಣಯಗಳನ್ನು ಅದು ಮುಂದಿಟ್ಟಿತು. ರಾಜಕೀಯ ಹಕ್ಕುಗಳ 4ನೇ ಭಾಗದಲ್ಲಿ ಅದು ಹೀಗೆ ಹೇಳಿದೆ. "ಇನ್ನು ಮುಂದೆ ಸಂವಿಧಾನದಲ್ಲಿ ವ್ಯಕ್ತಿಯ ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಸ್ವೀಕರಿಸಬೇಕು. ಕೇಂದ್ರದ ಅಥವಾ ಪ್ರಾಂತ್ಯದ ಯಾವುದೇ ಶಾಸನವೂ ಮಾನವನ ಆತ್ಮಸಾಕ್ಷಿಯ ಸ್ವಾತಂತ್ರ್ಯಕ್ಕೆ ಅಡ್ಡಿಯನ್ನುಂಟುಮಾಡಬಾರದು. ಅದು ವ್ಯಕ್ತಿ ಸ್ವಾತಂತ್ರ್ಯವನ್ನು ಸಂರಕ್ಷಿಸಬೇಕು. ಅಂದರೆ ಮಾನವನ ನಂಬಿಕೆಯ ಆರಾಧನೆಯ, ಧರ್ಮಪಾಲನೆಯ, ಧಾರ್ಮಿಕ ಶಿಕ್ಷಣ ನೀಡುವಿಕೆಯ, ಧರ್ಮ ಪ್ರಚಾರದ ಸ್ವಾತಂತ್ರ್ಯವನ್ನು ಇತರರ ಸಮಾನಹಕ್ಕುಗಳಿಗೆ ತೊಂದರೆಯುಂಟುಮಾಡದ ರೀತಿಯಲ್ಲಿ ರಕ್ಷಿಸಬೇಕು".

ಭಾರತ ಸಂವಿಧಾನ ಭಾಗ 3ರ ಅನುಚ್ಛೇದ 14 ರಿಂದ 35 ಭಾರತೀಯ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ಖಚಿತಪಡಿಸಿದೆ.

ಭಾರತ ಸಂವಿಧಾನವು ಮಾನವ ಹಕ್ಕುಗಳಿಗೆ ಮೂಲಭೂತ ಹಕ್ಕುಗಳ ಸ್ವರೂಪದಲ್ಲಿ ಹೆಚ್ಚು ಮಾನ್ಯತ ನೀಡಿದೆ. ನಮ್ಮ ಸಂವಿಧಾನವು ಮೊದಲು 7 ಮೂಲಭೂತ ಮಾನವ ಹಕ್ಕುಗಳನ್ನು ಗುರುತಿಸಿತ್ತು. ಆದರೆ 44ನೆಯ ತಿದ್ದುಪಡಿಯ ಮೂಲಕ ಆಸ್ತಿಯ ಹಕ್ಕನ್ನು ರದ್ದುಗೊಳಿಸಿತು. ಭಾಗ 3ರಲ್ಲಿ ನಮೂದಿಸಿರುವ 6 ಮೂಲಭೂತ ಹಕ್ಕುಗಳ ವಿವರ ಕೆಳಕಂಡಂತಿದೆ.

**ಅನುಚ್ಛೇದ – [14 ರಿಂದ 18]**

1. **ಸಮಾನತೆಯ ಹಕ್ಕು:** ಯಾವುದೇ ವ್ಯಕ್ತಿಗೆ ಕಾನೂನಿನಡಿ ಸಮಾನತೆ ಮತ್ತು ಸಮಾನಸಂರಕ್ಷಣೆಯನ್ನು ನಿರಾಕರಿಸುವಂತಿಲ್ಲ.
2. **ಸ್ವಾತಂತ್ರ್ಯದ ಹಕ್ಕು:** (ಅನುಚ್ಛೇದ – 19 ರಿಂದ 22) ಸಮಸ್ತ ನಾಗರಿಕರೂ ಹೊಂದಿರುವ ಹಕ್ಕುಗಳೆಂದರೆ ಅ) ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಆ) ನಿರಾಯುಧರಾಗಿ ಸಭೆ ಸೇರುವುದು. ಇ) ಸಂಘಗಳನ್ನು ರಚಿಸಿಕೊಳ್ಳುವುದು ಈ) ಭಾರತದ ರಾಜ್ಯ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಸರ್ವತ್ರ ಸಂಚಾರ ಮಾಡುವುದು ಉ) ಭಾರತದ ಯಾವುದೇ ಭಾಗದಲ್ಲಿ ವಾಸ ಮಾಡುವುದು ಊ) ಇಚ್ಛಿತ ಉದ್ಯೋಗ ಮತ್ತು ಕಸುಬನ್ನು ಹೊಂದುವುದು. ಅಂತೆಯೇ ಅನುಚ್ಛೇದ 21 ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆಗೆ ಸಂಬಂಧಿಸಿದ್ದು, ಅನುಚ್ಛೇದ–22 ದಸ್ತಗಿರಿ ಮತ್ತು ಸ್ಥಾನಬದ್ಧತೆಯನ್ನು ಸಂರಕ್ಷಿಸುತ್ತದೆ.
3. **ಶೋಷಣೆಯ ವಿರುದ್ಧದ ಹಕ್ಕು:** (ಅನುಚ್ಛೇದ–23–24) ಮಾನವನ ದುರ್ವ್ಯವಹಾರ ಮತ್ತು ಬಲಾತ್ಕಾರದ ದುಡಿಮೆಯನ್ನು ನಿಷೇಧಿಸುತ್ತದೆ ಮತ್ತು ಸಾರ್ವಜನಿಕ ಉದ್ದೇಶಗಳಿಗಾಗಿ ರಾಜ್ಯವು ಕಡ್ಡಾಯಸೇವೆ ವಿಧಿಸುವುದನ್ನು ಪ್ರತಿಬಂಧಿಸುವಂತಿಲ್ಲ. ಸೇವೆಯನ್ನು ನೀಡುವಾಗ ರಾಜ್ಯವು ಧರ್ಮ, ಮೂಲವಂಶ, ಜಾತಿ, ವರ್ಗ ಇವುಗಳ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ.
4. **ಧಾರ್ಮಿಕ ಸ್ವಾತಂತ್ರ್ಯದ ಹಕ್ಕು:** (ಅನುಚ್ಛೇದ 25 ಮತ್ತು 28) ಯಾವುದೇ ವ್ಯಕ್ತಿಗೆ ಇಚ್ಛಿತ ಧರ್ಮವನ್ನು ಆಚರಣೆ ಮಾಡುವ ಮತ್ತು ಪ್ರಚಾರ ಮಾಡುವ ಹಕ್ಕಿದೆ ಮತ್ತು ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸುವ ಹಕ್ಕು ಹೊಂದಿರುತ್ತಾರೆ.
5. **ಶೈಕ್ಷಣಿಕ ಹಾಗೂ ಸಂಸ್ಕೃತಿಯ ಹಕ್ಕು:** (ಅನುಚ್ಛೇದ – 30) ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಆಡಳಿತ ನಡೆಸುವ ಹಕ್ಕು ಹೊಂದಿದ್ದಾರೆ.
6. **ಸಂವಿಧಾನಿಕ ಪರಿಹಾರಗಳ ಹಕ್ಕು:** ಭಾರತದ ಸಂವಿಧಾನದ (ಅನುಚ್ಛೇದ 32 ರಿಂದ 35)ರವರೆಗೆ ಸಂವಿಧಾನಿಕ ಪರಿಹಾರ ಹಕ್ಕುಗಳನ್ನು ನೀಡಿದೆ. ಹಾಗೆಯೇ, ಇವುಗಳ ಮೇಲೆ ಸರ್ಕಾರ ಹೊಂದಿರುವ ನಿಯಂತ್ರಣ ಅಧಿಕಾರವನ್ನು ತಿಳಿಸಿದೆ. ಅವುಗಳೆಂದರೆ,
    1. ಅನುಚ್ಛೇದ 32 ಹಕ್ಕುಗಳ ಜಾರಿಗಾಗಿ ಪಡೆದಿರುವ ಹಕ್ಕು
    2. ಅನುಚ್ಛೇದ 33 – ಸಂಸತ್ತಿಗಿರುವ ಮಾರ್ಪಡಿಸುವ ಹಕ್ಕು.
    3. ಅನುಚ್ಛೇದ 34 – ಲಷ್ಕರಿ ಕಾನೂನು ಜಾರಿಯಲ್ಲಿದ್ದಾಗ ಈ ಹಕ್ಕುಗಳ ಮೇಲಿನ ಸಂಬಂಧ.
    4. ಅನುಚ್ಛೇದ 35 – ಹಕ್ಕುಗಳ ಜಾರಿಗಾಗಿ ಕಾನೂನು ರಚನೆ.


Digitised by Bharatavani, CIIL

**ವಿಶ್ವಸಂಸ್ಥೆ ಘೋಷಿತ ಮಾನವ ಹಕ್ಕುಗಳು**

1948 ಡಿಸೆಂಬರ್ 10ರಂದು ವಿಶ್ವಸಂಸ್ಥೆಯು ತನ್ನ ಸಾಮಾನ್ಯ ಸಭೆಯಲ್ಲಿ 217 ಎ(111)ರ ಮೂಲಕ ಮಾನವ ಹಕ್ಕುಗಳನ್ನು ದೃಢೀಕರಿಸುವ ನಿರ್ಣಯ ಕೈಗೊಂಡಿತು. ಸಮಾಜದ ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಅಂಗವನ್ನೂ ಸದಾ ಗಮನದಲ್ಲಿಟ್ಟುಕೊಂಡು ಯುನೆಸ್ಕೋ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ಜಾಗತಿಕ ಮಾನವ ಹಕ್ಕುಗಳ ಘೋಷಣೆಯನ್ನು ಗೌರವಿಸುವಂತೆ ಮಾಡಲು ಕ್ರಮಕೈಗೊಂಡಿತು. ಆ ಪ್ರಕಾರ ಮಾನವ ಹಕ್ಕುಗಳ ಘೋಷಣೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆ ಒಟ್ಟು 30 ಪರಿಚ್ಛೇದಗಳನ್ನೊಳಗೊಂಡಿದೆ.

**ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಘೋಷಿಸಿದ ಹಕ್ಕುಗಳನ್ನು 2 ಭಾಗಗಳಾಗಿ ವಿಂಗಡಿಸಲಾಗಿದೆ.**

| 1. ನಾಗರಿಕ ಮತ್ತು ರಾಜಕೀಯ ಹಕ್ಕುಗಳು | 2. ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳು |
|---|---|
| ಅ. ಅನುಚ್ಛೇದ 1 ಮತ್ತು 2 ಪ್ರತಿಯೊಬ್ಬರಿಗೂ ಜೀವಿಸುವ ಭದ್ರತೆಯ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ಗುಲಾಮಗಿರಿ ಮತ್ತು ದಾಸ್ಯತೆಯನ್ನು ನಿಷೇಧಿಸಿದೆ. ಅನುಚ್ಛೇದ 3 ರಿಂದ 20 ರವರೆಗೆ ನಾಗರಿಕ ಮತ್ತು ರಾಜಕೀಯ ಹಕ್ಕುಗಳಿವೆ.<br>ಆ. ಯಾರನ್ನೂ ಕೀಳಾಗಿ, ಕ್ರೂರವಾಗಿ ಅಮಾನವೀಯತೆಯಿಂದ ಚಿತ್ರಹಿಂಸೆ ಅಥವಾ ಶಿಕ್ಷೆಗೆ ಗುರಿಪಡಿಸುವಂತಿಲ್ಲ.<br>ಇ. ಕಾನೂನಿನಡಿ ಎಲ್ಲರೂ ಸಮಾನರಾಗಿದ್ದು ಒಬ್ಬ ವ್ಯಕ್ತಿಯಾಗಿ ಗುರುತಿಸಿಕೊಳ್ಳುವ ಹಕ್ಕು ಹೊಂದಿರುತ್ತಾರೆ.<br>ಈ. ನ್ಯಾಯ ಮಂಡಳಿಯ ಮೂಲಕ ಪರಿಹಾರ ಪಡೆಯುವ ಹಕ್ಕು.<br>ಉ. ಆರೋಪಿಯು ಅಪರಾಧಿ ಎಂದು ಸಾಬೀತಾಗುವವರೆಗೆ ನ್ಯಾಯ ಮಂಡಳಿಯ ಮೂಲಕ ನ್ಯಾಯಯುತವಾಗಿ ವಿಚಾರಣೆಗೆ ಒತ್ತಾಯಿಸುವ ಹಕ್ಕು.<br>ಊ. ವ್ಯಕ್ತಿಯ ವೈಯಕ್ತಿಕತೆಗೆ ಹಸ್ತಕ್ಷೇಪ ಉಂಟು ಮಾಡುವಂತಿಲ್ಲ.<br>ಋ. ಒಬ್ಬ ವ್ಯಕ್ತಿ ವಿಶ್ವದ ಯಾವುದೇ ಭಾಗದಲ್ಲಿ ಸಂಚರಿಸುವ, ವಾಸಿಸುವ, ಸ್ವದೇಶಕ್ಕೆ ಹಿಂದಿರುಗುವ ಹಕ್ಕು ಹೊಂದಿರುತ್ತಾನೆ.<br>ಎ. ಯಾವುದೇ ವ್ಯಕ್ತಿ ರಾಜಕೀಯವಾಗಿ ಅನುಭವಿಸುತ್ತಿರುವ ಕಿರುಕುಳದಿಂದ ತಪ್ಪಿಸಿಕೊಳ್ಳಲು ಮತ್ತೊಂದು ರಾಷ್ಟ್ರದ ಆಶ್ರಯ ಪಡೆಯುವ ಹಕ್ಕು.<br>ಏ. ರಾಷ್ಟ್ರೀಯತೆಯನ್ನು ಪಡೆಯುವ ಮತ್ತು ಬದಲಿಸಿಕೊಳ್ಳುವ ಹಕ್ಕು.<br>ಐ. ಸ್ವಂತ ಆಸ್ತಿ ಪಡೆಯುವ ಹಕ್ಕು.<br>ಒ. ವಾಕ್ ಮತ್ತು ವ್ಯಕ್ತಿ ಸ್ವಾತಂತ್ರ್ಯ, ಮಾಹಿತಿ ಸ್ವಾತಂತ್ರ್ಯದ ಹಕ್ಕು.<br>ಓ. ಶಾಂತಿಯುತವಾಗಿ ಸಭೆ ಸೇರುವ, ಸಂಘ ಸಂಸ್ಥೆ ಸ್ಥಾಪಿಸುವ ಹಕ್ಕು.<br>ಔ. ಚುನಾವಣೆಗಳಲ್ಲಿ ಮತ್ತು ಸಾರ್ವಜನಿಕ ಸೇವೆಗಳಲ್ಲಿ ಭಾಗವಹಿಸುವ ಹಕ್ಕು. | ಅ. ಸಾಮಾಜಿಕ ಭದ್ರತೆ ಪಡೆಯುವ ಹಕ್ಕು.<br>ಆ. ಇಚ್ಚಿತ ಉದ್ಯೋಗ ಮತ್ತು ವೇತನ ಪಡೆಯುವ ಹಕ್ಕು.<br>ಇ. ಕೆಲಸದ ಮಧ್ಯೆ ವಿಶ್ರಾಂತಿ ಪಡೆಯುವ ಮತ್ತು ಸಂಬಳ ಸಹಿತ ರಜಾ ಪಡೆಯುವ ಹಕ್ಕು.<br>ಈ. ಆರೋಗ್ಯ ಮತ್ತು ನೆಮ್ಮದಿಯಿಂದ ಜೀವಿಸುವ ಹಕ್ಕು.<br>ಉ. ಶಿಕ್ಷಣ ಪಡೆಯುವ ಹಕ್ಕು.<br>ಊ. ಸಮುದಾಯದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು.<br>ಋ. ಸಾಮಾಜಿಕ ಮತ್ತು ಅಂತಾರಾಷ್ಟ್ರೀಯ ನೀತಿಗೆ ಬದ್ಧರಾಗಿರುವ ಹಕ್ಕು.<br>ಎ. ವಿಶ್ವಸಂಸ್ಥೆಯ ನಿಯಮಾವಳಿಗಳಿಗೆ ವಿರುದ್ಧವಾಗಿ ಸ್ವಾತಂತ್ರ್ಯ ಚಲಾಯಿಸದಿರುವ ಹಕ್ಕು. |

**ಮಾನವ ಹಕ್ಕುಗಳ ಶಿಕ್ಷಣದ ಉದ್ದೇಶಗಳು**

1. ಮಾನವ ಹಕ್ಕುಗಳಿಗೆ ಸಂಬಂಧಿಸಿದ ಜಾಗತಿಕ ಘೋಷಣೆಯ ಹಿನ್ನೆಲೆ ಮತ್ತು ಉದ್ದೇಶಗಳನ್ನು ಪರಿಚಯಿಸುವುದು.
2. ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಹಕ್ಕುಗಳ ಉಲ್ಲಂಘನೆಯ ವಿರುದ್ಧ ಹೋರಾಡುವ ಸಂಘಟನೆಗಳನ್ನು ಪರಿಚಯಿಸುವುದು.
3. ಮಾನವ ಹಕ್ಕುಗಳ ಬಗ್ಗೆ ಜನರಲ್ಲಿರುವ ಪೂರ್ವಗ್ರಹಗಳನ್ನು ನಿವಾರಿಸುವುದು.
4. ಯಾವುದೇ ವ್ಯಕ್ತಿ ತನ್ನ ಹಕ್ಕುಗಳ ಜೊತೆಗೆ ಇತರರ ಹಕ್ಕುಗಳನ್ನು ಗೌರವಿಸುವ ಮತ್ತು ಪ್ರಶಂಸಾ ಮನೋಭಾವ ಹೊಂದುವಂತೆ ಮಾಡುವುದು.

Digitised by Bharatavani, CIIL

### ಲಕ್ಷಣಗಳು

1. ಮಾನವ ಹಕ್ಕುಗಳ ಘೋಷಣೆಯಂತೆ ಹುಟ್ಟಿನಿಂದ ಎಲ್ಲರೂ ಸಮಾನರು.
2. ಮಾನವ ಹಕ್ಕುಗಳನ್ನು ಅನುಭವಿಸುವ ಮತ್ತು ರಕ್ಷಿಸುವ ಮನೋಭಾವ ಹೊಂದಬೇಕೆಂಬುದು ವಿಶ್ವಸಂಸ್ಥೆಯ ಆಶಯ.
3. ಮಾನವ ಹಕ್ಕುಗಳು ಪ್ರತಿ ಸಮಾಜದ ಆಧಾರಸ್ತಂಭಗಳು.
4. ಮಾನವ ಹಕ್ಕುಗಳು ಮಾನವನನ್ನು ನಿರಂಕುಶತೆಯಿಂದ ಮುಕ್ತಗೊಳಿಸುತ್ತವೆ.
5. ಮಾನವ ಹಕ್ಕುಗಳು ವಿಶ್ವಮಾನ್ಯವಾದವು. ಇವು ವಿಶ್ವ ಸಂಸ್ಥೆಯಿಂದ ಅಂಗೀಕರಿಸಲ್ಪಟ್ಟವಾಗಿವೆ.

### ಮಾನವ ಹಕ್ಕುಗಳ ಆಯೋಗ

ಸಮಾಜಕಂಟಕ ಕೃತ್ಯಗಳನ್ನು ನಿಯಂತ್ರಿಸಲು ವಿಶ್ವಸಂಸ್ಥೆಯಡಿ **"ವಿಶ್ವಮಾನವ ಹಕ್ಕುಗಳು"** ಎಂಬ ಘೋಷಣೆ ಹೊರಡಿಸಿದರು. ಈ ದಿಸೆಯಲ್ಲಿ ಭಾರತ 1993 ಅಕ್ಟೋಬರ್ 12ರಂದು "ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ" ರಚಿಸಿತು. ಇದರ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ರಾಷ್ಟ್ರಾಧ್ಯಕ್ಷರು ಅನುಮೋದಿಸುತ್ತಾರೆ. ಇದಕ್ಕೆ ಮುನ್ನ ಆಯೋಗ ರಚನಾ ಸಮಿತಿಯ ಅಧ್ಯಕ್ಷರಾದ ಪ್ರಧಾನ ಮಂತ್ರಿಗಳು ಸದಸ್ಯರುಗಳಾದ, ಲೋಕಸಭಾ ಅಧ್ಯಕ್ಷರು, ವಿರೋಧಪಕ್ಷದ ನಾಯಕರು, ರಾಜ್ಯಸಭೆಯ ಉಪಾಧ್ಯಕ್ಷರು, ರಾಜ್ಯಸಭೆಯ ವಿರೋಧಪಕ್ಷದ ನಾಯಕರು, ಭಾರತ ಸರ್ಕಾರದ ಗೃಹ ವ್ಯವಹಾರಗಳ ಮಂತ್ರಾಲಯದ ಪ್ರಭಾರ ಹೊಂದಿರುವ ಮಂತ್ರಿಗಳ ಸಮಿತಿ ಸದಸ್ಯರ ಪಟ್ಟಿ ತಯಾರಿಸಿ ಅನುಮೋದನೆಗಾಗಿ ರಾಷ್ಟ್ರಾಧ್ಯಕ್ಷರಿಗೆ ಅನುಮೋದನೆಗಾಗಿ ಕಳುಹಿಸಿಕೊಡುತ್ತಾರೆ. ಇದರಲ್ಲಿ ಅಧ್ಯಕ್ಷರಾಗಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು, ನಿವೃತ್ತ ಸದಸ್ಯರಾಗಿ ಸರ್ವೋಚ್ಚ ನ್ಯಾಯಾಲಯದ ಹಾಲಿ ಅಥವಾ ನಿವೃತ್ತ ನ್ಯಾಯಾಧೀಶರು, ಮಾನವ ಹಕ್ಕುಗಳ ಬಗ್ಗೆ ಅನುಭವವುಳ್ಳ ಮತ್ತು ವಿಷಯ ಜ್ಞಾನವುಳ್ಳ ಇಬ್ಬರು ಸದಸ್ಯರು, ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು, ಅನುಸೂಚಿತ ಜಾತಿ ಮತ್ತು ಪಂಗಡಗಳ ರಾಷ್ಟ್ರೀಯ ಅಧ್ಯಕ್ಷರು, ಮಹಿಳಾ ರಾಷ್ಟ್ರೀಯ ಆಯೋಗದ ಅಧ್ಯಕ್ಷರುಗಳು ಸದಸ್ಯರುಗಳಾಗಿ ನೇಮಕಗೊಂಡಿರುತ್ತಾರೆ. ಜೊತೆಗೆ ಭಾರತ ಸರ್ಕಾರದ ಕಾರ್ಯದರ್ಶಿ ಶ್ರೇಣಿಯ ಒಬ್ಬ ಅಧಿಕಾರಿ ಕಾರ್ಯದರ್ಶಿಯಾಗಿ ನೇಮಕಗೊಂಡಿರುತ್ತಾರೆ.

### ಮಾನವ ಹಕ್ಕುಗಳ ಶಿಕ್ಷಣದಲ್ಲಿ ವಿವಿಧ ನಿಯೋಗಗಳ ಪಾತ್ರ

1. **ಕುಟುಂಬ:** ಇದು ಒಂದು ಅನೌಪಚಾರಿಕ ಸಕ್ರಿಯಾತ್ಮಕ ಶಿಕ್ಷಣ ಸಂಸ್ಥೆ. ಮಗು ಇಲ್ಲಿಂದಲೇ ಪ್ರೀತಿ, ವಾತ್ಸಲ್ಯ, ತ್ಯಾಗ, ನೈತಿಕತೆಗಳನ್ನು ಪಡೆಯಲಾರಂಭಿಸುತ್ತದೆ.
2. **ಶಾಲೆ:** ಮಾನವೀಯ ಗುಣಗಳನ್ನು ಬೆಳೆಸುವುದರ ಜೊತೆಗೆ ಸಮಾಜದಲ್ಲಿ ತನ್ನ ಕರ್ತವ್ಯವೇನೆಂಬ ಅರಿವನ್ನುಂಟು ಮಾಡಿ ಐಕ್ಯತೆಯ ಮನೋಭಾವ ತನ್ನ ಸಂಸ್ಕೃತಿಯ ಜೊತೆಗೆ ಇತರರ ಸಂಸ್ಕೃತಿಯನ್ನು ಗೌರವಿಸುವ ಮನೋಭಾವಗಳನ್ನು ಬೆಳೆಸುತ್ತದೆ.
3. ಅನೇಕ ಸ್ವೈಚ್ಛಿಕ ಸಂಘ-ಸಂಸ್ಥೆಗಳು ಮಾನವ ಹಕ್ಕುಗಳ ರಕ್ಷಣೆಗಾಗಿ ಕಾರ್ಯ ನಿರ್ವಹಿಸುತ್ತವೆ.
4. ನ್ಯಾಯಾಲಯಗಳು ಮಾನವ ಹಕ್ಕುಗಳನ್ನು ಎತ್ತಿಹಿಡಿಯುತ್ತವೆ.
5. ಪತ್ರಿಕೆಗಳು, ದೂರದರ್ಶನ ಮುಂತಾದ ಸಮೂಹ ಮಾಧ್ಯಮಗಳು ಮಾನವ ಹಕ್ಕುಗಳ ರಕ್ಷಣೆಗಾಗಿ ತಮ್ಮ ಕೊಡುಗೆ ನೀಡುತ್ತವೆ.
6. ರಾಜಕೀಯ ಪಕ್ಷಗಳು ಮಾನವ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತವೆ.

ಒಟ್ಟಾರೆ ಮಾನವ ಹಕ್ಕುಗಳು, ಮಾನವ ತನ್ನ ಸಮಾಜದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳು, ಹೊಂದಿರಬೇಕಾದ ಮನೋಭಾವ, ಪಡೆದುಕೊಳ್ಳಬಹುದಾದ ಅವಕಾಶಗಳು, ಸಂರಕ್ಷಿಸಬೇಕಾದ ಸಂಸ್ಕೃತಿ ಮೊದಲಾದವುಗಳ ಬಗ್ಗೆ ಮಾಹಿತಿ ನೀಡುವ ಶಿಕ್ಷಣದ ಅಗತ್ಯತೆಯಿದೆ.

– ಮೋ.ಕು.

## ಮಾನಸಿಕ ಸ್ವಾಸ್ಥ್ಯ

ಮನಃಶಾಸ್ತ್ರವು ಆಧುನಿಕ ವೈದ್ಯಕೀಯ ವಿಜ್ಞಾನದ ಅತ್ಯಂತ ಪ್ರಾಚೀನ ಕಲೆ. ಮನೋವೈದ್ಯಕೀಯ ಕಳೆದೆರಡು ದಶಕದಲ್ಲಿ ಪ್ರವೃದ್ಧಿ ಹೊಂದಿ, ಅಪಾರ ಸಂಶೋಧನೆ ನಡೆದು, ವಿಪುಲವಾದ ಸಾಹಿತ್ಯ ನಿರ್ಮಾಣವಾಗಿ, ಮನೋರೋಗಿಗಳ ಜೀವನ ಕ್ರಮವನ್ನು ಸುಗಮಗೊಳಿಸುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಆದರೂ ಕನಿಷ್ಠ ಸಂಖ್ಯೆಯಲ್ಲಿರುವ ಪರಿಣಿತ ಸಿಬ್ಬಂದಿ. ತಮ್ಮ ಮುಂದಿರುವ ಅಗಾಧ ಪ್ರಮಾಣದ ಸವಾಲನ್ನು ದಿಟ್ಟ ಹೆಜ್ಜೆಯಿಂದ ಸ್ವೀಕರಿಸಿದರೂ ಸಂಖ್ಯಾಬಲದಲ್ಲಿ ಕುಂದಿ, ಸಮಪ್ರಮಾಣದ ಸಮತೋಲನವನ್ನು ಕಾಪಾಡುವುದರಲ್ಲಿ ಅಯಶಸ್ವಿಯಾಗಿದ್ದರೆ ಅದು ನಮ್ಮ ಸಮಾಜ ಹಾಗೂ ಸಂಸ್ಕೃತಿಯ ವ್ಯವಸ್ಥೆಯಲ್ಲಿನ ನ್ಯೂನತೆಯೇ ಕಾರಣ. ಸರಾಸರಿ ಹದಿನೈದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯಿರುವ ಜಿಲ್ಲೆಯ ಕೇಂದ್ರ ಸ್ಥಳದಲ್ಲಿಯೇ ಮನೋವೈದ್ಯಕೀಯದ ಸೌಲಭ್ಯಗಳಿಲ್ಲದೆ, ರೋಗಿಗಳು ವಂಚಿತರಾಗುವ ಸಾಧ್ಯತೆ ವಸ್ತುಶಃ ಸತ್ಯ. ದೂರದರ್ಶಿತ್ವ ಹಾಗೂ ಸಮಯ ಪ್ರಜ್ಞೆಯ ಕೊರತೆಯಿಂದ ನರಳುವ ಸರಕಾರಿ ಯೋಜನೆಗಳು, ಮನೋವೈದ್ಯಕೀಯದ ಜನಪ್ರಿಯತೆಯನ್ನು ತಡೆಗಟ್ಟುವುದರಲ್ಲಿ ಸಫಲವಾಗಿವೆ. ಅದು ನಮ್ಮ ಸಮಾಜದ ದುರಾದೃಷ್ಟ. ಇದಕ್ಕೆ ಕಾರಣಗಳು ಹಲವಾರು ಇರಬಹುದು.

ನಮ್ಮ ಸಾಮಾಜಿಕ, ಸಾಂಸ್ಕೃತಿಕ ನಂಬಿಕೆಗಳು, ಅವುಗಳ ಪ್ರಭಾವ ವ್ಯಾಪ್ತಿ ಮನೋರೋಗಗಳನ್ನು ಪ್ರಾಥಮಿಕ ಹಂತಗಳಲ್ಲಿ ಗುರುತಿಸುವುದರಲ್ಲಿ ಅಡ್ಡಿಯನ್ನುಂಟು ಮಾಡಿವೆ. 'ಸೌಮ್ಯವ್ಯಕ್ತಿ' ಎಂದು ಕರೆಯಲ್ಪಡುವ ವ್ಯಕ್ತಿ ಸ್ಕಿಜೋಫ್ರೆನಿಯಾದಿಂದ, ತಲೆಹರಟೆ ಎಂದು ಮುದ್ದಿನಿಂದ ಕರೆಸಿಕೊಳ್ಳುವ ವ್ಯಕ್ತಿ ಮೇನಿಯಾ ವಿಕಲತೆಯಿಂದ ನರಳುತ್ತಿರುವ ಸಾಧ್ಯತೆಯಿದೆ. ಸಜ್ಜನ, ದೈವಾಂಶ ಸಂಭೂತ, ತನ್ನ ಆಸ್ತಿಯನ್ನೆಲ್ಲಾ ಮಠಕ್ಕೊ ದೇವಸ್ಥಾನಕ್ಕೋ ಅರ್ಪಿಸಿ, ಮನೆ ಮಕ್ಕಳುಗಳನ್ನು ಪರದೇಶಿಗಳನ್ನಾಗಿ ಮಾಡಿ, ಯಾತ್ರೆಗೆಂದು ಹೊರಟ ವ್ಯಕ್ತಿ ಪ್ಯಾರನ್ಯಾಡ್ ಪ್ರಕ್ರಿಯೆಗೆ ಬಲಿಪಶುವಾಗಿರಬಹುದು. ಆದ್ದರಿಂದ ಮನೋವಿಜ್ಞಾನದ ಪಸರಿಕೆಗೆ ತೊಡಕು ಬರುವುದು ನಮ್ಮ ಜೀವನಕ್ರಮದಲ್ಲಿರುವ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಭಾವನೆಗಳು ಬಲವಾಗಿ ಬೇರೂರಿರುವುದರಿಂದ ಮಾತ್ರ ಹಾಗೂ ಬದಲಾವಣೆಗಳಿಗೆ ಬಗ್ಗದ ಮನೋಧರ್ಮದಿಂದ.

ವ್ಯಕ್ತಿ ಮನೋವಿಕಲನಾಗಿದ್ದಾನೆ ಎನ್ನುವ ಸ್ಪಷ್ಟ ಕಲ್ಪನೆ ಮನೆಮಂದಿಗೆ ಮೂಡುವಾಗ ಕಾಯಿಲೆ ಸಾಕಷ್ಟು ಬೆಳೆದಿರುತ್ತದೆ. ಆಗ ರೋಗದ ಮುಂದಿನ ಗತಿಯನ್ನು ನಿಲ್ಲಿಸುವುದು ಅಸಾಧ್ಯ. ಬಲಿತ ಕಾಯಿಲೆಯನ್ನು ಬೇರುಸಮೇತ ಕಿತ್ತೊಗೆದು ಮನಸ್ಸನ್ನು ಸಂವೇದನಾಶೀಲವನ್ನಾಗಿ ಮಾಡುವುದು ಕಷ್ಟಸಾಧ್ಯ. ರೋಗಲಕ್ಷಣಗಳು ಸಂಪೂರ್ಣವಾಗಿ ನಶಿಸಿದರೂ, ಅವರೊಂದಿಗೆ


Digitised by Bharatavani, CIIL

ಸತತವಾಗಿ ಒಡನಾಡುವವರಿಗೆ ಆ ನ್ಯೂನತೆಯ ಪರಿಚಯ ಆಗುವುದು ಸಹಜ. ಸಿಡುಬು ಕಾಯಿಲೆ ಬಂದು ಹೋದ ಮೇಲೂ ಮುಖದ ಮೇಲೆ ಉಳಿಯುವ ಕಲೆಗಳ ರೀತಿಯಲ್ಲಿ. ಹೆಚ್ಚಿನ ಮನೋರೋಗಗಳನ್ನು ಕೂಡಲೇ ಗುರುತಿಸಿ ಚಿಕಿತ್ಸೆ ನೀಡದಿದ್ದಲ್ಲಿ ಅವು ತಮ್ಮ ಹಿಂದಿನ ಇರುವಿಕೆಯನ್ನು ಸಾಂಕೇತಿಕವಾಗಿ ಉಳಿಸಿಕೊಳ್ಳುವ ಸಾಧ್ಯತೆಗಳುಂಟು. ಇದರಿಂದ ಮನಸ್ಸಿನ ವಿಕಲತೆಯನ್ನು ವೈದ್ಯರು, ರೋಗಿಗಳು, ಅವರ ಹತ್ತಿರದ ಸಂಬಂಧಿಗಳು ಹಾಗೂ ನೆರೆಹೊರೆಯವರು ಕೂಡಲೇ ಗುರುತಿಸುವಂತಾಗಬೇಕು.

ಕಳೆದ ದಶಕದಲ್ಲಿ ಮನೋವಿಜ್ಞಾನ ಸಾಕಷ್ಟು ಪ್ರಗತಿಯನ್ನು ಸಾಧಿಸಿದರೂ, ಸ್ವಾಸ್ಥ್ಯ ಅಸ್ವಾಸ್ಥ್ಯದ ಬಗ್ಗೆ ಸ್ಪಷ್ಟ ಕಲ್ಪನೆಯಿಲ್ಲದಿರುವುದು ಸಮಸ್ಯೆಯ ಅಗಾಧತೆಯನ್ನು ಹೆಚ್ಚಿಸುತ್ತದೆ. ಯಾವುದು ಸ್ವಾಸ್ಥ್ಯತೆ ಅಥವಾ ಅಸ್ವಾಸ್ಥ್ಯತೆ? ರಾತ್ರಿಯೆಲ್ಲಾ ಕಂಠಪೂರ್ತಿ ಕುಡಿದು ಮಾರನೆಯ ದಿನ ಬೆಳಿಗ್ಗೆ ತನ್ನ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸುವವನು ಸ್ವಸ್ಥ್ಯನಾದರೆ, ಬದಲಾಗಿ ಉತ್ತಮ ನಡವಳಿಕೆ, ಮಾದರಿ ವರ್ತನೆಯಿಂದ ಆದರ್ಶಪ್ರಾಯನಾದ ವ್ಯಕ್ತಿ ಸಮಾಜದ ಕನಿಷ್ಠ ಬೇಡಿಕೆಗಳಿಗೂ ಬೇಜವಾಬ್ದಾರಿಯಿಂದ ವರ್ತಿಸುವವನು ಅಸ್ವಸ್ಥನೆ? ಈ ಪ್ರಶ್ನೆಗೆ ಉತ್ತರ ಸಾಧ್ಯ. ಆದರೆ ಕಷ್ಟ ಸಾಧ್ಯ. ವ್ಯಕ್ತಿಯ ಬಾಲ್ಯ, ಪರಿಸರ, ಆಗಿನ ಒಡನಾಟ, ಆತನಿಗೆ ತಕ್ಕ ಮಾರ್ಗದರ್ಶನ, ಶಾಲೆಯ ಶಿಕ್ಷಣ, ಪಠ್ಯಕ್ರಮ, ಇವೆಲ್ಲವೂ ಆತನ ವ್ಯಕ್ತಿತ್ವ ನಿರೂಪಣೆಯಲ್ಲಿ ಮಹತ್ತರ ಪಾತ್ರವನ್ನು ವಹಿಸುವುದರಿಂದ, ಇವುಗಳನ್ನು ಬೇರ್ಪಡಿಸುವುದು ಆಶಾದಾಯಕ. ಆದರೆ ಅಸಾಧ್ಯ.

ಗಮನಿಸಿ, ಸಮಾರಂಭವೊಂದು ಸರಿಯಾಗಿ ಸಂಜೆ ಆರು ಗಂಟೆಗೆ ಪ್ರಾರಂಭವಾಗುತ್ತದೆ ಎಂದಿಟ್ಟುಕೊಳ್ಳಿ. ಮುಖ್ಯ ಅತಿಥಿ ಸಮಯಕ್ಕೆ ಸರಿಯಾಗಿ ಆಗಮಿಸಿದರೆ ಆತನನ್ನು ಅಬ್ಸೆಸಿವ್ ವ್ಯಕ್ತಿತ್ವವೆನ್ನುತ್ತೇವೆ. ಅರ್ಧ ಘಂಟೆ ಮುಂಚೆಯೇ ಆತ ಆಗಮಿಸಿದರೆ ಅದು ಆತನದೇ ಜವಾಬ್ದಾರಿಯುತ ವ್ಯಕ್ತಿತ್ವದ ಪ್ರತೀಕ ಎಂದು ವಿಶ್ಲೇಷಿಸುವುದುಂಟು. ಹಾಗಾದರೆ ಅನ್ವರ್ಥಕಗಳಿಲ್ಲದ ಮಾದರಿ ವ್ಯಕ್ತಿತ್ವ ಯಾವುದು ಎನ್ನುವುದಕ್ಕೆ ನಿರ್ದಿಷ್ಟ ಉತ್ತರ ಸಿಕ್ಕಲಾರದು. ಹದಿನೆಂಟು ವಯಸ್ಸಿನ ಹುಡುಗಿ, ಕಾಲೇಜಾಯಿತು, ಮನೆಯಾಯಿತು ತನ್ನ ಪಾಠ ಪ್ರವಚನ ಅಭ್ಯಾಸವಾಯಿತು. ಹುಡುಗರನ್ನು ಕಣ್ಣೆತ್ತಿಯೂ ಸಹ ನೋಡುವವಳಲ್ಲ ಎಂದು ತಂದೆ ತಾಯಿ ತಮ್ಮ ಪುತ್ರಿಯ ಬಗ್ಗೆ ಹೆಮ್ಮೆ ಪಟ್ಟರೂ ಇದು ಆರೋಗ್ಯಕರ ಪ್ರವೃತ್ತಿಯಲ್ಲ. ತನ್ನ ಐದು ವರ್ಷದ ಮಗು ತುಂಬಾ ತುಂಟ, ಹೊಸ ಆಟಿಕೆಗಳನ್ನು ತಂದುಕೊಡಲೆಂದು ತನ್ನ ಹಳೆಯ ಆಟಿಕೆಗಳನ್ನು ಬೇಕೆಂತಲೇ ಮುರಿಯುತ್ತಾನೆ ಮತ್ತು ಮೊನ್ನೆಯಷ್ಟೇ ಐದು ರೂಪಾಯಿಯ ನೋಟನ್ನು ಬೇಕೆಂತಲೇ ಹರಿದಿದ್ದಾನೆ ಎಂದು ತಮ್ಮ ಏಕೈಕ, ಮುದ್ದಿನ ಮಗನ ತುಂಟಾಟದ ಬಗ್ಗೆ ಹೆಗ್ಗಳಿಕೆ ಪಡುವ ಪೋಷಕರು – ಅದೇ ರೀತಿಯಲ್ಲಿ, ಇದು ತುಂಟಾಟವಲ್ಲ, ಬದಲಾಗಿ ಮೆದುಳಿಗೆ ಆಗುವ ಅಲ್ಪ ಆಘಾತದ ದುಷ್ಪರಿಣಾಮದ ಫಲಿತಾಂಶ–ಹೈಪರಕೈನೆಸಿಸ್ ಎಂದು ಒಪ್ಪಲು ಸಿದ್ಧರಿರಲಿಕ್ಕಿಲ್ಲ. ಯಾವುದೇ ರೋಗಲಕ್ಷಣ ವ್ಯಕ್ತಿಯ ದೈನಂದಿನ ಚಟುವಟಿಕೆಯನ್ನು ನಿರ್ವಹಿಸುವುದರಲ್ಲಿ ಅಡ್ಡಿಪಡಿಸುತ್ತದೆಯೋ, ಆಗ ಅದು ಮಾನಸಿಕ ಅಸ್ವಸ್ಥತೆ ಎನಿಸಿಕೊಳ್ಳುತ್ತದೆ.

ಈ ದಿಸೆಯಲ್ಲಿ ಇನ್ನೊಂದು ಅಡೆತಡೆಯೆಂದರೆ ಸಂಪ್ರದಾಯ. ಮೂಢನಂಬಿಕೆಗಳ ಪಾತ್ರ. ಸಾಮಾನ್ಯವಾಗಿ ಬಳಕೆಯಲ್ಲಿರುವ ಮೂಢನಂಬಿಕೆಗಳನ್ನು ಅರಿಯಲು ಪ್ರಯತ್ನಿಸಿದಲ್ಲಿ ಸಮಸ್ಯೆಯ ಅಗಾಧತೆಯ ವ್ಯಾಪ್ತಿ ತಿಳಿಯುತ್ತದೆ. ಮೂಢನಂಬಿಕೆಗಳು ಆತಂಕಪೂರಿತ ಮನಸ್ಸಿಗೆ ಸಾಂತ್ವನ ನೀಡುವ ಸಿದ್ಧೌಷಧ. ಪ್ರಾಯಶಃ ನಮ್ಮಲ್ಲಿ ಮೂಢ ನಂಬಿಕೆಗಳೇ ಇಲ್ಲದಿದ್ದಲ್ಲಿ ಅಭದ್ರತೆಯ ಭಾವನೆಗಳು ಅಧಿಕವಾಗಿ, ಮನೋಸ್ಥೈರ್ಯಗಳು ಸಡಿಲಗೊಂಡು, ವ್ಯಕ್ತಿತ್ವ ಶಿಥಿಲಗೊಳ್ಳುತ್ತಿತ್ತೋ ಏನೋ..! ಮನೋರೋಗಿಗಳ ಸಂಖ್ಯೆ ಅಧಿಕವಾಗುತ್ತಿತ್ತೋ ಏನೋ..! ಮೂಢನಂಬಿಕೆಗಳಲ್ಲಿ ಆತ್ಮ ಸಂರಕ್ಷಣೆಯ ಮನೋಭಾವ ಅಧಿಕವಾಗಿದೆ. ಈ ನಂಬಿಕೆಗಳ ಆಚರಣೆಯಿಂದ ಸಿಗುವ ತಾತ್ಕಾಲಿಕ, ಮಾನಸಿಕ ಸಮಾಧಾನ ನೀಡುವುದು ಈ ಘಟಕವೆಂಬುದು ಖಾತ್ರಿ... ಆದರೆ ದುರದೃಷ್ಟವಶಾತ್, ಬೇಸರದ ಸಂಗತಿಯೆಂದರೆ ಸಾಮಾನ್ಯ ಜನರ ವಿದ್ಯಾಭ್ಯಾಸದ ಮಟ್ಟ ಉತ್ತಮ ಸ್ಥಿತಿಯಲ್ಲಿರುವಾಗ ಪ್ರತಿಯೊಬ್ಬರಿಗೂ ವೈಜ್ಞಾನಿಕ ಅರಿವು, ವಿಶ್ಲೇಷಣೆ, ಪೃಥಕ್ಕರಣ ಸೌಲಭ್ಯಗಳು ಹೆಚ್ಚುತ್ತಿರುವಂತೆ, ಮೂಢನಂಬಿಕೆಗಳೂ ಹೆಚ್ಚುತ್ತಿರುವುದು ಅಚ್ಚರಿಯ ಸಂಗತಿ. ಪ್ರಾಯಶಃ ಎಲ್ಲಾ ರಂಗಗಳಲ್ಲೂ ಕುಸಿಯುತ್ತಿರುವ ಮೌಲ್ಯಗಳು, ಒಡೆಯುತ್ತಿರುವ ಜಂಟಿ ಸಂಸಾರಗಳು, ಔದ್ಯೋಗೀಕರಣ, ನಗರಗಳ ತಡೆಯಿಲ್ಲದ ಬೆಳೆಯುವಿಕೆ, ಹಣದುಬ್ಬರ, ನಿರುದ್ಯೋಗ ಸಮಸ್ಯೆ, ಉಳ್ಳವರಿಂದ ಇಲ್ಲದವರ ಶೋಷಣೆ, ಆಧುನಿಕ ನಾಗರಿಕತೆಯ ಮಟ್ಟ ಹೆಚ್ಚಿದಂತೆ ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಸಹ ಹೆಚ್ಚಿರುವುದು ಈ ನಂಬಿಕೆಗಳ ಹಿಂದಿನ ಮೌಢ್ಯಕ್ಕೆ ಕಾರಣವಾಗಿರಬೇಕು. ತಾತ್ಕಾಲಿಕ ಸಾಂತ್ವನ, ಸಮಾಧಾನ, ಪರಿಹಾರೋಪಾಯ, ಮೂಢನಂಬಿಕೆಯಿಂದ ದೊರಕುವುದು ಇದರ ಜನಪ್ರಿಯತೆಗೆ ಕಾರಣ. ಪ್ರಪಂಚದ ಇತರ ದೇಶಗಳಲ್ಲಿನ ವೈದ್ಯರಿಗೂ, ಏಷ್ಯಾ ಖಂಡದ, ಅದರಲ್ಲೂ ಮುಖ್ಯವಾಗಿ ಭಾರತ ವಾಸಿಯಾಗಿರುವ ವೈದ್ಯರಿಗೂ ಜವಾಬ್ದಾರಿ ಇಮ್ಮಡಿಯಾಗಿದೆ. ಇಲ್ಲಿ ವೈದ್ಯರು ಕೇವಲ ರೋಗಿಯ ರೋಗರುಜಿನಗಳನ್ನು ಪರೀಕ್ಷಿಸಿ, ರೋಗವನ್ನು ನಿರ್ಧರಿಸುವುದಷ್ಟೇ ಅಲ್ಲ, ಬದಲಾಗಿ ಅವನಲ್ಲಿರುವ ಮೂಢನಂಬಿಕೆಯನ್ನು ತೊಲಗಿಸಬೇಕಾಗಿ ಬರುವುದು ಅವನ ಜವಾಬ್ದಾರಿಯನ್ನು ಹೆಚ್ಚು ಮಾಡುತ್ತದೆ.

ಇವುಗಳಿಗೆ ಪ್ರಮುಖ ಕಾರಣ ಎಂದರೆ ಒಟ್ಟು ಸಂಸಾರಗಳ ಸಂಘಟನೆಯ ವ್ಯವಸ್ಥೆಯ ಒಡೆಯುವಿಕೆ, ಆರ್ಥಿಕ ವ್ಯವಸ್ಥೆಯಲ್ಲಿ ಹಿಂಜರಿತ, ಸಾಮಾಜಿಕ ಮತ್ತು ಭಾವನಾತ್ಮಕ ಕುಸಿತ ಮತ್ತು ಪರಸ್ಪರ ಸೌಹಾರ್ದತೆಯ ಕೊರತೆ.

ಇದಕ್ಕೆ ಪರಿಹಾರವಾಗಿ ಕೆಳಕಂಡ ಚಿಕಿತ್ಸೆಯನ್ನು ಅಳವಡಿಸಿ ಕೊಳ್ಳಬಹುದು. ಎಲ್ಲ ಚಿತ್ತಚಾಂಚಲ್ಯಗಳಲ್ಲೂ ಇರುವಂತೆ ಸಣ್ಣ ಪ್ರಮಾಣದ ಸಮಾಧಾನಕಾರಿಯಾಗುವ ಔಷಧಗಳು – ಪ್ರೋತ್ಸಾಹಕ ಮನೋಚಿಕಿತ್ಸೆ, ಮನೋವೈದ್ಯರೊಂದಿಗೆ ನಿರಂತರ ಸಂವಾದ ಆತಂಕದ ಮೂಲಕಾರಣವನ್ನು ಗುರುತಿಸುವುದರಲ್ಲಿ ಫಲಕಾರಿ. ಒಮ್ಮೆ ಸಮಸ್ಯೆಯ ಅರಿವಾದೊಡನೆಯೇ ಅದಕ್ಕನುಗುಣವಾದ ಸಮಾಧಾನವನ್ನು ಕಂಡುಹಿಡಿಯುವುದು ಸಾಧ್ಯ. ಅಲ್ಲಿಯವರೆಗೂ ಮೂಡಿ ಬರುವ ಆತಂಕವನ್ನು ನಿಭಾಯಿಸಲು ಸ್ನಾಯುವನ್ನು ಬಿಗಿತಗೊಳಿಸುವ, ಸಡಿಲಗೊಳಿಸುವ ವ್ಯಾಯಾಮವನ್ನು ಕಲಿಸಿಕೊಡಲಾಗುತ್ತದೆ. ಮೊದಲ ಹಂತದಲ್ಲಿ ಆತಂಕವನ್ನು ಮೂಡಿಸುವ ಸಮಸ್ಯೆಯನ್ನು ತಂದುಕೊಂಡು ವ್ಯಾಯಾಮವನ್ನು ಮತ್ತೆ ಮಾಡುವುದರಿಂದ ಮುಂದೆ ಸಮಸ್ಯೆ ಎದುರಾದಾಗಲೆಲ್ಲಾ ಸ್ನಾಯುಗಳ ಮೂಲಕ ಆತಂಕ ಕಳೆದು ಹೋಗುವುದು.

ಇದಲ್ಲದೇ ಅನುಸರಿಸಬೇಕಾದ ಇತರ ಮೂಲತತ್ವಗಳೆಂದರೆ: ವೃತ್ತಿ ಚಿಕಿತ್ಸೆ (ಅಕ್ಯುಪೇಶನ್ ಥೆರಪಿ), ಮನೋರಂಜನೆ, ಆರಾಮವಾಗಿರುವುದು, ಆತಂಕ ನಿವೃತ್ತಿ.

– ಕೆ.ಎ.ಅ.ಪೈ.

Digitised by Bharatavani, CIIL

## ಮಾನವ ಬಂಡವಾಳ ಮತ್ತು ಮಾನವ ಸಂಪನ್ಮೂಲ ವಿಕಾಸ

ಸುಮಾರು ಮೂರು ದಶಕಗಳ ಹಿಂದೆ ಮಾನವ ಬಂಡವಾಳ ಎಂಬ ಪರಿಕಲ್ಪನೆಯನ್ನು ಪರಿಚಯಿಸಿದವರು ಶಿಕಾಗೋ ವಿಶ್ವವಿದ್ಯಾನಿಲಯದ ಟೆಡ್ ಷೂಲ್ಟ್ಸ್, ಜಾಕೊಬ್ ಮಿನ್ಸರ್, ಮಿಲ್ಟನ್ ಫ್ರೆಡ್ ಮ್ಯಾನ್, ಷೆರ್ವಿನ್ ರೋಸೆನ್ ಮುಂತಾದವರು. ಸಾಮಾನ್ಯವಾಗಿ ಎಲ್ಲರೂ ತಿಳಿಯುವುದು ಬಂಡವಾಳ ಎಂದರೆ ಬ್ಯಾಂಕ್‌ನಲ್ಲಿ ಇಟ್ಟಿರುವ ಠೇವಣಿ ಅಥವಾ ಕಂಪನಿಯ ಷೇರ್‌ಗಳು ಇತ್ಯಾದಿ. ಇವುಗಳೆಲ್ಲ ದೀರ್ಘಕಾಲ ಆದಾಯವನ್ನು ಉತ್ಪತ್ತಿ ಮಾಡುವುದರಿಂದ ಬಂಡವಾಳ ಎನಿಸಿಕೊಳ್ಳುತ್ತವೆ. ಆದರೆ ಮಾನವ ಬಂಡವಾಳ ಎನ್ನುವುದು ಬೇರೆ ವಿಧದ ಬಂಡವಾಳ. ಮಕ್ಕಳ ವಿದ್ಯಾಭ್ಯಾಸದಿಂದ ಶಾಲೆಗಾಗಿ ಮಾಡುವ ವೆಚ್ಚ, ಆರೋಗ್ಯ ರಕ್ಷಣೆಗೆ ಮಾಡುವ ಖರ್ಚು, ಸಮಯ ಪರಿಪಾಲನೆ, ಪ್ರಾಮಾಣಿಕತೆಗಳ ಬಗ್ಗೆ ಏರ್ಪಡಿಸುವ ಭಾಷಣದ ವೆಚ್ಚ, ಎಲ್ಲವನ್ನೂ ಮಾನವನ ಮೇಲೆ ಹೂಡುವ ಬಂಡವಾಳ ಎನ್ನಬಹುದು. ಏಕೆಂದರೆ ಅವುಗಳಿಂದ ಮಾನವರ ಕೆಲಸದ ದಕ್ಷತೆ ಹೆಚ್ಚುತ್ತದೆ, ಆರೋಗ್ಯ ಸುಧಾರಿಸುತ್ತದೆ. ಮಾನವನನ್ನು ಅವನ ಭೌತಿಕ ವಸ್ತುಗಳಿಂದ ಬೇರ್ಪಡಿಸುವಂತೆ ಅವನ ಗುಣ, ಕೌಶಲ, ಜ್ಞಾನ, ಆರೋಗ್ಯಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಇದರಿಂದಾಗಿ ಮಾನವ ಬಂಡವಾಳ ಮಾನವನಲ್ಲಿ ಆಂತರಿಕವಾಗಿ ಸೃಷ್ಟಿಯಾಗುತ್ತದೆ. ಅದು ಅವನ ಮೂಲಕ, ಅವನ ಸೇವೆ ಮತ್ತು ಕೌಶಲಗಳಿಂದ ಅನೇಕ ವರ್ಷಗಳ ಕಾಲ ಐಶ್ವರ್ಯದ ಉತ್ಪಾದನೆಗೆ ಕಾರಣವಾಗುತ್ತದೆ.

**ಶಿಕ್ಷಣ ಮತ್ತು ತರಬೇತಿ:** ಮಾನವ ಬಂಡವಾಳ ಹೂಡಿಕೆಯಲ್ಲಿ ಶಿಕ್ಷಣ ಮತ್ತು ತರಬೇತಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಗ್ಯಾರಿ ಎಸ್. ಬೆಕರ್‌ರವರು ಅಮೆರಿಕಾದಲ್ಲಿ ಜನರ ಸಂಪಾದನೆ ಹೆಚ್ಚಲು ಅಲ್ಲಿನ ಶಾಲೆ ಮತ್ತು ಕಾಲೇಜು ಶಿಕ್ಷಣದ ಅಭಿವೃದ್ಧಿ ಮುಖ್ಯ ಕಾರಣ ಎನ್ನುತ್ತಾರೆ. ಇದೇ ಪರಿಣಾಮವನ್ನು ಇನ್ನೂ ಸುಮಾರು ನೂರು ದೇಶಗಳಲ್ಲಿ ನಡೆಸಿದ ಸಮೀಕ್ಷೆಯಿಂದ ದೃಢಪಟ್ಟಿದೆ ಎಂದು ಬೆಕರ್ ಹೇಳುತ್ತಾರೆ. (Gary S. Becker, (1993) 'Human Capital' University of Chicago Press, Chicago).

ಆಲ್ಫರ್ಡ್ ಮಾರ್ಷಲ್‌ರವರ ಪ್ರಕಾರ ಎಲ್ಲಾ ಬಂಡವಾಳಗಳಿಗಿಂತ ಮಾನವನಲ್ಲಿ ತೊಡಗಿಸುವ ಬಂಡವಾಳ ಅತ್ಯಂತ ಮೌಲ್ಯವುಳ್ಳದ್ದು (Alfred Marshll (1930) 'Principles of Economics' 8th Edition, London).

ಟೆಡ್ ಷೂಲ್ಟ್ಸ್‌ರವರೂ ಕೂಡ ಮಾನವ ಬಂಡವಾಳ ಹೂಡಿಕೆಯೇ ದೇಶದ ಸಂಪಾದನೆಯ ಹೆಚ್ಚಳದಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಅಂಶವಾಗಿದೆ ಎನ್ನುತ್ತಾರೆ. (ಟಿ. ಡಬ್ಲ್ಯೂ. ಷೂಲ್ಟ್ಸ್: Investment in Human Capital', *AmericanEconomic Review:* vol. 51, pp 1-17).

ಹರ್ಬಿಸನ್ ಮತ್ತು ಮೈಯರ್ಸ್‌ರವರು ಸಮಾಜದಲ್ಲಿ ವ್ಯಕ್ತಿಗಳ ಜ್ಞಾನ, ಕೌಶಲ ಮತ್ತು ಅವರ ಕಾರ್ಯಸಾಧನೆಯ ಯೋಗ್ಯತೆಗಳನ್ನು ಹೆಚ್ಚಿಸಲು ಮಾಡುವ ಪ್ರತಿಯೊಂದು ಪ್ರಯತ್ನವೂ ಮಾನವರಲ್ಲಿ ಹೂಡುವ ಬಂಡವಾಳವೆಂದೂ, ಅದು ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದೂ ಹೇಳುತ್ತಾರೆ.

ಕುಟುಂಬಗಳಿಂದ ಮಾನವನ ಮೇಲೆ ಉಂಟಾಗುವ ಪರಿಣಾಮವನ್ನು ಕಡೆಗಣಿಸುವಂತಿಲ್ಲ. ಅದು ಮಾನವನ ಮೇಲೆ ಹೂಡುವ ಒಂದು ಮುಖ್ಯವಾದ ಬಂಡವಾಳ ಎನ್ನಲು ಏನೂ ಅಡ್ಡಿ ಇಲ್ಲ. ಏಕೆಂದರೆ ಮಕ್ಕಳನ್ನು ತಿದ್ದಿ, ಮಾರ್ಗದರ್ಶನ ಮಾಡಿ ಅವರಲ್ಲಿ ಉತ್ಸಾಹವನ್ನು ಮೂಡಿಸುವ ಕುಟುಂಬಗಳು ಅದರಿಂದ ಮುಂದೆ ಹೆಚ್ಚಿನ ಲಾಭವನ್ನು ಪಡೆಯುತ್ತವೆ. ಆ ಮಕ್ಕಳು ವಿದ್ಯಾವಂತರಾಗಿ ಹೊರ ಹೊಮ್ಮಿದಮೇಲೆ ತಮಗೆ ಹಾಗೂ ದೇಶಕ್ಕೆ ಅವರ ಸೇವೆಯಿಂದ ಅಪಾರವಾದ ಲಾಭ ಉಂಟಾಗುತ್ತದೆ. ಮಾನವ ಸಂಪನ್ಮೂಲವು ಮೊದಲು ಸಾಣೆ ಹಿಡಿಯದ ವಜ್ರದಂತೆ. ಶಿಕ್ಷಣ ಮತ್ತು ತರಬೇತಿಗಳೆಂಬ ಸಾಣೆ ಅದನ್ನು ವಜ್ರವನ್ನಾಗಿ ಪರಿವರ್ತಿಸಿ ಅದರ ಬೆಲೆಯನ್ನೂ, ಮತ್ತು ಅದರ ಲಕ್ಷಣವನ್ನೂ ಅಭಿವೃದ್ಧಿಗೊಳಿಸುತ್ತದೆ. ಉದಾಹರಣೆಗೆ, ದೇಶದಲ್ಲಿ ಪ್ರಾಕೃತಿಕ ಸಂಪತ್ತು ಹೇರಳವಾಗಿರಬಹುದು. ಆದರೆ ಈ ಸಂಪನ್ಮೂಲವನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳುವ ಶಕ್ತಿ ಮಾನವ ಸಂಪನ್ಮೂಲದ ಅಭಿವೃದ್ಧಿಯಿಂದ ಮಾತ್ರ ಸಾಧ್ಯ. ಮಾನವ ಸಂಪನ್ಮೂಲವು ಶಿಕ್ಷಣ ಮತ್ತು ತರಬೇತಿಗಳಿಂದ ಉತ್ತಮಗೊಂಡು ಹೆಚ್ಚಿನ ಉತ್ಪಾದಕ ಶಕ್ತಿಯನ್ನು ಗಳಿಸಿಕೊಳ್ಳುತ್ತದೆ. ಇದರಿಂದ ಪ್ರಕೃತಿ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಳ್ಳುವ ಶಕ್ತಿ ಬರುತ್ತದೆ.

### ಮಾನವ ಸಂಪನ್ಮೂಲದ ಅಭಿವೃದ್ಧಿ

ಈಗಿನ ಕಾಲದಲ್ಲಿ ಎಲ್ಲಾ ದೇಶಗಳೂ ಆರ್ಥಿಕಾಭಿವೃದ್ಧಿಯನ್ನು ಬಯಸುತ್ತದೆ. ಬಡ ರಾಷ್ಟ್ರಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಮ್ಮ ದೇಶಗಳಲ್ಲಿರುವ ಬಡತನ, ರೋಗ-ರುಜಿನ, ಅನಕ್ಷರತೆ, ಮೌಢ್ಯ, ಪರದೇಶಗಳ ದಬ್ಬಾಳಿಕೆ, ಮುಂತಾದವುಗಳ ವಿರುದ್ಧ ದೊಡ್ಡ ಸಮರವನ್ನೇ ನಡೆಸುತ್ತಿವೆ. ಅವುಗಳು ತಮ್ಮ ಭವಿಷ್ಯವನ್ನು ಬೇರೊಬ್ಬರ ಕೈಗೆ ಒಪ್ಪಿಸಲು ಇಷ್ಟಪಡುವುದಿಲ್ಲ. ಈಗಾಗಲೇ ಅಭಿವೃದ್ಧಿಯನ್ನು ಸಾಧಿಸಿರುವ ದೇಶಗಳು ಮತ್ತಷ್ಟು ಅಭಿವೃದ್ಧಿಯನ್ನು ಸಾಧಿಸಲು ಮತ್ತು ತಮ್ಮ ಅಭಿವೃದ್ಧಿಯ ವೇಗವನ್ನು ಮತ್ತಷ್ಟು ಹೆಚ್ಚಿಸಲು ಪ್ರಯತ್ನಿಸುತ್ತವೆ. ಇಂತಹ ರಾಷ್ಟ್ರಗಳು ಭೂಮಿಯ ಮೇಲಲ್ಲದೆ ಇತರ ಗ್ರಹಗಳತ್ತಲೂ ತಮ್ಮ ಕಾರ್ಯ ವ್ಯಾಪ್ತಿಯನ್ನು ಹೆಚ್ಚಿಸಲು ಪ್ರಯತ್ನಿಸುತ್ತವೆ. ಒಟ್ಟಿನಲ್ಲಿ ದೇಶದ ಆರ್ಥಿಕ ವ್ಯವಸ್ಥೆ ಯಾವುದೇ ಮಟ್ಟದಲ್ಲಿರಲಿ ಅದರ ಅಭಿವೃದ್ಧಿಯು ಮಾನವ ಸಂಪನ್ಮೂಲದ ಅಭಿವೃದ್ಧಿಯ ಮೂಲಕ ಮಾತ್ರ ಸಾಧ್ಯ. ಮಾನವ ಸಂಪನ್ಮೂಲ ಅಭಿವೃದ್ಧಿ ಎಂದರೆ ಸಮಾಜದಲ್ಲಿ ವಾಸಮಾಡುತ್ತಿರುವ ಜನರ ಜ್ಞಾನ, ಕೌಶಲ, ಕಾರ್ಯಸಾಮರ್ಥ್ಯ, ಮುಂತಾದವುಗಳನ್ನು ಮತ್ತಷ್ಟು ಹೆಚ್ಚಿಸುವುದು. ರಾಜಕೀಯ ದೃಷ್ಟಿಯಿಂದ ನೋಡಿದರೆ ಮಾನವ ಸಂಪನ್ಮೂಲ ಅಭಿವೃದ್ಧಿಯು ಜನರನ್ನು ದೇಶದ ರಾಜಕೀಯದ ಬಗ್ಗೆ ತಿಳುವಳಿಕೆಯುಳ್ಳವರನ್ನಾಗಿ ಮಾಡಿ ಮತದಾನದಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುವಂತೆ ಮಾಡುವುದು. ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಮಾನವ ಸಂಪನ್ಮೂಲದ ಅಭಿವೃದ್ಧಿಯು ಜನರನ್ನು ಉತ್ತಮವಾದ ರೀತಿಯಲ್ಲಿ ಜೀವನ ನಡೆಸುವಂತೆ ಮಾಡುವುದಲ್ಲದೆ ಹಳೆಯ ಕಂದಾಚಾರಗಳಿಗೆ ಗಂಟುಬೀಳುವುದನ್ನು ತಪ್ಪಿಸಿ ಆಧುನಿಕ ಜೀವನವನ್ನು ನಡೆಸುವುದಕ್ಕೆ ಸಹಾಯ ಮಾಡುತ್ತದೆ. ಒಟ್ಟಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯು ಆಧುನಿಕತೆಯ ಕೀಲಿಕೈ ಎನ್ನಬಹುದು.

### ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ರಾಷ್ಟ್ರೀಯ ಅಭಿವೃದ್ಧಿ

ಮಾನವ ಸಂಪನ್ಮೂಲ ಅಭಿವೃದ್ಧಿಗೂ ರಾಷ್ಟ್ರೀಯ ಅಭಿವೃದ್ಧಿಗೂ ಉತ್ತಮ ಸಂಬಂಧವಿದೆ. ರಾಷ್ಟ್ರೀಯ ಅಭಿವೃದ್ಧಿ ಎಂದರೆ ಜನರ ತಲಾ ಆದಾಯವನ್ನು ಹೆಚ್ಚಿಸುವುದರ ಮೂಲಕ ಅವರ ಜೀವನ ಮಟ್ಟ ಮತ್ತು ಯೋಗಕ್ಷೇಮವನ್ನು ಉತ್ತಮಪಡಿಸುವುದು. ಈ ಗುರಿಯನ್ನು ಸಾಧಿಸುವುದಕ್ಕೆ ದೇಶದಲ್ಲಿ ವ್ಯವಸಾಯದ ಪ್ರಗತಿಗಿಂತ ಕೈಗಾರಿಕಾ ಪ್ರಗತಿಯು ಅಗತ್ಯವಾದುದು. ಇದಕ್ಕೆ ಮಾನವ ಪ್ರಯತ್ನ ಅತ್ಯಗತ್ಯ. ಅದು ಮಾನವ ಸಂಪನ್ಮೂಲದ ಅಭಿವೃದ್ಧಿಯಿಂದ ಸಾಧ್ಯ. ಆದ್ದರಿಂದಲೇ ಮಾನವ


Digitised by Bharatavani, CIIL

ಸಂಪನ್ಮೂಲ ಅಭಿವೃದ್ಧಿಯು ಎಲ್ಲಾ ದೇಶಗಳಲ್ಲೂ ನಿರಂತರವಾಗಿ ನಡೆಯುವ ಕಾಯಕವಾಗಿರುತ್ತದೆ.

ಒಂದು ದೇಶದಲ್ಲಿನ ರಾಷ್ಟ್ರೀಯ ನಿವ್ವಳ ಆದಾಯ ಮತ್ತು ತಲಾ ಆದಾಯಗಳ ಹೆಚ್ಚಳ, ಶಾಲೆ ಮತ್ತು ಕಾಲೇಜುಗಳಿಗೆ ದಾಖಲಾಗುವವರ ಸಂಖ್ಯೆಯಲ್ಲಿ ಹೆಚ್ಚಳ, ಅಲ್ಲಿಗೆ ಬೇಕಾದ ಬೋಧಕರ ಸಂಖ್ಯೆಯಲ್ಲಿನ ಹೆಚ್ಚಳ, ವಿಜ್ಞಾನಿಗಳ ಮತ್ತು ವೈದ್ಯರುಗಳ ಹೆಚ್ಚಳ, ಮುಂತಾದವುಗಳು ರಾಷ್ಟ್ರೀಯ ಅಭಿವೃದ್ಧಿಯ ಸೂಚಕಗಳು. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಶಿಕ್ಷಣದ ಮೇಲೆ ವಿನಿಯೋಗಿಸುವ ಬಂಡವಾಳವು ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅಲ್ಲಿ ಸಿದ್ಧವಾಗುವ ಮಾನವ ಸಂಪನ್ಮೂಲವನ್ನು ಸದುಪಯೋಗ ಮಾಡಿಕೊಂಡು, ದೇಶದ ಪ್ರಗತಿಯನ್ನು ಸಾಧಿಸಲು ಸೂಕ್ತ ಕ್ಷೇತ್ರಗಳು ಸಿದ್ಧವಾಗಿರಬೇಕು. ಇದಕ್ಕಾಗಿ ಉತ್ತಮವಾದ ಯೋಜನೆಯನ್ನು ರೂಪಿಸಬೇಕಾಗುತ್ತದೆ. ಇಂತಹ ಯೋಜನೆಗಳು ಮಾನವ ಶಕ್ತಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಸಹಾಯ ಮಾಡುತ್ತವೆ.

ಸಾಮಾನ್ಯವಾಗಿ ದೇಶದ ನಿಧಾನ ಗತಿಯ ಅಭಿವೃದ್ಧಿಗೆ ಬಹು ಮುಖ್ಯವಾದ ಕಾರಣ ಎಂದರೆ ಮಾನವ ಸಂಪನ್ಮೂಲದ ಸರಿಯಾದ ಉಪಯೋಗದ ಕೊರತೆ. ಇದಕ್ಕೆ ಕಾರಣ ಕೆಲಸ ಮಾಡಲು ಸಿದ್ಧರಿರುವವರ ಪ್ರಮಾಣಕ್ಕಿಂತ ಕೆಲಸ ದೊರಕುವ ಸಾಧ್ಯತೆಯ ಪ್ರಮಾಣ ಕಡಿಮೆ ಇರುವುದೇ ಆಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳು ಸ್ವಾವಲಂಬನೆಯಿಂದ ಮುಂದೆ ಸಾಗಿ ಅಭಿವೃದ್ಧಿಯನ್ನು ಹೊಂದಬೇಕಾದರೆ ತಾಂತ್ರಿಕ ಅಭಿವೃದ್ಧಿಯ ಹೊಸ ಆವಿಷ್ಕಾರಕ್ಕೆ ಮತ್ತು ಹೊಸ ರೀತಿಯ ಸಾಮಾಜಿಕ ವ್ಯವಸ್ಥೆಗೆ ಅಗತ್ಯವಾದ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಅವುಗಳು ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ನಿಜವಾಗಿಯೂ ಇರುವ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾಗುತ್ತದೆ. ಕೇವಲ ಕೈಗಾರಿಕೀಕರಣದಿಂದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ಸಾಂಪ್ರದಾಯಿಕ ವ್ಯವಸಾಯದ ಕ್ರಮವನ್ನು ಬದಲಾಯಿಸಿ ಅದನ್ನೂ ಒಂದು ಕೈಗಾರಿಕೆಯ ರೀತಿಯಲ್ಲಿ ಬೆಳೆಸಬೇಕಾಗುತ್ತದೆ. ಕೇವಲ ಕೈಗಾರಿಕೀಕರಣದಿಂದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ಸಾಂಪ್ರದಾಯಿಕ ವ್ಯವಸಾಯದ ಕ್ರಮವನ್ನು ಬದಲಾಯಿಸಿ ಅದನ್ನೂ ಒಂದು ಕೈಗಾರಿಕೆಯ ರೀತಿಯಲ್ಲಿ ಬೆಳೆಸಬೇಕಾಗುತ್ತದೆ. ಹೀಗೆ ಮಾಡುವುದರಿಂದ ಉತ್ಪಾದನೆಯು ನಿರಂತರವಾಗಿ ಮುನ್ನಡೆದು ಮಾನವ ಸಂಪನ್ಮೂಲದ ಸಂಪೂರ್ಣ ಉಪಯೋಗವನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕೈಗಾರಿಕೆ, ವ್ಯವಸಾಯ, ಮುಂತಾದವುಗಳಿಗೆ ಪೂರಕವಾದ ಬ್ಯಾಂಕುಗಳ ಸೇವೆ, ಸಂಪರ್ಕ ಸಾಧನಗಳ ಸೇವೆ ಮುಂತಾದವುಗಳಲ್ಲಿ ಮಾನವ ಶಕ್ತಿಯ ವಿನಿಯೋಗವಾಗುತ್ತಿರುತ್ತದೆ. ಆರ್ಥಿಕ ವ್ಯವಸ್ಥೆಯಲ್ಲಿ ಮಾನವ ಸಂಪನ್ಮೂಲದ ಸಂಪೂರ್ಣ ಬಳಕೆಯಾಗಬೇಕಾದರೆ ಎಲ್ಲಾ ಕ್ಷೇತ್ರಗಳಲ್ಲೂ ಉತ್ಪಾದನೆ ಸತತವಾಗಿ ನಡೆಯುತ್ತಾ ಮುಂದೆಸಾಗಬೇಕು. ಇದರಿಂದ ಜನರ ಸಂಪಾದನೆ ಹೆಚ್ಚುತ್ತಾ ಹೋಗಲು ಸಾಧ್ಯ. ಉಳಿತಾಯದ ಪ್ರಮಾಣವೂ ಹೆಚ್ಚುತ್ತಾ ಹೋದಂತೆ ಬಂಡವಾಳ ಸಂಗ್ರಹ ಮತ್ತು ಹೂಡಿಕೆಗಳ ಪ್ರಮಾಣವೂ ಹೆಚ್ಚುತ್ತದೆ. ಇದರಿಂದ ಉತ್ಪಾದನೆ ಮತ್ತಷ್ಟು ಹೆಚ್ಚುವುದಲ್ಲದೆ, ಮಾರುಕಟ್ಟೆಯೂ ವಿಸ್ತರಿಸಿ, ವಿದೇಶೀ ವ್ಯಾಪಾರವೂ ಅಭಿವೃದ್ಧಿಗೊಳ್ಳುತ್ತದೆ.

ಹೀಗೆ ಮಾನವ ಸಂಪನ್ಮೂಲವನ್ನು ಒಂದು ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಹೋಲಿಸಬಹುದು. ಉತ್ಪಾದನೆಯನ್ನು ಮಾಡಿದ ವಿದ್ಯುತ್ತನ್ನು ಅನೇಕ ದಿಕ್ಕುಗಳಲ್ಲಿ ಸರಬರಾಜುಮಾಡಿ, ಅದನ್ನು ವಿವಿಧ ಉಪಯೋಗಗಳಿಗೆ ಬಳಸಿಕೊಳ್ಳಲು ಅನುವು ಮಾಡಿಕೊಡುವಂತೆ ದೇಶದಲ್ಲಿನ ಮಾನವ ಶಕ್ತಿಯ ಅಭಿವೃದ್ಧಿಯೂ ವಿವಿಧ ಪ್ರದೇಶಗಳಲ್ಲಿ, ವಿವಿಧ ರೀತಿಯ ಕೆಲಸಗಳಿಗೆ ಉಪಯೋಗವಾಗುತ್ತದೆ.

ಮಾನವ ಸಂಪನ್ಮೂಲವು ಮಾನವರು ಗಳಿಸುವ ಜ್ಞಾನ ಮತ್ತು ಕೌಶಲಗಳಿಂದ ಉಂಟಾಗುತ್ತದೆ. ಅದು ಮಾನವ ಬಂಡವಾಳ. ಷೂಲ್ಸ್ ರವರು ಪಾಶ್ಚಾತ್ಯ ದೇಶಗಳಲ್ಲಿ ಮಾನವ ಬಂಡವಾಳವು ಇತರ ಬಂಡವಾಳಗಳಿಗಿಂತ (ಭೌತಿಕ ಬಂಡವಾಳ) ವೇಗವಾಗಿ ಬೆಳೆಯುತ್ತಿದೆ ಎಂದು ಅಭಿಪ್ರಾಯಪಡುತ್ತಾರೆ. ರಾಷ್ಟ್ರೀಯ ಉತ್ಪನ್ನದ ಹೆಚ್ಚಳವು ಅಲ್ಲಿನ ವ್ಯವಸಾಯದ ಭೂಮಿಯ ಹೆಚ್ಚಳದಿಂದ, ಹೆಚ್ಚಿನ ಮಾನವ ಗಂಟೆಗಳಿಂದ ಮತ್ತು ಮರು ಉತ್ಪಾದನಾ ಭೌತಿಕ ಬಂಡವಾಳಗಳಿಂದ ಸಾಧ್ಯವಾಗಿದೆ. ಯಾವುದನ್ನು ನಾವು ಉಪಭೋಗ ಎನ್ನುತ್ತೇವೋ ಅದು ಮಾನವ ಬಂಡವಾಳ ಸೃಷ್ಟಿಯಲ್ಲಿ ಬಂಡವಾಳ ಹೂಡಿಕೆಯಾಗುತ್ತದೆ. ಶಿಕ್ಷಣಕ್ಕಾಗಿ ಮಾಡುವ ನೇರವಾದ ವೆಚ್ಚ, ಆರೋಗ್ಯ ರಕ್ಷಣೆಗಾಗಿ ಮಾಡುವ ವೆಚ್ಚ, ದೇಶದ ಒಳಗೆ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸಕ್ಕಾಗಿ ಹೋಗುವ ವೆಚ್ಚ, ಮುಂತಾದವುಗಳು ಹೊರನೋಟಕ್ಕೆ ಉಪಭೋಗವೆಂದು ಕಂಡರೂ ಅದು ಮಾನವ ಬಂಡವಾಳ ಹೂಡಿಕೆಯಾಗಿರುತ್ತದೆ. ಮಾನವರನ್ನು ಐಶ್ವರ್ಯದಂತೆ ಕಾಣಬಾರದು ಎಂದು ಜೆ.ಎಸ್. ಮಿಲ್ ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಐಶ್ವರ್ಯವು ಮಾನವನಿಗೋಸ್ಕರ ಇದೆಯೇ ವಿನಃ, ಮಾನವನು ಐಶ್ವರ್ಯಕ್ಕಾಗಿ ಅಲ್ಲ ಎಂಬ ಕಾರಣದಿಂದ. ಆದರೆ ಐಶ್ವರ್ಯವು ಉತ್ಪಾದನೆಗಾಗಿ ಬಳಸಲ್ಪಟ್ಟಾಗ ಅದು ಬಂಡವಾಳವಾಗುತ್ತದೆ. ಈ ರೀತಿ ಮಾನವ ಎನ್ನುವ ಐಶ್ವರ್ಯ ಉತ್ಪಾದಕ ಶಕ್ತಿಯನ್ನು ಹೊಂದಿದಾಗ ಅದು ಮಾನವ ಬಂಡವಾಳವಾಗುತ್ತದೆ.

ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೂ ಮಾನವ ಬಂಡವಾಳಕ್ಕೂ ಇರುವ ಸಂಬಂಧವನ್ನು ದೃಢಪಡಿಸುತ್ತಾ ಷೂಲ್ಸ್‌ರವರು ಹಲವು ಉದಾಹರಣೆಗಳನ್ನು ಕೊಡುತ್ತಾರೆ. ಅಮೆರಿಕಾದಲ್ಲಿ ಹೆಚ್ಚುಕಡಿಮೆ ಒಂದೇ ಬಗೆಯ ವೃತ್ತಿಯಲ್ಲಿ ನಿರತರಾಗಿರುವ ಕರಿಯರು ಮತ್ತು ಬಿಳಿಯರ ನಡುವೆ ಸಂಪಾದನೆಯಲ್ಲಿರುವ ವ್ಯತ್ಯಾಸಗಳು ಅವರ ಶೈಕ್ಷಣಿಕ ಮಟ್ಟದಲ್ಲಿ ಮತ್ತು ಅವರ ಆರೋಗ್ಯ ರಕ್ಷಣೆಯಲ್ಲಿನ ವ್ಯತ್ಯಾಸಗಳಿಂದ ಉಂಟಾಗಿದೆ ಎಂದು ತೋರಿಸುತ್ತಾರೆ. ವಲಸೆ ಬಂದ ರೈತ ಸಮುದಾಯದಲ್ಲಿ ಶಿಕ್ಷಣವಿಲ್ಲ, ಆರೋಗ್ಯವಿಲ್ಲ, ಕೌಶಲವಿಲ್ಲ. ಆದ್ದರಿಂದ ಅವರಲ್ಲಿ ಉಪಯುಕ್ತವಾದ ಕೆಲಸ ಮಾಡುವ ಯಾವುದೇ ರೀತಿಯ ಶಕ್ತಿ ಇಲ್ಲ ಎಂದು ಹೇಳಿ ಅವುಗಳ ಪರಿಶೀಲನೆಯಿಂದ ತಿಳಿದಿರುವುದೇನೆಂದರೆ, ಮಾನವ ಬಂಡವಾಳ ಹೂಡಿಕೆಯು ಅತ್ಯಂತ ಪ್ರಮುಖವಾದುದು ಎಂಬುದನ್ನು ಅವರು ಖಚಿತಪಡಿಸುತ್ತಾರೆ. ಷೂಲ್ಸ್‌ರವರು ದೇಶದ ಆರ್ಥಿಕ ವ್ಯವಸ್ಥೆಯ ಮುಖ್ಯ ಲಕ್ಷಣ ಮಾನವ ಬಂಡವಾಳದ ಬೆಳವಣಿಗೆ ಎನ್ನುತ್ತಾರೆ. ಅದಿಲ್ಲದಿದ್ದರೆ ಕೇವಲ ಕಷ್ಟಕರವಾದ ಕೆಲಸ ಮತ್ತು ಬಡತನಗಳು ಉಳಿದುಕೊಳ್ಳುತ್ತವೆ, ಮತ್ತು ಜನರ ಬಡತನವನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಕೆಲವರು ಮಾತ್ರ ಶ್ರೀಮಂತರಾಗುತ್ತಾರೆ ಎನ್ನುವ ಕಠೋರ ಸತ್ಯವನ್ನು ಪ್ರತಿಪಾದಿಸುತ್ತಾರೆ.

ಮ್ಯಾಕ್ಲೆಲ್ಯಾಂಡ್ ಎಂಬುವರು 20ನೇ ಶತಮಾನದ ಪ್ರಾರಂಭದಲ್ಲಿ ಅನೇಕ ದೇಶಗಳಲ್ಲಿನ ಆರ್ಥಿಕಾಭಿವೃದ್ಧಿಗೆ ನೆರವಾಗುವ ಅಂಶಗಳನ್ನು ಪರೀಕ್ಷಿಸಿದರು. ಅವರು ಅಲ್ಲಿನ ಜನರ ಸಾಧನೆಗೆ ಪ್ರೇರಣೆಗಳು ಯಾವುವು ಎಂಬುದನ್ನು ಮುಖ್ಯವಾಗಿ ಪರೀಕ್ಷಿಸಿದರು. ಆ ರೀತಿಯ ಪ್ರೇರಣೆಗಳು ಅವರಲ್ಲಿದ್ದ ಏನಾದರೂ ವಿಶೇಷವಾದುದನ್ನು ಸಾಧಿಸಬೇಕು ಎಂಬ ಆಕಾಂಕ್ಷೆ ಮತ್ತು ಹಿಂದೆ ಯಾವಾಗಲೂ ಸಾಧಿಸಿರದ ಮತ್ತು ಹೊಸದಾದುದನ್ನು ಸಾಧಿಸಬೇಕು ಎಂಬ ಆಕಾಂಕ್ಷೆ ಎಂದು ಅವರು ಗುರುತಿಸಿದರು. ಅವರಿಗೆ ಇದಕ್ಕೆ ಕಾರಣವಾಗಿ ದೊರೆತದ್ದು ಅಲ್ಲಿನ ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿ ಕಥೆಗಳ ಮೂಲಕ ಕಲಿಸಿದ ಪಾಠಗಳು ಮತ್ತು ಅಲ್ಲಿ ಪ್ರಚಲಿತವಾಗಿದ್ದ ಹಲವು ಸಾಹಿತ್ಯ ಎಂಬುದು ತಿಳಿಯಿತು. ಅವುಗಳಿಂದ ಮಕ್ಕಳು ಸಾಮಾಜೀಕರಣಗೊಂಡು, ಉದ್ಯಮ

Digitised by Bharatavani, CIIL

ಸಾಹಸಿಗಳಾಗಲು ಹಾಗೂ ಆ ಮೂಲಕ ದೇಶದ ಆರ್ಥಿಕಾಭಿವೃದ್ಧಿಗೆ ನೆರವಾಗಲು ಅಗತ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಂತಹವರಾದರು. ಹೀಗೆ ಜನರಿಗೆ ಪರಿಸರದಲ್ಲಿ ದೊರಕುವ ಸವಾಲುಗಳು, ಕುಟುಂಬದಲ್ಲಿ ಮಕ್ಕಳನ್ನು ಸಾಕುವ ರೀತಿ, ಮಕ್ಕಳೊಂದಿಗೆ ಪೋಷಕರು ನಡೆಸುವ ಸಂವಾದದ ರೀತಿನೀತಿಗಳು, ಸಾಮಾಜಿಕ ಪರಿಸರ, ಸಾಮಾಜಿಕ ಮೌಲ್ಯಗಳು, ಎಲ್ಲವೂ ದೇಶದ ಆರ್ಥಿಕಾಭಿವೃದ್ಧಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಇವುಗಳನ್ನೆಲ್ಲ ಅಭ್ಯಾಸ ಮಾಡಿದ ಮ್ಯಾಕ್ಲೆಲ್ಯಾಂಡ್, ಯಾವ ದೇಶವು ಆರ್ಥಿಕಾಭಿವೃದ್ಧಿಯಲ್ಲಿ ತೊಡಗಿರುತ್ತದೋ ಅಲ್ಲಿನ ಮಕ್ಕಳಿಗೆ ಸೂಕ್ತವಾದ ನೀತಿ ನಿಯಮಗಳ ಬೋಧನೆಗೆ ಅವಕಾಶವಿರಬೇಕೆಂದೂ ಅವುಗಳಿಂದ ಮುಂದೆ ಅವರಿಗೆ ಸಾಧನೆಯನ್ನು ಮಾಡಬೇಕೆಂಬ ಆಕಾಂಕ್ಷೆ ಉಂಟಾಗುತ್ತದೆ ಎಂದೂ ಒತ್ತಿ ಹೇಳುತ್ತಾರೆ.

ಈ ನಿಟ್ಟಿನಲ್ಲಿ ಅತ್ಯಂತ ನವೀನವಾದುದು ಬಡತನ ನಿರ್ಮೂಲನಾ ಯೋಜನೆಗಳು. 1990 ರ ಪ್ರಪಂಚ ಅಭಿವೃದ್ಧಿ ವರದಿಯ ಪ್ರಕಾರ, ಬಡತನ ನಿರ್ಮೂಲನಾ ಯೋಜನೆಯು ಮಾನವ ಬಂಡವಾಳ ಹೂಡಿಕೆಯ ಒಂದು ಮುಖ್ಯವಾದ ಮಾರ್ಗ. ಇದರಿಂದ ಬಡವರಿಗೆ ದೊರಕುವ ಸಹಾಯದಿಂದ ಮುಂದೆ ಅವರಿಗೆ ಅವರೇ ಸಹಾಯ ಮಾಡಿಕೊಳ್ಳುವ ಶಕ್ತಿ ಬರುತ್ತದೆ. ತಮ್ಮ ಕುಟುಂಬವನ್ನು ಮಿತಿಗೊಳಿಸಿಕೊಳ್ಳುವುದು, ಮಕ್ಕಳಿಗೆ ಶಿಕ್ಷಣ ಕೊಡಿಸುವುದು, ಹಸಿವಿನಿಂದ ಮುಕ್ತರಾಗುವುದು ಮುಂತಾದವುಗಳು ಬಡತನ ನಿರ್ಮೂಲನಾ ಯೋಜನೆಗಳಿಂದ ಅವರು ಕಲಿಯುತ್ತಾರೆ. ಹೀಗೆ ದೇಶದ ಮಾನವ ಬಂಡವಾಳವು ಹೆಚ್ಚಾಗಿ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗುತ್ತದೆ.

– ಎಚ್.ಎಸ್.ಆರ್.

## ಮಾನವ ಸಂಬಂಧಗಳು

ಸಮಾಜಶಾಸ್ತ್ರ ಮನೋವಿಜ್ಞಾನಗಳಲ್ಲಿ ಮಾನವ ಸಂಬಂಧಗಳು – ಅವುಗಳ ಅಧ್ಯಯನ ತುಂಬಾ ಪ್ರಮುಖ ಪಾತ್ರ ವಹಿಸುತ್ತವೆ. ಶಿಕ್ಷಣದಲ್ಲೂ ಇದರ ಪಾತ್ರ ಬಹಳ ಮುಖ್ಯ.

ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಜೊತೆಗೆ ಸ್ನೇಹ ಅಥವಾ ಇನ್ನಾವುದೇ ಸಂಬಂಧ ಹೊಂದಲು ಮತ್ತು ಅದು ಮುರಿಯಲು ಕಾರಣಾಂಶಗಳನ್ನು ಇದು ಅಧ್ಯಯನ ಮಾಡುತ್ತದೆ. ಹೀಗೆ ಅಂತರ್ವ್ಯಕ್ತಿ ಸಂಬಂಧಗಳ ಬಗ್ಗೆ ಹಲವಾರು ವಾದಗಳಿವೆ (Theories). ಮನಶ್ಶಾಸ್ತ್ರದಲ್ಲಿ ಇದೊಂದು ಬಹು ಆಸಕ್ತಿಯುತ ಅಧ್ಯಾಯ.

ನಾವು ಇಷ್ಟಪಡುವವರೊಂದಿಗೆ ಅಥವಾ ಪ್ರೀತಿಸುವವರೊಂದಿಗೆ, ನಾವು ಸಂಬಂಧಗಳನ್ನು ಬೆಳೆಸುತ್ತೇವೆ. ಯಾರನ್ನು ನಾವು ಅತಿ ಹೆಚ್ಚು ಇಷ್ಟ ಪಡುತ್ತೇವೆ ಮತ್ತು ಪ್ರೀತಿಸುತ್ತೇವೆ? ಸ್ಪೆನ್‌ಬರ್ಗ್ ಮತ್ತು ಗ್ರಾಜೆಕ್ (1984) ರ ಅಧ್ಯಯನದಂತೆ, ಪುರುಷರು ಸಾಮಾನ್ಯವಾಗಿ ತಮ್ಮ ಪ್ರೀತಿಯ ಹುಡುಗಿಯನ್ನು ತನ್ನ ತಾಯಿ, ತಂದೆ, ಓರಗೆಯ ಸೋದರ, ಸೋದರಿಯರಿಗಿಂತ ಹೆಚ್ಚಾಗಿ ಪ್ರೀತಿಸುತ್ತಾರೆ. ಆದರೆ ಸ್ತ್ರೀಯರು ತಮ್ಮ ಪ್ರೇಮಿಯನ್ನು ಮತ್ತು ಗೆಳತಿಯನ್ನು ಸಮಾನವಾಗಿ ಪ್ರೀತಿಸುತ್ತಾರೆ ಮತ್ತು ಗೆಳತಿಯನ್ನು ಹೆಚ್ಚಾಗಿ ಇಷ್ಟ ಪಡುತ್ತಾರೆ. ಆದರೆ ಸಾಮಾಜಿಕ, ಸಾಂಸ್ಕೃತಿಕ ವೈವಿಧ್ಯತೆಗಳಿಂದಾಗಿ ಇದನ್ನು ಸಾಮಾನ್ಯೀಕರಿಸಲಾಗುವುದಿಲ್ಲ.

ಅಂತರ್ವ್ಯಕ್ತಿ ಸಂಬಂಧಗಳ ವಾದಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಲಾಗುವುದಿಲ್ಲ. ಅಲ್ಲದೆ ಇವುಗಳಲ್ಲಿ ಅತಿ ಹೆಚ್ಚಿನ ವೈವಿಧ್ಯತೆಯನ್ನು ನಾವು ಕಾಣಬಹುದು. ಉದಾಹರಣೆಗೆ, ಪ್ರೇಮ ಸಂಬಂಧಗಳು, ಸಲಿಂಗ ಸ್ನೇಹಗಳು, ಭಿನ್ನಲಿಂಗ ಸಂಬಂಧಗಳು, ಕೆಲಸದ ಕ್ಷೇತ್ರದಲ್ಲಿನ ಸಂಬಂಧಗಳು – ವಿಭಿನ್ನ ರೀತಿಯ ಸಂಬಂಧಗಳು. ಇದು ಮಾತ್ರವಲ್ಲ; ಅಂತರ್ವ್ಯಕ್ತಿ ಸಂಬಂಧಗಳು ಕಾಲದಲ್ಲಿ ಬದಲಾಗುತ್ತವೆ. ಇವುಗಳನ್ನು ಅರ್ಥೈಸಲು ನಾವು ಅವುಗಳ ಪ್ರಕ್ರಿಯೆಗಳಿಗೆ ಒತ್ತು ಕೊಡಬೇಕಾಗುತ್ತದೆ. ಈ ಪ್ರಕ್ರಿಯೆಗಳು ದೀರ್ಘಕಾಲದಲ್ಲಿ ಆಗುತ್ತವೆ ಮತ್ತು ಪ್ರಾಯೋಗಿಕವಾಗಿ ಅವಲೋಕನ ಮಾಡುವುದು ತುಂಬಾ ಕಠಿಣ.

### ಅಂತರ್ವ್ಯಕ್ತಿ ಸಂಬಂಧಗಳ ವಾದಗಳು

**ಜೈವಿಕ ವಾದಗಳು:** ಸಾಮಾಜಿಕ ಸಂಬಂಧಗಳನ್ನು ಗುರುತಿಸುವ ಒಂದು ಬಗೆ ಎಂದರೆ ಜೈವಿಕ ವಿಧಾನದ ಮೂಲಕ. ತಮ್ಮ 'ಜೀನ್ಸ್'ಗಳ ರಕ್ಷಣೆಯನ್ನು ಪುನರುತ್ಪತ್ತಿಯ ಮೂಲಕ ಮಾಡುವುದೇ ಪ್ರತಿಯೊಬ್ಬರ ಪ್ರೇರಕವಾಗಿದೆ. ಹೀಗಾಗಿಯೇ ಆರೋಗ್ಯವಂಥ ಸಂಗಾತಿ ಪ್ರತಿಯೊಬ್ಬರಿಗೂ ಈ ಕಾರಣಕ್ಕಾಗಿ ಇಷ್ಟ. ಇದರಿಂದ ಆರೋಗ್ಯವಂಥ ಮಕ್ಕಳು ಹುಟ್ಟಲು ಸಾಧ್ಯ. ಹೀಗಾಗಿಯೇ ತಮ್ಮ ಮಕ್ಕಳಿಗೆ ತಂದೆ–ತಾಯಿಗಳಿಗೆ ಸೋದರ–ಸೋದರಿಯರಿಗೆ ದಾನ ಮಾಡಲು ಜನ ಒಪ್ಪುತ್ತಾರೆ. ಈ ವಾದಗಳು ಕುಟುಂಬಗಳಲ್ಲಿನ ವಿಶಿಷ್ಟ ಸಂಬಂಧಗಳನ್ನು ಗುರುತಿಸುತ್ತವೆ. ಪಾಲಕರು ತಮ್ಮ ಮಕ್ಕಳಿಗೋಸ್ಕರ ಕಾಲ ಮತ್ತು ಸಂಪನ್ಮೂಲಗಳನ್ನು ಹೆಚ್ಚಾಗಿ ವ್ಯಯಿಸುತ್ತಾರೆ. ಆದರೆ ಈ ವಾದಗಳು ಹೆಚ್ಚಾಗಿ ಲೈಂಗಿಕ ಸಂಬಂಧಗಳಿಗೆ ಒತ್ತು ಕೊಟ್ಟು ಗೆಳೆತನಗಳು ಕಡೆಗಣಿಸಲ್ಪಡುತ್ತವೆ.

**ಪುನರ್ಬಲನ ಮತ್ತು ಅಗತ್ಯ ಪೂರೈಕೆ (ತೃಪ್ತಿ) ವಾದ:** ನಾವು ಇತರರಿಂದ ಪಡೆಯುವ ಬಹುಮಾನ/ಪುರಸ್ಕಾರ/ ಪ್ರತಿಫಲಗಳೇ ನಾವು ಮಾಡಿಕೊಳ್ಳುವ ಗೆಳೆತನಗಳು ಮತ್ತು ಸಂಬಂಧಗಳಿಗೆ ಕಾರಣ ಎನ್ನುತ್ತದೆ ಈ ವಾದ. ಇದು ಅವರಿಂದ ಪಡೆಯುವ ಒಪ್ಪಿಗೆ, ಹಸನ್ಮುಖತೆ, ಲೈಂಗಿಕತೆ, ಅಂತಸ್ತು, ಪ್ರೀತಿ, ಸಹಾಯ, ಹಣ, ನಮ್ಮ ಅಭಿಪ್ರಾಯಗಳೊಡನೆ ಅಂಗೀಕಾರ – ಯಾವುದಾದರೂ ಇರಬಹುದು. ಇದರಿಂದ ನಮ್ಮ ಸಾಮಾಜಿಕ ಅಗತ್ಯಗಳ ಪೂರೈಕೆ ಆಗಬಹುದು. ಸ್ನೇಹಶೀಲ, ಸಹಕಾರಿ ಹಸನ್ಮುಖದ ವ್ಯಕ್ತಿಗಳು ಇತರರಿಗೆ ಹೆಚ್ಚು ಇಷ್ಟವಾಗುವರು.

ಆದರೆ ವ್ಯಕ್ತಿಗಳ ನಡುವಣ ಆಕರ್ಷಣೆಗೆ ಈ ವಾದ ಅಷ್ಟಾಗಿ ಪುಷ್ಟಿಯನ್ನೀಯದು. ಆರಂಭದ ಆಕರ್ಷಣೆಯ ಹಂತಕ್ಕೆ ಮಾತ್ರ ಇದು ಸಮಂಜಸವಾಗಬಹುದು. ಪಾಲಕರ ಮತ್ತು ಮಕ್ಕಳ ಸಂಬಂಧಕ್ಕೆ ಇದು ಪ್ರಮುಖವಾಗಲಾರದು. ಎಲ್ಲರೂ ಪೂರ್ತಿಯಾಗಿ ಸ್ವಾರ್ಥಿಗಳು ಮತ್ತು ಪುರಸ್ಕಾರಗಳೇ ಅವರಿಗೆ ಮುಖ್ಯ ಎಂದು ಈ ವಾದ ಭಾವಿಸುವಂತಿದೆ. ಈ ವಾದವು ವ್ಯಕ್ತಿ ಪ್ರಮುಖ ಪಾಶ್ಚಾತ್ಯ ಸಮಾಜಗಳಿಗೆ ಸೂಕ್ತವೆನಿಸಬಹುದು. ಆದರೆ ಪೌರ್ವಾತ್ಯ ಸಮಾಜಗಳಿಗಲ್ಲ.

**ಸಾಮಾಜಿಕ ವಿನಿಮಯ ವಾದ:** ಈ ವಾದವೂ ಪುನರ್ಬಲನ ವಾದದಂತಿದ್ದು ವ್ಯಕ್ತಿಗಳ ಪರಸ್ಪರ ಆಕರ್ಷಣೆಗೆ ಹೆಚ್ಚು ನಂಬಲರ್ಹವಾದ ವಿವರಣೆ ನೀಡುತ್ತದೆ. ಒಂದು ಸಂಬಂಧದಿಂದ ತಾವು ಪಡೆಯುವ ಪುರಸ್ಕಾರಗಳನ್ನು ಅಧಿಕವೆಂದು ಭಾವಿಸುತ್ತಾರೆ. ತಾವು ಇತರರಿಗೆ ನೀಡುವ ಪುರಸ್ಕಾರಗಳಿಗೆ ಪ್ರತಿಯಾಗಿ ಅವರಿಂದಲೂ ಅದೇ ಮಟ್ಟದ ಪುರಸ್ಕಾರಗಳನ್ನು ನಿರೀಕ್ಷಿಸುತ್ತಾರೆ.

**ಸಮತಾ ವಾದ (Equity Theory):** ಈ ವಾದದಂತೆ, ವ್ಯಕ್ತಿಗಳು ನಾವು ನೀಡುವ ಪುರಸ್ಕಾರಗಳ ಗಾತ್ರಕ್ಕನುಗುಣವಾಗದ ಪುರಸ್ಕಾರಗಳನ್ನು ಇತರರಿಂದ ಅಪೇಕ್ಷಿಸುತ್ತಾರೆ. ಸಮುದಾಯ ಸಂಬಂಧಗಳು (communal relationships) ಮೇಲೆ ಕಾಣಿಸಿದ ಪರಂಪರಾನುಗತ ವಾದಗಳಿಂದ ನಿಕಟ ಸಂಬಂಧಗಳನ್ನು ಸರಿಯಾಗಿ ಅರ್ಥೈಸುವುದರ ಬಗ್ಗೆ ಕೆಲ ತಜ್ಞರು ಸಂಶಯ ವ್ಯಕ್ತಪಡಿಸುತ್ತಾರೆ. ಕ್ಲಾರ್ಕ್ ಮತ್ತು ಮಿಲ್ಸ್‌ರ (1979) ಮೇರೆಗೆ ಎರಡು ಮುಖ್ಯ ಬಗೆಯ ಸಂಬಂಧಗಳನ್ನು ನಾವು ಕಾಣಬಹುದು.


Digitised by Bharatavani, CIIL

1) **ಸಮುದಾಯ ಸಂಬಂಧಗಳು:** ಇಲ್ಲಿ ಮುಖ್ಯ ಒತ್ತು ಇರುವುದು ಇನ್ನೊಬ್ಬ ವ್ಯಕ್ತಿಗೆ, (ಅವನಿಗೆ/ಅವಳಿಗೆ) ಬೇಕಾದ ಅಗತ್ಯಗಳನ್ನು ನೀಡುವುದು. ಮುಖ್ಯವಾಗಿ ಇದು ಹತ್ತಿರದ ಸ್ನೇಹಿತರಿಗೆ/ಕೌಟುಂಬಿಕ ಸದಸ್ಯರಿಗೆ ಸಂಬಂಧಿಸಿದುದು.

2) **ವಿನಿಮಯ ಸಂಬಂಧಗಳು:** ತಾನು ಪಡೆದದ್ದಕ್ಕಾಗಿ ಅದೇ ಪ್ರಮಾಣದಲ್ಲಿ ಪಡೆಯುವುದರ ಬಗ್ಗೆ ಹೆಚ್ಚಿನ ಒತ್ತು. ಸಾಮಾನ್ಯವಾಗಿ ಇದು ಪರಿಚಯಸ್ಥರಿಗೆ ಮತ್ತು ಅಪರಿಚಿತರಿಗೆ ಸಂಬಂಧಿಸಿದುದು.

**ಲೆವಿಂಗರನ ಐದು ಹಂತದ ಮಾದರಿ**

ಈ ಮಾದರಿಯಂತೆ ಕಾಲಾನುಕ್ರಮದಲ್ಲಿ ಸಂಬಂಧಗಳಲ್ಲಾಗುವ ಬದಲಾವಣೆಗಳು ಕೆಳಗಿನಂತಿವೆ:

1) ಪರಿಚಯ 2) ಸಂಬಂಧ ಬೆಳೆಯುವುದು 3) ಸಂಬಂಧ ತೀವ್ರವಾಗುವುದು 4) ಕುಂಠಿತವಾಗುವುದು 5) ಮುಕ್ತಾಯ.

**ಸೋಸುವಿಕೆಯ ವಾದ (Filter Theory):** ಕೆರ್ಕಾಫ್ ಮತ್ತು ಡೇವಿಸ್ (1962) ರಂತೆ ಸಂಬಂಧಗಳು ಕೆಲವು ಫಿಲ್ಟರ್‌ಗಳ ಮೂಲಕ ಬೆಳೆಯುತ್ತವೆ ಮತ್ತು ಮುಂದುವರೆಯುತ್ತವೆ. ಮೊದಲ ಹಂತದಲ್ಲಿ, ನಾವು ನಮ್ಮ ಆಸುಪಾಸಿನಲ್ಲಿನ ಕೇವಲ ಕೆಲವರನ್ನು ಮಾತ್ರ ಸಂಧಿಸುತ್ತೇವೆ. ಸಾಮಾನ್ಯವಾಗಿ ಅವರು ನಮ್ಮ ಸಾಮಾಜಿಕ ಸ್ಥರ ಹಾಗೂ ಶಿಕ್ಷಣ ಮಟ್ಟದ ಜನಾಂಗದವರೇ ಆಗಿರುತ್ತಾರೆ.

ಎರಡನೇ ಹಂತವು ಮಾನಸಿಕ ಅಂಶಗಳನ್ನು ಆಧರಿಸಿದೆ. ವ್ಯಕ್ತಿಗಳ ಸಾಮಾನ್ಯ ಮೌಲ್ಯಗಳು ಮತ್ತು ನಂಬಿಕೆಗಳಿಂದ ಅವಲಂಬಿತವಾದದ್ದು. ಮೂರನೆಯ ಹಂತವು ಸಮಾನ ಭಾವನಾತ್ಮಕ ಅಗತ್ಯಗಳಿಗೆ ಸಂಬಂಧಿಸಿದ್ದು. ವ್ಯಕ್ತಿಯ ಈ ಅಗತ್ಯಗಳ ಪೂರೈಕೆಗಳಿಗೆ ಸಂಬಂಧಿಸಿದಂತೆ ದೀರ್ಘಕಾಲಿಕ ಸಂಬಂಧಗಳು ಮುಂದುವರಿಯುತ್ತವೆ.

**ಅಂತರ್ವ್ಯಕ್ತಿ ಸಂಬಂಧಗಳ ರೂಪುಗೊಳ್ಳುವಿಕೆ**

1. ಪ್ರೇಮದ ಸಂಬಂಧಗಳು: ಇವುಗಳಿಗೆ ಕಾರಣವಾಗುವ ಅಂಶಗಳು – (ಅ) ದೈಹಿಕ ಆಕರ್ಷತ್ವ (ಆ) ಸಾಮೀಪ್ಯತೆ (ಇ) ಮನೋವೃತ್ತಿ ಸಾರೂಪ್ಯತೆ (ಈ) ಸಮಾನ ವಯಸ್ಸು ಧರ್ಮ, ಜಾತಿ, ಭಾಷೆ, ಸಾಮಾಜಿಕ ಸ್ಥರ ಇತ್ಯಾದಿ (ಉ) ಅದೇ ಬಗೆಯ ವ್ಯಕ್ತಿತ್ವ.

ನಮ್ಮನ್ನು ಹೋಲುವವರೊಡನೆ ನಮ್ಮ ಸಂಬಂಧಗಳು ಉತ್ತಮವಾಗಿ ರೂಪುಗೊಳ್ಳುತ್ತವೆ. ನಮ್ಮನ್ನು ಹೋಲುವವರನ್ನು ನಾವು ಇಷ್ಟಪಟ್ಟರೆ ಅವರೂ ಸಹ ನಮ್ಮನ್ನು ಇಷ್ಟ ಪಡುವ ಸಾಧ್ಯತೆ ಹೆಚ್ಚು. ಅಂತಹವರೊಂದಿಗಿನ ಬಿಚ್ಚು ಮನಸ್ಸಿನಿಂದ ಮಾತನಾಡುತ್ತೇವೆ. ನಮ್ಮನ್ನು ನಾವು ಇಷ್ಟ ಪಟ್ಟರೆ, ಅಂತಹವರನ್ನೇ ನಾವು ಇಷ್ಟ ಪಡುತ್ತೇವೆ. ನಾವು ಮಾಡುವ ಚಟುವಟಿಕೆಗಳನ್ನೇ ಅವರು ಇಷ್ಟಪಡುತ್ತಾರೆ.

**ಸಂಬಂಧಗಳ ನಿರ್ವಹಣೆ ಮತ್ತು ವಿಕಾಸ**

ನಮ್ಮ ವೈಯಕ್ತಿಕ ಮತ್ತು ಸೂಕ್ಷ್ಮ ವಿಷಯಗಳನ್ನು ಇನ್ನೊಬ್ಬರೊಂದಿಗಿನ ಬಿಚ್ಚುಮನಸ್ಸಿನಿಂದ ಹಂಚಿಕೊಂಡಾಗ ಸಂಬಂಧಗಳ ದೃಢತೆ ಹೆಚ್ಚುತ್ತದೆ. ಇದನ್ನೇ ಹೊರಗೆಡಹುವುದು (Self-disclosure) ಎನ್ನುವರು.

**ಬದ್ಧತೆ (Commitment)**

ಸಂಬಂಧವನ್ನು ಮುಂದುವರೆಸಲು ನಿರ್ಧರಿಸಿದಾಗ ಬದ್ಧತೆಯು ಕಾಲ ಸಂದಂತೆ ಹೆಚ್ಚುತ್ತದೆ.

**ಸಂಬಂಧಗಳು ಮುಂದುವರೆಯಲು ಕಾರಣಾಂಶಗಳು**

1. ಆ ವ್ಯಕ್ತಿಯ ಬಗ್ಗೆ ನಂಬಿಕೆ ಮತ್ತು ವಿಶ್ವಾಸ.
2. ಭಾವನಾತ್ಮಕ ಪ್ರೋತ್ಸಾಹವನ್ನು ಹಂಚಿಕೊಳ್ಳುವುದು.
3. ಯಶಸ್ಸಿನ ಸುದ್ದಿಯನ್ನು ಹಂಚಿಕೊಳ್ಳುವುದು.
4. ಆ ವ್ಯಕ್ತಿಯೊಂದಿಗಿದ್ದಾಗ ಅವನ(ಳ)ನ್ನು ಸಂತೋಷದಲ್ಲಿರುವಂತೆ ಯತ್ನಿಸುವುದು.
5. ಅಗತ್ಯ ಬಿದ್ದಾಗ ಸ್ವಯಂಪ್ರೇರಣೆಯಿಂದ ನೆರವು ನೀಡಲು ಮುಂದಾಗುವುದು.
6. ವ್ಯಕ್ತಿಯ ಅನುಪಸ್ಥಿತಿಯಲ್ಲಿ ಅವನ ಪರವಾಗಿರುವುದು.

**ಸಂಬಂಧಗಳ ಮುಕ್ತಾಯ**

ಸಂಬಂಧಗಳು ಹಲವಾರು ಕಾರಣಗಳಿಂದ ಕೊನೆಗೊಳ್ಳುತ್ತವೆ. ವಿಶಿಷ್ಟ ಸನ್ನಿವೇಶಗಳು ಮತ್ತು ಅವುಗಳ ಲಕ್ಷಣಗಳಿಂದಾಗಿ ಸಂಬಂಧಗಳಿಗೆ ಇತಿಶ್ರೀ ಒದಗಬಹುದು. ಇವುಗಳು ಗೌರವಯುತವಾಗಿ ಆಗಬಹುದು. ಉಲ್ಬಣಗೊಂಡರೆ ಹಿಂಸಾತ್ಮಕವಾಗಿಯೂ ಮುಗಿಯಬಹುದು. ವೈವಾಹಿಕ ಸಂಬಂಧಗಳು ಗಟ್ಟಿಯಾಗಿ ಉಳಿಯಲು ಶಿಕ್ಷಣ, ಧನಾತ್ಮಕ ವರ್ತನೆ, ಉದ್ಯೋಗಗಳು ಕಾರಣವಾಗಬಹುದು. ಈ ಸಂಬಂಧಗಳು ಮುರಿಯಲು ಮನೋರೋಗಗಳು, ಋಣಾತ್ಮಕ ವರ್ತನೆ ಮತ್ತು ದುಃಖಮಯ ಬಾಲ್ಯ ಕಾರಣವಾಗಬಲ್ಲುದು. ಅಸೂಯೆಯೂ ವೈವಾಹಿಕ ಬಿರುಕಿಗೆ ಒಂದು ಮುಖ್ಯ ಕಾರಣ.

**ಅಂತರ್‌ವ್ಯಕ್ತಿ ಸಂಬಂಧಗಳ ಭಾಗಗಳು**

ನಮಗೆ ತೀರಾ ಮುಖ್ಯವಾದವರ ಸಂಬಂಧಗಳು (ಸಂಗಾತಿ, ಪಾಲಕರು, ಗೆಳೆಯರು, ಗೆಳತಿಯರು) ಅತಿ ಹೆಚ್ಚಿನ ತೃಪ್ತಿ ನೀಡುತ್ತವೆ. ಮುಖ್ಯವಲ್ಲದ ಸಂಬಂಧಗಳು (ನೆರೆಹೊರೆಯವರು, ಜೊತೆಯಲ್ಲಿ ಕೆಲಸ ಮಾಡುವವರು) ಸಾಮಾನ್ಯವಾಗಿ ಹೆಚ್ಚಿನ ಮಟ್ಟದ ತೃಪ್ತಿ ನೀಡುವುದಿಲ್ಲ.

ಸಾಮಾಜಿಕ ಜೀವನದಲ್ಲಿ ನಾವು ತೊಡಗಿದಾಗ ವಿವಿಧ 'ಪಾತ್ರ'ಗಳನ್ನು ನಿರ್ವಹಿಸುತ್ತೇವೆ. ಈ ಪಾತ್ರಗಳೇ ನಾವು ಇತರರೊಂದಿಗೆ ಹೇಗೆ ವರ್ತಿಸಬೇಕೆಂದು ಸೂಚಿಸುತ್ತವೆ. ನಮ್ಮಂತೆಯೇ ಇತರರು ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಾರೆ. ಜೀವನದ ಆರಂಭದಲ್ಲಿ ಮಗು ತನ್ನ ಪಾಲಕರೊಂದಿಗೆ ಮತ್ತು ಸೋದರ–ಸೋದರಿಯರೊಂದಿಗೆ ಪಾತ್ರ ನಿರ್ವಹಿಸಿದರೆ, ಬೆಳೆದಂತೆ, ಸಂಬಂಧಗಳು ಮತ್ತು ಪಾತ್ರ ನಿರ್ವಹಣೆ ಅಧಿಕವೂ, ವೈವಿಧ್ಯಮಯವೂ ಆಗುತ್ತದೆ. ಉದಾಹರಣೆಗೆ ಓರಗೆಯವರೊಡನೆ, ನೆರೆ–ಹೊರೆಯವರೊಡನೆ, ಶಿಕ್ಷಕರೊಡನೆ, ಅಲ್ಲದೆ ಮುಂದೆ ವೃತ್ತಿ ಕೈಗೊಂಡಾಗ, ಸಹೋದ್ಯೋಗಿಗಳೊಡನೆ, ಅಧಿಕಾರಿಗಳೊಡನೆ, ಹಾಗೆಯೇ ಗಂಡ ಅಥವಾ ಹೆಂಡತಿಯಾಗಿ, ಪಾಲಕರಿಗೆ ಮಗ/ಮಗಳಾಗಿ, ಮಕ್ಕಳಿಗೆ ತಂದೆ/ತಾಯಿ ಆಗಿ, ಮೊಮ್ಮಕ್ಕಳಿಗೆ ಅಜ್ಜ/ಅಜ್ಜಿ ಆಗಿ.

ಕೌಟುಂಬಿಕ ಸಂಬಂಧಗಳು ಪೌರ್ವಾತ್ಯ ಸಂಸ್ಕೃತಿಗಳಲ್ಲಿ ಪಾಶ್ಚಾತ್ಯ ಜಗತ್ತಿಗಿಂತ ಭಿನ್ನವಾಗಿರುವುದನ್ನು ಕಾಣುತ್ತೇವೆ. ನಮ್ಮ ಭಾಷೆಗಳಲ್ಲಿ ಅತ್ತೆ, ಮಾವ, ಸೋದರತ್ತೆ, ಸೋದರ ಮಾವ, ಚಿಕ್ಕಪ್ಪ, ಚಿಕ್ಕಮ್ಮ, ಸೋದರ ಸೊಸೆ, ಸೋದರಳಿಯ, ಅಜ್ಜ, ಅಜ್ಜಿ, ಅವ್ವ, ತಾತ – ಈ ಪದಗಳು ವಿಶಿಷ್ಟ ವ್ಯಕ್ತಿಗಳನ್ನು ಸೂಚಿಸುತ್ತವೆ.

Digitised by Bharatavani, CIIL

### ಅಂತರ್ವ್ಯಕ್ತಿ ಸಂಬಂಧಗಳ ಪರಿಣಾಮಗಳು

ಉತ್ತಮ ಸಂಬಂಧಗಳಿಂದ ಸಂತೋಷ ಉಂಟಾಗುತ್ತದೆ. ಸಂಬಂಧಗಳು ಕುಸಿದಾಗ, ಅವುಗಳ ಪರಿಣಾಮ ದೈಹಿಕ ಮತ್ತು ಮಾನಸಿಕ ಆರೋಗ್ಯಗಳ ಮೇಲಾಗುತ್ತದೆ. ಭೌತಿಕ ಮತ್ತು ಆರ್ಥಿಕ ನೆರವು, ಸಾಮಾಜಿಕ ಮತ್ತು ಭಾವನಾತ್ಮಕ ಪ್ರೋತ್ಸಾಹ ಮತ್ತು ಆಸಕ್ತಿಗಳಲ್ಲಿ ಸಾಮಾನ್ಯತೆ – ಇವು ಉತ್ತಮ ಸಂಬಂಧಗಳಿಗೆ ಎಡೆಮಾಡುತ್ತವೆ. ಹಾಗೆಯೇ ಮದುವೆ ಆಗದಿರುವವರಿಗಿಂತ, ವಿಚ್ಛೇದಿತರಿಗಿಂತ, ಮದುವೆಯಾದವರು ಹೆಚ್ಚು ಸಂತಸದಿಂದಿರುತ್ತಾರೆ.

### ಮಾನವ ಸಂಬಂಧಗಳ ಮಹತ್ವ

ಇತರ ಜೀವಧಾರೆಗಳಿಗಿಂತ ಮಾನವ ಹಲವಾರು ವಿಷಯಗಳಲ್ಲಿ ವಿಭಿನ್ನನಾಗಿದ್ದಾನೆ. ಇವುಗಳಲ್ಲಿ ಮಾನವರ ನಡುವಣ ಸಂಬಂಧಗಳೂ ಒಂದು ಪ್ರಮುಖ ಅಂಶ. ನಮ್ಮ ಕೌಟುಂಬಿಕ ಜೀವನ, ನಾಗರಿಕತೆ, ಸಂಸ್ಕೃತಿ, ಇತಿಹಾಸ ಇವು ಮಾತ್ರವಲ್ಲದೆ ಮಾನವನ ಎಲ್ಲಾ ಸಾಧನೆಗಳಿಗೂ ಮುಖ್ಯ ಕಾರಣ – ಮನುಷ್ಯ ಸಂಬಂಧಗಳು. ಪರಂಪರೆ, ವಿಚಾರ ವಿನಿಮಯ, ಸಂವಹನ, ಶಿಕ್ಷಣ ಇವುಗಳೆಲ್ಲದರ ಬೇರುಗಳೇ ನಮ್ಮ ಸಂಬಂಧಗಳು.

ಕುಟುಂಬದಿಂದಲೇ ಐತಿಹಾಸಿಕವಾಗಿ ಮತ್ತು ಈಗಲೂ ನಮ್ಮ ಸಂಬಂಧಗಳ ಆರಂಭ ಮತ್ತು ಸಾಮಾಜಿಕ ಜೀವನದ ಉಗಮ. ಅಲ್ಲಿಯೇ ನಮ್ಮ ಬಾಲ್ಯ, ಆರಂಭಿಕ ಶಿಕ್ಷಣ, ಪೋಷಣೆ. ಹೀಗಾಗಿ ನಮ್ಮ ಸಂಬಂಧಗಳು ಬೆಳೆದು ಗಟ್ಟಿಯಾಗುವುದು ಅಲ್ಲಿಯೇ. ಹಾಗೆಯೇ ನಮ್ಮ ನೆರೆ–ಹೊರೆ, ಓರಗೆಯವರು. ಹೀಗಾಗಿ ವ್ಯಕ್ತಿ ಬೆಳೆದಂತೆ ಅವನ ಸಂಬಂಧಗಳು ಹೆಚ್ಚುತ್ತಾ ಹೋಗುತ್ತವೆ.

ಮುಂದೆ ಶಾಲೆ, ಧಾರ್ಮಿಕ, ಸಾಮಾಜಿಕ ಸಂಸ್ಥೆಗಳ ಸದಸ್ಯತ್ವದಿಂದಲೂ ಹೊಸ ಸಂಬಂಧಗಳ ಬೆಸುಗೆ ಉಂಟಾಗುತ್ತದೆ. ಭಾಷಾ ಸಂಸ್ಥೆಗಳು, ವಾಚನಾಲಯಗಳು, ಗ್ರಂಥ ಭಂಡಾರಗಳು, ಇತರ ಸಾರ್ವಜನಿಕ ಸಂಸ್ಥೆಗಳು, ಕಛೇರಿಗಳ ಜೊತೆಗೆ ಸಂಪರ್ಕ, ಕ್ರೀಡಾ ಚಟುವಟಿಕೆಗಳು, ಸಾಹಿತ್ಯ ಸಂಘಗಳು, ಸಾಂಸ್ಕೃತಿಕ ಚಟುವಟಿಕೆಗಳು ಹೊಸ ಹೊಸ ಸಂಬಂಧಗಳನ್ನು ಸೃಷ್ಟಿ ಮಾಡುತ್ತವೆ.

ಮನುಷ್ಯ ಬೆಳೆದಂತೆ ಸಂಬಂಧಗಳೂ ಬೆಳೆಯುತ್ತವೆ. ಕೆಲ ಸಂಬಂಧಗಳು ಮಾಸಲೂಬಹುದು, ಇನ್ನೂ ಕೆಲವು ಹೊಸದಾಗಿ ಆರಂಭವಾಗಲೂಬಹುದು, ಸಂಬಂಧಗಳ ಜೊತೆಗೆ ನಮ್ಮ ಪಾತ್ರಗಳೂ ಹೆಚ್ಚುತ್ತವೆ. ಸಂವಹನವೂ ಹೆಚ್ಚುತ್ತದೆ.

ಜೀವನವೇ ಒಂದು ಪಯಣ. ಅಲ್ಲಿ ಆರಂಭದಿಂದ ನಮ್ಮ ಪ್ರಯಾಣ ಮುಗಿಯುವ ತನಕ ಎಷ್ಟೋ ಸಂಬಂಧಗಳು ಬೆಳೆಯುತ್ತವೆ. ಆದರೆ ಮಾನವ ಕೋಟಿಯ ಪಯಣ ನಿರಂತರ. ಹಾಗೆಯೇ ಮಾನವ ಸಂಬಂಧಗಳೂ ಅವಿನಾಶಿ.

–ಡಿ.ಹ.ರಾ

## ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ

ಇಂದಿನ ಯುಗ ಜಾಗತೀಕರಣ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನದ ಯುಗ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ತಮ್ಮ ಸಮಾಜ ಮತ್ತು ಸರ್ಕಾರವನ್ನು ಅವುಗಳಿಂದ ಉದ್ಭವಿಸುವ ಸವಾಲುಗಳನ್ನು ಎದುರಿಸುವಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡುತ್ತಿವೆ. ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಸರ್ವವ್ಯಾಪಕ ವಿಶ್ವ ಮಾಹಿತಿ ತಂತ್ರಜ್ಞಾನ ಯುಗಕ್ಕೆ ದಾಪುಗಾಲನ್ನಿರಿಸಿದೆ. ಜನ ಜೀವನದ ಎಲ್ಲಾ ಕ್ಷೇತ್ರಗಳು ಕಂಪ್ಯೂಟರೀಕೃತವಾಗುತ್ತದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲಾ ರಂಗಗಳಲ್ಲಿನ ಜನರು ಅಂದರೆ ಸರ್ಕಾರದ ನೀತಿ ನಿಯಮಗಳನ್ನು ಅನುಷ್ಠಾನಗೊಳಿಸುವವರು, ವ್ಯಾಪಾರಸ್ಥರು, ಸಂಘ ಸಂಸ್ಥೆಗಳ ಕಾರ್ಯಕರ್ತರು ಶಿಕ್ಷಣ ರಂಗದಲ್ಲಿರುವವರು ಇದರ ಸೌಲಭ್ಯ ಪಡೆಯಲು ತಮ್ಮ ಕಾರ್ಯ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮುನ್ನುಗ್ಗಲು ಪೈಪೋಟಿ ನಡೆಸುತ್ತಿದ್ದಾರೆ.

ಈ ಜಾಗತಿಕ ಬದಲಾವಣೆಯು ಎಲ್ಲಾ ರಂಗದ ವ್ಯಕ್ತಿಗಳ ಮೇಲೆ ಹೊಸ ಕೌಶಲಗಳನ್ನು ಕಲಿತುಕೊಳ್ಳಲು ಬಹಳ ಒತ್ತಡವನ್ನು ಹೇರುತ್ತಿದೆ. ಇಂದಿನ ಜಾಗತೀಕರಣದ ಬದಲಾವಣೆಯ ಯುಗದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ವಿಶಿಷ್ಟವಾದ ಹಾಗೂ ಬಹಳ ಮಹತ್ತರವಾದ ಪಾತ್ರವಹಿಸುತ್ತಿದೆ.

### ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅರ್ಥ

ಸಂವಹನಕ್ಕಾಗಿ ಬಳಸುವ ವಿವಿಧ ರೀತಿಯ ತಂತ್ರಜ್ಞಾನದ ಸಾಮಗ್ರಿಗಳು/ಸಾಧನಗಳು ಮತ್ತು ಸಂಪನ್ಮೂಲಗಳು ಹಾಗೂ ಮಾಹಿತಿಗಳ ಸೃಷ್ಟಿ; ಪ್ರಚಾರ;ಶೇಖರಣೆ ಮತ್ತು ನಿರ್ವಹಣೆಗಾಗಿ ಬಳಸುವ ಎಲ್ಲಾ ರೀತಿಯ ತಂತ್ರಜ್ಞಾನವನ್ನೇ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (Information and Communication Technology- ICT) ಎಂದು ಕರೆಯಬಹುದು.

ಇಂದು ಎಲ್ಲಾ ಕ್ಷೇತ್ರದ ಮಾಹಿತಿಗಳು ಕಂಪ್ಯೂಟರ್ ಮೂಲಕ ಸಂಪರ್ಕಿಸಬಹುದಾದ ಅಂತರ್‌ಜಾಲದ ಸಹಾಯದಿಂದ ಕ್ಷಣಾರ್ಧದಲ್ಲಿ ಲಭ್ಯ. ಅಂತರ್‌ಜಾಲ ಮತ್ತು ಬಹುಮಾಧ್ಯಮ (ಇಂಟರ್‌ನೆಟ್ ಹಾಗೂ ಮಲ್ಟಿಮೀಡಿಯಾ) ಅತ್ಯಂತ ಜನಪ್ರಿಯ ಸಂವಹನ ಮಾಧ್ಯಮಗಳಾಗಿ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಯ ಮಹಾ ಹೆದ್ದಾರಿಯನ್ನು ಸುಗಮಗೊಳಿಸಿವೆ. ಪಠ್ಯ, ದೃಶ್ಯ, ಶಬ್ದಗಳ ಬಹುಮಾಧ್ಯಮದ ಅನ್ವಯಿಕ ಪ್ರಯೋಜನಗಳು ಜ್ಞಾನವರ್ಧನೆಗೆ – ಅದರಲ್ಲೂ ಮನೋರಂಜನೆ ಯೊಂದಿಗೆ ಅಧ್ಯಯನಕ್ಕೆ ಸ್ವತಃ ನಾವು ಭಾಗವಹಿಸುವ, ಪ್ರತಿಕ್ರಿಯಿಸುವ ಮುಕ್ತ ಅವಕಾಶಗಳನ್ನು ತೆರೆದಿಟ್ಟಿವೆ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ನೆರವಿನಿಂದ ದೇಶಗಳನ್ನು ಒಂದುಗೂಡಿಸಿ ಈ ವಿಶ್ವವನ್ನು ಒಂದು ಜಾಗತಿಕ ಹಳ್ಳಿಯನ್ನಾಗಿಸಿರುವ ಇಂಟರ್‌ನೆಟ್ ಅಥವಾ ಅಂತರ್ಜಾಲ ವಿಶ್ವವ್ಯಾಪಿ ಜಾಲ (World Wide Web) ಎಲ್ಲರಿಗೂ ತುಂಬಾ ಸಹಾಯಕಾರಿಯಾಗಿದೆ.

### ಬಳಸಲಾಗುವ ತಂತ್ರಗಳು ಅಥವಾ ಸಾಧನಗಳು

ಮಾಹಿತಿ ಮತ್ತು ತಂತ್ರಜ್ಞಾನ ಬಳಸಲಾಗುವ ತಂತ್ರಗಳು ಬಾನುಲಿ ಪ್ರಸಾರ ಸಾಧನಗಳಾದ ರೇಡಿಯೋ, ದೂರದರ್ಶನ ಮತ್ತು ದೂರವಾಣಿಗಳನ್ನು ಒಳಗೊಂಡಿವೆ. ಇವುಗಳನ್ನಲ್ಲದೆ ಇತ್ತೀಚಿನ ದಿನಗಳಲ್ಲಿ ಸಾಧನಗಳ ಬಳಕೆ ಹೀಗಿವೆ; ಮಾಹಿತಿ ಮತ್ತು ಸಂವಹನಕ್ಕಾಗಿ ನಮ್ಮ ಸುತ್ತಲ್ಲಿರುವ ಎಲ್ಲ ತರಹದ ಕಂಪ್ಯೂಟರ್‌ಗಳನ್ನು–ಡೆಸ್ಕಟಾಪ್, ಲ್ಯಾಪ್‌ಟಾಪ್; ನೋಟ್‌ಬುಕ್ಸ್, ಪಾಮ್‌ಹಿಡಿತದ ಪೈಲೈಟ್ಸ್, ಕಂಪ್ಯೂಟರ್ ಸರ್‌ವರ್‌ಗಳು ಮತ್ತು ಸೂಪರ್ ಕಂಪ್ಯೂಟರ್‌ಗಳನ್ನು ಉಪಯೋಗಿಸಲಾಗುತ್ತಿದೆ.

ಇವುಗಳನ್ನು ಜೊತೆಗೆ ಇನ್ನಿತರೇ ಆಧುನಿಕ ಸಾಧನಗಳಾದ ಬಹುಮಾಧ್ಯಮ ದೃಶ್ಯಾವಳಿ ಇರುವ ಕಂಪ್ಯೂಟರ್ ಶಬ್ದಚಿತ್ರಗಳು, ಎಲ್ಲಾ ಕ್ಷೇತ್ರದಲ್ಲಿನ ಮಾಹಿತಿಗಳನ್ನು ವಿವಿಧ ರೀತಿಯಲ್ಲಿ ದಾಖಲಿಸಿರುವ ಕಾಂಪ್ಯಾಕ್ಟ್

Digitised by Bharatavani, CIIL

ಡಿಸ್ಕ್‌ಗಳು (ಸಿ.ಡಿ). ಡಿ.ವಿ.ಡಿ.ಗಳು; ವೀಡಿಯೋ ದೃಶ್ಯಾವಳಿಗಳು; ಪೆನ್ ಡ್ರೈವ್‌ಗಳು; ಉಪಗ್ರಹಗಳಿಂದ ಬಿತ್ತರಿಸಲ್ಪಡುವ ಕಾರ್ಯಕ್ರಮಗಳು, ಸಂವಹನ ಬಿಳಿ ಹಲಗೆಗಳು (Communicative White Boards), ದತ್ತಾಂಶ ಪ್ರಕ್ಷೇಪಕಗಳು (Data Projectors), ಫೈಬರ್ ಆಪ್ಟಿಕ್ಸ್‌ಗಳು, ವೈ ಎಫ್ಟ್ (Wireless Fildelity) ಮೊಡಮ್‌ಗಳು ಮತ್ತು ರೂಟರ್ಸ್ ಇತ್ಯಾದಿ ಅಸಂಖ್ಯಾತ ಸಂಪರ್ಕ ಸಾಧನಗಳನ್ನು ಬಳಸಲಾಗುತ್ತದೆ. ಈ ಸಾಧನಗಳ ಸಹಾಯದಿಂದ ಇಲೆಕ್ಟ್ರಾನಿಕ್ ಸುದ್ದಿ/ಪತ್ರ ವ್ಯವಹಾರ, ಚುಟುಕು ಸಂದೇಶ ಸೇವೆ (Short Message Service-SMS) ಕಾರ್ಯಗಳು: ವೀಡಿಯೋ ದೂರದರ್ಶನ ಕರೆಗಳು ಇತ್ಯಾದಿಗಳ ರೂಪದಲ್ಲಿ ಮಾಹಿತಿಗಳನ್ನು ಪ್ರಸಾರ ಮಾಡಬಹುದಾಗಿದೆ.

**ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ವ್ಯಾಪ್ತಿ**

ಮಾಹಿತಿ ಮತ್ತು ತಂತ್ರಜ್ಞಾನ ಸಮಾಜದ ಎಲ್ಲಾ ಕ್ಷೇತ್ರಗಳ ಮೇಲೂ ಅಗಾಧವಾದ ಪ್ರಭಾವ ಬೀರಿದೆ. ಪ್ರಭಾವಕ್ಕೊಳಗಾದ ಕ್ಷೇತ್ರಗಳ ವಿವರ ಹೀಗಿವೆ.

ಅ) ಸಾರ್ವಜನಿಕ ಆಡಳಿತ ವ್ಯವಸ್ಥೆ; ಸಾರ್ವಜನಿಕ ಆಡಳಿತ ವ್ಯವಸ್ಥೆಯು ನಾಗರಿಕ ಸಮಾಜದ ಒಂದು ಪ್ರಮುಖವಾದ ಘಟ್ಟ, ಇದು ನಾಗರಿಕರಿಗೆ ಹಾಗೂ ಕೈಗಾರಿಕೆಗಳಿಗೆ ಸಂಬಂಧಿಸಿದ ವಿವಿಧ ರೀತಿಯ ಸೇವಾ ಸೌಲಭ್ಯಗಳನ್ನು ಒದಗಿಸುತ್ತದೆ. ಈ ವ್ಯವಸ್ಥೆಯು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಕಾರ್ಯಕ್ರಮಗಳನ್ನು ಒದಗಿಸುತ್ತದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಈ ಎಲ್ಲಾ ರಂಗದ ಚಟುವಟಿಕೆಗಳನ್ನು ಸಾರ್ವಜನಿಕರಿಗೆ ಒದಗಿಸುತ್ತದೆ. ಉದಾ: e-ಸರ್ಕಾರ– ಈ ಸೌಲಭ್ಯದ ಮೂಲಕ ಸಾರ್ವಜನಿಕರು ಯಾವ ವೇಳೆಯಲ್ಲಿ ಬೇಕಾದರೂ ದೂರವಾಣಿ ಅಥವಾ ಅಂತರ್ಜಾಲದ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ.

ಆ) ಗ್ರಾಮೀಣ ಮತ್ತು ನಗರಾಭಿವೃದ್ಧಿ ಕ್ಷೇತ್ರ

ಮಾಹಿತಿ ಮತ್ತು ತಂತ್ರಜ್ಞಾನದ ಸಹಾಯದಿಂದ ಇಂದಿನ ಮತ್ತು ಹಿಂದಿನ ದತ್ತಾಂಶ ಪಡೆಯಬಹುದು. ಆರೋಗ್ಯ, ಶಿಕ್ಷಣ, ನೀರು ಸರಬರಾಜು, ಒಳಚರಂಡಿ ಕಾಮಗಾರಿ, ಜನಸಂಖ್ಯಾ ಬೆಳವಣಿಗೆ ಮತ್ತು ಚಲನೆಯ ಬಗ್ಗೆ ಮಾಹಿತಿ ಸಂಗ್ರಹ ಮಾಡಿ ಅದನ್ನು ವಿವಿಧ ಮಾಹಿತಿ ತಂತ್ರಜ್ಞಾನದ ಸಾಧನಗಳ ಮೂಲಕ ಬಿತ್ತರಿಸಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ಟೆಲಿ ಕೇಂದ್ರಗಳ ಮೂಲಕ ಹಾಗೂ ಮೊಬೈಲ್‌ಗಳ ಬಳಕೆಯಿಂದ ತಮ್ಮ ಪ್ರದೇಶದ ಹೊರಗೆ ಇರುವ ಮಾರುಕಟ್ಟೆಯ ವಹಿವಾಟಿನ ಬಗ್ಗೆ ರೈತರು ಮತ್ತು ವ್ಯಾಪಾರಿಗಳಿಗೆ ಅರಿವು ಮೂಡುವುದರಿಂದ ಆರ್ಥಿಕವಾಗಿ ಅವರು ಸಬಲರಾಗಬಹುದು.

ಇ) ಸಾರಿಗೆ ವ್ಯವಸ್ಥೆ : ಮಾಹಿತಿ ಮತ್ತು ತಂತ್ರಜ್ಞಾನದ ಸಹಾಯದಿಂದ ಜಲ, ರಸ್ತೆ, ವಾಯು ಮತ್ತು ರೈಲು ಸಂಪರ್ಕ ವ್ಯವಸ್ಥೆಯನು ಅಭಿವೃದ್ಧಿಗೊಳಿಸಬಹುದು. ಸ್ಮಾರ್ಟ್ ಕಾರ್ಡ್‌ಗಳ ಸಹಾಯದಿಂದ ಪ್ರತಿನಿತ್ಯದ ಸಾರಿಗೆ ಸಂಪರ್ಕದ ಸುಲಲಿತ ಕಾರ್ಯಾಚರಣೆಗೆ ಅನುವು ಮಾಡಿಕೊಡಬಹುದು. ವಾಹನ ನಿಲುಗಡೆಯ ಅಳತೆ ಮಾಪಕಗಳ ಮೂಲಕ ಹಣ ಪಾವತಿಸುವಿಕೆ ವ್ಯವಸ್ಥಿತ ವಾಹನ ನಿಲುಗಡೆಯ ಸ್ಥಳಾವಕಾಶ ಇತ್ಯಾದಿ ಕಾರ್ಯಾಚರಣೆಗಳನ್ನು ಸುಸೂತ್ರವಾಗಿ ಕೈಗೊಳ್ಳಬಹುದು.

ಈ) ಪ್ರಯಾಣ ಮತ್ತು ಪ್ರವಾಸೋದ್ಯಮ ಕ್ಷೇತ್ರ :– ಈ ಕ್ಷೇತ್ರಗಳು ಮಾಹಿತಿ ತಂತ್ರಜ್ಞಾನದಿಂದ ಹೆಚ್ಚು ಲಾಭ ಪಡೆಯುತ್ತಿವೆ. ಮುಂಗಡ ಕಾಯ್ದಿರಿಸುವಿಕೆ ಹೋಗಬೇಕಾಗಿರುವ ಸ್ಥಳಗಳ ವಿವರ ಮಾರ್ಗ ನಕ್ಷೆಗಳು, ತಂಗಲು ಅನುಕೂಲಕರವಾದ ತಂಗುದಾಣಗಳ ವಿವರ, (on-line) ಆನ್‌ಲೈನ್ ಮುಂಗಡ ಬುಕಿಂಗ್ ಇವೆಲ್ಲದರ ಬಗ್ಗೆ ಮಾಹಿತಿಯನ್ನು ಕುಳಿತಲ್ಲೇ ಪಡೆಯಬಹುದಾಗಿದೆ.

ಈ ಕ್ಷೇತ್ರ ಬಳಸುವ ಮಾಹಿತಿ ಸಂವಹನ ತಂತ್ರಜ್ಞಾನರ (ICT) ಸಾಧನಗಳೆಂದರೆ – ಗಣಕೀಕೃತ ಮುಂಗಡ ಸೀಟು ಕಾದಿರಿಸುವಿಕೆ, ಟೆಲಿ ಸಮ್ಮೇಳನಗಳು ಆಡಿಯೋ ವೀಡಿಯೋ ವಿವರಣ ಪುಸ್ತಕಗಳು (Brochures), ನಿರ್ವಹಣ ಮಾಹಿತಿ ವ್ಯವಸ್ಥೆ ಎಲೆಕ್ಟ್ರಾನಿಕ್ ಹಣವರ್ಗಾವಣೆ, ಟೆಲಿಫೋನ್ ನೆಟ್‌ವರ್ಕ್ಸ್, ಸ್ಮಾರ್ಟ್‌ಕಾರ್ಡ್ಸ್ (ಹಣವ್ಯವಹಾರಕ್ಕೆ), ಮೊಬೈಲ್ ಸಂವಹನ, ಇ–ಅಂಚೆ, ಡಿಜಿಟಲ್ ಮತ್ತು ಅಂತರಜಾಲ.

ಉ) ಆರೋಗ್ಯ ಕ್ಷೇತ್ರ : ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ ಬಹಳ ಮೌಲ್ಯಯುತ ಸಂಪನ್ಮೂಲವಾಗುತ್ತಿದೆ. ಈ ತಂತ್ರಜ್ಞಾನದ ಸಹಾಯದಿಂದ ವಿಶ್ವದ ಮೂಲೆ ಮೂಲೆಯಲ್ಲಿರುವ ವೈದ್ಯರೊಂದಿಗೆ ರೋಗಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಮತ್ತು ದಾಖಲೆಗಳನ್ನು ಪಡೆಯುವಲ್ಲಿ ಹಾಗೂ ವರ್ಗಾಯಿಸಲು ಹಾಗೂ ಅವರುಗಳಿಂದ ರೋಗಕ್ಕೆ ಸಂಬಂಧಿಸಿದ ಸೂಕ್ತ ಹಾಗೂ ಪರಿಣಾಮಕಾರಿ ಸಲಹೆಗಳನ್ನು ಪಡೆಯುವುದು ಸಾಧ್ಯವಾಗಿದೆ. ಟೆಲಿಔಷಧಿಯ (ಅಂತರ್‌ಜಾಲ ಸಂಪರ್ಕದಿಂದ ಪಡೆಯುವ) ಸೇವೆಯು ಭೌಗೋಳಿಕವಾಗಿ ಬಹಳ ದೂರದಲ್ಲಿರುವ ರೋಗಿಗಳಿಗೆ ಮನೆಯಲ್ಲೇ ಕುಳಿತು ವೈದ್ಯಕೀಯ ಸೌಲಭ್ಯ ಪಡೆಯಲು ಅನುವು ಮಾಡಿಕೊಡುತ್ತದೆ.

ಊ) ವಿಶೇಷ ಗುಂಪಿನ ಮಕ್ಕಳಿಗೆ (ಶಾರೀರಕವಾಗಿ ಸವಾಲೊಡ್ಡುವ ಮಕ್ಕಳಿಗೆ): ನ್ಯೂನತೆಗಳಿರುವ ಮಕ್ಕಳು ಮಾಹಿತಿ ತಂತ್ರಜ್ಞಾನದ ಮೂಲಕ ಸಂವಹನ ಸೌಲಭ್ಯಗಳು, ಶಿಕ್ಷಣ ಮತ್ತು ಇತರ ಅವಕಾಶಗಳನ್ನು ಮುಕ್ತವಾಗಿ ಪಡೆಯಲು ಸಾಧ್ಯವಾಗಿದೆ. ಅಂಥ ಮಕ್ಕಳು ಬ್ರೈಲ್ ಕೀಬೋರ್ಡ್‌ಗಳು ಮತ್ತು ಪ್ರಿಂಟರ್‌ಗಳನ್ನು ಬಳಸುವುದರಿಂದ ಅವರನ್ನು ಅಕ್ಷರಸ್ಥರನ್ನಾಗಿ ಮಾಡಬಹುದಲ್ಲದೇ ಗಣಿತದ ಸಮಸ್ಯೆಗಳ ಬಗ್ಗೆಯು ಪರಿಹಾರವನ್ನು ನೀಡಬಹುದಾಗಿದೆ. SMS ಸೇವೆಯ ಸಹಾಯದಿಂದ ಮಾಹಿತಿಯನ್ನು ರವಾನಿಸಬಹುದು ಹಾಗೂ ಮಾಹಿತಿಗಳನ್ನು ಪಡೆಯಲುಬಹುದು. ಧ್ವನಿ ಆಧಾರಿತ ಡೈಯಲಿಂಗ್ ಸೇವೆಯಿಂದ ಅಂಥ ಮಕ್ಕಳಿಗೆ ಬಹಳ ಅನುಕೂಲವಾಗುತ್ತಿದೆ.

ಋ) E-ವಾಣಿಜ್ಯ (E-Commerce);- ಯಾವುದೇ ವಿಧದ ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದಂತೆ ಇತ್ತೀಚಿನ ದಿನಗಳಲ್ಲಿ ಇ–ವಾಣಿಜ್ಯ ಟೆಲಿಸಂವಹನ ಅಥವಾ ಅಂತರಜಾಲದ ಮಾಹಿತಿಗಳು ಬಹಳ ಪರಿಣಾಮಕಾರಿಯಾಗಿವೆ. ಆನ್–ಲೈನ್ ಖರೀದಿ, ಆನ್–ಲೈನ್ ಬ್ಯಾಂಕಿಂಗ್, ಆನ್–ಲೈನ್ ಸ್ಟಾಕ್ ಮಾರ್ಕೆಟ್ ವ್ಯವಹಾರ ಇತ್ಯಾದಿ ಇತ್ತೀಚಿನ ದಿನಗಳಲ್ಲಿ ಸರ್ವೇಸಾಮಾನ್ಯವಾಗಿವೆ. ಈ ವ್ಯವಸ್ಥೆಯ ಒಂದು ಲಾಭವೆಂದರೆ ಇದು ಸಮಯ ಹಾಗೂ ವಿಲೇವಾರಿ ವೆಚ್ಚವನ್ನು ಕಡಿತಗೊಳಿಸುತ್ತದೆ.

ಋು) ಶಿಕ್ಷಣ ಕ್ಷೇತ್ರ:– ಈ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನ ಬಹಳ ಪ್ರಮುಖವಾದ ಪಾತ್ರ ವಹಿಸುತ್ತಿದೆ. ಇಲ್ಲಿ ಬಳಕೆ ಆಗುವ ತಂತ್ರಜ್ಞಾನದ ಸಹಾಯದಿಂದ ಕಲಿಕಾರ್ಥಿ ಶೈಕ್ಷಣಿಕ ಸಾಮಗ್ರಿಗಳನ್ನು, ಸಾಧನಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸಾಧ್ಯವಿದೆ. ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಗ್ರಂಥಾಲಯದಲ್ಲಿ ಶೈಕ್ಷಣಿಕ ಮಾಹಿತಿಗಳನ್ನು ಶೇಖರಿಸಲು ಹಾಗೂ ನಿರ್ವಹಣೆ ಮಾಡಲು ಹೆಚ್ಚು ಸುಲಭವಾಗಿದೆ. ಗ್ರಂಥಾಲಯಗಳು ಈಗ ಹಳೆಯ ಮಾದರಿಯನ್ನು ಅನುಸರಿಸಿ ಪುಸ್ತಕಗಳನ್ನು ಸಂಗ್ರಹಿಸುವ ಬದಲಾಗಿ ಆನ್–ಲೈನ್ ಸಹಾಯ/ವ್ಯವಸ್ಥೆಯ ಮೂಲಕ ಹೆಚ್ಚು ಹೆಚ್ಚು ಮಾಹಿತಿಗಳನ್ನು ಸಂಗ್ರಹಿಸಬಹುದು. ಆನ್–ಲೈನ್ ಸಹಾಯದಿಂದ

Digitised by Bharatavani, CIIL

ವಿದ್ಯಾರ್ಥಿಗಳು ತರಗತಿಗಳ ಟಿಪ್ಪಣಿಗಳನ್ನು, ಹಾಗೂ ಪ್ರಾಜೆಕ್ಟ್‌ಗಳನ್ನು ಆನ್-ಲೈನ್ ಮೂಲಕ ಇತರರೊಂದಿಗೆ (ಸಹಪಾಠಿಗಳೊಂದಿಗೆ) ಚರ್ಚಿಸಬಹುದು. ಕಡಿಮೆ ಸಮಯದಲ್ಲಿ ಹೆಚ್ಚು ವಿಷಯ ಸಂಗ್ರಹ ಮಾಡಬಹುದು ಹಾಗೂ ಹೆಚ್ಚು ಜ್ಞಾನವನ್ನು ಅಭಿರುಚಿಗೆ ಅನುಗುಣವಾಗಿ ಪಡೆಯಬಹುದು. ಇದರ ಸಹಾಯದಿಂದ ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಇರುವ ಪ್ರತಿಯೊಬ್ಬರು ಕುಳಿತಲ್ಲೇ ಶಿಕ್ಷಣ ಪಡೆಯಬಹುದು.

ಹೀಗೆ ಮಾಹಿತಿ ತಂತ್ರಜ್ಞಾನದ ಪ್ರಭಾವವನ್ನು ಎಲ್ಲಾ ಕ್ಷೇತ್ರಗಳಲ್ಲೂ ಕಾಣಬಹುದಾಗಿದೆ. ಕೃಷಿ ಕ್ಷೇತ್ರದಲ್ಲೂ ಕೂಡ ರೈತರಿಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಮಾಹಿತಿ ತಂತ್ರಜ್ಞಾನದ ಮೂಲಕ ರವಾನಿಸಬಹುದಾಗಿದೆ. ಅದೇ ರೀತಿ ಪರಿಸರಕ್ಕೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹ ಹಾಗೂ ಅವುಗಳಿಗೆ ಸಂಬಂಧಿಸಿದ ಪರಿಹಾರೋಪಾಯಗಳ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡಲು ಸಾಧ್ಯವಿದೆ.

ಮನರಂಜನೆ ಕ್ಷೇತ್ರದಲ್ಲೂ ಮಾಹಿತಿ ಸಂವಹನ ತಂತ್ರಜ್ಞಾನ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿದೆ. ಅಂತರ್‌ಜಾಲದ ಮೂಲಕ ನಮಗೆ ಬೇಕಾದ ಮನರಂಜನ ಸಾಮಗ್ರಿಗಳನ್ನು (ಚಲನ ಚಿತ್ರಗಳು, ಹಾಡುಗಳು, ಕ್ರೀಡೆಗಳು, ಇತ್ಯಾದಿ) ಪಡೆದುಕೊಳ್ಳಬಹುದು. ಮೊಬೈಲ್‌ಗಳ ಮೂಲಕವೂ ಇದು ಸಾಧ್ಯ. ಇದಲ್ಲದೆ ವಿವಿಧ ರೀತಿಯ ಇಲೆಕ್ಟ್ರಾನಿಕ್ ದಾಖಲು ಸಾಧನಗಳು (ಸಿ.ಡಿ.ಗಳು, ಐಪಾಡ್ ಇತ್ಯಾದಿ) ಮನರಂಜನೆ ಸಾಮಗ್ರಿಯನ್ನು ದಾಖಲಿಸಿಕೊಳ್ಳಲು ನೆರವಾಗುತ್ತವೆ.

ಮಾಹಿತಿ – ಸಂವಹನ ತಂತ್ರಜ್ಞಾನ ನಮ್ಮ ಭೂಮಿ ಗ್ರಹಕ್ಕೆ ಮಾತ್ರ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಲು ಸಹಾಯಕವಾಗಿದೆ ಎಂದು ತಿಳಿಯಬಾರದು. ಗ್ರಹ, ಉಪಗ್ರಹಗಳ ಬಗ್ಗೆ, ಆಕಾಶ ಕಾಯಗಳ ಬಗ್ಗೆ ಅಧ್ಯಯನ ಮಾಡಲು ಕೂಡ ಈ ತಂತ್ರಜ್ಞಾನ ಬಹಳ ಸಹಾಯಕವಾಗಿದೆ.

ಬೋಧನಾ – ಕಲಿಕಾ ಪ್ರಕ್ರಿಯೆಯಲ್ಲಿ ಇದರ ಪಾತ್ರ

ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಒಂದು ಶಕ್ತಿಶಾಲಿ ಪ್ರಭಾವಿತ ಸಾಧನವನ್ನಾಗಿ ಬಳಸಬಹುದು.

- ಈ ತಂತ್ರಜ್ಞಾನದಿಂದ ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಹೆಚ್ಚು ಲಾಭವನ್ನು ಪಡೆಯಬಹುದು.

- ಈ ತಂತ್ರಜ್ಞಾನದಿಂದ ಶಾಲಾ ಕಾಲೇಜುಗಳಿಂದ ಬಹಳ ದೂರವಿರುವ ಹಾಗೂ ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾರ್ಥಿಗಳು ಹೆಚ್ಚು ಲಾಭವನ್ನು ಪಡೆಯಬಹುದು.

- ಈ ತಂತ್ರಜ್ಞಾನದಿಂದ ಶಾಲಾ ಕಾಲೇಜಿನಿಂದ ಹೊರ ಉಳಿದ ಹೆಣ್ಣುಮಕ್ಕಳು, ಮಹಿಳೆಯರು, ಅಂಗವಿಕಲ ಮಕ್ಕಳು, ಹಿರಿಯರು, ಹಣ ಮತ್ತು ಸಮಯದ ಅಭಾವದಿಂದ ಶಿಕ್ಷಣದಿಂದ ವಂಚಿತರಾದ ಪ್ರತಿಯೊಬ್ಬರು ಶಿಕ್ಷಣವನ್ನು ಪಡೆಯಬಹುದು.

- ಈ ತಂತ್ರಜ್ಞಾನವು ಸಮಯದ ಅಂತರ ಮತ್ತು ತರಗತಿಯ ಅಂತರವನ್ನು ಬಹಳ ಮೊಟಕುಗೊಳಿಸಿ ಮಾಹಿತಿಯನ್ನು ರವಾನಿಸುತ್ತದೆ.

- ಆನ್-ಲೈನ್ ಕಲಿಕಾ ಸಾಮಗ್ರಿಗಳನ್ನು ದಿನದ 24 ಗಂಟೆ ಹಾಗೂ ವಾರದ ಏಳು ದಿನಗಳಲ್ಲೂ ಬಳಸಿ ಪ್ರಯೋಜನ ಪಡೆಯಬಹುದು.

- ವಿದ್ಯಾರ್ಥಿ ಒಂದು ಕಡೆ, ಶಿಕ್ಷಕ ಮತ್ತೊಂದು ಕಡೆ ಇದ್ದರೂ ಕೂಡ ತಂತ್ರಜ್ಞಾನದ ಸಹಾಯದಿಂದ ಅಂದರೆ, ಟೆಲಿಸಮ್ಮೇಳನದ ತಂತ್ರಜ್ಞಾನದ ಮೂಲಕ; ರೇಡಿಯೋ ಹಾಗೂ ದೂರದರ್ಶನದ ಮೂಲಕ, ಟೆಲಿಫೋನ್ ಹಾಗೂ ಮೊಬೈಲ್‌ಗಳ ಸಹಾಯದಿಂದ ಕಲಿಕಾ ವಿಷಯಕ್ಕೆ ಸಂಬಂಧಿಸಿದಂತೆ ಪರೋಕ್ಷವಾಗಿ ಸಹಾಯ ಪಡೆಯಬಹುದು.

- ಇಂದಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮುದ್ರಣ ಸಾಮಗ್ರಿಗಳ ಮೇಲೆ ಅವಲಂಬಿತರಾಗುವ ಅಗತ್ಯವಿಲ್ಲ, ಹಾಗೂ ಅದು ಇರುವ ಸ್ಥಳಕ್ಕೂ ಹೋಗುವ ಅಗತ್ಯವಿಲ್ಲ. ಅಷ್ಟೇ ಅಲ್ಲದೇ ಸಿಗುವ ನಿಗದಿತ ಸಂಖ್ಯೆಯ ಪುಸ್ತಕಗಳ ಮೇಲೆ ಸಂಪೂರ್ಣ ಅವಲಂಬಿತರಾಗುವ ಅಗತ್ಯವಿಲ್ಲ. ಏಕೆಂದರೆ ಇವುಗಳೆಲ್ಲದಕ್ಕೂ ಪರಿಹಾರವಾಗಿ ಅಂತರಜಾಲ ಹಾಗೂ ವಿಶ್ವವ್ಯಾಪ್ತಿ ಅಂತರಜಾಲ (World Wide Web) ದಲ್ಲಿ ಎಲ್ಲಾ ವಿಷಯಕ್ಕೂ ಸಂಬಂಧಿಸಿದಂತೆ ಮಾಹಿತಿಗಳ ಭಂಡಾರವೇ ಇರುವ ಕಾರಣ ಒಂದೇ ಕ್ಷಣದಲ್ಲಿ ಎಷ್ಟು ಜನರು ಬೇಕಾದರೂ ಯಾವುದೇ ಮಾಹಿತಿಗಳನ್ನು ಕುಳಿತಲ್ಲೇ ಪಡೆಯಬಹುದಾಗಿದೆ.

- ತರಗತಿಯ ಒಳಗೂ ಕೂಡ ಈಗ ವಿಶ್ವದ ಪ್ರತಿಷ್ಠಿತ ವ್ಯಕ್ತಿಗಳ ಉಪನ್ಯಾಸ, ಅವರೊಂದಿಗೆ ಸಂಪರ್ಕ, ವಿಷಯಕ್ಕೆ ಸಂಬಂಧಿಸಿದ ಸಂದೇಹ ನಿವಾರಣೆ, ತಜ್ಞರೊಂದಿಗೆ ಸಂದರ್ಶನ ಇತ್ಯಾದಿ ಸೌಲಭ್ಯಗಳನ್ನು ಶಿಕ್ಷಕರೊಡಗೂಡಿ ವಿದ್ಯಾರ್ಥಿಗಳು ಪಡೆಯಬಹುದು.

- ವಿಶ್ವದ ಇಡೀ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ, ಆರ್ಥಿಕ, ರಾಜಕೀಯ ಇತ್ಯಾದಿ ವ್ಯವಸ್ಥೆಗಳ ಬಗ್ಗೆ ಕುಳಿತಲ್ಲೇ ಮಕ್ಕಳಿಗೆ ಮಾಹಿತಿ ನೀಡಬಹುದು.

- ವಿವಿಧ ವಿಷಯಗಳಿಗೆ ಪೂರಕವಾದ ದಾಖಲೆಗಳು, ಸಾಕ್ಷ್ಯಾಧಾರಗಳು, ಚಿತ್ರಗಳು ಇತ್ಯಾದಿಗಳನ್ನು ತೋರಿಸಬಹುದು.

- ಶೈಕ್ಷಣಿಕ ತಂತ್ರಜ್ಞಾನದ ಸಾಧನಗಳ ಸಹಾಯದಿಂದ ಮಕ್ಕಳಿಗೆ ನೈಜತೆಯ ಬಗ್ಗೆ ಪರಿಚಯ ಮಾಡಿಕೊಡಬಹುದು. ಇವುಗಳ ಮೂಲಕ ಮಕ್ಕಳಲ್ಲಿ ವಿಷಯದ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆ ಮೂಡಿಸಲು ಸಾಧ್ಯವಿದೆ. ಮಕ್ಕಳಲ್ಲಿ ಓದಿದ ಕಡೆ ಆಸಕ್ತಿ ಪ್ರೇರಣೆ, ಧನಾತ್ಮಕ ಧೋರಣೆ ಏಕಾಗ್ರತೆ ಮುಂತಾದ ಮನೋವೈಜ್ಞಾನಿಕ ಅಂಶಗಳನ್ನು ಬೆಳೆಸಲು ಸಾಧ್ಯವಾಗಿದೆ. ಇಷ್ಟೇ ಅಲ್ಲದೆ ಮಕ್ಕಳು ತಾವೇ ಸ್ವತಃ ತಮಗೆ ಆಸಕ್ತಿ ಇರುವ ಕ್ಷೇತ್ರದ ಬಗ್ಗೆ ಹೆಚ್ಚು ಹೆಚ್ಚು ಮಾಹಿತಿ ಪಡೆಯಲು ಸಾಧ್ಯವಿದೆ.

ಮಾಹಿತಿ ತಂತ್ರಜ್ಞಾನದಿಂದ ಶಿಕ್ಷಕರು ಸಾಕಷ್ಟು ತಮ್ಮ ಬೋಧನ ವಿಧಾನಗಳಲ್ಲಿ ಬದಲಾವಣೆಗಳನ್ನು ತರಬಹುದು. ಇದರಿಂದಾಗಿ ಮಕ್ಕಳಿಗೆ ಪರಿಣಾಮಕಾರಿಯಾಗಿ ಕಲಿಸಲು ಸಾಧ್ಯವಿದೆ. ಈ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಆವಶ್ಯಕ ಪೂರಕ ಬೋಧನ ಕಲಿಕಾ ಸಾಮಗ್ರಿಗಳನ್ನು ಒದಗಿಸಿ, ಹೊಸ ವಿಧಾನಗಳನ್ನು ಅಳವಡಿಸಿ ಕಲಿಸುವುದರಿಂದ ಮಕ್ಕಳು ಪರಿಣಾಮಕಾರಿಯಾಗಿ ಕಲಿಯಲು ಸಾಧ್ಯವಿದೆ.

– ಎಂ.ಸ.ಪಾ

## ಮಾಹಿತಿಯ ಸೂಪರ್ ಹೆದ್ದಾರಿ

ಮೊಟ್ಟಮೊದಲ ಬಾರಿಗೆ 1985ರಲ್ಲಿ ಅಮೆರಿಕಾದ ಉಪಾಧ್ಯಕ್ಷರು ಮಾಹಿತಿಯ ಸೂಪರ್ ಹೆದ್ದಾರಿ (Information Super Highway) ಪದವನ್ನು ಬಳಸಿದರೆನ್ನಲಾಗಿದೆ. ಇದು ನಿರಂತರ ವಿಕಾಸ ಹೊಂದುತ್ತಿರುವ ಹಾಗೂ ಸಾಕಾರಗೊಳ್ಳಬೇಕಾಗಿರುವ ವಿದ್ಯುನ್ಮಾನ ತಂತ್ರಜ್ಞಾನದ ಒಂದು ರೂಪವಾಗಿದೆ. ಭವಿಷ್ಯದಲ್ಲಿ ಇದರ ಸಾಧ್ಯತೆಗಳ ಬಗ್ಗೆ ಈಗಲೇ ಏನೂ ಹೇಳಲು ಸಾಧ್ಯವಿಲ್ಲ.


Digitised by Bharatavani, CIIL

'ಮಾಹಿತಿಯ ಸೂಪರ್ ಹೆದ್ದಾರಿ'ಯು ವಾಸ್ತವವಾಗಿ ಜನರನ್ನು ಒಟ್ಟಿಗೆ ಹತ್ತಿರ ತರುವ, ಸಂಪರ್ಕದಲ್ಲಿರುವಂತೆ ಮಾಡುವ ಒಂದು ಪ್ರಯತ್ನವಾಗಿದೆ. ಅಪೇಕ್ಷಿಸಿದ ಮಾಹಿತಿ ಮತ್ತು ಸೇವೆಯನ್ನು ವ್ಯಕ್ತಿಗಳು ಬೇಕೆನಿಸಿದಾಗ ಬೇಕಾದ ಸ್ಥಳದಲ್ಲಿ ಪಡೆಯುವ ಅವಕಾಶವನ್ನು ಇದು ಒದಗಿಸಿಕೊಡಲಿದೆ. ಅಗಾಧ ಪ್ರಮಾಣದ ಮಾಹಿತಿಯು ಕ್ಷಣಾರ್ಧದಲ್ಲಿ ವಿವಿಧ ಬಳಕೆದಾರರಿಗೆ ತಮ್ಮ ಬೆರಳಿನ ತುದಿಯಲ್ಲಿ ಲಭ್ಯವಾಗುವಂತೆ ಮಾಡುವ ತಂತ್ರ ಇದರಲ್ಲಿ ಅಡಕವಾಗಿದೆ. ಒಟ್ಟಾರೆ ಬಹು ಮುಖ ಹಾಗೂ ಬಹುಬಗೆಯ ಸಾಧ್ಯತೆಗಳನ್ನು ಒದಗಿಸಬಲ್ಲ ಭರವಸೆಯ ತಂತ್ರಜ್ಞಾನ ಇದಾಗಿದೆ.

## ಅರ್ಥ ಮತ್ತು ವೈಶಿಷ್ಟ್ಯ

ಸಂವಹನ ತಂತ್ರಜ್ಞಾನದಲ್ಲಿ ಉಂಟಾಗುವ ಬೆಳವಣಿಗೆಗಳು ಮುನ್ನಡೆಗಳು ಜನರಲ್ಲಿ ಮಾಹಿತಿ ಹಂಚಿಕೊಳ್ಳುವ ಹತ್ತು ಹಲವು ಅವಕಾಶಗಳನ್ನು ತೆರೆದಿಡುತ್ತವೆ. ಅದರಂತೆ, ಮಾಹಿತಿಯ ಸೂಪರ್ ಹೆದ್ದಾರಿ ವ್ಯವಸ್ಥೆಯು ಹಲವು ಭರವಸೆಯ ವೈಶಿಷ್ಟ್ಯಗಳನ್ನು ಹೊಂದಿದ್ದು, ಭೌತಿಕ ಅಡೆತಡೆಗಳನ್ನು ಮೀರಿ ಸರಾಗವಾಗಿ ಹಾಗೂ ಶೀಘ್ರವಾಗಿ ಮಾಹಿತಿ ಹರಿವಿಗೆ ಅವಕಾಶ ಕಲ್ಪಿಸುತ್ತದೆ. ಇದು ದೂರವಾಣಿ ಅಥವಾ ಕೇಬಲ್ ರಹಿತ ಸಂಪರ್ಕ ಮಾಧ್ಯಮಕ್ಕೆ ಸಂಬಂಧಿಸಿದೆ. ಇದು ಪ್ರಪಂಚದ ಹೆಚ್ಚಿನ ವ್ಯಕ್ತಿಗಳು, ಸಂಘ ಸಂಸ್ಥೆಗಳನ್ನು ಸಂಪರ್ಕಿಸುವ, ಮಾಹಿತಿ/ಸೇವೆ ಹಂಚಿಕೊಳ್ಳುವ ವ್ಯವಸ್ಥೆಯ ಒಂದು ಜೋಡಣೆಯಾಗಿದೆ. ಎಲ್ಲ ರೂಪದಲ್ಲಿ (ಅಂದರೆ ಪಠ್ಯ, ಶ್ರವ್ಯ, ದೃಶ್ಯ ಹಾಗೂ ಅನಿಮೇಶನ್) ಲಭ್ಯವಿರುವ ಮಾಹಿತಿಗೆ ದಾರಿ/ಪ್ರವೇಶದ ಸಾಧ್ಯತೆಯನ್ನು ಇದು ಉಂಟುಮಾಡುತ್ತದೆ. ಮಾಹಿತಿಯ ಸೂಪರ್ ಹೆದ್ದಾರಿಯು ಇಂಟರ್‌ನೆಟ್ (ಅಂತರ್ಜಾಲ) ರೂಪದ ಕಂಪ್ಯೂಟರ್ ಬೆಂಬಲಿತ ವ್ಯವಸ್ಥೆಯಾಗಿದೆ. ಸ್ಥಳೀಯ, ಪ್ರಾದೇಶಿಕ ಹಾಗೂ ಜಾಗತಿಕ ಹಂತದಲ್ಲಿ ಲಕ್ಷಾಂತರ ವ್ಯಕ್ತಿಗಳು ಇದರ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಲು ಸಾಧ್ಯ. ಬೇರೆ ಸಾಂಪ್ರದಾಯಿಕ ವಿಧಿ ವಿಧಾನಗಳಿಂದ ಮಾಹಿತಿಯನ್ನು ಹುಡುಕಿ ಹಂಚಿಕೊಳ್ಳುವುದು, ವರ್ಗಾಯಿಸುವುದು, ಅನ್ವಯಿಸುವುದು ಇತ್ಯಾದಿಗಳಿಗೆ ಬೇಕಾಗಿರುವ ಶ್ರಮ, ಸಮಯ, ಖರ್ಚುಗಳಿಗೆ ಹೋಲಿಸಿದಾಗ 'ಮಾಹಿತಿಯ ಸೂಪರ್ ಹೆದ್ದಾರಿ' ಅತ್ಯಂತ ಮಿತ ವ್ಯಯಕಾರಿ ಸಾಧನವಾಗಿದೆ. ಮನೆ, ಕಚೇರಿ ಮತ್ತಿತರ ಕಾರ್ಯಸ್ಥಳಗಳಲ್ಲಿದ್ದು ಎಲ್ಲರ ಜೊತೆ ಸಂಪರ್ಕ ಹೊಂದಲು ದೂರದರ್ಶನ ಕಾರ್ಯಕ್ರಮ ವೀಕ್ಷಣೆ, ಪಾಲ್ಗೊಳ್ಳುವಿಕೆ, ಸಂಪರ್ಕಜಾಲ, ಖರೀದಿಗೆ ಸಂಬಂಧಿಸಿದ ಸೇವೆ, ವಿದ್ಯುನ್ಮಾನ ಅಂಚೆಸೇವೆ, ವಾಣಿಜ್ಯ, ವ್ಯವಹಾರ, ಅಗಾಧ ಪ್ರಮಾಣದ ದತ್ತಾಂಶ/ಮಾಹಿತಿ ಸಂಗ್ರಹ ಹಾಗೂ ವಿನಿಮಯ ಮುಂತಾದವುಗಳಲ್ಲಿ ಒಂದೇ ಸೂರಿನಡಿಯಲ್ಲಿ ಬಳಕೆದಾರರಿಗೆ ಸೇವೆ ಒದಗಿಸುವುದು ಮಾಹಿತಿ ಸೂಪರ್ ಹೆದ್ದಾರಿಯ ಉದ್ದೇಶ ಎನ್ನಬಹುದು. ಕಂಪ್ಯೂಟರ್ ಬೆಂಬಲಿತ ಅಂತರ್ಜಾಲ ವ್ಯವಸ್ಥೆಯು ಇದರ ಒಂದು ಅಂಶವಾಗಿದೆ. ಆದರೆ 'ಮಾಹಿತಿಯ ಸೂಪರ್ ಹೆದ್ದಾರಿಯು ಅಂತರ್ಜಾಲವನ್ನು ಮೀರಿ ನಿಲ್ಲುವ ಜಾಗತಿಕ ಬೃಹತ್ ಸಂಪರ್ಕ ವ್ಯವಸ್ಥೆಯಾಗಿದೆ ಎಂದು ಹೇಳಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಕಂಪ್ಯೂಟರ್, ಅಂತರ್ಜಾಲ, ಡೇಟಾಬೇಸ್, ಜಾಗತಿಕ ಸಂಪರ್ಕ ವ್ಯವಸ್ಥೆ, ಕೇಬಲ್ ಹಾಗೂ ಕೇಬಲ್‌ರಹಿತ ಸಂಪರ್ಕ ಸಾಧನ, ವಿದ್ಯುನ್ಮಾನ ಅಂಚೆ ವೀಡಿಯೋ ಫೋನ್, ವಿದ್ಯುನ್ಮಾನ ವೃತ್ತಪತ್ರಿಕೆ, ಟೆಲೆಕ್ಸ್, ಟೆಲಿವಿಷನ್ ಸಂಪರ್ಕ, ಉಪಗ್ರಹ ಮುಂತಾದವುಗಳೆಲ್ಲವನ್ನು ಒಳಗೊಂಡ ಹಾಗೂ ಇವುಗಳ ಮೂಲಕ ಪರಸ್ಪರ ಸಂಪರ್ಕ ಏರ್ಪಡಿಸಿ ಬಳಕೆದಾರರ ಅಪೇಕ್ಷೆಗಳೆಲ್ಲವನ್ನು ಪೂರೈಸುವ ಜಾಗತಿಕ ಮಟ್ಟದ ಮಹಾ ಸಂಪರ್ಕಜಾಲವು ಮಾಹಿತಿಯ ಸೂಪರ್ ಹೆದ್ದಾರಿ ಎಂದು ಕರೆಯಲ್ಪಡುತ್ತದೆ.

ಮಾಹಿತಿಯ ಸೂಪರ್ ಹೆದ್ದಾರಿ ಕಾರ್ಯನಿರ್ವಹಣೆಗೆ ಬೇಕಾಗಿರುವ ಘಟಕಗಳು ಹೀಗಿವೆ–

ಅನಲಾಗ್ ಮತ್ತು ಡಿಜಿಟಲ್ ರೂಪದ ದೂರವಾಣಿ, ಮೊಬೈಲ್ ದೂರವಾಣಿ, ಕಂಪ್ಯೂಟರ್ ವ್ಯವಸ್ಥೆ, ಫ್ಯಾಕ್ಸ್‌ಯಂತ್ರ, ಟೆಲಿವಿಷನ್, ರೇಡಿಯೋ, ಕೇಬಲ್ ಟೆಲಿವಿಷನ್, ಅಂತರ್ಜಾಲ ವ್ಯವಸ್ಥೆ, ಉಪಗ್ರಹ, ಕೇಬಲ್ ರಹಿತ ಸಂಪರ್ಕಜಾಲ, ಇವುಗಳು ಕೆಲವು ಬಗೆಯ ಘಟಕಗಳೆನಿಸಿಕೊಳ್ಳುತ್ತವೆ. ಇನ್ನಿತರ ಘಟಕಗಳೆಂದರೆ ಮೇಲೆ ತಿಳಿಸಿದವುಗಳನ್ನೆಲ್ಲ ಬಳಸಿಕೊಳ್ಳಲು, ನಿರ್ವಹಿಸಲು ಬೇಕಾದ ಅಗತ್ಯ, ಕೌಶಲ ಮತ್ತು ಸಾಮರ್ಥ್ಯಗಳನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿಗಳು ಹಾಗೂ ಆರ್ಥಿಕ ಸಂಪನ್ಮೂಲ.

ಮಾಹಿತಿಯ ಸೂಪರ್ ಹೆದ್ದಾರಿಯಿಂದ ಉಂಟಾಗಬಹುದಾದ ಪ್ರಮುಖ ಪರಿಣಾಮಗಳು

- ವ್ಯಕ್ತಿಗಳ ಜೀವನ ಶೈಲಿಯಲ್ಲಿ ಸಾಕಷ್ಟು ಬದಲಾವಣೆಯ ಸಾಧ್ಯತೆ ಇದೆ. ಮನೆಗಳು ಕಚೇರಿಗಳಂತೆ ಕಾರ್ಯ ನಿರ್ವಹಿಸುವ ಸ್ಥಳಗಳಾಗಿ ಮಾರ್ಪಾಡಾಗಲಿವೆ (ಈಗಾಗಲೇ ಈ ಬದಲಾವಣೆ ಅಲ್ಲಲ್ಲಿ ಕಂಡುಬಂದಿದೆ).

- ಬೇರೆ ಬೇರೆ ಸ್ಥಳಗಳಿಗೆ/ಅಂಗಡಿಗಳಿಗೆ/ಬ್ಯಾಂಕ್ ಮತ್ತಿತರ ವ್ಯಾಪಾರ ವ್ಯವಹಾರ ಸ್ಥಳಗಳಿಗೆ ಅಗತ್ಯವಿದ್ದಾಗ ಮಾತ್ರ ಭೇಟಿ ನೀಡುವ ಕ್ರಮ ರೂಢಿಗೆ ಬರಲಿದೆ.

- ಮನೆಯಿಂದಲೇ ವ್ಯಾಪಾರ ವ್ಯವಹಾರ ನಡೆಸುವ ಸಾಧ್ಯತೆಗಳು ಜಾಸ್ತಿ ಆಗಲಿದ್ದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಟ ಕಡಿಮೆಯಾಗಲಿದೆ.

- ಹಣಕಾಸು ಹಾಗೂ ವ್ಯಾಪಾರ ವ್ಯವಹಾರ ನಿಜವಾದ ಅರ್ಥದಲ್ಲಿ ಜಾಗತಿಕ ರೂಪವನ್ನು ಪಡೆಯಲಿದೆ.

- ತಮ್ಮ ಕ್ಷೇತ್ರಗಳಲ್ಲಿ ಯುಕ್ತ, ಲಾಭದಾಯಕ ಹಾಗೂ ಯಶಸ್ವಿ ಕಾರ್ಯ ನಿರ್ವಹಣೆಗೆ ಮಾಹಿತಿಯ ಸೂಪರ್ ಹೆದ್ದಾರಿ ಅಗತ್ಯವೆನಿಸಲಿದೆ.

- ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಮುಕ್ತ ತಂತ್ರಜ್ಞಾನ ಮತ್ತು ಪ್ರಜೆಗಳ ಬೌದ್ಧಿಕ ಬೆಳವಣಿಗೆಯತ್ತ ಗಮನಹರಿಸಲಾಗುತ್ತದೆ ಹಾಗೂ ಬಂಡವಾಳ ಹೂಡಲಾಗುತ್ತದೆ.

- ಸಂಪರ್ಕ ವ್ಯವಸ್ಥೆ ಹಾಗೂ ಮೂಲಭೂತ ಸೌಕರ್ಯ ವೃದ್ಧಿಸುವ ದಿಕ್ಕಿನಲ್ಲಿ ಹೆಚ್ಚು ಬಂಡವಾಳ ಹೂಡಿಕೆ ಕಂಡುಬರುತ್ತದೆ.

- ನಿಜವಾದ ಅರ್ಥದಲ್ಲಿ ಜಾಗತಿಕ ಸಮಾಜ ಅಸ್ತಿತ್ವ ಪಡೆದುಕೊಂಡು ಇತರ ದೇಶಗಳೊಡನೆ ಪರಿಣಾಮಕಾರಿಯಾಗಿ ಸಂಪರ್ಕ ಏರ್ಪಡಿಸಿಕೊಳ್ಳಲು ಹೆಚ್ಚು ಅವಕಾಶ ಒದಗುತ್ತದೆ.

- ವಿವಿಧ ಹಂತಗಳಲ್ಲಿ ದೂರ ಶಿಕ್ಷಣ ಕಲಿಕೆಗೆ ಹೆಚ್ಚು ಬೇಡಿಕೆ ಕಂಡುಬರುತ್ತದೆ.

- ಬೇರೆ ಬೇರೆ ರಾಷ್ಟ್ರದ ವಿವಿಧ ಧರ್ಮ, ಜನಾಂಗದವರ ಜೊತೆ ಸಂಪರ್ಕ ಹೊಂದಿ ವಿಚಾರ ವಿನಿಮಯ ಹೆಚ್ಚಿಸಿಕೊಳ್ಳುವ ಸಾಧ್ಯತೆ ಉಂಟಾಗುತ್ತದೆ. ಇದರ ಫಲಶ್ರುತಿಯಿಂದ ವಿವಿಧ ವ್ಯಕ್ತಿ, ಧರ್ಮದ ಆಚಾರ/ವಿಚಾರ, ನಂಬಿಕೆ, ಚಿಂತನೆ, ಸಂಸ್ಕೃತಿ ಬಗ್ಗೆ ತಿಳಿಯುವುದರ ಮೂಲಕ ಬೇರೆಯವರ ಬಗ್ಗೆ ಗೌರವ, ಸಹನೆ, ಸಹಿಷ್ಣುತೆ ಬೆಳೆಸಲು ಉತ್ತಮ ಅವಕಾಶ ದೊರಕಲಿದೆ.

- ಸಂಪರ್ಕ ವ್ಯವಸ್ಥೆ ಹಾಗೂ ವಿವಿಧ ರೂಪದ ಮಾಹಿತಿಯ ಸಂಗ್ರಹಣೆ, ಪುನಃ ಪಡೆಯುವಿಕೆ, ಪ್ರಸರಣ ಇವುಗಳ ಮೂಲಕ ಅನುಭವಿ

Digitised by Bharatavani, CIIL

ಹಾಗೂ ತಜ್ಞ ವೈದ್ಯರ ಸೇವೆ, ಸಲಹೆ ಹೆಚ್ಚಿನ ವೈದ್ಯಕೀಯ ಸಂಸ್ಥೆಗಳಿಗೆ ಲಭ್ಯವಾಗಲಿದೆ.

ಮಾಹಿತಿಯ ಸೂಪರ್ ಹೆದ್ದಾರಿಯ ಬಗ್ಗೆ ಲಭ್ಯವಿರುವ ಅಂಶಗಳು ಬಳಕೆದಾರರಲ್ಲಿ ಒಂದು ರೀತಿಯ ರೋಮಾಂಚಕ ಸಾಧ್ಯತೆಗಳನ್ನು ತೆರೆದಿಡುತ್ತವೆ. ಇಷ್ಟೆಲ್ಲ ಸಾಧ್ಯತೆಗಳ ನಡುವೆಯೂ ಮುನ್ನೆಚ್ಚರಿಕೆಯ ಮಾತು ಅಗತ್ಯವೆನಿಸುತ್ತದೆ. ಪ್ರತಿಯೊಂದು ರೀತಿಯ ತಂತ್ರಜ್ಞಾನದ ದುರ್ಬಳಕೆಗೆ ಅವಕಾಶವಿರುತ್ತದೆ. ಅದು ಆ ತಂತ್ರಜ್ಞಾನದ ತಪ್ಪಲ್ಲ. ಮಾನವನ ಸ್ವಾರ್ಥ ಹಾಗೂ ದೌರ್ಬಲ್ಯಗಳಿಂದ ಪ್ರೇರಿತವಾದ ಅದರ ದುರ್ಬಳಕೆ ಸಾಧ್ಯ. ಯಾವುದೇ ರೀತಿಯ ಹೊಸ ತಂತ್ರಜ್ಞಾನಕ್ಕೆ ನಮ್ಮನ್ನು ನಾವು ತೆರೆದುಕೊಳ್ಳದೆ ಇರುವುದು ಸಾಧುವಲ್ಲದ ಮಾತು. ತಂತ್ರಜ್ಞಾನದ ಗುಣ ದೋಷಗಳ ತಿಳುವಳಿಕೆ ಅಗತ್ಯ. ಮಾಹಿತಿ ಮಹಾ ಸಂಪರ್ಕಜಾಲದ ಇಂದಿನ ಹಾಗೂ ಭವಿಷ್ಯದ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು, ಅಗತ್ಯವಿದ್ದಲ್ಲೆಲ್ಲಾ ಪಾರಂಪರಿಕ ಮಾತುಕತೆ, ವಿಚಾರ ವಿನಿಮಯ, ಮುಖಾಮುಖಿ ವ್ಯವಹರಿಸುವಿಕೆ, ಸಾಂಪ್ರದಾಯಿಕ ಸಂವಾದ, ವೈಯಕ್ತಿಕ ಒಡನಾಟ, ಸಂಬಂಧಗಳು, ನಂಬಿಕೆ, ವಿಶ್ವಾಸಗಳು, ಗಟ್ಟಿ ಮೌಲ್ಯಗಳು ಮರೆಯಾಗದಂತೆ, ಅವುಗಳಿಗೆ ಚ್ಯುತಿ ಬರದಂತೆ ಉತ್ತಮ ಅಂಶಗಳ ಲಾಭ ಪಡೆಯುವುದರಲ್ಲಿ ನಮ್ಮ ಜಾಣ್ಮೆ ಮೆರೆಯಬೇಕಾಗಿದೆ.

–ಎ.ಶ್ರೀ

## ಮಿದುಳು ನಕ್ಷೆ

ಒಂದು ವಿಚಾರ, ಪರಿಕಲ್ಪನೆ, ಯೋಜನೆ, ಪದಗಳು, ಆಲೋಚನೆಗಳು, ಕಾರ್ಯಗಳು ಅಥವಾ ಇಂತಹ ಇನ್ನಾವುದೇ ವಿಷಯಗಳಲ್ಲಿ ಯಾವುದಾದರೂ ಒಂದರ ವಿವಿಧ ಅಂಗಗಳನ್ನು ಅಥವಾ ಅವಯವಗಳನ್ನು ನಕ್ಷೆಯ ರೂಪದಲ್ಲಿ ಗುರುತಿಸುವ ವಿಧಾನವೇ ಮಿದುಳುನಕ್ಷೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಒಂದು ವಿಚಾರ, ಪದ ಅಥವಾ ಪರಿಕಲ್ಪನೆ ಇವುಗಳನ್ನು ಮುಖ್ಯವಾಗಿರಿಸಿಕೊಂಡು ಅವುಗಳ ಸುತ್ತ ಸಂಬಂಧಪಟ್ಟ ಉಪವಿಚಾರ ಪದ ಪರಿಕಲ್ಪನೆಗಳನ್ನು ಹೆಣೆಯುತ್ತಾ ನಕ್ಷೆಯ ರೂಪದಲ್ಲಿ ಗುರುತಿಸುವ ಪ್ರಕ್ರಿಯೆಯೇ ಮಿದುಳು ನಕ್ಷೆ (Mind Mapping). ಘಟಕಾಂಶಗಳನ್ನು ಅವುಗಳ ಪರಸ್ಪರ ಸಂಬಂಧದೊಂದಿಗೆ ನಕ್ಷಾರೂಪದಲ್ಲಿ ಸೂಚಿಸುವ ವಿಧಾನವೇ ಮಿದುಳು ನಕ್ಷೆ. ಒಂದು ಕೇಂದ್ರೀಕೃತ ಆಲೋಚನೆ ಅಥವಾ ಪರಿಕಲ್ಪನೆಯ ಮುಖ್ಯ ಘಟಕಗಳನ್ನು ಅವುಗಳ ಅಂತರ್ ಸಂಬಂಧವನ್ನು ಸೂಚಿಸುವಂತೆ ನಕ್ಷೆಯ ರೂಪದಲ್ಲಿ ಪ್ರತಿನಿಧಿಸುವ ಕ್ರಮವೇ ಮಿದುಳುನಕ್ಷೆ ಎಂದೂ ಹೇಳಬಹುದು. ಇದು ಒಂದು ಕ್ರಿಯೆಯ ಪರಿಣಾಮಗಳನ್ನು ಗುರುತಿಸಿಕೊಳ್ಳುವ ಕ್ರಮವೂ ಆಗಿರಬಹುದು.

ಮಿದುಳು ನಕ್ಷೆ ಹೊಸದಾದ ಪರಿಕಲ್ಪನೆಯೇನೂ ಅಲ್ಲ. ಕಲಿಕೆ, ಸ್ಮರಣೆ, ದೃಶ್ಯಾತ್ಮಕ ಆಲೋಚನೆ, ಸಮಸ್ಯಾ ಪರಿಹಾರ ಇತ್ಯಾದಿ ಸಂದರ್ಭಗಳಲ್ಲಿ ಶಿಕ್ಷಣತಜ್ಞರಿಂದ, ಮನೋವಿಜ್ಞಾನಿಗಳಿಂದ, ಇಂಜಿನಿಯರುಗಳಿಂದ ಈ ವಿಧಾನ ವಿವಿಧ ಸನ್ನಿವೇಶಗಳಲ್ಲಿ ಬಳಕೆಯಾಗಿದೆ. ಮೂರನೇ ಶತಮಾನದ ಪ್ರಸಿದ್ಧ ಚಿಂತಕ ಟೈರಸ್ ರಚಿಸಿದ ಮಿದುಳು ನಕ್ಷೆಗಳು ಪ್ರಾಚೀನವಾದವು. ಇವನು ಅರಿಸ್ಟಾಟಲನ ಪರಿಕಲ್ಪನಾತ್ಮಕ ವರ್ಗಗಳನ್ನು ದೃಶ್ಯೀಕರಿಸಿ ನಕ್ಷೆಗಳನ್ನು ತಯಾರಿಸಿದ್ದಾರೆ. 1235–1315ರ ನಡುವೆ ರೋಮನ್ ಲ್ಲೂಲ್ ಎಂಬಾತನು ಮಿದುಳುನಕ್ಷೆಗಳನ್ನು ಬಳಸಿದ್ದ. 1950ರಲ್ಲಿ ಅರ್ಥಾತ್ಮಕಜಾಲ (semantic network) ವನ್ನು ಒಂದು ಸಿದ್ಧಾಂತವಾಗಿ ಬಳಸಲಾಯಿತು. ಇದನ್ನೇ ಆಲನ್ ಎಂ. ಕೋಲಿನ್ ಮತ್ತು ಎಂ ರಾಸ್ ಕ್ವಿಲಾನ್ ಅವರು ಮಿದುಳು ನಕ್ಷೆಗಳಾಗಿ ರೂಪಿಸಿದರು. ಕೋಲಿನ್‌ನು ಈ ಕ್ಷೇತ್ರದಲ್ಲಿ ಕೊಟ್ಟಿರುವ ಕೊಡುಗೆಯನ್ನು ಗಮನಿಸಿದರೆ ಅವನನ್ನೇ 'ಮಿದುಳು ನಕ್ಷೆಯ ಪಿತಾಮಹ' ಎಂದು ಕರೆಯಬಹುದು. ಬ್ರಿಟನ್ನಿನ ಜನಪ್ರಿಯ ಮನೋವಿಜ್ಞಾನ ಲೇಖಕ ಟಾನಿ ಬಝುನ್ ಆಧುನಿಕ ಮಿದುಳು ನಕ್ಷೆಯನ್ನು ತಾನೇ ಅನ್ವೇಷಿಸಿದುದಾಗಿಯೂ ಆಲ್ ಫ್ರೆಡ್ ಕೋಝಿಯೇಸ್ಕಿಯ ಸಾಮಾನ್ಯ ಅರ್ಥವಿಜ್ಞಾನವೇ ತನ್ನನ್ನು ಈ ಕೊಡುಗೆ ಕೊಡುವಂತೆ ಪ್ರೋತ್ಸಾಹಿಸಿತು ಎಂದೂ ಹೇಳಿಕೊಂಡಿದ್ದಾರೆ.

ಈ ನಕ್ಷೆಯು ಸಾಮಾನ್ಯವಾಗಿ ವೃಕ್ಷದ ಆಕಾರವನ್ನೋ ಅಥವಾ ಶ್ರೇಣೀಕೃತ ವಿನ್ಯಾಸವನ್ನೋ ಜಾರುನಕ್ಷೆಯ (Flow Chart) ರೂಪವನ್ನೋ ಅಥವಾ ಇನ್ನಾವುದೋ ಚಿತ್ರದ ಆಕೃತಿಯನ್ನೋ ಪಡೆಯಬಹುದು. ಮೂಲ ವಿಷಯಗಳು ಇವುಗಳ ಅವಯವಗಳ ರೂಪದಲ್ಲಿ ಉಪವಿಷಯಗಳಾಗಿ ಕವಲೊಡೆಯುತ್ತವೆ. ಮುಖ್ಯ ವಿಷಯಗಳಿಗೆ ಉಪವಿಷಯಗಳ ಜೊತೆ ಇರುವ ಸಂಬಂಧವನ್ನು ಒಂದು ಜಾಲದ ರೂಪದಲ್ಲಿ ಬಿಂಬಿಸಲಾಗುತ್ತದೆ. ಆದುದರಿಂದಲೇ ಇದನ್ನು 'ಮಿದುಳು ಜಾಲೀಕರಣ' ಅಥವಾ 'ಜಾಲೀಕರಣ' (Net working) ಎಂದೂ ಹೇಳಲಾಗುತ್ತದೆ.

ಮಿದುಳು ನಕ್ಷೆಯನ್ನು ರೂಪಿಸುವ ವಿಧಾನವನ್ನು ಕೆಳಗಿನ ಮಿದುಳು ನಕ್ಷೆಯಲ್ಲಿ ತೋರಿಸಲು ಪ್ರಯತ್ನಿಸಲಾಗಿದೆ.

ಮಿದುಳು ನಕ್ಷೆ ಬಿಡಿಸಲು ವ್ಯವಸ್ಥಿತವಾದ ಕ್ರಮವನ್ನು ಅನುಸರಿಸಬೇಕು. ಒಂದು ಪರಿಕಲ್ಪನೆಯ, ಯೋಜನೆಯ ಕಾರ್ಯದ, ವಿಷಯದ ಘಟಕಾಂಶಗಳನ್ನು ಮೊದಲಿಗೆ ಗುರುತಿಸಿಕೊಳ್ಳಬೇಕು. ಇದನ್ನು ಸೃಜನಶೀಲವಾದ ಆಲೋಚನೆಯಿಂದ, ಸಂಬಂಧಿಸಿದ ಸಾಹಿತ್ಯಾವಲೋಕನದಿಂದ ಅಥವಾ ಆಯಾ ವಿಷಯಗಳಲ್ಲಿ ಪರಿಣತಿ ಪಡೆದವರೊಂದಿಗಿನ ಚರ್ಚೆಗಳಿಂದ ಕ್ರೋಡೀಕರಿಸಬಹುದು. ಇದಾದ ಬಳಿಕ ಸಂಬಂಧಪಟ್ಟ ಘಟಕಾಂಶಗಳನ್ನು ಒಂದೆಡೆ ಜೋಡಿಸಿಕೊಳ್ಳಬೇಕು.





Digitised by Bharatavani, CIIL

ಈ ಗುಂಪುಗಳನ್ನು ಆದ್ಯತೆಗೆ ಅನುಗುಣವಾಗಿ ಶ್ರೇಣೀಕರಿಸಿಕೊಳ್ಳಬೇಕು. ಪ್ರತಿ ಗುಂಪಿನೊಳಗಿನ ಘಟಕಗಳ ಸಂಬಂಧವನ್ನೂ ಹಾಗೂ ಮುಖ್ಯ ವಿಷಯ ಮತ್ತು ಗುಂಪುಗಳ ಸಂಬಂಧವನ್ನು ಕವಲುಗಳ ಹಾಗೂ ವಕ್ರರೇಖೆಗಳ ರೂಪದಲ್ಲಿ ಸೂಚಿಸಬೇಕು.

ಮಿದುಳು ನಕ್ಷೆಗಳನ್ನು ಬಿಡಿಸುವಾಗ ಮತ್ತೂ ಕೆಲವು ಅಂಶಗಳು ಗಮನದಲ್ಲಿರಲಿ. ಮುಖ್ಯ ವಿಷಯ ಹಾಳೆಯ ಮಧ್ಯಭಾಗದಲ್ಲಿ ಒಂದು ಚೌಕದೊಳಗೆ ಅಥವಾ ವೃತ್ತದೊಳಗೆ ಅಥವಾ ತ್ರಿಕೋನದ ಆಕೃತಿಯ ಒಳಗೆ ಇರಲಿ. ಮುಖ್ಯ ವಿಷಯವು ವರ್ಣಮಯವಾದ ಚಿತ್ರದೊಂದಿಗೆ (ಕೊನೆಯಪಕ್ಷ ಮೂರು ಬಣ್ಣಗಳು) ಎದ್ದು ಕಾಣುವಂತಿರಲಿ. ಮುಖ್ಯಾಂಶಗಳು ಹಾಗೂ ಅವಯವಾಂಶಗಳಿಗಿರುವ ಸಂಬಂಧವು ಡೊಂಕುರೇಖೆಗಳ ಮೂಲಕ (ಚಿತ್ರ ನೋಡಿ) ವಿವಿಧ ಬಣ್ಣ, ಅಕ್ಷರಗಳ ವಿನ್ಯಾಸ, ಚಿತ್ರಗಳು, ಸಂಕೇತಗಳು ಹಾಗೂ ಸಾಲುಗಳ ಗಾತ್ರ ಇತ್ಯಾದಿ ಅಂಶಗಳಿಗನುಗುಣವಾಗಿರಲಿ. ಮುಖ್ಯ ಪದಗಳು ಅವುಗಳ ಪ್ರಮುಖತೆಗನುಗುಣವಾಗಿ ಚಿಕ್ಕ/ದೊಡ್ಡದಾಗಿರಲಿ, ಪದಗಳು ಚಿತ್ರಗಳು ಒಂದಕ್ಕೊಂದು ಅಂಟಿಕೊಳ್ಳದೆ ಬೇರೆ ಬೇರೆ ಸಾಲುಗಳಲ್ಲಿ ಇರಲಿ. ಸಂಬಂಧಸೂಚಕ ಗೆರೆಗಳು ಕೇಂದ್ರದಿಂದ ಹೊರಹೊಮ್ಮಲಿ, ರೇಖೆಗಳು ಸಲೀಸಾಗಿ ಎಳೆದ ಹಸ್ತರೇಖೆಗಳಾಗಿರಲಿ. ಜೊತೆಗೆ ಚಿತ್ರಗಳ ಅಥವಾ ಪದಗಳ ಗಾತ್ರದಷ್ಟು ಮಾತ್ರ ಇರಲಿ. ಈ ರೇಖೆಗಳಲ್ಲಿ ಒಳಭಾಗದ ಅಂದರೆ ಕೇಂದ್ರವಿಷಯಕ್ಕೆ ನೇರವಾಗಿ ಸಂಬಂಧಿಸಿದ ರೇಖೆಗಳು ದಪ್ಪವಾಗಿದ್ದು ಅವುಗಳಿಂದ ಹೊರಗೆ ಹೊರಡುವ ಗೆರೆಗಳು ಸಪೂರವಾಗಿರಲಿ. ಈ ಗಾತ್ರವೇ ಮುಖ್ಯ ವಿಷಯಕ್ಕೆ ಸಂಬಂಧಿಸಿದಂತೆ ಉಪವಿಷಯಗಳ ಅಂತರವನ್ನು ಅಥವಾ ಸಂಬಂಧವನ್ನು ಹೆಚ್ಚು ಸ್ಪಷ್ಟಪಡಿಸುತ್ತವೆ. ಸಂಬಂಧಸೂಚಕ ಕೊಂಡಿಗಳನ್ನು, ಬಣ್ಣಗಳನ್ನು, ಚಿತ್ರಗಳನ್ನು, ಸಂಕೇತಗಳನ್ನು ಆಯಾಮಸೂಚಕಗಳನ್ನು ಸೂಕ್ತವಾಗಿ ಬಳಸಿ ವಿಷಯಗಳ ಶ್ರೇಣಿ, ಕ್ರಮ, ಚೌಕಟ್ಟು, ಇವುಗಳ ಸಮರ್ಪಕ ಬಳಕೆಯಿಂದ ಒಟ್ಟು ನಕ್ಷೆಗೆ ಸ್ಪಷ್ಟತೆಯನ್ನು ತರಲು ಪ್ರಯತ್ನಿಸಿ. ಇವೆಲ್ಲ ಅಂಶಗಳ ಸಂಯೋಜನೆಯಿಂದ ಒಂದು ಉತ್ತಮ ಮಿದುಳು ನಕ್ಷೆ ರೂಪುಗೊಳ್ಳುತ್ತದೆ.

ಮಿದುಳು ನಕ್ಷೆಯನ್ನು ಅನೇಕ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಹೊಸ ಆಲೋಚನೆಗಳ ಪ್ರಚೋದನೆಗೆ, ಒಂದು ಕಾರ್ಯದ ಅಥವಾ ಸಭೆಯ ಹೊರಹರಿವನ್ನು ಗುರುತಿಸಿಕೊಳ್ಳಲು, ಒಂದು ಪ್ರಕ್ರಿಯೆ ಅಥವಾ ಕಾರ್ಯದ ಉಪಘಟಕಗಳನ್ನು ಕಂಡುಕೊಳ್ಳಲು, ಒಂದು ಸಮಸ್ಯೆಯ ಕಾರಣಗಳನ್ನು ಅಥವಾ ಪರಿಹಾರಗಳನ್ನು ಹುಡುಕಲು, ಒಂದು ಯೋಜನೆಯ ನಕ್ಷೆ ತಯಾರಿಸಲು, ಪದ ಹಾಗೂ ದೃಶ್ಯ ಸಂಯೋಜನೆ ಮಾಡಲು, ಸೃಜನಶೀಲ ವಿಚಾರಗಳನ್ನು ಅಭಿವ್ಯಕ್ತಿಸಲು, ಗ್ರಾಂಥಿಕ ವಿಷಯಗಳನ್ನು ಸಂಕ್ಷೇಪಿಸಿ ಸರಳೀಕರಿಸಲು, ವಿಷಯಗಳು ನೆನಪಿಗೆ ದಕ್ಕುವಂತೆ ವಿನ್ಯಾಸಗೊಳಿಸಲು, ಕಾರ್ಯಸಂಸ್ಕೃತಿಯನ್ನು ಹುಟ್ಟುಹಾಕಿ ಬೆಳೆಸಲು, ವಿಚಾರ ಅಥವಾ ಮಾಹಿತಿಗಳನ್ನು ದಾಖಲಿಸಲು, ಮಿದುಳುನಕ್ಷೆಗಳು ಉತ್ತಮ ಸಾಧನಗಳಾಗುತ್ತವೆ. ಇಷ್ಟೇ ಅಲ್ಲದೆ ಹೊಸ ಆಲೋಚನೆಗಳನ್ನು ಹುಟ್ಟುಹಾಕಲು, ಒಂದು ಹೊಸಕಾರ್ಯವನ್ನು ಚಾಕ್ಷುಷ ರೂಪದಲ್ಲಿ ಪ್ರತಿನಿಧಿಸಲು, ಆಲೋಚನೆಗಳನ್ನು ವರ್ಗೀಕರಿಸಲು, ಪ್ರಸ್ತುತ ನಮಗಿರುವ ಸ್ಮರಣೆ ಅಥವಾ ಸ್ಮೃತಿಯನ್ನು ಗುರುತಿಸಿಕೊಳ್ಳಲೂ ಇವು ಸಹಾಯ ಮಾಡುತ್ತವೆ. ಇದನ್ನು ಬಳಸಿ ವಿದ್ಯಾರ್ಥಿಗಳು ತಮ್ಮ ಅಧ್ಯಯನದ ವೇಳಾಪಟ್ಟಿಯನ್ನು ತಯಾರಿಸಿಕೊಳ್ಳಬಹುದು. ವಿಚಾರಗಳನ್ನು ನಕ್ಷಾರೂಪದಲ್ಲಿ ಪ್ರತಿನಿಧಿಸುವುದರಿಂದ ಇವು ಕಾರ್ಯಯೋಜನೆಗೆ, ಸಂಘಟನೆಗೆ ನೆರವಾಗುತ್ತವೆ. ಹೀಗೆ ಆಲೋಚನೆಗಳ ಸಂಘಟನೆಗೆ, ಪರಿಕಲ್ಪನಾ ವಿಶ್ಲೇಷಣೆಗೆ, ಕಾರ್ಯ ಯೋಜನೆಗೆ ಸಮಸ್ಯಾ ಪರಿಹಾರಕ್ಕೆ ಇತ್ಯಾದಿ ವಿಭಿನ್ನ ರೀತಿಯಲ್ಲಿ ಸಹಾಯವಾಗುವುದರ ಮೂಲಕ ಮಿದುಳು ನಕ್ಷೆಯು ಯಾವುದೇ ಅಧ್ಯಯನದ ಉದ್ದೇಶ ಸಾಧನೆಗೆ ಪರಿಣಾಮಕಾರಿ ತಂತ್ರವಾಗಿ ಕೆಲಸಮಾಡುತ್ತದೆ.

ವೈಯಕ್ತಿಕವಾಗಿ, ಕೌಟುಂಬಿಕವಾಗಿ, ಶೈಕ್ಷಣಿಕವಾಗಿ ಹಾಗೂ ಉದ್ಯಮ ಕ್ಷೇತ್ರಗಳಲ್ಲಿ ವಿಚಾರಗಳ ಸಂಗ್ರಹ, ವಿಮರ್ಶೆ, ಪುನರ್ವಿಮರ್ಶೆ ಸ್ಪಷ್ಟೀಕರಣ ಇತ್ಯಾದಿ ಉದ್ದೇಶಗಳಿಗೆ ಮಿದುಳು ನಕ್ಷೆಯ ಕ್ರಮವನ್ನು ಅನ್ವಯಿಸಬಹುದು. ಈ ಸನ್ನಿವೇಶಗಳಲ್ಲಿ ಮೊದಲಿಗೆ ಮೂಲ ವಿಷಯದ ಘಟಕಾಂಶಗಳನ್ನು ಗುರುತಿಸಿ ನಂತರ ಶ್ರೇಣೀಕೃತ ವಿನ್ಯಾಸಗಳನ್ನು ವರ್ಗೀಕರಣ ವಿನ್ಯಾಸಗಳನ್ನು/ ಸರಣಿ ವಿನ್ಯಾಸಗಳನ್ನು ರೂಪಿಸಲಾಗುವುದು.

ಶಿಕ್ಷಣದಲ್ಲಿ ಮಿದುಳು ನಕ್ಷೆ ವಿಶೇಷ ರೀತಿಯಲ್ಲಿ ಮಹತ್ವ ಪಡೆಯುತ್ತದೆ. ಕಲಿಕೆ ಹಾಗೂ ಬೋಧನೆಯಲ್ಲಿ ಇದು ಅತ್ಯಂತ ಪರಿಣಾಮಕಾರಿ. ಏಕೆಂದರೆ ಇದು ಮಾನವನ ಮಿದುಳಿನ ಬಲ ಹಾಗೂ ಎಡಭಾಗವೆರಡರ ವಿಮರ್ಶಾತ್ಮಕ ಕೌಶಲಗಳನ್ನು ದುಡಿಸಿಕೊಳ್ಳುತ್ತದೆ. ಹೊಸ ಹೊಳಹುಗಳು ಹುಟ್ಟಲು ಅವಕಾಶ ಮಾಡಿಕೊಡುತ್ತದೆ.

ಮಿದುಳು ನಕ್ಷೆ ಕಲಿಕೆಗೆ ವಿಶೇಷವಾಗಿ ಸಹಾಯಮಾಡುತ್ತದೆ. ಏಕೆಂದರೆ ಯಾವುದೇ ಕಲಿಕೆ ಬಿಡಿಬಿಡಿಯಾದ ವ್ಯಷ್ಟಿರಚನೆಗಿಂತ ಸಂಬಂಧಿಸಿದ ಅವಯವಗಳೊಂದಿಗಿನ ಸಮಷ್ಟಿರಚನೆಗೆ ತೆರೆದುಕೊಂಡಾಗ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಅದರಲ್ಲೂ ಅವಯವಗಳ ಸಂಬಂಧವನ್ನು ಸ್ಪಷ್ಟೀಕರಿಸುವ ಈ ನಕ್ಷೆಯ ದೃಶ್ಯಮಾದರಿ ವಿಷಯಗಳನ್ನು ಹೆಚ್ಚು ಸ್ಪಷ್ಟ ಮಾಡಿಕೊಳ್ಳಲು ಕಲಿತುದನ್ನು ಹೆಚ್ಚು ಕಾಲ ನೆನಪಿನಲ್ಲಿ ಉಳಿಸಿಕೊಳ್ಳಲು ಸಹಾಯಮಾಡುತ್ತದೆ. ವಿಷಯಗಳ ಅವಯವಗಳ ಸಂಬಂಧಗಳ ಸ್ಪಷ್ಟವಾದಷ್ಟೂ ವಿಷಯ ಸ್ಪಷ್ಟವಾಗುತ್ತದೆ. ಈ ರೀತಿಯಿಂದಲೂ ಮಿದುಳು ನಕ್ಷೆ ಕಲಿಕೆ ಹಾಗೂ ಬೋಧನೆಯ ಒಂದು ತಂತ್ರವಾಗಿ ಕೆಲಸಮಾಡುತ್ತದೆ. ಬೋಧನೆಯ ಸನ್ನಿವೇಶದಲ್ಲಿ ಮಿದುಳು ನಕ್ಷೆಗಳು ಕಲಿಕೆಯನ್ನು ಸ್ಥಿರಗೊಳಿಸುತ್ತವೆ. ಸಮಾಜ ವಿಜ್ಞಾನ ತರಗತಿಯಲ್ಲಿ ಬಳಸಬಹುದಾದ ಒಂದು ಮಿದುಳು ನಕ್ಷೆಯನ್ನು ಕೆಳಗೆ ಕೊಡಲಾಗಿದೆ.

ಮಿದುಳು ನಕ್ಷೆಯನ್ನು ಒಂದು ಉತ್ತಮ ಟಿಪ್ಪಣಿ ತೆಗೆದುಕೊಳ್ಳುವ ತಂತ್ರವಾಗಿಯೂ ಬಳಸಬಹುದು. ಒಂದು ಉಪನ್ಯಾಸವನ್ನು ಕೇಳುತ್ತಿರುವಾಗ ಮುಖ್ಯಾಂಶಗಳನ್ನೂ ಅದರ ಜೊತೆಗೆ ವಿವರಗಳನ್ನೂ ಘಟಕಾಂಶಗಳ ರೂಪದಲ್ಲಿ ಗುರುತಿಸಿಕೊಂಡು ನಕ್ಷೆಯನ್ನು ತಯಾರಿಸಿಕೊಳ್ಳಬಹುದು. ಇದರ ಜೊತೆಗೆ ವಿಷಯಗಳನ್ನು ಚೆನ್ನಾಗಿ ನೆನಪಿಡುವ ಸಾಧನವಾಗಿಯೂ ಇದನ್ನು ಬಳಸಬಹುದು. ಸಂಕೀರ್ಣ ವಿಚಾರಗಳನ್ನು ಸರಳೀಕರಿಸಿ ಅರ್ಥಮಾಡಿಕೊಳ್ಳುವ ತಂತ್ರವಾಗಿಯೂ ಈ ಮಿದುಳು ನಕ್ಷೆಗಳು ಸಹಾಯಕ್ಕೆ ಬರುತ್ತವೆ.

ಮಿದುಳು ನಕ್ಷೆಯನ್ನು ವಿಭಿನ್ನ ಸನ್ನಿವೇಶಗಳಲ್ಲಿ ಬಳಸಬಹುದು. ಒಂದು ಗುಂಪಿನ ವಿವಿಧ ಸದಸ್ಯರು ವಿಭಿನ್ನ ಸಮಸ್ಯೆಗಳನ್ನು ಹೊಂದಿದ್ದು ಪರಿಹರಿಸಿಕೊಳ್ಳಬೇಕಾದಾಗ, ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳ ಬೇಕಾದಾಗ, ಗಜಿಬಿಜಿ ಗಲಾಟೆಯಿಲ್ಲದೆ ವ್ಯಕ್ತಿ ಒಬ್ಬನೇ ಮೌನವಾಗಿ ಕುಳಿತು ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕಾದಾಗ, ಹಲವೇ ಸದಸ್ಯರಿರುವ ಸಭೆಯ ಮೌನ ಮುರಿಯಬೇಕಾದ ಸಂದರ್ಭದಲ್ಲಿ ಇತ್ಯಾದಿ ಅನೇಕ ಸನ್ನಿವೇಶಗಳಲ್ಲಿ ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

ಮಿದುಳು ನಕ್ಷೆಗಳು ವೈಯಕ್ತಿಕ ಉದ್ದೇಶಗಳಿಗೆ ಹಾಗೂ ಗುಂಪು ಉದ್ದೇಶಗಳೆರಡಕ್ಕೂ ಸಮಾನವಾಗಿ ಉಪಯೋಗವಾಗುತ್ತವೆ. ಗುಂಪಿನಲ್ಲಿ ಮಿದುಳು ನಕ್ಷೆ ಕಟ್ಟುವ/ಬಳಸುವ ಕ್ರಮವನ್ನು ಹೀಗೆ ವಿವರಿಸಬಹುದು.

Digitised by Bharatavani, CIIL



**ಮೊದಲನೇ ಹಂತ : ಗುಂಪು ಕಟ್ಟಿರಿ**

ಒಂದು ಗುಂಪಿನ ಪ್ರತಿ ಸದಸ್ಯರಿಗೆ ಸೃಜನಶೀಲವಾದ ಬೇರೆ ಬೇರೆ ಸಮಸ್ಯೆಗಳಿವೆ ಎಂದಿಟ್ಟುಕೊಳ್ಳೋಣ. ಇವರೆಲ್ಲರೂ ಒಂದೇ ಯೋಜನೆಯ ಅಥವಾ ಒಂದು ಸೃಜನಶೀಲ ಕಾರ್ಯಾಗಾರದ ವಿವಿಧ ಸದಸ್ಯರಿರಬಹುದು. ಎಲ್ಲ ಸದಸ್ಯರನ್ನೂ ವೃತ್ತಾಕಾರವಾಗಿ ಒಂದು ಮೇಜಿನ ಸುತ್ತ ಅಥವಾ ವೃತ್ತಾಕಾರವಾಗಿ ಜೋಡಿಸಿದ ಕುರ್ಚಿಗಳಲ್ಲಿ ಕುಳ್ಳಿರಿಸಿ. ಈ ವ್ಯವಸ್ಥೆ ಸದಸ್ಯರು ಬರೆಯಬೇಕಾದುದನ್ನು ಬರೆಯಲು ಸಹಕಾರಿಯಾಗುವಂತೆ ಇರಲಿ.

**ಎರಡನೇ ಹಂತ : ಸಮಸ್ಯೆಯನ್ನು ಲಿಖಿತರೂಪದಲ್ಲಿ ದಾಖಲಿಸಿ**

ಪ್ರತಿಯೊಬ್ಬರೂ ಹಾಳೆಯ ಮಧ್ಯಭಾಗದಲ್ಲಿ ಒಂದು ವೃತ್ತಾಕೃತಿ ರಚಿಸಿ. ಅದರಲ್ಲಿ ತಮ್ಮ ಸಮಸ್ಯೆಗಳನ್ನು ಬರೆಯಲಿ. ಈ ಸಮಸ್ಯೆಯು ಒಂದು ಪದ, ಪದಪುಂಜ, ಹೇಳಿಕೆ ಅಥವಾ ಪ್ರಶ್ನೆಯ ರೂಪದಲ್ಲಿರಲಿ.

**ಮೂರನೇ ಹಂತ : ಪ್ರಚೋದನೆ ಜೋಡಿಸಿ**

ಪ್ರತಿಯೊಬ್ಬರೂ ಅವರವರ ಎಡಭಾಗದಲ್ಲಿರುವವರಿಗೆ (ಅಥವಾ ಬಲಭಾಗದಲ್ಲಿರುವವರಿಗೆ) ಹಾಳೆಯನ್ನು ವರ್ಗಾಯಿಸಲಿ. ಎಲ್ಲರಿಗೂ ಹಾಳೆ ಸಿಕ್ಕಿದ ಮೇಲೆ ಪ್ರತಿಯೊಬ್ಬರೂ ಆ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಕವಲುಗೆರೆಯನ್ನು ಗುರುತಿಸಿ ಅದಕ್ಕೆ ಅಂಟಿದಂತೆ ಒಂದು ವೃತ್ತ ರಚಿಸಿ ಅದರೊಳಗೆ ಪರಿಹಾರ ಪ್ರಚೋದಕವಾದ ಒಂದು ವಿಚಾರವನ್ನು ಅತಿ ಸಂಕ್ಷಿಪ್ತವಾಗಿ ಸೂಚಿಸಲಿ. ಈ ಪ್ರಚೋದನೆ ಹೆಚ್ಚು ಆಲೋಚನೆಗಳನ್ನು ಹುಟ್ಟು ಹಾಕುವಂತಿರಬೇಕು.

**ನಾಲ್ಕನೇ ಹಂತ : ಪ್ರಚೋದನೆಯ ಜೋಡಣೆ ಮುಗಿಸಿ**

ಎಲ್ಲರ ಸಮಸ್ಯೆಗಳಿಗೆ ಈ ರೀತಿಯ ಪ್ರಚೋದನಾತ್ಮಕ ಸೂಚನೆಗಳು ಸಿಗಲಿ. ಇದೇ ಸಂದರ್ಭದಲ್ಲಿ ತಕ್ಷಣವೇ ಅವುಗಳ ಘಟಕಾಂಶಗಳನ್ನು ಗುರುತಿಸಬೇಕು. ಮೂಲ ಸಮಸ್ಯೆಗೆ ದೊರೆಯಬಹುದಾದ ಪ್ರಚೋದನೆಗಳನ್ನು ಗುಂಪಿನ ಎಲ್ಲರಿಂದ ಎಲ್ಲರೂ ಪಡೆಯುವಂತಾಗಲಿ. ನಂತರ ಹಾಳೆಗಳನ್ನು ಸಮಸ್ಯೆಯ ಮಾಲೀಕನಿಗೆ ತಲುಪಿಸಿ ಪ್ರತಿಯೊಬ್ಬರ ಹಾಳೆಯಲ್ಲೂ ಮೂಲ ಸಮಸ್ಯೆಯಿಂದ ಕವಲೊಡೆದ ಅನೇಕ ಪ್ರಚೋದನಾತ್ಮಕ ಸೂಚನೆಗಳಿರುತ್ತವೆ.

**ಐದನೇ ಹಂತ : ಆಲೋಚನೆಗಳನ್ನು ಹುಟ್ಟುಹಾಕಿ**

ಈಗ ದೊರೆತಿರುವ ಸೂಚನೆಗಳ ಸಹಾಯದಿಂದ ಸಮಸ್ಯಾ ಪರಿಹಾರಕ್ಕೆ ಮಾರ್ಗಗಳನ್ನು ಗುರುತಿಸಿ. ಅಗತ್ಯವಿರುವಷ್ಟು ಆಲೋಚನೆಗಳು ಸಿಗುವವರೆಗೆ ಈ ಪ್ರಕ್ರಿಯೆಯನ್ನು ಮುಂದುವರಿಸಿ.

ಮೀನುಮೂಳೆ ನಕ್ಷೆ (Fish bone diagram)ಯೂ ಒಂದು ರೀತಿಯ ಮಿದುಳು ನಕ್ಷೆಯೇ. ಇದನ್ನು ಹಂತ ಹಂತವಾಗಿ ರಚಿಸಬೇಕು. ಅದರ ವಿವರಗಳು ಹೀಗಿವೆ. ಮೊದಲಿಗೆ ಹಾಳೆಯ ಒಂದು ಭಾಗದಲ್ಲಿ ಒಂದು ತ್ರಿಕೋನ ರಚಿಸಿ. ತ್ರಿಕೋನದ ತುದಿಯೇ ಮೀನಿನ ತಲೆ ಎಂದುಕೊಳ್ಳಿ. ಪ್ರಸ್ತುತ ನಕ್ಷೆಯಲ್ಲಿ ಬಿಡಿಸಬೇಕಾದ ವಿಷಯವನ್ನು (ಧ್ಯೇಯ, ಪರಿಕಲ್ಪನೆ) ಈ ತ್ರಿಕೋನದಲ್ಲಿ ಸಾಂಕೇತಿಕವಾಗಿ ಅಥವಾ ಪದಗಳ ರೂಪದಲ್ಲಿ ಬರೆಯಿರಿ. ನಂತರ ತ್ರಿಕೋನದ ಎಡಭಾಗಕ್ಕೆ ಒಂದು ಅಡ್ಡಗೆರೆ ಎಳೆಯಿರಿ. ಈ ಅಡ್ಡಗೆರೆಯ ಮೇಲೆ ಕೋನ ಉಂಟಾಗುವಂತೆ ಅನೇಕ ಗೆರೆಗಳನ್ನು ಎಳೆಯಿರಿ. ಕೋನ ಮಾಡುವ ಗೆರೆಗಳ ಮೇಲೆ ಮುಖ್ಯಾಂಶಗಳ ಉಪ ಅಂಶಗಳನ್ನು ಬರೆಯಿರಿ. ಉದಾಹರಣೆಗೆ, ಶಿಕ್ಷಣದಲ್ಲಿ ಓದುವ ಅಭ್ಯಾಸವನ್ನು


Digitised by Bharatavani, CIIL



ಹೇಗೆ ಹೆಚ್ಚಿಸಬಹುದು ಎಂಬುದನ್ನು ಕುರಿತ ಒಂದು ಮೀನು ಮೂಳೆ ನಕ್ಷೆ ಹೇಗಿರಬಹುದು ಎಂಬುದನ್ನು ಕೆಳಗೆ ಸೂಚಿಸಲಾಗಿದೆ.

1970ರಲ್ಲಿ ಬೆಳಕಿಗೆ ಬಂದ ಪರಿಕಲ್ಪನಾ ನಕ್ಷೆಗಳನ್ನು ಮಿದುಳು ನಕ್ಷೆ ರೇಖಾತ್ಮಕವಾಗಿ ಹೋಲುವುದಾದರೂ ಇವುಗಳ ನಡುವೆ ವ್ಯತ್ಯಾಸವಿದೆ. ಮೊದಲನೆಯದು ವಕ್ರಾಕಾರದ ಶ್ರೇಣಿಗಳು ಹಾಗೂ ವೃಕ್ಷರಚನೆಯ ಆಧಾರದ ಮೇಲೆ ಒಂದು ಮೂಲಭೂತ ಪರಿಕಲ್ಪನೆಯ ಅಥವಾ ವಿಷಯದ ಒಳ ಅವಯವಗಳನ್ನು ಅಥವಾ ಸಂಬಂಧಗಳನ್ನು ಸೂಚಿಸಿದರೆ ಎರಡನೆಯದು ವಿವಿಧ ಪರಿಕಲ್ಪನೆಗಳ ಸಂಬಂಧವನ್ನು ವೈವಿಧ್ಯಮಯ ವಿನ್ಯಾಸಗಳಲ್ಲಿ ಗುರುತಿಸುವಂತಹುದು. ಮಿದುಳು ನಕ್ಷೆಗಳು ಒಂದೇ ವಿಷಯ/ಪರಿಕಲ್ಪನೆಗಳನ್ನು ಕುರಿತ ವಿವರಗಳನ್ನು ಗುರುತಿಸಿದರೆ ಪರಿಕಲ್ಪನಾ ನಕ್ಷೆಯು ವಿವಿಧ ಪರಿಕಲ್ಪನೆಗಳ ನಡುವಿನ ಸಂಬಂಧವನ್ನು ಗುರುತಿಸುತ್ತದೆ.

ಮಿದುಳು ಲೇಖನ ಕ್ರಮವು ವಿಚಾರಗಳು ಚಲಿಸುವಂತೆ ಮಾಡಿ ಹೊಸಹೊಸ ಆಲೋಚನೆಗಳನ್ನು ಹುಟ್ಟು ಹಾಕಲು ಸಹಕರಿಸುತ್ತದೆ. ಮಿದುಳು ನಕ್ಷೆಯು ಹೊರಹೊಮ್ಮಿದ ವಿಚಾರಗಳನ್ನು ಸರಳವಾದ ಶ್ರೇಣೀಕೃತ ದೃಶ್ಯ ರಚನೆಯಲ್ಲಿ ಬೆಸೆಯಲು ಬೆಳೆಸಲು ಸಹಕರಿಸುತ್ತದೆ.

ನಮಗೆ ಬೇಕಾದ ವಿಷಯಗಳನ್ನು ಕುರಿತ ಮಿದುಳು ನಕ್ಷೆಗಳನ್ನು ತಯಾರಿಸಿಕೊಳ್ಳಲು ಈಗ ಅನೇಕ ಪ್ರೋಗ್ರಾಂಗಳು (ಕಂಪ್ಯೂಟರ್ ಕಾರ್ಯಕ್ರಮಗಳು) ಅಂತರ್ಜಾಲ (ಇಂಟರ್‌ನೆಟ್) ದಲ್ಲಿ ಸಿಗುತ್ತವೆ. ಹೀಗಾಗಿ ಮೂಲಭೂತ ಕಂಪ್ಯೂಟರ್ ಕೌಶಲಗಳಿರುವ ಯಾರೂ ಈ ನಕ್ಷೆಗಳನ್ನು ಸಿದ್ಧಪಡಿಸಿಕೊಳ್ಳಬಹುದು.

– ಎ.ಶ.

## ಮೆದುಳಿನ ಪಾರ್ಶ್ವತೆ–ಶೈಕ್ಷಣಿಕ ನಿಹಿತಾರ್ಥಗಳು

ಮಾನವನ ಮೆದುಳು ಸರಿ ಸುಮಾರು ಒಂದೂವರೆ ಕೆ.ಜಿ.ಯಷ್ಟು ತೂಗುತ್ತದೆ (3.3. ಪೌಂಡಗಳು). ಇದರಲ್ಲಿ 80%ದಷ್ಟು ನೀರು ಹಾಗೂ ಉಳಿದುದರಲ್ಲಿ 1/2ದಷ್ಟು ಭಾಗ ಕೊಬ್ಬಿನಂಶವನ್ನೂ ಇನ್ನುಳಿದ 1/2 ಭಾಗವು ಕಾರ್ಬೋಹೈಡ್ರೇಟ್ (ಶರ್ಕರ ಪಿಷ್ಟ) ಪ್ರೋಟೀನ್ (ಸಸಾರಜನಕ) ಹಾಗೂ ಬೈಜಿಕ ಆಮ್ಲವನ್ನು ಒಳಗೊಂಡಿದೆ. ಮೆದುಳಿನ ಪಾರ್ಶ್ವತೆ ಎಂದರೆ ಮೆದುಳಿನ ಒಂದು ಭಾಗದೊಂದಿಗೆ ಇನ್ನೊಂದು ಬದಿಯ ಮಹತ್ವವನ್ನು ಅಭ್ಯಾಸ ಮಾಡುವುದು ಎಂದರ್ಥ. ಕಶೇರು ಖಂಡಕ್ಕೆ ಹೊಂದಿಸುವ ಮೆದುಳಿನ ಭಾಗದಲ್ಲಿ ಉದ್ದುದ್ದವಾದ ಸೀಳಿಕೆಗಳು ಆಳವಾಗಿ ಮೆದುಳಿನ ಎರಡು ಭಾಗಗಳಲ್ಲಿ ಬೆಳೆಯುತ್ತಾ ಹೋಗುತ್ತದೆ. ಇದು ಮಾನವನ ಮೆದುಳನ್ನು ಎರಡು ಪಾರ್ಶ್ವಗಳಾಗಿ ವಿಂಗಡಿಸುತ್ತದೆ. ಮೆದುಳಿನ ಪಾರ್ಶ್ವತೆಯು ಒಂದು ಮೆದುಳಿನ 2 ಭಾಗಗಳಲ್ಲಿ ವಿಸ್ತರಿಸಿರುತ್ತದೆ. ಪ್ರತಿ ಪಾರ್ಶ್ವವೂ ಬೂದುಬಣ್ಣದ (ಕಾರ್ಟೆಕ್ಸ್) ಹೊರಭಾಗವನ್ನು ಹೊಂದಿದ್ದು ಅದನ್ನು ಮೆದುಳಿನ ಹೊರಮೈ ಎಂದು ಕರೆಯಲಾಗುತ್ತದೆ. ಇದು ಬಿಳಿ ಅಂಶಗಳ ಹೊದಿಕೆಯಿಂದ ಆವರಿಸಿರುತ್ತದೆ.

ಮೆದುಳಿನ ಭಾಗಗಳನ್ನು ಸಾಮಾನ್ಯವಾಗಿ ಬಲ ಹಾಗೂ ಎಡ ಎಂದು ವಿಭಜಿಸಬಹುದಾಗಿದೆ. ಮೆದುಳಿನ ಎಡಭಾಗವು ದೇಹದ ಬಲಭಾಗವನ್ನು ನಿಯಂತ್ರಣಗೊಳಿಸುತ್ತದೆ. ಹಾಗೆ, ಬಲಭಾಗವು ಪ್ರಮುಖವಾಗಿ ದೇಹದ ಎಡಭಾಗವನ್ನು ನಿಯಂತ್ರಿಸುತ್ತದೆ. ಆದುದರಿಂದ ನರವಿಜ್ಞಾನದ ಪ್ರಕಾರ ಮೆದುಳಿನ ಬಲಪಾರ್ಶ್ವವು ಎಡಕಣ್ಣು, ಕಿವಿ, ಕೈ, ಕಾಲುಗಳನ್ನು ನಿಯಂತ್ರಿಸಿದರೆ ಮೆದುಳಿನ ಎಡಭಾಗವು ಬಲಕಣ್ಣು, ಕಿವಿ, ಕಾಲು, ಕೈಗಳ ಕಾರ್ಯವನ್ನು ಹತೋಟಿಯಲ್ಲಿಡುತ್ತದೆ. ಬಲಗೈಯಲ್ಲಿ ಕೆಲಸ ಮಾಡುವವನಿಗೆ ಎಡ ಮೆದುಳಿನ ಭಾಗವು ಮಹತ್ವದ ಪಾತ್ರವಹಿಸುತ್ತದೆ. ತಿನ್ನುವುದು, ಬರೆಯುವುದು, ಎಸೆಯುವುದು, ತಲೆ ಬಾಚುವುದು ಮೊದಲಾದ ಕೌಶಲವನ್ನು ಸಹಜವಾಗಿ ಮಾಡಲು ಸುಲಭವಾಗುತ್ತದೆ. ಎಡಗೈಯಲ್ಲಿ ಕೆಲಸ ಮಾಡುವವನಿಗೆ ಮೆದುಳಿನ ಬಲಭಾಗವು ಆತನ ದೇಹದ ಎಡಭಾಗದ ಮೇಲಿನ ಹತೋಟಿಯನ್ನು ಸ್ಥಾಪಿಸುತ್ತದೆ.

ಆಲೋಚನೆ, ಸೃಜನಶೀಲತೆ, ಕಾನೂನು ಇತ್ಯಾದಿ ವಿಷಯಗಳ ಕಾರ್ಯದ ಬಗ್ಗೆ ವಿಶಾಲವಾದ ಸಾಮಾನ್ಯೀಕರಣಗಳನ್ನು ಮನೋವಿಜ್ಞಾನದಲ್ಲಿ ತಿಳಿಸಲಾಗಿದೆ. ಈ ಕ್ರಿಯೆಗಳು ಬಲ ಹಾಗೂ ಎಡಮೆದುಳಿನಿಂದ ನಡೆಯುತ್ತವೆ. ಈ ವಿಚಾರಗಳನ್ನು ಜಾಗ್ರತೆಯಿಂದ ಅಧ್ಯಯನ ಮಾಡಬೇಕಾಗುತ್ತದೆ. ಇಂಥ ಕಾರ್ಯಗತಿಯನ್ನು ಮೆದುಳು ಹೇಗೆ ನಿರ್ವಹಿಸುತ್ತದೆ ಎಂಬುದರ ಬಗ್ಗೆ ಅನೇಕ ಸಂಶೋಧನೆಗಳು ನಡೆಯುತ್ತಿವೆ. ನರಗಳ ಅಧ್ಯಯನಕ್ಕೆ ಸಂಬಂಧಿಸಿದ ಅಧ್ಯಯನ ಮಾಡುವ ಮನೋವಿಜ್ಞಾನಿಗಳು (ರೋಜರ್ ಸ್ಪರಿ, ಮಿಶೆಲ್ ಗಾಜಾಂಗ) ಮೆದುಳಿನ ಪಾರ್ಶ್ವಗಳ ಬಗ್ಗೆ ಅರ್ಥಮಾಡಿಕೊಳ್ಳಲು ಮೆದುಳು ಘಾಸಿಗೊಂಡ ರೋಗಿಗಳ ಬಗ್ಗೆ ಅಧ್ಯಯನವನ್ನು ಕೈಗೊಂಡಿರುವರು.

ಮಾನವನ ಮೆದುಳು ಒಂದು ಸೂಕ್ಷ್ಮವಾದ ಅಂಗ. ಇದರ ಕಾರ್ಯತಂತ್ರವೂ ಬಹಳ ಸಂಕೀರ್ಣ. ಇದನ್ನು ವಿಸ್ತೃತವಾದ ಪದ್ಧತಿಯ ಮೂಲಕ ವಿವಿಧ ಕೋನಗಳಲ್ಲಿ ಅಧ್ಯಯನ ಮಾಡಲಾಗಿದೆ. ಮೆದುಳಿನ ಪಾರ್ಶ್ವತೆ ಹಾಗೂ ಈ ಪಾರ್ಶ್ವತೆಯನ್ನು ಆಧರಿಸಿದ ಸಂಶೋಧನೆಗಳು 150 ವರ್ಷಗಳ ಹಿಂದೆಯೇ ನಡೆದಿವೆ. ಈಗಲೂ ಈ ಸಂಶೋಧನೆಗಳಿಗೆ




Digitised by Bharatavani, CIIL

ಗಮನಾರ್ಹವಾದ ಮಹತ್ವವಿದೆ. ಕ್ಯಾಲಿಫೋರ್ನಿಯಾದ ತಂತ್ರಜ್ಞಾನ ಸಂಸ್ಥೆಯ ಸೀರುರ್ಸ್ ರೋಜರ್ ಸ್ಪೆರಿ (1925), ರೋಸ್ಲೋಸ್ ವೈದ್ಯಕೀಯ ಸಮುದಾಯದ ಜೊಸೆಫ್ ಬೋಗನ್ (1969) ಹಾಗೂ ಅವರ ಸಂಗಡಿಗರು 1878ರಲ್ಲಿ ಜೊ ಹಗ್ಲಿಂಗ್ಸ್‌ರವರು ಹೇಳಿದ ವಿಚಾರವನ್ನು ಸಮರ್ಥಿಸುತ್ತಾ, ನಮ್ಮ ಮೆದುಳು ಎರಡು ಗಮ್ಯ ನೆಲೆಯನ್ನು ಹೊಂದಿದೆ, ಆದರೆ ಶರೀರಶಾಸ್ತ್ರೀಯವಾಗಿ ಇವುಗಳು ಒಂದೇ ರೀತಿಯ ಘಟಕಾಂಶಗಳನ್ನು ಪಡೆದಿವೆ ಎಂಬುದನ್ನು ತಿಳಿಸಿದರು. ಮಾನವನ ಮೆದುಳಿನ ಕ್ರಿಯೆಗಳ ಕುರಿತಾದ ಅಧ್ಯಯನವು ಒಟ್ಟಾರೆಯಾಗಿ ಹೊಸ ವಿಷಯವನ್ನು ಪತ್ತೆ ಮಾಡಿತು. ಇವುಗಳು ಮುಖ್ಯವಾಗಿ ಮೆದುಳಿನ ಎರಡು ಪಾರ್ಶ್ವದ ಹೊರಕವಚದ ಕ್ರಿಯೆಗಳು, ಸಂಘಟನೆಗಳು ಹಾಗೂ ಮಾಹಿತಿಗಳ ಸಂಕೇತೀಕರಣಗಳು ಭಿನ್ನ ಭಿನ್ನವಾಗಿರುತ್ತವೆ. ಪ್ರತಿಯೊಂದರ ಕಾರ್ಯವು ಇನ್ನೊಂದಕ್ಕಿಂತ ಬೇರೆಯಾಗಿದೆ. ಹೆಚ್ಚಿನಮಟ್ಟಿಗೆ ಬಲಗೈಯಲ್ಲಿ ಕಾರ್ಯಗೈಯುವ ವ್ಯಕ್ತಿಗಳಿಗೆ ಮೆದುಳಿನ ಎಡಪಾರ್ಶ್ವ ಹೆಚ್ಚು ಪ್ರೇರೇಪಣೆ ನೀಡುತ್ತದೆ ಹಾಗೂ ಎಡಗೈಯಲ್ಲಿ ಕೆಲಸ ಮಾಡುವ ವ್ಯಕ್ತಿಗೆ ಅವನ ಮೆದುಳಿನ ಬಲಪಾರ್ಶ್ವ ಹೆಚ್ಚು ಪ್ರೇರೇಪಣೆಗೊಳಪಡಿಸುತ್ತದೆ. ಹೀಗೆ ಮೆದುಳಿನ ಪ್ರತಿಪಾರ್ಶ್ವವೂ ಕಾರ್ಯ ನೆರವೇರಿಸುವಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಎಡಪಾರ್ಶ್ವವು ಓದುವುದು, ಮಾತನಾಡುವುದು, ಅಂಕಗಣಿತ ತರ್ಕಬದ್ಧವಾಗಿ ವಿಶ್ಲೇಷಿಸುವುದನ್ನು ನಿರ್ವಹಿಸಿದರೆ, ಬಲಪಾರ್ಶ್ವವು ವಿಶೇಷವಾಗಿ ಗಾತ್ರ, ಆಕಾರ, ಸ್ಥಳಸಂಬಂಧಿ ಕಾರ್ಯಗೈಯುವುದು, ಮುಖವನ್ನು ಗುರುತಿಸುವುದು, ಸಂಗೀತ ಗ್ರಹಣ ಇವುಗಳ ಕುರಿತು ನೈಸರ್ಗಿಕವಾಗಿ ಸಮಗ್ರವಾಗಿ ಹಾಗೂ ಏಕಕಾಲದಲ್ಲಿ ಕಾರ್ಯವೆಸಗುತ್ತದೆ.

ಮೆದುಳಿನ ಪಾರ್ಶ್ವತೆಯ ವಿಶೇಷ ಸಾಮರ್ಥ್ಯಗಳಿಗೆ ಹಲವಾರು ಸಾಕ್ಷಿಗಳಿವೆ. ಇಂದ್ರಿಯಗಳ ಕಾರ್ಯಗಳು ಹಾಗೂ ಮೆದುಳಿನ ಪಾರ್ಶ್ವದ ಕಾರ್ಯಗಳ ನಡುವಿನ ಪರಸ್ಪರ ಸಂಬಂಧಗಳ ಬಗ್ಗೆ ಸಂಶೋಧನೆಯನ್ನು ವಿವಿಧ ವಿಧಾನಗಳಿಂದ ಮಾಡಲಾಗಿದೆ. ಜೀವಶಾಸ್ತ್ರೀಯದಿಂದ ವ್ಯಕ್ತಿಯ ವ್ಯಕ್ತನಾತ್ಮಕದವರೆಗೆ ಬಹಳಷ್ಟು ವೈವಿಧ್ಯಮಯ ಸಂಶೋಧನೆಗಳು ಮೆದುಳಿನ ಪಾರ್ಶ್ವತೆಯ ವಿಶೇಷ ಸಾಮರ್ಥ್ಯಗಳ ಬಗ್ಗೆ ಸಾಕ್ಷಿಗಳನ್ನು ಒದಗಿಸಿವೆ. ಅಂಗಹಾನಿಯ ಕುರಿತ ಅಧ್ಯಯನಗಳು ಮೆದುಳಿನ ಪಾರ್ಶ್ವತೆ ಕುರಿತು ಹಲವಾರು ಅಂಶಗಳನ್ನು ಬೆಳಕಿಗೆ ತಂದಿವೆ. ಮೆದುಳಿನ ಶಕ್ತಿಯ ನ್ಯೂನತೆಯನ್ನು (ತೊಂದರೆಯನ್ನು) ಅನುಭವಿಸುತ್ತಿರುವ ರೋಗಿಗಳನ್ನು ಚಿಕಿತ್ಸೆಗೆ ಒಳಪಡಿಸಿ ಅಧ್ಯಯನವನ್ನು ಕೈಗೊಂಡಾಗ (ಎಟ್ ಲಿಂಗರ್, ವಾರಿಂಗ್‌ಟನ್ ಮತ್ತು ಜಾಂಗ್‌ವಿಲ್ 1957, ಲುರಿಯಾ 1956, ಮಿಲ್‌ನರ್ 1971, ಗೆಸ್ ಚಿವಿಂಡ್ 1970 ರವರು ನಡೆಸಿದ ಅಧ್ಯಯನಗಳ ಆಧಾರ) ಕಂಡುಕೊಂಡ ಫಲಿತಾಂಶಗಳ ಪ್ರಕಾರ ಮೆದುಳಿನ ಬಲಪಾರ್ಶ್ವದ ಕುಂಠಿತತೆಯಿಂದಾಗಿ ಆಕಾರ, ಗಾತ್ರ, ಸ್ಥಳದ ಸಾಮರ್ಥ್ಯದ ಕುಂದುವಿಕೆ ಉಂಟಾಗುವುದು. ಅದೇ ರೀತಿ ಮೆದುಳಿನ ಎಡಭಾಗದ ತೊಂದರೆಯಿಂದಾಗಿ ವ್ಯಕ್ತಿಯು ಮಾತಿನ ಶಕ್ತಿಯನ್ನು ಕಳೆದುಕೊಳ್ಳುವನು ಹಾಗೂ ಕಾರ್ಯಕಾರಣ ಸಾಮರ್ಥ್ಯವನ್ನು ಗಳಿಸಲು ಅಸಮರ್ಥನಾಗುವನು.

ಮಾನವನ ಮೆದುಳಿನ ಪಾರ್ಶ್ವತೆಯ ಆಕಾರ, ಗಾತ್ರಗಳನ್ನು ಪರೀಕ್ಷಿಸಲಾಗಿ, ನಿರ್ದಿಷ್ಟವಾಗಿ ವ್ಯತ್ಯಾಸವನ್ನು ಗಮನಿಸಬಹುದಾಗಿದೆ. ವಾಡ, ಕ್ಲಾರ್ಕ್ ಹಾಗೂ ಹಮೋನ್ (1975) 100 ಜನ ಮಕ್ಕಳ ಮತ್ತು 100 ಹರೆಯದವರನ್ನು ಪರೀಕ್ಷೆಗೆ ಆಯ್ದುಕೊಂಡಿದ್ದು ಮೆದುಳಿನ ಎಡಪಾರ್ಶ್ವದ ನ್ಯೂನತೆಯಿಂದ ಮಾತಿನ ಮೇಲೆ ಉಂಟಾದ ಪರಿಣಾಮವನ್ನು ಸಂಶೋಧಿಸಿ ಜೀವಶಾಸ್ತ್ರೀಯವಾಗಿ ಸಾಕ್ಷಿಯನ್ನು ಒದಗಿಸಿದ್ದು ಗೆಶ್‌ವಿಂಡ್ (1924) ಮತ್ತು ಲೆವಿಟಿಸ್ಕಿ (1968) ಹಾಗೂ ವಿಟೆಲ್‌ಸನ್ ಮತ್ತು ಪಾಲಿ (1975) ರವರು ಮೆದುಳಿನ ಎರಡು ಪಾರ್ಶ್ವಗಳ ವೈಶಿಷ್ಟ್ಯತೆಯ ಬಗ್ಗೆ ಸೂಕ್ತ ಸಾಕ್ಷಿಯನ್ನೊದಗಿಸುವುದರ ಮೂಲಕ ವರದಿ ನೀಡಿದ್ದಾರೆ. ಮೆದುಳಿನ ಎಡಪಾರ್ಶ್ವವು ಭಾಷಿಕ ಪ್ರಕ್ರಿಯೆಯ ಬಗ್ಗೆಯೂ ಬಲ ಪಾರ್ಶ್ವ ಗಾತ್ರ, ಆಕಾರ, ಸ್ಥಳಗಳ ಪ್ರಕ್ರಿಯೆಯ ಬಗ್ಗೆಯೂ ಪರಿಣಾಮವನ್ನು ಉಂಟುಮಾಡುತ್ತದೆ.

ಆಲಿಸುವಿಕೆಯಲ್ಲಿ ವ್ಯತ್ಯಾಸವೆಂಬುದು ಬೇರೆಬೇರೆ ಉತ್ತೇಜಕಗಳ ಅನ್ವಯವನ್ನು ಆಧರಿಸಿದೆ. (ಉದಾ: 2 ಭಿನ್ನ ರೀತಿಯ ಶಾಬ್ದಿಕ ಸಂದೇಶಗಳು) ಎರಡು ಕಿವಿಗಳ ಉತ್ತೇಜಕ, ಪ್ರೋತ್ಸಾಹಕಗಳಿಂದ ಪಡೆದ ಶಾಬ್ದಿಕ ಸಂದೇಶಗಳು ಪರಿಣಾಮಕಾರಿಯಾಗಿ ವ್ಯಕ್ತಿಯೊಬ್ಬನಿಗೆ ದೊರಕುವಲ್ಲಿ ಅವನ ಮೆದುಳಿನ ಎರಡು ಪಾರ್ಶ್ವಗಳು ಹೆಚ್ಚು ಕಾರ್ಯಗೈಯ್ಯುತ್ತವೆ. ಉದಾಹರಣೆಗೆ, ಶಬ್ದವೊಂದು ಎಡ ಕಿವಿಗೆ ಬಿದ್ದಾಗ ಅದರ ಸರಿಯಾದ ಸ್ವರೂಪ ಪಡೆಯುವುದಕ್ಕೆ ಕಾರಣ ಮೆದುಳಿನ ಬಲ ಪಾರ್ಶ್ವ (ಗೆಲ್ಡಾರ್ಡ್ 1972), ಇಂಥ ಆಲಿಸುವಿಕೆಯ ವ್ಯತ್ಯಾಸದ ಅಧ್ಯಯನವು ನಿರ್ದಿಷ್ಟವಾಗಿ ಭಾಷಾ ಉತ್ತೇಜಕಕ್ಕೆ ಅಗತ್ಯವಾದ ಬಲಕಿವಿಯ ಉಪಯೋಗವನ್ನೂ ಒಳಗೊಂಡಿದೆ. (ಗೆಷ್ನೆರ್ ಮತ್ತು ಹೆಬ್ಲರ್ಜ್ 1971, ಇನ್ ಗ್ರಾಮ್ 1975). ನೋಕ್ಸ್ ಮತ್ತು ಕಿಮುರ (1970)ರವರು ತಮ್ಮ ಸಂಶೋಧನೆಯಲ್ಲಿ 5 ರಿಂದ 8 ವರ್ಷದ ಮಕ್ಕಳನ್ನು ತಮ್ಮ ಪ್ರಯೋಗಕ್ಕೆ ಆಯ್ದುಕೊಂಡಾಗ ಅವರ ಎಡಕಿವಿಯು ಶಬ್ದಗಳಿಗೆ ಹೆಚ್ಚು ಸ್ಪಂದಿಸಿರುವುದು ಕಂಡುಬಂದಿತು. ಕ್ರಶನ್ (1975) ಸಹ ಆಲಿಸುವಿಕೆಯ ವ್ಯತ್ಯಾಸದ ಕುರಿತ ಆಳವಾದ ಅಧ್ಯಯನವನ್ನು ಕೈಗೊಂಡಿದ್ದು ಇದೇ ರೀತಿಯ ಫಲಿತಾಂಶವನ್ನು ಪಡೆದಿದ್ದಾನೆ.

ಕಣ್ಣಿನ ಪಾರ್ಶ್ವಕ ಚಲನೆಗಳಿಗೆ ಸಂಬಂಧಿಸಿದ ಸಂಶೋಧನೆಗಳನ್ನು ಟೆಕಿಸ್ಟೋಸ್ಕೋಪಿಕ್ ತಂತ್ರವನ್ನು ಉಪಯೋಗಿಸಿ ಅಧ್ಯಯನ ಮಾಡಲಾಗುತ್ತದೆ. ಒಬ್ಬ ಸಾಮಾನ್ಯ ಮನುಷ್ಯನ ಮೆದುಳಿನ ಪಾರ್ಶ್ವದ ಕುರಿತಾಗಿ ಲಕ್ಷ್ಯ ಹರಿಸುವಲ್ಲಿ ಅವನ ಕಣ್ಣಿನ ಪಾರ್ಶ್ವಿಕ ಚಲನೆಗಳನ್ನು ಅಧ್ಯಯನ ಮಾಡುವುದು ಒಂದು ವಿಧಾನವಾಗಿದೆ. (ಬೆಕನ್, 1971; ಗರ್ 1975) ಕಣ್ಣಿನ ಪಾರ್ಶ್ವಿಕ ಚಲನೆಯ ವ್ಯಕ್ತಿಯೊಬ್ಬ ಒಂದು ವಿಷಯದ ಬಗ್ಗೆ ಸಾಧಾರಣವಾಗಿ ಯೋಚನೆ ಮಾಡುವಾಗ ಅವನ ಬಲ ಅಥವಾ ಎಡ ದಿಕ್ಕಿಗೆ ಕಣ್ಣುಮಿಟುಕಿಸದಂತೆ ಸ್ಥಿರವಾಗಿರುತ್ತಾನೆ. ಜ್ಞಾನಾತ್ಮಕ ಚಟುವಟಿಕೆಗಳಲ್ಲಿ ಎಡಕಣ್ಣು ತದೇಕಚಿತ್ತದಂತೆ ನಿಂತುಬಿಡುತ್ತಿದ್ದು, ಆಗ ಬಲಮೆದುಳು ಹೆಚ್ಚು ಆಧಾರವನ್ನು ಪಡೆದುಕೊಳ್ಳುತ್ತದೆ. ಬಲಗಣ್ಣು ಮಿಟುಕಿಸದೇ ಇರುವಾಗ ಎಡ ಮೆದುಳು ಪ್ರಾಬಲ್ಯವನ್ನು ಹೊಂದುತ್ತದೆ. ಟೆಕಿಟೊಸ್ಕೋಪಿಕ್ ತಂತ್ರವನ್ನು ಬಳಸಿಕೊಂಡ ಅಧ್ಯಯನವು ಮೆದುಳಿನ ಪಾರ್ಶ್ವತೆಯ ಬಗ್ಗೆ ಅಧಿಕೃತವಾಗಿ ತಿಳಿಸುತ್ತದೆ. ಬಲಮೆದುಳು ಮುಖದ ಕಾರ್ಯಗೈಯ್ಯುವಲ್ಲಿಯೂ ಎಡಮೆದುಳು ಭಾಷಾ ಕಾರ್ಯ ಗೈಯ್ಯುವಲ್ಲಿಯೂ ಮಹತ್ವವನ್ನು ಪಡೆದುಕೊಂಡಿವೆ (ಹೈನ್ಸ್, ಎನಿಹೋಮಿಯನ್, ಐಸನ್ಬರ್ಗ್, ಗೋಲ್ಡ್‌ಬರ್ಗ್ 1975).

ಸಂಶೋಧನೆಗಳ ಆಧಾರದಿಂದ ಎಡ ಹಾಗೂ ಬಲಮೆದುಳಿನ ಪಾರ್ಶ್ವತೆಗೆ ವಿಶಿಷ್ಟ ಆಧಾರಗಳನ್ನು ಕಾಣಬಹುದು. ಮೆದುಳಿನ ಎಡಪಾರ್ಶ್ವಕ್ಕೆ ಸಂಬಂಧಿಸಿದ ಆಧಾರಗಳು ಹೀಗಿವೆ. ಮೆದುಳಿನ ಎರಡು ಭಾಗ (ಪಾರ್ಶ್ವ)ಗಳ ಕಾರ್ಯತಂತ್ರದಲ್ಲಿ ಭಿನ್ನತೆ ಇದೆ. ಬಹಳಷ್ಟು ವರ್ಷಗಳಿಂದ ಮೆದುಳಿನ ಎಡಪಾರ್ಶ್ವತೆಯ ಬಗ್ಗೆ ತಜ್ಞರು ಗಮನಹರಿಸುತ್ತಿದ್ದು ಇದನ್ನು "ಪ್ರಭಾವಶಾಲಿ" "ಮಾರ್ಗದರ್ಶಕ" ಎಂದು ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಡಪಾರ್ಶ್ವತೆಯು ಭಾಷಾಪ್ರಕ್ರಿಯೆ ಹಾಗೂ ಯೋಜನೆಗಳಿಗೆ ಜವಾಬ್ದಾರಿಯಾಗಿವೆ. ಭಾಷಾಬೆಳವಣಿಗೆಯ ಪ್ರಕ್ರಿಯೆಯ ದೃಷ್ಟಿಯಿಂದಲೂ ಇದೇ ಭಾಗ ಹೆಚ್ಚು ಕಾರ್ಯೋನ್ಮುಖವಾಗುತ್ತದೆ. ಆದರೆ ಕೇವಲ ಎಡಮೆದುಳು ಕಾರ್ಯಗೈಯ್ಯುವ ಶಾಬ್ದಿಕ ಮಾಹಿತಿ ರಚನೆಯು


Digitised by Bharatavani, CIIL

ಅಷ್ಟೊಂದು ಸಮರ್ಪಕವಾಗಿರುವುದಿಲ್ಲ. ಎಲ್ಲಾ ಶಾಬ್ದಿಕ ಪ್ರಕ್ರಿಯೆಗಳನ್ನು ಈ ಮೆದುಳಿನ ಭಾಗ ಮಾಡುತ್ತದೆಂದು ಹೇಳುವ ಹಾಗೆಯೂ ಇಲ್ಲ. ಗುಡ್ ಗ್ಲಾಸ್ ಹಾಗೂ ಕ್ವಾಡಫಾಸಲ್ (1977) ರವರು ಕಂಡುಕೊಂಡ ಆಸಕ್ತಿಯ ವಿಚಾರವೆಂದರೆ ಸುಮಾರು 123 ಎಡಗೈಯಲ್ಲಿ ಬರೆವ ಜನರಲ್ಲಿ ಶೇ. 53 ಜನರಲ್ಲಿ ಮಾತ್ರ ಎಡಮೆದುಳು ಭಾಷಾ ಪ್ರಕ್ರಿಯೆಯಲ್ಲಿ ಪ್ರಬಲವಾಗಿ ಕಾರ್ಯಗೈಯ್ಯುವ ಸಾಮರ್ಥ್ಯವನ್ನು ಹೊಂದಿದ್ದು, ಉಳಿದ ಶೇ. 47 ಜನರಲ್ಲಿ ಬಲಮೆದುಳು ಬಳಕೆಯಾಗುತ್ತಿತ್ತು. ಎಡಮೆದುಳು ಭಾಷೆಯ ಗ್ರಹಿಕೆ ಹಾಗೂ ಧಾರಣ ಶಕ್ತಿಯಲ್ಲಿ ಹೆಚ್ಚು ಪಾಲ್ಗೊಳ್ಳುತ್ತದೆ. ಕೆಲವು ಅಧ್ಯಯನಗಳ ಪ್ರಕಾರ ಅಲ್ಪಕಾಲದ ಸ್ಮರಣಾಶಕ್ತಿಯನ್ನು ಪ್ರಾಥಮಿಕವಾಗಿ ಎಡಮೆದುಳೇ ನಿರ್ವಹಿಸುತ್ತದೆ. ಅಂತಿಮವಾಗಿ ಭಾಷೆಗೆ (ಮಾತಿಗೆ) ಸಂಬಂಧಿಸಿದಂತೆ ಹಾವಭಾವಗಳು ನಡೆಯುವುದು ಎಡಮೆದುಳಿನ ಕಾರ್ಯಗಳ ಮೂಲಕವೇ ಎಂದು ದೃಢಪಟ್ಟಿದೆ. (ಬರ್ಕಲಾರ್ಡ್ ಮತ್ತು ಸ್ಮಿತ್ 1977). ಬರವಣಿಗೆಯ ಪ್ರಕ್ರಿಯೆಯಲ್ಲಿ ಎಡಮೆದುಳಿನ ಕಾರ್ಯವು ಬಲಮೆದುಳಿನ ಕಾರ್ಯವಾಗಿ ವರ್ಗಾವಣೆಗೊಳ್ಳುವುದೂ ಕಂಡುಬರುವುದುಂಟು. ಬರವಣಿಗೆಯ ಶಾಬ್ದಿಕ ಅಂಶಗಳು ಪ್ರಮುಖವಾಗಿ ಎಡಮೆದುಳಿನಲ್ಲಿಯೇ ಕಾರ್ಯಗೈದು, ದೃಶ್ಯರೂಪದ ಬರಹದ ಅಂಶಗಳು ಬಲಮೆದುಳಿನ ಕಾರ್ಯತಂತ್ರವಾಗಿ ಗೋಚರವಾಗುತ್ತವೆ. (ಬ್ರಾಡ್‌ವಿನ್ ಮತ್ತು ಓರ್ನಸ್ಟಿನ್, 1977). ಎಡಮೆದುಳು ಓದುವಂತಹ ಕಲಿಕಾ ಕಾರ್ಯಗಳಲ್ಲಿ ಒಳಗೊಳ್ಳುತ್ತದೆ. ಓದುವುದು ಸಹ ಎಡಮೆದುಳಿನ ಕಾರ್ಯಗತಿಯನ್ನು ಅವಲಂಬಿಸಿದೆ (ಹಂಟರ್, 1976, ಸ್ಪೆರ್ರೆ, 1974). ಗಣಿತದ ಪ್ರಕ್ರಿಯೆಗಳು, (ದುಮಾಸ್ ಮತ್ತು ಓಲ್ಸನ್, 1977) ಮತ್ತು ಬೀಜಗಣಿತ (ಹಂಟರ್, 1976) ಗಾನಕಲಿಕೆಗೂ ಎಡಮೆದುಳೇ ಕಾರಣವೆಂದು ಸಮರ್ಥಿಸಲಾಗಿದೆ. ಆದರೆ ಪ್ರಶ್ನೆಗೆ ಉತ್ತರ ಬರೆಯುವ ಕಾರ್ಯಕ್ಕೆ ಮಾತ್ರ ಮೆದುಳಿನ 2 ಪಾರ್ಶ್ವಗಳ ಸಹಕಾರ ಅಗತ್ಯವೆಂದು ತಿಳಿಯಲಾಗಿದೆ. (ಸ್ಮಿತ್ 1972)

ಎಡಮೆದುಳು ಪ್ರಮುಖವಾಗಿ ತಾರ್ಕಿಕವಾಗಿ ಯೋಚಿಸುವುದು, ವಿಮರ್ಶಿಸುವುದು (ಬ್ರಾಡ್ ವಿನ್ ಮತ್ತು ಓರ್ನ್‌ಸ್ಟಿನ್, 1977) ಹಾಗೂ ಶಾಬ್ದಿಕ ರೂಪಕೊಡುವಂಥ ಕಾರ್ಯಗೈಯ್ಯುತ್ತದೆ. ಇದು ಪ್ರತಿಯೊಂದು ವಿಚಾರವನ್ನೂ ಹೀಗೆಯೇ ಇರಬೇಕೆಂದು ಕಡ್ಡಾಯಗೊಳಿಸುತ್ತದೆ. ಹಾಗೂ ಇದು ಸ್ವೀಕರಿಸುವ ಪ್ರತಿವಿಷಯವನ್ನು ಸಾಮಾನ್ಯೀಕರಿಸುತ್ತದೆ. ಒಂದು ರೀತಿಯಲ್ಲಿ ಎಡಮೆದುಳು ಲೆಕ್ಕ ಮಾಡುವ ಗಣಕಯಂತ್ರ (ಡಿಜಿಟಲ್ ಕಂಪ್ಯೂಟರ್)ವನ್ನು ಹೋಲುತ್ತದೆ (ಸ್ಯಾಂಪಲ್ಸ್ 1975). ಇದಕ್ಕೆ ಮಾನಸಿಕ ವ್ಯವಸ್ಥೆ ಹಾಗೂ ಶಿಸ್ತು ಅಗತ್ಯ. ಇದು ಯಾವುದೇ ಗ್ರಹಿಕಾಂಶಗಳನ್ನು ಮತ್ತು ಇಂದ್ರಿಯಗಳಿಂದ ಸ್ವೀಕರಿಸುವ ಅಂಶಗಳನ್ನು ತಾರ್ಕಿಕವಾಗಿಯೂ, ಸರಳ ರೇಖಾತ್ಮಕವಾಗಿ ಕಾರ್ಯಗತಮಾಡುತ್ತದೆ. ಎಡಮೆದುಳಿನ ಕಾರ್ಯದ ಮೂಲಕವೇ ವ್ಯಕ್ತಿಯೊಬ್ಬನು ಹೊಸ ಅಭ್ಯಾಸಗಳನ್ನು ಪಡೆಯಲು ಸಾಧ್ಯವಾಗುತ್ತದೆ. (ಮೇ 1977). ಸಂಕ್ಷಿಪ್ತವಾಗಿ ಹೇಳುವುದಾದರೆ ಎಡಮೆದುಳಿನ ಅಧ್ಯಯನವನ್ನು ಪ್ರಾರಂಭದಿಂದ ಮಾಡುತ್ತಾ ಭಾಷಾವ್ಯಾಪ್ತಿಗೆ ಮೀರಿ ಅರ್ಥ ಮಾಡಿಕೊಳ್ಳುವುದು ಯೋಗ್ಯವಾಗಿದೆ.

ಮೆದುಳಿನ ಬಲಪಾರ್ಶ್ವಕ್ಕೆ ಸಂಬಂಧಿಸಿದ ಸಾಕ್ಷಿಗಳು ಹೀಗಿವೆ. ಬಲಮೆದುಳು ದೇಹದ ಎಡಬದಿಯನ್ನು ಹತೋಟಿಗೊಳಿಸುತ್ತದೆ. ಇದನ್ನು "ಸಣ್ಣ ಅಧೀನ (Minor subordinate) ಪಾರ್ಶ್ವ ಎನ್ನಲಾಗುತ್ತದೆ. ಯಾಕೆಂದರೆ ಇದನ್ನು ಶಬ್ದರೂಪದಲ್ಲಿ ಹಿಡಿದಿಡಲು ಕಷ್ಟವಾಗುತ್ತದೆ. ಗೆಸ್ಟ್‌ವಿಂಡ್ (1970) ಅವರ ಪ್ರಕಾರ ಇದು ಎಡಮೆದುಳಿಗಿಂತ ಚಿಕ್ಕದಾಗಿದ್ದರೂ ಹೆಚ್ಚು ಪ್ರಾಬಲ್ಯವನ್ನು ಹೊಂದಿದೆ. ಅನೇಕ ಸಂಶೋಧನೆಗಳು ತೋರಿಸುವಂತೆ ಬಲಮೆದುಳು ಬಹಳ ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ ಹಾಗೂ ಇಂದಿಗೂ ನರರೋಗತಜ್ಞರು ನುಡಿಯುವಂತೆ ಬಲಮೆದುಳು ಕೇವಲ ಪ್ರಜ್ಞಾರಹಿತ ಸ್ವಯಂಚಾಲಿತ ಶಕ್ತಿಯುಳ್ಳದ್ದು. ನಾವು ಬದುಕುವುದು ಎಡಮೆದುಳಿನಿಂದಾದರೂ ಬಲಮೆದುಳು (ಮೆದುಳಿನ ಬಲಪಾರ್ಶ್ವ) ಒಟ್ಟಾರೆಯಾಗಿ ಮೌನವಾಗಿರುವುದಿಲ್ಲ. ಭಾಷಾಕ್ರಿಯೆಗಳು ಮೆದುಳಿನ ಎರಡು ಪಾರ್ಶ್ವಗಳಲ್ಲಿಯೂ ಹಂಚಿಹೋಗಿದ್ದು, ಇವು ಮಗುವಿನ 5 ವರ್ಷಗಳವರೆಗಿನ ಶಾಲಾವಧಿಯಲ್ಲಿ ನಡೆಯುತ್ತಿರುತ್ತವೆ. ಅಂತೆಯೇ ಮೆದುಳಿನ ಬಲಪಾರ್ಶ್ವವು ಸಂಕೀರ್ಣವಲ್ಲದ ಭಾಷಾಪ್ರಕ್ರಿಯೆಗಳನ್ನು ನಿರ್ವಹಿಸುತ್ತದೆ. ಧ್ವನಿಯ ವಿಶ್ಲೇಷಣೆ, ಧ್ವನಿಯ ಏರಿಳಿತ ಮೊದಲಾದ ಭಾಷೆಯ ಆಂತರಿಕ ಘಟಕಗಳು ಬಲಮೆದುಳಿನ ಕಾರ್ಯಗಳಾಗಿವೆ. (ವಾನ್, ಲಾಂಕರ್, 1975). ಸಾಮಾನ್ಯವಾದ ಪರಿಭಾಷೆಯಲ್ಲಿ ಹೇಳಬೇಕೆಂದರೆ ಬಲಮೆದುಳಿನ ಶಾಬ್ದಿಕ ಸಂವಹನಾ ಸಾಮರ್ಥ್ಯವು ಎಡಮೆದುಳಿಗಿಂತ ತುಂಬಾ ಕಡಿಮೆ.

ಸಂಕೀರ್ಣವಾದ ದೃಶ್ಯಮಾಧ್ಯಮಗಳ ಗ್ರಹಿಕೆಯ ಬಗ್ಗೆ ಹೇಳುವಲ್ಲಿಯೂ ಬಲಮೆದುಳಿನ ಕಾರ್ಯವು ಮಹತ್ತರವಾಗಿದೆ. ಈ ಬಲಮೆದುಳು ಮುಖಗಳನ್ನು ಗುರುತಿಸುವಲ್ಲಿ ನಿಖರತೆಯನ್ನು ಹೊಂದಿದ್ದರೆ ಎಡಮೆದುಳು ವ್ಯಕ್ತಿಯ ಹೆಸರನ್ನು ಮುಖದೊಂದಿಗೆ ನೆನಪಿನಲ್ಲಿಟ್ಟುಕೊಳ್ಳುತ್ತದೆ. ರೇಖಾಗಣಿತದ ಆಕಾರಗಳನ್ನು, ಆಲೇಖಗಳನ್ನು ಬಲಮೆದುಳು ಸರಿಯಾಗಿ ಅರ್ಥೈಸಿಕೊಂಡಿರುತ್ತದೆ. (ಹಿಟ್ಸ್, ಸುಟ್ ಕರ್, ಸಾಟ್ಸ್, ಹಾಗೂ ಅಲ್ಬಮನ್, 1976) ಮಾಹಿತಿಯನ್ನು ರೇಖಾತ್ಮಕವಾಗಿ ಪ್ರದರ್ಶಿಸುವುದು. (ಉದಾ: ಅಲೇಖ, ಚಿತ್ರ, ಉರುಳುತಟ್ಟೆ ಇತ್ಯಾದಿ) ವಿಶೇಷವಾಗಿ ಮಾಹಿತಿಯನ್ನು ಗ್ರಹಿಸುವುದು ಹಾಗೂ ಧಾರಣಸಾಮರ್ಥ್ಯವು ಪ್ರಾಥಮಿಕವಾಗಿ ಬಲಮೆದುಳಿನದಾಗಿರುತ್ತವೆ. (ಟ್ರೈಲರ್, 1976). ಅಂತೆಯೇ, ಬಲಮೆದುಳು ಸಂಗೀತ, ಮೊರ್ಸಕೋಡ್ (ಟೆಲಿಗ್ರಾಂ ನೀಡುವಲ್ಲಿ ಬಳಸುವ ಸಂಕೇತಗಳು) ನಂಥಾ ಸಂಕೀರ್ಣವೂ ಅಶಾಬ್ದಿಕವೂ ಆಗಿರುವ ಶ್ರವಣ ಮಾಧ್ಯಮಗಳ ಗ್ರಹಿಕೆ ಹಾಗೂ ಧಾರಣ ಶಕ್ತಿಯನ್ನು ಹೊಂದಿದೆ. ದೈಹಿಕಭಂಗಿಯ ಬಗ್ಗೆ ಜಾಗೃತಿ, ಮುಖದ ಮೂಲಕ ಅಭಿಪ್ರೇರಣೆಗೊಳ್ಳುವುದು ಬಲಮೆದುಳಿನ ಸಾಮರ್ಥ್ಯವಾಗಿದೆ (ಬ್ರಾಂಡ್ ವಿನ್ ಹಾಗೂ ಓನ್‌ಸ್ಟೈನ, 1977). ಸ್ಪರ್ಶಜ್ಞಾನದ ಧಾರಣಸಾಮರ್ಥ್ಯವು ಸಹ ಬಲಮೆದುಳಿನ ಶಕ್ತಿಗೆ ಸಂಬಂಧಿಸಿದೆ (ಕಿಮುರ, 1973). ಮೆದುಳಿನ ಎರಡು ಪಾರ್ಶ್ವಗಳ ರಚನೆ, ಗುಣಲಕ್ಷಣಗಳ ಬಗ್ಗೆ ಪುನರಾವಲೋಕನಗೈದಾಗ ಎರಡು ಊಹಾತ್ಮಕ, ಸೃಜನಾತ್ಮಕ ಪರಿಣಾಮಗಳು ಮೇಲ್ನೋಟಕ್ಕೆ ಕಾಣಿಸುತ್ತವೆ. (ಗೋಲ್ಡಬರ್ಗ್ ಹಾಗೂ ಕೋಸ್ಟ, 1981). ಅವು ಹೀಗಿವೆ.

1. ಬಲಮೆದುಳು ವಿಶೇಷವಾಗಿ ಸಂಕೀರ್ಣವಾದ ಮಾಹಿತಿಯನ್ನು ವಿವರಿಸುವ ನರಸಾಮರ್ಥ್ಯವನ್ನು ಹೊಂದಿದೆ.

2. ಬಲಮೆದುಳು ಒಂದೇ ಜ್ಞಾನಾತ್ಮಕ ಕಾರ್ಯದ ಮಿತಿಯಲ್ಲಿ ಬಹಳಷ್ಟು ಸಾಮರ್ಥ್ಯವನ್ನು ಗ್ರಹಿಸುತ್ತದೆ. ಎಡಮೆದುಳು ಕಾರ್ಯನಿರ್ವಹಣೆ ಯಂತಹ ಉನ್ನತ ಮಟ್ಟದ ಕಾರ್ಯವನ್ನು ನಿರ್ವಹಿಸುತ್ತದೆ.

ಒಟ್ಟಿನಲ್ಲಿ ಮೆದುಳಿನ ಬಲಪಾರ್ಶ್ವವೂ ಬಹಳಷ್ಟು ಕಾರ್ಯವನ್ನು ನಿರ್ವಹಿಸುತ್ತದೆ. ಇದು ನೈಸರ್ಗಿಕವಾಗಿಯೂ ಸಮಗ್ರವಾಗಿಯೂ ಏಕಕಾಲಿಕವಾಗಿಯೂ ಕಾರ್ಯಗೈಯ್ಯುತ್ತದೆ (ಬೋಗನ್, 1975). ಇದು ಮುಖದ ಮೂಲಕ ಗ್ರಹಿಕೆಯನ್ನು, ಸಮಗ್ರವಾಗಿ ಅರ್ಥಮಾಡಿ ಕೊಳ್ಳುವುದನ್ನು ಸ್ಪರ್ಶಜ್ಞಾನವನ್ನು, ಸಂಗೀತವನ್ನು ಕುರಿತ ಸಾಮರ್ಥ್ಯವನ್ನು, ಪ್ರಸ್ತುತೀಕರಣವನ್ನು, ಯಾವುದೇ ಕಾರ್ಯಪ್ರಾರಂಭವನ್ನು ಮಾಡುತ್ತದೆ. ಇದು ಮೆದುಳಿನ ದೃಶ್ಯರೂಪಕಾಂಶಗಳನ್ನು ತಿಳಿಸುತ್ತದೆ. ಬಲಮೆದುಳು ವ್ಯಕ್ತಿಯ ಮುಖವನ್ನು ನೆನಪಿನಲ್ಲಿರಿಸಿಕೊಂಡರೆ ಎಡಮೆದುಳು ವ್ಯಕ್ತಿಯ

Digitised by Bharatavani, CIIL

ಹೆಸರನ್ನು ನೆನಪಿನಲ್ಲಿಟ್ಟುಕೊಳ್ಳುತ್ತದೆ. (ಸ್ಯಾಂಪಲ್ಸ್, 1977) ಬಲಮೆದುಳಿನ ಕಾರ್ಯವನ್ನು ಸೃಜನಶೀಲವೆಂದು (ಬೋಗನ್ 1969, ಟೊರೆನ್ಸ್ 1978) ಹೇಳಲಾಗಿದೆ. ಬಲಮೆದುಳಿನ ಕಾಲ್ಪನಿಕ ಶಕ್ತಿಯು ಒಂದು ರೀತಿಯಲ್ಲಿ ಸೃಜನಶೀಲತೆಯ ಸಂಪನ್ಮೂಲ ಕೂಡ ಆಗಿದ್ದು ಇದು ಮೆದುಳಿನ ಎರಡು ಪಾರ್ಶ್ವಗಳ ನಡುವಿನ ಆಂತರಿಕ ಶಿಸ್ತನ್ನು ತಿಳಿಸುತ್ತದೆ. ಇವೆಲ್ಲ ಅಂಶಗಳು ಮೆದುಳಿನ ಬೆಳವಣಿಗೆಯನ್ನು ಸ್ಪಷ್ಟಪಡಿಸುತ್ತದೆ.

ಮೆದುಳಿನ ಪಾರ್ಶ್ವಿಕ ವಿಶೇಷ ಅಧ್ಯಯನವು ಮಾನವನ ವರ್ತನೆ. ಸಾಮಾಜಿಕತೆ ಹಾಗೂ ಶೈಕ್ಷಣಿಕ ಕ್ಷೇತ್ರದ ಬಗ್ಗೆ ನಿಹಿತಾರ್ಥಗಳನ್ನು ಹೊಂದಿದೆ. ನಮ್ಮ ಇಂದಿನ ಶಾಲಾ ತರಗತಿಗಳಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ತಮ್ಮ ಮೆದುಳಿನ ಸ್ವಲ್ಪಾಂಶವನ್ನು ಮಾತ್ರ ಬಳಸಿಕೊಳ್ಳುತ್ತಾರೆ. ಅವರ ಅರ್ಧದಷ್ಟು ಮೆದುಳಿನ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಿಲ್ಲ (ಬೋಗನ್, 1975). ಪ್ರಸ್ತುತ ಶಿಕ್ಷಣವು ಅವಾಸ್ತವಿಕತೆಯಿಂದ ಕೂಡಿದ್ದು ಇದು ವಿಶೇಷವಾಗಿ ಎಡಮೆದುಳಿನ ಕಾರ್ಯದ ಬಗ್ಗೆ ಪೂರ್ವಗ್ರಹ ಪೀಡಿತತೆಯಿಂದ ಕೂಡಿದೆ. ಹಾಗೆಯೇ ಬಲಮೆದುಳಿನ ಕಾರ್ಯದ ಬಗ್ಗೆಯೂ ವಿರೋಧಾಭಾಸಗಳಿವೆ. ಇಂದಿನ ವಿದ್ಯಾರ್ಥಿಗಳು ಪ್ರಪಂಚದ ಸಂಕೀರ್ಣ ವರ್ತನೆಗಳ ಬಗ್ಗೆ ತಿಳಿಯಲು ಉತ್ಸುಕರಾಗಿದ್ದಾರೆ. ಹಾಗೂ ಶಿಕ್ಷಣವು ಇಡೀ ಮೆದುಳಿಗೆ ಕಾರ್ಯ ನೀಡುವಂತಿರಬೇಕು. ಆಧುನಿಕ ಸಮಾಜದಲ್ಲಿ ನಮ್ಮ ಶಿಕ್ಷಣ ಪದ್ಧತಿಯು ಅರ್ಧಭಾಗದ ಮೆದುಳಿನ ಕಾರ್ಯವನ್ನು ಸ್ವೀಕರಿಸುವುದಿಲ್ಲ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಮೆದುಳಿನ ಕೆಳಮಟ್ಟದ ಕಾರ್ಯಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಎಡಮೆದುಳಿನ ಕಾರ್ಯಕ್ಕೆ ಹೆಚ್ಚಿನ ಒತ್ತಾಸೆ ನೀಡಿದೆ.

ಸಾಮಾನ್ಯವಾಗಿ ಒಂದು ವಿಚಾರಧಾರೆಯಲ್ಲಿ ಎರಡು ರೀತಿಯ ಯೋಜನೆಗಳಿರುತ್ತವೆ. ಶಾಬ್ದಿಕ ಅಶಾಬ್ದಿಕ, ಎಡ ಹಾಗೂ ಬಲ ಮೆದುಳು ಅನುಕ್ರಮವಾಗಿ ಈ ಎರಡು ಕೆಲಸಗಳನ್ನು ನಿರ್ವಹಿಸುತ್ತದೆ. ನಮ್ಮ ಸಾಮಾನ್ಯ ಶಿಕ್ಷಣ ವ್ಯವಸ್ಥೆಯಲ್ಲಿ ವಿಜ್ಞಾನವು ಬೌದ್ಧಿಕತೆಯ ಅಶಾಬ್ದಿಕ ಅಂಶಗಳನ್ನು ನಿರ್ಲಕ್ಷಿಸಿದೆ. ಆಧುನಿಕ ಸಮಾಜದಲ್ಲಿ ಬಲಮೆದುಳಿನ ಕಾರ್ಯಶೀಲತೆಯ ಬಗ್ಗೆ ಹೆಚ್ಚಿನ ಗಮನಹರಿಸಲಾಗುತ್ತಿಲ್ಲ. ಪಠ್ಯಕ್ರಮ ರಚನೆಯಲ್ಲಿ ಪಾರ್ಶ್ವತೆಯ ಅಂಶಗಳನ್ನು ಪರಿಗಣಿಸುವುದು ಅಗತ್ಯ. ಹಾಗಾಗಿ ಶಾಲೆಗೆ ಮಗು ಹೋಗುವ ಪ್ರಾರಂಭದ ದಿನದಿಂದ ಎಡಗೈಯಲ್ಲಿ ಮಗು ಬರೆಯುತ್ತಿದ್ದರು. ಎಚ್ಚರಿಕೆಯಿಂದ ಗಮನಹರಿಸಬೇಕು. ಪ್ರಪಂಚವು ಇಂಥವರನ್ನು ಪ್ರತ್ಯೇಕವಾಗಿ ನೋಡುತ್ತದೆ. ಊಟದ ಮೇಜಿನಲ್ಲಿ ಊಟ ಮಾಡುವ ಬಗ್ಗೆ, ಕತ್ತರಿ ಹಿಡಿಯುವ ರೀತಿ, ಬಾಟಲಿಗೆ ಮುಚ್ಚಳ ಹಾಕುವ ಕ್ರಮ, ಕುರ್ಚಿಯಲ್ಲಿ ಕುಳಿತು. ಬರೆಯುವಲ್ಲಿನ ತೊಂದರೆ ಇವೆಲ್ಲವೂ ಮಗುವಿಗೆ ಒಂದಲ್ಲ ಒಂದು ರೀತಿಯಲ್ಲಿ ಒತ್ತಡ, ಕಿರಿಕಿರಿಯನ್ನು ಉಂಟುಮಾಡುತ್ತದೆ. ಶೈಶವ ಪೂರ್ವಾವಸ್ಥೆಯಿಂದ ಈ ಮಗುವಿಗೆ ಕಲಿಯಲು ಸೂಕ್ತ ವಾತಾವರಣವನ್ನು ಕಲ್ಪಿಸಬೇಕಾಗಿದೆ.

ಕಲಿಯುವವನ ಎಲ್ಲಾ ಅಡ್ಡಿ ಆತಂಕಗಳನ್ನು ಹೊರತುಪಡಿಸಿಯೂ ಅವನಿಗೆ ಪ್ರತಿಯೊಂದು ಮೆದುಳಿನ ಭಾಗವೂ ಮುಖ್ಯ. ಮೆದುಳಿನ ಎರಡು ಪಾರ್ಶ್ವಗಳ ದೃಷ್ಟಿಯಿಂದ ಮಾತನಾಡುವಾಗ ಬೋಧಕನಿಗೆ ಈ ಎರಡು ಪಾರ್ಶ್ವಗಳಲ್ಲಿ ಯಾವುದೇ ಒಂದು ಮಾತ್ರ ಮುಖ್ಯ ಎಂದು ಹೇಳುವಂತಿಲ್ಲ. ಕಲಿಯುವವನಿಗೆ ಸಂಬಂಧಿಸಿದಂತೆಯೂ ಪ್ರತಿಯೊಂದು ಪಾರ್ಶ್ವವೂ ಕೌಶಲಗಳನ್ನು ಪಡೆಯಲು ಅಗತ್ಯವಾಗಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವಾಗ ಮೆದುಳಿನ ಬಲ ಪಾರ್ಶ್ವ ಹಾಗೂ ಎಡಪಾರ್ಶ್ವಗಳೆರಡಕ್ಕೂ ಸೂಕ್ತವಾದ ಜ್ಞಾನ ಒದಗಿಸಬೇಕು. ಮೆದುಳಿನ ಪಾರ್ಶ್ವತೆಯ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಎಷ್ಟು ಸಾಧ್ಯವೋ ಅಷ್ಟು ಚರ್ಚೆ ನಡೆಸಿ ಕಲಿಸಬೇಕು. ಅತಿಮುಖ್ಯ ವಿಚಾರವೆಂದರೆ ಇಂಥ ವ್ಯವಸ್ಥೆಯು ಕಲಿಯುವವನಿಗೆ ಅವನ ಮೆದುಳಿನ ಎರಡೂ ಪಾರ್ಶ್ವಗಳೂ ಉತ್ತಮ ರೀತಿಯಲ್ಲಿ ಪ್ರತಿಕ್ರಿಯಿಸಲ ಸಹಾಯಕವಾಗಿರುತ್ತದೆ.

–ಫ್ಲಾ.ಡಿ.

## ಮೆದುಳಿನ ಪಾರ್ಶ್ವವಾಯು (Cerebral Palsy)

ಕೇಂದ್ರ ನರಮಂಡಲ (ಮೆದುಳು ಮತ್ತು ಮೆದುಳುಬಳ್ಳಿ ಸೇರಿದಂತೆ) ದೇಹದ ಎಲ್ಲಾ ಚಟುವಟಿಕೆಗಳ ಕೇಂದ್ರ. ಇದು ನಮ್ಮ ದೇಹದ ಎಲ್ಲ ಸ್ಥೂಲ ಹಾಗೂ ಸಂಕೀರ್ಣ ಚಟುವಟಿಕೆಗಳನ್ನು ಎಲ್ಲ ರೀತಿಯ ವರ್ತನೆಗಳನ್ನು ನಿಯಂತ್ರಿಸುತ್ತದೆ, ನಿರ್ದೇಶಿಸುತ್ತದೆ ಮತ್ತು ಸಂಯೋಜಿಸುತ್ತದೆ. ನರಮಂಡಲ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಏರುಪೇರುಗಳಾದರೂ ಅವುಗಳ ಪ್ರಭಾವ ವರ್ತನೆಗಳಲ್ಲಿ ಕಂಡುಬರುತ್ತದೆ. ಬಹಳ ದೀರ್ಘಕಾಲದಿಂದಲೂ ವಿಜ್ಞಾನಿಗಳು, ವೈದ್ಯಕೀಯ ತಜ್ಞರು ಮೆದುಳಿನ ಕಾರ್ಯಗಳನ್ನು, ರಚನೆಯ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಲೇ ಇದ್ದಾರೆ ಮೊದಲು ದೇಹದ ಇತರ ಅಂಗಗಳಂತೆ ಮೆದುಳು ಸಹ ಒಂದೇ ಅಂಗವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ತಿಳಿಯಲಾಗಿತ್ತು. ಆದರೆ ವಿಜ್ಞಾನ ಹಾಗೂ ತಂತ್ರಜ್ಞಾನದ ಆವಿಷ್ಕಾರಗಳಿಂದ ಮೆದುಳಿನ ಅಧ್ಯಯನಕ್ಕೆ ಅನೇಕ ವಿಧಾನಗಳು ತಂತ್ರ ಯಂತ್ರಗಳು ಲಭ್ಯವಾದುದರಿಂದ ಮೆದುಳಿನ ಬಗ್ಗೆ ಹೆಚ್ಚಿನ ಜ್ಞಾನ ಲಭಿಸಿದೆ. ಈಗ ಮೆದುಳನ್ನು ಅಧ್ಯಯನ ಮಾಡುವ ನರವಿಜ್ಞಾನ (Neurology) ಪ್ರತ್ಯೇಕ ಅಧ್ಯಯನ ಶಾಖೆಯಾಗಿ ಬೆಳೆದಿದೆ.

ಈ ಅಧ್ಯಯನಗಳಿಂದ ಮೆದುಳಿನ ಕಾರ್ಯದಲ್ಲಿ ಎರಡು ಮುಖ್ಯ ತತ್ವಗಳನ್ನು ಗುರುತಿಸಲಾಗಿದೆ. ಮೆದುಳು ಕೆಲವು ಕಾರ್ಯಗಳಲ್ಲಿ ಇಡಿಯಾಗಿಯೇ ಕಾರ್ಯ ನಿರ್ವಹಿಸಬಲ್ಲುದು. ಈ ತತ್ವಕ್ಕೆ ಇಡಿಯಾದ ಕ್ರಿಯೆ (Mass Action) ಎಂದು ಹೆಸರು. ಲ್ಯಾಷ್ಲೆ, ಪೆನ್‌ಫೀಲ್ಡ್ ಮುಂತಾದವರು ಮೆದುಳಿನ ವಿವಿಧ ಭಾಗಗಳನ್ನು ಪ್ರಚೋದನೆಗೆ ಒಳಪಡಿಸಿದ ತಮ್ಮ ಅಧ್ಯಯನಗಳಲ್ಲಿ ಮೆದುಳಿನ ವಿವಿಧ ಭಾಗಗಳು ಬೇರೆ ಬೇರೆ ವರ್ತನೆಗಳನ್ನು ನಿಯಂತ್ರಿಸುತ್ತವೆಂದೂ, ಮೆದುಳಿನ ಎಡ ಮತ್ತು ಬಲ ಗೋಳಾರ್ಧಗಳು ಬೇರೆ ಬೇರೆ ವರ್ತನೆಗಳನ್ನು ಸಾಮರ್ಥ್ಯವನ್ನು ಮೆದುಳಿನ ಕಾರ್ಯಗಳ ಸ್ಥಳೀಕರಣ (Localization of Cerebral Functions) ಎಂದು ಕರೆದಿದ್ದಾರೆ. 1970ರ ದಶಕದಲ್ಲಿ ಮಾಡಲಾದ ಸಂಶೋಧನೆಗಳಿಂದ ಮೆದುಳಿನ ನರಕೋಶಗಳ ವರ್ತನೆಯನ್ನು ಎಂಡಾರ್ಫಿನ್ (Endorphin) ಎಂಬ ಅನೇಕ ರಾಸಾಯನಿಕ ದ್ರವ್ಯಗಳು ನಿಯಂತ್ರಿಸುತ್ತವೆ ಎಂಬುದು ಬೆಳಕಿಗೆ ಬಂದಿದೆ. ಈ ದ್ರವ್ಯಗಳ ಗುಂಪಿಗೆ ಸೇರಿದ ಅಸೆಟಿಲ್‌ಕೋಲೈನ್, ನಾರ್‌ಎಫಿನೆಫ್ರಿನ್, ಡೋಪಮೈನ್, ಸೆರೋಟೋನಿನ್ ಮುಂತಾದವುಗಳ ಪ್ರಭಾವವನ್ನು ಅಧ್ಯಯನ ಮಾಡಿದ್ದಾರೆ.

ಈ ಮುಂದಿನ ಚಿತ್ರ ಮೆದುಳಿನ ಕಾರ್ಯಗಳ ಸ್ಥಾನೀಕರಣದ ಸ್ಥೂಲ ಪರಿಚಯ ನೀಡುತ್ತದೆ. ಚಿತ್ರದಲ್ಲಿ ಫ್ರಾಂಟಲ್ ಮತ್ತು ಪೆರೈಟಲ್ ಗೋಳಗಳ ನಡುವೆ ಇರುವ ಗತ್ಯಾತ್ಮಕ (Motor) ಮತ್ತು ಅದರ ಪಕ್ಕದಲ್ಲಿಯೇ ಇರುವ (ಚಿತ್ರದಲ್ಲಿ ತೋರಿಸಿಲ್ಲ) ಪ್ರಿಮೋಟಾರ್ ಕ್ಷೇತ್ರಗಳು ದೇಹದ ಎಲ್ಲಾ ರೀತಿಯ ಚಲನೆಯ ಕ್ರಿಯೆಗಳಲ್ಲಿ ನಿಯಂತ್ರಿಸುತ್ತವೆ ಎಂದು ತಿಳಿದುಬಂದಿದೆ. ಈ ಕ್ಷೇತ್ರದ ಬೇರೆ ಬೇರೆ ಸ್ಥಳಗಳನ್ನು ಪ್ರಚೋದಿಸಿದರೆ ದೇಹದ ಬೇರೆ ಬೇರೆ ಅಂಗಗಳಲ್ಲಿ ಚಲನೆ ಉಂಟಾಗುತ್ತದೆ. ಈ ಕ್ಷೇತ್ರಗಳಿಗೆ ಪಾರ್ಶ್ವವಾಯುವಿನಂಥ ಯಾವುದೇ ತೊಂದರೆ ಉಂಟಾದರೆ ತೊಂದರೆ ಉಂಟಾದ ಸ್ಥಳ (ಬಿಂದು) ನಿಯಂತ್ರಿಸುವ ಚಲನೆಯ ಅಂಗಗಳು ನಿಯಂತ್ರಣ ಕಳೆದುಕೊಂಡು ಅವುಗಳ ಚಲನೆ ಕುಂಠಿತಗೊಳ್ಳುತ್ತದೆ. ಈ ಸ್ಥಿತಿಯನ್ನು ಮೆದುಳಿನ ಪಾರ್ಶ್ವವಾಯು (ce-

Digitised by Bharatavani, CIIL




rebral palsy)ಎಂದು ಕರೆಯಲಾಗಿದೆ. (ಸೆಬ್ರಲ್ ಎಂದರೆ ಮೆದುಳು ಸಂಬಂಧಿಕ ಪಾಲ್ಸಿ ಎಂದರೆ ಪಾರ್ಶ್ವವಾಯು ಅಥವಾ ಚಲನಾತ್ಮಕ ಅಸಮರ್ಥತೆ ಎಂದು ಅರ್ಥ) ಅನೇಕ ಅಧ್ಯಯನಗಳಿಂದ 10,000 ಜನಸಂಖ್ಯೆಯಲ್ಲಿ 15ರಿಂದ 30 ಜನಕ್ಕೆ ಈ ರೋಗ ಉಂಟಾಗುತ್ತದೆ ಎಂದು ಕಂಡುಬಂದಿದೆ ವಿಶ್ವ ಆರೋಗ್ಯ ಸಂಸ್ಥೆ (WHO) (1994) ಭಾರತದಲ್ಲಿ 1000 ಮಕ್ಕಳಲ್ಲಿ 1.5 ರಿಂದ 3.5 ಮಕ್ಕಳಿಗೆ ಮೆದುಳಿನ ಪಾರ್ಶ್ವವಾಯು ಉಂಟಾಗುತ್ತದೆ ಎಂದು ವರದಿ ಮಾಡಿದೆ. ಭಾರತದಲ್ಲಿ ಮೆದುಳಿನ ಪಾರ್ಶ್ವವಾಯು ಪೀಡಿತ ಮಕ್ಕಳಲ್ಲಿ ಶೇ. 70ರಷ್ಟು ಮಕ್ಕಳು ಈ ವಿಧದ ರೋಗಕ್ಕೆ ಒಳಗಾಗುತ್ತಾರೆ.

ದೇಹದ ಸ್ನಾಯುಗಳಿಗೆ ನರಗಳ ಜೊತೆ ಹೊಂದಾಣಿಕೆ ಇಲ್ಲದೆ ದೈಹಿಕ ಚಲನೆಗೆ ತೊಂದರೆಯಾಗುವ ಪರಿಸ್ಥಿತಿಯನ್ನು ಮೆದುಳಿನ ಪಾರ್ಶ್ವವಾಯು (ಸೆರೆಬ್ರಲ್ ಪಾಲ್ಸಿ) ಎನ್ನುತ್ತಾರೆ. ಸ್ನಾಯುಗಳ ಬಲಹೀನತೆ ಮತ್ತು ಸೆಳೆತ ಇದರ ಪ್ರಮುಖ ಲಕ್ಷಣ. ಇದರಿಂದಾಗಿ ತನ್ನ ಕೆಲಸಗಳ ಬಗ್ಗೆ ಕಾಳಜಿವಹಿಸಿ ಸ್ವತಃ ಮಾಡಿಕೊಳ್ಳಲು ಮಕ್ಕಳಿಗೆ ಆಗುವುದಿಲ್ಲ. ಈ ಪರಿಸ್ಥಿತಿ ಮೆದುಳಿನ ಅಪೂರ್ಣ ಬೆಳವಣಿಗೆ ಮೆದುಳಿಗೆ ಯಾವುದೇ ಕಾರಣದಿಂದ ಉಂಟಾಗುವ ಧಕ್ಕೆ ಅಥವಾ ಮೆದುಳಿನ ಅಸಮರ್ಪಕ ಕಾರ್ಯದಿಂದ ಆಗುತ್ತದೆ. ಮಗು ಹುಟ್ಟುವಾಗಲೇ ಇರುವ ಈ ಸ್ಥಿತಿ ಬೆಳೆದಂತೆಯೇ ಏರುಪೇರಾಗದೆ ತಟಸ್ಥವಾಗಿರುತ್ತದೆ. ಈ ತೊದರೆಯಿಂದ ಬಳಲುವ ಮಕ್ಕಳ ಅಂಗಗಳ ಕಾರ್ಯ ಕುಂಠಿತಗೊಳ್ಳುತ್ತದೆ. ನಡೆಯುವುದು, ಕೈಗಳ ಉಪಯೋಗ ಹಾಗೂ ಮಾತನಾಡುವುದು ಮುಂತಾದ ಮೂಲಕೌಶಲಗಳನ್ನೂ ಮಾಡಲಾಗದೆ ಅವರು ಸಂಕಟವನ್ನು ಅನುಭವಿಸುತ್ತಾರೆ.

ಮೆದುಳಿನ ಪಾರ್ಶ್ವವಾಯುವಿನ ಚಿಹ್ನೆಗಳು ದೈಹಿಕ ಚಲನೆಯ ಸಾಮರ್ಥ್ಯದಲ್ಲಿ ಅತ್ಯಂತ ಕಡಿಮೆ ಮಟ್ಟದ ತೊಂದರೆಯಾಗಿ ಅಥವಾ ಅತ್ಯಧಿಕ ಮಟ್ಟದ ತೊಂದರೆಯಾಗಿ, ಅಥವಾ ಇವೆರಡರ ಮಧ್ಯೆ ಯಾವುದೇ ಮಟ್ಟದಲ್ಲಿ ಅಡಚಣೆಯಾಗಿ ಪ್ರಕಟಗೊಳ್ಳಬಹುದು. ಈ ತೊಂದರೆಯ ಜೊತೆಯಲ್ಲಿ ಮಕ್ಕಳಿಗೆ ಮಾತಿನ ತೊಂದರೆ, ಶ್ರವಣ ಹಾಗೂ ದೃಷ್ಟಿದೋಷ, ಅಪಸ್ಮಾರ, (ಮೂರ್ಛೆ ಹೋಗುವುದು) ಬುದ್ಧಿಮಾಂದ್ಯತೆ ಕಲಿಕಾ ನ್ಯೂನತೆ, ಕುಂಠಿತ ದೈಹಿಕ ಬೆಳವಣಿಗೆ ಆಹಾರಾಭ್ಯಾಸದ ತೊಂದರೆ, ಉಸಿರಾಟದ ತೊಂದರೆ ಮತ್ತು ವರ್ತನಾ ತೊಂದರೆ, ಇವು ಯಾವುದಾದರೂ ಇರುವ ಸಾಧ್ಯತೆ ಇದೆ.

**ವಿಧಗಳು:** ಸ್ನಾಯುಗಳ ಅಸಾಮಾನ್ಯ ಸೆಳೆತದ ಆಧಾರ ತೊಂದರೆಗೊಳಗಾದ ದೇಹದ ಭಾಗದ ಆಧಾರ, ಮತ್ತು ದೈಹಿಕ

ದುರ್ಬಲತೆಯ ಮಟ್ಟದ ಆಧಾರದ ಮೇಲೆ ಸೆರೆಬ್ರಲ್ ಪಾಲ್ಸಿಯನ್ನು ಮೂರು ವಿಧಗಳಾಗಿ ವರ್ಗೀಕರಿಸಿದ್ದಾರೆ.

I ಸ್ನಾಯುಗಳ ಸೆಳೆತದ ಆಧಾರದ ಮೇಲಿನ ವಿಂಗಡಣೆಯಲ್ಲಿ ನಾಲ್ಕು ವಿಧಗಳಿವೆ.

1. **ಸ್ಪಾಸ್ಟಿಸಿಟಿ (Spasticity):** ಶೇಕಡಾ 50ರಷ್ಟು ಮೆದುಳಿನ ಪಾರ್ಶ್ವವಾಯು ಈ ರೂಪದಲ್ಲಿ ಗೋಚರಿಸುತ್ತದೆ. ಸ್ಪಾಸ್ಟಿಸಿಟಿಯಿಂದ ಬಳಲುವ ಮಕ್ಕಳಲ್ಲಿ ನರ ಪ್ರಚೋದನೆಯ ತೊಂದರೆಯ ಫಲವಾಗಿ ಪ್ರತಿಕ್ರಿಯಾತ್ಮಕ ಮತ್ತು ಹಠಾತ್ ಚಲನೆಯ ಮೇಲೆ ಹತೋಟಿ ಇರುವುದಿಲ್ಲ. ಜೊತೆಗೆ ಚಲನೆಗೆ ಸಹಕರಿಸಬೇಕಾದ ಸ್ನಾಯುಗಳಲ್ಲಿ ಕ್ರಮಬದ್ಧವಾಗಿ ಅನಗತ್ಯ ಒತ್ತಡ ಉಂಟಾಗುತ್ತಿರುತ್ತದೆ. ನಿರ್ದಿಷ್ಟ ಸ್ನಾಯುಗಳನ್ನು ಹಿಗ್ಗಿಸಬೇಕೆಂದು ಅಂದುಕೊಂಡರೆ ಸ್ನಾಯುಗಳು ಅನೈಚ್ಛಿಕವಾಗಿ (ತನ್ನಿಂದ ತಾನೇ) ಸಂಕುಚಿತಗೊಳ್ಳುತ್ತವೆ. ನಿರೀಕ್ಷಿತ ದೈಹಿಕ ಚಲನೆಯು ಆಗದೇ ಇರುವುದರಿಂದ ಸ್ನಾಯುಗಳಲ್ಲಿ ಅತ್ಯಧಿಕ ಅಥವಾ ಅತಿ ಕಡಿಮೆ ಒತ್ತಡ ಕಂಡುಬರುತ್ತದೆ. ಸ್ನಾಯುಗಳು ಮೆದುಳಿನ ಇಚ್ಛೆಗನುಗುಣವಾಗಿ ವರ್ತಿಸದೆ, ಹತೋಟಿ ತಪ್ಪಿ ವರ್ತಿಸುವುದರಿಂದ ಉಂಟಾಗುವ ಅನೈಚ್ಛಿಕ ಚಲನೆಯನ್ನು ಸ್ಪಾಸ್ಟಿಕ್ ಎಂದು ಹೇಳುತ್ತಾರೆ. ಈ ಸ್ಥಿತಿಯನ್ನು 1861ರಲ್ಲಿ ಲಂಡನ್ನಿನ ಡಾ. ಲಿಟಲ್ ಎಂಬುವರು ಗುರ್ತಿಸಿ ವರ್ಣಿಸಿದ್ದರಿಂದ ಇದನ್ನು ಲಿಟಲ್‌ರೋಗ ಎಂದು ಹೆಸರಿಸುತ್ತಾರೆ.

2. **ಅಥೆಟೋಸಿಸ್ (Athetosis)–** ಈ ವಿಧದ ಮೆದುಳಿನ ಪಾರ್ಶ್ವವಾಯುವಿನಿಂದ ಬಳಲುವ ಮಕ್ಕಳ ಅನೈಚ್ಛಿಕ ಚಲನೆ ಅಲೆಗಳ ಹಾಗೆ ಏಳುತ್ತಾ ಬೀಳುತ್ತಾ ಇರುತ್ತದೆ. ಆದ್ದರಿಂದ ಮಕ್ಕಳು ಇದ್ದಕ್ಕಿದ್ದಂತೇ ಒಂದು ಕಡೆಗೆ ಓಲುವುದು, ಮುಗ್ಗರಿಸುವುದು ಇತ್ಯಾದಿ ಕಂಡುಬರುತ್ತದೆ. ಈ ಎಲ್ಲಾ ರೀತಿಯ ಅನಿರೀಕ್ಷಿತ ಚಲನೆಗಳು ಮಗುವಿನ ಸಂವೇಗಾತ್ಮಕ ಮನಸ್ಥಿತಿಯನ್ನು ಅನುಸರಿಸಿ ಇರುತ್ತದೆ. ಸುಸ್ಥಿರ ಮನಸ್ಥಿತಿ ಇದ್ದಾಗ ಕಡಿಮೆ ಏಳು ಬೀಳುಗಳು ಅಸ್ಥಿರ ಮನಸ್ಥಿತಿಯಲ್ಲಿ ಹೆಚ್ಚು ಏಳು ಬೀಳುಗಳು ಕಂಡು ಬರುತ್ತವೆ. ನಿದ್ರಾವಸ್ಥೆಯಲ್ಲಿ ಈ ಸ್ಥಿತಿ ಕಂಡು ಬರುವುದಿಲ್ಲ. ತೀವ್ರ ಮಟ್ಟದ ತೊಂದರೆ ಅಥೆಟೋಸಿಸ್ ಇದ್ದರೆ ಮಾತಿನ ತೊಡಕು ಉಂಟಾಗುತ್ತದೆ.

Digitised by Bharatavani, CIIL

3. **ಅಟಾಕ್ಸಿಯಾ (Ataxia)–** ಈ ವಿಧವನ್ನು ಗುರುತಿಸಲು ಸಾಮಾನ್ಯವಾಗಿ ವಿಳಂಬವಾಗುತ್ತದೆ. ಮೆದುಳು ಪೂರ್ತಿಯಾಗಿ ದೇಹದ ಮೇಲಿನ ಹತೋಟಿ ಕಳೆದುಕೊಂಡಿರುತ್ತದೆ. ಚಲನಾಂಗಗಳು ಮೆದುಳಿನ ಅಂಕೆಗೆ ಮೀರಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಆದ್ದರಿಂದ ಮಗು ನಡೆಯಬೇಕಾದರೆ ಪದೇ ಪದೇ ಬೀಳುವುದು, ಕುಳಿತಿದ್ದರೆ ಒಂದೇ ಭಂಗಿಯಲ್ಲಿ ಕೂರಲಾಗದೆ ಇರುವುದು ಈ ರೀತಿ ಕಷ್ಟವನ್ನು ಅನುಭವಿಸುತ್ತದೆ.

4. **ಮಿಶ್ರ (Mixed)–** ಹೆಸರೇ ಸೂಚಿಸುವಂತೆ ಕೆಲವು ಮಕ್ಕಳಲ್ಲಿ ಮೇಲೆ ಹೇಳಿರುವ ಮೂರು ವಿಧಗಳು ಒಟ್ಟಾಗಿ ಇರುವ ಸಾಧ್ಯತೆ ಇದೆ. ಇದನ್ನು ಮೆದುಳಿನ ಪಾರ್ಶ್ವವಾಯುವಿನ ಮಿಶ್ರ ವಿಧ ಎಂದು ಕರೆಯಲಾಗುತ್ತದೆ. ಈ ಸ್ಥಿತಿಯಲ್ಲಿ ಮಗು ಮೇಲೆ ವಿವರಿಸಿದ ಲಕ್ಷಣಗಳ ಮಿಶ್ರಣವನ್ನು ಹೊಂದಿರುತ್ತದೆ.

II. ಹತೋಟಿ ಕಳೆದುಕೊಂಡ ದೇಹದ ಭಾಗ ಮತ್ತು ಚಲನಾಂಗಗಳ ಆಧಾರದ ಮೇಲೆ ಮೆದುಳಿನ ಪಾರ್ಶ್ವವಾಯುವನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

1. ಕ್ವಾಡ್ರಿಪ್ಲೀಜಿಯ (Quadriplegia)– ಪೂರ್ತಿ ದೇಹ ತೊಂದರೆಗೊಳಗಾಗಿರುತ್ತದೆ. ಎರಡೂ ಕೈ ಹಾಗೂ ಎರಡೂ ಕಾಲುಗಳು ತಮ್ಮ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಕಳೆದುಕೊಂಡಿರುತ್ತವೆ.

2. ಡಿಪ್ಲೀಜಿಯಾ (Diplegia)– ದೇಹದ ಎಲ್ಲಾ ಭಾಗಗಳು ಸ್ವಾಧೀನ ಕಳೆದುಕೊಂಡಿರುತ್ತವೆ. ಆದರೆ ಕಾಲುಗಳ ಮೇಲಿನ ಹತೋಟಿ ಪೂರ್ತಿ ಇಲ್ಲದಿರುತ್ತದೆ.

3. ಹೆಮಿ ಪ್ಲಿಜಿಯಾ (Hemiplegia)– ದೇಹದ ಎಡ ಅಥವಾ ಬಲ ಭಾಗ ಪೂರ್ತಿಯಾಗಿ ಹತೋಟಿ ಕಳೆದುಕೊಂಡಿರುತ್ತದೆ.

4. ಪಾರಾಪ್ಲಿಜಿಯಾ (Paraplegia)– ದೇಹದ ಕೆಳಗಿನ ಭಾಗದ ಮೇಲೆ ಸಂಪೂರ್ಣವಾಗಿ ಮೆದುಳಿನ ಹತೋಟಿ ಇರುವುದಿಲ್ಲ. (ಈ ವಿಧ ಬಹಳ ವಿರಳ)

III. ದೈಹಿಕ ದುರ್ಬಲತೆಯ ಮಟ್ಟದ ಆಧಾರದಲ್ಲಿ ಮೆದುಳಿನ ಪಾರ್ಶ್ವವಾಯುವನ್ನು ಲಘು, ಸಾಧಾರಣ ಹಾಗೂ ತೀವ್ರ ಮಟ್ಟದ ತೊಂದರೆ ಎಂದು ಮೂರು ವಿಧಗಳಾಗಿ ವಿಂಗಡಿಸುತ್ತಾರೆ.

ಲಘುಮಟ್ಟ– ನಡೆಯಲು ಸಾಧ್ಯವಿದ್ದು, ಕೈಗಳ ಬಳಕೆಗೆ ಮಿತಿ ಇರುತ್ತದೆ. ಮಾತನಾಡಲು ಕಷ್ಟವಾಗುತ್ತದೆ.

ಸಾಧಾರಣ ಮಟ್ಟ– ಕಾಲಿಗೆ ಸಹಾಯಕ ಸಾಧನಗಳನ್ನು ಬಳಸಿಕೊಂಡು ಸ್ವಲ್ಪ ಮಟ್ಟಿಗೆ ನಡೆದಾಡಬಹುದು. ಕೈಗಳ ಬಳಕೆಗೆ ಬಹಳಷ್ಟು ಮಿತಿ ಇರುತ್ತದೆ. ಬಟ್ಟೆ ಧರಿಸುವುದು, ಊಟ ಮಾಡುವುದು, ವಾಹನ ಹತ್ತುವುದು, ಇಳಿಯುವುದು ಮಾತನಾಡುವುದು ಇವೆಲ್ಲವೂ ಕಷ್ಟವಾಗುತ್ತದೆ.

ತೀವ್ರ ಮಟ್ಟ– ಸ್ವತಂತ್ರವಾಗಿ ನಡೆಯಲಾಗುವುದಿಲ್ಲ. ಕೈಯಿಂದಲೂ ಯಾವುದೇ ಕೆಲಸ ಮಾಡಲಾಗುವುದಿಲ್ಲ, ಮಾತು ಕೂಡ ಆಡಲು ಆಗುವುದಿಲ್ಲ.

ಕಾರಣಗಳು– ಮೆದುಳಿನ ಪಾರ್ಶ್ವವಾಯುವಿಗೆ ನಿರ್ದಿಷ್ಟ ಕಾರಣ ತಿಳಿಯಲಾಗದಿದ್ದರೂ ಕೆಲವೊಂದು ಅಂಶಗಳು ಈ ಸ್ಥಿತಿಯುಂಟಾಗಲು ಕಾರಣ ಎಂದು ಹೇಳಬಹುದು. ವೈದ್ಯಕೀಯ ತಜ್ಞರು ಈ ಕೆಳಗಿನ ಸಾಮಾನ್ಯ ಕಾರಣಗಳನ್ನು ಗುರ್ತಿಸಿದ್ದಾರೆ.

ಅವಧಿಗೆ ಮುಂಚಿನ ಹೆರಿಗೆ, ಅವಳಿ, ತ್ರಿವಳಿಗಳ ಜನನ, ಹುಟ್ಟಿದ ತಕ್ಷಣ ಮೆದುಳಿಗೆ ಆಮ್ಲಜನಕದ ಕೊರತೆ, ಗರ್ಭಾವಸ್ಥೆಯಲ್ಲಿ ತಾಯಿಗೆ ತಗಲುವ ಕೆಲವೊಂದು ಸೋಂಕು ಅಥವಾ ವಿಷಕಾರಿ ವಸ್ತುಗಳ ಸಂಪರ್ಕ ಕಾರಣಾಂತರಗಳಿಂದ ಮೆದುಳಿನ ಅಸಮರ್ಪಕ ಬೆಳವಣಿಗೆ, ಕಾರಣಾಂತರಗಳಿಂದ ಮೆದುಳಿನ ಅಸಮರ್ಪಕ ಬೆಳವಣಿಗೆ. ಗರ್ಭಿಣಿಯರಲ್ಲಿ ಹಾರ್ಮೋನುಗಳ ಏರುಪೇರು, ಗರ್ಭಿಣಿಯರು ಹೆಚ್ಚು ಬಾರಿ ಕ್ಷ–ಕಿರಣಗಳಿಗೆ ಮೈಯ್ಯೊಡ್ಡುವುದು.

ಮಗುವಿಗೆ ಗರ್ಭಾವಸ್ಥೆಯಲ್ಲಿ ಪ್ರಸವದ ವೇಳೆಯಲ್ಲಿ ಅಥವಾ ಪ್ರಸವದ ತಕ್ಷಣ ಯಾವುದೇ ಕಾರಣದಿಂದ ಮೆದುಳಿಗೆ ಆಮ್ಲಜನಕದ ಪೂರೈಕೆ ಸರಿಯಾಗಿ ಆಗದಿದ್ದರೆ, ಮೆದುಳಿಗೆ ವಿಷಕಾರಿ ವಸ್ತುಗಳ/ ರಾಸಾಯನಿಕಗಳ ಸೇರ್ಪಡೆಯಾದರೆ, ಮೆದುಳಿಗೆ ಸೋಂಕು ತಗುಲಿದರೆ, ಮೆದುಳಿನಲ್ಲಿ ರಕ್ತಸ್ರಾವವಾದರೆ, ಮೆದುಳಿಗೆ ಸೂಕ್ಷ್ಮ ಪೆಟ್ಟಾದರೆ ಮಕ್ಕಳಿಗೆ ಮೆದುಳಿನ ಪಾರ್ಶ್ವವಾಯು ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

**ಮೆದುಳಿನ ಪಾರ್ಶ್ವವಾಯು ಪೀಡಿತರ ನಿರ್ವಹಣೆ**

ಮೆದುಳಿನ ಪಾರ್ಶ್ವವಾಯುವನ್ನು ಗುಣಪಡಿಸಲಾಗದಿದ್ದರೂ ಮಗು ಸಾಧ್ಯವಾದಷ್ಟು ಮಟ್ಟಿಗೆ ಸ್ವಾವಲಂಬಿಯಾಗಿ ತನ್ನ ಕಾರ್ಯವನ್ನು ತಾನೇ ನಿರ್ವಹಿಸಲು ಮತ್ತು ತನ್ನ ಕೈಲಾದ ಮಟ್ಟಿಗಿನ ಶೈಕ್ಷಣಿಕ ಹಾಗೂ ಔದ್ಯೋಗಿಕ ತರಬೇತಿಯನ್ನು ಪಡೆಯಲು ಹಲವಾರು ರೀತಿಯ ಪುನರ್ವಸತಿ ಕಾರ್ಯಗಳು ಲಭ್ಯವಿದೆ.

I. **ಚಿಕಿತ್ಸೆ–** ವಿವಿಧ ಕ್ಷೇತ್ರದ ತಜ್ಞರ ಸಹಕಾರದೊಂದಿಗೆ ಮೆದುಳಿನ ಪಾರ್ಶ್ವವಾಯುವಿನಿಂದ ಬಳಲುವ ಮಕ್ಕಳಿಗೆ ಪುನರ್ವಸತಿ ಕಲ್ಪಿಸಲು ಚಿಕಿತ್ಸೆ ನೀಡಬೇಕು.

1. **ದೈಹಿಕ ಚಿಕಿತ್ಸೆ (ಫಿಸಿಯೋ ಥೆರಪಿ)–** ಮಗುವಿನ ಸ್ಥೂಲ ಚಲನಾ ಕೌಶಲವನ್ನು ಅಭಿವೃದ್ಧಿಪಡಿಸಲು ಈ ಚಿಕಿತ್ಸೆ ನೀಡಲಾಗುತ್ತದೆ. ಸ್ನಾಯುಗಳ ಬಲವರ್ಧನೆ, ಶರೀರ ಭಂಗಿ ಮತ್ತು ನಡೆಯಲು ಬೇಕಾದ ನಿರ್ದಿಷ್ಟ ಚಲನೆಗಳನ್ನು ಪ್ರಯತ್ನಪೂರ್ವಕವಾಗಿ ಮಗುವಿಗೆ ಮಾಡಿಸಲಾಗುತ್ತದೆ.

ಕೆಲವೊಂದು ಚಲನೆಗಳನ್ನು ಮಗು ಸ್ವತಃ ಮಾಡುವಂತೆ ಉತ್ತೇಜಿಸಲಾಗುತ್ತದೆ. ದೇಹದ ಸ್ನಾಯುಗಳು ಚುರುಕಾಗಲು ಕೈ ಕಾಲುಗಳನ್ನು ನಿಧಾನವಾಗಿ ಎಳೆಯುವುದು, ಮೃದುವಾಗಿ ತಿಕ್ಕುವುದು, ನೀರಿನ ಚಿಕಿತ್ಸೆ ಮತ್ತು ವಿದ್ಯುತ್ ಚಿಕಿತ್ಸೆಯನ್ನು ತೊಂದರೆಯ ವಿಧ ಮತ್ತು ಮಟ್ಟವನ್ನು ಅನುಸರಿಸಿ ನಿರ್ಣಯಿಸುತ್ತಾರೆ. ಸ್ನಾಯುಗಳಿಗೆ ನರಸಂವೇದನೆ ಕಡಿಮೆ ಇರುವ ಕಾರಣ ಸ್ನಾಯುಗಳು ಸಂಕುಚಿತಗೊಂಡು ಕೈಕಾಲುಗಳಲ್ಲಿ ಶಾಶ್ವತ ಊನ ಕಾಣಿಸಿಕೊಳ್ಳುವುದನ್ನು ತಡೆಗಟ್ಟಲು ಈ ಚಿಕಿತ್ಸೆ ಅಗತ್ಯ.

2. **ಸ್ವಾನುಭವ ಚಿಕಿತ್ಸೆ (ಆಕ್ಯುಪೇಷನಲ್ ಥೆರಪಿ)–** ಇದು ದೇಹದ ನಿರ್ದಿಷ್ಟ ಸೂಕ್ಷ್ಮ ಹಾಗೂ ಸ್ಥೂಲ ಚಲನೆಗಳನ್ನು ಪ್ರಚೋದಿಸಲು ನೀಡುವ ಚಿಕಿತ್ಸೆ. ದೈನಂದಿನ ಚಟುವಟಿಕೆಗಳನ್ನು ಸಾಧ್ಯವಾದಷ್ಟು ಮಗು ತನ್ನಿಂದ ತಾನೇ ಮಾಡಿಕೊಳ್ಳುವಂತೆ ತಯಾರಿಸುವುದೇ ಈ ಚಿಕಿತ್ಸೆಯ ಗುರಿ. ಮಗುವಿನ ಕೂಲಂಕಷ ತಪಾಸಣೆಯ ನಂತರ ತಜ್ಞರ ನಿರ್ಣಯದ ಮೇರೆಗೆ ಈ ತರಬೇತಿಯನ್ನು ಪೋಷಕರ ಸಹಕಾರದೊಂದಿಗೆ ನೀಡಲಾಗುತ್ತದೆ. ನಿತ್ಯ ಜೀವನ ನಿರ್ವಹಣಾ ಕೌಶಲಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಪರಿಷ್ಕರಿಸಿ ನಿರ್ಧಾರ ಕೈಗೊಂಡು ನಿತ್ಯವೂ ಅಭ್ಯಾಸ ನೀಡಲಾಗುತ್ತದೆ.


Digitised by Bharatavani, CIIL

3. **ವಾಕ್ (ಮಾತಿನ) ಚಿಕಿತ್ಸೆ–** ಮೆದುಳಿನ ಪಾರ್ಶ್ವವಾಯುವಿನಿಂದ ತೊಂದರೆಗೊಳಗಾದ ಮಗುವಿಗೆ ಇತರ ನ್ಯೂನತೆಗಳು ಇರುವ ಸಂಭವ ಹೆಚ್ಚು. ಆದ ಕಾರಣ ಚಿಕ್ಕ ವಯಸ್ಸಿನಿಂದಲೇ ಮಗುವಿಗೆ ಮಾತು ಕೇಳಿ ಅರ್ಥಮಾಡಿಕೊಳ್ಳುವ ಸೌಲಭ್ಯ ಒದಗಿಸಬೇಕು. ಜೊತೆಗೆ ತನ್ನ ಸುತ್ತಮುತ್ತಲಿನ ಮಾತಿನ ಸಂವೇದನೆಯನ್ನು ಗ್ರಹಿಸಿ ಪ್ರತಿಕ್ರಿಯೆ ನೀಡುವಂತೆ ಉತ್ತೇಜಿಸಬೇಕು. ಹಾಗೆಯೇ ಗ್ರಹಿಸಿದ ಎಲ್ಲಾ ರೀತಿಯ ಸಂವೇದನೆಯನ್ನೂ ವಿಶ್ಲೇಷಿಸಿ ಸೂಕ್ತ ನಿರ್ಣಯದ ಮೂಲಕ ಭಾಷೆಯನ್ನು ಅಭಿವ್ಯಕ್ತಿಸುವ ಕಲೆಯನ್ನು ಕಲಿಸಬೇಕು.

4. **ಸಾಮಾಜಿಕ ಮತ್ತು ಸಂವೇಗಾತ್ಮಕ ಬೆಳವಣಿಗೆಗೆ ತರಬೇತಿ–** ಕುಟುಂಬದ ಸದಸ್ಯರು, ನೆರೆಹೊರೆಯವರು, ವೃತ್ತಿನಿರತ ತಜ್ಞರು ಎಲ್ಲರೊಂದಿಗೆ ಒಡನಾಡಲು ಮಕ್ಕಳಿಗೆ ಸಾಕಷ್ಟು ಅವಕಾಶ ಕಲ್ಪಿಸಿಕೊಡಬೇಕು. ಇದರಿಂದ ಅವರು ಸಾಮಾಜಿಕವಾಗಿ, ಸಂವೇಗಾತ್ಮಕ ಸ್ವಾವಲಂಬಿಗಳಾಗಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಇತರರೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಮ್ಮ ಭಾವನೆಗಳನ್ನು ಹಂಚಿಕೊಂಡು ಸಹಬಾಳ್ವೆ ಮಾಡಲು ಕಲಿಯುತ್ತಾರೆ.

**ಶಿಕ್ಷಣ–** ಮೆದುಳಿನ ಪಾರ್ಶ್ವವಾಯು ಪೀಡಿತ ಮಗುವಿನ ಸ್ಥಿತಿಯ ತೀವ್ರತೆಯ ಮೇಲೆ ಶಿಕ್ಷಣ ವ್ಯವಸ್ಥೆ ಮತ್ತು ತರಬೇತಿಯ ಬಗ್ಗೆ ನಿರ್ಧರಿಸಲಾಗುತ್ತದೆ. ಸಾಧ್ಯವಾದಷ್ಟೂ ಮಗು ಎಲ್ಲಾ ಮಕ್ಕಳಂತೆ ತನ್ನ ಮನೆಯ ಬಳಿ ಇರುವ ಶಾಲೆಗೆ ಹೋಗುವುದು ಸೂಕ್ತ. ಮುಖ್ಯವಾಹಿನಿಯಲ್ಲಿ ಒಂದಾಗಲು ಇದಕ್ಕಿಂತ ಸರಳ, ಸುಲಭ ಸಾಧನ ಬೇರೊಂದಿಲ್ಲ. ಮಗುವಿನ ಅಗತ್ಯಕ್ಕನುಗುಣವಾಗಿ ಭೌತಿಕ, ಸಾಮಾಜಿಕ, ಮಾನಸಿಕ ಪರಿಸರದಲ್ಲಿ ಮಾರ್ಪಾಟು ಮಾಡಬೇಕು. ತೀವ್ರ ಮಟ್ಟದ ತೊಂದರೆ ಅನುಭವಿಸುವ ಮಕ್ಕಳಿಗೆ ಮನೆಯಲ್ಲೇ ಕಲಿಸುವ ವ್ಯವಸ್ಥೆ ಮಾಡಬೇಕು.

ಸಾಮಾನ್ಯ ಶಾಲೆಯಲ್ಲಿ ಮಗುವಿಗೆ ಪ್ರವೇಶ ಸಿಕ್ಕಿದನಂತರ ಮಗುವಿನ ಅಗತ್ಯಗಳ ಬಗ್ಗೆ ಶಿಕ್ಷಕರಿಗೆ ಕೆಲವೊಂದು ಅಗತ್ಯ ಮಾಹಿತಿಗಳನ್ನು ನೀಡಬೇಕು. ಮಗುವಿನ ಸಂವಹನ ಮಾಧ್ಯಮ, ಸಾಧನ ಸಲಕರಣೆಗಳ ಉಪಯೋಗ, ಅದರ ಬಗ್ಗೆ ವಹಿಸಬೇಕಾದ ಎಚ್ಚರಿಕೆ ಕ್ರಮಗಳು ಇವುಗಳ ಬಗ್ಗೆ ತಜ್ಞರು ಶಿಕ್ಷಕರಿಗೆ ತಿಳಿಸಿರಬೇಕು. ಕೆಲವು ಸಾಮಾನ್ಯ ನಿರ್ವಹಣಾ ತಂತ್ರಗಳನ್ನು ಶಿಕ್ಷಕರು ತಿಳಿದಿರಬೇಕು. ದೈಹಿಕ ಚಿಕಿತ್ಸೆಯ ಬಗ್ಗೆ ಶಿಕ್ಷಕರಿಗೆ ಮಾಹಿತಿ ನೀಡಿದರೆ ಅವರು ಸಮಯ ಸಂದರ್ಭ ನೋಡಿ ಮಗುವಿಗೆ ಬೇಕಿರುವ ಚಲನೆಯನ್ನು, ನಡೆಯುವ, ಕೂರುವ ಭಂಗಿಯನ್ನು ಸರಿಪಡಿಸುತ್ತಿರಬಹುದು.

– ಸ್ವಾನುಭವ ಚಿಕಿತ್ಸೆಯ ಬಗ್ಗೆ ಶಿಕ್ಷಕರಿಗೆ ತಿಳಿಸಿದರೆ ಮಗುವಿನ ದೈನಂದಿನ ಅಭ್ಯಾಸಗಳನ್ನು ಗಮನಿಸಿ ಲೋಪ ದೋಷಗಳೇನಾದರೂ ಇದ್ದರೆ ಆ ಮಾಹಿತಿಯನ್ನು ತಜ್ಞರಿಗೆ ನೀಡಬಹುದು. ಆ ಮಾಹಿತಿಗೆ ಅನುಸಾರವಾಗಿ ತಜ್ಞರು ಮಗುವಿಗೆ ಸೂಕ್ತ ತರಬೇತಿಗೆ ಮಾರ್ಗದರ್ಶನ ನೀಡುತ್ತಾರೆ. ಶೈಕ್ಷಣಿಕ ಸಾಮಗ್ರಿಗಳ ಮಾರ್ಪಾಡಿಗೂ ಶಿಕ್ಷಕರು ಸಲಹೆಯನ್ನು ಕೊಡಬಹುದು.

– ಮಾತಿನ ತರಬೇತಿಯ ಪುನರ್ಬಲನ ಶಿಕ್ಷಕರಿಂದ ಶಾಲೆಯಲ್ಲಿ ಸಾಧ್ಯ. ಮಾತನಾಡಲು ಅವಕಾಶ ಕಲ್ಪಿಸಿಕೊಡುವುದು, ಸರಿಯಾದ ಉಚ್ಚಾರಣೆ ಹೇಳಿಸುವುದು, ಹೇಳಲಾಗದಿದ್ದರೆ ಬರೆಯುವಂತೆ ಪ್ರೋತ್ಸಾಹಿಸುವುದು, ಎರಡೂ ಆಗದಿದ್ದರೆ ವಿಶೇಷ ಸಾಧನಗಳ ಮೂಲಕ ಮಗು ಗುರುತಿಸುವಂತೆ ಮಾಡುವುದು ಹೀಗೆ ಯಾವುದೇ ರೀತಿಯಲ್ಲಿ ಮಗುವಿನ ಸಂವಹನ ನಡೆಯುವಂತೆ ನೋಡಿಕೊಳ್ಳಬಹುದು.

**ಕೆಲವು ನಿರ್ದಿಷ್ಟ ನಿರ್ವಹಣಾ ತಂತ್ರಗಳು:** ಮೆದುಳಿನ ಪಾರ್ಶ್ವವಾಯು ಪೀಡಿತರಲ್ಲಿ ವೈವಿಧ್ಯತೆ ಬಹಳ. ಒಬ್ಬೊಬ್ಬರ ತೊಂದರೆಯೂ ವಿಭಿನ್ನ. ಒಂದು ಮಗುವಿಗೆ ಕೈಗೊಂಡ ನಿರ್ವಹಣಾ ತಂತ್ರ ಮತ್ತೊಂದು ಮಗುವಿಗೆ ಹೊಂದಿಕೆಯಾಗದು. ಇದರಿಂದ ಶಿಕ್ಷಕರು ಗೊಂದಲಕ್ಕೊಳಗಾಗುತ್ತಾರೆ. ತರಗತಿಯಲ್ಲಿ ಈ ಮಕ್ಕಳನ್ನು ನಿಭಾಯಿಸಲು ಅನುಸರಿಸಬೇಕಾದ ಕೆಲವು ಸೂಚನೆಗಳು.

– ಒಂದೇ ಬಾರಿಗೆ ಎರಡು ಬಗೆಯ ಚಲನಾ ಕೌಶಲವನ್ನು ನಿರ್ವಹಿಸಲು ಇವರು ಅಸಮರ್ಥರು. ಹಾಗಾಗಿ ಬರೆಯುವ ಕಾರ್ಯದಲ್ಲಿ ನಿರತರಾಗಿದ್ದಾಗ ಜೊಲ್ಲುರಸ ನುಂಗಿಕೊಳ್ಳಲು ಆಗದೆ ಜೊಲ್ಲು ಸುರಿಸಬಹುದು. ಅಂತಹ ಮಕ್ಕಳಿಗೆ ಬರೆಯುವಾಗ ಜೊಲ್ಲು ಪಟ್ಟಿ ಕಟ್ಟಿಕೊಡಬೇಕು.

– ಏನಾದರೂ ಕೆಲಸ ಮಾಡುತ್ತಿರುವಾಗ ಕುಳಿತುಕೊಂಡಿರುವ ಭಂಗಿ ಹತೋಟಿ ತಪ್ಪಿ ಪದೇ ಪದೇ ಬೀಳುವಂತಾಗಬಹುದು. ಇದರ ನಿರ್ವಹಣೆಗೆ ಬರೆಯುತ್ತಿರುವಾಗ ಅಥವಾ ಕೈಯಿಂದ ಮಾಡುವ ಯಾವುದೇ ಕೆಲಸದಲ್ಲಿ ತೊಡಗಿರುವಾಗ ಮಗುವಿನ ಕುರ್ಚಿಗೆ ಸುತ್ತಲೂ ದಿಂಬು ಇಟ್ಟು ಹಿತಕರವಾದ ಆಸನದ ವ್ಯವಸ್ಥೆ ಮಾಡಬೇಕು.

– ಈ ಮಕ್ಕಳು ದೈಹಿಕ ಚಟುವಟಿಕೆಯಲ್ಲಿ ನಿರತರಾಗಿದ್ದಾಗ ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆ ಮತ್ತು ಇತರರಿಗಿಂತ ಹೆಚ್ಚಿನ ಪ್ರಯಾಸ ಪಡುತ್ತಾರೆ. ಹಾಗಾಗಿ ಒಂದು ದೈಹಿಕ ಕಾರ್ಯ ನಿರ್ವಹಿಸುವಾಗ ಇನ್ನೊಂದಕ್ಕೆ ಇವರ ಗಮನಹರಿಯುವುದಿಲ್ಲ. ನಡೆಯುತ್ತಿರುವಾಗ ಕಾಲಿಗೆ ಅಡ್ಡಲಾಗಿ ಏನಾದರೂ ಇದ್ದರೆ ಅದನ್ನು ಸರಿಸಿಕೊಳ್ಳಲು ಆಗುವುದಿಲ್ಲ. ಇದರಿಂದಾಗಿ ಈ ಮಕ್ಕಳು ನಡೆಯುವ ಹಾದಿಯನ್ನು ಆದಷ್ಟೂ ತಡೆರಹಿತವಾಗಿ ಇಟ್ಟಿರಬೇಕು. ತರಗತಿಯ ಇತರ ಮಕ್ಕಳ ಸಹಕಾರದಿಂದ ಇದನ್ನು ಗಮನಿಸಿಕೊಳ್ಳಬಹುದು.

– ಸಮಯದ ನಿರ್ಬಂಧ ವಿಧಿಸಿದರೆ ಎಲ್ಲಾ ಕೆಲಸಗಳು ಹಾನಿಗೊಳಗಾಗುತ್ತದೆ. ಈ ಮಕ್ಕಳು ವೇಗವಾಗಿ ಏನನ್ನಾದರೂ ಮಾಡಲು ತೊಡಗಿದರೆ ಆ ಕೆಲಸ ಸರಿಯಾಗಿರುವುದಿಲ್ಲ. ಶಾಲೆಯಲ್ಲಿ ಮಾಡಬೇಕಾದ ದೈಹಿಕ ಕಾರ್ಯಗಳನ್ನು ಇವರಿಗೆ ಸಾಧ್ಯವಾದಷ್ಟು ಕಡಿಮೆ ಕೊಡಬೇಕು. ಕೊಟ್ಟರೂ ಅದಕ್ಕೆ ಸಾಕಷ್ಟು ಕಾಲಾವಕಾಶ ನೀಡಬೇಕು.

– ಗಾಲಿ ಕುರ್ಚಿಯಲ್ಲಿ ಬರುವ ಮಕ್ಕಳಿಗೆ ಸ್ಥಳ ಸಂಬಂಧಿ ಮಾರ್ಪಾಡು ಅಗತ್ಯ. ಕುಳಿತುಕೊಳ್ಳುವ ಸ್ಥಳ, ಮೇಜಿನ ವಿನ್ಯಾಸ, ತರಗತಿಯಲ್ಲಿ ಸುತ್ತಾಡಲು ಸೌಲಭ್ಯ ಇವನ್ನು ಪರಿಗಣಿಸಬೇಕು.

– ಕೆಲವು ಮಕ್ಕಳಿಗೆ ಒಂದೇ ಕಡೆ ಒಂದೇ ಭಂಗಿಯಲ್ಲಿ ಹೆಚ್ಚು ಹೊತ್ತು ಕುಳಿತಿರಲು ಆಗುವುದಿಲ್ಲ. ಅವರ ಕುಳಿತ ರೀತಿಯನ್ನು ಆಗ್ಗಾಗ್ಗೆ ಬದಲಿಸುತ್ತಿರಬೇಕು. ಕೆಲವು ಮಕ್ಕಳು ಸ್ವತಃ ತಮ್ಮ ಭಂಗಿಯನ್ನು ಬದಲಿಸಿಕೊಳ್ಳಲು ಸಮರ್ಥರಾಗಿರುತ್ತಾರೆ. ಇನ್ನು ಕೆಲವರಿಗೆ ಇತರರ ಸಹಾಯ ಬೇಕಾಗುತ್ತದೆ.

– ತರಗತಿಯ ಪೀಠೋಪಕರಣಗಳಲ್ಲಿ, ಬರವಣಿಗೆಯ ಸಾಧನಗಳಲ್ಲಿ ಮಗುವಿನ ಅಗತ್ಯವನ್ನು ಗಮನಿಸಿ ತಕ್ಕಂತೆ ಮಾರ್ಪಾಡು ಮಾಡಬೇಕು. ಉಪಯೋಗಿಸುವ ಉಪಕರಣಗಳು ಸೂಕ್ತ ರೀತಿಯಲ್ಲಿ ಮಾರ್ಪಾಡಾಗಿದ್ದರೆ ಮಗುವಿನ ದೈನಂದಿನ ಕೆಲಸ ಕಾರ್ಯಗಳು ತರಗತಿಯಲ್ಲಿ ಸರಾಗವಾಗಿ ನಡೆಯುತ್ತವೆ.

**ಶೈಕ್ಷಣಿಕ ಸಾಮಗ್ರಿಗಳ ಮಾರ್ಪಾಡಿಗೆ ಸಲಹೆಗಳು**

– ಬೆರಳುಗಳ ಸೂಕ್ಷ್ಮ ಚಲನೆಗೆ ಬೇಕಾದ ಹಾಗೆ ಬರವಣಿಗೆಯ ಸಾಮಗ್ರಿಗೆ ಜೇಡಿಮಣ್ಣಿನ ಅಥವಾ ಪ್ಲಾಸ್ಟಿಕ್ ಚೆಂಡಿನ ಹಿಡಿಕೆ ಹಾಕಿಸಬಹುದು.

Digitised by Bharatavani, CIIL

– ಬರವಣಿಗೆ ತುಂಬಾ ಕಷ್ಟವಾದರೆ ಆ ಮಕ್ಕಳಿಗೆ ವಿದ್ಯುತ್‌ಚಾಲಿತ ಬೆರಳಚ್ಚು ಸಹಾಯಕ.

– ಮಾತಿನ ತೊಂದರೆ ತೀವ್ರವಾಗಿದ್ದು ಮೆದುಳು ಗ್ರಹಿಸಲು ಸಮರ್ಥವಾಗಿದ್ದು, ಅಭಿವ್ಯಕ್ತಿಸಲು ತೊಂದರೆ ಇದ್ದರೆ ಕಂಪ್ಯೂಟರ್‌ನ ಸಹಾಯ ಪಡೆದುಕೊಳ್ಳಬಹುದು.

– ಮಗುವಿಗೆ ಹಿತವಾಗುವಂತೆ ಹೆಚ್ಚು ಗೊಂದಲವಿಲ್ಲದೆ ಸ್ಥಳ ಆರಿಸಿ ಕೂರಿಸಲು ಅಚ್ಚು ಕಟ್ಟಾದ ವ್ಯವಸ್ಥೆ ಮಾಡಿಸಬಹುದು. ಅನಗತ್ಯ ಚಲನೆಯನ್ನು ನಿಯಂತ್ರಿಸುವಂತೆ ಕೂರಿಸಿದರೆ ಮಗುವಿನ ಗಮನ ಪಾಠದ ಕಡೆ ಹೋಗುತ್ತದೆ. ಇಲ್ಲದಿದ್ದರೆ ಮಗುವಿನ ಹೆಚ್ಚಿನ ಸಮಯ ಹಾಗೂ ಅನಗತ್ಯ ಚಲನೆ ನಿರ್ವಹಣೆಗೆ ವ್ಯಯವಾಗುತ್ತಿರುತ್ತದೆ.

– ಕೈಯ ಬಳಕೆ ಕಷ್ಟವಿರುವ ಮಕ್ಕಳಿಗೆ ಪುಟ ತಿರುಗಿಸಲು ಮೇಜಿಗೆ ಉಪಕರಣ ಜೋಡಿಸಬಹುದು. ತಲೆ ಹಾಗೂ ಮೊಣಕೈ ಚಲನೆ ಸರಿ ಇದ್ದರೆ ಉಪಕರಣವನ್ನು ಅಲ್ಲಿಗೂ ಜೋಡಿಸಬಹುದು.

– ಬರೆಯುವಾಗ ಮಣಿಕಟ್ಟಿನ ಮೇಲೆ ಪುಟ್ಟ ಮರಳಿನ ಚೀಲ ಇರಿಸಿದರೆ ಅದು ಬರೆಯಲು ಸಹಕರಿಸುತ್ತದೆ.

– ಪುಸ್ತಕವನ್ನು ಯಾವ ಕೋನದಲ್ಲಿ, ಯಾವ ಎತ್ತರದಲ್ಲಿ ಇರಿಸಿದರೆ ಮಗುವಿಗೆ ಸೂಕ್ತವೋ ಅಲ್ಲಿ ಇರಿಸುವ ವ್ಯವಸ್ಥೆ ಮಾಡಿಸಬೇಕು.

– ಮಗುವಿನ ಹತೋಟಿಗೆ ಮೀರಿದ ಚಲನೆಯನ್ನು ನಿರ್ಬಂದಿಸಲು ಕಾಲು ಪೂರ್ತಿ ನೆಲಮುಟ್ಟುವಂತೆ ಕೂರಿಸಬೇಕು. ಮೊಣಕೈಯಿಂದ ಮುಂದಕ್ಕೆ ಕೈ ಮೇಜಿನ ಮೇಲೆ ವಿಶ್ರಾಂತಿ ಪಡೆಯುತ್ತಿರಬೇಕು. ಎದೆ, ಹೊಟ್ಟೆಯ ಭಾಗಕ್ಕೆ ಪಟ್ಟಿಹಾಕಿ ಕುರ್ಚಿಗೆ ಬಿಗಿಯಬೇಕು.

– ನೋಟ್ ಪುಸ್ತಕ ಅಥವಾ ಬರೆಯುವ ಹಾಳೆಯನ್ನು ಮೇಜಿನ ಮೇಲೆ ಕ್ಲಿಪ್‌ನ ಸಹಾಯದಿಂದ ಅಲ್ಲಾಡದಂತೆ ಸಿಕ್ಕಿಸುವ ವ್ಯವಸ್ಥೆ ಮಾಡಿಸಬೇಕು.

– ಮೇಜಿನ ಸುತ್ತಲೂ ಸಣ್ಣದೊಂದು ಕಟ್ಟೆ ಇದ್ದರೆ ವಸ್ತುಗಳು ಜಾರಿ ಕೆಳಗೆ ಬೀಳುವುದಿಲ್ಲ.

– ಅಂಧ ವಿದ್ಯಾರ್ಥಿಗಳ ಕಲಿಕೆಗೆ ಉಪಯೋಗಿಸುವ ವಿಶೇಷವಾಗಿ ತಯಾರಿಸಿದ ಪಠ್ಯವಸ್ತು, ಮಾತನಾಡುವ ಪುಸ್ತಕ ಇತ್ಯಾದಿ ಶೈಕ್ಷಣಿಕ ಸಲಕರಣೆಗಳನ್ನು ಈ ಮಕ್ಕಳಿಗೂ ನೀಡಬಹುದು.

– ನಿಂತರೂ ಕುಳಿತರೂ ಕೆಲಸ ಮಾಡಲು ಸಾಧ್ಯವಾಗುವಂತೆ ಮೇಜನ್ನು ಮೇಲೆ ಕೆಳಗೆ ಮಾಡುವಂತಿರಬೇಕು. ಮಗು ತರಗತಿಯಲ್ಲಿ ಮಧ್ಯೆ ಏಳುವುದು, ಕೂರುವುದು ಮಾಡುತ್ತಿದ್ದರೆ ಸ್ನಾಯುಗಳು ಕುಗ್ಗುವುದನ್ನು ತಪ್ಪಿಸಬಹುದು. ಮೇಜು ಕುರ್ಚಿಯ ರಚನೆ ಮಗು ಸ್ವತಂತ್ರವಾಗಿ ಏಳಲು ಮತ್ತು ಕೂರಲು ಸಾಧ್ಯವಾಗುವಂತಿರಬೇಕು.

–ಐ.ಪಿ. ಗೌ

## ಮೇಲ್ವಿಚಾರಿತ ಅಧ್ಯಯನ

**ಹಿನ್ನೆಲೆ :** ಅನೇಕ ಶತಮಾನಗಳಿಂದ ಶಿಕ್ಷಕರ ಕಾರ್ಯಗಳ ಬಗ್ಗೆ ನಡೆದ ಸಂಶೋಧನೆ ಪರಿಶೀಲಿಸಿದಾಗ ಅನೇಕ ಬದಲಾವಣೆಗಳನ್ನು ಕಾಣುತ್ತೇವೆ. 19ನೇ ಶತಮಾನದ ಕೊನೆಯವರೆಗೆ ಶಿಕ್ಷಕನು 'ಶಿಸ್ತು ಕಾಪಾಡುವವ', 'ಮನೆಗೆಲಸಗಳನ್ನು ಕೊಡುವವ' ಹಾಗೂ 'ವಿದ್ಯಾರ್ಥಿಗಳಿಗೆ ಕಂಠಪಾಠ ಮಾಡಿಸುವವ' ಎಂಬ ಕಲ್ಪನೆ ಬೆಳೆದಿತ್ತು. ನಂತರದ ವರ್ಷಗಳಲ್ಲಿ ಶಿಕ್ಷಕರ ಕಾರ್ಯದ ಬಗ್ಗೆ ಆಳವಾಗಿ ಚಿಂತನೆ ನಡೆಸಿದ ಪರಿಣಾಮವಾಗಿ 'ಕಂಠಪಾಠ ಪದ್ಧತಿ'ಯ ಜೊತೆಗೆ 'ಪಾಠಗಳ ಬೋಧನೆ' ಪ್ರಮುಖವಾಗಿ ರೂಢಿಗೆ ಬಂದಿತು. ಶಿಕ್ಷಕರು ಪಾಠ ಬೋಧಿಸುವುದರ ಜೊತೆಗೆ ಅನುಗಮನ ಬೆಳವಣಿಗೆ, ನಿಗಮನ ಬೆಳವಣಿಗೆ, ಪುನರಭ್ಯಾಸ, ಕಂಠಪಾಠ, ಪುನರಾವರ್ತನೆ ಮತ್ತು ಇತರ ಕಾರ್ಯಗಳನ್ನು ಮಾಡಬೇಕಾಯಿತು. ಹೀಗಾಗಿ ಶಿಕ್ಷಕರ ಜವಾಬ್ದಾರಿಯು ಹೆಚ್ಚತೊಡಗಿತು. ಶಿಕ್ಷಣ ಸಂಸ್ಥೆಗಳ ನಿಗದಿತ ವೇಳಾಪಟ್ಟಿಯಲ್ಲಿರುವ ವಿಷಯಗಳ ಬೋಧನೆಯ ಜೊತೆಗೆ 1910ರ ಸುಮಾರಿಗೆ 'ಮೇಲ್ವಿಚಾರಿತ ಅಧ್ಯಯನ'ದ (Supervised Study) ಪರಿಕಲ್ಪನೆ ಮೂಡಿತು. ಶಿಕ್ಷಕರಿಗೆ ಈಗಾಗಲೇ ಮಾಡುವ ಕಾರ್ಯಗಳ ಜೊತೆಗೆ ಮೇಲ್ವಿಚಾರಿತ ಅಧ್ಯಯನದ ಜವಾಬ್ದಾರಿಯನ್ನೂ ಸಹ ನಿರ್ವಹಿಸಬೇಕಾಯಿತು. ಅಧ್ಯಯನದ ಮೇಲ್ವಿಚಾರಣೆ ವಹಿಸಿಕೊಂಡ ಶಿಕ್ಷಕರು ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನದ ಮೇಲ್ವಿಚಾರಣೆಗೆ ಯೋಜನೆ ತಯಾರಿಸಬೇಕಾಯಿತು.

ಎಲ್ಲ ಶಿಕ್ಷಕರು ಬೋಧನೆಯ ಮೂಲಕ ವಿದ್ಯಾರ್ಥಿಗಳಲ್ಲಿ ಅಭ್ಯಸಿಸುವ ಕೌಶಲಗಳನ್ನು ಬೆಳೆಸುವುದು ಪ್ರಮುಖವಾಯಿತು. ಮೊದಲ ಹಂತದಲ್ಲಿ ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನು ಮಾತ್ರ ಬೆಳೆಸುವುದು ಪ್ರಮುಖವಾಗಿ ಕಂಡು ಬಂದಿತು. ಆದರೆ ಅನೇಕ ವಿದ್ಯಾರ್ಥಿಗಳು ಅಭ್ಯಾಸ ಕೌಶಲಗಳನ್ನು ಅರಿತುಕೊಳ್ಳದಿರುವುದರಿಂದ ಅವರ ಬುದ್ಧಿಶಕ್ತಿಯ ಸಾಮರ್ಥ್ಯವು ಕಡಿಮೆಯಾಗತೊಡಗಿತು. ತರಗತಿಗಳಲ್ಲಿ ಶಿಕ್ಷಕರು ಕೊಟ್ಟಿರುವ ಮನೆಗೆಲಸದ ಪ್ರಶ್ನೆಗಳಿಗೆ ಉತ್ತರ ತಯಾರಿಸಲು ಮನೆಯ ವಾತಾವರಣ ಅನೇಕ ಸಂದರ್ಭಗಳಲ್ಲಿ ಅನುಕೂಲಕರವಾಗಿರಲಿಲ್ಲ ಹಾಗೂ ಅಭ್ಯಾಸ ಮಾಡಲು ಸಮರ್ಪಕ ವ್ಯವಸ್ಥೆ ಇರಲಿಲ್ಲ. ಶಿಕ್ಷಣ ಸಂಸ್ಥೆಯ ಕಾರ್ಯಗಳ ಬಗ್ಗೆ ವಿದ್ಯಾರ್ಥಿ ಬೆಳೆಸಿಕೊಂಡ ಋಣಾತ್ಮಕ ಧೋರಣೆ, ಶಿಕ್ಷಣ ಸಂಸ್ಥೆಯ ಅನೇಕ ಪಠ್ಯೇತರ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ ಹಾಗೂ ಕಲಿಕೆಯ ಜೊತೆಗೆ ಗಳಿಕೆ ಪ್ರಾರಂಭಿಸಿದ ಸನ್ನಿವೇಶಗಳಿಂದಾಗಿ ವಿದ್ಯಾರ್ಥಿಗೆ ಅಧ್ಯಯನ ಮಾಡಲು ಸಮಯ ದೊರೆಯುತ್ತಿರಲಿಲ್ಲ. ಶಿಕ್ಷಕರು ತಾವು ಬೋಧಿಸಿದ ಎಲ್ಲಾ ವಿಷಯಗಳನ್ನು ವಿದ್ಯಾರ್ಥಿಗಳು ಅರಿತುಕೊಂಡಿದ್ದಾರೆ ಎಂದು ತಿಳಿದುಕೊಂಡರೇ ಹೊರತು ಅವರು ಕಲಿತ ಅಂಶಗಳನ್ನು ವಿಶ್ಲೇಷಿಸಿದರೂ, ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೊ ಇಲ್ಲವೊ ಎಂಬುದನ್ನು ತಿಳಿದುಕೊಳ್ಳುವ ಗೋಜಿಗೆ ಸಹ ಹೋಗಲಿಲ್ಲ. ಒಂದೇ ಗುಡಿಸಲು ಅಥವಾ ಕೋಣೆಯಲ್ಲಿ ತಂದೆ, ತಾಯಿ ಹಾಗೂ ಮಕ್ಕಳು ವಾಸಿಸುತ್ತಿರುವ ಸನ್ನಿವೇಶ, ಪರಿಸರದಲ್ಲಿ ಕಂಡು ಬರುವ ಅನೇಕ ವಿಪರ್ಯಾಸ ಸನ್ನಿವೇಶಗಳು, ಸತತ ಗಲಾಟೆ ನಡೆಯುವ ವಾತಾವರಣ, ಅಭ್ಯಾಸಕ್ಕೆ ಅವಶ್ಯಕವಾಗಿ ಬೇಕಾಗಿರುವ ಸಮರ್ಪಕ ಗಾಳಿ ಮತ್ತು ಬೆಳಕು. ನಿಘಂಟು, ವಿಶ್ವಕೋಶ ಹಾಗೂ ಇನ್ನಿತರ ಸಹಾಯಕ ಸಾಮಗ್ರಿಗಳು ದೊರೆಯದಿರುವುದು, ತರಗತಿಯ ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆ ಹಾಗೂ ಇನ್ನಿತರ ಸನ್ನಿವೇಶಗಳು ಕಂಡು ಬಂದುದರಿಂದ ಅನೇಕ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದರು. ಹೀಗಾಗಿ ಬಹುತೇಕ ತರಗತಿಯ ವಿದ್ಯಾರ್ಥಿಗಳು ಕಲಿಕೆಯಲ್ಲಿ ಯಶಸ್ಸು ಸಾಧಿಸಲು ಸಹಾಯ ಮಾಡುವುದಕ್ಕಾಗಿ ಮೇಲ್ವಿಚಾರಿತ ಅಧ್ಯಯನ ಪ್ರಾರಂಭವಾಯಿತು.

**ಅರ್ಥ:** ಶಿಕ್ಷಕರ ನೇತೃತ್ವದಲ್ಲಿ ಒಂದು ಗುಂಪಿನ ಅಥವಾ ತರಗತಿಯ ವಿದ್ಯಾರ್ಥಿಗಳು ತಮ್ಮ ಅಭ್ಯಾಸದಲ್ಲಿ ಹಾಗೂ ಪ್ರಯೋಗಶಾಲೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು, ಅನೇಕ ಪ್ರಶ್ನೆಗಳಿಗೆ ಉತ್ತರ ಪಡೆದುಕೊಳ್ಳಲು ಹಾಗೂ ಅಗತ್ಯವೆನಿಸುವ ಮಾರ್ಗದರ್ಶನ ಪಡೆದುಕೊಳ್ಳಲು ನಡೆಸುವ ಒಂದು ವಿಧಾನವನ್ನು 'ಮೇಲ್ವಿಚಾರಿತ ಅಧ್ಯಯನ' ಎಂದು ಕರೆಯುತ್ತಾರೆ.


Digitised by Bharatavani, CIIL

ಮೇಲ್ವಿಚಾರಿತ ಅಧ್ಯಯನ ಸಂಘಟಿಸುವವರನ್ನು 'ಸಮನ್ವಯಕಾರ', 'ಸಹಾಯ ನೀಡುವ ಶಿಕ್ಷಕ', 'ಸಲಹೆ ಕೊಡುವವ' ಹಾಗೂ 'ವಿಶೇಷಜ್ಞ' ಎಂದು ಕರೆಯುತ್ತಾರೆ.

ಈ ವಿಧಾನದಲ್ಲಿ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿ ವ್ಯಾಸಂಗ ಮುಂದುವರಿಸುತ್ತಾನೆ. ಅಭ್ಯಾಸ ಮುಂದುವರಿಸಿದಾಗ ಏನಾದರೂ ಸಂದೇಹ, ಸಂಶಯ ಅಥವಾ ಅಡಚಣೆ ಉಂಟಾದಾಗ ಹಾಗೂ ಮಾರ್ಗದರ್ಶನ ಬೇಕಾದಾಗ ಕೂಡಲೇ ತರಗತಿಯಲ್ಲಿಯೇ ಇರುವ ಶಿಕ್ಷಕರನ್ನು ಸಂಪರ್ಕಿಸುತ್ತಾನೆ. ಶಿಕ್ಷಕರೂ ಸಹ ತಮ್ಮ ನಿಯಂತ್ರಣದಲ್ಲಿ ಇರುವ ವಿದ್ಯಾರ್ಥಿಗಳನ್ನು ಸತತವಾಗಿ ಸಂಪರ್ಕಿಸುತ್ತಾ ಬೆಂಚಿನಿಂದ ಬೆಂಚಿಗೆ ಹೋಗುತ್ತಾರೆ. ವಿದ್ಯಾರ್ಥಿಗಳು ಅಲ್ಲಲ್ಲಿ ಮಾಡುವ ತಪ್ಪುಗಳ ಬಗ್ಗೆ ಎಚ್ಚರಿಸುತ್ತಾರೆ. ನಿಗದಿಪಡಿಸಿರುವ ಗುರಿಗಳನ್ನು ತಲುಪಲು ವಿದ್ಯಾರ್ಥಿಗಳು ಮಾಡುವ ಕಲಿಕೆಯ ಪ್ರಯತ್ನಗಳಿಗೆ ಶಿಕ್ಷಕರು ವಿವಿಧ ಹಂತಗಳಲ್ಲಿ ಸೂಕ್ತ ನಿರ್ದೇಶನಗಳನ್ನು ಕೊಡುತ್ತಾರೆ.

**ಅಧ್ಯಯನದ ವಿನ್ಯಾಸ:** ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ ಮೇಲ್ವಿಚಾರಣಾ ಅಧ್ಯಯನಕ್ಕೆಂದೇ ಒಂದು ಅವಧಿ (45 ನಿಮಿಷ ಅಥವಾ 60 ನಿಮಿಷ) ಮೀಸಲಾಗಿಟ್ಟಿರುತ್ತಾರೆ. ಮೇಲ್ವಿಚಾರಿತ ಅಧ್ಯಯನ ಸಂಘಟಿಸಲ್ಪಡುವ ವೇಳೆ, ಕೋಣೆಯ ಸಂಖ್ಯೆ ಹಾಗೂ ವಿದ್ಯಾರ್ಥಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ತಿಳಿಸಿರುತ್ತಾರೆ. ಕೆಲವು ಶಿಕ್ಷಣ ಸಂಸ್ಥೆಯವರು ಗ್ರಂಥಾಲಯದಲ್ಲಿಯೂ ಸಹ ಅಧ್ಯಯನದ ಮೇಲ್ವಿಚಾರಣೆ ನಡೆಸುತ್ತಾರೆ.

ಪ್ರತಿಯೊಬ್ಬ ವಿದ್ಯಾರ್ಥಿಯ ವರ್ತನೆಗಳನ್ನು ಅರಿತು ಅವನ ಅಭಿರುಚಿ, ಸಾಮರ್ಥ್ಯ, ವೈಯಕ್ತಿಕ ಲಕ್ಷಣ, ಪ್ರತಿಭಾ ಶಕ್ತಿ ಹಾಗೂ ಮನೋಭಾವನೆಗೆ ಅನುಗುಣವಾಗಿ ಮಾರ್ಗದರ್ಶನ ನೀಡುತ್ತಾರೆ. ಯಾವುದೇ ವಿದ್ಯಾರ್ಥಿಗೆ ತನ್ನ ಅಭ್ಯಾಸದಲ್ಲಿ ಸಮಸ್ಯೆಗಳು ಕಂಡು ಬಂದರೆ ಶಿಕ್ಷಕರು ಆ ಸಮಸ್ಯೆಯ ಆಳವಾದ ಅಧ್ಯಯನ ನಡೆಸುತ್ತಾರೆ. ವಿವಿಧ ವಿಧಾನಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಾರೆ.

ಪ್ರತಿ ವಿದ್ಯಾರ್ಥಿಯು ಅನೇಕ ವಿಚಾರಗಳ ಬಗ್ಗೆ ಸ್ಪಷ್ಟನೆ ಪಡೆಯಲು ಶಾಂತವಾಗಿ ಪ್ರಶ್ನೆಗಳನ್ನು ಕೇಳಬೇಕು. ಇಂತಹ ಪ್ರಶ್ನೆಗಳ ಪಟ್ಟಿಯನ್ನು ಮುಂಚೆಯೇ ತಯಾರಿಸಿಕೊಂಡಿರಬೇಕು. ವಿದ್ಯಾರ್ಥಿಯ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ವಿಧ ವಿಧವಾದ ಮಾರ್ಗಗಳನ್ನು ಹಾಗೂ ವಿಧಾನಗಳನ್ನು ಸೂಚಿಸಬೇಕು. ಅಭ್ಯಾಸ ಮಾಡುವಾಗ ಅವನು ಉಪಯುಕ್ತ ಮಾಹಿತಿ ಸಂಗ್ರಹಿಸಿದರೆ ಪ್ರೋತ್ಸಾಹಕ ಮಾತುಗಳನ್ನು ಆಡಬೇಕು.

ಪ್ರತಿ ವಿಷಯದಲ್ಲಿ ವಿದ್ಯಾರ್ಥಿಯು ಗ್ರಹಿಸಿಕೊಳ್ಳಬೇಕಾದ ಮಾಹಿತಿಯನ್ನು ಗಮನದಲ್ಲಿಟ್ಟುಕೊಂಡು ಕಲಿಕೆಗೆ ಸಹಾಯಕವಾಗುವ ಸಾಧನಗಳನ್ನು ಹಾಗೂ ಅಭ್ಯಸಿಸುವ ಸಾಮಗ್ರಿಗಳನ್ನು ಅಧ್ಯಯನದ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಒದಗಿಸಬೇಕು, ಶಿಕ್ಷಕರು ಒದಗಿಸುವ ಇಂತಹ ಅಭ್ಯಾಸ ಸಾಮಗ್ರಿ ಪ್ರತಿ ವಿದ್ಯಾರ್ಥಿಯ ಅಭಿರುಚಿ, ಸಾಮರ್ಥ್ಯ ಹಾಗೂ ಓದುವ ಹಂತಕ್ಕೆ ಅನುಗುಣವಾಗಿ ಇರಬೇಕು. ಪ್ರತಿ ವಿದ್ಯಾರ್ಥಿಯು ಹೆಚ್ಚಿನ ಓದಿಗಾಗಿ ಪುಸ್ತಕ, ನಿಯತಕಾಲಿಕೆ, ವಿಶ್ವಕೋಶ, ಇಂಟರ್‌ನೆಟ್ ಹಾಗೂ ಇತರೇ ಮೂಲಗಳ ಮೂಲಕ ವಿಷಯ ಸಂಗ್ರಹಿಸುವ ಪ್ರವೃತ್ತಿ ಬೆಳೆಸಲು ಪ್ರೋತ್ಸಾಹಿಸಬೇಕು. ತನ್ನ ಅಭ್ಯಾಸಕ್ಕೆ ಬೇಕಾಗಿರುವ ಮಾಹಿತಿಯು ರೇಡಿಯೋ, ದೂರದರ್ಶನ, ಆಡಿಯೋ ಕ್ಯಾಸೆಟ್, ವೀಡಿಯೋ ಕ್ಯಾಸೆಟ್, ಸಿ.ಡಿ. ಹಾಗೂ ಇನ್ನಿತರ ಮೂಲಗಳಿಂದ ಸಿಗುತ್ತದೆ ಎಂಬ ಕಲ್ಪನೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಕೆಲವು ಸಂದರ್ಭಗಳಲ್ಲಿ ತಾವೇ ಕೆಲವು ಸಾಮಗ್ರಿಗಳನ್ನು ರಚಿಸಿ ಉಪಯೋಗಿಸುತ್ತಾರೆ. ಈ ಅಭ್ಯಾಸ ಸಾಮಗ್ರಿಗಳನ್ನು ಉಪಯೋಗಿಸುವ ರೀತಿ ಗೊತ್ತಾದಾಗ ಅವುಗಳನ್ನು ಮುಂದಿನ ದಿನಗಳಲ್ಲಿ ಇನ್ನೂ ಪರಿಣಾಮಕಾರಿಯಾಗಿ ತನ್ನ ಅಭ್ಯಾಸಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಸರಾಗವಾಗಿ ತಿಳಿದುಕೊಳ್ಳುತ್ತಾನೆ. ಗ್ರಂಥಾಲಯದಲ್ಲಿ ಕೆಲವು ಪುಸ್ತಕಗಳನ್ನು ಅವರಿಗೆ ತೋರಿಸಿ ಅದರಲ್ಲಿರುವ ವಿಷಯಸೂಚಿ, ಉಪಯೋಗಿಸುವ ರೀತಿಯನ್ನು ಕಲಿಸಿದಾಗ ಶೀಘ್ರವಾಗಿ ವಿಷಯ ಸಂಗ್ರಹಿಸುವ ಕಲೆ ಹಾಗೂ ಅನ್ವೇಷಣಾ ಪ್ರವೃತ್ತಿ ಬೆಳೆಸಿಕೊಳ್ಳುತ್ತಾರೆ. ಪ್ರತಿ ಅಧ್ಯಾಯದ ತಲೆಬರಹಗಳನ್ನು ಓದುವ ರೀತಿ, ಪ್ರತಿ ಅಧ್ಯಾಯನ ಪ್ರಾರಂಭದ ಮತ್ತು ಕೊನೆಯ ಪ್ಯಾರಾಗಳನ್ನು ಹಾಗೂ ಪ್ರತಿ ಪ್ಯಾರಾದ ಮೊದಲನೆಯ ಹಾಗೂ ಕೊನೆಯ ವಾಕ್ಯಗಳನ್ನು ಓದುವ ರೀತಿ ತಿಳಿಸಬೇಕು. ಈ ತರಬೇತಿ ವಿವಿಧ ಪುಸ್ತಕಗಳಲ್ಲಿರುವ ವಿಷಯದ ವಿವರ ಅರಿತುಕೊಳ್ಳಲು ಸಹಾಯಕವಾಗುತ್ತದೆ. ಪ್ರತಿ ಪುಟದ ಎಲ್ಲಾ ಸವಾಲುಗಳನ್ನು ಓದದೇ ಕೇವಲ ಪ್ರಮುಖ, ಅಗತ್ಯವೆನಿಸುವ ಅಥವಾ ಆಸಕ್ತಿ ಮೂಡಿಸುವ ಅಂಶಗಳನ್ನು ಗುರುತಿಸುವ ಕೌಶಲ್ಯ ಕಲಿಸಿಕೊಡಬೇಕು. ಒಂದು ಪುಸ್ತಕದಲ್ಲಿ ಲಭ್ಯವಿರುವ ವಿಷಯದ ಪ್ರಾಮುಖ್ಯತೆ ಅರಿತುಕೊಂಡ ನಂತರ ಅದನ್ನು ಓದುವ ವೇಗ ಬದಲಾಯಿಸುವ ಕಲ್ಪನೆಯನ್ನು ಅವರಲ್ಲಿ ಮೂಡಿಸಬೇಕು. ವಿದ್ಯಾರ್ಥಿಯು ಅಭ್ಯಾಸದ ವಿಷಯದ ಸಾರಾಂಶವನ್ನು ತನ್ನ ಶೈಲಿಯಲ್ಲಿ ಸಂಘಟಿಸಿ ಬರೆಯುವ ಸಾಮರ್ಥ್ಯ ಬೆಳೆಸಲು ಪ್ರಯತ್ನಿಸಬೇಕು. ವ್ಯವಸ್ಥಿತವಾಗಿ ಸಂಘಟಿಸುವ ಹಾಗೂ ಪ್ರತಿ ಪ್ರಮುಖ ಅಂಶಕ್ಕೆ ಸಂಬಂಧಿಸಿದ ನಿರ್ದಿಷ್ಟ ವಿಷಯವು ಇಂತಹ ಪುಟದಲ್ಲಿಯೇ ಇದೆ ಎಂಬುದನ್ನು ವಿದ್ಯಾರ್ಥಿ ಹೇಳುವ ಅಥವಾ ಗುರುತಿಸುವ ಸಾಮರ್ಥ್ಯ ಬೆಳೆಸಿಕೊಳ್ಳುವಂತಾಗಬೇಕು.

ಶಿಕ್ಷಕರು ಪ್ರತಿ ಹಂತದಲ್ಲಿ ವಿದ್ಯಾರ್ಥಿಗೆ ನಿರ್ದೇಶನ ನೀಡುವವರಾಗಿ, ಮಾರ್ಗದರ್ಶಕರಾಗಿ, ಪ್ರೋತ್ಸಾಹ ನೀಡುವವರಾಗಿ ಅವನ ಎಲ್ಲಾ ಕಾರ್ಯಗಳ ಮೇಲ್ವಿಚಾರಣೆ ಮಾಡುತ್ತಾರೆ. ಪ್ರತಿ ವಿದ್ಯಾರ್ಥಿ ಕಲಿಯಬೇಕಾದ ವಿಷಯ, ವಿಷಯದ ಪ್ರಮಾಣ, ಅಭ್ಯಸಿಸಬೇಕಾದ ಸಂಪನ್ಮೂಲಗಳು, ಹಾಗೂ ಆಕರ ಗ್ರಂಥಗಳು, ವಿವಿಧ ಸಂಪನ್ಮೂಲಗಳಿಂದ ಮೂಲಭೂತ ಮಾಹಿತಿ ಸಂಗ್ರಹಿಸುವ ವಿಧಾನ, ಅವುಗಳಿಂದ ಕೋಷ್ಟಕ, ಆಕೃತಿ, ನಕ್ಷೆ ಹಾಗೂ ಪ್ರಮುಖ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳುವ ರೀತಿ, ಪರೀಕ್ಷೆಯಲ್ಲಿ ಉತ್ತರ ಬರೆಯಬೇಕಾದ ವಿಧಾನ, ಸಂಗ್ರಹಿಸಿದ ಮಾಹಿತಿಯ ಬಗ್ಗೆ ನಿರ್ದಿಷ್ಟ ನಿರ್ಧಾರ ತೆಗೆದುಕೊಳ್ಳುವ ಹಾಗೂ ಇತರ ವಿಷಯಗಳ ಬಗ್ಗೆ ಸಲಹೆ ಕೊಡುತ್ತಾರೆ. ವಿದ್ಯಾರ್ಥಿಗಳ ಈ ಎಲ್ಲಾ ಕಾರ್ಯಗಳಲ್ಲಿ ಅನೇಕ ತೊಂದರೆಗಳು ಬರುವ ಸಾಧ್ಯತೆ ಇರುವುದರಿಂದ ಶಿಕ್ಷಕರು ಯಾವಾಗಲೂ ವಿದ್ಯಾರ್ಥಿಗಳ ಜೊತೆಗೇ ಇದ್ದುಕೊಂಡು ಅವರ ಚಟುವಟಿಕೆಗಳನ್ನು ನಿರಂತರವಾಗಿ ವೀಕ್ಷಿಸುತ್ತಾರೆ. ಯಾವುದೇ ಹಂತದಲ್ಲಿ ಸಮಸ್ಯೆ ಉದ್ಭವಿಸಿದಾಗ ಮಾತ್ರ ಮಾರ್ಗದರ್ಶನ ನೀಡುತ್ತಾರೆ.

ಅರ್ಥಗ್ರಹಿಕೆ, ಓದುಗಾರಿಕೆಯ ಅಭ್ಯಾಸ. ನಿಯತಕಾಲಿಕೆಗಳ ಅಭ್ಯಾಸ, ಪ್ರಶ್ನೆಗಳಿಗೆ ಉತ್ತರ ಸಂಗ್ರಹಿಸುವ ಅಭ್ಯಾಸ, ವಾಕ್ಯ ಹಾಗೂ ವಾಕ್ಯ ರಚನೆಯ ಅಭ್ಯಾಸ, ಪ್ರಬಂಧ ರಚನೆ, ವಿವಿಧ ಪ್ರಬಂಧಗಳನ್ನು ಅಭ್ಯಸಿಸಿ ಮುಖ್ಯಾಂಶಗಳನ್ನು ಸಂಗ್ರಹಿಸುವುದು. ಪಠ್ಯ ಓದಿ ಟಿಪ್ಪಣಿ ಮಾಡಿಕೊಳ್ಳುವ ಅಭ್ಯಾಸ, ಆಧಾರ ಗ್ರಂಥಗಳನ್ನು ಓದುವ ಅಭ್ಯಾಸ, ಸಾರಸಂಗ್ರಹ ಮತ್ತು ಸಾರವಿಸ್ತಾರ ಬರಹದ ಅಭ್ಯಾಸ, ಪರೀಕ್ಷೆಗೆ ಸಿದ್ಧರಾಗಲು ಓದುವ ಅಭ್ಯಾಸ ಹಾಗೂ ಕೈಗೊಂಡ ಇಂತಹ ಅನೇಕ ಕಾರ್ಯಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು.

ಪ್ರತಿಯೊಬ್ಬ ವಿದ್ಯಾರ್ಥಿ ಓದುವಾಗ ಯಾವುದೇ ಶಬ್ದವನ್ನು ಬಿಡದಂತೆ ಓದಲು ತಿಳಿಸಬೇಕು. ವಿದ್ಯಾರ್ಥಿಗಳ ಶಬ್ದಭಂಡಾರ ಬೆಳೆಸಲು ಪ್ರಮುಖ ಶಬ್ದಗಳನ್ನು, ವಾಕ್ಯವೃಂದಗಳಿಗೆ ವಿವರಣೆ ನೀಡುವುದರ ಜೊತೆಗೆ ಭಾಷೆಯ ಅರ್ಥ ತಿಳಿದುಕೊಳ್ಳಲು ಬೇರೆ ಬೇರೆ ಭಾಷೆಗಳ ನಿಘಂಟುಗಳನ್ನು

Digitised by Bharatavani, CIIL

ಉಪಯೋಗಿಸಲು ತರಬೇತಿ ನೀಡಬೇಕು. ಮಂದದೃಷ್ಟಿ, ಆಲಿಸುವಿಕೆಯ ಸಮಸ್ಯೆ ಹಾಗೂ ಇತರೇ ದೈಹಿಕ ಸಮಸ್ಯೆಗಳಿದ್ದರೆ ಅವುಗಳಿಗೆ ಪರಿಹಾರ ಸೂಚಿಸಬೇಕು. ಕವಿಗಳ ಹಾಗೂ ಲೇಖಕರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದರ ಜೊತೆಗೆ ವಿವಿಧ ವ್ಯಕ್ತಿಗಳ ವಿಚಾರಗಳ ತುಲನಾತ್ಮಕ ಅಧ್ಯಯನ ಮಾಡಲು ತರಬೇತಿ ನೀಡಬೇಕು. ಕೋಷ್ಟಕ, ಆಕೃತಿ, ಚಿತ್ರ, ನಕಾಶೆ ಹಾಗೂ ಇತರ ವಿವರಗಳನ್ನು ಅಭ್ಯಸಿಸಿ ಅವುಗಳನ್ನು ವಿಶ್ಲೇಷಿಸುವ ಸಾಮರ್ಥ್ಯ ಬೆಳೆಸಬೇಕು.

ಮೇಲ್ವಿಚಾರಣಾ ವ್ಯಾಸಂಗದ ಅವಧಿ ಮುಕ್ತಾಯವಾದ ನಂತರ ಶಿಕ್ಷಕರು ಆ ಗುಂಪಿನ ಅಥವಾ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಂಡ ಮಾಹಿತಿಯನ್ನು ಹಂಚಿಕೊಳ್ಳಲು ಅವಕಾಶ ನೀಡಲು ಚರ್ಚೆ ನಡೆಸಬೇಕು. ಇದರಿಂದ ಬೇರೆ ಬೇರೆ ವಿದ್ಯಾರ್ಥಿಗಳು ಈಗಾಗಲೇ ವಿಷಯ ಸಂಗ್ರಹಿಸಿದ ರೀತಿ, ಎದುರಿಸಿದ ಸಮಸ್ಯೆಗಳು, ಉಪಯೋಗಿಸಿದ ಕೌಶಲ ಹಾಗೂ ಕೈಗೊಂಡ ಸಾಧನೆಯ ವಿವರ ಉಳಿದ ವಿದ್ಯಾರ್ಥಿಗಳಿಗೆ ತಿಳಿಯುತ್ತದೆ. ಅಧ್ಯಯನ ಮುಗಿದ ನಂತರ ವಿದ್ಯಾರ್ಥಿ ತಯಾರಿಸಿದ ಸಾರಾಂಶ ಮಂಡಿಸಲು ಅವಕಾಶ ಕಲ್ಪಿಸಬೇಕು.

**ಅನುಕೂಲಗಳು**

1) ವಿದ್ಯಾರ್ಥಿಯೇ ನೇರವಾಗಿ ಕಾರ್ಯದಲ್ಲಿ ತೊಡಗುವುದರಿಂದ ಸ್ವತಂತ್ರವಾಗಿ ಮುಕ್ತ ವಾತಾವರಣದಲ್ಲಿ ಅವನ ಜ್ಞಾನ ವಿಸ್ತೃತವಾಗುವುದರ ಜೊತೆಗೆ ಕಲಿಕೆಗೆ ಹೊಸ ತಿರುವು ನೀಡಲು ಸಹಾಯಕ.

2) ವಿದ್ಯಾರ್ಥಿಗಳ ವೈಯಕ್ತಿಕ ವ್ಯತ್ಯಾಸ ಗುರುತಿಸಲು ಸಹಾಯಕ.

3) ಶಿಕ್ಷಕ ಮತ್ತು ವಿವಿಧ ವಿದ್ಯಾರ್ಥಿಗಳ ನಡುವೆ ಸುಮಧುರ ಬಾಂಧವ್ಯ ಬೆಳೆಸಲು ಸಹಾಯಕ.

4) ಶಿಕ್ಷಕರ ನಿರ್ದೇಶನದಂತೆ ಒಂದೇ ಕಲ್ಪನೆಗೆ ಲಭ್ಯವಿರುವ ಬೇರೆ ಬೇರೆ ಮೂಲಗಳ ಮಾಹಿತಿ ಸಂಗ್ರಹಿಸುವುದರಿಂದ ವಿದ್ಯಾರ್ಥಿಯು ಆತ್ಮವಿಶ್ವಾಸ ಹಾಗೂ ಸ್ವಾವಲಂಬನೆ ಬೆಳೆಸಿಕೊಳ್ಳುತ್ತಾನೆ.

5) ಕೆಲವು ಸಾಧನ ಅಥವಾ ಉಪಕರಣಗಳನ್ನು ಉಪಯೋಗಿಸುವ ಕೌಶಲ್ಯ ಬೆಳೆಸಿಕೊಳ್ಳುತ್ತಾನೆ.

6) ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಮತ್ತು ಮಂದಗತಿಯ ವಿದ್ಯಾರ್ಥಿಗಳನ್ನು ಗುರುತಿಸಿ ಚೆನ್ನಾಗಿ ಅಭ್ಯಾಸ ಮಾಡುವಂತೆ ಸಲಹೆ ನೀಡಲು ಸಹಾಯಕಾರಿ.

7) ತನ್ನ ಕಲಿಕೆಯ ವೇಗಕ್ಕೆ ಅನುಗುಣವಾಗಿ ವಿದ್ಯಾರ್ಥಿ ಅಭ್ಯಾಸ ಮುಂದುವರಿಸುತ್ತಾನೆ.

**ಸಲಹೆಗಳು**

1) ಮೇಲ್ವಿಚಾರಿತ ಅಧ್ಯಯನ ತರಗತಿ ಸಂಘಟಿಸಲು ಮುಂಚಿತವಾಗಿ ಯೋಜಿಸಿಕೊಳ್ಳಬೇಕು.

2) ಪ್ರತಿ ತರಗತಿಗೆ ಒಂದು ವಾರಕ್ಕೆ ವಿಶೇಷ ವೇಳಾಪಟ್ಟಿ ರಚಿಸಿ 45 ಅಥವಾ 60 ನಿಮಿಷಗಳ ಕನಿಷ್ಠ ಎರಡು ಅವಧಿಗಳನ್ನು ನಿಗದಿಪಡಿಸಬೇಕು.

3) ಪ್ರತಿ ವಾರದ ಎರಡು ಅವಧಿಗಳು ಬೇರೆ ಬೇರೆ ದಿನದಂದು ಮೇಲ್ವಿಚಾರಿತ ಅಧ್ಯಯನಕ್ಕೆಂದೇ ನಿಗದಿಪಡಿಸಬೇಕು. ಈ ತರಗತಿಗಳಿಗೆ ಬೇರೆ ಬೇರೆ ವಿಷಯ ಕಲಿಸುವ ಶಿಕ್ಷಕರನ್ನು ಮಾರ್ಗದರ್ಶನ ನೀಡಲು ನಿಗದಿಪಡಿಸಬೇಕು.

4) ಪ್ರತಿ ತಿಂಗಳ ಮೊದಲನೇ, ಎರಡನೇ, ಮೂರನೇ ಹಾಗೂ ನಾಲ್ಕನೆ ವಾರ ಬರುವ ಪ್ರತಿ ಎರಡು ತರಗತಿಗಳು ಇರುವ ದಿನ ಯಾವ ವಿಷಯ ಬೋಧಿಸುವ ಶಿಕ್ಷಕರು ಮೇಲ್ವಿಚಾರಣೆಗೆ ಬರುತ್ತಾರೆ ಎಂಬುದನ್ನು ನಿಗದಿಪಡಿಸಿದ ವಿಶೇಷ ವೇಳಾಪಟ್ಟಿಯಲ್ಲಿ ನಮೂದಿಸಿರಬೇಕು. ಈ ವೇಳಾಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.

5) ಮೇಲ್ವಿಚಾರಿತ ಅಧ್ಯಯನ ತರಗತಿ ಸಂಘಟಿಸಲು ಒಳ್ಳೆಯ ವಾತಾವರಣ ಇರುವಂತೆ ನೋಡಿಕೊಳ್ಳಬೇಕು.

6) ಒಂದು ವೇಳೆ ಕೆಲವು ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಇದ್ದರೆ, ಈ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿ ಮಾಡಿ ಆಯಾ ಗುಂಪಿಗೆ ಒಬ್ಬೊಬ್ಬ ಶಿಕ್ಷಕರನ್ನು ನಿಗದಿಪಡಿಸುವುದು ಒಳ್ಳೆಯದು.

7) ವಿವಿಧ ವಿದ್ಯಾರ್ಥಿಗಳು ಕಲಿಯುವ ವೇಗ, ಅಭಿರುಚಿ ಹಾಗೂ ಸಾಧನೆಯ ಹಂತಗಳು ಭಿನ್ನವಾಗಿರುವುದರಿಂದ ಪ್ರತಿ ವಿದ್ಯಾರ್ಥಿಗೆ ವೈಯಕ್ತಿಕ ಮಾರ್ಗದರ್ಶನ ನೀಡಲೇಬೇಕು.

8) ಒಂದು ಅವಧಿಯಲ್ಲಿ ಶಿಕ್ಷಕರು ತಮ್ಮ ಕೋಣೆಯಲ್ಲಿ ಸತತವಾಗಿ ಅಡ್ಡಾಡುತ್ತಾ ಎಲ್ಲಾ ವಿದ್ಯಾರ್ಥಿಗಳ ಹತ್ತಿರ ಹೋಗಿ ಅವಶ್ಯಕತೆ ಬಿದ್ದಾಗ ಮಾರ್ಗದರ್ಶನ ನೀಡಬೇಕು.

ಪ್ರತಿ ವಿದ್ಯಾರ್ಥಿಯನ್ನು ಒಬ್ಬ ವಿಶೇಷ ವ್ಯಕ್ತಿ ಎಂದು ಪರಿಗಣಿಸಿ ಅವನ ವೈಯಕ್ತಿಕ ಬೆಳವಣಿಗೆಗೆ ಅವಶ್ಯಕವಿರುವ ಮಾರ್ಗದರ್ಶನ ನೀಡುವ ವ್ಯವಸ್ಥೆ ಮಾಡುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ. ಮೇಲ್ವಿಚಾರಿತ ಅಧ್ಯಯನ ತರಗತಿಗಳು ಪ್ರತಿ ವಿದ್ಯಾರ್ಥಿಯು ಸ್ವಂತವಾಗಿ ಅಭ್ಯಾಸ ಮಾಡಲು ಸಹಕಾರಿ. ಇಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರ ಸಹಾಯ ಅವಶ್ಯಕವಾಗಿದೆ. ಕೆಲವು ಶಿಕ್ಷಣ ಸಂಸ್ಥೆಗಳು ತಮ್ಮ ಆಟದ ಬಯಲಿನಲ್ಲಿ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿ ಕೂರಿಸಿ ಅವರ ಮೇಲ್ವಿಚಾರಣೆಗೆ ಒಬ್ಬ ಶಿಕ್ಷಕರನ್ನು ನೇಮಿಸಿರುವುದನ್ನು ಕಾಣುತ್ತೇವೆ. ಶ್ರೀಮಂತರು ತಮ್ಮ ಮಕ್ಕಳಿಗಾಗಿ ಹೆಚ್ಚು ಹಣ ನೀಡಿ ಒಳ್ಳೆಯ ವ್ಯವಸ್ಥೆ ಹಾಗೂ ವಸತಿ ಇರುವ ಶಾಲೆಗಳಿಗೆ ಕಳುಹಿಸುತ್ತಾರೆ. ಇಂತಹ ಶಾಲೆಗಳಲ್ಲಿ ಮೇಲ್ವಿಚಾರಿತ ಅಧ್ಯಯನ ವ್ಯವಸ್ಥಿತವಾಗಿ ನಡೆಯುವುದರಲ್ಲಿ ಸಂಶಯವಿಲ್ಲ. ಆದರೆ ಸರ್ಕಾರಿ ವಸತಿಯುತ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಸಂಪನ್ಮೂಲಗಳ ಕೊರತೆ ಇರುವ ಕಾರಣ ಇಂತಹ ಅಧ್ಯಯನ ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಶಿಕ್ಷಣ ಸಂಸ್ಥೆಗಳು ಪ್ರತಿ ಸೆಮಿಸ್ಟರ್ ಅಥವಾ ವರ್ಷದ ಪ್ರಾರಂಭದ ದಿನದಿಂದ ಇಂತಹ ತರಗತಿಗಳನ್ನು ಸಂಘಟಿಸಲು ಯೋಜನೆ ರೂಪಿಸಿಕೊಂಡರೆ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯ ಅರಿವು ಮೂಡುವುದರ ಜೊತೆಗೆ ಶಿಕ್ಷಕರ ಕಾರ್ಯಭಾರವು ಸಹ ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಆದರೂ ಸಹ ಇಂತಹ ತರಗತಿಗಳ ಯಶಸ್ಸು ಆಯಾ ಶಿಕ್ಷಕನ ಅರ್ಪಣಾ ಮನೋಭಾವ ಹಾಗೂ ಕಠಿಣ ಶ್ರಮವನ್ನು ಅವಲಂಬಿಸಿದೆ. ಆಯಾ ವಿಷಯದ ಗುರಿಗಳನ್ನು ತಲುಪುವಲ್ಲಿ ಶಿಕ್ಷಕರು ಪ್ರಯತ್ನಿಸಿದರೂ ಸಹಾ ಅಂತಿಮ ಗುರಿ ಸ್ವಪ್ರಯತ್ನದ ಕಲಿಕೆ ಎಂದೇ ಹೇಳಬಹುದು.

–ಎಂ.ಎಂ.ಪ.


Digitised by Bharatavani, CIIL

## ಮೈಸೂರು ಒಡೆಯರ್ ದೊರೆಗಳ ಆಳ್ವಿಕೆಯಲ್ಲಿ ಶಿಕ್ಷಣ

ಒಂದು ಪುಟ್ಟ ಪಾಳೆಯ ಪಟ್ಟು ಆಗಿದ್ದ ಮೈಸೂರು ಒಂದು ಸಂಸ್ಥಾನ ಅಂದರೆ ಒಂದು ದೊಡ್ಡ ರಾಜ್ಯವಾಗಿ ರೂಪುಗೊಂಡ ಬಗ್ಗೆ ಒಂದು ರೋಚಕ ಇತಿಹಾಸವಿದೆ. 1399ರಲ್ಲಿ ಯದು ರಾಜರಿಂದ ಆರಂಭವಾದ ಮೈಸೂರಿನ ಒಡೆಯರ್ ದೊರೆಗಳ ಸುಮಾರು 550 ವರ್ಷಗಳ ಸುದೀರ್ಘ ಯಾತ್ರೆ, 1947 ಆಗಸ್ಟ್ 15ರಂದು ಭಾರತಕ್ಕೆ ಸ್ವತಂತ್ರ ಬಂದಾಗ, ಸ್ವತಂತ್ರ ಭಾರತದಲ್ಲಿ ವಿಲೀನವಾಗುವುದರೊಂದಿಗೆ ತನ್ನ ಇತಿಹಾಸದ ಕೊನೆಯ ಅಧ್ಯಾಯದ ಕೊನೆ ಪಂಕ್ತಿಯನ್ನು ಅಧಿಕೃತವಾಗಿ ಬರೆಯಿತು. ಯದುರಾಯರಿಂದ ಪ್ರಾರಂಭವಾದ ಈ ಯದುವಂಶದ ಕಿರೀಟ ಧರಿಸಿದವರು ಒಟ್ಟು ಇಪ್ಪತ್ತೈದು ಅರಸರು. ಇವರೆಲ್ಲರೂ ನೆನಪಿನಲ್ಲಿಡಬೇಕಾದಂಥ ಅರಸರು ಅಂತ ಹೇಳೋದು ಕಷ್ಟ ಮೊದಲನೆಯ ಯದುರಾಯ, 9ನೆಯ ರಾಜ ಒಡೆಯರು, 12ನೆಯ ರಣಧೀರ ಕಂಠೀರವ ನರಸರಾಜ ಒಡೆಯರು, 13ನೆಯ (ದೊಡ್ಡ) ದೇವರಾಜ ಒಡೆಯರು, 14ನೆಯ ಚಿಕ್ಕದೇವರಾಯ ಒಡೆಯರು, 22ನೆಯ ಮುಮ್ಮಡಿ ಕೃಷ್ಣರಾಜ ಒಡೆಯರು, 23ನೆಯ ಚಾಮರಾಜೇಂದ್ರ ಒಡೆಯರು, 24ನೆಯ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು 25ನೆಯ ಅಂತಿಮ ಅಧಿಕೃತ ಅರಸು ಜಯಚಾಮರಾಜ ಒಡೆಯರು ಮೈಸೂರು ರಾಜ್ಯವನ್ನು ಆಳಿ ಪ್ರಸಿದ್ಧರಾದವರು.

ಆಧುನಿಕ ಚಿಂತನೆಯ ಇಂದಿನ ದಿನಗಳಲ್ಲಿ ಶಿಕ್ಷಣ ಅಂದರೆ ಶಾಲಾ ಕಾಲೇಜುಗಳಲ್ಲಿ ನೀಡಲಾಗುವ ಸಾರ್ವಜನಿಕ ಶಿಕ್ಷಣ ಎಂದು ವ್ಯಾಖ್ಯಾನಿಸುವುದು ಸಹಜ. ಅದನ್ನೇ ಮಾನದಂಡವಾಗಿ ಪರಿಗಣಿಸಿದರೆ ನಮಗೆ ಈ ಸಾರ್ವಜನಿಕ ಶಿಕ್ಷಣದ ಮೊದಲ ಚಿಹ್ನೆಗಳು ಕಾಣಸಿಗುವುದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (1799–1868). ಮುಮ್ಮಡಿಯವರು ಮೈಸೂರು ನಗರದಲ್ಲಿ 'ರಾಜಾ ಫ್ರೀ ಸ್ಕೂಲ್' ಹೆಸರಿನಲ್ಲಿ 1833ರಲ್ಲಿ ಒಂದು ಇಂಗ್ಲಿಷ್ ಶಾಲೆಯನ್ನು ತಮ್ಮ ಸ್ವಂತ ಹಣದಿಂದ ಸ್ಥಾಪಿಸಿ. ಆಧುನಿಕ ಇಂಗ್ಲಿಷ್ ಶಿಕ್ಷಣಕ್ಕೆ ಬುನಾದಿ ಹಾಕಿದರು. ಪ್ರಾರಂಭದಲ್ಲಿ ಈ ಶಾಲೆಯ ವಿದ್ಯಾರ್ಥಿಗಳಾಗಿದ್ದವರು ರಾಜ ಕುಟುಂಬದವರು ಹಾಗೂ ರಾಜರ ಕೃಪೆಗೆ ಪಾತ್ರರಾಗಿದ್ದವರು. ಕ್ರಮೇಣ ಇತರರೂ ಪ್ರವೇಶ ಪಡೆದರು. ಈ ಶಾಲೆ ಇದ್ದದ್ದು ಚರ್ಚ್ ರಸ್ತೆಯಲ್ಲಿ (ಇಂದಿನ ಗ್ರಾಮಾಂತರ ಬಸ್ ನಿಲ್ದಾಣದ ದಕ್ಷಿಣ ಭಾಗದಲ್ಲಿ). ಪರಂಪರೆಯನ್ನು ರಕ್ಷಿಸಬೇಕಾಗಿದ್ದ ನಮ್ಮ ಘನ ಸರ್ಕಾರ ಈ ಶಾಲಾ ಕಟ್ಟಡವನ್ನು ಒಡೆದು ಹಾಕಿತು. ಒಡೆದು ಹಾಕುವಾಗ ಈ ಕಟ್ಟಡದಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣದ ತರಬೇತಿ ಶಾಲೆ U.G.T. ನಡೆಯುತ್ತಿತ್ತು. ಸರ್ಕಾರಕ್ಕೆ ಈ ಶಾಲೆಯ ಇತಿಹಾಸ, ಮಹತ್ವ ಗೊತ್ತಿರಲಿಲ್ಲ ಅನ್ನೋದು ದುರಂತ ! ಕಾಲಾ ನಂತರ ಈ ಶಾಲೆ ಮಹಾರಾಜ ಕಾಲೇಜಿನ ರೂಪ ಪಡೆಯಿತು.

ಏನೇನೋ ಸಬೂಬುಗಳನ್ನು ಸೃಷ್ಟಿಸಿ, ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಬ್ರಿಟಿಷ್ ಸರಕಾರವು ಮೈಸೂರಿನ ರಾಜ್ಯಾಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡು 'ಕಮೀಶನರ್ ಆಡಳಿತ' ಎಂಬ ಹೆಸರಿನಲ್ಲಿ ಅಧಿಕಾರ ಚಲಾಯಿಸಿದ್ದು 1831 ರಿಂದ 1881ರವರೆಗೆ. ಈ ಅವಧಿಯಲ್ಲಿ ಬ್ರಿಟಿಷರು ಶಿಕ್ಷಣಕ್ಕೆ ವಿಶೇಷವಾಗಿ ಇಂಗ್ಲಿಷ್ ಭಾಷೆಗೆ ಹೆಚ್ಚು ಒತ್ತು ನೀಡಿದರು. ಮೊಟ್ಟ ಮೊದಲನೆಯದಾಗಿ ಲಂಡನ್ ಮಿಷನ್ನಿನ ಎರಡು ಶಾಲೆಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. 1840ರಲ್ಲಿ ಮೈಸೂರಿನಲ್ಲಿ ವೆಸ್ಲಿಯನ್ ಮಿಷನ್ ಶಾಲೆಯನ್ನು ಶುರು ಮಾಡಿದರು. ಆಡಳಿತಾರೂಢ ಬ್ರಿಟಿಷರ ದೃಷ್ಟಿಯಲ್ಲಿ ಭಾರತಾದ್ಯಂತ ಪಾಶ್ಚಾತ್ಯ ಮಾದರಿಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವುದು, ಜ್ಞಾನ ಪ್ರಸಾರದ ಜೊತೆಗೆ ಮೇಲ್ವರ್ಗದ ಅಕ್ಷರಸ್ಥರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಅನುಕೂಲಕರ ಅನ್ನಿಸಿತ್ತು. ಈ ಉದ್ದೇಶದಿಂದ 1854ರಲ್ಲಿ ಹ್ಯಾಲಿ ಫಾಕ್ಸ್ ಕಮೀಷನ್ ಒಂದು ವರದಿ ನೀಡಿತು. ಪ್ರಾಥಮಿಕ ಶಾಲಾ ಹಂತದಿಂದ ಕಾಲೇಜಿನವರೆಗೆ ಶಿಕ್ಷಣವನ್ನು ಸಾರ್ವತ್ರೀಕರಿಸುವ ನೀತಿ ಕಾರ್ಯರೂಪಕ್ಕೆ ಬಂತು. ಅಂದು ಜ್ಯುಡಿಯಷಿಯಲ್ ಕಮೀಷನರ್ ಆಗಿದ್ದ ಡೆವೆರೋಕ್ಸ್ ಎಂಬುವವನ ಸಲಹೆಯಂತೆ "ಡೈರೆಕ್ಟೋರೇಟ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್" ಎಂಬ ಇಲಾಖೆ ಸ್ಥಾಪಿತವಾಯಿತು.

ಮೈಸೂರು ಸಂಸ್ಥಾನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಪ್ರಥವಾಗಿ ಸ್ಥಾಪನೆಗೊಂಡಿದ್ದು 1854ರಲ್ಲಿ ಕಬ್ಬನ್‌ನಿಂದ. ಪ್ರಾಥಮಿಕ ಹಂತದಲ್ಲಿ ಕನ್ನಡ ಬೋಧನ ಮಾಧ್ಯಮವಾಗಿತ್ತು. ಪ್ರೌಢ ಶಿಕ್ಷಣಕ್ಕೆ ಇಂಗ್ಲಿಷ್ ಬೋಧನ ಮಾಧ್ಯಮವಾಗಿತ್ತು.

1868ರಲ್ಲಿ ಬಿ.ಎಲ್. ರೈಸ್ ನೀಡಿದ ಸಲಹೆಯಂತೆ "ಹೋಬಳಿ ಶಾಲೆ ಪದ್ಧತಿ" ಜಾರಿಗೆ ಬಂತು. ಇದರ ಪ್ರಕಾರ ಹಳ್ಳಿಗಾಡುಗಳಲ್ಲಿ ಅಂದರೆ ನಗರ ಪಟ್ಟಣಗಳಿಂದ ದೂರ ಒಳ ಭಾಗದಲ್ಲಿ ಇರುವ ಮಕ್ಕಳಿಗೂ ಶಿಕ್ಷಣವನ್ನು ತಲುಪಿಸುವ ಕ್ರಮ ಪ್ರಾರಂಭವಾಯಿತು. ಈ ಪ್ರಕಾರ ರಾಜ್ಯದ ಪ್ರತಿಯೊಂದು ಹೋಬಳಿಯಲ್ಲಿ ಒಂದೊಂದು ಕನ್ನಡ ಪ್ರಾಥಮಿಕ ಶಾಲೆಯನ್ನು ತೆರೆಯಲಾಯಿತು. ಸಾರ್ವಜನಿಕ ಶಿಕ್ಷಣ ಉಚಿತವಾಗಿದ್ದು ಈ ಶಿಕ್ಷಣ ಯೋಜನೆಯ ವೈಶಿಷ್ಟ್ಯ

ಮುಮ್ಮಡಿ ಕೃಷ್ಣರಾಜ ಒಡೆಯರ ನಿಧನಾನಂತರ ಮೈಸೂರು ಸಂಸ್ಥಾನದ ರಾಜ್ಯಾಡಳಿತವನ್ನು ಬ್ರಿಟಿಷರು ಉತ್ತರಾಧಿಕಾರಿ ಹತ್ತನೇ ಚಾಮರಾಜೇಂದ್ರ ಒಡೆಯರಿಗೆ ವಹಿಸಿಕೊಡಬೇಕಾಯಿತು.

ಚಾಮರಾಜೇಂದ್ರ ಒಡೆಯರು ಶಿಕ್ಷಣಕ್ಕೆ ವಿಶೇಷ ಒತ್ತು ನೀಡಿ ಶಿಕ್ಷಣ ಪ್ರಚಾರಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ಕಾರ್ಯಾರಂಭ ಮಾಡಿದರು. ಅವುಗಳಲ್ಲಿ ಪ್ರಮುಖವಾದುವೆಂದರೆ,

1. ಕನ್ನಡ ಭಾಷೆಯಲ್ಲಿ ಸ್ಥಳೀಯ ಮತ್ತು ಪಂಡಿತ ಪರೀಕ್ಷೆಗಳನ್ನು ಮೇಲ್ದರ್ಜೆಗೆ ಏರಿಸುವುದು.
2. ಮೈಸೂರು, ಬೆಂಗಳೂರುಗಳಲ್ಲಿ ಸಂಸ್ಕೃತ ಕಾಲೇಜುಗಳ ಸ್ಥಾಪನೆ.
3. ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನಗಳು.
4. ಮೈಸೂರು, ಬೆಂಗಳೂರುಗಳಲ್ಲಿ ಮಹಿಳಾ ಕಾಲೇಜುಗಳ ಸ್ಥಾಪನೆ.
5. ಶಾಲಾ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಜಾತಿ ನಿರ್ಬಂಧ ರದ್ದು.
6. ಉರ್ದು ಶಿಕ್ಷಣಕ್ಕಾಗಿ ಪ್ರತ್ಯೇಕ ಶಾಲೆಗಳು ಹಾಗೂ ಇನ್ಸ್‌ಪೆಕ್ಟರ್‌ಗಳ ನೇಮಕಾತಿ.
7. ಮೈಸೂರು ಮತ್ತು ಹಾಸನದಲ್ಲಿ ವೃತ್ತಿ ಶಿಕ್ಷಣ ಶಾಲೆಗಳ ಆರಂಭ.
8. ಪಠ್ಯಪುಸ್ತಕ ಸಮಿತಿಗಳ ರಚನೆ.
9. ಶಿಕ್ಷಕರ ವೇತನದ ಪರಿಷ್ಕರಣ.
10. ಶಿಕ್ಷಣಕ್ಕಾಗಿಯೇ ಪ್ರತ್ಯೇಕ ಸೆಕ್ರೆಟೇರಿಯೇಟ್ (ವಿಭಾಗ).

ಚಾಮರಾಜೇಂದ್ರ ಒಡೆಯರ ನಿಧನಾನಂತರ ರಾಜಕುಮಾರ ನಾಲ್ವಡಿ ಕೃಷ್ಣರಾಜ ಒಡೆಯರು ಉತ್ತರಾಧಿಕಾರಿಯಾಗಿ ಸಿಂಹಾಸನಾರೂಢರಾದರು. ಆಗ ಅವರು 10 ವರ್ಷದ ಬಾಲಕನಾಗಿದ್ದುದರಿಂದ ಅವರು ಪ್ರಾಪ್ತ ವಯಸ್ಕರಾಗುವವರೆಗೆ ಅವರ ತಾಯಿಯವರಾದ ರಾಜಮಾತೆ ವಾಣೀವಿಲಾಸ ಸನ್ನಿಧಾನ ಅವರು ರೀಜೆಂಟ್ ಆಗಿ ರಾಜ್ಯಾಧಿಕಾರ ನಡೆಸಿದರು. ಚಾಮರಾಜೇಂದ್ರ ಒಡೆಯರು

Digitised by Bharatavani, CIIL

ಪ್ರಾರಂಭಿಸಿದ್ದ ಎಲ್ಲ ಯೋಜನೆಗಳನ್ನು ಇವರು ಅಪಾರ ಉತ್ಸಾಹದಿಂದ ಮುಂದುವರೆಸಿದರು. ವಿದ್ಯುತ್, ನೀರಾವರಿ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವೊಂದು ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸಿದರು. ಸಾರ್ವಜನಿಕ ಶಿಕ್ಷಣ ಉಚಿತವಾಗಿತ್ತು. ಹೆಣ್ಣು ಮಕ್ಕಳಿಗಾಗೇ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸಲಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ್

1902ರಲ್ಲಿ 18 ವರ್ಷ ಪ್ರಾಯಕ್ಕೆ ಸಂದ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ತಂದೆ ಮತ್ತು ತಾಯಿಯವರ ಆಡಳಿತ ಕಾಲದಲ್ಲಿ ಜಾರಿಯಲ್ಲಿದ್ದ ಎಲ್ಲ ಜನಪ್ರಿಯ ಯೋಜನೆಗಳನ್ನು ಮುಂದುವರೆಸಿದರು. ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದರು. 1927ರಲ್ಲಿ ಅಂದರೆ ನಾಲ್ವಡಿಯವರ ಆಡಳಿತದ ರಜತೋತ್ಸವ ವರ್ಷದಲ್ಲಿ ಶಿಕ್ಷಣಕ್ಕೆ 48 ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿತ್ತು. ಮಹಾರಾಜರು ಬ್ರಿಟಿಷ್ ಇಂಡಿಯಾ ಸರಕಾರಕ್ಕೆ ನೀಡುತ್ತಿದ್ದ 35 ಲಕ್ಷ ರೂ.ಗಳ ಪೊಗದಿ ಹಣಕ್ಕಿಂತಲೂ ಇದು ತುಂಬಾ ಹೆಚ್ಚಾಗಿತ್ತು. ಇದನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಮಹಾರಾಜರನ್ನು ಅಪಾರವಾಗಿ ಶ್ಲಾಘಿಸಿತು. ಮಹಾರಾಜರು ಕೊಡುತ್ತಿದ್ದ ಪೊಗದಿ ಹಣವನ್ನು $24^1/_2$ ಲಕ್ಷ ರೂಪಾಯಿಗಳಿಗೆ ಇಳಿಸಿತು. ಆಗ ವೈಸ್‌ರಾಯ್ ಆಗಿದ್ದ ಲಾರ್ಡ್ ಇರ್ವಿನ್ ಹೇಳಿದ ಮಾತುಗಳು ಗಮನಾರ್ಹ. "ಬಹುಶಃ ಮೈಸೂರು, ಇಂಡಿಯಾದ ಬೇರೆ ಯಾವುದೇ ದೇಶೀಯ ರಾಜ್ಯಕ್ಕಿಂತಲೂ ದೀರ್ಘವಾದ, ಪ್ರಗತಿಪರ ಸರ್ಕಾರದ ಪರಂಪರೆಯನ್ನು ಹೊಂದಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ದೇಶೋನ್ನತಿ ಮಾಡಿದುದರ ಗೌರವಾರ್ಥ ನಾವು ಈ ಪೊಗದಿ ಹಣವನ್ನು ಶಾಶ್ವತವಾಗಿ ಕಮ್ಮಿ ಮಾಡಿದ್ದೇವೆ."

### ಮಹಿಳಾ ಶಿಕ್ಷಣ

ಕನ್ನಡ ಹೆಣ್ಣು ಮಕ್ಕಳ ಶಾಲೆ ಪ್ರಪ್ರಥಮವಾಗಿ ಸ್ಥಾಪಿತವಾದದ್ದು 1840ರಲ್ಲಿ ಬೆಂಗಳೂರಲ್ಲಿ. ಮೈಸೂರು ನಗರದಲ್ಲಿ ಮೊಟ್ಟ ಮೊದಲಾಗಿ ಮಹಿಳಾ ಶಾಲೆ ಪ್ರಾರಂಭವಾದದ್ದು 1881ರಲ್ಲಿ. ಕೋಟೆಯೊಳಗಿನ ವರಾಹ ಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಮೊದಲ ದಿನಗಳನ್ನು ಕಳೆದ ನಂತರ ಜಗನ್ಮೋಹನ ಅರಮನೆಗೆ ಸ್ಥಳಾಂತರಗೊಂಡ ಈ ಶಾಲೆ 1882ರಲ್ಲಿ ಮಹಾರಾಣಿ ಪ್ರೌಢಶಾಲೆಯಾಗಿ ಸ್ವಂತ ಕಟ್ಟಡದಲ್ಲಿ ನೆಲೆಯೂರಿತು.

1892ರಲ್ಲಿ ಪ್ರಾರಂಭವಾದ ಚಾಮರಾಜೇಂದ್ರ ಅರಸು ಬಾಲಕರ ಬೋರ್ಡಿಂಗ್ ಶಾಲೆ ಹಾಗೂ 1911ರಲ್ಲಿ ಶುರುವಾದ ವಾಣೀವಿಲಾಸ ಅರಸು ಬಾಲಕಿಯರ ಬೋರ್ಡಿಂಗ್ ಶಾಲೆ ಮಹಾರಾಜರ ಸ್ವಂತ ಹಣದಿಂದ ನಡೆಸಲಾಗುತ್ತಿದ್ದ ಶಾಲೆಗಳು.

### ಗಿರಿಜನ ಶಾಲೆ

ಬುಡಕಟ್ಟು ಹಾಗೂ ಅರಣ್ಯ ನಿವಾಸಿಗಳಿಗೆ ಅವರವರ ಸ್ಥಳದಲ್ಲೇ ಶಿಕ್ಷಣ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಸೋಲಿಗರು, ಲಂಬಾಣಿ ಮತ್ತು ಗಿರಿಜನ ಶಾಲೆಗಳನ್ನು ತೆರೆಯಲಾಯಿತು. ಬಿಳಿಗಿರಿ ರಂಗನ ಬೆಟ್ಟ ಮುಂತಾದ ಬೆಟ್ಟ ಪ್ರದೇಶಗಳಲ್ಲಿ ಸೋಲಿಗರಿಗಾಗಿ ಶಾಲೆಗಳು, ಕಾಕನಕೋಟೆ ಮುಂತಾದ ಅರಣ್ಯ ಪ್ರದೇಶಗಳಲ್ಲಿ ಜೇನುಕುರುಬ ಮತ್ತು ಕುಂಬಿ ಜನರಿಗಾಗಿ, ಕೋಲಾರ ಜಿಲ್ಲೆಯಲ್ಲಿ ವಡ್ಡರಿಗಾಗಿ ಶಾಲೆಗಳು ಪ್ರಾರಂಭವಾದವು.

### ಪರಿಶಿಷ್ಟ ಜಾತಿ–ಹಿಂದುಳಿದವರಿಗಾಗಿ

1981ರಲ್ಲಿ ಪರಿಶಿಷ್ಟಜಾತಿ ಮತ್ತು ಇತರೇ ಹಿಂದುಳಿದ ಎಲ್ಲಾ ವರ್ಗದ ಮಕ್ಕಳನ್ನು ಸಾರ್ವಜನಿಕ ಶಾಲೆಗಳಿಗೆ ನಿರಾಂತಕವಾಗಿ ಸೇರಿಸಿಕೊಳ್ಳಬೇಕು ಎಂಬ ಆಜ್ಞೆ ಜಾರಿಗೆ ಬಂತು. ಇದರ ಜೊತೆಗೆ ಹಿಂದುಳಿದ ವರ್ಗದ ಹೆಣ್ಣು ಮಕ್ಕಳಿಗೆ ಹಾಗೂ ಪರಿಶಿಷ್ಟ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿದ್ಯಾರ್ಥಿ ವೇತನ, ಉಚಿತ ವಸತಿ, ಉಡುಪು, ಪುಸ್ತಕ ನೀಡಲಾಯಿತು.

### ವಿಶ್ವವಿದ್ಯಾನಿಲಯ ಸ್ಥಾಪನೆ

ಭಾರತದಲ್ಲೇ ಪ್ರಪ್ರಥಮವಾಗಿ ದೇಶೀಯ ರಾಜ್ಯಗಳಲ್ಲಿ ಸ್ವತಂತ್ರ ವಿಶ್ವವಿದ್ಯಾನಿಲಯ ಸ್ಥಾಪಿಸಿದ ಕೀರ್ತಿ ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರದು. 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿತು. ಪುಸ್ತಕ ಪ್ರಚಾರಕ್ಕಾಗಿ 'ಪ್ರಸಾರಾಂಗ' ವನ್ನು ಸ್ಥಾಪಿಸಿದರು. 1913ರಲ್ಲಿ ಕಡ್ಡಾಯ ಶಿಕ್ಷಣ ಮಸೂದೆ ಜಾರಿಗೆ ಬಂತು. ಇದರ ಪ್ರಕಾರ 7 ರಿಂದ 11 ವರ್ಷ ವಯಸ್ಸಿನ ಮಕ್ಕಳನ್ನು ಕೂಲಿ ಕೆಲಸಕ್ಕೆ ಕಳುಹಿಸುವುದನ್ನು ನಿಷೇಧಿಸಿ, ಎಲ್ಲ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುವ ಜವಾಬ್ದಾರಿಯನ್ನು ಪೋಷಕರಿಗೆ ವಹಿಸಲಾಯಿತು. ಗ್ರಾಮೀಣ ಪ್ರದೇಶದ ಇಂತಹ ಪೋಷಕರಿಗೆ ವಿಶೇಷವಾಗಿ ಪ್ರೋತ್ಸಾಹ, ಸವಲತ್ತುಗಳನ್ನು ನೀಡಲಾಗುತ್ತಿತ್ತು.

### ವಯಸ್ಕರ ಶಿಕ್ಷಣ

ಶಿಕ್ಷಣಾವಕಾಶ ದೊರಕದ ವಯಸ್ಕರಿಗೆ 1912ರಲ್ಲಿ ವಯಸ್ಕರ ಶಿಕ್ಷಣ ಯೋಜನೆ ಜಾರಿಗೆ ಬಂತು. ಇಂತಹವರಿಗಾಗಿ ವಿಶೇಷ ಪುಸ್ತಕಗಳನ್ನು ಪ್ರಕಟಿಸುವ ವ್ಯವಸ್ಥೆಯೂ ಜಾರಿಗೆ ಬಂತು.

ಶಾಲಾ ಕಾಲೇಜುಗಳಲ್ಲಿ ವಿಜ್ಞಾನ ಮತ್ತು ಕಲಾ ಶಿಕ್ಷಣದ ಜೊತೆಗೆ ವಾಣಿಜ್ಯ, ತಾಂತ್ರಿಕ, ಕೈಗಾರಿಕಾ ಮತ್ತು ವೃತ್ತಿ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಾಯಿತು.

### ಉರ್ದು ಶಾಲೆಗಳು

ಮುಸ್ಲಿಂ ಜನಾಂಗದ ಮಕ್ಕಳಿಗಾಗಿ ಪ್ರತ್ಯೇಕ ಉರ್ದು ಶಾಲೆಗಳನ್ನು ತೆರೆಯಲಾಯಿತು. 1890ರ ಸುಮಾರಿಗೆ ಕೆಲವು ಜಿಲ್ಲಾ ಮತ್ತು ತಾಲ್ಲೋಕು ಕೇಂದ್ರಗಳಲ್ಲಿ ಸರ್ಕಾರದ ವತಿಯಿಂದ ಉರ್ದು ಪ್ರೈಮರಿ ಶಾಲೆಗಳನ್ನು ಶುರು ಮಾಡಲಾಗಿತ್ತು. ಉರ್ದು ಶಾಲೆಗಳಲ್ಲಿ ಆಧುನಿಕ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಪಠ್ಯ ಪುಸ್ತಕಗಳನ್ನು ಉರ್ದು ಭಾಷೆಯಲ್ಲಿ ರಚಿಸಿ ಹಂಚಲಾಯಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳ ನಂತರ ಈ ಮಕ್ಕಳು ಸಾಮಾನ್ಯ ಪ್ರೌಢಶಾಲೆಗಳಿಗೆ ಸೇರಿ ತಮ್ಮ ಶಿಕ್ಷಣವನ್ನು ಕನ್ನಡ ಅಥವಾ ಅಂಗ್ಲ ಮಾಧ್ಯಮದಲ್ಲಿ ಮುಂದುವರೆಸಬೇಕಾಗಿತ್ತು.

### ಕುರುಡು ಮೂಕರ ಶಾಲೆ

1901ರಲ್ಲಿ ಶಿಕ್ಷಣ ವಿಭಾಗದ ಇನ್ಸ್‌ಪೆಕ್ಟರ್ ಎಂ. ಶ್ರೀನಿವಾಸರಾವ್ ಎಂಬುವವರು ಮೈಸೂರಿನಲ್ಲಿ ಖಾಸಗಿಯಾಗಿ ನಡೆಸುತ್ತಿದ್ದ ಕುರುಡು ಮತ್ತು ಮೂಕರ ಶಾಲೆಯು ನಿರೀಕ್ಷೆಗೆ ಮೀರಿ ಬೆಳೆದು, ಇತರ ರಾಜ್ಯಗಳಿಂದಲೂ ಅಂಗವಿಕಲ ಮಕ್ಕಳು ಬರುವುದು ಹೆಚ್ಚಾದ ಹಿನ್ನೆಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಸರ್ಕಾರ 1927ರಲ್ಲಿ ಈ ಶಾಲೆಯನ್ನು ವಹಿಸಿಕೊಂಡಿತು. ಅಂಧ ಮಕ್ಕಳಿಗಾಗಿ ಸಂಗೀತ, ನೇಯ್ಗೆ, ಮರಗೆಲಸ, ಬೆತ್ತದ ಕೆಲಸ ಮುಂತಾದ ಶಿಕ್ಷಣ ನೀಡುವುದೂ ಪ್ರಾರಂಭವಾಯಿತು.


Digitised by Bharatavani, CIIL

**ಸಂಸ್ಕೃತ ಶಾಲೆ**

ಹಲವಾರು ದೇವಸ್ಥಾನಗಳು, ಮಠಗಳಲ್ಲಿ ನಡೆಯುತ್ತಿದ್ದ ಸಂಸ್ಕೃತ ಪಾಠಶಾಲೆಗಳಿಗೆ ಸರ್ಕಾರ ಮಾನ್ಯತೆ ನೀಡಿ ಅನುದಾನ ನೀಡುವುದನ್ನು ಪ್ರಾರಂಭಿಸಿದ ನಂತರ 1921–22ರ ವೇಳೆಗೆ ಮೈಸೂರು ರಾಜ್ಯದಲ್ಲಿ ಒಟ್ಟು 51 ಸಂಸ್ಕೃತ ಶಾಲೆಗಳಿದ್ದವು. ಮೈಸೂರು ಮತ್ತು ಬೆಂಗಳೂರಿನ ಸಂಸ್ಕೃತ ಶಾಲೆಗಳನ್ನು ಕಾಲೇಜು ದರ್ಜೆಗೆ ಏರಿಸಲಾಯಿತು.

ಈ ಹಿಂದೆ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಒಂದು ಸಂಸ್ಕೃತ ಶಾಲೆಯನ್ನು ಪ್ರಾರಂಭಿಸಲು ಯತ್ನಿಸಿದ್ದು ಅದು ಶುರುವಾಗುವ ಮೊದಲೇ ಅವರು ಮರಣ ಹೊಂದಿದ್ದರು. ಅವರ ನೆನಪಿಗಾಗಿ ಅದೇ ವರ್ಷ ಅಂದರೆ 1868ರಲ್ಲಿ ಸಂಸ್ಕೃತ ಮಹಾಪಾಠ ಶಾಲೆ ಪ್ರಾರಂಭವಾಯಿತು. ವೇದಗಳಲ್ಲಿ ತರ್ಕ, ವ್ಯಾಕರಣ, ವೇದ ಶಾಸ್ತ್ರಗಳಲ್ಲಿ ವಿದ್ವತ್ ಪದವಿ ಶಿಕ್ಷಣವಿತ್ತು. 1883ರಲಿ ಆಯುರ್ವೇದ, ಜ್ಯೋತಿಷ್ಯ, ಮೀಮಾಂಸೆ ಮತ್ತು ಆಗಮ ಶಾಸ್ತ್ರಗಳನ್ನು ಸೇರಿಸಲಾಯಿತು.

**ಮೆಡಿಕಲ್ ಕಾಲೇಜು**

ಮೈಸೂರು ಸಂಸ್ಥಾನದಲ್ಲಿ ವೈದ್ಯಕೀಯ ಶಿಕ್ಷಣ ನೀಡುವ ವ್ಯವಸ್ಥೆ ಇರಲಿಲ್ಲ. ಇದಕ್ಕಾಗಿ ವಿಶೇಷವಾಗಿ ಬೊಂಬಾಯಿ ಮತ್ತು ಮದ್ರಾಸ್ ರಾಜ್ಯಗಳನ್ನು ಅವಲಂಬಿಸಬೇಕಾಗಿತ್ತು. ಈ ಕೊರತೆಯನ್ನು ನಿವಾರಿಸಲು ನಾಲ್ವಡಿ ಕೃಷ್ಣರಾಜ ಒಡೆಯರು 1917ರಲ್ಲಿ 'ಮೈಸೂರು ಮೆಡಿಕಲ್ ಸ್ಕೂಲ್' ಪ್ರಾರಂಭಿಸಿದರು. ಇದು ಮೈಸೂರು ರಾಜ್ಯದಲ್ಲಿ ಸ್ಥಾಪನೆಗೊಂಡ ಪ್ರಪ್ರಥಮ ವೈದ್ಯಕೀಯ ಶಾಲೆ ಹಾಗೂ ಇಂಡಿಯಾದಲ್ಲಿ ಏಳನೆಯದಾಗಿತ್ತು. ಕಾಲಕ್ರಮೇಣ 1924ರಲ್ಲಿ ಇದು 'ಮೆಡಿಕಲ್ ಕಾಲೇಜ್'ಆಗಿ ಪರಿವರ್ತಿತವಾಯಿತು.

ಇದೇ ರೀತಿ 1908ರಲ್ಲಿ ಸಂಸ್ಕೃತ ಪಾಠಶಾಲೆಯಲ್ಲಿ ಪುಟ್ಟದಾಗಿ ಪ್ರಾರಂಭವಾದ ಆಯುರ್ವೇದದ ಶಿಕ್ಷಣ ಕ್ರಮೇಣ ವೃದ್ಧಿಗೊಂಡು 1930ರಲ್ಲಿ ಸ್ವಂತ ಕಟ್ಟಡ ಹೊಂದಿ ಆಯುರ್ವೇದ ಕಾಲೇಜಾಗಿ ರೂಪಾಂತರಗೊಂಡಿತು.

ಇದರ ಜೊತೆಗೆ ಯುನಾನಿ ಪದ್ಧತಿಯ ಶಿಕ್ಷಣ ನೀಡುವುದಕ್ಕೂ ಪ್ರಾಮುಖ್ಯತೆ ನೀಡಿ ಯುನಾನಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸಲಾಯಿತು.

**ತಾಂತ್ರಿಕ ಶಿಕ್ಷಣ**

ಮೈಸೂರು ನಗರದಲ್ಲಿ 1892ರಲ್ಲೇ ಚಿಕ್ಕದಾಗಿ ಪ್ರಾರಂಭವಾಗಿದ್ದ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆಯು ಕಲೆ ಮತ್ತು ಗುಡಿ ಕೈಗಾರಿಕೆಯಲ್ಲಿ ವಿಶೇಷ ಶಿಕ್ಷಣ, ತರಬೇತಿ ನೀಡುವ ಬೃಹತ್ ಶಾಲೆಯಾಗಿ ಬೆಳೆದು ಮಾದರಿ ಸಂಸ್ಥೆ ಅನಿಸಿಕೊಂಡಿದೆ. ಈಗ ಈ ಸಂಸ್ಥೆಯಿರುವುದು 1906ರಲ್ಲಿ ಪ್ರಾರಂಭವಾಗಿ 1913ರಲ್ಲಿ ಪೂರ್ಣಗೊಂಡ ಬೃಹತ್ ಕಟ್ಟಡದಲ್ಲಿ.

ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ರಜತ ಮಹೋತ್ಸವದ ನೆನಪಿನಲ್ಲಿ 1927ರಲ್ಲಿ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ಮತ್ತು ತರಬೇತಿ ನೀಡುವ ಉದ್ದೇಶದಿಂದ ಶ್ರೀ ಕೃಷ್ಣ ರಾಜೇಂದ್ರ ರಜತೋತ್ಸವ ತಾಂತ್ರಿಕ ಶಿಕ್ಷಣ ಶಾಲೆ ಸ್ಥಾಪಿಸಲ್ಪಟ್ಟಿತು.

ನಾಲ್ವಡಿಯವರ ನಂತರ 1940ರಲ್ಲಿ ಮಹಾರಾಜರಾಗಿ ಪಟ್ಟಾಭಿಷಿಕ್ತರಾದ ಜಯಚಾಮರಾಜ ಒಡೆಯರು, ನಾಲ್ವಡಿಯವರು ಪ್ರಾರಂಭಿಸಿದ್ದ ಕ್ರಾಂತಿ ಪಥದಲ್ಲಿ ನಾಲ್ವಡಿಯವರಿಗಿದ್ದಷ್ಟೇ ಕಾಳಜಿಯಿಂದ, ಬದ್ಧತೆಯಿಂದ, ನಿಷ್ಠೆಯಿಂದ ಎಲ್ಲಾ ಯೋಜನೆಗಳನ್ನು ಕಾರ್ಯಗಳನ್ನು ಮುಂದುವರೆಸಿದರು. ಈ ಏಳು ವರ್ಷಗಳ ಅವಧಿಯಲ್ಲಿ ಹೊರಬಂದ ವಿಶೇಷ ತಾಂತ್ರಿಕ, ವೈಜ್ಞಾನಿಕ, ಹೊಸತನದ ಅನ್ವೇಷಣೆ ಅನುಸಂಧಾನದ ವಿಷಯಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಜಾರಿಗೊಳಿಸಲು ವಿಶೇಷ ಆಸ್ಥೆ ವಹಿಸಿದರು.

– ಪಿ.ವಿ.ನಂ.ಅ.

**ಮೌಖಿಕ ಪರೀಕ್ಷೆ**

ಉಪಾಧ್ಯಾಯರು ಮೌಖಿಕವಾಗಿ ಕೇಳುವ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಮೌಖಿಕವಾಗಿಯೇ ಉತ್ತರಿಸುವ ಪ್ರಶ್ನೆಗಳಿಗೆ ಮೌಖಿಕ ಪರೀಕ್ಷೆ ಎಂದು ಕರೆಯುತ್ತೇವೆ.

ಮೌಖಿಕವಾಗಿ ಕೇಳುವ ಪ್ರಶ್ನೆಗಳಿಗೆ ಬರವಣಿಗೆಯಲ್ಲಿ ಉತ್ತರವನ್ನು ಪಡೆಯುವುದಿಲ್ಲ. ಬರವಣಿಗೆಯ ಪರೀಕ್ಷೆಗೆ ಪೂರಕವಾಗಿ ಮೌಖಿಕ ಪರೀಕ್ಷೆಯನ್ನು ಉಪಯೋಗಿಸುತ್ತೇವೆ. ಇದನ್ನು ಆಂಗ್ಲ ಭಾಷೆಯಲ್ಲಿ viva-voce ಎಂದು ಹೇಳುತ್ತೇವೆ. ಇಲ್ಲಿ ಪರೀಕ್ಷಕ ಮತ್ತು ಪರೀಕ್ಷಾರ್ಥಿ ಮುಖಾಮುಖಿಯಾಗಿರುತ್ತಾರೆ. ಪರೀಕ್ಷಕನು ಪ್ರಶ್ನೆಗಳನ್ನು ಕೇಳುವುದರ ಮೂಲಕ ಸಾಮಾನ್ಯ ಜ್ಞಾನ, ವಿಷಯಜ್ಞಾನ, ಸ್ಮರಣ ಶಕ್ತಿಗಳನ್ನು ಪರೀಕ್ಷಾರ್ಥಿಯು ಬಾಯ್ದರೆಯಾಗಿ ಅಭಿವ್ಯಕ್ತಿಗೊಳಿಸುವ ಕೌಶಲ ಮುಂತಾದವುಗಳನ್ನು ಅಳೆಯಬಹುದು. ಕೇಳುವ ಪ್ರಶ್ನೆಗಳು ಪೂರ್ವ ನಿಯೋಜಿತ ಕ್ರಮದಲ್ಲಾಗಲಿ ಅಥವಾ ಅವ್ಯವಸ್ಥಿತ ಕ್ರಮದಲ್ಲಾಗಲಿ ಇರಬಹುದು.

ಮೌಖಿಕ ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ಮುಕ್ತವಾಗಿ ಉತ್ತರಿಸುವಂತೆ ಅನುವುಮಾಡಿಕೊಡುತ್ತವೆ. ವಿದ್ಯಾರ್ಥಿಗಳ ಮೌಖಿಕ ಅಭಿವ್ಯಕ್ತತೆ/ ಉಚ್ಚಾರಣಾಶಕ್ತಿ, ಕಂಠಪಾಠ ಮುಂತಾದ ಸಾಮರ್ಥ್ಯಗಳನ್ನು ಅಳೆಯುತ್ತದೆ. ಪರಿಕ್ಷಾರ್ಥಿಯನ್ನು ಅನೇಕ ಸರಣಿ ಪ್ರಶ್ನೆಗಳ ಮೂಲಕ ಆಳವಾಗಿ ಶೋಧಿಸುವ ಅವಕಾಶವಿದೆ. ಒಂದು ವೇಳೆ ಕೇಳಿದ ಪ್ರಶ್ನೆಗಳು ಅರ್ಥವಾಗದಿದ್ದರೆ ಪರೀಕ್ಷಕನು ಅದನ್ನು ಪುನರ್ ಜೋಡಿಸಿ ಬೇರೆ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಬಹುದು. ದೈಹಿಕವಾಗಿ ಸವಾಲು ಗಳನ್ನೆದುರಿಸುತ್ತಿರುವ (physically challenged) ವಿದ್ಯಾರ್ಥಿಗಳಿಗೆ ಇದು ಸೂಕ್ತವಾದ ಪರೀಕ್ಷಾ ಪದ್ಧತಿಯಾಗಿದೆ. ಅಲ್ಲದೆ ಚಿಕ್ಕ ಮಕ್ಕಳು (12–13 ವಯೋಮಾನದೊಳಗಿನ) ಸಹ ದೀರ್ಘಕಾಲ ಬರೆಯುವ ಪ್ರೌಢತೆ ಹೊಂದಿಲ್ಲದಿರುವುದರಿಂದ ಅವರಿಗೂ ಈ ಪದ್ಧತಿ ಅತ್ಯಂತ ಸಮಂಜಸವಾಗಿದೆ. ಬರವಣಿಗೆ ಪರೀಕ್ಷೆಯಲ್ಲಿ ಆಗುವಂತಹ ವೆಚ್ಚವನ್ನು ಸಹ ಕಡಿಮೆಮಾಡಬಹುದು. ಆದರೆ ಇದರ ವಿಶ್ವಸನೀಯತೆ ಮತ್ತು ಸಮಂಜಸತೆ ಕಡಿಮೆ. ಏಕೆಂದರೆ ಇಲ್ಲಿ ದಾಖಲೆಗಳು ಅಲಭ್ಯ, ಆದರೆ ಬರವಣಿಗೆ ಪರೀಕ್ಷೆಯಲ್ಲಿ ದಾಖಲೆ ಲಭ್ಯವಿರುತ್ತದೆ. ಇದು ವೈಯಕ್ತಿಕ ಪರೀಕ್ಷೆಯಾದ್ದರಿಂದ ಎಲ್ಲ ವಿದ್ಯಾರ್ಥಿಗಳನ್ನು ಪರೀಕ್ಷಿಸಲು ಹೆಚ್ಚಿನ ಕಾಲಾವಕಾಶಬೇಕು. ವ್ಯಕ್ತಿನಿಷ್ಠತೆಗೆ ಹೆಚ್ಚು ಅವಕಾಶವಿರುತ್ತದೆ.

ಮೌಖಿಕ ಪರೀಕ್ಷೆಗಳು ತಕ್ಷಣದಲ್ಲೇ ಮರುಪುಷ್ಟಯನ್ನು ಒದಗಿಸುತ್ತವೆ. ದೈನಂದಿನ ತರಗತಿಗಳಲ್ಲಿ ಮೌಖಿಕ ಪರೀಕ್ಷೆಯನ್ನೇ ಒಂದು ಮೌಲ್ಯಮಾಪನ ಸಾಧನವಾಗಿ ಬಳಸಬಹುದು. ಶಿಕ್ಷಕ ಮತ್ತು ವಿದ್ಯಾರ್ಥಿಗಳು ಏಕಕಾಲದಲ್ಲಿ ಸ್ವಯಂ ಮೌಲ್ಯಮಾಪನಗೊಳ್ಳುತ್ತಾರೆ. ದಾಖಲೆ ಲಭ್ಯತೆಯ ಕೊರತೆ ಇರುವುದರಿಂದ ಇಂದಿನ ಮುಂದುವರೆದ ಆಧುನಿಕ ತಂತ್ರಜ್ಞಾನವನ್ನು ಬಳಸಿ, ಮೌಖಿಕ ಪ್ರಶ್ನೆಗಳನ್ನು ಕೇಳುವಾಗ ಇದನ್ನು ಧ್ವನಿ ಮುದ್ರಿಸಿ, ಅಥವಾ ವೀಡಿಯೋ ಚಿತ್ರೀಕರಣ ಮಾಡುವುದರಿಂದ ಮೌಖಿಕ ದಾಖಲೆಗಳನ್ನು ಕಾಪಾಡಬಹುದು. ದಾಖಲೆಯ ಅಗತ್ಯತೆಯೇ ಅತಿ ಮುಖ್ಯವಾದುದು. ಇಲ್ಲಿ ಖರ್ಚು ಗೌಣ. ಅಲ್ಲದೆ ಉನ್ನತ ಶಿಕ್ಷಣದಲ್ಲಿ ವಿಚಾರ ಸಂಕಿರಣಗಳಲ್ಲಿ ಎಂ.ಫಿಲ್., ಪಿಎಚ್.ಡಿ ಗಳ ಪ್ರಾರಂಭ ಮತ್ತು

Digitised by Bharatavani, CIIL

ಮುಕ್ತಾಯಗಳಲ್ಲಿ ಈ ಪರೀಕ್ಷೆಯನ್ನು ಅತ್ಯಂತ ನಿಖರವಾದ ಪರೀಕ್ಷೆಯಾಗಿ ಬಳಸುವುದರಿಂದ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಳೆಯಲು ಸಾಧ್ಯವಾಗುತ್ತದೆ.

ಆದುದರಿಂದ ಮೌಖಿಕ ಪರೀಕ್ಷೆಗಳು ದಿನ ನಿತ್ಯ ಮತ್ತು ತತ್‌ಕ್ಷಣದಲ್ಲೇ ಸುಲಭವಾಗಿ ಪರೀಕ್ಷಿಸುವ ಉತ್ತಮ ಸಾಧನವಾಗಿವೆ. ಉಪಾಧ್ಯಾಯನಿಗೆ ಇದರ ಬಳಕೆ ಅನಿವಾರ್ಯ ಮತ್ತು ಅಗತ್ಯ.

ಶಾಲಾ ಸನ್ನಿವೇಶದಿಂದ ಹೊರಬಂದರೂ ದಿನನಿತ್ಯ ನಮಗೆ ಬೇಕಾದ ಮಾಹಿತಿಯನ್ನು ಇನ್ನೊಬ್ಬರಿಂದ ಪಡೆಯಲು, ಅರ್ಥ ಮಾಡಿಕೊಳ್ಳಲು ಈ ಪರೀಕ್ಷೆಯನ್ನು ಗೊತ್ತಿದ್ದೋ ಗೊತ್ತಿಲ್ಲದೆಯೋ ಬಳಸುತ್ತೇವೆ. ಉದಾಹರಣೆಗೆ ಎಲ್‌ಐಸಿ ಮಾಹಿತಿ, ಬ್ಯಾಂಕ್ ವಿಚಾರಗಳ ಬಗ್ಗೆ, ಸರ್ಕಾರಿ ನಿಯಮಗಳ ಬಗ್ಗೆ, ಆದಾಯ ತೆರಿಗೆ ಬಗ್ಗೆ, ವ್ಯಾಟ್ ತೆರಿಗೆ ಬಗ್ಗೆ ಹೀಗೆ ಅನೇಕ ಪ್ರಶ್ನೆಗಳನ್ನು ಸೂಕ್ತ ವ್ಯಕ್ತಿಗಳನ್ನು ಪ್ರಶ್ನಿಸುವುದರ ಮೂಲಕ ವಿಷಯ ಸಂಗ್ರಹಣೆಯನ್ನು ಮಾಡುತ್ತೇವೆ. ಆದ್ದರಿಂದ ಸರ್ವರಿಗೂ ಮೌಖಿಕ ಪರೀಕ್ಷೆಯ ಅರಿವಿನ ಅಗತ್ಯವಿದೆ.

ಮೌಖಿಕ ಪರೀಕ್ಷೆಗಳ ವಸ್ತುನಿಷ್ಠತೆ, ವಿಶ್ವಸನೀಯತೆ ಮತ್ತು ಸಮಂಜಸತೆಯನ್ನು ಕಾಪಾಡಲು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

1. ಕೇಳುವ ಪ್ರಶ್ನೆಗಳನ್ನು ಮುಂಚಿತವಾಗಿ ಯೋಜಿಸಿಕೊಳ್ಳಬೇಕು.
2. ಪ್ರಶ್ನೆಗಳಿಗೆ ಅಂಕಗಳನ್ನು ನಿರ್ಧರಿಸಿಕೊಳ್ಳಬೇಕು.
3. ಕೇಳುವ ಪ್ರಶ್ನೆಗಳು ಎಲ್ಲ ವಿದ್ಯಾರ್ಥಿಗಳಿಗೂ ಸಮಾನವಾದ ಕ್ಲಿಷ್ಟತೆಯನ್ನು ಹೊಂದಿರಬೇಕು.
4. ವ್ಯಕ್ತಿನಿಷ್ಠತೆಯನ್ನು ಹೋಗಲಾಡಿಸಲು ಇಬ್ಬರಿಗಿಂತ ಹೆಚ್ಚು ಪರೀಕ್ಷಕರನ್ನು ನೇಮಿಸಬೇಕು.
5. ಮೌಖಿಕ ಪರೀಕ್ಷೆ ಮುಗಿದ ತಕ್ಷಣವೇ ಅಂಕಗಳನ್ನು ತಿಳಿಸಬೇಕು. ಅನಗತ್ಯವಾಗಿ ವಿಳಂಬಮಾಡಬಾರದು.

–ಎನ್.ಎಸ್.ಸು

## ಮೌಲ್ಯಮಾಪನ – ಅರ್ಥ, ಉದ್ದೇಶಗಳು

ಶಿಕ್ಷಣ ವ್ಯವಸ್ಥೆಯು ಮುಖ್ಯವಾದ ನಾಲ್ಕು ಆಧಾರಗಳ ಮೇಲೆ ವಿನ್ಯಾಸಗೊಂಡಿದೆ. ಅವು, ಕ್ರಮವಾಗಿ,

1. ಶಿಕ್ಷಣದ ಗುರಿ ಮತ್ತು ಉದ್ದೇಶಗಳು
2. ಪಠ್ಯಕ್ರಮ
3. ಬೋಧನಾ – ಕಲಿಕಾ ಪ್ರಕ್ರಿಯೆ ಅಥವಾ ಪಠ್ಯಕ್ರಮ ವರ್ಗಾವಣೆ
4. ಮೌಲ್ಯಮಾಪನ

ಒಂದು ಶಾಲೆಯ ಮುಖ್ಯ ಕಾರ್ಯವೆಂದರೆ, ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲ ಮಾಡಿಕೊಡುವುದು ಮತ್ತು ಇದರಿಂದಾಗಿ ಅವರಲ್ಲಿ ಅಪೇಕ್ಷಿತ ವರ್ತನಾ ಬದಲಾವಣೆಯನ್ನು ಕಾಣುವುದು. ಇದನ್ನೇ ನಾವು ಶೈಕ್ಷಣಿಕ ಗುರಿ ಮತ್ತು ಉದ್ದೇಶಗಳಲ್ಲಿ ಹಾಗೂ ಬೋಧನಾ ಉದ್ದೇಶಗಳಲ್ಲಿ ಶೈಕ್ಷಣಿಕ ಪ್ರಕ್ರಿಯೆಯ ಪೂರ್ವಭಾವಿಯಾಗಿ ಕಾಣುತ್ತೇವೆ.

ಈ ಉದ್ದೇಶ ಸಾಧನೆಗಾಗಿ ಪಠ್ಯ ವಸ್ತುವು ವಿನ್ಯಾಸಗೊಳ್ಳುವುದು. ಹಾಗೂ ಅನೇಕ ವಿಷಯಗಳು ಅಂದರೆ ಆ ವಿಷಯಗಳನ್ನು ವಿದ್ಯಾರ್ಥಿಗಳು ಗ್ರಹಿಸಿ, ಅರ್ಥ ಮಾಡಿಕೊಂಡು ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡು, ಅದರ ಬಳಕೆಯನ್ನು ಇನ್ನಿತರ ಹೊಸ ಸಂದರ್ಭಗಳಲ್ಲಿ ಮಾಡಲು ಸಹಾಯವಾಗುವಂತಹ ವಿವಿಧ ವಿಷಯಗಳು – ಪಠ್ಯ ವಿಷಯವಾಗಿ ರೂಪಿತವಾಗುವುವು.

ಇವುಗಳನ್ನು ತರಗತಿಯ ಚಟುವಟಿಕೆಗಳಲ್ಲಿ ವರ್ಗಾಯಿಸುತ್ತಾ ಬೋಧನಾ – ಪ್ರಕ್ರಿಯೆಯಲ್ಲಿ ತೊಡಗುವ ಶಿಕ್ಷಕರು ವೈವಿಧ್ಯಮಯವಾದ ಬೋಧನಾ –ಕಲಿಕಾ ಸಂದರ್ಭಗಳನ್ನು ಸೃಷ್ಟಿಸುವರು. ಹೀಗೆ ಬೋಧನಾ–ಕಲಿಕಾ ಸನ್ನಿವೇಶದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಲ್ಲಿ ಕಲಿಕಾ ಫಲಗಳು ಸಹಜವಾಗಿ ಕಂಡುಬರುವುವು.

ಮೇಲೆ ಹೇಳಿದಂತೆ ದೊರಕುವ ಕಲಿಕಾಫಲಗಳೆಂಬ ಫಲಿತಾಂಶವನ್ನು ಪೂರ್ವಭಾವಿಯಾಗಿ ನಿರೂಪಿಸಿಕೊಂಡಂತಹ ಶೈಕ್ಷಣಿಕ ಗುರಿ, ಉದ್ದೇಶಗಳೇ ಅಲ್ಲದೇ, ಬೋಧನಾ ಉದ್ದೇಶಗಳೊಂದಿಗೆ ತುಲನೆ ಮಾಡಿ, ಪರೀಕ್ಷಿಸಲಾಗುವುದು; ವಿದ್ಯಾರ್ಥಿಗಳ ಸಾಧನೆಯ ಗುಣಮಟ್ಟವನ್ನು ನಿರ್ಧರಿಸಲಾಗುವುದು. ಇದು ಒಂದು ಪ್ರಕ್ರಿಯೆಯಾಗಿದ್ದು, ಇದನ್ನು ಮೌಲ್ಯಮಾಪನವೆಂದು ಗುರುತಿಸಲಾಗಿದೆ.

ಶಿಕ್ಷಣವೆಂಬುದು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗಾಗಿ ನಡೆಸುವ ಒಂದು ಉದ್ದೇಶ ಪೂರಿತವಾದ ಪ್ರಕ್ರಿಯೆ. ಆದ್ದರಿಂದ ಶಿಕ್ಷಣದ ಮೌಲ್ಯಮಾಪನವು ಸಹಾ ಅಷ್ಟೇ ಸಮಗ್ರವೂ, ನಿರಂತರವೂ ಆಗಿರಬೇಕಾದದ್ದು ಪ್ರಚಲಿತದಲ್ಲಿರುವ ಬೇಡಿಕೆ. ಇದಕ್ಕನುಗುಣವಾಗಿ, ಕಾಲದಿಂದ ಕಾಲಕ್ಕೆ ಮೌಲ್ಯಮಾಪನದ ವಿನ್ಯಾಸಗಳು ಬದಲಾಗುತ್ತಾ ಹೆಚ್ಚು ಹೆಚ್ಚು ಸುಧಾರಣೆಗೆ ಒಳಪಟ್ಟವು. ಶಿಕ್ಷಣದ ದೃಷ್ಟಿಯಿಂದ ಮೌಲ್ಯಮಾಪನದ ವ್ಯಾಖ್ಯಾನವು ಇಂತಿವೆ:

ಮೌಲ್ಯಮಾಪನವೆಂಬುದು ಒಂದು ಕ್ರಮಬದ್ಧವಾದ, ನಿರಂತರವಾದ ಸಮಗ್ರವಾದ ಪ್ರಕ್ರಿಯೆಯಾಗಿದ್ದು

1. ಪೂರ್ವಭಾವಿಯಾಗಿ ಗುರುತಿಸಿ, ನಿರ್ಧರಿಸಲ್ಪಟ್ಟ ಶೈಕ್ಷಣಿಕ ಉದ್ದೇಶಗಳು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೆ?
2. ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಒದಗಿಸಲಾದ ಕಲಿಕಾ ಅನುಭವಗಳು ಎಷ್ಟು ಪರಿಣಾಮಕಾರಿಯಾಗಿದ್ದವು?
3. ಶೈಕ್ಷಣಿಕ ಗುರಿಗಳನ್ನು ತಲುಪುವಲ್ಲಿ ಪಡೆದ ಸಾಫಲ್ಯತೆಯ ಮಟ್ಟವೆಷ್ಟು?

ಎಂಬ ಅಂಶಗಳನ್ನು ನಿರ್ಧರಿಸುವ ಕೆಲಸವನ್ನು ಮಾಡುತ್ತದೆ.

ಮೇಲೆ ಹೇಳಿದ ವ್ಯಾಖ್ಯಾನವನ್ನು ಆಧರಿಸಿ, ಮೌಲ್ಯಮಾಪನದ ಲಕ್ಷಣಗಳನ್ನು ಈ ಕೆಳಕಂಡಂತೆ ಪಟ್ಟಿಮಾಡಬಹುದು;

1. ಮೌಲ್ಯಮಾಪನವು ಒಂದು ಕ್ರಮಬದ್ಧವಾದ ಪ್ರಕ್ರಿಯೆಯಾಗಿದ್ದು, ವೀಕ್ಷಣೆಗೆ ದಕ್ಕಬಲ್ಲ, ಅಳೆಯಲು ಸಾಧ್ಯವಾಗಬಲ್ಲ ಸಾಕ್ಷಿ, ಇದು ಆಧಾರ ಮತ್ತು ಪುರಾವೆಗಳನ್ನು ಅವಲಂಬಿಸುತ್ತದೆ.
2. ಮೌಲ್ಯಮಾಪನವು ನಿರಂತರವಾಗಿ ಜಾರಿಯಲ್ಲಿರುವ ಪ್ರಕ್ರಿಯೆ. ಆದ್ದರಿಂದ ಬೋಧನಾ ಕಲಿಕಾ ಪ್ರಕ್ರಿಯೆ ಸಂಪೂರ್ಣವಾಗಿ ಮುಗಿದ ಮೇಲೆ ಮಾತ್ರ ನಡೆಯದೇ, ಶಿಕ್ಷಣದ ಪ್ರತಿ ಹಂತದಲ್ಲೂ ಜೊತೆಜೊತೆಯಾಗಿಯೇ ಸಾಗುವುದು.


Digitised by Bharatavani, CIIL

3. ಮೌಲ್ಯಮಾಪನವು ಶಿಕ್ಷಣದ ಗುರಿಯಾದ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯನ್ನು ಪರೀಕ್ಷಿಸುವುದು. ಅಂದರೆ ವಿದ್ಯಾರ್ಥಿಗಳ ಜ್ಞಾನವಲಯದ ಬೆಳವಣಿಗೆಯನ್ನೇ ಅಲ್ಲದೆ, ಅವರ ಸಂವೇಗಾತ್ಮಕ ಮತ್ತು ಮನೋಗತಾರಾತ್ಮಕ ಬೆಳವಣಿಗೆಯನ್ನೂ ಪರೀಕ್ಷಿಸುವುದು. ಆದ್ದರಿಂದ ವಿದ್ಯಾರ್ಥಿಗಳು ಕಲಿಕಾ ವಿಷಯಗಳಲ್ಲಿ ಏನನ್ನು ಸಾಧಿಸಿದರು ಎಂಬುದರ ಜೊತೆಯಲ್ಲಿಯೇ, ಅವರ ಧೋರಣೆ, ಆಸಕ್ತಿ ಮತ್ತು ಆದರ್ಶಗಳು, ಯೋಚಿಸುವ ಧಾಟಿ, ಹವ್ಯಾಸಗಳು, ಓದುವ ಅಭ್ಯಾಸ, ಅವರಲ್ಲಿನ ಹೊಂದಾಣಿಕಾ ಸಾಮರ್ಥ್ಯ– ಇವೆಲ್ಲವುಗಳನ್ನು ಅವಲೋಕಿಸಿ ಪರೀಕ್ಷಿಸುವುದು.

4. ಪಠ್ಯವಸ್ತುವಿನ ವರ್ಗಾವಣೆಯಲ್ಲಿ, ತರಗತಿಯ ಬೋಧನಾ ಪ್ರಕ್ರಿಯೆಯ ಪಾತ್ರದ್ದೇ ಸಿಂಹಪಾಲು. ಈ ಪ್ರಕ್ರಿಯೆಯು ಶೈಕ್ಷಣಿಕ ಗುರಿ, ಉದ್ದೇಶ ಮತ್ತು ಬೋಧನಾ ಉದ್ದೇಶಗಳ ಮುಂಚೂಣೆಯಲ್ಲಿಯೇ ಸಾಗಬೇಕು. ಇದರ ಮೇಲ್ವಿಚಾರಣೆಯು ಮೌಲ್ಯಮಾಪನದ ಇನ್ನೊಂದು ಮುಖ್ಯ ಲಕ್ಷಣ.

5. ಮೌಲ್ಯಮಾಪನವು ಸಮಗ್ರವಾದ ಪ್ರಕ್ರಿಯೆಯಾದ್ದರಿಂದ, ಅನೇಕ ರೀತಿಯ ಪರೀಕ್ಷಾ ಸಾಧನಗಳನ್ನು, ತಂತ್ರಗಳನ್ನು ಬಳಸುತ್ತದೆ. ಉದಾಹರಣೆಗೆ, ವಿಶ್ಲೇಷಣೆ, ಸಂಶ್ಲೇಷಣೆ, ಅನ್ವೇಷಣೆ, ಪ್ರಾಯೋಗಿಕ, ಇತ್ಯಾದಿ. ಅಷ್ಟೇ ಅಲ್ಲದೆ ವಿವಿಧ ರೀತಿಯ ಪರೀಕ್ಷೆಗಳು, ಉದಾಹರಣೆಗೆ ಕಿರುಪರೀಕ್ಷೆ, ಘಟಕ ಪರೀಕ್ಷೆ, ಅರೆವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳೆಂಬ ಸಾಧನಾ ಪರೀಕ್ಷೆಗಳು, ಪ್ರಬಂಧ ಮಾದರಿ, ವಸ್ತುನಿಷ್ಠ ಮಾದರಿ, ನಿಕಷ ಪರೀಕ್ಷೆಗಳು, ಪರಿಮಾಣಾತ್ಮಕ ಮತ್ತು ಗುಣಾತ್ಮಕ ಪರೀಕ್ಷೆಗಳು, ರೂಪಣಾತ್ಮಕ ಮತ್ತು ಸಂಕಲನಾತ್ಮಕ ಪರೀಕ್ಷೆಗಳು. ಹಾಗೆಯೇ, ವಿಶೇಷ ತಂತ್ರಗಳಾದ, ನಿರ್ಬಂಧಿತ ಅವಲೋಕನ ಮತ್ತು ಪ್ರಕ್ಷೇಪಣಾ ತಂತ್ರ ಇತ್ಯಾದಿ; ಇವುಗಳೂ ಬಳಸಲ್ಪಡುವುವು.

6. ಬೋಧನೆ ಮತ್ತು ಕಲಿಕೆ–ಇವೆರಡರಲ್ಲಿ 'ಕಲಿಕೆ' ಮತ್ತು 'ಕಲಿಕಾರ್ಥಿಗಳು' ಅತೀ ಮುಖ್ಯವಾದ ಭಾಗವೆಂದು ಮೌಲ್ಯಮಾಪನವು ಪರಿಗಣಿಸುವುದು. ಒಂದು ವೇಳೆ ಬೋಧನೆ ಇದ್ದು ಕಲಿಕೆ ಆಗಿಲ್ಲವೆಂದಾದಲ್ಲಿ ಅಂತಹ ಬೋಧನೆಗೆ ಯಾವ ಮೌಲ್ಯವೂ ಇರುವುದಿಲ್ಲ. ಆದ್ದರಿಂದ ಕಲಿಕೆ ಉಂಟಾಗುವಂತೆ ಬೋಧನಾ ವಿಧಾನವನ್ನು ಅನಿವಾರ್ಯವಾಗಿ ಬದಲಾಯಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ವಿದ್ಯಾರ್ಥಿಗಳ ಕಲಿಕೆಯನ್ನು ನೈದಾನ ಪರೀಕ್ಷೆಗೊಳಪಡಿಸಿ, ಅವರ ಕಲಿಕಾ ಸಮಸ್ಯೆಯನ್ನು ನಿಖರವಾಗಿ ಕಂಡುಹಿಡಿದು ಆ ದೋಷದ ಪರಿಹಾರಕ್ಕಾಗಿ ಪರಿಹಾರ ಬೋಧನೆಯನ್ನು ಮಾಡುತ್ತಾ ಕಲಿಕಾ ದೋಷಗಳನ್ನು ನಿವಾರಿಸುವವರೆಗೆ ಮೌಲ್ಯಮಾಪನವು ತನ್ನ ಹಸ್ತವನ್ನು ಚಾಚುತ್ತದೆ.

7. ಮೌಲ್ಯಮಾಪನವು ಎಲ್ಲ ಬೋಧನೆಗಳನ್ನು ಮತ್ತು ತರಬೇತಿಯನ್ನು ಪರೀಕ್ಷಿಸುವ ಅವಿಭಾಜ್ಯ ಅಂಗವಾಗಿದೆ.

8. ಮೌಲ್ಯಮಾಪನ ಯಶಸ್ವೀ ಕಾರ್ಯಾಚರಣೆಗೆ ಶಿಕ್ಷಕ, ವಿದ್ಯಾರ್ಥಿ ಮತ್ತು ಪೋಷಕರ ಸಹಕಾರದ ಅಗತ್ಯವಿದೆ.

9. ಶೈಕ್ಷಣಿಕ ಗುರಿ, ಉದ್ದೇಶಗಳು, ಪಠ್ಯಕ್ರಮದ ವಿನ್ಯಾಸ, ಪಠ್ಯಸೂಚಿ, ಪಠ್ಯಕ್ರಮದ ವರ್ಗಾವಣೆ ಮತ್ತು ಬೋಧನಾ–ಕಲಿಕಾ ಪ್ರಕ್ರಿಯೆ ಇವೆಲ್ಲವುಗಳನ್ನು ಒಂದು ಸಾಮಾನ್ಯ ಪದತಲದಿಂದ ವೀಕ್ಷಿಸಿ, ಅವುಗಳ ಮೌಲ್ಯ ನಿರ್ಧರಿಸುವ ಪ್ರಕ್ರಿಯೆಯೇ ಮೌಲ್ಯಮಾಪನ.

ಮೌಲ್ಯಮಾಪನವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದನ್ನೇ ತನ್ನ ಮುಖ್ಯ ಉದ್ದೇಶಗಳನ್ನಾಗಿ ಮಾಡಿಕೊಂಡಿದೆ ಮತ್ತು ಇದರಿಂದಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ಅತಿ ಮುಖ್ಯವೆನಿಸುತ್ತದೆ.

- ವಿದ್ಯಾರ್ಥಿಗಳ ಬೆಳವಣಿಗೆಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಮತ್ತು ಇತರ ಬಲಾಬಲಗಳ ಬಗ್ಗೆ, ಅವರ ದೋಷ ಮತ್ತು ಗುಣಗಳ ಬಗ್ಗೆ ನಿಖರವಾಗಿ ತಿಳಿಸಿಕೊಡುತ್ತದೆ.
- ಕರಾರುವಕ್ಕಾಗಿ ಎಲ್ಲಿ ಪರಿಹಾರೋಪಾಯಗಳ ಅವಶ್ಯಕತೆ ಇದೆ ಎಂದು ಗುರುತಿಸುವುದು.
- ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಸೂಚಿ, ಇವುಗಳಲ್ಲಿ ಸೂಕ್ತವಾದ ಮಾರ್ಪಾಡನ್ನು ತರಲು ಸಹಾಯಮಾಡುವುದು.
- ವ್ಯಕ್ತಿಭಿನ್ನತೆಯ ಬೇಡಿಕೆಯನ್ನು ಪೂರೈಸಲು ಮಾರ್ಗದರ್ಶನ ನೀಯುವುದು.




Digitised by Bharatavani, CIIL

- ಉತ್ತಮ ಕಲಿಕೆಗಾಗಿ ವಿದ್ಯಾರ್ಥಿಗಳನ್ನು ಅಭಿಪ್ರೇರಿಸುವುದು.
- ಶಿಕ್ಷಕರ ಪರಿಣಾಮಕಾರಿತ್ವವನ್ನು, ದಕ್ಷತೆಯನ್ನು ಖಚಿತಪಡಿಸುವುದು.
- ಬೋಧನಾ ಪ್ರಕ್ರಿಯೆಯ ಸುಧಾರಣೆಗೆ ಕಾರಣವಾಗುವುದು.
- ವಿದ್ಯಾರ್ಥಿಗಳಲ್ಲಿ ಈಗಾಗಲೇ ಇರುವ ಧೋರಣೆ, ಹವ್ಯಾಸ, ಪ್ರತಿಭೆ, ಸಾಮರ್ಥ್ಯ–ಇವುಗಳನ್ನು ಗುರುತಿಸುವುದೇ ಅಲ್ಲದೆ, ಮುಂದೆ ಅವುಗಳಲ್ಲಿ ಆಗಬೇಕಾದ ಧನಾತ್ಮಕ ಹೆಚ್ಚಳವನ್ನು ಕುರಿತು ಸೂಚನೆ ನೀಡುವುದು.
- ವಿದ್ಯಾರ್ಥಿಗಳಿಗೆ ತಮ್ಮ ಕಲಿಕಾ ಮಟ್ಟದ ಬಗ್ಗೆ ಮರುಸೂಚನೆ ನೀಡುವುದರ ಜೊತೆಗೇ ಶಿಕ್ಷಕರಿಗೆ ತಮ್ಮ ಬೋಧನಾ ಮಟ್ಟದ ಬಗ್ಗೆಯೂ ಮರುಸೂಚನೆಯನ್ನು ನೀಡುವುದು.

ಒಟ್ಟಾರೆ ಮೌಲ್ಯಮಾಪನಾ ಕಾರ್ಯವು ತೃಪ್ತಿಕರವಾಗಿ ನಡೆದಿದೆಯೆಂದು ಗೋಚರಿಸಬೇಕಾದರೆ, ಅದು ಈ ಕೆಳಗಿನ ಅಂಶಗಳೆಡೆಗೆ ಗಮನವನ್ನು ನೀಡಿರಬೇಕು.

1. ಪಠ್ಯವಸ್ತುವಿನಲ್ಲಿ ಅಂತಸ್ಥವಾಗೇ ಇರಬೇಕಾದ ಸ್ವಾತಂತ್ರ್ಯ.
2. ಕೇವಲ ಸ್ಮರಣೆಯಾಧಾರಿತ ಕಲಿಕೆಯ ಪರೀಕ್ಷೆಗಳಿಗೂ ಮೀರಿದ ವ್ಯಾಪ್ತಿಯನ್ನು ಹೊಂದಿರುವುದು.
3. ಪೂರ್ವಭಾವಿಯಾಗಿ ನಿಗದಿಪಡಿಸಿಕೊಂಡ ಉದ್ದೇಶಗಳು ಸಾಧಿಸಲ್ಪಟ್ಟಿರುವುದಕ್ಕೆ ಸಾಕಷ್ಟು ದಾಖಲೆ, ಪುರಾವೆಗಳು ಇರಬೇಕು.
4. ವಿದ್ಯಾರ್ಥಿಗಳ ಗುಣದೋಷಗಳನ್ನು ನಿಖರವಾಗಿ ಗುರುತಿಸುವಂತಿರಬೇಕು.

–ಸಿ.ಎನ್.ಸು.

## ಮೌಲ್ಯಮಾಪನದ ಕಾರ್ಯಗಳು

ಬೋಧನಾ ಪ್ರಕ್ರಿಯೆಯಲ್ಲಿ ಮೌಲ್ಯಮಾಪನದ ಪಾತ್ರ ಮಹತ್ವವಾದುದು. ಬೋಧನೆಯ ಮತ್ತು ಕಲಿಕೆಯ ಪರಿಣಾಮಕತೆಯನ್ನು ಅಳತೆ ಮಾಡಲು, ನಿರ್ಧರಿಸಲು ಇದು ಸಹಾಯಕ. ಅಲ್ಲದೇ ಬೋಧನಾ ಶೈಲಿಯಲ್ಲಿ, ಕಲಿಕೆಯಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆ ಮತ್ತು ಸುಧಾರಣೆಗಳನ್ನು ಕುರಿತಂತೆ ಮಾರ್ಗದರ್ಶನವನ್ನೂ ಮೌಲ್ಯಮಾಪನದಿಂದ ಪಡೆಯಬಹುದು. ಆದ್ದರಿಂದ ಬೋಧನಾ ಪ್ರಕ್ರಿಯೆ ಮೌಲ್ಯಮಾಪನದಿಂದ ಆರಂಭವಾಗಿ ಮೌಲ್ಯಮಾಪನದಿಂದಲೇ ಮುಕ್ತಾಯಗೊಳ್ಳುತ್ತದೆ. "ಬೋಧನಾ ವಿಷಯದ ಬಗ್ಗೆ ವಿದ್ಯಾರ್ಥಿಗಳು ಹೊಂದಿರಬಹುದಾದ ಜ್ಞಾನವೇನು? ಬೋಧನಾ ಉದ್ದೇಶಗಳು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೆ? ಎಂಬುದನ್ನು ನಿರ್ಧರಿಸುವ ಒಂದು ವ್ಯವಸ್ಥಿತ ಪ್ರಕ್ರಿಯೆಯೇ ಮೌಲ್ಯಮಾಪನ". ಪರೀಕ್ಷೆಗಳನ್ನು ನೀಡಿ ಅಂಕಗಳನ್ನು ನಿರ್ಧರಿಸುವುದಷ್ಟೇ ಮೌಲ್ಯಮಾಪನವಲ್ಲ. ಬದಲಾಗಿ ಮೌಲ್ಯಮಾಪನದ ಸಾಧನಗಳೆಂದಷ್ಟೇ ಹೇಳಬಹುದು.

## ಮೌಲ್ಯಮಾಪನದ ಪರಿಕಲ್ಪನೆ

ಇಂದಿನ ವಿದ್ಯಾರ್ಥಿಗಳು ಪರೀಕ್ಷೆಯನ್ನೇ ಕೇಂದ್ರವಾಗಿರಿಸಿಕೊಂಡು ಕಲಿಯುತ್ತಾರೆ. ಶಿಕ್ಷಕರೂ ಅದಕ್ಕೆ ಹೊರತಾಗಿಲ್ಲ. ವಿದ್ಯಾರ್ಥಿಗಳಲ್ಲಿ ಅನೇಕ ಸಮಸ್ಯೆಗಳು, ಸಂಶಯಗಳು, ಅಪೂರ್ಣರೀತಿಯ ಸಿದ್ಧಾಂತಗಳು ಪರೀಕ್ಷಾ ವ್ಯವಸ್ಥೆಯನ್ನೇ ಅವಲಂಬಿಸಿರುತ್ತವೆ. ಸ್ವತಂತ್ರ ಭಾರತದ ಎಲ್ಲ ಶೈಕ್ಷಣಿಕ ಆಯೋಗಗಳು ಪರೀಕ್ಷೆಯ ಗುಣಾವಗುಣಗಳನ್ನು ಪರಿಶೀಲಿಸಿ ಮೌಲ್ಯಮಾಪನದ ಪರಿಕಲ್ಪನೆಗಳನ್ನು ರಚಿಸಿವೆ.

ಮೌಲ್ಯಮಾಪನದಲ್ಲಿ ಪರೀಕ್ಷೆ ಮತ್ತು ಅಳತೆಗಳೆಂಬ ಎರಡು ವರ್ಗಗಳಿವೆ. "ಪರೀಕ್ಷೆ" ಎಂಬುದು ಯಾವುದೇ ಸಾಧನೆ ಮತ್ತು ಒಂದು ನಿರ್ದಿಷ್ಟ ಸ್ಥಳ ಅಥವಾ ಅವಧಿಗಳಲ್ಲಿ ಸೂಕ್ತ ಪ್ರಶ್ನೆಗಳಿಗೆ ಉತ್ತರಿಸುವಿಕೆ ಮತ್ತು ಕಾರ್ಯನಿರ್ವಹಿಸುವಿಕೆಯನ್ನು ನಿರೀಕ್ಷಿಸುತ್ತದೆ. "ಅಳತೆ"ಯು ಪರೀಕ್ಷೆಯ ನಂತರ ಪ್ರತಿಫಲಗಳನ್ನು ಪಡೆಯುವ ಸಲುವಾಗಿ ಮನೋವೈಜ್ಞಾನಿಕ ಅಂಶಗಳು ಪರೀಕ್ಷೆಯಲ್ಲಿ ಗುಣಾತ್ಮಕವಾದುದನ್ನು ಪರಿಮಾಣಾತ್ಮಕವಾಗಿ ಭೌತಿಕ ರೂಪದಲ್ಲಿ ಸ್ಪಷ್ಟವಾಗಿ ಆದೇಶಿಸುವ ಅಥವಾ ನೀಡುವ ಗಣಿತದ ಅಂಕಗಳೇ ಆಗಿರುತ್ತವೆ." ಪರೀಕ್ಷೆಗಳಿಲ್ಲದೆ ಅಳತೆ ಸಾಧ್ಯವಾಗುವುದಿಲ್ಲ. ಪರೀಕ್ಷೆಗೆ ಸ್ಥಾನಮಾನ ಕೊಡುವುದೇ ಅಂಕಗಳು. ಪರೀಕ್ಷೆಯಲ್ಲಿನ ವರ್ತನೆಗಳು ಮತ್ತು ಅಂಶಗಳು ಗುಣಾತ್ಮಕವಾಗಿರುತ್ತವೆ. ಇವುಗಳನ್ನು ಪರಿಮಾಣಾತ್ಮಕವಾಗಿ ವ್ಯಕ್ತಪಡಿಸುವುದೇ ಅಳತೆ.

## ಮೌಲ್ಯಮಾಪನದ ಆಧುನಿಕ ಪರಿಕಲ್ಪನೆ

ಶಾಲೆಯ ಮುಖ್ಯಕಾರ್ಯ ಕಲಿಕೆಯನ್ನುಂಟುಮಾಡುವುದು. ವಿದ್ಯಾರ್ಥಿಗಳಲ್ಲಿ ವರ್ತನಾತ್ಮಕ ಬದಲಾವಣೆಗಳನ್ನು ಪ್ರತಿನಿಧಿಸುವ ಬೋಧನಾ ಉದ್ದೇಶಗಳ ಮೂಲಕ ಸಾಮಾನ್ಯವಾಗಿ ಕಲಿಕೆಯುಂಟಾಗುವುದನ್ನು ನಿರೂಪಿಸಲಾಗುತ್ತದೆ. ಶೈಕ್ಷಣಿಕ ಮೌಲ್ಯಮಾಪನದ ಆಧುನಿಕ ಪರಿಕಲ್ಪನೆಯನ್ನು ಕೆಳಗಿನ ರೇಖಾ ಚಿತ್ರದ ಮೂಲಕ ನಿರೂಪಿಸಬಹುದು.




ಉದ್ದೇಶಗಳು, ವಿಷಯವಸ್ತು, ಕಲಿಕಾನುಭವಗಳು ಮತ್ತು ಮೌಲ್ಯಮಾಪನ ಕ್ರಮಗಳ ನಡುವಣ ಅಂತರ ಸಂಬಂಧವು ತರಗತಿ ಶಿಕ್ಷಕರಿಂದ ಉಪಯೋಗಿಸಿದ ಬೋಧನಾ ಕಲಿಕಾ ಪ್ರಕ್ರಿಯೆ ಮತ್ತು ಮೌಲ್ಯಮಾಪನ ಕ್ರಮಗಳನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವ ಒಂದು ಪ್ರಕ್ರಿಯೆಯಾಗಿದೆ ಎಂಬುದನ್ನು ರೇಖಾಚಿತ್ರ ಸ್ಪಷ್ಟಪಡಿಸುತ್ತದೆ.

## ಮೌಲ್ಯಮಾಪನದ ಕಾರ್ಯಗಳು

ಮೌಲ್ಯಮಾಪನ ಪ್ರಕ್ರಿಯೆಯ ಪ್ರಮುಖ ಕಾರ್ಯಗಳು:

**ದೋಷ ಪತ್ತೆ ಹಚ್ಚುವಿಕೆ :** ಒಬ್ಬ ಬೋಧಕ ತಾನು ಬೋಧನೆ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿ ಯಾವ ಹಂತದ ಕಲಿಕೆಯಲ್ಲಿ ದೃಢತೆ ಹೊಂದಿದ್ದಾನೆ. ಯಾವ ಹಂತದ ಕಲಿಕೆಯಲ್ಲಿ ನ್ಯೂನತೆ ಹೊಂದಿದ್ದಾನೆ ಎಂಬುದನ್ನು ಪತ್ತೆ ಹಚ್ಚಿ ಪರಿಹಾರೋಪಾಯಗಳನ್ನು ಒದಗಿಸಿಕೊಡುವುದು.

**ರೂಪಾಂತರಿಸುವಿಕೆ :** ಮೌಲ್ಯಮಾಪನ ಪ್ರಕ್ರಿಯೆಯಿಂದಾಗಿ ಪಠ್ಯಕ್ರಮ, ಪಠ್ಯಪುಸ್ತಕದಲ್ಲಿನ ವಿಷಯಗಳನ್ನು ಅವಶ್ಯಕತೆಗನುಗುಣವಾಗಿ ಬದಲಾವಣೆ ಮಾಡಿಕೊಳ್ಳುವುದು.

**ಭವಿಷ್ಯೋಕ್ತಿ :** ಮೌಲ್ಯಮಾಪನ ಕ್ರಿಯೆಯು ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಮನೋವೃತ್ತಿ, ಹವ್ಯಾಸಗಳು, ಕೈಚಳಕ, ಕೌಶಲ,


Digitised by Bharatavani, CIIL

ಪ್ರಶಂಸೆ ಮತ್ತು ತಿಳುವಳಿಕೆಗಳಂತಹ ಸಾಮರ್ಥ್ಯಗಳನ್ನು ಹೊರಹಾಕುವುದು.

ಉದಾ : ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆಗಳು (NTSE)

**ಆಯ್ಕೆ ಮಾಡಿಕೊಳ್ಳುವಿಕೆ :** ಸರಿಯಾದ ವ್ಯಕ್ತಿಯನ್ನು ನಿರ್ದಿಷ್ಟ ವೃತ್ತಿಗೆ ಆಯ್ಕೆ ಮಾಡುವುದು.

ಉದಾ : ಬಹಳಷ್ಟು ಕೋರ್ಸ್‌ಗಳಿಗೆ ನಡೆಯುವ ಅರ್ಹತಾ ಪರೀಕ್ಷೆಗಳು.

**ಅಭಿಪ್ರೇರಣೆ :** ವಿದ್ಯಾರ್ಥಿಗಳು ತಮ್ಮ ಗುರಿ ಮತ್ತು ಉದ್ದೇಶಗಳನ್ನು ತಲುಪಲು ಸಹಾಯಕವಾಗುವ ರೀತಿಯಲ್ಲಿ ಪ್ರೇರೇಪಿಸುವುದು.

**ಬೋಧನೆ :** ಬೋಧನಾ ಪ್ರಕ್ರಿಯೆಯ ಮೂಲಕ ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸುವುದು. ನಿರ್ದೇಶನ ಮತ್ತು ಸೂಚನೆಗಳನ್ನು ಉತ್ತಮಪಡಿಸುವುದರ ಜೊತೆಗೆ ಸೂಕ್ತ ತಂತ್ರ, ಸಲಕರಣೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ತಮ ಬೋಧನೆ ಕೈಗೊಳ್ಳಬಹುದು.

**ಮಾರ್ಗದರ್ಶನ**

- ವಿದ್ಯಾರ್ಥಿಗಳು ಸ್ವಂತ ನಿರ್ಧಾರವನ್ನು ಕೈಗೊಂಡು ಭವಿಷ್ಯದ ಜೀವನ ರೂಪಿಸಿಕೊಳ್ಳಲು ಸಹಾಯಕವಾಗುವ ರೀತಿಯಲ್ಲಿ ಮಾರ್ಗದರ್ಶನ ನೀಡುವುದು.
- ವಿದ್ಯಾರ್ಥಿಗಳು ತಮ್ಮ ಕಲಿಕಾ ಸಾಮರ್ಥ್ಯವನ್ನು ಅರಿಯುವಂತೆ ಮಾಡುವುದು.

ವಿದ್ಯಾರ್ಥಿಯು ವೈಯಕ್ತಿಕವಾಗಿ ಬೆಳೆಯಲು ಮತ್ತು ವಿಕಾಸ ಹೊಂದಲು ಮಾರ್ಗದರ್ಶನ ನೀಡುವುದು.

- ವಿದ್ಯಾರ್ಥಿಗಳ ವೈಯಕ್ತಿಕ ಮತ್ತು ಸಾಮೂಹಿಕ ಅವಶ್ಯಕತೆಗಳಿಗನುಗುಣವಾಗಿ ಮಾರ್ಗದರ್ಶನ ನೀಡುವುದು.

**ಪರೀಕ್ಷಣ**

- ಶಿಕ್ಷಕ ತಾನು ಒದಗಿಸಿಕೊಟ್ಟ ಕಲಿಕಾನುಭವಗಳ ಮಟ್ಟವನ್ನು ಪರೀಕ್ಷಿಸಿಕೊಳ್ಳುವುದು.
- ಬೋಧನೆಯ ಪರಿಣಾಮಕಾರತ್ವದ ಪರೀಕ್ಷೆ
- ತರಗತಿಯಲ್ಲಿ ಕೈಗೊಳ್ಳಲಾದ ಕಲಿಕಾ ಚಟುವಟಿಕೆಗಳ ಪರಿಣಾಮಕಾರತ್ವವನ್ನು ಪರೀಕ್ಷಿಸುವುದು.
- ಸಮಗ್ರ ಮೌಲ್ಯಮಾಪನ ಕೈಗೊಳ್ಳುವುದು.

**ಶ್ರೇಣಿ ನಿರ್ಧಾರ**

ವಿದ್ಯಾರ್ಥಿಗಳ ಕಲಿಕಾಮಟ್ಟವನ್ನು ಪರೀಕ್ಷಿಸಿ ಫಲಿತಾಂಶವನ್ನು ಶ್ರೇಣಿಗಳನ್ನು ನೀಡುವ ಮೂಲಕ ನಿರ್ಧರಿಸುವುದು.

**X. ಪ್ರತಿ ಪುಷ್ಟೀಕರಣ**

- ಉಪಾಧ್ಯಾಯ ತನ್ನ ಬೋಧನೆಯನ್ನು ಇನ್ನಷ್ಟು ಉತ್ತಮಪಡಿಸಿಕೊಳ್ಳಲು ಅನುಕೂಲವಾಗುವಂತೆ ಪ್ರತಿಪುಷ್ಟೀಕರಣ ನೀಡುವುದು.
- ವಿದ್ಯಾರ್ಥಿಗಳು ತಮ್ಮ ಕಲಿಕಾ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಲು ಪ್ರತಿಪುಷ್ಟೀಕರಣ ನೀಡುವುದು.

**ಮೌಲ್ಯಮಾಪನದ ವಿಧಗಳು**

1. ಸಂಕಲನಾತ್ಮಕ ಮೌಲ್ಯಮಾಪನ : ಶಿಕ್ಷಕರು ವರ್ಷ ಪೂರ್ತಿ ಬೋಧನಾ ಕಾರ್ಯ ಕೈಗೊಂಡು ವರ್ಷದ ಅಂತ್ಯದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ವೈಜ್ಞಾನಿಕವಾಗಿ ಬೆಲೆಕಟ್ಟುವ ಸರಳ ಕ್ರಮವೇ ಸಂಕಲನಾತ್ಮಕ ಮೌಲ್ಯಮಾಪನ.
2. ಸಮಗ್ರ ಅಥವಾ ವ್ಯಾಪಕ ಮೌಲ್ಯಮಾಪನ : ಶೈಕ್ಷಣಿಕ ವರ್ಷವಿಡೀ ಬೋಧನೆ – ಕಲಿಕೆ ರಚನಾತ್ಮಕವಾಗಿ ಸಾಗುವ ಕ್ರಮ.
3. ರಚನಾತ್ಮಕ / ರೂಪಣಾತ್ಮಕ / ವಿಕಾಸಾತ್ಮಕ ಮೌಲ್ಯಮಾಪನ :– ಒಂದು ನಿರ್ದಿಷ್ಟ ವಿಷಯದಲ್ಲಿ ಮಕ್ಕಳು ಯಾವ ಸ್ಥಾನದಲ್ಲಿದ್ದಾರೆಂಬುದನ್ನು ವೈಜ್ಞಾನಿಕವಾಗಿ ಗುರುತಿಸುವ ಕ್ರಮ.
4. ನೈದಾನಿಕ ಮೌಲ್ಯಮಾಪನ : ಮಕ್ಕಳ ಕಲಿಕೆಯ ಹಲವಾರು ದೋಷಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿವಿಧ ತಂತ್ರಗಳ ಮೂಲಕ ಗುರ್ತಿಸುವ ಕ್ರಮ.

**ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಶಿಕ್ಷಣ ಆಯೋಗಗಳ ಶಿಫಾರಸ್ಸುಗಳು**

**I. ವಿಶ್ವವಿದ್ಯಾನಿಲಯ ಆಯೋಗವು 1948ರಲ್ಲಿ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ನೀಡಿರುವ ಶಿಫಾರಸ್ಸುಗಳು :**

1. ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ ತರುವ ಉದ್ದೇಶದಿಂದ 3 ಸದಸ್ಯರುಳ್ಳ ಪರೀಕ್ಷಾ ಮಂಡಳಿಯನ್ನು ನೇಮಕ ಮಾಡಬೇಕು.
2. ಪರೀಕ್ಷಾ ಮಂಡಳಿಯು ಸೂಕ್ತ ಪಠ್ಯಕ್ರಮದ ರಚನೆಗೆ, ವಸ್ತುನಿಷ್ಠ ಪ್ರಶ್ನೆಗಳ / ಮೌಲ್ಯಮಾಪನದ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಗುಣಾತ್ಮಕ ಸುಧಾರಣೆಯನ್ನುಂಟು ಮಾಡುವುದು.
3. ಪ್ರತಿ ಘಟಕ ಬೋಧನೆಯ ಕಡೆಯಲ್ಲಿ ಕಡ್ಡಾಯವಾಗಿ ಘಟಕ ಪರೀಕ್ಷೆಗಳನ್ನು ಕೈಗೊಳ್ಳಬೇಕು.
4. ಆಂತರಿಕ ಮೌಲ್ಯಮಾಪನಕ್ಕೆ ಶೇ. 33ರಷ್ಟು ಅಂಕಗಳನ್ನು ನಿಗದಿಪಡಿಸಬೇಕು ಮತ್ತು ಕೃಪಾಂಕಗಳನ್ನು ನೀಡಬಾರದು.
5. ಲಿಖಿತ ಪರೀಕ್ಷೆಗಳಲ್ಲಿ ಸಮಂಜಸತೆ ಮತ್ತು ವಿಶ್ವಸನೀಯತೆಗಳನ್ನು ಕಾಪಾಡಬೇಕು.
6. ಬೋಧನಾನುಭವವುಳ್ಳ ಬೋಧಕರಷ್ಟೇ ವಮೌಲ್ಯಮಾಪನ ಮಾಡಬೇಕು.

**II. ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ 1952ರ ಮಾಧ್ಯಮಿಕ ಶಿಕ್ಷಣ ಆಯೋಗದ ಶಿಫಾರಸ್ಸುಗಳು**

1. ಅಂಕ ಪದ್ಧತಿಗೆ ಬದಲಾಗಿ ಶ್ರೇಣಿಕರು ಪದ್ಧತಿಯನ್ನು ಜಾರಿಗೆ ತರಬೇಕು.
2. ಬಾಹ್ಯ ಪರೀಕ್ಷೆಗಳಿಗಿಂತ ಆಂತರಿಕ ಪರೀಕ್ಷೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.
3. ವಿದ್ಯಾರ್ಥಿಗಳ ಪ್ರಗತಿ ಮಟ್ಟವನ್ನು ಪ್ರಗತಿ ಪತ್ರ ದಾಖಲಾತಿಯಲ್ಲಿ ಸಂಗ್ರಹಿಸಿಡಬೇಕು.
4. ವಿಷಯಕ್ಕಿಂತ ವಸ್ತುನಿಷ್ಠ ಪ್ರಶ್ನೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು.

Digitised by Bharatavani, CIIL

5. ಹಂತಹಂತವಾಗಿ ಪರೀಕ್ಷಿಸಿ ರೂಪಣಾತ್ಮಕ ಮೌಲ್ಯಮಾಪನಕ್ಕೆ ಹೆಚ್ಚಿನ ಒತ್ತು ನೀಡಬೇಕು.
6. ಪಠ್ಯೇತರ ಚಟುವಟಿಕೆಗಳಿಗೆ ಶ್ರೇಣಿ ಪದ್ಧತಿಯನ್ನು ಜಾರಿಗೊಳಿಸಬೇಕು.
7. ಮಾಧ್ಯಮಿಕ ಶಿಕ್ಷಣದ ಕಡೆಯಲ್ಲಿ ಒಂದು ಸಾರ್ವತ್ರಿಕ ಪರೀಕ್ಷೆಯನ್ನು ನಡೆಸಿ ಆ ಪರೀಕ್ಷೆಯಲ್ಲಿ ಹಂತಹಂತವಾಗಿ ತೇರ್ಗಡೆ ಹೊಂದಲು ಅವಕಾಶ ಕಲ್ಪಿಸಿಕೊಡಬೇಕು.

**III. ಮೌಲ್ಯಮಾಪನ ಪ್ರಕ್ರಿಯೆಗೆ 1956ರ ಅಖಿಲ ಭಾರತ ಗೋಷ್ಠಿಯ ಶಿಫಾರಸ್ಸುಗಳು**

1. ಮೌಲ್ಯಮಾಪನದಲ್ಲಿ ಆಂತರಿಕ ಮತ್ತು ಬಾಹ್ಯ ಪರೀಕ್ಷೆಗಳಿಗೆ ಸಮಾನುಪಾತದಲ್ಲಿ ಅಂಕಗಳನ್ನಿಡಬೇಕು.
2. ಮೌಲ್ಯಮಾಪನದಲ್ಲಿ ವಿವಿಧ ಮಾದರಿಯ ಪ್ರಶ್ನೆಗಳಿರಬೇಕು.

**IV. ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ 1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸ್ಸುಗಳು**

1. ಬಾಹ್ಯ ಪರೀಕ್ಷಾ ಪದ್ಧತಿಗೆ ಬದಲಾಗಿ ಆಂತರಿಕ ಮೌಲ್ಯಮಾಪನ ಪದ್ಧತಿಗೆ ಆದ್ಯತೆ ನೀಡಬೇಕು.
2. ವರ್ಷ ಪೂರ್ತಿ ಮಾಸಿಕ ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳ ಸಾಧನಾ ಮಟ್ಟವನ್ನು ನಿರ್ಧರಿಸಬೇಕು.
3. ವಿದ್ಯಾರ್ಥಿಗಳಿಗೆ ರಾಜ್ಯಮಟ್ಟ, ಜಿಲ್ಲಾಮಟ್ಟ, ತಾಲ್ಲೋಕು ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಮೂಲಕ ಪುರಸ್ಕಾರಗಳನ್ನು ನೀಡಬೇಕು.
4. ಅಂಕಗಳಿಗೆ ಬದಲಾಗಿ ಶ್ರೇಣಿ ಪದ್ಧತಿಯನ್ನು ಜಾರಿಗೊಳಿಸಬೇಕು.
5. ವಾರ್ಷಿಕ ಪದ್ಧತಿಗೆ ಬದಲಾಗಿ ಸೆಮೆಸ್ಟರ್ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು.

–ಮೋ.ಕು.

## ಮೌಲ್ಯಮಾಪನದ ವಿಧಗಳು

ಮೌಲ್ಯಮಾಪನದ ವಿಧಗಳು ಈ ಕೆಳಕಂಡಂತಿವೆ

ಅ) ರೂಪಣಾತ್ಮಕ ಮೌಲ್ಯಮಾಪನ

ಆ) ಸಂಕಲನಾತ್ಮಕ ಮೌಲ್ಯಮಾಪನ

ಇ) ಪ್ರಕ್ರಿಯಾ ಮೌಲ್ಯಮಾಪನ

ಈ) ಉತ್ಪನ್ನ ಮೌಲ್ಯಮಾಪನ

**ಅ) ರೂಪಣಾತ್ಮಕ ಮೌಲ್ಯಮಾಪನ:** ಮೊದಲಿಗೆ ಈ ವಿಧವನ್ನು 'ಪಠ್ಯಕ್ರಮ ಸುಧಾರಣೆ' ಸಂದರ್ಭಗಳಲ್ಲಿ ಬಳಸಲಾಗಿತ್ತು. ಪಠ್ಯಕ್ರಮ ರಚನೆ ಹಾಗೂ ಅದರ ಅನುಷ್ಠಾನ ಸಂದರ್ಭಗಳಲ್ಲಿ ಲಭ್ಯವಾಗುವ ಸಾಕ್ಷ್ಯಗಳನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ ಪಠ್ಯಕ್ರಮ ಪುನರ್ ವಿನ್ಯಾಸಗೊಳಿಸುವ ಕಾರ್ಯ ಈ ಮೌಲ್ಯಮಾಪನದಿಂದ ಸಾಧ್ಯ. ಈ ಮೌಲ್ಯಮಾಪನ ಪಠ್ಯಕ್ರಮ ರಚನೆಗೆ ಮಾತ್ರವಲ್ಲದೆ ಬೋಧನೆ ಹಾಗೂ ವಿದ್ಯಾರ್ಥಿ ಕಲಿಕೆಗೆ ಸಹಾಯಕವಾಗಿವೆ. ಈ ಮೂರು ಪ್ರಕ್ರಿಯೆಗಳನ್ನು ಸುಧಾರಿಸುವ ದೃಷ್ಟಿಯಿಂದ ಬಳಸುವ ಒಂದು ವ್ಯವಸ್ಥಿತ ಮೌಲ್ಯಮಾಪನ ಇದಾಗಿದೆ. ವಿದ್ಯಾರ್ಥಿಗಳನ್ನು ರೂಪಿಸುವ ಹಂತದಲ್ಲಿ ಈ ಮೌಲ್ಯಮಾಪನ ನಡೆಯುವುದರಿಂದ ಮೇಲಿನ ಮೂರೂ ಪ್ರಕ್ರಿಯೆಗಳು ಸುಧಾರಿಸುವ ನಿಟ್ಟಿನಲ್ಲಿ ಈ ಮೌಲ್ಯಮಾಪನದ ಪ್ರಯತ್ನಗಳು ಸಾಗಬೇಕು. ಅಂದರೆ ಈ ಮೌಲ್ಯಮಾಪನವು, ಸಂಬಂಧಪಟ್ಟ ಪ್ರಕ್ರಿಯೆಗಳ ಸುಧಾರಣೆಗೆ ಬೇಕಾದ ಉಪಯುಕ್ತ ಸಾಕ್ಷ್ಯಗಳನ್ನು ಸ್ಪಷ್ಟಪಡಿಸಲು ಶ್ರಮಿಸುವುದಲ್ಲದೆ ಆ ಸಾಕ್ಷ್ಯಗಳನ್ನು ಸೂಕ್ತವಾಗಿ ಬಳಸಿಕೊಳ್ಳುವ ಉಪಯುಕ್ತ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಈ ವಿಧದ ಮೌಲ್ಯಮಾಪನವು ವಿದ್ಯಾರ್ಥಿ, ಶಿಕ್ಷಕ ಹಾಗೂ ಪಠ್ಯಕ್ರಮ ರಚನೆಕಾರ ಎಲ್ಲರನ್ನೂ ಒಳಗೊಂಡಿದ್ದು, ತಮ್ಮ ತಮ್ಮ ಕ್ಷೇತ್ರದಲ್ಲಿನ 'ಅಭಿವೃದ್ಧಿ' ಸಾಧ್ಯವಾಗುವಂತೆ ಮಾಡುತ್ತದೆ.

ರೂಪಣಾತ್ಮಕ ಮೌಲ್ಯಮಾಪನದಿಂದ ಉಂಟಾಗಬಹುದಾದ ಋಣಾತ್ಮಕ ಪರಿಣಾಮಗಳನ್ನು ಕಡಿಮೆಗೊಳಿಸಲು, ಇದರ ಫಲಿತಾಂಶವನ್ನು, ನಿರ್ದಿಷ್ಟ ವಿದ್ಯಾರ್ಥಿಯ ಸಾಮರ್ಥ್ಯದ ಬಗ್ಗೆ ಯಾವುದೇ ಶೈಕ್ಷಣಿಕ ತೀರ್ಮಾನ ಕೈಗೊಳ್ಳುವುದನ್ನು ಬಿಡಬೇಕಾಗುತ್ತದೆ. ಈ ಮೌಲ್ಯಮಾಪನದ ಬಳಕೆದಾರರು (ಶಿಕ್ಷಕರು, ವಿದ್ಯಾರ್ಥಿಗಳು, ಪಠ್ಯಕ್ರಮ ರಚನಕಾರರು), ಮೌಲ್ಯಮಾಪನದ ಫಲಿತಾಂಶವನ್ನು ಕಲಿಕೆ ಹಾಗೂ ಬೋಧನಾ ಗುರಿಗಳಿಗೆ ಸಂಬಂಧ ಕಲ್ಪಿಸುವ ಯತ್ನವನ್ನು ಮಾಡುವುದರ ಮೂಲಕ ತತ್‌ಸಂಬಂಧಿತ ತೀರ್ಮಾನ ಕೈಗೊಳ್ಳಲು ಮಾತ್ರ ಸಾಧ್ಯವಿದೆ.

**ರೂಪಣಾತ್ಮಕ ಮೌಲ್ಯ ಮಾಪನದ ಉಪಯೋಗಗಳು**

1. ಈ ವಿಧದ ಮೌಲ್ಯಮಾಪನವು ನೈದಾನಿಕ ಸ್ವಭಾವವನ್ನು ಹೊಂದಿದ್ದು ವಿದ್ಯಾರ್ಥಿಯ ನಿರ್ದಿಷ್ಟ ಕಲಿಕಾ ದೌರ್ಬಲ್ಯವನ್ನು ಗುರುತಿಸಿ ಸೂಕ್ತ ಪರಿಹಾರ ಬೋಧನೆಗೆ ಅವಕಾಶ ಮಾಡಿಕೊಡುವುದರಿಂದ ಬೋಧನೆಯನ್ನು ವ್ಯಕ್ತಿಗತಗೊಳಿಸಲು (Individualize) ಸಾಧ್ಯವಾಗುತ್ತದೆ.
2. ವಿಷಯ ಪಾಂಡಿತ್ಯಕ್ಕಾಗಿ ವಿದ್ಯಾರ್ಥಿ ಕಲಿಕೆಯನ್ನು ನಿರ್ದೇಶಿಸುತ್ತದೆ.
3. ವಿದ್ಯಾರ್ಥಿ ಕಲಿಕೆಯನ್ನು ಸರಿಸಮನಾಗಿ ಮುಂದುವರಿಸುವಲ್ಲಿ (Pacing) ಬಹಳಷ್ಟು ಪ್ರಭಾವಶಾಲಿಯಾಗಿವೆ.
4. ಮುಂದೆ ಕಲಿಯಬೇಕಾಗಿರುವ ಘಟಕಕ್ಕೆ ಪೂರ್ವಾಗತ್ಯವಿರುವ ಹಿಂದಿನ ಘಟಕದ ಕಲಿಕಾಂಶಗಳ ಕಲಿಕೆಯನ್ನು ನಿಶ್ಚಿತಗೊಳಿಸುತ್ತದೆ.
5. ಕಲಿಯುತ್ತಿರುವ ಘಟಕಕ್ಕೆ ಬೇಕಾದಷ್ಟು ಕಲಿಕಾ ಸಿದ್ಧತೆಯನ್ನು ಮಾಡಲು ಸಹಕರಿಸುತ್ತದೆ.
6. ವಿದ್ಯಾರ್ಥಿಗಳಿಗೆ ತಾವು ಕಲಿಕೆಯ ಯಾವ ಹಂತದಲ್ಲಿದ್ದೇವೆ ಎಂಬುದರ ಅರಿವನ್ನು ನೀಡುತ್ತದೆ.
7. ಮೌಲ್ಯ ತೀರ್ಮಾನ ಇಲ್ಲದಿರುವುದರಿಂದ ಇದರ ಫಲಿತಾಂಶವು ವಿದ್ಯಾರ್ಥಿಗಳಿಗೆ ಧನಾತ್ಮಕವಾದ ಹಿಮ್ಮಾಹಿತಿಯನ್ನು (ಪ್ರತಿಪುಷ್ಠಿ) ಒದಗಿಸಿಕೊಡುತ್ತದೆ.

**ಆ. ಸಂಕಲನಾತ್ಮಕ ಮೌಲ್ಯಮಾಪನ**

ಈ ಮೌಲ್ಯಮಾಪನವು ಒಂದು ಶೈಕ್ಷಣಿಕ ಅವಧಿಯ ವ್ಯಾಪಕವಾದ ಫಲಿತಗಳ (larger out comes) ಸಾಧನೆಯನ್ನು ವಿಶ್ಲೇಷಿಸಿ ಆ ಸಾಧನೆಯ ಮಟ್ಟಕ್ಕೆ ಒಂದು ಸಾರ್ವತ್ರೀಕರಿಸಿದ ಬೆಲೆ ಕಟ್ಟಲು ನಿರ್ದೇಶಿಸುತ್ತದೆ. ಉದಾಹರಣೆ ಐದನೆ ತರಗತಿಯ ಗಣಿತದಲ್ಲಿ ಭಾಗಾಹಾರ ಪ್ರಕ್ರಿಯೆ ನಡೆಸುವಲ್ಲಿ ವಿದ್ಯಾರ್ಥಿಗಳ ವೇಗ ಹಾಗೂ ನಿರ್ವಹಣೆ ಎರಡನ್ನೂ ಬೋಧನೆಯ ಪ್ರಮುಖ ಉದ್ದೇಶವನ್ನಾಗಿ ಸಂಕಲನಾತ್ಮಕ ಮೌಲ್ಯಮಾಪನ ಇಟ್ಟುಕೊಳ್ಳಲು ಸಾಧ್ಯವಿದೆ. ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳನ್ನು


Digitised by Bharatavani, CIIL

ಸಾಮರ್ಥ್ಯಾನುಸಾರವಾಗಿ ಶ್ರೇಣೀಕರಿಸಿ, ವರದಿಯನ್ನು ಪೋಷಕರು ಹಾಗೂ ಆಡಳಿತ ವರ್ಗಕ್ಕೆ ದೊರಕಿಸಿಕೊಡುವುದು ಈ ಮೌಲ್ಯಮಾಪನದ ಉದ್ದೇಶವಾಗಿದೆ. ಹಾಗಾಗಿ ರೂಪಣಾತ್ಮಕ ಮೌಲ್ಯಮಾಪನದಂತೆ ಕಡಿಮೆ ಅಂತರದಲ್ಲಿ ಹೆಚ್ಚು ಬಾರಿ ನಡೆಸಲು ಸಾಧ್ಯವಿಲ್ಲ. ಒಂದು ಕೋರ್ಸಿನಲ್ಲಿ ಎರಡು ಅಥವಾ ಮೂರು ಬಾರಿ ಆಯೋಜಿಸಲಾಗುತ್ತದೆ. ಇದು ಒಂದು ಕೋರ್ಸಿನ ಪ್ರಮುಖ ಘಟ್ಟದ ಅಥವಾ ಅಂತಿಮ ಘಟ್ಟದ ವಿದ್ಯಾರ್ಥಿ ಸಾಧನೆಯ ಮೌಲ್ಯನಿರ್ಧಾರವನ್ನು ಸೂಚಿಸುತ್ತದೆ. ಸೆಕೆಂಡರಿ ಶಾಲಾ ಹಾಗೂ ಕಾಲೇಜು ಶಿಕ್ಷಣಗಳಲ್ಲಿ ಈ ಮೌಲ್ಯ ಮಾಪನವನ್ನು ಕೇವಲ ಗ್ರೇಡ್ ಹಾಗೂ ಪ್ರಮಾಣ ಪತ್ರ ನೀಡಲು ಬಳಸುತ್ತಾರೆ. ಹಾಗಾಗಿ ಕೆಲವೊಮ್ಮೆ ಇದನ್ನು ಅಂತಿಮ ಘಟ್ಟದ ಮೌಲ್ಯಮಾಪನ ಎಂದೂ ಪರಿಗಣಿಸಲಾಗುತ್ತದೆ.

ಮೌಲ್ಯ ಮಾಪನಕ್ಕೊಳಗಾದ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಯಾವ ಬದಲಾವಣೆ / ಮಾರ್ಪಾಡೂ ಈ ಮೌಲ್ಯ ಮಾಪನದಿಂದ ಫಲಿಸುವುದಿಲ್ಲ. ಹೆಚ್ಚು ಸಂದರ್ಭಗಳಲ್ಲಿ ತರಬೇತಿಗಾರನಿಗೆ/ಶಿಕ್ಷಕನಿಗೆ, ನಿರ್ದಿಷ್ಟ ಶೈಕ್ಷಣಿಕ ಕಾರ್ಯಕ್ರಮದಿಂದ ವಿದ್ಯಾರ್ಥಿಗಳು ಕಲಿತಿದ್ದಾರೆಯೇ? ಅವರ ನಿರ್ವಹಣಾ ಸಾಮರ್ಥ್ಯ ಸುಧಾರಿಸಿದೆಯೇ? ಎಂದು ತಿಳಿಸುತ್ತದೆ. ಒಟ್ಟಾರೆ ಹೇಳುವುದಾದರೆ, ಈ ವಿಧದ ಮೌಲ್ಯಮಾಪನವು ಬೋಧನೋದ್ದೇಶಗಳು ಎಷ್ಟರ ಮಟ್ಟಿಗೆ ಈಡೇರಿವೆ ಎಂಬುದನ್ನು ಪತ್ತೆ ಹಚ್ಚಿ ಗ್ರೇಡು/ಅಂಕಗಳನ್ನು ನೀಡಿ ವಿದ್ಯಾರ್ಥಿಗಳಿಗೆ ಪ್ರತಿಪುಷ್ಟಿ ದೊರಕಿಸಿಕೊಡುತ್ತದೆ. ಆರಂಭದಿಂದ ಅಂತ್ಯದವರೆಗಿನ ವಿದ್ಯಾರ್ಥಿ ಕಲಿಕೆಯನ್ನು ಮೌಲ್ಯಮಾಪನ ಮಾಡುತ್ತದೆ.

**ಸಂಕಲನಾತ್ಮಕ ಮೌಲ್ಯಮಾಪನದ ಉಪಯೋಗಗಳು**

1. ಕಲಿಕಾ ಫಲಿತವನ್ನು ದಾಖಲಿಸಿ ಅದರ ಮೌಲ್ಯ ತೀರ್ಮಾನಿಸುವಲ್ಲಿ ಸಹಕರಿಸುತ್ತದೆ.
2. ಬೋಧಕರಿಗೆ ಬೋಧನಾ ವಿಷಯ ಹಾಗೂ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ತಮ್ಮ ಉದ್ದೇಶ ಈಡೇರಿಕೆಯ ಬಗ್ಗೆ ಪ್ರತಿಪುಷ್ಟಿ ನೀಡುತ್ತದೆ.
3. ಕಲಿಕೆಗಾಗಿ ನಿರ್ಮಿಸಿದ ಯಾವ ಶೈಕ್ಷಣಿಕ ಕಾರ್ಯಕ್ರಮವನ್ನು ಹಾಗೇ ಮುಂದುವರೆಸಬಹುದು ಹಾಗೂ ಯಾವುದನ್ನು ನಿಲ್ಲಿಸಬೇಕು ಎಂಬುದರ ಬಗ್ಗೆ ಮಾಹಿತಿ ನೀಡುತ್ತದೆ.
4. ಮುಂದಿನ ಶೈಕ್ಷಣಿಕ ಹಂತಕ್ಕೆ ಹೋಗಲು ಬೇಕಾದ ಅರ್ಹತೆ ಇರುವಿಕೆ / ಇಲ್ಲದಿರುವಿಕೆಯನ್ನು ತೀರ್ಮಾನಿಸುತ್ತದೆ.

**ಇ. ಪ್ರಕ್ರಿಯಾ ಮೌಲ್ಯ ಮಾಪನ:** ಈ ವಿಧದ ಮೌಲ್ಯಮಾಪನದಲ್ಲಿ, ಶೈಕ್ಷಣಿಕ ಕಾರ್ಯಕ್ರಮದಲ್ಲಿ ನಿರ್ವಹಿಸಿದ ಚಟುವಟಿಕೆಗಳು ಮೌಲ್ಯಮಾಪನಕ್ಕೆ ಒಳಗಾಗುತ್ತದೆ. ಕೆಳಕಂಡ ಶೈಕ್ಷಣಿಕ ಚಟುವಟಿಕೆಗಳನ್ನು ಈ ವಿಧವು ಮೌಲ್ಯಮಾಪನ ಮಾಡುತ್ತವೆ.

1. ಯಾವ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲಾಯಿತು?
2. ಗುರುತಿಸಲ್ಪಟ್ಟಿರುವ ಶೈಕ್ಷಣಿಕ ಕಾರ್ಯಕ್ರಮದ ಗುರಿ ಮತ್ತು ಉದ್ದೇಶಗಳು.
3. ಸಂಕಲ್ಪಿಸಿದ್ದ ಶೈಕ್ಷಣಿಕ ಚಟುವಟಿಕೆಗಳಿಗೆ ಏನಾದರೂ ಮಾರ್ಪಾಡು ಮಾಡಲಾಯಿತೆ? ಏಕೆ?
4. ನಿರ್ದಿಷ್ಟ ಶೈಕ್ಷಣಿಕ ಹಂತದಲ್ಲಿ ಬಳಸಲಾದ ಕಲಿಕಾ ಸಾಮಗ್ರಿಗಳು, ಮಾಹಿತಿಗಳೂ, ಪ್ರದರ್ಶಕಗಳು ಉತ್ತಮ ಗುಣಮಟ್ಟದ್ದಾಗಿದ್ದುವೆ?

ಈ ವಿಧದ ಮೌಲ್ಯಮಾಪನದಿಂದ ಬೋಧನಾ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಿ, ವಿದ್ಯಾರ್ಥಿ ಕಲಿಕೆಯ ಮೇಲೆ ಧನಾತ್ಮಕವಾದ ಪ್ರಭಾವ ಬೀರಲು ಸಾಧ್ಯ.

**ಈ. ಉತ್ಪನ್ನ ಮೌಲ್ಯ ಮಾಪನ:**

ಒಂದು ಕೋರ್ಸಿನಲ್ಲಿ ವರ್ತನೆಯ ಯಾವ ಬದಲಾವಣೆಗಳನ್ನು ತರಲು ಇಚ್ಛಿಸಲಾಗಿತ್ತು ಆ ಬದಲಾವಣೆಗಳನ್ನು ಪ್ರಸ್ತುತ ಶೈಕ್ಷಣಿಕ ಚಟುವಟಿಕೆಗಳು ಯಾವ ಮಟ್ಟಕ್ಕೆ ನೆರವೇರಿಸಿವೆ ಎಂದು ತೀರ್ಮಾನಿಸುವುದೇ ಉತ್ಪನ್ನ ಮೌಲ್ಯಮಾಪನ. ಇನ್ನೊಂದರ್ಥದಲ್ಲಿ ಹೇಳುವುದಾದರೆ ಶೈಕ್ಷಣಿಕ ಕಾರ್ಯಕ್ರಮದ ಧ್ಯೇಯೋದ್ದೇಶಗಳನ್ನು 'ಯಾವ ಮಟ್ಟದಲ್ಲಿ' ತಲುಪಲು ಸಾಧ್ಯವಾಗಿವೆ ಎಂದು ತಿಳಿಯುವುದಾಗಿದೆ.

**ಉತ್ಪನ್ನ ಮೌಲ್ಯಮಾಪನದ ಉಪಯೋಗಗಳು**

1. ಶೈಕ್ಷಣಿಕ ಗುರಿ ಮುಟ್ಟುವತ್ತ ಪ್ರಸ್ತುತ ಹಂತದ ಶೈಕ್ಷಣಿಕ ಕಾರ್ಯಕ್ರಮವು ಯಾವ ಏಳಿಗೆ ತೋರಿಸಿದೆ ಎಂದು ತಿಳಿಯಲು.
2. ಶೈಕ್ಷಣಿಕ ಕಾರ್ಯಕ್ರಮವು ತನ್ನ ಉದ್ದೇಶಗಳನ್ನು ಎಷ್ಟರ ಮಟ್ಟಿಗೆ ತಲುಪಿದೆ ಎಂಬ ಅರಿವು ಮೂಡಿಸಲು
3. ಅಪೇಕ್ಷಣೀಯ ಬದಲಾವಣೆಗಳನ್ನು ತರಲು ಶೈಕ್ಷಣಿಕ ಕಾರ್ಯಕ್ರಮ ಹೇಗೆ ಪ್ರಭಾವ ಬೀರಿದೆ ಎಂದು ತಿಳಿಯಲು
4. ನಿರ್ಧರಿಸಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹೊರತು ಪಡಿಸಿ–ಬಾಹ್ಯಾಂಶಗಳೇನಾದರೂ ಅಪೇಕ್ಷಣೀಯ ಬದಲಾವಣೆ ತರಲು ಕಾರಣವಾಗಿದೆಯೇ ಎಂದು ಅರಿಲು
5. ಶೈಕ್ಷಣಿಕ ಕಾರ್ಯಕ್ರಮದ ಫಲವಾಗಿ ಮೂಡಿದ ಅನಪೇಕ್ಷಿತ ಬದಲಾವಣೆಗಳಾವುವು ಎಂಬ ಅರಿವು ಮೂಡಿಸಲು

–ಆ.ಬಿ.ಎನ್.

## ಮೌಲ್ಯಮೀಮಾಂಸೆ ಮತ್ತು ಶಿಕ್ಷಣ

ಮೌಲ್ಯ ಎಂಬುದರ ಸಾಮಾನ್ಯ ಅರ್ಥ ಬೆಲೆ. ಒಂದು ವಸ್ತುವಿನ ಬೆಲೆಯನ್ನು ಹಣದಿಂದ ಅಳೆಯಲಾಗುತ್ತದೆ. ಆದರೆ ಹಣದಿಂದ ಅಳೆಯಲಾಗದ ಅನೇಕ ವಿಷಯಗಳಿವೆ. ಉದಾ: ಶಿಕ್ಷಣದ ಮೌಲ್ಯ ಎಷ್ಟೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅದರ ಶಕ್ತಿ ಅಗಾಧವಾದುದು. ಆದುದರಿಂದ ಅದರ ಮೌಲ್ಯ ಅತ್ಯಮೂಲ್ಯ. ಒಬ್ಬ ಮನುಷ್ಯನ ಮೌಲ್ಯವನ್ನು ಅವನ ಸದ್ಗುಣ, ಸತ್ಕಾರ್ಯ, ಶಿಕ್ಷಣ, ಆದರ್ಶಗಳಿಂದ ಅಳೆಯುತ್ತೇವೆ.

ತತ್ವಶಾಸ್ತ್ರದ ಒಂದು ಅಂಗವೇ ಮೌಲ್ಯಮೀಮಾಂಸೆ (Axiology). ಮೌಲ್ಯ ಸಿದ್ಧಾಂತಗಳಲ್ಲಿ ನೀತಿಶಾಸ್ತ್ರ, ತರ್ಕಶಾಸ್ತ್ರ ಮತ್ತು ಸೌಂದರ್ಯೋಪಾಸಕ ಶಾಸ್ತ್ರಗಳು ಬರುತ್ತವೆ. ಗ್ರೀಕ್ ಭಾಷೆಯಲ್ಲಿ 'ಏಕ್ಸಿಯೊ' ಎಂದರೆ ಮೌಲ್ಯ, 'ಲಗೋಸ್' ಎಂದರೆ ಶಾಸ್ತ್ರ, ಆದುದರಿಂದ ಆಂಗ್ಲಪದ (Axiology) ಎಂಬುದನ್ನು ಕನ್ನಡ ಭಾಷೆಯಲ್ಲಿ 'ಮೌಲ್ಯಮೀಮಾಂಸೆ' ಅಥವಾ 'ಮೌಲ್ಯ ಸಿದ್ಧಾಂತ' ಎಂದು ಬಳಸಿಕೊಳ್ಳಲಾಗುತ್ತಿದೆ. ಇದು ಮೌಲ್ಯಗಳ ಬಗೆಗೆ ತಿಳಿಸುವಂತಹ ಶಾಸ್ತ್ರವಾಗಿದೆ.

ಹ್ಯಾರಿಸ್ಕೋ ಫೀಲ್ಡ್‌ರವರು, ಒಂದು ಸಮಾಜವು ಯಾವುದಕ್ಕೆ ಮಹತ್ವ ಕೊಡುತ್ತದೋ ಯಾವುದು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸಲ್ಪಡುವಷ್ಟು ಪ್ರಾಮುಖ್ಯವಾಗಿದೆಯೋ ಅದೇ "ಮೌಲ್ಯಮೀಮಾಂಸೆ" ಎಂದಿದ್ದಾರೆ.

Digitised by Bharatavani, CIIL

ಮೀಮಾಂಸೆ ಎಂದರೆ ಚಿಂತನೆ, ವಿಮೋಚನೆ, ಜಿಜ್ಞಾಸೆ, ಅನ್ವೇಷಣೆ, ಸಿದ್ಧಾಂತಶಾಸ್ತ್ರ ಎಂಬ ಅರ್ಥಗಳನ್ನು ಕೊಡುತ್ತದೆ. ಮೌಲ್ಯಮೀಮಾಂಸೆಯು ಮೌಲ್ಯಗಳಿಗೆ ಸಂಬಂಧಿಸಿದ ಶಾಸ್ತ್ರವಾಗಿದ್ದು, ಮೌಲ್ಯಗಳ ಕುರಿತಾದ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಅಲ್ಲದೆ ಮೌಲ್ಯಮೀಮಾಂಸೆಯು ಮೌಲ್ಯಗಳ ಸ್ವರೂಪ, ಮೂಲ, ಆಕರ, ಕಾರ್ಯವಿಧಾನ, ಪರಿಮಿತಿಗಳು ಮುಂತಾದವುಗಳ ಬಗ್ಗೆ ದೀರ್ಘವಾಗಿ ವಿವರವಾಗಿ ವಿಶ್ಲೇಷಾತ್ಮಕವಾಗಿ ವಿವೇಚನೆ ಮಾಡುವುದರಿಂದ ತತ್ವಶಾಸ್ತ್ರದಲ್ಲಿ ತನ್ನ ಅಸ್ತಿತ್ವವನ್ನು ಇಂದಿಗೂ ಉಳಿಸಿಕೊಂಡು ಬಂದಿರುತ್ತದೆ.

### ಮೌಲ್ಯಮೀಮಾಂಸೆ ಮತ್ತು ಪಂಚಕೋಶ ಸಿದ್ಧಾಂತ

ಮೌಲ್ಯಮೀಮಾಂಸೆಯನ್ನು ಪ್ರತಿಪಾದನೆ ಮಾಡುವಾಗ ಸಿದ್ಧಾಂತದ ಪ್ರತಿಪಾದನೆ ಮಾಡುವರು. ತೈತ್ತರೀಯ ಉಪನಿಷತ್ತಿನಲ್ಲಿ ವರ್ಣಿಸಿದಂತೆ ಮಾನವನ ಆತ್ಮವು ಪಂಚಕೋಶಗಳಿಂದ ಆವೃತ್ತವಾಗಿದೆ. ಅವುಗಳೆಂದರೆ,

- ಅನ್ನಮಯ ಕೋಶ – ಮಾನವ ಬಾಹ್ಯ ದೈಹಿಕ ಪದರಕ್ಕೆ ಸಂಬಂಧಿಸಿದ ವಿಷಯವನ್ನೊಳಗೊಂಡಿದೆ.
- ಪ್ರಾಣಮಯಕೋಶ – ಮಾನವನ ದೇಹದಲ್ಲಿ ಅಂತರ್ಗತವಾದ ಪ್ರಾಣಮಯ ಕೋಶವು ಸಚೇತನ ಪದರವಾಗಿದ್ದು ಚೈತನ್ಯ ಸ್ವರೂಪಿಯಾಗಿದೆ.
- ಮನೋಮಯಕೋಶ – ಪ್ರಾಣಮಯ ಕೋಶದೊಳಗೆ ಮನೋಮಯ ಕೋಶವಿದ್ದು ಅಲ್ಲಿ ಮನಸ್ಸು ಸದಾ ಜಾಗೃತವಾಗಿರುತ್ತದೆ.
- ವಿಜ್ಞಾನಮಯಕೋಶ – ಮನಸ್ಸಿನಿಂದ ವಿಕಾಸವಾದ ವಿಶೇಷ ಜ್ಞಾನವು ಅಂತಶ್ಚೇತನ ಪದರದಲ್ಲಿದ್ದು ಅತಿ ಮಾನಸಶಕ್ತಿಯುತವಾಗಿರುತ್ತದೆ.
- ಆನಂದಮಯಕೋಶ – ಈ ಕೋಶದಲ್ಲಿ ಆತ್ಮವು ಚಿರಸ್ಥಾಯಿಯಾಗಿದ್ದು ದೈಹಿಕ ಬಂಧನದಿಂದ ಬಿಡುಗಡೆಗೆ ತವಕಿಸುತ್ತದೆ.

ಅರವಿಂದ ಘೋಷ್‌ರವರ 'ಸಮಗ್ರ' ಶಿಕ್ಷಣದಲ್ಲಿ ಈ ಮೇಲಿನ ಐದುಕೋಶಗಳಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗಿದೆ. ದೇಹಕ್ಕೆ ನೀಡುವ ದೈಹಿಕ ಶಿಕ್ಷಣ 'ಉಸಿರಾಟಕ್ಕೆ ನೀಡುವ ಪ್ರಾಣಾಯಾಮ' ಮನಸ್ಸಿಗೆ ನೀಡುವ ಬೌದ್ಧಿಕ ಶಿಕ್ಷಣ ಮತ್ತು ಇಂದ್ರಿಯಶಿಕ್ಷಣ, ವಿಶಿಷ್ಟ ಜ್ಞಾನಕ್ಕೆ ನೀಡುವ ಅಂತಶ್ಚೇತನ ಶಿಕ್ಷಣ ಮತ್ತು ಆತ್ಮಕ್ಕೆ ನೀಡುವ ಆಧ್ಯಾತ್ಮಿಕ ಶಿಕ್ಷಣ ಕ್ರಮಗಳನ್ನು ಪ್ರತಿಪಾದನೆ ಮಾಡಿದ್ದಾರೆ. ಮಾನವನ ಶಿಕ್ಷಣ ಸಂಪೂರ್ಣವಾಗಬೇಕಾದರೆ ಮಾನವನ ಇತರ ಎಲ್ಲ ಚಟುವಟಿಕೆಗಳೊಂದಿಗೆ ಆಧ್ಯಾತ್ಮಿಕ ಜ್ಞಾನವು ಅಗತ್ಯ. ಇದನ್ನು 'ಯೋಗ' ಶಿಕ್ಷಣ ಎನ್ನುವರು. ಜೀವನವೆಲ್ಲ, ಯೋಗಮಯವಾಗಿದ್ದು ಬೌದ್ಧಿಕ ಸಂಸ್ಕೃತಿಯಿಂದ ಸೌಂದರ್ಯ ಪ್ರಜ್ಞೆಯೂ, ಭಾವಾವೇಶ ನಿಯಂತ್ರಣದಿಂದ ಶಕ್ತಿಯೂ, ಜಾಗೃತ ಅವಸ್ಥೆಗಳಿಂದ ಜ್ಞಾನವೂ, ಅಪೇಕ್ಷಿತ ಅನುಭವಗಳಿಂದ ಪ್ರೀತಿಯೂ ಏರ್ಪಟ್ಟು ಅಂತಿಮವಾಗಿ ದೈವತ್ವದ ಕಡೆಗೆ ನಿರ್ದೇಶಿಸಲ್ಪಟ್ಟು ಯೋಗಶಿಕ್ಷಣವು ಪರಿಪಕ್ವವಾಗುತ್ತದೆ. ಇದನ್ನು ಪಂಚಕೋಶ ಮೀಮಾಂಸೆಯಲ್ಲಿ ಪ್ರತಿಪಾದಿಸಲಾಗಿದೆ.

### ಮೌಲ್ಯಗಳು ಮತ್ತು ಪಾಶ್ಚಿಮಾತ್ಯ ದೃಷ್ಟಿಕೋನ

ಪಾಶ್ಚಿಮಾತ್ಯ ತತ್ವಜ್ಞಾನಿಗಳಲ್ಲಿ ಮೌಲ್ಯಗಳ ಕುರಿತು ವಿಭಿನ್ನ ವಾದಗಳು ಸೃಷ್ಟಿಯಾಗಿವೆ. ಅವುಗಳನ್ನು ಧ್ಯೇಯವಾದ, ವ್ಯಾವಹಾರಿಕವಾದ ಪ್ರಕೃತಿವಾದ ಮತ್ತು ವಾಸ್ತವವಾದ ಎಂದು ವಿಭಾಗಿಸಬಹುದು.

### ಆದರ್ಶವಾದ ಮತ್ತು ಮೌಲ್ಯಗಳು

ಮಾನವನ ಮೌಲ್ಯಗಳು ಮತ್ತು ಅಸ್ತಿತ್ವವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಮೌಲ್ಯಗಳಿಲ್ಲದೆ ಅಸ್ತಿತ್ವವಿಲ್ಲ. ಅಸ್ತಿತ್ವವಿಲ್ಲದೆ ಮೌಲ್ಯಗಳಿಲ್ಲ. ಮೌಲ್ಯಗಳೆಲ್ಲವೂ ಅಸ್ತಿತ್ವದಲ್ಲಿರುವಂತಹುದು. ಅವು ಸತ್ಯದ ಅವಿಭಾಜ್ಯ ಅಂಗ. ಮೌಲ್ಯಾಧಾರಿತ ವಸ್ತುಗಳು ಸ್ವತಂತ್ರ ಅಸ್ತಿತ್ವದಲ್ಲಿ ಬಹಳ ಬೆಲೆಯುಳ್ಳವುಗಳಾಗಿವೆ ಎಂದು **ಅರ್ಬನ್ ವೈಬರ್** ಅಭಿಪ್ರಾಯಿಸಿದ್ದಾರೆ. **ಡೇವಿಡ್ ಹ್ಯೂಂ** ಎಂಬ ತತ್ವಜ್ಞಾನಿಯು "ಮೌಲ್ಯಗಳನ್ನು ಉತ್ಪಾದಿಸಲು ಅಸಾಧ್ಯ, ನಾಶಮಾಡಲು ಅಸಾಧ್ಯ, ಅವು ಶಾಶ್ವತವಾದವು" ಎಂದಿದ್ದಾನೆ. ಧ್ಯೇಯವಾದಿಗಳ ಗುರಿಯು ಮೌಲ್ಯಗಳನ್ನು ಮೌಲ್ಯಗಳಿಗಾಗಿಯೇ ಪಡೆಯುವುದಾಗಿದೆ. ಮಾನವನ ಮರಣದ ನಂತರವೂ ಅವರ ಅಸ್ತಿತ್ವವು ನಾಶವಾಗುವುದಿಲ್ಲ. ಆದರ್ಶವಾದಿಗಳಿಗೆ ಅಮರತ್ವ ಎಂದರೆ ಅದೇ ದೊಡ್ಡ ಮೌಲ್ಯವಾಗಿದೆ" ಎಂದಿದ್ದಾರೆ. ಆದರ್ಶವಾದಿಗಳು ನೈತಿಕ ಮತ್ತು ಸೌಂದರ್ಯೋಪಾಸಕ ಮೌಲ್ಯಗಳಿಗೆ ಹೆಚ್ಚು ಮಹತ್ವ ನೀಡುತ್ತಾರೆ. **ಎಮ್ಯಾನುಯಲ್ ಕ್ಯಾಂಟ್**ರವರು ನೈತಿಕತೆಗೆ ಸಂಬಂಧಿಸಿದಂತೆ ಮಹತ್ವದ ಕೊಡುಗೆ ನೀಡಿದ್ದಾರೆ. "ನೀನು ನಿನಗಾಗಿ ಮತ್ತು ಇತರರಿಗಾಗಿ ಕಾರ್ಯನಿರ್ವಹಿಸು, ನೀನು ಸಾಧನ ಮಾತ್ರವಲ್ಲ, ಸಾಧಿಸುವವನು ಆಗಿರುವಿ" ಎಂದಿದ್ದಾರೆ. ಆದರ್ಶವಾದಿಗಳಿಗೆ ಆತ್ಮಸಾಕ್ಷಾತ್ಕಾರವೂ, ಬ್ರಹ್ಮ ಸಾಕ್ಷಾತ್ಕಾರವೂ ಜೀವನದ ಅಂತಿಮ ಗುರಿಯಾಗಿರುತ್ತದೆ.

### ವ್ಯಾವಹಾರಿಕವಾದ ಮತ್ತು ಮೌಲ್ಯಗಳು

ಮೌಲ್ಯಗಳು ಸ್ಥಿರವಾಗಿರುವುದಿಲ್ಲ. ಅವು ಪರಿಸ್ಥಿತಿಗೆ ತಕ್ಕಂತೆ ಬದಲಾಗುತ್ತಿರುತ್ತವೆ. ನೀನು ಕೊಲ್ಲಬೇಡ ಎಂಬುದು ಮೌಲ್ಯಾಧಾರಿತ ನುಡಿ. ನಿನ್ನನ್ನು ಕೊಲ್ಲಲು ಬಂದಾಗ ಸುಮ್ಮನಿರದೆ ಕಾರ್ಯಪ್ರವೃತನಾಗು ಎನ್ನುತ್ತದೆ ವ್ಯಾವಹಾರಿಕವಾದ. ಮಾನವನು ಜೀವನದ ಸತ್ಯವನ್ನು ಸೃಷ್ಟಿಸಿದಂತೆಯೇ ಮೌಲ್ಯಗಳನ್ನು ಸೃಷ್ಟಿಸುತ್ತಾನೆ. ಸುಖಜೀವನವನ್ನು ನಡೆಸಲು ಸಮಾಜ ಉತ್ತಮ ಸ್ಥಿತಿಯಲ್ಲಿರಬೇಕಾಗುತ್ತದೆ. ವ್ಯಾವಹಾರಿಕ ವಾದಿಗಳು ಪ್ರಜಾಸತ್ತೆಯ ಮೌಲ್ಯಗಳನ್ನು ಸ್ವಾಗತಿಸುತ್ತಾರೆ. ಒಂದು ವೇಳೆ ಮೌಲ್ಯಗಳು ಅತಂತ್ರವಾದರೆ ಸಮಾಜದಲ್ಲೂ ಏರಿಳಿತಗಳಾಗಿ ಉಪಯುಕ್ತವಾದಿಯ ಸುಖ ಸಂಸಾರದ ಧ್ಯೇಯಕ್ಕೆ ಭಂಗ ಉಂಟಾಗುವುದು. ಜಾನ್ ಡ್ಯೂಯಿ ಈ ನಿಲುವನ್ನು ಪ್ರತಿನಿಧಿಸುತ್ತಾರೆ.

### ಪ್ರಕೃತಿವಾದ ಮತ್ತು ಮೌಲ್ಯಗಳು

ಪ್ರಕೃತಿವಾದಿಗಳಿಗೆ ಹೋರಾಟದಿಂದ ಸ್ವತಂತ್ರರಾಗಿರುವುದು ಬಹುದೊಡ್ಡ ಮೌಲ್ಯ. ರೂಸೋ ಮುಂತಾದವರು ಸುಖಸಂತೋಷದಿಂದ ಜೀವನ ಮಾಡುವ ಸ್ವಾತಂತ್ರ್ಯವನ್ನು ಇಚ್ಛಿಸುತ್ತಾರೆ. ಸುಖಸಂತೋಷಕ್ಕಾಗಿ ಅವರು ಭಯ ನೋವುಗಳನ್ನು ದೂರಮಾಡಲು ಪ್ರಯತ್ನಿಸುತ್ತಾರೆ. ಇವರು ಅತ್ಯಂತ ಸುಖಿಗಳಾಗಿರಲು ಇಚ್ಛಿಸುತ್ತಾರೆ. ಅದರ ಜೊತೆಗೆ ನೈತಿಕ ಮೌಲ್ಯಗಳಿಗಾಗಿಯೂ ಹಾತೊರೆಯುತ್ತಾರೆ. ಕೆಲವೊಮ್ಮೆ ಪ್ರಕೃತಿಯಲ್ಲಿಯೇ ವಿಕೋಪಗಳುಂಟಾದಾಗ ಅವುಗಳನ್ನು ವಿಧಿಇಲ್ಲದೆ ಒಪ್ಪಿಕೊಳ್ಳುತ್ತಾರೆ. ಆದರೆ ಕೆಲವೊಮ್ಮೆ ಮಾನವ ಶಕ್ತಿಗಳೇ ಮಾನವ ಸಮಾಜದ ಮೇಲೆ ದಾಳಿ ಅಥವಾ ಹಾವಳಿ ಮಾಡುತ್ತವೆ. ಉದಾ: ಅಂತಾರಾಷ್ಟ್ರೀಯ ಘರ್ಷಣೆಗಳು, ಅಂತರ್ಜಾತೀಯ ಕಲಹಗಳು, ಸಮಾಜದೊಳಗೆ ಒಡಕು, ದ್ವೇಷ, ಅಸೂಯೆ, ಯುದ್ಧಗಳು ನಡೆಯುತ್ತವೆ. ಇವುಗಳನ್ನೆಲ್ಲಾ ತಡೆದು ಮಾನವೀಯತೆಯನ್ನು ಬಲಪಡಿಸಬೇಕು ಎಂದು ಪ್ರಕೃತಿ ವಾದಿಗಳು ಬಯಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಇಂತಹ ಪರಿಸ್ಥಿತಿಗಳು ಉಂಟಾಗದಂತೆ ಮುಂಜಾಗರೂಕತೆಯನ್ನು ವಹಿಸಿ

Digitised by Bharatavani, CIIL

ತಡೆಯುತ್ತಾರೆ. ಹೀಗೆ ಮೌಲ್ಯಗಳು ಸ್ವತಃ ಸಂದರ್ಭಕ್ಕನುಸಾರವಾಗಿ ಪ್ರಕೃತಿಯಲ್ಲಿ ಸೃಷ್ಟಿಯಾಗುತ್ತವೆ.

### ವಾಸ್ತವವಾದ ಮತ್ತು ಮೌಲ್ಯಗಳು

ಆದರ್ಶವಾದಿಗಳ ವಿರುದ್ಧವಾಗಿ ಹುಟ್ಟಿಕೊಂಡವಾದವೇ ವಾಸ್ತವವಾದ. ದೈವಿಕ ಶಕ್ತಿಯ ಕುರಿತು ಅವರು ತಟಸ್ಥ ನಿಲುವು ಹೊಂದಿರುತ್ತಾರೆ. ಆದರೆ ಮೌಲ್ಯಗಳ ಕುರಿತು ಮೌಲ್ಯಗಳು ಶಾಶ್ವತವಾಗಿದೆ ಎಂಬುದನ್ನು ಇವರು ಒಪ್ಪುತ್ತಾರೆ. ಮೌಲ್ಯಗಳು ಸರ್ವಾಂತರ್ಯಾಮಿಗಳಾಗಿರುತ್ತವೆ. ಮೌಲ್ಯಗಳೆಲ್ಲವೂ ಪರಮಾತ್ಮನಿಂದಲೇ ರಚಿತವಾಗಿದೆ ಎಂದು ನಂಬುತ್ತಾರೆ. ಪ್ರಾಯೋಗಿಕ ವಾಸ್ತವವಾದಿಗಳು ಮತ್ತು ವಿಜ್ಞಾನಿಗಳು, ಮೌಲ್ಯಗಳು ಭಗವಂತನಿಂದಲೇ ಸೃಷ್ಟಿಯಾಗಿವೆ ಎಂಬುದನ್ನು ಒಪ್ಪುವದಿಲ್ಲ. ಒಳ್ಳೆಯದೆಲ್ಲ ನಮ್ಮನ್ನು ಸೌಹಾರ್ದಯುತವಾಗಿ ಜೀವಿಸಲು ಬಿಡುತ್ತದೆ ಮತ್ತು ಕೆಟ್ಟದ್ದು ನಮಗೆ ಹಾನಿಮಾಡುತ್ತದೆ ಎಂದು ನಂಬುತ್ತಾರೆ. ಹರ್ಬರ್ಟ್ ಸ್ಪೆನ್ಸರ್ ಈ ವಾದವನ್ನು ಪ್ರತಿಪಾದಿಸಿದ್ದಾನೆ.

ವಾಸ್ತವವಾದಿಗಳು ಅದರ ಉಪಯುಕ್ತತಾ ತತ್ವವನ್ನು ಒಪ್ಪಿಕೊಳ್ಳುತ್ತಾರೆ. ಪ್ರಮುಖ ವಾಸ್ತವವಾದದ ಪ್ರತಿಪಾದಿಕ ಸ್ಟುವರ್ಟ್ ಮಿಲ್ಲರ್‌ರವರ ಪ್ರಕಾರ ಮೌಲ್ಯಗಳು ಸಮಾಜಕ್ಕೆ ಹೆಚ್ಚು ಸುಖಸಂಪತ್ತನ್ನು ಹೆಚ್ಚಿನ ಜನರಿಗೆ ತಂದುಕೊಡುತ್ತವೆ. ಈ ಸಂದರ್ಭದಲ್ಲಿನ ಮೌಲ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಪರಂಪರೆಯ ಪ್ರಕಾರ "ಸರ್ವೇಜನಾಃ ಸುಖಿನೋಭವಂತು" ಎಂಬ ವೇದವಾಕ್ಯವನ್ನು ಒಪ್ಪಲೇ ಬೇಕಾಗುತ್ತದೆ.

ವಾಸ್ತವವಾದವು ಸೌಂದರ್ಯೋಪಾಸನಾ ಮೌಲ್ಯಗಳನ್ನು ಬಹಳವಾಗಿ ಮೆಚ್ಚುತ್ತದೆ. ಕಲೆಯಲ್ಲಿ ನಾವು ಅದರ ವಿನ್ಯಾಸಕ್ಕೆ ಮಾತ್ರವಲ್ಲ ಅದರ ವ್ಯವಸ್ಥೆ, ವರ್ಣ ಮತ್ತು ಜೋಡಣೆಗೆ ಹೆಚ್ಚಿನ ಮಹತ್ವವನ್ನು ಕೊಡುತ್ತೇವೆ. ಇವೆಲ್ಲವೂ ಸೌಂದರ್ಯೋಪಾಸನ ಮೌಲ್ಯಗಳು, ಇವನ್ನು ವಾಸ್ತವವಾದಿಗಳು ಇಚ್ಛಿಸುತ್ತಾರೆ.

–ವೈ.ಎನ್.ಶ್ರೀ

## ಮೌಲ್ಯ ಶಿಕ್ಷಣ

ಮೌಲ್ಯಗಳನ್ನು ಮಾನವನ ಬದುಕಿನ ಗುರಿ ಎಂದೂ ನೀತಿಗಳನ್ನು ಆ ಗುರಿಗಳನ್ನು ತಲುಪಲು ಇರುವ ಮಾರ್ಗವೆಂದೂ ತಿಳಿಯಬಹುದು. ಗುರಿಗಿಂತಲೂ ಅದನ್ನು ಸಾಧಿಸಲು ಇರುವ ಮಾರ್ಗವೇ ಪ್ರಧಾನವಾಗಿರುತ್ತದೆ. ಆದುದರಿಂದ ನೈತಿಕತೆಯನ್ನು ಎಂದೂ ತ್ಯಜಿಸದೆ ಮೌಲ್ಯಗಳನ್ನು ಸಾಧಿಸಬೇಕಾದುದು ಕರ್ತವ್ಯ. ಕಲಿಕಾರ್ಥಿಗಳಲ್ಲಿ ಮೌಲ್ಯಗಳುಳ್ಳ ಒಳ್ಳೆಯ ಗುಣಗಳನ್ನು ಯೋಜಿತ ರೀತಿಯಲ್ಲಿ ಬೆಳೆಸಬೇಕೆಂಬುದೇ ಮೌಲ್ಯಶಿಕ್ಷಣದ ಅರ್ಥ. ಕಲಿಕಾರ್ಥಿಯ ವ್ಯಕ್ತಿತ್ವ, ಭೌತಿಕವಾಗಿ, ಬೌದ್ಧಿಕವಾಗಿ, ಭಾವನಾತ್ಮಕವಾಗಿ, ಸಾಮಾಜಿಕವಾಗಿ, ನೈತಿಕವಾಗಿ, ಸೌಂದರ್ಯೋಪಾಸಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸರ್ವಾಂಗೀಣ ಸುಂದರವಾಗಿ ಬೆಳೆಯಬೇಕೆಂಬುದೇ ಮೌಲ್ಯಶಿಕ್ಷಣದ ಮುಖ್ಯವಾಗಿರುವ ಉದ್ದೇಶವಾಗಿದೆ.

ಮೌಲ್ಯಶಿಕ್ಷಣವು ಸಮಾಜ, ಶಿಕ್ಷಣ ಮತ್ತು ಮೌಲ್ಯಗಳೊಂದಿಗೆ ಉತ್ತಮ ಸಂಬಂಧವುಳ್ಳವಾಗಿರಬೇಕು.'ಬದುಕು, ಇತರರೂ ಬದುಕಲು ನೆರವಾಗು' ಎಂಬ ಮೌಲ್ಯದ ಆಧಾರದ ಮೇಲೆ ಮಾನವ ಸಮಾಜ ನಿರಂತರವಾಗಿ ನಡೆದು ಬಂದಿದೆ. ಎಮಿಲಿ ಡರ್ಕಿಂ ಎಂಬ ಫ್ರೆಂಚ್ ನೀತಿಶಾಸ್ತ್ರಜ್ಞನ ಪ್ರಕಾರ ನೈತಿಕತೆಯ ಮೊದಲ ಪಾಠವೇ ಶಿಸ್ತು ಮತ್ತು ಸಮಾಜದ ವರ್ಗಗಳೊಂದಿಗೆ ಇರಬೇಕಾದ ಬಂಧುತ್ವವು ಎರಡನೆಯ ಅಂಶವಾಗಿದೆ. ಇದರಲ್ಲಿ ಮೊದಲನೆಯದು ವ್ಯಕ್ತಿಯ ಮೌಲ್ಯಗಳನ್ನು ಕುರಿತಾಗಿದೆ. ಇವು ಬಾಲ್ಯದಲ್ಲಿ ವ್ಯಕ್ತಿಗೆ ದೊರೆಯುವ ಶಿಕ್ಷಣ ಮತ್ತು ತರಬೇತಿಯಿಂದ ದೊರಕುವುದಾಗಿದೆ.

ಶಾಲಾ ಜೀವನವು ಮೌಲ್ಯಗಳ ತರಬೇತಿಗೆ ಒಳ್ಳೆಯ ಅವಕಾಶವನ್ನು ಒದಗಿಸುತ್ತದೆ. ಮೌಲ್ಯಗಳ ಬೆಳವಣಿಗೆಯಲ್ಲಿ ಶಾಲೆಯು ಮಾರ್ಗದರ್ಶಕನಂತೆ ವರ್ತಿಸುತ್ತದೆ. ಆದುದರಿಂದ ಶಾಲೆ ಮತ್ತು ಶಿಕ್ಷಕರು ಒಳ್ಳೆಯ ಮೌಲ್ಯಗಳನ್ನು ಬೆಳೆಸಬಲ್ಲರು. ಮೌಲ್ಯ ಶಿಕ್ಷಣವು ಅದರ ಸಂಪೂರ್ಣ ಅರ್ಥದಲ್ಲಿ ಯುಕ್ತವಾದ ಪ್ರಜ್ಞೆಯನ್ನು ಬೆಳೆಸಿಕೊಳ್ಳುವಂತೆ ಮಾಡುವುದು. ನೈತಿಕ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯಗಳನ್ನು ಬೆಳೆಸಿಕೊಂಡು ನ್ಯಾಯಯುತವಾದ ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು. ಸ್ಪರ್ಧಾತ್ಮಕವಾದ ಮೌಲ್ಯಗಳಲ್ಲಿ ಆಯ್ಕೆ ಮಾಡಿಕೊಂಡ ಮೌಲ್ಯಗಳನ್ನು ಅಂತರ್ಗತಗೊಳಿಸುವುದು. ಮೌಲ್ಯಗಳ ಕಲಿಕೆಯ ಸಂಪೂರ್ಣ ಚಿತ್ರವು ಕಲಿಕೆಯ ಸ್ಥಾನವನ್ನೇ ಆವರಿಸಿಕೊಂಡಿದೆ. ಅದು ಭಾವನಾತ್ಮಕ ಮತ್ತು ಮನೋವೈಜ್ಞಾನಿಕ ತಂತ್ರವನ್ನೊಳಗೊಂಡು ನೈತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಮೆಚ್ಚಿಕೊಳ್ಳಲು ಮತ್ತು ಸದ್ಗುಣಗಳ ಬೆಳವಣಿಗೆಗೆ ಸಹಾಯವಾಗುತ್ತದೆ.

ಮಿತಿಮೀರಿದ ಮಾನವನ ಬೇಡಿಕೆಗಳು ಶಿಕ್ಷಣ ವ್ಯವಸ್ಥೆಯ ಅವಾಂತರ, ಸ್ವಾರ್ಥತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆ, ಉತ್ತಮ ಸಾಂಸ್ಕೃತಿಕ ಪರಂಪರೆಯ ನಿರ್ಲಕ್ಷ್ಯ, ಜೀವನದ ಎಲ್ಲ ರಂಗಗಳಲ್ಲೂ ಮೌಲ್ಯಗಳ ಅವನತಿಗೆ ಕಾರಣವಾಗಿದೆ. ಇದಕ್ಕೆಲ್ಲ ಪರಿಹಾರವೆಂದರೆ ಪರಿಣಾಮಕಾರಿಯಾದ ಮೌಲ್ಯಾಧಾರಿತ ಶಿಕ್ಷಣವನ್ನು ಶಾಲೆಗಳಲ್ಲಿ ಅಳವಡಿಸುವುದು.

ಮೌಲ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಧಾಕೃಷ್ಣನ್ ಆಯೋಗವು ಶಿಕ್ಷಣದ ಮೂಲಕವೇ ಮೌಲ್ಯಗಳನ್ನು ಬೆಳೆಸಬೇಕೆಂದು ಹೇಳಿದ್ದರೆ, ಮೊದಲಿಯಾರ್ ಶಿಕ್ಷಣ ಆಯೋಗವು ಮಗುವಿನಲ್ಲಿ ಶಾಲಾ ಹಂತದಲ್ಲಿಯೇ ಮೌಲ್ಯಗಳನ್ನು ಬೆಳೆಸುವುದು ಅತಿ ಮುಖ್ಯ ಎಂದಿದೆ. ಕೊಠಾರಿ ಶಿಕ್ಷಣ ಆಯೋಗವು ವ್ಯಕ್ತಿಯಲ್ಲಿ ಜ್ಞಾನ, ಕೌಶಲಗಳಿದ್ದು ನೈತಿಕ ಮೌಲ್ಯಗಳಿಲ್ಲದಿದ್ದರೆ ಅಪಾಯ. ಎಂದರೆ 1986ರ ಶಿಕ್ಷಣ ನೀತಿಯು ಸಹಾ ಮೌಲ್ಯಶಿಕ್ಷಣವು ನಮ್ಮ ಪರಂಪರೆಯಾಗಿದ್ದು ಶಿಕ್ಷಣದಲ್ಲಿ ಇದಕ್ಕೆ ಒತ್ತು ನೀಡಬೇಕೆಂದು ಹೇಳಿದೆ. ಒಟ್ಟಾರೆ ಶಿಕ್ಷಣದ ವ್ಯವಸ್ಥೆಯಲ್ಲಿ ಮೌಲ್ಯಶಿಕ್ಷಣದ ಪ್ರಾಮುಖ್ಯವನ್ನು ಒತ್ತಿ ಹೇಳಲಾಗಿದೆ. ಆದುದರಿಂದ ಇದು ಹೆಚ್ಚು ಹೆಚ್ಚು ಅನುಷ್ಠಾನಗೊಂಡರೆ ಒಳ್ಳೆಯದು.

–ವೈ.ಎನ್.ಶ್ರೀ

## ಮೃತ್ಯು ಶಿಕ್ಷಣ

ಪ್ರತಿಯೊಬ್ಬರ ಜೀವನವು ಹೇಗೆ ಅನನ್ಯವೋ ಹಾಗೆ ಪ್ರತಿಯೊಬ್ಬರ ಮರಣವೂ ಅನನ್ಯವೇ. ಪ್ರತಿ ಮಾನವನ ಜೀವನದ ಕೊನೆಯಲ್ಲಿ ಸಾವು ಅವಿನಾಭಾವವಾದ ಅಂಶ. ಉಳಿಯುವಿಕೆಗಾಗಿ ಸಾವು ಇರಲೇಬೇಕು. ನಮ್ಮ ಮಕ್ಕಳು ಹಾಗೂ ಇತರ ಮಕ್ಕಳು ಚೆನ್ನಾಗಿ ಬದುಕಿ ಬಾಳಲು ನಾವು ಸಾಯಬೇಕು. ಸಾಯುವ ಕಾಲ ಬಂದಾಗ ಪ್ರಕೃತಿಯು ಇತರೆಲ್ಲ ಜೀವಿಗಳನ್ನು ಸಲಹುವಂತೆ ಮಾನವನನ್ನೂ ತನ್ನ ಅನನ್ಯ ಶಕ್ತಿಯಿಂದ ಸಲಹುತ್ತದೆ. ಸಾವನ್ನು ಒಪ್ಪಿಕೊಳ್ಳುವುದು ಕಷ್ಟವಾದರೂ ಒಟ್ಟು ಪ್ರಕೃತಿಯ ಕ್ರಿಯೆಯಲ್ಲಿ ಅದು ಅತ್ಯಂತ ಸಹಜ ಹಾಗೂ ಅನಿವಾರ್ಯ ಎಂಬ ಸಮಾಧಾನಕರವಾದ ಒಪ್ಪಿಗೆ ಮಾನವನಲ್ಲಿರುತ್ತದೆ.

Digitised by Bharatavani, CIIL

ಕೆಲವರು ಮಾತ್ರ ಸಾವನ್ನು ಕುರಿತ ಭೌತಿಕ ಅಂಶಗಳನ್ನು, ಸನ್ನಿವೇಶಗಳನ್ನು ಗಮನಿಸಿರುತ್ತಾರೆ. ಈಚೆಗಂತೂ ಸಾವಿನ ಸನ್ನಿವೇಶಗಳನ್ನು ಜನರು ನೋಡುವುದೂ ಕಡಿಮೆ. ಏಕೆಂದರೆ ಮುಂದುವರಿದ ಈ ದಿನಗಳಲ್ಲಿ ಸಾಮಾನ್ಯವಾಗಿ ಜನರು ಆಸ್ಪತ್ರೆಗಳಲ್ಲಿ ಮರಣಹೊಂದುವುದರಿಂದ ಆ ಸನ್ನಿವೇಶಗಳನ್ನು ಹೆಚ್ಚಾಗಿ ವೈದ್ಯರು ಅಥವಾ ದಾದಿಗಳು ನಿಭಾಯಿಸುತ್ತಾರೆ. ಮರಣಹೊಂದಿದ ನಂತರ ಉಳಿದವರು ನೋಡುತ್ತಾರೆ. ಹೀಗಾಗಿ ಹಿಂದಿನಂತೆ ಜನ ಸಾಯುತ್ತಿರುವಾಗ ಗಮನಿಸುವ, ತಿಳಿದುಕೊಳ್ಳುವ ಅವಕಾಶಗಳು ಕಡಿಮೆ. ಆದಾಗ್ಯೂ ಬಹಳ ಜನರು ತಾವು ಹೇಗೆ ಸಾಯುತ್ತೇವೆ ಎಂದು ತಿಳಿಯಬಯಸುತ್ತಾರೆ.

ನಿಮಗೆ ಹೇಗೆ ಸಾಯಬೇಕು ಎಂದು ಇಷ್ಟ ಎಂದು ಜನರನ್ನು ಕೇಳುವಾಗ ನನಗೆ ಗೌರವದಿಂದ ಅನಾಯಾಸವಾಗಿ ಸಾಯಬೇಕು ಎಂದು ಹೇಳುವುದು ಗಮನಕ್ಕೆ ಬಂದಿರಬಹುದು. ನೋವಿಲ್ಲದ ನಿರಾಯಾಸವಾದ ಸಾವು ಎಲ್ಲರ ಬಯಕೆ. ಆದುದರಿಂದಲೇ ಭಾರತೀಯರಲ್ಲಿ 'ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ, ದೇಹಿ ಮೇ ಶರಣಂ ದೇವ ಮಮ ಜನ್ಮನಿ' ಎಂದು ಕೇಳಿಕೊಳ್ಳುವಂತೆ ಚಿಕ್ಕ ವಯಸ್ಸಿನಿಂದಲೂ ಕೇಳಿಕೊಳ್ಳುವ ಪರಿಪಾಠ ಇದೆ. ಕೊನೆಯ ಗಳಿಗೆಯಲ್ಲಿ ತಿಳಿಯಾದ ಮನಸ್ಸಿನಿಂದ ಲೋಕಕ್ಕೆ ವಿದಾಯ ಹೇಳೇ ಹೋಗಬೇಕು ಎಂಬುದು ಮತ್ತೆ ಕೆಲವರ ಆಸೆ.

ಸಾವು ಎಂಬುದು ಒಂದು ಜೈವಿಕ ಕ್ರಿಯೆಯ ಅಂತ್ಯ. ಶೇ 20 ಜನರಲ್ಲಿ ಸಾವು ನಿರಾಯಾಸವಾಗಿರುತ್ತದೆ. ಉಳಿದವರಲ್ಲಿ ಹಾಗಲ್ಲ. ಆಕಸ್ಮಿಕವಾದ ಸನ್ನಿವೇಶಗಳು ಬಾಲ್ಯ ಮತ್ತು ಯೌವನಗಳಲ್ಲಿ ಸಾವಿಗೆ ಕಾರಣವಾಗಬಹುದು. ಹಿಂದಿಗಿಂತ ಇಂದು ಜನರು ಸಾವಿಗೆ ದೂರವಾಗಿರುವುದು ವೈದ್ಯಕೀಯ ತಂತ್ರಜ್ಞಾನದಿಂದ. ಸಾವು ಎಂಬುದು ಎಷ್ಟೇ ಕಡಿಮೆ ಅವಧಿಯಲ್ಲಿ ಸಂಭವಿಸಿದರೂ ಅದು ಒಮ್ಮೆಗೇ ಆಗುವುದಿಲ್ಲ. ಈ ಘಟನೆಯಲ್ಲಿ ಅಂಗಗಳು ಒಂದಾದಮೇಲೊಂದರಂತೆ ಸರಣಿಯಲ್ಲಿ ನಿಧಾನವಾಗಿ ನಿಷ್ಕ್ರಿಯವಾಗುತ್ತವೆ. ಈ ಸರಣಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.

ಸಾವು ಮತ್ತು ಅದರಾಚೆಗಿನ ಸತ್ಯಗಳು ಅಗೋಚರವಾದುದರಿಂದ ಅದು ಭಯ ಹುಟ್ಟಿಸುತ್ತದೆ. ಹಾಗಾಗಿ ಸಾವಿಗೆ ಸಂಬಂಧಿಸಿದ ಭಾವನಾತ್ಮಕ ಭಯಗಳನ್ನು ಎದುರಿಸುವುದು ಕಷ್ಟದ ಕೆಲಸ. ಕೆಲವೊಮ್ಮೆ ಆ ಹೆಸರು ಕೇಳಲೂ ಭಯಪಡುವವರುಂಟು. ಆದರೆ ಅನಿವಾರ್ಯವಾದ ಸತ್ಯವನ್ನು ಹೆಚ್ಚು ಅರಿವಿನೊಂದಿಗೆ ಯೋಚಿಸುವಾಗ ಅದನ್ನು ಒಪ್ಪಿಕೊಳ್ಳುವುದು ಸುಲಭವಾಗುತ್ತದೆ. ಈ ಒಪ್ಪಿಗೆ ಒಮ್ಮೆಗೇ ಬರುವಂತಹುದೂ ಅಲ್ಲ. ಈ ಸಾವನ್ನು ಕುರಿತಂತೆ ಸಾಯುವ/ ಸಾಯುತ್ತಿರುವ ವ್ಯಕ್ತಿಗೆ ವಿಶೇಷವಾದ ಅರಿವಿನ ಆವಶ್ಯಕತೆ ಎಷ್ಟಿರುತ್ತದೆಯೋ ಅಷ್ಟೇ ಅವನ ಸುತ್ತ ಇರುವವರಿಗೂ ಅದು ಅವಶ್ಯವಾಗಿರುತ್ತದೆ. ಇದಕ್ಕಾಗಿಯೇ ಮರಣವನ್ನು ಕುರಿತ ಶಿಕ್ಷಣದ ಅವಶ್ಯಕತೆ ಎಲ್ಲರಿಗೂ ಇರುತ್ತದೆ. ವ್ಯಕ್ತಿ ತನ್ನ ಸಾವನ್ನು ಇತ್ಯಾತ್ಮಕವಾಗಿ ಒಪ್ಪಿಕೊಂಡು ಅಗತ್ಯವಾದ ಸಮಸ್ಥಿತಿಯನ್ನು ಕಾಪಾಡಿಕೊಳ್ಳುವಲ್ಲಿ ಮತ್ತು ಇತರರಿಗೆ ನಿರ್ದಿಷ್ಟ ಸಂದರ್ಭಗಳಲ್ಲಿ ಅಪೇಕ್ಷಣೀಯವಾದ ಪ್ರತಿಕ್ರಿಯೆಯನ್ನು ತೋರುವುದಿಲ್ಲ. ಮೃತ್ಯು ಶಿಕ್ಷಣ ಸಹಕಾರಿಯಾಗುತ್ತದೆ. ಇದೇ ಮೃತ್ಯು ಶಿಕ್ಷಣದ ಅರ್ಥವೂ ಹೌದು, ಉದ್ದೇಶವೂ ಹೌದು.

ಬದುಕು ಮತ್ತು ಸಾವು ಇವುಗಳ ನಡುವಿನ ಮಧ್ಯದ ಗೆರೆ ಅತಿ ಸ್ಪಷ್ಟವಿಲ್ಲದಿರುವುದರಿಂದ ಬದುಕು ಉಳಿಸುವ ಕ್ರಿಯೆ ಯಾವಾಗ ನಿಲ್ಲಬೇಕು. ಸಂಬಂಧಿಕರು ಯಾವಾಗ ದುಃಖಿಸಲು ಪ್ರಾರಂಭಿಸಬೇಕು. (ದುಃಖವನ್ನು ತ್ಯಜಿಸಿ ತಮ್ಮ ಜೀವನವನ್ನು ಪುನಾರಚಿಸಿಕೊಳ್ಳಲು) ದಾನಮಾಡಿದ ಅಂಗಾಂಗಗಳನ್ನು ಯಾವಾಗ ತೆಗೆಯಬೇಕು ಇತ್ಯಾದಿಗಳನ್ನು ನಿರ್ಧರಿಸಿಕೊಳ್ಳಲು ಸಾವು ಎಂಬುದರ ವ್ಯಾಖ್ಯೆ ಅತ್ಯಗತ್ಯ.

ಹಿಂದಿನ ಕಾಲದಲ್ಲಿ ಉಸಿರಾಟ ಮತ್ತು ಹೃದಯ ಬಡಿತ ನಿಲ್ಲುವುದನ್ನೇ 'ಮರಣ' ಎಂದು ಘೋಷಿಸಲಾಗುತ್ತಿತ್ತು. ಇಂದು ಈ ನಿರ್ಣಯಗಳು ಸಮರ್ಪಕವಲ್ಲ ಎಂದು ಕಂಡುಬಂದಿವೆ. ಏಕೆಂದರೆ ತಂತ್ರಗಳು ಬದುಕಿಸುವಲ್ಲಿ ಯಶಸ್ವಿಯಾಗಿದೆ. ಇಂದು ಮಿದುಳಿನ ಸಾವನ್ನು ಅಂದರೆ ಮಿದುಳು ಕೆಲಸ ಮಾಡಲು ನಿಲ್ಲಿಸುವ ಸ್ಥಿತಿಯನ್ನೇ ಮರಣ ಎಂದು ಅನೇಕ ಕೈಗಾರಿಕಾ ರಾಷ್ಟ್ರಗಳಲ್ಲಿ ಮರಣ ಎಂದು ಒಪ್ಪಿಕೊಳ್ಳಲಾಗಿದೆ. ಮರಣದ ವ್ಯಾಖ್ಯೆ ಎಲ್ಲ ದೇಶಗಳಲ್ಲೂ ಒಂದೇ ತೆರನಾಗಿಲ್ಲ. ಜಪಾನೀಯರು ಇಂದಿಗೂ ಸಾಂಪ್ರದಾಯಿಕ ಮಾನದಂಡಗಳನ್ನೇ ಬಳಸುತ್ತಾರೆ.

ಹೆಚ್ಚು ಜನರು ಅಪೇಕ್ಷಿಸುವ ಸುಲಭವಾದ ಸರಾಗವಾದ ನಿರಾಯಾಸವಾದ ಮರಣವನ್ನು ಪ್ರಕೃತಿ ಅಪರೂಪವಾಗಿ ಆಗುವಂತೆ ಮಾಡುತ್ತದೆ. ವೈದ್ಯಕೀಯ ವಿಜ್ಞಾನವೂ ಇದನ್ನು ಖಾತ್ರಿಗೊಳಿಸುವುದಿಲ್ಲ. ಆದುದರಿಂದ ಮರಣದ ವಿಷಯದಲ್ಲಿ ಅತಿ ಪ್ರಮುಖವಾದ ವಿಷಯ ಎಂದರೆ ಸಮನ್ವಯತೆ, ಈ ಸಮನ್ವಯತೆಯನ್ನು ಉಂಟುಮಾಡುವಲ್ಲಿ ಸದ್ಯ ಬದುಕಿರುವವರ ಪಾತ್ರ ಅತಿ ವಿಶಿಷ್ಟವಾದುದು. ವಿಶಿಷ್ಟ ಸಂವಹನದ ಮೂಲಕ ಈ ಸಮನ್ವಯತೆಯನ್ನು ಬೆಳೆಸಲು ಸಾಧ್ಯ. ಸಾಯುವವನ ದೈಹಿಕ ಮತ್ತು ಮನೋವೈಜ್ಞಾನಿಕ ಸಂಕಟದ ಸನ್ನಿವೇಶದಲ್ಲಿ ನಾವು ಭಾವನಾತ್ಮಕವಾಗಿಯಾದರೂ ಅವನ ಜೊತೆ ಇದ್ದೇವೆ. ಅವನು ನಮಗೆ ಅತ್ಯಂತ ಪ್ರೀತಿಪಾತ್ರನಾದವ ಎಂಬುದನ್ನು ಅವರಿಗೆ ತೋರಿಸಿಕೊಡಬೇಕು. ನಾವು ಅವರಿಗೆ ಏನು ಬೇಕಾದರೂ ಮಾಡಲು ಸಿದ್ಧರಿದ್ದೇವೆ ಎಂಬ ವಿಶ್ವಾಸ ಮೂಡಿಸಬೇಕು. ಮಾನವೀಯವಾದ ಹಾಗೂ ದಯಾಮಯವಾದ ನೆಲೆಗಳಲ್ಲಿ ಸುತ್ತಲಿನವರು ಏನೇನು ಮಾಡಬಹುದೋ ಎಲ್ಲವನ್ನೂ ಮಾಡಲು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಿದ್ಧರಿರಬೇಕು. ಅವರಿಗೆ ಜೀವನದಲ್ಲಿ ಅತ್ಯಂತ ಮೌಲ್ಯಯುತವಾದದ್ದು ಏನು ಎಂಬುದನ್ನು ಮಾಡುವುದರ ಮೂಲಕ ಅವರಿಗೆ ಸಮಾಧಾನವನ್ನೂ ಸಂತೋಷವನ್ನೂ ಉಂಟುಮಾಡಬಹುದು.

ಸಾವಿನ ನಿಶ್ಚಿತತೆಯ ಬಗ್ಗೆ ನಾವು ಹೆಚ್ಚು ಸ್ಪಷ್ಟವಾಗಿರಬೇಕು. ನಾವೂ ಸಾಯುತ್ತಿದ್ದೇವೆ ಎಂದು ತಿಳಿದುಕೊಳ್ಳದಿದ್ದರೆ, ಸಾಯುವ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲಾಗದಿದ್ದರೆ ಅಂತಹವರು ಸಾವಿನಗಳಿಗೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಲೀ ನಿರ್ಧಾರ ಮಾಡುವುದಾಗಲೀ ಸಾಧ್ಯವಿಲ್ಲ. ತಮ್ಮ ಆತ್ಮೀಯರೊಂದಿಗೆ ಕೊನೆಗಳಿಗೆಯ ಭಾವನೆಗಳನ್ನು ಇತರರಿಗೆ ತಮ್ಮ ಕೃತಜ್ಞತೆಯನ್ನು ಹಂಚಿಕೊಳ್ಳಲಾಗುವುದಿಲ್ಲ.

ವೈದ್ಯರು ಮತ್ತು ದಾದಿಗಳು ಈ ದಿಶೆಯಲ್ಲಿ ಹೆಚ್ಚು ಸಹಾಯ ಮಾಡಬಹುದು. ಸಾಯುತ್ತಿರುವಾಗ ಅವರ ಸ್ಥಿತಿಯನ್ನು ತಿಳಿಯಹೇಳಿ ಮುಂದಿನ ಸೇವೆಯನ್ನು ನಿಲ್ಲಿಸಲು ಅಥವಾ ಮುಂದುವರಿಸಲು ಸಮರ್ಪಕ ನಿರ್ಣಯಗಳನ್ನು ಕೈಗೊಳ್ಳಬಹುದು. ಒಂದು ಆರೋಗ್ಯವಂತ ದೇಹ ಹೇಗೆ ಕೆಲಸಮಾಡುತ್ತದೆ ಎಂಬುದನ್ನು ಅತಿ ಸರಳವಾಗಿ ಗ್ರಹಿಕೆಗೆ ತಂದರೆ ರೋಗಗಳು ಹೇಗೆ ತಗಲುತ್ತವೆ, ಮಾನವ ಹೇಗೆ ಸಾಯುತ್ತಾನೆ ಎಂಬ ಅರಿವು ಸುಲಭವಾಗಿ ಸಿಗುತ್ತದೆ. ಆದುದರಿಂದ ದೇಹವನ್ನು ಕುರಿತ ಶಿಕ್ಷಣ ಅತಿ ಕಡಿಮೆ ತರಗತಿಯಿಂದಲೇ ಆರಂಭವಾಗಬೇಕು. ಆಗ ಸಾಯುವುದೆಂದರೇನು? ಎಂಬುದರ ಅರ್ಥ ಸ್ಪಷ್ಟವಾಗುತ್ತದೆ.

ಸಾಯುತ್ತಿರುವ ವ್ಯಕ್ತಿಗೆ ಪ್ರೀತಿ, ವಾತ್ಸಲ್ಯ, ಕರುಣೆ ಹೀಗೆ ಮಾನವೀಯವಾದ ವರ್ತನೆಗಳಿಂದ ನಿರಾಳವಾದ ಸಮಾಧಾನಕರವಾದ ಸಾವಿಗೆ ಸಹಕರಿಸಬಹುದು. ಪರಿಸ್ಥಿತಿಯನ್ನು ಕುರಿತ ಸತ್ಯದ ಅರಿವು


Digitised by Bharatavani, CIIL

ಮತ್ತು ಬದುಕಿನ ಅಂತಿಮ ಘಟ್ಟದ ಮೇಲಿನ ನಿಯಂತ್ರಣ ಇವುಗಳು ಒಳ್ಳೆಯ ಸಾವಿನ ಪ್ರಮುಖ ಅಂಶಗಳು.

ಒಂದು ಶತಮಾನದ ಹಿಂದೆ ಬಹಳಷ್ಟು ಸಾವುಗಳು ಮನೆಯಲ್ಲೇ ಆಗುತ್ತಿದ್ದವು. ಎಲ್ಲ ವಯಸ್ಸಿನವರೂ ಮಕ್ಕಳೂ ಸೇರಿದಂತೆ ಕುಟುಂಬದಲ್ಲಿ ಸಾಯುತ್ತಿರುವವರಿಗೆ ಸಮಾಧಾನ ಸಹಾಯ ಎಲ್ಲವೂ ಮಾಡುತ್ತಿದ್ದರು. ಸಾಯುವವರ ಪಕ್ಕದಲ್ಲಿದ್ದು ಧೈರ್ಯ ಹೇಳುತ್ತಿದ್ದರು. ಮನೆಗೆ ಸೇರಿದ ಗದ್ದೆಯಲ್ಲೋ ಹೊಲದಲ್ಲೋ ಅವರ ಅಂತ್ಯ ಸಂಸ್ಕಾರವನ್ನೂ ಮಾಡುತ್ತಿದ್ದರು. ಆ ಸ್ಥಳಕ್ಕೆ ಆಗಾಗ ಹೋಗಿ ಬಂದು ಆ ಸಂಬಂಧದ ಕೊಂಡಿಯನ್ನು ಗಟ್ಟಿಯಾಗಿಡುತ್ತಿದ್ದರು. ಕಂದಮ್ಮಗಳ ಮಕ್ಕಳು ಸಾಯುವುದು ಸಾಮಾನ್ಯವಾದುದರಿಂದ ಎಲ್ಲ ವಯಸ್ಸಿನವರೂ ಸಾಯುವುದನ್ನೂ ನೋಡಿ ಮಕ್ಕಳಿಗೂ ತಮ್ಮ ಅಥವಾ ಇತರ ಕುಟುಂಬದವರ ಸಾವನ್ನು ಅನುಭವಿಸಿದ ಅನುಭವವಿತ್ತು.

ಹಿಂದಿನ ಪೀಳಿಗೆಗೆ ಹೋಲಿಸಿದಾಗ ಇಂದು ಮಕ್ಕಳನ್ನು ಸಾವನ್ನು ಗಮನಿಸುವ ಅನುಭವದಿಂದ ರಕ್ಷಿಸಲಾಗುತ್ತದೆ. ಬಹಳಷ್ಟು ಮಕ್ಕಳು ವಯಸ್ಕರಾದರೂ ಹತ್ತಿರದವರ ಸಾಯುವಿಕೆಯಿಂದಾಗುವ ಅನುಭವವನ್ನು ಪಡೆದಿರುವುದೇ ಇಲ್ಲ. ಅವರು ಹಾಗೆ ಅನುಭವಿಸುವಾಗಲೂ ಬಹಳಷ್ಟು ಸಮಯಗಳಲ್ಲಿ ಆಸ್ಪತ್ರೆಗಳಲ್ಲೇ ಪ್ರಾಣ ಹೋಗಿರುತ್ತದೆ. ಹಾಗಾಗಿ ವ್ಯಕ್ತಿ. ಸಾಯುವ ಸಮಯದಲ್ಲಿ ಅವರನ್ನು ನೋಡಿರುವುದಿಲ್ಲ. ಸಾವಿನೊಂದಿಗಿನ ಈ ದೂರ ಸಾವನ್ನು ಕುರಿತಂತೆ ಒಂದು ರೀತಿಯ ಭಯವನ್ನೋ ಅಹಿತಕರ ಅನುಭವವನ್ನೋ ಉಂಟುಮಾಡುತ್ತದೆ. ದೂರದರ್ಶನ, ಚಲನಚಿತ್ರಗಳು, ಆಕಸ್ಮಿಕಗಳ ವರದಿ ಇವೆಲ್ಲವುಗಳಿಗೆ ತೆರೆದುಕೊಂಡಿದ್ದರೂ ನಾವು ಸಾವನ್ನು ಒಪ್ಪಿಕೊಳ್ಳದ ಸಂಸ್ಕೃತಿಯಲ್ಲಿ ಬದುಕುತ್ತಿದ್ದೇವೆ. ವಯಸ್ಕರು ಮಕ್ಕಳ ಜೊತೆಗೆ ಮರಣವನ್ನು ಕುರಿತು ಮಾತಾಡಲು ಇಷ್ಟಪಡುವುದಿಲ್ಲ. ಅವರು ಸತ್ತು ಹೋದರು ಎಂದು ಹೇಳುವ ಬದಲಿಗೆ 'ದೇವರ ಪಾದ ಸೇರಿದರು' 'ಪರಂಧಾಮವನ್ನೈದಿದರು' 'ತೀರಿಕೊಂಡರು' ಎಂದು ಹೇಳುವ ಮಾತುಗಳು ಸಾವನ್ನು ಒಪ್ಪಿಕೊಳ್ಳದೇ ಇರುವುದಕ್ಕೆ ಸಾಕ್ಷಿ.

ಬಾಲ್ಯದಲ್ಲಿ ಮಕ್ಕಳಿಗೆ ಸಾವಿನ ಕಲ್ಪನೆ ಬರುವುದೂ ಕಷ್ಟವೇ. ಅವರ ಆ ಅನುಭವವನ್ನು ಗಮನಿಸುವಾಗ ಅಂತಹ ಗಂಭೀರ ಕ್ಷಣಗಳಲ್ಲೂ ಅವರ ಆ ಮುಗ್ಧತೆಯನ್ನು ಮನಸ್ಸು ಸವಿಯುತ್ತದೆ. "ನನ್ನ ಪಪ್ಪಿ ಬೆಳಿಗ್ಗೆ ನಾನು ಶಾಲೆಗೆ ಬರುವಾಗ ಸತ್ತುಹೋಗಿತ್ತು, ಸದ್ಯ ನಾನು ಹೋಗುವಾಗ ಎದ್ದಿದ್ದರೆ ಸಾಕು' ಎಂದು ಬೇಬಿ ಹೇಳುವಾಗ ಅವಳ ಗೆಳತಿ ಮಹಾ ಅನುಭವಿಯಂತೆ 'ಸತ್ತು ಹೋಗಿದ್ದರೆ ಅದು ಹೇಗೆ ಏಳಲು ಸಾಧ್ಯ? ಅದಿನ್ನು ಮುಂದೆ ಏಳುವುದಿಲ್ಲ. ಆಡುವುದಿಲ್ಲ. ತಿನ್ನುವುದಿಲ್ಲ' ಎಂದು ಸಾಯುವಿಕೆಯ ವ್ಯಾಖ್ಯಾನವನ್ನು ತನ್ನದೇ ಮಾತುಗಳಲ್ಲಿ ಮಾಡುವುದನ್ನು ನಾವು ಗಮನಿಸಿದ್ದೇವೆ. ಸತ್ತ ಕಪ್ಪೆ ಹಲ್ಲಿ ಇತ್ಯಾದಿ ಜಂತುಗಳೊಡನೆ ಆಡುವಾಗ 'ಅದನ್ನು ಬಿಡು ಮಗ, ಅದು ಸತ್ತುಹೋಗಿದೆ' ಎಂದರೆ ತಕ್ಷಣವೇ 'ಸತ್ತುಹೋಗಿದೆ ಎಂದರೇನು' ಎಂದು ಕೇಳಿಯೇ ಕೇಳುತ್ತದೆ. ಆ ಸಮಯದಲ್ಲಿ ಏನು ಹೇಳಲಾರದೆ ಮೂಕರಾಗಿರುವಂತಹ ಅನುಭವ ಅನೇಕರಿಗಿರಬಹುದು.

ಸಾವಿನ ನೈಜ ಅರಿವು ಮೂರು ವಿಚಾರಗಳನ್ನು ಅವಲಂಬಿಸಿದೆ.

ಶಾಶ್ವತತೆ : ಒಮ್ಮೆ ಜೀವಂತವಾದುದು ಸತ್ತರೆ ಪುನಃ ಜೀವ ಬರುವುದಿಲ್ಲ.

ಸಾರ್ವತ್ರಿಕತೆ/ಸಾರ್ವಕಾಲಿಕತೆ : ಎಲ್ಲ ಜೀವಂತವಾದವುಗಳೆಲ್ಲವೂ ದಿನಕಳೆಯುತ್ತಿದ್ದಂತೆ ಒಂದು ಕಾಲದಲ್ಲಿ ಸಾಯುತ್ತವೆ.

ನಿಷ್ಕ್ರಿಯತೆ : ಎಲ್ಲ ಜೀವಂತ ಕ್ರಿಯೆಗಳೂ ಆಲೋಚನೆ, ಭಾವನೆ, ಚಲನೆ ಹಾಗೂ ದೈಹಿಕ ಕ್ರಿಯೆಗಳೂ ಸತ್ತು ಹೋಗುತ್ತವೆ.

ಸ್ಪಷ್ಟವಾಗಿ ಅರಿವಿಲ್ಲದಿದ್ದರೂ 7 ರಿಂದ 9 ವರ್ಷ ವಯಸ್ಸಿನ ಮಕ್ಕಳ ಸಾವನ್ನು ಈ ಮೂರು ಅಂಶಗಳಿಂಧ ಅರ್ಥಮಾಡಿಕೊಳ್ಳುತ್ತಾರೆ. ಚಿಟ್ಟೆ ಸತ್ತುಹೋಗಿದೆ ಎಂದಕೂಡಲೇ 'ಓ ಇದಿನ್ನು ಪುನಃ ಜೀವಪಡೆಯುವುದಿಲ್ಲ' ಎಂಬ ಅರಿವು ಅವರಿಗಿರುತ್ತದೆ. ಇದನ್ನು ಅವರು ಇತರ ಸನ್ನಿವೇಶಗಳಲ್ಲಿ – ಹಲ್ಲಿ, ನಾಯಿ, ಚೇರಂಟೆ – ಕಂಡಿರುತ್ತಾರೆ. ಸಾರ್ವತ್ರಿಕತೆಯ ಅಂಶ ಅವರಿಗೆ ಸ್ವಲ್ಪ ನಿಧಾನವಾಗಿ ಅರ್ಥವಾಗುತ್ತವೆ. ಕೆಲವರು ಸಾಯುವುದೇ ಇಲ್ಲ ಎಂಬುದು ಅವರ ಭಾವನೆ, ಅದರಲ್ಲೂ ಅವರಿಗೆ ತುಂಬಾ ಹತ್ತಿರದವರು – ಅಮ್ಮ, ಅಪ್ಪ ಇತ್ಯಾದಿ. ತಮ್ಮಂತೆಯೇ ಇರುವ ಇತರ ಮಕ್ಕಳೂ ಸಾಯುವುದಿಲ್ಲ ಎಂದು ಮೊದಮೊದಲು ಅವರು ಭಾವಿಸುತ್ತಾರೆ. ನಿಷ್ಕ್ರಿಯತೆಯ ಅಂಶ ಮಕ್ಕಳಿಗೆ ಅರ್ಥವಾಗುವುದು ಕಷ್ಟ. ಕಣ್ಣಿಗೆ ಕಾಣುವಂತೆ ಉಸಿರಾಟ ನಿಲ್ಲುವುದು ಇತ್ಯಾದಿ ಅಂಶಗಳು ಅವರಿಗೆ ಅರ್ಥವಾಗುವುದಾದರೂ ಆಲೋಚನೆ, ಭಾವನೆಗಳು ಕನಸುಕಾಣುವಿಕೆ ಎಲ್ಲವೂ ನಿಂತುಹೋಗುತ್ತವೆ ಎಂಬುದು ನಿಧಾನವಾಗಿ ಅರ್ಥವಾಗುತ್ತವೆ. ಮಧ್ಯಬಾಲ್ಯದ ವೇಳೆಗೆ ಮಕ್ಕಳಿಗೆ ಸಾವಿನ ಬಗೆಗಿನ ಚಿತ್ರ ಸಿಗುವುದಾದರೂ ಎಲ್ಲ ಮಕ್ಕಳಲ್ಲೂ ಈ ಪರಿಕಲ್ಪನೆ ಒಂದೇ ರೀತಿಯಾಗಿರುತ್ತದೆ ಎಂದು ಹೇಳಬರುವುದಿಲ್ಲ.

ಬಾಲ್ಯದಲ್ಲಿ ಎಲ್ಲ ಮಕ್ಕಳಿಗೆ ಸಾವಿನಬಗ್ಗೆ ಇರುವ ಅರಿವು ಒಂದೇ ತೆರನಾಗಿರುವುದಿಲ್ಲ. ಅಪಾಯ ಹೆಚ್ಚಿರುವ ಸ್ಥಳಗಳಲ್ಲಿ ದುಷ್ಕರ್ಮಿಗಳ ಕಿರುಕುಳ, ರಕ್ಷಣಾ ಪಡೆಗೆ ಸೇರಿದವರ ಮಕ್ಕಳು–ವಾಸಿಸುವ ಮಕ್ಕಳಿಗೆ ಸಾವಿನ ಅರಿವು ಇತರ ಮಕ್ಕಳಿಗಿಂತ ಬೇಗ ಮತ್ತು ಹೆಚ್ಚು ಸ್ಪಷ್ಟವಾಗಿರುತ್ತದೆ. ಧಾರ್ಮಿಕ ಬೋಧನೆಗಳು ಮಕ್ಕಳ ಅರಿವಿನ ಮೇಲೆ ಪರಿಣಾಮ ಬೀರುತ್ತವೆ. ಕ್ರಿಶ್ಚಿಯನ್ ಮತ್ತು ಜ್ಯೂ ಧರ್ಮಕ್ಕೆ ಸೇರಿದ ಮಕ್ಕಳಿಗೆ ಸಾವಿನ ಕಲ್ಪನೆ ಇತರ ಕೆಲವು ಪಂಗಡಗಳ ಮಕ್ಕಳಿಗಿಂತ ಚೆನ್ನಾಗಿ ಇರುತ್ತದೆ ಎಂದು ಸಂಶೋಧನೆಗಳು ಹೇಳುತ್ತವೆ.

ಹೆಚ್ಚು ಪೋಷಕರು ಮಕ್ಕಳೊಡನೆ ಸಾವನ್ನು ಕುರಿತಂತೆ ಚರ್ಚಿಸುವುದು ಅವರಲ್ಲಿ ಭಯವನ್ನು ಹೆಚ್ಚು ಮಾಡುತ್ತದೆ ಎಂದು ಯೋಚಿಸುತ್ತಾರೆ. ಅದರ ಬದಲಿಗೆ ಸಾವನ್ನು ಕುರಿತ ಸ್ಪಷ್ಟ ಅರಿವನ್ನು ಉಂಟು ಮಾಡಿದಷ್ಟೂ ಮುಂದೆ ಅವರು ಅದನ್ನು ಚೆನ್ನಾಗಿ ಒಪ್ಪಿಕೊಳ್ಳುತ್ತಾರೆ. ಇಂತಹ ವಿಷಯಗಳನ್ನು ಕುರಿತ ಅರಿವು ಅವರು ದೊಡ್ಡವರಾದಂತೆ ಒಂದು ಅಧ್ಯಾತ್ಮಿಕ ಅಥವಾ ತಾತ್ವಿಕ ದೃಷ್ಟಿಯಿಂದ ಸಾವನ್ನು ಅರ್ಥಮಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ.

ಹೆತ್ತವರು ಸಾಂಪ್ರದಾಯಿಕವಾದ ಅಥವಾ ಕ್ಲೀಷೆಯಾದ ಹೇಳಿಕೆಗಳನ್ನು ಮಕ್ಕಳು ಅದರ ಪದಶಃ ಅರ್ಥವನ್ನು ಗ್ರಹಿಸಿ ಕಸಿವಿಸಿಗೊಳ್ಳುವ ಸಾಧ್ಯತೆಗಳಿವೆ. "ತಾತ ದೇವರಲ್ಲಿ ಹೋದರು" ಎಂದೋ ಅವರು ಮೇಲೆ ಹೋದರು ಎಂದೋ ಹೇಳಿದರೆ ಮಗು "ಅಯ್ಯೋ, ನನ್ನನ್ನೇಕೆ ಕರೆದುಕೊಂಡು ಹೋಗಲಿಲ್ಲ" ಎಂದುಕೊಳ್ಳಬಹುದು. ಕೆಲವೊಮ್ಮೆ ಮಕ್ಕಳು ಉತ್ತರಿಸಲು ಅತಿ ಕಷ್ಟವಾದ ಪ್ರಶ್ನೆಗಳನ್ನು ಕೇಳಬಹುದು. "ನಾನು ಸಾಯುತ್ತೇನೆಯೇ?" "ನೀನೂ ಸಾಯುತ್ತೀಯಾ?" ಇಂತಹ ಸಂದರ್ಭಗಳಲ್ಲಿ 'ಇನ್ನೂ ತುಂಬಾ ತುಂಬಾ ವರ್ಷಗಳಾದ ಮೇಲೆ, ಮೊದಲು ನಾನು ಅಷ್ಟು ಹೊತ್ತಿಗೆ ನೀನು ತಾತನಾಗಿರುತ್ತೀಯ ಇತ್ಯಾದಿ ಸುಲಭ ಸತ್ಯವನ್ನು ಹೇಳಬಹುದು.

ತಾರುಣ್ಯಾವಸ್ಥೆಯ ಮಕ್ಕಳು ಸುಲಭವಾಗಿ ಸಾವಿನ ಶಾಶ್ವತತೆ, ಸಾರ್ವತ್ರಿಕತೆ ಮತ್ತು ನಿಷ್ಕ್ರಿಯತೆಯನ್ನು ಕುರಿತು ಹೇಳಬಲ್ಲರು. ಆದರೆ

Digitised by Bharatavani, CIIL

ತಾರ್ಕಿಕ ಅರಿವನ್ನು ನೈಜತೆಯೊಂದಿಗೆ ಬೆಸೆದು ಒಪ್ಪಿಕೊಳ್ಳುವುದು ಅವರಿಗೆ ಕಷ್ಟ. ಹಾಗಾಗಿ ಸಾವನ್ನು ಕುರಿತ ಅವರ ಪರಿಕಲ್ಪನೆ ಇನ್ನೂ ಮಾಗಿರುವುದಿಲ್ಲ. ಈ ಹಂತದ ಮಕ್ಕಳಿಗೆ ಸಾವಿನ ಶಾಶ್ವತತೆ ಮತ್ತು ನಿಷ್ಕ್ರಿಯತೆಯ ಬಗ್ಗೆ ತಿಳಿದಿದ್ದರೂ ಅಂತಹ ವಿಷಯಗಳ ಪ್ರಸ್ತಾಪ ಬಂದಾಗ ಅವರು ತಮ್ಮ ಗಮನವನ್ನು ಬೇರೆಡೆ ತಿರುಗಿಸುತ್ತಾರೆ. ಹಾಗಾಗಿ ಬದುಕು ಮತ್ತು ಸಾವನ್ನು ಬೇರ್ಪಡಿಸುವ ಅಂಶಗಳು ಬಾಲ್ಯದ ಹಂತಕ್ಕಿಂತ ತಾರುಣ್ಯದಲ್ಲಿ ಮಸುಕಾಗಿರುತ್ತವೆ. ಅವರ ಪ್ರಕಾರ 'ಅದೊಂದು ಬದಲಾವಣೆಯ ಹಂತ', ಕತ್ತಲು, ಏನೂ ಇಲ್ಲದಿರುವಿಕೆ ಇತ್ಯಾದಿ ಅವರ ಮಾತುಗಳು ಸಾವನ್ನು ತಿಳಿಸುತ್ತವೆ. ಸಾವಿನ ನಂತರದ ಜೀವನದ ಬಗ್ಗೆಯೂ ಅವರದ್ದೇ ಆದ ಸಿದ್ಧಾಂತಗಳಿರುತ್ತವೆ. ಸ್ವರ್ಗ, ನರಕಗಳ ಕಲ್ಪನೆಯ ಜೊತೆಗೆ ಪುನರವತಾರ, ಪರಕಾಯ ಪ್ರವೇಶ, ಆಧ್ಯಾತ್ಮಿಕವಾಗಿ ಪುನಃ ಬದುಕಿಬರುವುದು ಇತ್ಯಾದಿ ವಿಷಯಗಳ ಬಗ್ಗೆಯೂ ಅವರು ತಲೆಕೆಡಿಸಿಕೊಳ್ಳುತ್ತಾರೆ.

ಸಾವಿನ ಪ್ರಮಾಣ ತಾರುಣ್ಯದಲ್ಲಿ ಬಾಲ್ಯ ಹಾಗೂ ವೃದ್ಧಾಪ್ಯ ಇವುಗಳಿಗಿಂತ ಕಡಿಮೆ. ಆದರೂ ಆಗುವ ಇಂತಹ ಸಾವುಗಳು ಬಹಳ ಮಟ್ಟಿಗೆ ಹಠಾತ್ತಾಗಿ ಅಥವಾ ಆಕಸ್ಮಿಕವಾಗಿ ಆಗುವಂತಹವು. ಸಾವು ಎಲ್ಲರಿಗೂ ಬರುತ್ತವೆ. ಇದು ಯಾವಾಗ ಬೇಕಾದರೂ ಬರುತ್ತದೆ ಎಂಬುದರ ಸ್ಪಷ್ಟ ಅರಿವು ಇವರಿಗಿರುತ್ತದೆ. ಅಂದಮಾತ್ರಕ್ಕೆ ಇವರು ಸಾವು ಬಾರದಂತೆ ರಕ್ಷಿಸಿಕೊಳ್ಳುವವರಲ್ಲ. ಅವರು ಅತಿ ಹೆಚ್ಚು ಸವಾಲುಗಳಿಗೆ ಒಡ್ಡಿಕೊಳ್ಳುವುದನ್ನು ನೋಡಿದರೆ ಅವರು ಸಾವನ್ನು ವೈಯುಕ್ತಿಕವಾಗಿ ತೆಗೆದುಕೊಳ್ಳುವುದಿಲ್ಲವೆನಿಸುತ್ತದೆ. ಸಾವಿನ ಬಗ್ಗೆ ಏನನ್ನಾದರೂ ಕೇಳಿದರೆ "ಅದರ ಬಗ್ಗೆ ಏಕೆ ತಲೆಕೆಡಿಸಿಕೊಳ್ಳುವುದು? ಅದನ್ನು ಕುರಿತಂತೆ ನಾವೇನು ಮಾಡಲಾಗುತ್ತದೆ" ಎನ್ನುತ್ತಾರೆ. ಸಾವನ್ನು ಕುರಿತಂತೆ ಚರ್ಚಿಸಲು ಪ್ರೋತ್ಸಾಹಿಸುವುದರ ಮೂಲಕ ತಾರುಣ್ಯದಲ್ಲಿರುವವರಲ್ಲಿ ಸಾವನ್ನು ಕುರಿತ ಸತ್ಯ ಮತ್ತು ತರ್ಕ ಆಧಾರಿತ ಆಲೋಚನೆಗಳಲ್ಲಿ ಸಮನ್ವಯವನ್ನು ತಂದುಕೊಳ್ಳಲು ವಯಸ್ಕರು ಸಹಕರಿಸಬಹುದು. ವಿಷಯಗಳನ್ನು ಅವರು ತಮ್ಮ ಗೆಳೆಯರಿಗಿಂತ ಹಿರಿಯರೊಡನೆ ಮಾತಾಡಲು ಬಯಸುತ್ತಾರೆ. ಅದರಲ್ಲೂ ಅವರ ಹೆತ್ತವರಿಗಿಂತ ಇತರರು ಉತ್ತಮ. ಹೆತ್ತವರೂ ಈ ವಿಷಯವನ್ನು ಮಕ್ಕಳೊಂದಿಗೆ ಚರ್ಚಿಸಲು ಇಷ್ಟಪಡುವುದಿಲ್ಲ.

ದಿನನಿತ್ಯದ ಮಾತುಗಳಲ್ಲಿ ಹತ್ತಿರದವರು ಅಥವಾ ತಿಳಿದವರು ಯಾರೋ ಮರಣಹೊಂದಿದ ವಿಷಯ ಬಂದಾಗ ಆ ಸಂದರ್ಭದಲ್ಲಿ ಮಕ್ಕಳ ಮಾತುಗಳು ಹಾಗೂ ಅವರ ಭಾವನೆಗಳನ್ನೇ ಅತಿ ಸರಳವಾಗಿ ಆ ಸನ್ನಿವೇಶದಲ್ಲೇ ಬಳಸಿಕೊಂಡು ಸೂಕ್ತ ತಿಳುವಳಿಕೆ ನೀಡಬಹುದು. ಈ ಸಂದರ್ಭಗಳಲ್ಲಿ ಹೇಗೆ ವರ್ತಿಸಬಹುದು ಎಂಬುದಕ್ಕೆ ಈ ಸೂಚನೆಗಳು ಸಹಕಾರಿಯಾಗಬಹುದು.

ಮಕ್ಕಳ ಅಶಾಬ್ದಿಕ ವರ್ತನೆಗೆ ಗಮನಕೊಡಿ. ಹತ್ತಿರದವರ ಸಾವು ಸಂಭವಿಸಿರುವಾಗ ಅತಿ ಕಾಳಜಿಯಿಂದ ವಿಷಯವನ್ನು ನಿಧಾನವಾಗಿ ಪ್ರಸ್ತಾಪಿಸಿ. ಈ ಸಂದರ್ಭದಲ್ಲಿ ಮಕ್ಕಳು ಆಡುವ ಮಾತುಗಳನ್ನು ಗಮನವಿಟ್ಟು ಕೇಳಿರಿ. ನನ್ನ ಮಾತುಗಳನ್ನು ಇತರರು ಕೇಳುತ್ತಿದ್ದಾರೆ ಎಂಬ ಭರವಸೆಯೊಂದಿಗೆ ಮಗು ಮಾತನಾಡಬೇಕು. ಕೇಳುತ್ತಿರುವಂತೆ ನಾಟಕಮಾಡಿದರೆ ತಕ್ಷಣವೇ ಅವರು ಮಾತನಾಡುವುದನ್ನು ನಿಲ್ಲಿಸಿಬಿಡುತ್ತಾರೆ. ಅವರ ಭಾವನೆಗಳನ್ನು ನಿಜವೆಂದು ಒಪ್ಪಿಕೊಳ್ಳಿ (ಅವು ನಿಜವೇ). ನೀವು ಒಪ್ಪಿಕೊಳ್ಳುತ್ತಿರುವಿರೆಂಬುದು ಅವರ ಗಮನಕ್ಕೆ ಬರಲು ಅವರು ಹೇಳುತ್ತಿರುವ ಮಾತುಗಳನ್ನು ಸಂಗ್ರಹಿಸಿ ಹೇಳಿ. 'ನಿಂಗೂ ಬೇಜಾರಾಯ್ತಾ ಮಗು, ಹೌದು ನಿಜವಾಗಿ ಒಳ್ಳೆಯವರು. ನಿನ್ನೆ ಮಾತನಾಡಿದೆಯಾ? ಆಮೇಲೆ... ಎಂದು ಅವರನ್ನು ಮಾತಿಗೆ ಎಳೆಯಿರಿ. ಇದೇ ಸಂದರ್ಭದಲ್ಲಿ ಸಾವಿನ ಶಾಶ್ವತತೆ, ಸಾರ್ವತ್ರಿಕತೆ ಹಾಗೂ ನಿಷ್ಕ್ರಿಯತೆಯನ್ನು ಕುರಿತ ಸರಳವಾದ ಮಾಹಿತಿಯನ್ನು ಅತಿ ಸಹಜವಾಗಿ ಹೇಳಿ. ಮಾತನ್ನೇ ಅಗಲಿ ಸನ್ನಿವೇಶವನ್ನೇ ಆಗಲಿ ಅತಿ ಗಂಭೀರ ಮಾಡುವುದು ಸಲ್ಲದು. "ಏನು ಮಾಡುವುದು ಈ ದೇವರು ಕರೆದುಕೊಂಡುಬಿಟ್ಟ ಇತ್ಯಾದಿ ಸಲ್ಲದ ದಾರಿತಪ್ಪಿಸುವ ಹೇಳಿಕೆಗಳನ್ನು ನೀಡಬೇಡಿ. ಅವರ ಧಾರ್ಮಿಕ ನಂಬಿಕೆಗಳಿಗೆ ಪೆಟ್ಟು ಕೊಡಬೇಡಿ. ವೈಚಾರಿಕ ಹಾಗೂ ಧಾರ್ಮಿಕ ನೆಲೆಗಳಲ್ಲಿ ಸೂಕ್ತ ಮಾಹಿತಿ ಕೊಡಿ.

ಉತ್ತರ ಹೇಳಲಾಗದ ಪ್ರಶ್ನೆಗಳನ್ನು ಕೇಳಿದಾಗ 'ಆತ್ಮ ಎಂದರೇನಮ್ಮ? ಏಕೆ ಸಾಯಬೇಕು ಇತ್ಯಾದಿ ಪ್ರಶ್ನೆಗಳಿಗೆ ಮಗುವಿಗೆ ಅರ್ಥವಾಗುವಂತೆ ಸೂಕ್ತ ಉತ್ತರ ಗೊತ್ತಿಲ್ಲದಾಗ 'ಗೊತ್ತಿಲ್ಲ' ಎಂದು ಹೇಳುವುದು ಉತ್ತಮ, ಇಂತಹ ಸಂಭಾವ್ಯತೆ ಇಬ್ಬರೂ ಸೇರಿ ಉತ್ತರ ಹುಡುಕುವಂತೆ ಪ್ರೇರೇಪಿಸುತ್ತದೆ.'

ಸಾವಿನ ಬಗೆಗೆ ಇರುವ ಆತಂಕದಿಂದಾಗಿ ವಯಸ್ಕರು ಮೊದಮೊದಲು ಸಾವನ್ನು ಕುರಿತಾದ ಆಲೋಚನೆಗಳನ್ನೇ ದೂರವಿಟ್ಟಿರುತ್ತಾರೆ. ಅದಲ್ಲದೆ ಈ ಹಂತದಲ್ಲಿ ವ್ಯಕ್ತಿಗಳು ತುಂಬಾ ಜನರು ಸತ್ತಿರುವುದನ್ನು ನೋಡಿರುವುದೂ ಅಪರೂಪ. ತಮ್ಮ ಸಾವೂ ಇನ್ನೂ ದೂರವಿರುವುದರಿಂದ ಅದರ ಬಗ್ಗೆ ಏಕೆ ಚಿಂತಿಸಬೇಕು ಎಂಬುದು ಇವರ ಅನಿಸಿಕೆ. ಈ ಮಧ್ಯವಯಸ್ಕರು ಒಂದು ರೀತಿ ದಾಸ್ತಾನು ಲೆಕ್ಕ ಮಾಡುವವರಂತೆ, ಇನ್ನೂ ಎಷ್ಟು ದಿನ ನಾವು ಬದುಕಲಿದ್ದೇವೆ. ಅಷ್ಟರಲ್ಲಿ ಏನೇನು ಕೆಲಸ ಮಾಡಬೇಕು ಎಂದು ಲೆಕ್ಕ ಹಾಕುತ್ತಿರುತ್ತಾರೆ. ಇವರಿಗೆ ಸಾವಿನ ಪರಿಕಲ್ಪನೆ ಅಸ್ಪಷ್ಟವೇನೂ ಅಲ್ಲ. ಭವಿಷ್ಯದಲ್ಲಿ ಕೆಲವೇವರ್ಷಗಳಲ್ಲಿ ತಾವೂ ಮುದುಕರಾಗುತ್ತೇವೆ ಮತ್ತು ಸಾಯುತ್ತೇವೆ ಎಂಬುದರ ಸ್ಪಷ್ಟ ಅರಿವು ಮಾತ್ರ ಅವರಿಗಿರುತ್ತದೆ.

ಹೀಗೆ ಸಾವಿನ ಬಗ್ಗೆ ವಯೋಮಾನ ಸಂಬಂಧವಾದ ವ್ಯತ್ಯಾಸಗಳಿರುತ್ತವಾದರೂ ವ್ಯಕ್ತಿ ಭಿನ್ನತೆಗಳಿರುತ್ತವೆ. ಸಾವಿನ ಬಗೆಗಿನ ಆತಂಕ ವಯಸ್ಸಾಗುತ್ತಾ ಕಡಿಮೆಯಾಗುತ್ತದೆ. ಆಧ್ಯಾತ್ಮಿಕತೆಯ ಪಕ್ವತೆ ಸಾವಿನ ಭಯವನ್ನು ಕುಗ್ಗಿಸುತ್ತದೆ. ಸತ್ತವರು ವಿವಿಧ ರೂಪಗಳಲ್ಲಿ (ಮುಂದೆ ಹುಟ್ಟುವ ಮಕ್ಕಳ ರೂಪದಲ್ಲಿ, ವೈಯಕ್ತಿಕ ಕೆಲಸಗಳ ರೂಪದಲ್ಲಿ, ಅವರು ಬೀರುವ ಪ್ರಭಾವರೂಪದಲ್ಲಿ) ಎಂದು ನಂಬಿರುವವರಲ್ಲಿ ಈ ಅತಂಕ ಕಡಿಮೆ. ಮುಂದಿನ ಪೀಳಿಗೆಗಳು ಬದುಕಿ ಬಾಳಲು ಇದೊಂದು ಸಹಜಕ್ರಮ ಎಂದು ತಿಳಿದಿರುವವರಲ್ಲೂ ಸಾವಿನ ಆತಂಕ ಕಡಿಮೆ.

ಗಂಡಸರಿಗಿಂತ ಹೆಂಗಸರಲ್ಲಿ ಸಾವಿನ ಆತಂಕ ಹೆಚ್ಚು ಎಂದು ಸಂಶೋಧನೆಗಳು ಹೇಳುತ್ತವೆ. ಇದು ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳೆರಡಕ್ಕೆ ಸಂಬಂಧಿಸಿದಂತೆಯೂ ಸತ್ಯ ಎಂಬುದನ್ನೂ ಸಂಶೋಧನೆಗಳು ಹೇಳುತ್ತವೆ.

ಸಾವಿನ ಬಗೆಗಿನ ಆತಂಕ ಸಹಜವೇ. ಆದರೆ ಇತರ ಆತಂಕಕಾರಿ ಭಾವನೆಗಳಂತೆ ಇದೂ ಅತಿಯಾದಾಗ ಪರಿಣಾಮಕರ ಹೊಂದಾಣಿಕೆಗೆ ಅಡ್ಡಿಬರಬಹುದು. ವಯಸ್ಕರ ಭೌತಿಕ ಆರೋಗ್ಯ ಹಾಗೂ ಸಾವಿನ ಬಗೆಗಿನ ಆತಂಕಕ್ಕೆ ಸಂಬಂಧವಿಲ್ಲವಾದರೂ ಅವರ ಮಾನಸಿಕ ಆರೋಗ್ಯ ಹಾಗೂ ಆತಂಕಕ್ಕೆ ನಿಕಟ ಸಂಬಂಧವಿದೆ. ಸಾಮಾನ್ಯವಾಗಿ ಆತಂಕಪಡುವವರು ಅಥವಾ ಮಾನಸಿಕ ಡಿಪ್ರೆಷನ್‌ಗೆ ಒಳಗಾದವರಿಗೆ ಸಾವಿನ ಭಯ ಹೆಚ್ಚು. ಇವರ ಸದ್ಯದ ಹಾಗೂ ಆದರ್ಶ ಸ್ವ ಪರಿಕಲ್ಪನೆಗಳ ನಡುವಿನ ವ್ಯತ್ಯಾಸದಿಂದ ಇಂತಹ ಆತಂಕಗಳು ಉಂಟಾಗುತ್ತವೆ. ಇದಕ್ಕೆ ಬದಲಾಗಿ, ಹೆಚ್ಚು ಆತ್ಮವಿಶ್ವಾಸ ಇರುವವರಲ್ಲಿ ಸಾವಿನ ಬಗೆಗಿನ ಆತಂಕ ಹೆಚ್ಚು. ಈ ಆತಂಕಗಳನ್ನು ಸೂಕ್ತ ಸಮಾಲೋಚನೆಯಿಂದ ನಿವಾರಿಸಲು ಸಾಧ್ಯವಾಗುತ್ತದೆ. ಇದನ್ನು ವ್ಯಕ್ತಿಯ ಜೀವನದ ವಿವಿಧ ಹಂತಗಳಲ್ಲಿ ವಿವಿಧ ನಿಯೋಗಗಳ ಮೂಲಕ ಮಾಡುತ್ತಲೇ ಇದ್ದೇವೆ. ಇದನ್ನು ಹೆಚ್ಚು ಜಾಗೃತಗೊಳಿಸಿಕೊಳ್ಳುವುದರಿಂದ ವಿಶೇಷ ಪ್ರಯೋಜನಗಳಿವೆ.

–ಎ.ಶ.


Digitised by Bharatavani, CIIL

# ಯ

## ಯೋಗ ಚಿಕಿತ್ಸೆ

ಯೋಗ ಮಾನವನ ಭೌತಿಕ, ನೈತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಹಿತವನ್ನು ಸಮಷ್ಟಿಯಾಗಿ ಒಳಗೊಂಡಿರುವ ಹಾಗೂ ಸಾವಿರಾರು ವರ್ಷಗಳಲ್ಲಿ ವಿಕಸಿಸಿರುವ ವ್ಯಾವಹಾರಿಕ ವಿಜ್ಞಾನವಾಗಿದೆ. ಯೋಗದ ಆಚರಣೆಯನ್ನು ಮೊದಲು ಸುಮಾರು ಕ್ರಿ.ಪೂ. 200ರಲ್ಲಿ ಪತಂಜಲಿ ಮಹರ್ಷಿ ಯೋಗಸೂತ್ರ ಎಂಬ ಪ್ರಾಚೀನ ಗ್ರಂಥದಲ್ಲಿ ವ್ಯವಸ್ಥಿತಗೊಳಿಸಿದ್ದಾನೆ. ಪತಂಜಲಿಯನ್ನು ಯೋಗ ವಿದ್ಯೆಯ ಪಿತಾಮಹ ಎಂದು ಪರಿಗಣಿಸಲಾಗಿದೆ. ಆದ್ದರಿಂದಲೇ ಇಂದೂ ಯೋಗ ಕಲಿಕೆಯ ಆರಂಭದಲ್ಲಿ ಪತಂಜಲಿಯನ್ನು ಹೀಗೆ ಪ್ರಾರ್ಥಿಸುವ ವಾಡಿಕೆ ನಡೆದು ಬಂದಿದೆ.



ಮಹರ್ಷಿ ಪತಂಜಲಿ

*ಯೋಗೇನ ಚಿತ್ತಸ್ಯ ಪದೇನ ವಾಚಾಮ್*
*ಮಲಂ ಶರೀರಸ್ಯಚ ವೈದ್ಯಕೇನ*
*ಯೋಪಾಕರೋತ್ತಂ ಪ್ರವರಂ ಮುನೀನಾಮ್*
*ಪತಂಜಲಿಂ ಪ್ರಾಂಜಲಿರಾನತೋಸ್ಮಿ*

ಅರ್ಥ: ಯೋಗದಿಂದ ಮನಸ್ಸಿನ ಮಾಲಿನ್ಯವನ್ನು ತೊಡೆದ
ವ್ಯಾಕರಣದಿಂದ ವಾಗ್ದೋಷವನ್ನು ನಿವಾರಿಸಿದ
ವೈದ್ಯ ಶಾಸ್ತ್ರದಿಂದ ದೇಹದ ಮಾಲಿನ್ಯವನ್ನು ಕಳೆದ
ಪತಂಜಲಿ ಮುನೀಂದ್ರನಿಗೆ ನಾನು ಕೈಮುಗಿದು ವಂದಿಸುತ್ತೇನೆ.

ಚಿತ್ತವೃತ್ತಿಯನ್ನು ಅರ್ಥಾತ್ ಮನಸ್ಸಿನ ಚಾಂಚಲ್ಯವನ್ನು ನಿವಾರಿಸಿ ಅದನ್ನು ಏಕಾಗ್ರಗೊಳಿಸಿ ಉನ್ಮುಖ (ಮೇಲ್ಮುಖವಾದ) ಚಲನೆಗೆ ಸಿದ್ಧಗೊಳಿಸುವುದೇ ಯೋಗ ಎನ್ನುವ ಅಂಶವನ್ನು ಆಧ್ಯಾತ್ಮ ಚಿಂತಕರು ಶತಮಾನಗಳಿಂದ ಒತ್ತಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಔಷಧಿಗಳಿಂದ ಗುಣಪಡಿಸಲಾಗದ ವ್ಯಾಧಿಗಳನ್ನು ಯೋಗದಿಂದ ಗುಣಪಡಿಸಲು ಸಾಧ್ಯ ಎನ್ನುವುದನ್ನು ಆಧುನಿಕ ವೈದ್ಯಕೀಯ ವಿಜ್ಞಾನವೂ ಇತ್ತೀಚೆಗೆ ಒಪ್ಪಿಕೊಳ್ಳುತ್ತಿದೆ.

ಯೋಗ ಎಂಬುದು ಶಿಕ್ಷಣದ ಒಂದು ವಿಭಾಗ. ವ್ಯಕ್ತಿಯನ್ನು ಇಂದು ವಿಶ್ವಪಥಕ್ಕೆ ಕೊಂಡೊಯ್ಯುವ ಒಂದು ಸಾಧನೆ. ವ್ಯಕ್ತಿಗತ ಎಲ್ಲಾ ಅಂಶಗಳನ್ನು ಒಗ್ಗೂಡಿಸುವ ಹಾಗೂ ಎಲ್ಲರೊಳಗೆ ಒಂದಾಗುವ ಕಲೆ ಇದಾಗಿದೆ.

- "ಸಿರಿ, ಆನಂದ ಮತ್ತು ಮೋಕ್ಷಕ್ಕೆ ಶ್ರೇಷ್ಠ ಬುನಾದಿ ಆರೋಗ್ಯ"
- "ರೋಗದಿಂದ ಆರೋಗ್ಯಕ್ಕೆ ಧಕ್ಕೆ. ಜೀವಕ್ಕೆ ಧಕ್ಕೆ"

ಹಾಗೆ ಹೇಳಿದವರು 2500 ವರ್ಷಗಳ ಹಿಂದೆ ಭಾರತದಲ್ಲಿದ್ದ ಅತ್ಯಂತ ಪ್ರಾಚೀನ ವೈದ್ಯ ಚರಕಾಚಾರ್ಯರು. ಆರೋಗ್ಯದ ಬಗ್ಗೆ ವಿವರಿಸುತ್ತಾ ಅವರು ಹೇಳುತ್ತಾರೆ: ಬದುಕು ಎಂಬುದು ದೇಹ, ಮನಸ್ಸು ಮತ್ತು ಆಧ್ಯಾತ್ಮಗಳ ಮಿಲನ. ಇದು ಹಿಂದಿನ ಜನ್ಮ ಮತ್ತು ಮುಂದಿನದನ್ನು ಸೇರಿಸುವ ಕೊಂಡಿ.

ಒಂದಲ್ಲಾ ಒಂದು ಬಗೆಯ ರೋಗ ಮಾನವನನ್ನು ಕಾಡುತ್ತಲೇ ಇರುವುದರಿಂದ ಅದನ್ನು ತಡೆಗಟ್ಟಿ ಗುಣಪಡಿಸಿ ಆರೋಗ್ಯದ ಬೆನ್ನಟ್ಟಿ ಹೋಗುತ್ತಿರುವ ವಿಷಯ ನಾಗರಿಕತೆಯಷ್ಟೇ ಪುರಾತನವಾದುದು. ಆರೋಗ್ಯವೆಂದರೆ ರೋಗವಿಲ್ಲದೇ ಇರುವುದು ಎಂದರ್ಥ. ಶೈಶಾವಸ್ಥೆ, ಯೌವನ ಮತ್ತು ಇಳಿವಯಸ್ಸಿನಲ್ಲಿ ಉಂಟಾಗುವ ಪ್ರಕೃತಿ ಸಹಜವಾದ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳನ್ನು ತಪ್ಪಿಸುವುದು ಅಸಾಧ್ಯ. ಆದರೆ ಯೋಗಾಸನವನ್ನು ಮಾಡುವುದರಿಂದ ಔಷಧಿಯ ಕೃತ್ರಿಮ ಸಾಧನಗಳನ್ನು ಬಳಸದೆ ಒಬ್ಬ ತನ್ನ ದೇಹ ಹಾಗೂ ಮನಸ್ಸನ್ನು ಅಂಕೆಯಲ್ಲಿಟ್ಟುಕೊಂಡು ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯದಿಂದ ಇರಲು ಸಾಧ್ಯ. ಯೋಗದ ಗುರಿ ಎಂದರೆ ಶುಚೀರ್ಭೂತ ದೇಹದಲ್ಲಿ ಶುಚೀರ್ಭೂತ ಮನಸ್ಸು.

ಇಂದು ಮಾನವನ ಜೀವನ ಬಹಳ ಸಂಕೀರ್ಣಗೊಂಡಿದೆ. ನಮ್ಮ ಪರಿಸರ ಹೇಳಲಾರದಷ್ಟು ಕೆಟ್ಟಿದೆ. ಆದುದರಿಂದ ಆರೋಗ್ಯದ ಬಗ್ಗೆ ನಾವು ಎಚ್ಚರಿಕೆವಹಿಸುವುದಕ್ಕೆ ಹಿಂದೆಂದೂ ಇಲ್ಲದಷ್ಟು ಪ್ರಾಮುಖ್ಯ ಅಗತ್ಯವಾಗಿದೆ. ಶಿಸ್ತಿಲ್ಲದ ಜೀವನಕ್ರಮ ಕೋಪ, ದುರಾಸೆ ಇವುಗಳಿಗೆ ಈಡಾಗಿ ಅದರಿಂದ ಅನೇಕ ತೊಂದರೆಗಳು ವ್ಯಕ್ತಿಗೆ ಉಂಟಾಗುತ್ತವೆ. ಅಸ್ತಮಾ, ಬೆನ್ನುನೋವು, ತಲೆಶೂಲೆ, ಅಲ್ಸರ್ ಇವುಗಳಿಗೆ ಕಾರಣ ಹತೋಟಿ ಇಲ್ಲದ ಮನಸ್ಸು, ಅಯುಕ್ತ ಭಾವೋದ್ರೇಕದಿಂದ ರಕ್ತದ ಒತ್ತಡ ಏರುತ್ತದೆ. ಸಿಹಿಮೂತ್ರ ರೋಗ, ಜಠರದಲ್ಲಿ ಹಿಸ್ಸಾ ಆಮ್ಲ ಮುಂತಾದವು ಕಾಣಿಸಿಕೊಳ್ಳುತ್ತವೆ. ಇದನ್ನು ಸಂಪೂರ್ಣವಾಗಿ ಯೋಗ ಚಿಕಿತ್ಸಾ ಕ್ರಮದಿಂದ ತಪ್ಪಿಸಬಹುದು. ಇನ್ನೊಬ್ಬರ ಸಹಾಯವಿಲ್ಲದೆ ಔಷಧಿ ಪಥ್ಯವಿಲ್ಲದೆ ನೈಸರ್ಗಿಕವಾಗಿ ರೋಗವನ್ನು ತಪ್ಪಿಸುವ ಮಾರ್ಗವೇ ಯೋಗ ಚಿಕಿತ್ಸೆ.

ಯೋಗ ಚಿಕಿತ್ಸೆಯನ್ನು ಸ್ವಯಂ ವೈದ್ಯ ಎಂದು ಹೇಳಬಹುದು. ವ್ಯಕ್ತಿ ಜೀವನಕ್ಕೆ ಸಂಬಂಧಿಸಿದ ಅಂಶಗಳ ಸರಿಯಾದ ಕ್ರಮಾನುಗತ ತಿಳಿವಳಿಕೆ ಇಲ್ಲದಿರುವಿಕೆ ಮತ್ತು ಅಪಥ್ಯದ (ತಿನ್ನಬಾರದುದನ್ನು ತಿನ್ನುವುದು) ಪರಿಣಾಮದಿಂದಾಗಿ ವಿವಿಧ ರೀತಿಯ ವ್ಯಾಧಿಗಳು, ದೋಷಗಳು, ಬೇನೆಗಳು, ಕ್ರಮವಲ್ಲದ ಜೀವನ, ಕೆಟ್ಟ ಅಭ್ಯಾಸ ಇತ್ಯಾದಿಗಳ ಕೆಟ್ಟ ಗೂಡಾಗಿ ದೇಹ ಜರ್ಜರಿತವಾಗಿರುತ್ತದೆ. ರೋಗದ ಮೂಲ ವ್ಯಕ್ತಿಯ ತಪ್ಪು ತಿಳುವಳಿಕೆಯೇ ಆಗಿರುವುದರಿಂದ ಚಿಕಿತ್ಸೆ ಕೂಡ ಆ ತಪ್ಪು ನಡೆವಳಿಕೆಯನ್ನು ಸರಿಪಡಿಸುವುದೇ ಆಗಿರುತ್ತದೆ. ಅಂದರೆ ಈ ಎರಡೂ ಸಂದರ್ಭದಲ್ಲೂ ವ್ಯಕ್ತಿಯೇ ಮೂಲ ಕಾರಣಕರ್ತ. ರೋಗ ತಂದು ಕೊಳ್ಳುವವನು ಅವನೇ, ಸರಿಪಡಿಸಿಕೊಳ್ಳಬೇಕಾದವನೂ ಅವನೇ. ಯೋಗವನ್ನು ಸರಿಯಾದ ರೀತಿಯಲ್ಲಿ ಅಭ್ಯಾಸ ಮಾಡುವುದರ ಮೂಲಕ ರೋಗಗಳಿಗೆ ಚಿಕಿತ್ಸೆ ಮಾಡಿಕೊಳ್ಳುವುದೇ ಯೋಗ ಚಿಕಿತ್ಸೆ. ಪ್ರತಿಯೊಬ್ಬರೂ ಯೋಗ ಚಿಕಿತ್ಸೆಯ ಬಗ್ಗೆ ತಿಳಿದುಕೊಂಡು ಅದನ್ನು ಆಚರಣೆಯಲ್ಲಿ ತರುವುದು ಇಂದಿನ ಪರಿಸ್ಥಿತಿಯಲ್ಲಿ ಅವಶ್ಯಕವೆನಿಸಿದೆ.

### ಯೋಗ ಚಿಕಿತ್ಸೆಯು ಮೂರು ಆಯಾಮಗಳನ್ನು ಒಳಗೊಂಡಿದೆ

1. ಸರಿಯಾದ ಪರಿಪೂರ್ಣ ಆಹಾರದ ಕ್ರಮ
2. ಕ್ರಮಾನುಗತ ಯೋಗಾಭ್ಯಾಸ ಮತ್ತು
3. ವೈಯಕ್ತಿಕ ಜೀವನದ ಸರಿಯಾದ ತಿಳಿವಳಿಕೆ

Digitised by Bharatavani, CIIL

ಈ ಮೇಲ್ಕಂಡ ಕ್ರಮಾನುಗತ ಹಂತವನ್ನು ಅನುಸರಿಸಿದ್ದೇ ಆದಲ್ಲಿ ರೋಗ ನಿವಾರಣೆಯಾಗುವುದು. ಈ ಹಂತಗಳ ಸ್ಥೂಲ ವಿವರಣೆ ಮುಂದೆ ತಿಳಿಸಿದಂತೆ ಇದೆ.

**1. ಸರಿಯಾದ ಪರಿಪೂರ್ಣ ಆಹಾರದ ಕ್ರಮ**

ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಆಹಾರವು ಅತಿ ಮುಖ್ಯವಾದುದು. ಯೋಗ ವಿಜ್ಞಾನವು ಬರೀ ಒಂದು ರೋಗವನ್ನು ವಾಸಿಮಾಡುವುದಲ್ಲದೆ ಮನುಷ್ಯನ ಇಡೀ ದೇಹದ ರೋಗದ ನಿವಾರಣೆಯನ್ನು ಮಾಡುತ್ತದೆ. ರೋಗಿಯ ಸ್ಥಿತಿ ಮತ್ತು ರೋಗದ ಲಕ್ಷಣವನ್ನು ಗಮನಿಸಿ ಆಹಾರವನ್ನು ತೆಗೆದುಕೊಳ್ಳಲು ಸಲಹೆ ನೀಡಲಾಗುತ್ತದೆ.

ಯೋಗ ಚಿಕಿತ್ಸೆಯಲ್ಲಿ ಕ್ರಮಬದ್ಧ ಆಹಾರವೆಂದರೆ: ತಾಜಾ ತರಕಾರಿಗಳು, ಹಸಿರು ಸೊಪ್ಪು, ಋತುವಿಗೆ ತಕ್ಕಂತೆ ದೊರಕುವ ಹಣ್ಣುಗಳು, ಕೋಸಂಬರಿ, ತೌಡು ತೆಗೆಯದ ಗೋಧಿಯ ತಿನಿಸುಗಳು ಹಾಗೂ ಕೆಲವು ಬೇಳೆಕಾಳುಗಳು, ಮಾಂಸಾಹಾರಿಗಳಿಗೆ ಕೆಂಪು ಮಾಂಸ ಮತ್ತು ಕೋಳಿ ಮಾಂಸ ಸಾಮಾನ್ಯವಾಗಿ ನಿಷಿದ್ಧ. ಆದರೆ ಮಾಂಸಾಹಾರಿಗಳು ಕೆಲವು ಸಂದರ್ಭಗಳಲ್ಲಿ ಮೀನು ಮತ್ತು ಯಕೃತ್ತು ಇತ್ಯಾದಿಗಳನ್ನು ಸೇವಿಸಬಹುದು.

**ಜೀವಸತ್ವಗಳು**

ಒಳ್ಳೆಯ ಆರೋಗ್ಯ ನಮ್ಮದಾಗಬೇಕಾದರೆ ಮತ್ತು ರೋಗಗಳು ಬಾರದಂತೆ ತಡೆಗಟ್ಟಬೇಕಾದರೆ ಜೀವಸತ್ವಗಳು ಅಗತ್ಯವಾಗಿ ಬೇಕು. ಅವುಗಳು ಪ್ರೋಟೀನ್, ಪಿಷ್ಠ ಮತ್ತು ಕೊಬ್ಬುಗಳನ್ನು ಪರಿಷ್ಕರಿಸಿ ದೇಹಕ್ಕೆ ಚೈತನ್ಯಕೊಟ್ಟು ಅಣುಕೋಶಗಳ ಬೆಳವಣಿಗೆಗೆ ಸಹಾಯವಾಗುವಂತೆ ಮಾಡುತ್ತವೆ.

**"ಎ" ಜೀವಸತ್ವ :** ಇದರ ಕೊರತೆಯಿಂದ ರಾತ್ರಿ ಕುರುಡು ಉಂಟಾಗುತ್ತದೆ. ಬೆಳವಣಿಗೆಯಲ್ಲಿ ಕೊರತೆ ಮತ್ತು ಹಸಿವು ಉಂಟಾಗದಿರುವಿಕೆ ಕಾಣಿಸಿಕೊಳ್ಳುತ್ತದೆ. ಹಾಲು ಮತ್ತು ಹಾಲಿನ ಉತ್ಪನ್ನಗಳು, ಹಣ್ಣುಗಳು ಮತ್ತು ತರಕಾರಿ ಅದರಲ್ಲೂ ಪರಂಗಿ ಹಣ್ಣು ಮತ್ತು ಕ್ಯಾರೆಟ್ ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕು. ಮೊಟ್ಟೆ ಮತ್ತು ಯಕೃತ್ತಿನ ಎಣ್ಣೆಯಲ್ಲಿ 'ಎ' ಜೀವಸತ್ವ ಯಥೇಚ್ಛವಾಗಿ ಕಂಡುಬರುತ್ತದೆ.

**"ಬಿ$_1$" ಜೀವಸತ್ವ:** ಇದು ನರಗಳ ವ್ಯವಸ್ಥೆ ಮತ್ತು ಮಾಂಸ ಖಂಡಗಳ ಕೆಲಸವು ಸಾಂಗವಾಗಿ ನೆರವೇರಲು ಸಹಾಯಕವಾಗಿದೆ. ಈ ಜೀವಸತ್ವದ ಕೊರತೆಯಿಂದ ಮಾನಸಿಕ ಖಿನ್ನತೆ, ಕೋಪ ಮಾಡಿಕೊಳ್ಳುವಿಕೆ ಮತ್ತು ತೂಕ ಕಡಿಮೆ ಆಗುವುದು ಉಂಟಾಗುತ್ತದೆ. ಉಂಡೆ ಅಕ್ಕಿಯ ತವುಡು, ಕಡ್ಲೆಕಾಯಿ ಬೀಜದ ಹಾಲು ಮತ್ತು ತರಕಾರಿ ಇವುಗಳಲ್ಲಿ ಈ ಜೀವಸತ್ವ ಇರುತ್ತದೆ.

**"ಬಿ$_2$" ಜೀವಸತ್ವ :** ಚರ್ಮವನ್ನು ಆರೋಗ್ಯವಾಗಿಡಲು ಮತ್ತು ಕಣ್ಣುಗಳನ್ನು ಆರೋಗ್ಯವಾಗಿ ಕಾಪಾಡಿಕೊಂಡು ಬರಲು ಇದು ಸಹಾಯಕವಾಗಿದೆ. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಬಳಸುವುದರಿಂದ ಈ ಮೇಲ್ಕಂಡ ತೊಂದರೆಗಳಿಂದ ಪಾರಾಗಬಹುದು.

**"ಬಿ$_6$" ಜೀವಸತ್ವ :** ಚರ್ಮದ ಒಡೆತ, ಕೂದಲು ಉದುರುವಿಕೆ, ನರಗಳ ಸಂಬಂಧ ತೊಂದರೆಗಳು ಇತ್ಯಾದಿಬಿ$_6$ ಜೀವಸತ್ವದ ಕೊರತೆಯಿಂದ ಉಂಟಾಗುತ್ತವೆ.

ಗೋಧಿಯ ಮೊಳಕೆ, ಹಾಲು, ಬಾಳೆಹಣ್ಣು, ಹೆಂಡನೊರೆ, ದ್ರಾಕ್ಷಿ, ಕೋಸು, ಹಾಲು, ಮೀನು ಮತ್ತು ಯಕೃತ್ ಎಣ್ಣೆ ಇವುಗಳಲ್ಲಿ ಈ ವಿಟಮಿನ್ನು ದೊರಕುತ್ತದೆ.

**ಸಿ ಜೀವಸತ್ವ :** ಕಾಯಿಲೆಗಳನ್ನು ತಡೆಯುವ ಶಕ್ತಿಯುಳ್ಳದ್ದು ಮತ್ತು ತರುಚು ಗಾಯಗಳು ಬೇಗ ಗುಣವಾಗುವುದಕ್ಕೂ ಇದು ಸಹಕಾರಿಯಾಗಿದೆ. ಆರೋಗ್ಯಕರವಾದ ಒಸಡು ಮತ್ತು ಬಲವಾದ ಮೂಳೆಗಳನ್ನು ಹೊಂದಲು ಇದು ಸಹಕಾರಿಯಾಗಿದೆ. ಹುಳಿಯಾದ ಹಣ್ಣುಗಳು, ಪಪ್ಪಾಯಿ, ಮಾವು, ಟೊಮೆಟೋ, ಆಲೂಗಡ್ಡೆ ಇವುಗಳಲ್ಲಿ ಹೇರಳವಾಗಿ 'ಸಿ' ಜೀವಸತ್ವ ದೊರಕುತ್ತದೆ. ಚಿರಯೌವನವನ್ನು ಕಾಪಾಡಿಕೊಳ್ಳಲು 'ಸಿ' ಜೀವಸತ್ವದ ಸೇವನೆ ಸಹಾಯಮಾಡುತ್ತದೆ.

ಆಹಾರದಲ್ಲಿನ ವ್ಯತ್ಯಾಸ ಏನೇ ಇರಲಿ ಎಲ್ಲ ರೋಗಿಗಳು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅಂದರೆ ನಿಧಾನವಾಗಿ ಜಗಿದು ತಿನ್ನುವುದು, ಹೊಟ್ಟೆಯ 25% ಭಾಗ ಖಾಲಿ ಇರುವಂತೆ ನೋಡಿಕೊಳ್ಳುವುದು, ರಾತ್ರಿ ಮಲಗುವುದಕ್ಕೆ ಸರಿ ಸುಮಾರು ಎರಡು ಗಂಟೆ ಮುಂಚೆ ತಿನ್ನುವುದು, ತುಂಬಾ ಬಿಸಿಯಾದ, ಮಸಾಲೆ ಬೆರೆಸಿದ ಕರಿದ ಅಥವಾ ಅತಿಯಾಗಿ ಬೇಯಿಸಿದ ಆಹಾರವನ್ನು ತಿನ್ನದೇ ಇರುವುದು.

**ಕ್ರಮಾನುಗತ ಯೋಗಾಭ್ಯಾಸ**

ಅನಾರೋಗ್ಯದಿಂದ ಬಳಲುತ್ತಿರುವವರನ್ನು ಅವರ ವ್ಯಾಧಿ ಹಾಗೂ ದೇಹ ಪ್ರಕೃತಿಗೆ ಅನುಗುಣವಾಗಿ ಯೋಗಾಭ್ಯಾಸ ಮಾಡುವಂತೆ ಸೂಚಿಸಲಾಗುವುದು. ಕೆಲವು ವ್ಯಾಧಿಗಳ ವಿಷಯದಲ್ಲಿ ಯೋಗಾಸನಗಳ ಜೊತೆಗೆ ಪ್ರಾಣಾಯಾಮವನ್ನು ಅಭ್ಯಾಸ ಮಾಡುವುದು ಅನುಕೂಲವೆನಿಸುತ್ತದೆ. ಕೆಲವೊಮ್ಮೆ ಬಂಧಗಳು, ಮುದ್ರೆಗಳು ಮತ್ತು ಬಿಂದು ಅದುಮುವಿಕೆ (ಆಕ್ಯುಪ್ರೆಶರ್) ನಂತಹ ತಂತ್ರಗಳನ್ನು ಚಿಕಿತ್ಸೆಗೆ ಬಳಸಲಾಗುವುದು.ಅಲ್ಲದೆ ಎಣ್ಣೆ ಎಳೆತ (ಆಯಿಲ್ ಪುಲ್ಲಿಂಗ್), ಅಯಸ್ಕಾಂತ ಚಿಕಿತ್ಸೆ (ಮ್ಯಾಗ್ನೆಟಿಕ್ ಥೆರಪಿ) ಮತ್ತು ಏಕಾಗ್ರತೆಯ ಅಭ್ಯಾಸಗಳು ಸಹ ಅವಶ್ಯಕವಾಗಿ ಬೇಕಾಗುತ್ತವೆ.

**ಆಸನಗಳು ಮತ್ತು ಅವುಗಳ ಪರಿಣಾಮ**

1. **ತಾಡಾಸನ :** ಇದು ನರಗಳ ಪದ್ಧತಿಯನ್ನು ಶಕ್ತಿಶಾಲಿಯನ್ನಾಗಿ ಮಾಡಿ ಏಕಾಗ್ರತೆಯನ್ನು ಹೆಚ್ಚಿಸುತ್ತದೆ.

2. **ವೃಕ್ಷಾಸನ :** ಕಾಲಿನ ಸ್ನಾಯುಗಳು ಬಲಗೊಳ್ಳುವಂತೆ ಮಾಡುತ್ತದೆ ಮತ್ತು ದೇಹದ ಸಮತೋಲನ ಮತ್ತು ನಿಲುವಿನ ಅರಿವನ್ನುಂಟು ಮಾಡುತ್ತದೆ.

3. **ಅರ್ಧ ಚಕ್ರಾಸನ :** ಈ ಆಸನ ಬೆನ್ನೆಲುಬನ್ನು ದೃಢಗೊಳಿಸಿ ಬೆನ್ನಿಗೆ ಶಕ್ತಿಯನ್ನು ಕೊಡುತ್ತದೆ.

4. **ವೀರಭದ್ರಾಸನ :** ದೀರ್ಘ ಶ್ವಾಸ ತೆಗೆದುಕೊಳ್ಳಲು ಅನುಕೂಲ ವಾಗುವಂತೆ ಎದೆಯು ವಿಶಾಲವಾಗುತ್ತದೆ. ಭುಜ, ಬೆನ್ನು ಮತ್ತು ಕತ್ತುಗಳಲ್ಲಿನ ಸೆಳೆತ ಕಮ್ಮಿಯಾಗುತ್ತದೆ. ಈ ಆಸನವು ಪುಷ್ಠದ ಕೊಬ್ಬನ್ನು ಕರಗಿಸುತ್ತದೆ.

5. **ತ್ರಿಕೋಣಾಸನ :** ಕಾಲುಗಳಲ್ಲಿನ, ಸೊಂಟದಲ್ಲಿನ ಬಿಗಿಯನ್ನು ಸಡಿಲಿಸುತ್ತದೆ ಮತ್ತು ಕತ್ತಿನ ಉಳುಕು ಮತ್ತು ಬೆನ್ನುನೋವು ಇದರಿಂದ ಗುಣವಾಗುತ್ತದೆ.

6. **ಪಾದೋತ್ಥಾನಾಸನ :** ಇದು ಜೀರ್ಣಶಕ್ತಿಯನ್ನು ವೃದ್ಧಿಸುತ್ತದೆ. ಜ್ಞಾಪಕಶಕ್ತಿ ಹೆಚ್ಚಿಸುತ್ತದೆ, ಶೀರ್ಷಾಸನ ಮಾಡಲಾಗದವರು ಅದರ ಬದಲಿಗೆ ಇದನ್ನು ಮಾಡಬಹುದು.

7. **ಭುಜಂಗಾಸನ :** ಈ ಆಸನವು ಹಸಿವನ್ನು ಹೆಚ್ಚಿಸುತ್ತದೆ. ಯಕೃತ್ತು ಮತ್ತು ಮೂತ್ರಪಿಂಡಗಳು ಪುನರುಜ್ಜೀವನಗೊಳ್ಳುತ್ತದೆ. ಬೆನ್ನುನೋವು ಉಂಟಾಗುವುದನ್ನು ತಡೆಯುತ್ತದೆ.


Digitised by Bharatavani, CIIL

ಅರ್ಧ ಚಕ್ರಾಸನ

ಭುಜಂಗಾಸನ

ಧನುರಾಸನ

ಪದೋತ್ಥಾನಾಸನ

ಸರ್ವಾಂಗಾಸನ

ತಾಡಾಸನ

ತ್ರಿಕೋನಾಸನ

ವಜ್ರಾಸನ

ವೀರಭದ್ರಾಸನ

ವೃಕ್ಷಾಸನ


ಪ್ರಾಣಾಯಾಮ

Digitised by Bharatavani, CIIL

8. **ಧನುರಾಸನ :** ಜಠರದ ಹಾಗೂ ಕರುಳಿನ ತೊಂದರೆಗಳಿರುವವರಿಗೆ ಈ ಆಸನ ಮಾಡುವುದರಿಂದ ಸಹಾಯವಾಗುತ್ತದೆ. ಕೆಳಹೊಟ್ಟೆಯ ಅಂಗಾಂಗಗಳು ಚೆನ್ನಾಗಿ ಕೆಲಸಮಾಡಲು ಮತ್ತು ದೈಹಿಕ ಆಕೃತಿಯನ್ನು ಕಾಪಾಡಿಕೊಳ್ಳಲು ಸಹಾಯಮಾಡುತ್ತದೆ.

9. **ಸರ್ವಾಂಗಾಸನ :** ಸರ್ವ ಎಂದರೆ ಎಲ್ಲ ಎಂದರ್ಥ. ಈ ಆಸನದಿಂದ ದೇಹದ ಎಲ್ಲ ಭಾಗಗಳಿಗೂ ಅನುಕೂಲವಾಗುತ್ತದೆ. ಮೂತ್ರಕೋಶದ ತೊಂದರೆಗಳಿಂದ ಹಾಗೂ ಮೂಲವ್ಯಾಧಿಯಿಂದ ನರಳುವವರಿಗೆ ಈ ಆಸನದಿಂದ ಒಳ್ಳೆಯದಾಗುತ್ತದೆ.

ಈ ಆಸನವನ್ನು ಪಶ್ಚಿಮೋತ್ಥಾನಾಸನದೊಂದಿಗೆ ಮಾಡುವುದರಿಂದ, ವೀರ್ಯವು ಹೆಚ್ಚುವುದು ಮತ್ತು ಈ ಆಸನವನ್ನು ಬದ್ಧಕೋನಾಸನದೊಂದಿಗೆ ಮಾಡುವುದರಿಂದ ಹೆಂಗಸರಲ್ಲಿ ಮುಟ್ಟಿಗೆ ಸಂಬಂಧಿಸಿದ ತೊಂದರೆಗಳು ಗುಣವಾಗುವುವು. ಒಟ್ಟಿನಲ್ಲಿ ಹೇಳುವುದಾದರೆ ಈ ಆಸನ ಅನೇಕ ಸಾಮಾನ್ಯ ಕಾಯಿಲೆಗಳಿಗೆ ಒಂದು ಸಿದ್ಧೌಷಧ.

10. **ವಜ್ರಾಸನ :** ಈ ಭಂಗಿ ಪ್ರಾಣಾಯಾಮ ಹಾಗೂ ಧ್ಯಾನಕ್ಕೆ ಕುಳಿತುಕೊಳ್ಳಲು ಸೂಕ್ತವಾದ ಭಂಗಿ. ವೆರಿಕೋಸ್‌ನರಗಳ ಎಳೆತ ಮತ್ತು ಮಂಡಿಗಳ ಸಂಧಿವಾತ ಮುಂತಾದ ತೊಂದರೆಗಳಿರುವವರು ಈ ಆಸನದ ಉಪಯೋಗ ಪಡೆಯಬಹುದು.

### ೩. ವೈಯಕ್ತಿಕ ಜೀವನದ ಸರಿಯಾದ ತಿಳಿವಳಿಕೆ

ಬಹುತೇಕ ಮಂದಿ ಅನಾರೋಗ್ಯದಿಂದ ಬಳಲುತ್ತಿರುವವರು ಕೇವಲ ಕ್ರಮಾನುಗತ ಆಹಾರ ಮತ್ತು ನಿಯಮಬದ್ಧ ಯೋಗಾಭ್ಯಾಸದಿಂದಲೇ ತಮ್ಮ ಆರೋಗ್ಯವನ್ನು ಮತ್ತೆ ಪಡೆಯಬಹುದು. ಆದರೆ ಕೆಲವು ಅನಾರೋಗ್ಯದಿಂದ ತೊಂದರೆಗೆ ಒಳಗಾದವರು ತಮ್ಮ ತಪ್ಪು ಕಲ್ಪನೆಗಳಿಂದಾಗಿ ಹಾಗೂ ಅವೈಜ್ಞಾನಿಕ ವಿಧಾನದಿಂದ ಆಸನಗಳನ್ನು ಅಭ್ಯಾಸ ಮಾಡಲು ಹೋಗಿ ದೈಹಿಕ ದೋಷಗಳನ್ನು ಬರಮಾಡಿಕೊಳ್ಳುವ ಸಾಧ್ಯತೆ ಇದೆ. ಇಂತಹ ಸನ್ನಿವೇಶಗಳಲ್ಲಿ ಇವರುಗಳಿಗೆ ಸರಿಯಾದ ಶಾಸ್ತ್ರ ಸಂಬಂಧ ಹಾಗೂ ತತ್ವ ಸಂಬಂಧವಾದ ಅನೇಕ ವಿವರಗಳನ್ನು ನೀಡಲಾಗುತ್ತದೆ.

### ಆರೋಗ್ಯವಾಗಿರಲು ಕೆಲವು ಸಲಹೆಗಳನ್ನು ಈ ಕೆಳಗೆ ಕೊಡಲಾಗಿದೆ

1. ಗಟ್ಟಿ ಪದಾರ್ಥಗಳನ್ನು ಪಾನಿಯಗಳನ್ನು ಕುಡಿದು ತಿನ್ನಬೇಕು. ಅಂದರೆ ಆಹಾರವನ್ನು ಚೆನ್ನಾಗಿ ಅಗಿದು ತಿಂದು, ದ್ರವಗಳು ಅಥವಾ ನೀರನ್ನು ನಿಧಾನವಾಗಿ ಗುಟುಕರಿಸಬೇಕು.
2. ಶಾಂತಚಿತ್ತದಿಂದ ಊಟಮಾಡಬೇಕು. ಉದ್ರೇಕಗೊಳ್ಳಬಾರದು.
3. ಊಟಕ್ಕೆ ಮುಂಚೆ ಸ್ವಲ್ಪ ನಡೆಯಬೇಕು.
4. ಊಟ ಮಾಡುವಾಗ ಮಧ್ಯೆ ಮಾತನಾಡಬಾರದು.
5. ಊಟಕ್ಕೆ ಇನ್ನು ಅರ್ಧಗಂಟೆ ಇದೆ ಎನ್ನುವಾಗ ನೀರು ಕುಡಿಯಬೇಕು. ಊಟವಾದ ನಂತರ ಎರಡು ಗಂಟೆ ಬಿಟ್ಟು ನೀರು ಕುಡಿಯಬೇಕು. ಹೀಗೆ ಮಾಡುವುದರಿಂದ ಹೊಟ್ಟೆಯಲ್ಲಿನ ದ್ರವಗಳು ತೆಳುವಾಗದೆ ಆಹಾರವು ಚೆನ್ನಾಗಿ ಜೀರ್ಣವಾಗಲು ಸಹಾಯವಾಗುತ್ತದೆ.
6. ಊಟವಾದ ನಂತರ ಐದು ಅಥವಾ ಹತ್ತು ನಿಮಿಷ ವಜ್ರಾಸನದಲ್ಲಿ ಕುಳಿತುಕೊಳ್ಳುವುದರಿಂದ ಪಚನಗೊಳಿಸುವ ಅಂಗಗಳು ಚೈತನ್ಯಗೊಂಡು ಹೊಟ್ಟೆಯಲ್ಲಿ ಗಾಳಿ ತುಂಬಿಕೊಳ್ಳುವುದು ಕಡಿಮೆಯಾಗುತ್ತದೆ.
7. ತಾಮ್ರದ ಪಾತ್ರೆಯಲ್ಲಿ ರಾತ್ರಿ ನೀರು ತುಂಬಿಟ್ಟು, ಬೆಳಿಗ್ಗೆ ಬರೀ ಹೊಟ್ಟೆಯಲ್ಲಿರುವಾಗ ಅದನ್ನು ಕುಡಿಯಬೇಕು.
8. 1:1/2:1/4 ಪ್ರಮಾಣದಲ್ಲಿ ಧನಿಯ, ಜೀರಿಗೆ, ಮೆಣಸು ಪುಡಿ ಮಾಡಿ ಪ್ರತಿದಿನ ಒಂದು ಟೀ ಚಮಚ ಪುಡಿಯನ್ನು ಒಂದು ಕಪ್ಪು ನೀರಿಗೆ ಹಾಕಿ ಕುದಿಸಿ ಆ ಕಷಾಯವನ್ನು ಬೆಲ್ಲ, ನಿಂಬೆರಸ ಮತ್ತು ಶುಂಠಿ ಹಾಕಿ ಕುಡಿಯಬೇಕು. ವಾತ, ಪಿತ್ತ ಮತ್ತು ಕಫದಿಂದ ಮುಕ್ತಿ ಪಡೆಯಲು ಈ ಕಷಾಯ ಬಹಳ ಒಳ್ಳೆಯದು. ಕಫ, ಪಿತ್ತ ಮತ್ತು ವಾತ ಈ ಮೂರು ಅಂಶಗಳ ಆಧಿಕ್ಯ ಅಥವಾ ಅಸಮತೋಲನ ಆರೋಗ್ಯವನ್ನು ಹಾಳು ಮಾಡುತ್ತದೆ.
9. ತಣ್ಣೀರಿನ ಸ್ನಾನ ತಪ್ಪದೆ ಮಾಡುವುದು ಒಳ್ಳೆಯದು.
10. ಊಟವಾದ ತಕ್ಷಣ ಮಲಗಬಾರದು. ಅದರ ಬದಲು ಊಟಕ್ಕೆ ಮೊದಲು ಧ್ಯಾನ ಅಥವಾ ಶವಾಸನ (ಕೈ ಕಾಲುಗಳನ್ನು ಹೊರಚಾಚಿ ಮುಖ ಮೇಲೆ ಮಾಡಿ ಆರಾಮವಾಗಿ ಮಲಗುವುದು) ಮಾಡಬೇಕು.
11. ಬೇಯಿಸದ ತರಕಾರಿಯನ್ನು ತಿನ್ನುವುದರಿಂದ ಶಕ್ತಿಯು ಹೆಚ್ಚಾಗಿ ಶರೀರದಲ್ಲಿ ವಿಷ ಪದಾರ್ಥಗಳು ಸೇರುವುದು ಕಮ್ಮಿಯಾಗುತ್ತದೆ. ಹಸೀ ಕ್ಯಾರೆಟ್, ಬೀಟ್‌ರೋಟ್, ಬೂದುಗುಂಬಳಕಾಯಿ, ಸೌತೆಕಾಯಿ, ಮೂಲಂಗಿ ಮತ್ತು ಮೊಳಕೆ ಧಾನ್ಯಗಳನ್ನು ಪ್ರತಿದಿನ ಬಳಸಬಹುದು.
12. ತಾಜಾ ಮಜ್ಜಿಗೆ, ನಿಂಬೆ, ಜೇನುತುಪ್ಪ ಮತ್ತು ಎಳನೀರನ್ನು ಪ್ರತಿದಿನ ಉಪಯೋಗಿಸುವುದು ಒಳ್ಳೆಯದು.
13. ಸಕ್ಕರೆ, ಬೆಣ್ಣೆ, ಹಾಲು, ಹಾಲಿನ ಪದಾರ್ಥಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದು ಒಳ್ಳೆಯದು.
14. ಕಾಫಿ, ಟೀ, ಹೊಗೆಸೊಪ್ಪು, ಮದ್ಯ, ಕರಿದ ತಿಂಡಿ, ವಿಪರೀತ ಉಪ್ಪು ಇವುಗಳನ್ನು ಆದಷ್ಟು ಬಳಸದಿರುವುದು ಒಳ್ಳೆಯದು.
15. ಪ್ರಾಣವಾಯುವನ್ನು ದೇಹದ ಒಂದು ಭಾಗಕ್ಕೆ ದೀರ್ಘವಾಗಿ ತೆಗೆದುಕೊಂಡು ಉಚ್ವಾಸ, ನಿಶ್ವಾಸ ಮಾಡುವುದರಿಂದ ಹೃದಯದ ಬಡಿತವನ್ನು ನಿಯಂತ್ರಣಕ್ಕೆ ತಂದುಕೊಳ್ಳಬಹುದು.
16. ಅಂಗಾಲನ್ನು ಶಾಖವಾಗಿಯೂ, ಹೊಟ್ಟೆಯನ್ನು ಮೃದುವಾಗಿಯೂ ಮತ್ತು ತಲೆಯನ್ನು ತಂಪಾಗಿಯೂ ಇಟ್ಟುಕೊಳ್ಳಬೇಕು.
17. ಆದಷ್ಟು ಮೌನಿಯಾಗಿರುವುದು ಒಳ್ಳೆಯದು ಮತ್ತು ಸರಳವಾದ ಜೀವನ ನಡೆಸಬೇಕು. ಅತಿ ಆಸೆಯ ಜೀವನಕ್ರಮದಿಂದಾಗಿ ನರಗಳ ದೌರ್ಬಲ್ಯ ಹಾಗೂ ಇತರ ರೋಗಗಳನ್ನು ತಂದುಕೊಳ್ಳುವಂತಾಗುತ್ತದೆ.

–ಎ.ಆರ್.ಸೀ.

## ಯೋಗ ಮತ್ತು ಶಿಕ್ಷಣ

ಇತರ ಪ್ರಾಣಿಗಳಿಗೆ ಹೋಲಿಸಿದರೆ ಮಾನವ ಶಿಶು ತನ್ನ ಶೈಶವಾವಸ್ಥೆಯಲ್ಲಿ ಅತ್ಯಂತ ಅಸಹಾಯಕ ಸ್ಥಿತಿಯಲ್ಲಿ ಜನ್ಮಕ್ಕೆ ಬರುತ್ತದೆ. ಆದರೆ ಇತರ ಎಲ್ಲ ಪ್ರಾಣಿಗಳ ಶಿಶುಗಳಿಗಿಂತ ಹೆಚ್ಚಿನ ವಿಕಾಸವನ್ನು ಹೊಂದುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಬೆಳೆಯುತ್ತಿದ್ದಂತೆ ಆಹಾರ. ನಿದ್ರೆ, ಭಯ, ಮೈಥುನಗಳಲ್ಲಿ ಪ್ರಾಣಿಗಳಿಗೂ ಮಾನವರಿಗೂ ಹೆಚ್ಚು ಅಂತರವಿಲ್ಲ; ಆದರೆ "ತ್ರಿಕರಣ'ಗಳಾದ 'ಕಾಯಾ'(ಶರೀರ) (ಮಾನವ ಶರೀರ ಅತ್ಯಂತ ಹೆಚ್ಚು ವಿಕಾಸ ಹೊಂದಿದೆ). 'ವಾಚಾ; (ವಾಕ್‌ಶಕ್ತಿ) (ಇತರ ಯಾವ ಪ್ರಾಣಿಗೂ ಮಾನವನಷ್ಟು ವೈವಿಧ್ಯಮಯ ಧ್ವನಿ ಸಾಮರ್ಥ್ಯವಿಲ್ಲ) ಮತ್ತು 'ಮನಸಾ' (ಅಂತಃಕರಣ: ಮನಸ್ಸು, ಬುದ್ಧಿ, ಚಿತ್ತ). (ಜ್ಞಾನ ವಿಜ್ಞಾನಗಳನ್ನು ಮೈಗೂಡಿಸಿಕೊಳ್ಳಬಲ್ಲ ಸಾಮರ್ಥ್ಯ) ಇವು ಮೂರೂ ಮಾನವ ಶಿಶುಗಳಲ್ಲಿರುವ ಜನ್ಮಸಿದ್ಧವಾದ ವೈಶಿಷ್ಟ್ಯಪೂರ್ಣ


Digitised by Bharatavani, CIIL

ಪ್ರತಿಭೆಗಳು. ಸೃಷ್ಟಿಯಲ್ಲಿರುವ ವಿವಿಧ ಪ್ರಾಣಿ ವರ್ಗಗಳ ಪೈಕಿ ಅತ್ಯಂತ ಹೆಚ್ಚು ಬೌದ್ಧಿಕ ಸಾಮರ್ಥ್ಯವನ್ನು ಹೊಂದಿರುವ ಮಾನವನು ಭೂತ, ವರ್ತಮಾನ, ಭವಿಷ್ಯ– ಮೂರರ ಬಗ್ಗೆ ಚಿಂತನೆ ನಡೆಸಿ ಸೃಷ್ಟಿಯ ಎಲ್ಲಾ ಘಟಕಗಳ ಬಗ್ಗೆ ಅನುಕಂಪ, ಸಾಮರಸ್ಯ, ಜೀವ ಕಾರುಣ್ಯ ಹಾಗೂ ಇತರ ಪ್ರಾಣಿಗಳೊಂದಿಗೆ ಸಹಬಾಳ್ವೆ ಮಾತ್ರವಲ್ಲ, ಮುಂದಿನ ಪೀಳಿಗೆಗಾಗಿ ಅವುಗಳೆಲ್ಲದರ ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

ತನ್ನ ವಿಶೇಷ ಪ್ರತಿಭೆ ಹಾಗೂ ಶಕ್ತಿ ಸಾಮರ್ಥ್ಯಗಳ ಮೂಲಕ ಮಾನವ ಅನಾದಿ ಕಾಲದಿಂದಲೂ ವಿವಿಧ ಸಮಸ್ಯೆಗಳ ಕುರಿತು ಚಿಂತನೆ ನಡೆಸಿ ಗಳಿಸಿರುವ ಜ್ಞಾನ ಭಂಡಾರ ಅಪರಿಮಿತವಾಗಿದೆ. "ಅಭಿವ್ಯಕ್ತಿ ಸಾಮರ್ಥ್ಯ" (ವಿವಿಧ ಭಾಷೆಗಳ ಆವಿಷ್ಕಾರ, ಸಂಗೀತ, ಸಾಹಿತ್ಯ, ಸಂಸ್ಕೃತಿ ಹಾಗೂ ಸಮೂಹ ಮಾಧ್ಯಮಗಳು ಇತ್ಯಾದಿ) "ಅನುಭೋಗ ಸಾಮರ್ಥ್ಯ' (ಗೃಹ ನಿರ್ಮಾಣ, ಸಾರಿಗೆ, ಉಡುಪು–ತೊಡಪು, ಆಹಾರ, ಪ್ರಸಾಧನಗಳು ಇತ್ಯಾದಿ, "ಅನುಭಾವ ಸಾಮರ್ಥ್ಯ" ಲೋಕಾನುಭವದ ಆಧಾರದಲ್ಲಿ ಅತೀತದ ಬಗ್ಗೆ ಚಿಂತನೆ ನಡೆಸಿ ಸೃಷ್ಟಿ ಹಾಗೂ ಸೃಷ್ಟಿಕರ್ತನ ಬಗೆಗಿನ ಅರಿವು, ಜ್ಞಾನ ಹಾಗೂ ವಿಜ್ಞಾನದ ಎಲ್ಲಾ ಮಜಲುಗಳಲ್ಲಿ ನಡೆದ ಆವಿಷ್ಕಾರಗಳು ಇಂದು ಇಡೀ ಮನುಕುಲದ ಪಿತ್ರಾರ್ಜಿತ ಆಸ್ತಿ.

ಆದ್ದರಿಂದ ಮಾನವ ಶಿಶುವಿನ ಸರ್ವತೋಮುಖವಾದ ವಿಕಾಸಕ್ಕೆ ಶಿಕ್ಷಣದ ಅವಶ್ಯಕತೆಯಿದೆ. ಇಂತಹ ಶಿಕ್ಷಣಕ್ಕೆ ಮೂರು ಲಕ್ಷಣಗಳಿರಬೇಕು.

1. ಜೀವನದ ಪರಮ ಪುರುಷಾರ್ಥಗಳನ್ನು ಸಾಧಿಸುವ ನಿಟ್ಟಿನಲ್ಲಿ ಮಾನವನಲ್ಲಿರುವ ಎಲ್ಲ ಸುಪ್ತಶಕ್ತಿಗಳನ್ನು ಹಾಗೂ ಗುಣಗಳನ್ನು ವಿಕಾಸಗೊಳಿಸುವುದಕ್ಕೆ ಸಮರ್ಥವಾಗಿರಬೇಕು.

2. ತನ್ನ ವ್ಯಕ್ತಿಗತ ಜೀವನದೊಂದಿಗೆ ಸಾಮಾಜಿಕ, ನೈತಿಕ ಹಾಗೂ ಆಧ್ಯಾತ್ಮಿಕ ಜೀವನ ಮೌಲ್ಯಗಳನ್ನು ಸಂಪೂರ್ಣವಾಗಿ ಹೊಂದಾಣಿಸಿಕೊಂಡು ಬಾಳಲು "ಮಾರ್ಗದರ್ಶಿ"ಯಾಗಿರಬೇಕು.

3. ಅತಿ ಪುರಾತನದಿಂದ ಅತ್ಯಾಧುನಿಕ ಯುಗದ ತನಕ ಮಾನವನು ಸಾಧಿಸಿರುವ ಅಪಾರ ಜ್ಞಾನ ಹಾಗೂ ವಿಜ್ಞಾನಗಳ ಬಗ್ಗೆ ಅರಿವು, ಸ್ವಾಭಿಮಾನ ಹಾಗೂ ಅವುಗಳ ಬೆಳವಣಿಗೆಗೆ ತನ್ನದೇ ಆದ ಕೊಡುಗೆಗಳನ್ನು ನೀಡುವುದಕ್ಕೆ ಪ್ರಚೋದನೆ ನೀಡುವಂತಿರಬೇಕು.

ಮೇಲ್ಕಂಡ ಮೂರು ಗುರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು 'ಯೋಗದರ್ಶನ ಹಾಗೂ ಶಿಕ್ಷಣ' ಎಂಬ ವಿಷಯವನ್ನು ಈ ಕೆಳಗೆ ವಿಶದೀಕರಿಸಲಾಗಿದೆ.

## ದರ್ಶನ

ಸಂಸ್ಕೃತ ವಾಙ್ಮಯದಲ್ಲಿ ವೇದ. ಉಪನಿಷತ್ತುಗಳು. ಬ್ರಹ್ಮಸೂತ್ರ. ಭಗವದ್ಗೀತೆ, ರಾಮಾಯಣ ಮಹಾಭಾರತಗಳೆಂಬ ಇತಿಹಾಸಗಳು, ಅಷ್ಟಾದಶ ಪುರಾಣಗಳು ಇವುಗಳ ಸಾಲಿಗೆ ಸೇರುವ ವಿಶಿಷ್ಟ ಜ್ಞಾನ ರಾಶಿ ಉಪಲಬ್ಧವಿರುವುದು 'ದರ್ಶನ'ಗಳಲ್ಲಿ. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ– ಮೀಮಾಂಸಾ ಹಾಗೂ ಉತ್ತರ ಮೀಮಾಂಸ (ವೇದಾಂತ)ಗಳೆಂಬ ಷಡ್ದರ್ಶನಗಳು ಸತ್ಯದರ್ಶನದ 6 ಮಾರ್ಗಗಳು. ಇವು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಸ್ತರಗಳನ್ನು ಮಾರ್ಗದರ್ಶನವನ್ನು ಒದಗಿಸಿಕೊಡುತ್ತವೆ. ಇವುಗಳು ಒಂದಕ್ಕೊಂದು ಪೂರಕವಾಗಿದೆ. ಮಾನವ ಜೀವಿತದ ಪರಮ ಗುರಿ ಮತ್ತು ಮಾರ್ಗಗಳ ಆಳವಾದ ಪರಿಚಯ ಹಾಗೂ ಇವುಗಳೆರಡನ್ನು ಪೂರೈಸುವ ಜ್ಞಾನವನ್ನು ದರ್ಶನಗಳು ನೀಡುತ್ತವೆ. 'ದರ್ಶನ' ಎಂದರೆ 'ನೋಡುವುದು,' ಇಲ್ಲಿ 'ಸತ್ಯದರ್ಶನ'ವೆಂಬುದು ತಾತ್ಪರ್ಯ, 'ಜೀವನದ ಸಮಗ್ರ ದರ್ಶನ ಮಾಡಿಸುವ ಆರು ದೃಷ್ಟಿಕೋನಗಳೇ 'ಷಡ್ದರ್ಶನ ಸಮುಚ್ಚಯ'.

## ಯೋಗ

ಆರು ದೃಷ್ಟಿಕೋನಗಳಲ್ಲಿ "ಯೋಗ"ವು ಸತ್ಯ ದರ್ಶನ ಮಾಡಿಸುವ ಹಾಗೂ ಬದುಕಿನ ಸಾರ್ಥಕತೆಯನ್ನು ಸಾಧಿಸುವ ರಾಜಮಾರ್ಗ ಈ ಮಾರ್ಗಕ್ಕೆ "ಯೋಗದರ್ಶನ" "ಅಷ್ಟಾಂಗಯೋಗ" "ಪಾತಂಜಲ ಯೋಗ" ಹಾಗೂ "ರಾಜಯೋಗ" ಎಂಬುವು ಪರ್ಯಾಯ ಪದಗಳು.


ಮಹರ್ಷಿ ಪತಂಜಲಿ

'ಯುಜ್' ಎಂಬ ಧಾತುವಿನಿಂದ ಉತ್ಪನ್ನವಾದ ಪದ ಯೋಗ. "ಯೋಗ" ಎಂಬ ಪದಕ್ಕೆ 'ಒಟ್ಟು ಸೇರು,' 'ಒಂದುಗೂಡು' ಎಂಬ ಅರ್ಥಗಳಿವೆ. ಜೀವ ಪರಮಾತ್ಮರ ಸಂಯೋಗವನ್ನು ಇಲ್ಲಿ "ಯೋಗ" ಎಂದು ಕರೆಯಲಾಗಿದೆ. ''ಸಮಾಧಿ''ಯ ಸ್ಥಿತಿಯಲ್ಲಿ ಮಾತ್ರವೇ ಸಂಯೋಗದ ಅರ್ಥಾತ್ "ಶಿವ ಶಕ್ತ್ಯೈಕ್ಯ ಸ್ವರೂಪ"ದ ಸ್ಥಿತಿಯನ್ನು ಅನುಭವಿಸಲು ಸಾಧ್ಯವಿರುವುದರಿಂದ ಯೋಗಕ್ಕೆ ಸಮಾಧಿಯೆಂಬ ಅರ್ಥವೂ ಇದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬ ಎಂಟು ಅಂಗಗಳಿರುವುದರಿಂದ "ಅಷ್ಟಾಂಗ ಯೋಗ" ಎಂಬುದಾಗಿ ಜಗದ್ವಿಖ್ಯಾತವಾಗಿದೆ.

ಸುಮಾರು ಕ್ರಿ.ಪೂ. 3ನೇ ಶತಮಾನದಲ್ಲಿ ಬದುಕಿದ್ದ ತನ್ನ ಲೋಕಾನುಭವ ಹಾಗೂ ಅನುಭಾವಗಳಿಂದ ಪುಷ್ಟಿಗೊಂಡು ರಚಿಸಲ್ಪಟ್ಟ ಗ್ರಂಥವೇ "ಯೋಗದರ್ಶನ'. ಗ್ರಂಥಕರ್ತನ ಹೆಸರು ಪತಂಜಲಿ. ಗ್ರಂಥದ ಪ್ರಸ್ತುತಿ ಹಾಗೂ ಗ್ರಂಥದಲ್ಲಿ ಉಕ್ತವಾದ ಅತ್ಯಂತ ಗಹನವಾದ ವಿಚಾರವನ್ನು ಮನಗಂಡು ಆತನನ್ನು ಗ್ರಂಥದ 'ದ್ರಷ್ಟಾರ'ನೆಂದೂ, 'ಋಷಿ' ಎಂಬುದಾಗಿಯೂ ಕರೆದಿದ್ದಾರೆ. ಆದ್ದರಿಂದ ''ಪಾತಂಜಲ ಯೋಗ"ವೆಂಬುದು "ಪರ್ಯಾಯ" ಪದವಾಗಿ ರೂಢಿಯಾಯಿತು. "ರಾಜ"ತ್ವದ ಲಕ್ಷಣಗಳಾದ ಲೌಕಿಕ ಭೋಗ ಭಾಗ್ಯಗಳು (ಬುದ್ಧಿಬಲ, ಜನಬಲ, ಧನಬಲ, ಬಾಹುಬಲ, ದೀರ್ಘಾಯುರಾರೋಗ್ಯ – ಬಲ ಮುಂತಾದವುಗಳು) ಮತ್ತು ಯೋಗದ ಮೂಲಕ ಮಾತ್ರವೇ ಪಡೆಯಬಹುದಾದ (ಯೋಗಿಯ ಲಕ್ಷಣಗಳಾದ) ಆಂತರಂಗಿಕ ಯೋಗ್ಯತೆಗಳು (ಭಕ್ತಿ, ಜ್ಞಾನ, ವೈರಾಗ್ಯ, ವಿವೇಕ, ಇಂದ್ರಿಯನಿಗ್ರಹ, ಪರಮಸಹಿಷ್ಣುತೆ, ಸರ್ವಧರ್ಮಸಮಭಾವ, ವಿಶ್ವ–ಮೈತ್ರಿ, ಜೀವಕಾರುಣ್ಯ ಸ್ಥಿತಪ್ರಜ್ಞತ್ವ ಮುಂತಾದ ಜೀವನ ಮೌಲ್ಯಗಳು) ಇವೆರಡನ್ನೂ ವ್ಯಕ್ತಿಯ ಜೀವಿತ ಕಾಲದಲ್ಲಿಯೇ ದೊರಕಿಸಿಕೊಡಬಲ್ಲ ಸರ್ವಶ್ರೇಷ್ಠ ಮಾರ್ಗವಾಗಿರುವುದರಿಂದ "ರಾಜಯೋಗ"ವೆಂಬ ಹೆಸರು ಬಂದಿದೆ. ಪ್ರಧಾನವಾಗಿ "ಯೋಗ ವಿದ್ಯೆ"ಯು "ಪರಾವಿದ್ಯೆ". ಇದು ವ್ಯಕ್ತಿಯ "ಅಂತರಂಗ ವಿಕಾಸ"ವನ್ನು ಮಾಡಿಸುತ್ತದೆ ಇತರ ಲೌಕಿಕ ವಿದ್ಯೆಗಳು – ಭಾಷೆ, ಗಣಿತ, ವಿಜ್ಞಾನ, ತಂತ್ರಜ್ಞಾನ, ಮುಂತಾದವುಗಳು 'ಅಪರಾವಿದ್ಯೆ'ಗಳು: ಆರೋಗ್ಯ, ಆಹಾರ, ಸಂಪಾದನೆ, ಸಂತಾನ ಮುಂತಾದ ಜೀವನದ ಸುಖ ಸೌಕರ್ಯಗಳನ್ನು ಪಡೆಯಲು "ಬಹಿರಂಗ ವಿಕಾಸ"ಕ್ಕೆ ಮಾರ್ಗವಾಗಿದೆ.

## ಶಿಕ್ಷಣ

ಅಲೆಮಾರಿಯಾಗಿ ಬಾಳನ್ನು ಸವೆಸುತ್ತಿದ್ದ ಆದಿ ಮಾನವನು ಒಂದೆಡೆ ನೆಲೆಯಾಗಿ ಜೀವನ ನಡೆಸುವ ಸ್ಥಿತಿಯನ್ನು ತಲುಪಿದಾಗ ಅನೇಕ

Digitised by Bharatavani, CIIL

ಸಮಸ್ಯೆಗಳು ಎದುರಾದುವು. ಮೊಟ್ಟಮೊದಲನೆಯದು ತನ್ನ ಸೊತ್ತುಗಳ ರಕ್ಷಣೆ; ಕಾಡು ಪ್ರಾಣಿಗಳು ಹಾಗೂ ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆ. ಇದಕ್ಕಾಗಿ ಗೃಹನಿರ್ಮಾಣ. ಚಳಿ, ಮಳೆ ಹಾಗೂ ಮಾನಸಂರಕ್ಷಣೆಗಾಗಿ ಬಟ್ಟೆಬರೆಗಳು. ಆಹಾರಕ್ಕಾಗಿ ಬೇಟೆ, ಸಮುದಾಯದ ರಕ್ಷಣೆಗಾಗಿ ಸೈನ್ಯ, ಆರೋಗ್ಯ ಹಾಗೂ ಸ್ವಾಸ್ಥ್ಯ ರಕ್ಷಣೆಗಾಗಿ ವ್ಯಾಯಾಮ, ಯುದ್ಧಕಲೆ, ಕುಸ್ತಿ, ಬಿಲ್ಲುವಿದ್ಯೆ; ಆಹಾರದ ಉತ್ಪಾದನೆಗಾಗಿ ಶರೀರಶ್ರಮ, ಕೃಷಿ ಸಲಕರಣೆಗಳು, ಪಶುಪಾಲನೆ, ವಾಣಿಜ್ಯ, ಸಾರಿಗೆ ಸಂಪರ್ಕ, ಸಾಮಾನು ಸಾಗಾಟ; ಬಿಡುವಿನ ವೇಳೆಯಲ್ಲಿ ಮನೋರಂಜನೆಗಾಗಿ ಸಂಗೀತ, ಸಾಹಿತ್ಯ, ಕಲೆ, ಸತ್ಸಂಗ ಮುಂತಾದವು "ಅವಶ್ಯಕತೆ"ಗಳಾಗಿ ಬೆಳೆದುಬಂದವು. ಈ ಎಲ್ಲಾ ಸಂಶೋಧನೆಗಳು, ಜ್ಞಾನ–ವಿಜ್ಞಾನಗಳು ಮುಂದಿನ ಪೀಳಿಗೆಗೆ ದೊರಕುವಂತೆ ಮಾಡುವುದು ಮುಂದಿನ "ಅವಶ್ಯಕತೆ"ಯಾಯಿತು. ಇದಕ್ಕೊಂದು ವ್ಯವಸ್ಥಿತವಾದ ವಿಧಾನವನ್ನು ಮಾನವ ಕಂಡುಕೊಂಡ; ಇದುವೇ ಶಿಕ್ಷಣ.

ಸಮಾಜದ ಒಟ್ಟು ಹಿತರಕ್ಷಣೆಯಲ್ಲಿ ನಾಲ್ಕು ಕಾರ್ಯಗಳು ಅನಿವಾರ್ಯವಾದವು; ಶರೀರಶ್ರಮ, ಕೃಷಿ–ವಾಣಿಜ್ಯಾದಿಗಳು, ರಕ್ಷಣೆ ಹಾಗೂ ಶಿಕ್ಷಣ. ಇದನ್ನೇ ಕಾಲಕ್ರಮೇಣ ಅನುಕ್ರಮವಾಗಿ ಶೂದ್ರ, ವೈಶ್ಯ, ಕ್ಷತ್ರಿಯ ಹಾಗೂ ಬ್ರಾಹ್ಮಣ – "ವರ್ಣಧರ್ಮ"ವೆಂಬುದಾಗಿ ಕರೆಯಲಾಯಿತು. ವ್ಯಕ್ತಿಯ ಜೀವನದಲ್ಲಿ ಪ್ರಧಾನವಾದ ಕಾಲ ಘಟ್ಟಗಳು ನಾಲ್ಕು. ಬಾಲ್ಯ, ಕೌಮಾರ್ಯ, ಯೌವನ ಹಾಗೂ ವೃದ್ಧಾಪ್ಯ. ಇದನ್ನೇ ಕಾಲಕ್ರಮೇಣ ಅನುಕ್ರಮವಾಗಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸಂನ್ಯಾಸ – ಇವುಗಳನ್ನು "ಆಶ್ರಮಧರ್ಮ"ವೆಂಬುದಾಗಿ ಕರೆಯಲಾಯಿತು. ಬಾಲ್ಯ–ಕೌಮಾರ್ಯಗಳಲ್ಲಿ ಜೀವನದ ಸಿದ್ಧತೆಗಾಗಿ ಜ್ಞಾನ ಸಂಪಾದನೆ, ಅಧ್ಯಯನ, ಪ್ರತಿಭೆಗಳನ್ನು ಬೆಳೆಸಿಕೊಳ್ಳುವುದಕ್ಕೆ ಅವಕಾಶ. ಈ ಸಂದರ್ಭದಲ್ಲಿ ಕಟ್ಟುನಿಟ್ಟಾದ ಜೀವನ ಪದ್ಧತಿ – ಬ್ರಹ್ಮಚರ್ಯದ ಪಾಲನೆ ಅತ್ಯವಶ್ಯ. ಸ್ಮರಣ ಶಕ್ತಿ ಹಾಗೂ ಸ್ಫುರಣ ಶಕ್ತಿಗಳ ಉದ್ದೀಪನ, ಯಮ ನಿಯಮಾದಿಗಳ ಕಠಿಣವ್ರತ, ಆಸನ, ಪ್ರಾಣಾಯಾಮಗಳ ಅಭ್ಯಾಸ, ಇಂದ್ರಿಯನಿಗ್ರಹ, ಅಂತರಂಗ ಸಾಧನೆಗಳಾದ ಧ್ಯಾನ ಸಮಾಧಿಗಳಿಗೆ ಅವಕಾಶವನ್ನು ಕಲ್ಪಿಸಲಾಯಿತು. ಮುಂದಿನ ಯೌವನ ಹಾಗೂ ಪ್ರೌಢಾವಸ್ಥೆಯಲ್ಲಿ ಸಂಪಾದನೆ, ಸಂಸಾರ, ಸಂತಾನ, ಲೋಕಾನುಭವವನ್ನು ಪಡೆಯುವ ಕಾಲ. ಈ ಕಾಲಘಟ್ಟವನ್ನು ಗೃಹಸ್ಥಾಶ್ರಮವೆಂದು ಕರೆಯಲಾಗಿದೆ. ವೃದ್ಧಾಪ್ಯ ಮತ್ತು ಮುಪ್ಪಿನ ಕಾಲದಲ್ಲಿ ತನ್ನ ಎಲ್ಲ ಜವಾಬ್ದಾರಿಗಳು, ಸಂಪಾದಿಸಿದ ದ್ರವ್ಯ ಹಾಗೂ ಜ್ಞಾನವನ್ನು ತನ್ನ ಮುಂದಿನ ಪೀಳಿಗೆಗೆ ಧಾರೆಯೆರೆದು ಅವರು ಸಂತುಷ್ಟರೂ, ಸಂತೃಪ್ತರೂ ಆದ ಜೀವನವನ್ನು ಮಾಡಲು ಅನುವು ಮಾಡಿಕೊಡಬೇಕು. ತಾವು ವಿಶಾಲವಾದ ಸಮಾಜ, ರಾಷ್ಟ್ರ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತನೆಗಳಲ್ಲಿ ತೊಡಗಬೇಕು. ಕೌಟುಂಬಿಕ ಸಮಸ್ಯೆಗಳಿಂದ ದೂರವಿದ್ದು, ಏಕಾಂತವಾಸ ಮಾಡುತ್ತ ಅಥವಾ ಕುಟುಂಬದ ಸದಸ್ಯರೊಡನೆ ವಾಸ ಮಾಡುತ್ತಾ ಸಮಾಜದ ಕಲ್ಯಾಣ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಸಾಂಸಾರಿಕ ಜಂಜಾಟಗಳಿಂದ ದೂರವಿದ್ದು, ತನ್ನ ಜೀವನಾನುಭವಗಳನ್ನು ಸಮಾಜ ಸೇವೆಗೆ ಧಾರೆಯೆರೆಯುವುದು–ವಾನಪ್ರಸ್ಥ. ನಾಲ್ಕನೆಯ ಆಶ್ರಮವೇ 'ಸನ್ಯಾಸ'. ಪರಾವಿದ್ಯೆಯ ಸಂಪೂರ್ಣ ಸಾಕ್ಷಾತ್ಕಾರವನ್ನೇ ಗುರಿಯಾಗಿಟ್ಟುಕೊಂಡು 'ತನ್ನದೆ'ನ್ನುವ ಸರ್ವಸ್ವವನ್ನು ಭಗವದರ್ಪಣ ಭಾವದಿಂದ ಸಮರ್ಪಣೆ ಗೈದು ಕೇವಲ ಆಧ್ಯಾತ್ಮ ಚಿಂತನೆಯನ್ನಷ್ಟೇ ನಡೆಸುತ್ತಾ "ಲೋಕಾಸ್ಸಮಸ್ತಾ ಸುಖಿನೋಭವಂತು" ಎಂಬ ಆದರ್ಶವನ್ನು ಮನಸಾವಾಚಾಕರ್ಮಣಾ ಚಿಂತಿಸುತ್ತಾ 'ಜೀವನ್ಮುಕ್ತ' ಸ್ಥಿತಿಯಲ್ಲಿ ಬದುಕಿರುವುದನ್ನು 'ಸಂನ್ಯಾಸ'ವೆಂದು ಕರೆಯಲಾಗಿದೆ.

ಒಟ್ಟಿನಲ್ಲಿ ಸಾರಾಂಶ ಇಷ್ಟು ; "ವರ್ಣಾಶ್ರಮಧರ್ಮ" ಎಂದರೆ ಸಮಾಜ ಜೀವನ ಹಾಗೂ ವ್ಯಕ್ತಿಜೀವನ. ಇವುಗಳ ಶಾಂತಿ–ಸುಭದ್ರತೆಗಾಗಿ "ಕ್ರಮಬದ್ಧವಾದ ಶಿಕ್ಷಣ"ವು ಬೇಕು. ಇದಕ್ಕೆ ಯೋಗ ಶಿಕ್ಷಣವೇ ರಾಜಮಾರ್ಗ. ಧರ್ಮ, ಅರ್ಥ, ಕಾಮ, ಮೋಕ್ಷಗಳೇ ಪರಮ ಪುರುಷಾರ್ಥಗಳು. ಸತ್ಯ, ಧರ್ಮ, ಶಾಂತಿ, ಪ್ರೇಮ, ಅಹಿಂಸೆಗಳೆಂಬವುಗಳು ಎಲ್ಲರ ಶಾಂತಿ–ಸುಭದ್ರತೆಗಾಗಿ ಬದುಕಿನಲ್ಲಿ ಪ್ರತಿಯೊಬ್ಬರೂ ಅನುಸರಿಸಲೇ ಬೇಕಾದ ಶಾಶ್ವತ ಜೀವನ ಮೌಲ್ಯಗಳು.

## ಯೋಗ ಶಿಕ್ಷಣ

ಪ್ರಾಚೀನ ಭಾರತವು ಮಾನವ ಕುಲದ ಕಲ್ಯಾಣಕ್ಕಾಗಿ ನೀಡಿರುವ ಅತ್ಯುನ್ನತ ವಿದ್ಯೆ ಯೋಗವಿದ್ಯೆ. ಆಧುನಿಕ ಕಾಲದಲ್ಲಿ ಇದರ ಮಹತ್ವವನ್ನು ಜಗತ್ತಿನ ಎಲ್ಲ ಸಂಸ್ಕೃತಿಯ ಜನರು ಅರ್ಥ ಮಾಡಿಕೊಂಡಿದ್ದಾರೆ. "ಯೋಗ" ವಿದ್ಯೆ ಇಂದು ಇಡೀ ಮನುಕುಲದ ಆಸ್ತಿ. "ವೇಗ" ಮತ್ತು "ಉದ್ವೇಗ"ಗಳಿಂದ ಕೂಡಿದ ಆಧುನಿಕ ಮಾನವನು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾನೆ. ಇವೆಲ್ಲವುಗಳ ಪರಿಹಾರಕ್ಕೆ ಯೋಗವೊಂದೇ ರಾಜಮಾರ್ಗ. ಈ "ಅಷ್ಟಾಂಗ ಯೋಗ"ವನ್ನು ಕಲಿಸಿಕೊಡುವುದಕ್ಕೆ ಒಂದು ವ್ಯವಸ್ಥಿತವಾದ, ವೈಜ್ಞಾನಿಕವಾದ ಹಾಗೂ ಪರಿಣಾಮಕಾರಿಯಾದ ಶಿಕ್ಷಣತಂತ್ರವನ್ನು ರೂಪಿಸುವಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸುವುದು ಸೂಕ್ತ.



ಪ್ರಾಣಾಯಾಮ

1. ಪ್ರಧಾನವಾಗಿರುವ ನಾಲ್ಕು ಯೋಗಗಳಾದ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ ಹಾಗೂ ರಾಜಯೋಗದ ಸ್ಥೂಲ ಪರಿಚಯ, ಹಠಯೋಗ, ನಾದಯೋಗ, ಲಯಯೋಗ, ಕ್ರಿಯಾಯೋಗ, ಶಿವಯೋಗ, ಮಂತ್ರಯೋಗ, ಸಹಜರಾಜಯೋಗ, ಕುಂಡಲಿನೀಯೋಗ ಮುಂತಾದವುಗಳ ಕಿರುಪರಿಚಯ.

2. ಅಷ್ಟಾಂಗ ಯೋಗದ ವಿಸ್ತೃತ ಪರಿಚಯ–ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಇವುಗಳಲ್ಲಿರುವ ಸೂತ್ರಬದ್ಧತೆ.

3. ಆಧುನಿಕ ಜೀವನ ಪದ್ಧತಿಯಿಂದ "ಯೋಗಮಯ ಜೀವನ" ಕ್ಕೆ ಬದಲಾಯಿಸಿಕೊಳ್ಳಬೇಕಾದ ಅವಶ್ಯಕತೆ ಹಾಗೂ ಅನಿವಾರ್ಯತೆ. ಭೋಗಕ್ಕೂ ಯೋಗಬೇಕು, ರೋಗ ನಿವಾರಣೆಗೂ ಯೋಗಬೇಕು.

4. "ಸಂಯಮ"ದ ಜೀವನವೇ ಯೋಗಮಯ ಜೀವನ, "ಮನಯೇವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋ" (ಮಾನವನ ಬಂಧ ಮತ್ತು ಮೋಕ್ಷಗಳೆರಡಕ್ಕೂ ಮನಸ್ಸೇ ಕಾರಣ). ಹೀಗಿರುವುದರಿಂದ "Bending of Mind is more important than bending of body in Yoga" ಈ ಮಾತಿನಲ್ಲಿ ಯೋಗಾಭ್ಯಾಸಿಗಳಿಗೆ ವಿಶೇಷ ಮಾರ್ಗದರ್ಶನವಿದೆ.

5. ಯೋಗಮಯ ಜೀವನದ ಪ್ರವೇಶ ದ್ವಾರವೇ ಯಮನಿಯಮಗಳು. ಸಾಮಾಜಿಕ ಜೀವನ ಮೌಲ್ಯಗಳಾದ ಅಹಿಂಸಾ, ಸತ್ಯ, ಅಸ್ತೇಯ ಬೇರೆಯವರಿಗೆ ಸೇರಿದ್ದನ್ನು ತೆಗೆದುಕೊಳ್ಳದಿರುವುದು, ಅಪರಿಗ್ರಹ– ಆವಶ್ಯಕತೆಗಿಂತ ಹೆಚ್ಚಿನದನ್ನು ಸ್ವೀಕರಿಸದಿರುವುದು. ಬ್ರಹ್ಮಚರ್ಯ

Digitised by Bharatavani, CIIL

– ಈ ಐದನ್ನು "ಯಮ" ಎಂಬುದಾಗಿಯೂ; ವ್ಯಕ್ತಿಗತ ಜೀವನ ಮೌಲ್ಯಗಳಾದ ಶೌಚ, ಸಂತೋಷ, ತಪಸ್, ಸ್ವಾಧ್ಯಾಯ, (ಸ್ವಅಧ್ಯಯನ), ಈಶ್ವರಪ್ರಣಿಧಾನ (ಈಶ್ವರನಿಗೆ ಸಮರ್ಪಣೆ) ಈ ಐದನ್ನು "ನಿಯಮ" ಎಂಬುದಾಗಿಯೂ ಕರೆಯಲಾಗಿದೆ. ಒಟ್ಟಿನಲ್ಲಿ ಈ ಯೋಗೋಕ್ತ ದಶತತ್ವಗಳನ್ನು ಸಂತೋಷಪೂರ್ಣ ಮತ್ತು ಸ್ವಸ್ಥ ಜೀವನದ ಮೂಲಾಂಶಗಳು.

6. "ಯೋಗ"ದ ಅಭ್ಯಾಸದಲ್ಲಿ ಗುರುವಿನ ಅವಶ್ಯಕತೆ ಹಾಗೂ ಅನಿವಾರ್ಯತೆ ಇದೆ. ಭಾರತೀಯ ಸಂಸ್ಕೃತಿಯ ಮೇರುತತ್ವಗಳಲ್ಲೊಂದಾದ ಗುರು–ಶಿಷ್ಯ ಸಂಬಂಧ ಹಾಗೂ ಗುರುಕುಲ ಶಿಕ್ಷಣಪದ್ಧತಿಯು ಯೋಗಶಿಕ್ಷಣಕ್ಕೆ ಭದ್ರ ಬುನಾದಿ.

7. "ಯೋಗ ದರ್ಶನ" (ಪಾತಂಜಲ ಯೋಗಸೂತ್ರಗಳು) ಹಾಗೂ "ಯೋಗ ಶಾಸ್ತ್ರ"ವೆಂದೇ ಪ್ರಸಿದ್ಧವಾದ "ಭಗವದ್ಗೀತೆ", ಯೋಗ ಮಯ ಜೀವನದ ಕೈಪಿಡಿಗಳು ಯೋಗದ ಬಗ್ಗೆ ಎರಡು ಅಧಿಕೃತ ಸರ್ವಶ್ರೇಷ್ಠ ಗ್ರಂಥಗಳು. ಅವುಗಳ ಸ್ಥೂಲ ಪರಿಚಯ ಹಾಗೂ ಆಯ್ದ ಕೆಲವು ಯೋಗ ಸೂತ್ರಗಳು ಹಾಗೂ ಗೀತಾ ಶ್ಲೋಕಗಳ ವಿಸ್ತೃತ ಪರಿಚಯ ಯೋಗಾಭ್ಯಾಸಿಗೆ ಇರಬೇಕಾಗುತ್ತದೆ.

8. "ಜೀವನ ಧರ್ಮ"ವಾದ "ಯೋಗ ಶಾಸ್ತ್ರ"ವನ್ನು ಅರ್ಥೈಸಿಕೊಳ್ಳುವುದಕ್ಕೆ ಪೂರಕವಾಗಿ ಅದಕ್ಕೆ ಮುನ್ನ ಅತ್ಯಂತ ಮುಖ್ಯವಾದ ಕೆಲವು ತಾತ್ವಿಕ ವಿಷಯಗಳ ಕಿರು ಪರಿಚಯ : ಓಂಕಾರದ ಮಹತ್ವ, ಪಂಚಕೋಶಗಳು, ಪಂಚಮಹಾಭೂತಗಳು, ಪಂಚತನ್ಮಾತ್ರಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚವಿಧ ಚಿತ್ತವೃತ್ತಿಗಳು, ತ್ರಿಗುಣಗಳು, ಪ್ರಸ್ಥಾನತ್ರಯೀ, ಚತುರ್ವಿಧಪುರುಷಾರ್ಥಗಳು, ನಾಲ್ಕು ವರ್ಣಗಳು, ನಾಲ್ಕು ಆಶ್ರಮಗಳು, ನಾಲ್ಕು ಅವಸ್ಥೆಗಳು, ಕರ್ಮ ಸಿದ್ಧಾಂತ, ಪುನರ್ಜನ್ಮ ಸಿದ್ಧಾಂತ, ಅವತಾರ ಸಿದ್ಧಾಂತ, ಜಡಪ್ರಕೃತಿಯ ವಿಕಾಸ, ಜೀವವಿಕಾಸ, ಜೀವನಮೌಲ್ಯಗಳ ವಿಕಾಸ, ಜೀವ–ಜಗತ್ತು–ಈಶ್ವರ ಇತ್ಯಾದಿ.

9. ಯೋಗಮಯ ಜೀವನದ ಸಾಫಲ್ಯಕ್ಕೆ ಅತ್ಯವಶ್ಯಕವಾಗಿ ಅನುಸರಿಸಲೇಬೇಕಾಗಿರುವ ದಿನಚರಿ, ಆಹಾರಪದ್ಧತಿ ಹಾಗೂ ಜೀವನ ಶೈಲಿ.

10. "ಅಭ್ಯಾಸ" ಮತ್ತು "ವೈರಾಗ್ಯ"ಗಳು ಯೋಗಮಯ ಜೀವನದ ಸಾಫಲ್ಯಕ್ಕೆ ಪ್ರಧಾನ ವಾಹಿನಿಗಳಾಗಿವೆ. ಈ ಪರಿಕಲ್ಪನೆಗಳ ಸ್ಪಷ್ಟವಾದ ಪರಿಚಯ.

11. "ಯೋಗ" ಮತ್ತು "ವ್ಯಾಯಾಮ"ಗಳ ಅಂತರವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಯೋಗವು ವ್ಯಾಯಾಮವಲ್ಲ; ಯೋಗ ಒಂದು ಉಪಾಸನೆ, ಸಾಧನೆ, ಆತ್ಮಕಲ್ಯಾಣ ಹಾಗೂ ಲೋಕ ಕಲ್ಯಾಣಗಳಿಗೆ ಸಾಧನ. ವ್ಯಾಯಾಮವೆಂದರೆ ದೇಹದ ಅಂಗಗಳನ್ನು ವಿವಿಧ ವಿನ್ಯಾಸಗಳಲ್ಲಿ ಪದೇ ಪದೇ ಚಾಲನೆ ಮಾಡುವ ಅಭ್ಯಾಸ.

12. "ಯೋಗಾಧಾರಿತ ಶಿಕ್ಷಣ"ದ ವೈಶಿಷ್ಟ್ಯಗಳು.

i ಶಾಲಾ ದಿನಚರಿಯಲ್ಲಿ ಯೋಗದ ಪ್ರಸ್ತುತಿ; ಕುಳಿತುಕೊಳ್ಳುವ ಭಂಗಿ, ಉಡುಪು ತೊಡುಪು, ಓಂಕಾರದ ಅಭ್ಯಾಸ, ಮಂತ್ರಗಳ ಕಂಠಪಾಠ, ಮೌನ, ಏಕಾಗ್ರತೆ, ಧ್ಯಾನ, ಆಸನಗಳು, ಪ್ರಾಣಾಯಾಮ, ಸೇವೆ, ವಿನಯ–ವಿಧೇಯತೆ, ಪ್ರಾಮಾಣಿಕ ದುಡಿಮೆ ಇತ್ಯಾದಿ.

ii ಇತರೇ ವಿಷಯಗಳನ್ನು ಬೋಧಿಸುವ ಅಧ್ಯಾಪಕರು ಇರಿಸಿಕೊಳ್ಳಬೇಕಾದ ದೃಷ್ಟಿಕೋನ; ಯೋಗದ ಅಭ್ಯಾಸದಿಂದ ಇತರ ವಿಷಯಗಳನ್ನು ಕಲಿತುಕೊಳ್ಳಲು ಅನುಕೂಲವಾಗುವ ನೈಪುಣ್ಯ, ಆರೋಗ್ಯ ರಕ್ಷಣೆ, ಸ್ಮರಣ ಶಕ್ತಿ, ಸ್ಫುರಣ ಶಕ್ತಿ ಇತ್ಯಾದಿಗಳು.

iii "ಯೋಗ" ಶಿಕ್ಷಣಕ್ಕೆ ಅವಶ್ಯವಿರುವ ಮೂಲಭೂತ ಸೌಕರ್ಯಗಳು – ಪ್ರತ್ಯೇಕ ಪಠ್ಯಪುಸ್ತಕ, ಯೋಗ–ಸಾಹಿತ್ಯ, ಗ್ರಂಥಭಂಡಾರ, ಯೋಗದ ಅಭ್ಯಾಸಕ್ಕೆ ಸೂಕ್ತ ಕೊಠಡಿ, ಚಾರ್ಟ್‌ಗಳು, ಸಿ.ಡಿ.ಗಳು, ಕಂಪ್ಯುಟರ್, ಉಪನ್ಯಾಸಗಳು, ಪ್ರವಾಸ, ಶಾಲಾ ವಾರ್ಷಿಕೋತ್ಸವ, ಶಾಲಾ ಪತ್ರಿಕೆ ಬಿಡುಗಡೆ ಮುಂತಾದ ಸಂದರ್ಭಗಳಲ್ಲಿ ಯೋಗಕ್ಕೆ ಅವಕಾಶ ಮಾಡಿಕೊಡುವುದು ಇತ್ಯಾದಿ.

iv ಪೋಷಕರ ಪಾತ್ರ; ವಿದ್ಯಾರ್ಥಿಗಳಲ್ಲಿ ಯೋಗದ ಬಗ್ಗೆ ಆಸಕ್ತಿ ಮೂಡಿಸುವುದು, ಪ್ರೋತ್ಸಾಹಿಸುವುದು, ಅವರ ದಿನನಿತ್ಯದ ಅಭ್ಯಾಸದ ಕಡೆ ಗಮನಹರಿಸುವುದು, ತಮ್ಮ ಮಕ್ಕಳ ಜೊತೆ ತಾವೂ ಅಭ್ಯಾಸದಲ್ಲಿ ತೊಡಗುವುದು, ಸೂಕ್ತ ಸೌಕರ್ಯಗಳನ್ನು ಒದಗಿಸುವುದು ಇತ್ಯಾದಿ.

v ಯೋಗಾಧಾರಿತ ಆಟಗಳು – ಯಾವುದೇ ಉಪಕರಣಗಳ ಅವಶ್ಯಕತೆಯಿಲ್ಲದೆ, ಶಾಲಾ ಕೊಠಡಿಗಳೊಳಗೆ, ಕಿರು ಅವಧಿಯಲ್ಲಿ, ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವಕಾಶ ಕಲ್ಪಿಸಲು ಅನುಕೂಲವಾದ ಅನೇಕ ಆಟಗಳಿವೆ. ಇವುಗಳಿಂದ ಮನಸ್ಸಿನ ಏಕಾಗ್ರತೆ, ನೆನಪಿನ ಶಕ್ತಿ, ಸಹಕಾರ, ಸಮಯಪ್ರಜ್ಞೆ, ಬೆರೆತು ಬಾಳುವ ಪ್ರವೃತ್ತಿ, ಹಂಚಿಕೊಂಡು ತಿನ್ನುವ ಅಭ್ಯಾಸ, ಸಮೂಹ ಜೀವನ ಶೈಲಿ, ಪ್ರಾಮಾಣಿಕತೆ, ಹೃದಯ ವೈಶಾಲ್ಯ ಮುಂತಾದ ಗುಣಗಳು ಬೆಳೆಯುತ್ತವೆ.

vi ಶಿಕ್ಷಣ ಇಲಾಖೆಯ ಸಹಕಾರ

1. ಯೋಗಶಿಕ್ಷಣದಲ್ಲಿ ತರಬೇತಾದ ಅಧ್ಯಾಪಕರುಗಳ ನೇಮಕಾತಿ, ಎಲ್ಲ ಅಧ್ಯಾಪಕರುಗಳಿಗೂ ಯೋಗ ತರಬೇತಿ, ಕಾಲಕಾಲಕ್ಕೆ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸುವುದು ಇತ್ಯಾದಿ.

2. ನಿಗದಿತ ಸಮಯವನ್ನು ಗೊತ್ತುಪಡಿಸಿ, ಪಠ್ಯಕ್ರಮವೊಂದನ್ನು ರಚನೆಮಾಡುವುದು, ಶಾಲಾ ಚಟುವಟಿಕೆಗಳಲ್ಲಿ ಯೋಗದ ಅಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟು, ತರಬೇತಾದ ಅಧ್ಯಾಪಕರೊಬ್ಬರನ್ನು ಮಾರ್ಗದರ್ಶಕರನ್ನಾಗಿ ನಿಯುಕ್ತಿಗೊಳಿಸುವುದು.

3. ಲಿಖಿತ ಪರೀಕ್ಷೆಯನ್ನು ಒಳಗೊಂಡಂತೆ, ಅದಕ್ಕಿಂತಲೂ ಮುಖ್ಯವಾಗಿ ಶಾಲಾ ಜೀವನದ ವಿವಿಧ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗಳನ್ನು ಗಮನಿಸಿ "ನಿರಂತರ ಮೌಲ್ಯ ಮಾಪನ"ಮಾಡುವುದು.

vii ಮೌಲ್ಯಮಾಪನ ಮಾಡುವಾಗ ಗ್ರೇಡ್‌ಗಳು ಅಥವಾ ಅಂಕಗಳನ್ನು ನೀಡದೆ, ಶಾಲಾ ಜೀವನದಲ್ಲಿ ವಿದ್ಯಾರ್ಥಿಗಳ ಪ್ರತಿಭೆಗಳನ್ನು ಗುರುತಿಸಿ ಸೂಕ್ತ ಸಂದರ್ಭಗಳಲ್ಲಿ ಅವರವರ ಯೋಗ್ಯತಾನುಸಾರ ಅವಕಾಶಗಳನ್ನು ನೀಡಿ, ಹೆಚ್ಚಿನ ಪ್ರೋತ್ಸಾಹ ಹಾಗೂ ಅವಕಾಶ ನೀಡುವ ಪದ್ಧತಿ "ಯೋಗ"ಕ್ಕೆ ಅತ್ಯಂತ ಸೂಕ್ತ ಅನೌಪಚಾರಿತ ಮೌಲ್ಯಮಾಪನವಾಗುವುದು. ಇದಕ್ಕೆ ಯಾವುದೇ ಸ್ಪರ್ಧೆಗಳು, ತಾರತಮ್ಯ ತೋರುವ ಪ್ರಶಸ್ತಿಗಳು, ಸರ್ಟಿಫಿಕೇಟ್‌ಗಳು ಸೂಕ್ತವಲ್ಲ. ಯೋಗ ಶಿಕ್ಷಣದಲ್ಲಿ

Digitised by Bharatavani, CIIL

ಸೈದ್ಧಾಂತಿಕ ವಿಷಯಗಳ ಅಧ್ಯಯನದ ಬಗ್ಗೆ ಮೌಲ್ಯಮಾಪನ ಮಾಡುವ ದೃಷ್ಟಿಯಿಂದ ಲಿಖಿತ ಪರೀಕ್ಷೆಯೊಂದನ್ನು ನಡೆಸಬಹುದು. ಆದರೆ ಲಿಖಿತ ಪರೀಕ್ಷೆಗಳು "ಯೋಗ"ದ ಸಾಧನೆಯ ಮಟ್ಟವನ್ನು ಅಳತೆ ಮಾಡುವ ಮಾನದಂಡವಲ್ಲ. ಯೋಗವು ಬಾಹ್ಯಕ್ಕೆ ಸಂಬಂಧ ಪಟ್ಟಿದ್ದಲ್ಲ; ಭಾವ ಹಾಗೂ ಅನುಭಾವಕ್ಕೆ ಸಂಬಂಧಿಸಿದ್ದು. ಇದನ್ನು ಅಳತೆ ಮಾಡುವ ಮಾನದಂಡ ಇನ್ನೂ ಸಂಶೋಧನೆಯಾಗಿಲ್ಲ; ಅದರ ಅವಶ್ಯಕತೆಯಿದೆ.

13. ಕತೆಗಳು, ಹಾಡುಗಳು, ಶ್ಲೋಕಗಳು, ಆಟಗಳು, ಚರ್ಚಾಸ್ಪರ್ಧೆಗಳು, ಪ್ರದರ್ಶಿನಿಗಳು, ಮಹಾಪುರುಷರ ಜೀವನ ಚರಿತ್ರೆ, ಜೀವನದ ವಿವಿಧ ಪ್ರಸಂಗಗಳು, ಪ್ರಬಂಧ, ಪದಬಂಧ ಇತ್ಯಾದಿಗಳ ಮೂಲಕ ಹೆಚ್ಚಿನ ಚಟುವಟಿಕೆಗಳಿಗೆ ಆಸ್ಪದ ನೀಡುವುದು.

14. ಯೋಗದ ಬಗ್ಗೆ ದೇಶ ವಿದೇಶಗಳಲ್ಲಿರುವ ಜನಪ್ರಿಯತೆ, ಅದಕ್ಕೆ ಕಾರಣಗಳು, ಯೋಗದ ಕುರಿತು ನಡೆದ ವೈಜ್ಞಾನಿಕ ಸಂಶೋಧನೆಗಳು, ಆಧುನಿಕ ಜಗತ್ತಿನ ಯೋಗಿಗಳ ಪರಿಚಯ, ತಜ್ಞರಿಂದ ಉಪನ್ಯಾಸಗಳು, ಜಗತ್ತಿನಾದ್ಯಂತ ಪ್ರಚಲಿತವಾಗಿರುವ ವಿವಿಧ ರೀತಿಯ ಧ್ಯಾನ ಪದ್ಧತಿಗಳು, ಹೆಚ್ಚಿನ ಸಂಶೋಧನೆಗೆ ಅವಕಾಶಗಳು, ಗ್ರಂಥಗಳು, ಸಿ.ಡಿ.ಗಳು, ಯೋಗದ ಪ್ರಚಾರಕ್ಕೆ ಮೀಸಲಾದ ಸಂಘಸಂಸ್ಥೆಗಳು, ಚಳುವಳಿಗಳು, ಆಶ್ರಮಗಳನ್ನು ಪರಿಚಯಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

–ನಾ.ಸಾ

## ಯೋಜಿತ ಬೋಧನಾ ಸಾಮಗ್ರಿಗಳ ಮೌಲ್ಯಮಾಪನ

ನಾವು ಕೈಗೊಳ್ಳುವ ಪ್ರತಿಯೊಂದು ಕಾರ್ಯಕ್ರಮದಿಂದ ಯಶಸ್ಸನ್ನು ಬಯಸುವುದು ನಮ್ಮೆಲ್ಲರ ಉದ್ದೇಶವಾಗಿರುತ್ತದೆ. ಆದರೆ ಕೆಲವೊಮ್ಮೆ ಪರಿಣಾಮವು ತದ್ವಿರುದ್ಧ ಆಗಿರುತ್ತದೆ. ಕಾರ್ಯಕ್ರಮ ಒಂದರ ಫಲಿತಾಂಶವನ್ನು ಧನಾತ್ಮಕ ಅಥವಾ ಋಣಾತ್ಮಕವೆಂದು ನಿರ್ಧರಿಸಲು ಮೌಲ್ಯಮಾಪನದ ಸಹಾಯವನ್ನು ಪಡೆದಾಗ ಮಾತ್ರ ಹೇಳಲು ಸಾಧ್ಯವಿದೆ. ನಾವು ಶಿಕ್ಷಣ ಕ್ಷೇತ್ರದಲ್ಲಿ ಅನೇಕ ರೀತಿಯ ಮಹತ್ವದ ಕಾರ್ಯಕ್ರಮಗಳನ್ನು ಒಬ್ಬ ವಿದ್ಯಾರ್ಥಿಯ ಮೇಲೆ, ಸಣ್ಣ ಗುಂಪುಗಳ ಮೇಲೆ ಅಥವಾ ವಿವಿಧ ಕ್ಷೇತ್ರಗಳಿಗೆ ಅನ್ವಯ ಮಾಡಿರುತ್ತೇವೆ. ಅಂತಹ ಪ್ರಸಂಗದಲ್ಲಿ ಕಾರ್ಯಕ್ರಮದ ಮೌಲ್ಯಮಾಪನವನ್ನು ಮಾಡಲೇಬೇಕಾಗುತ್ತದೆ.

ಯೋಜಿತ ಬೋಧನಾ ಸಾಮಗ್ರಿಗಳ ಮೌಲ್ಯಮಾಪನ ಯೋಜಿತ ಬೋಧನಾ ಬೋಧನಾ ಸಾಮಗ್ರಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಕ್ರಮಾನುಗತವಾಗಿ ಬೋಧನಾ ಸಾಮಗ್ರಿಯನ್ನು ಪರೀಕ್ಷಿಸು ಮತ್ತು ಅವುಗಳ ಪರಿಣಾಮಕತೆಯನ್ನು ಹೆಚ್ಚಿಸುವ ಯುಕ್ತಿಗಳನ್ನು ಸೂಚಿಸುತ್ತದೆ. ಈ ರೀತಿಯ ಮೌಲ್ಯಮಾಪನವನ್ನು ಯೋಜಿತ ಬೋಧನ ಸಾಮಗ್ರಿಗಳ ಆಂತರಿಕ ಮೌಲ್ಯಮಾಪನ ಎನ್ನಲಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಪೂರ್ಣಗೊಂಡ ಕಾರ್ಯಕ್ರಮವನ್ನು ಇತರ ಬೋಧನಾ ಸಾಧನಗಳೊಂದಿಗೆ ಹೋಲಿಸಿ ಅದರ ಪರಿಣಾಮಕತೆಯನ್ನು ನಿರ್ಧರಿಸುವುದನ್ನು ಬಾಹ್ಯ ಮೌಲ್ಯಮಾಪನ ಎನ್ನಲಾಗುವುದು.

ಕಾರ್ಯಕ್ರಮದ ಮೌಲ್ಯಮಾಪನವು ವಿವಿಧ ಯೋಜಿತ ಬೋಧನಾ ಸಾಮಗ್ರಿಗಳ ಚೌಕಟ್ಟುಗಳಿಗೆ (Frames) ಸಂಬಂಧಿಸಿದಂತೆ ನಿರ್ಣಯ ಕೈಗೊಳ್ಳುವಿಕೆ, ವರ್ತನೆಯನ್ನು ಉತ್ಪಾದಿಸುವ ಅವುಗಳ ಸಾಮರ್ಥ್ಯ ಮತ್ತು ಕಾರ್ಯಕ್ರಮದ ದಕ್ಷತೆಯನ್ನು ಒಳಗೊಂಡಿದೆ. ಇಂತಹ ನಿರ್ಣಯವು ವಿವಿಧ ಪ್ರಕಾರದ ದತ್ತಾಂಶಗಳ ಸಂಗ್ರಹ ಮತ್ತು ವಿಶ್ಲೇಷಣೆಯನ್ನು ಆಧರಿಸಿದೆ. ಇಂತಹ ದತ್ತಾಂಶಗಳನ್ನು ಕಾರ್ಯಕ್ರಮದ ಪರೀಕ್ಷೆಯಿಂದ ಪಡೆಯಬಹುದಾಗಿದೆ. ಆದ್ದರಿಂದ ಕಾರ್ಯಕ್ರಮ ಮೌಲ್ಯಮಾಪನವು ಉದ್ದೇಶಪೂರ್ವಕ ಪರೀಕ್ಷೆಯಾಗಿದೆ. ಕಾರ್ಯಕ್ರಮ ಪರೀಕ್ಷಿಸುವಿಕೆಯು ಚೌಕಟ್ಟುಗಳಲ್ಲಿ ಮತ್ತು ಅವುಗಳ ವಿನ್ಯಾಸಗಳಲ್ಲಿ ಜರುಗುವ ಒಂದು ಪ್ರಕಾರದ ಪ್ರಯತ್ನವಾಗಿದೆ. ಕಾರ್ಯಕ್ರಮ ಪರೀಕ್ಷಿಸುವಿಕೆಯನ್ನು ಮೂರು ಪ್ರಕಾರಗಳಲ್ಲಿ ಮಾಡಲಾಗುವುದು.

1. ವೈಯಕ್ತಿಕ ಪರೀಕ್ಷೆ 2. ಸಣ್ಣ ಗುಂಪು ಪರೀಕ್ಷೆ 3. ಕ್ಷೇತ್ರ ಪರೀಕ್ಷೆ

### 1. ವೈಯಕ್ತಿಕ ಪರೀಕ್ಷೆ

ವೈಯಕ್ತಿಕ ಪರೀಕ್ಷೆಯನ್ನು ಸಾಮಾನ್ಯವಾಗಿ ವೈಯಕ್ತಿಕವಾಗಿ ಅನೌಪಚಾರಿಕವಾಗಿ ಕೈಗೊಳ್ಳಲಾಗುತ್ತದೆ. ಇದರ ಪ್ರಮುಖ ಉದ್ದೇಶವೆಂದರೆ ಕ್ರಮಾನುಗತ ಸಾಮಗ್ರಿಯ ಮೊದಲ ಕರಡನ್ನು, ಅದರ ಪರಿಣಾಮಕತೆಯನ್ನು ಪರೀಕ್ಷಿಸುವುದಾಗಿದೆ. ಈ ಹಂತದಲ್ಲಿ ಕ್ರಮಾನುಗತ ಸಾಮಗ್ರಿಯಲ್ಲಿನ ಯಾವುದೇ ದೋಷಗಳನ್ನು ಸರಿಪಡಿಸಲಾಗಿರುತ್ತದೆ.

ವೈಯಕ್ತಿಕ ಪರೀಕ್ಷೆಯಲ್ಲಿ ಯಾರಿಗಾಗಿ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲಾಗುತ್ತಿದೆಯೋ ಅವರನ್ನು ಪ್ರತಿನಿಧಿಸುವ ಕೇವಲ ಒಬ್ಬ ವಿದ್ಯಾರ್ಥಿಯನ್ನು ಒಂದು ಬಾರಿಗೆ ಪರೀಕ್ಷಿಸಲಾಗುವುದು. ಇಲ್ಲಿ ಕಾರ್ಯಕ್ರಮಕಾರ ಮತ್ತು ವಿದ್ಯಾರ್ಥಿ ನಡುವೆ ಮುಖಾಮುಖಿ ಅಂತರ್‌ಕ್ರಿಯೆ ಜರುಗುವುದು. ವೈಯಕ್ತಿಕ ಪರೀಕ್ಷೆಯು ಕಾರ್ಯಕ್ರಮಕಾರನಿಗೆ ವಿದ್ಯಾರ್ಥಿಯು ಒಂದು ಚೌಕಟ್ಟನ್ನು ಓದಿದ ನಂತರ ತಕ್ಷಣವೇ ಅವನ ಪ್ರತಿಕ್ರಿಯೆಯನ್ನು ಅಭ್ಯಸಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಯ ಸಹಾಯದಿಂದ ಕಾರ್ಯಕ್ರಮ ರಚನಾಕಾರನು ಆ ಕಾರ್ಯಕ್ರಮದಲ್ಲಿನ ಪ್ರಮುಖ ದೋಷಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗೆ ಒಂದು ಬಾರಿಗೆ ಒಂದು ಚೌಕಟ್ಟನ್ನು ಚಟುವಟಿಕೆಯನ್ನು ಮಾತ್ರ ಪ್ರಸ್ತುತಪಡಿಸಲಾಗುತ್ತದೆ. ಇಂತಹ ಪರೀಕ್ಷೆಯ ಉದ್ದೇಶವನ್ನು ವಿದ್ಯಾರ್ಥಿಗೆ ತಿಳಿಸಲಾಗುವುದು. ಅಂದರೆ ವಿದ್ಯಾರ್ಥಿಯನ್ನು ಪರೀಕ್ಷಿಸದೇ ಕಾರ್ಯಕ್ರಮವನ್ನು ದೋಷರಹಿತ ಮಾಡುವಲ್ಲಿ ಅವನ ಸಹಾಯ ಬೇಕಾಗುತ್ತದೆ ಎಂದು ತಿಳಿಸಬೇಕು.

ಕೆಳಗಿನ ನಿರ್ದೇಶನಗಳನ್ನು ವಿದ್ಯಾರ್ಥಿಗೆ ಕೊಡಬೇಕು.

- ಇದೊಂದು ಕರಡು ಪ್ರತಿಯಾಗಿದೆ. ವರ್ಗಕೋಣೆಯ ಬೋಧನೆಗಾಗಿ ಒಂದು ಯಶಸ್ವಿ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲು ನೀನು ಸಹಾಯ ಮಾಡಬೇಕು.
- ಚೌಕಟ್ಟುಗಳಲ್ಲಿ ಕಂಡು ಬರುವ ಭಾಷೆ, ಮಾಹಿತಿ ಅಥವಾ ಪರಿಕಲ್ಪನೆ ಇವುಗಳಿಗೆ ಕುರಿತಂತೆ ಯಾವುದೇ ಕ್ಲಿಷ್ಟತೆ, ಕೊರತೆ ಇದ್ದಲ್ಲಿ ಯಾವ ಅಳುಕು ಅಂಜಿಕೆ ಇಲ್ಲದೇ ಸ್ಪಷ್ಟವಾಗಿ ತಿಳಿಸು.
- ಚೌಕಟ್ಟುಗಳಿಗೆ ಕೊಡಬೇಕಾಗಿರುವ ಪ್ರತಿಕ್ರಿಯೆಗಳನ್ನು ಒಂದು ಪ್ರತ್ಯೇಕ ಹಾಳೆಯ ಮೇಲೆ ಬರೆಯಬೇಕು.
- ಚೌಕಟ್ಟುಗಳಿಗೆ ಪ್ರತಿಕ್ರಿಯೆಯನ್ನು ಅದರ ಹಿಂದಿನ ಭಾಗದಲ್ಲಿ ಕೊಡಲಾಗಿದೆ. ಆದರೆ ನಿನ್ನ ಪ್ರತಿಕ್ರಿಯೆ ಬರೆದ ನಂತರ ಅದನ್ನು ನೀನು ನೋಡಬಹುದು.


Digitised by Bharatavani, CIIL

ವೈಯಕ್ತಿಕ ಪರೀಕ್ಷಾ ಹಂತದಲ್ಲಿ ಅದರ ಪ್ರಸ್ತುತ ಕಾರ್ಯಕ್ರಮವನ್ನು ಯಾವ ಹಂತದ ಕಲಿಕಾರ್ಥಿಗಳಿಗಾಗಿ ರೂಪಿಸಲಾಗಿದೆಯೋ, ಅಂತಹ ಕಲಿಕಾರ್ಥಿಗಳ ಗುಂಪನ್ನೇ ಹೋಲುವ ಮೂರ್ನಾಲ್ಕು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇಂತಹ ವಿದ್ಯಾರ್ಥಿಯು ಅಪೇಕ್ಷಿತ ಪ್ರವೇಶ ವರ್ತನೆ, ಅರ್ಹತೆಗಳನ್ನು ಹೊಂದಿರಲೇಬೇಕು ಮತ್ತು ಕಲಿಸಬೇಕಾಗಿರುವ ಕ್ರಮಾನುಗತ ಸಾಮಗ್ರಿಯನ್ನು ಅವನು ಈ ಮೊದಲೇ ತಿಳಿದುಕೊಂಡಿರ ಬಾರದು. ಸಾಮಾನ್ಯವಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಥಿಗಳ ಸಾಮರ್ಥ್ಯಕ್ಕಿಂತ ಸ್ವಲ್ಪ ಕೆಳಗಿನ ಸಾಮರ್ಥ್ಯವನ್ನು ಹೊಂದಿರುವ ವಿದ್ಯಾರ್ಥಿಯನ್ನು ಆಯ್ಕೆ ಮಾಡುವುದು ಉತ್ತಮ. ವಿದ್ಯಾರ್ಥಿಗೆ ಅವನನ್ನು ಪರೀಕ್ಷಿಸುತ್ತಿರುವುದಾಗಿ ತಿಳಿಸದೇ ಅವನು ಕಾರ್ಯಕ್ರಮದ ಸುಧಾರಣೆಯಲ್ಲಿ ಕಾರ್ಯಕ್ರಮ ರೂಪಿಸುವವರಿಗೆ ಸಹಾಯ ಮಾಡುತ್ತಿರುವುದಾಗಿ ತಿಳಿಸಬೇಕು. ವಿದ್ಯಾರ್ಥಿ ಎದುರಿಸುವ ತೊಂದರೆಗಳು ಮತ್ತು ಅಭಿಪ್ರಾಯಗಳನ್ನು ಮುಕ್ತವಾಗಿ ಸ್ವೀಕರಿಸಬೇಕು. ವೈಯಕ್ತಿಕ ಪರೀಕ್ಷೆಗಿಂತ ಪೂರ್ವದಲ್ಲಿ ವಿದ್ಯಾರ್ಥಿಯ ಸಹಭಾಗಿತ್ವಕ್ಕಾಗಿ ಅವನೊಂದಿಗೆ ಉತ್ತಮ ಸಂಬಂಧ ಸ್ಥಾಪಿಸುವುದು ಅವಶ್ಯಕವಾಗಿದೆ.

ಮೊದಲಿಗೆ, ಕಾರ್ಯಕ್ರಮ ನಿರೂಪಕ ಕಾರ್ಯಕ್ರಮದ ಮೊದಲ ಕರಡನ್ನು ಕಲಿಕಾರ್ಥಿಗೆ ಒದಗಿಸುತ್ತಾನೆ. ಇಲ್ಲಿ ಅನುಸರಿಸಬಹುದಾದ ವಿಧಾನವೆಂದರೆ ಪ್ರತಿಯೊಂದು ಮಾಹಿತಿ ಚೌಕಟ್ಟನ್ನು 6" x 4" ಅಳತೆಯ ಕಾರ್ಡುಗಳ ಮೂಲಕ ಕಲಿಕಾರ್ಥಿಗೆ ಒದಗಿಸುವುದು. ಆ ಚೌಕಟ್ಟಿಗೆ ಅಪೇಕ್ಷಿತ ಪ್ರತಿಕ್ರಿಯೆಯನ್ನು ಕಲಿಕಾರ್ಥಿಯಿಂದ ನಿರೀಕ್ಷಿಸಿ ಆ ಉತ್ತರವನ್ನು ಅದೇ ಕಾರ್ಡಿನ ಹಿಂಬದಿಯಲ್ಲಿ ಅಥವಾ ಪ್ರತ್ಯೇಕ ಕಾಗದದಲ್ಲಿ ಪಡೆಯಬಹುದಾಗಿದೆ. ಆಗ ವಿದ್ಯಾರ್ಥಿ ತನ್ನ ಪ್ರತಿಕ್ರಿಯೆಯನ್ನು ಕೊಟ್ಟ ನಂತರ, ತನ್ನ ಪ್ರತಿಕ್ರಿಯೆಯನ್ನು ಉತ್ತರದೊಂದಿಗೆ ಹೋಲಿಸುತ್ತಾನೆ.

ಕಾರ್ಯಕ್ರಮ ನಿರೂಪಕನು ವಿದ್ಯಾರ್ಥಿ ಸರಿಯಾದ ಉತ್ತರವನ್ನು ಕೊಡುತ್ತಾನೆಯೋ, ಇಲ್ಲವೋ, ಅಲ್ಲಿ ಒದಗಿಸಲಾದ ಮರುಪೋಷಣೆಯು (Feedback) ಆ ತಪ್ಪನ್ನು ಸರಿಪಡಿಸಲು ಸಮರ್ಥವಾಗಿದೆಯೇ ಎಂಬುದನ್ನು ವೀಕ್ಷಿಸುತ್ತಾನೆ. ಅಲ್ಲದೇ ಈ ಸಮಯದಲ್ಲಿ ಕಲಿಕಾರ್ಥಿಗಾಗಿ, ಹೆಚ್ಚಿನ ಮಾಹಿತಿಯನ್ನು ಒದಗಿಸಲಾಗಿರುವುದನ್ನು ನಿರೂಪಕನು ಗಮನಿಸಬೇಕಾಗುತ್ತದೆ. ಕಲಿಕಾರ್ಥಿ ಸಂಪೂರ್ಣ ಕಾರ್ಯಕ್ರಮವನ್ನು ಮುಗಿಸಿದ ನಂತರ, ನಿರೂಪಕನು ಅವನೊಂದಿಗೆ, ಕಾರ್ಯಕ್ರಮದ ಕುರಿತು ಅವನು ಎದುರಿಸಿದ ತೊಂದರೆಗಳನ್ನು ಕುರಿತು, ವಿದ್ಯಾರ್ಥಿಯ ಅಭಿಪ್ರಾಯಗಳನ್ನು ಚರ್ಚಿಸಬೇಕಾಗುತ್ತದೆ. ವಿದ್ಯಾರ್ಥಿಯ ಅಭಿಪ್ರಾಯಗಳ ಆಧಾರದ ಮೇಲೆ ಕಾರ್ಯಕ್ರಮ ನಿರೂಪಕನಿಗೆ ಕಾರ್ಯಕ್ರಮದ ಕುರಿತು ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಬಗ್ಗೆ ಒಳನೋಟ ದೊರಕುವುದು.

ಹೀಗೆ ಈ ಎಲ್ಲಾ ಅಂಶಗಳನ್ನು ಅತ್ಯಂತ ಎಚ್ಚರಿಕೆಯಿಂದ ವಿಶ್ಲೇಷಿಸಲಾಗುವುದು. ಅಲ್ಲದೇ ಇಂತಹ ವೈಯಕ್ತಿಕ ಪರೀಕ್ಷೆಗಳನ್ನು ಪುನರಾವರ್ತಿಸಿದರೆ, ಕಾರ್ಯಕ್ರಮ ನಿರೂಪಕನಿಗೆ ತನ್ನ ಕಾರ್ಯಕ್ರಮವನ್ನು ಇನ್ನಷ್ಟು ದಕ್ಷವಾಗಿಸಲು ಸಾಧ್ಯವಾಗುವುದೆಂದು ಗಿಲ್ಬರ್ಟ್‌ರವರು ಅಭಿಪ್ರಾಯಪಡುತ್ತಾರೆ. ಇಂತಹ ವೈಯಕ್ತಿಕ ಪರೀಕ್ಷೆಯು ಹೆಚ್ಚಿನ ಸಮಯವನ್ನು ಬಯಸುವುದಾದರೂ ಕೂಡಾ ಒಂದು ಉತ್ತಮ ಕ್ರಮಾನುಗತ ಬೋಧನಾ ಕಾರ್ಯಕ್ರಮವನ್ನು ರೂಪಿಸಲು ಇದು ಅವಶ್ಯಕ ಮೊದಲ ಹೆಜ್ಜೆಯಾಗಿದೆ.

### 2. ಸಣ್ಣ ಗುಂಪು ಪರೀಕ್ಷೆ

ಕಾರ್ಯಕ್ರಮವನ್ನು ವೈಯಕ್ತಿಕ ಪರೀಕ್ಷೆಯ ಮೂಲಕ ಪರೀಕ್ಷಿಸಿದ ನಂತರ ಅದನ್ನು ಅನುಸರಿಸಿ ಸ್ಪಷ್ಟವಾಗಿ ಮುದ್ರಿಸಬೇಕು. ನಂತರ ಅದನ್ನು 10–12 ವಿದ್ಯಾರ್ಥಿಗಳ ಸಣ್ಣ ಗುಂಪಿಗೆ ಒದಗಿಸಬೇಕು. ಇದನ್ನು ಸಣ್ಣ ಗುಂಪು ಪರೀಕ್ಷೆ ಎನ್ನಲಾಗುವುದು. ಸಣ್ಣ ಗುಂಪು ಪರೀಕ್ಷೆಯ ಮೂಲಕ ಕಾರ್ಯಕ್ರಮವು ಸೂಕ್ತ ಕಲಿಕೆಯನ್ನು ಉಂಟುಮಾಡುವುದನ್ನು ನಿರ್ಧರಿಸಲಾಗುತ್ತದೆ.

ಸಣ್ಣ ಗುಂಪು ಪರೀಕ್ಷೆಗಿಂತ ಪೂರ್ವದಲ್ಲಿ, ಕಾರ್ಯಕ್ರಮ ನಿರೂಪಕನು ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ ಒದಗಿಸಲು ಪ್ರಯತ್ನಿಸಬೇಕು. ನಂತರ ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಪರೀಕ್ಷಿಸಲು ರೂಪಿಸಲಾದ ನಿಕಷ ಆಧಾರಿತ ಪರೀಕ್ಷೆಯನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು. ಪೂರ್ವ ಪರೀಕ್ಷೆಯ ನಂತರ, ವಿದ್ಯಾರ್ಥಿಗಳಿಗೆ ಕಾರ್ಯಕ್ರಮದ ಕುರಿತು ಸೂಕ್ತವಾದ ಮಾಹಿತಿಯನ್ನು ಒದಗಿಸಬೇಕು. ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ತಮ್ಮದೇ ಆದ ವೇಗದಲ್ಲಿ ಪೂರ್ಣಗೊಳಿಸುವರು. ನಿರೂಪಕರು ವಿದ್ಯಾರ್ಥಿಗಳ ಕಾರ್ಯವನ್ನು ಸಮಯವನ್ನು ವೀಕ್ಷಿಸಬೇಕು. ವಿದ್ಯಾರ್ಥಿಗಳಿಗೆ ನಿರೂಪಕನು ಯಾವುದೇ ಸಹಾಯ ಒದಗಿಸಬಾರದು. ಕಾರ್ಯಕ್ರಮ ಪೂರ್ಣಗೊಂಡ ನಂತರ ವಿದ್ಯಾರ್ಥಿಗಳ ಅಂತಿಮ ವರ್ತನೆಯನ್ನು ಪರೀಕ್ಷಿಸಲು ಎಲ್ಲ ವಿದ್ಯಾರ್ಥಿಗಳಿಗೆ ಅಂತಿಮ ಪರೀಕ್ಷೆಯನ್ನು ನೀಡಬೇಕು. ಅಂತಿಮ ಪರೀಕ್ಷೆಯ ನಂತರ ವಿದ್ಯಾರ್ಥಿಗಳೊಂದಿಗೆ ಕಾರ್ಯಕ್ರಮವನ್ನು ಕುರಿತು ಚರ್ಚಿಸಬೇಕು.

ಇದರ ನಂತರ, ಮಾಹಿತಿ ಸಾಂದ್ರತೆ ಮತ್ತು ವಿನ್ಯಾಸದ ರೂಪದಲ್ಲಿ ಸಾಂಖಿಕ ವಿಶ್ಲೇಷಣೆ ಕೈಗೊಳ್ಳಬೇಕು. ಇಂತಹ ಸಾಂಖಿಕ ವಿಶ್ಲೇಷಣೆಯ ಆಧಾರದ ಮೇಲೆ ಕಾರ್ಯಕ್ರಮದಲ್ಲಿ ಸುಧಾರಣೆ ಮಾಡಬೇಕು. ಕಾರ್ಯಕ್ರಮವು ನಿಗದಿತ ಮಾನಕಗಳನ್ನು ಪೂರೈಸುವವರೆಗೆ ಸಣ್ಣ ಗುಂಪು ಪರೀಕ್ಷೆಯನ್ನು ಪುನರಾವರ್ತಿಸಬೇಕು. ನಿಗದಿತ ಮಾನಕಗಳನ್ನು ಪೂರೈಸಿದರೆ, ಅದನ್ನು ಕ್ಷೇತ್ರ ಪರೀಕ್ಷೆಗೆ ಉಪಯೋಗಿಸಬೇಕು.

### 3. ಕ್ಷೇತ್ರ ಪರೀಕ್ಷೆ

ಕಾರ್ಯಕ್ರಮವನ್ನು ಅಭಿವೃದ್ಧಿ ಪೂರಕವಾಗಿ ಪರೀಕ್ಷಿಸಿದ ನಂತರ ಅದನ್ನು ಕ್ಷೇತ್ರ ಪರೀಕ್ಷೆಗೆ ಉಪಯೋಗಿಸಲಾಗುವುದು. ಕ್ಷೇತ್ರ ಪರೀಕ್ಷೆ ಎಂದರೆ ಸುಮಾರು 50 ವಿದ್ಯಾರ್ಥಿಗಳ ದೊಡ್ಡ ಗುಂಪಿನ ಮೇಲೆ ಪರೀಕ್ಷಿಸುವುದಾಗಿದ್ದು, ಅದೊಂದು ನೈಜ ಸನ್ನಿವೇಶದ ಪರೀಕ್ಷೆಯಾಗಿರುತ್ತದೆ. ಈ ಹಂತದಲ್ಲಿ ಪ್ರಯೋಗಾತ್ಮಕ ಪ್ರಭಾವವನ್ನು ತಪ್ಪಿಸಲು ಕಾರ್ಯಕ್ರಮವನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಒದಗಿಸುವರು.

ವೈಯಕ್ತಿಕ ಪರೀಕ್ಷೆ ಮತ್ತು ಸಣ್ಣ ಗುಂಪು ಪರೀಕ್ಷೆಗಿಂತ ಕ್ಷೇತ್ರ ಪರೀಕ್ಷೆಯು ಹೆಚ್ಚು ಔಪಚಾರಿಕ ಮತ್ತು ವ್ಯವಸ್ಥಿತವಾಗಿರುತ್ತದೆ. ಕ್ಷೇತ್ರ ಪರೀಕ್ಷೆಯ ಮುಖ್ಯ ಉದ್ದೇಶವೆಂದರೆ, ರೂಪಿಸಿದ ಕಾರ್ಯಕ್ರಮವು ನೈಜ ಸನ್ನಿವೇಶದಲ್ಲಿ ನಿಗದಿಪಡಿಸಲಾದ ಉದ್ದೇಶಗಳನ್ನು ಸಾಧಿಸುವುದೋ ಅಥವಾ ಇಲ್ಲವೋ ಎಂಬುದನ್ನು ನಿರ್ಧರಿಸುವುದಾಗಿದೆ.

ಒಂದು ವೇಳೆ ಕಾರ್ಯಕ್ರಮವು ಈ ಉದ್ದೇಶಗಳನ್ನು ಸಾಧಿಸಲು ವಿಫಲವಾದರೆ, ಅದರ ಫಲಿತಾಂಶವನ್ನು, ವಿಫಲತೆಗೆ ಕಾರಣಗಳು ಮತ್ತು ಅದನ್ನು ಸುಧಾರಿಸಲು ಸಲಹೆಗಳನ್ನು ಮಾಡಲು ಉಪಯೋಗಿಸ ಬಹುದಾಗಿದೆ. ಇಲ್ಲಿ ನೆನಪಿಡಬೇಕಾದ ಪ್ರಮುಖ ಅಂಶವೆಂದರೆ, ಪ್ರತಿಯೊಂದು ಪರೀಕ್ಷೆಯ ನಂತರ ಸೂಕ್ತ ಪರಿಷ್ಕರಣೆಯನ್ನು

Digitised by Bharatavani, CIIL

ಕೈಗೊಳ್ಳಬೇಕಾದುದು ಅವಶ್ಯವಾಗಿದೆ. ಇಂತಹ ಪರೀಕ್ಷೆಗಳ ಅಂತಿಮ ಉದ್ದೇಶವೆಂದರೆ ಕಾರ್ಯಕ್ರಮದಲ್ಲಿ ಸುಧಾರಣೆ ಬಯಸುವ ನಿರ್ದಿಷ್ಟ ಕ್ಷೇತ್ರಗಳನ್ನು ಗುರುತಿಸುವುದಾಗಿದೆ.

ಕ್ಷೇತ್ರ ಪರೀಕ್ಷೆಯು ಔಪಚಾರಿಕ ಮತ್ತು ವ್ಯವಸ್ಥಿತ ಪರೀಕ್ಷೆಯಾಗಿದ್ದು ಇದರಲ್ಲಿ 6 ಪ್ರಮುಖ ಹಂತಗಳಿವೆ. ಅವುಗಳೆಂದರೆ,

ಹಂತ 1: ಪ್ರತಿದರ್ಶದ ಆಯ್ಕೆ

ಹಂತ 2: ಪೂರ್ವ– ಪರೀಕ್ಷೆ ಒದಗಿಸುವಿಕೆ

ಹಂತ 3: ಕಾರ್ಯಕ್ರಮ ಒದಗಿಸುವಿಕೆ

ಹಂತ 4: ಅಂತಿಮ ಪರೀಕ್ಷೆ ಒದಗಿಸುವಿಕೆ

ಹಂತ 5: ಮನೋವೃತ್ತಿ ಮಾಪನ ಒದಗಿಸುವಿಕೆ

ಹಂತ 6: ಕಾರ್ಯಕ್ರಮದ ಮಾನಕಗಳ ವಿಶ್ಲೇಷಣೆ

**ಹಂತ 1: ಪ್ರತಿದರ್ಶದ ಆಯ್ಕೆ**

ವಿಶ್ವಸನೀಯ ಫಲಿತಾಂಶವನ್ನು ಪಡೆಯಲು 50 ಅಥವಾ ಅದಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳ ಗುಂಪನ್ನು ಆಯ್ಕೆ ಮಾಡಬೇಕು. ಪ್ರತಿದರ್ಶದ ಆಯ್ಕೆ ಮಾಡುವಾಗ ಗುಂಪಿನ ಏಕರೂಪತೆಗೆ ಹೆಚ್ಚಿನ ಗಮನಹರಿಸಬೇಕು. ವಿದ್ಯಾರ್ಥಿಗಳಿಗಿರಬೇಕಾದ ಪೂರ್ವಜ್ಞಾನವನ್ನು ಅಳೆಯಲು ಪೂರ್ವ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳು ಅಪೇಕ್ಷಿತ ವರ್ತನೆ ಮತ್ತು ಕೌಶಲ್ಯಗಳನ್ನು ಹೊಂದಿರದೇ ಇದ್ದರೆ ಅವರಿಗೆ ಪರಿಹಾರ ಬೋಧನೆಯನ್ನು ಕೈಗೊಳ್ಳಬೇಕು. ಗಮನಿಸಬೇಕಾದ ಅಂಶವೆಂದರೆ ಪೂರ್ವ ಪರೀಕ್ಷೆಯು ಪ್ರವೇಶ ವರ್ತನೆಯನ್ನು ನಿರ್ಧರಿಸುವ ಪರೀಕ್ಷೆಯಲ್ಲ. ಬದಲಿಗೆ ಪ್ರತಿದರ್ಶನದಲ್ಲಿ ಏಕರೂಪತೆಯನ್ನು ಸಾಧಿಸುವ ಪರೀಕ್ಷೆಯಾಗಿದೆ. ಅಲ್ಲದೇ ಇಂತಹ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆಯಬೇಕಾದುದು ಅಪೇಕ್ಷಣೀಯ.

**ಹಂತ 2: ಪೂರ್ವ ಪರೀಕ್ಷೆ ಒದಗಿಸುವುದು**

ಪ್ರತಿದರ್ಶದ ಆಯ್ಕೆಯ ನಂತರ, ವಿದ್ಯಾರ್ಥಿಗಳ ಪ್ರವೇಶ ವರ್ತನೆಯನ್ನು ಅಳೆಯಲು ನಿಕಷ ಆಧಾರಿತ ಪರೀಕ್ಷೆಯನ್ನು ಪೂರ್ವ ಪರೀಕ್ಷೆಯಾಗಿ ಉಪಯೋಗಿಸಬೇಕು. ಕೆಲವು ವಿದ್ಯಾರ್ಥಿಗಳು ಈ ಪೂರ್ವ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದರೆ, ಅವರನ್ನು ಕಾರ್ಯಕ್ರಮ ಪರೀಕ್ಷೆಗೆ ಆಯ್ಕೆ ಮಾಡಬಾರದು. ಇದರಿಂದ ಪೂರ್ವ–ಪರೀಕ್ಷೆಯಿಂದಲೂ ಕೂಡಾ ಸೂಕ್ತಪ್ರತಿದರ್ಶದ ಆಯ್ಕೆ ಸಾಧ್ಯವಾಗುತ್ತದೆ. ಪೂರ್ವ ಪರೀಕ್ಷೆಯು ವಿದ್ಯಾರ್ಥಿಗಳ ಸಾಧನೆಯನ್ನು ವಿಶ್ಲೇಷಿಸಲು ಸಹಾಯಕವಾಗುತ್ತದೆ.

**ಹಂತ 3: ಕಾರ್ಯಕ್ರಮ ಒದಗಿಸುವುದು**

ಪೂರ್ವ ಪರೀಕ್ಷೆಯ ನಂತರ, ಕಾರ್ಯಕ್ರಮದ ಮುದ್ರಿತ ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು. ಇಂತಹ ಮುದ್ರಿತ ಪ್ರತಿಗಳು ಪ್ರಾರಂಭದಲ್ಲಿ ವಿದ್ಯಾರ್ಥಿಗಳಿಗಾಗಿ ಅವಶ್ಯಕ ಸೂಚನೆಗಳನ್ನು ಒಳಗೊಂಡಿರಬೇಕು. ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ತಾವು ಅನುಭವಿಸುವ ತೊಂದರೆಗಳನ್ನು ತಿಳಿಸುವಂತೆ ಸೂಚಿಸಬೇಕು. ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯವನ್ನು ದಾಖಲಿಸಬೇಕು.

**ಹಂತ 4: ಅಂತಿಮ ಪರೀಕ್ಷೆ ಒದಗಿಸುವುದು**

ಕಾರ್ಯಕ್ರಮ ಪೂರ್ಣಗೊಂಡ ಸುಮಾರು ಅರ್ಧಗಂಟೆಯ ನಂತರ ವಿದ್ಯಾರ್ಥಿಗಳಿಗೆ, ಅಂತಿಮ ಪರೀಕ್ಷೆಯನ್ನು ಒದಗಿಸಬೇಕು. ಅಂತಿಮ ಪರೀಕ್ಷೆಯ ದತ್ತಾಂಶಗಳು ವಿದ್ಯಾರ್ಥಿಗಳ ಗಳಿಕೆಯ ಪ್ರಮಾಣವನ್ನು ಅರಿಯಲು ಸಹಾಯಕವಾಗುತ್ತವೆ.

**ಹಂತ 5: ಮನೋವೃತ್ತಿ ಮಾಪನ ಒದಗಿಸುವಿಕೆ**

ಅಂತಿಮ ಪರೀಕ್ಷೆಯ ನಂತರ ವಿದ್ಯಾರ್ಥಿಗಳಿಗೆ ಮನೋವೃತ್ತಿ ಮಾಪನವನ್ನು ಒದಗಿಸಬೇಕು. ಈ ಮಾಪನದ ಆಧಾರದ ಮೇಲೆ ಮನೋವೃತ್ತಿ ಸಹಗುಣಕವನ್ನು ಕಂಡುಹಿಡಿಯಬಹುದಾಗಿದೆ.

**ಹಂತ 6: ಕಾರ್ಯಕ್ರಮದ ಮಾನಕಗಳ ವಿಶ್ಲೇಷಣೆ**

ಎಲ್ಲ ರೀತಿಯ ದತ್ತಾಂಶಗಳನ್ನು ಸಂಗ್ರಹಿಸಿದ ನಂತರ ಕಾರ್ಯಕ್ರಮದ ಮಾನಕಗಳನ್ನು ವಿಶ್ಲೇಷಿಸಬೇಕು. ಇಂತಹ ಮಾನಕಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು.

**a: ಆಂತರಿಕ ಮಾನಕ**

**b: ಬಾಹ್ಯ ಮಾನಕ**

a: ಆಂತರಿಕ ಮಾನಕಗಳು ಕಾರ್ಯಕ್ರಮದ ಲಕ್ಷಣಗಳಿಗೆ ಸಂಬಂಧಿಸಿವೆ. ಅವುಗಳಲ್ಲಿ ನಾಲ್ಕು ಪ್ರಕಾರಗಳಿವೆ.

i ದೋಷ ದರ (Error rate)

ii ಕಾರ್ಯಕ್ರಮ ಸಾಂದ್ರತೆ (Programme density)

iii ಅನುಕ್ರಮ ಪ್ರಗತಿ (Sequence Progression)

iv ಚೌಕಟ್ಟು ತಪಶೀಲು ಪಟ್ಟಿ (Frame inventory)

b: ಬಾಹ್ಯ ಮಾನಕಗಳು ವಿದ್ಯಾರ್ಥಿಗಳ ಸಾಧನಾ ಗಳಿಕೆ ಮತ್ತು ಮನೋವೃತ್ತಿಗೆ ಸಂಬಂಧಿಸಿವೆ. ಅವುಗಳಲ್ಲಿ ನಾಲ್ಕು ಪ್ರಕಾರಗಳಿವೆ.

i 90/90 ಮಾನಕ (90/90 Standard)

ii ಮನೋವೃತ್ತಿ ಸಹಗುಣಕ (Attitude Coefficient)

iii ಗಳಿಕೆ ಅನುಪಾತ (Gain ratio)

iv ಕಾರ್ಯನಿರ್ವಹಣಾ ಮಟ್ಟ (Level of performance)

**a. ಆಂತರಿಕ ಮಾನಕ**

**1. ಕಾರ್ಯಕ್ರಮದ ದೋಷದರ**

ಕಲಿಕೆಯು ಒಂದು ಚಕ್ರವಾಗಿದ್ದು, ಇಲ್ಲಿ ಕಲಿಕಾರ್ಥಿಗೆ ಒಂದು ಪ್ರಚೋದನೆಯನ್ನು ಒದಗಿಸಲಾಗುತ್ತದೆ. ನಂತರ ಸೂಕ್ತ ಪ್ರತಿಕ್ರಿಯೆ ಪಡೆಯಲಾಗುತ್ತದೆ ಮತ್ತು ಮರುಪೋಷಣೆಯನ್ನು ಕೂಡಾ ಒದಗಿಸಲಾಗುತ್ತದೆ. ಕಲಿಕೆಯ ಪ್ರಮಾಣವು ಕಲಿಕಾ ಚಕ್ರದ ಈ ಮೂರು ಅಂಶಗಳನ್ನು ಅವಲಂಬಿಸಿದೆ. ಸ್ಕಿನ್ನರ್ ಮತ್ತು ಇತರರ ಪ್ರಕಾರ ಕಲಿಕೆಯು ಅನುಬಂಧನ (Conditioning) ದ ಮೂಲಕ ಸಾಗುತ್ತದೆ. ಕಾರ್ಯಕ್ರಮದ ಚೌಕಟ್ಟುಗಳಿಗೆ ವ್ಯಕ್ತವಾಗುವ ತಪ್ಪು ಪ್ರತಿಕ್ರಿಯೆಯು ಅನುಬಂಧನವು ಪೂರ್ಣವಾಗಿ ಆಗಿಲ್ಲ ಎನ್ನುವುದನ್ನು ಸೂಚಿಸುತ್ತದೆ. ಆದ್ದರಿಂದ ಪ್ರತಿಯೊಂದು ತಪ್ಪು ಪ್ರತಿಕ್ರಿಯೆಯನ್ನು ಒಂದು ದೋಷವೆಂದು ಪರಿಗಣಿಸಲಾಗುತ್ತದೆ.

ಕಾರ್ಯಕ್ರಮವು ದೋಷದಿಂದ ಮುಕ್ತವಾಗಿರಬೇಕು. ಸಾಮಾನ್ಯವಾಗಿ ಒಂದು ಕಾರ್ಯಕ್ರಮದಲ್ಲಿ ತಪ್ಪು ಪ್ರತಿಕ್ರಿಯೆಗಳ ಪ್ರತಿಶತ ಪ್ರಮಾಣವನ್ನು ದೋಷ ದರ ಎನ್ನಲಾಗುತ್ತದೆ. ಸಾಧ್ಯವಾದಷ್ಟು ಕಡಿಮೆ ದೋಷದರವಿರಬೇಕೆಂದು ಅಪೇಕ್ಷಿಸುವುದು ಸಹಜವಾಗಿದೆ. ಅಂದರೆ


Digitised by Bharatavani, CIIL

ಶೇ. 5 ದೋಷ ದರಕ್ಕಿಂತ ಕಡಿಮೆ ದರವನ್ನು ಹೊಂದಿರುವ ಕಾರ್ಯಕ್ರಮವನ್ನು ಉತ್ತಮವೆಂದು ಪರಿಗಣಿಸಲಾಗುತ್ತದೆ. ಸ್ಕಿನ್ನರ್‌ನ ಪ್ರಕಾರ ದೋಷವು ಕಲಿಕೆಗೆ ಅಡ್ಡಿ ಉಂಟು ಮಾಡುವುದರಿಂದ ಅದರ ದರ ಅತ್ಯಂತ ಕಡಿಮೆ ಇರಬೇಕು.

ದೋಷದರದ ವಿಶ್ಲೇಷಣೆಯನ್ನು ಪ್ರತಿಯೊಂದು ಚೌಕಟ್ಟಿಗೆ ಪಡೆದ ಪ್ರತಿಕ್ರಿಯೆಗಳ ಆಧಾರದ ಮೇಲೆ ಮಾಡಲಾಗುತ್ತದೆ. ಯಾವುದೇ ಒಂದು ನಿರ್ದಿಷ್ಟ ಚೌಕಟ್ಟಿಗೆ ವಿದ್ಯಾರ್ಥಿಯು ತಪ್ಪು ಪ್ರತಿಕ್ರಿಯೆ ನೀಡಿದರೆ, ಅದನ್ನು ದೋಷ ಎನ್ನಲಾಗುವುದು. ದೋಷದರವನ್ನು ಲೆಕ್ಕಾಚಾರ ಮಾಡಲು, ಚೌಕಟ್ಟುಗಳಲ್ಲಿ ವಿದ್ಯಾರ್ಥಿಗಳು ಮಾಡಿದ ದೋಷಗಳನ್ನು ಎಣಿಸಿ, ಅದನ್ನು ಒಟ್ಟು ಚೌಕಟ್ಟುಗಳು ಮತ್ತು ಒಟ್ಟು ವಿದ್ಯಾರ್ಥಿಗಳ ಗುಣಕದಿಂದ ಭಾಗಿಸಿ, ನಂತರ 100 ರಿಂದ ಗುಣಿಸಲಾಗುತ್ತದೆ.

$$\text{ದೋಷ ದರ} = \frac{\text{ಒಟ್ಟು ದೋಷಗಳ ಸಂಖ್ಯೆ}}{\text{ಒಟ್ಟು ಚೌಕಟ್ಟುಗಳ ಸಂಖ್ಯೆ} \times \text{ಒಟ್ಟು ವಿದ್ಯಾರ್ಥಿಗಳು}} \times 100$$

$$\text{ಉದಾಹರಣೆಗೆ, ದೋಷದರ} = \frac{5}{10 \times 5} \times 100 = 10\%$$

ಆದ್ದರಿಂದ ದೋಷದರ = 10%

ದೋಷದರ ವಿಶ್ಲೇಷಣೆಯ ಫಲಿತಾಂಶವನ್ನು ಅರ್ಥೈಸುವ ಸಂದರ್ಭದಲಿ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಸಾಮಾನ್ಯವಾಗಿ 5 ರಿಂದ 10 ಪ್ರತಿಶತ ದೋಷದರವನ್ನು ಸ್ವೀಕರಿಸಬಹುದಾಗಿದೆ. ಕಡಿಮೆ ದರವಿದ್ದಷ್ಟು ಉತ್ತಮ. ಆದರೆ ವಿಷಯದ ಸುಲಭತೆಯೂ ಕೂಡಾ ಕಡಿಮೆ ದರಕ್ಕೆ ಕಾರಣವಾಗಬಹುದು. ಆದ್ದರಿಂದ ದರ ವಿಶ್ಲೇಷಣೆಯನ್ನು ಅತ್ಯಂತ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಪ್ರತಿಯೊಂದು ಚೌಕಟ್ಟಿಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆ ಏನು, ದೋಷಕ್ಕೆ ಕಾರಣವೇನು, ವಿದ್ಯಾರ್ಥಿ ತೆಗೆದುಕೊಂಡ ಸಮಯವೆಷ್ಟು, ವಿದ್ಯಾರ್ಥಿಯ ಅಭಿಪ್ರಾಯವೇನು, ಈ ಎಲ್ಲವನ್ನು ಗಮನಿಸಬೇಕು.

**ಅಧಿಕ ದೋಷದರಕ್ಕೆ ಕಾರಣಗಳು**

ದೋಷಗಳಿಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಮೊದಲನೆಯ ದೆಂದರೆ ಚೌಕಟ್ಟುಗಳ ಅತಾರ್ಕಿಕ ವಿನ್ಯಾಸ. ಕಾರ್ಯಕ್ರಮದ ಚೌಕಟ್ಟುಗಳನ್ನು ಸರಳತೆಯಿಂದ ಕಠಿಣತೆಯೆಡೆಗೆ ಗೊತ್ತಿರುವುದರಿಂದ ಗೊತ್ತಿಲ್ಲದೆಡೆಗೆ ತತ್ವದ ಆಧಾರದ ಮೇಲೆ ವ್ಯವಸ್ಥಿತಗೊಳಿಸದಿದ್ದಲ್ಲಿ, ದೋಷ ದರವು ಅಧಿಕವಾಗಿರುವುದು. ಉತ್ತಮವಾಗಿ ಸಂಘಟಿಸಿದ ಕಾರ್ಯಕ್ರಮವು ಸಾಧ್ಯವಾದಷ್ಟು ದೋಷಗಳಿಂದ ಮುಕ್ತವಾಗಿರುತ್ತದೆ.

ಕಾರ್ಯಕ್ರಮದಲ್ಲಿನ ದೋಷಕ್ಕೆ ಎರಡನೇ ಮೂಲವೆಂದರೆ ಚೌಕಟ್ಟುಗಳ ಭಾಷೆ. ಚೌಕಟ್ಟುಗಳಲ್ಲಿ ಬಳಸಲಾದ ಭಾಷೆಯು ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯಕ್ಕೆ ಮೀರಿದುದಾದರೆ ವಿದ್ಯಾರ್ಥಿಗಳು ತಪ್ಪು ಮಾಡುವ ಸಾಧ್ಯತೆಗಳಿರುತ್ತವೆ. ಚೌಕಟ್ಟುಗಳಲ್ಲಿನ ಪದಗಳ ದ್ವಂದ್ವತೆಯಿಂದ ದೋಷದರ ಹೆಚ್ಚಾಗುತ್ತದೆ.

ದೋಷಗಳಿಗೆ ಮೂರನೇ ಕಾರಣವೆಂದರೆ, ವಿದ್ಯಾರ್ಥಿಗಳ ಸಾಮಾನ್ಯ ಸಾಮರ್ಥ್ಯ, ವಿದ್ಯಾರ್ಥಿಗಳ ಆಸಕ್ತಿ, ಅಭಿಪ್ರೇರಣೆ, ಅವರ ಹಿನ್ನೆಲೆ ಇವುಗಳು ಕೂಡಾ ದೋಷಗಳಿಗೆ ಕಾರಣವಾಗುತ್ತವೆ. ಅಲ್ಲದೆ ಸೂಕ್ತವಲ್ಲದ ಸುಳಿವುಗಳು, ಅಸಮರ್ಪಕ ಮಾಹಿತಿಯೂ ಕೂಡಾ ದೋಷಗಳಿಗೆ ಕಾರಣವಾಗುತ್ತವೆ.

**2. ಕಾರ್ಯಕ್ರಮದ ಸಾಂದ್ರತೆ**

ಕಾರ್ಯಕ್ರಮದ ಕಠಿಣತೆಯನ್ನು ಸಾಂಪ್ರದಾಯಿಕ ಅಂಶ ವಿಶ್ಲೇಷಣೆಯ ಮೂಲಕ ಅಳೆಯಬಹುದಾಗಿದೆ. ಕಠಿಣತಾಮಟ್ಟವು ಚೌಕಟ್ಟುಗಳ ಗಾತ್ರಕ್ಕೆ ಸಂಬಂಧಿಸಿದೆ. ಸಾಂದ್ರತೆಯು ಒಂದು ಕಾರ್ಯಕ್ರಮದ ಕಠಿಣತೆಯ ಸ್ವತಂತ್ರ ಅಳತೆಯಾಗಿದೆ. ಸಾಂದ್ರತೆಯು ಕ್ರಮಾನುಗತ ಸಾಮಗ್ರಿಯ ದರವನ್ನು ಪರೋಕ್ಷವಾಗಿ ಅಳೆಯುತ್ತದೆ. ಎರಡು ಪ್ರಕಾರದ ಸಾಂದ್ರತೆಯನ್ನು ಕ್ರಮಾನುಗತ ಸಾಮಗ್ರಿಯಲ್ಲಿ ಕಾಣಬಹುದಾಗಿದೆ. ಮೊದಲನೆಯ ಸಾಂದ್ರತೆಯೆಂದರೆ ಸ್ವತಂತ್ರ ಸಾಂದ್ರತೆ. ಸ್ವತಂತ್ರ ಸಾಂದ್ರತೆಯು ಕಾರ್ಯಕ್ರಮದ ಭಾಗವಾಗಿರುವ ಒಂದು ಚೌಕಟ್ಟಿನ ಸಾಂದ್ರತೆಯಾಗಿದೆ. ಇಂತಹ ಸ್ವತಂತ್ರ ಸಾಂದ್ರತೆಯೊಂದಿಗೆ ದೋಷದರ ಸಂಬಂಧಿಸಿದೆ. ಎರಡನೆಯ ಸಾಂದ್ರತೆ ಎಂದರೆ ಸಂಚಿತ ಸಾಂದ್ರತೆ. ಸಂಚಿತ ಸಾಂದ್ರತೆಯು ಹಿಂದಿನ ಚೌಕಟ್ಟುಗಳಲ್ಲಿ ಕಂಡು ಬರುವ ನಿರ್ದಿಷ್ಟ ಪದಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಸಾಮಾನ್ಯವಾಗಿ ಕಾರ್ಯಕ್ರಮದ ಸಾಂದ್ರತೆಯನ್ನು ಅಳತೆ ಮಾಡಲು ಪ್ರಕಾರ ಟೋಕನ್ ಅನುಪಾತ (Token Ration - TR)ವನ್ನು ಉಪಯೋಗಿಸಲಾಗುತ್ತದೆ. ಏಕೆಂದರೆ ಟೋಕನ್ ಅನುಪಾತ (TR)ಕಾರ್ಯಕ್ರಮದ ಸಾಂದ್ರತೆಯ ಸ್ವತಂತ್ರ ಅಳತೆಯಾಗಿದೆ.

ಒಂದು ಕಾರ್ಯಕ್ರಮದ ಕಠಿಣತಾ ಮಟ್ಟವನ್ನು ಅಳೆಯಲು ಕಾರ್ಯಕ್ರಮದ ಒಂದು ಭಾಗದಲ್ಲಿ ವಿದ್ಯಾರ್ಥಿಗಳಿಂದ ನಿರೀಕ್ಷಿಸಲಾಗುವ ವಿವಿಧ ಪ್ರತಿಕ್ರಿಯೆಗಳನ್ನು ದಾಖಲಿಸಲಾಗುತ್ತದೆ. ಈ ಸಂಖ್ಯೆಯನ್ನು ಅವಶ್ಯಕ ಪ್ರತಿಕ್ರಿಯೆಗಳ ಒಟ್ಟು ಸಂಖ್ಯೆಯಿಂದ ಭಾಗಿಸಲಾಗುತ್ತದೆ.

$$TR = \frac{\text{ವಿಭಿನ್ನ ಪ್ರಕಾರದ ಅವಶ್ಯಕ ಪ್ರತಿಕ್ರಿಯೆಗಳ ಒಟ್ಟು ಸಂಖ್ಯೆ}}{\text{ಅವಶ್ಯಕ ಪ್ರತಿಕ್ರಿಯೆಗಳ ಒಟ್ಟು ಸಂಖ್ಯೆ}}$$

Digitised by Bharatavani, CIIL

ಉದಾಹರಣೆಗೆ, ಒಂದು ನಿರ್ದಿಷ್ಟ ಕಾರ್ಯಕ್ರಮದಲ್ಲಿ ಒಟ್ಟು 70 ಪ್ರತಿಕ್ರಿಯೆಗಳಿದ್ದು, ವಿದ್ಯಾರ್ಥಿಯು 30 ವಿಭಿನ್ನ ಪ್ರತಿಕ್ರಿಯೆಗಳನ್ನು ಮಾಡಬೇಕಾದಾಗ ಸಾಂದ್ರತೆಯು

$$TR = \frac{30}{70} = 0.42$$

TR ಮೌಲ್ಯವು 0 ಮತ್ತು 1ರ ನಡುವೆ ಇರುತ್ತದೆ. TRನ ಮೌಲ್ಯವು ಕಾರ್ಯಕ್ರಮದ ಸಾಪೇಕ್ಷ ಕಠಿಣತಾ ಮಟ್ಟವನ್ನು ಸೂಚಿಸುತ್ತದೆ. TRನ ಮೌಲ್ಯವು 1 ಆಗಿದ್ದರೆ, ಕಾರ್ಯಕ್ರಮದ ಸಾಂದ್ರತೆಯು ಗರಿಷ್ಠವಾಗಿರುತ್ತದೆ. ಆಗ ಪ್ರತಿಯೊಂದು ಚೌಕಟ್ಟಿಗೆ ವಿದ್ಯಾರ್ಥಿಯು ವಿಭಿನ್ನ ಪ್ರತಿಕ್ರಿಯೆ ಕೊಡಬೇಕಾಗುತ್ತದೆ. ಆದ್ದರಿಂದ ಇಂತಹ ಕಾರ್ಯಕ್ರಮವನ್ನು ಅತ್ಯಂತ ಕಠಿಣ ಎನ್ನಲಾಗುತ್ತದೆ. ಅದರಂತೆ ವಿದ್ಯಾರ್ಥಿಯ ಪ್ರತಿಯೊಂದು ಪ್ರತಿಕ್ರಿಯೆಯು ಏಕರೂಪದ ಒಂದೇ ಪದವನ್ನು ಹೊಂದಿದ್ದರೆ, ಕಾರ್ಯಕ್ರಮವು ಕನಿಷ್ಠ ಸಾಂದ್ರತೆ ಹೊಂದಿದೆ ಎನ್ನಬಹುದಾಗಿದೆ. ಆದ್ದರಿಂದ TRನ ಲೆಕ್ಕಾಚಾರವು ಕಾರ್ಯಕ್ರಮದ ಕಠಿಣತಾ ಮಟ್ಟವನ್ನು ಕಂಡು ಹಿಡಿಯುವ ಉಪಯುಕ್ತ ಸಾಧನವಾಗಿದೆ. ಆದರ್ಶ TR ಮೌಲ್ಯವು 0.25 ರಿಂದ 0.33ರ ಒಳಗಡೆ ಇದ್ದು ಇಂತಹ ಕಾರ್ಯಕ್ರಮವನ್ನು ಉತ್ತಮವೆಂದು ಪರಿಗಣಿಸಲಾಗುತ್ತದೆ.

### 3. ಕಾರ್ಯಕ್ರಮದ ಅನುಕ್ರಮದ ಪ್ರಗತಿ (Sequence Progression)

ಒಂದು ಕಾರ್ಯಕ್ರಮವನ್ನು ಅನುಕ್ರಮದ ನಿರಂತರತೆಯ ರೂಪದಲ್ಲಿ ಸಾಮಾನ್ಯವಾಗಿ ವಿಶ್ಲೇಷಿಸಲಾಗುತ್ತದೆ. ವಿನ್ಯಾಸ ವಿಶ್ಲೇಷಣೆಯು ಕಾರ್ಯಕ್ರಮದ ಭಾಗಗಳ ತಾರ್ಕಿಕ ವ್ಯವಸ್ಥೆಯ ಮೌಲ್ಯಮಾಪನಕ್ಕೆ ಸಹಾಯವಾಗುತ್ತದೆ. ಕಾರ್ಯಕ್ರಮದ ಅನುಕ್ರಮದಲ್ಲಿ ಹಲವು ಪ್ರಕಾರಗಳಿವೆ.

ಗರಿಷ್ಠ ಪ್ರಮಾಣದ ವಿದ್ಯಾರ್ಥಿಗಳ ಅಂತರ್‌ಕ್ರಿಯೆಯನ್ನು ಒಳಗೊಂಡಿರುವ ಕಾರ್ಯಕ್ರಮವು ಅತ್ಯುತ್ತಮ ಅನುಕ್ರಮ ಹೊಂದಿದೆ ಎನ್ನಬಹುದಾಗಿದೆ. ಆದ್ದರಿಂದ ವಿದ್ಯಾರ್ಥಿಗಳ ಕಾರ್ಯಕ್ರಮದೊಂದಿಗಿನ ಅಂತರ್‌ಕ್ರಿಯೆಯನ್ನು ಕಾರ್ಯಕ್ರಮದ ವಿಶ್ವಸನೀಯತೆಯನ್ನು ನಿರ್ಧರಿಸುವಾಗ ತಾರ್ಕಿಕವಾಗಿ, ಆಂತರಿಕವಾಗಿ, ಮಾನಕವಾಗಿ ಪರಿಗಣಿಸಬಹುದಾಗಿದೆ. ವಿಷಯದೊಂದಿಗಿನ ವಿದ್ಯಾರ್ಥಿಗಳ ಅಂತರ್ ಕ್ರಿಯೆಯನ್ನು ಅನುಕ್ರಮ ನಿರಂತರತೆಯ ಮೂಲಕ ಅಧ್ಯಯನ ಮಾಡಬಹುದಾಗಿದೆ.

ಕಾರ್ಯಕ್ರಮದ ಅನುಕ್ರಮವನ್ನು ಈ ಉದ್ದೇಶಕ್ಕಾಗಿಯೇ ಸಿದ್ಧಪಡಿಸಲಾದ ಒಂದು ಚಾರ್ಟ್‌ನಿಂದ ವೀಕ್ಷಿಸಬಹುದಾಗಿದೆ. ಇಂತಹ ಚಾರ್ಟ್‌ನಿಂದ ಸೂಕ್ತ ಅನುಕ್ರಮವನ್ನು ಹೊಂದಿರುವ ಚೌಕಟ್ಟುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

### ಸ್ಕೇಲೋಗ್ರಾಮ್ (Scalogram)

ನಿಕಷ ಪರೀಕ್ಷೆಯಲ್ಲಿನ ಪರೀಕ್ಷಾಂಶಗಳನ್ನು ಘಟಕದ ಅನುಸಾರವಾಗಿ ಸಂಘಟಿಸಬೇಕು ಮತ್ತು ಪ್ರತಿಯೊಂದು ಪರೀಕ್ಷಾಂಶವನ್ನು ಅದರ ಘಟಕದಲ್ಲಿ ಒದಗಿಸಲಾಗುವ ಕ್ರಮದಲ್ಲಿ ಸಂಘಟಿಸಬೇಕು. ಇದರ ನಂತರ ನಿಕಷ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಈ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕಗಳಿಸಿದ ಏಳು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಆಯ್ಕೆ ಮಾಡಬೇಕು. ಚಾರ್ಟ್‌ನಲ್ಲಿ ಸರಿಯಾದ ಉತ್ತರಕ್ಕೆ (✓) ಚಿಹ್ನೆಯನ್ನು, ತಪ್ಪು ಉತ್ತರಕ್ಕೆ (X) ಈ ಚಿಹ್ನೆಯನ್ನು ಕೊಡಬೇಕು.

ಒಂದು ಕಾರ್ಯಕ್ರಮವು 50 ಚೌಕಟ್ಟುಗಳನ್ನು ಒಳಗೊಂಡಿದೆ. ಈ ಚೌಕಟ್ಟುಗಳನ್ನು 3 ಘಟಕಗಳಲ್ಲಿ ಸಂಘಟಿಸಲಾಗಿದೆ. ಅವುಗಳೆಂದರೆ A, B, C ಘಟಕಗಳು. ಕಾರ್ಯಕ್ರಮದ ನಿಕಷ ಪರೀಕ್ಷೆಯು 15 ಪರೀಕ್ಷಾಂಶಗಳನ್ನು ಒಳಗೊಂಡಿದೆ. ಈ 15 ಪರೀಕ್ಷಾಂಶಗಳನ್ನು ಕ್ರಮಬದ್ಧವಾಗಿ ಘಟಕದ ಅನುಸಾರ ಸಂಘಟಿಸಲಾಗಿದೆ.

ಚಾರ್ಟ್ 1 ಘಟಕದನುಸಾರ ಉತ್ತರ ಪರೀಕ್ಷೆಯ ಅಂಶಗಳ ತಾರ್ಕಿಕ ಅನುಕ್ರಮ

| | ಘಟಕ A | ಘಟಕ B | ಘಟಕ C |
|---|---|---|---|
| ಪರೀಕ್ಷಾಂಶದ ಅನುಕ್ರಮ ಸಂಖ್ಯೆ | 10 | 15 | 6 |
| | 2 | 3 | 13 |
| | 8 | 5 | 7 |
| | 4 | 9 | 14 |
| | 1 | 11 | 12 |

ಮೇಲಿನ ಪಟ್ಟಿಯಿಂದ ಸ್ಪಷ್ಟವಾಗುವುದೇನೆಂದರೆ, ಪ್ರತಿಯೊಂದು ಘಟಕವು 5 ಪರೀಕ್ಷಾಂಶಗಳನ್ನು ಹೊಂದಿದೆ. ಒಟ್ಟು ಪರೀಕ್ಷಾಂಶಗಳ ಸಂಖ್ಯೆ 15. ನಿರ್ದಿಷ್ಟ ಪರೀಕ್ಷಾಂಶವನ್ನು (ಉದಾ: 10) ಮೊದಲಿಗೆ ನಮೂದಿಸಲಾಗಿದೆ. ಏಕೆಂದರೆ ಅದಕ್ಕೆ ಸಂಬಂಧಿಸಿದ (ಪರೀಕ್ಷಾಂಶ 10ಕ್ಕೆ) ವಿಷಯ ಸಾಮಗ್ರಿಯನ್ನು ಆ ಘಟಕದ (ಘಟಕ A) ಪ್ರಾರಂಭದಲ್ಲಿ ಕೊಡಲಾಗಿರುತ್ತದೆ. ಉದಾಹರಣೆಗೆ, ಪರೀಕ್ಷಾಂಶ 11ನ್ನು ಘಟಕ Bನ ಕೊನೆಗೆ ಇಡಲಾಗಿದೆ. ಏಕೆಂದರೆ 11ಕ್ಕೆ ಸಂಬಂಧಿಸಿದ ವಿಷಯವನ್ನು ಘಟಕ Bನ ಕೊನೆಗೆ ಕೊಡಲಾಗಿದೆ.

ನಂತರ ಉತ್ತರ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಅತಿ ಹೆಚ್ಚು ಅಂಕಗಳಿಸಿದ 7 ಉತ್ತರ ಪತ್ರಿಕೆಗಳನ್ನು ಪಡೆಯಲಾಗಿದೆ. ಆ ಉತ್ತರ ಪತ್ರಿಕೆಗಳ ಆಧಾರದ ಮೇಲೆ ಕೆಳಗಿನಂತೆ ಸ್ಕೇಲೋಗ್ರಾಮ್ (Scalogram) ರಚಿಸಲಾಗಿದೆ.

Digitised by Bharatavani, CIIL

| ಅಂಕಗಳು | ಘಟಕ A | | | | | ಘಟಕ B | | | | | ಘಟಕ C | | | | |
|---|---|---|---|---|---|---|---|---|---|---|---|---|---|---|---|
| | 10 | 2 | 8 | 4 | 1 | 15 | 3 | 5 | 9 | 11 | 6 | 13 | 7 | 14 | 12 |
| 15 | ✓ | ✓ | ✓ | ✓ | | ✓ | ✓ | ✓ | ✓ | ✓ | ✓ | ✓ | ✓ | ✓ | ✓ |
| 14 | ✓ | ✓ | ✓ | ✓ | | ✓ | ✓ | ✓ | ✓ | ✓ | ✓ | ✓ | ✓ | ✓ | × |
| 13 | ✓ | ✓ | ✓ | ✓ | | ✓ | ✓ | ✓ | ✓ | ✓ | ✓ | ✓ | ✓ | × | × |
| 12 | ✓ | ✓ | ✓ | ✓ | | ✓ | ✓ | ✓ | ✓ | ✓ | ✓ | ✓ | × | × | × |
| 11 | ✓ | ✓ | ✓ | ✓ | | ✓ | ✓ | ✓ | ✓ | ✓ | ✓ | × | × | × | × |
| 10 | ✓ | ✓ | ✓ | ✓ | | ✓ | ✓ | ✓ | ✓ | × | × | × | × | × | × |
| 9 | ✓ | ✓ | ✓ | ✓ | | ✓ | ✓ | ✓ | ✓ | × | × | × | × | × | × |

✓ – ಸರಿ ಉತ್ತರ X – ತಪ್ಪು ಉತ್ತರ

ಇದರಿಂದ ಸ್ಪಷ್ಟವಾಗುವುದೆಂದರೆ, ಮೊದಲಿನ ಎರಡು ಘಟಕಗಳಾದ A ಮತ್ತು B ಯನ್ನು ವಿದ್ಯಾರ್ಥಿ ತಿಳಿದುಕೊಂಡರೆ, ಅವನು ಘಟಕ C ಯನ್ನು ಕೂಡಾ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾನೆ. ಅಲ್ಲದೇ ಕಾರ್ಯಕ್ರಮದಲ್ಲಿ ವಿಷಯವನ್ನು ಕಠಿಣತೆಯ ಆಧಾರದ ಮೇಲೆ ಸಂಘಟಿಸಿರುವದು ಕಂಡುಬರುತ್ತದೆ. ಘಟಕ A ನಲ್ಲಿ ಸರಳ, ಘಟಕ B ನಲ್ಲಿ ಸ್ವಲ್ಪ ಕಠಿಣ ಮತ್ತು ಘಟಕ C ನಲ್ಲಿ ಹೆಚ್ಚು ಕಠಿಣವಾದ ವಿಷಯವನ್ನು ಒದಗಿಸಲಾಗಿದೆ. ಅಂದರೆ ಚೌಕಟ್ಟುಗಳನ್ನು ತಾರ್ಕಿಕವಾಗಿ ಅನುಕ್ರಮ ಗೊಳಿಸಲಾಗಿದೆ. ಅಲ್ಲದೇ ಚೌಕಟ್ಟುಗಳ ಅನುಕ್ರಮವು ಮನೋವೈಜ್ಞಾನಿಕ ವಾಗಿಯೂ ಸಮಂಜಸವಾಗಿರುವುದು ತಿಳಿಯುತ್ತದೆ.

ಇಂತಹ ಕ್ರಮವನ್ನು ಸಣ್ಣಗುಂಪು ಪರೀಕ್ಷೆ ಮತ್ತು ಕ್ಷೇತ್ರ ಪರೀಕ್ಷೆಗಳೆರಡರ ನಂತರವೂ ಅನುಸರಿಸಬೇಕು.

### 4. ಚೌಕಟ್ಟು ತಪಶೀಲು ಪಟ್ಟಿ ವಿಶ್ಲೇಷಣೆ

ಒಂದು ಕಾರ್ಯಕ್ರಮದ ಚೌಕಟ್ಟುಗಳ ಅನುಕ್ರಮವನ್ನು ಮೌಲ್ಯಮಾಪನ ಮಾಡಲು ಚೌಕಟ್ಟು ತಪಶೀಲು ಪಟ್ಟಿಯು ಮಹತ್ವದ ಸಾಧನವಾಗಿದೆ. ಈ ಸಾಧನವು ಚೌಕಟ್ಟುಗಳ ರಚನೆ, ಅನುಕ್ರಮಣಿಕೆ ಮತ್ತು ಚೌಕಟ್ಟುಗಳಲ್ಲಿ ಉಪಯೋಗಿಸಲಾದ ಸೂಚನೆ, ಹೆಚ್ಚುವರಿ ಪ್ರಚೋದನೆಗಳ ಕುರಿತು ಮಾಹಿತಿಯನ್ನು ಒದಗಿಸುತ್ತದೆ.

ಚೌಕಟ್ಟು ತಪಶೀಲು ಪಟ್ಟಿಯನ್ನು ರೂಪಿಸುವಾಗ, ಚೌಕಟ್ಟುಗಳಲ್ಲಿ ಉಪಯೋಗಿಸಲಾದ ಸೂಚನೆ, ಹೆಚ್ಚುವರಿ ಪ್ರಚೋದನೆ ಅಂಶಗಳನ್ನು ಸೂಚಿಸಲು ಕೆಳಗಿನ ಸಂಕೇತಗಳನ್ನು ಬಳಸಲಾಗುತ್ತದೆ.

ಒಂದು ಕಾರ್ಯಕ್ರಮವು ಸೂಕ್ತವಾದ ಚೌಕಟ್ಟು ಅನುಕ್ರಮಣಿಕೆ ಹೊಂದಿರಬೇಕಾದರೆ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು.

1. ಒಂದು ವಿಷಯವನ್ನು ಕಲಿಸುವ ಮೊದಲನೇ ಚೌಕಟ್ಟು ಸಂಪೂರ್ಣ ಸೂಚಿತ ಚೌಕಟ್ಟಾಗಿರಬೇಕು. ಅಂದರೆ ಪೂರ್ಣವಾಗಿ ಹೆಚ್ಚುವರಿ ಪ್ರಚೋದನೆಗಳನ್ನು ಹೊಂದಿರಬೇಕು. ಇದರಿಂದ ವಿದ್ಯಾರ್ಥಿಯು ಸರಿಯಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ವಿದ್ಯಾರ್ಥಿ ತಾನು ಇನ್ನೂ ಪೂರ್ಣವಾಗಿ ಕಲಿಯದೇ ಪ್ರತಿಕ್ರಿಯೆ ನೀಡಬೇಕಾಗುತ್ತದೆ.

2. ಅಭ್ಯಾಸ ಚೌಕಟ್ಟುಗಳನ್ನು ಸಂಪೂರ್ಣ ಸೂಚಿತ ಚೌಕಟ್ಟುಗಳ ನಂತರ ಉಪಯೋಗಿಸಬೇಕು ಮತ್ತು ಇವುಗಳ ಅರ್ಧ ಸೂಚಿತ ಚೌಕಟ್ಟುಗಳಾಗಿರಬೇಕು.

3. ಕಾರ್ಯಕ್ರಮದ ಒಟ್ಟು ಚೌಕಟ್ಟುಗಳಲ್ಲಿ ಶೇ. 50ಕ್ಕಿಂತ ಹೆಚ್ಚಿನ ಚೌಕಟ್ಟುಗಳು ಸೂಚನೆ ಹೆಚ್ಚುವರಿ ಪ್ರಚೋದನೆಗಳನ್ನು ಹೊಂದಿರಬಾರದು ಮತ್ತು ಇಂತಹ ಸೂಚನೆಗಳು ಪ್ರಾರಂಭದಲ್ಲಿ ಪೂರ್ಣ, ಅಭ್ಯಾಸ ಚೌಕಟ್ಟುಗಳಲ್ಲಿ ಅರ್ಧ ಇರಬೇಕು. ಪರೀಕ್ಷಾ ಚೌಕಟ್ಟುಗಳಲ್ಲಿ ಸೂಚನೆಗಳಿರಬಾರದು. ಚೌಕಟ್ಟು ತಪಶೀಲು ಪಟ್ಟಿಯನ್ನು, ಚೌಕಟ್ಟುಗಳಲ್ಲಿ ಒದಗಿಸಲಾದ ಸೂಚನೆ ಹೆಚ್ಚುವರಿ ಪ್ರಚೋದನೆಗನುಸಾರವಾಗಿ ಕೆಳಗಿನಂತೆ ತಯಾರಿಸಬೇಕು.

ಚೌಕಟ್ಟು ಸಂಖ್ಯೆ

| ಸಂಕೇತ | ವಿವರಣೆ |
|---|---|
| ⊞ | ಸಂಪೂರ್ಣ ಸೂಚಿತ ಚೌಕಟ್ಟು |
| ⊜ | ಅರ್ಧ ಸೂಚಿತ ಚೌಕಟ್ಟು |
| ○ | ಸೂಚನೆರಹಿತ ಚೌಕಟ್ಟು |
| ⊗ | ಮಾಹಿತಿ ಚೌಕಟ್ಟು |

| ಘಟಕ ↓ | 1 | 2 | 3 | 4 | 5 | 6 | 7 | 8 | 9 | 10 | 11 | |
|---|---|---|---|---|---|---|---|---|---|---|---|---|
| A | ○ | ⊗ | ⊜ | ○ | ⊞ | ⊞ | ⊜ | ○ | ○ | ⊜ | ⊞ | 1 |
| B | ⊞ | ⊞ | ⊜ | ⊞ | ⊜ | ⊞ | ⊞ | ⊜ | ⊜ | ○ | ○ | 2 |
| C | ⊞ | ⊜ | ⊞ | ⊜ | ⊗ | ⊞ | ⊗ | ⊜ | ⊗ | ○ | ○ | 3 |

ಮೇಲಿನ ಪಟ್ಟಿಯಲ್ಲಿ ಘಟಕ A, B, C ಗಳ ತಪಶೀಲು ಪಟ್ಟಿಗಳನ್ನು ತಯಾರಿಸಲಾಗಿದೆ. ಈಗ ಅವುಗಳನ್ನು ವಿಶ್ಲೇಷಿಸೋಣ.

Digitised by Bharatavani, CIIL

**ಘಟಕ A:** ಇದು ಕಳಪೆ ಅನುಕ್ರಮಣಿಕೆಯಾಗಿದೆ. ಮೊದಲನೇ ಚೌಕಟ್ಟು ಸೂಚನೆರಹಿತವಾಗಿದೆ. ಮೊದಲಿಗೆ ಪೂರ್ಣ ಸೂಚಿತ ಚೌಕಟ್ಟನ್ನು ಕೊಡಬೇಕಾಗಿತ್ತು. **2** ನೇ ಚೌಕಟ್ಟು ಮಾಹಿತಿಯನ್ನು ಒದಗಿಸುವುದಾದರೂ ವಿದ್ಯಾರ್ಥಿ ಇದಕ್ಕೆ ಪ್ರತಿಕ್ರಿಯೆ ನೀಡಬೇಕಾಗಿಲ್ಲ. ಇನ್ನು **3** ನೇ ಚೌಕಟ್ಟು ಅಭ್ಯಾಸ ಚೌಕಟ್ಟಾಗಿದೆ. ಆದರೆ ಮೊದಲಿನ ಎರಡು ಚೌಕಟ್ಟುಗಳು ಯಾವುದೇ ಕಲಿಕಾ ಸಾಮಗ್ರಿಯನ್ನು ಒದಗಿಸುವುದಿಲ್ಲ. **5–6** ಚೌಕಟ್ಟುಗಳು ಪೂರ್ಣ ಸೂಚಿತವಾಗಿದ್ದು, 7 ಅಭ್ಯಾಸ ಚೌಕಟ್ಟಾಗಿದೆ. **8, 9** ಪರೀಕ್ಷಾ ಚೌಕಟ್ಟಾಗಿದೆ. ಇದು ಸರಿಯಾಗಿದೆ. ಹೀಗೆ ಪ್ರತಿಯೊಂದು ಚೌಕಟ್ಟನ್ನು ಪರಿಶೀಲಿಸುತ್ತಾ ಹೋದಾಗ, ಘಟಕ **A**ನ ಅನುಕ್ರಮವು ಉತ್ತಮವಾಗಿಲ್ಲ ಎಂದು ತಿಳಿದುಬರುತ್ತದೆ.

**ಘಟಕ B:** ಇಲ್ಲಿ ಮೊದಲಿಗೆ ಪೂರ್ಣಸೂಚಿತ ಚೌಕಟ್ಟುಗಳು ನಂತರ ಅಭ್ಯಾಸ ಚೌಕಟ್ಟು, ಕೊನೆಗೆ ಪರೀಕ್ಷಾ ಚೌಕಟ್ಟುಗಳನ್ನು ಕೊಡಲಾಗಿದೆ. ಆದ್ದರಿಂದ ಇದೊಂದು ಅತ್ಯುತ್ತಮ ಅನುಕ್ರಮಣಿಕೆಯನ್ನು ಹೊಂದಿದೆ.

**ಘಟಕ C:** ಇದು ಸಾಮಾನ್ಯ ಮಟ್ಟದ ಅನುಕ್ರಮಣಿಕೆ ಹೊಂದಿದೆ.

### B: ಬಾಹ್ಯ ಅರ್ಹತೆ

ಒಂದು ಕಾರ್ಯಕ್ರಮವನ್ನು ಅದರ ಆಂತರಿಕ ಅರ್ಹತೆಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿದ ನಂತರ, ಕಾರ್ಯಕ್ರಮವನ್ನು ಬಾಹ್ಯ ಅರ್ಹತೆಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವ ಅಗತ್ಯವಿರುತ್ತದೆ. ಆಂತರಿಕ ಅರ್ಹತೆಯು ಕಾರ್ಯಕ್ರಮದ ತತ್ವಗಳಿಗೆ ಸಂಬಂಧಿಸಿದರೆ, ಬಾಹ್ಯ ಅರ್ಹತೆಯು ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ನಂತರ ಕಲಿಕಾರ್ಥಿಯ ಸಾಧನಾ ಕಾರ್ಯನಿರ್ವಹಣೆಯನ್ನು ಸೂಚಿಸುತ್ತದೆ. ಬಾಹ್ಯ ಅರ್ಹತೆಯು ಕಾರ್ಯಕ್ರಮ ಸಾಮಗ್ರಿಯ ಉದ್ದೇಶಗಳಿಗೆ ಸಂಬಂಧಿಸಿರುತ್ತದೆ. ಆದ್ದರಿಂದ ಈಗ ಬಾಹ್ಯ ಅರ್ಹತೆಯನ್ನು ನಿರ್ಧರಿಸುವ ಕೆಲವು ಸಾಧನಗಳನ್ನು ಕುರಿತು ತಿಳಿಯೋಣ.

### 1: 90/90 ಮಾನಕ

ಕ್ರಮಾನುಗತ ಬೋಧನೆಯ ಸಾಮಗ್ರಿಯನ್ನು ಕೆಲವು ನಿರ್ದಿಷ್ಟ ಉದ್ದೇಶಗಳ ಆಧಾರದ ಮೇಲೆ ರಚಿಸಲಾಗಿರುತ್ತದೆ. ಎಷ್ಟರಮಟ್ಟಿಗೆ ಈ ಉದ್ದೇಶಗಳನ್ನು ಈಡೇರಿಸಲು ಸಾಧ್ಯವಿದೆ ಎಂಬುದನ್ನು 90/90 ಮಾನಕದಿಂದ ತಿಳಿಯಬಹುದಾಗಿದೆ. ಕಾರ್ಯಕ್ರಮವು 90/90 ಮಾನಕವನ್ನು ತಲುಪಿದಾಗ, ಆ ಕಾರ್ಯಕ್ರಮವನ್ನು ಪರೀಕ್ಷಿಸುವುದನ್ನು ನಿಲ್ಲಿಸಲಾಗುತ್ತದೆ ಮತ್ತು ಅದನ್ನು ಮುದ್ರಿಸಬಹುದಾಗಿದೆ.

ಒಂದು ಕಾರ್ಯಕ್ರಮದಲ್ಲಿನ ಶೇ. 90 ಚೌಕಟ್ಟುಗಳಿಗೆ ವಿದ್ಯಾರ್ಥಿಗಳು ಉತ್ತರಿಸಲು ಸಮರ್ಥರಾದರೆ ಒಂದು ಪ್ರಕಾರದ 90/90 ಮಾನಕವನ್ನು ತಲುಪಿದಂತೆ. ಆದರೆ ಕೇವಲ ಇದರಿಂದ ಮಾತ್ರ ಕಾರ್ಯಕ್ರಮದ ಪರಿಣಾಮಕತೆಯನ್ನು ಅಳೆಯಲು ಸಾಧ್ಯವಿಲ್ಲ. ಏಕೆಂದರೆ ಒಂದು ಕಾರ್ಯಕ್ರಮದ ಯಶಸ್ಸು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಏನು ಮಾಡುವರು ಎಂಬುದಕ್ಕೆ ಮಾತ್ರ ಸಂಬಂಧಿಸಿರದೇ, ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ನಂತರ ಏನನ್ನು ಮಾಡಲು ಸಮರ್ಥರಾಗಿದ್ದಾರೆ ಎಂಬುದಕ್ಕೆ ಸಂಬಂಧಿಸಿರುತ್ತದೆ. ಅಂದರೆ ವಿದ್ಯಾರ್ಥಿಗಳು ಶೇ. 85ರಷ್ಟು ಚೌಕಟ್ಟುಗಳಿಗೆ ಪ್ರತಿಕ್ರಿಯೆ ನೀಡಿದರೂ ಅವರು ಕಾರ್ಯಕ್ರಮದ ಎಲ್ಲ ಉದ್ದೇಶಗಳನ್ನು ಈಡೇರಿಸಿದರೆ, ಅಂತಹ ಕಾರ್ಯಕ್ರಮವನ್ನು ಕಳಪೆ ಎನ್ನಲಾಗದು. ಅದೇ ರೀತಿ ವಿದ್ಯಾರ್ಥಿಗಳು ಶೇ. 100 ಚೌಕಟ್ಟುಗಳಿಗೆ ಪ್ರತಿಕ್ರಿಯೆ ನೀಡಿ, ಉತ್ತರ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡದಿದ್ದಲ್ಲಿ ಅದನ್ನು ಉತ್ತಮ ಕಾರ್ಯಕ್ರಮ ಎನ್ನಲು ಸಾಧ್ಯವಿಲ್ಲ.

90/90 ಮಾನಕವನ್ನು ವಿಶ್ಲೇಷಿಸುವ ಇನ್ನೊಂದು ವಿಧಾನವೆಂದರೆ, 90 ಪ್ರತಿಶತ ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಬಳಸಿ, ಶೇ. 90 ಗಳಿಕೆಯನ್ನು ಮಾಡುವುದು. ಅಂದರೆ ವಿದ್ಯಾರ್ಥಿಗಳು ಪೂರ್ವ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಅವರು ಗಳಿಸಲು ಸಾಧ್ಯವಿರುವುದರಲ್ಲಿ ಶೇ. 90 ಪ್ರತಿಶತ ಗಳಿಸಿರುವುದನ್ನು ತಿಳಿಯಬಹುದಾಗಿದೆ.

ಉದಾಹರಣೆಗೆ, ಒಬ್ಬ ವಿದ್ಯಾರ್ಥಿಯು ಪೂರ್ವ ಪರೀಕ್ಷೆಯಲ್ಲಿ ಶೇ. 30 ಅಂಕ ಗಳಿಸುವನು. ಅವನು ಗಳಿಸಬಹುದಾದ ಗರಿಷ್ಠ ಅಂಕವೆಂದರೆ 100. ಕಾರ್ಯಕ್ರಮವು ಶೇ. 100. ಉತ್ತಮವಾಗಿದ್ದರೆ ಅಂದರೆ ಅವನು ಇನ್ನು ಶೇ. 70 ಅಂಕಗಳನ್ನು ಗಳಿಸಲು ಸಾಧ್ಯವಿದೆ. ಅವನು ಉತ್ತರ ಪರೀಕ್ಷೆಯಲ್ಲಿ ಶೇ. 90 ಅಂಕ ಗಳಿಸಿದರೆ ಅವನು ಸಾಧ್ಯವಿರುವ ಶೇ. 70 ಪ್ರತಿಶತದಲ್ಲಿ ಶೇ. 60 ಪ್ರತಿಶತ ಗಳಿಸಿದಂತಾಯಿತು. ಅಂದರೆ ಅವನ ಗಳಿಕೆಯು

$$\frac{60}{70} = 85.7\%$$ (ಸಾಧ್ಯವಿರುವ ಗರಿಷ್ಠ ಗಳಿಕೆಗೆ)

ಒಂದು ಕಾರ್ಯಕ್ರಮದ 90/90 ಮಾನಕವನ್ನು ಪಡೆಯುವ ಅತ್ಯಂತ ಪ್ರಾಯೋಗಿಕ ವಿಧಾನವು ಕೆಳಗಿನಂತಿದೆ. ಮೊದಲಿಗೆ ಪೂರ್ವ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ನಂತರ ಕಾರ್ಯಕ್ರಮವನ್ನು ಒದಗಿಸಬೇಕು. ಕಾರ್ಯಕ್ರಮ ಪೂರ್ಣಗೊಂಡ ನಂತರ ಅಂತಿಮ ಉತ್ತರ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಪೂರ್ವ ಮತ್ತು ಉತ್ತರ ಪರೀಕ್ಷೆಗಳ ಆಧಾರದ ಮೇಲೆ 90/90 ಮಾನಕವನ್ನು ಕೆಳಗಿನ ಸೂತ್ರದ ಸಹಾಯದಿಂದ ಕಂಡು ಹಿಡಿಯಬಹುದು.

$$90/90 \text{ ಮಾನಕ} = \frac{\text{ನೈಜ ಗಳಿಕೆ}}{\text{ನಿರೀಕ್ಷಿತ ಗಳಿಕೆ}}$$

12 ಅಂಕಗಳನ್ನು ಗಳಿಸಿದರೆ, ಸಾಧ್ಯವಿರುವ ಗಳಿಕೆ (ಗರಿಷ್ಠ)

ನಿರೀಕ್ಷಿತ ಗಳಿಕೆ 100–12 = 88%

ನೈಜ ಗಳಿಕೆ = 92–12 = 80%

$$90/90 \text{ ಮಾನಕ} = \frac{\text{ನೈಜ ಗಳಿಕೆ}}{\text{ನಿರೀಕ್ಷಿತ ಗಳಿಕೆ}} = \frac{80}{88}$$

ಅಂದರೆ ನಿರೀಕ್ಷಿತ ಗಳಿಕೆಯು 88% ಆಗಿದ್ದು, ವಿದ್ಯಾರ್ಥಿಯು 80% ಗಳಿಸಿದ್ದರಿಂದ, ಸಮಂಜಸ ಕಾರ್ಯಕ್ರಮ ಎನ್ನಬಹುದಾಗಿದೆ.

### 2. ಮನೋವೃತ್ತಿ ಸಹಗುಣಕ

ಒಂದು ಕಾರ್ಯಕ್ರಮದ ಕಾರ್ಯನಿರ್ವಹಿಸುವಿಕೆಯನ್ನು ಮೌಲ್ಯಮಾಪನ ಮಾಡಲು ಉಪಯೋಗಿಸುವ ಇನ್ನೊಂದು ಬಾಹ್ಯ ಅರ್ಹತಾ ಸಾಧನವೆಂದರೆ ಕಾರ್ಯಕ್ರಮದ ಕುರಿತು ವಿದ್ಯಾರ್ಥಿಗಳ ಮನೋವೃತ್ತಿಗಳನ್ನು ಅಳೆಯುವುದು. ಇಂತಹ ಮನೋವೃತ್ತಿ ಮಾಪನವು ಕಾರ್ಯಕ್ರಮದ ತತ್ವಗಳು ಮತ್ತು ಲಕ್ಷಣಗಳಿಗೆ ಸಂಬಂಧಿಸಿದ ಹೇಳಿಕೆಗಳನ್ನು ಒಳಗೊಂಡಿರುತ್ತದೆ.

ಮನೋವೃತ್ತಿ ಮಾಪನವನ್ನು ಲೈಕರ್ಟ್‌ರವರ 3 ಅಂಶಗಳ ಮಾಪನದ ಆಧಾರದ ಮೇಲೆ ರೂಪಿಸಲಾಗುತ್ತದೆ. ಕಾರ್ಯಕ್ರಮದ

Digitised by Bharatavani, CIIL

ಹಂತಗಳ ಗಾತ್ರ, ಕಠಿಣತಾ ಮಟ್ಟ, ಭಾಷೆ, ಅನುಕ್ರಮಣಿಕೆ, ಪುನರ್ಬಲನ ಮುಂತಾದ ಲಕ್ಷಣಗಳು ಮತ್ತು ತತ್ವಗಳನ್ನು ಕುರಿತ ಹೇಳಿಕೆಗಳನ್ನು ಈ ಮಾಪನವು ಒಳಗೊಂಡಿರುತ್ತದೆ. ವಿದ್ಯಾರ್ಥಿಗಳಿಗೆ ಪ್ರತಿಯೊಂದು ಹೇಳಿಕೆಗೆ ಒಪ್ಪಿಗೆ, ತಟಸ್ಥ ಮತ್ತು ಒಪ್ಪಿಗೆ ಇಲ್ಲ ಎಂಬ ಮೂರು ಅಂಶಗಳಲ್ಲಿ ಯಾವುದಾದರೂ ಒಂದನ್ನು ಸೂಚಿಸುವಂತೆ ತಿಳಿಸಲಾಗುತ್ತದೆ. ನಂತರ, ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಕೂಡ ಲೆಕ್ಕ ಮಾಡಲಾಗುತ್ತದೆ. ಕೆಳಗಿನ ಸೂತ್ರದ ಸಹಾಯದಿಂದ ಮನೋವೃತ್ತಿ ಸಹಗುಣಕವನ್ನು ಲೆಕ್ಕಾಚಾರ ಮಾಡಲಾಗುತ್ತದೆ.

$$\text{ಮನೋವೃತ್ತಿ ಸಹಗುಣಕ} = \frac{(f^+) - (f^-)}{(f^+) + (f^0) + (f^-)}$$

$f^+$ = ಒಪ್ಪಿಗೆ ಅಂಶದ ಒಟ್ಟು ಆವೃತ್ತಿಗಳು

$f^-$ = ಒಪ್ಪಿಗೆ ಇಲ್ಲದ ಅಂಶದ ಒಟ್ಟು ಆವೃತ್ತಿಗಳು

$f^0$ = ತಟಸ್ಥ ಅಂಶದ ಒಟ್ಟು ಆವೃತ್ತಿಗಳು

ಉದಾಹರಣೆ: ಒಂದು ಮನೋವೃತ್ತಿ ಮಾಪನಿಯನ್ನು 100 ವಿದ್ಯಾರ್ಥಿಗಳಿಗೆ ಒದಗಿಸಲಾಗಿದ್ದು ಕೆಳಗಿನಂತೆ ದತ್ತಾಂಶಗಳನ್ನು ಪಡೆಯಲಾಗಿದೆ.

$f^+ = 80 \quad f^0 = 5 \quad f^- = 15$

$$\text{ಮನೋವೃತ್ತಿ ಸಹಗುಣಕ} = \frac{80 - 15}{80 + 5 + 15} = \frac{65}{100} = 0.65$$

ಮನೋವೃತ್ತಿ ಸಹಗುಣಕವು 0.65 ಆಗಿದೆ. ಅಂದರೆ ಶೇಕಡಾ 65 ರಷ್ಟು ವಿದ್ಯಾರ್ಥಿಗಳು ಕಾರ್ಯಕ್ರಮದ ಎಲ್ಲಾ ತತ್ವಗಳು ಮತ್ತು ಲಕ್ಷಣಗಳಿಗೆ ಸಮ್ಮತಿ ವ್ಯಕ್ತಪಡಿಸಿರುವರು. ಈ ರೀತಿಯಾಗಿ, ಪ್ರತಿಯೊಂದು ಲಕ್ಷಣದ ಮೌಲ್ಯಮಾಪನವನ್ನು ಮೇಲಿನ ವಿಧಾನವನ್ನು ಅನುಸರಿಸಿ ಮಾಡಬಹುದಾಗಿದೆ.

### 3. ಗಳಿಕೆ ಅನುಪಾತ

ಮ್ಯಾಕ್ ಗ್ವೆನ್ ಮತ್ತು ಪೀಟರ್ಸ್‌ರವರ ಪ್ರಕಾರ ಕಲಿಯಲು ಸಾಧ್ಯವಿರುವ ಪ್ರಮಾಣ ಮತ್ತು ಕಲಿತ ಪ್ರಮಾಣದ ನಡುವಿನ ಗಳಿಕಾ ಅನುಪಾತವು ಒಂದು ಕಾರ್ಯಕ್ರಮ ಪರಿಣಾಮಕತೆಯ ಅತ್ಯುತ್ತಮ ಅರ್ಹತೆಯಾಗಿದೆ. ಗಳಿಕಾ ಅನುಪಾತವನ್ನು ಕೆಳಗಿನ ಸೂತ್ರದ ಸಹಾಯದಿಂದ ಕಂಡು ಹಿಡಿಯಬಹುದಾಗಿದೆ.

$$\text{ಗಳಿಕಾ ಅನುಪಾತ} = \frac{\text{(ಅಂತಿಮ ಪರೀಕ್ಷೆ ಅಂಕ – ಪೂರ್ವ ಪರೀಕ್ಷೆ ಅಂಕ) ದ ಸರಾಸರಿ}}{\text{(ಒಟ್ಟು ಅಂಕಗಳು – ಪೂರ್ವ ಪರೀಕ್ಷೆ ಅಂಕ) ದ ಸರಾಸರಿ}}$$

**ಉದಾಹರಣೆ:**

ಅಂತಿಮ ಪರೀಕ್ಷೆಯ ಸರಾಸರಿ 46

ಪೂರ್ವ ಪರೀಕ್ಷೆಯ ಸರಾಸರಿ 12

ಒಟ್ಟು ಅಂಕ ಸರಾಸರಿ 50 ಆಗಿದ್ದರೆ

$$\text{ಗಳಿಕಾ ಅನುಪಾತ} = \frac{46 - 12}{50 - 12} = \frac{34}{38} = \frac{17}{19}$$

ಅಂದರೆ, ವಿದ್ಯಾರ್ಥಿಯು ಕಲಿಯಲು ಸಾಧ್ಯವಿರುವ 19 ಅಂಶಗಳಲ್ಲಿ 17 ಅಂಶಗಳನ್ನು ಕಲಿತಿರುವನು.

### 4. ಕಾರ್ಯನಿರ್ವಹಣೆ ಮಟ್ಟ

ಕ್ರಮಾನುಗತ ಬೋಧನಾ ಸಾಮಗ್ರಿಯನ್ನು ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸಲು ಉಪಯೋಗಿಸಲಾಗುತ್ತದೆ. ಬೋಧನಾ ಉದ್ದೇಶಗಳನ್ನು ವಿದ್ಯಾರ್ಥಿಗಳ ಸಾಧನೆ ಕಾರ್ಯನಿರ್ವಹಣೆಯ ರೂಪದಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಈ ಉದ್ದೇಶಕ್ಕಾಗಿ ಹಲವು ಸಾಧನಗಳನ್ನು ಉಪಯೋಗಿಸಲಾಗುತ್ತಿದ್ದು, ಅವುಗಳಲ್ಲಿ ಕಾರ್ಯ ನಿರ್ವಹಣೆಯ ಮಟ್ಟವು ಅತ್ಯಂತ ಸರಳವಾಗಿದೆ. ಈ ವಿಧಾನದಲ್ಲಿ ಅಂತಿಮ ಪರೀಕ್ಷೆಯ ಸರಾಸರಿಯನ್ನು ತೆಗೆದುಕೊಂಡು ಶತಾಂಶದಲ್ಲಿ ಪರಿವರ್ತಿಸಲಾಗುತ್ತದೆ. ಒಂದು ಉತ್ತಮ ಕಾರ್ಯಕ್ರಮವು ಸರಾಸರಿ ಶೇ. 75 ಸಾಧನೆ ಹೊಂದಿರಬೇಕಾಗುತ್ತದೆ.

**ಉದಾಹರಣೆ:** ಒಂದು ಅಂತಿಮ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸರಾಸರಿ ಶೇ. 78 ಆಗಿದೆ. ಇದು ಶೇ. 75 ಅರ್ಹತಾ ಮಟ್ಟಕ್ಕಿಂತ ಹೆಚ್ಚಾಗಿದ್ದು, ಕಾರ್ಯಕ್ರಮವು ಪರಿಣಾಮಕಾರಿಯಾಗಿದೆ ಎಂಬುದನ್ನು ಸೂಚಿಸುತ್ತದೆ.

**ಮಿತಿಗಳು**

ಒಂದು ಕಾರ್ಯಕ್ರಮವನ್ನು ಮೌಲ್ಯಮಾಪನ ಮಾಡುವಾಗ ಕೆಳಗಿನ ಅಂಶಗಳನ್ನು ಗಮನಿಸಬೇಕು.

1. ಕಾರ್ಯಕ್ರಮದ ಆಂತರಿಕ ಮತ್ತು ಬಾಹ್ಯ ಮಾನಕಗಳನ್ನು ವಿಶ್ಲೇಷಿಸಲು ವಿಶ್ವಸನೀಯ ಮತ್ತು ಪ್ರಾಯೋಗಿಕ ದತ್ತಾಂಶಗಳನ್ನು ಉಪಯೋಗಿಸಬೇಕು.
2. ಕಾರ್ಯಕ್ರಮ ಮೌಲ್ಯಮಾಪನವು ವೈಯಕ್ತಿಕ ಪಕ್ಷಪಾತದಿಂದ ಮುಕ್ತವಾಗಿರಬೇಕು.
3. ನಿಕಷ ಪರೀಕ್ಷೆಯು ಸಮಂಜಸ ಮತ್ತು ವಿಶ್ವಸನೀಯವಾಗಿರಬೇಕು.
4. ಕಾರ್ಯಕ್ರಮದ ಪರಿಣಾಮವನ್ನು ನಿರ್ಧರಿಸಲು ಆಂತರಿಕ ಮತ್ತು ಬಾಹ್ಯ ಮಾನಕಗಳೆರಡನ್ನೂ ಗಣನೆಗೆ ತೆಗೆದುಕೊಳ್ಳಬೇಕು.

–ಜ.ಗು.ರೊ.

Digitised by Bharatavani, CIIL

# ರ

## ರಕ್ಷಣಾ ತಂತ್ರಗಳು

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಅನೇಕ ಸನ್ನಿವೇಶಗಳನ್ನು ಎದುರಿಸುತ್ತಾನೆ. ಅವುಗಳಲ್ಲಿ ಕೆಲವು ಮುದಕೊಡುತ್ತವೆ. ಮತ್ತೆ ಕೆಲವು ಅತ್ಯಂತ ಸಂತೋಷವನ್ನುಂಟುಮಾಡುತ್ತವೆ. ಇನ್ನೂ ಕೆಲವು ಮತ್ತೊಬ್ಬರೊಡನೆ ಹೇಳಿಕೊಳ್ಳಲಾಗದಷ್ಟು ಖುಷಿಯನ್ನು ಕೊಡುವಂತಹವೂ ಉಂಟು. ಇದಕ್ಕೆ ಬದಲಾಗಿ ಮತ್ತೆ ಕೆಲವು ಸನ್ನಿವೇಶಗಳು, ಅನುಭವಗಳು ಮನುಷ್ಯನಿಗೆ ಸಹಿಸಲು ಕಷ್ಟವಾದ, ಬೇಸರ ಅಥವಾ ನೋವನ್ನು ಉಂಟುಮಾಡುವಂತಹವು ಆಗಿರಬಹುದು. ಇಂತಹ ಸನ್ನಿವೇಶಗಳೇ ಮಾನವನು ಎದುರಿಸುವ ಸಮಸ್ಯಾತ್ಮಕವಾದ ಸನ್ನಿವೇಶಗಳು. ಈ ಸನ್ನಿವೇಶಗಳಲ್ಲಿ ಯಾರೇ ಆಗಲಿ ಒಂದು ರೀತಿಯ ಭಯ, ಆತಂಕ, ಅಸಹಾಯಕತೆ, ಗಾಬರಿ, ಉದ್ವಿಗ್ನತೆ, ತುಮುಲ, ಸಂದಿಗ್ಧತೆ ಇತ್ಯಾದಿ ಸ್ಥಿತಿಗಳಲ್ಲಿ ಸಿಲುಕಿಕೊಳ್ಳುತ್ತಾರೆ. ಇದು ಅತ್ಯಂತ ಸಹಜವೂ ಹೌದು. ಇಂತಹ ಸನ್ನಿವೇಶಗಳು ಪ್ರತಿ ವ್ಯಕ್ತಿಯ ಜೀವನದಲ್ಲಿ ಒಂದಲ್ಲ ಒಂದು ಹಂತದಲ್ಲಿ ಎದುರಾಗಿಯೇ ಆಗುತ್ತವೆ. ಈ ಎಲ್ಲ ಸಂದರ್ಭಗಳಲ್ಲಿ ಅವರಿವರೆನ್ನದೆ ಎಲ್ಲರಲ್ಲಿಯೂ ಇರುವ ಒಂದು ವಿಶಿಷ್ಟವಾದ ಮಾನಸಿಕ ಶಕ್ತಿಯು ಅವುಗಳನ್ನು ಎದುರಿಸಲು, ಅದರಿಂದ ವಿಮುಕ್ತರಾಗಿ ಸಹಜಸ್ಥಿತಿಯಲ್ಲೇ ಜೀವನ ಮಾಡಲು ಅನುವು ಮಾಡಿಕೊಡಲು ಕಾರ್ಯಪ್ರವೃತ್ತವಾಗುತ್ತವೆ. ಇಂತಹ ಸನ್ನಿವೇಶಗಳಿಂದ ಮನಸ್ಸಿಗೆ ಉಂಟಾಗುವ ಆಘಾತಗಳು, ವೇದನೆಗಳಿಂದ ಮಾನವನನ್ನು ವಿಮುಕ್ತಿಗೊಳಿಸುತ್ತದೆ. ಈ ಸ್ಥಿತಿಯಲ್ಲಿ ಮನಸ್ಸಿನ ಅಜಾಗ್ರತ ಭಾಗವೊಂದು ಜಾಗ್ರತವಾಗಿ ಕೆಲವು ವಿಶಿಷ್ಟ ರೀತಿಯ ವರ್ತನೆಗಳನ್ನು ಮೂಡಿಸುತ್ತದೆ. ಪರಿಸ್ಥಿತಿಯೊಂದಿಗೆ ಸಮತೋಲನವನ್ನು ಏರ್ಪಡಿಸುತ್ತದೆ. ಇದರಿಂದಾಗಿ ವ್ಯಕ್ತಿಗೆ ತಾತ್ಕಾಲಿಕವಾಗಿಯಾದರೂ ನೆಮ್ಮದಿ ಸಿಗುತ್ತದೆ. ಈ ರೀತಿ ಸದ್ಯದ ಮಾನಸಿಕ ಅಸಮತೋಲನವನ್ನು ಅಥವಾ ವಿಶಿಷ್ಟ ಸನ್ನಿವೇಶಗಳಲ್ಲಿ ವ್ಯಕ್ತಿಗೆ ಉಂಟಾಗಿರುವ ನಿರಾಶೆ, ದ್ವಂದ್ವ, ಒತ್ತಡ, ದುಃಖ ಮತ್ತು ಸಂಕಷ್ಟಗಳಿಂದ ತಪ್ಪಿಸಿಕೊಳ್ಳಲು ವ್ಯಕ್ತಿಯಲ್ಲೇ ಮಾನಸಿಕವಾಗಿ ಇರುವ ತಂತ್ರಗಳು 'ರಕ್ಷಣಾ ತಂತ್ರಗಳು' ಎನಿಸಿಕೊಳ್ಳುತ್ತವೆ. ಸದ್ಯದ ಸ್ಥಿತಿಯಿಂದ ತಪ್ಪಿಸಿಕೊಳ್ಳುವ ತಂತ್ರಗಳು ಇವುಗಳಾಗಿರುವುದರಿಂದ ಇವುಗಳನ್ನು 'ಪಲಾಯನ ತಂತ್ರಗಳು' ಎಂದೂ, ಪರಿಸ್ಥಿತಿಗೆ ಸಮಾಯೋಜನೆ ಮಾಡಿಕೊಳ್ಳಲು ಇವು ಸಹಾಯ ಮಾಡುವುದರಿಂದ ಇವುಗಳನ್ನು 'ಸಮಾಯೋಜನ ತಂತ್ರಗಳು' (Adjustment Mechanisms) ಎಂದೂ ಕರೆಯುವುದುಂಟು.

ಈ ಎಲ್ಲ ತಂತ್ರಗಳೂ ಮಾನಸಿಕ ತಂತ್ರಗಳು. ಆತಂಕವನ್ನು ಕಡಿಮೆಮಾಡಿಕೊಳ್ಳುವುದು ಇವುಗಳ ಉದ್ದೇಶ. ಇವು ಮೊದಲಿಗೆ ಸಿಗ್ಮಂಡ್ ಫ್ರಾಯ್ಡ್‌ನಿಂದ ಅವನ ಮನೋವಿಶ್ಲೇಷಣಾತ್ಮಕ ಸಿದ್ಧಾಂತದ ಅಂಗವಾಗಿ ಚರ್ಚಿತವಾದವು. ಅನಂತರ ಇವುಗಳನ್ನು ಕುರಿತ ವಿಶ್ಲೇಷಣೆಯನ್ನು ಅವನ ಮಗಳಾದ ಅನ್ನಾ ಫ್ರಾಯ್ಡ್‌ಳು ಮುಂದುವರಿಸಿದಳು. ಆಲ್ಫ್ರೆಡ್ ಆಡ್ಲೆಡ್ ಮೊದಲಾದವರು ಇವರು ಗುರುತಿಸಿರದ ಹಲವಾರು ರಕ್ಷಣಾ ತಂತ್ರಗಳನ್ನು ಮುಂದೆ ಗುರುತಿಸಿದರು. ಇವು ವ್ಯಕ್ತಿಯನ್ನು ಮಾನಸಿಕವಾದ ನೋವು ಅಥವಾ ಆತಂಕದಿಂದ ರಕ್ಷಿಸುತ್ತವೆ ಎಂಬುದು ಅವರ ಅಭಿಪ್ರಾಯ. ಸಿಗ್ಮಂಡ್ ಫ್ರಾಯ್ಡ್ ಮತ್ತು ಅವನ ಅನುಯಾಯಿಗಳ ಪ್ರಕಾರ ಮನಸ್ಸು ಎಂಬುದೊಂದು ಯುದ್ಧರಂಗ. ಇಲ್ಲಿ ಮನಸ್ಸಿನಲ್ಲೇ ಉದ್ಭವಗೊಳ್ಳುವ ವಿವಿಧ ಭಾವನೆಗಳ ನಡುವೆ ಯುದ್ಧ ನಡೆಯುತ್ತಿರುತ್ತದೆ. ತುಡಿತಗಳು, ವಾಸ್ತವಿಕತೆಯ ಒತ್ತಡ ಮತ್ತು ಸಮಾಜದ ಮಾನಕಗಳು–ಇವು ಮೂರೂ ಈ ಯುದ್ಧದಲ್ಲಿ ಪಾಲ್ಗೊಳ್ಳುತ್ತವೆ. ಫ್ರಾಯ್ಡ್ ಹೇಳುವಂತೆ ವ್ಯಕ್ತಿತ್ವವು ಮೂರು ಪ್ರಧಾನ ವ್ಯವಸ್ಥೆಗಳಿಂದ ಸಂರಚನೆಯಾಗಿರುತ್ತದೆ. ಅವುಗಳು ಇದ್, ಈಗೊ ಮತ್ತು ಸೂಪರ್ ಈಗೊ. ಇವುಗಳ ಪರಸ್ಪರ ಅನುವರ್ತನೆಯ ಪರಿಣಾಮವೇ ವ್ಯಕ್ತಿಯ ಗೋಚರವಾಗುವ ವರ್ತನೆ. ಇದ್, ಎಂಬುದು ಜೈವಿಕವಾದುದು, ನೀತಿರಹಿತವಾದುದು. ಇದು ಸುಖಾಪೇಕ್ಷೆಯ ಜೈವಿಕ ತತ್ವಗಳಿಗೆ ಅನುರೂಪವಾಗಿ ಕಾರ್ಯ ನಿರ್ವಹಿಸುತ್ತದೆ. ಅಂದರೆ ವ್ಯಕ್ತಿಗಳು ಯಾವಾಗಲೂ ನೋವನ್ನು ಕ್ಷೀಣಗೊಳಿಸಿ, ಸುಖವನ್ನು ವೃದ್ಧಿಗೊಳಿಸಿಕೊಳ್ಳಲು ಬಯಸುವಂತಹ ಪ್ರವೃತ್ತಿ ಇದು. ಈಗೊ ಭಾಗಶಃ ಸುಖಾಪೇಕ್ಷೆಯ ತತ್ವಗಳ ಮೇಲೆ ಕಾರ್ಯ ನಿರ್ವಹಿಸಿದರೂ ವಾಸ್ತವಿಕತೆಯ ತತ್ವಗಳನ್ನು ಅನುಸರಿಸಿ ಅಭಿವ್ಯಕ್ತಿಗೊಳಿಸುತ್ತದೆ. ಸೂಪರ್ ಈಗೊ ವ್ಯಕ್ತಿಯ ಆಂತರೀಕರಣಗೊಂಡ ನೈತಿಕ ಪ್ರಜ್ಞೆ; ಅತಿ ಮಾನುಷತ್ವಗುಣ, ಸಾಂಪ್ರದಾಯಿಕ ಮೌಲ್ಯಗಳು ಹಾಗೂ ಆದರ್ಶಗಳಿಗೆ ಮಹತ್ವ ನೀಡುತ್ತದೆ. ಫ್ರಾಯ್ಡ್ ಹೇಳುವಂತೆ 'ಇದ್', 'ಈಗೊ' ಮತ್ತು 'ಸೂಪರ್ ಈಗೊ' ಇವುಗಳಲ್ಲಿ 'ಇದ್' ಮತ್ತು 'ಸೂಪರ್ ಈಗೊ'ಗಳು ಉಂಟುಮಾಡುವ ಆತಂಕವನ್ನು ನಿಯಂತ್ರಿಸಿಕೊಳ್ಳಲು 'ಈಗೊ' ಹಲವಾರು ರಕ್ಷಣಾ ತಂತ್ರಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಇವುಗಳನ್ನು ನಾವು ಉದ್ದೇಶಪೂರ್ವಕವಾಗಿ ಬಳಸುವೆವಾದರೂ ಹಲವಾರು ಸನ್ನಿವೇಶಗಳಲ್ಲಿ ಇವು ನಮಗೆ ಅರಿವಿಲ್ಲದೆಯೇ ಬಳಸಲ್ಪಡುತ್ತವೆ. ಅವು ಮೂಲತಃ ಆರೋಗ್ಯಕರ ವಲ್ಲದಿದ್ದರೂ ಅವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಅಪೇಕ್ಷಿತ ರೀತಿಯಲ್ಲಿ ಕೆಲಸಮಾಡಲು ಅಗತ್ಯವಾದ ಹೊಂದಾಣಿಕೆಗೆ ಸಹಾಯಮಾಡುತ್ತವೆ. ಆದರೆ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಇವುಗಳನ್ನು ಅತಿಯಾಗಿ ಬಳಸಿದಾಗ ಇವು ಮತ್ತೂ ಹೆಚ್ಚಿನ ಸಮಸ್ಯೆಗಳನ್ನು ಉಂಟುಮಾಡುತ್ತವೆ. ಇಂತಹ ಅನೇಕ ರಕ್ಷಣಾ ತಂತ್ರಗಳನ್ನು ಮನೋವಿಜ್ಞಾನಿಗಳು ಗುರುತಿಸಿದ್ದಾರೆ. ಈ ರಕ್ಷಣಾ ತಂತ್ರಗಳ ಸಂಖ್ಯೆ ಇದಕ್ಕೆ ಸಂಬಂಧಿಸಿದ ಬೇರೆ ಬೇರೆ ಅಧ್ಯಯನಗಳಲ್ಲಿ ಬೇರೆ ಬೇರೆಯಾಗಿದೆ. ಸಾಮಾನ್ಯವಾಗಿ ಬಹಳಷ್ಟು ತಜ್ಞರು ಗುರುತಿಸಿರುವ ರಕ್ಷಣಾ ತಂತ್ರಗಳನ್ನೂ ಅವುಗಳ ಸ್ವರೂಪವನ್ನೂ ಇಲ್ಲಿ ವಿವರಿಸಲಾಗಿದೆ.

**ನಿರಾಕರಣೆ (Denial):** ಇದು ಅತ್ಯಂತ ಪ್ರಚಲಿತವಾದ ರಕ್ಷಣಾ ತಂತ್ರ. ವಾಸ್ತವವನ್ನು ಅಥವಾ ಅತಿ ಸ್ಪಷ್ಟವಾದ ಸನ್ನಿವೇಶಗಳನ್ನು, ಎದುರಿಸಲಾಗದ ಸನ್ನಿವೇಶಗಳನ್ನು ವಿವರಿಸಲು ಬಳಸುವಂತಹುದು. ಏನೋ ಆಗುತ್ತಿದೆ ಅಥವಾ ಆಗಿದೆ ಎಂಬುದನ್ನು ಸಾರಾಸಗಟಾಗಿ ನಿರಾಕರಿಸುವ ಸ್ಥಿತಿ ಇದು. ಮದ್ಯಪಾನ ವ್ಯಸನಿಗಳು ಈ ರಕ್ಷಣಾ ತಂತ್ರಕ್ಕೆ ಮೊರೆಹೋಗುವುದು ಸಾಮಾನ್ಯ. ಅವರು ತಮಗೆ ಸಮಸ್ಯೆ ಇದೆ ಎಂದು ಒಪ್ಪಿಕೊಳ್ಳುವುದಕ್ಕೆ ತಯಾರಿರುವುದಿಲ್ಲ. ಹೀಗೆಯೇ ದಾರುಣವಾದ ಘಟನೆಗಳನ್ನು ಅನುಭವಿಸಿದವರು ಆ ಘಟನೆ ನಡೆಯಿತು ಎಂದು ಒಪ್ಪಿಕೊಳ್ಳುವುದಿಲ್ಲ. ಹೀಗೆ ಎದುರಿಸಲು ಕಷ್ಟಸಾಧ್ಯವಾದ ಸನ್ನಿವೇಶಗಳಿಂದ ವ್ಯಕ್ತಿಯನ್ನು ರಕ್ಷಿಸಲು 'ನಿರಾಕರಣೆ' ಬಳಕೆಯಾಗುತ್ತದೆ. ಇದು ಆತಂಕ ನೋವುಗಳಿಂದ ವ್ಯಕ್ತಿಯನ್ನು ರಕ್ಷಿಸುತ್ತದೆಯಾದರೂ ಅತಿ ಹೆಚ್ಚಿನ ಮಾನಸಿಕ ಶಕ್ತಿಯ ಹೂಡಿಕೆಯನ್ನು ಇದು ಬಯಸುತ್ತದೆ. ಇದರಿಂದಾಗಿ ಇತರ ರಕ್ಷಣಾ ತಂತ್ರಗಳೂ ಜಾಗೃತವಾಗುತ್ತವೆ.


Digitised by Bharatavani, CIIL

**ಅಡಗಿಸುವಿಕೆ, (ದಮನ) (Repression):** ಮತ್ತೊಂದು ಪರಿಚಿತ ರಕ್ಷಣಾ ತಂತ್ರವಿದು. ವಿಷಯಗಳನ್ನು ಜಾಗೃತವಾದ ಅರಿವಿನ ನೆನಪಿನ ಹೊರಗೆ ಇಡಲು ಇದು ಕ್ರಿಯಾಶೀಲವಾಗುತ್ತದೆ. ಈ ನೆನಪುಗಳು ತಾತ್ಕಾಲಿಕವಾಗಿ ಮಾಸಿದ ಹಾಗೆ ಕಂಡರೂ ಅವು ಮಾಯವಾಗುವುದಿಲ್ಲ. ಅದು ವ್ಯಕ್ತಿಯ ವರ್ತನೆಯ ಮೇಲೆ ಪರಿಣಾಮ ಬೀರುತ್ತಲೇ ಇರುತ್ತದೆ. ಉದಾಹರಣೆಗೆ, ಚಿಕ್ಕ ಮಗುವಾಗಿದ್ದಾಗ ಅನುಭವಿಸಿದ ದಂಡನೆ, ಶಿಕ್ಷೆ ಇವುಗಳನ್ನು ಅಡಗಿಸಿಡಲು ಪ್ರಯತ್ನಪಟ್ಟರೂ ಅದು ಮುಂದೆ ಸಂಬಂಧಗಳನ್ನು ಬೆಳೆಸಿಕೊಳ್ಳುವ ಸಂದರ್ಭದಲ್ಲಿ ತೊಂದರೆಕೊಡಬಹುದು. ತಾನು ಇಷ್ಟಪಟ್ಟ ಹುಡುಗ ಹುಡುಗಿಯರ ವಿಷಯವನ್ನು ಹೇಳದಿರುವುದು, ಅತಿಯಾಗಿ ಇಷ್ಟಪಟ್ಟುದನ್ನು ಅಭಿವ್ಯಕ್ತಿಪಡಿಸದೇ ಇರುವುದು ಇವೆಲ್ಲವೂ ಒಂದು ರೀತಿ ಅಡಗಿಸುವಿಕೆಯ ತಂತ್ರಗಳೇ.

**ಸ್ಥಾನಪಲ್ಲಟ (Displacement):** ಆಫೀಸಿನಲ್ಲಿ ಅನುಭವಿಸಿದ ಕ್ಲೇಶಗಳೆಲ್ಲವನ್ನೂ ಮನೆಗೆ ಹೋಗಿ ಹೆಂಡತಿ ಮಕ್ಕಳ ಮೇಲೆ ತೀರಿಸುವುದು ಅತಿ ಸಾಮಾನ್ಯ. ಇದೇ ಸ್ಥಾನಪಲ್ಲಟ. ಇದು ಅತಿ ಸಾಮಾನ್ಯವಾದ ಅಹಂ ರಕ್ಷಣಾ ತಂತ್ರ. ವ್ಯಕ್ತಿ ತನ್ನ ಕೋಪತಾಪಗಳನ್ನು, ಅಸಹಾಯಕತೆಗಳನ್ನು ಕಡಿಮೆ ಅಪಾಯಕಾರಿಯಾದ ಅಥವಾ ಕಡಿಮೆ ಆತಂಕಕಾರಿಯಾದ ವಸ್ತು ಅಥವಾ ವ್ಯಕ್ತಿಗಳ ಮೇಲೆ ತೀರಿಸಿಕೊಳ್ಳುವುದು ಈ ತಂತ್ರದ ಸ್ವರೂಪ. ನೇತ್ಯಾತ್ಮಕ ಪರಿಣಾಮಗಳನ್ನುಂಟುಮಾಡುವ ರೀತಿಯಲ್ಲಿ ಕೋಪ ತೋರಿಸುವುದರ ಬದಲಿಗೆ ವ್ಯಕ್ತಿಗೆ ಅಷ್ಟೇನೂ ಗಹನವೆನಿಸದ ಪರಿಣಾಮಗಳನ್ನುಂಟುಮಾಡುವ ತರದಲ್ಲಿ ಕೋಪ ತೋರಿಸುವ ವರ್ತನೆ ಇದು. ಕಛೇರಿಯಲ್ಲಿ ಬಾಸ್ ಬೈದುದಕ್ಕೆ ಅವನಿಗೇ ಬೈಯುವುದರಿಂದಾಗುವ ಪರಿಣಾಮಗಳು ಮನಸ್ಸಿಗೆ ಬಂದು ಅದರಿಂದಾಗಿ ಹಾಗೆ ಮಾಡದೆ ಅದೇ ಕೋಪವನ್ನು ಮನೆಗೆ ಬಂದು ಹೆಂಡತಿ, ಮಕ್ಕಳು ಅಥವಾ ಸಾಕುಪ್ರಾಣಿಗಳು ಇವುಗಳ ಮೇಲೆ ತೋರಿಸುವುದು. ಇದನ್ನು 'ಅತ್ತೆ ಮೇಲಿನ ಕೋಪ ಕೊತ್ತಿ ಮೇಲೆ' ಎಂದು ಹೇಳುವುದುಂಟು.

**ಉದಾತ್ತೀಕರಣ (Sublimation):** ಒಪ್ಪಿಗೆಯಿಲ್ಲದ ತುಡಿತಗಳನ್ನು ಹೆಚ್ಚು ಅಂಗೀಕೃತವಾದ ವರ್ತನೆಗಳಾಗಿ ಪರಿವರ್ತಿಸುವುದರ ಮೂಲಕ ವ್ಯಕ್ತಿ ನೆಮ್ಮದಿ ಸಂತೋಷಗಳನ್ನು ಕಂಡುಕೊಳ್ಳುವುದು ಉದಾತ್ತೀಕರಣ. ಅತಿ ಹೆಚ್ಚು ಕೋಪ ಇರುವ ವ್ಯಕ್ತಿ ತನ್ನ ಕೋಪವನ್ನು ಹೊರಹಾಕುವುದಕ್ಕಾಗಿ ಕುಸ್ತಿ ಒದೆತವನ್ನು ಬಳಸಿಕೊಳ್ಳುವುದು ಇದಕ್ಕೆ ಒಂದು ಉದಾಹರಣೆ. ಫ್ರಾಯ್ಡ್ ಉದಾತ್ತೀಕರಣವನ್ನು ವ್ಯಕ್ತಿಯ ಪ್ರಬುದ್ಧತೆಯ ಸಂಕೇತ ಎಂದೂ ಅದು ಸಾಮಾಜಿಕವಾಗಿ ಒಪ್ಪಿಗೆಯಾಗುವ ರೀತಿಯಲ್ಲಿ ವ್ಯಕ್ತಿ ನಡೆದುಕೊಳ್ಳಲು ಸಹಾಯಮಾಡುತ್ತದೆ ಎಂದೂ ಅಭಿಪ್ರಾಯಪಟ್ಟಿದ್ದಾನೆ. ಮಕ್ಕಳಿಲ್ಲದವರು ಮಕ್ಕಳನ್ನು ದತ್ತು ತೆಗೆದುಕೊಳ್ಳುವುದು, ಯುದ್ಧದಲ್ಲಿ ತೀರಿಕೊಂಡ ಮಗನ ನೆನಪಿನಲ್ಲಿ ಸೇವಾ ಸಂಸ್ಥೆಯನ್ನು ನಡೆಸುವುದು ಇವೆಲ್ಲವು ಉದಾತ್ತೀಕರಣಕ್ಕೆ ಉದಾಹರಣೆಗಳು. ಲೈಂಗಿಕ ಬಯಕೆಗಳು ಹಾಗೂ ತುಡಿತಗಳನ್ನು ಹೇಗೆ ಸೃಜನಶೀಲ ರಚನಾತ್ಮಕ ವರ್ತನೆಗಳಾಗಿ ಬದಲಿಸಬಹುದು ಎಂಬುದನ್ನು ಫ್ರಾಯ್ಡ್ ವಿವರಿಸಿದ್ದಾನೆ.

**ಪ್ರಕ್ಷೇಪಣೆ (Projection):** ನಮಗೆಲ್ಲರಿಗೂ ನಾವು ಹೇಗಿರಬೇಕೆಂಬ ಚಿತ್ರವಿರುತ್ತದೆ. ಇದನ್ನೇ ಫ್ರಾಯ್ಡ್ 'ಅಹಂ ಆದರ್ಶ' ಎಂದು ಕರೆಯುತ್ತಾನೆ. ಕೆಲವು ಬಾರಿ ನಮ್ಮ ಮತ್ತು ಬೇರೆಯವರ ಗುಣಗಳು, ಭಾವನೆಗಳು ನಮ್ಮ ಆದರ್ಶಗಳೊಂದಿಗೆ ಹೊಂದಿಕೊಳ್ಳುವುದಿಲ್ಲ. ನಮಗೆ ಇಷ್ಟವಿಲ್ಲದ ಈ ಭಾವನೆಗಳನ್ನು ನಾವು ಬೇರೊಬ್ಬರಿಗೆ ಆರೋಪಿಸಿದಾಗ ಅದನ್ನು 'ಪ್ರಕ್ಷೇಪಣ' ಎಂದು ಕರೆಯುತ್ತೇವೆ. ಈ ರೀತಿಯಲ್ಲಿ ಆ ಗುಣಗಳ ಸ್ವಾಮಿತ್ವವನ್ನು ಪಡೆಯದೇ ಮತ್ತೊಬ್ಬರು ಆ ಗುಣಗಳನ್ನು ಹೊಂದಿರುವುದರ ಬಗ್ಗೆ ಟೀಕೆಮಾಡಲು ಹಕ್ಕು ಪಡೆದವರಂತೆ ವರ್ತಿಸುತ್ತೇವೆ. ಇತರರನ್ನು ಆ ಗುಣಗಳಿಗಾಗಿ ಹಳಿಯುತ್ತೇವೆ. ಈ ರೀತಿಯಲ್ಲಿ ನಮ್ಮಲ್ಲಿರುವ ಅನಪೇಕ್ಷಿತವಾದ ಅಥವಾ ಒಪ್ಪಿಗೆ ಇಲ್ಲದ ಗುಣಗಳನ್ನು, ಭಾವನೆಗಳನ್ನು ಮತ್ತೊಬ್ಬರಲ್ಲಿ ಪತ್ತೆಹಚ್ಚಿ ದೂಷಿಸಿ ಸಮಾಧಾನಪಟ್ಟುಕೊಳ್ಳುವುದೇ ಈ ರಕ್ಷಣಾ ತಂತ್ರ. ಉದಾಹರಣೆಗೆ ಯಾರನ್ನಾದರೂ ಕಂಡರೆ ನಮಗೆ ಇಷ್ಟವಿಲ್ಲದಿದ್ದರೆ ಅವರಿಗೂ ನಮ್ಮನ್ನು ಕಂಡರೆ ಇಷ್ಟವಿಲ್ಲ ಎಂದುಕೊಳ್ಳುವುದು. ತುಡಿತಗಳನ್ನು, ಆಸೆಗಳನ್ನು ಹೊರಹಾಕಲು ಸಹಾಯ ಮಾಡುವುದರ ಮೂಲಕ ಇದು ವ್ಯಕ್ತಿಯ ಆತಂಕವನ್ನು ಕಡಿಮೆಮಾಡುತ್ತದೆ. ಅನ್ಯಾಯ ಮಾಡುವ ಮನುಷ್ಯ ತನ್ನ ಸುತ್ತಮುತ್ತ ಇರುವವರಲ್ಲೂ ಅನ್ಯಾಯ ಮಾಡುವ ವರ್ತನೆಯನ್ನೇ ಗಮನಿಸುತ್ತಿರುತ್ತಾನೆ. ಇತರರನ್ನು ದೂಷಿಸುವುದರ ಮೂಲಕ ತನ್ನ ಕೊರತೆಯ ಬಗ್ಗೆ ಸಮಾಧಾನ ಪಟ್ಟುಕೊಳ್ಳುತ್ತಾನೆ. ಚೆನ್ನಾಗಿ ಪಾಠ ಮಾಡಲು ಆಗದಿರುವ ಅಧ್ಯಾಪಕ ಮಕ್ಕಳನ್ನು ದೂಷಿಸುತ್ತಾನೆ. 'ಕುಣಿಯಲಾರದವಳು ನೆಲ ಡೊಂಕು ಅಂದಳಂತೆ' ಎಂಬ ಗಾದೆ ಇದನ್ನೇ ಹೇಳುತ್ತದೆ.

**ಪ್ರಕ್ಷೇಪಣಾತ್ಮಕ ಗುರುತಿಸಿಕೊಳ್ಳುವಿಕೆ (Projective Identification):** ಪ್ರಕ್ಷೇಪಣ ಎಂಬುದು ನಮಗೆ ಗೊತ್ತಿಲ್ಲದೆಯೇ ಆಗುವಂತಹುದು. ಈ ಪ್ರಕ್ಷೇಪಣಕ್ಕೆ ಒಳಗಾದವರು ತಮ್ಮದೇ ಸಹಿಸಲಾಗದ ಗುಣಗಳನ್ನು ಮತ್ತೊಬ್ಬರಿಗೆ ಆರೋಪಿಸುತ್ತಿದ್ದಾರೆ ಎಂಬುದು ತಿಳಿದಿರುವುದು ಅಪರೂಪ. ಕೆಲವೊಮ್ಮೆ ಪ್ರಕ್ಷೇಪಿಸಿದ ವಿಷಯ ವ್ಯಕ್ತಿಯ ಮನಸ್ಸಿನಲ್ಲಿ ಆಳವಾಗಿ ಉಳಿದುಕೊಂಡುಬಿಡುತ್ತದೆ. ಇದು ಒಂದು ರೀತಿಯ ತುಮುಲವನ್ನು ಉಂಟುಮಾಡುತ್ತದೆ. ಒಂದು ಕಡೆ ಪ್ರಕ್ಷೇಪಿಸಿದ ಅಂಶಗಳು ತನ್ನವೇ ಎಂದು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ವ್ಯಕ್ತಿ ಇರುವುದಿಲ್ಲ. ಮತ್ತೊಂದು ಕಡೆ ಅದನ್ನು ತಿಳಿಯದೆ ವಿಧಿ ಇಲ್ಲ. ಅದನ್ನು ತನ್ನ ಮನಸ್ಸಿನಿಂದ ಅಳಿಸಿಹಾಕಲು ಅಶಕ್ತನಾಗುತ್ತಾನೆ. ಹಾಗಾಗಿ ಅದನ್ನು ನಿರಾಕರಿಸುವ ಬದಲಿಗೆ ಅಸಂತೋಷಕರವಾದ ಮತ್ತು ಸ್ವೀಕಾರಾರ್ಹವಲ್ಲದ ನಡತೆಗಳು ಬೇರೆ ಯಾರಿಂದಾಗಿಯೋ ಆದುದು ಎಂದು ವಿವರಿಸುತ್ತಾನೆ. 'ಅವಳು ಹಾಗೆ ಮಾಡುವಂತೆ ಮಾಡಿದಳು' 'ಅವರು ನನ್ನ ಈ ನಡೆವಳಿಕೆಗೆ ಕಾರಣ' ಮುಂತಾಗಿ ವ್ಯಕ್ತಿ ತನ್ನ ನಡತೆಯನ್ನು ಸಮರ್ಥಿಸಿಕೊಳ್ಳುತ್ತಾನೆ.

**ಬೌದ್ಧೀಕರಣ (Intellectualization):** ಘಟನೆಗಳನ್ನು ಹೆಚ್ಚು ಪರಿಹಾರಾತ್ಮಕವಾಗಿ ಆಲೋಚಿಸುವುದರ ಮೂಲಕ ಆತಂಕವನ್ನು ಕಡಿಮೆ ಮಾಡಿಕೊಳ್ಳುವುದು ಈ ರಕ್ಷಣಾ ತಂತ್ರದ ಸ್ವರೂಪ. ಇದು ಸನ್ನಿವೇಶದ ಆತಂಕ, ಭಾವನಾತ್ಮಕ ಅಂಶಗಳನ್ನು ಸಮಸ್ಥಿತಿಯಲ್ಲಿ ನಿರ್ವಹಿಸಲು ಸಹಾಯಕವಾಗುತ್ತದೆ. ಉದಾಹರಣೆಗೆ, ಅತ್ಯಂತ ದಾರುಣವಾದ ರೋಗವನ್ನು ಅನುಭವಿಸುತ್ತಿರುವವರು ಆ ರೋಗದ ಎಲ್ಲ ಲಕ್ಷಣಗಳನ್ನೂ, ಕಾರಣಗಳನ್ನೂ ಕಂಡುಹಿಡಿದುಕೊಂಡು ಅದರಿಂದ ಸಾಧ್ಯವಾದಷ್ಟು ದೂರವಿರಲು ಪ್ರಯತ್ನಿಸುತ್ತಾರೆ.

**ತಾರ್ಕಿಕತೆ ಅಥವಾ ಸಂಯುಕ್ತೀಕರಣ (Rationalization):** ವ್ಯಕ್ತಿ ತಾರ್ಕಿಕವಾಗಿ ತನ್ನ ಕೊರತೆಗಳನ್ನು, ತಪ್ಪುಗಳನ್ನು ಸಮರ್ಥಿಸಿಕೊಳ್ಳುವ ರೀತಿ ಇದು. ಒಪ್ಪಿಗೆಯಿಲ್ಲದ ವರ್ತನೆಗಳನ್ನು ಭಾವನೆಗಳನ್ನು ಹೆಚ್ಚು ತಾರ್ಕಿಕವಾಗಿ ವಿವರಿಸುವುದು ಪ್ರಸ್ತುತಪಡಿಸುವುದು ಇದರ ಲಕ್ಷಣ. ಜೊತೆಜೊತೆಯಲ್ಲೇ ವರ್ತನೆಯ ನಿಜವಾದ ಕಾರಣಗಳನ್ನು ಮುಚ್ಚಿಡುವುದು. ಉದಾಹರಣೆಗೆ, ಪರೀಕ್ಷೆಯಲ್ಲಿ ಹೆಚ್ಚು ಅಂಕ ಬಾರದಿರುವಾಗ ತಾನು ಸರಿಯಾಗಿ ಸಿದ್ಧತೆ ನಡೆಸಲಿಲ್ಲ ಎಂದು ಹೇಳುವ ಬದಲಾಗಿ ಅಧ್ಯಾಪಕರು ಸರಿಯಾಗಿ ಹೇಳಿಕೊಡಲಿಲ್ಲ. ಹೆಚ್ಚು ಅಂಕಗಳು ಬರುವುದಾದರೂ ಹೇಗೆ ಎಂದು ಹೇಳುವುದು, ಶಾಲೆಗೆ ತಡವಾಗಿ ಬರಲು ಬಸ್ಸು ತಡವಾದುದು ಕಾರಣ ಎಂದು ಹೇಳುವುದು ಇತ್ಯಾದಿ. ತನ್ನ ವರ್ತನೆಯನ್ನು 'ಸರಿ' ಎಂದು ಸಾಧಿಸುವ ಪರಿ ಇದು. ಇಲ್ಲಿ ವ್ಯಕ್ತಿ ತನ್ನ

Digitised by Bharatavani, CIIL

ಕೊರತೆ, ಸೋಲಿಗೆ ಕೊಡುವ ಕಾರಣ ಅತಿ ತರ್ಕಬದ್ಧವಾಗಿಯೇ ಇರುತ್ತದೆ. ಇದರಲ್ಲಿ ಕೆಲವು ವೇಳೆ ತನಗೆ ದೊರೆಯದ್ದು ಬೆಲೆಯುಳ್ಳದ್ದಲ್ಲವೆಂದು ಹೇಳಬಹುದು. ದ್ರಾಕ್ಷಿ ದೊರೆಯದ ನರಿ ಅದು ಹುಳಿ ಎಂದು ಹೇಳಿದಹಾಗೆ ಇದನ್ನು ಹುಳಿದ್ರಾಕ್ಷಿ ಮನೋಭಾವ (Sour Grape Attitudes) ಎನ್ನುತ್ತಾರೆ. ಕೆಲವು ವೇಳೆ ತಾವು ಪಡೆದದ್ದು ದೋಷಯುಕ್ತವಾದರೂ ಅದು ಉಪಯುಕ್ತವಾದುದೇ ಎಂದು ಸಾಧಿಸಬಹುದು. ಇದನ್ನು ಸಿಹಿ ನಿಂಬೆ ಮನೋಭಾವ (Sweet Lemon Attitude) ಎನ್ನುತ್ತಾರೆ.

**ಪ್ರತ್ಯಾವರ್ತನೆ ಅಥವಾ ಪ್ರತಿಗಮನ (Regression):** ಅತಿ ಒತ್ತಡದ ಸನ್ನಿವೇಶಗಳು ಎದುರಾದಾಗ, ಅದನ್ನು ಎದುರಿಸಬಹುದಾದ ಇತ್ಯಾತ್ಮಕ ವರ್ತನೆಗಳ ಬದಲಿಗೆ, ವ್ಯಕ್ತಿಯ ಬೆಳವಣಿಗೆಯ ಹಿಂದಿನ ಹಂತದ ವರ್ತನೆಗಳಿಗೆ ಮೊರೆ ಹೋಗುವುದು ಈ ತಂತ್ರದ ಲಕ್ಷಣ. ವ್ಯಕ್ತಿಯ ಬೆಳವಣಿಗೆಯಲ್ಲಿ ಮನಶ್ಶಾಸ್ತ್ರಜ್ಞರು ಅನೇಕ ಹಂತಗಳನ್ನು ಗುರುತಿಸುತ್ತಾರೆ. ಈ ತಂತ್ರಕ್ಕೆ ಒಳಗಾಗುವವರು ಯಾವ ವರ್ತನೆಯನ್ನು ತೋರಿಸುತ್ತಾರೆ ಎಂಬುದು ಯಾವ ಹಂತದಲ್ಲಿ ಈ ರೀತಿಯ ಸಮಸ್ಯೆಗೆ ಒಳಗಾಗುತ್ತಾನೆ ಎಂಬುದನ್ನು ಅವಲಂಬಿಸಿದೆ. ಈ ತಂತ್ರದಲ್ಲಿ ವ್ಯಕ್ತಿಗಳು ಮನೋಲೈಂಗಿಕ ಹಂತದ ವರ್ತನೆಗಳನ್ನು ತೋರಿಸುತ್ತಾರೆ ಎಂದು ಅನ್ನ ಫ್ರಾಯ್ಡಳು ಅಭಿಪ್ರಾಯಪಡುತ್ತಾಳೆ. ಈ ತಂತ್ರದ ಪ್ರಭಾವಕ್ಕೆ ಒಳಗಾದವರು ದುಶ್ಚಟ ವ್ಯಸನಿಗಳಾಗಬಹುದು. ವಯಸ್ಸಾದವರು ತಮಗೆ ವಯಸ್ಸಾದುದನ್ನು ಒಪ್ಪಿಕೊಳ್ಳದೆ ಯುವಕ–ಯುವತಿಯರಂತೆ ವರ್ತಿಸಬಹುದು. ತಾಯಿಗೆ ಎರಡನೇ ಮಗುವಾದಾಗ ಮೊದಲನೇ ಮಗು ಸಣ್ಣ ಮಗುವಿನ ವರ್ತನೆಯನ್ನು ತೋರಿಸುವುದೂ ಇದರಿಂದಲೇ.

**ಪ್ರತಿಕ್ರಿಯಾ ರಚನೆ (Reaction formation):** ವಿರುದ್ಧವಾದ ಭಾವಗಳನ್ನು ತುಡಿತಗಳನ್ನು ಅಥವಾ ವರ್ತನೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಆತಂಕವನ್ನು ಕಡಿಮೆಮಾಡಿಕೊಳ್ಳುವ ವಿಧಾನವಿದು. ಉದಾಹರಣೆಗೆ, ಇಷ್ಟವಿಲ್ಲದವರ ಬಗ್ಗೆ ಅತಿಯಾದ ಪ್ರೀತಿ ತೋರಿಸಿ ನೈಜಭಾವವನ್ನು ಮರೆಮಾಚುವುದು. ಹೀಗೆ ತಮ್ಮ ನೈಜ ಭಾವನೆಗಳನ್ನು ಅದಕ್ಕೆ ವಿರುದ್ಧವಾದ ಭಾವಗಳ ಹಿಂದೆ ಸರಿಸುವುದು ಈ ರಕ್ಷಣಾ ತಂತ್ರದ ಲಕ್ಷಣ. ತನಗಿಂತ ಸುಂದರನೂ ಬುದ್ಧಿವಂತನೂ ಆದವನ ಬಗ್ಗೆ ಅಸೂಯೆ ಇದ್ದರೂ ಅತಿ ಕಾಳಜಿ, ಪ್ರೀತಿ ತೋರಿಸುವುದು.

**ಪರಿಹಾರ ಅಥವಾ ಕ್ಷತಿಪೂರ್ತಿ (Compensation):** ಆಲ್ ಫ್ರೆಡ್ ಅಡ್ಲರನ ಪ್ರಕಾರ ಜೀವನದ ಬಹುಭಾಗ ನಮ್ಮ ಕೊರತೆಗಳಿಗೆ ಪರಿಹಾರ ಒದಗಿಸುವುದರಲ್ಲೇ ಕಳೆದುಹೋಗುತ್ತದೆ. ಕೆಲವೊಮ್ಮೆ ನಾವು ಯಾವುದರಲ್ಲಿ ಹಿಂದೆ ಬಿದ್ದಿದ್ದೇವೆ ಅದನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಇದಕ್ಕೆ ಪ್ರಚಲಿತವಾದ ಉದಾಹರಣೆ ಎಂದರೆ ಡೆಮಾಸ್ತನೀಸನು ಉತ್ತಮ ವಾಗ್ಮಿಯಾದುದು. ಕೆಲವೊಮ್ಮೆ ವ್ಯಕ್ತಿಗಳು ಒಂದು ವಿಷಯದಲ್ಲಿ ತಮಗಿರುವ ಕೊರತೆಯನ್ನು ತುಂಬಿಕೊಳ್ಳಲು ಮತ್ತೊಂದು ವಿಷಯದಲ್ಲಿ ಅತಿ ಹೆಚ್ಚಿನ ಸಾಧನೆಗೈಯುತ್ತಾರೆ. ಓದುವುದರಲ್ಲಿ ಅಷ್ಟೇನೂ ಬುದ್ಧಿವಂತನಲ್ಲದ ವಿದ್ಯಾರ್ಥಿ ಆಟೋಟಗಳಲ್ಲಿ ವಿಶೇಷ ಸಾಧನೆ ಮಾಡುತ್ತಾನೆ. ದೈಹಿಕವಾಗಿ ಸುಂದರಾಂಗರಲ್ಲದವರು ದೊಡ್ಡ ವಿದ್ವಾಂಸರಾಗುತ್ತಾರೆ. ಇವು ಕೀಳರಿಮೆಯನ್ನು ನಿರ್ವಹಿಸಲು ಆರೋಗ್ಯಕರವಾದುವು. ಕೆಲವು ವೇಳೆ ಅನಾರೋಗ್ಯಕರವಾದ ಪರಿಹಾರಾತ್ಮಕ ವರ್ತನೆಗಳೂ ಆಗಿರಬಹುದು. ಹೀಗೆ ವ್ಯಕ್ತಿ ಯಾವುದಾದರೊಂದು ರಂಗದಲ್ಲಿ ಅನುಭವಿಸಿದ ಕೀಳರಿಮೆಯ ನೋವನ್ನು ಮತ್ತೊಂದು ರಂಗದಲ್ಲಿ ಉತ್ತಮ ಸಾಧನೆಯನ್ನು ತೋರುವುದರ ಮೂಲಕ ಸರಿದೂಗಿಸುವುದು, ಆ ಮೂಲಕ ಸಮಾಧಾನಪಟ್ಟುಕೊಳ್ಳುವುದು ಇದರ ಲಕ್ಷಣ.

**ಹಗಲುಗನಸು ಕಾಣುವುದು (Fantasy):** ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸ್ವಪ್ನ ಚಕ್ರವರ್ತಿಗಳೇ. ಕನಸುಕಾಣುವುದು ಎಲ್ಲರ ಸ್ವಭಾವ. ಇದು ದಿನನಿತ್ಯದ ಯಾಂತ್ರಿಕತೆಯನ್ನು ಹೋಗಲಾಡಿಸಿ ಅನಿಶ್ಚಿತವಾದ ಭವಿಷ್ಯವನ್ನು ಬಯಕೆ ಆಸೆಗಳಿಂದ ಎದುರಿಸಲು ಅನುವು ಮಾಡಿಕೊಡುತ್ತದೆ. ವ್ಯಕ್ತಿಯ ಬಯಕೆಗಳು ಅದಮ್ಯವಾಗಿದ್ದು ಅವುಗಳನ್ನು ತೀರಿಸಿಕೊಳ್ಳಲು ಸಾಧ್ಯವಿಲ್ಲದಾಗ ಈ ರಕ್ಷಣಾ ತಂತ್ರಕ್ಕೆ ಮೊರೆಹೋಗುವುದುಂಟು. ಹಗಲುಗನಸು ಅತಿಯಾದಾಗ, ವ್ಯಕ್ತಿಯನ್ನು ನಿಷ್ಕ್ರಿಯನನ್ನಾಗಿಸುತ್ತದೆ. ಆಗ ಅದು ಅಪಾಯಕಾರಿಯಾಗುತ್ತದೆ.

**ಗುರುತಿಸಿಕೊಳ್ಳುವಿಕೆ (Identification):** ಇದನ್ನು ತಾದಾತ್ಮ್ಯತೆ ಎಂದೂ ಕರೆಯುವುದುಂಟು. ವ್ಯಕ್ತಿಯ ಆಕಾಂಕ್ಷೆಗಳು ಈಡೇರದಿದ್ದಾಗ ಅಥವಾ ವ್ಯಕ್ತಿಯಲ್ಲಿ ಏನಾದರೂ ಕೊರತೆ ಇದ್ದಾಗ ಅಂತಹ ಗುಣವುಳ್ಳವರ ಜೊತೆಗೆ ಗುರುತಿಸಿಕೊಳ್ಳುವುದು ಇದರ ಲಕ್ಷಣ. ಬೇರೆಯವರ ಅನಿಸಿಕೆಗಳು, ಮನೋಭಾವಗಳು ಸಾಧನೆಗಳನ್ನು ತಮ್ಮದೇ ಎಂದು ಗುರುತಿಸಿಕೊಳ್ಳುವುದು ಇದಕ್ಕೆ ಸಂಬಂಧಿಸಿದ ವರ್ತನೆ. ಮಕ್ಕಳು ತಮ್ಮ ಪಾಲಕರ ಹಾಗೂ ತಮ್ಮ ಊರಿಗೆ ಸಂಬಂಧಪಟ್ಟ ಯಶಸ್ಸನ್ನು ಯಾವಾಗಲೂ ಹೇಳಿಕೊಳ್ಳುತ್ತಾರೆ. ನಾನು ಡಾಕ್ಟರರ ಮಗ, ಅನಿಲ್ ಕುಂಬ್ಳೆ ನಮ್ಮ ಊರಿನವ ಇತ್ಯಾದಿ. ತಮ್ಮಲ್ಲಿರುವ ಅಸಫಲತೆಯನ್ನು ತಮಗೆ ನಿಕಟವಾಗಿರುವ ವ್ಯಕ್ತಿಗಳ ಸಫಲತೆಯಲ್ಲಿ ಸಂಬಂಧವನ್ನು ಏರ್ಪಡಿಸಿ ತೃಪ್ತಿಯನ್ನು ಕಾಣುತ್ತಾರೆ. ಸಿನಿಮಾ ತಾರೆಯರ ಹಾಗೆ ಅಲಂಕರಿಸಿಕೊಳ್ಳುವುದು, ಫುಟ್‌ಬಾಲ್ ಆಟಗಾರರ ಹಾಗೆ ತಲೆಗೂದಲು ಬಿಡುವುದು, ನೆಚ್ಚಿನ ಶಿಕ್ಷಕರ ಅನುಕರಣೆ ಇತ್ಯಾದಿ ವರ್ತನೆಗಳು ಈ ತಂತ್ರಕ್ಕೆ ಸಂಬಂಧಿಸಿದಂತಹವುಗಳು.

**ಶುದ್ಧೀಕರಣ (Undoing):** ಎಲ್ಲ ತಪ್ಪಿಗೂ ಪರಿಹಾರ ಇದ್ದೇ ಇದೆ ಎಂಬುದು ಇದರ ಆಶಯ. ಮಾಡಿದ ತಪ್ಪಿಗೆ ಇರುವ ಅಪರಾಧಿ ಮನೋಭಾವವನ್ನು ಹೋಗಲಾಡಿಸಿಕೊಳ್ಳಲು, ಮಾಡಿದ ತಪ್ಪಿನ ಪರಿಣಾಮದ ತೀವ್ರತೆಯನ್ನು ಕಡಿಮೆಮಾಡಿಕೊಳ್ಳಲು ಅನುಸರಿಸುವ ಮಾರ್ಗವಿದು. ಅನಾರೋಗ್ಯಕರವಾದ ಅಥವಾ ವಿನಾಶಕಾರಿಯಾದ ಅಥವಾ ಭಯಹುಟ್ಟಿಸುವಂತಹ ಕೆಲಸಗಳನ್ನು ಮಾಡಿ ಅದರ ಪರಿಣಾಮವನ್ನು ಕಡಿಮೆಮಾಡಲು ಅದರ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗುವುದು. ಉದಾಹರಣೆಗೆ ಯಾರ ಬಗೆಗಾದರೂ ಕ್ರೂರವಾಗಿ ವರ್ತಿಸಿ ನಂತರ ಅದರಿಂದ ಉಂಟಾದ ಪಾಪಪ್ರಜ್ಞೆಯನ್ನು ಅಳಿಸಿಹಾಕಲು ಅವರೊಡನೆ ಅತ್ಯಂತ ಪ್ರೀತಿಯಿಂದ ನಡೆದುಕೊಳ್ಳುವುದು. ಕಾರ್ಯಸ್ಥಾನದಲ್ಲಿ ಅತ್ಯಂತ ಪ್ರಾಮಾಣಿಕನಾದ ವ್ಯಕ್ತಿ ಮನೆಗೆ ಸಂಬಂಧಿಸಿದ ಬಿಲ್ಲುಗಳನ್ನು ಇತರ ಕಾರ್ಯಗಳನ್ನು ಮರೆಯುತ್ತಾನೆ. ಇದನ್ನೂ ಫ್ರಾಯ್ಡ್ ಇದೇ ತಂತ್ರಕ್ಕೆ ಸೇರಿಸುತ್ತಾನೆ. ಆದರೆ ಇದು ಹಲವರಿಂದ ಆಕ್ಷೇಪಣೆಗೆ ಒಳಗಾಗಿದೆ. ಒಟ್ಟಿನಲ್ಲಿ ತಾನು ತಪ್ಪು ಮಾಡಿದ್ದೇನೆ ಎಂಬ ಅರಿವಿರುವ ವ್ಯಕ್ತಿ ಅದಕ್ಕಾಗಿ ಕೊರಗುವ ಬದಲಿಗೆ ಇನ್ನಿತರ ಇತ್ಯಾತ್ಮಕವಾದ ಚಟುವಟಿಕೆಗಳಲ್ಲಿ ತೊಡಗಿ ತನ್ನ ಅಪರಾಧಿ ಮನೋಭಾವವನ್ನು ದೂರಮಾಡಿಕೊಳ್ಳುವುದನ್ನು ಶುದ್ಧೀಕರಣ ಎನ್ನಲಾಗುತ್ತದೆ. ಮೋಸ ಅನ್ಯಾಯ ಮಾಡುವವರು ಗಳಿಸಿದ ಹಣವನ್ನು ಧರ್ಮ ಕಾರ್ಯಗಳಿಗೆ, ಸಮಾಜಸೇವೆಗೆ ವ್ಯಯಮಾಡುವುದೂ ಇದೇ ತಂತ್ರಕ್ಕೆ ಉದಾಹರಣೆ. ಇದು ಒಂದು ರೀತಿಯ ಕ್ಷಮಾಯಾಚನಾ ತಂತ್ರ.

**ಹಿಂಜರಿಕೆ (Withdrawal):** ಹಿಂಸೆ ಅಥವಾ ನೋವನ್ನು ಉಂಟುಮಾಡಿರುವ ಸನ್ನಿವೇಶವನ್ನು ನೆನಪಿಗೆ ತರುವ ಯಾವುದೇ ಚಿಂತನೆ ಆಲೋಚನೆಗಳನ್ನು ಮನಸ್ಸಿನಿಂದ ದೂರವಿಡುವುದು, ಅದನ್ನು ಕುರಿತು ಯೋಚಿಸಲೂ ಇಷ್ಟಪಡದಿರುವುದು ಹಿಂಜರಿಕೆ. ದಿನನಿತ್ಯದ ಸಾಮಾಜಿಕ ಜೀವನ ನೋವಿನಿಂದ ಕೂಡಿದ ಅನೇಕ ಘಟನೆಗಳನ್ನು ಒಳಗೊಂಡಿರುತ್ತದೆ.

Digitised by Bharatavani, CIIL

ಗೆಳೆಯರು, ಸಹೋದ್ಯೋಗಿಗಳು ಆ ಘಟನೆಗಳನ್ನು ಕುರಿತಂತೆ ಮನಸ್ಸಿಗೆ ಒಪ್ಪದ ಅನೇಕ ಪ್ರಶ್ನೆಗಳನ್ನು ಕೇಳಬಹುದು. ಹಾಗಾಗಿ ಸಾಮಾಜಿಕ ಸನ್ನಿವೇಶಗಳಲ್ಲೇ ಭಾಗವಹಿಸದಿರುವುದು ಈ ತಂತ್ರಕ್ಕೆ ಸಂಬಂಧಿಸಿದ ವರ್ತನೆ. ಹಿಂಜರಿಕೆಗೆ ಮೊರೆಹೋದವರ ಸಾಮಾಜಿಕ ಜೀವನ ಕೊನೆಗೊಂಡಂತೆಯೇ. ದೂರದರ್ಶನ, ಸಾಹಿತ್ಯ ಇವೂ ನೋವು ತರುವ ಸನ್ನಿವೇಶಗಳನ್ನು ಉಂಟುಮಾಡಬಹುದು. ಹೀಗಾಗಿ ಅನೇಕ ಸಹಜ ವರ್ತನೆಗಳೂ ಇದರಿಂದ ನಿಂತುಹೋಗಿಬಿಡುತ್ತವೆ. ಇದು ಅತ್ಯಂತ ಅಪಾಯಕಾರಿ ರಕ್ಷಣಾ ತಂತ್ರ. ಏಕೆಂದರೆ ಇದು ಹೆಚ್ಚಿನ ಸಂದರ್ಭಗಳಲ್ಲಿ ವ್ಯಕ್ತಿಯನ್ನು ಸಮಾಜದಿಂದ ದೂರಮಾಡಿ 'ಒಂಟಿತನ'ವನ್ನು ಉಂಟುಮಾಡಬಹುದು. ಅದರಲ್ಲೂ ಇದು ಹಗಲುಗನಸಿನೊಡನೆ ಸೇರಿಕೊಂಡರೆ ವ್ಯಕ್ತಿಯ ಜೀವನವನ್ನೇ ಕುಂಠಿತಗೊಳಿಸಬಹುದು.

ಈ ರೀತಿಯಲ್ಲಿ ರಕ್ಷಣಾ ತಂತ್ರಗಳು ಒಂದು ಮಿತಿಯಲ್ಲಿ ಸಹಾಯಕವೂ ಆರೋಗ್ಯಕರವೂ ಆದರೂ ಸರಿಯಾಗಿ ಬಳಸದಿದ್ದರೆ ಅಥವಾ ಅತಿಯಾಗಿ ಅಳವಡಿಸಿಕೊಂಡರೆ ಅನಾರೋಗ್ಯಕರವೂ ಅಪಾಯಕಾರಿಯೂ ಆಗಬಹುದು. ರಕ್ಷಣಾ ತಂತ್ರಗಳ ಅಸಮರ್ಪಕ ಅಳವಡಿಕೆಯು ವ್ಯಕ್ತಿಯ ನೈಜ ಭಾವನೆಗಳನ್ನು ಕಂಡುಕೊಳ್ಳುವಲ್ಲಿ, ವಾಸ್ತವಿಕ ಪ್ರಪಂಚದ ಜೊತೆಗೆ ಸಂಬಂಧವನ್ನಿಟ್ಟುಕೊಳ್ಳುವಲ್ಲಿ ಸಮರಸ ಜೀವನವನ್ನು ನಡೆಸುವಲ್ಲಿ ಅಡ್ಡಿಯಾಗಬಹುದು.

ಒಬ್ಬ ವ್ಯಕ್ತಿ ಆತಂಕವನ್ನು ನಿರ್ವಹಿಸಲು ಎರಡು ಮಾರ್ಗಗಳಿವೆ. ಒಂದು, ಸನ್ನಿವೇಶದಿಂದ ತಪ್ಪಿಸಿಕೊಳ್ಳುವುದು ಮತ್ತು ಸನ್ನಿವೇಶವನ್ನು ಎದುರಿಸಿ, ಹೆಚ್ಚಿನ ತಿಳಿವಳಿಕೆಯಿಂದ ಜವಾಬ್ದಾರಿಯುತವಾಗಿ ನಿರ್ವಹಿಸುವುದು. ಮೊದಲನೆಯ ಸನ್ನಿವೇಶದಲ್ಲಿ ರಕ್ಷಣಾ ತಂತ್ರಗಳು ಬಳಕೆಯಾಗುತ್ತವೆ. ಸಾಮಾನ್ಯವಾಗಿ ಮೊದಲನೆಯ ವಿಧಾನ ಆತಂಕವನ್ನು ಕಡಿಮೆಮಾಡುತ್ತದೆ. ಎರಡನೆಯದು ಸನ್ನಿವೇಶದೊಂದಿಗೆ ಹೊಂದಿಕೊಳ್ಳಲು ಅನುವು ಮಾಡಿಕೊಡುತ್ತದೆ. ಸನ್ನಿವೇಶಗಳು ನಮ್ಮ ಹಿಡಿತದಲ್ಲಿಲ್ಲದಿದ್ದಾಗ ಮೊದಲನೆಯದಕ್ಕೆ ಒಂದು ಮಿತಿಯಲ್ಲಿ ಮೊರೆಹೋಗುವುದು ಪರಿಣಾಮಕಾರಿಯಾಗಬಹುದು. ಸಮಸ್ಯೆಯ ಪರಿಹಾರಕ್ಕೆ ಅವಕಾಶಗಳಿದ್ದಾಗ ಎರಡನೆಯ ಮಾರ್ಗವೇ ಒಳಿತು. ಇವುಗಳಲ್ಲಿ ಯಾರು ಎಷ್ಟು ಏನನ್ನು ಬಳಸುತ್ತಾರೆ ಎಂಬುದು ಪ್ರತಿ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ನಿರ್ಧಾರವಾಗುತ್ತದೆ. ಫ್ರಾಯ್ಡ್ ಸಹ ಇವುಗಳನ್ನು ಅಗತ್ಯವೆಂದು ಒಪ್ಪಿಕೊಳ್ಳುವನಾದರೂ ಉದಾತ್ತೀಕರಣವನ್ನು ಬಿಟ್ಟು ಉಳಿದವುಗಳು ನೇತ್ಯಾತ್ಮಕವಾದುದೇ ಎಂಬುದು ಅವನ ಅಭಿಪ್ರಾಯ. ಒಟ್ಟಿನಲ್ಲಿ ಈ ರಕ್ಷಣಾ ತಂತ್ರಗಳ ಬಳಕೆಯ ಪರಿಮಾಣ ಆಯಾ ಸಮುದಾಯವನ್ನು ಅವಲಂಬಿಸಿರುತ್ತದೆ. ಇಡೀ ಸಮುದಾಯದಲ್ಲಿ ಪ್ರತಿ ವ್ಯಕ್ತಿಯ ಬಗ್ಗೆ, ಅವನ ಬೆಳವಣಿಗೆಯ ಬಗ್ಗೆ ಕಾಳಜಿ ಇರುವಂತೆ ಸಮುದಾಯವನ್ನು ಸೃಷ್ಟಿಸುವ ಮೂಲಕ ಉದಾತ್ತ ಸಮಾಜವನ್ನು ಹುಟ್ಟುಹಾಕುವುದೇ ಇದಕ್ಕೆ ಉತ್ತಮ ಪರಿಹಾರ. ಈ ರೀತಿಯ ಆರೋಗ್ಯಕರವಾದ ಮನೋವೈಜ್ಞಾನಿಕ ಸನ್ನಿವೇಶವನ್ನು ಸೃಷ್ಟಿಸುವುದು ಅದಕ್ಕಾಗಿ ಕಾರ್ಯನಿರತನಾಗುವುದು ಪ್ರತಿ ವ್ಯಕ್ತಿಯ ಕರ್ತವ್ಯ ಕೂಡ.

–ಎ.ಶ. ಮತ್ತು ಕೆ.ಜ

## ರವೀಂದ್ರನಾಥ ಟ್ಯಾಗೋರ್

ಭಾರತಮಾತೆಯ ಶ್ರೇಷ್ಠಪುತ್ರ, ಕವಿ, ತತ್ವಜ್ಞಾನಿ, ನಾಟಕಕಾರ, ವರ್ಣಚಿತ್ರಕಾರ ಎಲ್ಲದಕ್ಕೂ ಮಿಗಿಲಾಗಿ ಶ್ರೇಷ್ಠ ಶಿಕ್ಷಣ ತಜ್ಞ, ನೋಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟ್ಯಾಗೋರರನ್ನು (1861–1941) ಆಧುನಿಕ ಸಂತ, ಋಷಿ, ಗುರು ಎಂದು ಭಾರತದ ಜನತೆ ಗೌರವಾದರಗಳಿಂದ ಕಾಣುತ್ತಿದ್ದರು. ಎಲ್ಲ ಭಾರತೀಯರು ಇವರನ್ನು "ಗುರುದೇವ" ಎಂದೇ ಕರೆಯುತ್ತಿದ್ದರು. ಇವರು ತಮ್ಮ ಬಹುಮುಖ ಪ್ರತಿಭೆಯಿಂದ ಸ್ಥಾಪಿಸಿದ 'ವಿಶ್ವಭಾರತಿ' ಶೈಕ್ಷಣಿಕ ಸಂಸ್ಥೆ ಮಾನವ ಜನಾಂಗಕ್ಕೆ ಒಂದು ಮಹಾನ್ ಕೊಡುಗೆಯಾಗಿ ಈಗ ವಿಶ್ವಭಾರತಿ ವಿಶ್ವವಿದ್ಯಾಲಯವಾಗಿದೆ. ಈಗ ಇದು ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯವಾಗಿ ಮಾರ್ಪಾಡಾಗಿದೆ.

ಇವರು ಕ್ರಿ.ಶ. ಮೇ 6ನೇ ತಾರೀಖು 1861ರಲ್ಲಿ ಕಲ್ಕತ್ತಾದಲ್ಲಿ ಜನಿಸಿದರು. ಇವರ ತಾತ ರಾಜಕುಮಾರರಾಗಿದ್ದರು. ಇವರ ತಂದೆ ಮಹರ್ಷಿ ದೇವೇಂದ್ರ ನಾಥ ಟ್ಯಾಗೋರ್‌ರವರು ಅಗರ್ಭ ಶ್ರೀಮಂತರಾಗಿದ್ದು 'ಬ್ರಹ್ಮಸಮಾಜ'ದ ಮುಖಂಡರಾಗಿದ್ದರೂ ಮಗನನ್ನು ಸರಳ ಹಾಗೂ ಸಾದಾ ಜೀವನದಲ್ಲಿ ಬೆಳೆಸಿದರು. ಇವರನ್ನು ಶಾಲೆಗೆ ಕಳುಹಿಸದೆ ಮನೆಯಲ್ಲಿಯೇ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿ ಖಾಸಗಿ ಶಿಕ್ಷಕರಿಂದ ಮಾತೃಭಾಷೆ, ಸಂಸ್ಕೃತ, ಗಣಿತ, ಜೀವಶಾಸ್ತ್ರ ಮುಂತಾದ ವಿಷಯಗಳಲ್ಲಿ ಪಾಠ ಹೇಳಿಸುತ್ತಿದ್ದರು. ಆದರೆ ಮಿಕ್ಕ ವಿಷಯಗಳ ಅಭ್ಯಾಸಕ್ಕಾಗಿ ಇವರು ಸೆಮಿನರಿ ಹಾಗೂ ಬೆಂಗಾಳಿ ಅಕಾಡೆಮಿ ಶಾಲೆಗಳಿಗೆ ಹೋಗಬೇಕಾಯಿತು. ಆದರೆ ಆ ಶಾಲೆಗಳಲ್ಲಿ ಅನುಸರಿಸುತ್ತಿದ್ದ ನೀರಸ ಪಾಠ ವಿಧಾನ ಇವರಿಗೆ ಹಿಡಿಸಲಿಲ್ಲ. ನಾಲ್ಕು ಗೋಡೆ ಮಧ್ಯೆ ನಡೆಯುವ ಶಿಕ್ಷಣ ಇವರಿಗೆ ಪರಿತಾಪವನ್ನು ಉಂಟು ಮಾಡಿತು. "ಶಿಕ್ಷಣವೆಂದರೆ ಸ್ವಾತಂತ್ರ್ಯ ಹರಣ" ಎಂದು ಭಾವಿಸತೊಡಗಿದರು. ಇವರು ತಮ್ಮ ಸ್ವಂತ ಪ್ರತಿಭೆಯಿಂದ ಹಾಗೂ ಪರಿಶ್ರಮದಿಂದ ಜ್ಞಾನ ಸಂಪಾದಿಸಿ ಕವಿತೆಗಳನ್ನು ಬರೆಯಲು 8ನೇ ವರ್ಷದಿಂದಲೇ ಪ್ರಾರಂಭಿಸಿದರು. ಒಮ್ಮೆ ಇವರ ತಂದೆ ಇವರನ್ನು ಹಿಮಾಲಯ ಪರ್ವತಗಳ ಬಳಿಗೆ ಪ್ರವಾಸಕ್ಕೆ ಕರೆದೊಯ್ದಾಗ ಅಲ್ಲಿಯ ಸೌಂದರ್ಯ ಪ್ರಶಾಂತ ವಾತಾವರಣದಿಂದ ಪ್ರಭಾವಿತರಾಗಿ ಸರ್ವತಂತ್ರ ಸ್ವತಂತ್ರ ಪರಿಸರದಲ್ಲಿಯೇ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕೆಂಬುದು ಇವರ ಉದ್ದೇಶವಾಗಿತ್ತು. ರವೀಂದ್ರರು ಕ್ರಿ.ಶ. 1877ರಲ್ಲಿ ಕಾನೂನು ಪದವಿ ಅಭ್ಯಾಸಕ್ಕಾಗಿ ಇಂಗ್ಲೆಂಡಿಗೆ ತೆರಳಿದರೂ ಪದವಿ ಪಡೆಯದೆ ತಾಯ್ನಾಡಿಗೆ ಹಿಂದಿರುಗಿದರು. 1883ರಲ್ಲಿ ಮೃಣಾಲಿನಿ ದೇವಿಯೊಂದಿಗೆ ಇವರ ವಿವಾಹವಾಯಿತು. ಕೆಲವು ವರ್ಷಗಳ ನಂತರ ಇವರಿಗೆ ಶ್ರೇಷ್ಠ ಕವಿ ಬಂಕಿಮ ಚಂದ್ರರ ಪರಿಚಯವಾಯಿತು. ರವೀಂದ್ರರು ಬರೆದ 'ಜನಗಣಮನ' ಗೀತೆಯೇ ಇಂದು ನಮ್ಮ ರಾಷ್ಟ್ರಗೀತೆಯಾಗಿದೆ. ಕ್ರಿ.ಶ. 1885ರಲ್ಲಿ ಭಾರತ ಸರ್ಕಾರವು "ನೈಟ್" ಎಂಬ ಪದವಿಯನ್ನು ಕೊಟ್ಟು ಇವರನ್ನು ಗೌರವಿಸಿತು. ಕ್ರಿ.ಶ. 1913ರಲ್ಲಿ ಇವರು ಬರೆದ 'ಗೀತಾಂಜಲಿ' ಎಂಬ ಕವನ ಸಂಕಲನಕ್ಕೆ 'ನೋಬೆಲ್' ಪಾರಿತೋಷಕ ದೊರೆಯಿತು. ಇವರು ಶಿಕ್ಷಣದಲ್ಲಿ ತುಂಬಾ ಆಸಕ್ತರಾಗಿದ್ದು ಕ್ರಿ.ಶ. 1901ರಲ್ಲಿ ಕಲ್ಕತ್ತಾ ನಗರದಿಂದ 100 ಮೈಲಿ ದೂರದ ಬೋಲ್‌ಪುರ ಎಂಬಲ್ಲಿ 'ಶಾಂತಿ ನಿಕೇತನ' ಎಂಬ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿದರು. ಈ ಮಹಾನ್ ಚೇತನ ಕ್ರಿ.ಶ. 1941 ಆಗಸ್ಟ್ 7ರಂದು ಪರಮಾತ್ಮನಲ್ಲಿ ಲೀನವಾಯಿತು.

ರವೀಂದ್ರನಾಥ ಟ್ಯಾಗೋರ್

ರವೀಂದ್ರರು ರಚಿಸಿದ ಪ್ರಮುಖ ಕೃತಿಗಳು ಇಂತಿವೆ:

1) School and the Society 2) School of Tomorrow 3) Democracy and Education 4) Freedom and Culture 5) Interest & effort in Education. 6) 'Geethanjali' (ಇದಕ್ಕೆ 1913ರಲ್ಲಿ ನೋಬಲ್ ಪಾರಿತೋಷಕ ದೊರೆಯಿತು.)

Digitised by Bharatavani, CIIL

ರವೀಂದ್ರರ ಸಾಹಿತ್ಯಕ ಜೀವನವನ್ನು ಐದು ಅವಧಿಗಳಾಗಿ ವಿಭಾಗಿಸಬಹುದು.

1. ಪ್ರಾರಂಭಿಕ ಅವಧಿ: 1877 ರಿಂದ 1886ರ ವರೆಗೆ. ಈ ಅವಧಿಯಲ್ಲಿನ ಕೃತಿಗಳು (ಅ) ಪ್ರಭಾತ ಸಂಗೀತ (ಆ) ಸಂಧ್ಯಾಸಂಗೀತ (ಇ) ಸೃಷ್ಟಿಯ ಸೇಡು (ನಾಟಕ).
2. ಸಾಧನೆಯ ಅವಧಿ: 1886 ರಿಂದ 1887ರ ವರೆಗೆ. ಈ ಅವಧಿಯ ಕೃತಿಗಳು 1) ಮಾನಸಿ 2) ತಾರಿ 3) ರಾಜ ಹಾಗೂ ರಾಣಿ 4) ಮಾಲಿನ್ ಹಾಗೂ ತ್ಯಾಗ.
3. ಬದಲಾವಣೆಯ ಅವಧಿ: 1888 ರಿಂದ 1905ರ ವರೆಗೆ. ಈ ಅವಧಿಯಲ್ಲಿನ ಕೃತಿಗಳು. (ಅ) ಕಲ್ಪನೆ (ಆ) ಸಿದ್ಧಿ ಮತ್ತು (ಇ) ಭಗ್ನತೆ.
4. ಗೀತಾಂಜಲಿ ಅವಧಿ: 1905 ರಿಂದ 1919ರ ವರೆಗೆ ಈ ಅವಧಿಯಲ್ಲಿನ ಕೃತಿಗಳು (ಅ) ಗೀತಾಂಜಲಿ (ಆ) ಬಾಲಿಕ (ಇ) ಕಗ್ಗತ್ತಲೆಯ ಕೋಣೆಯ ಅರಸ (ಈ) ಅಂಚೆ ಕಛೇರಿ.
5. ಅಂತಾರಾಷ್ಟ್ರೀಯತ್ವದ ಅವಧಿ: 1919 ರಿಂದ 1941ರ ವರೆಗೆ ಈ ಅವಧಿಯಲ್ಲಿನ ಕೃತಿಗಳು. (ಅ) ಲಿಪಿಕ (ಆ) ಮುಕುಟಧಾರ.

ರವೀಂದ್ರರ ಜೀವನದ ಅನುಭವಗಳೇ ಅವರ ಜೀವನ ಸಿದ್ಧಾಂತಗಳಾಗಿ ರೂಪುಗೊಂಡಿವೆ.

ಅವರು (ಅ) ಪ್ರಕೃತಿ ತತ್ವವಾದಿ (ಆ) ಆದರ್ಶವಾದಿ (ಇ) ಶ್ರೇಷ್ಠ ಆಧ್ಯಾತ್ಮವಾದಿ (ಈ) ವಾಸ್ತವಿಕವಾದಿ (ಉ) ಮಾನವತಾವಾದಿ (ಊ) ವ್ಯಕ್ತಿ ಸ್ವಾತಂತ್ರ್ಯವಾದಿ ಹಾಗೂ (ಎ) ಅಂತರರಾಷ್ಟ್ರೀಯವಾದಿ. ಇವರ ಶೈಕ್ಷಣಿಕ ತತ್ವಶಾಸ್ತ್ರವು ಇವರ ಜೀವನ ಸಿದ್ಧಾಂತಗಳಿಗೆ ಅನುಗುಣವಾಗಿ ರೂಪುಗೊಂಡಿವೆ. ಇವರ ಪ್ರಕಾರ,

(ಅ) ಮಗುವು ಸ್ವತಂತ್ರ ಪರಿಸರದಲ್ಲಿ ಬೆಳೆಯಬೇಕು ಹಾಗೂ ಪೋಷಣೆಯಾಗಬೇಕು.

(ಆ) ಕ್ರಿಯಾತ್ಮಕ ಹಾಗೂ ಸೃಜನಾತ್ಮಕ ಸ್ವಯಂ ಅಭಿವ್ಯಕ್ತತೆ.

(ಇ) ನಿಸರ್ಗದಲ್ಲಿ ಸಕ್ರಿಯ ಸಂಪರ್ಕ.

(ಈ) ಅಂತಾರಾಷ್ಟ್ರೀಯ ಸಂವಾದ–"ವಸುದೈವ ಕುಟುಂಬಕಮ್" (ವಿಶ್ವವೇ ಒಂದು ಕುಟುಂಬ)

ರವೀಂದ್ರರು ಶಿಕ್ಷಣದಲ್ಲಿ ಪ್ರಕೃತಿಗೆ ನೀಡಿರುವ ಮಹತ್ವದಿಂದಾಗಿ ಇವರನ್ನು ನಿಸರ್ಗವಾದದ ಪ್ರತಿಪಾದಕ ರೂಸೋರಿಗೆ ಹೋಲಿಸಲಾಗಿದೆ.

ಇವರ ಪ್ರಕಾರ ಶೈಕ್ಷಣಿಕ ಗುರಿಗಳು ಇಂತಿರಬೇಕು:

(ಅ) ಭಾರತದಲ್ಲಿ ಅಭ್ಯುದಯ ಹೊಂದಿದ ಸಂಸ್ಕೃತಿಯ ನಡುವೆ ನಿಕಟವಾದ ಸಂಬಂಧ ಕಲ್ಪಿಸುವುದು.

(ಆ) ಪಾಶ್ಚಿಮಾತ್ಯ ವಿಜ್ಞಾನಕ್ಕೆ ಹಾಗೂ ಸಂಸ್ಕೃತಿಗೆ ಹೊಸ ಮಾರ್ಗ ಒದಗಿಸುವುದು.

(ಇ) ಶಿಕ್ಷಣದ ಮೂಲಕ ಪರಿಪೂರ್ಣತೆ ಸಾಧಿಸುವುದು.

(ಈ) ವ್ಯಕ್ತಿಯ ಸರ್ವತೋಮುಖ ಪ್ರಗತಿ ಸಾಧಿಸುವುದು.

(ಉ) ಮನಸ್ಸಿನ, ಹೃದಯದ ಹಾಗೂ ಇಚ್ಛೆಯ ಸ್ವಾತಂತ್ರ್ಯ ಕಲ್ಪಿಸುವುದು.

(ಊ) ದೈಹಿಕ, ಬೌದ್ಧಿಕ, ಆಧ್ಯಾತ್ಮಿಕ ಶಿಕ್ಷಣಗಳ ನಡುವೆ ಸಮತೋಲನ ಕಾಪಾಡುವುದು.

(ಋ) ಶಿಕ್ಷಣವನ್ನು ಪ್ರಾಚೀನ ಕಾಲದ "ಗುರುಕುಲ ಪದ್ಧತಿ" ಯಂತೆ ವಿನ್ಯಾಸಗೊಳಿಸುವುದು.

**ಪಠ್ಯಕ್ರಮ**

1) ವ್ಯಾಪಕವಾಗಿರಬೇಕು ಮತ್ತು ಸರ್ವ ಅಂಶಗಳನ್ನು ವಿಕಾಸಗೊಳಿಸುವಂತಿರಬೇಕು.
2) ಸೌಂದರ್ಯ ಮತ್ತು ಸದ್ಗುಣಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು.
3) ಸಂಪೂರ್ಣ ಹಾಗೂ ಸಮೃದ್ಧ ಜ್ಞಾನವನ್ನು ನೀಡುವಂತಿರಬೇಕು.
4) ಸತ್ಯ, ಸೌಂದರ್ಯ ಹಾಗೂ ಒಳ್ಳೆಯತನಗಳನ್ನು ಮಕ್ಕಳು ಪ್ರಶಂಸಿಸುವಂತಿರಬೇಕು.
5) ಕಾವ್ಯ, ಕಲೆ, ಸಂಗೀತ ಹಾಗೂ ಲಲಿತಕಲೆಗಳು ಮಕ್ಕಳಿಗೆ ಕಡ್ಡಾಯವಾಗಬೇಕು.

**ಬೋಧನಾ ವಿಧಾನಗಳು**

1) ಯಾಂತ್ರಿಕ ಬೋಧನಾ ವಿಧಾನದಲ್ಲಿ ನಂಬಿಕೆಯಿಲ್ಲ.
2) ಬೋಧನೆಯಲ್ಲಿ ನಾಟಕಾಭಿನಯ ತಂತ್ರವನ್ನು ಅಳವಡಿಸಿ ಕೊಳ್ಳಬೇಕು.
3) ಸ್ವಾತಂತ್ರ್ಯದ ಗುಣಲಕ್ಷಣಗಳಿಗೆ ಪ್ರಾಶಸ್ತ್ಯ ನೀಡುವುದು.
4) ವಿಜ್ಞಾನವನ್ನು ಪ್ರಾಯೋಗಿಕ ವಿಧಾನದ ಮೂಲಕ ಬೋಧಿಸಬೇಕು.
5) ಮಕ್ಕಳು ಸ್ವಯಂ ಕಲಿಕೆಯಲ್ಲಿ ನಿರತರಾಗಬೇಕು.
6) ರಚನಾತ್ಮಕ ಹಾಗೂ ಸೃಜನಾತ್ಮಕ ಚಟುವಟಿಕೆಗಳಿಗೆ ಪ್ರಾಧಾನ್ಯ.

ಶಿಸ್ತಿನ ನೆಪದಲ್ಲಿ ಮಕ್ಕಳ ಸ್ವಾತಂತ್ರ್ಯವನ್ನು ಹತ್ತಿಕ್ಕಬಾರದು. ಪ್ರತಿಯಾಗಿ ಮಕ್ಕಳನ್ನು ಪ್ರೀತಿ, ವಾತ್ಸಲ್ಯ, ಮಮತೆ ಹಾಗೂ ಆಸಕ್ತಿಯಿಂದ ಕಾಣಬೇಕು ಹಾಗೂ ವರ್ತಿಸಬೇಕು. ಶಿಸ್ತು ಮಕ್ಕಳಲ್ಲಿ ಆಂತರಿಕವಾಗಿ ಉತ್ಪನ್ನವಾಗಬೇಕೇ ವಿನಃ ಬಾಹ್ಯಿಕವಾಗಿ ಅಲ್ಲ ಎಂಬುದು ಅವರ ವಾದ. ಮಕ್ಕಳು ತಮ್ಮ ಹೊಣೆಗಾರಿಕೆಯನ್ನು ಸ್ವತಃ ಅರಿತುಕೊಳ್ಳುವಂತಾಗಬೇಕು. ಮಕ್ಕಳ ಉತ್ತಮವಾದ ವರ್ತನೆಯೇ ಶಿಸ್ತು ಎಂದು ರವೀಂದ್ರರು ದೃಢವಾಗಿ ನಂಬಿದ್ದರು.

ರವೀಂದ್ರರು ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರಿಗೆ ಗುರುತರವಾದ ಸ್ಥಾನ ನೀಡಿದ್ದಾರೆ. ಶಿಕ್ಷಕ ವಿದ್ಯಾರ್ಥಿಗಳ ಗುರು, ಸ್ನೇಹಿತ, ಪಾಲಕ, ಮಾರ್ಗದರ್ಶಿ, ತತ್ವಜ್ಞಾನಿ ಹಾಗೂ ಹಿತಚಿಂತಕನಾಗಿರಬೇಕು. ಅವರ ಮಾತಿನಲ್ಲಿ ಹೇಳುವುದಾದರೆ "ಯಾವ ವ್ಯಕ್ತಿಯ ಹೃದಯದಲ್ಲಿ ಮಕ್ಕಳ ಬಗ್ಗೆ ಸಹಾನುಭೂತಿ ಲವಲೇಶವೂ ಇರುವುದಿಲ್ಲವೋ ಅಂಥವನು ಮಕ್ಕಳಿಗೆ ಬೋಧನೆ ಮಾಡುವ ಶ್ರೇಷ್ಠವಾದ ಕಾರ್ಯಕ್ಕೆ ಅನರ್ಹನು."

ಇವರು ಕ್ರಿ.ಶ. 1901ರಲ್ಲಿ ತಮ್ಮ ಶೈಕ್ಷಣಿಕ ತತ್ವಗಳ ಆಧಾರದ ಮೇಲೆ ಶಿಕ್ಷಣದ ಗುರಿಗಳನ್ನು ಈಡೇರಿಸಲು ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಯೇ "ಶಾಂತಿನಿಕೇತನ". ಇದು ಕ್ರಿ.ಶ. 1921ರಲ್ಲಿ "ವಿಶ್ವಭಾರತಿ" ಎಂಬ ಹೆಸರಿನ ಅಂತರರಾಷ್ಟ್ರಿಯ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿದೆ. ರವೀಂದ್ರರ ತಂದೆಯವರಾದ ಮಹರ್ಷಿ ದೇವೇಂದ್ರನಾಥರು ಅಂದು ಕಲ್ಕತ್ತಾ ನಗರದಿಂದ 100 ಕಿ.ಮೀ. ದೂರದಲ್ಲಿ ಬೋಲಾಪುರ ಎಂಬ ಪುಟ್ಟ ಗ್ರಾಮದಲ್ಲಿ 1863ರಲ್ಲಿ ನಿಸರ್ಗ ಸೌಂದರ್ಯದ ನೆಲೆವೀಡು ಹಾಗೂ ಪ್ರಶಾಂತ ವಾತಾವರಣದಲ್ಲಿ ಒಂದು ಆಶ್ರಮ ಕಟ್ಟಿದ್ದರು.


Digitised by Bharatavani, CIIL

ಅಲ್ಲಿಯೇ ರವೀಂದ್ರರು ಶಾಂತಿನಿಕೇತನವನ್ನು ಆರಂಭಿಸಿದರು. ಶಾಂತತೆಯ ನೆಲೆವೀಡಾಗಿದ್ದುದರಿಂದ ರವೀಂದ್ರರು ಶಾಂತಿನಿಕೇತನ ಎಂದು ಹೆಸರಿಟ್ಟರು. ಈ ಸ್ಥಳದಲ್ಲಿ ಹೂದೋಟವನ್ನು ಬೆಳೆಸಿದ್ದರು. ನಂತರ ಕೆಲವು ಕುಟೀರಗಳು ನಿರ್ಮಾಣವಾದವು. ಪ್ರಾರಂಭದಲ್ಲಿ 5 ವಿದ್ಯಾರ್ಥಿಗಳಿಂದ ಕೂಡಿದ ವಿದ್ಯಾಸಂಸ್ಥೆ ನಂತರದಲ್ಲಿ ವಿಶ್ವವಿದ್ಯಾಲಯವಾಗಿ ಬೆಳೆಯಿತು. ಇಲ್ಲಿ ಕೀರ್ತಿಶಾಲಿಗಳಾದ ಕಲಾಕಾರರು ಹಾಗೂ ಪ್ರಕಾಂಡ ಪಂಡಿತರೂ ಸೇವೆಯನ್ನು ಸಲ್ಲಿಸಿದ್ದಾರೆ. ಅವರಲ್ಲಿ ವಿದ್ವನ್ಮಣಿ ನಂದಲಾಲ ಬೋಸ್, ಶ್ರೇಷ್ಠ ತತ್ವಜ್ಞಾನಿ ಗಜೇಂದ್ರನಾಥ ಟ್ಯಾಗೋರ್, ಶ್ರೇಷ್ಠ ಸಂತ ಸಿ.ಎಫ್, ಆಂಡ್ರೂಸ್ ಹಾಗೂ ವಿಲಿಯಂ ಪಿಯರ್‌ಸನ್ ಪ್ರಮುಖರು. ಇಲ್ಲಿನ ಪ್ರಮುಖ ಲಕ್ಷಣಗಳು: 1) ಮನೆ ವಾತಾವರಣ 2) ಆಧ್ಯಾತ್ಮಿಕ ಹಾಗೂ ಧಾರ್ಮಿಕ ವಾತಾವರಣ 3) ನಿಸರ್ಗ ವಾತಾವರಣ 4) ಸಂಘಟನೆಯ ವಾತಾವರಣ 5) ಸ್ವಾತಂತ್ರ್ಯದ ವಾತಾವರಣ 6) ಮಾತೃಭಾಷೆಗೆ ಆದ್ಯತೆ 7) ಶಿಸ್ತಿಗೆ ಹೆಚ್ಚು ಪ್ರಾಧಾನ್ಯ 8) ಸೃಷ್ಟಿಯ ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ಅವಕಾಶ 9) ಸೃಜನಾತ್ಮಕ ಕಾರ್ಯಗಳಿಗೆ ಪ್ರೋತ್ಸಾಹ 10) "ವಿಶ್ವಂ ಭವತಿ ಏಕಮ್ ಇದಮ್"– ವಿಶ್ವವೇ ಒಂದುಗೂಡುವ ಸ್ಥಳ.

**ಶಾಂತಿನಿಕೇತನದ ಉದ್ದೇಶಗಳು ಇಂತಿದ್ದವು**

1) ಪೂರ್ವ–ಪಶ್ಚಿಮ ರಾಷ್ಟ್ರಗಳ ಸಂಸ್ಕೃತಿಗಳ ಸಮನ್ವಯ ಸಾಧಿಸುವುದು.

2) ವಿಶ್ವ ಕುಟುಂಬತ್ವವನ್ನು ಸಾಧಿಸುವುದು.

3) ಮಾನವನ ಐಕ್ಯ ಹಾಗೂ ವ್ಯಕ್ತಿತ್ವ ವಿಕಾಸವನ್ನು ಸಾಧಿಸುವುದು.

4) ಗ್ರಾಮಗಳ ಪುನರ್‌ರಚನೆ.

ಇತ್ತೀಚೆಗೆ ಕೇಂದ್ರ ಸರ್ಕಾರ ವಿಶ್ವಭಾರತಿ ಸಂಸ್ಥೆಯನ್ನು ಸರ್ವಾಂಗ ಪರಿಪೂರ್ಣವಾದ (Full Pledged) ಕೇಂದ್ರ ವಿಶ್ವವಿದ್ಯಾಲಯವೆಂದು ಪರಿಗಣಿಸಿದೆ. ಇದರ ಪ್ರಮುಖ ವಿಭಾಗಗಳು ಇಂತಿವೆ:

ಅ) ಶಾಂತಿನಿಕೇತನ – ಶಾಲೆ

ಆ) ವಿಶ್ವಭಾರತಿ – ವಿಶ್ವವಿದ್ಯಾಲಯ.

ಇ) ಗ್ರಾಮೀಣ ಪುನರ್ ರಚನಾ ಸಂಸ್ಥೆ (The Institute of Rural Reconstruction)

ಇದು ಎರಡು ಮಂಡಳಿಗಳನ್ನು ಹೊಂದಿದೆ.

**1)** **ಆಂತರಿಕ ಮಂಡಳಿ:** ಭಾರತಕ್ಕೆ ಸಂಬಂಧಿಸಿದ್ದು, ಭಾರತೀಯ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ನೀಡಲಾಗುವುದು.

**2)** **ಬಾಹ್ಯ ಮಂಡಳಿ:** ವಿವಿಧ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದು ವಿವಿಧ ದೇಶಗಳ ಸಾಹಿತ್ಯ ಅಭ್ಯಾಸಕ್ಕೆ ಅವಕಾಶ ಕಲ್ಪಿಸಲಾಗಿದೆ.

**ವಿಶ್ವಭಾರತಿಯ ವಿವಿಧ ಭಾಗಗಳು**

1) ಶಿಶು ಭವನ – ಪೂರ್ವ ಪ್ರಾಥಮಿಕ ಶಾಲೆ.

2) ಪಾಠ ಭವನ – ಪ್ರಾಥಮಿಕ ಶಿಕ್ಷಣ ಶಾಲೆ.

3) ಶಿಕ್ಷಾ ಭವನ – ಮಾಧ್ಯಮಿಕ ಶಿಕ್ಷಣ ಶಾಲೆ.

4) ವಿದ್ಯಾ ಭವನ – ಉಚ್ಚ ಶಿಕ್ಷಣ ಸಂಶೋಧನಾ ಕೇಂದ್ರ.

5) ವಿನಯ ಭವನ – ಶಿಕ್ಷಕರ ತರಬೇತಿ ಶಿಕ್ಷಣ.

6) ಕಲಾಭವನ – ಲಲಿತ ಕಲೆಗಳ ಶಿಕ್ಷಣ.

7) ಸಂಗೀತ ಭವನ – ಸಂಗೀತ ವಿದ್ಯೆಗೆ ಮೀಸಲಾದ ಸಂಸ್ಥೆ.

8) ಶ್ರೀನಿಕೇತನ – ಗ್ರಾಮೀಣ ಪುನರ್ ರಚನೆಯ ಸಂಸ್ಥೆ.

9) ಶಿಕ್ಷಾ ಸತ್ರ – ಗ್ರಾಮೀಣ ಶಿಕ್ಷಣ ಸಂಸ್ಥೆ.

10) ಶಿಲ್ಪ ಸದನ – ಉದ್ಯೋಗ ತರಬೇತಿ ಸಂಸ್ಥೆ.

11) ಚೀನಾ ಭವನ – ಚೀನಿ ಭಾಷಾಭ್ಯಾಸ ಸಂಸ್ಥೆ.

ರವೀಂದ್ರರು ವಿಶ್ವಭಾರತಿಯನ್ನು ಸಮಗ್ರ ಪ್ರಪಂಚಕ್ಕೆ ಮಾನವೀಯ ಸಂದೇಶವನ್ನು ನೀಡುವ ಸ್ಥಳವನ್ನಾಗಿ ಮಾರ್ಪಡಿಸಿದರು. ಮಹಾತ್ಮ ಗಾಂಧೀಜಿಯವರ ಮಾತಿನಲ್ಲಿ ಹೇಳುವುದಾದರೆ "ಶಾಂತಿನಿಕೇತನವು ರವೀಂದ್ರರು ಭಾರತಕ್ಕೆ ಅಷ್ಟೇ ಅಲ್ಲದೆ ಸಮಗ್ರ ಪ್ರಪಂಚಕ್ಕೆ ಬಿಟ್ಟು ಹೋಗಿರುವ ಬಳುವಳಿಯಾಗಿದೆ."

– ಜಿ.ಎಂ.ಸೋ.

## ರಾಚನಿಕವಾದ ಮತ್ತು ಶಿಕ್ಷಣ

ರಾಚನಿಕವಾದ (Constructivism) ಎಂಬುದು ಮನುಷ್ಯರು ತಮ್ಮ ತಮ್ಮ ಜ್ಞಾನ ಮತ್ತು ಅರ್ಥಗಳನ್ನು ತಾವೇ ತಮ್ಮ ತಮ್ಮ ಸ್ವಂತ ಅನುಭವಗಳ ಆಧಾರದ ಮೇಲೆ ಕಟ್ಟಿಕೊಳ್ಳುತ್ತಾ ಹೋಗುತ್ತಾರೆ ಎಂಬ ನಿಲವು ಉಳ್ಳ ಜ್ಞಾನಸಿದ್ಧಾಂತ. ಇದು ಕಲಿಕೆ ಕುರಿತ ಸಿದ್ಧಾಂತವೂ ಹೌದು. ಪ್ರತಿಯೊಬ್ಬರೂ ತಮ್ಮ ತಮ್ಮ ಅನುಭವಗಳ ಬಗ್ಗೆ ಆಲೋಚನಾತ್ಮಕ ಅವಲೋಕನೆಗಳ ಮುಖೇನ ತಾವು ಬದುಕಿರುವ ಪ್ರಪಂಚದ ಅರಿವನ್ನು ತಮ್ಮದೇ ಆದ ಶೈಲಿಯಲ್ಲಿ ರಚಿಸಿಕೊಳ್ಳುತ್ತಾರೆ ಎಂಬುದು ರಾಚನಿಕವಾದದ ನಿಲವು. ಈ ವಾದದ ಪ್ರಕಾರ, ಪ್ರತಿಯೊಬ್ಬರೂ ತಮ್ಮದೇ ಆದ 'ನಿಯಮ'ಗಳನ್ನು ರೂಪಿಸಿಕೊಳ್ಳುತ್ತಾರೆ ಮತ್ತು ತಮ್ಮದೇ ಆದ 'ಮಾನಸಿಕ ಮಾದರಿ'ಗಳನ್ನು ಸ್ಥಾಪಿಸಿಕೊಳ್ಳುತ್ತಾರೆ. ಅನುಭವಗಳನ್ನು ಅರ್ಥಪೂರ್ಣವಾಗಿ ಗ್ರಹಿಸುವುದಕ್ಕೆ ಇದು ಅನಿವಾರ್ಯ. ಕಲಿಕೆ ಎಂಬುದು ನಮ್ಮ ಮಾನಸಿಕ ಮಾದರಿಗಳನ್ನು ಹೊಸ ಅನುಭವಕ್ಕೆ ಅನುರೂಪವಾಗಿ ಮಾರ್ಪಡಿಸಿಕೊಳ್ಳುವುದೇ ಆಗಿದೆ. ರಾಚನಿಕವಾದವು ಕಲಿಕೆಯ ಯಾವುದೋ ಒಂದು ನಿರ್ದಿಷ್ಟ ವಿಧಾನ ಕುರಿತ ವ್ಯಾಖ್ಯಾನ ಅಲ್ಲ. ವಾಸ್ತವವಾಗಿ ಅದು ಕಲಿಕೆಯ ಪ್ರಕ್ರಿಯೆಗಳನ್ನು ಕುರಿತ ವ್ಯಾಖ್ಯಾನ. ರಾಚನಿಕವಾದದ ಆಧುನಿಕ ವ್ಯಾಖ್ಯಾನ ಮತ್ತು ವಾದದ ಬೆಳವಣಿಗೆಗೆ ಜೀನ್ ಪಿಯಾಜೆ, ಜಾನ್ ಡೂಯಿ, ಜೆರೋಮ್ ಬ್ರೂನರ್ ಮತ್ತು ವೈಗಾಸ್ಕಿ ಅವರು ನೀಡಿರುವ ಕೊಡುಗೆಗಳು ಗುರುತರವಾದುವು.

ರಾಚನಿಕವಾದವು ವರ್ತನಾವಾದ ಮತ್ತು ಆಯೋಜಿತ ಬೋಧನೆಗಳಂಥ (Programmed Instruction) ಉಪದೇಶಾತ್ಮಕ ಕಲಿಕಾಪ್ರಕ್ರಿಯೆಗಳಿಗೆ ಪ್ರತಿಭಟನೆಯ ರೂಪದಲ್ಲಿ ಒಡಮೂಡಿದ ಒಂದು ಶೈಕ್ಷಣಿಕ ನೆಲೆ. ಇದು ಕಲಿಕೆ ಮತ್ತು ಜ್ಞಾನಸಿದ್ಧಾಂತಗಳನ್ನು ಕುರಿತ ವಿವರಣಾತ್ಮಕ ವಾದ; ಇದು ಉಪದೇಶಾತ್ಮಕವಾದ ಅಲ್ಲ. ಇದರ ತಾಯಿ ಬೇರು ಇರುವುದು ಜ್ಞಾನಾತ್ಮಕ ಮನೋವಿಜ್ಞಾನದಲ್ಲಿ. ಅದರ ವ್ಯಾವಹಾರಿಕ ದೃಷ್ಟಿಕೋನಕ್ಕೆ ನೆಲೆ ಸಿಗುವುದು ಜಾನ್ ಡೂಯಿ ಅವರ ವಿಚಾರಧಾರೆಗಳಲ್ಲಿ. ಈ ವಾದದ ಸಾಮಾಜಿಕ ಆಯಾಮದ ಹೊಳಹುಗಳು ದೊರಕುವುದು ವೈಗಾಸ್ಕಿ ಅವರ ಕೃತಿಗಳಲ್ಲಿ. ರಾಚನಿಕವಾದದ ಪ್ರಕಾರ ಜ್ಞಾನ ಎಂಬುದು ಇನ್ನೊಬ್ಬರಿಂದ ಸ್ವೀಕರಿಸಿ ಪಡೆಯುವಂಥದ್ದು ಅಲ್ಲ; ಜ್ಞಾನ ಎಂಬುದು ಸಾಂದರ್ಭಿಕ ಪ್ರಕ್ರಿಯೆಗಳಿಂದ ಒಡಮೂಡುವ ಮತ್ತು ಸೃಷ್ಟ್ಯಾತ್ಮಕವೂ ವ್ಯಕ್ತಿಗತವೂ ಜ್ಞಾತೃನಿಷ್ಠವೂ ಆದ ಕ್ರಿಯಾಶೀಲ ಪ್ರಕ್ರಿಯೆ. **ಜ್ಞಾನಾರ್ಜನೆ ಎಂಬುದು ನಿಜವಲ್ಲ; ಜ್ಞಾನ ರಚನೆ ನಿಜ, ಸಾಧ್ಯ.** ಇದನ್ನೇ ಬೇರೆ ಪದಗಳಲ್ಲಿ

Digitised by Bharatavani, CIIL

ಹೇಳುವುದಾದರೆ, ಕಲಿಕಾರ್ಥಿಗಳು ಮಾಡಬೇಕಾದದ್ದು ಜ್ಞಾನಾರ್ಜನೆ ಅಲ್ಲ; ಅವರು ಮಾಡಬೇಕಾದದ್ದು ಜ್ಞಾನರಚನೆಯನ್ನು. ಜ್ಞಾನ ಕಟ್ಟಿಕೊಳ್ಳುವ ವ್ಯಕ್ತಿನಿಷ್ಠ ಪ್ರಕ್ರಿಯೆಗೆ ವ್ಯಕ್ತಿಯ ಪೂರ್ವಾನುಭವ, ಸದ್ಯದ ಅನುಭವ ಮತ್ತು ಪರಿಸರ ಕುರಿತು ಆತನಿಗೆ [ಆಕೆಗೆ] ಇರುವ ಪ್ರಾಕ್ಕಲ್ಪನೆಗಳೇ ಆಧಾರ. ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಗಳು ತಮ್ಮ ಅನುಭವ ಮತ್ತು ಪ್ರಾಕ್ಕಲ್ಪನೆಗಳನ್ನು ಪರೀಕ್ಷೆಗೊಳಪಡಿಸಿಕೊಳ್ಳುತ್ತಾರೆ. ಈ ಪರೀಕ್ಷೆಗಳ ನೆಲೆಯಲ್ಲಿ ಅವರು ತಮ್ಮ ತಮ್ಮ ಮಾನಸಿಕ ಬಿಂಬನಗಳನ್ನು ಪರಿಷ್ಕರಿಸಿಕೊಳ್ಳುತ್ತಲೂ ಸುಧಾರಿಸಿಕೊಳ್ಳುತ್ತಲೂ ಹೋಗುತ್ತಾರೆ. ಈ ಪ್ರಕ್ರಿಯೆ ಸಾಮಾಜಿಕ ಸಂಧಾನ ಅರ್ಥಾತ್ ಸಾಮಾಜಿಕ ಕೊಡುಕೊಳ್ಳುವಿಕೆಯ ಮೂಲಕ ನಡೆಯುತ್ತಿರುತ್ತದೆ. ಜ್ಞಾನರಚನೆ ಕುರಿತು ಪ್ರತಿಯೊಬ್ಬರಿಗೂ ತಮ್ಮದೇ ಆದ ಶೈಲಿ, ತಮ್ಮದೇ ಆದ ಅರ್ಥ ಇರುತ್ತದೆ. ಜ್ಞಾನಕಟ್ಟಿಕೊಳ್ಳುವುದರಲ್ಲಿ ನಿರತರಾದವರ ಮನಸ್ಸು ಉದ್ದಿಷ್ಟ ಜ್ಞಾನವನ್ನು ಕುರಿತಂತೆ ಖಾಲಿ ಇರುವುದಿಲ್ಲ. ಅವರು ಕಲಿಕೆಯ ಸಂದರ್ಭವನ್ನು ಪ್ರವೇಶಿಸುವಾಗ ತಮ್ಮದೇ ಆದ ಪೂರ್ವಾನುಭವಗಳನ್ನೂ ಸಾಂಸ್ಕೃತಿಕ ಗ್ರಹಿಕೆಗಳನ್ನು ಹೊತ್ತುಕೊಂಡೇ ಬರುತ್ತಾರೆ. ಅವರ ಈ ಪೂರ್ವಗ್ರಹಿಕೆಗಳು ಮತ್ತು ಅವರಿಗೆ ಒದಗಿಬರುವ ಹೊಸ ಅನುಭವಗಳು ಸಾಮಾಜಿಕ ಸಂಧಾನದ ಮೂಲಕ ಪರಿಷ್ಕೃತಗೊಳ್ಳುತ್ತಾ ಹೋಗುತ್ತವೆ.

ವಾಸ್ತವವಾಗಿ ರಾಚನಿಕವಾದ ಎಂಬುದು ಕಲಿಕೆಯನ್ನು ಕುರಿತ ಜ್ಞಾನಾರ್ಥಕ ದೃಷ್ಟಿಕೋನ ಮತ್ತು ಮಾನವಿಕ ದೃಷ್ಟಿಕೋನಗಳ ನಡುವೆ ಬರುವ ಹಲವು ಶೈಕ್ಷಣಿಕ ಸಿದ್ಧಾಂತಗಳ ಸಮೂಹಕ್ಕೆ ಒಟ್ಟಾಗಿ ಕೊಟ್ಟಿರುವ ಹೆಸರು. ನಮ್ಮ ಪರಿಕಲ್ಪನೆಗಳು, ಅನುಭವಗಳಿಗೆ – ಸಾಮಾಜಿಕ ಸಮಾಲೋಚನೆ ಮತ್ತು ಸಂಧಾನಗಳ ಮೂಲಕ – ವೈಯಕ್ತಿಕ ಅರ್ಥಗಳನ್ನು ಹುಡುಕಿಕೊಳ್ಳುವ ಪ್ರಕ್ರಿಯೆಯನ್ನು ರಾಚನಿಕವಾದ ಎಂದು ಪರಿಭಾವಿಸಬಹುದು. ಈ ಅರ್ಥದಲ್ಲಿ ಕಲಿಕೆ ಎಂಬುದು ಪೂರ್ವಕಲಿಕೆ ಮತ್ತು ಹೊಸ ಅನುಭವಗಳ ಆಧಾರದ ಮೇಲೆ ಜ್ಞಾನವನ್ನು ಕಲಿಕಾರ್ಥಿ ಸ್ವಂತವಾಗಿ ರಚಿಸಿಕೊಳ್ಳುವುದೇ ಆಗಿರುತ್ತದೆ.

ರಚಿಸುವುದು ಎಂಬುದಕ್ಕೆ ಇಂಗ್ಲಿಷಿನಲ್ಲಿ to construct ಎನ್ನುತ್ತಾರೆ. ಇದು ಲ್ಯಾಟಿನ್ನಿನ con struere ಎಂಬುದರಿಂದ ನಿಷ್ಪತ್ತಿಗೊಂಡಿರುವ ಪದ. ಹೀಗೆಂದರೆ 'ಜೋಡಿಸಿಕೊಳ್ಳುವಿಕೆ', 'ಕಟ್ಟುವಿಕೆ', 'ರಚಿಸುವಿಕೆ', 'ರೂಪ ನೀಡುವಿಕೆ' ಎಂಬ ಅರ್ಥಗಳು ಬರುತ್ತವೆ. ಪೂರ್ವಾನುಭವಗಳು ಮತ್ತು ಹೊಸ ಅನುಭವಗಳ ಆಧಾರದ ಮೇಲೆ ಜ್ಞಾನವನ್ನು ಕಟ್ಟಿಕೊಳ್ಳುತ್ತಾ ಹೋಗುವ ಪ್ರಕ್ರಿಯೆಗಳು ರಾಚನಿಕವಾದದ ಪರಿಕಲ್ಪನೆಯ ಬಹು ಮುಖ್ಯ ಆದ್ಯತೆ. ಅವೇ ರಾಚನಿಕವಾದದ ವಿವಿಧ ಮಗ್ಗುಲುಗಳ ಕೇಂದ್ರಬಿಂದು.

ರಾಚನಿಕವಾದ ಇತ್ತೀಚೆಗೆ ಸೃಜಿಸಿದ ಶೈಕ್ಷಣಿಕ ಸಿದ್ಧಾಂತವೇನಲ್ಲ. ಅದಕ್ಕೆ ಸುದೀರ್ಘ ಇತಿಹಾಸವೇ ಇದೆ. ಕ್ರಿಸ್ತಶಕೆಯ ಪೂರ್ವದ 5ನೇ ಶತಮಾನದಲ್ಲಿ ಗೌತಮ ಬುದ್ಧ, ಸುಮಾರು ಇದೇ ಅವಧಿಯಲ್ಲಿ ಜೀವಿಸಿದ್ದ ಹೆರೆಕ್ಲಿಟಸ್ ಮತ್ತು ಕ್ರಿಸ್ತಶಕೆಯ ಆರನೇ ಶತಮಾನದಲ್ಲಿ ಜೀವಿಸಿದ್ದ **ಲಾಟಿತ್ಸು** (Laotse) ಮೊದಲಾದವರ ಚಿಂತನೆಗಳಲ್ಲಿ ರಾಚನಿಕವಾದದ ಕುರುಹುಗಳನ್ನು ಗುರುತಿಸಬಹುದು. ಪಾಶ್ಚಾತ್ಯ ಸಂಸ್ಕೃತಿಯಲ್ಲಿ **ಗಿಯಾಂಬಟ್ಟಿಸ್ತಾ ವೈಕೊ** (1668–1744), **ಇಮ್ಯಾನುವಲ್ ಕಾಂಟ್** (1724–1804), **ಅರ್ಥರ್ ಷೊಫೆನ್‌ಹಾವರ್** (1788–1860) ಮತ್ತು **ಹ್ಯಾನ್ಸ್ ವೈಹಿಂಜರ್** (1852–1933) ಅವರನ್ನು ಆದ್ಯರಾಚನಿಕರೆಂದು ಪರಿಗಣಿಸಿದ್ದಾರೆ. ಇಟಲಿ ದೇಶದ ತತ್ವಜ್ಞಾನಿ ಗಿಯಾಂಬಟ್ಟಿಸ್ತ ವೈಕೊ ಎಂಬಾತ ಹೇಳಿರುವ ಈ ಮಾತು ರಾಚನಿಕವಾದಕ್ಕೆ ಉತ್ತಮ ಪೀಠಿಕೆ ಒದಗಿಸುತ್ತದೆ: 'ಈ ಪ್ರಪಂಚ ಭಗವಂತನಿಗೆ ಚೆನ್ನಾಗಿ ಗೊತ್ತು, ಏಕೆಂದರೆ ಅದನ್ನು ಅವನೇ ಸೃಷ್ಟಿಸಿದ್ದು. ಮನುಷ್ಯರು ಏನನ್ನು ಸ್ವತಃ ಮಾಡುತ್ತಾರೋ ಅದನ್ನು ಮಾತ್ರ ಅವರು ತಿಳಿಯಬಲ್ಲರು'. ಮನುಷ್ಯರು ಯಾವುದನ್ನು ಸ್ವತಃ ರಚಿಸುತ್ತಾರೋ ಅದನ್ನು ಮಾತ್ರ ಅವರು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲರು ಎಂಬುದು ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. **ನೌಮ್ ಗ್ಯಾಬೊ** [1890–1977] ಎಂಬ ಅಮೆರಿಕಾದ ಚಿಂತಕ ಹೀಗೆ ಹೇಳಿದ್ದಾನೆ: '*ನಾವು ಏನನ್ನು ಮಾಡುತ್ತೇವೆಯೋ, ಏನನ್ನು ನಿರ್ಮಿಸುತ್ತೇವೆಯೋ, ಏನನ್ನು ರಚಿಸುತ್ತೇವೆಯೋ ಅದು ಮಾತ್ರ ನಮಗೆ ತಿಳಿದಿರುತ್ತದೆ. ನಾವು ಮಾಡಿದ್ದೆಲ್ಲವೂ, ರಚಿಸಿದ್ದೆಲ್ಲವೂ, ಏನನ್ನು ರಚಿಸುತ್ತೇವೆಯೋ ಅದು ಮಾತ್ರ ನಮಗೆ ತಿಳಿದಿರುತ್ತದೆ. ನಾವು ಮಾಡಿದ್ದೆಲ್ಲವೂ, ರಚಿಸಿದ್ದೆಲ್ಲವೂ ವಾಸ್ತವತೆಗಳೇ. ಇವುಗಳನ್ನು ನಾನು 'ಚಿತ್ರಣಗಳು' ಎಂದು ಕರೆಯುತ್ತೇನೆ. ಪ್ಲೇಟೋ ಹೇಳಿದ ಅರ್ಥದಲ್ಲಿ [ಈ ಚಿತ್ರಣಗಳು ಕೇವಲ ವಾಸ್ತವತೆಯ ಪ್ರತಿಫಲನಗಳು] ಅಲ್ಲ. ಈ ಚಿತ್ರಣಗಳೇ ವಾಸ್ತವತೆ ಮತ್ತು ಈ ವಾಸ್ತವತೆಗಳಾಚೆಗೆ ಬೇರಾವುದೇ ವಾಸ್ತವತೆ ಇಲ್ಲ ಎಂಬುದು ನನ್ನ ಗ್ರಹಿಕೆ. ಇದಕ್ಕೆ ವಿನಾಯಿತಿ ಎಂದರೆ ನಮ್ಮ ಸೃಜನಶೀಲ ಪ್ರಕ್ರಿಯೆಯಲ್ಲಿ ನಾವು ಈ ಚಿತ್ರಣಗಳನ್ನು ಬದಲಿಸಿಕೊಳ್ಳಬಹುದು: ಆಗ ನಾವು ಹೊಸ ವಾಸ್ತವತೆಗಳನ್ನು ಸೃಷ್ಟಿಸಿರುತ್ತೇವೆ*'. ನೌಮ್ ಗ್ಯಾಬೊ ಅವರ ವಿಚಾರಧಾರೆಯನ್ನು ಅನೇಕರು ರಾಚನಿಕವಾದದ ಪ್ರಣಾಳಿಕೆ ಎಂದು ವ್ಯಾಖ್ಯಾನಿಸಿದ್ದಾರೆ. ಮುಂದೆ 1787ರಲ್ಲಿ ಇಮ್ಯಾನ್ಯುಯಲ್ ಕ್ಯಾಂಟ್ ಅವರು ತಮ್ಮ ***"ಕ್ರಿಟೀಕ್ ಆಫ್ ಪ್ಯೂರ್ ರೀಸನ್"*** ಎಂಬ ಪುಸ್ತಕವೊಂದರಲ್ಲಿ ಹೀಗೆ ಬರೆದಿದ್ದಾರೆ: '*ಮನುಷ್ಯರು ಯಾವುದನ್ನು ತಮ್ಮದೇ ವಿನ್ಯಾಸಕ್ಕನುಗುಣವಾಗಿ ಸ್ವತಃ ತಾವೇ ಮಾಡುತ್ತಾರೋ ಅದನ್ನು ಮಾತ್ರ ಅವರ ಮನಸ್ಸು ಗ್ರಹಿಸಬಲ್ಲದು*'. **ಜಾನ್ ಡ್ಯೂಯಿ** ಅವರು 1910ರಲ್ಲಿ ಪ್ರಕಟಿಸಿದ **'ಹೌ ವಿ ಥಿಂಕ್'** ಎಂಬ ಪುಸ್ತಕದಲ್ಲಿ ಈ ಮಾತುಗಳನ್ನು ಹೇಳಿದ್ದಾರೆ: *"ಕಲಿಕೆ ಉಂಟಾಗುವುದು ತಮ್ಮ ಮುಂದಿರುವ ಸಮಸ್ಯೆಗಳ ಸಂದರ್ಭಗಳೊಂದಿಗೆ ಗುದ್ದಾಡುತ್ತಾ ಸಮಸ್ಯೆಗಳಿಗೆ ತಮ್ಮದೇ ಆದ ಉತ್ತರ ಮತ್ತು ಪರಿಹಾರಗಳನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಮಾತ್ರ"*.

ಕಲಿಕೆ ಮತ್ತು ಜ್ಞಾನ ಕುರಿತಂತೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಸಂಚಲನ ಮೂಡಿಸಿರುವ ಸಿದ್ಧಾಂತಗಳಲ್ಲಿ ರಾಚನಿಕವಾದ ಅತ್ಯಂತ ಪ್ರಮುಖವಾದುದು. ಜ್ಞಾನ ಎಂಬುದು ಪ್ರಪಂಚವನ್ನು ಕುರಿತದ್ದು ಅಲ್ಲ. ಅದು ಪ್ರಪಂಚವನ್ನು ಒಳಗೊಂಡಿದ್ದು [**ಶೆರ್ಮನ್**, 1995]. ಜ್ಞಾನ ಎಂಬುದು ಬಾಹ್ಯ ಕಾಯ ಕುರಿತ ನೈಜ ತಿಳಿವಳಿಕೆ ಅಲ್ಲ. ಅದು ಕಾಯದೊಂದಿಗಿನ ಒಡನಾಟದ ಆಧಾರದ ಮೇಲೆ ಪ್ರತಿಯೊಬ್ಬರೂ ವೈಯಕ್ತಿಕ ನೆಲೆಯಲ್ಲಿ ಕಟ್ಟಿಕೊಳ್ಳಬೇಕಾದ ಮಾನಸಿಕ ಚಿತ್ರಣ. ರಾಚನಿಕ ವಿಧಾನದಲ್ಲಿ ವಿಶ್ವಾಸಾರ್ಹವಾದ ಮತ್ತು ಸವಾಲಿನಿಂದ ಕೂಡಿದ ಯೋಜನಾಕಾರ್ಯಗಳನ್ನು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಕಲಿಕೆಯ ಸಮುದಾಯದ ತಜ್ಞರು ಸಹಭಾಗಿತ್ವದ ನೆಲೆಯಲ್ಲಿ ಒಟ್ಟಾಗಿ ಕೈಗೊಳ್ಳುತ್ತಾರೆ. ವಾಸ್ತವ ಪ್ರಪಂಚದಲ್ಲಿ ಸಹಭಾಗಿತ್ವದ ತತ್ವಕ್ಕೆ ಬದ್ಧವಾಗಿರುವ ಕಲಿಕಾ ಸಮುದಾಯಗಳನ್ನು ಸೃಷ್ಟಿಸುವುದು ರಾಚನಿಕವಾದದ ಆಶಯಗಳಲ್ಲಿ ಒಂದು. ವಿಶ್ವಾಸಾರ್ಹ ಪರಿಸರದಲ್ಲಿ ಕಲಿಕಾರ್ಥಿಗಳು ತಮ್ಮ ಕಲಿಕೆಯ ಜವಾಬ್ದಾರಿಗಳನ್ನು ತಾವೇ ತೆಗೆದುಕೊಳ್ಳುತ್ತಾರೆ. ತಮ್ಮ ಕಲಿಕೆ ಮತ್ತು ಸಾಧನೆಗಳನ್ನು ವಿದ್ಯಾರ್ಥಿಗಳೇ ನಿರ್ದೇಶಿಸಿಕೊಳ್ಳುತ್ತಾರೆ. ಅವರೇ ನಿಗಾವಣೆ ಮಾಡಿಕೊಳ್ಳುತ್ತಾರೆ ಮತ್ತು ಈ ಕೆಲಸಗಳನ್ನು ಮಾಡುವುದಕ್ಕೆ ಅಗತ್ಯವಾದ **ಪರಾಸಂಜ್ಞಾನಾತ್ಮಕ (Meta cognitive)** ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ. ಒಂದು ಯುಕ್ತವಾದ ಚಟುವಟಿಕೆಯಲ್ಲಿ ಜನಗಳು ಸಹಭಾಗಿತ್ವದಲ್ಲಿ ಕಾರ್ಯನಿರತರಾದಾಗ, ಅವರಲ್ಲಿ ಪ್ರತಿಯೊಬ್ಬರೂ ತಮ್ಮದೇ ಆದ ಚೌಕಟ್ಟುಗಳು, ಗ್ರಹಿಕೆಗಳು ಮತ್ತು ಅನುಭವಗಳನ್ನು ಆ ಚಟುವಟಿಕೆಗೆ


Digitised by Bharatavani, CIIL

ತರುತ್ತಾರೆ. ಅವರಲ್ಲಿ ಪ್ರತಿಯೊಬ್ಬರೂ ಅವರ ಪರಿಗಣನೆಯಲ್ಲಿರುವ ಸಮಸ್ಯೆಯನ್ನು ವಿವಿಧ ದೃಷ್ಟಿಕೋನಗಳಿಂದ ಪರಾಮರ್ಶಿಸುತ್ತಾರೆ. ಈ ವೈವಿಧ್ಯಪೂರ್ಣ ದೃಷ್ಟಿಕೋನಕ್ಕೆ ತಂಡದ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡುತ್ತಾರೆ. ಆಗ ಪ್ರತಿಯೊಬ್ಬರೂ ಇತರರ ದೃಷ್ಟಿಕೋನದಿಂದ ಲಾಭ ಪಡೆದು ತಮ್ಮ ಸನ್ನಿವೇಶದೊಂದಿಗೆ ವ್ಯವಹರಿಸುವ ಮತ್ತು ಅರ್ಥಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಇತ್ಯಾತ್ಮಕತೆಯಿಂದ ಪಾಲ್ಗೊಳ್ಳುತ್ತಾರೆ. ಕೆಲವು ನಿರ್ದಿಷ್ಟ ರೀತಿಯ ತೊಡಗಿಕೊಳ್ಳುವಿಕೆ ಮತ್ತು ರಚನಾಶೀಲ ಚಟುವಟಿಕೆಗಳ ಮೂಲಕ ಕಲಿಕೆಯನ್ನು ಹೇಗೆ ಸುಗಮಗೊಳಿಸಬಹುದು ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ರಾಚನಿಕವಾದ ಒಂದು ಉತ್ತಮ ಚೌಕಟ್ಟನ್ನು ಒದಗಿಸುತ್ತದೆ. ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ ಮತ್ತು ರಾಜಕೀಯ ಸಂದರ್ಭಗಳಲ್ಲಿ ಕ್ರಿಯಾಶೀಲತೆಯಿಂದ ಪಾಲ್ಗೊಳ್ಳುವುದರ ಮೂಲಕ ಅರ್ಥವನ್ನು ನಮಗೆ ನಾವೇ ಕಟ್ಟಿಕೊಳ್ಳಬಹುದು ಎಂಬುದಕ್ಕೆ ರಾಚನಿಕವಾದ ಒತ್ತಾಸೆ ನೀಡುತ್ತದೆ. ಕ್ರಿಯಾಶೀಲ ಪಾಲ್ಗೊಳ್ಳುವಿಕೆ ಮತ್ತು ಅನುಭವಗಳ ಅರ್ಥಪೂರ್ಣ ವಿನಿಮಯದ ಪ್ರಕ್ರಿಯೆಯಲ್ಲಿ **ಸಂವಾದ** ಬಲು ನಿರ್ಣಾಯಕವಾದ ಅಂಶ.

ನಾವು ಕಲಿಯುವಾಗ ನಮ್ಮ ಮನಸ್ಸಿನಲ್ಲಿ ಯಾವ ಯಾವ ರೀತಿಯ ರಚನೆಗಳು ಹೇಗೆ ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ರಾಚನಿಕವಾದ ವಿಶದಪಡಿಸುತ್ತದೆ. **ಯಾವುದೇ ಸಂದರ್ಭ ಅಥವಾ ಸನ್ನಿವೇಶದಲ್ಲಿ ಉಂಟಾಗುವ ಕಲಿಕೆ ವ್ಯಕ್ತಿಗತವಾದದ್ದು ಎಂಬುದು ರಾಚನಿಕವಾದಿಗಳ ಮೂಲಭೂತ ಪ್ರಸ್ತಾವನೆಗಳಲ್ಲಿ ಒಂದು.** ಕಲಿಕೆಯ ಯಾವುದೇ ಒಂದು ಸಂದರ್ಭದಲ್ಲಿ ಇರುವ ಎಲ್ಲರೂ ಒಂದೇ ರೀತಿಯಲ್ಲಿ ಕಲಿಯುವುದಿಲ್ಲ ಮತ್ತು ಅವರ ಕಲಿಕೆ ಒಂದೇ ತೆರನಾಗಿ ಇರುವುದಿಲ್ಲ. ಏಕೆಂದರೆ ಕಲಿಕೆ ವ್ಯಕ್ತಿಗತವಾದ ಹಿನ್ನೆಲೆ, ವ್ಯಕ್ತಿಗತ ಅನುಭವ ಮತ್ತು ವ್ಯಕ್ತಿಗತವಾದ ಜ್ಞಾನರಚನಾ ಶೈಲಿಯನ್ನು ಅವಲಂಬಿಸಿರುತ್ತದೆ. ಹೀಗಾಗಿ **ಕಲಿಕೆ ಎಂಬುದು ಮಾಹಿತಿಯ ಯಾಂತ್ರಿಕ ವರ್ಗಾವಣೆ ಅಲ್ಲ. ಅದೊಂದು ಅತ್ಯಂತ ಕ್ರಿಯಾಶೀಲ ಅಂತರಕ್ರಿಯೆಗಳನ್ನು ಒಳಗೊಳ್ಳುವ ಚಲನಶೀಲ ಪ್ರಕ್ರಿಯೆ.** ಕಲಿಕೆಯ ಸಂದರ್ಭಗಳಲ್ಲಿ ಇರುವವರು ಆ ಸಂದರ್ಭಕ್ಕೆ ಸಂಬಂಧಿಸಿದ ಪೂರ್ವಕಲಿಕೆಯನ್ನು ಹೊತ್ತುತಂದಿರುತ್ತಾರೆ. ಉದ್ದಿಷ್ಟ ಪರಿಕಲ್ಪನೆಗಳ ಬಗ್ಗೆ ಪ್ರತಿಯೊಬ್ಬರಿಗೂ ಅವರದೇ ಆದ ಪೂರ್ವಾನುಭವಗಳು, ಅವರದೇ ಆದ ಮಾನಸಿಕ ಬಿಂಬನಗಳು ಇರುತ್ತವೆ. ಹೀಗಾಗಿ ಕಲಿಕೆಯ ಚಟುವಟಿಕೆಗಳು ಪ್ರತಿಯೊಬ್ಬರಿಗೂ ಅನನ್ಯವಾದ ವಿಶಿಷ್ಟ ಅನುಭವಗಳನ್ನು ಕೊಡುತ್ತವೆ. ಆದ್ದರಿಂದ ನಾವು ಕಲಿತದ್ದನ್ನು ಕುರಿತು ನಮ್ಮ ಮನಸ್ಸಿನಲ್ಲಿ ಪಡಿಮೂಡುವ ಬಿಂಬನಗಳು ಅನನ್ಯವಾಗಿರುತ್ತವೆ. ಹೀಗಾಗಿ ಪ್ರತಿಯೊಬ್ಬರೂ ಜ್ಞಾನವನ್ನು ಕಟ್ಟಿಕೊಳ್ಳುತ್ತಾ ಹೋಗುತ್ತಾರೆ. ಜ್ಞಾನವನ್ನು ಬೇರೆಯವರು ಕಟ್ಟಿಕೊಡಲು ಬರುವುದಿಲ್ಲ, ಅದನ್ನು ಪ್ರತಿಯೊಬ್ಬರೂ ಸ್ವತಃ ಕಟ್ಟಿಕೊಳ್ಳಬಹುದು, ಕಟ್ಟಿಕೊಳ್ಳಬೇಕು ಎಂಬುದು ರಾಚನಿಕರ ದೃಷ್ಟಿಕೋನ.

ಸಂಕ್ಷೇಪವಾಗಿ ಹೇಳುವುದಾದರೆ ಕಲಿಕೆಯನ್ನು ಕುರಿತ ಸದ್ಯದ ರಾಚನಿಕವಾದದ ನೆಲೆಗಳು ಇಂತಿವೆ: ಪ್ರತಿಯೊಬ್ಬರೂ ತಮ್ಮ ಪೂರ್ವಕಲಿಕೆಯೊಂದಿಗೆ ಹೊಸಕಲಿಕೆಯನ್ನು ಅರ್ಥಪೂರ್ಣ ರೀತಿಯಲ್ಲಿ ಅಣಿಗೊಳಿಸಿಕೊಳ್ಳುತ್ತಾ ತಮ್ಮ ಜ್ಞಾನವನ್ನು ತಾವೇ ಕಟ್ಟಿಕೊಳ್ಳುವ ಕ್ರಿಯಾಶೀಲ ಕರ್ತೃಗಳು. ಕಲಿಕೆಯ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ತಮ್ಮ ಮನಸ್ಸಿನಲ್ಲಿ ಈಗಾಗಲೇ ಅಚ್ಚಾಗಿರುವ ಪ್ರತಿಬಿಂಬಗಳೊಂದಿಗೆ ತಮ್ಮ ಹೊಸ ಅವಲೋಕನಗಳು ಮತ್ತು ಹೊಸ ಅನುಭವಗಳನ್ನು ಹೊಂದಿಸಿಕೊಳ್ಳುವುದರಲ್ಲಿ ನಿರತರಾಗುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರ ಮನಸ್ಸಿನ ಬಿಂಬಗಳು ಪರಿಷ್ಕಾರಗೊಳ್ಳುತ್ತಲೂ ಸುಧಾರಿಸುತ್ತಲೂ ಹೋಗುತ್ತವೆ. ಕಲಿಕೆ ಎಂಬುದು ಮಾಹಿತಿಗಳ ವರ್ಗಾವಣೆ ಎಂಬ ನಿಲುವನ್ನು ರಾಚನಿಕರು ತಿರಸ್ಕರಿಸುತ್ತಾರೆ. ತಾವು ಕಲಿಯುವುದನ್ನು ಅರ್ಥಪೂರ್ಣವಾಗಿಸಿಕೊಳ್ಳಲು ಕಲಿಯುವವರು ಸಕ್ರಿಯರಾಗಿರಬೇಕು, ಕೆಲವಾದರೂ ಪ್ರಮುಖ ಶೈಕ್ಷಣಿಕ ನಿರ್ಣಯಗಳನ್ನು ಕಲಿಯುವವರೇ ತೆಗೆದುಕೊಳ್ಳಬೇಕು ಎಂಬುದು ರಾಚನಿಕರ ಸ್ಪಷ್ಟ ನಿಲುವು. ಜ್ಞಾನ ಒತ್ತಡದಿಂದ ಮಾಹಿತಿಯನ್ನು ಇನ್ನೊಬ್ಬರ ಮನಸ್ಸಿನೊಳಕ್ಕೆ ತುರುಕುವ ಪ್ರಕ್ರಿಯೆ ಅಲ್ಲ. ಹೀಗಾಗಿ **ಕಲಿಕೆಯ ಪ್ರಕ್ರಿಯೆಯ ಕೇಂದ್ರದಲ್ಲಿ ಎಲ್ಲಿಯವರೆಗೆ ಕಲಿಯುವವರು ಇರುವುದಿಲ್ಲವೋ ಅಲ್ಲಿಯವರೆಗೆ ಕಲಿಕೆ ಅರ್ಥಪೂರ್ಣವಾಗದು** ಎಂಬುದು ರಾಚನಿಕವಾದಿಗಳ ದೃಷ್ಟಿ.

### ಕಲಿಕೆ ಕುರಿತು ರಾಚನಿಕವಾದದ ದೃಷ್ಟಿ

1. ಕಲಿಕೆ ಎಂಬುದು ಅರ್ಥಕಟ್ಟುವ ಅಥವಾ ಹೊಸ ಅರ್ಥಗಳನ್ನು ಹುಡುಕಿಕೊಳ್ಳುವ ಕ್ರಿಯಾಶೀಲ ಪ್ರಕ್ರಿಯೆ. ಆದ್ದರಿಂದ ಕಲಿಕೆಯು ಯಾವುದರ ಅರ್ಥವನ್ನು ಕಲಿಕಾರ್ಥಿಗಳು ಹುಡುಕುತ್ತಿದ್ದಾರೋ ಅಲ್ಲಿಂದ ಆರಂಭಗೊಳ್ಳಬೇಕು.

2. ಅರ್ಥಕಟ್ಟುವ ಪ್ರಕ್ರಿಯೆ ಬಿಡಿಗಳನ್ನೂ ಒಳಗೊಳ್ಳುತ್ತದೆ, ಇಡಿಯನ್ನೂ ಒಳಗೊಳ್ಳುತ್ತದೆ. ಬಿಡಿಗಳನ್ನು ಇಡಿಯಾದುದರ ಭಾಗವೆಂದು ಪರಿಗಣಿಸಿ ನೋಡಿದಾಗ ಅರ್ಥಕಟ್ಟುವಿಕೆ ಸುಗಮಗೊಳ್ಳುತ್ತದೆ. ಆದ್ದರಿಂದ ಕಲಿಕೆಯ ಪ್ರಕ್ರಿಯೆಗಳು ಮೂಲಭೂತ ಪರಿಕಲ್ಪನೆಗಳ ಕಡೆಗೆ ಗಮನವೀಯಬೇಕೇ ಹೊರತು ಬಿಡಿ ಬಿಡಿಯಾಗಿ ನಿಲ್ಲುವ ಮಾಹಿತಿಗಳ ಕಡೆಗಲ್ಲ.

3. ಕಲಿಕೆ ಸುಗಮವಾಗಿ ಆಗಬೇಕಾದರೆ, ಕಲಿಯುವವರ ಮಾನಸಿಕ ಮಾದರಿಗಳನ್ನು ಮೊದಲು ನಾವು ಅರ್ಥಮಾಡಿಕೊಳ್ಳಬೇಕು. ಅವರ ಮನಸ್ಸಿನಲ್ಲಿ ಈಗಾಗಲೇ ರೂಪುಗೊಂಡಿರುವ ಪ್ರತಿಮೆಗಳ ಸ್ವಭಾವ, ಅವರ ಮಾನಸಿಕ ಮಾದರಿಗಳಿಗೆ ಪೂರಕವಾಗಿ ಅವರು ಇಟ್ಟುಕೊಂಡಿರುವ ಸಮರ್ಥನೆಗಳು ಮತ್ತು ಅವರ ಪೂರ್ವಾನುಭವಗಳ ಗ್ರಹಿಕೆ ಇಲ್ಲದೇ ಇರುವಾಗ ಅವರಿಗೆ ಅರ್ಥಪೂರ್ಣ ಕಲಿಕೆಯ ಅನುಭವಗಳನ್ನು ಒದಗಿಸುವುದು ಸಾಧ್ಯವಿಲ್ಲ.

4. ಪ್ರತಿಯೊಬ್ಬ ಕಲಿಕಾರ್ಥಿಯೂ ತನ್ನದೇ ಆದ ಅರ್ಥವನ್ನು ಕಟ್ಟಿಕೊಳ್ಳುವುದಕ್ಕೆ ಅನುವುಮಾಡಿಕೊಡುವುದೇ ಕಲಿಕೆಯ ಉದ್ದೇಶ. ಬಿಡಿ ಬಿಡಿ ಮಾಹಿತಿಗಳನ್ನು ಕಂಠಸ್ಥಗೊಳಿಸಿ ಗಿಣಿಪಾಠ ಒಪ್ಪಿಸುವುದು ಕಲಿಕೆ ಅಲ್ಲ. ಶಿಕ್ಷಣವು ತನ್ನ ಮೂಲ ಸ್ವರೂಪದಲ್ಲಿ ಅಂತರಶಿಸ್ತೀಯ ನೆಲೆಗಳನ್ನು ಉಳ್ಳದ್ದು. ಆದ್ದರಿಂದ ಮೌಲ್ಯನಿರ್ಧಾರಣೆಯ ಪ್ರಕ್ರಿಯೆಯನ್ನು ಕಲಿಕೆಯ ಅಂತರ್ಗತ ಭಾಗವಾಗಿ ನೋಡುವುದು ಯುಕ್ತ. ಕಲಿಕಾರ್ಥಿಗಳಿಗೆ ಅವರವರ ಕಲಿಕೆಯ ಗುಣಮಟ್ಟ ಕುರಿತು ಮರುಉಣಿಕೆ (Feedback) ನೀಡುವುದು ಮೌಲ್ಯಮಾಪನದ ಪ್ರಮುಖ ಉದ್ದೇಶ.

### ಜ್ಞಾನಸಿದ್ಧಾಂತದ ರಾಚನಿಕವಾದಿ ನೆಲೆಗಳು

1. ಜ್ಞಾನ ಕಟ್ಟಿಕೊಳ್ಳಬಹುದಾದದ್ದೇ ಹೊರತು ವರ್ಗಾವಣೆ ಮಾಡುವಂಥದ್ದಲ್ಲ.

2. ಪೂರ್ವಜ್ಞಾನ ಮತ್ತು ಪೂರ್ವಾನುಭವಗಳು ಕಲಿಕೆಯ ಪ್ರಕ್ರಿಯೆಯನ್ನು ಪ್ರಭಾವಿಸುತ್ತವೆ.

3. ಆರಂಭಿಕ ಗ್ರಹಿಕೆಗಳು ಸ್ಥಾನಿಕವಾಗಿರುತ್ತವೆಯೇ ಹೊರತು ಜಾಗತಿಕವಾಗಿರುವುದಿಲ್ಲ.

4. ಉಪಯುಕ್ತ ಜ್ಞಾನರಚನೆಗಳನ್ನು ಕಟ್ಟುವ ಪ್ರಕ್ರಿಯೆಗೆ ಪ್ರಯತ್ನಶೀಲತೆಯ ಜೊತೆಗೆ ಅರ್ಥಪೂರ್ಣ ಕಲಿಕೆಯ ಅನುಭವಗಳೂ ಬೇಕು.

Digitised by Bharatavani, CIIL

ಬೋಧನೆಯ ಸಾಂಪ್ರದಾಯಿಕ ವಿಧಾನಗಳು ಜ್ಞಾನವನ್ನು ಜ್ಞೇಯನಿಷ್ಠ ನೆಲೆಯಿಂದ ಪರಿಭಾವಿಸುತ್ತವೆ. ಜ್ಞೇಯನಿಷ್ಠ ಚೌಕಟ್ಟಿನಲ್ಲಿ ಶಿಕ್ಷಕರು ಕಲಿಕಾರ್ಥಿಗಳನ್ನು ನಿಷ್ಕ್ರಿಯ ಗ್ರಾಹಕರು ಎಂದು ಪರಿಗಣಿಸಿ ಅವರಿಗೆ ಜ್ಞಾನವನ್ನು ವರ್ಗಾಯಿಸಲು ಯತ್ನಿಸುತ್ತಾರೆ. ಶಿಕ್ಷಕರಿಗೆ ಎಲ್ಲವೂ ಗೊತ್ತಿದೆ, ಅವರು ಜ್ಞಾನದ ಭಂಡಾರ ಆಗಿರುವುದರಿಂದ ಸರಿಯಾದ ಜ್ಞಾನ ಮತ್ತು ಸಮರ್ಪಕ ಉತ್ತರಗಳು ಕೇವಲ ಶಿಕ್ಷಕರಿಂದ ಮಾತ್ರ ದೊರಕುವುದು ಸಾಧ್ಯ ಎಂಬುದು ಸಾಂಪ್ರದಾಯಿಕ ನೆಲೆಗಳ ನಂಬಿಕೆ. ಈ ನಂಬಿಕೆಗೆ ವ್ಯತಿರಿಕ್ತವಾದ ನಿಲುವನ್ನು ರಾಚನಿಕವಾದಿ ನೆಲೆಗಟ್ಟು ತಳೆಯುತ್ತದೆ. ಇದರ ಪ್ರಕಾರ ಜ್ಞಾನವು ಜ್ಞಾತೃನಿಷ್ಠವಾದದ್ದು ಮತ್ತು ಕಲಿಕಾರ್ಥಿಗಳು ತಮ್ಮ ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ತಾವು ಪಡೆಯುವ ಅನುಭವಗಳಿಂದ ಜ್ಞಾನವನ್ನು ಕಟ್ಟಿಕೊಳ್ಳುತ್ತಾ ಹೋಗುತ್ತಾರೆ.

**ಕಲಿಕೆ ಕುರಿತು ರಾಚನಿಕವಾದಿಗಳ ವಿಚಾರಧಾರೆ**

ರಾಚನಿಕವಾದಿಗಳ ದೃಷ್ಟಿಯಲ್ಲಿ ಮನಸ್ಸಿನಲ್ಲಿ ಮೂಡುವುದು ಎಂಬುದು ಹೊರಗಿನ ವಾಸ್ತವತೆಯ ಆಂತರಿಕ ಪ್ರತಿರೂಪಗಳೇ ಆಗಿವೆ. ಈ ಪ್ರತಿರೂಪಗಳೇ ವಾಸ್ತವತೆಗಳು. ಜ್ಞಾನ ಎಂಬುದು ಹೊರಗಡೆ ಇರುವುದಿಲ್ಲ. ಅದು ಇರುವುದು ಮನಸ್ಸಿನ ಒಳಗೇ. ಆದ್ದರಿಂದ ಪ್ರಪಂಚವನ್ನು ವ್ಯಕ್ತಿಗತವಾಗಿ ಅರ್ಥೈಸುವಿಕೆಯ ಪ್ರತಿಫಲವೇ ಕಲಿಕೆ. ಹೀಗಾಗಿ **ಕಲಿಕೆ ಮತ್ತು ಜ್ಞಾನ ಎಂಬುದು ವ್ಯಕ್ತಿನಿಷ್ಠವಾದುವು**. ಮನಸ್ಸಿನ ಆಲೋಚನೆಗಳು ಆಯಾ ವ್ಯಕ್ತಿಯ ಗ್ರಹಿಕೆ ಮತ್ತು ಅನುಭವಗಳ ಆಧಾರದ ಮೇಲೆ ರೂಪುಗೊಳ್ಳುತ್ತವೆ. ಆದ್ದರಿಂದ ಅರ್ಥಕಟ್ಟುವಿಕೆಯು ಆಂತರಿಕವಾಗಿ ರಚಿತಗೊಳ್ಳುತ್ತದೆ ಮತ್ತು ಅನುಭವಗಳಿಂದ ರೂಪುಗೊಳ್ಳುತ್ತದೆ. ಅರ್ಥಕಟ್ಟುವಿಕೆಯ ಪ್ರಕ್ರಿಯೆಗೆ ಇಡಿಯ ಗ್ರಹಿಕೆಯೂ ಬೇಕು ಮತ್ತು ಬಿಡಿಗಳ ಗ್ರಹಿಕೆಯೂ ಬೇಕು. ವಾಸ್ತವವಾಗಿ ಕಲಿಕೆ ಎಂಬುದು 'ಅರ್ಥಗಳ ಹುಡುಕಾಟ'. ಕಲಿಕೆ ಎಂಬುದು ಜ್ಞಾನವನ್ನು ಇತರರಿಂದ ಪಡೆದುಕೊಳ್ಳುವ ಕ್ರಿಯೆ ಅಲ್ಲ. ಕಲಿಕಾರ್ಥಿಗಳು ಮಾಹಿತಿಗಳ 'ನಿಷ್ಕ್ರಿಯ ಸ್ವೀಕಾರಿಗಳು' ಅಲ್ಲ. ಬದಲಾಗಿ ಅವರು ಅರ್ಥ ಹುಡುಕುವ ಪ್ರಕ್ರಿಯೆಯಲ್ಲಿ ಕ್ರಿಯೆಯಲ್ಲಿ ಪ್ರಧಾನ ಭಾಗೀದಾರರು. ಅವರು ತಮ್ಮ ಜ್ಞಾನವನ್ನು ಸ್ವತಃ ತಾವೇ ಕಟ್ಟಿಕೊಳ್ಳುವ ಮತ್ತು ಸಮಸ್ಯೆಗಳಿಗೆ ತಮ್ಮದೇ ಆದ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ನಿರತರಾಗಿರುವವರು. ಅವರು ಹೊಸತನ್ನು ಕಲಿಯುವಾಗ ಅವರ ಮನಸ್ಸಿನಲ್ಲಿ ಹಲವು ಪೂರ್ವಗ್ರಹಿಕೆಗಳು ಇದ್ದೇ ಇರುತ್ತವೆ. ಆ ನೆಲೆಯಲ್ಲಿ ಅವರು ಹೊಸ ಅನುಭವಗಳನ್ನು ಅವಲೋಕಿಸುತ್ತಾರೆ. ಅವರ ಪೂರ್ವಗ್ರಹಿಕೆಗಳು ಹೊಸ ಅನುಭವಗಳನ್ನು ಅಂತರ್ಗತಗೊಳಿಸಿಕೊಳ್ಳುವುದಕ್ಕೆ ಕೆಲವೊಮ್ಮೆ ಪೂರಕವಾಗಿರಬಹುದು ಕೆಲವೊಮ್ಮೆ ಅಡ್ಡಿಯಾಗಬಹುದು. ಅದೇನೇ ಇದ್ದರೂ ಅವರ ಪೂರ್ವಗ್ರಹಿಕೆಗಳು ಮತ್ತು ಪೂರ್ವಾನುಭವಗಳನ್ನು ಹೊರಗಿಟ್ಟು ಕಲಿಕೆ ಉಂಟುಮಾಡುವುದು ಸಾಧ್ಯವಲ್ಲ. ಏಕೆಂದರೆ ಅವರು ತಮ್ಮ ಪೂರ್ವಕಲ್ಪನೆಗಳ ಆಧಾರದ ಮೇಲೆಯೇ ಹೊಸ ಅನುಭವಗಳನ್ನು ಅರ್ಥೈಸಿಕೊಳ್ಳಲು ಎಳಸುತ್ತಾರೆ. ಇದು ಸಾಧ್ಯವಾಗದಾಗ ತಮ್ಮ ಪೂರ್ವಕಲ್ಪನೆಗಳಿಗೆ ಹೊಸ ಅರ್ಥವನ್ನು ಕೊಟ್ಟುಕೊಂಡು ಕಲಿಕೆಯಲ್ಲಿ ಮುಂದೆ ಸಾಗುತ್ತಾರೆ. ಆದ್ದರಿಂದ ಕಲಿಕೆಯು ಕಲಿಕಾರ್ಥಿಗಳ ಪೂರ್ವಗ್ರಹಿಕೆಗಳು, ಪೂರ್ವಕಲ್ಪನೆಗಳು ಮತ್ತು ಪೂರ್ವಾನುಭವಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಪುನರ್ಯೋಜಿಸಿಕೊಳ್ಳುವುದನ್ನು ಒಳಗೊಳ್ಳುತ್ತದೆ. ಇದು ಕಲಿಕೆಗೆ ಅನಿವಾರ್ಯವಾದ ಒಂದು ಪ್ರಕ್ರಿಯೆ. ಈ ಪ್ರಕ್ರಿಯೆಯನ್ನು ಸಾಮಾಜಿಕ ಅಂತರಕ್ರಿಯೆಗಳು ಸುಗಮಗೊಳಿಸುತ್ತವೆ. ಆದ್ದರಿಂದ ಸಾಮಾಜಿಕವಾಗಿ ತೊಡಗಿಸಿಕೊಳ್ಳುವಿಕೆಯಿಂದ ಕಲಿಕೆ ಹೆಚ್ಚು ಸುಗಮಗೊಳ್ಳುತ್ತದೆ.

ರಾಚನಿಕವಾದದಲ್ಲಿ ವಿವಿಧ ಆಲೋಚನೆಗಳ ಹಲವು ಪ್ರಕಾರಗಳಿವೆ. ಇವುಗಳಲ್ಲಿ ಪ್ರತಿಯೊಂದೂ ರಾಚನಿಕವಾದದ ಬೇರೆ ಬೇರೆ ಮುಖಗಳನ್ನು ಪರಿಚಯಿಸುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಟ್ಟಿದೆ:

**ವ್ಯಕ್ತಿವಿಶಿಷ್ಟ ರಾಚನಿಕವಾದ:** ಇದು ರಾಚನಿಕವಾದಗಳಲ್ಲೆಲ್ಲಾ ಅತ್ಯಂತ ಸರಳವಾದದ್ದು. ಇದನ್ನು ಕೆಲವೊಮ್ಮೆ ವೈಯಕ್ತಿಕ ರಾಚನಿಕವಾದ ಎಂದೂ ಕರೆಯುತ್ತಾರೆ. **ಜೀನ್ ಪಿಯಾಜೆ** ಅವರು ಈ ವಾದದ ಆದ್ಯ ಪ್ರವರ್ತಕರು. ಅವರ ಪ್ರಕಾರ 'ಕಲಿಕಾರ್ಥಿಗಳು ಸಕ್ರಿಯ ಪಾಲ್ಗೊಳ್ಳುವಿಕೆಯ ಮೂಲಕ ಜ್ಞಾನವನ್ನು ರಚಿಸಿಕೊಳ್ಳುತ್ತಾರೆಯೇ ಹೊರತು ಅವರು ಜ್ಞಾನವನ್ನು ತಮ್ಮ ಪರಿಸರದಿಂದ ನಿಷ್ಕ್ರಿಯವಾಗಿ ಸ್ವೀಕರಿಸುವುದಿಲ್ಲ'. ಜ್ಞಾನ ರಚಿಸಿಕೊಳ್ಳುವ ಕ್ರಿಯೆಗೆ ಅವರ ಆರಂಭಿಕ ಜ್ಞಾನವೇ ಭೂಮಿಕೆ. ಅದರ ಅಡಿಪಾಯದ ಮೇಲೆ ಅವರು ಹೊಸ ಹೊಸ ಅನುಭವಗಳನ್ನು ಈಗಾಗಲೇ ಇರುವ ಜ್ಞಾನದೊಂದಿಗೆ ಅಣಿಗೊಳಿಸಿಕೊಳ್ಳುವುದರ ಮೂಲಕ ಜ್ಞಾನವನ್ನು ರಚಿಸಿಕೊಳ್ಳುತ್ತಾರೆ ಮತ್ತು ಅವರ ಈಗಿನ ಜ್ಞಾನವನ್ನು ಇನ್ನಷ್ಟು ಪಕ್ವಗೊಳಿಸಿಕೊಳ್ಳುತ್ತಾರೆ.

**ತೀವ್ರಗಾಮಿ ರಾಚನಿಕವಾದ:** ತೀವ್ರಗಾಮಿ ರಾಚನಿಕವಾದವೂ ಕೂಡ ವ್ಯಕ್ತಿವಿಶಿಷ್ಟ ರಾಚನಿಕವಾದದ ನೆಲೆಯನ್ನು ಒಪ್ಪುತ್ತದೆ. ಆ ನೆಲೆಯೊಂದಿಗೆ ಇನ್ನೂ ಒಂದು ತತ್ವವನ್ನು ತೀವ್ರಗಾಮಿ ರಾಚನಿಕವಾದ ಒಳಗೊಳ್ಳುತ್ತದೆ: ಜ್ಞಾನ ರಚನೆ ಎಂಬುದು ಅನುಭವಗಳಿಗೆ ಸ್ವೀಕಾರಾರ್ಹ ಅರ್ಥ ಕೊಡುವ ನಿಟ್ಟಿನಲ್ಲಿ ವ್ಯಕ್ತಿಯು ಮಾಡಿಕೊಳ್ಳಬೇಕಾದ ಚಲನಶೀಲ ಹೊಂದಾಣಿಕೆಯ ಪ್ರಕ್ರಿಯೆ. ಜ್ಞಾತೃ ವಾಸ್ತವದಲ್ಲಿ ಹೊರಗಿನ 'ನೈಜ ಪ್ರಪಂಚ'ದ ಜ್ಞಾನವನ್ನು ಕಟ್ಟಿಕೊಳ್ಳುವುದಿಲ್ಲ. ಬದಲಾಗಿ ತನ್ನ ಅನುಭವಗಳಿಗೆ ಅರ್ಥ ಕಟ್ಟುತ್ತಾ ಹೋಗುವುದು ಮತ್ತು ಹಾಗೆ ಮಾಡುವುದಕ್ಕೆ ಅಗತ್ಯವಿರುವ ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಕಲಿಕಾರ್ಥಿಯ ಕೆಲಸ. ಬಾಹ್ಯ ವಾಸ್ತವತೆ ಎಂಬುದು ಇದೆ ಎಂಬ ಭಾವನೆಯನ್ನು ತೀವ್ರಗಾಮಿ ರಾಚನಿಕವಾದ ಪ್ರಶ್ನೆಗೆ ಒಳಪಡಿಸುತ್ತದೆ. ಜ್ಞೇಯನಿಷ್ಠ ವಾಸ್ತವತೆ ಎಂಬುದು ಇಲ್ಲವೇ ಇಲ್ಲ ಎಂಬುದು ತೀವ್ರಗಾಮಿ ರಾಚನಿಕರ ನಿಲುವಲ್ಲ. ಬದಲಾಗಿ ಆ ವಾಸ್ತವತೆಯ ಸ್ವರೂಪ ಮತ್ತು ಸ್ವಭಾವಗಳು ಏನು ಎಂಬುದನ್ನು ತಿಳಿಯುವುದು ಶಕ್ಯವಲ್ಲ ಎಂಬುದು ಅವರ ನಿಲುವು. ಮನಸ್ಸು ಹೊಸ ಅನುಭವಗಳನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಜ್ಞಾನದ ಚೌಕಟ್ಟಿನಲ್ಲಿ ಅಣಿಗೊಳಿಸಿಕೊಳ್ಳಲು ಯತ್ನಿಸುತ್ತದೆ. ಕೆಲವೊಮ್ಮೆ ಆ ಚೌಕಟ್ಟು ನೆರವಿಗೆ ಬರುವುದಿಲ್ಲ. ಇದರಿಂದ ಎದುರಾಗುವ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ವ್ಯಕ್ತಿಯು ಹೊಸ ಅನುಭವಗಳನ್ನು ಅಳವಡಿಸಿಕೊಳ್ಳುವುದಕ್ಕೆ ಅನುಕೂಲಕರವಾದ ರೀತಿಯಲ್ಲಿ ತನ್ನ ಮಾನಸಿಕ ರಚನೆಗಳನ್ನು ಪರಿಷ್ಕರಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಇದೊಂದು ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆ. ಈ ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಹಲವು ಹತ್ತು ಮಾರ್ಗಗಳು ಇರುವುದು ಸಾಧ್ಯ. ತೀವ್ರಗಾಮಿ ರಾಚನಿಕವಾದ ಕೂಡ ಒಂದು ಅರ್ಥದಲ್ಲಿ ವ್ಯಕ್ತಿವಿಶಿಷ್ಟ ರಾಚನಿಕವಾದವೇ ಆಗಿದೆ. ಏಕೆಂದರೆ ಇಲ್ಲಿಯೂ ಕೂಡ ಆದ್ಯ ಗಮನ ಇರುವುದು ಜ್ಞಾನರಚಿಸಿಕೊಳ್ಳುವ ಕರ್ತೃವಿನ ಮೇಲೆ ಮಾತ್ರ. ಕಲಿಕೆಯನ್ನು ಪ್ರಭಾವಿಸುವ ಪರಿಸರ ಕುರಿತು ಹೆಚ್ಚಿನ ನಿರ್ವಚನೆ ಈ ವಾದದಲ್ಲಿ ಕಂಡುಬರುವುದಿಲ್ಲ.

**ಸಾಮಾಜಿಕ ರಾಚನಿಕವಾದ:** ಜ್ಞಾನ ರಚನೆಯ ಪ್ರಕ್ರಿಯೆ ಉಂಟಾಗುವುದು ಸಾಮಾಜಿಕ ಸಂದರ್ಭಗಳಲ್ಲಿ. ಜ್ಞಾನಾರ್ಥಕ ಕಾರ್ಯಭಾರಗಳನ್ನು ಸಾಮಾಜಿಕ ಕಾರ್ಯಭಾರಗಳಿಂದ ಪ್ರತ್ಯೇಕಿಸಿ ನೋಡಲು ಬರುವುದಿಲ್ಲ. ಏಕೆಂದರೆ ಪ್ರತಿಯೊಂದು ಜ್ಞಾನಸಂಬಂಧಿ ಕಾರ್ಯಕ್ಕೂ ಒಂದು ಸಾಮಾಜಿಕ ಆಯಾಮ ಇದ್ದೇ ಇರುತ್ತದೆ [**ಪೆರೆಟ್–**


Digitised by Bharatavani, CIIL

**ಕ್ಲೆರ್ಮಾಂಟ್**, 1993]. ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯ ಮೇಲೆ ಸಾಮಾಜಿಕ ಪರಿಸರದ ಪ್ರಭಾವ ಗುರುತರವಾದದ್ದು. ಕಲಿಕಾರ್ಥಿಯ ಸಾಮಾಜಿಕ ಪ್ರಪಂಚ ಹಲವು ವ್ಯಕ್ತಿಗಳನ್ನು ಒಳಗೊಳ್ಳುತ್ತದೆ. ಅವರಲ್ಲಿ ಶಿಕ್ಷಕರು, ಸಹಪಾಠಿಗಳು, ಪೋಷಕರು, ಆಡಳಿತಾಧಿಕಾರಿಗಳು, ನೆರೆಹೊರೆಯವರು ಮತ್ತು ಸ್ನೇಹಿತರು ಮುಖ್ಯವಾದವರು. ಕಲಿಕೆಯನ್ನು ಪ್ರಭಾವಿಸುವವರೆಲ್ಲರೂ ವ್ಯಕ್ತಿಯ ಸಾಮಾಜಿಕ ಪ್ರಪಂಚದ ಭಾಗವೇ ಆಗಿರುತ್ತಾರೆ. ಇವರೊಂದಿಗೆ ಕಲಿಕಾರ್ಥಿ ನಡೆಸುವ ವಿಚಾರ ವಿನಿಮಯ ಮತ್ತು ಸಹಭಾಗಿತ್ವದಲ್ಲಿ ಕೈಗೊಳ್ಳುವ ಚಟುವಟಿಕೆಗಳು ಕಲಿಕೆಯ ಮೇಲೆ ಇತ್ಯಾತ್ಮಕ ಪರಿಣಾಮವನ್ನು ಬೀರುತ್ತವೆ. ವ್ಯಕ್ತಿಯ ಜ್ಞಾನರಚನೆಯ ಕೈಂಕರ್ಯದಲ್ಲಿ ಸಾಮಾಜಿಕ ಪರಿಸರದ ಪ್ರಭಾವವನ್ನು ಕೂಲಂಕಷವಾಗಿ ಪರಿಶೀಲಿಸಿದವರಲ್ಲಿ ವೈಗಾಸ್ಕಿ ಅವರು ಮೊದಲಿಗರು. ಇವರ ಪ್ರಕಾರ, ಕಲಿಕೆ ಅರ್ಥಾತ್ ಜ್ಞಾನರಚನೆ ಎರಡು ಹಂತಗಳಲ್ಲಿ ಜರುಗುತ್ತದೆ. ಇತರರೊಂದಿಗೆ ಕಲಿಕಾರ್ಥಿ ನಡೆಸುವ ಅಂತರಕ್ರಿಯೆಗಳಿಂದ ಲಭಿಸುವ ಅನುಭವಗಳು ಮತ್ತು ಗ್ರಹಿಕೆಗಳನ್ನು ಮೊದಲನೇ ಹಂತವು ಒಳಗೊಳ್ಳುತ್ತದೆ. ಈ ಅನುಭವಗಳು ಮತ್ತು ಗ್ರಹಿಕೆಗಳು ಈಗಾಗಲೇ ಮನಸ್ಸಿನಲ್ಲಿ ಇರುವ ರಚನೆಗಳೊಂದಿಗೆ ಹದವಾಗಿ ಮೇಳೈಸುವಂತೆ ಮಾಡುವುದು ಜ್ಞಾನ ರಚನೆಯ ಎರಡನೇ ಹಂತ. ಜ್ಞಾನ ರಚನೆಯ ಪ್ರಕ್ರಿಯೆಯ ಭಾಗವಾಗಿ ನಡೆಯುವ ಅಂತರಕ್ರಿಯೆಯಲ್ಲಿ ಹೆಚ್ಚು ಅನುಭವವುಳ್ಳ ಪಾಲುದಾರರು ಕಲಿಕಾರ್ಥಿಯ ತಿಳಿವಳಿಕೆಯ ವಿಕಾಸಕ್ಕೆ ಅನುಕೂಲವಾಗುವಂತೆ ತಮ್ಮ ಅನುಭವಗಳ **ಅಟ್ಟಣಿಗೆಯ (Scaffold)** ನೆರವು ನೀಡುತ್ತಾರೆ. ಅವರು ಒದಗಿಸುವ ಅಟ್ಟಣಿಗೆಯ ನೆರವಿನಿಂದ ಕಲಿಕಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಜ್ಞಾನವನ್ನು ಕಟ್ಟಿಕೊಳ್ಳುತ್ತಾರೆ.

**ಸಾಂಸ್ಕೃತಿಕ ರಾಚನಿಕವಾದ:** ಕಲಿಕೆಯ ಮೇಲೆ ಪ್ರಭಾವಿಸುವ ಅಂಶಗಳಲ್ಲಿ ಕಲಿಕಾರ್ಥಿಯ ಸದ್ಯದ ಸಾಮಾಜಿಕ ಪರಿಸರದ ಮಹತ್ವವನ್ನು ಸಾಮಾಜಿಕ ರಾಚನಿಕವಾದವು ಕಟ್ಟಿಕೊಡುತ್ತದೆ. ಸಾಮಾಜಿಕ ಪರಿಸರದಿಂದಾಚೆಗೆ ಇರುವ ಚರಾಂಶಗಳು ಕಲಿಕೆಯನ್ನು ಪ್ರಭಾವಿಸುತ್ತವೆಯೇ? ಹೌದು ಎನ್ನುತ್ತದೆ ಸಾಂಸ್ಕೃತಿಕ ರಾಚನಿಕವಾದ. ಪ್ರತಿಯೊಬ್ಬರೂ ತಮ್ಮ ತಮ್ಮ ಸಾಂಸ್ಕೃತಿಕ ಶ್ರೀಮಂತಿಕೆ ಮತ್ತು ಹೊರೆಗಳೊಂದಿಗೆ ಕಲಿಯುವ ಸನ್ನಿವೇಶಕ್ಕೆ ಬರುತ್ತಾರೆ. ಪ್ರತಿಯೊಬ್ಬರಿಗೂ ಅವರದೇ ಆದ ಭಾಷೆ, ನಂಬಿಕೆಗಳು, ಧಾರ್ಮಿಕತೆ, ಅನುವಂಶಿಕ ಲಕ್ಷಣಗಳು, ಸಂಪ್ರದಾಯಗಳು, ಜೀವನ ಮೌಲ್ಯಗಳು ಇರುತ್ತವೆ. ಜ್ಞಾನ ರಚನೆ ಎಂಬುದು ಈ ಎಲ್ಲಾ ಕಾರಕಗಳನ್ನೊಳಗೊಳ್ಳುವ ಸಾಂಸ್ಕೃತಿಕ ಪ್ರಭಾವದಿಂದ ಹೊರತಾದ ಪ್ರಕ್ರಿಯೆ ಅಲ್ಲ. ಇವೆಲ್ಲವೂ ಕಲಿಕೆಯನ್ನು ಅರ್ಥಾತ್ ಜ್ಞಾನ ರಚನೆಯ ಪ್ರಕ್ರಿಯೆಯನ್ನು ಪ್ರಭಾವಿಸುತ್ತವೆ. ಕಲಿಕೆಗೆ ಉಪಯೋಗಿಸುವ ಸಾಧನಗಳು ಸಾಂಸ್ಕೃತಿಕ ಒಲುಮೆಉಳ್ಳವು ಗಳಾಗಿರುವುದರಿಂದ ಸಾಧನಗಳು ಕೆಲವರ ಕಲಿಕೆಯನ್ನು ಸುಗಮಗೊಳಿಸುತ್ತವೆ ಮತ್ತು ಇನ್ನು ಕೆಲವರ ಕಲಿಕೆಗೆ ಅಡ್ಡಿಯಾಗಿ ಪರಿಣಮಿಸುತ್ತವೆ. ಉನ್ನತಮಟ್ಟದ ಮಾನಸಿಕ ಚಟುವಟಿಕೆಗಳು ಸಾಂಸ್ಕೃತಿಕ ಕಾರಕಗಳು **ಮಧ್ಯಸ್ಥಿಕೆಯಲ್ಲಿಯೇ (Mediation)** ಜರುಗುತ್ತವೆ. ಹೀಗಾಗಿ, ಜ್ಞಾನರಚನೆಗೆ ಸಂಬಂಧಪಟ್ಟಂತೆ ಯಾವ ಯಾವ ಅಂಶಗಳನ್ನು ಸಾಂಸ್ಕೃತಿಕ ಕಾರಕಗಳು ಪ್ರಭಾವಿಸುತ್ತವೆ ಎಂಬುದನ್ನು ಸಾಂಸ್ಕೃತಿಕ ರಾಚನಿಕವಾದ ಪರಿಗಣಿಸುತ್ತದೆ.

**ವಿಮರ್ಶಾತ್ಮಕ ರಾಚನಿಕವಾದ:** ಜ್ಞಾನ ರಚನೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಜರುಗುತ್ತದೆ ಎಂಬುದು ನಿಜ. ಜ್ಞಾನ ರಚನೆಯ ಉದ್ದೇಶವಾದರೂ ಏನು? ಎಂಬ ಪ್ರಶ್ನೆ ವಿಮರ್ಶಾತ್ಮಕ ರಾಚನಿಕವಾದದ ಕೇಂದ್ರ ವಿಷಯ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸುಧಾರಣೆಯೇ ಜ್ಞಾನ ರಚನೆಯ ಪರಮಾಂತಿಮ ಗುರಿ ಎಂಬುದು ವಿಮರ್ಶಾತ್ಮಕ ರಾಚನಿಕವಾದದ ಸ್ಪಷ್ಟ ನಿಲುವು. ಸಮಾಜದ ಸುಧಾರಣೆ ಆಗಬೇಕಾದರೆ ಮತ್ತು ಸಾಂಸ್ಕೃತಿಕ ಪರಿವರ್ತನೆಯ ಆಶಯ ಸಾಕಾರವಾಗಬೇಕಾದರೆ ನಾವು ನಮ್ಮ ನಂಬಿಕೆಗಳು, ಮೌಲ್ಯಗಳು, ಆಚರಣೆಗಳು ಮತ್ತು ಚಾಲ್ತಿಯಲ್ಲಿರುವ ದಮನಕಾರಿ ಸಾಮಾಜಿಕ ಸಂಬಂಧಗಳನ್ನು ಪ್ರಶ್ನಿಸಬೇಕು ಮತ್ತು ಅವುಗಳೊಂದಿಗೆ ಮುಖಾಮುಖಿಯಾಗುವುದಕ್ಕೆ ಅಣಿಯಾಗಬೇಕು ಎಂಬುದು ವಿಮರ್ಶಾತ್ಮಕ ರಾಚನಿಕರ ವಾದ. ಯಾವುದನ್ನೂ ಅದರ ಮೇಲ್ನೋಟದ ಅರ್ಥದಲ್ಲಿ ಗ್ರಹಿಸದೇ ಎಲ್ಲವನ್ನೂ ವಿಮರ್ಶಾತ್ಮಕ ನೆಲೆಯಲ್ಲಿ ಗ್ರಹಿಸುವುದರ ಮಹತ್ವವನ್ನು ವಿಮರ್ಶಾತ್ಮಕ ರಾಚನಿಕವಾದ ಒತ್ತಿ ಹೇಳುತ್ತದೆ. ಸಂವಾದ, ಪ್ರಶ್ನೆಗಳು, ಮಂಥನ, ವಿಮರ್ಶಾತ್ಮಕ ಪ್ರಜ್ಞೆ, ಅರಿವಿನಿಂದ ಕೂಡಿದ ಕ್ರಿಯಾಶೀಲತೆ ಮತ್ತು ಆತ್ಮಾವಲೋಕನಗಳ ಮೂಲಕ ಹೆಚ್ಚು ಸಹನೀಯವೂ ಮಾನವೀಯವೂ ಆದ ಸಮಾಜ ನಿರ್ಮಾಣ ಮಾಡುವುದು ವಿಮರ್ಶಾತ್ಮಕ ರಾಚನಿಕವಾದದ ಆಶಯ. ಪ್ರೌಲೋಫ್ರೆಯ ಮತ್ತು ಅನುಯಾಯಿಗಳ **ವಿಮರ್ಶಾತ್ಮಕ ಬೋಧನಶಾಸ್ತ್ರ (Critical pedagogy)** ಆಧಾರವೇ ಈ ರೀತಿಯ ನಿಲುವು.

**ಮನೋವೈಜ್ಞಾನಿಕ ರಾಚನಿಕವಾದ:** ರಾಚನಿಕವಾದದ ಈ ಮುಖಕ್ಕೆ ಜೀನ್ ಪಿಯಾಜೆ ಅವರ 'ವ್ಯಕ್ತಿ ವಿಕಾಸಾತ್ಮಕ ಮಾದರಿ'ಯೇ ಪ್ರಮುಖ ಆಧಾರ. ವಿಕಾಸ ಪ್ರಕ್ರಿಯೆಯಲ್ಲಿ ಕಲಿಕೆಯು ವೈಯಕ್ತಿಕ, ವ್ಯಕ್ತಿಗತ ಮತ್ತು ಬೌದ್ಧಿಕ ಕಸರತ್ತು. ಇದಕ್ಕೆ ಹೊರಪ್ರಪಂಚದೊಂದಿಗಿನ ಒಡನಾಟಗಳಿಂದ ವ್ಯಕ್ತಿ ಪಡೆಯುವ ಅನುಭವಗಳೇ ಅಡಿಪಾಯ. ಪಿಯಾಜೆ ಅವರ ಪ್ರಕಾರ, ವ್ಯಕ್ತಿಯ ಆಂತರಿಕ ಜ್ಞಾತೃನಿಷ್ಠ ಮಾನಸಿಕ ಸ್ಥಿತಿಗಳಿಗೂ ಬಾಹ್ಯ ಪ್ರಪಂಚದ ವಾಸ್ತವತೆಗಳಿಗೂ ನಿರಂತರ ಮುಖಾಮುಖಿ ಇರುತ್ತದೆ. ಈ ಅಂತರಕ್ರಿಯೆಗಳ ಫಲವಾಗಿ ವ್ಯಕ್ತಿಯ ಮನಸ್ಸು ತನ್ನಷ್ಟಕ್ಕೆ ತಾನೇ ವ್ಯವಸ್ಥಿತಗೊಳ್ಳುತ್ತಿರುತ್ತದೆ. ಪಿಯಾಜೆ ಅವರ ಪರಿಗಣನೆಗಳಲ್ಲಿ, ವಸ್ತುನಿಷ್ಠ ಅಸ್ತಿತ್ವವಾದಿ ವಾಸ್ತವತೆಗೆ ಜಾಗವಿಲ್ಲ. ಮನುಷ್ಯನ ಬೌದ್ಧಿಕ ಬೆಳವಣಿಗೆ ಹೊಂದಾಣಿಕೆ ಮತ್ತು ಸಂಯೋಜನೆಗಳ ಮೂಲಕ ಆಗುತ್ತದೆ. ಹೊಂದಾಣಿಕೆಯ ಪ್ರಕ್ರಿಯೆಯು **ಮನೋಗತತೆ** (ಸ್ವಾಂಗೀಕರಣ) ಮತ್ತು **ಸರಿಹೊಂದಿಸುವಿಕೆ** (ಅನುಕೂಲನ)ಯನ್ನು ಒಳಗೊಳ್ಳುತ್ತದೆ. ಬಾಹ್ಯ ಪರಿಸರದಿಂದ ಬರುವ ಮಾಹಿತಿ ಮತ್ತು ಅನುಭವಗಳು ಮನಸ್ಸನ್ನು ಪ್ರವೇಶಿಸಿ ಆಲೋಚನೆಗಳ ರೂಪ ಪಡೆಯುವುದು ಮನೋಗತತೆ. ಅಣಿಗೊಳಿಸುವುದೇ ಸರಿಹೊಂದಿಸುವಿಕೆ. ಮನಸ್ಸಿನೊಳಗೆ ತೆಗೆದುಕೊಂಡು ಸಾಮಗ್ರಿಯನ್ನು ಯುಕ್ತರೀತಿಯಲ್ಲಿ ಮನಸ್ಸಿನಲ್ಲಿ ವಿನ್ಯಾಸಗೊಳಿಸುವುದೇ ಸಂಯೋಜನೆ. ಪಿಯಾಜೆ ಪ್ರಕಾರ, ಮನಸ್ಸಿನಲ್ಲಿ ಸಂಯೋಜನೆಯ ಸಂಕೀರ್ಣಗೊಳ್ಳುತ್ತಾಹೋಗುವ ಮತ್ತು ಸಮನ್ವಯಿತವಾಗಿರುವ ಹಲವು ಮಾರ್ಗಗಳ ಮೂಲಕ ಸಾಧಿತವಾಗುತ್ತದೆ. ಇವುಗಳಲ್ಲಿ ಅತ್ಯಂತ ಸರಳವಾದ ರಚನೆಯನ್ನು ಪಿಯಾಜೆ 'ಸ್ಕೀಮಾ' ಎಂದು ಕರೆದಿದ್ದಾರೆ. ಅದನ್ನು ಮಾನಸಿಕ 'ಹೂಟ' ಎಂದು ಕರೆಯಬಹುದು. ಒಂದು ಕಾಯದ ಮೇಲೆ ನಡೆಸಬಹುದಾದ ನಿರ್ದಿಷ್ಟ ಕ್ರಿಯೆಯ ಮಾನಸಿಕ ಬಿಂಬವೇ ಸ್ಕೀಮಾ.

### ರಾಚನಿಕಾತ್ಮಕ ತರಗತಿಗಳಲ್ಲಿ ಶಿಕ್ಷಕರ ಪಾತ್ರ

ರಾಚನಿಕಾತ್ಮಕ ತರಗತಿಗಳಲ್ಲಿ ಶಿಕ್ಷಕರು ತಮ್ಮ ಸಾಂಪ್ರದಾಯಿಕ ನಂಬಿಕೆ ಮತ್ತು ಮೌಲ್ಯಗಳನ್ನು ಬದಿಗಿರಿಸಿ ಹೊಸ ರೀತಿಯ ಚಿಂತನೆಗಳಿಗೆ ಉನ್ಮುಖತೆಯನ್ನು ತೋರುವುದು ಅನಿವಾರ್ಯ. ಕಲಿಕೆ ಎಂಬುದು 'ಪರಮ ಸತ್ಯಗಳ' ವರ್ಗಾವಣೆಯಲ್ಲ. ಹಾಗೆ ಮಾಡುವುದಕ್ಕೆ ಮಕ್ಕಳ ಮನಸ್ಸು ಎಂಬುದು ಮಾಹಿತಿಗಳನ್ನು ತುಂಬಿಟ್ಟುಕೊಳ್ಳುವ ಖಾಲಿ ಪಾತ್ರೆ ಅಲ್ಲ. ಕಲಿಕೆ ಎಂಬುದು ಜ್ಞಾನ ರಚಿಸುವ ಕ್ರಿಯೆ. ಅದು ಅರ್ಥಗಳ ಹುಡುಕಾಟದ ಒಂದು ಪ್ರಕ್ರಿಯೆ. ಮಕ್ಕಳು ಏನನ್ನು ರಚಿಸುತ್ತಾರೋ ಅದನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬುದನ್ನು ಶಿಕ್ಷಕರು ಮೊದಲು

Digitised by Bharatavani, CIIL

ಅರ್ಥಮಾಡಿಕೊಳ್ಳಬೇಕು. ಅದ್ದರಿಂದ ಶಿಕ್ಷಕರು ಜ್ಞಾನ ರಚನೆಗೆ ಇಂಬು ಕೊಡುವಂತಹ ಅನುಭವಗಳನ್ನು ಒದಗಿಸುವುದಕ್ಕೆ ಆದ್ಯತೆ ಕೊಡಬೇಕೇ ಹೊರತು ಮಾಹಿತಿಗಳನ್ನು ನೆನಪಿಟ್ಟುಕೊಂಡು ಗಿಣಿಪಾಠ ಒಪ್ಪಿಸುವ ಪರಿಪಾಠಕ್ಕೆ ಅಲ್ಲ. ವಿದ್ಯಾರ್ಥಿಗಳು ತರಗತಿಗೆ ಯಾವತ್ತೂ ಖಾಲಿಯಾಗಿ ಬರುವುದಿಲ್ಲ. ನೈಸರ್ಗಿಕ ಪ್ರಪಂಚದ ಬಗ್ಗೆ ಅವರಿಗೆ ಅವರದೇ ಆದ ಅನುಭವಗಳು, ಕಲ್ಪನೆಗಳು, ಗ್ರಹಿಕೆಗಳು, ಮಿಥ್ಯೆಗಳು (Myths) ಇರುತ್ತವೆ. ನೈಸರ್ಗಿಕ ಪ್ರಪಂಚದ ಬಗ್ಗೆ ಮಕ್ಕಳು ಇಟ್ಟುಕೊಂಡಿರುವ ಪ್ರತಿಮೆಗಳು, ಬಿಂಬನಗಳು ಮತ್ತು ಪರಿಕಲ್ಪನೆಗಳು ವಿಭಿನ್ನವಾಗಿರುತ್ತವೆ. ಅವು ಪಠ್ಯಪುಸ್ತಕದಲ್ಲಿ ಹೇಳಿರುವ ರೀತಿಯಲ್ಲಿ ಇರಬೇಕಾದ್ದಿಲ್ಲ. ಇರುವುದಿಲ್ಲ ಕೂಡ. ಹಾಗೆಯೇ ಅವು ವಯಸ್ಕರ (ಉದಾಹರಣೆಗೆ, ಶಿಕ್ಷಕರ) ಬೋಧನೆಯ ಶೈಲಿಗೆ ಅನುಗುಣವಾಗಿ ಇರಬೇಕೆಂದಿಲ್ಲ. ಅವರ ಪರಿಕಲ್ಪನೆಗಳು ಶಿಷ್ಟ ಪರಿಕಲ್ಪನೆಗಳಿಗೆ ಅನುರೂಪವಾಗಿಲ್ಲ ಎಂದ ಮಾತ್ರಕ್ಕೆ ಅವು ತಪ್ಪು ಎಂದು ಶಿಕ್ಷಕರು ಅರ್ಥೈಸಬಾರದು.

ವಿದ್ಯಾರ್ಥಿಗಳಿಗೆ ಪ್ರಪಂಚದ ತಿಳಿವಳಿಕೆ ಇರುವುದಿಲ್ಲ; ಶಿಕ್ಷಕರಿಗೆ ಎಲ್ಲವೂ ಗೊತ್ತಿರುತ್ತದೆ ಎಂಬ ನೆಲೆಯನ್ನು ರಾಚನಿಕವಾದವು ತಿರಸ್ಕರಿಸುತ್ತದೆ. ಶಿಕ್ಷಕರು ಹೇಳಿದ್ದನ್ನು ವಿದ್ಯಾರ್ಥಿಗಳು ನಿಷ್ಕ್ರಿಯತೆಯಿಂದ ಯಥಾರ್ಥದಲ್ಲಿ ಸ್ವೀಕರಿಸುತ್ತಾರೆ ಎನ್ನುವುದು ನಿಜವಲ್ಲ. ಶಾಲೆ ಒದಗಿಸುವ ಅನುಭವಗಳ ನೆಲೆಯಲ್ಲಿ ಅವರು ತಮ್ಮ ಅನುಭವ ಮತ್ತು ಕಲ್ಪನೆಗಳನ್ನು ಪರೀಕ್ಷಿಸಿಕೊಳ್ಳುತ್ತಲೂ ಪರಿಷ್ಕರಿಸಿಕೊಳ್ಳುತ್ತಲೂ ಹೋಗುತ್ತಾರೆ. ಸಂದರ್ಭ, ಪರಿಕಲ್ಪನೆ, ವಿದ್ಯಮಾನಗಳು ಅಥವಾ ಸನ್ನಿವೇಶಗಳು ಅರ್ಥಪೂರ್ಣವಾಗುವವರೆಗೂ ಈ ಕ್ರಿಯೆ ಮುಂದುವರೆಯುತ್ತಲೇ ಇರುತ್ತದೆ. ಹೀಗೆ ಅರಿವನ್ನು ಪರಿಷ್ಕರಿಸಿಕೊಳ್ಳುವ ಕ್ರಿಯೆಯೇ ಜ್ಞಾನದ ನಿರ್ಮಾಣ. ಶಾಲೆಯಲ್ಲಿ ಕಲಿತ ವಿಷಯಗಳಿಗೂ ಶಾಲೆಯ ಹೊರಗೆ ಅವರು ಪಡೆಯುವ ಅನುಭವಕ್ಕೂ ಸಂಬಂಧ ಕಲ್ಪಿಸುವಂಥ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕಲ್ಪಿಸುವುದರಿಂದಲೂ ತಮ್ಮ ಅನುಭವಗಳನ್ನು ತಮ್ಮದೇ ಭಾಷೆಯಲ್ಲಿ ವ್ಯಕ್ತಪಡಿಸುವುದಕ್ಕೆ ಅವಕಾಶ ನೀಡುವುದರಿಂದಲೂ ಜ್ಞಾನ ಸೃಷ್ಟಿಗೆ ಹಾದಿ ಸುಗಮವಾಗುತ್ತದೆ. ಮಕ್ಕಳಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸುವುದಕ್ಕೆ ಅನುಕೂಲವಾಗುವಂತೆ ಸಂವಾದ, ವಿಚಾರಣೆ, ಅನ್ವೇಷಣೆ, ಪ್ರಶ್ನೆ ಕೇಳುವಿಕೆ, ಚರ್ಚೆ, ಅನ್ವಯ, ಆತ್ಮವಿಮರ್ಶೆಗಳಂಥ ಅನುಭವಗಳಿಗೆ ಅವಕಾಶ ಕಲ್ಪಿಸಿದಾಗ ಜ್ಞಾನ ರಚನೆ ಸರಾಗವಾಗಿ ನಡೆಯುತ್ತದೆ. ಈ ಕ್ರಿಯೆಯನ್ನು ಸುಗಮಗೊಳಿಸುವ ಕೆಲಸ ಶಿಕ್ಷಕರದ್ದು.

ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಟ್ಟಾಗಿ ಸಹಭಾಗಿತ್ವ ತತ್ವದ ನೆಲೆಯಲ್ಲಿ ಜ್ಞಾನದ ಮರುಸೃಷ್ಟಿ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವಂತೆ ರಾಚನಿಕವಾದ ಒತ್ತಾಯಿಸುತ್ತದೆ. ಈ ನೆಲೆಯಲ್ಲಿ ವಿದ್ಯಾರ್ಥಿಗಳು ಜ್ಞಾನದ ರಚನೆಯಲ್ಲಿ ತೊಡಗುವುದಕ್ಕೆ ಮಾರ್ಗಗಳನ್ನು ಸುಗಮಗೊಳಿಸುವುದು ಅದಕ್ಕೆ ಅಗತ್ಯವಿರುವ ಪರಿಸರ ಸೃಷ್ಟಿಸುವುದು ಶಿಕ್ಷಕರ ಪಾತ್ರ.

ಮಗು ಅರ್ಥಪೂರ್ಣವಾಗಿ ಕಲಿಯುವುದು **ಉಪದೇಶಾತ್ಮಕ (didactic) ಬೋಧನೆ**ಯಿಂದ ಅಲ್ಲ. ಅದು ಸಮರ್ಪಕವಾಗಿ ಕಲಿಯುವುದು ಅನುಭವಗಳಿಂದ. ವಸ್ತುಗಳು ಮತ್ತು ಜನಗಳೊಂದಿಗೆ ಮಕ್ಕಳು ನಡೆಸುವ ಅಂತರಕ್ರಿಯೆಯಿಂದ ಕಲಿಕೆ ಕಟ್ಟಿಕೊಳ್ಳುತ್ತಾ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಆದ್ದರಿಂದ ಅನುಭವಾತ್ಮಕ ಕಲಿಕೆಗೆ ರಾಚನಿಕವಾದವು ಹೆಚ್ಚಿನ ಮಹತ್ವ ಕೊಡುತ್ತದೆ. ಸುತ್ತಲಿನ ಪರಿಸರದೊಂದಿಗೆ– ಅದು ನೈಸರ್ಗಿಕ ಪರಿಸರವಿರಬಹುದು ಇಲ್ಲವೇ ಸಾಮಾಜಿಕ ಪರಿಸರವಿರಬಹುದು– ಒಡನಾಟ, ಪರಿಸರದಲ್ಲಿ ಇರುವ ವಸ್ತುಗಳು ಮತ್ತು ಜನಗಳೊಂದಿಗೆ ಮುಖಾಮುಖಿ ಮತ್ತು ಅವುಗಳೊಂದಿಗೆ ಮಗು ನಡೆಸುವ ಅಂತರಕ್ರಿಯೆಗಳ ಫಲವಾಗಿ ಕಲಿಕೆ ಪರಿಣಾಮಕಾರಿಯಾಗುತ್ತದೆ; ಹೆಚ್ಚು ಹೆಚ್ಚು ಸ್ಫುಟಗೊಳ್ಳುತ್ತಾ ಹೋಗುತ್ತದೆ. ಆದ್ದರಿಂದ ಹಿರಿ ಕಿರಿಯರೊಂದಿಗೆ ಸಂವಹನಿಸುವ, ಪ್ರಶ್ನೆಕೇಳುವ ಮತ್ತು ಅನುಭವಗಳನ್ನು ಪರಸ್ಪರ ಹಂಚಿಕೊಳ್ಳುವ ಅವಕಾಶಗಳು ಮಕ್ಕಳಿಗೆ ಸಿಗಬೇಕು. ಅವು ಸಿಗುವಂತೆ ಶೈಕ್ಷಣಿಕ ಚಟುವಟಿಕೆಗಳನ್ನು ವಿನ್ಯಾಸಗೊಳಿಸುವುದು ಶಿಕ್ಷಕರ ಕರ್ತವ್ಯವಾಗುತ್ತದೆ. ಶಿಕ್ಷಕರು ಜ್ಞಾನದ ಪ್ರಾಥಮಿಕ ಆಕರಗಳಲ್ಲ. ಅವರು ಕಲಿಕೆಯನ್ನು ಸುಗಮಗೊಳಿಸುವುದರಲ್ಲಿ ತಜ್ಞರಾಗಿರುವುದು ಅಗತ್ಯ. ಮಕ್ಕಳ ಪೂರ್ವಜ್ಞಾನವನ್ನು ತಿಳಿದು ಅದರ ಆಧಾರದ ಮೇಲೆ ಯುಕ್ತ ಚಟುವಟಿಕೆಗಳನ್ನು ಆಯೋಜಿಸಿ ಕಲಿಕೆಯನ್ನು ಅರ್ಥಪೂರ್ಣವಾಗುವಂತೆ ಮಾಡುವುದು ಅವರ ಪರಮಾದ್ಯತೆಯ ಕರ್ತವ್ಯ. ಕಲಿಯುವುದನ್ನು ಕಲಿಸುವುದರ ಮೂಲಕ ಜ್ಞಾನರಚನೆಯ ಪ್ರಕ್ರಿಯೆ ಸುಲಲಿತವಾಗಿ ಜರುಗುವಂತೆ ಮಾಡುವುದು (ರೀಲ್, 1994) ಮತ್ತು ಕಲಿಕೆಯ ದೃಷ್ಟಿಯಿಂದ ವಿದ್ಯಾರ್ಥಿಗಳನ್ನು ಸಬಲೀಕರಿಸುವುದು ಶಿಕ್ಷಕರು ಮಾಡಬೇಕಾದ ಕೆಲಸ.

### ಪಠ್ಯಕ್ರಮದ ಮೇಲೆ ರಾಚನಿಕವಾದದ ಪ್ರಭಾವ

ರಾಚನಿಕವಾದವು ಕೇಂದ್ರೀಕೃತ ಶಿಷ್ಟ ಪಠ್ಯಕ್ರಮದ ಕಲ್ಪನೆಯನ್ನು ತಿರಸ್ಕರಿಸುತ್ತದೆ. ಆ ರೀತಿಯ ಪಠ್ಯಕ್ರಮ ಇರಬಾರದು ಎಂಬುದು ರಾಚನಿಕರ ನಿಲುವು. ಅದಕ್ಕೆ ಬದಲಾಗಿ ಪಠ್ಯಕ್ರಮ ತರಗತಿಯ ಸನ್ನಿವೇಶದಲ್ಲಿಯೇ ವಿಕಾಸಗೊಳ್ಳಬೇಕು ಮತ್ತು ವಿದ್ಯಾರ್ಥಿಗಳ ಆರಂಭಿಕ ಜ್ಞಾನವು ಪಠ್ಯಕ್ರಮದ ವಿಕಾಸಕ್ಕೆ ಆಧಾರವಾಗಿರಬೇಕು ಎಂಬುದು ರಾಚನಿಕವಾದಿಗಳ ವಿಚಾರ ಧಾರೆ. ಇದನ್ನು ನಾವು ಒಪ್ಪಿಕೊಳ್ಳುವುದಾದರೆ ಪ್ರತಿಯೊಂದು ಶಾಲೆಗೂ ತನ್ನದೇ ಆದ ಪಠ್ಯಕ್ರಮ ಇರಬೇಕಾಗುತ್ತದೆ. ಪಠ್ಯಕ್ರಮ ಅನುಭವಾತ್ಮಕ ಕಲಿಕೆಗೆ ಅನುಕೂಲಿಯಾಗಿರಬೇಕು, ಸಹಭಾಗಿತ್ವದ ಕಲಿಕೆಗೆ ಪೂರಕವಾಗಿರಬೇಕು, ಪ್ರಶ್ನೆ ಮತ್ತು ಸಂವಾದಗಳಿಗೆ ಅವಕಾಶ ಕಲ್ಪಿಸಬೇಕು, ವಿದ್ಯಾರ್ಥಿಗಳ ಬದುಕಿಗೆ ಅದು ಹತ್ತಿರವಾಗಿರಬೇಕು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಕೌಶಲ್ಯಗಳನ್ನು ಬೆಳೆಸುವಂಥ ಕಲಿಕೆಯ ಅನುಭವಗಳನ್ನು ಪಠ್ಯಕ್ರಮ ಒದಗಿಸಬೇಕು ಎಂಬುದು ರಾಚನಿಕವಾದದ ದೃಷ್ಟಿ. ಪಠ್ಯಕ್ರಮವು ಅರ್ಥಪೂರ್ಣ ಕಲಿಕೆಗೆ ಅನುವುಮಾಡಿಕೊಡಬೇಕು. ಯಾಂತ್ರಿಕ ಕಲಿಕೆಯನ್ನು ಉತ್ತೇಜಿಸುವಂತೆ ಇರಬಾರದು.

### ರಾಚನಿಕವಾದ ದೃಷ್ಟಿಯಲ್ಲಿ ಬೋಧನೆಯ ತಂತ್ರಗಳು

ಬೋಧನೆಯ ತಂತ್ರಗಳು ಇಡಿಯನ್ನು ಗ್ರಹಿಸುವುದಕ್ಕೆ ಪೂರಕವಾಗಿರಬೇಕು. ಸಂವಾದ, ಚರ್ಚೆ, ಯೋಜನಾ ಕಾರ್ಯ, ಪ್ರಶ್ನೆಗಳನ್ನು ಕೇಳುವಿಕೆ, ಪ್ರಶ್ನೆಗಳ ಬಗ್ಗೆ ಚರ್ಚೆ, ಅನುಭವಾತ್ಮಕ ಕಲಿಕೆ, ಒಂದು ವಿಷಯ, ಘಟನೆ ಅಥವಾ ವಿದ್ಯಮಾನವನ್ನು ಹಲವು ದೃಷ್ಟಿಗಳಿಂದ ಪರಿಶೀಲಿಸುವಿಕೆ, ಬಹು ಇಂದ್ರಿಯಾತ್ಮಕ ಬೋಧನಾ ಮಾರ್ಗಗಳ ಅಳವಡಿಕೆ, ಚಟುವಟಿಕೆ ಆಧಾರಿತ ಕಲಿಕೆ, ಸ್ವಕಲಿಕೆ, ಸ್ವನಿರ್ದೇಶಿತ ಕಲಿಕೆ, ಪರಿವರ್ತನಾತ್ಮಕ ಕಲಿಕೆ, ಸಾಂದರ್ಭಿಕ ಗ್ರಹಿಕೆ, ಸಹಭಾಗಿತ್ವ ಕಲಿಕೆ, ಆತ್ಮಾವಲೋಕನ ತಂತ್ರಗಳು, ವಿಚಾರ ವಿನಿಮಯ, ಆಲೋಚನೆಗಳನ್ನು ಪರೀಕ್ಷಿಸಿ ನೋಡುವಿಕೆ ಇವೇ ಮೊದಲಾದ ವಿಧಾನಗಳನ್ನು ಅಳವಡಿಸಿಕೊಳ್ಳುವಂತೆ ರಾಚನಿಕವಾದವು ಒತ್ತಾಯಿಸುತ್ತದೆ. ಒಟ್ಟಿನಲ್ಲಿ ಕಲಿಕೆಯ ಅನುಭವಗಳು ವಿದ್ಯಾರ್ಥಿಗಳ ಪೂರ್ವಕಲಿಕೆಯನ್ನು ಆಧರಿಸಿರಬೇಕು ಮತ್ತು ಹೊಸ ಅನುಭವಗಳು ಜ್ಞಾನರಚನೆಗೆ ಪೂರಕವಾಗಿರಬೇಕು ಎಂಬುದು ರಾಚನಿಕವಾದದ ಪ್ರಮುಖ ಆಗ್ರಹ.

### ರಾಚನಿಕವಾದದ ನೆಲೆಯಲ್ಲಿ ಕಲಿಕೆಯ ಮೌಲ್ಯನಿರ್ಧಾರಣೆ

ಕಲಿಕೆಯ ಮೌಲ್ಯನಿರ್ಧಾರಣೆ ಮಾಡುವಾಗ ಅಂಕಗಳನ್ನಾಗಲೀ ಗ್ರೇಡುಗಳನ್ನಾಗಲೀ ನೀಡಕೂಡದು ಎಂಬುದು ರಾಚನಿಕವಾದದ ನಿಲುವು. ಅಂಕಗಳು ಮತ್ತು ಗ್ರೇಡುಗಳು ಅನಗತ್ಯವೂ ಅನಾರೋಗ್ಯಕರವೂ ಆದ ತುಲನೆಗೆ ಆಸ್ಪದ ನೀಡುತ್ತವೆ. ಮೌಲ್ಯನಿರ್ಧಾರಣೆಯು ಕಲಿಕೆ/ ಬೋಧನೆ


Digitised by Bharatavani, CIIL

ಮುಗಿದ ಅನಂತರ ಮಾಡುವ ಚಟುವಟಿಕೆ ಅಲ್ಲ. ಅದು ಕಲಿಕೆಯ ಅಂತರ್ಗತ ಭಾಗವೇ ಆಗಿರಬೇಕು ಎನ್ನುತ್ತದೆ ರಾಚನಿಕವಾದ. ಸಮಯ ಮಿತಿಯನ್ನು ನಿಗದಿಗೊಳಿಸಿ ಮಾಡುವ 'ವೇಗ ಪರೀಕ್ಷೆ'ಗಳು ರಾಚನಿಕವಾದಿಗಳಿಗೆ ಒಪ್ಪಿಗೆ ಆಗದು. ಅವರು ನಿರಂತರ ಮೌಲ್ಯಮಾಪನದ ಅಗತ್ಯ ಮತ್ತು ಮೌಲ್ಯಗಳನ್ನು ಒತ್ತಿಹೇಳುತ್ತಾರೆ. ಮಕ್ಕಳಿಗೆ ಅವರ ಕಲಿಕೆಯ ಬಗ್ಗೆ ಮರುಉಣಿಕೆ ನೀಡುವುದು ಮತ್ತು ಅವರಿಗೆ ಎಲ್ಲಿ ಸಹಾಯದ ಅವಶ್ಯಕತೆ ಇದೆ ಎಂಬುದನ್ನು ಗುರುತಿಸುವುದು ಎಲ್ಲ ಮೌಲ್ಯನಿರ್ಧಾರಣೆಗಳ ಪ್ರಮುಖ ಉದ್ದೇಶ. ಯಾವ ರೀತಿಯ ಸಹಾಯ ಅಗತ್ಯ ಇದೆ ಎಂಬುದನ್ನು ನಿರ್ಧರಿಸಿ ಅನಂತರ ಆ ಸಹಾಯವನ್ನು ಒದಗಿಸುವುದು ಮುಂದಿನ ತಾರ್ಕಿಕ ಹಂತ. ಒಟ್ಟಿನಲ್ಲಿ ಕಲಿಕೆಯು ಮತ್ತು ವ್ಯಕ್ತಿತ್ವದ ಮೌಲ್ಯನಿರ್ಧಾರಣೆಯು ಆಯಾ ವಿದ್ಯಾರ್ಥಿಯ ಸ್ವಂತದ ಅರಿವನ್ನು ವರ್ಧಿಸಬೇಕು ಎಂಬುದು ಇಲ್ಲಿರುವ ಆಶಯ.

– ಎಚ್.ಎಲ್.ಸ.

## ರಾಜ್ಯ ಸಂಪನ್ಮೂಲ ಕೇಂದ್ರ – ಕರ್ನಾಟಕ

ಭಾರತದ ರಾಜ್ಯಗಳಲ್ಲಿ ಜಾರಿಗೊಳ್ಳುತ್ತಿದ್ದ ಹಲವು ಬಗೆಯ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೆ ಅಗತ್ಯವಾದ ಶೈಕ್ಷಣಿಕ ಹಾಗೂ ತಾಂತ್ರಿಕ ನೆರವನ್ನು ವ್ಯವಸ್ಥಿತವಾಗಿ ನೀಡಲು ರಾಜ್ಯ ಸಂಪನ್ಮೂಲ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ಭಾರತದಲ್ಲಿ ಇಂತಹ ಒಟ್ಟು 26 ರಾಜ್ಯ ಸಂಪನ್ಮೂಲ ಸಂಸ್ಥೆಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಜಾರಿಗೊಳಿಸುತ್ತಿರುವ ವಿವಿಧ ಬಗೆಯ ಸಾಕ್ಷರತೆ, ಸಾಕ್ಷರೋತ್ತರ ಹಾಗೂ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳಿಗೆ, ಅವುಗಳಲ್ಲಿ ಭಾಗಿಯಾಗುವ ಸರ್ಕಾರ, ಸರ್ಕಾರೇತರ, ವಿಶ್ವವಿದ್ಯಾನಿಲಯಗಳೇ ಮುಂತಾದ ಸಂಸ್ಥೆಗಳಿಗೆ ಅಗತ್ಯ ಶೈಕ್ಷಣಿಕ ಮಾರ್ಗದರ್ಶನವನ್ನು ರಾಜ್ಯ ಸಂಪನ್ಮೂಲ ಕೇಂದ್ರಗಳು ನೀಡುತ್ತಾ ಬಂದಿವೆ. ಕರ್ನಾಟಕದ ಸಂಪನ್ಮೂಲ ಕೇಂದ್ರ ಒಂದು ರಾಜ್ಯ ಮಟ್ಟದ ಸಂಸ್ಥೆಯಾಗಿದ್ದು, ಅದನ್ನು ಮೈಸೂರಿನಲ್ಲಿ ಸ್ಥಾಪಿಸಲಾಗಿದೆ. ಇದರ ಯಾವುದೇ ಶಾಖೆಗಳು ಇಲ್ಲ. ತನ್ನ ಸ್ವಂತ ಕಟ್ಟಡದಲ್ಲೇ ಇದು ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಸಂಪನ್ಮೂಲ ಕೇಂದ್ರ ಭಾರತ ಸರ್ಕಾರದ ಅನುದಾನದಿಂದ ನಡೆಯುತ್ತಿದೆ. ಕೆಲವೊಮ್ಮೆ ರಾಜ್ಯ ಸರ್ಕಾರ ಹಾಗೂ ವಿಶೇಷ ಯೋಜನೆಗಳಿಂದಲೂ ಆರ್ಥಿಕ ನೆರವು ದೊರೆಯುತ್ತಿದೆ.

**ಆಡಳಿತ ಮಂಡಳಿ :** ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ರಾಜ್ಯ ಸರ್ಕಾರ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ ಉದ್ದೇಶಗಳಿಗೆ ತಕ್ಕಂತೆ ರಾಜ್ಯ ಸಂಪನ್ಮೂಲ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಇದಕ್ಕೆ ಸೂಕ್ತ ಮಾರ್ಗದರ್ಶನ ನೀಡಿ ಕಾರ್ಯಕ್ರಮಗಳನ್ನು ರೂಪಿಸಲು ಆಡಳಿತ ಮಂಡಳಿಯೊಂದಿದೆ. ಅವರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ, ಮಾತೃ ಸಂಸ್ಥೆಯಾದ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆ, ಲೋಕ ಶಿಕ್ಷಣ ನಿರ್ದೇಶನಾಲಯ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ವಿಶ್ವ ವಿದ್ಯಾನಿಲಯಗಳು, ಶಿಕ್ಷಣ ತಜ್ಞರು, ಜನಪ್ರತಿನಿಧಿಗಳು, ಮಹಿಳೆಯರು, ಪರಿಶಿಷ್ಟಜಾತಿ, ಪರಿಶಿಷ್ಟವರ್ಗದವರನ್ನು ಪ್ರತಿನಿಧಿಸುವಂತೆ ತಜ್ಞರು ಸದಸ್ಯರಾಗಿರುತ್ತಾರೆ. ಇದು ನೋಂದಣೆಗೊಂಡ ಒಂದು ಸ್ವಾಯತ್ತ ಸಂಸ್ಥೆ.

**ಉದ್ದೇಶಗಳು :** ಮೂಲಸಾಕ್ಷರತೆ ಹಾಗೂ ಸಾಕ್ಷರೋತ್ತರ ಕಾರ್ಯಕ್ರಮಗಳಿಗೆ ಓದುವ ಹಾಗೂ ಬೋಧನಾ ಸಾಮಗ್ರಿಯನ್ನು ಹಾಗೂ ನವ ಸಾಕ್ಷರರಿಗೆ ಶ್ರೇಣಿ ಕೃತ ಓದುವ ಪುಸ್ತಕಗಳನ್ನು ರಚಿಸುವುದು. ವಿವಿಧ ಬಗೆಯಾದ, ವಿವಿಧ ಹಂತದ ತರಬೇತಿಗಳಿಗೆ ವಿನ್ಯಾಸ ರೂಪಿಸಿ ಸಂಪನ್ಮೂಲ ಸಾಹಿತ್ಯ, ಕೈಪಿಡಿಗಳನ್ನು ಸಿದ್ಧಪಡಿಸುವುದು; ತಳಮಟ್ಟದಿಂದ ಹಿಡಿದು ರಾಜ್ಯಮಟ್ಟದ ವಿವಿಧ ಕಾರ್ಯಕರ್ತರಿಗೆ – ಸ್ವಯಂ ಸೇವಕರು, ಪ್ರೇರಕರು, ಸಂಯೋಜಕರು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಅಧಿಕಾರಿಗಳಿಗೆ – ತರಬೇತಿ ನೀಡುವುದು. ದೃಕ್–ಶ್ರವಣ ಮಾಧ್ಯಮ ಸಾಮಗ್ರಿಗಳನ್ನು ತಯಾರಿಸುವುದು; ಮಾಧ್ಯಮಗಳೊಂದಿಗೆ ಸಹಕರಿಸುವುದು; ಕಾರ್ಯಕ್ರಮಗಳ ಮೌಲ್ಯಮಾಪನ, ಪರಿವೀಕ್ಷಣೆಗೆ ಅಗತ್ಯ ಸಾಮಗ್ರಿ ತಯಾರಿಸಿ ಮಾರ್ಗದರ್ಶನ ನೀಡುವುದು; ಸಂಶೋಧನೆ, ಅಧ್ಯಯನ, ಮೌಲ್ಯಮಾಪನಗಳನ್ನು ನಡೆಸುವುದು; ಗೋಷ್ಠಿ, ಕಮ್ಮಟ, ಸಮ್ಮೇಳನಗಳನ್ನು ನಡೆಸುವುದು; ಕಾರ್ಯಕ್ರಮಗಳಿಗೆ ಸೂಕ್ತ ವಾತಾವರಣ ದೊರೆಯುವಂತೆ ಸಾಮಗ್ರಿ ತಯಾರಿಸಿ ಮಾರ್ಗದರ್ಶನ ನೀಡುವುದು. ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಜನಸಂಖ್ಯೆ ಮತ್ತು ಅಭಿವೃದ್ಧಿ ಶಿಕ್ಷಣ. ಮಹಿಳೆಯರು, ಅಲ್ಪ ಸಂಖ್ಯಾತರು ಹಿಂದುಳಿದ ವರ್ಗದವರು ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಜನರ ಆಶೋತ್ತರಗಳಿಗೆ ಅವಕಾಶವಿರುವಂತೆ ಯೋಜನೆಗಳನ್ನು ರೂಪಿಸುವುದು, ಇವು ಈ ಸಂಸ್ಥೆಯ ಉದ್ದೇಶಗಳಾಗಿವೆ.

**ವಿಭಾಗಗಳು :** ರಾಜ್ಯ ಸಂಪನ್ಮೂಲ ಕೇಂದ್ರದಲ್ಲಿ ಮೇಲೆ ಸೂಚಿಸಿರುವ ಉದ್ದೇಶಗಳನ್ನು ಸಾಧಿಸಲು ಹಲವು ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ಅವೆಂದರೆ ೧) ಸಾಮಗ್ರಿ ತಯಾರಿಕೆ ಹಾಗೂ ಮಾಧ್ಯಮ ವಿಭಾಗ, ೨. ತರಬೇತಿ ಮತ್ತು ದಾಖಲೀಕರಣ ವಿಭಾಗ, ೩. ಸಾಕ್ಷರೋತ್ತರ ಮತ್ತು ಮುಂದುವರಿಕೆ ಶಿಕ್ಷಣ ವಿಭಾಗ, ೪. ಮಹಿಳೆಯರು, ಪರಿಶಿಷ್ಟಜಾತಿ/ಪರಿಶಿಷ್ಟವರ್ಗ ಹಾಗೂ ವಿಶೇಷ ಕಾರ್ಯಕ್ರಮಗಳ ವಿಭಾಗ, ೫. ಸಂಶೋಧನೆ ಮತ್ತು ಮೌಲ್ಯಮಾಪನ ವಿಭಾಗ ಹಾಗೂ ೬. ಜನಸಂಖ್ಯೆ ಮತ್ತು ಅಭಿವೃದ್ಧಿ ಶಿಕ್ಷಣ ವಿಭಾಗ.

**ಪರಿಣತಿ :** ರಾಜ್ಯ ಸಂಪನ್ಮೂಲ ಕೇಂದ್ರ ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಪರಿಣತಿಯನ್ನು ಪಡೆದಿರುವುದರ ಜೊತೆಗೆ ಮಾಹಿತಿ–ಶಿಕ್ಷಣ–ಸಂವಹನಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಅಭಿವೃದ್ಧಿ, ಆರೋಗ್ಯ, ಶಾಲಾ ಶಿಕ್ಷಣ, ನಗರ ಮೂಲಭೂತ ಸೌಕರ್ಯಗಳು, ಪಂಚಾಯತ್ ರಾಜ್ ವ್ಯವಸ್ಥೆ, ಮಹಿಳಾ ಸಬಲೀಕರಣ, ಮಳೆನೀರು ಸಂರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿಯೂ ವಿಶೇಷ ಅನುಭವ ಹಾಗೂ ಪರಿಣತಿಯನ್ನು ಪಡೆದುಕೊಂಡಿದೆ.

**ಕಾರ್ಯಜಾಲ :** ರಾಜ್ಯ ಸಂಪನ್ಮೂಲ ಕೇಂದ್ರ ತನ್ನೆಲ್ಲಾ ಕಾರ್ಯಕ್ರಮಗಳನ್ನು ಇತರೇ ತಜ್ಞ ಸಂಸ್ಥೆಗಳ ಜೊತೆ ಸಂಯೋಜಿಸಿ, ಸಮಾಲೋಚಿಸಿ ನಡೆಸುತ್ತದೆ. ಕೆಲವೊಮ್ಮೆ ಅವರಿಗೆ ಅವರ ಕೋರಿಕೆಯಂತೆ ವಿಶೇಷ ಯೋಜನೆಗಳನ್ನು ನಡೆಸಿಕೊಟ್ಟಿರುವುದಿದೆ. ಅಂತಹ ಸಂಸ್ಥೆಗಳೆಂದರೆ ಯುನೆಸ್ಕೋ, ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಕರ್ನಾಟಕ ರಾಜ್ಯ ಸಾಕ್ಷರತಾ ಪ್ರಾಧಿಕಾರ, ಲೋಕ ಶಿಕ್ಷಣ ನಿರ್ದೇಶನಾಲಯ, ಜಿಲ್ಲಾ ಸಾಕ್ಷರ ಸಮಿತಿಗಳು, ಜನಶಿಕ್ಷಣ ಸಂಸ್ಥೆಗಳು, ಸ್ವಯಂ–ಸೇವಾ/ಸರ್ಕಾರೇತರ ಸಂಸ್ಥೆಗಳು, ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಶಿಕ್ಷಣ, ಸಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು, ಆಡಳಿತ ತರಬೇತಿ ಸಂಸ್ಥೆ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮಹಿಳಾ ಸಮಾಖ್ಯಾಗಳು, ಜನ ಶಿಕ್ಷಣ ಸಂಸ್ಥೆಗಳು ಇತ್ಯಾದಿ. ಮೇಲ್ಕಂಡ ಸಂಸ್ಥೆಗಳ ಸಹಯೋಗ ಹಾಗೂ ಸಹಕಾರದಿಂದ ಸಂಸ್ಥೆ ಹಲವು ವಿಶೇಷ ಯೋಜನೆಗಳನ್ನು ರೂಪಿಸಿ, ನಡೆಸಿಕೊಂಡು ಬಂದಿದೆ. ಅವುಗಳಲ್ಲಿ ಮುಖ್ಯವಾದವು: ಸಾಕ್ಷರತೆ ಮತ್ತು ಆರೋಗ್ಯ, ಚಿಣ್ಣರ ಅಂಗಳ ಕಾರ್ಯಕ್ರಮದ ದಾಖಲೀಕರಣ, ಚಿಣ್ಣರ ಅಂಗಳ ಕಾರ್ಯಕ್ರಮದ ಸಹವರ್ತಿ ಮೌಲ್ಯಮಾಪನ, ಚಿಣ್ಣರ

Digitised by Bharatavani, CIIL

ಅಂಗಳದ ಮೌಲ್ಯಮಾಪನ. ಕರ್ನಾಟಕದ ಅಮಾನವೀಯ ಪದ್ಧತಿಗಳ ದಾಖಲೀಕರಣ, ಗ್ರಾಮ ಪಂಚಾಯಿತಿ ಸದಸ್ಯರ ಸಬಲೀಕರಣ ಸಾಮಗ್ರಿ ತಯಾರಿಕೆ, ಕರ್ನಾಟಕದ ಪ್ರೇರಕರ ಸಾಮರ್ಥ್ಯ ಹೆಚ್ಚಿಸುವ ಯುನೆಸ್ಕೋ ಯೋಜನೆ, ಜಲಸಂವರ್ಧನಾ ಯೋಜನಾ ಸಂಘದವರಿಗೆ ಕ್ರಿಯಾತ್ಮಕ ಸಾಕ್ಷರತೆ ಹಾಗೂ ಕರ್ನಾಟಕ ನಗರಾಭಿವೃದ್ಧಿ ಮತ್ತು ಸಮುದ್ರ ತೀರ ಪರಿಸರ ನಿರ್ವಹಣಾ ಯೋಜನೆ

**ಸಾಧನೆ :** ಕಳೆದ 31 ವರ್ಷಗಳಿಂದ ರಾಜ್ಯ ಸಂಪನ್ಮೂಲ ಕೇಂದ್ರ ವಯಸ್ಕರ ಹಾಗೂ ಮುಂದುವರಿಕೆ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿರುವ ಕೊಡುಗೆ ಅಸಾಧಾರಣವಾದದ್ದು; ಪಡೆದಿರುವ ಸಾಧನೆ ಮೆಚ್ಚುವಂತಹದ್ದು. ಅದರ ಸಂಕ್ಷಿಪ್ತ ವಿವರ ಕೆಳಕಂಡಂತಿದೆ.

**ಸಾಮಗ್ರಿ ತಯಾರಿಕೆ :** ವಯಸ್ಕ ಕಲಿಕಾರ್ಥಿಗಳಿಗೆ ಅನುಕೂಲವಾಗುವಂತೆ 30 ಪ್ರಾಥಮಿಕಗಳನ್ನು ತಯಾರಿಸಿದ್ದು ಅವುಗಳನ್ನು ಕೇಂದ್ರಾಧಾರಿತ ಯೋಜನೆಗಳು, ಸಾಕ್ಷರತಾ ಆಂದೋಲನಗಳು, ಶಿಬಿರಗಳು ಹಾಗೂ ವಿಶೇಷ ಯೋಜನೆಗಳಿಗೆ ಬಳಸಲಾಗುತ್ತಿದೆ. ಕಲಿಯೋಣ ಬಾ (1979), ಬಾ ತಾಯಿ ಕಲಿಯೋಣ (1979) ಬಾಳದೀಪ (1984) ಓದುಕಲಿ (1986) ನಾಡು ನುಡಿ (2002), ಬಾರವ್ವ ಕಲಿಯಾಕ (2002), ಜೇನು ನುಡಿ ಕಲಿಯಾಕು (2002–ಜೇನು ಕುರುಬರಿಗೆ). ಆವೋ ಗೋರ್ ಅಪನ್ ಓದ (2004–ಲಂಬಾಣಿಯರಿಗೆ ದ್ವಿಭಾಷಾ ಪ್ರಾಥಮಿಕೆ), ನಮ್ಮೂರ ಕೆರೆ (2005), ಅಕ್ಷರ ಆರೋಗ್ಯ (2006), ಸಾಕ್ಷರ ಬದುಕು (2005–ವೃತ್ತಿ ಪರವಾದುದು). ಅಕ್ಷರ ಅಧಿಕಾರ (2008–ಗ್ರಾಮ ಪಂಚಾಯಿತಿ ಸದಸ್ಯರಿಗೆ,) ಸಾಕ್ಷರ ಸಂದೇಶ (2007 ಶಿಬಿರ ಕಲಿಕಾರ್ಥಿಗಳಿಗೆ)–ಇವು ಕೆಲ ಮುಖ್ಯ ಪ್ರಾಥಮಿಕಗಳು. ಇವುಗಳಲ್ಲದೆ. ರಾಜ್ಯ ಸಂಪನ್ಮೂಲ ಕೇಂದ್ರ ಸಾಕ್ಷರೋತ್ತರ ಕಾರ್ಯಕ್ರಮಕ್ಕಾಗಿ ತಿಳಿಯೋಣ ಬಾ, ಬಾಳಿನ ಬೆಳಕು, ಬದುಕಿನ ದಾರಿ, ಅರಳು ಮಲ್ಲಿಗೆ ಮುಂತಾದ ಪ್ರಾಥಮಿಕಗಳನ್ನೂ ಸಹ ಹೊರತಂದಿದೆ.

ಪುಸ್ತಕ ಸಾಮಗ್ರಿ ತಯಾರಿಕೆಯಲ್ಲಿ ಮತ್ತೊಂದು ವಿಭಾಗವೆಂದರೆ ನವ ಸಾಕ್ಷರ ಸಾಹಿತ್ಯ. ನವಸಾಕ್ಷರರ ಓದು ಗಟ್ಟಿಗೊಂಡು, ವಿಸ್ತಾರವಾಗಲು ಹಾಗೂ ಅವರು ಮಾಹಿತಿ ಪಡೆಯಲು ಸುಮಾರು 550 ಶ್ರೇಣೀಕೃತ ಪುಸ್ತಕಗಳು ರೂಪುಗೊಂಡಿವೆ. ಅವು ತುಂಬ ವಿಸ್ತಾರವಾದ ವಿಷಯ ವ್ಯಾಪ್ತಿಯನ್ನು ಒಳಗೊಂಡಿವೆ. ಸಣ್ಣಕತೆ, ಜೀವನ ಚರಿತ್ರೆ, ಜಾನಪದ, ಬುಡಕಟ್ಟು ಸಂಸ್ಕೃತಿ, ಮುಸ್ಲಿಂ ಹಾಗೂ ದಲಿತ ಸಂಸ್ಕೃತಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ವ್ಯವಸ್ಥೆ. ಮಹಿಳೆ ಮತ್ತು ಕಾನೂನು, ಆರೋಗ್ಯ, ಜನಸಂಖ್ಯೆ ಮತ್ತ ಅಭಿವೃದ್ಧಿ ಶಿಕ್ಷಣ, ರೇಷ್ಮೆ ವ್ಯವಸಾಯ, ವಿವಿಧ ಕಸುಬುಗಳು, ಹಣ್ಣು ಹಾಗೂ ತರಕಾರಿ ಬೆಳೆ, ಸ್ವಯಂ ಉದ್ಯೋಗ ಹಾಗೂ ಆರ್ಥಿಕಾಭಿವೃದ್ಧಿ, ಹಳ್ಳಿ ಬದುಕು, ಸಾಮಾನ್ಯ ವಿಜ್ಞಾನ, ಇತಿಹಾಸ, ಮಹಿಳಾ ಸಬಲೀಕರಣ, ವೈಜ್ಞಾನಿಕ ಚಿಂತನೆ ಮುಂತಾದ ಹಲವು ವಿಷಯಗಳ ಕುರಿತ ನವಸಾಕ್ಷರ ಪುಸ್ತಕಗಳು ಕರ್ನಾಟಕದ ಎಲ್ಲ ಗ್ರಾಮಗಳ ಮುಂದುವರಿಕೆ ಶಿಕ್ಷಣ ಗ್ರಂಥಾಲಯಗಳಲ್ಲಿದ್ದು, ನವಸಾಕ್ಷರರು ಹಾಗೂ ಗ್ರಾಮೀಣ ಯುವ–ಜನತೆ ಇವುಗಳಿಂದ ತುಂಬ ಪ್ರಯೋಜನ ಪಡೆಯುತ್ತಿದ್ದಾರೆ.

**ತರಬೇತಿ ಸಾಮಗ್ರಿ / ಹಾಗೂ ಸಂಪನ್ಮೂಲ ಸಾಮಗ್ರಿ :** ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ರಾಜ್ಯ ಸಂಪನ್ಮೂಲ ಕೇಂದ್ರ ತರಬೇತಿ ಸಾಹಿತ್ಯವನ್ನು ಹೊರತಂದಿದೆ. ತರಬೇತಿ ಪಠ್ಯವಸ್ತು, ಸಂಪನ್ಮೂಲ ಸಾಹಿತ್ಯ ತರಬೇತಿ ಕೈಪಿಡಿಗಳನ್ನು ಕಾರ್ಯಾಗಾರಗಳ ಮೂಲಕ ತಯಾರಿಸಿ ಹಾಗೂ ಕೆಲವೊಮ್ಮೆ ಅನುವಾದಗಳ ಮೂಲಕ ಹೊರತಂದು ವಿವಿಧ ಕಾರ್ಯಕರ್ತರಿಗೆ, ತರಬೇತಿದಾರರಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಇತರೇ ಆಸಕ್ತಿ ಇರುವ ಜನರಿಗೆ ಉಪಯೋಗವಾಗುವಂತೆ ಮಾಡಲಾಗಿದೆ. ಕಳೆದ 31 ವರ್ಷಗಳಲ್ಲಿ ಇಂತಹ ಸುಮಾರು 85 ಗ್ರಂಥಗಳನ್ನು (ಸಾಕ್ಷರತಾ ಅಂಕಿ–ಅಂಶಗಳ ಪುಸ್ತಕಗಳೂ ಸೇರಿ) ಪ್ರಕಟಿಸಿ ಒಂದು ಸಾಧನೆಯನ್ನು ಮಾಡಿದೆ.

**ಪ್ರೇರಣಾ ಸಾಮಗ್ರಿ :** ಕಾರ್ಯಕ್ರಮದಲ್ಲಿ ತೊಡಗಿಸಿ ಕೊಳ್ಳುವವರೆಲ್ಲರನ್ನು ಪ್ರೇರೇಪಿಸಿರಲು ರಾಜ್ಯ ಸಂಪನ್ಮೂಲ ಕೇಂದ್ರ ಹಲವು ವಿಧದ ಪ್ರೇರಣಾ ಸಾಮಗ್ರಿಯನ್ನು ಹೊರತಂದಿದೆ. ಅದರಲ್ಲಿ ವಾರ್ತಾಪತ್ರಗಳು, ಭಿತ್ತಿ ಚಿತ್ರಗಳು, ಚಾರ್ಟುಗಳು, ಕರಪತ್ರಗಳು, ಸ್ಟಿಕ್ಕರ್‌ಗಳು, ಬೀದಿನಾಟಕ ಹಾಗೂ ರೇಡಿಯೋ ನಾಟಕಗಳ ಪುಸ್ತಕಗಳು, ಹಾಡಿನ ಸಂಕಲನಗಳು, ಧ್ವನಿಸುರುಳಿಗಳು, ಸಿ.ಡಿ.ಗಳು, ಸ್ಲೈಡ್‌ಗಳು ಹಾಗೂ ವಿಷಯಾಧಾರಿತ ಚಲನಚಿತ್ರಗಳು ಮುಖ್ಯವಾದವು.

**ತರಬೇತಿ :** ರಾಜ್ಯ ಸಂಪನ್ಮೂಲ ಕೇಂದ್ರದ ಮತ್ತೊಂದು ಪ್ರಮುಖ ಚಟುವಟಿಕೆ ಎಂದರೆ ತರಬೇತಿ ನೀಡುವುದು. ಅಕ್ಷರ ಕಲಿಸುವ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಸ್ವಯಂ ಸೇವಕರಿಂದ ಹಿಡಿದು ಹಿಂದಿನ ಮೇಲ್ವಿಚಾರಕರು, ಯೋಜನಾಧಿಕಾರಿಗಳು, ಈಗಿನ ತಾಲ್ಲೂಕು ಮಟ್ಟದ ಸಂಪನ್ಮೂಲ ವ್ಯಕ್ತಿಗಳು, ಪ್ರೇರಕರು, ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳು, ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ಸಂಯೋಜಕರು, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಪಂಚಾಯಿತಿರಾಜ್–ಜನ ಪ್ರತಿನಿಧಿಗಳು, ರಾಷ್ಟ್ರೀಯ ಸೇವಾ ಯೋಜನಾಧಿಕಾರಿಗಳು, ಜನ ಶಿಕ್ಷಣ ಸಂಸ್ಥೆಗಳು ಮಹಿಳಾ ಸಮಾಖ್ಯಾ. ಸ್ವಸಹಾಯ ಗುಂಪುಗಳು ಹಾಗೂ ನೆಹರೂ ಯುವ ಕೇಂದ್ರಗಳ ಸಿಬ್ಬಂದಿ. ಸರ್ಕಾರೇತರ ಸಂಸ್ಥೆಗಳು ವಿಶ್ವವಿದ್ಯಾಲಯಗಳ ಸಿಬ್ಬಂದಿ ಹೀಗೆ ವಯಸ್ಕರ ಶಿಕ್ಷಣದಲ್ಲಿ ತೊಡಗಿಸಿಕೊಳ್ಳುತ್ತಿರುವ ಎಲ್ಲ ವರ್ಗದ ಜನರಿಗೆ ಇದುವರೆಗೆ ಸುಮಾರು 80,000 ಮಂದಿಗೂ ಮೇಲ್ಪಟ್ಟು ರಾಜ್ಯ ಸಂಪನ್ಮೂಲ ಕೇಂದ್ರ ತರಬೇತಿ ನೀಡಿದೆ.

**ಸಂಶೋಧನೆ ಮತ್ತು ಮೌಲ್ಯಮಾಪನ :** ಸಾಕ್ಷರತೆ ಹಾಗೂ ಮುಂದುವರಿಕೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ಸಂಪನ್ಮೂಲ ಕೇಂದ್ರ ಹಲವು ಸಂಶೋಧನಾ ಹಾಗೂ ಮೌಲ್ಯಮಾಪನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಸಾಮಾನ್ಯವಾಗಿ ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳಿಗೆ ಸಂಶೋಧನೆ ಮಾಡುವುದೇ ಹೆಚ್ಚು. ಪ್ರಾರಂಭದ ಹತ್ತು ವರ್ಷಗಳಲ್ಲಿ (1979–88) ನಡೆದಿರುವ ಕೆಲಸ ಕಡಿಮೆ. ಆದರೆ ನಂತರದ 21 ವರ್ಷಗಳಲ್ಲಿ ಯೋಜನೆಗಳನ್ನು ಕೈಗೆತ್ತಿಕೊಂಡು ವರದಿಗಳನ್ನು ಹೊರತಂದಿದೆ. ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ, ಮಧ್ಯದಲ್ಲಿ ಕಲಿಕಾ ಕೇಂದ್ರ ಬಿಡುವ ಕಲಿಕಾರ್ಥಿಗಳು. ಮುಂದುವರಿಕೆ ಶಿಕ್ಷಣದಲ್ಲಿ ಜನ ಶಿಕ್ಷಣ ನಿಲಯಗಳ ಪಾತ್ರ, ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಜನಸಂಖ್ಯಾ ಶಿಕ್ಷಣ ಅಳವಡಿಕೆ, ಸಾಕ್ಷರೋತ್ತರ ಮತ್ತು ಮುಂದುವರಿಕೆ ಶಿಕ್ಷಣದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಅಳವಡಿಕೆ, ಪ್ರಾಥಮಿಕೆಗಳು, ಚಿಣ್ಣರ ಅಂಗಳ, ವೃತ್ತಿ ಕೌಶಲ, ಅಭಿವೃದ್ಧಿ, ಪ್ರೇರಕರ ತರಬೇತಿಯ ಪರಿಣಾಮ, ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ, ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳ ಸುಸ್ಥಿರತೆ, ಮುಂದುವರಿಕೆ, ಶಿಕ್ಷಣದಲ್ಲಿ ಗ್ರಾಮಪಂಚಾಯಿತಿಗಳ ಪಾತ್ರ, ತರಬೇತಿಯ ಆವಶ್ಯಕತೆಗಳು ಸಾಹಿತ್ಯ ಸಾಮಗ್ರಿಯಲ್ಲಿ ಜನಸಂಖ್ಯೆ ಮತ್ತು ಅಭಿವೃದ್ಧಿ ವಿಷಯಗಳ ವಿಶ್ಲೇಷಣೆ, ಕರ್ನಾಟಕದಲ್ಲಿ ನಡೆದ ವಯಸ್ಕ ಸಾಕ್ಷರತೆ ಕುರಿತ ಸಂಶೋಧನೆ ಮತ್ತು ಮೌಲ್ಯಮಾಪನದ ವಿಶ್ಲೇಷಣೆ ಮುಂತಾದ ವಿಷಯಗಳ ಬಗ್ಗೆ ರಾಜ್ಯ ಸಂಪನ್ಮೂಲ ಕೇಂದ್ರ 35ಕ್ಕೂ ಹೆಚ್ಚು ಸಂಶೋಧನಾ ಮತ್ತು ಮೌಲ್ಯಮಾಪನ


Digitised by Bharatavani, CIIL

ವರದಿಗಳನ್ನು ಪ್ರಕಟಿಸಿದೆ. ಇವಲ್ಲದೆ ಕೇಂದ್ರ ಸರ್ಕಾರದ ಕೋರಿಕೆಯಂತೆ ದಕ್ಷಿಣ ಭಾರತದ ವಿವಿಧ ರಾಜ್ಯಗಳಲ್ಲಿ ಜನಶಿಕ್ಷಣ ಸಂಸ್ಥೆಗಳ ಸ್ಥಾಪನೆಗಾಗಿ ಹಲವು 'ಸಾಧ್ಯತೆ ಅಧ್ಯಯನ' (Feasibility Study)ಗಳನ್ನೂ ನಡೆಸಿದೆ.

**ದಾಖಲೀಕರಣ :** ರಾಜ್ಯ ಸಂಪನ್ಮೂಲ ಕೇಂದ್ರವು ಕಾಲಕಾಲಕ್ಕೆ ಹಲವು ದಾಖಲೀಕರಣ ಚಟುವಟಿಕೆಗಳನ್ನು ಮಾಡುತ್ತಾ ಬಂದು ವಯಸ್ಕರ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಹಾಗೂ ಇತರೇ ಇಲಾಖೆಗಳಿಗೆ ಇದರಿಂದ ತುಂಬ ಉಪಯೋಗವಾಗಿದೆ. ಅವುಗಳಲ್ಲಿ 'ಸಾಕ್ಷರ ದಾರಿಗೆ ಸಾವಿರ ಹೆಜ್ಜೆ' (2000) ತುಂಬ ಮುಖ್ಯವಾದುದು. ಕರ್ನಾಟಕದ 10 ವರ್ಷದ ಸಾಕ್ಷರತಾ ಆಂದೋಲನಗಳ ಸಾಧನೆ ಕುರಿತು ಹೊರತಂದಿರುವ ಹೆಬ್ಬೊತ್ತಿಗೆ ಈ ಅಧ್ಯಯನ. ಈ ಕ್ಷೇತ್ರಕ್ಕೆ ಇದೊಂದು ಆಕರ ಗ್ರಂಥ. 'ಸಂವಾದ' ಪ್ರೇರಕರ ಯಶೋಗಾಥೆಗಳ ಸಂಕಲನ, 'ಯಶಸ್ಸು' (2003), 'ನೈಸರ್ಗಿಕ ಕೃಷಿ ಕತೆ' (2007), 'ಸಾಕ್ಷರತೆಗಾಗಿ ವಿನೂತನ ಹೆಜ್ಜೆಗಳು' (2008), 'ಚಿಣ್ಣರ ಅಂಗಳ' (2001), 'ಸಾಕ್ಷರತಾ ಆಂದೋಲನ ನಾವು ಕಂಡಂತೆ'(1996) 'ಅಕ್ಷರ ಅಧಿಕಾರ (2006), 'ಕರ್ನಾಟಕದಲ್ಲಿ ಅಮಾನವೀಯ ಪದ್ಧತಿಗಳು (2001), 'ಎನ್ ಅನಾಲಿಸಿಸ್ ಆಫ್ ರಿಸರ್ಚ್ ಆಫ್ ಎವ್ಯಾಲ್ಯುವೇಷನ್ ಸ್ಟಡೀಸ್ ಆನ್ ಅಡಲ್ಟ್ ಎಜುಕೇಷನ್ ಇನ್ ಕರ್ನಾಟಕ' (2001) ಮುಖ್ಯವಾದವು. ರಾಜ್ಯ ಸಂಪನ್ಮೂಲ ಕೇಂದ್ರ ದಾಖಲೀಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ 15 ಕೃತಿಗಳನ್ನು ಹೊರತಂದಿದೆ.

**ಪರಿವೀಕ್ಷಣೆ :** ವಾಸ್ತವವಾಗಿ ವಯಸ್ಕರ ಶಿಕ್ಷಣ ಹಾಗೂ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳು ಜಾರಿಗೊಳ್ಳುವುದು ಜಿಲ್ಲಾ ಸಾಕ್ಷರ ಸಮಿತಿಗಳ ಮೂಲಕ. ಆಯಾ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ತಳಹಂತದವರೆಗೂ ಜಾರಿಗೊಳಿಸುವುದು ಅವರೇ. ಅವರಿಗೆ ಅಗತ್ಯವಿರುವ ಹಣಕಾಸಿನ ನೆರವು ನೀಡಿ ಮಾರ್ಗದರ್ಶನ ನೀಡುವುದು ಕರ್ನಾಟಕ ರಾಜ್ಯ ಸಾಕ್ಷರತಾ ಪ್ರಾಧಿಕಾರ ಹಾಗೂ ಲೋಕ ಶಿಕ್ಷಣ ನಿರ್ದೇಶನಾಲಯ. ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಿದ ಕಾರ್ಯಕ್ರಮಗಳು ಅವುಗಳ ಉದ್ದೇಶಗಳಿಗೆ ಅನುಗುಣವಾಗಿ ಜಾರಿಗೊಳ್ಳುತ್ತಿರುವುದರ ಬಗ್ಗೆ ಪರಿವೀಕ್ಷಣೆ ನಡೆಸುವ ಜವಾಬ್ದಾರಿ ಲೋಕ ಶಿಕ್ಷಣ ನಿರ್ದೇಶನಾಲಯದ್ದು, ಅದರ ಜೊತೆ ರಾಜ್ಯ ಸಂಪನ್ಮೂಲ ಕೇಂದ್ರ ಕೈ ಜೋಡಿಸಿ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಪರಿವೀಕ್ಷಣೆ ನಡೆಸುತ್ತಾ ಬಂದಿದೆ.

**ಜಲ ಸಾಕ್ಷರತೆ – ನೈಸರ್ಗಿಕ ಕೃಷಿ :** ವಯಸ್ಕರ ಶಿಕ್ಷಣ ಕಾರ್ಯಕರ್ತರು ಹಾಗೂ ಇತರೇ ಜನಗಳಲ್ಲಿ ನೈಸರ್ಗಿಕ ಕೃಷಿ ಹಾಗೂ ಜಲ ಸಾಕ್ಷರತೆಯ ಕುರಿತು ಅರಿವನ್ನುಂಟು ಮಾಡಲು ಕಳೆದ 10 ವರ್ಷಗಳಿಂದ ರಾಜ್ಯ ಸಂಪನ್ಮೂಲ ಕೇಂದ್ರ ಹಲವು ಚಟವಟಿಕೆಗಳನ್ನು ಹಮ್ಮಿಕೊಂಡು ಬಂದಿದೆ. ಜಲ ಸಂರಕ್ಷಣೆ ಕುರಿತು ಚಾರ್ಟುಗಳು. ಭಿತ್ತಿ ಚಿತ್ರಗಳು ಹಾಗೂ ಸಂಪನ್ಮೂಲ ಸಾಹಿತ್ಯ ತಯಾರಿಕೆ, ಯಶೋಗಾಥೆಗಳ ದಾಖಲೀಕರಣ, ತರಬೇತಿ ಕಾರ್ಯಕ್ರಮಗಳು, ತಿಂಗಳ ವಾರ್ತಾಪತ್ರಗಳು, ವೆಬ್‌ಸೈಟ್ ರೂಪಿಸುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಕಾರ್ಯಕ್ರಮಗಳ ವ್ಯಾಪ್ತಿ :** ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವಿರುವ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ಹಲವು ಹೆಸರುಗಳಲ್ಲಿ ಜಾರಿಗೊಂಡಿದ್ದು, ಅದಕ್ಕೊಂದು ಸ್ಪಷ್ಟ ರೂಪ ದೊರೆತದ್ದು 1978ರಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ರೂಪುಗೊಂಡ ಮೇಲೆ. ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ, ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ, ರಾಜ್ಯ ವಯಸ್ಕರ ಶಿಕ್ಷಣ ಕಾರ್ಯಕ್ರಮ, ಅಕ್ಷರ ಸೇನೆ, ಸಂಪೂರ್ಣ ಸಾಕ್ಷರತಾ ಆಂದೋಲನಗಳು, ಸಾಕ್ಷರೋತ್ತರ ಕಾರ್ಯಕ್ರಮಗಳು, ಕನ್ನಡನಾಡು–ಸಾಕ್ಷರನಾಡು, ಶಿಬಿರ ಸಾಕ್ಷರತೆ ಕಲಿಕೆ–ಗಳಿಕೆ, ಮಹಿಳಾ ಸಾಕ್ಷರತೆ, ಸಾಕ್ಷರ ಸನ್ಮಾನ, ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ, ಸಮುದಾಯ ಶಿಕ್ಷಣ ಮತ್ತು ತರಬೇತಿ ಹಾಗೂ ಕಳೆದ ವರ್ಷದಿಂದ ಜಾರಿಗೊಳ್ಳುತ್ತಿರುವ ಸಾಕ್ಷರ ಭಾರತ್ ಕಾರ್ಯಕ್ರಮ ಈ ಮುಂತಾದ ಹಲವು ಮೂಲ ಸಾಕ್ಷರತೆ, ಸಾಕ್ಷರೋತ್ತರ ಹಾಗೂ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳಿಗೆ ರಾಜ್ಯ ಸಂಪನ್ಮೂಲ ಕೇಂದ್ರ ಶೈಕ್ಷಣಿಕ ಹಾಗೂ ತಾಂತ್ರಿಕ ನೆರವನ್ನು ನೀಡುತ್ತಾ ಬಂದಿದೆ. ಇದಕ್ಕಾಗಿ ರಾಜ್ಯ ಸಂಪನ್ಮೂಲ ಕೇಂದ್ರ ಹಲವು ಕಾರ್ಯಾಗಾರಗಳು, ಸಂವಾದ ಶಿಬಿರಗಳು, ಸಮ್ಮೇಳನಗಳು, ಗೋಷ್ಠಿಗಳು, ತರಬೇತಿಗಳು, ವಿಷಯ ಪರಿಚಯ ಶಿಬಿರಗಳು, ಅಧ್ಯಯನಗಳು, ಸಂಶೋಧನೆ, ಮೌಲ್ಯಮಾಪನ, ದಾಖಲೀಕರಣ, ಮುದ್ರಣ, ಪ್ರಕಟಣೆ, ಕಲಾಜಾಥಾ, ಕ್ಷೇತ್ರಭೇಟಿ, ಔಟ್‌ರೀಚ್, ಪ್ರಯೋಗಾತ್ಮಕವಾಗಿ ಕೇಂದ್ರಗಳನ್ನು ನಡೆಸುವಿಕೆ, ಮಾಧ್ಯಮ, ವೆಬ್‌ಸೈಟ್ ತೆರೆಯುವಿಕೆ ಮುಂತಾದ ಚಟುವಟಿಕೆಗಳನ್ನು ಮಾಡುತ್ತಾ ಬಂದಿದೆ.

**ಸಾಕ್ಷರ ಭಾರತ್ ಕಾರ್ಯಕ್ರಮ :** ಇತ್ತೀಚೆಗೆ ದೊಡ್ಡ ಪ್ರಮಾಣದಲ್ಲಿ ಜಾರಿಗೊಂಡು ಭರದಿಂದ ಪೂರ್ವ ಸಿದ್ಧತೆಗಳು ನಡೆಯುತ್ತಿರುವ ಕಾರ್ಯಕ್ರಮವೆಂದರೆ ಸಾಕ್ಷರ ಭಾರತ್ ಕಾರ್ಯಕ್ರಮ. ಈ ಸಾಕ್ಷರ ಕಾರ್ಯಕ್ರಮದಡಿಯಲ್ಲಿ ಎರಡು ಹಂತಗಳಲ್ಲಿ 20 ಜಿಲ್ಲೆಗಳಲ್ಲಿ ಒಟು 36 ಲಕ್ಷಕ್ಕೂ ಮಿಕ್ಕು ಅನಕ್ಷರಸ್ಥರನ್ನು ತೊಡಗಿಸಿಕೊಳ್ಳುತ್ತಿರುವುದು ಇದರ ಪ್ರಮುಖ ಉದ್ದೇಶ. ಮೊದಲ ಹಂತದಲ್ಲಿ 20 ಲಕ್ಷ ವಯಸ್ಕ ಅನಕ್ಷರಸ್ಥರನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ. ಈ ಸಂಬಂಧ ಪಠ್ಯಪುಸ್ತಕ ರಚನೆ, ತರಬೇತಿ ವಿನ್ಯಾಸವನ್ನು ರೂಪಿಸುವುದು, ವಿವಿಧ ಹಂತದ ಕಾರ್ಯಕರ್ತರಿಗೆ ತರಬೇತಿ ನೀಡುವುದು, ವಾತಾವರಣ ನಿರ್ಮಾಣ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಮಾಧ್ಯಮಗಳ ಮೂಲಕ ಪ್ರಚಾರ ನೀಡುವುದು – ಇವೇ ಮುಂತಾದ ಚಟುವಟಿಕೆಗಳಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರ ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಹಾಗೂ ಲೋಕ ಶಿಕ್ಷಣ ನಿರ್ದೇಶನಾಲಯದೊಂದಿಗೆ ಜೊತೆಗೂಡಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದೆ.

### ಒಟ್ಟು ಸಾಧನೆ, ಮನ್ನಣೆ ಮತ್ತು ಪುರಸ್ಕಾರ

ಕಳೆದ 31 ವರ್ಷಗಳಿಂದ ಸಾಮಗ್ರಿ ತಯಾರಿಕೆ ಹಾಗೂ ಪ್ರಕಟಣೆಗೆ ಸಂಬಂಧಿಸಿದಂತೆ ರಾಜ್ಯ ಸಂಪನ್ಮೂಲ ಕೇಂದ್ರ ಇದುವರೆಗೆ 1020 ಕೃತಿಗಳನ್ನು ಪ್ರಕಟಿಸಿದೆ. ಅವೆಂದರೆ ಮೂಲ ಪಠ್ಯಪುಸ್ತಕ 30, ಸಾಕ್ಷರೋತ್ತರ ಪಠ್ಯಪುಸ್ತಕ 20, ನವಸಾಕ್ಷರ ಓದುವ ಪುಸ್ತಕಗಳು 550, ತರಬೇತಿ/ಸಂಪನ್ಮೂಲ/ಆಕರ ಸಾಹಿತ್ಯ 110, ಪ್ರೇರಣಾ ಸಾಮಗ್ರಿ 250 ಸಂಶೋಧನೆ/ಅಧ್ಯಯನ/ಮೌಲ್ಯಮಾಪನ 35, ದಾಖಲೀಕರಣ 15, ವಾರ್ತಾಪತ್ರ ಹಾಗೂ ನಿಯತಕಾಲಿಕೆಗಳು 10. ಇದಲ್ಲದೆ ರಾಜ್ಯ ಸಂಪನ್ಮೂಲ ಕೇಂದ್ರ ನೂರಾರು ಗೋಷ್ಠಿಗಳು, ಸಮ್ಮೇಳನಗಳು, ಕಾರ್ಯಾಗಾರಗಳನ್ನು ನಡೆಸಿದೆ. ಇದುವರೆಗೆ ಸಂಸ್ಥೆಯಿಂದ ತರಬೇತಿ ಪಡೆದವರ ಸಂಖ್ಯೆ 80,000 ಗಡಿದಾಟಿದೆ. ರಾಜ್ಯ ಸಂಪನ್ಮೂಲ ಕೇಂದ್ರ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅದರ ಕಾರ್ಯಕ್ಷಮತೆಯನ್ನು ಗುರುತಿಸಿ ರಾಷ್ಟ್ರ ಹಾಗೂ ಅಂತಾರಾಷ್ಟ್ರಮಟ್ಟದ ಸಂಸ್ಥೆಗಳು ಈ ಸಂಸ್ಥೆಯನ್ನು ವಿವಿಧ ಸಂದರ್ಭಗಳಲ್ಲಿ ಪುರಸ್ಕರಿಸಿವೆ. 'ಸಾಕ್ಷರತಾ ಆಂದೋಲನದಲ್ಲಿ ತರಬೇತಿ ಒಂದು ಅಧ್ಯಯನ'ಕ್ಕೆ ರಾಷ್ಟ್ರೀಯ ಸಾಕ್ಷರತಾ ಮಿಷನ್ ನೀಡಿದ ಪ್ರಶಸ್ತಿ (1997), ಸಂಸ್ಥೆಯ ಅತ್ಯುತ್ತಮ ಸಾಧನೆಗಾಗಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಹಾಗೂ ಯುನೆಸ್ಕೋ ಜಂಟಿಯಾಗಿ ನೀಡಿದ ಪ್ರಶಸ್ತಿ (2001)

Digitised by Bharatavani, CIIL

ಮುಖ್ಯವಾದುವು 2000–2005 ಅವಧಿಯ ಕಾರ್ಯಸಾಧನೆಯನ್ನಾಧರಿಸಿ ಕೇಂದ್ರ ಸರ್ಕಾರ ರಾಜ್ಯ ಸಂಪನ್ಮೂಲ ಕೇಂದ್ರವನ್ನು 'ಎ' ಶ್ರೇಣಿಗೆ ಉನ್ನತೀಕರಿಸಿದ್ದು ಮತ್ತೊಂದು ವಿಶೇಷ.

–ಸಿ.ಪಿ.ವಿ.

## ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ

ಡಿ.ಎಸ್.ಇ.ಆರ್.ಟಿ. ಎಂದೇ ಜನಪ್ರಿಯವಾಗಿರುವ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯವು ಸಾರ್ವಜನಿಕ ಶಿಕ್ಷಣ ಇಲಾಖೆಯ ಶೈಕ್ಷಣಿಕ ಅಂಗವಾಗಿದೆ. ಶಾಲಾ ಶಿಕ್ಷಣದಲ್ಲಿ ಶೈಕ್ಷಣಿಕ ನಾಯಕತ್ವವನ್ನು ನೀಡುವುದು ಹಾಗೂ ಸಂಶೋಧನೆ ನಡೆಸುವುದರೊಂದಿಗೆ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ ಗುರಿಯನ್ನು ಡಿ.ಎಸ್.ಇ.ಆರ್.ಟಿ. ಹೊಂದಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಡಿ.ಎಸ್.ಇ.ಆರ್.ಟಿ. ಒಂದು ಪ್ರತ್ಯೇಕವಾದ ಶೈಕ್ಷಣಿಕ ಘಟಕವಾಗಿ ಪ್ರಾರಂಭವಾಯಿತು. ಮೂಲತಃ 1964ರಲ್ಲಿ ರಾಜ್ಯ ಶಿಕ್ಷಣ ಸಂಸ್ಥೆ (SIE)ಯು ಕರ್ನಾಟಕದ ಉತ್ತರ ಭಾಗದ ಧಾರವಾಡದಲ್ಲಿ ಕಾರ್ಯಾರಂಭ ಮಾಡಿತು. ಈ ಘಟಕವನ್ನು ಅನಂತರ ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ಇತರ ಶೈಕ್ಷಣಿಕ ಘಟಕಗಳಾದ ರಾಜ್ಯ ವಿಜ್ಞಾನ ಸಂಸ್ಥೆ (SIS), ರಾಜ್ಯ ಶಿಕ್ಷಣ ಮೌಲ್ಯಮಾಪನ ಘಟಕ (SEEU) ಮತ್ತು ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ವಿಭಾಗಗ(EVG)ಳು 1975ರಲ್ಲಿ ವಿಲೀನಗೊಂಡು ಒಂದು ಪ್ರತ್ಯೇಕ ಸಂಸ್ಥೆಯಾಗಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ರೂಪಗೊಂಡಿತು. 1993ರಲ್ಲಿ ಪಠ್ಯಪುಸ್ತಕ ನಿರ್ದೇಶನಾಲಯವನ್ನು ಡಿ.ಎಸ್.ಇ.ಆರ್.ಟಿ. ಯೊಂದಿಗೆ ಸೇರಿಸಲಾಯಿತು. ಅನಂತರ ಶಿಕ್ಷಕರ ಶಿಕ್ಷಣದ ಆಡಳಿತ ಘಟಕವನ್ನು (TE) ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯಿಂದ ಬೇರ್ಪಡಿಸಿ ಡಿ.ಎಸ್.ಇ.ಆರ್.ಟಿ.ಯೊಂದಿಗೆ ವಿಲೀನಗೊಳಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ. 2005–06ನೇ ಸಾಲಿನಲ್ಲಿ ಪ್ರತ್ಯೇಕವಾಗಿ ರಾಜ್ಯ ಪಠ್ಯ ಪುಸ್ತಕ ಸಂಘವೆಂದು ಸ್ಥಾಪಿಸಿ ಬೇರ್ಪಡಿಸಲಾಯಿತು. ತದನಂತರದಲ್ಲಿ ತನ್ನದೇ ಅಸ್ತಿತ್ವದಲ್ಲಿ ಡಿ.ಎಸ್.ಇ.ಆರ್.ಟಿ.ಯು ಶೈಕ್ಷಣಿಕ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಕರ ಶಿಕ್ಷಣಕ್ಕೆ ವಿಶೇಷ ಪ್ರಾಮುಖ್ಯವನ್ನು ನೀಡಿತು ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಗುಣಾತ್ಮಕ ತರಬೇತಿ ನೀಡಲು ಹೆಚ್ಚು ಒತ್ತು ನೀಡಲಾಯಿತು. ರಾಜ್ಯದಲ್ಲಿ 1993ರಲ್ಲಿ ಎಂಟು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು (DIET) ಪ್ರಾರಂಭಿಸಿ ಅನಂತರ ಅನುಕ್ರಮವಾಗಿ ರಾಜ್ಯದ ಎಲ್ಲ 20 ಕಂದಾಯ ಜಿಲ್ಲೆಗಳಲ್ಲಿ ಜಿಲ್ಲಾ ಮತ್ತು ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಅಂತೆಯೇ ಪ್ರೌಢಶಿಕ್ಷಣ ವಿಭಾಗದಲ್ಲಿ ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಣದ ಗುಣಮಟ್ಟವನ್ನು ಉತ್ತಮಗೊಳಿಸಲು 6 ಸರ್ಕಾರಿ ಶಿಕ್ಷಣ ಕಾಲೇಜುಗಳನ್ನು ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳನ್ನಾಗಿ ಉನ್ನತೀಕರಿಸಲಾಯಿತು.

ಶಿಕ್ಷಕ ಶಿಕ್ಷಣದ ಖಾಸಗಿ ಕ್ಷೇತ್ರದಲ್ಲಿ, ಶಿಕ್ಷಕ ತರಬೇತುದಾರರಿಗೆ ಅಗತ್ಯವಿರುವ ಗುಣಾತ್ಮಕ ಸಂಪನ್ಮೂಲಗಳನ್ನು ಒದಗಿಸುವಂತೆ ಶಿಕ್ಷಕ ತರಬೇತುದಾರರಿಗೆ ಶೈಕ್ಷಣಿಕ ಸಂಶೋಧನೆಗಳನ್ನು ಕೈಗೊಳ್ಳಲು ತರಬೇತಿ ನೀಡುವಂತೆ ಉದ್ದೇಶಿಸಿ ಬೆಂಗಳೂರಿನ ಆರ್.ವಿ. ಶಿಕ್ಷಕರ ಮಹಾವಿದ್ಯಾಲಯವನ್ನು ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ ಇನ್ ಎಜುಕೇಶನ್ (IASE) ದರ್ಜೆಗೆ ಏರಿಸಲಾಯಿತು. 4 ಖಾಸಗಿ ಬಿ.ಎಡ್. ಕಾಲೇಜುಗಳನ್ನು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳಾಗಿ ಉನ್ನತೀಕರಿಸಲಾಯಿತು.

ಎಜುಸ್ಯಾಟ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಡಿ.ಎಸ್.ಇ.ಆರ್.ಟಿ.ಯು ತನ್ನ ಆವರಣದಲ್ಲಿ ದೃಕ್–ಶ್ರವಣ ವ್ಯವಸ್ಥೆಯುಳ್ಳ ಒಂದು ಸ್ಟುಡಿಯೋವನ್ನು ಸಹ ನಿರ್ಮಿಸಿದೆ. ಈ ಕಾರ್ಯಕ್ರಮದಲ್ಲಿ ಬಳಸುವ ದೂರದರ್ಶನ ಆಧಾರಿತ ದೃಶ್ಯ ಪಾಠಗಳನ್ನು ಈ ಸ್ಟುಡಿಯೋದಲ್ಲಿಯೇ ಸಿದ್ಧಪಡಿಸಲಾಗಿದೆ.

ಇಸ್ರೋ ಸಂಸ್ಥೆಯವರು ಸ್ಥಾಪಿಸಿರುವ ಭೂಕೇಂದ್ರ ಹಾಗೂ ಮೇಲ್ ಸಂಪರ್ಕ ವ್ಯವಸ್ಥೆಗಳನ್ನು ಬಳಸಿಕೊಂಡು ಶೈಕ್ಷಣಿಕ ಪ್ರಸಾರಗಳನ್ನು ಡಿ.ಎಸ್.ಇ.ಆರ್.ಟಿ.ಯಿಂದಲೇ ಮಾಡಲಾಗುವುದು. ಎಜುಸ್ಯಾಟ್ ಯೋಜನೆಯಡಿಯಲ್ಲಿ ತಾಂತ್ರಿಕ ಮಹಾವಿದ್ಯಾಲಯಗಳ ಪಾಠಪ್ರಸಾರಗಳ ಸಲುವಾಗಿ ಭೂಕೇಂದ್ರ ಸ್ಥಾಪನೆ ಮತ್ತು ಮೇಲ್ ಸಂಪರ್ಕ ವ್ಯವಸ್ಥೆಯನ್ನು ಈಗಾಗಲೇ ಕಲ್ಪಿಸಲಾಗಿದೆ.

### ಡಿ.ಎಸ್.ಇ.ಆರ್.ಟಿ.ಯ ಧ್ಯೇಯಗಳು

1. ರಾಜ್ಯದ ಶಾಲಾ ಶಿಕ್ಷಣದಲ್ಲಿ ಶೈಕ್ಷಣಿಕ ಮುಂದಾಳತ್ವವನ್ನು ಒದಗಿಸುವುದು.
2. ಶಿಕ್ಷಕ ತರಬೇತಿಯ ಮೂಲಕ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಅಭಿವೃದ್ಧಿಯನ್ನು ಸಾಧಿಸುವುದು.
3. ಶಿಕ್ಷಕರ ಅಭಿವೃದ್ಧಿಯನ್ನು ಸುಗಮಗೊಳಿಸಲು ಕ್ರಿಯಾ ಸಂಶೋಧನೆ (Action Research) ಗೆ ಬೆಂಬಲಿಸುವುದು.
4. ಆಗಿಂದಾಗ್ಗೆ ರಾಜ್ಯ ಸರ್ಕಾರದ ನೀತಿಯಲ್ಲಿ ಉಂಟಾಗುವ ಬದಲಾವಣೆಗನುಗುಣವಾಗಿ ಶೈಕ್ಷಣಿಕ ಸುಧಾರಣೆಗಳನ್ನು ಕೈಗೊಳ್ಳುವುದು.
5. ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಎನ್.ಸಿ.ಇ.ಆರ್.ಟಿ., ನೀಪ, ಯೂನಿಸೆಫ್, ಡಿಪಿಇಪಿ, ಯುಎನ್‌ಡಿಪಿ, ಎಸ್.ಎಸ್.ಎ., ಆರ್.ಐ.ಇ., ಬೆಂಗಳೂರು, ಭಾರತೀಯ ವಿಜ್ಞಾನ ಸಂಸ್ಥೆ, ಮುಂತಾದ ಸಂಸ್ಥೆಗಳ ಕಾರ್ಯಕ್ರಮಗಳನ್ನು ರಾಜ್ಯ ಮಟ್ಟದಲ್ಲಿ ಸಂಯೋಜಿಸುವುದು.
6. ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೇರೆ ಬೇರೆ ಸಂಸ್ಥೆಗಳ (NGOಗಳನ್ನೊಳಗೊಂಡ) ಸಹಯೋಗದೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ಯೋಜನೆಗಳನ್ನು ಕೈಗೊಳ್ಳುವುದು.
7. ರಾಜ್ಯದಲ್ಲಿ ಶಿಕ್ಷಕ ಶಿಕ್ಷಣದ ಅಗತ್ಯವನ್ನು ಪೂರೈಸುವುದು.
8. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಸೇವಾನಿರತ ತರಬೇತಿ ಒದಗಿಸುವಲ್ಲಿ ಸಂಪರ್ಕ ಘಟಕ (Nodal Agency)ವಾಗಿ ಕಾರ್ಯನಿರ್ವಹಿಸುವುದು.
9. ಪಠ್ಯಕ್ರಮ ರಚನೆ ಹಾಗೂ ಪರಿಷ್ಕರಣೆಯನ್ನು ಕೈಗೊಳ್ಳುವುದು.
10. ಪಠ್ಯ ಪುಸ್ತಕಗಳು, ಶಿಕ್ಷಕರ ಕೈಪಿಡಿಗಳು ಮತ್ತು ಇತರ ಸಂಪನ್ಮೂಲ ಸಾಮಗ್ರಿಗಳನ್ನು ರಚಿಸಿ, ಮುದ್ರಿಸಿ, ಪ್ರಕಾಶಿಸಿ ಶಾಲೆಗಳಿಗೆ, ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ವಿತರಿಸುವುದು.


Digitised by Bharatavani, CIIL

**ಡಿ.ಎಸ್.ಇ.ಆರ್.ಟಿ.ಯ ಪ್ರಮುಖ ಚಟುವಟಿಕೆಗಳು**

1. ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು.
2. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಹಂತಗಳೆರಡೂ ಒಳಗೊಂಡಂತೆ ರಾಜ್ಯದಲ್ಲಿ ಶಿಕ್ಷಕ ಶಿಕ್ಷಣ ತರಬೇತಿಯ ನಿರ್ವಹಣೆಯನ್ನು (ಸೇವಾ ಪೂರ್ವ ಮತ್ತು ಸೇವಾನಿರತ ಶಿಕ್ಷಣ) ಮಾಡುವುದು.
3. ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳು, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು ಹಾಗೂ ಇತರ ಶಿಕ್ಷಕ ತರಬೇತಿ ಸಂಸ್ಥೆಗಳ ನಿರ್ವಹಣೆ.
4. ಶಾಲಾ ಶಿಕ್ಷಣದ ಅಡಿಯಲ್ಲಿ ಬರುವ ವಿವಿಧ ವ್ಯಾಸಂಗಗಳ ಪಠ್ಯಕ್ರಮದ ತಯಾರಿಕೆ ಮತ್ತು ಪರಿಷ್ಕರಣೆ.
5. ಕೆಳಕಂಡ ತರಬೇತಿಗಳಿಗೆ ಅವಶ್ಯವಾಗಿರುವ ಪಠ್ಯಪುಸ್ತಕಗಳ ಶಿಕ್ಷಕರ ಕೈಪಿಡಿಗಳ, ಸಂಪನ್ಮೂಲ ಸಾಮಗ್ರಿಗಳ, ಮತ್ತು ತರಬೇತಿ ಸಂಚಿಕೆಗಳ ಸಿದ್ಧತೆ, ಪ್ರಕಟಣೆ ಮತ್ತು ವಿತರಣೆ.

   ಅ. 1 ರಿಂದ 10ನೇ ತರಗತಿಗಳು

   ಆ. ಶಿಕ್ಷಣದಲ್ಲಿ ಡಿಪ್ಲೋಮಾ

   ಇ. ಇತರ ವಿಷಯ ವ್ಯಾಸಂಗಗಳಾದ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಸಂಸ್ಕೃತ, ವಾಣಿಜ್ಯ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ ಮುಂತಾದವು.
6. ರಾಜ್ಯದಲ್ಲಿ ವಿಜ್ಞಾನ ಶಿಕ್ಷಣವನ್ನು ಪ್ರೋತ್ಸಾಹಿಸುವುದು.
7. ಶಾಲೆಗಳಿಗೆ ಬೋಧನೆ-ಕಲಿಕೆಯ ಸಾಮಗ್ರಿಗಳ ಸಂಗ್ರಹಣೆ ಮತ್ತು ವಿತರಣೆ.
8. ಪಠ್ಯ ವಿಷಯ, ಶಿಕ್ಷಣಶಾಸ್ತ್ರ, ಶಿಕ್ಷಣದಲ್ಲಿ ರಂಗಕಲೆಯಂತಹ ನವೀನ ಪದ್ಧತಿಗಳ ಅಳವಡಿಕೆ, ಶಾಲೆಗಳಲ್ಲಿ ಕಡಿಮೆ ವೆಚ್ಚದ/ವೆಚ್ಚರಹಿತ ಬೋಧನೆ-ಕಲಿಕೆಯ ಸಾಮಗ್ರಿಗಳ ತಯಾರಿಕೆ ಮುಂತಾದ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ ಕಾರ್ಯಗತಗೊಳಿಸುವುದು.
9. ಬಣ್ಣದ ಟಿವಿಗಳು, ದೃಕ್‌ಶ್ರವಣ ಸುರುಳಿಗಳು, ಗಣಕಯಂತ್ರಗಳು, ಸಿ.ಡಿ.ರೋಂಗಳು (CD Rom), ಪ್ರಯೋಗಶಾಲೆ ಮತ್ತು ಗ್ರಂಥಾಲಯಗಳಿಗೆ ಅಗತ್ಯವಾದ ಸಾಮಗ್ರಿಗಳು, ನಕ್ಷೆಗಳು, ಭೂಪಟಗಳು ಹಾಗೂ ಮಾದರಿಗಳನ್ನು ಶಾಲೆಗಳಿಗೆ ವಿತರಿಸುವುದು.
10. ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಶಿಕ್ಷಕರನ್ನು ನೇರವಾಗಿ ಎಜುಸ್ಯಾಟ್ ಯೋಜನೆಯ ಮೂಲಕ ಸಂಪರ್ಕಿಸುವುದು.
11. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವನ್ನು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡುವುದು ಹಾಗೂ ಕಾರ್ಯಕ್ರಮಗಳ ಖರ್ಚು ವೆಚ್ಚಗಳನ್ನು ಪರಿಶೀಲಿಸುವುದು.
12. ರಾಜ್ಯ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಸಂಬಂಧಪಟ್ಟ ವಿವಿಧೋದ್ದೇಶಗಳಿಗೆ ಬಿಡುಗಡೆ ಮಾಡುವುದು ಹಾಗೂ ಕಾರ್ಯಕ್ರಮಗಳ ಖರ್ಚು ವೆಚ್ಚಗಳನ್ನು ಪರಿಶೀಲಿಸುವುದು.

**೫. ಡಿ.ಎಸ್.ಇ.ಆರ್.ಟಿ.ಯ ಅಂಗರಚನೆ**




ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಶ್ರೇಣಿಯ ಅಧಿಕಾರಿಯು ಡಿ.ಎಸ್.ಇ.ಆರ್.ಟಿ.ಯ ಮುಖ್ಯಸ್ಥರಾಗಿರುತ್ತಾರೆ. ಸಹ-ನಿರ್ದೇಶಕರ ಶ್ರೇಣಿಯ ಅಧಿಕಾರಿಯು ಎಲ್ಲಾ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕರ್ತವ್ಯಗಳಲ್ಲಿ ನಿರ್ದೇಶಕರಿಗೆ ನೆರವು ನೀಡುತ್ತಾರೆ.

ಡಿ.ಎಸ್.ಇ.ಆರ್.ಟಿ.ಯು ಕೆಳಕಂಡ ಘಟಕಗಳನ್ನು ಒಳಗೊಂಡಿವೆ.

**೧. ಶಿಕ್ಷಕ ಶಿಕ್ಷಣ ಘಟಕ (ಟಿ.ಇ.)**

ಈ ಘಟಕವು ರಾಜ್ಯದಲ್ಲಿನ ಶಿಕ್ಷಕ ಶಿಕ್ಷಣದ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಕ ಶಿಕ್ಷಣಗಳೆರಡೂ ಸೇರಿ) ಹೊಣೆಯನ್ನು ಹೊತ್ತಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಶ್ರೇಣಿಯ ಅಧಿಕಾರಿ ಈ ಘಟಕದ ಮುಖ್ಯಸ್ಥರಾಗಿರುತ್ತಾರೆ. ಮುಖ್ಯಸ್ಥರಿಗೆ ಕಿರಿಯ ಶ್ರೇಣಿಯ ದರ್ಜೆಯ ಇಬ್ಬರು ಹಿರಿಯ ಸಹಾಯಕ ನಿರ್ದೇಶಕರು ನೆರವು ನೀಡುತ್ತಾರೆ. ಒಬ್ಬ

Digitised by Bharatavani, CIIL

ಅಧಿಕಾರಿಯು ಡಯಟ್‌ಗಳು ಮತ್ತು ಸಿಟಿಇ ಗಳ ಜವಾಬ್ದಾರಿ ಹೊಂದಿದ್ದರೆ, ಇನ್ನೊಬ್ಬ ಅಧಿಕಾರಿಯು ಪ್ರಾಥಮಿಕ ಹಾಗೂ ಪ್ರೌಢ ಹಂತದ ಎಲ್ಲ ಶಿಕ್ಷಕ ತರಬೇತಿ ಸಂಸ್ಥೆಗಳ ಜವಾಬ್ದಾರಿ ಹೊಂದಿರುವರು.

**೨. ರಾಜ್ಯ ಶಿಕ್ಷಣ ಮೌಲ್ಯಮಾಪನ ಘಟಕ (ಎಸ್.ಬಿ.ಇ)**

ಶಾಲಾ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು ಹಾಗೂ ಶಿಕ್ಷಕರ ವೃತ್ತಿಪರತೆಯನ್ನು ಅಭಿವೃದ್ಧಿಪಡಿಸುವುದು ಈ ಘಟಕದ ಮುಖ್ಯ ಉದ್ದೇಶವಾಗಿದೆ. ರಾಜ್ಯ ಶಿಕ್ಷಣ ಸಂಸ್ಥೆಯು ಈ ಹಿಂದೆ ನಡೆಸುತ್ತಿದ್ದ ಎಲ್ಲ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ವೃತ್ತಿ ಮಾರ್ಗದರ್ಶನ,

1983ರಲ್ಲಿ ಪಠ್ಯಪುಸ್ತಕ ನಿರ್ದೇಶಕರ ಹುದ್ದೆಯನ್ನು ರದ್ದುಪಡಿಸಿ ನಿರ್ದೇಶನಾಲಯವನ್ನು ಡಿಎಸ್.ಇ.ಆರ್.ಟಿ.ಯೊಂದಿಗೆ ವಿಲೀನಗೊಳಿಸಲಾಯಿತು. ಡಿ.ಎಸ್.ಇ.ಆರ್.ಟಿ.ಯ ನಿರ್ದೇಶಕರು ಪಠ್ಯಪುಸ್ತಕದ ನಿರ್ದೇಶನಾಲಯದ ಪದ ನಿಮಿತ್ತ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸುತ್ತಾರೆ. ಉಪ-ನಿರ್ದೇಶಕರ ಹುದ್ದೆಯ ಅಧಿಕಾರಿ ಇವರಿಗೆ ನೆರವು ನೀಡುತ್ತಾರೆ. ಐವರು ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಯ ಅಧಿಕಾರಿಗಳು, ನಾಲ್ಕು ಸಹಾಯಕ ನಿರ್ದೇಶಕರ ಹುದ್ದೆಗಳ ಅಧಿಕಾರಿಗಳಿದ್ದು ಇವರು ವಿವಿಧ ವಿಷಯಗಳ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯನಿರ್ವಹಿಸುವರು. ಪಠ್ಯಕ್ರಮ ತಯಾರಿಕೆ, ವಿವಿಧ ವಿಷಯಗಳಿಗೆ ಶಾಲಾ ವೇಳಾಪಟ್ಟಿಯಲ್ಲಿ ಸಮಯವನ್ನು ನಿಗದಿಪಡಿಸುವುದು., ಮೌಲ್ಯಮಾಪನ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನವನ್ನು, ಪಠ್ಯಪುಸ್ತಕ ನಿರ್ದೇಶನಾಲಯವು ಒದಗಿಸುತ್ತದೆ. ಪ್ರಾಥಮಿಕ ಹಂತದ 1 ರಿಂದ 4ನೇ ತರಗತಿಗಳಿಗೆ ಸಂಬಂಧಿಸಿದಂತೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ವಿಧಾನವನ್ನು ಪ್ರಥಮ ಬಾರಿಗೆ ಈ ನಿರ್ದೇಶನಾಲಯದಿಂದಲೇ ರೂಪಿಸಲಾಗಿದೆ.

ಶಿಕ್ಷಣ ತಜ್ಞರು ಮತ್ತು ತರಗತಿಯ ಅಧ್ಯಾಪಕರ ಸಹಕಾರದೊಂದಿಗೆ ಈ ನಿರ್ದೇಶನಾಲಯವು ಶೈಕ್ಷಣಿಕ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ, ಪ್ರಾಥಮಿಕ ಮತ್ತು ಪ್ರೌಢ ಹಂತಗಳಲ್ಲಿ ವರ್ಷವನ್ನು ಮೂರು ಘಟಕಗಳಾಗಿ ವಿಭಜಿಸಿ ತ್ರೈಮಾಸಿಕ (Trimester) ಪದ್ಧತಿಯನ್ನು 2004-05ನೇ ಸಾಲಿನಿಂದ ಪ್ರಾರಂಭಿಸಲಾಯಿತು. ಕಿರುಪರೀಕ್ಷೆಗಳು ಮತ್ತು ವರ್ಷಾಂತ್ಯದ ಪರೀಕ್ಷೆಗಳ ಬದಲಾಗಿ ವ್ಯಾಪಕ ಮೌಲ್ಯಮಾಪನವನ್ನು ಪರಿಚಯಿಸಿ ಶ್ರೇಣಿ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ವಿಭಾಗಗಳಲ್ಲದೆ ಅನೇಕ ವರ್ಷಗಳ ಕಾಲ ವಿಸ್ತರಣಾ ವಿಭಾಗವೂ ಕೆಲಸ ಮಾಡುತ್ತಿತ್ತು. ಈ ವಿಭಾಗ ಸೇವಾನಿರತ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಅಲ್ಪಕಾಲೀನ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು, ಉಪಯುಕ್ತ ಸಾಹಿತ್ಯ ಪ್ರಕಟಿಸುವುದು, ಮಾರ್ಗದರ್ಶನ ನೀಡುವುದು ಮುಂತಾದ ವಿಸ್ತರಣ ಕಾರ್ಯಗಳನ್ನು ಕೈಗೊಳ್ಳುತ್ತಿತ್ತು.

**ಸರ್ವಶಿಕ್ಷಣ ಅಭಿಯಾನ ತರಬೇತಿ ಕೋಶ**

ರಾಜ್ಯದ ಸರ್ವಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರನ್ನು ತರಬೇತಿಗೆ ಒಳಪಡಿಸುವ ಜವಾಬ್ದಾರಿಯನ್ನು ಡಿ.ಎಸ್.ಇ.ಆರ್.ಟಿ. ಸಂಸ್ಥೆಗೆ ನೀಡಲಾಗಿದೆ. ಪ್ರತಿಯೊಬ್ಬ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಕನಿಷ್ಠ 20 ದಿನಗಳ ತರಬೇತಿಯನ್ನು ಒಂದು ವರ್ಷದಲ್ಲಿ ಪಡೆಯಬೇಕಾಗಿದೆ. ಇದೊಂದು ಬೃಹತ್ತಾದ ಯೋಜನೆಯಾದುದರಿಂದ 2003-04ರ ಸಾಲಿನಲ್ಲಿ ಡಿ.ಎಸ್.ಇ.ಆರ್.ಟಿ.ಯಲ್ಲಿ ಒಂದು ಪ್ರತ್ಯೇಕ ಕೋಶವನ್ನು ರಚಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ರಾಜ್ಯಾದ್ಯಂತ ನಡೆಯುವ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಕಾರ್ಯಕ್ರಮಗಳ ಮೇಲುಸ್ತುವಾರಿಯನ್ನು ಈ ಕೋಶವು ನೋಡಿಕೊಳ್ಳುತ್ತದೆ. ತರಬೇತಿಗಾಗಿ ಡಿ.ಎಸ್.ಇ.ಆರ್.ಟಿ.ವತಿಯಿಂದ ಬಿಡುಗಡೆಯಾದ ಅನುದಾನವನ್ನು ತಲುಪಿಸುವಲ್ಲಿ ಈ ಶಾಖೆಯು ಗಮನವನ್ನುಹರಿಸುತ್ತದೆ.

ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳಿಗೆ ಯೋಜನೆಯನ್ನು ತಯಾರಿಸಿ, ವಿಷಯತಜ್ಞರಿಂದ ತರಬೇತಿ ಸಂಚಿಕೆಗಳನ್ನು ಸಿದ್ಧಪಡಿಸಿ, ಪ್ರಧಾನ ಸಂಪನ್ಮೂಲ ವ್ಯಕ್ತಿಗಳನ್ನು ತರಬೇತಿಗೆ ಒಳಪಡಿಸಿ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ನಡೆಯುವ ಈ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ನಿರ್ವಹಣೆಯನ್ನು ನೋಡಿಕೊಳ್ಳುವ ಕಾರ್ಯವೂ ಈ ಶಾಖೆಯ ಜವಾಬ್ದಾರಿಯಾಗಿದೆ. ಬಹುವರ್ಗ ಮತ್ತು ಬಹುಹಂತ ಬೋಧನೆಗೆ ಸಂಬಂಧಿಸಿದಂತೆ "ಬಹುಮುಖಿ" ಎಂಬ ತರಬೇತಿ ಸಂಚಿಯನ್ನು ಮತ್ತು ಹೊಸದಾಗಿ ನೇಮಕಗೊಂಡ ಶಿಕ್ಷಕರಿಗೆ ಬುನಾದಿ ತರಬೇತಿಯ ಸಲುವಾಗಿ "ಪ್ರೇರಣಾ" ಎಂಬ ತರಬೇತಿ ಸಂಚಿಯನ್ನು ಪ್ರಪ್ರಥಮವಾಗಿ ಈ ಶಾಖೆಯು ಹೊರತಂದಿದೆ. ಸರ್ಕಾರೇತರ ಸಂಸ್ಥೆಗಳೊಂದಿಗೆ ಸಹಕರಿಸಿ ಅನೇಕ ಕಾರ್ಯಕ್ರಮಗಳನ್ನು ಎಸ್.ಎಸ್.ಎ ವತಿಯಿಂದ ಡಿ.ಎಸ್.ಇ.ಆರ್.ಟಿ.ಯು ಈ ಶಾಖೆಯ ಮೂಲಕವೇ ಹಮ್ಮಿಕೊಳ್ಳುತ್ತಿದೆ. ಎಂದರೆ "ಕೇಳಿ - ತಿಳಿ", "ಬಾನ್ದನಿ", ಎಜುಸ್ಯಾಟ್, ಕಂಪ್ಯೂಟರ್ ಆಧಾರಿತ ಶಿಕ್ಷಣ ಕಾರ್ಯಕ್ರಮ ಇತ್ಯಾದಿ. ಈ ಶಾಖೆಯ ನಿರ್ವಹಣೆಯನ್ನು ಹಿರಿಯ ಸಹಾಯಕ ನಿರ್ದೇಶಕರೊಬ್ಬರು ನಿರ್ವಹಿಸುತ್ತಾರೆ.

-ಆರ್.ಸ.ಮೂ

**ರಾಧಾಕೃಷ್ಣನ್ ಎಸ್.**

ಡಾ॥ ಎಸ್. ರಾಧಾಕೃಷ್ಣನ್

ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಸೆಪ್ಟೆಂಬರ್ 5, 1888ನೇ ಇಸವಿಯಲ್ಲಿ ಚೆನ್ನೈ ಬಳಿ ಇರುವ ತಿರುತ್ತಣಿ ಎಂಬ ಪಟ್ಟಣದಲ್ಲಿ ಜನಿಸಿದರು. ಇವರ ತಂದೆತಾಯಿಯರು ಆರ್ಥಿಕವಾಗಿ ಅಷ್ಟೇನೂ ಉತ್ತಮ ಸ್ಥಿತಿಯಲ್ಲಿ ಇಲ್ಲದಿದ್ದರೂ ಬುದ್ಧಿವಂತನಾದ ತಮ್ಮ ಮಗನನ್ನು ತಿರುಪತಿಯಲ್ಲಿನ ಜರ್ಮನ್ ಮಿಷನರಿ ಶಾಲೆಗೆ ಸೇರಿಸಿದರು. ನಂತರ ರಾಧಾಕೃಷ್ಣನ್ ವೆಲ್ಲೂರಿನ ಕಾಲೇಜೊಂದರಲ್ಲಿ ಸೇರಿಕೊಂಡರು. ಪುನಃ ತಮ್ಮ 17ನೇ ವಯಸ್ಸಿನಲ್ಲಿ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿದ್ಯಾರ್ಥಿಯಾದರು. ತಮ್ಮ ಶೈಕ್ಷಣಿಕ ಜೀವನದಲ್ಲಿ ಅವರು ವಿವಿಧ ರೀತಿಯ ವಿದ್ಯಾರ್ಥಿ ವೇತನಗಳಿಂದ ಪುರಸ್ಕೃತರಾದರು. ಇದು ಅವರ ಅಗಾಧ ಬುದ್ಧಿಮತ್ತೆಗೆ ನಿದರ್ಶನವಾಗಿದೆ. 1906ರಲ್ಲಿ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಿಂದ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಸ್ನಾತಕೋತ್ತರ ಪದವಿಗಾಗಿ "ವೇದಾಂತದ ನೈತಿಕತೆ ಹಾಗೂ ಅದರ ತಾತ್ವಿಕ ಪೂರ್ವಧಾರಣೆಗಳು" (Ethics of Vedanta and its Metaphysical Presuppositions) ಎಂಬ ಸಂಶೋಧನಾ ಪ್ರಬಂಧವನ್ನು ಬರೆದರು. ಈ ಪ್ರಬಂಧವು ತಮ್ಮ ತತ್ವಶಾಸ್ತ್ರದ ಪ್ರಾಧ್ಯಾಪಕರಾದ ಡಾ॥ ವಿ.ಜಿ. ಹಾಗ್‌ರವರನ್ನು ಪ್ರಸನ್ನಗೊಳಿಸುವುದಿಲ್ಲವೆಂಬ ಸಂಶಯ ರಾಧಾಕೃಷ್ಣನ್ನರನ್ನು ಕಾಡುತ್ತಿತ್ತು. ಆದರೆ, ಈ ಪ್ರಬಂಧವನ್ನು ಓದಿದ ಡಾ॥ ಹಾಗ್‌ರವರು ಉತ್ತಮ ಕೃತಿಯೊಂದನ್ನು ರಚಿಸಿದ್ದೀರೆಂದು ಅವರನ್ನು ಹೊಗಳಿದರು. ಇದನ್ನು ಅವರು ತಮ್ಮ 20ನೇ ವಯಸ್ಸಿನಲ್ಲೇ ಸಾಧಿಸಿದ್ದರು. ರಾಧಾಕೃಷ್ಣನ್ನರು ತತ್ವಶಾಸ್ತ್ರವನ್ನು ಆಯ್ಕೆಗಿಂತ ಹೆಚ್ಚಾಗಿ ಆಕಸ್ಮಿಕವಾಗಿ ಅಧ್ಯಯನ ಮಾಡಿದರು ಎಂದರೆ ಆಶ್ಚರ್ಯವಾಗಬಹುದು. ವಿದ್ಯಾರ್ಥಿ ಜೀವನದಲ್ಲಿ ಆರ್ಥಿಕ ಮುಗ್ಗಟ್ಟು ಇದ್ದುದರಿಂದ ಒಮ್ಮೆ


Digitised by Bharatavani, CIIL

ಅದೇ ಕಾಲೇಜಿನಲ್ಲಿ ಓದುತ್ತಿದ್ದ ಅವರ ನೆಂಟನೊಬ್ಬ ತನ್ನ ಎಲ್ಲ ತತ್ವಶಾಸ್ತ್ರ ಪುಸ್ತಕಗಳನ್ನು ಇವರಿಗೆ ನೀಡಿದ್ದ. ಹೇಗೊ ತತ್ವಶಾಸ್ತ್ರದ ಎಲ್ಲ ಪಠ್ಯಪುಸ್ತಕಗಳು ದೊರೆತುಬಿಟ್ಟಿದ್ದರಿಂದ ಅವರು ತತ್ವಶಾಸ್ತ್ರವನ್ನೇ ಅಧ್ಯಯನ ಮಾಡಲು ನಿಶ್ಚಯಿಸಿದರು. ನಂತರ ಪುಸ್ತಕಗಳನ್ನು ಓದುತ್ತಾ ಹೋದಂತೆ ತತ್ವಶಾಸ್ತ್ರದಲ್ಲಿ ಅಪಾರ ಆಸಕ್ತಿ ಸಹಜವಾಗಿಯೇ ಅವರಲ್ಲಿ ಉಂಟಾಯಿತು. ಇದರಿಂದಾಗಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ತತ್ವಶಾಸ್ತ್ರಗಳ ಮೇಲೆ ಹಲವಾರು ಪ್ರಶಂಸಿತ ಪ್ರಬಂಧಗಳನ್ನು ಬರೆದರು. ಏಪ್ರಿಲ್ 1909ರಲ್ಲಿ ತಮ್ಮ 20ನೇ ವಯಸ್ಸಿನಲ್ಲಿ ಮದ್ರಾಸ್ ಪ್ರೆಸಿಡೆಂಸಿ ಕಾಲೇಜಿನ ತತ್ವಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ ಆಯ್ಕೆಗೊಂಡರು. ಈ ಅವಧಿಯಿಂದ ಅವರ ಅಧ್ಯಾಪನ ಕಾರ್ಯವು ಆರಂಭಗೊಂಡಿತು. ವಿದ್ಯಾರ್ಥಿ ವರ್ಗ ಇವರ ಅಗಾಧ ಪಾಂಡಿತ್ಯಕ್ಕೆ ಮಾತ್ರವಲ್ಲದೆ ಅವರ ಸರಳ ಬೋಧನಾ ರೀತಿಯಿಂದಾಗಿ ಇವರನ್ನು ಬಹಳ ಇಷ್ಟಪಡುತ್ತಿತ್ತು. 1918ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಇವರನ್ನು ತತ್ವಶಾಸ್ತ್ರದ ವಿಭಾಗದಲ್ಲಿ ಪ್ರಾಧ್ಯಾಪಕರನ್ನಾಗಿ ಆಯ್ಕೆ ಮಾಡಿತು. ಈ ಹೊತ್ತಿಗಾಗಲೇ "ದಿ ಕ್ವೆಸ್ಟ್, ಜರ್ನಲ್ ಆಫ್ ಫಿಲಾಸಫಿ" ಮತ್ತು "ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಎಥಿಕ್ಸ್" ಎಂಬ ಹಲವು ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಇವರ ಪ್ರಬಂಧಗಳು ಪ್ರಕಟಗೊಂಡಿದ್ದವು. ಇದೇ ಸಮಯದಲ್ಲಿ "ರವೀಂದ್ರನಾಥ ಠಾಗೋರರ ದರ್ಶನ" (Philosophy of Ravindranath Tagore) ಎಂಬ ತಮ್ಮ ಮೊದಲನೇ ಗ್ರಂಥವನ್ನು ಪ್ರಕಟಿಸಿದರು. ಭಾರತೀಯ ಸತ್ವದ ಯಥಾರ್ಥ ಅಭಿವ್ಯಕ್ತಿಯನ್ನು ರವೀಂದ್ರರ ದರ್ಶನದಲ್ಲಿ ಕಾಣಬಹುದು ಎಂಬುದು ರಾಧಾಕೃಷ್ಣನ್ನರ ಮತ. "ಸಮಕಾಲೀನ ದರ್ಶನಗಳಲ್ಲಿ ಧರ್ಮದ ಪ್ರಾಬಲ್ಯ (ಆಧಿಪತ್ಯ)" (The reign of Religion in contemporary Philosophy) ಎಂಬ ಎರಡನೇ ಗ್ರಂಥವು 1920ರಲ್ಲಿ ಪ್ರಕಟಗೊಂಡಿತು. ಕಲ್ಕತ್ತಾ ವಿಶ್ವವಿದ್ಯಾಲಯದ ಮಾನಸಿಕ ಮತ್ತು ನೈತಿಕ ವಿಜ್ಞಾನ ವಿಭಾಗದ ಐದನೇ ಜಾರ್ಜ್ ಪೀಠಕ್ಕೆ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ 1921ರಲ್ಲಿ ಆಯ್ಕೆಗೊಂಡರು. ಜೂನ್ 1926ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ವಿಶ್ವವಿದ್ಯಾಲಯಗಳ ಒಕ್ಕೂಟದಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯವನ್ನು ರಾಧಾಕೃಷ್ಣನ್ನರು ಪ್ರತಿನಿಧಿಸಿದರು. ಸೆಪ್ಟೆಂಬರ್ 1926ರಲ್ಲಿ ಪುನಃ ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನಡೆದ ತತ್ವಶಾಸ್ತ್ರದ ಅಂತರರಾಷ್ಟ್ರೀಯ ಒಕ್ಕೂಟದಲ್ಲಿ ಹಾಜರಿದ್ದರು. ಇದೇ ಸಮಯದಲ್ಲಿ ಇವರ ಶೈಕ್ಷಣಿಕ ಜೀವನದಲ್ಲಿ ನಡೆದ ಘಟನೆಯೆಂದರೆ ಆಕ್ಸ್‌ಫರ್ಡ್‌ನ ಹ್ಯಾರಿಸ್ ಮ್ಯಾಂಚೆಸ್ಟರ್ ಕಾಲೇಜು ಇವರನ್ನು ಜೀವನದ ಆದರ್ಶಗಳನ್ನು ಕುರಿತು ಉಪನ್ಯಾಸಗಳನ್ನು ನೀಡಲು ಆಹ್ವಾನಿಸಿದ್ದು, ಹಿಬ್ಬರ್ಟ್ ಉಪನ್ಯಾಸ ಸರಣಿ ಎಂಬ ವಾರ್ಷಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 1929ರಲ್ಲಿ ಇವರು ನೀಡಿದ ಉಪನ್ಯಾಸಗಳು ನಂತರ "ಆದರ್ಶವಾದಿಯೊಬ್ಬನ ಬಾಳಿನ ದೃಷ್ಟಿಕೋನ" (An Idealist Viewof Life) ಎಂಬ ಪುಸ್ತಕರೂಪದಲ್ಲಿ ಪ್ರಕಟವಾಯಿತು. ರಾಧಕೃಷ್ಣನ್ನರ ಉಪನ್ಯಾಸಗಳನ್ನು ಕೇಳಿದ ಎಚ್.ಎನ್. ಸ್ಪಾಲ್ಡಿಂಗ್ ಅವುಗಳಲ್ಲಿದ್ದ ವಸ್ತು ಮತ್ತು ಅವರ ವ್ಯಕ್ತಿತ್ವಕ್ಕೆ ಎಷ್ಟರಮಟ್ಟಿಗೆ ಮಾರುಹೋದರೆಂದರೆ ಆಕ್ಸ್‌ಫರ್ಡ್‌ನಲ್ಲಿ ಪೌರ್ವಾತ್ಯಧರ್ಮಗಳು ಹಾಗೂ ನೈತಿಕತೆಯ ಪೀಠವೊಂದನ್ನು ಸ್ಥಾಪಿಸಲು ನಿಶ್ಚಯಿಸಿದರು. 1936ರಲ್ಲಿ ಸ್ಥಾಪಿತವಾದ ಈ ಪೀಠಕ್ಕೆ ರಾಧಾಕೃಷ್ಣನ್ನರನ್ನೇ ಆಹ್ವಾನಿಸಲಾಯಿತು. ಇದಕ್ಕೂ ಮುನ್ನ ಅಂದರೆ ಡಾ॥ ರಾಧಾಕೃಷ್ಣನ್ 1931 ರಿಂದ 1936ರ ವರೆಗೆ ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದ್ದರು. 1939ರಲ್ಲಿ ಭಾರತಕ್ಕೆ ಹಿಂದಿರುಗಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿ ಒಂಬತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ರಾಜಕೀಯ ಕ್ಷೇತ್ರದಲ್ಲಿ ಇವರ ಸೇವೆ 1947ರಲ್ಲಿ ಭಾರತ ಸ್ವತಂತ್ರವಾದಾಗ ಯುನೆಸ್ಕೋವಿನಲ್ಲಿ ಭಾರತದ ಪ್ರತಿನಿಧಿಯಾಗುವುದರಿಂದ ಆರಂಭವಾಯಿತು. ನಂತರ 1949ರಿಂದ 1952ರ ವರೆಗೆ ಸೋವಿಯತ್ ಯೂನಿಯನ್‌ಗೆ ಭಾರತದ ರಾಯಭಾರಿಯಾಗಿದ್ದರು. ಭಾರತದ ಸಂವಿಧಾನ ಸಭೆಗೆ ಸದಸ್ಯರಾಗಿಯೂ ಸಹ ಆಯ್ಕೆಗೊಂಡರು. ನಂತರ 1956ರಲ್ಲಿ ಭಾರತದ ಉಪರಾಷ್ಟ್ರಪತಿಯ ಸ್ಥಾನವನ್ನು ಅಲಂಕರಿಸುವ ಅವಕಾಶ ದೊರೆಯಿತು. 1962ರಿಂದ 1967ರ ವರೆಗೆ ರಾಧಾಕೃಷ್ಣನ್ನರು ಭಾರತದ ಅತ್ಯುನ್ನತ ಪದವಿಯಾದ ರಾಷ್ಟ್ರಪತಿ ಸ್ಥಾನದಿಂದ ಗೌರವಿಸಲ್ಪಟ್ಟರು. ಅವರು ರಾಷ್ಟ್ರಪತಿಗಳಾದಾಗ ಅವರ ಕೆಲವು ಶಿಷ್ಯರು ಹಾಗೂ ಸ್ನೇಹಿತರು ಸೆಪ್ಟೆಂಬರ್ 5ನೇ ತಾರೀಖಿನಂದು ಅವರ ಹುಟ್ಟುಹಬ್ಬವನ್ನು ಆಚರಿಸಲು ಅನುಮತಿಸಲು ಕೇಳಿಕೊಂಡಾಗ ಅವರು "ಆ ದಿನವನ್ನು ನನ್ನ ಹುಟ್ಟುಹಬ್ಬವೆಂದು ಆಚರಿಸುವ ಬದಲು "ಶಿಕ್ಷಕರ ದಿನ"ವೆಂದು ಆಚರಿಸಿದರೆ ಅದು ನನಗೆ ಸಲ್ಲುವ ವಿಶೇಷ ಗೌರವವೆಂದು ಭಾವಿಸುತ್ತೇನೆ" ಎಂದು ನುಡಿದರು. ಅಂದಿನಿಂದ ಸೆಪ್ಟೆಂಬರ್ 5ನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ. ಮನುಕುಲಕ್ಕೆ ಸಲ್ಲಿಸಿದ ವಿದ್ವತ್ಪೂರ್ಣ ಸೇವೆಯನ್ನು ಮನಗಂಡು ಭಾರತ ಸರ್ಕಾರ ಅವರನ್ನು 1955ರಲ್ಲಿ 'ಭಾರತ ರತ್ನ' ಬಿರುದಿನಿಂದ ಗೌರವಿಸಿತು.

ರಾಧಾಕೃಷ್ಣನ್ನರು ಭಾರತದ ರಾಷ್ಟ್ರಪತಿಯಾದಾಗ ದಾರ್ಶನಿಕ ಬರ್ಟ್ರಾಂಡ್ ರಸೆಲ್ ಈ ರೀತಿ ಪ್ರತಿಕ್ರಿಯಿಸಿದರು "ರಾಧಾಕೃಷ್ಣನ್ನರು ಭಾರತದ ರಾಷ್ಟ್ರಪತಿಯಾದುದು ತತ್ವಶಾಸ್ತ್ರಕ್ಕೆ ಗೌರವವನ್ನು ತಂದಿದೆ. ದಾರ್ಶನಿಕನಾಗಿ ನಾನು ಇದರಿಂದ ಹರ್ಷಗೊಂಡಿದ್ದೇನೆ. ತತ್ವಜ್ಞಾನಿ ಪ್ಲೇಟೋ ದಾರ್ಶನಿಕರು ಚಕ್ರವರ್ತಿಗಳಾಗಬೇಕು ಎಂದು ಹೇಳಿರುವ ಹಿನ್ನೆಲೆಯಲ್ಲಿ ತತ್ವಜ್ಞಾನಿಯನ್ನೇ ರಾಷ್ಟ್ರಪತಿಯನ್ನಾಗಿ ಆಯ್ಕೆ ಮಾಡಿರುವುದು ಭಾರತಕ್ಕೆ ಹೆಮ್ಮೆಯ ವಿಷಯ".

"ಭಾರತ ರತ್ನ" ಬಿರುದಲ್ಲದೆ ಬ್ರಿಟಿಷ್ ಅಕಾಡೆಮಿ ಸದಸ್ಯರಾಗುವ ಗೌರವವೂ, ಆರ್ಡರ್ ಆಫ್ ಮೆರಿಟ್ ಬಿರುದು, ಜರ್ಮನ್ ಬುಕ್ ಟ್ರೇಡ್‌ನ ಶಾಂತಿ ಪುರಸ್ಕಾರವೂ, ಟೆಂಪಲ್‌ಟನ್ ಪಾರಿತೋಷಕವು ಇವರ ಪಾಲಿಗೆ ಬಂತು. ಟೆಂಪಲ್ ಟನ್ ಪಾರಿತೋಷಕದಿಂದ ಲಭಿಸಿದ ಹಣವನ್ನು ಸಂಪೂರ್ಣವಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ದಾನ ಮಾಡಿದರು. 1989ರಲ್ಲಿ ಈ ವಿಶ್ವವಿದ್ಯಾಲಯವು ಹಲವಾರು ವಿದ್ಯಾರ್ಥಿ ವೇತನಗಳನ್ನು ರಾಧಾಕೃಷ್ಣನ್ನರ ನೆನಪಿನಲ್ಲಿ ಆರಂಭಿಸಿತು.

ಡಾ॥ ರಾಧಾಕೃಷ್ಣನ್ನರು ದಾರ್ಶನಿಕ ಶಿಕ್ಷಣತಜ್ಞ, ಮಹಾನ್ ಚಿಂತಕ ಹಾಗೂ ಶ್ರೇಷ್ಠ ಮಟ್ಟದ ಶಿಕ್ಷಕ. ತಮ್ಮ ಸಂಪ್ರದಾಯವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ತಮ್ಮ ಸಂಶೋಧನಾ ಪ್ರಬಂಧದಲ್ಲಿ ವೇದಾಂತವು ಪ್ರಪಂಚವನ್ನು 'ಮಾಯೆ' ಎಂದು ಹೇಳುವುದನ್ನು ಪಾಶ್ಚಾತ್ಯರು ಪೂರ್ವಗ್ರಹಗಳಿಂದ ಕಾಣುತ್ತಿದ್ದು ಅವರು ಹೊಂದಿದ್ದ ತಪ್ಪು ಕಲ್ಪನೆಯನ್ನು ತಮ್ಮ ಸಂಶೋಧನಾ ಪ್ರಬಂಧದ ಮೂಲಕ ಹೋಗಲಾಡಿಸಿದರು.

ವಸ್ತುನಿಷ್ಠ ದಾರ್ಶನಿಕರೆಂದು ಹೇಳಲ್ಪಡುವ ಪಾಶ್ಚಾತ್ಯ ತತ್ವಜ್ಞಾನಿಗಳು ತಮ್ಮ ವಿಶಾಲ ಸಂಸ್ಕೃತಿಯ ಮತಧರ್ಮಶಾಸ್ತ್ರಗಳಿಂದ ಹೇಗೆ ಪ್ರಭಾವಿತರಾಗಿದ್ದಾರೆ ಎಂಬುದನ್ನು ರಾಧಾಕೃಷ್ಣನ್ನರು ತೋರಿಸಿಕೊಟ್ಟರು. ಆದಿಶಂಕರರ ಅದ್ವೈತ ವೇದಾಂತವನ್ನು ಸಕಾರಾತ್ಮಕವೂ ರಚನಾತ್ಮಕವೂ ಆದ ತತ್ವಶಾಸ್ತ್ರವೆಂದು ಪಾಶ್ಚಾತ್ಯರಿಗೆ ತೋರಿಸಿಕೊಟ್ಟರು. ಪೌರ್ವಾತ್ಯರು ಹಾಗೂ ಪಾಶ್ಚಾತ್ಯರು ಮೂಲತಃ ಭಿನ್ನರು ಎಂಬ ದೃಷ್ಟಿಕೋನದ ತೀವ್ರ ವಿರೋಧಿ ರಾಧಾಕೃಷ್ಣನ್ನರು. ಮನುಕುಲದ ಅಧ್ಯಾತ್ಮಿಕ ಏಕತೆಯಲ್ಲಿ ನಂಬಿಕೆಯಿರುವ ಇವರು ಈ ಏಕತೆಯು ವೈವಿಧ್ಯಮಯ ಸಂಸ್ಕೃತಿಯಿಂದಾಗಿ ಕಾಣದಾಗಿದೆ. ಹೀಗೆ ಅಡಗಿರುವ ಏಕತೆಯನ್ನು ಹೊರತರಬೇಕಾದ್ದು ನಮ್ಮ ಉದ್ದೇಶ ಎಂದು ಅಭಿಪ್ರಾಯಪಡುತ್ತಾರೆ. ಸಾಂಸ್ಕೃತಿಕ ವೈವಿಧ್ಯತೆಯನ್ನು ಸಂಸ್ಕೃತಿಯ ಹಿಂದಿರುವ ವ್ಯಕ್ತಿಯ ಜತೆ

Digitised by Bharatavani, CIIL

ಸಮೀಕರಿಸಬಾರದು ಎಂಬುದು ಇವರ ಮತ. ಪೌರ್ವಾತ್ಯ ಹಾಗೂ ಪಾಶ್ಚಾತ್ಯ ದರ್ಶನಗಳ ಮೇಲೆ ಸಮನಾದ ಪ್ರಭುತ್ವವನ್ನು ಹೊಂದಿದ್ದ ಪ್ರಥಮ ಭಾರತೀಯ ಚಿಂತಕರು ಇವರು ಎಂದರೆ ತಪ್ಪಾಗಲಾರದು.

ವಿವಿಧ ಧರ್ಮಗಳು, ವೈವಿಧ್ಯಮಯ ಸಂಸ್ಕೃತಿಗಳನ್ನು ರಾಧಾಕೃಷ್ಣನ್ನರು ವಿರೋಧಿಸುವುದಿಲ್ಲ. ಬದಲಾಗಿ ಈ ವಿವಿಧತೆಯು ಅಭಿವ್ಯಕ್ತಿಗೊಳಿಸುತ್ತಿರುವ ಏಕಮೇವ ಸತ್ಯವನ್ನು ಅರಿಯಬೇಕೆಂದು ಒತ್ತಿ ಹೇಳುತ್ತಾರೆ.

ಡಾ॥ ರಾಧಾಕೃಷ್ಣನ್ನರು ಶಿಕ್ಷಣತಜ್ಞರು, ಶ್ರೇಷ್ಠ ಮಟ್ಟದ ಶಿಕ್ಷಕರಾಗಿದ್ದರು. ದೇಶದ ಹಾಗೂ ಸಮಾಜದ ಹಲವು ಸಮಸ್ಯೆಗಳನ್ನು ಸೂಕ್ತರೀತಿಯ ಶಿಕ್ಷಣದಿಂದ ನಿವಾರಿಸಬಹುದು ಎಂಬುದು ಅವರ ಅಭಿಪ್ರಾಯ. ಶಿಕ್ಷಕ ಹಾಗೂ ವಿದ್ಯಾರ್ಥಿಯ ನಡುವಿನ ಸಂಬಂಧವನ್ನು ಬಲಗೊಳಿಸುವುದು ಮತ್ತು ಶಿಕ್ಷಣದ ಗುಣಮಟ್ಟವನ್ನು ಉತ್ತಮಗೊಳಿಸುವುದರ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಬೇಕೆಂದು ಅವರು ಇಚ್ಛಿಸುತ್ತಿದ್ದರು. ದೇಶದ ಶ್ರೇಷ್ಠ ವ್ಯಕ್ತಿಗಳು ಶಿಕ್ಷಕರಾಗಬೇಕು. ಕೇವಲ ಬೋಧನೆಯೊಂದೇ ಶಿಕ್ಷಕನ ಕಾರ್ಯವಲ್ಲ. ಜತೆಗೆ ಆತನು ತನ್ನ ವಿದ್ಯಾರ್ಥಿಗಳ ನಿಜವಾದ ಒಲವನ್ನು, ವಿಶ್ವಾಸವನ್ನು ಗಳಿಸಲು ಪ್ರಯತ್ನಿಸಬೇಕು. ಶಿಕ್ಷಕನು ಗೌರವವನ್ನು ಗಳಿಸಬೇಕೇ ಹೊರತು ಬೇಡಬಾರದು. ಇದು ಅವರ ಅಭಿಪ್ರಾಯವಾಗಿತ್ತು. ಅವರ ಶಿಕ್ಷಕ ಜೀವನದಲ್ಲಿ ಇದಕ್ಕೆ ಹಲವಾರು ನಿದರ್ಶನಗಳನ್ನು ನಾವು ಕಾಣಬಹುದು. ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಅವರು ಮೈಸೂರಿನಿಂದ ಹೊರಟಾಗ ಅವರನ್ನು ಪುಷ್ಪಾಲಂಕೃತ ಗಾಡಿಯೊಂದರಲ್ಲಿ ಕುಳ್ಳಿರಿಸಿ ಮೈಸೂರು ವಿಶ್ವವಿದ್ಯಾಲಯದಿಂದ ರೈಲ್ವೇ ನಿಲ್ದಾಣದವರೆಗೆ ಅವರ ಶಿಷ್ಯರು ಆ ಸಾರೋಟನ್ನು ಎಳೆದುಕೊಂಡು ಹೋದರು. ಇದು ರಾಧಾಕೃಷ್ಣನ್ನರ ಬಗ್ಗೆ ಶಿಷ್ಯರಿಗಿದ್ದ ಗೌರವ ಎಷ್ಟರಮಟ್ಟಿಗಿತ್ತು ಎಂಬುದಕ್ಕೆ ದ್ಯೋತಕವಾಗಿದೆ. ಶಿಕ್ಷಣದ ಗುರಿ ಏನು ಎಂಬುದನ್ನು ಅವರು ಈ ರೀತಿ ಹೇಳಿದ್ದಾರೆ. "ಮಾಹಿತಿ ಸಂಗ್ರಹಣೆ ಮುಖ್ಯವಾಗಿದ್ದರೂ, ತಾಂತ್ರಿಕ ಕುಶಲತೆ ಆಧುನಿಕ ಸಮಾಜದಲ್ಲಿ ಅಗತ್ಯವಿದ್ದರೂ ಇವಾವುದೂ ಶಿಕ್ಷಣದ ಗುರಿಯಲ್ಲ. ಬದಲಾಗಿ ನಮ್ಮನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿಸುವಂಥ ಮನೋಭಾವದ ತರ್ಕಯುತ ಬುದ್ಧಿಯ ಪ್ರಜಾಪ್ರಭುತ್ವದೆಡೆಗಿನ ಒಳ ಒಲವಿನ ಬೆಳವಣಿಗೆ ಶಿಕ್ಷಣದ ಗುರಿಯಾಗಿದೆ". ಮತ್ತೊಂದೆಡೆ ಅವರು ಹೀಗೆ ನುಡಿಯುತ್ತಾರೆ "ಬೋಧನೆಯನ್ನೇ ಜೀವನ ಲಕ್ಷ್ಯವಾಗಿ ಆಯ್ಕೆಮಾಡಿಕೊಳ್ಳುವಂಥ ವಚನಬದ್ಧತೆ ಹಾಗೂ ಸಮರ್ಪಣಾ ಮನೋಭಾವವುಳ್ಳ ಶಿಕ್ಷಕರಿಲ್ಲದೆ ಉತ್ತಮ ಶಿಕ್ಷಣ ವ್ಯವಸ್ಥೆ ಸಾಧ್ಯವಿಲ್ಲ". ಈ ಮಾತು ಅಕ್ಷರಶಃ ಸತ್ಯ. ಏಕೆಂದರೆ ಶಿಕ್ಷಣ ವ್ಯವಸ್ಥೆ ಬೆನ್ನೆಲುಬು ಶಿಕ್ಷಕರೆ ಆಗಿದ್ದಾರೆ. ಉನ್ನತ ಶಿಕ್ಷಣವು ಕೈಗಾರಿಕೆ, ವಾಣಿಜ್ಯ, ಆಡಳಿತ, ರಾಜಕೀಯ, ಕಸುಬು ಇತ್ಯಾದಿ ಕ್ಷೇತ್ರಗಳಲ್ಲಿ ಶ್ರೇಷ್ಠ ಮುಂದಾಳುಗಳನ್ನು ಒದಗಿಸುವಂತಿರಬೇಕು. ಜೊತೆಗೆ, ಆತ್ಮವಿಕಾಸ, ಮನಸ್ಸಿನ ನಿರ್ಭಯತೆ, ಉದ್ದೇಶದೆಡೆಗಿನ ಸತ್ಯನಿಷ್ಠತೆ ಹಾಗೂ ಶುದ್ಧ ಆತ್ಮಸಾಕ್ಷಿಯನ್ನು ಬೆಳೆಸುವಂತಿರಬೇಕು.

ಶಿಕ್ಷಣವೆಂದರೇನು ಎಂಬ ಪ್ರಶ್ನೆಗೆ ಅವರ ಉತ್ತರ ಹೀಗಿದೆ – "ಒಬ್ಬ ವ್ಯಕ್ತಿಯು ತನ್ನ ಬಾಳಿನಲ್ಲಿ ಕಾರ್ಯರೂಪಕ್ಕೆ ತರಬಹುದಾದ ಜ್ಞಾನ ಹಾಗೂ ಕುಶಲತೆಗಳನ್ನು ಬೋಧಿಸುವ ಪ್ರಕ್ರಿಯೆಯೇ ಶಿಕ್ಷಣ. ಉದಾತ್ತ ಸಂಪ್ರದಾಯಗಳನ್ನು, ಕರುಣೆ, ಪ್ರೀತಿ, ವಿಶ್ವಾಸ ಮುಂತಾದ ಉತ್ಕೃಷ್ಟ ಗುಣಗಳನ್ನು ವ್ಯಕ್ತಿಯಲ್ಲಿ ಮೊಳೆಯುವಂತೆ ಬೋಧಿಸಿ ಅದರ ಫಲವಾಗಿ ಆತನು ಜೀವನವನ್ನು ಪೂರ್ಣರೀತಿಯಲ್ಲಿ ಸಾಗಿಸುವಂತೆ ಮಾಡುವುದು ಶಿಕ್ಷಕನ ಗುರಿಯಾಗಿರಬೇಕು." ಶಿಕ್ಷಕನು ಕೇವಲ ಮಾಹಿತಿಯನ್ನು ವಿದ್ಯಾರ್ಥಿಗೆ ತಲುಪಿಸುವ ಮಾಧ್ಯಮವಾಗದೆ ದೈವೀ ಗುಣಗಳನ್ನು ತನ್ನಲ್ಲಿ ಬೆಳೆಸಿಕೊಂಡು ತನ್ಮೂಲಕ ವಿದ್ಯಾರ್ಥಿಗಳನ್ನು ಸತ್ಪಥದಲ್ಲಿ ಕೊಂಡೊಯ್ಯಬೇಕು ಎಂಬುದು ಇವರ ಅಭಿಪ್ರಾಯ. 1948ರಲ್ಲಿ ಭಾರತ ಸರ್ಕಾರ ಡಾ॥ ರಾಧಾಕೃಷ್ಣನ್ನರ ನೇತೃತ್ವದಲ್ಲಿ ಒಂದು ಶಿಕ್ಷಣ ಆಯೋಗವನ್ನು ರಚಿಸಿ ಭಾರತದ ವಿಶ್ವವಿದ್ಯಾಲಯ ಶಿಕ್ಷಣವನ್ನು ಕುರಿತು ವರದಿಯನ್ನೊಪ್ಪಿಸುವಂತೆ ಕೋರಿತು. ಸೂಕ್ತ ಸಲಹೆಗಳನ್ನು ನೀಡಿ ದೇಶದ ಅಂದಿನ ಹಾಗೂ ಭವಿಷ್ಯದ ಉನ್ನತ ಶೈಕ್ಷಣಿಕ ವ್ಯವಸ್ಥೆಯನ್ನು ಉತ್ತಮಗೊಳಿಸುವುದು ಸಮಿತಿಯ ಉದ್ದೇಶವಾಗಿತು. ರಾಧಾಕೃಷ್ಣನ್ನರು ಹಲವಾರು ಉತ್ತಮ ಸಲಹೆಗಳನ್ನು ನೀಡಿ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರ ವಹಿಸಿದರು. ನಮಗೆ ತಿಳಿದಂತೆ ಶಿಕ್ಷಕರನ್ನು ಕುರಿತ ಇವರ ಕಳಕಳಿ ಅಪಾರ. ಸಹಜವಾಗಿಯೇ ಸಮಿತಿಯ ವರದಿಯಲ್ಲಿ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವವರ ಶಿಕ್ಷಣದ ಬಗ್ಗೆ ಹಲವಾರು ಸೂಕ್ತ ಸಲಹೆಗಳನ್ನು ನೀಡಿದರು. ವಿಶ್ವವಿದ್ಯಾಲಯಗಳ ಗುಣಾತ್ಮಕ ಮಟ್ಟವನ್ನು ಹೆಚ್ಚಿಸಲು ವಿಶ್ವವಿದ್ಯಾಲಯ ಅನುದಾನ ಆಯೋಗವನ್ನು ಸ್ಥಾಪಿಸಲು ಇವರು ಮಾಡಿದ ಶಿಫಾರಸು ಮಹತ್ವಪೂರ್ಣವಾದುದು.

ಡಾ॥ ರಾಧಾಕೃಷ್ಣನ್ ರಾಜಕೀಯ ಮುತ್ಸದಿ, ಮಾನವತಾವಾದಿ ಹಾಗೂ ಶ್ರೇಷ್ಠ ವ್ಯಕ್ತಿತ್ವವುಳ್ಳವರು. ಪ್ಲೇಟೋ ಹೇಳುವಂತೆ, ಒಬ್ಬ ದಾರ್ಶನಿಕ ನಮ್ಮ ದೇಶದ ಎರಡನೇ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದಾಗ ಸ್ವತಂತ್ರ ಭಾರತಕ್ಕೆ ಸರಿಯಾದ ಮಾರ್ಗದಲ್ಲಿ ಮುಂದುವರೆಯುವ ಅವಕಾಶ ದೊರೆಯಿತು. ಮನುಕುಲದ ಏಕತೆಯನ್ನು ಪ್ರತಿಪಾದಿಸುತ್ತಿದ್ದ ಇವರು ಮಾನವತಾವಾದಿಯೂ ಹೌದು. ಅವರ ಪ್ರಕಾರ ನಾವು ಕೈಗೊಳ್ಳುವ ಧ್ಯಾನ, ಭಜನೆ, ಪ್ರಾರ್ಥನೆ ಇತ್ಯಾದಿಗಳು ಸಮಸ್ತ ಮಾನವರ ಹಾಗೂ ರಾಷ್ಟ್ರಗಳ ಸಮರಸ ಜೀವನದಲ್ಲಿ ವ್ಯಕ್ತಗೊಳ್ಳಬೇಕು. ಮಾನವನ ಭ್ರಾತೃತ್ವದ ಭಾವನೆಯ ಮುಖಾಂತರ ಪ್ರತಿಯೊಬ್ಬರು ಮನುಕುಲದ ಏಕತೆಯನ್ನು ಮನಗಾಣಬೇಕು ಎಂಬುದು ಇವರ ಮತ. ರಾಷ್ಟ್ರಪತಿಯಾದಾಗಲೂ ಇವರು ಬಹಳ ಸರಳರಾಗಿದ್ದರು. ಹತ್ತು ಸಾವಿರ ರೂಪಾಯಿಗಳ ಅವರ ಮಾಸಿಕ ವೇತನದಲ್ಲಿ ಎರಡೂವರೆಸಾವಿರವನ್ನು ಮಾತ್ರ ಸ್ವೀಕರಿಸಿ ಉಳಿದ ಮೊತ್ತವನ್ನು ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ ದಾನವಾಗಿ ನೀಡುತ್ತಿದ್ದರು. ಇದು ಅವರ ಧರ್ಮಬುದ್ಧಿಗೆ ಒಂದು ಉದಾಹರಣೆ. ಸ್ವಾತಂತ್ರ ಪೂರ್ವದಲ್ಲಿ 'ಕೃಷ್ಣಾರ್ಪಣ ಚ್ಯಾರಿಟಬಲ್ ಟ್ರಸ್ಟ್" ಒಂದನ್ನು ಸ್ಥಾಪಿಸುವಲ್ಲಿ ಪಾತ್ರವಹಿಸಿದ್ದರು. ರಾಷ್ಟ್ರಪತಿಭವನದಲ್ಲಿ ಅವರನ್ನು ಯಾರು ಬೇಕಾದರೂ ಭೇಟಿಮಾಡಲು ಅವಕಾಶವಿತ್ತು. ಸಮಾಜದ ವಿವಿಧ ವರ್ಗದವರು ಅವರನ್ನು ಅಲ್ಲಿ ಭೇಟಿ ಮಾಡುತ್ತಿದ್ದುದುಂಟು. ಹಲವು ವಿಧದಲ್ಲಿ ಅವರು ಶಿಕ್ಷಕರಾಗಿಯೇ ಉಳಿದರು ಮತ್ತು ಅವರು ತಮ್ಮ ಮಂತ್ರಿಗಳಿಗೆ ಬರೆದ ಹಲವು ಪತ್ರಗಳಲ್ಲಿ ಅವರ ಅಧಿಕಾರಯುತ ವಾಣಿಯು ಧ್ವನಿತವಾದದ್ದೂ ಉಂಟು.

ತಮ್ಮ ಕೊನೆಯ ದಿನಗಳನ್ನು ಸ್ವಗೃಹದಲ್ಲಿ ಕಳೆದ ಡಾ॥ ರಾಧಾಕೃಷ್ಣನ್ನರು ಏಪ್ರಿಲ್ 17, 1975ರಲ್ಲಿ ಇಹಲೋಕವನ್ನು ತ್ಯಜಿಸಿದರು.

– ಬಿ.ಎಂ.ಚಂ.

## ರಾಷ್ಟ್ರೀಯ ಅಧ್ಯಾಪಕ ಪ್ರಶಿಕ್ಷಣ ಪರಿಷತ್ತು

ಶಿಕ್ಷಣದ ಗುಣಾತ್ಮಕ ಸುಧಾರಣೆಯಾಗಬೇಕಿದ್ದರೆ ಇಂದು ಶಿಕ್ಷಕರಿಗೆ ಒಂದು ವೃತ್ತಿಪರ ಶಿಕ್ಷಣದ ಅವಶ್ಯಕತೆ ಇದೆ ಎಂದು ರಾಷ್ಟ್ರೀಯ ಶಿಕ್ಷಣ ಆಯೋಗ 1964ರಲ್ಲೇ ಅಭಿಪ್ರಾಯಪಟ್ಟಿತು. ಇದರ ಪೂರ್ವದಲ್ಲಿ ಹಾಗೂ ಅನಂತರದ ವರ್ಷಗಳಲ್ಲಿ ಹಲವಾರು ಆಯೋಗಗಳು ಸಮಿತಿಗಳು ಇದೇ ಮಾತನ್ನು ಪುನರುಚ್ಚರಿಸಿವೆ. ಈ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳಾಗಿದ್ದರೂ ಇತ್ತೀಚಿನ ದಿನಗಳಲ್ಲಿ ಬೋಧನಾ-ಕಲಿಕಾ ಕ್ಷೇತ್ರದಲ್ಲಿ ಹಲವಾರು


Digitised by Bharatavani, CIIL

ಸುಧಾರಣೆಗಳು ಕಂಡುಬರುತ್ತಿದ್ದಾಗ್ಯೂ ಪ್ರಶಿಕ್ಷಣದ ಗುಣಮಟ್ಟ ಕುಸಿಯುತ್ತಿರುವುದನ್ನು ರಾಷ್ಟ್ರೀಯ ಶಿಕ್ಷಣನೀತಿ (1986) ಗಂಭೀರವಾಗಿ ಗುರುತಿಸಿತು. ಈ ದಿಸೆಯಲ್ಲಿ ಗುಣಾತ್ಮಕ ಸುಧಾರಣೆಯನ್ನು ತರಬೇಕಾದರೆ ಪ್ರಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಮಾರ್ಪಡಿಸಿ ಪುನಃ ರೂಪಿಸುವ ಅಗತ್ಯವನ್ನು 1992ರ ರಾಷ್ಟ್ರೀಯ ಶಿಕ್ಷಣನೀತಿಯ ಕಾರ್ಯ ಯೋಜನೆಯಲ್ಲಿ ಒತ್ತಿ ಹೇಳಲಾಗಿದೆ. ಇವೆಲ್ಲದರ ಫಲಶ್ರುತಿಯೆಂಬಂತೆ 1993ರಲ್ಲಿ ಪಾರ್ಲಿಮೆಂಟ್ ಕಾಯಿದೆ ಅನ್ವಯ ರಾಷ್ಟ್ರೀಯ ಅಧ್ಯಾಪಕ ಪ್ರಶಿಕ್ಷಣ ಪರಿಷತ್ತು (National Council of Teach Education-NCTE) ಸ್ಥಾಪನೆಗೊಂಡಿತು. ಇದಕ್ಕೂ ಪೂರ್ವದಲ್ಲಿ 1993ರಿಂದಲೂ ಅದು ಒಂದು ಸಲಹಾ ಸಮಿತಿಯಾಗಿ, ಎನ್.ಸಿ.ಇ.ಆರ್.ಟಿ.ಯ ವಿಭಾಗವಾಗಿ ಕಾರ್ಯ ನಿರ್ವಹಿಸುತ್ತ ಬಂದಿತ್ತು. ಪಾರ್ಲಿಮೆಂಟ್ ಕಾಯಿದೆಯಿಂದಾಗಿ ಇದು ಒಂದು ಸ್ವಾಯತ್ತ ಶಾಸನ ಬದ್ಧ ಸಂಸ್ಥೆಯಾಗಿ ಶಕ್ತಿಶಾಲಿಯಾಗಿ ಆಗಸ್ಟ್ 17, 1995ರಲ್ಲಿ ಕಾರ್ಯಾರಂಭ ಮಾಡಿತು.

ಪ್ರಶಿಕ್ಷಣ ಕ್ಷೇತ್ರದಲ್ಲಿ ವ್ಯವಸ್ಥಿತವಾದ ಹಾಗೂ ಸಮನ್ವಿತ ಅಭಿವೃದ್ಧಿ ತರುವುದೇ ಎನ್.ಸಿ.ಟಿ.ಇ.ಯ ಪ್ರಮುಖ ಗುರಿಯಾಗಿರುತ್ತದೆ. ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ನಿಗದಿತ ಪ್ರಮಾಣಕಗಳನ್ನು (Norms) ರೂಪಿಸಿ, ಅವುಗಳನ್ನು ಅಧ್ಯಾಪಕ ಶಿಕ್ಷಣ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಿ ದೇಶದ ಇಡೀ ಅಧ್ಯಾಪಕ ಪ್ರಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸುವುದು ಇದರ ಮಹತ್ವದ ಜವಾಬ್ದಾರಿಯಾಗಿರುತ್ತದೆ.

**ಎನ್.ಸಿ.ಟಿ.ಇ.ಯ ಕಾರ್ಯಗಳು**

1993ರ ಎನ್.ಸಿ.ಟಿ.ಇ. ಕಾಯಿದೆಯಲ್ಲಿ ಉಲ್ಲೇಖಿಸಿರುವ ಅದರ ಕಾರ್ಯಗಳನ್ನು ಎರಡು ವಿಧಗಳಾಗಿ ನೋಡಬಹುದು.

1. ನಿಯಂತ್ರಣಾತ್ಮಕ
2. ಶೈಕ್ಷಣಿಕ ಅಭಿವೃದ್ಧಿ ಸಂಬಂಧಿ

**1. ನಿಯಂತ್ರಣಾತ್ಮಕ ಕಾರ್ಯಗಳು**

- ವಿವಿಧ ಹಂತಗಳ ಪ್ರಶಿಕ್ಷಣ ಘಟಕಾಂಶಗಳಾದ – ಪಠ್ಯಕ್ರಮ, ಅದರ ಸ್ವರೂಪ, ಅವಧಿ, ವಿದ್ಯಾರ್ಥಿಗಳ ಆಯ್ಕೆ ವಿಧಾನ, ಅವರ ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆ ಇತ್ಯಾದಿಗಳನ್ನು ನಿಗದಿಪಡಿಸುವುದು.
- ಹೊಸದಾಗಿ ಆರಂಭಗೊಳ್ಳುವ ಪ್ರಶಿಕ್ಷಣ ಸಂಸ್ಥೆಗಳಿಗೆ ಹಾಗೂ ಆರಂಭಿಸುವ ನೂತನ ಕೋರ್ಸುಗಳಿಗೆ ಅಗತ್ಯವಾದ ಭೌತಿಕ ಸೌಲಭ್ಯಗಳು, ಬೋಧನಾ ಸೌಕರ್ಯಗಳು, ಬೋಧಕರು ಹಾಗೂ ಅವರ ವಿದ್ಯಾರ್ಹತೆಗಳನ್ನು ನಿಗದಿಪಡಿಸುವುದು.
- ಪ್ರಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ನಿಗದಿಪಡಿಸಬಹುದಾದ ಬೋಧನಾ ಹಾಗೂ ಇತರ ಶುಲ್ಕಗಳನ್ನು ನಿರ್ಧರಿಸುವುದು.
- ಶಾಲೆಗಳಲ್ಲಿ ಹಾಗೂ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ ನೇಮಕಗೊಳ್ಳಲು ಅಗತ್ಯ ಶೈಕ್ಷಣಿಕ ಅರ್ಹತೆಗಳನ್ನು ನಿಗದಿಪಡಿಸುವುದು.
- ಈಗಾಗಲೇ ಕಾರ್ಯ ನಿರತವಾಗಿರುವ ಹಾಗೂ ಹೊಸದಾಗಿ ಆರಂಭಗೊಳ್ಳುವ ಪ್ರಶಿಕ್ಷಣ ಸಂಸ್ಥೆಗಳಿಗೆ ಹಾಗೂ ಕೋರ್ಸುಗಳಿಗೆ ಮಾನ್ಯತೆ (Recognition) ನೀಡುವುದು.
- ಪ್ರಶಿಕ್ಷಣ ಸಂಸ್ಥೆಗಳು ಬದ್ಧತೆಯಿಂದ ಕಾರ್ಯ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ಕಾರ್ಯಕ್ಷಮತಾ ಮಾಪನ, ಪ್ರಮಾಣಕಗಳ ಪಾಲನೆಯ ಕುರಿತಾಗಿ ಕಾಲಕಾಲಕ್ಕೆ ಪರಿಶೀಲನೆಗೆ ಒಳಪಡಿಸಲು ಮಾರ್ಗಸೂಚಿಗಳು ಹಾಗೂ ಕಾರ್ಯತಂತ್ರಗಳನ್ನು ರೂಪಿಸುವುದು.
- ಪ್ರಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಾರೀಕರಣವನ್ನು ತಡೆಗಟ್ಟಲು ಬೇಕಾದ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

**2. ಶೈಕ್ಷಣಿಕ ಅಭಿವೃದ್ಧಿ ಸಂಬಂಧಿ ಕಾರ್ಯಗಳು**

ಎ. ಪ್ರಶಿಕ್ಷಣದ ವಿವಿಧ ಮಜಲುಗಳಿಗೆ ಸಂಬಂಧಿಸಿದಂತೆ ಸಮೀಕ್ಷೆ ಹಾಗೂ ಅಧ್ಯಯನಗಳನ್ನು ಕೈಗೊಂಡು ಅವುಗಳ ಫಲಿತಾಂಶಗಳನ್ನು ಪ್ರಕಟಿಸುವುದು.

ಬಿ. ಪ್ರಶಿಕ್ಷಣ ಕ್ಷೇತ್ರದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ ಹಾಗೂ ಸಿದ್ಧಪಡಿಸುವಲ್ಲಿ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ರಾಜ್ಯ ಹಾಗೂ ಕೇಂದ್ರ ಸರಕಾರಗಳು ಅಲ್ಲದೆ ಯುಜಿಸಿಗೆ ಸೂಕ್ತ ಸಲಹೆ ನೀಡುವುದು.

ಸಿ. ದೇಶದಲ್ಲಿ ಪ್ರಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸಿ ಅದನ್ನು ಅನುಷ್ಠಾನಗೊಳಿಸಲು ಅಗತ್ಯ ಸಮನ್ವಯ ಹಾಗೂ ಮೇಲ್ವಿಚಾರಣೆಗಳನ್ನು ಒದಗಿಸುವುದು.

ಡಿ. ಪ್ರಶಿಕ್ಷಣಕ್ಕೆ ಸಂಬಂಧಪಟ್ಟ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆ ಹಾಗೂ ನೂತನ ಆವಿಷ್ಕಾರಗಳನ್ನು ಪ್ರೋತ್ಸಾಹಿಸುವುದು.

ಇ. ಪ್ರಶಿಕ್ಷಣದ ವಿವಿಧ ಹಂತಗಳಿಗಾಗಿ ಯೋಜನೆಗಳನ್ನು ರೂಪಿಸುವುದು ಹಾಗೂ ಮಾನ್ಯತೆ ಪಡೆದ ಸಂಸ್ಥೆಗಳನ್ನು ಗುರುತಿಸಿ ಶಿಕ್ಷಕರ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರೋತ್ಸಾಹ ನೀಡುವುದು ಹಾಗೂ ಇದಕ್ಕಾಗಿ ಹೊಸ ಸಂಸ್ಥೆಗಳ ನಿರ್ಮಾಣದಲ್ಲಿ ತೊಡಗುವಂತೆ ಮಾಡುವುದು.

ಪ್ರಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ಕುರಿತಾದ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲು ಹಾಗೂ ಆಯಾ ಪ್ರದೇಶಗಳಲ್ಲಿ ಬರುವ ರಾಜ್ಯಗಳಿಗೆ ಶಿಕ್ಷಣ ಕುರಿತಾದ ಅದರಲ್ಲೂ ವಿಶೇಷವಾಗಿ ಪ್ರಶಿಕ್ಷಣ ಕುರಿತಂತೆ ಸೂಕ್ತ ಸಲಹೆ ಮಾರ್ಗಸೂಚಿಗಳನ್ನು ನೀಡುವ ಉದ್ದೇಶದಿಂದ ದೇಶದ ನಾಲ್ಕು ಕಡೆಗಳಲ್ಲಿ ಪ್ರಾದೇಶಿಕ ಸಮಿತಿ (ರೀಜಿನಲ್ ಕಮಿಟಿ)ಗಳಿರುತ್ತವೆ. ಪ್ರತಿಯೊಂದು ಪ್ರಾದೇಶಿಕ ಸಮಿತಿಯೂ ಆಯಾ ರಾಜ್ಯಗಳ ಶಿಕ್ಷಣ ಕಾರ್ಯದರ್ಶಿ, ಡಿ.ಎಸ್.ಇ.ಆರ್.ಟಿ. ನಿರ್ದೇಶಕರು, ವಿಶ್ವವಿದ್ಯಾಲಯಗಳ ನಿವೃತ್ತ ಕುಲಪತಿಗಳು ಹಾಗೂ ಶಿಕ್ಷಣ ತಜ್ಞರನ್ನೊಳಗೊಂಡ ಒಂದು ಉನ್ನತ ಅಧಿಕಾರವಿರುವ (ಹೈಪವರ್) ಸಮಿತಿ ಆಗಿರುತ್ತದೆ. ಈ ಸಮಿತಿಯು ಕಾಲಕಾಲಕ್ಕೆ ಸಭೆ ಸೇರಿ ಪ್ರಶಿಕ್ಷಣ ಸಂಸ್ಥೆಗಳ ತಪಾಸಣಾ ವರದಿಗಳನ್ನು ಕೂಲಂಕಷವಾಗಿ ಪರಾಮರ್ಶಿಸಿ ಅವುಗಳಿಗೆ ಮಾನ್ಯತೆ ನೀಡುವ/ಇಲ್ಲವೇ ರದ್ದುಪಡಿಸುವಂತಹ ನಿರ್ಧಾರಗಳನ್ನು ಕೈಗೊಳ್ಳುತ್ತದೆ. ಅಲ್ಲದೆ ಆಯಾ ರಾಜ್ಯಗಳಲ್ಲಿರುವ ಪ್ರಶಿಕ್ಷಣ ವ್ಯವಸ್ಥೆ ಕುರಿತಂತೆ ಇರುವ ಗೊಂದಲಗಳು ಹಾಗೂ ಆಗಬೇಕಾದ ಬದಲಾವಣೆಗಳನ್ನು ಸಮಗ್ರವಾಗಿ ಚರ್ಚಿಸಿ ನೀತಿ ನಿಯಮಗಳನ್ನು ಜಾರಿಗೆ ತರುವಲ್ಲಿ ರಾಜ್ಯ ಸರಕಾರಗಳಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುತ್ತದೆ.

ಎನ್.ಸಿ.ಟಿ.ಇ. ಕೇಂದ್ರ ಕಛೇರಿಯು ನವದೆಹಲಿಯಲ್ಲಿದೆ. ರಾಷ್ಟ್ರವ್ಯಾಪಿಯಾಗಿದ್ದು ಪ್ರಶಿಕ್ಷಣ ಕುರಿತ ನೀತಿ ನಿಯಮ, ಮಾನದಂಡಗಳನ್ನು ರೂಪಿಸುವುದು, ಇವುಗಳನ್ನು ಜಾರಿಗೆ ತರಲು ಕ್ರಮಗಳನ್ನು ಕೈಗೊಳ್ಳುವುದು, ಅಲ್ಲದೆ ಸಂಶೋಧನೆ ಹಾಗೂ ಪ್ರಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಪ್ರಕಟಿಸುವುದು NCTE ಕೇಂದ್ರ ಸಮಿತಿಯ ಪ್ರಮುಖ

Digitised by Bharatavani, CIIL

ಕಾರ್ಯಗಳಾಗಿರುತ್ತವೆ. ಕೇಂದ್ರೀಯ ಸಮಿತಿಯ ನೇತೃತ್ವವನ್ನು ಕೇಂದ್ರೀಯ ಅಧ್ಯಕ್ಷರು (Chairman) ವಹಿಸಿದರೆ, ಆಯಾ ಪ್ರಾದೇಶಿಕ ಸಮಿತಿಗಳಿಗೆ ಪ್ರಾದೇಶಿಕ ಅಧ್ಯಕ್ಷರಿರುತ್ತಾರೆ. ಅವರಿಗೆ ಆಡಳಿತಾತ್ಮಕ ಸಹಾಯಕ್ಕೆಂದು ಪ್ರಾದೇಶಿಕ ಕಛೇರಿಗಳು ಕಾರ್ಯ ನಿರ್ವಹಿಸುತ್ತವೆ. ದಕ್ಷಿಣ ಪ್ರಾದೇಶಿಕ ಕಛೇರಿ ಬೆಂಗಳೂರಿನಲ್ಲೂ, ಉತ್ತರ ಪ್ರಾದೇಶಿಕ ಕಛೇರಿ ಜೈಪುರದಲ್ಲೂ, ಪೂರ್ವ ಪ್ರಾದೇಶಿಕ ಕಛೇರಿ ಭುವನೇಶ್ವರದಲ್ಲೂ, ಪಶ್ಚಿಮ ಪ್ರಾದೇಶಿಕ ಕಛೇರಿ ಭೂಪಾಲದಲ್ಲೂ ಸ್ಥಾಪಿತವಾಗಿವೆ. ಪ್ರತಿಯೊಂದು ಪ್ರಾದೇಶಿಕ ಕಛೇರಿಯ ಆಡಳಿತ ನೋಡಿಕೊಳ್ಳಲು ಆಯಾ ಪ್ರಾದೇಶಿಕ ನಿರ್ದೇಶಕರಿರುತ್ತಾರೆ. ದಕ್ಷಿಣ ಪ್ರಾದೇಶಿಕ ಕಛೇರಿಯ ಕಾರ್ಯ ವ್ಯಾಪ್ತಿಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ಗೋವಾ ಬರುತ್ತವೆ.

**ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಪ್ರಕ್ರಿಯೆ**

ಪ್ರಶಿಕ್ಷಣ ಕ್ಷೇತ್ರದಲ್ಲಿ ಕಾಲೇಜನ್ನು ಇಲ್ಲವೇ ಕೋರ್ಸನ್ನು ಆರಂಭಿಸಬೇಕೆನ್ನುವ ಶಿಕ್ಷಣ ಸಂಸ್ಥೆಗಳು ಎನ್.ಸಿ.ಟಿ.ಇ. ಪ್ರಾದೇಶಿಕ ಕಛೇರಿಯಲ್ಲಿ ದೊರೆಯುವ ಅರ್ಜಿನಮೂನೆಯನ್ನು ಪಡೆದು (ಈಗ ಆನ್ಲೈನ್ ಮೂಲಕವೂ ಪಡೆದುಕೊಳ್ಳಬಹುದು) ಅವುಗಳನ್ನು ಪೂರ್ಣವಾಗಿ ತುಂಬಿ ಅದರೊಂದಿಗೆ ಲಗತ್ತಿಸಬೇಕಾದ ದಾಖಲೆಗಳೊಂದಿಗೆ ಹಾಗೂ ನಿಗದಿಪಡಿಸಿದ ಶುಲ್ಕದೊಂದಿಗೆ ಮರಳಿ ಸಲ್ಲಿಸಬೇಕು. ಪ್ರಮುಖವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕಾದ ಪ್ರಮುಖ ದಾಖಲೆಗಳು ಇಂತಿವೆ.

- ಮಾಲಿಕತ್ವ ಇಲ್ಲವೇ ಲೀಸ್ ಮೇಲೆ ಪಡೆದಿರಬಹುದಾದ ಭೂ ದಾಖಲೆಗಳು, ಕಟ್ಟಡ ಕುರಿತಾದ ದಾಖಲೆ ಪತ್ರಗಳು–ವಿನ್ಯಾಸ
- ಅರ್ಜಿ ಪರಿಶೀಲನಾ ಫೀ
- ಎಂಡೋಮೆಂಟ್ ಫಂಡ್ ಹಾಗೂ ರಿಜರ್ವ್‌ಫಂಡ್
- ಪ್ರಾಯೋಗಾಲಯಗಳಲ್ಲಿ ಲಭ್ಯವಿರುವ ಉಪಕರಣಗಳು, ಸೌಲಭ್ಯಗಳು (ಮನೋವಿಜ್ಞಾನ, ಶೈಕ್ಷಣಿಕ ತಂತ್ರಶಾಸ್ತ್ರ, ವಿಜ್ಞಾನ, ಭಾಷಾ ಹಾಗೂ ಕಂಪ್ಯೂಟರ್)
- ಗ್ರಂಥಾಲಯ ಸೌಲಭ್ಯಗಳು, ಗ್ರಂಥಗಳು ಹಾಗೂ ಜರ್ನಲ್‌ಗಳು
- ಸಂಸ್ಥೆಯ ರಿಜಿಸ್ಟ್ರೇಷನ್, ಆಡಳಿತ ಮಂಡಳಿ ಹಾಗೂ ಸದಸ್ಯರ ವಿವರಗಳು
- ಮಾನವ ಸಂಪನ್ಮೂಲಗಳು – ಬೋಧಕ, ಬೋಧಕೇತರ ಸಿಬ್ಬಂದಿ ವಿವರಗಳು

ಈ ಎಲ್ಲ ವಿವರ ಹಾಗೂ ದಾಖಲೆಗಳನ್ನೊಳಗೊಂಡ ಅರ್ಜಿಯನ್ನು ಆಯಾ ಎನ್.ಸಿ.ಟಿ.ಇ. ಪ್ರಾದೇಶಿಕ ಕಛೇರಿಗೆ ಸಲ್ಲಿಸಿದ ನಂತರ ಅವುಗಳನ್ನು ಪರಿಶೀಲಿಸಿ ಅವುಗಳಲ್ಲಿ ಯಾವುದಾದರೂ ಪ್ರಮುಖ ಕೊರತೆಗಳಿದ್ದರೆ ಅವುಗಳನ್ನು ಸರಿಪಡಿಸುವಂತೆ ಶಿಕ್ಷಣ ಸಂಸ್ಥೆಗಳಿಗೆ ತಿಳಿಸಲಾಗುವುದು. ಈ ಲೋಪದೋಷಗಳನ್ನು ಸರಿಪಡಿಸಿದ ನಂತರ ಶಿಕ್ಷಣ ಸಂಸ್ಥೆಗಳಿಗೆ ತಪಾಸಣಾ ತಂಡಗಳನ್ನು ಕಳಿಸಲಾಗುವುದು. ಈ ತಪಾಸನಾ ತಂಡ ಇತರ ರಾಜ್ಯಗಳ ತಜ್ಞರನ್ನು (2–3 ಜನ) ಸದಸ್ಯರನ್ನಾಗಿ ಒಳಗೊಂಡಿದ್ದು ನಿಗದಿಪಡಿಸಿದ ದಿನಾಂಕದಂದು ಆಯಾ ಕಾಲೇಜುಗಳಿಗೆ ಭೇಟಿ ಕೊಟ್ಟು ಅವು ಕಲ್ಪಿಸಿರುವ ಸೌಲಭ್ಯಗಳು ಹಾಗೂ ಒದಗಿಸಿರುವ ಅಧ್ಯಾಪಕ ಹಾಗೂ ಸಿಬ್ಬಂದಿ ವರ್ಗದವರನ್ನು ಕುರಿತಾದ ಮಾಹಿತಿಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿ ವಿವರವಾದ ವರದಿ ನೀಡುತ್ತದೆ. ಈ ವರದಿಗಳನ್ನು ಆಯಾ ಪ್ರಾದೇಶಿಕ ಸಮಿತಿಗಳ ಸಭೆಯಲ್ಲಿ ಮಂಡಿಸಿ ಚರ್ಚಿಸಲಾಗುತ್ತದೆ. ಈ ಸಭೆಯಲ್ಲಿ ತಜ್ಞರು ಕೂಲಂಕಷವಾಗಿ ವರದಿಯನ್ನು ಪರಿಶೀಲಿಸಿ ಆಯಾ ಸಂಸ್ಥೆಗೆ ಮಾನ್ಯತೆ ನೀಡಬಹುದೇ ಇಲ್ಲವೇ ಎಂಬುದನ್ನು ನಿರ್ಣಯಿಸುತ್ತಾರೆ.

**ಎನ್.ಸಿ.ಟಿ.ಇ. ಕಾರ್ಯಗತಗೊಳಿಸಿರುವ ಪ್ರಮುಖ ಶೈಕ್ಷಣಿಕ ಕಾರ್ಯಕ್ರಮಗಳು**

ಪ್ರಶಿಕ್ಷಣದ ವಿವಿಧ ಹಂತಗಳಿಗೆ ಹಾಗೂ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮಾಣಕ (Norms) ಗುಣಮಟ್ಟ ನಿರ್ಧಾರಕಗಳನ್ನು (Standards) ರೂಪಿಸಿರುವುದು.

- ದೂರ ಶಿಕ್ಷಣದ ಮೂಲಕ ಪ್ರಶಿಕ್ಷಣ ಒದಗಿಸುತ್ತಿರುವ ಸಂಸ್ಥೆಗಳಲ್ಲಿ ಇರಬಹುದಾದ ವ್ಯಾಪಾರೀಕರಣ ನಿವಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

- ರಾಜ್ಯವಾರು ಪ್ರಶಿಕ್ಷಣ ನೀಡುತ್ತಿರುವ ಶಿಕ್ಷಣ ಸಂಸ್ಥೆಗಳ ಎಲ್ಲ ಮಾಹಿತಿ ಒಳಗೊಂಡ ಮಾಹಿತಿ ಸಂಗ್ರಹ (ಡೇಟಾ ಬ್ಯಾಂಕ್) ಸಿದ್ಧಪಡಿಸಿರುವುದು.

- ಪ್ರಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ಸಂಶೋಧನೆಗಳಿಗೆ ಆದ್ಯತೆ ನೀಡಿರುವುದು.

- ಪ್ರಶಿಕ್ಷಕರಿಗಾಗಿ ವಿವಿಧ ವಿಷಯದಲ್ಲಿ ಬೋಧನಾ ಸಾಮಗ್ರಿ ಸಿದ್ಧಪಡಿಸಲಾಗಿರುವುದು.

- ಹಲವಾರು ಪ್ರಚಲಿತ ಹಾಗೂ ಉಪಯುಕ್ತ ವಿಷಯಗಳಲ್ಲಿ ರಾಜ್ಯಮಟ್ಟದ, ಪ್ರಾದೇಶಿಕ ಮಟ್ಟದ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಪ್ರಶಿಕ್ಷಕರಲ್ಲಿ ವಿಶೇಷ ಅರಿವನ್ನು ಮೂಡಿಸಲು ಪ್ರಯತ್ನಿಸಿರುವುದು.

  ಉದಾ: ಮಾನವ ಹಕ್ಕುಗಳು, ಸಿ.ಟಿ.ಇ. ಹಾಗೂ ಐ.ಎ.ಎಸ್.ಇ.ಗಳ ಪಾತ್ರ, ಪ್ರಾಥಮಿಕ ಶಿಕ್ಷಣದಲ್ಲಿ ಗುಣಾತ್ಮಕತೆ, ಶಾಲೆ ಮತ್ತು ಸಮುದಾಯ.

- ಪ್ರಶಿಕ್ಷಕರಿಗಾಗಿ ಹಲವು ವಿಷಯಗಳಲ್ಲಿ ವೀಡಿಯೋ ಕಾರ್ಯಕ್ರಮ ಹಾಗೂ ಸಿ.ಡಿ.ಗಳನ್ನು ತಯಾರಿಸುವುದು.

- ಶಿಕ್ಷಕರಿಗೆ ಹಾಗೂ ಪ್ರಶಿಕ್ಷಕರಿಗೆ ಉಪಯೋಗವಾಗಬಲ್ಲ ಅನೇಕ ಸಂಶೋಧನಾ ಹಾಗೂ ಸಂಶೋಧನೇತರ ಗ್ರಂಥಗಳನ್ನು ಪ್ರಕಟಿಸಿರುವುದು.

- ಕಾಲಕಾಲಕ್ಕೆ ಶಿಕ್ಷಕ ಬೆಂಬಲ (Teacher support), 'ಅನ್ವೇಷಿಕಾ' (The Indian Journal of Teacher Education) ನಿಯತ ಕಾಲಿಕ ಹಾಗೂ ಎನ್.ಸಿ.ಟಿ.ಇ. ವಾರ್ತಾಪತ್ರ (NCTE News letter) ನಿಯತಕಾಲಿಕಗಳನ್ನು ಪ್ರಕಟಿಸುತ್ತಿರುವುದು.

- ತನ್ನ ಉದ್ದೇಶಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಕಾರಿಯಾಗಲು ಹಾಗೂ ಕಾರ್ಯಕ್ಷೇತ್ರ ವಿಸ್ತರಿಸಿಕೊಳ್ಳಲೆಂದು ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಹಯೋಗದ ಒಡಂಬಡಿಕೆ (MOU)ಗಳನ್ನು ಮಾಡಿಕೊಂಡಿರುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತವಿಶ್ವವಿದ್ಯಾಲಯ (IGNOU), ನ್ಯಾಕ್ (NAAC), ದೂರ ಶಿಕ್ಷಣ ಮಂಡಳಿ (DEC) ಹಾಗೂ Intel.

- ಶೈಕ್ಷಣಿಕ ಕಾರ್ಯಗಳಲ್ಲಿ ಅಂತರ್‌ರಾಷ್ಟ್ರೀಯ ಸಂಘಟನೆಗಳಾದ COL, UNESCO ಹಾಗೂ SAARC ಗಳ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ಸಮಾವೇಶಗಳನ್ನು ಏರ್ಪಡಿಸಿರುವುದು.


Digitised by Bharatavani, CIIL

**ಎನ್.ಸಿ.ಟಿ.ಇ. ಪ್ರಕಟಣೆಗಳು**

ಎನ್.ಸಿ.ಟಿ.ಇ. ಅಸ್ತಿತ್ವಕ್ಕೆ ಬಂದ 15 ವರ್ಷಗಳಲ್ಲಿ ನೂರಕ್ಕೂ ಹೆಚ್ಚು ಶಿಕ್ಷಣ ಸಂಬಂಧೀ ಅಮೂಲ್ಯ ಪ್ರಕಟಣೆಗಳನ್ನು ಹೊರತಂದಿದ್ದು ಅವುಗಳಲ್ಲಿ ಬಹುತೇಕ ಪ್ರಶಿಕ್ಷಣ ಕುರಿತಾದವುಗಳೇ ಆಗಿವೆ. ಅವುಗಳಲ್ಲಿ ಕೆಲವು ಸಂಶೋಧನಾತ್ಮಕ ಪ್ರಕಟಣೆಗಳಿದ್ದರೆ ಮತ್ತೆ ಕೆಲವು ಸಂಶೋಧನೇತರ ಪ್ರಕಟಣೆಗಳಾಗಿವೆ. ಅದರಲ್ಲಿ ಪ್ರಮುಖವಾದವುಗಳೆಂದರೆ–

1. ಗುಣಾತ್ಮಕ ಪ್ರಶಿಕ್ಷಣಕ್ಕಾಗಿ ಪಠ್ಯಕ್ರಮ ಚೌಕಟ್ಟು (1998 & 2009)
2. ಪ್ರಶಿಕ್ಷಣವನ್ನು ಪುನಶ್ಚೇತನಗೊಳಿಸುವುದು.
3. ಪ್ರಶಿಕ್ಷಣ ಕುರಿತಾದ ರಾಜ್ಯವಾರು ಅಧ್ಯಯನಗಳು.
4. ಶಾಲಾ ಶಿಕ್ಷಕರು ಹಾಗೂ ಪ್ರಶಿಕ್ಷಕರ ಬೇಡಿಕೆ ಮತ್ತು ಪೂರೈಕೆಗಳ ಸ್ಥಿತಿಗಳು – ರಾಜ್ಯವಾರು.
5. ಗುಣಾತ್ಮಕ ಶಾಲಾ ಶಿಕ್ಷಣಕ್ಕಾಗಿ ಸಾಮರ್ಥ್ಯ ಹಾಗೂ ಬದ್ಧತೆ ಆಧಾರಿತ ಪ್ರಶಿಕ್ಷಣ.
6. ಪ್ರಶಿಕ್ಷಣದಲ್ಲಿ ಮಾಪನ ಮತ್ತು ಮೌಲ್ಯಮಾಪನ.
7. ಶೈಕ್ಷಣಿಕ ಸಂಶೋಧನೆ–ಒಂದು ಕೈಪಿಡಿ.
8. ಮಾನವಹಕ್ಕುಗಳು ಹಾಗೂ ರಾಷ್ಟ್ರೀಯ ಮೌಲ್ಯಗಳು–ಸ್ವಅಧ್ಯಯನ ಮಾಡ್ಯೂಲ್‌ಗಳು.
9. ಸೃಜನಶೀಲತೆಯ ಪೋಷಣೆ
10. ಲರ್ನಿಂಗ್: ದಿ ಟ್ರಷರ್ ವಿದಿನ್–ಡೆಲೊರ್ಸ್ ರಿಪೋರ್ಟ (ಹಿಂದಿ ಆವೃತ್ತಿ)
11. ಶಿಕ್ಷಣ ತಜ್ಞರ ವಿಚಾರಧಾರೆಗಳು–(ಗಾಂಧೀಜಿ, ಅರೊಬಿಂದೊ, ಜಕೀರ್ ಹುಸೇನ್)
12. ಪ್ರಾಥಮಿಕ ಪ್ರಶಿಕ್ಷಣದಲ್ಲಿ ಗುಣಾತ್ಮಕತೆಯ ಕಳಕಳಿಗಳು (ಮಾನೋಗ್ರಾಫ ಸರಣಿ)

**ಎನ್.ಸಿ.ಟಿ.ಇ. ಪ್ರಮಾಣಕಗಳು (Norms)**

ಶಿಕ್ಷಕರ ಶಿಕ್ಷಣದ ಹಲವು ಪ್ರಕಾರಗಳು ಹಾಗೂ ಹಂತಗಳಲ್ಲಿ ಜಾರಿಯಲ್ಲಿರುವ ವಿವಿಧ ಕೋರ್ಸುಗಳಿಗಾಗಿ ಎನ್.ಸಿ.ಟಿ.ಇ. ಮಾನದಂಡಗಳನ್ನು (Norms) ರೂಪಿಸಲಾಗಿದ್ದು, ಅವು ಈ ಕೆಳಗಿನಂತಿವೆ–

- ಪ್ರಾಥಮಿಕ ಪೂರ್ವ ಶಿಕ್ಷಣದಲ್ಲಿ ಡಿಪ್ಲೋಮಾ (ಡಿ.ಪಿ.ಎಸ್.ಎಡ್.)
- ಪ್ರಾಥಮಿಕ ಶಿಕ್ಷಣದಲ್ಲಿ ಪದವಿ (ಬಿ.ಎಲ್.ಎಡ್.)
- ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೋಮಾ (ಡಿ.ಎಡ್.)
- ಪ್ರೌಢಶಾಲಾ ಶಿಕ್ಷಣದಲ್ಲಿ ಪದವಿ (ಬಿ.ಎಡ್.)
- ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ (ಎಂ.ಎಡ್.)
- ದೈಹಿಕ ಶಿಕ್ಷಣದಲ್ಲಿ ಡಿಪ್ಲೋಮಾ (ಡಿ.ಪಿ.ಎಡ್.)
- ದೈಹಿಕ ಶಿಕ್ಷಣದಲ್ಲಿ ಪದವಿ (ಬಿ.ಪಿ.ಎಡ್.)
- ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ (ಎಂ.ಪಿ.ಎಡ್.)
- ಪ್ರಾಥಮಿಕ ಶಿಕ್ಷಣದಲ್ಲಿ ಪದವಿ (ಬಿ.ಎಡ್.) ದೂರ ಶಿಕ್ಷಣ
- ಪ್ರೌಢಶಾಲಾ ಶಿಕ್ಷಣದಲ್ಲಿ ಪದವಿ (ಬಿ.ಎಡ್.) ದೂರ ಶಿಕ್ಷಣ
- ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ (ಎಂ.ಎಡ್.) ದೂರ ಶಿಕ್ಷಣ
- ಕಲಾ ಶಿಕ್ಷಣದಲ್ಲಿ ಡಿಪ್ಲೋಮಾ–(ದೃಶ್ಯ ಕಲೆ) (Visual Arts)
- ಕಲಾ ಶಿಕ್ಷಣದಲ್ಲಿ ಡಿಪ್ಲೋಮಾ–(ಕ್ರಿಯಾಶೀಲ ಕಲೆಗಳು) (Performing Arts)

–ಎ.ಎ.ಅ.ಸ್ವಾ

**ರಾಷ್ಟ್ರೀಯ ಪಠ್ಯಕ್ರಮ**

ಒಂದು ರಾಷ್ಟ್ರ ತನ್ನ ರಾಷ್ಟ್ರೀಯ ಉದ್ದೇಶಗಳನ್ನು ಸಾಧನೆಗೆ ಎಲ್ಲಾ ರಾಜ್ಯಗಳಲ್ಲೂ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವಂತೆ ಔಪಚಾರಿಕವಾಗಿ ರೂಪಿಸಿರುವ ಪಠ್ಯಕ್ರಮವೇ ರಾಷ್ಟ್ರೀಯ ಪಠ್ಯಕ್ರಮ. ರಾಷ್ಟ್ರೀಯ ಪಠ್ಯಕ್ರಮ ಇಡೀ ರಾಷ್ಟ್ರದಲ್ಲಿ ಅನುಸರಿಸಬೇಕಾದ ಪಠ್ಯಕ್ರಮದ ಚೌಕಟ್ಟನ್ನು ಸೂಚಿಸುತ್ತದೆ. ರಾಷ್ಟ್ರೀಯ ಪಠ್ಯಕ್ರಮ ಇಡೀ ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸ್ಥೂಲವಾಗಿ ಏಕರೂಪತೆಯನ್ನು ತರಲು ಪ್ರಯತ್ನಿಸುತ್ತದೆ. ಇದರ ಅರ್ಥ ರಾಷ್ಟ್ರದ ಎಲ್ಲ ಭಾಗಗಳ ಶೈಕ್ಷಣಿಕ ವ್ಯವಸ್ಥೆ ಒಂದೇ ರೀತಿಯಾಗಿರುವುದೆಂದಲ್ಲ. ದೇಶದ ಆಯಾ ರಾಜ್ಯಗಳ, ಕ್ಷೇತ್ರೀಯ ಅವಶ್ಯಕತೆಗಳಿಗೆ, ಸಾಂಸ್ಕೃತಿಕ ಭಿನ್ನತೆಗಳಿಗೆ, ಸವಾಲುಗಳಿಗೆ, ಸ್ಥಳೀಯ ಇತಿಹಾಸ, ಸಂಪ್ರದಾಯಗಳಿಗೆ, ವಿಶಿಷ್ಟತೆಗಳಿಗೆ ಈ ರಾಷ್ಟ್ರೀಯ ಪಠ್ಯಕ್ರಮದಲ್ಲಿ ಅವಕಾಶವಿರುತ್ತದೆ. ರಾಷ್ಟ್ರಮಟ್ಟದ ಉದ್ದೇಶಗಳಿಗೆ, ರಾಷ್ಟ್ರದ ಏಕತೆ ಮತ್ತು ಸಮಗ್ರತೆಯ ಗುರಿಗೆ ಸ್ಪಂದಿಸುವುದೇ ರಾಷ್ಟ್ರೀಯ ಪಠ್ಯಕ್ರಮದ ಧ್ಯೇಯವಾಗಿರುತ್ತದೆ.

ಶಿಕ್ಷಣವು ಒಟ್ಟಾರೆ ಸಮಾಜದ ಒಂದು ಉಪವ್ಯವಸ್ಥೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ನಂತರದ ಅವಧಿಯ ರಾಷ್ಟ್ರೀಯ ಶಿಕ್ಷಣ ನೀತಿಯು ಅನೇಕ ಪ್ರಯತ್ನಗಳನ್ನು ಕೈಗೊಂಡಿತ್ತು. ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿ ಮತ್ತು ಅದನ್ನು ವಿನ್ಯಾಸಗೊಳಿಸುವ ಮೊದಲ ಪ್ರಯತ್ನ 1964–66ರ ಭಾರತೀಯ ಶಿಕ್ಷಣ ಆಯೋಗದ ಮುಖಾಂತರ ನಡೆಯಿತು. ಭಾರತ ಸರ್ಕಾರವು ರಾಷ್ಟ್ರೀಯ ಶಿಕ್ಷಣ ಆಯೋಗದ (1964–66) ಅಧ್ಯಕ್ಷರಾದ ಡಿ.ಎಸ್. ಕೊಠಾರಿ ಅವರ ಅಧ್ಯಕ್ಷತೆಯಲ್ಲಿ ಈ ಪ್ರಯತ್ನಗಳನ್ನು ಕೈಗೊಳ್ಳಲಾಯಿತು. ಆಯೋಗವು ರಾಷ್ಟ್ರೀಯ ಅಭಿವೃದ್ಧಿಗಾಗಿ ಶಿಕ್ಷಣದ ಅವಶ್ಯಕತೆಯನ್ನು ಕಂಡುಕೊಂಡಿತ್ತು. ಶಿಕ್ಷಣವನ್ನು ನೀಡದಿದ್ದರೆ ರಾಷ್ಟ್ರದ ಪ್ರಗತಿ ಸಾಧ್ಯವಿಲ್ಲವೆಂದು ಆಯೋಗವು ತನ್ನ ವರದಿಯಲ್ಲಿ ಎತ್ತಿ ಹಿಡಿಯಿತು. ಗುಣಮಟ್ಟದ ಶಿಕ್ಷಣವನ್ನು ರಾಷ್ಟ್ರೀಯ ಅಭಿವೃದ್ಧಿಗಾಗಿ ನೀಡಬೇಕು, ರಾಷ್ಟ್ರೀಯ ಅಭಿವೃದ್ಧಿಗಾಗಿ ಸಮಿತಿಯನ್ನು ರಚಿಸಬೇಕೆಂದು ಆಯೋಗ ಸಲಹೆ ನೀಡಿತು. ಆಯೋಗವು 10 ವರ್ಷದ ಶಾಲಾ ಶಿಕ್ಷಣಕ್ಕೆ ಮೂಲ ಅಥವಾ ಆರಂಭಿಕ ಪಠ್ಯಕ್ರಮ ಸಾಮಾನ್ಯವಾಗಿರಬೇಕೆಂದು ಸಲಹೆಯನ್ನು ನೀಡಿತು. ಬ್ರಿಟಿಷ್ ವ್ಯವಸ್ಥೆಯು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರೀಕೃತ ಮಾದರಿಯ ಪಠ್ಯಕ್ರಮವನ್ನು ಸೂಚಿಸಿತ್ತು.

ರಾಷ್ಟ್ರೀಯ ಪಠ್ಯಕ್ರಮದ ಪರಿಕಲ್ಪನೆ ಭಾರತಕ್ಕೆ ವಿಶಿಷ್ಟವಾದುದಲ್ಲ. ಪ್ರಪಂಚದ ಪ್ರತಿಯೊಂದು ದೇಶ ರಾಷ್ಟ್ರೀಯ ಪಠ್ಯಕ್ರಮವನ್ನು ಹೊಂದಿರುತ್ತದೆ. ಆಯಾ ದೇಶಗಳ ಸಂವಿಧಾನಗಳು ರಾಷ್ಟ್ರೀಯ ಪಠ್ಯಕ್ರಮದ ಮೇಲೆ ಬೆಳಕನ್ನು ಬೀರುತ್ತವೆ. ರಾಷ್ಟ್ರೀಯ ನಾಯಕರು, ರಾಷ್ಟ್ರೀಯ ಆದರ್ಶಗಳು ಮತ್ತು ಲಕ್ಷಣಗಳು ಶಿಕ್ಷಣ ವ್ಯವಸ್ಥೆಯ ಮೇಲೆ ಬೆಳಕನ್ನು

Digitised by Bharatavani, CIIL

ಚೆಲ್ಲುತ್ತದೆ. ಭಾರತವು ವಿಶಾಲವಾದ ದೇಶ. ಅನೇಕ ರಾಜ್ಯಗಳನ್ನು ಹೊಂದಿರುವುದರ ಜೊತೆಗೆ ವಿವಿಧ ಸಂಸ್ಕೃತಿಗಳನ್ನು, ಸಾಮಾಜಿಕ ಮತ್ತು ಜನರ ಆರ್ಥಿಕ ಹಿನ್ನೆಲೆಗಳನ್ನು ಹೊಂದಿದೆ. ರಾಷ್ಟ್ರೀಯ ಪಠ್ಯಕ್ರಮವು ಶಿಕ್ಷಣದ ಚೌಕಟ್ಟನ್ನು ಅಥವಾ ರಚನೆಯನ್ನು ಒದಗಿಸುತ್ತದೆ. ಹೆಚ್ಚು ಹೆಚ್ಚು ಅವಕಾಶಗಳು ರಾಜ್ಯಗಳಿಗೆ ಇರುತ್ತವೆ. ರಾಷ್ಟ್ರೀಯ ಪಠ್ಯಕ್ರಮದ ಗುರಿ ರಾಷ್ಟ್ರೀಯ ಜನತೆಯಲ್ಲಿ ಏಕತೆಯನ್ನು ಬೆಳೆಸುವುದಾಗಿರುತ್ತದೆ.

**ರಾಷ್ಟ್ರೀಯ ಪಠ್ಯಕ್ರಮದ ಪ್ರಾಮುಖ್ಯ:** ರಾಷ್ಟ್ರೀಯ ಪಠ್ಯಕ್ರಮ ಸಂಪೂರ್ಣವಾದ ರಾಷ್ಟ್ರೀಯ ಅಭಿವೃದ್ಧಿ ಮತ್ತು ಪುನರ್ರಚನೆಗೆ ಒಂದು ಶಕ್ತಿಯುತ ಸಾಧನವೆಂದು ಹೇಳಬಹುದು. ರಾಷ್ಟ್ರೀಯ ಅಭಿವೃದ್ಧಿಯನ್ನು ಸುಧಾರಿಸುವುದು ಅವಶ್ಯಕವಾಗಿದೆ. ಶೈಕ್ಷಣಿಕ ಚಿಂತನೆಗಳಿಂದ ಉತ್ತಮವಾದ ಪಠ್ಯಕ್ರಮ ರಚಿಸಿ ಮತ್ತು ಪರಿಣಾಮಕಾರಿಯಾದ ಶಿಕ್ಷಣನೀತಿ ಮತ್ತು ಬಲವುಳ್ಳ ಒಪ್ಪಂದಗಳಿಂದ ಶಿಕ್ಷಣವನ್ನು ಸುಧಾರಿಸಿ ವಿಸ್ತರಿಸಬಹುದು. ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಿಂದ ಶಿಕ್ಷಣವನ್ನು ಬೇರ್ಪಡಿಸುವುದಕ್ಕೆ ಹೋಗಬಾರದು. ಶಿಕ್ಷಣ ಶಕ್ತಿಯುತ ಸಾಧನವಾಗಿ ಯೋಜಿತವಾದ ಆರ್ಥಿಕ ಬದಲಾವಣೆಗಳನ್ನು ಎತ್ತಿ ಹಿಡಿಯುತ್ತದೆ. ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆ ಅರ್ಥಮಾಡಿಸುವುದೇನೆಂದರೆ, ಶಿಕ್ಷಣವು ಸಮಾಜದ ಬದಲಾವಣೆಯ ಮೇಲೆ ಪ್ರಭಾವವನ್ನು ಬೀರುವುದು ಮತ್ತು ರಾಷ್ಟ್ರೀಯ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡುವುದು. ರಾಷ್ಟ್ರೀಯ ಪಠ್ಯಕ್ರಮದ ಚಿಂತನೆಯನ್ನು ಸರಿಯಾಗಿ ಮತ್ತು ಸುವ್ಯವಸ್ಥಿತವಾಗಿ ರಾಷ್ಟ್ರೀಯ ಶಿಕ್ಷಣ ಆಯೋಗ (1964–66)ವು ಮಾಡಿತು. ರಾಷ್ಟ್ರೀಯ ಅಭಿವೃದ್ಧಿ ಮತ್ತು ಶಿಕ್ಷಣದ ಮಧ್ಯೆ ನೇರವಾದ ಸಂಬಂಧವಿದೆಯೆಂದು ಒತ್ತಿ ಹೇಳಿತು. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಗುಣಮಟ್ಟದ ದೃಷ್ಟಿಯಿಂದ ಸರಿಯಾಗಿ ರಚಿಸಬೇಕೆಂದು ಹೇಳಿತು.

**ರಾಷ್ಟ್ರೀಯ ಪಠ್ಯಕ್ರಮ ಅಭಿವೃದ್ಧಿಯ ಒಟ್ಟಾರೆ ನೋಟ:** ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ರಾಷ್ಟ್ರೀಯ ಪಠ್ಯಕ್ರಮ ಮತ್ತು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಅನೇಕ ಆಯೋಗಗಳು, ಸಮಿತಿಗಳು ಗಮನವನ್ನು ಹರಿಸಿದವು. ಸ್ವಾತಂತ್ರ್ಯ ಬರುವುದಕ್ಕಿಂತ ಮುನ್ನ ಮೊದಲ ಬಾರಿಗೆ ಮಹಾತ್ಮಗಾಂಧಿಯವರು 'ಮೂಲಶಿಕ್ಷಣ'ವನ್ನು ಜಾರಿಗೊಳಿಸಬೇಕೆನ್ನುವ ಚಿಂತನೆಯ ಮೂಲಕ ಪಠ್ಯಕ್ರಮ ಪುನರ್ರಚನೆಗೆ ಸಂಬಂಧಿಸಿದಂತೆ ಗಮನಹರಿಸಿದರು. ಡಾ. ಜಾಕೀರ್‌ಹುಸೇನ್ ಸಮಿತಿಯು ಮುಂದೆ ಮೂಲ ಶಿಕ್ಷಣ ಯೋಜನೆಯನ್ನು ವಿಸ್ತರಿಸಿತು. ಸ್ವಾತಂತ್ರ್ಯ ಬಂದ ತಕ್ಷಣ ಭಾರತ ಸರ್ಕಾರವು ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವನ್ನು (1948) ನೇಮಿಸಿತು. ಆಯೋಗದ ಶಿಫಾರಸ್ಸಿನನ್ವಯ ಸೂಕ್ತವಾದ ಬದಲಾವಣೆಯನ್ನು ವಿಶ್ವವಿದ್ಯಾನಿಲಯ ಹಂತದ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾಡಿಕೊಳ್ಳಲಾಯಿತು. ರಾಷ್ಟ್ರೀಯ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಇನ್ನೊಂದು ಪ್ರಧಾನ ಬೆಳವಣಿಗೆಯೆಂದರೆ ಸೆಕೆಂಡರಿ ಶಿಕ್ಷಣ ಆಯೋಗ (1952–53)ವನ್ನು ರಚನೆ ಮಾಡಿದ್ದು. ಇದರ ಶಿಫಾರಸ್ಸಿನನ್ವಯ ಬೇರೆ ಬೇರೆ ದಿಶೆಗಳಲ್ಲಿ ಶಿಕ್ಷಣ ಮುಂದುವರಿಸಲು ಸಹಾಯಕವಾದ ವೈವಿಧ್ಯತೆಯ ಪಠ್ಯಕ್ರಮವನ್ನು ಸೆಕೆಂಡರಿ ಹಂತದಲ್ಲಿ ಅಳವಡಿಸಲಾಯಿತು.

ಎಲ್ಲ ಹಂತಗಳ ಶಿಕ್ಷಣ ವ್ಯವಸ್ಥೆಯನ್ನು ಪುನರ್ರಚಿಸುವುದಕ್ಕಾಗಿ 1964–66ರಲ್ಲಿ ರಾಷ್ಟ್ರೀಯ ಶಿಕ್ಷಣ ಆಯೋಗವನ್ನು ನೇಮಿಸಿತು. ಆಯೋಗವು ಶಾಲಾ ಪಠ್ಯಕ್ರಮವನ್ನು ಸುಧಾರಿಸುವಂತೆ ಸೂಚಿಸಿತು. 10+2+3 ವಿನ್ಯಾಸದ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವುದು, 10 ವರ್ಷಗಳ ಶಾಲಾವಧಿಯ ಪಠ್ಯಕ್ರಮವನ್ನು ವಿನ್ಯಾಸಗೊಳಿಸುವುದು ಮತ್ತು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಈ ಆಯೋಗ ಸಲಹೆಯನ್ನು ನೀಡಿತು.

**ರಾಷ್ಟ್ರೀಯ ಪಠ್ಯಕ್ರಮ– ಒಂದು ಬಾಹ್ಯನೋಟ:** ರಾಷ್ಟ್ರೀಯ ಪಠ್ಯಕ್ರಮವು ತನ್ನದೇ ಆದ ಗುಣಲಕ್ಷಣಗಳನ್ನು ಹೊಂದಿರಬೇಕೆಂದು ರಾಷ್ಟ್ರೀಯ ಶಿಕ್ಷಣ ಆಯೋಗವು ಸಲಹೆಗಳನ್ನು ನೀಡಿತು.

ಭಾರತ ಸಂವಿಧಾನದಲ್ಲಿ ವೈಯಕ್ತಿಕ ಮತ್ತು ಸಾಮಾಜಿಕ ಗುರಿಗಳು ಮತ್ತು ಉತ್ತಮ ಮೌಲ್ಯಗಳ ತಯಾರಿಗೆ ಹೆಚ್ಚಿನ ಒತ್ತನ್ನು ನೀಡಿ ಜಾರಿಗೊಳಿಸುವುದು. ರಾಷ್ಟ್ರೀಯ ಅಭಿವೃದ್ಧಿಯ ಗುರಿಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಅಗತ್ಯವಾಗಿ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು. ಪಠ್ಯಕ್ರಮ ತಯಾರಿಕೆಯಲ್ಲಿ ಮತ್ತು ತರ್ಜುಮೆಯಲ್ಲಿ ಕಲಿಕಾ ಕೇಂದ್ರಿತ ಮಾರ್ಗೋಪಾಯಕ್ಕೆ ಹೆಚ್ಚಿನ ಒತ್ತನ್ನು ನೀಡುವುದು.

ಪ್ರಾಥಮಿಕ ಮತ್ತು ಸೆಕೆಂಡರಿ ಹಂತದ ಎಲ್ಲಾ ಕಲಿಕಾರ್ಥಿಗಳಿಗೆ ವಿಶಾಲ ಆಧಾರಿತ ಸಾಮಾನ್ಯ ಶಿಕ್ಷಣವನ್ನು ನೀಡುವುದು. ಬೋಧನೆ ಮತ್ತು ಕಲಿಕೆಯ ಉದ್ದೇಶಗಳನ್ನು ಗ್ರಹಿಸುವುದಕ್ಕೆ ವಿಷಯ ವಸ್ತುವಿನ ಆಯ್ಕೆ ಮತ್ತು ಕಲಿಕಾ ಅನುಭವಗಳಿಗೆ ಸ್ವಾತಂತ್ರ್ಯವನ್ನು ನೀಡುವುದು, ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ರಾಷ್ಟ್ರೀಯ ಪಠ್ಯಕ್ರಮ ರಚನೆಗೆ ಆಧಾರವಾಗಿರುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯೂ (1986) ರಾಷ್ಟ್ರೀಯ ವ್ಯವಸ್ಥೆಯಲ್ಲಿ ಮೂಲ ಪಠ್ಯಕ್ರಮಕ್ಕೆ ಪ್ರಮುಖವಾದ ಸ್ಥಾನಮಾನವನ್ನು ನೀಡಿತು.

ರಾಷ್ಟ್ರೀಯ ಶಿಕ್ಷಣ ನೀತಿ (1986)ಯು ಪಾರ್ಲಿಮೆಂಟ್‌ನಿಂದ ಅನುಮತಿಯನ್ನು ಪಡೆದು ಪಠ್ಯಕ್ರಮದ ಲಕ್ಷಣಗಳು ಈ ಕೆಳಕಂಡಂತೆ ಇರಬೇಕೆಂದು ಸಲಹೆಯನ್ನು ನೀಡಿತು.

1) ಮೂಲ ಅಂಗಗಳು 2) ಕನಿಷ್ಠ ಕಲಿಕಾ ಹಂತಗಳು 3) ಭಾಷೆ ಮತ್ತು ಗಣಿತ 4) ಪರಿಸರ ಅಧ್ಯಯನಗಳು 5) ಕಾರ್ಯಾತ್ಮಕ ಅನುಭವ ಮತ್ತು ಕಲೆಯ ಶಿಕ್ಷಣ 6) ಆರೋಗ್ಯ ಮತ್ತು ದೈಹಿಕ ಶಿಕ್ಷಣ 7) ಹೆಣ್ಣು ಮಕ್ಕಳ ಶಿಕ್ಷಣ 8) ವಿಶೇಷ ಅಗತ್ಯತೆಗಳ ಕಲಿಕಾರ್ಥಿಗಳಿಗೆ ಶಿಕ್ಷಣ 9) ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಕ್ಷಣ.

– ಆರ್.ಶ.

## ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ

ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಪರಿಷತ್ತು (NCSTC) ಹಾಗೂ ಅದರ ಸಹಸಂಸ್ಥೆಗಳ ಕೆಲವು ಮುಂಗಾಣಿಗರ (Fore-Visioners) ಸಕಾಲಿಕ ಸ್ಪಂದನದಿಂದ ಸರ್ಕಾರಿ ಹಾಗೂ ಸರ್ಕಾರೇತರ 70 ಸಂಸ್ಥೆಗಳ 'ಜಾಲ' ರೂಪುಗೊಂಡಿತು. ಎನ್‌ಸಿಎಸ್‌ಟಿಸಿಯನೆಟ್ (ಜಾಲ) 1993ರಿಂದ ಪ್ರತೀ ವರ್ಷ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶವನ್ನು ಸಂಘಟಿಸುತ್ತಿದೆ. 1990ರಲ್ಲಿ ಗ್ವಾಲಿಯರ್ (ಮಧ್ಯಪ್ರದೇಶ) ಶಾಲಾಮಕ್ಕಳು ನಡೆಸಿದ ಸ್ಥಳೀಯ ನೀರಿನ ಸಮಸ್ಯೆಯ ವೈಜ್ಞಾನಿಕ ಅಧ್ಯಯನವು ಮೂಡಿಸಿದ ಭರವಸೆಯಿಂದ 1993ರಲ್ಲಿ 'ನಿಮ್ಮ ಪರಿಸರ ಅರಿಯಿರಿ' ಧ್ಯೇಯವಾಕ್ಯ (Theme) ಕೇಂದ್ರ ವಿಷಯದೊಂದಿಗೆ ಜಿಲ್ಲಾಮಟ್ಟ, ರಾಜ್ಯಮಟ್ಟ, ರಾಷ್ಟ್ರಮಟ್ಟದಲ್ಲಿ ಮಕ್ಕಳು 'ವೈಜ್ಞಾನಿಕವಿಧಾನದಲ್ಲಿ ನಡೆಸಿದ ಕಾರ್ಯಯೋಜನೆಗಳನ್ನು ಮಂಡಿಸಿದರು.

ಶಾಲೆಯಲ್ಲಿರುವ–ಶಾಲೆಯಿಂದ ಹೊರಗಿರುವ ಎಲ್ಲ ಮಕ್ಕಳಿಗೂ ಸಮಾನ ಅವಕಾಶವಿರುವಂತೆ 10 ರಿಂದ 17ರ ವಯೋಮಾನದ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವದ ಪ್ರಚೋದನೆಗೆ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ವೇದಿಕೆ ಒದಗಿಸಿದೆ. ಆಯಾ ವರ್ಷದ ಡಿಸೆಂಬರ್ 31ಕ್ಕೆ 10


Digitised by Bharatavani, CIIL

ರಿಂದ 14 ವಯಸ್ಸಿನವರನ್ನು 'ಕಿರಿಯರ ವಿಭಾಗ' 14 ರಿಂದ 17 ವಯಸ್ಸಿನವರನ್ನು 'ಹಿರಿಯರ ವಿಭಾಗ'ವೆಂದು ಪರಿಗಣಿಸಿರುವುದಲ್ಲದೆ ಗ್ರಾಮಾಂತರ ಹಾಗೂ ನಗರಭಾಗದ ಮಕ್ಕಳಿಗೂ ಸಮಪ್ರಮಾಣದ ಪ್ರಾತಿನಿಧ್ಯಕ್ಕೆ ಒತ್ತು ಕೊಟ್ಟಿದೆ.

ಮಕ್ಕಳ ವಿಜ್ಞಾನ ಸಮಾವೇಶದಲ್ಲಿ 'ಯೋಜನೆಗಳ ವರದಿ'ಯನ್ನು ಮಂಡಿಸುತ್ತಾರೆ. ಈ ಯೋಜನೆಗಳು ಸರಳವಾದ, ನವೀನತೆಯನ್ನು ಹೊಂದಿರುವ, ಪ್ರಾಯೋಗಿಕವಾದ, ವೈಜ್ಞಾನಿಕ ವಿಧಾನದಲ್ಲಿನ ಅಧ್ಯಯನವಾಗಿರಬೇಕು, ಇದನ್ನು ಕನಿಷ್ಠ ಇಬ್ಬರು, ಗರಿಷ್ಠ 5 ಮಕ್ಕಳ ತಂಡವು ಎನ್‌ಸಿಎಸ್‌ಟಿಸಿ ಘೋಷಿಸುವ 'ಕೇಂದ್ರ ವಿಷಯ'ಕ್ಕೆ ಸಂಬಂಧಿಸಿದಂತೆ ಸ್ಥಳೀಯವಾಗಿ ಜೀವನಕ್ಕೆ ಹತ್ತಿರವಿರುವ ಪರಿಸರ/ಸನ್ನಿವೇಶಕ್ಕೆ ಹೊಂದಿಕೊಂಡಿರುವಂತಹ, ದತ್ತಾಂಶಗಳನ್ನು ಸಂಗ್ರಹಿಸಿ, ಅದನ್ನು ವೈಜ್ಞಾನಿಕ ವಿಧಾನದಲ್ಲಿ ನಿಖರವಾಗಿ ನಿರೂಪಿಸಿ, ದಾಖಲಿಸಿ, ವಿಶ್ಲೇಷಿಸುವಾಗ, ನಿರ್ದಿಷ್ಟ, ಖಚಿತವಾದ ಫಲ ಗುರ್ತಿಸುವಂತಹ ವಾಗಿರಬೇಕು. ನೇರವಾಗಿ ಸಮುದಾಯದ ಕಾರ್ಯಗಳಿಗೆ ಸಂಬಂಧಿಸಿದ್ದು, ಯೋಜನೆಯು ಪರಿಹಾರ ಮಾರ್ಗ ಸೂಚಿಸಿ, ಅನುಪಾಲನೆ ಮಾಡಿರಬೇಕು.

ಇದಕ್ಕಾಗಿ ವ್ಯಾಪಕವಾದ ಹಾಗೂ ಕಾರ್ಯ ಸಾಧ್ಯವಾಗುವ ಕಾರ್ಯಾಚರಣೆಯನ್ನು ಎನ್‌ಸಿಎಸ್‌ಟಿಸಿಯು ಯೋಜಿಸಿ, ಪ್ರತಿರಾಜ್ಯದಲ್ಲೂ ಈ ಕಾರ್ಯವನ್ನು ಜಿಲ್ಲಾಮಟ್ಟ ಹಾಗೂ ರಾಜ್ಯಮಟ್ಟದಲ್ಲಿ ಸಂಘಟಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರಿನಲ್ಲಿರುವ ಕರ್ನಾಟಕರಾಜ್ಯ ವಿಜ್ಞಾನ ಪರಿಷತ್ತು (ಕರಾವಿಪ) ಇತರೇ ರಾಜ್ಯಗಳಲ್ಲೂ ಕರಾವಿಪದಂತಹ ವಿಜ್ಞಾನವನ್ನು ಜನಪ್ರಿಯಗೊಳಿಸುವ ಸಂಸ್ಥೆಗಳು–ಕೇರಳದ ಶಾಸ್ತ್ರ ಸಾಹಿತ್ಯ ಪರಿಷತ್ತು ಮುಂತಾದವು ಈ ಕಾರ್ಯವನ್ನು ನಿರ್ವಹಿಸುತ್ತವೆ.

1993ರಲ್ಲಿ ನಡೆದ ಸಮಾವೇಶಗಳಿಗೆ ಅಧ್ಯಯನದ ಕೇಂದ್ರ ವಿಷಯ 'ನಿಮ್ಮ ಪರಿಸರ ಅರಿಯಿರಿ' ನಂತರ ಪ್ರತಿ ಎರಡು ವರ್ಷಗಳಿಗೆ ಕೇಂದ್ರ ವಿಷಯಗಳು ಕ್ರಮವಾಗಿ–

94 & 95 ಭಾರತವನ್ನು ಮಾಲಿನ್ಯರಹಿತಗೊಳಿಸೋಣ.

96 & 97 ನಮ್ಮ ಕನಸಿನ ಭಾರತ–ನಾವದನ್ನು ರೂಪಿಸೋಣ.

98 & 99 ನಿಸರ್ಗ ಸಂರಕ್ಷಣೆ, ಸಂಪೋಷಣೆ, ಸಮವಿತರಣೆ.

2000 & 01 ದೇಶೀಯ ವೈದ್ಯಕೀಯ ಜ್ಞಾನ, ದೇಶದ ಭವಿಷ್ಯತ್ತಿಗಾಗಿ.

2002 & 03 ಆಹಾರ ಪದ್ಧತಿ–ಎಲ್ಲರಿಗೂ ಪೌಷ್ಟಿಕ ಆಹಾರ.

2004 & 05 ಉತ್ತಮ ಭವಿಷ್ಯಕ್ಕೆ ಜಲಸಂಪನ್ಮೂಲಗಳ ಸಮರ್ಥ ಬಳಕೆ.

2006 & 07 ಜೀವಿ ವೈವಿಧ್ಯ–ನಿಸರ್ಗ ಪೋಷಿಸಿ–ನಮ್ಮೆಲ್ಲರ ಭವಿಷ್ಯಕ್ಕಾಗಿ.

2008 & 09 ಇರುವುದೊಂದೇ ಭೂಮಿ. ನಮ್ಮೆಲ್ಲರ ಮನೆ ಸಂಶೋಧಿಸಿ, ಸಂರಕ್ಷಿಸಿ, ಸಂಪೋಷಿಸಿ.

2010 & 11 ಭೂಸಂಪನ್ಮೂಲ, ಸಮೃದ್ಧಿಗಾಗಿ ಬಳಸಿ ಭವಿಷ್ಯಕ್ಕಾಗಿ ಉಳಿಸಿ.

ಪ್ರತಿವರ್ಷವೂ ಆಯಾ ರಾಜ್ಯದಲ್ಲಿನ ಸಂಘಟನಾಸಂಸ್ಥೆ ಆಗಸ್ಟ್ ಮೊದಲವಾರದ ಒಳಗೆ ಜಿಲ್ಲಾಮಟ್ಟದಲ್ಲಿ ಯೋಜನಾ ತಯಾರಿಕೆಯ ರೀತಿ–ನೀತಿ ಹಾಗೂ ಕಾರ್ಯಕ್ರಮದ ಬಗ್ಗೆ ಪತ್ರಿಕಾ ಪ್ರಕಟಣೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಶಾಲೆಗಳಿಗೆ ಮಾಹಿತಿ ನೀಡಿ, ಈ ಬಗ್ಗೆ ಒಂದು ದಿನದ ತರಬೇತಿಯನ್ನು ಶಿಕ್ಷಕರಿಗೆ ಏರ್ಪಡಿಸುತ್ತದೆ, ಯೋಜನೆಗೆ ಸಂಬಂಧಿಸಿದ ಚಟುವಟಿಕೆಗಳ ಸಂಪನ್ಮೂಲ ಕೈಪಿಡಿ ಹಾಗೂ 'ಸಿಡಿ' [CD]ಯನ್ನು ರಾಷ್ಟ್ರಮಟ್ಟದಲ್ಲಿ ರಚಿಸಿ, ರಾಜ್ಯಮಟ್ಟದಲ್ಲಿ ರಾಜ್ಯಭಾಷೆಗಳಲ್ಲಿಯೂ ಸಿದ್ಧಗೊಳಿಸಿ ಒದಗಿಸುತ್ತದೆ.

ನಂತರ 2–3 ತಿಂಗಳ ಅವಧಿಯಲ್ಲಿ ವಿವಿಧ ಸ್ಥಳ/ಶಾಲೆಗಳಲ್ಲಿ ಕ್ಷೇತ್ರಕಾರ್ಯ, ಸರ್ವೇಕ್ಷಣೆ, ವೀಕ್ಷಣೆ, ಪ್ರಾಯೋಗಿಕ ಕಾರ್ಯಗಳ ರೀತಿ ಯೋಜನೆ ಕಾರ್ಯ ನಡೆಯುತ್ತದೆ, ಆಗಸ್ಟ್‌ನಲ್ಲಿ ಆ ಬಗ್ಗೆ ಜಿಲ್ಲಾಮಟ್ಟದಲ್ಲಿ ಆಯಾ ಜಿಲ್ಲಾ ಸಂಚಾಲಕರಲ್ಲಿ ನೋಂದಣಿಯು ನಡೆಯುತ್ತದೆ. ಈ ಕಾರ್ಯ ಯೋಜನೆಯಲ್ಲಿ ರಾಜ್ಯಮಟ್ಟದಲ್ಲಿ ಜಿಲ್ಲಾ ಸಂಯೋಜಕರು ಹಾಗೂ ಸಹ ಸಂಯೋಜಕರು ಕಾರ್ಯವನ್ನು ನಿರ್ವಹಿಸುತ್ತಾರೆ. ನವಂಬರ್–ಡಿಸಂಬರ್ ಮೊದಲವಾರದಲ್ಲಿ ಜಿಲ್ಲಾಮಕ್ಕಳ ವಿಜ್ಞಾನ ಸಮಾವೇಶ, ಡಿಸೆಂಬರ್ 2ನೇ ವಾರದ ಒಳಗಾಗಿ ರಾಜ್ಯಮಟ್ಟದ ಸಮಾವೇಶ ಡಿಸೆಂಬರ್ 27 ರಿಂದ 31ರವರೆಗೆ ಅಖಿಲ ಭಾರತ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ನಡೆಯುತ್ತದೆ.

ತಂಡಗಳನ್ನು ರಚಿಸಿ ಯೋಜನಾ ಶೀರ್ಷಿಕೆ ನಿಗದಿಪಡಿಸಿಕೊಂಡು ಕಾರ್ಯನಿರ್ವಹಿಸಲು ಮಾರ್ಗದರ್ಶಿ ಶಿಕ್ಷಕರು ನೆರವಾಗುತ್ತಾರೆ. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಗ್ರಾಮೀಣ ಪ್ರದೇಶ 50%, ನಗರ ಪ್ರದೇಶ 50% ಕಿರಿಯರ ವಿಭಾಗ 40%, ಹಿರಿಯರ ವಿಭಾಗ 60% ಯೋಜನೆಗಳನ್ನು ನಿಯಮಾನುಸಾರ ಆಯ್ಕೆ ಮಾಡಿ ರಾಜ್ಯಮಟ್ಟಕ್ಕೆ ನಂತರ ರಾಷ್ಟ್ರಮಟ್ಟಕ್ಕೆ ಆಯ್ಕೆ ಮಾಡಲಾಗುತ್ತದೆ. ಈ ಪ್ರಕ್ರಿಯೆಯ ಅನುಪಾತ ಹೀಗಿದೆ: ಗ್ರಾಮೀಣ: ನಗರ : : 50:50, ಕಿರಿಯ: ಹಿರಿಯ : : 50:60, ಜಿಲ್ಲಾ: ರಾಜ್ಯ : : 15:1, ರಾಜ್ಯ: ರಾಷ್ಟ್ರ : : 10:1

ತಂಡದಲ್ಲಿ ಕಾರ್ಯನಿರ್ವಹಿಸಿದರೂ, ತಂಡ ನಾಯಕನಿಗೆ ಮಾತ್ರ ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಭಾಗಿಯಾಗಲು ಅವಕಾಶವಿದೆ. ಆದರೂ ಹೆಚ್ಚುವರಿಯಾಗಿ ಬಂದ ಮಕ್ಕಳಿಗೂ ವ್ಯವಸ್ಥಾಪಕರು ಊಟ–ವಸತಿಯನ್ನು ಒದಗಿಸುತ್ತಿದ್ದಾರೆ. ಜಿಲ್ಲೆಯಿಂದ ರಾಜ್ಯಕ್ಕೆ ರಾಜ್ಯದಿಂದ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಆಯ್ಕೆ ಆದ ಮಕ್ಕಳಲ್ಲಿ ಪ್ರತಿ ಜಿಲ್ಲೆಗೆ ಒಬ್ಬ ಕಿರಿಯ ವಿಜ್ಞಾನಿ, ಪ್ರತಿ ರಾಜ್ಯಕ್ಕೆ ಒಬ್ಬ ಕಿರಿಯ ವಿಜ್ಞಾನಿಯ ಆಯ್ಕೆ ಆಗುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ರಾಜ್ಯ ಇಬ್ಬರು ಮಕ್ಕಳನ್ನು ಭಾರತೀಯ ರಾಷ್ಟ್ರೀಯ ವಿಜ್ಞಾನ ಕಾಂಗ್ರೆಸ್ (ಸಮಾವೇಶ)ನಲ್ಲಿ ಭಾಗವಹಿಸಲು ಆಯ್ಕೆ ಮಾಡುತ್ತಾರೆ. ಆಯ್ದ ಮಕ್ಕಳ ಯೋಜನೆಗಳಿಗೆ ಆರ್ಥಿಕ ಅನುದಾನ, ಪೇಟೆಂಟ್ ಪಡೆಯಲು ಅಂತರರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಮೇಳದಲ್ಲಿ (Intel Science & Technology Fair) ನಲ್ಲಿ ಭಾಗಿಗಳಾಗಲು ಅವಕಾಶ ದೊರೆಯುತ್ತದೆ. ರಾಜ್ಯಮಟ್ಟದ 'ಯುವ ವಿಜ್ಞಾನಿ/ಕಿರಿಯ ವಿಜ್ಞಾನಿ'ಗೆ ಕರ್ನಾಟಕ ಸರ್ಕಾರವು ರೂ. 5000/–, ಶಾಲೆಗೆ ರೂ. 4,000/– ಮಾರ್ಗದರ್ಶಿ ಶಿಕ್ಷಕರಿಗೆ ರೂ. 1000/– ನೀಡುತ್ತದೆ. ಕರ್ನಾಟಕ ರಾಜ್ಯಮಟ್ಟದಲ್ಲಿ 4 ವಿಭಾಗ (ಹಿರಿಯ, ಕಿರಿಯ, ಗ್ರಾಮೀಣ, ನಗರ)ದ ಅತ್ಯುತ್ತಮ ಯೋಜನೆಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ದತ್ತಿಯಿಂದ ಪುರಸ್ಕಾರವಿದೆ.

ಕಿರಿಯರ ಯೋಜನಾ ವರದಿಯು 2000 ಪದ, ಹಿರಿಯರ ವರದಿ 2500 ಪದಗಳ ವ್ಯಾಪ್ತಿ, ವರದಿಮಂಡನೆ ಕಾಲದಲ್ಲಿ ಕೇವಲ 4 ಪೋಸ್ಟರ್/ಚಾರ್ಟ್ ಪ್ರದರ್ಶಿಸಲು ಅವಕಾಶ ಹಾಗೂ ವರದಿಯು A4 ಸೈಜಿನ ಕಾಗದದಲ್ಲಿ ಸಂಶೋಧನಾ ಪ್ರಬಂಧಗಳ ಮಾದರಿಯಲ್ಲೇ ಇರಬೇಕಾಗಿರುವುದು, ಎಳೆಯ ವಯಸ್ಸಿನಿಂದಲೇ ಅಚ್ಚುಕಟ್ಟು, ತಾರ್ಕಿಕತೆಗೆ

Digitised by Bharatavani, CIIL

ಅವಕಾಶ ಕಲ್ಪಿಸುವುದು, ಕಲಿಕೆಯ ವ್ಯಾಪ್ತಿ, ಹರಹು, ಸ್ವರೂಪ ಬದಲಾಗಿ ಸಹಕಾರ ಮನೋಭಾವ ಸಮುದಾಯಗಳ ಬಗ್ಗೆ ಕಾಳಜಿ, ಸಮಾಜಮುಖಿಯಾಗಲು ಅವಕಾಶ ಹೀಗೆ ಬಹುವಿಧವಾಗಿ ಈ ಸಮಾವೇಶಗಳ ಫಲಶ್ರುತಿ ಇದೆ. ಕರ್ನಾಟಕದ ಚಿತ್ರದುರ್ಗ, ಬೆಳಗಾಂ (2 ಬಾರಿ), ಧಾರವಾಡ, ಗುಲ್ಬರ್ಗ, ಅರಸೀಕೆರೆ (ಹಾಸನ), ಮೈಸೂರು (2 ಬಾರಿ), ತುಮಕೂರು, ಬೀದರ್, ಬಾಗಲಕೋಟೆ, ಹಾವೇರಿ, ದಾವಣಗೆರೆ, ಮಂಡ್ಯ, ಚಿಕ್ಕಮಗಳೂರು, ಪಿಲುಕುಲ (ಮಂಗಳೂರು) ಶಿವಮೊಗ್ಗ, ರಾಯಚೂರುಗಳಲ್ಲಿ ರಾಜ್ಯ ಸಮಾವೇಶ ನಡೆದಿದೆ. ದೆಹಲಿ, ಗೌಹಾಟಿ (2 ಬಾರಿ), ಹೈದರಾಬಾದ್, ಭೂಪಾಲ್, ಚೆನ್ನೈ, ಗೋವಾದ ಮಾಪೋಫ್, ಕೊಲ್ಕತ್ತಾ, ಲಕ್ನೊ, ಭುವನೇಶ್ವರ, ಸಿಕ್ಕಿಂ (ಗ್ಯಾಂಗ್‌ಟಾಕ್), ಗುಜರಾತಿನ ಅಹಮದಾಬಾದ್, ಪೂನಾಗಳಲ್ಲಿ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶಗಳು ಜರುಗಿದ್ದು ಈವರೆಗೆ ರಾಷ್ಟ್ರದ 8 ರಿಂದ 9 ಲಕ್ಷ ಮಕ್ಕಳು ಈ ಸಮಾವೇಶದ ಫಲಾನುಭವಿಗಳಾಗಿದ್ದಾರೆ. ಬಾಂಗ್ಲಾ, ಜರ್ಮನಿ, ಶ್ರೀಲಂಕಾ ಹಾಗೂ ASEAN ದೇಶಗಳು ಈ ಯೋಜನೆಯಲ್ಲಿ ಆಸಕ್ತಿಯನ್ನು ತಳೆದಿದ್ದು ರಾಷ್ಟ್ರೀಯ ಸಮಾವೇಶದಲ್ಲಿ ಆ ದೇಶದ ಪ್ರತಿನಿಧಿಗಳು ಭಾಗಿಗಳಾಗಿದ್ದಾರೆ. ರಾಜ್ಯದಲ್ಲಿನ ಭಾವನಾತ್ಮಕ ಬೆಳವಣಿಗೆ, ರಾಷ್ಟ್ರೀಯ ಭಾವೈಕ್ಯತೆಗೆ ಪೂರಕವಾಗಿದೆ.

ncstenet@hotmail.com. ಹಾಗೂ krvp.unfo@gmail.com ನಿಂದ ಹೆಚ್ಚಿನ ವಿವರ ಪಡೆಯಬಹುದಾಗಿದೆ.

–ಎನ್.ಕಾ.ರಾ.

## ರಾಷ್ಟ್ರೀಯ ಮನಸ್ವಾಸ್ಥ್ಯ ಮತ್ತು ನರವಿಜ್ಞಾನ ಸಂಸ್ಥೆ (ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಆ್ಯಂಡ್ ನ್ಯೂರೊ ಸೈನ್ಸ್ - NIMHANS) ಬೆಂಗಳೂರು

ನಿಮ್‌ಹಾನ್ಸ್ ಎಂದೇ ಪ್ರಸಿದ್ಧವಾಗಿರುವ ಈ ಸಂಸ್ಥೆ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಕ್ಷೇತ್ರಗಳಲ್ಲಿ ಶೈಕ್ಷಣಿಕ ಧ್ಯೇಯವನ್ನು ಇಟ್ಟುಕೊಂಡು ಮನೋರೋಗಿಗಳನ್ನು ಗುಣಪಡಿಸುವ ಉತ್ತಮ ಸಾಮಾಜಿಕ ಧ್ಯೇಯವನ್ನು ತನ್ನದಾಗಿಸಿಕೊಂಡಿರುವ ಸಂಸ್ಥೆ. ಇದು ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಮನೋರೋಗಿಗಳ ಆಸ್ಪತ್ರೆಯಾಗಿ 1925ರಲ್ಲಿ ಅಸ್ತಿತ್ವಕ್ಕೆ ಬಂದಿತು. ನಂತರ 1954ರಲ್ಲಿ ಸ್ಥಾಪಿತವಾಗಿದ್ದ ಅಖಿಲಭಾರತ ಮನಸ್ವಾಸ್ಥ್ಯ ಸಂಸ್ಥೆಯನ್ನು ಹಾಗೂ ಬೆಂಗಳೂರಿನ ಮನೋರೋಗಿಗಳ ಆಸ್ಪತ್ರೆಯನ್ನು ಡಿಸೆಂಬರ್ 27, 1974ರಲ್ಲಿ ಏಕೀಕರಿಸಿ ಈಗಿನ ಈ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇಂದು ಇದು ಏಷ್ಯಾಖಂಡದಲ್ಲೇ ಹೆಸರನ್ನು ಗಳಿಸಿರುವ ಸಂಸ್ಥೆಯಾಗಿದೆ.

ಸೇವೆ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಂಶೋಧನೆ ಈ ಕ್ರಮದ ಆದ್ಯತೆಯನ್ನು ಸಂಸ್ಥೆಯು ಹೊಂದಿದೆ. ಬಹುಶಾಸ್ತ್ರೀಯ ಸಮಗ್ರ ವಿಧಾನ (Multi Disciplinary Integrated Approach)ವನ್ನು ಅನುಸರಿಸುವ ಈ ಸಂಸ್ಥೆ ಸಂಶೋಧನಾ ಫಲಿತಾಂಶಗಳನ್ನು ಪರಿಣಾಮಕಾರಿಯಾಗಿ ಮನೋರೋಗಿಗಳನ್ನು ಗುಣಪಡಿಸಲು ಉಪಯೋಗಿಸುವುದರಲ್ಲಿ ಸಮರ್ಥವಾಗಿದೆ. ವಿಶ್ವವಿದ್ಯಾನಿಲಯ ಅನುದಾನ ಆಯೋಗವು ನವೆಂಬರ್ 14, 1994ರಂದು "ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ ಸಂಸ್ಥೆಯ (Deemed University) ಸ್ಥಾನಮಾನಗಳನ್ನು ನೀಡಿದ್ದರಿಂದ ಶೈಕ್ಷಣಿಕ ವಿಷಯಗಳಲ್ಲಿ ಸ್ವಾಯತ್ತತೆಯು ಈ ಸಂಸ್ಥೆಗೆ ಲಭಿಸಿತು. ಇತ್ತೀಚೆಗೆ ಅಕ್ಟೋಬರ್ 20, 2010ರಂದು ನಿಮ್‌ಹ್ಯಾನ್ಸ್ ಬಿಲ್ 2009ನ್ನು ಕೇಂದ್ರ ಸರ್ಕಾರ ಜಾರಿಗೆ ತಂದು ಈ ಸಂಸ್ಥೆಯನ್ನು "ರಾಷ್ಟ್ರೀಯ ಮಹತ್ವ"ವುಳ್ಳ ಸಂಸ್ಥೆಯೆಂದು ಘೋಷಿಸಿತು. ಕೇಂದ್ರ ಆರೋಗ್ಯ ಹಾಗೂ ಮಾನವಕಲ್ಯಾಣ ಇಲಾಖೆಯಡಿ ಬರುವ ಈ ಸಂಸ್ಥೆ ಸರ್ಕಾರದಿಂದ ಮಾತ್ರವಲ್ಲದೆ ಹಲವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಅನುದಾನ ಸಂಸ್ಥೆಗಳಿಂದ ಸಂಶೋಧನೆಗೆಂದು ಧನ ಸಹಾಯವನ್ನು ಪಡೆಯುತ್ತಿದೆ.

ವಿಶ್ವದಾದ್ಯಂತ ಹೆಸರನ್ನು ಗಳಿಸಿರುವ ಈ ಸಂಸ್ಥೆಯಲ್ಲಿ ಮೆದುಳು–ಮನಸ್ಸು–ವರ್ತನೆ (Brain-mind-behaviour) ಅಕ್ಷ (axis)ಕ್ಕೆ ಸಂಬಂಧಿಸಿದಂತೆ ಜೈವಿಕ ಸ್ವವರ್ತನಾತ್ಮಕ (behavioural) ಹಾಗೂ ಮೂಲ ವಿಜ್ಞಾನಗಳ ಕ್ಷೇತ್ರಗಳಲ್ಲಿ ಮುಂದುವರೆದ ಚಿಕಿತ್ಸಾ ಸೇವೆ ತರಬೇತಿ ಮತ್ತು ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ.

ಸಂಸ್ಥೆಯು ತನ್ನದೇ ಆದ ನಿರ್ದಿಷ್ಟ ಧ್ಯೇಯೋದ್ದೇಶಗಳನ್ನು ಹೊಂದಿದೆ. ಮಾಹಿತಿ ತಂತ್ರಜ್ಞಾನದಲ್ಲಾಗುತ್ತಿರುವ ಆವಿಷ್ಕಾರಗಳನ್ನು ಬಳಸಿ ಮನಸ್ವಾಸ್ಥ್ಯ ಮತ್ತು ನರವಿಜ್ಞಾನಗಳ ಕ್ಷೇತ್ರದಲ್ಲಿ ರೋಗ ನಿದಾನ ಹಾಗೂ ಚಿಕಿತ್ಸಾ ವಿಧಾನಗಳನ್ನು ಭಾರತದ ಮೂಲೆ ಮೂಲೆಗಳಿಗೂ ತಲುಪಿಸುವ ಸಲುವಾಗಿ ಯೋಜನೆಗಳನ್ನು ಸಿದ್ಧಪಡಿಸುವುದು ತರಬೇತಿ ಸೌಲಭ್ಯಗಳನ್ನು ಸ್ಥಾಪಿಸುವುದು ಹಾಗೂ ಸಾಂಸ್ಥಿಕ ಮತ್ತು ದೂರಶಿಕ್ಷಣದ ಮುಖಾಂತರ ಮುಂದುವರೆಯುತ್ತಿರುವ ದೇಶಗಳಿಗೆ ಮನಸ್ವಾಸ್ಥ್ಯ ಮತ್ತು ನರವಿಜ್ಞಾನಗಳ ಕ್ಷೇತ್ರದಲ್ಲಿ ಜ್ಞಾನ ಪ್ರಸಾರವನ್ನು ಕೈಗೊಳ್ಳುವುದು.

- ನರಸಂಬಂಧಿ ಕಾಯಿಲೆಗಳ ರೋಗನಿದಾನ ಮತ್ತು ಚಿಕಿತ್ಸಾ ವಿಧಾನ (Therapeatic)ಗಳ ಅತ್ಯಾಧುನಿಕ ಸೌಲಭ್ಯಗಳನ್ನು ಸ್ಥಾಪಿಸುವುದು ಹಾಗೂ ರಾಷ್ಟ್ರದ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವಾಗಿ ಪರಿವರ್ತನೆಗೊಳ್ಳುವುದು.

- ಆಪತ್ತು ನಿರ್ವಹಣೆ (Disaster Management) ಮತ್ತು ಮಾನಸಿಕ ಪುನರ್ವಸತಿ (Mental Rehabilitation) ಗಳಿಗಾಗಿ ವಿಧಾನಗಳನ್ನು ರೂಪಿಸುವುದು.

- ನರವಿಜ್ಞಾನದ ತಾತ್ವಿಕ ಹಾಗೂ ಭೌತಿಕ ಆಯಾಮಗಳನ್ನು ಸಂಯೋಜಿಸುವುದು.

- ಬಾಹ್ಯಾಕಾಶ, ಅಣುಶಕ್ತಿ ಮುಂತಾದುವುಗಳಿಗೆ ಸಂಬಂಧಿಸಿದ ನರವಿಜ್ಞಾನ ಹಾಗೂ ವರ್ತನಾತ್ಮಕ ಸಂಶೋಧನೆಗಳಲ್ಲಿ ಪಾಲ್ಗೊಳ್ಳುವುದು.

- ನರವಿಜ್ಞಾನ ಮತ್ತು ವರ್ತನಾತ್ಮಕ ವಿಜ್ಞಾನಗಳ ಕ್ಷೇತ್ರದಲ್ಲಿ ಮುಂದಾಳತ್ವವನ್ನು ವಹಿಸುವ ದಿಶೆಯಲ್ಲಿ ಸಾಗುವುದು.

ನರವಿಜ್ಞಾನ ಮತ್ತು ಮನಸ್ವಾಸ್ಥ್ಯದ ವಿವಿಧ ವಿಷಯಗಳಲ್ಲಿ ಸರ್ಟಿಫಿಕೇಟ್, ಡಿಪ್ಲೋಮಾ, ಎಂ.ಫಿಲ್. ಮುಂತಾದ ಪದವಿಗಳನ್ನು ಈ ಸಂಸ್ಥೆಯಲ್ಲಿ ನೀಡಲಾಗುತ್ತಿದೆ. ನರ್ಸಿಂಗ್ ಮತ್ತು ರೇಡಿಯೋಗ್ರಫಿ ವಿಷಯಗಳಲ್ಲಿ ಸ್ನಾತಕ ಪದವಿಯನ್ನು ಇಲ್ಲಿ ಪಡೆಯಬಹುದಾಗಿದೆ. ನ್ಯೂರೋಸರ್ಜರಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಸಂಸ್ಥೆಯಲ್ಲಿ ನೀಡುವ ವ್ಯವಸ್ಥೆಯಿದೆ.

ಮೆದುಳು–ಮನಸ್ಸು–ವರ್ತನೆಯ ಅಕ್ಷದಲ್ಲಿ ಬಹುಶಾಸ್ತ್ರೀಯ ಶೈಕ್ಷಣಿಕ, ಸಂಶೋಧನಾ ಹಾಗೂ ಆರೋಗ್ಯ ರಕ್ಷಣಾ ಸಂಸ್ಥೆಯಾದ ಇದು ನಿಮ್‌ಹ್ಯಾನ್ಸ್ 2009 (ಮಸೂದೆ) ಮಂಜೂರಾತಿಯಿಂದ ಇನ್ನೂ ಹೆಚ್ಚಿನ ಸ್ವಾಯತ್ತತೆಯನ್ನು ಪಡೆಯುವುದರಿಂದ ಇದರ ಧ್ಯೇಯ ಸಾಧನೆಯು ಸುಗಮವಾದಂತಾಗಿದೆ.

–ಬಿ.ಎಂ.ಚಂ


Digitised by Bharatavani, CIIL

## ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಮಾಪನ ಪರಿಷತ್ತು (NAAC)

ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಮಾಪನ ಪರಿಷತ್ತು 1994ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC) ದಿಂದ ಸ್ಥಾಪಿಸಲ್ಪಟ್ಟ ಸ್ವಾಯತ್ತ ಮಂಡಳಿಯಾಗಿದೆ. ಇದು ಬೆಂಗಳೂರಿನಲ್ಲಿ ತನ್ನ ಕೇಂದ್ರ ಕಛೇರಿಯನ್ನು ಹೊಂದಿದ್ದು, ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳ, ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಗುಣಾತ್ಮಕತೆಯನ್ನು ಅಳತೆ ಮಾಡಿ ಮೌಲ್ಯಾಂಕನಗೊಳಿಸುವುದು ಇದರ ಉದ್ದೇಶ ಮತ್ತು ಕಾರ್ಯವಾಗಿದೆ. ಇತ್ತೀಚಿನ ಆರು ದಶಕಗಳಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣವು ವ್ಯಾಪಕವಾಗಿ ಹರಡಿದೆ. ಇಂದು ಭಾರತದಲ್ಲಿ ಸುಮಾರು 400 ವಿಶ್ವವಿದ್ಯಾಲಯಗಳು, 1800ಕ್ಕೂ ಅಧಿಕ ಕಾಲೇಜುಗಳಿವೆ, 2015ರ ವೇಳೆಗೆ 1500 ವಿಶ್ವವಿದ್ಯಾಲಯಗಳು ಮತ್ತು 3000ಕ್ಕೂ ಹೆಚ್ಚು ಕಾಲೇಜುಗಳಾಗುವ ಸಾಧ್ಯತೆಯಿದೆ. ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸುವುದರೊಂದಿಗೆ ಅವುಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದಕ್ಕೆ 1986ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು 1992 ರ ಕ್ರಿಯಾ ಯೋಜನೆಗಳಲ್ಲಿ ಒಂದು ಸ್ವಾಯತ್ತ ರಾಷ್ಟ್ರೀಯ ಅಳತೆಯ ಸಂಸ್ಥೆ ಇರಬೇಕೆಂಬ ಒತ್ತಾಯದ ಪರಿಣಾಮವೇ ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಮಾಪನ ಮಂಡಳಿಯ ಸ್ಥಾಪನೆಯಾಗಿದೆ. ಅಂತೆಯೇ ಇಂದು ಉನ್ನತ ಶಿಕ್ಷಣ ಸಂಸ್ಥೆಗಳ ಮಾಪನ ಮತ್ತು ಮರು ಮೌಲ್ಯಮಾಪನ ನಡೆಸಿ ಅವುಗಳಿಗೆ ಸೂಕ್ತ ದರ್ಜೆ ನೀಡಲಾಗುತ್ತದೆ.

ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮಾಪನ ಮಾಡಲು ತಳಹದಿಯಾಗಿ NAAC ಈ ಕೆಳಗಿನ ಅಂಶಗಳನ್ನು ಅನುಲಕ್ಷಿಸುತ್ತದೆ.

1. ಪಠ್ಯಕ್ರಮದ ಅಂಶ
2. ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ
3. ಸಂಶೋಧನೆ, ಸಂವಾಹಿಸುವಿಕೆ ಮತ್ತು ವಿಸ್ತರಣೆ
4. ಮೂಲಭೂತ ಸೌಲಭ್ಯಗಳು ಮತ್ತು ಕಲಿಕಾ ಸಂಪನ್ಮೂಲಗಳು
5. ವಿದ್ಯಾರ್ಥಿ ಬೆಂಬಲ ಮತ್ತು ಪ್ರಗತಿದಾಯಕತೆ
6. ಪ್ರಶಾಸನ ಮತ್ತು ನಾಯಕತ್ವ
7. ವಿನೂತನ ರೂಢಿಗಳು

ಹೀಗೆ ಏಳು ಅಳತೆಗೋಲುಗಳಿದ್ದು ಅವುಗಳಿಗೆ ಈ ಕೆಳಗಿನಂತೆ ಅಂಕಗಳನ್ನು ನೀಡಲಾಗುತ್ತದೆ.

| | | | | |
|---|---|---|---|---|
| **1.** | **ಪಠ್ಯಕ್ರಮದ ಅಂಶಗಳು** | | : | **(50 ಅಂಕಗಳು)** |
| | ಅ. | ಪಠ್ಯಕ್ರಮ ವಿನ್ಯಾಸ ಮತ್ತು ಅಭಿವೃದ್ಧಿ | : | 10 |
| | ಬ. | ಶೈಕ್ಷಣಿಕ ನಮ್ಯತೆ | : | 15 |
| | ಕ. | ಪಠ್ಯಕ್ರಮ ಪ್ರತಿಪುಷ್ಟೀಕರಣ | : | 10 |
| | ಡ. | ಪಠ್ಯಕ್ರಮ ನವೀಕರಣ | : | 05 |
| | ಇ. | ಪಠ್ಯಕ್ರಮದಲ್ಲಿ ಉತ್ತಮ ರೂಢಿ | : | 10 |
| **2.** | **ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ** | | : | **(450 ಅಂಕಗಳು)** |
| | ಅ. | ಪ್ರವೇಶಾತಿ ಪ್ರಕ್ರಿಯೆ ಮತ್ತು ವಿದ್ಯಾರ್ಥಿ ಪ್ರೊಫೈಲ್ | : | 30 |
| | ಬ. | ವಿವಿಧ ಅಗತ್ಯತೆಗಳ ಪೂರೈಕೆ | : | 30 |
| | ಕ. | ಬೋಧನೆ, ಕಲಿಕೆ ಪ್ರಕ್ರಿಯೆ | : | 270 |
| | ಡ. | ಶಿಕ್ಷಕರ ಗುಣಮಟ್ಟ | : | 65 |
| | ಇ. | ಮೌಲ್ಯಮಾಪನ ಪ್ರಕ್ರಿಯೆ ಮತ್ತು ಸುಧಾರಣೆಗಳು | : | 30 |
| | ಈ. | ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನದಲ್ಲಿ ಉತ್ತಮ ರೂಢಿಗಳು | | 10 |
| **3.** | **ಸಂಶೋಧನೆ, ಸಂಪರ್ಕಿಸುವಿಕೆ ಮತ್ತು ವಿಸ್ತರಣೆ** | | : | **(100 ಅಂಕಗಳು)** |
| | ಅ. | ಸಂಶೋಧನೆಯ ಉನ್ನತೀಕರಣ | : | 15 |
| | ಬ. | ಸಂಶೋಧನೆ ಮತ್ತು ಪ್ರಕಾಶನ | : | 25 |
| | ಕ. | ಸಂಪರ್ಕಿಸುವಿಕೆ | : | 05 |
| | ಡ. | ವಿಸ್ತರಣಾ ಚಟುವಟಿಕೆಗಳು | : | 40 |
| | ಇ. | ಸಹಯೋಗ | : | 05 |

Digitised by Bharatavani, CIIL

| | | | |
|---|---|---|---|
| | ಈ. ಸಂಶೋಧನೆ, ಸಂಪರ್ಕಿಸುವಿಕೆ ಮತ್ತು ವಿಸ್ತರಣೆಯಲ್ಲಿ ಉತ್ತಮ ರೂಢಿಗಳು | : | 10 |
| **4.** | **ಮೂಲಭೂತ ಸೌಲಭ್ಯಗಳು ಮತ್ತು ಕಲಿಕಾ ಸಂಪನ್ಮೂಲಗಳು** | : | **(100 ಅಂಕಗಳು)** |
| | ಅ. ಕಲಿಕೆಗಾಗಿ ಭೌತಿಕ ಸೌಲಭ್ಯಗಳು | : | 20 |
| | ಬ. ಸಂರಚನೀಯತೆಯ ನಿರ್ವಹಣೆ | : | 10 |
| | ಕ. ಕಲಿಕಾ ಸಂಪನ್ಮೂಲವಾಗಿ ಗ್ರಂಥಾಲಯ | : | 35 |
| | ಡ. ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನವು ಕಲಿಕಾ ಸಂಪನ್ಮೂಲವಾಗಿ | : | 15 |
| | ಇ. ಇತರ ಸೌಲಭ್ಯಗಳು | : | 10 |
| | ಈ. ಮೂಲಭೂತ ಸೌಲಭ್ಯಗಳನ್ನು ಮತ್ತು ಕಲಿಕಾ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವಲ್ಲಿ ಉತ್ತಮ ರೂಢಿಗಳು | : | 10 |
| **5.** | **ವಿದ್ಯಾರ್ಥಿಗಳ ಬೆಂಬಲ ಮತ್ತು ಪ್ರಗತಿ** | : | **(100 ಅಂಕಗಳು)** |
| | ಅ. ವಿದ್ಯಾರ್ಥಿಗಳ ಪ್ರಗತಿ | : | 30 |
| | ಬ. ವಿದ್ಯಾರ್ಥಿಗಳಿಗೆ ಬೆಂಬಲ | : | 30 |
| | ಕ. ವಿದ್ಯಾರ್ಥಿ ಚಟುವಟಿಕೆಗಳು | : | 30 |
| | ಡ. ವಿದ್ಯಾರ್ಥಿ ಪ್ರಗತಿ ಮತ್ತು ಬೆಂಬಲದಲ್ಲಿ ಉತ್ತಮ ರೂಢಿಗಳು | : | 10 |
| **6.** | **ಪ್ರಶಾಸನ ಮತ್ತು ನಾಯಕತ್ವ** | : | **(150 ಅಂಕಗಳು)** |
| | ಅ. ಸಾಂಸ್ಥಿಕ ದಿವ್ಯದೃಷ್ಟಿ ಮತ್ತು ನಾಯಕತ್ವ | : | 15 |
| | ಬ. ಸಂಘಟನಾತ್ಮಕ ವ್ಯವಸ್ಥೆ | : | 20 |
| | ಕ. ತಂತ್ರಗಾರಿಕಾ ಅಭಿವೃದ್ಧಿ ಮತ್ತು ಹರಡುವಿಕೆ | : | 30 |
| | ಡ. ಮಾನವ ಸಂಪನ್ಮೂಲ ನಿರ್ವಹಣೆ | : | 40 |
| | ಇ. ಹಣಕಾಸಿನ ನಿರ್ವಹಣೆ ಮತ್ತು ಸಂಪನ್ಮೂಲ ಸಂಚಲನೆ | : | 35 |
| | ಈ. ಆಡಳಿತ ಮತ್ತು ನಾಯಕತ್ವದಲ್ಲಿ ಉತ್ತಮ ರೂಢಿಗಳು | : | 10 |
| **7.** | **ವಿನೂತನ ರೂಢಿಗಳು (ಆರೋಗ್ಯಕರ ರೂಢಿಗಳು)** | : | **(50 ಅಂಕಗಳು)** |
| | ಅ. ಆಂತರಿಕ ಗುಣಾತ್ಮಕ ಭರವಸೆ ವ್ಯವಸ್ಥೆ | : | 20 |
| | ಬ. ಒಳಗೊಳ್ಳುವಿಕೆಯ ರೂಢಿಗಳು | : | 15 |
| | ಕ. ಫಲಾನುಭವಿಗಳ ಸಂಬಂಧ | : | 15 |
| | **ಒಟ್ಟು** | : | **1000 ಅಂಕಗಳು** |

ಸಂಸ್ಥೆಯ ಮಾನ್ಯತೆ ಹಾಗೂ ಮೌಲ್ಯಮಾಪನ ಕಾರ್ಯಕ್ಕಾಗಿ NAAC ನಾಲ್ಕು ಹಂತಗಳ ಪ್ರಕ್ರಿಯೆಗಳನ್ನು ಅನುಸರಿಸುತ್ತದೆ.

1. ಅರ್ಜಿ ಸಲ್ಲಿಸುವಿಕೆ
2. ಸಾಂಸ್ಥಿಕ ಮಾಹಿತಿ ಸಿದ್ಧಗೊಳಿಸುವಿಕೆ ಮತ್ತು ಸಲ್ಲಿಸುವಿಕೆ (SSR ಸ್ವ-ಅಧ್ಯಯನ ವರದಿ)
3. ಸಂಸ್ಥೆಗೆ NAAC ತಂಡದ ಭೇಟಿ
4. NAAC ಸಂಸ್ಥೆಯಿಂದ ಅಂತಿಮ ನಿರ್ಣಯ

**ಮಾನ್ಯತೆ ಮತ್ತು ಮೌಲ್ಯಮಾಪನಕ್ಕೆ ಸಿದ್ಧತೆ**

NAAC ಮೌಲ್ಯಾಂಕನಕ್ಕೆ ಒಳಪಡಲಿಚ್ಛಿಸುವ ಸಂಸ್ಥೆಗಳು ಮತ್ತು ಸಂಬಂಧಿತ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳೆಲ್ಲರೂ ಅಗತ್ಯ


Digitised by Bharatavani, CIIL

ಸಮಯ ಮತ್ತು ಪರಿಶ್ರಮ ನೀಡಲು ಸಂಸ್ಥೆಯ ಸಕಲ ಬೆಂಬಲದೊಂದಿಗೆ ಮತ್ತು ಪ್ರಜ್ಞಾಪೂರ್ವಕವಾಗಿ ಎಲ್ಲ ಹಂತಗಳಲ್ಲಿ ಕಾರ್ಯನಿರ್ವಹಿಸಲು ಬದ್ಧರಾಗಿರಬೇಕು. ಈ ಉದ್ದೇಶದ ಸಾಧನೆಗಾಗಿ 4–6 ಸದಸ್ಯರ ಸ್ಟೀರಿಂಗ್ ಕಮಿಟಿಯನ್ನು ಸ್ಥಾಪಿಸಿ ದತ್ತಾಂಶಗಳ ಸಂಯೋಜನೆಗೆ ಮುಖ್ಯಸ್ಥರು ಧನಾತ್ಮಕ ಪಾತ್ರ ನಿರ್ವಹಿಸಬೇಕು. ಈ ಕಮಿಟಿಯು ದತ್ತಾಂಶಗಳ ವ್ಯಾಪಕವಾದ ಸಾಧ್ಯತೆಯ ಜವಾಬ್ದಾರಿಯನ್ನು ನಿರ್ವಹಿಸಬೇಕು. ಸಂಯೋಜಕರು NAAC ತಂಡದ ಭೇಟಿಯ ಸಮಯದಲ್ಲಿ ಸುಗಮಕರ್ತರಾಗಿ ಕಾರ್ಯನಿರ್ವಹಿಸಬೇಕು. ಅಲ್ಲದೆ ಆಂತರಿಕ ಗುಣಾತ್ಮಕ ಭರವಸೆಯ ಘಟಕವು (IQAC) ಸಂಸ್ಥೆಯಲ್ಲಿ ಸ್ಥಾಪಿಸಲ್ಪಟ್ಟು ಮೌಲ್ಯಾಂಕನ ಮತ್ತು ಮರು ಮೌಲ್ಯಾಂಕನ ಸನ್ನಿವೇಶಗಳಲ್ಲಿ ಸತತವಾಗಿ ಕಾಳಜಿಪೂರ್ವಕವಾಗಿ ಕಾರ್ಯ ನಿರ್ವಹಿಸಬೇಕು.

**ದರ್ಜೆ ನೀಡುವಿಕೆ**

ಉನ್ನತ ಶಿಕ್ಷಣ ಸಂಸ್ಥೆಯನ್ನು ಮೇಲ್ಕಂಡ ರೀತಿಯಲ್ಲಿ ಮೌಲ್ಯಮಾಪನ ಮಾಡಿ ಅದು ಗಳಿಸುವ ಒಟ್ಟು ಅಂಕಗಳ ಆಧಾರದ ಮೇಲೆ ಅದಕ್ಕೆ A, A+, A++, B, B+, B++, C, C+, C++ ಎಂಬ ಒಂಬತ್ತು ದರ್ಜೆಗಳಲ್ಲಿ ಒಂದು ದರ್ಜೆಯನ್ನು ನೀಡಲಾಗುತ್ತದೆ.

ಪ್ರಸ್ತುತದಲ್ಲಿ ಹೊಸ ವಿಧಾನದನ್ವಯ –

1. A - ಅತ್ಯುತ್ತಮ

2 B - ಉತ್ತಮ

3. C - ತೃಪ್ತಿಕರ

ಈ ಮೂರು ಹಂತದ ಶ್ರೇಣಿಗಳನ್ನು ನೀಡಲಾಗುತ್ತದೆ.

ಉನ್ನತ ಶಿಕ್ಷಣ ಸಂಸ್ಥೆಗಳ ತೃಪ್ತಿಕರ ಮತ್ತು ಸತತವಾದ ಗುಣಮಟ್ಟ ನಿರ್ವಹಣೆಗಾಗಿ, ಫಲಾನುಭವಿಗಳ ಮತ್ತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ, ಗುಣಮಟ್ಟದ ಸಂಸ್ಕೃತಿಗಾಗಿ, ಶೈಕ್ಷಣಿಕ ಸಂಸ್ಥೆಗಳ ಬಲವರ್ಧನೆ ಮತ್ತು ಸಮಗ್ರ ಗುಣಾತ್ಮಕತೆಯ ಭರವಸೆ ಮತ್ತು ನಿಯಂತ್ರಣಕ್ಕಾಗಿ NAAC ಮೌಲ್ಯಾಂಕನವು ಕಡ್ಡಾಯವಾಗಿದೆ.

–ಎನ್.ಎನ್.ಗ.

## ರಾಷ್ಟ್ರೀಯ ಸೇವಾ ಯೋಜನೆ

ರಾಷ್ಟ್ರೀಯ ಸೇವಾ ಯೋಜನೆಯು (ಎನ್.ಎಸ್.ಎಸ್.) 24 ಸೆಪ್ಟೆಂಬರ್ 1969ರಂದು ಆಗಿನ ವಿದ್ಯಾಮಂತ್ರಿಯಾಗಿದ್ದ ಡಾ. ವಿ.ಕೆ. ಆರ್.ವಿ. ರಾವ್ ನೇತೃತ್ವದಲ್ಲಿ ಜಾರಿಯಾಯಿತು. ಮೊದಲಿಗೆ 37 ವಿಶ್ವವಿದ್ಯಾನಿಲಯಗಳಲ್ಲಿ ಏಕಕಾಲದಲ್ಲಿ ಜಾರಿಗೊಳಿಸಲಾಯಿತು. ರಾಷ್ಟ್ರೀಯ ಸೇವಾ ಯೋಜನೆಯು ಗಾಂಧೀಜಿಯವರ ಕನಸಿನ ಕೂಸಾಗಿದ್ದರಿಂದ ಅವರ ಜನ್ಮ ಶತಾಬ್ದಿಯ ದಿನದಂದು ಯೋಜನೆಯನ್ನು ಪ್ರಾರಂಭಿಸಲಾಯಿತು.

ರಾಷ್ಟ್ರೀಯ ಸೇವಾ ಯೋಜನೆಯ ಮೂಲ ಉದ್ದೇಶ 'ನಾನಲ್ಲ ನೀನು' ಎಂಬುದು. ಅಂದರೆ ಇದು ನಿಸ್ವಾರ್ಥತೆಯನ್ನು ಮತ್ತು ಇನ್ನೊಬ್ಬರಲ್ಲಿ ಇರುವ ಕಾಳಜಿಯನ್ನು ಅವಲಂಬಿಸಿದೆ ಎಂಬುದನ್ನು ಈ ಯೋಜನೆ ಮನದಟ್ಟು ಮಾಡಿಕೊಡುತ್ತದೆ.

**ರಾಷ್ಟ್ರೀಯ ಸೇವಾ ಯೋಜನೆಯ ಚಿಹ್ನೆ**

ಇದರ ಚಿಹ್ನೆಯು ಒರಿಸ್ಸಾದ ಕೊನಾರ್ಕದ ಸೂರ್ಯದೇವಸ್ಥಾನದ ದೊಡ್ಡ ಚಕ್ರವನ್ನು ಮಾದರಿಯನ್ನಾಗಿಸಿಕೊಂಡಿದೆ. ಚಿಹ್ನೆಯಲ್ಲಿ ಕಂಡುಬರುವ ಚಕ್ರವು ಸೃಷ್ಟಿಯ ಸ್ಥಿತಿ, ಲಯವನ್ನು ಪ್ರತಿಬಿಂಬಿಸುತ್ತದೆ. ಈ ಚಿಹ್ನೆಯು ರಾಷ್ಟ್ರೀಯ ಸೇವಾ ಯೋಜನೆಯ ನಿರಂತರ ಸಾಮಾಜಿಕ ಸೇವೆಯನ್ನು ಪ್ರತಿನಿಧಿಸುತ್ತದೆ.

**ಬ್ಯಾಡ್ಜ್**

ಬ್ಯಾಡ್ಜ್‌ನಲ್ಲಿ ಎನ್.ಎಸ್.ಎಸ್.ನ ಸಂಕೇತವನ್ನು ಅಳವಡಿಸಲಾಗಿದೆ. ಚಕ್ರದಲ್ಲಿ ಬರುವ ಕಡ್ಡಿಗಳು ದಿನದ 24 ಗಂಟೆಯನ್ನು ಕೆಂಪು ಬಣ್ಣವು ಯುವಕರ ಅಪರಿಮಿತ ಉತ್ಸಾಹವನ್ನು ನೀಲಿಬಣ್ಣವು ಸಮಾನತೆಯನ್ನು ಮತ್ತು ಇದು ರಾಷ್ಟ್ರೀಯ ಸೇವಾ ಯೋಜನೆಯ ಒಂದು ಸಣ್ಣಭಾಗ ಎಂಬುದನ್ನು ಪ್ರತಿಬಿಂಬಿಸುತ್ತದೆ.

**ಎನ್.ಎಸ್.ಎಸ್.ನ ಧ್ಯೇಯೋದ್ದೇಶಗಳು**

1. ವಿದ್ಯಾರ್ಥಿಗಳು ತಾವು ಸೇವೆ ಸಲ್ಲಿಸುವ ಸಮುದಾಯವನ್ನು ಅರ್ಥಮಾಡಿಕೊಳ್ಳುವುದು.
2. ಸಮುದಾಯದ ಅವಶ್ಯಕತೆಗಳನ್ನು ಗುರುತಿಸುವುದು ಮತ್ತು ಜನರ ಸಮಸ್ಯೆಯನ್ನು ಪರಿಹರಿಸಲು ಸಹಕರಿಸುವುದು.
3. ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮತ್ತು ನಾಗರಿಕ ಜವಾಬ್ದಾರಿಯನ್ನು ಬೆಳೆಸುವುದು.
4. ವಿದ್ಯಾರ್ಥಿಗಳು ತಮ್ಮ ಜ್ಞಾನ ಸಂಪತ್ತಿನಿಂದ ಸಮುದಾಯದ ಹಾಗೂ ತಮ್ಮ ಸ್ವಂತ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು.
5. ಸಹಬಾಳ್ವೆಗೆ ಬೇಕಾದ ಸಾಮರ್ಥ್ಯವನ್ನು ಮೈಗೂಡಿಸುವುದು.
6. ಸಮುದಾಯವನ್ನು ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವ ಕೌಶಲವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
7. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಮತ್ತು ಪ್ರಜಾಪ್ರಭುತ್ವ ಮನೋಧೋರಣೆಯನ್ನು ಬೆಳೆಸುವುದು.
8. ತುರ್ತುಪರಿಸ್ಥಿತಿಯನ್ನು ಮತ್ತು ಪ್ರಾಕೃತಿಕ ವಿಕೋಪಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸುವುದು.
9. ರಾಷ್ಟ್ರೀಯ ಸಮಗ್ರತೆಯನ್ನು ಮತ್ತು ಸಾಮಾಜಿಕ ಐಕ್ಯತೆಯನ್ನು ಮೈಗೂಡಿಸಿಕೊಳ್ಳುವುದು.

ಪ್ರಸ್ತುತ ಸುಮಾರು ಇನ್ನೂರು ವಿಶ್ವವಿದ್ಯಾನಿಲಯಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದ್ದು ಸುಮಾರು 2.6 ಮಿಲಿಯನ್ ಸ್ವಯಂ ಸೇವಕರು ಇವರ ಪ್ರಯೋಜನ ಪಡೆಯುತ್ತಿದ್ದಾರೆ. ಇವರ ನಿಸ್ವಾರ್ಥ ಸೇವೆಯನ್ನು ಸಮುದಾಯಗಳು, ವಿಶ್ವವಿದ್ಯಾನಿಲಯಗಳು, ಮಹಾವಿದ್ಯಾಲಯಗಳು ಮತ್ತು ಸಾರ್ವಜನಿಕರು ಮೆಚ್ಚಿಕೊಂಡಿದ್ದಾರೆ.

–ಚಿ.ರ.ಮ.

## ರಾಷ್ಟ್ರೀಯ ಸ್ವಯಂ ಸೇವಕ ಸಂಘ

ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್.ಎಸ್.ಎಸ್.)27 ಸೆಪ್ಟೆಂಬರ್ 1925 ರಂದು ಡಾ॥ ಕೇಶವಬಲಿರಾಮ ಹಡಗೆವಾರರ ಮನೆಯಲ್ಲಿಯೇ ಸರಳವಾಗಿ "ಇಂದಿನಿಂದ ನಾವು ಸಂಘವನ್ನು ಆರಂಭಿಸುತ್ತಿದ್ದೇವೆ" ಎಂಬ ಅನೌಪಚಾರಿಕ ಹೇಳಿಕೆಯೊಂದಿಗೆ ಪ್ರಾರಂಭವಾಯಿತು. ಯಾವುದೇ ಹೆಸರು, ಸಂವಿಧಾನ, ಕಾರ್ಯಾಲಯ, ನಿಧಿ ಸಂಗ್ರಹಣೆಯ ವ್ಯವಸ್ಥೆಗಳಿಲ್ಲದೆ, ಪತ್ರಿಕೆಯಲ್ಲಿ ಪ್ರಚಾರವಿಲ್ಲದೆ

Digitised by Bharatavani, CIIL

ಶಾಂತವಾಗಿ ಆರಂಭವಾದ ಸಂಘದ ಸಸಿಗೆ ಆ ದಿನಗಳಲ್ಲಿ ಡಾಕ್ಟರ್‌ಜಿ ಅವರ ನಿರ್ಮಲ ಧ್ಯೇಯವಾದಿ ವ್ಯಕ್ತಿತ್ವ ಹಾಗೂ ಅವರ ಅಂತಃಕರಣದ ತಳಮಳಗಳೇ ನೀರು ಗೊಬ್ಬರಗಳಾಗಿದ್ದವು. ಸ್ವಾತಂತ್ರ್ಯ ವೀರ ಸಾವರಕರರು ಜಗತ್ತಿನ ಕಣ್ಣಿಗೆ ಅಗೋಚರವಾಗಿ ಆರಂಭವಾದ ಈ ಹಿಂದೂ ಸಂಘಟನೆಯ ಕಾರ್ಯವನ್ನು 'ಮನುವಿನ ಮೀನು' ಎಂದು ಅರ್ಥಪೂರ್ಣವಾಗಿ ಕರೆದಿದ್ದರು.



ಡಾ॥ ಕೇಶವಬಲಿರಾಮ ಹಡಗೇವಾರ

ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಪ್ರೇರಿತವಾದ ಇತರ ಸಂಘಗಳನ್ನು ಸಂಘ ಪರಿವಾರ ಎಂದು ಕರೆಯಲಾಗುತ್ತದೆ. ಈ ಸಂಘಗಳನ್ನು ನಡೆಸಲು ಪೂರ್ಣಾವಧಿ ಸ್ವಯಂ ಸೇವಕರನ್ನು ನೇಮಿಸಲಾಗುತ್ತದೆ. ಸಂಘಪರಿವಾರದ ಸಂಸ್ಥೆಗಳೆಂದರೆ, ವಿಶ್ವ ಹಿಂದೂ ಪರಿಷತ್, ರಾಷ್ಟ್ರ ಸೇವಿಕ ಸಮಿತಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್, ವನವಾಸಿ ಕಲ್ಯಾಣ ಆಶ್ರಮ, ಭಾರತೀಯ ಮಜದೂರ ಸಂಘ, ವಿದ್ಯಾ ಭಾರತಿ, ಸೇವಾ ಭಾರತಿ ಇತ್ಯಾದಿ.

**ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉದ್ದೇಶಗಳು**

1. ಭಾರತ ದೇಶವನ್ನು ಬ್ರಿಟಿಷರಿಂದ ಮುಕ್ತಗೊಳಿಸುವುದು.
2. ಬುದ್ಧಿ, ಮನಸ್ಸು ಮತ್ತು ಹೃದಯಗಳಿಗೆ ಸಂಸ್ಕಾರವೊದಗಿಸುವುದು.
3. ಅಸೇತು ಹಿಮಾಚಲ ಹಬ್ಬಿರುವ ವಿರಾಟ ಹಿಂದೂ ಸಮಾಜವನ್ನು ಸಂಘಟಿಸುವುದು.
4. ಈ ನಾಡಿನ ಸ್ವಂತಿಕೆಯನ್ನು ಇಲ್ಲಿನ ಜನಜೀವನದ ಎಲ್ಲ ರಂಗಗಳಲ್ಲಿ ವಿಕಾಸಗೊಳಿಸುವುದೇ ನೈಜ ಸ್ವಾತಂತ್ರ್ಯವೆಂದು ತಿಳಿದು ಅದಕ್ಕಾಗಿ ಶ್ರಮಿಸುವುದು.
5. ಭಾರತವನ್ನು ಒಂದು ರಚನಾತ್ಮಕ ಸಮಾಜವನ್ನಾಗಿ ಕಟ್ಟುವುದು.
6. ದಲಿತರ ಉದ್ಧಾರಕ್ಕಾಗಿ ಶ್ರಮಿಸುವುದು.
7. ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು.
8. ಶಾರೀರಿಕ ಮತ್ತು ರಾಜಕೀಯ ಶಿಕ್ಷಣವನ್ನು ಪಡೆಯುವುದು ಮತ್ತು ಇತರರಿಗೂ ಶಿಕ್ಷಣವನ್ನು ಕೊಡುವುದು.

**ಸ್ವಾತಂತ್ರ್ಯ ಚಳವಳಿ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ**

- 1928ರಲ್ಲಿ ಭಾರತಕ್ಕೆ ಬಂದ ಸೈಮನ್ ಕಮೀಷನ್‌ಗೆ ಇಡೀ ಭಾರತ ಬಹಿಷ್ಕಾರ ಹಾಕಿತ್ತು. ಈ ಪ್ರದರ್ಶನಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕರು ಮುಂದಾಳುಗಳಾಗಿದ್ದರು.

- 1930 ಜನವರಿ 26 ರಂದು ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ದಿನವನ್ನಾಗಿ ದೇಶಾದ್ಯಂತ ಆಚರಿಸಲು ನಿರ್ಧರಿಸಿತು. ಅಂತೆಯೇ ಡಾ. ಹಡಗೇವಾರ್‌ರವರು ಅಂದು ಸಂಘದ ಎಲ್ಲಾ ಶಾಖೆಗಳಲ್ಲಿ ರಾಷ್ಟ್ರ ಧ್ವಜವಂದನೆ ನಡೆಸಿ ಸ್ವಾತಂತ್ರ್ಯದ ಕಲ್ಪನೆ ಮತ್ತು ಅವಶ್ಯಕತೆ ಕುರಿತಂತೆ ಉಪನ್ಯಾಸ ಮಾಡಿದರು.

- 1930 ರಲ್ಲಿ ಉಪ್ಪಿನ ಸತ್ಯಾಗ್ರಹ ಮತ್ತು 'ಅರಣ್ಯ ಕಾನೂನು'ಗಳನ್ನು ಭಂಗಗೊಳಿಸುವ ಸತ್ಯಾಗ್ರಹವನ್ನು ಹೂಡಲಾಗಿತ್ತು. 1931 ರಲ್ಲಿ ಅನೇಕಬಾರಿ ಡಾ॥ ಹಡಗೆವಾರರು ಸೆರೆಮನೆವಾಸ ಅನುಭವಿಸಿದರು.

- 1942ರ 'ಭಾರತ ಬಿಟ್ಟು ತೊಲಗಿ' ಆಂದೋಲನದಲ್ಲಿ ರಾ.ಶಿ. ಸಂ. ಸಕ್ರಿಯವಾಗಿ ಭಾಗವಹಿಸಿತ್ತು.

- ಭಾರತದ ವಿಭಜನೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ವಿರೋಧವನ್ನು ವ್ಯಕ್ತಪಡಿಸಿತು.

**ಸ್ವಾತಂತ್ರ್ಯಾನಂತರ**

ವಿಭಜನೆಯಿಂದ ತತ್ತರಿಸಿದ ಹಿಂದೂಗಳನ್ನು ರಕ್ಷಿಸಿದರು. ಸ್ವತಃ ಸರದಾರ್ ಪಟೇಲರು ಈ ರೀತಿ ಹೇಳಿದರು: "ಸಂಘದ ಶೂರ ಸೈನಿಕರು ಅಸಂಖ್ಯಾತ ನಿರ್ದೋಷಿ ಸ್ತ್ರೀ ಹಾಗೂ ಮಕ್ಕಳನ್ನು ರಕ್ಷಿಸಿದರು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ದೂರ ದೂರದ ಸ್ಥಳಗಳಿಂದ ಅವರನ್ನು ರಕ್ಷಿಸಿ ತಂದವರು ಸ್ವಯಂ ಸೇವಕರೇ" (ಪಹಲೀ ಅಗ್ನಿ ಪರೀಕ್ಷಾ–ಪುಟ. 13).

ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಅನೇಕಬಾರಿ ನಿಷೇಧಿಸಲಾಗಿತ್ತು. ಮೊದಲ ನಿಷೇಧ 1947ರಲ್ಲಿ. ಅದು ಗಾಂಧೀಜಿಯವರ ಕೊಲೆಯ ನಂತರ. 1975ರಲ್ಲಿ ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿ ಹೇರಿದಾಗಲೂ ಸಂಘವನ್ನು ನಿಷೇಧಿಸಲಾಗಿತ್ತು.

**ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸೇವೆಗಳು**

1. 1947ರಲ್ಲಿ ಮುಸ್ಲಿಮ್ ಲೀಗ್ ಭಾರತಕ್ಕೆ ಗಂಡಾಂತರ ಉಂಟು ಮಾಡಲು ಆಯುಧಗಳನ್ನು ಬಾಂಬ್‌ಗಳನ್ನು ಸಂಗ್ರಹಿಸಿ ಷಡ್ಯಂತ್ರ ರಚಿಸಿತ್ತು . ಆ ಸುದ್ದಿಯನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಬಯಲಿಗೆಳೆದು ಗಂಡಾಂತರವನ್ನು ತಪ್ಪಿಸಿತು.
2. ಭಾರತದಲ್ಲಿ ಜಮ್ಮು ಕಾಶ್ಮೀರದ ವಿಲೀನ, ಹೈದರಾಬಾದ್ ವಿಲೀನ, ಗೋವಾ ಮುಕ್ತಿ ಚಳುವಳಿಗಳಲ್ಲಿ ಸಕ್ರಿಯವಾಗಿ ಸಂಘವು ಭಾಗವಹಿಸಿದೆ.
3. ಗುಜರಾತ್‌ನಲ್ಲಿ ಮಚ್ಚು ಅಣೆಕಟ್ಟು ಒಡೆದಾಗ ನಿರಾಶ್ರಿತರಾದವರಲ್ಲಿ ಬಹು ಮಂದಿ ಮುಸಲ್ಮಾನರಿದ್ದರು. ಆಗ ರಂಜಾನ್ ದಿನಗಳು. ಅವರಿಗೆಲ್ಲ ಅವರ ವಿಧಿಗಳಿಗನುಗುಣವಾಗಿ ಊಟ, ತಿಂಡಿಯ ವ್ಯವಸ್ಥೆಯನ್ನು ಸಂಘದ ಕಾರ್ಯಕರ್ತರು ಮಾಡಿದ್ದರು.
4. 1962ರಲ್ಲಿ ಚೀನಾ ಭಾರತವನ್ನು ಆಕ್ರಮಣ ಮಾಡಿದಾಗ ಸಂಘ ಮಾಡಿದ ಕಾರ್ಯಗಳಿಗೆ ಪಂ. ನೆಹರೂರವರು ಪ್ರಭಾವಿತರಾಗಿ 1963ರ ಗಣರಾಜ್ಯ ಪೆರೇಡ್‌ನಲ್ಲಿ ಪಾಲ್ಗೊಳ್ಳಲು ಸಂಘಕ್ಕೆ ಆಹ್ವಾನವಿತ್ತಿದ್ದರು. (ಪು.ಸಂ. 11, ಸಂಘದ ಕತೆ, ರಾಷ್ಟ್ರ ಜಾಗರಣ ಅಭಿಯಾನ)

ಹೀಗೆ ಸಂಘವು ಭಾರತ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಇದು ಒಂದು ರಾಜಕೀಯ ಪಕ್ಷವಲ್ಲ. ಆದರೆ ಅದರ ತತ್ವ ಸಿದ್ಧಾಂತಗಳಿಗೆ ಹೊಂದಿಕೊಳ್ಳುವ ಯಾವುದೇ ರಾಜಕೀಯ ಪಕ್ಷಕ್ಕೆ ತನ್ನ ಸಹಕಾರವನ್ನು ಸೂಚಿಸುತ್ತದೆ. ಸದ್ಯದಲ್ಲಿ ಇದು ಭಾರತೀಯ ಜನತಾ ಪಕ್ಷಕ್ಕೆ ಬೆಂಬಲವನ್ನು ಸೂಚಿಸಿದೆ. ಆದರೆ ಕೆಲವೊಮ್ಮೆ ಅದರ ಕಾರ್ಯವೈಖರಿಯನ್ನು ಟೀಕೆಮಾಡಲೂ ಹಿಂಜರಿದಿಲ್ಲ.

–ಚಿ.ರ.ಮ.

Digitised by Bharatavani, CIIL

## ರೂಢಕಲ್ಪನೆಗಳು

ನಿರ್ದಿಷ್ಟ ಸಾಮಾಜಿಕ ಗುಂಪುಗಳು ಅಥವಾ ವ್ಯಕ್ತಿಗಳ ಬಗ್ಗೆ ಇರುವ ಜನಪ್ರಿಯ ಅಭಿಪ್ರಾಯವನ್ನು ರೂಢಕಲ್ಪನೆ ಎನ್ನುವರು. ರೂಢಕಲ್ಪನೆ ಮತ್ತು ಪೂರ್ವಗ್ರಹದ ಪರಿಕಲ್ಪನೆಗಳನ್ನು ಆಗಾಗ್ಗೆ ವಿವಿಧ ಅರ್ಥಗಳೊಂದಿಗೆ ಬಳಸಲಾಗುತ್ತದೆ ಮತ್ತು ಕೆಲವೊಮ್ಮೆ ಅವುಗಳ ಅರ್ಥ ಗೊಂದಲ ವನ್ನುಂಟುಮಾಡುತ್ತದೆ.

ಸ್ಟೀರಿಯೋಟೈಪ್ (ರೂಢಕಲ್ಪನೆ) ಎಂಬ ಪದ ಸ್ಟೀರಿಯೋಸ್ ಮತ್ತು ಟೈಪೋಸ್ ಎಂಬ ಗ್ರೀಕ್ ಪದಗಳಿಂದ ಉಗಮವಾಗಿದೆ. ಸ್ಟೀರಿಯೋಸ್ ಎಂದರೆ ದೃಢವಾದ ಮತ್ತು ಟೈಪೋಸ್ ಎಂದರೆ ಅಭಿಪ್ರಾಯ ಎಂದರ್ಥ. ಆದ್ದರಿಂದ ರೂಢಕಲ್ಪನೆ ಎಂದರೆ ದೃಢವಾದ ಅಭಿಪ್ರಾಯ ಎಂದಾಗುತ್ತದೆ. ಈ ಪರಿಕಲ್ಪನೆಯನ್ನು ಪತ್ರಿಕಾ ಕ್ಷೇತ್ರದಲ್ಲಿ ಮೊದಲು ರೂಪಿಸಿದ ವ್ಯಕ್ತಿ ಫಿರ್ಮಿನ್ ಡಿಡೋಟ್‌ರವರು. ಆಧುನಿಕ ಮನೋವಿಜ್ಞಾನದಲ್ಲಿ ಈ ಪರಿಕಲ್ಪನೆಯನ್ನು 1922ರಲ್ಲಿ ವಾಲ್ಟರ್ ಲಿಪ್‌ಮನ್‌ರವರು ಮೊಟ್ಟಮೊದಲು ಬಳಸಿರುತ್ತಾರೆ.

ಯಹೂದಿ (ಜ್ಯು)ಗಳ ಜಿಪುಣರು, ಪಂಜಾಬಿಗಳು ಬುದ್ಧಿಸೂಕ್ಷ್ಮತೆ ಅವಿಲ್ಲದವರು, ನೀಗ್ರೋಗಳು, ಒರಟರು, ಕೊಳಕರು, ಬ್ರಾಹ್ಮಣರು ಬುದ್ಧಿವಂತರು– ಈ ರೀತಿಯ ಒಂದು ನಿರ್ದಿಷ್ಟ ಗುಂಪಿನ ಬಗ್ಗೆ ಇರುವ ಸಾಮಾನ್ಯ ಭಾವನೆಗಳು. ಮನೋಚಿತ್ರಗಳು ರೂಢಕಲ್ಪನೆಗೆ ಕೆಲವು ಉದಾಹರಣೆಗಳು. ಇವುಗಳಲ್ಲಿ ಸತ್ಯಾಂಶವಿರುವುದಿಲ್ಲ. ಅವು ಕೆಲವೇ ವ್ಯಕ್ತಿಗಳ ಅನುಭವಗಳ ಮೇಲೆ ಆಧಾರಿತಗೊಂಡಿದ್ದು ಗುಂಪಿನಲ್ಲಿ ಪ್ರಚಲಿತವಾಗಿರುತ್ತವೆ. ಇವು ಧನಾತ್ಮಕ ಅಥವಾ ಋಣಾತ್ಮಕ ಲಕ್ಷಣಗಳನ್ನು ಸೂಚಿಸುವಂಥಹುಗಳಾಗಿರುತ್ತದೆ.

ರೂಢಕಲ್ಪನೆಗಳೆಂದರೆ, ಒಂದು ಜನ ಸಮುದಾಯದಲ್ಲಿ ಪ್ರಚಾರದಲ್ಲಿರುವ ಲಕ್ಷಣಗಳು ಅಥವಾ ಸಾಮಾಜಿಕ ಮೌಲ್ಯಗಳ ಬಗ್ಗೆ ವಿರುದ್ಧ ಸಾಕ್ಷ್ಯಗಳು ಎದ್ದುಕಾಣುತ್ತಿದ್ದರೂ ಬದಲಾಯಿಸಲಾರದಷ್ಟು ಬಲವಾಗಿ ಬೇರು ಬಿಟ್ಟಿರುವ ವ್ಯಕ್ತಿ ಲಕ್ಷಣಗಳು ಅಥವಾ ಸಾಮಾಜಿಕ ಮೌಲ್ಯಗಳ ಭಾವನೆ; ಲಕ್ಷಣ; ಮೌಲ್ಯ ಮುಂತಾದುವುಗಳ ಬಗ್ಗೆ ಬದಲಾಯಿಸಲಾರದಷ್ಟು ಬಲವಾಗಿ ನೆಲೆಗೊಂಡಿರುವ ನಮ್ಮ ಭಾವನೆಗಳು.

ಸಾಮಾಜಿಕ ಮನೋವಿಜ್ಞಾನಿಗಳ ಪ್ರಕಾರ ರೂಢಕಲ್ಪನೆಯು ಒಂದು ದೃಷ್ಟಿಕೋನದ ಪ್ರಕಾರ ಒಳಗುಂಪುಗಳು ಹಾಗೂ ಹೊರಗುಂಪುಗಳ ಬಗ್ಗೆ ಜನರು ಹೊಂದಿರುವ ಅಭಿಪ್ರಾಯವಾಗಿದೆ. ವ್ಯಕ್ತಿ ತಾನು ಸೇರಿರುವ ಬಯಸುವ ಗುಂಪು ಸಾಮಾನ್ಯ ಹಾಗೂ ಉತ್ತಮ ಎಂದು ಪರಿಗಣಿಸುತ್ತಾನೆ ಇದೇ ಒಳಗುಂಪು. ಇತರೆ ಗುಂಪುಗಳು ಹೊರಗುಂಪುಗಳಾಗಿದ್ದು ವ್ಯಕ್ತಿ ಅವುಗಳು ತನ್ನ ಒಳಗುಂಪಿಗಿಂತ ಕೆಳಮಟ್ಟದಲ್ಲಿರುವುಗಳೆಂದು ಪರಿಗಣಿಸುತ್ತಾರೆ.

ಮತ್ತೊಂದು ದೃಷ್ಟಿಕೋನದಿಂದ ರೂಢಕಲ್ಪನೆಗಳನ್ನು ಸ್ವಯಂಚಾಲಿತ/ ಅನೈಚ್ಛಿಕ ಹಾಗೂ ವ್ಯಕ್ತವಾಗುವ ರೂಢಕಲ್ಪನೆಗಳೆಂದು ವರ್ಗೀಕರಿಸಲಾಗಿದೆ. ಪ್ರತಿಯೊಬ್ಬರು ತಮಗೆ ಅರಿವಿಲ್ಲದೇ ತೋರುವ ವರ್ತನೆಗಳು ಅನೈಚ್ಛಿಕ ರೂಢಕಲ್ಪನೆಗಳು. ವ್ಯಕ್ತಿ ಅಥವಾ ಜಾಗೃತ ರೂಢಕಲ್ಪನೆಗಳು ವ್ಯಕ್ತಿಯಿಂದ ನಿಯಂತ್ರಿಸಲ್ಪಟ್ಟು ಸೂಕ್ತ ಮಾರ್ಪಾಡುಗಳನ್ನು ಹೊಂದುತ್ತವೆ. ವ್ಯಕ್ತಿ ರೂಢ ಕಲ್ಪನೆಗಳು ಉದ್ದೇಶಪೂರಕವಾಗಿ ವ್ಯಕ್ತವಾಗುತ್ತವೆ.

ರೂಢಕಲ್ಪನೆಗಳನ್ನು ಮೂರನೇ ರೀತಿಯಲ್ಲಿ ವರ್ಗೀಕರಿಸುವ ವಿಧಾನವೆಂದರೆ ಸಾಮಾನ್ಯ ರೂಢಕಲ್ಪನೆಗಳ ವಿಧಗಳು ಮತ್ತು ಉಪವಿಧಗಳು. ಸಾಮಾನ್ಯ ರೂಢಕಲ್ಪನೆ ವಿಶಾಲವಾದ, ಹೆಚ್ಚು ಜನರಲ್ಲಿ ಕಂಡುಬರುವ ಹಾಗೂ ಹೆಚ್ಚು ಒಪ್ಪಿತವಾಗಿರುವ ಕಲ್ಪನೆಯಾಗಿದೆ. ಸಾಮಾನ್ಯ ಗುಂಪು ಒಳಗೊಂಡಿರುವ ವಿವಿಧ ಗುಂಪುಗಳ ರೂಢ ಕಲ್ಪನೆಗಳನ್ನು ಉಪವಿಧಗಳು ಎಂದು ಕರೆಯುತ್ತಾರೆ. ಇವು ನಿರ್ದಿಷ್ಟವಾಗಿದ್ದು ಈ ಗುಂಪುಗಳ ಅಭಿಪ್ರಾಯಗಳು ಅವರ ವಿವಿಧ ದೃಷ್ಟಿಕೋನಗಳನ್ನು ಅವಲಂಬಿಸಿರುತ್ತವೆ.

ಕೆಲವು ಸನ್ನಿವೇಶಗಳು ವ್ಯಕ್ತಿಯ ರೂಢಕಲ್ಪನೆಗಳ ಮೇಲೆ ಪ್ರಭಾವ ಬೀರುತ್ತವೆ. ಕೆಲವು ಅಧ್ಯಯನಗಳ ಪ್ರಕಾರ ಮಹಿಳೆಯರು ಪುರುಷರಿಗಿಂತ ಹೆಚ್ಚು ಋಣಾತ್ಮಕ ರೂಢಕಲ್ಪನೆಗಳನ್ನು ಹೊಂದಿರುತ್ತಾರೆ. ಮಹಿಳೆಯರನ್ನು ಅವರ ಬಾಹ್ಯ ನೋಟದಿಂದ ಅಳೆಯಬಹುದಾಗಿದೆ. ಇತರೆ ಸಿದ್ಧಾಂತಗಳ ಪ್ರಕಾರ ವ್ಯಕ್ತಿಯ ಚಟುವಟಿಕೆಗಳಿಗೆ ಅವನ/ಅವಳ ಆಂತರಿಕ ಸ್ಥಿತಿ (ಗುರಿಗಳು, ಭಾವನೆ, ವ್ಯಕ್ತಿತ್ವ, ಸ್ಥಿರಗುಣಗಳು, ಪ್ರೇರಣೆಗಳು, ಮೌಲ್ಯಗಳು ಇತ್ಯಾದಿ) ಕಾರಣವೇ ಹೊರತು ಅವನ/ಅವಳ ಬಾಹ್ಯ ನೋಟವಲ್ಲ.

ಸಮಾಜಶಾಸ್ತ್ರಜ್ಞ ಚಾರ್ಲ್ಸ್ ಇ. ಹರ್ಸ್ಟ್‌ರವರ ಪ್ರಕಾರ – ರೂಢಕಲ್ಪನೆಗಳಿಗೆ ಒಂದು ಪ್ರಮುಖ ಕಾರಣವೇನೆಂದರೆ, ಒಂದು ಗುಂಪಿನ ವ್ಯಕ್ತಿಗಳು ಮತ್ತೊಂದು ಜನಾಂಗೀಯ ಸಮೂಹದಲ್ಲಿರುವ ಜನರ ಬಗ್ಗೆ ಹೊಂದಿರುವ ವೈಯಕ್ತಿಕ ಅರಿವಿನ/ಅನ್ಯೋನ್ಯತೆಯ ಕೊರತೆಯಾಗಿದೆ. ಅನ್ಯೋನ್ಯತೆಯ ಭಾವನೆಯ ಕೊರತೆ ಅಪರಿಚಿತ ವ್ಯಕ್ತಿಗಳು ಒಗ್ಗೂಡುವುದನ್ನು ಪ್ರೋತ್ಸಾಹಿಸುವುದಿಲ್ಲ.

ರೂಢಕಲ್ಪನೆಗಳು ಗುಂಪುಗಳ ಮಧ್ಯೆ ಭಿನ್ನತೆ ಹೆಚ್ಚಾಗಲು ಕಾರಣವಾಗುತ್ತವೆ. ಗುಂಪುಗಳ ಮಧ್ಯೆ ಕಂಡುಬರುವ ಸ್ಪರ್ಧಾತ್ಮಕ ಮನೋಭಾವ ಸಾಮ್ಯತೆಯನ್ನು ಕಡಿಮೆಮಾಡಿ, ಭಿನ್ನತೆಯನ್ನು ಹೆಚ್ಚಿಸುತ್ತದೆ.

ಉದಾ: ಆಫ್ರಿಕಾದಲ್ಲಿರುವ ಅಮೇರಿಕನ್ನರು ತಮ್ಮನ್ನು ಅಮೆರಿಕಾದ ನಾಗರೀಕರಂತೆ ಗುರ್ತಿಸಿಕೊಳ್ಳುತ್ತಾರೆ.

### ರೂಢಕಲ್ಪನೆಗಳ ಸಿದ್ಧಾಂತಗಳು

ವಿವಿಧ ಪಂಥಗಳು ರೂಢಕಲ್ಪನೆಗಳ ಬೆಳವಣಿಗೆಯ ಬಗ್ಗೆ ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಮನಶ್ಶಾಸ್ತ್ರಜ್ಞರು ವ್ಯಕ್ತಿಯು ಗುಂಪಿನೊಂದಿಗೆ ಹೊಂದಿರುವ ಅನುಭವಗಳು, ಗುಂಪಿನೊಂದಿಗಿನ ಸಂವಹನ ವಿನ್ಯಾಸಗಳು ಹಾಗೂ ಅಂತರ್ ಸಮೂಹದ ಘರ್ಷಣೆಗಳಿಗೆ ಒತ್ತು ಕೊಡುತ್ತಾರೆ. ಸಮಾಜಶಾಸ್ತ್ರಜ್ಞರು ಗುಂಪುಗಳ ಮಧ್ಯೆ ಇರುವ ಸಂಬಂಧಗಳು ಮತ್ತು ಸಾಮಾಜಿಕ ರಚನೆಯಲ್ಲಿ ವಿವಿಧ ಗುಂಪುಗಳ ಪಾತ್ರಗಳಿಗೆ ಒತ್ತು ಕೊಡುತ್ತಾರೆ. ಮನೋವಿಶ್ಲೇಷಣಾಧಾರಿತ ಮಾನವತಾವಾದಿಗಳ ಪ್ರಕಾರ ರೂಢಕಲ್ಪನೆಗಳು ನಿಖರವಾದ ಪ್ರಾತಿನಿಧಿಕಗಳಾಗಿರುವುದಿಲ್ಲ. ಆದರೆ ಒಬ್ಬ ಇನ್ನೊಬ್ಬರೊಂದಿಗೆ ತೋರಿಸಿಕೊಳ್ಳುವ ಪ್ರಕ್ಷೇಪಣೆಯಾಗಿದೆ.

ಸಮಾಜಶಾಸ್ತ್ರದ ಅಧ್ಯಯನಗಳ ಪ್ರಕಾರ ಆರಂಭದಲ್ಲಿ ರೂಢಕಲ್ಪನೆಗಳನ್ನು ಸಾಮಾನ್ಯವಾಗಿ ಬಿಗಿ ನಿಲುವಿನ, ದಮನಗೊಳ್ಳಲ್ಪಟ್ಟ ಮತ್ತು ನಿರಂಕುಶ ಧೋರಣೆಯ ವ್ಯಕ್ತಿಗಳು ವ್ಯಕ್ತಪಡಿಸುತ್ತಾರೆ ಎಂದು ನಂಬಲಾಗಿತ್ತು. ಕೆಲವು ಸಮಾಜಶಾಸ್ತ್ರಜ್ಞರ ಪ್ರಕಾರ ಘರ್ಷಣೆಗಳು, ಕೆಳಮಟ್ಟ ಪೋಷಣೆ ಮತ್ತು ಅಸಮರ್ಪಕ ಮಾನಸಿಕ ಮತ್ತು ಭಾವನಾತ್ಮಕ ವಿಕಾಸಗಳು ರೂಢಕಲ್ಪನೆಗಳು ಬೆಳೆಯಲು ಕಾರಣವೆಂದು ಅಭಿಪ್ರಾಯಪಡುತ್ತಾರೆ. ಆದರೆ ಇತ್ತೀಚಿನ ಅಧ್ಯಯನಗಳಲ್ಲಿ ರೂಢಕಲ್ಪನೆಗಳು ಸಾಮಾನ್ಯವಾಗಿ ಎಲ್ಲಾ ಕಡೆ/ಎಲ್ಲಾ ಸಮಾಜಗಳಲ್ಲಿ ಕಂಡುಬರುತ್ತವೆ ಎಂದು ಗುರುತಿಸಲಾಗಿದೆ.

ವಿಭೇಧೀಕರಣವು ಮಾನವ ವರ್ತನೆಯ ಒಂದು ಅಗತ್ಯ ಅಂಶವಾಗಿದೆ. ಇದು ವಿಶ್ವವನ್ನು ಸರಳಗೊಳಿಸಲು, ಮತ್ತು ವ್ಯವಸ್ಥೆಗೊಳಿಸಲು ನೆರವಾಗುತ್ತದೆ.

Digitised by Bharatavani, CIIL

ಮತ್ತೊಂದು ಸಿದ್ಧಾಂತದ ಪ್ರಕಾರ ರೂಢಕಲ್ಪನೆಗಳು ವ್ಯಕ್ತಿಯನ್ನು ಆತಂಕದಿಂದ ರಕ್ಷಿಸುತ್ತವೆ ಮತ್ತು ಆತ್ಮಾಭಿಮಾನವನ್ನು ಹೆಚ್ಚಿಸುತ್ತವೆ.

**ರೂಢಕಲ್ಪನೆಗಳು ರೂಪುಗೊಳ್ಳುವಿಕೆ:**

ರೂಢಕಲ್ಪನೆಗಳು ರೂಪುಗೊಳ್ಳುವಲ್ಲಿ ಬಾಲ್ಯದ ಅನುಭವಗಳು ಹೆಚ್ಚಿನ ಪರಿಣಾಮ ಬೀರುತ್ತವೆ. ಬಾಲ್ಯದಲ್ಲಿ ಪೋಷಕರು, ಶಿಕ್ಷಕರು, ಸಮವಯಸ್ಕರು ಮತ್ತು ಮಾಧ್ಯಮಗಳ ಪ್ರಭಾವದಿಂದ ರೂಢಕಲ್ಪನೆಗಳು ರೂಪುಗೊಳ್ಳುತ್ತವೆ. ಒಂದು ಸಾರಿ ಕಲಿತ ರೂಢಕಲ್ಪನೆಗಳು ಆ ವ್ಯಕ್ತಿಯಲ್ಲಿ ನೆಲೆಗೊಳ್ಳುತ್ತವೆ.

ರೂಢಕಲ್ಪನೆಗಳು ಜನರ ಮೇಲೆ ಋಣಾತ್ಮಕ ಹಾಗೂ ಧನಾತ್ಮಕ ಪ್ರಭಾವವನ್ನು ಹೊಂದಿವೆ. ಇವುಗಳ ಪ್ರಭಾವದಲ್ಲಿ ವ್ಯತ್ಯಾಸಗಳು ಕಂಡುಬಂದರೂ ಸಹ ಹೆಚ್ಚಿನ ಸಂದರ್ಭಗಳಲ್ಲಿ ಋಣಾತ್ಮಕ ಪ್ರಭಾವ ಬೀರುತ್ತದೆ. ಇವುಗಳು ಬೀರುವ ಋಣಾತ್ಮಕ ಪರಿಣಾಮಗಳೆಂದರೆ ಜನರ ಬಗ್ಗೆ ಅಸಮರ್ಪಕ ಅಭಿಪ್ರಾಯ ಹೊಂದುವುದು, ಬಲಿಪಶುವಾಗಿಸುವಿಕೆ, ತಪ್ಪು ತೀರ್ಮಾನಗಳನ್ನು ಕೈಗೊಳ್ಳುವುದು, ವ್ಯಥೆಪಡುವುದು, ಅಪೂರ್ಣ ಕಾರ್ಯ ನಿರ್ವಹಣೆ ಮುಂತಾದುವು. ವಿಶ್ವದಾದ್ಯಂತ ಇರುವ ವಿವಿಧ ಜನಾಂಗದವರು – ಅಮೇರಿಕನ್ನರು, ಆಫ್ರಿಕನ್ನರು, ಯಹೂದಿಗಳು, ಜರ್ಮನ್ನರು, ಯುರೋಪಿಯನ್ನರು, ಪರ್ಷಿಯನ್ನರು, ಭಾರತೀಯರು ಮುಂತಾದವರು ಹಲವಾರು ಸಾಮಾಜಿಕ ವಿಷಯಗಳ ಬಗ್ಗೆ ತಮ್ಮದೇ ಆದ ರೂಢಕಲ್ಪನೆಗಳನ್ನು ಹೊಂದಿರುತ್ತಾರೆ.

ಮೊದಲೇ ತಿಳಿಸಿದಂತೆ ರೂಢಕಲ್ಪನೆಗಳು ಯಥಾರ್ಥತೆಯಿಂದ ದೂರವಾಗಿರುವುದರಿಂದ ಇವುಗಳಿಂದ ಗುಂಪುಗಳ ನಡುವಣ ಅರಿವಿನ ಹಾಗೂ ಅನ್ಯೋನ್ಯತೆಯ ಬೆಳವಣಿಗೆಗೆ ತೊಂದರೆಯುಂಟಾಗುತ್ತದೆ. ಈ ರೂಢಕಲ್ಪನೆಗಳು ಕೆಲವು ಪದ/ಪದಪುಂಜಗಳ ಮೂಲಕ ವ್ಯಕ್ತವಾಗುವುದರಿಂದ ಅವುಗಳನ್ನು ಬಳಸಿದಾಗ ಆ ಗುಂಪಿಗೆ ಸೇರುವ ವ್ಯಕ್ತಿಯ ಮನಸ್ಸಿಗೆ ನೋವು ಉಂಟಾಗುತ್ತದೆ. ಆದ್ದರಿಂದ ರೂಢ ಕಲ್ಪನೆಗಳ ಅರ್ಥಹೀನತೆಯನ್ನು ತಿಳಿಸಬೇಕು. ಮಕ್ಕಳು ತಮ್ಮ ಪೋಷಕರಿಂದ ಹೊರಗುಂಪುಗಳ ಬಗ್ಗೆ ಅವರು ಹೊಂದಿರುವ ರೂಢಕಲ್ಪನೆಗಳನ್ನು ತಮಗೆ ಅರಿವಿಲ್ಲದಂತೆ ಸ್ವೀಕರಿಸಿ ಬೆಳೆಸಿಕೊಳ್ಳುವುದರಿಂದ ಹೊರಗುಂಪಿಗೆ ಸೇರಿದ ಮಕ್ಕಳೊಂದಿಗೆ ಸೌಹಾರ್ದಯುತ ಸಂಬಂಧ ಬೆಳೆಸಿಕೊಳ್ಳಲು ಸಾಧ್ಯವಾಗದೆ ಅನೇಕ ವೇಳೆ ಬೇರೆ ಗುಂಪುಗಳ ಬಗ್ಗೆ ತಪ್ಪು ಕಲ್ಪನೆಗಳನ್ನು ಅಭಿಪ್ರಾಯಗಳನ್ನು ಬೆಳೆಸಿಕೊಳ್ಳುವ ಅಪಾಯವಿದೆ. ಆದ್ದರಿಂದ ಶಿಕ್ಷಕರು ಮಕ್ಕಳಲ್ಲಿ ಇರುವ ರೂಢಕಲ್ಪನೆಗಳನ್ನು ಗುರ್ತಿಸಿ ಅವುಗಳ ಅರ್ಥಹೀನತೆ ಬಗ್ಗೆ ತಿಳುವಳಿಕೆ ನೀಡಿ ಅವುಗಳನ್ನು ನಿರಾಕರಿಸಲು ಪ್ರಯತ್ನಿಸಬೇಕು.

–ಹೆಚ್.ವಿ.ವಾ.

## ರೇಡಿಯೋ

ಶ್ರವ್ಯ ಪ್ರಸಾರ ಮಾಧ್ಯಮವಾಗಿರುವ ರೇಡಿಯೋ ಸಮೂಹ ಸಂವಹನ ಮಾಧ್ಯಮಗಳಲ್ಲಿ ಸಾಮಾಜಿಕ ಪರಿವರ್ತನೆಗೆ ಕಾರಣವಾದ ಮುಖ್ಯ ಮಧ್ಯವರ್ತಿಯೆನಿಸಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಟೆಲಿಗ್ರಾಫ್ ವ್ಯವಸ್ಥೆಯಲ್ಲಿ ಸಂದೇಶಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತಂತಿಗಳ ಮೂಲಕ ಮೋರ್ಸ್ ಕೋಡಿನಲ್ಲಿ 'ಕಡ' – 'ಕಟ' ಸಂಕೇತಗಳಲ್ಲಿ ಕಳುಹಿಸಲಾಗುತ್ತಿತ್ತು. ಈ ಟೆಲಿಗ್ರಾಫ್ ಪದ್ಧತಿಯನ್ನು ಹೆಚ್ಚು ದಕ್ಷಗೊಳಿಸುವ ತಂತಿಗಳೇ ಇಲ್ಲದೇ ಸಂದೇಶಗಳನ್ನು ಕಳುಹಿಸುವ ವಿಧಾನವನ್ನು ಕಂಡು ಹಿಡಿಯುವ ನಿರಂತರ ಪ್ರಯತ್ನದ ಫಲವಾಗಿ ರೇಡಿಯೋ ತರಂಗಗಳ ಆವಿಷ್ಕಾರವಾಯಿತು. ಸುಮಾರು 1873ರ ಮೊದಲೇ ಭೌತಶಾಸ್ತ್ರಜ್ಞರು ಎಲೆಕ್ಟ್ರೋ ಮ್ಯಾಗ್ನೆಟಿಕ್ ತರಂಗಗಳನ್ನು ಪತ್ತೆ ಹಚ್ಚಿದ್ದರು. ಸ್ಕಾಟ್‌ಲ್ಯಾಂಡಿನ ಗಣಿತಜ್ಞ ಜೇಮ್ಸ್ ಮ್ಯಾಕ್ಸ್‌ವೆಲ್ ಹಾಗೂ ಜರ್ಮನಿಯ ಭೌತಶಾಸ್ತ್ರಜ್ಞ ಹೀನ್ರಿಚ್ ಹರ್ಟ್ಜ್‌ರವರು ಎಲೆಕ್ಟ್ರೋ ಮ್ಯಾಗ್ನೆಟಿಕ್ ತರಂಗಗಳ ಕುರಿತು ಪ್ರಮುಖ ಸಿದ್ಧಾಂತಗಳನ್ನು ಮಂಡಿಸಿದ್ದರು. ಇದರ ಪ್ರಾಯೋಗದ ಬಳಕೆಯನ್ನು ಮಾಡಿದಾತ ಇಟಲಿಯ ಶ್ರೇಷ್ಠ ವ್ಯಕ್ತಿ ಗುಗ್ಲಿಯೆಲ್ಮೋ ಮಾರ್ಕೋನಿ.

ಮಾರ್ಕೋನಿ

ಮಾರ್ಕೋನಿ 1895ರಲ್ಲಿ 21ನೇ ವಯಸ್ಸಿನಲ್ಲಿ ತನ್ನ ತಂದೆಯ ಬೊಲೊಗನ್ ಎಸ್ಟೇಟ್‌ನಲ್ಲಿ ಸುಮಾರು ಒಂದು ಮೈಲಿ ದೂರದಲ್ಲಿನ ಸ್ಥಳಕ್ಕೆ ತಂತಿಯಿಲ್ಲದೆ ಸಂದೇಶ ಕಳುಹಿಸಿದ. ಆ ಬಳಿಕ ಮಾರ್ಕೋನಿಯ ತಂತಿಯಿಲ್ಲದ ಟೆಲಿಗ್ರಾಫ್ ಸಂಸ್ಥೆ ಬ್ರಿಟಿಷ್ ಸರ್ಕಾರದ ಧನ ಸಹಾಯದಿಂದ ಸ್ಥಾಪಿಸಲ್ಪಟ್ಟಿತು. ಮಾರ್ಕೋನಿ ತನ್ನ ಆವಿಷ್ಕಾರಕ್ಕೆ ಇಂಗ್ಲೆಂಡಿನಲ್ಲಿ ಸ್ವಾಮ್ಯದ ಸನದು (Patent) ಪಡೆದುಕೊಂಡಿದ್ದ. ಹೀಗೆ ಮಾರ್ಕೋನಿ ಒಂದು ಹೊಸ ತಂತ್ರಜ್ಞಾನದ ಆವಿಷ್ಕಾರಕ್ಕೆ ಕಾರಣನಾದ. ಮಾರ್ಕೋನಿ ಕಂಡು ಹಿಡಿದ ತಂತಿಯಿಲ್ಲದ ಟೆಲಿಗ್ರಾಫ್, ಸಂಪರ್ಕ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಗೆ ಕಾರಣವಾಯಿತು. ಸಾಗರಗಳಾಚೆ ಸಂದೇಶಗಳನ್ನು ಕಳುಹಿಸುವುದು ಸಾಧ್ಯವಾಯಿತು. ರೈಲ್ವೆ ನಿಲ್ದಾಣಗಳಿಂದ ಚಲಿಸುತ್ತಿರುವ ರೈಲುಗಳೊಂದಿಗೆ ಒಳನಾಡಿನಿಂದ ಸಮುದ್ರದಲ್ಲೆಲ್ಲೋ ತೇಲುತ್ತಿರುವ ನೌಕೆಯೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದು ಸುಲಭವಾಯಿತು. ಮೊದಲನೆಯ ಮಹಾಯುದ್ಧದಲ್ಲಿ ಸೈನ್ಯಗಳಿಗೆ ಸಂದೇಶಗಳ ರವಾನೆಗೆ ಈ ತಂತಿಯಿಲ್ಲದ ಟೆಲಿಗ್ರಾಫ್ ತುಂಬಾ ಉಪಯುಕ್ತವಾಯಿತು. ಹಲವು ವರ್ಷಗಳವರೆಗೂ ರೇಡಿಯೋ ತರಂಗಗಳ ತಂತ್ರಜ್ಞಾನ ದೂರ ಸಂಚಾರ ಕ್ಷೇತ್ರದಲ್ಲಿ ಮಾತ್ರ ಬಳಕೆಯಾಗುತ್ತಿತ್ತು.

**ಐತಿಹಾಸಿಕ ಬೆಳವಣಿಗೆ**

1906ರಲ್ಲಿ ಲೀ.ಡಿ. ಫಾರೆಸ್ಟ್ ಎಲೆಕ್ಟ್ರೋ ಮ್ಯಾಗ್ನೆಟಿಕ್ ತರಂಗಗಳ ಎತ್ತರವನ್ನು ಮಾನವನ ಧ್ವನಿಗೆ ಹಾಗೂ ಇತರ ಶಬ್ದಗಳಿಗೆ ಹೊಂದಾಣಿಕೆ ಮಾಡಬಹುದು ಎಂಬುದನ್ನು ಕಂಡು ಹಿಡಿದನು. ಇದರ ಫಲವಾಗಿ ತರಂಗಗಳ ಮೂಲಕ ಧ್ವನಿಯನ್ನು ರವಾನಿಸಬಲ್ಲ ಸಾಧನವನ್ನು ಸೃಷ್ಟಿಸಿ ಅದನ್ನು ಆಡಿಯೋ ಟ್ಯೂಬ್ (Audio Tube) ಎಂದು ಕರೆದನು. ಮೊತ್ತ ಮೊದಲಿಗೆ ರೇಡಿಯೋ ಕಾರ್ಯಕ್ರಮವನ್ನು ಪ್ರಸಾರ ಮಾಡಿದ ಕೀರ್ತಿ ರೆಜಿನಾಲ್ಡ್ ಫೆಸೆನ್‌ಡೆಸ್‌ಗೆ ಸಲ್ಲುತ್ತದೆ. ಆತ 1909ರಲ್ಲಿ ತನ್ನ ಪ್ರಯೋಗಾಲಯದಿಂದ ರೆಕಾರ್ಡ್ ಮಾಡಿರಿಸಿದಂತಹ ಕ್ರಿಸ್‌ಮಸ್ ಗೀತೆಗಳನ್ನು ಪ್ರಸಾರ ಮಾಡಿದ್ದನು. ಮನೋರಂಜನಾ ಸಾಧನವಾಗಿ ರೇಡಿಯೋ ಸಾಮರ್ಥ್ಯವನ್ನು 1910ರಲ್ಲಿ ಡಿ. ಫಾರೆಸ್ಟ್ ಎನ್‌ರಿಂಕ್ ಕರುಸೋರವನು ಅತ್ಯುತ್ತಮವಾದ ಸಂಗೀತ ಕಾರ್ಯಕ್ರಮವನ್ನು ನ್ಯೂಯಾರ್ಕ್‌ನ ಮೆಟ್ರೋ ಪಾಲಿಟನ್ ಒಪೇರಾ ಹೌಸ್‌ನಿಂದ ಪ್ರಸಾರ ಮಾಡುವ ಮೂಲಕ ಸ್ಪಷ್ಟಪಡಿಸಿದನು.

ಈ ಮೂಲಕ ರೇಡಿಯೋ ತರಂಗಗಳ ತಂತ್ರಜ್ಞಾನದ ಹೊಸ ಸಾಧ್ಯತೆಗಳ ಅರಿವಾಯಿತು. ಈ ತಂತ್ರಜ್ಞಾನ ಮನೋರಂಜನೆಯ ರೀತಿಯನ್ನು ಬದಲಾಯಿಸಬಹುದು ಎನ್ನುವುದು ತಿಳಿಯಿತು. ಈ ಮಾಧ್ಯಮದ ಸಾಧ್ಯತೆಗಳನ್ನು ಮೊದಲು ಬಳಸಿಕೊಂಡವರು ಹವ್ಯಾಸಿಗಳು,


Digitised by Bharatavani, CIIL

ಹೆಚ್ಚು ಬಂಡವಾಳವಿಲ್ಲದೆ ಆದರೆ ಏನಾದರೂ ಹೊಸತನವನ್ನು ಮಾಡಬಯಸುತ್ತಿದ್ದ ಉತ್ಸಾಹಿಗಳು. ಇಂತಹ ಜನ ತಮ್ಮದೇ ಆದ ಒಂದು ಚಿಕ್ಕ ಟ್ರಾನ್ಸ್‌ಮೀಟರ್ ಮೂಲಕ ತಮಗೆ ಪರಿಚಯ ಇದ್ದವರೊಂದಿಗೆ, ಇಲ್ಲದವರೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಪ್ರಯತ್ನಿಸಿದರು.

ಅಮೆರಿಕಾದಲ್ಲಿ 1920ರ ಸುಮಾರಿನಲ್ಲಿ ಇಂತಹ 6000 ಹವ್ಯಾಸಿ ಮಿನಿ ರೇಡಿಯೋ ಟ್ರಾನ್ಸ್‌ಮೀಟರುಗಳಿದ್ದುವೆಂದು ತಿಳಿದುಬಂದಿದೆ. ಜನರ ಆಸಕ್ತಿ ಕೆರಳಿಸಿದ್ದ ಒಂದು ಬಾಕ್ಸಿಂಗ್ ಪಂದ್ಯ ರೇಡಿಯೋ ಮಾಧ್ಯಮಕ್ಕೆ ಚಾಲನೆ ಕೊಟ್ಟಿತು ಎಂದು ಹೇಳಬಹುದು. ಒಬ್ಬ ರೇಡಿಯೋ ಹವ್ಯಾಸಿ ಈ ಪಂದ್ಯದ ಬಗೆಗೆ ತನ್ನದೇ ವೀಕ್ಷಕ ವಿವರಣೆಯನ್ನು ತನ್ನ ಟ್ರಾನ್ಸ್‌ಮೀಟರಿನ ಮೂಲಕ ಪ್ರಸಾರ ಮಾಡಿದ ಇದನ್ನು ಕೇಳಿದ ಬೇರೆ ರೇಡಿಯೋ ಹವ್ಯಾಸಿಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಪಂದ್ಯದ ವಿವರಗಳನ್ನು ತಿಳಿಸುವುದರಲ್ಲಿ ಮೊದಲಿಗರಾದರು. ತಮ್ಮ ಸುತ್ತ ಮುತ್ತಲಿನ ಸಮುದಾಯದಲ್ಲಿ ಒಂದು ರೀತಿಯ ಪ್ರತಿಷ್ಠೆಯನ್ನು ಪಡೆದರು. ಈ ಘಟನೆ ರೇಡಿಯೋ ಬಗೆಗೆ ಜನ ಹೆಚ್ಚು ಆಸಕ್ತಿ ವಹಿಸುವಂತೆ ಮಾಡಿತು.

### ಸಾರ್ವಜನಿಕ ರೇಡಿಯೋ ಕೇಂದ್ರಗಳು

ವಿಶ್ವದ ಮೊದಲ ಸಾರ್ವಜನಿಕ ರೇಡಿಯೋ ಕೇಂದ್ರ 1920ರಲ್ಲಿ ಅಮೆರಿಕಾದ ಪಿಟ್ಸ್ ಬರ್ಗ್‌ನಲ್ಲಿ ಸ್ಥಾಪನೆಯಾಗಿತ್ತು. ಇದೇ ಸುಮಾರಿನಲ್ಲಿ ಮೊರ್ಕೊನಿ ಕಂಪೆನಿ ಲಂಡನ್ನಿನಲ್ಲಿ ಪ್ರಸಾರದ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು. 1922ರಲ್ಲಿ ಬ್ರಿಟಿಷ್ ಬ್ರಾಡ್ ಕಾಸ್ಟಿಂಗ್ ಕಂಪೆನಿಯ ಸ್ಥಾಪನೆಯಾಯಿತು. ಮುಂದೆ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ (ಬಿ.ಬಿ.ಸಿ) ಸಾರ್ವಜನಿಕ ನ್ಯಾಸವಾಯಿತು. ಅಲ್ಲಿನ ಒಂದು ಮುಖ್ಯ ರಾಷ್ಟ್ರೀಯ ಸಂಸ್ಥೆಯಾಯಿತು. ಸಾರ್ವಜನಿಕ ಸೇವಾ ಪ್ರಸಾರಗಳಿಗೆ ಬೇರೆ ದೇಶಗಳಿಗೆ ಮಾದರಿಯಾಯಿತು. ಪಾಶ್ಚಾತ್ಯದೇಶಗಳಲ್ಲಿ ರೇಡಿಯೋ 1930 – 1940ರ ದಶಕಗಳಲ್ಲಿ ಬಹಳ ವೇಗವಾಗಿ ಬೆಳೆಯಿತು. ರೇಡಿಯೋ ಶ್ರವಣ ಜನರ ಜೀವನದ ಒಂದು ಅಂಗವಾಯಿತು.

### ಭಾರತದಲ್ಲಿ ರೇಡಿಯೋ

ಇಪ್ಪತ್ತನೇ ಶತಮಾನದ ಇಪ್ಪತ್ತರ ದಶಕದಲ್ಲಿ ಕೆಲ ಹವ್ಯಾಸಿ ಖಾಸಗಿ ಸಂಸ್ಥೆಗಳು ಭಾರತದಲ್ಲಿ ರೇಡಿಯೋ ಯುಗವನ್ನು ಆರಂಭಗೊಳಿಸಿದವು. 1920ರಲ್ಲಿ ಮುಂಬಯಿಯ ಟೈಮ್ಸ್ ಆಫ್ ಇಂಡಿಯಾ ಕಟ್ಟಡದ ಮೇಲಿನಿಂದ ಮೊಟ್ಟ ಮೊದಲ ರೇಡಿಯೋ ಪ್ರಸಾರ ನಡೆಯಿತು. ಆದರೆ ಆಗಿನ್ನೂ ರೇಡಿಯೋ ಮೂಲಕ ಪ್ರಸಾರಕ್ಕೆ ಭಾರತದಲ್ಲಿ ಪರವಾನಿಗೆ ಸಿಕ್ಕುತ್ತಿರಲಿಲ್ಲ. 1922ರಲ್ಲಿ ಮೊದಲ ಪ್ರಸಾರ ಪರವಾನಗಿ ಲಭ್ಯವಾಯಿತು. ಇದಾದ ಸುಮಾರು ಒಂದು ವರ್ಷದ ವೇಳೆಗೆ 1923ರಲ್ಲಿ ಮೊದಲ ಪ್ರಸಾರ ಸಮ್ಮೇಳನವೂ ನಡೆದು, ಅದೇ ವರ್ಷದ ಜೂನ್‌ನಲ್ಲಿ ಮುಂಬಯಿಯ 'ರೇಡಿಯೋ ಕ್ಲಬ್' ತನ್ನ ಮೊದಲ ಪ್ರಸಾರ ನಡೆಸಿತು. ಅದೇ ವರ್ಷದ ಅಂದರೆ 1923ರ ನವೆಂಬರ್ ತಿಂಗಳಲ್ಲಿ ಕಲ್ಕತ್ತಾ 'ರೇಡಿಯೋ ಕ್ಲಬ್' ಕಾರ್ಯಾರಂಭ ಮಾಡಿತು. ಇವೆರಡಕ್ಕೂ ಮಾರ್ಕೋನಿ ಕಂಪೆನಿಯೇ ಟ್ರಾನ್ಸ್ ಮೀಟರ್‌ಗಳನ್ನು ಅಳವಡಿಸಿತು. 1924ರಲ್ಲಿ 40 ವಾಟ್ ಟ್ರಾನ್ಸ್ ಮೀಟರ್‌ನ ನೆರವಿನೊಂದಿಗೆ ಮದ್ರಾಸ್ 'ರೇಡಿಯೋ ಕ್ಲಬ್' ಕಾರ್ಯಕ್ರಮ ಬಿತ್ತರಿಸಿತು.

ಸರಕಾರಿ ನೆರವಿನಿಂದ ಭಾರತದಲ್ಲಿ ಬಾನುಲಿ ಪ್ರಸಾರ ಕಾರ್ಯ 1926ರ ಸುಮಾರಿಗೆ ಆರಂಭವಾಯಿತೆನ್ನಬಹುದು. 'ಇಂಡಿಯನ್ ಬ್ರಾಡ್ ಕಾಸ್ಟಿಂಗ್ ಕಂಪೆನಿ ಲಿಮಿಟೆಡ್' ಎಂಬ ಹೆಸರಿನ ಖಾಸಗಿ ಸಂಸ್ಥೆಯೊಂದು ಬ್ರಿಟಿಷ್ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡು ಮುಂಬೈ ಮತ್ತು ಕಲ್ಕತ್ತಾ ಮಹಾನಗರಗಳಲ್ಲಿ 1 1/2 ಕಿಲೋ ವಾಟ್ ಸಾಮರ್ಥ್ಯದ ಮಧ್ಯಮ ತರಂಗಾಂತರ ಟ್ರಾನ್ಸಿಟರ್ ಅನ್ನು ಸ್ಥಾಪಿಸಿತು. ಮುಂಬೈನಲ್ಲಿ ಜುಲೈ 23, 1927ರಂದು ಹಾಗೂ ಅದೇ ವರ್ಷ ಕಲ್ಕತ್ತಾದಲ್ಲಿ ಬಾನುಲಿ ಕೇಂದ್ರಗಳು ಕಾರ್ಯಾರಂಭ ಮಾಡಿದವು. ಹೀಗೆ ಭಾರತದಲ್ಲಿ ಅಧಿಕೃತ ಬಾನುಲಿ ಪ್ರಸಾರವು ಜುಲೈ 23, 1927ರಂದು ಆರಂಭವಾಯಿತು.

1930ರ ಏಪ್ರಿಲ್ 1 ರಂದು ಭಾರತದಲ್ಲಿ ಪ್ರಸಾರ ವ್ಯವಸ್ಥೆ ಸರ್ಕಾರದ ಕೈ ಸೇರಿತು. 1936ರಲ್ಲಿ The Indian State Broadcasting Series (ISBS) ಎನಿಸಿಕೊಂಡ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಮೊದಲ ಕಂಟ್ರೋಲರ್ ಆಗಿದ್ದ ಲಿಯೋನಲ್ ಫೀಲ್ಡನ್ ಅದಕ್ಕೆ All India Radio ಎಂಬ ಹೆಸರು ನೀಡಿದರು. 1936ರಲ್ಲೇ All India Radio ಅನ್ನು ಸಂಕ್ಷಿಪ್ತವಾಗಿ AIR ಎಂದು ಕರೆಯಲಾಯಿತು. AIR ನ್ನು ಕೈಗಾರಿಕೆ ಮತ್ತು ಕಾರ್ಮಿಕ ಇಲಾಖೆಯಡಿ ಇರಿಸಲಾಯಿತು. ಪ್ರಸಾರ ವ್ಯವಸ್ಥೆಯ ನಿರ್ವಹಣೆ ಹಾಗೂ ಅಭಿವೃದ್ಧಿಯನ್ನು ನೋಡಿಕೊಳ್ಳಲು ಕೇಂದ್ರ ಪ್ರಸಾರ ಸಲಹಾ ಸಮಿತಿಯನ್ನು ರಚಿಸಲಾಯಿತು. 1936ರ ಹೊತ್ತಿಗೆ ಮುಂಬಾಯಿ, ದೆಹಲಿ, ಮದ್ರಾಸು, ಕಲ್ಕತ್ತಾ ಅಲ್ಲದೆ ಲಕ್ನೋ ಮತ್ತು ತಿರುಚಿಯಲ್ಲೂ ರೇಡಿಯೋ ಕೇಂದ್ರಗಳಾಗಿದ್ದವು. 1957ರಲ್ಲಿ 'ವಿವಿಧ ಭಾರತಿ' ಪ್ರಾರಂಭವಾದಾಗ ರೇಡಿಯೋ ಒಂದು ಪ್ರಬಲ ಸಮೂಹ ಸಂವಹನ ಮಾಧ್ಯಮ ಎನಿಸಿಕೊಂಡಿತು.

### ತಂತ್ರಜ್ಞಾನದ ವಿಕಾಸ

ರೇಡಿಯೋ ಪ್ರಸಾರ ಪ್ರಾರಂಭದಲ್ಲಿ ಲೀ ಡಿ ಫಾರೆಸ್ಟ್ ಕಂಡು ಹಿಡಿದ ಎಮ್ – Amplitude Modulation ಎನ್ನುವ ತಂತ್ರಜ್ಞಾನವನ್ನು ಬಳಸಿಕೊಂಡು ಕಾರ್ಯ ನಿರ್ವಹಿಸುತ್ತಿತ್ತು. ಸಾರ್ವಜನಿಕ ಕೇಂದ್ರಗಳು ಮಧ್ಯಮ (Medium) ಮತ್ತು ಲಘು (Short) ತರಂಗಗಳನ್ನು ಬಳಸಿಕೊಳ್ಳುತ್ತಿದ್ದವು. ಮಧ್ಯಮ ತರಂಗಗಳ ವ್ಯಾಪ್ತಿ ಸೀಮಿತ, ಆದರೆ ಆ ವ್ಯಾಪ್ತಿಯಲ್ಲಿ ಪ್ರಸಾರಗಳಲ್ಲಿ ಹೆಚ್ಚಿನ ಗದ್ದಲ (Noise) ಕೇಳಿಸುತ್ತಿರಲಿಲ್ಲ. ಲಘು ತರಂಗಗಳು ಬಹು ದೂರ ಪ್ರಯಾಣ ಮಾಡುತ್ತಿದ್ದವು. ಆದರೆ ಕೆಲವೊಮ್ಮೆ ಪ್ರಸಾರದಲ್ಲಿ ಕೇಳಿಸಲಾಗದಷ್ಟು ಗದ್ದಲವಿರುತ್ತಿತ್ತು.

ಎಡ್ವಿನ್ ಆರ್ಮ್ ಸ್ಟ್ರಾಂಗ್‌ನ ಸಂಶೋಧನೆಯ ಫಲವಾಗಿ ಎಫ್.ಎಂ. Frequency Modulation ತಂತ್ರಜ್ಞಾನ 1934ರಲ್ಲಿ ಆವಿಷ್ಕಾರವಾಯಿತು. ಆದರೆ ಸಾರ್ವಜನಿಕ ರೇಡಿಯೋ ಕೇಂದ್ರಗಳು ಈ ತಂತ್ರಜ್ಞಾನವನ್ನು ಬಳಸಿಕೊಂಡಿದ್ದು ಎರಡನೆಯ ವಿಶ್ವ ಸಮರದ ನಂತರವೇ. ಎಫ್.ಎಂ. ಪ್ರಸಾರ ಸಂಗೀತದ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಾಗುವಷ್ಟು ಸ್ಪಷ್ಟವಾಗಿರುತ್ತದೆ. ಸಂಪರ್ಕ ಉಪಗ್ರಹಗಳು ನೂರಾರು ರೇಡಿಯೋ ಚಾನೆಲ್‌ಗಳನ್ನು ನಮ್ಮ ಮನೆಗಳಿಗೆ ತರಬಲ್ಲವು. ಡಿಜಿಟಲ್ ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳ ಮೇಲೂ ಪ್ರಭಾವ ಬೀರಿದೆ. ಡಿಜಿಟಲ್ ರೇಡಿಯೋ ಪ್ರಸಾರಗಳು ಈಗಾಗಲೇ ಪ್ರಾರಂಭವಾಗಿದೆ. ಹಾಗೆಯೇ ಹಲವಾರು ರೇಡಿಯೋ ಕೇಂದ್ರಗಳು ತಮ್ಮ ಸಂಗೀತ ಜಾಗವನ್ನು World Wide Web ನಲ್ಲಿ ಸ್ಥಾಪಿಸಿಕೊಂಡಿದೆ.

### ರೇಡಿಯೋ ಕಾರ್ಯಕ್ರಮಗಳ ಪರಿಣಾಮ

ರೇಡಿಯೋದಲ್ಲಾದ ತಾಂತ್ರಿಕ ಬೆಳವಣಿಗೆ ಹಾಗೂ ಪ್ರಸಾರ ಕೇಂದ್ರಗಳಲ್ಲಿನ ಸುಧಾರಣೆಯ ಫಲವಾಗಿ ರೇಡಿಯೋ ವಿಶ್ವದ ಅತಿ ದೊಡ್ಡ ಪ್ರಸಾರ ವ್ಯವಸ್ಥೆಗಳಲ್ಲಿ ಒಂದಾಗಿ ಸೇರ್ಪಡೆಯಾಗಿದೆ. ಇದರೊಂದಿಗೆ ರೇಡಿಯೋದ ಗುಣಾತ್ಮಕ ಅಂಶಗಳು ಇಂದಿಗೂ ಅದರ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿವೆ.

Digitised by Bharatavani, CIIL

### ರೇಡಿಯೋದ ಗುಣಾತ್ಮಕ ಅಂಶಗಳು

1. ಅತ್ಯಂತ ವೇಗವಾಗಿ ಸುದ್ದಿಯನ್ನು ಬಿತ್ತರಿಸುವ ಮಾಧ್ಯಮ:

ರೇಡಿಯೋ ಕಾರ್ಯಕ್ರಮ ನಿರ್ಮಾಣ ಹಾಗೂ ನಿರ್ವಹಣೆಯ ಕೆಲಸ ಸರಳವೂ ಸುಲಭವೂ ಆದ್ದರಿಂದ ಏನೇ ವಿಷಯವಾದರೂ ಅದರ ಪ್ರಸಾರ ಅತ್ಯಂತ ಶೀಘ್ರವಾಗುತ್ತದೆ.

2. ವಿದ್ಯುತ್ ಸೌಲಭ್ಯವಿರದ ಪ್ರದೇಶಗಳಲ್ಲಿಯೂ ರೇಡಿಯೋ ಬಳಕೆ, ವಿದ್ಯುತ್‌ನ ಸಹಾಯವಿಲ್ಲದೆ ಬ್ಯಾಟರಿಯಿಂದ ರೇಡಿಯೋವನ್ನು ಬಳಸಬಹುದಾದ್ದರಿಂದ ವಿದ್ಯುತ್ ವ್ಯವಸ್ಥೆಯಿಲ್ಲದ ಜಾಗಗಳಲ್ಲಿ ಜನ ಸಾಮಾನ್ಯರು, ಪರಿಸರ ಅಧ್ಯಯನಾಸಕ್ತರು, ಸಂಶೋಧನಕಾರರು ಸುಲಭವಾಗಿ ಬಳಸಬಹುದಾದ ಮಾಧ್ಯಮವಾಗಿರುವುದರಿಂದ ತಾಜಾ ಸುದ್ದಿಗಳ ಹಾಗೂ ಮನೋರಂಜನೆಯಾ ಕಾರ್ಯಕ್ರಮಗಳು ಅವರಿಗೂ ಲಭ್ಯ.

3. ರೇಡಿಯೋಗಾಗಿ ಕಾರ್ಯಕ್ರಮ ಅಥವಾ ವಾರ್ತಾ ಸಂಚಿಕೆ ನಿರ್ಮಾಣ ದುಬಾರಿಯಲ್ಲ.

ಒಂದು ಪುಟ್ಟ ಟೇಪ್ ರೆಕಾರ್ಡರ್ ಜೊತೆಗೆ, ಆಕಾಶವಾಣಿ ಪ್ರಸಾರ ಯೋಗ್ಯ ಟೇಪುಗಳ ಹಾಗೂ ಧ್ವನಿಮುದ್ರಕಗಳ ಗಾತ್ರವೂ ಚಿಕ್ಕದಿದ್ದು ಅವುಗಳನ್ನು ಕೊಂಡೊಯ್ಯುವುದು, ಬಳಸುವುದು ತೀರಾ ಸರಳವಾಗಿರುವುದರಿಂದ ಹೆಚ್ಚಿನ ಸಂಖ್ಯೆಯ ಕೆಲಸಗಾರರ ಅವಶ್ಯಕತೆಯೂ ಇದಕ್ಕಿಲ್ಲದಿರುವುದರಿಂದ ಕುಗ್ರಾಮದಿಂದಲೂ ಸುದ್ದಿ ಸಂಗ್ರಹಣೆ ಹಾಗೂ ಪ್ರಸಾರ ಕೇಂದ್ರಕ್ಕೆ ರವಾನೆ ಸುಲಭ ಸಾಧ್ಯವಾಗಿರುವುದರಿಂದ ತುರ್ತು ಸಂದರ್ಭಗಳಲ್ಲಿ ಮಾಹಿತಿಯನ್ನು ತ್ವರಿತವಾಗಿ ಪಡೆದುಕೊಳ್ಳಬಹುದು.

4. ಅನಕ್ಷರತೆಯ ಹೊಡೆತದಿಂದ ರೇಡಿಯೋ ಮುಕ್ತ: ರೇಡಿಯೋ ಶ್ರವಣ ಮಾಧ್ಯಮ. ಶ್ರೋತೃ ಹೇಳಿದ್ದೆಲ್ಲವನ್ನೂ ಕೇಳುವವನಾಗಿರುತ್ತಾನೆ. ಇಲ್ಲಿ ಓದಬೇಕಾದುದು ಏನ ಇರದೇ ಇರುವುದರಿಂದ ಹೇಳುವವನ ಕಂಠ, ನಾಲಗೆ ಹಾಗೂ ಕೇಳುವವನ ಕಿವಿ ಬಳಕೆಯಾಗುವುದರಿಂದ ರೇಡಿಯೋಗೆ ಸಾಕ್ಷರಿಯೂ ನಿರಕ್ಷರಿಯೂ ಒಂದೇ ಆಗಿರುತ್ತಾನೆ.

### ಶಿಕ್ಷಣ ಕ್ಷೇತ್ರದಲ್ಲಿ ರೇಡಿಯೋ

ವಿವಿಧ ಕ್ಷೇತ್ರಗಳಲ್ಲಿ ಔಪಚಾರಿಕ ಹಾಗೂ ಔಪಚಾರಿಕೇತರ ಶಿಕ್ಷಣವನ್ನು ಪಡೆಯುತ್ತಿರುವವರ ಜೊತೆ ಜೊತೆಗೆ ಜನ ಸಾಮಾನ್ಯರಿಗೆ ಶಿಕ್ಷಣವನ್ನು ನೀಡುವ ಸಲುವಾಗಿ ಪ್ರಾರಂಭದಿಂದಲೂ ರೇಡಿಯೋ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರಮುಖ ಸ್ಥಾನವನ್ನು ನೀಡಿದೆ. ರೇಡಿಯೋದಲ್ಲಿ ಪ್ರಸಾರವಾಗುವ ಪ್ರಮುಖ ಶೈಕ್ಷಣಿಕ ಕಾರ್ಯಕ್ರಮಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

- ಶಾಲಾ ಕಾಲೇಜುಗಳ ಪಠ್ಯಕ್ರಮದಲ್ಲಿ ಸೇರಿರುವ ವಿಷಯಗಳ ಬಗೆಗೆ ಅನುಭವಿ ಉಪಾಧ್ಯಾಯರಿಂದ ಪಾಠಗಳು

- ಯಾವುದೇ ಒಂದು ಪಠ್ಯ ಕ್ರಮವನ್ನು ಅನುಸರಿಸದೆ, ಶಾಲಾ ಕಾಲೇಜು ವಿದ್ಯಾರ್ಥಿಗಳ ಸಾಮರ್ಥ್ಯ, ತಿಳುವಳಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳು.

- ವನ್ಯ ಸಂರಕ್ಷಣೆ, ಹೈನುಗಾರಿಕೆ, ತೋಟಗಾರಿಕೆ ಇಂತಹ ಯಾವುದೇ ಆಸಕ್ತಿಕರ ವಿಷಯದ ಎಲ್ಲಾ ಆಯಾಮಗಳನ್ನು ಸಾಮಾನ್ಯ ಶ್ರೋತೃಗಳಿಗೆ ಪರಿಚಯ ಮಾಡಿಕೊಡುವ ಬಾನುಲಿ ಪಾಠಶಾಲೆ.

- ಮಹಿಳೆಯರು, ರೈತರು, ಕಾರ್ಮಿಕರು ಮೊದಲಾದ ವಿಶಿಷ್ಟ ಶ್ರೋತೃ ಗಣಕ್ಕೆ ಉಪಯುಕ್ತವಾಗುವಂತಹ ಸಾಮಾಜಿಕ ಶಿಕ್ಷಣ.

ಈ ಎಲ್ಲ ಕಾರ್ಯಕ್ರಮಗಳ ಫಲವಾಗಿ ರೇಡಿಯೋ ಜನ ಸಾಮಾನ್ಯರನ್ನು ಶಿಕ್ಷಿತಗೊಳಿಸುವ ಕಾರ್ಯ ನೆರವೇರಿಸಿದೆ.

### ಸಾಮಾಜಿಕ ಕ್ಷೇತ್ರ

ರೇಡಿಯೋ ಸಾವಿರಾರು ಜನರಿಗೆ ಸಮಾಜದ ಅಂಚಿನಲ್ಲಿದ್ದ ನಿರ್ಬಲರಿಗೆ ಅದರಲ್ಲೂ ಓದು ಬರಹ ಬಾರದ ಅನಕ್ಷರಸ್ಥರಿಗೆ ಹೊಸ ವಿಷಯಗಳನ್ನು ತಿಳಿಯುವಲ್ಲಿ ಸಹಕರಿಸಿದೆ. ಆ ಮೂಲಕ ಅವರಿಗೆ ಮಾನಸಿಕ ಸ್ಥೈರ್ಯವನ್ನು ನೀಡಿದೆ ಹಾಗೂ ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಮನೆಯಿಂದ ಹೊರಗೆ ಹೋಗದ ಮಹಿಳೆಯರಿಗೆ ರೇಡಿಯೋದಿಂದಾಗಿ ಹೊರ ಪ್ರಪಂಚದ ಸುದ್ದಿ ಸಮಾಚಾರಗಳು ತಿಳಿಯುವುದರ ಜೊತೆಗೆ ತನಗೆ ಬೇಕಾದುದನ್ನು ಕೇಳುವ ಅರಿತುಕೊಳ್ಳುವ ಸ್ವಾತಂತ್ರ್ಯ ಸಿಕ್ಕಿದೆ ಹಾಗೂ ಅದು ಮಹಿಳೆಯ ಸಬಲೀಕರಣಕ್ಕೆ ನಾಂದಿ ಹಾಡಿತು. ಇದರಿಂದಾಗಿ ಮಹಿಳೆ ಸಮಾಜದಲ್ಲಿ ಪ್ರಮುಖ ಪಾತ್ರ ವಹಿಸುವಲ್ಲಿ ರೇಡಿಯೋ ಪರೋಕ್ಷವಾಗಿ ಕಾರಣ ಎನ್ನಬಹುದು. ಅಂತಾರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಪ್ರಾದೇಶಿಕ ಮಹತ್ವವುಳ್ಳ ದಿನಗಳಂದು ಪ್ರಸಾರವಾಗುವ ವಿಶೇಷ ಕಾರ್ಯಕ್ರಮಗಳು ಜನರಲ್ಲಿ ಅಂತಾರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವುದರ ಜೊತೆಗೆ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಭಾವೈಕ್ಯತೆಯನ್ನು ಉಳಿಸುವ ಪರಿಯನ್ನು ತಿಳಿಸುತ್ತವೆ. ಹಾಗೆಯೇ ಪರಿಸರ ಪ್ರೇಮಿ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ಹಾಗೂ ಭೌತಿಕ ಪರಿಸರದ ಕಾಳಜಿಯನ್ನು ಜನಸಾಮಾನ್ಯರಿಗೆ ಪ್ರಪಂಚದಾದ್ಯಂತ ಹರಡುವ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ರೇಡಿಯೋ ಮಹತ್ತರ ಪಾತ್ರವನ್ನು ವಹಿಸಿದೆ.

### ಸಾಂಸ್ಕೃತಿಕ ಕ್ಷೇತ್ರ

ದೇಶ ವಿದೇಶಗಳ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಜವಾಬ್ದಾರಿಯನ್ನು ನಿಭಾಯಿಸುವ ಸಲುವಾಗಿ ದೇಶೀಯ ಪ್ರಾದೇಶಿಕ ಹಾಗೂ ಸಾಮುದಾಯಕ ಭಾಷೆಯಲ್ಲಿ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಮೂಲಕ ಭಾಷೆಗಳ ಪದ ಸಂಪತ್ತನ್ನು ಶ್ರೀಮಂತಗೊಳಿಸುವಲ್ಲಿ ರೇಡಿಯೋ ತನ್ನ ಸೇವೆಯನ್ನು ನೀಡಿದೆ. ಭಾಷೆಯನ್ನು ಸಂಪದ್ಭರಿತಗೊಳಿಸುವುದರ ಜೊತೆಗೆ ಸಂಸ್ಕೃತಿಯನ್ನು ಬಿಂಬಿಸುವ ಜಾನಪದ ಸಂಗೀತ, ಶಾಸ್ತ್ರೀಯ ಸಂಗೀತದಂತಹ ಕಾರ್ಯಕ್ರಮಗಳನ್ನು ಬಿತ್ತರಿಸುವ ಮೂಲಕ ಕಲೆ ಹಾಗೂ ಕಲಾವಿದರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಸಾಮಾನ್ಯರು ಗುರುತಿಸಲು ರೇಡಿಯೋ ನೆರವಾಗಿದೆ.

### ಆರ್ಥಿಕ ಕ್ಷೇತ್ರ

ಸಣ್ಣ ಪ್ರಮಾಣದ ಉದ್ದಿಮೆದಾರರು ಕಡಿಮೆ ಖರ್ಚಿನಲ್ಲಿ ಜಾಹೀರಾತನ್ನು ನೀಡುವ ಮೂಲಕ ಅತೀ ಹೆಚ್ಚು ಬಳಕೆದಾರರನ್ನು ತಲುಪುವಂತೆ ಮಾಡುವುದರ ಮೂಲಕ ಸಣ್ಣ ಉದ್ದಿಮೆದಾರರೂ ಸಹ ದೊಡ್ಡ ಕೈಗಾರಿಕ ಸಂಸ್ಥೆಗಳೊಂದಿಗೆ ಸ್ಪರ್ಧಿಸುವಂತೆ ಮಾಡಿದೆ. ಹಾಗೆಯೇ ಕೃಷಿ ಸಂಬಂಧಿತ ಕಾರ್ಯಕ್ರಮಗಳಿಂದಾಗಿ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಹೆಚ್ಚಿಸಿಕೊಂಡು ಮಾರುಕಟ್ಟೆಯ ಧಾರಣೆಯನ್ನು ತಿಳಿದುಕೊಂಡು ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವಂತಾಗಿದೆ. ಮಾರುಕಟ್ಟೆಯ ಧಾರಣೆಯನ್ನು ತಿಳಿದುಕೊಳ್ಳುವುದರ ಮೂಲಕ ಹಳ್ಳಿಗಳಲ್ಲಿರುವ ಸಣ್ಣ ಪ್ರಮಾಣದ ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ಉತ್ತಮಪಡಿಸಿಕೊಂಡು ಆರ್ಥಿಕಾಭಿವೃದ್ಧಿಯನ್ನು ಹೊಂದುವಂತಾಗಿದೆ.


Digitised by Bharatavani, CIIL

## ರೇಡಿಯೋ ಮಿತಿಗಳು

ಹಲವಾರು ಕ್ಷೇತ್ರಗಳಿಗೆ ತನ್ನ ಕೊಡುಗೆಯನ್ನಿತ್ತ ರೇಡಿಯೋ ತನ್ನದೇ ಆದ ಮಿತಿಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾದುವುಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

- ಕಾರ್ಯಕ್ರಮ ನಿರ್ಮಾಪಕ ಅಥವಾ ನಿರೂಪಕ ಶ್ರೋತೃ ವರ್ಗದ ಸಮ್ಮುಖದಲ್ಲಿ ಇಲ್ಲದಿರುವುದರಿಂದ ಅಂದರೆ ದೃಶ್ಯಾಂಶ (Visual Element) ಇಲ್ಲದಿರುವುದರಿಂದಾಗಿ ಶ್ರೋತೃಗಳು ಬೇಗನೇ ಆಸಕ್ತಿ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಹಾಗಾಗಿ, ಕಾರ್ಯಕ್ರಮದ ನಿರೀಕ್ಷಿತ ಉದ್ದೇಶಗಳು ಪರಿಣಾಮಕಾರಿಯಾಗಿ ಈಡೇರದಿರುವ ಸಾಧ್ಯತೆ ಇದೆ. ಇದೇ ಈ ಮಾಧ್ಯಮದ ಒಂದು ದೌರ್ಬಲ್ಯ ಎನ್ನಬಹುದು. ಹಾಗೆಯೇ ಶ್ರವಣಾನುಭವ ನೀಡುವ ಬಾನುಲಿ ಮಾಧ್ಯಮವು ಸಂವೇದನೆ ಹಾಗೂ ಕಲ್ಪನಾ ಸೂಕ್ಷ್ಮತೆಯ ದೃಷ್ಟಿಯಿಂದ ಶ್ರೋತೃವಿನ ಮೇಲೆ ಭಾರಿ ಹೊರೆಯನ್ನು ಹೊರಿಸುತ್ತದೆ.

- ರೇಡಿಯೋ ಕಾರ್ಯಕ್ರಮಗಳು ಪೂರ್ವನಿಗದಿತವಾದುದರಿಂದ ಅದರ ಪ್ರಸಾರ ವೇಳೆಯಲ್ಲಿಯೇ ಕಾರ್ಯಕ್ರಮಗಳನ್ನು ಕೇಳಬೇಕು. ಪತ್ರಿಕಾ ಮಾಧ್ಯಮದಂತೆ ಒಮ್ಮೆ ಓದಿದ ವಿಷಯ ಅರ್ಥವಾಗದಿದ್ದಲ್ಲಿ ಮತ್ತೆ ಓದಿ ಅರ್ಥೈಸಿಕೊಳ್ಳಲು, ಹಿಮ್ಮರಳಲು ಈ ಮಾಧ್ಯಮದಲ್ಲಿ ಸಾಧ್ಯವಿಲ್ಲ. ಇಲ್ಲಿ ಚಿತ್ತೈಕಾಗ್ರತೆ ಇದ್ದಲ್ಲಿ ಮಾತ್ರ ಶ್ರೋತೃವು ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಬಹುದು.

- ಬಾನುಲಿ ಕಾರ್ಯಕ್ರಮ ಏಕಮುಖವಾದುದರಿಂದ ಶ್ರೋತೃವರ್ಗವು ಕಾರ್ಯಕ್ರಮವನ್ನು ಆಲಿಸುತ್ತಿರುವ ವೇಳೆಯಲ್ಲಿ ಏನಾದರೂ ಸಂಶಯ ಸಂದೇಹಗಳು ಮೂಡಿ ಬಂದರೆ ತತ್‌ಕ್ಷಣ ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ.

- ಬಾನುಲಿ ಕಾರ್ಯಕ್ರಮದಲ್ಲಿ ನೀಡುವ ಶೈಕ್ಷಣಿಕ ಕಾರ್ಯಕ್ರಮ ಇಲ್ಲವೇ ವೃತ್ತಿಪರ ಕಾರ್ಯಕ್ರಮಗಳ ಮೂಲಕ ಶ್ರೋತೃಗಳಿಗೆ ಕ್ರಿಯೆಯಲ್ಲಿ ತೊಡಗಲು ಪ್ರೇರಣೆ ಹಾಗೂ ಕ್ರಿಯೆಯ ಕುರಿತ ಸೂಕ್ತ ಮಾಹಿತಿ ದೊರಕುತ್ತದೆ. ಆದರೆ ಪ್ರಾತ್ಯಕ್ಷಿಕೆ, ಪ್ರಾಯೋಗಿಕ ಕೌಶಲ ಹಾಗೂ ಇತರ ಕೌಶಲಗಳನ್ನು ನೀಡುವುದು ಅಸಾಧ್ಯ. ಹಾಗಾಗಿ ಕೆಲವೊಮ್ಮೆ ಕಲಿಕೆ ಅಪೂರ್ಣವಾಗುತ್ತದೆ.

– ವಿ.ಕು

# ಲ

## ಲಿಂಗ ಶಿಕ್ಷಣ

ಲಿಂಗಶಿಕ್ಷಣವನ್ನು (Gender Education) ಕೆಲವೊಮ್ಮೆ 'ಲೈಂಗಿಕ ಶಿಕ್ಷಣ' ಎಂದೂ 'ಲಿಂಗ ಹಾಗೂ ಸಂಬಂಧಗಳ ಶಿಕ್ಷಣ' ಎಂದೂ ಕರೆಯಲಾಗುತ್ತದೆ. ಇದು ಲಿಂಗ, ಲೈಂಗಿಕ ಅನನ್ಯತೆ, ಸಂಬಂಧಗಳು, ಅನ್ಯೋನ್ಯತೆ ಇವುಗಳನ್ನು ಕುರಿತ ಮಾಹಿತಿಗಳನ್ನು ಕೊಡುವ ಹಾಗೂ ಪಡೆಯುವ, ಮನೋಭಾವಗಳನ್ನು ಅಂತೆಯೇ ನಂಬಿಕೆಗಳನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆ. ಲಿಂಗಶಿಕ್ಷಣವು ತಾರುಣ್ಯದಲ್ಲಿರುವವರ ವಿಶಿಷ್ಟ ಕೌಶಲಗಳನ್ನು ಬೆಳೆಸುವ ಸಾಧನವೂ ಹೌದು. ಇದರಿಂದಾಗಿ ತಾರುಣ್ಯದಲ್ಲಿರುವವರು ಅವರದೇ ವರ್ತನೆಗಳನ್ನು ಕುರಿತಂತೆ ಉತ್ತಮ ಆಯ್ಕೆಗಳನ್ನು ಮಾಡಲು ಸಾಧ್ಯವಾಗುತ್ತದೆ. ಜೊತೆಗೆ ಆ ಆಯ್ಕೆಗಳನ್ನು ಕುರಿತಂತೆ ಆತ್ಮವಿಶ್ವಾಸದಿಂದ ಸಮರ್ಥವಾಗಿ ನಡೆದುಕೊಳ್ಳಲು ಸಾಧ್ಯವಾಗುತ್ತದೆ.

ತಾರುಣ್ಯಾವಸ್ಥೆಯಲ್ಲಿರುವ ಮಕ್ಕಳಿಗೆ ಲಿಂಗಶಿಕ್ಷಣ ಪಡೆಯುವ ಹಕ್ಕಿದೆ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ವಿಚಾರ. ಏಕೆಂದರೆ ಈ ಮೂಲಕ ಅವರು ನಿಂದೆ, ದೌರ್ಜನ್ಯ, ಅನಪೇಕ್ಷಿತ ಗರ್ಭಧಾರಣೆ, ಲೈಂಗಿಕವಾಗಿ ವರ್ಗವಾಗುವ ಖಾಯಿಲೆಗಳಾದ ಎಚ್.ಐ.ವಿ. ಮತ್ತು ಏಡ್ಸ್ ಮೊದಲಾದವುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ಅವರ ಮೇಲೆ ಪ್ರಭಾವ ಬೀರುವ ವಿಷಯಗಳನ್ನು ಕುರಿತು ಮಾಹಿತಿ ಪಡೆಯುವ, ಅವರ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಹಕ್ಕುಗಳು ಇದರಿಂದಾಗಿ ಅವರಿಗೆ ಲಭ್ಯವಾಗುತ್ತವೆ. ಲೈಂಗಿಕತೆಯನ್ನು ನೈತಿಕ ಹಿನ್ನೆಲೆಯಲ್ಲಿ ಅನುಭವಿಸಲು, ಆ ಮೂಲಕ ಉತ್ತಮ ಸಂಬಂಧಗಳನ್ನು ರೂಪಿಸಿ ಬೆಳೆಸಿಕೊಳ್ಳಲು ಲಿಂಗಶಿಕ್ಷಣ ಸಹಕಾರಿಯಾಗುತ್ತದೆ.

ಲಿಂಗಶಿಕ್ಷಣದ ಗುರಿಗಳು ಅತ್ಯಂತ ಸ್ಪಷ್ಟವಾದವು. ತಾರುಣ್ಯಾವಸ್ಥೆಯಲ್ಲಿರುವವರಲ್ಲಿ ಅನಪೇಕ್ಷಿತ ಗರ್ಭಧಾರಣೆ, ಲಿಂಗವಾಹಕ ರೋಗಗಳು ಇತ್ಯಾದಿ ನೇತ್ಯಾತ್ಮಕ ಪರಿಣಾಮಗಳಿಂದ ಉಂಟಾಗಬಹುದಾದ ಗಂಡಾಂತರಗಳನ್ನು ಕಡಿಮೆಮಾಡುವುದು, ಲೈಂಗಿಕತೆಯ ಇತ್ಯಾತ್ಮಕ ಅನುಭವಗಳನ್ನು ಪಡೆಯಲು ಸಹಾಯಮಾಡುವುದು, ಲೈಂಗಿಕತೆಯನ್ನು ಕ್ಷೇಮವಾಗಿ ಆರೋಗ್ಯಕರವಾಗಿ ಹಾಗೂ ಆನಂದಕರವಾಗಿ ಅಂತೆಯೇ ಸಮಾಜದ ಸಾಂಸ್ಕೃತಿಕ ಮಿತಿಗಳ ಹಿನ್ನೆಲೆಯಲ್ಲಿ ಅನುಭವಿಸಲು ಅಗತ್ಯವಾದ ಮಾರ್ಗದರ್ಶನ ನೀಡುವುದು ಲಿಂಗಶಿಕ್ಷಣದ ಪ್ರಮುಖ ಅಂಶಗಳು.

ಲಿಂಗಶಿಕ್ಷಣಕ್ಕೆ ವಿಶಿಷ್ಟವಾದ ಉದ್ದೇಶಗಳಿವೆ. ಈ ಹಿನ್ನೆಲೆಯಲ್ಲಿ ಅದು ಕಿಶೋರ/ಕಿಶೋರಿಯರಲ್ಲಿ ಅನೇಕ ಸಾಮರ್ಥ್ಯಗಳನ್ನೂ ಮನೋಭಾವಗಳನ್ನೂ ಮೂಡಿಸಬೇಕು. ಜೊತೆಗೆ ಅನೇಕ ಕೌಶಲಗಳನ್ನು ಬೆಳೆಸಬೇಕು. ಈ ಕೌಶಲಗಳು ಬಹಳಮಟ್ಟಿಗೆ ಸಾಮಾನ್ಯವಾದ ಜೀವನ ಕೌಶಲಗಳೇ. ಉತ್ತಮ ಸಂವಹನ ಕೌಶಲ, ಸಲೀಸಾಗಿ ಮನಬಿಚ್ಚಿ ಮಾತನಾಡುವ ಕೌಶಲ, ಅಗತ್ಯವಾದ ಸಹಾಯ ಮತ್ತು ಮಾರ್ಗದರ್ಶನ ಕೊಡಬಹುದಾದ ಸಂಪನ್ಮೂಲಗಳನ್ನು ಗುರುತಿಸುವ, ಕಂಡುಕೊಳ್ಳುವ ಕೌಶಲ ಇತ್ಯಾದಿಗಳು ಮುಖ್ಯವಾದವು. ಇವು ಉತ್ತಮ ಲೈಂಗಿಕ ಸಂಬಂಧಗಳ ಬೆಳವಣಿಗೆಗೆ ಅನ್ವಯವಾಗುವಂತಹವು. ಇದಲ್ಲದೆ ಮತ್ತೊಬ್ಬರು ಹೇರುವ ಒತ್ತಡವನ್ನು ಗುರುತಿಸುವ ಹಾಗೂ ನಿಭಾಯಿಸುವ ಕೌಶಲ ಇದರಿಂದ ಬೆಳೆಯಬೇಕು. ಇದರ ಜೊತೆಗೆ ಹೆತ್ತವರಿಂದಾಗಲೀ ಪೋಷಕರಿಂದಾಗಲೀ ವೃತ್ತಿತಜ್ಞರಿಂದಾಗಲೀ ಕುಟುಂಬದವರಿಂದಾಗಲೀ ಸಮುದಾಯದಿಂದಾಗಲೀ ಆರೋಗ್ಯ ಮತ್ತು ಕಲ್ಯಾಣ ಸೇವಾ ಕ್ಷೇತ್ರಗಳಿಂದಾಗಲೀ ಸೂಕ್ತ ಮಾಹಿತಿ ಪಡೆಯುವ ಕೌಶಲಗಳೂ ಇದರಿಂದ ಸಾಧ್ಯವಾಗಬೇಕು.

ಲಿಂಗಶಿಕ್ಷಣವು ಸತ್ಯ ಹಾಗೂ ಸತ್ಯವಲ್ಲದ ವಿಚಾರಗಳನ್ನು ನಿಷ್ಪಕ್ಷವಾಗಿ ಗುರುತಿಸುವ ಸಾಮರ್ಥ್ಯ ಬೆಳೆಸಬೇಕು. ನೈತಿಕ ಹಾಗೂ ಸಾಮಾಜಿಕ ವಿಚಾರಗಳನ್ನು ವಿವೇಚನೆಯೊಂದಿಗೆ ಚರ್ಚಿಸಲು ಅಗತ್ಯವಾದ ವಿವೇಕವನ್ನು ಮೂಡಿಸಬೇಕು. ವಿವಿಧ ಸಾಂಸ್ಕೃತಿಕ ಮನೋಭಾವಗಳ ಹಿನ್ನೆಲೆಯಲ್ಲಿ

Digitised by Bharatavani, CIIL

ಲಿಂಗ ಮತ್ತು ಲೈಂಗಿಕತೆಯನ್ನು ತಿಳಿಯುವ ಸೂಕ್ಷ್ಮ ಸಂವೇದನೆಯನ್ನು ಜಾಗೃತಗೊಳಿಸಬೇಕು. ಅತಿ ಸಂಕೀರ್ಣವೂ ಒಂದು ರೀತಿ ಗಂಭೀರವೂ ಆದ ಲೈಂಗಿಕತೆ, ಗರ್ಭಪಾತ, ಗರ್ಭನಿರೋಧಕಗಳು ಇತ್ಯಾದಿಗಳ ಬಗ್ಗೆ ಪ್ರಬುದ್ಧತೆಯಿಂದ ಸಂವಾದ ಮಾಡಲು ವಿದ್ಯಾರ್ಥಿಗಳನ್ನು ಅಣಿಗೊಳಿಸಬೇಕು.

ಲಿಂಗಶಿಕ್ಷಣವು ಮುಖ್ಯವಾಗಿ ಕೆಲವು ವಿಷಯಗಳನ್ನು ಕುರಿತ ಮಾಹಿತಿಯನ್ನು ಯುವಜನರಿಗೆ ಒದಗಿಸಬೇಕು. ಲೈಂಗಿಕ ಬೆಳವಣಿಗೆ ಮತ್ತು ಸಂತಾನೋತ್ಪತ್ತಿ, ಇದಕ್ಕೆ ಸಂಬಂಧಿಸಿದಂತೆ ತಾರುಣ್ಯಾವಸ್ಥೆ ಹಾಗೂ ಸಂತಾನೋತ್ಪತ್ತಿಗೆ ಸಂಬಂಧಿಸಿದ ದೈಹಿಕ ಮತ್ತು ಭಾವನಾತ್ಮಕ ಬದಲಾವಣೆಗಳನ್ನು ಮನಗಾಣಿಸಬೇಕು. ಗರ್ಭಧಾರಣೆ ಹಾಗೂ ಲೈಂಗಿಕವಾಗಿ ಹರಡುವ ಕಾಯಿಲೆಗಳು, ಗರ್ಭನಿರೋಧಕಗಳು ಮತ್ತು ಜನನನಿಯಂತ್ರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಮಾಹಿತಿ ಕೊಡಬೇಕು. ಪ್ರಸ್ತುತ ದೊರೆಯುವ ಗರ್ಭನಿರೋಧಕಗಳು ಯಾವುವು, ಅವು ಹೇಗೆ ಕೆಲಸಮಾಡುತ್ತವೆ, ಜನರು ಅವುಗಳನ್ನು ಹೇಗೆ ಬಳಸುತ್ತಾರೆ, ಏನನ್ನು ಬಳಸಬೇಕು ಎಂದು ಜನ ಹೇಗೆ ನಿರ್ಧರಿಸುತ್ತಾರೆ. ಅವುಗಳನ್ನು ಹೇಗೆ ಪಡೆಯಬೇಕು ಎಂಬ ವಿಚಾರಗಳು ಕಲಿಯುವವರ ಗಮನಕ್ಕೆ ಬರಬೇಕು. ಇವುಗಳ ಜೊತೆಗೆ ಪ್ರಮುಖವಾಗಿ ಮಾನವೀಯ ಸಂಬಂಧಗಳನ್ನು ಕುರಿತು ಆಳವಾಗಿ ಮನಮುಟ್ಟುವಂತೆ ಅರ್ಥ ಮಾಡಿಸಬೇಕು. ಸಂಬಂಧಗಳು ಯಾವ ಯಾವ ರೀತಿಯಲ್ಲಿರುತ್ತವೆ, ಪ್ರೀತಿ, ಬದ್ಧತೆ, ವಿವಾಹ ಮತ್ತು ಭಾಗಿತ್ವ ಇವುಗಳು ಹೇಗೆ ಮುದಕೊಡುತ್ತವೆ, ಅವುಗಳಿಂದ ಮಾನವನ ವ್ಯಕ್ತಿತ್ವದ ಬೆಳವಣಿಗೆ ಹೇಗೆ ಆಗುತ್ತದೆ ಎಂಬ ಅರಿವು ಮೂಡಿಸಬೇಕು. ಲೈಂಗಿಕ ವರ್ತನೆಗಳಿಗೆ ಸಂಬಂಧಿಸಿದ ನಿಯಮಗಳು, ಲೈಂಗಿಕತೆಗೆ ಸಂಬಂಧಿಸಿದ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಭಿಪ್ರಾಯಗಳು, ಹಾಗೂ ಲೈಂಗಿಕ ವೈವಿಧ್ಯ ಇವುಗಳ ಜೊತೆಗೆ ನಿರ್ದಿಷ್ಟ ಅಪಾಯಗಳನ್ನು ಕಡಿಮೆಮಾಡುವ ವರ್ತನೆಗಳು, ಜನರ ಲೈಂಗಿಕ ಆಯ್ಕೆಗಳು ಮತ್ತು ವರ್ತನೆಗಳ ಹಿಂದೆ ಕೆಲಸ ಮಾಡುವ ಸೈದ್ಧಾಂತಿಕ ಅಂಶಗಳು, ಲೈಂಗಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಅಪಾಯಗಳು, ಗರ್ಭನಿರೋಧಕಗಳು ಮತ್ತು ಜನನ ನಿಯಂತ್ರಣ, ಸಂಭೋಗವನ್ನು ನಿರಾಕರಿಸುವ ಮತ್ತು ತಡೆಗಟ್ಟುವ ವಿಧಾನಗಳು ಎಲ್ಲವೂ ಲಿಂಗ ಶಿಕ್ಷಣದ ಪರಿಧಿಯಲ್ಲಿ ಬರುತ್ತವೆ.

ಲಿಂಗಶಿಕ್ಷಣದ ಪ್ರಕ್ರಿಯೆ ಅನನ್ಯವಾದುದು. ಯುವಜನರಿಗೆ ಲಿಂಗಶಿಕ್ಷಣದ ಅಡಿಯಲ್ಲಿ ನಿರ್ದಿಷ್ಟ ವಿಷಯಗಳನ್ನು ತಿಳಿಸಬೇಕಾಗುತ್ತದೆ. ಯುವಜನರು ಲೈಂಗಿಕತೆಯ ಬಗೆಗಿನ ಮಾಹಿತಿಯನ್ನು ಅನೇಕ ಮೂಲಗಳಿಂದ ಪಡೆಯುತ್ತಾರೆ. ಅವರದೇ ವಯಸ್ಸಿನ ಗೆಳೆಯರು, ಮಾಧ್ಯಮಗಳು, ಜಾಹೀರಾತುಗಳು, ದೂರದರ್ಶನ, ನಿಯತಕಾಲಿಕೆಗಳು, ಭಿತ್ತಿಪತ್ರಗಳು, ಪುಸ್ತಕಗಳು, ಅಂತರ್ಜಾಲ, ಇತ್ಯಾದಿ. ಇವುಗಳಲ್ಲಿ ಎಲ್ಲವೂ ನಿರ್ದುಷ್ಟವಾದ ಮಾಹಿತಿಯನ್ನೇ ಒದಗಿಸುತ್ತವೆ ಎಂದು ಹೇಳಲಾಗದು. ಹಾಗಾಗಿ ಲಿಂಗಶಿಕ್ಷಣದ ಅಡಿಯಲ್ಲಿ ಮಾಡಬೇಕಾದುದೆಂದರೆ, ಯುವಜನರು ಈ ಮಾಹಿತಿ ಮೂಲಗಳಲ್ಲಿ ಯಾವ ಮೂಲಗಳಿಂದ ವಿಷಯಗಳನ್ನು ಕಲೆಹಾಕುತ್ತಿದ್ದಾರೆ ಎಂಬುದನ್ನು ತಿಳಿದು ಆ ಮಾಹಿತಿಯ ಸಮಂಜಸತೆ ಹಾಗೂ ವಿಶ್ವಸನೀಯತೆಯ ಬಗ್ಗೆ ಅರಿವು ಮೂಡಿಸುವುದು. ಈಗಾಗಲೇ ಅವರು ತಿಳಿದಿರುವ ವಿಷಯಗಳನ್ನು ಬೇರೆ ಬೇರೆ ರೀತಿಗಳಲ್ಲಿ ಅವರಿಂದ ತಿಳಿದು ಆ ಮಾಹಿತಿ ಸರಿಯಾಗಿದೆಯೇ ಎಂಬುದನ್ನೂ ಪರೀಕ್ಷಿಸಬೇಕು. ಗರ್ಭನಿರೋಧಕಗಳು ಕ್ಷೇಮಕರವಲ್ಲ ಎಂದೋ, ಏಡ್ಸ್ ರೋಗ ಗುಣವಾಗುತ್ತದೆ ಎಂದೋ ಮಾಹಿತಿ ದೊರೆತಿರಬಹುದು. ಅಂತಹ ಸಂದರ್ಭಗಳಲ್ಲಿ ಮುಂದೆ ಆ ಮೂಲದಿಂದ ಮಾಹಿತಿ ಪಡೆಯುವಾಗ ಎಚ್ಚರಿಕೆ ವಹಿಸಲು ಹೇಳಬೇಕು ಅಥವಾ ಆ ಮೂಲಗಳಿಂದ ಮಾಹಿತಿ ಪಡೆಯಬಾರದೆಂದು ಹೇಳಿಕೊಡಬೇಕು.

ಲಿಂಗಶಿಕ್ಷಣದ ಪ್ರಕ್ರಿಯೆಯಲ್ಲಿ ಕೆಲವು ರೀತಿಯ ಎಚ್ಚರಿಕೆಗಳು ಅಗತ್ಯ. ಲಿಂಗ ಮತ್ತು ಲೈಂಗಿಕತೆಗೆ ಸಂಬಂಧಿಸಿದಂತೆ ತಾರುಣ್ಯಾವಸ್ಥೆಯಲ್ಲಿರುವವರಲ್ಲಿ ವಿಶಾಲವಾದ ಮನೋಭಾವವನ್ನು ಮೂಡಿಸಲು ಲಿಂಗ ಶಿಕ್ಷಣದಿಂದ ಸಾಧ್ಯವಿದೆ. ಆದರೂ ಈ ಮನೋಭಾವಗಳು, ನಂಬಿಕೆಗಳು ಕೆಲವೊಮ್ಮೆ ವಿರೋಧಾಭಾಸವನ್ನೂ ಗೊಂದಲವನ್ನೂ ಮೂಡಿಸಬಹುದು. ಉದಾಹರಣೆಗೆ, ಉತ್ತಮ ಆರೋಗ್ಯದ ಅಭ್ಯಾಸಗಳನ್ನು ಕುರಿತ ಕೆಲವು ಮಾಹಿತಿಗಳು ಲೈಂಗಿಕತೆಗೆ ಸಂಬಂಧಿಸಿದ ಅಪಾಯಗಳನ್ನು ಕ್ಲೇಶಗಳನ್ನು ಮುಂದಿಟ್ಟರೆ ಮತ್ತೆ ಕೆಲವು ಮಾಹಿತಿಗಳು ಲೈಂಗಿಕವಾಗಿ ಕ್ರಿಯಾಶೀಲವಾಗಿರುವವರು ಹೆಚ್ಚು ಆಕರ್ಷಕವಾಗಿಯೂ ಸುಂದರವಾಗಿಯೂ ಇರುತ್ತಾರೆ ಎಂಬ ಚಿತ್ರವನ್ನು ಬಿಂಬಿಸಬಹುದು. ಲಿಂಗ ಹಾಗೂ ಲೈಂಗಿಕತೆ ಎಂಬುದು ಅತಿ ಸೂಕ್ಷ್ಮವಾದ ವಿಚಾರವಾದ್ದರಿಂದ ಯುವಕರೇ ಆಗಲಿ ಲಿಂಗ ಶಿಕ್ಷಣ ತಜ್ಞರೇ ಆಗಲೀ ಅತೀ ದೃಢವಾದ ಅಭಿಪ್ರಾಯಗಳನ್ನು ಹೊಂದಿರಬೇಕು. ಇವುಗಳಿಗೆ ಸಂಬಂಧಿಸಿದ ನೈತಿಕ ಚೌಕಟ್ಟಿನ ಅರಿವೂ ಇರಬೇಕು. ಕೆಲವೊಮ್ಮೆ ಬಹಳಷ್ಟು ಸರಿ ಎಂದೆನಿಸುವ ಅಭಿಪ್ರಾಯಗಳಿಗೂ ನೈತಿಕ ಚೌಕಟ್ಟಿಗೂ ನಡುವೆ ಭಿನ್ನಾಭಿಪ್ರಾಯಗಳಿರಬಹುದು, ಏಕೆಂದರೆ ಈ ಎರಡೂ ಅಭಿಪ್ರಾಯಗಳ ಹಿಂದಿನ ಮನೋಧರ್ಮ ಬೇರೆ ಬೇರೆಯಾಗಿರಬಹುದು. ಸಾಮಾನ್ಯವಾಗಿ ಹದಿಹರೆಯದ ಮಕ್ಕಳು ಗರ್ಭಪಾತ, ವಿವಾಹಪೂರ್ವ ಲೈಂಗಿಕತೆ, ಗರ್ಭನಿರೋಧಕ, ಜನನ ನಿಯಂತ್ರಣ ಇವುಗಳ ಬಗ್ಗೆ ಹೆಚ್ಚು ಭಾವುಕರಾಗಿ ಮಾತನಾಡಬಯಸುತ್ತಾರೆ. ಅವು ತಾರ್ಕಿಕವೂ ಆಗಿರಬಹುದು. ಈ ಸಂದರ್ಭಗಳಲ್ಲಿ ಆಯಾ ಪ್ರದೇಶದ ಸಾಂಸ್ಕೃತಿಕ, ಧಾರ್ಮಿಕ ಹಾಗೂ ನೈತಿಕ ವಿಚಾರಗಳನ್ನು ನಾವು ಒಪ್ಪುತ್ತೇವೆಯೋ ಇಲ್ಲವೋ ಎಂಬುದು ಬಹಳ ಮುಖ್ಯವಾಗುತ್ತದೆ.

ಲಿಂಗಶಿಕ್ಷಣವನ್ನು ಕೊಡುವ ವ್ಯಕ್ತಿಗಳಿಗೆ ಲೈಂಗಿಕತೆಯ ಬಗ್ಗೆ ಅವರದೇ ಆದ ಮನೋಭಾವಗಳು ನಂಬಿಕೆಗಳು ಇರುತ್ತವೆ. ಇದೇ ಅಭಿಪ್ರಾಯಗಳು ಅವರು ಕೊಡುವ ಲೈಂಗಿಕ ಶಿಕ್ಷಣದ ಮೇಲೆ ನೇತ್ಯಾತ್ಮಕವಾದ ಪರಿಣಾಮವನ್ನುಂಟುಮಾಡಬಾರದು. ಉದಾಹರಣೆಗೆ, ವಿವಾಹಪೂರ್ವ ಲೈಂಗಿಕತೆಯನ್ನು ಒಪ್ಪಬಹುದು ಎಂಬುದು ಒಬ್ಬ ವ್ಯಕ್ತಿಯ ವೈಯಕ್ತಿಕ ಅಭಿಪ್ರಾಯವಾದರೂ ಇದು ಆಯಾ ಸಮಾಜದ ಸಂಸ್ಕೃತಿಯಲ್ಲಿ ಒಪ್ಪಿಗೆ ಪಡೆದಿದೆಯೇ ಎಂಬುದನ್ನೂ ಗಮನಿಸಬೇಕಾಗುತ್ತದೆ. ಅಂದಮಾತ್ರಕ್ಕೆ ಕ್ಷೇಮಕರವಾದ ಗರ್ಭನಿರೋಧಕ ಅಥವಾ ಲೈಂಗಿಕತೆಯ ವಿಷಯಗಳನ್ನು ಅವನು ತಿಳಿಸಬಾರದು ಎಂದೇನಿಲ್ಲ. ಲಿಂಗ ಮತ್ತು ಲೈಂಗಿಕತೆಯನ್ನು ಕುರಿತಂತೆ ಯುವಜನರಲ್ಲಿ ಸಂಕುಚಿತವಾದ ನೇತ್ಯಾತ್ಮಕ ವಿಚಾರಗಳನ್ನು ಹೇರುವ ಪ್ರಯತ್ನ ಸಂಪೂರ್ಣವಾಗಿ ಸೋತಿದೆ. ಇಂದು ಇದ್ದುದನ್ನು ಇರುವಂತೆ ಹೇಳಬೇಕಾಗುತ್ತದೆ. ಲೈಂಗಿಕತೆಯನ್ನು ಕುರಿತಂತೆ ಹೆದರಿ ಯುವಕರು ದೂರಹೋಗುವ ಬದಲಾಗಿ ಸಕಾರಾತ್ಮಕ ಮನೋಭಾವವನ್ನು ಅಗತ್ಯವಾದ ಕೌಶಲಗಳ ಬೆಳವಣಿಗೆಯನ್ನೂ ಲಿಂಗಶಿಕ್ಷಣ ಗುರಿಯಾಗಿಡುವುದು ಅಗತ್ಯವಾಗಿದೆ. ಇದು ಯುವಜನರಲ್ಲಿ ಲೈಂಗಿಕತೆಯನ್ನು ಕುರಿತಂತೆ ಅದರ ಅನುಭವವನ್ನು ಕುರಿತಂತೆ ಕ್ಷೇಮಕರವಾದ ಅರಿವು ಮತ್ತು ಮನೋಭಾವವನ್ನು ಬೆಳೆಸುತ್ತದೆ.

ಲಿಂಗಶಿಕ್ಷಣವು ಅನೇಕ ಕಾರಣಗಳಿಂದ ಮಹತ್ವದ್ದಾಗುತ್ತದೆ. ಜನರು ಲೈಂಗಿಕ ಚಟುವಟಿಕೆಗಳಲ್ಲಿ ಏಕೆ ತೊಡಗುತ್ತಾರೆ ಇತ್ಯಾದಿ ಅಂಶಗಳನ್ನು ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ಅರ್ಥ ಮಾಡಿಸುವುದರೊಂದಿಗೆ ಅದು ಗಂಡು ಹೆಣ್ಣುಗಳ ನಡುವೆ ನವಿರಾದ ಭಾವಗಳ ಬೆಳವಣಿಗೆಗೆ ಆ ಮೂಲಕ ಹೊಂದಾಣಿಕೆ, ವಿವೇಕ, ಪ್ರೌಢಭಾವಗಳನ್ನು ಜಾಗೃತಗೊಳಿಸುತ್ತದೆ. ಸ್ವನಿರ್ಧಾರ, ಸ್ವಂತ ಅಭಿಪ್ರಾಯಗಳ ಮೇಲೆ ಜೀವನ ನಡೆಸುವ ಕೌಶಲಗಳನ್ನು


Digitised by Bharatavani, CIIL

ಮೂಡಿಸುತ್ತದೆ. ಲಿಂಗ ವ್ಯತ್ಯಾಸಗಳ ಅರಿವು ಮೂಡಿಸುವುದರೊಂದಿಗೆ ಲೈಂಗಿಕತೆ ಹಾಗೂ ವಾಂಶಿಕವಾದ ಪಾರಂಪರಿಕವಾದ ಅಂಶಗಳು ಜನಗಳ ಭಾವನೆಗಳನ್ನು ನಿರ್ಧಾರಗಳನ್ನು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ಇದು ತೋರಿಸಿಕೊಡುತ್ತದೆ. ಸಂಬಂಧಗಳ ಅಪೇಕ್ಷಣೀಯ ಲಕ್ಷಣಗಳು ಯಾವುವು ಎಂಬುದನ್ನೂ ಲಿಂಗ ಶಿಕ್ಷಣ ಅರಿವಿಗೆ ತರುತ್ತದೆ. ಲೈಂಗಿಕತೆಯಿಂದ ಪ್ರಾರಂಭವಾದ ಸಂಬಂಧಗಳು ಹೇಗೆ ಅನ್ಯೋನ್ಯತೆಯ ಕಡೆ ವಾಲಿಕೊಂಡು ಇಬ್ಬರೂ ಒಬ್ಬರಿಗೊಬ್ಬರು ಸಹಕಾರದಿಂದ ಪ್ರೀತಿಯಿಂದ ಬಾಳುವ ಹಾಗೆ ಬೆಳೆಯುತ್ತವೆ ಎಂಬ ಅಂಶವನ್ನೂ ಲಿಂಗ ಶಿಕ್ಷಣ ಸ್ಪಷ್ಟಪಡಿಸುತ್ತದೆ. ಹಿಂಸೆ, ನಿಂದೆ, ದೌರ್ಜನ್ಯ ಇವು ಸಂಬಂಧಗಳನ್ನು ಹೇಗೆ ಹಾಳುಮಾಡುತ್ತವೆ ಎಂಬುದೂ ಇದರಿಂದ ಗಮನಕ್ಕೆ ಬರುತ್ತದೆ. ಈ ಕಾರಣದಿಂದಲೇ ಲಿಂಗ ಶಿಕ್ಷಣ ಸಮಾಜಕ್ಕೆ ಒಂದು ವರದಾನ ಎಂದು ಹೇಳಬಹುದು.

ಶಾಲೆಗಳಲ್ಲಿ ಲಿಂಗಶಿಕ್ಷಣವನ್ನು ಪಠ್ಯಕ್ರಮದ ಒಂದು ಪ್ರಮುಖ ವಿಷಯವಾಗಿ ಮತ್ತೆಕೆಲವು ಕಡೆಗಳಲ್ಲಿ ಜೀವಶಾಸ್ತ್ರದ, ಆರೋಗ್ಯಶಾಸ್ತ್ರದ ಗೃಹ ಅರ್ಥಶಾಸ್ತ್ರದ ಅಥವಾ ದೈಹಿಕ ಶಿಕ್ಷಣದ ಭಾಗವಾಗಿ ಕೊಡಲಾಗುತ್ತದೆ. ಕೆಲವು ದೇಶಗಳಲ್ಲಿ ಲಿಂಗ ಶಿಕ್ಷಣ ಕೊಡಬೇಕೇ ಎಂಬುದೇ ಅತ್ಯಂತ ಚರ್ಚಾಸ್ಪದವಾಗಿದ್ದು ಈ ರೀತಿಯ ಶಿಕ್ಷಣವನ್ನು ಕೊಡುವ ಪ್ರಯತ್ನಗಳೇ ಪ್ರಾರಂಭವಾಗದಿರುವುದೂ ಉಂಟು. ಏಡ್ಸ್ ರೋಗದ ವ್ಯಾಪಕವಾದ ಸನ್ನಿವೇಶ ಲಿಂಗ ಶಿಕ್ಷಣದ ಅಗತ್ಯವನ್ನು ಕುರಿತ ತುರ್ತಾದ ಅನಿವಾರ್ಯತೆಯನ್ನು ಎತ್ತಿ ಹಿಡಿದಿದೆ. ಅನೇಕ ದೇಶಗಳಲ್ಲಿ ಅದರಲ್ಲೂ ಈ ರೋಗ ಅತಿ ಹೆಚ್ಚಿನ ಪ್ರಮಾಣದಲ್ಲಿರುವ ದೇಶಗಳಲ್ಲಿ ಲಿಂಗ ಶಿಕ್ಷಣವು ಸಾರ್ವಜನಿಕ ಆರೋಗ್ಯದ ಮಾರ್ಗೋಪಾಯವಾಗಿ ಪರಿಗಣಿತವಾಗಿದೆ. ಕೆಲವು ರಾಷ್ಟ್ರೀಯ ಸಂಸ್ಥೆಗಳ ಪ್ರಕಾರ ಅನೇಕ ದೇಶಗಳು ಲಿಂಗ ಶಿಕ್ಷಣವು ಜನಸಂಖ್ಯೆಯ ಆಧಿಕ್ಯವನ್ನು ನಿಯಂತ್ರಿಸುವಿಕೆ, ಮಹಿಳಾ ಹಕ್ಕುಗಳ ಅನ್ವಯ ಇತ್ಯಾದಿ ಅನೇಕ ಜಾಗತಿಕ ಪ್ರಯೋಜನಗಳನ್ನು ಮನಗಂಡಿವೆ.

ಲಿಂಗಶಿಕ್ಷಣ ಜಾರಿಯಲ್ಲಿರುವ ಕಡೆಗಳಲ್ಲಿ ಎರಡು ವಿಧಾನಗಳು ಚಾಲ್ತಿಯಲ್ಲಿವೆ. ಒಂದು, ಸಮಗ್ರ ಲಿಂಗಶಿಕ್ಷಣ. ಇದು ಲೈಂಗಿಕತೆಯ ನಿರೋಧವನ್ನು ಒಂದು ಉತ್ತಮ ಆಯ್ಕೆಯಾಗಿ ಬೋಧಿಸುವುದರ ಜೊತೆಗೆ ಗರ್ಭನಿರೋಧಕಗಳು ಮುಂತಾದ ವಿಷಯಗಳನ್ನು ಕುರಿತ ಹೆಚ್ಚಿನ ಮಾಹಿತಿಯನ್ನು ಕೊಡುತ್ತದೆ. ಮತ್ತೊಂದು ವಿಧದಲ್ಲಿ ಕೇವಲ ಲೈಂಗಿಕತೆಯ ನಿರೋಧವನ್ನು ಮಾತ್ರ ಲಿಂಗ ಶಿಕ್ಷಣದ ಭಾಗವಾಗಿ ಕಲಿಸಲಾಗುತ್ತದೆ. ಇದು ವಿವಾಹಪೂರ್ವದಲ್ಲಿ ಅಗತ್ಯವಾದ ಲೈಂಗಿಕತೆಯ ನಿರೋಧವನ್ನು ಮಾತ್ರ ಬೋಧಿಸಿ ಕೈ ಬಿಡುತ್ತದೆ. ಈ ಎರಡೂ ವಿಧಾನಗಳೂ ಚರ್ಚಾಸ್ಪದವಾಗಿಯೇ ಉಳಿದಿವೆ.

ಸಮಗ್ರ ಲಿಂಗಶಿಕ್ಷಣವನ್ನು ಅನುಮೋದಿಸುವವರು, ತಾರುಣ್ಯಾವಸ್ಥೆಯ ನಂತರ ಲೈಂಗಿಕತೆ ಮಕ್ಕಳ ಹಕ್ಕು. ಅದನ್ನು ಕುರಿತ ನಿರ್ಧಾರಗಳನ್ನು ಅವರು ಹೇಗೆ ತೆಗೆದುಕೊಳ್ಳಬೇಕು, ಯಾವ ಯಾವ ನಿರ್ಧಾರದಿಂದ ಯಾವ ರೀತಿಯ ಪರಿಣಾಮಗಳಾಗುತ್ತವೆ ಎಂಬುದನ್ನು ತಿಳಿಸಿಕೊಡಬೇಕು ಎಂದು ಹೇಳುತ್ತಾರೆ. ಇದಕ್ಕೆ ಬದಲಾಗಿ ನಿರೋಧಪೂರ್ವಕ ಲಿಂಗ ಶಿಕ್ಷಣವನ್ನು ಮುಂದಿಡುವವರು ಅಂತಹ ವಿಧಾನವು ನೈತಿಕ ಗುಣಮಟ್ಟವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಆಕ್ಷೇಪಿಸುತ್ತಾರೆ. ವಿವಾಹದ ಮಿತಿಯಲ್ಲೇ ಲೈಂಗಿಕತೆ "ಆರೋಗ್ಯಕರವೂ ರಚನಾತ್ಮಕವೂ" ಆಗಿರುವಂತಹುದು ಎಂದು ವಾದಿಸುತ್ತಾರೆ. ಮೊದಲನೆಯ ವಿಧ ಅನಾರೋಗ್ಯಕರವೂ ಅಪಾಯಕಾರಿಯೂ ಆದ ಪರಿಣಾಮಗಳನ್ನು ಉಂಟುಮಾಡಬಹುದು ಎಂಬುದು ಅವರ ಅಭಿಪ್ರಾಯ.

ಐತಿಹಾಸಿಕವಾಗಿ ಸ್ಫೂರ್ತಿಗೊಂಡ ಲೈಂಗಿಕತೆಯ ಪರವಾದ ಸಿಗ್ಮಂಡ್ ಫ್ರಾಯ್ಡ್ ಮುಂತಾದವರು ದೇಹದ ಮೇಲಿನ ನಿಯಂತ್ರಣದ ಜೊತೆಗೆ ಸಾಮಾಜಿಕ ನಿಯಂತ್ರಣದಿಂದ ಮುಕ್ತಿ ಎಂಬ ಎರಡು ಅಂಶಗಳನ್ನು ಮುಂದಿಡುತ್ತಾರೆ. ಲಿಂಗ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕೇ ಎಂಬ ಪ್ರಶ್ನೆಯನ್ನು ಪ್ರಶ್ನೆಯಾಗಿಯೇ ಕೇಳುತ್ತಾರೆ. ಇವರ ಪ್ರಕಾರ ಲೈಂಗಿಕ ಶಿಕ್ಷಣ ಎಂದರೆ ವ್ಯಕ್ತಿಗೆ ಸಾಮಾಜಿಕವಾಗಿ ವ್ಯವಸ್ಥಿತವಾದ ಲೈಂಗಿಕ ನಿಯಂತ್ರಣಗಳಿಂದ ಮುಕ್ತಿಪಡೆದು ತಮ್ಮ ಮನಸ್ಸನ್ನು ಪಕ್ವಗೊಳಿಸುವ, ಗಟ್ಟಿಗೊಳಿಸುವ, ಸಂಭಾಳಿಸುವುದರ ಕುರಿತಾಗಿ ಶಿಕ್ಷಣವನ್ನು ನೀಡುವುದು ಎಂದಾಗುತ್ತದೆ. ಇವರ ದೃಷ್ಟಿಯಲ್ಲಿ ಸಾಮಾಜಿಕವಾಗಿ ಲೈಂಗಿಕ ನಿಯಂತ್ರಣ ಅಪಾಯಕಾರಿಯೂ ಆದುದು.

ಲಿಂಗಶಿಕ್ಷಣ ಯಾವಾಗ ಪ್ರಾರಂಭವಾಗಬೇಕು ಎಂಬುದೂ ಮುಖ್ಯವಾದ ಪ್ರಶ್ನೆ. ಮಕ್ಕಳು ತಾರುಣ್ಯಾವಸ್ಥೆಗೆ ತಲುಪುವ ಮೊದಲೇ ಲಿಂಗ ಶಿಕ್ಷಣ ಪ್ರಾರಂಭವಾಗಬೇಕು. ಲೈಂಗಿಕತೆಯನ್ನು ಕುರಿತಂತೆ ಈ ಮಕ್ಕಳು ಕೆಲವು ವರ್ತನೆಗಳನ್ನು ಬೆಳೆಸಿಕೊಳ್ಳುವ ಮೊದಲೇ ಇದು ಮೊದಲಾಗಬೇಕು. ಈ ಶಿಕ್ಷಣ ನಿರ್ದಿಷ್ಟವಾಗಿ ಯಾವಾಗ ಪ್ರಾರಂಭವಾಗಬೇಕು ಎಂಬುದು ಮಕ್ಕಳ ದೈಹಿಕ ಭಾವನಾತ್ಮಕ ಮತ್ತು ಬೌದ್ಧಿಕ ಬೆಳವಣಿಗೆಯ ಮೇಲೆ ಅವಲಂಬಿಸಿರುತ್ತದೆ. ಇದರ ಜೊತೆಗೆ ಹೇಳಿದುದನ್ನು ಓದಿದುದನ್ನು ಗ್ರಹಿಸುವ ಅವರ ಸಾಮರ್ಥ್ಯವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಲಿಂಗ ಶಿಕ್ಷಣವನ್ನು ಕುರಿತಂತೆ ಎಷ್ಟು ಹೇಳಿಕೊಡಲಾಗಿದೆ ಎಂಬುದು ಯಾರು ಹೇಳಿಕೊಡುತ್ತಿದ್ದಾರೆ, ಯಾವಾಗ ಮತ್ತು ಯಾವ ಸನ್ನಿವೇಶದಲ್ಲಿ ಹೇಳಿಕೊಡುತ್ತಿದ್ದಾರೆ, ಹೇಳಿಸಿಕೊಳ್ಳುವ ವಿದ್ಯಾರ್ಥಿಯ ಅಗತ್ಯವೇನು ಎಂಬುದರ ಮೇಲೆ ನಿಂತಿದೆ. ಮಕ್ಕಳಿಗೆ ಮೂಲಭೂತ ವಿಷಯಗಳ ಅರಿವು ಕೊಟ್ಟಲ್ಲಿ ಮುಂದೆ ಸಂಕೀರ್ಣವಾದ ವಿಷಯಗಳನ್ನು ತಿಳಿಯಲು ಸುಲಭವಾಗುತ್ತದೆ. ಚಿಕ್ಕವರಿರುವಾಗಲೇ ಮಾನವನ ದೇಹದ ಬೆಳವಣಿಗೆ ಹೇಗೆ ಆಗುತ್ತದೆ, ಕಾಲಕಾಲಕ್ಕೆ ಆಗುವ ಬದಲಾವಣೆಗಳೇನು, ಚಿಕ್ಕ ಮಗು ದೊಡ್ಡದಾಗುವುದು ಹೇಗೆ ಈ ಅಂಶಗಳನ್ನು ಸ್ಪಷ್ಟಮಾಡುವುದರಿಂದ ಮುಂದಿನ ವಿಷಯಗಳ ಕಲಿಕೆ ಸುಲಭವಾಗುತ್ತದೆ, ಸಾಧ್ಯವಾಗುತ್ತದೆ. ಇದು ತಾರುಣ್ಯಾವಸ್ಥೆಯ ಹಾಗೂ ಅದಕ್ಕೆ ಪೂರ್ವದ ಹಂತಗಳ ವಿಷಯಗಳನ್ನು ಅರಿಯಲು ಸಹಕಾರಿಯಾಗುತ್ತದೆ. ಮಕ್ಕಳು ಚಿಕ್ಕವರಿರುವಾಗ ವೈರಸ್‌ಗಳು ಹಾಗೂ ಜಂತುಗಳು ಹೇಗೆ ಸೋಂಕಿಗೆ ಕಾರಣವಾಗುತ್ತವೆ ಅದರಿಂದ ಏನಾಗುತ್ತದೆ ಎಂಬುದನ್ನೂ ಮೊದಲೇ ಮನಗಾಣಿಸುವುದು ಒಳ್ಳೆಯದು. ಇದು ಲೈಂಗಿಕತೆಯಿಂದಾಗುವ ಸೋಂಕುಗಳನ್ನು ಅರ್ಥಮಾಡಿಸುತ್ತದೆ.

ಮಕ್ಕಳು ಚಿಕ್ಕವರಿರುವಾಗ ಲಿಂಗಶಿಕ್ಷಣ ಕೊಡುವುದರಿಂದ ಅದು ಸಲ್ಲದ ಕುತೂಹಲವನ್ನು ಕೆರಳಿಸಿ ಲೈಂಗಿಕ ಪ್ರಯೋಗಗಳನ್ನು ಮಾಡುವಂತಹ ಅಪಾಯಕಾರಿ ಪರಿಣಾಮವನ್ನುಂಟುಮಾಡುತ್ತದೆ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ. ಅಂತಹ ಅಪಾಯಗಳು ಆಗುವುದಿಲ್ಲ ಎಂಬುದನ್ನು ಸಂಶೋಧನೆಗಳು ವರದಿ ಮಾಡಿವೆ. ಇಂತಹ ಮಾಹಿತಿಗಳು ಮುಂದೆ ಅವರಿಗೆ ಅಗತ್ಯವಿರುವಾಗ ಸಿದ್ಧವಾಗಿರಬೇಕು ಎಂಬ ಹಿನ್ನೆಲೆಯಲ್ಲಿ ಲಿಂಗಶಿಕ್ಷಣ ಅದಕ್ಕೆ ಪೂರಕವಾದ ಎಲ್ಲ ಮಾನಸಿಕ ಸಿದ್ಧತೆಗಳೊಂದಿಗೆ ಯೋಜಿಸಿದ ಶಿಕ್ಷಣವಾಗಿರುತ್ತದೆ. ಲಿಂಗಶಿಕ್ಷಣವನ್ನು ಯಾರು ಕೊಡಬೇಕು ಎಂಬುದೂ ಪ್ರಮುಖವಾದ ವಿಚಾರ. ಲಿಂಗಶಿಕ್ಷಣವನ್ನು ಕೊಡುವ ಸಾಮಾನ್ಯ ನಿಯೋಗಗಳೆಂದರೆ ಶಾಲೆ, ಕುಟುಂಬ ಹಾಗೂ ಸಾರ್ವಜನಿಕ ಆರೋಗ್ಯ ಅಭಿಯಾನಗಳು. ಲಿಂಗಶಿಕ್ಷಣವನ್ನು ಅನೇಕ ಸನ್ನಿವೇಶಗಳಲ್ಲಿ ಕೊಡಬಹುದು. ಶಾಲೆಯ ಒಳಗೆ ಮತ್ತು ಹೊರಗೆ ಲಿಂಗಶಿಕ್ಷಣವನ್ನು ಕೊಡಬೇಕಾದ ಜವಾಬ್ದಾರಿ ಅನೇಕರ ಮೇಲೆ ಇರುತ್ತದೆ. ಲಿಂಗಶಿಕ್ಷಣ ಕೊಡುವಲ್ಲಿ ಹೆಚ್ಚು ಪ್ರಭಾವಬೀರುವವರೆಂದರೆ ಶಿಕ್ಷಕರು. ಶಾಲೆಯಲ್ಲಿ

Digitised by Bharatavani, CIIL

ಅಧ್ಯಾಪಕರ ಮತ್ತು ಮಕ್ಕಳ ನಡುವಿನ ಅಂತರ್‌ಕ್ರಿಯೆ ಕುಟುಂಬಕ್ಕಿಂತ ಭಿನ್ನವಾಗಿರುತ್ತದೆ. ಇದು ಹೆಚ್ಚು ಔಪಚಾರಿಕವಾದರೂ ಇಲ್ಲಿಯೂ ಕಲಿಸಲು ಹೇರಳವಾದ ಅವಕಾಶಗಳಿರುತ್ತವೆ. ಸಾಮಾನ್ಯವಾಗಿ ಶಾಲೆಯಲ್ಲಿ ಲಿಂಗ ಶಿಕ್ಷಣವು ವ್ಯವಸ್ಥಿತ ಪಾಠಗಳ ರೂಪದಲ್ಲಿರುತ್ತವೆ. ಲಿಂಗ ಶಿಕ್ಷಣದ ಉತ್ತಮವಾದ ಉಪಕ್ರಮವೆಂದರೆ ಕುಟುಂಬಗಳ ಒತ್ತಾಸೆಯ ಸಹಯೋಗದಿಂದ ಮಾಡುವಂತಹುದು. ಶಾಲೆ ಮತ್ತು ಕುಟುಂಬ ಎರಡೂ ಮಾಧ್ಯಮಗಳಿಂದ ವಿದ್ಯಾರ್ಥಿಗಳಿಗೆ ಸಿಗುವ ಮಾಹಿತಿಯ ಸಮಂಜಸತೆಯನ್ನು ದೃಢೀಕರಿಸಬೇಕು. ಯುವಜನರು ಯುವಜನರಿಂದಲೇ ಈ ಕುರಿತ ಮಾಹಿತಿಯನ್ನು ಪಡೆಯುವ ಉಪಕ್ರಮ ಬಹಳಷ್ಟು ದೇಶಗಳಲ್ಲಿ ಜಾರಿಯಲ್ಲಿದೆ. ಯುವಜನರ ಜ್ಞಾನ, ಮನೋಭಾವ ಮತ್ತು ವರ್ತನೆಗಳನ್ನು ಉತ್ತಮಪಡಿಸುವಲ್ಲಿ ಶಾಲಾ ಆಧಾರಿತ ಲಿಂಗ ಶಿಕ್ಷಣ ಕಾರ್ಯಕ್ರಮ ಪ್ರಮುಖವೂ ಪರಿಣಾಮಕಾರಿಯೂ ಆದ ಸಾಧನ.

ಪರಿಣಾಮಕಾರಿ ಲಿಂಗಶಿಕ್ಷಣವನ್ನು ಒದಗಿಸುವುದು ನಿಜವಾಗಿಯೂ ಒಂದು ಸವಾಲಿನ ವಿಷಯ. ಏಕೆಂದರೆ ಇದು ಅತ್ಯಂತ ಸೂಕ್ಷ್ಮವಾದ ವಿಚಾರಗಳನ್ನು ಒಳಗೊಳ್ಳುತ್ತದೆ. ಜೊತೆಗೆ ಹೆತ್ತವರು, ಶಾಲಾ ಸಿಬ್ಬಂದಿ, ಸಮುದಾಯದ ಗುಂಪುಗಳ ಜನರು, ಆರೋಗ್ಯ ಸೇವಾ ನಿರತರು ಇತ್ಯಾದಿ ಅನೇಕ ಜನರ ಸಹಭಾಗಿತ್ವವನ್ನು ಅಪೇಕ್ಷಿಸುತ್ತದೆ. ಆದಾಗ್ಯೂ ಲಿಂಗ ಶಿಕ್ಷಣವು ಅನೇಕ ವೈಯಕ್ತಿಕ ಚಟುವಟಿಕೆಗಳನ್ನು ಒಳಗೊಳ್ಳುವುದರಿಂದ, ಅನೇಕ ಹಂತಗಳಲ್ಲಿ ಸನ್ನಿವೇಶಗಳಲ್ಲಿ ನಡೆಯುವುದರಿಂದ ಕಲಿಕೆಗೆ ಬಹಳಷ್ಟು ಅವಕಾಶಗಳಿವೆ. ಈ ನಿಟ್ಟಿನಲ್ಲಿ ಒಬ್ಬ ವ್ಯಕ್ತಿ ಕೊಡಬಹುದಾದ ಕೊಡುಗೆ ಆ ವ್ಯಕ್ತಿಯ ಸಂಬಂಧ, ಪಾತ್ರ ಹಾಗೂ ವಿಷಯದಲ್ಲಿ ಅವನಿಗಿರುವ ಪರಿಣತಿಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ, ಪೋಷಕರು ಯುವಜನತೆಗೆ ಸಂಬಂಧಿಸಿದಂತೆ ಅತ್ಯಂತ ಹತ್ತಿರದಲ್ಲಿ ಕೆಲಸಮಾಡಬಲ್ಲವರು. ಇವರ ಪಾತ್ರ ಚಿಕ್ಕಂದಿನಿಂದಲೇ ಮುಖ್ಯವಾಗಿ ವೈಯಕ್ತಿಕ ಒತ್ತಾಸೆ, ಶಿಕ್ಷಣ ಇವುಗಳನ್ನು ಒದಗಿಸುವುದಾಗಿರುತ್ತದೆ. ಶಾಲಾ ಆಧಾರಿತ ಲಿಂಗ ಶಿಕ್ಷಣ ಮುಖ್ಯವಾಗಿ ಔಪಚಾರಿಕವಾದ ರೀತಿಯಲ್ಲಿ ಕೌಶಲಗಳ ಬೆಳವಣಿಗೆಗೆ ಹಾಗೂ ಮನೋಭಾವಗಳ ಸ್ಪಷ್ಟೀಕರಣಕ್ಕೆ ಅಗತ್ಯವಾದ ಮಾಹಿತಿಯನ್ನೂ ಅವಕಾಶಗಳನ್ನೂ ಒದಗಿಸುತ್ತದೆ. ಇದು ಪಠ್ಯಕ್ರಮದ ಪಾಠಗಳ ಸಹಾಯದಿಂದ ಸಾಗುತ್ತದೆ. ಸಮುದಾಯ ಆಧರಿತವಾದ ಯೋಜನೆಗಳು ಹೆಚ್ಚು ಔಪಚಾರಿಕವಲ್ಲದ ರೀತಿಯಲ್ಲಿ ಮಾಹಿತಿ, ಸೇವೆ ಮತ್ತು ಸಲಹೆಗಳನ್ನು ಒದಗಿಸುತ್ತವೆ. ಲೈಂಗಿಕ ಹಾಗೂ ಸಾಮಾನ್ಯ ಆರೋಗ್ಯ ಸೇವೆಗಳು ನಿರ್ದಿಷ್ಟ ಮಾಹಿತಿಗಳನ್ನು ಒತ್ತಾಸೆಗಳನ್ನು ಸೇವೆಗಳನ್ನು ಪಡೆಯಲು ಸಹಕರಿಸುತ್ತವೆ. ಯುವಜನರ ಮೇಲೆ ಸಹಚರರ ಮತ್ತು ಸಮಾಜದ ಒತ್ತಡಗಳನ್ನು ನಿರ್ವಹಿಸುವುದು, ಸಂವಹನ, ವಿಚಾರಣೆ ಮತ್ತು ದೃಢತೆಯ ಕೌಶಲಗಳನ್ನು ಅಭ್ಯಾಸಮಾಡಲು ಅವಕಾಶಗಳನ್ನು ಒದಗಿಸುವುದು, ಮಾಹಿತಿಗಳನ್ನು ತಮಗೆ ಸಂಬಂಧಿಸಿದಂತೆ ಅರ್ಥೈಸಿಕೊಳ್ಳಲು ಸಹಕಾರಿಯಾಗುವಂತೆ ಯುವಜನರನ್ನು ಒಳಗೊಂಡ ಬೋಧನೆ ಮತ್ತು ಕಲಿಕೆಯ ವಿಶೇಷ ಉಪಕ್ರಮಗಳ ಬಳಕೆ, ಈ ಎಲ್ಲ ಅಂಶಗಳನ್ನೊಳಗೊಂಡ ಔಪಚಾರಿಕ ಕಾರ್ಯಕ್ರಮಗಳು ಲಿಂಗ ಹಾಗೂ ಲೈಂಗಿಕತೆಯನ್ನು ಕುರಿತಂತೆ ಯುವಜನರಲ್ಲಿರಬೇಕಾದ ಅರಿವಿನ ಮಟ್ಟವನ್ನು ಹೆಚ್ಚಿಸುತ್ತವೆ ಎಂಬುದು ಸಾಬೀತಾಗಿದೆ. ಇದರ ಜೊತೆಗೆ ಪರಿಣಾಮಕಾರಿ ಲಿಂಗ ಶಿಕ್ಷಣವು ಲೈಂಗಿಕ ಆರೋಗ್ಯ ಸೇವೆಗಳ ಸೌಲಭ್ಯವನ್ನೂ ಒಳಗೊಳ್ಳುತ್ತದೆ. ಇದು ಲೈಂಗಿಕತೆಯನ್ನು ಕುರಿತಂತೆ ಇತರ ಮಾಧ್ಯಮಗಳಿಂದ ದೊರಕುವ ವಿಷಯಗಳನ್ನೂ ಗಣನೆಗೆ ತೆಗೆದುಕೊಳ್ಳುತ್ತದೆ. (ಉದಾಹರಣೆಗೆ, ಗೆಳೆಯರಿಂದ ಸಮೂಹ ಮಾಧ್ಯಮಗಳಿಂದ) ಇದು ಯುವಜನರ ಅಗತ್ಯಗಳಿಗೂ ಸ್ಪಂದಿಸುತ್ತದೆ.

ಸಮೂಹ ಮಾಧ್ಯಮಗಳ ಮೂಲಕ ಕೊಡಬಹುದಾದ ಲಿಂಗಶಿಕ್ಷಣವು ಸಾಮಾನ್ಯವಾಗಿ ಸ್ಥಳೀಯ, ಪ್ರಾಂತೀಯ ಮತ್ತು ರಾಷ್ಟ್ರೀಯ ಮಟ್ಟದ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಿಂದ ಪೋಷಿತವಾಗಿದ್ದು ಲೈಂಗಿಕ ಆರೋಗ್ಯ ವಿಚಾರಗಳನ್ನು ಕುರಿತಂತೆ ಜನರಲ್ಲಿ ಅರಿವು ಮೂಡಿಸಲು ಸಹಕಾರಿಯಾಗುತ್ತದೆ. ಲಿಂಗಶಿಕ್ಷಣ ಹೆಚ್ಚು ಫಲಕಾರಿಯಾಗಬೇಕಾದರೆ ಈ ಎಲ್ಲ ನಿಯೋಗಗಳು ಉತ್ತಮರೀತಿಯಲ್ಲಿ ಒಟ್ಟುಗೂಡಿ ಕಾರ್ಯಪ್ರವೃತ್ತವಾಗುವುದರಿಂದ ಸಾಧ್ಯವಾಗುತ್ತದೆ. ಇದಲ್ಲದೆ ಈ ನಿಯೋಗಗಳು ಭಿನ್ನ ಗುಂಪುಗಳ ಜನರಿಗೆ ಮದುವೆಯಾದವರಿಗೆ, ಆಗದವರಿಗೆ, ಲೈಂಗಿಕವಾಗಿ ದೌರ್ಜನ್ಯಕ್ಕೆ ಒಳಗಾದವರಿಗೆ, ಬಡತನ ಅಥವಾ ಇನ್ನಾವುದೇ ಕಾರಣಗಳಿಂದ ಲೈಂಗಿಕ ದೌರ್ಜನ್ಯಕ್ಕೆ ಹೆಚ್ಚು ಒಳಗಾಗುವ ಸಾಧ್ಯತೆ ಇರುವವರಿಗೆ, ನಿರಾಶ್ರಿತರಿಗೆ, ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ, ಅನಾಥರಿಗೆ–ಅವರಿಗೇ ವಿಶಿಷ್ಟವಾದ ಸಹಾಯವನ್ನು ಗುರುತಿಸಿ ಒದಗಿಸಬೇಕಾಗುತ್ತದೆ.

ಲಿಂಗಶಿಕ್ಷಣದಲ್ಲಿ ಕುಟುಂಬ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮಕ್ಕಳೊಡನೆ ಹೆತ್ತವರು ಲೈಂಗಿಕತೆಯ ಬಗ್ಗೆ ಮಾತನಾಡಬೇಕೇ ಬೇಡವೇ ಎಂಬುದು ಸಾಂಪ್ರದಾಯಿಕವಾದ ಭಾರತೀಯ ಸಮಾಜದಲ್ಲಿ ಒಂದು ಪ್ರಶ್ನೆ. ಹೆತ್ತವರು ಅವರಾಗಿಯೇ ಉದ್ದೇಶಪೂರ್ವಕವಾಗಿ ಅದನ್ನೊಂದು ವಿಷಯವಾಗಿ ಮಾತನಾಡದಿದ್ದರೂ ಅಂತಹ ವಿಷಯಗಳ ಕುರಿತು ಹೇಳಬೇಕಾದಾಗ ಮಕ್ಕಳು ಆ ಕುರಿತು ಪ್ರಶ್ನೆ ಕೇಳುವಾಗ ಸರಿಯಾದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಮಕ್ಕಳ, ಯುವಜನರ ಮನಸ್ಸು ಗೊಂದಲಮಯವಾಗುವುದಲ್ಲದೆ ಅಪಾಯಗಳೂ ಆಗಬಹುದು. ಇದಕ್ಕೆ ಒಂದು ಉದಾಹರಣೆ ಎಂದರೆ ಭಾರತದ ಕೆಲವು ಸಮುದಾಯಗಳಲ್ಲಿ ಹೆಣ್ಣುಮಕ್ಕಳು ಋತುಮತಿಯಾದ ಸಂದರ್ಭದಲ್ಲಿ ಅವಳನ್ನು ಸಂಪೂರ್ಣವಾಗಿ ದೈಹಿಕ ಶ್ರಮದಿಂದ ಹೊರಗಿಡಲು ಮೂರು ದಿನ ಮನೆಯಲ್ಲಿ ಒಂದು ಪ್ರತ್ಯೇಕ ಸ್ಥಳದಲ್ಲಿರಿಸುವ ಪದ್ಧತಿ ಇತ್ತು. ಈ ಕುರಿತು ಇತರೇ ಋತುಮತಿಯಾಗದ ಹುಡುಗಿಯರು ಅವರೇಕೆ ಹೀಗೆ ಕುಳಿತುಕೊಳ್ಳುತ್ತಾರೆ ಎಂದು ಕೇಳಿದರೆ ಅವರನ್ನು ಆಗಾಗ ಒಂದು ಹಕ್ಕಿ (ಕಾಗೆ) ಬಂದು ಮುಟ್ಟಿ ಹೋಗುತ್ತದೆ. ಹಾಗೆ ಮುಟ್ಟಿದಾಗಲೆಲ್ಲಾ ಅವರು ಕುಳಿತುಕೊಳ್ಳುತ್ತಾರೆ ಎಂದು ಅವರಿಗೆ ಹೇಳಲಾಗುತ್ತಿತ್ತು. ಇದು ಒಂದು ಉದಾಹರಣೆಯಷ್ಟೇ. ಅಂತಹ ವಿಷಯಗಳನ್ನು ಮನಗಾಣಿಸುವ ರೀತಿ, ಸನ್ನಿವೇಶ, ಅದಕ್ಕೆ ಬೇಕಾದ ತಯಾರಿ ಅಥವಾ ಸಿದ್ಧತೆ ಇವೆಲ್ಲವನ್ನೂ ಗಮನಕ್ಕೆ ತಂದುಕೊಂಡು ಸೂಕ್ತವಾದ ಸಮಯದಲ್ಲಿ ಸರಿಯಾದ ಮಾಹಿತಿ ಕೊಡಬೇಕು. ಲೈಂಗಿಕತೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಯಾವುದೇ ಸಂಕೋಚವಿಲ್ಲದೆ ಬೆಳೆಯುವ ಮಕ್ಕಳು ಕೇಳುವ ಸನ್ನಿವೇಶ ಕುಟುಂಬದಲ್ಲಿರಬೇಕು. ತಂದೆ, ತಾಯಿ ಮಗುವಿನೊಡನೆ ಆ ಮಟ್ಟಕ್ಕೆ ಪ್ರೀತಿಯನ್ನು ಹಂಚಿಕೊಳ್ಳುವುದರಿಂದ ಇದು ಸಾಧ್ಯವಾಗುತ್ತದೆ. ಆರೋಗ್ಯಕರವಾದ ಇಂತಹ ಮಾತುಕತೆ ಮಕ್ಕಳು ಕ್ಷೇಮದಿಂದ ಬೆಳೆಯಲು ಸೂಕ್ತ ವರ್ತನೆಗಳನ್ನು ರೂಪಿಸಿಕೊಳ್ಳಲು, ಪರಿಣಾಮಕಾರಿ ನಿರ್ಧಾರಗಳನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ. ಇದಕ್ಕಾಗಿ ಮನೆಯಲ್ಲಿ ಯುವಜನರು ಮನೆಯಲ್ಲಿರುವ ಇತರ ವ್ಯಕ್ತಿಗಳೊಂದಿಗೆ ಮುಖಾಮುಖಿಯಾಗಿ ಈ ವಿಷಯವನ್ನು ಚರ್ಚಿಸಬಹುದು. ಇವು ಮುಖ್ಯ ವಿಚಾರಗಳ, ಪ್ರಶ್ನೆಗಳ ಅಥವಾ ಕಾಳಜಿಗಳ ರೂಪದಲ್ಲಿರಬಹುದು. ಇದು ಅವರವರ ಮನೋಭಾವಗಳು ಅಭಿಪ್ರಾಯಗಳ ಬಗೆಗಿನ ಚರ್ಚೆಯ ರೂಪದಲ್ಲಿರಬಹುದು. ಮಕ್ಕಳು ಲೈಂಗಿಕತೆಯ ಬಗ್ಗೆ ಮಾತನಾಡುವುದೇ ತಪ್ಪು ಎಂದು ಭಾವಿಸಬಾರದು. ಕೆಲವೊಮ್ಮೆ ಬೆಳೆಯುವ ಮಕ್ಕಳೇ ಈ ವಿಷಯ ಮಾತನಾಡಲು ಹಿಂಜರಿಯುತ್ತಾರೆ. ಆಗ ಸಂದೇಹಗಳು ನಿವಾರಣೆಯಾಗುವ ಸನ್ನಿವೇಶಗಳನ್ನು ಹೆತ್ತವರೇ ಕಲ್ಪಿಸಿಕೊಡಬೇಕು. ದೂರದರ್ಶನದಲ್ಲಿ ಬರುವ, ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೈಂಗಿಕತೆ


Digitised by Bharatavani, CIIL

ಆಧಾರವಾದ ವಿಷಯಗಳನ್ನು ಚರ್ಚೆಗೆ ಎಳೆಯಬಹುದು. ಕುಟುಂಬದಲ್ಲಿ ಈ ರೀತಿಯ ಮುಕ್ತ ಸನ್ನಿವೇಶಗಳಿರುವಲ್ಲಿ ಮಕ್ಕಳ ವರ್ತನೆಗಳು ಹೆಚ್ಚು ಪ್ರಬುದ್ಧವಾಗಿರುತ್ತವೆ ಎಂದು ಅಧ್ಯಯನಗಳು ಹೇಳುತ್ತವೆ.

ಮಕ್ಕಳು ಶಾಲೆಯಲ್ಲಿ ಲಿಂಗಶಿಕ್ಷಣವನ್ನು ಪಡೆಯುತ್ತಾ ಹೋದಂತೆ ಈ ನಿಟ್ಟಿನಲ್ಲಿ ಪೋಷಕರ ಜವಾಬ್ದಾರಿ ಕಡಿಮೆಯಾಗುತ್ತಾ ಹೋಗುತ್ತದೆಯಾದರೂ ಸದಾ ಕಾಲ ವಿದ್ಯಾರ್ಥಿಗಳು ಜವಾಬ್ದಾರಿಯುತ ವಾದ ವಯಸ್ಕರಾಗುವವರೆಗೆ ಕುಟುಂಬಕ್ಕೆ ಈ ಕರ್ತವ್ಯ ಇದ್ದೇ ಇರುತ್ತದೆ. ಹೀಗಾಗಿ ಕುಟುಂಬವೇ ಆಗಲಿ ಶಾಲೆಯೇ ಆಗಲೀ ಲಿಂಗಶಿಕ್ಷಣವನ್ನು ಚಿಕ್ಕ ವಯಸ್ಸಿನಲ್ಲೇ ಕೊಡುವುದು ಮುಖ್ಯ ಎಂಬುದರ ಜೊತೆಗೆ ಅದನ್ನು ಅಗತ್ಯವಿರುವವರೆಗೆ ಮುಂದುವರಿಸಿಕೊಂಡು ಹೋಗಬೇಕು ಎಂಬುದೂ ಅಷ್ಟೇ ಮುಖ್ಯ.

ಲಿಂಗಶಿಕ್ಷಣವನ್ನು ಪೋಷಕರೊಂದಿಗೆ, ಗೆಳೆಯರೊಂದಿಗೆ ಧಾರ್ಮಿಕ ನಾಯಕರೊಂದಿಗಿನ ಚರ್ಚೆಯ ಮೂಲಕ ಅಥವಾ ಸಮೂಹ ಮಾಧ್ಯಮದ ಮೂಲಕವೂ ಅನೌಪಚಾರಿಕವಾಗಿ ಪಡೆಯಬಹುದು. ಇದಲ್ಲದೆ ಸ್ವಸಹಾಯ ರೀತಿಯ ಸಲಹೆ ಸೂಚನೆ ಉಪದೇಶಗಳನ್ನು ಕೊಡುವ ಬರಹಗಾರರಿಂದಲಾಗಲೀ ನಿಯತಕಾಲಿಕೆಗಳ ಸಲಹಾ ಕಾಲಂಗಳಿಂದಾಗಲೀ ಲಿಂಗಶಿಕ್ಷಣವನ್ನು ಕುರಿತ ವೆಬ್ ಸೈಟ್‌ಗಳಿಂದಾಗಲೀ ಲಿಂಗಶಿಕ್ಷಣ ಪಡೆಯುವ ಸಾಧ್ಯತೆಗಳಿವೆ.

ಲಿಂಗಶಿಕ್ಷಣ ಕೊಡಬೇಕೇ ಬೇಡವೇ ಎಂಬುದು ಭಾರತವನ್ನೂ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಚರ್ಚೆಯ ವಿಷಯವಾಗಿದೆ. ಭಾರತೀಯ ಚಿಂತಕರಲ್ಲಿ ಕೆಲವರು ಅಪಾಯಗಳನ್ನು ತಡೆಗಟ್ಟುವುದು ಅವುಗಳಾದ ಮೇಲೆ ನಿವಾರಿಸಬೇಕಾದ ಪ್ರಯತ್ನಗಳಿಗಿಂತ ಒಳ್ಳೆಯದು ಎಂಬರ್ಥದಲ್ಲಿ ಲೈಂಗಿಕತೆಯ ಕುರಿತ ಮಾಹಿತಿಗಳಿಗಿಂತ ನಿರ್ದಿಷ್ಟ ಕಾಲದವರೆಗೆ ಅದು ಸಲ್ಲದು ಎಂದು ತಿಳಿಸುವುದೇ ಮೇಲು ಎಂದು ಅಭಿಪ್ರಾಯಪಡುತ್ತಾರೆ. ಆದರೆ ಅತಿ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುವ ಮತ್ತು ಪ್ರೌಢಾವಸ್ಥೆಯಲ್ಲೇ ತಾಯಿಯರಾಗುವ ಸನ್ನಿವೇಶಗಳು ಅತಿ ಹೆಚ್ಚಾಗಿರುವ ಭಾರತದಲ್ಲಿ ಲೈಂಗಿಕತೆಯ ಕುರಿತ ಉತ್ತಮ ಮಾಹಿತಿ ಬಹಳ ಸಹಾಯಕ್ಕೆ ಬರಬಹುದು. 2005-06ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಶೇ. 12ರಷ್ಟು ಹೆಂಗಸರು 15ರಿಂದ 19ರ ವಯಸ್ಸಿನೊಳಗೆ ತಾಯಿಯಾಗಿರುತ್ತಾರೆ. ಪ್ರತಿ ಆರು ತಾಯಿಯರಲ್ಲಿ ಒಬ್ಬಳು 15ರಿಂದ 19ರ ವಯಸ್ಸಿನ ಒಳಗೆ ತಾಯಿಯಾಗಿರುತ್ತಾಳೆ. ಈ ವಯಸ್ಸಿನಲ್ಲಿ ಲೈಂಗಿಕತೆ ಭಾರತದಲ್ಲಿ ನ್ಯಾಯಯುತವೇ. ಅಂದಮೇಲೆ ಲಿಂಗಶಿಕ್ಷಣ ಇಲ್ಲಿ ಅವಶ್ಯಕ ಮಾತ್ರವಲ್ಲ, ಅನಿವಾರ್ಯವೂ ಹೌದು. ಮತ್ತೊಂದು ಸಮೀಕ್ಷೆಯ ಪ್ರಕಾರ 20ರಿಂದ 24 ವಯಸ್ಸಿನ ಒಳಗಿರುವ ಮಹಿಳೆಯರಲ್ಲಿ ಶೇಕಡ 47.4ರಷ್ಟು ಮಹಿಳೆಯರು 18ನೇ ವಯಸ್ಸಿನಲ್ಲಿ ವಿವಾಹವಾಗಿರುತ್ತಾರೆ. ಶೇ. 18ರಷ್ಟು ಮಹಿಳೆಯರು 15ನೇ ವಯಸ್ಸಿನಲ್ಲಿ ಮದುವೆಯಾಗಿರುತ್ತಾರೆ. ಈ ಸಂದರ್ಭವೂ ಲಿಂಗಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಲಿಂಗ ಶಿಕ್ಷಣವು ಏಡ್ಸ್ ರೋಗವನ್ನು ತಡೆಗಟ್ಟುವಲ್ಲಿಯೂ ಕೆಲಸಮಾಡುತ್ತದೆ. ಸರ್ಕಾರದ ಅಂಕಿಸಂಖ್ಯೆಗಳ ಪ್ರಕಾರ ಭಾರತದಲ್ಲಿ ಮೂರು ಮಿಲಿಯ ಜನರು ಏಡ್ಸ್ ರೋಗದಿಂದ ಬಳಲುತ್ತಿದ್ದಾರೆ. ಲಿಂಗ ಸಂವಾಹಕ ರೋಗಗಳಲ್ಲಿ ಶೇ. 40ರಷ್ಟು 15ರಿಂದ 29 ವಯಸ್ಸಿನವರಲ್ಲಿ ಕಾಣುತ್ತದೆ. ಏಡ್ಸ್ ರೋಗದ ಶೇ. 31ರಷ್ಟು ಜನರು ಇದೇ ವಯೋಮಾನದವರಾಗಿದ್ದಾರೆ. ಇದು ಭಾರತೀಯ ಯುವಜನತೆಯಲ್ಲಿ ಅಪಾಯದ ಸನ್ನಿವೇಶದ ಕಳವಳವನ್ನೂ ಮನಗಾಣಿಸುತ್ತದೆ. ಉತ್ತಮ ಲಿಂಗಶಿಕ್ಷಣ ಇದನ್ನು ನಿಯಂತ್ರಿಸುವಲ್ಲಿ ಫಲಕಾರಿಯಾಗುತ್ತದೆ.

–ಎ.ಶ.

## ಲಿಖಿತ ಪರೀಕ್ಷೆ

ವಿದ್ಯಾರ್ಥಿಯ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಸಾಧನೆಯನ್ನು ತಿಳಿಸುವುದೇ ಪರೀಕ್ಷೆ. ಪರೀಕ್ಷೆಗಳು ವಿದ್ಯಾರ್ಥಿಯ ಸಾಧನೆಯ ಮಟ್ಟವನ್ನು ನಿರ್ಧರಿಸುತ್ತವೆ.

ಪರೀಕ್ಷೆಗಳಲ್ಲಿ ಮೂರು ವಿಧಗಳಿವೆ. ಅವೆಂದರೆ ಮೌಖಿಕ, ಲಿಖಿತ ಹಾಗೂ ಕಾರ್ಯನಿರ್ವಹಣ. ಈ ಪರೀಕ್ಷೆಗಳಲ್ಲಿ ಲಿಖಿತ ಪರೀಕ್ಷೆ ಬಹಳ ಸಾಮಾನ್ಯವಾಗಿದೆ.

**ಲಿಖಿತ ಪರೀಕ್ಷೆಗಳು:** ಬರವಣಿಗೆ ಮುಖಾಂತರ ವಿದ್ಯಾರ್ಥಿಗಳ ಸಾಧನೆಯನ್ನು ತಿಳಿದುಕೊಳ್ಳುವ ಪರೀಕ್ಷೆ ಇದಾಗಿದೆ. ಲಿಖಿತ ಪರೀಕ್ಷೆಗಳಲ್ಲಿ ಮೂರು ವಿಧಗಳನ್ನು ಕಾಣಬಹುದು.

ಲಿಖಿತ ಪರೀಕ್ಷೆ ←
- ಪ್ರಬಂಧ ಮಾದರಿ ಪರೀಕ್ಷೆ
- ಪುಟ್ಟ / ಲಘು ಉತ್ತರ ಪರೀಕ್ಷೆ
- ಅತಿ ಪುಟ್ಟ ಉತ್ತರ ಮತ್ತು ವಸ್ತುನಿಷ್ಠ ಪರೀಕ್ಷೆ

ಲಿಖಿತ ಪರೀಕ್ಷೆಯ ಗುಣಾವಗುಣಗಳನ್ನು ಅವುಗಳ ವಿಧಗಳಿಗನುಗುಣವಾಗಿ ವಿಶ್ಲೇಷಿಸಬಹುದು.

**ಪ್ರಬಂಧ ಮಾದರಿ ಪರೀಕ್ಷೆ:** ಶಿಕ್ಷಣ ವ್ಯವಸ್ಥೆಯಲ್ಲಿ ಈ ವಿಧದ ಪ್ರಶ್ನೆಗಳು ಹೆಚ್ಚು ಬಳಕೆಯಾಗುತ್ತಿವೆ. ಈ ವಿಧದ ಲಿಖಿತ ಪರೀಕ್ಷೆಯನ್ನು ಸಾಂಪ್ರದಾಯಿಕ ಪರೀಕ್ಷೆಗಳೆಂದೂ ಕರೆಯುವರು. ಇದನ್ನು ಹೊರತು ಪಡಿಸಿದರೆ ವಿದ್ಯಾರ್ಥಿಗಳ ಮೌಲ್ಯಮಾಪನ ಸಾಧ್ಯವೇ ಇಲ್ಲವೇನೋ ಅನ್ನುವಷ್ಟರಮಟ್ಟಿಗೆ ಇದು ಶಿಕ್ಷಣದಲ್ಲಿ ಹಾಸುಹೊಕ್ಕಾಗಿದೆ. ಇದರ ಪ್ರಮುಖ ಲಕ್ಷಣಗಳು ಇಂತಿವೆ;

- ಈ ವಿಧದ ಪ್ರಶ್ನೆಗಳನ್ನು ಬರೆಯುವ ಉತ್ತರದ ಅಳತೆ ಸ್ವಲ್ಪ ಜಾಸ್ತಿಯಾಗಿರುತ್ತದೆ.
- ಸಾಮಾನ್ಯವಾಗಿ ಇಂತಹ ಪ್ರಶ್ನೆಗಳು ನಿರ್ದಿಷ್ಟ ಉತ್ತರ ಹೊಂದಿರುವುದಿಲ್ಲ.
- ಬರೆದಿರುವ ಉತ್ತರದ ನಿಖರತೆ ಹಾಗೂ ಗುಣಾತ್ಮಕತೆಯನ್ನು ವಿಷಯ ತಿಳಿದಿರುವ ವ್ಯಕ್ತಿ ಮೌಲ್ಯಮಾಪನ ಮಾಡಿದಾಗ ಮಾತ್ರ ಅರಿವಿಗೆ ಬರುತ್ತವೆ.
- ಇಂತಹ ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ವಿದ್ಯಾರ್ಥಿಯು ವಿಷಯದ ಬಗ್ಗೆ ತನಗೆ ಗೊತ್ತಿರುವುದರಲ್ಲಿ ಸುಸಂಗತ ಅಂಶಗಳನ್ನು ಆಯ್ಕೆ ಮಾಡಿ, ಸಂಘಟಿಸಿ ಸ್ವಂತ ವಾಕ್ಯದಲ್ಲಿ ಉತ್ತರಿಸಬೇಕಾಗುತ್ತದೆ.
- ಪ್ರಶ್ನೆಗಳು ಸಾಮಾನ್ಯವಾಗಿ 'ವಿವರಿಸಿ', 'ವರ್ಣಿಸಿ', 'ವಿಶ್ಲೇಷಿಸಿ', 'ಹೋಲಿಸಿ', 'ಚರ್ಚಿಸಿ' ಮುಂತಾದ ಪದಗಳಿಂದ ಆರಂಭವಾಗುತ್ತದೆ.
- ಪ್ರಬಂಧ ಮಾದರಿ ಪ್ರಶ್ನೆಗಳು ತನ್ಮೂಲಕ ದೊರೆಯುವ ಪರೀಕ್ಷಾ ಸನ್ನಿವೇಶದಲ್ಲಿ ವಿದ್ಯಾರ್ಥಿಗೆ ಪ್ರತಿಕ್ರಿಯಿಸಲು ಸಾಕಷ್ಟು ಸ್ವಾತಂತ್ರ್ಯ ನೀಡುತ್ತದೆ.
- ವಿದ್ಯಾರ್ಥಿಗಳಲ್ಲಿರುವ 1) ನಿರ್ದಿಷ್ಟ ಜ್ಞಾನದ ಮಟ್ಟ 2) ವಿವಿಧ ಸಮಸ್ಯೆ ಕಡೆಗೆ ಅವನಿಗಿರುವ ದೃಷ್ಟಿಕೋನ 3) ಆಲೋಚನಾ ಪ್ರಕ್ರಿಯೆಯಲ್ಲಿ ವೈಯಕ್ತಿಕ ಅನುಭವಗಳ ಪ್ರಭಾವ 4) ತನ್ನಲ್ಲಿರುವ ಮೌಲ್ಯಗಳು 5) ವ್ಯಕ್ತಿತ್ವದ ಅನೇಕ ಕಾರಕಗಳು 6) ತನ್ನಲ್ಲಿರುವ ವಿವಿಧ ಆಸಕ್ತಿ 7) ಮಾನಸಿಕ

Digitised by Bharatavani, CIIL

ವ್ಯವಸ್ಥೆ (Mental make up) ಮುಂತಾದವುಗಳನ್ನು ಸುಲಭವಾಗಿ ಹೊರಗೆಳೆಯಲು ಸಾಧ್ಯವಿದೆ. ಇದರಿಂದ ವಿದ್ಯಾರ್ಥಿಗಳ ಮೂಲಭೂತ ಸಾಮರ್ಥ್ಯಗಳ ಬಗ್ಗೆ ಸಮರ್ಪಕ ಮಾಹಿತಿ ಪಡೆಯಬಹುದು.

- ವಿದ್ಯಾರ್ಥಿಯು ಈ ಕೆಳಕಂಡ ಸಾಮರ್ಥ್ಯಗಳನ್ನು ಪ್ರದರ್ಶಿಸುವಂತೆ ಪ್ರೋತ್ಸಾಹಿಸುತ್ತದೆ:

– ಘಟನೆ ಹಾಗೂ ತಥ್ಯಾಂಶಗಳ (Facts & Events) ವ್ಯಾಖ್ಯಾನಿಸುವಿಕೆ.

– ಸಮಸ್ಯೆಗಳ ವಿಶ್ಲೇಷಣೆ.

– ಸಮರ್ಪಕವಾದ ದತ್ತಾಂಶಗಳ ಹಿನ್ನೆಲೆಯಲ್ಲಿ ವಾದವಿವಾದಗಳ ಹೂಡುವಿಕೆ.

– ವಿವಿಧ ತಥ್ಯಾಂಶಗಳು, ವಿಚಾರಗಳು, ಘಟನೆಗಳು, ತತ್ವಗಳು ಮುಂತಾದವುಗಳ ನಡುವೆ ಸಂಬಂಧ ಕಲ್ಪಿಸುವುದು.

- ಕೆಳಕಂಡವುಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತವೆ.

– ಮಿದುಳಿನಲ್ಲಿ ದಾಖಲಾಗಿರುವ ಮಾಹಿತಿಗಳಲ್ಲಿ ಸುಸಂಗತವಾದ ಮಾಹಿತಿಯನ್ನು ಗುರುತಿಸಿ, ಆಯ್ಕೆ ಮಾಡಿ ಬೇಕಾದ ಮಾಹಿತಿಯನ್ನು ಹೊರತೆಗೆಯಲು

– ರವಾನಿಸಬೇಕಾದ ಅಂಶಗಳಿಗೆ ತಕ್ಕ ಭಾಷಾ ಶೈಲಿಯನ್ನು ನಿರ್ಧರಿಸಲು.

– ತನ್ನದೇ ವಿಶಿಷ್ಟವಾದ ಅಭಿವ್ಯಕ್ತೀಕರಣದ ಶೈಲಿಯೊಂದನ್ನು ಸೃಷ್ಟಿಸಿ ಅದನ್ನು ಬಳಸಿಕೊಳ್ಳಲು

– ತನ್ನ ದೃಷ್ಟಿಕೋನವನ್ನು / ವಿಚಾರವನ್ನು ಮಂಡಿಸಿ ಇತರರ ಮನವೊಪ್ಪಿಸಲು ಸೂಕ್ತ ಕ್ರಮಾನುಗತಿ ಹಾಗೂ ಒಂದು ಭದ್ರವಾದ ಸಂಬದ್ಧತೆಯನ್ನು ಬಳಸಲು.

– ಮಾಹಿತಿ ಸಂಸ್ಕರಣೆಗೆ ತನ್ನ ಸೃಜನಶೀಲತೆ ಹಾಗೂ ಸ್ವಂತಿಕೆಯನ್ನು ಪ್ರದರ್ಶಿಸಲು.

**ಇತಿಮಿತಿಗಳು**

ಈ ಎಲ್ಲಾ ಸಾಮರ್ಥ್ಯಗಳ ನಡುವೆಯೂ ಪ್ರಬಂಧ ಮಾದರಿ ಪ್ರಶ್ನೆಗಳಲ್ಲಿ ಅಲ್ಲಗಳೆಯಲು ಸಾಧ್ಯವಾಗದ ಮಿತಿಗಳಿವೆ. ಪ್ರಮುಖವಾದ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

- ಈ ವಿಧದ ಪ್ರಶ್ನೆಗಳಲ್ಲಿ, ಬರೆಯುವ ಉತ್ತರದ ಉದ್ದ ಹೆಚ್ಚಿನದ್ದಾಗಿರಬೇಕು. ಹಾಗಾಗಿ ಎರಡೂವರೆ ಅಥವಾ ಮೂರು ಘಂಟೆಯ ಪರೀಕ್ಷಾವಧಿಯಲ್ಲಿ ಕೇಳಬಹುದಾದ ಪ್ರಶ್ನೆಗಳ ಸಂಖ್ಯೆ ಕಡಿಮೆಯಾಗಿ ಪಠ್ಯಕ್ರಮದ ಎಲ್ಲ ವಿಷಯಗಳನ್ನು ಮೌಲ್ಯಮಾಪನ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಮೌಲ್ಯಮಾಪನ ಸಾಧನದ ಬಹು ಮುಖ್ಯ ಗುಣಲಕ್ಷಣಗಳಾದ ಸುಸಂಗತತೆ ಹಾಗೂ ವಿಶ್ವಾಸಾರ್ಹತೆ ಎರಡನ್ನೂ ಕಳೆದುಕೊಂಡಂತಾಗುತ್ತದೆ.

- ಪ್ರಶ್ನೆಗಳಲ್ಲಿ ಸಾಂಪ್ರದಾಯಿಕವಾದ ಆಯ್ಕೆಗೆ ಅವಕಾಶ ಕಲ್ಪಿಸುವುದರಿಂದ ಅಧ್ಯಯನದಲ್ಲಿ / ಕಲಿಯುವಿಕೆಯಲ್ಲೂ ಆಯ್ಕೆ ತಂತ್ರ ಬಳಸುತ್ತಾರೆ. ಪ್ರತಿ ವಿದ್ಯಾರ್ಥಿಯೂ ಬೇರೆ ಬೇರೆ ಪ್ರಶ್ನೆಗಳನ್ನು ಆಯ್ಕೆ ಮಾಡಿ ಉತ್ತರಿಸಲು ಸಾಧ್ಯತೆ ಇರುವುದರಿಂದ ಅವರ ಸಾಮರ್ಥ್ಯದ ಹೋಲಿಕೆ ಸಾಧ್ಯವಾಗುವುದಿಲ್ಲ.

- ಪ್ರಶ್ನೆಗಳಿಗೆ ಬಳಸುವ ನಿರ್ದಿಷ್ಟ ಶಬ್ದ(ಪದ)ಗಳ ಸಂಖ್ಯೆ ಕಡಿಮೆ ಇರುವುದರಿಂದ ಅವನ್ನೇ ಮರುಬಳಕೆ ಮಾಡಬೇಕಾಗುತ್ತದೆ. ಆಗ ಪ್ರಶ್ನೆ ಪತ್ರಿಕೆಯು ಅಕ್ಷರಶಃ ಪುನರುಚ್ಚಾರಣೆ ಆದಂತಾಗುತ್ತದೆ. ಇದು ವಿದ್ಯಾರ್ಥಿಗಳಿಗೆ ಇಂತಹುದೇ ಪ್ರಶ್ನೆ ಕೇಳಬಹುದೆಂದು ಊಹೆ ಮಾಡಲು ಪ್ರೋತ್ಸಾಹಿಸುತ್ತದೆ.

- ಅಂಕ ನೀಡುವುದರಲ್ಲಿನ ವ್ಯಕ್ತಿನಿಷ್ಠತೆ ಇದರ ಪ್ರಮುಖ ದೌರ್ಬಲ್ಯವಾಗಿದೆ. ಅನೇಕ ಅಂಶಗಳು ವ್ಯಕ್ತಿನಿಷ್ಠತೆಗಾಗಿ ಅವಕಾಶ ಮಾಡಿಕೊಡುತ್ತವೆ. ಉದಾ: ದ್ವಂದ್ವಾರ್ಥವಿರುವ ಪದಗಳ ಬಳಕೆ' ಬರೆಯಬೇಕಾದ ಉತ್ತರದ ಉದ್ದಗಲಗಳ ಮಾಹಿತಿ ಇಲ್ಲದಿರುವಿಕೆ, ಮೌಲ್ಯಮಾಪಕರ ಅವಧಾನ ಇಲ್ಲದಿರುವಿಕೆ ಇತ್ಯಾದಿ.

- ವಿದ್ಯಾರ್ಥಿಗಳಲ್ಲಿ, ಸುಸಂಗತವಾದ ಉತ್ತರ ಬರೆಯುವ ಬದಲು ಪುಟ ತುಂಬಿಸಲು ತಮಗೆ ಗೊತ್ತಿರುವುದನ್ನೆಲ್ಲಾ ಬರೆಯಲು ಪ್ರೇರೇಪಿಸುತ್ತದೆ.

- ಮೂರು ಪುಟದಷ್ಟು ಉತ್ತರಿಸಬೇಕಾದ್ದರಿಂದ ವಸ್ತುನಿಷ್ಠತೆಯ ಅಂಕ ನಿರ್ಧಾರಕ್ಕಿಂತ ಬರವಣಿಗೆಯ ಅಂದ, ಅಲಂಕಾರಿಕ ಪ್ರಯತ್ನಗಳು, (ಪದಗಳ ಕೆಳಗೆ ಗೆರೆ ಎಳೆಯುವುದು, ಬಣ್ಣ ಬಣ್ಣದ ಇಂಕಿನಿಂದ ಬರೆಯುವುದು ಇತ್ಯಾದಿ) ಉತ್ತರಿಸಿರುವ ಪುಟಗಳ ಸಂಖ್ಯೆ ಮುಂತಾದ ಅಂಶಗಳೇ ಪ್ರಮುಖವಾಗಿ ವ್ಯಕ್ತಿನಿಷ್ಠತೆಗೆ ಎಡೆ ಕೊಡುತ್ತವೆ.

ಪ್ರಬಂಧ ಮಾದರಿ ಪ್ರಶ್ನೆಗಳು ಅನೇಕ ಟೀಕೆಗಳಿಗೆ ಒಳಗಾಗಿವೆ. (ವಸ್ತು ನಿಷ್ಠತೆ, ವೈಜ್ಞಾನಿಕತೆ, ನಿಖರತೆ, ಇಲ್ಲದಿರುವಿಕೆ ಇತ್ಯಾದಿ) ಆದರೆ ಇದರ ಪರವಾದಿಗಳ ಒಕ್ಕೊರಲಿನ ಅಭಿಪ್ರಾಯವೆಂದರೆ ಈ ಪ್ರಶ್ನಾ ವಿಧದ ಮೇಲಿನ ಅವಲಂಬನೆ ಪರಿಗಣಿಸಿದಾಗ ಅವುಗಳನ್ನು ತಿರಸ್ಕರಿಸುವುದಕ್ಕಿಂತ ಸುಧಾರಿಸುವುದೇ ಲಾಭದಾಯಕ. ಈ ಎಲ್ಲ ಮಿತಿಗಳಿದ್ದಾಗ್ಯೂ ಅದರ ಗುಣಲಕ್ಷಣಗಳು ಮೌಲ್ಯಮಾಪನ ಪ್ರಕ್ರಿಯೆಗೆ ನೀಡಿರುವ ಕೊಡುಗೆಯನ್ನು ಅಲ್ಲಗಳೆಯುವಂತಿಲ್ಲ. ವಿದ್ಯಾರ್ಥಿಗಳಿಗೆ ಕಲಿಯುವ ಸ್ಫೂರ್ತಿ ಹಾಗೂ ಶಿಕ್ಷಕರಿಗೆ ಕಲಿಸುವ ಹುಮ್ಮಸ್ಸು ತುಂಬಿ ಪರಿಣಾಮಕಾರಿ ಬೋಧನೆ ಹಾಗೂ ಅರ್ಥಪೂರ್ಣ ಕಲಿಕೆಗೆ ಕಾರಣವಾಗಿಸಲು ಈ ವಿವಿಧ ಪ್ರಶ್ನೆಗಳನ್ನು ಶಕ್ತಿಶಾಲಿ ಸಾಧನೆಗಳಾಗಿ ಸ್ವೀಕರಿಸಬಹುದು.

**ಪ್ರಬಂಧ ಮಾದರಿ ಪ್ರಶ್ನೆಗಳನ್ನು ಸುಧಾರಿಸಲು ಸಲಹೆಗಳು**

ಪ್ರಬಂಧ ಮಾದರಿ ಪ್ರಶ್ನೆಗಳು ಒಂದು ಪರೀಕ್ಷಾವಧಿಯ ಬಹಳಷ್ಟು ಸಮಯವನ್ನು ಬಳಸಿಕೊಳ್ಳುತ್ತವೆ. ಒಂದು ನಿಗದಿತ ಸಮಯದಲ್ಲಿ ಇಂತಹ ಪ್ರಶ್ನೆಗಳನ್ನು ಹೆಚ್ಚು ಕೇಳಲು ಸಾಧ್ಯವಿಲ್ಲ. ಹಾಗಾಗಿ ಈ ಪ್ರಶ್ನೆಗಳನ್ನು ಬೇರೆ ವಿಧದ ಪ್ರಶ್ನೆಗಳಿಂದ ಅಳೆಯಲು ಸಾಧ್ಯವಾಗದ / ಕಷ್ಟವಾಗುವಂತಹ ಸಾಮರ್ಥ್ಯಗಳನ್ನಷ್ಟೇ ಅಳೆಯುವಂತೆ ರಚಿಸಬೇಕಾಗುತ್ತದೆ. ಇಂತಹ ಪ್ರಶ್ನೆಗಳ ವಿಶ್ವಾಸಾರ್ಹತೆ ಹಾಗೂ ಸಿಂಧುತ್ವವನ್ನು ಸುಧಾರಿಸಲು ಕೆಲವು ಲಕ್ಷಣಗಳನ್ನು ಅವು ಹೊಂದಿರಬೇಕಾಗುತ್ತವೆ. ಅವೆಂದರೆ:

- ಪ್ರಬಂಧ ಮಾದರಿಯ ಪ್ರತಿಯೊಂದು ಪ್ರಶ್ನೆಯ ಹೇಳಿಕೆಯು,

– ಒಂದು ನಿರ್ದಿಷ್ಟ ಸಮಸ್ಯೆಯನ್ನು ಪ್ರಸ್ತುತಪಡಿಸಬೇಕು.

– ಹೆಚ್ಚು ಶ್ರಮವಿಲ್ಲದೇ ಗ್ರಹಿಸಲು ಸಾಧ್ಯವಾಗುವಂತೆ ಸರಳ ಹಾಗೂ ದ್ವಂದ್ವಾರ್ಥವಿಲ್ಲದ ಭಾಷೆಯನ್ನು ಬಳಸಬೇಕು.


Digitised by Bharatavani, CIIL

– ಆರಂಭದಲ್ಲಿ ಬಳಸುವ ನಿರ್ದೇಶಿತ ಪದಗಳ ಅನಿಶ್ಚಿತ ಬಳಕೆ ಕಡಿಮೆಗೊಳಿಸಿ ಅದರ ಬದಲು / ಜೊತೆಗೆ ಪರೀಕ್ಷಾರ್ಥಿಗಳಿಗೆ ತಾವು ಹೇಗೆ / ಎಷ್ಟು ಉತ್ತರಿಸಬೇಕು? ಎಷ್ಟು ಉದಾಹರಣೆಗಳಿರಬೇಕು ಇತ್ಯಾದಿಗಳನ್ನು ಸೂಚ್ಯವಾಗಿ ತಿಳಿಸುವ ಶಬ್ದಗಳನ್ನು ಬಳಸಬೇಕು.

– ವಿದ್ಯಾರ್ಥಿಯ ಬೌದ್ಧಿಕ ಮಟ್ಟ, ಅವರ ಪೂರ್ವಾನುಭವಗಳು ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡು ನಿರ್ದೇಶಿತ ಪದಗಳನ್ನು ಬಳಸಬೇಕು.

ಉದಾ: ಬೌದ್ಧಿಕ ಮಟ್ಟ ಹೆಚ್ಚಿದ್ದಲ್ಲಿ, ವಿಶ್ಲೇಷಿಸಿ, ವಿಮರ್ಶಿಸಿ, ಇತ್ಯಾದಿ, ಬೌದ್ಧಿಕ ಮಟ್ಟ ಕಡಿಮೆ ಇದ್ದಲ್ಲಿ, ವರ್ಣಿಸಿ, ವಿವರಿಸಿ ಇತ್ಯಾದಿ.

– ವಿದ್ಯಾರ್ಥಿಗಳಿಗೆ ಉತ್ತರಿಸುವಾಗ ಪೂರ್ಣ ಸ್ವತಂತ್ರವನ್ನು ಮೊಟಕುಗೊಳಿಸಿ, ತಮಗೆ ಬರುವುದನ್ನೆಲ್ಲಾ ಬರೆಯುವುದರ ಬದಲು ಅಪೇಕ್ಷಿತ ಉತ್ತರವನ್ನು ಅಗತ್ಯಕ್ಕೆ ಸೀಮಿತಗೊಳಿಸಬೇಕೆಂದು ಸೂಚ್ಯ ನೀಡುವಂತೆ ರಚಿತವಾಗಿರಬೇಕು.

– ಭಾಷಾ ಸಾಮರ್ಥ್ಯಕ್ಕೆ / ಬರವಣಿಗೆಗೆ ಬೆಲೆ ಕೊಡುವಂತಿದ್ದರೆ ಅದಕ್ಕೆ ಪ್ರತ್ಯೇಕ ಅಂಕಗಳನ್ನು ಸ್ಪಷ್ಟಪಡಿಸಬೇಕು.

- ವಿದ್ಯಾರ್ಥಿಗಳು ಸಾಮರ್ಥ್ಯದ ಸ್ತರಗಳಲ್ಲಿ ವಿಭಿನ್ನತೆ ಹೊಂದಿರುವುದರಿಂದ ಪ್ರಶ್ನೆಗಳು ಕ್ಲಿಷ್ಟತೆಯ ವಿವಿಧ ಮಟ್ಟಗಳಲ್ಲಿ ಇರಬೇಕಾಗುತ್ತದೆ.

- ಪ್ರಶ್ನೆ ರಚಿಸುವಾಗಲೇ ಮಾದರಿ ಉತ್ತರದ ರಚನೆಯಾದರೆ, ಪ್ರಶ್ನೆ ರಚನೆಯಲ್ಲಿನ ಕುಂದು ಕೊರತೆಗಳು ಸ್ಪಷ್ಟವಾಗಿ ಗೋಚರಿಸಿ ತಿದ್ದುಪಡಿ ಮಾಡಲು ಸಹಾಯವಾಗುತ್ತದೆ.

- ಪ್ರಶ್ನೆಯ ವಿವಿಧ ಅಂಕಗಳಿಗೆ ನಿಗದಿಸಿರುವ ಅಂಕಗಳ ವಿಭಜನೆಯನ್ನು ಪ್ರಶ್ನೆ ಪತ್ರಿಕೆಯಲ್ಲೇ ನಮೂದಿಸಬೇಕು.

ಉದಾ: ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸಿ ಹಾಗೂ ಅವರ ಗುಣಾವಗುಣಗಳನ್ನು ತಲಾ ಎರಡರಂತೆ ತಿಳಿಸಿ. ಇಲ್ಲಿ '5' ಅಂಕಗಳನ್ನು ಒಟ್ಟಾರೆ ಸೂಚಿಸುವ ಬದಲು '1 + 2 + 2' ಎಂದು ಸೂಚಿಸಿದರೆ ಉತ್ತಮ.

**ಲಘು ಉತ್ತರದ ಪ್ರಶ್ನೆಗಳು**

ಈ ಮಾದರಿ ಪ್ರಶ್ನೆಗಳು ಒಂದು ದೃಢೀಕರಿಸುವ ಮಟ್ಟದಲ್ಲಿ ವಸ್ತುನಿಷ್ಠ ಮೌಲ್ಯಮಾಪನಕ್ಕೆ ಎಡೆ ಮಾಡಿಕೊಡುತ್ತವೆ. ಇದಲ್ಲದೆ ಪ್ರಬಂಧ ಮಾದರಿ ಸಾರ್ವಭೌಮತ್ವದಲ್ಲಿನ ಕೆಲವು ಸಾಮರ್ಥ್ಯಗಳನ್ನು ಈ ವಿಧದ ಪ್ರಶ್ನೆಗಳು ಅಳೆಯಲು ಸಾಧ್ಯವಿದೆ. ಇಷ್ಟೆಲ್ಲಾ ಹೆಗ್ಗಳಿಕೆ ಇದ್ದೂ ಅವು ಬಳಸಿಕೊಳ್ಳುವುದು ಪೂರ್ಣ ಪರೀಕ್ಷಾ ಅವಧಿಯಲ್ಲಿನ ಸ್ವಲ್ಪ ಕಾಲಾವಕಾಶ ಹಾಗೂ ಒಟ್ಟಾರೆ ಅಂಕಗಳಲ್ಲಿನ ಒಂದು ಸಣ್ಣ ಭಾಗ ಮಾತ್ರ.

**ಲಘು ಉತ್ತರ ಪ್ರಶ್ನೆಗಳ ಲಕ್ಷಣಗಳು**

- ಇಂತಹ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ಕಲಿಕಾಂಶ ಇರುತ್ತವೆ.
- ಅಪೇಕ್ಷಿತ ಉತ್ತರ ಸುಮಾರು 20 ರಿಂದ 50 ಪದಗಳಲ್ಲಿ ಇರಬೇಕಾಗುತ್ತದೆ.
- ಉತ್ತರಿಸಲು ಪರೀಕ್ಷಾ ಅವಧಿಯಲ್ಲಿನ ಕೇವಲ 5 ರಿಂದ 10 ನಿಮಿಷಗಳ ಕಾಲಾವಕಾಶ ಬೇಕಾಗುತ್ತದೆ.
- ಪ್ರಬಂಧ ಮಾದರಿ ಪ್ರಶ್ನೆಗಳಿಗಿಂತ ಸಂಖ್ಯೆಯಲ್ಲಿ ಹೆಚ್ಚು ಕೇಳಲು ಸಾಧ್ಯವಿರುವುದರಿಂದ ಪಠ್ಯವಸ್ತುವಿನ ಹೆಚ್ಚಿನ ಕಲಿಕಾಂಶಗಳ ಸಾಧನೆಯನ್ನು ಅಳೆಯಬಹುದು.
- ಪುಟಗಟ್ಟಲೇ ಇರುವ ಮಾಹಿತಿಯನ್ನು ಅದರ ಸಾರ ಹಾಳಾಗದಂತೆ ಸಂಕ್ಷಿಪ್ತಗೊಳಿಸಬಲ್ಲ ಸಾಮರ್ಥ್ಯವನ್ನು ಅಳೆಯುತ್ತವೆ.
- ವಸ್ತುನಿಷ್ಠ ಹಾಗೂ ಪ್ರಬಂಧ ಮಾದರಿ ಪ್ರಶ್ನೆಗಳಲ್ಲಿರುವ ಲೋಪದೋಷಗಳನ್ನು ಹೋಗಲಾಡಿಸಿ ಅವಕ್ಕಿಂತ ಹೆಚ್ಚು ವ್ಯಾಪ್ತಿಯ ಸಾಮರ್ಥ್ಯ, ಸಾಧನೆಯನ್ನು ಪರೀಕ್ಷಿಸಲು ಸಾಧ್ಯವಿದೆ.
- ಪಠ್ಯವಸ್ತುವಿನ ಸಣ್ಣ ಸಣ್ಣ ಭಾಗಗಳನ್ನು ಪರೀಕ್ಷಿಸುವುದರಿಂದ ಉತ್ತಮ ನೈದಾನಾತ್ಮಕ ಸಾಧನವಾಗಬಲ್ಲದು.
- ಪ್ರಶ್ನೆ ಪತ್ರಿಕೆ ರಚನೆಕಾರನಿಗೆ ಹೆಚ್ಚು ಪಠ್ಯವಸ್ತುವನ್ನು ಈ ಪ್ರಶ್ನೆಗಳ ಮುಖಾಂತರ ಪರಿಣಾಮಕಾರಿಯಾಗಿ ಕೇಳಲು ಸಾಧ್ಯವಿದೆ. ಇದರಿಂದ ಪರೀಕ್ಷೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿದಂತಾಗುತ್ತದೆ.
- ಈ ಮಾದರಿ ಪ್ರಶ್ನೆಗಳನ್ನು ಬಾಹ್ಯ ಹಾಗೂ ಶಾಲಾ ಪರೀಕ್ಷೆಗಳೆರಡಲ್ಲೂ ಅಷ್ಟೇ ಪರಿಣಾಮಕಾರಿಯಾಗಿ ಕೇಳಲು ಸಾಧ್ಯವಿದೆ.

**ಅತಿ ಲಘು ಉತ್ತರ ಹಾಗೂ ವಸ್ತುನಿಷ್ಠ ಪ್ರಶ್ನೆಗಳು**

**ಅತಿ ಲಘು ಉತ್ತರ ಪ್ರಶ್ನೆಗಳು**

ಅತಿ ಲಘು ಉತ್ತರ ಪ್ರಶ್ನೆಗಳು ಮೌಲ್ಯಮಾಪನದಲ್ಲಿ ಒಂದು ಹೊಸ ಆವಿಷ್ಕಾರ. ಇಂತಹ ಪ್ರಶ್ನೆಗಳ ಅಪೇಕ್ಷಿತ ಉತ್ತರ ಒಂದು ಪದ, ಪದಪುಂಜ ಅಥವಾ ಕೆಲವು ಸಂದರ್ಭಗಳಲ್ಲಿ ಒಂದು ವಾಕ್ಯದಲ್ಲಿ ಇರಬೇಕಾಗುತ್ತದೆ.

**ಲಕ್ಷಣಗಳು**

- ಕಡಿಮೆ ಅಂಕಗಳನ್ನು ಬಳಸಿ ಹೆಚ್ಚು ಪ್ರಶ್ನೆಗಳನ್ನು ಕೇಳಲು ಸಾಧ್ಯವಿರುವುದರಿಂದ, ಅಳೆಯಬಹುದಾದ ವಿಷಯದ ವ್ಯಾಪ್ತಿ ಹೆಚ್ಚಿರುತ್ತದೆ.
- ವಸ್ತುನಿಷ್ಠ ಪರೀಕ್ಷೆಗಳಿಗೆ ಪರ್ಯಾಯವಾಗಿ ಬಳಸಬಹುದು.
- ಸ್ವ–ಮೌಲ್ಯ ಮಾಪನಕ್ಕೆ ಎಡೆಮಾಡಿಕೊಡುತ್ತದೆ.

ಇವುಗಳನ್ನು ಪೂರೈಕೆ ವಿಧದ ಪ್ರಶ್ನೆಗಳು ಎಂದೂ ಕರೆಯುವರು. ಪೂರೈಕೆ ಪ್ರಶ್ನೆಗಳು ಎರಡು ವಿಧದಲ್ಲಿವೆ:

1. ನೇರಪ್ರಶ್ನೆ: ಇಂತಹ ಪ್ರಶ್ನೆಗಳಿಗೆ ದ್ವಂದ್ವಾರ್ಥವಿಲ್ಲದ ನಿರ್ದಿಷ್ಟ ಪುಟ್ಟ ಉತ್ತರ ಬರೆಯಬೇಕಾಗುತ್ತದೆ.

   ಉದಾ: ಭಾರತದ ಮೊದಲ ಮಹಿಳಾ ಪ್ರಧಾನಿ ಹೆಸರೇನು? ದ್ರವರೂಪದಲ್ಲಿರುವ ಲೋಹ ಯಾವುದು?

2. ಭರ್ತಿ ಮಾಡುವಿಕೆ: ಇಂತಹ ಪ್ರಶ್ನೆಗಳಲ್ಲಿ ಬಿಟ್ಟಿರುವ ಸ್ಥಳದಲ್ಲಿ ಸರಿ ಉತ್ತರವನ್ನು ಭರ್ತಿಮಾಡಬೇಕಾಗುತ್ತದೆ.

   ಉದಾ: ಅ) ಭಾರತದ ಮೊದಲ ಪ್ರಧಾನಿ................

   ಆ) ದ್ರವ ರೂಪದಲ್ಲಿರುವ ಲೋಹ ...............

**ಅತಿ ಲಘು ಉತ್ತರದ ಪ್ರಶ್ನೆ ರಚಿಸಲು ಸಲಹೆಗಳು**

- ಪಠ್ಯಪುಸ್ತಕದಲ್ಲಿರುವ ವಾಕ್ಯಗಳಲ್ಲಿ ಕೆಲವು ಶಬ್ದಗಳನ್ನು ಹೊರತೆಗೆದು ಅದನ್ನು ಪ್ರಶ್ನೆಯನ್ನಾಗಿ ಪರಿವರ್ತಿಸಬಾರದು.

Digitised by Bharatavani, CIIL

- ನಿರ್ದಿಷ್ಟ ಉತ್ತರವಿರುವ ಪ್ರಶ್ನೆಗಳನ್ನು ಕೇಳಬಾರದು.

ಉದಾ: {□, ◺ , ○} ಇವು ಏನು? (ಜ್ಯಾಮಿತಿಯ ಆಕೃತಿಗಳು, ಸಮತಲಗಳು, ತ್ರಿಭುಜ, ವೃತ್ತ, ಚತುರ್ಭುಜ)

ಅಲೆಗ್ಸಾಂಡರ್ ಯಾರು? (ಒಬ್ಬ ಮನುಷ್ಯ, ಒಬ್ಬ ದೊರೆ, ವಿದೇಶಿ)

- ಹೇಳಿಕೆಯಲ್ಲಿ ಪಠ್ಯಾಂಶಕ್ಕೆ ಸಂಬಂಧಿಸಿದ ಮಹತ್ವಪೂರ್ಣ ಕಲಿಕಾಂಶವನ್ನು ಮಾತ್ರ ಭರ್ತಿಮಾಡಲು ಬಿಡಬೇಕು.

- ಪಠ್ಯಪುಸ್ತಕದಿಂದ ಆಯ್ದ ಹೇಳಿಕೆಗಳನ್ನು ಅಕ್ಷರಶಃ ಹಾಕದೆ, ಅರ್ಥ ಕೆಡದ ಹಾಗೆ ಪದ / ಶಬ್ದಗಳನ್ನು ಬದಲಿಸಬೇಕು. ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳು ಯಾಂತ್ರಿಕ ಕಂಠಪಾಠ ಮಾಡುವುದನ್ನು ತಪ್ಪಿಸುತ್ತದೆ.

- ಪ್ರಶ್ನಾ ಹೇಳಿಕೆಗಳಿಗೆ ಪೂರಕವಾಗುವಂತೆ ಚಿತ್ರಗಳನ್ನು ಪ್ರಶ್ನೆಗಳಲ್ಲಿ ಬಳಸಬಹುದು. ವಿದ್ಯಾರ್ಥಿಗಳಿಗೆ ಇಂತಹ ಪ್ರಶ್ನೆಗಳಿಗೆ ಉತ್ತರಿಸುವಾಗ ಹೊಸತಾದ ಭಾವನೆ ಮೂಡುತ್ತದೆ.

- ಪ್ರಶ್ನೆಗೆ ಉತ್ತರಿಸಲು ಅಗತ್ಯವಿರುವ ಸೂಚನೆ ಸ್ಪಷ್ಟವಾಗಿ ನೀಡಬೇಕು.

- ಭರ್ತಿ ಮಾಡಬೇಕಾಗಿರುವ ಉತ್ತರವನ್ನು ಬಲಭಾಗದಲ್ಲಿ ಒಂದರ ಕೆಳಗೆ ಒಂದರಂತೆ ಬರೆಯಲು ಅವಕಾಶ ಕಲ್ಪಿಸಬೇಕು. ಇದು ಮೌಲ್ಯ ನಿರ್ಧರಿಸಲು ಸಹಕಾರಿಯಾಗುತ್ತದೆ.

- ಭರ್ತಿ ಮಾಡಬೇಕಾದ ಸ್ಥಳವನ್ನು ಪ್ರಶ್ನೆಹೇಳಿಕೆಯ ಕೊನೆಯಲ್ಲಿ ಇಡುವುದು ಮನೋವೈಜ್ಞಾನಿಕವಾಗಿ ಸೂಕ್ತ ಮಾತ್ರವಲ್ಲ, ಪ್ರಶ್ನೆಯ ರಚನೆಯನ್ನು ಗ್ರಹಿಸುವಲ್ಲಿ ಸಹಾಯ ಮಾಡುತ್ತದೆ.

**ನಿಜ ಸುಳ್ಳು ವಿಧದ ಪ್ರಶ್ನೆಗಳು**

ಇಂತಹ ಪ್ರಶ್ನೆಗಳು ಕೇವಲ ಎರಡೇ ಸಾಧ್ಯತೆಗಳಿರುವ ಪರ್ಯಾಯ ಪ್ರತಿಕ್ರಿಯೆಗಳನ್ನು ಹೊಂದಿರುತ್ತವೆ. ನಿಜ–ಸುಳ್ಳು / ತಪ್ಪು–ಸರಿ ಇಂತಹ ಪ್ರಶ್ನೆಗಳಿಗೆ ಉತ್ತರಿಸುವಾಗ ಪ್ರಶ್ನೆ ಹೇಳಿಕೆಯಲ್ಲಿ ಅಡಕವಾಗಿರುವ ಅಂಶ ಸರಿಯೇ / ತಪ್ಪೇ ಅಥವಾ ಹೌದೋ / ಅಲ್ಲವೋ ಎಂಬುದನ್ನು ವಿದ್ಯಾರ್ಥಿ ನಿರ್ಧರಿಸಬೇಕು.

**ಸಲಹೆಗಳು:**

1) ಪ್ರಶ್ನೆ ರಚಿಸಲು ಪೂರ್ಣ ಸರಿ ಅಥವಾ ಪೂರ್ಣ ತಪ್ಪು ಆಗಿರುವ ಹೇಳಿಕೆಗಳನ್ನು ಮಾತ್ರ ಆಯ್ಕೆ ಮಾಡಬೇಕು. ಉದಾ:

ಅ) ಸಕ್ಕರೆ ನೀರಿನಲ್ಲಿ ಕರಗುತ್ತದೆ. ಆ) 15 x 9 = 125 ಇ) ಚಂದ್ರನು ಭೂಮಿಯ ಸುತ್ತ ಸುತ್ತುತ್ತಾನೆ. ಈ) ಗ್ಲೂಕೋಸ್‌ನ ರಾಸಾಯನಿಕ ಸಂಕೇತ ಉ) ಛತ್ತೀಸ್‌ಘಡ್ ಭಾರತದೇಶದ ಒಂದು ರಾಜ್ಯ.

2) ಪ್ರಶ್ನೆ ಹೇಳಿಕೆಯು ಒಂದಕ್ಕಿಂತ ಹೆಚ್ಚು ಪಠ್ಯಾಂಶಗಳನ್ನು ಹೊಂದಿರಬಾರದು.

ಉದಾ: ಚಂದ್ರನು ಭೂಮಿಯ ಸುತ್ತ ಸುತ್ತುತ್ತಾನೆ. ಹಾಗೆಯೇ ಭೂಮಿಯು ಸೂರ್ಯನ ಸುತ್ತ ಸುತ್ತುತ್ತದೆ.
ಮೇಲಿನ ಹೇಳಿಕೆಯ ಎರಡು ಸ್ವತಂತ್ರ ಹೇಳಿಕೆಗಳಾಗಲು ಸಾಧ್ಯವಿದೆ.

3) ಪ್ರಶ್ನೆ ಹೇಳಿಕೆಗಳು 'ಕಚ್ಚಾ ಅಳತೆ'ಗೆ ದಾರಿಮಾಡುವಂತಿರಬಾರದು.

ಉದಾ: ಋಣಾತ್ಮಕ ಚಿಹ್ನೆ ಹೊಂದಿರುವ ಕಣಗಳನ್ನು ನ್ಯೂಟ್ರಾನ್ ಎನ್ನುವರು.

ವಿದ್ಯಾರ್ಥಿಯು ಮೇಲಿನ ಹೇಳಿಕೆಯನ್ನು 'ತಪ್ಪು' ಎಂದು ನಿರ್ಧರಿಸಿ ಇದಕ್ಕೆ ಪೂರ್ಣ ಅಂಕ ಪಡೆದರೂ, ಅವನಿಗೆ ನ್ಯೂಟ್ರಾನಿನ ಸರಿಯಾದ ವ್ಯಾಖ್ಯಾನ ತಿಳಿದಿಲ್ಲದೆ ಇರುವ ಸಾಧ್ಯತೆ ಇದೆ.

4) ಹೇಳಿಕೆಗಳು ಕ್ಷುಲ್ಲಕ ಪಠ್ಯಾಂಶಗಳನ್ನು ಹೊಂದಿರಬಾರದು.

ಉದಾ: ಬಸಯ್ಯನ ಹೆಂಡತಿಯ ಹೆಸರು ಸೀತಮ್ಮ (ಸ/ತ)

ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯ ಮಹತ್ವಪೂರ್ಣ ಸಾಮರ್ಥ್ಯ ಯಾವುದನ್ನೂ ಈ ಹೇಳಿಕೆ ಅಳೆಯುವುದಿಲ್ಲ.

5) ಹೇಳಿಕೆಯು ವ್ಯಾಕರಣ ಬದ್ಧ ರಚನೆಯಾಗಿರಬೇಕು.

6) 'ಸರಿ' ಹಾಗೂ 'ತಪ್ಪು' ಎರಡೂ ಹೇಳಿಕೆಗಳ ಸಂಖ್ಯೆ ಸಮವಿರಲಿ.

7) 'ನಿಜ–ಸುಳ್ಳು' ಪ್ರಶ್ನೆ ವಿಧದ ಲೋಪದೋಷ ಸರಿಪಡಿಸುವ ದೃಷ್ಟಿಯಿಂದ ಪ್ರಶ್ನೆಯನ್ನು ಸುಧಾರಿಸಿ ಬರೆಯಬಹುದು:

"ಕೆಳಗೆ ನೀಡಿರುವ ಹೇಳಿಕೆಗಳು ಸರಿಯೋ / ತಪ್ಪೋ ಎನ್ನುವುದನ್ನು ಕೊಟ್ಟಿರುವ ಸರಿ / ತಪ್ಪು ಅಥವಾ ಹೌದು /ಅಲ್ಲ, ಮುಂತಾದ ಅಕ್ಷರ / ಚಿಹ್ನೆಗಳ ಕೆಳಗೆ ಅಡ್ಡಗೆರೆ ಎಳೆದು ತಿಳಿಸಿ, ತಪ್ಪಿದ್ದರೆ ತಿದ್ದಿ ಬರೆಯಿರಿ."

**ಬಹು ಅಂಶ ಆಯ್ಕೆಯ ಪ್ರಶ್ನೆಗಳು:**

ಈ ವಿಧದಲ್ಲಿ ವಿದ್ಯಾರ್ಥಿಗೆ ಪ್ರತಿಕ್ರಿಯಿಸಲು ಎರಡಕ್ಕಿಂತ ಹೆಚ್ಚು ಪರ್ಯಾಯಗಳಿರುತ್ತವೆ. ಪರ್ಯಾಯಗಳನ್ನು 'ಆಯ್ಕೆ'ಗಳೆಂದೂ ಕರೆಯುತ್ತಾರೆ. ಪರ್ಯಾಯಗಳ ಪಟ್ಟಿಯಲ್ಲಿ ಕೇವಲ ಒಂದು ಸರಿ ಉತ್ತರವಾಗಿದ್ದು ಉಳಿದ ಪರ್ಯಾಯಗಳನ್ನು (ತಪ್ಪು ಉತ್ತರಗಳನ್ನು) ದಿಗ್ಭ್ರಮೆಕಾರಕಗಳು / ಮೋಸಕಾರಕಗಳು / ಸುಳಿವು–ನಿವಾರಕಗಳು ಎನ್ನುವರು. ವಿದ್ಯಾರ್ಥಿ ತಾನು ಆಯ್ಕೆ ಮಾಡಿದ 'ಆಯ್ಕೆ'ಯ ಕ್ರಮ ಸಂಖ್ಯೆಯನ್ನು ಪ್ರಶ್ನೆಯ ಬಲಭಾಗದಲ್ಲಿ ಬರೆಯಬೇಕಾಗುತ್ತದೆ.

ಬಹು ಅಂಶ ಆಯ್ಕೆ ಪ್ರಶ್ನೆಯಲ್ಲಿ ಎರಡು ಭಾಗಗಳಿರುತ್ತವೆ.

1) ಕಾಂಡ ಅಥವಾ ಮಾರ್ಗದರ್ಶಿ

2) ಪರ್ಯಾಯಗಳ ಪಟ್ಟಿ

**ಕಾಂಡ ಅಥವಾ ಮಾರ್ಗದರ್ಶಿ**

ಈ ವಿಧದ ಪ್ರಶ್ನೆಗಳಲ್ಲಿ ಕಾಂಡವು,

ಅ) ಒಂದು ಅಪೂರ್ಣ ಹೇಳಿಕೆಯ ರೂಪದಲ್ಲಿರಬಹುದು

ಉದಾ: ಕರ್ನಾಟಕದ ರಾಜಧಾನಿ

ಎ) ಮೈಸೂರು ಬಿ) ಬೆಂಗಳೂರು ಸಿ) ಮಂಡ್ಯ ಡಿ) ಶಿವಮೊಗ್ಗ

ಆ) ನೇರ ಪ್ರಶ್ನೆಯ ರೂಪದಲ್ಲಿರಬಹುದು.

ಉದಾ: ಮಾಲಿನ್ಯ ನಿಯಂತ್ರಣಕ್ಕೆ ಕೆಳಗೆ ಕೊಟ್ಟಿರುವ ಯಾವ ಕಾಯಿದೆ/ಕಾನೂನು ಶಿಸ್ತಿನ ಕ್ರಮ ಕೈಗೊಳ್ಳುತ್ತವೆ?

ಎ) ವಾಯು ಕಾಯಿದೆ 1987, ಬಿ) ಪರಿಸರ ಕಾಯಿದೆ 1986 ಸಿ) ಜಲಕಾಯಿದೆ 1974 ಡಿ) ಕೈಗಾರಿಕಾ ಕಾಯಿದೆ 1948

Digitised by Bharatavani, CIIL

**ಪರ್ಯಾಯಗಳ ಪಟ್ಟಿ:** ಈ ಪಟ್ಟಿಯಲ್ಲಿ ಒಂದೇ ಒಂದು ಸರಿ ಉತ್ತರ ಅಥವಾ ಅತ್ಯುತ್ತಮ ಉತ್ತರ ಹೊಂದಿದ್ದು ಉಳಿದ ಪರ್ಯಾಯಗಳು ತಪ್ಪು ಉತ್ತರಗಳಾಗಿರುತ್ತವೆ.

ಬಹು ಅಂಶ ಆಯ್ಕೆ ಪ್ರಶ್ನೆ ರಚಿಸಲು ಸಲಹೆಗಳು:

• ನಿಜ–ಸುಳ್ಳು ವಿಧದ ಪ್ರತ್ಯೇಕ ಪ್ರಶ್ನೆಗಳನ್ನು ಸೇರಿಸಿ ಬಲವಂತದಿಂದ ಈ ವಿಧದ ಪ್ರಶ್ನೆಗಳನ್ನಾಗಿ ಬದಲಾಯಿಸಬಾರದು.

ಉದಾ: ಮದರ್ ಥೆರೇಸಾ

ಅ) ಭಾರತದ ಪ್ರಜೆ ಆ) ಇಂಗ್ಲೆಂಡ್‌ನ ಪ್ರಜೆ ಇ) ಆಸ್ಟ್ರೇಲಿಯಾ ಪ್ರಜೆ ಈ) ಅಮೆರಿಕನ್ ಪ್ರಜೆ

ಮೇಲಿನ ಪ್ರಶ್ನೆ ಕನಿಷ್ಠ ಎರಡು ನಿಜ–ಸುಳ್ಳು ಪ್ರಶ್ನೆಗಳಾಗಬಹುದು. ಅದನ್ನು ಬಲವಂತವಾಗಿ ಈ ವಿಧದ ಪ್ರಶ್ನೆಯನ್ನಾಗಿ ಬದಲಾಯಿಸಲಾಗಿದೆ.

• ಕಾಂಡದ ಭಾಗವು ನಿರ್ದಿಷ್ಟ ಸಮಸ್ಯೆಯನ್ನು ಗುರುತಿಸಲು ಸಾಧ್ಯವಾಗುವಂತಹ ಮಹತ್ವಪೂರ್ಣ ಅಂಶವನ್ನು ಹೊಂದಿರಬೇಕು.

ಉದಾ: 'ಪ್ರಾಜೆಕ್ಟ್ ಟೈಗರ್'

1) ಏಪ್ರಿಲ್ 1972 2) ಏಪ್ರಿಲ್ 1973 3) ಜೂನ್ 1972 4) ಜೂನ್ 1973

ಮೇಲಿನ ಹೇಳಿಕೆಯಲ್ಲಿ 'ಪ್ರಾಜೆಕ್ಟ್ ಟೈಗರ್' ಸಮಸ್ಯೆ ಗುರುತಿಸಲು ಸಹಾಯ ಮಾಡುವುದಿಲ್ಲ. ಅದನ್ನು ಹೀಗೆ ಕೇಳಬಹುದು.

'ಪ್ರಾಜೆಕ್ಟ್ ಟೈಗರ್' ಮೊದಲು ಆರಂಭವಾದುದು

1) ಏಪ್ರಿಲ್ 1972 2) ಏಪ್ರಿಲ್ 1973 3) ಜೂನ್ 1972 4) ಜೂನ್ 1973

• ಪರ್ಯಾಯ ಪಟ್ಟಿಯಲ್ಲಿ ಎಲ್ಲ ಪರ್ಯಾಯಗಳಲ್ಲೂ ಇರುವ ಸಾಮಾನ್ಯ ಪದವನ್ನು ಕಾಂಡದಲ್ಲೇ ಸೇರಿಸಬೇಕು.

ಉದಾ: ನೀರಿಗೆ ಎಸೆದ ತ್ಯಾಜ್ಯವು ನೀರಿನಲ್ಲಿರುವ ಮೀನುಗಳನ್ನು ಕೊಲ್ಲುತ್ತದೆ. ಏಕೆಂದರೆ,

ಅ) ಅದು ನೀರಿಗೆ ಜಲಜನಕವನ್ನು ಬಿಡುತ್ತದೆ.

ಆ) ಅದು ಕೆಟ್ಟ ವಾಸನೆ ಕೊಡುತ್ತದೆ.

ಇ) ಅದು ನೀರಿನಲ್ಲಿರುವ ಆಹಾರಾಂಶಗಳನ್ನು ತೆಗೆಯುತ್ತದೆ.

ಈ) ಅದು ಅವುಗಳಿಗೆ ಬೇಕಾದ ಆಮ್ಲಜನಕವನ್ನು ಬಳಸಿಕೊಳ್ಳುತ್ತದೆ.

ಮೇಲಿನ ಉದಾಹರಣೆಯ ಪರ್ಯಾಯ ಪಟ್ಟಿಯಲ್ಲಿ 'ಅದು' ಪುನರಾವರ್ತನೆಯಾಗಿದೆ, ಆದ್ದರಿಂದ ಅದನ್ನು ಕಾಂಡದಲ್ಲಿ ಸೇರಿಸಿ ಬರೆಯುವುದು ಉತ್ತಮ.

• ಕಾಂಡದಲ್ಲಿರುವ ಪ್ರಶ್ನೆಗೆ ಪರ್ಯಾಯ ಪಟ್ಟಿಯಲ್ಲಿ ಒಂದೇ ಒಂದು ಖಚಿತ ಉತ್ತರವಿರಬೇಕು. ಸುಲಭವಾಗಿ ಸರಿ ಉತ್ತರ ಗುರುತಿಸಲು ಸಾಧ್ಯವಾಗದಂತೆ ಪರ್ಯಾಯಪಟ್ಟಿ ತಯಾರಿಸಬೇಕು.

ಉದಾ: ಈ ಕೆಳಗಿನವುಗಳಲ್ಲಿ ಯಾವುದನ್ನು ಪುನರ್‌ಚಕ್ರ (Recycle) ಮಾಡಲು ಸಾಧ್ಯವಿಲ್ಲ?

ಕಾಗದ, ಗಾಜು, ಪ್ಲಾಸ್ಟಿಕ್, ಇಂಧನ

• ಪರ್ಯಾಯಗಳು ವ್ಯಾಕರಣ ದೃಷ್ಟಿಯಿಂದ ಕಾಂಡದೊಂದಿಗೆ ಹೊಂದುವಂತೆ ಇರಬೇಕು.

ಉದಾ: ರೇಡಿಯೋವನ್ನು ಮೊಟ್ಟ ಮೊದಲಿಗೆ ಕಂಡು ಹಿಡಿದವನು

ಅ) ಕ್ಯೂರಿ, ಆ) ಮಾರ್ಕೋನಿ ಇ) ರಾಬರ್ಟ್ ಹುಕ್ ಈ) ಗೆಲಿಲಿಯೋ ಉ) ಆರ್ಕಿಮಿಡೀಸ್

ಮೇಲಿನ ಉದಾಹರಣೆಯಲ್ಲಿ ಕಾಂಡದಲ್ಲಿರುವ 'ಕಂಡು ಹಿಡಿದವನು' ಎನ್ನುವ ಪದಕ್ಕೆ ಕ್ಯೂರಿ (ಮಹಿಳೆ) ಹೆಸರು ಹೊಂದಾಣಿಕೆಯಾಗುವುದಿಲ್ಲ.

• ಪರ್ಯಾಯ ಪಟ್ಟಿಯಲ್ಲಿರುವ ಪರ್ಯಾಯಗಳೆಲ್ಲದರ ಉದ್ದ, ಭಾಷಾಮಟ್ಟ ಇವುಗಳಲ್ಲಿ ವ್ಯತ್ಯಾಸ ಕಾಣಬಾರದು.

ಉದಾ: 'ಮೇಧಾಪಾಟ್ಕರ್' ಒಬ್ಬ ಚಿರಪರಿಚಿತ

ಎ) ಸಿನಿಮಾನಟಿ ಬಿ) ರಾಜಕೀಯ ವ್ಯಕ್ತಿ ಸಿ) ಸಮಾಜ ಸುಧಾರಕಿ ಡಿ) ಪರಿಸರ ಹೋರಾಟಗಾರ್ತಿ

ಮೇಲಿನ ಉದಾಹರಣೆಯಲ್ಲಿ ಎಲ್ಲಾ ಪರ್ಯಾಯಗಳು ಸಾಮಾನ್ಯವಾದ ಉದ್ದ ಹಾಗೂ ಭಾಷಾಮಟ್ಟ ಹೊಂದಿರುವುದರಿಂದ ಉತ್ತರಿಸಲು ಅನಾವಶ್ಯಕ ಸೂಚನೆ ವಿದ್ಯಾರ್ಥಿಗಳಿಗೆ ನೀಡುವುದಿಲ್ಲ.

• ಪರ್ಯಾಯಗಳಾಗಿ 'ಇವು ಯಾವುವೂ ಅಲ್ಲ', 'ಇವೆಲ್ಲವೂ' ಮುಂತಾದವುಗಳನ್ನು ಆಯ್ಕೆ ಪಟ್ಟಿಯಲ್ಲಿ ನಿರ್ದಿಷ್ಟ ಉದ್ದೇಶವಿಲ್ಲದೆ ಸೇರಿಸಬಾರದು.

• ಕಾಂಡದಲ್ಲಿರುವ ಹೇಳಿಕೆಗಳು ಋಣಾತ್ಮಕವಾಗಿರಬಾರದು.

ಉದಾ: ಈ ಕೆಳಗಿನವುಗಳಲ್ಲಿ ಬೆಸಸಂಖ್ಯೆಗಳ ಗುಂಪಿಗೆ ಯಾವುವು ಸೇರಿಲ್ಲ?

ಅ) 82 ಆ) 103 ಇ) 98 ಈ) 0

ಮೇಲಿನ ಹೇಳಿಕೆ ಋಣಾತ್ಮಕವಾಗಿದೆ. ಇಂತಹ ಹೇಳಿಕೆಗಳನ್ನು ಆದಷ್ಟು ಕಡಿಮೆ ಮಾಡಬೇಕು. ಈ ಪ್ರಶ್ನೆಯನ್ನು ಸುಧಾರಣೆಗೊಳಿಸಿ ಹೀಗೆ ಕೇಳಬಹುದು: ಕೆಳಗಿನವುಗಳಲ್ಲಿ ಬೆಸಸಂಖ್ಯೆ ಗುಂಪಿಗೆ ಸೇರದ ಸಂಖ್ಯೆ ಯಾವುದು?

• ಪ್ರಶ್ನೆಯಲ್ಲಿ ಬಳಸುವ ಭಾಷೆ ವಿದ್ಯಾರ್ಥಿಯ ಗ್ರಹಿಕೆಮಟ್ಟಕ್ಕೆ ಅನುಗುಣವಾಗಿರಬೇಕು.

• ಒಂದು ಪ್ರಶ್ನೆಗೆ ಉತ್ತರ ಮತ್ತೊಂದು ಪ್ರಶ್ನೆಯಲ್ಲಿಲ್ಲದಂತೆ ಎಚ್ಚರ ವಹಿಸಬೇಕು.

• ಪರ್ಯಾಯ ಪಟ್ಟಿಯಲ್ಲಿ ಸರಿ ಉತ್ತರದ ಕ್ರಮಸಂಖ್ಯೆ ಒಂದು ನಿರ್ದಿಷ್ಟ ವಿನ್ಯಾಸ ಮೂಡಿಸಬಾರದು.

ಉದಾ: ಪರ್ಯಾಯ ಪಟ್ಟಿಯಲ್ಲಿನ ಮೂರನೇ ಪರ್ಯಾಯವೇ ಎಲ್ಲಾ ಪ್ರಶ್ನೆಗಳಿಗೂ ಸರಿ ಉತ್ತರವಾಗಿರಬಾರದು.

• ಪರ್ಯಾಯಗಳ ಸಂಖ್ಯೆ 4–5ಕ್ಕಿಂತ ಕಡಿಮೆ ಇರದಂತೆ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಅದೃಷ್ಟದ ಆಟ ಮೇಲುಗೈ ಆಗಬಹುದು.

**ಜೋಡಣೆಯ ಪರೀಕ್ಷೆ**

ಇದು ವಸ್ತುನಿಷ್ಠ ಪರೀಕ್ಷೆಯ ವಿಧಗಳಲ್ಲೊಂದಾಗಿದೆ.

**ಲಕ್ಷಣಗಳು**

• ನಿರ್ದಿಷ್ಟ ವಿಷಯ ವಸ್ತುವಿಗೆ ಸೇರಿದ ಅಂಶಗಳನ್ನು ಮೊದಲನೇ ಪಟ್ಟಿಯಲ್ಲಿ ಒಂದರ ಕೆಳಗೊಂದರಂತೆ ಬರೆಯಲಾಗುತ್ತದೆ.

Digitised by Bharatavani, CIIL

• ಮೊದಲನೇ ಪಟ್ಟಿಯ ಪ್ರತಿ ಅಂಶಕ್ಕೆ ಅತ್ಯುತ್ತಮವಾಗಿ ಹೊಂದುವ ಅಂಶವನ್ನು ಎರಡನೇ ಪಟ್ಟಿಯಲ್ಲಿ ಬರೆಯಲಾಗುತ್ತದೆ.

• ಎರಡನೇ ಪಟ್ಟಿಯ ಅಂಶಗಳನ್ನು ಅನಿರ್ದಿಷ್ಟ ಕ್ರಮದಲ್ಲಿ ಬರೆಯಲಾಗುತ್ತದೆ.

• ಮೊದಲನೇ ಪಟ್ಟಿಯ ಪ್ರತಿ ಅಂಶಕ್ಕೂ ಸೂಕ್ತವಾಗಿ ಹೊಂದುವ ಅಂಶವನ್ನು ಎರಡನೇ ಪಟ್ಟಿಯಿಂದ ತೆಗೆದು ಜೋಡಿಸಬೇಕಾಗುತ್ತದೆ.

**ಜೋಡಣೆಯ ಪರೀಕ್ಷೆ ರಚಿಸಲು ಸಲಹೆಗಳು**

• ಒಂದು ಪಟ್ಟಿಯ ಪ್ರತಿ ಅಂಶಕ್ಕೂ ಒಂದು ನಿರ್ದಿಷ್ಟ ಜೋಡಣೆ ಮತ್ತೊಂದು ಪಟ್ಟಿಯಲ್ಲಿ ಇರಬೇಕು.

• ನಿರ್ದಿಷ್ಟ ವರ್ಗಕ್ಕೇ ಸೇರಿದ ಅಂಶಗಳನ್ನು ಮಾತ್ರ ಪ್ರತಿ ಪಟ್ಟಿಯು ಒಳಗೊಂಡಿರಬೇಕು.

| | ಎ | ಬಿ |
|---|---|---|
| ಉದಾ: | ನಿರ್ದಿಷ್ಟ ಸಮಸ್ಯೆಗಳು | ಪರಿಹಾರ ಸೂತ್ರಗಳು |
| | ಭಾರತದ ರಾಜ್ಯಗಳು | ರಾಜಧಾನಿಗಳು |
| | ಕನ್ನಡ ಸಂಧಿಗಳು | ಉದಾಹರಣೆಗಳು |

• ಜೋಡಣೆ ಪಟ್ಟಿಗಳು ಅತಿ ಉದ್ದ ಅಥವಾ ಅತಿ ಚಿಕ್ಕದಾಗಿರದೆ ಸುಮಾರು 5 ರಿಂದ 15 ಅಂಶಗಳನ್ನು ಒಳಗೊಂಡಿದ್ದರೆ ಉತ್ತಮ ಎಂದು ಪರಿಗಣಿಸಲಾಗಿದೆ.

• ಎರಡನೇ ಪಟ್ಟಿಯಲ್ಲಿ ಮೊದಲನೇ ಪಟ್ಟಿಗಿಂತ 2–3 ಹೆಚ್ಚು ಅಂಶಗಳಿದ್ದರೆ ವಿದ್ಯಾರ್ಥಿ ತಿಳಿವಳಿಕೆಯನ್ನು ಹೆಚ್ಚು ನಿಖರವಾಗಿ ಅರಿಯಲು ಸಾಧ್ಯವಾಗುತ್ತದೆ.

• ಮೊದಲನೇ ಪಟ್ಟಿಯಲ್ಲಿ ಅಂಶಗಳನ್ನು ಕ್ರಮಾನುಗತಿಯಲ್ಲಿಯೂ ಎರಡನೇ ಪಟ್ಟಿಯಲ್ಲಿ ಕ್ರಮರಹಿತವಾಗಿಯೂ ಬರೆಯಬೇಕು.

• ಹೇಳಿಕೆಗಳು ಉದ್ದವಾಗಿರುವ ಅಂಶಗಳಿದ್ದರೆ ಅವು ಮೊದಲನೇ ಪಟ್ಟಿಯಲ್ಲಿ ಇರಬೇಕು.

**ವರ್ಗೀಕರಣ ಪರೀಕ್ಷೆ**

ಈ ವಿಧದ ಪರೀಕ್ಷೆಯನ್ನು ನಿರ್ದಿಷ್ಟ ವರ್ಗಕ್ಕೆ ಸೇರಿದ 3 ಅಥವಾ 4 ಅಂಶಗಳ ಗುಂಪಿಗೆ ಆ ವರ್ಗಕ್ಕೆ ಸೇರದ ಒಂದಂಶ ಸೇರಿಸಿ ಪ್ರಶ್ನೆ ರಚಿಸಬೇಕು. ವಿದ್ಯಾರ್ಥಿ, ಅಂಶಗಳು ಸೇರಿರುವ ನಿರ್ದಿಷ್ಟ ವರ್ಗವನ್ನು ಕಂಡುಹಿಡಿದು ಅದಕ್ಕೆ ಸೇರದ ಅಂಶವನ್ನು ಗುಂಪಿನಿಂದ ಹುಡುಕಿ ತೆಗೆಯಬೇಕು.

**ಸಲಹೆಗಳು**

1) ಪ್ರತಿ ಗುಂಪಿನಲ್ಲಿ 4–5ಕ್ಕಿಂತ ಹೆಚ್ಚು ಅಂಶಗಳು ಇರಕೂಡದು.

2) ಗುಂಪಿನಲ್ಲಿ ಒಂದು ಅಂಶ ಮಾತ್ರ ಇತರೆ ಅಂಶಗಳೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿರಕೂಡದು.

3) ಕೊಟ್ಟಿರುವ ಅಂಶಗಳನ್ನು ಕೇವಲ ಒಂದೇ ರೀತಿ ವರ್ಗೀಕರಿಸಲು ಸಾಧ್ಯವಿರಬೇಕು.

ಉದಾ: ಬಿಂದು, ರೇಖಾಖಂಡ, ಕಿರಣ, ಸರಳರೇಖೆ

ಮೇಲಿನ ಉದಾಹರಣೆಯಲ್ಲಿ ಎರಡು ರೀತಿಯ ವರ್ಗೀಕರಣ ಸಾಧ್ಯವಿದೆ.

– ಎಲ್ಲ ಅಂಶಗಳೂ ರೇಖೆಗಳಾಗಿರುವುದು, 'ನಿರ್ದಿಷ್ಟ ವರ್ಗ' ಎಂದು ಕಲ್ಪಿಸಿಕೊಂಡರೆ ಬಿಂದು ಈ ವರ್ಗಕ್ಕೆ ಸೇರುವುದಿಲ್ಲ.

– 'ಎಲ್ಲವೂ ಪರಿಮಿತ ಅಂಶ'ಗಳಾಗಿರುವುದು ನಿರ್ದಿಷ್ಟ ವರ್ಗ ಎಂದಾದರೆ, ಸರಳರೇಖೆ, ಅಪರಿಮಿತವಾಗಿದ್ದು ಈ ವರ್ಗಕ್ಕೆ ಸೇರುವುದಿಲ್ಲ. ಹಾಗಾಗಿ ಈ ರೀತಿ ಪ್ರಶ್ನೆಗಳಿಂದ ಮಕ್ಕಳಿಗೆ ಸೂಕ್ತ ಅಂಕ ನೀಡುವಲ್ಲಿ ಸಮಸ್ಯೆ ಆಗುತ್ತದೆ.

**ಸಂಬಂಧ ಕಲ್ಪನೆಯ ಪರೀಕ್ಷೆ**

'ಎ', 'ಬಿ', 'ಸಿ'ಗಳು ಮೂರು ಅಂಶಗಳಾದಾಗ ಇವುಗಳನ್ನು ಗಣಿತ ಚಿಹ್ನೆಗಳನ್ನು ಉಪಯೋಗಿಸಿ ಅನುಪಾತದ ರೂಪದಲ್ಲಿ ಅಂದರೆ 'ಎ : ಬಿ' : : ಸಿ : ? ಎಂಬ ರೂಪದಲ್ಲಿ ಪ್ರಶ್ನೆಗಳನ್ನು ರಚಿಸಲಾಗುತ್ತದೆ. ಇಲ್ಲಿ ಎ:ಬಿ ಯು ಎ ಮತ್ತು ಬಿ ನಡುವಿನ ಸಂಬಂಧ ಸೂಚಿಸುತ್ತದೆ. ಆ ಮಾಹಿತಿ ಬಳಸಿ, 'ಸಿ : ?' ಅಂದರೆ ಸಿ ಮತ್ತು ನಾಲ್ಕನೇ ಅಂಶದ ನಡುವಿನ ಸಂಬಂಧ ಪತ್ತೆ ಹಚ್ಚಬೇಕಾಗುತ್ತದೆ.

ಉದಾ: 4 : 16 : : 8 : ?

ಗುರುನಾನಕ್ : ಸಿಖ್ :: ಜೀಸಸ್ ಕ್ರೈಸ್ಟ್ : ?

**ಸಲಹೆಗಳು**

• ಅಂಶಗಳ ಆಯ್ಕೆ ಮಾಡುವಾಗ ಎ,ಬಿ.ಗೆ ಇರುವ ಸಂಬಂಧದ ರೀತಿಯಲ್ಲೇ ಸಿ ಮತ್ತು ಎನ ಸಂಬಂಧವೂ ಇರುವಂತೆ ರಚಿಸಬೇಕು?

• ಪ್ರತಿ ಪ್ರಶ್ನೆಗೆ ನಿರ್ದಿಷ್ಟ ಉತ್ತರ ಇರಬೇಕು.

**ಕ್ರಮಬದ್ಧಗೊಳಿಸುವ ಪರೀಕ್ಷೆ**

ಈ ಪರೀಕ್ಷೆಯಲ್ಲಿ ಕೊಟ್ಟಿರುವ ಅಂಶಗಳನ್ನು ಸೂಚಿತ ಕ್ರಮದಲ್ಲಿ ವ್ಯವಸ್ಥೆಗೊಳಿಸಿ ಬರೆಯಬೇಕಾಗುತ್ತದೆ.

ಉದಾ:

1) ಕೆಳಗೆ ಕೊಟ್ಟಿರುವ 'ಆವಿಷ್ಕಾರ'ಗಳನ್ನು ಅವು ಆವಿಷ್ಕಾರವಾದ ಕಾಲಾನುಕ್ರಮದಲ್ಲಿ ಬರೆಯಿರಿ.
ಕಂಪ್ಯೂಟರ್, ಟಿವಿ, ಟೆಲಿಫೋನ್, ರೇಡಿಯೋ

2) ಈ ಕೆಳಗಿನ ರಾಷ್ಟ್ರಗಳನ್ನು ಅವುಗಳ ಆರ್ಥಿಕ ಬೆಳವಣಿಗೆಯ ಮಟ್ಟದ ಏರಿಕೆ ಕ್ರಮದಲ್ಲಿ ಬರೆಯಿರಿ.
ಪಾಕಿಸ್ತಾನ, ಭಾರತ, ಆಫ್ಘಾನಿಸ್ಥಾನ, ನೇಪಾಳ.

3) ಅವರೋಹಣ ಕ್ರಮದಲ್ಲಿ ಬರೆಯಿರಿ:
.001; 0.1; 0.0056; 0.00004

–ಬಿ.ಎನ್.ಆ


Digitised by Bharatavani, CIIL

# ವ

## ವರ್ಗ ವ್ಯವಸ್ಥೆ ಮತ್ತು ಶಿಕ್ಷಣ

ಸಮಾಜದಲ್ಲಿನ ವ್ಯಕ್ತಿಗಳನ್ನು ಆರ್ಥಿಕ ಮತ್ತು ಸಾಂಸ್ಕೃತಿಕ ಗುಂಪುಗಳನ್ನಾಗಿ ಹೊಂದಿಸುವ ಅನುಕ್ರಮಣಿಕೆಯನ್ನು ವರ್ಗ ವ್ಯವಸ್ಥೆ ಎನ್ನಬಹುದು.

ಸಮಾಜ ಶಾಸ್ತ್ರಜ್ಞರುಗಳು, ರಾಜಕೀಯ ವಿಚಾರವಾದಿಗಳು, ಆರ್ಥಿಕ ತಜ್ಞರುಗಳು ಮತ್ತು ಸಾಮಾಜಿಕ ಇತಿಹಾಸಕಾರರುಗಳಿಗೆ ಅತ್ಯಂತ ಪ್ರಮುಖವಾಗಿ ಅಗತ್ಯವಿರುವ ಅಂಶ ಅಥವಾ ವಿಚಾರವೇ ಈ ವರ್ಗ ವ್ಯವಸ್ಥೆ. ಕೆಲವು ಸಂದರ್ಭಗಳಲ್ಲಿ ಸಮಾಜದ ಸ್ತರಗಳನ್ನು ತಿಳಿಸುವಲ್ಲಿಯೂ ಇದರ ಬಳಕೆ ಇರುವುದು ಕಂಡುಬರುತ್ತಿದೆಯಲ್ಲದೆ, ಇವೆರಡನ್ನೂ ಪರ್ಯಾಯ ಪದಗಳಂತೆ ಬಳಸಿಕೊಳ್ಳುವುದೂ ಇದೆ.

ಐತಿಹಾಸಿಕ ಹಿನ್ನೆಲೆಯಲ್ಲಿ, ಸಾಮಾಜಿಕ ವರ್ಗ ವ್ಯವಸ್ಥೆ ಉಗಮವಾಗುವುದು ತಾವು ಹೊಂದಿರುವ ಮೂಲಭೂತವಾದ ಆರ್ಥಿಕ ಸ್ಥಿತಿಗಳು ಮತ್ತು ಆಸ್ತಿಯಿಂದ ಇತರ ವ್ಯಕ್ತಿಗಳನ್ನು ಗುರುತಿಸುವಲ್ಲಿ ಬಳಸಲ್ಪಡುವ ವ್ಯವಸ್ಥೆ ಎನ್ನುವುದು ಇದೆ.

ವರ್ಗ ವ್ಯವಸ್ಥೆಯು ಜೀವನದ ಅವಿಭಾಜ್ಯ ಅಂಶ ಅಥವಾ ಲಕ್ಷಣವಾಗಿದೆ. ವರ್ಗ ವ್ಯವಸ್ಥೆಯನ್ನು ನಿರ್ಧರಿಸುವ ನಿರ್ಧಾರಕಗಳು ಯಾವುವೆಂದರೆ,

1. ಒಂದು ಸಾಮಾಜಿಕ ಗುಂಪಿನಲ್ಲಿ ವ್ಯಕ್ತಿ ಹೊಂದಿರುವ ಸ್ಥಾನಮಾನ.
2. ಉತ್ಪಾದಕತೆ, ಮಾಲಿಕತ್ವ ಮತ್ತು ಬಳಕೆ ಇವುಗಳ ನಡುವಿನ ಸಂಬಂಧ.
3. ಶಿಕ್ಷಣ ಮತ್ತು ಸಂಸ್ಕೃತೀಕರಣ

ಸಮಾಜದಲ್ಲಿ ಅತ್ಯಂತ ಪ್ರಭಾವಶಾಲಿ ವರ್ಗವೆಂದು ಗುರುತಿಸಿಕೊಳ್ಳುವ ಗುಂಪುಗಳು ತಮ್ಮದೇ ಆದ ಜೀವನಶೈಲಿಯನ್ನು (ಮೇಲ್ಮಟ್ಟ) ಹೊಂದಿರುತ್ತಾರೆ. ಇದರ ಜೊತೆಗೆ ಅವರುಗಳ ಉಡುಗೆ, ತೊಡುಗೆಗಳು, ಆಭರಣಗಳು, ಹಾವಭಾವಗಳು, ಭಾಷೆ, ರಾಜಕೀಯವಾಗಿ ಹೊಂದಿರುವ ಹಕ್ಕುಗಳು, ಬಿರುದುಗಳು ಇತ್ಯಾದಿ ಅದಕ್ಕೆ ತದ್ವಿರುದ್ಧವಾದ ಅಂಶಗಳನ್ನು ಹೊಂದಿರುವ ಗುಂಪುಗಳೂ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಕೆಳಸ್ತರದ ವರ್ಗವಾಗಿ ಗುರುತಿಸಿಕೊಂಡಿರುತ್ತವೆ. ಇದರ ಜೊತೆಗೆ ಜನಾಂಗೀಯ (Racial) ವಿಚಾರಗಳೂ ಸಹ ವರ್ಗ ವ್ಯವಸ್ಥೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಈ ಎಲ್ಲಾ ಪ್ರಾಕಾರದ ವ್ಯವಸ್ಥೆಯು ಪಾರಂಪರಿಕವಾಗಿ ಬಂದಂತಹುಗಳಾಗಿರಬಹುದು. ಅಥವಾ ತಮ್ಮ ತಮ್ಮ ಸ್ವಪರಿಶ್ರಮದಿಂದ ಪಡೆದುಕೊಂಡದ್ದೂ ಆಗಿರಬಹುದು.

ವರ್ಗ ವ್ಯವಸ್ಥೆಯ ಪೂರ್ವಾಪರಗಳನ್ನು ಅವಲೋಕಿಸಿ ನೋಡಿದಾಗ ತಿಳಿದುಬರುವ ಅಂಶಗಳೇನೆಂದರೆ, ನವೀನ ಸಮಾಜದಲ್ಲಿ, ಆರ್ಥಿಕ ಸ್ಥಿತಿಗಳನ್ನು ಆಧರಿಸಿಯೇ ವರ್ಗ ವ್ಯವಸ್ಥೆ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಇದಲ್ಲದೇ ಒಂದು ವರ್ಗವು ತನ್ನವರಿಗೆ ನೀಡಲಾಗದೇ ಇರುವ ಆಹಾರ ಅಥವಾ ಹಸಿವು ಈ ಅಂಶಗಳೂ ಕಾರಣವಾಗಿರಬಹುದು. ಕೆಲಸವನ್ನು ನಿರ್ವಹಿಸುವ ಸನ್ನಿವೇಶ ಮತ್ತು ಕೆಲಸದ ಶೈಲಿಯೂ ಇದನ್ನು ನಿರ್ಧರಿಸಬಹುದಾಗಿದೆ. ಮೇಲ್ವರ್ಗದ ಜನರುಗಳು ತಮ್ಮ ಕೆಲಸವನ್ನು ನಿರ್ವಹಿಸುವಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಅವರುಗಳು ಸಮಾಜದಲ್ಲಿ ಗೌರವ, ಸ್ಥಾನವಾನ ಮತ್ತು ಅಧಿಕಾರಯುತವಾದ ವರ್ತನೆಯನ್ನು ತೋರಿಸುತ್ತಾರೆ. ಇನ್ನು ಕೆಳವರ್ಗದ ಜನರುಗಳು ಕೆಲಸದಲ್ಲಿ ಸ್ಥಿರತೆಯನ್ನು ಹೊಂದಿರುವುದಿಲ್ಲ, ವೃತ್ತಿ ಸಮಾಧಾನ ಹೊಂದಿರುವುದಿಲ್ಲ.

ವರ್ಗ ವ್ಯವಸ್ಥೆಯು ಜನರುಗಳ ಜೀವನ ಶೈಲಿಯ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರುತ್ತದೆ. ವಿವಿಧ ಸಮಾಜ ಶಾಸ್ತ್ರಜ್ಞರುಗಳು ವರ್ಗ ವ್ಯವಸ್ಥೆಯ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ಹೊಂದಿರುವುದು ತಿಳಿದುಬರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಮಾರ್ಕ್ಸ್ ವಾದದ ಪ್ರಕಾರ ವರ್ಗವ್ಯವಸ್ಥೆಯನ್ನು ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ಅಂಶಗಳು ಎಂಬುದಾಗಿ ತಿಳಿಸಲಾಗಿದೆ. ಅವುಗಳೆಂದರೆ ವ್ಯಕ್ತಿಗಳು ಹೊಂದಿರಬಹುದಾದ ಸ್ಥಿರ ಮತ್ತು ಚರಾಸ್ಥಿಗಳು ಮತ್ತು ಅವರುಗಳ ಸಂಘಟನೆ.

'ಮ್ಯಾಕ್ಸ್ ವೇಬರ್'ರವರ ಪ್ರಕಾರ ವರ್ಗ ವ್ಯವಸ್ಥೆಯು ಪ್ರಮುಖವಾಗಿ ಮೂರು ಅಂಶಗಳನ್ನು ಆಧರಿಸಿದೆ. ಅವುಗಳೆಂದರೆ, ಸಾಮಾಜಿಕ ಸ್ತರ, ಸ್ಥಿತಿಗತಿ, ಪಕ್ಷ ಜಾತಿ. ಅವರು ಇದರ ಜೊತೆಗೆ 6 ಪ್ರಮುಖ ಮೌಲ್ಯಗಳ ಬಗ್ಗೆಯೂ ತಿಳಿಯಪಡಿಸಿದ್ದಾರೆ. ಅವುಗಳೆಂದರೆ,

1. ಪರಿಶ್ರಮ, ಸಾಮಾನ್ಯೀಕರಣ, ವೈಯಕ್ತೀಕರಣ, ಸಂಪತ್ತು, ಚಟುವಟಿಕೆ, ಚಿಂತನೆ.

ವಿಲಿಯಂ ಲಾಯ್ಡ್ ವಾರ್ನರ್‌ರವರು ತಮ್ಮ ಪುಸ್ತಕವಾದ 'ಅಮೆರಿಕಾದ ವರ್ಗ ವ್ಯವಸ್ಥೆ (1949)ಯಲ್ಲಿ ತಿಳಿಸಿರುವಂತೆ, ವರ್ಗ ವ್ಯವಸ್ಥೆಯನ್ನು ಮೇಲ್ವರ್ಗ ಮಧ್ಯಮವರ್ಗ ಮತ್ತು ಕೆಳವರ್ಗ ಎಂಬುದಾಗಿ ವಿಭಾಗಿಸಲಾಗಿದೆ. ಇವುಗಳನ್ನು ಮತ್ತೆ ಕೆಲವು ಉಪವಿಭಾಗಗಳನ್ನಾಗಿ ವಿಂಗಡಣೆ ಮಾಡಲಾಗಿದೆ. ಅವುಗಳೆಂದರೆ,

1. **ಮೇಲು ವರ್ಗ**

ವಂಶಪಾರಂಪರ್ಯವಾಗಿ ಹರಿದು ಬಂದಂತಹ ಸಂಪತ್ತು, ಗುರುತಿಸಿಕೊಂಡ ವರ್ಗ.

2. **ಕೆಳ ಮೇಲ್ವರ್ಗ**

ತಮ್ಮದೇ ಆದ ಸಾಧನೆಯ ಮೂಲಕ ಸಂಪತ್ತನ್ನು ಗಳಿಸಿಕೊಂಡಂತಹವರು (ಸಿನಿಮಾ ಕಲಾವಿದರು, ಅಥ್ಲೀಟ್‌ಗಳು. ವ್ಯವಹಾರಗಾರರು).

3. **ಮೇಲು – ಮಧ್ಯಮವರ್ಗ**

ಕಾಲೇಜು ಶಿಕ್ಷಣ ಅದರಲ್ಲಿಯೂ ಸ್ನಾತಕೋತ್ತರ ಶಿಕ್ಷಣ ಪಡೆದಂತಹವರು ಸಾಹಿತಿಗಳು, ಕವಿಗಳು, ಸಂಗೀತಗಾರರು, ಪೈಲಟ್‌ಗಳು.

4. **ಕೆಳ – ಮಧ್ಯಮವರ್ಗ**

ಕಡಿಮೆ ಸಂಬಳಕ್ಕಾಗಿ ಕೆಲಸ ಮಾಡುವ ಕಾರ್ಮಿಕರು, ಉದಾ:– ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ, ಶಿಕ್ಷಕರು, ಲೆಕ್ಕಪತ್ರ ನೋಡಿಕೊಳ್ಳುವವರು, ಪುರೋಹಿತರು.

5. **ಮೇಲು – ಕೆಳವರ್ಗ**

ದಿನನಿತ್ಯದ ಕೆಲಸಗಳನ್ನು ಮಾಡುವ ದಿನಗೂಲಿ ನೌಕರರು.

Digitised by Bharatavani, CIIL

6. **ಕೆಳವರ್ಗ**

ಮನೆ ಮತ್ತು ನಿಖರವಾದ / ನಿರ್ದಿಷ್ಟವಾದ ಕೆಲಸ ಇಲ್ಲದಿರುವ ಬಡ ಜನರು.

ಚೀನೀಯರಲ್ಲಿ ಕಂಡುಬರುವ ವರ್ಗ ವ್ಯವಸ್ಥೆಯ ಬಗ್ಗೆ ಸಮಾಜತಜ್ಞ ಲೀಯೀರವರು ತಿಳಿಸಿರುವಂತೆ ಅಲ್ಲಿನ ವರ್ಗ ವ್ಯವಸ್ಥೆಯು ರೈತಾಪಿಜನರು, ವಿವಿಧ ಕೆಲಸಗಳನ್ನು ಮಾಡುವ ಕಾರ್ಮಿಕರು, ಬಂಡವಾಳದಾರರು ಇತ್ಯಾದಿಯಾಗಿ ಗುರುತಿಸಿಕೊಂಡಿದೆ.

ಭಾರತೀಯ ಸಂಸ್ಕೃತಿಯಲ್ಲಿ 'ವರ್ಣಾಶ್ರಮ' ವ್ಯವಸ್ಥೆ ಜಾರಿಯಲ್ಲಿದ್ದುದನ್ನು ಗಮನಿಸಬಹುದಾಗಿದೆ. ಇಲ್ಲಿ ಯಾವುದೇ ಕಾರಣಕ್ಕೂ ವರ್ಗಗಳ ಬದಲಾವಣೆಗೆ ಅವಕಾಶವಿಲ್ಲದೆ ಇರುವ ಅಂಶ ಗಮನಿಸಬಹುದಾಗಿದೆ. ವಿವಿಧ ವರ್ಣಗಳೆಂದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಬ್ರಾಹ್ಮಣರೆಂದರೆ ಧಾರ್ಮಿಕ ವಿಧಿ ವಿಧಾನಗಳನ್ನು ಬಲ್ಲ ಪೌರೋಹಿತ್ಯಕಾರ್ಯವನ್ನು ನೆರವೇರಿಸುವಂತಹ ಗುಂಪು. ಕ್ಷತ್ರಿಯರೆಂದರೆ ಇಡೀ ಪ್ರಾಂತ್ಯದ ರಕ್ಷಣೆಯ ಜವಾಬ್ದಾರಿಯನ್ನು ಹೊರುವ ವರ್ಗವಾದರೆ, ವೈಶ್ಯರ ಗುಂಪಿನಲ್ಲಿ ವ್ಯವಸಾಗಾರರು, ವ್ಯಾಪಾರಿಗಳು, ಕಲಾಕಾರರನ್ನು ಗುರುತಿಸಬಹುದಾಗಿದೆ. ಇನ್ನು ಶೂದ್ರರೆಂದರೆ ಮೇಲ್ವರ್ಗದವರು ಹೇಳುವ ಅಥವಾ ಒಪ್ಪಿಸುವ ಕೆಲಸವನ್ನು ನಿರ್ವಹಿಸುವ ಪಂಗಡ ಎನ್ನಬಹುದು.

ಸಮಾಜ ಶಾಸ್ತ್ರಜ್ಞರುಗಳು ಈ ವರ್ಗ ವ್ಯವಸ್ಥೆಗೆ ಸಂಬಂಧಪಟ್ಟಂತೆ ತಮ್ಮದೇ ಆದ ನಿಲುವು ಮತ್ತು ಧೋರಣೆಗಳನ್ನು ಹೊಂದಿದ್ದು, ಈ ರೀತಿಯ ವರ್ಗ ವ್ಯವಸ್ಥೆ ಇರಬೇಕೋ ಅಥವಾ ಬೇಡವೋ ಎನ್ನುವ ಜಿಜ್ಞಾಸೆಯಲ್ಲಿರುವುದು ಕಂಡುಬರುತ್ತಿದೆ. ಸಾಂವಿಧಾನಿಕವಾಗಿ ಎಲ್ಲರೂ ಸಮಾನರು. ಎಲ್ಲರೂ ತಮ್ಮ ತಮ್ಮ ಇಚ್ಛೆಗೆ ಅನುಗುಣವಾಗಿ ಜೀವನವನ್ನು ನಡೆಸಲು ಅವಕಾಶವಿದೆ ಎಂಬುದನ್ನು ತಿಳಿಯಪಡಿಸಲಾಗಿದೆ.

ಉತ್ತಮ ಶಿಕ್ಷಣವು ಎಲ್ಲ ವರ್ಗದ ಎಲ್ಲ ಮಕ್ಕಳಿಗೂ ಸುಲಭವಾಗಿ ದೊರಕುವಂತಿರಬೇಕು. ಎಲ್ಲ ವರ್ಗದವರ ಮಕ್ಕಳು ಒಟ್ಟಿಗೆ ಮಿಶ್ರವಾಗಿ ಶಾಲೆಯಲ್ಲಿ ಕಲಿಯುವಂತಾದರೆ ವರ್ಗ ಪ್ರಜ್ಞೆಯನ್ನು ಹೋಗಲಾಡಿಸ ಬಹುದು. ವರ್ಗವ್ಯವಸ್ಥೆ ಸಮಾಜದಲ್ಲಿದ್ದರೂ ಶಾಲೆಯಲ್ಲಿರಬಾರದು. ಶಿಕ್ಷಣದ ಹಕ್ಕು ಈ ದಿಸೆಯಲ್ಲಿ ಸ್ಮರಣೀಯ.

–ಎಂ.ಎಸ್.ತ.

## ವಸ್ತುನಿಷ್ಠ ಪರೀಕ್ಷಾಂಶಗಳು

ವಿದ್ಯಾರ್ಥಿಯ ಈಗಿನ ಲಿಖಿತ ಪರೀಕ್ಷೆಗಳು ಹೆಚ್ಚಾಗಿ ಬಳಕೆಯಾಗುತ್ತಿದ್ದು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಹಂತದವರೆಗೆ ಪ್ರಚಲಿತವಾಗಿವೆ. ಪರೀಕ್ಷೆಗಳು ವಿದ್ಯಾರ್ಥಿ ಸಮೂಹದ ಸಾಧನೆಯನ್ನು ಮೌಲ್ಯಮಾಪನ ಮಾಡುವುದು ಅವಿಭಾಜ್ಯ ಅಂಗವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಗುರುತಿಸಲು ಪಠ್ಯವಿಷಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ವೇಳೆಯಲ್ಲಿ ಪ್ರಶ್ನೆಗಳಿಗೆ ಲಿಖಿತ ಉತ್ತರ ಪಡೆಯುವ ವಿಧಾನವನ್ನು ಲಿಖಿತ ಪರೀಕ್ಷೆ ವಿಧಾನವೆಂದು ಕರೆಯುತ್ತೇವೆ. ಇವುಗಳಲ್ಲಿ ಪ್ರಮುಖವಾಗಿ 3 ವಿಧಗಳಿವೆ.

1. ಪ್ರಬಂಧ ಮಾದರಿ
2. ಲಘು ಉತ್ತರ ಮಾದರಿ
3. ವಸ್ತುನಿಷ್ಠ ಪರೀಕ್ಷೆಗಳು

ಇವುಗಳಲ್ಲಿ ನಾವು ವಸ್ತುನಿಷ್ಠ ಪರೀಕ್ಷೆಯ ಬಗೆಗೆ ವಿವರವಾಗಿ ತಿಳಿದುಕೊಳ್ಳೋಣ.

ಮೂಲವಸ್ತು, ವಸ್ತುವಿನ ನಮೂನೆ, ವಸ್ತುವಿನ ನಕಾಶೆ ಇವುಗಳಲ್ಲಿ ಒಂದನ್ನು ಹೆಸರಿಸುವಂತೆ ಮಾಡುವುದು ಮತ್ತು ದತ್ತ ವಸ್ತುಗಳ ಸಮೂಹದಲ್ಲಿ ಯಾವುದೇ ನಿರ್ದಿಷ್ಟ ವಸ್ತುವನ್ನು ಗುರುತಿಸುವಂತೆ ಹೇಳುವುದು ಈ ವರ್ಗಕ್ಕೆ ಸೇರುತ್ತದೆ. ಇದರಲ್ಲಿ ಹಲವು ಪ್ರಶ್ನೆಗಳು ಜ್ಞಾನವಲಯ ಮತ್ತು ಭಾವವಲಯಕ್ಕೆ ಸೇರುತ್ತವೆ. ಏಕೆಂದರೆ ಕೌಶಲ್ಯವು ಜ್ಞಾನ ಮತ್ತು ಗ್ರಹಿಕೆ ನಂತರದ ಹಂತವೆಂದು ಗಮನಿಸಬೇಕು.

ನಿರ್ದಿಷ್ಟ ಉತ್ತರವನ್ನು ನಿರೀಕ್ಷಿಸುವ ಸಂಕೇತ ರೂಪದ ಒಂದು ಪದ ಅಥವಾ ಚಿಹ್ನೆ ಇಲ್ಲವೆ ಒಂದೇ ವಾಕ್ಯದಲ್ಲಿ ಉತ್ತರಿಸುವ ಹಾಗೂ ಯಾರೇ ಮೌಲ್ಯಮಾಪನ ಮಾಡಿದರೂ ವ್ಯತ್ಯಾಸವಾಗದ ಅತ್ಯಂತ ಶ್ರೇಷ್ಠ ರೀತಿಯಲ್ಲಿ ಪ್ರಮಾಣೀಕರಿಸಿದ ಪರೀಕ್ಷಾಂಶಗಳನ್ನು ಒಳಗೊಂಡಿರುವ ಪರೀಕ್ಷಾಂಶಗಳು ವಸ್ತುನಿಷ್ಠ ಇವುಗಳನ್ನು ಉದ್ದೇಶನಿಷ್ಠ ಪರೀಕ್ಷಾಂಶಗಳೆಂತಲೂ ಧ್ಯೇಯನಿಷ್ಠ ಪರೀಕ್ಷಾಂಶಗಳೆಂದೂ ಕರೆಯುವುದುಂಟು. ಇಲ್ಲಿ ಕಡಿಮೆ ಸಮಯದಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಅಳೆಯಬಹುದು. ವಾಸ್ತವಾಂಶಗಳ ಜ್ಞಾನವನ್ನು ಸಮರ್ಪಕವಾಗಿ ಅಳತೆ ಮಾಡಬಹುದು. ಪ್ರಾರಂಭದ ಹಂತದಿಂದಲೂ ಇವು ಬಹಳವಾಗಿ ಪ್ರಚಾರದಲ್ಲಿರುವ ಮೌಲ್ಯಮಾಪನದ ಉತ್ತಮ ಸಾಧನಗಳಾಗಿವೆ.

ಈ ಪ್ರಶ್ನೆಗಳಿಗೆ ಉತ್ತರಿಸಲು ಕೇವಲ 10, 20 ಅಥವಾ 30 ಸೆಕೆಂಡುಗಳು ಬೇಕಾಗಬಹುದು. ವಿದ್ಯಾರ್ಥಿಗಳ ಆ ಸಾಧನದ ವಸ್ತುನಿಷ್ಠತೆ ಒಂದು ಪ್ರಶ್ನೆಗೆ ಒಂದೇ ಉತ್ತರ ಬರುವುದು. ಯಾರೇ ಪರೀಕ್ಷಿಸಿದರೂ ಎಲ್ಲರೂ ಒಂದೇ ರೀತಿಯ ಅಂಕವನ್ನು ನೀಡುವ ಹಾಗೆ ರಚಿತಗೊಂಡಿರುವ ಪರೀಕ್ಷೆಗಳಾಗಿವೆ. ಯಾವುದೇ ಪರೀಕ್ಷೆಯ ಸಾಧನದಿಂದ ಪಡೆದ ಉತ್ತರಗಳಿಗೆ ಎಲ್ಲ ಪರೀಕ್ಷಕರು ಸಮನಾದ ಅಂಕಗಳನ್ನು ನೀಡಿದಾಗ ಆ ಪರೀಕ್ಷೆಯ ಸಾಧನ ವಸ್ತುನಿಷ್ಠತೆಯಿಂದ ಕೂಡಿದೆ ಎಂದರ್ಥ.

ಇದು ನಮಗೆ ಪ್ರಾರಂಭದಲ್ಲಿ ಸರಳವೆಂದು ತೋರಿದರೂ ಅಷ್ಟು ಸರಳವಾಗಿರುವುದಿಲ್ಲ. ಇದು ಸೃಜನಾತ್ಮಕ ಸಾಮರ್ಥ್ಯ ಮತ್ತು ಪರಿಪೂರ್ಣ ಜ್ಞಾನವನ್ನು ಹೊಂದಿದವರಿಗೆ ಸಾಧ್ಯ. ಅಷ್ಟೇ ಅಲ್ಲ, ವಿಷಯದ ವಸ್ತು ಮತ್ತು ಉದ್ದೇಶಗಳನ್ನು ನಿರ್ಧರಿಸಿ ರಚಿತವಾಗಿರಬೇಕು. ಆತನ ಆಲೋಚನೆ, ಹಿನ್ನೆಲೆಗಳಿಗನುಗುಣವಾಗಿ ಕಠಿಣತರ, ಮಧ್ಯಮ ಹಾಗೂ ಸರಳತೆಯಿಂದ ಕೂಡಿದ್ದು ಆತನ ಕೌಶಲ್ಯ, ಸಾಮರ್ಥ್ಯ ಮುಂತಾದವುಗಳನ್ನು ಪರೀಕ್ಷಿಸುವುದಾಗಿದೆ.

### ವಸ್ತುನಿಷ್ಠ ಪರೀಕ್ಷೆಯ ವಿಧಗಳು

1. ಬಿಟ್ಟಸ್ಥಳಗಳನ್ನು ತುಂಬುವುದು.
2 ಸರಿ–ತಪ್ಪು ಪ್ರಶ್ನೆಗಳು
3. ಬಹು ಅಂಶಗಳಿಂದ ಆಯ್ಕೆ ಪ್ರಶ್ನೆಗಳು
4. ಜೋಡಣೆಯ ಪ್ರಶ್ನೆಗಳು
5. ವರ್ಗೀಕರಣ ಪ್ರಶ್ನೆಗಳು
6. ಸಂಬಂಧ ಕಲ್ಪನೆ ಪ್ರಶ್ನೆಗಳು
7. ನೇರ ಪ್ರಶ್ನೆಗಳು
8. ಅನುಕ್ರಮಣಿಕೆ ಪ್ರಶ್ನೆಗಳು


Digitised by Bharatavani, CIIL

9. ವಾಕ್ಯ ಪೂರ್ಣಗೊಳಿಸುವಿಕೆ
10. ಚಿತ್ರ ರಚನಾ ಪ್ರಶ್ನೆಗಳು

**ರಚನಾ ತತ್ವಗಳು**

ವಸ್ತುನಿಷ್ಠ ಪ್ರಶ್ನೆಗಳನ್ನು ರಚಿಸುವಾಗ ಪಠ್ಯ ಮತ್ತು ಸಂಪನ್ಮೂಲ ಸಂಗತಿಗಳನ್ನು ವಿಶ್ಲೇಷಿಸುವುದು ಅದರಂತೆ ಕೆಲವು ಸಾಮಾನ್ಯ ತತ್ವಗಳನ್ನು ಪ್ರಶ್ನೆ ರಚಿಸುವಲ್ಲಿ ಗಮನದಲ್ಲಿಡಬೇಕು.

1. ಪರೀಕ್ಷಾಂಶಗಳು ಸ್ಪಷ್ಟವಾಗಿ ನಿರೂಪಿತವಾಗಬೇಕು.
2. ಕಲಿಕೆಗೆ ಒತ್ತು ಕೊಡುವಂತಿರಬೇಕು ವಿನಃ ಸ್ಮರಣೆಗಾಗಿ ಅಲ್ಲ
3. ಯಾವುದೇ ಸಂದರ್ಭಕ್ಕೂ ದ್ವಂದ್ವಾರ್ಥ ಪ್ರಶ್ನೆಗಳು ಇರಲೇಬಾರದು
4. ಪರೀಕ್ಷಾಂಶಗಳು ಸಾಕಷ್ಟು ವ್ಯಾಪಕತೆ ಹೊಂದಿರಬೇಕು.
5. ಭಾಷಾಮಟ್ಟವು ಉತ್ತಮವಾಗಿರಬೇಕಲ್ಲದೆ ಸ್ಪಷ್ಟವಾಗಿರಬೇಕು.
6. ಪರೀಕ್ಷಾಂಶಗಳು ನೇರವಾಗಿರಬೇಕಲ್ಲವೆ ನಿರ್ದಿಷ್ಟ ಉತ್ತರ ಬರುವಂತಿರಬೇಕು
7. ಪರೀಕ್ಷಾಂಶಗಳು ಸರಳತೆಯಿಂದ ಕಠಿಣದೆಡೆಗೆ ಸಾಗಬೇಕು.
8. ಪರೀಕ್ಷಾಂಶಗಳು ಎಲ್ಲಾ ಅಧ್ಯಾಯಗಳಿಂದ ಆಯ್ಕೆ ಮಾಡಿಕೊಂಡಿರಬೇಕು.
9. ಪರೀಕ್ಷಾಂಶಗಳು ಮಕ್ಕಳ ಮಾನಸಿಕಮಟ್ಟಕ್ಕೆ ತಕ್ಕಂತಿರಬೇಕು
10. ವ್ಯಾಕರಣ ದೋಷಗಳಿಂದ ಮುಕ್ತವಾಗಿರಬೇಕು
11. ಪರೀಕ್ಷಾಂಶಗಳು ಪಠ್ಯಪುಸ್ತಕದಿಂದ ನೇರವಾಗಿ ನಕಲು ಮಾಡಬಾರದು.
12. ಅಸ್ಪಷ್ಟವಾದ ಹೇಳಿಕೆ ಮತ್ತು ವಿವಾದಾತ್ಮಕ ಅಂಶಗಳನ್ನು ಕೇಳಬಾರದು
13. ಒಂದು ಪರೀಕ್ಷಾಂಶಕ್ಕೆ ಉತ್ತರ ಇನ್ನೊಂದು ಪರೀಕ್ಷಾಂಶದಲ್ಲಿ ದೊರೆಯುವಂತಿರಬಾರದು ಹಾಗೂ ಒಂದೇ ಪರೀಕ್ಷಾಂಶಕ್ಕೆ ಎರಡು ಉತ್ತರಗಳನ್ನು ನಿರೀಕ್ಷಿಸಬಾರದು.
14. ಉತ್ತರಿಸುವ ಬಗೆಗೆ ಸ್ಪಷ್ಟ ಸೂಚನೆಗಳಿರಬೇಕು
15. ಪರೀಕ್ಷಾಂಶಗಳು ವೈವಿಧ್ಯಮಯವಾಗಿದ್ದು ಭಿನ್ನ ಸಾಮರ್ಥ್ಯದ ವಿದ್ಯಾರ್ಥಿಗಳೆಲ್ಲ ಉತ್ತರಿಸುವಂತಿರಬೇಕು
16. ಪರೀಕ್ಷಾಂಶಗಳನ್ನು ರಚಿಸಿದ ನಂತರ ಅವುಗಳನ್ನು ವಿಮರ್ಶಿಸಿ ಸಮತೋಲನವಾಗಿರುವಂತೆ ನೋಡಿಕೊಳ್ಳಬೇಕು.

**ಇತಿ–ಮಿತಿಗಳು**

1. **ಭಾಷಾ ಸಾಮರ್ಥ್ಯವನ್ನು ಅಳೆಯುವುದು:** ಕೇವಲ ತುಂಡು ಜ್ಞಾನವನ್ನು ಮಾತ್ರ ನೀಡುತ್ತದೆ. ವಿಷಯದ ಸಾಮಾನ್ಯ ತಿಳಿವಳಿಕೆ ಅಂಶಗಳು ಚಿಕ್ಕದಾಗಿರುವುದರಿಂದ ವಾಕ್ಯರಚನೆಯಲ್ಲಿ ಪರಿಪೂರ್ಣತೆಯನ್ನು ಹೊಂದಿರುವುದಿಲ್ಲ. ವಿಚಾರ ಪ್ರಚೋದಕವಾದ ಅಂಶಗಳಿರುವುದಿಲ್ಲ. ನಿಬಂಧ ಪರೀಕ್ಷೆಯಲ್ಲಿ ಉನ್ನತವಾದ ವಿಚಾರಗಳನ್ನು ಅಭಿವ್ಯಕ್ತಪಡಿಸಲು ಸಾಧ್ಯವಿರುವಂತೆ ಇಲ್ಲಿ ಅವಕಾಶವಿರುವುದಿಲ್ಲ.
2. **ಅದೃಷ್ಟ ಪರೀಕ್ಷೆ :** ಇಲ್ಲಿ ತಮಗೆ ಬೇಕಾದ ಅಂಶಗಳನ್ನು ತಿಳಿದಿರಲಿ ತಿಳಿಯದಿರಲಿ ಊಹೆಯ ಮೇಲೆ ಉತ್ತರಿಸುವ ಸಾಧ್ಯತೆ ಇದೆ.
3. **ಮುದ್ರಣಕ್ಕೆ ಹೆಚ್ಚು ಹಣ ಬೇಕು:** ವಸ್ತುನಿಷ್ಠ ಪರೀಕ್ಷಾಂಶಗಳನ್ನು ಮುದ್ರಿಸಿ ಕೊಡಬೇಕಾಗುವುದರಿಂದ ಮುದ್ರಣ ಕಾರ್ಯಕ್ಕೆ ಹೆಚ್ಚು ಹಣದ ಅಗತ್ಯವಿದೆ.
4. **ತಯಾರಿಸಲು ತೊಂದರೆ:** ಉತ್ತಮ ಪರೀಕ್ಷಾಂಶಗಳನ್ನು ರಚನೆಗೆ ಶಿಕ್ಷಕರಿಗೆ ಹೆಚ್ಚು ವೇಳೆ ಬೇಕಾಗುತ್ತದೆ.
5. **ನಕಲು ಮಾಡುವ ಅವಕಾಶ :** ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರವನ್ನು ನಕಲು ಮಾಡುವುದು ಸುಲಭ.
6. **ಭಾಷಾ ಕೌಶಲ್ಯ ಅಭಾವ:** ವಿದ್ಯಾರ್ಥಿಗಳ ಭಾಷಾ ಕೌಶಲ್ಯ ಗುರುತಿಸಲು ಸಾಧ್ಯವಿಲ್ಲ.

**ವಸ್ತುನಿಷ್ಠ ಪರೀಕ್ಷೆಯ ವಿಧಗಳು:** ಪ್ರಚಾರದಲ್ಲಿರುವ ವಸ್ತುನಿಷ್ಠ ಪರೀಕ್ಷಾಂಶಗಳಲ್ಲಿ ಸಾಕಷ್ಟು ವಿವಿಧತೆಗಳನ್ನು ಕಾಣುತ್ತೇವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ.

1. **ಬಿಟ್ಟ ಸ್ಥಳಗಳನ್ನು ತುಂಬುವುದು :** ಒಂದು ವಾಕ್ಯ ಇಲ್ಲವೆ ಹೇಳಿಕೆಯಲ್ಲಿ ಮುಖ್ಯಪದ ಅಥವಾ ಪರಿಕಲ್ಪನೆಯನ್ನು ಬಿಡುವುದು. ಪದಗಳು ವಾಕ್ಯದ ಯಾವುದಾದರೊಂದು ಭಾಗದಲ್ಲಿ ಬರಬಹುದು. ಅದೇ ರೀತಿ ಒಂದಕ್ಕಿಂತ ಹೆಚ್ಚು ಪದಗಳು ಖಾಲಿ ಇರಬಹುದು.

ಉದಾ : ಹಿಂದೂ ಧರ್ಮದ ಪವಿತ್ರ ಗ್ರಂಥ.........

ಭಾರತದ ಉತ್ತರಕ್ಕೆ ........... ಪರ್ವತವಿದೆ.

2. **ಸರಿ–ತಪ್ಪು ಪ್ರಶ್ನೆಗಳು :** ಕೆಲವು ವಾಕ್ಯಗಳನ್ನು ಕೊಟ್ಟು ಆ ಹೇಳಿಕೆಗಳನ್ನು ಸರಿ (True) ಅಥವಾ ತಪ್ಪು (False) ಎಂಬುದನ್ನು T ಅಥವಾ F ಅಕ್ಷರಗಳಿಂದ ತೋರಿಸಬೇಕಾಗುತ್ತದೆ.

ಉದಾ : ಭಾರತಕ್ಕೆ ಸ್ವತಂತ್ರ ಬಂದ ವರ್ಷ 1949........ [ ]

ಮುಸ್ಲಿಮ್ ಧರ್ಮದ ಪವಿತ್ರ ಗ್ರಂಥ ಖುರಾನ್........ [ ]

3. **ಬಹು ಆಯ್ಕೆ ಪ್ರಶ್ನೆ ಅಂಶಗಳು :** ಪ್ರತಿ ವಾಕ್ಯದ ಮುಂದೆ ಸಾಮಾನ್ಯವಾಗಿ ನಾಲ್ಕು ಪರ್ಯಾಯಗಳನ್ನು ನೀಡಿದ್ದು ಅದರಲ್ಲಿ ಒಂದು ಉತ್ತರ ಮಾತ್ರ ಸರಿಯಿದ್ದು ಅದನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿ ಬರೆಯಬೇಕು.

ಉದಾ: ರೇಖಾ ಗಣಿತದ ಜನಕ...................

(ಯುಕ್ಲಿಡ್, ಪೈಥಾಗೋರಸ್, ಆರ್ಕಿಮಿಡಿಸ್, ಲಾಪ್ಲಾಸ್)

ಪ್ರಪಂಚದಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶ ................

(ಮೈನಾಮನ್, ಚಿರಾಪುಂಜಿ, ಆಗುಂಬೆ, ಅಮೆರಿಕನ್ ಆಲ್ಪ್ಸ್)

4. **ಹೊಂದಿಸಿ ಬರೆಯುವ ಪ್ರಶ್ನೆಗಳು :** ಈ ವಿಧಾನದಲ್ಲಿ ಅ ಮತ್ತು ಬ ಎಂಬ ಎರಡು ಪಟ್ಟಿಗಳು ಇರುತ್ತವೆ. ಈ ಎರಡೂ ಪಟ್ಟಿಗಳಲ್ಲಿನ ವಿಷಯ / ದೇಶ / ಚಿಹ್ನೆ ಸಂಬಂಧ ಮುಂತಾದವುಗಳಿದ್ದು ಅವುಗಳ ನಡುವೆ ಇರುವಂತಹ ಸಂಬಂಧಗಳನ್ನು ಗುರುತಿಸಿ ಹೊಂದಿಸಿ ಬರೆಯಬೇಕು.

| ಉದಾ : ಅ | ಬ |
|---|---|
| ಕೊಲಂಬಸ್ | ಆಸ್ಟ್ರೇಲಿಯಾ |
| ವಾಸ್ಕೋಡಿಗಾಮಾ | ಅಮೆರಿಕಾ |

Digitised by Bharatavani, CIIL

ಮ್ಯಾಗಿಲಾನ್ ದಕ್ಷಿಣ ಧ್ರುವ

ಕ್ಯಾಪ್ಟನ್ ಕುಕ್ ಫೆಸಿಫಿಕ್ ಸಾಗರ

ಇಂಡಿಯಾ

5. **ವರ್ಗೀಕರಣ ಪ್ರಶ್ನೆಗಳು :** ಈ ಪ್ರಶ್ನೆಗಳಲ್ಲಿ ನಾಲ್ಕು–ಐದು ಅಂಶಗಳನ್ನೊಳಗೊಂಡ ಕೆಲವೊಂದು ಗುಂಪುಗಳಿರುತ್ತವೆ. ಪ್ರತಿ ಗುಂಪಿನಲ್ಲಿ ಒಂದು ಅಂಶವನ್ನು ಬಿಟ್ಟು ಉಳಿದವು ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿರುತ್ತದೆ. ವಿದ್ಯಾರ್ಥಿಗಳು ಇಲ್ಲಿ ಗುಂಪಿಗೆ ಸೇರದ ಭಿನ್ನ ಅಂಶವನ್ನು ಪ್ರತ್ಯೇಕಿಸಿ ತೆಗೆಯಬೇಕು. ಇಲ್ಲಿ ಯೋಚಿಸಿ ಉತ್ತರಿಸಲು ವಿದ್ಯಾರ್ಥಿಗಳಿಗೆ ಅವಕಾಶವಿದೆ.

ಉದಾ : ಅಮೆರಿಕಾ, ಇಂಗ್ಲೆಂಡ್, ಯುರೋಪ್, ಆಫ್ರಿಕಾ, ಏಶಿಯಾ

ಕನ್ನಡ, ತಮಿಳು, ಮಲೆಯಾಳಂ, ತೆಲುಗು, ಒರಿಯಾ.

6. **ಸಂಬಂಧ ಕಲ್ಪನೆ ಪ್ರಶ್ನೆಗಳು :** ಇಲ್ಲಿ ಒಂದು ಗುಂಪಿನಲ್ಲಿ ಒಂದಕ್ಕೊಂದು ಸಂಬಂಧವಿರುವ ಎರಡು ಅಂಶಗಳನ್ನು ನೀಡಲಾಗಿದ್ದು ಇನ್ನೊಂದು ಗುಂಪಿನಲ್ಲಿ ಒಂದು ಅಂಶ ನೀಡಿದ್ದು ಅದಕ್ಕೆ ಸಂಬಂಧಿಸಿದಂತಹ ಅದೇ ಬಗೆಯ ಅಂಶವನ್ನು ಬರೆಯಬೇಕು.

ಉದಾ : 1 ಶಂಕರಾಚಾರ್ಯರು : ಅದ್ವೈತ : : ರಾಮಾನುಜಾಚಾರ್ಯರು:

2. 6/4 : – : : 2 1/3 : ಮಿಶ್ರ ಭಿನ್ನರಾಶಿ

7. **ನೇರಪ್ರಶ್ನೆಗಳು :** ನಿರ್ದಿಷ್ಟವಾದ ಒಂದು ಅಥವಾ ಎರಡು ಪದ, ಸಂಖ್ಯೆ, ಚಿಹ್ನೆ ಅಥವಾ ವಾಕ್ಯದಲ್ಲೇ ಉತ್ತರಿಸಬಹುದಾದ ಪುಟ್ಟ ಉತ್ತರವನ್ನು ಬಯಸುವ ಪ್ರಶ್ನೆಗಳೇ ನೇರಪ್ರಶ್ನೆಗಳು. ಇಲ್ಲಿ ಸ್ಮರಿಸಿಕೊಂಡು ಉತ್ತರಿಸಬೇಕು.

ಉದಾ : 1. ಸಂವಿಧಾನಶಿಲ್ಪಿ ಎಂದು ಯಾರನ್ನು ಕರೆಯುತ್ತಾರೆ?

2. ರಾಮಾಯಣದರ್ಶನಂ ಮಹಾಕಾವ್ಯ ಬರೆದವರು ಯಾರು?

8. **ಅನುಕ್ರಮಣಿಕೆ ಪ್ರಶ್ನೆಗಳು :** ಕ್ರಮಬದ್ಧತೆ ಇಲ್ಲಿ ಮುಖ್ಯವಾದುದು. ಭಾಷೆ, ಗಣಿತ, ವಿಜ್ಞಾನ ಮುಂತಾದ ವಿಷಯಗಳಲ್ಲಿ ಕೊಟ್ಟಿರುವ ಅಂಶಗಳನ್ನು ಅನುಕ್ರಮವಾಗಿ ಬರೆಯಬೇಕು ಇಲ್ಲವೇ ಆರೋಹಣ ಅಥವಾ ಅವರೋಹಣ ಕ್ರಮದಲ್ಲಿ ಅನುಕ್ರಮವಾಗಿ ಜೋಡಿಸಬೇಕು.

ಉದಾ : 1. ಹಣ್ಣು, ಹೂವು, ಕಾಯಿ, ಮೊಗ್ಗು, ಬೇರು

2. 0.067, 0.01, 0.801, 0.03.01 ಆರೋಹಣ ಕ್ರಮದಲ್ಲಿ ಬರೆಯಿರಿ.

9. **ವಾಕ್ಯ ಪೂರ್ಣಗೊಳಿಸುವಿಕೆ :** ಇದು ಒಂದು ಅಪೂರ್ಣ ಹೇಳಿಕೆಯಾಗಿದ್ದು, ಸೂಕ್ತವಾದ ಪದ/ಪದಗಳನ್ನು ತುಂಬುವುದರ ಮೂಲಕ ವಾಕ್ಯವನ್ನು ಪೂರ್ಣಗೊಳಿಸಲಾಗುವುದು.

ಉದಾ : ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯು...........

ಸಮಾಂತರ ಸರಳರೇಖೆಗಳನ್ನು ಎರಡು ಕಡೆಗೆ ಎಷ್ಟೇ ಬೆಳೆಸಿದರೂ ಅವು...........

10. **ಚಿತ್ರ ರಚನಾ ಪ್ರಶ್ನೆಗಳು :** ಚಿತ್ರ ರಚನಾ ಪ್ರಶ್ನೆಗಳಿಗೆ ಯಾವುದಾದರೊಂದು ವಿಷಯವನ್ನು ಚಿತ್ರದ ಮೂಲಕ ಪ್ರಸ್ತುತಪಡಿಸಬೇಕಾಗುತ್ತದೆ. ಇಲ್ಲವೆ ಅಪೂರ್ಣವಾದ ರಚನೆಯನ್ನು ಭೂಮಿತಿ ಉಪಕರಣಗಳ ಸಹಾಯದಿಂದ ಪೂರ್ಣಗೊಳಿಸ ಬೇಕಾಗುತ್ತದೆ.

ಉದಾ : 1/4ನ್ನು ಚಿತ್ರದ ಮೂಲಕ ತೋರಿಸಿರಿ.

ಭಾರತ ದೇಶದ ನಕಾಶೆಯಲ್ಲಿ ನಾಲ್ಕು ನದಿ ಅಥವಾ ನಾಲ್ಕು ಬೆಟ್ಟ ಅಥವಾ ನಾಲ್ಕು ನಗರಗಳನ್ನು ಗುರುತಿಸಿ.

**ಉದ್ದೇಶ ಆಧಾರಿತ ಪರೀಕ್ಷಾಂಶಗಳನ್ನು ರಚಿಸುವಾಗ ಗಮನಿಸಬೇಕಾದ ಅಂಶಗಳು**

ಪರೀಕ್ಷಾಂಶಗಳನ್ನೂ, ಹಂತ, ಉದ್ದೇಶ, ವಯಸ್ಸು ಎಲ್ಲವನ್ನೂ ಪರಿಗಣಿಸಿ ಜಾಗರೂಕತೆಯಿಂದ ಮತ್ತು ಕ್ರಮಬದ್ಧವಾದ ರೀತಿಯಿಂದ ರೂಪಿಸಬೇಕು.

ಶಿಕ್ಷಕ ಪರೀಕ್ಷಾಂಶಗಳನ್ನು ರಚಿಸುವ ಮುನ್ನ ಸರಿಯಾಗಿ ವಿಚಾರಿಸಿ ಪರೀಕ್ಷೆಯ ವಿನ್ಯಾಸವನ್ನು ರೂಪಿಸಬೇಕು.

- ಸಮಂಜಸತೆ, ವಿಶ್ವಸನೀಯತೆ, ವಸ್ತುನಿಷ್ಠತೆ ಹಾಗೂ ಉಪಯೋಗಾರ್ಹತೆ ಗುಣಗಳನ್ನು ಗಮನಿಸಬೇಕು
- ಬೋಧನಾ ಉದ್ದೇಶಗಳತ್ತ ಗಮನಹರಿಸಬೇಕು.
- ವಿಷಯ ವಸ್ತುವಿಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕು.
- ಏನನ್ನು ಕಲಿಸಲಾಗಿದೆ? ಹೇಗೆ ಕಲಿಸಲಾಗಿದೆ? ಎಂಬುದನ್ನು ಗಮನದಲ್ಲಿಡಬೇಕು.
- ಜ್ಞಾನ, ತಿಳುವಳಿಕೆ, ಕೌಶಲ್ಯ ಹಾಗೂ ಅನ್ವಯಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು.
- ಪರೀಕ್ಷಾಂಶಗಳ ಎಲ್ಲ ಪ್ರಕಾರಗಳಿಗೂ ಸೂಕ್ತ ಆದ್ಯತೆ ನೀಡಬೇಕು.
- ಕ್ಲಿಷ್ಟತೆಯ ಶ್ರೇಣೀಕರಣವನ್ನು ಗಮನಿಸಬೇಕು.
- ವಿದ್ಯಾರ್ಥಿಗಳ ವಯೋಮಾನ ಅರಿತು ಕಠಿಣ, ಸುಲಭ ಮತ್ತು ಸಾಮಾನ್ಯಮಟ್ಟದ ಪರೀಕ್ಷಾಂಶಗಳನ್ನು ಸೇರಿಸಬೇಕು.
- ಐಚ್ಛಿಕ ಪರೀಕ್ಷಾಂಶಗಳನ್ನು ಜಾಗರೂಕತೆಯಿಂದ ನಿರ್ಧರಿಸಬೇಕು.
- ಪರೀಕ್ಷಾಂಶಗಳ ಹಂಚಿಕೆ ಅವುಗಳಿಗೆ ನಿಗದಿಪಡಿಸಿದ ಅಂಕಗಳಿಗನುಸಾರವಾಗಿ ಇರುವಂತೆ ಪರೀಕ್ಷಾಯೋಜನೆ ರೂಪಿತವಾಗಬೇಕು.

–ವಿ.ಡಿ.ಐ

## ವೃದ್ಧಾಪ್ಯ

ಜೀವಿತಾವಧಿಯ ಮುಕ್ತಾಯದ ಅವಧಿಯೇ ವೃದ್ಧಾಪ್ಯ. ಅಂದರೆ ಜನರು ತಮ್ಮ ಹಿಂದಿನ ಹೆಚ್ಚು ಅಪೇಕ್ಷಿತ ಅವಧಿಯಿಂದ ಅಥವಾ ಉಪಯುಕ್ತತೆ ಅವಧಿಯಿಂದ ದೂರ ಸರಿಯುವ ಅವಧಿಯೇ ವೃದ್ಧಾಪ್ಯ. ಅರವತ್ತರ ವಯಸ್ಸನ್ನು ಮಧ್ಯವಯಸ್ಸಾವಧಿ ಮತ್ತು ವೃದ್ಧಾಪ್ಯವನ್ನು ವಿಭಜಿಸುವ ಅವಧಿಯೆಂದು ಪರಿಗಣಿಸಲಾಗುತ್ತದೆ. ವೃದ್ಧಾಪ್ಯದ ವಯಸ್ಸನ್ನು ಅಳೆಯುವುದು ಅಷ್ಟೊಂದು ಸೂಕ್ತವಲ್ಲ. ಏಕೆಂದರೆ ವ್ಯಕ್ತಿಗಳಿಂದ ವ್ಯಕ್ತಿಗಳಿಗೆ ವೃದ್ಧಾಪ್ಯದ ಗುಣ ಲಕ್ಷಣಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ.

ಇಂದಿನ ಜೀವನ ಶೈಲಿ ಮತ್ತು ಉತ್ತಮ ಮಟ್ಟದ ಆರೋಗ್ಯ ಸುರಕ್ಷತೆಯ ಕ್ರಮಗಳಿಂದಾಗಿ ಬಹಳಷ್ಟು ಪುರುಷರು ಮತ್ತು ಸ್ತ್ರೀಯರಲ್ಲಿ ಅರವತ್ತು ಮತ್ತು ಎಪ್ಪತ್ತನೇ ವಯಸ್ಸಿನವರೆಗೂ ವೃದ್ಧಾಪ್ಯದ ಮಾನಸಿಕ


Digitised by Bharatavani, CIIL

ಮತ್ತು ದೈಹಿಕ ಗುಣ ಲಕ್ಷಣಗಳು ಕಂಡಬರುವುದಿಲ್ಲ. ಈ ಕಾರಣದಿಂದಾಗಿ ಅರವತ್ತನೆ ವಯಸ್ಸನ್ನು ಬಹಳಷ್ಟು ವ್ಯವಹಾರಗಳಲ್ಲಿ ನಿವೃತ್ತಿಯ ವಯಸ್ಸಾಗಿ ಪರಿಗಣಿಸುತ್ತಾರೆಯೆ ಹೊರತು ವೃದ್ಧಾಪ್ಯದ ಆರಂಭವೆಂದು ಗುರುತಿಸುವುದಿಲ್ಲ. ಹಾಗೆಯೇ ಜೀವನದ ಕೊನೆಯ ಹಂತವನ್ನು ಉಪವಿಭಾಗಗಳಾಗಿ ವಿಂಗಡಿಸುವುದಾದರೆ 60 ರಿಂದ 70ರವರೆಗೆ ಪೂರ್ವವೃದ್ಧಾಪ್ಯವೆಂದು ಮತ್ತು 70ರ ಪ್ರಾರಂಭದಿಂದ ಜೀವನದ ಅಂತ್ಯದವರೆಗೆ ಮುಂದುವರಿದ ವೃದ್ಧಾಪ್ಯವೆಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. 60ನೇ ವಯಸ್ಸಿನಲ್ಲಿರುವವರನ್ನು ಸಾಮಾನ್ಯವಾಗಿ ಸಮಾಜದಲ್ಲಿ ಹಿರಿಯರೆಂದು ಪರಿಗಣಿಸಲಾಗುತ್ತದೆ. ಮತ್ತು 70ನೇ ವಯಸ್ಸು ದಾಟಿದವರನ್ನು ವಯಸ್ಸಾದವರೆಂದು ಅಥವಾ ವೃದ್ಧರೆಂದು ಪರಿಗಣಿಸಲಾಗುತ್ತದೆ.

## ವೃದ್ಧಾಪ್ಯದ ಗುಣಲಕ್ಷಣಗಳು

ಜೀವನದ ಇನ್ನಿತರ ಅವಧಿಗಳ ಹಾಗೆ ವೃದ್ಧಾಪ್ಯವು ಕೂಡ ಕೆಲವು ದೈಹಿಕ ಮತ್ತು ಮಾನಸಿಕ ಬದಲಾವಣೆಗಳಿಂದ ಕೂಡಿರುತ್ತದೆ. ಈ ಬದಲಾವಣೆಯ ಪರಿಣಾಮಗಳು ಬಹಳ ಮಟ್ಟದವರೆಗೆ ಪುರುಷರು ಮತ್ತು ಸ್ತ್ರೀಯರು ತಮ್ಮ ಸಾಮಾಜಿಕ ಮತ್ತು ವೈಯುಕ್ತಿಕ ಸಮಾಯೋಜನೆಗಳಲ್ಲಿ ಉತ್ತಮವಾಗಿರುತ್ತಾರೋ ಅಥವಾ ಕಡಿಮೆಯಾಗಿ ಇರುತ್ತಾರೋ ಎಂಬುದನ್ನು ನಿರ್ಧರಿಸುತ್ತವೆ. ಸಾಮಾನ್ಯವಾಗಿ ಹೆಚ್ಚಿನ ವ್ಯಕ್ತಿಗಳಲ್ಲಿ ವೃದ್ಧಾಪ್ಯದ ಗುಣಲಕ್ಷಣಗಳು ವೃದ್ಧರನ್ನು ಅತಿ ಕಡಿಮೆ ಮಟ್ಟದ ಸಮಾಯೋಜನೆ, ಅಸಂತೋಷದತ್ತ ದೂಡುತ್ತವೆಯೆ ಹೊರತು ಉತ್ತಮ ಸಮಾಯೋಜನೆ ಮತ್ತು ಸಂತೋಷದತ್ತ ಅಲ್ಲ.

ವೃದ್ಧಾಪ್ಯವು ಇಳಿಮುಖದ ಅವಧಿಯಾಗಿದೆ. ಹುಟ್ಟಿನಿಂದ ಹಿಡಿದು ಜೀವನದುದ್ದಕ್ಕೂ ವ್ಯಕ್ತಿಗಳು ಸ್ಥಿರವಾಗಿರದೆ ರಚನಾತ್ಮಕವಾಗಿ ತಮ್ಮ ಕಾರ್ಯವೈಖರಿಗಳಲ್ಲಿ ಬದಲಾವಣೆಗಳನ್ನು ಹೊಂದಿರುತ್ತಾರೆ. ಬೆಳವಣಿಗೆಯ ವಿವಿಧ ಹಂತದಲ್ಲಿ ಆಗುವ ಬದಲಾವಣೆಗಳನ್ನು ವಯಸ್ಸಾಗುವಿಕೆಯು ಸೂಚಿಸುತ್ತದೆ. ಇವು ದೈಹಿಕ ಮತ್ತು ಮಾನಸಿಕ ಕಾರ್ಯವೈಖರಿಗಳ ಮೇಲೆ ಪ್ರಭಾವ ಬೀರುತ್ತವೆ. ವೃದ್ಧಾಪ್ಯದಲ್ಲಿ ಆಗುವ ದೈಹಿಕ ಮಾನಸಿಕ ಇಳಿಮುಖವು ನಿಧಾನವಾಗಿರುತ್ತದೆ ಮತ್ತು ಕ್ರಮಿಕವಾಗಿರುತ್ತವೆ. ಈ ರೀತಿಯ ಭರಿಸಲಾಗದಂತಹ ಹಾನಿಗಳ ಇಳಿಮುಖವನ್ನು ವೃದ್ಧಾಪ್ಯವೆಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ದೈಹಿಕ ಶಕ್ತಿ ಸಾಮರ್ಥ್ಯಗಳ ಕುಂದುವಿಕೆ ಮತ್ತು ಕಾಯಿಲೆ ಬೀಳುವಂತಹ ಸಂದರ್ಭಗಳು ಹೆಚ್ಚಾಗುತ್ತವೆ. ದೇಹದಲ್ಲಿ ಪ್ರತಿರೋಧ ಶಕ್ತಿ ಕಡಿಮೆಯಾಗುವುದರಿಂದ ರೋಗ ಉಂಟಾಗುವುದು. ಮಾನಸಿಕ ಮತ್ತು ಸಂಜ್ಞಾನಾತ್ಮಕ ಸಾಮರ್ಥ್ಯಗಳಾದ ನೆನೆಪಿನ ಶಕ್ತಿ, ಆಲೋಚನಾ ಶಕ್ತಿ, ನಿರ್ಣಯ ತೆಗೆದುಕೊಳ್ಳುವಿಕೆ, ಏಕಾಗ್ರತೆ ಮುಂತಾದವುಗಳ ಕ್ಷೀಣತೆ ಕಂಡುಬರುತ್ತದೆ. ಅಸಹನೆ, ಖಿನ್ನತೆ, ಆತಂಕ ಮುಂತಾದ ಸಂವೇಗಾತ್ಮಕ ಸಮಸ್ಯೆಗಳಿಂದ ವ್ಯಕ್ತಿಯು ಸಾಮಾಜಿಕವಾಗಿ ಮತ್ತು ವೈಯಕ್ತಿಕವಾಗಿ ಅಪಸಮಾಯೋಜನೆಗೆ ಒಳಗಾಗುತ್ತಾನೆ. ವೃದ್ಧಾಪ್ಯದ ಅವಧಿ ದೈಹಿಕ ಮತ್ತು ಮಾನಸಿಕ ವಿಸಂಘಟನೆಯು ಹೆಚ್ಚು ಕಡಿಮೆ ಪೂರ್ಣಗೊಂಡಂತಹ ಅವಧಿಯಾಗಿದೆ. ವೃದ್ಧಾಪ್ಯದಲ್ಲಿ ವ್ಯಕ್ತಿಯ ಅಸ್ಥಿಗಳು ಮೆದುವಾಗಿ ಬೆನ್ನು ಬಾಗುತ್ತದೆ. ಚರ್ಮ ಸುಕ್ಕುಗಟ್ಟುತ್ತವೆ. ಹೃದಯದ ಬಡಿತ ನಿಧಾನವಾಗುತ್ತದೆ, ಜೀರ್ಣಶಕ್ತಿ ಕಡಿಮೆಯಾಗುತ್ತದೆ. ಮೆದುಳಿಗೆ ರಕ್ತದ ಸರಬರಾಜು ನಿಧಾನವಾಗುತ್ತದೆ. ಮಿದುಳಿನಲ್ಲಿರುವ ನರಕೋಶಗಳು ಕಡಿಮೆಯಾಗುತ್ತವೆ. ಇದರಿಂದ ಬೌದ್ಧಿಕ ಚಟುವಟಿಕೆಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಆರ್ಥಿಕ ಅವಲಂಬನೆ, ದೈಹಿಕ ಮತ್ತು ಮಾನಸಿಕ ದುರ್ಬಲತೆ, ಅನಾರೋಗ್ಯ, ಮಕ್ಕಳು ಮತ್ತು ಹತ್ತಿರದ ವ್ಯಕ್ತಿಗಳು ದೂರವಾಗುವಿಕೆ ಮುಂತಾದವುಗಳಿಂದಾಗಿ ವೃದ್ಧಾಪ್ಯದಲ್ಲಿ ಮಾನಸಿಕ ಒತ್ತಡ ಉಂಟಾಗುತ್ತದೆ. ಇತ್ತೀಚಿಗೆ ವೃದ್ಧರ ಬಗ್ಗೆ ಸಮಾಜದಲ್ಲಿ ಗೌರವ ಆದರಗಳು ಕಡಿಮೆಯಾಗಿ ಅವರ ಬಗ್ಗೆ ತಾರತಮ್ಯ ಧೋರಣೆ ಕಂಡು ಬರುತ್ತಿರುವುದರಿಂದ ವೃದ್ಧರಲ್ಲಿ ಹೆಚ್ಚಿನ ಸಮಸ್ಯೆಗಳು ಕಂಡುಬರುತ್ತಿವೆ.

## ವೃದ್ಧಾಪ್ಯವನ್ನು ನಿರ್ಣಯಿಸುವ ವಿವಿಧ ಮಾನದಂಡಗಳು

ಸಮಾಜದಲ್ಲಿ ವೃದ್ಧಾಪ್ಯವನ್ನು ಗುರುತಿಸುವ ಮಾನದಂಡಗಳು ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನವಾಗಿರುತ್ತವೆ. ವಿವಿಧ ವಯೋಮಾನದವರು ತಾವು ಅರ್ಥೈಸಿಕೊಂಡ ಮಾಹಿತಿಗಳ ಆಧಾರದ ಮೇಲೆ ವೃದ್ಧಾಪ್ಯವನ್ನು ವ್ಯಾಖ್ಯಾನಿಸುತ್ತಾರೆ. ಉದಾಹರಣೆಗೆ ಚಿಕ್ಕಮಕ್ಕಳು ಒಬ್ಬ ವ್ಯಕ್ತಿಯಲ್ಲಿ ಬಿಳಿಕೂದಲು ಅಥವಾ ಕೂದಲು ಉದುರುವಿಕೆ ಮತ್ತು ಅವನು ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲವೆಂದು ತಿಳಿದರೆ ಅವನಿಗೆ ವಯಸ್ಸಾಗಿರಬಹುದೆಂದು ಅರ್ಥೈಸಿಕೊಳ್ಳುತ್ತಾರೆ. ಜನಪದ ಸಾಹಿತ್ಯಗಳ ಪ್ರಕಾರ ಒಬ್ಬ ವ್ಯಕ್ತಿಯು ಸೌಮ್ಯತೆಯಿಂದ ಕೂಡಿದ್ದು ಅರ್ಥೈಸಿಕೊಳ್ಳುವ ಸಾಮರ್ಥ್ಯ ಚೆನ್ನಾಗಿದ್ದು ಇತರರಿಗೆ ಉಪದೇಶ ಮತ್ತು ಮಾರ್ಗದರ್ಶನ ನೀಡುವ ಸಾಮರ್ಥ್ಯವಿದ್ದರೆ ಅವರನ್ನು ವಯಸ್ಸಾದವರೆಂದು ಅರ್ಥೈಸಿಕೊಳ್ಳುತ್ತಾರೆ.

ದೈಹಿಕ ಸಾಮರ್ಥ್ಯ ಮತ್ತು ಲಕ್ಷಣಗಳ ಆಧಾರದ ಮೇಲೆ ಹೇಳುವುದಾದರೆ ಶಕ್ತಿಹೀನನಾಗಿರುವುದು, ಕೈಕಾಲು ನಡಗುವುದು. ಸುಕ್ಕುಗಟ್ಟಿದ ಚರ್ಮ ಮತ್ತು ಮುಖ, ದಂತಪಂಕ್ತಿಗಳಿಲ್ಲದಿರುವುದು, ಮತ್ತು ಸಾಮಾನ್ಯ ಚಟುವಟಿಕೆಗಳಿಗೂ ಇತರರ ಮೇಲೆ ಅವಲಂಬಿತರಾಗಿರುವುದು. ಮುಂತಾದವುಗಳು ಒಬ್ಬ ವ್ಯಕ್ತಿಯಲ್ಲಿ ಕಂಡುಬಂದರೆ ಅವರನ್ನು ವೃದ್ಧರೆಂದು ಕರೆಯುತ್ತಾರೆ.

ಇತರರ ವಾದ ವಿವಾದಗಳನ್ನು ಒಪ್ಪದಿರುವುದು, ತಾವು ಬೆಳೆದು ಬಂದ ಕಾಲ ಚೆಂದವೆಂದು ಪ್ರತಿಪಾದಿಸುವುದು, ಯಾವುದೇ ಹೊಸ ವಿಧಾನ ಮತ್ತು ವಿಚಾರಗಳಿಗೆ ಹೊಂದಿಕೊಳ್ಳದೆ ತಿರಸ್ಕರಿಸುವುದು, ಸದಾ ಕುಟುಂಬದ ಸದಸ್ಯರುಗಳ ಮೇಲೆ ಕಿರಿಕಿರಿಗೊಳ್ಳುವುದು, ಕುಂಠಿತಗೊಂಡ ಜೀರ್ಣಶಕ್ತಿ ಮತ್ತು ದೇಹ ಅನುಮತಿಸದ ಆಹಾರ ಪದಾರ್ಥಗಳನ್ನು ಸೇವಿಸಲು ಹಾತೊರೆಯುವುದು, ನಿವೃತ್ತಿಯ ನಂತರ ಲಭ್ಯವಿರುವ ಬಿಡುವಿನ ವೇಳೆಯನ್ನು ಹೇಗೆ ಕಳೆಯಬೇಕೆಂದು ತಿಳಿಯದೇ ಬೇಸರ ಮತ್ತು ಆಯಾಸದಿಂದ ಹಗಲಿನಲ್ಲಿ ಮಲಗಿ ನಿದ್ರಿಸುವುದು, ರಾತ್ರಿವೇಳೆ ನಿದ್ರೆ ಬಾರದೇ ಪದೇ ಪದೇ ಎಚ್ಚರಗೊಳ್ಳುವುದು ಮುಂತಾದ ಲಕ್ಷಣಗಳು ವರ್ತನೆಗಳು ವೃದ್ಧಾಪ್ಯವನ್ನು ಸೂಚಿಸುತ್ತವೆ.

## ವಯಸ್ಸಾಗುವಿಕೆಯ ಪ್ರಕ್ರಿಯೆ

ಬಾಲ್ಯದಿಂದ ವಯಸ್ಕಾವಧಿಯವರೆಗೆ ಆಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಗಳನ್ನು ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. ಆದರೆ ವಯಸ್ಕಾವಧಿಯ ಪೂರ್ಣಗೊಳ್ಳುವಿಕೆ ಮತ್ತು ಮುಂದುವರಿದ ವಯೋಮಾನದ ಬದಲಾವಣೆಗಳನ್ನು ವಯಸ್ಸಾಗುವಿಕೆ ಎಂದು ಕರೆಯಲಾಗುತ್ತದೆ. ವಯಸ್ಸಾಗುವಿಕೆಯ ಪ್ರಕ್ರಿಯೆಯನ್ನು ಈ ಕೆಳಕಂಡಂತೆ ವಿವರಿಸಬಹುದು.

**ದೈಹಿಕ ಬದಲಾವಣೆಗಳು:** ವೃದ್ಧಾಪ್ಯದಿಂದ ಅನೇಕ ತಡೆಗಟ್ಟಲಾಗದಂತಹ ದೈಹಿಕ ಬದಲಾವಣೆಗಳು ಕಂಡುಬರುತ್ತವೆ. ವೃದ್ಧರು ನಿದ್ರೆ ಮಾಡುವಲ್ಲಿ ತೊಂದರೆಗಳನ್ನು ಅನುಭವಿಸುತ್ತಾರೆ. ಪಂಚೇಂದ್ರಿಯಗಳ ಕಾರ್ಯಚಟುವಟಿಕೆಗಳಲ್ಲಿ ಆಗುವ ವ್ಯತ್ಯಾಸದಿಂದಾಗಿ ಪ್ರಚೋದನೆಗಳಿಗೆ ನಿಧಾನವಾಗಿ ಪ್ರತಿಕ್ರಿಯೆ ನೀಡುತ್ತಾರೆ. ಅಂಗಾಂಗಗಳಲ್ಲಾಗುವ ನ್ಯೂನತೆಗಳಿಂದ ದೇಹದ ಉಷ್ಣಾಂಶ ನಿಯಂತ್ರಣದಲ್ಲಿ ಏರಿಳಿತಗಳನ್ನು ಕಾಣಬಹುದು. ಇದರಿಂದಾಗಿ ವಯಸ್ಸಾದವರು ಉಷ್ಣ ಮತ್ತು ಶೀತದ ವಾತಾವರಣಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಕಷ್ಟವಾಗುತ್ತದೆ.

Digitised by Bharatavani, CIIL

ನಾಡಿಮಿಡಿತದಲ್ಲಿ ಏರಿಳಿತಗಳು ಕಂಡು ಬರುತ್ತವೆ. ಅಲ್ಲದೆ ಜೀರ್ಣಾಂಗ ವ್ಯವಸ್ಥೆಯ ಕಾರ್ಯಕ್ಷಮತೆಯು ಕ್ಷೀಣಿಸುವುದರಿಂದ ಅಜೀರ್ಣತೆಯಿಂದ ಆಹಾರ ಸೇವನೆಯು ಕಡಿಮೆಯಾಗುವುದು ಮತ್ತು ಆಹಾರ ಸೇವನೆಯಲ್ಲಿ ಆಸಕ್ತಿಯಿದ್ದರೂ ದಂತ ಪಂಕ್ತಿಗಳ ಉದುರುವಿಕೆಯಿಂದಾಗಿ ಆಹಾರವನ್ನು ಅಗಿಯುವುದು ಕಷ್ಟಕರವಾದ ಮತ್ತು ಬೇಸರ ತರಿಸುವ ಕೆಲಸವಾಗಿರುತ್ತದೆ. ಇದರಿಂದ ಆಹಾರ ಸೇವನೆಯಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಜೀರ್ಣ ಚಟುವಟಿಕೆಗಳ ವ್ಯತ್ಯಾಸದಿಂದಾಗಿ ದೇಹದಲ್ಲಿ ಶುದ್ಧೀಕರಣದ ವ್ಯವಸ್ಥೆಯಲ್ಲಿ ವೈಪರಿತ್ಯಗಳುಂಟಾಗುತ್ತವೆ. ರೋಗ ನಿರೋಧಕ ಶಕ್ತಿಯು ಕ್ಷೀಣಗೊಳ್ಳುವುದರಿಂದ ವ್ಯಕ್ತಿಯು ಅನೇಕ ಅನಾರೋಗ್ಯದ ಸಮಸ್ಯೆಗಳಿಗೆ ಒಳಗಾಗುತ್ತಾನೆ. ಕಡಿಮೆಯಾದ ಆಹಾರ ಸೇವನೆ ಮತ್ತು ಅನಾರೋಗ್ಯ ಹೆಚ್ಚಾಗಿ ಕಾಡುವುದರಿಂದ ದೈಹಿಕ ಸಾಮರ್ಥ್ಯವು ಕುಂಠಿತಗೊಂಡು ವ್ಯಕ್ತಿಯು ಯಾವುದೇ ಸಣ್ಣಪುಟ್ಟ ಕೆಲಸಗಳನ್ನು ಮಾಡಲು ಬಹಳ ಶ್ರಮ ಪಡಬೇಕಾಗುತ್ತದೆ ಮತ್ತು ಬೇಗ ಆಯಾಸ ಉಂಟಾಗುತ್ತದೆ.

ವಯಸ್ಸಾಗುವಿಕೆಯೊಂದಿಗೆ ಅನೇಕ ತಡೆಗಟ್ಟಲಾಗದಂತಹ ದೈಹಿಕ ಕ್ಷೀಣಿಸುವಿಕೆ ಪ್ರಕ್ರಿಯೆಗಳು ಆರಂಭವಾಗುತ್ತವೆ. ವಯಸ್ಕತನದಿಂದ ಪ್ರಾರಂಭಗೊಂಡ ಸಾಮಾನ್ಯ ದೈಹಿಕ ಲಕ್ಷಣಗಳಲ್ಲಿ ಮತ್ತು ಪ್ರತಿಯೊಂದು ಅಂಗಾಂಗಗಳ ಕಾರ್ಯಚಟುವಟಿಕೆಗಳಲ್ಲಿ ಬದಲಾವಣೆಗಳು ಕಂಡು ಬರುತ್ತವೆ. ಕೂದಲು ಉದುರುವಿಕೆಯು ಪ್ರಾರಂಭಗೊಳ್ಳುವುದು ಮತ್ತು ಕ್ರಮೇಣ ಬಿಳಿಕೂದಲಾಗುವುದು, ಮೂಳೆಗಳ ಸೆಳೆತ ಪ್ರಾರಂಭಗೊಳ್ಳುವುದು ಮತ್ತು ದುರ್ಬಲಗೊಳ್ಳುವುದು, ಮಾಂಸಖಂಡಗಳ ಶಕ್ತಿ ಕುಂದುವುದು, ರಕ್ತಸಂಚಾರದಲ್ಲಿನ ವ್ಯತ್ಯಯಗಳು, ರಕ್ತದೊತ್ತಡ ಹೆಚ್ಚಾಗುವುದು, ಮತ್ತು ಶ್ವಾಸಕೋಶಕ್ಕೆ ಕಡಿಮೆ ಆಮ್ಲಜನಕದ ಪೂರೈಕೆಯಿಂದಾಗಿ ವಯಸ್ಸಾದವರಲ್ಲಿ ಶಕ್ತಿ ಕಡಿಮೆಯಾಗುವುದು, ದೈಹಿಕ ಭಾವಭಂಗಿಯಲ್ಲಿ ಬದಲಾವಣೆಗಳು, ಬೆನ್ನುಮೂಳೆ ಬಾಗುವುದು, ಅಂಗಾಂಗಗಳು ಅಪಕ್ವಗೊಳ್ಳುವುದು, ಮುಂತಾದವು ಕಂಡುಬರುತ್ತವೆ.

**ಮಾನಸಿಕ ಪ್ರಕ್ರಿಯೆಗಳಲ್ಲಿ ಬದಲಾವಣೆಗಳು**

ವೃದ್ಧಾಪ್ಯದ ವ್ಯಕ್ತಿಯಲ್ಲಿ ಕ್ರಮೇಣ ಬೌದ್ಧಿಕ ಸಾಮರ್ಥ್ಯಗಳು ಮತ್ತು ಮಾನಸಿಕ ಕಾರ್ಯ ಚಟುವಟಿಕೆಗಳು ಕುಂಠಿತಗೊಳ್ಳುತ್ತವೆ. ಕೆಲವು ವ್ಯಕ್ತಿಗಳು ಮನೋರೋಗಗಳಿಗೆ ತುತ್ತಾಗಬಹುದು. ಇವರಲ್ಲಿ ಸ್ಮೃತಿ ಶಕ್ತಿಯು ಕಡಿಮೆಯಾಗುತ್ತದೆ. ಆಲೋಚಿಸುವುದು, ನಿರ್ಣಯ ತೆಗೆದುಕೊಳ್ಳುವುದು ಮತ್ತು ಕಲಿಯುವ ಸಾಮರ್ಥ್ಯಗಳು ಕಡಿಮೆಯಾಗುತ್ತವೆ. ವಯಸ್ಸಾದಂತೆಲ್ಲಾ ವ್ಯಕ್ತಿಯ ರಕ್ತನಾಳಗಳ ಒಳಪದರಗಳಲ್ಲಿ ಕೊಬ್ಬು ಮತ್ತು ಲವಣಾಂಶಗಳು ಶೇಖರಣೆಗೊಳ್ಳುವುದರಿಂದ ಅವು ಜಡವಾಗಿ ಬಿಗಿಯಾಗುತ್ತವೆ. ಇದರಿಂದ ವೃದ್ಧಾಪ್ಯದವರು ಮೆದುಳಿನ ರಕ್ತನಾಳದ ತೊಂದರೆಯಿಂದಾಗಿ 'ವ್ಯಾಸ್‌ಕ್ಯುಲರ್ ಡಿಮೇನ್‌ಶಿಯಾ' ಎಂಬ ರೋಗಸ್ಥಿತಿಗೆ ಒಳಗಾಗುತ್ತಾರೆ ಇದರಿಂದ ಅವರ ಸಂಜ್ಞಾನಾತ್ಮಕ ಕಾರ್ಯ ಚಟುವಟಿಕೆಗಳು ಕ್ಷೀಣಿಸುತ್ತಾ ಹೋಗುತ್ತವೆ. ಇವುಗಳಲ್ಲದೆ ವೃದ್ಧಾಪ್ಯದಲ್ಲಿ 'ಡೆಲಿರಿಯಂ' ಮತ್ತು ಮುಪ್ಪಿನ ಮನೋವಿಕೃತಿಗಳಂತಹ ಮಾನಸಿಕ ರೋಗಗಳು ಹೆಚ್ಚಾಗಿ ಕಂಡು ಬರುತ್ತವೆ.

**ಸಂವೇದನಾ ಕಾರ್ಯಚಟುವಟಿಕೆಗಳಲ್ಲಾಗುವ ಬದಲಾವಣೆಗಳು**

ವೃದ್ಧಾಪ್ಯದ ವ್ಯಕ್ತಿಯ ಸಂವೇದನಾ ಕಾರ್ಯಚಟುವಟಿಕೆಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣುತ್ತೇವೆ.

**ದೃಷ್ಟಿ:** ಕಣ್ಣಿನ ಅಕ್ಷಿಪಟಲದ (ರೆಟಿನ) ಸಾಮರ್ಥ್ಯ ಕಡಿಮೆಯಾಗುವುದರಿಂದಾಗಿ ನೋಡುವ ಮತ್ತು ಬಣ್ಣಗಳನ್ನು ಗುರುತಿಸುವಿಕೆಯ ಸಾಮರ್ಥ್ಯ ಕಡಿಮೆಯಾಗುತ್ತದೆ. ದೃಷ್ಟಿ ಮಸೂರದ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯು ಕಡಿಮೆಯಾಗುವುದರಿಂದ ವೃದ್ಧಾಪ್ಯದ ವ್ಯಕ್ತಿಯು ದೂರದೃಷ್ಟಿ ಮತ್ತು ಸಮೀಪ ದೃಷ್ಟಿ ದೋಷಗಳಿಗೆ ಒಳಗಾಗುತ್ತಾನೆ.

**ಕೇಳಿಸುವಿಕೆ:** ಕಿವಿಯ ಆಂತರಿಕ ಭಾಗಗಳಲ್ಲಾಗುವ ಶಕ್ತಿ ಕ್ಷೀಣಿಸುವುದರಿಂದ ವಯಸ್ಸಾದವರಲ್ಲಿ ಕೇಳಿಸುವಿಕೆಯ ಸಮಸ್ಯೆಯು ಉಂಟಾಗುತ್ತದೆ.

**ರುಚಿಸುವಿಕೆ:** ನಾಲಿಗೆಯಲ್ಲಿ ರುಚಿ ಗ್ರಂಥಿಗಳ ಸಾಮರ್ಥ್ಯ ಕ್ಷೀಣಗೊಳ್ಳುವುದರಿಂದ ಆಹಾರದಲ್ಲಿನ ರುಚಿಯನ್ನು ಗುರುತಿಸುವಿಕೆಯ ಸಾಮರ್ಥ್ಯವು ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ಆಹಾರವು ರುಚಿಸುವುದಿಲ್ಲ.

**ವಾಸನೆ:** ವಾಸನೆಯನ್ನು ಗ್ರಹಿಸುವ ಕೋಶಗಳು ಕ್ಷೀಣಿಸುವಿಕೆಯಿಂದಾಗಿ ವಾಸನೆ ಗ್ರಹಿಕಾ ಸಾಮರ್ಥ್ಯವು ಕಡಿಮೆಯಾಗುತ್ತದೆ.

**ಸ್ಪರ್ಶ:** ಚರ್ಮವು ಹೆಚ್ಚು ಮತ್ತು ಗಟ್ಟಿಯಾಗಿರುವುದರಿಂದ ಸ್ಪರ್ಶವನ್ನು ಗ್ರಹಿಸುವ ಸಾಮರ್ಥ್ಯವು ಕಡಿಮೆಯಾಗುತ್ತಾ ಹೋಗುತ್ತದೆ.

**ಮಾನಸಿಕ ಕಾರ್ಯಚಟುವಟಿಕೆಗಳಲ್ಲಾಗುವ ಬದಲಾವಣೆಗಳು**

ವಯಸ್ಸಾಗುವಿಕೆಯ ಬಹಳ ಪ್ರಮುಖ ಲಕ್ಷಣಗಳನ್ನು ವ್ಯಕ್ತಿಯ ಸಂಜ್ಞಾನಾತ್ಮಕ ಚಟುವಟಿಕೆಗಳಲ್ಲಿ ಕಾಣಬಹುದು. ಅವಧಾನದ ಕೊರತೆ, ಏಕಾಗ್ರತೆ, ಪ್ರತ್ಯಾಕ್ಷನುಭವ ಸಾಮರ್ಥ್ಯಗಳ ಕುಗ್ಗುವಿಕೆ, ನೆನಪಿನ ಶಕ್ತಿ ಕ್ಷೀಣಗೊಳ್ಳುವುದು, ನೆನಪಿನ ಸಂಗ್ರಹದ ಜೀವಕೋಶಗಳ ನಾಶವಾಗುವಿಕೆಯಿಂದಾಗಿ ಮತ್ತು ಕುಗ್ಗಿದ ನೆನಪಿನ ಶಕ್ತಿಯಿಂದಾಗಿ ಅಸಮರ್ಪಕ ಮಾಹಿತಿ ಆಧಾರದ ಮೇಲೆ ತೆಗೆದುಕೊಳ್ಳುವ ನಿರ್ಣಯಗಳು ಸಾಮಾನ್ಯವಾಗಿ ತಪ್ಪಾಗುವುದು, ಆಲೋಚನಾ ಶಕ್ತಿಯು ಕುಂಠಿತಗೊಳ್ಳುವುದು ಇದೆಲ್ಲದರ ಪರಿಣಾಮವಾಗಿ ಬುದ್ಧಿಶಕ್ತಿಯು ಕಡಿಮೆಯಾಗುವುದು ಒಂದೆಡೆಯಾದರೆ, ಮತ್ತೊಂದೆಡೆ ಜೀವನದ ಅನುಭವಗಳ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳುವಿಕೆಯ ಉತ್ತಮವಾಗಿರುವುದನ್ನು ಕೆಲವು ವೃದ್ಧರಲ್ಲಿ ಕಾಣಬಹುದು. ನೆನಪಿನ ಶಕ್ತಿಯ ಕುಂದುವಿಕೆಯು ವೃದ್ಧರಲ್ಲಿ ಕಂಡುಬಂದರೂ ಇದರ ಪ್ರಭಾವವು ಎಲ್ಲಾ ಪ್ರಕಾರದ ನೆನಪಿನ ಮೇಲೆ ಕಂಡು ಬರುವುದಿಲ್ಲ. ವೃದ್ಧರಲ್ಲಿ ತಮ್ಮ ಜೀವನ ಚರಿತ್ರೆಗೆ ಸಂಬಂಧಿಸಿದ ನೆನಪಿನ ಶಕ್ತಿ ಮತ್ತು ದೀರ್ಘಾವಧಿಯ ನೆನಪಿನ ಶಕ್ತಿಗಳು ಸಾಮಾನ್ಯವಾಗಿ ಸುಸ್ಥಿತಿಯಲ್ಲಿ ಕಂಡು ಬರುತ್ತವೆ. ವೃದ್ಧರು ತಮ್ಮ ಜೀವನಕ್ಕೆ ಸಂಬಂಧಿಸಿದ ಮತ್ತು ಹಿಂದಿನ ವರ್ಷಗಳ ಮಾಹಿತಿಗಳನ್ನು ಬಹಳ ನಿಖರವಾಗಿಯೇ ಹೇಳುತ್ತಾರೆ. ಅದೇ ಸಂದರ್ಭದಲ್ಲಿ ತತ್‌ಕ್ಷಣದ ನೆನಪಿನ ಶಕ್ತಿ ಮತ್ತು ಸಾಂದರ್ಭಿಕ ನೆನಪಿನ ಶಕ್ತಿಯಲ್ಲಿನ ಮಾಹಿತಿಗಳನ್ನು ನೆನಪಿಸಿಕೊಮಡು ಮಾತನಾಡುವಾಗ ಕೆಲವೊಮ್ಮೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ ಆ ವಿಚಾರದ ಬಗ್ಗೆ ಮಾಹಿತಿ ತಮಗೆ ಇಲ್ಲ ಎಂದು ವಾದಿಸುತ್ತಾರೆ. ಏಕೆಂದರೆ ಹೊಸ ಮಾಹಿತಿಗಳನ್ನು ಸಂಗ್ರಹಿಸಿಡುವ ಜೀವಕೋಶಗಳು ಮೆದುಳಿನಲ್ಲಿ ಉತ್ಪತ್ತಿಯಾಗದ ಕಾರಣ ದೊರೆತ ಮಾಹಿತಿಗಳು ಸಮರ್ಪಕವಾದ ರೀತಿಯಲ್ಲಿ ಸಂಗ್ರಹಗೊಂಡಿರುವುದಿಲ್ಲ. ಇದರ ಪರಿಣಾಮವೇ ವೃದ್ಧರು ಯಾರೊಂದಿಗಾದರೂ ಮಾತನಾಡುವಾಗ ಕೇಳಿದ ಪ್ರಶ್ನೆಗಳನ್ನೇ ಮತ್ತೆ ಮತ್ತೆ ನಂತರದ ಭೇಟಿಗಳಲ್ಲಿ ಕೇಳುತ್ತಿರುತ್ತಾರೆ.

**ಚಲನಾ ಸಾಮರ್ಥ್ಯಗಳಲ್ಲಿ ಬದಲಾವಣೆಗಳು**

ವಯಸ್ಕಾವಧಿಗೆ ಹೋಲಿಸಿ ನೋಡಿದಾಗ ವೃದ್ಧರಲ್ಲಿ ಚಲನಾ ಸಾಮರ್ಥ್ಯಗಳು ದೈಹಿಕ ಮತ್ತು ಮನೋವೈಜ್ಞಾನಿಕ ಕಾರಣಗಳಿಂದಾಗಿ ಕ್ಷೀಣಗೊಂಡಿರುವುದನ್ನು ಕಾಣಬಹುದು. ದೈಹಿಕ ಶಕ್ತಿ ಮತ್ತು ಸಾಮರ್ಥ್ಯಗಳು ಕಡಿಮೆಯಾಗಿರುವುದು, ಸ್ನಾಯುಗಳು ಸ್ವಾಸ್ಥ್ಯದಿಂದ ಇಲ್ಲದಿರುವುದು,


Digitised by Bharatavani, CIIL

ಕೀಲುಗಳು ಬಿರುಸಾಗುವಿಕೆ, ಕೈಕಾಲುಗಳು ನಡುಗುವುದು, ಮುಂತಾದವು. ದೈಹಿಕ ಕಾರಣಗಳು. ಮನೋವೈಜ್ಞಾನಿಕವಾಗಿ ತಮಗಿಂತ ಕಿರಿಯರಿಗೆ ಹೋಲಿಸಿದಾಗ ತಮ್ಮ ಶಕ್ತಿ, ವೇಗ ಮತ್ತು ಕೌಶಲಗಳಲ್ಲಿ ಹಿಂದುಳಿದಿದ್ದೇವೆ. ಅಥವಾ ಕಡಿಮೆಯಿದ್ದೇವೆ ಎಂಬ ಕೀಳಿರಿಮೆಯ ಭಾವನೆಯು ಸದಾ ಇವರನ್ನು ಕಾಡುವುದರಿಂದಾಗಿ ಇವರು ಸಂವೇಗಾತ್ಮಕವಾಗಿ ಒತ್ತಡದಿಂದ ಬಳಲುತ್ತಾರೆ, ಇದರ ಪರಿಣಾಮವಾಗಿ ಹಿಂಜರಿಕೆ ಮತ್ತು ಆತ್ಮ ವಿಶ್ವಾಸದಿಂದ ಕಾರ್ಯನಿರ್ವಹಿಸಲು ವಿಫಲರಾಗುತ್ತಾರೆ.

**ಲೈಂಗಿಕ ಚಟುವಟಿಕೆಗಳಲ್ಲಿ ಬದಲಾವಣೆಗಳು**

ಅರವತ್ತೈದು ವರ್ಷದಾಟಿದ ಬಹುತೇಕ ಜನರಲ್ಲಿ ಲೈಂಗಿಕತೆಯ ಬಗ್ಗೆ ಮಾನಸಿಕ ಮಟ್ಟದಲ್ಲಿ ಆಸಕ್ತಿಯಿದ್ದರೂ ಲೈಂಗಿಕ ಗ್ರಂಥಿಗಳ ಚಟುವಟಿಕೆ ಕ್ಷೀಣಿಸುವುದರಿಂದ ದೈಹಿಕ ಲೈಂಗಿಕ ಚಟುವಟಿಕೆಗಳಲ್ಲಿ ಸಂತೃಪ್ತಿ ಹೊಂದಲು ಸಾಧ್ಯವಿರುವುದಿಲ್ಲ. ಅನಾರೋಗ್ಯ ಪೂರ್ಣ ವೃದ್ಧರಲ್ಲಿ ಲೈಂಗಿಕ ಆಸಕ್ತಿಯಿದ್ದರೂ ಸಹ ಸಮಾಜವು ವೃದ್ಧರು ಲೈಂಗಿಕತೆಯ ಬಗ್ಗೆ ಆಸಕ್ತಿ ತೋರಿವುದುನ್ನು ಅಥವಾ ತೊಡಗುವುದನ್ನು ಪ್ರೋತ್ಸಾಹಿಸವುದಿಲ್ಲ. ಅಂಥ ವ್ಯಕ್ತಿಗಳನ್ನು ಹೀಯಾಳಿಸುವುದು, ಮತ್ತು ಅಲ್ಲಗಳೆಯುವ ಕಾರಣ ಬಹುತೇಕ ವೃದ್ಧರು ಲೈಂಗಿಕ ಕಾರ್ಯಚಟುವಟಿಕೆಗಳಿಂದ ಹಿಂಜರಿಯುತ್ತಾರೆ. ಪುನರುತ್ಪತ್ತಿಯ ಅಂಗಗಳಲ್ಲಿ ಹಾರ್ಮೋನ್‌ಗಳ ಉತ್ಪಾದನೆಯು ಕಡಿಮೆಯಾಗುವುದರಿಂದ ಮತ್ತು ಪುನರುತ್ಪತ್ತಿಯ ಅಂಗಗಳ ಕಾರ್ಯಚಟುವಟಿಕೆಗಳು ಕ್ಷೀಣಗೊಳ್ಳುವ ಕಾರಣದಿಂದಾಗಿ ವೃದ್ಧರಲ್ಲಿ ಲೈಂಗಿಕ ಆಸಕ್ತಿಯು ಕಡಿಮೆಯಾಗುತ್ತದೆ ಮತ್ತು ಕ್ಷೀಣಗೊಂಡ ದೈಹಿಕ ಶಕ್ತಿ ಸಾಮರ್ಥ್ಯಗಳು ಸಹ ಲೈಂಗಿಕ ಚಟುವಟಿಕೆಗಳಿಗೆ ಹೆಚ್ಚಾಗಿ ಸ್ಪಂದಿಸುವುದಿಲ್ಲ.

**ವೃದ್ಧಾಪ್ಯ ಆರಂಭಗೊಂಡಾಗಿನಿಂದ ಹಲವು ಪಾತ್ರಗಳಲ್ಲಾಗುವ ಬದಲಾವಣೆಗಳು:**

ವಯಸ್ಕಾವಧಿಯವರೆಗೂ ಸದೃಢಕಾಯನಾಗಿದ್ದು ಬಹಳ ಶಕ್ತಿ ಸಾಮರ್ಥ್ಯ ಹೊಂದಿದ ವ್ಯಕ್ತಿಯು ವೃದ್ಧಾಪ್ಯವು ಪ್ರಾರಂಭಗೊಳ್ಳುತ್ತಲೇ ನಿಶಕ್ತಿ ಮತ್ತು ಅಸಮರ್ಥತೆಯನ್ನು ಅನುಭವಿಸಲು ಪ್ರಾರಂಭಿಸುತ್ತಾನೆ. ಎಷ್ಟೇ ಆರೋಗ್ಯ ಪೂರ್ಣವಾಗಿದ್ದರೂ ರೋಗ ನಿರೋಧಕ ಶಕ್ತಿಗಳು ಕ್ಷೀಣಗೊಂಡ ಪರಿಣಾಮವಾಗಿ ಅನಾರೋಗ್ಯದೆಡೆ ವಾಲುತ್ತಾನೆ. ಆಹಾರದ ಮೇಲಿನ ಅನಾಸಕ್ತಿ ಮತ್ತು ಜೀರ್ಣ ಶಕ್ತಿಯಲ್ಲಾಗುವ ಏರಿಳಿತಗಳಿಂದಾಗಿ ಆಹಾರ ಸೇವನೆಯ ಬಗ್ಗೆ ಅತಿಯಾದ ಕಾಳಜಿವಹಿಸಿದರೂ ನಿಶ್ಯಕ್ತಿಯನ್ನು ಅನುಭವಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಇವೆಲ್ಲದರ ಪರಿಣಾಮವಾಗಿ ಚಟುವಟಿಕೆಗಳಲ್ಲಿ ತನ್ನನ್ನು ತಾನೇ ಸ್ವಯಂ ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಿದ್ದ ವ್ಯಕ್ತಿ ವೃದ್ಧಾಪ್ಯ ಆರಂಭಗೊಂಡ ನಂತರ ದೈಹಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಹಿಂಜರಿಯುತ್ತಾನೆ. ತನ್ನನ್ನು ದೈಹಿಕವಾಗಿ ಅಸಮರ್ಥನೆಂದು ಪರಿಗಣಿಸಿ ಯಾವುದೇ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಹೆದರಿ ಹಿಂದೆ ಉಳಿಯುತ್ತಾನೆ. ಇಷ್ಟೆ ಅಲ್ಲದೆ ತನ್ನ ಚಟುವಟಿಕೆಗಳಲ್ಲಿ ಸಹಾಯಕ್ಕಾಗಿ ಇತರರ ಮೇಲೆ ಅವಲಂಬಿತನಾಗಲು ಪ್ರಾರಂಭಿಸುತ್ತಾನೆ. ದೈಹಿಕ ಶಕ್ತಿ ಸಾಮರ್ಥ್ಯಗಳ ಕುಂದುವಿಕೆಯಿಂದಾಗಿ ತಾವು ವಯಸ್ಕರಿದ್ದಾಗಿನಷ್ಟು ಚಟುವಟಿಕೆಗಳನ್ನು ಮಾಡಲಾಗುತ್ತಿಲ್ಲ ಎಂಬ ಅರಿವಿನಿಂದಾಗಿ ಅಸಹನೆ, ತಮ್ಮ ಮೇಲೆ ತಮಗೆ ಕೋಪ, ತಾವು ನಿರುಪಯೋಗರಾಗಿ ಬಿಟ್ಟೆವೇನೋ ಎಂಬ ಭಾವನೆ ಮನಸ್ಸಿನಲ್ಲಿ ಮೂಡುತ್ತದೆ. ತಮ್ಮ ಆಲೋಚನೆ, ವಿಚಾರಗಳು ಮತ್ತು ನಿರ್ಣಯಗಳನ್ನು ಇತರರು ಸ್ವೀಕರಿಸುವುದಿಲ್ಲ ಮತ್ತು ಅವುಗಳನ್ನು ಆಲಿಸಲು ಸಹ ತಯಾರಿರುವುದಿಲ್ಲ ಎಂಬ ಅರಿವಿನಿಂದಾಗಿ ತಮ್ಮ ಮಾನಸಿಕ ಸಾಮರ್ಥ್ಯಗಳಿಗೆ ಸಿಗಬೇಕಾದ ಮಾನ್ಯತೆ ಸಿಗದೇ ಇರುವುದರಿಂದ ಉದ್ವೇಗ, ಕೋಪ, ಕೀಳರಿಮೆ ಭಾವಗಳನ್ನು ತೋರ್ಪಡಿಸುತ್ತಾರೆ. ಜೀವನದ ಕೊನೆಯಲ್ಲಿ ಪುನಃ ಪುನಃ ಸೋಲನ್ನು ಅನುಭವಿಸಿ ಹತಾಶೆಗೆ ಒಳಗಾಗುತ್ತಾರೆ. ಇದೆಲ್ಲದರ ಪರಿಣಾಮವಾಗಿ ನಗುವಿನ ಚಿಲುಮೆ, ಸ್ಫೂರ್ತಿಯ ಚೇತನ ಮತ್ತು ಇತರರಿಗೆ ಮಾರ್ಗದರ್ಶಕನಾಗಿದ್ದಂತಹ ವ್ಯಕ್ತಿಯು ವೃದ್ಧಾಪ್ಯದಲ್ಲಿ ಎಲ್ಲಾವನ್ನೂ ಕಳೆದುಕೊಂಡು ನಿಶ್ಚೇತನದಿಂದ ಸದಾ ಚಿಂತಾಕ್ರಾಂತನಾಗಿ ನೋವನ್ನು ಅನುಭವಿಸುತ್ತಾನೆ.

**ಹಣಕಾಸಿನ ಬದಲಾವಣೆಗಳು:** ದುಡಿಯುವ ವಯಸ್ಸಿನಲ್ಲಿ ತನಗೆ ಇಷ್ಟ ಬಂದಹಾಗೆ ತನ್ನ ಸಂಸಾರ, ಮಕ್ಕಳು ಮನೆಗೆ ಖರ್ಚುಮಾಡಿ ತನ್ನ ಸ್ವಂತ ಇಚ್ಛೆಗಳನ್ನು ತನ್ನ ಸಂಪಾದನೆಯಿಂದ ಪೂರೈಸಿಕೊಳ್ಳುತ್ತಿದ್ದ ವ್ಯಕ್ತಿ ವೃದ್ಧಾಪ್ಯದಲ್ಲಿ ನಿವೃತ್ತಿ ಹೊಂದಿದ ನಂತರ ಬರುವ ಪಿಂಚಣಿಯಲ್ಲಿ ತನ್ನ ಮೂಲಭೂತ ಅವಶ್ಯಕತೆಗಳಿಗೆ ಹಣ ಹೊಂದಿಸಲು ಕಷ್ಟ ಪಡುತ್ತಾನೆ. ಕಡಿಮೆಯಾದ ಆದಾಯದಲ್ಲಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹೆಣಗಾಡುವ ವೃದ್ಧರು ತಮ್ಮ ಇಚ್ಛೆ, ಆಸೆಗಳನ್ನು ಹಣಕಾಸಿನ ಲಭ್ಯತೆ ಇಲ್ಲದ ಕಾರಣ ಬಲವಂತವಾಗಿ ತಳ್ಳಿಹಾಕಬೇಕಾಗುತ್ತದೆ. ಇಷ್ಟೆ ಅಲ್ಲದೆ ಕುಂಠಿತಗೊಂಡ ಆರೋಗ್ಯದ ಕಾರಣದಿಂದಾಗಿ ವೈದ್ಯಕೀಯ ಸೌಲಭ್ಯಗಳಿಗೆ ಹೆಚ್ಚಿನ ಹಣ ವ್ಯಯ ಮಾಡಬೇಕಾಗಿ ಬರುತ್ತದೆ ಮತ್ತು ಹಿಂದೆ ತಾವು ದುಡಿದು ಇತರರಿಗೆ ಅವಶ್ಯಕತೆಗಳನ್ನು ಪೂರೈಸುತ್ತಿದ್ದ ವ್ಯಕ್ತಿ ಈಗ ತನ್ನ ಅವಶ್ಯಕತೆಗೆ ತನ್ನ ಮಕ್ಕಳ ಅಥವಾ ಇನ್ನಾರ ಮುಂದೋ ಕೈ ಚಾಚಲು ಇಷ್ಟ ಪಡದೆ ಮಾನಸಿಕ ತೊಳಲಾಟಕ್ಕೆ ಒಳಗಾಗುತ್ತಾನೆ. ಹಣಕಾಸಿನ ಈ ಬದಲಾವಣೆಗೆ ಹೊಂದಿಕೊಳ್ಳುವ ಕಾರಣಕ್ಕಾಗಿ ತಾವು ಹಿಂದೆ ನಡೆಸುತ್ತಿದ್ದ ಜೀವನ ಶೈಲಿಯನ್ನು ನಡೆಸಲಾಗದೆ ತಮ್ಮ ಜೀವನ ಶೈಲಿಯ ಮಟ್ಟವನ್ನು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ. ಹಣಕಾಸಿನ ಅಭದ್ರತೆ ಸದಾ ಕಾಡುತ್ತಿರುತ್ತದೆ. ಕೆಲವೊಮ್ಮೆ ಈ ಹಣಕಾಸಿನ ಅವಶ್ಯಕತೆಯನ್ನು ಪೂರೈಸಿಕೊಳ್ಳಲಾಗದೆ ಮತ್ತೊಮ್ಮೆ ಜೀವನದಲ್ಲಿ ಯಾವುದಾದರೂ ಸಣ್ಣಪುಟ್ಟ ಕೆಲಸಗಳಿಗೆ ಸೇರಿ ತಮ್ಮ ಜೀವನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ನಿವೃತ್ತಿ ನಂತರವೂ ಕಷ್ಟ ಪಡುತ್ತಾರೆ. ಈ ಎಲ್ಲಾ ವಿಚಾರಗಳಿಂದಾಗಿ ತಮ್ಮ ಮಕ್ಕಳು ಮತ್ತು ತಮ್ಮ ಮನೆಯವರೆ ಸಂಪಾದನೆ ಮಾಡದ ತನ್ನನ್ನು ಅಗೌರವದಿಂದ ಕಾಣುವುದನ್ನು ನೋಡಿ ಕೊರಗುತ್ತಾರೆ. ತಾವು ಇನ್ನೊಬ್ಬರ ಮೇಲೆ ಆರ್ಥಿಕವಾಗಿ ಹೊರೆಯಾಗುತ್ತಿದ್ದೆವಲ್ಲಾ ಎಂದು ಸದಾ ಚಿಂತಿಸುತ್ತಿರುತ್ತಾರೆ.

**ಕುಟುಂಬದಲ್ಲಿ ಬದಲಾಗುವ ಪಾತ್ರ:** ಆರೋಗ್ಯದಿಂದಿದ್ದು, ದುಡಿಯುತ್ತಿದ್ದ ಸಂದರ್ಭದಲ್ಲಿ ತಾವು ಅನುಭವಿಸಿದ ಸ್ವಾತಂತ್ರ್ಯ, ತಮ್ಮ ಮನೆ ಮತ್ತು ಹೊರಗಿನ ಪ್ರಪಂಚದಲ್ಲಿ ತಮಗೆ ಸಿಗುತ್ತಿದ್ದ ಮಾನ್ಯತೆಯನ್ನು ಅನುಭವಿಸಿದ ವ್ಯಕ್ತಿ ವೃದ್ಧಾಪ್ಯ ಬಂದಾಗ ತನ್ನ ಕುಟುಂಬದವರೇ ತನ್ನನ್ನು ಆರ್ಥಿಕವಾಗಿ ಹೊರೆಯೆಂದು ಭಾವಿಸುವುದು ಮತ್ತು ಅಗೌರವದಿಂದ ಕಾಣುವುದು ಮತ್ತು ಇವರಿಂದ ಏನೂ ಉಪಯೋಗವಿಲ್ಲವೆಂದು ಹೇಳುವುದನ್ನು ಕೇಳಿ ನೋವನ್ನನುಭವಿಸುತ್ತಾರೆ. ಪ್ರೀತಿ, ವಾತ್ಸಲ್ಯಗಳನ್ನು ತುಂಬಿ ಬೆಳೆಸಿದ ಮಕ್ಕಳೇ ತಮ್ಮನ್ನು ಕಡೆಗಣಿಸುವುದು, ಆರೈಕೆ ಮಾಡದಿರುವುದು ಮತ್ತು ತಮ್ಮೊಂದಿಗೆ ಅಸಹನೆಯಿಂದ ವರ್ತಿಸುವುದು, ಮಾತನಾಡಲು ಸಮಯವಿಲ್ಲದವರಂತೆ ತಮ್ಮಿಂದ ದೂರವಿರುವುದು, ಮೊಮ್ಮಕ್ಕಳೊಂದಿಗೆ ಆಡಬಯಸುವ ಮನಸ್ಸನ್ನು ಅರ್ಥಮಾಡಿಕೊಳ್ಳದೆ ಮಕ್ಕಳನ್ನು ದೂರವಿಟ್ಟು ಮಾನಸಿಕ ಹಿಂಸೆಯನ್ನನುಭವಿಸುವಂತೆ ಮಾಡುವುದು. ಹೀಗೆ ತಮ್ಮ ಮನೆಯಲ್ಲಿ ತಾವೇ ಅತಿಥಿಗಳಂತೆ, ಕೆಲಸದವರಂತೆ ಜೀವನ ನಡೆಸುವಂತಹ ಮಿತಿಮೀರಿದ ಪರಿಸ್ಥಿತಿಯನ್ನು ತಾಳಲಾರದೇ ತಾವೇ ಹೋಗಿ ವೃದ್ಧಾಶ್ರಮಕ್ಕೆ ಸೇರಿಕೊಳ್ಳುತ್ತಾರೆ. ಅಥವಾ ಎಲ್ಲವನ್ನೂ ತೊರೆದು ಎಲ್ಲಾದರೂ ಹೊರಟು ಹೋಗುತ್ತಾರೆ.

Digitised by Bharatavani, CIIL

**ಸಾಮಾಜಿಕ ಬದಲಾವಣೆಗಳು:** ವ್ಯಕ್ತಿಯು ವೃದ್ಧಾಪ್ಯಕ್ಕೆ ಬಂದಾಗ ಸಮಾಜದಲ್ಲಿ ತಮ್ಮನ್ನು ಮುಂಚಿನ ಹಾಗೆ ಜನರು ನಡೆಸಿಕೊಳ್ಳುತ್ತಿಲ್ಲ ಹಿಂದೆ ತಾನು ಮತ್ತು ತನ್ನ ಸ್ಥಾನಮಾನಕ್ಕೆ ತಲೆ ಬಾಗುತ್ತಿದ್ದ ಈ ಸಮಾಜ ಈಗ ಅಧಿಕಾರವಿರದ ಹಾಗೂ ಆರ್ಥಿಕವಾಗಿ ಬಲಶಾಲಿಯಲ್ಲದ ತನ್ನನ್ನು ಹಿಂದಿನ ಹಾಗೇ ಗೌರವಿಸುವುದಿಲ್ಲ. ಇದರಿಂದ ತಮ್ಮ ಇರುವಿಕೆಯನ್ನು ಲೆಕ್ಕಿಸದ ಸಮಾಜ ವೃದ್ಧರ ಬಗ್ಗೆ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದೆ ಎಂದು ತಿಳಿಯುತ್ತಾರೆ. ಇದರಿಂದ ವೃದ್ಧರ ಮನಸ್ಸಿನಲ್ಲಿ ಅಸಹನೆ ಮತ್ತು ಬೇಸರ ಉಂಟಾಗುತ್ತದೆ.

**ಅಪಸಮಾಯೋಜನೆ:** ಬದಲಾದ ತಮ್ಮ ನೈತಿಕ ಮತ್ತು ಮಾನಸಿಕ ಸಾಮರ್ಥ್ಯ, ಸಮಾಜದಲ್ಲಿ, ಸಂಸಾರದಲ್ಲಿ ಕಡಿಮೆಯಾದ ತಮ್ಮ ಮಹತ್ವ ಎಲ್ಲವನ್ನೂ ಗಮನಿಸುವ ವೃದ್ಧರು ನಕಾರಾತ್ಮಕ ಬದಲಾವಣೆಗಳಿಗೆ ಹೊಂದಿಕೊಳ್ಳಲಾಗದೆ ಮಾನಸಿಕವಾಗಿ ಘರ್ಷಣೆಗಳನ್ನು ಎದುರಿಸುತ್ತಾರೆ ಮತ್ತು ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಇವೆಲ್ಲದರ ಪರಿಣಾಮವಾಗಿ ಖಿನ್ನತೆ, ಆತಂಕ, ಭಯ ಉಂಟಾಗುತ್ತವೆ. ಪರಿಣಾಮವಾಗಿ ತಾನೇಕೆ ಬದಲಾಗಬೇಕು, ಸುತ್ತ ಮುತ್ತಲಿನವರು ತನಗಾಗಿ ಏಕೆ ಬದಲಾಗುತ್ತಿಲ್ಲ ಎಂದು ಕೋಪಗೊಳ್ಳುತ್ತಾರೆ. ಬದಲಾದ ಪರಿಸ್ಥಿತಿಯೊಂದಿಗೆ ನಡೆಯಲಾಗದೆ ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿಸ್ಥಿತಿಗಳನ್ನು ಬದಲಿಸಿಕೊಳ್ಳಲಾಗದಿದ್ದಾಗ ಅಪಸಮಾಯೋಜನೆ ಯುಂಟಾಗಿ ಇದರ ಪರಿಣಾಮವಾಗಿ ಅನೇಕ ಮಾನಸಿಕ ಸಮಸ್ಯೆಗಳನ್ನು ಅನುಭವಿಸುತ್ತಾರೆ.

**ಮಾನಸಿಕವಾಗಿ ವೃದ್ಧಾಪ್ಯದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು**

ಮನಸ್ಸಿಗೆ ಒಬ್ಬ ವ್ಯಕ್ತಿಯ ಜೀವನದಲ್ಲಿ ತೀವ್ರ ಸುಧಾರಣೆಯನ್ನು ತರುವಂತಹ ಮತ್ತು ಯಾವುದೇ ಗಾಯಗಳನ್ನು ಗುಣಪಡಿಸುವಂತಹ ಅಪರಿಮಿತವಾದ ಶಕ್ತಿಯಾಗಿರುತ್ತದೆ. ನಮ್ಮ ವರ್ತನೆಗಳು ಸಾಮಾನ್ಯವಾಗಿ ಮನಸ್ಸಿನ ಭಾವಸ್ಥಿತಿ ಮತ್ತು ಸಂವೇಗಗಳಿಂದ ನಿಯಂತ್ರಿತಗೊಂಡಿರುತ್ತದೆ. ಇದು ನಮ್ಮ ಆರೋಗ್ಯದ ಮೇಲೆ ಬಹಳಷ್ಟು ಪ್ರಭಾವವನ್ನು ಬೀರುತ್ತದೆ. ಮನಸ್ಸಿನ ಶಕ್ತಿಯನ್ನು ಅರ್ಥೈಸಿಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದರಿಂದ ಒಬ್ಬ ವ್ಯಕ್ತಿಯು ಆರೋಗ್ಯ, ಸಂಬಂಧಗಳಲ್ಲಿ ಮತ್ತು ಪರಿಸರದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಕಂಡುಕೊಳ್ಳಬಹುದು.

ವೃದ್ಧಾಪ್ಯವು ವಿವಿಧ ಸಂವೇಗಗಳಾದ ಭಯ, ಕೋಪ, ಖಿನ್ನತೆ, ಪ್ರತಿಬಲನ, ಪುನರ್‌ಯೌವ್ವನದ ಬಯಕೆ ಮತ್ತು ಅಸಹಾಯಕತೆಗಳಿಂದ ಕೂಡಿರುತ್ತದೆ. ಈ ಎಲ್ಲಾ ಸಂವೇಗಗಳ ಪರಿಣಾಮವಾಗಿ ವ್ಯಕ್ತಿಯ ಆಹಾರ ಸೇವನೆ, ಆರೋಗ್ಯ ಮತ್ತು ಸಂಬಂಧಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ವಯಸ್ಸಾಗುವಿಕೆಯಲ್ಲಿ ಕಂಡು ಬರುವ ದೈಹಿಕ, ಬಾಹ್ಯ ಮತ್ತು ಆಂತರಿಕ ಬದಲಾವಣೆಗಳಿಗೆ ಹೊಂದಿಕೊಂಡು ಸ್ವಯೋಗ್ಯತೆ ಭಾವನೆಗಳನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು. ಒಬ್ಬ ವ್ಯಕ್ತಿಯು ತನ್ನ ಬಗ್ಗೆ ಮತ್ತು ತನ್ನ ಜೀವನದ ಗುಣ ಮಟ್ಟವನ್ನು ನಿರ್ಧರಿಸುವಲ್ಲಿ ವ್ಯಕ್ತಿಯ ಆತ್ಮಭಿಮಾನವು ಬಹಳ ಮುಖ್ಯವಾದ ಕೊಡುಗೆಯಾಗಿರುತ್ತದೆ. ತನ್ನಲ್ಲಿರುವಂತಹ ಕೌಶಲ್ಯಗಳು ಮತ್ತು ಪ್ರತಿಭೆಯನ್ನು ಬಳಸಿಕೊಂಡು ಇತರರಿಗೆ ಸಹಾಯವಾಗುವಂತೆ ಕೆಲಸಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದರ ಮುಖಾಂತರ ಆತ್ಮಭಿಮಾನವನ್ನು ಬೆಳೆಸಿಕೊಳ್ಳಬಹುದು.

ಎರಿಕ್ ಎರಿಕ್‌ಸನ್ ವಿವರಿಸಿರುವ ಮನೋಸಾಮಾಜಿಕ ವಿಕಾಸಾತ್ಮಕ ಹಂತಗಳಲ್ಲಿ ಕೊನೆಯ ಹಂತವಾದ ಸಮಗ್ರತೆ ನೈರಾಶ್ಯ ಭಾವನೆಯ ದ್ವಂದ್ವ ಹಂತ ವೃದ್ಧಾಪ್ಯದಲ್ಲಿ ಬರುತ್ತದೆ. ವ್ಯಕ್ತಿ ಮಧ್ಯಮಾವಸ್ಥೆಯನ್ನು ದಾಟಿ ನಿವೃತ್ತಿಯ ನಂತರ ವೃದ್ಧಾಪ್ಯಕ್ಕೆ ಕಾಲಿಟ್ಟಾಗ ಈ ದ್ವಂದ್ವ ಉಂಟಾಗುತ್ತದೆ ಎಂದು ಎರಿಕ್‌ಸನ್ ಅಭಿಪ್ರಾಯಪಟ್ಟಿದ್ದಾನೆ. ವ್ಯಕ್ತಿ ತನ್ನ ಜೀವನದ ಹಿಂದಿನ ಹಂತಗಳಲ್ಲಿ ಸಫಲತಾ ಪೂರ್ವಕವಾಗಿ ಜೀವನ ನಡೆಸಿ ತನ್ನ ಕರ್ತವ್ಯಗಳನ್ನು ನಿರ್ವಹಿಸಿ ತೃಪ್ತಿಪಡೆಯದಿದ್ದರೆ ಅವನಿಗೆ ತನ್ನ ಜೀವನ ಸಾರ್ಥಕವಾಯಿತು ಎಂಬ ಸಮಗ್ರತೆಯ ಭಾವನೆ ಮೂಡಿ, ಶಾಂತ ಜೀವನವನ್ನು ನಡೆಸುವ ಮನಃಸ್ಥಿತಿ ಉಂಟಾಗುತ್ತದೆ. ಹಾಗಾಗದೆ ವ್ಯಕ್ತಿಯ ಇದುವರೆಗಿನ ಜೀವನ ಅಸ್ತವ್ಯಸ್ತತೆಯಿಂದ ಕೂಡಿದ್ದು, ವಿಫಲತೆಗಳೇ ಉಂಟಾಗಿದ್ದಲ್ಲಿ ಅವನಲ್ಲಿ ಅತೃಪ್ತಿ, ನಿರಾಶೆಯ ಭಾವನೆ ಮೂಡಿ ಮಾನಸಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಮಗ್ರತೆ ಭಾವನೆ ಬೆಳೆಸಿಕೊಂಡ ವೃದ್ಧ ವ್ಯಕ್ತಿ ವೃದ್ಧಾಪ್ಯದ ಸಮಸ್ಯೆಗಳನ್ನು ಸಫಲತಾಪೂರ್ವಕವಾಗಿ ಎದುರಿಸರುವ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುತ್ತಾನೆ.

ವ್ಯಕ್ತಿ ತನ್ನ ಆಲೋಚನೆಗಳು ಮತ್ತು ಸಂವೇಗಗಳಿಂದ ಇತರರೊಂದಿಗೆ ವ್ಯಕ್ತಿ–ವ್ಯಕ್ತಿ ನಡುವಣ ಸಂಬಂಧಗಳನ್ನು ಉತ್ತಮ ಪಡಿಸಿಕೊಳ್ಳಬೇಕು. ಪರಸ್ಪರ ಅರ್ಥೈಸಿಕೊಳ್ಳುವಿಕೆ ಮತ್ತು ಗೌರವಗಳನ್ನು ಹಂಚಿಕೊಳ್ಳುವುದರ ಮೂಲಕ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕು. ವ್ಯಕ್ತಿಯು ತನ್ನ ವೈಯಕ್ತಿಕ ಜವಾಬ್ದಾರಿ ಮತ್ತು ತನ್ನ ಸ್ವಾತಂತ್ರ್ಯವನ್ನು ಹೆಚ್ಚಿಸಿಕೊಂಡರೆ ಆತ್ಮಭಿಮಾನವೂ ಸಹ ಹೆಚ್ಚುತ್ತದೆ.

ವಯಸ್ಸಾದವರಲ್ಲಿ ಹೆಚ್ಚಾಗಿ ಕಂಡುಬರುವ ಅನುತ್ತೇಜಕ ಆಲೋಚನೆಗಳನ್ನು ಮನಸ್ಸಿನಿಂದ ಹೊರಹಾಕಲು ತಮ್ಮನ್ನು ತಾವು ಇತರರಿಗೆ ಉಪಯೋಗವಾಗುವ ರೀತಿಯಲ್ಲಿ ವರ್ತಿಸುವುದರ ಮುಖಾಂತರ ತಮ್ಮ ಜೀವನಕ್ಕೆ ಹೊಸ ಅರ್ಥವನ್ನು ಕಂಡುಕೊಳ್ಳಬೇಕು. ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚು ಭಾಗವಹಿಸುವುದರಿಂದ ತಮ್ಮಂತೆ ಇರುವಂತಹ ಇತರ ವ್ಯಕ್ತಿಗಳೊಂದಿಗೆ ಅತಿ ಹತ್ತಿರದ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಲು ಸಹಾಯವಾಗುತ್ತದೆ. ಇದರಿಂದ ಒಂಟಿತನ ದೂರವಾಗುತ್ತದೆ ಮತ್ತು ಸಮಾಜದಲ್ಲಿ ಇನ್ನೂ ಕ್ರಿಯಾಶೀಲವಾಗಿದ್ದೇನೆ. ನನಗೂ ಮಾನ್ಯತೆಯಿದೆ ಎಂಬ ಸಕಾರಾತ್ಮಕ ಭಾವನೆ ಮೂಡುತ್ತದೆ.

ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸ್ವ–ನಂಬಿಕೆಯು ಸಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತದೆ. ಆದ್ದರಿಂದ ವ್ಯಕ್ತಿಯು ವೃದ್ಧಾಪ್ಯದಲ್ಲಿ ನಂಬಿಕೆಯನ್ನು ಕಳೆದುಕೊಳ್ಳದೇ ಸ್ವನಂಬಿಕೆಯನ್ನು ಹೆಚ್ಚಿಸಿಕೊಳ್ಳುವಂತಹ ಮಾನಸಿಕ ಆಲೋಚನೆಗಳಲ್ಲಿ ತೊಡಗಬೇಕು. ಅದರ ಪರಿಣಾಮವಾಗಿ ವ್ಯಕ್ತಿಯ ಮಾನಸಿಕ ಮತ್ತು ದೈಹಿಕ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಯಾವುದೇ ವ್ಯಕ್ತಿ ಜೀವನದಲ್ಲಿ ಸಂತೋಷವನ್ನು ಅನುಭವಿಸುವುದು ತಾನು ಪ್ರೀತಿಸುವ ಚಟುವಟಿಕೆಗಳಲ್ಲಿ ತಮ್ಮನ್ನು ತಾನು ತೊಡಗಿಸಿಕೊಂಡಾಗ ಮಾತ್ರ ಸಾಧ್ಯ. ವೃದ್ಧಾಪ್ಯದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳು ಕುಂದಿದರೂ ಸಹ ಹೊಸ ಆಲೋಚನೆಗಳು ಮತ್ತು ಹೊಸ ಕಲಿಕೆಗಳನ್ನು ಅಳವಡಿಸಿಕೊಳ್ಳುವುದರಿಂದ ಚೈತನ್ಯಯುತವಾದ ಜೀವನವನ್ನು ಮತ್ತೆ ಸೃಷ್ಟಿಸಿಕೊಳ್ಳಬಹುದು. ಉತ್ತಮ ಪೌಷ್ಠಿಕ ಆಹಾರ ಸೇವನೆ ಮತ್ತು ವ್ಯಾಯಾಮಗಳು, ಯೋಗ, ಧ್ಯಾನ ಮುಂತಾದ ಆರೋಗ್ಯ ಪೂರ್ಣಹವ್ಯಾಸಗಳು ವೃದ್ಧಾಪ್ಯದಲ್ಲಿ ಸಂತೋಷ ಮತ್ತು ನೆಮ್ಮದಿಯನ್ನು ತಂದುಕೊಡುತ್ತವೆ.

–ಪಿ. ಮಂ


Digitised by Bharatavani, CIIL

## ವೈಗಾಸ್ಕಿಯವರ ಸಾಮಾಜಿಕ–ಸಾಂಸ್ಕೃತಿಕ ಸಿದ್ಧಾಂತ

ರಷ್ಯಾ ದೇಶದ ಮನೋವಿಜ್ಞಾನಿ ಲೆವ್ ವೈಗಾಸ್ಕಿ (Lev Vygotsky 1896-1934)ಯವರು "ಸಾಮಾಜಿಕ ವಿಕಸನ ಸಿದ್ಧಾಂತ" ಅಥವಾ "ಸಾಮಾಜಿಕ ಸಾಂಸ್ಕೃತಿಕ ಸಿದ್ಧಾಂತ"ದ ಪ್ರತಿಪಾದಕರು. ಇವರ ಸಂಶೋಧನ ಲೇಖನಗಳು 1962ರಲ್ಲಿ ಪ್ರಕಟಣೆ ಆಗುವವರೆಗೆ, ವೈಗಾಸ್ಕಿಯವರ ಸಿದ್ಧಾಂತಗಳು ಪ್ರಪಂಚದ ಬಹುತೇಕ ಶಿಕ್ಷಣ ತಜ್ಞರಿಗೆ ಪರಿಚಯವಾಗಿರಲಿಲ್ಲ. ತದನಂತರ ಈ ಸಿದ್ಧಾಂತಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದ ರಚನಾತ್ಮಕ ಕಲಿಕಾ ಸಿದ್ಧಾಂತಗಳಿಗೆ (Constructivist Learning Theories) ಬುನಾದಿಯಾದವು. ಸಾಮಾಜಿಕ ವಿಕಸನ ಸಿದ್ಧಾಂತದ ಪ್ರವರ್ತಕರಾದ ಲೆವ್ ವೈಗಾಸ್ಕಿಯವರ ಆಸಕ್ತಿಗಳು ವೈವಿಧ್ಯಮಯವಾಗಿದ್ದು, ಅವರು ವಿಕಸನ ಮನೋವಿಜ್ಞಾನ, ಮಗುವಿನ ಬೆಳವಣಿಗೆ ಮತ್ತು ವಿಕಸನ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ.

ವೈಗಾಸ್ಕಿ

ವೈಗಾಸ್ಕಿಯವರ ಸಾಮಾಜಿಕ – ಸಾಂಸ್ಕೃತಿಕ ವಿಕಸನ ಸಿದ್ಧಾಂತವು ಮಾನವನ ಕಲಿಕೆಯನ್ನು ಒಂದು ಸಾಮಾಜಿಕ ಪ್ರಕ್ರಿಯೆಯೆಂದು ಮತ್ತು ಮಾನವನ ಬುದ್ಧಿಶಕ್ತಿಯು ಸಮಾಜದಲ್ಲಿ ಅಥವಾ ಸಂಸ್ಕೃತಿಯಲ್ಲಿ ರೂಪುಗೊಳ್ಳುತ್ತದೆ ಎಂದು ವರ್ಣಿಸುತ್ತದೆ. ಅವರ ಸಾಮಾಜಿಕ ವಿಕಸನ ಸಿದ್ಧಾಂತದ ವಾದವೇನೆಂದರೆ, ವಿಕಸನಕ್ಕೆ ಪೂರ್ವಭಾವಿಯಾಗಿ ಸಾಮಾಜಿಕ ಪಾರಸ್ಪರಿಕ ಕ್ರಿಯೆಗಳಿರುತ್ತವೆ ಹಾಗೂ ಸಾಮಾಜೀಕರಣ ಮತ್ತು ಸಾಮಾಜಿಕ ವರ್ತನೆಗಳ ಅಂತಿಮ ಫಲಗಳು ಪ್ರಜ್ಞೆ ಮತ್ತು ಅರಿಯುವಿಕೆ / ಸಂಜ್ಞಾನದ ಸಾಮರ್ಥ್ಯಗಳಾಗಿರುತ್ತವೆ. ವ್ಯಕ್ತಿಗಳು ಸಾಮಾಜಿಕ – ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುವಾಗ ನಡೆಸುವ ಕ್ರಿಯೆ ಮತ್ತು ಅನುಕ್ರಿಯೆಗಳ ನಡುವಿನ ಸಂಬಂಧಗಳ ಮೇಲೆ ವೈಗಾಸ್ಕಿಯವರು ತಮ್ಮ ಸಿದ್ಧಾಂತವನ್ನು ಕೇಂದ್ರೀಕರಿಸಿದ್ದಾರೆ. ಅವರ ಪ್ರಕಾರ, ವ್ಯಕ್ತಿಗಳು ತಮ್ಮ ಸಾಮಾಜಿಕ ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಾಗ, ತಮ್ಮ ಸಂಸ್ಕೃತಿಯಿಂದ ಪಡೆದುಕೊಂಡ ಮಾತುಗಾರಿಕೆ ಮತ್ತು ಬರಹ ಸಾಧನಗಳನ್ನು ಬಳಸುತ್ತಾರೆ. ಪ್ರಾರಂಭಿಕ ಹಂತದಲ್ಲಿ ಮಕ್ಕಳು ಸಾಂಸ್ಕೃತಿಕ ಸಾಧನಗಳನ್ನು ಸಾಮಾಜಿಕ ಕಾರ್ಯ ನಿರ್ವಹಣೆಗೆ ಮತ್ತು ಅಗತ್ಯತೆಗಳ ಸಂವಹನೆಗೆ ಮಾತ್ರ ಬಳಸುತ್ತಾರೆ. ಈ ಸಾಧನಗಳು ಆಂತರೀಕರಣ (internalization) ನಂತರ ಉನ್ನತ ಆಲೋಚನಾ ಸಾಮರ್ಥ್ಯಗಳ ಬೆಳವಣಿಗೆಗೆ ಪೂರಕವಾಗುತ್ತವೆ. ವೈಗಾಸ್ಕಿಯವರು ಪ್ರತಿಪಾದಿಸಿದ ಸಿದ್ಧಾಂತಗಳಲ್ಲಿ ಅವರಿಗೆ ಖ್ಯಾತಿಗಳಿಸಿಕೊಟ್ಟ ಪ್ರಮುಖವಾದ ಪರಿಕಲ್ಪನೆಯೇ "ಸಾಮಾಜಿಕ ಸಂಜ್ಞಾನ" ಅಥವಾ "ಕಲಿಕೆಯ ಸಾಮಾಜಿಕ ವಿಕಸನ ಸಿದ್ಧಾಂತ".

ಕಲಿಕೆಯ ಸಾಮಾಜಿಕ ವಿಕಸನ ಸಿದ್ಧಾಂತದ ಸಾರವನ್ನು ಹೀಗೆ ನಿರೂಪಿಸಬಹುದು:

- ಸಾಮಾಜಿಕ ಪಾರಸ್ಪರಿಕ ಕ್ರಿಯೆಗಳು ಮಕ್ಕಳ ಸಂಜ್ಞಾನಾತ್ಮಕ ವಿಕಸನದ ಮೇಲೆ ಗಮನೀಯವಾದ ಪ್ರಭಾವ ಬೀರುತ್ತವೆ.

- ಜೈವಿಕ ಮತ್ತು ಸಾಮಾಜಿಕ ವಿಕಸನಗಳು ಪರಸ್ಪರ ಒಂದರಿಂದ ಇನ್ನೊಂದು ಬೇರ್ಪಟ್ಟಿರುವುದಿಲ್ಲ.

- ಮಕ್ಕಳ ಸಾಮಾಜಿಕ ಪರಸ್ಪರ ಅನುಕ್ರಿಯೆಗಳು ಮತ್ತು "ಹೆಚ್ಚು ಜ್ಞಾನಹೊಂದಿರುವ ಇತರರು" (More Knowledgeable Others, MKO), ಅಂದರೆ ಶಿಕ್ಷಕರು, ಪೋಷಕರು, ತರಪೇತುಗಾರರು, ಸಹಪಾಠಿಗಳು, ತಜ್ಞರು ಇವರ ನಡುವೆ ನಡೆಯುವ ಸಂಧಾನಗಳ ಮೂಲಕ ಕಲಿಕೆ ಉಂಟಾಗುತ್ತದೆ.

ವೈಗಾಸ್ಕಿಯವರ ಸಿದ್ಧಾಂತದ ಪ್ರಮುಖವಾದ ಆಲೋಚನೆ "ಸಂಜ್ಞಾನಾತ್ಮಕ ವಿಕಸನದ ಪ್ರಕ್ರಿಯೆಯಲ್ಲಿ ಸಾಮಾಜಿಕ ಪಾರಸ್ಪರಿಕ ಕ್ರಿಯೆಗಳು ಮೂಲ ಪಾತ್ರವನ್ನು ನಿರ್ವಹಿಸುತ್ತವೆ" ಎಂಬುದು. ವೈಗಾಸ್ಕಿಯವರು ಪ್ರತಿಪಾದನೆ ಮಾಡಿರುವ ಈ ಸಿದ್ಧಾಂತವು ಜೀನ್ ಪಿಯಾಜೆಯವರು ಪ್ರತಿಪಾದಿಸಿರುವ ಮಗುವಿನ ವಿಕಸನದ ಪ್ರಕ್ರಿಯೆಯನ್ನು ವಿರೋಧಿಸುತ್ತದೆ. ಪಿಯಾಜೆಯವರ ಪ್ರಕಾರ ಕಲಿಕೆಗೆ ವಿಕಸನವು ಅತಿ ಅವಶ್ಯಕವಾಗಿ ಪೂರ್ವಭಾವಿ ಅಂಶವಾದರೆ (ಅಂದರೆ ಕಲಿಕೆಗಿಂತ ವಿಕಸನವು ಮೊದಲನೆಯದು), ವೈಗಾಸ್ಕಿಯವರ ಪ್ರಕಾರ, ಮಗುವಿನ ಸಂಜ್ಞಾನಾತ್ಮಕ ವಿಕಸನಕ್ಕೆ ಸಾಮಾಜಿಕ ಕಲಿಕೆಯು ಪೂರ್ವಭಾವಿ ಅಂಶವಾಗುತ್ತದೆ. (ಅಂದರೆ ಸಂಜ್ಞಾನಾತ್ಮಕ ವಿಕಸನಕ್ಕಿಂತ ಸಾಮಾಜಿಕ ಕಲಿಕೆಯು ಮೊದಲನೆಯದು).

ವೈಗಾಸ್ಕಿ (1978) ಯವರ ಸಿದ್ಧಾಂತದ ಪ್ರಕಾರ ಮಗುವಿನ ಸಾಮಾಜಿಕ – ಸಾಂಸ್ಕೃತಿಕ ವಿಕಸನ ಕಾರ್ಯದಲ್ಲಿನ ಪ್ರತಿಯೊಂದು ಕ್ರಿಯೆಯೂ ಎರಡು ಮಟ್ಟಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಮೊದಲು ಸಾಮಾಜಿಕ ಹಂತದಲ್ಲಿ (ವ್ಯಕ್ತಿಗಳ ನಡುವೆ ಅಥವಾ ಅಂತರ ಮನೋವೈಜ್ಞಾನಿಕವಾಗಿ),

ಎರಡನೆಯದು ವೈಯಕ್ತಿಕ ಹಂತದಲ್ಲಿ (ಮಗುವಿನ ಒಳಗೆ ಅಥವಾ ಅಂತರ್ ಮನೋವೈಜ್ಞಾನಿಕವಾಗಿ).

ಮಗುವಿನ ಸಂಸ್ಕೃತಿ ಮತ್ತು ವ್ಯಕ್ತಿಗಳ ನಡುವಣ ಸಂವಹನಗಳ (Interpersonal Communication) ಪಾತ್ರವನ್ನು ವೈಗಾಸ್ಕಿಯವರು ಅಧ್ಯಯನ ಮಾಡಿ, ಉನ್ನತ ಮಾನಸಿಕ ಕಾರ್ಯಗಳು ಹೇಗೆ ವಿಕಸನಗೊಳ್ಳುತ್ತವೆ ಎಂಬುದರ ತತ್ವಗಳನ್ನು ನಿರೂಪಿಸಿದ್ದಾರೆ. ಅವರ ಪ್ರಕಾರ ನಿರ್ದಿಷ್ಟ ಸಾಂಸ್ಕೃತಿಕ ಗುಂಪುಗಳಲ್ಲಿ ಉನ್ನತ ಮಾನಸಿಕ ವಿಕಸನ ಕಾರ್ಯಗಳು ಐತಿಹಾಸಿಕವಾಗಿ ವಿಕಸನಗೊಳ್ಳುತ್ತವೆ. ವ್ಯಕ್ತಿಗತವಾಗಿ ಉನ್ನತ ಮಾನಸಿಕ ಕಾರ್ಯಗಳ ವಿಕಸನವು, ಮಗು ಮತ್ತು ಮಗುವಿನ ಜೀವನದಲ್ಲಿ ಪ್ರಭಾವಪೂರ್ಣ ವ್ಯಕ್ತಿಗಳಾದ ಪೋಷಕರು, ಶಿಕ್ಷಕರು ಹಾಗೂ ಇತರ ಹಿರಿಯ ವ್ಯಕ್ತಿಗಳ ನಡುವಣ ಸಾಮಾಜಿಕ ಪಾರಸ್ಪರಿಕ ಕ್ರಿಯೆಗಳ ಮೂಲಕ ಆಗುತ್ತದೆ. ಈ ಸಾಮಾಜಿಕ ಪಾರಸ್ಪರಿಕ ಕ್ರಿಯೆಗಳ ಮೂಲಕ ಮಗು ತನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮಾನಸಿಕ ಅಭ್ಯಾಸಗಳು ಮತ್ತು ಹವ್ಯಾಸಗಳನ್ನು ಕಲಿಯುತ್ತದೆ. ಅಂದರೆ, ಮಾತನಾಡುವ ಭಾಷೆ, ಮಾತನಾಡುವ ವೈಖರಿ, ಲಿಖಿತ ಭಾಷೆ ಮತ್ತು ಸಾಂಕೇತಿಕ ಜ್ಞಾನವನ್ನು ಕಲಿಯುತ್ತದೆ. ಇವುಗಳ ನೆರವಿನಿಂದ ಅರ್ಥಗಳನ್ನು ಕಂಡುಕೊಳ್ಳುತ್ತದೆ ಮತ್ತು ತನ್ನದೇ ಆದ ರೀತಿಯಲ್ಲಿ ಜ್ಞಾನದ ರಚನೆಯನ್ನು ಮಾಡುತ್ತದೆ.

ವೈಗಾಸ್ಕಿಯವರ ಸಾಮಾಜಿಕ ಸಾಂಸ್ಕೃತಿಕ ವಿಕಸನ ಸಿದ್ಧಾಂತದ ಈ ಪ್ರಮುಖವಾದ ಪ್ರಾಸ್ತಾವಿಕ ಪರಿಕಲ್ಪನೆಯನ್ನು "ಸಾಂಸ್ಕೃತಿಕ ಮಧ್ಯಸ್ಥಿಕೆ" (Cultural Mediation) ಎಂದು ಕರೆಯುತ್ತಾರೆ. ಈ ಪರಸ್ಪರ ಅನುಕ್ರಿಯೆಗಳ ಮೂಲಕ ಮಕ್ಕಳು ಗಳಿಸಿಕೊಂಡ ನಿರ್ದಿಷ್ಟ ಜ್ಞಾನವು ಅವರ ಸಂಸ್ಕೃತಿಯು ಹಂಚಿಕೊಂಡ ಜ್ಞಾನವನ್ನು ಪ್ರತಿನಿಧಿಸುತ್ತದೆ. ಸಾಂಸ್ಕೃತಿಕ ಮಧ್ಯಸ್ಥಿಕೆಯ ಮೂಲಕ ಜ್ಞಾನವನ್ನು ಗಳಿಸುವ ಈ ಪ್ರಕ್ರಿಯೆಯನ್ನು

Digitised by Bharatavani, CIIL

"ಆಂತರೀಕರಣ" ಅಥವಾ "ಅಂತಃಸ್ಥೀಕರಣ" (internalization) ಎನ್ನುತ್ತಾರೆ. ಜ್ಞಾನವು ಆಂತರೀಕರಣವಾದ ಬಳಿಕ ಮಗು ತನ್ನ ಸಂಸ್ಕೃತಿಯಿಂದ ಪಡೆದುಕೊಂಡ, ಸಾಧನವನ್ನು ಸ್ವೀಕಾರ ಮಾಡಿಕೊಂಡು ಅದನ್ನು ತನ್ನದನ್ನಾಗಿ ಮಾಡಿಕೊಂಡು ತನ್ನದೇ ಆದ ಅನನ್ಯ ರೀತಿಯಲ್ಲಿ ಬಳಸುವ ಸಾಮರ್ಥ್ಯವನ್ನು ಪಡೆಯುತ್ತದೆ.

**ವೈಗಾಸ್ಕಿಯವರ ಸಾಮಾಜಿಕ–ಸಾಂಸ್ಕೃತಿಕ ವಿಕಸನದ ತತ್ವಗಳು**

ವೈಗಾಸ್ಕಿಯವರ ಸಾಮಾಜಿಕ ವಿಕಸನ ಸಿದ್ಧಾಂತವು ಎರಡು ಪ್ರಮುಖ ತತ್ವಗಳನ್ನು ಆಧರಿಸಿದೆ.

- ಹೆಚ್ಚು ಜ್ಞಾನ ಹೊಂದಿರುವ ಇತರರು (More Knowledgeable Others, MKO)

ಹೆಚ್ಚು ಜ್ಞಾನ ಹೊಂದಿರುವ ಇತರರು ಎಂದರೆ, ಒಂದು ನಿರ್ದಿಷ್ಟ ಕಾರ್ಯ, ಪ್ರಕ್ರಿಯೆ ಅಥವಾ ಪರಿಕಲ್ಪನೆಗೆ ಸಂಬಂಧಿಸಿದಂತೆ ಕಲಿಯುವವರಿಗಿಂತ ಉತ್ತಮ ಅರಿವು ಅಥವಾ ಉನ್ನತ ಸಾಮರ್ಥ್ಯ ಹೊಂದಿರುವ ಯಾವುದೇ ವ್ಯಕ್ತಿ. ಸಾಮಾನ್ಯವಾಗಿ, ಆ ಇತರ ವ್ಯಕ್ತಿ ತಂದೆ, ತಾಯಿ, ಶಿಕ್ಷಕ, ತರಪೇತುಗಾರ ಅಥವಾ ಹಿರಿಯ ಪ್ರೌಢರಾಗಿರುತ್ತಾರೆ. ಅವರಲ್ಲದೇ ಸಹಪಾಠಿಗಳು, ಸಮವಯಸ್ಕರು, ಕಿರಿಯರು ಅಥವಾ ಕಂಪ್ಯೂಟರ್ ವಿಷಯದಲ್ಲಿಯೂ ಸಹ ಹೆಚ್ಚು ಜ್ಞಾನಹೊಂದಿರುವ ಇತರರು ಆಗಬಹುದು.

- ವಿಕಸನದ ಸಾಮೀಪ್ಯ ವಲಯ (Zone of Proximal Development, ZPD)

ಮಗುವು ತನ್ನ ಸಾಮರ್ಥ್ಯಗಳನ್ನು ಬಳಸಿ ತಾನೇತಾನಾಗಿ ನಿರ್ವಹಿಸಲು ಸಾಧ್ಯವಿರದ ಕಾರ್ಯವನ್ನು ಹಿರಿಯರ ಮಾರ್ಗದರ್ಶನ ಅಥವಾ ಸಮವಯಸ್ಕರ ಸಹಯೋಗದೊಂದಿಗೆ ನಿರ್ವಹಿಸಲು ಸಾಧ್ಯವಾಗುವ ಕ್ಷೇತ್ರವೇ ವಿಕಸನದ ಸಾಮೀಪ್ಯ ವಲಯ."

ವೈಗಾಸ್ಕಿಯವರ ಪ್ರಕಾರ "ಸ್ವತಂತ್ರವಾಗಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಸಾಮರ್ಥ್ಯವು ನಿರ್ಧರಿಸುವ ನಿಜವಾದ ವಿಕಸನ ಹಂತ ಮತ್ತು ಹಿರಿಯರ ಮಾರ್ಗದರ್ಶನದೊಂದಿಗೆ ಹೆಚ್ಚು ಸಾಮರ್ಥ್ಯವುಳ್ಳ ಸಮವಯಸ್ಕರ ಸಹಯೋಗದೊಂದಿಗೆ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಸಾಮರ್ಥ್ಯವು ನಿರ್ಧರಿಸುವ ಸಂಭಾವ್ಯ ವಿಕಸನ ಹಂತಗಳ ನಡುವಿನ ದೂರವೇ ವಿಕಸನದ ಸಾಮೀಪ್ಯ ವಲಯ. ವೈಗಾಸ್ಕಿಯವರ ವಾದದ ಪ್ರಕಾರ ಕಲಿಕೆಯು ಈ ವಲಯದಲ್ಲಿ ನಡೆಯುತ್ತದೆ.

ಇನ್ನೂ ಸರಳವಾಗಿ ಹೇಳುವುದಾದರೆ, "ಒಬ್ಬ ಕಲಿಯುವವ ಸ್ವತಂತ್ರವಾಗಿ ಕಾರ್ಯಗಳನ್ನು ನೆರವೇರಿಸುವ ಸಾಧ್ಯತೆಗಳು ಮತ್ತು ಅದೇ ಕಲಿಯುವವ ಬೇರೆಯವರ ಸಹಾಯವಿಲ್ಲದೆ ನೆರವೇರಿಸಲಾಗುವ ಸಾಧ್ಯತೆಗಳ ನಡುವಿನ ಅಂತರವೇ ವಿಕಸನದ ಸಾಮೀಪ್ಯ ವಲಯ". (Zone of Prorimal Development-ZPD) ಸ್ವತಂತ್ರವಾಗಿ ಕಾರ್ಯಗಳನ್ನು ನೆರವೇರಿಸುವ ಸಾಧ್ಯತೆಗಳು ಕಲಿಯುವವನ "ವಿಕಸನದ ಪ್ರಚಲಿತ ವಲಯ" (Zone of Current Development, ZCD) ದಲ್ಲಿ ಸೇರಿರುತ್ತವೆ. ಹೆಚ್ಚು ಸಾಮರ್ಥ್ಯವಿರುವ ಸಮವಯಸ್ಕ, ಶಿಕ್ಷಕ ಅಥವಾ ಹೆಚ್ಚು ಜ್ಞಾನ ಹೊಂದಿರುವ ಇತರರ ಸಹಾಯದಿಂದ ಕಲಿಯುವವನ ಕಾರ್ಯಗಳನ್ನು ನೆರವೇರಿಸಲಾಗುವ ಸಾಧ್ಯತೆಗಳು ಅವನ ವಿಕಸನದ ಸಾಮೀಪ್ಯ ವಲಯ" (Zone of Proximal Development) ದಲ್ಲಿ ಸೇರಿರುತ್ತವೆ. ವಿಕಸನದ ಸಾಮೀಪ್ಯ ವಲಯ (ZPD) ಕಡಿಮೆಯಾದಂತೆ, ವಿಕಸನದ ಪ್ರಚಲಿತ ವಲಯ (ZCD) ಹೆಚ್ಚಾಗುತ್ತದೆ.

ವೈಗಾಸ್ಕಿಯವರ ಅನಿಸಿಕೆಯ ಪ್ರಕಾರ, "ಮಕ್ಕಳು ಮೊದಲು ಕ್ರಮವಿಲ್ಲದ, ಯೋಜಿಸಿಲ್ಲದ ಮತ್ತು ಸಾಂದರ್ಭಿಕ ಪರಿಕಲ್ಪನೆಗಳನ್ನು ಹೊಂದಿರುತ್ತಾರೆ. ಉತ್ತೇಜನ ಅಥವಾ ಮಾರ್ಗದರ್ಶನ ಕೊಟ್ಟಾಗ, ಮಕ್ಕಳು ಮತ್ತು ಸಾಮರ್ಥ್ಯವುಳ್ಳ ವ್ಯಕ್ತಿಯ ನಡುವಿನ ಪ್ರತಿಕ್ರಿಯೆಗಳ ಫಲವಾಗಿ, ಮಕ್ಕಳ ಪರಿಕಲ್ಪನೆಗಳು ಕ್ರಮಬದ್ಧವಾಗುತ್ತವೆ ಮತ್ತು ತಾರ್ಕಿಕವಾಗಿ ಯೋಜಿಸಲ್ಪಡುತ್ತವೆ. ವಿಕಸನದ ಸಾಮೀಪ್ಯ ವಲಯದು ಇನ್ನೂ ಪರಿಪಕ್ವತೆಯನ್ನು ಹೊಂದಿರದ ಕಾರ್ಯಗಳನ್ನು ಸೂಚಿಸುತ್ತವೆ ಹಾಗೂ ಅವು ಪರಿಪಕ್ವತೆಯ ಪ್ರಕ್ರಿಯೆಯಲ್ಲಿರುತ್ತವೆ. ಅವುಗಳೇ ಕ್ರಮೇಣ ಪರಿಪಕ್ವತೆಯನ್ನು ಹೊಂದುತ್ತವೆ.

**ವೈಗಾಸ್ಕಿಯವರ ಸಾಮಾಜಿಕ ವಿಕಸನ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥಗಳು**

ಸಾಮಾಜಿಕ ವಿಕಸನ ಸಿದ್ಧಾಂತವನ್ನು ಆಧರಿಸಿದ ಬೋಧನಾ ವಿಧಾನಗಳು ಮತ್ತು ತಂತ್ರಗಳು ಸಾಂಪ್ರದಾಯಿಕ ಬೋಧನಾ ಪದ್ಧತಿಗಳಿಗಿಂತ ಬಹಳಷ್ಟು ಪರಿಣಾಮಕಾರಿ ಎಂಬುದನ್ನು ಸಂಶೋಧನಾ ಫಲಿತಾಂಶಗಳು ಸೂಚಿಸುತ್ತವೆ. ಈ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥವೇನೆಂದರೆ, ಕಲಿಯುವವರು ತಮ್ಮ ಜ್ಞಾನವನ್ನು ಪರಿಶೋಧಿಸಲು ಮತ್ತು ರಚಿಸಿಕೊಳ್ಳಲು ಸಾಮಾಜಿಕವಾಗಿ ಸಂಪದ್ಭರಿತವಾದ ಪರಿಸರವನ್ನು ಒದಗಿಸಬೇಕು. ಈ ಸಾಮಾಜಿಕ ಪರಿಸರದಲ್ಲಿ ಹೆಚ್ಚು ಜ್ಞಾನಹೊಂದಿರುವ ಇತರರು ಕಲಿಯುವವರಿಗೆ ಜ್ಞಾನವನ್ನು ರಚಿಸಿಕೊಳ್ಳಲು ಮತ್ತು ಕೌಶಲಗಳನ್ನು ಬೆಳೆಸಿಕೊಳ್ಳಲು ಬೇಕಾದ ಪರಿಕಲ್ಪನೆಗಳ ಚೌಕಟ್ಟಿನ ಆಧಾರವನ್ನು (Scaffolding) ಮತ್ತು ಉತ್ತೇಜನವನ್ನು ಕೊಡುತ್ತಾರೆ.

ಕಲಿಕಾ ಸಂದರ್ಭಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನಿಬಂಧನೆಗಳನ್ನು ಅಳವಡಿಸಲು ಸಹಾಯ ಮಾಡುವ ಬೋಧನಾ ವಿಧಾನಗಳಲ್ಲಿ ಅಧಿಕೃತತೆ (Authenticity), ಸಾಧನ ಮಧ್ಯಸ್ಥಿಕೆ (Tool mediated ) ಚಟುವಟಿಕೆ, ಸಾಮಾಜಿಕ ಪ್ರತಿಕ್ರಿಯೆ ಮತ್ತು ಸಂಭಾಷಣೆ (Social interaction and Discourse), ಸಹಭಾಗಿತ್ವದಲ್ಲಿ ಸಮಸ್ಯೆಯನ್ನು ನಿರೂಪಿಸುವುದು ಮತ್ತು ಬಿಡಿಸುವುದು (Cooperative problem posing and solving) ಮತ್ತು ಪರಿಣತಿಯ ವಿತರಣೆ (distribution of expertise) ಅಂಶಗಳು ಪ್ರಮುಖವಾಗಿವೆ (ಬ್ರೌನ್ ಮತ್ತು ಕ್ಯಾಂಪಿಯಾನ್, 1994).

ವೈಗಾಸ್ಕಿಯವರ ದೃಷ್ಟಿಯಲ್ಲಿ ಬೋಧನೆಯೆಂದರೆ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವೆ ನಡೆಯುವ ಪರಸ್ಪರ ಅನುಕ್ರಿಯೆಗಳು, ತಾರ್ಕಿಕವಾದಗಳು ಮತ್ತು ಸಂವಾದಗಳು. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಕ್ರಿಯಾಶೀಲರಾಗಿ ಭಾಗವಹಿಸುತ್ತಾರೆ. ಶಿಕ್ಷಕರು ಮಕ್ಕಳ ಬೌದ್ಧಿಕ ವಿಕಸನಕ್ಕೆ ವ್ಯಕ್ತಿಗಳ ನಡುವಣ ಅನ್ಯೋನ್ಯಕ್ರಿಯೆಗಳಿಗೆ ತನ್ಮೂಲಕ ಸಾಮಾಜಿಕ ವಿಕಸನಕ್ಕೆ ಬೆಂಬಲ ನೀಡುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ.

– ಜಿ.ವಿ.

## ವ್ಯವಸ್ಥಾ ಉಪಕ್ರಮ – ಶಿಕ್ಷಣದಲ್ಲಿ

ಜೀವಕೋಟಿಗಳಲ್ಲಿ ಅತ್ಯಂತ ಸಂಕೀರ್ಣವಾದ ಜೀವಿ ಮಾನವ. ಅದಕ್ಕೆ ಕಾರಣ ಅವನ ದೇಹದ ರಚನೆ. ಮಾನವನ ದೇಹರಚನೆಯು ಅನೇಕ ಅಂಗಗಳ ಸಮೂಹದಿಂದ ಆಗಿದೆ. ವಿಭಿನ್ನ ಅಂಗಗಳಲ್ಲಿ ಕೆಲವು ಅಂಗಗಳ ಗುಂಪುಗಳಿವೆ. ಈ ಅಂಗಸಮೂಹಗಳು ಮಾನವ ದೇಹದಲ್ಲಿ ನಿರ್ದಿಷ್ಟ ಜೀವನಕ್ರಿಯೆಗಳನ್ನು ನಡೆಸುತ್ತಿವೆ. ಉಸಿರಾಟ, ಜೀರ್ಣಕ್ರಿಯೆ, ವಿಸರ್ಜನ ಕ್ರಿಯೆ, ಸಾಗಣಿಕೆ, ಸಂತಾನೋತ್ಪತ್ತಿ, ನಿಯಂತ್ರಣ ಮತ್ತು


Digitised by Bharatavani, CIIL

ಸಹಕಾರ ಇವೆಲ್ಲವೂ ಮಾನವನ ದೇಹದಲ್ಲಿ ನಿರ್ದಿಷ್ಟ ಅಂಗಸಮೂಹಗಳು ನಡೆಸುವ ಜೈವಿಕ ಕ್ರಿಯೆಗಳು. ಐಚ್ಛಿಕ ಹಾಗೂ ಅನೈಚ್ಛಿಕ ಸ್ನಾಯುಗಳಿಂದ ನಿರ್ದಿಷ್ಟ ಅಂಗಸಮೂಹವು ಮಾನವ ದೇಹದಲ್ಲಿ ಈ ಜೈವಿಕ ಕ್ರಿಯೆಗಳನ್ನು ನಡೆಸುತ್ತವೆ. ಪ್ರತಿ ಅಂಗಸಮೂಹಕ್ಕೆ ನಿರ್ದಿಷ್ಟ ಕಾರ್ಯವಿರುತ್ತದೆ. ಉದಾಹರಣೆಗೆ ಮೂಗು, ಗಂಟಲು, ಶ್ವಾಸನಾಳ, ಬ್ರಾಂಕೈ, ಬ್ರಾಂಕಿಯೊಲ್, ಶ್ವಾಸಕೋಶಗಳು– ಈ ಅಂಗಸಮೂಹ ಮಾನವ ದೇಹದಲ್ಲಿ ಉಸಿರಾಟಕ್ರಿಯೆಯನ್ನು ನಡೆಸಲು ರಚನೆಯಾದ ಅಂಗವ್ಯೂಹ. ಆದ್ದರಿಂದಲೇ ಈ ವ್ಯೂಹವನ್ನು ಶ್ವಾಸಾಂಗವ್ಯೂಹ ಎಂದು ಕರೆಯುವರು. ನಿರ್ದಿಷ್ಟ ಕೆಲಸಗಳನ್ನು ಮಾಡುವ ಈ ಅಂಗಗಳ ಸಮೂಹವನ್ನು ವ್ಯವಸ್ಥೆಯೆಂದು, ಅವು ಮಾಡುವ ಕಾರ್ಯವನ್ನು ಉಪಕ್ರಮ (ಅಭಿಗಮನ) ಎಂದೂ ಒಟ್ಟಾರೆ ಇದನ್ನು 'ವ್ಯವಸ್ಥಾ ಉಪಕ್ರಮ' ಎಂತಲೂ ಸೂಚಿಸಬಹುದು.

'ವ್ಯವಸ್ಥೆ' ಎಂದರೆ ನಿರ್ದಿಷ್ಟ ಕೆಲಸಗಳನ್ನು ಮಾಡುವ ಅಂಗಗಳ ಸಮೂಹ. ಇದಕ್ಕೆ ಕೆಲವು ಸೌಕರ್ಯ ವ್ಯವಸ್ಥೆ, ಜೀರ್ಣಾಂಗ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಇತ್ಯಾದಿಗಳು ಉದಾಹರಣೆಗಳು. ಹಾಗೆಯೇ, ಒಂದು ನಿರ್ದಿಷ್ಟ ಕಾರ್ಯ ಮಾಡುವ ಹಲವಾರು ಬಿಡಿಬಿಡಿಯಾದ ಮತ್ತು ಆಂತರಿಕ ಸಂಬಂಧವುಳ್ಳ ಘಟಕಾಂಶಗಳ ಒಂದು ಸಮೂಹದ ಕಾರ್ಯವನ್ನು ಅಧ್ಯಯನ ಮಾಡುವ ಕ್ರಮವೇ ವ್ಯವಸ್ಥಾ ಉಪಕ್ರಮ. (System approach).

ವ್ಯವಸ್ಥಾ ಉಪಕ್ರಮವು ಆಧುನಿಕ ಯುಗದ ವಿನೂತನ ಆವಿಷ್ಕಾರವಾಗಿದೆ. ಇದು ಶಿಕ್ಷಣರಂಗದಲ್ಲಿ ಬೋಧನೆ ಮತ್ತು ಕಲಿಕೆಯು ಅತ್ಯಂತ ಪರಿಣಾಮಕಾರಿಯಾಗಿ ಜರುಗುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಇಂದಿನ ಯುಗದ ಆಧುನಿಕ ತಂತ್ರಜ್ಞಾನ ಮತ್ತು ವೈಜ್ಞಾನಿಕ ಪದ್ಧತಿಗಳನ್ನೊಳಗೊಂಡು ವ್ಯಕ್ತಿಯ ಮನೋಚಾಲನೆಯಂತೆ ವಿಷಯವನ್ನು ಸಾದರಪಡಿಸುವಲ್ಲಿ ಇದು ಬಹಳ ಸಹಾಯಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ವ್ಯವಸ್ಥಾ ಉಪಕ್ರಮ/ವ್ಯವಸ್ಥಾ ಅಭಿಗಮನ ಎಂಬ ಪರಿಕಲ್ಪನೆಯು ಎರಡನೆಯ ಜಾಗತಿಕ ಮಹಾಯುದ್ಧದ ಕಾಲದಲ್ಲಿ ಉಗಮವಾಯಿತು. ಅದೂ ರಣರಂಗದಲ್ಲಿ! ವಿವಿಧ ಯುದ್ಧಸಾಮಗ್ರಿಗಳ ಸಮೂಹದಿಂದ ಶತ್ರುದೇಶದ ಮೇಲೆ ದಾಳಿ ನಡೆಸಿ, ಆ ದೇಶವನ್ನು ಸಂಪೂರ್ಣ ನಾಶಗೊಳಿಸುವ ಧ್ಯೇಯ ಹೊಂದಿದ ಒಂದು ರೂಪುರೇಷೆಯ ಪರಿಕಲ್ಪನೆಯೆ ವ್ಯವಸ್ಥಾಉಪಕ್ರಮ. ಈ ಪರಿಕಲ್ಪನೆ ಕೇವಲ ಯುದ್ಧಕ್ಷೇತ್ರಕ್ಕೆ ಸೀಮಿತಗೊಳ್ಳಲಿಲ್ಲ. ತದನಂತರ ಇದರ ಒಳ್ಳೆಯ ವಿಚಾರಗಳನ್ನು ಔದ್ಯೋಗಿಕ ರಂಗದಲ್ಲಿ ಬಳಸಲಾಯಿತು. ಔದ್ಯೋಗಿಕ ಬೆಳವಣಿಗೆ ಮತ್ತು ವಿವಿಧ ಉದ್ಯಮಗಳ ಸಂರಚನೆ, ನಿರ್ವಹಣೆ ಮುಂತಾದವುಗಳಲ್ಲಿ ವಿವಿಧ ವ್ಯವಸ್ಥೆಗಳನ್ನು ರೂಪಿಸಲಾಯಿತು. ಹೀಗೆಯೇ ವ್ಯವಸ್ಥಾ ಉಪಕ್ರಮದ ಪರಿಕಲ್ಪನೆ ವಾಣಿಜ್ಯ ಕ್ಷೇತ್ರ, ಶೈಕ್ಷಣಿಕ ಕ್ಷೇತ್ರ, ಔದ್ಯೋಗಿಕ ಕ್ಷೇತ್ರ, ತಾಂತ್ರಿಕ ಕ್ಷೇತ್ರ, ಕೈಗಾರಿಕಾ ಕ್ಷೇತ್ರ, ವೈದ್ಯಕೀಯ ಕ್ಷೇತ್ರ, ಮಾಹಿತಿ ತಂತ್ರಜ್ಞಾನ ಕ್ಷೇತ್ರ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಈ ಪರಿಕಲ್ಪನೆ ಬಳಕೆಯಾಗುತ್ತಿದೆ. ಶೈಕ್ಷಣಿಕ ಕಾರ್ಯಕ್ರಮಗಳ ರೂಪುರೇಷೆ, ಸಂಘಟನೆ, ಆಡಳಿತ ವಿಸ್ತರಣೆ, ಸಂಶೋಧನೆ, ಶಿಕ್ಷಣದ ಪ್ರಕ್ರಿಯೆಗಳ ಕಾರ್ಯಾಚರಣೆ ಮುಂತಾದವುಗಳ ಅಧ್ಯಯನದಲ್ಲಿ ವ್ಯವಸ್ಥಾ ಉಪಕ್ರಮವನ್ನು ಇಂದು ಬಳಸಿಕೊಳ್ಳಲಾಗುತ್ತಿದೆ. ವಿಶೇಷವಾಗಿ ಬೋಧನೆ–ಕಲಿಕೆ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿಸಲು ಇದರ ಬಳಕೆ ಅನಿವಾರ್ಯ.

ವ್ಯವಸ್ಥಾ ಉಪಕ್ರಮ ಎಂಬ ಪದವನ್ನು ಮೊದಲ ಬಾರಿಗೆ ಬಳಸಿದವರು ಬೆರಥಾಲನ್‌ಫಿ. ಇದು ಜೀವಶಾಸ್ತ್ರದ ಮೂಲದಿಂದ ಉತ್ಪತ್ತಿಯಾಗಿದೆ. ಈ ವ್ಯವಸ್ಥಾ ಉಪಕ್ರಮವನ್ನು ವ್ಯವಸ್ಥಾ ಅಭಿಗಮನ, ವ್ಯವಸ್ಥಾ ಮಾರ್ಗ, ವ್ಯವಸ್ಥೆಯ ಕ್ರಮ, ವ್ಯವಸ್ಥೆಯ ರೀತಿ, ವ್ಯವಸ್ಥಾ ವಿಶ್ಲೇಷಣೆ, ವ್ಯವಸ್ಥೆಯ ತಾಂತ್ರಿಕತೆ, ಕ್ರಿಯಾತ್ಮಕ ಸಂಶೋಧನಾ ಕಾರ್ಯ ಎಂದು ಹಲವಾರು ರೀತಿಗಳಲ್ಲಿ ಹೆಸರಿಸುವುದುಂಟು.

'ವ್ಯವಸ್ಥೆ' ಎಂಬುದು ಪರಸ್ಪರ ಹೊಂದಾಣಿಕೆಯಾದ, ಒಂದನ್ನೊಂದು ಆಶ್ರಯಿಸಿರುವ, ಅವಲಂಬಿಸಿರುವ, ಒಂದಕ್ಕೊಂದು ಸಂಬಂಧಿತವಾದ ಬಿಡಿ ಭಾಗಗಳು ಕ್ರಮಬದ್ಧವಾಗಿ ಕೂಡಿಕೊಂಡಿರುವುದನ್ನು ಸೂಚಿಸುತ್ತದೆ.ಇದು ಪರಸ್ಪರ ಸಂಬಂಧಹೊಂದಿರುವ ಬಿಡಿ ಭಾಗಗಳ ಸಮಷ್ಟಿಯನ್ನು ಸೂಚಿಸುತ್ತದೆ. ಇದನ್ನು 'ಸಂಶ್ಲೇಷಣ ಪ್ರಕ್ರಿಯೆ' ಎಂತಲೂ ಹೇಳಬಹುದು. ಉದಾಹರಣೆಗೆ ಕಂಪ್ಯೂಟರ್. ಇದು ಹಲವಾರು ಸಾಮಗ್ರಿಗಳ ಸಮುಚ್ಚಯ. ಮಾನಿಟರ್, ಕೀಬೋರ್ಡ್, ಮೌಸ್, ಸಿಪಿಯು, ಮುದ್ರಕ, ಸ್ಕ್ಯಾನರ್, ಸ್ಪೀಕರ್ಸ್ ಮುಂತಾದ ಸಾಧನಗಳನ್ನು ವ್ಯವಸ್ಥಿತವಾಗಿ ಜೋಡಿಸಲಾದ ಒಂದು ವ್ಯವಸ್ಥೆ. ಅದನ್ನು ಕಂಪ್ಯೂಟರ್ ವ್ಯವಸ್ಥೆ ಎನ್ನುವರು. ಅವೆಲ್ಲವೂ ಒಗ್ಗೂಡಿ ವ್ಯವಸ್ಥೆಯ ಗುರಿ ಸಾಧಿಸಲು ಸಹಾಯಕಾರಿಯಾಗಿರುತ್ತದೆ. ವ್ಯವಸ್ಥೆಯು ಸ್ವಯಂ ನಿಯಂತ್ರಿತ, ಸ್ವಯಂ ಚಾಲಿತ ಮತ್ತು ಸ್ವಯಂ ಮುಂದುವರೆಯುವ ರಚನೆಯಾಗಿರುತ್ತದೆ. ವ್ಯವಸ್ಥೆಯು ಕೆಲಸ ಮಾಡುವಾಗ ತನಗೆ ನಿರ್ದಿಷ್ಟವಾದ ಉದ್ದೇಶಗಳನ್ನು ಮಾತ್ರ ಪೂರೈಸುವ ಗುರಿ ಹೊಂದಿರುತ್ತದೆ. ವ್ಯವಸ್ಥೆಯಲ್ಲಿ ಒಂದು ಭಾಗ ವಿಫಲ ಹೊಂದಿದರೆ ಸಂಪೂರ್ಣ ವ್ಯವಸ್ಥೆ ವಿಫಲ ಹೊಂದುವುದು.

ಈ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ, ಅದರಲ್ಲಿ ಎರಡು ವಿಧಗಳಿವೆ. ಒಂದು ನೈಸರ್ಗಿಕ ವ್ಯವಸ್ಥೆ, ಮತ್ತೊಂದು ಮಾನವ ನಿರ್ಮಿತ ವ್ಯವಸ್ಥೆ. ವಿಸರ್ಜನಾಂಗ ವ್ಯೂಹ, ಉಸಿರಾಟವ್ಯೂಹ, ಋತುವ್ಯವಸ್ಥೆ ಇತ್ಯಾದಿ ಇವುಗಳನ್ನೆಲ್ಲವನ್ನು ಗಮನಿಸಿದಾಗ ಇವು ನಿಸರ್ಗದ ಕೊಡುಗೆಗಳಾಗಿವೆ. ಇವೆಲ್ಲವೂ ನಿಸರ್ಗದಿಂದ ಉಂಟಾಗಿವೆ. ಇವುಗಳ ಮೇಲೆ ಮಾನವಜೀವಿಯ ನಿಯಂತ್ರಣ ಇರುವುದಿಲ್ಲ. ಹೀಗಾಗಿ ಇವುಗಳಲ್ಲಿಯ ಬದಲಾವಣೆಗಳನ್ನು ಒಮ್ಮೆಲೆ ಊಹಿಸುವುದು ಕಷ್ಟ ಸಾಧ್ಯ. ನೀರಾವರಿ ವ್ಯವಸ್ಥೆ, ಗಣಕಯಂತ್ರ ವ್ಯವಸ್ಥೆ, ರಕ್ಷಣಾ ವ್ಯವಸ್ಥೆ, ಅಂಚೆ ಮತ್ತು ತಂತಿ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಇತ್ಯಾದಿಗಳು ಮಾನವ ನಿರ್ಮಿತ ವ್ಯವಸ್ಥೆಗಳಾಗಿವೆ. ಇವು ಮಾನವ ಕೃತಕವಾಗಿ ಸಿದ್ಧಪಡಿಸಿದ ವ್ಯವಸ್ಥೆಗಳು. ಮಾನವ–ನಿರ್ಮಿತ ವ್ಯವಸ್ಥೆಗಳು ದಿನೇ ದಿನೇ ಹೆಚ್ಚುತ್ತಲಿವೆ. ಶಿಲಾಯುಗದ ಮಾನವನಿಂದ ಇಂದಿನ ಯುಗದವರೆಗೆ ಮಾನವ ವಿವಿಧ ಬಗೆಯ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತ ತನ್ನ ಜೀವನವನ್ನು ಹೆಚ್ಚು ಸುಖಮಯ ಹಾಗೂ ಸುಲಲಿತವನ್ನಾಗಿ ಮಾಡಿಕೊಂಡಿದ್ದಾನೆ.

ವ್ಯವಸ್ಥಾ ಉಪಕ್ರಮದಲ್ಲಿ ಹಲವಾರು ಹಂತಗಳಿವೆ. ಅವುಗಳೆಂದರೆ ವ್ಯವಸ್ಥೆಯ ವಿಶ್ಲೇಷಣೆ, ವ್ಯವಸ್ಥೆಯ ವಿನ್ಯಾಸ ಮತ್ತು ಅಭಿವೃದ್ಧಿ, ವ್ಯವಸ್ಥೆಯ ನಿರ್ವಹಣೆ ಮತ್ತು ಮೌಲ್ಯಮಾಪನ. ಮೊದಲನೆಯದಾದ ವ್ಯವಸ್ಥಾ ವಿಶ್ಲೇಷಣೆಯ ಹಂತದಲ್ಲಿ ವ್ಯವಸ್ಥೆಯನ್ನು ಸರಿಯಾಗಿ ವಿಶ್ಲೇಷಿಸಿ ಅದರಲ್ಲಿ ಬರುವ ವಿವಿಧ ಅಂಗಗಳನ್ನು ಕಂಡುಹಿಡಿದು ಅವುಗಳನ್ನು ಸರಿಯಾಗಿ ಸಂಘಟಿಸಿ ವ್ಯವಸ್ಥೆಯು ಹಂತ ಹಂತವಾಗಿ ಮುಂದುವರಿಯುವಂತೆ ಮಾಡಬೇಕು. ಹೀಗೆ ಮಾಡುವುದರಿಂದ ವ್ಯವಸ್ಥೆಯ ರಚನಾಕಾರನಿಗೆ ಮಧ್ಯದಲ್ಲಿ ಬರುವ ಅಡೆತಡೆಗಳ ಅರಿವು ಉಂಟಾಗಿ ಅವುಗಳನ್ನು ಎದುರಿಸಲು ಸಾಧ್ಯವಾಗುತ್ತದೆ. ಅಪೇಕ್ಷಿತ ಉದ್ದೇಶಗಳನ್ನು ಸರಿಯಾಗಿ ಪೂರೈಸಿಕೊಳ್ಳಲು ಈ ವಿಶ್ಲೇಷಣೆಯು ತುಂಬಾ ಸಹಾಯಕಾರಿಯಾಗಿದೆ. ಇದರಿಂದ ಸೇರ್ಪಡೆ ಮಾಡಿಕೊಳ್ಳಬೇಕಾದ ಅಂಶಗಳ ಹಾಗೂ ಪ್ರಕ್ರಿಯೆಗಳ ಕಲ್ಪನೆ ಹಾಗೂ ದೊರೆಯಬಹುದಾದ ಹೊರಹರಿವಿನ (output) ಉತ್ಪನ್ನಗಳ ಕಲ್ಪನೆಯು ಉಂಟಾಗುತ್ತದೆ. ಅಲ್ಲದೆ ಅವುಗಳ ಮೇಲೆ ಆದ ಪರಿಸರದ ಪರಿಣಾಮವೂ ಜೊತೆಜೊತೆಗೆ ತಿಳಿಯುತ್ತದೆ. ಎರಡನೆಯ ಹಂತವು ವ್ಯವಸ್ಥೆಯ ವಿನ್ಯಾಸ ಮತ್ತು ಅಭಿವೃದ್ಧಿ. ಒಂದು ವ್ಯವಸ್ಥೆಯ ಅಂಶಗಳನ್ನು ಸರಿಯಾಗಿ ವಿಶ್ಲೇಷಿಸಿದ ನಂತರ ಅವುಗಳನ್ನು ಕ್ರಮಬದ್ಧವಾಗಿ

Digitised by Bharatavani, CIIL

ಸಂಶ್ಲೇಷಿಸುವುದು ಬಹಳ ಮುಖ್ಯ. ಇಲ್ಲಿ ವ್ಯವಸ್ಥೆಯ ವಿನ್ಯಾಸ ಎಂದರೆ ಒಟ್ಟು ವ್ಯವಸ್ಥೆಯನ್ನು ಯೋಜಿಸಿಕೊಂಡಿರುವಂತೆ ಅಭಿವೃದ್ಧಿಪಡಿಸುವ ಮಾರ್ಗ. ಹಾಗಾಗಿ ಈ ಹಂತದಲ್ಲಿ ವ್ಯವಸ್ಥೆಯ ಮುಖ್ಯ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ಅದು ಸಮರ್ಪಕವಾಗಿ ನಡೆಯಲು ಅಗತ್ಯವಿರುವ ಅಂಶಗಳಾದ ಸಾಧನಗಳು, ತಂತ್ರಗಳು, ಕಾರ್ಯಕ್ರಮಗಳು, ಯುಕ್ತಿಗಳು, ಮತ್ತು ಮಾರ್ಗೋಪಾಯಗಳನ್ನು ಯೋಜಿಸಿಕೊಳ್ಳಬೇಕು. ಈ ಎಲ್ಲ ಅಂಶಗಳ ಆಧಾರದ ಮೇಲೆ ಯೋಜನೆಯ ವಿನ್ಯಾಸವನ್ನು ರೂಪಿಸಬೇಕು. ವ್ಯವಸ್ಥಾ ಉಪಕ್ರಮದ ಮೂರನೆಯ ಅಂಶ ವ್ಯವಸ್ಥೆಯ ನಿರ್ವಹಣೆ ಮತ್ತು ಮೌಲ್ಯಮಾಪನ. ಇದು ಅತ್ಯಂತ ಎಚ್ಚರಿಕೆಯಿಂದ ಗಮನವಿಟ್ಟು ಕೈಗೊಳ್ಳಬೇಕಾದ ಕೆಲಸ. ಈ ಹಂತದಲ್ಲಿ ವ್ಯವಸ್ಥೆಯು ಚಾಲನೆಗೆ ಒಳಪಟ್ಟಿರುತ್ತದೆ. ಚಾಲಕರು ವಿವಿಧ ರೀತಿ ಅಥವಾ ವಿಧಾನಗಳನ್ನು ಅನುಸರಿಸಿ ವ್ಯವಸ್ಥೆಯ ಚಾಲನೆಗೆ ಪುಷ್ಟಿ ಕೊಡುವರು. ವ್ಯವಸ್ಥೆಯು ಸರಿಯಾಗಿ ಮುಂದುವರೆದು ಕೊನೆಗೊಂಡಾಗ, ಅಪೇಕ್ಷಿತ ಉದ್ದೇಶಗಳಿಗೆ ಅನುಗುಣವಾಗಿ ಮೌಲ್ಯಮಾಪನ ಮಾಡುವುದು. ಒಂದು ವೇಳೆ ಅಪೇಕ್ಷಿತ ಉದ್ದೇಶಗಳು ಸಫಲವಾಗದೆ ಇದ್ದಲ್ಲಿ, ಪುನಃ ಮೊದಲಿನಿಂದ ಹಿಡಿದು ಎಲ್ಲ ಹಂತಗಳನ್ನು ಪುನರಾವರ್ತಿಸಬೇಕಾಗುತ್ತದೆ. ಈ ಹಂತಗಳನ್ನು ಶಿಕ್ಷಣದ ಯಾವುದೇ ಹಂತಕ್ಕೆ ಅನ್ವಯಿಸಿಕೊಳ್ಳಬಹುದಾಗಿದೆ. ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವಲ್ಲಿ ವ್ಯವಸ್ಥಾ ಉಪಕ್ರಮವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಇಂದು ನಮ್ಮ ಶಿಕ್ಷಣ ರಂಗದಲ್ಲಿ ಅನೇಕ ನ್ಯೂನತೆಗಳು ಕಂಡುಬರತೊಡಗಿವೆ. ಮುಖ್ಯವಾಗಿ ಇಂದಿನ ಶಿಕ್ಷಣವು ಶಿಕ್ಷಕ ಕೇಂದ್ರಿತವಾಗಿದೆ. ಇದರಿಂದ ವಿದ್ಯಾರ್ಥಿಗಳ ಬೇಕು ಬೇಡಿಕೆಗಳು ಈಡೇರುತ್ತಿಲ್ಲ. ಇದಲ್ಲದೆ ಅವರ ಸಮಸ್ಯೆಗಳಿಗೆ ಯೋಗ್ಯ ಪರಿಹಾರ ದೊರಕದೆ ಪರದಾಡುವಂತಾಗಿದೆ. ಭಾರತವು ವಿಜ್ಞಾನ ಹಾಗೂ ತಾಂತ್ರಿಕತೆಯಲ್ಲಿ ತ್ವರಿತವಾಗಿ ಮುನ್ನಡೆ ಸಾಧಿಸಿ ಮುಂದುವರಿದ ದೇಶಗಳೊಡನೆ ಸಮರ್ಪಕವಾಗಿ ವ್ಯವಹರಿಸಬೇಕಿದ್ದಲ್ಲಿ ಶಿಕ್ಷಣವನ್ನು ನವೀನ ಉದ್ದೇಶಗಳನ್ನೊಳಗೊಂಡಂತೆ ಪುನರ್‌ರಚಿಸಬೇಕಾಗಿದೆ. ಇಂದು ಶಾಲೆಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿಂದುಳಿದಿರುವಿಕೆ ಮತ್ತು ಅದರಿಂದ ಅಶಾಂತಿ ಒಂದೆಡೆಯಾದರೆ ಇನ್ನೊಂದೆಡೆ ಸಮರ್ಪಕವಾದ ಬೋಧನಾ ವಿಧಾನಗಳನ್ನು, ಸಲಕರಣೆಗಳನ್ನು ಬಳಸಿಕೊಂಡು ಪಾಠ ಮಾಡುವ ಶಿಕ್ಷಕರ ಕೊರತೆ. ಇದೂ ಅಲ್ಲದೇ ಯೋಗ್ಯ ಸಂಘಟನಕಾರರ ಮತ್ತು ಆಡಳಿತಗಾರರ ಕೊರತೆಯಾಗಿ ಇಡೀ ಶಿಕ್ಷಣ ವ್ಯವಸ್ಥೆಯೇ ಸೋತಿರುವಂತೆ ಭಾಸವಾಗುತ್ತದೆ. ಹೀಗೆ ಶಿಕ್ಷಣವನ್ನು ಪುನರ್‌ರಚಿಸುವಲ್ಲಿ ವ್ಯವಸ್ಥಾ ಉಪಕ್ರಮವು ಶಿಕ್ಷಣಕ್ಕೆ ಒಂದು ವರವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ವ್ಯವಸ್ಥೆಯ ಅರ್ಥವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಹಲವಾರು ಸ್ವತಂತ್ರವಾದ ಆಂತರಿಕ ಸಂಬಂಧವುಳ್ಳ ಅಂಶಗಳ ಸಮಷ್ಟಿಯಾಗಿರುತ್ತದೆ ಎನ್ನುವುದು ತಿಳಿಯುತ್ತದೆ. ವ್ಯವಸ್ಥೆಯ ಈ ಅಂಶಗಳನ್ನು ಚಲಕಗಳೆನ್ನುವರು. ಒಳಹರಿವು (input), ಪ್ರಕ್ರಿಯೆ (process), ಹೊರಹರಿವು (output), ಮತ್ತು ಪರಿಸರದ ಅಂಶಗಳು, ಪ್ರತಿಪುಷ್ಟೀಕರಣ–ಇವೇ ಆ ಚಲಕಗಳು. ವ್ಯವಸ್ಥೆಯಲ್ಲಿರುವ, ಧ್ಯೇಯೋದ್ದೇಶಗಳ ಸಾಧನೆಗಾಗಿ ಬಳಸಲಾಗುವ ಎಲ್ಲ ಭೌತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಒಳಹರಿವುಗಳೆನ್ನುವರು. ಇವುಗಳು ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅಂಶಗಳಾಗಿರುತ್ತವೆ. ಉದಾಹರಣೆಗೆ ಸೌರವ್ಯೂಹ ವ್ಯವಸ್ಥೆಯಲ್ಲಿ ಸೂರ್ಯ, ಚಂದ್ರ, ಪೃಥ್ವಿ, ಗುರು, ಬುಧ, ಶನಿ ಮುಂತಾದವುಗಳು. ಶಿಕ್ಷಣದ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು, ಪಠ್ಯವಸ್ತು, ಬೋಧನಾ ಸಲಕರಣೆಗಳು ಹಾಗೂ ಪದ್ಧತಿಗಳು. ಮಾನವನ ಜೀರ್ಣಾಂಗ ವ್ಯವಸ್ಥೆಯಲ್ಲಿ ಜೀರ್ಣಕ್ರಿಯೆಯಲ್ಲಿ ಪಾಲ್ಗೊಳ್ಳುವ ಅಂಗಗಳಾದ ಹಲ್ಲುಗಳು, ನಾಲಿಗೆ, ಗಂಟಲು, ಅನ್ನನಾಳ, ಜಠರ, ಪಿತ್ತಕೋಶ, ಮೇದೋಜೀರಕ ಗ್ರಂಥಿ, ಕರುಳು, ಆಹಾರ ಪದಾರ್ಥ, ಲಾಲಾರಸ, ಜಠರರಸ, ಪಿತ್ತರಸ, ಕರುಳ ರಸ, ಮೇದೋಜೀರಕ ರಸ ಇತ್ಯಾದಿಗಳು ಒಳಹರಿವುಗಳೆನ್ನಿಸಿಕೊಳ್ಳುವವು. ಎರಡನೆಯ ಅಂಶ ಪ್ರಕ್ರಿಯೆ. ಒಂದು ನಿರ್ದಿಷ್ಟ ಗುರಿಯನ್ನು ಸಾಧಿಸಲು ಉದ್ಯುಕ್ತವಾಗುವ ಚಟುವಟಿಕೆ ಅಥವಾ ಚಟುವಟಿಕೆಗಳ ಸಮೂಹವೇ ಪ್ರಕ್ರಿಯೆ ಎನಿಸಿಕೊಳ್ಳುವುದು. ಇದನ್ನು ಕಾರ್ಯಾಚರಣೆ ಎಂದೂ ಹೇಳಬಹುದು. ಉದಾಹರಣೆಗೆ ಬೋಧನೆ ಮತ್ತು ಕಲಿಕೆಯ ಚಟುವಟಿಕೆಗಳು. ವ್ಯವಸ್ಥೆಯಲ್ಲಿರುವ ಎಲ್ಲ ಅಂಶಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುವ, ಒಟ್ಟಾರೆಯಾಗಿ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಡುವ ಕಾರ್ಯಾಚರಣೆಯ ಪ್ರಕ್ರಿಯೆ. ಮಾನವ ಜೀರ್ಣಾಂಗ ವ್ಯವಸ್ಥೆಯಲ್ಲಿ ಜೀರ್ಣಕ್ರಿಯೆಯಲ್ಲಿ ಪಾಲ್ಗೊಳ್ಳುವ ಎಲ್ಲ ಅಂಗಗಳು ತಮ್ಮ ತಮ್ಮ ಕಾರ್ಯವನ್ನು ಮಾಡಿ ಸಮಗ್ರವಾಗಿ ಸಂಕೀರ್ಣ ಆಹಾರ ಪದಾರ್ಥಗಳನ್ನು ಸರಳವಾದ ಆಹಾರ ಕಣಗಳನ್ನಾಗಿ ಪರಿವರ್ತಿಸಿ ರಕ್ತಗತವಾಗುವ ಹಾಗೆ ಮಾಡುವುದೇ ಜೀರ್ಣಿಸುವ ಪ್ರಕ್ರಿಯೆ. ಅದೇ ಜೀರ್ಣಕ್ರಿಯೆ. ಮೂರನೆಯ ಚಲಕ ಹೊರಹರಿವುಗಳು. ವ್ಯವಸ್ಥೆಯಲ್ಲಿರುವ ಎಲ್ಲ ಅಂಶಗಳು ತಮ್ಮ ತಮ್ಮ ಕಾರ್ಯವನ್ನು ಮಾಡಿದಾಗ, ಅವುಗಳಿಂದ ಉಂಟಾಗುವ ಉತ್ಪನ್ನ ಅಥವಾ ಫಲವನ್ನು ಹೊರಹರಿವು (ಉತ್ಪಾದಕ) ಎನ್ನುವರು. ಹೊರಹರಿವುಗಳಿಂದ ವ್ಯವಸ್ಥೆಯ ಪರಿಣಾಮಕಾರಿತ್ವವನ್ನು ತಿಳಿಯಬಹುದು. ಇವುಗಳು ವ್ಯವಸ್ಥೆಯ ಫಲಿತಾಂಶವೂ ಆಗಿರುತ್ತವೆ. ಉದಾಹರಣೆಗೆ ಶಿಕ್ಷಣವ್ಯವಸ್ಥೆಯಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹೊರಬರುವ ವಿದ್ಯಾರ್ಥಿಗಳು. ವ್ಯವಸ್ಥಾ ಉಪಕ್ರಮದ ನಾಲ್ಕನೆಯ ಚಲಕ ಪರಿಸರದ ಅಂಶಗಳು. ಒಳಹರಿವು, ಪ್ರಕ್ರಿಯೆ ಹಾಗೂ ಹೊರಹರಿವುಗಳು ಈ ಎಲ್ಲ ಅಂಶಗಳು ಕ್ರಿಯಾರೂಪ ಪಡೆದುಕೊಳ್ಳಲು ಒಂದು ಸೂಕ್ತ ವಾತಾವರಣ ಬೇಕಾಗುವುದು. ಆ ಸ್ಥಳವೇ ಪರಿಸರ ಎನಿಸಿಕೊಳ್ಳುವುದು. ಆ ಪರಿಸರ ಆರೋಗ್ಯಕರವಾಗಿದ್ದರೆ ಹಾಗೂ ಕ್ರಿಯಾತ್ಮಕವಾಗಿದ್ದರೆ ಅಪೇಕ್ಷಿತ ಗುರಿ ಹಾಗೂ ಉದ್ದೇಶಗಳನ್ನು ಸಾಧಿಸಬಹುದಾಗಿದೆ. ಉದಾಹರಣೆಗೆ ಶಾಲಾ ಪರಿಸರ, ಸಮಾಜ, ಮನೆ, ಮುಂತಾದವುಗಳು. ಇವುಗಳು ಅನುಕೂಲಕರವಾಗಿದ್ದರೆ ಅಪೇಕ್ಷಿತ ಗುರಿಗಳನ್ನು ಸಾಧಿಸಬಹುದಾಗಿದೆ.

ಈ ನಾಲ್ಕು ಅಂಶಗಳನ್ನು ಒಳಗೊಂಡ ವ್ಯವಸ್ಥೆಯನ್ನು ಈ ಕೆಳಗಿನ ಧಾರಾಚಿತ್ರದಿಂದ ತಿಳಿಯಬಹುದು.




ಈ ಮೇಲಿನ ನಾಲ್ಕು ಪ್ರಮುಖ ಅಂಶಗಳು ನಿಖರವಾಗಿ ಕಾರ್ಯ ನಿರ್ವಹಿಸಿದಾಗ ವ್ಯವಸ್ಥೆಯು ಅತ್ಯಂತ ಪರಿಣಾಮಕಾರಿ ವ್ಯವಸ್ಥೆ ಎನಿಸಿಕೊಳ್ಳುವುದು. ಒಂದು ವೇಳೆ ಯಾವುದೇ ಹಂತದಲ್ಲಿ ತೊಂದರೆಯಾದರೆ ಆ ವ್ಯವಸ್ಥೆ ಅಲ್ಲಿಯೇ ನಿಂತು ಹೋಗುವುದು ಇಲ್ಲವೇ

Digitised by Bharatavani, CIIL

ಅದರಿಂದ ಫಲಪ್ರದವಾದ ಉತ್ಪನ್ನಗಳು ದೊರೆಯದೇ ಹೋಗಬಹುದು. ಅಂತಹ ಸಂದರ್ಭದಲ್ಲಿ ವ್ಯವಸ್ಥೆಯ ಕಾರ್ಯವು ನಿಖರವಾಗಿ ನಡೆಯುವಂತೆ ಮಾಡಲು ವ್ಯವಸ್ಥೆಯ ರಚನೆ ಹಾಗೂ ಕಾರ್ಯದಲ್ಲಿ ಸೂಕ್ತ ಬದಲಾವಣೆ ಮಾಡಲು ಪ್ರತಿಪುಷ್ಟೀಕರಣವನ್ನು ನೀಡಲಾಗುವುದು. ಈ ಪ್ರತಿಪುಷ್ಟೀಕರಣವು ಅನೇಕ ಅಂಶಗಳನ್ನು ಒಳಗೊಳ್ಳುತ್ತದೆ. ವ್ಯವಸ್ಥೆಯ ಎಲ್ಲ ಅಂಶಗಳನ್ನು ಪರಿಶೀಲಿಸುವುದು, ವ್ಯವಸ್ಥೆಯ ಒಳಗೆ ಸೇರಬೇಕಾದ ಅಂಶಗಳನ್ನು ಒಳಗೊಳ್ಳುತ್ತದೆ. ವ್ಯವಸ್ಥೆಯ ಎಲ್ಲ ಅಂಶಗಳನ್ನು ಪರಿಶೀಲಿಸುವುದು, ವ್ಯವಸ್ಥೆಯ ಒಳಗೆ ಸೇರಬೇಕಾದ ಅಂಶಗಳನ್ನು ಉತ್ತಮಗೊಳಿಸುವುದು, ವ್ಯವಸ್ಥೆಯ ಒಳಗೆ ಸೇರಬೇಕಾದ ವಸ್ತುಗಳ ಕಾರ್ಯಗಳನ್ನು ಸರಿಯಾಗಿ ಪರೀಕ್ಷೆ ಮಾಡುವುದು, ವ್ಯವಸ್ಥೆಯಲ್ಲಿನ ಪ್ರಮುಖ ಅಂಶಗಳ ಕಾರ್ಯವನ್ನು ಪರೀಕ್ಷಿಸುವುದು, ವ್ಯವಸ್ಥೆಯ ಚಾಲನೆ ಹಾಗೂ ಪ್ರಕ್ರಿಯೆಗಳು ಸರಿಯಾದ ರೀತಿಯಲ್ಲಿ ನಡೆಯುವಂತೆ ಮಾಡುವುದು, ಇಡೀ ವ್ಯವಸ್ಥೆ ನಡೆಯಲು ಬೇಕಾದ ಪರಿಸರವನ್ನು ಉತ್ತಮಗೊಳಿಸುವುದು. ಒಂದು ವೇಳೆ ಹೊರಬಂದ ಉತ್ಪನ್ನಗಳು ಇಚ್ಛಿತ ಬದಲಾವಣೆಯನ್ನು ಹೊಂದಿ ಉತ್ತಮ ಪರಿಣಾಮ ಹಾಗೂ ಫಲಿತಾಂಶವನ್ನು ತೋರಿಸಿದ್ದಾದರೆ ಅದು ಪರಿಣಾಮಕಾರಿ ವ್ಯವಸ್ಥೆ ಎನ್ನಿಸಿಕೊಂಡು ಅದನ್ನು ಮುಂದುವರಿಸಲು ಸೂಚಿಸಲಾಗುವುದು.

ಶಿಕ್ಷಣದಲ್ಲಿ ವ್ಯವಸ್ಥಾ ಉಪಕ್ರಮದ ಅಳವಡಿಕೆ ವಿಶಿಷ್ಟ ಫಲಗಳನ್ನು ಕೊಡುತ್ತದೆ. ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. ಶಿಕ್ಷಣ ಎಂಬುದು ಒಂದು ಮಾನವ ನಿರ್ಮಿತ ಬೃಹತ್ ವ್ಯವಸ್ಥೆ. ಇದೊಂದು ಪೂರ್ಣಪ್ರಮಾಣದ ವ್ಯವಸ್ಥೆ. ಇದರಲ್ಲಿ ಹಲವಾರು ಅಂಗಗಳಿವೆ. ಅವುಗಳನ್ನು ಉಪವ್ಯವಸ್ಥೆಗಳೆಂದು ಕರೆಯಲಾಗುತ್ತದೆ. ಸಾಮಾನ್ಯಶಿಕ್ಷಣ ಒಂದು ವ್ಯವಸ್ಥೆಯಾದರೆ ಅದರಲ್ಲಿ ಬರುವ ವೃತ್ತಿಶಿಕ್ಷಣ ಒಂದು ಉಪ ವ್ಯವಸ್ಥೆಯಾಗಿರುತ್ತದೆ. ವೃತ್ತಿಶಿಕ್ಷಣದಲ್ಲಿ ಬರುವ ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ಶಿಕ್ಷಕರ ಶಿಕ್ಷಣ ಇತ್ಯಾದಿಗಳು ವೃತ್ತಿ ಶಿಕ್ಷಣದ ಉಪ ವ್ಯವಸ್ಥೆಗಳಾಗಿರುತ್ತವೆ. ಹೀಗೆ ಶಿಕ್ಷಣವೆಂಬ ವ್ಯವಸ್ಥೆಯಲ್ಲಿ ಸಮಂಜಸವಾದ ಉದ್ದೇಶಗಳನ್ನು ಹಾಕಿಕೊಂಡು, ಸೂಕ್ತ ವ್ಯವಸ್ಥಾಮಾರ್ಗಕ್ಕೆ ಅಳವಡಿಸಿ, ಹಾಕಿಕೊಳ್ಳಲಾದ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದು, ಶಿಕ್ಷಣದಲ್ಲಿ ವ್ಯವಸ್ಥಾ ಉಪಕ್ರಮದ ವ್ಯಾಪ್ತಿಗೆ ಬರುತ್ತದೆ. ಶಿಕ್ಷಣದಲ್ಲಿ ವ್ಯವಸ್ಥಾ ಉಪಕ್ರಮವನ್ನು ಅಳವಡಿಸಿಕೊಂಡಾಗ ಅದರ ಬೇರೆ ಬೇರೆ ಚಲಕಗಳಲ್ಲಿ ಕಾರ್ಯತತ್ಪರವಾಗುವ ಅಂಶಗಳನ್ನು ಕೆಳಗಿನ ರೇಖಾಚಿತ್ರದ ಮೂಲಕ ತಿಳಿಯಬಹುದು.

ಶೈಕ್ಷಣಿಕ ವ್ಯವಸ್ಥಾ ಉಪಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಆಡಳಿತಗಾರರು, ಪಠ್ಯ ವಸ್ತು, ಶೈಕ್ಷಣಿಕ ಗುರಿ, ಉದ್ದೇಶಗಳು, ಬೋಧನಾ ವಿಧಾನ – ಸಾಮಗ್ರಿ – ಯುಕ್ತಿಗಳು ಇವೆಲ್ಲವುಗಳು ಒಳಹರಿವುಗಳೆನಿಸಿಕೊಳ್ಳುವುವು. ಶೈಕ್ಷಣಿಕ ವ್ಯವಸ್ಥಾ ಉಪಕ್ರಮ ಒಳಗೊಳ್ಳುವ ಕಾರ್ಯಚಟುವಟಿಕೆಗಳಾದ ಬೋಧನೆ, ಕಲಿಕೆ, ಮೌಲ್ಯಮಾಪನ, ಪ್ರತಿಪುಷ್ಟೀಕರಣ, ಆಡಳಿತ ನಿರ್ವಹಣೆ, ಮೇಲ್ವಿಚಾರಣೆ ಇವೆಲ್ಲವು ಪ್ರಕ್ರಿಯೆಗಳೆನಿಸಿಕೊಳ್ಳುವುವು. ಶೈಕ್ಷಣಿಕ ವ್ಯವಸ್ಥಾ ಉಪಕ್ರಮದಲ್ಲಿ ಬರುವ ಶೈಕ್ಷಣಿಕ ಗುರಿ ಹಾಗೂ ಉದ್ದೇಶಗಳ ಈಡೇರಿಕೆ, ಸಂಪನ್ಮೂಲ ವಿದ್ಯಾರ್ಥಿಗಳ ಸಮುದಾಯ, ಆರೋಗ್ಯಕರ ಪರಿಸರ ನಿರ್ಮಾಣ ಇವುಗಳೆಲ್ಲವೂ ಹೊರಹರಿವುಗಳೆನಿಸಿಕೊಳ್ಳುವುವು. ಶೈಕ್ಷಣಿಕ ವ್ಯವಸ್ಥಾ ಉಪಕ್ರಮದ ಉದ್ದೇಶಿತ ಹೊರಹರಿವುಗಳು ಬಾರದಿದ್ದಲ್ಲಿ ವ್ಯವಸ್ಥೆಯನ್ನು ಪರಿಶೀಲಿಸಿ ಪುನರ್ ಸಂಘಟಿಸಲಾಗುವುದು. ಅಂದರೆ ವ್ಯವಸ್ಥೆಗೆ ಪ್ರತಿಪುಷ್ಟೀಕರಣ ನೀಡಲಾಗುವುದು. ಅಪೇಕ್ಷಿತ ಹೊರಹರಿವುಗಳು ಬರುವವರೆಗೆ ವ್ಯವಸ್ಥೆಯನ್ನು ಸುಧಾರಿಸಲಾಗುವುದು. ಈ ಮೇಲಿನ ನಾಲ್ಕು ಪ್ರಮುಖ ಅಂಶಗಳು




Digitised by Bharatavani, CIIL

ಶೈಕ್ಷಣಿಕ ಪರಿಸರದಲ್ಲಿ ಕಾರ್ಯೋನ್ಮುಖವಾಗುವುವು. ಇಲ್ಲಿ ಶೈಕ್ಷಣಿಕ ಪರಿಸರ ಬಹಳಷ್ಟು ಕ್ರಿಯಾತ್ಮಕವಾಗಿರಬೇಕಾಗುವುದು. ಶೈಕ್ಷಣಿಕ ವ್ಯವಸ್ಥೆಗೆ ವ್ಯವಸ್ಥಾ ಮಾರ್ಗದ ಅನ್ವಯ ಎಂದರೆ ಯೋಜನೆಯಿಂದೊಡಗೂಡಿದ ಸಂಘಟಿತವಾದ ಕಾರ್ಯ. ಈ ಪ್ರಕ್ರಿಯೆ ಲಭ್ಯವಿರುವ ಎಲ್ಲ ಕಲಿಕೆಯ ಸಂಪನ್ಮೂಲಗಳ ಸಂಗ್ರಹ, ಇಚ್ಛಿತ ಕಲಿಕೆಯ ಉದ್ದೇಶಗಳನ್ನು ಗುರುತಿಸುವಿಕೆ ಇವೆಲ್ಲವನ್ನೂ ಒಳಗೊಂಡ ಅನ್ವಯಿಕ ಪ್ರಕ್ರಿಯೆ. ಉದ್ದೇಶಗಳ ಸಾಧನೆಯಾಗುವವರೆಗೆ ಈ ಪ್ರಕ್ರಿಯೆಯು ಮುಂದುವರಿಯುತ್ತದೆ. ಶಿಕ್ಷಣದಲ್ಲಿನ ವ್ಯವಸ್ಥಾ ಉಪಕ್ರಮವು ಮುಖ್ಯವಾಗಿ ವಿದ್ಯಾರ್ಥಿ ಮತ್ತು ಅವನಿಂದ ಬೇಡಿಕೆಯಿರುವ ಕಾರ್ಯ ನೈಪುಣ್ಯತೆಗಳನ್ನು ತನ್ನ ಕೇಂದ್ರ ಬಿಂದುವಾಗಿರಿಸಿಕೊಂಡಿರುತ್ತದೆ. ಅನಂತರ ಅದು ವಿಷಯ ಅಥವಾ ವಸ್ತು, ಕಲಿಕೆಯ ಅನುಭವಗಳು, ಪ್ರಭಾವಿ ಮಾಧ್ಯಮಗಳು ಮತ್ತು ಬೋಧನಾ ವಿಧಾನ, ತಂತ್ರಗಳ ಪರಿಗಣನೆ ಇವುಗಳ ಬಗೆಗಿನ ನಿರ್ಣಯಗಳನ್ನು, ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಈ ರೀತಿಯ ವ್ಯವಸ್ಥೆಯು ತನ್ನಷ್ಟಕ್ಕೆ ತಾನೇ ಸ್ವಯಂ ಸುಧಾರಣೆಗಳನ್ನು ಮತ್ತು ತಿದ್ದುಪಡಿಗಳನ್ನು ಅಳವಡಿಸಿಕೊಳ್ಳುವ ಸನ್ನಿವೇಶ ಹಾಗೂ ಸಾಮರ್ಥ್ಯವನ್ನು ಒದಗಿಸುತ್ತದೆ.

ಶೈಕ್ಷಣಿಕ ವ್ಯವಸ್ಥೆಯಲ್ಲಿ ಚಾಲ್ತಿಗೆ ಬರಬಹುದಾದ ವ್ಯವಸ್ಥಾ ಉಪಕ್ರಮದ ಸ್ವರೂಪವನ್ನು ನಿರ್ದಿಷ್ಟವಾಗಿ ಗುರುತಿಸಿಕೊಳ್ಳಬೇಕಾಗುತ್ತದೆ. ಉಪಕ್ರಮದ ಅಳವಡಿಕೆಗೆ ಮೂಲವಾದ ಸಮಸ್ಯೆಯನ್ನು ಗ್ರಹಿಸುವುದು ಮೊತ್ತ ಮೊದಲ ಕೆಲಸ. ಸಮಸ್ಯೆಯನ್ನು ಕುರಿತು ವ್ಯಾಪಕವಾಗಿ ಅಧ್ಯಯನ ಮಾಡಿ ಸಂಬಂಧಪಟ್ಟ ಉಪಸಮಸ್ಯೆಗಳನ್ನು ಗುರುತಿಸಿಕೊಂಡು ಈಗ ಗಮನಿಸಿ ಪರಿಹರಿಸಬೇಕಾದ ಸಮಸ್ಯೆಯನ್ನು ನಿರ್ದಿಷ್ಟ ಪಡಿಸಿಕೊಳ್ಳಬೇಕು. ಸಮಸ್ಯಾ ಪರಿಹಾರದ ಅಧ್ಯಯನ ಎರಡನೆಯ ಕೆಲಸ. ವ್ಯವಸ್ಥೆಯ ಅಭಿವೃದ್ಧಿಯ ಚಕ್ರದಲ್ಲಿ ಇದು ಪ್ರಥಮ ಹಂತವಾಗಿದೆ. ವ್ಯವಸ್ಥೆಯ ಅಭಿವೃದ್ಧಿ ಸಮಸ್ಯೆಗಳಿಗೆ ಸಾಧ್ಯವಿರುವ ಎಲ್ಲ ಪರ್ಯಾಯ ಪರಿಹಾರಗಳನ್ನು ಇಲ್ಲಿ ಪರೀಕ್ಷಿಸಬೇಕು ಮತ್ತು ಈ ಪರಿಹಾರಗಳಿಗೆ ತಾಂತ್ರಿಕತೆಯ ಅಡಚಣೆಗಳು, ಸಂಪನ್ಮೂಲಗಳ ಲಭ್ಯತೆ ಮತ್ತು ಸಂಘಟನೆಯಲ್ಲಿ ರಚನಾ ವಿನ್ಯಾಸಗಳನ್ನು ತಾಳೆ ನೋಡಬೇಕು ಅಥವಾ ಪರೀಕ್ಷಿಸಬೇಕು. ಸಂಭವನೀಯತೆಯ ಅಧ್ಯಯನದ ನಂತರ, ಗ್ರಹಿಸಲ್ಪಟ್ಟ ಸಮಸ್ಯೆಯು ಶಿಕ್ಷಕರಿಗೆ ಒಪ್ಪಿಗೆಯಾದರೆ, ಸ್ವೀಕಾರಾರ್ಹವಾದರೆ ಶಿಕ್ಷಕರು ವ್ಯವಸ್ಥೆಯ ಅಭಿವೃದ್ಧಿಗೆ ಮುಂದುವರಿಯುತ್ತಾರೆ. ಒಂದು ವೇಳೆ ವ್ಯವಸ್ಥೆ ತಿರಸ್ಕರಿಸಲ್ಪಟ್ಟರೆ, ಸ್ವೀಕೃತವಾಗದಿದ್ದರೆ ಮತ್ತೆ ಅಧ್ಯಯನ ಕೈಗೊಳ್ಳಲಾಗುವುದು; ಒಂದು ವೇಳೆ ಅದು ಪ್ರಯೋಜನಕರವಾದದ್ದು, ಉಪಯುಕ್ತವಾದದ್ದು ಎಂದು ಕಂಡು ಬಂದರೆ ಮತ್ತೆ ಅದನ್ನು ಸಂಭವನೀಯತೆ ಅಧ್ಯಯನಕ್ಕೆ ಪರಾಮರ್ಶಿಸಲು ತೊಡಗಬೇಕು. ಅಥವಾ ಮತ್ತೆ ಅದು ಉಪಯುಕ್ತವಲ್ಲ ಎಂದು ಕಂಡು ಬಂದರೆ ಆ ದಿಶೆಯತ್ತ ಪ್ರಯತ್ನ ಮಾಡುವುದನ್ನು ಕೈಬಿಡಲಾಗುವುದು. ಮೂರನೆಯದಾಗಿ ವ್ಯವಸ್ಥೆಯ ಅಗತ್ಯತೆ ಮತ್ತು ಬೇಡಿಕೆಗಳನ್ನು ದೃಢಪಡಿಸಿಕೊಳ್ಳಬೇಕು. ಈ ಹಂತದಲ್ಲಿ ಸಮಸ್ಯೆಯನ್ನು ಹೆಚ್ಚು ನಿಖರವಾಗಿ ವ್ಯಾಖ್ಯಾನಿಸಲಾಗುವುದು. ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಜಾರಿಗೊಳಿಸುವ ತೀರ್ಮಾನವಾದ ನಂತರವೇ ಅವುಗಳನ್ನು ಅನುಸರಿಸಲಾಗುತ್ತದೆ.

ಈ ಹಂತದಲ್ಲಿ ಉದ್ದೇಶಗಳನ್ನು, ನೀತಿ, ಧೋರಣೆಗಳನ್ನು, ವ್ಯವಸ್ಥೆಯೊಳಗಿರುವವರಿಗೆ ಒದಗಬಹುದಾದ ಅಡಚಣೆಗಳನ್ನು, ಸಂಪೂರ್ಣವಾಗಿ ಕಾರ್ಯಾಚಾರಣೆಯ ಅಂಶಗಳನ್ನು ದೃಢಪಡಿಸಿಕೊಳ್ಳಲಾಗುತ್ತದೆ. ವ್ಯವಸ್ಥೆಯ ವಿನ್ಯಾಸ ಮುಂದಿನ ಕಾರ್ಯ. ವ್ಯವಸ್ಥೆಯ ಅಗತ್ಯತೆಗಳ ನಿರೂಪಣೆಗಳ ಆಧಾರದ ಮೇಲೆಯೇ ವ್ಯವಸ್ಥೆ ವಿನ್ಯಾಸಗಾರರು ವ್ಯವಸ್ಥೆಯನ್ನು ವಿನ್ಯಾಸಗೊಳಿಸುತ್ತಾರೆ. ಅದಕ್ಕನುಗುಣವಾದ 'ನೀಲನಕ್ಷೆ'ಯನ್ನು ತಯಾರಿಸುತ್ತಾರೆ. ಈ ನಕ್ಷೆಯೇ ಹೊಸ ವ್ಯವಸ್ಥೆಯನ್ನು ರೂಪಿಸಲು ಮೂಲಾಧಾರವಾಗುತ್ತದೆ. ವಿನ್ಯಾಸವು ವಿವರಣಾತ್ಮಕ ವಿಶಿಷ್ಟತೆಗಳನ್ನೊಳಗೊಂಡ ವ್ಯವಸ್ಥೆಯ ಪ್ರತಿ ಅಂಗಾಂಶಗಳ ನಿರ್ದಿಷ್ಟ ಕಾರ್ಯವಿವರಣೆಯಾಗಿದೆ. ಭೌತಿಕ ತಯಾರಿ, ಕಾರ್ಯವಿಧಾನಗಳು, ಕಾರ್ಯಕ್ರಮ ಪರಿಹಾರಗಳು, ಸಂಘಟನೆಯಲ್ಲಿಯ ಬದಲಾವಣೆಗಳು ಇವುಗಳನ್ನು ಪ್ರಾಥಮಿಕ ಅಂಗಾಂಶಗಳೆಂದು ಗುರುತಿಸಲಾಗಿದೆ. ವಿನ್ಯಾಸದ ಪ್ರತಿ ಅಂಶವನ್ನು ಮೊದಲಿಗೆ ರೂಪಿಸಿ ನಂತರದಲ್ಲಿ ಸಂಪೂರ್ಣ ವ್ಯವಸ್ಥೆಯಲ್ಲಿ ಒಟ್ಟುಗೂಡಿಸಲಾಗುವುದು. ಭೌತಿಕ ಅಂಶಗಳ ತಯಾರಿ ಮುಂದಿನ ಹಂತ. ಇದು ಪ್ರಮುಖವಾಗಿ ಉಪಕರಣಗಳನ್ನು ಆಯ್ಕೆ ಮಾಡುವುದು ಮತ್ತು ಅದರ ಬಳಕೆಯ ಮಿತಿಗಳನ್ನು ನಿಗದಿಪಡಿಸುವ ಕೆಲಸ. ವಿಶೇಷತಜ್ಞರ ಮತ್ತು ಸಲಹೆಗಾರರ ತಾಂತ್ರಿಕ ನಿರ್ಣಯಗಳ ಆಧಾರದ ಮೇಲೆ ಇದನ್ನು ಮಾಡಲಾಗುತ್ತದೆ.

ಲಭ್ಯವಿರುವ ಹಣ, ಸ್ಥಳ / ಸನ್ನಿವೇಶ, ಉಪಕರಣಗಳ ಅನಿವಾರ್ಯತೆಯ ಮಟ್ಟ, ಅಗತ್ಯವಿರುವ ಸಹಕಾರದ ಒಪ್ಪಿಗೆ ಈ ಎಲ್ಲ ಅಂಶಗಳ ಮೇಲೆ ಇದನ್ನು ನಿರ್ಧರಿಸಲಾಗುತ್ತದೆ. ಇದರ ನಂತರದ ಕೆಲಸ ಕಾರ್ಯವಿಧಾನದ ಮಾಹಿತಿಗೆ ಸಂಬಂಧಪಟ್ಟದ್ದು. ಕಾರ್ಯವನ್ನು ಯಾವಾಗ, ಹೇಗೆ ಮತ್ತು ಯಾಕೆ ನಿರ್ವಹಿಸಬೇಕು ಎಂಬುದನ್ನು ಈ ಹಂತದಲ್ಲಿ ನಿರ್ಧರಿಸಬೇಕು. ಲಭ್ಯವಿರುವ ಎಲ್ಲ ವಿಧಾನಗಳನ್ನು ಪರಿಶೀಲಿಸಿ ಸೂಕ್ತ ಕಾರ್ಯವಿಧಾನವನ್ನು ಆರಿಸಿಕೊಳ್ಳಲಾಗುವುದು. ಈ ಎಲ್ಲವೂ ಸಾಧಿಸಬೇಕಾದ ಹೊರಹರಿವನ್ನು ಮನಸ್ಸಿನಲ್ಲಿಟ್ಟುಕೊಂಡೇ ನಡೆಯುವಂತಹವು. ವ್ಯವಸ್ಥೆಯ ವಿನ್ಯಾಸ ಯಾವಾಗಲೂ ಈ ಹೊರಹರಿವಿಗೆ ಸಂಬಂಧಿಸಿದುದು. ಇದಕ್ಕೆ ಅಗತ್ಯವಾದ ಪರಿಹಾರಗಳನ್ನು ದೃಢೀಕರಿಸಿಕೊಳ್ಳಲು ಕೆಲವೊಮ್ಮೆ ಕೈಯಿಂದಲೇ ಮಾಡುವ ವಿಶ್ಲೇಷಣಾ ತಂತ್ರಗಳನ್ನು ಬಳಸಿದರೆ ಮತ್ತೆ ಕೆಲವು ಸಲ ಕಂಪ್ಯೂಟರ್ ಮೂಲಕ ವಿಶ್ಲೇಷಣೆಗಳು ಅಗತ್ಯವಾಗುತ್ತವೆ. ಹೀಗಾಗಿ ಪರಿಹಾರಾತ್ಮಕ ಕಾರ್ಯಗಳಿಗೆ ಮಾಹಿತಿಯನ್ನು ಹೇಗೆ ಮತ್ತು ಎಲ್ಲಿಂದ ಪಡೆಯಬೇಕು ಎಂಬುದನ್ನು ನಿರ್ಧರಿಸಿಕೊಳ್ಳುವುದು ಮುಂದಿನ ಹಂತ. ಇದರಿಂದ ಮುಂದೆ ಅಗತ್ಯವಾದ ಸಂಘಟನೀಯ ಬದಲಾವಣೆಗಳತ್ತ ಗಮನಹರಿಸಬೇಕು. ಹೊಸ ವ್ಯವಸ್ಥೆಗಳಲ್ಲಿ ಅನೇಕ ವೇಳೆ ವಿವಿಧ ಕಾರ್ಯಗಳನ್ನು ವಿವಿಧ ವ್ಯಕ್ತಿಗಳು ನಿರ್ವಹಿಸಬೇಕಾಗುತ್ತದೆ. ಇದು ಒಟ್ಟು ಸಂಘಟನೆಯಲ್ಲಿ ರಚನಾತ್ಮಕ ಬದಲಾವಣೆಗಳನ್ನು ಬಯಸುತ್ತದೆ. ಈ ರೀತಿಯ ವ್ಯವಸ್ಥೆಯ ಬದಲಾವಣೆಗಳ ಹೊಂದಾಣಿಕೆಯನ್ನು ಕಾಳಜಿಪೂರ್ವಕವಾಗಿ ಯೋಜನೆಗೊಳಿಸಬೇಕು ಮತ್ತು ಸಹಾನುಭೂತಿಯಿಂದ ಜಾರಿಗೊಳಿಸಬೇಕು. ಆ ರೀತಿ ಮಾಡುವಲ್ಲಿ ವಿಫಲವಾದರೆ ಸಂಘಟನೆಯಲ್ಲಿ ಪ್ರತಿರೋಧದ ಫಲಿತಾಂಶ ಮತ್ತು ಹೊಸ ವ್ಯವಸ್ಥೆಯ ವೈಫಲ್ಯತೆ ಉಂಟಾಗುತ್ತದೆ. ಈ ರೀತಿಯ ವ್ಯವಸ್ಥಾತ್ಮಕ ಬದಲಾವಣೆಗಳು– ಚಟುವಟಿಕೆಗಳು, ನಿಲುವುಗಳು, ಸಿದ್ಧತೆ– ತರಬೇತಿ ಮತ್ತು ಮಾರ್ಗದರ್ಶನವನ್ನು ಬಯಸುತ್ತವೆ. ಆದ್ದರಿಂದ ಹೊಸ ವ್ಯವಸ್ಥೆಯ ಬಗ್ಗೆ ಸಿಬ್ಬಂದಿಗಳಿಗೆ ವಿಶೇಷವಾದ ತರಬೇತಿ ಕೊಡುವುದು ಅವಶ್ಯಕ. ಈವರೆಗೆ ಕಂಡುಕೊಂಡ ಸಮಸ್ಯೆಗೆ ಪರಿಹಾರ ಕಾರ್ಯವನ್ನು ರೂಪಿಸಲಾಗಿರುತ್ತದೆ. ಈ ಪರಿಹಾರಾತ್ಮಕ ಕಾರ್ಯವು ನಿರೀಕ್ಷಿಸಿದ ಫಲಗಳನ್ನು ಕೊಡಬಲ್ಲುದೆ ಎಂದು ಪರೀಕ್ಷಿಸುವುದು ಮುಂದಿನ ಕೆಲಸ. ಇಡೀ ವ್ಯವಸ್ಥೆ ಈ ಹಂತದಲ್ಲಿ ಪರೀಕ್ಷೆಗೆ ಒಳಪಡುತ್ತದೆ. ಇಂತಹ ಪರೀಕ್ಷೆಗಳನ್ನು ಜಾಗರೂಕತೆಯಿಂದ ರೂಪಿಸಿಕೊಂಡಿರಬೇಕು. ಪರೀಕ್ಷೆಗಾಗಿ ಅನೇಕ ಮಾರ್ಗಗಳಿದ್ದು, ಹೊಸ ವ್ಯವಸ್ಥೆಯನ್ನು ಹಳೆಯ ವ್ಯವಸ್ಥೆಯೊಂದಿಗೆ ಸಮಾಂತರವಾಗಿ ಪರೀಕ್ಷಿಸಬಹುದು ಅಥವಾ ಅದನ್ನು ಸಣ್ಣ ಪ್ರಮಾಣಗಳ ಹಿನ್ನೆಲೆಯಲ್ಲೂ ಪರೀಕ್ಷಿಸಬಹುದು. ಪರೀಕ್ಷೆಯನ್ನು ವಿವಿಧ ಹಂತಗಳಲ್ಲಿಯೂ

Digitised by Bharatavani, CIIL

ವಿವಿಧ ಮಟ್ಟಗಳಲ್ಲಿಯೂ ಮಾಡಬಹುದು. ಈಗಾಗಲೇ ಸ್ಪಷ್ಟವಾಗಿ ನಿರೂಪಿಸಿದ ವ್ಯವಸ್ಥೆಯ ಅಗತ್ಯಗಳೊಂದಿಗೆ, ಬೇಡಿಕೆಗಳೊಂದಿಗೆ ಪ್ರಸ್ತುತ ವ್ಯವಸ್ಥೆ ಕೊಡಬಹುದಾದ ಫಲಿತಾಂಶಗಳನ್ನು ಹೋಲಿಕೆ ಮಾಡಬಹುದು. ತೃಪ್ತಿಕರವಾಗಿಲ್ಲದಿದ್ದಲ್ಲಿ ವ್ಯವಸ್ಥೆಯನ್ನು ಪುನಃ ರೂಪಿಸಲಾಗುವುದು. ತೃಪ್ತಿಕರವಾಗಿದ್ದಲ್ಲಿ ವ್ಯವಸ್ಥೆಯನ್ನು ಅನ್ವಯಿಸಲು ಸಜ್ಜುಗೊಳಿಸಲಾಗುವುದು. ಇದರ ನಂತರದ ಹಂತ ಯೋಜನೆಯ ನಿರ್ವಹಣೆ. ಯೋಜಿತವಾದ ವ್ಯವಸ್ಥೆಗೆ ಅನುಗುಣವಾಗಿ ನಿರ್ವಾಹಕರ ನೇತೃತ್ವದಲ್ಲಿ ಯೋಜಿತ ವಿನ್ಯಾಸದಲ್ಲಿ ಕಾರ್ಯಾನ್ವಯವಾಗುವ ಹಂತವಿದು. ಇದು ಅತ್ಯಂತ ಪ್ರಮುಖವಾದ ಹಂತ. ನಿಗದಿತ ಉದ್ದೇಶ, ವೇಳೆ, ಅವಧಿ, ಪ್ರತಿಯೊಬ್ಬರ ಕಾರ್ಯಗಳನ್ನು ಕಾರ್ಯಗತಗೊಳಿಸುವಿಕೆ– ಎಲ್ಲದರ ಕಡೆ ಗಮನಹರಿಸಬೇಕು. ಎಷ್ಟೇ ಜಾಗರೂಕತೆಯಿಂದ ಯೋಜಿಸಿದ ವಿನ್ಯಾಸವಾದರೂ ಅದು ಉದ್ದೇಶಗಳ ಸಾಧನೆಯಲ್ಲಿ ನೂರಕ್ಕೆ ನೂರರಷ್ಟು ಯಶಸ್ವಿಯಾಗುತ್ತದೆ ಎಂದು ಹೇಳಲಾಗುವುದಿಲ್ಲ. ಹಾಗಾಗಿ ವ್ಯವಸ್ಥೆಯ ಉದ್ದೇಶಗಳ ಹಿನ್ನೆಲೆಯಲ್ಲಿ ಈವರೆಗಿನ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡಬೇಕು. ಅದು ತೃಪ್ತಿಕರವಾಗಿಲ್ಲದಿದ್ದಲ್ಲಿ ವ್ಯವಸ್ಥೆಯನ್ನು ಪುನಃ ರೂಪಿಸಲಾಗುವುದು.

ಶಿಕ್ಷಣದಲ್ಲಿ ವ್ಯವಸ್ಥಾ ಉಪಕ್ರಮದ ಉಪಯೋಗಗಳು ಹಲವಾರು. ಶಿಕ್ಷಣ ವ್ಯವಸ್ಥೆಯಲ್ಲಿ ಒಳಹರಿವುಗಳ ಗುಣಮಟ್ಟವನ್ನು ಹೆಚ್ಚಿಸುವುದು, ಶಿಕ್ಷಣ ವ್ಯವಸ್ಥೆಯಲ್ಲಿಯ ಎಲ್ಲ ಚಲಕಗಳು (ಅಂಗಗಳು) ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದು, ಶಿಕ್ಷಣ ವ್ಯವಸ್ಥೆಗೆ ಉಪಯುಕ್ತವೆನಿಸುವ ಮಾನವ ಹಾಗೂ ಮಾನವೇತರ ಸಂಪನ್ಮೂಲಗಳನ್ನು ಬಳಕೆ ಮಾಡಿಕೊಳ್ಳುವುದು, ಬೋಧನೆ ಹಾಗೂ ಕಲಿಕೆಯ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿಸುವುದು, ಪರೀಕ್ಷೆ ಹಾಗೂ ಮೌಲ್ಯಮಾಪನ ಪದ್ಧತಿಗಳನ್ನು ಪರಿಣಾಮಕಾರಿಯಾಗಿ ಅಳವಡಿಸುವುದು, ಜೊತೆಗೆ ಅವುಗಳಲ್ಲಿ ಸುಧಾರಣೆ ತರುವುದು, ಶೈಕ್ಷಣಿಕ ಆಡಳಿತ, ನಿರ್ವಹಣೆ ಹಾಗೂ ಮೇಲ್ವಿಚಾರಣೆಯ ಪ್ರಕ್ರಿಯೆಗಳಿಂದ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು, ಶಾಲಾ ಆಡಳಿತ ಹಾಗೂ ನಿರ್ವಹಣೆಯಲ್ಲಿ ಸುಧಾರಣೆಯನ್ನು ತಂದು ಶಾಲೆಯ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುವುದು, ಶಿಕ್ಷಣ ವ್ಯವಸ್ಥೆಯಲ್ಲಿಯ ದೋಷಗಳನ್ನು ಪತ್ತೆಮಾಡುವುದು ಹಾಗೂ ನಿವಾರಿಸುವುದು, ಶೈಕ್ಷಣಿಕ ತರಬೇತಿ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸುಧಾರಿಸುವುದು, ರಾಷ್ಟ್ರೀಯ, ಪ್ರಾದೇಶಿಕ, ಸಾಂಸ್ಥಿಕ ಮಟ್ಟದಲ್ಲಿ ದೀರ್ಘ ಅಥವಾ ಅರೆಕಾಲಿಕ ಶೈಕ್ಷಣಿಕ ಯೋಜನೆಗಳನ್ನು ವ್ಯವಸ್ಥಿತವಾಗಿ ರೂಪಿಸುವುದು, ಶಿಕ್ಷಣ ಪ್ರಕ್ರಿಯೆಗೆ ಅನಿವಾರ್ಯವಾದ ಮಾನವ ಮತ್ತು ಭೌತಿಕ ಸಂಪನ್ಮೂಲಗಳ ಗರಿಷ್ಠ ಉಪಯೋಗವನ್ನು ಮಾಡಿಕೊಳ್ಳಲು ಸಹಾಯ ಮಾಡುವುದು, ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣವನ್ನು ವಿನ್ಯಾಸಗೊಳಿಸಲು, ನಿಯಂತ್ರಿಸಲು ಮತ್ತು ಸುಧಾರಿಸಲು ಸಹಾಯವನ್ನು ಮಾಡುವುದು–ಹೀಗೆ ಹತ್ತು ಹಲವು ರೀತಿಯಲ್ಲಿ ವ್ಯವಸ್ಥಾಉಪಕ್ರಮದ ಪರಿಕಲ್ಪನೆ ಶಿಕ್ಷಣದ ಒಟ್ಟು ಗುಣಮಟ್ಟದ ರಕ್ಷಣೆಗೆ ಮತ್ತು ಪೋಷಣೆಗೆ ಉಪಯುಕ್ತವೆನಿಸಿದೆ.

–ಎ.ಎಸ್. ಮತ್ತು ಎಸ್.ಎಂ.ಎಂ.

## ವಿಕಾಸಾತ್ಮಕ ಕಾರ್ಯಗಳು

ಮಾನವ ಶಿಶು ಮೊದಲಿಗೆ ಜೀವಾಂಡ ರೂಪದಿಂದ ಆರಂಭವಾಗಿ ಸೂಕ್ಷ್ಮವಾದ, ಸಂಕೀರ್ಣವಾದ, ಸುಸಂಗತವಾದ, ನಿರ್ದಿಷ್ಟವಾದ, ನಿಖರವಾದ ಮತ್ತು ಸುವ್ಯವಸ್ಥಿತವಾದ ವಿವಿಧ ಬದಲಾವಣೆಯ ಹಂತಗಳ ಮೂಲಕ ನಿರ್ದಿಷ್ಟ ಅವಧಿಯಲ್ಲಿ ಪೂರ್ಣ ಪ್ರಮಾಣದ ಶಿಶುವಾಗಿ ವಿಕಾಸ ಹೊಂದುತ್ತದೆ. ವಿಕಾಸ ಕೆಲವು ನಿಯಮಗಳಿಗೆ, ಗುಣಾತ್ಮಕವಾದ, ಪ್ರಯೋಗಾತ್ಮಕವಾದ ಪ್ರಕ್ರಿಯೆಗೆ ಒಳಪಟ್ಟಿದೆ. ನಿಶ್ಚಿತವಾದ ವಿನ್ಯಾಸವನ್ನು ಅನುಸರಿಸುತ್ತದೆ. ಹರಲಾಕ್‌ರವರು ವಿಕಾಸ, ವ್ಯಕ್ತಿಯಲ್ಲಿ ಹೊಸ ಗುಣಲಕ್ಷಣಗಳನ್ನು ಮತ್ತು ಸಾಮರ್ಥ್ಯಗಳನ್ನು ರೂಪಿಸುವ ಪರಿಪಕ್ವತೆ ಕಡೆಗೆ ಮುಂದುವರಿಯುವ ಬದಲಾವಣೆಗಳ ಸರಣಿ ಎಂದು ಹೇಳುತ್ತಾರೆ. ವಿಕಾಸವು ಪರಿಪಕ್ವನ ಮತ್ತು ಕಲಿಕೆಯ ಪ್ರತಿಫಲವಾಗಿದೆ. ಶ್ರೇಣಿ ಬದ್ಧವಾದ ಈ ಪ್ರಕ್ರಿಯೆ ತೀವ್ರತೆಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಸ್ವಲ್ಪಮಟ್ಟಿಗೆ ಭಿನ್ನವಾಗಿರುವ ಸಾಧ್ಯತೆಗಳಿವೆ, ಹೀಗಿದ್ದರೂ ಸಹ ಪ್ರತಿ ಒಂದು ಜೀವ ಜಾತಿಯ ವಿಕಾಸದ ದಿಶೆ ತನ್ನದೇ ಆದ ನಿರೀಕ್ಷಿಸಬಹುದಾದ ವಿಕಾಸದ ಸಹಜ ರೂಪದಲ್ಲಿ ಮುಂದುವರಿಯುತ್ತದೆ. ವಿವಿಧ ಸಾಮರ್ಥ್ಯಗಳು ಮತ್ತು ಕೌಶಲಗಳು ಸಂಘಟಿತವಾಗಿ ಹೊಸ ವರ್ತನೆಗಳು ಮತ್ತು ಕೌಶಲಗಳು ರೂಪುಗೊಳ್ಳಲು ಪೂರಕವಾಗಿ ಹಾಗೂ ಸಮಗ್ರವಾಗಿ ಕಾರ್ಯ ನಿರ್ವಹಿಸುತ್ತವೆ.

### ವಿಕಾಸಾತ್ಮಕ ಕಾರ್ಯಗಳ ಪರಿಕಲ್ಪನೆ ಮತ್ತು ಸ್ವರೂಪ

ವಿಕಾಸ ಸಂಬಂಧವಾದ ಕಾರ್ಯವೆಂದರೆ ಮಾನವನ ಜೀವಿತ ಕಾಲದಲ್ಲಿ ಯಾವುದೇ ಒಂದು ಹಂತದಲ್ಲಿ ಅಥವಾ ಅವಧಿಯಲ್ಲಿ ಅಥವಾ ಅದರ ಆಸುಪಾಸಿನಲ್ಲಿ ವ್ಯಕ್ತಗೊಳ್ಳುವ ವರ್ತನಾ ವಿನ್ಯಾಸಗಳು.

ಪ್ರತಿ ಒಂದು ಸಮಾಜವು ತನ್ನ ಸಮೂಹದ ಸದಸ್ಯರು ತಮ್ಮ ಜೀವನದ ವಿವಿಧ ಹಂತಗಳಲ್ಲಿ ಕೆಲವು ಅವಶ್ಯಕವಾದ ಕೌಶಲಗಳಲ್ಲಿ ಪ್ರಾವೀಣ್ಯತೆ ಪಡೆಯಬೇಕೆಂದು ಮತ್ತು ಕೆಲವು ಸರ್ವಸಮ್ಮತವಾದ ವರ್ತನೆಗಳನ್ನು ಪ್ರಕಟಪಡಿಸಬೇಕೆಂದು ನಿರೀಕ್ಷಿಸುತ್ತದೆ. ಅಮೆರಿಕಾ ಸಮಾಜವನ್ನು ಅಧ್ಯಯನ ಮಾಡಿದ ಹ್ಯಾವಿಂಗ್‌ಹರ್ಸ್ಟ್ ಎಂಬ ಮನೋವಿಜ್ಞಾನಿ ಇಂತಹ ಸರ್ವಸಮ್ಮತವಾದ ಕಾರ್ಯಗಳನ್ನು “ವಿಕಾಸಾತ್ಮಕ ಕಾರ್ಯಗಳು” (Development Tasks) ಎಂದು ಕರೆದಿದ್ದಾರೆ.

ವಿಕಾಸಾತ್ಮಕ ಕಾರ್ಯಗಳು ಪರಿಪಕ್ವತೆ, ಸಾಮಾಜಿಕ ಒತ್ತಡಗಳು, ವೈಯಕ್ತಿಕ ಅಗತ್ಯಗಳು, ಮೌಲ್ಯಗಳು ಮತ್ತು ಆಕಾಂಕ್ಷೆಯ ಮಟ್ಟಗಳಿಂದ ಪ್ರಭಾವಿತವಾಗುತ್ತವೆ.

ವಿಕಾಸಾತ್ಮಕ ಕಾರ್ಯಗಳು ಸಂರಚನಾತ್ಮಕ ಬದಲಾವಣೆಗಳು ಹಾಗೂ ಅದರಿಂದ ಉಂಟಾಗುವ ಕಾರ್ಯಾತ್ಮಕ ಸಾಮರ್ಥ್ಯಗಳನ್ನು ಒಳಗೊಂಡಿವೆ. ಈ ಬದಲಾವಣೆಗಳು ಅನೇಕ ಹಂತಗಳಲ್ಲಿ ನಿರ್ದಿಷ್ಟ ವರ್ತನೆಗಳನ್ನು ಪ್ರಕಟಗೊಳಿಸುವುದರ ಮೂಲಕ ನಡೆಯುತ್ತವೆ. ಪ್ರತಿ ಒಂದು ಹಂತವು ತನ್ನದೇ ಆದಂತಹ ಗುಣಲಕ್ಷಣಗಳನ್ನು ಹೊಂದಿ ವಿಶಿಷ್ಟವಾಗಿದೆ. ಒಂದು ಹಂತಕ್ಕೆ ಅಥವಾ ಅವಧಿಗೆ ನಿಗದಿತವಾದ ಕಾರ್ಯಾತ್ಮಕ ಸಾಮರ್ಥ್ಯಗಳನ್ನು ಸಾಧಿಸಿದ ತರುವಾಯವೆ ‘ಮುಂದಿನ ಹಂತಕ್ಕೆ ಅಥವಾ ಅವಧಿಗೆ ಚಲಿಸಲು ಸಾಧ್ಯವಾಗುತ್ತದೆ. ವಿಕಾಸಾತ್ಮಕ ಕಾರ್ಯಗಳ ವಿವಿಧ ಹಂತಗಳನ್ನು ಖಚಿತವಾದ ಸೀಮಾರೇಖೆಯಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಏಕೆಂದರೆ, ಒಂದು ಹಂತದ ಕಾರ್ಯಾತ್ಮಕ ಸಾಮರ್ಥ್ಯಗಳನ್ನು ಸಾಧಿಸುತ್ತಿದ್ದಂತೆಯೇ ಮುಂದಿನ ಹಂತದ ಕಾರ್ಯಗಳ ಗುಣಲಕ್ಷಣಗಳು ಮೂಡಲು ಸಿದ್ಧವಾಗುತ್ತಿರುತ್ತವೆ, ಅಲ್ಲದೆ, ಇದು ವ್ಯಕ್ತಿಯಿಂದ ವ್ಯಕ್ತಿಗೆ ತೀವ್ರತೆಯಲ್ಲಿ ಭಿನ್ನವಾಗಿರುವ ಮತ್ತು ಒಂದೇ ವ್ಯಕ್ತಿಯಲ್ಲಿಯೂ ಒಂದು ಕಾರ್ಯದಿಂದ ಇನ್ನೊಂದು ಕಾರ್ಯಕ್ಕೆ ಭಿನ್ನವಾಗಿರುವ ಸಾಧ್ಯತೆಗಳಿರುತ್ತವೆ.

ವಿಕಾಸಾತ್ಮಕ ಕಾರ್ಯಗಳು ವಿಕಾಸದ ಆಯಾಮಗಳಾದ, ದೈಹಿಕ ಮತ್ತು ಗತ್ಯಾತ್ಮಕ ಸಾಮಾಜಿಕ, ಸಂವೇಗಾತ್ಮಕ ಮತ್ತು ಸಂಜ್ಞಾನಾತ್ಮಕ ಕ್ಷೇತ್ರಗಳಲ್ಲಿ ಒಟ್ಟಾಗಿ, ಪೂರಕವಾಗಿ ಕಾಣಿಸಿಕೊಳ್ಳುತ್ತವೆ.

ವಿಕಾಸಾತ್ಮಕ ಕಾರ್ಯಗಳನ್ನು ಯಶಸ್ವಿಯಾಗಿ ಸಾಧಿಸಿದಾಗ ಅದು ವ್ಯಕ್ತಿಯ ತೃಪ್ತಿ, ಸಂತೋಷ ಹಾಗೂ ಯಶಸ್ಸಿಗೆ ಎಡೆ ಮಾಡಿಕೊಡುತ್ತವೆ.

Digitised by Bharatavani, CIIL

ಆದರೆ, ವಿಕಾಸಾತ್ಮಕ ಕಾರ್ಯಗಳನ್ನು ಸಾಧಿಸುವುದರಲ್ಲಿ ವಿಫಲತೆ ಉಂಟಾದರೆ ಅತೃಪ್ತಿ, ಅಸಂತೋಷ ಉಂಟಾಗಿ ಇತರ ಕಾರ್ಯಗಳನ್ನು ನಿರ್ವಹಿಸುವಾಗ ತೊಡಕಾಗಿ ಪರಿಣಮಿಸುತ್ತದೆ. ಇಷ್ಟೇ ಅಲ್ಲದೆ ಈ ಕಾರ್ಯಗಳನ್ನು ಸಾಧಿಸಿದಾಗ ಸಮಾಜದ ಒಪ್ಪಿಗೆಯೂ ದೊರೆಯುತ್ತದೆ. ಆದರೆ ಅವುಗಳನ್ನು ಸಾಧಿಸದೆ ಇದ್ದಾಗ ವ್ಯಕ್ತಿ ಸಮಾಜದಿಂದ ತಿರಸ್ಕೃತನಾಗಿ ಅಸಂತೋಷ, ಅತೃಪ್ತಿಯಿಂದ ಅಪಸಮಾಯೋಜಿತ ವ್ಯಕ್ತಿಯಾಗುವ ಸಾಧ್ಯತೆಗಳಿರುತ್ತವೆ. ವ್ಯಕ್ತಿ ಕಳವಳ, ಉದ್ವೇಗ, ವ್ಯಾಕುಲತೆ ಮತ್ತು ಒತ್ತಡಗಳಿಗೆ ಒಳಗಾಗಬಹುದು ಹಾಗೂ ಕ್ಲಿಷ್ಟವಾದ ಮತ್ತು ಸಂಕೀರ್ಣವಾದ ಸಮಾಜಕ್ಕೆ ಹೊಂದಿಕೊಳ್ಳದೇ ಹೋಗುವ ಸಂದರ್ಭ ಎದುರಿಸಬೇಕಾಗಬಹುದು.

### ವಿಕಾಸಾತ್ಮಕ ಕಾರ್ಯಗಳ ಮಹತ್ವ

ವಿಕಾಸಾತ್ಮಕ ಕಾರ್ಯಗಳ ಕುರಿತಾದ ಅರಿವು. ಸಮಾಜವು ವ್ಯಕ್ತಿಯಿಂದ ಯಾವ ಯಾವ ಹಂತದಲ್ಲಿ ಏನೇನನ್ನು ಅಪೇಕ್ಷಿಸುತ್ತದೆ ಎಂದು ಮನವರಿಕೆ ಮಾಡಿಕೊಡುತ್ತದೆ. ಸರಿಯಾದ ವರ್ತನೆಗಳನ್ನು ಸೂಕ್ತವಾದ ಸಮಯದಲ್ಲಿ ಪ್ರಕಟಪಡಿಸಲು ಪ್ರೇರಣೆ ನೀಡುತ್ತದೆ. ಒಂದು ಹಂತಕ್ಕೆ ಸಂಬಂಧಿಸಿದ ಎಲ್ಲ ವಿಕಾಸಾತ್ಮಕ ಕಾರ್ಯಗಳನ್ನು ಸಮರ್ಪಕವಾಗಿ ಮುಗಿಸಲಾಗಿದೆಯೋ ಇಲ್ಲವೋ ಎಂದು ತಿಳಿದುಕೊಳ್ಳುವುದರಲ್ಲಿ ಸಹಾಯಕವಾಗಿದೆ. ಒಂದು ವೇಳೆ ಹಾಗೆ ಮುಗಿಸಲಾಗದಿದ್ದಲ್ಲಿ ಅದಕ್ಕೆ ಕಾರಣಗಳನ್ನು ಕಂಡುಹಿಡಿದು ವ್ಯಕ್ತಿಯನ್ನು ಕಳವಳ, ಬಿಕ್ಕಟ್ಟು, ಉದ್ವೇಗ, ದ್ವಂದ್ವ, ವ್ಯಾಕುಲತೆ, ಅಸಮಾಧಾನದಿಂದ ದೂರವಿರಬಹುದಾಗಿದೆ.

ವಿಕಾಸಾತ್ಮಕ ಕಾರ್ಯಗಳ ವಿಕಾಸದ ಸಾಮಾನ್ಯ ಮೈಲಿಗಲ್ಲುಗಳು. ವರ್ತನಾ ವಿನ್ಯಾಸಗಳು ಯಾವ ವಯಸ್ಸಿನಲ್ಲಿ ಕಂಡುಬರುತ್ತವೆ ಎನ್ನುವುದನ್ನು ತಿಳಿಸುವುದರಿಂದ ಶಿಕ್ಷಕರಿಗೆ ಇವು ಯಾವ ವಯಸ್ಸಿಗೆ ಯಾವ ರೀತಿಯ ಪಠ್ಯಕ್ರಮವನ್ನು ರಚಿಸಬೇಕು ಎಂದು ನಿರ್ಣಯಿಸಲು ಸಹಾಯಕವಾಗುತ್ತವೆ. ಸಾಮಾನ್ಯವಾಗಿ ಪಠ್ಯಕ್ರಮ ರೂಪಿಸುವಾಗ ವಿಕಾಸಾತ್ಮಕ ಕಾರ್ಯಗಳ ಪಟ್ಟಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗುತ್ತದೆ.

ಪೋಷಕರಿಗೂ ವಿಕಾಸಾತ್ಮಕ ಕಾರ್ಯಗಳ ಅರಿವು ಮಕ್ಕಳು ಸರಿಯಾದ ದಿಶೆಯಲ್ಲಿ ಅವರ ವಯಸ್ಸಿಗೆ ತಕ್ಕಂತೆ ವಿಕಾಸಗೊಳ್ಳುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತವೆ. ಕೆಲವು ಪ್ರತಿಭಾವಂತ ಮಕ್ಕಳು ತಮ್ಮ ವಯಸ್ಸಿಗೆ ಮೀರಿದ ವರ್ತನೆಯನ್ನು ತೋರಿಸಿದರೆ ಪೋಷಕರು ಆತಂಕಪಡದೆ ಅಂಥ ಮಗುವಿಗೆ ಅಗತ್ಯವಾದ ಮಾರ್ಗದರ್ಶನ ನೀಡಬೇಕು. ಮಗು ತನ್ನ ವಯಸ್ಸಿನ ಇತರ ಮಕ್ಕಳು ತೋರಿಸುವ ಸಾಮಾನ್ಯ ವರ್ತನೆಯನ್ನೇ ತೋರಿಸದಿದ್ದಲ್ಲಿ, ಉದಾಹರಣೆಗೆ, 3 ವರ್ಷವಾದರೂ ಮಾತನಾಡುವುದನ್ನೇ ಕಲಿಯದಿದ್ದಲ್ಲಿ ಅಥವಾ ಸರಿಯಾದ ವಯಸ್ಸಿಗೆ ನಡಿಗೆ ಕಲಿಯದಿದ್ದಲ್ಲಿ ಆ ಮಗು ವಿಕಾಸಾತ್ಮಕ ಕಾರ್ಯಗಳಲ್ಲಿ ಹಿಂದೆ ಬಿದ್ದಿದೆ ಎಂದು ತಿಳಿಯಬೇಕು. ವಿಳಂಬ ಮಾಡದೆ ಮಗುವನ್ನು ತಜ್ಞರಿಂದ ಪರೀಕ್ಷೆ ಮಾಡಿಸಿ, ವಿಕಾಸದ ವಿಳಂಬಕ್ಕೆ ಕಾರಣಗಳೇನು ಎಂಬುದನ್ನು ತಿಳಿದುಕೊಂಡು ಸೂಕ್ತ ಚಿಕಿತ್ಸೆ ಮಾಡಿಸಬೇಕು.

ಸಮಾಜವು ಅಪೇಕ್ಷಿಸುವ ಹಾಗೂ ಮಾನವ ಸಹಜ ವರ್ತನೆಗಳ ವಿಕಾಸಾತ್ಮಕ ಕಾರ್ಯಗಳು ಯಾವ ಯಾವ ಹಂತದಲ್ಲಿ ಎಷ್ಟರಮಟ್ಟಿಗೆ ಪ್ರಕಟವಾಗಬೇಕೆಂಬುದರ ಕುರಿತು ಸ್ಪಷ್ಟವಾದ ಹಾಗೂ ವಿವರವಾದ ಪಟ್ಟಿಯನ್ನು ನೀಡಿದವರಲ್ಲಿ ಹ್ಯಾವಿಂಗ್ ಹರ್ಸ್ಟ್ ಎಂಬ ಮನೋವಿಜ್ಞಾನಿ ಪ್ರಥಮರಾಗಿದ್ದಾರೆ. ಹರ್ಲಾಕ್ ಮತ್ತು ಪಿಯಾಜೆಯಂತಹ ಪ್ರಸಿದ್ಧ ಮನೋವಿಜ್ಞಾನಿಗಳೂ ವಿಕಾಸಾತ್ಮಕ ಕಾರ್ಯಗಳ ಪಟ್ಟಿಗಳನ್ನು ನೀಡಿದ್ದಾರೆ. ಹ್ಯಾವಿಗ್ ಹರ್ಸ್ಟ್ ತಮ್ಮ ಪಟ್ಟಿಯನ್ನು ಅಮೆರಿಕಾ ಸಮಾಜದ ಸ್ಥಿತಿಗತಿಗಳ ಆಧಾರದ ಮೇಲೆ ಸಿದ್ಧಪಡಿಸಿದ್ದಾರೆ. ಆದ್ದರಿಂದ ಈ ಪಟ್ಟಿ ಎಲ್ಲ ಸಮಾಜಗಳಿಗೂ ಸಂಪೂರ್ಣವಾಗಿ ಅನ್ವಯಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಪ್ರತಿಯೊಂದು ಸಮಾಜದ ವಿಕಾಸಾತ್ಮಕ ಕಾರ್ಯಗಳನ್ನು ಪ್ರತ್ಯೇಕವಾಗಿ ಆ ಸಮಾಜದ ಮಕ್ಕಳ ವಿಕಾಸದ ದಿಶೆಯನ್ನು ಅಧ್ಯಯನ ಮಾಡಿ ಸಿದ್ಧಪಡಿಸಬೇಕಾಗುತ್ತದೆ. ಆದಾಗ್ಯೂ ಹ್ಯಾವಿಗ್ ಹರ್ಸ್ಟ್‌ರ ಪಟ್ಟಿಯನ್ನು ಅಲ್ಲಲ್ಲಿ ಬದಲಾವಣೆಗಳೊಂದಿಗೆ ಭಾರತೀಯ ಸಮಾಜಕ್ಕೂ ಅನ್ವಯಿಸಬಹುದು. ಬಾಲ್ಯಾವಸ್ಥೆಯ ವಿಕಾಸಾತ್ಮಕ ಕಾರ್ಯಗಳಲ್ಲಿ, ಅವು ಹೆಚ್ಚಾಗಿ ಜೈವಿಕ ಅಂಶಗಳಿಂದ ಪ್ರಭಾವಿತವಾಗುವುದರಿಂದ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ. ಆದರೆ ನಂತರದ ವಿಕಾಸಾತ್ಮಕ ಕಾರ್ಯಗಳು ಸಾಮಾಜಿಕ ಮತ್ತು ಶೈಕ್ಷಣಿಕ ಅಂಶಗಳಿಂದ ಹೆಚ್ಚಾಗಿ ಪ್ರಭಾವಗೊಳ್ಳುವುದರಿಂದ ಅವುಗಳಲ್ಲಿ ಒಂದು ಸಮಾಜದಿಂದ ಮತ್ತೊಂದು ಸಮಾಜಕ್ಕೆ ಅವುಗಳ ಸ್ವರೂಪದಲ್ಲಿ ಮತ್ತು ಅವು ಕಂಡುಬರುವ ವಯಸ್ಸಿನಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಈ ಕೆಳಗೆ ಹ್ಯಾವಿಗ್ ಹರ್ಸ್ಟ್‌ರು ಸಿದ್ಧಪಡಿಸಿರುವ ವಿಕಾಸಾತ್ಮಕ ಕಾರ್ಯಗಳ ಪಟ್ಟಿಯನ್ನು ಕೊಟ್ಟಿದೆ.

### ಶೈಶವಾವಸ್ಥೆ ಮತ್ತು ಆರಂಭಿಕ ಬಾಲ್ಯಾವಸ್ಥೆಯ ವಿಕಾಸಾತ್ಮಕ ಕಾರ್ಯಗಳು

- ನಡಿಗೆಯನ್ನು ಕಲಿಯುವುದು.
- ಘನ ಆಹಾರ ಪದಾರ್ಥಗಳನ್ನು ಸೇವಿಸುವುದು
- ಮಾತನಾಡುವುದನ್ನು ಕಲಿಯುವುದು.
- ದೇಹದ ತ್ಯಾಜ್ಯಗಳನ್ನು (ಮಲ–ಮೂತ್ರ) ಹೊರಹಾಕುವುದರ ಮೇಲೆ ನಿಯಂತ್ರಣ ಸಾಧಿಸುವುದನ್ನು ಕಲಿಯುವುದು.
- ಲಿಂಗ ವ್ಯತ್ಯಾಸಗಳನ್ನು ಮತ್ತು ಲಿಂಗ ಸಹಜ ಗಾಂಭೀರ್ಯವನ್ನು ಕಲಿಯುವುದು.
- ಶಾರೀರಿಕ (Phisiological) ಸ್ಥಿರತೆಯನ್ನು ಸಾಧಿಸುವುದು.
- ಸಾಮಾಜಿಕ ಹಾಗೂ ಭೌತಿಕ ವಾಸ್ತವಿಕತೆಗೆ ಸಂಬಂಧಿಸಿದ ಸರಳ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳುವುದು.
- ತಂದೆ–ತಾಯಿ, ಅಣ್ಣ–ಅಕ್ಕಂದಿರು ಮತ್ತು ಇತರ ವ್ಯಕ್ತಿಗಳೊಂದಿಗೆ ಸಂವೇಗಾತ್ಮಕವಾಗಿ ತನ್ನನ್ನು ಸಂಬಂಧಿಸಿಕೊಳ್ಳಲು ಕಲಿಯುವುದು.
- ಸರಿ–ತಪ್ಪುಗಳ ನಡುವಣ ವ್ಯತ್ಯಾಸವನ್ನು ಗುರ್ತಿಸುವುದನ್ನು ಕಲಿತುಕೊಳ್ಳುವುದು ಮತ್ತು ನೈತಿಕ ಪ್ರಜ್ಞೆಯನ್ನು (Conscious) ಬೆಳೆಸಿಕೊಳ್ಳುವುದು.

### ಮಧ್ಯ ಬಾಲ್ಯಾವಸ್ಥೆಯ ವಿಕಾಸಾತ್ಮಕ ಕಾರ್ಯಗಳು

- ಸಾಮಾನ್ಯ ಆಟಗಳಿಗೆ ಬೇಕಾಗುವ ದೈಹಿಕ ಕೌಶಲಗಳನ್ನು ಕಲಿತುಕೊಳ್ಳುವುದು.
- ಬೆಳೆಯುತ್ತಿರುವ ವ್ಯಕ್ತಿಯಾಗಿ ತನ್ನ ಬಗೆಗೆ ಆರೋಗ್ಯಕರವಾದ ಮನೋಭಾವಗಳನ್ನು ಬೆಳೆಸಿಕೊಳ್ಳುವುದು.
- ತನ್ನ ಸಮ–ವಯಸ್ಕರೊಂದಿಗೆ ಹೊಂದಿಕೊಂಡು ಹೋಗುವುದು.


Digitised by Bharatavani, CIIL

- ಸೂಕ್ತವಾದ ಲಿಂಗ ಪಾತ್ರ (Sex Role) ವನ್ನು ಕಲಿತುಕೊಳ್ಳುವುದು.
- ಓದು, ಬರಹ ಮತ್ತು ಲೆಕ್ಕಾಚಾರಕ್ಕೆ ಬೇಕಾದ ಮೂಲಭೂತ ಕೌಶಲಗಳನ್ನು ಬೆಳೆಸಿಕೊಳ್ಳುವುದು.
- ದಿನನಿತ್ಯದ ಜೀವನಕ್ಕೆ ಅಗತ್ಯವಾದ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುವುದು.
- ನೈತಿಕ ಪ್ರಜ್ಞೆ, ನೈತಿಕತೆ ಮತ್ತು ಮೌಲ್ಯಗಳ ಶ್ರೇಣಿಯನ್ನು ರೂಪಿಸಿಕೊಳ್ಳುವುದು.
- ಸಾಮಾಜಿಕ ಗುಂಪುಗಳು ಮತ್ತು ಸಂಸ್ಥೆಗಳ ಬಗ್ಗೆ ಮನೋಭಾವಗಳನ್ನು ಬೆಳೆಸಿಕೊಳ್ಳುವುದು.

**ತಾರುಣ್ಯಾವಸ್ಥೆಯ (ಕಿಶೋರಾವಸ್ಥೆಯ) ವಿಕಾಸಾತ್ಮಕ ಕಾರ್ಯಗಳು**

- ತನ್ನ ದೇಹವನ್ನು ಮತ್ತು ಪುರುಷ ಅಥವಾ ಸ್ತ್ರೀಯ ಪಾತ್ರವನ್ನು ಒಪ್ಪಿಕೊಳ್ಳುವುದು.
- ಎರಡೂ ಲಿಂಗಗಳ ಸಮ-ವಯಸ್ಕರೊಂದಿಗೆ ಹೊಸ ಸಂಬಂಧಗಳನ್ನು ಬೆಳೆಸಿಕೊಳ್ಳುವುದು.
- ಪೋಷಕರಿಂದ ಮತ್ತು ಇತರ ವಯಸ್ಕರಿಂದ ಸಂವೇಗಾತ್ಮಕ ಸ್ವಾತಂತ್ರ್ಯ ಸಾಧಿಸುವುದು.
- ಆರ್ಥಿಕ ಸ್ವಾತಂತ್ರ್ಯದ ಖಚಿತತೆಯನ್ನು ಸಾಧಿಸುವುದು.
- ವೃತ್ತಿಯೊಂದನ್ನು ಆಯ್ಕೆ ಮಾಡಿಕೊಂಡು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವುದು.
- ಪೌರ ದಕ್ಷತೆಗೆ ಬೇಕಾದ ಬೌದ್ಧಿಕ ಕೌಶಲಗಳನ್ನು ಮತ್ತು ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುವುದು.
- ಸಾಮಾಜಿಕವಾಗಿ ಜವಾಬ್ದಾರಿಯುತ ವರ್ತನೆಯನ್ನು ಕಲಿತುಕೊಳ್ಳಲು ಅಪೇಕ್ಷಿಸಿ ಅದನ್ನು ಸಾಧಿಸುವುದು.
- ವಿವಾಹವಾಗಲು ಮತ್ತು ಕುಟುಂಬ ಜೀವನ ಆರಂಭಿಸಲು ಸಿದ್ಧತೆ ಮಾಡಿಕೊಳ್ಳುವುದು.
- ಸಾಕಷ್ಟು ವೈಜ್ಞಾನಿಕವಾದ ವಿಶ್ವದೃಷ್ಟಿಯೊಂದಿಗೆ ಹೊಂದಿಕೊಳ್ಳುವ ಪ್ರಜ್ಞಾಯುಕ್ತ ಮೌಲ್ಯಗಳನ್ನು ರೂಪಿಸಿಕೊಳ್ಳುವುದು.

**ಆರಂಭಿಕ ವಯಸ್ಕಾವಸ್ಥೆಯ ವಿಕಾಸಾತ್ಮಕ ಕಾರ್ಯಗಳು**

- ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು
- ವಿವಾಹವಾಗುವ ವ್ಯಕ್ತಿಯೊಡನೆ ಜೀವಿಸುವುದನ್ನು ಕಲಿಯುವುದು.
- ಕುಟುಂಬವನ್ನು ಆರಂಭಿಸುವುದು.
- ಮಕ್ಕಳನ್ನು ಸಾಕುವುದು.
- ಗೃಹಕಾರ್ಯಗಳನ್ನು ನಿರ್ವಹಿಸುವುದು.
- ವೃತ್ತಿ ಜೀವನವನ್ನು ಆರಂಭಿಸುವುದು.
- ಪೌರ ಜವಾಬ್ದಾರಿಗಳನ್ನು ತೆಗೆದುಕೊಳ್ಳುವುದು.
- ತನ್ನ ನಿಲುವುಗಳಿಗೆ ಸರಿಹೊಂದುವ ಸಾಮಾಜಿಕ ಸಮೂಹವನ್ನು ಹುಡುಕಿಕೊಳ್ಳುವುದು.

**ಮಧ್ಯವಯಸ್ಸಿನ ವಿಕಾಸಾತ್ಮಕ ಕಾರ್ಯಗಳು**

- ವಯಸ್ಕ ಪೌರ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಸಾಧಿಸುವುದು.
- ಆರ್ಥಿಕ ಜೀವನ ಮಟ್ಟವನ್ನು ಸ್ಥಾಪಿಸುವುದು ಮತ್ತು ಅದನ್ನು ಉಳಿಸಿಕೊಂಡು ಹೋಗುವುದು.
- ತಾರುಣ್ಯಾವಸ್ಥೆಯ ಮಕ್ಕಳಿಗೆ ಜವಾಬ್ದಾರಿಯುತ ಮತ್ತು ಸಂತೋಷಪೂರ್ಣ ವಯಸ್ಕರಾಗಲು ಸಹಾಯ ನೀಡುವುದು.
- ವಯಸ್ಕಾವಸ್ಥೆಗೆ ಅನುಗುಣವಾದ ವಿರಾಮ ವೇಳೆಯ ಚಟುವಟಿಕೆಗಳನ್ನು ರೂಢಿಸಿಕೊಳ್ಳುವುದು.
- ಓರ್ವ ವ್ಯಕ್ತಿಯಾಗಿ ತನ್ನ ಸಂಗಾತಿಗೆ ಸಂಬಂಧಿಸಿಕೊಳ್ಳುವುದು.
- ಮಧ್ಯ ವಯಸ್ಸಿನ ಶಾರೀರಿಕ ಬದಲಾವಣೆಗಳನ್ನು ಒಪ್ಪಿಕೊಂಡು, ಅವುಗಳಿಗೆ ಹೊಂದಿಕೊಳ್ಳುವುದು.
- ವಯಸ್ಸಾಗುತ್ತಿರುವ ತಂದೆ-ತಾಯಿಗೆ ಹೊಂದಿಕೊಳ್ಳುವುದು.

**ಉತ್ತರ-ಪಕ್ವಾವಸ್ಥೆಯ ವಿಕಾಸಾತ್ಮಕ ಕಾರ್ಯಗಳು**

- ಕುಗ್ಗುತ್ತಿರುವ ದೈಹಿಕ ಶಕ್ತಿ ಮತ್ತು ಆರೋಗ್ಯಕ್ಕೆ ಹೊಂದಿಕೊಳ್ಳುವುದು.
- ನಿವೃತ್ತಿಗೆ ಮತ್ತು ಕಡಿಮೆಯಾದ ವರಮಾನಕ್ಕೆ ಹೊಂದಿಕೊಳ್ಳುವುದು.
- ಜೀವನ ಸಂಗಾತಿಯ ಮೃತ್ಯುವಿಗೆ ಹೊಂದಿಕೊಳ್ಳುವುದು.
- ತನ್ನ ವಯಸ್ಸಿನವರ ಗುಂಪಿಗೆ ಉದ್ದೇಶಪೂರ್ವಕವಾಗಿ ಸಂಬಂಧ ಬೆಳೆಸಿಕೊಳ್ಳುವುದು.
- ಸಾಮಾಜಿಕ ಮತ್ತು ಪೌರ ಕರ್ತವ್ಯಗಳನ್ನು ಪೂರ್ಣಗೊಳಿಸುವುದು.
- ತೃಪ್ತಿಕರ ಭೌತಿಕ ಜೀವನದ ವ್ಯವಸ್ಥೆಯನ್ನು ಮಾಡಿಕೊಳ್ಳುವುದು.

**ವಿಕಾಸಾತ್ಮಕ ಕಾರ್ಯಗಳ ಮೇಲೆ ಪ್ರಭಾವ ಬೀರುವ ಅಂಶಗಳು**

ವಿಕಾಸಾತ್ಮಕ ಕಾರ್ಯಗಳ ಮೇಲೆ ಈ ಕೆಳಗಿನ ಅಂಶಗಳು ಪ್ರಭಾವ ಬೀರುತ್ತವೆ.

**೧. ಅನುವಂಶೀಯತೆ**

ಮಾನವನ ವಿಕಾಸಾತ್ಮಕ ಕಾರ್ಯಗಳು ಗರ್ಭಧಾರಣೆಯಿಂದಲೇ ಪ್ರಾರಂಭವಾಗುತ್ತವೆ. ಪ್ರತಿ ಒಬ್ಬ ವ್ಯಕ್ತಿಯೂ ತಂದೆಯಿಂದ 23 ವರ್ಣತಂತುಗಳು ಹಾಗೂ ತಾಯಿಯಿಂದ 23 ವರ್ಣತಂತುಗಳು ಹೀಗೆ ಒಟ್ಟು 46 ವರ್ಣತಂತುಗಳನ್ನು ಗರ್ಭಧಾರಣೆಯಲ್ಲಿ ಪಡೆಯುತ್ತಾನೆ. ಈ ವರ್ಣತಂತುಗಳಲ್ಲಿ 'ವಂಶವಾಹಿಗಳು' ಎಂಬ ರಾಸಾಯನಿಕ ದ್ರವ್ಯಘಟಕಗಳು ಅನುವಂಶೀಯ ಗುಣಲಕ್ಷಣಗಳನ್ನು ಹೊಂದಿರುವ ವಂಶವಾಹಕಗಳಾಗಿವೆ. ಇವು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವಿವಿಧ ಸಾಮರ್ಥ್ಯಗಳು ಹಾಗೂ ಇತಿಮಿತಿಗಳನ್ನು ರವಾನಿಸುತ್ತವೆ. ಈ ರೀತಿಯಲ್ಲಿ ಅನುವಂಶೀಯ ಗುಣಲಕ್ಷಣಗಳು ಹಾಗೂ ಇತಿಮಿತಿಗಳನ್ನು ತಂದೆ ತಾಯಿಗಳಿಂದ ಪಡೆದರೂ, ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳು,

Digitised by Bharatavani, CIIL

ಅಂತಃಶಕ್ತಿ ಸಾಮರ್ಥ್ಯ, ಇತಿಮಿತಿಗಳನ್ನು ಹೊಂದಿದ ಅದ್ವಿತೀಯ ವ್ಯಕ್ತಿತ್ವದ ಉದಯವಾಗುತ್ತದೆ.

ಜೀವಿಯಲ್ಲಿ ವಿಕಾಸಾತ್ಮಕ ಕಾರ್ಯಗಳು ಮೂಡುವಾಗ ಅನುವಂಶಿಕವಾಗಿ ಪಡೆದ ಶಕ್ತಿ ಸಾಮರ್ಥ್ಯಗಳು ಸಹಾಯಕವಾಗುತ್ತವೆ ಹಾಗೂ ಇತಿಮಿತಿಗಳು ಮಿತಿಯನ್ನು ಸೂಚಿಸುತ್ತವೆ. ಅಂದರೆ, ಯಾವುದೇ ಕಾರ್ಯವನ್ನು ಕೈಗೊಳ್ಳುವಲ್ಲಿ ವ್ಯಕ್ತಿಯು ತನ್ನ ಶಕ್ತಿ ಸಾಮರ್ಥ್ಯಗಳನ್ನು ಮೀರಿ ಮುಂದುವರಿಯಲಾಗುವುದಿಲ್ಲ. ಅನುವಂಶೀಯತೆ ಜೀವಿಯ ವಿಕಾಸಾತ್ಮಕ ಕಾರ್ಯ ಸಾಧನೆಯ ಯಶಸ್ಸು ಹಾಗೂ ಅಪಯಶಸ್ಸಿನ ಮೇಲೆ ಬಲವಾದ ಪ್ರಭಾವ ಬೀರುತ್ತದೆ.

**೨. ಸಾಮಾಜಿಕ ಅಂಶಗಳು**

ಪ್ರತಿ ಒಂದು ಸಮಾಜವೂ ತನ್ನದೇ ಆದ ಒಂದು ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುತ್ತದೆ. ಅಂದರೆ, ಸಮಾಜಕ್ಕೆ ತನ್ನದೇ ಆದ ಸಂಪ್ರದಾಯಗಳು, ನೀತಿ ನಿಯಮಗಳು, ಕಟ್ಟುಪಾಡುಗಳು, ಭಾಷೆ, ಸಾಹಿತ್ಯ, ಆಚಾರ ವಿಚಾರಗಳು ಇರುತ್ತವೆ ಮತ್ತು ಅದು ತನ್ನ ಸದಸ್ಯರು ಇವುಗಳನ್ನು ಅನುಸರಿಸುವುದಲ್ಲದೆ, ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ರವಾನಿಸಬೇಕೆಂದು ಅಪೇಕ್ಷಿಸುತ್ತದೆ. ಹಲವು ಸಲ ಇವು ಸದಸ್ಯರ ಕೊಡುಗೆಗಳಿಂದ ಬದಲಾವಣೆಗಳಿಗೂ ಒಳಗಾಗುತ್ತವೆ.

ಈ ಸಾಮಾಜಿಕ ಅಂಶಗಳ ಅರಿವು ಮಾನವನ ವಿಕಾಸಾತ್ಮಕ ಕಾರ್ಯಗಳ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತದೆ. ಇದರಿಂದ ಅವನು ಸಮಾಜಕ್ಕೆ ಒಪ್ಪುವ ರೀತಿಯಲ್ಲಿ ಜೀವಿಸಿ, ಇತರರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಯಶಸ್ವಿಯಾಗಿ ಬಾಳಲು ಸಹಾಯವಾಗುತ್ತದೆ.

**೩. ಜೈವಿಕ ಅಂಶಗಳು**

ಮಾನವ ಶರೀರದಲ್ಲಿ ಇರುವ ಕೆಲವು ಗ್ರಂಥಿಗಳು ವಿವಿಧ ರಾಸಾಯನಿಕಗಳನ್ನು ಉತ್ಪಾದಿಸುತ್ತವೆ. ಇವುಗಳನ್ನು ರಸದೂತಗಳು (ಹಾರ್ಮೋನು) ಎನ್ನುತ್ತಾರೆ. ಇವು ದೇಹದ ವಿವಿಧ ಚಟುವಟಿಕೆಗಳನ್ನು ಸಕಾಲದಲ್ಲಿ ಸಮರ್ಥವಾಗಿ ಕೈಗೊಳ್ಳುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವುಗಳಲ್ಲಿ ವಿಕಾಸಾತ್ಮಕ ಕಾರ್ಯಗಳಿಗೆ ಸಂಬಂಧಿಸಿದಂತೆ ಪಿಟ್ಯೂಟರಿ, ಥೈರಾಯಿಡ್, ಆಡ್ರಿನಲ್, ಲೈಂಗಿಕ, ಪ್ಯಾರಾಥೈರಾಯಿಡ್, ಪಿನೀಯಲ್ ಕಾಯ, ಥೈಮಸ್ ಗ್ರಂಥಿಗಳು ಇವುಗಳು ದೈಹಿಕ, ಬೆಳವಣಿಗೆ, ಲೈಂಗಿಕ ಪರಿಪಕ್ವತೆ, ಬೌದ್ಧಿಕ ಬೆಳವಣಿಗೆ, ದೇಹದಲ್ಲಿ ವಿವಿಧ ರಾಸಾಯನಿಕಗಳ ಪ್ರಮಾಣ ಇತ್ಯಾದಿಗಳನ್ನು ನಿಯಂತ್ರಿಸುತ್ತವೆ. ಇವುಗಳ ಅಧಿಕ ಸ್ರಾವ ಅಥವಾ ಕೊರತೆ ವ್ಯಕ್ತಿಯ ವಿಕಾಸ ಕಾರ್ಯಗಳ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ಇವು ತಮ್ಮ ಕಾರ್ಯವನ್ನು ಸಕಾಲದಲ್ಲಿ ಸಮರ್ಪಕವಾಗಿ ನಿರ್ವಹಿಸುವ ಅಗತ್ಯವಿದೆ. ಇಲ್ಲದೇ ಹೋದರೆ, ವ್ಯಕ್ತಿಯು ತನ್ನ ಸಮತೋಲನ ಮತ್ತು ನಿಯಂತ್ರಣವನ್ನು ಕಳೆದುಕೊಳ್ಳುತ್ತಾನೆ.

**೪. ಪರಿಸರ**

ಪರಿಸರವೆಂದರೆ, ವ್ಯಕ್ತಿಯನ್ನು ಸುತ್ತುವರಿದಿರುವ ಭೌಗೋಳಿಕ ಅಂಶಗಳು, ವಸ್ತುಗಳು, ಶಕ್ತಿಗಳು, ಸ್ಥಿತಿಗತಿಗಳು, ಜನರು, ಪ್ರಭಾವಗಳು ಮುಂತಾದವುಗಳು. ಪರಿಸರದ ಎಲ್ಲ ಘಟಕಗಳೂ ಮಾನವನ ಜೀವನದ ಮೇಲೆ ಅನೇಕ ರೀತಿಯಲ್ಲಿ ಸತತವಾಗಿ ಪ್ರಭಾವ ಬೀರುತ್ತಿರುತ್ತವೆ. ತಾಯಿಯ ಗರ್ಭದಲ್ಲಿ ಜೀವಾಂಡದ ರೂಪದಲ್ಲಿ ಜೀವವು ಉದ್ಭವಿಸಿದ ಕ್ಷಣದಿಂದಲೇ ಮಗುವಿನ ಮೇಲೆ ಪರಿಸರದ ಪ್ರಭಾವವು ಪ್ರಾರಂಭವಾಗುತ್ತದೆ. ತಾಯಿಯ ಆರೋಗ್ಯ, ಸೇವಿಸುವ ಆಹಾರ, ಮಾನಸಿಕ ಸ್ಥಿತಿ ಇತ್ಯಾದಿಗಳು ಮಗುವಿನ ವಿಕಾಸದ ಮೇಲೆ ಪ್ರಭಾವ ಬೀರುತ್ತವೆ.

ಕುಟುಂಬವು ವ್ಯಕ್ತಿಯ ವಿಕಾಸ ಕಾರ್ಯಗಳ ಮೇಲೆ ಪ್ರಭಾವ ಬೀರುವ ಮುಖ್ಯಕಾರಕ. ತಂದೆ, ತಾಯಿ, ಕುಟುಂಬದ ಇತರ ಸದಸ್ಯರೊಂದಿಗೆ ಪ್ರಾರಂಭವಾದ ಅನ್ಯೋನ್ಯತೆಯು ನಂತರ ಹೆಂಡತಿ, ಮಕ್ಕಳು ಮುಂತಾದ ಸಂಬಂಧಗಳೊಂದಿಗೆ ಸಾಯುವವರೆವಿಗೆ ಮುಂದುವರಿಯುತ್ತದೆ, ನಂತರ ಸಖ ಸಮೂಹ, ಶಾಲೆ, ಧಾರ್ಮಿಕ ಸಂಸ್ಥೆಗಳು, ಆದರ್ಶ ವ್ಯಕ್ತಿಗಳು, ಮುಂದಾಳುಗಳು ಮುಂತಾದವರು ವ್ಯಕ್ತಿಯ ವಿಕಾಸಾತ್ಮಕ ಕಾರ್ಯಗಳ ಮೇಲೆ ಪ್ರಭಾವ ಬೀರುತ್ತಲೇ ಇರುತ್ತಾರೆ. ಅನುಕೂಲಕರ ಪರಿಸರ ದೊರೆಯದೇ ಹೋದರೆ, ವ್ಯಕ್ತಿಗೆ ತನ್ನ ಆಂತರಿಕ ಶಕ್ತಿಗಳನ್ನು ಗರಿಷ್ಠ ಮಿತಿಯವರೆವಿಗೆ ಸಾಧಿಸಲು ಸಾಧ್ಯವಾಗದೇ ಹೋಗುತ್ತದೆ. ಪರಿಸರವು ವ್ಯಕ್ತಿಯ ಅಂತಃಸಾಮರ್ಥ್ಯವನ್ನು ಗುರುತಿಸಿ ಹೊರಗೆಳೆದು ರೂಪಿಸುತ್ತದೆ ಮತ್ತು ಹರಿತಗೊಳಿಸುತ್ತದೆ. ಅಂತಃಶಕ್ತಿಯಿದ್ದು, ಪರಿಸರ ಸರಿಯಾಗಿಲ್ಲದೆ ಹೋದಾಗ ಅತೃಪ್ತಿ, ಅಸಮಾಧಾನ, ಅಸಂತೋಷಗಳು ಉಂಟಾಗಿ ಅಪಸಮಾಯೋಜನೆ, ಉದ್ವೇಗ, ವ್ಯಾಕುಲತೆಗಳು ಹೆಚ್ಚಾಗಿ ಮಾನಸಿಕ ಆರೋಗ್ಯ ಕೆಡುವ ಸಾಧ್ಯತೆಗಳಿವೆ. ಆದ್ದರಿಂದ ಅನುಕೂಲಕರವಾದ ಪರಿಸರವು ವಿಕಾಸಾತ್ಮಕ ಕಾರ್ಯಗಳ ಹೊರಹೊಮ್ಮುವಿಕೆಗೆ ಅತ್ಯಗತ್ಯವಾಗಿದೆ.

ಅನನುಕೂಲಕರ ಪರಿಸರವು ವಿಕಾಸಾತ್ಮಕ ಕಾರ್ಯಗಳ ಮೇಲೆ ನಕಾರಾತ್ಮಕ ಪರಿಣಾಮವನ್ನು ಹಾಗೂ ಅನುಕೂಲಕರ ಪರಿಸರವು ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ.

–ಹೆಚ್.ಬಿ. ಉ

## ವಿಚಾರಗೋಷ್ಠಿ

ಉನ್ನತ ಶಿಕ್ಷಣದ ಬೋಧನೆ ಕಲಿಕಾ ತಂತ್ರಗಳಲ್ಲಿ ವಿಚಾರಗೋಷ್ಠಿ ತಂತ್ರವೂ ಒಂದಾಗಿದೆ. ಇದನ್ನು ಆಯ್ಕೆ ಮಾಡಿದ ವಿಷಯದ ವಿವಿಧ ಮುಖಗಳನ್ನು ಚರ್ಚಿಸಲು ಬಳಸಲಾಗುತ್ತದೆ. ವಿಚಾರಗೋಷ್ಠಿಯು ಸಹ ಚರ್ಚಾ ಸಮೂಹದ ಒಂದು ಪ್ರಕಾರವಾಗಿದೆ. ಇಲ್ಲಿ ಇಬ್ಬರು ಅಥವಾ ಹೆಚ್ಚು ಜನರು ಸಮಸ್ಯೆಯ ವಿವಿಧ ಮುಖಗಳನ್ನು ಸಭಿಕರ ಮುಂದೆ ನಿರೂಪಿಸುವರು. ಸಮಸ್ಯೆಯನ್ನು ನಿರೂಪಿಸಿದ ನಂತರ ಗೋಷ್ಠಿಯ ಸದಸ್ಯರು ವಿವಿಧ ಪ್ರಶ್ನೆಗಳನ್ನು ಕೇಳಬಹುದು. ಸ್ಪಷ್ಟೀಕರಣ ಮಾಹಿತಿಯನ್ನು ಪಡೆಯಬಹುದು. ಗೋಷ್ಠಿಯ ಒಬ್ಬ ಸದಸ್ಯ ಅಧ್ಯಕ್ಷನಂತೆ ಕಾರ್ಯ ನಿರ್ವಹಿಸಬಹುದು. ಅವನು ಚರ್ಚೆಯ ವಿಷಯವನ್ನು ಸಭಿಕರಿಗೆ ಪರಿಚಯಿಸಬೇಕು. ಲೇಖನದ ಮಂಡನೆಯ ನಂತರ ನಡೆಯುವ ಚರ್ಚೆಯ ಸಾರಾಂಶವನ್ನು ನಿರೂಪಿಸುವುದು ಅಧ್ಯಕ್ಷರ ಕರ್ತವ್ಯವಾಗಿರುತ್ತದೆ.

### ವಿಚಾರಗೋಷ್ಠಿಯ ಅರ್ಥ

ಆಂಗ್ಲ ಪದ 'ಸಿಂಪೋಸಿಯಂ' (Symposium) ನ ಕನ್ನಡ ರೂಪಾಂತರವೇ 'ವಿಚಾರಗೋಷ್ಠಿ'. ಪ್ರಾಚೀನ ಗ್ರೀಸ್‌ನಲ್ಲಿ ಭೋಜನದ ನಂತರ ಸಂಗೀತ, ನರ್ತನ, ಸಂಭಾಷಣೆ ಮೊದಲಾದವುಗಳೊಂದಿಗೆ ನಡೆಸುತ್ತಿದ್ದ ಪಾನಗೋಷ್ಠಿಗೆ 'ಸಿಂಪೋಸಿಯಂ' ಎನ್ನುತ್ತಿದ್ದರು. ನಂತರದಲ್ಲಿ ತತ್ವಶಾಸ್ತ್ರ ಮೊದಲಾದ ಗಹನ ವಿಷಯಗಳನ್ನು ಕುರಿತು ಚರ್ಚಿಸುವ ಕೂಟ ಎಂಬ ಅರ್ಥದಲ್ಲಿ ಈ ಪದವನ್ನು ಉಪಯೋಗಿಸತೊಡಗಿದರು. ಒಂದು ವಿಷಯವನ್ನು ಕುರಿತು ಬೇರೆ ಬೇರೆ ದೃಷ್ಟಿಗಳಿಂದ ಬೇರೆ ಬೇರೆ ಲೇಖಕರು ಬರೆದ ಲೇಖನಗಳ ಸಂಗ್ರಹಕ್ಕೂ 'ಸಿಂಪೋಸಿಯಂ' ಎನ್ನುತ್ತಾರೆ. ಆದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಬೋಧನಾ–ಕಲಿಕಾ ತಂತ್ರವಾಗಿ ಈ ಪದವನ್ನು ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಲಾಗುತ್ತಿದೆ. ವೆಬ್‌ಸ್ಟರ್ ಶಬ್ದಕೋಶ 'ಸಿಂಪೋಸಿಯಂ' ಪದಕ್ಕೆ ಮೂರು ಅರ್ಥಗಳನ್ನು ಕೊಡುತ್ತದೆ. (i) ವಿಚಾರಗಳನ್ನು ಮುಕ್ತವಾಗಿ ವಿನಿಮಯ ಮಾಡಿಕೊಳ್ಳುವ ಯಾವುದೇ


Digitised by Bharatavani, CIIL

ಸಭೆ ಅಥವಾ ಸಾಮಾಜಿಕ ಕೂಟ (ii) ಒಂದು ನಿರ್ದಿಷ್ಟ ವಿಷಯದ ಬಗ್ಗೆ ಚರ್ಚಿಸಲು ಸಂಘಟಿಸಿದ ಸಮ್ಮೇಳನ (iii) ಒಂದು ನಿರ್ದಿಷ್ಟ ವಿಷಯದ ಬಗ್ಗೆ ಸಾರ್ವಜನಿಕವಾಗಿ ವ್ಯಕ್ತಗೊಂಡ ಅಭಿಪ್ರಾಯಗಳ ಸಂಗ್ರಹ.

ಆಕ್ಸ್‌ಫರ್ಡ್ ಶಬ್ದಕೋಶದ ಪ್ರಕಾರ "ವಿಚಾರಗೋಷ್ಠಿ ಎಂದರೆ ಒಂದು ನಿರ್ದಿಷ್ಟ ಶೈಕ್ಷಣಿಕ ವಿಷಯದ ಬಗ್ಗೆ ಚರ್ಚಿಸಲು ಸೇರುವ ಸಮ್ಮೇಳನ ಅಥವಾ ಸಭೆ." ಇಂದು ಈ ಅರ್ಥದಲ್ಲಿಯೇ ವಿಚಾರಗೋಷ್ಠಿ ಎನ್ನುವ ಪದವನ್ನು ಉಪಯೋಗಿಸಲಾಗುತ್ತಿದೆ.

'ಸಿಂಪೋಸಿಯಂ' ಎಂಬ ಪದವನ್ನು ಪ್ರಥಮ ಬಾರಿಗೆ ಬಳಸಿದವರು ಪ್ಲೇಟೋ. ಇವರು ಇದನ್ನು ಪ್ರಸ್ತುತ ವಿಚಾರದ ಬಗ್ಗೆ ನಡೆಸುವ ಉತ್ತಮ ಸಂಭಾಷಣೆ (ಸಂವಾದ) ಎಂದರು. ಇದರ ಇನ್ನೊಂದು ಅರ್ಥ ಸಂತೋಷವಾಗಿ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದಾಗಿದೆ ಎಂದಿದ್ದಾರೆ. ವಿಚಾರಗೋಷ್ಠಿಯನ್ನು ಇತ್ತೀಚಿಗೆ ಒಂದು ಸಮಸ್ಯೆ ಅಥವಾ ವಿಷಯದ ಕುರಿತು ಹಲವಾರು ವ್ಯಕ್ತಿಗಳು ಒಟ್ಟಿಗೆ ಸೇರಿ ಚರ್ಚಿಸುವುದು ಎನ್ನುವ ಅರ್ಥದಲ್ಲಿ ವ್ಯಾಖ್ಯಾನಿಸಲಾಗಿದೆ. ಇಲ್ಲಿ ಪ್ರತಿಯೊಬ್ಬರೂ ಸಹ ಹಂತ ಹಂತವಾಗಿ ವಿಚಾರ ಮಂಡಿಸುತ್ತಾರೆ. ಈ ಸಂದರ್ಭದಲ್ಲಿ ವಿಷಯದಲ್ಲಿ ಪ್ರಭುತ್ವ ಹೊಂದಿರುವವರು, ವಿಷಯವನ್ನು ಸಮಗ್ರವಾಗಿ ಅರಿತವರು ಅದರ ಬಗ್ಗೆ ಚರ್ಚೆಯಲ್ಲಿ ತೊಡಗಿ ವಿಚಾರ ವ್ಯಕ್ತಪಡಿಸುತ್ತಾರೆ.

ವಿಚಾರಗೋಷ್ಠಿಯ ಅರ್ಥವನ್ನು ಈ ಕೆಳಕಂಡ ವ್ಯಾಖ್ಯಾನಗಳಿಂದ ಮತ್ತಷ್ಟು ಸ್ಪಷ್ಟಗೊಳಿಸಬಹುದು.

ಯೋಜನೆಗಳು, ಮೌಲ್ಯ ತೀರ್ಮಾನ ಅಥವಾ ಅರ್ಥೈಸುವಿಕೆ, ನಿರ್ಧಾರಗಳನ್ನು ಒಳಗೊಂಡಂತಹ, ಆಸಕ್ತ ಕೇಳುಗರನ್ನು ಹೊಂದಿರುವ, ಸಾಮಾನ್ಯವಾಗಿ ವಿಚಾರಗಳನ್ನು ವಿಮರ್ಶಿಸುವ, ಹಲವಾರು ಜನರು ಮುಕ್ತವಾಗಿ ವಿಚಾರ ವಿನಿಮಯ ಮಾಡಿಕೊಳ್ಳುವ ಸಭೆಯನ್ನು ವಿಚಾರಗೋಷ್ಠಿ ಎನ್ನಬಹುದು.

**ವಿಚಾರಗೋಷ್ಠಿಯ ಉದ್ದೇಶಗಳು**

1. ಸಮಸ್ಯೆಯನ್ನು ಗುರುತಿಸುವ ಮತ್ತು ಅರ್ಥಮಾಡಿಕೊಳ್ಳುವ ಎರಡು ವಿಭಿನ್ನ ದೃಷ್ಟಿಕೋನಗಳನ್ನು ಅರ್ಥವಾಡಿಕೊಳ್ಳುವುದು / ಅರಿಯುವುದು.
2. ಸಮಸ್ಯೆಯ ಬಗ್ಗೆ ತೀರ್ಮಾನಿಸುವ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳುವುದು.
3. ಸಮಸ್ಯೆಯ ಬಗ್ಗೆ ಮೌಲ್ಯ ನೀಡುವುದು ಮತ್ತು ಭಾವನೆಗಳನ್ನು ಬೆಳೆಸಿಕೊಳ್ಳುವುದು.
4. ವಿಷಯದ ಬಗ್ಗೆ ಹೊರಹೊಮ್ಮುವ ಸಮಸ್ಯೆಯ ಬಗ್ಗೆ ಉತ್ತಮ ವಿಚಾರ ವ್ಯಕ್ತಪಡಿಸುವುದು.

**ವಿಚಾರಗೋಷ್ಠಿಯ ತಂತ್ರಗಳು**

ವಿಚಾರಗೋಷ್ಠಿಯು ಚರ್ಚೆಯ ಒಂದು ಪ್ರಮುಖ ತಂತ್ರವಾಗಿದ್ದು ಇದು ಎರಡು ಅಥವಾ ಹೆಚ್ಚು ಭಾಷಣಕಾರರನ್ನು ಒಳಗೊಂಡಿರುತ್ತದೆ. ಇದು 10 ರಿಂದ 20 ನಿಮಿಷವಿದ್ದು ಸಮಸ್ಯೆಗೆ ಅಥವಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತವಾಗಿರುವ ರಾಷ್ಟ್ರೀಯ, ಅಂತಾರಾಷ್ಟ್ರೀಯ ಯೋಜನೆಗಳು, ಕಾರ್ಯಕ್ರಮಗಳು, ಹೇಳಿಕೆಗಳು, ಪತ್ರಿಕಾ ಪ್ರಕಟಣೆಗಳು ಮುಂತಾದವನ್ನು ಕುರಿತು ತಮ್ಮದೇ ಆದ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸುವ ಉಪಕ್ರಮವಾಗಿದೆ. ಇದರಲ್ಲಿ ಕೇಳುಗರ ಅಥವಾ ವೀಕ್ಷಕರ ಪ್ರಶ್ನಾರೂಪದಲ್ಲಾಗಲೀ ಅಥವಾ ಟೀಕೆಯ ರೂಪದಲ್ಲಾಗಲೀ ವಿಚಾರವನ್ನು ಮುಕ್ತವಾಗಿ ವ್ಯಕ್ತಪಡಿಸಬಹುದಾಗಿದೆ. ಇಲ್ಲಿನ ಮಾತುಗಳು ಪ್ರಸ್ತುತದ ಪರಿಸ್ಥಿತಿಗಳಾಗಿದ್ದು ವಾದದ ರೂಪದಲ್ಲಾಗಲೀ, ಮಾಹಿತಿ ನೀಡುವ ರೂಪದಲ್ಲಾಗಲೀ ಇರಬಹುದು ಅಥವಾ ಪ್ರಚೋದನಕಾರಿಯಾಗಿಯೂ ಆಗಬಹುದು ಇವೆಲ್ಲವೂ ಸಹ ಒಂದು ಕ್ರಮದಲ್ಲಿ ನಡೆಯುತ್ತವೆ. ಅಧ್ಯಕ್ಷರು ವಿಷಯದ ವಿಚಾರಗೋಷ್ಠಿಯನ್ನು ಪರಿಚಯಿಸಿ ಪ್ರಾರಂಭಿಸಿದಾಗ ಕೆಲವೊಂದು ಸಲಹೆಗಳು ಮತ್ತು ವಿಚಾರದ ಮಹತ್ವವನ್ನು ಸಾಮಾನ್ಯ ಉಪಕ್ರಮ ರೂಪದಲ್ಲಿ ನೀಡುತ್ತಾರೆ. ವಿಚಾರಗೋಷ್ಠಿಯು ಮಾಹಿತಿಯನ್ನು ಸುಲಭವಾಗಿ ಪಡೆಯುವ ಅತ್ಯುತ್ತಮ ತಂತ್ರವಾಗಿದ್ದು ಕೇಳುಗರು ಸಾಮಾನ್ಯವಾಗಿ ನೀತಿ, ಮೌಲ್ಯಗಳನ್ನು ಅರ್ಥಮಾಡಿಕೊಂಡು ಅಂತಿಮ ತೀರ್ಮಾನಕ್ಕೆ ಸುಲಭವಾಗಿ ಬರಲು ಸಹಕಾರಿಯಾಗುತ್ತದೆ.

ವಿಚಾರಗೋಷ್ಠಿಯಲ್ಲಿ ವಿಚಾರವನ್ನು ಸ್ಪಷ್ಟವಾಗಿ ತಿಳಿಯದೆ ಚರ್ಚೆಯಲ್ಲಿ ತೊಡಗಲು ಸಾಧ್ಯವಾಗುವುದಿಲ್ಲ. ಏಕೆಂದರೆ ಚರ್ಚೆಯನ್ನು ವಿಚಾರಗೋಷ್ಠಿಯಲ್ಲಿರುವ ಎಲ್ಲರೂ ಒಂದು ನಿರ್ದಿಷ್ಟ ವಿಷಯವನ್ನು ಮಂಡಿಸಿದ ಮೇಲೆ ಮಾಡಬೇಕಾಗುತ್ತದೆ. ಇಲ್ಲಿ ಗುಂಪಿನ ಎಲ್ಲರೂ ಏಕರೀತಿಯಲ್ಲಿ ಮಾತಿನ ಚಕಮಕಿಯಲ್ಲಿ ತೊಡಗುತ್ತಾರೆ. ಚರ್ಚಾಗೋಷ್ಠಿಯಲ್ಲಿ ಎರಡು ಗುಂಪುಗಳಿದ್ದು ಒಂದು ಮತ್ತೊಂದರೊಡನೆ ವಿಚಾರ ಮಂಡನೆಯಲ್ಲಿ ತೊಡಗುತ್ತದೆ. ಇವೆರಡರ ನಡುವೆ ಒಬ್ಬ ವ್ಯಕ್ತಿ ಅಧ್ಯಕ್ಷನ ಸ್ಥಾನದಲ್ಲಿ ಎರಡೂ ಗುಂಪುಗಳನ್ನು ನಿಯಂತ್ರಿಸುತ್ತಿರುತ್ತಾನೆ. ಇಲ್ಲದಿದ್ದರೆ ಎರಡೂ ಗುಂಪುಗಳೂ ಸಹ ಚರ್ಚೆಯಲ್ಲಿ ಅತಿರೇಕಕ್ಕೆ ತಲುಪಿ ಸಂಘರ್ಷವಾಗುವ ಸಂದರ್ಭಗಳೇ ಹೆಚ್ಚಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಎರಡೂ ಗುಂಪಿನ ವಿಚಾರಗಳು ವಿಷಯದ ವ್ಯಾಪ್ತಿ ಮೀರಿದಾಗ ಅದನ್ನು ಮುಖ್ಯವಾಹಿನಿಗೆ ತರುವ ಕಾರ್ಯವನ್ನು ಅಧ್ಯಕ್ಷರು ನಿರ್ವಹಿಸುತ್ತಾರೆ ಮತ್ತು ವಿಚಾರಗೋಷ್ಠಿಯಲ್ಲಿ ಶಾಂತಿ ಕಾಪಾಡುವಂತೆ ನೋಡಿಕೊಳ್ಳುತ್ತಾರೆ. ಕೊನೆಗೆ ಚರ್ಚೆಯ ಸಾರಾಂಶವನ್ನು ನಿರೂಪಿಸುವುದು ಅವರ ಆದ್ಯ ಕರ್ತವ್ಯವಾಗಿರುತ್ತದೆ.

**ವಿಚಾರಗೋಷ್ಠಿಯಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು**

ವಿಚಾರಗೋಷ್ಠಿಯಲ್ಲಿ ಈ ಕೆಳಗಿನ ಮೂರು ಮುನ್ನೆಚ್ಚರಿಕೆಯ ನಿಯಮಗಳನ್ನು ಅನುಸರಿಸಬೇಕಾಗುತ್ತದೆ.

1. ಮೊದಲನೆಯದಾಗಿ, ವಿಚಾರಗೋಷ್ಠಿಯಲ್ಲಿ ಅಧ್ಯಕ್ಷರು ಮಾತನಾಡಲು ಪೂರ್ವಸಿದ್ಧತೆ ಮಾಡಿಕೊಂಡಿರಬೇಕು. ಅವರಿಗೆ ನೀತಿ, ನಿಯಮ, ಮಾತಿನ ದಿಶೆ, ರೀತಿ ಮುಂತಾದವುಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಅರಿವಿರಬೇಕು ಮತ್ತು ಯಾವ ಉದ್ದೇಶವನ್ನಿಟ್ಟುಕೊಂಡು ವಿಚಾರಗೋಷ್ಠಿ ಏರ್ಪಾಡಾಗಿದೆ ಎಂಬುದರ ಬಗ್ಗೆ ತಿಳಿದಿರುವುದರ ಜೊತೆಗೆ ವಿಷಯದ ಹಿನ್ನೆಲೆಯನ್ನು ಅವರು ತಿಳಿದಿರಬೇಕು ಮತ್ತು ಸಭಿಕರು ವಿಷಯದ ಬಗ್ಗೆ ಯಾವ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಬಹುದು ಎಂಬುದರ ಬಗ್ಗೆ ಊಹಿಸಿ ಅದನ್ನು ನಿಭಾಯಿಸಲು ಪೂರ್ವಸಿದ್ಧತೆ ಮಾಡಿಕೊಂಡಿರಬೇಕಾಗುತ್ತದೆ.

2. ಅಧ್ಯಕ್ಷರು ಸಮಸ್ಯೆಯ ಮಹತ್ವದ ಬಗ್ಗೆ ಸಮಗ್ರವಾಗಿ ತಿಳಿದಿರಬೇಕಾಗುತ್ತದೆ. ಜೊತೆಗೆ ಯಾವ ಸಮಸ್ಯೆಯು ಅತ್ಯುತ್ತಮವಾದುದು ಮತ್ತು ಎಲ್ಲಿ ಆ ಸಮಸ್ಯೆಯ ಬಗ್ಗೆ ತಪ್ಪು ವಿವರಣೆ ಮತ್ತು ಭಿನ್ನಾಭಿಪ್ರಾಯ ಬರುತ್ತದೆಯೋ ಅದನ್ನು ಸ್ಪಷ್ಟಪಡಿಸಿ ಬಗೆಹರಿಸುವ ತಂತ್ರ ತಿಳಿದಿರಬೇಕು. ವಿಷಯದ ಮುಖ್ಯಾಂಶಗಳ ಕಡೆಗೆ ಹೆಚ್ಚು ಮಹತ್ವ ನೀಡಿ ಆ ಅಂಶಗಳನ್ನು ಗುರುತಿಸಿ ಬೆಳೆಸಬೇಕಾಗುತ್ತದೆ.

Digitised by Bharatavani, CIIL

3. ಅಧ್ಯಕ್ಷರು ಎಲ್ಲಾ ಸನ್ನಿವೇಶಗಳಲ್ಲಿಯೂ ಚರ್ಚೆಯನ್ನು ಜಾಗರೂಕತೆಯಿಂದ ನಿಯಂತ್ರಿಸಬೇಕಾಗುತ್ತದೆ. ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆಗೆ ಸೂಕ್ತ ಮಾರ್ಗದರ್ಶನ ನೀಡಬೇಕಾಗುತ್ತದೆ.

–ಎನ್.ಡಿ. ಮಂ

## ವಿಚಾರ ಸಂಕಿರಣ

ಆಧುನಿಕ ಶಿಕ್ಷಣ ತಜ್ಞರು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಚರ್ಚಾವಿಧಾನವನ್ನು ಬಳಕೆಗೆ ತಂದರು. ಈ ವಿಧಾನದಲ್ಲಿ ಎಲ್ಲರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸ್ವಾತಂತ್ರ್ಯವಿದೆ. ಒಂದು ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ದೃಷ್ಟಿಕೋನಗಳಿಂದ ವಿಚಾರಗಳನ್ನು ಪರಿಶೀಲನೆ ಮಾಡಿ ಚರ್ಚಿಸಿ, ವಿಶ್ಲೇಷಿಸಿ, ಹೋಲಿಸಿ ಮತ್ತು ಮೌಲ್ಯಮಾಪನ ಮಾಡಿ ನಿರ್ಣಯ ಕೈಗೊಳ್ಳುವುದರಿಂದ ಪರಸ್ಪರರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಸಹಾಯಕವಾಗುವುದು. ಚರ್ಚೆ ವಿದ್ಯಾರ್ಥಿಗಳಲ್ಲಿ ಜ್ಞಾನಾತ್ಮಕ ಮತ್ತು ಸಂವಹನ ಕೌಶಲಗಳನ್ನು ಬೆಳೆಸುವುದರಿಂದ ಉನ್ನತ ಶಿಕ್ಷಣ ಹಂತದಲ್ಲಿ ಇದಕ್ಕೆ ಹೆಚ್ಚಿನ ಮಹತ್ವವಿದೆ.

ಪಾರಸ್ಪರಿಕ ಚರ್ಚೆ ಹಾಗೂ ವಿಚಾರ ವಿನಿಮಯವನ್ನು ಉಪಯೋಗಿಸುವ ಅನೇಕ ತಂತ್ರಗಳು ರೂಪಿತವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಪ್ರಶ್ನೋತ್ತರ ತಂತ್ರ, (Discussion Technique) ಮಸ್ತಿಷ್ಕ ಆಂದೋಲನ (Brain starming), ಬಜ್ ಸತ್ರಗಳು (Buzz Sessions), ಪ್ಯಾನಲ್ ಚರ್ಚೆಗಳು (Panel Discussion), ವಿಚಾರ ಸಂಕಿರಣಗಳು (Seminars), ವಿಚಾರಗೋಷ್ಠಿ (Symposium) ಮತ್ತು ಕಾರ್ಯಾಗಾರಗಳು (Workshops).

### ಅರ್ಥ

ಸೆಮಿನಾರ್ ಎನ್ನುವ ಇಂಗ್ಲಿಷ್ ಪದದ ಪರ್ಯಾಯ ಕನ್ನಡ ಪದವೇ ವಿಚಾರ ಸಂಕಿರಣ. ವೆಬ್‌ಸ್ಟರ್ ಶಬ್ದಕೋಶದಲ್ಲಿ ಸೆಮಿನಾರ್ ಪದಕ್ಕೆ ಈ ಅರ್ಥಗಳಿವೆ (i) ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಮೇಲ್ವಿಚಾರಿತ ಸಮೂಹ ಒಂದು ಸಂಶೋಧನೆ ಮಾಡುವುದು ಅಥವಾ ಉನ್ನತ ಅಧ್ಯಯನ ಮಾಡುವುದು (ii) ಇಂಥ ವಿದ್ಯಾರ್ಥಿ ಸಮೂಹಕ್ಕೆ ಮಾಡುವ ಶೈಕ್ಷಣಿಕ ಕಾರ್ಯಕ್ರಮ ಅಥವಾ ಅದರ ತರಗತಿಗಳು (iii) ಇದೇ ರೀತಿಯ ಸಮೂಹ ಚರ್ಚೆ. 'ಸೆಮಿನಾರ್' ಪದ 'ಸೆಮಿನರಿ' ಎಂದು ಪದದಿಂದ ರೂಪಿತವಾಗಿದೆ. ಈ ಪದವನ್ನು 'ಸ್ಕೂಲ್' (ಶಾಲೆ) ಎಂಬ ಅರ್ಥದಲ್ಲಿ ಉಪಯೋಗಿಸಲಾಗುತ್ತಿತ್ತು. ಆಕ್ಸ್‌ಫರ್ಡ್ ಶಬ್ದಕೋಶದಲ್ಲಿ 'ಸೆಮಿನಾರ್' ಪದಕ್ಕೆ ಇನ್ನೂ ಎರಡು ಅರ್ಥಗಳಿವೆ (i) ಚರ್ಚೆಗೆ ಅಥವಾ ತರಬೇತಿಗೆ ಸೇರುವ ಒಂದು ಸಭೆ (ii) ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಸಮೂಹವೊಂದು ಅಧ್ಯಾಪಕರೊಂದಿಗೆ ವಿಷಯಗಳನ್ನು ಚರ್ಚಿಸಲು ಸೇರುವುದು.

ಒಂದು ಬೋಧನಾ ತಂತ್ರವಾಗಿ ವಿಚಾರ ಸಂಕಿರಣವನ್ನು ಈ ಮುಂದಿನ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ.

ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಜನರು ಒಂದು ನಿರ್ದಿಷ್ಟ ವಿಷಯವನ್ನು ಕುರಿತು ತಮ್ಮ ನಿಲುವುಗಳನ್ನು ಪ್ರಸ್ತುತಪಡಿಸಿ ನಂತರ ಚರ್ಚಿಸುವುದೇ ವಿಚಾರ ಸಂಕಿರಣವಾಗಿದೆ. ಈ ತಂತ್ರದಲ್ಲಿ ವಿಚಾರವನ್ನು ಮಂಡಿಸುವವರು ಮುಂಚಿತವಾಗಿ ಆ ವಿಷಯದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಪರಿಪೂರ್ಣತೆಯನ್ನು ಪಡೆದುಕೊಂಡಿರಬೇಕಾಗುತ್ತದೆ. ಅಷ್ಟೇ ಅಲ್ಲದೆ ವಿಷಯಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿದ ಮಾಹಿತಿಯನ್ನು ಕ್ರಮಬದ್ಧವಾಗಿ ಸಂಘಟಿಸಬೇಕಾಗುತ್ತದೆ. ನಂತರ ಅಂಥ ಲೇಖನದ ಒಂದು ಪ್ರತಿಯನ್ನು ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಸದಸ್ಯರಿಗೆ ವಿಚಾರ ಮಂಡಿಸುವುದಕ್ಕಿಂತ ಮೊದಲೇ ನೀಡಬೇಕಾಗುತ್ತದೆ. ಇವರಿಂದ ಸದಸ್ಯರು ಮಂಡಿಸುವ ವಿಷಯದ ಬಗ್ಗೆ ತಿಳಿದುಕೊಂಡು ನಂತರ ಉತ್ತಮವಾಗಿ ಚರ್ಚಿಸಲು ಮತ್ತು ಹೆಚ್ಚಿನ ವಿಚಾರ ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ.

ವಿಚಾರ ಸಂಕಿರಣವು ಉನ್ನತ ಕಲಿಕೆಯ ಹಂತದಲ್ಲಿ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರವನ್ನು ಮಂಡಿಸಬಹುದಾದುದರಿಂದ ಕೆಲವೊಮ್ಮೆ ಸಂಕೀರ್ಣವಾದ ಅಥವಾ ತೊಡಕಾದ ವಿಷಯವನ್ನು ಕುರಿತು ವಿಚಾರ ಸಂಕಿರಣದಲ್ಲಿ ನೆರೆದಿರುವ ಸಭಿಕರು ಸ್ಪಷ್ಟತೆಯನ್ನು ಕೇಳಿದಾಗ ಅದನ್ನು ಸ್ಪಷ್ಟೀಕರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಚರ್ಚೆಯೂ ಸಹ ನಡೆಯುತ್ತದೆ.

### ವಿಚಾರ ಸಂಕಿರಣ ತಂತ್ರದ ಉದ್ದೇಶಗಳು

ವಿಚಾರ ಸಂಕಿರಣ ತಂತ್ರದ ಮುಖ್ಯ ಉದ್ದೇಶ ಉನ್ನತ ಶಿಕ್ಷಣ. ವಿದ್ಯಾರ್ಥಿಗಳಲ್ಲಿ ಜ್ಞಾನ ಮತ್ತು ಸಂವಹನ ಕೌಶಲಗಳನ್ನು ಬೆಳೆಸುವುದಾಗಿದೆ. ಇದರ ಪ್ರಮುಖ ಉದ್ದೇಶಗಳನ್ನು ಈ ಕೆಳಕಂಡಂತೆ ನಮೂದಿಸಬಹುದಾಗಿದೆ.

### ಜ್ಞಾನಾತ್ಮಕ ಉದ್ದೇಶಗಳು

ಜ್ಞಾನಾತ್ಮಕವಾಗಿ ಉನ್ನತ ಕಲಿಕಾ ಸನ್ನಿವೇಶವನ್ನು ಸೃಷ್ಟಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಇದರ ಪ್ರಮುಖಾಂಶಗಳೆಂದರೆ,

1. ವಿಶ್ಲೇಷಿಸುವಿಕೆ, ಸಂಶ್ಲೇಷಿಸುವಿಕೆ, ಮೌಲ್ಯಮಾಪನ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುವಂತಹ ಉನ್ನತ ಜ್ಞಾನಾತ್ಮಕ ಸಾಮರ್ಥ್ಯವನ್ನು ಬೆಳೆಸುವುದು.
2. ಮೌಲ್ಯೀಕರಣ, ಸಂಘಟನೆ ಮತ್ತು ಗುಣಲಕ್ಷಣಕ್ಕನುಗುಣವಾಗಿ ಪರಿಸ್ಥಿತಿಯನ್ನು ಬಹುಬೇಗ ಪರೀಕ್ಷಿಸುವ ಮತ್ತು ಅದಕ್ಕೆ ಪ್ರತಿಕ್ರಿಯಿಸುವಂತಹ ಹಾಗೂ ಹೊಂದಾಣಿಕಾ ಮನೋಭಾವವನ್ನು ಬೆಳೆಸುವಂತಹ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
3. ಇತರರ ವಿಚಾರವಂತಿಕೆಯನ್ನು ಅರ್ಥಮಾಡಿಕೊಳ್ಳುವ ಮತ್ತು ಪರಿಣಾಮಕಾರಿಯಾಗಿ ವ್ಯಾಖ್ಯಾನಿಸುವ ಸಾಮರ್ಥ್ಯವನ್ನು ಬೆಳೆಸುವುದು.
4. ಇತರರ ವಿಚಾರವನ್ನು ಸ್ಪಷ್ಟೀಕರಿಸುವ ಮತ್ತು ಅದಕ್ಕೆ ಪೂರಕವಾದ ವಿಚಾರಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ಬೆಳೆಸುವುದು.

### ಸಂವೇಗಾತ್ಮಕ ಉದ್ದೇಶಗಳು

ಸಂವೇಗಾತ್ಮಕ ವಲಯಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣದ ಉದ್ದೇಶಗಳು–

1. ಇತರರ ವಿಚಾರ ಮತ್ತು ಭಾವನೆಗಳಿಗೆ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಬೆಳೆಸುವುದು.
2. ಇತರರ ವಿಚಾರ ಮತ್ತು ಭಾವನೆಗಳಿಗೆ ಗೌರವ ಕೊಡುವುದು ಮತ್ತು ಸಹೋದ್ಯೋಗಿಗಳೊಂದಿಗೆ ಸಹಕಾರ ಭಾವನೆಯನ್ನು ವೃದ್ಧಿಸುವಂತೆ ಮಾಡುವುದು.
3. ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರಲ್ಲಿ ಚರ್ಚೆಯಲ್ಲಿ ಭಾಗವಹಿಸುವಾಗ ಸಂವೇಗಾತ್ಮಕ ಸ್ಥಿರತೆಯನ್ನು ಬೆಳೆಸುವುದು ಹಾಗೂ ಸಂವೇಗಗಳನ್ನು ನಿಯಂತ್ರಿಸುವುದು.


Digitised by Bharatavani, CIIL

4. ಪ್ರಶ್ನಿಸುವ ಮತ್ತು ಉತ್ತರಿಸುವಲ್ಲಿ ಸೌಜನ್ಯಪೂರ್ಣವಾಗಿ ವರ್ತಿಸುವ ಮನೋಭಾವ ಮೂಡಿಸುವುದು.

**ಅಭಿವ್ಯಕ್ತಿ, ಗ್ರಹಿಕೆ ಕೌಶಲಗಳು**

1. ಭಾಷೆಯನ್ನು ಸೂಕ್ತ ರೀತಿಯಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಿ ಮಾಡುವ ಕೌಶಲ ಬೆಳೆಸುವುದು.
2. ಸಂದರ್ಭೋಚಿತವಾಗಿ ಸೌಜನ್ಯಪೂರ್ಣ ಪದಗಳನ್ನು ಬೆಳೆಸುವ ಕೌಶಲಗಳನ್ನು ರೂಪಿಸುವುದು.
3. ಬೇರೆಯವರ ಹೇಳಿಕೆಯನ್ನು ಶಾಂತವಾಗಿ ಆಲಿಸುವುದು.
4. ಬೇರೆಯವರ ವಿವರಣೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು.

**ವಿಚಾರ ಸಂಕಿರಣದ ಸಂಘಟನೆ**

ಯಾವುದೇ ಒಂದು ವಿಚಾರ ಸಂಕಿರಣದ ಸಂಘಟನೆಯಲ್ಲಿ ಈ ಕೆಳಕಂಡ ಪಾತ್ರಗಳನ್ನು ನಿರ್ವಹಿಸುವವರು ಇರಬೇಕಾಗುತ್ತದೆ.

1. ಸಂಘಟನಾಕಾರರು
2. ಅಧ್ಯಕ್ಷರು
3. ವಿಚಾರ ಮಂಡನೆ ಮಾಡುವವರು
4. ಭಾಗವಹಿಸುವವರು ಅಥವಾ ಪಾಲ್ಗೊಳ್ಳುವವರು ಅಥವಾ ಸದಸ್ಯರು.
5. ವೀಕ್ಷಕರು ಅಥವಾ ನಿರೀಕ್ಷಕರು.

1. **ಸಂಘಟನಾಕಾರರ ಪಾತ್ರ**

ವಿಚಾರ ಸಂಕಿರಣಕ್ಕೆ ಸಂಬಂಧಪಟ್ಟಂತಹ ಕಾರ್ಯಕ್ರಮವನ್ನು ಸಿದ್ಧಪಡಿಸುವ ಮತ್ತು ಯೋಜಿಸುವ ಜವಾಬ್ದಾರಿಯು ಸಂಘಟನಾಕಾರರಿಗೆ ಸೇರಿರುತ್ತದೆ. ಇವರು ವಿಚಾರ ಸಂಕಿರಣಕ್ಕೆ ಯಾವ ವಿಷಯವನ್ನು ಆಯ್ಕೆ ಮಾಡಬೇಕು ಮತ್ತು ಆಯ್ಕೆ ಮಾಡಿದ ವಿಷಯದ ವಿವಿಧ ಆಯಾಮಗಳ ಬಗ್ಗೆ ಸ್ಪರ್ಧಿಗಳು ಯಾವ ಯಾವ ದೃಷ್ಟಿಕೋನಗಳಲ್ಲಿ ವಿಚಾರ ಮಂಡಿಸಬೇಕು ಹಾಗೂ ವಿಷಯದ ಜೊತೆಗೆ ಅಂತರ್ ಸಂಬಂಧವನ್ನು ಹೊಂದಿರುವಂತಹ ಯಾವ ಯಾವ ಉಪವಿಚಾರಗಳನ್ನು ಚರ್ಚಿಸಬೇಕು ಎಂಬುದರ ಬಗ್ಗೆ ನಿಖರವಾದ ಮತ್ತು ಸ್ಪಷ್ಟವಾದ ಸೂಕ್ತ ಮಾಹಿತಿ ನೀಡುವಂತಿರಬೇಕು. ಅಷ್ಟೇ ಅಲ್ಲದೆ ವಿಚಾರ ಸಂಕಿರಣದ ದಿನಾಂಕ, ಸ್ಥಳ, ಸಮಯವನ್ನೂ ಸಹ ನಿಗದಿಪಡಿಸಬೇಕಾಗುತ್ತದೆ. ಹಾಗೆಯೇ ವಿಚಾರ ಸಂಕಿರಣದ ಸಂಚಾಲಕರ ಹೆಸರನ್ನೂ ಸಹ ಇವರೇ ಸೂಚಿಸಬೇಕಾಗುತ್ತದೆ. ಒಟ್ಟಿನಲ್ಲಿ ವಿಚಾರ ಸಂಕಿರಣದ ಸಂಪೂರ್ಣ ಯೋಜನೆಯನ್ನು ತಯಾರಿಸುವ ಜವಾಬ್ದಾರಿ ಇವರದ್ದಾಗಿರುತ್ತದೆ.

2. **ಅಧ್ಯಕ್ಷರ ಪಾತ್ರ**

ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಸೂಚಿಸಲಾಗುತ್ತದೆ. ಇವರು ವಿಚಾರ ಸಂಕಿರಣದಲ್ಲಿ ವಿಷಯ ಮಂಡಿಸುವವರ ಹೆಸರನ್ನು ಕರೆಯುವವರಾಗಿರುತ್ತಾರೆ ಹಾಗೂ ಯಾರು ಯಾವ ಸಮಯದಲ್ಲಿ ವಿಷಯ ಮಂಡಿಸಬೇಕು ಎಂಬುದನ್ನು ಅವರು ಆಯ್ಕೆ ಮಾಡಿಕೊಂಡು ಸಿದ್ಧಪಡಿಸಿರುವ ಲೇಖನಗಳ ಶೀರ್ಷಿಕೆಯ ಸಹಾಯದಿಂದ ನಿರ್ಧರಿಸುತ್ತಾರೆ. ಅಷ್ಟೇ ಅಲ್ಲದೆ ಇವರಿಗೆ ವಿಚಾರ ಸಂಕಿರಣದಲ್ಲಿ ವಿಚಾರ ಮಂಡಿಸುವವರ, ಪಾಲ್ಗೊಳ್ಳುವವರ ಸ್ಥಾನಮಾನ ಮತ್ತು ಕರ್ತವ್ಯಗಳು ಮತ್ತು ಹಕ್ಕುಗಳ ಬಗ್ಗೆ ಹೆಚ್ಚಿನ ಜವಾಬ್ದಾರಿ ಇರಬೇಕಾಗುತ್ತದೆ.

ವಾಸ್ತವಿಕವಾಗಿ ವಿಚಾರ ಸಂಕಿರಣದ ಚಟುವಟಿಕೆಗಳು ಅಧ್ಯಕ್ಷರನ್ನು ಅವಲಂಬಿಸಿರುವುದರಿಂದ ಇವರು ಇಡೀ ಕಾರ್ಯಕ್ರಮವನ್ನು ನಿರ್ದೇಶಿಸುವ ಹೊಣೆಗಾರಿಕೆ ಹೊತ್ತಿರುತ್ತಾರೆ. ಹಾಗೆಯೇ ಪಾಲ್ಗೊಂಡಿರುವವರು ಚರ್ಚೆಯಲ್ಲಿ ತೊಡಗಲು ಇವರು ಪ್ರೋತ್ಸಾಹ ನೀಡುತ್ತಾರೆ ಮತ್ತು ಚರ್ಚಿಸುವ ವಿಷಯಕ್ಕೆ ಸೂಕ್ತ ಸಲಹೆಯನ್ನು ನೀಡುವುದರೊಂದಿಗೆ ಪ್ರಸ್ತುತ ಚರ್ಚಿಸುತ್ತಿರುವ ವಿಷಯವು ವಿಚಾರ ಸಂಕಿರಣದ ವಿಷಯಕ್ಕೆ ಸೂಕ್ತವೇ ಎಂಬುದನ್ನು ಸಹ ಪರಿಶೀಲಿಸುವುದಲ್ಲದೆ ಭಾಗವಹಿಸಿದ ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುವ ಜವಾಬ್ದಾರಿ ವಹಿಸಬೇಕಾಗುತ್ತದೆ. ಕೊನೆಗೆ ವಿಷಯದ ಬಗ್ಗೆ ವಿಚಾರ ಮಂಡಿಸುವ ವೇಳೆಯಲ್ಲಿ ಮತ್ತು ಚರ್ಚೆಯಲ್ಲಿ ಮಂಡಿಸಿದ ಪ್ರಮುಖಾಂಶಗಳನ್ನೆಲ್ಲಾ ಇವರು ಸಾರಾಂಶೀಕರಿಸಬೇಕು. ವಿಚಾರ ಸಂಕಿರಣದಲ್ಲಿ ಒಂದು ವೇಳೆ ವಿವಾದಗಳು ಉಂಟಾದಲ್ಲಿ ಅವುಗಳನ್ನು ಅಧ್ಯಕ್ಷರು ಚಾಕಚಕ್ಯತೆಯಿಂದ ನಿಭಾಯಿಸಬೇಕಾಗುತ್ತದೆ.

3. **ಮುಖ್ಯ ಭಾಷಣಕಾರರ ಪಾತ್ರ**

ವಿಚಾರ ಸಂಕಿರಣವು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಸಂಘಟನಾಕಾರರು ನೀಡಿರುವ ವಿಷಯವನ್ನು ಕುರಿತು ಒಂದು ದೀರ್ಘ ಭಾಷಣ ಮಾಡುವವರನ್ನು ಮುಖ್ಯ ಭಾಷಣಕಾರರು ಎಂದು ಕರೆಯುತ್ತೇವೆ. ಇವರು ಚರ್ಚೆಯ ವಿಷಯವನ್ನು ಸಾರಾಂಶೀಕರಿಸಿ ಭಾಗವಹಿಸುವವರೆಲ್ಲರಿಗೂ ಹಂಚಬೇಕಾಗುತ್ತದೆ. ಹಾಗೆಯೇ ಇತರ ಭಾಷಣಕಾರರೂ ಸಹ ಅದೇ ದೃಷ್ಟಿಕೋನವನ್ನು ಇಟ್ಟುಕೊಂಡು ವಿಚಾರ ಮಂಡಿಸಬೇಕಾಗುತ್ತದೆ. ಇದು ಕೊನೆಗೆ ದೀರ್ಘ ಚರ್ಚೆಗೆ ಅವಕಾಶ ಮಾಡಿಕೊಡುತ್ತದೆ. ಆ ಸಂದರ್ಭದಲ್ಲಿ ಭಾಷಣಕಾರರು, ಭಾಗವಹಿಸುವವರು ಕೇಳುವ ಪ್ರಶ್ನೆಗೆ ಸಮಜಾಯಿಸಿ ನೀಡಿ ಸಮರ್ಥಿಸಿಕೊಳ್ಳುವವರಾಗಿರಬೇಕು. ಇವರು ಇತರರ ವಿಚಾರಗಳನ್ನು ವಿಮರ್ಶಿಸುವ ಬೌದ್ಧಿಕ ಸಾಮರ್ಥ್ಯ, ಪರಿಣತಿ, ಅನುಭವ ಹೊಂದಿದವರಾಗಿರಬೇಕಾಗುತ್ತದೆ.

4. **ಭಾಗವಹಿಸುವವರ ಪಾತ್ರ**

ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಆ ವಿಷಯದ ಬಗೆಗೆ ಹೆಚ್ಚು ಜ್ಞಾನವುಳ್ಳವರಾಗಿರಬೇಕು. ವಿಚಾರ ಮಂಡನೆಯನ್ನು ಕುರಿತು ಅಧ್ಯಕ್ಷರು ಮುಖ್ಯ ಭಾಷಣಕಾರರು ಮತ್ತು ಇತರ ಸದಸ್ಯರೊಂದಿಗೆ ಚರ್ಚಿಸಲು ಅವಕಾಶವಿರುತ್ತದೆ. ಹಾಗೆಯೇ ವಿಚಾರ ಮಂಡಿಸುವವರು ವಿಚಾರ ಮಂಡನೆ ಕುರಿತು ಸದಸ್ಯರು ಯಾವುದೇ ಸ್ಪಷ್ಟೀಕರಣ ಕೇಳಿದಾಗಲೂ ಅದಕ್ಕೆ ಸಮಜಾಯಿಸಿ ನೀಡಬೇಕಾಗುತ್ತದೆ ಹಾಗೂ ಪ್ರೇಕ್ಷಕರು ಕೇಳಿದ ಪ್ರಶ್ನೆಗಳಿಗೆ ತಮ್ಮ ಅನುಭವದ ಆಧಾರದ ಮೇಲೆ ಉತ್ತರಿಸುವಂತಿರಬೇಕು. ವಿಚಾರದ ಬಗ್ಗೆ ಕೇಳುಗರಿಗೆ ಹೆಚ್ಚಿನ ಸ್ಪಷ್ಟೀಕರಣದ ಅಗತ್ಯ ಬಿದ್ದಾಗ ಅಧ್ಯಕ್ಷರು ಸಮಜಾಯಿಸಿ ನೀಡಬಹುದಾಗಿದೆ. ಯಾವುದೇ ಒಂದು ವಿಚಾರ ಸಂಕಿರಣದಲ್ಲಿ ಸಾಮಾನ್ಯವಾಗಿ ಸುಮಾರು 25 ರಿಂದ 40 ರಷ್ಟು ಮಂದಿ ಭಾಗವಹಿಸುವವರು ಇರಬೇಕಾಗುತ್ತದೆ.

**ನಿರೀಕ್ಷಕರು ಅಥವಾ ವೀಕ್ಷಕರ ಪಾತ್ರ**

ವಿಚಾರ ಸಂಕಿರಣದಲ್ಲಿ ಅಧ್ಯಕ್ಷರು, ಮುಖ್ಯ ಅತಿಥಿಗಳು, ವೀಕ್ಷಕರು, ವಿಚಾರ ಮಂಡನೆ ಮಾಡುವವರು ಇವರುಗಳೆಲ್ಲರೂ ಸಹ ವೀಕ್ಷಕರುಗಳೇ ಆಗಿರುತ್ತಾರೆ. ಆದರೆ ವಿಚಾರ ಸಂಕಿರಣದ ನಡವಳಿಕೆಗಳನ್ನು ವೀಕ್ಷಿಸಿ

Digitised by Bharatavani, CIIL

ದಾಖಲಿಸಿಕೊಳ್ಳಲು ಒಬ್ಬರು ಅಥವಾ ಇಬ್ಬರು ವೀಕ್ಷಕರನ್ನು ಪ್ರತ್ಯೇಕವಾಗಿ ನಿಯೋಜಿಸುವ ಪರಿಪಾಟ ಇದೆ. ಇವರು ವಿಚಾರ ಸಂಕಿರಣದಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನು ವೀಕ್ಷಿಸಿ ಎಚ್ಚರದಿಂದ ದಾಖಲು ಮಾಡಿಕೊಂಡು ಅಂತಿಮ ವರದಿಯನ್ನು ಸಿದ್ಧಪಡಿಸಬೇಕು.

**ವಿಚಾರ ಸಂಕಿರಣದ ಕ್ರಮ**

ವಿಚಾರ ಸಂಕಿರಣದಲ್ಲಿ ವಿಷಯ ಮಂಡಿಸುವವರು ಮೊದಲೇ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತಹ ಮಾಹಿತಿಯನ್ನು ಸಿದ್ಧಪಡಿಸಿ ಅದರಲ್ಲಿ ಯಾವ ಉಪವಿಷಯಗಳ ಬಗ್ಗೆ ವಿಚಾರ ಮಂಡಿಸಲಾಗುತ್ತದೆ, ಅವು ಯಾವ ಯಾವ ಅಂಶಗಳನ್ನು ಒಳಗೊಂಡಿರುತ್ತವೆ ಎಂಬುದನ್ನು ತಿಳಿಸಲು ಪೂರ್ಣಲೇಖನವನ್ನು ಸಂಘಟನಾಕಾರರಿಗೆ ಕಳುಹಿಸಿಕೊಡಬೇಕಾಗುತ್ತದೆ. ನಂತರ ಸಂಘಟನಾಕಾರರು ವಿಚಾರ ಸಂಕಿರಣದಲ್ಲಿ ಮಂಡಿಸಲು ಸೂಕ್ತವೆನಿಸಿದ ಲೇಖನಗಳನ್ನು ಆಯ್ಕೆಮಾಡಿ ಅಂಥ ಲೇಖನಗಳ ಸಾರಾಂಶವನ್ನು ಸಿದ್ಧಪಡಿಸಿ ಅವುಗಳನ್ನು ಎಲ್ಲಾ ಸ್ಪರ್ಧಿಗಳಿಗೂ ನೀಡುತ್ತಾರೆ. ಇಂಥ ಸಾರಾಂಶ ವಿಷಯ ಮಂಡನೆಯ ನಂತರ ಆ ವಿಚಾರದ ಬಗ್ಗೆ ಸದಸ್ಯರು ಗುಂಪು ಚರ್ಚೆಯಲ್ಲಿ ತೊಡಗಲು ಸಹಾಯಕವಾಗುತ್ತದೆ. ಈ ಚರ್ಚೆಯ ಸಂದರ್ಭದಲ್ಲಿ ಭಾಷಣಕಾರರು ಸಾಮಾನ್ಯವಾಗಿ 1. ಮಂಡಿಸಿದ ವಿಚಾರದ ಬಗ್ಗೆ ಸ್ಪಷ್ಟನೆಯನ್ನು ನೀಡಬೇಕಾಗುತ್ತದೆ. 2. ಈ ವಿಚಾರದ ಬಗ್ಗೆ ತಮಗಿರುವ ಜ್ಞಾನದ ಪರಿಚಯ ಮಾಡಿಕೊಡಬೇಕಾಗುತ್ತದೆ. 3. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಸಮಸ್ಯೆಗಳು, ಪ್ರಚಲಿತ ಸನ್ನಿವೇಶಕ್ಕೆ ಆ ವಿಷಯದ ಹೊಂದಾಣಿಕೆಯ ಬಗ್ಗೆ ಬರುವ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ.

ವಿಷಯಕ್ಕೆ ಸಂಬಂಧಿಸಿದಂತೆ ತಮಗಿರುವ ಜ್ಞಾನದ ಆಧಾರದ ಮೇಲೆ ಅಧ್ಯಕ್ಷರು ವಿಚಾರ ಸಂಕಿರಣದ ನಡಾವಳಿಯ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ. ಭಾಗವಹಿಸಿದವರು ವಿಷಯದ ಬಗ್ಗೆ ಸೂಕ್ತವಾಗಿ ಚರ್ಚಿಸುವಂತೆ ಪ್ರೇರೇಪಿಸಿ ಕೇಳುವ ಪ್ರಶ್ನೆಗಳಿಗೆ ಅನುಗುಣವಾಗಿ ಭಾಷಣಕಾರರು ಉತ್ತರ ನೀಡುವಂತೆ ಪ್ರಚೋದಿಸುವುದು ಮುಖ್ಯಸ್ಥರ ಪಾತ್ರವಾಗಿರುತ್ತದೆ. ಪ್ರತಿಯೊಂದು ವಿಚಾರ ಮಂಡನೆಯ ನಂತರವೂ ಸಾಕಷ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ವಿಚಾರ ಸಂಕಿರಣದಲ್ಲಿ ವಿಚಾರ ಮಂಡನೆಯು ಮುಖ್ಯವಾದರೂ ಸಾಧ್ಯವಾದಷ್ಟು ಸಮಯವನ್ನು ವಿಷಯದ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಬೇಕು.

ವಿಚಾರ ಸಂಕಿರಣದಲ್ಲಿ ಚರ್ಚೆ ಯಾಂತ್ರಿಕವಾಗಿ ಆಗಬಾರದು. ವಿಚಾರ ಮಂಡಿಸುವವರು ವಿವಿಧ ರೀತಿಯ ಅಭಿಪ್ರಾಯಗಳನ್ನು ಒತ್ತಾಯಪೂರ್ವಕವಾಗಿ ವ್ಯಕ್ತಪಡಿಸಬಾರದು. ಯಾವಾಗ ಯಾಂತ್ರಿಕವಾಗಿ ಅಥವಾ ಒತ್ತಾಯಪೂರ್ವಕವಾಗಿ ವಿಭಿನ್ನ ರೀತಿಯ ಅಭಿಪ್ರಾಯ ಮೂಡುತ್ತದೆಯೋ ಆಗ ಅದರಿಂದ ಬರುವ ಫಲಿತಾಂಶ ಗೊಂದಲಮಯವಾಗಿರುತ್ತದೆ. ಆ ಸಂದರ್ಭದಲ್ಲಿ ಇದರ ಬಗ್ಗೆ ವಿರೋಧ, ಭಿನ್ನಾಭಿಪ್ರಾಯಗಳು ಬರುತ್ತವೆ. ಇಂತಹ ಸಮಯದಲ್ಲಿ ವಿಚಾರ ಸಂಕಿರಣದ ಮೂಲ ಉದ್ದೇಶವೇ ಹಾಳಾಗುತ್ತದೆ. ಆದರೆ ವಿಚಾರ ಸಂಕಿರಣದಲ್ಲಿ ಹೆಚ್ಚಿನ ವಿಚಾರವಂತಿಕೆಯು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಬಂದಾಗ ವಿಚಾರ ಸಂಕಿರಣದ ದಿಕ್ಕೇ ಬದಲಾಗುತ್ತದಲ್ಲದೆ, ಮುಂದಿನ ವಿಷಯಗಳಲ್ಲಿ ಸಮಗ್ರ ವಿಷಯವನ್ನು ಗ್ರಹಿಸಲು ಮತ್ತು ದೀರ್ಘವಾಗಿ ಚರ್ಚಿಸಲು ಹಾಗೂ ವಿಷಯವನ್ನು ವಿವಿಧ ಆಯಾಮಗಳಲ್ಲಿ ಚಿಂತಿಸಲು ಸಾಧ್ಯವಾಗುತ್ತದೆ.

**ವಿಚಾರ ಸಂಕಿರಣದ ವಿಧಗಳು**

ವಿಚಾರ ಸಂಕಿರಣವನ್ನು ವಿವಿಧ ರೀತಿಗಳಲ್ಲಿ ಸಂಘಟಿಸಬಹುದು. ಸಂಘಟನೆ ರೀತಿಯ ಆಧಾರದ ಮೇಲೆ ಪ್ರಮುಖವಾಗಿ ನಾಲ್ಕು ವಿಧಗಳಾಗಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ,

**1. ಸಣ್ಣ ವಿಚಾರ ಸಂಕಿರಣ (Mini Seminar)**

ಶಾಲಾ ತರಗತಿಯ ಹಂತದಲ್ಲಿ ನಿರ್ದಿಷ್ಟ ವಿಷಯವನ್ನು ಕುರಿತು ಸಂಘಟಿಸಿರುವ ವಿಚಾರ ಸಂಕಿರಣವನ್ನು ಸಣ್ಣ ವಿಚಾರ ಸಂಕಿರಣ ಎಂದು ಕರೆಯಲಾಗುತ್ತದೆ. ಇದರ ಮುಖ್ಯ ಉದ್ದೇಶ ವಿಚಾರ ಸಂಕಿರಣವನ್ನು ಸಂಘಟಿಸುವುದು ಹೇಗೆ ಅದರಲ್ಲಿ ಯಾವ ಪಾತ್ರ ನಿರ್ವಹಿಸಬೇಕು ಮತ್ತು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಸ್ಪಷ್ಟ ಚಿತ್ರಣ ನೀಡುವುದಲ್ಲದೆ, ವಿದ್ಯಾರ್ಥಿಗಳನ್ನು ಇತರ ವಿಚಾರ ಸಂಕಿರಣದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದಾಗಿದೆ. ದೊಡ್ಡದಾಗಿ ವಿಚಾರ ಸಂಕಿರಣವನ್ನು ಏರ್ಪಡಿಸುವುದಕ್ಕೆ ಮೊದಲು ಶೈಕ್ಷಣಿಕ ಸಂಸ್ಥೆಯಲ್ಲಿ ಚಿಕ್ಕದಾಗಿ ಏರ್ಪಡಿಸುವುದರಿಂದ ದೊಡ್ಡ ವಿಚಾರ ಸಂಕಿರಣಕ್ಕೆ ಸಿದ್ಧತೆ ಹೇಗಿರಬೇಕು ಎಂಬುದರ ಬಗ್ಗೆ ತಿಳಿಯುತ್ತದೆ.

**2. ದೊಡ್ಡ ವಿಚಾರ ಸಂಕಿರಣ (Major Seminar)**

ಇದನ್ನು ಒಂದು ಪ್ರಧಾನ ವಿಷಯವನ್ನು ಇಟ್ಟುಕೊಂಡು ವಿಭಾಗ ಮಟ್ಟದಲ್ಲಿ ಅಥವಾ ಸಂಸ್ಥೆಯ ಮಟ್ಟದಲ್ಲಿ ಸಂಘಟಿಸಲಾಗುತ್ತದೆ. ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಇಂಥ ವಿಚಾರ ಸಂಕಿರಣದ ಭಾಗವಾಗಿರುತ್ತಾರೆ. ಇಂತಹ ವಿಚಾರ ಸಂಕಿರಣವನ್ನು ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ವಿಭಾಗಗಳಲ್ಲಿ ಸಂಘಟಿಸಲಾಗುತ್ತದೆ. ಸಾಮಾನ್ಯವಾಗಿ ಒಂದು ಮುಖ್ಯ ವಿಷಯವನ್ನು ವಿಚಾರ ಸಂಕಿರಣಕ್ಕೆ ಆಯ್ಕೆ ಮಾಡಿಕೊಳ್ಳುವ ದೃಷ್ಟಿಯಿಂದಲೂ ಈ ವಿಚಾರ ಸಂಕಿರಣ ಏರ್ಪಡಿಸಲಾಗುತ್ತದೆ.

**3. ರಾಜ್ಯ / ರಾಷ್ಟ್ರೀಯ ವಿಚಾರ ಸಂಕಿರಣ**

ರಾಜ್ಯ, ರಾಷ್ಟ್ರೀಯ ವಿಚಾರ ಸಂಕಿರಣವನ್ನು ರಾಜ್ಯ / ರಾಷ್ಟ್ರಮಟ್ಟದಲ್ಲಿ ಸಂಘಟಿಸಲಾಗುತ್ತದೆ. ಇದನ್ನು ಹೆಚ್ಚಾಗಿ ರಾಜ್ಯ / ರಾಷ್ಟ್ರೀಯ ಮಟ್ಟದ ಸಂಸ್ಥೆಗಳು ಸಂಘಟಿಸುತ್ತವೆ. ಇದಕ್ಕೆ ಪ್ರಬುದ್ಧರಿಂದ ವಿಚಾರ ಸಂಕಿರಣ ವಿಷಯವನ್ನು ಆಹ್ವಾನಿಸಲಾಗುತ್ತದೆ. ವಿಚಾರ ಸಂಕಿರಣದ ಕಾರ್ಯದರ್ಶಿಯು ವಿಚಾರ ಸಂಕಿರಣದ ವಿಷಯ ಯೋಜನೆಯನ್ನು ತಯಾರಿಸುತ್ತಾರೆ. ಇದಕ್ಕೆ ರಾಷ್ಟ್ರೀಯ ಸಂಘ ಸಂಸ್ಥೆಗಳು ನೆರವನ್ನು ಸಹ ನೀಡುತ್ತವೆ. ಇದರ ಸಮಯ, ದಿನಾಂಕ, ಎಷ್ಟು ದಿನಗಳು ನಡೆಸಬೇಕು ಮತ್ತು ಸ್ಥಳ ಮುಂತಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನೂ ಸಹ ಇವರೇ ನಿಗದಿಪಡಿಸುತ್ತಾರೆ.

ಸಾಮಾನ್ಯವಾಗಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯು (NCERT) ರಾಷ್ಟ್ರೀಯ ಮಟ್ಟದಲ್ಲಿ ಈ ಮುಂದಿನ ವಿಷಯಗಳ ಬಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತದೆ. ಶೈಕ್ಷಣಿಕ ತಂತ್ರಶಾಸ್ತ್ರ, ಜನಸಂಖ್ಯಾ ಶಿಕ್ಷಣ, ಶಿಕ್ಷಣದ ಒಲವುಗಳು, ದೂರ ಶಿಕ್ಷಣ, ಅನೌಪಚಾರಿಕ ಶಿಕ್ಷಣ, ಭಾರತದ ಶೈಕ್ಷಣಿಕ ಗುಣಮಟ್ಟ ಸಂಶೋಧನೆ ಇತ್ಯಾದಿ.

**4. ಅಂತಾರಾಷ್ಟ್ರೀಯ ವಿಚಾರ ಸಂಕಿರಣ**

ಈ ರೀತಿಯ ವಿಚಾರ ಸಂಕಿರಣವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಘಟಿಸಲಾಗುತ್ತದೆ. UNESCO ಮತ್ತು ಇತರ ಅಂತಾರಾಷ್ಟ್ರೀಯ ಮಾನ್ಯತೆ ಪಡೆದ ಸಂಸ್ಥೆಗಳು ಈ ಬಗೆಯ ವಿಚಾರ ಸಂಕಿರಣವನ್ನು


Digitised by Bharatavani, CIIL

ಸಂಘಟಿಸುತ್ತವೆ. ವಿವಿಧ ರಾಷ್ಟ್ರಗಳ ಸದಸ್ಯರು ಇಂಥ ವಿಚಾರ ಸಂಕಿರಣಗಳಲ್ಲಿ ಪಾಲ್ಗೊಳ್ಳುತ್ತಾರೆ.

ವಿಚಾರ ಸಂಕಿರಣ ತಂತ್ರದಲ್ಲಿ ಕೆಲವು ಮಿತಿಗಳು ಇವೆ.

1. ವಿಚಾರ ಸಂಕಿರಣ ತೀರ ವಿಸ್ತೃತವಾಗಿದ್ದರೆ ಅದರ ಕೆಲವೊಂದು ಅಂಶಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಯುವುದಿಲ್ಲ.
2. ಒಂದು ಬೋಧನಾ ಕಲಿಕಾ ತಂತ್ರವಾಗಿ ಈ ತಂತ್ರವನ್ನು ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಬಳಸಲಾಗುವುದಿಲ್ಲ. ಇದನ್ನು ಉನ್ನತ ಶಿಕ್ಷಣ ಹಂತದಲ್ಲಿ ಮಾತ್ರ ಬಳಸಬಹುದಾಗಿದೆ. ವಿಚಾರ ಸಂಕಿರಣವನ್ನು ಏರ್ಪಡಿಸುವ ಸದಸ್ಯರು ಸಾಮಾಜಿಕ ಮತ್ತು ಭಾವನಾತ್ಮಕವಾಗಿ ಪ್ರೌಢರಾಗಿರಬೇಕು. ಆದ್ದರಿಂದ ಇದನ್ನು ಪ್ರಾಥಮಿಕ ಶಿಕ್ಷಣ ಹಂತಕ್ಕೆ ಉಪಯೋಗಿಸಲು ಸಾಧ್ಯವಾಗುವುದಿಲ್ಲ.
3. ವಿಚಾರ ಸಂಕಿರಣ ಆರಂಭವಾದಾಗ ಪ್ರಾರಂಭದಲ್ಲಿ ಮಾತನಾಡುವವರು ಹೆಚ್ಚು ಸಮಯ ಮಾತನಾಡಿದರೆ ಮತ್ತು ಚರ್ಚೆಯಲ್ಲಿ ತೊಡಗಿದಾಗ ಕೆಲವೇ ವ್ಯಕ್ತಿಗಳು ಅತಿಯಾಗಿ ಚರ್ಚೆಯಲ್ಲಿ ಭಾಗವಹಿಸಿದರೆ ಇತರ ವ್ಯಕ್ತಿಗಳು ಅವಕಾಶದಿಂದ ವಂಚಿತರಾಗುತ್ತಾರೆ.
4. ಚರ್ಚಾ ಅವಧಿಯಲ್ಲಿ ಎರಡು ರೀತಿಯಲ್ಲಿ ವಿಚಾರಗಳು ವ್ಯಕ್ತವಾಗುತ್ತವೆ. ಅಂದರೆ ವಿಷಯದ ಪರ ಮತ್ತು ವಿರೋಧ ವಿಚಾರಗಳು ಸಾಮಾನ್ಯವಾಗಿ ವ್ಯಕ್ತವಾಗುತ್ತವೆ. ಅಂಥ ಸಂದರ್ಭಗಳಲ್ಲಿ ಸದಸ್ಯರು ಸ್ವ ನಿಯಂತ್ರಣ ತಪ್ಪಿದರೆ ಸಂಕಿರಣದಲ್ಲಿ ಗೊಂದಲವಾಗಿ ವಿಚಾರ ಸಂಕಿರಣದ ಉದ್ದೇಶ ದಾರಿ ತಪ್ಪುತ್ತದೆ. ಆಗ ಅಧ್ಯಕ್ಷರು ಮಾರ್ಗದರ್ಶನ ನೀಡಬೇಕು.

–ಎನ್.ಡಿ.ಮಂ.

## ವಿಮರ್ಶಾತ್ಮಕ ಬೋಧನೆ

ಪ್ರತಿಯೊಂದು ಮಾನವ ಸಮಾಜ ಒಂದಲ್ಲ ಒಂದು ರೀತಿಯಲ್ಲಿ ಸ್ತರೀಕೃತಗೊಂಡಿದೆ. ಈ ಸ್ತರೀಕರಣದ ಆಧಾರಗಳು ಅನೇಕ ಜಾತಿ (ಭಾರತದಲ್ಲಿ), ಹುಟ್ಟು, ಆರ್ಥಿಕ ಸ್ಥಾನಮಾನ, ಆರೋಪಿತ ಸ್ಥಾನಮಾನ ಇತ್ಯಾದಿ ಸ್ತರೀಕರಣ ಕೆಲವು ವರ್ಗಗಳಿಗೆ ವಿಶೇಷವಾದ ಅಧಿಕಾರ ನೀಡಿ ಆ ವರ್ಗಗಳು ಉಳಿದ ವರ್ಗಗಳನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಾ ಬಂದಿರುವುದನ್ನು ಮಾನವ ಇತಿಹಾಸದುದ್ದಕ್ಕೂ ಕಾಣಬಹುದು. ಈ ಅಧಿಕಾರವನ್ನೇ ಆಧಿಪತ್ಯ (Hegemony) ಎನ್ನಬಹುದು. ಇದು ನೇರವಾಗಿ, ಸ್ಪಷ್ಟವಾಗಿ ರಾಜತ್ವ, ಪುರೋಹಿತಷಾಹಿ, ನಿರಂಕುಶ ಅಧಿಕಾರದ ರೂಪದಲ್ಲಿ ಕಂಡುಬರಬಹುದು ಅಥವಾ ಪರೋಕ್ಷ ರೀತಿಯಲ್ಲಿ, ಸೂಕ್ಷ್ಮ ರೂಪಗಳಲ್ಲಿ ಪ್ರಜಾಸತ್ತಾತ್ಮಕ ಸಮಾಜಗಳಲ್ಲಿಯೂ ವ್ಯಕ್ತವಾಗಬಹುದು. ಸಮಾಜದ ಕೆಲವು ವರ್ಗಗಳು ಒಟ್ಟು ಸೇರಿ ಉಳಿದ ಅಧೀನ ವರ್ಗಗಳ ಮೇಲೆ ನಿಯಂತ್ರಣ ಉಳಿಸಿಕೊಳ್ಳಲು ತಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುವ ಪ್ರಕ್ರಿಯೆಯನ್ನೇ ಆಧಿಪತ್ಯ ಎನ್ನಬಹುದು. ಐತಿಹಾಸಿಕವಾಗಿ ಈ ರೀತಿ ಆಧಿಪತ್ಯ ಹೊಂದಿರುವ ವರ್ಗಗಳು ಉಳಿದ ವರ್ಗಗಳ ಪ್ರಜ್ಞೆಯನ್ನೇ ಸಂಕುಚಿತಗೊಳಿಸಿ ತಾವು ಇರುವುದೇ ಹೀಗೆ, ಸೃಷ್ಟಿಯಾಗಿರುವುದೇ ಹೀಗೆ, ಪಡೆದಿರುವುದೇ ಹೀಗೆ ಎಂದು ಭಾವಿಸಿ ತಮ್ಮ ಸುಸ್ಥಿತಿಯನ್ನು ಒಪ್ಪಿಕೊಂಡೇ ಬಂದಿದ್ದಾರೆ. ಈ ಆಧಿಪತ್ಯ ಹೊಂದಿರುವ ವರ್ಗಗಳು ತಮ್ಮ ಮೇಲೆ ಸ್ಥೂಲ ಅಥವಾ ಸೂಕ್ಷ್ಮ ರೂಪಗಳಲ್ಲಿ ನಡೆಸುತ್ತಿರುವ ಸಾಮಾಜಿಕ, ಆರ್ಥಿಕ ದಬ್ಬಾಳಿಕೆ, ಶೋಷಣೆ, ಅನ್ಯಾಯಗಳನ್ನು ವಿವೇಚನಾತ್ಮಕವಾಗಿ ವಿಮರ್ಶಿಸಿ ತಮ್ಮ ವಿರೋಧ ವ್ಯಕ್ತಪಡಿಸುವ ಮನೋಭಾವವನ್ನು, ಧೈರ್ಯವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಅಂಶವನ್ನು ಅನೇಕ ಶಿಕ್ಷಣ ತಜ್ಞರು ಅದರಲ್ಲೂ ದಬ್ಬಾಳಿಕೆಗೆ ಒಳಗಾಗಿದ್ದ ಲ್ಯಾಟಿನ್ ಅಮೆರಿಕನ್ ಮತ್ತು ಆಫ್ರಿಕಾ ದೇಶಗಳ ಶಿಕ್ಷಣ ತಜ್ಞರು 20ನೇ ಶತಮಾನದ ಉತ್ತರಾರ್ಧದಲ್ಲಿ 1950 ರಿಂದೀಚೆಗೆ ಮನಗಂಡರು. ಈ ತಜ್ಞರು ಶಾಲೆಯ ಉದ್ದೇಶಗಳು, ಬೋಧನಾ ಪ್ರಕ್ರಿಯೆಯನ್ನು ಈ ದೃಷ್ಟಿಕೋನದಿಂದ ಸೂಕ್ಷ್ಮವಾಗಿ ವಿಶ್ಲೇಷಿಸಿ ವಿದ್ಯಾರ್ಥಿಗಳ ಪ್ರಜ್ಞಾವ್ಯಾಪ್ತಿಯನ್ನು ವಿಸ್ತಾರಗೊಳಿಸಿ ತಮ್ಮ ವಿರುದ್ಧ ಆಗುತ್ತಿರುವ ಅನ್ಯಾಯ, ದಬ್ಬಾಳಿಕೆಗಳನ್ನು ಅರಿತುಕೊಂಡು ಅವುಗಳನ್ನು ಮುಕ್ತವಾಗಿ ವಿರೋಧಿಸುವ ಮನೋಭಾವವನ್ನು ಧೈರ್ಯವನ್ನು ಬೆಳೆಸಿಕೊಳ್ಳುವಂತೆ ಮಾಡಬೇಕೆಂದೂ ಇದಕ್ಕಾಗಿ ಅಧ್ಯಾಪಕರು ತಮ್ಮ ಬೋಧನಾ ವಿಧಾನವನ್ನು ಆಮೂಲಾಗ್ರವಾಗಿ ಬದಲಿಸಿಕೊಳ್ಳುವುದಲ್ಲದೆ ತಮ್ಮ ಮನೋಭಾವವನ್ನು ಈ ದಿಶೆಯಲ್ಲಿ ಪರಿವರ್ತಿಸಿಕೊಳ್ಳಬೇಕೆಂದು ವಾದಿಸಲು ಆರಂಭಿಸಿದ ಈ ಹೊಸ ಶಿಕ್ಷಣ ಉಪಕ್ರಮವನ್ನು ವಿಮರ್ಶಾತ್ಮಕ ಬೋಧನೆ (Critical Pedagogy) ಎಂದು ಕರೆದರು.

ಪೌಲೋ ಫ್ರೈಯರಿ

ಬ್ರೆಜಿಲ್‌ನ ಪೌಲೋ ಫ್ರೇಯರಿ (1921–1994) ತಮ್ಮ ಪ್ರಸಿದ್ಧ ಪುಸ್ತಕ ‘ಪೆಡಗಜಿ ಆಫ್ ದಿ ಅಪ್ರೆಸ್ಸೆಡ್’ ಮೂಲಕ ಈ ಆಂದೋಲನದ ನೇತೃತ್ವ ವಹಿಸಿದರು. ಅಮೆರಿಕಾದ ಪ್ರಸಿದ್ಧ ಸ್ತ್ರೀವಾದಿ ಗ್ಲೋರಿಯಾ ಜೀನ್ ವಾಟ್ಕಿನ್ಸ್ (ಜನ್ಮ 1952) ಬರೆದ ‘ಟೀಚಿಂಗ್ ಟು ಟ್ರಾನ್ಸ್‌ಗೆಸ್’, ನೀಲ್ ಪೋಸ್ಟ್‌ಮನ್ನರ (1931–2003) ‘ಟೀಚಿಂಗ್ ಆಸ್ ಎ ಸಬವರ್ಸಿವ್ ಆಕ್ಟಿವಿಟಿ’ ಈ ಪ್ರವೃತ್ತಿಯ ಪ್ರಸಿದ್ಧ ಕೃತಿಗಳು ಕೆನಡಾದ ಪೀಟರ್ ಮೆಕ್‌ಲೋರೆನ್ (ಜನ್ಮ 1948), ಇರಾಷೋರ್ (ನ್ಯೂಯಾರ್ಕ್), ಅಮೆರಿಕಾದ ಹೆನ್ರಿ ಲೆವಿನ್. ಫ್ರೆಂಚ್ ಸಮಾಜ ಶಾಸ್ತ್ರಜ್ಞ ಪಿಯರೆ ಬೋರ್ಡ್ (1930–2002) ಜರ್ಮನಿಯ ತತ್ವಶಾಸ್ತ್ರಜ್ಞ ಹಾಗೂ ಸಮಾಜಶಾಸ್ತ್ರಜ್ಞ ಮಾರ್ಕ್ಯೂಸ್ ಹರ್ಬಟ್ (1898–1979), ಅಮೆರಿಕಾದಲ್ಲಿ ‘ಎಸೆನ್ಷಿಯಲ್ ಸ್ಕೂಲ್ ಮೂವ್‌ಮೆಂಟ್’ ಶೈಕ್ಷಣಿಕ ಸುಧಾರಕ ಥಿಯೋಡೋರ್ ರೈಲ್ಯಾಂಡ್ ಸೈಜರ್ (1932–2009) ಕೆನಡಾದ ಜಾನ್ ಗುಡ್‌ಲ್ಯಾಡ್ ವಿಮರ್ಶಾತ್ಮಕ ಬೋಧನೆಯ ಪ್ರತಿಪಾದಕರಲ್ಲಿ ಮುಖ್ಯರೆನಿಸಿದ್ದಾರೆ.

ನಮ್ಮ ಸಮಾಜ ವರ್ಗ, ಜಾತಿ, ಕುಲ, ಲಿಂಗ, ಸಾಮಾಜಿಕ ಸ್ಥಾನಮಾನ, ಹುಟ್ಟು ಮುಂತಾದ ಅನೇಕ ಅಂಶಗಳ ಆಧಾರದ ಮೇಲೆ ಅಸಮಾನ ರೀತಿಯಲ್ಲಿ ಸ್ತರೀಕೃತಗೊಂಡಿದೆ. ಈ ರೀತಿಯ ಸ್ತರೀಕರಣ ಕೆಲವು ವರ್ಗಗಳ ಆಧಿಪತ್ಯಕ್ಕೆ ಅವಕಾಶ ಕಲ್ಪಿಸಿ ಅನೇಕ ಪ್ರತ್ಯಕ್ಷ ಅಥವಾ ಪರೋಕ್ಷ ರೀತಿಯ ದಬ್ಬಾಳಿಕೆ, ಅನ್ಯಾಯಗಳು ಮತ್ತು ಶೋಷಣೆಗಳಿಗೆ ಕಾರಣವಾಗಿದೆ ಎನ್ನುವುದು ವಿಮರ್ಶಾತ್ಮಕ ಬೋಧನೆಯ ಮೂಲ ಗ್ರಹಿಕೆ. ವಿಮರ್ಶಾತ್ಮಕ ಬೋಧನೆ ವಿದ್ಯಾರ್ಥಿಗಳನ್ನು ಸಮಾಜದ ಅನ್ಯಾಯಗಳ ಅರಿವು ಪಡೆದುಕೊಂಡು ಅವುಗಳನ್ನು ವಿರೋಧಿಸಲು ಸಿದ್ಧವಾಗುತ್ತದೆ ಎಂದು ನಿರೀಕ್ಷಿಸಲಾಗುತ್ತದೆ. ಈ ನಿಲುವಿನಿಂದ ವಿಮರ್ಶಾತ್ಮಕ ಬೋಧನೆಯ ಆಂದೋಲನವನ್ನು ಕ್ರಾಂತಿಕಾರಿ ಎಂದು ಪರಿಗಣಿಸಬೇಕು. ಪ್ರಜಾಸತ್ತೆ ಹಾಗೂ ದಬ್ಬಾಳಿಕೆಯಿಂದ ಮುಕ್ತಿ ವಿಮರ್ಶಾತ್ಮಕ ಬೋಧನೆಯ ಅಡಿಗಲ್ಲುಗಳೆನಿಸಿವೆ. ವ್ಯಕ್ತಿಗಳನ್ನು ಸಮಾಜದಲ್ಲಿ ತಮ್ಮ

Digitised by Bharatavani, CIIL

ಮೇಲೆ ಆಧಿಪತ್ಯ ನಡೆಸುವ ವರ್ಗದವರು ಮಾಡುತ್ತಿರುವ ಅನ್ಯಾಯಗಳ ಬಗ್ಗೆ ಪ್ರಜ್ಞಾವಂತರನ್ನಾಗಿಸುವುದು ಈ ಆಂದೋಲನದ ಮುಖ್ಯ ಗುರಿ. ಒಮ್ಮೆ ದಬ್ಬಾಳಿಕೆಗೆ ಒಳಗಾಗಿರುವವರು ಸಮಾಜದಲ್ಲಿರುವ ವಸ್ತು ಸ್ಥಿತಿಯನ್ನು ದಬ್ಬಾಳಿಕೆಯನ್ನು ಅರಿತುಕೊಂಡರೆ ಅವರಿಗೆ ಅದನ್ನು ವಿಮರ್ಶಿಸುವ ಧೈರ್ಯ ಬರುತ್ತದೆ. ಯಾವುದು ಸರಿ, ಯಾವುದು ತಪ್ಪು ಎಂದು ವಿಮರ್ಶಿಸಿ ತೀರ್ಮಾನ ಕೈಗೊಂಡು ಅನ್ಯಾಯವನ್ನು ವಿರೋಧಿಸಲು ಒಗ್ಗಟ್ಟಾಗಿ ಪ್ರಯತ್ನಿಸತೊಡಗುತ್ತಾರೆ. ಆಗ ಅಧಿಕಾರ ನಡೆಸುವ ವರ್ಗಗಳು ಸಾಮಾಜಿಕ ನ್ಯಾಯದ ಗುರಿಯೆಡೆಗೆ ಪ್ರಯತ್ನಿಸಲೇಬೇಕಾಗುತ್ತದೆ.

ವಿಮರ್ಶಾತ್ಮಕ ಬೋಧನೆ ಸಮಾಜದ ದಬ್ಬಾಳಿಕೆಯನ್ನು ಅದಕ್ಕೆ ಸಂಬಂಧಿಸಿದ ನಂಬಿಕೆಗಳನ್ನು, ಆಚರಣೆಗಳನ್ನು ಪ್ರಶ್ನಿಸಲು, ಅವುಗಳನ್ನು ಎದುರಿಸಲು ವಿದ್ಯಾರ್ಥಿಗಳಿಗೆ ಸಹಾಯ ನೀಡುವ ಬೋಧನಾ ಕ್ರಮ, ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ವಿಮರ್ಶಾತ್ಮಕ ಬೋಧನೆ ವಿದ್ಯಾರ್ಥಿಗಳು ವಿಮರ್ಶಾತ್ಮಕ ಪ್ರಜ್ಞೆಯನ್ನು (Critical consciousness) ಬೆಳೆಸಿಕೊಳ್ಳಲು ಸಹಾಯ ನೀಡುವ ಬೋಧನಾ ಕ್ರಮದ ಸಿದ್ಧಾಂತ ಮತ್ತು ಆಚರಣೆಗಳಿಗೆ ಸಂಬಂಧಿಸಿದೆ.

ಇರಾಶೋರ್ ವಿಮರ್ಶಾತ್ಮಕ ಬೋಧನೆಗೆ ಇನ್ನೂ ವಿವರವಾದ ವ್ಯಾಖ್ಯೆ ನೀಡಿದ್ದಾರೆ. ಯಾವುದೇ ಹೇಳಿಕೆಯ ಮೇಲ್ಮಟ್ಟದ ಅರ್ಥ, ಮೊದಲ ಅನಿಸಿಕೆಗಳು, ಪ್ರಭಾವಿ ಕಲ್ಪಿತ ಭಾವನೆಗಳು, ಆಡಳಿತಾತ್ಮಕ ಘೋಷಣೆಗಳು, ಸಾಂಪ್ರದಾಯಿಕ ಹಳಸಲು ನುಡಿಗಳು, ಬೇರೆಯವರಿಂದ ಪಡೆದುಕೊಂಡ ವಿವೇಚನಾತ್ಮಕ ನುಡಿಗಳು ಮತ್ತು ಕೇವಲ ಅಭಿಪ್ರಾಯಗಳು ಇವುಗಳ ಹಿಂದಿರುವ ಅರ್ಥವನ್ನು, ಇಚ್ಛೆ, ಉದ್ದೇಶಗಳನ್ನು ಕುರಿತು ಯೋಜಿಸುವ, ಓದಿ ಅರ್ಥ ಮಾಡಿಕೊಳ್ಳುವ, ಬರೆಯುವ ಮತ್ತು ಮಾತನಾಡುವ ಅಭ್ಯಾಸಗಳನ್ನು ಬೆಳೆಸುವುದು, ಯಾವುದೇ ಕ್ರಿಯೆಯ, ಘಟನೆಯ, ವಸ್ತುವಿನ ಪ್ರಕ್ರಿಯೆ; ವಿಷಯ ವಸ್ತುವಿನ, ನೀತಿ ಧೋರಣೆಯ, ಸಮೂಹ ಮಾಧ್ಯಮದ ಅಥವಾ ಸಂಭಾಷಣೆ, ವ್ಯಾಖ್ಯಾನದ ಹಿಂದಿರುವ ಗಹನವಾದ ಅರ್ಥವನ್ನು ತಿಳಿದುಕೊಳ್ಳುವ, ಅರ್ಥಮಾಡಿಕೊಳ್ಳುವ, ಸಾಮಾಜಿಕ ಸಂದರ್ಭವನ್ನು ತಿಳಿದುಕೊಳ್ಳುವ, ಸಿದ್ಧಾಂತವನ್ನು ಅರ್ಥಮಾಡಿಕೊಳ್ಳುವ ಮತ್ತು ಅವುಗಳ ವೈಯಕ್ತಿಕ ಪರಿಣಾಮಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವನ್ನು, ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಉಂಟುಮಾಡುವ ಬೋಧನ ಉಪಕ್ರಮವೇ ವಿಮರ್ಶಾತ್ಮಕ ಬೋಧನೆ.

ಸಾಮಾಜಿಕ ಕಾರಣಗಳಿಂದಾಗಿ ಸಮಾಜದಲ್ಲಿ ಉಂಟಾಗಿರುವ ಅಸಮಾನತೆಗಳನ್ನು ನಿವಾರಣೆ ಮಾಡಲು ಪ್ರಗತಿಶೀಲ ಚಿಂತನೆಯ ಅಧ್ಯಾಪಕರು ಕೈಗೊಳ್ಳುವ ಪ್ರಯತ್ನವೇ ವಿಮರ್ಶಾತ್ಮಕ ಬೋಧನೆ ಎಂದು ಪೀಟರ್ ಮೆಕ್‌ಲಾರೆನ್ ಅಭಿಪ್ರಾಯಪಡುತ್ತಾರೆ. ರಾಷ್ಟ್ರದ ನಡುವಣ ಸಾಮಾಜಿಕ ಹಾಗೂ ಭೌತಿಕ ಸಂಬಂಧಗಳನ್ನು ಪರಸ್ಪರ ಸಂಬಂಧಿಸಿ ಅವುಗಳನ್ನು ವಿಮರ್ಶಾತ್ಮಕವಾಗಿ ಕ್ರಮವೇ ವಿಮರ್ಶಾತ್ಮಕ ಬೋಧನೆ.

ವಿಮರ್ಶಾತ್ಮಕ ಬೋಧನೆ ಈ ಮುಂದಿನ ಉದ್ದೇಶಗಳನ್ನು ಹೊಂದಿದೆ.

1. ನಿರ್ಬಂಧಿತ ಸಾಮಾಜೀಕರಣವನ್ನು ವಿರೋಧಿಸಿ ಅದನ್ನು ಉದಾರಗೊಳಿಸುವುದು.
2. ವ್ಯಾಪಾರಿ ಪ್ರಜ್ಞೆಗೆ ಬದಲಾಗಿ ವಿಮರ್ಶಾತ್ಮಕ ಪ್ರಜ್ಞೆಯನ್ನು ಬೆಳೆಸಿ ವಿಸ್ತಾರಗೊಳಿಸುವುದು.
3. ಅಸಮಾನತೆಗಳನ್ನು ಮುಂದುವರಿಸಿಕೊಂಡು ಹೋಗುವ ಸಮಾಜಗಳನ್ನು ಆಮೂಲಾಗ್ರವಾಗಿ ಸಮಾನತೆ ಸಮಾಜಗಳಾಗಿ ಪರಿವರ್ತಿಸುವುದು.
4. ನಿರಂಕುಶಾಧಿಕಾರವನ್ನು ಸರಿಯಾಗಿ ಅಧ್ಯಯನ ಮಾಡಿ ಅದರ ಮಿತಿಗಳನ್ನು ಅರ್ಥ ಮಾಡಿಕೊಂಡು, ಅದರ ಸ್ಥಾನದಲ್ಲಿ ಪ್ರಜಾಸತ್ತೆಯನ್ನು ಅಭಿವೃದ್ಧಿಗೊಳಿಸುವುದು.
5. ಸಹಭಾಗಿತ್ವದ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿ ಶಿಕ್ಷಣ ವ್ಯವಸ್ಥೆಯಿಂದ ವಿಮುಖರಾಗುವ ವಿದ್ಯಾರ್ಥಿಗಳನ್ನು ಕಡಿಮೆ ಮಾಡುವುದು.
6. ಸಮಾಜದ ಶಿಷ್ಟ ವರ್ಗಗಳ ಶ್ರೇಣೀಕರಣದ ಬಗ್ಗೆ ಇರುವ ಪುರಾತನ ಕಲ್ಪನೆಗಳ ಮೇಲೆ ಬೆಳಕು ಚೆಲ್ಲಿ ಅವುಗಳನ್ನು ದೂರಮಾಡುವುದು.
7. ಶೈಕ್ಷಣಿಕವಾಗಿ ಅಸಮರ್ಥತೆಯುಳ್ಳ ಮಕ್ಕಳಿಗೆ ವಿಮರ್ಶಾತ್ಮಕವಾದ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಸಹಾಯ ನೀಡುವುದು.
8. ನಿತ್ಯ ಜೀವನದಲ್ಲಿ ಜನಗಳಲ್ಲಿ ಕಂಡುಬರುವ ಯೋಚನೆಗಳು ಮತ್ತು ಭಾಷಾಭಿವ್ಯಕ್ತಿಯ ಬಗ್ಗೆ ವಿದ್ಯಾರ್ಥಿಗಳ ಪ್ರಜ್ಞೆಯನ್ನು ಹೆಚ್ಚಿಸಿ ವಿಸ್ತಾರಗೊಳಿಸುವುದು.
9. ಸಮಾಜದಲ್ಲಿ ನಡೆಯುತ್ತಿರುವ ಆಧಿಪತ್ಯದ ಸ್ವರೂಪವನ್ನು ತಿಳಿಯಲು ಅದರ ಬಗ್ಗೆ ಸಂಶೋಧನೆ ಮಾಡುವ ಕೌಶಲಗಳನ್ನು ಬೆಳೆಸುವುದು ಮತ್ತು ನಿಯಂತ್ರಣಕ್ಕೊಳಗಾದ ಮಾಹಿತಿಗಳನ್ನು ಒದಗಿಸುವುದು.
10. ತಮ್ಮ ಸದ್ಯದ ಪರಿಸ್ಥಿತಿಯ ಮಿತಿಗಳ ಬಗ್ಗೆ ಚಿಂತಿಸಿ, ಅವುಗಳನ್ನು ದೂರಮಾಡಲು ಪ್ರಯತ್ನಿಸುವುದರ ಬಗ್ಗೆ ವಿದ್ಯಾರ್ಥಿಗಳು ಆಲೋಚಿಸುವಂತೆ ಮಾಡುವುದು.

ಶೋರ್ ಅವರ ಅಭಿಪ್ರಾಯದಲ್ಲಿ ಶಿಕ್ಷಣದ ಪಾತ್ರ ಸಮಾಜದಲ್ಲಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಸಾಮಾಜೀಕರಣ ಗೊಳಿಸುವುದಕ್ಕಿಂತ, ಸಮಾಜದಲ್ಲಿರುವ ಅಸಮಾನತೆಗಳನ್ನು ಮತ್ತು ಪ್ರಧಾನ ತಪ್ಪು ಕಲ್ಪನೆಗಳನ್ನು ಪ್ರಶ್ನಿಸುವುದರಲ್ಲಿ ಹೆಚ್ಚಾಗಿದೆ ಎಂದು ನಾವು ಒಪ್ಪಿಕೊಂಡಾಗ, ಈ ಗುರಿಯನ್ನು ಸಾಧಿಸಲು ಬೇಕಾಗುವ ವಿಧಿ – ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ.

ವಿಮರ್ಶಾತ್ಮಕ ಬೋಧನೆಯನ್ನು ಅದು ಏನನ್ನು ಮಾಡಲು ಉದ್ದೇಶಿಸುತ್ತದೆ ಎನ್ನುವ ದೃಷ್ಟಿಕೋನದಿಂದ ಪರಿಭಾಷಿಸಬಹುದು. ಒಂದು ಬೋಧನಾ ವಿಧಾನಶಾಸ್ತ್ರವಾಗಿ, ವಿಮರ್ಶಾತ್ಮಕ ಬೋಧನೆ ಮಕ್ಕಳ ಪ್ರಜ್ಞೆಯನ್ನು ಹೆಚ್ಚಿಸಲು ಉದ್ದೇಶಿಸುತ್ತದೆ. ಅದು ಸಮಾಜದ ವಿಮರ್ಶೆಯಾಗುತ್ತದೆ. ವಿದ್ಯಾರ್ಥಿಗಳ ಅಭಿಪ್ರಾಯಗಳಿಗೆ ಮೌಲ್ಯ ನೀಡುತ್ತದೆ, ಅದು ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ, ಮೌಲ್ಯಗಳಿಗೆ, ವ್ಯಕ್ತೀಯತೆಗೆ ಗೌರವ ಕೊಡುತ್ತದೆ. ಭರವಸೆ ನೀಡುವ ಸಕ್ರಿಯ ಬೋಧನೆಯ ರೂಪದಲ್ಲಿ ಅದು ವಿದ್ಯಾರ್ಥಿಗಳು ನಿಜವಾದ ಅರ್ಥದಲ್ಲಿ ಸಮಾಜದ ಸಹಭಾಗಿ ಸದಸ್ಯರನ್ನಾಗಿಸಲು ಪ್ರಯತ್ನಿಸುತ್ತದೆ. ಇಂಥ ವಿದ್ಯಾರ್ಥಿಗಳು ಕೇವಲ ಸಮಾಜಕ್ಕೆ ಸೇರಿದ ಸದಸ್ಯರಾಗದೆ, ಸಮಾಜವನ್ನು ಸೃಷ್ಟಿಸುವ, ಪುನರ್‌ರಚಿಸುವ, ಸ್ವಾತಂತ್ರ್ಯದ ಪರಿಸ್ಥಿತಿಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುವ ಸದಸ್ಯರಾಗುತ್ತಾರೆ. ನಿಜವಾದ ಸಾಮಾಜಿಕ ಮುಕ್ತಿಗೆ ಸಮಾಜದ ವರ್ಗ ವ್ಯವಸ್ಥೆ ಬಹುಸಂಖ್ಯಾತ ಸದಸ್ಯರು ಪಡೆಯದಂತೆ ತಡೆಹಿಡಿದಿರುವ ಜ್ಞಾನ ಮತ್ತು ಸಂವೇದನಾಶೀಲತೆಯ ಬೆಳವಣಿಗೆ ಪೂರ್ವಾವಶ್ಯಕತೆಗಳಾಗಿವೆ ಎಂದು ಮಾರ್ಕ್ಯೂಸ್ ಹೇಳುತ್ತಾರೆ.

ಯಾವುದೇ ಸಮಾಜದಲ್ಲಿ ತಟಸ್ಥ ಶೈಕ್ಷಣಿಕ ಪ್ರಕ್ರಿಯೆ ಎಂಬುದಿಲ್ಲವೆಂಬುದು ಪೌಲೋ ಫ್ರೇಯರಿಯ ಅಭಿಪ್ರಾಯ. ಅದು ಈ ಪೀಳಿಗೆಯ ವಿದ್ಯಾರ್ಥಿಗಳನ್ನು ಪ್ರಸ್ತುತದ ಸಾಮಾಜಿಕ ವ್ಯವಸ್ಥೆಯ ತರ್ಕಕ್ಕೆ


Digitised by Bharatavani, CIIL

ಹೊಂದಿಕೊಳ್ಳುವಂತೆ ಸಿದ್ಧಪಡಿಸುವುದು ಅಥವಾ ಅದು ಸ್ವಾತಂತ್ರ್ಯ ತತ್ವದ ಆಚರಣೆಯ ಮೂಲಕ ವಾಸ್ತವಿಕ ಪರಿಸ್ಥಿತಿಯನ್ನು ವಿಮರ್ಶಾತ್ಮಕವಾಗಿ, ಸೃಜನಾತ್ಮಕವಾಗಿ ಎದುರಿಸಿ, ತಮ್ಮ ಪ್ರಸ್ತುತ ಪರಿಸ್ಥಿತಿಯನ್ನು ರೂಪಾಂತರಗೊಳಿಸುವುದರಲ್ಲಿ ಹೇಗೆ ಭಾಗವಹಿಸ ಬಹುದೆಂಬುದನ್ನು ಕಂಡುಕೊಳ್ಳಲು ಸಹಾಯ ನೀಡುತ್ತದೆ. ಇದೇ ಅಭಿಪ್ರಾಯವನ್ನು ಮೈಕೇಲ್ ಆಪಲ್ ಸಹ ಧ್ವನಿಸಿದ್ದಾರೆ.

ವಿಮರ್ಶಾತ್ಮಕ ಬೋಧನೆಯನ್ನು ತರಗತಿ ಸಂದರ್ಭದಲ್ಲಿ ಹೇಗೆ ಆಚರಣೆ ತರಬಹುದೆಂಬುದಕ್ಕೆ ಕೆಲವು ಉದಾಹರಣೆಗಳನ್ನು ಸೂಚಿಸಬಹುದು.

1. ಸಮಾಜದಲ್ಲಿ ಯಾವುದಾದರೂ ಒಂದು ವರ್ಗ ತಾನು ನ್ಯಾಯವೆಂದು ಪರಿಗಣಿಸಿ ಕೈಗೊಂಡ ಹೋರಾಟವನ್ನು ವಿಶ್ಲೇಷಿಸುವಂತೆ ವಿದ್ಯಾರ್ಥಿಗಳನ್ನು ಪ್ರಚೋದಿಸಿ ವಿಮರ್ಶಾತ್ಮಕ ದೃಷ್ಟಿಯಿಂದ ವಿಶ್ಲೇಷಿಸಿದಾಗ ಆ ಹೋರಾಟದಲ್ಲಿ ನ್ಯಾಯಪರ ಹೋರಾಟದ ಲಕ್ಷಣಗಳಿವೆಯೇ ಎಂದು ಚರ್ಚಿಸಲಿ.
2. ತಮ್ಮ ಕುಟುಂಬದಲ್ಲಿ, ಸಾಮಾಜಿಕ ಗುಂಪಿನಲ್ಲಿ (ಜಾತಿ, ಧರ್ಮ) ಇರುವ ಅಧಿಕಾರಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸಲಿ.
3. ಸಮಾಜದಲ್ಲಿರುವ ಜನಪ್ರಿಯ ಸಾಂಸ್ಕೃತಿಕ ಅಂಶಗಳು (ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು) ಮತ್ತು ಸಮೂಹ ಮಾಧ್ಯಮಗಳು ನೀಡುತ್ತಿರುವ ಸಂದೇಶಗಳ ಹಿಂದೆ ಇರಬಹುದಾದ ಅರ್ಥಗಳನ್ನು, ಉದ್ದೇಶಗಳನ್ನು ಪರೀಕ್ಷಿಸಲು ಪ್ರೋತ್ಸಾಹಿಸಿ.
4. ಸಮಕಾಲೀನ ಸಮಾಜದಲ್ಲಿ ಇರುವ ವಿವಾದಾಂಶಗಳನ್ನು ವಿಶ್ಲೇಷಿಸಿ, ಚರ್ಚಿಸಿ, ಮೌಲ್ಯಮಾಪನ ಮಾಡಲಿ, ಅವುಗಳ ಇತಿ–ಮಿತಿಗಳನ್ನು ನಿರ್ಣಯಿಸಲಿ.
5. ತಮ್ಮ ನಿಲುವನ್ನು ಸಮರ್ಥಿಸಲು ಸತ್ತಾರೂಢ ಶಕ್ತಿಗಳು ನೀಡುವ ಸಾಮಾನ್ಯ ಹೇಳಿಕೆಗಳ ಅರ್ಥಹೀನತೆಯನ್ನು ಚರ್ಚಿಸಲಿ.
6. ಸಮಾಜದಲ್ಲಿ ಪ್ರಚಲಿತವಿರುವ ಕಲ್ಪನೆಗಳನ್ನು, ಪೂರ್ವಗ್ರಹಗಳನ್ನು ಮತ್ತು ರೂಢಕಲ್ಪನೆ (ಸ್ಟೀರಿಯೋ ಟೈಪ್)ಗಳ ವಿಶ್ಲೇಷಣೆ ಮಾಡಲಿ.

ವಿಮರ್ಶಾತ್ಮಕ ಬೋಧನೆ ಕ್ರಮವನ್ನು ಪಠ್ಯಕ್ರಮದ ವಿವಿಧ ವಿಷಯಗಳನ್ನು ಬೋಧಿಸುವಾಗ ಅಳವಡಿಸಿಕೊಳ್ಳಲು ಸಾಧ್ಯವಿದೆ. ಸಾಹಿತ್ಯ, ಸಮಾಜ ವಿಜ್ಞಾನ ಬೋಧನೆಯಲ್ಲಿ ಇದಕ್ಕೆ ಹೆಚ್ಚಿನ ಅವಕಾಶ ದೊರೆಯುತ್ತದೆ. ವಿಜ್ಞಾನ ಬೋಧನೆಯಲ್ಲೂ ವೈಜ್ಞಾನಿಕ ಆವಿಷ್ಕಾರಗಳು ಸಮಾಜ ಮತ್ತು ಪರಿಸರದ ಮೇಲೆ ಬೀರಬಹುದಾದ ಅಹಿತಕರ, ವಿನಾಶಕಾರಿ ಪರಿಣಾಮಗಳ ದೃಷ್ಟಿಯಿಂದ, ಅವುಗಳ ಬಗ್ಗೆ ಅರಿವು ಮೂಡಿಸಲು ವಿಮರ್ಶಾತ್ಮಕ ಬೋಧನೆ ನೆರವಾಗುತ್ತದೆ. ಪಠ್ಯವಸ್ತುವಿನ ಆಯ್ಕೆ, ತರಗತಿ ಬೋಧನೆ, ಶಾಲಾ ಚಟುವಟಿಕೆಗಳ ರೂಪಣೆ ಈ ಎಲ್ಲ ಮಟ್ಟದಲ್ಲೂ ವಿಮರ್ಶಾತ್ಮಕ ಬೋಧನೆಯ ಗುರಿ ಒಳಗೊಂಡಿರಬೇಕಾಗುತ್ತದೆ. ಸಹ ಚಟುವಟಿಕೆಗಳ ಮೂಲಕವೂ ವಿಮರ್ಶಾತ್ಮಕ ಬೋಧನೆಯ ಗುರಿಯನ್ನು ಸಾಧಿಸಲು ಸಾಧ್ಯವಿದೆ.

– ಎಚ್.ಪಿ.ಶ್ಯಾ.

## ವಿದ್ಯಾರ್ಥಿ ಸಕ್ರಿಯತೆ

**ಅರ್ಥ:** ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕ – ವಿದ್ಯಾರ್ಥಿಗಳ / ಕಲಿಕಾರ್ಥಿಗಳ ನಡುವಿನ ಅನ್ಯೋನ್ಯ ಸಹ ಸಂಬಂಧ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಇದರಿಂದ ಬೌದ್ಧಿಕ ಸಾಮರ್ಥ್ಯದ ಯುಗವನ್ನು, ಶಾಂತಿಯುತ ಸಮಾಜವನ್ನು ಶಿಸ್ತಿನ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ.

ಆದರೆ ಮೇಲಿನ ಅಪೇಕ್ಷಿತ ಕಾರ್ಯ ನಡೆಯುವಲ್ಲಿ ವಿಫಲತೆ ಉಂಟಾದರೆ 'ಮುಕ್ತ' ಚರ್ಚೆ ಆಲೋಚನೆ, ವಿರೋಧ, ಕ್ರಾಂತಿಕಾರಕ ಚರ್ಚೆಗಳು, ಅಶಾಂತಿ ಕಲಿಕಾರ್ಥಿಗಳಲ್ಲಿ ಉಂಟಾಗುವುದು ಸಹಜ. ಇಂದು ಸಾರ್ವತ್ರಿಕ / ಸಾರ್ವಜನಿಕ ಶಿಕ್ಷಣ ಒಂದು ಸಾಮಾಜಿಕ ಬೇಡಿಕೆಯಾಗಿ ಪರಿಣಮಿಸಿದೆ.

ಜನ ಸಾಮಾನ್ಯರ ಸಾಮರ್ಥ್ಯ, ಆಶೋತ್ತರಗಳು, ಅತ್ಯುತ್ತಮ ತರಬೇತಿ ಹೊಂದಿರುವ ಮಾನವ ಶಕ್ತಿಯನ್ನು ಬಲಪಡಿಸುವುದು ಸಾರ್ವಜನಿಕ ಶಿಕ್ಷಣದ ಮುಖ್ಯ ಉದ್ದೇಶವಾಗಿದೆ. ಆಧುನಿಕ ತಂತ್ರಜ್ಞಾನದ ಸಮಾಜಕ್ಕೆ ಅನುಗುಣವಾದ ವ್ಯಕ್ತಿಗಳನ್ನು ತಯಾರಿಸುವ ಕಾರ್ಯವನ್ನು ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳು ಮಾಡಬೇಕಿದೆ.

ಶಿಕ್ಷಣದ ಈ ಮಹತ್ಕಾರ್ಯದಲ್ಲಿ ವ್ಯತ್ಯಯ ಉಂಟಾದಾಗ ಅಂದರೆ ಸಾರ್ವಜನಿಕ ಶಾಲೆ ಹಾಗೂ ಖಾಸಗಿ ಶಾಲೆಗಳು ಒದಗಿಸುವ ಶಿಕ್ಷಣ ಹಾಗೂ ಶಿಕ್ಷಣದ ಬೇಡಿಕೆಯಲ್ಲಿ ವ್ಯತ್ಯಾಸ ಉಂಟಾದಾಗ ಸಮಾಜದಲ್ಲಿ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸಿ ವಿದ್ಯಾಭ್ಯಾಸ ನೀಡುವುದು ಕಷ್ಟಕರವಾಗಿ ಪರಿಣಮಿಸುತ್ತದೆ. ಇದರಿಂದ ಬಡ – ಶ್ರೀಮಂತರ ಮಧ್ಯೆ ಅಂತರ ಉಂಟಾಗಿ ಶಿಕ್ಷಣ ಕ್ಷೇತ್ರದಲ್ಲಿ / ಸಮಾಜದಲ್ಲಿ ಉದ್ವಿಗ್ನತೆ, ಚರ್ಚೆ, ಕ್ರಾಂತಿ, ಅಭದ್ರತೆ ಉಂಟಾಗಿ 'ಅಶಾಂತಿ' ಉಂಟಾಗುತ್ತದೆ. ಸಾಮಾಜಿಕ ಬಾಂಧವ್ಯಕ್ಕೆ ಧಕ್ಕೆ ಉಂಟಾಗುತ್ತದೆ. ಈ 'ಅಶಾಂತಿ'ಗೆ ಕಾರಣಗಳು ಕಾಲ, ಸಂದರ್ಭಗಳು ಬೇರೆ ಬೇರೆಯಾಗಿರುತ್ತವೆ. ಈ ನಿಟ್ಟಿನಲ್ಲಿ ಐತಿಹಾಸಿಕ ದಾಖಲೆಗಳನ್ನು ಗಮನಿಸಿದಾಗ ಈ ರೀತಿಯ ಕ್ರಾಂತಿ, ಉದ್ವಿಗ್ನತೆ ನಿರಂತರವಾಗಿ ನಡೆದು ಬಂದಿರುವ ಸಾರ್ವತ್ರಿಕ ಅಂಶವಾಗಿದೆ. ಅಲ್ಲದೆ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಅವಿರತವಾಗಿ ತಮ್ಮ ಬೇಡಿಕೆ ಈಡೇರಿಕೆಗಾಗಿ ಸಕ್ರಿಯವಾಗಿ ಭಾಗವಹಿಸಿರುವುದು ಒಂದು ಐತಿಹಾಸಿಕ ಅಂಶವಾಗಿ ಪರಿಣಮಿಸಿದೆ. ವಿದ್ಯಾರ್ಥಿಗಳು ಶಿಕ್ಷಣದ ಬೇಡಿಕೆಗಳ ಪೂರೈಕೆಗಾಗಿ ಶೈಕ್ಷಣಿಕ ಸುಧಾರಣೆಗಳಿಗಾಗಿ ಹೋರಾಟ ಮಾಡಿದ ಕಾರ್ಯಚಟುವಟಿಕೆಗಳನ್ನು 'ವಿದ್ಯಾರ್ಥಿ ಸಕ್ರಿಯತೆ' (Student Activism) ಎಂದು ಕರೆಯಲಾಗಿದೆ.

### ವಿದ್ಯಾರ್ಥಿ ಸಕ್ರಿಯತೆಯ ಐತಿಹಾಸಿಕ ಹಿನ್ನೆಲೆ

ಮಧ್ಯಯುಗದಲ್ಲಿ – ಫ್ರಾನ್ಸ್, ಇಟಲಿ, ಜರ್ಮನಿ – ಇತರೆಡೆಗಳಲ್ಲಿ ವಿದ್ಯಾರ್ಥಿಗಳ ದೊಂಬಿ / ಗೊಂದಲ ಮತ್ತು ಅಶಾಂತಿಯ ಉದ್ವಿಗ್ನತೆ ಎಲ್ಲೆಡೆ ಹರಡಿತು. ಇದೇ ಕಾಲದಲ್ಲಿ ಮಾರ್ಟಿನ್ ಲೂಥರ್ ನಡೆಸುತ್ತಿದ್ದ ಚರ್ಚ್ ವಿರುದ್ಧ ಚಳವಳಿಗೆ ವಿದ್ಯಾರ್ಥಿಗಳು ಬೆಂಬಲ ನೀಡಿದರು. ಪೋಪ್ ಸಾಮ್ರಾಜ್ಯದ ವಿರುದ್ಧ ನಡೆಯುತ್ತಿದ್ದ ಚಳುವಳಿಗೆ ಅಲ್ಲಿನ ಆಡಳಿತ ಗೊಂದಲಗಳು ಕಾರಣವಾಗಿದ್ದವು.

ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾನಿಲಯಗಳ ಆವರಣಗಳಲ್ಲಿ ನಡೆಯುವ / ಸಮಸ್ಯೆಗಳ ವಿರುದ್ಧ ಚಳವಳಿ ತಕ್ಷಣ ಪ್ರಾರಂಭವಾಗುವುದನ್ನು ಗಮನಿಸಿದ್ದೇವೆ. ಚಳವಳಿಗಳು ಕೆಲವೊಮ್ಮೆ ಸಮಸ್ಯೆಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಪ್ರಾರಂಭವಾಗಿ ಅದರಿಂದ ವಿಫಲತೆ ಹೊಂದಿರುವುದು ಕಂಡು ಬರುತ್ತವೆ. ಹಬ್ಬಾಸ್ – ಪ್ರಕಾರ (1640) ವಿದ್ಯಾರ್ಥಿಗಳ ಅಶಿಸ್ತು

Digitised by Bharatavani, CIIL

ಚಳವಳಿಗೆ ಕಾರಣವಾಗುವುದಿಲ್ಲ. ಆಡಳಿತ ಮತ್ತು ಜನರ ಮಧ್ಯ ಉಂಟಾಗುವ ಗೊಂದಲ ಮತ್ತು ಅಶಾಂತಿಗಳೇ ವಿದ್ಯಾರ್ಥಿಗಳ ಚಳವಳಿಗೆ ಕಾರಣ ಎಂದಿದ್ದಾರೆ.

1848ರ ವಿಯನ್ನ ಕ್ರಾಂತಿಯಲ್ಲಿ ಫ್ರೆಡ್ರಿಕ್ ಏಂಜಲ್ಸ್‌ರ ವಿವರಣೆಯಂತೆ ನಾಲ್ಕು ಸಾವಿರ ವಿದ್ಯಾರ್ಥಿಗಳು ಕ್ರಾಂತಿಗೆ ಬಲವಾದ ಸೈನಿಕರಂತಿದ್ದರು. ದೇಶ ರಕ್ಷಣೆಯ ಯೋಧರಿಗಿಂತ ಮಿಗಿಲಾದ ಶಿಸ್ತಿನ ಸಿಪಾಯಿಗಳಾಗಿದ್ದರು. ಕ್ರಾಂತಿಯ ನಿಜವಾದ ಸೈನಿಕರಾಗಿದ್ದರು, ಅಷ್ಟೆ ಅಲ್ಲ ಅವರು ಚಿರಯೌವನದ ಪ್ರೋತ್ಸಾಹಿಗಳಾಗಿದ್ದರು.

**ಲೆನಿನ್** ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದಾಗ ಕ್ರಾಂತಿಕಾರಕ ಚಳುವಳಿಯಲ್ಲಿ ಭಾಗವಹಿಸಿದ್ದರು. ಜಾಗತಿಕ ಯುದ್ಧದ ನಂತರದಲ್ಲಿ ಯೂರೋಪಿನ ಸಮಸ್ಯೆಗಳ ವಿರುದ್ಧ, ಚಳವಳಿಯಲ್ಲಿ ಧುಮುಕಿದರು.

ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳ ತೀವ್ರ ಸುಧಾರಣಾ ಚಳವಳಿ ಮತ್ತು ಸಕ್ರಿಯತೆ ಹೊಸದೇನೂ ಅಲ್ಲ. ಆಯಾ ಸನ್ನಿವೇಶ ಸಂದರ್ಭಗಳಿಗೆ ಸಂಬಂಧಿಸಿದಂತೆ ಹೊಸ ಆಯಾಮಗಳು ಹುಟ್ಟಿಕೊಳ್ಳುತ್ತವೆ. ವಿದ್ಯಾರ್ಥಿಗಳ ರಾಜಕೀಯ ಮತ್ತು ಸಕ್ರಿಯತೆಯು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವೇದಿಕೆಗಳಾಗಿ ಪರಿಣಮಿಸಿವೆ. 1930ರವರೆಗೆ ವಿದ್ಯಾರ್ಥಿಗಳ ಮತ್ತು ಯುವಕರ ತೀವ್ರ ಚಳವಳಿಗಳು ನಿಜವಾದ ಅರ್ಥ ಪಡೆದಿರಲಿಲ್ಲ. ಆನಂತರದಲ್ಲಿ ಈ ಚಳವಳಿಗಳು **'ಸಾಮಾಜಿಕ ಶಕ್ತಿ'**ಯಾಗಿ ಪರಿಣಮಿಸಿವೆ.

### ವಿದ್ಯಾರ್ಥಿ ಸಕ್ರಿಯತೆಯ ಮೂಲ ಮತ್ತು ಅಂತಾರಾಷ್ಟ್ರೀಯ ಪ್ರವೃತ್ತಿ

ವಿದ್ಯಾರ್ಥಿಗಳ ಘಟನಾ ವಿದ್ಯಮಾನಗಳಿಗೆ ನಾನಾ ಕಾರಣಗಳಿರಬಹುದು. ವಿದ್ಯಾರ್ಥಿಗಳ ಮುಷ್ಕರ ಮತ್ತು ಬಂಡಾಯಕ್ಕೆ ಒಂದು ಕಾರಣ ಹೇಳುವುದು ಕಷ್ಟಕರವಾದುದು. ಈ ರೀತಿಯ ಕಾರಣಗಳು ತುಂಬಾ ಸೂಕ್ಷ್ಮವಾದ ಮತ್ತು ತಪ್ಪುನಂಬಿಕೆಗಳಿಗೆ ಕಾರಣವಾಗಿರುತ್ತವೆ. ಅಲ್ಲದೇ ಅವು ತುಂಬಾ ಸಕ್ರೀಯತೆ ಮತ್ತು ಭಾವನಾತ್ಮಕ ಘಟನೆಗಳಿಗೆ ಸಂಬಂಧಿಸಿರುತ್ತವೆ. ಕಾರಣಗಳು ಆಯಾ ಸಂದರ್ಭ, ಸನ್ನಿವೇಶ, ಕಾಲವನ್ನು ಅವಲಂಬಿಸಿರುತ್ತವೆ.

ವಿದ್ಯಾರ್ಥಿಗಳ ಮುಷ್ಕರ ಮತ್ತು ಬಂಡಾಯ ಬಗ್ಗೆ ಹಿಂದೆ ಮತ್ತು ಇಂದು ನಡೆದಿರುವ ಸಮೀಕ್ಷೆಗಳನ್ನು ಗಮನಿಸಿದಾಗ ಶೈಕ್ಷಣಿಕ ಸಂಸ್ಥೆಗಳಿಗೆ ಸಂಬಂಧಿಸಿದ ಕೆಲವು ಆಂತರಿಕ ಸಂಘರ್ಷಗಳು ಇವುಗಳಿಗೆ ಕಾರಣವೆಂಬುದು ತಿಳಿದು ಬರುತ್ತದೆ. ಶಿಕ್ಷಣ ಸಂಸ್ಥೆಗಳ ಒಡೆತನ ಸದಸ್ಯರು, ಆಡಳಿತ ಮತ್ತು ಬೋಧಕ ವರ್ಗ ಇವುಗಳ ಮಧ್ಯದಲ್ಲಿ ನಡೆಯುವ ಆಂತರಿಕ ಸಂಘರ್ಷಗಳು ಇವುಗಳಿಗೆ ಮೂಲಕಾರಣಗಳೆಂದು ತಿಳಿದು ಬರುತ್ತದೆ. ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುವ ಅಧಿಕಾರಿಗಳ ಅಂತಿಮ ನಿಲುವುಗಳು ವಿದ್ಯಾರ್ಥಿಗಳ ಸಾಮಾಜಿಕ ಜೀವನ ಮತ್ತು ಇರುವಿಕೆಗೆ ಸಂಬಂಧಿಸಿರುತ್ತವೆ.

ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುವ ಅಧಿಕಾರಿಗಳ ಮತ್ತು ಅಲ್ಲಿ ಕಾರ್ಯನಿರ್ವಹಿಸುವ ನಿರ್ವಹಣಾಧಿಕಾರಿಗಳ ಮಧ್ಯದಲ್ಲಿ ನಡೆಯುವ ಶೀತಲ ಸಮರಗಳು ಆಂತರಿಕ ಭಿನ್ನಾಭಿಪ್ರಾಯಗಳು ನಂಬಿಕೆಗಳಿಗೆ ಸಂಬಂಧಿಸಿರುತ್ತವೆ. ಶಿಕ್ಷಣದ ವಿಕಾಸ ಶೈಕ್ಷಣಿಕ ಆಡಳಿತಾಧಿಕಾರಿಗಳನ್ನು ಮತ್ತು ಕಾರ್ಯನಿರ್ವಹಿಸುವ ಬೋಧಕರನ್ನು ಅವಲಂಬಿಸಿರುತ್ತದೆ. ಅದರಲ್ಲೂ ವಿಶೇಷವಾಗಿ ಬೋಧಕರು ಶಿಕ್ಷಣ ಸಂಸ್ಥೆಯ ಬೆನ್ನೆಲುಬು. ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ತೆಗೆದುಕೊಳ್ಳುವ ಅತ್ಯಂತ ಮುಖ್ಯ ನಿರ್ಧಾರಗಳು ಕೆಲವೊಮ್ಮೆ ಸಂಘರ್ಷಕ್ಕೆ ಕಾರಣವಾಗುತ್ತವೆ. ಆಡಳಿತ ಮತ್ತು ಶೈಕ್ಷಣಿಕ ವಿಕಾಸದ ವಿಚಾರ ವಿನಿಮಯಗಳು ವಿದ್ಯಾರ್ಥಿಗಳ ಭಾವನೆಗಳನ್ನು ಕೆರಳಿಸುವ ಸಾಧ್ಯತೆ ಕಂಡು ಬರುತ್ತದೆ. ಹೀಗೆ ಶಿಕ್ಷಣ ಸಂಸ್ಥೆಗಳಲ್ಲಿ **ತ್ರಿಕೋನ ಸ್ಪರ್ಧೆ** ಅಂದರೆ ರಾಜಕೀಯ ಮಂಡಳಿ, ಆಡಳಿತ ಮತ್ತು ಬೋಧಕ ಇವರ ಮಧ್ಯದ ಶೀತಲ ಸಮರಗಳೂ ವಿದ್ಯಾರ್ಥಿ ಅತೃಪ್ತಿಗೆ ಕಾರಣವಾಗಿ ಘರ್ಷಣೆಗಳೂ ಉದ್ಭವಿಸುತ್ತವೆ.

ಇತ್ತೀಚಿನ ಶತಕದಲ್ಲಿ ಶಿಕ್ಷಣ ಸಂಸ್ಥೆಗಳ ಸಂಬಂಧ ಮತ್ತು ಸಂಘರ್ಷಗಳ ಮಧ್ಯೆ ಕಂಡು ಬರುವ ನಾಲ್ಕನೇ ಅಂಶವೆಂದರೆ **ವಿದ್ಯಾರ್ಥಿಗಳು**. ವಿದ್ಯಾರ್ಥಿಗಳು ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ಧ್ವನಿ ಎತ್ತುವುದುಂಟು. ಈ ರೀತಿಯ ವಿದ್ಯಾರ್ಥಿ ಪ್ರದರ್ಶನ ಮೊದಲು ಫ್ರಾನ್ಸ್ ಮತ್ತು ಪಶ್ಚಿಮ ಜರ್ಮನಿಗಳಲ್ಲಿ ಕಂಡುಬಂದಿತು. ವಿದ್ಯಾರ್ಥಿಗಳ ಶಕ್ತಿ ಪ್ರದರ್ಶನ ಮುಷ್ಕರ ಮತ್ತು ಬಂಡಾಯಗಳ ರೂಪದಲ್ಲಿ ಆಗಾಗ ನಡೆಯಲು ಪ್ರಮುಖ ಕಾರಣ ಮೇಲಿನ ಮೂರು ಶಕ್ತಿ ಮೂಲಗಳು. ಶೈಕ್ಷಣಿಕ ಸಂಸ್ಥೆಗಳ ಆವರಣದಲ್ಲಿ ವಿದ್ಯಾರ್ಥಿಗಳ ವಿಚಾರಗಳಿಗೆ ಅವಕಾಶ ಇಲ್ಲದಿರುವ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು, ಯುವಕರು ತಮ್ಮ ನಿಲುವುಗಳನ್ನು ವ್ಯಕ್ತಪಡಿಸಲು, ಕೊಳ್ಳಲು ಜೊತೆಗೆ ಸಾಮಾಜಿಕ ಜೀವನಕ್ಕೆ ಸಮೀಕರಿಸಿ ಕೊಳ್ಳಲು ಹಾಗೂ ಸಮಾಜದ ಧ್ಯೇಯೋದ್ದೇಶಗಳು ಮತ್ತು ನೀತಿಗಳನ್ನು ಈಡೇರಿಸಿಕೊಳ್ಳಲು ತಮ್ಮ ಶಕ್ತಿ ಪ್ರದರ್ಶನವನ್ನು ಒಂದು ಹಕ್ಕಾಗಿ ಪಡೆದುಕೊಳ್ಳಲು ಯುವ ವಿದ್ಯಾರ್ಥಿಗಳು ಮುಷ್ಕರ, ದಂಗೆ, ಹೋರಾಟ ನಡೆಸುವುದು ಸರ್ವೇಸಾಮಾನ್ಯವಾಗಿದೆ ಎಂಬ ಅಂಶವು ಗಮನಾರ್ಹವಾಯಿತು.

ವಿದ್ಯಾರ್ಥಿಗಳ ಬೇಡಿಕೆ ಹೋರಾಟಗಳನ್ನು ವಯಸ್ಕರ ಸಮಾಜ ಗಣನೆಗೆ ತೆಗೆದುಕೊಳ್ಳದಿರುವುದು ಕಾರ್ಯಗತಗೊಳಿಸುವಲ್ಲಿ ಮೀನ – ಮೇಷ ಎಣಿಸುವುದು. ವಿಳಂಬ ನೀತಿ ಅನುಸರಿಸುವುದು ಸರ್ವೇ ಸಾಮಾನ್ಯ. ರಾಷ್ಟ್ರದ ಶಿಕ್ಷಣ ಸಂಸ್ಥೆಗಳಾಗಲಿ, ಸಮಾಜವಾಗಲಿ, ಯುವಕರ ಬೇಡಿಕೆ ಈಡೇರಿಸುವಲ್ಲಿ ಸಾಂಪ್ರದಾಯಿಕ ಧೋರಣೆ ಅನುಸರಿಸುತ್ತವೆ. ಈ ಸಂಪ್ರದಾಯ ಬದ್ಧ ಸಂಸ್ಥೆಗಳು ವಿದ್ಯಾರ್ಥಿಗಳ ಯುವಕರ ಬೇಡಿಕೆಗಳನ್ನು ಬಹುಬೇಗ ಅರ್ಥ ಮಾಡಿಕೊಂಡು ಪ್ರಗತಿಯ ಕಡೆಗೆ ಸಾಗಬೇಕಿತ್ತು. ವಿದ್ಯಾರ್ಥಿಗಳ ಬೇಡಿಕೆಗಳು ಬದಲಾವಣೆಯ ಬಯಕೆಗಳು ಮತ್ತು ಕ್ರಾಂತಿಕಾರಿಕ ಸಕ್ರಿಯತೆಗಳನ್ನು ಒಂದೇ ಬಾರಿ ಬಗೆಹರಿಸಲಾಗದು. ಇವುಗಳ ಪೂರ್ಣ ಪ್ರಮಾಣದ ಈಡೇರಿಕೆಗೆ ನಿರಂತರ ಕ್ರಾಂತಿಗಳಾಗಬೇಕಾಗುತ್ತದೆ. ಇಂಥ ಕ್ರಾಂತಿಗಳೇ ಕೆಲವು ವೇಳೆ ಸಮಸ್ಯೆಗಳಾಗಿ ಪರಿಣಮಿಸುತ್ತವೆ.

ಅಂತರಾಷ್ಟ್ರೀಯ ಇತಿಹಾಸದಲ್ಲಿ ಗಮನಿಸಿದಾಗ 1960ರಲ್ಲಿ ಇಂಡೋನೇಷ್ಯದ ವಿದ್ಯಾರ್ಥಿಗಳು ನಡೆಸಿದ ಆ ರಾಷ್ಟ್ರದ ಆಡಳಿತದ ವಿರುದ್ಧ ಮಾಡಿದ ಚಳವಳಿ ಆಂದೋಲನವು ರಾಷ್ಟ್ರೀಯ ರಾಜಕಾರಣಕ್ಕೆ ಸಂಬಂಧಿಸಿತ್ತು. ಅದು ಸಮಾಜದಲ್ಲಿ ಕ್ರಾಂತಿ ಉಂಟುಮಾಡುವ ರಾಷ್ಟ್ರದ ಧ್ಯೇಯದಲ್ಲಿ ಬದಲಾವಣೆ ತರುವ ಪ್ರಯತ್ನವಾಗಿತ್ತು.

ಉತ್ತರ ಅಮೇರಿಕ ವಿದ್ಯಾರ್ಥಿಗಳ ಹೋರಾಟಕ್ಕೆ ಆ ರಾಷ್ಟ್ರದಲ್ಲಿನ ಸಾಮಾಜಿಕ–ಆರ್ಥಿಕ ಅಸಮತೋಲನ ಕಾರಣವಾಗಿತ್ತು. ಶೈಕ್ಷಣಿಕ ರಂಗದಲ್ಲಿನ ಅಸಮಾನತೆ ಹೋಗಲಾಡಿಸುವುದು ಹಾಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು ಅದರ ಧ್ಯೇಯವಾಗಿತ್ತು. ಮತ್ತೊಂದು ಹಂತದಲ್ಲಿ ಈ ಹೋರಾಟವು ಶಿಕ್ಷಣ ಸಂಸ್ಥೆಗಳಲ್ಲಿನ ಪ್ರಕ್ರಿಯೆಗಳನ್ನು ಸಾಮಾಜೀಕರಣಗೊಳಿಸುವುದು, ಶಿಕ್ಷಣದಲ್ಲಿ ಆದರ್ಶಗಳು, ಪಠ್ಯಕ್ರಮ ಆಚರಣೆ, ಸಂಶೋಧನೆ ಇತ್ಯಾದಿ ಅಂಶಗಳಿಗೆ ಹೆಚ್ಚು ಒತ್ತನ್ನು ನೀಡುವುದಾಗಿತ್ತು. ವಿದ್ಯಾರ್ಥಿಗಳ ಆ ಚಳವಳಿಯು ಅ ರಾಷ್ಟ್ರದಲ್ಲಿನ ಸಾಮಾಜಿಕ ಸಮಸ್ಯೆಗಳಾದ ಆರ್ಥಿಕ ಅಸಮಾನತೆ, ಜನಾಂಗೀಯ ಅಸಮಾನತೆ, ಸಾಮಾಜಿಕ ಸಾಮರಸ್ಯದ ಕೊರತೆ, ಅವಕಾಶಗಳ ವಂಚನೆ ಇತ್ಯಾದಿ ಅಂಶಗಳಿಗೆ ಸಂಬಂಧಿಸಿದಂತೆ ಸರ್ಕಾರದ ವಿರುದ್ಧ ನಡೆಸಿದ


Digitised by Bharatavani, CIIL

ಹೋರಾಟವಾಗಿತ್ತು. **ಬ್ಲಾಕ್ ಸ್ಟೂಡೆಂಟ್ ಅಸೋಸಿಯೇಷನ್, ಯೂನಿವರ್ಸಿಟಿ ಆಕ್ಷನ್ ಗ್ರೂಪ್** ಎಂಬ ವಿದ್ಯಾರ್ಥಿಗಳ ಗುಂಪುಗಳು ಅಸಮಾನತೆ, ಅವಕಾಶಗಳ ವಂಚನೆ, ಭೇದ ಭಾವನೆ, ಜನಾಂಗೀಯ ತಾರತಮ್ಯ ಇತ್ಯಾದಿಗಳ ವಿರುದ್ಧ ಆಯಾ ಕಾಲ, ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಹೋರಾಟ ನಡೆಸಿದವು.

1960–1970ರ ದಶಕದಲ್ಲಿ ಆಫ್ರಿಕಾ ಖಂಡದಲ್ಲಿ ಒಂದಲ್ಲ ಒಂದು ರೀತಿಯ ವಿದ್ಯಾರ್ಥಿಗಳ ಚಳವಳಿಗಳು ನಡೆದವು. ಈಜಿಪ್ಟ್, ಸೆನೆಗಲ್, ನೈಜೀರಿಯಾ, ಘಾನ, ಕಮೆರೂನ್, ಕಾಂಗೋ, ಜೈರೆ, ದಕ್ಷಿಣ ಆಫ್ರಿಕ, ಜಾಂಬಿಯ, ತಾಂಜೀನಿಯಾ, ಕಿನ್ಯಾ, ಈಥಿಯೋಪಿಯಾ – ಇತ್ಯಾದಿ ರಾಷ್ಟ್ರಗಳಲ್ಲಿ ವಿದ್ಯಾರ್ಥಿ ಚಳವಳಿ ನಡೆದವು. ಈ ಚಳವಳಿಗಳೂ ಆಯಾ ರಾಷ್ಟ್ರಗಳ ಕಾಲ, ಸನ್ನಿವೇಶ, ಸಂದರ್ಭಗಳಿಗೆ ಸಂಬಂಧಿಸಿವೆ. ಚಳವಳಿಗಳೂ ಹೆಚ್ಚಾಗಿ ಪರೀಕ್ಷೆಗಳು, ಪಠ್ಯವಸ್ತು, ರಾಷ್ಟ್ರೀಯ ಧ್ಯೇಯೋದ್ದೇಶಗಳು, ನೀತಿಗಳು, ಶಾಲಾ–ಕಾಲೇಜುಗಳು, ಆಡಳಿತ, ಸಂಸ್ಥೆಗಳ ಆಡಳಿತ, ಸಂಸ್ಕೃತಿ, ಆಂತರಿಕ ಆಡಳಿತ ನೀತಿಗಳು–ಇತ್ಯಾದಿ ಅಂಶಗಳ ವಿರುದ್ಧ ನಡೆದವು.

ರಾಷ್ಟ್ರೀಯ ರಾಜಕಾರಣದಲ್ಲಿ ವಿದ್ಯಾರ್ಥಿಗಳ ಸಕ್ರಿಯತೆಯನ್ನು ಕಡೆಗಣಿಸುವಂತಿಲ್ಲ. ವಿದ್ಯಾರ್ಥಿಗಳ ಸಕ್ರಿಯತೆ ಸ್ಫೋಟ ಇಡೀ ದೇಶದಲ್ಲಿಯೇ ವ್ಯಾಪಿಸಿರುತ್ತವೆ. ವಿದ್ಯಾರ್ಥಿಗಳ ಚಳವಳಿಗಳು, ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ, ಸರ್ಕಾರದ ನೀತಿಗಳು, ಶಿಕ್ಷಣ ಇತ್ಯಾದಿ ಸಮಸ್ಯೆಗಳಿಗೆ ಸಂಬಂಧಿಸಿರುತ್ತವೆ. ರಾಜ್ಯ ರಾಷ್ಟ್ರೀಯ ಸರ್ಕಾರಗಳ ಸವಾಲುಗಳು ಯುವ ಜನತೆ ವಿದ್ಯಾರ್ಥಿಗಳ ಜೀವನ ಅವಶ್ಯಕತೆಗಳನ್ನು ಈಡೇರಿಸುವುದಾಗಿರುತ್ತದೆ. ಶೈಕ್ಷಣಿಕ ಮುಕ್ತತೆಗಾಗಿ ಶೈಕ್ಷಣಿಕ ಸಂಸ್ಥೆಗಳ ಆವರಣದ ಒಳಗೆ ಮತ್ತು ಹೊರಗೆ ಮುಕ್ತ ಅವಕಾಶಗಳನ್ನು ಪಡೆಯುವುದಾಗಿರುತ್ತದೆ.

**ಪೀಟರ್ ಯುನಾರೋಸ್**ರವರು "ವಿದ್ಯಾರ್ಥಿಗಳು ಜನ ಸಾಮಾನ್ಯರ ಗಮನ ಸೆಳೆಯುವ ಚಳವಳಿಗಳನ್ನು ಮಾಡುತ್ತಾರೆ. ಇವು ತುಂಬಾ ಭರವಸೆಯುತವಾಗಿರುತ್ತವೆ. ಹಿರಿಯರ ಗಮನ ಸೆಳೆಯುವ ಮೂಲಕ ತಮ್ಮ ಸವಾಲುಗಳನ್ನು ಗೆಲ್ಲುವ ಸಾಮರ್ಥ್ಯ ಅವುಗಳಲ್ಲಿರುತ್ತದೆ. ವಿದ್ಯಾರ್ಥಿ ಚಳವಳಿಗಳು ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸುತ್ತವೆ. ಇಂಥ ಚಳವಳಿಕೆಗಳು ಕೆಲವೊಮ್ಮೆ ಅತಿರೇಕಕ್ಕೆ ಹೋಗುವ ಸಾಧ್ಯತೆಯು ಇರುತ್ತದೆ. ಆದರೆ ಇವು ಇಡೀ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತವೆ. ಸರ್ಕಾರದ ನೀತಿಗಳನ್ನು ಧೈರ್ಯವಾಗಿ ಪ್ರಶ್ನಿಸುತ್ತವೆ. ಸವಾಲುಗಳನ್ನು ಎದುರಿಸುತ್ತವೆ" – ಎಂದು ಅಭಿಪ್ರಾಯ ಪಡುತ್ತಾರೆ.

ವಿದ್ಯಾರ್ಥಿಗಳ ಆಂದೋಲನಗಳು ಶೈಕ್ಷಣಿಕ ಮತ್ತು ರಾಜಕೀಯ ನೈತಿಕತೆ/ಅನೈತಿಕತೆಯನ್ನು ಒಳಗೊಂಡಿರುತ್ತವೆ. ಇವು ಇಡೀ ವಿಶ್ವದಲ್ಲಿಯೇ ವ್ಯಾಪಿಸಿವೆ. ತಮ್ಮದೇ ಆದ ಐತಿಹಾಸಿಕ ಹಿನ್ನೆಲೆ ಸಾಮಾಜಿಕ ನೆಲೆಗಳನ್ನು ಒಳಗೊಂಡ ಅಂಶಗಳನ್ನು ಈ ಚಳವಳಿಗಳು ಪ್ರತಿಬಿಂಬಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಇಡೀ ವಿಶ್ವದಲ್ಲಿ ವಿದ್ಯಾರ್ಥಿಗಳ ಬಿಕ್ಕಟ್ಟುಗಳು ಸ್ಥಳೀಯ ಮತ್ತು ಪ್ರಾದೇಶಿಕ ವಿಷಯಕ್ಕೆ ಸಂಬಂಧಿಸಿರದೆ ಕೇವಲ ಶಕ್ತಿ ಪ್ರದರ್ಶನಕ್ಕಾಗಿ ಹೋರಾಡುವ ಧೋರಣೆ ಕೆಲವೊಮ್ಮೆ ಕಂಡು ಬರುತ್ತದೆ.

## ಭಾರತದಲ್ಲಿ ವಿದ್ಯಾರ್ಥಿ ಸಕ್ರಿಯತೆ

ವಿದ್ಯಾರ್ಥಿ ಬಲ ಇತ್ತೀಚಿನ ದಶಕಗಳಲ್ಲಿ ಅನೇಕ ದೇಶಗಳಲ್ಲಿ ಮಹತ್ವಗಳಿಸಿಕೊಂಡಿದೆ. ಅದರಲ್ಲೂ ಭಾರತದಲ್ಲಿ ವಿದ್ಯಾರ್ಥಿಗಳ ಆಂದೋಲನ ತನ್ನದೇ ಆದ ಇತಿಹಾಸವನ್ನು ಹೊಂದಿದ ವಿಷಯವಾಗಿದೆ. ವಿದ್ಯಾರ್ಥಿಗಳು ರಾಜಕೀಯದಲ್ಲಿ ತಮ್ಮ ಹಕ್ಕುಗಳಿಗಾಗಿ, ದೇಶ ಪ್ರಗತಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತರಾಗಿ ಕ್ರಿಯಾಶೀಲರಾಗಿ ಆಂದೋಲನ ಮಾಡುವ ವಿದ್ಯಾರ್ಥಿ ಕ್ರಿಯಾಶೀಲತೆ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಗೂ ಬಹಳ ಮುಂಚೆಯೆ ಆರಂಭವಾಯಿತೆಂದು ಹೇಳಬಹುದು. ಭಾರತದಲ್ಲಿ ಆಂಗ್ಲರ ಆಡಳಿತವನ್ನು ವಿರೋಧಿಸಿ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಂಗ್ಲರ ಅನುಚಿತ ಆಡಳಿತ ನೀತಿಸೂತ್ರಗಳನ್ನು ವಿರೋಧಿಸುವುದರ ಮೂಲಕ ಭಾರತದಲ್ಲಿ ವಿದ್ಯಾರ್ಥಿ ಸಕ್ರಿಯತೆ ಆರಂಭವಾಯಿತು. ಬ್ರಿಟಿಷರ ಆಡಳಿತಕ್ಕೆ ಭಾರತೀಯರ ಪ್ರತಿಕ್ರಿಯೆ ವಸಾಹತು ವಿರೋಧಿ ಸ್ವಾತಂತ್ರ್ಯ ಆಂದೋಳನವಾಗಿ ರೂಪುಗೊಂಡಾಗ ಆ ಆಂದೋಲನದ ಮುಖಂಡರು ವಿವಿಧ ಹಂತಗಳಲ್ಲಿ ವಿದ್ಯಾರ್ಥಿ ಬಲವನ್ನು ಉಪಯೋಗಿಸಿಕೊಂಡರು. ಸ್ವಾತಂತ್ರ್ಯ ಪೂರ್ವದಲ್ಲಿ ಕಂಡು ಬಂದ ವಿದ್ಯಾರ್ಥಿ ಸಕ್ರಿಯತಾ ಆಂದೋಲನ ಸ್ವಾತಂತ್ರ್ಯ ಗಳಿಸುವವರೆಗೂ ಮೌಲ್ಯಾಧಾರಿತವಾಗಿತ್ತು. ಬ್ರಿಟಿಷರ ಆಡಳಿತವನ್ನು ಕಿತ್ತೊಗೆದು ಸ್ವಾತಂತ್ರ್ಯ ಗಳಿಸುವ ಒಂದೇ ಗುರಿ ವಿದ್ಯಾರ್ಥಿ ಸಕ್ರಿಯತೆ ಮುಂದೆ ಇದ್ದಿತು. ಆದರೆ ವಿದ್ಯಾರ್ಥಿ ಸಕ್ರಿಯತೆ ಸ್ವಾತಂತ್ರ್ಯದ ನಂತರದ ದಶಕಗಳಲ್ಲಿ ದಿಕ್ಕು ತಪ್ಪಿದಂತಾಗಿದೆಯಾದರೂ ಕೆಲವು ಘಟನೆಗಳಲ್ಲಿ ತನ್ನ ಪ್ರಭಾವ ಬೀರಿ ಸಫಲತೆ ಪಡೆದಿದೆ.

ಹತ್ತೊಂಬತ್ತನೆ ಶತಮಾನದಲ್ಲಿ ವಿದ್ಯಾರ್ಥಿ ಆಂದೋಳನ ವಿವಿಧ ಹಂತಗಳಲ್ಲಿ ವಿಕಾಸಗೊಂಡಿತು. 19ನೇ ಶತಮಾನದ ಆದಿಭಾಗದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದಂಥ ಹಲವು ಸಮಾಜ ಸುಧಾರಕ ಆಂದೋಳನಗಳು ಭಾರತದಲ್ಲಿ ನಡೆದವು. ಅಲ್ಲದೆ ಸಮಾಜಸುಧಾರಣೆಯನ್ನೇ ಮುಖ್ಯ ಗುರಿಯಾಗಿಸಿಕೊಂಡು ಕೆಲವು ಸಂಸ್ಥೆಗಳು ಸಂಘಗಳು ಹುಟ್ಟಿಕೊಂಡವು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯ ಸಮಾಜದಲ್ಲಿ ರಾಜಕೀಯ ಅರಿವು ಮೂಡಿತಲ್ಲದೆ ಇವರಿಂದ ವಿದ್ಯಾರ್ಥಿ ವರ್ಗವ ಪ್ರಭಾವಗೊಂಡಿತು. 1875ರಷ್ಟು ಹಿಂದೆಯೆ "ಸ್ಟೂಡೆಂಟ್ ಅಸೋಸಿಯೇಷನ್" ಎಂಬ ವಿದ್ಯಾರ್ಥಿ ಸಂಘವೊಂದನ್ನು ಬಂಗಾಳದಲ್ಲಿ ವಕೀಲರು, ಭಾರತದ ಆದ್ಯ ರಾಜಕೀಯ ಮುಖಂಡರುಗಳಲ್ಲಿ ಒಬ್ಬರಾದ ಆನಂದ ಮೋಹನ ಬೋಸರು ಪ್ರಾರಂಭಿಸಿದರು. ಮೆಟ್ರೊಪೊಲಿಟನ್ ಕಾಲೇಜಿನ ಪ್ರಾಧ್ಯಾಪಕ ವರ್ಗದವರಲ್ಲಿ ಒಬ್ಬರಾದ ಸುರೇಂದ್ರನಾಥ ಬ್ಯಾನರ್ಜಿ ದೇಶದ ಹಿತದೃಷ್ಟಿಯಿಂದ ವಿದ್ಯಾರ್ಥಿ ವರ್ಗದಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಲು ಕ್ರಮಗಳನ್ನು ತೆಗೆದುಕೊಂಡರು. ನಂತರ, 1893ರಲ್ಲಿ ಸುರೇಂದ್ರನಾಥ ಬ್ಯಾನರ್ಜಿಯ ಬಂಧನದ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸಿದರು. ಬಂಗಾಳಿ ಯುವಕ ವರ್ಗದ ಒಂದು ಭಾಗ, ವಿಶೇಷತಃ ವಿದ್ಯಾರ್ಥಿಗಳು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮಂದಗತಿಯ ಧೋರಣೆಯಿಂದ ಅತೃಪ್ತವಾಗಿತ್ತಲ್ಲದೆ ಕ್ರಾಂತಿಕಾರಿ ಮಾರ್ಗಗಳನ್ನು ಅನುಸರಿಸಲನುವಾಗಿತ್ತು.

1905ರ ಬಂಗಾಳ ವಿಭಜನೆಗೂ ಮುನ್ನ ರಾಜಕೀಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪಾತ್ರವಹಿಸುವುದನ್ನು ತಡೆಯಲು ಬಂದ ಕಾರ್ಲೈಲ್ ಸುತ್ತೋಲೆ ಮತ್ತು ಆದೇಶಗಳ ವಿರುದ್ಧ ದೇಶದ ವಿವಿಧ ಸ್ಥಳಗಳಲ್ಲಿ ವಿದ್ಯಾರ್ಥಿಗಳ ಆಂದೋಳನ ಪ್ರಾರಂಭಗೊಂಡಿತು. 1905ರ ಬಂಗಾಳದ ವಿಭಜನೆಯಾದುದು ಭಾರತದ ಇಪ್ಪತ್ತನೆಯ ಶತಮಾನದ ವಿದ್ಯಾರ್ಥಿಗಳ ಕ್ರಿಯಾತ್ಮಕತೆಗೆ ನಾಂದಿ ಹಾಡಿತು.

1905ರಲ್ಲಿ ಬಂಗಾಳ ವಿಭಜನೆಯಾದಾಗ ಬಂಗಾಳದ ವಿದ್ಯಾರ್ಥಿವರ್ಗ ರಾಷ್ಟ್ರೀಯತೆಯ ಕರೆಗೆ ಅತ್ಯುತ್ಸಾಹದಿಂದ ಓಗೊಟ್ಟರು. ಶಾಲಾ ಮಕ್ಕಳಿಂದ ಹಿಡಿದು ಎಲ್ಲಾ ವಿದ್ಯಾರ್ಥಿವರ್ಗದವರು ಸ್ವದೇಶಿ ಮತ್ತು ಬಹಿಷ್ಕಾರ ಚಟುವಟಿಕೆಗಳಲ್ಲಿ ತೊಡಗಿದರು. ಬಂಗಾಳದಲ್ಲಾದ ಈ ಪ್ರತಿಕ್ರಿಯೆ ದೇಶದ ಇತರ ಸ್ಥಳಗಳ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿತು. ಆಗ ಪ್ರಚಲಿತವಿದ್ದ ಶಿಕ್ಷಣ ವ್ಯವಸ್ಥೆಯಲ್ಲಿನ ಅತೃಪ್ತಿಯು ಆಧಾರವಾಗಿ

Digitised by Bharatavani, CIIL

ಪರಿಣಮಿಸಿತು. ರಾಷ್ಟ್ರೀಯವಾದಿಗಳು ಕಣಕ್ಕಿಳಿದು ವಿದ್ಯಾರ್ಥಿವರ್ಗದ ಬೆಂಬಲಿಗರಾದರು. ಬಂಗಾಳದ ವಿಭಜನೆಯ ನಂತರ 30 ಜುಲೈ, 1905ರಲ್ಲಿ ಸರ್ಕಾರಿ ಹಿಂದು ಈಡನ್ ಹಾಸ್ಟೆಲ್‌ನಲ್ಲಿ ನಡೆದ ವಿದ್ಯಾರ್ಥಿ ಸಭೆ ಬಂಗಾಳಿಗಳ ಪ್ರಕೃತಿಗೆ ವಿರುದ್ಧವಲ್ಲದ ಸಕ್ರಿಯ ವಿರೋಧಾತ್ಮಕ ಚಳುವಳಿ ಅಸಾಧ್ಯವೇನಲ್ಲ ಎಂದು ತೀರ್ಮಾನಿಸಿತು. ಇದಕ್ಕೆ ಪರ್ಯಾಯ ಮಾರ್ಗವಾಗಿ ಐರೋಪ್ಯ ಸರಕುಗಳನ್ನು ಬಹಿಷ್ಕರಿಸಬಹುದೆಂಬ ಪ್ರಸ್ತಾಪವನ್ನು ಸಭೆಯಲ್ಲಿ ಮಾಡಲಾಯಿತು. ಆಗಸ್ಟ್ 7, 1905ರಂದು ಕಲ್ಕತ್ತೆಯ ಪುರಸಭೆಯಲ್ಲಿ ನಡೆದ ಅತಿದೊಡ್ಡ ಸಭೆಯಲ್ಲಿ ಸಹಸ್ರಾರು ಜನ ಹಾಜರಿದ್ದರು. ಅದರಲ್ಲಿ ವಿದ್ಯಾರ್ಥಿಗಳೇ ಹೆಚ್ಚಾಗಿದ್ದರು. ಬಂಗಾಳ ವಿಭಜನೆಯ ವಿರುದ್ಧ ಆರಂಭಗೊಂಡ ಈ ಚಳುವಳಿ ಸ್ವದೇಶಿ ಚಳುವಳಿಯಾಗಿ ರೂಪಾಂತರಗೊಂಡಿತು.

ಬಂಗಾಳದ ಚಳುವಳಿ ದಕ್ಷಿಣ ಭಾರತದ "ಸ್ವದೇಶ ಮಿತ್ರನ್" ಮತ್ತು "ವೃತ್ತಾಂತ ಚಿಂತಾಮಣಿ"ಯಂಥ ಪತ್ರಿಕೆಗಳಿಂದಾಗಿ ದಕ್ಷಿಣ ಭಾರತಕ್ಕೂ ಹರಡಿತು. ಸೆಂಟ್ರಲ್ ಪ್ರಾವಿನ್ಸ್‌ನಲ್ಲಿ ಅಮರಾವತಿ ಎಂಬಲ್ಲಿನ ಸರ್ಕಾರಿ ಪ್ರೌಢಶಾಲೆಯ 150 ವಿದ್ಯಾರ್ಥಿಗಳನ್ನು ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸಿದಕ್ಕಾಗಿ ಶಾಲೆಯಿಂದ ತೆಗೆದು ಹಾಕಲಾಯಿತು. ರಂಗಪುರ ಎಂಬಲ್ಲಿ ವಿದ್ಯಾರ್ಥಿಗಳಿಗೆ "ವಂದೇ ಮಾತರಂ" ಎಂದು ಕೂಗಿದ್ದಕ್ಕಾಗಿ ತಲಾ 5 ರೂಪಾಯಿ ಜುಲ್ಮಾನೆ ವಿಧಿಸಲಾಯಿತು.

1886ರಷ್ಟು ಹಿಂದೆಯೆ ಕೊಯಮತ್ತೂರಿನಲ್ಲಿ ಸಾರ್ವಜನಿಕ ಸಮಸ್ಯೆಗಳನ್ನು ಚರ್ಚಿಸಲು ಸ್ಟೂಡೆಂಟ್ಸ್ ಲಿಟರರಿ ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದಿತ್ತು. 1903ರಲ್ಲಿ ಯಂಗ್‌ಮೆನ್ಸ್ ಹಿಂದು ಅಸೋಸಿಯೇಷನ್ ಸೇಲಂನಲ್ಲಿ ಅಧ್ಯಯನದ ಗುರಿಯನ್ನಿಟ್ಟುಕೊಂಡು ಪ್ರಾರಂಭಗೊಂಡಿತಾದರೂ ನಂತರ ಸ್ವದೇಶಿ ಚಳುವಳಿಯನ್ನು ಬೆಂಬಲಿಸಿತು. ರಾಜಮಹೇಂದ್ರಿಯಲ್ಲಿ 11 ಫೆಬ್ರವರಿ 1907ರಂದು "ಬಾಲ ಭಾರತ ಸಮಿತಿ" (Young India Association) ಮಾತೃಭೂಮಿಯ ಪ್ರೇಮವನ್ನು ಬೆಳೆಸುವ, ಸ್ವದೇಶಿ ಮನೋಭಾವವನ್ನು ಜಾಗೃತಗೊಳಿಸುವ ಹಾಗೂ ಇನ್ನು ಕೆಲವು ಶೈಕ್ಷಣಿಕ ಗುರಿಗಳನ್ನಿಟ್ಟುಕೊಂಡು ಪ್ರಾರಂಭವಾಯಿತು.

ಮಹಾರಾಷ್ಟ್ರದಲ್ಲಿ ಉಪೇಂದ್ರನಾಥ ಮತ್ತು ವಿ.ಡಿ. ಸಾವರ್ಕರ್ 1906ರಲ್ಲಿ ಯಂಗ್ ಇಂಡಿಯ ಲೀಗ್ ಎಂಶಬ ಸಂಘವನ್ನು ಪಂಜಾಬಿನಲ್ಲಿ "ನಯೀ ಹವಾ" ಎಂಬ ಸಂಘ ವಿದ್ಯಾರ್ಥಿಗಳನ್ನು ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವ ಗುರಿಯನ್ನಿಟ್ಟುಕೊಂಡು ಪ್ರಾರಂಭಗೊಂಡವು.

1920ರ ದಶಕ ಭಾರತದಲ್ಲಿ ಶೈಕ್ಷಣಿಕ ಹಾಗೂ ರಾಜಕೀಯ ಬದಲಾವಣೆಗಳನ್ನು ತಂದಿತು. ಮಹಾತ್ಮಗಾಂಧಿಯವರ 1920ರ ಅಸಹಕಾರ ಆಂದೋಳನ ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ವಿಶಿಷ್ಟ ವರ್ಗದ ಸಂಸ್ಥೆಯಿಂದ ಜನಸಾಮಾನ್ಯರ ಚಳುವಳಿಯನ್ನಾಗಿಸಿತು. ಈ ಚಳುವಳಿ ವಿದ್ಯಾರ್ಥಿ ವರ್ಗದ ರಾಜಕೀಯ ಜೀವನದಲ್ಲಿ ಹೊಸ ತಿರುವನ್ನು ನೀಡಿತು. ಕಾಂಗ್ರೆಸ್ ಮುಖಂಡರು ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಯ ಪ್ರಾಂಗಣದಿಂದ ಹೊರಬಂದು ಸ್ವಾತಂತ್ರ್ಯ ಹೋರಾಟದಲ್ಲಿ ಹೃತ್ಪೂರ್ವಕವಾಗಿ ಪಾತ್ರವಹಿಸಲು ಕರೆಕೊಟ್ಟರು.

ಸ್ವದೇಶಿ ಆಂದೋಲನದ ಪ್ರಾರಂಭ ವಿದ್ಯಾರ್ಥಿಗಳು ರಾಜಕೀಯದಲ್ಲಿ ಪಾತ್ರವಹಿಸುವುದರೊಂದಿಗೆ ಆರಂಭವಾಯಿತು. 1920ರಲ್ಲಿ ಮಹಾತ್ಮ ಗಾಂಧೀಯವರು ಭಾರತದ ರಾಜಕೀಯದಲ್ಲಿ ಪ್ರವೇಶಿಸಿದಾಗ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸತೊಡಗಿದರು. 1928 ರಿಂದ 1942ರ ಭಾರತ ಬಿಟ್ಟು ತೊಲಗಿರಿ (ಕ್ವಿಟ್ ಇಂಡಿಯಾ) ಆಂದೋಲನದವರೆಗಿನ ಅವಧಿಯಲ್ಲಿ ವಿದ್ಯಾರ್ಥಿಗಳ ಹಾಗೂ ಯುವಜನರ ಆಂದೋಲನಗಳು ಬಲಗೊಂಡವು. 1930ರ ದಶಕದಲ್ಲಿ ಅಸಹಕಾರ ಆಂದೋಲನದಲ್ಲಿ ವಿದ್ಯಾರ್ಥಿಗಳು ಹಿಂದೆಂದೂ ಭಾಗವಹಿಸದಷ್ಟು ಅತ್ಯಧಿಕ ಪ್ರಮಾಣದಲ್ಲಿ ಪಾಲ್ಗೊಂಡರು. 1934ರಲ್ಲಿ ಕಾಂಗ್ರೆಸ್ಸಿನ ಒಂದು ಭಾಗ ಹೊರಬಂದು ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿಯಾಯಿತು. ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇದರ ವಿಚಾರದತ್ತ ಆಕರ್ಷಿತರಾದರು.

**ಭಾರತೀಯ ಯುವಕರ ಸಕ್ರಿಯತೆ ಮತ್ತು ಪ್ರಜಾಪ್ರಭುತ್ವದ ಸವಾಲುಗಳು**

ಯುವಕರು ರಾಜಕೀಯದಲ್ಲಿ ಭಾಗವಹಿಸುತ್ತಿರುವುದು ಇತ್ತೀಚಿನ ವಿಷಯವಲ್ಲ ಎಂಬುದು ಆಧುನಿಕ ಇತಿಹಾಸದಿಂದ ತಿಳಿದು ಬರುತ್ತದೆ. ರಾಜಕೀಯದಲ್ಲಿ ಯುವಕರು ನಿರ್ಣಾಯಕ ಪಾತ್ರ ವಹಿಸುವುದನ್ನು ಹಿಂದಿನ ಇತಿಹಾಸ ತಿಳಿಸುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸಿರುವುದನ್ನು ಗಮನಿಸಬಹುದು. ಉದಾಹರಣೆಗೆ ಫ್ರಾನ್ಸ್‌ಕ್ರಾಂತಿ, ಜರ್ಮನಿ, ರಷ್ಯಾ, ಆಸ್ಟ್ರಿಯಾ ಇತ್ಯಾದಿ ಕ್ರಾಂತಿಗಳನ್ನು ಗಮನಿಸಬಹುದು. ಯುವಜನರ ಕ್ರಾಂತಿಗಳು ಸಾಮಾಜಿಕ ಬದಲಾವಣೆಗಳನ್ನು ಬಯಸಿದ ಸಕ್ರಿಯತೆಯ ಕಾರ್ಯವಾಗಿ ಪರಿಣಮಿಸಿರುವುದನ್ನು ಇತಿಹಾಸದಲ್ಲಿ ಕಾಣಬಹುದು. 1969ರ ಹಿಪ್ಪೀ ಚಳವಳಿಯು ಸಹ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದ ಆಂದೋಲನವಾಗಿದೆ.

ಭಾರತ ಸ್ವಾತಂತ್ರ್ಯ ಪಡೆದು ಸಂವಿಧಾನ ರಚನೆ ಮತ್ತು ಹೊಸ ರಾಜಕೀಯ ಆಡಳಿತ ಪ್ರಾರಂಭವಾದ ನಂತರದಲ್ಲಿ ಯುವಕರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದು ಕಂಡು ಬರುತ್ತದೆ. ಇದಕ್ಕಿಂತ ಮುಂಚೆ ಯುವಕರನ್ನು ರಾಜಕೀಯದಿಂದ ದೂರ ಇಡಲಾಗಿತ್ತು. ಭಾರತದಲ್ಲಿ 1880 ರಲ್ಲಿ ಯುವಕರು ಭಾರತೀಯ ನಾಗರೀಕ ಸೇವಾ ಪರೀಕ್ಷೆ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವುದು ಕಂಡು ಬರುತ್ತದೆ. ಉದಾಹರಣೆಗೆ ಅಸಹಕಾರ ಚಳುವಳಿ, ಭಾರತ ಬಿಟ್ಟು ತೊಲಗಿ ಚಳವಳಿ ಇತ್ಯಾದಿ. ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಯುವಕ ಸಕ್ರಿಯತೆ (Youth Activism) ಬಾಂಬೆ ಪ್ರಾಂತ್ಯದಲ್ಲಿ ಜನಪ್ರಿಯಗೊಂಡಿತು. ಇದಕ್ಕೆಲ್ಲಾ ಕಾರಣ ಪಾಶ್ಚಿಮಾತ್ಯರ ಮಾರ್ಕ್ಸ್‌ವಾದ ಹಾಗೂ ಲಿಬರಲ್‌ವಾದದ ಪ್ರಭಾವವಾಗಿತ್ತು. ಭಾರತ ಸ್ವಾತಂತ್ರ್ಯ ಪಡೆದ ನಂತರ ಯುವ ಚಳವಳಿಗಳು ಹೊಸ ಬೆಳವಣಿಗೆಯನ್ನು ಪಡೆದುಕೊಂಡಿವೆ.

ಹಾಲ್ಬ್‌ಬಾಕ್ (1968) ಪ್ರಕಾರ – "ಸ್ವಾತಂತ್ರ್ಯ ಪೂರ್ವ ಚಳವಳಿಗಳು ಸ್ವಾತಂತ್ರ್ಯದ ನಂತರ ನಿರ್ದಿಷ್ಟ ಕುಂದು ಕೊರತೆಗಳನ್ನು ಹೋಗಲಾಡಿಸುವ ಚಳವಳಿಗಳಾಗಿ ಪರಿವರ್ತನೆಯಾಗಿವೆ".

ಭಾರತ ಸ್ವಾತಂತ್ರ್ಯ ಪಡೆದ ನಂತರ ಕೆಲವು ವಿದ್ಯಾರ್ಥಿ ಚಳವಳಿಗಳನ್ನು ಕಾಣಬಹುದು. ಉದಾಹರಣೆಗೆ ಗುಜರಾತ್ ವಿದ್ಯಾರ್ಥಿ ಚಳವಳಿ (1973–74), 1967ರ ಬಿಹಾರ ವಿದ್ಯಾರ್ಥಿ ಆಂದೋಲನವನ್ನು ಶೈಕ್ಷಣಿಕ ಪುನರ್ ಸಂಘಟನೆಗಾಗಿ ನಡೆಸಲಾಯಿತು. ಜಯಪ್ರಕಾಶ್ ನಾರಾಯಣ ಇವರ ಮಾರ್ಗದರ್ಶನ, ಸಲಹೆ ಈ ಚಳವಳಿಗೆ ದೊರೆತ್ತಿತ್ತು. 1969ರಲ್ಲಿ ಹಿಂದಿ ಭಾಷಾ ವಿರೋಧ ಚಳವಳಿ, ಮದ್ರಾಸ್, 1962ರಲ್ಲಿ ಬೆಂಗಳೂರು, ಮೈಸೂರು ಹಿಂದಿ ವಿರೋಧ ಚಳವಳಿಗಳು, ಭಾರತೀಯ ಗಡಿ ಅಕ್ರಮಣಾ ವಿಚಾರ, 1975ರ ಬಂಗಾಳ ವಿದ್ಯಾರ್ಥಿ ಆಂದೋಲನ ಇತ್ಯಾದಿ ವಿದ್ಯಾರ್ಥಿ ಆಂದೋಲನಗಳನ್ನು ಕಾಣಬಹುದು. 'ಸಾಮಾಜಿಕ ಮತ್ತು ರಾಜಕೀಯ' ಚಳವಳಿಗಳಲ್ಲಿ ಯುವಕರು ಭಾಗವಹಿಸುವ ಈ ಕಾರ್ಯವನ್ನು ಸಕ್ರಿಯತೆ ಮತ್ತು ಪ್ರೋತ್ಸಾಹದಾಯಕ ಎಂದು ಕರೆಯಲಾಗುವುದು. (ಬರೋಹ, 2002 ಪು. 8–9).


Digitised by Bharatavani, CIIL

ಎಂ. ಫ್ಲೆಮಿಂಗ್ ಮತ್ತು ಆರ್. ಕಾರ್‌ಪಂತ್‌ಕಾಫ್ "ಸಾಮೂಹಿಕ ಚಳವಳಿಯಲ್ಲಿ ಯುವಕರ ಪಾತ್ರ ಮಹತ್ವವಾದುದು. ಆದರೆ ಇದು ನೈಜವಾದ ಚಳವಳಿಯಾಗಿ ಪರಿಣಮಿಸಿರುವುದು ಬಹಳ ವಿರಳ" ಎಂದು ಅಭಿಪ್ರಾಯ ಪಡುತ್ತಾರೆ.

ಈಶಾನ್ಯ ಭಾರತದಲ್ಲಿ ವಿದ್ಯಾರ್ಥಿಗಳು ಔಪಚಾರಿಕ ಶಿಕ್ಷಣಕ್ಕೆ ಸಂಬಂಧಿಸಿದ ಚಳವಳಿಯನ್ನು ಪ್ರಾರಂಭಿಸಿರುವುದನ್ನು ಕಾಣಬಹುದು (A.K. Baruah 2002) ಯುವಕರು ಇಂತಹ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿರುದನ್ನು ಕಾಣಬಹುದು. ಅಸ್ಸಾಂನಲ್ಲಿ (1836) ವಿದ್ಯಾರ್ಥಿ ಚಳವಳಿಗಳು ಆ ರಾಜ್ಯದ ಭಾಷೆ, ಸಂಸ್ಕೃತಿ ಮತ್ತು ಬೌದ್ಧಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಹಾಗೂ ಅವುಗಳ ಉಳಿವಿಗಾಗಿ ಹೋರಾಟ ಮಾಡಿರುವುದನ್ನು ಗಮನಿಸಬಹುದು. ಅಲ್ಲದೇ ಶಾಲಾ – ಕಾಲೇಜು ಹಾಗೂ ನ್ಯಾಯಾಲಯಗಳಲ್ಲಿ ಅಸ್ಸಾಂ ಭಾಷೆಯನ್ನು ಜಾರಿಗೆ ತರಲು ವಿದ್ಯಾರ್ಥಿಗಳು ಆಂದೋಲನ ನಡೆಸಿದರು. ಅಷ್ಟೇ ಅಲ್ಲದೇ ಪಾಶ್ಚಾತ್ಯ ಸಂಸ್ಕೃತಿಯ ವಿರುದ್ಧ ಹೋರಾಟ ಪ್ರಾರಂಭಿಸಿದರು. (ಚೌಧರಿ–1984) ಈ ಹೋರಾಟದಲ್ಲಿ ಆನಂದರಾಂ ಬರೂಅ, ಮಧ್ವಾ ಚಂದ್ರ ಬರೋಡೋಲಿ, ಅಹ್ಮದ್, ಜಿ.ಎ., ಇವರನ್ನು ಸ್ಮರಿಸಬಹುದು. ಅಸ್ಸಾಂ ವಿದ್ಯಾರ್ಥಿ ಚಳವಳಿಯು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿರುವುದು ಕಂಡು ಬರುತ್ತದೆ. (1939) ಅಸ್ಸಾಂ ರಾಜ್ಯಾಡಳಿತದಲ್ಲಿ ಯುವಕರ ಸಕ್ರಿಯತೆಯು ಸಾಮಾಜಿಕ ಜಾಗೃತಿ ಮೂಡಿಸುವ ಒಂದು ಉತ್ತಮ ಸಾಧನವಾಗಿ ಪರಿಣಮಿಸಿತು. ಯುವಕರಲ್ಲಿ ರಾಜಕೀಯ ಆಡಳಿತದ ಜಾಗೃತಿ ಮೂಡಿಸುವುದು. ಪ್ರಜಾಪ್ರಭುತ್ವದ ನೆಲೆಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವುದು ಇದರ ಉದ್ದೇಶಗಳಾಗಿದ್ದವು.

ಅಸ್ಸಾಂ ರಾಜ್ಯದಲ್ಲಿ 1974–8ರವರೆಗೆ ವಿದ್ಯಾರ್ಥಿಗಳ ರಾಜಕೀಯ ಉದ್ದೇಶಗಳ ಹೋರಾಟ ಬಹು ದೊಡ್ಡ ಪ್ರಮಾಣದಲ್ಲಿ ಆಯಿತು. ಈ ಚಳುವಳಿ ಬಹುಮಟ್ಟಿಗೆ ಅಹಿಂಸಾತ್ಮಾವಾಗಿತ್ತು. ಕಡೆಗೆ ವಿದ್ಯಾರ್ಥಿಗಳಿಗೆ ಜಯ ದೊರೆತು ವಿದ್ಯಾರ್ಥಿ ಮುಖಂಡ ಪ್ರಫುಲ್ಲಕುಮಾರ ಮೋಹಂತ ಅಸ್ಸಾಂ ರಾಜ್ಯ ಮುಖ್ಯಮಂತ್ರಿಯಾದರು.

ಗಾಂಧಿವಾದಿ ಅಣ್ಣಾಹಜ್ಹಾರೆ ತಮ್ಮ 'ಸಿವಿಲ್ ಸೊಸೈಟಿ' ಮೂಲಕ ಭ್ರಷ್ಟಾಚಾರವನ್ನು ತೊಲಗಿಸಲು ಪ್ರಬಲ ಜನ ಲೋಕಪಾಲ ಕಾಯ್ದೆಗಾಗಿ 2010–11ರಲ್ಲಿ ಆರಂಭಿಸಿದ ಚಳುವಳಿಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕೇಂದ್ರ ಸರ್ಕಾರ ದಿಶೆಯಲ್ಲಿ ಕಾರ್ಯ ಆರಂಭಿಸುವಂತೆ ಮಾಡಿದರು.

ಪ್ರಸ್ತುತ ದಿನಗಳಲ್ಲಿ ಯುವ ವಿದ್ಯಾರ್ಥಿಗಳ ಸಕ್ರಿಯತೆ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುತ್ತದೆ. ವಿದ್ಯಾರ್ಥಿಗಳು ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯ, ಭಾಷೆಯ ಸಂರಕ್ಷಣೆ, ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ತುಂಬಾ ಸಕ್ರಿಯವಾಗಿ ಭಾಗವಹಿಸಿದ್ದಾರೆ. ವಿದ್ಯಾರ್ಥಿ ಸಂಘಟನೆಗಳು ರಾಜ್ಯ ಮತ್ತು ರಾಷ್ಟ್ರಗಳ ಮಧ್ಯೆ ಉದ್ಭವಿಸುವ ಸಮಸ್ಯೆಗಳನ್ನು ಬಿಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಆಯಾ ರಾಜ್ಯಗಳ ತೀವ್ರ ಸ್ವರೂಪದ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳಲು ವಿದ್ಯಾರ್ಥಿ ಸಕ್ರಿಯತೆ ನೆರವಾಗುವುದು. ಉದಾಹರಣೆಗೆ ಈಶಾನ್ಯ ವಾಯುವ್ಯ ಅಸ್ಸಾಂನ ಗಡಿ ಸಮಸ್ಯೆ, ವಲಸೆ, ಸಂಸ್ಕೃತಿ, ಸಾಹಿತ್ಯ, ಭಾಷೆಗಳ ಸಂರಕ್ಷಣೆಗಾಗಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವುದನ್ನು ಕಾಣಬಹುದು.

ಶಿಕ್ಷಣ ಸಾಮಾಜಿಕ ಸಮಾನತೆ, ಹಕ್ಕು, ಆಸ್ತಿ ಸಂರಕ್ಷಣೆ, ವಿದ್ಯುತ್, ನೆಲ, ಜಲ, ಪ್ರವಾಹ, ಬಡತನ, ನಿರುದ್ಯೋಗ, ಇತ್ಯಾದಿ ಬೇಡಿಕೆಗಳಿಗಾಗಿ ಯುವ ವಿದ್ಯಾರ್ಥಿ ಸಮೂಹ ಸಕ್ರಿಯತೆ ತುಂಬಾ ನೆರವಾಗುತ್ತದೆ. ಸಾಮಾಜಿಕ ಮತ್ತು ರಾಜಕೀಯ ಸವಾಲುಗಳನ್ನು ಎದುರಿಸುವಲ್ಲಿ ವಿದ್ಯಾರ್ಥಿ ಸಕ್ರಿಯತೆ ನೆರವಾಗುವುದು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಠ್ಯ ವಸ್ತು, ಶಿಕ್ಷಕರ ನೇಮಕಾತಿ, ಶಾಲೆಗಳ ಪ್ರಾರಂಭ, ಮೌಲ್ಯಮಾಪನ ಸೌಲಭ್ಯಗಳು ಇತ್ಯಾದಿ ವಿಷಯಗಳ ಬಗ್ಗೆ ಬೇಡಿಕೆ ಈಡೇರಿಸಿಕೊಳ್ಳಲು ಸಕ್ರಿಯ ಹೋರಾಟವನ್ನು ವಿದ್ಯಾರ್ಥಿಗಳು ಮಾಡುತ್ತಾರೆ. ಸಾಮಾಜಿಕ, ರಾಜಕೀಯ, ಆರ್ಥಿಕ ಮಾನವೀಯ ವ್ಯವಸ್ಥೆಗಳನ್ನು ಉಜ್ವಲಗೊಳಿಸುವ ಧ್ಯೇಯದಿಂದ ವಿದ್ಯಾರ್ಥಿ ಒಕ್ಕೂಟಗಳು ಕಾರ್ಯ ನಿರ್ವಹಿಸುತ್ತವೆ. ವಿದ್ಯಾರ್ಥಿ ಸಕ್ರಿಯತೆ ಸಮಾಜದ ಯಶೋಭಿವೃದ್ಧಿಗಾಗಿ ಹೋರಾಟ ಮಾಡುವ ಒಂದು ಉತ್ತಮ ಸಂಘಟನೆಯಾಗಿ ಭಾರತದಲ್ಲಿ ಪರಿಣಮಿಸಿರುವುದನ್ನು ಈ ನಿಟ್ಟಿನ ಚಾರಿತ್ರಿಕ ಹಿನ್ನೆಲೆಯಲ್ಲಿ ಗಮನಿಸಬಹುದು. ಅಷ್ಟೇ ಅಲ್ಲದೇ ವಿದ್ಯಾರ್ಥಿಗಳ ಸಕ್ರಿಯ ಸಹಭಾಗಿತ್ವವು ಪ್ರಜಾ ರಾಜ್ಯ ಆಡಳಿತದ ನೆರವಿಗೆ ಬಂದಿರುವುದು ಕಂಡು ಬರುತ್ತದೆ. ವಿದ್ಯಾರ್ಥಿ ಸಕ್ರಿಯತೆ ಸಾಮಾಜಿಕ, ರಾಜಕೀಯ ಹಾಗೂ ಇತರ ಕ್ಷೇತ್ರದಲ್ಲಿ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿರುತ್ತದೆ.

–ಬಿ.ಎ.

## ವಿದ್ಯುನ್ಮಾನ ಅಂಚೆ (ಇ–ಮೇಲ್)

ಸಂಪರ್ಕ ಕ್ಷೇತ್ರದಲ್ಲಿಯ ಕ್ರಾಂತಿಯಿಂದಾಗಿ ಭೌಗೋಳಿಕವಾಗಿ ದೂರವಾಗಿದ್ದ ಪ್ರದೇಶಗಳು ಮನೆಯ ಬಾಗಿಲಿನಲ್ಲಿರುವಂತೆ ಭಾಸವಾಗಿ ಇಡೀ ವಿಶ್ವವೆ ಸಂಕುಚಿತಗೊಳ್ಳುತ್ತಿದೆ. ಈ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವುದು ವಿದ್ಯುನ್ಮಾನ ಅಂಚೆ. ಇದು ಅಂತರ್ ಜಾಲ ವ್ಯವಸ್ಥೆಯಿಂದ ಹೊರಹೊಮ್ಮಿದೆ. ಹಿಂದಿಗಿಂತಲೂ ಇಂದು ವ್ಯಕ್ತಿ ವ್ಯಕ್ತಿಗಳ ನಡುವೆ ಪರಸ್ಪರ ಸಂಪರ್ಕಗಳು ಏರ್ಪಡುವಂತೆ ತಂತ್ರಜ್ಞಾನವು ಬೆಳವಣಿಗೆಯಾಗುತ್ತಿದೆ.

E-mail ಅನ್ನು ಕನ್ನಡದಲ್ಲಿ ಇಲೆಕ್ಟ್ರಾನಿಕ್ ಅಂಚೆ ಅಥವಾ ವಿದ್ಯುನ್ಮಾನ ಅಂಚೆ ಎಂದೂ ಸಹ ಕರೆಯಲಾಗುತ್ತದೆ. ಮೊಡೆಮ್ ಹಾಗೂ ಅಂತರ್‌ಜಾಲ ಇವುಗಳನ್ನು ಬಳಸಿಕೊಂಡು ಒಂದು ಕಂಪ್ಯೂಟರ್‌ನಿಂದ ಮತ್ತೊಂದು ಕಂಪ್ಯೂಟರ್‌ಗೆ ಸಂದೇಶವನ್ನು ಕಳುಹಿಸುವ ಮತ್ತು ಪಡೆಯುವ ವ್ಯವಸ್ಥೆಗೆ ಇ–ಮೇಲ್ ಅಥವಾ ವಿದ್ಯುನ್ಮಾನ ಅಂಚೆ ಎಂದು ಕರೆಯುತ್ತೇವೆ. ಇ–ಮೇಲ್‌ಗಳ ಮೂಲಕ ಇಂದು ಯಾರು ಯಾವುದೇ ಕಾಲಕ್ಕೆ ಎಲ್ಲಿದ್ದರೂ ಸಂದೇಶ / ಮಾಹಿತಿ ಕಳುಹಿಸಬಹುದು. ಇಲ್ಲಿ ಕಾಗದದ ಬಳಕೆಯಿರುವುದಿಲ್ಲ. ಶಾಯಿ ಪೆನ್ನು ಇರುವುದಿಲ್ಲ. E-mail ಎಂದರೆ ಕಂಪ್ಯೂಟರ್‌ಗಳ ಮೂಲಕ ಅಂಚೆಯನ್ನು ಕಳುಹಿಸುವುದಾಗಿದೆ. ವಿದ್ಯುನ್ಮಾನ ಅಂಚೆಯು ಮೂಲಕ ಪತ್ರ, ಚಿತ್ರ ಮುಂತಾದವುಗಳನ್ನು ರವಾನಿಸಬಹುದಾಗಿದೆ. ವಿದ್ಯುನ್ಮಾನ ಅಂಚೆ ಕಳುಹಿಸಬೇಕೆಂದರೆ ನಮ್ಮ ಕಂಪ್ಯೂಟರ್‌ಗೆ ನಾವು ಅಂತರ್‌ಜಾಲ ಸೌಲಭ್ಯ ಪಡೆದಿರಬೇಕು. ಅಲ್ಲದೆ ನಾವು ಯಾರಿಗೆ ವಿದ್ಯುನ್ಮಾನ ಅಂಚೆ ಕಳುಹಿಸಬೇಕಾಗಿದೆಯೋ ಅವರೂ ಸಹ ತಮ್ಮ ಕಂಪ್ಯೂಟರ್‌ನಲ್ಲಿ ಅಂತರ್‌ಜಾಲವನ್ನು ಹೊಂದಿರಬೇಕು. ಏಕೆಂದರೆ ವಿದ್ಯುನ್ಮಾನ ಅಂಚೆ ಕಳುಹಿಸುವುದರಿಂದ ಅಥವಾ ಈ ಸೌಲಭ್ಯದಿಂದ ಎರಡು ಬಳಕೆದಾರ ಕಂಪ್ಯೂಟರ್‌ಗಳೊಂದಿಗೆ ಸಂಪರ್ಕ ಏರ್ಪಡುತ್ತದೆ. ಇಲ್ಲಿ ಬಹಳ ಕಡಿಮೆ ಸಮಯದಲ್ಲಿ ಮಾಹಿತಿ ವಿನಿಮಯ ಸಾಧ್ಯವಾಗುತ್ತದೆ. ನಮ್ಮ ಕಂಪ್ಯೂಟರ್ ವಿಳಾಸಕ್ಕೆ ಕಳುಹಿಸಿದ ಸಂದೇಶಗಳ ರಹಸ್ಯವನ್ನು ಕಾಪಾಡಿಕೊಳ್ಳುವುದರಿಂದ ಬೇರೆಯವರು ಅದನ್ನು ಪಡೆಯಲು ಸಾಧ್ಯವಿಲ್ಲ. ನಮ್ಮ ಮೇಲ್ ವಿಳಾಸಕ್ಕೆ ಬಂದಿರುವ ಇ–ಮೇಲ್‌ಗಳು ನಮ್ಮ ಕಂಪ್ಯೂಟರ್‌ನಲ್ಲಿಯೇ ಸಂಗ್ರಹವಾಗಿರುತ್ತವೆ. ಬಳಕೆದಾರರು ಇ–ಮೇಲ್ ಸೌಲಭ್ಯ ಪಡೆಯಲು ಮೊದಲು ನೋಂದಣಿ ಮಾಡಬೇಕು. ಆಗ ಅವರಿಗೆ ಒಂದು ಮೇಲ್ ಬಾಕ್ಸ್ ಒದಗಿಸಲಾಗುತ್ತದೆ. ಈ ಬಾಕ್ಸ್‌ನಲ್ಲಿ ಎಲ್ಲಾ ಮೇಲ್‌ಗಳು ಸಂಗ್ರಹವಾಗುತ್ತವೆ.

Digitised by Bharatavani, CIIL

## ವಿದ್ಯುನ್ಮಾನ ಅಂಚೆ ಕಳುಹಿಸುವ ವಿಧಾನ

ವಿದ್ಯುನ್ಮಾನ ಅಂಚೆಯನ್ನು ಒಂದು ಕಂಪ್ಯೂಟರ್‌ನಿಂದ ಇನ್ನೊಂದು ಕಂಪ್ಯೂಟರ್‌ಗೆ ಈ ಕೆಳಕಂಡ ವಿಧಾನಗಳ ಸಹಾಯದಿಂದ ಕಳುಹಿಸಲಾಗುತ್ತದೆ.

- ಮೇಲ್ ಸಂದೇಶ ಕಳುಹಿಸಲು, ಉಪಯೋಗಿಸುವವರ ವಿಳಾಸ ಮತ್ತು ಪಾಸ್‌ವರ್ಡ್ ಮೂಲಕ ಮೇಲ್ ಪುಟವನ್ನು ತೆರೆಯಬೇಕು.
- ನಂತರ ನಾವು ಯಾರ ವಿಳಾಸಕ್ಕೆ ಕಳುಹಿಸಬೇಕಾಗಿದೆಯೋ ಆ ವಿಳಾಸವನ್ನು ಟೈಪ್ ಮಾಡಬೇಕು. ನಂತರ ಸಂದೇಶವನ್ನು ಟೈಪ್ ಮಾಡಿ `Send' ಗುಂಡಿಯನ್ನು ಒತ್ತುವ ಮೂಲಕ ಸಂದೇಶವನ್ನು ಕಳುಹಿಸಬೇಕು.
- ಸರಿಯಾದ ವಿಳಾಸಕ್ಕೆ ನಮ್ಮ ಸಂದೇಶ ಕಳುಹಿಸಿದ ಮೇಲೆ ಅದು ಮೋಡಮ್‌ನ ಮೂಲಕ ದೂರವಾಣಿ ಜಾಲ ಪ್ರವೇಶಿಸುತ್ತದೆ. ನಂತರ ದೂರವಾಣಿ ಜಾಲದೊಂದಿಗೆ ಸಾಗಿ ಸೇವಾ ಮುಖ್ಯ ಕಂಪ್ಯೂಟರ್‌ಅನ್ನು ಸೇರುತ್ತದೆ. ನಂತರ
- ಸಂದೇಶವು ಅಂತರ್‌ಜಾಲದ ಮೂಲಕ ತಲುಪಬೇಕಾದ ವಿಳಾಸಕ್ಕೆ ತಲುಪುತ್ತದೆ.
- ಸಂದೇಶವು ಸೇವಾ ವಿತರಕನ ಮುಖ್ಯ ಕಂಪ್ಯೂಟರ್ ಮತ್ತು ಬಳಕೆದಾರನ ಮೇಲ್ ಬಾಕ್ಸ್‌ನಲ್ಲಿ ಸಂಗ್ರಹವಾಗಿರುತ್ತದೆ.
- ಸಂದೇಶವು ಬಳಕೆದಾರನ ಅಂತರ್ಜಾಲದೊಂದಿಗೆ ಸಂಪರ್ಕ ಪಡೆದ ಕೂಡಲೇ ಅವನಿಗೆ ದೊರೆಯುತ್ತದೆ.

ಕೊನೆಯದಾಗಿ ಬಳಕೆದಾರನ ಮೊಡೆಮ್ ಮತ್ತು ಕಂಪ್ಯೂಟರ್ ಮೂಲಕ ಸಂದೇಶವನ್ನು ಪರದೆಯ ಮೇಲೆ ನೋಡಬಹುದಾಗಿದೆ.

ಹೀಗೆ ಒಂದು ವಿದ್ಯುನ್ಮಾನ ಅಂಚೆ ಕಳುಹಿಸುವಂತಹ ಹಲವಾರು ಕ್ರಿಯೆಗಳು ಕ್ಷಣಾರ್ಧದಲ್ಲಿ ನಡೆಯುತ್ತವೆ.

## ವಿದ್ಯುನ್ಮಾನ ಅಂಚೆಯ ವಿಳಾಸ

ಸಾಮಾನ್ಯ ಅಂಚೆಯಂತೆ ಇ–ಮೇಲ್‌ಗೂ ಕೂಡ ವಿಳಾಸವಿರುತ್ತದೆ. ಪ್ರತಿಯೊಬ್ಬ ಬಳಕೆದಾರ ಕಂಪ್ಯೂಟರ್‌ಗೆ ಒಂದು ಪ್ರತ್ಯೇಕ ವಿಳಾಸವಿರುತ್ತದೆ. ಇ–ಮೇಲ್ ವಿಳಾಸಕ್ಕೆ ನಿರ್ದಿಷ್ಟ ರೂಪವಿರುತ್ತದೆ. ಮತ್ತು ಒಂದು ಸಂಕೇತವಿದೆ. ಇದರಲ್ಲಿ ಎರಡು ಭಾಗಗಳಿವೆ. ಮೊದಲನೆಯದು ಬಳಕೆದಾರನ ಹೆಸರು. ಎರಡನೆಯದು ತಲುಪುವ ಪ್ರದೇಶ ಅಥವಾ ವಲಯ, ಇವೆರಡರ ನಡುವೆ @ ಎಂಬ ಸಂಕೇತವಿರುತ್ತದೆ. ಈ ಇ–ಮೇಲ್ ವಿಳಾಸದಲ್ಲಿ ಇಂಗ್ಲಿಷ್ ವರ್ಣಮಾಲೆಯ ಸಣ್ಣ ಅಕ್ಷರಗಳನ್ನು ಮಾತ್ರ ಬಳಸಲಾಗುತ್ತದೆ. ಉದಾ.: raju@gmail.com. ಅಂತರ್ ಜಾಲದಲ್ಲಿ ವೆಬ್ ಪುಟ, ಚಿತ್ರ, ಪಠ್ಯ, ಕಡತ, ಮುಂತಾದವುಗಳು ಇರುತ್ತವೆ. ಪ್ರತಿಯೊಂದು ಜಾಲಕ್ಕೆ ಒಂದು ನಿರ್ದಿಷ್ಟವಾದ ಹೆಸರು ಇರುವುದರಿಂದ ವೆಬ್‌ಸೈಟುಗಳು ಮತ್ತು ಇತರ ಮಾಹಿತಿಯನ್ನು ಸರಳವಾಗಿ ಕಂಡುಹಿಡಿಯಬಹುದಾಗಿದೆ. ಇದರಿಂದ ಸುಲಭವಾಗಿ ಸಂಪನ್ಮೂಲಗಳನ್ನು ಗುರುತಿಸಬಹುದಾಗಿದೆ.

## ವಿದ್ಯುನ್ಮಾನ ಅಂಚೆ ಕಳುಹಿಸುವ ಕ್ರಮ

ಒಂದು ವಿದ್ಯುನ್ಮಾನ ಅಂಚೆ ಕಳುಹಿಸುವಾಗ ಒಂದು ನಿರ್ದಿಷ್ಟ ವಿಧಾನ ಅನುಸರಿಸಬೇಕು. ಉಪಯೋಗಿಸುವವರ ಹೆಸರು ಮತ್ತು ಪಾಸ್‌ವರ್ಡ್ ಬಳಸಿದಾಗ ಮೇಲ್ ಕಳುಹಿಸಲು ಸಂಬಂಧಪಟ್ಟ ಪುಟವು ತೆರೆಯುತ್ತದೆ. ಅನಂತರ

To – ಯಾರಿಗೆ ಇ–ಮೇಲ್ ಕಳುಹಿಸಬೇಕೋ ಅವರ ಇ–ಮೇಲ್ ವಿಳಾಸ,

CC – ಒಬ್ಬರಿಗಿಂತ ಹೆಚ್ಚಿನ ಜನರಿಗೆ ಇ–ಮೇಲ್ ಕಳುಹಿಸಬೇಕಾದರೆ ಅವರೆಲ್ಲರ ಇ–ಮೇಲ್ ವಿಳಾಸ ಬರೆಯಬೇಕು.

Subject – ಕಳುಹಿಸಬೇಕಾದ ಸಂದೇಶದ ಸಂಕ್ಷಿಪ್ತ ವಾಕ್ಯ

Attach file – ಸೌಲಭ್ಯಗಳನ್ನು ಉಪಯೋಗಿಸಿ ಕಡತಗಳನ್ನು ಕಳುಹಿಸಬಹುದು.

ಈ ರೀತಿಯಾಗಿ ವಿವರಗಳನ್ನು ಟೈಪ್ ಮಾಡಿದ ನಂತರ ಕಂಪ್ಯೂಟರ್‌ನಲ್ಲಿ Send ಬಟನ್ ಒತ್ತಬೇಕು. ನಾವು ಕಳುಹಿಸಿದ ಇ–ಮೇಲ್ ತಲುಪಿದ್ದನ್ನು ಕುರಿತು ನಮ್ಮ ಕಂಪ್ಯೂಟರ್ ಪರದೆಯ ಮೇಲೆ ಅಂಗೀಕಾರ ಸಂದೇಶ ಮೂಡುತ್ತದೆ.

ಸಂದೇಶ ಓದುವವರಿಗೆ ಸಂದೇಶ ಕಳುಹಿಸಿದವರ ಮೇಲ್ ವಿಳಾಸ ತಿಳಿಯುತ್ತದೆ.

## ವಿದ್ಯುನ್ಮಾನ ಅಂಚೆಗಳ ಸ್ವೀಕಾರ

ನಮ್ಮ ಕಂಪ್ಯೂಟರ್‌ಗೆ ಅಥವಾ ನಮ್ಮ ಇ–ಮೇಲ್ ವಿಳಾಸಕ್ಕೆ ಯಾರಾದರೂ ಇ–ಮೇಲ್ ಕಳುಹಿಸಿದಾಗ ಅವರ ಮೇಲ್ ಸರ್ವರ್‌ನಿಂದ ಅಂತರ್‌ಜಾಲದ ಮೂಲಕ ನಮ್ಮ ಮೇಲ್ (Server) ಸರ್ವರ್ ಸೇರುತ್ತದೆ. ನಾವು ಇ–ಮೇಲ್ ಪಡೆಯಬೇಕಾದರೆ ನಮ್ಮ ಕಂಪ್ಯೂಟರ್‌ನೊಂದಿಗೆ ಸಂಪರ್ಕ ಪಡೆಯಬೇಕು. ಇಂಟರ್‌ನೆಟ್‌ನೊಂದಿಗೆ ಸಂಪರ್ಕ ಹೊಂದಿ ರಿಸೀವ್ ಮೇಲ್ ಬಟನ್ ಅನ್ನು ಒತ್ತಿದಾಗ ನಮ್ಮ ಕಂಪ್ಯೂಟರ್ ಪರದೆಯ ಮೇಲೆ ನಮಗೆ ಬಂದಿರುವ ಎಲ್ಲಾ ಸಂದೇಶಗಳ ಲಿಸ್ಟ್ ದೊರೆಯುತ್ತದೆ. ಪ್ರತಿಯೊಂದು ಸಂದೇಶದ ಮೇಲ್ ಎರಡು ಬಾರಿ ಕ್ಲಿಕ್ ಮಾಡಿದಾಗ ಇ–ಮೇಲ್ ಕಳುಹಿಸಿದವರ ಹೆಸರು, ವಿಳಾಸ, ದಿನಾಂಕ, ಸಮಯ, ವಿಷಯಗಳೊಂದಿಗೆ ಪರದೆಯ ಮೇಲೆ ಮೂಡುತ್ತದೆ. ಇವುಗಳನ್ನು ಪಡೆಯಲು ಇಂಟರ್‌ನೆಟ್ ಎಕ್ಸ್‌ಪ್ಲೋರರ್ ಅಥವಾ (Mozila) ಮೊಜಿಲಾ ತಂತ್ರಾಂಶ ಬಳಸಬೇಕು. ಹೆಚ್ಚಿನ ಕಡತವನ್ನು ಡೌನ್‌ಲೋಡ್ ಮಾಡಿ ಕಂಪ್ಯೂಟರ್‌ನಲ್ಲಿ ಶೇಖರಿಸಿಡಬಹುದು.

## ವಿದ್ಯುನ್ಮಾನ ಅಂಚೆಗಳಿಗೆ ಉತ್ತರಿಸುವುದು

ತಲುಪಿದ ಇ–ಮೇಲ್‌ಗಳಿಗೆ ಉತ್ತರ ನೀಡಬೇಕಾದಾಗ ರೀಪ್ಲೇ (Replay) ಬಟನ್ ಅನ್ನು ಒತ್ತಿದಾಗ ಇನ್ನೊಂದು ಸಂದೇಶ ಕಿಟಕಿ ತೆರೆದುಕೊಳ್ಳುತ್ತದೆ. ಅದರೊಂದಿಗೆ ಸ್ವೀಕೃತವಾದ ಸಂದೇಶ ಪಠ್ಯವು ಪರದೆಯ ಮೇಲೆ ಮೂಡುತ್ತದೆ. ಇದರೊಂದಿಗೆ ಉತ್ತರವನ್ನು ಕಳುಹಿಸಬಹುದು. ಉತ್ತರವನ್ನು ಬೇರೆಯವರಿಗೆ ಕಳುಹಿಸಬೇಕಾದಾಗ ಅವರ ಇ–ಮೇಲ್ ವಿಳಾಸ ಟೈಪ್ ಮಾಡಿ ಕಳುಹಿಸಬಹುದಾಗಿದೆ.

## ವಾರ್ತಾ ಗಣಗಳು (News Servers)

ಒಂದು ವಿಷಯದ ಕುರಿತು ಆಸಕ್ತಿ ಹೊಂದಿದವರ ಗುಂಪನ್ನು 'ವಾರ್ತಾಗಣ'ಗಳು ಎನ್ನಬಹುದು. ಅಸಕ್ತರ ಗುಂಪು ಆಸಕ್ತಿಯುತ ವಿಷಯದ ಕುರಿತು ಚರ್ಚೆಯನ್ನು ಇ–ಮೇಲ್ ಮೂಲಕ ಮಾಡಬಹುದಾಗಿದೆ. ಆ ಗುಂಪಿನ ಆಸಕ್ತಿಗನುಗುಣವಾಗಿ ವಿಷಯದ ಕುರಿತು ಚರ್ಚೆ ನಡೆಸಲು ಸಹಾಯಕವಾಗುವುದೇ ವಾರ್ತಾಗಣ. ಇದು ಸಾರ್ವಜನಿಕ ಇ–ಮೇಲ್ ಚರ್ಚಾ ಗುಂಪು ಎಂದು ಕರೆಯಲ್ಪಡುವುದು. ವಾರ್ತಾಗಣದಲ್ಲಿ ಭಾಗವಹಿಸುವವರು ಈ–ಮೇಲ್‌ನ ಮೂಲಕ ತಮ್ಮ ಸಂದೇಶವನ್ನು ಕಳುಹಿಸುತ್ತಾರೆ. ಆ ಸಂದೇಶಗಳಿಗೆ ಮರಳಿ ಉತ್ತರಗಳನ್ನು


Digitised by Bharatavani, CIIL

ಕಳುಹಿಸಬಹುದು. ಇ–ಮೇಲ್ ಗುಂಪುಗಳು ಮತ್ತು ವಾರ್ತಾಗಣ ಚರ್ಚೆಗೆ ಸಹಾಯಕವಾಗುವುದು. ನಿರ್ದಿಷ್ಟ ವಿಷಯದ ಬಗ್ಗೆ ಆಸಕ್ತಿಹೊಂದಿರುವ ಇ–ಮೇಲ್ ಸಂದೇಶಗಳನ್ನು ಎಲ್ಲರಿಗೂ ಮೇಲ್ ಮಾಡಲಾಗುತ್ತದೆ. ನಂತರ ಈ ಮೇಲ್‌ಗಳಿಗೆ ಯಾರು ಬೇಕಾದರೂ ಪ್ರತಿಕ್ರಿಯೆ ವ್ಯಕ್ತಪಡಿಸಬಹುದು. ಈ ಸಂದೇಶಗಳನ್ನು ಒದಗಿಸುವವರು ಆ ಗುಂಪಿನ ಮಾಹಿತಿ ಪಡೆಯಬಹುದಾಗಿದೆ. Use Net ಎನ್ನುವ ಜಾಲವು ಈ ವಾರ್ತಾಗಣ ಸೌಲಭ್ಯವನ್ನು ಒದಗಿಸುತ್ತದೆ. Use Net ಜಾಲದಲ್ಲಿ News Server ಅಥವಾ ಸುದ್ದಿಸೇವಾ ವಿತರಕ ಎಂಬ ಗಣಗಳು ಇರುವುವು. ಇವುಗಳ ಮೂಲಕ ನಾವು ಹೊಸ ಸಂದೇಶಗಳನ್ನು ಪಡೆದು ಚರ್ಚೆ ನಡೆಸಬಹುದು.

**ವಿದ್ಯುನ್ಮಾನ ಅಂಚೆಯ ಅನುಕೂಲಗಳು:**

ದೂರವಾಣಿ ಸಂಪರ್ಕದ ಮೂಲಕ ಇಬ್ಬರು ತಮ್ಮ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಆದರೆ ದೂರವಾಣಿ ಸಂಪರ್ಕಕ್ಕೆ ಕೆಲವೊಂದು ಸಾರಿ ಬಹಳ ಸಮಯ ಕಾಯಬೇಕಾಗುತ್ತದೆ. ಆದರೆ ಇ–ಮೇಲ್‌ನ ಮೂಲಕ ಮಾಹಿತಿ ವಿನಿಮಯ ನಡೆಯುವುದು. ಇದು ಇಬ್ಬರಿಗೆ ಮಾತ್ರ ಸೀಮಿತವಾಗಿಲ್ಲ. ನಾವು ಕಳುಹಿಸಿದ ಮಾಹಿತಿ ಒಬ್ಬರಿಗಿಂತ ಹೆಚ್ಚು ಜನರಿಗೂ ಕಳುಹಿಸಬಹುದು. ಕಾಲ ದೇಶಗಳನ್ನು ಮೀರಿ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಬಹುದಾಗಿದೆ. ಇ–ಮೇಲ್‌ನ ಮೂಲಕ ಕೆಲವೇ ಸೆಕೆಂಡ್‌ಗಳಲ್ಲಿ ಸಂದೇಶಗಳನ್ನು ರವಾನಿಸುವುದು ಸಾಧ್ಯವಾಗುತ್ತದೆ. ಹಾಗೆಯೇ ಸೆಕೆಂಡುಗಳಲ್ಲಿ ಸಂದೇಶವನ್ನು ಪಡೆಯಬಹುದಾಗಿದೆ. ಅದಕ್ಕೆ ಉತ್ತರವನ್ನೂ ಸಹ ಕಳುಹಿಸಬಹುದಾಗಿದೆ. ಇ–ಮೇಲ್ ಮೂಲಕ ಜನರಲ್ಲಿ ಸಂಬಂಧತೆ ಮತ್ತು ಸ್ವಂತಿಕೆಯ ಭಾವವನ್ನು ಪೋಷಿಸಿ, ಪಾಲಿಸಿಕೊಂಡು ಹೋಗಬಹುದು. ಕುಟುಂಬದ ಎಲ್ಲಾ ಸದಸ್ಯರು, ಗೆಳೆಯರು, ಅಪರಿಚಿತರು ಯಾರೇ ಆಗಲಿ ಎಲ್ಲರೊಡನೆ ಚಾಟ್ ಮಾಡಬಹುದು. ಇದಕ್ಕೆ ತಗಲುವ ವೆಚ್ಚವು ಬಹಳ ಕಡಿಮೆ.

**ವಿದ್ಯುನ್ಮಾನ ಅಂಚೆಯ ಅನಾನುಕೂಲಗಳು**

ವಿದ್ಯುನ್ಮಾನ ಅಂಚೆಯಲ್ಲಿ ವ್ಯಕ್ತಿಗಳು ಮುಖಾಮುಖಿಯಾಗುವುದಿಲ್ಲ. ಚರ್ಚೆಯಲ್ಲಿ ಭಾಗವಹಿಸುವವರು ಒಂದು ನಿರ್ಧಾರಕ್ಕೆ ಬರುವದು ಕಷ್ಟಕರವಾಗುತ್ತದೆ. ಭಿನ್ನಾಭಿಪ್ರಾಯಗಳು ತಲೆದೋರುತ್ತವೆ. ಇ–ಮೇಲ್ ರೂಪಗಳು ಸಾಮಾನ್ಯ ಬಳಕೆದಾರ ಒಬ್ಬನೇ ವಾರ್ತಾಕರ್ತನೊಡನೆ ಮಾಹಿತಿ ವಿನಿಮಯ ಮಾಡಬಹುದು. ಇಲ್ಲವೇ ಒಂದು ಗುಂಪಿನೊಡನೆ ಮಾಡಬಹುದು. ಪ್ರತಿ ಬಳಕೆದಾರನಿಗೂ ಒಂದು ಮೇಲ್ ಬಾಕ್ಸ್ ಇರುತ್ತದೆ. ಸಂದೇಶಗಳು ಈ ಬಾಕ್ಸ್‌ನಲ್ಲಿ ಸಂಗ್ರಹವಾಗುತ್ತವೆ. ಇಲ್ಲಿ ಸಂದೇಶಗಳು ಕಂಪ್ಯೂಟರ್ ಜಾಲದ ಮೂಲಕ ರವಾನೆಯಾಗುತ್ತದೆ.

–ಶೀ. ಜಿ.

## ವಿಶೇಷ ಅಗತ್ಯವಿರುವ (ಸವಾಲುಳ್ಳ) ಮಕ್ಕಳಿಗೆ ವರ್ತನಾ ಚಿಕಿತ್ಸೆ

ವರ್ತನೆ ಮಾನವನ ಸಹಜ ಲಕ್ಷಣ. ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಹಲವಾರು ಚಟುವಟಿಕೆಗಳಲ್ಲಿ ನಿರತರಾಗಿರುತ್ತೇವೆ. ಇವುಗಳಲ್ಲಿ ಕೆಲವು ಹೊರನೋಟಕ್ಕೆ ಕಾಣಿಸುತ್ತದೆ ಮತ್ತು ಕೆಲವು ಕಾಣಿಸುವುದಿಲ್ಲ. ಕೆಲವೊಂದು ಅಳತೆಗೆ ನಿಲುಕುತ್ತವೆ ಮತ್ತೆ ಕೆಲವು ಅಳತೆಗೆ ನಿಲುಕುವುದಿಲ್ಲ.

ಹೊರನೋಟಕ್ಕೆ ಕಾಣುವ ಆಳತೆಗೆ ನಿಲುಕುವ ವ್ಯಕ್ತಿಯ ಚಟುವಟಿಕೆಗಳನ್ನು ವರ್ತನೆ ಎನ್ನಬಹುದು. ಇವುಗಳನ್ನು ಮುಖ್ಯವಾಗಿ ಎರಡು ವಿಧಗಳಾಗಿ ಗುರುತಿಸಬಹುದು.

1. ಕುಶಲ ವರ್ತನೆಗಳು ಸಾಮಾಜಿಕವಾಗಿ ಹಾಗೂ ವೈಯಕ್ತಿಕವಾಗಿ ಗೆಲುವಿನ ಬಾಳು ನಡೆಸಲು ಬೇಕಾಗುವ ವರ್ತನೆಗಳೇ ಕುಶಲವರ್ತನೆಗಳು.

2. ಸಮಸ್ಯಾತ್ಮಕ ವರ್ತನೆಗಳು : ವ್ಯಕ್ತಿಗೆ ಮತ್ತು ಸಮಾಜಕ್ಕೆ ಅಪಾಯಕಾರಿಯಾಗಿರುವ ವರ್ತನೆಗಳನ್ನು ಸಮಸ್ಯಾತ್ಮಕ ವರ್ತನೆಗಳು ಎನ್ನುತ್ತಾರೆ.

ಬೌದ್ಧಿಕ ಹಾಗೂ ಸಾಮಾಜಿಕ ಕಲಿಕೆಯ ತತ್ವಗಳನ್ನು ಅಳವಡಿಸಿಕೊಂಡು ಕುಶಲ ವರ್ತನೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಸಮಸ್ಯಾತ್ಮಕವರ್ತನೆಗಳನ್ನು ನಿವಾರಿಸಿ ವರ್ತನೆಯನ್ನು ಅಪೇಕ್ಷಿತ ದಿಶೆಯಲ್ಲಿ ಮಾರ್ಪಡಿಸಲು ಕೈಗೊಳ್ಳುವ ಚಿಕಿತ್ಸೆಯನ್ನು ವರ್ತನಾ ಚಿಕಿತ್ಸೆ (Behaviour therapy) ಎನ್ನುತ್ತಾರೆ.

**ವರ್ತನಾ ಚಿಕಿತ್ಸೆಯ ಅಳವಡಿಕೆ**

ಕುಶಲ ವರ್ತನೆಯನ್ನು ಅಭಿವೃದ್ಧಿಪಡಿಸಲು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಕೆಲವೊಂದು ಅಗತ್ಯ ವರ್ತನೆಗಳನ್ನು ಕಲಿಯಲು ತೊಡಕುಂಟಾಗುತ್ತದೆ. ಹಾಗಾಗಿ ಈ ಕುಶಲ ವರ್ತನೆಗಳನ್ನು ಅವರು ಸಹಜ ರೀತಿಯಲ್ಲಿ ಕಲಿಯಲಾರರು. ಅವರ ವಿಶೇಷ ಅಗತ್ಯಕ್ಕೆ ತಕ್ಕಂತೆ ನಿರ್ದಿಷ್ಟ ಕ್ರಮಗಳನ್ನು ಯೋಜಿಸಿಕೊಂಡು ಆ ಮಕ್ಕಳಲ್ಲಿ ಕುಶಲ ವರ್ತನೆಯನ್ನು ಬೆಳೆಸಲು ವರ್ತನಾ ಚಿಕಿತ್ಸೆ ಬಹಳ ಸಹಕಾರಿ.

ಸಮಸ್ಯಾತ್ಮಕ ವರ್ತನೆಗಳು ವೈಯಕ್ತಿಕ ಹಾಗೂ ಸಾಮಾಜಿಕ ದೃಷ್ಟಿಕೋನದಿಂದ ಅಪಾಯಕಾರಿಯಾಗಿರುತ್ತದೆ. ಕೆಲವೊಂದು ವರ್ತನೆಗಳು ವಯೋಸಹಜವಲ್ಲದಿರಬಹುದು ಅಥವಾ ಅಸಮಂಜಸವಾಗಿರಬಹುದು. ಕೆಲವು ಅಸಹಜ ವರ್ತನೆಗಳು ಮಗುವಿಗೆ ಕುಶಲ ವರ್ತನೆ ಕಲಿಯಲು ತಡೆಯೊಡ್ಡಬಹುದು. ಸಾಮಾಜಿಕವಾಗಿ ತಪ್ಪು ಎನಿಸಿಕೊಳ್ಳುವ ವರ್ತನೆ ಇರಬಹುದು. ಈ ಕಾರಣಗಳಿಂದ ಸಮಸ್ಯಾತ್ಮಕ ವರ್ತನೆಗಳನ್ನು ನಿವಾರಿಸುವುದು ಆವಶ್ಯಕ. ವಿಶೇಷ ಅಗತ್ಯವುಳ್ಳ ಮಕ್ಕಳು ಹಲವಾರು ಸಂದರ್ಭಗಳಲ್ಲಿ ನ್ಯೂನತೆಯಿಂದಾಗಿ ಕೆಲವು ಸಮಸ್ಯಾತ್ಮಕ ವರ್ತನೆಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಇಂತಹ ಕೆಲವು ವರ್ತನೆಗಳು ಕೆಲವೊಮ್ಮೆ ನ್ಯೂನತೆಯ ಲಕ್ಷಣಗಳೂ ಆಗಿರಬಹುದು. ಸೂಕ್ಷ್ಮವಾಗಿ ಅವಲೋಕಿಸಿ ಇಂಥ ಸಮಸ್ಯಾತ್ಮಕ ವರ್ತನೆಗಳ ಕಾರಣಗಳನ್ನು ವಿಶ್ಲೇಷಿಸಿ ಅವುಗಳನ್ನು ನಿವಾರಿಸಲು ವರ್ತನಾ ಚಿಕಿತ್ಸೆ ಫಲಕಾರಿ. ಕುಶಲ ವರ್ತನೆ ಮತ್ತು ಸಮಸ್ಯಾತ್ಮಕ ವರ್ತನೆ ಇವೆರಡನ್ನೂ ಮಕ್ಕಳು ಕಲಿಯುತ್ತಾರೆ. ತೃಪ್ತಿಕರ ಪರಿಣಾಮ ಬೀರುವ ವರ್ತನೆಗಳನ್ನು ಕಲಿಯುತ್ತಾರೆ. ಅತೃಪ್ತಿಕರ ಪರಿಣಾಮ ಬೀರುವ ವರ್ತನೆಗಳನ್ನು ಮರೆಯುತ್ತಾರೆ. ಈ ತತ್ವದ ಆಧಾರದ ಮೇಲೆ ಮಕ್ಕಳಲ್ಲಿ ಕುಶಲ ವರ್ತನೆಯನ್ನು ಬೆಳೆಸಲು ಮತ್ತು ಸಮಸ್ಯಾತ್ಮಕ ವರ್ತನೆಯನ್ನು ನಿವಾರಿಸಲು ವರ್ತನಾ ಚಿಕಿತ್ಸೆ ರೂಪುಗೊಂಡಿದೆ. ವರ್ತನೆಗೆ ಕಾರಣವೇನು ಹಾಗೂ ಅದರ ಪರಿಣಾಮವೇನು ಎಂಬ ವಿಶ್ಲೇಷಣೆಯ ಆಧಾರದಮೇಲೆ ವರ್ತನಾ ಚಿಕಿತ್ಸೆ ನೀಡಲಾಗುತ್ತದೆ. ವರ್ತನಾ ಚಿಕಿತ್ಸೆಯನ್ನು ಎರಡು ಮುಖ್ಯ ವಿಧಗಳಾಗಿ ವಿಂಗಡಿಸಬಹುದು.

ಕುಶಲ ವರ್ತನೆಗಳ ಬಲವರ್ಧಕ ಚಿಕಿತ್ಸೆ ಮತ್ತು ಸಮಸ್ಯಾತ್ಮಕ ವರ್ತನೆಗಳ ನಿರ್ಬಂಧಕ ಚಿಕಿತ್ಸೆ.

**ಕುಶಲ ವರ್ತನೆ ಕಲಿಸಲು ಉಪಯೋಗಿಸಬಹುದಾದ ವರ್ತನಾ ಚಿಕಿತ್ಸೆ**

ಮಕ್ಕಳು ತಮ್ಮ ಸುತ್ತಮುತ್ತಲಿನವರಿಂದ ಪರಿಸರದಿಂದ ಆತ್ಮೀಯರಿಂದ ವರ್ತನೆಗಳನ್ನು ಕಲಿಯುತ್ತಾರೆಂಬುದು ಸ್ಪಷ್ಟ. ಕುಶಲ

Digitised by Bharatavani, CIIL

ವರ್ತನೆ ಕಲಿಸಲು ಕೆಲವೊಂದು ಚಿಕಿತ್ಸೆಗಳು ಇವೆ. ಅವುಗಳಲ್ಲಿ ಎರಡು ಮುಖ್ಯ ಚಿಕಿತ್ಸಾ ವಿಧಾನಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ.

1) **ಪುನರ್ಬಲನ ನೀಡುವುದು** – ವರ್ತನೆಯ ಪರಿಣಾಮವಾಗಿ ನಡೆಯುವ ಘಟನೆ ಮಗುವಿಗೆ ಇಷ್ಟವಾಗುವಂತಿದ್ದರೆ. ಅದರ ಪೂರಕ ವರ್ತನೆ ಪುನರಾವರ್ತನೆಗೊಳ್ಳುತ್ತದೆ. ಹೀಗೆ ಅಪೇಕ್ಷಿತ ವರ್ತನೆ ತೋರಿಸಿದ ಮಗುವಿಗೆ ಇಷ್ಟವಾಗುವ ಪ್ರತಿಕ್ರಿಯೆ ನೀಡುವ ವಿಧಾನವನ್ನು ಪುನರ್ಬಲನ ನೀಡುವಿಕೆ ಎಂದು ಹೇಳುತ್ತಾರೆ.

ಒಂದು ವರ್ತನೆಯನ್ನು ಅನುಸರಿಸಿ ಜರುಗುವ ಘಟನೆ ಅಥವಾ ಪ್ರತಿಕ್ರಿಯೆ ಬಹುಮಾನವಾಗುತ್ತದೆ. ಹೀಗೆ ದೊರಕುವ ಪ್ರತಿಫಲ ಹಿತಕರವಾಗಿದ್ದರೆ ಅದನ್ನು ಪಡೆದ ಮಗು ಅದಕ್ಕೆ ಕಾರಣವಾದ ವರ್ತನೆಯನ್ನು ಪುನರಾವರ್ತಿಸುತ್ತದೆ. ನಮಗೆ ತಿಳಿದೋ ತಿಳಿಯದೆಯೋ ನಾವೆಲ್ಲರೂ ಬಹುಮಾನದ ನಿರೀಕ್ಷೆಯಿಂದ ಪ್ರೇರಿತರಾಗುತ್ತೇವೆ. ಬಹುಮಾನದ ವಸ್ತು, ವಿಧಾನ, ಪ್ರಮಾಣ, ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿರಬಹುದು. ಆದರೂ ವರ್ತನೆಗಳೆಲ್ಲ ಬಹುತೇಕ ಅದಕ್ಕೆ ಪ್ರತಿಕ್ರಿಯೆಯಾಗಿ ದೊರಕುವ ಬಹುಮಾನದಿಂದ ಪ್ರೇರಿತವಾಗಿರುತ್ತವೆ.

ಅಗತ್ಯವುಳ್ಳ ಮಕ್ಕಳಿಗೆ ಹೊಸ ಕೌಶಲ ವಿಚಾರ ಕಲಿಸಲು ಇದು ಉಪಯುಕ್ತ ವಿಧಾನ.

2) **ಮಾದರಿ ಅಥವಾ ನಮೂನೀಕರಣ (Modeling)** – ಮಗು ಏನನ್ನು ಕಲಿಯಬೇಕೆಂದು ನಾವು ಅಪೇಕ್ಷಿಸುತ್ತೇವೋ, ಏನು ಮಾಡಬೇಕೆಂದು ನಿರೀಕ್ಷಿಸುತ್ತೇವೋ, ಅದನ್ನು ಮಾದರಿಯಾಗಿ ಮಗುವಿಗೆ ಮಾಡಿ ತೋರಿಸುವುದೇ ನಮೂನೀಕರಣ. ಈ ಮಕ್ಕಳಿಗೆ ಪದೇ ಪದೇ ಹೇಳುವುದರಿಂದ ಅವರು ನಿರೀಕ್ಷಿತ ನಿರ್ದಿಷ್ಟ ಕೌಶಲವನ್ನು ಕಲಿಯಲಾರರು. ಬದಲಿಗೆ ಅದನ್ನು ಹೆಜ್ಜೆ ಹೆಜ್ಜೆಯಾಗಿ ಸರಳೀಕರಿಸಿ, ಸುಲಭ ಹೆಜ್ಜೆಯಿಂದ ಆರಂಭಿಸಿ ಮುಂದುವರಿಯುವ ವಿಧಾನವನ್ನು ಹಿರಿಯರು ಮಾದರಿಯಾಗಿ ಮಾಡುವುದರಿಂದ ಈ ಮಕ್ಕಳು ಸುಲಭವಾಗಿ ಕಲಿಯುತ್ತಾರೆ. ಸ್ವಲ್ಪ ಜಟಿಲ ಎನ್ನಿಸುವ ಕೌಶಲವನ್ನು, ಕಲೆಯನ್ನು ಮಗುವಿಗೆ ಕಲಿಸಲು ಈ ವಿಧಾನವನ್ನು ಅನುಸರಿಸಬಹುದು.

3) **ಸಮಸ್ಯಾತ್ಮಕ ವರ್ತನೆಯನ್ನು ನಿವಾರಿಸಲು ನೀಡಬಹುದಾದ ವರ್ತನಾ ಚಿಕಿತ್ಸಾ ವಿಧಾನಗಳು** – ಅನಗತ್ಯ ವರ್ತನೆಗಳನ್ನು ನಿವಾರಿಸಲು ಅನೇಕ ತಂತ್ರಗಳಿವೆ. ಅವುಗಳಲ್ಲಿ ಉಪಯುಕ್ತವಾದ ಎರಡು ಚಿಕಿತ್ಸಾ ಕ್ರಮಗಳನ್ನು ಇಲ್ಲಿ ವಿವರಿಸಿದೆ.

ಅ) **ನಿರ್ಲಕ್ಷಿಸುವುದು (Ignoring)**: ಹಲವಾರು ಸಂದರ್ಭಗಳಲ್ಲಿ ಮಕ್ಕಳು ಹಿರಿಯರ ಗಮನ ಸೆಳೆಯಲು ಬೇಡದ ವರ್ತನೆಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅದು ಸಮಸ್ಯೆಯ ಮಟ್ಟಕ್ಕೆ ಬಂದಾಗ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕಾದುದು ಅಗತ್ಯ. ಇಂತಹ ಸಂದರ್ಭದಲ್ಲಿ ಮಗುವಿನ ಅಸಂಬದ್ಧ ವರ್ತನೆಯನ್ನು ನಿರ್ಲಕ್ಷಿಸುವುದು ಒಂದು ಪ್ರಭಾವಶಾಲಿ ವರ್ತನಾ ಚಿಕಿತ್ಸೆ. ಈ ಚಿಕಿತ್ಸೆಯನ್ನು ಇದು ಅನುಭವಿ ತಜ್ಞರ ಮಾರ್ಗದರ್ಶನದಲ್ಲಿ ನೀಡಬೇಕು. ಏಕೆಂದರೆ ಚಿಕಿತ್ಸಾ ಕ್ರಮದ ಒಳಿತು ಕೆಡಕುಗಳನ್ನು ಸೂಕ್ತವಾಗಿ ವಿಶ್ಲೇಷಿಸಿ ಕ್ರಮಬದ್ಧವಾಗಿ ನಿಯಮಗಳನ್ನು ಪಾಲಿಸಿ ನೀಡಬೇಕಿರುವ ತಂತ್ರವಾಗಿದೆ.

ಆ) **ಸ್ವ–ನಿರ್ವಹಣಾ ತಂತ್ರ (Self Management Technique)**: ಇದು ಮಕ್ಕಳು ತಮ್ಮ ಅನಗತ್ಯ ವರ್ತನೆಗೆ ತಾವೇ ಜವಾಬ್ದಾರರು ಎಂದು ಅರಿತುಕೊಂಡು ತಮ್ಮನ್ನು ತಾವೇ ಸುಧಾರಿಸಿಕೊಳ್ಳುವ ಒಂದು ಸರಳ ಮತ್ತು ಪ್ರಭಾವಶಾಲಿ ತಂತ್ರ. ತಮ್ಮ ವರ್ತನೆಯನ್ನು ಅವಲೋಕಿಸಿ, ಅದನ್ನು ಗುರುತಿಸಿ ಅದನ್ನು ತಾವೇ ಕಡಿಮೆ ಮಾಡಿಕೊಳ್ಳಲು ತಮಗೆ ತಾವೇ ನಿರ್ದೇಶನ ಕೊಟ್ಟುಕೊಳ್ಳುವಂತೆ ಮಕ್ಕಳಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಮಾರ್ಗದರ್ಶನದ ಹಂತಗಳನ್ನು ನೆನಪಿಟ್ಟುಕೊಂಡು ಅದರ ಪ್ರಕಾರ ತಮಗೆ ತಾವೇ ಸಲಹೆ ಸೂಚನೆಗಳನ್ನು ಕೊಟ್ಟುಕೊಳ್ಳುತ್ತಾ ಸಮಸ್ಯಾತ್ಮಕ ವರ್ತನೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಿಕೊಳ್ಳಬಹುದು. ಪ್ರಾರಂಭದಲ್ಲಿ ಹಂತಗಳನ್ನು ಗುರುತು ಹಾಕಿ ಕೊಟ್ಟು ಸೂಚನೆ ನೀಡುವಲ್ಲಿ ಹಿರಿಯರ ಪಾತ್ರ ಬಹಳ ಮುಖ್ಯ. ಹಾಗೆಯೇ ಮಕ್ಕಳು ಈ ತಂತ್ರವನ್ನು ಅಳವಡಿಸಿಕೊಳ್ಳುವಾಗಲೂ ಅವರು ಸರಿಯಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದಾರೆಂದು ಖಚಿತಪಡಿಸಿಕೊಳ್ಳುವಲ್ಲಿ ಹಿರಿಯರ ಪಾತ್ರ ಮಹತ್ವಪೂರ್ಣವಾದುದು.

ವರ್ತನಾ ಚಿಕಿತ್ಸೆ ನೀಡುವಾಗ ನೆನಪಿನಲ್ಲಿಡಬೇಕಾದ ಕೆಲವು ಸೂಚನೆಗಳು–

– ಒಂದು ಮಗು ಹಲವು ಸಮಸ್ಯಾತ್ಮಕ ವರ್ತನೆಗಳನ್ನು ತೋರ್ಪಡಿಸಬಹುದು. ಅಂಥ ಪ್ರತಿ ವರ್ತನೆಯನ್ನು ವಿಶ್ಲೇಷಿಸಿ ಪ್ರತಿಯೊಂದು ವರ್ತನೆಗೂ ಸೂಕ್ತ ವರ್ತನಾ ಚಿಕಿತ್ಸೆ ತಂತ್ರವನ್ನು ಅಳವಡಿಸಬೇಕು.

– ಇಬ್ಬರು ಮಕ್ಕಳಲ್ಲಿರುವ ಒಂದೇ ಸಮಸ್ಯಾತ್ಮಕ ವರ್ತನೆಗೆ ಒಂದೇ ಚಿಕಿತ್ಸೆ ಫಲಕಾರಿಯಾಗುತ್ತದೆ ಎಂದು ಹೇಳಲಾಗದು. ಸೂಕ್ತ ತಂತ್ರವನ್ನು ಮಗುವಿನ ವೈಯಕ್ತಿಕ ರೀತಿ ನೀತಿ ಸಮಯ ಸಂದರ್ಭಕ್ಕೆ ಅನುಸಾರವಾಗಿ ಆಯ್ಕೆ ಮಾಡಿ ಚಿಕಿತ್ಸೆ ನೀಡಬೇಕಾಗುತ್ತದೆ.

– ಒಂದು ನಿರ್ದಿಷ್ಟ ವರ್ತನೆಗೆ ಒಂದು ನಿರ್ದಿಷ್ಟ ಚಿಕಿತ್ಸೆ ಎಂದು ನಿಗದಿಪಡಿಸಲಾಗದು. ಪ್ರತಿಯೊಂದು ಮಗುವಿನ ವರ್ತನೆಯನ್ನು ಕೂಲಂಕಷವಾಗಿ ವಿಶ್ಲೇಷಣೆ ಮಾಡಿ ಮಗುವಿನ ಪರಿಸ್ಥಿತಿಗೆ ಹೊಂದಿಕೆಯಾಗುವ ತಂತ್ರವನ್ನು ಆರಿಸಿಕೊಳ್ಳಬೇಕು. ವರ್ತನಾ ಚಿಕಿತ್ಸೆ ವಿಶೇಷ ಅಗತ್ಯವುಳ್ಳ ಮಕ್ಕಳ ನಿರ್ವಹಣೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ. ಈ ಚಿಕಿತ್ಸಾ ವಿಧಾನಗಳೆಲ್ಲಾ ವೈಜ್ಞಾನಿಕ ದೃಷ್ಟಿಕೋನದಿಂದ ಕಲಿಕಾ ತತ್ವಗಳ ಆಧಾರದ ಮೇಲೆ ಪ್ರಾಯೋಗಿಕವಾಗಿ ತಜ್ಞರ ಅನುಭವದಿಂದ ರೂಪುಗೊಂಡಿವೆ. ವರ್ತನಾ ಚಿಕಿತ್ಸೆಯನ್ನು ಅಳವಡಿಸಿಕೊಳ್ಳಲು ಹೆಚ್ಚಿನ ಅಭ್ಯಾಸ ಹಾಗೂ ತಜ್ಞರ ಮಾರ್ಗದರ್ಶನ ಬೇಕಾಗುತ್ತದೆ.

–ಗೌ.ಐ.ಪಿ.

## ವಿಶೇಷ ಶಿಕ್ಷಣ ಮತ್ತು ಪ್ರತಿಶಿಕ್ಷಣ ಕಾರ್ಯಕ್ರಮಗಳು

ಅಂಗವಿಕಲ ಮಕ್ಕಳು ಕರ್ನಾಟಕದ ವಿಶೇಷ ಶಿಕ್ಷಣ ಮತ್ತು ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಮತ್ತು ವಿದ್ಯಾಭ್ಯಾಸ ಪದ್ಧತಿಯಲ್ಲಿನ ಅವ್ಯವಸ್ಥೆಯನ್ನು ಸಹಿಸಲೇಬೇಕಿದೆ. ಸುಮಾರು 75 ಮಿಲಿಯನ್ ಅಂಗವಿಕಲ ಮಕ್ಕಳ ಪೈಕಿ 1/3 ರಷ್ಟು ಭಾಗ ಪ್ರೈಮರಿ ಶಾಲಾ ವಯೋಮಾನದ ಮಕ್ಕಳು ಶಾಲೆಗಳಿಂದ ಹೊರಗೇ ಉಳಿದಿದ್ದಾರೆ. ಅಂಕಿಅಂಶಗಳ ಪ್ರಕಾರ ಪ್ರಪಂಚದ 20% ಕಡುಬಡವರು ಅಂಗವಿಕಲತೆ ಹೊಂದಿದ್ದಾರೆ. ಮುಂದುವರೆದ ದೇಶಗಳಲ್ಲೂ 90%ರಷ್ಟು ಅಂಗವಿಕಲ ಮಕ್ಕಳು ಶಾಲೆಗೆ ಹೋಗುವುದಿಲ್ಲ. 30%ರಷ್ಟು ಬೀದಿಮಕ್ಕಳು

Digitised by Bharatavani, CIIL

ಅಂಗವಿಕಲರಾಗಿದ್ದಾರೆ. ವಯಸ್ಕ ಅಂಗವಿಕಲರ ವಿದ್ಯಾಭ್ಯಾಸ ಮಟ್ಟವೂ ಕೇವಲ 3% ಮಾತ್ರ. ಕೆಲವು ದೇಶಗಳಲ್ಲಿ ಮಹಿಳೆಯ ವಿಷಯಕ್ಕೆ ಬಂದಾಗ ಇದು 1% ಮಾತ್ರ.

ಅಂಗವಿಕಲ ಮಕ್ಕಳಿಗೆ ಕೆಲವೊಮ್ಮೆ ಅದೇ ವಯೋಮಾನದ ಮಕ್ಕಳಿಗೆ ಕೊಡುವ ಶಿಕ್ಷಣಕ್ಕಿಂತ ವಿಭಿನ್ನವಾದ ರೀತಿಯಲ್ಲಿ ಶಿಕ್ಷಣ ಕೊಡಬೇಕಾಗುತ್ತದೆ. ಪ್ರಪಂಚದಾದ್ಯಂತ ಅಂಗವಿಕಲ ಮಕ್ಕಳನ್ನು ಸಾಮಾನ್ಯ ಶಿಕ್ಷಣ ಪದ್ಧತಿಯಿಂದ ದೂರವೇ ಇಡಲಾಗುತ್ತದೆ. ಮುಂದುವರೆದ ದೇಶಗಳಲ್ಲೂ ಕೆಲವು ತಪ್ಪು ಪರಿಕಲ್ಪನೆ ಮತ್ತು ಸಮೂಹದ ಋಣಾತ್ಮಕ ಮನೋಭಾವದಿಂದಾಗಿ ಇಂತಹ ಮಕ್ಕಳು ಹಾಗೆಯೇ ಉಳಿಯುತ್ತಾರೆ. ಹಲವು ಸಂಘಸಂಸ್ಥೆಗಳು, ಸಂಘಟನೆಗಳು ಈ ವಿಶೇಷ ಶಿಕ್ಷಣವನ್ನು ಮುಖ್ಯ ವಿಭಾಗದಲ್ಲೇ ಸೇರಿಸಿಕೊಳ್ಳಲು ಮುಂದಾಗಿವೆ. ಭಾರತ ಮತ್ತು ಇತರ ಏಷಿಯಾ-ಪೆಸಿಫಿಕ್ ಸ್ಥಳಗಳಲ್ಲಿ ವಿಶೇಷಶಿಕ್ಷಣವನ್ನು ಉನ್ನತಿಗೆ ತರಲು ಹಲವು ಹೆಜ್ಜೆಗಳನ್ನು ಇಡಲಾಗಿದೆ. ಆದರೆ ಒಂದು ವ್ಯವಸ್ಥಿತ ಸಂಘಟನೆ ಇರದ ಕಾರಣ ಅಸಮವಾದ ಬೆಳವಣಿಗೆ ಮತ್ತು ಕಡಿಮೆ ಗುಣಮಟ್ಟ ಕಂಡುಬರುತ್ತದೆ.

**ಭಾರತದಲ್ಲಿ ವಿಶೇಷ ಶಿಕ್ಷಣ ಸಂಸ್ಥೆಗಳು**

ಭಾರತವು ಪ್ರಪಂಚದ ಇತರ ಭಾಗಗಳ ಬೆಳವಣಿಗೆಯೊಂದಿಗೆ ತಾನೂ ಹೆಜ್ಜೆ ಇಡುತ್ತಿದೆ. 1883ರಲ್ಲಿ ಭಾರತದ ಮೊದಲ ಶ್ರವಣದೌರ್ಬಲ್ಯದವರ ಶಾಲೆಯೊಂದು ಬಾಂಬೆಯಲ್ಲಿ ಆರಂಭವಾಯಿತು. ಅಮೃತಸರದಲ್ಲಿ 1887ರಲ್ಲಿ ಮೊದಲ ಶ್ರವಣದೋಷದವರಿಗಾಗಿ ಶಾಲೆ ಆರಂಭವಾಯಿತು. ಇಂದು 3200 ವಿಶೇಷ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆದರೂ ಗ್ರಾಮಾಂತರ ಪ್ರದೇಶದ ಮಕ್ಕಳು ಇದರಿಂದ ವಂಚಿತರಾಗಿದ್ದಾರೆ. ಈ ನಿಟ್ಟಿನಲ್ಲಿ 1950ರಲ್ಲಿ **"ಸಾಮೂಹಿಕ ಶಾಲೆ"**ಯ ಕಲ್ಪನೆಯನ್ನು ಕಾಣಲಾಯಿತು. 1952ರಲ್ಲಿ ಸರಕಾರದ ವತಿಯಿಂದ ಸ್ಕಾಲರ್‌ಶಿಪ್ ಘೋಷಿಸಲಾಯಿತು. ಸಮಾಜದಲ್ಲಿ ಮೂಲೆಗುಂಪಾದ ಅಂಗವಿಕಲ ಮಕ್ಕಳ ಜೀವನಾವಶ್ಯಕತೆಗಳೊಂದಿಗೆ ಅವರ ಜೀವನ ಮಟ್ಟವನ್ನು ಸುಧಾರಿಸಿ ತಮ್ಮ ಸಾಮರ್ಥ್ಯದ ಸಂಪೂರ್ಣ ಲಾಭಪಡೆಯುವಂತಾಗಬೇಕೆಂಬುದೇ ಇದರ ಉದ್ದೇಶ. ಸಮಾಜದಲ್ಲಿ ಮೇಲು-ಕೀಳು ಭಾವವಿಲ್ಲದೆ ಸಮಾನತೆಯನ್ನು ತರಬೇಕಿದೆ. ಅಂಗವಿಕಲರ ಬಹಿಷ್ಕಾರ ಅನೇಕ ರೂಪದಲ್ಲಿ ಕಾಣಬಹುದಾಗಿದೆ. 2000ದವರೆಗೆ 75 ಮಿಲಿಯನ್ ಮಕ್ಕಳು ಶಾಲೆಯಲ್ಲಿ ನೋದಾಯಿಸಲ್ಪಟ್ಟಿಲ್ಲ. ಇವರಲ್ಲಿ ಅರ್ಧದಷ್ಟು ಮಕ್ಕಳು ಹೆಣ್ಣುಮಕ್ಕಳು. ಮನೆಗೆಲಸದವರು, ಗ್ರಾಮೀಣರು, ಕೊಳೆಗೇರಿಯಲ್ಲಿ ವಾಸಿಸುವವರು ಶಾಲೆಗೆ ಪ್ರವೇಶ ಪಡೆಯುವುದು ದೂರದ ಮಾತೇ ಆಗಿದೆ. ಭಾಷೆ-ಜಾತಿ ಆಧಾರಿತ ಭೇದಭಾವದಿಂದ ಶಿಕ್ಷಣ ಕನಸೇ ಆಗಿ ಉಳಿದಿದೆ.

**ಭಾರತೀಯ ಪುನರ್ವಸತಿ ಕೌನ್ಸಿಲ್ (Rehabilitation Council of India - RCI)**

1986ರಲ್ಲಿ ಭಾರತೀಯ ಪುನರ್ವಸತಿ ಕೌನ್ಸಿಲ್ ಆರಂಭವಾಯಿತು. 1992ರಲ್ಲಿ ಪಾರ್ಲಿಮೆಂಟ್ ಮುದ್ರೆಯೊಂದಿಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಇದರ ಮೂಲಕ ಅಂಗವಿಕಲರಿಗೆ ಕೊಡುವ ವಿದ್ಯಾಭ್ಯಾಸ, ಪಠ್ಯಕ್ರಮ, ಔದ್ಯೋಗಿಕ ತರಬೇತಿ ಮುಂತಾದವುಗಳ ನಿಯಮಿತ ದಾಖಲೆಯನ್ನು ಹೊಂದುವಂತಾಗಿದೆ. ವಿದ್ಯಾಭ್ಯಾಸ ಕ್ರಮದಲ್ಲಿ ಯಾವುದೇ ಅವೈಜ್ಞಾನಿಕತೆ ಕಂಡುಬರದಂತೆ ಕ್ರಮಕೈಗೊಳ್ಳಲಾಗಿದೆ. ಇದರ ಪರಿಣಾಮವಾಗಿ ಇಂದು ಕರ್ನಾಟಕದಲ್ಲೇ 3 ವಿಶ್ವವಿದ್ಯಾನಿಲಯಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುತ್ತಿದೆ. ಅವು:

1. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
2. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಧಾರವಾಡ
3. ಮಣಿಪಾಲ್ ಉನ್ನತ ಶಿಕ್ಷಣ ಕೇಂದ್ರ, ಮಣಿಪಾಲ

**ಬೆಂಗಳೂರು ವಿಶ್ವವಿದ್ಯಾಲಯವು ಅಂತರ ಶಿಕ್ಷಣ ವ್ಯವಸ್ಥೆಯ ಮೂಲಕ**

(1) P.G. Diploma in Community based Rehabilitation - planning and management

(2) Diploma in community based Rehabilitation

(3) Diploma in Epilepsy Care

(4) Certificate programmes: CP - Indian Portage on Early Childhood Development, CP - Inclusive Education, CP - Planning and Management of NGOs and Self Help organizations, CP - UNCRPD and citizen charter ಕಾರ್ಯಕ್ರಮಗಳನ್ನು ಹೊಂದಿದೆ.

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು: B.Ed. Special Education Programme**

(1) Mental Retardation

(2) Learning Disability

(3) Visual impairment

(4) Hearing impairment ಕೋರ್ಸುಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಒದಗಿಸುತ್ತಿದೆ.

---

**ಇತರ ತರಬೇತಿ ಕಾರ್ಯಕ್ರಮಗಳು**

**ದೃಷ್ಟಿದೋಷವುಳ್ಳವರಿಗಾಗಿ**

| | | |
|---|---|---|
| 1. | M.Ed. (Special Education) - Visual Impairment | 1 |
| 2. | B.A. B.Ed. (Visual Impairment) | 4 |
| 3. | B.Ed. (Special Education) - Visual Impairment | 1 |
| 4. | Bachelor in Mobility Science | 1 |
| 5. | Diploma in Education-Special Education (Visual Impairment) | 2 |
| 6. | Diploma in Education - Special Education (Deaf / Blindness) | 1 |

Digitised by Bharatavani, CIIL

**ಶ್ರವಣದೋಷವುಳ್ಳವರಿಗಾಗಿ**

| | | |
|---|---|---|
| 7. | M.Ed. (Special Education) - Hearing Impairment) | 1 |
| 8. | B.Ed. (Special Education) - Hearing Impairment) | 1 |
| 9. | Diploma in Education - Special Education (Hearing Impairment) | 2 |
| 10. | Diploma in Teaching Young Hearing Impaired Children | |
| 11. | Diploma in Indian Sign Language Interpreting (Level!, B & C each of Four months duration) | 1 |

**ಬುದ್ಧಿಮಾಂದ್ಯತೆ ಇರುವವರಿಗಾಗಿ**

| | | |
|---|---|---|
| 12. | M.Ed. (Special Education) - Mental Retardation | 1 |
| 13. | B.Sc. (Special Education and Rehabilitation | 3 |
| 14. | B.Ed. (Special Education) - Mental Retardation) | 1 |
| 15. | B.Ed. (Special Education) - Learning Disability | 1 |
| 16. | P.G. Diploma in Early Intervention | |
| 17. | P.G. Diploma in Special Education (Mental Retardation) | 1 |
| 18. | Diploma in Education - Special Education (Mental Retardation) | 2 |
| 19. | Diploma in Vocational Rehabilitaion (MR) | 1 |
| 20. | Diploma in Early Childhood Special Education (MR) | 1 |

**ಪುನರ್ವಸತಿ ವಿಭಾಗದಲ್ಲಿ**

| | | |
|---|---|---|
| 21. | Master of Prosthetics & Orthotics | 2 |
| 22. | Bachelor of Prosthetics and Orthotics | 4 1/2 |
| 23. | Diploma in Prosthetic and Orthotics | 2 1/2 |
| 24. | Certificate Course in Prosthetic & Orthotic | 1 |
| 25. | Certificate Course in Hearing Aid (only for persons with hearing impairment) | |
| 26. | Certificate Course in Ear Mould Technology (only for persons with hearing impairment) | |

**ಸಂವಹನಾಧಾರಿತ ಪುನರ್ವಸತಿ**

| | | |
|---|---|---|
| 27. | P.G. Diploma in Community Based Rehabilitation | 1 |
| 28. | Diploma in Community Based Rehabilitation | 1 |

**ಮನಃಶಾಸ್ತ್ರೀಯ ಪುನರ್ವಸತಿ**

| | | |
|---|---|---|
| 29. | M.Phil (Rehabilitation Psychology) | 2 |
| 30. | P.G. Diploma in Rehabilitation Pshychology | 1 |

**ವೈದ್ಯಕೀಯ ಮನಃಶಾಸ್ತ್ರ**

| | | |
|---|---|---|
| 31. | M.Phil (Clinical Psychology) | 2 |
| 32. | Certificate in Clinical Psychology (in Service) | 6 mnts |


Digitised by Bharatavani, CIIL

**ಮಾತು ಮತ್ತು ಶ್ರವಣ ದೋಷವುಳ್ಳವರಿಗಾಗಿ**

| | | |
|---|---|---|
| 33. | "A"-Master in Audiology and Speech-Langauage Pathology (MASLP) - Annual | 2 |
| | "B"-Master in Audiology and Speech-Language Pathology (MASLP) - Semester | |
| 34. | M.Sc. in Audiology | 2 |
| 35. | M.Sc. in Speech Language Pathology | 2 |
| 36. | "A"-Bachelor in Audiology and Speech-Language Pathology (BASLP) - Annual | 4 |
| | "B"-Bachelor in Audiology and Speech-Language Pathology (BASLP) - Semester | |
| 37. | Diploma in Hearing Language and Speech | 1 |
| 38. | Diploma in Hearing Aid and Ear Mould Technology | 1 |

**ಸ್ನಾಯು ವಿಫಲತೆ ಮತ್ತು ಸೆರೆಬ್ರಲ್ ಪಾಲ್ಸಿ ಉಳ್ಳವರಿಗಾಗಿ**

| | | |
|---|---|---|
| 39. | B.Ed. (Special Education) - Locomotor and Neurological Disorder | 1 |
| 40. | P.G. Diploma in Special Education: Multiple Disabilities-physical and Neurological | 1 |
| 41. | P.G. Diploma in Developmental Therapy (Cerebral Palsy & Neurological Disabilities) | 1 |
| 42. | Diploma in Education - Special Education (Cerebral Palsy) | 1 |
| 43. | Basic Development Therapy Course for Childrn with Cerebral Palsy and other Neurological Handicaps | 1 |

**ಆಟಿಸಂ ಮಕ್ಕಳಿಗಾಗಿ**

| | | |
|---|---|---|
| 44. | Diploma in Education - Special Education (Autism Spectrum Disorder) | 1 |

**ವೈದ್ಯಕೀಯ ಪುನರ್ವಸತಿ**

| | | |
|---|---|---|
| 45. | Bachelor in Rehabilitation Therapy | 4 |
| 46. | Diploma in Rehabilitation Therapy | 2 1/2 |
| 47. | Certificate Course in Rehabilitation Therapy Assistant | 1 |

**ಸಮಾಜಸೇವೆ/ಆಡಳಿತ, ಔದ್ಯೋಗಿಕ ತರಬೇತಿ, ಆಪ್ತಸಲಹೆ ವಿಭಾಗಗಳಲ್ಲಿ**

| | | |
|---|---|---|
| 48. | Master in Rehabilitation Science (Rehab Social Worker) | 2 |
| 49. | M.Sc. (Psycho-Social Rehabilitation) | 2 |
| 50. | Bachelor in Rehabilitation Science (Vocational Counsellor) | 3 |
| 51. | Master in Disability Rehabilitation Administration | 2 |
| 52. | Post-Graduate Diploma in Disability Rehabilitation and Management | |

Digitised by Bharatavani, CIIL

**ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಹೊಂದಿರುವ ಇತರ ಕಾರ್ಯಕ್ರಮಗಳು**

1. B.Ed. Special Education-HI/VI/MR/LI & CP (Norms)
2. P.G. Professional Diploma for in-service teachers.
3. P.G. Diploma in Community Based Rehabilitation-Planning & Management
4. P.G. Diploma in Disability Management for Doctors
5. Diploma in Community Based Rehabilitation
6. Foundation Course in Special Education 3 months
7. M.Ed. Special Education through Distance Mode.

---

–ಇಂ.ರಾ.

## ವಿಶೇಷ ಶಿಕ್ಷಣದಲ್ಲಿ ಸರ್ಕಾರಗಳ ಪಾತ್ರ

### ವಿಶೇಷ ಶಿಕ್ಷಣದಲ್ಲಿ ರಾಜ್ಯ ಸರ್ಕಾರಗಳ ಪಾತ್ರ

ನಿರ್ದಿಷ್ಟವಾಗಿ 41ನೇ ವಿಧಿಚ್ಛೇದದಂತೆ ವಿಕಲಚೇತನರು ಹಾಗೂ ಇತರೇ ಕಾರಣಗಳಿಂದ ಬಡತನದ ಬವಣೆಯಲ್ಲಿರುವವರಿಗೆ ಆರ್ಥಿಕ ನೆರವು ನೀಡುವುದು ಹಾಗೂ ಅವರ ಸಾಮಾಜಿಕ ಸ್ಥಿತಿಯಲ್ಲಿ ಸುಧಾರಣೆ ತರುವುದು ಎಲ್ಲ ರಾಜ್ಯ ಸರ್ಕಾರಗಳ ಆದ್ಯ ಕರ್ತವ್ಯವಾಗಿರುತ್ತದೆ.

**ಕರ್ನಾಟಕ**

ವಿಕಲಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಹಾಗೂ ಅವರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಲು ಕೆಳಕಂಡ ವಿಧದ ವಿಕಲಚೇತನರಿಗೆ ರೂ. 6000/– ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ವರಮಾನವುಳ್ಳ ವಿಕಲಚೇತನತೆಯೊಂದಿಗೆ ಹುಟ್ಟಿದ ಮಗು ಮತ್ತು ಅಘಾತದಿಂದ ವಿಕಲಚೇತನರಾದ ವ್ಯಕ್ತಿಗಳು ಮಾಸಾಶನಕ್ಕೆ ಅರ್ಹರಾಗಿರುತ್ತಾರೆ.

ವಿಕಲಚೇತನ ವ್ಯಕ್ತಿಗಳ (ಸಮಾನ ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 ಅಧ್ಯಾಯ 1 ಭಾಗ 2(4)(ಟ)ರಲ್ಲಿ ಅಂಗವಿಕಲ ವ್ಯಕ್ತಿ ಎಂದರೆ ವೈದ್ಯಕೀಯ ಪ್ರಾಧಿಕಾರವು ಪ್ರಮಾಣೀಕರಿಸಿದ ರೀತಿಯಲ್ಲಿ ಯಾವುದೇ ವಿಕಲಚೇತನತೆಯಿಂದ ಶೇಕಡಾ 40% ಕ್ಕಿಂತ ಕಡಿಮೆ ಇರದಂತೆ ಅದರಿಂದ ಬಳಲುತ್ತಿರುವ ವ್ಯಕ್ತಿ.

**ವಿಕಲಚೇತನ ಎಂದರೆ**

1. ಅಂಧತ್ವ 2. ಮಂದದೃಷ್ಟಿ 3. ಕುಷ್ಠರೋಗ 4. ಶ್ರವಣ ದೋಷವುಳ್ಳವರು 5. ಚಲನ ವಲನ ಅಂಗವಿಕಲತೆ 6. ಬುದ್ಧಿಮಾಂದ್ಯತೆ 7. ಮಾನಸಿಕ ಅಸ್ವಸ್ಥತೆ. ಈ ಸ್ಥಿತಿಗಳಿಗೆ ಒಳಗಾದವರು.

1. 40% ರಷ್ಟು ಹಾಗೂ ಅದಕ್ಕಿಂತ ಹೆಚ್ಚು ವಿಕಲಚೇತನತೆಯುಳ್ಳ ವ್ಯಕ್ತಿಗಳು ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆದಿದ್ದರೆ. 400/– ರೂ. ಮಾಸಾಶನ ಪಡೆಯಲು ಅರ್ಹರಾಗಿರುತ್ತಾರೆ.
2. 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚು ವಿಕಲಚೇತನತೆಯುಳ್ಳ ವ್ಯಕ್ತಿಗಳು ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆದಿದ್ದರೆ, 1000/– ರೂ. ಮಾಸಾಶನ ಪಡೆಯಲು ಅರ್ಹರಾಗಿರುತ್ತಾರೆ.

ವಿಕಲಚೇತನ ಮಕ್ಕಳು ಜನಿಸದಂತೆ ಗರ್ಭಾವಸ್ಥೆಯಲ್ಲೇ ಪರೀಕ್ಷೆ ಮಾಡಿ ಸಲಹೆ ನೀಡಲು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅನುವಂಶಿಕ ಸಲಹಾ ಕೇಂದ್ರಗಳನ್ನು ತೆರೆಯಲು ಕರ್ನಾಟಕ ರಾಜ್ಯ ಸರಕಾರ ತೀರ್ಮಾನಿಸಿದೆ.

ಕರ್ನಾಟಕ ಸರಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಡ್ಡಾಯ ವಿಕಲಚೇತನರಿಗೆ ರಾಜ್ಯ ಸರಕಾರದ ತಿದ್ದುಪಡಿ ಪ್ರಕಾರ ಎಲ್ಲಾ ಸರಕಾರಿ ಇಲಾಖೆಗಳು, ಮಂಡಳಿಗಳು, ನಿಗಮಗಳು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ, ವಿವಿಧ ಸ್ಥಳೀಯ ಸಂಸ್ಥೆಗಳು ಹಾಗೂ ಸರಕಾರದ ನೆರವು ಪಡೆಯುವ ಸಂಸ್ಥೆಗಳು ಕಡ್ಡಾಯವಾಗಿ 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಿಗೆ 3% ರಷ್ಟು ಹಾಗೂ 'ಸಿ' ಮತು 'ಡಿ' ಗುಂಪಿನ ಹುದ್ದೆಗಳಿಗೆ 5% ರಷ್ಟು ಮೀಸಲಾತಿಯನ್ನು ನೀಡಬೇಕೆಂದು ತೀರ್ಮಾನಿಸಲಾಗಿದೆ.

2001ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 9,40,643 ಜನ ಅಂಗವಿಕಲರಿದ್ದಾರೆ. ಈ ಪೈಕಿ 6,61,139 ಜನ ಗ್ರಾಮೀಣ ಭಾಗದಲ್ಲೂ, 2,79,504 ಜನ ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಇದರಲ್ಲಿ 31.40% ಅಂದರೆ 4,73,844 ಜನ ಅಂಗವಿಕಲರು ಅನಕ್ಷರಸ್ಥರು.

1 ರಿಂದ 5ನೇ ತರಗತಿ ಓದುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಈಗಿನ 50 ರೂ. ದಿಂದ 75 ರೂ. ಗೆ ಏರಿಸಲಾಗಿದೆ. ಅದೇ ರೀತಿ 6 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ 100 ರಿಂದ 120 ರೂ. ಗಳಿಗೆ ಹೆಚ್ಚಿಸಲಾಗಿದೆ. ಸರ್ವಶಿಕ್ಷಣ ಅಭಿಯಾನದ ಸಮೀಕ್ಷೆಯ ಪ್ರಕಾರ 6 ವರ್ಷದೊಳಗಿನ ತೀವ್ರ ಅಂಗವಿಕಲತೆಯುಳ್ಳ ಮಕ್ಕಳಿಗಾಗಿ ಶಿಕ್ಷಣ ಇಲಾಖೆಯೊಂದಿಗೆ ವಿಶೇಷ ಶಾಲೆಗಳನ್ನು ತೆರೆಯಲು ಯೋಚಿಸಲಾಗಿದೆ.

85% ರಷ್ಟು ರಿಯಾಯಿತಿಯಲ್ಲಿ ವಿಕಲಚೇತನರು ಬಸ್ ಪ್ರಯಾಣ ಮಾಡಲು ರಾಜ್ಯ ಸರ್ಕಾರ ಅನುವು ಮಾಡಿದೆ ಈ 60%ನ್ನು ರಾಜ್ಯ ಸರ್ಕಾರವು, 25%ನ್ನು ರಸ್ತೆ ಸಾರಿಗೆ ಸಂಸ್ಥೆಗಳು ಭರಿಸಲಿವೆ.

1988ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಿರುವ ಮಾರ್ಗದರ್ಶಿ ಸಂಸ್ಥೆ ವಿಕಲಚೇತನರಿಗೆ ಸಾಮಾಜಿಕ ನ್ಯಾಯ ಒದಗಿಸುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ವಿಕಲಚೇತನರಿಗೆ ಅವಕಾಶ ಒದಗಿಸಿ, ಅವರ ಪ್ರತಿಭೆಗಳನ್ನು ಹೊರತರುವಲ್ಲಿ, ಮಾರ್ಗದರ್ಶಿ ಸಂಸ್ಥೆ ಯಶಸ್ವಿಯಾಗಿದೆ. ಸಮಾಜದ ವಿವಿಧ ಸಂಘ ಸಂಸ್ಥೆಗಳು ಹಾಗೂ ಆಸಕ್ತ


Digitised by Bharatavani, CIIL

ದಾನಿಗಳ ನೆರವಿನಿಂದ ವಿಕಲಚೇತನರಿಗೆ ಸಮಾಜದಲ್ಲಿ ಆರ್ಥಿಕ ಭದ್ರತೆ ಒದಗಿಸುವಲ್ಲಿ ಸಂಸ್ಥೆ ಮುನ್ನಡೆದಿದೆ.

**ವಿಶೇಷ ಶಿಕ್ಷಣದಲ್ಲಿ ಇತರೇ ರಾಜ್ಯ ಸರ್ಕಾರಗಳ ಪಾತ್ರ**

1. ದೆಹಲಿ ರಾಜ್ಯ ಸರಕಾರ ವಿಕಲಚೇತನರಿಗೆ 3% ಐ.ಟಿ.ಐ ನಲ್ಲಿ, 5% ಡಿ.ಡಿ.ಎ. ಮಳಿಗೆಗಳಲ್ಲಿ, 1% ಡಿ.ಡಿ.ಎ. ನಿವೇಶನಗಳಲ್ಲಿ ಮೀಸಲಾತಿ ನೀಡಿದೆ ಸರಕಾರಿ ವೃತ್ತಿಗಳನ್ನು ಪಡೆಯಲು ವಿಕಲಚೇತನರಿಗೆ 10 ವರ್ಷಗಳ ಹೆಚ್ಚಿನ ಮಿತಿಯನ್ನು ಕೊಡಲಾಗಿದೆ. 1 ರಿಂದ 5ನೇ ತರಗತಿ ಕಲಿಯುವ ವಿಕಲಚೇತನರಿಗೆ 50/- ರೂ. ಪ್ರತಿ ತಿಂಗಳು ಹಾಗೂ 6 ರಿಂದ 5ನೇ ತರಗತಿ ಕಲಿಯುವ ವಿಕಲಚೇತನರಿಗೆ 70/- ರೂ. ಪ್ರತಿ ತಿಂಗಳ ಶಿಷ್ಯವೇತನ ನೀಡಲಾಗುತ್ತಿದೆ. 50/- ರೂ. ನಿರುದ್ಯೋಗ ಸಹಾಯ ಭತ್ತೆ ಹಾಗೂ 200/- ವಿಕಲಚೇತನ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗಿದೆ.
2. ವಿಕಲಚೇತನ ಮಕ್ಕಳ ದಾಖಲೆಗಳನ್ನು ಸಂಗ್ರಹಿಸಲು ಹೊಸ ತಂತ್ರಾಂಶವನ್ನು ತಮಿಳುನಾಡು ಸರಕಾರ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ನಿರ್ಮಿಸಿದೆ.
3. ಹಿಮಾಚಲ ಸರಕಾರದ ಹೋಟೆಲ್‌ಗಳಲ್ಲಿ ವಿಕಲಚೇತನರಿಗಾಗಿ ವಿಶೇಷ ರಿಯಾಯಿತಿ ದರದಲ್ಲಿ ಆಹಾರ ಮತ್ತು ವಸತಿಯ ಸೌಲಭ್ಯ ಕಲ್ಪಿಸಿದೆ.
4. ಬಿಹಾರ್‌ನ ಸರ್ಕಾರವು ವಿಕಲಚೇತನರಿಗಾಗಿ ಪಿಂಚಣಿಯನ್ನು ಕೊಡಲು ನಿರ್ಧರಿಸಿದೆ.
5. ವಿಕಲಚೇತನ ವಿದ್ಯಾರ್ಥಿಗಳಿಗೆ ಆಂಧ್ರ ಪ್ರದೇಶ ಸರಕಾರವು ಉಚಿತ ಊಟದ ವ್ಯವಸ್ಥೆ ಮಾಡಿಕೊಟ್ಟಿದೆ.
6. ವಿಕಲಚೇತನರಿಗೆ ಅಂಡಮಾನ ಮತ್ತು ನಿಕೋಬಾರ್ ದ್ವೀಪಗಳಲ್ಲಿ 1% ಶ್ರವಣ ದೋಷ, 1% ಕೀಲು-ಮೂಳೆ ದೋಷ ಹಾಗೂ 1% ಶ್ರವಣ ದೋಷ ಹೊಂದಿದವರಿಗೆ ಸರಕಾರಿ ವೃತ್ತಿಗಳಲ್ಲಿ ಮೀಸಲಾತಿ ನೀಡಿದೆ ಸ್ವ ಉದ್ಯೋಗಕ್ಕೆ ಸಹಾಯ ಹಾಗೂ ವೈದ್ಯಕೀಯ ಖರ್ಚಿಗೆ ಆರ್ಥಿಕ ಸಹಾಯ ಒದಗಿಸಲಾಗಿದೆ.
7. ಮಧ್ಯಪ್ರದೇಶದಲ್ಲಿ ವಿಕಲಚೇತನ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳಲ್ಲಿ ಮೀಸಲಾತಿ ಹಾಗೂ ಸಾಮಾನ್ಯರಿಗಾಗಿ ಗರಿಷ್ಠ ಮಿತಿಯನ್ನು 10 ವರ್ಷ ಹೆಚ್ಚಿಸಲಾಗಿದೆ.
8. ಜಮ್ಮು ಮತ್ತು ಕಾಶ್ಮೀರದಲ್ಲಿ ವಿಕಲಚೇತನರಿಗೆ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗಿದೆ.
9. ಹರಿಯಾಣಾ ರಾಜ್ಯ ಸರಕಾರ ಕಿವುಡ ಮತ್ತು ಮೂಗ ಮಕ್ಕಳಿಗೆ ವೃತ್ತಿಪರ ತರಬೇತಿಯನ್ನು ಆಯೋಜಿಸಿದೆ.
10. ಗುಜರಾತ ರಾಜ್ಯ ಸರಕಾರವು ಕಿವುಡ, ಮೂಗ ಮತ್ತು ಬುದ್ಧಿಮಾಂದ್ಯರಿಗೆ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ.
11. ವಿಕಲಚೇತನರಿಗೆ ಪಶ್ಚಿಮ ಬಂಗಾಳ ರಾಜ್ಯ ಸರಕಾರವು ಆರ್ಥಿಕ ಸಹಾಯವನ್ನು ಕೊಡುವಲ್ಲಿ ತಾನೇ ಜಾಮೀನು ಒದಗಿಸುತ್ತದೆ.

**ವಿಶೇಷ ಶಿಕ್ಷಣದಲ್ಲಿ ಕೇಂದ್ರ ಸರಕಾರದ ಪಾತ್ರ**

ಬುದ್ಧಿಮಾಂದ್ಯ, ಮೆದುಳಿನ ಪಾರ್ಶ್ವವಾಯು, ಆಟಿಸಂ ಹಾಗೂ ಇತರ ನ್ಯೂನತೆಯುಳ್ಳವರನ್ನು ಮುಖ್ಯ ವಾಹಿನಿಗೆ ತರಲು ಅಗತ್ಯ ಶಿಕ್ಷಣ, ತರಬೇತಿಯನ್ನು ವಿಶೇಷ ಶಿಕ್ಷಣ ಕೊಡುತ್ತದೆ. 1992 ರಲ್ಲಿ ಜಾರಿಗೆ ಬಂದ ಭಾರತೀಯ ಪುನರ್ವಸತಿ ಕಾಯ್ದೆ ಬುದ್ಧಿಮಾಂದ್ಯರಿಗೆ ಸರಕಾರಿ ಸೌಲಭ್ಯ ಒದಗಿಸಬೇಕೆಂದು ಹೇಳುತ್ತದೆಯಾದರೂ, ಪೂರ್ಣ ಪ್ರಮಾಣದಲ್ಲಿ ಅದು ಈವರೆಗೆ ಜಾರಿಗೆ ಬಂದಿಲ್ಲ.

ಒಂದು ಅಂಕಿ ಅಂಶದ ಪ್ರಕಾರ ಭಾರತದಲ್ಲಿ 70 ಮಿಲಿಯನ್ ಅಂಗವಿಕಲರಿದ್ದಾರೆ. ಅದರಲ್ಲಿ ಕೇವಲ 2% ಅಂಗವಿಕಲರು ಮಾತ್ರ ಶಿಕ್ಷಣ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. 1% ಜನರು ಮಾತ್ರ ಉದ್ಯೋಗಿಗಳಾಗಿದ್ದಾರೆ. ವಿಶೇಷ ಶಿಕ್ಷಣಕ್ಕಾಗಿ ಸರಕಾರದ ವಿನಿಯೋಗ ಅತ್ಯಲ್ಪವಾಗಿದೆ.

1. ಇದೀಗ ಖಾಸಗಿ ವಲಯದಲ್ಲಿ ವಿಕಲಚೇತನರಿಗೆ ಹೆಚ್ಚು ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರವು ವಿಕಲಚೇತನ ನೌಕರರ ಭವಿಷ್ಯ ನಿಧಿಗೆ ಉದ್ಯೋಗದಾತರ ಪಾಲನ್ನು ಮತ್ತು ರಾಜ್ಯ ವಿಕಲಚೇತನ ನೌಕರರ ವಿಮಾ ಹಣವನ್ನು ತಾನೇ 2008 ಏಪ್ರಿಲ್ 1 ರಂದು ಅಥವಾ ನಂತರ ಕೆಲಸಕ್ಕೆ ಸೇರಿದ ವಿಕಲಚೇತನ ನೌಕರರಿಗಾಗಿ 3 ವರ್ಷಗಳ ಕಾಲ ಭರಿಸುವುದಾಗಿ ಘೋಷಿಸಿದೆ. ವಿಕಲಚೇತನ ನೌಕರರ ಭವಿಷ್ಯ ನಿಧಿಗೆ ಸಂಬಂಧಪಟ್ಟ, 1.1% ರಷ್ಟು ಆಡಳಿತ ವೆಚ್ಚ ಮತ್ತು ಮತ್ತಿತರ ನಿಬಂಧ ನಿಯಮದಂತೆ ತಗಲುವ ಇತರೇ ವೆಚ್ಚವನ್ನು ಉದ್ಯೋಗದಾತನೇ ಭರಿಸಬೇಕು.
2. ವಿಕಲಚೇತನರ ಸಾಮಾಜಿಕ ನ್ಯಾಯಕ್ಕಾಗಿ ಕಳೆದ ವರ್ಷಕ್ಕಿಂತ 2000 ಕೋಟಿಗಳ ಹೆಚ್ಚಳವನ್ನು 2010-11ರ ಆಯವ್ಯಯದಲ್ಲಿ ಮಂಡಿಸಲಾಗಿದೆ.
3. 6000 ಅಂತರ್ಜಾಲ ತಾಣಗಳನ್ನು ವಿಕಲಚೇತನರಿಗೆ ಸ್ನೇಹಪರವಾದ ತಾಣಗಳನ್ನಾಗಿ ಮಾರ್ಪಾಡು ಮಾಡಲು ಕೇಂದ್ರ ಸರಕಾರವು ನಿರ್ಧರಿಸಿದ್ದು, ಅವುಗಳಲ್ಲಿ 3 ಅತ್ಯುತ್ತಮ ಸರಕಾರಿ, ಸಾರ್ವಜನಿಕ ಮತ್ತು ಖಾಸಗಿ ಅಂತರ್ಜಾಲ ತಾಣಗಳಿಗೆ ಬಹುಮಾನ ಘೋಷಿಸಲಾಗಿದೆ.
4. ವಿಕಲಚೇತನದ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆಯನ್ನು ಸರಳಗೊಳಿಸಲು ಕೇಂದ್ರ ಸರಕಾರ ನಿರ್ಧರಿಸಿದೆ. ಒಂದು ವಾರ ಅಥವಾ ಒಂದು ತಿಂಗಳೊಳಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಾಲ್ಲೂಕು ಮಟ್ಟದಲ್ಲಿ, ವಲಯವಾರು ಮಟ್ಟದಲ್ಲಿ ವಿಕಲಚೇತನ ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ. ಈ ಜವಾಬ್ದಾರಿಯನ್ನು ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು ಸರ್ಕಾರೇತರ ಸಂಸ್ಥೆಗಳಿಗೆ ವಹಿಸಬೇಕೆಂದು ತೀರ್ಮಾನಿಸಲಾಗಿದೆ.
5. ಕೇಂದ್ರ ಸರಕಾರವು ವಿಕಲಚೇತನರ ಪೋಷಕರಿಗೆ ತರಬೇತಿಗೆ "ಸಹಯೋಗಿ ಯೋಜನೆ"ಯನ್ನು ರೂಪಿಸಿದೆ.
6. ವಿಕಲಚೇತನರಿಗಾಗಿ ಶಾಲೋತ್ತರ ವೃತ್ತಿಪರ ತರಬೇತಿ ನೀಡಲು "ಜ್ಞಾನ ಪ್ರಭ" ಯೋಜನೆ ರೂಪಿಸಲಾಗಿದೆ.
7. ಸ್ವ-ಉದ್ಯೋಗ ಅವಕಾಶಗಳನ್ನು ಕಲ್ಪಿಸಲು ಕೇಂದ್ರ ಸರಕಾರವು ರಾಷ್ಟ್ರೀಯ ಟ್ರಸ್ಟ್‌ನ ಮುಖಾಂತರ "ಉದ್ಯಮ ಪ್ರಭ" ಯೋಜನೆಯನ್ನು ಹಮ್ಮಿಕೊಂಡಿದೆ.
8. ಬುದ್ಧಿಮಾಂದ್ಯತೆಯುಳ್ಳ ಮಕ್ಕಳ ಪೋಷಕರ ಸಂಘದಿಂದ ಸಾಲವನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

Digitised by Bharatavani, CIIL

9. ಬುದ್ಧಿಮಾಂದ್ಯತೆಯುಳ್ಳ ಮಕ್ಕಳ ಪೋಷಕರ ಸಂಘದಿಂದ ಎನ್.ಹೆಚ್.ಎಫ್.ಡಿ.ಸಿ. ಸ್ಕೀಮಿನ ಅಡಿಯಲ್ಲಿ ಕಿರು ಸಾಲವನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

10. ರಾಷ್ಟ್ರೀಯ ವೃತ್ತಿ ಖಾತ್ರಿ ಕಾಯ್ದೆಯಡಿಯಲ್ಲಿ ಬಡತನದ ರೇಖೆಯಲ್ಲಿರುವ ವಿಕಲಚೇತನರಿಗೆ 3% ಮೀಸಲಾತಿಯನ್ನು ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

11. ರಾಷ್ಟ್ರೀಯ ಆರೋಗ್ಯ ವಿಮಾ ನಿಗಮವು ವಿಕಲಚೇತನರಿಗೆ "ನಿರಾಮಯ ಯೋಜನೆ"ಯನ್ನು ಆರಂಭಿಸಿದೆ.

## ಜಾಗತಿಕ ಮಟ್ಟದಲ್ಲಿ ವಿಶೇಷ ಶಿಕ್ಷಣ

81 ದೇಶಗಳು ಮತ್ತು ಯುರೋಪಿಯನ್ ಒಕ್ಕೂಟವು ವಿಶ್ವದ ಅಂದಾಜು 650 ದಶಲಕ್ಷ ವಿಕಲಚೇನತರ ಬದುಕನ್ನು ಉತ್ತಮಗೊಳಿಸಲು ಚಾರಿತ್ರಿಕ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದವು ಇದುವರೆಗಿನ ಯಾವುದೇ ಒಡಂಬಡಿಕೆಯ ಸಹಿಗಳ ಮೊದಲನೇ ದಿನದ ದಾಖಲೆಯನ್ನೂ ಮೀರಿಸಿದೆ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಸಾಧನಗಳ ಇತಿಹಾಸದಲ್ಲಿ ಅತ್ಯಂತ ತ್ವರಿತವಾಗಿ ವ್ಯವಹರಿಸಲಾದ ಈ ಒಪ್ಪಂದದ 19 ಒಡಂಬಡಿಕೆಗಳು ಜಾರಿಗೆ ಬರಬೇಕಿದೆ. ಸುಮಾರು 44 ದೇಶಗಳು ಒಡಂಬಡಿಕೆಯ ಸ್ವೈಚ್ಛಿಕ ನಡವಳಿಕೆಗೆ ಸಹಿ ಮಾಡಿದ್ದು, ಇದು ಎಲ್ಲಾ ರಾಷ್ಟ್ರೀಯ ಆಯ್ಕೆಗಳು ಬರಿದಾದಾಗ ನೆರವನ್ನು ಕೋರಿ ಬರುವ ವ್ಯಕ್ತಿಗಳ ಹಕ್ಕುಗಳ ಕುರಿತು ತಜ್ಞ ಸಮಿತಿಯ ಪರಿಹಾರವನ್ನು ಒದಗಿಸಲು ಅನುವು ಮಾಡಿಕೊಡುತ್ತದೆ. ಈ ಒಡಂಬಡಿಕೆಯು ವಿಕಲಚೇತನ ವ್ಯಕ್ತಿಗಳ ವಿರುದ್ಧ ಉದ್ಯೋಗ, ಶಿಕ್ಷಣ, ಆರೋಗ್ಯ ಸೇವೆಗಳು ಸಾರಿಗೆ, ನ್ಯಾಯ, ಪ್ರವೇಶಾಧಿಕಾರಗಳನ್ನೊಳಗೊಂಡಂತೆ ಬದುಕಿನ ಎಲ್ಲಾ ಕ್ಷೇತ್ರದಲ್ಲಿ ನಡೆಯುವ ತಾರತಮ್ಯಗಳಿಗೆ ತಡೆ ಹಾಕುತ್ತದೆ.

ಜಮೈಕಾ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಬಗ್ಗೆ ಒಡಂಬಡಿಕೆಯನ್ನೂ ಅನುಮೋದಿಸಿದ್ದು. ಈ ಮೂಲಕ ಒಡಂಬಡಿಕೆಯ ಸಮ್ಮತಿಯಿಂದಾಚೆಗೆ ಹೋಗಿ ಕಾನೂನನ್ನು ಅಳವಡಿಸಿದ ಮೊದಲ ದೇಶವಾಗಿದೆ. ವಿಕಲಚೇತನರಿಗೆ ವಿಶ್ವ ಕ್ರಿಯಾತ್ಮಕ ಯೋಜನೆ (World Program of Action) ಅಡಿಯಲ್ಲಿ ಸ್ವ ಉದ್ಯೋಗ, ಸಹಕಾರ, ಸಮೂಹ ಆದಾಯ ತರುವ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ.

ವ್ಯಾಪಾರ ಸಂಘಗಳು, ವಿಶೇಷ ವೃತ್ತಿಪರ ಮಾರ್ಗದರ್ಶನ, ನೇಮಕಾತಿ, ತರಬೇತಿ, ವೃತ್ತಿ ವಿಕಾಸದ ಯೋಜನೆಗಳನ್ನು ಆರಂಭಿಸಬೇಕೆಂದು ಸಂಡ್‌ಬರ್ಗ ಘೋಷಣೆಯು ತಿಳಿಸುತ್ತದೆ.

ಅಮೆರಿಕಾ, ಇಂಗ್ಲೆಂಡ್ ನ್ಯೂಜಿಲೆಂಡ್ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿ ಅಂಗವಿಕಲರನ್ನು ತುಂಬಾ ಗೌರವಯುತವಾಗಿ ನಡೆಸಿಕೊಳ್ಳುತ್ತಾರೆ. ಕೇವಲ ಅನುಕಂಪ ತೋರದೆ ಅವರಿಗೆ ಸಲ್ಲಬೇಕಾದ ಹಕ್ಕು, ಸೌಲಭ್ಯ, ಸಹಕಾರ ಸಿಗುವಂತೆ ಸಹಾಯ ನೀಡುತ್ತಾರೆ. ಯಾವುದೇ ಅಂಗಡಿ ಮುಂಗಟ್ಟುಗಳಿರಲಿ ಅಲ್ಲಿಗೆ ವಿಕಲಚೇತನರು ಸುಲಭವಾಗಿ ಹೋಗುವ ಎಲ್ಲ ಸೌಕರ್ಯಗಳಿವೆ. ಆಸ್ಪತ್ರೆಗಳಲ್ಲಿ ಡಾಕ್ಟರರು ಮೊದಲು ವಿಕಲಚೇತನರ ತಪಾಸಣೆ ಮಾಡುತ್ತಾರೆ.

ಬದಲಾವಣೆ ಒಂದು ದಿನದಲ್ಲಾಗದು. ಒಂದು ಬರಹದಲ್ಲಾಗದು. ಆದರೆ ಬದಲಾವಣೆಯ ಪ್ರಾರಂಭ ಒಂದು ಬರಹದಿಂದಾದರೂ ಆದರೆ ಅಷ್ಟೇ ಸಾಕು. ಆಂಧ್ರಪ್ರದೇಶದ ಎರಡೂ ಕಾಲಿಲ್ಲದ ರಾಮ್‌ನರೇಶ ಐಐಟಿಯಲ್ಲಿ ಅತಿ ಹೆಚ್ಚಿನ ಅಂಕ ಪಡೆದು ಬೆಂಗಳೂರಿನಲ್ಲಿ ಗೂಗಲ್ ವೆಬ್‌ಸೈಟ್ ಕಂಪನಿಯಲ್ಲಿ ದೊಡ್ಡ ಸಂಬಳದ ಕಂಪ್ಯೂಟರ್ ಇಂಜಿನಿಯರ್ ಆಗಿ ನೇಮಕಗೊಂಡಿದ್ದಾರೆ.

ಬೆಂಗಳೂರಿನ ತೇಜಸ್ವಿನಿ ಹೆಗಡೆ ವಿಕಲಚೇತನರಾಗಿದ್ದು, ಕನ್ನಡ ಸಾಹಿತ್ಯದಲ್ಲಿ ಎಂ.ಎ.ಯನ್ನು ಮೈಸೂರು ಮುಕ್ತ ವಿಶ್ವವಿದ್ಯಾನಿಲಯದ ಮೂಲಕ ಮಾಡಿರುವುದು ಹೆಮ್ಮೆಯ ಸಂಗತಿ.

ವಿಕಲಚೇತನರಾದವರು ಸ್ವತಃ ವ್ಹೀಲ್ ಚೇರ್‌ಮೇಲಾದರೂ ತಮಗೆ ಇಷ್ಟ ಬಂದ ಕಡೆ ಸುಲಭವಾಗಿ ಹೋಗಿ ತಮ್ಮ ಕೆಲಸ ಕಾರ್ಯಗಳನ್ನು ತಾವೇ ಸ್ವತಃ ಮಾಡಿಕೊಳ್ಳುವ ಕಾಲ ಬರಬೇಕಾಗಿದೆ. ಅವರಲ್ಲಿ ಸ್ವಾಭಿಮಾನ, ಆತ್ಮಶಕ್ತಿಯನ್ನು ವೃದ್ಧಿಸುವ ಕಾರ್ಯಗಳನ್ನು ಸರ್ಕಾರ ಮಾಡಬೇಕಾಗಿದೆ. ಅವರೂ ಎಲ್ಲರಂತೆ ಜೀವಿಸುವ, ಓದುವ, ದುಡಿಯುವ, ಎಲ್ಲಾ ಕಡೆ ಹೋಗುವ ಹಕ್ಕಿದೆ, ಸ್ವಾತಂತ್ರ್ಯವಿದೆ.

–ಶಿ.ಕ.

## ವಿಶ್ವವಿದ್ಯಾನಿಲಯ ಅನುದಾನ ಆಯೋಗ

ಭಾರತದ ಇಂದಿನ ಶಿಕ್ಷಣ ವ್ಯವಸ್ಥೆ ಇಂಗ್ಲಿಷ್ ಮತ್ತು ಪಾಶ್ಚಾತ್ಯ ವಿಜ್ಞಾನಗಳನ್ನು ಕಲಿಸುವ ಶಾಲೆಗಳನ್ನು ತೆರೆಯಬೇಕೆಂದು 1823ರಲ್ಲಿ ಮೌಂಟ್ ಸ್ಟುವರ್ಟ್ ಅಭಿಪ್ರಾಯಪಟ್ಟ ಸಮಯದಿಂದ ಆರಂಭವಾಯಿತು. ಕಾಲಕ್ರಮೇಣ ಮೆಕಾಲೆ, ಚಾರ್ಲ್ಸ್‌ವುಡ್ಸ್ ಮುಂತಾದವರ ಸಲಹೆಗಳಂತೆ ಶಾಲೆಗಳಿಂದ ಆರಂಭಗೊಂಡದ್ದು 1857ರ ಹೊತ್ತಿಗೆ ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದವು. 1925ರಲ್ಲಿ ಅಂತರ್ ವಿಶ್ವವಿದ್ಯಾಲಯ ಮಂಡಳಿಯೊಂದು ವಿಶ್ವವಿದ್ಯಾನಿಲಯಗಳ ಚಟುವಟಿಕೆಗಳನ್ನು ಸುಗಮಗೊಳಿಸಲು ಸ್ಥಾಪಿತಗೊಂಡಿತು. 1944ರಲ್ಲಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರಚಿಸಲು **"ವಿಶ್ವವಿದ್ಯಾನಿಲಯ ಅನುದಾನ ಸಮಿತಿ"** ಅಸ್ತಿತ್ವಕ್ಕೆ ಬಂದಿತು. ಸ್ವಾತಂತ್ರ್ಯಾ ನಂತರದಲ್ಲಿ ಡಾ॥ ರಾಧಾಕೃಷ್ಣನ್ ಅವರ ನೇತೃತ್ವದಲ್ಲಿ ರಚಿಸಲ್ಪಟ್ಟ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವು (1948) ಮುಂಚಿನ ವಿಶ್ವವಿದ್ಯಾನಿಲಯ ಅನುದಾನ ಸಮಿತಿಯನ್ನು ಇಂಗ್ಲೆಂಡಿನಲ್ಲಿರುವಂತೆ ವಿಶ್ವವಿದ್ಯಾನಿಲಯ ಅನುದಾನ ಆಯೋಗವಾಗಿ ಪರಿವರ್ತಿಸಬೇಕೆಂದು ಸಲಹೆ ನೀಡಿತು. ಈ ಸಲಹೆಯ ಮೇರೆಗೆ ಕೇಂದ್ರಸರ್ಕಾರವು **"ವಿಶ್ವವಿದ್ಯಾನಿಲಯ ಅನುದಾನ ಆಯೋಗ"**(ಯು.ಜಿ.ಸಿ)ವನ್ನು 1953ರಲ್ಲಿ ರಚಿಸಿತು. 1953 ಡಿಸೆಂಬರ್ 28ರಂದು ಅಂದಿನ ಕೇಂದ್ರ ಶಿಕ್ಷಣ ಸಚಿವರಾದ ಮೌಲಾನಾ ಅಬುಲ್ ಕಲಾಂ ಅಜ಼ಾದ್‌ರವರು ಆಯೋಗವನ್ನು ಔಪಚಾರಿಕವಾಗಿ ಉದ್ಘಾಟಿಸಿದರು. ನವೆಂಬರ್ 1956ರಲ್ಲಿ ಆಯೋಗವು ಸಂವಿಧಾನದ ಕಾನೂನಿನ ಪ್ರಕಾರ ಅಸ್ತಿತ್ವಕ್ಕೆ ಬಂದಿತು. ದೇಶದ ಕೆಲವು ಆಯ್ದ ಸ್ಥಳಗಳಲ್ಲಿ ಆಯೋಗದ ಪ್ರಾದೇಶಿಕ ಕೇಂದ್ರಗಳು ಸ್ಥಾಪಿತಗೊಂಡಿವೆ. ಇದರ ಮುಖ್ಯಕಾರ್ಯಾಲಯ ನವದೆಹಲಿಯ ಬಹದ್ದೂರ್ ಷಾ ಜಫ಼ರ್ ಮಾರ್ಗದಲ್ಲಿದೆ.

ಅನುದಾನವನ್ನು ನೀಡುವುದು ಮತ್ತು ಉನ್ನತಶಿಕ್ಷಣ ಸಂಸ್ಥೆಗಳಲ್ಲಿನ ಗುಣಮಟ್ಟವನ್ನು ನಿರ್ಧರಿಸಿ ಅದನ್ನು ಕಾಪಾಡುವುದು ಈ ಎರಡು ಮುಖ್ಯ ಜವಾಬ್ದಾರಿಗಳನ್ನು ಹೊಂದಿರುವ ಈ ಆಯೋಗವು ದೇಶದಲ್ಲೇ ಏಕೈಕ ಅನುದಾನ ನೀಡುವ ಅಂಗವಾಗಿದೆ. ಆಯೋಗವು ಕೆಲವು ಮುಖ್ಯ ಕರ್ತವ್ಯಗಳನ್ನು ಹೊಂದಿದೆ. ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಸಂಘಟಿಸಿ ಪ್ರೋತ್ಸಾಹಿಸುವುದು, ವಿಶ್ವವಿದ್ಯಾಲಯ ಮಟ್ಟದಲ್ಲಿ ಬೋಧನೆ, ಪರೀಕ್ಷೆ ಹಾಗೂ ಸಂಶೋಧನೆಗಳ ಗುಣಮಟ್ಟವನ್ನು ನಿರ್ಧರಿಸಿ ಕಾಪಾಡುವುದು, ಉನ್ನತ ಶಿಕ್ಷಣದ ಕನಿಷ್ಠ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಕೆಲವು


Digitised by Bharatavani, CIIL

ನಿಯಮಗಳನ್ನು ರಚಿಸುವುದು, ವಿಶ್ವವಿದ್ಯಾಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಅನುದಾನವನ್ನು ವಿತರಿಸುವುದರ ಜತೆಗೆ ಅಲ್ಲಿನ ಶಿಕ್ಷಣಕ್ಕೆ ಸಂಬಂಧಿಸಿದ ಬೆಳವಣಿಗೆಗಳನ್ನು ಗಮನಿಸುವುದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ನಡುವೆ ಮುಖ್ಯ ಕೊಂಡಿಯಂತೆ ಕಾರ್ಯನಿರ್ವಹಿಸುವುದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಉತ್ತಮಗೊಳಿಸುವ ಸಲುವಾಗಿ ಸಲಹೆಯನ್ನು ನೀಡುವುದು ಈ ಸಂಸ್ಥೆಯ ಮುಖ್ಯ ಕಾರ್ಯಗಳು.

ದೇಶದಲ್ಲಿ ಹರಡಿರುವ ನೂರಾರು ಶಿಕ್ಷಣ ಸಂಸ್ಥೆಗಳ ಅಗತ್ಯಕ್ಕೆ ಸ್ಪಂದಿಸಲು ಆಯೋಗವು ವಿಕೇಂದ್ರೀಕರಣದ ಮೂಲಕ ದೇಶದ ವಿವಿಧ ಸ್ಥಳಗಳಲ್ಲಿ ತನ್ನ ಪ್ರಾದೇಶಿಕ ಕಛೇರಿಗಳನ್ನು ಹೈದರಾಬಾದ್, ಪುಣೆ, ಭೂಪಾಲ್, ದೆಹಲಿ, ಗೌಹಾಟಿ, ಕೊಲ್ಕೊತ್ತಾ, ಬೆಂಗಳೂರುಗಳಲ್ಲಿ ಸ್ಥಾಪಿಸಿದೆ. ಈ ಏಳು ಕಛೇರಿಗಳಿಗೂ ನಿರ್ದಿಷ್ಟ ರಾಜ್ಯಗಳನ್ನು ವಹಿಸಿಕೊಡಲಾಗಿದೆ. ಇದಲ್ಲದೆ ಆಯೋಗವು ಅಂತರ್ ವಿಶ್ವವಿದ್ಯಾನಿಲಯ ಕೇಂದ್ರಗಳೆಂದು ಕರೆಯಲಾಗುವ ಅಂಗಗಳನ್ನು (ಇಂಟರ್ ಯುನಿವರ್ಸಿಟಿ ಸೆಂಟರ್ IUC) 1984ರಿಂದ ಸ್ಥಾಪಿಸುತ್ತಾ ಬಂದಿದೆ.

ಈ ಸ್ವಾಯತ್ತ ಅಂಗಗಳು ಆಯೋಗದ ಮೂಲಧ್ಯೇಯವನ್ನು ಸಾಧಿಸುವಲ್ಲಿ ಸಹಕಾರಿಯಾಗಿವೆ. ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಪರಿಷತ್ತು (NAAC) ಅಂತಹ ಒಂದು ಸ್ವಾಯತ್ತ ಅಂಗ. ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು (Academic Staff Colleges) ದೇಶದ ವಿವಿಧೆಡೆಗಳಲ್ಲಿ ಬಹುಸಂಖ್ಯೆಯಲ್ಲಿದ್ದು ಆಯೋಗದ ಅಂಗ ಸಂಸ್ಥೆಗಳ ರೀತಿಯಲ್ಲಿ ಕಾರ್ಯನಿರ್ವಹಿಸುತ್ತವೆ.

ಆಯೋಗವು ಆಯ್ದ ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರೀಯ ಸೌಲಭ್ಯ (National facilities) ಕೇಂದ್ರಗಳನ್ನು ಸ್ಥಾಪಿಸಿದೆ. ಅವು ಪಶ್ಚಿಮ ಪ್ರಾದೇಶಿಕ ಇನ್‌ಸ್ಟ್ರುಮೆಂಟೇಷನ್ ಸೆಂಟರ್ (ಮುಂಬೈ ವಿಶ್ವವಿದ್ಯಾಲಯ), ಎಂ.ಎಸ್.ಟಿ. ರಾಡಾರ್ ಸೌಲಭ್ಯಗಳು (ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ತಿರುಪತಿ), ಮಾನವಿಕ ಮತ್ತು ಸಾಮಾಜಿಕ ವಿಜ್ಞಾನಗಳಿಗೆ ಅಂತರ್ ವಿಶ್ವವಿದ್ಯಾನಿಲಯ ಕೇಂದ್ರ (ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಸಿಮ್ಲಾ) ಕ್ರಿಸ್ಟಲ್ ಗ್ರಾಫ್ ಸೆಂಟರ್ (ಅಣ್ಣಾ ವಿಶ್ವವಿದ್ಯಾನಿಲಯ, ಚೆನ್ನೈ).

1989ರಲ್ಲಿ ಆಯೋಗವು ಕಾಲೇಜು ಅಧ್ಯಾಪಕ ವೃತ್ತಿಗೆ ಬರಲಿಚ್ಛಿಸುವ ಅಭ್ಯರ್ಥಿಗಳಿಗಾಗಿ ರಾಷ್ಟ್ರೀಯ ಅರ್ಹತಾ ಪರೀಕ್ಷೆ (National Eligibility Test, NET) ಎಂಬ ಪ್ರವೇಶ ಪರೀಕ್ಷೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ನಡೆಸಲು ಆರಂಭಿಸಿತು. ಅಧ್ಯಾಪಕ ವೃತ್ತಿಯಲ್ಲಿ ಗುಣಮಟ್ಟವನ್ನು ಹೆಚ್ಚಿಸುವುದು ಇದರ ಉದ್ದೇಶ.

ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ನೇತೃತ್ವದಲ್ಲಿ ಆಯೋಗವು ಕಾರ್ಯನಿರ್ವಹಿಸುತ್ತದೆ. ಮಾನವ ಸಂಪನ್ಮೂಲ ಖಾತೆಯ ಕಾರ್ಯದರ್ಶಿಗಳು ಸಹ ಆಯೋಗದ ಸದಸ್ಯರಾಗಿರುತ್ತಾರೆ. ಈ ಖಾತೆಯಿಂದ ಆಯೋಗಕ್ಕೆ ಧನ ಒದಗಿಬರುತ್ತದೆ.

ಹೊಸಹೊಸ ಜ್ಞಾನಶಾಖೆಗಳ ಉದಯ ಹಾಗೂ ಇಪ್ಪತ್ತೊಂದನೇ ಶತಮಾನದ ಶಿಕ್ಷಣದ ಹೊಸ ಸವಾಲುಗಳು ಆಯೋಗದ ಜವಾಬ್ದಾರಿಯನ್ನು ಹಲವು ಪಟ್ಟು ಹೆಚ್ಚಿಸಿದೆ.

–ಬಿ.ಎಂ.ಚಂ

## ವಿಶ್ವವಿದ್ಯಾನಿಲಯಗಳು–ಕರ್ನಾಟಕದ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹಾಗೂ ಸ್ವಾತಂತ್ರ್ಯಪೂರ್ವಕಾಲದಲ್ಲಿ ಕರ್ನಾಟಕವು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮೇಲುಗೈಯನ್ನು ಪಡೆದಿದೆ. ಸ್ವಾತಂತ್ರ್ಯಾನಂತರದ ಕಾಲದಲ್ಲಂತೂ ಭಾರತದಲ್ಲಿ ಉನ್ನತ ಶಿಕ್ಷಣದಲ್ಲಿ ವೇಗದ ಮುನ್ನಡೆ ಸಾಧಿಸಿದ ಬೆರಳೆಣಿಕೆಯ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಒಂದು. ತಂತ್ರಜ್ಞಾನ, ವೈದ್ಯ, ವಿಜ್ಞಾನ ಕಲೆ, ಕೃಷಿ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ಜ್ಞಾನವರ್ಧನೆಯ ಜವಾಬ್ದಾರಿಯನ್ನು ಹೊತ್ತ ಹೆಸರುವಾಸಿಯಾದ ವಿಶ್ವವಿದ್ಯಾಲಯಗಳು ಕರ್ನಾಟಕ ರಾಜ್ಯದಲ್ಲಿ ನೆಲೆನಿಂತಿವೆ.

**ಸಾಮಾನ್ಯ ವಿಶ್ವವಿದ್ಯಾನಿಲಯಗಳು: ೧) ಮೈಸೂರು ವಿಶ್ವವಿದ್ಯಾನಿಲಯ**

ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಪ್ರಸಿದ್ಧ ತಂತ್ರಜ್ಞರೂ ರಾಜಕೀಯ ಮುತ್ಸದ್ದಿಗಳಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಇವರುಗಳ ಪ್ರಯತ್ನದಿಂದ ಮೈಸೂರು ವಿಶ್ವವಿದ್ಯಾನಿಲಯ, 1916 ಜುಲೈ 27ರಂದು ಅಸ್ತಿತ್ವಕ್ಕೆ ಬಂದಿತು. ಅಮೆರಿಕಾ ಮತ್ತು ಆಸ್ಟ್ರೇಲಿಯ ದೇಶಗಳ ಶೈಕ್ಷಣಿಕ ಅಭಿವೃದ್ಧಿಯನ್ನು ಅಭ್ಯಾಸಿಸಿ ಥಾಮಸ್ ಡಿನ್‌ಹ್ಯಾಮ್ ಹಾಗೂ ಸಿ.ಆರ್. ರೆಡ್ಡಿಯವರು ಸಿದ್ಧಪಡಿಸಿದ ವರದಿಯ ಆಧಾರದ ಮೇಲೆ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಲಾಯಿತು. ಬ್ರಿಟಿಷ್ ಆಳ್ವಿಕೆಗೆ ಒಳಪಡದ ಭಾರತದ ಪ್ರಥಮ ವಿಶ್ವವಿದ್ಯಾನಿಲಯವೆಂಬ ಹಾಗೂ ಕರ್ನಾಟಕರಾಜ್ಯದ ಪ್ರಥಮ ವಿಶ್ವವಿದ್ಯಾಲಯವೆಂಬ ಹಿರಿಮೆ ಈ ವಿಶ್ವವಿದ್ಯಾನಿಲಯಕ್ಕೆ ಸಲ್ಲುತ್ತದೆ. ಅಲ್ಲದೆ, ಇದು ಭಾರತದ ಆರನೇ ವಿಶ್ವವಿದ್ಯಾನಿಲಯವೂ ಹೌದು. ಅಂಗ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದ ಮೈಸೂರು ವಿಶ್ವವಿದ್ಯಾನಿಲಯ 1956 ಮಾರ್ಚ್ 3 ರಂದು ವಿಶ್ವವಿದ್ಯಾನಿಲಯ ಅನುದಾನ ಆಯೋಗದಿಂದ ಮಾನ್ಯತೆ ಪಡೆದು ಸ್ವಾಯತ್ತತೆಯನ್ನು ಪಡೆಯಿತು. ಈ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಕ್ಕೆ ವರಕವಿ ಕುವೆಂಪುರವರು "ಮಾನಸಗಂಗೋತ್ರಿ" ಎಂದು ಹೆಸರಿಸಿದ್ದಾರೆ. "ನಹಿಜ್ಞಾನೇನ ಸದೃಶಂ" (ಜ್ಞಾನಕ್ಕೆ ಸಮನಾದ್ದಿಲ್ಲ) ಎಂಬುದು ಇದರ ಧ್ಯೇಯಮಂತ್ರ.

ಹೆಚ್.ವಿ. ನಂಜುಂಡಯ್ಯನವರು ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳು (1916–20). ಪ್ರೊ॥ ಇ.ಪಿ. ಮೆಟ್‌ಕಾಫ್ (1930–37) ಹಾಗೂ ಇ.ಜಿ. ಮೆಕಾಲ್ಪೈನ್ (1942–44) ಇವರುಗಳು ಕುಲಪತಿಗಳಾಗಿ ಸೇವೆ ಸಲ್ಲಿಸಿದ ಆಂಗ್ಲ ಮಹನೀಯರು. ವರಕವಿ ಕುವೆಂಪು, ದೇ.ಜ.ಗೌ. ರಾಜಕೀಯ ಮುತ್ಸದ್ದಿ ಕೆ.ಎಲ್. ಶ್ರೀಮಾಲಿ, ಇತಿಹಾಸ ತಜ್ಞ ಕೆ.ಎಂ. ಪಣಿಕ್ಕರ್ ಮುಂತಾದವರು ಈ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಜ್ಞಾನದ ವಿವಿಧ ಶಾಲೆಗಳಲ್ಲಿ ಸ್ನಾತಕಪದವಿ, ಸ್ನಾತಕೋತ್ತರ ಪದವಿಗಳನ್ನು ನೀಡುತ್ತಿದ್ದು ಸಂಶೋಧನೆಗೂ ಹೆಚ್ಚು ಒತ್ತು ನೀಡಿರುವ ಈ ವಿಶ್ವವಿದ್ಯಾನಿಲಯ ನಮ್ಮ ದೇಶದ ಪ್ರಮುಖ ಜ್ಞಾನಪ್ರಸಾರ ಕೇಂದ್ರವಾಗಿದೆ. ನ್ಯಾಕ್ (NAAC) ಸಂಸ್ಥೆಯು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪಂಚತಾರ ಸ್ಥಾನವನ್ನು ನೀಡಿ ಮಾನ್ಯಮಾಡಿದೆ.

ಪ್ರಾರಂಭದಲ್ಲಿ ಇಡೀ ಮೈಸೂರು ಸಂಸ್ಥಾನದ ಒಂಬತ್ತು ಜಿಲ್ಲೆಗಳು ಮೈಸೂರು ವಿಶ್ವವಿದ್ಯಾನಿಲಯದಡಿಯಲ್ಲಿದ್ದವು. ಆದರೆ ಈಗ ಕೇವಲ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳು ಮಾತ್ರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿವೆ. ಈ ಹಿಂದೆ ಅಂಚೆ

Digitised by Bharatavani, CIIL

ಮತ್ತು ತೆರಪಿನ ಶಿಕ್ಷಣ ನಿರ್ದೇಶನಾಲಯ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯದಡಿಯಲ್ಲಿ ಕೆಲಸ ಮಾಡುತ್ತಿದ್ದು 1996ರಲ್ಲಿ ಈ ಸಂಸ್ಥೆ ಒಂದು ಪ್ರತ್ಯೇಕ ಮುಕ್ತ ವಿಶ್ವವಿದ್ಯಾಲಯವಾಗಿ (ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಪರಿವರ್ತಿತಗೊಂಡಿತು. 122 ಕಾಲೇಜುಗಳು ಹಾಗೂ ಮಹಾರಾಜ ಕಾಲೇಜು, ಯುವರಾಜ ಕಾಲೇಜು, ಯುನಿವರ್ಸಿಟಿ ಸಂಜೆ ಕಾಲೇಜು, ದೈಹಿಕ ಶಿಕ್ಷಣ ಕಾಲೇಜು, ಲಲಿತ ಕಲೆಗಳ ಕಾಲೇಜು, ವಿಸ್ತರಣ ಕಾರ್ಯಗಳಲ್ಲಿ ಕೆಲಸ ಮಾಡುವ ಪ್ರಸಾರಾಂಗ ಮತ್ತು ಮುದ್ರಣಾಲಯವನ್ನು ವಿಶ್ವವಿದ್ಯಾನಿಲಯ ಹೊಂದಿದೆ. ಈ 5 ಘಟಕ ಕಾಲೇಜು (Constituent Colleges)ಗಳು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿವೆ. ವಿಶ್ವವಿದ್ಯಾನಿಲಯವು ನೇರವಾಗಿ ನಿಯಂತ್ರಿಸುವ ಎರಡು ಸ್ನಾತಕೋತ್ತರ ಕೇಂದ್ರಗಳು ಹಾಸನ ಮತ್ತು ಮಂಡ್ಯಗಳಲ್ಲಿ ಕಾರ್ಯನಿರತವಾಗಿವೆ. ಇವಲ್ಲದೆ ಕೆಲವು ಶಿಕ್ಷಣಸಂಸ್ಥೆಗಳಿಗೆ ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ಕೇಂದ್ರಗಳನ್ನು ನಡೆಸಲು ಅನುಮತಿ ನೀಡಿದ್ದು ಅವುಗಳು ಸಹ ಕಾರ್ಯೋನ್ಮುಖವಾಗಿವೆ. ವೃತ್ತಿಪರ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ಸಹ ಇದು ನಡೆಸುತ್ತಿದೆ. ಸ್ನಾತಕೋತ್ತರ ವಿಭಾಗಗಳು ಪ್ರೌಢ ವ್ಯಾಸಂಗದಲ್ಲಿ ಹಾಗೂ ಸಂಶೋಧನೆಯಲ್ಲಿ ಶ್ರೇಷ್ಠತೆಯನ್ನು ಪಡೆದು ವಿವಿಧ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಪ್ರಾಯೋಜನೆಗಳನ್ನು ಹಾಗೂ ಕೋಟಿಗಟ್ಟಲೇ ಹಣವನ್ನು ಅನುದಾನ ರೂಪದಲ್ಲಿ ಪಡೆಯುತ್ತಿವೆ. ವಿಶ್ವವಿದ್ಯಾನಿಲಯದ ಗ್ರಂಥಾಲಯ ಸುಮಾರು 8 ಲಕ್ಷಕ್ಕೂ ಮೀರಿ ಪುಸ್ತಕಗಳನ್ನೂ 2400 ನಿಯತಕಾಲಿಕೆಗಳನ್ನು ಹೊಂದಿದ್ದು ವಿದ್ಯಾರ್ಥಿಗಳಿಗೆ ಜ್ಞಾನಸಂಪಾದನೆಗೆ ಸಹಕರಿಸುತ್ತಿದೆ. ಶೈಕ್ಷಣಿಕ, ತಾಂತ್ರಿಕ ಹಾಗೂ ಸಾಂಸ್ಕೃತಿಕ ವಿನಿಮಯದ ಸಲುವಾಗಿ ವಿಶ್ವವಿದ್ಯಾನಿಲಯ ಹೊರದೇಶಗಳ ಪ್ರಸಿದ್ಧ ಸಂಸ್ಥೆ ಮತ್ತು ವಿಶ್ವವಿದ್ಯಾನಿಲಯಗಳೊಡನೆ ಒಪ್ಪಂದಗಳನ್ನು ಮಾಡಿಕೊಂಡಿದೆ. ಮಹಾರಾಜ ಕಾಲೇಜಿನ ಹಿಂಭಾಗದಲ್ಲಿರುವ ಪ್ರಾಚ್ಯ ಸಂಶೋಧನಾ ಸಂಸ್ಥೆ (Oriental Research Institute) ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿದೆ. ಮಾನಸ ಗಂಗೋತ್ರಿ ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನ ವಿಭಾಗದ ಮುಖ್ಯಸ್ಥರು ಈ ಸಂಸ್ಥೆಯ ಮೇಲ್ವಿಚಾರಕರಾಗಿರುತ್ತಾರೆ.

ಕನ್ನಡ ವಿಭಾಗ 1966ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಾಗಿ ವ್ಯವಸ್ಥೆಗೊಂಡು ಎಂ.ಎ. ಕಾರ್ಯಕ್ರಮದ ಜೊತೆಗೆ ಕನ್ನಡಕ್ಕೆ ಸಂಬಂಧಿಸಿದ ಇತರ ಕಾರ್ಯಕ್ರಮಗಳನ್ನೂ ನಡೆಸುತ್ತದೆ. ವಿಸ್ತೃತ ಗ್ರಂಥಸೂಚಿ, ಕನ್ನಡ ವಿಶ್ವಕೋಶ, ಇಂಗ್ಲಿಷ್ ಕನ್ನಡ ನಿಘಂಟು, ಎಫಿಗ್ರಾಫಿಯಾ ಆಫ್ ಕರ್ನಾಟಿಕ ಎಂಬ ಕರ್ನಾಟಕದ ಶಾಸನಗಳಿಗೆ ಸಂಬಂಧಿಸಿದ ಇಂಗ್ಲಿಷ್ ಸಂಪುಟಗಳ ಅನುವಾದ ಹಾಗೂ ಸಂಪಾದನೆ ಕರ್ನಾಟಕ ವಿಷಯ ವಿಶ್ವಕೋಶ ಇವು ಈ ಸಂಸ್ಥೆಯ ಗಣನೀಯ ಕೊಡುಗೆಗಳು. ಇತರ ವಿಷಯ ವಿಶ್ವಕೋಶಗಳ ರಚನೆ ನಡೆಯುತ್ತಿದೆ.

### ೨) ಬೆಂಗಳೂರು ವಿಶ್ವವಿದ್ಯಾನಿಲಯ

ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭದಲ್ಲಿ ಬೆಂಗಳೂರಿನ ಸೆಂಟ್ರಲ್‌ಕಾಲೇಜಿನ ರೂಪದ 1886ರಲ್ಲಿ ಜನ್ಮತಾಳಿತು. ವಿಜ್ಞಾನ ವಿಷಯಗಳಲ್ಲಿ ಸ್ನಾತಕ ಪದವಿಗಳನ್ನು ನೀಡುವುದು ಸೆಂಟ್ರಲ್ ಕಾಲೇಜಿನ ಉದ್ದೇಶವಾಗಿತ್ತು. 1906ರ ವರೆಗೆ ಮದ್ರಾಸ್ ವಿಶ್ವವಿದ್ಯಾಲಯದಡಿ ಕೆಲಸ ಮಾಡಿ ನಂತರ 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಡಿಯಲ್ಲಿ ಬಂತು. 1964 ಜುಲೈ 10ರಂದು ಇದನ್ನು ಯು.ಜಿ.ಸಿ. ಸಂಸ್ಥೆ ಬೆಂಗಳೂರು ವಿಶ್ವವಿದ್ಯಾನಿಲಯವೆಂದು ಕರೆದು ಮಾನ್ಯತೆ ನೀಡಿತು. ಜ್ಞಾನಭಾರತಿ ಎಂಬ ವಿಶಾಲವಾದ ಪ್ರಾಂಗಣದಲ್ಲಿ ವಿಶ್ವವಿದ್ಯಾನಿಲಯ ತನ್ನ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಸೆಂಟ್ರಲ್ ಕಾಲೇಜು ಹಾಗೂ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ಬೆಂಗಳೂರು (1912) ಈ ಎರಡು ಸಂಸ್ಥೆಗಳನ್ನು ಸಂಪೂರ್ಣ ಬೆಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಕೊಡಲಾಯಿತು. "ಜ್ಞಾನಂ ವಿಜ್ಞಾನ ಸಹಿತಂ" ಎಂಬ ಧ್ಯೇಯಮಂತ್ರವನ್ನಿಟ್ಟುಕೊಂಡು ವಿಶ್ವವಿದ್ಯಾನಿಲಯ ಕಾರ್ಯೋನ್ಮುಖವಾಗಿದೆ.

ನ್ಯಾಕ್ (NAAC) ಸಂಸ್ಥೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಂಚತಾರ ಸ್ಥಾನಮಾನವನ್ನು ನೀಡಿ ಮಾನ್ಯ ಮಾಡಿದೆ. ಶ್ರೇಣಿ ಪದ್ಧತಿಯಲ್ಲಿ ಇದಕ್ಕೆ 'ಎ' ಶ್ರೇಣಿ ದೊರೆತಿದೆ. ಈ ವಿಶ್ವವಿದ್ಯಾನಿಲಯ ಹಲವಾರು ಪ್ರಸಿದ್ಧ ವ್ಯಕ್ತಿಗಳನ್ನು ರೂಪಿಸಿದೆ. ಸಿ.ಎನ್.ಎಸ್. ಐಯ್ಯಂಗಾರ್, ಎಚ್. ನರಸಿಂಹಯ್ಯ, ಸಿ.ಎನ್.ಆರ್. ರಾವ್, ಸಜ್ಜನ್‌ಜಿಂದಾಲ್ ಕ್ರಿಕೆಟ್‌ಪಟುಗಳಾದ ಅನಿಲ್‌ಕುಂಬ್ಳೆ, ರಾಹುಲ್ ದ್ರಾವಿಡ್, ವೆಂಕಟೇಶ್ ಪ್ರಸಾದ್ ಹಾಗೂ ರಾಬಿನ್ ಉತ್ತಪ್ಪ–ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಸ್ನಾತಕಪದವಿಯನ್ನು ಪಡೆದವರಲ್ಲಿ ಪ್ರಮುಖರಾದವರು. ಸೆಂಟ್ರಲ್‌ಕಾಲೇಜಿನಲ್ಲಿ ಹಲವು ಪ್ರಸಿದ್ಧ ವಿಜ್ಞಾನಿಗಳು ತಮ್ಮ ಸಂಶೋಧನೆಯನ್ನು ಕೈಗೊಂಡಿದ್ದಾರೆ. ನೊಬೆಲ್ ವಿಜೇತ ಸಿ.ವಿ. ರಾಮನ್‌ರವರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (ಆಗ ಟಾಟಾ ಇನ್ಸ್ಟಿಟ್ಯೂಟ್) ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ವಿಶ್ವವಿದ್ಯಾನಿಲಯದೊಡನೆ ಸಹಭಾಗಿಯಾಗಿದ್ದರು. ಅರ್ಥಶಾಸ್ತ್ರದಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದ ಲಿಯೊನಿಡ್ ಹರ್‌ವಿಚ್ಜ್ 1965 ರಿಂದ 68 ರವರೆಗೆ ಇಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು.

ಬೆಂಗಳೂರು ವಿಶ್ವವಿದ್ಯಾನಿಲಯ ಅಂತಾರಾಷ್ಟ್ರೀಯ ಗುಣಮಟ್ಟದ ಸಂಶೋಧನೆಗಳನ್ನು ನಿರ್ವಹಿಸಿ ಪ್ರಸಿದ್ಧಿ ಪಡೆದಿದೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ವಿಭಾಗಮಾಡಿ ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ದಕ್ಷಿಣ ವಿಶ್ವವಿದ್ಯಾನಿಲಯ ಎಂಬ ಎರಡು ವಿಶ್ವವಿದ್ಯಾನಿಲಯಗಳನ್ನಾಗಿ ಮಾಡಬೇಕೆಂಬ ಪ್ರಸ್ತಾವನೆ ಕರ್ನಾಟಕ ಸರ್ಕಾರದ ಮುಂದೆ ಮಂಡಿಸಲಾಗಿತ್ತು. ಇತ್ತೀಚಿನ ಮೂಲಗಳಿಂದ ಕರ್ನಾಟಕ ಸರ್ಕಾರ ಈ ಪ್ರಸ್ತಾವನೆಗೆ ಒಪ್ಪಿಗೆ ನೀಡಿದೆ ಎಂದು ತಿಳಿದು ಬಂದಿದೆ. ಈ ಪ್ರಸ್ತಾವನೆ ಕಾರ್ಯರೂಪಕ್ಕೆ ಬಂದಾಗ ಬೆಂಗಳೂರಿನ ಸಮೀಪದಲ್ಲಿರುವ ಹೊಸಕೋಟೆಯಲ್ಲಿ ಹೊಸದಾಗಿ ನಿರ್ಮಿಸಲಿರುವ ಪ್ರಾಂಗಣ (Campus)ದೊಂದಿಗೆ ಹೊಸದಾಗಿ ಬೆಂಗಳೂರು ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರಲಿದೆ. ಈಗ ಜ್ಞಾನಭಾರತಿಯಲ್ಲಿ ಇರುವ ವಿಶ್ವವಿದ್ಯಾನಿಲಯವನ್ನು ಬೆಂಗಳೂರು ದಕ್ಷಿಣ ವಿಶ್ವವಿದ್ಯಾನಿಲಯವೆಂದು ಕರೆಯಲಾಗುತ್ತದೆ.

### ೩) ಕುವೆಂಪು ವಿಶ್ವವಿದ್ಯಾನಿಲಯ

ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯಲ್ಲಿರುವ ಕುವೆಂಪು ವಿಶ್ವವಿದ್ಯಾನಿಲಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ, 1976ರ ಪ್ರಕಾರ 1987, ಜೂನ್ 29 ರಂದು ಅಸ್ತಿತ್ವಕ್ಕೆ ಬಂದಿತು. ಗ್ರಾಮೀಣ ವೈಲಕ್ಷಣ ಹಾಗೂ ಆಧುನಿಕತೆಯ ಉತ್ಸಾಹ ಇವೆರಡನ್ನೂ ಮೇಳವಿಸಿ ಅದಕ್ಕೆ ಬದ್ಧವಾಗಿರುವ ಈ ವಿಶ್ವವಿದ್ಯಾನಿಲಯ ವಿಶಿಷ್ಟ ಶೈಕ್ಷಣಿಕ ವ್ಯವಸ್ಥೆಯನ್ನು ಹೊಂದಿದೆ. ಕಲೆ, ವಿಜ್ಞಾನ, ವಾಣಿಜ್ಯ, ಶಿಕ್ಷಣ ಹಾಗೂ ಕಾನೂನು ಈ ಕ್ಷೇತ್ರಗಳಲ್ಲಿ ಒಟ್ಟು 41 ಸ್ನಾತಕೋತ್ತರ ವಿಭಾಗಗಳನ್ನು ಇದು ಹೊಂದಿದೆ. 45 ಸ್ನಾತಕೋತ್ತರ ಪದವಿಗಳನ್ನು, 4 ಸ್ನಾತಕೋತ್ತರ ಡಿಪ್ಲೋಮಾಗಳನ್ನು, ಸ್ನಾತಕ ಪದವಿಗಳನ್ನು ನೀಡಲು ಈ ವಿಶ್ವವಿದ್ಯಾನಿಲಯ ಸಜ್ಜುಗೊಂಡಿದೆ. ಶಿವಮೊಗ್ಗ ಮತ್ತು ಚಿಕ್ಕಮಗಳೂರು, ಜಿಲ್ಲೆಗಳಲ್ಲಿ ಹರಡಿರುವ


Digitised by Bharatavani, CIIL

80 ಅಂಗ ಕಾಲೇಜುಗಳು, 3 ಘಲಕ ಕಾಲೇಜುಗಳು (ಇದರಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಗಿದೆ) 1 ಸ್ವಾಯತ್ತ ಕಾಲೇಜು, 1 ಬಿ.ಪಿಎಡ್ ಕಾಲೇಜು ಹಾಗೂ 17 ಬಿ.ಎಡ್ ಕಾಲೇಜುಗಳು ಕುವೆಂಪು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಸೇರಿವೆ. ಕಡೂರಿನಲ್ಲಿ ಒಂದು ಸ್ನಾತಕೋತ್ತರ ಕೇಂದ್ರ ಕಾರ್ಯೋನ್ಮುಖವಾಗಿದೆ.

'ಜ್ಞಾನಸಹ್ಯಾದ್ರಿ' ಎಂದು ಹೆಸರಿಸಲಾಗಿರುವ ಈ ವಿಶ್ವವಿದ್ಯಾನಿಲಯ ಶಿವಮೊಗ್ಗ ಪಟ್ಟಣದಿಂದ 28 ಕಿ.ಮೀ. ದೂರದಲ್ಲಿರುವ ಶಂಕರ ಘಟ್ಟದಲ್ಲಿರುವ ಭದ್ರಾ ಜಲಾಶಯಕ್ಕೆ ಕೇವಲ 2 ಕಿ.ಮೀ. ದೂರವಿರುವ ಇದು 230 ಎಕರೆಯಷ್ಟು ವಿಶಾಲ ಹರವಿನಲ್ಲಿ ಹರಡಿದೆ.

ಜ್ಞಾನಸಹ್ಯಾದ್ರಿಯ ಈ ವಿಶಾಲ ಪ್ರದೇಶದಲ್ಲಿರುವ ಆಡಳಿತ ಕಟ್ಟಡವಾದ ಕುವೆಂಪು ಶತಮಾನೋತ್ಸವ ಭವನದಲ್ಲಿ ಉಪಕುಲಪತಿಗಳ ಕಚೇರಿ, ಶೈಕ್ಷಣಿಕ ಯೋಜನಾ ಕಚೇರಿ ಇತ್ಯಾದಿಗಳು ಕೆಲಸ ಮಾಡುತ್ತಿವೆ.

### ೪) ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಹಿಂದಿನ ಬಾಂಬೆ ಪ್ರೆಸಿಡೆನ್ಸಿಯ ಶಾಸನಸಭೆ 1949ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿತು. 1950ರಲ್ಲಿ ಶಾಸನ ಬದ್ಧವಾದ ವಿಶ್ವವಿದ್ಯಾನಿಲಯದ ಸ್ಥಾನವನ್ನು ಪಡೆಯಿತು. ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುತ್ತವೆ. "ಅರಿವೇ ಗುರು" ಎಂಬ ಧ್ಯೇಯಮಂತ್ರವನ್ನು ಹೊಂದಿರುವ ಈ ವಿಶ್ವವಿದ್ಯಾನಿಲಯ ಕಲೆ, ವಾಣಿಜ್ಯ, ಶಿಕ್ಷಣ, ಕಾನೂನು, ವಿಜ್ಞಾನ ತಂತ್ರಜ್ಞಾನ, ಸಾಮಾಜಿಕ ವಿಜ್ಞಾನ, ಮ್ಯಾನೇಜ್‌ಮೆಂಟ್ ಮುಂತಾದ ಕ್ಷೇತ್ರಗಳಲ್ಲಿ ಕೋರ್ಸುಗಳನ್ನು ನಡೆಸುತ್ತಿದೆ.

ಡಾ॥ ಪಿ.ಸಿ. ಪಾವಟೆಯವರು ವಿಶ್ವವಿದ್ಯಾನಿಲಯದ ಮೊದಲ ಉಪಕುಲಪತಿಗಳಾಗಿದ್ದು ಇದರ ವಿಕಾಸದ ಹಂತದಲ್ಲಿ ಅಗತ್ಯವಿದ್ದ ಮುಂದಾಳತ್ವವನ್ನು ವಹಿಸಿದರು. ಅದ್ಭುತವಾದ ಶೈಲಿಯಲ್ಲಿ ನಿರ್ಮಿಸಲಾಗಿರುವ ಶಿಲಾಭವನವು ಪಾವಟೆಯವರಿಗಿದ್ದ ವಾಸ್ತುಶಿಲ್ಪಜ್ಞಾನದ ಪ್ರತೀಕದಂತಿದೆ. ಕರ್ನಾಟಕ ರಾಜ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿದರೆ ಇದು ಹಳೆಯ ವಿಶ್ವವಿದ್ಯಾನಿಲಯವಾಗಿದೆ.

43 ಸ್ನಾತಕೋತ್ತರ ವಿಭಾಗಗಳನ್ನು ಹೊಂದಿರುವ ಈ ವಿಶ್ವವಿದ್ಯಾಲಯ ಪಿ.ಜಿ. ಎಂ.ಫಿಲ್, ಪಿಎಚ್.ಡಿ. ಪದವಿಗಳನ್ನು ನೀಡುತ್ತದೆ. ಬೆಳಗಾವಿ, ಬಿಜಾಪುರ, ಹಾವೇರಿ, ಗದಗ ಮತ್ತು ಕಾರವಾರಗಳಲ್ಲಿ ಒಟ್ಟು ಐದು ಸ್ನಾತಕೋತ್ತರ ಕೇಂದ್ರಗಳನ್ನು ನಡೆಸಲಾಗುತ್ತಿದೆ. ವಿಜ್ಞಾನ, ಕಲೆ, ವಾಣಿಜ್ಯ, ಲಲಿತಕಲೆ, ಕಾನೂನು ಹಾಗೂ ಶಿಕ್ಷಣ ಈ ಶಾಖೆಗಳಲ್ಲಿ ಪದವಿಯನ್ನು ನೀಡುತ್ತಿರುವ 5 ಘಟಕ ಕಾಲೇಜುಗಳು ಈ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿದೆ.

ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳ ಅಗತ್ಯಗಳಿಗೆ ಈ ವಿಶ್ವವಿದ್ಯಾನಿಲಯ ಸ್ಪಂದಿಸುತ್ತಿದೆ. ಸಂಪರ್ಕ ಕೌಶಲಗಳ ಕೊರತೆ, ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಅವಕಾಶಗಳ ಕೊರತೆ, ಇತ್ಯಾದಿಗಳನ್ನು ಅನುಭವಿಸುತ್ತಿರುವ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿಶ್ವವಿದ್ಯಾನಿಲಯವು ಪಠ್ಯಕ್ರಮವನ್ನು ಪ್ರಾಂತ್ಯಕ್ಕೆ ಸಂಬಂಧಿಸಿದ ಕೆಲವು ನಿರ್ದಿಷ್ಟ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದೆ.

ಕಲೆ, ವಾಣಿಜ್ಯ ಮತ್ತು ಸಮಾಜ ವಿಜ್ಞಾನ ಶಾಖೆಗಳಲ್ಲಿ ಉನ್ನತ ಶಿಕ್ಷಣವನ್ನು ಅಂಚೆ ಮತ್ತು ತೆರಪಿನ ಶಿಕ್ಷಣ ವ್ಯವಸ್ಥೆಯ ಮುಖಾಂತರ ಆಸಕ್ತರಿಗೆ ತಲುಪುವಂತೆ ಮಾಡಲಾಗುತ್ತಿದೆ. ವಿಶ್ವವಿದ್ಯಾನಿಲಯವು ಹೊರದೇಶಗಳ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ.

### ೫) ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು

ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರಿನಿಂದ 18 ಕಿ.ಮೀ. ದೂರದ ಕೊಣಾಜೆ ಎಂಬಲ್ಲಿ 1980, ಸೆಪ್ಟೆಂಬರ್ 10ರಂದು ಸ್ಥಾಪಿತಗೊಂಡಿತು. ಇತ್ತೀಚಿಗೆ ಸ್ಥಾಪಿತಗೊಂಡ ಈ ವಿಶ್ವವಿದ್ಯಾನಿಲಯ "ಜ್ಞಾನವೇ ಬೆಳಕು" ಎಂಬುದನ್ನು ಧ್ಯೇಯಮಂತ್ರವನ್ನಾಗಿಟ್ಟುಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗದ ಪ್ರಾಧ್ಯಾಪಕರಾಗಿದ್ದ ಡಾ॥ ಬಿ. ಶೇಖ್‌ಅಲಿ ಇದರ ಪ್ರಪ್ರಥಮ ಉಪಕುಲಪತಿಗಳು. ನ್ಯಾಕ್ ಸಂಸ್ಥೆ ಇದಕ್ಕೆ ನಾಲ್ಕು ತಾರಾ ಸ್ಥಾನಮಾನವನ್ನು ನೀಡಿದೆ.

29 ಸ್ನಾತಕೋತ್ತರ ವಿಭಾಗಗಳನ್ನು ಹೊಂದಿರುವ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 2 ಘಟಕ ಕಾಲೇಜುಗಳು, 4 ಕಾನೂನು ಕಾಲೇಜು, 18 ಶಿಕ್ಷಣ ಕಾಲೇಜು, 5 ಸ್ವಾಯತ್ತ ಕಾಲೇಜುಗಳು ಮತ್ತು ಇನ್ನಿತರ 156 ಕಾಲೇಜುಗಳು ಕೆಲಸ ಮಾಡುತ್ತಿವೆ. ಭಾರತದಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್, ಗಾರ್ಮೆಂಟ್ ಡಿಸೈನ್, ಲೆದರ್ ಡಿಸೈನ್ ಮಾನವ ಸಂಪನ್ಮೂಲ ಅಭಿವೃದ್ಧಿ ಈ ಕ್ಷೇತ್ರಗಳಲ್ಲಿ ಪದವಿ ಕೋರ್ಸುಗಳನ್ನು ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಯೋಗ ವಿಜ್ಞಾನಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಪ್ರಥಮಬಾರಿಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಯಿತು.

### ೬) ಗುಲ್ಬರ್ಗ ವಿಶ್ವವಿದ್ಯಾನಿಲಯ

"ವಿದ್ಯೆಯೇ ಅಮೃತ" ಎಂಬ ಧ್ಯೇಯವಾಕ್ಯವನ್ನಿಟ್ಟುಕೊಂಡು ಗುಲ್ಬರ್ಗ ವಿಶ್ವವಿದ್ಯಾನಿಲಯ 1980ರಲ್ಲಿ ಅಸ್ತಿತ್ವಕ್ಕೆ ಬಂದಿತು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಸ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಪ್ರೊ॥ ಎಂ. ನಾಗರಾಜ್‌ರವರು ಇದರ ಪ್ರಥಮ ಉಪಕುಲಪತಿಗಳಾಗಿ ನೇಮಕವಾದರು. ವಿಶ್ವವಿದ್ಯಾನಿಲಯವು ಮುಂಚೆ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿ ಕೆಲಸ ಮಾಡುತ್ತಿತ್ತು. ಗುಲ್ಬರ್ಗ, ಬೀದರ್, ರಾಯಚೂರು, ಈ ಪ್ರದೇಶಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುತ್ತವೆ. 860 ಎಕರೆ ವಿಸ್ತಾರದ ವಿಶಾಲ ಪ್ರದೇಶದಲ್ಲಿರುವ ಈ ವಿಶ್ವವಿದ್ಯಾನಿಲಯ ಗುಲ್ಬರ್ಗ ನಗರದಿಂದ 6 ಕಿ.ಮೀ. ದೂರದಲ್ಲಿದೆ. ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಪ್ರಾಧ್ಯಾಪಕ ನಾಗರಾಜು ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳು.

ವಿಶ್ವವಿದ್ಯಾನಿಲಯವು 38 ಸ್ನಾತಕೋತ್ತರ ವಿಭಾಗಗಳನ್ನು ಹೊಂದಿದ್ದು 4 ಸ್ನಾತಕೋತ್ತರ ಕೇಂದ್ರಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ನಡೆಸುತ್ತಿದೆ. ಬಸವಕಲ್ಯಾಣದಲ್ಲಿ ಮತ್ತೊಂದು ಕೇಂದ್ರವನ್ನು ತೆರೆಯುವ ಯೋಜನೆಯಿದೆ. ಒಟ್ಟು 305 ಶಿಕ್ಷಣ ಸಂಸ್ಥೆಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿವೆ.

### ೭) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಈ ವಿಶ್ವವಿದ್ಯಾನಿಲಯ ಬಹಳ ಇತ್ತೀಚಿಗೆ ಆರಂಭಗೊಂಡಿತು. ತುಮಕೂರು ಹಾಗೂ ಸುತ್ತಮುತ್ತಲಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 2004ರಲ್ಲಿ ಇದನ್ನು ಆರಂಭಿಸಲಾಯಿತು. "ಜ್ಞಾನವು ಅನಂತ" ಎಂಬುದು ಇದರ ಧ್ಯೇಯವಾಕ್ಯ. ಇದು 25 ಬೇರೆ ಬೇರೆ ವಿಭಾಗಗಳನ್ನು ಹೊಂದಿದೆ. ಅಲ್ಲದೆ ಕಲೆ, ವಿಜ್ಞಾನ, ವಾಣಿಜ್ಯ, ಶಿಕ್ಷಣ, ಲಲಿತಕಲೆ ಈ ಎಲ್ಲಾ ಕ್ಷೇತ್ರಗಳಲ್ಲೂ ಜ್ಞಾನಾರ್ಜನೆಗೆ ಅವಕಾಶವನ್ನಿತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿದ್ದ. ಓ. ಅನಂತರಾಮಯ್ಯ ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾದರು.

Digitised by Bharatavani, CIIL

### ೮) ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ

ದಾವಣಗೆರೆಯಿಂದ 8 ಕಿ.ಮೀ. ದೂರದ ತೋಳಹುಣಸೆ ಎಂಬಲ್ಲಿ ಶಿವಗಂಗೋತ್ರಿ ಆವರಣದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯ 2010ರಲ್ಲಿ ಅಸ್ತಿತ್ವಕ್ಕೆ ಬಂದಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ॥ ಎಸ್. ಇಂದುಮತಿ ಎಂಬುವರು ಇದರ ಪ್ರಥಮ ಉಪಕುಲಪತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಶ್ವವಿದ್ಯಾನಿಲಯವು ವಾಣಿಜ್ಯ, ಮ್ಯಾನೇಜ್‌ಮೆಂಟ್, ಲಲಿತಕಲೆ, ಶಿಕ್ಷಣ, ಸಮಾಜ ಕಾರ್ಯ (Social Work) ಜೈವ ರಸಾಯನ, ಆಹಾರ ತಂತ್ರಜ್ಞಾನ, ಮೈಕ್ರೋ ಬಯಾಲಜಿ, ಅರ್ಥಶಾಸ್ತ್ರ– ಈ ಶಾಖೆಗಳಲ್ಲಿ ಸ್ನಾತಕಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ನೀಡಲು ಸಜ್ಜಾಗಿದೆ. ಇದಲ್ಲದೆ ಸ್ನಾತಕೋತ್ತರ ಡಿಪ್ಲೋಮಾ ಮತ್ತು ಕೆಲವು ಸರ್ಟಿಫಿಕೇಟ್ ಕೋರ್ಸುಗಳನ್ನು ನಡೆಸಲಾಗುತ್ತಿದೆ.

### ೯) ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ

ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ ಆಗಸ್ಟ್ 20, 2010ರಂದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ ಅನ್ವಯ ಅಸ್ತಿತ್ವಕ್ಕೆ ಬಂದಿತು. ಬಳ್ಳಾರಿಯಲ್ಲಿರುವ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಬರುತ್ತದೆ. ಮಾನಸಗಂಗೋತ್ರಿ ಅರ್ಥಶಾಸ್ತ್ರ ವಿಭಾಗದ ಪ್ರೊ॥ ಮಂಜುನಾಥ ಹೊಸಮನಿ ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿ ಆಯ್ಕೆಗೊಂಡಿದ್ದಾರೆ. ಬಳ್ಳಾರಿ ನಗರದ ಹೊರವಲಯದ 95 ಎಕರೆಯಷ್ಟು ವಿಶಾಲ ಪ್ರದೇಶದಲ್ಲಿ ವಿಶ್ವವಿದ್ಯಾನಿಲಯವು ನೆಲೆಗೊಂಡಿದ್ದು ಇನ್ನಷ್ಟು ಜಾಗ ಸರ್ಕಾರದಿಂದ ಲಭಿಸುವ ಸಾಧ್ಯತೆಯಿದೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿರುವ ಒಟ್ಟು 87 ಕಾಲೇಜುಗಳು ಹಾಗೂ ನಂದಿಹಳ್ಳಿಯಲ್ಲಿರುವ ಸ್ನಾತಕೋತ್ತರ ಕೇಂದ್ರ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಸೇರಿವೆ. ಮೈಸೂರು ವಿಶ್ವವಿದ್ಯಾನಿಲಂಯುದ ಅರ್ಥಶಾಸ್ತ್ರ ಪ್ರಾಧ್ಯಾಪಕ ಮಂಜಪ್ಪ ಹೊಸಮನಿಯವರನ್ನು ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿ ನೇಮಿಸಲಾಯಿತು.

2011ರಿಂದ ಆರಂಭಿಸಬೇಕೆಂದಿರುವ 10 ಹೊಸ ಕೋರ್ಸುಗಳಲ್ಲಿ ಫೈನಾನ್ಸ್ ಮತ್ತು ಅಕೌಂಟಿಂಗ್, ಹಾಸ್ಪಿಟಾಲಿಟಿ ಮತ್ತು ಟ್ರಾವೆಲ್ ಮ್ಯಾನೇಜ್‌ಮೆಂಟ್‌ಗಳಲ್ಲಿ ಸ್ನಾತಕೋತ್ತರ ಪದವಿ ತರಗತಿಗಳನ್ನು ಸೇರಿಸಲಾಗಿದೆ.

### ೧೦) ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾಂ

ಕರ್ನಾಟಕ ವಿಶ್ವವಿದ್ಯಾನಿಲಯದ ಬೆಳಗಾವಿಯ ಘಟಕ ಈಗ ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯವಾಗಿ ಪರಿವರ್ತನೆಗೊಂಡಿದೆ. ಬೆಳಗಾವಿ, ಬಿಜಾಪುರ, ಬಾಗಲಕೋಟೆಗಳಲ್ಲಿರುವ ಒಟ್ಟು 290 ಶಿಕ್ಷಣ ಸಂಸ್ಥೆಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವುವು. ಮೈಸೂರು ವಿಶ್ವವಿದ್ಯಾನಿಲಯದಿಂದ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕ ಬಿ.ಆರ್, ಅನಂತನ್ ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿದ್ದಾರೆ.

### ವಿಶೇಷ ವಿಶ್ವವಿದ್ಯಾನಿಲಯಗಳು

ತಂತ್ರಜ್ಞಾನ, ವೈದ್ಯಕೀಯ, ಕೃಷಿ, ಲಲಿತಕಲೆಗಳು, ಸಂಸ್ಕೃತ, ಮಹಿಳಾಶಕ್ತಿ ಇವುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ವಿಶ್ವವಿದ್ಯಾನಿಲಯಗಳು ಕರ್ನಾಟಕದಲ್ಲಿ ಸ್ಥಾಪಿತಗೊಂಡಿವೆ. ಈ ವಿಶ್ವವಿದ್ಯಾನಿಲಯಗಳ ಮುಖ್ಯ ಉದ್ದೇಶ ಆಯಾ ಕ್ಷೇತ್ರಗಳಲ್ಲಿ ಹೆಚ್ಚು ಒತ್ತನ್ನು ನೀಡುವುದು. ಆಯಾ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ, ಸಂಶೋಧನೆ ಹಾಗೂ ಜ್ಞಾನಾಭಿವೃದ್ಧಿ ಇವುಗಳು ವಿಶೇಷ ವಿಶ್ವವಿದ್ಯಾನಿಲಯಗಳಿಂದ ಸಾಧ್ಯವಾಗುತ್ತಿದೆ. ಕರ್ನಾಟಕದ ಅಂಥ ವಿಶೇಷ ವಿಶ್ವವಿದ್ಯಾನಿಲಯಗಳು ಇಂತಿವೆ.

### ೧. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು (ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್)

ಮೈಸೂರಿನ ರಾಜಪ್ರತಿನಿಧಿಯಾಗಿದ್ದ ಮಹಾರಾಣಿ ಕೆಂಪ ನಂಜಮ್ಮಣ್ಣಿಯವರು 1899ರಲ್ಲಿ ಬೆಂಗಳೂರಿನ ಹೆಬ್ಬಾಳದಲ್ಲಿ 30 ಎಕರೆ ಜಮೀನನ್ನು ಕೃಷಿ ಪ್ರಯೋಗ ಕೇಂದ್ರಕ್ಕೆ ದಾನವಾಗಿ ನೀಡಿ ಜರ್ಮನಿಯ ಡಾ॥ ಲೆಹಮನ್‌ರವರನ್ನು ಕೆಲವು ಕೃಷಿ ಸಂಬಂಧಿತ ಪ್ರಯೋಗಗಳನ್ನು ಮಾಡಲು ನೇಮಿಸಿದರು. ನಂತರ ಬಂದ ಕೆನೆಡಾದ ಡಾ॥ ಲೆಸ್ಲಿ ಕೋಲ್‌ಮನ್ ಅತ್ಯುತ್ಸಾಹದಿಂದ 25 ವರ್ಷಗಳ ಕಾಲ ಕೆಲಸ ಮಾಡಿದರು. ಈ ಪ್ರಯೋಗಾಲಯಕ್ಕೆ 303 ಎಕರೆ ಮತ್ತಷ್ಟು ಜಮೀನನ್ನು ನೀಡಲಾಯಿತು. ಸರ್ ಎಂ. ವಿಶ್ವೇಶ್ವರಯ್ಯನವರು 1913ರಲ್ಲಿ ಮೈಸೂರು ಕೃಷಿ ವಿದ್ಯಾಲಯವೆಂಬ ವಸತಿ ಶಾಲೆಯೊಂದನ್ನು ಹೆಬ್ಬಾಳಿನಲ್ಲಿ ಸ್ಥಾಪಿಸಿ ಅದಕ್ಕೆ ಕೋಲ್‌ಮನ್ನರನ್ನು ನಿರ್ದೇಶಕರನ್ನಾಗಿ ಮಾಡಿದರು. 1946ರಲ್ಲಿ ಕೃಷಿಮಂತ್ರಿಯಾಗಿದ್ದ ಎಂ.ಎ. ಶ್ರೀನಿವಾಸನ್‌ರವರು ಕೃಷಿಯಲ್ಲಿ ಆರಂಭಿಸಿದರು. ಆಗ ಈ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದಡಿಯಲ್ಲಿತ್ತು. ಕಾಲಾನಂತರ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು 1956ರಲ್ಲಿ ಕೃಷಿಕಾಲೇಜಿಗಾಗಿ ಹೊಸ ಕಟ್ಟಡವನ್ನು ನಿರ್ಮಿಸಬೇಕೆಂದು ನಿಶ್ಚಯಿಸಿ 1956 ಜನವರಿ 25ರಂದು ಅಸ್ತಿಭಾರವನ್ನು ಹಾಕಿದರು. 1961ರಲ್ಲಿ ಭಾರತಸರ್ಕಾರ ರಾಕ್‌ಫೆಲ್ಲರ್ ಫೌಂಡೇಷನ್ನಿನ ಡಾ॥ ರಾಲ್ಫ್‌ಕಮ್ಮಿಂಗ್ಸ್‌ರವರ ನೇತೃತ್ವದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸಮಿತಿಯೊಂದನ್ನು ರಚಿಸಿತು. ಈ ಸಮಿತಿ ಬೆಂಗಳೂರಿನ ಹೆಬ್ಬಾಳಕ್ಕೆ ಭೇಟಿಕೊಟ್ಟು ಅಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿತು. 1963ರಲ್ಲಿ ಈ ಶಿಫಾರಸಿನ ಮೇರೆಗೆ ಅಮೆರಿಕದ ಲ್ಯಾಂಡ್‌ಗ್ರಾಂಟ್ ಕಾಲೇಜಿನ ಮಾದರಿಯಲ್ಲಿ ಕೃಷಿವಿಶ್ವವಿದ್ಯಾನಿಲಯ ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್‌ಬಿಲ್ (ಆಕ್ಟ್ ನಂ 77) ಪ್ರಕಾರ ವ್ಯವಸ್ಥೆಗೊಂಡಿತು. ಡಾ॥ ಕೆ.ಸಿ. ನಾಯಕ್‌ರವರು ಈ ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿಗಳಾಗಿ ನೇಮಕಗೊಂಡರು. ಆಗಸ್ಟ್ 21, 1964ರಂದು ಭಾರತದ ಉಪರಾಷ್ಟ್ರಪತಿಗಳಾಗಿದ್ದ ಡಾ॥ ಜಾಕಿರ್‌ಹುಸೇನರು ವಿಶ್ವವಿದ್ಯಾನಿಲಯದ ಉದ್ಘಾಟನೆ ಮಾಡಿದರು. ನಂತರ ಕರ್ನಾಟಕ ಸರ್ಕಾರ ನೀಡಿದ 1300 ಎಕರೆ ಜಮೀನಿನಲ್ಲಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ವಿಶ್ವವಿದ್ಯಾನಿಲಯ ಸ್ಥಳಾಂತರಗೊಂಡಿತು. 1969ರಲ್ಲಿ ಈ ಹೊಸಕಟ್ಟಡವನ್ನು ಶ್ರೀಮತಿ ಇಂದಿರಾಗಾಂಧಿಯವರು ಉದ್ಘಾಟಿಸಿದರು. ಬೆಂಗಳೂರು, ಶಿವಮೊಗ್ಗ, ಮಂಡ್ಯ, ಹಾಸನ ಈ ಜಿಲ್ಲೆಗಳಲ್ಲಿರುವ ಕೃಷಿ ಕಾಲೇಜುಗಳು, ಪೊನ್ನಂಪೇಟೆಯ ಅರಣ್ಯ ವಿಜ್ಞಾನ ಕಾಲೇಜು (ಕಾಲೇಜ್ ಆಫ್ ಫಾರೆಸ್ಟ್ರಿ), ಚಿಂತಾಮಣಿಯ ರೇಷ್ಮೆ ವ್ಯವಸಾಯ ಕಾಲೇಜು (ಕಾಲೇಜ್ ಆಫ್ ಸೀರಿಕಲ್ಚರ್) ಈ ಎಲ್ಲಾ ಸಂಸ್ಥೆಗಳು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುತ್ತವೆ. ಇದಲ್ಲದೆ ಮೂಡಿಗೆರೆಯ ತೋಟಗಾರಿಕೆ ಕಾಲೇಜು ಈ ವಿಶ್ವವಿದ್ಯಾನಿಲಯಕ್ಕೆ ಸೇರಿದೆ. ಕೃಷಿವಿಜ್ಞಾನ, ತೋಟಗಾರಿಕೆ, ಅರಣ್ಯ ವಿಜ್ಞಾನಗಳಲ್ಲಿ ಪದವಿಯನ್ನು ಹಾಗೂ ಕೃಷಿವಿಜ್ಞಾನದ ಕ್ಷೇತ್ರಗಳಾದ ಕೃಷಿಕೀಟವಿಜ್ಞಾನ, ಕೃಷಿವಿಸ್ತರಣ, ಸಸ್ಯರೋಗ ವಿಜ್ಞಾನ, ಕೃಷಿ ಅರ್ಥಶಾಸ್ತ್ರ ಮುಂತಾದ ಇನ್ನೂ ಹಲವಾರು ಶಾಖೆಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಈ ವಿಶ್ವವಿದ್ಯಾನಿಲಯವು ನೀಡುತ್ತಿದೆ.

Digitised by Bharatavani, CIIL

ಇದಲ್ಲದೆ ಬೇಕರಿ ತಂತ್ರಜ್ಞಾನದಲ್ಲಿ ಕೆಲವು ಕೋರ್ಸುಗಳನ್ನು ಹಾಗೂ ಕೆಲವು ತರಬೇತಿ ಕಾರ್ಯಕ್ರಮಗಳನ್ನು ಇದು ನಡೆಸುತ್ತದೆ.

ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಈ ಮೂರು ಚಟುವಟಿಕೆಗಳು ವಿಶ್ವವಿದ್ಯಾನಿಲಯದ ಗುರಿಯಾಗಿವೆ. ಬದಲಾಗುತ್ತಿರುವ ಸಮಾಜದ ಅಗತ್ಯಗಳಿಗೆ ರೈತಬಾಂಧವರ ಆಕಾಂಕ್ಷೆಗಳಿಗೆ ಕೃಷಿ ಶಿಕ್ಷಣ ಸ್ಪಂದಿಸುವಂತೆ ಮಾಡುವುದು, ಸಂಶೋಧನೆ ವಿಸ್ತರಣೆ ಮತ್ತು ಕೈಗಾರಿಕೆ ಈ ಕ್ಷೇತ್ರಗಳಲ್ಲಿ ಉದಯವಾಗುವ ಸಮಸ್ಯೆಗಳನ್ನು ಎದುರಿಸಲು ಸಮರ್ಥವಾದ ಶ್ರೇಷ್ಠ ಕೌಶಲ್ಯವುಳ್ಳ ಮಾನವ ಸಂಪನ್ಮೂಲವನ್ನು ತರಬೇತಿಗೊಳಿಸುವ ಕೃಷಿ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸುವುದು ಇವು ವಿಶ್ವವಿದ್ಯಾನಿಲಯದ ಧ್ಯೇಯವಾಗಿದೆ. ಸೂಕ್ತ ತಂತ್ರಜ್ಞಾನದ ವಿಕಾಸ ಮತ್ತು ಇದನ್ನು ಜಾರಿಗೆ ತರುವ ವ್ಯವಸ್ಥೆ ಇವು ಸಂಶೋಧನಾ ಕ್ಷೇತ್ರದಲ್ಲಿನ ಧ್ಯೇಯವಾಗಿವೆ.

ಸಂಶೋಧನೆಯಿಂದ ಪಡೆದ ಫಲಿತಾಂಶ ಮತ್ತು ತಂತ್ರಜ್ಞಾನ ರೈತರಿಗೆ ತಲುಪುವಂತೆ ಮಾಡುವುದು ವಿಸ್ತರಣಾ ಚಟುವಟಿಕೆಯಿಂದ ಸಾಧಿಸಬೇಕಾದ ಗುರಿಯಾಗಿದೆ. ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಉಪಯುಕ್ತವಾದ ಪ್ರಕಟಣೆಗಳನ್ನು ಹೊರತಂದಿದೆಯಲ್ಲದೆ ನಿಯತಕಾಲಿಕೆಗಳನ್ನು ಸಹ ಪ್ರಕಟಗೊಳಿಸುತ್ತಿದೆ

**೨. ಕೃಷಿ ವಿಶ್ವವಿದ್ಯಾಲಯ, ಧಾರವಾಡ (ಅಗ್ರಿಕಲ್ಚರಲ್ ಯುನಿವರ್ಸಿಟಿ, ಧಾರವಾಡ)**

ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವು ಅಕ್ಟೋಬರ್ 1, 1986ರಲ್ಲಿ ಪ್ರಾರಂಭಗೊಂಡಿತು. ಬೆಳಗಾವಿ, ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ಗುಲ್ಬರ್ಗ, ಬಾಗಲಕೋಟೆ, ರಾಯಚೂರು ಮತ್ತು ಉತ್ತರ ಕನ್ನಡ ಈ ಜಿಲ್ಲೆಗಳು ಈ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುತ್ತವೆ.

ಕೃಷಿ, ತೋಟಗಾರಿಕೆ, ಪಶುವೈದ್ಯ, ಮೀನುಗಾರಿಕೆ ಕೃಷಿತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಶಿಕ್ಷಣವನ್ನು ಒದಗಿಸುವುದು ಈ ವಿಶ್ವವಿದ್ಯಾನಿಲಯದ ಧ್ಯೇಯವಾಗಿದೆ. ಈ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ವಿಸ್ತರಣೆ ಇವುಗಳೂ ಸಹ ವಿಶ್ವವಿದ್ಯಾನಿಲಯದ ಗುರಿಯಾಗಿವೆ.

ಈ ವಿಶ್ವವಿದ್ಯಾನಿಲಯದಡಿಯಲ್ಲಿ 4 ಕೃಷಿ ಕಾಲೇಜುಗಳು, 25 ಸಂಶೋಧನ ಕೇಂದ್ರಗಳು, 6 ವಿಸ್ತರಣಾ ಘಟಕ, 5 ಕೃಷಿ ವಿಜ್ಞಾನ ಕೇಂದ್ರ ಇವುಗಳು ಕಾರ್ಯೋನ್ಮುಖವಾಗಿವೆ. ಇದರ ಪ್ರಥಮ ಉಪಕುಲಪತಿಗಳು ಡಾ॥ ಜೆ.ವಿ. ಗೌಡ ಎಂಬುವರು. ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆ ಈ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸವನ್ನು ಈ ವಿಶ್ವವಿದ್ಯಾನಿಲಯ ಸಾಧಿಸಿದೆ.

**೩. ಕರ್ನಾಟಕ ಪಶುವೈದ್ಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾನಿಲಯ, ಬೀದರ್ (ಕರ್ನಾಟಕ ವೆಟರ್ನರಿ, ಅನಿಮಲ್ ಆ್ಯಂಡ್ ಫಿಷರಿಸ್ ಸೈನ್ಸಸ್ ಯುನಿವರ್ಸಿಟಿ, ಬೀದರ್)**

ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿ ಪಶುಸಂಗೋಪನೆ, ಡೈರಿ ಮತ್ತು ಮೀನುಗಾರಿಕೆಗಳಲ್ಲಿ ಎರಡು ದಶಕಗಳಲ್ಲಿ ಆಗಬೇಕಿದ್ದ ಅಭಿವೃದ್ಧಿಯಲ್ಲಿ ಕೊರತೆಯನ್ನು ಕಂಡು ಕರ್ನಾಟಕ ಸರ್ಕಾರ ಪ್ರತ್ಯೇಕವಾಗಿ ಈ ವಿಶ್ವವಿದ್ಯಾನಿಲಯವನ್ನು ಶಾಸಕಾಂಗ ಸಭೆಯಲ್ಲಿ ಕಾಯ್ದೆ ಜಾರಿಮಾಡಿ ಅಸ್ತಿತ್ವಕ್ಕೆ ತಂದಿತು. 23 ಫೆಬ್ರವರಿ 2004 ರಂದು ಈ ವಿಶ್ವವಿದ್ಯಾನಿಲಯ ಪ್ರಾರಂಭವಾಯಿತು. ಪಶುವೈದ್ಯ, ಪಶು ಹಾಗೂ ಡೈರಿ ವಿಜ್ಞಾನಗಳ ಗ್ರಾಮೀಣ ವೈಶಿಷ್ಟ್ಯವುಳ್ಳ ತಂತ್ರಜ್ಞಾನಗಳ ಶಿಕ್ಷಣ ಮತ್ತು ಕಲಿಕೆಯ ಅಭಿವೃದ್ಧಿ, ಸಂಶೋಧನೆ ಹಾಗೂ ವಿಸ್ತರಣಾ ಶಿಕ್ಷಣ ಹಾಗೂ ಸಂವಹನ ಈ ಗುಂಪುಗಳನ್ನು ಸಾಧಿಸಲು ಪ್ರತ್ಯೇಕವಾಗಿ ಈ ವಿಶ್ವವಿದ್ಯಾನಿಲಯ ಆರಂಭಗೊಂಡಿತು. "ಗ್ರಾಮೀಣಾಭಿವೃದ್ಧಿ ರೈತ ಬಂಧು" ಎಂಬುದು ವಿಶ್ವವಿದ್ಯಾನಿಲಯದ ಧ್ಯೇಯಮಂತ್ರ. ಪ್ರೊ॥ ಆರ್.ಎನ್. ಶ್ರೀನಿವಾಸಗೌಡ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳು.

ಬೀದರಿನ ನಂದಿನಗರ ಆವರಣದಲ್ಲಿರುವ ಈ ವಿಶ್ವವಿದ್ಯಾನಿಲಯ ಗ್ರಾಮೀಣ ಪಶುಸಂಪತ್ತು, ಕೋಳಿಸಾಕಣೆ ಮತ್ತು ಮೀನುಗಾರಿಕಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುವ ಮುಖ್ಯ ಗುರಿಯನ್ನು ಹೊಂದಿದೆ. ಕರ್ನಾಟಕದ 28 ಜಿಲ್ಲೆಗಳ ಮೇಲೆ ಈ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯಿದೆ. ಬೆಂಗಳೂರಿನ ಪಶುವೈದ್ಯ ಕಾಲೇಜು ಹಾಗೂ ಡೈರಿ ವಿಜ್ಞಾನ ಕಾಲೇಜು, ಬೀದರ್ ಶಿವಮೊಗ್ಗ ಮತ್ತು ಹಾಸನಗಳಲ್ಲಿರುವ ಪಶುವೈದ್ಯ ಕಾಲೇಜುಗಳು, ಗುಲ್ಬರ್ಗದ ಡೈರಿ ವಿಜ್ಞಾನ ಕಾಲೇಜು ಮತ್ತು ಮೀನುಗಾರಿಕಾ ಕಾಲೇಜು, ಮಂಗಳೂರು ಈ ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಗಳಾಗಿವೆ.

**೪. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ಬಿಜಾಪುರ (ಕರ್ನಾಟಕ ಸ್ಟೇಟ್ ವಿಮೆನ್ಸ್ ಯುನಿವರ್ಸಿಟಿ, ಬಿಜಾಪುರ)**

ಕರ್ನಾಟಕದಲ್ಲಿ ಮಹಿಳಾ ಶಿಕ್ಷಣಕ್ಕಾಗಿ ವಿಶೇಷ ಗಮನವನ್ನೀಯಲು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯವನ್ನು ಆಗಸ್ಟ್ 2003ರಲ್ಲಿ ಬಿಜಾಪುರದಲ್ಲಿ ಸ್ಥಾಪಿಸಲಾಯಿತು. ಇದು ಕರ್ನಾಟಕ ಪ್ರಪ್ರಥಮ ಮಹಿಳಾ ವಿಶ್ವವಿದ್ಯಾನಿಲಯ ಮಹಿಳಾಶಕ್ತಿಯನ್ನು ಶಿಕ್ಷಣದ ಮುಖಾಂತರ ವೃದ್ಧಿಗೊಳಿಸುವುದು ಈ ವಿಶ್ವವಿದ್ಯಾನಿಲಯದ ಮುಖ್ಯಗುರಿ. ಶೈಕ್ಷಣಿಕ ಸಾಧನೆ, ಸಂಶೋಧನೆ, ಸೃಜನಾತ್ಮಕತೆ, ವ್ಯಕ್ತಿತ್ವವಿಕಸನ ಮುಂತಾದುವುಗಳ ಮುಖಾಂತರ ತನ್ನ ಧ್ಯೇಯವನ್ನು ಸಾಧಿಸಲು ಈ ವಿಶ್ವವಿದ್ಯಾನಿಲಯ ಕಾರ್ಯೋನ್ಮುಖವಾಗಿದೆ. ಬಿಜಾಪುರದಲ್ಲಿ ಸ್ಥಾಪಿತವಾಗಿರುವ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಉತ್ತರ ಕರ್ನಾಟಕದ 12 ಜಿಲ್ಲೆಗಳಲ್ಲಿರುವ ಮಹಿಳಾ ಕಾಲೇಜುಗಳು ಕೆಲಸ ಮಾಡುತ್ತಿವೆ. ಈ 12 ಜಿಲ್ಲೆಗಳು ಬಹಳಷ್ಟು ಹಿಂದುಳಿದ ಜಿಲ್ಲೆಗಳಾಗಿವೆ. ಕರ್ನಾಟಕದ ಪ್ರಾದೇಶಿಕ ತಾರತಮ್ಯವನ್ನು ನಿವಾರಿಸಲೆಂದು ಈ ವಿಶ್ವವಿದ್ಯಾನಿಲಯವನ್ನು ಬಿಜಾಪುರ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ.

ವಿಶ್ವವಿದ್ಯಾನಿಲಯದ ಕೆಲವು ಮುಖ್ಯ ಧ್ಯೇಯೋದ್ದೇಶಗಳು ಇಂತಿವೆ: ಸ್ವಾವಲಂಬನೆ ಹಾಗೂ ಬದಲಾಗುತ್ತಿರುವ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳನ್ನು ಎದುರಿಸುವ ಸಾಮರ್ಥ್ಯ ಇವುಗಳನ್ನು ಮಹಿಳೆಯರಲ್ಲಿ ಜಾಗೃತಗೊಳಿಸಲು ಬೇಕಾದ ಗುಣಮಟ್ಟದ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣವನ್ನು ನೀಡುವುದು ಮಹಿಳೆಯರ ವ್ಯಕ್ತಿತ್ವ ವಿಕಸನ ಹಾಗೂ ಮುಂದಾಳತ್ವದ ಗುಣಗಳ ವಿಕಸನ, ಜ್ಞಾನ ಶಕ್ತಿಯ ಲಾಭಗಳನ್ನು ಮಹಿಳೆಯುರು ಪಡೆಯುವಂತೆ ಮಾಡುವುದು, ಸಾಂಸ್ಕೃತಿಕ ಪರಂಪರೆಯನ್ನೊಡಗೂಡಿದ ಸಮಗ್ರ ಶಿಕ್ಷಣ ವ್ಯಕ್ತಿತ್ವದ ಪೂರ್ಣತೆಗೆ ಅವಶ್ಯವಾದ ಮೌಲ್ಯಗಳು, ವೃತ್ತಿಪರ ಕುಶಲತೆ ಮುಂತಾದುವುಗಳನ್ನು ಮಹಿಳೆಯರಿಗೆ ನೀಡುವುದು, ಹಿಂದುಳಿದ ಪ್ರದೇಶಗಳ ಮಹಿಳೆಯರು ಮುಖ್ಯ ಪ್ರವಾಹಕ್ಕೆ ಸೇರುವಂತೆ ಮಾಡುವುದು, ಸಮಾಜದ ಎಲ್ಲಾ ಸ್ತರಗಳಲ್ಲೂ ಪರಿಣಾಮಕಾರಿ ಹಾಗೂ ರಚನಾತ್ಮಕ ಪಾತ್ರವನ್ನು ವಹಿಸುವಂತೆ ಮಹಿಳೆಯರನ್ನು ಪ್ರಚೋದಿಸಿ ಅದಕ್ಕೆ ತಕ್ಕ ಸಾಮರ್ಥ್ಯವನ್ನು ನೀಡುವುದು.

ವಿಶ್ವವಿದ್ಯಾನಿಲಯವು ಮಾನವಿಕ, ಸಾಮಾಜಿಕ ವಿಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಶಿಕ್ಷಣ, ವಾಣಿಜ್ಯ ಹಾಗೂ ಮ್ಯಾನೇಜ್‌ಮೆಂಟ್

Digitised by Bharatavani, CIIL

ವಿಭಾಗಗಳನ್ನು ಹೊಂದಿದ್ದು ಈ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ನೀಡಲು ಸಜ್ಜುಗೊಂಡಿದೆ. ಇದರ ಪ್ರಥಮ ಕುಲಪತಿಗಳಾಗಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಸಯ್ಯದಾ ಅಖ್ತರ್ ಎಂಬುವರು ನೇಮಕಗೊಂಡರು.

**೫. ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶನ ಕಲಾ ವಿಶ್ವವಿದ್ಯಾನಿಲಯ, ಮೈಸೂರು (ಗಂಗೂಬಾಯಿ ಹಾನಗಲ್ ಮ್ಯೂಸಿಕ್ ಆ್ಯಂಡ್ ಪರ್‌ಫಾರ್ಮಿಂಗ್ ಆರ್ಟ್ಸ್ ಯುನಿವರ್ಸಿಟಿ, ಮೈಸೂರು)**

ಸಂಗೀತ ಮತ್ತು ಪ್ರದರ್ಶನ ಕಲೆಗಳಿಗೆ ವಿಶೇಷ ಪ್ರೋತ್ಸಾಹವನ್ನು ನೀಡಲು ಈ ವಿಶ್ವವಿದ್ಯಾನಿಲಯವನ್ನು ಮೈಸೂರಿನಲ್ಲಿ ಆರಂಭಿಸಲಾಗಿದೆ. ಸದ್ಯಕ್ಕೆ ತರಗತಿಗಳನ್ನು ನಡೆಸಲು ಪೂರ್ಣ ಪ್ರಮಾಣದಲ್ಲಿ ವಿಶ್ವವಿದ್ಯಾನಿಲಯವು ಸಿದ್ಧವಾಗಿಲ್ಲವಾದರೂ ಸರ್ಕಾರ ಹನುಮಣ್ಣ ನಾಯಕ ದೊರೆ ಎಂಬುವರನ್ನು ಉಪಕುಲಪತಿಗಳಾಗಿ ನೇಮಕ ಮಾಡಿದೆ. ಇವರು ವಿಶ್ವವಿದ್ಯಾನಿಲಯ ಸಂಪೂರ್ಣವಾಗಿ ಕಾರ್ಯ ಪ್ರವೃತ್ತವಾಗಲು ಅಗತ್ಯವಿರುವ ಸೌಲಭ್ಯಗಳ ಏರ್ಪಾಟು ಮಾಡುವ ಕಾರ್ಯವನ್ನು ವಹಿಸಿಕೊಂಡಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಚೌಕಟ್ಟನ್ನು ರೂಪಿಸಲು ಶಾಸನಬದ್ಧ ಸಮಿತಿ ಹಾಗೂ ಅಧ್ಯಯನ ಮಂಡಳಿ (Board of Studies) ಗಳನ್ನು ರಚಿಸಲಾಗಿದೆ.

ಭಟ್ಕಂಡೆ ಸಂಗೀತ ವಿಶ್ವವಿದ್ಯಾನಿಲಯ, ಲಕ್ನೋ, ಇಂದಿರಾ ಕಲಾ ಸಂಗೀತ ವಿಶ್ವವಿದ್ಯಾನಿಲಯ, ಛತ್ತೀಸ್‌ಗಡ್ – ಇವೆರಡು ಸಂಗೀತ ವಿಶ್ವವಿದ್ಯಾಲಯಗಳ ನಂತರ ಸ್ಥಾಪಿತವಾಗುತ್ತಿರುವ ವಿಶ್ವವಿದ್ಯಾನಿಲಯ ಇದಾಗಿದೆ.

**೬. ಸಂಸ್ಕೃತ ವಿಶ್ವವಿದ್ಯಾನಿಲಯ**

ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವ ಸಲುವಾಗಿ ಕರ್ನಾಟಕ ಸರ್ಕಾರ ಸಂಸ್ಕೃತ ವಿಶ್ವವಿದ್ಯಾನಿಲಯ ಮಸೂದೆಯನ್ನು ಜಾರಿಗೆ ತಂದಿದೆ. ಭಾರತದ ಇತರ ಹಲವು ರಾಜ್ಯಗಳಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯಗಳು ಕಾರ್ಯೋನ್ಮುಖವಾಗಿವೆಯಾದರೂ ಕರ್ನಾಟಕ ರಾಜ್ಯದಲ್ಲಿ ಇದು ಪ್ರಥಮ ಸಂಸ್ಕೃತ ವಿಶ್ವವಿದ್ಯಾನಿಲಯವಾಗುತ್ತದೆ. ಹಿಂದೂ ಧರ್ಮ ಮತ್ತು ಸಂಸ್ಕೃತ ಇವೆರಡರ ನಡುವೆ ನಿಕಟವಾದ ಸಂಬಂಧವಿದೆ. ವೈದಿಕ ವಿಚಾರಗಳು ಸಂಸ್ಕೃತ ಭಾಷೆಯಲ್ಲಿ ವ್ಯಕ್ತಗೊಂಡಿವೆ. ಇದಲ್ಲದೆ ಭಾರತದ ಎಲ್ಲ ಭಾಷೆಗಳಿಗೂ ಸಂಸ್ಕೃತ ತಾಯಿಯಂತೆ ಎಂದರೆ ತಪ್ಪಾಗಲಾರದು. ಇಂಥ ಸಂಸ್ಕೃತ ಭಾಷೆಗೆ ಪ್ರೋತ್ಸಾಹ ನೀಡಲು ಸರ್ಕಾರ ಈ ವಿಶ್ವವಿದ್ಯಾನಿಲಯದ ಸ್ಥಾಪನೆಯ ನಿರ್ಧಾರವನ್ನು ಕೈಗೊಂಡಿದೆ.

ಸಂಸ್ಕೃತ ಭಾಷೆಯು ಕಂಪ್ಯೂಟರ್ ಸಾಫ್ಟ್‌ವೇರ್ ಸಿದ್ಧಪಡಿಸಲು ಬಹಳ ಸೂಕ್ತವಾದ ರಚನೆಯನ್ನು ಹೊಂದಿದೆಯೆಂದು ಅಮೆರಿಕಾದ ನ್ಯಾಸಾ ಸಂಸ್ಥೆಯ ವಿಜ್ಞಾನಿಗಳು ಈ ನಿಟ್ಟಿನಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಸಂಸ್ಕೃತ ಕೇವಲ ಒಂದು ಧರ್ಮಕ್ಕೆ ಅಥವಾ ಪಂಗಡಕ್ಕೆ ಸೇರಿದ ಭಾಷೆಯಾಗದೆ ವಿಶ್ವಭಾಷೆಯಾಗಿದೆ. ವಿಶ್ವದ ಹಲವೆಡೆಗಳಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳು ನಡೆದಿವೆ. ಈ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಲ್ಲೇಪುರಂ ಜಿ. ವೆಂಕಟೇಶ್ ಎಂಬುವರನ್ನು ಉಪಕುಲಪತಿಗಳಾಗಿ ನೇಮಕ ಮಾಡಲಾಗಿದೆ.

ಮಹಾತ್ಮಗಾಂಧಿಯವರು ಒಂದೆಡೆ ಹೀಗೆ ಹೇಳಿದ್ದಾರೆ. "ಸಂಸ್ಕೃತ ಅಧ್ಯಯನ ಮಾಡದೆ ನಿಜವಾದ ಭಾರತೀಯನಾಗಲು ನಿಜವಾದ ಅರಿವುಳ್ಳ ಮಾನವನಾಗಲು ಸಾಧ್ಯವಿಲ್ಲ." ಒಮ್ಮೆ ಡಾ॥ ಅಂಬೇಡ್ಕರ್‌ರವರು ಸಂಸ್ಕೃತ ಭಾಷೆಯನ್ನು ಭಾರತದ ಅಧಿಕೃತ ಭಾಷೆಯನ್ನಾಗಿ ಮಾಡುವ ಸಲಹೆಗೆ ಪ್ರೋತ್ಸಾಹಿಸಿದಾಗ ಕೆಲವರು ಅವರ ಈ ನಿಲುವನ್ನು ಪ್ರಶ್ನಿಸಿದರು. ಅದಕ್ಕೆ ಅವರು "ಸಂಸ್ಕೃತ ಅಧಿಕೃತ ಭಾಷೆಯಾದರೆ ಏನು ತಪ್ಪು?" ಎಂದು ಉತ್ತರಿಸಿದರು.

**೭. ಕನ್ನಡ ವಿಶ್ವವಿದ್ಯಾನಿಲಯ, ಹಂಪಿ**

ಕನ್ನಡ ವಿಶ್ವವಿದ್ಯಾನಿಲಯ 1991, ಕಾಯ್ದೆ ಅನ್ವಯ 1991ರಲ್ಲಿ ಕನ್ನಡ ವಿಶ್ವವಿದ್ಯಾನಿಲಯ ಹಂಪಿಯಲ್ಲಿ ಪ್ರಾರಂಭವಾಯಿತು. 1980ರ ದಶಕದಲ್ಲಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಬೇಡಿಕೆಯಿತ್ತು. ಅದು 1991ರಲ್ಲಿ ಸಾಕಾರಗೊಂಡಿತು.

ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿದ್ದವರು ಈಗ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಚಂದ್ರಶೇಖರ ಕಂಬಾರರು. ಈ ವಿಶ್ವವಿದ್ಯಾನಿಲಯವು "ಮಾತೆಂಬುದು ಜ್ಯೋತಿರ್ಲಿಂಗ"ವೆಂಬ ಧ್ಯೇಯವಾಕ್ಯವನ್ನು ಹೊಂದಿದೆ. ವಿಶ್ವವಿದ್ಯಾನಿಲಯ ಮೂರು ಅಂಗಗಳನ್ನು ಹೊಂದಿದೆ. ಆಡಳಿತಾಂಗ, ಅಧ್ಯಯನಾಂಗ ಹಾಗೂ ಪ್ರಸಾರಾಂಗ. ಆಡಳಿತಾಂಗ ವಿಶ್ವವಿದ್ಯಾನಿಲಯದ ಸಕಲ ಆಡಳಿತಾತ್ಮಕ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಅಧ್ಯಯನಾಂಗವು ಸಂಶೋಧನೆ ಮತ್ತು ಸಂಶೋಧನೆ ಹಾಗೂ ಬೋಧನಾ ಚಟುವಟಿಕೆಗಳ ನಡುವೆ ಸಮನ್ವಯ ಈ ಗುರಿಗಳನ್ನು ಹೊಂದಿದೆ. ಪ್ರಸಾರಾಂಗವು ಈ ವಿಶ್ವವಿದ್ಯಾನಿಲಯದ ಸಂಶೋಧನೆಗಳನ್ನು ತನ್ನ ಪ್ರಕಟಣೆಗಳ ಮೂಲಕ ಕನ್ನಡಿಗರಿಗೆ ತಲುಪುವಂತೆ ಮಾಡುವ ಕಾರ್ಯಭಾರವನ್ನು ಹೊತ್ತಿದೆ. ಇದಲ್ಲದೆ ಪ್ರಚಾರೋಪನ್ಯಾಸ ಮಾಲೆ ಎಂಬ ಉಪನ್ಯಾಸ ಮಾಲಿಕೆಯ ಅಡಿಯಲ್ಲಿ ಹಲವು ಉಪನ್ಯಾಸಗಳನ್ನು ಏರ್ಪಡಿಸುವ ಜವಾಬ್ದಾರಿಯನ್ನು ಸಹ ಪ್ರಸಾರಾಂಗ ವಹಿಸಿಕೊಂಡಿದೆ. ನಿಯತಕಾಲಿಕೆಗಳು, ಪಠ್ಯಪುಸ್ತಕಗಳು, ನವಸಾಕ್ಷರರಿಗಾಗಿ ಪುಸ್ತಕಗಳು ಇತ್ಯಾದಿಗಳನ್ನು ಪ್ರಕಟಿಸಿ ಎಲ್ಲರಿಗೂ ತಲುಪುವಂತೆ ಪ್ರಸಾರಾಂಗ ನೋಡಿಕೊಳ್ಳುತ್ತಿದೆ.

ಕನ್ನಡ ಸಾಹಿತ್ಯ ಮತ್ತು ಜಾನಪದ ಶಾಖೆಯಲ್ಲಿ ಸ್ನಾತಕೋತ್ತರ ಪದವಿ, ಲಲಿತಕಲೆ, ಸಂಗೀತಗಳಲ್ಲಿ ಪದವಿಗಳನ್ನು ಈ ವಿಶ್ವವಿದ್ಯಾನಿಲಯವು ನೀಡುತ್ತಿದೆ. ದೂರಶಿಕ್ಷಣ ವ್ಯವಸ್ಥೆಯಡಿಯಲ್ಲಿ ಭಾಷಾಂತರ ಅಧ್ಯಯನ, ಕ್ರಿಯಾತ್ಮಕ ಕನ್ನಡ, ದಲಿತ ಅಧ್ಯಯನ, ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಮಹಿಳಾ ಅಧ್ಯಯನ, ಕರ್ನಾಟಕ ಅಧ್ಯಯನ, ದ್ರಾವಿಡ ಅಧ್ಯಯನ ಈ ಶಾಖೆಗಳಲ್ಲಿ ಸ್ನಾತಕೋತ್ತರ ಡಿಪ್ಲೋಮಾವನ್ನು ನೀಡಲಾಗುತ್ತಿದೆ. ಹಾಗೆಯೇ ಕೆಲವು ಪೋಸ್ಟ್ ಮೆಟ್ರಿಕ್ಯುಲೇಷನ್ ಮತ್ತು ಸರ್ಟಿಫಿಕೇಟ್ ಕೋರ್ಸುಗಳನ್ನು ಸಹ ವಿಶ್ವವಿದ್ಯಾನಿಲಯವು ನಡೆಸುತ್ತಿದೆ. ಶಿಲ್ಪಕಲೆಯಲ್ಲಿ ಡಿಪ್ಲೋಮಾ ಸಹ ವಿವಿಧ ಕೋರ್ಸುಗಳಲ್ಲಿ ಒಂದಾಗಿದೆ.

**೮. ಭಾರತ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯ, ಬೆಂಗಳೂರು (ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು)**

ಕರ್ನಾಟಕ ಸರ್ಕಾರ, ಬೆಂಗಳೂರು ವಿಶ್ವವಿದ್ಯಾನಿಲಯ, ಬಾರ್‌ಕೌನ್ಸಿಲ್‌ನ ಹಿರಿಯ ಸದಸ್ಯರು ಹಾಗೂ ಕರ್ನಾಟಕ ರಾಜ್ಯ ಬಾರ್‌ಕೌನ್ಸಿಲ್‌ನ ಹಿರಿಯ ಸದಸ್ಯರು ಇವರೆಲ್ಲರ ಸಹಕಾರದಿಂದ 1987, ಆಗಸ್ಟ್ 29ರಂದು ಈ ವಿಶ್ವವಿದ್ಯಾನಿಲಯವು ಸಂವಿಧಾನಿಕ ರೀತಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಬೆಂಗಳೂರಿನಲ್ಲಿರುವ ಈ ವಿಶ್ವವಿದ್ಯಾನಿಲಯವು ಪೂರ್ಣರೂಪದ ಆಡಳಿತಾತ್ಮಕ ಮತ್ತು ಶೈಕ್ಷಣಿಕ (Academic) ಸ್ವಾಯತ್ತತೆಯನ್ನು ಹೊಂದಿದೆ. ದೇಶದ ಸಂಘಟಿತ ವೃತ್ತಿಯಾದ ವಕೀಲಿವೃತ್ತಿಯ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ವ್ಯವಸ್ಥಾಪನೆ ನಡೆಯುತ್ತಿದೆ.


Digitised by Bharatavani, CIIL

ಉಚ್ಚತಮ ನ್ಯಾಯಾಲಯದ ಹಾಗೂ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಹಾಗೂ ಹಿರಿಯ ವಕೀಲರು ವಿಶ್ವವಿದ್ಯಾನಿಲಯದ ಬೋಧನೆಯಲ್ಲಿ ಸಹಕರಿಸುತ್ತಾರೆ. ಸ್ಥಾಪಕ–ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಡಾ॥ ಎನ್. ಆರ್. ಮಾಧವ ಮೆನನ್‌ರವರ ಮೇಲ್ವಿಚಾರಣೆಯಲ್ಲಿ ಆರಂಭಗೊಂಡ ಈ ವಿಶ್ವವಿದ್ಯಾನಿಲಯವು ಸಂಶೋಧನೆ ಮತ್ತು ಬೋಧನೆಗಳನ್ನು ಒಂದು ವಿಶಿಷ್ಟ ಅನುಭವವನ್ನಾಗಿ ಮಾರ್ಪಡಿಸಿದೆ.

ಕಾನೂನು ಶಾಖೆಯಲ್ಲಿ ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ಪದವಿಗಳನ್ನು ವಿಶ್ವವಿದ್ಯಾನಿಲಯವು ನೀಡುತ್ತಿದೆ. ಇದಲ್ಲದೆ ದೂರ ಶಿಕ್ಷಣ ಕಾರ್ಯಕ್ರಮದ ಸೌಲಭ್ಯವೂ ಇದೆ. ಶಿಶು ಮತ್ತು ಕಾನೂನು ಕೇಂದ್ರ ಮಹಿಳೆ ಮತ್ತು ಕಾನೂನು ಕೇಂದ್ರ, ಪರಿಸರ ಶಿಕ್ಷಣ, ಸಂಶೋಧನೆ ಮತ್ತ ಸಮರ್ಥನಾ (Advocacy) ಕೇಂದ್ರ, ಇನ್ನೂ ಮುಂತಾದ ಸಂಶೋಧನಾ ಕೇಂದ್ರಗಳು ಈ ವಿಶ್ವವಿದ್ಯಾನಿಲಯದ ಅಂಗಗಳಾಗಿ ಕಾರ್ಯನಿರ್ವಹಿಸುತ್ತಿವೆ.

**೯. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿ (ವಿಶ್ವೇಶ್ವರಯ್ಯ ಟೆಕ್ನಲಾಜಿಕಲ್ ಯುನಿವರ್ಸಿಟಿ, ಬೆಳಗಾಂ)**

ಭಾರತದ ತಾಂತ್ರಿಕ ವಿಶ್ವವಿದ್ಯಾನಿಲಯಗಳಲ್ಲಿ ಅತಿ ದೊಡ್ಡದಾದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಬೆಳಗಾವಿಯಲ್ಲಿ 1998, ಏಪ್ರಿಲ್ 1 ರಂದು ವಿ.ಟಿ.ಯು ಕಾಯ್ದೆ, 1994ರ ಅನ್ವಯ ಅಸ್ತಿತ್ವಕ್ಕೆ ಬಂದಿತು. ಈ ವಿಶ್ವವಿದ್ಯಾನಿಲಯದ ನೇತೃತ್ವದಲ್ಲಿ ಸುಮಾರು 186 ಕಾಲೇಜುಗಳು ಕೆಲಸ ಮಾಡುತ್ತಿವೆ. ವಿಶ್ವವಿದ್ಯಾನಿಲಯದ ವಿವಿಧ ಪ್ರಾಂತೀಯ ವಿಶ್ವವಿದ್ಯಾನಿಲಯಗಳಡಿಯಲ್ಲಿ ಕಾರ್ಯನಿರತವಾಗಿದ್ದ ತಾಂತ್ರಿಕ ಸಂಸ್ಥೆಗಳನ್ನು ಒಂದು ಆಡಳಿತ ವ್ಯವಸ್ಥೆಯಡಿಯಲ್ಲಿ ತರುವ ಗುರಿಯನ್ನು ಸಮರ್ಥವಾಗಿ ಸಾಧಿಸಿರುವುದಲ್ಲದೆ ವಿವಿಧ ಪಠ್ಯಕ್ರಮಗಳನ್ನು ಏಕಪ್ರವಾಹಗೊಳಿಸಿದೆ.

ಆಡಳಿತಾತ್ಮಕ ಕಾರಣಗಳಿಂದಾಗಿ ವಿಶ್ವವಿದ್ಯಾನಿಲಯದ ನಾಲ್ಕು ಪ್ರಾದೇಶಿಕ ಕೇಂದ್ರಗಳನ್ನು ಬೆಳಗಾವಿ, ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಾಗಳಲ್ಲಿ ಕಾರ್ಯನಿರತವಾಗಿವೆ. ತಂತ್ರಜ್ಞಾನದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಮತ್ತು ಸಂಶೋಧನ ಪದವಿಗಳನ್ನು ಈ ವಿಶ್ವವಿದ್ಯಾನಿಲಯವು ನೀಡುತ್ತಿದೆ. ಇದರ ಪ್ರಥಮ ಉಪಕುಲಪತಿಗಳು ಡಾ॥ ಬಾಲವೀರ ರೆಡ್ಡಿ.

ವಿಶ್ವವಿದ್ಯಾನಿಲಯವು ಇ–ಲರ್ನಿಂಗ್ ಸೆಂಟರನ್ನು (e-learning centre) ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ ಸಂಸ್ಥೆಯಲ್ಲಿ 2003ರಲ್ಲಿ ತೆರೆಯಿತು. ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಉಪಗ್ರಹ ಮತ್ತು ಅಂತರ್ಜಾಲವ್ಯವಸ್ಥೆಯ ಮೂಲಕ ದೂರಶಿಕ್ಷಣ ಮತ್ತು ತರಬೇತಿಯನ್ನು ಪಡೆಯಲು ಅನುಕೂಲ ಮಾಡಿಕೊಡುವುದು ಈ ಇ–ಲರ್ನಿಂಗ್ ಕೇಂದ್ರದ ಉದ್ದೇಶ.

**೧೦. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು (ರಾಜೀವ್‌ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್, ಬೆಂಗಳೂರು)**

ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ಕ್ಷೇತ್ರದ ಉನ್ನತ ಶಿಕ್ಷಣವನ್ನು ನಿಯಂತ್ರಿಸಲು ಹಾಗೂ ಪ್ರೋತ್ಸಾಹಿಸಲು ಕರ್ನಾಟಕ ಸರ್ಕಾರ 1996ರಲ್ಲಿ ಈ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿತು. ಇದರ ಪ್ರಥಮ ಕುಲಪತಿಗಳು ಡಾ॥ ಎಸ್. ಕಾಂತ ಎಂಬುವರು. 'ಸೂಕ್ತ ಆರೋಗ್ಯ ಶಿಕ್ಷಣದ ಹಕ್ಕು' (Right for Rightful Health Science Education) ಎಂಬ ಧ್ಯೇಯವಾಕ್ಯವನ್ನು ಈ ವಿಶ್ವವಿದ್ಯಾನಿಲಯವು ಹೊಂದಿದೆ.

ವಿವಿಧ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿದ್ದ ಕರ್ನಾಟಕದ ಸುಮಾರು 276 ಆರೋಗ್ಯವಿಜ್ಞಾನಕ್ಕೆ ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳನ್ನು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ತರಲಾಯಿತು.

ಜಾನಪದ ವಿಶ್ವವಿದ್ಯಾನಿಲಯ ಜಾನಪದ ಸಾಹಿತ್ಯ, ಕಲೆಗಳಿಗೆ ಪೋತ್ಸಾಹ ನೀಡಲು ಅವುಗಳ ಅಧ್ಯಯನ ಬೋಧನೆ ಮತ್ತು ಸಂಶೋಧನೆಗಾಗಿ ಪ್ರತ್ಯೇಕ ಜಾನಪದ ವಿಶ್ವವಿದ್ಯಾನಿಲಯವನ್ನು ಶಾಸನ ಬದ್ಧವಾಗಿ ಸ್ಥಾಪಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಪ್ರಾಧ್ಯಾಪಕರಾಗಿದ್ದ ಡಾ॥ ಅಂಬಳಿಕೆ ಹಿರಿಯಣ್ಣ ಇದರ ಪ್ರಥಮ ಕುಲಪತಿಗಳು

**೧೧. ಅಜೀಂ ಪ್ರೇಮ್‌ಜಿ ಖಾಸಗಿ ವಿಶ್ವವಿದ್ಯಾನಿಲಯ**

ಇತ್ತೀಚೆಗೆ ಕರ್ನಾಟಕ ಸರ್ಕಾರ ಒಂದು ಕಾಯ್ದೆಯನ್ನು ರೂಪಿಸಿ ಬೆಂಗಳೂರಿನಲ್ಲಿ ಖಾಸಗಿ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಲು ವಿಪ್ರೋ ಕಂಪೆನಿಯ ಮಾಲೀಕ ಅಜೀಂ ಪ್ರೇಮ್‌ಜೀಯವರಿಗೆ ಅನುಮತಿ ನೀಡಿದೆ. ಇತ್ತೀಚೆಗೆ ಈ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿದೆ.

ಅಮೆರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಇರುವಂತೆಯೇ ಭಾರತದಲ್ಲಿಯೂ ಖಾಸಗಿ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅವಕಾಶವಿದ್ದು ಕೆಲವು ಖಾಸಗಿ ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದಿವೆ. ಆದರೆ ಕರ್ನಾಟಕದಲ್ಲಿ ಈ ವಿಚಾರ ಚರ್ಚೆಗೊಳಗಾಗಿ ಕಡೆಗೆ ಕರ್ನಾಟಕ ಸರ್ಕಾರ ಮನ್ನಣೆ ನೀಡಿ ಖಾಸಗಿ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅನುಮತಿ ನೀಡಿದೆ. ಈ ವಿಶ್ವವಿದ್ಯಾನಿಲಯ ಯುಜಿಸಿಯ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಯಾವುದೇ ಧನಸಹಾಯ ನೀಡುವುದಿಲ್ಲ. ಆಡಳಿತ, ಶೈಕ್ಷಣಿಕ ವಿಚಾರಗಳು ಮತ್ತು ಸಂಪನ್ಮೂಲಗಳ ವಿಷಯದಲ್ಲಿ ಖಾಸಗಿ ವಿಶ್ವವಿದ್ಯಾನಿಲಯಕ್ಕೆ ಸ್ವಾಯತ್ತತೆ ಇರುತ್ತದೆ. ಆದರೂ ಇದಕ್ಕೆ ಯುಜಿಸಿಯ ಮಾನ್ಯತೆ ಬೇಕು.

–ಬಿ.ಎಂ.ಚಂ.

## ವಿಷಯ ಕೊಠಡಿಗಳು

ಶಾಲೆಗಳು ಜ್ಞಾನ ಮಂದಿರಗಳು. ಶಾಲೆಯನ್ನು ಗ್ರೀಕರು "ಮನೆ"ಗಳೆಂದು ಕರೆಯುತ್ತಿದ್ದರು. ಅಲ್ಲಿ ಮೊದಲಿಗೆ ಶ್ರೀಮಂತ ವರ್ಗದ (Elite) ಜನರು ವಾರಕ್ಕೊಮ್ಮೆ ಒಂದೆಡೆ ಕುಳಿತು ಜೀವನದ ಹಲವು ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಿದ್ದರು. ನಂತರ, ವಿಜ್ಞಾನ, ಸಾಹಿತ್ಯ, ತತ್ತ್ವಶಾಸ್ತ್ರ ವಿಷಯಗಳ ಚರ್ಚೆಯು ನಡೆಯುತ್ತಿತ್ತು. ಕಾಲಕ್ರಮೇಣ ಅದು ಔಪಚಾರಿಕ ಶಾಲೆಯ ಕಲ್ಪನೆಗೆ ಕಾರಣವಾಯಿತೆಂಬುದು ಇತಿಹಾಸ. ಪ್ರತಿ ಮನೆಯಲ್ಲಿ ವಿವಿಧ ಕೋಣೆಗಳಲ್ಲದೆ ಇರುವ ಪ್ರತಿಯೊಬ್ಬ ಸದಸ್ಯರಿಗೂ ನಿಗದಿಯಾದ ಕರ್ತವ್ಯಗಳುಂಟು. 1964–66ರ ಕೊಠಾರಿ ಶಿಕ್ಷಣ ಆಯೋಗವು ತನ್ನ ವರದಿಯಲ್ಲಿ "ಭಾರತದ ಭವಿಷ್ಯವು ತನ್ನ ಶಾಲಾ–ಕೊಠಡಿಗಳಲ್ಲಿ ರೂಪಗೊಳ್ಳುತ್ತಿದೆ" ಎಂದು ಉಲ್ಲೇಖಿಸಿದೆ. ಬಹು ಹಿಂದೆ ಶಾಲೆಗಳು ಎಂಬ ಮಾತೇ ಇರಲಿಲ್ಲ. ಕುಟುಂಬದ ಹಿರಿಯ ಸದಸ್ಯ ತನ್ನವರಿಗೆ ಕುಟುಂಬದ ನಿರ್ವಹಣೆ, ಜವಾಬ್ದಾರಿ, ಸಮಸ್ಯೆಗಳ ನಿವಾರಣೆಗಳ ಬಗ್ಗೆ ತಿಳಿವಳಿಕೆ ನೀಡಿ ಪ್ರಾತ್ಯಕ್ಷಗೊಳಿಸುತ್ತಿದ್ದ. ಜೀವನದ ಮೌಲ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿತ್ತು. ಸರಳ ಜೀವನ, ಉನ್ನತ ಚಿಂತನೆಗೆ

Digitised by Bharatavani, CIIL

ಅವಕಾಶವಿತ್ತು. ವೇದ–ಉಪನಿಷತ್ತು ಕಾಲದಲ್ಲಿ ಬೌದ್ಧರ ಕಾಲದಲ್ಲಿ, ಮಧ್ಯಕಾಲೀನ ಅವಧಿಯಲ್ಲಿ ಇದೇ ಶಿಕ್ಷಣ ಪದ್ಧತಿ ಮುಂದುವರಿದಿತ್ತು. ಗುರುಕುಲಗಳು ಊರುಗಳಿಂದ ಬಹುದೂರವಿತ್ತು. ಗುರುಗಳನ್ನು ಅರಸುತ್ತಾ ಹೋಗಿ ಕಾಡಿ–ಬೇಡಿ ವಿದ್ಯೆ ಪಡೆಯಲಾಗುತ್ತಿತ್ತು. ಗುರುಗಳ ಸೇವೆ ಮಾಡುತ್ತಾ ವಿದ್ಯೆ ಕಲಿಯಬೇಕಿತ್ತು. ಓದು, ಬರಹ, ಗಣಿತದ ಅಲ್ಪಜ್ಞಾನವನ್ನು ಶಿಷ್ಯರಿಗೆ ಕಲಿಸಲಾಗುತ್ತಿತ್ತು. ಆ ಕಾಲದಲ್ಲಿ ಜನರಿಗೆ ಹೆಚ್ಚಿನ ಆಶೋತ್ತರಗಳು ಅಷ್ಟಾಗಿ ಇರಲಿಲ್ಲ. ವಿದ್ಯೆ ಕಲಿಯಲು ಭೂಮಿ, ಆಕಾಶ, ಗಿಡ–ಮರ, ಪ್ರಾಣಿ–ಪಕ್ಷಿ, ಪರಿಸರವೇ ಸಾಕಾಗಿತ್ತು. ಮುಂದೆ ಮನುಷ್ಯನ ಆಶೋತ್ತರಗಳು ಬೆಳೆದಂತೆ ಆತನ ಸಂಕೀರ್ಣ ಸಮಸ್ಯೆಗಳಿಗೆ ಸರಳ ಚಿಂತನೆ ಸಾಕಾಗದೆ ಅನೌಪಚಾರಿಕ ವ್ಯವಸ್ಥೆಯಿಂದ ಔಪಚಾರಿಕ ಶಿಕ್ಷಣ ವ್ಯವಸ್ಥೆ ಪಾದಾರ್ಪಣೆ ಆಯಿತು. ಕಾಂಕ್ರೀಟ್ ಕಟ್ಟಡದ ನಾಲ್ಕು ಗೋಡೆಗಳೇ ಕಲಿಯುವ ಸ್ಥಳಗಳಾದವು. ಅಂದು ಗುರುಕುಲದಲ್ಲಿ ಪ್ರಶಾಂತವಾದ ಗಿಡ–ಮರ, ಪ್ರಾಣಿ–ಪಕ್ಷಿ ಸುಂದರ ಪರಿಸರದಲ್ಲಿ ಕಲಿಯುತ್ತಿದ್ದ ಸ್ವತಂತ್ರ ವ್ಯವಸ್ಥೆಯಿಂದ ಹೊರಬಂದು ಶಾಲಾ–ಕಟ್ಟಡಗಳ ವಿನ್ಯಾಸಕ್ಕೆ ವರ್ಗಾಯಿಸಲಾಯಿತು. "Class rooms are the Integral part of total education" – ಶಾಲೆಗಳಿಲ್ಲದೆ ಶಿಕ್ಷಣವಿಲ್ಲ, ತರಗತಿಗಳಿಲ್ಲದೆ ಪಾಠವಿಲ್ಲ ಎಂಬುದಾಗಿದೆ. ಶಾಲೆಗಳಲ್ಲಿ ಕಟ್ಟಡ, ಪೀಠೋಪಕರಣಗಳು, ಪಾಠೋಪಕರಣಗಳು, ಗ್ರಂಥಾಲಯ, ಪ್ರಯೋಗಾಲಯಗಳು, ಸಾಮಗ್ರಿ ಸಂಪನ್ಮೂಲಗಳಾಗಿವೆ (materialistic resources). ಅಧ್ಯಾಪಕರು, ಆಡಳಿತಗಾರರು, ನಿರ್ವಾಹಕರು, ಪೋಷಕರು, ಸಿಬ್ಬಂದಿಗಳು ಮಾನವ ಸಂಪನ್ಮೂಲಗಳಾಗಿವೆ (Non-materialistic resources/Human resources). ಜ್ಞಾನ ಹಾಗೂ ಅನುಭವಕ್ಕೆ ಸೂರು–ವಿಶ್ವವೇ ಅಥವಾ ಪರಿಸರವೇ ಎಂಬುದನ್ನು ಒಪ್ಪಿದರೂ ನಿರ್ದಿಷ್ಟವಾದ ರೀತಿಯ ಕಲಿಕೆಯ ಸ್ಥಳದ ಅಗತ್ಯವಿರುವುದನ್ನು ಮರೆಯುವಂತಿಲ್ಲ. ಆಕಾಶಕ್ಕೆ ಏಣಿ ಹಾಕಲು ಸಾಧ್ಯವೇ? ಮರದಲ್ಲಿನ ಎಲೆಗಳನ್ನು ಎಣಿಸಲು ಸಾಧ್ಯವೇ? ಸಮುದ್ರದಲ್ಲಿ ಈಜಲು ಸಾಧ್ಯವೇ? ಎಂದರೆ ಸಾಧ್ಯವಿಲ್ಲ ಎಂಬುದು ಗೋಜಲಿನ ಪ್ರಶ್ನೆಗಳಿಗೆ ಪ್ರತ್ಯುತ್ತರ ನೀಡಲಾಗುವುದಿಲ್ಲ. ಆದರೆ ಶಾಲಾ ಕೊಠಡಿ/ವಿಷಯ ಕೊಠಡಿಗಳಲ್ಲಿ ಈ ಪ್ರಶ್ನೆಗಳಿಗೆ ಸಮರ್ಥನೆಗಳ ಮೂಲಕ–ಆಕಾಶಕ್ಕೆ ಏಣಿ ಸಾಧ್ಯವಿಲ್ಲದಿದ್ದರೂ 10 ಅಂತಸ್ತಿನ ಮನೆ ಮಹಡಿಗೆ ಏಣಿ ಹಾಕಿ ಹೀಗೆಯೇ ಎಂದು ಹೇಳಬಹುದು. ಹಾಗೆಯೇ ಮರದಲ್ಲಿನ ಒಂದು ಗೊಂಚಲಿನ ಎಲೆ ಎಣಿಸಿ ಉಳಿದ ಎಲೆಗಳನ್ನು ಎಣಿಸಲು ಸಾಧ್ಯವೆಂದು ಖಾತರಿ ಮಾಡಬಹುದು. ಅಂತೆಯೇ ಸಣ್ಣ–ಸಣ್ಣ ಹಳ್ಳ, ಕೊಳ್ಳ, ಕಾಲುವೆಗಳಲ್ಲಿ, ನದಿಗಳಲ್ಲಿ ಸ್ನಾನ ಅಥವಾ ಈಜಿನ ಮೂಲಕ ಸಮುದ್ರದ ಈಜಿಗೂ ಪ್ರೇರಣೆ ನೀಡಬಹುದು. ಇವುಗಳನ್ನು ಕಥೆ, ಕವನ, ಪ್ರಸಂಗಗಳ ಮೂಲಕ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಬಹುದು. ಶಾಲಾ ತರಗತಿ ಅಥವಾ ತರಗತಿ ಕೊಠಡಿ/ಕೋಣೆ ಕೇವಲ ಕಪ್ಪು ಹಲಗೆ, ಡೆಸ್ಕುಗಳು ಅಥವಾ ಬೆಂಚುಗಳು, ಟೇಬಲ್, ಕುರ್ಚಿ, ಸೀಮೆಸುಣ್ಣ, ಡೆಸ್ಟರ್‌ಗಳಿಂದ ಮಾತ್ರ ತುಂಬಿರುವುದಾಗಿ ಭಾವಿಸಬಾರದು. ಇವೆಲ್ಲಾ ನಿರ್ಜೀವ ಸಾಧನಗಳು. ಇವುಗಳಿಗೆ ಜೀವಂತ ಕಳೆ ನೀಡುವ ಶಕ್ತಿ ಇರುವುದು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾತ್ರ. ಶಾಲೆ ಎಂದು ಭಾವಿಸಿದಾಗ ಶಾಲಾ ಕಟ್ಟಡ, ತರಗತಿ ಕೋಣೆಗಳು, ಗ್ರಂಥಾಲಯ, ಕಛೇರಿ, ಪ್ರಯೋಗಾಲಯ, ಆಟದ ಮೈದಾನ ಎಂಬುದು ಗೋಚರವಾದರೂ ತರಗತಿ ಕೋಣೆಗಳಿಗೆ ವಿಶೇಷ ಆದ್ಯತೆವುಂಟು. ಶಿಕ್ಷಕರು ತಮ್ಮ ವೇಳಾಪಟ್ಟಿಯಂತೆ ಪ್ರತಿ ವಿಷಯ ಬೋಧನೆಯಲ್ಲಿ ತಮ್ಮದೇ ಆದ ಬೋಧನಾ ವ್ಯವಸ್ಥೆಯಲ್ಲಿ ವಿಷಯ ಮಂಡಿಸುತ್ತಾರೆ. Wood ಎಂಬ ವಿದ್ವಾಂಸರು ಒಮ್ಮೆ ಹೇಳುತ್ತಾರೆ. "The system of Education will not rise above the head of the Teacher" ಎಂದು. ಹಾಗೆಯೇ "No Library, No Text book, No Laboratory is Equivalent to the Teacher" ಎಂಬುದು ಮತ್ತೊಂದು ಉಕ್ತಿ. ಅಂದರೆ ಶಿಕ್ಷಕನ ವ್ಯಕ್ತಿತ್ವ, ಆತನ ಧ್ಯೇಯೋದ್ದೇಶಗಳೇ ಬೇರೆ. ಆತನನ್ನು ಯಾರಿಗೂ ಹೋಲಿಸಲಾಗುವುದಿಲ್ಲ ಎಂಬುದು ಈ ಮಾತುಗಳ ಅರ್ಥವಾಗಿದ್ದರೂ ಪ್ರತಿ ತರಗತಿಗಳ ವಿಧಿ–ವಿಧಾನ, ವಿನ್ಯಾಸವೇ ಬೇರೆ ಬೇರೆ. ಶಾಲಾ ಹಂತದಲ್ಲಿ ಭಾಷೆಗಳು, ಗಣಿತ, ವಿಜ್ಞಾನ, ಸಮಾಜ–ವಿಜ್ಞಾನ ಎಂಬ ವಿಷಯಗಳ ಕಲಿಯುವಿಕೆ, ಕಲಿಸುವಿಕೆ ವಿಭಿನ್ನವೇ ಸರಿ ಒಂದರಂತೆ ಇನ್ನೊಂದಿಲ್ಲ. ಇವುಗಳ ಬೋಧನೆ ಹಾಗೂ ಕಲಿಕೆ ತರಗತಿಯಲ್ಲಿ ನಡೆದರೂ ಅವುಗಳು ಒಂದೊಂದು ವಿಷಯದಲ್ಲೂ ವ್ಯತ್ಯಾಸವಾಗುತ್ತಲೇ ಹೋಗುತ್ತದೆ. ಹಿರಿಯ ಶಿಕ್ಷಣ ತಜ್ಞರು ಹೇಳಿದ ಮಾತು ನನಗೆ ಇಂದಿಗೂ ನೆನಪಾಗುತ್ತಲೇ ಇದೆ "Ten minutes of bad teaching keeps the country dark for a year". ಅಂದರೆ ತರಗತಿ ಕೋಣೆ ಇರುವುದು ವಾಸ್ತವವಲ್ಲದ ವಿಚಾರ ಹೇಳುವ ಜಾಗವಲ್ಲ. ಪ್ರತಿ ವಿದ್ಯಾರ್ಥಿಯ ಬೌದ್ಧಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಬದುಕಿಗೆ ಜೀವಕಳೆ ತುಂಬುವಂತಿರಬೇಕು. ಭಾಷೆಯ ಬೋಧನೆಯಿಂದ ಓದು, ಬರಹ, ಮಾತುಗಾರಿಕೆ, ಸಂವೇದನಾ ಶೀಲ ಭಾವನೆಗಳಿಗೆ ಮೆರುಗು ನೀಡುವಂತಿರಬೇಕು. ಕಲಾ ವಿಷಯಗಳು ಜೀವಂತವಾಗುವಂತೆ ಪುಷ್ಟೀಕರಣ ನೀಡಬೇಕು. ವಿಜ್ಞಾನ ವಿಷಯಗಳು ಪ್ರಾಯೋಗಿಕ ನೆಲಗಟ್ಟಿನಲ್ಲಿರುವಂತೆ ನೋಡಿಕೊಳ್ಳಬೇಕು. ಗಣಿತ ವಿಷಯದ ಮೂಲಕ ನಿಖರತೆ, ಸ್ಪಷ್ಟತೆ ಬೆಳೆಯುವಂತೆ ಕಾಪಾಡಬೇಕು. ಇವುಗಳ ಮಹತ್ವ, ಹಿನ್ನೆಲೆ, ಆಗುವ ಅನುಕೂಲಗಳನ್ನು ತಿಳಿಯುವ ಸ್ಥಳವೇ ವಿಷಯ ಬೋಧನಾ ಕೊಠಡಿಗಳು (Subject Teaching Rooms). ಬೋಧನೆ ಎಂಬುದು ಕೌಶಲ್ಯ. ಎಷ್ಟೋ ಶಿಕ್ಷಕರು ವಿಷಯ ಸಂಪನ್ಮೂಲವಿದ್ದರೂ ತರಗತಿ ಕೊಠಡಿಗಳಲ್ಲಿ ಸಮರ್ಥ ಶಿಕ್ಷಕರಾಗಿ ಹೊರಹೊಮ್ಮಲು ಸಾಧ್ಯವಾಗುವುದಿಲ್ಲ. ಮತ್ತೆ ಕೆಲವರಿಗೆ ಸ್ವಲ್ಪ ವಿಷಯ ಸಂಪನ್ಮೂಲವಿದ್ದರೂ ಅದನ್ನು ತಮ್ಮ ಮಾತಿನ ಜಾಣ್ಮೆಯಿಂದ ವಿದ್ಯಾರ್ಥಿಗಳ ಮೆಚ್ಚುಗೆ ಸಂಪಾದಿಸಬಲ್ಲರು, ಇವೆಲ್ಲಾ ರೀತಿಯ ಸಂವಹನ (Communication) ಕೌಶಲ್ಯಗಳನ್ನು ಅಭ್ಯಾಸ ಮಾಡುವ ಸ್ಥಳವೇ ವಿಷಯ ಕೊಠಡಿ ಅಥವಾ ಬೋಧನಾ ಕೊಠಡಿ ಎಂದು ಕರೆಯಬಹುದು. ಇತರ ಶಾಲಾ–ಕಾಲೇಜುಗಳಲ್ಲಿ ಕೇವಲ ತರಗತಿ ಕೊಠಡಿ ಎಂತಲೋ, ಉಪನ್ಯಾಸ ಕೊಠಡಿಯಂತಲೋ ಕರೆಯುತ್ತೇವೆ. ತರಗತಿ ಮೇಲ್ವಿಚಾರಣೆ, ಮಕ್ಕಳ ಶಿಸ್ತು, ಅವರಲ್ಲಿ ಏಕಾಗ್ರತೆ ಮೂಡಿಸುವ ಬಗ್ಗೆ, ಸಾಮಾಜಿಕ ವಾತಾವರಣ ಸೃಷ್ಟಿಸುವುದು, ವಿಷಯ ತಿಳಿಸುವ ಕ್ರಮ, ವಿಷಯ ಕಲಿಸುವ ಕ್ರಮ, ವಿದ್ಯಾರ್ಥಿಯನ್ನು ಪ್ರೇರೇಪಿಸುವ ಬಗೆ, ಅವರು ಕಲಿತ ವಿಷಯಗಳ ಮೌಲ್ಯಮಾಪನ, ಕಲಿಕೆಯಲ್ಲಿ ಹಿಂಬೀಳಲು ಕಾರಣ, ಶೈಕ್ಷಣಿಕ ತಂತ್ರಜ್ಞಾನದ ಬಳಕೆ, ಹೀಗೆ ಹಲವು ಹತ್ತು ಬಗೆಗಳಲ್ಲಿ ಈ ವಿಷಯ ಕೊಠಡಿ ಸಮರ್ಥ ಶಿಕ್ಷಕನಾಗಿ ಹೊರಹೊಮ್ಮಲು ಸಹಾಯಕವೆನಿಸುತ್ತದೆ. ಆದರೆ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಉಳಿದ ಸಾಮಾನ್ಯ ವಿಷಯಗಳ ಬೋಧನಾ ಕೊಠಡಿಗಳನ್ನು ಹೊರತುಪಡಿಸಿ ಭವಿಷ್ಯದಲ್ಲಿ ಅವರು ಯಾವ ವಿಷಯ ಬೋಧನೆ ಮಾಡುವರೋ ಆ ವಿಷಯವಾಗಿ ಬೋಧನಾ ವಿನ್ಯಾಸಗಳ ತರಬೇತಿ ನೀಡುವ ವಿಶೇಷ ಕೊಠಡಿ ಅಥವಾ ಕೋಣೆಗೆ ವಿಷಯ ಬೋಧನಾ ಕೊಠಡಿ ಅಥವಾ ವಿಷಯ ಕೊಠಡಿ ಎಂದು ಕರೆಯುತ್ತಾರೆ. ಕನ್ನಡ ಬೋಧನಾ ವಿಷಯಗಳ ಕೊಠಡಿ, ಭೌತಶಾಸ್ತ್ರ ಬೋಧನಾ ವಿಷಯಗಳ ಕೊಠಡಿ, ಭೂಗೋಳಶಾಸ್ತ್ರ ಬೋಧನಾ ವಿಷಯಗಳ ಕೊಠಡಿ, ಇತಿಹಾಸ ಮತ್ತು ಪೌರನೀತಿ ಬೋಧನಾ ವಿಷಯಗಳ ಕೊಠಡಿ, ಗಣಿತ ಬೋಧನಾ ವಿಷಯಗಳ ಕೊಠಡಿ, ಆಂಗ್ಲಭಾಷಾ ಬೋಧನಾ ವಿಷಯಗಳ ಕೊಠಡಿ, ರಸಾಯನಶಾಸ್ತ್ರ ಬೋಧನಾ ವಿಷಯಗಳ ಕೊಠಡಿ, ಜೀವಶಾಸ್ತ್ರ ಬೋಧನಾ ವಿಷಯಗಳ ಕೊಠಡಿ ಎಂಬ ವಿಷಯ ಬೋಧನಾ ಕೊಠಡಿಗಳನ್ನು ಕಾಣುತ್ತೇವೆ. ಸಾಮಾನ್ಯ ವಿಷಯಗಳ ಬೋಧನೆಗೂ ಆಯ್ಕೆ ಮಾಡಿ


Digitised by Bharatavani, CIIL

ಭವಿಷ್ಯದಲ್ಲಿ ವಿಶೇಷ ಬೋಧನಾ ವಿಷಯಕ್ಕೂ ವ್ಯತ್ಯಾಸವಿರುತ್ತದೆ. ಸಾಮಾನ್ಯ ವಿಷಯಗಳು ಎಲ್ಲಾ ವಿದ್ಯಾರ್ಥಿಗಳಿಗೂ ಕಡ್ಡಾಯವಾಗಿರುತ್ತದೆ. ಆದರೆ ವಿಶೇಷ ಬೋಧನಾ ವಿಷಯಗಳು ಎಲ್ಲರಿಗೂ ಒಂದೇ ಆಗಿರದೆ ಅವರವರು ಪದವಿಯಲ್ಲಿ ಆಯ್ಕೆಗೊಳಿಸಿದ್ದ ಐಚ್ಛಿಕ ವಿಷಯಗಳಿಗೆ ಪೂರಕವಾಗಿರುತ್ತದೆ. ಉದಾ: ಒಬ್ಬ ವಿದ್ಯಾರ್ಥಿ ಪದವಿಯಲ್ಲಿ ಅದರಲ್ಲಿಯೂ ಕಲಾ ವಿಭಾಗದವನಾಗಿದ್ದು ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ವಿಷಯಗಳನ್ನು ಐಚ್ಛಿಕವಾಗಿ ಅಭ್ಯಾಸ ಮಾಡಿ ನಿಗದಿತ ಅಂಕಗಳನ್ನು ಪಡೆದು ಬಿ.ಎಡ್. ವ್ಯಾಸಂಗ ಮಾಡಲು ಬಯಸಿ ಸೇರಿದರೆ ಆತನು ಇತಿಹಾಸ ವಿಷಯವನ್ನು ಬೋಧನಾ ವಿಷಯವಾಗಿ ಆಯ್ಕೆಗೊಳಿಸುವುದರ ಜೊತೆಗೆ ಕನ್ನಡ/ ಆಂಗ್ಲ ಭಾಷೆಯನ್ನು ಮತ್ತೊಂದು ಬೋಧನಾ ವಿಷಯವಾಗಿ ಕಡ್ಡಾಯವಾಗಿ ಆಯ್ಕೆಮಾಡಿ ಅಭ್ಯಾಸಿಸಬೇಕು. ಈ ವಿಷಯ ಬೋಧನಾ ಕೊಠಡಿಗಳು ಸಾಮಾನ್ಯ ಕೊಠಡಿಯಂತಿರದೆ ಪ್ರಾಯೋಗಿಕ ಮಹತ್ವ ಹೊಂದಿವೆ. ಕೆಲವೊಮ್ಮೆ ಅವುಗಳು ಪ್ರಯೋಗ ನಡೆಸುವ ಕೊಠಡಿಯಾಗಿ ಕಾರ್ಯ ನಿರ್ವಹಿಸುವುದುಂಟು. ಆಯಾಯ ವಿಷಯಗಳ ಪರಿಕಲ್ಪನೆಗಳು, ತತ್ವಗಳು, ನಿರೂಪಣೆಗಳು, ಸಿದ್ಧಾಂತಗಳಿಗೆ ಅನುಗುಣವಾಗಿ ಸ್ಥಳದಲ್ಲೇ ಸಮರ್ಥನೆ ಕೈಗೊಳ್ಳಲಾಗುತ್ತದೆ. ಈ ವಿಷಯ ಬೋಧನಾ ಕೊಠಡಿಯ ಶಿಕ್ಷಕರಾಗಲು ಬಯಸಿರುವವರಿಗೆ ಆಯಾಯ ವಿಷಯಕ್ಕೆ ಅಗತ್ಯವಾಗಿ ತಯಾರಿಸುವ ಪಾಠಯೋಜನೆ, ಘಟಕಯೋಜನೆ, ಸಂಪನ್ಮೂಲ ಘಟಕ, ಘಟಕ ಪರೀಕ್ಷೆ, ಪ್ರಶ್ನೆ ವಿನ್ಯಾಸಗಳು, ವಿವಿಧ ವಿಷಯ ವಸ್ತುವಿನ ಮಾದರಿಗಳು, ಚಿತ್ರಪಟಗಳು, ಗ್ಲೋಬ್, ನಕ್ಷೆಗಳು, ಅವಲೋಕನ ಗ್ರಂಥಗಳು ಮುಂತಾದವುಗಳನ್ನು ಹೊಂದಿದ್ದು ಅವುಗಳ ತಯಾರಿಕೆ, ತಯಾರು ಮಾಡುವ ವಿಧಾನ, ಪುಸ್ತಕಗಳನ್ನು ಓದಿ ವಿಷಯ ಸಂಗ್ರಹಿಸುವ ಕ್ರಮ, ಇವುಗಳ ಬಗ್ಗೆ ಕ್ರಮಬದ್ಧ ಮಾರ್ಗದರ್ಶನ ನೀಡಲಾಗುತ್ತದೆ. ಶಾಲೆಗೆ ಬರುವ ವಿದ್ಯಾರ್ಥಿಗಳು ಕೇವಲ ಮಣ್ಣಿನ ಮುದ್ದೆಗಳಲ್ಲ. ಅವರಿಗೂ ಎಲ್ಲಾ ರೀತಿಯ ಆಸೆ, ಮನೋಬಲ, ಚೈತನ್ಯ ಇರುತ್ತದೆ. ಅವುಗಳನ್ನು ಪರಿಪಕ್ವಗೊಳಿಸಿ ಸಮಾಜ ಬಯಸುವ ರೀತಿಯಲ್ಲಿ ಮಾರ್ಪಾಟು ಮಾಡುವ ಚಿಂತನೆ ಶಿಕ್ಷಕನಿಗಿರಬೇಕು. ಮಕ್ಕಳ ಮನೋವಿಜ್ಞಾನ, ವಿವಿಧ ಬೋಧನಾ ಮಾದರಿಗಳ ಅಭ್ಯಾಸ, ಪಠ್ಯಕ್ರಮ ರಚನೆ, ಮೌಲ್ಯಮಾಪನ ವಿಧಾನಗಳು, ಇತ್ಯಾದಿಗಳ ಬಗ್ಗೆ ಕೇವಲ ಮಾಹಿತಿ ಸಂಗ್ರಹಿಸುವುದೇ ಅಲ್ಲ ಅವುಗಳು ಸಮಕಾಲೀನ ಸನ್ನಿವೇಶಕ್ಕೆ ಎಷ್ಟು ಪ್ರಸ್ತುತ ಎಂಬುವುದನ್ನು ವಿಮರ್ಶಿಸಲಾಗುವುದು. ವಿಷಯ ಬೋಧನಾ ಕೊಠಡಿಗಳಲ್ಲಿ ಬೋಧನಾ ವಿಧಾನಗಳ ವಿಷಯ ತಜ್ಞರಿರುತ್ತಾರೆ. ಅವರನ್ನು ಬೋಧನಾ ಉಪನ್ಯಾಸಕರೆಂತಲೂ ಕರೆಯುತ್ತಾರೆ. (Method Master). ಇವರು ಯುಜಿಸಿ ನಿಗದಿಪಡಿಸಿದ ಅರ್ಹ ವಿದ್ಯಾರ್ಹತೆ ಹೊಂದಿದವರಾಗಿರುತ್ತಾರೆ. ಪದವಿ ತನಕ ಅಭ್ಯಾಸ ಮಾಡಿ ಪರಿಣಿತಿ ಪಡೆದ ಬೋಧನಾ ವಿಷಯಗಳನ್ನು ಬೋಧನೆಗೆ ಒಳಪಡಿಸಿ ಹರ್ಬರ್ಟನ ಬೋಧನಾ ವಿಧಿಗಳಿಗೆ ಒಳಪಡಿಸುವುದು ಹೇಗೆ? ಎಂಬುದನ್ನು ಇವರಿಂದ ಸಮರ್ಥಿಸಲಾಗುತ್ತದೆ. OHP ಬಳಕೆ, ಕಂಪ್ಯೂಟರ್ ಆಧಾರಿತ ಬೋಧನೆ, ದೃಕ್ ಶ್ರವಣ ಮಾಧ್ಯಮಗಳ ಬಳಕೆ, ಬಹು ಮಾಧ್ಯಮ ವಿಧಾನಗಳ ಬಳಕೆಗೆ ಇವರು ಮಾರ್ಗದರ್ಶನ ನೀಡುತ್ತಾರೆ. ಕೇವಲ ಸಾಂಪ್ರದಾಯಿಕ ಬೋಧನಾ ವಿಧಾನಗಳನ್ನು ಅಳವಡಿಸಿ ವಿಷಯ ಬೋಧನೆ ಮಾಡಿದರೆ ಸಾಲದು, ಪ್ರಸ್ತುತ ವೈಜ್ಞಾನಿಕ ಮತ್ತು ತಾಂತ್ರಿಕ ವಿಧಾನಗಳನ್ನು ಬಳಸಿ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜಿಸುವುದು ಹೇಗೆ? ಎಂಬುವುದನ್ನು ಮನದಟ್ಟು ಇದರಿಂದ ಆಗುತ್ತದೆ.

–ಕೆ.ರ.

## ವಿಷಯ ವಸ್ತು ವಿಶ್ಲೇಷಣೆ

ವಿಷಯ ವಸ್ತು ವಿಶ್ಲೇಷಣೆಯು (Content Analysis) ದತ್ತಾಂಶ ವಿಶ್ಲೇಷಣೆಯ ಒಂದು ಪ್ರಮುಖ ತಂತ್ರವಾಗಿದೆ. ಅಲ್ಲದೆ ಇದು ಅವಲೋಕನದ ತಂತ್ರವೂ ಆಗಿದೆ. ವಿಷಯ ವಸ್ತುವಿನ ವಿಧಾನದಿಂದ ದಾಖಲೆಗಳ ಮೂಲಕ ಪಡೆದಂತಹ ದತ್ತಾಂಶವನ್ನು ಹೆಚ್ಚು ವ್ಯವಸ್ಥಿತವಾಗಿ ವಿಶ್ಲೇಷಣೆ ಮಾಡಬಹುದು. ಪತ್ರಗಳು, ದಿನಚರಿಗಳ ಮತ್ತು ಲೇಖನಗಳು, ಚೀಟಿಗಳ ಕರಡು ಪ್ರತಿ ಮುಂತಾದವುಗಳ ವಿಷಯ ವಸ್ತುವಿನ ವಿಶ್ಲೇಷಣೆ ಮಾಡಬಹುದು. ಇಲ್ಲಿ ಸಂಶೋಧಕನು ಜನರ ವರ್ತನೆಯನ್ನು ನೇರವಾಗಿ ಅವಲೋಕನ ಮಾಡುವ ಬದಲಾಗಿ ಅವರ ವರ್ತನೆ ಬಗ್ಗೆ ಅವರನ್ನು ಕೇಳುವ ಬದಲಾಗಿ, ಇತರರು ನೀಡಿದ ಸಂವಹನವನ್ನು ಮತ್ತು ಸಂವಹನವನ್ನು ಕೇಳುವುದರ ಮೂಲಕ ವಿಶ್ಲೇಷಣೆ ಮಾಡುತ್ತಾರೆ. ಇಲ್ಲಿ ಸಂವಹನದ ವಿಷಯವಸ್ತುವು ಅಂತಿಮ ನಿರ್ಧಾರಗಳನ್ನು ಕೈಗೊಳ್ಳಲು ಸಹಾಯಕವಾಗುತ್ತದೆ. ವಿಷಯ ವಿಶ್ಲೇಷಣೆ ಎಂಬ ಪದವನ್ನು ಮೊಟ್ಟ ಮೊದಲಿಗೆ ಬಳಸಿದವರು ಕಾರ್ಟ್ವೈಟ್‌ರವರು (1970).

ವಿಷಯ ವಿಶ್ಲೇಷಣೆಯು ವಿಷಯ ವಸ್ತುವಿನ ವಿಶ್ಲೇಷಣೆಯನ್ನು ವ್ಯವಸ್ಥಿತವಾಗಿ ಮತ್ತು ವಸ್ತುನಿಷ್ಠವಾಗಿಮಾಡಿ ಸಂದೇಶಗಳ ಸಂವಹನಗಳ ನಿರ್ದಿಷ್ಟವಾದ ಗುಣಲಕ್ಷಣಗಳನ್ನು ಗುರುತಿಸುವುದರ ಮೂಲಕ ತೀರ್ಮಾನಗಳನ್ನು ಮಾಡುವ ಒಂದು ತಂತ್ರವಾಗಿದೆ.

ಬೆರಲ್ ಸನ್ ರವರ ಪ್ರಕಾರ "ವಿಷಯ ವಸ್ತು ವಿಶ್ಲೇಷಣೆ ನಿರ್ದಿಷ್ಟ ಉದ್ದೇಶಕ್ಕಾಗಿ ಸಂವಹನ/ಅಭಿವ್ಯಕ್ತಿ ಮೂಲಕ ಲಿಖಿತ ಅಥವಾ ಮೌಖಿಕ ರೂಪದಲ್ಲಿ ಪ್ರಕಟಿಸಿದ ವ್ಯವಸ್ಥಿತವಾದ ಮತ್ತು ಗುಣಾತ್ಮಕವಾದ ವಿಶ್ಲೇಷಣೆಯಾಗಿದ್ದು ಇದು ಒಂದು ಸಂಶೋಧನಾ ತಂತ್ರವಾಗಿದೆ."

ಇವರ ವ್ಯಾಖ್ಯಾನದಲ್ಲಿ ಸಂವಹನ ಎಂಬ ಪದವು ಲಭ್ಯವಿರುವ ಒಂದು ಮಾಹಿತಿಗೆ ಸಂಬಂಧಿಸಿದೆ. ಅಂದರೆ ಲಿಖಿತ ಸಾಮಗ್ರಿಗಳು ವಿವಿಧ ಮಾಧ್ಯಮಗಳ ಮೂಲಕ ಮಾಡಿದ ಪ್ರಸ್ತುತೀಕರಣಗಳು ಕರಕುಶಲ ವಸ್ತುಗಳು, ಶುಚಿಗೊಳಿಸುವ ವಸ್ತುವಿಗೆ ಸಂಬಂಧಿಸಿದ ಉತ್ಪಾದನೆಗಳ ಕುರಿತ ದೂರದರ್ಶನದ ಜಾಹೀರಾತುಗಳು ಮುಂತಾದವು ವಿಷಯವಸ್ತು ವಿಶ್ಲೇಷಣೆಯ ದತ್ತಾಂಶದ ಕೆಲವು ಉದಾಹರಣೆಗಳಾಗಿವೆ. ವ್ಯವಸ್ಥಿತವಾದ ವಿಷಯ ವಸ್ತು ವಿಶ್ಲೇಷಣೆಯ ಅಧ್ಯಯನಗಳು ಕೆಲವು ನಿರ್ದಿಷ್ಟ ಲೇಖನಗಃಳ ಲೇಖಕರು ಯಾರು ಎಂದು ಪ್ರತ್ಯೇಕಿಸಲು ನೆರವಾಗುತ್ತವೆ ಇದರಲ್ಲಿ ಪದಗಳು, ತಾವೇ ಸ್ವತಃ ವಿಷಯವಸ್ತುವನ್ನು ಪ್ರಕಟಪಡಿಸುತ್ತವೆ. ಹೀಗೆ ಬಾಹ್ಯವಾಗಿ ಪ್ರಸ್ತುತಪಡಿಸಿದ ಪದಗಳು ಬಣ್ಣಗಳು ಅಥವಾ ವಸ್ತು ಗಳನ್ನು ಅಧ್ಯಯನ ಮಾಡುವುದರಿಂದ ಸಂಶೋಧಕನು ಸುಲಭವಾಗಿ ಪ್ರಸ್ತುತಪಡಿಸಿದ ವಿಷಯ ವಸ್ತುವನ್ನು ಅಧ್ಯಯನ ಮಾಡುತ್ತಾನೆ. ಇಲ್ಲಿ ವಿಷಯವಸ್ತುವಿನ ವಿಶ್ಲೇಷಣೆಯ ಉದ್ದೇಶಗಳು ಗ್ರಂಥ ಕರ್ತೃವನ್ನು ನಿರ್ಧರಿಸುತ್ತವೆ.

ಈ ವಿಧಾನವು ವಸ್ತುನಿಷ್ಠವಾಗಿದೆ ಮತ್ತು ವ್ಯವಸ್ಥಿತವಾಗಿದೆ ಎಂದರೆ ಅದು ಸಾಂಪ್ರದಾಯಿಕ ವಿಧಾನವಾಗಿದೆ. ಇಲ್ಲಿ ಸಂಶೋಧಕನು ಪೂರ್ವನಿರ್ಧಾರಿತ ಯೋಜನೆಯ ಪ್ರಕಾರ ಸಂಶೋಧನೆಯನ್ನು ಕೈಗೊಳ್ಳುತ್ತಾನೆ ಉದಾಹರಣೆಗೆ : ನೀವು ಪಟ್ಟಣದ ಒಂದು ಸರಳವಾದ, ಅದರ ನೆರೆಯ ಪ್ರದೇಶವನ್ನು ತೋರಿಸುವ ಒಂದು ಬಣ್ಣದ ಪ್ಲಾಸ್ಟಿಕ್‌ನ ಹಾಳೆಯ ಮೇಲೆ ಪಟ್ಟಣದ ಅದರ ಗಡಿರೇಖೆಗಳನ್ನು ಮತ್ತು ನೆರೆಯ ಪ್ರದೇಶಗಳನ್ನು ತೋರಿಸುವ ಒಂದು ಭೂ ಪಟವನ್ನು ತಯಾರಿಸುತ್ತೀರಿ. ಈ ಭೂ ಪಟವು ಅದರಷ್ಟೇ ಛಾಯಾ ಚಿತ್ರದ ಮೇಲೆ ಇಟ್ಟಾಗ, ಅದು

Digitised by Bharatavani, CIIL

ಅಳತೆಯ ಪ್ರಕಾರ ಸಮವಾಗಿರುತ್ತದೆ. ಇಲ್ಲಿ ನೀವು ಛಾಯಾಚಿತ್ರದ ವಿಷಯು ವಸ್ತುವನ್ನು ಹೆಚ್ಚು ಉತ್ತಮವಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಸಾಮಾನ್ಯವಾಗಿ ವಿಷಯ ವಸ್ತುವಿನ ವಿಶ್ಲೇಷಣೆಯು ವಿಷಯ ವಸ್ತುವಿನ ಕೆಲವು ಪರೀಕ್ಷಾಂಶಗಳನ್ನು ನಿರ್ಧರಿಸುವ ಕೆಲವು ಉಪವಿಧಗಳ ಒಳಗಿರುವ ಸಮತೆಯನ್ನು ನಿರ್ಧರಿಸುವ ಉದ್ದೇಶಗಳನ್ನು ಹೊಂದಿರುತ್ತದೆ. ಇದರೊಂದಿಗೆ ಪರಿಮಾಣಾತ್ಮಕ ಫಲಿತಾಂಶಗಳನ್ನು ಸಾಮಾನ್ಯವಾಗಿ ಸಂಖ್ಯಾಶಾಸ್ತ್ರೀಯವಾಗಿ ವಿಶ್ಲೇಷಣೆ ಮಾಡಲಾಗುತ್ತದೆ. ಒಟ್ಟಿನಲ್ಲಿ ವಿಷಯ ವಸ್ತುವಿನ ವಿಶ್ಲೇಷಣೆ ಎಂದರೆ ಈಗಾಗಲೇ ಅಸ್ಥಿತ್ವದಲ್ಲಿರುವ ಐತಿಹಾಸಿಕ ಸಂಶೋಧನೆಯಲ್ಲಿ ಬಳಸುವಂತಹ ದಾಖಲೆಯಾದ ಸಾಮಗ್ರಿಗಳ ವಿಶ್ಲೇಷಣೆ. ಇಲ್ಲಿ ಕ್ಲಿಷ್ಟಕರವಾದ ಭಾಗ ಯಾವುದೆಂದರೆ ವಿಷಯದ ಯವ ಗುಣ ಲಕ್ಷಣಗಳನ್ನು ಪರಿಗಣಿಸಬೇಕು ಮತ್ತು ಲೆಕ್ಕ ಮಾಡಬೇಕು ಎಂದು ನಿರ್ಧರಿಸುವುದು ಹಾಗೂ ಅವುಗಳನ್ನು ವ್ಯಾಖ್ಯಾನ ಮಡುವುದು. ಇಲ್ಲಿ ನೇರವಾಗಿ ದಾಖಲೆಗಳಿಂದ ದತ್ತಾಂಶವನ್ನು ಪಡೆಯುವುದು ಅಷ್ಟು ಸುಲಭವಾದದ್ದಲ್ಲ. ಇದರಿಂದ ಅವನು ಎಲ್ಲಾ ಸಮಸ್ಯೆಗಳನ್ನು ದೂರವಿಡುತ್ತಾನೆ ಎಂದು ಅಲ್ಲ. ಕೆಲವು ವಿಧದ ಅನ್ವೇಷಣೆಗಳಿಗೆ ದತ್ತಾಂಶ ಸಂಗ್ರಹಿಸಲು ಗ್ರಂಥಾಲಯದ ಮೂಲವೇ ಸಾಕಾಗುತ್ತದೆ. ಆದರೆ ಇತರ ಅನ್ವೇಷಣೆಗಳಲ್ಲಿ ಮಾಹಿತಿಯನ್ನು ದೂರದಿಂದ ಅಥವಾ ವಿವಿಧ ಮೂಲಗಳಿಂದ ಪಡೆಯುವುದು ಅವಶ್ಯಕವಾಗಿರುತ್ತದೆ ಈ ನಿಟ್ಟಿನಲ್ಲಿ ಸಂಶೋಧಕರಿಗೆ ವಿಷಯವಸ್ತು ವಿಶ್ಲೇಷಣೆ ಮಾಡಲು ಸೂಕ್ತವಾದ ಪ್ರಾತಿನಿಧಿಕ ಪ್ರತಿದರ್ಶಗಳನ್ನು ಆಯ್ಕೆ ಮಾಡುವುದು. ಕಷ್ಟಕರವಾದ ಕಾರ್ಯವಾಗಿರುತ್ತದೆ.

## ವಿಷಯ ವಸ್ತುವಿನ ವಿಶ್ಲೇಷಣೆಯ ವ್ಯಾಪ್ತಿ

ವಿಷಯ ವಸ್ತುವಿನ ವಿಶ್ಲೇಷಣೆಯ ವ್ಯಾಪ್ತಿಯು ತುಂಬ ವಿಶಾಲವಾದುವಾಗಿದ್ದು ಸಂಶೋಧಕನು ವಿಷಯ ವಸ್ತುವಿನ ವಿಶ್ಲೇಷಣೆಯನ್ನು ಪರಿಪೂರ್ಣವಾಗಿ ಮಾಡುವ ಮೊದಲು ಅದರ ವ್ಯಾಪ್ತಿಯನ್ನು ಅರಿತಿರಬೇಕಾಗುತ್ತದೆ. ವಿಷಯ ವಸ್ತು ವಿಶ್ಲೇಷಣೆಯ ವ್ಯಾಪ್ತಿಯನ್ನು ಈ ಕೆಳಕಂಡ ಅಂಶಗಳ ಸಹಾಯದಿಂದ ತಿಳಿಯ ಬಹುದಾಗಿದೆ ಅವುಗಳೆಂದರೆ

1. ವಿಷಯ ವಸ್ತುವಿನ ವಿಶ್ಲೇಷಣೆಯು ಸರಳವಾದ ಆವೃತ್ತಿ ಎಣಿಕೆಗಳ ಅಥವಾ ವಸ್ತುನಿಷ್ಠ ಚಲಕಗಳ ಮೇಲೆ ಅವಲಂಬಿತವಾಗಿದೆ.
2. ಶಿಕ್ಷಣದಲ್ಲಿರುವ ಹೆಚ್ಚಿನ ಮಟ್ಟದ ವಿಷಯ ವಸ್ತುವಿನ ವಿಶ್ಲೇಷಣೆಯ ಸಾಮಗ್ರಿಯ ವಿಶ್ಲೇಷಣೆಗೆ ನೇರವಾಗಿ ಉತ್ತರಿಸುವ ಪ್ರಶ್ನೆಗಳಿಗೆ ಸಂಬಂಧಿಸಿದೆ.
3. ವಿಷಯ ವಸ್ತುವಿನ ಇತ್ತೀಚಿನ ಅಧ್ಯಯನಗಳಲ್ಲಿ ಕೇವಲ ವಿಷಯ ವಸ್ತುವಿನ ಆವೃತ್ತಿಗಳಷ್ಟೇ ಅಲ್ಲದೆ, ಅನೇಕ ವಿಷಯ ವಸ್ತುವಿನ ಚಲಕಗಳಲ್ಲಿರುವ ಆಂತರಿಕ ಸಂಬಂಧಗಳನ್ನು ಅಧ್ಯಯನ ಮಾಡುವುದರ ಕಡೆಗೆ ಸಹ ಒಲವು ತೋರಿಸಲಾಗುತ್ತದೆ.
4. ಶಿಕ್ಷಕರ ಪ್ರತಿಪುಷ್ಠಿಯು ಸರಿಯಾಗಿದೆ ; ಉತ್ತಮವಾಗಿದೆ ಇತ್ಯಾದಿ ಎನ್ನುವಂತಹ ಹೇಳಿಕೆಗಳನ್ನು ನಂತರ ಅಧ್ಯಯನಕ್ಕೆಂದು ತಯಾರಿಸಿದ ಸಾಧನದ ಮೂಲಕ ವಿಶ್ಲೇಷಣೆ ಮಾಡಬಹುದು. ಆದರೂ ವಿಷಯವಸ್ತುವಿನ ವಿಶ್ಲೇಷಣೆಯನ್ನು ಪರಿಣಾಮಾತ್ಮಕ ವರ್ಣನೆಗೆ ಮಿತಿಗೊಳಿಸಲಾಗಿದೆ.

ಒಟ್ಟಿನಲ್ಲಿ ಪೂರ್ವದ ಅಧ್ಯಯನಗಳು, ವಿಷಯವಸ್ತುವಿನ ವಿಶ್ಲೇಷಣೆಯ ಸಂಕೀರ್ಣವಾದ, ಸಾಮಾಜಿಕ ಮತ್ತು ಮನೋವೈಜ್ಞಾನಿಕ ಚಲಕಗಳ ಕುರಿತ ಒಳನೋಟವನ್ನು ನೀಡುವ ಉದ್ದೇಶವನ್ನು ವಿಷಯ ವಸ್ತು ವಿಶ್ಲೇಷಣೆಯೂ ಹೊಂದಿದೆ.

## ವಿಷಯ ವಸ್ತು ವಿಶ್ಲೇಷಣೆಯ ಮಾರ್ಗಗಳು

ವಿಷಯ ವಸ್ತುವನ್ನು ಅನೇಕ ಮಾರ್ಗಗಳ ಮೂಲಕ ವಿಶ್ಲೇಷಣೆ ಮಾಡಬಹುದಾಗಿದೆ. ವಿಷಯವಸ್ತು ವಿಶ್ಲೇಷಣೆ ಮುಖ್ಯವಾಗಿ ಒಂದು ಸಂದೇಶಕ್ಕೆ ಸಂಬಂಧಿಸಿದ್ದರೂ ಇದನ್ನು ಸಂವಹನದ ಇತರ ಮೂಲಾಂಶಗಳ ಕುರಿತಾದ ಪ್ರಶ್ನೆಗಳನ್ನು ಉತ್ತರಿಸಲು ಸಹ ಬಳಸಬಹುದು. ಸಂಶೋಧಕನು ಅದನ್ನು ಯಾರು ಹೇಳುತ್ತಾರೆ? ಯಾರಿಗೆ ಹೇಳುತ್ತಾರೆ? ಹೇಗೆ ಹೇಳುತ್ತಾರೆ? ಮತ್ತು ಯಾವ ಪರಿಣಾಮ ಬೀರುತ್ತದೆ ಎಂದು ಪ್ರಶ್ನಿಸಬಹುದು ಅವನು ಇದನ್ನು ಈ ಕೆಳಗಿನ ಮಾರ್ಗಗಳ ಕುರಿತ ಪ್ರಾಕಲ್ಪನೆಗಳನ್ನು ಪರೀಕ್ಷಿಸಲು ಬಳಸಬಹುದಾಗಿದೆ ಅವುಗಳೆಂದರೆ

1. ಪಠ್ಯದ ಗುಣಲಕ್ಷಣಗಳು
2. ಸಂದೇಶದ ಹಿನ್ನೆಲೆ
3. ಸಂವಹನ ಪರಿಣಾಮಗಳು

ಈ ಹಿನ್ನೆಲೆಯಲ್ಲಿ ವಿಷಯ ವಸ್ತುವಿನ ವಿಶ್ಲೇಷಣೆಯನ್ನು ಸಂಸ್ಕೃತಿಯ ವಿವಿಧ ರೂಪಗಳನ್ನು ಮತ್ತು ಸಾಂಸ್ಕೃತಿಕ ಬದಲಾವಣೆಯನ್ನು ಅಧ್ಯಯನ ಮಾಡಲು ಉಪಯೋಗಿಸುತ್ತಾರೆ. ವಿವಿಧ ಸಂಸ್ಕೃತಿಗಳಲ್ಲಿರುವ ಸಾಹಿತ್ಯದ ವಿಷಯು ವಸ್ತುವನ್ನು ವಿಶ್ಲೇಷಿಸುವುದರ ಮೂಲಕ ಇದನ್ನು ಸಾಧಿಸಬಹುದಾಗಿದೆ.

ವಿಷಯ ವಸ್ತುವಿನ ವಿಶ್ಲೇಷಣೆಯ ಮುಖ್ಯವಾದ ಅನ್ವಯಿಕತೆ ಎಂದರೆ ಸಂದೇಶವನ್ನು ಸ್ವೀಕರಿಸುವವನ ಮೇಲೆ ಸಂದೇಶದ ಪರಿಣಾಮದ ಕುರಿತು ತೀರ್ಮಾನಗಳನ್ನು ಮಾಡುವುದು. ಸಂಶೋಧಕನು, 'ಎ' ಯು ಕಳಿಸಿದ ಸಂದೇಶಗಳ ಪರಿಣಾಮವು 'ಬಿ'ಯ ಮೇಲೆ ಹೇಗೆ ಆಗಿದೆ ಎನ್ನುವುದನ್ನು ಕಳಿಸಿದ ಸಂದೇಶದ ವಿಷಯ ವಸ್ತುವನ್ನು ವಿಶ್ಲೇಷಣೆ ಮಾಡುವುದರ ಮೂಲಕ ನಿರ್ಧರಿಸುತ್ತಾನೆ. ಪರ್ಯಾಯವಾಗಿ ಸಂಶೋಧಕನು ಸ್ವೀಕರಿಸುವವನ ವರ್ತನೆಯ ಇತರ ರೂಪಗಳನ್ನು ಪರೀಕ್ಷಿಸುವುದರ ಮೂಲಕ ಸಂವಹನದ ಪರಿಣಾಮಗಳನ್ನು ಅಧ್ಯಯನ ಮಾಡಬಹುದು. ವಿಷಯವಸ್ತುವಿನ ವಿಶ್ಲೇಷಣೆಯು ಸ್ವೀಕರಿಸುವವನ ವರ್ತನೆಯೊಂದಿಗೆ ಸಹಸಂಬಂದ ಹೊಂದಿದ ಸೂಕ್ತವಾದ ಚಲಕಗಳನ್ನು ಉತ್ಪ್ರೇಕ್ಷಿಸದೆ ಇರುವುದಕ್ಕೆ ಸಹಾಯಕವಾಗಿದೆ.

ಇತ್ತೀಚಿನ ದಿನಗಳಲ್ಲಿ ವಿಷಯವಸ್ತು ವಿಶ್ಲೇಷಣೆಯ ಅಧ್ಯಯನಗಳಲ್ಲಿ ಒಂದು ಭಾಷೆಯ ಗುಣಲಕ್ಷಣಗಳನ್ನು ಅಧ್ಯಯನ ಮಾಡಿದ್ದಾರೆ. ಸಂದೇಶವನ್ನು ಕಳುಹಿಸುವವರ ಮತ್ತು ಸಂದೇಶದ ಹಿನ್ನೆಲೆಯನ್ನು ಕುರಿತು ತೀರ್ಮಾನ ಮಾಡುವುದಕ್ಕಾಗಿ ಪಠ್ಯವಸ್ತುವನ್ನು ವಿಶ್ಲೇಷಣೆ ಮಾಡುತ್ತಾರೆ. ಇಬ್ಬರು ಲೇಖಕರಲ್ಲಿ ಲೇಖನ ಬರೆಯುವಿಕೆಯಲ್ಲಿ ವಿವಾದಗಳು ಇದ್ದಲ್ಲಿ ಸಂಶೋಧಕ ಪಠ್ಯವಸ್ತುವನ್ನು ವಿಶ್ಲೇಷಿಸಿ ಈ ಇಬ್ಬರ ನಡುವೆ ಪದ ಪ್ರಯೋಗದಲ್ಲಿ ಇರುವ ವ್ಯತ್ಯಾಸದ ವಿಶ್ಲೇಷಣೆಯನ್ನು ಆಧಾರವಾಗಿಟ್ಟು ಕೊಂಡು ನಿರ್ಧಾರ ಕೈಗೊಳ್ಳುತ್ತಾನೆ.

## ವಿಷಯ ವಿಶ್ಲೇಷಣೆಯ ನಿರ್ಧಾರಕಾಂಶಗಳು

ವಿಷಯ ವಸ್ತುವನ್ನು ವಿಶ್ಲೇಷಣೆ ಮಾಡುವಾಗ ಉಪಯೋಗಿಸುವ ಅಥವಾ ಗಮನದಲ್ಲಿಡುವ ಅಂಶಗಳನ್ನು ವಿಷಯ ವಸ್ತುವಿನ ವಿಶ್ಲೇಷಣೆ ನಿರ್ಧಾರಕ ಅಂಶಗಳು ಎಂದು ಕರೆಯುತ್ತೇವೆ. ಇವುಗಳು ಸಂಶೋಧಕನು ವಿಷಯ ವಿಶ್ಲೇಷಣೆ ಮಾಡುವಾಗ ಅತ್ಯಂತ ಪ್ರಮುಖ ಪಾತ್ರವನ್ನು


Digitised by Bharatavani, CIIL

ನಿರ್ವಹಿಸುತ್ತವೆ. ಅವುಗಳನ್ನು ಸಂಕ್ಷಿಪ್ತವಾಗಿ ಈ ಮುಂದಿನಂತೆ ತಿಳಿಯಬಹುದಾಗಿದೆ.

**1. ವಿಷಯ ವಸ್ತುವಿನ ಆಯ್ಕೆ:** ವಿಷಯ ವಸ್ತುವನ್ನು ವಿಶ್ಲೇಷಣೆ ಮಾಡುವಾಗ ವಿಷಯ ವಸ್ತುವಿನ ಆಯ್ಕೆಯು ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಆಯ್ಕೆ ಮಾಡಿದ ವಿಷಯವು ವಿಶ್ಲೇಷಣೆ ಮಾಡಬೇಕಾದ ವಿಷಯ ವಸ್ತುವಿನೊಂದಿಗೆ ನಿಖರ ಸಂಬಂದ ಹೊಂದಿರಬೇಕು ಇಲ್ಲವಾದಲ್ಲಿ ಇದು ವಿಶ್ಲೇಷಣೆಯ ಉದ್ದೇಶಕ್ಕೆ ತದ್ವಿರುದ್ಧವಾಗುತ್ತದೆ ಆದ್ದರಿಂದ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳವಾಗ ತರ್ಕಬದ್ಧವಾಗಿ ಚಿಂತಿಸಿ, ಯೋಚಿಸಿ ವಿಷಯ ವಸ್ತುವನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

**2. ವಿಷಯ ವಸ್ತುವನ್ನು ಸಂಕೇತಿಸಲು ಒಂದು ವಿನ್ಯಾಸವನ್ನು ರಚಿಸುವುದು:** ವಿಷಯ ವಸ್ತುವನ್ನು ಪ್ರಕ್ರಿಯೆಗೊಳಿಸುವುದಕ್ಕೆ ಮತ್ತು ಅದನ್ನು ವಿಶ್ಲೇಷಿಸಿ ಅರ್ಥ ಪೂರ್ಣವಾದ ರೀತಿಯಲ್ಲಿ ವರ್ಗೀಕರಿಸಿ, ಕ್ರೂಢಿಕರಿಸಲು ಅನೇಕ ಮಾರ್ಗಗಳಿವೆ ಇಂತಹ ಸಂದರ್ಭದಲ್ಲಿ ಸಾಂಕೇತೀಕರಿಸಲು ಸೂಕ್ತವಾಗಿ ತರಬೇತಿ ಪಡೆದ ಪರಿಣಿತರನ್ನು ಹೊಂದಿರುವುದು ಬಹಳ ಮುಖ್ಯವಾಗಿದೆ. ಪ್ರತಿ ಒಬ್ಬರೂ ಯಾವ ಅವಶ್ಯಕತೆಗಳನ್ನು ಗಮನಿಸಬೇಕು ಮತ್ತು ಅದನ್ನು ಹೇಗೆ ದಾಖಲಿಸಬೇಕು ಎಂಬುದನ್ನು ತಿಳಿದಿರಬೇಕು.

**3. ಆವೃತ್ತಿ ಮತ್ತು ಮೊತ್ತ** ವಿಷಯ ವಸ್ತುವಿನ ಸಾಮಗ್ರಿಯನ್ನು ವಿಂಗಡಿಸುವಾಗ ಸಾಮಾನ್ಯವಾಗಿ ಮೇಲಿಂದ ಮೇಲೆ ಪುನರ್ ಸಂಭವಿಸುವ ಕೆಲವು ವಿನ್ಯಾಸಗಳನ್ನು ಎಣಿಕೆ ಮಾಡುವ ಮಾರ್ಗವನ್ನು ಅನುಸರಿಸುತ್ತೇವೆ. ನಂತರ ಅದನ್ನು ಪರಿಮಾಣಾತ್ಮಕ ಸಂಖ್ಯಾಶಾಸ್ತ್ರಕ್ಕೆ ಒಳಪಡಿಸುತ್ತೇವೆ. ಹಾಗೆಯೇ ಆವೃತ್ತಿಗೆ ನಿಕಟವಾಗಿ ಸಂಬಂಧಿಸಿದ ಸಂಬಂಧವು ಪ್ರತಿಯೊಂದು ವಿಷಯವಸ್ತುವಿನ ಒಟ್ಟು ಮೊತ್ತವಾಗಿದೆ. ಇದು ಒಂದು ನಿರ್ದಿಷ್ಟವಾದ ಗುಣಲಕ್ಷಣವನ್ನು ಹೊಂದಿರುತ್ತದೆ. ಆದ್ದರಿಂದ ಕಾಲ ಮತ್ತು ಅವಕಾಶಕ್ಕೆ ಸಂಬಂಧಿಸಿದಂತೆ ಇದನ್ನು ಅಳತೆ ಮಾಡಬಹುದಾಗಿದೆ.

**4. ವಿಷಯ ವಸ್ತುವಿನ ಗುಣಮಟ್ಟದ ನಿರ್ಧಾರ** ವಿಷಯದ ಸಂವಹನದ ಮೂಲದ ವಿಷಯ ವಸ್ತುವನ್ನು ಅಧ್ಯಯನ ಮಾಡುವ ಇನ್ನೊಂದು ಮಾರ್ಗವೇನೆಂದರೆ ಪ್ರತಿ ಒಂದು ಕಾರ್ಯದಲ್ಲಿ ನಿರ್ದಿಷ್ಟ ಗುಣಗಳು ಇವೆಯೋ ಅಥವಾ ಇಲ್ಲವೋ ಎಂದು ನೋಡುವುದಾಗಿದೆ. ಇವುಗಳ ಆಧಾರದ ಮೇಲೆ ವಿಷಯ ವಸ್ತುವನ್ನು ವಿಂಗಡಿಸುವುದು ಹಾಗೂ ಜನಪ್ರಿಯ ವಿಷಯದ ಅಧ್ಯಯನ, ಅಧ್ಯಯನದ ವಿನ್ಯಾಸದ ವಿಧಗಳು ಇತ್ಯಾದಿಗಳು ಇದರ ಉದಾಹರಣೆಗಳಾಗಿವೆ.

**5. ವಿಷಯ ವಸ್ತುವಿನ ಮೂಲ ಮತ್ತು ತೀವ್ರತೆಯ ಮಟ್ಟ** ವಿಷಯ ವಸ್ತುವಿನ ನಿರ್ದಿಷ್ಟ ರೂಪಕ್ಕೆ ಜವಾಬ್ದಾರಿಯಾದುದು ಯಾವುದು ಎಂದು ಸ್ಥಾಪಿಸುವುದೇ ಅಧ್ಯಯನದ ಮೂಲ ಉದ್ದೇಶವಾಗಿರುತ್ತದೆ. ಇದರಲ್ಲಿ ವಿಷಯ ವಸ್ತುವನ್ನು ವಿಶ್ಲೇಷಣೆ ಮಾಡಲು ಅದರ ಮೂಲವನ್ನು ಮೊದಲು ಅಧ್ಯಯನ ಮಾಡಿ, ವರ್ಗೀಕರಿಸಿ ಅದರ ಸತ್ಯತೆಯನ್ನು ಖಾತ್ರಿ ಮಾಡಿಕೊಂಡು ದಾಖಲಿಸಬೇಕು. ನಂತರ ವಸ್ತುವಿಷಯದ ಮೂಲಗಳನ್ನು ಅದರ ಸತ್ಯತೆಯನ್ನು ಕಂಡುಹಿಡಿದು ವಿಶ್ಲೇಷಣೆ ಮಾಡಲು ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಕೆಲವು ಮೂಲಾಂಶಗಳು ಎಷ್ಟು ಬಲವಾಗಿ ಹಾಜರಿವೆ ಎಂಬುದರ ಆಧಾರದ ಮೇಲೆ ಸಹ ವಿಷಯವನ್ನು ಬೇರ್ಪಡಿಸಿ ವಿಶ್ಲೇಷಿಸಬಹುದಾಗಿದೆ. ಇದನ್ನು ವಿಷಯವಸ್ತುವಿನ ವಿಶ್ಲೆಷಣೆ ಎಂದು ಕರೆಯುತ್ತೇವೆ.

### ವಿಷಯ ವಸ್ತುವಿನ ವಿಶ್ಲೇಷಣೆಯ ಹಂತಗಳು

ಯಾವುದೇ ಒಂದು ವಿಷಯ ವಸ್ತುವನ್ನು ವಿಶ್ಲೇಷಣೆ ಮಾಡಬೇಕಾದರೆ ಅದು ನಿರ್ದಿಷ್ಟ ಉದ್ದೇಶ ಮತ್ತು ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ವಿಶ್ಲೇಷಣೆ ಮಾಡಲಾಗುತ್ತದೆ. ಇವುಗಳ ಆಧಾರದ ಮೇಲೆ ವಿಷಯ ವಸ್ತುವು ತನ್ನ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಈ ನಿಟ್ಟಿನಲ್ಲಿ ವಿಷಯ ವಿಶ್ಲೇಷಣೆ ಮಾಡಬೇಕಾದಾಗ ಕೆಲವು ಹಂತಗಳ ಆಧಾರದ ಮೇಲೆ ವಿಷಯ ವಸ್ತುವನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ. ವಿಷಯ ವಸ್ತುವಿನ ವಿಶ್ಲೇಷಣೆಯಲ್ಲಿ ಅನುಸರಿಸುವ ಪ್ರಮುಖ ಹಂತಗಳೆಂದರೆ,

**1. ಉದ್ದೇಶಗಳನ್ನು ನಿರ್ದಿಷ್ಟಗೊಳಿಸುವುದು:** ಅಧ್ಯಯನ ಉದ್ದೇಶಗಳು ಅತ್ಯಂತ ಮಹತ್ವದ ಸ್ಥಾನ ಪಡೆದಿದ್ದು ವಿಷಯ ವಿಶ್ಲೇಷಣೆಗೆ ಅತ್ಯಂತ ಪೂರಕವಾಗಿದೆ. ಇಲ್ಲಿ ಅನ್ವೇಷಣೆಯ ಉದ್ದೇಶಗಳು ಸ್ಪಷ್ಟವಾಗಿಲ್ಲದಿದ್ದರೆ ವಿಷಯ ವಸ್ತುವಿನ ವಿಶ್ಲೇಷಣೆಯೂ ಸ್ಪಷ್ಟವಾಗುವ ಬದಲಾಗಿ ಗೊಂದಲಮಯವಾಗುವ ಸಂಭವವಿದೆ. ಆದ್ದರಿಂದ ಸಂಶೋಧಕನು ತನ್ನ ವಿಷಯದ ಅಥವಾ ಸಂಶೋಧನೆಯ ಉದ್ದೇಶಗಳನ್ನು ಮೊದಲು ಸ್ಪಷ್ಟಪಡಿಸಿಕೊಂಡು ನಿರ್ದಿಷ್ಟಪಡಿಸಿಕೊಂಡು ನಂತರ ವಿಷಯ ವಸ್ತುವನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ.

**2. ವಿಶ್ಲೇಷಣೆಗೆ ನಿರ್ಣಾಯಕಗಳನ್ನು ರೂಪಿಸುವುದು:** ಸಂಶೋಧಕನು ವಿಷಯ ವಿಶ್ಲೇಷಣೆ ಮಾಡುವುದಕ್ಕೆ ಮೊದಲು ವಿಶ್ಲೇಷಣೆಗೆ ನಿರ್ಣಾಯುಕಗಳನ್ನು ರೂಪಿಸಿಕೊಳ್ಳಬೇಕು. ಏಕೆಂದರೆ ಇವುಗಳ ಸಹಾಯದಿಂದ ಯಾವ ವಿಷಯ ವಸ್ತುವಿನ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳುವಳಿಕೆಯು ಸಿಗುತ್ತದಲ್ಲದೆ ಸುಸಂಗತ ದತ್ತಾಂಶವನ್ನು ನಿರ್ದಿಷ್ಟಗೊಳಿಸಿ ವಿಶ್ಲೇಷಿಸಲು ಸಹಾಯಕವಾಗುತ್ತದೆ.

**3. ಚಲಕಗಳು ಮತ್ತು ವರ್ಗಗಳನ್ನು ನಿರ್ಧರಿಸುವುದು:** ವಿಷಯ ವಿಶ್ಲೇಷಣೆ ಮಾಡುವುದಕ್ಕೆ ಮೊದಲು ಸಂಶೋಧಕನು ಚಲಕಗಳನ್ನು ಸ್ಪಷ್ಟಪಡಿಸಿಕೊಂಡು ಪ್ರಸ್ತುತ ಸಂಶೋಧನೆಯಲ್ಲಿ ಯಾವ ಪ್ರಕಾರವಾಗಿ ಈ ಚಲಕವನ್ನು ಬಳಸಲಾಗುತ್ತಿದೆ. ಇದರ ಬದಲಾವಣೆಗಳೇನು ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿದಿರಬೇಕು ನಂತರ ತನ್ನ ಸಂಶೋಧನೆಯಲ್ಲಿ ಯಾವ ಉದ್ದೇಶವನ್ನು ಅಥವಾ ವಿಷಯವನ್ನು ಈ ಚಲಕ ಪ್ರತಿನಿಧಿಸುತ್ತದೆ ಎಂಬುದನ್ನು ವ್ಯಾಖ್ಯಾನಿಸಿಕೊಳ್ಳಬೇಕಾಗುತ್ತದೆ. ಮತ್ತು ಇವುಗಳ ವರ್ಗಗಳನ್ನು ನಿರ್ಧರಿಸಬೇಕಾಗುತ್ತದೆ. ವರ್ಗವು ಸಾಮಾನ್ಯವಾಗಿ ಏನನ್ನು ಹೇಳಿದೆ ಅಥವಾ ಸಂದೇಶವನ್ನು ಹೇಗೆ ಹೇಳಿದೆ ಎಂದು ಅನ್ವೇಷಕರು ಪರಿಶೀಲಿಸಬೇಕಾಗುತ್ತದೆ. ಈ ವರ್ಗಗಳು ಸಂಶೋಧಕನ ಉದ್ದೇಶದ ಮೇಲೆ ಅವಲಂಬಿತವಾಗಿರುತ್ತವೆ.

**4. ಪರಿಮಾಣವನ್ನು ಗೊತ್ತುಮಾಡುವುದು:** ವಿಷಯ ವಸ್ತುವಿನ ವಿಶ್ಲೇಷಣೆಯಲ್ಲಿ ಪ್ರಮುಖವಾಗಿ ಐದು ಘಟಕಗಳನ್ನು ಬಳಸಲಾಗುತ್ತದೆ. ಉದಾಹರಣೆ ಪದ, ಪ್ರಧಾನ ವಿಷಯ, ಘಟಕವನ್ನು ಬಳಸುವಿಕೆ, ಅಂಶ ಮತ್ತು ಅವಕಾಶ ಹಾಗೂ ಸಮಯ ಮುಂತಾದ ಅಂಶಗಳಿಂದ ಪರಿಮಾಣವನ್ನು ನಿರ್ಧರಿಸುವುದು ಸಮಗ್ರ ಕಾರ್ಯದ ವಿಶ್ಲೇಷಣೆಯ ಒಂದು ಅಖಂಡತೆಗೆ ಸಂಬಂಧಿಸಿದೆ. ಒಂದು ಪ್ರಕರಣಕ್ಕೆ ಸಂಬಂಧಿಸಿದ ಅಥವಾ ಮೀಸಲಿಟ್ಟ ಅವಕಾಶ ಅಥವಾ ಸಮಯದ ತೀವ್ರತೆಯನ್ನು ಸೂಚಿಸಲು ಇದನ್ನು ಬಳಸಬಹುದಾಗಿದ್ದು ವಿಷಯ ವಿಶ್ಲೇಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

Digitised by Bharatavani, CIIL

**5. ಪ್ರತಿದರ್ಶ ಚಯನ:** ವಿಶ್ಲೇಷಿಸಬೇಕಾದ ವಿಷಯಕ್ಕೆ ಸಂಬಂದಿಸಿದಂತೆ ಅದನ್ನು ಸೂಕ್ತವಾಗಿ ಪ್ರತಿನಿಧಿಸುವಂತಹ ಪ್ರತಿದರ್ಶವನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಪ್ರತಿದರ್ಶಚಯನವು ಸಂಶೋಧಕನಿಗೆ ವಿಷಯ ವಿಶ್ಲೇಷಣೆ ಮಾಡುವಲ್ಲಿ ಅತ್ಯಂತ ಮಹತ್ವ ಪಡೆದಿದ್ದು ಆಯ್ಕೆ ಮಾಡುವಾಗ ಅತ್ಯಂತ ಮುಖ್ಯವಾಗಿ ಸಂದರ್ಭಗಳು ಮತ್ತು ದಿನಾಂಕಗಳನ್ನು ಮುನ್ನೆಚ್ಚರಿಕೆಯಿಂದ ಜಾಗರೂಕರಾಗಿ ಆಯ್ಕೆ ಮಾಡಬೇಕಾಗುತ್ತದೆ. ಏಕೆಂದರೆ ಇದು ವಿಷಯ ವಸ್ತುವಿನ ವಿಶ್ಲೇಷಣೆಯ ನಿರ್ದಿಷ್ಟತೆ ಮತ್ತು ವಿಷಯದ ನಿಖರತೆಯನ್ನು ಕಾಯ್ದುಕೊಳ್ಳಲು ಸಹಾಯಕವಾಗುತ್ತದೆ.

**6. ಸಾಂಕೇತಿಕ ಪ್ರಕ್ರಿಯೆಗಳನ್ನು ಪ್ರಮಾಣೀಕೃತ ಗೊಳಿಸುವುದು:** ವಿಷಯ ವಿಶ್ಲೇಷಣೆಗೆ ದರ್ಜೆಗಳನ್ನು ನಿರ್ಧರಿಸುವುದರಿಂದ ಸಾಂಕೇತಿಕರಣಗೊಳಿಸಿ ವಿಷಯವನ್ನು ಪ್ರಮಾಣೀಕೃತ ಗೊಳಿಸಿಕೊಳ್ಳಬಹುದಾಗಿದೆ. ಇದರಿಂದ ವಿಶ್ಲೇಷಿಸಿದ ವಿಷಯಕ್ಕೆ ತಜ್ಞರಿಂದ ಅದೇ ಸಾಮಗ್ರಿಗೆ ವಿವಿಧ ದರ್ಜೆ ನಿರ್ಧರಿಸಿ ಉನ್ನತ ಒಪ್ಪಿಗೆಯನ್ನು ಅಪೇಕ್ಷಿಸಬಹುದಾಗಿದೆ. ಇದನ್ನು ಇಂತಹ ಕೆಲಸ ಮಾಡುವುದರಲ್ಲಿ ಆಸಕ್ತಿಯಿರುವವರನ್ನು, ಸಂಕೇತೀಕರಣ ಗೊಳಿಸುವವರನ್ನು ಆಯ್ಕೆ ಮಾಡುವುದರ ಮೂಲಕ ಮಾಡಬಹುದಾಗಿದೆ. ಹೀಗೆ ವಿಷಯ ವಿಶ್ಲೇಷಣೆಯನ್ನು ಮಾಡಬಹುದಾಗಿದೆ. ಕೊನೆಗೆ ವಿಶ್ವಾಸನೀಯತೆಯನ್ನು ಪರೀಕ್ಷಿಸುವುದರ ಮೂಲಕ ವಿಷಯ ವಿಶ್ಲೇಷಣೆಯನ್ನು ಯಶಸ್ವಿಯಾಗಿಸಬಹುದಾಗಿದೆ.

ಹಾಗೆಯೇ ಗಾಲ ಮತ್ತು ಬರ್ಗ್ ಎಂಬ ಸಂಶೋಧಕರು ಮತ್ತು ಶಿಕ್ಷಣ ತಜ್ಞರು ವಿಷಯ ವಸ್ತುವಿನ ವಿಶ್ಲೇಷಣೆಯನ್ನು ಈ ಮುಂದಿನ ಹಂತಗಳಲ್ಲಿ ಮಾಡಬಹುದೆಂದು ಸೂಚಿಸಿದ್ದಾರೆ.

1. ಉದ್ದೇಶಗಳನ್ನು ನಿರ್ದಿಷ್ಟಗೊಳಿಸುವುದು.
2. ಸುಸಂಬಂಧವಾದ ದತ್ತಾಂಶಗಳನ್ನು ಗುರುತಿಸುವುದು.
3. ಪತ್ಯಕ್ಕೆ ಸಂಬಂಧಿಸಿದ ಪುರಾವೆಗಳನ್ನು ಸಂಗ್ರಹಿಸುವುದು.
4. ದತ್ತಾಂಶ ಪ್ರತಿದರ್ಶಚಯನದ ಯೋಜನೆಯನ್ನು ಮಾಡುವುದು.
5. ಸಂಕೇತೀಕರಣದ ಪ್ರಕ್ರಿಯೆಗಳನ್ನು ಅಭಿವೃದ್ಧಿಗೊಳಿಸುವುದು.
6. ವಿಶ್ಲೇಷಣೆಯ ಪ್ರಕ್ರಿಯೆಗಳನ್ನು ಯೋಜಿಸುವುದು. ಹೀಗೆ ವಿವಿಧ ವಿಧಾನಗಳಲ್ಲಿ ವಿಷಯವಸ್ತುವನ್ನು ವಿಶ್ಲೇಷಣೆ ಮಾಡಬಹುದಾಗಿದೆ.

ವಿಷಯವಸ್ತುವನ್ನು ಒಮ್ಮೆ ಸಾಂಕೇತಿಸಿದ ನಂತರ ಅದು ಸಂಶೋಧನಾ ಸಮಸ್ಯೆಗೆ ಸಂಬಂಧಿಸುವ ಅಗತ್ಯವಿದ್ದರೆ ನೋಡಿ ತಖ್ತೆಗಳು ಮತ್ತು ನಕ್ಷೆಗಳನ್ನು ದತ್ತಾಂಶದಲ್ಲಿರುವ ವಿನ್ಯಾಸಗಳನ್ನು ಪ್ರಸ್ತುತ ಪಡಿಸಲು ಬಳಸುತ್ತಾರೆ. ಈ ವ್ಯತ್ಯಾಸಗಳು ಏನು ಅರ್ಥ ಸೂಚಿಸುತ್ತವೆ ಎಂಬುದರ ಬಗ್ಗೆ ಸಂಶೋಧಕನಿಗೆ ಅಥವಾ ವಿಷಯ ವಿಶ್ಲೇಷಣೆ ಮಾಡುವವನಿಗೆ ಜಾಗರೂಕತೆಯಿರ ಬೇಕಾಗುತ್ತದೆ. ವಿಷಯ ವಸ್ತುವಿನ ಮಾರ್ಗವು ಏನನ್ನು ವಿಶ್ಲೇಷಣೆ ಮಾಡಬೇಕು. ಎಂಬುದನ್ನು ನಿರ್ಧರಿಸುತ್ತದೆ ಆದ್ದರಿಂದ ಈ ಕುರಿತು ವಿಷಯವನ್ನು ಸಾಂಕೇತೀಕರಣಗೊಳಿಸುವಾಗ ಮತ್ತು ವಿಶ್ಲೇಷಣೆಯ ಅಂತಿಮ ರೂಪುರೇಷೆ ತಯಾರಿಸುವಾಗ ಎಚ್ಚರಿಕೆ ವಹಿಸಿ ಸಾಕ್ಷಿ ಪುರಾವೆಗಳನ್ನು ಪರಿಗಣಿಸಬೇಕಾಗುತ್ತದೆ.

–ಜಿ.ಶೀ.

## ವಿಸ್ಮರಣೆಯ (ಮರೆವು) ಸ್ವರೂಪ

ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತರವನ್ನು ಮರೆಯುವುದು, ಅಧಿಕಾರಿಗಳು ಆಫೀಸಿಗೆ ಹೋಗುವಾಗ ಪೆನ್ನು/ಫೈಲುಗಳನ್ನು ಮರೆತು ಹೋಗುವುದು, ಸೊಗಸಾಗಿ ಅಡಿಗೆ ಮಾಡುವ ಹೆಣ್ಣು ಸಾರಿಗೆ ಉಪ್ಪು ಹಾಕುವುದನ್ನು ಮರೆಯುವುದು, ಗೃಹಸ್ಥನೊಬ್ಬ ಪೇಟೆಯಿಂದ ತರಬೇಕಾದ ಸಾಮಾನುಗಳನ್ನು ಮರೆಯುವುದು ಹೀಗೆ ದೇವರಿಲ್ಲದ ದೇವಾಲಯವಿಲ್ಲ. ಆಡು ಮುಟ್ಟದ ಸೊಪ್ಪಿಲ್ಲ, ಮರೆವು ಇಲ್ಲದ ಮಾನವನಿಲ್ಲ ಎಂಬ ಮಾತೊಂದಿದೆ. ಇಂದಿನ ಯುವ ಪೀಳಿಗೆಯ ವಿದ್ಯಾರ್ಥಿಗಳು ಮತ್ತು ಈ ವೈವಿಧ್ಯಮಯ ಪರಿಸರದ ಜನಸ್ತೋಮವು ಮರೆವನ್ನು ದ್ವೇಷಿಸುತ್ತಾರೆ. ಆಗಲೇ ನೆನಪಿತ್ತು, ಥತ್, ಈಗ ನೆನಪಾಗುತ್ತಿಲ್ಲ ಎಂದು ಪರಿತಾಪ ಪಡುವುದು. ಮನಸ್ಸಿನಲ್ಲಿದೆ, ಗಂಟಲಲ್ಲಿದೆ, ಬಾಯಲ್ಲಿದೆ ಆದರೆ ನಾಲಿಗೆಗೆ ಬರುತ್ತಿಲ್ಲವೇ! ಎಂದು ನಾವು ಬಹಳಷ್ಟು ಸಲ ಹೇಳಿದ್ದುಂಟು. ಮಾಂಸದ ಮುದ್ದೆಯಂತೆ ಇದ್ದು, ತರುವಾಯ ಬಲಿಷ್ಠ ಬುದ್ಧಿವಂತ ಪ್ರಾಣಿ ಎನಿಸಿಕೊಂಡ ಮನುಷ್ಯ ಉದಯಿಸಿದಂದಿನಿಂದ ತನ್ನ ಜೀವನದುದ್ದಕ್ಕೂ ಅನೇಕ ವಿಷಯಗಳನ್ನು ಕಲಿಯುತ್ತಲೇ ಇದ್ದಾನೆ. ಕೆಲವು ವಿಷಯವನ್ನು ಕೇಳಿ, ಕೆಲವನ್ನು ನೋಡಿ, ಕೆಲವನ್ನು ಅನುಭವಿಸಿ ತನ್ನ ವಿಚಾರ ಸರಣಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಸಮಯ ಬಂದಾಗ, ಅವಶ್ಯಕತೆ ಇದ್ದಾಗ ಕಲಿತ ವಿಷಯಗಳನ್ನು ನೆನಪಿಸಿಕೊಳ್ಳುತ್ತಾನೆ. ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅವಶ್ಯಕ ಸಂಗತಿಗಳು ನೆನಪಿಗೆ ಬರದಿದ್ದರೆ ಪರಿತಪಿಸುತ್ತಾನೆ, ವ್ಯಥೆಪಡುತ್ತಾನೆ. ಹಾಗೆಯೇ ಜೀವನದಲ್ಲಿ ನಡೆದ ಅಹಿತಕರ ಘಟನೆಗಳನ್ನು ಮನಸ್ಸಿನಲ್ಲಿ ತೀವ್ರ ಪರಿಣಾಮಬೀರುವ, ಬೀರಿದ ಅಂಶಗಳನ್ನು ಭಯಾನಕ ಅಂಶಗಳನ್ನು, ವಿಚಾರಗಳನ್ನು ಮರೆಯಲು ಪ್ರಯತ್ನಿಸುತ್ತಾನೆ. ಆದರೂ ಸಹ ಜೀವನದಲ್ಲಿ ಇಂತಹ ದುಃಖಕರ ಬೇಸರ ತರಿಸುವ ಸಂಗತಿಗಳು ಆಗಾಗ್ಗೆ ನೆನಪಿಗೆ ಬಂದು ಆತನ ನೆಮ್ಮದಿಯನ್ನು ಹಾಳು ಮಾಡುತ್ತವೆ, ಮನಸ್ಸಿನಲ್ಲಿ ಅಶಾಂತಿ ಮೂಡಿಸುತ್ತವೆ. ಹೀಗೆ ಯಾವುದು ಅವಶ್ಯಕವೋ ಅದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದುಕೊಂಡ ವಿಷಯಗಳನ್ನು ಎಷ್ಟು ಪ್ರಯತ್ನ ಪಟ್ಟಾಗಲೂ ಕೆಲವು ವೇಳೆ ನೆನಪಿಗೆ ಬಾರದೆ ಮರತೇ ಹೋಗುತ್ತವೆ. ಹೀಗೆ ಯಾವುದು ಅನಾಶ್ಯಕವೋ ದುಃಖಕರವಾದದ್ದೋ ಅದನ್ನು ಮರೆಯಬೇಕೆಂದರೆ ಅದು ಹಾಗಾಗದೆ ಮತ್ತೆ ಮತ್ತೆ ನೆನಪಿಗೆ ಬರುತ್ತದೆ, ಮತ್ತೆ ಮತ್ತೆ ಸ್ಮೃತಿ ಪಟಲದಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗೆ ನೆನಪು ಅಥವಾ ಸ್ಮೃತಿ ಹಾಗೂ ಮರೆವು ಅಥವಾ ವಿಸ್ಮೃತಿ ಅಥವಾ ವಿಸ್ಮರಣೆ ಇವು ಒಂದೇ ನಾಣ್ಯದ ಎರಡು ಮುಖಗಳಂತೆ, ಒಂದೇ ರಥದ ಎರಡು ಚಕ್ರಗಳಂತೆ ಪರಸ್ಪರ ವಿರುದ್ಧವಾಗಿ ಅವು ಕಂಡುಬಂದರೂ ಅವೆರಡೂ ಮಾನವನಿಗೆ ಅವಶ್ಯಕವಾದುದು. ಮಹತ್ವವಾದದ್ದೂ ಕೂಡ. ನಾವು ನಮ್ಮ ದೈನಂದಿನ ಜೀವನದಲ್ಲಿ ಆಗಾಗ ಏನನ್ನಾದರೂ ಮರೆತು ಹೋಗುತ್ತಿರುತ್ತೇವೆ. ಆಗ ಮರೆವು ಎನ್ನುವ ಪದವನ್ನು ಧಾರಾಳವಾಗಿ ಬಳಸುತ್ತೇವೆ.

ಮರೆವು ಅಥವಾ ವಿಸ್ಮೃತಿಗೆ ಸ್ಮೃತಿಯಷ್ಟೇ ಮಹತ್ವವಿದೆ. ಸ್ಮೃತಿಯಷ್ಟೇ ಮರೆವು ಕೂಡ ವ್ಯಾಪಕವಾಗಿ ಕಂಡು ಬಂದರೂ ನಾವು ಅದಕ್ಕೆ ಸ್ಮೃತಿಗೆ ನೀಡುವಷ್ಟು ಮಹತ್ವ ನೀಡುತ್ತಿಲ್ಲ. ಆದರೆ ಅಧ್ಯಯನ ಪ್ರಕ್ರಿಯೆಯಲ್ಲಿ ವಿಸ್ಮೃತಿಗೂ ವಿಶಿಷ್ಟವಾದ ಸ್ಥಾನವಿದೆ. ಮನುಷ್ಯ ಕೆಲವು ಅನುಭವಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಕೆಲವು ಅನುಭವಗಳನ್ನು ಮರೆಯಬೇಕಾಗುತ್ತದೆ. ಹತ್ತು ನೆನಪಾದರೆ ಒಂಬತ್ತು ಮರೆತು ಹೋಗುತ್ತದೆ ಎನ್ನುವುದು ಇದಕ್ಕೇ ಅನ್ವಿಸುತ್ತದೆ. ತಪ್ಪು ಪ್ರಚೋದನೆಗಳಿಂದುಂಟಾದ, ಅಸಮಂಜಸವಾದ ಹಾಗೂ ಅಪ್ರಿಯವಾದ ಅನುಭವಗಳನ್ನು ಅಥವಾ ವಿಷಯಗಳನ್ನು ಮನುಷ್ಯನು ಮರೆಯಲೇಬೇಕಾಗುತ್ತದೆ. ಇಲ್ಲವಾದರೆ ಅವನ ಬಾಳು ಗೊಂದಲದಿಂದ ಕೂಡಿ ನರಕ ಸದೃಶವಾಗುವುದು. ಅನಗತ್ಯವಾದ ಅಥವಾ ಅಸಮಂಜಸವಾದ ಅನುಭವಗಳನ್ನು ವಿಷಯಗಳನ್ನು ಮರೆತರೇನೇ ಹೊಸದನ್ನು ಕಲಿಯಬಹುದಾಗಿದೆ. ಹೊಸ ಅನುಭವ ಪಡೆಯಲು ಸಾಧ್ಯವಾಗಬೇಕಾದರೆ, ಸಂತೋಷದಿಂದ ಬಾಳಬೇಕಾದರೆ ವಿಸ್ಮೃತಿಯು ಒಂದು ನಿಸರ್ಗದತ್ತವಾದ ವರವಾಗಿದೆ. ಈ ವ್ಯವಸ್ಥೆ (ವರ)ಇರದೇ


Digitised by Bharatavani, CIIL

ಹೋದರೆ ಮನುಷ್ಯನ ಬಾಳು ದುಃಖಮಯವಾಗುತ್ತಿತ್ತು. ಆದರೆ ಅತಿಯಾದ ವಿಸ್ಮೃತಿ ಒಳ್ಳೆಯದಲ್ಲ. ಕೆಲವು ಬಾರಿ ಯಾವುದನ್ನು ನಾವು ಮರೆಯಬಾರದು ಎಂದು ನಿರ್ಧರಿಸುತ್ತಿರುತ್ತೇವೆಯೋ ಅದೇ ಮರೆತು ಹೋಗುತ್ತದೆ. ಈ ಸಮಸ್ಯೆಗಳಿಗೆ ಕಾರಣ ಮತ್ತು ಪರಿಹಾರವನ್ನು ಅರಿಯಬೇಕಾದರೆ ವಿಸ್ಮೃತಿಯ ಪರಿಪೂರ್ಣ ಜ್ಞಾನಬೇಕಾಗುತ್ತದೆ. ಶಿಕ್ಷಕರಿಗೆ ಈ ಜ್ಞಾನ ತೀರಾ ಅತ್ಯಗತ್ಯ. ಇದು ಮಾನವನಿಗೆ ರಕ್ಷಣ ಮೌಲ್ಯವಾಗಿದ್ದು ಪ್ರತಿಯೊಬ್ಬನಲ್ಲೂ ಸಹಜವಾಗಿ ಬೆಳೆಯುವ ಮಾನಸಿಕ ಕ್ರಿಯೆಯಾಗಿದೆ. ಇಂತಹ ವಿಸ್ಮೃತಿ ಮಾನವನ ವ್ಯಕ್ತಿತ್ವಕ್ಕೂ ಮತ್ತು ಸುಖಕರ ಜೀವನಕ್ಕೂ ಅಡ್ಡಿಯನ್ನುಂಟು ಮಾಡುವುದಿಲ್ಲ. ಆದ್ದರಿಂದ ಮರೆವು ಅತ್ಯವಶ್ಯಕ. ಪ್ರತಿ ವ್ಯಕ್ತಿಯು ಪ್ರತಿಕ್ಷಣದಲ್ಲೂ ಒಂದಲ್ಲಾ ಒಂದು ನೂತನ ಸನ್ನಿವೇಶವನ್ನು ಪ್ರವೇಶಿಸುತ್ತಾನೆ. ಈ ಸನ್ನಿವೇಶಗಳ ಋಣಾತ್ಮಕ ಅಂಶಗಳಾದ ಅಹಿತಕರ ಘಟನೆಗಳು ಮನಸ್ಸಿನಲ್ಲಿ ಉಳಿದರೆ ವ್ಯಕ್ತಿ ದುಃಖ ಎಂಬ ಪ್ರತಾಪದಲ್ಲಿ ಜೀವನ ಕಳೆದು ಮಾನಸಿಕ ರೋಗಿಯಾಗುತ್ತಾನೆ. ಪ್ರಕೃತಿಯೇ ಮಾನವನಿಗೆ ಮರೆವನ್ನು (ವಿಸ್ಮೃತಿಯನ್ನು) ನೀಡಿದೆ ಎಂದರೆ ತಪ್ಪಾಗಲಾರದು.

ತಾತ್ಕಾಲಿಕವಾಗಲಿ ಅಥವಾ ಶಾಶ್ವತವಾಗಲಿ ಕೆಲವು ಅಂಶಗಳನ್ನು ನೆನಪು ಮಾಡಿಕೊಳ್ಳಲು ಕೆಲವು ವೇಳೆ ಅಸಮರ್ಥವಾಗುತ್ತೇವೆ. ಅದನ್ನೇ ಮರೆವು ಎನ್ನುವರು. ಒಂದು ಸಂಗತಿಯನ್ನು ನೆನಪಿಗೆ ತಂದುಕೊಳ್ಳುವುದರಲ್ಲಿನ ಅಸಮರ್ಥತೆಯೇ ಇದು. ಇದೊಂದು ಧಾರಣ, ಪುನಃ ಸ್ಮರಣೆ ಹಾಗೂ ಅಭಿಜ್ಞಾನ (ಗುರ್ತಿಸುವಿಕೆ)ಗಳಲ್ಲಿನ ವೈಫಲ್ಯತೆಯಾಗಿದೆ. ಕಲಿತ ವಿಷಯ ಮನಸ್ಸಿನಲ್ಲಿರಬೇಕಾದರೆ ಅದು ಧಾರಣವಾಗಬೇಕು. ಧಾರಣವಿಲ್ಲದೆ ನಶಿಸಿ ಹೋದರೆ ವಿಸ್ಮೃತಿ ಉಂಟಾಗುತ್ತದೆ. ಋಣಾತ್ಮಕ ಧಾರಣ ಸ್ಥಿತಿಯನ್ನು ವಿಸ್ಮೃತಿ ಎನ್ನುವರು. ಹೀಗೆ ಪ್ರಜ್ಞಾವಸ್ಥೆಗೆ ತರಲು ಸಾಧ್ಯವಿಲ್ಲದ ಹಿಂದಿನ ಅನುಭವವೇ ಮರೆವು. ಧಾರಣಶಕ್ತಿ ಮತ್ತು ಪುನರಾವೃತ್ತಿಗಳು ನೆನಪಿನ ಅವಿಭಾಜ್ಯ ಅಂಗಗಳಾದರೆ ಇವೆರಡರ ಕೊರತೆಯ ಕಾರಣವೇ ಮರೆವು. ಕಲಿತದ್ದೆಲ್ಲವೂ ಸ್ಮೃತಿಯ ಉಗ್ರಾಣಕ್ಕೆ ಸೇರುವುದು ನಿಶ್ಚಿತವಾದರೂ, ಅವೆಲ್ಲವನ್ನು ಪುನಃ ಸಂಪಾದಿಸಿಕೊಂಡು ಬಳಸಲಾಗುವುದಿಲ್ಲ. ಅನೇಕ ಮಾಹಿತಿಗಳು ಕಾರಣಾಂತರಗಳಿಂದ ನಷ್ಟವಾಗಿ ಹೋಗುತ್ತವೆ. ಹೀಗೆ ಮಾಹಿತಿಗಳನ್ನು ಉಗ್ರಾಣದಿಂದ ಪುನಃ ಸಂಪಾದಿಸಿಕೊಳ್ಳಲಾಗದಿರುವಿಕೆಯನ್ನು ಮರೆವು ಎನ್ನುವರು. ಮನಸ್ಸು ನಿಚ್ಚಳವಾಗಿದ್ದಷ್ಟು, ಸಂತೋಷವಾಗಿರುವಷ್ಟು ವಿಷಯಗಳು ಮಿದುಳಿನಲ್ಲಿ ಗರ್ಭೀಕರಿಸುತ್ತವೆ ಮತ್ತು ಸಂದರ್ಭೋಚಿತವಾಗಿ ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆ. ಆದರೆ ಮನಸ್ಸು ನಿಚ್ಚಳವಾಗಿಲ್ಲದಿದ್ದರೆ, ವ್ಯಾಕುಲವಾಗಿದ್ದರೆ ವಿಷಯಗಳು ಸೂಕ್ತವಾಗಿ ಗ್ರಹಿಕೆಯಾಗುವುದಿಲ್ಲ ಮತ್ತು ನೋಡಿದ ಅಥವಾ ಕಲಿತ ವಿಷಯಗಳು ಹೆಚ್ಚು ಸಮಯ ಉಳಿಯುವುದಿಲ್ಲ. ಜೀವನದಲ್ಲಿ ಮಗು ಅಥವಾ ವ್ಯಕ್ತಿ ನಾನಾ ವಿಷಯಗಳನ್ನು ಕಲಿಯುತ್ತಾನೆ. ಕಲಿತ ವಿಷಯಗಳನ್ನು ಸ್ವಲ್ಪ ದಿನ ಇಟ್ಟುಕೊಂಡರೆ ಮತ್ತು ಕೆಲವು ವಿಷಯುಗಳನ್ನು ಶಾಶ್ವತವಾಗಿಟ್ಟುಕೊಳ್ಳುತ್ತೇವೆ. ಆದರೆ ಎಲ್ಲಾ ವಿಷಯಗಳು ಜೀವನದಲ್ಲಿ ಉಳಿಯುವುದಿಲ್ಲ ಎನ್ನುವುದು ಸತ್ಯ. ಕೆಲವು ಸಂದರ್ಭಗಳಲ್ಲಿ ಮನಸ್ಸಿನಲ್ಲಿ ಎಲ್ಲ ಸುಖ, ದುಃಖ ಸಂತೋಷದ ಅನುಭವದ ಅಂಶಗಳು ಮತ್ತು ಘಟನೆಗಳು ಉಳಿದರೆ ವ್ಯಾಕುಲತೆ ಉಂಟಾಗುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಕೆಲ ಸಂದರ್ಭಗಳಲ್ಲಿ ಮರೆವೂ ಸಹ ಅಗತ್ಯವಾಗಿದೆ.

ಜೀವನದಲ್ಲಿ ಉತ್ತಮ ಮನೋಬಲವನ್ನು ರೂಢಿಸಿಕೊಂಡವನು, ಇಲ್ಲ ಸಲ್ಲದ ವಿಷಯಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವುದಕ್ಕೆ ಹೋಗುವುದಿಲ್ಲ. ಇಲ್ಲಸಲ್ಲದ ವಿಷಯಗಳು ಮನಸ್ಸಿನಲ್ಲಿ ಹರಿದಾಡುತ್ತಿದ್ದರೆ ಕಲಿತ ಮತ್ತು ನೋಡಿದ ವಿಷಯಗಳು ಸಂದರ್ಭೋಚಿತವಾಗಿ ಸ್ಮರಣೆಗೆ ಬಾರದೇ ಹೋಗುತ್ತವೆ.

ಕಲಿಕೆಯ ಶಾಶ್ವತವಾದ ಇಲ್ಲವೇ ತಾತ್ಕಾಲಿಕವಾದ ನಷ್ಟಕ್ಕೆ ವಿಸ್ಮೃತಿ ಎನ್ನುವರು. ಸಕಾಲದಲ್ಲಿ ನಮಗೆ ಬೇಕಾದ ಸಂಗತಿಯನ್ನು ಸ್ಮರಣೆಯಲ್ಲಿ ತರಲಾಗದಿರುವ ಸ್ಥಿತಿಗೆ ವಿಸ್ಮೃತಿ ಎನ್ನುವರು. ಕಲಿತ ವಿಷಯ ಮನಸ್ಸಿನಲ್ಲಿ ಧರಿಸಲ್ಪಡದೇ ಕಳೆದು ಹೋಗುವುದೇ ವಿಸ್ಮತಿ. ಒಂದು ಸಂಗತಿಯನ್ನು ನೆನಪಿಗೆ ತಂದುಕೊಳ್ಳುವುದರಲ್ಲಿನ ಅಸಮರ್ಥತೆಯೇ ವಿಸ್ಮೃತಿ.

- "ವಿಸ್ಮೃತಿಯು ಕಲಿಕೆಯ ಅಥವಾ ಸ್ಮೃತಿಯ ಅವಶ್ಯಕ ಸ್ಥಿತಿ"– ರಿಬಾಟ್.
- "ನಿಜವಾದ ಕಲಿಕೆಯೆಂದರೆ ನ್ಯಾಯಯುತವಾದ ಮರೆಯುವಿಕೆ ಆಗಿದೆ." – ಜಾನ್ ಆ್ಯಡಮ್
- "ಹಿಂದೆ ಕಲಿತಿರುವ ವಿಷಯವನ್ನು ಪುನಃಸ್ಮರಣೆ ಮಾಡುವ ಅಥವಾ ಸಾಮರ್ಥ್ಯವನ್ನು ತಾತ್ಪೂರ್ತಿಕವಾಗಿ ಅಥವಾ ನಿರಂತರವಾಗಿ ಕಳೆದುಕೊಳ್ಳುವುದೇ ವಿಸ್ಮೃತಿ.
- "ಪೂರ್ವದಲ್ಲಿ ಕಲಿತ ಕಾರ್ಯವೊಂದನ್ನು ಅನುಷ್ಠಾನ ಮಾಡುವಾಗ ಅಥವಾ ಒಂದನ್ನು ನೆನಪಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಗ ಆಗುವ ವಿಫಲತೆಯು ವಿಸ್ಮೃತಿ". ಡ್ರೆವ್ವರ್.
- "ಕಲಿಕೆಯಲ್ಲಿ ಉಂಟಾದ ಅನುಬಂಧನಗಳು ದುರ್ಬಲವಾಗುವಿಕೆ ಅಥವಾ ಕ್ಷೀಣಿಸುವಿಕೆಯೇ ಮರೆವು ಅಥವಾ ಅಳಿವು"– ಪಾವಲೋವ್
- "ಹಿಂದಿನ ಅನುಭವಗಳನ್ನು ಪ್ರಜ್ಞಾವಸ್ಥೆಗೆ ತರಲು ಅಸಾಧ್ಯವಾದುದೇ ಮರೆವು"– ರಿಬರ್ಟ
- ನ್ಯಾಯಯುತವಾಗಿ ಕಲಿಕೆಗೆ ಮತ್ತು ಸ್ಮರಣೆಗೆ ಮರೆವು ಅತ್ಯವಶ್ಯಕವಾಗಿದೆ." – ಜಾನ್ ಹ್ಯಾಡಮ್
- "ಕಲಿತ ಕೂಡಲೆ ಅದು ಪುನಃ ಅಭ್ಯಾಸಕ್ಕೆ ಒಳಗಾಗದಿದ್ದರೆ ವಿಸ್ಮೃತಿ ಪ್ರಮಾಣ ಮತ್ತು ವೇಗ ಹೆಚ್ಚಾಗುತ್ತದೆ."– ಎಬ್ಬಿಂಗ್
- "ಕಲಿಕೆಯ ಶಾಶ್ವತ ಅಥವಾ ತಾತ್ಕಾಲಿಕ ನಷ್ಟವೇ ಮರೆವು"– ಮೂನ್.

ಎಬ್ಬಿಂಗ್ ಹಾಸ್

ಫ್ರಾನ್ಸ್ ಮನೋವಿಜ್ಞಾನಿ ಎಬ್ಬಿಂಗ್ ಹಾಸ್ (Ebbinghaus) ರವರು ನೆನಪು ಮತ್ತು ಮರೆವಿನ ಮೇಲೆ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಇವರ ಪ್ರಕಾರ ಕಲಿತ ವಿಷಯದ ಮರೆವು ಆರಂಭಿಕ ಹಂತದಲ್ಲಿ ಶೀಘ್ರವಾಗಿದ್ದರೆ ನಂತರದ ಅವಧಿಗಳಲ್ಲಿ ಕಡಿಮೆಯಾಗುತ್ತದೆ. ಇವರ ಪ್ರಕಾರ "ಮಿದುಳಿನ ಕಲಿಕೆ ಅಥವಾ ಅನುಭವದ ಮುದ್ರೆಯನ್ನೊಳಗೊಂಡ ನರಕೋಶದ ತಾತ್ಕಾಲಿಕ / ಶಾಶ್ವತ ಕಳೆದುಹೋಗುವಿಕೆಯೇ ಮರೆವು". ಕಲಿಕೆ ಎಷ್ಟು ಅನಿವಾರ್ಯವೋ ಮರೆವೂ ಕೂಡ ಅಷ್ಟೇ. ಅನಿವಾರ್ಯ ಮರೆವನ್ನು ಸಂಪೂರ್ಣ ಹೋಗಲಾಡಿಸಲು ಸಾಧ್ಯವಿಲ್ಲ. ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಕಲಿಕೆಯಲ್ಲಿ ಮರೆವಿನ ಪಾತ್ರ ಹೆಚ್ಚಾದರೆ ಕಲಿಕೆಯ

Digitised by Bharatavani, CIIL

ವೇಗವು ಕುಂಠಿತಗೊಳ್ಳುತ್ತದೆ. ನಿರಾಸಕ್ತಿ ಮೂಡುತ್ತದೆ. ಒಂದು ಸಮಯದಲ್ಲಿ ಜೀವನದ ಬಗ್ಗೆ ಜಿಗುಪ್ಸೆ ಅಸೂಯೆ, ಈರ್ಷೆ ಉಂಟಾಗುತ್ತದೆ. ಜೊತೆಗೆ ನಾನು ಏಕೆ ಕಲಿಯಬೇಕೆಂಬ ಬೇಜಾರುಂಟಾಗಬಹುದು. ಆದರೆ ಕಲಿತದ್ದೆಲ್ಲ, ಅನುಭವಕ್ಕೆ ಬಂದ ಸಿಹಿ-ಕಹಿ ಘಟನೆಗಳೆಲ್ಲಾ ಸ್ಮೃತಿಪಟಲದಲ್ಲಿ ಉಳಿಯುತ್ತಾ ಹೋದರೆ ಮನಸ್ಸು ತಿಪ್ಪೆಯೋಪಾದಿಯಲ್ಲಿ ಕಸದ ತೊಟ್ಟಿಯಾಗುತ್ತದೆ ಮತ್ತು ಆಲೋಚನಾ ಸ್ಥಿತಿ ನಿರ್ಮಾಣವಾಗಿ ವ್ಯಕ್ತಿತ್ವವು ಮಾಯವಾಗುತ್ತದೆ, ಬದುಕು ದುಸ್ತರವಾಗುತ್ತದೆ.

**ವಿಸ್ಮೃತಿಗೆ ಕಾರಣಗಳು (ನಮಗೆ ಮರೆವು ಏಕಾಗುತ್ತದೆ?)**

ಮರೆವಿಗೆ ಕಾರಣಗಳೇನು? ನಾವು ಹೇಗೆ ಮರೆಯುತ್ತೇವೆ, ಮರೆಯುವ ಬಗೆ, ಮುಂತಾದ ಅಂಶಗಳ ಮೇಲೆ ಹಲವಾರು ಪ್ರಯೋಗಗಳು ನಡೆದಿವೆ. ಕೆಲವು ನಡೆಯುತ್ತಲೇ ಇವೆ. ಅವುಗಳಲ್ಲಿ ಕಂಡುಬಂದ ಕೆಲವು ಪ್ರಮುಖ ಅಂಶಗಳು:

- ಕಲಿತ ವಿಷಯ ಪುನರಾವರ್ತನೆ ಆಗದೇ ಇದ್ದರೆ ಮರೆವು ಉಂಟಾಗುತ್ತದೆ.
- ಆಸಕ್ತಿಯ ಕೊರತೆ
- ದಣಿವು ಹಾಗೂ ಆಯಾಸ
- ಯಾಂತ್ರಿಕ ಕಲಿಕೆ
- ಸ್ಮೃತಿ ಜಾಲದಲ್ಲಿನ ಅಸ್ಪಷ್ಟತೆಯಿಂದ
- ಸಮಯ ಗತಿಸುವಿಕೆ
- ಪರಿಣಾಮಕಾರಿಯಾಗದ ಕಲಿಸುವಿಕೆ
- ದುಃಖಕರ ಅನುಭವಗಳು
- ಪಂಚೇಂದ್ರಿಯಗಳ ನ್ಯೂನತೆ ಮತ್ತು ಅನಾರೋಗ್ಯ
- ಅನ್ಯ ವಿಷಯಗಳ ಪ್ರವೇಶ
- ಕಲಿಕೆಯಲ್ಲಿ ಅಡಚಣೆ ಮತ್ತು ಮತ್ತೆ ಮತ್ತೆ ತಡೆವುಂಟು ಮಾಡುವ ಕ್ರಿಯೆಗಳು
- ಏಕಾಗ್ರತೆಯ ಕೊರತೆ
- ನಿದ್ರೆ ಅಭಾವ
- ವಿಶ್ರಾಂತಿಯ ಅಭಾವ
- ಬಲವಂತ ಅಧ್ಯಯನ
- ಅನುಪಯುಕ್ತ ಮಾಹಿತಿ
- ಮಾಹಿತಿ
- ಹಸ್ತಕ್ಷೇಪ
- ನಿರೋಧ
- ದಮನ
- ಸಂವೇಗಗಳು
- ಪ್ರಚೋದನಾ ಸನ್ನಿವೇಶಗಳಲ್ಲಿ ಬದಲಾವಣೆ
- ಭಾವೋದ್ರೇಕತೆಯ ತೀವ್ರತೆ.
- ಪ್ರೇರಣಾ ತತ್ವ ಅನುಸರಿಸದೇ ಇರುವುದು.
- ಕಲಿಸುವ ಮತ್ತು ಕಲಿತ ವಿಷಯಗಳಲ್ಲಿ ಜೋಡಣೆ ಇಲ್ಲದಿರುವುದು
- ಅಹಿತಕರ ಅನುಭವಗಳು
- ವಯಸ್ಸು
- ವಿಚಿತ್ರ ಸನ್ನಿವೇಶದ ಕಲಿಕೆ
- ಮೆದುಳಿಗಾದ ತೊಂದರೆ
- ವೇದನೆ, ದುಃಖ, ಆಘಾತದ ಸಂದರ್ಭದ ಕಲಿಕೆ ಮುಂತಾದವುಗಳು.

ಕಲಿತ ಸಂಗತಿಯನ್ನು ಉಪಯೋಗಿಸದೇ ಇದ್ದಾಗ, ಪುನರಾವರ್ತಿಸದಿದ್ದಾಗ ಮರೆವುಂಟಾಗುತ್ತದೆ. ಕಲಿಯುವ ಆಸಕ್ತಿಯಿಲ್ಲದಿದ್ದರೆ ಸಮಯ ವ್ಯರ್ಥವಾಗುವುದರೊಂದಿಗೆ ವಿಸ್ಮೃತಿ ಉಂಟಾಗುತ್ತದೆ. ಅರ್ಥಮಾಡಿಕೊಳ್ಳದೇ ಕಲಿತ ವಿಷಯವು ಮರೆತು ಹೋಗುತ್ತದೆ. ಸ್ಮೃತಿ ಜಾಲದಲ್ಲಿ ಸಂಗತಿಗಳು ಅಸ್ಪಷ್ಟವಾಗಿ ಮೂಡಿದ್ದರೆ ಕ್ರಮೇಣ ಸ್ಮೃತಿ ಜಾಲ ಅಳಿಸಿಹೋಗಿ ವಿಸ್ಮೃತಿ ಉಂಟಾಗುತ್ತದೆ. ಕಲಿತ ವಿಷಯವನ್ನು ಆಗಾಗ್ಗೆ ನೆನಪಿಸಿಕೊಳ್ಳದಿದ್ದರೆ ಸ್ಮೃತಿಜಾಲ ದುರ್ಬಲಗೊಂಡು ಮರೆವುಂಟಾಗುತ್ತದೆ. ಕಲಿತ ವೇಳೆಗೂ ಪುನಃ ಅಭ್ಯಾಸದ ವೇಳೆಗೂ ಕಾಲಾವಧಿ ಹೆಚ್ಚಾದಂತೆ ಮರೆವಿನ ಪ್ರಮಾಣವೂ ಹೆಚ್ಚಾಗುತ್ತಾ ಹೋಗುತ್ತದೆ. ಕಲಿಕೆ ನಂತರ ನಿದ್ರೆಯಿಂದ ಎದ್ದವನ ನೆನಪು 70% ರಷ್ಟಿದ್ದರೆ ನಿದ್ರೆ ಮಾಡದವನ ನೆನಪು ಕೇವಲ 49% ಇದ್ದದ್ದು ತಿಳಿದು ಬಂದಿದೆ. ಕೆಲವು ವೇಳೆ ಎಷ್ಟೋ ಸಮಸ್ಯೆಗಳಲ್ಲಿ ದೊರೆಯುವ ಉತ್ತರಗಳು ನಿದ್ರೆಯಿಂದ ಎದ್ದ ತಕ್ಷಣ ಮಿಂಚಿನಂತೆ ನೆನಪಿಗೆ ಬರುತ್ತವೆ. ಇದರರ್ಥ ನಿದ್ರಾವಸ್ಥೆಯಲ್ಲಿಯೂ ಸಹ ಮೆದುಳು ಕಾರ್ಯ ಪ್ರವೃತ್ತವಾಗಿರುತ್ತದೆ. ನಾವು ಕಲಿತ ನಂತರ ಅನೇಕ ದೈನಂದಿನ ಚಟುವಟಿಕೆಗಳಲ್ಲಿ ತೊಡಗುವುದರಿಂದ ಅಸಂಖ್ಯಾತ ಹೊಸ ವಿಚಾರಗಳು ಮೆದುಳಿಗೆ ಪ್ರವೇಶವಾಗಿ ಕಲಿತ ವಿಷಯ ಮಸುಕಾಗುತ್ತದೆ. ಇದರಿಂದ ಕಾಲ ಕ್ರಮೇಣ ಕಲಿತ ವಿಷಯಗಳು ವಿಸ್ಮೃತಿಗೆ ಒಳಗಾಗುತ್ತವೆ. ತೀವ್ರ ಮಾನಸಿಕ ಅಥವಾ ದೈಹಿಕ ವೇದನೆ ಉಂಟುಮಾಡುವ ಅನುಭವಗಳು ಮನಸ್ಸಿನ ಅಜಾಗೃತಿ ಭಾಗಕ್ಕೆ ನಮಗೆ ಅರಿವಿಲ್ಲದಂತೆ ತಳ್ಳಲ್ಪಡುತ್ತವೆ. ಇಂಥ ಅನೈಚ್ಛಿಕ ದಮನ ಕೂಡ ಮೇಲ್ನೋಟಕ್ಕೆ ವಿಸ್ಮೃತಿಯಂತೆ ಕಾಣುತ್ತದೆ.

ಮಾದಕ ವಸ್ತುಗಳ ಪ್ರಭಾವದಿಂದ ನರಮಂಡಲವು ಅಶಕ್ತವಾಗಿ ಮರೆವು ಉಂಟಾಗುತ್ತದೆ. ಇಳಿವಯಸ್ಸಿನಿಂದಾಗಿ ಸ್ಮೃತಿ ಶಕ್ತಿ ಕುಂಠಿತಗೊಳ್ಳುತ್ತದೆ. ಕಲಿಕೆ ನಂತರ ಮೆದುಳಿಗೆ ವಿಶ್ರಾಂತಿ ದೊರೆಯದಿದ್ದರೆ ಕಾಲ ಕ್ರಮೇಣ ಕಲಿಕೆಯಲ್ಲಿ ಮರೆವುಂಟಾಗುತ್ತದೆ. ಕಾಲ ಮತ್ತು ಉಪಯೋಗಿಸದೇ ಕಲಿತ ವಿಷಯವನ್ನು ಆಗಾಗ್ಗೆ ನೆನಪಿಸಿಕೊಳ್ಳದಿದ್ದರೆ ಸ್ಮೃತಿ ಜಾಲ ದುರ್ಬಲಗೊಂಡು ಮರೆವಾಗುತ್ತದೆ. ಕಲಿಕೆ ನಂತರ ಅನೇಕ ದೈನಂದಿನ ಚಟುವಟಿಕೆಗಳಲ್ಲಿ ತೊಡಗುವುದರಿಂದ ಅಸಂಖ್ಯಾತ ಹೊಸ ವಿಚಾರಗಳು ಮೆದುಳಿಗೆ ಪ್ರವೇಶಿಸಿ ಕಲಿತ ವಿಷಯ ಮಸುಕಾಗುತ್ತದೆ.

ಮಗು ಅಥವಾ ವ್ಯಕ್ತಿ ವಿಷಯವನ್ನು ಎಷ್ಟುಬೇಕೋ ಅಷ್ಟು ತೃಪ್ತಿದಾಯಕವಾಗಿ, ಸ್ಪಷ್ಟವಾಗಿ, ಅರ್ಥವತ್ತಾಗಿ ಏಕೆ? ಯಾವಾಗ? ಕಾರಣ? ಮಹತ್ವ, ಗುಣಾವಗುಣಗಳು ಮುಂತಾದ ವಿಷಯ ಸಾಮಗ್ರಿಗಳನ್ನು ಕಲಿಯುವ ಸಂದರ್ಭದಲ್ಲಿ ಗ್ರಹಿಸದೇ ಇದ್ದರೆ ಮರೆವಿಗೆ ಅಥವಾ ವಿಸ್ಮೃತಿಗೆ ಕಾರಣವಾಗುತ್ತದೆ. ಕಲಿಯುವ ವಿಷಯದಲ್ಲಿ ಮತ್ತು ವಿಷಯ ಅಭಿವ್ಯಕ್ತಿ ಸಂದರ್ಭದಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳು ಉದ್ವೇಗ, ಭಯ, ಕಂಪನ, ಆತಂಕ,. ಅವಸರ ಮುಂತಾದವುಗಳ ತೀವ್ರತೆಯಿಂದ ವಿಸ್ಮೃತಿಯಾಗಲು


Digitised by Bharatavani, CIIL

ಕಾರಣವಾಗುತ್ತದೆ. ಮಕ್ಕಳು ಪ್ರಶ್ನೆಗಳಿಗೆ ಉತ್ತರ ಹೇಳುವಾಗ ಚರ್ಚಿಸುವಾಗ ಮತ್ತಿತರ ವಿಷಯಗಳಲ್ಲಿ ಅವರನ್ನು ಪ್ರೋತ್ಸಾಹಿಸದಿರುವುದು, ಹೊಗಳದೆ ಇರುವುದು ಮರೆವಿಗೆ ಕಾರಣವಾಗಬಹುದು. ಪುಷ್ಟೀಕರಣ ಮತ್ತು ಪ್ರೇರಣಾ ತತ್ವಗಳನ್ನು ಅನುಸರಿಸದೇ ಇರುವುದು ಮರೆವಿಗೆ ಕಾರಣವಾಗುತ್ತದೆ. ಮಕ್ಕಳ ವಯೋಮಿತಿಗೆ, ಆಸಕ್ತಿ, ಅಭಿರುಚಿಗೆ, ಬೌದ್ಧಿಕ ಶಕ್ತಿಗನುಸಾರವಾಗಿ ಬೋಧಿಸುವ ವಿಷಯಗಳಲ್ಲಿ ಯಾವ ಸ್ವ-ಅನುಭವಗಳನ್ನೂ ನೀಡದೇ ಕೇವಲ ಸೈದ್ಧಾಂತಿಕವಾಗಿ ಮಾತ್ರ ನೀಡುವುದರಿಂದ ಸಾಕಷ್ಟು ಅರ್ಥಪೂರ್ಣ ಅನುಭವಗಳನ್ನು ನೀಡದೇ ಇರುವುದು ಮರೆವಿಗೆ ಕಾರಣವಾಗಬಹುದು. ಬೋಧನಾ ಸಂದರ್ಭದಲ್ಲಿ ಉತ್ತಮ ಬೋಧನಾ ತಂತ್ರಗಳು, ಕೌಶಲಗಳು, ಬೋಧನಾ ತತ್ವಗಳು, ಸೂಕ್ತ ಆಧುನಿಕ ಬೋಧನೋಪಕರಣಗಳನ್ನು ಬಳಸದೇ, ಕೇವಲ ಬಾಯ್ದೆರೆ ಮತ್ತು ಬರವಣಿಗೆ ಮೂಲಕ ಬೋಧನೆ ನಡೆಯುವುದರಿಂದ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರದಿರುವುದರಿಂದ ವಿಷಯ ಹೆಚ್ಚು ಕಾಲ ಇರದೆ ಮರೆವು ಉಂಟಾಗುತ್ತದೆ.

ಮಕ್ಕಳು ಉತ್ತಮ ವಾತಾವರಣದಲ್ಲಿ ಉಚಿತ ಸಂದರ್ಭದಲ್ಲಿ ಕಲಿಯಲು ಅವಕಾಶ ನೀಡದೆ ಯಾವುದೋ ಒಂದು ಸಂದರ್ಭ ಮತ್ತು ಯಾವುದೋ ಒಂದು ಪರಿಸರದಲ್ಲಿ ಕಲಿಸಿದರಾಯ್ತು. ಕಲಿತಷ್ಟು ಕಲಿಯಲಿ ಎಂದು ಯಾವುದೇ ರೀತಿಯ ಉತ್ತಮ ಸೌಲಭ್ಯಗಳನ್ನು ಒದಗಿಸದೇ ಉತ್ತಮ ಆಂತರಿಕ ಅಥವಾ ಬಾಹ್ಯ ವಾತಾವರಣ, ನಿರ್ಮಾಣ ಮಾಡದೆ ಇರುವುದರಿಂದ ಕಲಿತ ವಿಷಯಗಳು ಪರಿಣಾಮಕಾರಿಯಾಗದೆ ಮರೆವುಂಟಾಗುತ್ತದೆ. ಕಲಿಯುವ ಮತ್ತು ಕಲಿಸುವ ವಿಷಯಗಳಿಗೆ ಸರಿಯಾದ ಕೊಂಡಿಗಳ ಸಂಬಂಧ ಏರ್ಪಡಿಸದೆ ಒಂದಕ್ಕೊಂದು ವಿಷಯಗಳಿಗೆ ಸಂಬಂಧವಿಲ್ಲದಂತೆ ಕಲಿತರೆ ಮರೆವುಂಟಾಗಬಹುದು. ಕಲಿತ ವಿಷಯಗಳಿಗೆ ಮತ್ತು ಕಲಿಸುವ ವಿಷಯಗಳಲ್ಲಿ ಉದಾಹರಣೆಗಳು, ನಿದರ್ಶನಗಳು, ಸಹ–ಸಂಬಂಧಗಳು, ಪ್ರಯೋಗಗಳು, ಸಂಬಂಧವಿಲ್ಲದೇ ನಡೆದರೆ ಯಾವುದೂ ಸರಿಯಾಗಿ ಅರ್ಥವಾಗದೆ ಬೇಕಾದ ಸಂದರ್ಭದಲ್ಲಿ ಜ್ಞಾಪಕಕ್ಕೆ ಬಾರದೆ ವಿಷಯಗಳು ಕಳಚಿಹೋಗಿ ಮರೆವು ಆಗುವುದಕ್ಕೆ ಕಾರಣವಾಗುತ್ತದೆ.

– ಆರ್.ನ.ಮೂ.

## ವಿಜ್ಞಾನ ಬೋಧನೆಯಲ್ಲಿ ಪ್ರಯೋಗಾಲಯಗಳ ಪಾತ್ರ

ಅನುಭವಗಳನ್ನು ನಿಯಂತ್ರಿತ ವೀಕ್ಷಣೆಗಳಿಗೊಳಪಡಿಸಿ ಶುದ್ಧವಾದ, ವಿಶ್ವಸನೀಯವಾದ ಫಲಿತಾಂಶಗಳನ್ನು ಕೊಡುವಂತಹ ಯಾವುದೇ ಸ್ಥಳ ಪ್ರಯೋಗಾಲಯ ಅಂದರೆ, ಕೇವಲ ರಾಸಾಯನಿಕಗಳು, ಉಪಕರಣಗಳು, ಸಲಕರಣೆಗಳು, ನಾಲ್ಕು ಗೋಡೆಗಳಿಗೆ ಸೀಮಿತವಾಗಿರದೆ ಇಡೀ ವಿಶ್ವವೇ ಪ್ರಯೋಗಾಲಯವಾಗಿರಬಹುದು. ಉದಾಹರಣೆಗೆ, ನ್ಯೂಟನ್‌ಗೆ ತೋಟ, ಆರ್ಕಿಮಿಡೀಸ್‌ಗೆ ಸ್ನಾನದ ತೊಟ್ಟಿ, ರಾಮನ್‌ಗೆ ಸಮುದ್ರಯಾನ, ಶಾಲಾ ಕಾಲೇಜುಗಳಲ್ಲಿರುವ ಪ್ರಯೋಗಾಲಯಗಳು ಸಾಂಪ್ರದಾಯಿಕವಾಗಿರುತ್ತವೆ.

ವಿಜ್ಞಾನದ ಮೂಲತತ್ವವಾದ "ಮಾಡಿ ಕಲಿ"ಯುವಿಕೆ ಪ್ರಯೋಗಾಲಯಗಳಲ್ಲಿ ಮಾತ್ರ ವಾಸ್ತವವಾಗುತ್ತದೆ. ಔಪಚಾರಿಕವಾದ ಶಾಲಾ ಕಾಲೇಜುಗಳಲ್ಲಿನ ಪ್ರಯೋಗಾಲಯಗಳೂ ಸಹ ನಿಜ ಅರ್ಥದಲ್ಲಿ ಕಾರ್ಯನಿರ್ವಹಿಸಿದರೆ ಕೇವಲ ಒರೆಹಚ್ಚುವ, ತಪಶೀಲು ನೋಡುವ ಪ್ರಯೋಗ ಅಥವಾ ಸಾಂಪ್ರದಾಯಿಕವಾಗಿ ನಿಗದಿತವಾದ ವೈಜ್ಞಾನಿಕ ಕುಶಲತೆಗಳಿಗೆ ಮಾತ್ರ ಸೀಮಿತವಾಗಿರದೆ ಪ್ರಯೋಗಾರ್ಥಿಗಳನ್ನು ಕುರುಡುನಂಬಿಕೆ, ಮೂಢನಂಬಿಕೆ, ಕಂದಾಚಾರಗಳಿಂದ ಮುಕ್ತಗೊಳಿಸಲು ಅಗತ್ಯವಾದ ವಾಸ್ತವಜ್ಞಾನ ಅನುಭವಗಳನ್ನು ನೀಡುತ್ತವೆ.

ತಥ್ಯಗಳನ್ನು ಪರಿಕಲ್ಪನೆಗಳನ್ನಾಗಿಸಲು, ಸಿದ್ಧಾಂತ ಮತ್ತು ವಾಸ್ತವಗಳ ನಡುವೆ ಅಂತರ ಕಡಿಮೆ ಮಾಡಲು, ವಿಚಾರಗಳನ್ನು ಆಚರಣೆಗೆ ತರಲು, ಮೂಢರನ್ನು ರೂಢರನ್ನಾಗಿಸಲು ಅಗತ್ಯವಾದ ಪರಿಸರ, ಅನುಭವಗಳನ್ನು ಒದಗಿಸುವ ಪ್ರಯೋಗಾಲಯ ಚಿಕ್ಕದಾದರೂ ಸಹ ಅನುಕರಣೀಯ ಅನ್ವೇಷಣಾ ಕಾರ್ಯಗಳಿಗೆ ಯುಕ್ತವಾದ ಅವಕಾಶ ಕಲ್ಪಿಸುತ್ತದೆ. ಸಿದ್ಧಾಂತ–ವಾಸ್ತವಗಳ ನಡುವಿನ ವ್ಯತ್ಯಾಸಗಳನ್ನು ಸಕಾರಣವಾಗಿ ವಿವರಿಸಿ ಪ್ರಶಂಸಿಸಲು ನೆರವು ನೀಡುತ್ತದೆ. ತರಗತಿಕೋಣೆ ಮತ್ತು ಪ್ರಯೋಗಾಲಯಗಳ ನಡುವಿನ ಕೃತಕ ಅಂತರ, ಭಿನ್ನತೆಗಳನ್ನು ನಿವಾರಿಸುತ್ತದೆ. ತರಗತಿ ಕೋಣೆಯಲ್ಲಿನ ಕಲಿಕೆಗೆ ಪೂರಕವಾಗುತ್ತದೆ.

ಅನೇಕ ಉತ್ತಮ ಪ್ರಾತ್ಯಕ್ಷಿಕೆಗಳಿಗಿಂತ ಪ್ರಯೋಗಾಲಯ ಕಾರ್ಯದ ಒಂದು ಅನುಭವ ಮಿಗಿಲಾದುದು. ಕಾರಣ ಈ ಅನುಭವಗಳು ನೇರ, ಪ್ರಥಮ ಹಾಗೂ ಅಗತ್ಯ ಹಸ್ತಾನುಭವಗಳಿಂದ ಪ್ರಾವೀಣ್ಯ ಕಲಿಕೆಗೆ ದಾರಿಯಾಗುತ್ತವೆ. ನೋಡಿ, ಕೇಳಿ, ಕಲಿಯುವುದಕ್ಕಿಂತ, ಮಾಡಿ ಕಲಿಯುವಿಕೆಗೆ ಆದ್ಯತೆ ನೀಡಿ, ದೀರ್ಘಕಾಲದ ಸ್ಮೃತಿಗೆ ಕಾರಣವಾಗುತ್ತದೆ.

ಅಮೂರ್ತ ವೈಜ್ಞಾನಿಕ ತಿಳಿವಳಿಕೆ ಪಡೆಯಲು, ವೈಜ್ಞಾನಿಕ ಪರಿಕಲ್ಪನೆಗಳನ್ನು ಮೂಡಿಸಿಕೊಳ್ಳಲು, ವೈಜ್ಞಾನಿಕ ಧೋರಣೆ ಆಸಕ್ತಿಗಳನ್ನು ಬೆಳೆಸಿಕೊಳ್ಳಲು, ವಿಜ್ಞಾನ ವಿಧಾನದಲ್ಲಿ ತರಬೇತಿ ಪಡೆಯಲು, ಪ್ರಯೋಗಾಲಯ ಕಾರ್ಯದ ಅನುಭವಗಳು ಅತ್ಯಗತ್ಯ.

ಪ್ರಯೋಗಾಲಯ ಕಾರ್ಯಗಳಿಂದ ಉಂಟಾಗುವ ಇತರೆ ಲಾಭಗಳೆಂದರೆ, ಪ್ರಯೋಗಾರ್ಥಿಗಳಲ್ಲಿ ಸಹಕಾರ ಮನೋಭಾವ, ಸವಾಲುಗಳನ್ನು ಸ್ವೀಕರಿಸುವ ಮನಸ್ಸು, ಸ್ವ–ಶಿಸ್ತು, ಸ್ವ–ಗೌರವ, ಸ್ವ–ವಿಮರ್ಶೆ ಮುಂತಾದ ಮಾನಸಿಕ ಶ್ರೀಮಂತಿಕೆಯ ಗುಣಗಳ ಬೆಳವಣಿಗೆ ಸಾಧ್ಯ.

ನಿತ್ಯ ಜೀವನಕ್ಕೆ ಅವಶ್ಯವಾದಂತಹ ವಿಮರ್ಶಾತ್ಮಕ ಮತ್ತು ಸೂಕ್ಷ್ಮ ವೀಕ್ಷಣೆ, ಶ್ರಮಗೌರವ, ಬೆರೆಸುವಿಕೆ, ಅಳತೆಮಾಡುವಿಕೆ, ದಾಖಲಿಸುವಿಕೆ, ಕ್ರಮಬದ್ಧತೆ, ಸಮಯಪಾಲನೆ, ಕರಾರುವಾಕ್ಕುತನ, ಸ್ವಚ್ಛತೆ ಮುಂತಾದ ಗುಣಗಳನ್ನು ಮೈಗೂಡಿಸಿಕೊಳ್ಳಲು ಪ್ರಯೋಗಾಲಯ ಕಾರ್ಯಗಳು ಸಹಾಯ ಮಾಡುತ್ತವೆ.

ಅನ್ವೇಷಣೆ ಮಾಡಲು, ಸಮಸ್ಯೆಗಳನ್ನು ಪರಿಹರಿಸಲು, ಸಮಸ್ಯಾ ಕೇಂದ್ರಿತವಾಗಿರಿಸಲು ಪ್ರಯೋಗಾಲಯ ಅನುಭವಗಳು ಪುಷ್ಟಿ ನೀಡುತ್ತವೆ.

ರಾಸಾಯನಿಕಗಳ, ವಸ್ತುಗಳ ಭಿನ್ನತೆಗಳನ್ನು ಗುರ್ತಿಸಿದ ಪ್ರಯೋಗಾರ್ಥಿ ನಿತ್ಯ ಜೀವನದಲ್ಲಿ ವ್ಯಕ್ತಿ ಭಿನ್ನತೆಗಳನ್ನು ಪ್ರಶಂಸಿಸುವುದೇ ಅಲ್ಲದೆ ಅದಕ್ಕನುಗುಣವಾಗಿ ವರ್ತಿಸಲು ಕಲಿಯುತ್ತಾನೆ.

ಸೂಕ್ಷ್ಮ, ಅಪರೂಪ, ಆರ್ಥಿಕವಾಗಿ ದುಬಾರಿಯಾದ ಪ್ರಯೋಗಗಳನ್ನು ಉತ್ತಮ ಮೇಲ್ವಿಚಾರಣೆಯಡಿಯಲ್ಲಿ ಅಭ್ಯಾಸ ಮಾಡಿ, ನಂತರ ಸ್ವತಂತ್ರವಾಗಿ ನಿರ್ವಹಿಸಲು ಕಲಿತ ಪ್ರಯೋಗಾರ್ಥಿ ನಿತ್ಯ ಜೀವನಕ್ಕೆ ಅವಶ್ಯವಾದ ಆತ್ಮ ವಿಶ್ವಾಸ, ನಿಷ್ಠೆ, ಸಮಯಪಾಲನೆ, ಯಥಾವತ್ತಾಗಿರುವಿಕೆ ಮುಂತಾದ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುತ್ತಾನೆ.

ರಾಸಾಯನಿಕಗಳ ಮಿಶ್ರಣದಿಂದ ಸೂಕ್ಷ್ಮ ಬದಲಾವಣೆಗಳನ್ನು ವೀಕ್ಷಿಸುವುದರಿಂದ (ಉದಾಹರಣೆಗೆ ಲಿಟ್ಮಸ್ ಪರೀಕ್ಷೆ, ಕಾಂತಸೂಜಿಯಲ್ಲಿನ ಸೂಕ್ಷ್ಮ ಅಲುಗುವಿಕೆ) ಪ್ರಾಯೋಗಿಕ ಪ್ರಮಾಣ ಎಂದರೇನು? ಪ್ರಾಯೋಗಿಕ ಬದಲಾವಣೆಗಳನ್ನು ಹೇಗೆ ವೀಕ್ಷಿಸಬೇಕು? ಬದಲಾವಣೆಗಳು ಎಷ್ಟು ಇರುತ್ತವೆ? ಇಂತಹ ಬದಲಾವಣೆಗಳ ಮಹತ್ವದ ಸಾರ್ಥಕತೆಗಳೇನು? ಎಂಬ ಅಂಶಗಳ ತಿಳಿವಳಿಕೆ ಪಡೆಯಲು ಸಾಧ್ಯ.

Digitised by Bharatavani, CIIL

ಪ್ರಯೋಗಾಲಯ ಕಾರ್ಯಗಳು ನಮ್ಮ ಇತಿಮಿತಿಗಳನ್ನು, ಸಾಮರ್ಥ್ಯಗಳನ್ನು ತಿಳಿದುಕೊಂಡು ಅದಕ್ಕನುಗುಣವಾಗಿ ವರ್ತಿಸಲು ಸಹಾಯಮಾಡುತ್ತವೆ. ನಮ್ಮಲ್ಲಿರಬಹುದಾದ ವಿನಾಕಾರಣದ ನಾಚಿಕೆ, ಅವರೋಧ, ಹೆದರಿಕೆ, ಕೀಳರಿಮೆಗಳನ್ನು ಅನುಭವಗಳು ಹೋಗಲಾಡಿಸುತ್ತವೆ.

ಆಶುಉಪಕರಣಗಳ ಅವಶ್ಯಕತೆ, ಅವುಗಳನ್ನು ತಯಾರಿಸುವಿಕೆ ಮುಂತಾದವುಗಳಿಂದ ಆತ್ಮವಿಶ್ವಾಸ, ಸೃಜನಶೀಲತೆಗಳನ್ನು ಬೆಳೆಸುವುದಲ್ಲದೆ ಉಪಕರಣಗಳ ಹಿಂದಿರುವ ತತ್ವಗಳ ಆಳ ತಿಳಿವಳಿಕೆಯಿಂದ ನಿತ್ಯ ಜೀವನದಲ್ಲಿ ಪರ್ಯಾಯ, ಸರಿಪಡಿಸುವಿಕೆ, ಮುಂತಾದವುಗಳ ತಿಳಿವಳಿಕೆ ನೀಡುತ್ತದೆ. ಪ್ರಯೋಗಾರ್ಥಿಗೆ "ತಾನುವಿಜ್ಞಾನಿ" ಎಂಬ ಉದಾತ್ತ ಭಾವನೆಯಿಂದ ಉನ್ನತ ತಾದಾತ್ಮ್ಯ ಸಾಧ್ಯವಾಗುತ್ತದೆ.

–ಎಚ್.ಎಸ್.ಮ.

## ವೇದಕಾಲೀನ ಶಿಕ್ಷಣ

### ಚಾರಿತ್ರಿಕ ಹಿನ್ನೆಲೆ

ಭಾರತೀಯ ಶಿಕ್ಷಣಕ್ಕೆ ಪ್ರಾಚೀನ ಕಾಲದಲ್ಲಿಯೇ (ಕ್ರಿ.ಪೂ 1500–ಕ್ರಿ.ಪೂ.600) ಮಹತ್ವದ ಅಡಿಪಾಯ ದೊರಕಿದೆ. ವೇದಗಳು ಆರ್ಯರ ಜೀವನ, ಸಂಸ್ಕೃತಿ, ಶಿಕ್ಷಣದ ಬಗ್ಗೆ ವಿಸ್ತಾರದ ವಿವರಣೆಯನ್ನು ನೀಡುತ್ತವೆ. ಆರ್ಯರು ಮೊದಲು ಸಿಂಧೂ ಬಯಲಿನಲ್ಲಿ ನೆಲೆಸಿದವರು ಕ್ರಮೇಣ ಭಾರತದ ಇತರ ಭಾಗಗಳಿಗೂ ಹರಡಿಕೊಂಡರು. ಮೊದಲು ಪಂಜಾಬಿನಲ್ಲಿ ನೆಲಸಿದ ಆರ್ಯರು ಆ ಪ್ರದೇಶವನ್ನು "ಸಪ್ತ ಸಿಂಧವಃ" ಎಂದು ಕರೆದರು. ಅಂದರೆ ಏಳು ನದಿಗಳ ಪ್ರದೇಶ–ಜೀಲಂ, ಚೀನಾಬ್, ರಾವಿ, ಬಿಯಾಸ್, ಸಟ್ಲೇಜ್, ಸರಸ್ವತಿ ಮತ್ತು ದ್ರಿಷದ್ವತಿ. ಇಲ್ಲಿಯೇ ಋಗ್ವೇದ ರಚಿತವಾದಂತೆ ಕಂಡು ಬಂದಿದೆ. ಒಟ್ಟು ನಾಲ್ಕು ವೇದಗಳಿವೆ. ಋಗ್ವೇದ, ಸಾಮವೇದ, ಯಜುರ್ವೇದ ಮತ್ತು ಅಥರ್ವಣವೇದ. ಇವುಗಳಲ್ಲಿ ಋಗ್ವೇದ ಅತಿ ಪ್ರಾಚೀನವಾದುದು.

ವೇದ ಎಂದರೆ ತಿಳಿವಳಿಕೆ ಅಥವಾ ಜ್ಞಾನ ಎಂದರ್ಥ. ಪೀಳಿಗೆಯಿಂದ ಪೀಳಿಗೆಗೆ ಕಂಠಪಾಠದಲ್ಲೇ ಬಂದ ಇವು ದೇವವಾಣಿ ಎಂಬ ನಂಬಿಕೆ ಇದೆ. ಇತ್ತೀಚೆಗಷ್ಟೇ ಇವು ಗ್ರಂಥರೂಪ ಪಡೆದಿವೆ. ಆರ್ಯರ ಸಂಸ್ಕೃತಿಯ ಬೆಳವಣಿಗೆಯಲ್ಲಿ ಋಗ್ವೇದದ ಕಾಲಕ್ಕೂ ತರುವಾಯ ರಚಿತವಾದ ಉಳಿದ ಎರಡು ವೇದಗಳ ಕಾಲಕ್ಕೂ ನಡುವಿನ ಕಾಲವನ್ನು,

1) ಋಗ್ವೇದದ ಕಾಲ (ಪೂರ್ವ ವೈದಿಕ ಕಾಲ)
2) ಉಳಿದ ವೇದಗಳ ಕಾಲ (ಉತ್ತರ ವೈದಿಕ ಕಾಲ) ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ವೇದಗಳಲ್ಲಿ ಸಂಹಿತೆ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷದ್ ಎಂಬ ನಾಲ್ಕು ಭಾಗಗಳಿವೆ.

### ವೇದಕಾಲೀನ ಶಿಕ್ಷಣದ ಉದ್ದೇಶಗಳು

ವೇದಗಳ ಕಾಲದಲ್ಲಿ ಶಿಕ್ಷಣದ ಮೂಲ ಹಾಗೂ ಬಹುಮುಖ್ಯ ಉದ್ದೇಶ ಮೋಕ್ಷಸಾಧನೆಗೆ ಶಿಷ್ಯನನ್ನು ಎಲ್ಲಾ ವಿಷಯಗಳಲ್ಲೂ ಸಿದ್ಧಪಡಿಸುವುದಾಗಿತ್ತು. ಈ ಆದರ್ಶ ಉದ್ದೇಶದೊಂದಿಗೆ ಶಿಕ್ಷಣಕ್ಕೆ ಈ ಕೆಳಗಿನ ವ್ಯಾವಹಾರಿಕ, ಪ್ರಾಪಂಚಿಕ ಉದ್ದೇಶಗಳು ಇದ್ದವು.

1) ಮಾನವನ ಗುಣವನ್ನು ಸಂಪದ್ಭರಿತವಾಗಿಸುವುದು.
2) ಈಶ್ವರ ಭಕ್ತಿ ಹಾಗೂ ಧಾರ್ಮಿಕತೆಯ ಭಾವನೆಯನ್ನು ಬೆಳೆಸುವುದು.
3) ವ್ಯಕ್ತಿತ್ವ ವಿಕಾಸ ಉಂಟುಮಾಡುವುದು.
4) ಸಾಮಾಜಿಕ ಕರ್ತವ್ಯದ ಅರಿವು ಉಂಟುಮಾಡುವುದು.
5) ಮನುಷ್ಯನಲ್ಲಿ ಸತ್ಯದ ಅರಿವು, ಪ್ರಾಮಾಣಿಕತೆಯ ಅರಿವು ಉಂಟುಮಾಡುವುದು.
6) ಕಂಠಪಾಠದ ಮೂಲಕ ಸ್ಮರಣಾ ಶಕ್ತಿ ಹೆಚ್ಚಿಸುವುದು.
7) ವಿದ್ಯಾರ್ಥಿಗಳನ್ನು ವೇದ ಶಾಸ್ತ್ರ, ಪುರಾಣಗಳ ಅಧ್ಯಯನ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸುವುದು.
8) ವಿದ್ಯಾರ್ಥಿಗಳಲ್ಲಿ ಗುರು ಹಿರಿಯರ ಬಗ್ಗೆ ವಿಧೇಯತೆ ಮೂಡಿಸುವುದು.
9) ಸಾಮಾಜಿಕ ಕುಶಲತೆಯ ಉನ್ನತಿ ಹಾಗೂ ರಾಷ್ಟ್ರೀಯ ಸಂಸ್ಕೃತಿಯ ಸಂರಕ್ಷಣೆಯ ಅರಿವು ಮೂಡಿಸುವುದು.
10) ವಿದ್ಯಾರ್ಥಿಗಳಲ್ಲಿ ಶಿಸ್ತು ಪ್ರತಿಪಾದಿಸುವುದು.

### ವೇದ ಕಾಲೀನ ಶಿಕ್ಷಣದ ಪಠ್ಯಕ್ರಮ

ಪಠ್ಯಕ್ರಮವು ಸಾಮಾಜಿಕ ಸಂಘಟನೆಯ ಆಧಾರದ ಮೇಲೆ ವಿಭಜನೆಯಾಗಿತ್ತು. ಬ್ರಾಹ್ಮಣರಿಗೆ ಧರ್ಮ, ಕ್ಷತ್ರಿಯರಿಗೆ ಯುದ್ಧ ಮತ್ತು ರಾಜನೀತಿ, ವೈಶ್ಯರುಗಳಿಗೆ ಕೃಷಿ ಹಾಗೂ ವಾಣಿಜ್ಯ ಶಿಕ್ಷಣ, ಶೂದ್ರರಿಗೆ ಹಸ್ತಕಲೆ ಹಾಗೂ ಸೇವಾ ಕಾರ್ಯದ ಜ್ಞಾನ ಪಠ್ಯಕ್ರಮದಲ್ಲಿ ಅಳವಡಿಸಲಾಗಿತ್ತು. ಶೂದ್ರರನ್ನು ಹೊರತುಪಡಿಸಿ ಇತರೇ ಮೂರು ವರ್ಗದ ಜನರಿಗೆ ಈ ಕೆಳಕಂಡ ಪಠ್ಯವಸ್ತುಗಳನ್ನು ಅಳವಡಿಸಲಾಗಿತ್ತು.

- **ಋಗ್ವೇದದ ಸೂತ್ರಗಳು**

ಇದರಲ್ಲಿ ಒಟ್ಟು ಹತ್ತು ಮಂಡಲಗಳು (ಅಧ್ಯಾಯ), 1028 ಸೂತ್ರಗಳು, 10552 ಋಕ್ಕುಗಳೂ ಇವೆ. ಋಗ್ವೇದ ಧಾರ್ಮಿಕವಾದರೂ ಅದರಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಷಯಗಳನ್ನು ಅರಿಯಲು ಸಾಕಷ್ಟು ಅವಕಾಶವಿದೆ.

- **ಯಜುರ್ವೇದ ಸೂತ್ರಗಳು**

ಇದರಲ್ಲಿ ಸುಮಾರು 101 ಶಾಖೆಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 1) ಕಾಠಕ 2) ಕಪಿಸ್ಥಲ 3) ಮೈತ್ರಾಯಣಿ 4) ತೈತ್ತರೀಯ 5) ವಾಜ ಸೇನೆಯ.

ಇವುಗಳಲ್ಲಿ ಮೊದಲಿನ ನಾಲ್ಕಕ್ಕೆ ಕೃಷ್ಣಯಜುರ್ವೇದವೆಂದು, ಐದನೆಯದಕ್ಕೆ ಶುಕ್ಲಯಜುರ್ವೇದವೆಂದು ಹೆಸರು. ಕೃಷ್ಣಯಜುರ್ವೇದದಲ್ಲಿ ಯಾಗಗಳನ್ನು ಮಾಡುವ ವಿಧಾನವಿದ್ದರೆ, ಶುಕ್ಲಯಜುರ್ವೇದದಲ್ಲಿ ಮಂತ್ರಗಳು, ಪ್ರಾರ್ಥನೆಗಳಿವೆ. ಯಾಗದ ನಿಯಮಗಳು 40 ಭಾಗಗಳಲ್ಲಿ ಅಡಕವಾಗಿವೆ.

- **ವ್ಯಾಕರಣ**

• ಜ್ಯೋತಿಷ್ಯ ಶಾಸ್ತ್ರ, ದೇವ ವಿದ್ಯಾ, ಬ್ರಹ್ಮ ವಿದ್ಯಾ, ಭೂತವಿದ್ಯಾ, ದೇವಜನ ವಿದ್ಯಾ (ನೃತ್ಯ), ತರ್ಕಶಾಸ್ತ್ರ, ಇತಿಹಾಸ ಇವುಗಳನ್ನು ಪಠ್ಯ ಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿತ್ತು.

### ವೈದಿಕ ಶಿಕ್ಷಣಕ್ಕೆ ವಿದ್ಯಾರ್ಥಿಗಳ ದಾಖಲಾತಿ ಕ್ರಮ

ವೈದಿಕಶಿಕ್ಷಣ ಪ್ರಣಾಲಿಯಲ್ಲಿ "ಉಪನಯನದ" ಸ್ಥಾನವು ಮಹತ್ವಪೂರ್ಣವಾಗಿದೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣಗಳಿಗೆ


Digitised by Bharatavani, CIIL

ಸೇರಿದ ಮಕ್ಕಳಿಗೆ ಕ್ರಮವಾಗಿ 9, 11 ಮತ್ತು 12ನೇ ವಯಸ್ಸಿನಲ್ಲಿ ಉಪನಯನ ಸಂಸ್ಕಾರವನ್ನು ಮಾಡಿ, ಅವರಿಗೆ ತಂದೆ ಗಾಯಿತ್ರಿ ಮಂತ್ರದ ಉಪದೇಶ ಮಾಡಿ, ಯಜ್ಞೋಪವೀತ (ಜನಿವಾರ) ವನ್ನು ಧಾರಣೆ ಮಾಡಿಸುತ್ತಿದ್ದರು. ಉಪನಯನ ಎಂದರೆ ಉಪ–ಹತ್ತಿರಕ್ಕೆ, ನಯನ–ಕರೆದುಕೊಂಡು ಹೋಗುವುದು ಎಂದು ಅರ್ಥ. ಅಂದರೆ ಉಪನಯನವಾದ ನಂತರ ವಿದ್ಯಾರ್ಥಿ ಗುರುವಿನಿಂದ ವಿದ್ಯೆ ಪಡೆಯಲು ಗುರುಕುಲಕ್ಕೆ ಪ್ರವೇಶ ಪಡೆಯುವ ಅರ್ಹತೆ ಪಡೆಯುತ್ತಿದ್ದ.

ಋಗ್ವೇದ ಮುಂತಾದವುಗಳಲ್ಲಿ ಅಲ್ಲಲ್ಲಿ ಈ ವಿಷಯದ ಬಗ್ಗೆ ವಿವರಿಸಲಾಗಿದೆ. ಉಪನಯನದ ಅರ್ಥ "ಹತ್ತಿರ ಬರುವಿಕೆ" ಎಂದರೆ ಗುರುಗಳ ಬಳಿ ಬರುವಿಕೆ. ವೈದಿಕ ಕಾಲದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸಂಸ್ಕಾರ ಅನಿವಾರ್ಯವಾಗಿತ್ತು. ಉಪನಯನದ ನಂತರ ವಿದ್ಯಾರ್ಥಿಯನ್ನು ದ್ವಿಜ ಎಂದು ಕರೆಯುತ್ತಿದ್ದರು. ಇಲ್ಲಿ ದ್ವಿಜ ಎಂದರೆ–ಎರಡು ಸಲ ಜನ್ಮ ಪಡೆದವ ಎಂದರ್ಥ. ಅಂದರೆ ವಿದ್ಯಾರ್ಥಿ ತನ್ನ ತಂದೆ–ತಾಯಿಗಳಿಂದ ಜನ್ಮ ಪಡೆದು ಗುರುಗಳಿಂದ ಉಪನಯನ ಸಂಸ್ಕಾರ ಹೊಂದಿ ಅಧ್ಯಾತ್ಮಿಕವಾಗಿ ಎರಡನೇ ಜನ್ಮ ಪಡೆಯುವುದರಿಂದ ಅವರನ್ನು ದ್ವಿಜರೆಂದು ಕರೆಯುತ್ತಿದ್ದರು. ಶೂದ್ರರನ್ನು ಹೊರತುಪಡಿಸಿ ಉಳಿದ ವರ್ಗದ ಬಾಲಕರು ತಮ್ಮ ಆರು ಅಥವಾ ಏಳನೇ ವಯಸ್ಸಿನಲ್ಲಿ ಉಪನಯನವಾದ ಬಳಿಕ ವಿದ್ಯಾಭ್ಯಾಸವನ್ನು ಆರಂಭಿಸುತ್ತಿದ್ದರು. ಶಿಕ್ಷಣ ಆರಂಭಿಸುವ ಬ್ರಾಹ್ಮಣ ಬಾಲಕರ ವಯಸ್ಸು 9, ಕ್ಷತ್ರಿಯ ಬಾಲಕರ ವಯಸ್ಸು 11, ವೈಶ್ಯ ಬಾಲಕರ ವಯಸ್ಸು 12 ಕಡ್ಡಾಯವಾಗಿತ್ತು. ಉತ್ತಮ ಸಂಸ್ಕೃತಿ, ಸಂಪ್ರದಾಯ, ಕೌಟುಂಬಿಕ ಹಿನ್ನೆಲೆ ಮತ್ತು ಆಸಕ್ತಿದಾಯಕ ವಿದ್ಯಾರ್ಥಿಗಳು ಗುರುಕುಲ ಪ್ರವೇಶಕ್ಕೆ ಅರ್ಹರಾಗಿದ್ದರು. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಅವಧಿಯಲ್ಲಿ ಬ್ರಹ್ಮಚರ್ಯಪಾಲನೆ ಮಾಡಬೇಕಾದುದು ಕಡ್ಡಾಯವಾಗಿತ್ತು.

### ಬೋಧನಾ ಕ್ರಮ

1. ವೈದಿಕ ಶಿಕ್ಷಣದ ಬೋಧನಾ ಕ್ರಮವು ಸ್ಮರಣೆಯ ವಿಧಾನವಾಗಿತ್ತು. ಶಿಕ್ಷಕರು ಮುಖ್ಯವಾಗಿ ಶಾಬ್ಧಿಕ ಉಚ್ಚಾರಣೆ, ಸ್ಪಷ್ಟತೆಯನ್ನು ಬೋಧನಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿದ್ದರು. ವಿದ್ಯಾರ್ಥಿಗಳು ತಮ್ಮ ಸಂದೇಹವನ್ನು ಸ್ಥಳದಲ್ಲಿಯೇ ತಿಳಿಸಿ ಶಿಕ್ಷಕರಿಂದ ಸಕಾರಾತ್ಮಕವಾಗಿ ಉತ್ತರ ಪಡೆಯುತ್ತಿದ್ದರು. ಜೊತೆಯಲ್ಲಿ ಸ್ವಅಧ್ಯಯನ, ಧ್ಯಾನವು ಮುಂದುವರೆಯುತ್ತಿದ್ದವು. ವೈದಿಕ ಶಿಕ್ಷಣದಲ್ಲಿ ಸ್ಪಷ್ಟ ಉಚ್ಚಾರಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಉಚ್ಚಾರಣಾ ಸಂದರ್ಭದಲ್ಲಿ 52 ಬಗೆಯ ಧ್ವನಿಗಳು, 13 ಬಗೆಯ ಸ್ವರಗಳು, 39 ಬಗೆಯ ವ್ಯಂಜನಗಳಿಗೆ ವಿಶೇಷ ಪ್ರಾಧಾನ್ಯ ನೀಡಲಾಗಿತ್ತು. ಧ್ಯಾನವು ನೆನಪಿನ ಶಕ್ತಿಯನ್ನು, ಶಿಸ್ತನ್ನು ಮೂಡಿಸುತ್ತದೆ ಎಂದು ನಂಬಲಾಗಿತ್ತು.
2. ಬೆಳಗಿನ ಬ್ರಾಹ್ಮೀ ಮುಹೂರ್ತದಲ್ಲಿ ಅಂದರೆ ಬೆಳಗಿನ ಜಾವ 3–30 ಘಂಟೆಗೆ ಎದ್ದು ಸ್ತೋತ್ರ ಪಠನ ಮಾಡಿಸಲಾಗುತ್ತಿತ್ತು.
3. ಪ್ರಶ್ನೆ–ಉತ್ತರ ವಿಧಾನ: ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳುವ ಮೂಲಕ ಉತ್ತರ ಪಡೆಯುವ ವಿಧಾನ ಪ್ರಚಲಿತದಲ್ಲಿತ್ತು. ಇದರಿಂದ ಶಿಕ್ಷಕರು ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವುದು ಸುಲಭವಾಗಿತ್ತು.
4. ಒಗಟು ವಿಧಾನ: ಚಿಂತನಾ ಶಕ್ತಿ ಬೆಳೆಸುವಲ್ಲಿ ಈ ವಿಧಾನ ಬಳಕೆಯಾಗುತ್ತಿತ್ತು.
5. ಸಾದೃಶ್ಯವಾದ ವಿಧಾನ: ನೆನಪಿನ ಶಕ್ತಿಯ ಬಲವರ್ಧನೆಗೆ ಬಹಳ ಸಹಕಾರಿಯಾಗಿತ್ತು. ಈ ವಿಧಾನದಲ್ಲಿ ಶಿಕ್ಷಕರು ಸಮಸ್ಯೆಗಳನ್ನು ಬಿಡಿಸುವುದರ ಮೂಲಕ ಕಠಿಣ ವಿಷಯಗಳನ್ನು ಬೋಧಿಸುತ್ತಿದ್ದರು.
6. ವಾದ–ವಿವಾದ ವಿಧಾನ: ತಾರ್ಕಿಕ ಶಕ್ತಿ ಬೆಳೆಸುವಲ್ಲಿ ಪರಿಣಾಮಕಾರಿಯಾಗಿತ್ತು.
7. ಪ್ರತಿಪ್ರಗತಿ ವಿಧಾನ: ಪ್ರಶ್ನಾವಳಿಗಳ ಸರಮಾಲೆಯಲ್ಲಿ ಹಿಂದಿನ ಪ್ರಶ್ನೆಯ ಉತ್ತರದ ಆಧಾರದ ಮೇಲೆ ಮುಂದಿನ ಪ್ರಶ್ನೆ ಅವಲಂಬಿತವಾಗಿರುತ್ತಿತ್ತು.

### ಗುರುವಿನ ಸ್ಥಾನ

ವೇದ ಕಾಲದಲ್ಲಿ ಗುರುವಿಗೆ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಥಮ ಸ್ಥಾನವಿತ್ತು. ವೇದ ಕಾಲದಲ್ಲಿ ಎರಡು ಬಗೆ ಗುರುಗಳಿದ್ದರು. ಕೆಲವು ಗುರುಗಳು ಊರಿಂದ ಊರಿಗೆ ಹೋಗಿ ಆಸಕ್ತ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು. ಈ ದಿಸೆಯಲ್ಲಿ ಶ್ರಮಿಸುತ್ತಿದ್ದ ಆಚಾರ್ಯರನ್ನು ಚರಕರು ಎಂದು ಕರೆಯುತ್ತಿದ್ದರು. ಇಂತಹ ಗುರುಗಳ ಸಂಖ್ಯೆ ಬಹಳ ಕಡಿಮೆ ಇತ್ತು. ಸಾಮಾನ್ಯವಾಗಿ ಗುರುಗಳು ಅರಣ್ಯಗಳಲ್ಲಿದ್ದ ಗುರುಕುಲದಲ್ಲಿ ಪಾಠ ಪ್ರವಚನ ನಡೆಸುತ್ತಿದ್ದರು.

ವಿದ್ಯಾರ್ಥಿಗಳು ಉಪನಯನ ಸಂಸ್ಕಾರವಾದ ಬಳಿಕ ಗುರುವಿನ ಚರಣತಲದಲ್ಲಿ ಇದ್ದುಕೊಂಡೇ ತಮ್ಮ ಶಿಕ್ಷಣ ಪೂರ್ತಿ ಮಾಡಬೇಕಿತ್ತು. ಗುರುಗಳೇ ಶಿಷ್ಯರ ಸಂರಕ್ಷಣೆದಾತರು ಹಾಗೂ ಶಿಷ್ಯರ ಊಟ, ವಸತಿ, ಮುಂತಾದ ಅಗತ್ಯಗಳನ್ನು ಪೂರೈಸಿ ಅವರ ಸಂರಕ್ಷಣೆ ಮಾಡುತ್ತಿದ್ದರು. ಗುರುಗಳು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಪೋಷಿಸುತ್ತಿದ್ದರು.

### ಶಿಸ್ತು

ವೇದಕಾಲೀನ ಶಿಕ್ಷಣದ ಗುರುಕುಲ ಪದ್ಧತಿಯಲ್ಲಿ ಶಿಸ್ತು ಅತ್ಯಂತ ಪ್ರಧಾನವಾಗಿತ್ತು. ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಾಗಲೇ ಉತ್ತಮ ಸಂಸ್ಕೃತಿ, ಸಂಪ್ರದಾಯ, ಕೌಟುಂಬಿಕ ಹಿನ್ನೆಲೆ ಇರುವ ವಿದ್ಯಾರ್ಥಿಗಳನ್ನು ಒಪ್ಪಿಕೊಳ್ಳಲಾಗುತ್ತಿತ್ತು.

ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸಲು ಕೆಳಕಂಡ ವಿಧಾನ ಅನುಸರಿಸಲಾಗುತ್ತಿತ್ತು.

1) ಗುರುಕುಲದ ನಿಯಮಗಳ ಕಡ್ಡಾಯ ಪಾಲನೆ, ಬೆಳಗ್ಗೆ ಮುಂಚೆ ಏಳುವುದು, ಗುರುಗಳ ವಚನ ಪಾಲನೆ, ವಿಧೇಯಪೂರ್ಣವರ್ತನೆ, ತಪ್ಪು ಮಾಡಿದರೆ ಅದಕ್ಕೆ ದಂಡನೆ, ಸತ್ಯಪಾಲನೆ ಮುಂತಾದ ಕಠಿಣ ನಿಯಮಗಳ ಪಾಲನೆ ಮಾಡಬೇಕಾಗಿತ್ತು.
2) ಗುರುಗೃಹದಲ್ಲಿದ್ದುಕೊಂಡೇ ವಿದ್ಯಾಭ್ಯಾಸ ಮಾಡಬೇಕಿತ್ತು.
3) ವಿದ್ಯಾರ್ಥಿ ಜೀವನದ ನಿಯಮಗಳು ಕಠಿಣ ಮತ್ತು ನಿಶ್ಚಿತವಾದವುಗಳಾಗಿದ್ದವು. ವಿದ್ಯಾರ್ಥಿಗಳು ಸ್ವಯಂ ರಾಜಕುಮಾರರಿದ್ದರೂ ಭಿಕ್ಷಾಕಾರ್ಯಕ್ಕೆ ಹೋಗಬೇಕಿತ್ತು.
4) ವಿದ್ಯಾಧ್ಯಯನದ ಸಮಾಪ್ತಿ ವೇಳೆಯಲ್ಲಿ "ಸಮಾವರ್ತನೆ" ಎಂಬ ಸಂಸ್ಕಾರದ ಮೂಲಕ ಪದವಿ ಪ್ರದಾನ ಮಾಡಲಾಗುತ್ತಿತ್ತು. ಈ ವೇಳೆಯಲ್ಲಿ ಅವರಿಗೆ ವಿದ್ಯಾರ್ಥಿಗಳ ಕರ್ತವ್ಯಗಳನ್ನು ಪುನಃ ನೆನಪಿಸಲಾಗುತ್ತಿತ್ತು.

### ಗುರು ಶಿಷ್ಯರ ಸಂಬಂಧ

ಶಿಷ್ಯರು ಗುರುವಿನ ಜೊತೆಯಲ್ಲಿ ಇದ್ದುಕೊಂಡೇ ಶಿಕ್ಷಣ ಕಲಿಯಬೇಕಿತ್ತು. ಹಾಗಾಗಿ ಶಿಷ್ಯರು ಗುರುಕುಲವನ್ನು ತಮ್ಮ ಕುಟುಂಬವೆಂದೇ ಭಾವಿಸಿದ್ದರು. ಇಲ್ಲಿಯ ವ್ಯವಹಾರ ತಂದೆ ಮತ್ತು ಮಕ್ಕಳಂತೆ ಆಗಿತ್ತು. ಗುರುಗಳೂ ತಮ್ಮ ಶಕ್ತಿ ಮೀರಿ ಜ್ಞಾನವನ್ನು ಧಾರೆಯೆರೆಯುತ್ತಿದ್ದರು.

Digitised by Bharatavani, CIIL

ವಿದ್ಯಾರ್ಥಿಗಳ ಅಗತ್ಯತೆಯನ್ನು ಮನಗಂಡು ಗುರುಗಳು ಅವರಿಗೆ ಬೇಕಾದ ಅವಶ್ಯಕ ಸಾಮಗ್ರಿಗಳನ್ನು ಪೂರೈಸುತ್ತಿದ್ದರು. ಗುರುಗಳ ಶಿಷ್ಯರ ಅನುಪಾತ ಕಡಿಮೆ ಇದ್ದಿದ್ದರಿಂದ ಗುರುಗಳು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಶ್ರದ್ಧೆಯಿಂದ ಗಮನಿಸಿ ಅವರ ತಪ್ಪುಗಳನ್ನು ತಿದ್ದುತ್ತಿದ್ದರು.

### ಸ್ತ್ರೀ ಶಿಕ್ಷಣ

ಸ್ತ್ರೀಯರು ಕೂಡ ಬ್ರಹ್ಮಚರ್ಯಪಾಲನೆ ಮಾಡುತ್ತಿದ್ದರು ಮತ್ತು ಅವರಿಗೂ ಉಪನಯನ ಸಂಸ್ಕಾರ ಮಾಡಲಾಗುತ್ತಿತ್ತು. ಉನ್ನತ ವರ್ಣದ ಹೆಣ್ಣುಮಕ್ಕಳಿಗೂ ಶಿಕ್ಷಣದ ಅವಕಾಶವಿತ್ತು. ವೇದಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿ ಮುಂತಾದ ವೇದಾಧ್ಯಯನ ಮಾಡಿದ ಮಹಿಳೆಯರು ಇದ್ದರು ಎಂಬುದರ ಉಲ್ಲೇಖ ವೇದ ಸಾಹಿತ್ಯದಲ್ಲಿ ದೊರೆಯುತ್ತದೆ. ಆದರೆ ಐತಿಹಾಸಿಕ ಕಾರಣಗಳಿಂದಾಗಿ ಅವರಿಗೆ ವೇದಾಧ್ಯಯನ ಅನುಮತಿ ಕೊಡುವುದು ಉಚಿತವಲ್ಲವೆಂದು, ಪತಿ ಸೇವೆ ಅವರ ಪ್ರಮುಖ ಧರ್ಮವೆಂದು ತಿಳಿಯಲಾಯಿತು. ಈ ಬದಲಾವಣೆಯಿಂದಾಗಿ ಸ್ತ್ರೀ ಶಿಕ್ಷಣ ಸ್ಥಗಿತವಾಯಿತು.

–ಎನ್.ಎಲ್

–ಶ.ಎಸ್.ಎಲ್.

## ವೇದಾಂತ ದರ್ಶನ ಮತ್ತು ಶಿಕ್ಷಣ

'ವಿದ್' ಎಂದರೆ 'ತಿಳಿ' ಎಂದರ್ಥ. ತಿಳಿವಿನಿಂದ ಯಾವುದು ಕೂಡಿದೆಯೋ ಅದು ವೇದ. ಜ್ಞಾನಪ್ರತಿಪಾದಕವಾದ ವೇದವು ಅಸಂಖ್ಯಾತವಾಗಿರುವುದರಿಂದ ವೇದಗಳು ಎಂಬುದಾಗಿ ಬಹುವಚನ ಪ್ರಯೋಗ ರೂಢಿಯಲ್ಲಿದೆ. ಹಾಗಾಗಿ ವೇದಗಳು ಎಂದರೆ ಜ್ಞಾನರಾಶಿ. ಈ ಜ್ಞಾನರಾಶಿಗೆ ಆಮ್ನಾಯ, ಸಮಾನ್ನಾಯ ಎಂಬ ಹೆಸರುಗಳು ಇವೆ. ಭರತಖಂಡದಲ್ಲಿ ಜ್ಞಾನಿಗಳು, ಋಷಿ–ಮುನಿಗಳು ತಮ್ಮ ತಮ್ಮ ತಪಃ ಪ್ರಭಾವದಿಂದ ಲೋಕಕ್ಕೆ ನೀಡಿರುವ ತಿಳಿವಳಿಕೆಗೆ ಯೋಗ್ಯವಾದ ಜ್ಞಾನಭಂಡಾರವೇ ಪವಿತ್ರತಮವಾದ ವೇದಗಳು. ಇಲ್ಲಿ ಮಂತ್ರಗಳು, ಬ್ರಾಹ್ಮಣಗಳೂ ಇವೆ. ಅನಿಷ್ಟ ಪರಿಹಾರಪೂರ್ವಕವಾಗಿರುವ, ಇಷ್ಟಪ್ರಾಪ್ತಿಗೆ ಅನುಕೂಲವಾಗುವ ಉಪಾಯಗಳಿವೆ. ಧರ್ಮ, ಕರ್ಮಾನುಷ್ಠಾನಗಳ ವಿಧಿ ಪ್ರಕಾರಗಳಿವೆ. ಆತ್ಮಸಾಕ್ಷಾತ್ಕಾರದ ವಿಧಾನಗಳು ಹಾಗೂ ಅನುಭೂತಿಗಳಿವೆ.

ಸರ್ವರಿಗೂ, ಸರ್ವಕಾಲಕ್ಕೂ ಅನ್ವಯವಾಗುವ ಜೀವನದ ರಹಸ್ಯ ಭಂಡಾರಗಳೇ ವೇದಗಳು. ವಿಶ್ವದಲ್ಲಿರುವ ಯಾರೇ ಆಗಲಿ, ಎಲ್ಲೇ ಇರಲಿ, ಯಾವುದೇ ಕಾಲದಲ್ಲಿಯಾಗಲೀ ಒರೆಗೆ ಹಚ್ಚಿ, ಚೆನ್ನಾಗಿ ಪರೀಕ್ಷಿಸಿ, ಸ್ವಾನುಭವಗಳನ್ನೂ ಪಡೆದುಕೊಳ್ಳಬಹುದಾದ ನಿತ್ಯ–ಸತ್ಯಗಳೇ ವೇದಗಳು. ಇದರ ನೈಜ ಅರಿವಿನ ಕೊರತೆಯಿಂದಾಗಿ ಅಜ್ಞಾನ ಎಲ್ಲೆಡೆ ಆವರಿಸಿದೆ. ಈ ಅಜ್ಞಾನದಿಂದಲೇ ವೇದಗಳ ಬಗ್ಗೆ ನಾನಾ ಟೀಕೆ–ಟಿಪ್ಪಣಿಗಳಿವೆ. ವೇದಗಳ ಸುಜ್ಞಾನ ಎಲ್ಲೆಡೆ ಹರಡಿದರೆ ಕಲಹ–ವೈಷಮ್ಯಗಳು ನಾಶವಾಗುತ್ತದೆ. ಜನರು ನೆಮ್ಮದಿಯ ಬದುಕನ್ನು ಸಾಗಿಸಬಹುದು.

ಕಾಡು–ಮೇಡುಗಳಲ್ಲಿ ಬೆಟ್ಟ–ಗುಡ್ಡಗಳಲ್ಲಿ ವಾಸಿಸುವ ಋಷಿ ಮುನಿಗಳು ತಲ–ತಲಾಂತರಗಳಿಂದ ಲೋಕಕ್ಕೆ ನೀಡಿದ ವೇದಗಳು ಲಕ್ಷೋಪಲಕ್ಷ ಶಾಖೆಗಳಿಂದ ಕೂಡಿತ್ತು. ಆದರೆ ಇವುಗಳೆಲ್ಲವನ್ನೂ ರಕ್ಷಿಸಲು ಸಾಧ್ಯವಾಗದೇ ಹೋದ ಕಾರಣಗಳಿಂದ ಋಷಿ ಮುನಿಗಳ ಭೌತದೇಹ ನಶಿಸುವುದರೊಂದಿಗೆ ರಹಸ್ಯವಿದ್ಯೆಗಳು ಕಣ್ಮರೆಯಾಗುತ್ತಿದ್ದವು. ಇದನ್ನು ಮೊಟ್ಟಮೊದಲಿಗೆ ಪತ್ತೆಮಾಡಿದ ಮಹಾನ್ ವೈಜ್ಞಾನಿಕ, ದಾರ್ಶನಿಕ, ಮೇಧಾವೀಮಹರ್ಷಿಯೇ ಕೃಷ್ಣದ್ವೈಪಾಯನ. ಇವರು ಅಥವಾ ವ್ಯಾಸ ಅಂದಿನ ಕಾಲದಲ್ಲಿ ಭರತ ಭೂಮಿಯನ್ನು ಅನೇಕ ಸಲ ಸುತ್ತಿ ಋಷಿ ಮುನಿಗಳೆಲ್ಲರನ್ನೂ ಸಂದರ್ಶಿಸಿ, ಅವರೆಲ್ಲರ ಜ್ಞಾನಭಂಡಾರವನ್ನು ಒಗ್ಗೂಡಿಸಿ, ಜನರ ಹಿತಕ್ಕಾಗಿ ನಾಲ್ಕುಭಾಗವಾಗಿ ವಿಂಗಡಿಸಿ, ತನ್ನ ನಾಲ್ಕು ಶಿಷ್ಯರಿಗೆ ಧಾರೆ ಎರೆದುಕೊಟ್ಟು ವೇದವ್ಯಾಸರಾದರು. ಪೈಲರು ಋಗ್ವೇದವನ್ನೂ, ವೈಶಂಪಾಯನರು ಯಜುರ್ವೇದವನ್ನು ಜೈಮಿನಿಗಳು ಸಾಮವೇದವನ್ನು ಮತ್ತು ಸುಮಂತರು ಅಥರ್ವಣ ವೇದವನ್ನು ರಕ್ಷಿಸಿ ತಮ್ಮ ತಮ್ಮ ಶಿಷ್ಯಕೋಟಿಗೆ ವರ್ಗಾವಣೆಯಾಗುವಂತೆ ನೋಡಿಕೊಂಡರು.

ಕಾಲಕ್ರಮೇಣ ಪ್ರತಿಯೊಂದು ವೇದದಲ್ಲಿಯೂ ಸಂಹಿತಾ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ ಎಂಬ ನಾಲ್ಕು ಭಾಗಗಳು ಕಂಡು ಬಂದವು. ವ್ಯಕ್ತಿಯ ಜೀವನವನ್ನೂ ನಾಲ್ಕು ಭಾಗಗಳಂತೆ ಹೆಚ್ಚು ಕಡಿಮೆ ವಿಂಗಡಿಸಿ, ವೇದಗಳ ಒಂದೊಂದು ಭಾಗಕ್ಕೆ ವೃತ್ತಿಜೀವನದ ಒಂದೊಂದು ಭಾಗವನ್ನೂ ಕೂಡಿಸಲಾಯಿತು. ಪ್ರಾರಂಭದ 8 ವರ್ಷಗಳ ನಂತರ ಗುರುಕುಲಗಳಲ್ಲಿ ಬ್ರಹ್ಮಚರ್ಯವ್ರತದಲ್ಲಿ ಸಂಹಿತಾಪಾಠಗಳು, ಗೃಹಸ್ಥಾಶ್ರಮದಲ್ಲಿ ಬ್ರಾಹ್ಮಣಗಳ ಬಳಕೆಯೂ, ವಾನಪ್ರಸ್ಥಾಶ್ರಮದಲ್ಲಿ ಆರಣ್ಯಕಗಳ ಉಪಯೋಗವು ನಂತರ ಕಡೆಯಲ್ಲಿ ಸಂನ್ಯಾಸಿಯಾಗಿ ಉಪನಿಷತ್ತುಗಳ ಅಧ್ಯಯನ ಹಾಗೂ ದರ್ಶನಗಳು ಬಳಕೆಗೆ ಬಂದವು. ಈಗ ಎಲ್ಲವನ್ನೂ ಎಲ್ಲಿ ಬೇಕಾದರೂ ಕಲಿಯಬಹುದಾಗಿದೆ.

ವೇದಗಳ ಕೊನೆಯ ಭಾಗಗಳಿಗೆ ವೇದದ ಕೊನೆ ಅಥವಾ ವೇದಾಂತ ಎಂದು ಕರೆಯುತ್ತಾರೆ. ಉಪನಿಷತ್ತುಗಳೇ ವೇದಾಂತಗಳು. ಉಪ+ನಿ+ಷದ್ ಎಂಬುದು ಉಪನಿಷತ್ ಶಬ್ದವನ್ನು ನೀಡಿದೆ. ಗುರುವಿನ ಅತ್ಯಂತ ಸಮೀಪದಲ್ಲಿ ಯೋಗ್ಯತೆ ಪಡೆದ ಶಿಷ್ಯ ಸ್ವೀಕರಿಸಬಹುದಾದ ರಹಸ್ಯ ನಿತ್ಯ ಸತ್ಯವೇ ಉಪನಿಷತ್. ಇದು ಜ್ಞಾನಾಪೇಕ್ಷೆಯನ್ನು ಪರಮ ತತ್ತ್ವದ ಕಡೆಗೆ ಕೊಂಡೊಯ್ದು ಗುರಿ ತಲುಪುವಂತೆ ಮಾಡುತ್ತದೆ. ಇದು ಮುಮುಕ್ಷುಗಳ ಸಂಸ್ಕಾರ ಬೀಜವನ್ನು ನಾಶ ಮಾಡುತ್ತದೆ. ವಿಷಯಗಳಲ್ಲಿ ಬಯಕೆಯಿಲ್ಲದವರಾಗಿ ಗುರುಗಳ ಸಾಮೀಪ್ಯಕ್ಕೆ ಬಂದು ಪರಾವಿದ್ಯೆಯಲ್ಲಿ ತತ್ಪರರಾಗಿ ಅವಿದ್ಯೆಯೇ ಮುಂತಾದವುಗಳನ್ನು ನಾಶಗೊಳಿಸುವುದರಿಂದ ಇದು ಉಪನಿಷತ್ ಆಗಿದೆ. ಅಗ್ನಿವಿದ್ಯೆಯೂ ಉಪನಿಷತ್ ಆಗಿದೆ. ವಿರಾಟ್ ಪುರುಷನಿಗೆ ಅಗ್ನಿ ಎಂದು ಹೆಸರು. ಅಗ್ನಿವಿದ್ಯೆಯಿಂದ ಸಮಸ್ತ ಇಷ್ಟಾರ್ಥಗಳು ಪ್ರಾಪ್ತಿಯಾಗುತ್ತವೆ. ಅರ್ಥಾತ್ ಗರ್ಭಾವಾಸ, ಹುಟ್ಟು, ಮುಪ್ಪು ಇತ್ಯಾದಿ ಸರ್ವಸಂಕಟ ಸಮೂಹಗಳ ಅವಸಾದನ ಅಂದರೆ ಸಡಿಲಗೊಳಿಸುವಿಕೆಯಿಂದ ಜೀವನವು ಹಗುರವಾಗುತ್ತದೆ. ಹಾಗಾಗಿ ಇದು ಉಪನಿಷತ್ ಆಗಿದೆ. ಇದೇ ವೇದಾಂತ, ಇದೇ ಜೀವನ ಶಿಕ್ಷಣ.

ವೇದಾಂತದಲ್ಲಿ 200ಕ್ಕೂ ಹೆಚ್ಚು ಉಪನಿಷತ್ತುಗಳಿವೆ. ಇವುಗಳಲ್ಲಿ 10 ಉಪನಿಷತ್ತುಗಳು ಬಹಳ ಪ್ರಸಿದ್ಧವಾಗಿವೆ. ಕೆಲವರು 12 ಉಪನಿಷತ್ತುಗಳನ್ನು ಮತ್ತೆ ಕೆಲವರು 16 ಉಪನಿಷತ್ತುಗಳನ್ನು ಪ್ರಧಾನ ಉಪನಿಷತ್ತುಗಳೆಂದು ಪರಿಗಣಿಸಿದ್ದಾರೆ. ಇಲ್ಲಿ 10 ಉಪನಿಷತ್ತುಗಳ ಸಾರ ಹಾಗೂ ಶೈಕ್ಷಣಿಕ ಪ್ರಾಮುಖ್ಯವನ್ನು ಕೊಡಲಾಗಿದೆ. ಅವುಗಳು ಯಾವುವೆಂದರೆ ಐತರೇಯ, ಈಶ, ಕಠ, ತೈತ್ತಿರೀಯ, ಬೃಹದಾರಣ್ಯಕ, ಕೇನ, ಛಾಂದೋಗ್ಯ, ಪ್ರಶ್ನೆ, ಮಾಂಡೂಕ್ಯ ಮತ್ತು ಮುಂಡಕ.

ಋಗ್ವೇದದ ಐತರೇಯ ಆರಣ್ಯಕದ ಭಾಗವೇ ಐತರೇಯೋಪನಿಷತ್ತು. ಇತರೆಯ ಮಗನಾದ ಮಹೀದಾಸ ಋಷಿಯಿಂದ ಪ್ರೋಕ್ತವಾಗಿದೆ. ಈ ಉಪನಿಷತ್ತು. ಇದರಲ್ಲಿ ಜಗತ್ತಿನ ಉತ್ಪತ್ತಿ, ವಿಕಾಸ, ಪ್ರಳಯಗಳ ವಿಷಯಗಳಿವೆ. ಆತ್ಮಜ್ಞಾನೋಪದೇಶವೂ ಇದೆ. ಜೀವನಿಗಿರುವ ಮೂರು ಸ್ಥಿತಿಗಳು ಇಲ್ಲಿ ವಿವರಿಸಲ್ಪಟ್ಟಿದೆ. ರೇಪೋರೂಪದಿಂದ ಲಿಂಗಶರೀರವು ಗರ್ಭಪ್ರವೇಶ ಮಾಡಿ, ಶಿಶುರೂಪದಲ್ಲಿ ಪ್ರಪಂಚಪ್ರವೇಶ ಮಾಡಿ, ಸುಖದುಃಖಾದಿಗಳಿಂದ ಸ್ಥೂಲ ಶರೀರ ಜೀರ್ಣವಾಗಿ ಮತ್ತೊಂದು


Digitised by Bharatavani, CIIL

ಶರೀರ ಪ್ರವೇಶ ಮಾಡುವ ಕ್ರಮಗಳ ವಿವರಣೆ ಇದೆ. ಇಲ್ಲಿನ ಬೋಧನಾಕ್ರಮಗಳು ಪ್ರಮುಖವಾಗಿ ಸಂವಹನ ಮತ್ತು ವಿಶ್ಲೇಷಣಗಳಾಗಿವೆ.

ಯಜುರ್ವೇದದ ಕಾಣ್ವ, ಮಾಧ್ವಂದಿನ ಶಾಖೆಗಳಿಂದ ಹೊರಬಂದಿರುವುದು ಈಶೋಪನಿಷತ್ತು. ದಕ್ಷಿಣ ಭಾರತದಲ್ಲಿ ಕಾಣ್ವ ಶಾಖೆಯಿಂದ ಹೊರಬಂದಿರುವ ಈಶೋಪನಿಷತ್ತಿಗೆ ವ್ಯಾಖ್ಯಾನಗಳಿವೆ. ಇದರಲ್ಲಿ ಈಶನ ವ್ಯಾಪಕ ಸ್ವರೂಪ, ವಿದ್ಯೆ, ಅವಿದ್ಯೆ, ಸುಭೂತಿ ಹಾಗೂ ಅಸುಭೂತಿ ವಿಚಾರಗಳಿವೆ. ವಿಶ್ವಶಾಂತಿ, ವಿಶ್ವಭ್ರಾತೃತ್ವ, ವಿವಿಧತೆಯಲ್ಲಿ ಏಕತೆ, ಎಲ್ಲರ ಕ್ಷೇಮ ಹಾಗೂ ಅಭಿವೃದ್ಧಿ, ತೃಪ್ತಿ, ಕೃತಜ್ಞತಾಭಾವ, ಜ್ಞಾನದ ಅತ್ಯಾವಶ್ಯಕತೆ, ಅಜ್ಞಾನದಿಂದಾಗುವ ಅನಾಹುತಗಳು, ಇತರರಿಗೋಸ್ಕರ ತುಡಿತ, ಪರಿಶುದ್ಧ ಚಾರಿತ್ರ್ಯ, ಉಪಕಾರಸ್ಮರಣೆ, ವಿಷಯ ವಸ್ತುಗಳಿಗೆ ಅಂಟಿಕೊಳ್ಳದಿರುವಿಕೆ, ತನ್ನದಲ್ಲದ್ದಕ್ಕೆ ಆಸೆಪಡದಿರುವುದು, ತ್ಯಾಗ ಮುಂತಾದ ಮೌಲ್ಯಗಳು ನಿರೂಪಣೆಯಾಗಿವೆ. ಕಂಠಪಾಠ ಮತ್ತು ಸ್ವಾನುಭವ ಪದ್ಧತಿಗಳು ಬೋಧನಾಕ್ರಮಗಳಾಗಿವೆ.

ಕೃಷ್ಣ ಯಜುರ್ವೇದದ ಕಾಠಕ ಶಾಖೆಗೆ ಸೇರಿರುವುದು ಕಠೋಪನಿಷತ್ತು. ಕಥಾ ರೂಪದಲ್ಲಿರುವ ವಿಶೇಷವಾದ ಉಪನಿಷತ್ತು ಇದಾಗಿದೆ. ಸೂಕ್ತ ಅರ್ಹತೆಯಿದ್ದವರಿಗೆ ಮಾತ್ರ ಸುಪ್ತ ವಿದ್ಯೆ ಎಂಬುದು ಇಲ್ಲಿ ಪ್ರತಿಪಾದಿತವಾಗಿದೆ. ನಿಜವಾದ ಗುರು ಶಿಷ್ಯನನ್ನು ಯಾವ ರೀತಿಗಳಲ್ಲಿ ಪರೀಕ್ಷೆ ಮಾಡಬಹುದು ಎಂಬುದಕ್ಕೆ ಇದೊಂದು ಆದರ್ಶ ಉಪನಿಷತ್ತು. ಗುರು–ಶಿಷ್ಯರ ಸಂಭಾಷಣಾ ರೂಪದಲ್ಲಿ ಅತ್ಯಂತ ಗಹನವಾದ ಬ್ರಹ್ಮವಿದ್ಯೆಯ ಮಜಲುಗಳು ಕಾಣಸಿಗುತ್ತದೆ. ಇಲ್ಲಿ ಶಿಷ್ಯನು 6–7 ವರ್ಷದ ಹುಡುಗ ನಚಿಕೇತ. ಗುರು ಸಾಕ್ಷಾತ್ ಮೃತ್ಯುದೇವತೆ ಯಮ. ಶ್ರೇಯಸ್ಸು ಹಾಗೂ ಪ್ರೇಯಸ್ಸುಗಳಲ್ಲಿ ಪ್ರೇಯಸ್ಸಿಗೆ ಆಸೆಪಡದ ನಚಿಕೇತ ತಾನು ಬ್ರಹ್ಮವಿದ್ಯೆಗೆ ಸಂಪೂರ್ಣ ಅಧಿಕಾರಿ ಎಂಬುದನ್ನು ಯಮನಿಗೆ ಮನದಟ್ಟು ಮಾಡಿ ಶ್ರೇಯಸ್ಸನ್ನು ಪಡೆಯುತ್ತಾನೆ. ಶ್ರೇಯಸ್ಸಿಗೆ ಸದಾಚಾರ, ಇಂದ್ರಿಯನಿಗ್ರಹ ಹಾಗೂ ಸಹನೆ ಅತ್ಯಾವಶ್ಯಕ. ಜ್ಞಾನಿಯಾದವನು ಯಾವ ರೀತಿಯಲ್ಲಿ ಅಂಗುಷ್ಠ ಮಾತ್ರ ಪರಿಮಾಣದ ಪರಮಾತ್ಮನನ್ನು ನೋಡುತ್ತಾನೆಂಬುದನ್ನು ವರ್ಣಿಸಲಾಗಿದೆ. ಬ್ರಹ್ಮನ ಅಂತರ್ಯಾಮಿತ್ವ, ಬ್ರಹ್ಮನ ಸ್ವರೂಪಗಳು ವಿವರಿಸಲ್ಪಟ್ಟಿವೆ. ಯಮಧರ್ಮರಾಯನು ನಚಿಕೇತನ ಪಾದತೊಳೆದು ಅತಿಥಿಸತ್ಕಾರ ಮಾಡುವುದು ರೋಚನೀಯವಾಗಿದೆ. ಹಿರಿಯರಿಗೆ ಗೌರವ ತೋರಿಸುವುದು, ಗೌರವಯುತವಾಗಿ ಹಿರಿಯರ ತಪ್ಪನ್ನು ತಿದ್ದುವುದು, ಪರರಿಗಾಗಿ ಸರ್ವರೀತಿಯ ತ್ಯಾಗ, ಧೈರ್ಯ, ತಿಳಿಯಲೇಬೇಕೆಂಬ ಛಲ, ತೆರೆದ ಮನಸ್ಸು, ವಿಶಾಲಹೃದಯ, ಋಜುಮಾರ್ಗ, ಐಹಿಕ ಸುಖಗಳಿಗೆ ದಾಸರಾಗದಿರುವುದು, ಮಾನವೀಯತೆ, ಸಹನೆ, ಸ್ಥಿರಮನಸ್ಸು, ಇತರರಿಗಾಗಿ ಹಾತೊರೆಯುವುದು, ಶುದ್ಧ ಮನಸ್ಸು ಹಾಗೂ ಹೃದಯ, ಶಿಸ್ತು, ಏಕಾಗ್ರತೆ, ಕೇಳುವ ಕೌಶಲ, ಪರಿಪ್ರಶ್ನೆ, ಶಾಂತಿ, ಧ್ಯಾನ, ಕೋಪನಾಶ, ಇತ್ಯಾದಿ ಮೌಲ್ಯಗಳ ವೈಭವೀಕರಣವಾಗಿದೆ. ಕಥಾ ಪದ್ಧತಿ, ಸಂವಹನಾ ಪದ್ಧತಿ, ಪರಿಪ್ರಶ್ನಾ ಪದ್ಧತಿ, ಹೋಲಿಕೆಗಳು, ಸ್ವ-ಮೌಲ್ಯಮಾಪನ ಪದ್ಧತಿ, ಸ್ವಾನುಭವ ಪದ್ಧತಿಗಳು ಬೋಧನಾ ಪದ್ಧತಿಗಳಾಗಿವೆ.

ತೈತ್ತಿರೀಯ ಉಪನಿಷತ್ತು ಯಜುರ್ವೇದದ ಅಂತ್ಯಭಾಗವಾಗಿದೆ. ಈ ಉಪನಿಷತ್ತಿನಲ್ಲಿ ಸ್ಥೂಲಶರೀರ ಹಾಗೂ ಸೂಕ್ಷ್ಮಶರೀರಗಳಿಗೆ ಉಕ್ತವಾಗಿರುವ ಕೋಶಗಳ ವಿವರಣೆ ಇದೆ. ಅನ್ನಮಯಕೋಶ, ಪ್ರಾಣಮಯಕೋಶ, ಮನೋಮಯಕೋಶ, ವಿಜ್ಞಾನಮಯಕೋಶ ಮತ್ತು ಆನಂದಮಯಕೋಶಗಳ ವಿವರಣೆ ಸೊಗಸಾಗಿದೆ. ಸ್ನಾತಕನಿಗೆ ನೀಡುವ ಉಪದೇಶವಂತೂ ಸ್ತುತ್ಯರ್ಹವಾಗಿದೆ. ವಿದ್ಯೆ ಕಲಿಯುವವರ ಕರ್ತವ್ಯಗಳು, ವಿದ್ಯೆ ನೀಡುವವರ ಕರ್ತವ್ಯಗಳು, ಬ್ರಹ್ಮಚರ್ಯಪದ್ಧತಿಯಲ್ಲಿನ ನೀತಿ–ನಿಯಮಗಳು, ಗೃಹಸ್ಥಾಶ್ರಮದ ಆಚರಣೆಗಳು, ಧರ್ಮಜನಾದ ಕರ್ಮದ ಮರ್ಮ, ಜ್ಞಾನಸಂಪಾದನೆಗೆ ಬೇಕಾಗಿರುವ ವೈರಾಗ್ಯ ಮುಂತಾದುವುಗಳು ವರ್ಣಿತವಾಗಿವೆ. ಶಿಕ್ಷಣ ಪದ್ಧತಿಗೆ ಅತ್ಯಮೂಲ್ಯ ಬೇಕಾಗಿರುವ ನಾಲ್ಕು ಅಂಶಗಳು ಇಲ್ಲಿ ಉಕ್ತವಾಗಿವೆ. ಅವು ಯಾವುವೆಂದರೆ ಗುರು, ಶಿಷ್ಯ, ಜ್ಞಾನ ಹಾಗೂ ಬೋಧನಾವಿಧಾನ. ಇಲ್ಲಿರುವ ಮೌಲ್ಯಗಳು ಈ ರೀತಿ ಇವೆ–ಶಬ್ದಸಂಪತ್ತು, ಧನಾತ್ಮಕ ಚಿಂತನೆ, ಕಲಿಕೆಯಲ್ಲಿ ತೃಪ್ತಿ, ಕಲಿಕೆಯಲ್ಲಿ ಸಮಾನತೆ, ಶಿಸ್ತು, ಸತ್ಯ, ಧರ್ಮ, ಕೃತಜ್ಞತೆ, ದ್ವೇಷಮಾಡದೆ ಇರುವುದೂ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನೂ ಗೆಲ್ಲುವುದು, ದಾನದ ಮಹತ್ವ, ಹಿರಿಯರ ಸೇವೆ, ವಿಶಾಲಮನೋಭಾವ, ಇತ್ಯಾದಿ. ಇಲ್ಲಿನ ಬೋಧನಾಪದ್ಧತಿಗಳಲ್ಲಿ ಮುಖ್ಯವಾದವುಗಳು ಈ ರೀತಿ ಇವೆ– ಸ್ವಾಧ್ಯಾಯ, ಪ್ರಶ್ನಾ, ಪರಿಪ್ರಶ್ನಾಕ್ರಮ, ಸಂವಹನ, ಚರ್ಚೆ, ಉಪನ್ಯಾಸ, ಆದೇಶ ಹಾಗೂ ವಿಶ್ಲೇಷಣೆ, ಶ್ರವಣ, ಮನನ, ನಿಧಿಧ್ಯಾಸನಗಳು ಜ್ಞಾನಸಾಧಕಗಳಾಗಿವೆ.

ಶುಕ್ಲಯಜುರ್ವೇದದ ಶತಪಥ ಬ್ರಾಹ್ಮಣದ ಕೊನೆಯ ಭಾಗವೇ ಬೃಹದಾರಣ್ಯಕ ಉಪನಿಷತ್ತು. ಇದೂ ಸಹ ಮಾಧ್ವಂದಿನ ಮತ್ತು ಕಾಣ್ವ ಶಾಖೆಗಳಲ್ಲಿ ಉಪಲಬ್ಧವಾಗಿದೆ. ಆದರೆ ಕಾಣ್ವಶಾಖೆಯಲ್ಲಿನ ಉಪನಿಷತ್ತಿಗೆ ವ್ಯಾಖ್ಯಾನಗಳಿವೆ. ಕರ್ಮೋಪಾಸನೆಗಳು, ಕರ್ಮೋಪಾಸನೆಗಳ ಫಲ, ಕರ್ಮೋಪಾಸನೆಗಳ ಫಲದ ಅನಿತ್ಯತ್ವ, ಕರ್ಮೋಪಾಸನೆಗಳಲ್ಲಿ ವಿರಕ್ತಿ, ವಿದ್ಯೆ ಮತ್ತು ಅವಿದ್ಯೆಗಳ ವ್ಯತ್ಯಾಸ, ಪ್ರಾಣಸ್ವರೂಪ, ಸರ್ವಕರ್ಮಸಂನ್ಯಾಸದ ಮಹತ್ವ, ಜ್ಞಾನವೇ ಮೋಕ್ಷಕ್ಕೆ ಸಾಧನವೆಂಬ ಸಿದ್ಧಾಂತ, ಎಲ್ಲಕ್ಕಿಂತಲೂ ಪ್ರಿಯವಾದ ಆತ್ಮನ ವಿಚಾರ, ಜೀವನ್ಮುಕ್ತಿ ವಿಚಾರ ಇತ್ಯಾದಿಗಳನ್ನು ಇಲ್ಲಿ ವಿವರವಾಗಿ ತಿಳಿಸಿದ್ದಾರೆ. ಸತತವಾಗಿ ಯಾವಾಗಲೂ ಎಚ್ಚರದಿಂದಿರುವುದು, ಕಲಿಕಾ ಸಂದರ್ಭ ಬಂದೊದಗಿದ ತತ್‌ಕ್ಷಣವೇ ಕಲಿಯುವುದು, ಸ್ವಾನುಭವಕ್ಕೆ ಅವಕಾಶ ದೊರೆತೊಡನೆ ಅದನ್ನು ಹಾಳು ಮಾಡಿಕೊಳ್ಳದೆ ಪಡೆದುಕೊಳ್ಳುವುದು, ಪ್ರತಿಯೊಂದು ವಿಚಾರದ ಒಳಹೊಕ್ಕು ವೀಕ್ಷಿಸುವುದು, ನಿರಂತರ ಪ್ರಶ್ನೆ ಮಾಡುವುದು, ಗುರಿಯ ಕಡೆಗೆ ಅಂತಃಕರಣವನ್ನು ಕೇಂದ್ರೀಕರಿಸುವುದು, ಬಾಹ್ಯ ಪ್ರಪಂಚದಲ್ಲಿ ದೊರೆಯುವ ಆಮಿಷಗಳಿಗೆ ಒಳಗಾಗದಿರುವುದು, ಪರಿಶುದ್ಧ ಚಿಂತನೆ, ಪರಿಶುದ್ಧ ಮಾತು ಹಾಗೂ ಪರಿಶುದ್ಧ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವುದು, ಎಲ್ಲಾ ರೀತಿಯ ಸದ್ಗುಣಗಳನ್ನು ಬೆಳೆಸಿಕೊಂಡು ಅಂತಿಮಗುರಿ ತಲುಪುವುದು, ಇತ್ಯಾದಿಗಳನ್ನೂ ಇಲ್ಲಿ ಕಾಣಬಹುದಾಗಿದೆ. ಕಂಠಪಾಠ, ಚಿಂತನ, ಪ್ರಶ್ನೆ, ಪರಿಪ್ರಶ್ನೆ, ಸಂವಹನ, ವಿಶ್ಲೇಷಣೆ, ಚರ್ಚೆ ಮುಂತಾದ ಬೋಧನಾ ಪದ್ಧತಿಗಳಿವೆ.

ಕೇನೋಪನಿಷತ್ತು ಸಾಮವೇದದ ತಲವಕಾರ ಬ್ರಾಹ್ಮಣಕ್ಕೆ ಸೇರಿದೆ. ಇದಕ್ಕೆ ಜೈಮಿನೀಯ ಬ್ರಾಹ್ಮಣವೆಂಬ ಹೆಸರೂ ಇದೆ. ಬ್ರಹ್ಮೋಪಾಸನೆಯೇ ಇದರ ಮೂಲ ಉದ್ದೇಶ. ಅತೀಂದ್ರಿಯ ವಸ್ತುವಾದ ಬ್ರಹ್ಮನನ್ನೇ ಅರಿಯುವ ಬಗೆ ಇದರಲ್ಲಿದೆ. ವಿಶ್ವಶಾಂತಿ, ಪ್ರಶ್ನೆ ಮಾಡುವ ಕುತೂಹಲ, ಪ್ರತಿಯೊಂದರ ಒಳಹೊಕ್ಕು ನೋಡುವುದು, ತಿಳಿಯಲೇಬೇಕೆಂಬ ಉತ್ಕಟೇಚ್ಛೆ, ಬ್ರಹ್ಮನ ಅಮರತ್ವ, ವಿಶ್ವದ ಸಂಕೀರ್ಣತೆ ಹಾಗೂ ರಹಸ್ಯದ ಅರಿವಿನಲ್ಲಿ ಆಶ್ಚರ್ಯ, ವೈಜ್ಞಾನಿಕ ದೃಷ್ಟಿಕೋನ, ವೈಜ್ಞಾನಿಕ ಚಿಂತನೆ, ತೀರ್ಮಾನಕ್ಕೆ ಮೊದಲು ಕೂಲಂಕಷ ಪರೀಕ್ಷೆ, ಅಂತರ್ದೃಷ್ಟಿಯ ಮಹತ್ವ, ಆತ್ಮನ ಅರಿವು, ಸರ್ವಜೀವಿಗಳನ್ನು ಪ್ರೀತಿಸುವುದು, ಸತ್ಯಾನ್ವೇಷಣೆ ಇಲ್ಲಿ ಪ್ರಮುಖವಾಗಿವೆ. ಪ್ರಶ್ನೋತ್ತರ ಪದ್ಧತಿ, ಬೌದ್ಧಿಕ ಚಿಂತನಾಕ್ರಮ, ವಿಶ್ಲೇಷಣ ಪದ್ಧತಿ, ಉಪನ್ಯಾಸ ಕ್ರಮ, ಆಧ್ಯಾತ್ಮಿಕ ಐದು ಕಥಾ ಪದ್ಧತಿಗಳು ಬೋಧನಾ ಪದ್ಧತಿಗಳಾಗಿವೆ.

ಸಾಮವೇದ ಶಾಖೆಗೆ ಸೇರಿದ ಅಂತ್ಯ ಭಾಗವೊಂದರಲ್ಲಿ ಛಾಂದೋಗ್ಯವು ಒಂದು ಉಪನಿಷತ್ತು. ಇಲ್ಲಿ ತತ್ತ್ವಜ್ಞಾನದ ಜೊತೆಗೆ ತತ್ತ್ವ ಉಪಾಸನೆಗಳಿವೆ. ಆರಂಭದಿಂದ ಹಿಡಿದು ಕೊನೆಯವರೆವಿಗೂ ನಾನಾ ಪ್ರಕಾರವಾದ ವಿದ್ಯಾ ರೀತಿಗಳು ಉಪಾಸನೆಗಳು ಇಲ್ಲಿ ಕಾಣಸಿಗುತ್ತವೆ.

Digitised by Bharatavani, CIIL

ಉದಾಹರಣೆಗೆ: ಉದ್ಗೀಥವಿದ್ಯಾ (ಅಂತರಾದಿತ್ಯವಿದ್ಯಾ, ಅಕ್ಷಿಪುರುಷ ವಿದ್ಯಾ, ಮಧು ವಿದ್ಯಾ, ಗಾಯತ್ರಿವಿದ್ಯಾ, ಶಾಂಡಿಲ್ಯವಿದ್ಯಾ, ಕೋಳದಿ ಗ್ವತ್ಸವಿದ್ಯಾ, ಪುರುಸವಿದ್ಯಾ, ಸಂವರ್ಗ ಬ್ರಹ್ಮವಿದ್ಯಾ, ಷೋಡಶ ಕಲಶ ಬ್ರಹ್ಮ ವಿದ್ಯಾ, ಉಪಕೋಸಲ ವಿದ್ಯಾ, ಪ್ರಾಣವಿದ್ಯಾ, ಪಂಚಾಗ್ನಿ ವಿದ್ಯಾ, ವೈಶ್ಯಾನರವಿದ್ಯಾ, ಸಧ್ವಿದ್ಯಾ, ಭೂಮವಿದ್ಯಾ, ರಹರ ವಿದ್ಯಾ, ಪ್ರಜಾಪತಿವಿದ್ಯಾ, ಈ ಉಪನಿಷತ್ತಿನಲ್ಲಿ ಜೀವನದ ಪ್ರಗತಿಗೆ ಚಟುವಟಿಕೆ, ಮನಸ್ಸಿನ ಹತೋಟಿ, ಏಕಾಗ್ರತೆ, ಧ್ಯಾನ, ಸರಿಯಾದ ದೃಷ್ಟಿಕೋನ, ದೈನಂದಿನ ನೀತಿಗಳು, ಸಾಮಾಜಿಕ ಸಂಬಂಧ, ಸಂಸ್ಕೃತಿಯ ಪುನಃಸಂಸ್ಕರಣ, ಸಾಮ, ದಾನ, ಭೇದ ಮತ್ತು ದಂಡ ನಾಲ್ಕು ರಾಜನೀತಿಯ ಉಪಾಯಗಳು, ಗುರಿಸಾಧನೆಯಲ್ಲಿ ಛಲ, ಕೃತಜ್ಞತೆ, ಸದಾ ಸತ್ಕಾರ್ಯ ಮಾಡುವುದು, ಪ್ರಕೃತಿರಕ್ಷಣೆ, ದಾನ, ಸತ್ಯ, ಶಾಂತಿ, ಅಭ್ಯಾಸ, ವಿಶ್ವಭ್ರಾತೃತ್ವ, ದೃಢನಂಬಿಕೆ, ಧೈರ್ಯ, ಸಹನೆ, ವಿಶಾಲಹೃದಯ, ಪೂರ್ವಗ್ರಹವಿಲ್ಲದ ತೀರ್ಮಾನಗಳು, ವಿಧೇಯತೆ, ಕ್ರಮಬದ್ಧತೆ, ಸ್ವ-ಸಹಾಯ, ಆಧ್ಯಾತ್ಮಿಕ ಶಿಸ್ತು, ಜ್ಞಾನದ ಹಸಿವು, ಇತ್ಯಾದಿಗಳನ್ನು ಹೇರಳವಾಗಿ ಕಾಣಬಹುದು. ಅಲ್ಲದೇ ಮಾನಸಿಕ ದೌರ್ಬಲ್ಯಗಳ ನಿವಾರಣೆ, ಮನಶ್ಶಾಂತಿ, ಜ್ಞಾನಪಡೆಯುವ ಪ್ರಾಯೋಗಿಕ ದಾರಿಗಳು, ಸ್ವ-ಅರಿವು, ಸ್ವಾನುಭವ, ಮೇಲೆ ಮೇಲೆ ಏರುತ್ತಾ ಉನ್ನತ ಚಿಂತನೆ ಮಾಡುವುದು, ಮನಸ್ಸನ್ನು ಬಾಹ್ಯ ಪ್ರಪಂಚದಿಂದ ಒಳಕ್ಕೆಳೆದುಕೊಳ್ಳುವ ದಾರಿಗಳು, ಕಂಠಪಾಠ ಪದ್ಧತಿ, ಮನಶ್ಚರಣ ಪದ್ಧತಿ, ಕಲಿಕೆಯ ವಿಧಾನಗಳು-ಹಂತ-ಹಂತ ಕಲಿಕೆ, ಸಂಪೂರ್ಣ ಕಲಿಕೆ, ಶ್ರವಣ-ಮನನ, ನಿದಿಧ್ಯಾಸನ, ಹೋಲಿಕಾ ಪದ್ಧತಿ, ಕಥಾವಿಧಾನ, ಪ್ರಾಜೆಕ್ಟ್ ವಿಧಾನ, ಪ್ರಯೋಗ ವಿಧಾನ, ಡೆಮಾನ್ಸ್ಟ್ರೇಷನ್ ವಿಧಾನ, ಅಂತರ್‌ಮುಖಿ ಪ್ರಶ್ನಾ ವಿಧಾನ, ವೈಜ್ಞಾನಿಕ ಚಿಂತನಾ ಪ್ರಕಾರಗಳು, ಚರ್ಚಾವಿಧಾನ, ಉದಾಹರಣಾ ವಿಧಾನ, ಸ್ವಕಲಿಕಾ ವಿಧಾನ, ಇತ್ಯಾದಿಗಳ ವಿವರಣೆಗಳು ಕಂಡುಬರುತ್ತವೆ.

ಪ್ರಶ್ನೋಪನಿಷತ್ತು ಅಥರ್ವಣವೇದಕ್ಕೆ ಸೇರಿದ್ದಾಗಿದೆ. ಇದು ಒಂದು ರೀತಿಯಲ್ಲಿ ಬ್ರಾಹ್ಮಣವಾಗಿದೆ. ಈ ಜಗತ್ತಿಗೆ ಮೂಲಕಾರಣ ಯಾವುದು? ಪ್ರಜಾಪತಿ ಅಥವಾ ಹಿರಣ್ಯಗರ್ಭ ಎಂದರೇನು! ಇವನ ಲಕ್ಷಣಗಳೇನು? ರಯಿ ಮತ್ತು ಪ್ರಾಣ ಇವುಗಳ ಸೃಷ್ಟಿ ಹೇಗೆ ಆಯಿತು? ರಯಿ ಎಂದರೆ ಭೌತದ್ರವ್ಯ. ಪ್ರಾಣವು ಶಕ್ತಿ ಸೂಚಕ. ಭೌತದ್ರವ್ಯ ಮತ್ತು ಶಕ್ತಿಗಳು ವಿಶ್ವದುತ್ಪತ್ತಿಯಲ್ಲಿ ಹೇಗೆ ಸಹಕರಿಸಿವೆ? ಇಂದ್ರಿಯಗಳಿಗೂ ಪ್ರಾಣಕ್ಕೂ ಇರುವ ಸಂಬಂಧವೇನು? ಪ್ರಾಣನ ಉತ್ಪತ್ತಿ ಹೇಗಾಯಿತು? ಪ್ರಾಣನ ಸ್ವರೂಪವೇನು? ಪುರುಷನ ಸ್ವಪ್ನ ಪ್ರಪಂಚ ಹೇಗಿರುತ್ತದೆ! ಓಂಕಾರಧ್ಯಾನದ ಮಹತ್ವವೇನು? ಪುರುಷನ ಕಲೆಗಳ ವಿಚಾರವೇನು! ಇವುಗಳೆಲ್ಲವೂ ಪ್ರಶ್ನೋತ್ತರ ವಿಧಾನದಲ್ಲಿ ಇಲ್ಲಿ ನಿರೂಪಿಸಲ್ಪಟ್ಟಿವೆ.

ಮಾಂಡೂಕ್ಯ ಉಪನಿಷತ್ತೂ ಸಹ ಅಥರ್ವಣವೇದಕ್ಕೆ ಸೇರಿದೆ. ಮುಮುಕ್ಷುಗಳ ಮುಕ್ತಿಗಾಗಿಯೇ ಈ ಉಪನಿಷತ್ತು ಇದೆ. ಎಲ್ಲಾ ವೇದಾಂತಗಳ ಸಾರವೇ ಈ ಉಪನಿಷತ್ತಿನಲ್ಲಿದೆ. ಅವಸ್ಥಾತ್ರಯವಾದ ಜಾಗ್ರತ್ತು, ಸ್ವಪ್ನ, ಸುಷುಪ್ತಿಗಳ ವಿವರಣೆ ಇಲ್ಲಿದೆ. ಕೊನೆಯ ಅವಸ್ಥೆಯಾದ ತುರಿಯದ ವಿವರಣೆಯೂ ಇಲ್ಲದೆ. ಎಲ್ಲಾ ವಿಚಾರಗಳು ಉಪನ್ಯಾಸ ಪದ್ಧತಿಯಲ್ಲಿದೆ.

ಮುಂಡಕೋಪನಿಷತ್ತು ಸಹ ಅಥರ್ವಣವೇದಕ್ಕೆ ಸೇರಿದೆ. ಇದರಲ್ಲಿ ಪರಾ ಅಂದರೆ ಆಧ್ಯಾತ್ಮಿಕ ವಿದ್ಯೆ ಮತ್ತು ಅಪರಾ ಅಂದರೆ ಲೌಕಿಕ ವಿದ್ಯೆಯನ್ನು ಹೇಳಲಾಗಿದೆ. ಪರಾವಿದ್ಯೆಯು ಸಂನ್ಯಾಸಿಗಳಿಗೆ ವಿಹಿತವಾಗಿದೆ. ಅವರು ಮುಂಡನ ಮಾಡಿಸಿಕೊಂಡಾಗ ತಲೆಯ ಕೂದಲುಗಳೆಲ್ಲಾ ಹೇಗೆ ಮಾಯವಾಗುತ್ತವೆಯೋ ಅದರಂತೆ ಇಲ್ಲಿರುವ ವಿದ್ಯೆಯಿಂದ ಅಂತಃಕರಣದಲ್ಲಿರುವ ಭ್ರಮೆಗಳೆಲ್ಲವೂ ಹೊರಟು ಹೋಗುತ್ತವೆ. ಅಪರಾ ವಿದ್ಯೆಯಲ್ಲಿ ಜಗತ್ತಿಗೆ ಸಂಬಂಧಿಸಿದ ಸಮಸ್ತ ವಿಷಯಗಳ ಪ್ರಸ್ತಾಪವಿದೆ. ಅಪರಾವಿದ್ಯೆಯಲ್ಲಿ ಬಹುಶಾಖೆಗಳಿದ್ದರೂ ಸಹ ಇದು ಅಂತಿಮವಲ್ಲ. ಪರಾವಿದ್ಯೆಗೆ ಅಪರಾವಿದ್ಯೆಯು ಮೆಟ್ಟಿಲೇರಿಗಳೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಇಂದಿನ ಶಿಕ್ಷಣ ಪದ್ಧತಿಯನ್ನು ಗಮನಿಸಿದಾಗ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಎರಡೂ ವಿದ್ಯೆಗಳು ಆವಶ್ಯಕ ಎಂಬುದು ವೇದ್ಯವಾಗುತ್ತದೆ. ಇದರಿಂದ ಮನಸ್ಸು ಶಾಂತವಾಗುತ್ತದೆ. ವ್ಯಕ್ತಿಯಲ್ಲಿ ಸ್ವನಂಬಿಕೆ ಉಂಟಾಗುತ್ತದೆ. ವಿಶ್ವಕ್ಕೆ ಹಿತವನ್ನುಂಟು ಮಾಡುವ ಆಸೆ ಚಿಗುರೊಡೆಯುತ್ತದೆ. ವಿವಿಧತೆಯಲ್ಲಿ ಏಕತೆ, ನಮ್ರತೆ, ಕಷ್ಟಸಹಿಷ್ಣುತೆ, ಕ್ರಿಯಾಶೀಲತ್ವ, ಸತ್ಯಾನ್ವೇಷಣೆಯಲ್ಲಿ ಮುನ್ನುಗ್ಗಿ ಹೋಗುವುದು. ಅತಿಥಿಸತ್ಕಾರ, ವಿಧೇಯತೆ, ಎಲ್ಲಾ ಕಡೆ ಸಮತೆ, ನಿಯತ ಬ್ರಹ್ಮಚರ್ಯ, ಏಕಾಗ್ರತೆ, ಸೋಮಾರಿತನ ಇಲ್ಲದಿರುವುದು, ಮಾತಿನ ಪರಿಶುದ್ಧತೆ, ಶಿಸ್ತು, ದಾನದಮಹತ್ವ, ಕೃತಜ್ಞತೆ ಇತ್ಯಾದಿ ಮೌಲ್ಯಗಳು ಇಲ್ಲಿ ತೋರಿಸಲ್ಪಟ್ಟಿವೆ. ಉಪನ್ಯಾಸ ಹಾಗೂ ಸಂವಹನ ಪದ್ಧತಿಗಳು ಬೋಧನಾಕ್ರಮಗಳಾಗಿವೆ.

–ಸಿ.ಗು.ಮೂ.

# ಶ

## ಶ್ರವಣ ಸವಾಲುಳ್ಳ ಮಕ್ಕಳ ಶಿಕ್ಷಣ

ಮಾನವ ಜೀವಿಗೆ ಶಾಬ್ದಿಕ ಸಂವಹನ ಮತ್ತು ಮಾತುಗಾರಿಕೆಯ (ಭಾಷಾ) ವಿಕಾಸಕ್ಕೆ ಪ್ರಮುಖವಾದ ಪಾತ್ರವಹಿಸುವ ಇಂದ್ರಿಯವೆಂದರೆ ಕಿವಿ ಹಾಗೂ ಅದರ ಮೂಲಕ ಆಲಿಸುವಿಕೆ. ಆಲಿಸುವಿಕೆಯಲ್ಲಿ ತೊಂದರೆ ಇದ್ದಲ್ಲಿ ಮಾತನಾಡುವಿಕೆಯಲ್ಲಿಯೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಹ್ಯಾಲ್ಲೊಹಾನ್ ಮತ್ತು ಕಾಫ್‌ಮನ್ (1991) ಪ್ರಕಾರ "ಶಬ್ದದ ಕೆಲವು ಹಂತದ ತರಂಗಗಳನ್ನು ಕೇಳಿಸಿಕೊಳ್ಳುವುದರಲ್ಲಿ ಸ್ವಲ್ಪ ತೊಂದರೆ ಇರುವವರನ್ನು ಶ್ರವಣ ದೋಷ ಇರುವವರು ಎಂದು ಕರೆಯುತ್ತಾರೆ."

ಬಿಲ್, ಮೆಕ್ಲೀನ್ ಮತ್ತು ನ್ಯೂಮನ್ (1986)ರ ಪ್ರಕಾರ "ಶ್ರವಣದೋಷವುಳ್ಳವರು ಎಂದರೆ ಸಾಧಾರಣದಿಂದ ಅತಿ ತೀವ್ರ ತೊಂದರೆ ಉಳ್ಳವರು-ಅಂದರೆ ಪೂರ್ಣ ಶ್ರವಣ ದೋಷ ಮತ್ತು ಕೇಳಿಸಿಕೊಳ್ಳಲು ಸ್ವಲ್ಪ ತೊಂದರೆ ಇರುವವರು. ಶ್ರವಣ ಸಾಧನ ಇದ್ದು ಮತ್ತು ಇಲ್ಲದೆ ಶ್ರವಣೇಂದ್ರಿಯ ಪರೀಕ್ಷೆಯಲ್ಲಿ ವ್ಯಕ್ತಿ ಏನನ್ನು ಕೇಳಿಸಿಕೊಳ್ಳಲು ಸಾಧ್ಯವಿಲ್ಲದಾಗ ಅಂತಹ ಶ್ರವಣ ತೊಂದರೆಯನ್ನು ಶ್ರವಣದೋಷ ಎಂದು ಕರೆಯುವರು."


Digitised by Bharatavani, CIIL

ಶ್ರವಣ ಸಾಧನ ಬಳಸಿ ತನ್ನ ಅಳಿದುಳಿದ ಶ್ರವಣ ಶಕ್ತಿಯನ್ನು ಉಪಯೋಗಿಸುವುದಕ್ಕೆ ಸ್ವಲ್ಪ ಮಟ್ಟಿನ ಶ್ರವಣದೋಷ ಎಂದು ತಿಳಿಯಬಹುದು.

ಅಸಮರ್ಥ ವ್ಯಕ್ತಿಗಳ ಕಾಯ್ದೆ 1996ರಲ್ಲಿ ಶ್ರವಣ ದೋಷವನ್ನು ಹೀಗೆಂದು ಅರ್ಥೈಸಲಾಗಿದೆ. "ಸಂಭಾಷಣಾ ತರಂಗದ ಆವೃತ್ತಿ ವ್ಯಾಪ್ತಿಯಲ್ಲಿ ಉತ್ತಮ ಕಿವಿಯಲ್ಲಿ 60 ಡೆಸಿಬಲ್ಸ್‌ಗಿಂತ ಅಥವಾ ಅದಕ್ಕಿಂತ ಹೆಚ್ಚು ಡೆಸಿಬಲ್‌ಗಳ ನಷ್ಟವನ್ನು ಹೊಂದಿರುವಿಕೆಯನ್ನು ಶ್ರವಣ ದೋಷ ಎಂದು ಪರಿಗಣಿಸಲಾಗುತ್ತದೆ."

**ಶ್ರವಣದೋಷಕ್ಕೆ ಕಾರಣಗಳು**

ಶಿಶುವಿನ ಶ್ರವಣದೋಷಗಳನ್ನು ಸ್ಥೂಲವಾಗಿ ಜನನಪೂರ್ವ, ಜನನಾವಧಿ ಹಾಗೂ ಜನನೋತ್ತರ ಅವಧಿಗೆ ಸೇರಿದವುಗಳೆಂದು ವಿಭಾಗಿಸಬಹುದು. ಆದರೆ, ದೋಷ/ನ್ಯೂನತೆ ಯಾವ ಅವಧಿಯಲ್ಲಿ ಆಗಿದೆ ಎಂದು ನಿರ್ದಿಷ್ಟವಾಗಿ ತಿಳಿಯಲು ಸಾಧ್ಯವಾಗುವುದಿಲ್ಲ.

ಶಿಶುವಿನ ಬೆಳವಣಿಗೆಯ ಸ್ವರೂಪ ಹೆಚ್ಚು ಅನುವಂಶೀಯತೆಯಿಂದ ಪ್ರಭಾವಿತವಾಗಿರುತ್ತದೆ. ಅನುವಂಶೀಯ ಗುಣಗಳು ಜೀವಕೋಶಗಳಲ್ಲಿರುವ ವರ್ಣತಂತುಗಳಲ್ಲಿ ಅಡಕವಾಗಿರುವ ವಂಶವಾಹಿ ಸಂದೇಶವನ್ನು ಅವಲಂಬಿಸಿರುತ್ತದೆ. ವಂಶವಾಹಿ ಕಣ ಸಾಮಗ್ರಿ (genetic material DNA) ಯಲ್ಲಿ ಬದಲಾವಣೆ ತರುವ ಯಾವುದೇ ಸಂಗತಿಯು ವ್ಯಕ್ತಿಯಲ್ಲಿ ಸಾಧಾರಣ ಅಥವಾ ತೀವ್ರತರದ ಶ್ರವಣ ದೋಷಗಳನ್ನು ಉಂಟು ಮಾಡಬಹುದು ಹಾಗೂ ಇದು ಕುಟುಂಬದಲ್ಲಿ ಕಂಡು ಬಂದಲ್ಲಿ ತಲತಲಾಂತರ ಪೀಳಿಗೆಗಳಿಗೆ ವರ್ಗಾಯಿಸಬಹುದು.

ಪ್ರಸವ ಪೂರ್ವ ಹಂತದಲ್ಲಿ ಇತರ ಔಷಧಿಗಳ ಸೇವನೆಯಿಂದಲೂ ಶ್ರವಣ ದೋಷವುಂಟಾಗಬಹುದು. ಉದಾಹರಣೆಗೆ ಆಸ್ಪಿರಿನ್, ಆಂಟಿಬಯೋಟಿಕ್, ನೋವು ನಿವಾರಕಗಳು, ಹೊಗೆಸೊಪ್ಪು, ಮದ್ಯ ಮುಂತಾದವುಗಳ ಚಟ. ಈ ಎಲ್ಲಾ ಔಷಧಗಳು ಹಾಗೂ ರಾಸಾಯನಿಕ ವಸ್ತುಗಳ ದುಷ್ಪರಿಣಾಮಗಳಿಂದ ಶ್ರವಣ ದೋಷ ಉಂಟಾಗಬಹುದು. ಪ್ರಸವ ಪೂರ್ವ ಹಂತದಲ್ಲಿ ಇನ್ನೂ ಕೆಲವು ಅಂಶಗಳು ಪ್ರಭಾವ ಬೀರುತ್ತವೆ.

ಈ ಅವಧಿಯಲ್ಲಿ ಭ್ರೂಣದ ಸಾಮಾನ್ಯ ಬೆಳವಣಿಗೆಗೆ ಅಡ್ಡಿಯಾಗುವ ಅಂಶಗಳು ಎರಡು ಬಗೆಯವು– ಭ್ರೂಣದ ಪರಿಸರ ಮತ್ತು ಭ್ರೂಣಕ್ಕೆ ನೇರವಾಗಿ ಧಕ್ಕೆ ತರುವ ಅಂಶಗಳು. ಅವುಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

ತಾಯಿಯ ದೇಹದ ಸ್ಥಿತಿಗತಿಗಳು ಮತ್ತು ಭ್ರೂಣಕ್ಕೆ ನೇರವಾಗಿ ಧಕ್ಕೆ ತರುವ ಅಂಶಗಳು:

**ಜನನ ಪೂರ್ವ ಅವಧಿ**

| ಭ್ರೂಣದ ಪರಿಸರ / ತಾಯಿಯ ದೇಹದ ಸ್ಥಿತಿಗತಿ | ಭ್ರೂಣಕ್ಕೆ ನೇರವಾಗಿ ಧಕ್ಕೆ ತರುವ ಅಂಶಗಳು |
|---|---|
| 1, ರಕ್ತ ಹೀನತೆ | 1. ಸೋಂಕು ರೋಗಗಳು |
| 2. ಮೂತ್ರಪಿಂಡದ ತೀವ್ರ ಕಾಯಿಲೆಗಳು (ಮೂರು ತಿಂಗಳಲ್ಲಿ) | 2. ರುಬೆಲ್ಲಾ (german measles)–ಗರ್ಭಧರಿಸಿದ ಮೊದಲು ಈ ಬಗೆಯ ದಡಾರ ಉಂಟಾದರೆ ಭ್ರೂಣ ಸಾಯಬಹುದು, ಇಲ್ಲವೇ ಬೆಳವಣಿಗೆ ಮತ್ತು ವಿಕಾಸದಲ್ಲಿ ಅನೇಕ ಕುಂದು ಕೊರತೆಗಳು ಕಾಣಿಸಿಕೊಳ್ಳಬಹುದು. ಆದ್ದರಿಂದ ಇದು ಬಾರದಂತೆ ತಡೆಗಟ್ಟುವುದು ಉತ್ತಮ |
| 3. ಸಕ್ಕರೆ ಕಾಯಿಲೆ (ಡಯಾಬೆಟಿಸ್) | 3. ಸಿಫಿಲಿಸ್ (ಪರಂಗಿ ರೋಗ) |
| 4. ಅರ್ಬುದ (Cancer) | 4. ಕ್ಷಯ |
| 5. ವಿಪರೀತ ವಾಂತಿಯಾಗುವುದು | 5. ಇತರ ಅಂಟುಜಾಡ್ಯಗಳು |
| 6. ಪೌಷ್ಟಿಕಾಂಶದ ಕೊರತೆ | 6. ಕ್ಷ–ಕಿರಣ, ಮತ್ತು ವಿಕಿರಣಗಳ ದುಷ್ಪರಿಣಾಮಗಳು. |
| 7. ಸೋಂಕು ರೋಗಗಳು | 7. ಔಷಧ ಮತ್ತು ರಾಸಾಯನಿಕ ವಸ್ತುಗಳ ದುಷ್ಪರಿಣಾಮಗಳು |
| 8. ಗಂಡ ಹೆಂಡತಿಯ ರಕ್ತದಲ್ಲಿ ಹೊಂದಾಣಿಕೆ ಇಲ್ಲದಿರುವಿಕೆ (Rh-Disease) (ರಕ್ತ ಸಂಬಂಧದಲ್ಲಿ ಮದುವೆಯಾದಲ್ಲಿ ಹುಟ್ಟುವ ಮಗುವಿನ ನ್ಯೂನತೆಗಳಿಗೆ ದಾರಿಯಾಗುವುದು ಖಚಿತ) | 8. ಕ್ಯಾನ್ಸರ್, ಫಿಟ್ಸ್ ಇವುಗಳನ್ನು ಹೋಗಲಾಡಿಸಲು ತಾಯಿ ತೆಗೆದುಕೊಳ್ಳುವ ಔಷಧಗಳು. |
| 9. ರಕ್ತದ ಅಧಿಕ ಒತ್ತಡ | 9. ನೋವು ಉಪಶಮನ ಮಾಡಲು ಹಾಗೂ ಗರ್ಭಪಾತವನ್ನು ತಡೆಗಟ್ಟಲು ತೆಗೆದುಕೊಳ್ಳುವ ಔಷಧಿಗಳು ಕೂಡ ಭ್ರೂಣದ ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡಬಹುದು. (ವೈದ್ಯರ ಸಲಹೆ ಇಲ್ಲದೆ ಯಾವುದೇ ಔಷಧಗಳನ್ನು ತೆಗೆದುಕೊಳ್ಳ ಬಾರದು) |
| 10. ದೇಹದಲ್ಲಿ ನೀರು ಶೇಖರಣೆ ಮತ್ತು ಮೂತ್ರದಲ್ಲಿ ಪ್ರೋಟೀನ್ ಅಂಶ ಹಾಗೂ ರಕ್ತದ ಅಧಿಕ ಒತ್ತಡ ಇವುಗಳಿಂದ ಉಂಟಾಗುವ ತೊಂದರೆಗಳು. | |
| 11. ಟಾಕ್ಸೇಮಿಯಾ (Toxemia) (ರಕ್ತದಲ್ಲಿ ವಿಷ ಸೇರುವುದು) ಹೆಚ್ಚಾದರೆ ಸೆಳೆತಗಳು (Convalsions) ಉಂಟಾಗಿ ತಾಯಿಯ ಮತ್ತು ಭ್ರೂಣದ ಜೀವಕ್ಕೆ ಧಕ್ಕೆ ಉಂಟಾಗಬಹುದು. | |

Digitised by Bharatavani, CIIL

### ಜನನ ಕಾಲದಲ್ಲಿ ದುಷ್ಪರಿಣಾಮ ಬೀರುವ ಅಂಶಗಳು

**a) ಭ್ರೂಣ ಪರಿಪಕ್ವವಾಗುವುದಕ್ಕಿಂತ ಮುಂಚಿತವಾಗಿ ಜನಿಸುವುದು:** ಸಾಮಾನ್ಯವಾಗಿ ಭ್ರೂಣಾವಸ್ಥೆ 40 ವಾರಗಳು ಇರುತ್ತದೆ. ಒಂದು ವೇಳೆ 35–37 ವಾರದೊಳಗೆ ಶಿಶು ಜನನವಾದರೆ ಅದನ್ನು ಪರಿಪಕ್ವತೆಗಿಂತ ಮುಂಚಿತವಾಗಿ ಜನಿಸಿದ ಮಗು (premature child) ಎಂದು ಕರೆಯುತ್ತೇವೆ. ಇಂತಹ ಮಕ್ಕಳಲ್ಲಿ ಆಮ್ಲಜನಕ ಹಾಗೂ ಸಕ್ಕರೆಯ ಕೊರತೆ ಕಾಣಿಸಿಕೊಂಡು ಶ್ವಾಸಕೋಶ, ಮಿದುಳಿಗೆ ಸಂಬಂಧಪಟ್ಟ ಕಾಯಿಲೆಗಳು ಕಾಣಿಸಿಕೊಂಡು ಕೆಲವೊಮ್ಮೆ ಶ್ರವಣದೋಷಕ್ಕೂ ಅದು ಕಾರಣವಾಗಬಹುದು.

ಆದ್ದರಿಂದ ಇಂತಹ ಮಕ್ಕಳನ್ನು ಕೂಡಲೇ ವೈದ್ಯರ ತಪಾಸಣೆಗೆ ಒಳಪಡಿಸಬೇಕು.

**b) ಜನನ ಸಮಯದಲ್ಲಿ ಆಗುವ ಗಾಯಗಳು:** ಹೆರಿಗೆ ಸುಗಮವಾಗಿ ಆಗದ ಪಕ್ಷದಲ್ಲಿ ಕೃತಕ ವಿಧಾನಗಳಿಂದ (ಉಪಕರಣಗಳನ್ನು ಉಪಯೋಗಿಸಿ ಅಥವಾ ಅಪರೇಷನ್ ಮಾಡುವುದರ ಮೂಲಕ) ಮಗುವಿನ ಜನನಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ಉಪಕರಣಗಳನ್ನು ಸರಿಯಾಗಿ ಬಳಸದಿದ್ದಲ್ಲಿ ಅದರಿಂದ ಮಗುವಿನ ಮುಖಕ್ಕೆ ತಲೆಯ ಮೇಲ್ಭಾಗದ ನರಗಳಿಗೆ, ಮಿದುಳು ಮತ್ತು ಮಿದುಳು ಬಳ್ಳಿಗೆ ತೊಂದರೆಯುಂಟಾಗಬಹುದು. ಅಷ್ಟೇ ಅಲ್ಲದೆ ಈ ಅವಧಿಯಲ್ಲಿ ಉಪಯೋಗಿಸುವ ಅರಿವಳಿಕೆ (anaesthesia) ಮಗುವಿನ ಕೇಂದ್ರ ನರಮಂಡಲದ ಕ್ರಿಯೆಯನ್ನು ಬಹಳಷ್ಟು ದೋಷಪೂರಿತಗೊಳಿಸಬಹುದು.

**c) ಶೈಶಾವಾವಸ್ಥೆ ಹಾಗೂ ಬಾಲ್ಯದಲ್ಲಿನ ಅಂಶಗಳು:** ಈ ಅವಧಿಯಲ್ಲಿ ಗೋಚರವಾಗುವ ನ್ಯೂನತೆಗಳು ಇದಕ್ಕಿಂತ ಮೊದಲೇ ಅಂಕುರಗೊಂಡಿರಬಹುದು. ಇಲ್ಲವೇ ಈ ಅವಧಿಯಲ್ಲಿಯೇ ತಲೆ ಎತ್ತಿರಬಹುದು. ಈ ಅವಧಿಯಲ್ಲಿ ನ್ಯೂನತೆಗಳಿಗೆ ಕಾರಣವಾಗುವ ಪ್ರಮುಖಾಂಶವೆಂದರೆ ಅಪಘಾತಗಳಿಂದ ಉಂಟಾಗುವ ಶಾಶ್ವತವಾದ ನ್ಯೂನತೆಗಳು. ಇಂತಹ ಅಪಘಾತಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು.

ಇನ್ನೂ ಕೆಲವು ಮಕ್ಕಳಲ್ಲಿ ಸೋಂಕು ರೋಗಗಳು, ನರಸಂಬಂಧಿ ರೋಗಗಳು ದಡಾರ (measles), ಮಿದುಳ ಪೊರೆಯುತ (menengitis), ಸಂಧಿವಾತ ಜ್ವರ (rheumatic fever). ಇವೇ ಮೊದಲಾದ ಕೆಲವು ಕಾಯಿಲೆಗಳು ಶಾಶ್ವತವಾದ ಕುಂದುಕೊರತೆಗಳಿಗೆ ಕಾರಣವಾಗುತ್ತವೆ. ಈ ಕಾಯಿಲೆಗಳನ್ನು ಉಪಯುಕ್ತ ರೋಗ ನಿವಾರಕಗಳ ಸರಿಯಾದ ಬಳಕೆಯಿಂದ ನಿಯಂತ್ರಿಸಬಹುದು. ದಡಾರ (measles) ಪ್ರಾಣಾಂತಿಕವಲ್ಲದಿದ್ದರೂ ಅಂಗವಿಕಲತೆ ಉಂಟು ಮಾಡಬಹುದು.

### ವರ್ಗೀಕರಣ

ಶ್ರವಣ ಸವಾಲುಳ್ಳ ಮಕ್ಕಳ ವರ್ಗೀಕರಣವನ್ನು ಆ ಮಕ್ಕಳ ಶಬ್ದ ಕೇಳುವಿಕೆಯ ಮಿತಿಯ ತೀವ್ರತೆಯನ್ನು ಡೆಸಿಬಲ್ ಅಳತೆಯ (dB) ಆಧಾರದ ಮೇಲೆ ವರ್ಗೀಕರಿಸಬಹುದು. ಶಬ್ದ ಕೇಳುವ ಮಿತಿಯ ತೀವ್ರತೆಯ ಆಧಾರದ ಮೇಲೆ ಈ ಮಕ್ಕಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು.

**ಲಘು**

ವಯಸ್ಕರಿಗೆ: 25 ರಿಂದ 40 dB ಮಧ್ಯೆ

ಮಕ್ಕಳಿಗೆ: 20 ರಿಂದ 40 dB ಮಧ್ಯೆ

ಮಧ್ಯಮ: 41 ರಿಂದ 55 dB ಮಧ್ಯೆ

ಮಧ್ಯಮ ಆದರೆ ತೀವ್ರ: 56 ರಿಂದ 70 dB ಮಧ್ಯೆ

ತೀವ್ರ: 71 ರಿಂದ 90 dB

ತೀವ್ರತರ: 90 dB ಅಥವಾ ಅದಕ್ಕಿಂತ ಹೆಚ್ಚು

ಶ್ರವಣ ಸೂಕ್ಷ್ಮತೆ ಶಬ್ದದ ತರಂಗಗಳ ಆಧಾರದ ಮೇಲೆ ವ್ಯತ್ಯಾಸವಾಗುತ್ತದೆ. ಆಡಿಯೋ ಮೀಟರ್ ಸಹಾಯದಿಂದ ಇದನ್ನು ಅಳತೆ ಮಾಡಬಹುದು.

ಶ್ರವಣ ದೋಷವು ಎರಡು ಕಿವಿಗಳಲ್ಲೂ ಉಂಟಾಗಬಹುದು. ಅಥವಾ ಒಂದೇ ಕಿವಿಯಲ್ಲಿ ಉಂಟಾಗಬಹುದು. ಅತಿ ಗಡುಸಿನ ಶಬ್ದಗಳಾದ ಕಾರುಗಳಲ್ಲಿನ ಸ್ಟೀರಿಯೋಗಳು, ಮಕ್ಕಳ ಯಂತ್ರಚಾಲಿತ ಆಟಿಕೆಗಳು, ಹುಲ್ಲುಗಾವಲುಗಳ ನಿರ್ವಹಣೆಗೆ ಬಳಸುವ ಯಂತ್ರಗಳು, ಧ್ವನಿವರ್ಧಕಗಳು, ಬಂದೂಕುಗಳ ಶಬ್ದ, ಹಾಗೂ ಇತರೇ ಗಡುಸಾದ ಶಬ್ದಗಳನ್ನು ಉಂಟುಮಾಡುವ ಉಪಕರಣಗಳಿಂದ ಶ್ರವಣ ದೋಷ ಉಂಟಾಗಬಹುದು.

### ಶ್ರವಣ ಸವಾಲುಳ್ಳ ಮಕ್ಕಳ ಗುಣಲಕ್ಷಣಗಳು

ಶ್ರವಣ ನ್ಯೂನತೆಯ ಮಟ್ಟ ಮತ್ತು ವಯಸ್ಸು ಮಗುವಿನ ವಿದ್ಯಾಭ್ಯಾಸದ ಮೇಲೆ ನೇರವಾಗಿ ಪ್ರಭಾವ ಬೀರುತ್ತವೆ. ಭಾಷೆ ಕಲಿಯುವ ಮುನ್ನ ನ್ಯೂನತೆ ಉಂಟಾಗಿದ್ದಲ್ಲಿ ಈ ಪ್ರಭಾವ ನಂತರ ಶ್ರವಣ ನ್ಯೂನತೆ ಉಂಟಾದ ಮಗುವಿನ ಮೇಲಾಗುವ ಪರಿಣಾಮಕ್ಕಿಂತ ತೀಕ್ಷ್ಣವಾಗಿರುತ್ತದೆ.

### ಶ್ರವಣ ದೋಷವುಳ್ಳ ಮಕ್ಕಳ ಪ್ರಮುಖ ಲಕ್ಷಣಗಳು ಇಂತಿವೆ

1. ಭಾಷೆಯ ಅಭಿವೃದ್ಧಿ ನಿಧಾನವಾಗುತ್ತದೆ.
2. ಶ್ರವಣ ಹೀನ ಮಕ್ಕಳು ಭಾಷೆ ಕಲಿಯಲು ತುಂಬಾ ಕಷ್ಟಪಡುತ್ತಾರೆ. ಶ್ರವಣ ತೊಂದರೆ ಇರುವ ಮಗು ತನ್ನ ಜೊತೆಯ ಮಕ್ಕಳಂತೆ ತೊದಲು ನುಡಿದರೂ ಬೇಗ ಬಿಟ್ಟು ಬಿಡುತ್ತದೆ. ಏಕೆಂದರೆ ಮಗುವಿಗೆ ಮಾತನಾಡುವ ಶಬ್ದಗಳು ಕೇಳಿಸುವುದಿಲ್ಲ.
3. ಕಿವಿ ನೋವಿನ ಬಗ್ಗೆ ಪದೇ ಪದೇ ದೂರುವುದು, ಕಿವಿ ಸೋರುವುದು ಅಥವಾ ಕಿವಿಯ ಸೋಂಕು.
4. ಮಾತನಾಡುವವರ ತುಟಿಗಳ ಮೇಲೆ ಏಕಾಗ್ರತೆ, ಬೇರೆಯವರಾಡುವ ಮಾತುಗಳನ್ನು ಕೇಳುವ ಒಂದು ಪ್ರಯತ್ನ.
5. ಭಾಷೆಯ ಪದ ವಿನ್ಯಾಸ, ಗ್ರಹಣ ಶಕ್ತಿ ಇಲ್ಲದಿರುವುದರಿಂದ ಪ್ರತಿಕ್ರಿಯೆ ಕುಂಠಿತವಾಗುತ್ತದೆ. ಸರಿಯಾಗಿ ಅರ್ಥಮಾಡಿಕೊಳ್ಳುವುದು, ವರ್ಗೀಕರಣ ಮತ್ತು ಸಾಮಾನ್ಯೀಕರಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಮೂರ್ತವಾದ ಪರಿಕಲ್ಪನೆಗಳು ಕಷ್ಟವಾಗುತ್ತವೆ. ಬೀಜಗಣಿತದಂಥ ವಿಷಯಗಳನ್ನು ಕಲಿಯುವುದು ಶ್ರವಣ ತೊಂದರೆಯುಳ್ಳ ಮಕ್ಕಳಿಗೆ ಕಷ್ಟವಾಗುತ್ತದೆ.
6. ಶ್ರವಣ ತೊಂದರೆ ಮಕ್ಕಳು ತರಗತಿಯಲ್ಲಿ ಕಲಿಯುವುದರಲ್ಲಿಯೂ ಸಹ ವಿವಿಧ ರೀತಿಯ ತೊಂದರೆಗಳನ್ನು ಅನುಭವಿಸುತ್ತಾರೆ.
   a) ಇವರಿಗೆ ಓದಿದಾಗ ಕೇಳಿಸುವುದಿಲ್ಲ. ಭಾಷೆಯೇ ದುರ್ಬಲವಾಗಿರುವಾಗ, ಓದುವುದರಲ್ಲಿ ಯಶಸ್ಸು ಗಳಿಸುವುದು ಕಷ್ಟ.


Digitised by Bharatavani, CIIL

b) ಗಣಿತದ ಬಗ್ಗೆ ಕಷ್ಟಗಳು ಈ ಮಕ್ಕಳಲ್ಲಿ ಕಾಣಿಸುತ್ತವೆ. ಗಣಿತದ ವಿಷಯ ಅಮೂರ್ತವಾದ ಕಾರಣ, ಭಾಷೆಯಲ್ಲಿ ಲೋಪವಿರುವುದರಿಂದ ಹಾಗೂ ಗ್ರಹಣ ಶಕ್ತಿ ಇಲ್ಲದಿರುವುದರಿಂದ ಗಣಿತ ಕಲಿಯಲು ಬಹಳ ಶ್ರಮಪಡಬೇಕಾಗುತ್ತದೆ.

7. ಇಂತಹ ಮಕ್ಕಳಿಗೆ ಸಾಮಾಜಿಕ ಹೊಂದಾಣಿಕೆಯ ಕೊರತೆ ಕಾಣಿಸಿಕೊಳ್ಳುತ್ತದೆ. ಇತರ ಸಾಮಾನ್ಯ ಮಕ್ಕಳೊಂದಿಗೆ ಬೆರೆಯುವಾಗ ಕೀಳರಿಮೆ ಹಾಗೂ ಒಂಟಿತನ ಕಾಡುತ್ತದೆ.

8. ಶಬ್ದಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಕಲಿಯುವುದು ಕಷ್ಟ.

### ಶ್ರವಣ ಸವಾಲುಳ್ಳ ಮಕ್ಕಳ ಶಿಕ್ಷಣ

ಸಾಮಾನ್ಯ ಮಕ್ಕಳಿಗಿರುವ ಪಠ್ಯಕ್ರಮವನ್ನೇ ಶ್ರವಣ ತೊಂದರೆಯಿರುವ ಮಕ್ಕಳಿಗೂ ನೀಡಬೇಕು. ಇಂತಹ ಮಕ್ಕಳಿಗೆ ಕೆಲವು ಅಗತ್ಯವಿರುವ ವಿಶಿಷ್ಟವಾದ ಕೌಶಲಗಳನ್ನು ಕಲಿಸಬೇಕು.

1. **ಶ್ರವಣ ಸಾಧನದ ಬಳಕೆ:** ಶ್ರವಣ ಸವಾಲುಳ್ಳ ಮಕ್ಕಳು ಈ ಸಾಧನವನ್ನು ತಮ್ಮ ತರಬೇತಿ ಹಾಗೂ ಶಿಕ್ಷಣಕ್ಕಾಗಿ ಬಳಸಲೇಬೇಕು. ಇದರ ಬಗ್ಗೆ ಸಂಬಂಧಪಟ್ಟವರಿಂದ ಸೂಕ್ತ ತರಬೇತಿಯನ್ನು ನೀಡಿ ಅದನ್ನು ಅವರ ದೋಷದ ಪ್ರಮಾಣದ ಅನುಸಾರ ಬಳಸುವಂತೆ ಶಿಕ್ಷಕರು ಜಾಗ್ರತೆ ವಹಿಸಬೇಕು.

2. **ಔದ್ಯೋಗಿಕ ತರಬೇತಿ:** ಉದ್ಯೋಗ ತರಬೇತಿಗಾಗಿ ಇಂತಹ ಮಕ್ಕಳನ್ನು ಒಳಪಡಿಸಬೇಕು. ಇಂತಹ ಮಕ್ಕಳನ್ನು ಒಂದು ಉದ್ಯೋಗ ಕೈಗೊಳ್ಳಲು ಸಿದ್ಧಪಡಿಸಬೇಕಾದುದು ಆವಶ್ಯಕ.

3. **ಶ್ರವಣ ತರಬೇತಿ (Auditory training):** ಭಾಷೆಗೆ ಸಂಬಂಧಿಸಿದ ವಿವಿಧ ಶಬ್ದಗಳ ಗ್ರಹಿಕೆಗೆ ಸಂಬಂಧಿಸಿದಂತೆ ತರಬೇತಿಯನ್ನು ನೀಡಬೇಕು. ಇಂತಹ ತರಬೇತಿಯಿಂದ ಸೂಕ್ಷ್ಮವಾಗಿ ಗಮನ ನೀಡಿ ಕೇಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದನ್ನೇ ತುಟಿ ಓದು ಎನ್ನುತ್ತಾರೆ. ಸಂಪೂರ್ಣವಾಗಿ ಕಿವಿ ಕೇಳಿಸದ ಮಕ್ಕಳಿಗೆ ತುಟಿಗಳ ಚಲನೆಯಿಂದ ಶಬ್ದಗಳನ್ನು ಗ್ರಹಿಸುವ ತರಬೇತಿ ನೀಡಬೇಕು.

4. **ತರಗತಿಯನ್ನು ವ್ಯವಸ್ಥೆಗೊಳಿಸುವಿಕೆ:** ತರಗತಿಯಲ್ಲಿ ಇಂತಹ ಮಕ್ಕಳನ್ನು ಮುಂದಿನ ಬೆಂಚುಗಳಲ್ಲಿ ಕೂಡಿಸಬೇಕು. ಅವರುಗಳು ಶಿಕ್ಷಕರ ಸಮೀಪದಲ್ಲೇ ಕುಳಿತುಕೊಳ್ಳುವ ಹಾಗೆ ಆಸನಗಳನ್ನು ವ್ಯವಸ್ಥೆಗೊಳಿಸಬೇಕು. ಶಿಕ್ಷಕರು ಮಾತನಾಡುವಾಗ ಶಬ್ದದ ಏರಿಳಿತದೊಂದಿಗೆ ಸ್ಪಷ್ಟವಾಗಿ, ನಿಧಾನವಾಗಿ ಮಾತನಾಡಬೇಕು. ಶಿಕ್ಷಕರು ಮಾತನಾಡುವಾಗ ಅವರ ತುಟಿ ಚಲನೆಯ ಮಕ್ಕಳಿಗೆ ಕಾಣಿಸುವಂತೆ ನಿಧಾನವಾಗಿ ಸ್ಪಷ್ಟವಾಗಿ ಮಾತಾಡಬೇಕು. ಇತರ ಮಕ್ಕಳೊಂದಿಗಿನ ಇವರ ಒಡನಾಟ ಹಾಗೂ ಬೆರೆಯುವುದನ್ನು ಉತ್ತೇಜಿಸಬೇಕು, ಬೋಧನೆಗೆ ಪೂರಕವಾಗಿ ದೃಶ್ಯ ಸಾಮಗ್ರಿಗಳನ್ನು ಹೆಚ್ಚಾಗಿ ಬಳಸಬೇಕು.

5. **ಮಾತುಗಾರಿಕೆಯ ಓದುವಿಕೆ:** ಮಾತುಗಾರಿಕೆಯ ಓದುವಿಕೆ ಎಂದರೆ ಮಾತುಗಳನ್ನು ಕೇಳಿಸಿಕೊಳ್ಳದೆ ಅರ್ಥ ಮಾಡಿಕೊಳ್ಳುವುದು. ಇದು ಒಂದು ಕಲೆ. ಬರೀ ಅವರ ತುಟಿಗಳ ಚಲನೆ ಹಾಗೂ ನಾಲಿಗೆಯ ಚಲನೆ ಮತ್ತು ಮುಖಭಾವ ಗಮನಿಸುವಿಕೆಯಿಂದ ಬೇರೆಯವರ ಮಾತನ್ನು ಅರ್ಥ ಮಾಡಿಕೊಳ್ಳಬಹುದು.

ಇಂತಹ ಕಲೆಯನ್ನು ಕಲಿಸಲು ಶ್ರವಣ ದೋಷ ಮಕ್ಕಳಿಗೆ ಪೋಷಕರು ಹಾಗೂ ಶಿಕ್ಷಕರು ಸೂಕ್ತ ತರಬೇತಿಯನ್ನು ಕೊಡುವುದರಲ್ಲಿ ಶ್ರಮವಹಿಸಬೇಕು. ಸಂಜ್ಞೆ ಮತ್ತು ತುಟಿಗಳ ಚಲನೆಯಿಂದ ಇಂತಹ ಮಕ್ಕಳು ಭಾಷೆಯನ್ನು ಬಹುಬೇಗ ಕಲಿಯುತ್ತಾರೆ.

**ಪೋಷಕರ ಪಾತ್ರ:** ಶ್ರವಣ ನ್ಯೂನತೆ ಮಕ್ಕಳನ್ನು ವಿಶೇಷ ಶಾಲೆಗಳಿಂದ ಸಮಗ್ರ ಶಿಕ್ಷಣ ನೀಡಲು ಸಾಮಾನ್ಯ ಶಾಲೆಗಳಿಗೆ ಸೇರಿಸುವಲ್ಲಿ ಪೋಷಕರು ನೆರವಾಗಬೇಕು. ಸಾಮಾನ್ಯ ಶಾಲೆಗೆ ಸೇರಿಸುವ ಶ್ರವಣ ನ್ಯೂನತೆಯ ಮಕ್ಕಳ ನಿರ್ವಹಣೆಯಲ್ಲಿ ಶಿಕ್ಷಕರು ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕು.

a) ಅಂತಹ ಮಕ್ಕಳೊಂದಿಗೆ ಮಾತಾಡುವಾಗ ಸ್ಪಷ್ಟವಾಗಿ, ನಿಧಾನವಾಗಿ ತುಟಿಗಳ ಚಲನೆ ಹಾಗೂ ಮುಖಭಾವದೊಂದಿಗೆ ಮಾತಾಡಬೇಕು.

b) ಅಂತಹ ಮಕ್ಕಳೊಂದಿಗೆ ಆದಷ್ಟು ಹೆಚ್ಚಾಗಿ ಮಾತಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು.

c) ಅಂತಹ ಮಕ್ಕಳು ಧರಿಸುವ ಶ್ರವಣ ಸಾಧನಗಳನ್ನು ಆಗಾಗ್ಗೆ ಸಂಬಂಧಪಟ್ಟವರಿಂದ ಪರೀಕ್ಷಿಸಬೇಕು ಹಾಗೂ ಮಕ್ಕಳು ಅದನ್ನು ಸದಾ ಧರಿಸುವುದನ್ನು ಕೂಡ ಗಮನಿಸಬೇಕು.

**ಶಾಲೆಗಳ ಪಾತ್ರ:** ಆಡಳಿತಗಾರರಿಗೆ, ಮುಖ್ಯಸ್ಥರಿಗೆ, ಬೋಧಕ ಮತ್ತು ಬೋಧಕೇತರ ವರ್ಗದವರಿಗೆ ಶ್ರವಣ ನ್ಯೂನತೆಯ ಮಕ್ಕಳ ಸಮಸ್ಯೆಗಳು, ಅಗತ್ಯತೆಗಳು ಹಾಗೂ ಸಹಕರಿಸುವ ರೀತಿ ವಿಧಾನಗಳ ಬಗ್ಗೆ ಸೂಕ್ತ ತರಬೇತಿಯನ್ನು ನೀಡಬೇಕು. ಇದರಿಂದ ಇಂತಹ ಮಕ್ಕಳನ್ನು ಸಾಮಾನ್ಯ ಶಿಕ್ಷಣದೊಂದಿಗೆ ಸೇರ್ಪಡೆಗೊಳಿಸಲು ಸಹಾಯವಾಗುತ್ತದೆ. ಶಿಕ್ಷಕರಿಂದ ಅಗತ್ಯವಿರುವ ಎಲ್ಲಾ ರೀತಿಯ ಸಹಾಯ ಹಾಗೂ ಸಹಕಾರ ಇಂತಹ ಮಕ್ಕಳಿಗೆ ದೊರೆತರೆ ಆ ಮಕ್ಕಳು ಧೈರ್ಯದಿಂದ ಆತ್ಮವಿಶ್ವಾಸದೊಂದಿಗೆ ಸಾಮಾನ್ಯ ಮಕ್ಕಳೊಂದಿಗೆ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ. ಮಕ್ಕಳೊಂದಿಗೆ ಮುಕ್ತವಾಗಿ ಬೆರೆತು, ಅವರ ಕಷ್ಟ ಸುಖಗಳ ಬಗ್ಗೆ ಚರ್ಚಿಸಬೇಕು. ಹಾಗೂ ಇತರ ಮಕ್ಕಳು ಅವರನ್ನು ಕೀಳಾಗಿ ಕಾಣದಂತೆ ತಿಳುವಳಿಕೆ ಹೇಳಬೇಕು.

### ಶಿಕ್ಷಣಕ್ಕಾಗಿ ಲಭ್ಯವಿರುವ ಸೌಲಭ್ಯಗಳು

ಬ್ರಿಟಿಷ್ ಆಳ್ವಿಕೆ ಕಾಲದಲ್ಲಿಯೇ ಶ್ರವಣ ಸವಾಲುಳ್ಳ ಮಕ್ಕಳಿಗೆ ಶಾಲೆಗಳನ್ನು ಆರಂಭಿಸಲಾಯಿತು. ಸ್ವಾತಂತ್ರ್ಯಾನಂತರ ಬೇರೆ ಬೇರೆ ರಾಜ್ಯಗಳಲ್ಲಿ ಅಂಧ ಮತ್ತು ಕಿವುಡು ಮಕ್ಕಳಿಗಾಗಿ ಸಂಯುಕ್ತ ಶಾಲೆಗಳನ್ನು ಆರಂಭಿಸಲಾಯಿತು. ಕರ್ನಾಟಕದಲ್ಲಿ ಮೈಸೂರು ಮತ್ತು ಬೆಳಗಾಂನಲ್ಲಿ ಇಂಥ ಶಾಲೆಗಳನ್ನು ತೆರೆಯಲಾಯಿತು. ಮುಂಬಯಿಯಲ್ಲಿ ಅಖಿಲ ಭಾರತ ಅಂಧ ಮಕ್ಕಳ ಸಂಸ್ಥೆ (AIHI)ಸ್ಥಾಪನೆಯಾದ ನಂತರ ಶ್ರವಣ ಸವಾಲುಳ್ಳ ಮಕ್ಕಳ ಶಿಕ್ಷಣಕ್ಕೆ ಅಂಧ ಮಕ್ಕಳ ಶಿಕ್ಷಕರ ತರಬೇತಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ (AIISH) ಇಂಥ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಕಿವಿ ದೋಷಗಳಿಗೆ ಶಸ್ತ್ರಚಿಕಿತ್ಸೆ ಶ್ರವಣ ಸಾಧನಗಳನ್ನು ಪೂರೈಸಿ ಮತ್ತು ಭಾಷಾ ಕಲಿಕೆಗೆ ವಾಕ್ ಶ್ರವಣ ತರಬೇತಿ, ಶ್ರವಣ ನ್ಯೂನತೆಯ ಅಳತೆ, ಪೋಷಕರಿಗೆ ಸಮಾಲೋಚನೆ ಮುಂತಾದ ಸೇವೆಗಳನ್ನು ಒದಗಿಸುತ್ತಿದೆ. ನವದೆಹಲಿಯ ಎನ್.ಸಿ.ಇ.ಆರ್.ಟಿ. ಸಂಸ್ಥೆಯ ವಿಶೇಷ ಶಿಕ್ಷಣ ವಿಭಾಗ ಶ್ರವಣ ದೋಷವುಳ್ಳ ಮಕ್ಕಳ ವಿಶೇಷಶಿಕ್ಷಣಕ್ಕೆ ಬೇಕಾದ ಬೋಧನಾ ಸಾಮಗ್ರಿಗಳನ್ನು ಸಾದರ ಪಡಿಸುತ್ತದೆ. ಇತ್ತೀಚಿನ ದಶಕಗಳಲ್ಲಿ ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ಶ್ರವಣ ಸವಾಲುಳ್ಳ ಮಕ್ಕಳ ವಿಶೇಷ ಶಿಕ್ಷಣಕ್ಕಾಗಿ ಅನೇಕ ಸರ್ಕಾರಿ ಹಾಗೂ ಖಾಸಗಿ ಶಾಲೆಗಳನ್ನು ತೆರೆಯಲಾಗಿದೆ. ಈ ಕ್ಷೇತ್ರದಲ್ಲಿ ಅನೇಕ ಖಾಸಗಿ ಸ್ವಯಂಪ್ರೇರಿತ ಸಂಸ್ಥೆಗಳು ಸ್ತುತ್ಯಾರ್ಹ ಸೇವೆ ಸಲ್ಲಿಸುತ್ತಿವೆ.

Digitised by Bharatavani, CIIL

### ವಿಶೇಷ ಶೈಕ್ಷಣಿಕ ಅಗತ್ಯತೆಗಳ ಪೂರೈಕೆ

1. ಶ್ರವಣ ದೋಷವಿರುವ ಪ್ರತಿಯೊಂದು ಮಗುವೂ ಶ್ರವಣ ಸಾಧನ ಧರಿಸಿದ್ದಾರೆಯೇ, ಧರಿಸಿದ್ದರೆ, ಆ ಸಾಧನ ಸರಿಯಾಗಿ ಕೆಲಸ ನಿರ್ವಹಿಸುವ ಸ್ಥಿತಿಯಲ್ಲಿದೆಯೇ ಎಂಬುದನ್ನು ಗಮನಿಸಬೇಕು.

2. ವೈಯಕ್ತಿಕ ಹಾಗೂ ಸಾಮೂಹಿಕ ಶ್ರವಣ ಸಾಧನದ ಕಾರ್ಯದ ಬಗ್ಗೆ ಪ್ರದರ್ಶನ ಮತ್ತು ವಿಶೇಷ ಉಪನ್ಯಾಸ ಏರ್ಪಡಿಸುವ ಮೂಲಕ ಶ್ರವಣ ಸಾಧನಗಳು ಶ್ರವಣ ದೋಷಗಳಿರುವ ಮಕ್ಕಳಿಗೆ ಹೇಗೆ ಸಹಾಯಕವಾಗುತ್ತದೆ ಎಂಬುದನ್ನು ಮನದಟ್ಟು ಮಾಡಿಸಬೇಕು. ಸುಲಭವಾಗಿ / ಯಥೇಚ್ಛವಾಗಿ ದೊರೆಯುವಂತಿದ್ದರೆ ಸಾಮೂಹಿಕ ಶ್ರವಣ ಸಾಧನವನ್ನು ಉಪಯೋಗಿಸಬೇಕು.

3. ಕಪ್ಪು ಹಲಗೆಯ ಮೇಲೆ ಬರೆದಿರುವ ಅಂಶಗಳನ್ನು ಹೇಳುವಾಗ ಇಲ್ಲವೇ ವಿವರಿಸುವಾಗ ತರಗತಿಗೆ ಮುಖಮಾಡಿ ನಿಲ್ಲಬೇಕು. ಈ ಸಂದರ್ಭದಲ್ಲಿ ಓವರ್‌ಹೆಡ್ ಪ್ರೊಜೆಕ್ಟರ್ ಅಥವಾ ಮೇಲ್ ತಲೆ ಪ್ರಕ್ಷೇಪಕವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕು.

4. ವಿಶೇಷ ಅಗತ್ಯತೆಗಳಿಗೆ ತಕ್ಕಂತೆ ಮಾರ್ಪಡಿಸಿದ ಬೋಧನಾ ಸಾಮಗ್ರಿಗಳನ್ನು ಬಳಸುವ ಮತ್ತು ವಿವಿಧ ಚಟುವಟಿಕೆಗಳನ್ನು ಪ್ರತ್ಯಕ್ಷ ಅನುಭವಗಳನ್ನು ಒದಗಿಸುವ ಮೂಲಕ ಶ್ರವಣ ದೋಷವುಳ್ಳ ಮಕ್ಕಳು ವಿಷಯವನ್ನು ಸುಲಭವಾಗಿ ಸ್ಪಷ್ಟವಾಗಿ ಗ್ರಹಿಸುವಂತೆ ಮಾಡಬೇಕು ಹಾಗೂ ಅವರ ಕಲಿಕಾ ಸಾಮರ್ಥ್ಯವನ್ನು ಉತ್ತಮಗೊಳಿಸಬೇಕು.

5. ಇಂತಹ ಮಕ್ಕಳಿಗೆ ಅನಗತ್ಯವಾಗಿ ಸಹಾನುಭೂತಿ ತೋರಿಸುವುದಕ್ಕಿಂತ ಅವರಿಗೆ ವಹಿಸಿದ ಎಲ್ಲಾ ಕೆಲಸಗಳನ್ನು ಆದಷ್ಟು ಶ್ರಮದಾಯಕವಾಗಿದ್ದರೂ ಮಾಡಲೇಬೇಕೆನ್ನುವ ದೃಢ ನಿರ್ಧಾರ ಹಾಗೂ ಆತ್ಮವಿಶ್ವಾಸವನ್ನು ಅವರು ಬೆಳೆಸಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸುವುದು ಹೆಚ್ಚು ಸೂಕ್ತ.

–ಎಂ.ಸ.ಪಾ

### ಶಾಲೆ– ಒಂದು ಸಾಮಾಜಿಕ ಸಂಸ್ಥೆಯಾಗಿ

ಶಿಕ್ಷಣ ಒಂದು ಸಾಮಾಜಿಕ ಪ್ರಕ್ರಿಯೆಯಾಗಿ ವಿದ್ಯಾರ್ಥಿಯ ಸಮಾಜೀಕೀಕರಣಕ್ಕಾಗಿ ಮತ್ತು ಭಾವಿ (ವಯಸ್ಕ ಹಂತದ) ಜೀವನದ ವಿವಿಧ ಪಾತ್ರಗಳನ್ನು ನಿರ್ವಹಿಸಲು ಯೋಗ್ಯರನ್ನಾಗಿ ಮಾಡುತ್ತದೆ. ಈ ಜವಾಬ್ದಾರಿ ನಿರ್ವಹಿಸಲು ಸಮಾಜದಲ್ಲಿ ಅನೇಕ ಸಂಸ್ಥೆಗಳಿದ್ದರೂ ಶಾಲೆಯೇ ಅತ್ಯಂತ ಸಮರ್ಥ, ಸಕ್ರಿಯ ಸಂಸ್ಥೆಯಾಗಿದೆ. ಸಂಸ್ಕೃತಿ ಬೆಳೆಯುತ್ತಾ ಅನೇಕ ಪ್ರಭಾವಗಳಿಗೂ ತೊಡಕುಗಳಿಗೂ ತುತ್ತಾಗುತ್ತಾ ವಿಶೇಷ ರೂಪ ಪಡೆಯುತ್ತಾ ಇರುವುದರಿಂದ ನಿಷ್ಕ್ರಿಯ ಸಂಸ್ಥೆಗಳು ಅದನ್ನು ಸರಿಯಾಗಿ ಪ್ರಸರಿಸಲಾರವೆಂದು ಸ್ಪಷ್ಟವಾಗಿ ಮನವರಿಕೆಯಾಗಲು, ಶಾಲೆಗಳು ರೂಪಿತವಾದವು. ಇವು ಶಿಕ್ಷಣವನ್ನು ಕ್ರಮಬದ್ಧವಾಗಿ ಪ್ರಸಾರ ಮಾಡಲು ಸಮರ್ಥವಾದವು. ಓದು ಮತ್ತು ಬರವಣಿಗೆಯ ರೂಪದಲ್ಲಿ ಸಂಸ್ಕೃತಿಯನ್ನು ಹರಡಬೇಕಾಗಿ ಬಂದುದರಿಂದ ಸಾಮಾಜಿಕ ಸಂಸ್ಥೆಯಾಗಿ ಶಾಲೆಗಳು ಸ್ಥಾಪನೆಯಾಗುವ ಅಗತ್ಯವುಂಟಾಯಿತು. ಹಿಂದೆ ಶಾಲಾ ಶಿಕ್ಷಣವು ಸಂಸ್ಕೃತಿಯ ಅಂಶಗಳಾದ ಭಾಷೆ, ವೇದಾಂತ, ಗಣಿತ ಶಾಸ್ತ್ರ ಮತ್ತು ಅವುಗಳ ಇತರ ಅಂಗಗಳ ಅಧ್ಯಯನಕ್ಕೆ ಮೀಸಲಾಗಿತ್ತು. ಸಮಾಜದಲ್ಲಿನ ಮೇಲ್ದರ್ಜೆಯ ಜನರೇ ಅಧ್ಯಯನದ ಕೆಲಸವನ್ನು ವಹಿಸಿಕೊಂಡಿದ್ದರು. ಕಾಲಕ್ರಮದಲ್ಲಿ ದೇಶದ ಎಲ್ಲ ಪ್ರಜೆಗಳ ಮಕ್ಕಳೂ ಶಾಲಾ ಶಿಕ್ಷಣ ಪಡೆಯುವುದು ರೂಢಿಗೆ ಬಂದಿತು.

ನಾಗರಿಕತೆ ಬೃಹದಾಕಾರವಾಗಿ ಬೆಳೆಯುತ್ತಾ ಹೋದಂತೆ ಆಡಳಿತ ವ್ಯವಸ್ಥೆಯ ವಿವರ, ನೀತಿ ಮತ್ತು ಆಚಾರಗಳ ವಿವರ, ಸಂಪ್ರದಾಯಗಳ ವಿವರ, ಸಾಹಿತ್ಯ ಮತ್ತು ಕಲೆಗಳ ಜ್ಞಾನ ಮತ್ತು ವಿವಿಧ ವಿಜ್ಞಾನ ಶಾಖೆಗಳ ವಿವರಗಳನ್ನು ಪರಿಣಾಮಕಾರಿಯಾಗಿ ಅರಿತು ಸಮಾಜದ ಸದಸ್ಯನಾಗಿ ಯಶಸ್ವಿ ಬಾಳನ್ನು ನಡೆಸಲು ಶಾಲಾ ವ್ಯವಸ್ಥೆ ಅಗತ್ಯವಾಯಿತು. ಕುಟುಂಬ ಮತ್ತಿತರ ಸಂಸ್ಥೆಗಳು ಶೈಕ್ಷಣಿಕ ಕರ್ತವ್ಯ ನಿರ್ವಹಣೆಯನ್ನು ಸಡಿಲಗೊಳಿಸಿರುವುದರಿಂದ ಸಮಾಜದಲ್ಲಿ ಶಾಲೆಗಳ ಸ್ಥಾನ ದ್ವಿಗುಣವಾಯಿತು.

ಶಿಕ್ಷಣವನ್ನು ನೀಡುವ ಶಾಲೆಗಳು ವಿದ್ಯಾರ್ಥಿಗಳನ್ನು ಔಪಚಾರಿಕವಾಗಿ ಸಮಾಜೀಕರಿಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಿವೆ.

ಶಾಲೆಗಳು ಸಾಮಾಜಿಕ ಸಂಸ್ಥೆಗಳಂತೆ ಕೆಲಸ ಮಾಡುತ್ತವೆ ಎಂಬುದನ್ನು ಈ ಕೆಳಗಿನ ಸಮರ್ಥನೆಗಳಿಂದ ಸ್ಪಷ್ಟಪಡಿಸಬಹುದು.

- ವಿವಿಧ ಕುಟುಂಬ, ವಿವಿಧ ಸಮುದಾಯಗಳಿಂದ ಮಕ್ಕಳು ಶಾಲೆಗೆ ಬರುತ್ತಾರೆ. ಹಾಗೆ ಬರುವ ಮಕ್ಕಳ ಹಿನ್ನೆಲೆ ಭಿನ್ನವಾಗಿರುವುದರಿಂದ ಅವರ ನಡುವೆ ನಡೆಯುವ ಅಂತರ ಕ್ರಿಯೆ ಸಾಮಾಜಿಕ ಸ್ವರೂಪವನ್ನು ಪಡೆಯುತ್ತದೆ. ಕುಟುಂಬದ ಸಂರಕ್ಷಿತ ಜೀವನದಿಂದ ಹೊರಬಂದು ಜೀವಿಸುವುದನ್ನು ಶಾಲೆಗಳು ಕಲಿಸುತ್ತವೆ.

- ಭಿನ್ನ ಪರಿಸರದಿಂದ ಬರುವ ಮಕ್ಕಳು ಶಾಲೆಯಲ್ಲಿ ಸಮ ವಯಸ್ಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶಾಲೆಯಲ್ಲಿ ಮಕ್ಕಳು ಅಪರಿಚಿತ ಪರಿಸರವನ್ನು ಪಡೆದು ಹೊಸ ರೀತಿಯ ಪ್ರಭಾವಗಳಿಗೆ ಗುರಿಯಾಗುತ್ತಾರೆ. ಇದರಿಂದ ಅವರು ಭವಿಷ್ಯದಲ್ಲಿ ವಹಿಸಬೇಕಾದ ವಯಸ್ಕ ಪಾತ್ರಗಳನ್ನು ಪೂರ್ವಭಾವಿಯಾಗಿಯೇ ಕಲ್ಪಿಸಿಕೊಳ್ಳಬಹುದು.

- ವಿವಿಧ ಶ್ರೇಣಿಗಳ ವ್ಯಕ್ತಿಗಳಿದ್ದರೂ ಸಹಜೀವಿಗಳಂತೆ ಬೆರೆಯುವ ಅವಕಾಶವನ್ನು ಮಕ್ಕಳು ಶಾಲೆಗಳಲ್ಲಿ ಪಡೆಯುತ್ತಾರೆ. ಅಲ್ಲದೆ ಹಿರಿಯರೊಂದಿಗೆ ಗೌರವದಿಂದಲೂ ಕಿರಿಯರೊಂದಿಗೆ ಪ್ರೀತಿ ವಿಶ್ವಾಸಗಳಿಂದಲೂ ಜೀವಿಸಲು ಅಗತ್ಯವಾದ ಸಾಮಾಜಿಕ ಕೌಶಲಗಳ ತರಬೇತಿಯನ್ನು ಶಾಲೆ ಒದಗಿಸುತ್ತದೆ.

- ಕುಟುಂಬ ಮತ್ತು ಸಮೂಹಗಳಂತೆ ಶಾಲೆಗಳೂ ತಮ್ಮದೇ ಆದ ಉಪ ಸಂಸ್ಕೃತಿಯನ್ನು ಹೊಂದಿರುತ್ತವೆ. ಇವು ಶಾಲೆಯ ವಿವಿಧ ಮಕ್ಕಳ ನಡುವೆ ಐಕ್ಯತೆಯನ್ನು ತರಲು ಪ್ರಯತ್ನಿಸುತ್ತವೆ.

- ಭಿನ್ನ ರೀತಿಯ ವಿದ್ಯಾರ್ಥಿಗಳು ಒಟ್ಟಿಗೆ ಇರುವುದರಿಂದ ವಿವಿಧ ರೀತಿಯ ಮೌಲ್ಯಗಳು, ನಂಬಿಕೆಗಳು, ಸಂಪ್ರದಾಯಗಳು ಆಲೋಚನೆ ಮತ್ತು ವರ್ತನ ವಿನ್ಯಾಸಗಳೂ ಇರುತ್ತವೆ. ವೈವಿಧ್ಯತೆಯು ಶಾಲಾ ಸಾಮಾಜಿಕ ವ್ಯವಸ್ಥೆಯ ವೈಶಿಷ್ಟ್ಯವಾಗಿರುತ್ತದೆ.

- ಶಾಲಾ ಜೀವನದಲ್ಲಿ ವಿದ್ಯಾರ್ಥಿಗಳು ಸಾಧನೆಯ ಮೂಲಕ ಕಲಿಕೆಯನ್ನು ತೋರಬೇಕಾಗುತ್ತದೆ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೊಂದಿಗೆ ವ್ಯಕ್ತಿತ್ವ ವಿಕಸನ ಚಟುವಟಿಕೆಗಳನ್ನು, ನಾಯಕತ್ವ ತರಬೇತಿಯ ಚಟುವಟಿಕೆಗಳನ್ನು, ವೃತ್ತಿ ಆಯ್ಕೆ ಸಿದ್ಧತೆಗೆ ಬೇಕಾದ ಚಟುವಟಿಕೆಗಳನ್ನು ಶಾಲೆಗಳು ಒದಗಿಸುತ್ತವೆ.

- ಶಾಲಾ ಆರಂಭ ಮುನ್ನ, ಊಟದ ವಿರಾಮ ಮತ್ತು ಶಾಲಾ ನಂತರದ ಸಮಯದಲ್ಲಿ ಮಕ್ಕಳು ಒಟ್ಟಿಗೆ ಇರುತ್ತಾ ಅನೌಪಚಾರಿಕ


Digitised by Bharatavani, CIIL

ಸನ್ನಿವೇಶಗಳಲ್ಲಿ ಕ್ರೀಡೆ, ಸಹಭೋಜನ, ಹರಟೆ, ಸಮೂಹ ಅಧ್ಯಯನ ಚರ್ಚೆಗಳಲ್ಲಿ ತೊಡಗುತ್ತಾ ಸಾಮಾಜಿಕ ಸಂಬಂಧವನ್ನು ಹೆಚ್ಚಿಸಿಕೊಳ್ಳುತ್ತಾರೆ.

ಶಾಲೆಯು ಒಂದು ಸಾಮಾಜಿಕ ಸಂಸ್ಥೆಯಾಗಲು ತನ್ನದೇ ಆದ ಒಂದು ಸಂರಚನೆಯನ್ನು ಹೊಂದಿರುತ್ತದೆ. ಸರ್ಕಾರಿ ಅಥವಾ ಖಾಸಗಿ ಆಡಳಿತ ಮಂಡಳಿಗಳು ನಡೆಸುವ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರು ವಿವಿಧ ವಿಷಯಗಳನ್ನು (ವಿಜ್ಞಾನ, ಕಲಾ ಮತ್ತು ಭಾಷಾ) ಬೋಧಿಸುವ ಶಿಕ್ಷಕರು, ಸಂಗೀತ, ಕರಕುಶಲ ಕಲೆ, ದೈಹಿಕ ಶಿಕ್ಷಣ ನೀಡುವ ಶಿಕ್ಷಕರು, ಶಾಲಾ ಕಛೇರಿ ಸಿಬ್ಬಂದಿ ವರ್ಗದವರು ಈ ಎಲ್ಲರೂ ಸಹಕಾರದಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತ ಒಂದು ರೀತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸುತ್ತಾರೆ. ಶಾಲಾ ಆಡಳಿತ ಮಂಡಳಿಯವರು ಸ್ಥಳೀಯ ಸಮುದಾಯದವರಾಗಿರಬಹುದು ಇಲ್ಲವೆ ಪಂಚಾಯಿತಿ ಅಥವಾ ಜಿಲ್ಲಾ ಪರಿಷತ್‌ನ ಸದಸ್ಯರೂ ಆಗಿರಬಹುದು. ಶಾಲೆಗಳ ಪಠ್ಯಕ್ರಮ, ಪರೀಕ್ಷಾ ನಿರ್ವಹಣೆ ವಿಚಾರಗಳು ರಾಜ್ಯ ಶಿಕ್ಷಣ ಇಲಾಖೆಯ ಮೇಲ್ವಿಚಾರಣೆಯಲ್ಲಿರುತ್ತದೆ. ಆಗಾಗ ತನಿಖಾಧಿಕಾರಿಗಳು ಭೇಟಿ ನೀಡುತ್ತಾರೆ. ಶಾಲೆಗಳ ವ್ಯವಸ್ಥೆ, ಶಿಕ್ಷಣದ ಗುಣಮಟ್ಟ, ಶಿಸ್ತು ಪರಿಪಾಲನೆ, ಸಾಮಾಜಿಕ ಪರಿಸರ ಉತ್ತಮ ರೀತಿಯಲ್ಲಿರುವಂತೆ ತನಿಖಾಧಿಕಾರಿಗಳು, ಇಲಾಖೆಯ ಮೇಲಧಿಕಾರಿಗಳೊಂದಿಗೆ ಸಮಾಲೋಚಿಸಿ ಮಾರ್ಗದರ್ಶನ ನೀಡುತ್ತಾರೆ. ಮುಖ್ಯ ಉಪಾಧ್ಯಾಯರು ಮತ್ತು ಸಹ ಉಪಾಧ್ಯಾಯರ ನಡುವೆ ಹಿತಕರ ಮತ್ತು ರಚನಾತ್ಮಕವಾದ ಅಂತರಕ್ರಿಯೆ ಇದ್ದಲ್ಲಿ ಶಾಲೆಯು ವಿಕಾಸ ಹೊಂದುತ್ತಿರುವ ಮಕ್ಕಳ ಮೇಲೂ ಫಲಪ್ರದವಾದ ಸಾಮಾಜಿಕ ಗುಣವುಳ್ಳ ಪ್ರಭಾವ ಬೀರಬಹುದು.

ಶಾಲೆಗಳು ಸಮಾಜದಿಂದ ಹೊರಗಿರಲು ಸಾಧ್ಯವಿಲ್ಲ. ಆದ್ದರಿಂದ, ಶಾಲೆಗಳು ಸಮಾಜದೊಡನೆ ಗಾಢವಾದ ಸಂಪರ್ಕವನ್ನು ಇಟ್ಟುಕೊಂಡಿರುವುದು. ಶಿಕ್ಷಣದ ಧ್ಯೇಯೋದ್ದೇಶಗಳೂ ಸಮಾಜದಿಂದಲೇ ರೂಪಿತವಾಗುತ್ತವೆ. ಶಿಕ್ಷಣದ ವಸ್ತು ವಿಷಯಗಳಾದ ಸಮಾಜಶಾಸ್ತ್ರ, ಸಾಹಿತ್ಯ, ವಿಜ್ಞಾನ, ಗಣಿತ, ಅರ್ಥಶಾಸ್ತ್ರಾದಿಗಳೆಲ್ಲವೂ ಸಮಾಜದಿಂದಲೇ ದೊರಕುತ್ತವೆ. ಸಂಸ್ಕೃತಿಯ ಮಾದರಿಗಳೂ, ಶಿಕ್ಷಕರು ಅನುಸರಿಸಬೇಕಾದ ವ್ಯಕ್ತಿತ್ವ ಮಾದರಿಗಳೂ ಸಮಾಜದ ಉತ್ಕೃಷ್ಟ ಉದಾಹರಣೆಗಳಿಂದ ದೊರಕುವವು. ಸಮಾಜದಲ್ಲಿ ಸಂಪ್ರದಾಯದಿಂದ ನಡೆಸಿಕೊಂಡು ಬಂದ ಸಮಾರಂಭಗಳು, ಹಬ್ಬ ಹರಿದಿನಗಳೂ ಶಾಲೆಗಳಲ್ಲಿ ಆಚರಿಸಲ್ಪಡುತ್ತವೆ. ಅಂತಹ ಸಂದರ್ಭಗಳಲ್ಲಿ ಮಕ್ಕಳ ಪೋಷಕರೂ ಭಾಗವಹಿಸಿ ಶಾಲೆ, ಸಮಾಜ ಇನ್ನೂ ನಿಕಟ ಸಂಪರ್ಕ ಪಡೆಯುತ್ತವೆ.

ಶಾಲೆಯ ಬೆಳಗಿನ ಪ್ರಾರ್ಥನಾ ಸಭೆಯ ಕಾರ್ಯಕ್ರಮಗಳು, ಕ್ರೀಡಾ ಸಮಾರಂಭ, ಪೋಷಕರ ದಿನಾಚರಣೆ, ಘಟಿಕೋತ್ಸವ, ವಸ್ತು ಪ್ರದರ್ಶನ ಇವು ಶಾಲೆಯ ಸಾಮಾಜಿಕ ಸ್ವರೂಪವನ್ನು ಹೆಚ್ಚಿಸುತ್ತವೆ. ಶಾಲಾಗೀತೆ, ಶಾಲಾ ಧ್ಯೇಯ, ಶಾಲಾಧ್ವಜ, ಸಮವಸ್ತ್ರ, ಸಮವಸ್ತ್ರದ ಬಣ್ಣ ಇತ್ಯಾದಿಗಳು ಶಾಲಾ ಸಂಸ್ಕೃತಿಯ ಮಹತ್ವದ ಅಂಶಗಳಾಗುತ್ತವೆ. ಶಾಲೆಗಳು ವಿವಿಧ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಅನೇಕ ಜೀವನ ಮೌಲ್ಯಗಳನ್ನು– ಅಭಿವ್ಯಕ್ತಿಶೀಲತೆ, ವ್ಯಕ್ತಿ–ವ್ಯಕ್ತಿ ನಡುವಣ ಸ್ನೇಹ ಸೌಹಾರ್ದತೆ, ಸಮಸ್ಯಾ ಪರಿಹಾರಶಕ್ತಿ ಮುಂತಾದ ಕೌಶಲಗಳನ್ನು ಕಲಿಸುತ್ತವೆ. ಮಾನವ ಸಮಾಜದಲ್ಲಿ ನಿರಂತರವಾಗಿ ನಡೆಯುವ ಸಂಶೋಧನೆಗಳು, ಆವಿಷ್ಕಾರಗಳೂ ಮತ್ತು ಸಮಾಜದ ಬದಲಾಗುವ ನೀತಿ ನಡವಳಿಕೆಗಳಿಗನುಗುಣವಾಗಿ ಶಾಲಾ–ಶಿಕ್ಷಣದ ಸ್ವರೂಪ ಬದಲಾಗುತ್ತದೆ.

ಶಾಲೆಯ ಬಿಡುವಿನ ಸಮಯ (ಸಂಜೆ/ರಜಾ ದಿನಗಳ)ಗಳಲ್ಲಿ ಸಮಾಜದ ಹಿರಿಯರು/ ಯುವಕರು ಅನೇಕ ಸಾಮಾಜಿಕ/ಸಾಂಸ್ಕೃತಿಕ ಚಟುವಟಿಕೆಗಳನ್ನು, ವಿಚಾರ ವಿನಿಮಯ ಗೋಷ್ಠಿಗಳನ್ನು ಶಾಲೆಯಲ್ಲಿ ಏರ್ಪಡಿಸಿ ಎಲ್ಲರೂ ಭಾಗವಹಿಸುವಂತೆ ಮಾಡುವುದೂ ಆಚರಣೆಯಲ್ಲಿದೆ.

–ನಾ.ಕೆ.ಆರ್.

## ಶ್ರೇಣೀಕರಣ ವ್ಯವಸ್ಥೆ

ಮೌಲ್ಯಮಾಪನವು ಬೋಧನಾ ಕಲಿಕಾ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ. ಮೌಲ್ಯಮಾಪನವು ಶಿಕ್ಷಣದಲ್ಲಿ ಗುಣಾತ್ಮಕ ಅಭಿವೃದ್ಧಿಗೆ ನೆರವಾಗುವುದು. ಉತ್ತಮ ಗುಣಮಟ್ಟದ ಮೌಲ್ಯಮಾಪನವಿದ್ದಾಗ ಮಾತ್ರ ಬೋಧನೆಯನ್ನು ಯಶಸ್ವಿಯಾಗಿ ಕೈಗೊಂಡು ಬೋಧನೋದ್ದೇಶಗಳನ್ನು ಸಾಧಿಸಬಹುದಾಗಿದೆ.

ಮೌಲ್ಯಮಾಪನವು ಕಲಿಕಾರ್ಥಿಯ ವರ್ತನೆಯ ಬದಲಾವಣೆಗಳ ಗತಿ ಮತ್ತು ಪರಿಮಾಣಗಳನ್ನು ಸ್ಪಷ್ಟಪಡಿಸುತ್ತದೆ. ಪರೀಕ್ಷೆಯ ನಂತರ ಫಲಾಫಲಗಳನ್ನು ತಿಳಿಯುವ ದೃಷ್ಟಿಯಿಂದ ಗುಣಾತ್ಮಕವಾದ, ಮನೋವೈಜ್ಞಾನಿಕವಾದ ಅಂಶಗಳನ್ನು ಪರಿಮಾಣಾತ್ಮಕವಾಗಿ ಭೌತಿಕ ರೂಪದಲ್ಲಿ ವ್ಯಕ್ತಪಡಿಸಲು ಆದೇಶಿಸುವ ಅಂಕಗಳೇ ಅಳತೆ. ಅಳತೆ ಇಲ್ಲದೆ ಪರೀಕ್ಷೆಗಳು ಸಾಧ್ಯವಿಲ್ಲ. ಪರೀಕ್ಷೆ ಮಾಡುವ ಅಳತೆಗಳಿಗೆ ತನ್ನದೇ ಆದ ಬೆಲೆಯೇ ಇಲ್ಲ. ಪರೀಕ್ಷೆ ಮತ್ತು ಅಳತೆಗಳನ್ನು ಒಗ್ಗೂಡಿಸಿ ಅರ್ಥ ನೀಡುವುದೇ ಮೌಲ್ಯಮಾಪನ.

ಅಂಕಗಳ ಸಹಾಯದಿಂದ ಅಳತೆ ಮಾಡಿ ಮೌಲ್ಯಮಾಪನ ಮಾಡುವುದು ಸರ್ವೇಸಾಮಾನ್ಯ ಹಾಗೂ ಪ್ರಚಲಿತವಾಗಿರುವ ಒಂದು ವಿಧಾನ.

ಪ್ರಸ್ತುತ ಮೌಲ್ಯಮಾಪನವು ಅನೇಕ ದೋಷಗಳನ್ನು ಹೊಂದಿರುವುದನ್ನು ಶಿಕ್ಷಣ ಆಯೋಗ ಮತ್ತು ಸಮಿತಿಗಳು ಪಟ್ಟಿ ಮಾಡಿ ತೋರಿಸಿವೆ. ಸಂಕುಚಿತ ವ್ಯಾಪ್ತಿಯ ಯಾಂತ್ರಿಕ ವಿಧಾನ ಮತ್ತು ನಿಖರತೆಗೆ ಅವಕಾಶವಿಲ್ಲದೆ ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆಯ ಅಗತ್ಯತೆಯನ್ನು ಸೂಚಿಸಿದೆ. ಫಲಿತಾಂಶಗಳು ಅಂಕಗಳ ಆಧಾರದ ಮೇಲೆ ಘೋಷಣೆಯಾಗುತ್ತಿವೆ. ಶಿಕ್ಷಕರು ಕೂಡ ಪರೀಕ್ಷೆಯನ್ನೇ ದೃಷ್ಟಿಕೋನದಲ್ಲಿಟ್ಟುಕೊಂಡು ಬೋಧಿಸುತ್ತಿದ್ದಾರೆ. ಇಂದಿನ ಶಿಶುಕೇಂದ್ರಿತ ಶಿಕ್ಷಣ ಕ್ರಮದಲ್ಲಿ ಶಿಕ್ಷಕಕೇಂದ್ರಿತ ಪರೀಕ್ಷಾ ಕ್ರಮಗಳಿರುವುದು ವಿಪರ್ಯಾಸ. ಪೋಷಕರು ಕೂಡ ತಮ್ಮ ಮಕ್ಕಳ ಅಂಕಗಳಿಗೆ ಅನಗತ್ಯ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಹೆಚ್ಚಿನ ಅಂಕ ಗಳಿಸುವಂತೆ ಒತ್ತಡ ಹೇರುತ್ತಿದ್ದಾರೆ. ವಿದ್ಯಾರ್ಥಿಗಳ ನಡುವೆ ಹಾಗೂ ಶಾಲೆಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ಏರ್ಪಡುತ್ತಿದೆ. ಇಂತಹ ಸ್ಥಿತಿಗತಿಗಳು ವಿದ್ಯಾರ್ಥಿಗಳಲ್ಲಿ ಮಾನಸಿಕ ಭಯ ಹಾಗೂ ಕ್ಷೋಭೆಯನ್ನುಂಟುಮಾಡುತ್ತವೆ. ಅನುತ್ತೀರ್ಣ ಹಾಗೂ ಕಡಿಮೆ ಅಂಕಗಳ ಭಯದಿಂದ ಪರೀಕ್ಷೆಯಲ್ಲಿ ನಕಲು ಮಾಡುವುದು ಒಂದು ಕಡೆ ಹೆಚ್ಚಾಗುತ್ತಿದ್ದರೆ ಮತ್ತೊಂದು ಕಡೆ ಆತ್ಮಹತ್ಯೆಗೆ ಶರಣಾಗುವ ಕೃತ್ಯಗಳೂ ಜರುಗುತ್ತಿವೆ. ಅಷ್ಟೇ ಅಲ್ಲದೆ ಪರೀಕ್ಷೆಗಳಲ್ಲಿ ಕೇವಲ ಅಂಕ ಗಳಿಕೆಗೆ ಆದ್ಯತೆ ನೀಡಿ ಅವರ ಇತರ ಸಾಮರ್ಥ್ಯಗಳನ್ನು ನಾಶಗೊಳಿಸಲಾಗುತ್ತಿದೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮೌಲ್ಯಮಾಪನದಲ್ಲಿ ಶ್ರೇಣೀಕರಣ ಪದ್ಧತಿಯು ಸೂಕ್ತವಾಗಿದ್ದು, ಕೇವಲ ಅಂಕಗಳು ಅಥವಾ ಪ್ರತಿ ವಿಷಯದಲ್ಲಿ ಶೇಕಡವಾರು ಅಂಕಗಳನ್ನು ತೋರುವುದಕ್ಕೆ ಬದಲಾಗಿ ಗುಣಾತ್ಮಕತೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

**ಶ್ರೇಣೀಕರಣ ವ್ಯವಸ್ಥೆಯ ಅರ್ಥ:** ಪರೀಕ್ಷೆಯ ಸಂಖ್ಯಾರೂಪದ ಪ್ರಾಪ್ತಾಂಕಗಳಿಗೆ ಬದಲು ಬಳಸುವ ಸ್ಥಾನಸೂಚಕ ಸಂಕೇತಗಳೇ ಶ್ರೇಣೀಮಟ್ಟಗಳಾಗಿರುತ್ತವೆ. ಅಂದರೆ ವಿದ್ಯಾರ್ಥಿಗಳ ಪರೀಕ್ಷೆಯ

Digitised by Bharatavani, CIIL

ಫಲಿತಾಂಶಗಳನ್ನು ಅಂಕಗಳ ಆಧಾರದ ಮೇಲೆ ಪ್ರಕಟಿಸುವ ಬದಲು ಶ್ರೇಣಿಯಲ್ಲಿ ಪ್ರಕಟಿಸುವುದೇ ಶ್ರೇಣೀಕರಣ ಪದ್ಧತಿ.

ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ಪ್ರಮಾಣಾನುಸಾರವಾಗಿ ಸೂಕ್ತವೆನಿಸುವ ಸ್ಥಾನದಲ್ಲಿ ವರ್ಗೀಕರಿಸುವ ಕಾರ್ಯವೇ "ಶ್ರೇಣೀಕರಣ ವ್ಯವಸ್ಥೆ."

ವಿದ್ಯಾರ್ಥಿಯು ವಿಷಯವೊಂದಕ್ಕೆ ಸಂಬಂಧಿಸಿದಂತೆ ವರ್ಷವಿಡೀ ನಡೆಯುವ ಘಟಕ ಪರೀಕ್ಷೆ, ಕಿರು ಪರೀಕ್ಷೆ, ಅರ್ಧವಾರ್ಷಿಕ ಪರೀಕ್ಷೆ, ವಾರ್ಷಿಕ ಪರೀಕ್ಷೆ ಇತ್ಯಾದಿಗಳಲ್ಲಿ ಪಡೆದಂತಹ ಅಂಕಗಳನ್ನು ಶ್ರೇಣೀಕರಣಗೊಳಿಸಬಹುದು. ಕೆಲವು ಸಂದರ್ಭದಲ್ಲಿ ಕೇವಲ ಅಂತಿಮ ಪರೀಕ್ಷೆಯ ಅಂಕಗಳನ್ನು ಮಾತ್ರ ಪರಿಗಣಿಸಿ ಶ್ರೇಣೀಕರಣಗೊಳಿಸವರು. ಇದು ಆಯಾಯ ರಾಜ್ಯದ ಪರೀಕ್ಷಾ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ.

**ಶ್ರೇಣೀಕೃತ ವ್ಯವಸ್ಥೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ ಮಾಡಿರುವ ಶಿಫಾರಸ್ಸುಗಳು ಹೀಗಿವೆ:**

ಮೌಲ್ಯಮಾಪನದ ನಿಖರತೆಯನ್ನು ಕಾಪಾಡುವ ಸಲುವಾಗಿ ಅದು ಏಳು ಬಿಂದುಗಳ ಶ್ರೇಣಿ ಪಟ್ಟಿಯನ್ನು ಸಲಹೆ ಮಾಡಿದೆ. (seven point grading scale)

ಒಂದು ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಕರು ನೀಡಿದ ಅಂಕಗಳನ್ನು ಶ್ರೇಣೀಕರಣಗೊಳಿಸುವ ಕ್ರಮ. ಒಂದು ವಿಷಯದಲ್ಲಿ ವಿದ್ಯಾರ್ಥಿಗಳು ಪಡೆದ ಶೇಕಡವಾರು ಅಂಕಗಳ ವ್ಯಾಪ್ತಿಯನ್ನು ಗುರುತಿಸುವುದು. ನಂತರ ಅದಕ್ಕೆ ಅನುಗುಣವಾಗಿ ಶ್ರೇಣಿ ಪಟ್ಟಿಯನ್ನು ತಯಾರು ಮಾಡುವುದು.

ಉದಾ: ಗಣಿತದಲ್ಲಿ ಉತ್ತೀರ್ಣರಾಗಲು ಪಡೆಯಬೇಕಾಗಿರುವ ಅಂಕ 35. ಅದೇ ವಿಷಯದಲ್ಲಿ ಪಡೆದ ಗರಿಷ್ಠ ಅಂಕಗಳು 99 ಆಗಿರಬಹುದು. ಕನಿಷ್ಠ ಅಂಕಗಳು 24 ಆಗಿರಬಹುದು. ಶ್ರೇಣಿ ಪಟ್ಟಿಯ ತಯಾರಿಕೆ ಈ ರೀತಿಯಾಗಿರುತ್ತದೆ.

| ಅಂಕಗಳ ವ್ಯಾಪ್ತಿ | ಶ್ರೇಣಿಗಳ ವಿತರಣೆ |
|---|---|
| 1. 99 ರಿಂದ ಮೇಲ್ಪಟ್ಟ | O (Outstanding) |
| 2. 89 ರಿಂದ 80 | A (Very Good) |
| 3. 79 ರಿಂದ 70 | B (Good) |
| 4. 69 ರಿಂದ 60 | C (Average/fair) |
| 5. 59 ರಿಂದ 50 | D (Below average/Satifactory) |
| 6. 49 ರಿಂದ 40 | E (poor) |
| 7. 39 ರಿಂದ ಕೆಳಗಿರುವವರು (ಅನುತೀರ್ಣರಾದವರು) | F (Fail) (very poor) |

ಈ ಅಂಕಗಳ ವ್ಯಾಪ್ತಿ ಪ್ರತಿಯೊಂದು ವಿಷಯಕ್ಕೂ ಬೇರೆ ಬೇರೆಯಾಗಿರುತ್ತದೆ. ಅದಕ್ಕೆ ಅನುಗುಣವಾಗಿ ಶ್ರೇಣಿಗಳ ವಿತರಣೆಯನ್ನು ಮಾಡಬೇಕಾಗುತ್ತದೆ.

ಶಿಕ್ಷಕರು ತಮ್ಮ ವಿಷಯದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಟ್ಟವನ್ನು ಅವಲಂಬಿಸಿ 3 point scale, 5 point scale ಅಥವಾ 7 point scaleಗಳಾಗಿ ಶ್ರೇಣಿಗಳ ವಿತರಣೆಯನ್ನು ಮಾಡಬಹುದಾಗಿದೆ. ನಿಖರತೆಗೆ ಆದ್ಯತೆಯನ್ನು ನೀಡಿ ಶ್ರೇಣಿಗಳ ವಿತರಣೆಯನ್ನು ನಿರ್ಧರಿಸಬಹುದು.

ಕೆಲವು ಸಂದರ್ಭಗಳಲ್ಲಿ ನೇರವಾಗಿ ವಿಷಯಕ್ಕೆ ಸಂಬಂಧಿಸಿದಂತೆ ಶ್ರೇಣಿಗಳನ್ನು ನೀಡಿ ನಂತರ ಅದನ್ನು ಶ್ರೇಣಿ ಬಿಂದು ಸರಾಸರಿಯಾಗಿ ಪರಿವರ್ತಿಸಬಹುದು. ಅದರ ವಿವರಣೆ ಈ ಕೆಳಕಂಡಂತೆ ಇದೆ.

**ಶ್ರೇಣಿ ಬಿಂದು ಸರಾಸರಿ (Grade Point Average-GPA)**

ಒಬ್ಬ ವಿದ್ಯಾರ್ಥಿಯು ಒಂದು ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಪ್ರಶ್ನೆಯ ಉತ್ತರಕ್ಕೆ ಪಡೆದ ಶ್ರೇಣಿಯನ್ನು ಶ್ರೇಣಿಬಿಂದುವಾಗಿ ಪರಿವರ್ತಿಸಿ ನಂತರ ಶ್ರೇಣಿ ಬಿಂದು ಸರಾಸರಿಯನ್ನು ಕಂಡು ಹಿಡಿಯುವ ವಿಧಾನಕ್ಕೆ ಶ್ರೇಣಿ ಬಿಂದು ಸರಾಸರಿ ಎಂದು ಕರೆಯುತ್ತಾರೆ.

ಇದೇ ರೀತಿ ಪ್ರತಿ ವಿಷಯದ ಶ್ರೇಣಿ ಬಿಂದುವನ್ನು ಪರಿಗಣಿಸಿ ಶ್ರೇಣಿ ಬಿಂದು ಸರಾಸರಿಯನ್ನು ಕಂಡುಹಿಡಿಯಬಹುದಾಗಿದೆ.

ಉದಾ: ಶ್ರೇಣಿ ಬಿಂದು ಸರಾಸರಿಯ ಪಟ್ಟಿ

| ಪ್ರಶ್ನೆಗಳ ಸಂಖ್ಯೆ | 1 | 2 | 3 | 4 | 5 | ಒಟ್ಟು |
|---|---|---|---|---|---|---|
| ಶ್ರೇಣಿಗಳು | O | A | A | O | B | |
| ಶ್ರೇಣಿ ಬಿಂದು | 6 | 5 | 5 | 6 | 4 | 26 |

$$G.P.A = \frac{26}{5} = 5.2$$

$$\text{ಶ್ರೇಣಿಬಿಂದು ಸರಾಸರಿ (GPA)} = \frac{\text{ಗಳಿಸಿದ ಒಟ್ಟು ಶ್ರೇಣಿ ಬಿಂದುಗಳು}}{\text{ಪ್ರಶ್ನೆಗಳ ಸಂಖ್ಯೆ}}$$

ಒಟ್ಟಾರೆ ಶ್ರೇಣಿ = A

$$\text{ಅದೇ ರೀತಿ GPA} = \frac{\text{ವಿಷಯಗಳ ಎಲ್ಲಾ ಶ್ರೇಣಿ ಮೌಲ್ಯಗಳ ಮೊತ್ತ}}{\text{ಒಟ್ಟು ವಿಷಯಗಳು}}$$

(ಒಬ್ಬ ವಿದ್ಯಾರ್ಥಿಯ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ)

(ಸೂಚನೆ: ಸೂಚಿತ ಶ್ರೇಣಿ ಬಿಂದುಗಳು '0' – 6; 'A'– 5; 'B'–4; 'C'–3; 'D'–2; 'E'–1 ಮತ್ತು 'F'–0)

ಇದೇ ಕ್ರಮವನ್ನು ಅನುಸರಿಸಿ ವಿದ್ಯಾರ್ಥಿಗಳ ನಡುವಿನ ಸಾಧನಾ ಮಟ್ಟವನ್ನು ಕೂಡ ಲೆಕ್ಕ ಮಾಡಬಹುದು.

**ಅಂಕ ವ್ಯವಸ್ಥೆಯ ಕೆಲವು ಅನಾನುಕೂಲಗಳು:**

ಅಂಕ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಅಂಕಗಳ ವ್ಯಾಪ್ತಿ 0 ಯಿಂದ 100 ರವರೆಗೆ ಇರುತ್ತದೆ. ಆದ್ದರಿಂದ ಇದನ್ನು 101 ಬಿಂದು ಪದ್ಯ ಎಂದು ಪರಿಗಣಿಸಲಾಗುವುದು. ಇಂತಹ ಪಟ್ಟಿಯಲ್ಲಿ ಒಬ್ಬ ವಿದ್ಯಾರ್ಥಿ ಒಂದು ವಿಷಯಕ್ಕೆ ಸಂಬಂಧಿಸಿದಂತೆ 67 ಅಂಕಗಳನ್ನು ಪಡೆದರೆ, ಮತ್ತೊಬ್ಬ ವಿದ್ಯಾರ್ಥಿ ಅದೇ ವಿಷಯದಲ್ಲಿ 66 ಅಂಕಗಳನ್ನು ಪಡೆದಿದಲ್ಲಿ ಉನ್ನತ (superior) ಎಂದು ಪರಿಗಣಿಸಲಾಗುವುದು.

ಕೆಲವು ವೇಳೆ ಒಂದು ವಿದ್ಯಾರ್ಥಿಯ ಉತ್ತರ ಪತ್ರಿಕೆಯನ್ನು ಒಬ್ಬರೇ ಶಿಕ್ಷಕರು ಎರಡು ಸಲ ಮೌಲ್ಯಮಾಪನ ಮಾಡಿದಾಗ ಅಂಕಗಳಲ್ಲಿ ವ್ಯತ್ಯಾಸ ಕಂಡು ಬರಬಹುದು.

ಉದಾ: ಮೊದಲ ಸಲ ಮೌಲ್ಯಮಾಪನ – 67

ಎರಡನೇ ಸಲ ಮೌಲ್ಯಮಾಪನ – 58


Digitised by Bharatavani, CIIL

ಇಂತಹ ಸಂದರ್ಭದಲ್ಲಿ ಅಂಕಗಳ ವ್ಯವಸ್ಥೆಯಿಂದ ವಿದ್ಯಾರ್ಥಿಯ ನಿಜವಾದ ಸಾಧನ ಮಟ್ಟವನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಇನ್ನೂ ಹಲವಾರು ಸಂದರ್ಭಗಳಲ್ಲಿ ಪ್ರತಿ ಶಿಕ್ಷಕರು ಮೌಲ್ಯಮಾಪನ ಮಾಡಬೇಕಾದರೆ ತಮ್ಮದೇ ಆದ ದೃಷ್ಟಿಕೋನ, ಜ್ಞಾನ, ಉತ್ತರಕ್ಕೆ ಅವಶ್ಯಕವಿರುವ ಮಾಹಿತಿಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಒಂದೇ ಉತ್ತರಕ್ಕೆ ಮೂರು ಜನ ಶಿಕ್ಷಕರು ಮೂರು ರೀತಿಯ ಅಂಕಗಳನ್ನು ನೀಡುವ ಸಾಧ್ಯತೆ ಇದೆ. ಹೀಗಾಗಿ ಅಂಕಗಳ ವ್ಯವಸ್ಥೆಯಲ್ಲಿ ಹಲವಾರು ರೀತಿಯ ದೋಷಗಳು ನುಸುಳಬಹುದು.

ಅಂಕಗಳ ವ್ಯವಸ್ಥೆ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಹಾಗು ಪೋಷಕರಿಗೆ ಸುಲಭವಾಗಿ ಅರ್ಥವಾದರೂ ಕೂಡ ಅದು ವಿದ್ಯಾರ್ಥಿಯ ಒಟ್ಟಾರೆ ಸಾಧನೆಯನ್ನು ಅಳತೆ ಮಾಡಲು ಸಾಧ್ಯವಿಲ್ಲ. ಶಿಕ್ಷಕರಿಂದ ಶಿಕ್ಷಕರಿಗೆ ಮೌಲ್ಯಮಾಪನ ಮಾಡಲು ಪರಿಗಣಿಸುವ ಅಂಶಗಳಲ್ಲಿ ವ್ಯತ್ಯಾಸವಿರುತ್ತದೆ. ಇದರಿಂದ ಒಬ್ಬ ವಿದ್ಯಾರ್ಥಿಯು ಪಡೆದಂತಹ ಒಂದೆರಡು ಅಂಕಗಳ ವ್ಯತ್ಯಾಸದಿಂದ ಆತ ಬಹಳ ಜಾಣ ಅಥವಾ ದಡ್ಡ ಎಂದು ಹೇಳಲು ಸಾಧ್ಯವಿಲ್ಲ.

ಈ ಎಲ್ಲಾ ನ್ಯೂನತೆಗಳನ್ನು ಹೋಗಲಾಡಿಸಲು ಶ್ರೇಣಿಕೃತ ವ್ಯವಸ್ಥೆ ಬಹಳ ಸಹಾಯಕ ಎಂದು ಹೇಳಬಹುದು.

**ಶ್ರೇಣೀಕೃತ ವ್ಯವಸ್ಥೆಯ ಅನುಕೂಲಗಳು:**

1. ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯವನ್ನು ಹೋಗಲಾಡಿಸುವುದು.
2. ವಿದ್ಯಾರ್ಥಿಗಳಲ್ಲಿ ಅನಾರೋಗ್ಯಕರ ಸ್ಪರ್ಧೆಯನ್ನು ತಡೆಗಟ್ಟುವುದು.
3. ತರಗತಿಯಲ್ಲಿ ವಿದ್ಯಾರ್ಥಿಗಳ ಸ್ಥಾನಮಾನ ತಿಳಿಯಬಹುದು.
4. ವಿದ್ಯಾರ್ಥಿಗಳ ಮಾನಸಿಕ ಭಯ ಮತ್ತು ಕ್ಷೋಭೆಯನ್ನು ನಿವಾರಿಸುವುದು.
5. ವಿದ್ಯಾರ್ಥಿಗಳಲ್ಲಿ ಅನಾವಶ್ಯಕ ಹೋಲಿಕೆಗಳನ್ನು ಮಾಡುವುದನ್ನು ತಪ್ಪಿಸಬಹುದು.
6. ಮೌಲ್ಯಮಾಪನದಲ್ಲಿ ಸಮಾನತೆಯನ್ನು ತರಬಹುದು.

ಶ್ರೇಣೀಕರಣ ಪದ್ಧತಿಯನ್ನು ಅಂಕಪದ್ಧತಿಗೆ ಹೋಲಿಸಿದ್ದಲ್ಲಿ ಅದು ಹೆಚ್ಚು ಪರಿಣಾಮಕಾರಿಯಾಗಿ ಮಕ್ಕಳ ಸರ್ವತೋಮುಖ ಆರೋಗ್ಯಕರ ಬೆಳವಣಿಗೆಗೆ ಹೆಚ್ಚು ಸೂಕ್ತವಾಗಿದೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಈ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

–ಎಂ.ಸ

## ಶಿಕ್ಷಕ ನಿರ್ಮಿತ ಪರೀಕ್ಷೆಗಳು

ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಮೌಲ್ಯಮಾಪನ ಅತಿ ಅಗತ್ಯವಾದ ಹಾಗೂ ಅನಿವಾರ್ಯವಾದ ಹಂತ. ಮೌಲ್ಯಮಾಪನವಿಲ್ಲದೇ ಹೋದರೆ ಶಿಕ್ಷಣ ಅಪೂರ್ಣವಾಗಿರುತ್ತದೆ. ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರಗತಿಯ ಸಾಧನೆಯನ್ನು ಅರಿಯಲು ವಿವಿಧ ಬಗೆಯ ಮೌಲ್ಯಮಾಪನ ವಿಧಾನಗಳು ಬಳಕೆಯಲ್ಲಿವೆ. ಅವುಗಳಲ್ಲಿ "ಶಿಕ್ಷಕ ನಿರ್ಮಿತ ಪರೀಕ್ಷಣೆಗಳು" ಪ್ರಮುಖವಾದವು. ಈ ಪರೀಕ್ಷೆಗಳ ಫಲಿತಾಂಶವನ್ನು ವಿವಿಧ ಶಾಲೆಗಳು, ಸಂಸ್ಥೆಗಳು ತಮ್ಮದೇ ಆದ ನಿರ್ದಿಷ್ಟ ಉದ್ದೇಶಗಳಿಗಾಗಿ ಉಪಯೋಗಿಸಿಕೊಂಡರೂ ಕೆಲವು ಸಾಮಾನ್ಯ ಗುರಿಗಳನ್ನು ಈಡೇರಿಸಿಕೊಳ್ಳಲು ಇವು ನೆರವಾಗುತ್ತವೆ. ಇವು ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಶಿಕ್ಷಕರಿಗೆ, ಶಾಲಾ ಆಡಳಿತಗಾರರಿಗೆ, ಸರ್ಕಾರದ ಶಿಕ್ಷಣ ಇಲಾಖೆಗೆ ಅಂತಿಮವಾಗಿ ಜನಸಾಮಾನ್ಯರಿಗೆ ಅತಿ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ.

ಶಿಕ್ಷಕನ ಪ್ರಧಾನ ಕರ್ತವ್ಯವೆಂದರೆ ಆತನು ತನ್ನ ವ್ಯಾಪ್ತಿಯಲ್ಲಿ ಬರುವ ಮಕ್ಕಳನ್ನು ವಿದ್ಯಾವಂತರನ್ನಾಗಿ, ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು. ಇದಕ್ಕಾಗಿ ಉಪಯುಕ್ತವಾದ, ಆಕರ್ಷಕವಾದ, ಪರಿಣಾಮಕಾರಿಯಾದ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಕಾರ್ಯಕ್ಕಾಗಿ ಶಿಕ್ಷಣ ತಜ್ಞರು ಒಂದೊಂದು ವಿಷಯವನ್ನೂ ಬೋಧಿಸಲು ನೆರವಾಗುವ ಪ್ರತ್ಯೇಕ ಬೋಧನಾ ವಿಧಾನವನ್ನು ರೂಪಿಸಿದ್ದಾರೆ. ಇದು ಬೋಧನಾ ವಿಧಾನದ ಚೌಕಟ್ಟನ್ನು ಮಾತ್ರ ಪರಿಚಯ ಮಾಡಿಕೊಡುತ್ತದೆ. ಆದರೆ ವಾಸ್ತವವಾಗಿ ಪ್ರತಿ ಶಿಕ್ಷಕನೂ ಸ್ಥೂಲವಾಗಿರುವ ಈ ಚೌಕಟ್ಟಿನಡಿಯಲ್ಲಿ ತನ್ನದೇ ಆದ ವಿಶಿಷ್ಟ ವಿಧಾನದಲ್ಲಿ ತನ್ನ ಬೋಧನಾ ಕಾರ್ಯವನ್ನು ನಿರ್ವಹಿಸುತ್ತಾನೆ. ಆದರೆ ಈ ವಿಧಾನವು ಎಷ್ಟರಮಟ್ಟಿಗೆ ವಿಶ್ವಸನೀಯ ಹಾಗೂ ಸುಸಂಬದ್ಧವಾಗಿದೆ ಎಂಬುದನ್ನು ಸೂಕ್ತ ಸಾಕ್ಷ್ಯಾಧಾರಗಳಿಂದ ತಿಳಿದುಕೊಳ್ಳುವುದು ಅತಿ ಅಗತ್ಯ. ಈ ದಿಸೆಯಲ್ಲಿ ಶಿಕ್ಷಕ ತಾನೇ ನಿರ್ಮಿಸಿದ ಪರೀಕ್ಷೆಗಳು ಅವನ ನೆರವಿಗೆ ಬರುತ್ತವೆ. ವಾಸ್ತವವಾಗಿ ಮಾನಕೀಕೃತಗೊಳಿಸಿದ (Standardized) ಪರೀಕ್ಷೆಗಳು ಅತಿ ಉತ್ತಮವಾಗಿದ್ದರೂ ಎಲ್ಲ ವಿಷಯಗಳಿಗೆ, ಎಲ್ಲ ತರಗತಿಗಳಿಗೆ ಇವು ಲಭ್ಯವಾಗುವುದು ದುಸ್ತರ. ಅಲ್ಲದೇ ಶಿಕ್ಷಕ ತಾನು ನಿರ್ಧರಿಸಿದ ಉದ್ದೇಶಗಳು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೆ ಎಂಬುದನ್ನು ಅರಿಯಲು ತಾನೇ ಪರೀಕ್ಷೆಗಳನ್ನು ರೂಪಿಸುವುದು ಅಪೇಕ್ಷಣೀಯ. ಈ ಪರೀಕ್ಷೆಯ ಫಲಿತಾಂಶವನ್ನು ವಿಶ್ಲೇಷಿಸಿದಾಗ ಮಕ್ಕಳ ಸಾಧನೆಯ ಮಟ್ಟ ತಿಳಿಯುತ್ತದೆ. ಒಂದುವೇಳೆ ಮಕ್ಕಳು ಕಡಿಮೆ ಅಂಕಗಳನ್ನು ಪಡೆದಿದ್ದರೆ ಶಿಕ್ಷಕನು ಇದಕ್ಕೆ ಕಾರಣಗಳನ್ನು ಕಂಡುಕೊಳ್ಳಬೇಕು. ಈ ಕಾರಣಗಳಲ್ಲಿ ಶಿಕ್ಷಕನ ಬೋಧನಾ ವಿಧಾನವೂ ಪ್ರಮುಖವಾಗಿರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಶಿಕ್ಷಕ ಆತ್ಮಾವಲೋಕನ ಮಾಡಿಕೊಂಡು ತನ್ನ ಬೋಧನೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಂಡು ಉತ್ತಮ ಬೋಧನಾ ಯೋಜನೆ ತಯಾರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಶಾಲೆಯಲ್ಲಿ ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ನಿರಂತರ ವ್ಯಾಪಕ ಮೌಲ್ಯಮಾಪನ ಇರಬೇಕು ಎಂಬುದು ಎಲ್ಲ ತಜ್ಞರ ಅಭಿಮತ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಇದಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಅದಕ್ಕಾಗಿಯೇ ಶಾಲೆಯಲ್ಲಿ ಘಟಕ ಪರೀಕ್ಷೆ, ಮಾಸಿಕ ಪರೀಕ್ಷೆ, ಸೆಮೆಸ್ಟರ್ ಅಂತ್ಯದ ಪರೀಕ್ಷೆ, ಪೂರ್ವಸಿದ್ಧತಾ ಪರೀಕ್ಷೆ ಹಾಗೂ ವಾರ್ಷಿಕ ಪರೀಕ್ಷೆಗಳು ನಡೆಸಲ್ಪಡುತ್ತವೆ. ಈ ಎಲ್ಲ ಪರೀಕ್ಷೆಗಳಿಗೆ ಪ್ರಶ್ನೆಗಳನ್ನು ರಚಿಸುವವರು ಸಾಮಾನ್ಯವಾಗಿ ಆಯಾ ಶಾಲೆಯ ಶಿಕ್ಷಕರೇ ಆಗಿರುತ್ತಾರೆ. ಚಿಕ್ಕ ಶಾಲೆಗಳಲ್ಲಿ ತರಗತಿಯಲ್ಲಿ ಪಾಠ ಮಾಡುವ ಶಿಕ್ಷಕರೇ ಪ್ರಶ್ನೆಪತ್ರಿಕೆ ತಯಾರಕರೂ ಆಗಿರುತ್ತಾರೆ. ದೊಡ್ಡ ಶಾಲೆಗಳಲ್ಲಿ ಒಂದೇ ವಿಷಯ ಪಾಠಮಾಡುವ ಹೆಚ್ಚು ಮಂದಿ ಶಿಕ್ಷಕರು ಇರುತ್ತಾರೆ. ಇಂತಹ ಕಡೆಗಳಲ್ಲಿ ಇವರಲ್ಲಿ ಯಾರಾದರೂ ಒಬ್ಬರು ಅಥವಾ ಒಂದು ಚಿಕ್ಕ ಗುಂಪು ಪ್ರಶ್ನೆಪತ್ರಿಕೆ ತಯಾರಿಸಬಹುದು, ಏನೇ ಆದರೂ ಇವು ಶಿಕ್ಷಕ ನಿರ್ಮಿತ ಪರೀಕ್ಷೆಗಳು. ಈ ಪರೀಕ್ಷೆಗಳಿಂದ ಹಲವಾರು ಅನುಕೂಲಗಳು ಇವೆ. ಅವುಗಳಲ್ಲಿ ಪ್ರಮುಖವಾದವು (1) ಪರೀಕ್ಷೆಗಳನ್ನು ತಯಾರಿಸುವುದು ಮತ್ತು ಉಪಯೋಗಿಸುವುದು ಸಾಪೇಕ್ಷವಾಗಿ ಸುಲಭ. (2) ಇವು ವಿದ್ಯಾರ್ಥಿಗಳಿಗೆ ಉತ್ತೇಜನ, ಉತ್ಸಾಹ ನೀಡುತ್ತವೆ. (3) ಇದರಿಂದ ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯ ಹಾಗೂ ಕುಂದುಕೊರತೆಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

Digitised by Bharatavani, CIIL

(4) ಶಿಕ್ಷಕನು ತನ್ನ ಬೋಧನಾ ಸಾಮರ್ಥ್ಯವನ್ನು ಸ್ವಯಂ ಮೌಲ್ಯಮಾಪನ ಮಾಡಿಕೊಂಡು ಅಗತ್ಯವಾದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳಬಹುದು. (5) ಅತಿ ಕಡಿಮೆ ಕಾಲದ ಅವಧಿಯಲ್ಲಿ ಕಡಿಮೆ ಖರ್ಚಿನಲ್ಲಿ ತರಗತಿಯ ಎಲ್ಲ ವಿದ್ಯಾರ್ಥಿಗಳ ಬಗ್ಗೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಬಹುದು. (6) ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ವರದಿ ತಯಾರಿಸಬಹುದು.

ಇಂತಹ ಅನೇಕ ಅನುಕೂಲಗಳು ಇದ್ದರೂ ಬಹುತೇಕ ಶಾಲೆಗಳಲ್ಲಿ ಈ ದಿನಗಳಲ್ಲಿ ರೂಢಿಯಲ್ಲಿರುವ ಪರೀಕ್ಷಾ ಕ್ರಮದಲ್ಲಿ ಹಲವಾರು ನ್ಯೂನತೆಗಳು ಇವೆ. ಪರೀಕ್ಷೆಯು ಎಷ್ಟು ಪರಿಣಾಮಕಾರಿಯಾಗಿ ಇರಬೇಕಿತ್ತೋ ವಾಸ್ತವವಾಗಿ ಅಷ್ಟು ಪರಿಣಾಮಕಾರಿಯಾಗಿ ಇಲ್ಲ. ಇದು ಇಂದು ಕೇವಲ ಅಂಕ ಗಳಿಕೆಯ ಅಂತಿಮವಾದ ಹಾಗೂ ಏಕೈಕ ಗುರಿಯನ್ನು ಹೊಂದಿದೆಯೇ ವಿನಹ ವಿದ್ಯಾರ್ಥಿಯ ಅಭಿವೃದ್ಧಿಗೆ, ಬೆಳವಣಿಗೆಗೆ ಮಾಧ್ಯಮವಾಗಿಲ್ಲ. ಕೇವಲ ಜ್ಞಾನಾತ್ಮಕ ಗುರಿಗಳ ಸಾಧನೆಯತ್ತ ತನ್ನ ಗಮನವನ್ನು ಕೇಂದ್ರೀಕರಿಸಿದೆಯೇ ವಿನಹ ಅಷ್ಟೇ ಪ್ರಮುಖ ಗುರಿಗಳಾದ ಅರಿವು, ಜ್ಞಾನದ ಅನ್ವಯ, ಕೌಶಲಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡಿಲ್ಲ. ಶಿಕ್ಷಣದ ಗುರಿಗಳನ್ನು, ಕಲಿಕೆಯ ಅನುಭವಗಳನ್ನು ಗಮನದಲ್ಲಿ ಇರಿಸಿಕೊಳ್ಳದೇ ಕೇವಲ ವಿಷಯಕ್ಕೆ, ಮಾಹಿತಿಗೆ ಮಾತ್ರ ಇಂತಹ ಪರೀಕ್ಷೆಗಳಲ್ಲಿ ಮಹತ್ವ ನೀಡಲಾಗುತ್ತಿದೆ. ಪರೀಕ್ಷೆಯಲ್ಲಿ ತೇರ್ಗಡೆಯಾಗುವುದನ್ನು ಅದರಲ್ಲೂ ಅಧಿಕ ಅಂಕಗಳನ್ನು ಗಳಿಸುವುದನ್ನೇ ಪರಮಗುರಿಯನ್ನಾಗಿ ಇಟ್ಟುಕೊಂಡಿರುವ ವಿದ್ಯಾರ್ಥಿಗಳು ನಕಲು ಮಾಡುವುದು, ಮಾರುಕಟ್ಟೆಯಲ್ಲಿ ದೊರಕುವ ಕಳಪೆ ಮಾರ್ಗದರ್ಶಿಗಳನ್ನು ಅವಲಂಬಿಸುವುದು, ವಿಷಯವನ್ನು ಅಂದರೆ ಪ್ರಶ್ನೋತ್ತರಗಳನ್ನು ಬಾಯಿ ಪಾಠ ಮಾಡುವುದು, ಪರೀಕ್ಷೆಯಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಊಹಿಸುವುದು ಮೊದಲಾದ ಅನಪೇಕ್ಷಣೀಯ ವಿಧಾನಗಳನ್ನು ಅನುಸರಿಸಬಹುದು. ಈ ಬಗೆಯ ಪರೀಕ್ಷೆಗಳು ಕೇವಲ ಸ್ಮರಣಶಕ್ತಿಗೆ ಮಹತ್ವ ನೀಡುತ್ತವೆ.

ಶಿಕ್ಷಕ ನಿರ್ಮಿಸುವ ಪರೀಕ್ಷೆಗಳಲ್ಲಿ ಅನೇಕ ವೇಳೆ ಪ್ರಶ್ನೆಗಳು ತುಂಬಾ ಉದ್ದವಾಗಿದ್ದು, ಸಂಕೀರ್ಣವಾಗಿದ್ದು ಅಸ್ಪಷ್ಟವಾಗಿರುತ್ತವೆ. ಇವು ಚಿಕ್ಕದಾಗಿ, ನೇರವಾಗಿ ಇರದಿರುವುದರಿಂದ ವಿದ್ಯಾರ್ಥಿಗಳಲ್ಲಿ ಗೊಂದಲ ಉಂಟಾಗಿ ಅವರು ವಸ್ತುನಿಷ್ಠವಾಗಿ ಉತ್ತರಿಸದೆ ವ್ಯಕ್ತಿನಿಷ್ಠವಾಗಿ ಉತ್ತರ ಬರೆಯುವ ಸಾಧ್ಯತೆ ಇರುತ್ತದೆ. ಯಾವುದೇ ಶಾಲೆಯ, ಯಾವುದೇ ತರಗತಿಯ, ಯಾವುದೇ ಒಂದು ವಿಷಯದ ಹಿಂದಿನ ಹಲವು ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೆಲವು ಪ್ರಶ್ನೆಗಳು ಅನೇಕ ಬಾರಿ ಪುನರಾವರ್ತಿತವಾಗಿರುವುದು ಗೋಚರಿಸುತ್ತದೆ. ಇದರಿಂದ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಊಹಿಸಲು ನಾವೇ ಉತ್ತೇಜನ ನೀಡಿದಂತೆ ಆಗುವ ಅಪಾಯವೂ ಇದೆ; ಸಂಭಾವ್ಯತೆಯ ಅಂಶ (Chance factor) ಇರುತ್ತದೆ.

ಸಾಮಾನ್ಯವಾಗಿ ಶಿಕ್ಷಕರು ತಯಾರಿಸುವ ಹೆಚ್ಚಿನ ಪ್ರಶ್ನೆಗಳು ಪ್ರಬಂಧ ಮಾದರಿ ಉತ್ತರಗಳನ್ನು ನಿರೀಕ್ಷಿಸುತ್ತವೆ. ಇವು ವ್ಯಾಪಕವಾಗಿರುವುದಿಲ್ಲ. ಖಚಿತ ಮಿತಿಗಳನ್ನು ಸೂಚಿಸದೆ ಅಸ್ಪಷ್ಟತೆಯಿಂದ ಕೂಡಿರುವ ಸಾಧ್ಯತೆಯೇ ಹೆಚ್ಚು. ಪ್ರಶ್ನೆಪತ್ರಿಕೆಗಳಲ್ಲಿ "ಯಾವುದಾದರೂ ಮೂರಕ್ಕೆ", "ಯಾವುದೇ ನಾಲ್ಕು ಪ್ರಶ್ನೆಗಳಿಗೆ" ಉತ್ತರಿಸಿ ಎಂಬ ರೀತಿಯ ಸೂಚನೆ ನೀಡುವುದರಿಂದ ವಿದ್ಯಾರ್ಥಿಗಳು ತಮ್ಮ ಪಠ್ಯದ ಕೆಲವು ನಿರ್ದಿಷ್ಟ ಭಾಗಗಳನ್ನು ಅಧ್ಯಯನ ಮಾಡದೇ ಹಾಗೆಯೇ ಬಿಟ್ಟುಬಿಡಬಹುದು. ಇಂತಹ ವಿದ್ಯಾರ್ಥಿಗಳೂ ತೇರ್ಗಡೆಗೆ ಅಗತ್ಯವಾದ ಕನಿಷ್ಠ ಅಂಕಗಳನ್ನು ಸುಲಭವಾಗಿ ಪಡೆಯಬಹುದು. ಆದರೆ ಇಲ್ಲಿ ಅಧ್ಯಯನದ ವಿಷಯದ ವ್ಯಾಪಕತೆಗೆ ತಿಲಾಂಜಲಿ ಕೊಟ್ಟಂತೆ ಆಗಿರುತ್ತದೆ. ಕಷ್ಟಪಟ್ಟು ಓದಿ ಸಿದ್ಧರಾಗಿ ಬಂದಿರುವ ವಿದ್ಯಾರ್ಥಿಗಳಿಗೂ ಯಾವ ಪ್ರಶ್ನೆಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಗೊಂದಲ ಉಂಟಾಗುವ ಸಾಧ್ಯತೆ ಇದೆ.

ಇಂದು ರೂಢಿಯಲ್ಲಿರುವ ಈ ಬಗೆಯ ಪರೀಕ್ಷೆಗಳ ಮತ್ತೊಂದು ಪ್ರಮುಖ ನ್ಯೂನತೆ ಎಂದರೆ ಇಲ್ಲಿನ ಉತ್ತರಗಳು ಕೇವಲ ಬರಹ ರೂಪದಲ್ಲಿ ಇರುತ್ತವೆ. ಮೌಖಿಕವಾಗಿ ಉತ್ತರಿಸುವ, ವೀಕ್ಷಿಸಿ ಹೇಳುವ, ಕಾರ್ಯ ನಿರ್ವಹಿಸಿ ತೋರುವ, ಕ್ರಿಯಾಶೀಲವಾಗಿ ಚಿಂತಿಸಿ ತನ್ನ ಸ್ವಂತಿಕೆಯನ್ನು ತೋರುವ ಹಲವಾರು ಬಗೆಯ ಸಾಮರ್ಥ್ಯಗಳನ್ನು ಬಹುತೇಕ ಉಪೇಕ್ಷಿಸಲಾಗಿರುತ್ತದೆ.

1986ರ ರಾಷ್ಟ್ರೀಯ ಶಿಕ್ಷಕ ನೀತಿಯಲ್ಲಿ ಸೂಚಿಸಿರುವಂತೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಅತಿ ಹೆಚ್ಚಿನ ಆದ್ಯತೆಯನ್ನು ಶಿಕ್ಷಣ ಕ್ರಮದಲ್ಲಿ ಅಳವಡಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯು ಹೇಳುತ್ತಿದ್ದರೂ, ಘಟಕ ಪರೀಕ್ಷೆಗಳನ್ನು, ಮಾಸಿಕ ಪರೀಕ್ಷೆಗಳನ್ನು, ಇತರ ಕಿರು ಪರೀಕ್ಷೆಗಳನ್ನು ನಡೆಸುವಂತೆ ಶಿಕ್ಷಕರಿಗೆ ಸೂಚನೆ ನೀಡಿದ್ದರೂ ವಾಸ್ತವವಾಗಿ ಅರ್ಧವಾರ್ಷಿಕ ಹಾಗೂ ವಾರ್ಷಿಕ ಪರೀಕ್ಷೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಇಡೀ ವರ್ಷದಲ್ಲಿ ವಿದ್ಯಾರ್ಥಿಯ ಸಾಧನೆ ಹೇಗೇ ಇದ್ದರೂ ವಾರ್ಷಿಕ ಪರೀಕ್ಷೆಯಲ್ಲಿ ಅವನ ಸಾಧನೆ ಉತ್ತಮವಾಗಿದ್ದಲ್ಲಿ ಅವನು ಮುಂದಿನ ತರಗತಿಗೆ ತೇರ್ಗಡೆ ಹೊಂದುತ್ತಾನೆ.

ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕನು ಪಾಠ ಮುಂದುವರಿಕೆಗಾಗಿ, ಮಕ್ಕಳು ತಾನು ಬೋಧಿಸಿದ ವಿಷಯವನ್ನು ಗ್ರಹಿಸಿದ್ದಾರೆಯೇ ಎಂಬುದನ್ನು ತಿಳಿಯಲು ಮೌಖಿಕ ಪ್ರಶ್ನೆಗಳನ್ನು ಕೇಳುತ್ತಾನೆ. ಆಗೊಮ್ಮೆ ಈಗೊಮ್ಮೆ ಇವು ಬರಹದ ರೂಪದ ಉತ್ತರಗಳನ್ನು ನಿರೀಕ್ಷಿಸಬಹುದು. ಆದರೂ ಇಂತಹ ಪ್ರಶ್ನೆಗಳು ಬಹುತೇಕ ನೇರ ಮತ್ತು ಸರಳವಾಗಿರುತ್ತವೆ.

ಶಿಕ್ಷಕನು ಒಂದು ಘಟಕವನ್ನು ಬೋಧಿಸಿದ ನಂತರ ಮಕ್ಕಳು ಆ ವಿಷಯವನ್ನು ಎಷ್ಟರಮಟ್ಟಿಗೆ ಗ್ರಹಿಸಿದ್ದಾರೆ ಎಂಬುದನ್ನು ಅಳೆಯಲು, ತಿಳಿಯಲು, ತನ್ನ ಬೋಧನೆಯ ಸಫಲತೆ ಅಥವಾ ವಿಫಲತೆ ಅರಿಯಲು ಘಟಕ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಪರೀಕ್ಷೆ ಲಿಖಿತ, ಮೌಖಿಕ, ಕಾರ್ಯ ನಿರ್ವಹಣೆ, ವೀಕ್ಷಣೆ, ಸಂದರ್ಶನ ಮೊದಲಾದ ವಿವಿಧ ರೂಪಗಳಲ್ಲಿ ಇರಬಹುದು. ಈ ಪರೀಕ್ಷೆಯಾದ ನಂತರ ಅಗತ್ಯ ಪರಿಹಾರ ಬೋಧನಾ ಕ್ರಮಗಳನ್ನು ಕೈಗೊಳ್ಳಬಹುದು. ಇಲ್ಲಿ ಉಪಯೋಗಿಸಲ್ಪಡುವ ಎಲ್ಲ ಪರೀಕ್ಷೆಗಳೂ ಶಿಕ್ಷಕ ನಿರ್ಮಿತವಾದವು. ಅಂತೆಯೇ ಸೆಮಿಸ್ಟರ್ ಮಧ್ಯದಲ್ಲಿ ನಡೆಸಲಾಗುವ ಕಿರು ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ತಯಾರಿಸುವವರು ಅದೇ ಶಾಲೆಯ ಶಿಕ್ಷಕರೇ ಆಗಿರುತ್ತಾರೆ. ಕರ್ನಾಟಕದಲ್ಲಿ ಇದನ್ನು 5ನೇ ತರಗತಿಯಿಂದ 9ನೇ ತರಗತಿವರೆಗೆ ನಡೆಸಲಾಗುತ್ತದೆ. ಇಲ್ಲಿ ಶೇ. 50 ಭಾಗ ವಸ್ತುನಿಷ್ಠ ಪ್ರಶ್ನೆಗಳೂ, ಮಿಕ್ಕ ಪ್ರಶ್ನೆಗಳು ಕಿರುಉತ್ತರವನ್ನು ಅಪೇಕ್ಷಿಸುವ ಪ್ರಶ್ನೆಗಳೂ ಆಗಿರುತ್ತವೆ.

ಸೆಮಿಸ್ಟರ್ ಪರೀಕ್ಷೆ ವರ್ಷದ ಮಧ್ಯಭಾಗದಲ್ಲಿ ನಡೆಯುತ್ತದೆ. ಇಲ್ಲಿ ಲಿಖಿತ ಹಾಗೂ ಮೌಖಿಕ ಪ್ರಶ್ನೆಗಳು 80 : 20 ಪ್ರಮಾಣದಲ್ಲಿ ಇರುತ್ತವೆ. ಪೂರ್ವಸಿದ್ಧಪಡಿಸಿದ ನೀಲನಕ್ಷೆಗೆ ಅನುಗುಣವಾಗಿ ಶಿಕ್ಷಕರೇ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿಕೊಳ್ಳುತ್ತಾರೆ. ಇದು 'ಎ' ವಿಭಾಗದಲ್ಲಿ ಇದ್ದರೆ 'ಬಿ' ವಿಭಾಗದಲ್ಲಿ ಮಕ್ಕಳ ಭಾವನಾತ್ಮಕ ಹಾಗೂ ಸೃಜನಾತ್ಮಕ ಬೆಳವಣಿಗೆಯನ್ನು ಪರೀಕ್ಷಿಸಲಾಗುತ್ತದೆ ಹಾಗೂ ಫಲಿತಾಂಶವನ್ನು


Digitised by Bharatavani, CIIL

ಅಂಕಗಳಿಂದ ಸೂಚಿಸದೆ ಶ್ರೇಣಿಗಳಲ್ಲಿ ಸೂಚಿಸಲಾಗುತ್ತದೆ. ವಾರ್ಷಿಕ ಪರೀಕ್ಷೆ ಹಾಗೂ 10ನೇ ತರಗತಿ ಮಕ್ಕಳಿಗೆ ನಡೆಸಲಾಗುವ ಪೂರ್ವಸಿದ್ಧತಾ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ತಯಾರಿಸುವವರು ಶಿಕ್ಷಕರೇ ಆಗಿರುತ್ತಾರೆ.

ಶಿಕ್ಷಕ ನಿರ್ಮಿತ ಪರೀಕ್ಷೆಗಳನ್ನು ಹಲವು ರೀತಿಗಳಲ್ಲಿ ವರ್ಗೀಕರಿಸಬಹುದು. ಅಂಶಗಳ ರೂಪಕ ಪ್ರಕಾರ ಮುಖ್ಯವಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. (1) ಪ್ರಬಂಧ ರೂಪದ ಪ್ರಶ್ನೆಗಳು (2) ವಸ್ತುನಿಷ್ಠ ಪ್ರಶ್ನೆಗಳು.

ಪ್ರಬಂಧ ರೂಪದ ಪ್ರಶ್ನೆಗಳಿಗೆ ಪರೀಕ್ಷಾರ್ಥಿಯು ಒಂದು ವಾಕ್ಯ, ಒಂದು ಪ್ಯಾರಾ ಅಥವಾ ಅದಕ್ಕಿಂತ ಉದ್ದದ ಉತ್ತರವನ್ನು ಬರೆಯಬೇಕಾಗುತ್ತದೆ. ಅದರ ಗುಣಮಟ್ಟ ಹಾಗೂ ಪರಿಪೂರ್ಣತೆಯನ್ನು ವ್ಯಕ್ತಿನಿಷ್ಠತೆಯಿಂದಲೇ ಮೌಲ್ಯಮಾಪನ ಮಾಡಲಾಗುತ್ತದೆ. ಏಕೆಂದರೆ ಇಲ್ಲಿ ಎಲ್ಲ ವಿದ್ಯಾರ್ಥಿಗಳ ಉತ್ತರಗಳು ಒಂದೆ ಬಗೆಯಾಗಿರುವುದಿಲ್ಲ. ಪರೀಕ್ಷಾರ್ಥಿಗೆ ಉತ್ತರಿಸುವ ಸ್ವಾತಂತ್ರ್ಯವನ್ನು ನೀಡಿರುವುದರಿಂದ ಯಾವುದೇ ಒಂದೇ ಒಂದು ಉತ್ತರವನ್ನು ಪರಿಪೂರ್ಣ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ.

ಪ್ರಬಂಧ ರೂಪದ ಪ್ರಶ್ನೆಗಳನ್ನು ಎರಡು ಪ್ರಧಾನ ಗುಂಪುಗಳನ್ನಾಗಿ ವಿಂಗಡಿಸಬಹುದು. (1) ವಿಸ್ತೃತಗೊಂಡ ಪ್ರತ್ಯುತ್ತರ (Extended response) (2) ನಿರ್ಬಂಧಿಸಿದ ಪ್ರತ್ಯುತ್ತರ (Restricted response) ವಿಸ್ತೃತಗೊಂಡ ಪ್ರತ್ಯುತ್ತರ ಬರೆಯುವಾಗ ವಿದ್ಯಾರ್ಥಿಗೆ ಚರ್ಚಿಸಬೇಕಾದ ಅಂಶಗಳ ಬಗ್ಗೆಯಾಗಲಿ, ಅವನು ತನ್ನ ಉತ್ತರವನ್ನು ಸಾದರಪಡಿಸುವ ಕ್ರಿಯೆ ಅಥವಾ ವಿಧಾನದ ವಿಷಯದಲ್ಲಾಗಲೀ ಯಾವುದೇ ನಿರ್ಬಂಧ ಇರುವುದಿಲ್ಲ. ಈ ಬಗೆಯ ಉತ್ತರಗಳನ್ನು ಬರೆಯುವಾಗ ವಿದ್ಯಾರ್ಥಿಯು ತನ್ನ ವಾಸ್ತವಿಕ ಜ್ಞಾನವನ್ನು ಸ್ಮರಿಸಿಕೊಳ್ಳುತ್ತಾನೆ ಮತ್ತು ಅದರ ಮೌಲ್ಯ ಮಾಪನ ಮಾಡುತ್ತಾನೆ. ತನ್ನ ಭಾವನೆಗಳನ್ನು, ಅನಿಸಿಕೆಗಳನ್ನು ಕ್ರಮವಾಗಿ ಜೋಡಿಸಿ ಅವುಗಳನ್ನು ತಾರ್ಕಿಕವಾಗಿ, ಅರ್ಥಪೂರ್ಣವಾಗಿ ಸಾದರಪಡಿಸುತ್ತಾನೆ.

ಆದರೆ ಉತ್ತರದ ನಮೂನೆ ಹಾಗೂ ವಿಸ್ತಾರಗಳಿಗೆ ಮಿತಿ ಹಾಕಿದಾಗ ಅದು ನಿರ್ಬಂಧಿಸಿದ ಪ್ರತ್ಯುತ್ತರವಾಗುತ್ತದೆ. ಉದಾಹರಣೆಗೆ, ಉತ್ತರವು 100 ಪದಗಳಲ್ಲಿ ಅಥವಾ ಅರ್ಧ ಪುಟಕ್ಕೆ ಮೀರದಂತೆ ಇರಬೇಕು ಎಂಬ ರೀತಿಯ ಸೂಚನೆಯನ್ನು ಇಲ್ಲಿ ನೀಡಲಾಗಿರುತ್ತದೆ.

ಪ್ರಬಂಧ ಮಾದರಿ ಪ್ರಶ್ನೆಗಳಿಂದ ಕೆಲವು ಅನುಕೂಲಗಳು ಇವೆ. ಇವುಗಳ ತಯಾರಿ ಸುಲಭ. ಇವುಗಳನ್ನು ಶಾಲೆಯ ಎಲ್ಲ ವಿಷಯಗಳಲ್ಲೂ ಉಪಯೋಗಿಸಬಹುದು. ಈ ಬಗೆಯ ಪರೀಕ್ಷೆಗಳಿಂದ ವಿದ್ಯಾರ್ಥಿಯು ತನ್ನ ಭಾವನೆಗಳನ್ನು ಪರಿಣಾಮಕಾರಿಯಾಗಿ ಜೋಡಿಸುವ ಸಾಮರ್ಥ್ಯ, ಹೇಳಿಕೆಯೊಂದನ್ನು ಟೀಕೆ ಮಾಡುವ ಅಥವಾ ಸಮರ್ಥಿಸುವ ಸಾಮರ್ಥ್ಯ, ವ್ಯಾಖ್ಯಾನಿಸುವ ಸಾಮರ್ಥ್ಯ ಮೊದಲಾದ ಬೋಧನಾ ಉದ್ದೇಶಗಳನ್ನು ಹೆಚ್ಚು ಉತ್ತಮವಾಗಿ ಮಾಪನ ಮಾಡಬಹುದು. ವಿದ್ಯಾರ್ಥಿಯು ತನ್ನ ಕಲ್ಪನೆಯ ಪರಿಪಕ್ವತೆಗೆ ಸಂಬಂಧಿಸಿದ ಊಹೆಗಳನ್ನು ಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದು ಸೂಕ್ತ ರೀತಿಯಲ್ಲಿ ಇದನ್ನು ಮಾಪನ ಮಾಡಬಹುದು. ವಿದ್ಯಾರ್ಥಿಯ ಉತ್ತರವು ಸಂಪೂರ್ಣ ಸರಿ ಅಥವಾ ಸಂಪೂರ್ಣ ತಪ್ಪು ಆಗಿರಬೇಕಿಲ್ಲ. ಇಂತಹ ಪ್ರಶ್ನೆಗಳು ಕೇವಲ ಊಹೆಯನ್ನು ನಿವಾರಿಸುವಲ್ಲಿ ಬಹುತೇಕ ಫಲಪ್ರದವಾಗಿರುತ್ತವೆ.

ಅಂತೆಯೇ ಈ ಬಗೆಯ ಪ್ರಶ್ನೆಗಳಿಗೆ ಅನೇಕ ಇತಿಮಿತಿಗಳೂ ಉಂಟು. ಇದರಿಂದ ಪರೀಕ್ಷಿಸಲ್ಪಡುವ ಪಠ್ಯವಸ್ತುವಿಗೆ ಮಿತಿ ಬೀಳುತ್ತದೆ. ಮೌಲ್ಯಮಾಪನ ವ್ಯಕ್ತಿನಿಷ್ಠವಾಗಿರುತ್ತದೆ. ಭಾಷೆಯ ಮೇಲೆ ಉತ್ತಮ ಹಿಡಿತ ಇರುವ ವಿದ್ಯಾರ್ಥಿಯು ಸಮಂಜಸವಾದ, ಸಂಗತವಾದ ವಿಷಯಾಂಶಗಳು ತಿಳಿದಿಲ್ಲದಿದ್ದರೂ ನಿರರ್ಗಳವಾಗಿ ಉತ್ತರಬರೆಯಬಲ್ಲ. ವ್ಯಕ್ತಿನಿಷ್ಠವಾದ ಪ್ರಶ್ನೆಗಳಾದ್ದರಿಂದ ಪರೀಕ್ಷಕನ ಮನೋಭಾವವೂ ಮಾಪನದ ಮೇಲೆ ಪ್ರಭಾವ ಬೀರುತ್ತದೆ. ಕಾಗುಣಿತ, ಅಂದವಾದ ಬರವಣಿಗೆ, ಬಣ್ಣ ಬಣ್ಣದ ಮಸಿಗಳ ಉಪಯೋಗ, ಅಚ್ಚುಕಟ್ಟುತನ, ಭಾಷಾಶುದ್ಧಿ ಮೊದಲಾದ ಅಂಶಗಳು ಪರೀಕ್ಷಕನ ಮೇಲೆ ಪ್ರಭಾವ ಬೀರಬಹುದು. ಇಂತಹ ಅನೇಕ ನ್ಯೂನತೆಗಳು, ಇತಿ ಮಿತಿಗಳು ಇದ್ದರೂ ಇಂದಿಗೂ ಇವು ಸಾಕಷ್ಟು ಜನಪ್ರಿಯವಾಗಿವೆ. ಇವುಗಳ ಕ್ಷಮತೆಯನ್ನು ಸುಧಾರಿಸಲು ಹಲವಾರು ವಿಧಾನಗಳು, ಕ್ರಮಗಳು ಇದ್ದು ಇವುಗಳ ರಚನೆಯ ವಿವಿಧ ಹಂತಗಳಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುತ್ತದೆ.

ಒಂದು ಲಿಖಿತ ಪರೀಕ್ಷೆಯಲ್ಲಿ ಪರೀಕ್ಷಾರ್ಥಿಯು ಅಲ್ಲಿ ನೀಡಲಾಗಿರುವ ಹಲವು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡುವ ಹಾಗೂ ಇದನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಲು ಸಾಧ್ಯವಾಗುವ ಪರೀಕ್ಷೆಯೇ ವಸ್ತುನಿಷ್ಠ ಪರೀಕ್ಷೆ. ಇಲ್ಲಿ ಪರೀಕ್ಷೆಯ ಮೌಲ್ಯಮಾಪನದಲ್ಲಿ ಅಂಕಗಳ ನೀಡಿಕೆಯಲ್ಲಿ ಎಷ್ಟೇ ಮಂದಿ ಪರೀಕ್ಷಕರಿದ್ದರೂ ಅದು ಒಬ್ಬರಿಂದ ಮತ್ತೊಬ್ಬರಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ಕಿರುಉತ್ತರಗಳನ್ನು ನಿರೀಕ್ಷಿಸುವ ಪ್ರಶ್ನೆಗಳನ್ನು ಸಾಮಾನ್ಯವಾಗಿ ಈ ಗುಂಪಿಗೇ ಸೇರಿಸಲಾಗುತ್ತದೆ. ಏಕೆಂದರೆ ಇವುಗಳನ್ನು ಹೆಚ್ಚು ವಸ್ತುನಿಷ್ಠವಾಗಿಯೇ ಮೌಲ್ಯಮಾಪನ ಮಾಡಬಹುದು. ಆದರೂ ಇಂತಹ ಪ್ರಶ್ನೆಗಳಲ್ಲಿಯೂ ವ್ಯಕ್ತಿನಿಷ್ಠತೆಯ ಅಂಶವೂ ಇಣುಕುವ ಸಾಧ್ಯತೆ ಇರಬಹುದು.

ವಸ್ತುನಿಷ್ಠ ಪರೀಕ್ಷೆಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು.

1. ಪೂರ್ಣಗೊಳಿಸುವ ಅಥವಾ ಸ್ಮರಿಸಿ ಹೇಳುವ ಬಗೆ.
2. ಆಯ್ಕೆಯ ಬಗೆಯ ಅಥವಾ ಗುರುತಿಸುವ ಬಗೆ (ಬಹು ಆಯ್ಕೆಯ, ಹೊಂದಿಸುವ ಅಥವಾ ಪರ್ಯಾಯ ಉತ್ತರ ನೀಡುವ ಬಗೆ)
3. ಸಂದರ್ಭವನ್ನು ಅವಲಂಬಿಸುವ ಬಗೆ (ಚಿತ್ರರೂಪದ, ವ್ಯಾಖ್ಯಾನಿಸುವ ಬಗೆ)

ವಸ್ತುನಿಷ್ಠ ಪರೀಕ್ಷೆ ಹಲವು ಧನಾತ್ಮಕ ಗುಣಗಳನ್ನು ಹೊಂದಿದೆ. ಮುಖ್ಯವಾಗಿ (1) ಇದನ್ನು ಸುಲಭವಾಗಿ ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಿ ಅಂಕ ನೀಡಬಹುದು. ಅಂಕ ನೀಡಿಕೆಯು ಕಾಲದಿಂದ ಕಾಲಕ್ಕೆ ಪರೀಕ್ಷಕನಿಂದ ಪರೀಕ್ಷಕನಿಗೆ ವ್ಯತ್ಯಾಸವಾಗುವುದಿಲ್ಲ. (2) ಇದರಿಂದ ಪಠ್ಯವಸ್ತುವಿನ ವ್ಯಾಪಕ ಹಾಗೂ ಪ್ರಾತಿನಿಧಿತವಾದ ಮಾದರಿಯನ್ನು ಪರೀಕ್ಷಿಸಬಹುದು. ಇದು ನಿರೀಕ್ಷಿತ ಪ್ರಶ್ನೆಗಳ ಉತ್ತರಗಳನ್ನು ಕಂಠಪಾಠ ಮಾಡುವ ಹಾಗೂ ಅದೃಷ್ಟದ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ. (3) ಇವುಗಳನ್ನು ಉತ್ತರಿಸಲು ಕಡಿಮೆ ಅವಧಿ ಸಾಕು. ಅಂತೆಯೇ ಪರೀಕ್ಷಕರಿಗೂ ಇದು ಕಾಲವನ್ನು ಉಳಿಸುತ್ತದೆ. (4) ಪರೀಕ್ಷಕರ ಮೇಲೆ ಪ್ರಭಾವ ಬೀರಬಹುದಾದ ಅಸಂಬದ್ಧವಾದ ಬಾಹ್ಯ ಅಂಶಗಳಾದ ಬರವಣಿಗೆಯ ವೇಗ, ಅಭಿವ್ಯಕ್ತಿಯ ನಿರರ್ಗಳತೆ, ಅಂದವಾದ ಬರವಣಿಗೆ, ಮೊದಲಾದವುಗಳನ್ನು ದೂರ ಇಡಬಹುದು ಮತ್ತು (5) ಅರಿವು, ಅನ್ವಯ, ವಿಶ್ಲೇಷಣೆ, ಮುಂದೆ ಆಗಬಹುದಾದುದನ್ನು ತಿಳಿಸುವ ಹಾಗೂ ಅರ್ಥ ವಿವರಿಸುವ ಉನ್ನತ ಮಾನಸಿಕ ಕ್ರಿಯೆಗಳನ್ನು ಇವುಗಳಿಂದ ಮಾಪನ ಮಾಡಬಹುದು.

ಈ ಬಗೆಯ ಪರೀಕ್ಷೆಗಳಿಗೆ ಕೆಲವು ಮಿತಿಗಳೂ ಇವೆ. ಅವುಗಳಲ್ಲಿ ಪ್ರಮುಖವಾದವು (1) ವಿಷಯವನ್ನು ಸಂಯೋಜಿಸುವ ಸಾಮರ್ಥ್ಯ,

Digitised by Bharatavani, CIIL

ವಿಷಯವನ್ನು ತಾರ್ಕಿಕವಾಗಿ, ಸುಸಂಬದ್ಧವಾಗಿ ಸಾದರಪಡಿಸುವಂತಹ ಉದ್ದೇಶಗಳನ್ನು ಮಾಪನ ಮಾಡಲು ಸಾಧ್ಯವಿಲ್ಲ (2) ಇಂತಹ ಪ್ರಶ್ನೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ರೂಪಿಸುವುದು ಕಷ್ಟ ಸಾಧ್ಯ ಹಾಗೂ ಇದಕ್ಕೆ ಹೆಚ್ಚು ಸಮಯ ಹಿಡಿಸುತ್ತದೆ. ಈ ಕಾರ್ಯಕ್ಕೆ ವಿಶೇಷ ಸಾಮರ್ಥ್ಯವೂ ಅಗತ್ಯ ಮತ್ತು (3) ಇಂತಹ ಪ್ರಶ್ನೆಗಳ ಸಂಖ್ಯೆಯು ಪ್ರತಿ ಪ್ರಶ್ನೆಪತ್ರಿಕೆಯಲ್ಲೂ ಸಾಕಷ್ಟು ಹೆಚ್ಚು ಇರುವುದರಿಂದ ಇವುಗಳ ಮುದ್ರಣ ವೆಚ್ಚವೂ ಪ್ರಬಂಧ ಮಾದರಿ ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ತಗಲುವ ವೆಚ್ಚಕ್ಕಿಂತ ಗಣನೀಯವಾಗಿ ಅಧಿಕವಾಗಿರುತ್ತದೆ.

–ಸಿ.ಜಿ. ವೆಂ

## ಶಿಕ್ಷಣದ ಅವಕಾಶಗಳ ಸಮಾನೀಕರಣ

'ಶಿಕ್ಷಣ' ಎಂಬುದು ವ್ಯಕ್ತಿಯನ್ನು ಹಾಗೂ ಮಾನವ ಸಮುದಾಯವನ್ನು ಪ್ರಗತಿ ಪಥದೆಡೆಗೆ ಕೊಂಡೊಯ್ಯುವ ಅಮೂಲ್ಯ ಆಸ್ತಿ. ಸಾಧನ, ಒಡವೆ ಇದ್ದಂತೆ. ಈ ಒಡವೆಯನ್ನು ಸಮಾಜದ ಸರ್ವರೂ ತೊಡಬೇಕೆಂಬುದು ರಾಜ್ಯಾಂಗದ ಆಶಯವಾಗಿದೆ. ಆದರೆ ಪ್ರಾಚೀನ ಕಾಲದಿಂದಲೂ ಶಿಕ್ಷಣ ಕೆಲವೇ ಜನರ ಸ್ವತ್ತಾಗಿತ್ತು. ಇದನ್ನು ಸರಿಪಡಿಸಿ 'ಸರ್ವರಿಗೂ ಶಿಕ್ಷಣ' ಎನ್ನುವ ಪರಿಕಲ್ಪನೆ ಬಂದು ಶಿಕ್ಷಣವನ್ನು ಸಾರ್ವತ್ರೀಕರಣ ಮಾಡಿ, ಯಾರೊಬ್ಬರೂ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಲಾಗುತ್ತಿದೆ. ಹೀಗೆ ಶಿಕ್ಷಣ ಪಡೆಯಲು ಬಂದ ಪ್ರತಿ ಮಗು/ ವ್ಯಕ್ತಿ ತನ್ನ ನಿಜ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳಲು ಅಗತ್ಯವಾದ ಸೌಲಭ್ಯಗಳು ಮುಕ್ತವಾಗಿ ಸಿಗುವಂತಾಗಬೇಕು. ಅಲ್ಲಿ ಯಾವುದೇ ರೀತಿಯ ತಾರತಮ್ಯ, ಅಸಮಾನತೆ, ಅವಕಾಶಗಳ ವಂಚನೆ, ಕೊರತೆ ಉಂಟಾಗಬಾರದು. ಆಗ ಮಾತ್ರ ವ್ಯಕ್ತಿ/ಮಗು ತನ್ನಲ್ಲಿರುವ ಸಾಮರ್ಥ್ಯಗಳನ್ನು ಪೂರ್ಣಪ್ರಮಾಣದಲ್ಲಿ ಬಳಕೆಮಾಡಿಕೊಳ್ಳಲು, ಮಾನವ ಸಂಪನ್ಮೂಲ ಅಭಿವೃದ್ಧಿಗೊಳ್ಳಲು ಹಾಗೂ ಮಾನವ ಜನಾಂಗ ಪರಿಪೂರ್ಣತೆ ಪಡೆಯಲು ಸಾಧ್ಯ ಎಂಬುದೇ ಶಿಕ್ಷಣದ ಅವಕಾಶಗಳ ಸಮಾನೀಕರಣದ ಮೂಲ ಆಶಯವಾಗಿದೆ.

ಮೂಲಭೂತವಾಗಿ ಶಿಕ್ಷಣವು ಮಕ್ಕಳಲ್ಲಿ ಶೈಕ್ಷಣಿಕ, ಭಾವನಾತ್ಮಕ ಮತ್ತು ಸಮಾಜಾಭಿವೃದ್ಧಿ ಮೌಲ್ಯಗಳನ್ನು ಹಾಗೂ ಸಾಮರ್ಥ್ಯಗಳನ್ನು ಬೆಳೆಸಬೇಕು. ಮಕ್ಕಳು ಇವುಗಳನ್ನು ಕಲಿಯಬಲ್ಲರು, ಈ ಕಲಿಕೆಯಲ್ಲಿ ಅಥವಾ ಕಲಿಯುವ ಸಾಮರ್ಥ್ಯದಲ್ಲಿ ವ್ಯತ್ಯಾಸಗಳು ಕಂಡುಬರುವುದು ಸರ್ವೇಸಾಮಾನ್ಯ. ಆದರೆ ಈ ವ್ಯತ್ಯಾಸ ಸಾಂಸ್ಕೃತಿಕ, ಆರ್ಥಿಕ, ಪ್ರಾದೇಶಿಕ, ಸಾಮಾಜಿಕ ಭಿನ್ನತೆಗಳ ನೆಲೆಗಟ್ಟಿನಿಂದ ಉಂಟಾಗಬಾರದು. ಹೀಗಾಗಿ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಒಳಗಾದ ಶಿಕ್ಷಣ ಕಾರ್ಯಕ್ರಮಗಳು ಶೈಕ್ಷಣಿಕ ಆಚರಣೆಗಳೊಡನೆ ಸಂಗಮಗೊಂಡು ಮಗುವಿನ ಮೂಲಭೂತ ಸಾಮರ್ಥ್ಯಗಳು, ದಕ್ಷತೆ ಅಥವಾ ಯೋಗ್ಯತೆಗಳು ಸರ್ವರಿಂದಲೂ ಸಾಧಿತವಾಗಬೇಕಾಗುತ್ತದೆ.

### ಶೈಕ್ಷಣಿಕ ಅವಕಾಶಗಳ ಸಮಾನೀಕರಣದ ಅರ್ಥ

ಸಾಮಾನ್ಯ ಅರ್ಥದಲ್ಲಿ ಶಿಕ್ಷಣದ ಅವಕಾಶಗಳ ಸಮಾನೀಕರಣ ಎಂದರೆ: ತನ್ನ ಸಾಮರ್ಥ್ಯ ಬೆಳೆಸಿಕೊಳ್ಳಲು ಪ್ರತಿಯೊಬ್ಬರಿಗೂ ಸಮಾನ ಅವಕಾಶ ನೀಡುವುದು. ಅಂದರೆ ಎಲ್ಲಾ ಮಕ್ಕಳು ಕನಿಷ್ಠ ಪಕ್ಷ ತಮ್ಮ ಮೂಲಭೂತ ಸಾಮರ್ಥ್ಯ / ದಕ್ಷತೆಗಳನ್ನು ವೃದ್ಧಿಸಿಕೊಳ್ಳುವ ಅವಕಾಶಗಳನ್ನು ಸಮಾನಗೊಳಿಸುವುದು. ಇಲ್ಲಿ ಮಗುವು ಯಾವ ಹಿನ್ನೆಲೆಯನ್ನು ಪಡೆದು ಶಾಲೆಗೆ ಬಂದಿದ್ದರೂ ತನ್ನ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾಗಿ ಬೇಕಾದ ವಿಧಾನಗಳನ್ನು ಶಾಲೆಯು ಅನುಸರಿಸಬೇಕು ಹಾಗೂ ಸೌಲಭ್ಯಗಳನ್ನು ನೀಡಬೇಕು. ಇದರಿಂದಾಗಿ ಸಮಾಜದ ಪ್ರತಿನಿಧಿಯಾದ ಮಗುವು ಕೂಡಿಬಾಳಲು, ಜ್ಞಾನ ಪಡೆಯಲು ಹಾಗೂ ಉದ್ಯೋಗ ಪಡೆಯಲು ಬೇಕಾದ ಕನಿಷ್ಠ ದಕ್ಷತೆ ಹಾಗೂ ಸಾಮರ್ಥ್ಯವನ್ನು ಸಂಪಾದಿಸಿದಂತಾಗುತ್ತದೆ.

ಇನ್ನೊಂದು ದೃಷ್ಟಿಯಲ್ಲಿ ಶಿಕ್ಷಣದ ಅವಕಾಶಗಳ ಸಮಾನೀಕರಣ ಎಂದರೆ: ಪ್ರತಿಯೊಂದು ಮಗುವು ತನ್ನದೇ ಆದ ವ್ಯಕ್ತಿತ್ವ ಹೊಂದಿರುವುದರಿಂದ ಅವರವರ ವೈಯಕ್ತಿಕ ಆಸಕ್ತಿ, ವಯಸ್ಸು, ಸಾಮರ್ಥ್ಯ, ಅಭಿರುಚಿ, ಅವಶ್ಯಕತೆಗೆ ಅನುಗುಣವಾದ ವಿವಿಧ ರೀತಿಯ ಚಟುವಟಿಕೆಗಳನ್ನು ಆಧರಿಸಿದ ಪಠ್ಯವಸ್ತುವನ್ನು ದೊರಕಿಸಿಕೊಡುವುದು. ಶಿಕ್ಷಣದಲ್ಲಿ ಸಮಾನ ಅವಕಾಶವೆಂದರೆ ಎಲ್ಲರಿಗೂ ಏಕರೀತಿಯಾದ ಶಿಕ್ಷಣ ವ್ಯವಸ್ಥೆ ಮಾಡುವುದು, ಇಲ್ಲವೇ ಉಚಿತವಾದ ಏಕರೀತಿಯ ಶಿಕ್ಷಣವನ್ನು ಕೊಡುವುದೆಂದು ಸಂಕುಚಿತವಾಗಿ ಭಾವಿಸಬಾರದು. ಏಕೆಂದರೆ ಎಲ್ಲರಿಗೂ ಏಕರೀತಿಯ ಶಿಕ್ಷಣವನ್ನು 'ಸರಿಸಮಾನ ಶೈಕ್ಷಣಿಕ ಅವಕಾಶದ' ಆಶ್ರಯದಲ್ಲಿ ನೀಡಲು ಸಾಧ್ಯವಿಲ್ಲ. ಎಲ್ಲರಿಗೂ ಶೈಕ್ಷಣಿಕ ಅವಕಾಶವನ್ನು ಎಲ್ಲಾ ಸ್ಥಳಗಳಲ್ಲಿ ಮತ್ತು ಎಲ್ಲಾ ವರ್ಗಗಳಿಗೆ ದೊರಕಿಸಿಕೊಡುವುದೇ ವಿನಃ, ಒಂದೇ ರೀತಿಯ ಶಿಕ್ಷಣವನ್ನಲ್ಲ. ಏಕೆಂದರೆ ಪ್ರತಿ ಮಗುವು ದೈಹಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ, ಭಾವನಾತ್ಮಕವಾಗಿ ಭಿನ್ನವಾಗಿರುವುದರಿಂದ ಮತ್ತು ವಿವಿಧ ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವುದರಿಂದ ಅವರವರ ಶಕ್ತಿ ಸಾಮರ್ಥ್ಯ, ಅಭಿರುಚಿಗಳಲ್ಲಿ ಭಿನ್ನತೆಗಳು ಕಂಡುಬರುವುದರಿಂದ ಸಮಾನ ಅವಕಾಶವೆಂದರೆ ಏಕರೂಪತೆ ಅಲ್ಲ 'ಸಾಮರ್ಥ್ಯಕ್ಕೆ ತಕ್ಕಂತೆ ಆದ್ಯತೆ' ಎಂಬುದು ಸ್ಪಷ್ಟವಾಗುತ್ತದೆ.

ಪ್ರಜಾಸತ್ತಾತ್ಮಕ ಸಮಾಜವು ಮಾನವನ ಸಮಾನತೆಯಲ್ಲಿ, ಸಮಾನ ಅವಕಾಶದಲ್ಲಿ ಆಳವಾದ ವಿಶ್ವಾಸವನ್ನು ಹೊಂದಿದೆ. ಇಂತಹ ಸಾಮಾಜಿಕ ವಾತಾವರಣದಲ್ಲಿ ಶಿಕ್ಷಣವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬಲ್ಲದು. ಪ್ರಜಾಸತ್ತೆಯಲ್ಲಿ ಸಮಾನ ಸವಕಾಶವೆಂದರೆ 'ಯಾವ ವ್ಯಕ್ತಿಯಾಗಲಿ, ತಾನು ಸೇರಿದ ಜನಾಂಗದಿಂದಾಗಲಿ, ಧರ್ಮದಿಂದಾಗಲಿ, ವರ್ಗದಿಂದಾಗಲಿ ಮತ್ತು ರಾಷ್ಟ್ರೀಯತೆಯಿಂದಾಗಲಿ ಸಮಾಜದ ಸೌಲಭ್ಯಗಳನ್ನು ಅನುಭವಿಸಲು ಅರ್ಹನಾಗುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಸಮಾನ ಅವಕಾಶಗಳನ್ನು ಮೂಲಭೂತವಾಗಿ ಪಡೆದಿರುತ್ತಾನೆ. ಈ ಹಿನ್ನೆಲೆಯಲ್ಲಿ ಏಕರೂಪದ ಶಿಕ್ಷಣ ಒದಗಿಸುವುದು ಸಾಧ್ಯವಿದ್ದರೂ ಅದು ಅರ್ಥಹೀನವೆನಿಸುತ್ತದೆ, ಶೈಕ್ಷಣಿಕ ಅವಕಾಶಗಳ ಸಮಾನೀಕರಣ ಎನ್ನುವುದು ಒಂದೆಡೆ ಸಾಮಾಜಿಕ ನ್ಯಾಯವಾದರೆ ಮತ್ತೊಂದೆಡೆ ಮಾನವ ಸಂಪನ್ಮೂಲದ ಸದ್ವಿನಿಯೋಗವನ್ನು ಸೂಚಿಸುತ್ತದೆ.

ಸಂಗ್ರಹವಾಗಿ ಹೇಳುವುದಾದರೆ ಶಾಲಾಕಾಲೇಜುಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಬೋಧನೆ, ಗ್ರಂಥಾಲಯ, ಪಾಠೋಪಕರಣಗಳು, ಪೀಠೋಪಕರಣಗಳು, ಆಟದ ಸಾಮಗ್ರಿಗಳು, ಪ್ರಯೋಗಶಾಲೆ, ಶೌಚಾಲಯ, ಗಣಕಯಂತ್ರ, ಉಪಗ್ರಹ ಬೋಧನೆ ಇನ್ನೂ ಮುಂತಾದ ಗುಣಮಟ್ಟದ ಸೌಲಭ್ಯಗಳನ್ನು ಸರ್ವರಿಗೂ ಸಮಪ್ರಮಾಣದಲ್ಲಿ ದೊರಕಿಸಿಕೊಡುವುದು. ಈ ರೀತಿ ಸೌಲಭ್ಯಗಳನ್ನು ವಿಸ್ತರಿಸುವಾಗ ಲಿಂಗ, ಜಾತಿ, ಜನಾಂಗ, ಪ್ರಾಂತ್ಯ, ವರ್ಣ ಇಂತಹ ಯಾವುದೇ ಅಂಶಗಳನ್ನು ಆಧರಿಸಿರಬಾರದು.

ಜೆ.ಪಿ. ನಾಯಕ್‌ರವರು 'ಸಮಾನತೆ' ಎನ್ನುವುದು ಒಂದು ಪ್ರಧಾನವಾದ ಪರಿಕಲ್ಪನೆ. ಅದು ಪರ್ಯಾಪ್ತತೆ (Adequcy), ಲಭ್ಯತೆ (Accessibility) ಮತ್ತು ಗುಣಮಟ್ಟ (Quality) ಎನ್ನುವ ಮೂರು ಅಂಶಗಳನ್ನು ಒಳಗೊಂಡಿರಬೇಕೆಂದು ತಿಳಿಸುತ್ತಾರೆ.


Digitised by Bharatavani, CIIL

**ಶೈಕ್ಷಣಿಕ ಅವಕಾಶಗಳ ಸಮಾನೀಕರಣದ ದೃಷ್ಟಿಕೋನ ಶಿಕ್ಷಣದ ವಿವಿಧ ಹಂತಗಳಿಗನುಗುಣವಾಗಿ ಬದಲಾಗುತ್ತದೆ.**

### 1. ಪ್ರಾಥಮಿಕ ಶಿಕ್ಷಣ

ವಿಶ್ವ ಮಾನವ ಹಕ್ಕು ವಿಧಿ 26 (1) ರಲ್ಲಿ ಶಿಕ್ಷಣ ಪಡೆಯುವುದು ಪ್ರತಿಯೊಬ್ಬರ ಮೂಲಭೂತ ಹಕ್ಕು ಎಂದು ಪ್ರತಿಪಾದಿಸಲಾಗಿದೆ ಹಾಗೂ ಭಾರತ ಸಂವಿಧಾನದ ವಿಧಿ 45 ರಲ್ಲಿ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪೂರೈಸುವುದಾಗಿ ಒಪ್ಪಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣದ ಸ್ವಭಾವ ಹಾಗೂ ಪಠ್ಯವಸ್ತು ಮಗುವಿನ ಮೂಲ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು ಹಾಗೂ ಪ್ರಾಥಮಿಕ ಶಿಕ್ಷಣದ ರೀತಿನೀತಿ, ಪಠ್ಯವಿಷಯ, ಪ್ರತಿಯೊಬ್ಬರಿಗೂ ಒಂದೇ ಆಗಿರಬೇಕು. ಯಾವುದೇ ಜಾತಿ, ಲಿಂಗ, ಭಾಷೆ, ಪ್ರಾಂತ್ಯ, ಮತ, ಜನಾಂಗ ಮೊದಲಾದವುಗಳನ್ನು ಪರಿಗಣಿಸದೆ ಎಲ್ಲರಿಗೂ ಶಿಕ್ಷಣವನ್ನು ಸರಿಸಮವಾಗಿ ದೊರಕಿಸಿ ಕೊಡುವುದಾಗಿದೆ.

### 2. ಸೆಕೆಂಡರಿ ಶಿಕ್ಷಣ

ಪ್ರೌಢಶಾಲಾ ಶಿಕ್ಷಣದ ಹಂತದಲ್ಲಿ ಎಲ್ಲರಿಗೂ ಏಕರೀತಿಯಾದ ಶಿಕ್ಷಣವನ್ನು ವ್ಯವಸ್ಥೆಮಾಡದೆ ಅವರವರ ವೈಯಕ್ತಿಕ ಆಸಕ್ತಿ, ಸಾಮರ್ಥ್ಯ ಮತ್ತು ಅವಶ್ಯಕತೆಗೆ ಅನುಗುಣವಾದ ವಿವಿಧ ರೀತಿಯ ಚಟುವಟಿಕೆಗಳನ್ನು ಆಧರಿಸಿದ ಪಠ್ಯವಸ್ತುವನ್ನು ದೊರಕಿಸಿಕೊಡುವುದನ್ನು ಶೈಕ್ಷಣಿಕ ಸರಿಸಮಾನ ಅವಕಾಶವೆಂದು ಪರಿಗಣಿಸಲಾಗಿದೆ. ಏಕೆಂದರೆ ಪ್ರೌಢ ಹಂತದಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಗಳನ್ನು ಗುರುತಿಸಬಹುದು. ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಒಂದೇ ಆಗಿದ್ದರೂ ಅನೇಕ ವಿಷಯಗಳಲ್ಲಿ ಭಿನ್ನತೆಗಳನ್ನು ಹೊಂದಿರುತ್ತಾರೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನದೇ ಆದ ಬುದ್ಧಿಶಕ್ತಿ, ಅಭಿರುಚಿ, ಸಾಮರ್ಥ್ಯ, ಪ್ರತಿಭೆ, ಆಸಕ್ತಿ, ಮನೋಭಾವ ಹೊಂದಿರುತ್ತಾನೆ. ಇವೆಲ್ಲವನ್ನೂ ಗಮನಿಸದೆ ಏಕರೀತಿಯಾದ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ನೀಡಿದಂತೆ ಪ್ರೌಢ ಹಂತದಲ್ಲಿ ನೀಡುವುದು ಸೂಕ್ತವಲ್ಲ. ಆದ್ದರಿಂದ ಪ್ರೌಢ ಹಂತದಲ್ಲಿ ಶೈಕ್ಷಣಿಕ ಅವಕಾಶಗಳ ಸಮಾನೀಕರಣ ಅಂದರೆ ವೈವಿಧ್ಯವಾದ ಪಠ್ಯಕ್ರಮವನ್ನು ಪ್ರತಿಯೊಬ್ಬರ ಅಭಿರುಚಿ, ಸಾಮರ್ಥ್ಯ, ಆಸಕ್ತಿ ಹಾಗೂ ಪ್ರತಿಭೆಗಳಿಗನುಗುಣವಾಗಿ ಶಿಕ್ಷಣದ ಸೌಲಭ್ಯಗಳನ್ನು ಸಮಾನತೆ ತತ್ವದ ಮೇಲೆ ನೀಡುವುದಾಗಿದೆ.

### 3. ಉನ್ನತ ಮತ್ತು ವೃತ್ತಿ ಶಿಕ್ಷಣ

ಉನ್ನತ ಶಿಕ್ಷಣ ಪಡೆಯುವ ಮುಕ್ತ ಅವಕಾಶವಿದ್ದರೂ ಅದು ವಿದ್ಯಾರ್ಥಿಯ ಪ್ರತಿಭೆಯನ್ನು ಆಧರಿಸಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಉನ್ನತ ಶಿಕ್ಷಣ ಪಡೆಯಬೇಕೆಂಬ ಆಸಕ್ತಿ ಇದ್ದು ಸಾಮರ್ಥ್ಯವಿಲ್ಲದಿದ್ದರೆ ಏನು ಪ್ರಯೋಜನ? ಅದು ವ್ಯರ್ಥವಾಗುತ್ತದೆ. ಆದ್ದರಿಂದ ಉನ್ನತ ಶಿಕ್ಷಣದಲ್ಲಿ ಎರಡು ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ.

1. ಉನ್ನತ ಶಿಕ್ಷಣದಿಂದ ವ್ಯಕ್ತಿಯ ಸಾಮರ್ಥ್ಯ ವೃದ್ಧಿಸಬೇಕು.
2. ಉನ್ನತ ಶಿಕ್ಷಣದ ಗುಣ ಮತ್ತು ಶ್ರೇಷ್ಠತೆ ಹೆಚ್ಚಬೇಕು.

ಹೀಗಾಗಿ ಉನ್ನತ ಶಿಕ್ಷಣದಲ್ಲಿ ಸಾಮರ್ಥ್ಯವನ್ನು ಪರಿಗಣಿಸಬೇಕೇ ವಿನಾ ಶಿಕ್ಷಣ ವ್ಯಕ್ತಿಯ ಹಕ್ಕು ಎನ್ನುವುದಲ್ಲ. ಯೋಗ್ಯತೆಗೆ ಅನುಸಾರವಾದ ಉನ್ನತ ಶಿಕ್ಷಣ ಎಲ್ಲರಿಗೂ ಸಿಗಬೇಕೆಂದು ಮಾನವ ಹಕ್ಕುಗಳು ಸಾರುತ್ತದೆ. ಹೀಗಾಗಿ ಉನ್ನತ ಶಿಕ್ಷಣದಲ್ಲಿ ಅವಕಾಶಗಳಿಗೆ ಕೆಲವು ಮಿತಿಗಳನ್ನು ಹಾಕಿ, ಹಿಂದುಳಿದ ಜನಾಂಗ ಹಾಗೂ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ ಕೆಲವೊಂದು ರಿಯಾಯಿತಿಗಳನ್ನು ನೀಡಬೇಕಾಗುತ್ತದೆ. ಆದರೆ ಈ ಇತಿ–ಮಿತಿಗಳಿಂದಾಗಿ ಅರ್ಹರು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಾರಾದರೂ ಅದನ್ನು ಸಾಮಾಜಿಕ ನ್ಯಾಯವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

### ಶೈಕ್ಷಣಿಕ ಅಸಮಾನತೆಗೆ ಕಾರಣಗಳು

ಬಹು ಹಿಂದಿನಿಂದಲೂ ಶೈಕ್ಷಣಿಕ ಸೌಕರ್ಯಗಳು ಸಮಾನವಾಗಿಲ್ಲದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಉನ್ನತ ಶಿಕ್ಷಣದಲ್ಲಿನ ಸೌಕರ್ಯಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಲಿಸಿದರೆ ವ್ಯತ್ಯಾಸವಾಗಿರುವುದನ್ನು ಕಾಣಬಹುದಾಗಿದೆ. ಕೆಲವು ಕಡೆ ಸೌಲಭ್ಯಗಳು ಅಧಿಕವಾಗಿದ್ದರೆ ಮತ್ತೆ ಹಲವುಕಡೆ ಇಲ್ಲದಂತಾಗಿವೆ. ಅದೇ ರೀತಿಯಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಲಿಸಿದರೆ ಶೈಕ್ಷಣಿಕ ಸೌಲಭ್ಯಗಳಲ್ಲಿ ವ್ಯತ್ಯಾಸಗಳಿವೆ. ಇದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾಗಿ... 1. ರಾಜ್ಯಗಳ ನಡುವಿರುವ ಆರ್ಥಿಕ ವ್ಯತ್ಯಾಸಗಳು. 2. ಸಾಮಾಜಿಕವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒಲವು ತೋರದಿರುವುದು ಹಾಗೂ ಪೂರ್ವಗ್ರಹ ಪೀಡಿತ ಭಾವನೆಗಳು. 3. ಹಿಂದುಳಿದ ಹಾಗೂ ದುರ್ಬಲ ವರ್ಗಗಳು ಕಲಿಯಲು ಆಸಕ್ತಿ ತೋರದಿರುವುದು. 4. ಅನಕ್ಷರತೆ, ಬಡತನ ಹಾಗೂ ನಿರುದ್ಯೋಗ. 5. ಗುಡ್ಡಗಾಡು ಮತ್ತು ಅಲೆಮಾರಿ ಜನಾಂಗದವರಿಗೆ ಶಿಕ್ಷಣದ ಮಾಹಿತಿ ದೊರಕದಿರುವುದು. 6. ಉದ್ಯೋಗವಕಾಶಗಳು ಕೆಲವೇ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುವುದು. 7. ಶಿಕ್ಷಕರ ಕೊರತೆ, ಕಟ್ಟಡ ಹಾಗೂ ಉಪಕರಣಗಳ ಕೊರತೆ. 8. ಮಾನಸಿಕವಾಗಿ ವ್ಯಕ್ತಿ ಹಾಗೂ ಸಮಾಜ ಕೀಳರಿಮೆ ಇಲ್ಲವೇ ಮೇಲರಿಮೆಯನ್ನು ಬೆಳೆಸಿಕೊಂಡಿರುವುದು. 9. ಜಾತಿಯತೆ, ಭ್ರಷ್ಟಾಚಾರ ಹಾಗೂ ಸ್ವಾರ್ಥ ರಾಜಕೀಯ. 10. ಅಂಗವಿಕಲರು, ಬುದ್ಧಿಮಾಂದ್ಯರು ಹಾಗೂ ಗ್ರಾಮೀಣ ಜನರ ಶಿಕ್ಷಣದ ಬಗ್ಗೆ ಇರುವ ತಾತ್ಸಾರ.... ಇನ್ನು ಮುಂತಾದವು.

ಈ ಎಲ್ಲಾ ಕಾರಣಗಳಿಂದಾಗಿ ಏನೂ ಸೌಲಭ್ಯಗಳಿಲ್ಲದ ಗ್ರಾಮೀಣ ಪ್ರದೇಶದ ಶಾಲೆಯಿಂದ ಬಂದ ವಿದ್ಯಾರ್ಥಿಗಳನ್ನು ಪಟ್ಟಣ ಪ್ರದೇಶದ ವಿದ್ಯಾವಂತ ಕುಟುಂಬಗಳ ಹಾಗೂ ಉತ್ತಮ ಖಾಸಗೀ ಶಾಲೆಗಳಲ್ಲಿ ಓದಿದ ಮಕ್ಕಳೊಂದಿಗೆ ಹೋಲಿಕೆ ಮಾಡುವುದು ಸರಿಯಲ್ಲ. ಆದ್ದರಿಂದ ಎಲ್ಲ ರೀತಿಯ ಸೌಲಭ್ಯಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶದ ಮಕ್ಕಳಿಗೆ ಸರಿಸಮವಾಗಿ ನೀಡಿ ಅದರ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿದಾಗ ಶೈಕ್ಷಣಿಕ ಸಮಾನ ಅವಕಾಶಗಳ ಸಮಾನೀಕರಣಕ್ಕೆ ನಿಜವಾದ ಅರ್ಥ ಬರುತ್ತದೆ.

### ಶೈಕ್ಷಣಿಕ ಸಮಾನ ಅವಕಾಶ ಒದಗಿಸಲು ಕಾರ್ಯಕ್ರಮಗಳು

ಮಾನವನ ಹಕ್ಕುಗಳಲ್ಲಿ ವ್ಯಕ್ತಿಯು ತನ್ನ ಸಾಮರ್ಥ್ಯವನ್ನು ಪೂರ್ಣವಾಗಿ ವಿಕಸಿಸಿಕೊಳ್ಳುವ ಹಕ್ಕು ಸಹಾ ಒಂದಾಗಿದೆ. ಫ್ರಾನ್ಸಿನ ಶಿಕ್ಷಣ ತಜ್ಞರು, ಸರ್ವರಿಗೂ ಅವರವರ ಶಕ್ತಿಗನುಗುಣವಾಗಿ ವಿದ್ಯಾ ಸೌಕರ್ಯಗಳನ್ನು ಒದಗಿಸುವುದು ಉತ್ತಮ ಆದರ್ಶವೆಂದು ಭಾವಿಸುತ್ತಾರೆ. ಗ್ರಾಹಂಬೆಲಫ್‌ರವರು... ಯುಕ್ತ ಸನ್ನಿವೇಶದ ಮೂಲಕ ಮಕ್ಕಳಿಗೆ ಸೂಕ್ತವಾದ ಶಿಕ್ಷಣವನ್ನು ಸರಿಯಾದ ಶಿಕ್ಷಕರಿಂದ ಒದಗಿಸಬೇಕು. ಈ ಶಿಕ್ಷಣಕ್ಕೆ ಹಣವು ಸರ್ಕಾರದಿಂದ ವ್ಯಯವಾಗಬೇಕೆಂದು ಅಭಿಪ್ರಾಯಪಡುತ್ತಾರೆ. ಹಕ್ಸಲೆರವರು ಕೇವಲ ಶಿಕ್ಷಣವನ್ನು ಕಡ್ಡಾಯ ಮಾಡುವುದರಿಂದ, ಶುಲ್ಕವನ್ನು ತೆಗೆದುಹಾಕುವುದರಿಂದ, ಶಾಲಾಬಾಗಿಲನ್ನು ಸದಾ ತೆರೆಯುವುದರಿಂದ ಮಾತ್ರ ಶೈಕ್ಷಣಿಕ ಸಮಾನಾವಕಾಶಗಳನ್ನು ಕಲ್ಪಿಸಿದಂತಾಗುವುದಿಲ್ಲ. ಬದಲಿಗೆ

Digitised by Bharatavani, CIIL

ಸರ್ಕಾರವು ಬಲವಂತವಾಗಿ ಕಾನೂನುಗಳ ಮೂಲಕ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವುದರಿಂದ, ಪೋಷಕರಿಗೆ ಆಗುವ ಆದಾಯ ನಷ್ಟಕ್ಕೆ ಪರಿಹಾರವನ್ನು ಒದಗಿಸಿದಾಗ, ಜೊತೆಗೆ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲಗಳನ್ನು ದೊರಕಿಸಿಕೊಡುವುದರಿಂದ ನೈಜವಾದ ಶೈಕ್ಷಣಿಕ ಸಮಾನತೆ ಒದಗಿಸುವುದು ಸಾಧ್ಯವಾಗುವುದು ಎಂದಿದ್ದಾರೆ.

ಹೀಗಾಗಿ ಹೆಚ್ಚಿನ ಲಕ್ಷ್ಯವನ್ನು ಮಕ್ಕಳು ಶಿಕ್ಷಣವನ್ನು ಪ್ರಾರಂಭಿಸುವ ಸಮಯದಲ್ಲಿ ಕೊಟ್ಟು, ಅವರ ಪ್ರತಿಭೆಗೆ ಸೂಕ್ತ ಸನ್ನಿವೇಶ ಕಲ್ಪಿಸಿ, ಅವರವರ ಬುದ್ಧಿಶಕ್ತಿಗಳು ಕುದುರಲು ಸಾಧ್ಯವಾದ ಮಟ್ಟಿಗೆ ಅನುಗುಣವಾದ ಶಿಕ್ಷಣವನ್ನು ದೊರಕಿಸಿಕೊಡುವುದು ಉತ್ತಮ. ಸಮಾನತೆಯ ಆದರ್ಶವಾಗಿದ್ದು, ಸರಳವಾಗಿದ್ದು ಎಲ್ಲರ ಮುಂದುವರಿಕೆಗೆ ಸಹಾಯಕವಾಗಿರುವುದರಿಂದ ಎಲ್ಲರ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಅವಕಾಶಗಳನ್ನು ಒದಗಿಸಬೇಕಾಗುತ್ತದೆ. ಅಂತಹ ಶೈಕ್ಷಣಿಕ ಸಮಾನ ಅವಕಾಶ ಒದಗಿಸುವ ಕಾರ್ಯಕ್ರಮಗಳು ಇಂತಿವೆ...

### 1. ಪರಿಹಾರಾತ್ಮಕ ಶಿಕ್ಷಣ ಕ್ರಮಗಳು

ಪರಿಹಾರಾತ್ಮಕ ಶಿಕ್ಷಣ ಕ್ರಮಗಳೆಂದರೆ – ಇದುವರೆಗೆ ಶಿಕ್ಷಣ ಸೌಲಭ್ಯಗಳನ್ನು ಪಡೆಯದೇ ಇರುವಂತಹ ಆರ್ಥಿಕ, ಸಾಮಾಜಿಕ ಹಾಗೂ ಹಿಂದುಳಿದವರ ಮಕ್ಕಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸುವುದು. ಈ ವರ್ಗಕ್ಕೆ ಸೇರಿದ ಮಕ್ಕಳು ಮನೆಯಲ್ಲಿ ಸಾಕಷ್ಟು ಸೌಲಭ್ಯಗಳಿಲ್ಲದೆ, ಪೌಷ್ಠಿಕ ಆಹಾರ ದೊರೆಯದೆ, ಉತ್ತಮ ಆರೋಗ್ಯ ಹೊಂದದೆ ಮತ್ತು ಮನೆಯಲ್ಲಿ ಹೆಚ್ಚಿನ ಜನ ವಾಸಿಸುತ್ತಿರುವುದರಿಂದ ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಈ ವರ್ಗದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳಿಂದ ಹೊರಗೆ ಉಳಿಯುತ್ತಿದ್ದಾರೆ. ಇವರಿಗೆ ಶ್ರೀಮಂತ ಅಥವಾ ಮಧ್ಯಮ ವರ್ಗದ ಮಕ್ಕಳಿಗೆ ದೊರೆಯುವಂತಹ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಅವರ ಮಟ್ಟಕ್ಕೆ ತರಲು ಪ್ರಯತ್ನಿಸಬೇಕಾಗುತ್ತದೆ. ಈ ಸಂಬಂಧ ಭಾರತದಲ್ಲಿ ಪರಿಹಾರಾತ್ಮಕ ಕಾರ್ಯಕ್ರಮಗಳು ಈ ರೂಪದಲ್ಲಿವೆ. ಸಂವಿಧಾನದ 15 ಮತ್ತು 46ನೇ ವಿಧಿಯಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸ ಬೇಕಾಗಿರುವುದರಿಂದ ಅವರಿಗೆ ವಿದ್ಯಾರ್ಥಿ ವೇತನಗಳು, ಉನ್ನತ ಶಿಕ್ಷಣದಲ್ಲಿ ಮೀಸಲಾತಿ, ಉದ್ಯೋಗದಲ್ಲಿ ಮೀಸಲಾತಿ, ಉನ್ನತ ಶಿಕ್ಷಣದ ಪ್ರವೇಶಕ್ಕೆ ಕೆಲವು ರಿಯಾಯಿತಿಗಳು, ವಿಶೇಷ ಬೋಧನಾ ತರಗತಿಗಳನ್ನು ನಡೆಸುವುದು, ಉದ್ಯೋಗ ತರಬೇತಿಗಳನ್ನು ನೀಡುವುದು, ಶುಲ್ಕ ರಿಯಾಯಿತಿ ನೀಡುವುದು, ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸುವುದು ಹಾಗೂ ಹಾಸ್ಟೆಲ್ ಸೌಲಭ್ಯಗಳನ್ನು ಉಚಿತವಾಗಿ ನೀಡುವುದು, ಉಚಿತ ಸಮವಸ್ತ್ರ, ಪಠ್ಯಪುಸ್ತಕ, ಸೈಕಲ್ ಹಾಗೂ ಮಧ್ಯಾಹ್ನದ ಬಿಸಿ ಊಟ ದೊರಕಿಸಲಾಗುತ್ತಿದೆ. ಶಾಲೆಗೆ ಸಂಬಂಧಿಸಿದಂತೆ ಅವಶ್ಯಕ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಶೌಚಾಲಯ, ಶಿಕ್ಷಕರ ನೇಮಕಾತಿ ಮತ್ತು ಅವರಿಗೆ ತರಬೇತಿ ಮುಂತಾದವುಗಳನ್ನು ಕಾಲಕ್ಕನುಗುಣವಾಗಿ ಹೆಚ್ಚಿಸಲಾಗುತ್ತಿದೆ.

### 2. ಗುಣಾತ್ಮಕ ಸುಧಾರಣೆಗಳು

ಶೈಕ್ಷಣಿಕ ಸಮಾನ ಅವಕಾಶಗಳನ್ನು ಕಲ್ಪಿಸುವುದೆಂದರೆ ಕೇವಲ ಹೆಚ್ಚುಹೆಚ್ಚು ಜನರಿಗೆ ಶಿಕ್ಷಣ ನೀಡಲು ಶಾಲೆಗಳನ್ನು ತೆರೆಯುತ್ತಾ ಹೋಗುವುದಲ್ಲ. ಹೀಗೆ ತೆರೆಯಲ್ಪಟ್ಟ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಸಹ ರಾಷ್ಟ್ರದ ಕರ್ತವ್ಯ. ಕಡಿಮೆ ಗುಣಮಟ್ಟದ ಶಿಕ್ಷಣ ಶೈಕ್ಷಣಿಕ ಅಸಮಾನತೆಗೆ ಕಾರಣವಾಗುತ್ತದೆ.

ಉತ್ತಮ ಗುಣಮಟ್ಟದ ಶಿಕ್ಷಣವನ್ನು ಅವರವರ ಸಾಮರ್ಥ್ಯ, ಇಷ್ಟ ಹಾಗೂ ಸಾಂಸ್ಕೃತಿಕ ಹಿನ್ನೆಲೆಗೆ ತಕ್ಕಂತೆ ನೀಡಬೇಕಾಗುತ್ತದೆ. ನಾವು ನೀಡುವ ಶಿಕ್ಷಣ ಸಮಾಜದಲ್ಲಿ ಸಮಾನತೆ, ಶಿಸ್ತು, ಸಂಯಮ, ಸಹಕಾರ ಮನೋಭಾವ, ಸ್ವನಿಯಂತ್ರಣ, ಬೇರೆಯವರ ಮಾತಿಗೆ ಹಾಗೂ ವ್ಯಕ್ತಿತ್ವಕ್ಕೆ ಗೌರವಕೊಡುವುದು ಮುಂತಾದ ಉತ್ತಮ ಗುಣಲಕ್ಷಣಗಳನ್ನು ಬೆಳೆಸಬೇಕು. ಜೊತೆಗೆ ಬಡತನ ಹೋಗಲಾಡಿಸಲು ಪ್ರಯತ್ನಿಸಬೇಕು, ಉತ್ತಮ ಜ್ಞಾನವನ್ನು ಪಡೆಯಲು ಸಹಾಯಕವಾಗಬೇಕು, ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಬೇಕು, ಹೆಣ್ಣು ಮಕ್ಕಳ ಹಾಗೂ ಗಂಡು ಮಕ್ಕಳ ಶಿಕ್ಷಣದ ಗುಣಮಟ್ಟದಲ್ಲಿರುವ ವ್ಯತ್ಯಾಸಗಳನ್ನು ಹೋಗಲಾಡಿಸಬೇಕು.

### 3. ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದು

ನಮ್ಮ ಸಂವಿಧಾನದ ವಿಧಿ 45 ರ ಪ್ರಕಾರ ಸಂವಿಧಾನ ಪ್ರಾರಂಭವಾದ ಹತ್ತು ವರ್ಷಗಳ ಒಳಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕಾಗಿತ್ತು ಆದರೆ ಅದು ಈ ದಿನದವರೆಗೂ ಸಾಧ್ಯವಾಗದೇ ಇರುವುದು ದುರದೃಷ್ಟಕರ. ಇದರ ಪರಿಣಾಮವಾಗಿ ರಾಷ್ಟ್ರದಲ್ಲಿ ಇಂದೂ ಅನಕ್ಷರತೆಯನ್ನು ಕಾಣುತ್ತಿದ್ದೇವೆ. ಆದ್ದರಿಂದ ಇವರಿಗೆ ಸಾಕ್ಷರತೆ ನೀಡಲು... ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣ ಮಾಡಲಾಗಿದೆ. ಇಲ್ಲಿ ಬಹುಮುಖ ಪ್ರವೇಶ ಪದ್ಧತಿಯನ್ನು ಜಾರಿಗೊಳಿಸಿ, ಸ್ಥಳೀಯ ವಿದ್ಯಾವಂತರನ್ನು ಅಲ್ಪಕಾಲಾವಧಿಯ ಆಧಾರದ ಮೇಲೆ ಶಿಕ್ಷಣ ನೀಡಲು ಗ್ರಾಮೀಣ ಪ್ರದೇಶಗಳಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಜೊತೆಗೆ ಅನೌಪಚಾರಿಕ ಶಿಕ್ಷಣದ ಕಾರ್ಯಕ್ರಮಗಳನ್ನು ಹೆಚ್ಚಿಸಲಾಗುತ್ತಿದೆ ಮತ್ತು ನಾನಾ ಕಾರಣಗಳಿಗಾಗಿ ಶಾಲೆಯನ್ನು ಬಿಟ್ಟ ಮಕ್ಕಳಿಗಾಗಿ ವಿಶೇಷ ಶಿಕ್ಷಣವನ್ನು ನೀಡಲಾಗುತ್ತಿದೆ. ಇತ್ತೀಚೆಗೆ 2000 ರಿಂದ 2010 ರವರೆಗೆ ಸರ್ವಶಿಕ್ಷಣ ಅಭಿಯಾನದ ಮೂಲಕ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ತಕ್ಕಮಟ್ಟಿಗೆ ಸುಧಾರಿಸಲಾಗಿದೆ.

### 4. ಸಾಮಾನ್ಯ ಶಾಲೆಗಳು

ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಶಾಲೆಗಳಲ್ಲಿ ಕೆಲವು ಶಾಲೆಗಳು ಕೆಳದರ್ಜೆಯ ಶಿಕ್ಷಣವನ್ನು, ಇನ್ನು ಕೆಲವು ಶಾಲೆಗಳು ಉತ್ತಮ ಶಿಕ್ಷಣವನ್ನು ನೀಡುತ್ತಿವೆ. ಖಾಸಗಿ ಶಾಲೆಗಳು ಅಧಿಕ ಪ್ರವೇಶ ಶುಲ್ಕ ಹಾಗೂ ಬೋಧನಾ ಶುಲ್ಕಗಳನ್ನು ವಿಧಿಸುತ್ತಿರುವುದರಿಂದ ಕೆಳ ಹಾಗೂ ದುರ್ಬಲ ವರ್ಗದ ಮಕ್ಕಳು ಈ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ. ಸೆಕೆಂಡರಿ ಹಂತದಲ್ಲೂ ಈ ಸಮಸ್ಯೆಯನ್ನು ಕಾಣುತ್ತಿದ್ದೇವೆ. ಇದರಿಂದಾಗಿ ಸಮಾಜದಲ್ಲಿ ಮೇಲು, ಸಾಮಾನ್ಯ ಮತ್ತು ಕೆಳ ದರ್ಜೆಗಳು ಸೃಷ್ಟಿಸಲ್ಪಡುತ್ತಿರುವುದರೊಂದಿಗೆ ಕೆಳವರ್ಗದ ಮಕ್ಕಳಲ್ಲಿನ ಪ್ರತಿಭೆಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಈ ಪ್ರತಿಭಾವಂತ ಮಕ್ಕಳು ಉತ್ತಮ ಶಾಲೆಗಳಲ್ಲಿ ಪ್ರವೇಶ ಪಡೆಯಲು ವಿಫಲರಾಗುತ್ತಾರೆ. ಈ ರೀತಿ ಶ್ರೀಮಂತರನ್ನು ಬಡವರನ್ನು ಬೇರ್ಪಡಿಸುವುದು ಶಿಕ್ಷಣ ತತ್ವದ ವಿರೋಧಿ ಸಂಗತಿ. ಆದ್ದರಿಂದ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಪ್ರತಿಯೊಬ್ಬರ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವಂತಹ ಶಿಕ್ಷಣ ಬೇಕು. ಇಂತಹ ಸಾರ್ವಜನಿಕವಾದ ಸಾಮಾನ್ಯ ಶಾಲೆಗಳತ್ತ ಸರ್ಕಾರ ಗಮನಹರಿಸ ಬೇಕಾಗುತ್ತದೆ. ಈ ಶಾಲೆಗಳಲ್ಲಿ ಜಾತಿ, ಧರ್ಮ, ಪಂಗಡ, ವರ್ಗ, ಪ್ರದೇಶ ಹಾಗೂ ಆರ್ಥಿಕ ಸ್ಥಿತಿಯನ್ನು ಕಡೆಗಣಿಸಿ ಎಲ್ಲರಿಗೂ ಪ್ರವೇಶಾವಕಾಶವನ್ನು ನೀಡಬೇಕು. ಜೊತೆಗೆ ಉತ್ಕೃಷ್ಟ ಶಿಕ್ಷಣವನ್ನು ಒದಗಿಸುವುದು, ಉತ್ತಮ ಶಿಕ್ಷಕರನ್ನು ನೇಮಿಸುವುದು, ಶುಲ್ಕ ವಿನಾಯ್ತಿ ನೀಡುವುದು ಮತ್ತು ಸಾಮಾಜಿಕ ಐಕ್ಯತೆಯೊಂದಿಗೆ ಪೋಷಕರ ಆಶೋತ್ತರಗಳನ್ನು ಈಡೇರಿಸುವಂತಹ ವ್ಯವಸ್ಥೆಗಳು ಜಾರಿಗೊಳ್ಳಬೇಕು. ಏಪ್ರಿಲ್ 1, 2010 ರಲ್ಲಿ ಜಾರಿಗೆ ಬಂದ "ಮಕ್ಕಳ ಮೂಲಭೂತ ಹಕ್ಕು" ಶಾಲಾ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವಲ್ಲಿ ಸಹಾಯಕವಾಗಲಿದೆ.


Digitised by Bharatavani, CIIL

### 5. ಆಯ್ಕಾತ್ಮಕ ಪ್ರವೇಶಗಳು

ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಉನ್ನತ ಹಂತಗಳಲ್ಲಿ ಪ್ರತಿಭೆಯ ಆಧಾರದ ಮೇಲೆ ಪ್ರವೇಶ ನೀಡಬೇಕು. ಪ್ರತಿಭೆಗಳನ್ನು ಗುರುತಿಸುವ ಸಲುವಾಗಿ ಕೆಲವು ಪರೀಕ್ಷೆಗಳನ್ನು ನಡೆಸಬೇಕು. ಇದರಿಂದ ಎಲ್ಲಾ ವರ್ಗದವರಿಗೂ ನ್ಯಾಯ ಒದಗಿಸಿದಂತಾಗುತ್ತದೆ. ಹೀಗೆ ಅರ್ಹತೆ ಆಧಾರದ ಮೇಲೆ ಪ್ರವೇಶ ನೀಡುವಾಗ ಹಿಂದುಳಿದ ವರ್ಗ, ಪಂಗಡ, ಪರಿಶಿಷ್ಟ ಜಾತಿ, ಪಂಗಡ, ಅಂಗವಿಕಲರು, ಹೆಣ್ಣುಮಕ್ಕಳು, ಗ್ರಾಮಾಂತರ ಪ್ರದೇಶ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಸೀಟುಗಳನ್ನು ಕಾಯ್ದಿರಿಸಬೇಕು. ಜೊತೆಗೆ ಅವರಿಗೆ ಸೂಕ್ತ ತರಬೇತಿಯನ್ನು ಉಚಿತವಾಗಿ ನೀಡಬೇಕು.

### 6. ಇತರೇ ಕಾರ್ಯಾಂಶಗಳು

ವಿದ್ಯಾರ್ಥಿ ವೇತನಗಳನ್ನು ಹೆಚ್ಚಿಸುವುದು, ಎಲ್ಲಾ ಹಂತಗಳ ಶಿಕ್ಷಣದ ಆಡಳಿತವನ್ನು ಬಲಪಡಿಸುವುದು, ಹಿಂದುಳಿದ ವರ್ಗಗಳ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಗಮನಹರಿಸಲು ಉನ್ನತ ಅಧಿಕಾರಿಗಳನ್ನು ನೇಮಿಸುವುದು, ನಗರ ಹಾಗೂ ಗ್ರಾಮೀಣ ಪ್ರದೇಶಗಳ ನಡುವೆ ಸಂಬಂಧ ಕಲ್ಪಿಸುವುದು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗಳನ್ನು ಹೆಚ್ಚುಹೆಚ್ಚು ಸ್ಥಾಪಿಸುವುದು ಇತ್ಯಾದಿ ಕಾರ್ಯಕ್ರಮಗಳ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಸಮಾನೀಕರಿಸಬೇಕು.

### ಶೈಕ್ಷಣಿಕ ಅವಕಾಶಗಳ ಅಸಮಾನತೆ ಹೋಗಲಾಡಿಸಲು ಕೊಥಾರಿ ಆಯೋಗದ (1964–66) ಸಲಹೆಗಳು

### 1. ಬೋಧನಾ ಶುಲ್ಕ

ವುಡ್ಸ್ ವರದಿಯು ಮೊದಲು ಶಾಲೆಯಲ್ಲಿ ಶುಲ್ಕದ ನಿಯಮವನ್ನು ಜಾರಿಗೆ ತಂದಿತು. ಕಾರಣ ಜನರು ಹಣ ಕೊಟ್ಟಾಗ ಮಾತ್ರ ಒಂದು ವಸ್ತುವಿಗೆ ಮತ್ತು ವಿಷಯಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ ಹಾಗೂ ಕಾಳಜಿಯಿಂದ ನೋಡಿಕೊಳ್ಳುತ್ತಾರೆ ಎಂಬುದಾಗಿತ್ತು. ಆದರೆ ಕೊಥಾರಿ ಆಯೋಗವು ಪ್ರಾಥಮಿಕ ಹಂತದಿಂದ ಪದವಿ ಹಂತದವರೆಗೆ ಶಿಕ್ಷಣ ಉಚಿತವಾಗಿರಬೇಕೆಂದು ಸಲಹೆ ಮಾಡಿದೆ ಹಾಗೂ ಬೋಧನಾ ಶುಲ್ಕವನ್ನು ಸಂಪೂರ್ಣ ಕೈಬಿಡಬೇಕೆಂದು ಸೂಚಿಸಿದೆ, ಶುಲ್ಕವನ್ನು ಕೈಬಿಡುವುದು ಒಂದೇ ಸಾರಿ ಆಗದಿದ್ದರೂ ಹಂತಹಂತವಾಗಿ ಕೈಬಿಡಲು ತಿಳಿಸಿದೆ. ಅದರಂತೆ ನಾಲ್ಕನೇ ಯೋಜನೆಯ ಒಳಗೆ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ, ಐದನೆಯ ಯೋಜನೆಯ ಒಳಗೆ ಕಿರಿಯ ಪ್ರೌಢಶಾಲೆಗಳಲ್ಲಿ, ನಂತರದ ಹತ್ತು ವರ್ಷಗಳಲ್ಲಿ ಪ್ರೌಢಶಾಲೆ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಅವಶ್ಯವಿರುವವರಿಗೆಲ್ಲ ಬೋಧನಾ ಶುಲ್ಕವನ್ನು ಮನ್ನಾ ಮಾಡಬೇಕೆಂದು ತಿಳಿಸಿದೆ. ಮೊದಲ ಹಂತದಲ್ಲಿ ಶೇಕಡಾ 30ರಷ್ಟು ಜನ ಬೋಧನಾ ಶುಲ್ಕದಿಂದ ಮುಕ್ತರಾಗಬೇಕೆಂದಿದೆ.

### 2. ಇತರೇ ಖಾಸಗಿ ವೆಚ್ಚ

ಬೋಧನಾ ಶುಲ್ಕದ ಜೊತೆಗೆ ಇನ್ನೂ ಹೆಚ್ಚಿನ ವೆಚ್ಚಗಳನ್ನು ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ವ್ಯಯಮಾಡಬೇಕಾಗುತ್ತದೆ. 1965–66 ರಲ್ಲಿ ಲೆಕ್ಕ ಹಾಕಿದಂತೆ ವರ್ಷಕ್ಕೆ 1ನೇ ತರಗತಿ ವಿದ್ಯಾರ್ಥಿಗೆ ರೂ. 30 ಖರ್ಚಾದರೆ, 10 ನೇ ತರಗತಿ ವಿದ್ಯಾರ್ಥಿಗೆ ರೂ. 286.38 ಖರ್ಚಾಗುತ್ತದೆ. ಇಂದು ಒಂದು ಮಗುವಿಗೆ ಸಾವಿರಾರು ರೂ. ಗಳನ್ನು ವ್ಯಯಿಸಬೇಕಾಗುತ್ತದೆ. ಹೀಗಾಗಿ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಪ್ರೈಮರಿ ಹಂತದಲ್ಲಿ ದೊರಕಿಸಿಕೊಡಬೇಕೆಂದು ಸಲಹೆ ಮಾಡಿದೆ. ಪ್ರೌಢಶಾಲೆ ಮತ್ತು ಉನ್ನತ ಶಿಕ್ಷಣದ ಹಂತದಲ್ಲಿ 'ಪುಸ್ತಕಗಳ ಬ್ಯಾಂಕ್'ಗಳನ್ನು ಸ್ಥಾಪಿಸಬೇಕು. ಇದಕ್ಕಾಗಿ ಸರ್ಕಾರ ಹಾಗೂ ಯುಜಿಸಿಗಳು ಹೆಚ್ಚಿನ ಧನ ಸಹಾಯ ಮಾಡಬೇಕು. ಸೆಕೆಂಡರಿ ಮತ್ತು ಉನ್ನತ ಶಿಕ್ಷಣಸಂಸ್ಥೆಗಳ ಗ್ರಂಥಭಂಡಾರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಠ್ಯಪುಸ್ತಕಗಳು ದೊರೆಯುವಂತಾಗುವುದು ಅವಶ್ಯವೆಂದು ತಿಳಿಸಿದೆ.

### 3. ವಿದ್ಯಾರ್ಥಿ ವೇತನ

ಇದನ್ನು ಎಲ್ಲ ಹಂತಗಳಲ್ಲೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಸೂಕ್ತವಾದ ಸೌಲಭ್ಯಗಳನ್ನು ವಿಸ್ತರಿಸಬೇಕೆಂದು ತಿಳಿಸಿದೆ. ಪ್ರಾಥಮಿಕ ಹಂತದಲ್ಲಿ ಶೇ. 5 ರಷ್ಟು, ಪ್ರೌಢಶಾಲೆಯಲ್ಲಿ ಶೇ. 15 ರಷ್ಟು, ಕಾಲೇಜಿನಲ್ಲಿ ಶೇ. 25 ರಷ್ಟು ಮತ್ತು ಶೇ. 50 ರಷ್ಟು ಸ್ನಾತಕೋತ್ತರ ಹಂತದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು 1985 ರ ವೇಳೆಗೆ ವಿದ್ಯಾರ್ಥಿ ವೇತನ ಪಡೆಯಬೇಕೆಂದು ಸಲಹಿಸಿದೆ.

### 4. ರಾಷ್ಟ್ರೀಯ ವಿದ್ಯಾರ್ಥಿ ವೇತನಗಳು

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಮೂಲಕ ಉನ್ನತ ಶಿಕ್ಷಣದಲ್ಲಿ ಅಭ್ಯಾಸ ಮಾಡುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶೇ. 10 ರಷ್ಟು ರಾಷ್ಟ್ರೀಯ ವಿದ್ಯಾರ್ಥಿ ವೇತನ ವಿಸ್ತರಿಸಲು ಸಲಹಿಸಿದೆ. ಈ ದಿಸೆಯಲ್ಲಿ ಶೇ. 50 ರಷ್ಟು ವಿದ್ಯಾರ್ಥಿ ವೇತನಗಳು ಕೇಂದ್ರ ಮಟ್ಟದಲ್ಲೂ ಉಳಿದ ಶೇ. 50 ರಷ್ಟು ವಿದ್ಯಾರ್ಥಿ ವೇತನಗಳು ರಾಜ್ಯ ಮಟ್ಟದಲ್ಲಿ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಗುಂಪು ಇಲ್ಲವೇ ಸಮೂಹದ ಆಧಾರದ ಮೇಲೆ ವಿತರಣೆಯಾಗಬೇಕು ಎಂದಿದೆ. ಯು.ಜಿ.ಸಿ. ಮೂಲಕ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿ ವೇತನಕ್ಕೆ ಯೋಜನೆ ರೂಪಿಸಿಕೊಳ್ಳಬೇಕು. ಇದು ಶೇ. 10 ರಷ್ಟು ಪದವಿ ಹಾಗೂ ಶೇ. 20 ರಷ್ಟು ಸ್ನಾತಕೋತ್ತರ ಹಂತದಲ್ಲಿ ದೊರೆಯುವಂತಾಗಬೇಕು ಎಂದಿದೆ. ರಾಷ್ಟ್ರಮಟ್ಟದಲ್ಲಿ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿ ವೇತನಕ್ಕೆ ಒಂದು ಸಮಿತಿ ನೇಮಿಸಿ ಈ ವಿಷಯದಲ್ಲಿ ಅದು ಕಾರ್ಯ ಪ್ರವೃತ್ತಿಯಾಗಬೇಕೆಂದು ತಿಳಿಸಿದೆ. ವೃತ್ತಿ ಶಿಕ್ಷಣಕ್ಕೂ ಇಂತಹ ಸೌಲಭ್ಯಗಳು ದೊರೆಯುವಂತಾಗಬೇಕು. ಪ್ರತಿ ವರ್ಷವೂ ಕನಿಷ್ಠ 500 ಪ್ರತಿಭಾವಂತರು ಹೊರದೇಶಗಳಲ್ಲಿ ವ್ಯಾಸಂಗ ಮಾಡಿಕೊಂಡು ಬರುವಂತೆ ರಾಷ್ಟ್ರೀಯ ವಿದ್ಯಾರ್ಥಿ ವೇತನಗಳಿರಬೇಕು ಎಂದು ಸಲಹಿಸಿದೆ.

### 5. ಸಾಲದ ವಿದ್ಯಾರ್ಥಿ ವೇತನಗಳು

ವಿದ್ಯಾರ್ಥಿ ವೇತನಗಳು ಸಾಲದ ರೂಪದಲ್ಲಿ ದೊರೆತರೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಬಡವರಿಗೆ ಸಹಾಯವಾಗುವುದು. ಇಂತಹ ಸೌಲಭ್ಯಗಳನ್ನು ವೃತ್ತಿ ಶಿಕ್ಷಣದಲ್ಲಿ ವಿಜ್ಞಾನವನ್ನು ಪ್ರಮುಖವಾಗಿ ಅಭ್ಯಾಸ ಮಾಡುವಂತಹವರಿಗೆ ನೀಡಿದರೆ ಯೋಜನೆಯ ಯಶಸ್ಸು ಪಡೆಯುತ್ತದೆ. ಏಕೆಂದರೆ ವೃತ್ತಿ ಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳಿಗೆ ತಕ್ಷಣ ಕೆಲಸ ಸಿಗುವುದರಿಂದ ಅವರು ಸಾಲವನ್ನು ಬೇಗ ಹಿಂತಿರುಗಿಸುತ್ತಾರೆ ಎಂದು ತಿಳಿಸಿದೆ. ಸಾಲ ತೆಗೆದುಕೊಂಡವರು ಶಿಕ್ಷಕರಾಗಿ ಬೋಧನಾ ಕ್ಷೇತ್ರಕ್ಕೆ ಸೇರಿದರೆ ಹತ್ತನೇ ಒಂದು ಭಾಗ ಸಾಲವನ್ನು ಮನ್ನಾ ಮಾಡಬೇಕೆಂದು ಈ ಆಯೋಗ ಸೂಚಿಸಿದೆ.

### 6. ಪ್ರಾಂತೀಯ ಅಸಮಾನತೆಯನ್ನು ಹೋಗಲಾಡಿಸಬೇಕು

ಕೆಲವು ರಾಜ್ಯಗಳಲ್ಲಿ ಶೈಕ್ಷಣಿಕ ಪ್ರಗತಿ ತೃಪ್ತಿಕರವಾಗಿದ್ದರೆ ಮತ್ತೆ ಹಲವು ರಾಜ್ಯಗಳಲ್ಲಿ ಬಹಳ ಹೀನ ಸ್ಥಿತಿ ಇಲ್ಲವೇ ಬಾಲ್ಯ ಸ್ಥಿತಿಯಲ್ಲಿವೆ. ಆದ್ದರಿಂದ ಮುಂದುವರಿಯುತ್ತಿರುವ ರಾಜ್ಯಗಳನ್ನು ಕಡೆಗಣಿಸದಂತೆ ಹಿಂದುಳಿದ ರಾಜ್ಯಗಳಿಗೆ ಹೆಚ್ಚಿನ ಹಣ ಸಹಾಯ, ಮೇಲ್ವಿಚಾರಣೆ ಮತ್ತು

Digitised by Bharatavani, CIIL

ಮಾರ್ಗದರ್ಶನವನ್ನು ಕೇಂದ್ರ ಸರ್ಕಾರ ದೊರಕಿಸಿಕೊಡಬೇಕು. ರಾಜ್ಯಗಳಲ್ಲಿನ ಪ್ರತಿ ಜಿಲ್ಲೆಯನ್ನು ಒಂದು ಯೋಜನಾ ಘಟಕವನ್ನಾಗಿ ಇಟ್ಟುಕೊಂಡು, ಜಿಲ್ಲೆಗಳಲ್ಲಿನ ಅಂತರವನ್ನು ನಿವಾರಿಸಿಕೊಳ್ಳಲು ಯೋಜನೆ ರೂಪಿಸಿಕೊಳ್ಳಲು ಯತ್ನಿಸಬೇಕು. ರಾಜ್ಯ ಮಟ್ಟದಲ್ಲಿ ಇದಕ್ಕೆ ವಿಶೇಷ ವ್ಯವಸ್ಥೆ ಇರಬೇಕು. ಶಿಕ್ಷಣದ ಪ್ರಮುಖ ವಿಷಯವಾದ ಶೈಕ್ಷಣಿಕ ಸಮಾನ ಸೌಲಭ್ಯಗಳನ್ನು ಕಲ್ಪಿಸಿಕೊಡಲು ವಿಶೇಷ ಇಲಾಖೆ ಮತ್ತು ಯೋಜನೆಗಳು ರೂಪುಗೊಳ್ಳಬೇಕೆಂದು ಸಲಹಿಸಿದೆ.

### 7. ಇತರೇ ಅಂಶಗಳು

ವಿದ್ಯಾರ್ಥಿಗೆ ವಿದ್ಯಾಭ್ಯಾಸದ ವೇಳೆಯಲ್ಲಿ ಸ್ವತಃ ಗಳಿಕೆ ಮಾಡಿಕೊಳ್ಳಲು ಅವಕಾಶವಿರಬೇಕು. ದೂರದ ಪ್ರದೇಶಗಳಿಂದ ಓಡಾಡುವ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ವಾಹನದ ಸೌಲಭ್ಯ ಅಗತ್ಯ. ರಾಜ್ಯ ಸರ್ಕಾರದ ಬಸ್ಸುಗಳಲ್ಲಿ ಓಡಾಡಲು ವಿದ್ಯಾರ್ಥಿಗಳಿಗೆ ರಿಯಾಯಿತಿ ನೀಡಬೇಕು. ಕಡಿಮೆ ವೆಚ್ಚದಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕು. ಓದುವ ಕೇಂದ್ರಗಳನ್ನು ಸ್ಥಾಪಿಸಬೇಕು. ಕೇಂದ್ರ ಸರ್ಕಾರವು ವಿಶೇಷ ಹಣದ ಸಹಾಯವನ್ನು ರಾಜ್ಯ ಸರ್ಕಾರಗಳಿಗೆ ಸಕಾಲದಲ್ಲಿ ನೀಡಬೇಕು. ರಾಜ್ಯ ಸರ್ಕಾರಗಳು ಎಲ್ಲ ರೀತಿಯ ವಿದ್ಯಾರ್ಥಿ ವೇತನಗಳ ಹಂಚಿಕೆಯನ್ನು ನೋಡಿಕೊಂಡು ತಾನೂ ಹೆಚ್ಚು ಭಾಗ ಹಣವನ್ನು ನೀಡಬೇಕು.

### 1986 ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಶೈಕ್ಷಣಿಕ ಸಮಾನ ಅವಕಾಶಗಳು

ಅಸಮಾನತೆಯನ್ನು ತೊಡೆದುಹಾಕುವಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ವಿಶೇಷ ಗಮನ ನೀಡಿದೆ. ಶಿಕ್ಷಣದಿಂದ ವಂಚಿತರಾದವರಿಗೆ ವಿಶೇಷ ಶೈಕ್ಷಣಿಕ ಅವಕಾಶ ನೀಡುವುದನ್ನು ಒತ್ತಿಹೇಳಿದೆ. ಇವರಲ್ಲಿ ಮಹಿಳೆಯರು, ಪರಿಶಿಷ್ಟಜಾತಿ ಮತ್ತು ವರ್ಗ, ಅಲ್ಪಸಂಖ್ಯಾತರು, ಅಂಗವಿಕಲರು ಮತ್ತು ಬುದ್ಧಿಮಾಂದ್ಯರೂ ಸೇರಿದ್ದಾರೆ.

1. ಸ್ತ್ರೀಯರ ಸ್ಥಾನಮಾನದಲ್ಲಿ ಮೂಲಭೂತ ಬದಲಾವಣೆಯನ್ನು ತರಲು ರಾಷ್ಟ್ರೀಯ ಶಿಕ್ಷಣದಲ್ಲಿ ಪುನರ್‌ರಚಿತ ಪಠ್ಯವಸ್ತು, ಪಠ್ಯಪುಸ್ತಕ, ಆಡಳಿತದಲ್ಲಿ ತರಬೇತಿ ಮತ್ತು ಬದಲಾವಣೆಯನ್ನು ತರಲು ಸೂಚಿಸಿದೆ. ಮಹಿಳೆಯರ ಅಭಿವೃದ್ಧಿಗೆ ಪ್ರಜಾಸತ್ತಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿದೆ. ಮಹಿಳೆಯರ ಸಾಕ್ಷರತೆ ವೃದ್ಧಿಸುವುದು, ಶಾಲೆಯಲ್ಲಿ ಹೆಣ್ಣು ಮಕ್ಕಳ ಸೇರ್ಪಡೆ ಮತ್ತು ಉಳಿಸಿಕೊಳ್ಳುವಿಕೆಯನ್ನು ಹಾಗೂ ವೃತ್ತಿಶಿಕ್ಷಣದಲ್ಲಿ ಹೆಚ್ಚು ಜನ ಹೆಣ್ಣುಮಕ್ಕಳು ಭಾಗವಹಿಸುವಂತೆ ಮಾಡಲು ಎಲ್ಲ ಪ್ರಯತ್ನಗಳನ್ನು ಕೈಗೊಳ್ಳುವುದರ ಮಹತ್ವವನ್ನು ಆಯೋಗ ಒತ್ತಿಹೇಳಿದೆ.

2. ಎಲ್ಲಾ ಆಯಾಮಗಳಲ್ಲಿ ಸಮಾನತೆಯನ್ನು ಸಾಧಿಸಲು ಶಿಕ್ಷಣ ಕೇಂದ್ರವಾಗಬೇಕಿದೆ ಎಂದು ನೂತನ ಶಿಕ್ಷಣನೀತಿ ಸೂಚಿಸಿದೆ. ಇದಕ್ಕಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪೋಷಕರನ್ನು ಪ್ರೋತ್ಸಾಹಿಸುವುದು, ವಿದ್ಯಾರ್ಥಿವೇತನ ನೀಡುವುದು, ಮಕ್ಕಳು ಶಾಲೆಯ ಮಧ್ಯದಲ್ಲಿ ಬಿಟ್ಟು ಹೋಗದಂತೆ ನೋಡಿಕೊಳ್ಳುವುದು, ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ತೆರೆಯುವುದು, ಶಾಲಾಕಟ್ಟಡ, ಬಾಲವಾಡಿ ಹಾಗೂ ವಯಸ್ಕರ ಕೇಂದ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವುದು ಒತ್ತಿಹೇಳಲಾಗಿದೆ.

3. ಗುಡ್ಡಗಾಡು, ಮರಳುಗಾಡು, ಸಮುದ್ರತೀರ ಮುಂತಾದ ಸಂಪರ್ಕ ಸಾಧ್ಯವಿಲ್ಲದ ಪ್ರದೇಶಗಳಲ್ಲಿ ಹೆಚ್ಚಿನ ಪ್ರಾಥಮಿಕ ಶಾಲೆಗಳನ್ನು ತೆರೆಯುವುದು. ಈ ವರ್ಗದವರ ಆಡುಭಾಷೆಯಲ್ಲಿ ಬೋಧನಾ ಸಾಮಗ್ರಿ ಮತ್ತು ಪಠ್ಯಪುಸ್ತಕಗಳನ್ನು ರಚಿಸಿ ಆನಂತರ ಪ್ರಾದೇಶಿಕ ಭಾಷೆಗೆ ಬದಲಾಯಿಸಿಕೊಳ್ಳುವುದರ ಮೂಲಕ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿರುಚಿಯನ್ನು ಗೌರವಿಸಬೇಕೆಂದು ಹೇಳಲಾಗಿದೆ. ಈ ವರ್ಗದ ಪ್ರತಿಭಾನ್ವಿತರು ಗುಡ್ಡಗಾಡುಗಳಲ್ಲಿಯೇ ಉಳಿದು, ಉಳಿದವರ ಏಳಿಗೆಗಾಗಿ ದುಡಿಯುವಂತೆ ಮಾಡುವುದರ ಮಹತ್ವವನ್ನು ತಿಳಿಸಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಸತಿಸೌಲಭ್ಯಗಳನ್ನು ಒಳಗೊಂಡ ಆಶ್ರಮಶಾಲೆಗಳನ್ನು ತೆರೆಯುವಂತೆ ಸೂಚಿಸಿದೆ. ಈ ಜನರ ಭಾಷೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಅಗತ್ಯವನ್ನು ಆಯೋಗ ತಿಳಿಸಿದೆ.

4. ಅಂಗವಿಕಲರ ಶಿಕ್ಷಣ ಇತರೆಯವರ ಶಿಕ್ಷಣದೊಂದಿಗೆ ಸಮಾನವಾಗಿರಬೇಕು. ಹೀಗಾಗಿ ತೀವ್ರವಾಗಿ ನ್ಯೂನತೆ ಹೊಂದಿದವರಿಗೆ ಜಿಲ್ಲಾ ಮಟ್ಟದಲ್ಲಿ ವಸತಿಶಾಲೆಗಳನ್ನು ತೆರೆಯಬೇಕು. ಅಂಗವಿಕಲರಿಗೆ ವೃತ್ತಿಶಿಕ್ಷಣ ಮತ್ತು ತರಬೇತಿ ನೀಡಲು ಮುಂದಾಗುವ ಸಂಸ್ಥೆಗಳಿಗೆ ಧನಸಹಾಯವನ್ನು ನೀಡಬೇಕೆಂದು ಸೂಚಿಸಿದೆ.

5. ವಯಸ್ಕರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕಲಿಕಾ ಕೇಂದ್ರಗಳನ್ನು ಮತ್ತು ವಾಚನಾಲಯಗಳನ್ನು ಪ್ರಾರಂಭಿಸಬೇಕು. ಜೊತೆಗೆ ಪುಸ್ತಕಗಳ ಪ್ರಕಟಣೆ, ಪ್ರಚಾರ, ಸಮೂಹ ಮಾಧ್ಯಮಗಳ ಬಳಕೆ, ಸ್ವಯಂಕಲಿಕೆಗೆ ಪ್ರೋತ್ಸಾಹ ಮುಂತಾದ ಕಾರ್ಯಕ್ರಮಗಳನ್ನು ಶೈಕ್ಷಣಿಕ ಸಮಾನ ಅವಕಾಶಗಳ ಹಿನ್ನೆಲೆಯಲ್ಲಿ ಗ್ರಾಮೀಣ ಜನರಿಗೆ ನೀಡಲು ಸೂಚಿಸಿದೆ. ಈ ಸಂಬಂಧವಾಗಿ ಸಮುದಾಯದಲ್ಲಿನ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸ್ವಯಂಸೇವಾ ಸಂಸ್ಥೆಗಳ ಭಾಗವಹಿಸುವಿಕೆಯ ಅಗತ್ಯವನ್ನು ಹೇಳಿದೆ.

### ಶಿಕ್ಷಣದ ಹಕ್ಕು ಕಾಯ್ದೆ – 2010

ಶಿಕ್ಷಣದ ಅವಕಾಶಗಳ ಸಮಾನೀಕರಣದ ಹಿನ್ನೆಲೆಯಲ್ಲಿ ಭಾರತದಲ್ಲಿ ಇದೊಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಇದರಿಂದ ಒಂದು ಕೋಟಿ ಮಕ್ಕಳಿಗೆ ಪ್ರಯೋಜನ ಸಿಗಲಿದೆ. ಈಗಲೂ ಶೇ. 4.6 ರಷ್ಟು ಮಕ್ಕಳು ಶಾಲೆಯಿಂದ ಹೊರಗೆ ಉಳಿದಿರುವುದು ಪ್ರಗತಿಗೆ ಮಾರಕವಾಗಿದೆ. ಇಂತಹ ಮಕ್ಕಳು ಶಾಲೆಗೆ ಹೋಗುವಂತೆ ಮಾಡುವ ಹೊಣೆಗಾರಿಕೆ ರಾಜ್ಯ ಮತ್ತು ಸ್ಥಳೀಯ ಆಡಳಿತಗಳ ಮೇಲೆ ಬಿದ್ದಿದೆ. 2002ರಲ್ಲಿ ಸಂವಿಧಾನದ 86 ನೇ ತಿದ್ದುಪಡಿ ತರುವ ಮೂಲಕ ಇಂದು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಮಕ್ಕಳು ಹಕ್ಕು ಕಾಯ್ದೆ ಜಾರಿಗೆ ಬಂದಿದೆ. ಖಾಸಗಿ ಶಾಲೆಗಳಲ್ಲೂ ದುರ್ಬಲ ವರ್ಗದವರಿಗೆ ಶೇ. 25 ರಷ್ಟು ಸೀಟು ಮೀಸಲಿಡಲು ಇಲ್ಲಿ ಸೂಚಿಸಲಾಗಿದೆ. ಈ ಯೋಜನೆಯಿಂದ ಸದೃಢ ಭಾರತ ನಿರ್ಮಾಣವಾಗುವುದರಲ್ಲಿ ಅನುಮಾನವಿಲ್ಲ. ಭಾರತದ ಈ ಯೋಜನೆಯನ್ನು ಯುನೆಸ್ಕೋ ಮತ್ತು ಯುನಿಸೆಫ್ ಶ್ಲಾಘಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಯೋಜನೆಯ ಜಾರಿಗೆ ಹಣಕಾಸು ಆಯೋಗದಿಂದ 25 ಸಾವಿರ ಕೋಟಿ ರೂಪಾಯಿಗಳು ಮಂಜೂರಾತಿಯಾಗಿದೆ.

ಏಪ್ರಿಲ್ 1, 2010 ರ ಕಾಯ್ದೆಯ ಪ್ರಕಾರ 1 ರಿಂದ 5 ನೇ ತರಗತಿಯ ಮಕ್ಕಳಿಗೆ 1 ಕಿ.ಮೀ. ವ್ಯಾಪ್ತಿಯಲ್ಲಿ 6 ರಿಂದ 8 ನೇ ತರಗತಿಯ ಮಕ್ಕಳಿಗೆ ವಾಸಸ್ಥಳದಿಂದ 3 ಕಿ.ಮೀ. ವ್ಯಾಪ್ತಿಯಲ್ಲಿ ಶಾಲೆಗಳು ಲಭ್ಯವಾಗಬೇಕಾಗಿದೆ. ಹೊಸ ಕಾಯ್ದೆಯ ಪ್ರಕಾರ 5 ನೇ ತರಗತಿಯವರೆಗೆ ಇರುವ ಶಾಲೆಗಳಲ್ಲಿ 6, 7 ಮತ್ತು 8 ನೇ ತರಗತಿಗಳು ಲಭ್ಯವಾಗಬೇಕಾಗಿದೆ. ಒಂದು ವೇಳೆ ಸೂಚಿತ ವ್ಯಾಪ್ತಿಯಲ್ಲಿ ಯಾವುದೇ ಶಾಲೆ ಇಲ್ಲದಿದ್ದರೆ


Digitised by Bharatavani, CIIL

ಸರ್ಕಾರ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕಾಗಿದೆ ಇಲ್ಲವೆ ಮಕ್ಕಳಿಗೆ ವಸತಿ ವ್ಯವಸ್ಥೆ ಮಾಡಿಕೊಡಬೇಕಾಗಿದೆ. ಶೈಕ್ಷಣಿಕ ವರ್ಷ ಆರಂಭವಾದ ನಂತರ 6 ತಿಂಗಳ ಒಳಗೆ ಶಾಲೆ ಬಿಟ್ಟ ಮಕ್ಕಳನ್ನು ಅಥವಾ ಶಾಲೆಗೆ ಸೇರದೇ ಇದ್ದ ಮಕ್ಕಳನ್ನು ದಾಖಲೆ ಮಾಡಿಕೊಳ್ಳಲು ಸೂಚಿಸಿರುವುದು ಗಮನಾರ್ಹವಾದ ಸಾಧನೆಗೆ ಸಹಾಯಕವಾಗುವುದು.

– ಎಚ್.ವಿ.ಶಿ.

## ಶಿಕ್ಷಣದಲ್ಲಿ ಪಾಡ್‌ಕ್ಯಾಸ್ಟಿಂಗ್

ಪಾಡ್‌ಕ್ಯಾಸ್ಟಿಂಗ್ ಎಂಬ ಪದವು ತಂತ್ರಜ್ಞಾನಗಳ ಸಂಗ್ರಹವಾಗಿದ್ದು, ಇದು ದೃಕ್ ಹಾಗೂ ಶ್ರವಣ ಮಾಧ್ಯಮದ ತಂತ್ರಾಂಶವನ್ನು ಅಂತರ್‌ಜಾಲದಲ್ಲಿ ಬಳಸುವ ಪ್ರಕ್ರಿಯೆಯಾಗಿದೆ. ಇದರಿಂದ ಪ್ರತಿಯೊಬ್ಬ ಉತ್ಪಾದಕನೂ ಶ್ರವಣ ಮಾಧ್ಯಮದಲ್ಲಿ ವಿಷಯಗಳನ್ನು ಉತ್ಪಾದಿಸಿ ಸ್ವ-ಪ್ರಕಟಿಸಬಹುದಾಗಿದೆ. ಇದನ್ನು ರೇಡಿಯೋ ಹಾಗೂ ದೂರದರ್ಶನ ಕಾರ್ಯಕ್ರಮಗಳಿಗೂ ಬಳಸಬಹುದು.

ಯಾವುದೇ ಡಿಜಿಟಲ್ ಶ್ರವಣ ಮಾಧ್ಯಮ (Audioplayer) ಅಥವಾ ಗಣಕಯಂತ್ರದಲ್ಲಿನ ಶ್ರವಣಮಾಧ್ಯಮ ತಂತ್ರಾಂಶದಿಂದಲೂ ಇದನ್ನು ಬಳಸಬಹುದು. "ಪಾಡ್‌ಕ್ಯಾಸ್ಟ್" ಎಂಬುದು ಹೆಚ್ಚಾಗಿ ಶ್ರವಣ ಆಧಾರಿತ ವಿಷಯ ಹಂಚಿಕೆಗೆ ಸಂಬಂಧಿಸಿದ್ದು. "ಪಾಡ್‌ಕ್ಯಾಸ್ಟ್" ಅಥವಾ "ವೆಬ್‌ಕ್ಯಾಸ್ಟ್" ಎಂಬುದು ಮಾಧ್ಯಮ ಹಂಚಿಕೆಯನ್ನು ತೋರಿಸುತ್ತದೆ.

"ಪಾಡ್‌ಕ್ಯಾಸ್ಟಿಂಗ್" ಎಂಬುದು ಅತ್ಯಂತ ಕುತೂಹಲಕರ ಹಾಗೂ ಅದ್ಭುತವಾದ ತಡೆಯಿಲ್ಲದ ತಂತ್ರಜ್ಞಾನವಾಗಿದ್ದು ಅದು ಇತ್ತೀಚಿನ ಬೆಳವಣಿಗೆಯಾಗಿದೆ. ಪಾಡ್‌ಕ್ಯಾಸ್ಟಿಂಗ್ ಎಂಬುದು ಕುತೂಹಲಕರ ಏಕೆಂದರೆ ಯಾವುದೇ ವ್ಯಕ್ತಿ ಇದರಲ್ಲಿ ಭಾಗವಹಿಸಿ, ತನ್ನ ವಿಚಾರಗಳನ್ನು ಮುಕ್ತವಾಗಿ ವ್ಯಕ್ತಪಡಿಸಬಹುದಾಗಿದೆ. ವ್ಯಕ್ತಿಗಳ ಆಸಕ್ತಿಗನುಸಾರವಾಗಿ ವಿಚಾರವನ್ನು ವ್ಯಕ್ತಪಡಿಸಬಹುದಾಗಿದೆ.

ಪಾಡ್‌ಕ್ಯಾಸ್ಟಿಂಗ್ ವ್ಯಕ್ತಿಗಳ ಸಂವಹನ ಕೌಶಲ್ಯಕ್ಕೆ ಶಕ್ತಿಯನ್ನು ತುಂಬುತ್ತದೆ. ಇದನ್ನು ಬಳಸಲು ಮೂಲವಾಗಿ ಪಾಡ್‌ಕ್ಯಾಸ್ಟಿಂಗ್ ಸಲಕರಣೆ ಹಾಗೂ ಸಂವಹನದಲ್ಲಿ ಆಸಕ್ತಿಯಿರಬೇಕು. ಪಾಡ್‌ಕ್ಯಾಸ್ಟನ್ನು ಬಳಸುವವರು ತಮ್ಮ ಮೊದಲ ಬಳಕೆಯಲ್ಲೇ ಹೆಚ್ಚು ಭೌಗೋಳಿಕ ವಿಭಾಗದ ಕೇಳುಗರಿಗೆ ರೇಡಿಯೋ ಚಾನೆಲ್‌ಗಳ (AM/FM) ಮೂಲಕ ವಿಷಯವನ್ನು ಪ್ರಪಂಚಕ್ಕೆ ಪ್ರಸರಿಸಬಹುದು.

ಪ್ರಸ್ತುತ ವಿಶಾಲ ಜಗತ್ತಿನಲ್ಲಿ ಮೊದಲು ಕೇವಲ ದೊಡ್ಡ ಸಂಸ್ಥೆಗಳು, ಸರ್ಕಾರಿಸಂಸ್ಥೆಗಳು ಮಾತ್ರ ಈ ಪ್ರಸಾರ ಮಾಧ್ಯಮವನ್ನು ಉಪಯೋಗಿಸುತ್ತಿವೆ. ಆದರೆ ಪಾಡ್‌ಕ್ಯಾಸ್ಟಿಂಗ್ ಆಧುನಿಕ ಸಮಾಜದ ಪ್ರತಿಯೊಬ್ಬ ಸಾಮಾನ್ಯ ನಾಗರಿಕನನ್ನು ತಲುಪಲು ಸಾಧ್ಯವಾಗಿದೆ.

ಪಾಡ್‌ಕ್ಯಾಸ್ಟಿಂಗನ್ನು ಶಾಲೆಯಲ್ಲಿ ಶಿಕ್ಷಕನು ಯಶಸ್ವಿಯಾಗಿ ಬಳಸಬಹುದಾಗಿದೆ. ವಿದ್ಯಾರ್ಥಿಗಳು ಐ-ಪಾಡ್ (i-pod) ಸಾಧನವನ್ನು ಬಳಸಿ ಪ್ರತಿನಿತ್ಯದ ವಾರ್ತೆಗಳನ್ನು ಹಾಗೂ ಇನ್ನಿತರ ಪಠ್ಯ ವಿಷಯಗಳನ್ನು ಅಂತರ್ಜಾಲದಿಂದ ಬಳಸಲುಬಹುದು. ತರಗತಿಯ ಶಿಕ್ಷಕನು ಪ್ರತ್ಯೇಕ ತರಗತಿ ಹಾಗೂ ವಿಷಯಕ್ಕೆ ಅನುಸಾರವಾಗಿ ಶ್ರವಣಮಾಧ್ಯಮದಲ್ಲಿ ಉತ್ಪಾದಿಸಿದ ಪಠ್ಯವನ್ನು ವಿದ್ಯಾರ್ಥಿಗಳು ಸಮಯ ಹಾಗೂ ಸ್ಥಳದ ನಿರ್ಬಂಧನೆ ಇಲ್ಲದೆ ಎಲ್ಲಿ ಬೇಕಾದರೂ ಯಾವಾಗ ಬೇಕಾದರೂ ತಮಗಿಷ್ಟ ಬಂದ ಪಾಠವನ್ನು ಕೇಳಬಹುದು.

### ಪಾಡ್‌ಕ್ಯಾಸ್ಟಿಂಗ್‌ನ ಶೈಕ್ಷಣಿಕ ಉಪಯೋಗಗಳು

- ದೂರಶಿಕ್ಷಣದಲ್ಲಿ ರೇಡಿಯೋ, ದೂರದರ್ಶನ, ಅಂತರ್ಜಾಲದಲ್ಲಿ ಬಳಸಬಹುದು.
- ಸ್ವಯಂ-ಕಲಿಕೆಗೆ ಹೆಚ್ಚು ಸಹಾಯಕಾರಿ.
- ವಿದ್ಯಾರ್ಥಿ ತನಗಿಷ್ಟ ಬಂದ ವೇಗದಲ್ಲಿ ಕಲಿಯುವ ಅವಕಾಶವಿದೆ.
- ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿಷಯ ಕಲಿಯಲು ಅವಕಾಶವಿದೆ.
- ಓದುವ ದೋಷವಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತ.
- ಬಹು-ಭಾಷಾ ಶಿಕ್ಷಣಕ್ಕೆ ಅವಕಾಶ.
- ಸಂಪನ್ಮೂಲ ವ್ಯಕ್ತಿಗಳ ವಿಚಾರಗಳನ್ನು ದೂರ ಪ್ರದೇಶಗಳಿಗೆ ಪ್ರಸರಿಸಲು ಸಹಕಾರಿ.

ಪಾಡ್‌ಕ್ಯಾಸ್ಟಿಂಗ್‌ನ ನ್ಯೂಸ್‌ಫೀಢ್ (RSS), ಐ-ಟ್ಯೂನ್ ಹಾಗೂ ಪಾಡ್‌ಕ್ಯಾಸ್ಟ್ ಐಲ್ ತಂತ್ರಾಂಶದಲ್ಲಿ ವಿವಿಧ ವಿಷಯ ಡೈರೆಕ್ಟರಿಗಳನ್ನು ವಿಂಗಡಿಸಬಹುದು. ಇವುಗಳಲ್ಲಿ ಪ್ರಖ್ಯಾತವಾದವು ಪಾಡ್‌ಕ್ಯಾಸ್‌ಅಲಿ (Podcast Alley) ಇದರಲ್ಲಿ 41,000 ವಿಭಾಗಗಳಿದ್ದು, 2 ಮಿಲಿಯನ್ ಪ್ರತ್ಯೇಕ ಭಾಗಗಳಿವೆ. ನಮಗೆ ಬೇಕಾದ ವಿಷಯವನ್ನು ಆಯ್ಕೆ ಮಾಡಲು ಸರ್ಚ್ (Search) ಭಾಗದಲ್ಲಿ ಬೇಕಾದ ಹೆಸರನ್ನು ನಮೂದಿಸಬೇಕು ಆಗ ಆ ವಿಷಯವು ಸುಲಭವಾಗಿ ಸಿಗುತ್ತದೆ.

ಐ-ಟ್ಯೂನ್ (I-Tune) ತಂತ್ರಾಂಶವು ನಮಗೆ ಬೇಕಾದ ಪಠ್ಯದ ವಿಷಯವನ್ನು ಅಂತರ್ಜಾಲದಲ್ಲಿ ಆಯ್ಕೆಮಾಡಿ ಐ-ಪಾಡ್‌ಸಾಧನದಲ್ಲಿ ಡೌನ್‌ಲೋಡ್ (Download) ಮಾಡಲು ಉಪಯುಕ್ತವಾಗಿದೆ. ಅಂತರ್ಜಾಲದಲ್ಲಿ ಕ್ರೆಡಿಟ್‌ಕಾರ್ಡ್ ಬಳಸಿ ನಮಗೆ ಬೇಕಾದ ವಿಷಯವನ್ನು ಕೊಂಡುಕೊಳ್ಳಬಹುದಾಗಿದೆ.

ಗಣಕಯಂತ್ರದಲ್ಲಿನ ಐ-ಟ್ಯೂನ್ ತಂತ್ರಾಂಶವನ್ನು ಬಳಸಿ ಅಂತರ್ಜಾಲದಲ್ಲಿನ ಪಾಠಗಳನ್ನು ಕೇಳಬಹುದು. ಈ ಪಾಠಗಳನ್ನು ಅಂತರ್ಜಾಲದಿಂದ ಡೌನ್‌ಲೋಡ್ ಮಾಡಿ ಮೊಬೈಲ್ ಅಥವಾ ಐ-ಪಾಡ್‌ಗಳಿಗೆ ಡೇಟ್ ಕೇಬಲ್ ಸಹಾಯದಿಂದ ವರ್ಗಾಯಿಸಬಹುದು. ಈ ಪಾಠಗಳನ್ನು ವಿದ್ಯಾರ್ಥಿ ಯಾವಾಗ ಬೇಕಾದರೂ ಕೇಳಬಹುದು ಹಾಗೂ ವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ರೆಕಾರ್ಡ್ ಮಾಡಿ ಅಂತರ್ಜಾಲಕ್ಕೆ ರವಾನಿಸಬಹುದು. ಪಾಠಗಳನ್ನು MP3, AAC ಮಾಧ್ಯಮದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.

ದೃಕ್ ಶ್ರವಣ (Video) ಪಾಡ್‌ಕ್ಯಾಸ್ಟ್‌ನಲ್ಲಿ ಶೈಕ್ಷಣಿಕ ಚಲನಚಿತ್ರಗಳನ್ನು ಕೂಡ ವೀಕ್ಷಿಸಬಹುದು. ಇದಕ್ಕೆ ಅಂತರ್ಜಾಲದಲ್ಲಿ ದೃಕ್‌ಶ್ರವಣ ಮಾಧ್ಯಮದ ಪಾಠಗಳು MP4 ರೂಪದಲ್ಲಿ (Format) ಉಪಲಬ್ಧವಿರುತ್ತವೆ. ಶಿಕ್ಷಕರು ತಮ್ಮ ಪಾಠಗಳನ್ನು ವೀಡಿಯೋ ರೆಕಾರ್ಡಿಂಗ್ ಮಾಡಿ ವಿವಿಧ ಭಾಗಗಳನ್ನು ಅಂತರ್ಜಾಲಕ್ಕೆ ಗಣಕಯಂತ್ರದ ಸಹಾಯದೊಂದಿಗೆ ಅಪ್‌ಲೋಡ್ (Upload) ಮಾಡಬಹುದು. ಹೀಗೆ ಅಂತರ್ಜಾಲಕ್ಕೆ ರವಾನಿಸಿದ ದೃಕ್-ಶ್ರವಣ ಮಾಧ್ಯಮದ ಪಾಠಗಳನ್ನು ವಿದ್ಯಾರ್ಥಿಗಳು ತಮ್ಮ ಐ-ಪಾಡ್ ಅಥವಾ ಗಣಕಯಂತ್ರದಲ್ಲಿ ಅಂತರ್ಜಾಲದಿಂದ ತಮಗೆ ಬೇಕಾದ ಪಾಠಗಳನ್ನು ಡೌನ್‌ಲೋಡ್ ಮಾಡಿ ಚಲನಚಿತ್ರ ಸಹಿತ ಆನಂದದಾಯಕ ಪಾಠಗಳನ್ನು ಕೇಳಲು ಅವಕಾಶವಿದೆ.

Digitised by Bharatavani, CIIL

ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪ್ರಪಂಚದ ಪ್ರತ್ಯೇಕ ಭಾಗದಿಂದ ತಾವಿರುವ ನಗರಗಳಿಂದಲೇ ಪಠ್ಯವಿಷಯಗಳನ್ನು ಅಂತರ್ಜಾಲದಲ್ಲಿ ಶ್ರವಣಮಾಧ್ಯಮ ಅಥವಾ ದೃಕ್-ಶ್ರವಣ ಮಾಧ್ಯಮದಲ್ಲಿ ಪಾಠಗಳನ್ನು ರವಾನಿಸಬಹುದು. ಇತರರು ರವಾನಿಸಿದ ಪಠ್ಯ ವಿಷಯಗಳನ್ನು ಪಡೆಯಬಹುದು. ಇಲ್ಲಿಯವರೆಗೆ ಬಹಾಮ NE, ಕಿಲ್ಲನ್ TX ಹಾಗೂ ಫಿಲಾಡೆಲ್‌ಫಿಯಾ ನಗರಗಳಿಂದ ವಿವಿಧ ವಿಷಯಗಳ ಪಾಠಗಳನ್ನು ರವಾನೆ ಮಾಡಿದ್ದಾರೆ. ಇದನ್ನು ಪಾಡ್‌ಕ್ಯಾಸ್ಟ್ ವೆಬ್‌ಮಾಸ್ಟರ್ "Our City Website"ನಲ್ಲಿನ ಫೀಡ್‌ನಲ್ಲಿ ಸೇರಿಸುತ್ತಾರೆ. 'ಪಾಡ್ ಕ್ಯಾಸ್ಟಿಂಗ್'ನ ಶೈಕ್ಷಣಿಕ ಉಪಯೋಗ ಹೆಚ್ಚಿರುವುದರಿಂದ ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ಮಾಡಲು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉತ್ಸುಕರಾಗಿರುತ್ತಾರೆ.

– ಕೆ.ಬಿ.ಪ್ರ.

## ಶಿಕ್ಷಣದ ವಿವಿಧ ಹಂತಗಳಲ್ಲಿ ಶೈಕ್ಷಣಿಕ ಆಡಳಿತ

ಭಾರತವು ಒಂದು ಬೃಹತ್ತಾದ ದೇಶ. ಪ್ರಜಾಪ್ರಭುತ್ವದ ಏಳಿಗೆಗೆ ರಾಷ್ಟ್ರದ ಸಾಮಾಜಿಕ, ಆರ್ಥಿಕ ಪ್ರಗತಿಗೆ ಶಿಕ್ಷಣ ಅನಿವಾರ್ಯವಾಗಿದೆ. ಶಿಕ್ಷಣವನ್ನು ಹಲವು ಹಂತಗಳಲ್ಲಿ ನೀಡಲಾಗುತ್ತಿದೆ.

### ಪೂರ್ವ ಪ್ರಾಥಮಿಕ ಶಿಕ್ಷಣ

ಪ್ರಾಚೀನ ಶೈಕ್ಷಣಿಕ ಸಂಸ್ಥೆಗಳಾದ ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕ ಸ್ಥಾನಗಳು, ಮಠಗಳಲ್ಲಿ ಸಾಂಪ್ರದಾಯಿಕ ಪದ್ಧತಿಯಿಂದ ಬೋಧಿಸಲಾಗುತ್ತಿತ್ತು. 3 R's ಕಲಿಕೆ ಮತ್ತು ಕಂಠಪಾಠಕ್ಕೆ ಪ್ರಾಧಾನ್ಯತೆ ಇದ್ದಿತು. ಪ್ರಾಥಮಿಕ ಶಿಕ್ಷಣಕ್ಕೆ ಮೆಟ್ಟಿಲಾದ ಪೂರ್ವ ಪ್ರಾಥಮಿಕ ಶಿಕ್ಷಣವು 1900 ರಲ್ಲಿ ಹೆಚ್ಚು ಗಮನ ಸೆಳೆಯಿತು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಈ ಶಿಕ್ಷಣದ ಅವಶ್ಯಕತೆಯ ಅರಿವು ಬೆಳೆಯತೊಡಗಿತು. ಪ್ರಥಮ ಬಾರಿಗೆ ಭಾರತ ಸರ್ಕಾರವು ಶಿಕ್ಷಣವನ್ನು 3ನೇ ಪಂಚವಾರ್ಷಿಕ ವ್ಯವಸ್ಥೆಯ ಆಧಾರವೆಂದು ಗುರುತಿಸಿತು. 1964–66ರಲ್ಲಿ ಕೊಠಾರಿ ಆಯೋಗವು ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕೆ ಪೂರ್ವ ಪ್ರಾಥಮಿಕ ಶಿಕ್ಷಣವು ಸಹಾಯಕವೆಂದು ಶಿಫಾರಸ್ಸು ಮಾಡಿತು.

1963ರಲ್ಲಿ ಭಾರತ ಸರ್ಕಾರ ಮಂತ್ರಾಲಯದ ಅಭಿಪ್ರಾಯದಲ್ಲಿ ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್‌ನಲ್ಲಿ ಮಕ್ಕಳ ಅಧ್ಯಯನ ಘಟಕ ಪ್ರಾರಂಭಿಸಲಾಯಿತು. ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ 7ನೇ ಪಂಚವಾರ್ಷಿಕ ಯೋಜನೆ ಮಹತ್ವ ಪೂರ್ಣವಾಗಿದೆ. 1986ರಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ನರ್ಸರಿ ಶಾಲೆಗಳೆಂದೂ 3 ರಿಂದ 5 ವರ್ಷ ಮಕ್ಕಳಿಗೆ ನೀಡುವ ಶಿಕ್ಷಣವನ್ನು ಅನೌಪಚಾರಿಕ ಶಿಕ್ಷಣವೆಂದೂ ಪರಿಗಣಿಸಲಾಯಿತು. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ನರ್ಸರಿ, ಮಾಂಟೆಸರಿ, ಕಿಂಡರ್‌ಗಾರ್ಟನ್ ಶಿಕ್ಷಣವೆಂದು ಕರೆಯಲಾಗುವುದು.

ಬಡತನ ನಿವಾರಣೆ ಹಾಗೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸರ್ಕಾರ ಹಾಗೂ ಕೆಲವು ಖಾಸಗಿ ನಿಯೋಗಗಳು 'ಬಾಲವಾಡಿ' ಎಂಬ ಕಾರ್ಯಕ್ರಮ ಪ್ರಾರಂಭಿಸಿದವು. ಆದಿವಾಸಿ ಮಕ್ಕಳಿಗೆ 'ಅಂಗನವಾಡಿ' ಎಂಬ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮಗಳಲ್ಲಿ ಶಿಕ್ಷಣ ಅನೌಪಚಾರಿಕವಾಗಿದ್ದು ಚಟುವಟಿಕೆ ಆಧಾರವಾಗಿರುತ್ತದೆ.

ಕೆಲವು ಖಾಸಗಿ ನಿಯೋಗ, ರಾಷ್ಟ್ರೀಯ, ಅಂತರಾಷ್ಟ್ರೀಯ ಕೇಂದ್ರಗಳು ಈ ಶಿಕ್ಷಣ ನೀಡುತ್ತಿವೆ. ಉದಾಹರಣೆಗೆ: ವಿಶ್ವ ಆರೋಗ್ಯ ಸಂಸ್ಥೆ, ಭಾರತೀಯ ಮಕ್ಕಳ ಕಲ್ಯಾಣ ಪರಿಷತ್, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ತರಬೇತಿ ಪರಿಷತ್, ಪೂರ್ವ ಪ್ರಾಥಮಿಕ ಶಿಕ್ಷಣದ ನಿರ್ವಹಣೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ವಿಭಾಗ ಮಾಡುತ್ತಿವೆ. ಮಕ್ಕಳಿಗೆ ಶಾಲಾ ಕಟ್ಟಡ, ಶೌಚಾಲಯ ವ್ಯವಸ್ಥೆ, ಕುಡಿಯುವ ನೀರು, ಶಾಲಾ ತೋಟ ನಿರ್ಮಿಸಲು ರಾಜ್ಯ, ಕೇಂದ್ರ ಸರ್ಕಾರ, ಪಂಚಾಯಿತಿ, ಸರ್ಕಾರೇತರ ಸಂಸ್ಥೆಗಳು ನೆರವು ನೀಡುತ್ತಿವೆ.

### ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ

ಪ್ರಸ್ತುತದಲ್ಲಿ ರಾಜ್ಯ, ರಾಷ್ಟ್ರೀಯ ಮಾದರಿಯಂತೆ 1 ರಿಂದ 5 ಅಥವಾ 1 ರಿಂದ 7 ಅಥವಾ 1 ರಿಂದ 8ನೇ ತರಗತಿಗಳನ್ನು ಪ್ರಾಥಮಿಕ ಶಾಲೆ ಹೊಂದಿವೆ. ಎಸ್.ಎಸ್.ಎ. ಅಡಿಯಲ್ಲಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ 8ನೇ ತರಗತಿಯನ್ನು ತೆರೆಯಲಾಗಿದೆ. 1962–63ರಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಸಮವಸ್ತ್ರ, ಪಠ್ಯಕ್ರಮ, ಪಠ್ಯವಸ್ತುವಿನಲ್ಲಿ ಏಕರೂಪತೆ ತರಲಾಯಿತು. ತ್ರಿಭಾಷಾ ಸೂತ್ರವನ್ನು ಶಾಲೆಗಳಲ್ಲಿ ಪರಿಚಯಿಸಲಾಯಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, 6 ರಿಂದ 14 ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ, ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡಲು ರಾಜ್ಯ ಸರ್ಕಾರ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ. ಈ ಕಾರ್ಯಕ್ರಮಗಳ ಉದ್ದೇಶ ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಉಳಿಕೆ, ಸಾರ್ವತ್ರಿಕ ಗುಣಾತ್ಮಕ ಕಲಿಕೆ, ಈ ದಿಸೆಯಲ್ಲಿ ಹಮ್ಮಿಕೊಂಡಿರುವ ಪ್ರಮುಖ ಕಾರ್ಯಕ್ರಮಗಳು, ಕಪ್ಪು ಹಲಗೆಯ ಕಾರ್ಯಾಚರಣೆ, ಡಿ.ಪಿ.ಇ.ಪಿ ಚಟುವಟಿಕೆ ಆಧಾರಿತ ಶಿಕ್ಷಣ, ಶಿಕ್ಷಕರಿಗೆ ವೃತ್ತಿನಿರತ ತರಬೇತಿ, ಬೋಧನಾ ಕಲಿಕೆ ಸಾಮಗ್ರಿ ಒದಗಿಸುವುದು, ಸಮುದಾಯದತ್ತ ಶಾಲಾ ಕಾರ್ಯಕ್ರಮ, ಮಕ್ಕಳಲ್ಲಿ ಕನಿಷ್ಠ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು, ಚೈತ್ರದ ಚಿಗುರು ಹಾಗೂ ಚಿಣ್ಣರ ಅಂಗಳ, ಬೇಸಿಗೆ ಸೇತು ಬಂಧ ಶಿಬಿರಗಳು, ನಲಿ ಕಲಿ ಕಾರ್ಯಕ್ರಮ, ಬಿಸಿಯೂಟ ಯೋಜನೆ, ವಿದ್ಯಾರ್ಥಿ ಕ್ಷೇಮ ವಿಮಾಯೋಜನೆ, ಸರ್ವ ಶಿಕ್ಷಣ ಅಭಿಯಾನ (2001–02), ಮಾಹಿತಿಸಿಂಧು ಕಂಪ್ಯೂಟರ್ ಶಿಕ್ಷಣ ಮುಂತಾದವು. ಸರ್ವಶಿಕ್ಷಣ ಅಭಿಯಾನ (2001–02)ರಲ್ಲಿ ಪ್ರಾರಂಭಗೊಂಡು ಪ್ರಸ್ತುತ ಜಾರಿಯಲ್ಲಿದೆ. ಇದು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಗುಣಾತ್ಮಕ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಲಿಂಗಸಮಾನತೆ, ವಿದ್ಯಾರ್ಥಿಗಳ ದಾಖಲಾತಿ, ಹಾಜರಾತಿ, ಭಾಗವಹಿಸುವಿಕೆ, ಕಲಿಕೆ ಮತ್ತು ಉತ್ತೀರ್ಣತೆಗೆ ಸಂಬಂಧಿಸಿದ ತಾರತಮ್ಯತೆ ಹೋಗಲಾಡಿಸುವುದು ಇದರ ಉದ್ದೇಶವಾಗಿದೆ.

### ಪ್ರೌಢಶಾಲಾ ಶಿಕ್ಷಣ/ಸೆಕೆಂಡರಿ ಶಿಕ್ಷಣ

ರಾಜ್ಯದ ಪ್ರೌಢಶಾಲೆಗಳಲ್ಲಿ 8 ರಿಂದ 10ನೇ ತರಗತಿಗಳಿದ್ದು, ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಮಾತ್ರ 8 ರಿಂದ 12 ವರೆಗಿನ ತರಗತಿಗಳಿವೆ. ಸೆಕೆಂಡರಿ ಶಿಕ್ಷಣದ ಅಭಿವೃದ್ಧಿಗೆ, ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಿಸಲು, ಗುಣಾತ್ಮಕ ಶಿಕ್ಷಣಕ್ಕೆ ಪ್ರೋತ್ಸಾಹಕೊಡಲು ಸರ್ಕಾರ ಉಚಿತ ಸಮವಸ್ತ್ರ, ನೋಟ್‌ಬುಕ್, ಶಾಲಾ ಬ್ಯಾಗ್ ವಿತರಣೆ, ವಿದ್ಯಾರ್ಥಿ ವೇತನ, ಸೈಕಲ್ ನೀಡುವಿಕೆ, ಬಿಸಿಯೂಟ, ಸಮುದಾಯದತ್ತ ಶಾಲಾ ಕಾರ್ಯಕ್ರಮ, ಶಾಲಾ ಕಟ್ಟಡ, ಕುಡಿಯುವ ನೀರು, ಶೌಚಾಲಯ, ಪ್ರೌಢಶಾಲಾ ಶಿಕ್ಷಕರಿಗೆ ತರಬೇತಿ, ಸಾಹಿತ್ಯ ರಚನೆ, ಕಲಿಕಾ ಸಾಮಗ್ರಿ ತಯಾರಿಕೆ ಮುಂತಾದ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದೆ.

### ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣದ ವ್ಯವಸ್ಥೆ

1976ರಲ್ಲಿ ರಾಜ್ಯಾಂಗವು ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸೇರಿಸಿರುವುದರಿಂದ ಶೈಕ್ಷಣಿಕ ಆಡಳಿತದ ಜವಾಬ್ದಾರಿಯನ್ನು ಕೇಂದ್ರ, ರಾಜ್ಯ, ಸ್ಥಳೀಯ ಸರ್ಕಾರಗಳಿಗೆ ನಿರ್ದಿಷ್ಟ ರೀತಿಯಲ್ಲಿ ಹಂಚಲಾಗಿದೆ.


Digitised by Bharatavani, CIIL

ಕೇಂದ್ರ ಸರ್ಕಾರವು ದೇಶದ ಶಿಕ್ಷಣ ವ್ಯವಸ್ಥೆಗೆ ಮುಖ್ಯವಾಗಿದ್ದು ರಾಷ್ಟ್ರೀಯ ಗುರಿಗಳ ಸಾಧನೆಗಾಗಿ ರಾಜ್ಯಗಳಲ್ಲಿ ಶಿಕ್ಷಣನೀತಿ ಕಾರ್ಯಕ್ರಮಗಳು ರೂಪುಗೊಳ್ಳಲು ಚೌಕಟ್ಟು ಒದಗಿಸುತ್ತದೆ. ರಾಜ್ಯ ಸರ್ಕಾರ ಶಿಕ್ಷಣಕ್ಕಾಗಿ ನಿರ್ದಿಷ್ಟ ಮೊತ್ತವನ್ನು ಶಾಲಾ ಕಾಲೇಜು ನಡೆಸಲು, ಖಾಸಗಿ ಶಾಲೆಗಳಿಗೆ ಅನುದಾನ, ಪಠ್ಯ ಪುಸ್ತಕ ರಚನೆ, ವಿದ್ಯಾರ್ಥಿ ವೇತನ, ಮಧ್ಯಾಹ್ನ ಉಪಾಹಾರ ಯೋಜನೆಗೆ ಖರ್ಚು ಮಾಡುವುದು ಹಾಗೂ ಮೇಲ್ವಿಚಾರಣೆ ನಡೆಸುವುದು.

ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ ಸಚಿವರು ಶಿಕ್ಷಣದ ಗುಣಮಟ್ಟದ ಅಭಿವೃದ್ಧಿಗಾಗಿ ಮುಖ್ಯಮಂತ್ರಿ, ಹಣಕಾಸು ಸಚಿವರೊಡನೆ ಚರ್ಚಿಸಿ ಆದೇಶ ಹೊರಡಿಸುವರು. ಶಿಕ್ಷಣ ಕಾರ್ಯದರ್ಶಿಗಳು ಸಹಾಯ ಸಲಹೆ ನೀಡುವರು. ಶಿಕ್ಷಣ ಕಾರ್ಯದರ್ಶಿಗಳು ಐ.ಎ.ಎಸ್. ಅಧಿಕಾರಿಗಳಾಗಿರುತ್ತಾರೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪ್ರಾ. ಪ್ರೌಢಶಿಕ್ಷಣ)ಗಳ ಅಧೀನದಲ್ಲಿ ಆಡಳಿತಾತ್ಮಕ ಕಾರ್ಯಗಳು ಸುಸೂತ್ರವಾಗಿ ನಡೆಯಲು ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಲಾಗಿದೆ. ಸಾರ್ವಜನಿಕ ಶಿಕ್ಷಣದ ಆಯುಕ್ತಾಲಯವನ್ನು ಬೆಂಗಳೂರಿನಲ್ಲಿ, ಅದರ ಅಪರ ಆಯುಕ್ತಾಲಯಗಳು ಗುಲ್ಬರ್ಗಾ, ಧಾರವಾಡದಲ್ಲಿವೆ. ಆಯುಕ್ತರು ಐ.ಎ.ಎಸ್. ಅಧಿಕಾರಿಗಳಾಗಿರುತ್ತಾರೆ. ಆಯುಕ್ತಾಲಯಗಳೊಂದಿಗೆ ರಾಜ್ಯ ಯೋಜನಾ ನಿರ್ದೇಶನಾಲಯವಿದ್ದು ಪೂರ್ವ ಪ್ರಾಥಮಿಕ ಶಿಕ್ಷಣದಿಂದ 10ನೇ ತರಗತಿವರೆಗಿನ ಶಿಕ್ಷಣದ ಉಸ್ತುವಾರಿ, ಪರೀಕ್ಷೆ, ಶಿಕ್ಷಕರ ಸೇವಾ ಪೂರ್ವ ತರಬೇತಿ, ಸೇವಾ ನಿರತ ತರಬೇತಿ, ಶೈಕ್ಷಣಿಕ ಸಂಶೋಧನೆ, ಮಧ್ಯಾಹ್ನದ ಉಪಾಹಾರ, ಶಿಕ್ಷಕರ ನೇಮಕಾತಿ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

ಸರ್ಕಾರದ ಮತ್ತು ಶಿಕ್ಷಣ ಆಯುಕ್ತರ ಮಟ್ಟದಲ್ಲಿ ನೀತಿಗಳು, ಆದೇಶಗಳು ರೂಪುಗೊಳ್ಳುತ್ತವೆ. ರಾಜ್ಯದ ಎಲ್ಲಾ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಇವುಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುವರು.

ಪ್ರಸ್ತುತ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಈ ಕೆಳಕಂಡ 10 ನಿರ್ದೇಶನಾಲಯ ಹಾಗೂ ನಿರ್ದೇಶಕರು ಕೆಲಸ ನಿರ್ವಹಿಸುತ್ತಿರುವರು.

1. ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯ
2. ಪ್ರೌಢಶಾಲಾ ಶಿಕ್ಷಣ ನಿರ್ದೇಶನಾಲಯ
3. ಉರ್ದು ಮತ್ತು ಇತರ ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ
4. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
5. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ
6. ಸರ್ವ ಶಿಕ್ಷಣ ಅಭಿಯಾನ ನಿರ್ದೇಶನಾಲಯ
7. ನಿರ್ದೇಶನಾಲಯ – ಆಡಳಿತ
8. ನಿರ್ದೇಶನಾಲಯ – ಜನಶಾಲಾ
9. ನಿರ್ದೇಶನಾಲಯ – ಧಾರವಾಡ
10. ನಿರ್ದೇಶನಾಲಯ – ಗುಲ್ಬರ್ಗಾ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಅಧೀನದಲ್ಲಿ, ರಾಜ್ಯ ಮಟ್ಟದ ಇತರ ಕಛೇರಿಗಳು ಇಂತಿವೆ:

1. ಮಧ್ಯಾಹ್ನ ಬಿಸಿಯೂಟ ಯೋಜನೆ
2. ಕೇಂದ್ರೀಯ ದಾಖಲಾತಿ ಘಟಕ.
3. ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ.
4. ರಾಜ್ಯ ಶಿಕ್ಷಣ ಸಂಪನ್ಮೂಲ ಮತ್ತು ಮಾಹಿತಿ ಕೇಂದ್ರ (ಸೆರಿಕ್ ಲೈಬ್ರರಿ).

ರಾಜ್ಯ ಮಟ್ಟದಲ್ಲಿ ಶೈಕ್ಷಣಿಕ ಆಡಳಿತದ ಸಮರ್ಪಕ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣ ತತ್ವಕ್ಕನುಸಾರ ಸ್ಥಳೀಯ ಸಂಸ್ಥೆಗಳಿಗೂ ಅಧಿಕಾರ ನೀಡಲಾಗಿದೆ.

ವಿಭಾಗ ಮಟ್ಟದಲ್ಲಿ – ಪ್ರಾಥಮಿಕ, ಪ್ರೌಢಶಿಕ್ಷಣ ವ್ಯವಸ್ಥೆಯಲ್ಲಿ ವಿಭಾಗೀಯ ಸಹ ನಿರ್ದೇಶಕರು, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳು ಜಿಲ್ಲಾ ಮಟ್ಟದಲ್ಲಿ – ಜಿಲ್ಲಾ ಪಂಚಾಯತ್, ಉಪ ನಿರ್ದೇಶಕರ ಕಚೇರಿ, ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಾರ್ಯನಿರ್ವಹಿಸುತ್ತವೆ, ತಾಲ್ಲೂಕು ಮಟ್ಟದಲ್ಲಿ – ತಾಲ್ಲೂಕು ಪಂಚಾಯತ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು, ಶಾಲಾ ಮಟ್ಟದಲ್ಲಿ – ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾ ಮುಖ್ಯಸ್ಥರು, ಸಹ ಶಿಕ್ಷಕರು ಕೆಲಸ ನಿರ್ವಹಿಸುತ್ತಿರುವರು.

ರಾಜ್ಯದಲ್ಲಿ ಶಿಕ್ಷಣ ನೀಡುವ ಕಾರ್ಯವನ್ನು ಶಿಕ್ಷಣ ಇಲಾಖೆಯಲ್ಲದೆ ಸಮಾಜ ಕಲ್ಯಾಣ ಇಲಾಖೆ, ಸ್ಥಳೀಯ ಸಂಸ್ಥೆಗಳು, ಜವಾಹರ್ ನವೋದಯ, ಕೇಂದ್ರೀಯ ಶಾಲೆ, ಸೈನಿಕ ಶಾಲೆ, NRI, ಮದರಸ, ಅರೇಬಿಕ್ ಸಂಸ್ಥೆಗಳು ಮೊದಲಾದವೂ ನೆರವೇರಿಸುತ್ತಿವೆ.

**ಪದವಿಪೂರ್ವ ಶಿಕ್ಷಣ**

ಪದವಿ ಪೂರ್ವ ಶಿಕ್ಷಣದ ಯೋಜನೆಯನ್ನು ರಾಜ್ಯದಲ್ಲಿ 1957ರಲ್ಲಿ ಪ್ರಾರಂಭಿಸಲಾಯಿತು. ಪ್ರಸ್ತುತ ಪದವಿಪೂರ್ವ ಶಿಕ್ಷಣ ಇಲಾಖೆಯು 1970ರಲ್ಲಿ ಸ್ಥಾಪಿಸಲಾಯಿತು. ಈ ಯೋಜನೆಯನ್ನು ಎರಡು ವರ್ಷದ ಕೋರ್ಸನ್ನಾಗಿ 1972ರಲ್ಲಿ ಮಾಡಲಾಯಿತು. ಎರಡು ವರ್ಷದ ಈ ಕೋರ್ಸನ್ನು ಸರ್ಕಾರಿ, ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ, ಸ್ವತಂತ್ರ ಪದವಿ ಪೂರ್ವ ಕಾಲೇಜುಗಳಲ್ಲಿ, ಪ್ರಥಮ ದರ್ಜೆ, ವಿಭಜಿತ ಕಾಲೇಜು, ಖಾಸಗಿ ಅನುದಾನಿತ ಕಾಲೇಜು, ಕಾರ್ಪೋರೇಷನ್‌ನಿಂದ ನಿರ್ವಹಿಸಲ್ಪಡುವ ಪದವಿಪೂರ್ವ ಕಾಲೇಜುಗಳಲ್ಲಿ ನೀಡಲಾಗುತ್ತಿದೆ.

ಪದವಿಪೂರ್ವ ಶಿಕ್ಷಣದ ಮುಖ್ಯ ನಿರ್ದೇಶನಾಲಯವು ಬೆಂಗಳೂರಿನಲ್ಲಿದೆ. ಇಲ್ಲಿ ಎರಡು ನಿರ್ದೇಶನಾಲಯಗಳಿವೆ:

1. ಪದವಿ ಪೂರ್ವಶಿಕ್ಷಣ
2. ವೃತ್ತಿ ಶಿಕ್ಷಣ

ಪದವಿಪೂರ್ವ ಶಿಕ್ಷಣದ ನಿರ್ದೇಶಕರ ಅಧೀನದಲ್ಲಿ 3 ಜಂಟಿ ನಿರ್ದೇಶಕರಿರುವರು. ಇವರು ಶಾಲಾ ಆಡಳಿತ, ಪರೀಕ್ಷೆ ಹಾಗೂ ಶಿಕ್ಷಣದ ಕಾರ್ಯ ನಿರ್ವಹಿಸುವರು. ಪ್ರತಿ ಜಂಟಿ ನಿರ್ದೇಶಕರ ಅಧೀನ 4 ಉಪ ನಿರ್ದೇಶಕರಿರುವರು. ಒಬ್ಬೊಬ್ಬ ಉಪನಿರ್ದೇಶಕರ ಅಧೀನ 2 ಸಹಾಯಕ ನಿರ್ದೇಶಕರಿದ್ದು ಒಟ್ಟು 8 ಸಹಾಯಕ ನಿರ್ದೇಶಕರು ಕಾರ್ಯ ನಿರ್ವಹಿಸುವರು. ಸಹಾಯಕ ನಿರ್ದೇಶಕರ ಹುದ್ದೆ ಜ್ಯೂನಿಯರ್ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ಸಮಾಂತರವಾಗಿರುತ್ತದೆ. ಸೆಕೆಂಡರಿ ಶಿಕ್ಷಣ, ಉನ್ನತ ಶಿಕ್ಷಣ ಹಾಗೂ ವೃತ್ತಿ ಸಾಮಾನ್ಯ ಶಿಕ್ಷಣಗಳ ನಡುವೆ ಪದವಿ ಪೂರ್ವ ಶಿಕ್ಷಣ ಕೊಂಡಿಯಂತೆ ಕಾರ್ಯನಿರ್ವಹಿಸುವುದು.

Digitised by Bharatavani, CIIL

ವೃತ್ತಿ ಶಿಕ್ಷಣ ಇಲಾಖೆಯಲ್ಲಿ ನಿರ್ದೇಶಕರ ಅಧೀನದಲ್ಲಿ 02 ಜಂಟಿ ನಿರ್ದೇಶಕರಿದ್ದು ಆಡಳಿತ ಹಾಗೂ ಪರೀಕ್ಷೆ ಕಾರ್ಯ ನಿರ್ವಹಿಸುವರು. ಇವರ ಅಧೀನ ತಲಾ 02 ಉಪ ನಿರ್ದೇಶಕರಿದ್ದು ಇವರುಗಳ ಅಧೀನ ಪ್ರತಿ ಉಪ ನಿರ್ದೇಶಕರಿಗೆ 02 ಸಹಾಯಕ ನಿರ್ದೇಶಕರಿದ್ದು ಶಿಕ್ಷಣಕ್ಕೆ ಸಂಬಂಧಿಸಿದ ಪರೀಕ್ಷೆ, ಮೌಲ್ಯಮಾಪನ ಮುಂತಾದವುಗಳನ್ನು ನಿರ್ವಹಿಸುವರು.

ಮೇಲಿನ ಈ ವ್ಯವಸ್ಥೆಯೊಂದಿಗೆ ಪ್ರತಿ ಜಿಲ್ಲೆಗೊಬ್ಬ ಉಪ ನಿರ್ದೇಶಕರಿದ್ದು ಇವರು ಪದವಿ ಪೂರ್ವ ಹಾಗೂ ವೃತ್ತಿ ಶಿಕ್ಷಣ ಎರಡರ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುವರು.

ರಾಜ್ಯದಲ್ಲಿ 1994–95ರಲ್ಲಿ ಒಟ್ಟು 1893 ಪದವಿ ಪೂರ್ವ ಕಾಲೇಜುಗಳಿದ್ದು ಅವುಗಳಲ್ಲಿ 220 (184 ಖಾಸಗಿ, 36 ಸರ್ಕಾರಿ) ಕಾಲೇಜುಗಳನ್ನು ಪ್ರಥಮ ದರ್ಜೆ ಕಾಲೇಜುಗಳಿಗೆ ಸೇರಿಸಲಾಯಿತು. 313 (295 ಖಾಸಗಿ ಮತ್ತು 18 ಸರ್ಕಾರಿ) ಸ್ವತಂತ್ರ ಪದವಿ ಪೂರ್ವ ಕಾಲೇಜುಗಳು, 1360 (838 ಖಾಸಗಿ ಮತ್ತು 522 ಸರ್ಕಾರಿ) ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿವೆ. 1986 ರಲ್ಲಿ ಪ್ರಾರಂಭವಾದ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಪದವಿ ಪೂರ್ವ ಕೋರ್ಸ್‌ನಲ್ಲಿ ವಿಜ್ಞಾನ ವಿಷಯ ಓದಿದ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ.

### ಕಾಲೇಜು/ಪದವಿ ಶಿಕ್ಷಣ

ಇಡೀ ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಸಂಸ್ಥೆಯನ್ನು ಮದ್ರಾಸ್ ಸರ್ಕಾರವು ಮಂಗಳೂರಿನಲ್ಲಿ 1868ರಲ್ಲಿ ಸ್ಥಾಪಿಸಿತು. 1916ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪಿತಗೊಂಡಿತು. 1960ರಲ್ಲಿ ಪದವಿ ಶಿಕ್ಷಣದ ನಿರ್ದೇಶನಾಲಯವು ಸಾಮಾನ್ಯ ಶಿಕ್ಷಣದ ಆಡಳಿತದಲ್ಲಿ ಏಕರೂಪತೆಗಾಗಿ ಸ್ಥಾಪಿತಗೊಂಡಿತು. 1994–95 ರಲ್ಲಿ ರಾಜ್ಯದಲ್ಲಿ 699 ಡಿಗ್ರಿ ಕಾಲೇಜುಗಳಿದ್ದು ಅವುಗಳಲ್ಲಿ 136 ಸರ್ಕಾರಿ, 267 ಅನುದಾನಿತ, 276 ಖಾಸಗಿ ಅನುದಾನ ರಹಿತ ಕಾಲೇಜುಗಳಿದ್ದವು. ಈ ಡಿಗ್ರಿ ಶಿಕ್ಷಣವು ಬಿ.ಎ., ಬಿ.ಎಸ್ಸಿ., ಬಿ.ಕಾಂ. ಪದವಿಯ ವಿದ್ಯಾರ್ಥಿಗಳನ್ನು ಹೊಂದಿದ್ದವು. ನಿರ್ದೇಶನಾಲಯ ಈ ಶಿಕ್ಷಣದ ತರಬೇತಿ, ಆಡಳಿತ ನಿರ್ವಹಿಸಿದರೆ ಸಂಬಂಧಿಸಿದ ವಿಶ್ವವಿದ್ಯಾನಿಲಯಗಳು ಪರೀಕ್ಷೆ, ಮೌಲ್ಯಮಾಪನ ಮುಂತಾದವುಗಳನ್ನು ನೋಡಿಕೊಳ್ಳುತ್ತವೆ.

### ವಿಶ್ವವಿದ್ಯಾನಿಲಯ ಶಿಕ್ಷಣ

ಕರ್ನಾಟಕದಲ್ಲಿ 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭಗೊಂಡಿತು. 1949ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, 1964ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ, 1980ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ, 1987ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯ ಪ್ರಾರಂಭಗೊಂಡವು. ವ್ಯಾವಸಾಯಿಕ ವಿಜ್ಞಾನದ ಕಾಲೇಜು 1965ರಲ್ಲಿ ಬೆಂಗಳೂರಿನಲ್ಲಿ ಹಾಗೂ 1986ರಲ್ಲಿ ಧಾರವಾಡದಲ್ಲಿ ಸ್ಥಾಪನೆಗೊಂಡವು. 1991ರಲ್ಲಿ ಕನ್ನಡ ಭಾಷೆ, ಕಲೆ, ಸಂಸ್ಕೃತಿ ಅಭಿವೃದ್ಧಿಗಾಗಿ ಕನ್ನಡ ವಿಶ್ವವಿದ್ಯಾನಿಲಯವನ್ನು ಹಂಪಿಯಲ್ಲಿ ಸ್ಥಾಪಿಸಲಾಯಿತು. 1993ರಲ್ಲಿ ಉನ್ನತ ಶಿಕ್ಷಣದ ಅಕಾಡೆಮಿಗೆ ಡೀಮ್ಡ್ (ಸ್ವಾಯತ್ತ) ವಿಶ್ವವಿದ್ಯಾನಿಲಯದ ಸ್ಥಾನ ನೀಡಲಾಯಿತು. ಕರ್ನಾಟಕ ರಾಜ್ಯದಲ್ಲಿನ ಎಲ್ಲ ವೈದ್ಯಕೀಯ ಕಾಲೇಜುಗಳನ್ನು ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು ಒಳಗೊಳ್ಳುತ್ತದೆ. ರಾಜ್ಯದ ಎಲ್ಲ ತಾಂತ್ರಿಕ ಇಂಜಿನಿಯರಿಂಗ್ ಕಾಲೇಜುಗಳನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ನಿಯಂತ್ರಿಸುತ್ತದೆ.

ಬೆಂಗಳೂರಿನ ಭಾರತೀಯ ಸಂಸ್ಥೆ (1911), ಭಾರತೀಯ ನಿರ್ವಹಣಾ ಸಂಸ್ಥೆ (1972) ಭಾರತೀಯ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಕಾನೂನು ಸಂಸ್ಥೆ (1987), ಬೆಂಗಳೂರು, ಸಾಮಾಜಿಕ, ಆರ್ಥಿಕ ಪರಿವರ್ತನೆ ಸಂಸ್ಥೆ ಬೆಂಗಳೂರು (1972)–ಇವು ಉನ್ನತ ಶಿಕ್ಷಣದ ಕಾರ್ಯ ಕೈಗೊಳ್ಳುತ್ತಿರುವ ತರಬೇತಿ ನೀಡುತ್ತಿರುವ ಇತರ ಕೆಲವು ಸಂಸ್ಥೆಗಳು.

ವಿಶ್ವವಿದ್ಯಾನಿಲಯ ಶಿಕ್ಷಣದ ಆಡಳಿತ, ಕಾರ್ಯಭಾರ, ತರಬೇತಿ ಮುಂತಾದವುಗಳು ಕುಲಪತಿ, ಉಪಕುಲಪತಿ ನಿಯಂತ್ರಣದಲ್ಲಿದ್ದು ಪರೀಕ್ಷೆ, ಮೌಲ್ಯಮಾಪನವು ರಿಜಿಸ್ಟ್ರಾರ್ (ಮೌಲ್ಯಮಾಪನ)ರ ನಿಯಂತ್ರಣದಲ್ಲಿರುತ್ತದೆ.

–ಬಿ.ಇ.

## ಶಿಕ್ಷಣ ಮತ್ತು ಆರ್ಥಿಕ ಗುಣಮಟ್ಟ

ದೇಶದ ಆರ್ಥಿಕ ಅಭಿವೃದ್ಧಿಗೆ ಶಿಕ್ಷಣ ಒಂದು ಮುಖ್ಯವಾದ ಅಂಶವೆಂದು ಅದರ ಬಗ್ಗೆ ಎಲ್ಲರಿಗೂ ಆಸಕ್ತಿ ಇದ್ದರೂ, ಶಿಕ್ಷಣದ ವಿವಿಧ ಹಂತಗಳಲ್ಲಿ ದೇಶದ ಅಭಿವೃದ್ಧಿಗೆ ಪೂರಕವಾದದ್ದು ಯಾವುದು ಎಂಬುದರ ಬಗ್ಗೆ ಹೆಚ್ಚಿನ ಸಂಶೋಧನೆಯ ಅಗತ್ಯತೆ ಇನ್ನೂ ಇದೆ.

ಈ ಬಗ್ಗೆ ಯೋಚಿಸುವಾಗ ಪುರಾತನ ಅರ್ಥಶಾಸ್ತ್ರಜ್ಞರ ಬರಹಗಳನ್ನು ಗಮನಿಸುವುದು ಅವಶ್ಯಕ. ಅವರು ಆರ್ಥಿಕ ದೃಷ್ಟಿಯಿಂದ ಶಿಕ್ಷಣದ ಸಾರ್ವತ್ರೀಕರಣವು ಅಷ್ಟು ಅಗತ್ಯವಾದುದೆಂದು ಭಾವಿಸಿರಲಿಲ್ಲ. ಉದಾಹರಣೆಗೆ ಆಡಂ ಸ್ಮಿತ್ತರು ಆರ್ಥಿಕ ಬೆಳವಣಿಗೆಯು ಶ್ರಮವಿಭಜನೆಯ ಸಂಬಂಧವನ್ನು ಹೊಂದಿದೆ ಎಂದು ಹೇಳಿದರೂ ಅದನ್ನು ಸ್ಪಷ್ಟವಾಗಿ ಶಿಕ್ಷಣದೊಂದಿಗೆ ಜೋಡಿಸಲಿಲ್ಲ. ಮಾಲ್ತಸ್‌ರವರ ಪ್ರಕಾರ ಆರ್ಥಿಕ ಪ್ರಗತಿಯು ಜನರ ಮರಣ ಪ್ರಮಾಣವನ್ನು ಕಡಿಮೆ ಮಾಡುವುದರಿಂದ ಜನನ ಪ್ರಮಾಣವು ಹಾಗೇ ಉಳಿದು ಜನಸಂಖ್ಯೆಯು ಹಾಗೆಯೇ ಬೆಳೆಯುತ್ತಾ ಮುಂದುವರೆದರೆ, ಮತ್ತೆ ಪರಾವಲಂಬನೆಯಿಂದ ತಲಾ ಆದಾಯ ಇಳಿಮುಖವಾಗುತ್ತದೆ ಎಂದು ಹೇಳಿದ್ದಾರೆ.

ಮಾಲ್ತಸ್, ಮಿಲ್ ಮತ್ತು ಸೀನಿಯರ್‌ರವರು (ಇವರೆಲ್ಲ ಪುರಾತನ ಅರ್ಥಶಾಸ್ತ್ರಜ್ಞರು) ಶಿಕ್ಷಣವು ಜಾಣತನದಿಂದ ವೆಚ್ಚ ಮಾಡುವ ಅಭಿವೃತ್ತಿಗಳನ್ನು, ಸಂಯಮವನ್ನು ಮತ್ತು ವರ್ಗಶಾಂತಿಯನ್ನು ಮತ್ತು ಮಹಿಳೆಯರಿಗೆ ಮದುವೆಯಾಗುವಾಗ ತಾವೇ ತೀರ್ಮಾನವನ್ನು ತೆಗೆದುಕೊಳ್ಳುವ ಸ್ವಾತಂತ್ರವನ್ನು ತಂದುಕೊಡುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಶಿಕ್ಷಣವು ಜನಸಂಖ್ಯೆಯ ಬೆಳವಣಿಗೆಗೆ ತಡೆಯೊಡ್ಡುತ್ತದೆ ಮತ್ತು ಉಳಿತಾಯ ಮಾಡುವ ಅಭ್ಯಾಸವನ್ನು ವೃದ್ಧಿಸುತ್ತದೆ. ಇವೆರಡೂ ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕ ವ್ಯವಸ್ಥೆಗಳಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾದ ವಿಷಯಗಳು. ಆದರೆ ಭಾರತದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಬರಹಗಳಲ್ಲಿ ಇವುಗಳ ಚರ್ಚೆಗೆ ಸಾಕಷ್ಟು ಮಹತ್ವವನ್ನು ಕೊಟ್ಟಿಲ್ಲ.

ಶಿಕ್ಷಣವು ಆರ್ಥಿಕಾಭಿವೃದ್ಧಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದರೆ, ಅದು ಆರ್ಥಿಕಾಭಿವೃದ್ಧಿಗೆ ಅಗತ್ಯವಾದವುಗಳನ್ನು ತನ್ನ ಪ್ರಭಾವದಿಂದ ಬದಲಾವಣೆಗೆ ಒಳಪಡಿಸುತ್ತದೆ ಅಥವಾ ಶಿಕ್ಷಣವು ತನ್ನ ಭರಿತದ (ಇನ್‌ಪುಟ್) ಪರಿಣಾಮವಾಗಿ ಆರ್ಥಿಕಾಭಿವೃದ್ಧಿಗೆ ಕಾರಣವಾದ ಅಂಶಗಳ ಮೇಲೆ ಪ್ರಭಾವವನ್ನುಂಟುಮಾಡುತ್ತದೆ. ಮೊದಲನೆಯದಕ್ಕೆ ಉದಾಹರಣೆಯಾಗಿ ಶಿಕ್ಷಣವು ಉತ್ತಮವಾಗಿ ಕೆಲಸ ಮಾಡುವ ಅಭಿವೃತ್ತಿಯನ್ನುಂಟುಮಾಡುತ್ತದೆ. ಉಪಭೋಗದ ಆಯ್ಕೆಯನ್ನು ಉತ್ತಮ ಪಡಿಸುತ್ತದೆ. ಉಳಿತಾಯದ ಶಕ್ತಿಯನ್ನು ವೃದ್ಧಿಸುತ್ತದೆ. ಜಾಣತನದಿಂದ ಆರ್ಥಿಕ ತೀರ್ಮಾನಗಳನ್ನು ಕೈಗೊಳ್ಳುವ ಶಕ್ತಿಯನ್ನು ನೀಡುತ್ತದೆ. ಪರಿಸರಕ್ಕೆ


Digitised by Bharatavani, CIIL

ಹೊಂದಿಕೊಳ್ಳುವ ಶಕ್ತಿಯನ್ನು ನೀಡುತ್ತದೆ. ಹೊಸ ಆವಿಷ್ಕಾರಕ್ಕೆ ಅಗತ್ಯವಾದ ಶಕ್ತಿಯನ್ನು ನೀಡುತ್ತದೆ. ಹೊಂದಾಣಿಕೆಗೆ ತಕ್ಕ ಮನಃಸ್ಥಿತಿಯನ್ನು ನೀಡುತ್ತದೆ.ಕುಟುಂಬದ ಗಾತ್ರದ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಶಕ್ತಿ, ಆರ್ಥಿಕ ದೃಷ್ಟಿಕೋನಕ್ಕೆ ಹೊಂದಿಕೊಳ್ಳುವಂತಹ ಸಾಮಾಜಿಕ ಅಭಿವೃತ್ತಿಯನ್ನುಂಟುಮಾಡುತ್ತದೆ ಎಂದು ಹೇಳಬಹುದು.

ಎರಡನೆಯದಕ್ಕೆ ಉದಾಹರಣೆಯಾಗಿ ಶಿಕ್ಷಣವನ್ನು ಒಂದು ಭರಿತವಾಗಿ ನೋಡಿದಾಗ ಅದೊಂದು ಕೌಶಲವನ್ನು ಉಂಟುಮಾಡುತ್ತದೆ. ಅದು ಒಂದು ಮಾನವ ಬಂಡವಾಳದ ಸೃಷ್ಟಿ ಎನ್ನಬಹುದು.

ಮೊದಲನೆಯ ಉದಾಹರಣೆಯಲ್ಲಿನ ಅಂಶಗಳನ್ನು ದೃಢಪಡಿಸುವುದು ಸುಲಭವಲ್ಲ ಹಾಗೂ ಅದರ ಪ್ರಮಾಣವನ್ನು ನಿರ್ಧರಿಸುವುದೂ ಕಷ್ಟ. ಸಾಮಾನ್ಯವಾಗಿ ಹಲವು ಶೈಕ್ಷಣಿಕ ಅಭಿವೃದ್ಧಿ ಸೂಚಕಗಳ ಮತ್ತು ಆರ್ಥಿಕಾಭಿವೃದ್ಧಿಯ ಬೆಳವಣಿಗೆಯ ಮಟ್ಟದ ಪರಸ್ಪರ ಸಂಬಂಧವನ್ನು ಹೋಲಿಸಿನೋಡಿ ಒಂದು ಮತ್ತೊಂದರ ಮೇಲೆ ಬೀರಿದ ಪ್ರಭಾವವನ್ನು ಅಂದಾಜು ಮಾಡಬೇಕಾಗುತ್ತದೆ. ಶಿಕ್ಷಣವು ಭರಿತವಾಗಿದ್ದಾಗ ಪರಿಣಾಮ ಬೀರುವ ಅಂಶಗಳ ಮೌಲ್ಯವನ್ನು ಲೆಕ್ಕಹಾಕುವುದು ಸುಲಭ. ಡೆನ್ನಿಸನ್‌ರವರ ಮಾನವ ಶಕ್ತಿ ಯೋಜನೆಯ ಮಾರ್ಗ ಮತ್ತು ಒಟ್ಟು ಉತ್ಪಾದನೆಯ ಕೆಲಸದ ಮಾರ್ಗ ಈ ಸಂಬಂಧದಲ್ಲಿ ಉಪಯೋಗಿಸುವ ಮುಖ್ಯವಾದ ವಿಧಾನವಾಗಿದೆ.

ಶಿಕ್ಷಣ ಮತ್ತು ಆರ್ಥಿಕಾಭಿವೃದ್ಧಿಗಳು ಪರಸ್ಪರ ಸಂಬಂಧವನ್ನು ಹೊಂದಿವೆ ಎನ್ನುವ ಮನೋಭಾವನೆಯಿಂದ ಹರ್ಬಿಸನ್ ಮತ್ತು ಮೈಯರ್‌ರವರು ತಮ್ಮ "ಎಜುಕೇಶನ್, ಮ್ಯಾನ್ ಪವರ್ ಅಂಡ್ ಎಕನಾಮಿಕ್ ಗ್ರೋಥ್" ಎನ್ನುವ ಗ್ರಂಥದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಯ ಹಂತಗಳಿಗೆ ಇರುವ ಸಂಬಂಧದ ರೀತಿಯನ್ನು ವಿವರಿಸಿದ್ದಾರೆ. ಅವರು ಮಾನವ ಸಂಪನ್ಮೂಲ ಅಭಿವೃದ್ಧಿಯ ಸೂಚಕಗಳನ್ನು ವಿವಿಧ ದೇಶಗಳಲ್ಲಿನ ಶಿಕ್ಷಣದ ವಿವಿಧ ಹಂತಗಳಲ್ಲಿನ ದಾಖಲಾತಿ ಪ್ರಮಾಣದ ಆಧಾರದ ಮೇಲೆ ತೀರ್ಮಾನಗಳನ್ನು ಮಾಡಿದ್ದಾರೆ. ಆದರೆ ಸೆನ್ ಎಂಬ ಅರ್ಥಶಾಸ್ತ್ರಜ್ಞರು ಬಹಳ ಮುಖ್ಯವಾದ ಟೀಕೆಗಳನ್ನು ಅವರ ವಿಧಾನದ ವಿರುದ್ಧವಾಗಿ ಮಾಡಿದ್ದಾರೆ. ಮೊದಲನೆಯದಾಗಿ ಶಿಕ್ಷಣದ ಎಲ್ಲ ಹಂತಗಳಲ್ಲೂ ದಾಖಲಾತಿ ಪ್ರಮಾಣ ಆರ್ಥಿಕಾಭಿವೃದ್ಧಿಯ ಪ್ರಮಾಣವನ್ನು ಸೂಚಿಸುವುದಿಲ್ಲ. ಮಾನವ ಸಂಪನ್ಮೂಲದ ಅಭಿವೃದ್ಧಿಯನ್ನು ಶಿಕ್ಷಣವನ್ನು ಪಡೆದ ಕೆಲಸಗಾರರ ಸಂಖ್ಯೆಯು ಸೂಚಿಸುತ್ತದೆ. ಈಗಿನ ದಾಖಲಾತಿಯ ಪ್ರಮಾಣವು ಕೇವಲ ಹಿಂದಿನ ದಾಖಲಾತಿಯ ಪ್ರಮಾಣಕ್ಕೆ ಸೇರಿಕೊಳ್ಳುವ ಮೊತ್ತವಾಗಿರುತ್ತದೆ ಎಂದು ಹೇಳುತ್ತಾರೆ. ಎರಡನೆಯದಾಗಿ ಶಿಕ್ಷಣದ ಪ್ರಗತಿಯು ಸರಿಯಾದ ಮಾರ್ಗದಲ್ಲಿ ಮುಂದುವರೆಯುತ್ತಿದೆ ಎಂಬುದನ್ನು ಕಾಣಲು, ಆರ್ಥಿಕ ಪ್ರಗತಿಯೊಂದಿಗೆ ಅದು ಹೊಂದಿರುವ ಸಂಬಂಧವನ್ನು ನಿಖರವಾಗಿ ಅರ್ಥಮಾಡಿಕೊಳ್ಳಬೇಕು ಎನ್ನುತ್ತಾರೆ. ಸೆನ್‌ರವರು ಈ ದೃಷ್ಟಿಯಿಂದ ಶಿಕ್ಷಣ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಪರೀಕ್ಷಿಸಿ ಮೊದಲನೆ ಮತ್ತು ಎರಡನೇ ಹಂತದ ಶಿಕ್ಷಣವನ್ನು ಪಡೆದವರಿಗೂ ರಾಷ್ಟ್ರೀಯ ಆದಾಯದ ಪ್ರತಿ ಘಟಕದ ಹೆಚ್ಚಳಕ್ಕೂ ಯಾವುದೇ ಸಾಮಾನ್ಯ ಸಂಬಂಧ ಕಂಡುಬರುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಈ ವಿಷಯದಲ್ಲಿ ಯಾವುದೇ ತೀರ್ಮಾನಕ್ಕೆ ಬರುವುದರಲ್ಲಿ ಜಾಗ್ರತೆಯನ್ನು ವಹಿಸಬೇಕು.

ಕೆ. ಮುಖರ್ಜಿ ಮತ್ತು ಎನ್.ಕೃಷ್ಣರಾವ್‌ರವರು ಭಾರತದಲ್ಲಿ ಶಿಕ್ಷಣದಲ್ಲಿ ಹೂಡುವ ಬಂಡವಾಳಕ್ಕೂ ಆರ್ಥಿಕಾಭಿವೃದ್ಧಿಗೂ ಇರುವ ಸಹ ಸಂಬಂಧವನ್ನು ಪರೀಕ್ಷಿಸಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಅವರು ವಿವಿಧ ಶೈಕ್ಷಣಿಕ ಹಂತಗಳಲ್ಲಿ ಮತ್ತು ವಿವಿಧ ರಾಜ್ಯಗಳಲ್ಲಿ ನೂರು ಜನರಲ್ಲಿ ದಾಖಲಾತಿಯಾದ ಪ್ರಮಾಣ ಮತ್ತು ರಾಜ್ಯಗಳ ಆದಾಯ ಎಷ್ಟು ಹೆಚ್ಚಿತು ಎಂಬುದನ್ನು 1951 ರಿಂದ 61ರವರೆಗೆ ಪರೀಕ್ಷಿಸಿದ್ದಾರೆ. ಹೀಗೆ ಅನೇಕ ಸಹ ಸಂಬಂಧಗಳನ್ನು ಪರೀಕ್ಷಿಸಿ ಕೊನೆಗೆ ಯಾವುದೇ ಹಂತದ ಶಿಕ್ಷಣ ಮತ್ತು ದೇಶದ ಆರ್ಥಿಕ ಅಭಿವೃದ್ಧಿಗಳ ಸಹ ಸಂಬಂಧಗಳು ವಿಶೇಷತ್ವವನ್ನೇನೂ ಸೂಚಿಸುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ವಿಶೇಷತ್ವವನ್ನು ಕೇವಲ ಉನ್ನತ ತಾಂತ್ರಿಕ ಶಿಕ್ಷಣದ ಹಂತದಲ್ಲಿ ಮಾತ್ರ ಗುರುತಿಸಲಾಯಿತು ಎಂದು ತಿಳಿಸಿದ್ದಾರೆ. ಆದ್ದರಿಂದ ಅವರು ಕೇವಲ ಉನ್ನತ ತಾಂತ್ರಿಕ ಶಿಕ್ಷಣದಲ್ಲಿ ಹೂಡಲಾಗುವ ಬಂಡವಾಳವೇ ದೇಶದ ಆರ್ಥಿಕಾಭಿವೃದ್ಧಿಗೆ ಕಾರಣ, ಉಳಿದ ಶಿಕ್ಷಣ ಹಂತಗಳಲ್ಲಿ ಮಾಡುವ ವೆಚ್ಚ ಕೇವಲ ಉಪಭೋಗದ ವೆಚ್ಚ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಈ ಅಧ್ಯಯನವು ಹಲವು ಮಿತಿಗೊಳಪಟ್ಟಿವೆ ಎಂದು ಸಂಶೋಧಕರೇ ಒಪ್ಪಿಕೊಂಡಿದ್ದಾರೆ. ಆ ಮಿತಿಗಳೆಂದರೆ, ಅಧ್ಯಯನದ ವಿಶ್ಲೇಷಣೆಯು ಕೇವಲ ಅಲ್ಪಾವಧಿಗೆ ಸಂಬಂಧಪಟ್ಟಿದೆ ಮತ್ತು ಶ್ರಮದ ಅಂತರ ರಾಜ್ಯ ಚಲನೆಯು ಈ ಸಹ ಸಂಬಂಧ ವಿಶ್ಲೇಷಣೆಯನ್ನು ಭಗ್ನಗೊಳಿಸುತ್ತದೆ. ಅದೂ ಅಲ್ಲದೇ ವಿವಿಧ ರಾಜ್ಯಗಳ ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ವಿಧವಿಧವಾಗಿರುತ್ತದೆ ಮತ್ತು ವಯೋಮಾನ ಸಂರಚನೆಯೂ ಬೇರೆಬೇರೆಯಾಗಿರುತ್ತದೆ. ಒಟ್ಟಿನ ದಾಖಲಾತಿ ಪ್ರಮಾಣವು ಶಿಕ್ಷಣದಲ್ಲಿ ಹೂಡಲಾದ ಒಟ್ಟು ಬಂಡವಾಳವನ್ನು ಪ್ರತಿನಿಧಿಸುತ್ತದೆ. ಆದರೆ ಅದರ ಸೂಕ್ತ ಪ್ರಮಾಣವು ಬಂಡವಾಳ ಹೂಡಿಕೆಯಾಗುವುದಿಲ್ಲ. ಹೆಚ್ಚು ವಿದ್ಯಾವಂತರಿಂದ ಕೂಡಿರುವ ಒಂದು ರಾಜ್ಯದ ಶ್ರಮವು ಹೆಚ್ಚಿನ ಪ್ರಮಾಣದ ದಾಖಲಾತಿಯು ಕೇವಲ ನಿವೃತ್ತರ ಮತ್ತು ಮೃತರ ಸ್ಥಾನ ತುಂಬಲು ಅಗತ್ಯ. ಹೀಗೆ ಒಂದೇ ಪ್ರಮಾಣದ ದಾಖಲಾತಿ ಶಿಕ್ಷಣದಲ್ಲಿ ಹೂಡಲಾಗುವ ಬಂಡವಾಳವು ದೇಶದ ಆರ್ಥಿಕಾಭಿವೃದ್ಧಿಗೆ ಕಾರಣವಾದ ಹಲವಾರು ಅಂಶಗಳಲ್ಲಿ ಒಂದು.

ಆದ್ದರಿಂದ ಶಿಕ್ಷಣದ ಸೂಚಕಗಳಿಗೂ ಆರ್ಥಿಕಾಭಿವೃದ್ಧಿ ಸೂಚಕಗಳಿಗೂ ಇರುವ ಸಹ ಸಂಬಂಧವನ್ನು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ.

ಕೈಗಾರಿಕಾಭಿವೃದ್ಧಿಗೂ ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣಗಳಿಗೂ ಇರುವ ಸಂಬಂಧ ಸಾಕಷ್ಟು ಸ್ಪಷ್ಟವಾಗಿದ್ದರೂ, ವ್ಯವಸಾಯಕ್ಕೂ ಶಿಕ್ಷಣಕ್ಕೂ ಇರುವ ಸಂಬಂಧ ಜಟಿಲವಾಗಿದೆ. ಆದರೂ ಈ ಸಮಸ್ಯೆ ಭಾರತಕ್ಕೆ ಬಹು ಮುಖ್ಯವಾದದ್ದು. ನವೀನ ಹಾಗೂ ವೈಜ್ಞಾನಿಕ ವ್ಯವಸಾಯವು ಎಷ್ಟರಮಟ್ಟಿಗೆ ವಸ್ತುಗಳ ಭರಿತಕ್ಕೆ ಒಳಪಟ್ಟಿದೆಯೋ ಅಷ್ಟೇ ಮಾನವ ಶಕ್ತಿಯ ಭರಿತಕ್ಕೂ ಒಳಪಟ್ಟಿದೆ. ಇದರಲ್ಲಿ ಮಾನವ ಅಂಶಕ್ಕೆ ಪ್ರಭಾವ ಬೀರುವ ಅಂಶಗಳಲ್ಲಿ ಅಕ್ಷರ ಜ್ಞಾನದ ಮಟ್ಟ ಮತ್ತು ವ್ಯವಸಾಯದ ಕೆಲಸಗಾರರು ಪಡೆಯುವ ಔಪಚಾರಿಕ ಶಿಕ್ಷಣವೂ ಮುಖ್ಯವಾದುದು.

–ರಾ.ಎಚ್.ಎಸ್.

## ಶಿಕ್ಷಣ ಮತ್ತು ಬಂಡವಾಳ ಹೂಡಿಕೆ

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರೂಪಿಸಿದ ಹಾಗೂ ಪ್ರಚುರಪಡಿಸಿದ ಅರ್ಥಶಾಸ್ತ್ರಜ್ಞರಲ್ಲಿ ಪ್ರಮುಖರಾದಂತಹವರು ಪ್ರೊ॥ ಮಹಬೂಬ್–ಉಲ್–ಹಕ್, ಶಿಕ್ಷಣವನ್ನು ಕ್ಷಿಪ್ರ ಆರ್ಥಿಕ ಅಭಿವೃದ್ಧಿಗೆ ಒಂದು ಅತ್ಯಗತ್ಯ ರಹದಾರಿ ಎಂದು ತಿಳಿಸಿದ್ದಾರೆ. ಹಾಗೆಯೇ ಮಾನವ ಬಂಡವಾಳವನ್ನು ನಿರ್ಮಿಸುವ ಪ್ರಕ್ರಿಯೆಯಲ್ಲಿ ಶಿಕ್ಷಣ ಒಂದು ಮುಖ್ಯ ಸಾಧನವಾಗಿದೆ ಎನ್ನುತ್ತಾರೆ. ಆದರೆ ಅಭಿವೃದ್ಧಿ ಕಾರ್ಯ ಅಥವಾ ಆರ್ಥಿಕ ಚಟುವಟಿಕೆ ಬೆಳೆದು ಅಭಿವೃದ್ಧಿಯಾಗಬೇಕಾದರೆ, ಇವುಗಳಲ್ಲಿನ ಬಂಡವಾಳ ಹೂಡಿಕೆ ಅತ್ಯಗತ್ಯ. ಈ ಹೂಡಿಕೆಯ ಬಹುಮುಖ ಪರಿಣಾಮಗಳನ್ನು ಗುಣಕ ಪರಿಣಾಮ [Multiple effect] ಎಂದು ಕರೆಯಲಾಗುವುದು.

Digitised by Bharatavani, CIIL

ಏಕೆಂದರೆ ಇಂತಹ ಹೂಡಿಕೆಗಳನ್ನು ಧನಾತ್ಮಕ ಲಾಭಗಳನ್ನು ಹಾಗೂ ಇತರೆ ಅನುಕೂಲಗಳನ್ನು ಪಡೆಯಲು ಮಾಡಬೇಕಾಗುತ್ತದೆ. ಎಲ್ಲ ಆರ್ಥಿಕ ಚಟುವಟಿಕೆಗಳಲ್ಲಿ ಬಂಡವಾಳ ಹೂಡಿಕೆ ಅನಿವಾರ್ಯವಾದಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಅನಿವಾರ್ಯವಾಗಿದೆ. ಇತ್ತೀಚಿನ ದಿನಗಳಲ್ಲಂತೂ ಇದರ ಪ್ರಾಮುಖ್ಯ ಗಂಭೀರ ರೂಪ ತಾಳಿದೆ.

ಬಂಡವಾಳ ಸರಕುಗಳನ್ನು [Capital Goods] ಉತ್ಪಾದಿಸಲು ಖರ್ಚು ಮಾಡುವ ಹಣವನ್ನು ಬಂಡವಾಳ ಹೂಡಿಕೆ (Investment) ಎನ್ನಬಹುದು. ಹಾಗೆಯೇ ಅನುಭೋಗವನ್ನು (Consumption) ಹೊರತುಪಡಿಸಿ, ಆದಾಯವನ್ನು ಗಳಿಸುವ ಚಟುವಟಿಕೆಗಳ ಮೇಲೆ ತೊಡಗಿಸಿದ ಬಂಡವಾಳವನ್ನೂ ಹೂಡಿಕೆ ಎನ್ನುತ್ತಾರೆ. ಅಂದಮೇಲೆ ಶಿಕ್ಷಣ ಕ್ಷೇತ್ರದ ವಿವಿಧ ಚಟುವಟಿಕೆಗಳು ಅಂದರೆ ಜ್ಞಾನಾರ್ಜನೆ, ತಂತ್ರಕೌಶಲಗಳ ಬೆಳವಣಿಗೆ ಹಾಗೂ ಅಭಿವೃದ್ಧಿ ತರಬೇತಿ ಮತ್ತು ಇವುಗಳಿಗೆ ಪೂರಕವಾದ ಎಲ್ಲ ಚಟುವಟಿಕೆಗಳಲ್ಲಿ ತೊಡಗಿಸಿದ ಬಂಡವಾಳವನ್ನು 'ಶಿಕ್ಷಣ ಕ್ಷೇತ್ರದ ಬಂಡವಾಳ ಹೂಡಿಕೆ' ಎಂದು ಅರ್ಥೈಸಬಹುದಾಗಿದೆ.

ಸಾಮಾನ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ನಿರ್ಧಾರಕಗಳು ಇತರೆ ಹೂಡಿಕೆ ನಿರ್ಧಾರಕಗಳಿಗಿಂತ ಭಿನ್ನವಾಗಿರುತ್ತವೆ. ಕಾರಣ ಶಿಕ್ಷಣ ಬರೀ ಆರ್ಥಿಕ ಚಟುವಟಿಕೆಯಲ್ಲದೆ ದೇಶವನ್ನು ಸಮಾಜವನ್ನು ಕಟ್ಟುವ ಒಂದು ಮಹತ್ವಪೂರ್ಣ ಹಾಗೂ ಗುರುತರ ಜವಾಬ್ದಾರಿಯನ್ನು ಹೊಂದಿರುತ್ತದೆ. ಶಿಕ್ಷಣದಲ್ಲಿ ಹೂಡಿಕೆಯನ್ನು ಬರೀ ಲಾಭದ ದೃಷ್ಟಿಯಿಂದ ಮಾತ್ರ ವಿಶ್ಲೇಷಣೆ ಮಾಡಿದರೆ ಅದು ಶಿಕ್ಷಣದ ಮಹತ್ವವನ್ನು ಸಂಕುಚಿತಗೊಳಿಸಿದಂತಾಗುತ್ತದೆ.

ಶಿಕ್ಷಣದಲ್ಲಿ ತೊಡಗಿಸಿದ ಬಂಡವಾಳ ಪ್ರತಿಫಲ ನೀಡಬೇಕಾದರೆ ಸುಮಾರು 15 ರಿಂದ 20 ವರ್ಷಗಳವರೆವಿಗೆ ಕಾಯಬೇಕಾಗುತ್ತದೆ. ಶಿಕ್ಷಣದಲ್ಲಿ ಹೂಡಿಕೆ ಮಾಡುವುದು ಸರ್ಕಾರದ ನೈತಿಕ–ಸಾಮಾಜಿಕ ಜವಾಬ್ದಾರಿಯಾದರೆ, ಸರ್ಕಾರೇತರ ಸಂಸ್ಥೆಗಳು ತಮ್ಮದೇ ಆದ ಉದ್ದೇಶಗಳನ್ನು ಹಾಗೂ ನಿರೀಕ್ಷೆಗಳನ್ನು ಇಟ್ಟುಕೊಂಡಿರುತ್ತವೆ. ಸರ್ಕಾರ ಹಾಗೂ ಸರ್ಕಾರೇತರ ವಲಯಗಳು ಶಿಕ್ಷಣದ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಬಂಡವಾಳವನ್ನು ತೊಡಗಿಸುತ್ತವೆ.

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಲೆಕ್ಕಾಚಾರ ವ್ಯವಸ್ಥೆ [System of Education Accounts] ಒಂದು ಪ್ರಮುಖ ವಿಷಯವಾಗಿ ಬೆಳೆಯುತ್ತಿದೆ. ಇದರಲ್ಲಿ ಶಿಕ್ಷಣ ಬಂಡವಾಳದ ಮೂಲ ಹಾಗೂ ಹರಿವುಗಳನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡಲಾಗುತ್ತದೆ. ಶಿಕ್ಷಣ ಬಂಡವಾಳ ಸಂಪನ್ಮೂಲಗಳನ್ನು ಎಲ್ಲಿಂದ ಪಡೆದು ಯಾವುದಕ್ಕೆ ಮತ್ತು ಹೇಗೆ ಬಳಸಲಾಗುತ್ತಿದೆ ಎಂಬ ವಿವರಗಳನ್ನು ಇದರಲ್ಲಿ ವಿಶ್ಲೇಷಿಸಲಾಗುತ್ತದೆ. ಶಿಕ್ಷಣ ಕ್ಷೇತ್ರದ ಸಂಪನ್ಮೂಲಗಳ ಶೇಖರಣೆ, ವಿತರಣೆ ಹಾಗೂ ಖರ್ಚುಗಳು ಮತ್ತು ಇವುಗಳ ಖರ್ಚುಗಳ ಸುಧಾರಣೆ ವ್ಯವಸ್ಥೆಗೆ [Expenditure Reform System] ಹೇಗೆ ಪೂರಕವಾಗಿವೆ ಎನ್ನುವ ವಿಚಾರಗಳನ್ನು ಪಾರದರ್ಶಕ ರೀತಿಯಲ್ಲಿ ವಿವರಿಸುವುದು ಇದರ ಉದ್ದೇಶವಾಗಿದೆ.

ಹಲವಾರು ರೀತಿಯ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಮಾಡುವುದರ ಜೊತೆಗೆ, ವ್ಯಕ್ತಿಗಳೂ ಅಥವಾ ಕುಟುಂಬಗಳೂ ತಮ್ಮ ಮಕ್ಕಳ ಶಿಕ್ಷಣದಲ್ಲಿ ಬಂಡವಾಳ ಹೂಡಿಕೆ ಮಾಡುವುದನ್ನು ನಾವು ಕಾಣಬಹುದಾಗಿದೆ. ಸರ್ಕಾರ ಎಲ್ಲ ರೀತಿಯ ಶಿಕ್ಷಣಕ್ಕೆ ವಿವಿಧ ಮಜಲುಗಳಲ್ಲಿ ಬಂಡವಾಳ ಹೂಡಿಕೆ ಮಾಡುವುದು ಸರ್ವೇಸಾಮಾನ್ಯ. ಅದರಲ್ಲೂ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣ ಕ್ಷೇತ್ರಗಳಲ್ಲಿ ಸರ್ಕಾರದ ಬಂಡವಾಳ ಹೂಡಿಕೆ ಅಗಾಧವಾಗಿದೆ. ಕ್ರಮೇಣವಾಗಿ ಉನ್ನತ ಶಿಕ್ಷಣದಲ್ಲಿ ಇದರ ಹೂಡಿಕೆ ಕಡಿಮೆಯಾಗುತ್ತಿರುವುದರ ಜೊತೆಗೆ, ಖಾಸಗಿ ಸಂಸ್ಥೆಗಳ ಹೂಡಿಕೆ ಬಹಳ ವೇಗವಾಗಿ ಹೆಚ್ಚುತ್ತಿದೆ. ಭಾರತ ಸರ್ಕಾರದ ಶಿಕ್ಷಣ ಬಂಡವಾಳ ಹೂಡಿಕೆಯನ್ನು ವಿವಿಧ ಪಂಚವಾರ್ಷಿಕ ಯೋಜನೆಗಳ ಮಾಹಿತಿಯಲ್ಲಿ ಹಾಗೂ ಪ್ರತಿ ವರ್ಷದ ಮುಂಗಡ ಪತ್ರದ ಮಂಡನೆಯಲ್ಲಿ ಕಾಣಬಹುದಾಗಿದೆ. ಹಾಗೆಯೇ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ವಿಶ್ವಸ್ಥ ಮಂಡಳಿಗಳು ತಮ್ಮದೇ ಆದ ಉದ್ದೇಶಗಳೊಂದಿಗೆ ಲಾಭವನ್ನು ಸಹ ಗಮನದಲ್ಲಿಟ್ಟುಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಮಾಡುತ್ತಿರುವುದನ್ನು ನಾವು ಕಾಣಬಹುದಾಗಿದೆ. ಇತ್ತೀಚೆಗಂತೂ ಇಂತಹ ಹೂಡಿಕೆ ಬೃಹದಾಕಾರದಲ್ಲಿ ಬೆಳೆಯುತ್ತಿದೆ. ಇದೇ ರೀತಿ ಎಲ್ಲ ರೀತಿಯ ಧಾರ್ಮಿಕ ಸಂಸ್ಥೆಗಳೂ ಶಿಕ್ಷಣ ಕ್ಷೇತ್ರದಲ್ಲಿ ಅಗಾಧವಾಗಿ ಬಂಡವಾಳ ಹೂಡಿಕೆ ಮಾಡುವುದರ ಮೂಲಕ ತಮ್ಮ ಪಾತ್ರವನ್ನು ಗುರುತಿಸಿಕೊಳ್ಳತೊಡಗಿವೆ. ಇದು ಇತ್ತೀಚಿನ ಬೆಳವಣಿಗೆಯಲ್ಲದಿದ್ದರೂ, ಇದರ ಕಾರ್ಯವೈಖರಿ ಮಾತ್ರ ಪ್ರಸಕ್ತದಲ್ಲಿ ವಿಭಿನ್ನವಾಗಿದೆ. ತೃತೀಯ ವಲಯವೆನ್ನಿಸಿಕೊಂಡ (ಸರ್ಕಾರೇತರ) ನಾಗರಿಕ ಸಂಸ್ಥೆಗಳು ವೇಗವಾಗಿ ಬೆಳೆಯುತ್ತಿರುವ ಮತ್ತು ಸಹಕಾರಿ ಸಂಸ್ಥೆಗಳೂ "ಎಲ್ಲರೂ ಒಬ್ಬರಿಗಾಗಿ, ಒಬ್ಬರು ಎಲ್ಲರಿಗಾಗಿ" ಎಂಬ ಧೋರಣೆಯನ್ನು ಗುರಿಯಾಗಿಟ್ಟುಕೊಂಡು, ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಮಾಡಲು ಮುಂದಾಗಿವೆ. ಆದರೆ ಇದರ ಪ್ರಮಾಣ ಗಮನಾರ್ಹವಾಗಿಲ್ಲ. ಹಾಗೆಯೇ ಕುಟುಂಬಗಳು ಹಾಗೂ ವ್ಯಕ್ತಿಗಳು ತಮ್ಮ ತಮ್ಮ ಮಕ್ಕಳ ಶಿಕ್ಷಣದಲ್ಲಿ ಖರ್ಚುಮಾಡುವುದನ್ನೂ ನಾವು ಗಮನಿಸಬೇಕಾಗುತ್ತದೆ.

ಇತ್ತೀಚಿನ ಗ್ಯಾಟ್ ಒಪ್ಪಂದದ (2006) ಪ್ರಕಾರ, ವಿದೇಶಿ ಕಂಪೆನಿಗಳೂ, ವ್ಯಕ್ತಿಗಳೂ ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ಹೂಡಬಹುದಾಗಿದೆ. ಅಂದರೆ ವಿದೇಶಿ ನೇರ ಬಂಡವಾಳ ಹೂಡಿಕೆ (Foreign Direct Investment) ಯಲ್ಲಿ ಶಿಕ್ಷಣದ ಹೂಡಿಕೆಯೂ ಸೇರಿಕೊಂಡಿರುತ್ತದೆ. ಭಾರತವು ಇಂಥ ಕಂಪೆನಿಗಳನ್ನು ನಿಯಂತ್ರಿಸಲು ಇತ್ತೀಚೆಗಷ್ಟೇ ವಿದೇಶಿ ವಿಶ್ವವಿದ್ಯಾನಿಲಯಗಳ ಪ್ರೋತ್ಸಾಹ ಮತ್ತು ನಿಯಂತ್ರಣ (2001 ) ಕಾಯ್ದೆಯನ್ನು ಜಾರಿಗೊಳಿಸಿದೆ. [Foreign Universities Promotion and Regulation Act] 2010 ಇದರ ಜೊತೆಗೆ ಇನ್ನೂ ಹಲವಾರು ಮಸೂದೆಗಳು ರೂಪಿತವಾಗುತ್ತಿವೆ.

ಆರ್ಥಿಕ ಅಭಿವೃದ್ಧಿಯ ಇತ್ತೀಚಿನ ಪರಿಕಲ್ಪನೆ ಪ್ರಕಾರ, ಮಾನವ ಅಭಿವೃದ್ಧಿ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಮಾನವ ಸಾಮರ್ಥ್ಯ ಅಭಿವೃದ್ಧಿ ಬಹಳ ಪ್ರಮುಖ ಸ್ಥಾನ ಪಡೆದಿವೆ. ಈ ಎಲ್ಲ ಪರಿಕಲ್ಪನೆಗಳ ಬೆಳವಣಿಗೆ ಹಾಗೂ ಅಭಿವೃದ್ಧಿ ಶಿಕ್ಷಣವನ್ನು ಅವಲಂಬಿಸಿವೆ. ಇದರಿಂದಾಗಿಯೇ ಶಿಕ್ಷಣದಲ್ಲಿ ಅಪಾರವಾದಂತಹ ಬಂಡವಾಳ ಹೂಡಿಕೆ ಅಗತ್ಯವಾಗಿದೆ.ಇದು ಜನ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಅವರ ಆದಾಯದ ಮೂಲಗಳನ್ನೂ ಹೆಚ್ಚು ಮಾಡುತ್ತಿದೆ. ಒಂದು ಕೈಗಾರಿಕಾ ಚಟುವಟಿಕೆಯಲ್ಲಿ ಕಚ್ಚಾ ವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ಮಾರ್ಪಾಡು ಮಾಡಲು ಬಂಡವಾಳದ ಅವಶ್ಯಕತೆ ಇರುವಂತೆ, ಶಿಕ್ಷಣಕ್ಷೇತ್ರದಲ್ಲೂ ಸಹ ಸಾಮಾನ್ಯ ಮಾನವರನ್ನು ಸಾಮರ್ಥ್ಯವುಳ್ಳವರನ್ನಾಗಿ ಮಾಡುವುದಕ್ಕೆ ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆ ಅನಿವಾರ್ಯವಾಗಿದೆ. ಮಾನವ ಸಂಪನ್ಮೂಲ ಮಾನವ ಬಂಡವಾಳವಾಗಿ ಪರಿವರ್ತನೆಯಾಗುವುದಕ್ಕೆ ಶಿಕ್ಷಣದಲ್ಲಿ ಬಂಡವಾಳ ಹೂಡಿಕೆ ಅತ್ಯಗತ್ಯ. ಇದರಿಂದಾಗಿಯೇ ಶಿಕ್ಷಣದ ಅರ್ಥಶಾಸ್ತ್ರ ಒಂದು ವಿಶೇಷ ಅಧ್ಯಯನ ವಿಷಯವಾಗಿ ಬೆಳೆಯುತ್ತಿದೆ. ಇದು ಶಿಕ್ಷಣದ ಅಗತ್ಯ, ಅನುಕೂಲಗಳು ಶಿಕ್ಷಣದ ನೀಡಿಕೆ, ಬೇಡಿಕೆ, ಸಂಪನ್ಮೂಲಗಳ ಕ್ರೋಢೀಕರಣ, ಶಿಕ್ಷಣ


Digitised by Bharatavani, CIIL

ವೆಚ್ಚ, ಪ್ರತಿಫಲಗಳು, ಸರ್ಕಾರದ ಪಾತ್ರ, ಹಾಗೂ ಶಿಕ್ಷಣದ ಸಾಂಸ್ಥಿಕ ವಿಚಾರಗಳು ಇತ್ಯಾದಿ ಅಂಶಗಳನ್ನು ಕುರಿತು ಅಭ್ಯಾಸ ಮಾಡುತ್ತದೆ. ಶಿಕ್ಷಣದಲ್ಲಿ ಬಂಡವಾಳ ಹೂಡಿಕೆ ಮಹತ್ವವನ್ನು ಹಲವಾರು ಅರ್ಥಶಾಸ್ತ್ರಜ್ಞರು ಈ ಕೆಳಕಂಡಂತೆ ವಿವರಿಸಿದ್ದಾರೆ.

ಆಲ್ಫ್ರೆಡ್ ಮಾರ್ಷಲ್‌ರವರ ಪ್ರಕಾರ ಶಿಕ್ಷಣದಲ್ಲಿನ ಬಂಡವಾಳ ಹೂಡಿಕೆಯು ಸಹಜವಾಗಿದ್ದು, ಇದು ಎಲ್ಲ ರೀತಿಯ ಬಂಡವಾಳ ಹೂಡಿಕೆಗಿಂತ ಮೌಲ್ಯಯುತವಾಗಿರುತ್ತದೆ. ಕೆನ್ನೆತ್ ಗ್ಯಾಲ್‌ಬ್ರೆತ್‌ರವರ ದೃಷ್ಟಿಯಲ್ಲಿ ಒಂದು ದೇಶದ ಕೈಗಾರಿಕಾ ಬೆಳವಣಿಗೆಯಲ್ಲಿ ಅತಿ ಹೆಚ್ಚಿನ ಮಹತ್ವ ಉಳ್ಳದ್ದು ಶಿಕ್ಷಣದಲ್ಲಿ ಬಂಡವಾಳ ತೊಡಗಿಸುವುದು. ಥಿಯೊಡಾರ್ ಶೂಲ್ಟ್ಜ್‌ರವರ ಅಭಿಪ್ರಾಯದಲ್ಲಿ ಶಿಕ್ಷಣದಲ್ಲಿ ಹೂಡಿಕೆ ಮಾಡಿದ ಒಂದು ಡಾಲರ್ ಇತರೇ ಹೂಡಿಕೆಗಳಿಗಿಂತ ಭಿನ್ನವಾಗಿರುವುದಲ್ಲದೆ, ಅತಿ ಹೆಚ್ಚಿನ ಅನುಕೂಲಗಳನ್ನು ದೊರಕಿಸುವ ಸಾಧನವಾಗಿದೆ.

ಇತ್ತೀಚೆಗಷ್ಟೇ ಅಮೆರಿಕಾದ ಓಹಾಯೊ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಭಾರತದ ಡಾ॥ ರಾಜೇಂದರ್ ಕೌಶಲ್‌ರವರು ತಮ್ಮ ಸಂಶೋಧನೆ ಮೂಲಕ ಶಿಕ್ಷಣದಲ್ಲಿ ಬಂಡವಾಳ ಹೂಡಿಕೆ ಮತ್ತು ಶಿಕ್ಷಣದ ಗುಣಮಟ್ಟಗಳ ನಡುವೆ ನಿಕಟ ಸಂಬಂಧವಿದೆ ಎಂದು ತೋರಿಸಿದ್ದಾರೆ. ಇವರ ವಿಶ್ಲೇಷಣೆ ಪ್ರಕಾರ ಸುಮಾರು 100 ಡಾಲರ್‌ನಷ್ಟು ಹಣವನ್ನು ಶಿಕ್ಷಣದಲ್ಲಿ ಹೂಡಿಕೆ ಮಾಡಿದರೆ, ಶಿಕ್ಷಣದ ಗುಣಮಟ್ಟ ಶೇಕಡಾ 0.6ರಷ್ಟು ಉತ್ತಮಗೊಳ್ಳುತ್ತದೆ.

ಆರ್ಥಿಕ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ವಿವರಿಸಲು ಇತ್ತೀಚೆಗೆ ಅರ್ಥಶಾಸ್ತ್ರದಲ್ಲಿ ಹೊಸ ಹೊಸ ಮಾದರಿಗಳನ್ನು ರೂಪಿಸಲಾಗುತ್ತಿದೆ. ಅವುಗಳಲ್ಲಿ ಪ್ರಮುಖವಾದದ್ದು ರೋಮರ್ ಮತ್ತು ಲೂಕಾಸ್‌ರವರು ನಿರೂಪಿಸಿದ "ಅಂತರ್ಗತ ಬೆಳವಣಿಗೆ ಮಾದರಿ" (Endogenous Growth Model) ಇದರ ಪ್ರಕಾರ ಒಂದು ದೇಶದ ಅಭಿವೃದ್ಧಿ ಆ ದೇಶದ ಶಿಕ್ಷಣದಲ್ಲಿ ತೊಡಗಿಸಿದ ಬಂಡವಾಳ, ಜ್ಞಾನ ಹಾಗೂ ತಂತ್ರಕೌಶಲಗಳನ್ನು ಅವಲಂಬಿಸಿದೆ. ಅಮರ್ತ್ಯಸೇನ್, ಅಜೇರಿಯಾಂಡಸ್ ಮತ್ತು ಡ್ರೇಜರ್ ಅಭಿಪ್ರಾಯದಂತೆ ಯಾವ ದೇಶ ಶಿಕ್ಷಣದಲ್ಲಿ ಹೆಚ್ಚು ಬಂಡವಾಳ ಹೂಡಿಕೆ ಮಾಡುತ್ತದೋ, ಆ ದೇಶ ನಿರಂತರವಾಗಿ ಅತಿ ಹೆಚ್ಚಿನ ಬೆಳವಣಿಗೆಯನ್ನು ಸಾಧಿಸುವುದಲ್ಲದೆ ಸಂಪನ್ಮೂಲಗಳ ದಕ್ಷ ಬಳಕೆ ಮಾಡಿಕೊಳ್ಳುತ್ತದೆ.

ಶಿಕ್ಷಣ ಬಂಡವಾಳ ಹೂಡಿಕೆಯಲ್ಲಿ ಒಂದು ವಿಶಿಷ್ಟ ಬೆಳವಣಿಗೆ ಎಂದರೆ ಜಾಗತೀಕರಣದ ಹಿನ್ನೆಲೆಯಲ್ಲಿ ಪ್ರಪಂಚದ ಬಹುತೇಕ ರಾಷ್ಟ್ರಗಳು ಹಮ್ಮಿಕೊಂಡ ಹೊಸ ಆರ್ಥಿಕ ನೀತಿಗಳು ಮತ್ತು ಅದಕ್ಕೆ ಪೂರಕವಾದ ಸ್ವಾರೂಪಿಕ ಹೊಂದಾಣಿಕೆಗಳು ಇವುಗಳನ್ವಯ ಬೆಳಕಿಗೆ ಬಂದದ್ದು ಖಾಸಗೀಕರಣ, ಅದರಲ್ಲೂ ಪ್ರಮುಖವಾಗಿ ಉನ್ನತ ಶಿಕ್ಷಣದ ಖಾಸಗೀಕರಣ. ಈ ನಿಟ್ಟಿನಲ್ಲೇ ಶಿಕ್ಷಣ ಕ್ಷೇತ್ರದಿಂದ ಸರ್ಕಾರದ ಹಿಂಜರಿತ, ಜೊತೆಯಲ್ಲೇ ಈ ಕ್ಷೇತ್ರದಲ್ಲಿ ಖಾಸಗೀ ವ್ಯಕ್ತಿಗಳ, ದೇಶ-ವಿದೇಶ, ಕಂಪೆನಿಗಳಿಂದ ಉನ್ನತ ಶಿಕ್ಷಣದಲ್ಲಿ ಬಂಡವಾಳ ಹೂಡಿಕೆ ಪ್ರಾರಂಭವಾಗಿದೆ. ಇದು ಸರ್ಕಾರವನ್ನು ವಿತ್ತೀಯ ಕೊರತೆ (Fiscal Deficit)ಯಿಂದ ಪಾರುಮಾಡುವುದಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ಅಗಾಧವಾದ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುತ್ತಿದೆ. ಹಲವಾರು ಕಡೆ ಸರ್ಕಾರಿ-ಖಾಸಗಿ ಸಹಭಾಗಿತ್ವವನ್ನೂ ಕಾಣಬಹುದಾಗಿದೆ.

–ಲೀ.

## ಶಿಕ್ಷಣದ ಪ್ರತಿಫಲದ ಲೆಕ್ಕಾಚಾರ

ಶಿಕ್ಷಣದಲ್ಲಿ ಬಂಡವಾಳ ಹೂಡಿಕೆ ಅಗತ್ಯ ಹಾಗೂ ಶಿಕ್ಷಣ ವೆಚ್ಚದ ವಿಶಿಷ್ಟ ಲಕ್ಷಣಗಳನ್ನು ತಿಳಿದುಕೊಂಡ ಹಿನ್ನೆಲೆಯಲ್ಲಿ, ಶಿಕ್ಷಣ ಪ್ರತಿಫಲ ಲೆಕ್ಕಾಚಾರಗಳ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ. ಶಿಕ್ಷಣದ ವಿವಿಧ ರೀತಿಯ ಅನುಕೂಲಗಳು, ವ್ಯಕ್ತಿಗೆ, ಸಮಾಜಕ್ಕೆ, ದೇಶಕ್ಕೆ ಹಾಗೂ ಅದರ ಸಂಸ್ಕೃತಿಗೆ ಶಿಕ್ಷಣದಿಂದ ಉಂಟಾಗುವ ಲಾಭಗಳು, ಶಿಕ್ಷಣ ಪ್ರತಿಫಲ ಲೆಕ್ಕಾಚಾರಗಳನ್ನು ನಿರ್ಧರಿಸುತ್ತವೆ. ಜೊತೆಗೆ ಈ ಎಲ್ಲಾ ವಿಚಾರಗಳು ಶಿಕ್ಷಣ ಪ್ರತಿಫಲ ಲೆಕ್ಕಾಚಾರದ ಸಂಕೀರ್ಣತೆಗಳನ್ನೂ ಪ್ರತಿಬಿಂಬಿಸುತ್ತವೆ. ಇಂತಹ ಲೆಕ್ಕಾಚಾರದ ಸಂಕೀರ್ಣತೆಗಳು ವಿಷಯದ ಸೂಕ್ಷ್ಮತೆ, ಗೋಜಲುಗಳು, ಹಾಗೂ ಸಮಸ್ಯೆಗಳ ಬಗ್ಗೆ ವಿವಿಧ ರೀತಿಯ ವಿಚಾರಗಳನ್ನು ತಿಳಿಸಿಕೊಡುತ್ತವೆ.

ಆರ್ಥಿಕ ಚಟುವಟಿಕೆಗಳಲ್ಲಿ, ಯೋಜನೆಗಳಲ್ಲಿ, ಉತ್ಪಾದನೆಯಲ್ಲಿ ವೆಚ್ಚ-ಪ್ರತಿಫಲ (Cost-Benefit Analysis) ವಿಶ್ಲೇಷಣೆಯು ಲಾಭ-ನಷ್ಟದ ರೂಪದಲ್ಲಿ ಲೆಕ್ಕಾಚಾರ ಮಾಡುವುದು ಸರ್ವೇ ಸಾಮಾನ್ಯ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಲಾಭ-ನಷ್ಟ ವಿಶ್ಲೇಷಣೆ ಮೂಲಕ ವೆಚ್ಚ-ಪ್ರತಿಫಲ ವಿಶ್ಲೇಷಣೆ ಮಾಡುವುದು ಅಸಂಬದ್ಧವಾಗುತ್ತದೆ. ಇದು ಅಪರಿಪೂರ್ಣ ಕೂಡ. ಇದರಿಂದಾಗಿಯೇ ಶಿಕ್ಷಣದ ವೆಚ್ಚ-ಪ್ರತಿಫಲ ಲೆಕ್ಕಾಚಾರದಲ್ಲಿ ಹತ್ತು ಹಲವಾರು ಅಂಶಗಳು ಅಂದರೆ ಶಿಕ್ಷಣದಿಂದ ಒಬ್ಬ ವ್ಯಕ್ತಿಗೆ ಸಮಾಜಕ್ಕೆ ದೇಶಕ್ಕೆ ಜ್ಞಾನಾಭಿವೃದ್ಧಿಗೆ ಸಾಂಸ್ಥಿಕ ಬೆಳವಣಿಗೆಗೆ, ಒಟ್ಟಾರೆ ಮಾನವ ಕುಲದ ಅಭಿವೃದ್ಧಿಗೆ ಉಂಟಾಗುವ ಅನುಕೂಲಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಅನಿವಾರ್ಯವಾಗುತ್ತದೆ. ಅದೇ ರೀತಿಯಲ್ಲಿ ಇದರ ಲೆಕ್ಕಾಚಾರದ ಮಾದರಿಗಳು ಹಾಗೂ ಅದರ ಗುರಿಗಳು ವಿವಿಧ ರೀತಿಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಿನ್ನವಾಗಿಯೂ ಇರುತ್ತವೆ.

### ಶಿಕ್ಷಣದ ವೆಚ್ಚ-ಪ್ರತಿಫಲ ವಿಶ್ಲೇಷಣೆ

- ಶಿಕ್ಷಣದ ಪ್ರಗತಿ ಹಾಗೂ ದೇಶದ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆ ನಡುವಿನ ಸಂಬಂಧವನ್ನು ವಿಶ್ಲೇಷಿಸಲಾಗುತ್ತದೆ. ಅಂದರೆ ಶಿಕ್ಷಣ ಪ್ರಗತಿ ಸೂಚ್ಯಂಕಗಳು ಹಾಗೂ ಆರ್ಥಿಕ ಮತ್ತು ಮಾನವ ಅಭಿವೃದ್ಧಿ ಹಾಗೆಯೇ ಸಾಮಾಜಿಕ ಅಭಿವೃದ್ಧಿ ಸೂಚ್ಯಂಕಗಳ ನಡುವಿನ ಸಂಬಂಧವನ್ನು ಪರಿಶೀಲಿಸಲಾಗುತ್ತದೆ.

- ಶಿಕ್ಷಣ ಪ್ರತಿಫಲಗಳ ಅಂದರೆ ಪ್ರತ್ಯಕ್ಷ ಹಾಗೂ ಪರೋಕ್ಷ ಅನುಕೂಲಗಳ ಧನಾತ್ಮಕ ಸಂಬಂಧವನ್ನು ಗುರುತಿಸುವ ಪ್ರಕ್ರಿಯೆ, ಶಿಕ್ಷಣ ವೆಚ್ಚ ಪ್ರತಿಫಲ ಲೆಕ್ಕಾಚಾರಗಳಿಗೆ ಪೂರಕವಾಗಿರುತ್ತದೆ.

- ಇದೇ ರೀತಿ ಶಿಕ್ಷಣದಿಂದ ಉಂಟಾಗುವ ಅಲ್ಪಕಾಲದ ಹಾಗೂ ದೀರ್ಘಕಾಲದ ಅನುಕೂಲಗಳನ್ನು ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ ಶಿಕ್ಷಣದ ಹೂಡಿಕೆ ಪ್ರತಿಫಲ ನೀಡುವುದು ಒಂದು ದೀರ್ಘಕಾಲಿಕ ಪ್ರಕ್ರಿಯೆಯಾಗಿರುತ್ತದೆ.

- ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ಸ್ಥಿರತೆ, ಒಂದು ದೇಶದ ಅಭಿವೃದ್ಧಿಯ ಮುಖ್ಯ ಗುರಿಗಳಾಗಿರುತ್ತವೆ. ಇವುಗಳನ್ನು ಸಾಧಿಸುವಲ್ಲಿ ಶಿಕ್ಷಣದ ಪಾತ್ರ ಅಪಾರವಾದದ್ದು. ಅಂದರೆ, ಶಿಕ್ಷಣ ಪ್ರತಿಫಲ ಲೆಕ್ಕಾಚಾರದಲ್ಲಿ ಈ ಅಂಶಗಳೂ ಅಡಕವಾಗಿರುತ್ತವೆ.

- ಅಭಿವೃದ್ಧಿಯ ಪ್ರಾಥಮಿಕ ಹಂತಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಗಳು ಅಧಿಕವಾಗಿರುವುದಕ್ಕೆ ಕಾರಣ ಶಿಕ್ಷಣದ ಅಸಮಾನತೆ ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅಂದರೆ ಶಿಕ್ಷಣ ಪ್ರತಿಫಲ ಲೆಕ್ಕಾಚಾರದಲ್ಲಿ ಈ ಅಂಶವನ್ನು ಪರಿಗಣಿಸಬೇಕಾಗುತ್ತದೆ.

Digitised by Bharatavani, CIIL

• ಹೆಸರಾಂತ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಮೈಕೆಲ್ ವಿ. ಟೂಡೆರೊ ಅವರ ಅಭಿಪ್ರಾಯದಲ್ಲಿ ಶಿಕ್ಷಣ ಪ್ರತಿಫಲ ಲೆಕ್ಕಾಚಾರ ಮಾಡುವಾಗ, ಶಿಕ್ಷಣವು ಎಷ್ಟರ ಮಟ್ಟಿಗೆ ದಕ್ಷ ಶ್ರಮಿಕರನ್ನು ತಯಾರುಮಾಡುತ್ತದೆ ಉದ್ಯೋಗ ಹಾಗೂ ಆದಾಯದ ಮೂಲಗಳನ್ನು ಸೃಷ್ಟಿಸುತ್ತದೆ, ಜ್ಞಾನವಂತ ಹಾಗೂ ಧೀಮಂತ ನಾಯಕರುಗಳನ್ನು ರೂಪಿಸುತ್ತವೆ ಹಾಗೂ ಮಾನವರಲ್ಲಿ ಪ್ರಗತಿಪರ ಆಧುನಿಕ ಪ್ರವೃತ್ತಿಗಳನ್ನು ಜಾಗೃತಗೊಳಿಸುತ್ತದೆ ಎಂಬ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

• ಅಮೇರಿಕಾ ದೇಶದ ಎಡ್ವರ್ಡ್ ಡೆನ್ನಿಸನ್ ಎಂಬ ಅರ್ಥಶಾಸ್ತ್ರಜ್ಞ 1927 ರಿಂದ 1957ರ ನಡುವಿನ ಅವಧಿಯಲ್ಲಿ ಅಮೇರಿಕಾದ ಆರ್ಥಿಕ ಅಭಿವೃದ್ಧಿ ಹಾಗೂ ಶಿಕ್ಷಣದ ಬಂಡವಾಳ ಹೂಡಿಕೆ ನಡುವಿನ ಸಂಬಂಧವನ್ನು ವಿಶ್ಲೇಷಿಸಿ, ಶಿಕ್ಷಣ ಕ್ಷೇತ್ರದ ಕೊಡುಗೆಯು ಆ ದೇಶದ ಒಟ್ಟು ರಾಷ್ಟ್ರೀಯ ಆದಾಯದ ಶೇ. 23ರಷ್ಟು ಇರುವುದಾಗಿ ತಿಳಿಸಿದ್ದಾರೆ. ಅಂದರೆ ಒಂದು ದೇಶದ ಒಟ್ಟು ಆದಾಯಕ್ಕೆ ಶಿಕ್ಷಣ ಕ್ಷೇತ್ರದ ಕೊಡುಗೆಯನ್ನು ಗಮನಿಸಿದಾಗ, ಶಿಕ್ಷಣದ ಪ್ರತಿಫಲ ಗೋಚರವಾಗುತ್ತದೆ.

• ಹಲವಾರು ತಜ್ಞರ ಒಟ್ಟಾರೆ ಅಭಿಪ್ರಾಯದಂತೆ ಶಿಕ್ಷಣ ಪ್ರತಿಫಲ ಲೆಕ್ಕಾಚಾರ ಅಷ್ಟೇನೂ ಸರಳ ಹಾಗೂ ಸುಲಭವಲ್ಲ. ಆದರೂ ಮಾನವ ಸಂಪನ್ಮೂಲ ಅಭಿವೃದ್ಧಿ ಅರ್ಥಶಾಸ್ತ್ರಜ್ಞರು ಶಿಕ್ಷಣ ಪ್ರತಿಫಲವನ್ನು ಅಳತೆಮಾಡಲು ಒಂದು ಹೊಸ ವಿಧಾನ ಅಥವಾ ಮಾದರಿಯನ್ನು ರೂಪಿಸಲು ಪ್ರಯತ್ನಿಸಿದ್ದಾರೆ. ಇದನ್ನೇ ಉಳಿಕೆ ವಸ್ತು ಅಥವಾ ಕಳೆದುಳಿದ ಅಥವಾ ಲೆಕ್ಕ ಸಿಗದೆ ಉಳಿಕೆಯ ಮೊತ್ತದ ಕ್ರಮ (Residual Approach) ಎನ್ನುತ್ತಾರೆ. ಅಂದರೆ, ಎಲ್ಲಾ ಉತ್ಪಾದನಾಂಗಗಳ ಪ್ರತಿಫಲವನ್ನು ಒಟ್ಟುಗೂಡಿಸಿದರೂ ಅದು ಒಟ್ಟು ಉತ್ಪಾದನೆಗಿಂತ ಕಡಿಮೆ ಇದ್ದು ಈ ಲೆಕ್ಕಕ್ಕೆ ಸಿಗದೆ ಉಳಿದಿರುವ ಅಂಶವನ್ನು ಶಿಕ್ಷಣದ ಪ್ರತಿಫಲ ಎಂದು ಪರಿಗಣಿಸಲಾಗುವುದು.

ಇತ್ತೀಚಿನ ಯುನೆಸ್ಕೊ [UNESCO] ವರದಿಯ ಪ್ರಕಾರ ಶಿಕ್ಷಣದ ಪ್ರತಿಫಲಗಳನ್ನು ಈ ಕೆಳಗಿನ ಅಂಶಗಳ ರೂಪದಲ್ಲಿ ಗುರುತಿಸಬಹುದಾಗಿದೆ.

• ಬದಲಾದ ಸಂಧರ್ಭಕ್ಕೆ ಜನರನ್ನು ತಯಾರುಮಾಡಿ ಅವರು ಹೊಸ ಸಂದರ್ಭಕ್ಕೆ ಸುಲಭವಾಗಿ ಹೊಂದಿಕೊಳ್ಳುವಂತೆ ಮಾಡುವಲ್ಲಿ, ಇದಕ್ಕೆ ಬೇಕಾದ ಶಕ್ತಿ–ಸಾಮರ್ಥ್ಯವನ್ನು ತುಂಬುವಲ್ಲಿ ಶಿಕ್ಷಣದ ಪಾತ್ರ.

• ಸಾಮಾಜಿಕ ಮೌಲ್ಯಗಳು, ಜ್ಞಾನ, ವ್ಯಕ್ತಿ ಸಾಮರ್ಥ್ಯ ಹಾಗೂ ತಂತ್ರ–ಕೌಶಲಗಳನ್ನು ಅಭಿವೃದ್ಧಿಪಡಿಸುವುದರ ಮುಖೇನ ಸಮಾಜದ ಅಭಿವೃದ್ಧಿಗೆ ಕಾರಣವಾಗುವಲ್ಲಿ ಶಿಕ್ಷಣದ ಮಹತ್ವ.

• ಸಂಪನ್ಮೂಲಗಳ ಬಳಕೆಯಲ್ಲಿ ದಕ್ಷತೆಯನ್ನು ತುಂಬಿ ಅವುಗಳ ಉತ್ಪಾದಕತೆಯನ್ನು ಹೆಚ್ಚು ಮಾಡುವಲ್ಲಿ ಶಿಕ್ಷಣದ ಪಾತ್ರ.

• ಉದ್ಯಮಶೀಲತೆ ಅಭಿವೃದ್ಧಿ, ಜನಸಂಖ್ಯಾ ನಿಯಂತ್ರಣ ಹಾಗೂ ಅಭಿವೃದ್ಧಿ ಪ್ರಕ್ರಿಯೆಯನ್ನು ಜಾಗೃತಗೊಳಿಸುವಲ್ಲಿ ಶಿಕ್ಷಣದ ಪಾತ್ರ.

ಸಾಮಾನ್ಯವಾಗಿ ಶಿಕ್ಷಣದ ಪ್ರತಿಫಲವನ್ನು ಶಿಕ್ಷಣದಿಂದ ಉಂಟಾದ ಈ ಕೆಳಗಿನ ಹತ್ತು ಹಲವಾರು ಅನುಕೂಲಗಳು ಅಥವಾ ಲಾಭಗಳಿಂದಲೂ ಗುರುತಿಸಿ ಮಾಪನ ಮಾಡಬಹುದಾಗಿದೆ.

• ಒಂದು ದೇಶದ ಅಭಿವೃದ್ಧಿ ಹಾಗೂ ಆದಾಯ ಹೆಚ್ಚಳ.

• ಜ್ಞಾನ, ಪ್ರತಿಭೆ, ತಂತ್ರಕೌಶಲಗಳು, ಸಂಶೋಧನೆ ಮತ್ತು ಅಭಿವೃದ್ಧಿ ಪ್ರವೃತ್ತಿಗಳನ್ನು ಜಾಗೃತಗೊಳಿಸಿ ಅವುಗಳನ್ನು ಮೊನಚುಗೊಳಿಸುವುದು.

• ತಂತ್ರ–ಜ್ಞಾನದ ಪ್ರಗತಿ.

• ಮಾನವನ ಸ್ವಯಂ ಜವಾಬ್ದಾರಿಗಳನ್ನು ಹೆಚ್ಚಿಸುವುದು.

• ಸಮಾಜದ ಕ್ಷೇಮಾಭಿವೃದ್ಧಿಗೆ ಶಿಕ್ಷಕ ವ್ಯಕ್ತಿಗಳ ಪ್ರಯತ್ನಗಳು.

• ರಾಜಕೀಯ ಹಾಗೂ ಆರ್ಥಿಕ ಸ್ಥಿರತೆ, ಸಾಮಾಜಿಕ ಉನ್ನತಿ, ಪ್ರಜ್ಞಾವಂತ ಪ್ರಜಾಪ್ರಭುತ್ವದ ಅನುಷ್ಠಾನ,

• ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಂಡು ಹೋಗುವುದರಲ್ಲಿ ಶಿಕ್ಷಿತ ಪೌರರ ಪಾತ್ರ.

• ಜವಾಬ್ದಾರಿಯುತ, ಬುದ್ಧಿವಂತ ಸಮಾಜವನ್ನು ಸೃಷ್ಟಿಸುವುದು.

• ಜನರ ವಿರಾಮದ ಅವಧಿ ಮತ್ತು ಅವರ ವೇಳೆಯ ಹಾಗೂ ಜೀವನ ಗುಣಮಟ್ಟವನ್ನು ಹೆಚ್ಚಿಸುವುದು.

ಶಿಕ್ಷಣ ಪ್ರತಿಫಲಗಳು ಒಂದು ದೇಶದ ಆರ್ಥಿಕ ಅಭಿವೃದ್ಧಿ ಹಾಗೂ ಬೆಳವಣಿಗೆಯಲ್ಲಿ ಪ್ರತಿನಿಧಿತವಾದರೂ ಇವುಗಳ ನಡುವಿನ ಸಕಾರಾತ್ಮಕ ಸಂಬಂಧ ಸಹಜವಾಗಿಯೇ ಪ್ರಾಪ್ತವಾಗುವುದಿಲ್ಲ ಎಂದು ಮಾನವ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಪ್ರೊ॥ ಮಹಬೂಬ್ ಉಲ್ ಹಕ್ ಅವರು ಈ ಸಂಬಂಧ ಶಕ್ತಿಯುತವಾಗಬೇಕಾದರೆ ಸರಿಯಾದ ಶಿಕ್ಷಣನೀತಿ ಅನಿವಾರ್ಯ ಎನ್ನುತ್ತಾರೆ. ಹಾಗೆಯೇ ಇವುಗಳ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಯಾಗಬೇಕಾದರೆ ಶಿಕ್ಷಣ ಪಡೆದ ಜನರನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳುವಂತಹ ಉದ್ಯೋಗ ನೀತಿಯನ್ನು ಹಮ್ಮಿಕೊಳ್ಳಬೇಕು ಮತ್ತು ಇದರಿಂದಾಗಿಯೇ ಸಮಾಜದ ಒಡಕುಗಳು ಹಾಗೂ ದುಷ್ಟಶಕ್ತಿಗಳನ್ನು ನಿಗ್ರಹಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಹಿಂದೆ ಚರ್ಚಿಸಿದ ವಿಚಾರಗಳ ಹಿನ್ನೆಲೆಯಲ್ಲಿ, ಶಿಕ್ಷಣ ಪ್ರತಿಫಲಗಳನ್ನು ಅಳತೆ ಮಾಡುವ ಕೆಲವೊಂದು ವೈಜ್ಞಾನಿಕ ವಿಧಾನಗಳನ್ನು ಈ ಕೆಳಕಂಡಂತೆ ಗುರುತಿಸಬಹುದಾಗಿದೆ.

• ಶಿಕ್ಷಣದ ಮೇಲಿನ ಹೂಡಿಕೆ ಮತ್ತು ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಅಭಿವೃದ್ಧಿ ನಡುವಿನ ಸಂಬಂಧವನ್ನು ಪರಿಶೀಲಿಸುವುದು.

• ಹಾಗೆಯೇ ಶಿಕ್ಷಣದ ಹೂಡಿಕೆ ಮತ್ತು ಭೌತಿಕ ಬಂಡವಾಳ ಬೆಳವಣಿಗೆ ನಡುವಿನ ಸಂಬಂಧವನ್ನು ಪರಿಶೀಲಿಸುವುದು.

• ಈ ಹಿಂದೆ ಚರ್ಚಿಸಿದ ರೆಸಿಡ್ಯೂ ವಿಧಾನವನ್ನು ಬಳಸಿಕೊಂಡು ಒಂದು ದೇಶದ ಒಟ್ಟು ಉತ್ಪನ್ನದಲ್ಲಿ ಶಿಕ್ಷಣದ ಕೊಡುಗೆಯನ್ನು ಗುರುತಿಸುವುದು.

• ಶಿಕ್ಷಣ ಹೂಡಿಕೆಯಿಂದ ನೇರವಾದ ಹಾಗೂ ಪರೋಕ್ಷ ಅನುಕೂಲಗಳನ್ನು ಅಲ್ಪ ಹಾಗೂ ದೀರ್ಘಾವಧಿಯಲ್ಲಿ ಲೆಕ್ಕಾಚಾರ ಮಾಡುವುದು.

• ಅದೇ ರೀತಿಯಲ್ಲಿ ಶಾಲಾ ದಾಖಲಾತಿ, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾಭ್ಯಾಸ, ಸಂಶೋಧನೆ ಹಾಗೂ ಇದಕ್ಕೆ ಸಿಕ್ಕಿರುವ ವಿಶೇಷ ಮಾನ್ಯತೆ ಇವುಗಳಿಂದಾಗಿಯೂ ಶಿಕ್ಷಣ ಪ್ರತಿಫಲವನ್ನು ಗುರುತಿಸಬಹುದು.

• ಗ್ಯಾಟ್ (GAT) ಒಪ್ಪಂದದ (2006) ನಂತರದಲ್ಲಿ ಹಕ್ಕು ಸ್ವಾಮ್ಯಗಳ ಒಪ್ಪಂದಗಳನ್ನು (Patent Agreements) ಪರಿಗಣಿಸುವ ಮೂಲಕವೂ ಶಿಕ್ಷಣದ ಪ್ರತಿಫಲಗಳನ್ನು ಲೆಕ್ಕಾಚಾರ ಮಾಡಬಹುದಾಗಿದೆ.

–ಲೀ.


Digitised by Bharatavani, CIIL

## ಶಿಕ್ಷಣದ ವೆಚ್ಚಗಳು

ವಸ್ತುಗಳನ್ನು ಉತ್ಪಾದನೆ ಮಾಡುವ ಸಂದರ್ಭದಲ್ಲಿ ತಗುಲುವ ಎಲ್ಲ ರೀತಿಯ ವೆಚ್ಚಗಳನ್ನು 'ಉತ್ಪಾದನಾ ವೆಚ್ಚ' ಎಂದು ಕರೆಯಲಾಗುತ್ತದೆ. ಅಂದರೆ ಕಚ್ಚಾವಸ್ತುಗಳಿಂದ ಸಿದ್ಧವಸ್ತುಗಳನ್ನು ತಯಾರಿಸಲು ತಗುಲುವ ಖರ್ಚನ್ನು ಒಟ್ಟು ಉತ್ಪಾದನಾ ವೆಚ್ಚ ಎಂದು ಕರೆಯಲಾಗುತ್ತದೆ. ಈ ಉತ್ಪಾದನಾ ಕಾರ್ಯಾಚರಣೆಯಲ್ಲಿ ಎಲ್ಲ ರೀತಿಯ ಉತ್ಪಾದನಾಂಗಗಳ ಪ್ರತಿಫಲ ಅಂದರೆ ಗೇಣಿ, ಕೂಲಿ, ಲಾಭ ಹಾಗೂ ಬಡ್ಡಿ ಮತ್ತು ಇತರೆ ಖರ್ಚುಗಳು ಅಡಕವಾಗಿರುತ್ತವೆ. ಸಾಮಾನ್ಯವಾಗಿ ಒಂದು ವಸ್ತುವಿನ ಬೆಲೆ ನಿರ್ಧರಿಸುವಾಗ ಈ ಎಲ್ಲಾ ಖರ್ಚುಗಳನ್ನು ಜೊತೆಗೆ ಸ್ವಲ್ಪ ಮಟ್ಟಿನ ಲಾಭವನ್ನೂ ಸೇರಿಸಲಾಗುವುದು. ಅತೀ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸುವುದನ್ನು 'ಉತ್ಪಾದನಾ ದಕ್ಷತೆ' ಎಂದು (Production Efficiency) ಕರೆಯಲಾಗುವುದು. ಇದು ಒಂದು ವಸ್ತುವಿನ ಪೈಪೋಟಿ ಸಾಮರ್ಥ್ಯವನ್ನು ನಿರ್ಧರಿಸುತ್ತದೆ. ಹಾಗಾಗಿಯೇ ಇದು ಉತ್ಪಾದನಾ ಅರ್ಥಶಾಸ್ತ್ರದ ಕೇಂದ್ರಬಿಂದುವಾಗಿದೆ. ಇದೇ ರೀತಿಯ ವೆಚ್ಚಗಳನ್ನು ನಾವು ಶಿಕ್ಷಣದಲ್ಲೂ ಕಾಣಬಹುದು. ಅಂದರೆ ಸಾಮಾನ್ಯ ಮಾನವರನ್ನು ಶಿಕ್ಷಣದ ಮೂಲಕ ಜ್ಞಾನವಂತ ಹಾಗೂ ಸಾಮರ್ಥ್ಯವುಳ್ಳ ಮನುಷ್ಯರನ್ನು ರೂಪಿಸುವ ಪ್ರಕ್ರಿಯೆ ಹಲವಾರು ರೀತಿಯ ವೆಚ್ಚಗಳನ್ನು ಅಥವಾ ಖರ್ಚುಗಳನ್ನು ಒಳಗೊಂಡಿರುತ್ತದೆ. ಇದನ್ನೇ 'ಶಿಕ್ಷಣದ ವೆಚ್ಚಗಳು' ಎಂದು ಕರೆಯಲಾಗುತ್ತದೆ. ಪ್ರಸಕ್ತ ಅಭಿವೃದ್ಧಿ ಅಭಿಯಾನದಲ್ಲಿ ಇಂತಹ ಶಿಕ್ಷಣ ವೆಚ್ಚದ ಬಗ್ಗೆ ವೈಜ್ಞಾನಿಕವಾದಂತಹ ಜ್ಞಾನ ಅತ್ಯಗತ್ಯವಾಗಿದೆ.

ಒಂದು ಸಂಸ್ಥೆ, ದೇಶ ಅಥವಾ ಒಬ್ಬ ವ್ಯಕ್ತಿ ತನ್ನ ಶಿಕ್ಷಣಕ್ಕೆ ಭರಿಸುವ ಎಲ್ಲಾ ಖರ್ಚುಗಳನ್ನು 'ಶಿಕ್ಷಣ ವೆಚ್ಚ' ಎಂದು ತಿಳಿಯಬಹುದು. ಶಿಕ್ಷಣಕ್ಕೆ ತಗುಲುವ ವೆಚ್ಚಗಳು ವಿವಿಧ ರೀತಿಯವು ಹಾಗೂ ವಿವಿಧ ರೀತಿಯ ಸಂಸ್ಥೆಗಳು ಹಾಗೂ ಜನರು ಈ ಶಿಕ್ಷಣ ವೆಚ್ಚವನ್ನು ಭರಿಸುವ ಕ್ರಿಯೆಯಲ್ಲಿ ನಿರತವಾಗಿರುತ್ತವೆ. ಶಿಕ್ಷಣದ ಆಯಾಮ, ಅಗತ್ಯಗಳು ಹಾಗೂ ವೈವಿಧ್ಯತೆಗಳು ಹೆಚ್ಚಿದಂತೆಲ್ಲಾ ಶಿಕ್ಷಣ ವೆಚ್ಚಗಳು ಸಹ ಹೆಚ್ಚುತ್ತಾ ಹೋಗುತ್ತವೆ. ಇವುಗಳು ಅಧಿಕವಾದಂತೆಲ್ಲಾ ಶಿಕ್ಷಣಕ್ಕೆ ತಗುಲುವ ಖರ್ಚುಗಳೂ ಅಧಿಕವಾಗುತ್ತವೆ.

ಶಿಕ್ಷಣಕ್ಕೆ ತಗುಲುವ ವೆಚ್ಚವನ್ನು ಲೆಕ್ಕಾಚಾರ ಮಾಡುವುದು ಸುಲಭದ ಮಾತಲ್ಲ. ಕಾರಣ ಇದರ ವೆಚ್ಚವನ್ನು ಭರಿಸುವವರು ವಿವಿಧ ರೀತಿಯ ಸಂಸ್ಥೆಗಳು, ಸರ್ಕಾರ ದೇಶ–ವಿದೇಶ ಕಂಪೆನಿಗಳು ಕುಟುಂಬಗಳು ಹಾಗೂ ವ್ಯಕ್ತಿಗಳು, ಶಿಕ್ಷಣದಲ್ಲಿ ಸರ್ಕಾರದ ಪಾತ್ರ ಅಭಿವೃದ್ಧಿಶೀಲ ದೇಶಗಳಲ್ಲಿ ಮಹತ್ವದ್ದಾಗಿದ್ದರೂ, ಶಿಕ್ಷಣ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರವೇ ಭರಿಸುತ್ತದೆ ಎಂದು ಹೇಳುವಂತಿಲ್ಲ. ಪೋಷಕರೂ ತಮ್ಮ ತಮ್ಮ ಆರ್ಥಿಕ ಅನುಕೂಲತೆಗೆ ತಕ್ಕನಾಗಿ ತಮ್ಮ ತಮ್ಮ ಮಕ್ಕಳ ಶಿಕ್ಷಣಕ್ಕೆ ಖರ್ಚುಮಾಡುತ್ತಾರೆ. ಸಹಜವಾಗಿಯೇ ಶ್ರೀಮಂತ ಪೋಷಕರು ಬಡಪೋಷಕರಿಗಿಂತ ಹೆಚ್ಚಾಗಿ ಶಿಕ್ಷಣಕ್ಕೆ ಖರ್ಚು ಮಾಡುತ್ತಾರೆ. ಅಂದರೆ ಇದರ ಪ್ರತಿಫಲವೂ ಇಂತಹ ವರ್ಗಕ್ಕೆ ಹೆಚ್ಚಾಗಿ ಸಿಗುತ್ತದೆ. ಹೀಗಾಗಿಯೇ ಅರ್ಥಶಾಸ್ತ್ರಜ್ಞರು ಶಿಕ್ಷಣದಲ್ಲಿ ಅಸಮಾನತೆ ಉಂಟಾದಂತೆಲ್ಲಾ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳು ಅತಿಯಾಗುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ. ಸರ್ಕಾರ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣದ ವೆಚ್ಚವನ್ನು ಆದಷ್ಟು ಮಟ್ಟಿಗೆ ತಾನೇ ಭರಿಸುವ ಪ್ರಯತ್ನ ಮಾಡುತ್ತಿದೆ. ಇತ್ತೀಚೆಗೆ ಜಾರಿಗೊಳಿಸಿರುವ ಪ್ರತಿ ವ್ಯಕ್ತಿಯ ಶಿಕ್ಷಣದ ಹಕ್ಕು ಸರ್ಕಾರದ ಶಿಕ್ಷಣ ವೆಚ್ಚವನ್ನು ಮತ್ತಷ್ಟು ಅಧಿಕವಾಗಿಸುತ್ತದೆ. ಉಚಿತ ಶಿಕ್ಷಣ, ಬಿಸಿ ಊಟ, ಪುಸ್ತಕ, ಸಮವಸ್ತ್ರ, ಸೈಕಲ್ ಹಾಗೂ ಇತರೇ ಶಿಕ್ಷಣ ವೆಚ್ಚವನ್ನು ಸರ್ಕಾರವೇ ತುಂಬಬೇಕಾಗುತ್ತದೆ. ಅಂದರೆ ವ್ಯಕ್ತಿಗತವಾದ ಶಿಕ್ಷಣ ವೆಚ್ಚವು ತುಂಬಾ ಕಡಿಮೆ ಇರುತ್ತದೆ. ಆದರೆ ಖಾಸಗಿ ಶಿಕ್ಷಣವು ದುಬಾರಿಯಾಗಿರುವ ಕಾರಣ ಶಿಕ್ಷಣದ ಗುಣಮಟ್ಟ ಹಾಗೂ ಇದನ್ನು ಕೊಳ್ಳುವ ಸಾಮರ್ಥ್ಯ ಕೇವಲ ಶ್ರೀಮಂತ ಪೋಷಕರಿಗಿರುವುದು. ಸರ್ಕಾರವು ನೇರ ತೆರಿಗೆಯಲ್ಲಿ ಶಿಕ್ಷಣ ತೆರಿಗೆಯನ್ನೂ ಸೇರಿಸಿ, ಇದರ ಮೂಲಕವೂ ಶಿಕ್ಷಣಕ್ಕೆ ತಗುಲುವ ವೆಚ್ಚವನ್ನು ಭರಿಸುವ ಕಾರ್ಯದಲ್ಲಿ ಮುಂದಾಗಿದೆ.

ಶಿಕ್ಷಣ ವೆಚ್ಚವನ್ನು ವಿವಿಧ ರೀತಿಯಲ್ಲಿ ವಿಂಗಡಿಸಬಹುದು. ಉದಾಹರಣೆಗೆ, ಹಣಕಾಸು ವೆಚ್ಚ, ನೈಜ ವೆಚ್ಚ, ಪ್ರತ್ಯಕ್ಷ ಹಾಗೂ ಪರೋಕ್ಷ ವೆಚ್ಚ, ಅವಕಾಶ ವೆಚ್ಚ ಇತ್ಯಾದಿ ಹಲವಾರು ವೆಚ್ಚಗಳು ಜಂಟಿ ವೆಚ್ಚಗಳಾಗಿದ್ದು ಅವುಗಳನ್ನು ಶಿಕ್ಷಣ ವೆಚ್ಚವೆಂದು ಬೇರ್ಪಡಿಸಲು ಸಾಧ್ಯವಾಗುವುದಿಲ್ಲ.

ಶಿಕ್ಷಣದ ಹಣಕಾಸು ವೆಚ್ಚವನ್ನು ಈಗಾಗಲೇ ತಿಳಿಸಿರುವಂತೆ ಎಲ್ಲ ರೀತಿಯ ಸಂಸ್ಥೆಗಳು ದೇಶ ವಿದೇಶಿ ಕಂಪೆನಿಗಳು, ವ್ಯಕ್ತಿಗಳು ಮಾಡುತ್ತಾರೆ. ಶಿಕ್ಷಣವನ್ನು ಪಡೆಯಲು ಕಳೆದ ಸಮಯ, ವಿದ್ಯಾರ್ಥಿಯ, ಪೋಷಕರ, ಉಪಾಧ್ಯಾಯರ, ಸರ್ಕಾರದ ಶ್ರಮ, ತ್ಯಾಗ, ಹೊಂದಾಣಿಕೆ, ಶಿಕ್ಷಣಕ್ಕೆ ತೆರಿಗೆ ನೀಡುವವರ ತ್ಯಾಗ ಇತ್ಯಾದಿ ಎಲ್ಲವನ್ನೂ ನೈಜ ವೆಚ್ಚ ಎಂದು ಪರಿಗಣಿಸಬಹುದಾದರೂ ಇದನ್ನು ಹಣದ ರೂಪದಲ್ಲಿ ವ್ಯಕ್ತಪಡಿಸುವುದು ಕಷ್ಟವಾಗುತ್ತದೆ. ಇದೇ ರೀತಿ ಬೇರೆ ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಕಂಡುಬರುವ ಅವಕಾಶವೆಚ್ಚವನ್ನು ವಿಶಾಲ ಅರ್ಥದಲ್ಲಿ ಶಿಕ್ಷಣ ವೆಚ್ಚದಲ್ಲಿ ಸೇರಿಸಬಹುದಾಗಿದೆ. ಅವಕಾಶ ವೆಚ್ಚವೆಂದರೆ ಶಿಕ್ಷಣಕ್ಕೆ ಖರ್ಚು ಮಾಡದಿದ್ದರೆ ಇನ್ನಾವ ಪ್ರಗತಿಪರ, ಲಾಭದಾಯಕ ಚಟುವಟಿಕೆಯಲ್ಲಿ ಹಣವನ್ನು ಹೂಡಿಕೆ ಮಾಡಬಹುದಿತ್ತು ಎನ್ನುವುದರ ಲೆಕ್ಕಾಚಾರ. ಶಿಕ್ಷಣದ ಹೂಡಿಕೆ ಬಂಡವಾಳವನ್ನು ಅಂದರೆ ಕಟ್ಟಡಗಳಲ್ಲಿ, ಪ್ರಸಾರಾಂಗಗಳಲ್ಲಿ, ತಂತ್ರ ವಿಜ್ಞಾನಗಳಲ್ಲಿ ತೊಡಗಿಸಿದ ಹಣವನ್ನು ಸ್ಥಿರ ಬಂಡವಾಳವೆಂದೂ ದಿನನಿತ್ಯದ ಖರ್ಚುಗಳನ್ನು ಕ್ರಿಯಾತ್ಮಕ ಬಂಡವಾಳವೆಂದೂ ತಿಳಿಯಬಹುದಾಗಿದೆ. ಒಟ್ಟಾರೆ ಶಿಕ್ಷಣ ವೆಚ್ಚವು ಮೇಲೆ ತಿಳಿಸಿದ ವಿವಿಧ ರೀತಿಯ ವೆಚ್ಚಗಳನ್ನು ಒಳಗೊಂಡಿರುತ್ತದೆ.

### ಶಿಕ್ಷಣ ವೆಚ್ಚದ ವಿಶಿಷ್ಟ ಲಕ್ಷಣಗಳು

- ಶಿಕ್ಷಣದ ವೆಚ್ಚ ವಿವಿಧ ಸಂಸ್ಥೆಗಳು ಹಾಗೂ ಇತರೇ (ಕುಟುಂಬ ವೆಚ್ಚಕ್ಕೆ) ಮೂಲಗಳನ್ನು ಒಳಗೊಂಡಿರುತ್ತದೆ.
- ನೇರ ವೆಚ್ಚಗಳನ್ನು ಹೊರತುಪಡಿಸಿ, ಹಲವಾರು ರೀತಿಯ ಶಿಕ್ಷಣ ವೆಚ್ಚಗಳು ಪೂರಕ ಹಾಗೂ ಜಂಟಿ ವೆಚ್ಚಗಳಾಗಿರುತ್ತವೆ.
- ಶಿಕ್ಷಣದ ಎಲ್ಲ ವೆಚ್ಚಗಳೂ ಇದರ ಬೆಲೆ ಅಥವಾ ಶುಲ್ಕದಲ್ಲಿ ವ್ಯಕ್ತವಾಗುವುದಿಲ್ಲ.
- ಸಾಮಾನ್ಯವಾಗಿ ಶಿಕ್ಷಣದಲ್ಲಿ ವೆಚ್ಚ ಮಾಡಿದವರಿಗೆ ನೇರವಾದ ಪ್ರತಿಫಲ ಅಥವಾ ಅನುಕೂಲ ದೊರೆಯದೇ ಇರಬಹುದು.
- ಶಿಕ್ಷಣ ವೆಚ್ಚಗಳು ಬಹಳ ಬೇಗ ಪ್ರತಿಫಲ ನೀಡುವುದಿಲ್ಲ. ಅಂದರೆ ಇದರ ಗರ್ಭಾವಧಿ ಕಾಲ ಅಥವಾ ಪ್ರತಿಫಲಕಾಲ (gestation period) ದೀರ್ಘವಾಗಿರುತ್ತದೆ.
- ಶಿಕ್ಷಣ ಖಾಸಗೀಕರಣದ ಉದ್ದೇಶ, ಉತ್ತಮ ಶಿಕ್ಷಣ ದೊರಕಿಸುವುದರ ಜೊತೆಗೆ, ಶಿಕ್ಷಣ ಸೇವೆಯನ್ನು ಪಡೆಯುವವರೇ ಇದರ ಸಂಪೂರ್ಣ ವೆಚ್ಚವನ್ನು ಭರಿಸಬೇಕೆಂಬುದಾಗಿದೆ. ಇದರಿಂದಾಗಿ ಸರ್ಕಾರದ ಆರ್ಥಿಕ ಬಿಕ್ಕಟ್ಟು ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗುತ್ತದೆ.
- ಶಿಕ್ಷಣದ ಸ್ವರೂಪ ಬದಲಾದಂತೆ ಹಾಗೂ ಇದರ ಗುಣಮಟ್ಟ ಹೆಚ್ಚಿದಂತೆಲ್ಲಾ ಇದರ ವೆಚ್ಚವೂ ಅಧಿಕವಾಗಿರುತ್ತದೆ.
- ಶಿಕ್ಷಣ ವೆಚ್ಚ ಮತ್ತು ಶಿಕ್ಷಣದ ಗುಣಮಟ್ಟ ಇವುಗಳ ನಡುವೆ ಸಕಾರಾತ್ಮಕ ಸಂಬಂಧವಿರುತ್ತದೆ. ಏಕೆಂದರೆ ಉತ್ತಮ ಗುಣಮಟ್ಟದ

Digitised by Bharatavani, CIIL

ಶಿಕ್ಷಣವು ಸಾಕಷ್ಟು ಪ್ರಮಾಣದ ಹೂಡಿಕೆ ಹಾಗೂ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಮಾನವ ಅಭಿವೃದ್ಧಿ ಮತ್ತು ಶಿಕ್ಷಣ ವೆಚ್ಚ ಪರಸ್ಪರ ಅವಲಂಬಿತವಾಗಿವೆ. ಕಾರಣ ಮಾನವ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಶಿಕ್ಷಣ ಪ್ರಮುಖ ನಿರ್ಧಾರಕವಾಗಿದೆ. ಜೊತೆಗೆ, ಈ ಶಿಕ್ಷಣದಿಂದಾಗಿಯೇ ಜನರ ಜೀವನ ಮಟ್ಟ, ಆದಾಯ, ಆರೋಗ್ಯ, ಎಲ್ಲವನ್ನೂ ಸಾಧಿಸಬಹುದಾಗಿದೆ. ಮಾನವ ಅಭಿವೃದ್ಧಿ ಶ್ರೇಣೀಕರಣವನ್ನು ಉತ್ತಮಪಡಿಸಿಕೊಳ್ಳುವುದಾದರೆ, ಶಿಕ್ಷಣ ಅನಿವಾರ್ಯ. ಇದರಿಂದಾಗಿ ಇದಕ್ಕಾಗಿ ಹೆಚ್ಚಿನ ಮಟ್ಟದ ವೆಚ್ಚವೂ ಅಗತ್ಯವಾಗುತ್ತದೆ. ಮಾನವ ಸಾಮರ್ಥ್ಯದ ಅಭಿವೃದ್ಧಿ ಶಿಕ್ಷಣ ವೆಚ್ಚವನ್ನೂ ಅವಲಂಬಿಸಿದೆ. ಒಟ್ಟಾರೆ ಒಂದು ದೇಶದ ಅಭಿವೃದ್ಧಿ, ಧ್ಯೇಯ ಧೋರಣೆಗಳು, ಆಯಾಮಗಳು ಶಿಕ್ಷಣ ನೀತಿ, ಬದಲಾಗುತ್ತಿರುವ ಉದ್ಯೋಗ ಮಾರುಕಟ್ಟೆ, ಜನಸಂಖ್ಯೆ ಜಾಗತೀಕರಣ ಇತ್ಯಾದಿ, ಅಂಶಗಳು ಒಂದು ದೇಶದ ಶಿಕ್ಷಣ ವೆಚ್ಚವನ್ನು ನಿರ್ಧರಿಸುತ್ತವೆ.

ಸರ್ಕಾರ ಶಿಕ್ಷಣದಲ್ಲಿ ಖರ್ಚು ಮಾಡಿದ ಹಣ, ಶಿಕ್ಷಣದ ಬೆಲೆ ಅಥವಾ ಶುಲ್ಕದ ರೂಪದಲ್ಲಿ ಸಂಪೂರ್ಣ ಪ್ರಮಾಣದಲ್ಲಿ ವ್ಯಕ್ತವಾಗುವುದಿಲ್ಲ. ಶೈಕ್ಷಣಿಕ ವೆಚ್ಚ ಸರ್ಕಾರದ ಒಂದು ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಯಾಗಿರುತ್ತದೆ. ಆದರೆ ಖಾಸಗಿ ಶಿಕ್ಷಣದಲ್ಲಿ, ಶಿಕ್ಷಣದ ಹಣಕಾಸು ವೆಚ್ಚವು ಸಂಪೂರ್ಣವಾಗಿ ಶಿಕ್ಷಣ ಶುಲ್ಕದಲ್ಲಿ ನಿಹಿತವಾಗಿದ್ದು ಅದರ ಮೂಲಕ ವ್ಯಕ್ತವಾಗುತ್ತದೆ.

ಒಂದು ದೇಶದ ರಾಷ್ಟ್ರೀಯ ಉತ್ಪನ್ನ ಹಾಗೂ ಆ ದೇಶದ ಶಿಕ್ಷಣ ವೆಚ್ಚದ ನಡುವೆ ಪರಸ್ಪರ ಸಂಬಂಧವಿರುತ್ತದೆ. ಅಂದರೆ ಅಭಿವೃದ್ಧಿಶೀಲ ದೇಶಗಳಿಗಿಂತ, ಮುಂದುವರಿದ ದೇಶಗಳು ತಮ್ಮ ತಮ್ಮ ದೇಶಗಳ ರಾಷ್ಟ್ರೀಯ ಉತ್ಪನ್ನಗಳಲ್ಲಿ ಹೆಚ್ಚಿನ ಭಾಗವನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡುತ್ತವೆ. ಒಂದು ದೇಶದ ಆದಾಯವು ಹೆಚ್ಚಿದಂತೆಲ್ಲಾ ಆ ದೇಶದ ಶಿಕ್ಷಣ ವೆಚ್ಚವೂ ಹೆಚ್ಚುತ್ತಾ ಹೋಗುವುದು.

### ಜಾಗತೀಕರಣ ಮತ್ತು ಶಿಕ್ಷಣ ವೆಚ್ಚ

ಕಳೆದ ಎರಡು ದಶಕಗಳಿಂದ ಎಲ್ಲಾ ದೇಶಗಳೂ ಜಾಗತೀಕರಣವನ್ನು ತಮ್ಮ ಆರ್ಥಿಕ ಚಟುವಟಿಕೆಗಳನ್ನು ಅಳವಡಿಸಿಕೊಂಡಿವೆ. ಇದಕ್ಕೆ ಭಾರತದೇಶ ಹೊರತೇನಲ್ಲ. ಈ ನಿಟ್ಟಿನಲ್ಲಿ ಹಲವಾರು ಸ್ವಾಭಾವಿಕ ಬದಲಾವಣೆಗಳಾಗಿದ್ದು ಇದರಲ್ಲಿ ಉನ್ನತ ಶಿಕ್ಷಣದ ಖಾಸಗೀಕರಣವು ಸಹ ಒಂದಾಗಿದೆ. ಜೊತೆಗೆ, ಶಿಕ್ಷಣದಲ್ಲಿ ಸಾರ್ವಜನಿಕ ಹೂಡಿಕೆ ಹಿಂಜರಿಕೆಯಾಗಿದ್ದು ಶಿಕ್ಷಣದ ವೆಚ್ಚವು ಹೆಚ್ಚಾಗುತ್ತಿದೆ. ಈ ಕ್ಷೇತ್ರದಲ್ಲಿ ಖಾಸಗಿ ಬಂಡವಾಳ ಹೂಡಿಕೆ, ವಿದೇಶಗಳಿಂದಲೂ ಹರಿದು ಬರುತ್ತಿದೆ. ಅಂದರೆ ಶಿಕ್ಷಣವು ಅದರಲ್ಲೂ ಉನ್ನತ ಶಿಕ್ಷಣ ಸಾಮಾನ್ಯ ಜನರಿಗೆ ದುಬಾರಿಯಾಗಿದ್ದು, ಶಿಕ್ಷಣ ಸೇವೆಯನ್ನು ವಾಣಿಜ್ಯೀಕರಣಗೊಳಿಸಲಾಗಿದೆ. ಶಿಕ್ಷಣವು ಮಾರುಕಟ್ಟೆ ಸರಕಾಗಿ/ಸೇವೆಯಾಗಿ (Marketing Commodity/Service) ಪರಿಗಣಿಸಲ್ಪಟ್ಟು, ಇದರ ಗುಣಮಟ್ಟವನ್ನು ಶಿಕ್ಷಣ ಶುಲ್ಕದ ರೂಪದಲ್ಲಿ ಅಳೆಯಲಾಗುತ್ತಿದೆ. ಶಿಕ್ಷಣ ವೆಚ್ಚವನ್ನು ಸಂಪೂರ್ಣವಾಗಿ, ಇದನ್ನು ಉಪಯೋಗಿಸುವ ವ್ಯಕ್ತಿಯಿಂದಲೇ ವಸೂಲು ಮಾಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಒಟ್ಟಾರೆ ಒಂದು ದೇಶದ ಆರ್ಥಿಕ ಚಟುವಟಿಕೆಗಳ ಸ್ವರೂಪ ಬದಲಾದಂತೆ ಆ ದೇಶದ ಶಿಕ್ಷಣ ವೆಚ್ಚಗಳು ಸಹ ಬದಲಾಗುವುದರ ಜೊತೆಗೆ, ಅವುಗಳು ಹೆಚ್ಚಾಗುತ್ತಿರುವ ಸೂಚನೆಗಳು ಕಾಣಬರುತ್ತಿವೆ. ಆದರೆ ಶಿಕ್ಷಣದ ಮೌಲ್ಯವನ್ನು ಮಾಪನ ಮಾಡುವುದು ಸುಲಭವಲ್ಲ.

–ಲೀ.

## ಶಿಕ್ಷಣದಲ್ಲಿ ಕಂಪ್ಯೂಟರ್

ನಮ್ಮ ದಿನ ನಿತ್ಯ ಜೀನವದ ಹೆಚ್ಚು ಕಡಿಮೆ ಎಲ್ಲಾ ರಂಗಗಳಿಗೂ ಕಂಪ್ಯೂಟರ್ ಪ್ರವೇಶಿಸಿದೆ. ಎಲ್ಲೆಡೆ ಇದರ ಅಳವಡಿಕೆ ಮತ್ತು ಬಳಕೆ ಕ್ರಮೇಣ ಹೆಚ್ಚಾಗುತ್ತಾ ಇದೆ. ಎಲ್ಲಾ ರಂಗಗಳಲ್ಲಿನ ಹೆಚ್ಚಿನ ಕಾರ್ಯಗಳು ಕಂಪ್ಯೂಟರೀಕರಣಗೊಳ್ಳುತ್ತಿವೆ. ಶಿಕ್ಷಣ ಕ್ಷೇತ್ರವೂ ಇದಕ್ಕೆ ಹೊರತೇನಲ್ಲ. ಬೋಧನೆ, ಕಲಿಕೆ, ಮೌಲ್ಯಮಾಪನವೂ ಸೇರಿದಂತೆ ಶಿಕ್ಷಣ ಕ್ಷೇತ್ರದ ಎಲ್ಲಾ ಕಾರ್ಯಗಳಿಗೂ ಸಂಬಂಧಿಸಿದಂತೆ ಕಂಪ್ಯೂಟರ್‌ನ ಸಾಮರ್ಥ್ಯ ಅನ್ವಯಗಳನ್ನು ಬಳಸಿಕೊಳ್ಳಲಾಗುತ್ತಿದೆ. ಶಿಕ್ಷಣದಲ್ಲಿ ಕಂಪ್ಯೂಟರ್ ಬಳಕೆಯ ಶೈಕ್ಷಣಿಕ ಗುರಿಗಳನ್ನು ಸಾಧಿಸುವ ಹಾಗೂ ಶಿಕ್ಷಣ ವ್ಯವಸ್ಥೆಯ ಒಟ್ಟಾರೆ ಗುಣಮಟ್ಟ ಮತ್ತು ಕಾರ್ಯ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶಗಳನ್ನು ಒಳಗೊಂಡಿದೆ ಎಂದು ಹೇಳಬಹುದು.

### ವ್ಯಾಪ್ತಿ

ಶಿಕ್ಷಣ ಕ್ಷೇತ್ರದಲ್ಲಿ ಕಂಪ್ಯೂಟರ್ ಬಳಕೆಯ ವ್ಯಾಪ್ತಿಗೆ ಬರುವಂತಹ ಕಾರ್ಯ ಕ್ಷೇತ್ರಗಳೆಂದರೆ ವಿವಿಧ ಶಿಕ್ಷಣ ಕೋರ್ಸ್‌ಗಳಿಗೆ ಸಂಬಂಧಿಸಿದ ಪ್ರವೇಶ ಪ್ರಕ್ರಿಯೆ, ಪ್ರವೇಶ ಪರೀಕ್ಷೆ ನಿರ್ವಹಣೆ, ಸೀಟು ಹಂಚಿಕೆ, ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ವಹಣೆ. ಹಣಕಾಸು ಖರ್ಚು ವೆಚ್ಚಗಳ ನಿರ್ವಹಣೆ, ವಿದ್ಯಾರ್ಥಿ ಸಂಬಂಧಿತ ದಾಖಲೆಗಳ ತಯಾರಿ, ಸಂರಕ್ಷಣೆ, ಅಪ್‌ಡೇಟ್ ಮಾಡುವಿಕೆ, ಡೇಟಾ ಬೇಸ್ ಸೃಷ್ಟಿಸುವಿಕೆ, ಬಳಸಿಕೊಳ್ಳುವಿಕೆ, ಶೈಕ್ಷಣಿಕ ಪತ್ರವ್ಯವಹಾರ, ಕಾಲೇಜು, ವಿಶ್ವವಿದ್ಯಾನಿಲಯ (ಶಿಕ್ಷಣ ಸಂಸ್ಥೆ ಹಾಗೂ ಪರೀಕ್ಷಾ ಮಂಡಳಿಗಳು) ಇವುಗಳ ನಡುವಿನ ಸಂಪರ್ಕ ಜಾಲ ಗ್ರಂಥಾಲಯದ ಪರಿಣಾಮಕಾರಿ ಬಳಕೆ, ಕಲಿಕೆ ಬೋಧನೆ ಪ್ರಕ್ರಿಯೆ, ಪರೀಕ್ಷಾ ಸಂಬಂಧಿತ ಕಾರ್ಯಗಳು, ಆನ್‌ಲೈನ್ ಪರೀಕ್ಷಾ ವ್ಯವಸ್ಥೆಯ ಬಳಕೆ, ಬಹುಮಾಧ್ಯಮ ತಂತ್ರಜ್ಞಾನದ ಅಳವಡಿಕೆ, ಅಂತರ್ಜಾಲದ ಬಳಕೆ, ಇ–ಕಲಿಕೆ ಭಾಸಿತ ಕಲಿಕೆ (Virtual learning) ಶೈಕ್ಷಣಿಕ ಸಿ.ಡಿ. ತಯಾರಿ ಮತ್ತು ಬಳಕೆ, ಸ್ಮಾರ್ಟ್‌ಕ್ಲಾಸ್ ಅಳವಡಿಕೆ, ದೂರ ಸಂಪರ್ಕ ಸಮ್ಮೇಳನ ಇತ್ಯಾದಿಗಳು. ಕಂಪ್ಯೂಟರ್ ಬೆಂಬಲಿತ ಕಲಿಕೆ/ಬೋಧನೆಯ, ವಿಷಯವನ್ನು ಸಹ ಶಿಕ್ಷಣದಲ್ಲಿ ಕಂಪ್ಯೂಟರ್ ಬಳಕೆಯ ವ್ಯಾಪ್ತಿಯಲ್ಲಿ ಸೇರಿಸಬಹುದಾಗಿದೆ.

### ಕಂಪ್ಯೂಟರ್ ಆಧಾರಿತ/ಬೆಂಬಲಿತ ಕಲಿಕೆ–ಬೋಧನೆ

ಅಂತಾರಾಷ್ಟ್ರೀಯ ಶಿಕ್ಷಣ ನಿಘಂಟಿನ (1985) ಪ್ರಕಾರ ವಿದ್ಯಾರ್ಥಿಯೊಬ್ಬ ತನ್ನ ಕಲಿಕಾ ಪ್ರಕ್ರಿಯೆ ನಿರ್ವಹಿಸಿಕೊಳ್ಳಲು ಅಗತ್ಯಕ್ಕನುಗುಣವಾಗಿ ಹೆಚ್ಚಿನ ಬೋಧನಾ ಸಾಮಗ್ರಿ ಆಯ್ಕೆ ಮಾಡಿಕೊಳ್ಳುವಲ್ಲಿ ಕಂಪ್ಯೂಟರ್‌ನ ಬಳಕೆಯನ್ನು ಕಂಪ್ಯೂಟರ್ ಬೋಧನೆ ಎಂದು ಕರೆಯಲ್ಪಡುತ್ತದೆ. ಕಂಪ್ಯೂಟರ್ ಆಧಾರಿತ ಕಲಿಕೆಯು ಕಂಪ್ಯೂಟರ್ ಬಗ್ಗೆ ಕಲಿಯುವುದಕ್ಕಿಂತ ಭಿನ್ನವಾಗಿದೆ. ಕಂಪ್ಯೂಟರ್ ಬಗ್ಗೆ ಕಲಿಯುವಿಕೆಯು ಕಂಪ್ಯೂಟರ್‌ನ ರಚನೆ, ಕಾರ್ಯ, ಯಂತ್ರಾಂಶ–ತಂತ್ರಾಂಶಗಳ ಮಾಹಿತಿ, ಕಂಪ್ಯೂಟರ್ ಭಾಷೆಗಳು, ಕಂಪ್ಯೂಟರ್ ಅನ್ವಯ, ಕಾರ್ಯಕ್ರಮಗಳ ಬಗ್ಗೆ ತಿಳಿವಳಿಕೆ ಇತ್ಯಾದಿ ಅಂಶಗಳನ್ನು ಒಳಗೊಂಡಿದೆ. ಕಂಪ್ಯೂಟರ್ ಆಧಾರಿತ ಕಲಿಕೆಯು ಈ ಎಲ್ಲಾ ಅಂಶಗಳನ್ನು ಕಲಿಯುವ ಉದ್ದೇಶ ಹೊಂದಿರುವುದಿಲ್ಲ. ಕಂಪ್ಯೂಟರ್ ಕಲಿಕೆಯು ಕಂಪ್ಯೂಟರ್ ಮೂಲಕ ವ್ಯಾಸಂಗ, ಕಂಪ್ಯೂಟರ್ ಬಳಸಿಕೊಂಡು ಜ್ಞಾನಾರ್ಜನೆ ಮಾಡುವುದಾಗಿದೆ. ಅಂದರೆ ಕಂಪ್ಯೂಟರ್ ಬೆಂಬಲಿತ ಕಲಿಕೆಯು ಕಂಪ್ಯೂಟರ್‌ನ ವಿಶಿಷ್ಟ ಸಾಮರ್ಥ್ಯ ಮತ್ತು ಸೌಲಭ್ಯಗಳನ್ನು ಬಳಸಿಕೊಂಡು ಕಲಿಕೆ ಉದ್ದೇಶಗಳನ್ನು ಈಡೇರಿಸುವುದಾಗಿದೆ. ಇಲ್ಲಿ ಕಂಪ್ಯೂಟರನ್ನು ಕಲಿಕೆ ಪ್ರಕ್ರಿಯೆಯಲ್ಲಿ ಒಂದು ಸಾಧನವನ್ನಾಗಿ ಬಳಸಿಕೊಳ್ಳಲಾಗುತ್ತದೆ.

Digitised by Bharatavani, CIIL

ಅಂದರೆ ಕಂಪ್ಯೂಟರ್ ಒಂದು ರೀತಿಯಲ್ಲಿ ಶಿಕ್ಷಕನ ಕಾರ್ಯವನ್ನು ನಿರ್ವಹಿಸುತ್ತದೆ ಎಂದು ಹೇಳಬಹುದು. ತರಗತಿಯ ಸಾಂಪ್ರದಾಯಿಕ ಕಲಿಕೆಯು ಕೆಲವು ಸಮಸ್ಯೆ ಮತ್ತು ಪರಿಮಿತಿಗಳನ್ನು ಒಳಗೊಂಡಿದೆ. ಸಮಾನ ಗುಣಮಟ್ಟ/ಸಾಮರ್ಥ್ಯ ಹೊಂದಿರುವ ಶಿಕ್ಷಕರ ಅಲಭ್ಯತೆಯಿಂದ ಏಕರೂಪದ ಸಮಾನ ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯವಾಗುತ್ತಿಲ್ಲ. ಶಿಕ್ಷಕ ವಿದ್ಯಾರ್ಥಿಗಳ ಅನುಪಾತ ಕ್ರಮೇಣ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳ ಕಡೆ ವೈಯಕ್ತಿಕವಾಗಿ ಗಮನಹರಿಸಲು ಸಾಧ್ಯವಾಗುತ್ತಿಲ್ಲ. ಕಲಿಕೆಯ ಜೊತೆ ಜೊತೆಯಲ್ಲೇ ಪರಿಣಾಮಕಾರಿಯಾದ ಹಿಮ್ಮಾಹಿತಿ, ಪ್ರಗತಿ ಚಿತ್ರಣ ಹಾಗೂ ಪುಷ್ಟೀಕರಣ ಇವುಗಳನ್ನು ಒದಗಿಸುವುದು ಸಾಂಪ್ರದಾಯಿಕ ಬೋಧನಾ ವಿಧಾನಗಳ ಬಳಕೆಯಿಂದ ಕಷ್ಟ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕಂಪ್ಯೂಟರ್ ಬೆಂಬಲಿತ ಕಲಿಕೆಯು, ವಿದ್ಯಾರ್ಥಿಕಲಿಕೆಯನ್ನು ವೈಯಕ್ತೀಕರಿಸುವ ಪ್ರಯತ್ನವಾಗಿದೆ. ಈ ಕ್ರಮದಲ್ಲಿ ವ್ಯಕ್ತಿ ಭಿನ್ನತೆಗಳನ್ನು ಗಣನೆಗೆ ತೆಗೆದುಕೊಂಡು ವಿದ್ಯಾರ್ಥಿ ತನ್ನ ಸಾಮರ್ಥ್ಯ, ಕಲಿಯುವ ಗತಿಗನುಗುಣವಾಗಿ ಕಲಿಕೆಯು ಸಾಗುತ್ತದೆ. ಇಲ್ಲಿ ಕಲಿಕೆ ವಿದ್ಯಾರ್ಥಿಯ ಸ್ವನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ವಿದ್ಯಾರ್ಥಿಯು ಸತತವಾಗಿ ಕಂಪ್ಯೂಟರ್ ಜೊತೆ ಸಂವಹನದಲ್ಲಿ ಭಾಗಿಯಾಗುತ್ತಾನೆ. ಬೋಧನೆ ಹಾಗೂ ಕಲಿಕೆ ನಡುವೆ ಸ್ಪಷ್ಟ ವ್ಯತ್ಯಾಸಗಳಿದ್ದರೂ ಕಂಪ್ಯೂಟರ್ ಆಧಾರಿತ ಬೋಧನೆ ಹಾಗೂ ಕಂಪ್ಯೂಟರ್ ಆಧಾರಿತ ಕಲಿಕೆ ಇವುಗಳನ್ನು ಪರ್ಯಾಯ ಅರ್ಥದಲ್ಲಿ ಬಳಸಲಾಗುತ್ತದೆ.

ಪೂರ್ವಯೋಜಿತ (ಕ್ರಮಾನುಗತ) ಕಲಿಕೆಯ ತತ್ವವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇದಕ್ಕನುಗುಣವಾಗಿ ಕಲಿಕೆಯ ಸಾಮಗ್ರಿ (Learning material) ಯನ್ನು ಚಿಕ್ಕ ಅಂಶಗಳ (Frames) ರೂಪದಲ್ಲಿ ಹಂತ ಹಂತವಾಗಿ ಕಂಪ್ಯೂಟರ್ ಮೂಲಕ ಪ್ರಸ್ತುತಪಡಿಸಲಾಗುತ್ತದೆ. ಈ ಹಂತಗಳು ನಿರ್ಧಾರಿತ ಕ್ರಮದಲ್ಲಿ ಜೋಡಿಸಲ್ಪಟ್ಟಿರುತ್ತವೆ. ಪ್ರತಿಯೊಂದು ಹಂತದ ಕಲಿಕೆಯು ವಿದ್ಯಾರ್ಥಿ ಸಕ್ರಿಯವಾಗಿ ಪ್ರತಿಕ್ರಿಯಿಸುವ ಸೌಲಭ್ಯವನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಹಂತದ ಕಲಿಕೆಯ ನಂತರ, ಅದಕ್ಕೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ವಿದ್ಯಾರ್ಥಿ ಉತ್ತರಿಸಬೇಕಾದ ಅಗತ್ಯವಿರುತ್ತದೆ. ವಿದ್ಯಾರ್ಥಿಯ ಉತ್ತರವನ್ನು ಪೂರ್ವ ನಿರ್ಧಾರಿತ ಉತ್ತರ ಪಟ್ಟಿಗೆ ಹೋಲಿಸುವ ಕಾರ್ಯವನ್ನು ಕಂಪ್ಯೂಟರ್ ನಿರ್ವಹಿಸುತ್ತದೆ. ಉತ್ತರ ಸರಿಯಾಗಿದ್ದರೆ ಕಲಿಕೆಯ ಕಾರ್ಯ ಮುಂದುವರಿಸಲು ವಿದ್ಯಾರ್ಥಿಗೆ ಸೂಚನೆ ನೀಡಲಾಗುತ್ತದೆ. ಉತ್ತರ ತಪ್ಪಾಗಿದ್ದರೆ ಸರಿಯಾದ ಉತ್ತರ ಒದಗಿಸಲು ಪುನಃ ಪ್ರಯತ್ನಿಸುವಂತೆ ಅವಕಾಶ ಒದಗಿಸಲಾಗುತ್ತದೆ. ಅಲ್ಲದೆ, ಉತ್ತರ ಏಕೆ ಸರಿಯಾಗಿಲ್ಲ ಎಂಬುದರ ಬಗ್ಗೆ ವಿವರಣೆ ಒದಗಿಸಲಾಗುವುದು. ಹೀಗೆ ಕಲಿಕೆ ಪ್ರಕ್ರಿಯೆ ಮುಂದುವರೆಯುತ್ತದೆ.

### ಕಂಪ್ಯೂಟರ್ ಆಧಾರಿತ ಕಲಿಕೆಯ ಕ್ರಮಗಳು

ಟ್ಯುಟೋರಿಯಲ್ ಕ್ರಮ, ರೂಢಿ ಮತ್ತು ಅಭ್ಯಾಸ ಆಧಾರಿತ ಕ್ರಮ, ಗಣನೆ ಆಧರಿಸಿದ ಕ್ರಮ, ಆಟ/ವಿನೋದ ಆಧಾರಿಸಿದ ಕ್ರಮ, ಸಿಮ್ಯುಲೇಷನ್ ಕ್ರಮ, – ಇವುಗಳು ಕಂಪ್ಯೂಟರ್ ಆಧಾರಿತ ಕ್ರಮಗಳೆಂದು ಗುರುತಿಸಲ್ಪಡುತ್ತವೆ. ಇವುಗಳ ಸಂಕ್ಷಿಪ್ತ ವಿವರಣೆ ಹೀಗಿದೆ.

**ಟ್ಯುಟೋರಿಯಲ್ ಕ್ರಮ:** ಕಂಪ್ಯೂಟರ್ ಮೂಲಕ ವಿದ್ಯಾರ್ಥಿಗಳಿಗೆ ಹಂತ ಹಂತವಾಗಿ ಪಾಠ ಒದಗಿಸುವ ಕ್ರಮ ಇದಾಗಿದೆ. ತಥ್ಯಾಂಶಗಳು, ಪರಿಕಲ್ಪನೆ, ನಿಯಮ, ತತ್ವಗಳ ಇತ್ಯಾದಿ ರೂಪದ ಕಲಿಕೆಯ ವಿಷಯವನ್ನು ವಿದ್ಯಾರ್ಥಿಗೆ ವೈಯಕ್ತಿಕವಾಗಿ ತಲಪಿಸುವ ಪ್ರಯತ್ನವನ್ನು ಈ ಕ್ರಮ ಒಳಗೊಂಡಿದೆ. ಇಲ್ಲಿ ವಿದ್ಯಾರ್ಥಿ ತನ್ನ ಸಾಮರ್ಥ್ಯ, ಕಲಿಯುವ ಗತಿ, ಅಗತ್ಯಗಳಿಗನುಗುಣವಾಗಿ ಕಲಿಕೆಯ ಭಾಗಗಳನ್ನು ಆಯ್ಕೆಮಾಡಿ ಕಲಿಕೆಯನ್ನು ಪ್ರಾರಂಭಿಸಿ ಮುಂದುವರೆಸುವ ಹಾಗೂ ತಾತ್ಕಾಲಿಕವಾಗಿ ನಿಲುಗಡೆಗೆ ಒಳಪಡಿಸಿಕೊಳ್ಳಲು ಸ್ವತಂತ್ರನಾಗಿರುತ್ತಾನೆ. ಕಲಿಯಲು ಸಹಾಯವಾಗುವಂತೆ ಪಠ್ಯ ಸಾಮಗ್ರಿ, ದೃಶ್ಯ ಸಂಬಂಧಿತ ಹಾಗೂ ಬಹುಮಾಧ್ಯಮ ಸಲಕರಣೆ ಪರಿಣಾಮಗಳನ್ನು ಕಂಪ್ಯೂಟರ್ ಮೂಲಕ ಒದಗಿಸಲಾಗುವುದು. ಕಲಿಯುವ ಪಾಠಗಳು ಕಂಪ್ಯೂಟರ್‌ನ ಹಾರ್ಡ್ ಡಿಸ್ಕಿನಲ್ಲಿ ಅಥವಾ ಸಿಡಿಯಲ್ಲಿ ಶೇಖರಿಸಲ್ಪಟ್ಟಿದ್ದಾಗಿರಬಹುದು ಅಥವಾ ಆನ್‌ಲೈನ್‌ನಲ್ಲಿ ಕಲಿಯುವಂತಹ ವ್ಯವಸ್ಥೆ ಹೊಂದಿರಬಹುದು.

### ರೂಢಿ ಮತ್ತು ಅಭ್ಯಾಸ ಆಧಾರಿತ ಕಲಿಕೆ ಕ್ರಮ

ಕಲಿತ ವಿಷಯಗಳನ್ನು ಆಧರಿಸಿ ನಿಯಂತ್ರಿತ ಹಾಗೂ ವ್ಯವಸ್ಥಿತ ರೂಪದಲ್ಲಿ ರೂಢಿಕಾರ್ಯ ಮತ್ತು ಅಭ್ಯಾಸಗಳನ್ನು ಕಂಪ್ಯೂಟರ್ ಮೂಲಕ ಒದಗಿಸುವುದು ಹಾಗೂ ಬಳಸಿಕೊಳ್ಳುವುದು ಈ ಕ್ರಮದ ಉದ್ದೇಶವಾಗಿದೆ. ಕಂಪ್ಯೂಟರ್‌ನ ವಿಶೇಷತೆಗಳನ್ನು ಬಳಸಿಕೊಂಡು ಪಠ್ಯ, ಚಿತ್ರ, ನಕ್ಷೆ ಮತ್ತಿತರ ದೃಶ್ಯ ರೂಪದ ಅಂಶಗಳನ್ನು ನಿಯಂತ್ರಿಕ ಸಮಸ್ಯೆ, ಚಟುವಟಿಕೆ, ಪ್ರಶ್ನೆ ಇತ್ಯಾದಿಗಳನ್ನು ಗೊತ್ತಾದ ಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಒದಗಿಸುವ ಸೌಲಭ್ಯಗಳನ್ನು ಇದು ಹೊಂದಿದೆ. ಈ ಸೌಲಭ್ಯದ ಸಹಾಯದಿಂದ ಬೇರೆ ಬೇರೆ ವಿದ್ಯಾರ್ಥಿಗಳಿಗೆ ಸಮಾನ ಅಥವಾ ವಿಭಿನ್ನ ಕ್ಲಿಷ್ಟತೆ ಹೊಂದಿರುವ ಬೇರೆ ಬೇರೆ ಅಭ್ಯಾಸಗಳನ್ನು ಒದಗಿಸಬಹುದಾಗಿದೆ. ವಿದ್ಯಾರ್ಥಿಗಳ ಪ್ರಗತಿ, ಸಾಧನೆಗಳನ್ನು ವೈಯಕ್ತಿಕವಾಗಿ ತಿಳಿಸುವ / ತಿಳಿಯುವ ಅವಕಾಶ ಇಲ್ಲಿದೆ. ಮಾಡಿರುವ ತಪ್ಪುಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ವಿದ್ಯಾರ್ಥಿಗೆ ಒದಗಿಸಬೇಕಾದ ಅಭ್ಯಾಸಗಳನ್ನು ಗುರುತಿಸಿ ಉಪಯುಕ್ತ ನಿರ್ದೇಶನಗಳನ್ನು ಕಂಪ್ಯೂಟರ್ ಒದಗಿಸುತ್ತದೆ. ವಿದ್ಯಾರ್ಥಿಗಳ ತಪ್ಪುಗಳನ್ನು ಗುರುತಿಸಿ, ವಿಶ್ಲೇಷಿಸಿ ಪರಿಹಾರ ಮಾರ್ಗಗಳನ್ನು ಒದಗಿಸಲು ಈ ಕ್ರಮದಲ್ಲಿ ಅವಕಾಶವಿದೆ.

**ಸಿಮ್ಯುಲೇಷನ್ ಕ್ರಮ:** ಕೆಲವು ಆಯ್ದ ವಿಷಯಗಳನ್ನು ಕಲಿಸುವಾಗ ಕಂಪ್ಯೂಟರ್ ಬಳಸಿಕೊಂಡು ನಿಜವಾದ ಸನ್ನಿವೇಶಗಳ ಭ್ರಮೆಯನ್ನು ಉಂಟುಮಾಡಿ ವಾಸ್ತವತೆಗೆ ಹತ್ತಿರವಾದ ಸನ್ನಿವೇಶಗಳನ್ನು ಸೃಷ್ಟಿಸಿ, ಕಾರ್ಯಕ್ರಮ ಯೋಜಿಸಿ ಕಲಿಕೆ ಉಂಟುಮಾಡಲು ಸಾಧ್ಯ. ಈ ಕ್ರಮವನ್ನು ಅನುಸರಿಸಿ ಕಲಿಯುವ ಸೌಲಭ್ಯವನ್ನು ಸಿಮ್ಯುಲೇಷನ್ ಕ್ರಮ ಎಂದು ಕರೆಯುತ್ತಾರೆ. ಅಪಾಯಕಾರಿ ಸನ್ನಿವೇಶ, ನೈಜ ಸಾಧನ ಸಲಕರಣೆಗಳ ಅಲಭ್ಯತೆ, ಸಂಕೀರ್ಣತೆ, ಸುದೀರ್ಘ, ಸಮಯದ ಕೊರತೆ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಸಿಮ್ಯುಲೇಷನ್ ಕ್ರಮವನ್ನು ಬಳಸಲಾಗುತ್ತದೆ. ಪರಿಣತಿ, ನೈಪುಣ್ಯಗಳನ್ನು ಬೆಳೆಸುವುದಲ್ಲದೆ ಪ್ರಾಕಲ್ಪನೆ (hypothesis) ರೂಪಿಸುವುದು. ತೀರ್ಮಾನ ಕೈಗೊಳ್ಳುವುದು ಇತ್ಯಾದಿಗಳಿಗೆ ತರಬೇತಿ ನೀಡುವುದು ಸಿಮ್ಯುಲೇಷನ್ ಮೂಲಕ ಸಾಧ್ಯ.

### ಲೆಕ್ಕಾಚಾರ / ಗಣನೆ ಆಧರಿಸಿದ ಕಲಿಕೆ ಕ್ರಮ

ಸಂಕೀರ್ಣ ಎಣಿಕೆ, ಕ್ಲಿಷ್ಟ ಲೆಕ್ಕಾಚಾರ ಇವುಗಳಿಗೆ ಸಂಬಂಧಪಟ್ಟಂತೆ ಕಂಪ್ಯೂಟರ್ ತಂತ್ರಗಳು ಹಾಗೂ ಸಾಧ್ಯತೆಗಳನ್ನು ಬಳಸಿಕೊಳ್ಳುವುದೇ ಈ ಕ್ರಮದ ಪ್ರಮುಖ ಉದ್ದೇಶವಾಗಿದೆ. ದೊಡ್ಡ ದೊಡ್ಡ ಸಂಖ್ಯೆಗಳನ್ನು ಒಳಗೊಂಡ ಲೆಕ್ಕಾಚಾರ ಮಾಡುವಾಗ, ಸಂಕೀರ್ಣ ರೀತಿಯ ಸೂತ್ರಗಳನ್ನು ಬಳಸಿಕೊಳ್ಳುವಾಗ, ವಿಜ್ಞಾನ ಪ್ರಯೋಗಾಲಯಗಳಲ್ಲಿ ಅಪಾರ ಪ್ರಮಾಣದ ಅಂಕಿ–ಅಂಶ ಸಂಸ್ಕರಣೆ ಮತ್ತು ನಿರ್ವಹಣೆಯಲ್ಲಿ, ಸಂಶೋಧನೆ ಪ್ರಕ್ರಿಯೆಯಲ್ಲಿ ಕಂಪ್ಯೂಟರನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾಗಿದೆ. ಈ ಪ್ರಕ್ರಿಯೆಯನ್ನು ಲೆಕ್ಕಾಚಾರ/ಗಣನೆ ಆಧಾರಿತ ಕಲಿಕ ಕ್ರಮ ಎಂದು ಕರೆಯಲಾಗುತ್ತದೆ.

Digitised by Bharatavani, CIIL

### ಆಟ/ಮನೋರಂಜನೆ ಆಧರಿಸಿದ ಕಂಪ್ಯೂಟರ್ ಕಲಿಕೆ ಕ್ರಮ

ಕಾಗುಣಿತ, ವ್ಯವಹಾರ ಜ್ಞಾನ, ಪದ ಸಂಪತ್ತು, ಹಸ್ತ ನೈಪುಣ್ಯತೆ, ವೀಕ್ಷಣೆ, ಆಲೋಚನಾ ಸಾಮರ್ಥ್ಯ, ನೆನಪಿನ ಶಕ್ತಿ, ಚುರುಕುತನ, ಸಮಯ ಪ್ರಜ್ಞೆ, ಕಲ್ಪನಾಶಕ್ತಿ, ಸಾಹಸ, ಧೈರ್ಯ ಮೊದಲಾದವುಗಳನ್ನು ಬೆಳೆಸಲು/ ವೃದ್ಧಿಸಲು ಕಂಪ್ಯೂಟರ್ ಆಟಗಳು ಸಹಾಯ ಮಾಡುತ್ತವೆ. ದರ್ಶಕದ ಮೂಲಕ ಒದಗಿಸಲ್ಪಡುವ ಸೂಚನೆ, ನಿರ್ದೇಶನಗಳನ್ನು ಅರ್ಥಮಾಡಿಕೊಳ್ಳುವುದು, ಪಾಲಿಸುವುದು ಈ ಕಲಿಕೆ ಕ್ರಮದಿಂದ ಸಾಧ್ಯ. ಈ ಕ್ರಮದ ಉದ್ದೇಶ ಮನೋರಂಜನೆ/ವಿನೋದ ಒದಗಿಸುವುದಾಗಿದ್ದರೂ ಸಹ ಕಂಪ್ಯೂಟರ್ ಯಂತ್ರವು ಅಪೇಕ್ಷಿತ ಕಲಿಕೆಯ ಸನ್ನಿವೇಶ ಹಾಗೂ ಚಟುವಟಿಕೆಗಳನ್ನು ಒದಗಿಸುತ್ತದೆ. ಈ ರೀತಿಯ ಕಂಪ್ಯೂಟರ್ ಕಲಿಕೆ ಕ್ರಮವು ಉತ್ತಮ ಪ್ರೇರಣಾ ಮೌಲ್ಯವನ್ನು ಹೊಂದಿದೆ.

### ಕಂಪ್ಯೂಟರ್ ಆಧಾರಿತ ಕಲಿಕೆಯ ಉತ್ತಮ ಅಂಶಗಳು ಮತ್ತು ಮಿತಿಗಳು

ಕಂಪ್ಯೂಟರ್ ಆಧಾರಿತ ಕಲಿಕೆಯನ್ನು ಇತರ ಬೋಧನಾ ವಿಧಾನಗಳ ಜೊತೆ ಬಳಸಿಕೊಂಡಾಗ ವಿದ್ಯಾರ್ಥಿಗಳ ಕಲಿಕೆಯ ದಕ್ಷತೆ ಮತ್ತು ಗುಣಮಟ್ಟ ಸುಧಾರಿಸುತ್ತದೆ. ಬೋಧನೆಯನ್ನು ವೈಯಕ್ತೀಕರಿಸಲು ವಿಶೇಷ ಅವಕಾಶ ಒದಗುತ್ತದೆ. ಕಲಿಕೆಯ ಗತಿ ವಿದ್ಯಾರ್ಥಿಯ ಹತೋಟಿಯಲ್ಲಿರುತ್ತದೆ. ವಿದ್ಯಾರ್ಥಿ ಕಲಿಕೆಯಲ್ಲಿ ಪಾಲ್ಗೊಳ್ಳಲು ಸೂಕ್ತ ವಾತಾವರಣ ಕಲ್ಪಿಸುತ್ತದೆ.

ಆದರೆ ಇದು ಶಿಕ್ಷಕನ ಜೊತೆ ನೇರ ಮುಖಾಮುಖಿ ಸಂಪರ್ಕದ ಕೊರತೆ ಹೊಂದಿದೆ. ಕಲಿಕೆ ತೀರಾ ಯಾಂತ್ರಿಕವಾದಾಗ ವಿದ್ಯಾರ್ಥಿಗಳಲ್ಲಿ ನಿರುತ್ಸಾಹ, ಸವಾಲಿನ ಕೊರತೆ ಕಂಡುಬರುತ್ತದೆ. ಸೃಜನಶೀಲತೆ, ಸ್ವಂತಿಕೆ ಇವುಗಳ ಬೆಳವಣಿಗೆಗೆ ಅವಕಾಶ ಕಡಿಮೆ.

– ಎ.ಶ್ರೀ

## ಶಿವರಾಮಕಾರಂತರ ಶೈಕ್ಷಣಿಕ ಚಿಂತನೆಗಳು

ಶಿವರಾಮ ಕಾರಂತರು ಕನ್ನಡ ಸಮಾಜದ ವಿಶಿಷ್ಟ ಪ್ರತಿಭೆ. ಕಾರಂತರು ಈ ಸಮಾಜದ ಎಲ್ಲ ಕ್ಷೇತ್ರಗಳನ್ನು ಕುರಿತು ಚಿಂತಿಸಿದವರು. ಕ್ರಿಯಾಶೀಲರಾಗಿದ್ದವರು. ಅವರ ಈ ಕ್ರಿಯಾಶೀಲತೆ ಅವರನ್ನು ಬದುಕಿರುವಾಗಲೇ ಸಂಕೇತವಾಗುವಂತೆ ಮಾಡಿತು. ಕಾರಂತರ ಬಹುಮುಖ ಪ್ರತಿಭೆ, ಕಲೆ, ವಿಜ್ಞಾನ, ಸಾಹಿತ್ಯ, ವೈಚಾರಿಕತೆ, ಶಿಕ್ಷಣ, ಸಾಮಾಜಿಕ ಸುಧಾರಣೆ, ಆರ್ಥಿಕ, ಧಾರ್ಮಿಕ ಹೀಗೆ ಎಲ್ಲ ಜ್ಞಾನ ಕ್ಷೇತ್ರಗಳಲ್ಲೂ ಅಸಾಮಾನ್ಯ ಕಾರ್ಯಸಿದ್ಧಿಯನ್ನು ಸಾಧಿಸಿದೆ. ಅವರ ಈ ಪ್ರತಿಭೆ ಕೇವಲ ಔಪಚಾರಿಕತೆಗೆ ಈ ಎಲ್ಲ ಕ್ಷೇತ್ರಗಳನ್ನು ಗಮನಿಸಿದ್ದಲ್ಲ. ಈ ಜ್ಞಾನಕ್ಷೇತ್ರದ ಹಿಂದೆ ಇರುವ ಜ್ಞಾನದ ಅರಿವಿಗೆ, ತೀವ್ರ ಕುತೂಹಲಕಾರಿಯಾಗಿ ಕ್ರಿಯಾಶೀಲವಾಗಿದೆ. ಇವೆಲ್ಲವನ್ನು ಗಮನಿಸಿದರೆ ಒಬ್ಬ ವ್ಯಕ್ತಿ ಇಷ್ಟೆಲ್ಲವನ್ನೂ ಸಾಧಿಸಿದರೇ ಎಂದು ಆಶ್ಚರ್ಯ ಉಂಟಾಗುತ್ತದೆ. ಹಾಗೆ ನೋಡಿದರೆ ಕಾರಂತರು ನಮ್ಮ ಅರ್ಥದಲ್ಲಿ ಪರಿಗಣಿಸುವ ವಿಶೇಷವಾದ ಶಿಕ್ಷಣವನ್ನು ಪಡೆದವರಲ್ಲ. ಕಾಲೇಜು ಶಿಕ್ಷಣಕ್ಕೆ ಕಾಲಿರಿಸುತ್ತಿದ್ದಂತೆ ಆ ಕಲಿಕೆಯ ಕ್ರಮದಿಂದ ಬೇಸತ್ತು, ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದವರು. ಆದರೆ ಕಾಲಾಂತರದಲ್ಲಿ ಕಾರಂತರು


ಶಿವರಾಮಕಾರಂತ

ಶಿಕ್ಷಣವನ್ನು ಅದರ ಎಲ್ಲ ವಿವಿಧ ಆಯಾಮಗಳಿಂದ ಗಂಭೀರವಾಗಿ ಚಿಂತಿಸಿದವರು. ಶಿಕ್ಷಣದ ಪ್ರಗತಿಗಾಗಿ ಶ್ರಮಿಸಿದವರು. ಕುತೂಹಲದಾಯಕವಾದ ಸಂಗತಿಯೆಂದರೆ ಕಾರಂತರಷ್ಟು ಶಿಕ್ಷಣವನ್ನು ಕುರಿತು ಗಂಭೀರವಾಗಿ ಚಿಂತಿಸಿದ ಮತ್ತೊಬ್ಬ ಸೃಜನಶೀಲ ಬರಹಗಾರನಿಲ್ಲವೆಂದರೂ ಅತಿಶಯೋಕ್ತಿ ಅಲ್ಲ. ಅವರ ಚಿಂತನೆಯ ವಿಶ್ವಾಸಾರ್ಹತೆ (ಅಥೆಂಟಿಸಿಟಿ) ಬಗ್ಗೆ ನಮಗೆ ಪ್ರಶ್ನೆಗಳಿರಬಹುದು. ಆದರೆ ಅವರ ಚಿಂತನೆಯ ಹಿಂದಿನ ಅರಿವಿನ ಹಂಬಲ ಮತ್ತು ಕ್ರಿಯಾಶೀಲತೆಯ ಬಗ್ಗೆ ಅಲ್ಲ.

ಕಾರಂತರನ್ನು ಕೇವಲ ಅವರ ಕಾದಂಬರಿ ಮತ್ತು ಇತರ ಸಾಹಿತ್ಯದ ಹಿನ್ನೆಲೆಯಿಂದ ಕನ್ನಡ ಸಮಾಜ ಗಮನಿಸಿದ್ದೇ ಹೆಚ್ಚು. ಆದರೆ ಶಿಕ್ಷಣವನ್ನು ಕುರಿತು ಕಾರಂತರು ನಡೆಸಿರುವ ಅಧ್ಯಯನ, ಚಿಂತನೆ, ಪ್ರಯೋಗ ಗಮನಾರ್ಹವಾದುದು ಮತ್ತು ಮಹತ್ವದ್ದು. ಹುಚ್ಚು ಮನಸ್ಸಿನ ಹತ್ತು ಮುಖಗಳು, ಸ್ಮೃತಿ ಪಟಲದಿಂದ, ವಿಜ್ಞಾನ ಪ್ರಪಂಚ, ಬಾಲಪ್ರಪಂಚ, ಸಿರಿಗನ್ನಡ ಅರ್ಥಕೋಶ, ಅದ್ಭುತ ಜಗತ್ತು, ಕಾರಂತರ ಬಿಡಿ ಬರಹಗಳು, ಪುಸ್ತಕಗಳಲ್ಲಿ ಕಾರಂತರ ಶೈಕ್ಷಣಿಕ ಚಿಂತನೆಯ ಬಗ್ಗೆ ಸಾಕಷ್ಟು ವಿವರಗಳಿವೆ. ಸಾವಿರಾರು ಪುಟಗಳು ಶಿಕ್ಷಣವನ್ನು ಕುರಿತು ಬರೆದಿದ್ದಾರೆ. ಅದರಲ್ಲೂ ಅವರ ವಿಜ್ಞಾನ ಪ್ರಪಂಚ, ಬಾಲ ಪ್ರಪಂಚ, ಸಿರಿಗನ್ನಡ ಅರ್ಥಕೋಶ, ಸಂಪುಟಗಳು ಕಾರಂತರ ಶಿಕ್ಷಣವನ್ನು ಕುರಿತ ಗಂಭೀರ ಚಿಂತನೆಯನ್ನು ಸಾರುತ್ತವೆ. ಕಾರಂತರು ಶಿಕ್ಷಣವನ್ನು ವಿಶಾಲವಾದ ಅರ್ಥದಲ್ಲಿ ಗ್ರಹಿಸಿದವರಾಗಿದ್ದಾರೆ. "ಸ್ಮೃತಿಪಟಲದ ಶಿಕ್ಷಣ ಮತ್ತು ನಾನು" ಎಂಬ ಭಾಗದ "ಅರಿವಿಗೆ ಬರುವ ಮುಂಚೆ" ಎಂಬ ಭಾಗದಲ್ಲಿ ಇದನ್ನು ನೋಡಬಹುದು. "ಮನುಷ್ಯನ ಬದುಕು ಮಾತ್ರವಲ್ಲ, ವಿಕಾಸಗೊಂಡ ಹಲವು ಬಗೆಯ ಪಶುಪ್ರಾಣಿಗಳ ಬದುಕು ಸಹ ಶಿಕ್ಷಣವನ್ನು ಅವಲಂಬಿಸಿದೆ" ಎನ್ನುತ್ತಾರೆ.

ಜಗತ್ತಿನಲ್ಲಿ ವಾಸಿಸುವ ಪ್ರತಿ ಪ್ರಾಣಿಯೂ ಮನುಷ್ಯನನ್ನು ಸೇರಿ, ಎರಡು ಮುಖ್ಯ ಉದ್ದೇಶಗಳನ್ನು ಹೊಂದಿರುತ್ತದೆ. ಒಂದು ತನ್ನ ಆಹಾರ ಸಂಪಾದನೆ ಹಾಗೂ ಇನ್ನೊಂದು ತಾನು ಬೇರೆ ಪ್ರಾಣಿಗಳಿಗೆ ಆಹಾರವಾಗದಂತೆ ತನ್ನ ರಕ್ಷಣೆ ಮಾಡಿಕೊಳ್ಳುವುದು. ಈ ಪ್ರಕ್ರಿಯೆ ಎರಡು ರೀತಿ ಸಾಧ್ಯವಾಗುತ್ತದೆ. ಒಂದು ಅನುವಂಶಿಕತೆಯಿಂದ; ಒಂದು ಪ್ರಾಣಿ ಸತತವಾಗಿ ತನ್ನ ಹಿರಿಯರನ್ನು ಅನುಸರಿಸುತ್ತ ಅನುವಂಶಿಕತೆಯಿಂದ ಬರುವಂತಹದ್ದು! ಇವು ಕಲಿಕೆಯ ಕ್ರಮವನ್ನೇ ಅವಲಂಬಿಸುತ್ತವೆ. ಆದರೆ ಮನುಷ್ಯನಿಗೆ ಪ್ರಾಣಿಗಳಿಗೆ ಸಹಜವಾಗಿ ಇರುವ ಬಲಾಢ್ಯತೆ, ಸ್ವಾಭಾವಿಕವಾಗಿ ಇರುವ ಹಲ್ಲು, ಉಗುರಿನಂತಹ ಆಯುಧಗಳು ಇಲ್ಲದಿರುವುದರಿಂದ ಆತ ಮುಂದುವರೆದು ಯೋಚಿಸಬೇಕಾಗಿ ಬಂತು. ದೇಹ ಬಲದ ಕೊರತೆಯನ್ನು ಆತ ವಿವಿಧ ಆಯುಧಗಳ ಉಪಯೋಗದಿಂದ ಹೆಚ್ಚಿಸಿಕೊಳ್ಳಬೇಕು. ಬಿಲ್ಲು, ಬಾಣ ಹಿಡಿಯುವುದೊಂದು ಉಪಾಯ! ಒಂಟಿಯಾಗಿ ಇದಿರಿಸಲಾಗದ ಬೇಟೆಯನ್ನು ಗುಂಪು ಸೇರಿ ಅಟ್ಟಿ, ಓಡಿಸಿ ಬಲಿ ಹಾಕುವುದು ಮನುಷ್ಯ ಕಲಿತುಕೊಂಡ ಇನ್ನಿತರ ಉಪಾಯಗಳು. ಇಲ್ಲಿ ಬುದ್ಧಿ ಬಲ ಮತ್ತು ಗುಂಪಿನ ಬಲ, ಶಿಸ್ತುಗಳು ಅವನಿಗೆ ನೆರವಾಗುತ್ತವೆ. ಇವೆಲ್ಲವೂ ಅವನಿಗೆ ಕಲಿಕೆಯಿಂದ ಬರಬೇಕಾದವು. ಅವನಲ್ಲಿ ಹುಟ್ಟಿನೊಡನೆ ಕಾಣಿಸಿಕೊಳ್ಳುವ ಸ್ವಾಭಾವಿಕ ಗುಣಗಳಲ್ಲ. ಪ್ರಾಣಿ ಹಾಗೂ ಮನುಷ್ಯನ ನಡುವೆ ಕಲಿಕೆಯ ವ್ಯತ್ಯಾಸವನ್ನು ಕಾರಂತರು ಸಹಜವಾಗಿಯೇ ಗುರುತಿಸುತ್ತಾರೆ. ಮನುಷ್ಯನಿಗೆ ಪ್ರಾಣಿಗಳಂತೆ ಕಲಿಕೆ ಯಾಕೆ ಮುಖ್ಯವಾಯಿತು ಎಂದು ಸೂಚಿಸುತ್ತಾರೆ. ಮನುಷ್ಯ ಹೀಗೆ ಪ್ರಾಣಿಯಿಂದ ಬೇರೆಯಾಗುತ್ತಿದ್ದಂತೆ ಆತ ಮತ್ತಷ್ಟು ಪ್ರತ್ಯೇಕಿತನಾಗಿ ನಾಗರಿಕನಾಗತೊಡಗಿದ. ನಾಗರಿಕನಾದಂತೆ ಆತನ ಕಲಿಕೆಯ ಕ್ರಮವೂ


Digitised by Bharatavani, CIIL

ಹೇಗೆ ಜ್ಞಾನವಾಗಿ ಬದಲಾಯಿತು ಎಂಬುದನ್ನು ಕಾರಂತರು ಸೂಚಿಸುತ್ತಾರೆ. ಕಾರಂತರ ಪ್ರಕಾರ ನಾಗರಿಕ ಮನುಷ್ಯನ ಜ್ಞಾನ, ಕಲಿಕೆಯ ಮೂರು ಪ್ರಧಾನ ಸಂಗತಿಗಳು 1. ಆಹಾರ ಸಂಪಾದನೆ, 2. ಆತ್ಮ ರಕ್ಷಣೆ 3. ಸಮಾಜಜೀವನ. ಮನುಷ್ಯ ಈ ಮೂರು ಸಂಗತಿಗಳನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬೋಧಿಸತೊಡಗಿದ.

ಭಾರತದಂತಹ ದೇಶದಲ್ಲಿ ಶಿಕ್ಷಣದ ಪ್ರಧಾನ ಸಂಗತಿಗಳು ಹೇಗೆ ರೂಢಿಗೊಂಡವು ಎಂಬುದನ್ನು ಕಾರಂತರು ಬಹಳ ವೈಚಾರಿಕವಾಗಿ ಗುರುತಿಸಲು ಪ್ರಯತ್ನಿಸುತ್ತಾರೆ. ಕೃಷಿ, ಕೈಗಾರಿಕೆ, ವ್ಯಾಪಾರ ಮುಂತಾದ ಹೊಟ್ಟೆಪಾಡಿನ ಮೂಲ ಆಶಯ ಉಳ್ಳವುಗಳನ್ನು, ಹೊಟ್ಟೆಪಾಡಿನ ಶಿಕ್ಷಣವನ್ನು, ಸೂರ್ಯ, ಚಂದ್ರ, ಗ್ರಹ, ನಕ್ಷತ್ರ ಮುಂತಾದ ಖಗೋಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಿಸರ್ಗ ಮತ್ತು ಕಾಲಸಂಬಂಧಿ ಶಿಕ್ಷಣವನ್ನು, ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ಶಿಕ್ಷಣವನ್ನು, ನಗರಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎಂಜಿನಿಯರಿಂಗ್ ಶಿಕ್ಷಣವನ್ನು, ಆತ್ಮರಕ್ಷಣೆ ಮತ್ತು ದೇಶದ ರಕ್ಷಣೆಗೆ ಯುದ್ಧ ಶಿಕ್ಷಣವನ್ನು, ಮಾನವನ ಭಾವನೆಗೆ ಸಂಬಂಧಿಸಿದಂತೆ ಮಾನವಿಕ ಶಿಕ್ಷಣವನ್ನು ಕಲಿಯುತ್ತಾ ಬಂದಿದ್ದೇವೆ. ಪುರಾತನ ನಾಗರಿಕತೆಗಳಲ್ಲಿ ಒಂದಾದ ಭಾರತೀಯ ನಾಗರಿಕತೆಯಲ್ಲಿ ಮಾನವನ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದಂತೆ ಅತ್ಯಂತ ವ್ಯವಸ್ಥಿತವಾಗಿ ಶಿಕ್ಷಣವನ್ನು ರೂಪಿಸಿಕೊಂಡು ಬರಲಾಗಿರುವ ಸಂಗತಿಯನ್ನು ಕಾರಂತರು ಗುರುತಿಸುತ್ತಾರೆ.

ಮುಂದೆ ಕಾರಂತರು ಸ್ಮೃತಿಪಟಲದಲ್ಲಿ 'ಬಾಲ್ಯದಲ್ಲಿ' ಎಂಬ ಅಧ್ಯಾಯದಲ್ಲಿ ತುಂಬಾ ಮಹತ್ವದ ಶಿಕ್ಷಣದ ಸಂಗತಿಗಳು ಕುರಿತು ತಮ್ಮ ಗ್ರಹಿಕೆಗಳನ್ನು ಅಭಿವ್ಯಕ್ತಿಸಿದ್ದಾರೆ. ಕಾರಂತರಿಗೆ ಬಾಲ್ಯದಲ್ಲಿ ಅಂದಿನ ಸಾಧಾರಣ ರೀತಿಯಲ್ಲಿಯೇ, ಸಾಂಪ್ರದಾಯಿಕ ರೀತಿಯಲ್ಲೇ, ಐಗಳ ಮಠದಲ್ಲಿ ವಿದ್ಯಾಭ್ಯಾಸ ನಡೆಯುತ್ತಿತ್ತು. ಈ ವ್ಯವಸ್ಥೆಯಲ್ಲಿ ಸರ್ಕಾರದ ಯಾವ ಪಾತ್ರವೂ ಇಲ್ಲ. ಶಿಕ್ಷಣ ಆಗ ಎಲ್ಲರ ಸೊತ್ತು ಆಗಿರಲಿಲ್ಲ. ಸಾಂಪ್ರದಾಯಿಕ ಶಿಕ್ಷಣದಲ್ಲಿ ಆಗ ಓದು, ಬರಹ, ಗಣಿತ ಮೂರೇ ಮುಖ್ಯ ವಿಷಯಗಳಾಗಿದ್ದವು. ಕಾಲ ಬದಲಾದರೂ ಈ ರೀತಿಯ ಕ್ರಮ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಹೀಗೆಯೇ ಮುಂದುವರೆಯುತ್ತಿರುವುದನ್ನು ಬಹಳ ವಿಷಾದದಿಂದ ಕಾರಂತರು ಉಲ್ಲೇಖಿಸುತ್ತಾರೆ.

ಕಾರಂತರ ಬಾಲ್ಯದ ಹೊತ್ತಿಗೆ ಬಾಸೆಲ್ ಮಿಷನ್ನಿನವರು ಶಾಲೆಗಳನ್ನು ತೆರೆದು ಎಲ್ಲರಿಗೂ ಶಿಕ್ಷಣ ಕೊಡಲು ಆರಂಭಿಸಿದ್ದರು. ಆಗ ಮೆಕ್ಮಲನ್ ಕಂಪನಿಯ ಪಠ್ಯ ಪುಸ್ತಕಗಳ ಹಾಗೂ ಬಾಸೆಲ್ ಮಿಶನ್ನಿನ ಮೂಲ ಪಾಠಿಕೆಗಳು ರೂಢಿಗೆ ಬರತೊಡಗಿದವು. ಆಂಗ್ಲರು ಪ್ರಭುತ್ವದ ನೇತೃತ್ವ ವಹಿಸಿದ್ದರಿಂದ ಆಂಗ್ಲಭಾಷೆಗೆ ಎಲ್ಲಿಲ್ಲದ ಬೇಡಿಕೆ ಬರತೊಡಗಿತು. ಕಾರಂತರು ತಮ್ಮ ಮುಂದಿನ ವಿದ್ಯಾಭ್ಯಾಸವನ್ನು ಬಾಸೆಲ್ ಮಿಶನ್ನಿನಲ್ಲೆ ಮುಂದುವರೆಸುತ್ತಾರೆ. ಕಾರಂತರ ತಂದೆಯವರಿಗೆ ಮಗ ಆಧುನಿಕ ವಿದ್ಯಾಭ್ಯಾಸವನ್ನು ಪಡೆಯಬೇಕೆಂಬ ಹಂಬಲ. ಈ ಸಂದರ್ಭದಲ್ಲಿಯೇ ಕಾರಂತರ ವೈಚಾರಿಕ ದೃಷ್ಟಿಕೋನ ಮತ್ತು ಕ್ರಾಂತಿಕಾರಕ ಪ್ರಭಾವದ ಪರಿಚಯವಾಗುತ್ತದೆ. ಕಾರಂತರು 'ನಮ್ಮ ಈ ಹೊಸ ಶಾಲೆಯ ಗೋಡೆ ಬರಿದಾಗಿದ್ದು ಕಿಟಕಿ, ಬಾಗಿಲುಗಳ ಮೇಲೆ ಮಾತ್ರ ಕೆಲವು ನಾಣ್ಣುಡಿಗಳು ರಂಜಿಸುತ್ತಿದ್ದವು. ಅವುಗಳಲ್ಲಿ ಎರಡು ಮಾತ್ರ ನೆನಪಿನಲ್ಲಿದೆ. "ರಾಜ ಪ್ರತ್ಯಕ್ಷ ದೇವತಾ" ಎಂಬುದೊಂದು, 'ದೇವರ ಭಯವೇ ಜ್ಞಾನದ ಆರಂಭ' ಎಂಬುದು ಇನ್ನೊಂದು; ಮುಂದೆ ಕಾರಂತರು ಶಾಲೆ ಆರಂಭವಾದೊಡನೆ ಸ್ವಾಮಿದೇವನೆ ಲೋಕ ಪಾಲನೆ ನಿನ್ನ ಭಜಿಸುವೆ ಎಂಬ ಸ್ತುತಿ ಪದ್ಯವನ್ನು ಶಾಲೆ ಮುಗಿಯುವ ಹೊತ್ತಿಗೆ "ಗಾಡ್ ಸೇವ್ ದೀ ಕಿಂಗ್" ಎಂದು ಗರ್ಜಿಸಿ ಹಾಡುತ್ತಿದ್ದೆವು" ಎಂಬ ಎರಡು ಮಹತ್ತರ ಅಂಶಗಳನ್ನು ದಾಖಲಿಸುತ್ತಾರೆ. ಹೀಗೆ ದಾಖಲಿಸುವಾಗ ಅವರು ಬಳಸುವ "ರಂಜಿಸುತ್ತಿದ್ದವು" "ಗರ್ಜಿಸಿ" ಎಂಬ ಕ್ರಿಯಾಪದಗಳನ್ನು ಉಪಯೋಗಿಸುವಾಗ ಅವುಗಳನ್ನು ಭಿನ್ನ ದೃಷ್ಟಿಯಿಂದಲೇ ಕಾರಂತರು ನೋಡುತ್ತಿರುವುದು ವ್ಯಕ್ತವಾಗುತ್ತದೆ. ಆಳುವ ಪ್ರಭುತ್ವವೊಂದು ದೇವರು ಮತ್ತು ರಾಜ ಇಬ್ಬರನ್ನೂ ಪರಸ್ಪರ ಅಭೇದಗೊಳಿಸಿ, ಒಬ್ಬರ ಪ್ರತಿನಿಧಿ ಇನ್ನೊಬ್ಬರೆಂದು ಕರೆಯುತ್ತಾ ಹೇಗೆ ತನ್ನ ಅಧಿಕಾರವನ್ನು ರೂಪಿಸಿಕೊಳ್ಳುತ್ತಿತ್ತು ಎಂಬುದನ್ನು ಬಾಲ್ಯದಲ್ಲಿಯೇ ಗುರುತಿಸುತ್ತಾರೆ.

ಇದೇ ಹೊತ್ತಿನಲ್ಲಿ ಕಾರಂತರಿಗೆ ಡ್ರಾಯಿಂಗ್ ಹಾಗೂ ಅಂದಿನ ಕನ್ನಡ ಸಾಹಿತ್ಯದ ಬಗ್ಗೆ ವಿಶೇಷವಾದ ಒಲವು ಮೂಡತೊಡಗಿತ್ತು. ಕಾರಂತರಿಗೆ ಆಗ ಡ್ರಾಯಿಂಗ್ ಮಾಸ್ತರರಾಗಿದ್ದ "ಗಾಬ್ರಿಯಲ್ ರೌಂಡ್ಸ್" ತುಂಬ ಅಚ್ಚುಮೆಚ್ಚಿನ ಉಪಾಧ್ಯಾಯರಾಗಿದ್ದರು. ಮುಂದೆ ಕಾರಂತರು ಮಕ್ಕಳಿಗೆ ಪಠ್ಯಪುಸ್ತಕ ರಚಿಸುವ ಸಂದರ್ಭದಲ್ಲಿ ಈ ಡ್ರಾಯಿಂಗ್ ತುಂಬಾ ಉಪಯುಕ್ತವಾಯಿತು. ಕಾರಂತರು 5ನೇ ತರಗತಿಯಲ್ಲಿ ಓದುವ ಹೊತ್ತಿಗೆ 1901ರಲ್ಲಿ ಗತಿಸಿದ ನಂದಳಿಕೆ ಲಕ್ಷ್ಮೀನಾರಣಪ್ಪನಿಗೆ ಕನ್ನಡ ಕಲಿಸಿದ ಸುಬ್ಬರಾಯರು ಕಾರಂತರಿಗೂ ಅಧ್ಯಾಪಕರಾಗಿದ್ದರು. ಕುಂದಾಪುರದಲ್ಲಿ ಓದುವಾಗ ಅವರ ಮತ್ತೊಬ್ಬ ಅಧ್ಯಾಪಕರಾದ ಶಿವರಾಮಯ್ಯನವರ ದೆಸೆಯಿಂದ ಕಾರಂತರು ವೆಂಕಟಾಚಾರ್ಯರ ಕೃತಿಗಳು, ನಂಜನಗೂಡು ತಿರುಮಲಾಂಬ ಕೃತಿಗಳು, ಚ. ವಾಸುದೇವಯ್ಯನವರ "ಆರ್ಯಕೀರ್ತಿ" ಚಾಮರಾಜನಗರದ ವೆಂಕಟರಮಣ ಶಾಸ್ತ್ರಿಗಳವರ "ಬರಹಗಳು" ಪುಟ್ಟಣನವರ "ಮಾಡಿದ್ದುಣ್ಣೋ ಮಹಾರಾಯ" ಮುಂತಾದ ಕೃತಿಗಳನ್ನು ಓದಲು ಅನುವು ಆಯಿತು. "ಇದರಿಂದ ಕನ್ನಡ ಭಾಷೆಯ ಮೋಹ ನನ್ನಲ್ಲಿ ಮೊಳೆಯುವುದಕ್ಕೆ ವಿಶೇಷ ಕಾರಣವಾಯಿತು" ಎನ್ನುತ್ತಾರೆ ಕಾರಂತರು.

ಈ ಹೊತ್ತಿಗಾಗಲೇ ಕಾರಂತರಿಗೆ ಸಾಂಪ್ರದಾಯಿಕ ಶಿಕ್ಷಣದ ಕಲಿಕೆಯ ಕ್ರಮದ ಬಗ್ಗೆ ಬೇಸರ ಮೂಡಿತ್ತು. ಅನಿಬೆಸೆಂಟ್ ಚಳವಳಿಯಿಂದ ಕಾರಂತರು ಪ್ರಭಾವಿತರಾದರು. ಅನಿಬೆಸೆಂಟ್ ಅವರ ದೇಶೀಯ ಚಿಂತನೆ ಕಾರಂತರಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿತ್ತು. 1920ರ ಹೊತ್ತಿಗೆ ಆಲಿ ಸಹೋದರರೊಡನೆ ಮಂಗಳೂರಿಗೆ ಬಂದಿದ್ದ ಗಾಂಧೀಜಿಯವರ ಖಿಲಾಪತ್ತು ಚಳವಳಿಯಿಂದ ಕಾರಂತರ ದೇಶೀಯ ಚಿಂತನೆ ಮತ್ತಷ್ಟು ದೃಢಗೊಂಡಿತು. ಇದೇ ಸಂದರ್ಭದಲ್ಲಿ ತಿಲಕರು ತೀರಿಕೊಂಡರು. ಇದರಿಂದ ಕಾರಂತರು 1921ರ ಫೆಬ್ರವರಿಯಲ್ಲಿ ಕಾಲೇಜಿಗೆ ವಿದಾಯ ಹೇಳಿ ಚಳವಳಿಗೆ ಧುಮುಕಿದರು. ಮುಂದೆ ಚಳವಳಿಯ ಕಾರಣದಿಂದ ಕಾರಂತರು ದೇಶದ ಅನೇಕ ಕಡೆ ಸಂಚರಿಸಿದರು. ಅಹಮದಾಬಾದಿಗೆ ಭೇಟಿ ನೀಡಿದರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದರು. ಇಂಗ್ಲಿಷ್ ಶಿಕ್ಷಣಕ್ಕಿಂತ ರಾಷ್ಟ್ರೀಯ ಶಿಕ್ಷಣ ಬೇಕು ಎಂದು ಕಾರಂತರು ಚಿಂತಿಸತೊಡಗಿದರು. ಶಾಲೆಯ ದಿನಗಳಲ್ಲಿ ಅವರು ಗೋಡೆಯ ಮೇಲೆ ನೋಡಿದ್ದ ಬರಹ ಹಾಗೂ ಶಾಲೆಯ ಆರಂಭ ಮತ್ತು ಮುಕ್ತಾಯದ ಸಂದರ್ಭದಲ್ಲಿನ ಪ್ರಾರ್ಥನೆಯ ಪಠ್ಯಗಳಿಂದಲೇ ಪ್ರಭುತ್ವದ ವಿರುದ್ಧದ ಅವರ ಚಿಂತನೆ ಮತ್ತಷ್ಟು ದೃಢಗೊಂಡು ರಾಷ್ಟ್ರೀಯ ಶಿಕ್ಷಣದ ಬಗ್ಗೆ ಕಾರಂತರು ಚಿಂತಿಸುವಂತಾಯಿತು.

ಆದರೆ ಕಾರಂತರು ಮುಂದೆ ಗಾಂಧೀಜಿಯವರ ತತ್ವಗಳನ್ನು ಮತ್ತು ದೇಶೀಯ ಚಿಂತನೆಯನ್ನು ತಿರಸ್ಕರಿಸಿದರು. ರಾಷ್ಟ್ರೀಯ ಶಿಕ್ಷಣದ ಬಗ್ಗೆ ಮಾತನಾಡುತ್ತಿದ್ದ ಕಾರಂತರೇ ಮುಂದೆ ಇಂಗ್ಲಿಷ್ ಶಿಕ್ಷಣದ ಬಗ್ಗೆ ಮಾತನಾಡತೊಡಗಿದರು. ಇದಕ್ಕೆ ಕಾರಣ ಗಾಂಧೀಜಿಯವರ ದೇಶೀಯ ಚಿಂತನೆ ಸಾಧುವಾದುದಲ್ಲವೆಂಬುದು ಕಾರಂತರ ದೃಢವಾದ

Digitised by Bharatavani, CIIL

ನಂಬಿಕೆಯಾಗಿದ್ದುದು. ಖಿಲಾಪತ್ ಚಳುವಳಿಯ ಮೂಲಕ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಕಾರಂತರು ಮುಂದೆ ಚಳವಳಿಯಿಂದ ದೂರ ಸರಿದರು. "ಅಸಹಕಾರ ಚಳವಳಿಯಲ್ಲಿ ಧುಮುಕಿ ಕುಂದಾಪುರವನ್ನು ಸೇರಿದಾಗ ಮನಸ್ಸಿನಲ್ಲಿ ಗಾಂಧೀಜಿಯವ ಆದರ್ಶವೇ ತುಂಬಿಕೊಂಡಿತ್ತು. ಅವರು 'ಹಿಂದ್ ಸ್ವರಾಜ್' ಎಂಬ ಗ್ರಂಥದಲ್ಲಿ ಬರೆದಿರುವ ಮಾತುಗಳನ್ನು ವೇದವಾಕ್ಯವೆಂದೇ ತಿಳಿದಿದ್ದೆ, ಯಂತ್ರಯುಗಕ್ಕೆ ಅವರು ತೀರ ವಿರೋಧಿಗಳು. ಐಹಿಕ ಬಾಳ್ವೆಯ ತಿರಸ್ಕಾರ, ಬ್ರಹ್ಮಚರ್ಯೆ, ಮೊದಲಾದ ಆದರ್ಶಗಳನ್ನು ನಾನು ಒಂದೇ ಗುಟುಕಿಗೆ ಕುಡಿದು ಜೀರ್ಣಿಸಿಕೊಂಡವನಂತೆ ದೊಡ್ಡ ದೊಡ್ಡ ಕನಸನ್ನು ಕಟ್ಟಿಕೊಂಡು ಬಾಳತೊಡಗಿದೆ. ಯಾವುದೇ ವಸ್ತುವನ್ನು ತಿನ್ನುವಾಗ ಅಥವಾ ತಿಂದೊಡನೆಯೇ ಜೀರ್ಣ ಮತ್ತು ಅಜೀರ್ಣಗಳ ಸಮಸ್ಯೆಯೇ ಹುಟ್ಟುವುದಿಲ್ಲ. ತಿಂದ ಸ್ವಲ್ಪ ಹೊತ್ತಿನ ಮೇಲೆ ಆ ಪ್ರಶ್ನೆ ಉದ್ಭವಿಸುತ್ತದೆ. ನನ್ನ ವಿಷಯದಲ್ಲೂ ಈ ಮಾತು ಮೆಲ್ಲಗೆ ನಿಜವಾಗುತ್ತಾ ಬಂತು." ಈ ಮಾತುಗಳಲ್ಲಿ ವ್ಯಕ್ತವಾಗುವ ಧ್ವನಿಯೇ ಗಾಂಧೀಜಿಯ ಆದರ್ಶಗಳು ತನ್ನ ಬದುಕಿಗೆ ತಕ್ಕವಲ್ಲ ಎಂದು ನಿರ್ಧರಿಸಿದಂತೆ ಇದೆ. ಮುಂದೆ ಕಾರಂತರು ನಾಡಿನ ಆರ್ಥಿಕ ಸಮಸ್ಯೆಯ ಹಿತದೃಷ್ಟಿಯಿಂದ ಬೃಹತ್ ಕೈಗಾರಿಕೆಗಳು ಅವಶ್ಯವೆನ್ನುತ್ತಾರೆ. ಗಾಂಧೀವಾದಕ್ಕೆ ಕಾರಂತ ವಿರೋಧದ ಪ್ರತಿಕ್ರಿಯೆ ಗಮನಾರ್ಹವಾದುದ್ದು. ಮುಂದೆ ಬ್ರಹ್ಮಚರ್ಯಕ್ಕೆ ಸಂಬಂಧಿಸಿದಂತೆ ಗಾಂಧಿ ಮತ್ತು ಕಾರಂತರ ಭಿನ್ನ ನಿಲುವು ಎಲ್ಲರಿಗೂ ಗೊತ್ತೇ ಇರುವಂತಹುದು.

ಕಾರಂತರು ಗಾಂಧೀವಾದದ ರಾಷ್ಟ್ರೀಯ ಶಿಕ್ಷಣ ಮತ್ತು ದೇಶೀ ಚಿಂತನೆಯನ್ನು ಸರಿಯಾಗಿ ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ. ಮುಂದೆ ಕಾರಂತರು ಆಂಗ್ಲಶಿಕ್ಷಣ ಹಾಗೂ ಖಾಸಗಿ ಶಿಕ್ಷಣದ ಪರವಾಗಿ ಮಾತನಾಡತೊಡಗಿದರು. "ಮೊದಲಿನಿಂದಲೂ ನಾನೂ ಸಹ ಮಾತೃಭಾಷೆಯಲ್ಲೇ ಹೆಚ್ಚಿನ ಶಿಕ್ಷಣ ಆಗಬೇಕು ಎಂದುಕೊಂಡು ಬಂದವನು. ಈ ದೇಶದಲ್ಲಿ 500ಕ್ಕಿಂತ ಹೆಚ್ಚು ಭಾಷೆಗಳಿವೆ. ಅವೆಲ್ಲವೂ ಮಾತೃಭಾಷೆಗಳೇ. ಅವೆಲ್ಲವನ್ನು ನಾವು ಶಿಕ್ಷಣಕ್ಕೆ ಆರಿಸುತ್ತೇವೆಯೇ? ಅವನ್ನು ಕಲಿಸುತ್ತೇವೆಯೇ? ಅದು ಎಂದೂ ಯಾವ ದೇಶಕ್ಕೂ ಸಾಧ್ಯವಾಗದ ಕೆಲಸ. ಇಂದು ವಿಸ್ತೃತ ಜ್ಞಾನವನ್ನು ಯಾವುದೇ ರೀತಿಯಲ್ಲಿ ಅಪೇಕ್ಷಿಸುವವರು ತಮ್ಮ ದೇಶ ಭಾಷೆಯಲ್ಲಿ ಅವನ್ನು ಒದಗಿಸಲು ಶಕ್ತರಾಗಿಲ್ಲ. ಮಹಮ್ಮದ ಇದ್ದಲ್ಲಿಗೆ ಬೆಟ್ಟ ಬಾರದೆ ಹೋದರೆ, ಆ ಬೆಟ್ಟದ ಬಳಿಗೆ ಮಹಮ್ಮದ ಹೋಗಬೇಕು.. ಇಂದಿನ ದಿನಗಳಲ್ಲಿ, ನಮ್ಮ ಮಾನಸಿಕ ಬೆಳವಣಿಗೆ ಮಾತೃಭಾಷೆಯ ಅತಿ ಮೋಹದಿಂದ ಬಡವಾಗಬಾರದು. ಇದು ಅಂಥ ಜ್ಞಾನ ಭಂಡಾರ ನಮ್ಮ ದೇಶದಲ್ಲಿ ಮೊದಲಿನಿಂದಲೂ ನಾವು ಉಳಿಸಿಕೊಂಡು ಬಂದಿರುವ ಇಂಗ್ಲಿಷಿನಿಂದ ಮಾತ್ರವೇ ಸಾಧ್ಯ. ಸದ್ಯಕ್ಕೆ ನಾವು, ಜ್ಞಾನ ಸಂಪಾದನೆಗಾಗಿ ಅದಕ್ಕೆ ಶರಣು ಹೋಗಬೇಕು." ಮಾತೃಭಾಷೆಯ ಬಗ್ಗೆ ಕಾರಂತರು ತೋರುವ ಈ ಪ್ರತಿಕ್ರಿಯೆ ಕುತೂಹಲಕಾರಿಯಾದದ್ದು. ತಾವು ಹೀಗೆ ಇಂಗ್ಲಿಷ್ ಪರವಾಗಿ ಮಾತನಾಡಲು ಕಾರಣವನ್ನು ಅವರೇ ಸೂಚಿಸುತ್ತಾರೆ. "ಇಂಗ್ಲಿಷಿನಲ್ಲಿ ಸಾಮಾನ್ಯ ಭಾಷಾಜ್ಞಾನವಿದ್ದ ವ್ಯಕ್ತಿ ತನ್ನ ಜ್ಞಾನವನ್ನು ಬೆಳೆಯಿಸಿಕೊಳ್ಳಲು, ಪ್ರತಿಯೊಂದು ವಿಷಯದಲ್ಲಿಯೂ ಬರಹಗಳಿವೆ. ಎಳೆಯರ ಸಲುವಾಗಿಯೂ ನೂರಾರು ಬರಹಗಳಿವೆ. ಕನ್ನಡದಲ್ಲಿ ಬೆಳೆದವರಿಗೂ ಸಹ ಏನೇನೂ ಇಲ್ಲ. ವಿದ್ಯಾರ್ಥಿಗಳೂ ತಾವಾಗಿಯಲ್ಲವಾದರೂ, ಗುರುಗಳ ಸಹಾಯದಿಂದ ಓದಿ, ತಿಳಿಯುವೆವೆಂದರೆ, ಗ್ರಂಥಗಳ ದಾರಿದ್ರ್ಯ ಹೇಳತೀರದು." ಕಾರಂತರ ಮೇಲಿನ ಮಾತುಗಳು ಇಂಗ್ಲಿಷ್ ಪಕ್ಷಪಾತಿತನದ್ದು ಎಂದು ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಕಾರಂತರ ಮೇಲಿನ ಹೇಳಿಕೆಯ ಸಂದರ್ಭದಲ್ಲಿ ಎರಡು ಮುಖ್ಯ ವಿಷಯಗಳು ಸ್ಪಷ್ಟವಾಗುತ್ತದೆ. ಒಂದು, ನಮ್ಮ ಮಾತೃ ಭಾಷೆ ಕನ್ನಡದಲ್ಲಿ ಆಧುನಿಕ ಜಗತ್ತಿಗೆ ಬೇಕಾದ ಜ್ಞಾನದ ಕೊರತೆ ಇದೆ; ಎರಡು, ಇಂಗ್ಲಿಷಿನಲ್ಲಿ ಎಲ್ಲ ಬಗೆಯ ಜ್ಞಾನ ಭಂಡಾರವಿದೆ. "ಅಂಥ ಜ್ಞಾನ ನಮ್ಮ ಜನಗಳಿಗೆ ಸಿಗುವ ತನಕ, ಅದನ್ನು ಒದಗಿಸಬಲ್ಲ ಇಂಗ್ಲಿಷ್ ಭಾಷೆ, ಈ ತನಕ ನಾವು ಬೆಳೆಯಿಸಿಕೊಂಡು ಬಂದದ್ದು ಇದ್ದೇ ಇದೆ." ಕಾರಂತರ ಈ ದೃಷ್ಟಿಕೋನ ಸಮಗ್ರವಾದುದೇನೂ ಅಲ್ಲ. ಇಂಗ್ಲಿಷ್ ಭಾಷೆಯ ಬಗೆಗಿನ ಅವರ ಅಭಿಪ್ರಾಯದ ಹಿಂದೆ ಘನವಾದ ಸಾಮಾಜಿಕ ಕಾಳಜಿಯೇನೂ ಇಲ್ಲ. ಆಂಗ್ಲರ ಆಗಮನದ ತರುವಾಯ ಎಲ್ಲರಿಗೂ ಶಿಕ್ಷಣ ಲಭ್ಯವಾಯಿತು. ಹಾಗೂ ಎಲ್ಲರಿಗೂ ಈ ಭಾಷೆಯನ್ನು ಕಲಿಯಲು ಯಾವ ಸಾಂಪ್ರದಾಯಿಕ ಅಡ್ಡಿಯೂ ಇಲ್ಲ ಎಂಬ ಕಾರಣದಿಂದ ಕಾರಂತರು ಇಂಗ್ಲಿಷಿನ ಪರ ಮಾತನಾಡಿದವರಲ್ಲ. ಬದಲಿಗೆ ಇಂಗ್ಲಿಷಿನಲ್ಲಿ ಅಪಾರ ಜ್ಞಾನವಿದೆ. ಅದು ನಮ್ಮದಾಗಬೇಕು ಎಂದುಕೊಂಡವರು. ಇಂದು ಇಂಗ್ಲಿಷಿನ ಪರವಾಗಿ ಮಾತನಾಡುವ ಜನರಂತೆ ಮೇಲ್ನೋಟದ ವಾಸ್ತವಿಕ ಮಾತುಗಳು ಕಾರಂತರವೂ ಕೂಡ.

ಕಾರಂತರ ಮೇಲಿನ ಹೇಳಿಕೆಯಿಂದ ಸ್ಪಷ್ಟವಾಗುವ ಮತ್ತೊಂದು ಅಂಶವೆಂದರೆ ಕನ್ನಡದಲ್ಲಿ ಜ್ಞಾನದ ಕೊರತೆ ಇದೆ ಎನ್ನುವುದು. ಕಾರಂತರು ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳು, ಬೃಹತ್ ಕೈಗಾರಿಕೆಗಳು ಮುಂತಾದ ವೈಜ್ಞಾನಿಕ ಸಂಗತಿಯನ್ನು ಮಾತ್ರ ಜ್ಞಾನವೆಂದು ಭಾವಿಸುತ್ತಾರೆ. "ಈ ವಿಜ್ಞಾನ ಪ್ರಪಂಚದಲ್ಲಿ, ಕೇವಲ ಆಧುನಿಕ ವಿಜ್ಞಾನವನ್ನು ಕನ್ನಡದಲ್ಲಿ ತರುಣರಿಗೆ, ಸುಮಾರು ಹೈಸ್ಕೂಲು ಮಟ್ಟದ ಶಿಕ್ಷಣವುಳ್ಳವರಿಗೆ ತಿಳಿಸುವ ಪ್ರಯತ್ನ ಮಾಡಿದ್ದೇನೆ. ಕನ್ನಡದ ಜನರು ಆಧುನಿಕ ಯುಗವನ್ನು ಕುರಿತು ಅರಿವನ್ನು ಪಡೆಯಲು ಅವರ ನುಡಿಯ ಮೂಲಕ ವಿಜ್ಞಾನ ಯುಗದ ಪರಿಚಯ ಮಾಡಿಕೊಳ್ಳಲೇಬೇಕಾಗುತ್ತದೆಂಬುದಾಗಿ ನನ್ನ ನಂಬಿಕೆ." ಕಾರಂತರು ಯೂರೋಪಿನಲ್ಲಿ ನಡೆದ ಈ ಕೈಗಾರಿಕಾ ಕ್ರಾಂತಿ ಹಾಗೂ ಅದರಿಂದ ರೂಪಿತಗೊಂಡ ವೈಚಾರಿಕತೆಯನ್ನು ಐತಿಹಾಸಿಕ ಪ್ರಜ್ಞೆಯಿಂದ ಗ್ರಹಿಸಿದಂತೆ ತೋರುವುದಿಲ್ಲ. ಈ ಕೈಗಾರಿಕಾ ಕ್ರಾಂತಿ ಹಾಗೂ ಅದು ಸೃಷ್ಟಿಸಿಕೊಂಡ ಇಂಗ್ಲಿಷ್ ಭಾಷೆ ಅಂದಿನವರೆವಿಗೆ ಇದ್ದ ಇಡೀ ಯೂರೋಪನ್ನೇ ಬದಲಿಸಿತು. ಲಿಂಗ, ಜಾತಿ, ವರ್ಗ, ಅಸಮಾನತೆ ಮುಂತಾದ ಸಾಮಾಜಿಕ ವಿಪ್ಲವಕ್ಕೆ ಕಾರಣವಾಯಿತು. ಯುರೋಪ್ ಸಮಾಜದೊಳಗೆ ಇನ್ನಿಲ್ಲದ ಬದಲಾವಣೆಯನ್ನು ಈ ಸಂಗತಿಗಳು ಉಂಟು ಮಾಡಿದವು. ಭಾರತದಲ್ಲಿ ಕೂಡ ಇಂಗ್ಲಿಷ್ ಶಿಕ್ಷಣ ಇಂಥ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ. ಆದರೆ ಕಾರಂತರಿಗೆ ಈ ಸಾಮಾಜಿಕ, ಐತಿಹಾಸಿಕ ಬೆಳವಣಿಗೆಗಿಂತ, ಜ್ಞಾನದ ತಿಳಿವು ಮಾತ್ರ ಮುಖ್ಯವಾಗುತ್ತದೆ. ಕನ್ನಡವು ಸೇರಿದಂತೆ ಒಟ್ಟು ಭಾರತೀಯ ಭಾಷೆಗಳಲ್ಲಿ ಯಾವುದೇ ವೈಜ್ಞಾನಿಕ ಜ್ಞಾನವಿಲ್ಲವೆಂಬುದು ಕಾರಂತರ ಸ್ಪಷ್ಟ ತಿಳುವಳಿಕೆ. ಕನ್ನಡದ ಮತ್ತೊಬ್ಬ ಶ್ರೇಷ್ಠ ಲೇಖಕರಾದ ಕುವೆಂಪು ಅವರಿಗೆ ಆಧ್ಯಾತ್ಮದ ದೃಷ್ಟಿಯಿಂದ ಭಾರತ ಇಡೀ ಪ್ರಪಂಚದಲ್ಲೇ ಅತ್ಯಂತ ಶ್ರೀಮಂತವಾದ ದೇಶ ಎನ್ನಿಸಿದೆ. ಆಧುನಿಕತೆಯನ್ನು ಒಪ್ಪಿಕೊಂಡು ಅದರೊಳಗೆ ಸಮ್ಮಿಳಿತಗೊಳ್ಳಲೇ ಬೇಕಾಗಿರುವ ಅಧ್ಯಾತ್ಮದ ಬಗ್ಗೆ ಕುವೆಂಪು ಮಾತನಾಡುತ್ತಾರೆ. ಯಂತ್ರ ಋಷಿ, ರೈತಯೋಗಿ, ಮುಂತಾದ ಪದಗಳು ಈ ಹಿನ್ನೆಲೆಯಿಂದ ರೂಪುಗೊಂಡವು. ಕಾರಂತರು ಆಧ್ಯಾತ್ಮ, ಅಲೌಕಿಕ ಚಿಂತನೆ ಮುಂತಾದ ಭಾರತೀಯ ಜ್ಞಾನ ಪರಂಪರೆಯನ್ನು ಜ್ಞಾನವೆಂದು ಒಪ್ಪಲು ಸಿದ್ಧರಿಲ್ಲ.

ಕಾರಂತರು ತಾವು ಬಾಲಪ್ರಪಂಚವನ್ನು, ವಿಜ್ಞಾನ ಪ್ರಪಂಚವನ್ನು, ಕನ್ನಡದಲ್ಲಿ ಯಾಕೆ ಬರೆದೆ ಎನ್ನುವುದರ ಜೊತೆಗೆ ಯಾರಿಗೆ ಬರೆದೆ ಎಂಬುದನ್ನು ಸೂಚಿಸಿದ್ದಾರೆ. ಅದು ಹೈಸ್ಕೂಲ್ ವಿದ್ಯಾರ್ಥಿಗಳಿಗೆ. ಕಾರಂತರು ವಿಜ್ಞಾನ ಪ್ರಪಂಚ ಬರೆಯುವ ಹೊತ್ತಿಗೆ ಹೈಸ್ಕೂಲ್ ಮಟ್ಟದ ಶಿಕ್ಷಣವುಳ್ಳವರು


Digitised by Bharatavani, CIIL

ನಮ್ಮ ಸಮಾಜದ ಯಾವ ವರ್ಗಕ್ಕೆ ಸೇರಿದವರೆಂಬುದು ನಮಗೆ ಗೊತ್ತಿರುವ ಸಂಗತಿ. ಕಾರಂತರ ಸುಮಾರು ಸಾವಿರಕ್ಕೂ ಮಿಕ್ಕಪುಟಗಳಲ್ಲಿ, ಶೈಕ್ಷಣಿಕ ಚಿಂತನೆಯ ಬರಹಗಳಲ್ಲಿ, ಎಲ್ಲಿಯೂ ಆಧುನಿಕ ಶಿಕ್ಷಣ, ವಿಜ್ಞಾನ ಮತ್ತು ಇವುಗಳಿಂದ ರೂಪಿತಗೊಂಡ ವೈಚಾರಿಕತೆ ಭಾರತೀಯ ಸಮಾಜದಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬಂದ ಜಾತೀಯತೆಯನ್ನು ವರ್ಗ ತಾರತಮ್ಯವನ್ನು ಇನ್ನಿಲ್ಲದಂತೆ ಪಲ್ಲಟಗೊಳಿಸಿತು ಎಂಬುದನ್ನು ಕುರಿತು ಮಾತನಾಡುವುದೇ ಇಲ್ಲ. ಕಾರಂತರು ಇಂಗ್ಲಿಷ್ ಶಿಕ್ಷಣವನ್ನು ಶುದ್ಧ ಜ್ಞಾನಕ್ಕಾಗಿ ಅಷ್ಟೇ ಸ್ವೀಕರಿಸುತ್ತಾರೆ. ಕಾರಂತರು ಕನ್ನಡದ ಪರಮ ವೈಚಾರಿಕ ಲೇಖಕರು. ಅವರ ವೈಚಾರಿಕತೆ ಆಧುನಿಕ ಜ್ಞಾನ ಮುಖಿ ಮನೋಭಾವದ್ದೇ ಹೊರತು ಸಮಗ್ರ ಸಾಮಾಜಿಕ ಕಾಳಜಿಯ ಹಿನ್ನೆಲೆಯಿಂದ ರೂಪುಗೊಂಡಿದ್ದಲ್ಲ.

ರಾಷ್ಟ್ರೀಯ ಶಿಕ್ಷಣವನ್ನು ಕುರಿತು ಕಾರಂತರ ಧೋರಣೆಯು ತುಂಬಾ ಗಮನಾರ್ಹವಾದುದು. ಈ ಧೋರಣೆಯನ್ನು ರಾಷ್ಟ್ರೀಯ ಚಳವಳಿಗೆ ಕಾರಂತರು ತೋರಿದ ಪ್ರತಿಕ್ರಿಯೆಯಿಂದ ಗುರುತಿಸಬಹುದು. ಈ ವಿಷಯದಲ್ಲಿ ಮೂರು ಸಂಗತಿಗಳು ತುಂಬಾ ಮುಖ್ಯವಾದವು. ಒಂದು, ರಾಷ್ಟ್ರೀಯ ಚಳವಳಿಗೆ ಧುಮುಕಿದ ಉದ್ದೇಶ ಮತ್ತು ಪ್ರೇರಣೆ ಹಾಗೂ ನಿರಾಶೆ, ಎರಡು, ರಾಷ್ಟ್ರೀಯ ಚಳವಳಿ ಹಾಗೂ ಸ್ವಾತಂತ್ರ್ಯವನ್ನು ಕುರಿತ ಕಾರಂತ, ದೃಷ್ಟಿಕೋನ. ಮೂರು ಸ್ವಾತಂತ್ರ್ಯದ ನಂತರ ರಾಷ್ಟ್ರೀಯ ಶಿಕ್ಷಣವನ್ನು ಕುರಿತ ಕಾರಂತರ ನಿಲುವು. ಕಾರಂತರು ಅನಿಬೆಸೆಂಟ್ ಅವರ ದೇಶೀಯ ಚಿಂತನೆಯ ಪ್ರಭಾವಕ್ಕೆ ಒಳಗಾಗಿ ಚಳವಳಿಗೆ ಧುಮುಕಿದವರು. ಆನಂತರ ಗಾಂಧೀಜಿಯವರ ದಟ್ಟ ಪ್ರಭಾವಕ್ಕೆ ಸಿಕ್ಕು ರಾಷ್ಟ್ರೀಯ ಚಳವಳಿಯ ಪರವಾಗಿ ಹೋರಾಡಿದರು. ಆದರೆ ಕೆಲವೇ ವರ್ಷಗಳಲ್ಲಿ ಅದರಿಂದ ಬೇರೆ ಬೇರೆ ಕಾರಣಗಳಿಂದ ದೂರ ಸರಿದರು.

1995ರಲ್ಲಿ ಒಮ್ಮೆ ಕಾರಂತರು ದೇಶ ಸ್ವಾತಂತ್ರ್ಯ ಗಳಿಸಿಕೊಂಡ ಬಗ್ಗೆ ಆಡಿದ ಮಾತಿನಿಂದ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯನ್ನು ಅವರು ಹೇಗೆ ನೋಡಿದ್ದರು ಎಂಬುದು ಗೊತ್ತಾಗುತ್ತದೆ. ಕಾರಂತರ ಪ್ರಕಾರ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ನಮ್ಮ ಚಳವಳಿಗಳಿಂದ ಅಲ್ಲ. ಯಾವ ಚಳವಳಿಗಳನ್ನು ಮಾಡದ ಆಫ್ರಿಕಾದ ದೇಶಗಳು ಯಾಕೆ ಸ್ವತಂತ್ರವಾದವು? ಇಂಗ್ಲೆಂಡ್ ಎರಡನೇ ಮಹಾಯುದ್ಧದ ನಂತರ ಆರ್ಥಿಕವಾಗಿ ಹಾಗೂ ಮಾನವ ಸಂಪನ್ಮೂಲದ ದೃಷ್ಟಿಯಿಂದ ಬಹಳ ತೊಂದರೆಯಲ್ಲಿತ್ತು. ಆಗ ಇಂಗ್ಲಿಷ್‌ನ ಜನತೆಯನ್ನು ರಕ್ಷಿಸುವ ಮತ್ತು ಅಭಿವೃದ್ಧಿಪಡಿಸುವ ಸಂಗತಿಯೇ ಬಹಳ ಸವಾಲಿನದ್ದಾಗಿತ್ತು. ಇಂತಹ ಸಂದರ್ಭದಲ್ಲಿ ವಸಾಹತುಶಾಹಿ ದೇಶಗಳನ್ನು ನಿಯಂತ್ರಿಸುವುದು ಕಷ್ಟವಾಯಿತು. ಅದರಲ್ಲೂ ಭಾರತದಂಥ ಬೃಹತ್ ದೇಶವನ್ನು ನಿಯಂತ್ರಿಸುವುದು ಸಾಧ್ಯವೇ ಇಲ್ಲವಾಯಿತು. ಈ ಕಾರಣದಿಂದ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು ಎಂದರು. ಕಾರಂತರಿಗೆ ದೇಶದ ಸ್ವಾತಂತ್ರ್ಯ ಚಳವಳಿಯ ಸಫಲತೆಯ ಬಗ್ಗೆಯಾಗಲಿ ಮತ್ತು ದೇಶಾದ್ಯಂತ ಸ್ವಾತಂತ್ರ್ಯ ಚಳವಳಿಯನ್ನು ಎಬ್ಬಿಸಿದಂಥ ಗಾಂಧೀಜಿಯವರ ಆದರ್ಶದ ಬಗ್ಗೆಯಾಗಲಿ ಅನುಮಾನಗಳು ಇದ್ದೇ ಇದ್ದವು. ಈ ಎಲ್ಲ ಕಾರಣದಿಂದ ಮುಂದೆ ರಾಷ್ಟ್ರೀಯ ಶಿಕ್ಷಣವನ್ನು ಕುರಿತ ಅವರ ಧೋರಣೆಯೂ ಇಂಥ ಅನುಮಾನದಿಂದಲೇ ರೂಪ ತಳೆಯಿತು. 1989ರ ಹೊತ್ತಿಗೆ ಎರಡನೇ ಬಾರಿ ಪರಿಷ್ಕೃತಗೊಂಡ ಸಂಪತ್ತಿನಲ್ಲಿ ಮಂಡನೆಯಾದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕುರಿತು ಕಾರಂತರು ತೋರಿದ ಪ್ರತಿಕ್ರಿಯೆ ಕೂಡ ಇಂಥ ಅನುಮಾನದಿಂದ ದೂರವಾದುದೇನಲ್ಲ.

"ಹಿಂದಿನ ಧ್ಯೇಯ ಧೋರಣೆಯಲ್ಲಿ ರಾಷ್ಟ್ರೀಯ ಅಭಿವೃದ್ಧಿ, ಪೌರಪ್ರಜ್ಞೆ, ಸಾಂಸ್ಕೃತಿಕ ಪ್ರಜ್ಞೆ, ರಾಷ್ಟ್ರೀಯ ಸಂಘಟನೆ, ಶಿಕ್ಷಣದ ವಿವೇಕಯುತ ಪುನರ್‌ರಚನೆ, ಅದರ ಗುಣಮಟ್ಟಗಳ ಬಗ್ಗೆ ಸುಧಾರಣೆ" – ಇಂಥ ಹಲವು ಧ್ಯೇಯಗಳು ಇದ್ದೇ ಇದ್ದವು. ವಿಜ್ಞಾನ ಮತ್ತು ತಂತ್ರಶಾಸ್ತ್ರಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡಬೇಕೆಂದೂ ಇತ್ತು. ಜನಜೀವನಕ್ಕೂ, ಶಿಕ್ಷಣಕ್ಕೂ ಸಂಬಂಧ ಹೆಚ್ಚಬೇಕು. ನೈತಿಕ ಅಭಿವೃದ್ಧಿಯ ಕಡೆಗೆ ಗಮನಹರಿಸಬೇಕೆಂಬ ಸದಾಶಯಗಳೂ ಸೇರಿಕೊಂಡಿದ್ದವು.

ಈ ಬಾರಿ ಇಂಥ ಆಶಯಗಳ ಪ್ರಮಾಣ, ವಿವರ, ಉದ್ದೇಶ ಇನ್ನಷ್ಟು ವ್ಯಾಪಕವಾಗಿ ಸೂಚಿಸಲ್ಪಟ್ಟಿವೆ. ಇಂಥ ಉದ್ದೇಶಗಳಲ್ಲಿ ಈ ಬಾರಿ "ರಾಷ್ಟ್ರೀಯ ಸಂಘಟನೆ, ಸಾಂಸ್ಕೃತಿಕ ಪ್ರಜ್ಞೆ, ಪಾರಮಾರ್ಥ (Spiritual) ಪ್ರಜ್ಞೆ, ದೇಶಭಕ್ತಿ, ಇತ್ಯಾದಿ ವಿಷಯಗಳು ಬೇಕಷ್ಟಿವೆ."

ಮೇಲಿನ ಮಾತುಗಳು ಕಾರಂತರ ರಾಷ್ಟ್ರೀಯ ಶಿಕ್ಷಣವನ್ನು ಕುರಿತ ನಿಲುವನ್ನು ಸ್ಪಷ್ಟಪಡಿಸುತ್ತವೆ. ಅವರ ದೃಷ್ಟಿಯಲ್ಲಿ "ಜಾತಿಮತ ಭೇದವಿಲ್ಲದೆ, ಗಂಡುಹೆಣ್ಣು ಎಂಬ ತಾರತಮ್ಯ ತೋರಿಸದೆ, ಯೋಗ್ಯ ಶಿಕ್ಷಣಕ್ಕೆ ಎಲ್ಲರಿಗೂ ಅವಕಾಶ ಇರಬೇಕು... ಸಮಾನತೆಯ ಒಂದು ದೃಷ್ಟಿಯಿಂದಲೇ ಸ್ತ್ರೀಯರು, ಪರಿಶಿಷ್ಟ ಜಾತಿಯವರು ಶಿಕ್ಷಿತರಾಗಬೇಕಾಗುತ್ತದೆ" ಎನ್ನುವಾಗ ಹಾಗೂ ಮುಂದೆ ಇಡೀ ಲೇಖನದಲ್ಲಿ ಅವರು ಚರ್ಚಿಸಿರುವ ಸಂಗತಿಗಳು ಈ ಎಲ್ಲ ಆಶಯಗಳ ಬಗ್ಗೆ ಕಾರಂತರಿಗೆ ಅಪನಂಬಿಕೆ ಇದೆ. "ಈ ಎಲ್ಲ ವಿಷಯಗಳ ಬಗ್ಗೆಯೂ ನನ್ನ ಬುದ್ಧಿ ಹರಿಯಬಾರದು" ಎನ್ನುವ ಅವರ ಮಾತು ಈ ಅಪನಂಬಿಕೆಯ ನೆಲೆಯಿಂದಲೇ ಹುಟ್ಟಿದ್ದು. ರಾಷ್ಟ್ರೀಯ ಶಿಕ್ಷಣ ನೀತಿ ಸಮಾನತೆಯ ದೃಷ್ಟಿಯಿಂದ ಸರ್ವರಿಗೂ ಶಿಕ್ಷಣದ ಅವಕಾಶ ಕಲ್ಪಿಸಬೇಕು. ಸರ್ಕಾರವೇ ಶಿಕ್ಷಣ ನೀಡುವ ಮತ್ತು ರೂಪಿಸುವ ಜವಾಬ್ದಾರಿಯನ್ನು ಪಡೆದಿರಬೇಕಾಗುತ್ತದೆ. ಆದರೆ ಹೀಗೆ ರೂಪುಗೊಳ್ಳುವ ಸಾರ್ವತ್ರಿಕ ಶಿಕ್ಷಣದಿಂದ ಶಿಕ್ಷಣದ ಗುಣಮಟ್ಟ ಮತ್ತು ಮೌಲ್ಯ ಸಾಧ್ಯವಿಲ್ಲವೆಂಬುದು ಕಾರಂತರ ನಿಲುವು. ಶಿಕ್ಷಣ ಗುಣಮಟ್ಟದ ಬಗ್ಗೆ ಅವರು ತೋರಿಸುವ ಒಲವು ಅವರನ್ನು ಖಾಸಗೀ ಶಿಕ್ಷಣ ವ್ಯವಸ್ಥೆಯ ಪಕ್ಷಪಾತಿಯನ್ನಾಗಿ ಮಾಡಿದೆ ಎನ್ನಿಸುತ್ತದೆ. ಒಳ್ಳೆಯ ಶಿಕ್ಷಣ ತುಂಬ ವೆಚ್ಚವನ್ನು ಬೇಡುವಂತಹದ್ದು. ಆದರೆ ಆ ವೆಚ್ಚ ತೆರಬಲ್ಲವರಿಗೆ ಮಾತ್ರ ಶಿಕ್ಷಣ. ಎಂದರೆ ಶಿಕ್ಷಣ ಕೆಲವರ ಸೊತ್ತು ಮಾತ್ರ ಆಗುತ್ತದೆ. ಕೆಲವರಿಗೆ ಮಾತ್ರ ಒಳ್ಳೆಯ ಶಿಕ್ಷಣವನ್ನು ಕೊಡುವುದು ಅಥವಾ ಎಲ್ಲರಿಗೂ ಸಾಮಾನ್ಯ ಮಟ್ಟದ ಶಿಕ್ಷಣವನ್ನಾದರೂ ಕೊಟ್ಟೇ ತೀರುವುದು. ಕಾರಂತರ ಶಿಕ್ಷಣ ಸಂಬಂಧಿ ನಿಲುವಿನಿಂದ ಇದನ್ನು ಖಚಿತವಾಗಿ ಗುರುತಿಸಬಹುದು.

ಕಾರಂತರ ಶೈಕ್ಷಣಿಕ ಚಿಂತನೆಯ ಬಹುಭಾಗ ಮಕ್ಕಳ ಶಿಕ್ಷಣ ಹಾಗೂ ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಇದೆ. 1931–32ರಲ್ಲಿ ಪಂಜೆಮಂಗೇಶರಾಯರ ಒತ್ತಾಯದಿಂದ ಮಂಗಳೂರಿನಲ್ಲಿ ಶಿಕ್ಷಣ ಸಪ್ತಾಹವನ್ನು ನಡೆಸಿದರು. ಅಲ್ಲಿ ಕಾರಂತರು ಮಕ್ಕಳ ಕಲಿಕೆಗೆ ಕೈಗೊಂಡ ಅನೇಕ ಪ್ರಯೋಗಗಳು ಯಾವತ್ತೂ ಮಕ್ಕಳ ವಿದ್ಯಾಭ್ಯಾಸದ ಕ್ರಮದಲ್ಲಿ ಮಾದರಿಯಾಗಬಲ್ಲವು.

ಈಗಿನ ಶಾಲೆಗಳಲ್ಲಿ ದೊರೆಯುವ ವಿದ್ಯಾಭ್ಯಾಸವು ಒಂದೇ ತೆರನಾಗಿದೆ. ಶಾಲಾ ಶಿಕ್ಷಣವು ಕೇವಲ ಯಾಂತ್ರಿಕವಾಗಿ ನಡೆಯುತ್ತಾ ಬಂದಿದೆ. ವಿದ್ಯೆಯೆಂಬುದು ಮಕ್ಕಳ ಪಾಲಿಗೆ ಅವರಿಗೆ ಬೇಡದ ಅವರು ಬಯಸದ ಔಷಧದಂತಾಗಿದೆ. ಈಗಿನ ಶಾಲೆಗಳಲ್ಲಿ ಮಕ್ಕಳ ಕ್ರಿಯಾಶಕ್ತಿಯೂ ಪೂರ್ಣ ನಷ್ಟವಾಗಿ ಅವರು ಶಾಲೆಯಿಂದ ಹೊರಗೆ ಬರುವಾಗ ತೇಜಸ್ಸಿಲ್ಲದ ಉತ್ಸಾಹವಿಲ್ಲದ, ನಗುವಿಲ್ಲದ ಶವವಾಗಿ ಬರುತ್ತಾರೆ. ಕಾರಂತರು ಕಾರಣಯುಕ್ತವಾಗಿಯೇ ಇಂತಹ ಸಿಟ್ಟನ್ನು ಪ್ರಕಟಪಡಿಸುತ್ತಿದ್ದರು. ಈ ಶಾಲೆಗಳ ಯಾಂತ್ರಿಕತೆ ಮತ್ತು ಏಕಮಾದರಿಯ ದೋಷಗಳನ್ನು ಕುರಿತು ಕಾರಂತರು ಅನೇಕ ಬಾರಿ ಛೇಡಿಸಿದ್ದಾರೆ. ಮಕ್ಕಳಿಗೆ ಶಾಲೆಯ ಆರಂಭದಲ್ಲಿ ಭಾಷೆಯನ್ನು ಕಲಿಸುವಾಗ ಎಂತಹ ಆಭಾಸಗಳು ಜರುಗುತ್ತವೆ, ಇಂತಹದರ

Digitised by Bharatavani, CIIL

ಕಡೆಗೆ ಹೇಗೆ ಸರ್ಕಾರ ಮತ್ತು ಶಿಕ್ಷಣ ತಜ್ಞರು ಯೋಚಿಸಬೇಕಾಗಿದೆ ಎಂದು ಕಾರಂತರು ಉದಾಹರಣೆಯ ಸಹಿತ ನಿರೂಪಿಸಿದ್ದಾರೆ.

"ಆ ಮೊದಲ ಪುಸ್ತಕದಲ್ಲಿ 'ಅ-ಆ'ದಿಂದ ಅಕ್ಷರ ಪಾಠ ಶುರುವಾಗುತ್ತದೆ. ಅಳಿಲು, ಆನೆಗಳ ಚಿತ್ರದಿಂದ ಪ್ರಥಮ ಪಾಠ ತೊಡಗುತ್ತದೆ. ದುರ್ದೈವಕ್ಕೆ" "ಅ" ದಿಂದ ತೊಡಗುವ ಈ ಪುಸ್ತಕದ ಅಳಿಲು, ನಮ್ಮ ಊರಿನ ಮಕ್ಕಳ ಪಾಲಿಗೆ "ಚಣಿಲು" ಎಂಬ ಒಂದು ಪ್ರಾಣಿ. ಆ ಚಿತ್ರ "ಚ" ಕಾರಕ್ಕೆ ಸಂಕೇತವಾಗಬಹುದೇ ಹೊರತು "ಅ"ಕ್ಕೆ ಆಗಬಾರದು. ರಾಜ್ಯಾದಂತ ಒಂದೇ ರೀತಿಯ ಕನ್ನಡದ ಪ್ರಾಥಮಿಕ ಪಠ್ಯಪುಸ್ತಕಗಳನ್ನು ಸರ್ಕಾರವೇ ಪ್ರಕಟಿಸುತ್ತದೆ. ಆದರೆ ಈ ಪಠ್ಯಪುಸ್ತಕಗಳಲ್ಲಿ ಮೇಲಿನಂತೆ ಚಣಿಲು; ಅಳಿಲುಗಳಾಗುವುದು; 'ಅವನು ಬಸವ, ಅವಳು ಕಮಲ' ಎಂದು ಶುರುವಾಗುವುದು ಅವೈಜ್ಞಾನಿಕವಾದುದು." ಪಠ್ಯಪುಸ್ತಕ ರಚಿಸಿದ ಮಹನೀಯರಿಗೆ, ಭಾಷೆಯ ಕಲಿಕೆಯ ಮನೋವಿಜ್ಞಾನದ ಕ್ರಮ ಗೊತ್ತಿಲ್ಲದಿರುವುದನ್ನು ಇನ್ನೂ ಅನೇಕ ಉದಾಹರಣೆಗಳೊಡನೆ ಕಾರಂತರು ತೋರಿಸುತ್ತಾರೆ. ಆಡು ಮಾತಿನ ಹಲವು ಪ್ರಭೇದಗಳಿರುವ ರಾಜ್ಯದಲ್ಲಿ ಮಕ್ಕಳ ಶಿಕ್ಷಣದ ಆರಂಭದ ಹೊತ್ತಿನಲ್ಲಿ ಆಯಾ ಪ್ರಾದೇಶಿಕತೆಯ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಮಕ್ಕಳಿಗೆ ಭಾಷಾ ಪಠ್ಯಪುಸ್ತಕ ಇಲ್ಲದಿರುವುದರ ಅವೈಜ್ಞಾನಿಕತೆಯನ್ನು ಕಾರಂತರು ಟೀಕಿಸುತ್ತಾರೆ.

ಪೂರ್ವ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಒಂದು ವಸ್ತುವಿನ ಚಿತ್ರ ತೋರಿಸಿ ಆ ಬಳಿಕ ಸಂಬಂಧಪಟ್ಟ ಹೆಸರನ್ನು ದೊಡ್ಡ ಅಕ್ಷರಗಳಲ್ಲಿ ಕಾರ್ಡಿನಲ್ಲಿ ಬರೆದು ಸಮೀಪ ಇರಿಸಿ ಅನಂತರ ಚಿತ್ರದ ವಸ್ತುವಿಗೆ ಸಂಬಂಧಪಟ್ಟ ಯಾವೆಲ್ಲಾ ವಿಷಯಗಳನ್ನು ಮಗು ಹೇಳಬಹುದೋ ಅದನ್ನೆಲ್ಲಾ ಮಾತನಾಡಿಸಬೇಕು. ಮಕ್ಕಳ ಭಾಷೆಯಲ್ಲಿ ಪರಿಣತಿ ಸಂಪಾದಿಸಬೇಕಾದರೆ ಕೃತ್ರಿಮತೆ ಅಥವಾ ಒತ್ತಾಯ ಪ್ರಯೋಜನಕ್ಕೆ ಬರಲಾರದು. ತಾನು ತಿಳಿಯಬೇಕು! ತನಗೆ ಗೊತ್ತಿರುವುದನ್ನು ತಿಳಿಸಬೇಕು ಎಂಬ ಉದ್ದೇಶಗಳೇ ಭಾಷೆಗೆ ಪೋಷಕ ಸಾಧನವೆಂಬುದು ಕಾರಂತರ ಸ್ಪಷ್ಟ ಭಾಷಿಕ ತಿಳುವಳಿಕೆಯಾಗಿತ್ತು. ಪ್ರಾಥಮಿಕ ಶಾಲೆಗಳಿಗೆ ಬರುವ ಮಕ್ಕಳು, ಮನೆಯಲ್ಲಿ ಆಡುವ ಭಾಷೆಯನ್ನು ಬಳಸುತ್ತಾರೆ. ಶಾಲೆಯಲ್ಲಿ ಇನ್ನೊಂದು ಭಾಷೆ ಹೇಳಿಕೊಡುವುದಾದರೆ ಅಲ್ಲಿನ ಸಂಭಾಷಣೆಗಳೆಲ್ಲವೂ ಆ ಭಾಷೆಯಲ್ಲಿ ನಡೆಯಬೇಕು. ಮನೆಯಲ್ಲಿ ಗ್ರಾಮ್ಯಭಾಷೆಯನ್ನು ಬಳಸುತ್ತಿದ್ದರೆ ಗ್ರಂಥಸ್ಥ ಭಾಷೆಯ ರೂಪವನ್ನು ಬಳಸುವುದನ್ನು ಕಲಿಸಬೇಕು. ನಂತರ ಮಾತಾಡಲು, ನಂತರ ಓದಲು ಅನಂತರ ಬರಹವನ್ನು ಕಲಿಸಬೇಕು. ಮಗುವಿನ ಪಾಲಿನ ಶಬ್ದಭಂಡಾರ ಅದರ ಆಸಕ್ತಿಯ ವಿಷಯಗಳಿಗೆ ಸಂಬಂಧಿಸಿರಬೇಕು. ಓದುವ ಪ್ರಯತ್ನವನ್ನು ಭಾಷೆ ಬಂದ ಮೇಲೆ ಕಲಿಸಬೇಕು. ಒಂದು ಭಾಷೆಯನ್ನು ಚೆನ್ನಾಗಿ ಕಲಿತ ಮೇಲೆ ಎರಡನೇ ಭಾಷೆಯನ್ನು ಕಲಿಸಬೇಕು. ಈ ಭಾಷೆ ಕೂಡ ಆರಂಭದಲ್ಲಿ ಕೇಳಿ ಬರಬೇಕಾದುದು. ಹೀಗೆ ಅನೇಕ ಭಾಷೆಯನ್ನು ಕಲಿಸುವಾಗ ಮೂಲತಃ ಪ್ರತಿಯೊಂದು ಭಾಷೆಗೂ ಇರುವ ಭಾಷಿಕ ವ್ಯಾಕರಣದ ವ್ಯತ್ಯಾಸ ಮಗುವಿನಲ್ಲಿ ಗೊಂದಲ ಉಂಟುಮಾಡಬಹುದು. ಹಾಗೆ ಆಗದಂತೆ ತುಂಬಾ ಎಚ್ಚರಿಕೆ ವಹಿಸಬೇಕು. ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರಂತರ ಚಿಂತನೆ ವೈಜ್ಞಾನಿಕವಾದುದು. ಈ ಸಂದರ್ಭದಲ್ಲಿ ಶಿಕ್ಷಕರಿಗೆ ಒಂದು ಕಷ್ಟದ ಶಬ್ದವು ಬಂದರೆ ಅದರ ಅರ್ಥವನ್ನು ಕೊಡುವಂಥ ಕೋಶವೊಂದು ಬೇಕೆಂದು ಕಾರಂತರಿಗೆ ಅನಿಸಿತು. ಈ ಕಾರಣದಿಂದ "ಸಿರಿಗನ್ನಡ ಅರ್ಥಕೋಶವನ್ನು" ಸಂಪಾದಿಸಿದರು.

ಆಗ ಪ್ರಚಲಿತವಾಗಿದ್ದ ಪಠ್ಯ ಪುಸ್ತಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಕಾರಂತರು, ಅವುಗಳು ಮಕ್ಕಳ ಸ್ಮರಣ ಶಕ್ತಿಯ ಮೇಲೆ ಒತ್ತು ನೀಡುತ್ತಿದ್ದುದನ್ನು ಗಮನಿಸಿದರು. ಮಕ್ಕಳ ವಯೋಮಾನವನ್ನು ನೋಡಿಕೊಂಡು ಪಠ್ಯಗಳನ್ನು ರೂಪಿಸಬೇಕಾಗಿತ್ತು. ಮಕ್ಕಳೊಂದಿಗೆ ಇರುವ ಕ್ರಿಯಾಶೀಲ ಶಕ್ತಿಯನ್ನು ಉತ್ತೇಜಿಸುವಂತಾಗಿರಬೇಕು. ಆದರೆ ಈಗಿನ ಪಠ್ಯಪುಸ್ತಕಗಳು ಬಹಳ ನೀರಸವಾಗಿದೆ. "ಇವತ್ತಿನ ಯಾವತ್ತೂ ಪಠ್ಯಪುಸ್ತಕಗಳು ಪೂರ್ಣವಾಗಿ Statement of texts ಆಗಿವೆ" ಎನ್ನುವುದನ್ನು ಕಾರಂತರು ಕಂಡುಕೊಂಡರು. ಹೀಗೆ ವಿಸ್ತೃತವಾಗಿ ಚಿಂತಿಸಿದ ಕಾರಣದಿಂದ "ಹೂಗನ್ನಡ ಪಾಠಮಾಲೆ", "ಸಿರಿಗನ್ನಡ ಪಾಠಮಾಲೆ", "ಓದುವ ಆಟ" ಮುಂತಾದ ಪುಸ್ತಕಗಳನ್ನು ಕಾರಂತರು ಬರೆದರು.

ಮಕ್ಕಳಿಗೆ ಪಠ್ಯವನ್ನು ರೂಪಿಸುವಾಗ ಘನೋದ್ದೇಶದಿಂದ ರೂಪಿಸಬಾರದು. ಎಳೆಯ ಮಕ್ಕಳ ಪುಸ್ತಕದಲ್ಲಿ "ಪ್ರಾರ್ಥನೆಗೆ ತತ್ವಜ್ಞಾನವಿರಲಿ ಅದರೆ ಉಳಿದ ಗಳಿಗೆಯಲ್ಲೂ ಅದುಬೇಡ. 'ಮಾನವ ಜನ್ಮವ್ಯರ್ಥ', 'ಹಿಗ್ಗುವೆಯಾಕೋ', 'ಸುಪ್ತಾವಸ್ಥೆಗಳು,' ಇತ್ಯಾದಿ ಹಾಡುಗಳ ಪರಿಚಯವು ಮಗುವಿಗಾಗುವಂತಿಲ್ಲ" ಎನ್ನುವುದರ ಮೂಲಕ ಬಲವಂತವಾಗಿ ಪಠ್ಯದಲ್ಲಿ ತತ್ವಜ್ಞಾನವನ್ನು ತುಂಬುವುದನ್ನು ಕಾರಂತರು ವಿರೋಧಿಸಿದರು. ಕಾರಂತರಿಗೆ ಬಾಳ್ವೆಯೇ ಬೆಳಕು. ಸಮೃದ್ಧವಾದ ಬದುಕನ್ನು ಕಟ್ಟಿಕೊಳ್ಳಬೇಕಾದ ಮಕ್ಕಳ ಮನಸ್ಸಿನಲ್ಲಿ ವಿಪರೀತ ತತ್ವಜ್ಞಾನದಿಂದ ಬಾಳು ನಿರರ್ಥಕವೆಂಬ ಭಾವ ಬರಬಾರದು. ದೇವರನ್ನು ತಿಳಿಯುವುದು ಕೂಡ ಬಾಳ್ವೆಯಿಂದಲೇ ಎಂಬುದು ಕಾರಂತರ ಬದುಕಿನ ಬಗೆಗಿನ ಇತ್ಯಾತ್ಮಕ ದೃಷ್ಟಿಕೋನವಾಗಿತ್ತು. ಮಕ್ಕಳಿಗೆ ಧೈರ್ಯ, ಶೌರ್ಯ, ಸ್ಥೈರ್ಯ, ಉತ್ಸಾಹ ಕುತೂಹಲ ಕ್ರಿಯಾಶೀಲತೆ ಮೂಡುವಂತೆ ಮಾಡುವುದೇ ಪಠ್ಯಪುಸ್ತಕಗಳ ನಿಜವಾದ ಕಾರ್ಯವೆಂದುಕೊಂಡಿದ್ದರು ಕಾರಂತರು ಮತ್ತು ಹಾಗೆಯೇ ಆ ನಿಟ್ಟಿನಲ್ಲಿ ಪಠ್ಯಗಳನ್ನು ರಚಿಸಿದರು.

ಮಕ್ಕಳು ಸದಾ ಚಟುವಟಿಕೆಯಿಂದ ಕೂಡಿರಬೇಕು ಮತ್ತು ಆ ಚಟುವಟಿಕೆಯಿಂದಲೇ ಅವರೊಳಗಿನ ಕ್ರಿಯಾಶೀಲತೆ ರೂಪುಗೊಳ್ಳುವಂತೆ ಮಾಡಬೇಕಾದುದು ಮಾತ್ರ ಅಧ್ಯಾಪಕರ ಕೆಲಸ. ಮಕ್ಕಳ ಈ 'ಉತ್ಪಾದಕ ಶಕ್ತಿ'ಯನ್ನು ಕಾರಂತರು ಬಹಳವಾಗಿ ಗುರುತಿಸಿದ್ದರು. 'ಶಾಲೆಗಳೆಂಬುವು ಮಕ್ಕಳ ಶಿಕ್ಷಣಕ್ಕಾಗಿರುವುವು; ಗುರುವು ಏನೂ ಅರಿಯದ ಬಾಲಕನಿಗೆ ಹೇಳಿಕೊಡುವುದು, ಶಿಷ್ಯ ಅವುಗಳನ್ನೆಲ್ಲಾ ಪರಿಗ್ರಹಿಸುವುದು ಎಂಬುದು ನಮ್ಮಲ್ಲಿ ಶಾಲೆ, ಗುರು, ಶಿಷ್ಯ – ಇವರೊಳಗಿನ ಸಂಬಂಧದ ಕಲ್ಪನೆಯು. ಮಕ್ಕಳೆಂಬುವರು ಬರಿದಾದ ಬಂಡಿಗಳು, ಅವುಗಳಲ್ಲಿ ಉಪಾಧ್ಯಾಯನು ತುಂಬಿಸಿದರೆ ಮಾತ್ರ ಉಂಟು ಇಲ್ಲವಾದರೆ ಇಲ್ಲ ಎಂಬ ತಿಳಿವು ಇಪ್ಪತ್ತನೆಯ ಶತಮಾನದಲ್ಲೂ ನಮ್ಮಲ್ಲಿ ಬೇರೂರಿದೆ. "ಮಕ್ಕಳ ಮನಸ್ಸು ತಾನೇ ಅರಳುವಂತೆ ಆಗಬೇಕು. ಈ ಅರಳುವಿಕೆಗೆ ಅನುಕೂಲಕರವಾದ ಅವಕಾಶವನ್ನು ಕಲ್ಪಿಸುವುದು ಒಳ್ಳೆಯ ಶಿಕ್ಷಣದ ಗುರಿ. ಇದಕ್ಕೆ ಬದಲಾಗಿ ಹಿರಿಯರು ತಮ್ಮ ಆಕೃತಿಯಲ್ಲಿ ಮಕ್ಕಳನ್ನು ರೂಪಿಸುವುದು; ತಮಗೆ ಮುಖ್ಯವೆನಿಸಿದ ಇಲ್ಲವೆ ತಮಗೆ ಗೊತ್ತಿರುವ ವಿಷಯಗಳನ್ನು ಮಕ್ಕಳ ತಲೆಗೆ ತುಂಬಿಸುವುದು ಖಂಡಿತ ಸರಿಯಾದುದಲ್ಲ" ಎಂಬುದು ಕಾರಂತರ ಸ್ಪಷ್ಟೋಕ್ತಿ. ಆದರೆ ಭಾರತದೇಶದಲ್ಲಿ ಇಂದಿನವರೆವಿಗೂ ಇಂತಹ ಶಿಕ್ಷಣದ ಕ್ರಮವೇ ಮುಂದುವರೆದುಕೊಂಡು ಬಂದಿದೆ. ಈ ಕಾರಣದಿಂದಲೇ ನಮ್ಮಲ್ಲಿ ಜ್ಞಾನಾಭಿವೃದ್ಧಿ ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ಮಕ್ಕಳು ನಿಸರ್ಗದೊಡಗಿನ ಸಂಬಂಧ ಹಾಗೂ ಆಟೋಟಗಳಲ್ಲಿ ಉತ್ಸುಕತೆಯಿಂದ ಇರುತ್ತಾರೆ. ಇಂತಹ ಸಂಗತಿಗಳೇ ಶಿಕ್ಷಣದಲ್ಲಿ ಮುಖ್ಯಾಂಶಗಳಾಗಿರಬೇಕು. ಮಕ್ಕಳು ಸದಾ ನಗುತ್ತಾ ನಲಿಯುತ್ತಾ ಇರಬೇಕು. ಶಾಲೆಗಳು ಬಂದೀ ಖಾನೆಗಳಾಗಬಾರದು. "ಮಕ್ಕಳ ನಗುವೇನೆಂದು ಅರಿಯದವನು ಉಪಾಧ್ಯಾಯನಾಗಲು ಅರ್ಹನಲ್ಲ. ಮಕ್ಕಳ ಶಿಕ್ಷಣವೆಂದರೆ ನಗುವಿನ ಶಿಕ್ಷಣ. ಶಿಕ್ಷಣದ ಗುರಿಯಾದರೂ ನಗುವೇ" ಎನ್ನುವುದು ಕಾರಂತರ ಮಕ್ಕಳ ಪರ ಚಿಂತನೆಯಾಗಿತ್ತು.


Digitised by Bharatavani, CIIL

ಭಾರತದಲ್ಲಿ ಓದು, ಬರಹ, ಗಣಿತ ಈ ಮೂರೇ ಶಿಕ್ಷಣದ ಮೂಲ ಗುರಿಯೆಂದು ಬಹಳ ಕಾಲದಿಂದಲೂ ಭಾವಿಸಲಾಗಿತ್ತು. ಕಾರಂತರಿಗೆ ಈ ಕ್ರಮ ಸರಿಯಲ್ಲವೆನ್ನಿಸಿತು. 1931–32ರ ಹೊತ್ತಿಗೆ ಕಾರಂತರು ಅನೇಕ ಶಾಲೆಗಳನ್ನು ಸುತ್ತಾಡಿ ಈ ಕಲಿಕೆಯ ಕ್ರಮದ ದೋಷವನ್ನು ಗುರುತಿಸಿದರು ಮತ್ತು ಇಂತಹ ಭ್ರಾಂತು ಹೋಗಲಾಡಿಸುವ ತನಕ ದೇಶದ ಏಳಿಗೆ ಸಾಧ್ಯವಿಲ್ಲವೆಂದು ಗಟ್ಟಿ ಧ್ವನಿಯಲ್ಲಿ ಹೇಳುತ್ತಿದ್ದರು. ಈ ಹಿನ್ನೆಲೆಯಿಂದ ಕಾರಂತರ ಬಾಲವನ ಮತ್ತು ಬಾಲ ಪ್ರಪಂಚ ತುಂಬಾ ಗಮನಾರ್ಹವಾದ ಶೈಕ್ಷಣಿಕ ಪ್ರಯೋಗಗಳು. ಪುತ್ತೂರಿನ ಪರ್ಲಡ್ಕ ಎಂಬ ಪಟ್ಟಣದ ಕೊನೆಯಲ್ಲಿದ್ದ ಸುಮಾರು ಆರು ಎಕರೆ ಪ್ರದೇಶವನ್ನು ಕಾರಂತರು ಸರ್ಕಾರದಿಂದ ಪಡೆದುಕೊಂಡರು. ಕಾರಂತರ ಬಹುತೇಕ ಶಿಕ್ಷಣ ಸಂಬಂಧಿ ಚಟುವಟಿಕೆಯ ಹಿಂದೆ ಬೆನ್ನೆಲುಬಾಗಿ ನಿಂತ ಶಿವರಾಯರು ಈ ಜಾಗವನ್ನು ಕಾರಂತರಿಗೆ ಕೊಡಿಸಿದರು. ಈ ಪ್ರದೇಶಕ್ಕೆ ಪಡುಮಲೆ ಎಂಬ ಹೆಸರಿದ್ದಿತ್ತು. ತುಂಬಾ ದಟ್ಟವಾಗಿ ಗಿಡಮರಗಳಿಂದ ಕೂಡಿತ್ತು ಆ ಜಾಗ. ಕಾರಂತರು ಈ ಸ್ಥಳಕ್ಕೆ 'ಬಾಲವನ' ಎಂಬ ಹೆಸರಿಟ್ಟರು. 'ಕಿಂಡರ್ ಗಾರ್ಟನ್' ಎಂಬುದರ ಸ್ಥೂಲ ಅನುವಾದವಿದು. ಕಾರಂತರು ತಮ್ಮ ಗೆಳೆಯ ರಾಮನ್ ನಂಬಿಯಾರ್ ಜೊತೆಗೂಡಿ ಸಾಲ ಮಾಡಿ ಬಾಲವನ ಆರಂಭಿಸಿದರು. ಬಾಲವನದ ಶಿಕ್ಷಣ ಕ್ರಮದಲ್ಲಿ ಕಾರಂತರು ಭಾಷೆ ಮತ್ತು ಗಣಿತದ ವಿಚಾರದಲ್ಲಿ ಕೆಲವು ಪ್ರಯೋಗಗಳನ್ನು ನಡೆಸಿದರು. ಬೆಲಾರ್ಡ್ ಭಾಷೆಯ ವಿಚಾರದಲ್ಲಿ ರೂಪಿಸಿದ್ದ ಸೂತ್ರವನ್ನು ಕಾರಂತರು ಬಹುವಾಗಿ ಮೆಚ್ಚಿದ್ದರು ಮತ್ತು ಅವನ್ನೇ ತಮ್ಮ ಪಠ್ಯದಲ್ಲೂ ಅನುಸರಿಸತೊಡಗಿದರು. ಬೆಲಾರ್ಡ್ ಸೂಚಿಸುವಂತೆ ಒಂದು ವಾಕ್ಯವನ್ನು ತೆಗೆದುಕೊಂಡು ಆ ವಾಕ್ಯದಲ್ಲಿರುವ ನಾಮಪದಕ್ಕೆ ಸಂಬಂಧಿಸಿದಂತೆ ಮಕ್ಕಳೊಡನೆ ಮಾತುಕತೆ ನಡೆಸುವುದು, ಆ ಪದ ಮಕ್ಕಳಿಗೆ ಚೆನ್ನಾಗಿ ಪರಿಚಯವಾದ ನಂತರ ಈ ಪದಕ್ಕೆ ಸಂಬಂಧಿಸಿದಂತೆ ಬೇರೆ ಬೇರೆಯ ಇನ್ನಷ್ಟು ಪದಗಳನ್ನು ರಚಿಸುವುದು. ಹೀಗೆಯೇ ಗಣಿತಕ್ಕೆ ಸಂಬಂಧಿಸಿದಂತೆಯೂ ಕಾರಂತರು ಅನೇಕ ಪ್ರಯೋಗಗಳನ್ನು ನಡೆಸಿದರು.

ಮಕ್ಕಳ ಜ್ಞಾನದ ದಾಹವನ್ನು ಹೆಚ್ಚಿಸುವ ದೃಷ್ಟಿಯಿಂದ ಇಂಗ್ಲಿಷ್‌ನಲ್ಲಿ ಆರ್ಥರ್ ಮೀ ಸಂಪಾದಿಸಿದ "ಚಿಲ್ಡ್ರನ್ ಎನ್‌ಸೈಕ್ಲೋಪೀಡಿಯ"ದ ಮಾದರಿಯಲ್ಲಿ ಕನ್ನಡದಲ್ಲಿ ಪುಸ್ತಕ ಬರೆಯಬೇಕೆಂದು ಕಾರಂತರು ನಿರ್ಧರಿಸಿದರು. ಇದುವೇ ಅವರ ಬಾಲಪ್ರಪಂಚ. ಇದನ್ನು "ಮಕ್ಕಳ ಹಸಿವನ್ನು ಹೆಚ್ಚಿಸುವ ದೊಡ್ಡ ಸಾಹಸ" ಎಂದು ಕಾರಂತರು ಕರೆದರು. ಬಾಲಪ್ರಪಂಚದ ಸಂಪುಟಗಳಲ್ಲಿ ಖಗೋಳ, ಸೌರವ್ಯೂಹ, ಭೂವಿಜ್ಞಾನ, ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂ ಖಂಡಗಳು, ಕಲೆಯ ವಿವಿಧ ಪ್ರಕಾರಗಳು, ಪ್ರಪಂಚದ ಇತಿಹಾಸ, ಧರ್ಮಗಳು ಮುಂತಾದ ಅನೇಕ ವಿಚಾರಗಳನ್ನು ಸರಳ ಮತ್ತು ಸೂಕ್ಷ್ಮವಾಗಿ ಪ್ರಸ್ತಾಪಿಸಿದರು. ಇವು ಕಿರಿಯರ ವಿಶ್ವಕೋಶವಾಗಿದ್ದವು. ಈ ಸಂಪುಟಗಳ ಲೇಖನಗಳಲ್ಲಿ ಕಾರಂತರು ಯಾವ ಕ್ಲಿಷ್ಟಪದವನ್ನು ಬಳಸದೆ ಅತ್ಯಂತ ಸರಳವಾದ ಭಾಷೆಯನ್ನು ಬಳಸಿದ್ದಾರೆ. ಈ ಬಾಲಪ್ರಪಂಚದ ನಂತರವೂ ಕಾರಂತರು ಶಿಕ್ಷಣ ಸಂಬಂಧಿ ಪ್ರಯೋಗಗಳನ್ನು ನಡೆಸುತ್ತಲೇ ಇದ್ದರು. ಅವುಗಳಲ್ಲಿ ಪಠ್ಯಪುಸ್ತಕದ ವಿಚಾರ ಒಂದಾದರೆ, ಪ್ರತ್ಯಕ್ಷ ಶಿಕ್ಷಣ ವಿಧಾನ ಮತ್ತೊಂದು.

ಈ ರೀತಿಯ ಪಠ್ಯಪುಸ್ತಕಗಳಲ್ಲಿ 'ಅದ್ಭುತ ಜಗತ್ತು' ಒಂದು. ತೀರಾ ಎಳೆಯ ಮಕ್ಕಳನ್ನೂ ಗುರಿಯಾಗಿಟ್ಟುಕೊಂಡು ರೂಪಿಸಿದ ಸಂಪುಟಗಳು ಇವು. ಆಕಾಶ ಕಾಯಗಳ ಸಂರಚನೆ. ಭೂಮಿಯ ಉಗಮ, ವಿಕಾಸ ಕ್ರಮ, ಸಾಗರ ನಿರ್ಮಾಣ ಮುಂತಾದ ವಿಷಯಗಳನ್ನು ಈ ಸಂಪುಟಗಳು ಒಳಗೊಂಡಿವೆ. ಆದರೆ ಈ ಸಂಪುಟಗಳ ವಿಷಯ ವಸ್ತುವಿನ ಹಿಂದಿನ ವೈಜ್ಞಾನಿಕ ನಿಖರತೆಯ ಬಗ್ಗೆ ಇಂದಿಗೂ ಅನೇಕ ಸಂಶಯಗಳಿವೆ. ಆದರೆ ಕಾರಂತರಿಗೆ ಮಕ್ಕಳ ಮನಸ್ಸು ಇಂತಹ ವಿಷಯಗಳ ಕಡೆಗೂ ಯೋಚಿಸುವಂತೆ ಮಾಡುವುದೇ ಮುಖ್ಯ ಗುರಿಯಾಗಿತ್ತು. ಮುಂದೆ 'ವಿಜ್ಞಾನ ಪ್ರಪಂಚ'ವು ಇದೇ ಮಾದರಿಯ ಸಂಪುಟವಾಗಿದೆ. ಕಾರಂತರು ಈ ಸಂಪುಟಗಳಿಗಾಗಿ ವ್ಯಾಪಕವಾದ ಅಧ್ಯಯನವನ್ನು ಕೈಗೊಂಡರು. "ನಾನು ಈ ವಿಷಯಗಳಿಗಾಗಿ ಅನೇಕ ಗ್ರಂಥಗಳಿಗೆ ಲೇಖನಗಳಿಗೆ ಋಣಿಯು. ಇಲ್ಲಿರುವ ಎಲ್ಲವೂ ವಿವಿಧ ಮೂಲಗಳಿಂದ ಸಂಗ್ರಹಿಸಿದವುಗಳೇ. ಬರಿಯ ಅಂಚೆಯವನ ಕೆಲಸ ನನ್ನದು" ಎಂದು ಕಾರಂತರು ಹೇಳಿದ್ದಾರೆ. ಈ ಮಾತೇ ಅವರ ವ್ಯಾಪಕ ಓದನ್ನು ತಿಳಿಸುತ್ತದೆ. ಈ ಸಂಪುಟ ಬರಹಗಳ ಮೂಲಕ ಕನ್ನಡದಲ್ಲಿ ವಿಜ್ಞಾನ ಬರಹಗಳನ್ನು ಬರೆಯುವುದು ಸಾಧ್ಯವೆಂದು ತೋರಿಸಿಕೊಟ್ಟ ಕಾರಂತರ ರೀತಿ ಗಮನಾರ್ಹವಾದುದು.

ಎಳೆಯ ಮಕ್ಕಳಲ್ಲಿ ಆಸಕ್ತಿ–ಅಭಿರುಚಿಗಳನ್ನು ಬೆಳೆಸದೆ ಹೋದರೆ, "ಮುಂದಿನ ಪ್ರೌಢ ಶಿಕ್ಷಣವು ಒದ್ದೆಯ ಮಣ್ಣಿನ ಪಾಯದ ಮೇಲೆ ಕಟ್ಟಿದ, ನಾಲ್ಕೆನಾಲ್ಕು ದಿನಗಳಲ್ಲಿ ಕುಸಿಯುವ ಗೋಪುರವಾದೀತು" ಎಂದು ಕಾರಂತರು ಹೇಳುತ್ತಿದ್ದರು. ಹಿನ್ನೆಲೆಯಲ್ಲಿ ಮಕ್ಕಳಿಗಾಗಿ ವೈಜ್ಞಾನಿಕ ಬರಹಗಳನ್ನು ಅವರು ರಚಿಸಿದರು. ಕಿರಿಯರ ವಿಶ್ವಕೋಶ ಸಂಪುಟಗಳಲ್ಲದೆ ವಿಜ್ಞಾನ ಸಂಬಂಧಿ ಕೃತಿಗಳನ್ನು ರೂಪಿಸಿದರು. ಮಕ್ಕಳಿಗಾಗಿ 'ಹೊಯ್ಸಳರ', 'ಬುದ್ಧಿವಂತ,' 'ನಂಗೊತ್ತಿಲ್ಲಪ್ಪಾ,' 'ನರನೋ ವಾನರನೋ', 'ಗಜರಾಜ' 'ಸೂರ್ಯಚಂದ್ರ,' 'ಮಗನ ಮದುವೆ' ಮೊದಲಾದ ಮಕ್ಕಳ ಸೃಜನಶೀಲ ಬರಹಗಳನ್ನು ಕಾರಂತರು ಬರೆದರು.

ಕಾರಂತರು ನಾಡಿನ ಶಿಕ್ಷಣದ ಬಗೆಗೆ ಚಿಂತಿಸುವ ಹೊತ್ತಿಗೆ ಬಹು ಸಂಖ್ಯಾತ ವಯಸ್ಕರು ಶಿಕ್ಷಣ ವ್ಯವಸ್ಥೆಯಿಂದಲೇ ದೂರ ಉಳಿದಿದ್ದರು. 1953ರ ಹೊತ್ತಿಗೆ ಪ್ಯಾರಿಸ್ಸಿನ ಯೂನೆಸ್ಕೋ ಸಂಸ್ಥೆಯವರು ವಯಸ್ಕರ ವಿದ್ಯಾಭ್ಯಾಸದ ಸಮಸ್ಯೆಗಳನ್ನು ಕಂಡುಹಿಡಿಯುವುದಕ್ಕಾಗಿ Fundamental Group Training Scheme' ಎಂಬ ಯೋಜನೆಯನ್ನು ರೂಪಿಸಿದರು. ಇದನ್ನು ಎರಡು ವರ್ಷಗಳ ಕಾಲ ಮೈಸೂರಿನ ಇಲವಾಲ ಎಂಬ ಗ್ರಾಮದಲ್ಲಿ ನಡೆಸಿದರು. ಯೂನೆಸ್ಕೋ ಸಂಸ್ಥೆಯ ನಿರ್ದೇಶಕರಾದ ಜಾನ್‌ಬವರ್ಸ್ ಅವರು ಕಾರಂತರಿಗೆ ಪರಿಚಯಸ್ಥರಾದುದರಿಂದ ವಯಸ್ಕರ ಶಿಕ್ಷಣದ ಈ ಕಾರ್ಯದಲ್ಲಿ ಕೈಜೋಡಿಸುವಂತೆ ವಿನಂತಿಸಿಕೊಂಡರು. ಜಾನ್ಸ್‌ಬವರ್ಸ್ ಅವರ ಒತ್ತಾಯದ ಮೇರೆಗೆ ಒಂದೆರಡು ಪ್ರಾಥಮಿಕ ಪುಸ್ತಕಗಳನ್ನು ಕಾರಂತರು ತಯಾರಿಸಿದರು. ಉದಾ: "ಜೋಗಿ ಕಂಡ ಊರು,' 'ಜೋಗಿ ಒಲಿದ ಊರು', 'ಅಳಿಲ ಭಕ್ತಿ' ಮುಂತಾದವು. ಕಾರಂತರು ವಯಸ್ಕರ ಶಿಕ್ಷಣವನ್ನು ಕುರಿತು ಬಹಳ ಗಂಭೀರವಾಗಿ ಚಿಂತಿಸಿದರು. "ಹೇಗೆ ಎಳೆಯರು ವಯಸ್ಕರಲ್ಲವೋ ಹಾಗೆಯೇ ವಯಸ್ಕರು ಎಳೆಯರೂ ಅಲ್ಲ. ಅವರದು ಕೇವಲ ವಯಸ್ಸಿನ ಮೆಟ್ಟಿಲುಗಳಲ್ಲ, ಮನಸ್ಸಿನ ಮೆಟ್ಟಿಲುಗಳು" ಎಂದು ಹೇಳುತ್ತಿದ್ದ ಕಾರಂತರು ಅವರಿಗೆ ತಕ್ಕಂತಹ ಪಠ್ಯಗಳನ್ನು ರೂಪಿಸಿದರು. ಹಳ್ಳಿಯ ಜನ ನವ ಸಾಕ್ಷರರಾಗುತ್ತಾ ಸ್ವಉದ್ಯೋಗವನ್ನು ಅವಲಂಬಿಸಿ ಗೌರವದಿಂದ ಬದುಕುವಂತೆ ಮಾಡಬೇಕೆಂದರು. ಕಾರಂತರು ಶಿಕ್ಷಕರ ಬಗ್ಗೆಯೂ ಗಂಭೀರವಾಗಿ ಚಿಂತಿಸಿದವರು. ದಿನೇ ದಿನೇ ಕುಸಿಯುತ್ತಿರುವ ಅಧ್ಯಾಪಕ ಮೌಲ್ಯವನ್ನು ಕಂಡು ಕೆಂಡವಾದವರು. ಶಿಕ್ಷಕರು ಸರಿಯಾದ ಅಧ್ಯಯನ ಅಧ್ಯಾಪನವನ್ನು ಮಾಡುತ್ತಿಲ್ಲವೆಂಬುದು ಕಾರಂತರ ಸಿಟ್ಟಿಗೆ ಕಾರಣವಾಗಿತ್ತು. ಶಿಕ್ಷಕರೆಂದರೆ ಕೇವಲ ಪಾಠ ಮಾಡುವವರಲ್ಲ. ವಿದ್ಯಾರ್ಥಿಯ ಪಠ್ಯವನ್ನಷ್ಟೇ ಚೆನ್ನಾಗಿ ಅಧ್ಯಯನ ಮಾಡಿಕೊಂಡಿದ್ದರೆ ಸಾಲದು. ಆತ ಅಪಾರವಾದ ಓದಿನ ಹಿನ್ನೆಲೆಯನ್ನು ಹೊಂದಿರಬೇಕು. ತನ್ನ ನಡತೆಯ ಮೂಲಕವೇ ವಿದ್ಯಾರ್ಥಿಗಳಲ್ಲಿ ಮೌಲ್ಯವರ್ಧನೆ ಮಾಡಬೇಕೇ ಹೊರತು ಬೋಧನೆಯಿಂದ ಅಲ್ಲ ಎಂಬುದು ಕಾರಂತರ ನಿಲುವಾಗಿತ್ತು.

Digitised by Bharatavani, CIIL

ಶಿವರಾಮಕಾರಂತರ ಒಟ್ಟಾರೆ ಶೈಕ್ಷಣಿಕ ಚಿಂತನೆ, ಅವರ ಬದುಕು ಮತ್ತು ಬರಹದ ಒಟ್ಟಾರೆ ಸಂರಚನೆಯ ಒಳಗೆ ಇದೆ. ಕಾರಂತರ ಧೋರಣೆಗಳನ್ನು ರೂಪಿಸಿದ ಸಾಮಾಜಿಕ ಸಂದರ್ಭ ಹಾಗೂ ಕಾರಂತರು ಅದಕ್ಕೆ ತೋರಿಸುತ್ತಾ ಬಂದ ಪ್ರತಿಕ್ರಿಯೆ ಎರಡೂ ಅವರ ಎಲ್ಲಾ ಬರಹಗಳಲ್ಲೂ ವ್ಯಕ್ತವಾಗಿವೆ. ಕಾರಂತರ ಪ್ರಧಾನವಾದ ಸೃಜನಶೀಲ ಬರಹವೆಂದರೆ ಕಾದಂಬರಿ ಕ್ಷೇತ್ರ. ಈ ಕಾದಂಬರಿಗಳಲ್ಲಿ ಕಾರಂತರ ಅಪಾರ ಮಾನವತಾವಾದವನ್ನು ಸುಧಾರಣಾವಾದಿ ದೃಷ್ಟಿಕೋನವನ್ನು ನೋಡಬಹುದು. ಆದರೆ ಈ ಸುಧಾರಣಾವಾದಿತ್ವ ಕೌಟುಂಬಿಕ ನೆಲೆಯಲ್ಲಿ ನಡೆಯುವಂತಹದ್ದೇ ಹೊರತು ಸಮಗ್ರ ಸಾಮಾಜಿಕ ಸುಧಾರಣೆಯ ನೆಲೆಗಟ್ಟಿನಲ್ಲಿ ನಡೆಯುವುದಲ್ಲ. ಈ ಮಾತು ಕಾರಂತರ ಎಲ್ಲ ಸೃಜನಶೀಲ ಬರಹಗಳಿಗೂ ಅನ್ವಯಿಸಬಹುದಾದ ಮಾತು. ಹಾಗೆಯೇ ಕಾರಂತರ ಒಟ್ಟಾರೆ ಶೈಕ್ಷಣಿಕ ಚಿಂತನೆಯಲ್ಲಿ ಅಭಿರುಚಿ, ವಿವೇಚನೆ, ವಿವರ ಮತ್ತು ವಿಸ್ತಾರ ಹಾಗೂ ಜ್ಞಾನದ ತಿಳಿವಿನ ದೃಷ್ಟಿಯನ್ನು ಪ್ರಧಾನ ಆಶಯವನ್ನಾಗಿ ಉಳ್ಳದ್ದು. ಕಾರಂತರು ಶೈಕ್ಷಣಿಕ ಚಿಂತನೆಯ ಬಹುತೇಕ ಭಾಗವನ್ನು ಮಕ್ಕಳ ಕಲಿಕೆಯ ಕ್ರಮಕ್ಕೆ ಮೀಸಲಿಟ್ಟಿದ್ದಾರೆ. ಅಲ್ಲಿ ಭಾಷೆಯ ಹಾಗೂ ಪಠ್ಯದ ವಿಷಯವನ್ನು ಮುಖ್ಯವಾಗಿ ಚರ್ಚಿಸುತ್ತಾರೆ. ಶುದ್ಧತೆ ಕಾರಂತರಿಗೆ ಮುಖ್ಯ ಪ್ರಶ್ನೆಯಾಗುತ್ತದೆ. ಆದರೆ ತಲೆತಲಾಂತರದಿಂದ ಶಿಕ್ಷಣದಿಂದ ವಂಚಿತರಾದವರ ಬಗ್ಗೆ ಕಾರಂತರ ನಿಲುವು ಭಾಷೆಯ ಶುದ್ಧತೆಯ ದೃಷ್ಟಿಯಿಂದ ಏನು ಎಂಬುದು ಕುತೂಹಲಕರವಾಗಿಯೇ ಉಳಿಯುತ್ತದೆ. ಮಾತೃ ಭಾಷೆಯಾದ ಕನ್ನಡದ ಬಗ್ಗೆ, ಕನ್ನಡದ ಜ್ಞಾನ ಪರಂಪರೆಯ ಬಗ್ಗೆ ಕೂಡ ಕಾರಂತರ ನಿಲುವು ಬಹುಸಂಖ್ಯಾತರ ಪರವಾದುದಲ್ಲ. ಇಂಗ್ಲಿಷ್ ಪರವಾದುದು. ಇದಕ್ಕೆ ಕಾರಂತರು ಕೊಡುವ ಕಾರಣ ಸಾಮಾಜಿಕವಾದುದಲ್ಲ. ಜ್ಞಾನದ ಪರವಾದುದು. ಕಾರಂತರ ಈ ಶೈಕ್ಷಣಿಕ ಚಿಂತನೆ ಕೂಡ ವೈಯಕ್ತಿಕ ಮಟ್ಟದ ಹಾಗೂ ಸಮಾಜದ ಆಂಶಿಕ ಸಾಧನೆಯೇ ಹೊರತು ಸಮಗ್ರ ಸಮಾಜದ ಬದಲಾವಣೆಯ ಪ್ರಕ್ರಿಯೆಯಾಗಿ ಕಾಣಿಸುವುದಿಲ್ಲ. ಆದರೆ ಮಕ್ಕಳ ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿದಂತೆ ಕಾರಂತರ ನಿಲುವು ಅತ್ಯಂತ ಉಪಯುಕ್ತವಾದುದು, ಸಾರ್ವಕಾಲಿಕವಾದುದು. ಮತ್ತೆ ಮತ್ತೆ ಕಾರಂತರ ಈ ಶೈಕ್ಷಣಿಕ ಚಿಂತನೆಗಳನ್ನು ಬಹಳ ಜತನದಿಂದ ಶೈಕ್ಷಣಿಕ ರಂಗ ಚಿಂತಿಸಬೇಕಾದ ಹಾಗೂ ಒಳಗು ಮಾಡಿಕೊಳ್ಳಬೇಕಾದ ಜರೂರು ಇದೆ.

–ಎಂ.ಎನ್.ನಂ.

## ಶಿಸ್ತಿನ ಪರಿಕಲ್ಪನೆ

"ಶಿಸ್ತು" ಎಂಬ ಪದವು ಆಂಗ್ಲ ಭಾಷೆಯ 'Discipline' ಎಂಬುದಕ್ಕೆ ಸಮಾನವಾಗಿ ಪ್ರಯೋಗಿಸಲಾಗುತ್ತದೆ. ಮೂಲತಃ 'Discipline' ಎಂಬ ಪದ ಲ್ಯಾಟಿನ್ ಭಾಷೆಯ 'Disciplina' ಎಂಬ ಪದದಿಂದ ಬಂದಿದ್ದು ಇದು ಬೋಧಿಸು, ಸೂಚನೆನೀಡು ಎಂಬ ಅರ್ಥಕೊಡುತ್ತದೆ. ಉಗಮವಾಗಿದೆ 'Discipline' ಎಂಬ ಶಬ್ದಕ್ಕೆ ಇನ್ನೂ ಒಂದು ಅರ್ಥವಿದೆ. ನಿರ್ದಿಷ್ಟ ಜ್ಞಾನ ಶಾಖೆಗಳಾದ ಅರ್ಥಶಾಸ್ತ್ರ ಇತಿಹಾಸ, ತತ್ವಶಾಸ್ತ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ ಮುಂತಾದ ನಿರ್ದಿಷ್ಟ ಜ್ಞಾನವನ್ನು ನಿರ್ದಿಷ್ಟ ಅಧ್ಯಯನ ವಿಧಾನಗಳ ಮೂಲಕ ಅಧ್ಯಯನ ಮಾಡುವ ಜ್ಞಾನ ಶಾಖೆಗಳನ್ನೂ 'Discipline' ಎಂದು ಹೇಳುತ್ತಾರೆ. ಈ ಪದಕ್ಕೆ ಕನ್ನಡದಲ್ಲಿ ಶಾಸ್ತ್ರ ಎಂಬ ಪದ ಬಳಕೆಯಲ್ಲಿದೆ. 'Discipline' ಪದವನ್ನು 'ಶಿಸ್ತು' ಎಂಬ ಅರ್ಥದಲ್ಲಿ ಈ ಲೇಖನದಲ್ಲಿ ಅರ್ಥೈಸಲಾಗಿದೆ.

ವಿಶಾಲಾರ್ಥದಲ್ಲಿ ಶಿಷ್ಯನಾದವನು ತನ್ನ ಗುರುವಿನಿಂದ ಬೇಕಾದ ಜ್ಞಾನ ಪಡೆಯಬೇಕಾದರೆ ತನು–ಮನವನ್ನು ಸಂಪೂರ್ಣವಾಗಿ ಗುರುವಿಗೆ ಸಮರ್ಪಿಸಿ; ಒಂದರ್ಥದಲ್ಲಿ ಶರಣಾಗತಿ ಮನೋಭಾವನೆಯನ್ನು ತಳೆಯಬೇಕಿತ್ತು. ಆದ್ದರಿಂದಲೇ ಶಿಷ್ಯ, ಶಿಸ್ತು ಮತ್ತು ಶಿಕ್ಷೆ ಪದಗಳು ಅವಿನಾಭಾವ ಸಂಬಂಧ ಹೊಂದಿವೆ.

ಪ್ರಾಚೀನ ಭರತಖಂಡದ ಗುರುಕುಲ ಶಿಕ್ಷಣ ಪದ್ಧತಿಯಲ್ಲೂ 'ಶಿಸ್ತಿ'ನ ಪರಿಕಲ್ಪನೆಯನ್ನು ಗುರುತಿಸಲಾಗಿದೆ. 'ಗುರುಕುಲ' ವಾತಾವರಣವೇ ಒಂದು ವಿಧದ ಶಿಸ್ತಿನಿಂದ ಕೂಡಿರುತ್ತಿತ್ತು. ಗುರುಕುಲ ಪದ್ಧತಿಯು ಶೀಲ ಸೌಜನ್ಯತೆ ಮತ್ತು ನಿಷ್ಠೆಯ ಪ್ರತೀಕವಾಗಿರುತ್ತಿತ್ತು. ಆದಕಾರಣ 'ಸ್ವಯಂಶಿಸ್ತು' ಗುರುಕುಲ ಶಿಕ್ಷಣ ಪದ್ಧತಿಯ ದ್ಯೋತಕವಾಗಿತ್ತು. ಅಂದಿನಿಂದ ಇಂದಿನವರೆಗಿನ ಗುರು–ಶಿಷ್ಯರ ಪರಂಪರೆಯಲ್ಲಿ 'ಶಿಸ್ತಿ'ನ ಪರಿಕಲ್ಪನೆ ಹಾಸುಹೊಕ್ಕಾಗಿದೆ. ಶಿಕ್ಷಣದಲ್ಲಿ 'ಶಿಸ್ತಿನ' ಪಾತ್ರ ನಿರ್ವಿವಾದ ಆಧುನಿಕ ಶಿಕ್ಷಣದ ಅಸ್ಥಿಭಾರವೇ 'ಶಿಸ್ತು'. ಆದ್ದರಿಂದ ಉದಾತ್ತ ಜ್ಞಾನ ಮತ್ತು ಶಿಸ್ತಿನ ಸಹಯೋಗವೇ ಅತ್ಯುತ್ತಮ ಶಿಕ್ಷಣವೆಂಬುದು ಸರ್ವರ ಪರಿಭಾವನೆ. ಸಂಕುಚಿತ ಅರ್ಥದಲ್ಲಿ ಬಾಹ್ಯವಾಗಿ ವಿದ್ಯಾರ್ಥಿಗಳ ಮೇಲೆ ಹೇರುವ ಅದರಿಂದ ಆತನ ವರ್ತನೆಗಳನ್ನು ಹತೋಟಿಯಲ್ಲಿಟ್ಟು ಅಪೇಕ್ಷಿತ ದಿಶೆಯಲ್ಲಿ ಆತನನ್ನು ಕೊಂಡೊಯ್ಯುವುದೇ ಆಗಿದೆ. ವಿಶಾಲಾರ್ಥದಲ್ಲಿ ವಿದ್ಯಾರ್ಥಿಯೇ ಸಮಾಜದ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಸ್ವಯಂ ಹತೋಟಿಯನ್ನು ಸಾಧಿಸುವುದೇ ಶಿಸ್ತಾಗಿದೆ. ಇದನ್ನು ಸ್ವಯಂ ಶಿಸ್ತು ಎಂತಲೂ ಕರೆಯುತ್ತಾರೆ.

**ಶಿಸ್ತಿನ ಅಗತ್ಯತೆ ಮತ್ತು ವಿಜ್ಞಾನ :** ಜೀವನದ ಎಲ್ಲಾ ಕಾರ್ಯಕ್ಷೇತ್ರಗಳಲ್ಲೂ 'ಶಿಸ್ತಿನ' ಪ್ರಭಾವವಿದೆ. ಯಾವುದೇ ದೇಶ, ಸಮಾಜ, ಶಾಲೆ ಅಥವಾ ವ್ಯಕ್ತಿ ಸಮರ್ಪಕವಗಿ ಕಾರ್ಯ ನಿರ್ವಹಿಸಲು ಶಿಸ್ತಿನ ಅಗತ್ಯತೆ ಇದೆ. ವ್ಯಕ್ತಿ ಅಥವಾ ಸಂಸ್ಥೆ ತನ್ನ ಗುರಿ–ಉದ್ದೇಶಗಳನ್ನು ತಲುಪುವಲ್ಲಿ ಶಿಸ್ತಿನ ಪಾತ್ರವಿದೆ. ಆದ್ದರಿಂದ ಶಿಸ್ತು ಮಾನವನ ಬದುಕಿನೊಂದಿಗೆ ಅವಿಚ್ಛಿನ್ನವಾದ ಸಂಬಂಧವನ್ನು ಹೊಂದಿದೆ. ಮಗುವಿನಲ್ಲಿರುವ ಎಲ್ಲ ಸಹಜ ಸಾಮರ್ಥ್ಯಗಳನ್ನು ಪೂರ್ಣವಾಗಿ ಅರಳಿಸಿ ಮಗುವಿನ ಸರ್ವತೋಮುಖ ಅಭಿವೃದ್ಧಿಗೆ 'ಶಿಸ್ತು ಮೊದಲ ಅಸ್ತಿಭಾರವಾಗಿದೆ. ಮಾನವ ಸಂಪನ್ಮೂಲದ ಅಗಾಧ ಶಕ್ತಿಯ ಸದ್ಬಳಕೆಗೆ ಶಿಸ್ತಿನ ಅಗತ್ಯತೆ ಇದೆ. ಶಾಲಾ ಸನ್ನಿವೇಶದಲ್ಲಿ ಶಿಸ್ತು ಮಗುವಿನ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುತ್ತದೆ. ಶಾಲಾ ಪರಿಸರದಲ್ಲಿ ಶಿಸ್ತು ಕೇವಲ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಅಗತ್ಯವಲ್ಲದೆ ವಿದ್ಯಾರ್ಥಿಗಳನ್ನು ದೇಶದ ಅತ್ಯುತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಕಲಿಯುವವನಿಗೆ ವಿಶೇಷ ಶಕ್ತಿ ಮತ್ತು ಸ್ವಯಂ ಹತೋಟಿಯನ್ನು ಒದಗಿಸುವಲ್ಲಿ ಶಿಸ್ತಿನ ಅಗತ್ಯತೆ ಇದೆ.

ವಿದ್ಯಾರ್ಥಿಯ 'ಪ್ರಜ್ಞೆ'ಯನ್ನು ಎಚ್ಚರಿಸಿ, ಇಚ್ಛಾಶಕ್ತಿ ಮತ್ತು ನೈತಿಕ ಒಳನೋಟವನ್ನು ಅಭಿವೃದ್ಧಿಪಡಿಸಲು ಶಿಸ್ತಿನ ಅಗತ್ಯತೆ ಇದೆ. ಶಿಕ್ಷಣದ ಗುರಿಗಳಾದ ಅಪೇಕ್ಷಿತ ಮನೋಭಾವ, ಸ್ವಾವಲಂಬನೆ, ಆತ್ಮಸ್ಥೈರ್ಯ, ಸಹಕಾರ, ಸಹನೆ, ರಾಷ್ಟ್ರೀಯ ಭಾವೈಕ್ಯತೆಗಳನ್ನು ಸಾಧಿಸಲು ಶಿಸ್ತಿನ ಅಗತ್ಯತೆ ಇದೆ. ಪ್ರತಿಯೊಬ್ಬರೂ ತಮ್ಮ ಸ್ವಾತಂತ್ರ್ಯ ಹಕ್ಕು ಮತ್ತು ಕರ್ತವ್ಯಗಳನ್ನು ಅನುಭವಿಸಲು ಹಾಗೂ ಅವುಗಳ ಕಾರ್ಯತತ್ಪರತೆಗೆ ಶಿಸ್ತಿನ ಅಗತ್ಯವಿದೆ. ಹೀಗೆ ಒಬ್ಬ ವ್ಯಕ್ತಿ ತನ್ನ ಹಕ್ಕುಗಳನ್ನು ಅನುಭವಿಸುವಾಗ ಇತರರ ಹಕ್ಕುಗಳಿಗೆ ಧಕ್ಕೆ ಉಂಟಾಗದಂತೆ ನಡೆದುಕೊಳ್ಳಲು ಶಿಸ್ತಿನ ಅಗತ್ಯತೆ ಇದೆ. ಪ್ರಾಯಶಃ ಪ್ರತಿಯೊಬ್ಬರೂ ತನ್ನ ದೇಶ, ಸಮಾಜ ಮತ್ತು ಶಾಲೆಗೆ ವಿಧೇಯರಾಗಿರಲು ಶಿಸ್ತಿನ ಅಗತ್ಯತೆ ಇದೆ.

ಶಿಕ್ಷಣವು ಸತ್ಪ್ರಜೆಗಳನ್ನು ನಿರ್ಮಾಣಮಾಡುವಲ್ಲಿ ಶಿಸ್ತಿನ ಮಹತ್ವವಿದೆ. ಇಂತಹ ಕಾಯಕದಲ್ಲಿ 'ಶಿಸ್ತು' ವ್ಯಕ್ತಿಯ ವ್ಯಕ್ತಿತ್ವವನ್ನು ಸಾಣೆ ಹಿಡಿದು


Digitised by Bharatavani, CIIL

ಪ್ರಜ್ವಲತೆಗೆ(ಸುವಿಕೆ) ಕಾರಣವಾಗುವುದರ ಮೂಲಕ ದೇಶ ಪ್ರಗತಿಪಥದತ್ತ ಸಾಗಲು ನೆರವಾಗುತ್ತದೆ.

**ಶಿಸ್ತಿನ ಸಿದ್ಧಾಂತಗಳು** : ಶಿಸ್ತಿನ ಆವಶ್ಯಕತೆ ಮತ್ತು ಸ್ವರೂಪವನ್ನು ವಿವರಿಸಲು ಅನೇಕ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಕಠಿಣವಾದ ದೈಹಿಕ ದಂಡನೆಯಿಂದ ಶಿಸ್ತನ್ನು ಬೆಳೆಸಬೇಕೆಂಬ ವಾದವನ್ನು ದಂಡನೆ ಸಿದ್ಧಾಂತ ಪ್ರತಿಪಾದಿಸುತ್ತದೆ 'Spare the rod and spoil the child' ನೀವು ಬೆತ್ತವನ್ನು ಬಿಸಾಕಿದರೆ ಅಂದರೆ, ಉಪಯೋಗಿಸದಿದ್ದರೆ ಮಕ್ಕಳನ್ನು ಕೆಡಿಸಿದಂತೆ' ಎನ್ನುವುದು ಈ ಸಿದ್ಧಾಂತದ ಮುಖ್ಯ ತತ್ವ. ಮಕ್ಕಳು ಕಠಿಣವಾದ ಶಿಸ್ತನ್ನು ಕಲಿಯಬೇಕಾದರೆ ಕಠಿಣವಾದ ದಂಡನೆಯಿಂದ ಮಾತ್ರ ಸಾಧ್ಯವೆಂದೂ ದಂಡನೆಯ ಹೆದರಿಕೆಯಿಂದ ಮಕ್ಕಳು ತಮ್ಮ ವರ್ತನೆಯಲ್ಲಿ ತಿದ್ದಿಕೊಳ್ಳುತ್ತಾರೆ ಎನ್ನುವುದು ಈ ಸಿದ್ಧಾಂತದ ತಿರುಳು. ಹತ್ತೊಂಬತ್ತನೇ ಶತಮಾನಕ್ಕೂ ಮೊದಲು ಯೂರೋಪಿನ ಶಾಲೆಗಳಲ್ಲಿ ಕಠಿಣವಾದ ದಂಡನೆಯನ್ನು ಕೊಡುತ್ತಿದ್ದರು. ಚಾರ್ಲ್ಸ್ ಡಿಕನ್ಸ್ ತನ್ನ Hard Times ಕಾದಂಬರಿಯಲ್ಲಿ ಶಾಲೆಗಳಲ್ಲಿ ವಸತಿ ನಿಲಯಗಳಲ್ಲಿ ಮಕ್ಕಳನ್ನು ನಿಯಂತ್ರಿಸಲು ಕಠಿಣ ದಂಡನೆಯ ಕ್ರಮಗಳನ್ನು ಚಿತ್ರಿಸಿದ್ದಾನೆ. ನಮ್ಮ ದೇಶದಲ್ಲಿ ಹಿಂದೆ ಅಧ್ಯಾಪಕರನ್ನು ಬೆತ್ತ ಹಿಡಿದುಕೊಂಡಿರುವಂತೆ ಚಿತ್ರಿಸಲಾಗುತ್ತಿತ್ತು. ನಮ್ಮ ಪ್ರಾಥಮಿಕ ಹಾಗೂ ಹೈಸ್ಕೂಲ್‌ಗಳಲ್ಲಿ ಹಿಂದಿನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುವಾಗ ತಪ್ಪು ಮಾಡಿದರೆ ಬೆತ್ತದಿಂದ ಥಳಿಸುವುದು, ಕಿವಿ ಹಿಂಡುವುದು, ಬೆಂಚಿನ ಮೇಲೆ ನಿಲ್ಲಿಸುವುದು ಮುಂತಾದ ದಂಡನೆಗಳನ್ನು ನೀಡುತ್ತಿದ್ದರು. ಯೂರೋಪಿನಲ್ಲಿ ಮಾನವತಾವಾದ ಬೆಳೆದು ಬಂದ ನಂತರ ಮತ್ತು ಆಧುನಿಕ ಮನೋವಿಜ್ಞಾನ ದಂಡನೆ ವರ್ತನೆಯಲ್ಲಿ ರೂಪಿಸುವುದರಲ್ಲಿ ಫಲಕಾರಿಯಾಗುವುದಿಲ್ಲವೆನ್ನುವುದನ್ನು ಪ್ರಾಯೋಗಿಕವಾಗಿ ತೋರಿಸಿದ ನಂತರ ಶಿಕ್ಷಣತಜ್ಞರು ಶಿಸ್ತನ್ನು ಬೆಳೆಸಲು ದಂಡನೆಯನ್ನು ಉಪಯೋಗಿಸಬಾರದೆಂದು ಟೀಕಿಸತೊಡಗಿದರೆಂದು ಕ್ರಮೇಣ ಶಾಲೆಗಳಲ್ಲಿ ದೈಹಿಕ ದಂಡನೆಯನ್ನು ಕೊಡುವುದು ನಿಂತು ಹೋಯಿತು.

ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗೆ ತೊಂದರೆಯುಂಟಾಗುವಂಥ ವರ್ತನೆ ತೋರಿಸಿ ತಪ್ಪು ಮಾಡಿ ಶಿಸ್ತನ್ನೂ ಪಾಲಿಸದಿದ್ದರೆ ತಪ್ಪು ಮಾಡಿದ ವ್ಯಕ್ತಿಗೆ ತಪ್ಪಿಗೆ ಅನುಗುಣವಾಗಿ ದಂಡನೆ ನೀಡಬೇಕೆಂದೂ, ಯಾವ ವ್ಯಕ್ತಿಗೆ ಹಾನಿ ಉಂಟಾಗಿದೆಯೋ ಅದನ್ನು ತಪ್ಪು ಮಾಡಿದ ವ್ಯಕ್ತಿ ತುಂಬಿಕೊಡಬೇಕೆಂದೂ ವಾದಿಸುವ ಶಿಸ್ತಿನ ಸಿದ್ಧಾಂತಕ್ಕೆ ಪ್ರಾಯಶ್ಚಿತ್ತ ಸಿದ್ಧಾಂತ ಎಂದು ಹೇಳಲಾಗುತ್ತದೆ 'Eye for an Eye, Tooth for a Tooth', tit for Tat ಎಂಬ ವಾಕ್ಯಗಳು ಈ ಸಿದ್ಧಾಂತವನ್ನು ಧ್ವನಿಸುತ್ತವೆ.

ರಾಜರ ಆಳ್ವಿಕೆಯಲ್ಲಿ ಈ ರೀತಿ ಪ್ರಾಯಶ್ಚಿತ್ತ ರೂಪದ ದಂಡನೆ ನೀಡುವುದು ಬಳಕೆಯಲ್ಲಿತ್ತು. ಹಿಂದೆ ಶಾಲೆಗಳಲ್ಲಿ ಮಕ್ಕಳು ಮಾಡುವ ತಪ್ಪುಗಳನ್ನು ತಿದ್ದಲು ತಪ್ಪಿಗೆ ಅನುಗುಣವಾದ ದಂಡನೆ ನೀಡುವುದು ಹಾನಿ ಉಂಟಾದ ವಿದ್ಯಾರ್ಥಿಗೆ ಹಾನಿಯನ್ನು ತುಂಬಿ ಕೊಡುವಂತೆ ತಪ್ಪು ಮಾಡಿದ ವಿದ್ಯಾರ್ಥಿಯನ್ನು ಒತ್ತಾಯಿಸುವ ಕ್ರಮ ತೆಗೆದುಕೊಳ್ಳಲಾಗುತ್ತಿತ್ತು. ಆದರೆ ಈ ಕ್ರಮದಿಂದ ತಪ್ಪು ಮಾಡಿದ ವಿದ್ಯಾರ್ಥಿಗೆ ತಾನು ಮಾಡಿದ ತಪ್ಪಿನ ಅರಿವು ಉಂಟಾಗುತ್ತಿತ್ತೆಂಬ ಭರವಸೆ ಇರುತ್ತಿರಲಿಲ್ಲ. ಪ್ರತಿಯಾಗಿ ತಾನು ಹಾನಿ ಉಂಟುಮಾಡಿದ ಸಹಪಾಠಿಯ ಬಗ್ಗೆ, ದಂಡನೆ ನೀಡಿದ ಅಧ್ಯಾಪಕರ ಬಗ್ಗೆ 'ದ್ವೇಷಭಾವನೆ ಮೂಡುವ ಸಾಧ್ಯತೆಯೇ ಹೆಚ್ಚಾಗಿರುತ್ತಿತ್ತು'. ಆದ್ದರಿಂದ ಈ ಸಿದ್ಧಾಂತಕ್ಕೆ ಇದ್ದ ಮಾನ್ಯತೆ ಕಡಿಮೆಯಾಗುತ್ತ ಬಂದಿತು.

ಯೂರೋಪಿನಲ್ಲಿ ಮಾನವತಾವಾದಿ ತತ್ವಗಳು ಪ್ರಚಲಿತವಾದಂತೆ, ಪ್ರಜಾಸತ್ತಾತ್ಮಕ ತತ್ವಗಳ ಅರಿವು ಮೂಡಿದಂತೆ ವ್ಯಕ್ತಿ ತಪ್ಪು ಮಾಡಿದರೆ ಶಿಸ್ತಿನ ನಿಯಮಗಳನ್ನು ಮೀರಿ ನಡೆದರೆ ಅಂಥ ವ್ಯಕ್ತಿಗೆ ತನ್ನ ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ನೀಡಬೇಕೆಂದೂ ಅವನನ್ನು ಸುಧಾರಿಸಲು ಪ್ರಯತ್ನಿಸಬೇಕೆಂದೂ ಅವನಿಗೆ ತನ್ನ ತಪ್ಪಿನ ಅರಿವನ್ನು ಉಂಟುಮಾಡಬೇಕೆಂದೂ ವಾದಿಸುವ 'ಸುಧಾರಣಾ ಸಿದ್ಧಾಂತ' ಶಿಸ್ತನ್ನು ಮಾನವೀಯ ತತ್ವಗಳ ದೃಷ್ಟಿಯಿಂದ ವಿವರಿಸಲು ಪ್ರಯತ್ನಿಸಿತು. ದೈಹಿಕ ದಂಡನೆಯಿಂದ ಸ್ಥಾಯಿಯಾದ ಶಿಸ್ತನ್ನು ರೂಪಿಸಲು ಸಾಧ್ಯವಿಲ್ಲವೆಂದೂ ವ್ಯಕ್ತಿಗೆ ತನ್ನ ತಪ್ಪಿನ ಅರಿವು ಮೂಡಿದಾಗಲೇ ಶಿಸ್ತನ್ನು ಪಾಲಿಸಲು ಸಾಧ್ಯವಾಗುತ್ತದೆ ಎಂದೂ ತನ್ನ ತಪ್ಪನ್ನು ಸುಧಾರಿಸಿಕೊಳ್ಳುವ ಅವಕಾಶ ನೀಡುವ ಕ್ರಮದಿಂದ ಶಿಸ್ತನ್ನು ಬೆಳೆಸಲು ಸಾಧ್ಯವೆಂದೂ ಈ ಸಿದ್ಧಾಂತ ವಾದಿಸುತ್ತದೆ. ಈ ಸಿದ್ಧಾಂತಕ್ಕೆ ಪ್ರಜಾಸತ್ತಾತ್ಮಕ ತತ್ವಗಳಿಂದ ವ್ಯಕ್ತಿಗೌರವ, ತಪ್ಪು ತಿದ್ದಿಕೊಳ್ಳುವ ಅವಕಾಶದ ಹಕ್ಕು ತನ್ನ ವರ್ತನೆಗೆ ವಿವರಣೆ ನೀಡುವ ಅವಕಾಶದ ಸ್ವಾತಂತ್ರ್ಯ ಇತ್ಯಾದಿ ಅಂಶಗಳು ಆಧಾರವಾಗಿರುವುದರಿಂದ ಶಿಸ್ತಿನ ಈ ಸಿದ್ಧಾಂತವನ್ನು ಪ್ರಜಾಸತಾತ್ಮಕ ಸಿದ್ಧಾಂತವೆಂದು ಹೇಳಬಹುದು. ಇತ್ತೀಚಿನ ದಶಕಗಳಲ್ಲಿ ಶಾಲೆಗಳಲ್ಲಿ ಈ ಸಿದ್ಧಾಂತದ ಆಧಾರದ ಮೇಲೆಯೇ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಬೆಳೆಸುವ ಪ್ರಯತ್ನ ಮಾಡಲಾಗುತ್ತಿದೆ.

ವಯಸ್ಸಿನಲ್ಲಿ ಬೆಳೆದು ದೊಡ್ಡವರಾದ ಮಕ್ಕಳಲ್ಲಿ (ಉತ್ತರ ಬಾಲ್ಯಾವಸ್ಥೆಯ ನಂತರ ಅವರಲ್ಲಿ ವಿವೇಚನೆ ಮೂಡುವುದರಿಂದ, ಹೊರಗಣ ನೈತಿಕ ನಿಯಮಗಳನ್ನು ಆಂತರೀಕರಣ ಮಾಡಿಕೊಂಡು ಫ್ರಾಯ್ಡ್ ವಿವರಿಸಿದ ನೈತಿಕ ಪ್ರಜ್ಞೆ (ಸೂಪರ್ ಈಗೊ)ಯನ್ನು ಬೆಳೆಸಿಕೊಳ್ಳುವುದರಿಂದ ಅವರಲ್ಲಿ ಶಿಸ್ತು ಮೂಡಲು ಈ ನೈತಿಕ ಪ್ರಜ್ಞೆ ಆಂತರಿಕವಾಗಿ ಮಾರ್ಗದರ್ಶನ ನೀಡುತ್ತದೆ. ಆದ್ದರಿಂದ ಈ ನೈತಿಕ ಪ್ರಜ್ಞೆಯನ್ನು ಪ್ರಬಲಗೊಳಿಸುವ ಪ್ರಯತ್ನ ಮಾಡಬೇಕು.

ಶೈಕ್ಷಣಿಕ ತತ್ವಶಾಸ್ತ್ರದ ಪಂಥಗಳಾದ ಆದರ್ಶವಾದ, ನೈಸರ್ಗಿಕವಾದ, ವಾಸ್ತವವಾದ ಮತ್ತು ವ್ಯವಹಾರಿಕವಾದಗಳು ಶಿಸ್ತಿನ ಪರಿಕಲ್ಪನೆಯನ್ನು ವಿಭಿನ್ನ ದೃಷ್ಟಿಕೋನದಲ್ಲಿ ವಿವರಿಸುತ್ತವೆ.

**ಆದರ್ಶವಾದ ಮತ್ತು ಶಿಸ್ತಿನ ಪರಿಕಲ್ಪನೆ** : ಜಗತ್ತಿನ ಸರ್ವಶ್ರೇಷ್ಠ, ಸಾರ್ವಕಾಲಿಕ ಮಹಾನ್ ಚಿಂತಕರಾದ ಪ್ಲೇಟೋ, ಕೊಮಿನಿಯಸ್, ಹರ್ಬಾರ್ಟ್ಸ್, ಕಾಂಟ್, ಅರಿಸ್ಟಾಟಲ್, ಬಾರ್ಕ್ಲೆ, ಸಾಕ್ರೇಟೀಸ್, ಹೆಗಲ್, ಸ್ವಾಮಿ ವಿವೇಕಾನಂದ, ಬುದ್ಧ, ಬಸವ, ಗಾಂಧೀಜಿ, ರವೀಂದ್ರನಾಥ ಠಾಗೋರ್ ಆದರ್ಶವಾದಿಗಳೆನಿಸಿದ್ದಾರೆ.

ಆದರ್ಶವಾದದ ಪ್ರಕಾರ ಶಿಸ್ತು-ಸ್ವಾತಂತ್ರ್ಯ ಒಂದಕ್ಕೊಂದು ಸಂಬಂಧವಿರುವ ಪರಿಕಲ್ಪನೆಗಳಾಗಿವೆ. ಆದರ್ಶವಾದಿಗಳು ಸ್ವಾತಂತ್ರ್ಯವನ್ನೊಳಗೊಂಡ ಶಿಸ್ತನ್ನು ಬೆಂಬಲಿಸುತ್ತಾರೆ. ಆತ್ಮಸಂಯಮದ ನಿಯಂತ್ರಣಕ್ಕೊಳಪಟ್ಟ ಇಚ್ಛಾ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ್ದಾರೆ. ಆದರ್ಶವಾದಿಗಳ ಪ್ರಕಾರ 'ಸ್ವಾತಂತ್ರ್ಯವಿಲ್ಲದ ಶಿಕ್ಷಣ ರಾಕ್ಷಸೀಯವಾದುದು. ಆದ್ದರಿಂದ ಈ ಸ್ವಾತಂತ್ರ್ಯ ಶಿಸ್ತಿನ ಮಾರ್ಗದಲ್ಲಿ ನಿರ್ದೇಶಿತವಾಗಿರಬೇಕು' ಎಂಬುದು ಅವರ ವಾದ.

ಆದರ್ಶವಾದಿಗಳ ಅನಿಸಿಕೆಯಲ್ಲಿ ಸ್ವಾತಂತ್ರ್ಯವನ್ನೊಳಗೊಂಡ ಶಿಸ್ತಿನಿಂದ ಕೂಡಿಲ್ಲದ ಶಿಕ್ಷಣವು ಯಾಂತ್ರಿಕವಾದದ್ದು, ಪ್ರತಿಯೊಬ್ಬ ವ್ಯಕ್ತಿಯು ಸ್ವತಂತ್ರವಾಗಿಯೇ ಹುಟ್ಟುತ್ತಾನೆ. ಹಾಗೆ ತನ್ನ ಹುಟ್ಟಿನೊಂದಿಗೆ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡು ಈ ಜಗತ್ತಿಗೆ ಕಾಲಿರಿಸುತ್ತಾನೆ. ಆದಕಾರಣ ಶಿಕ್ಷಣವೆಂಬುದು ವಿವೇಚನಾಯುಕ್ತವಾದ ಸ್ವಾತಂತ್ರ್ಯಕ್ಕೆ

Digitised by Bharatavani, CIIL

ಮಾರ್ಗದರ್ಶಿಯಂತಿರಬೇಕು ಹಾಗೂ ಅಂತಹ ವಾತಾವರಣದಲ್ಲಿಯೇ ಸ್ವಾತಂತ್ರ್ಯವನ್ನೊಳಗೊಂಡ ಶಿಸ್ತು ಬೆಳೆಯಬೇಕೆಂಬುದು ಆದರ್ಶವಾದಿಗಳ ಅಭಿಮತವಾಗಿದೆ. ಆದರ್ಶವಾದಿಗಳು ಸ್ವಾತಂತ್ರ್ಯಕ್ಕೆ ಆದ್ಯತೆ ಮತ್ತು ಉತ್ತೇಜನ ನೀಡಿದ್ದರೂ ಕಟ್ಟುನಿಟ್ಟಾದ ಶಿಸ್ತನ್ನು ಬೆಂಬಲಿಸಿದ್ದಾರೆ. ವಿದ್ಯಾರ್ಥಿಗಳು ನಿಯಮಬದ್ಧವಾಗಿ ನಡೆಯುವುದೇ ಅವರ ದೃಷ್ಟಿಯಲ್ಲಿನ ಶಿಸ್ತೆನಿಸಿದೆ. ವಿವೇಚನಾಯುಕ್ತ ಸ್ವಾತಂತ್ರ್ಯ, ಅದಕ್ಕಾಗಿ ನಿಯಮಗಳ ಪಾಲನೆ, ಸಹಕಾರ ಮತ್ತು ಕರ್ತವ್ಯ ಶ್ರದ್ಧೆಗಳು ಮಾಡುವಂತಾಗಬೇಕೆಂಬುದೇ ಆದರ್ಶವಾದಿಗಳ 'ಶಿಸ್ತಿ'ನ ಸಿದ್ಧಾಂತ.

**ನೈಸರ್ಗಿಕವಾದ ಮತ್ತು 'ಶಿಸ್ತಿ'ನ ಪರಿಕಲ್ಪನೆ :** ರೂಸೋ, ಲಿಂಕ್, ಪಿತೆ, ಮತ್ತು ಟ್ಯಾಗೋರ್ ಸರ್ವಶ್ರೇಷ್ಠ ನಿಸರ್ಗವಾದಿಗಳಾಗಿದ್ದಾರೆ. ಮೂಲತಃ ನಿಸರ್ಗವಾದವು ನಿಸರ್ಗಗಮ್ಯಾತ್ಮಕವಾದುದು. 'ಪ್ರಕೃತಿಯನ್ನು ಹಿಂಬಾಲಿಸು' ಎಂಬುದೇ ನಿಸರ್ಗವಾದದ ಶಿಕ್ಷಣದ ಸಿದ್ಧಾಂತ. ನಿಸರ್ಗವಾದಿಗಳ ಪ್ರಕಾರ ಶಿಕ್ಷಣವು ಪ್ರಕೃತಿಯಲ್ಲಿಯೇ ನಡೆದು ಮಗುವಿನ ಸ್ವತಂತ್ರ ಬೆಳವಣಿಗೆಗೆ ಅವಕಾಶ ಕಲ್ಪಿಸಿ ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಮಾರ್ಗದರ್ಶಿಯಂತಿರಬೇಕು. ಆದ್ದರಿಂದ ನಿಸರ್ಗವಾದಿಗಳು ವ್ಯಕ್ತಿ ಸ್ವಾತಂತ್ರ್ಯ ನೀಡಬಯಸುತ್ತಾರೆ. ಸಾಮಾಜಿಕ ಸ್ವಾತಂತ್ರ್ಯವನ್ನಲ್ಲ. ನಿಸರ್ಗವಾದಿಗಳ ಪ್ರಕಾರ ಶಿಸ್ತು ಸ್ವಾಭಾವಿಕ ಘಟನಾವಳಿಗಳಿಂದ ಕೂಡಿದುದಾಗಿರಬೇಕು. ಹರ್ಬರ್ಟ್‌ಸ್ಪೆನ್ಸರ್‌ನ ಪ್ರಕಾರ ಅನುಭವಗಳ ಪುನರಾವರ್ತನೆಯಿಂದ ಮಗುವಿನ ಚಟುವಟಿಕೆಗೆ ಒಳ್ಳೆಯ ಮಾರ್ಗದರ್ಶನ ಸಿಗುತ್ತದೆ ಎಂಬುದು. ಆದ್ದರಿಂದ ಜ್ಞಾನ ಮತ್ತು ಬುದ್ಧಿವಂತಿಕೆಯನ್ನು ವಿದ್ಯಾರ್ಥಿಗಳೇ ಸ್ವಯಂ ಅರಿಯುವಂತೆ ಮಾಡುವುದೇ 'ಶಿಸ್ತು' ಎಂದಿದ್ದಾರೆ.

**ವಾಸ್ತವವಾದ ಮತ್ತು ಶಿಸ್ತಿನ ಪರಿಕಲ್ಪನೆ :** ಬರ್ಟ್‌ರಂಡ್ ರಸೆಲ್, ಬಟ್ಲರ್, ಸಿ.ವಿ.ಗುಡ್ ಹರ್ಬರ್ಟ್‌ಸ್ಪೆನ್ಸರ್, ರಾಸ್ ಮುಂತಾದವರು ವಾಸ್ತವವಾದದ ಪ್ರತಿಪಾದಕರಾಗಿದ್ದಾರೆ. ವಾಸ್ತವವಾದಿಗಳು ಕಟ್ಟುನಿಟ್ಟಾದ ಶಿಸ್ತನ್ನು ವಿರೋಧಿಸಿದ್ದಾರೆ. ಇವರ ಪ್ರಕಾರ ಶಿಸ್ತು ಎಂಬುದು ಪ್ರೀತಿ ತಮ್ಮ ಕರುಣೆಯ ಆಧಾರಿತವಾಗಿರಬೇಕು. ಯಾವುದೇ ತೆರನಾದ ಬಾಹ್ಯ ಶಿಕ್ಷೆಗೆ ಇವರ ವಿರೋಧವಿದೆ. ವಿದ್ಯಾರ್ಥಿಗಳ ಭೌತಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಶಾಲಾ ಪರಿಸರವು ನಿರ್ಮಾಣಗೊಂಡಿರಬೇಕು. ಹಾಗೂ ಇದನ್ನು ತರುವ ಸಲುವಾಗಿ ಮಕ್ಕಳನ್ನು ಸದಾಚಟುವಟಿಕೆಯುಕ್ತರನ್ನಾಗಿ ಮಾಡುವ ಅವಕಾಶಗಳನ್ನು ಕಲ್ಪಿಸಬೇಕು. ಯಾವಾಗ ಮಗು ತನ್ನ ಸಂಕೀರ್ಣ ಶಾಲಾ ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವುದೋ ಆಗ ಅದು ಶಿಸ್ತಿನ ಮೌಲ್ಯವನ್ನು ಪ್ರಶಂಸಿಸುತ್ತದೆ. ಜೊತೆಗೆ ತನ್ನ ಶಾಲಾ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳುತ್ತದೆ ಎಂಬ ಅಭಿಪ್ರಾಯವನ್ನು ವಾಸ್ತವವಾದಿಗಳು ಪ್ರತಿಪಾದಿಸಿದ್ದಾರೆ. ಮಕ್ಕಳಿಗೆ ವೈಜ್ಞಾನಿಕ ಆಧಾರಗಳ ಮೇಲೆ ಕಲಿಕಾ ಸನ್ನಿವೇಶವನ್ನು ಉಂಟುಮಾಡಿದ ಮಕ್ಕಳು ಸಹಜವಾಗಿಯೇ ಅದರಲ್ಲಿ ಆಸಕ್ತಿ ತೋರಿಸಿ ಪಾಲ್ಗೊಳ್ಳುತ್ತಾರೆ. ಆಗ ಅವರ ವರ್ತನೆ ಸಹಜವಾಗಿಯೇ ಶಿಸ್ತಿನಿಂದ ಕೂಡಿರುತ್ತದೆ. ಆದ್ದರಿಂದ ಶಿಸ್ತು ಬೋಧನಾ–ಕಲಿಕಾ ಪ್ರಕ್ರಿಯೆಯ ಒಂದು ಉಪಉತ್ಪನ್ನವಾಗಿ ಉಂಟಾಗುತ್ತದೆ

**ವ್ಯವಹಾರಿಕವಾದ ಮತ್ತು ಶಿಸ್ತಿನ ಪರಿಕಲ್ಪನೆ :** ವ್ಯವಹಾರಿಕವಾದದ ಸಮಾನಾರ್ಥಕ ಆಂಗ್ಲ ಪದ Pragmatism ಎಂಬುದಾಗಿದೆ. ಮೂಲತಃ Pragmatism ಎಂಬುದು ಗ್ರೀಕ್ ಭಾಷೆಯಿಂದ ಉಗಮವಾಗಿದ್ದು ಇದರರ್ಥ Practical ಅಥವಾ Practice ಎಂಬುದಾಗಿದೆ. ವ್ಯವಹಾರಿಕವಾದದ ಪ್ರತಿಪಾದಕರನ್ನು ವ್ಯವಹಾರಿಕವಾದಿಗಳೆಂದು ಕರೆಯಲಾಗುತ್ತದೆ. ಜಾನ್‌ಡ್ಯೂಯಿ, ವಿಲಿಯಂ ಜೇಮ್ಸ್, ಕಿಲ್‌ಪ್ಯಾಟ್ರಿಕ್ ಈ ವಾದದ ಪ್ರತಿಪಾದಕರು. ವ್ಯವಹಾರಿಕವಾದಿಗಳು ಪ್ರಸ್ತುತ ಸ್ಥಿತಿಯನ್ನು ಕುರಿತು ಚಿಂತಿಸುತ್ತಾರೆ. ಆದ್ದರಿಂದ ಇವರನ್ನು ವ್ಯವಹಾರ ಚತುರರು ಅಥವಾ ಪ್ರಯೋಗಶೀಲ ಸಿದ್ಧಾಂತಿಗಳೆಂದೂ ಕರೆಯುತ್ತಾರೆ. ವ್ಯವಹಾರಿಕವಾದಿಗಳ ದೃಷ್ಟಿಯಲ್ಲಿ ಶಿಸ್ತೆಂದರೆ 'ಆಟ' ಮತ್ತು 'ಕೆಲಸ' ಏಕೆಂದರೆ ಆಟ ಮತ್ತು ಕೆಲಸಗಳು ಬುದ್ಧಿ–ಭಾವಗಳಿಂದ ಕೂಡಿದ ಯಾವುದೇ ಚಟುವಟಿಕೆಗಳು 'ಸ್ವಯಂಶಿಸ್ತನ್ನು' ಉಂಟುಮಾಡುತ್ತವೆ.

ವ್ಯವಹಾರಿಕವಾದಿಗಳ ಪ್ರಕಾರ ಮಕ್ಕಳ ಸ್ವಾಭಾವಿಕ ಅಭಿರುಚಿ ಆಸಕ್ತಿಗಳನ್ನು ಪ್ರಚೋದನೆಗೊಳಿಸಿ, ಅವುಗಳನ್ನು ತೃಪ್ತಿಗೊಳಿಸಿ ಸಂತೋಷಪಡುವಂತೆ ಮಾಡಿದ್ದೇ ಆದರೆ, ಶಿಸ್ತು ತಾನಾಗಿಯೇ ಉಂಟಾಗುತ್ತದೆ, ಅಶಿಸ್ತಿನ ಸಮಸ್ಯೆಯೇ ಉದ್ಭವಿಸುವುದಿಲ್ಲ. ವ್ಯವಹಾರಿಕವಾದಿಗಳಿಗೆ 'ಆಟ' ಮತ್ತು 'ಕೆಲಸ'ಗಳೆರಡೂ ಸಮಾನ ಗೌರವವುಳ್ಳವುಗಳಾಗಿವೆ.

ವ್ಯವಹಾರಿಕವಾದಿಗಳ ನಂಬಿಕೆಯಲ್ಲಿ ಮಕ್ಕಳನ್ನು ಉದ್ದೇಶಪೂರ್ವಕವಾದ, ಸಹಕಾರಯುಕ್ತ ಚಟುವಟಿಕೆಗಳನ್ನು ಸ್ವತಂತ್ರವಾದ ಮತ್ತು ಸುಖಕರವಾದ ವಾತಾವರಣದಲ್ಲಿ ಕೊಂಡೊಯ್ದದ್ದೇ ಆದರೆ 'ಶಿಸ್ತು' ತಾನಾಗಿಯೇ ಮೂಡುತ್ತದೆ. ಜೊತೆಗೆ ಮಕ್ಕಳು 'ಮುಂದಾಳತ್ವ', 'ಆತ್ಮವಿಶ್ವಾಸ', 'ಸಂಯಮ' ಮುಂತಾದ ಸದ್ಗುಣಗಳನ್ನು ಕಲಿಯುವ ಮೂಲಕ 'ಶಿಸ್ತ'ನ್ನು ಹೊಂದುತ್ತಾರೆ.

ವ್ಯವಹಾರಿಕವಾದಿಗಳ ಪ್ರಕಾರ ಪ್ರತಿಯೊಂದು ಚಟುವಟಿಕೆಯು ಸ್ವಾಭಾವಿಕ ಸನ್ನಿವೇಶದಲ್ಲಿ ನಡೆಯುವುದರಿಂದ ಮತ್ತು ಎಲ್ಲರಿಗೂ ಸಮಾನತೆಯಿರುವುದರಿಂದ ಮಗು ತನ್ನ ಸೃಜನಾತ್ಮಕತೆ ಅರಳಿಸಿಕೊಂಡು ಉತ್ತಮ ಪೌರನಾಗಿ ರೂಪುಗೊಳ್ಳುತ್ತದೆ. ಸಮಾಜದ ಯಾವುದೇ ಪ್ರಮಾಣಗಳನ್ನು (Norms) ಮಗುವಿನ ಮೇಲೆ ಬಲವಂತವಾಗಿ ಹೇರಬಾರದು ಹಾಗೂ ಯಾವುದೇ ಜನಾಂಗ ತನ್ನ ನೈತಿಕ ನಡವಳಿಕೆಗಳನ್ನು ಸ್ವತಃ ಸಂಸ್ಥಾಪಿಸಿಕೊಳ್ಳಬೇಕು ಎಂಬುದು ವ್ಯವಹಾರಿಕವಾದದ ದೃಷ್ಟಿಯಲ್ಲಿ ಶಿಸ್ತಿನ ಪರಿಕಲ್ಪನೆಯಾಗಿವೆ.

**ಪ್ರಸ್ತುತ ತರಗತಿಗಳಲ್ಲಿ ಶಿಸ್ತಿನ ಸ್ಥಾನ :** ತರಗತಿಗಳು ಅತ್ಯುತ್ತಮವಾಗಿ ಕಾರ್ಯತತ್ಪರತೆಯನ್ನು ಪ್ರತಿಫಲಿಸಬೇಕಾದರೆ ಅತ್ಯುತ್ತಮ ಶಿಸ್ತಿನ ಅವಶ್ಯಕತೆಯಿದೆ. ಆದ್ದರಿಂದ ತರಗತಿಯ ಶಿಸ್ತೇ ಶಾಲೆಯ ಶಿಸ್ತಾಗಿದೆ.

ಸಾಮಾನ್ಯವಾಗಿ ತರಗತಿಯ ಶಿಸ್ತಿನ ಸ್ಥಾನ ನೇರವಾಗಿ ಶಿಕ್ಷಕ, ವಿದ್ಯಾರ್ಥಿ ಮತ್ತು ಬೋಧನೆಯ ಪ್ರತಿಫಲವಾಗಿದೆ. ಭಾಗಶಃ ತರಗತಿಯ ಶಿಸ್ತು ಪ್ರತ್ಯಕ್ಷವಾಗಿ ಶಿಕ್ಷಕನು ಯೋಜಿಸುವ ಪಠ್ಯಕ್ರಮ ಕಾರ್ಯಕ್ರಮಗಳನ್ನಾಧರಿಸಿದೆ. ಪ್ರತಿಯೊಬ್ಬ ಶಿಕ್ಷಕನು ಉತ್ತಮ ಕಲಿಕಾ ಅನುಭವವನ್ನು ನೀಡಿದಾಗ ವಿದ್ಯಾರ್ಥಿಗಳಿಗೆ ಆ ಕಲಿಕಾ ಅನುಭವಗಳು ನೈಜ ಜೀವನದೊಂದಿಗೆ ಹೇಗೆ ಸೂಕ್ತತೆ ಹೊಂದಿವೆ ಎಂಬುದರ ಅರಿವು ಉಂಟಾಗುತ್ತದೆ.

ತರಗತಿಯ ಶಿಸ್ತು ವಿದ್ಯಾರ್ಥಿಗಳ ಕಲಿಕಾಸಾಧನೆ, ಸಾಮರ್ಥ್ಯ, ಅಭಿಪ್ರೇರಣೆ ಮತ್ತು ಆಸಕ್ತಿಯ ಆಧಾರಿತವಾಗಿದೆ. ಆದ್ದರಿಂದ ಶಿಕ್ಷಕನು ಮನೋವೈಜ್ಞಾನಿಕವಾಗಿ ಇವೆಲ್ಲ ಅಂಶಗಳ ಪರಿಜ್ಞಾನ ಹೊಂದಿರಬೇಕಾಗಿದೆ. ಇದಕ್ಕೆ ಸೂಕ್ತವಾಗಿ ವಿದ್ಯಾರ್ಥಿಗಳನ್ನು ವಿಶಾಲ ದೃಷ್ಟಿಕೋನದಲ್ಲಿ ಅಭ್ಯಸಿಸಬೇಕು. ಶಿಕ್ಷಕನ ಒಟ್ಟಾರೆ ವ್ಯಕ್ತಿತ್ವವು ಸಹ ತರಗತಿಯ ಶಿಸ್ತಿನ ಮೇಲೆ ಪ್ರಭಾವವನ್ನು ಹೊಂದಿದೆ. ಶಿಕ್ಷಕನ ಬದ್ಧತೆ, ನಿಷ್ಠತೆ, ಸಹನೆ, ಕರುಣೆ, ಉತ್ತಮ ಚಾರಿತ್ರ್ಯ ವ್ಯಕ್ತಿತ್ವದ ಅಂಶಗಳಾಗಿದ್ದು ಶಿಸ್ತನ್ನು ಕಾಪಾಡಲು ಸಹಕಾರಿಯಾಗಿವೆ.

ಶಾಲಾ ವೇಳಾಪಟ್ಟಿಗೆ ಅನುಗುಣವಾಗಿ ಬೋಧನಾ ತರಗತಿಗಳು ಜರುಗಿದಾಗ ಶಿಸ್ತು ತಾನಾಗಿಯೇ ಮೂಡುತ್ತದೆ. ಶಾಲಾ ಪಂಚಾಂಗದಂತೆ


Digitised by Bharatavani, CIIL

ಎಲ್ಲಾ ಪಠ್ಯ ಹಾಗೂ ಸಹ ಪಠ್ಯ ಚಟುವಟಿಕೆಗಳು ಕಾರ್ಯರೂಪಕ್ಕೆ ಬಂದಾಗ ವ್ಯವಸ್ಥಿತ ರೀತಿಯಲ್ಲಿ ಶಿಸ್ತನ್ನು ಕಾಣಬಹುದಾಗಿದೆ.

ಶಾಲೆ ಸಂದರ್ಭದಲ್ಲಿ ಶಿಕ್ಷಕರು ಶಾಬ್ದಿಕವಾಗಿ ಎಚ್ಚರಿಕೆ ನೀಡಬಹುದು. ಮಕ್ಕಳು ತಪ್ಪು ಮಾಡಿದಾಗ ಅವರಿಗೆ ತಪ್ಪಿನ ಅರಿವು ಮೂಡಿಸಿ ಎಚ್ಚರಿಕೆ ನೀಡಬೇಕು. ಕೆಲವು ಶಾಲೆಗಳಲ್ಲಿ ತಪ್ಪು ಮಾಡಿದಾಗ ದೈಹಿಕವಲ್ಲದ ರೀತಿಯಲ್ಲಿ ಪ್ರಾಯಶ್ಚಿತ್ತಪಟ್ಟುಕೊಳ್ಳದಂತೆ ಮಾಡುವ ವ್ಯವಸ್ಥೆ ಇರುತ್ತದೆ. ಯಾವುದೇ ಕಾರಣಕ್ಕೆ ದೈಹಿಕವಾಗಿ ದಂಡಿಸುವುದು ಸೂಕ್ತವಲ್ಲ. ದೈಹಿಕ ದಂಡನೆಯನ್ನೇ ಶಾಲೆಗಳಲ್ಲಿ ನಿಷೇಧಿಸಲಾಗಿದೆ. ತೀವ್ರತರ ಶಿಸ್ತಿನ ಸಮಸ್ಯೆಗಳುಂಟಾದಾಗ ಪೋಷಕರಿಗೆ ಸೂಚನೆ ನೀಡಿ, ಅವರ ಸಹಕಾರ ಪಡೆಯಲಾಗುತ್ತದೆ.

ಶಿಸ್ತನ್ನು ಕಾಪಾಡುವಲ್ಲಿ ಶಿಕ್ಷಣದ ಪಾತ್ರಕ್ಕೆ ಪೋಷಕರ ಪಾತ್ರವು ಪೂರಕವಾದದ್ದು. ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳನ್ನು ವೈಯಕ್ತಿಕ ಭಿನ್ನತೆಯ ಆಧಾರದ ಮೇಲೆ ಅರ್ಥೈಯಿಸಿಕೊಳ್ಳಬೇಕು. ಪೋಷಕರು ತಮ್ಮ ಮಕ್ಕಳ ಸಹಜ ಸಾಮರ್ಥ್ಯಗಳ ಪರಿಪಕ್ವ ಅಭಿವೃದ್ಧಿಗೆ ಸಹಕಾರವನ್ನು ನೀಡುವುದರ ಜೊತೆಗೆ ಧನಾತ್ಮಕ ಪ್ರೋತ್ಸಾಹವನ್ನು ನೀಡಬೇಕು. ಪೋಷಕರು ತಮ್ಮ ಮಕ್ಕಳ ಸಾಮಾಜಿಕ, ನೈತಿಕ, ಭಾವನಾತ್ಮಕ ಬೌದ್ಧಿಕ ಪ್ರತಿಭೆಗಳನ್ನು ವ್ಯಕ್ತಪಡಿಸಲು ಮುಕ್ತ ಅವಕಾಶ ಕಲ್ಪಿಸಬೇಕು. ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಏಕಮುಖ ತೀರ್ಮಾನ ಕೈಗೊಳ್ಳದೇ ಶಾಲೆಯ ಶಿಕ್ಷಕರೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರಕ್ಕೆ ಬರುವುದು ಸಹ ಪೋಷಕರ ಗುರುತರ ಜವಾಬ್ದಾರಿಯಾಗಿದೆ. ಪ್ರತಿಯೊಬ್ಬ ಪೋಷಕರು ಶಾಲೆಗಳು ಏರ್ಪಡಿಸುವ ಪೋಷಕ ಸಭೆಗಳಲ್ಲಿ ತಪ್ಪದೇ ಭಾಗವಹಿಸಿ ತಮ್ಮ ಮಕ್ಕಳ ಪುರೋಭಿವೃದ್ಧಿಗೆ ನೆರವಾದಾಗ ಮಾತ್ರ ಶಿಸ್ತನ್ನು ಕಾಪಾಡಲು ಸಾಧ್ಯವಾಗುತ್ತದೆ.

ಒಟ್ಟಾರೆ ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿ ತರುವಲ್ಲಿ ಶಿಕ್ಷಣ, ಶಾಲೆ, ಸಮಾಜ ಮತ್ತು ಪೋಷಕರ ಸಂಬಂಧ ಇನ್ನೂ ಹೆಚ್ಚು ಗಟ್ಟಿಯಾಗಬೇಕು. ಶಿಸ್ತಿನ ಪರಿಕಲ್ಪನೆಯ ಪರಿಧಿಯ ವ್ಯಾಪ್ತಿಯಲ್ಲಿ ವಿದ್ಯಾರ್ಥಿಯ ದೇಹ, ಮನಸ್ಸು ಮತ್ತು ಆತ್ಮಗಳು ವಿಕಾಸ ಹೊಂದಬೇಕು ಆಗ ಮಾತ್ರ ಸತ್ಪ್ರಜೆಗಳ ನಿರ್ಮಾಣ ಸಾಧ್ಯ. ಆ ಮೂಲಕ ದೇಶ ಪ್ರಗತಿ ಪಥದಲ್ಲಿ ಮುನ್ನುಗ್ಗಿ ಸದೃಢವಾಗುತ್ತದೆ.

–ಕೃ

## ಶಿಕ್ಷಣದ ಅರ್ಥಶಾಸ್ತ್ರೀಯ ಪರಿಕಲ್ಪನೆಗಳು

### 1. ಮಾನವ ಬಂಡವಾಳದ ಪರಿಕಲ್ಪನೆ ಅಥವಾ ಬಂಡವಾಳ ಹೂಡಿಕೆಯಾಗಿ ಶಿಕ್ಷಣ

ಈಗಿನ ಕಾಲದಲ್ಲಿ ಪ್ರಪಂಚದ ಎಲ್ಲ ದೇಶಗಳೂ ಆರ್ಥಿಕ ಪ್ರಗತಿಯನ್ನು ಬಯಸುತ್ತವೆ. ಪ್ರತಿಯೊಂದು ದೇಶವೂ ತನ್ನಲ್ಲಿನ ಬಡತನ, ರೋಗರುಜಿನ, ಮೌಢ್ಯ ಮುಂತಾದವುಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುವುದು ಸಹಜವಾಗಿದೆ. ಆರ್ಥಿಕವಾಗಿ ಮುಂದುವರೆದ ದೇಶಗಳು ಇನ್ನೂ ಮುಂದುವರೆಯಲು ವೈಜ್ಞಾನಿಕ ಸಂಶೋಧನೆ ಮುಂತಾದವುಗಳ ಮೂಲಕ ಪ್ರಯತ್ನಿಸುತ್ತವೆ. ಇದಕ್ಕಾಗಿ ಅಲ್ಲಿನ ಜನರು ಸತತವಾದ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಕೈಗಾರಿಕೀಕರಣ, ವ್ಯವಸಾಯದ ಅಭಿವೃದ್ಧಿ, ಸಾರಿಗೆ ಸಂಪರ್ಕಗಳ ಬೆಳವಣಿಗೆ, ಶೈಕ್ಷಣಿಕ ಅಭಿವೃದ್ಧಿ, ಮುಂತಾದವುಗಳನ್ನು ಹೆಚ್ಚಿನ ಆಸಕ್ತಿಯಿಂದ ಕೈಗೊಳ್ಳಬೇಕು. ಇದಕ್ಕಾಗಿ ಜನರು ತಮ್ಮ-ತಮ್ಮ ಆಸಕ್ತಿಗೆ ಅನುಗುಣವಾಗಿ ಶಿಕ್ಷಣವನ್ನು ಪಡೆಯಬೇಕು. ಶಿಕ್ಷಣವನ್ನು ಪಡೆಯಲು ಜನರು ಸಾಕಷ್ಟು ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಇದನ್ನು ಶಿಕ್ಷಣದಲ್ಲಿ ಹೂಡುವ ಬಂಡವಾಳ ಎನ್ನುತ್ತಾರೆ. ಏಕೆಂದರೆ ಭವಿಷ್ಯದಲ್ಲಿ ಅದರಿಂದ ಐಶ್ವರ್ಯದ ಉತ್ಪಾದನೆಯು ವ್ಯಕ್ತಿಯ ಸಂಪಾದನೆಯ ರೂಪದಲ್ಲಿ ಉಂಟಾಗುತ್ತದೆ.

ಈಗ ಶಿಕ್ಷಣವು ಒಂದು ಬಂಡವಾಳ ಹೂಡಿಕೆಗೆ ಅತ್ಯಂತ ಉತ್ತಮ ಕ್ಷೇತ್ರ ಎಂದು ಪರಿಗಣಿಸಲ್ಪಟ್ಟಿದೆ. ಏಕೆಂದರೆ ಅದರಿಂದ ಭವಿಷ್ಯದಲ್ಲಾಗುವ ಹಲವು ಲಾಭಗಳಿಂದ. ಅವುಗಳೆಂದರೆ ಶಿಕ್ಷಣವನ್ನು ಪಡೆದವರು ಗಳಿಸುವ ಕೌಶಲ ಮತ್ತು ಕೆಲಸ ಮಾಡುವ ಶಕ್ತಿ ಹಾಗೂ ಅದರಿಂದ ಭವಿಷ್ಯದಲ್ಲಾಗುವ ಸಂಪಾದನೆ, ಮುಂತಾದವುಗಳು. ಶಿಕ್ಷಣದಿಂದ ಅದನ್ನು ಪಡೆದವರು ತಮ್ಮ ಉತ್ಪಾದಕ ಶಕ್ತಿ-ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುತ್ತಾರೆ. ಇದರಿಂದ ಅವರ ಸಾಮಾಜಿಕ ಬದುಕು, ಸಂಸ್ಕೃತಿ ಉತ್ತಮಗೊಳ್ಳುತ್ತದೆ.

### 2. ಮಾನವ ಶಕ್ತಿ ಯೋಜನೆ

ಮಾನವ ಶಕ್ತಿಯನ್ನು ಯೋಜನಾಬದ್ಧವಾಗಿ ಉಪಯೋಗಿಸಿಕೊಳ್ಳಲು ಅಗತ್ಯವಾದ ಮಾರ್ಗೋಪಾಯಗಳನ್ನು ರೂಪಿಸುವುದೇ ಮಾನವ ಶಕ್ತಿ ಯೋಜನೆ. ಇದರಿಂದ ಮಾನವ ಶಕ್ತಿಯು ಸರಿಯಾದ ಉಪಯೋಗವಾಗುವುದಲ್ಲದೆ ಯಾರಿಗೂ ನಿರುದ್ಯೋಗ ಉಂಟಾಗುವುದಿಲ್ಲ. ಭವಿಷ್ಯದಲ್ಲಿ ಭರವಸೆಯನ್ನಿಟ್ಟುಕೊಂಡು ಮುಂದೆ ತಾವು ನಿರ್ವಹಿಸುವ ಕೆಲಸಕ್ಕೆ ಅಗತ್ಯವಾದ ಸಂಪೂರ್ಣ ಸಿದ್ಧತೆಗಳನ್ನು ಮಾಡಿಕೊಳ್ಳಬಹುದು.

### 3. ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿ

ದೇಶದ ಆರ್ಥಿಕಾಭಿವೃದ್ಧಿಯು ಅಲ್ಲಿನ ಜನರ ಉತ್ಪಾದಕ ಶಕ್ತಿಯನ್ನು ಅವಲಂಬಿಸಿರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ವಿವಿಧ ರೀತಿಯ ವಸ್ತುಗಳ ಮತ್ತು ಸೇವೆಗಳ ಉತ್ಪಾದನೆಗೆ ಅಗತ್ಯವಾದ ಶಿಕ್ಷಣ ಮತ್ತು ತರಬೇತಿಗಳು ಅವಶ್ಯಕ. ಹೀಗೆ ದೇಶದ ಆರ್ಥಿಕಾಭಿವೃದ್ಧಿಯು ಶಿಕ್ಷಣವನ್ನು ಅವಲಂಬಿಸಿರುತ್ತದೆ.

### 4. ಶೈಕ್ಷಣಿಕ ಹಣಕಾಸು

ಶಿಕ್ಷಣಕ್ಕಾಗಿ ಹಲವು ರೀತಿಯ ವೆಚ್ಚಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಒಂದು ಯೋಜನಾಬದ್ಧವಾದ ರೀತಿಯಲ್ಲಿ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಶೈಕ್ಷಣಿಕ ಹಣಕಾಸು ಎನ್ನುವರು. ('ಶಿಕ್ಷಣದ ವೆಚ್ಚ' ನೋಡಿ)

### 5. ಶಿಕ್ಷಣದ ಪ್ರತಿಫಲ

ಯಾವುದೇ ಒಂದು ಬಂಡವಾಳ ಹೂಡಿಕೆಗೆ ಅದರದೇ ಆದ ಒಂದು ಪ್ರತಿಫಲ ಇರುತ್ತದೆ. ಅದು ಸಾಮಾನ್ಯವಾಗಿ ಹಣದ ರೂಪದಲ್ಲಿರುತ್ತದೆ. ಶಿಕ್ಷಣಕ್ಕೂ ಒಂದು ಬಂಡವಾಳ ಹೂಡಿಕೆ ಆಗುವುದರಿಂದ ಅದರಿಂದಲೂ ಒಂದು ಪ್ರತಿಫಲ ಇರುತ್ತದೆ. ಅದನ್ನೇ ಶಿಕ್ಷಣದ ಪ್ರತಿಫಲ ಎನ್ನುವುದು. ಶಿಕ್ಷಣವನ್ನು ಪಡೆದವರು ಒಂದಲ್ಲ ಒಂದು ರೀತಿಯಲ್ಲಿ ಹಣ ಸಂಪಾದನೆಯನ್ನು ಮಾಡಲು ಅವರು ಪಡೆದ ಶಿಕ್ಷಣ ನೆರವಾಗುವುದರಿಂದ, ಅವರ ಪ್ರತಿಫಲ ಅಥವಾ ಸಂಪಾದನೆಯು ಅವರು ಪಡೆದ ಶಿಕ್ಷಣದ ಪ್ರತಿಫಲ ಎನಿಸಿಕೊಳ್ಳುತ್ತದೆ. ಇದು ಒಬ್ಬ ವ್ಯಕ್ತಿಯು ಶಿಕ್ಷಣವನ್ನು ಪಡೆಯುವುದಕ್ಕಾಗಿ ವಿನಿಯೋಗಿಸಿದ ಹಣ ಮಾತ್ರವಲ್ಲದೆ, ಅದಕ್ಕಾಗಿ ಅವನು ವಿನಿಯೋಗಿಸಿದ ಸಮಯ, ಪಟ್ಟ ಶ್ರಮ, ಪಡೆದ ಸಮಾಜದ ನೆರವು, ಎಲ್ಲವೂ ಸೇರಿ ಶಿಕ್ಷಣಕ್ಕಾಗಿ ತೊಡಗಿಸಿದ ಬಂಡವಾಳ ಎನಿಸಿಕೊಳ್ಳುತ್ತದೆ.

ಹೀಗೆ ಶಿಕ್ಷಣದಿಂದ ಬರುವ ಪ್ರತಿಫಲವನ್ನು ಖಾಸಗಿ ಪ್ರತಿಫಲ ಮತ್ತು ಸಾಮಾಜಿಕ ಪ್ರತಿಫಲ ಎಂದು ಎರಡು ಭಾಗಗಳನ್ನಾಗಿ ಮಾಡಬಹುದು. ಶಿಕ್ಷಣವನ್ನು ಪಡೆದ ವ್ಯಕ್ತಿಯು ತನ್ನ ಸಂಪಾದನೆಯಿಂದ

Digitised by Bharatavani, CIIL

ವರಮಾನವನ್ನು ಪಡೆಯುವುದು ವೈಯಕ್ತಿಕ ಪ್ರತಿಫಲವಾದರೆ, ಜನರು ಪಡೆದ ಶಿಕ್ಷಣದಿಂದ ದೇಶಕ್ಕಾಗುವ ಸಂಪಾದನೆ (ತೆರಿಗೆಗಳ ಮೂಲಕ), ಶಿಕ್ಷಣಕ್ಕಾಗಿ ಜನರು ಕೊಡುವ ಸಹಾಯ ಧನ, ಶುಲ್ಕವಾಗಿ ಕೊಡುವ ಹಣ, ಮುಂತಾದವುಗಳು ಸಾಮಾಜಿಕ ಪ್ರತಿಫಲವಾಗಿರುತ್ತದೆ.

### 6. ಶಿಕ್ಷಣದ ವೆಚ್ಚ

ಶಿಕ್ಷಣಕ್ಕಾಗಿ ವ್ಯಕ್ತಿಗಳು ಹಾಗೂ ಸಮಾಜ ಅನೇಕ ರೀತಿಯ ವೆಚ್ಚಗಳನ್ನು ಮಾಡಬೇಕಾಗುತ್ತದೆ. ಇದಕ್ಕಾಗಿ ಮಾಡುವ ವೆಚ್ಚದಲ್ಲಿ:

1. ಸಾಮಾಜಿಕ ವೆಚ್ಚ.
2. ವೈಯಕ್ತಿಕ ವೆಚ್ಚ ಮತ್ತು
3. ಅವಕಾಶ ವೆಚ್ಚಗಳು ಇರುತ್ತವೆ

ಸಾಮಾನ್ಯವಾಗಿ ಸಾಮಾಜಿಕ ವೆಚ್ಚವು ಸ್ಥಿರ ವೆಚ್ಚವಾಗಿರುತ್ತದೆ. ಎಂದರೆ ಒಮ್ಮೆ ಮಾಡುವ ವೆಚ್ಚವಾಗಿರುತ್ತದೆ. ಉದಾಹರಣೆಗೆ: ಕಟ್ಟಡ, ಪೀಠೋಪಕರಣ, ಆಟದ ಮೈದಾನ, ಪುಸ್ತಕ ಭಂಡಾರ ಇತ್ಯಾದಿ.

ನಂತರ ಅದು ಬಂಡವಾಳ ವೆಚ್ಚ, ನಿರ್ವಹಣಾವೆಚ್ಚ, ಕಾರ್ಯನಿರ್ವಾಹಕ ವೆಚ್ಚ (ಉದಾ: ಸಂಬಳ) ಮುಂತಾದ ವೆಚ್ಚಗಳನ್ನೂ ಒಳಗೊಂಡಿರುತ್ತದೆ.

ಒಬ್ಬ ವ್ಯಕ್ತಿಯು ತನಗಾಗಿ ಮಾಡುವ ಶಿಕ್ಷಣದ ವೆಚ್ಚವನ್ನು ವೈಯಕ್ತಿಕ ವೆಚ್ಚ ಎನ್ನಬಹುದು. ಅವಕಾಶ ವೆಚ್ಚ ಎಂದರೆ ಒಬ್ಬ ವ್ಯಕ್ತಿಯು ವಿದ್ಯಾಭ್ಯಾಸಕ್ಕಾಗಿ ಶಾಲೆ ಅಥವಾ ಕಾಲೇಜಿಗೆ ಹೋಗುವ ಬದಲು ಒಂದುವೇಳೆ ಅವನು ಯಾವುದಾದರೂ ಕೆಲಸವನ್ನು ಮಾಡಿ ಸಂಪಾದಿಸುತ್ತಿದ್ದ ಎಂದಿಟ್ಟುಕೊಳ್ಳೋಣ. ಆದರೆ ಶಾಲೆಗೆ ಅಥವಾ ಕಾಲೇಜಿಗೆ ಶಿಕ್ಷಣ ಪಡೆಯಲು ಹೋಗುವುದರಿಂದ ಸಂಪಾದನೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಂಪಾದನೆ ಮಾಡುತ್ತಿದ್ದ ಹಣವನ್ನೂ ವೆಚ್ಚ ಎಂದು ಪರಿಗಣಿಸಬೇಕಾಗುತ್ತದೆ. ಇದೇ ಅವಕಾಶ ವೆಚ್ಚ (ಇದನ್ನು 'ಶಾಡೋ ಪ್ರೈಸ್' ಎನ್ನುತ್ತಾರೆ).

ಕೆಲವು ವೆಚ್ಚಗಳು ಪ್ರತ್ಯಕ್ಷ ಮತ್ತೆ ಕೆಲವು ಪರೋಕ್ಷ ವೆಚ್ಚಗಳಾಗಿರುತ್ತವೆ. ಒಟ್ಟು ವೆಚ್ಚವನ್ನು ವಿದ್ಯಾರ್ಥಿಗಳ ಸಂಖ್ಯೆಯಿಂದ ಭಾಗಿಸಿದಾಗ ಘಟಕ ವೆಚ್ಚ ದೊರೆಯುತ್ತದೆ.

ಮೊದಲು ವೆಚ್ಚ ಮತ್ತು ಆದಾಯಗಳ ಒಂದು ಮುಂಗಡ ಪತ್ರವನ್ನು ತಯಾರಿಸಿಕೊಳ್ಳಬೇಕು. ಸಾಮಾನ್ಯವಾಗಿ ಈಗಿನ ಕಾಲದಲ್ಲಿ ಖೋತ ಆಯವ್ಯಯ ಪಟ್ಟಿ ಅಥವಾ ಮುಂಗಡ ಪತ್ರವನ್ನು ಸಿದ್ಧಪಡಿಸಲಾಗುತ್ತದೆ. ಇಂತಹ ಪಟ್ಟಿ ತಯಾರಾದ ನಂತರ ಅದಕ್ಕೆ ಅನುಸಾರವಾಗಿ ಶಿಕ್ಷಣದ ವೆಚ್ಚವನ್ನು ಮಾಡಬೇಕಾಗುತ್ತದೆ.

### 7. ಶೈಕ್ಷಣಿಕ ವೆಚ್ಚದ ಮೇಲಿನ "ವೆಚ್ಚ-ಪ್ರತಿಫಲ"ಗಳ ವಿಶ್ಲೇಷಣೆ

ಈ ಬಗೆಯ ವೆಚ್ಚ-ಪ್ರತಿಫಲ ವಿಶ್ಲೇಷಣೆಯು ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಮೊದಲು ಇದನ್ನು ಅಮೆರಿಕಾದಲ್ಲಿ ಜಾರಿಗೆ ತಂದವರು ಡ್ಯೂಪಿಟ್ ಎಂಬುವರು. ಅವರು ತಮ್ಮ "ಮೆಜರ್ಮೆಂಟ್ ಆಫ್ ಪಬ್ಲಿಕ್ ಯುಟಿಲಿಟಿ ವರ್ಕ್ಸ್" ಎನ್ನುವ ಬರಹದಲ್ಲಿ ಅಲ್ಲಿನ ನೀರಿನ ಸಂಪನ್ಮೂಲ ಮತ್ತು ಅದರ ಉಪಯೋಗಗಳಿಗೆ ಸಂಬಂಧಪಟ್ಟಂತೆ ಅದಕ್ಕಾಗಿ ಮಾಡಿರುವ ವೆಚ್ಚ ಮತ್ತು ಅದರಿಂದ ಪಡೆದಿರುವ ಪ್ರತಿಫಲಗಳನ್ನು ತೂಗಿನೋಡಿ ಅಂದರೆ ವಿಶ್ಲೇಷಿಸಿ, ಆ ಬಂಡವಾಳ ಹೂಡಿಕೆಯು ಎಷ್ಟರಮಟ್ಟಿಗೆ ಲಾಭದಾಯಕವಾಗಿತ್ತು ಎಂಬುದನ್ನು ತೋರಿಸಿಕೊಟ್ಟರು. ಆಗ ಇಂತಹ ವಿಶ್ಲೇಷಣೆ ನೀರಿನ ಉಪಯೋಗಕ್ಕೆ ಮಾತ್ರ ಸೀಮಿತವಾಗಿರದೆ ಬೇರೆ ಬೇರೆ ಸಂಪನ್ಮೂಲಗಳಿಗೂ ಏಕೆ ಅನ್ವಯಿಸಬಾರದೆಂಬ ಆಲೋಚನೆ ಪ್ರಾರಂಭವಾಯಿತು. ಆಗ ಇದನ್ನು ಶಿಕ್ಷಣಕ್ಕಾಗಿ ಮಾಡುವ ವೆಚ್ಚ ಹಾಗೂ ಅದರಿಂದ ದೊರೆಯುವ ಪ್ರತಿಫಲಕ್ಕೂ ಅನ್ವಯಿಸುವಂತೆ ಏಕೆ ಮಾಡಬಾರದು? ಎಂದು ಆಲೋಚಿಸಿ, ಶಿಕ್ಷಣ ಕ್ಷೇತ್ರಕ್ಕೂ ಅನ್ವಯಿಸುವಂತೆ ವೆಚ್ಚ-ಪ್ರತಿಫಲ ವಿಶ್ಲೇಷಣೆ ಪ್ರಾರಂಭವಾಯಿತು.

ಇದನ್ನು ಶಿಕ್ಷಣಕ್ಕಾಗಿ ಮಾಡುವಾಗ ನಾಲ್ಕು ಹಂತಗಳು ಮುಖ್ಯವಾಗುತ್ತದೆ. ಅವುಗಳೆಂದರೆ,

1. ಶಿಕ್ಷಣದ ವಿವಿಧ ಪ್ರತಿಫಲ ಮತ್ತು ವೆಚ್ಚಗಳನ್ನು ಗುರುತಿಸುವುದು, ಅಂದಾಜು ಮಾಡುವುದು, ಅಳತೆ ಮಾಡುವುದು ಹಾಗೂ ಬೆಲೆಕಟ್ಟುವುದು.
2. ಪ್ರಸ್ತುತ ಇರುವ ಮೌಲ್ಯವನ್ನು ಪರಿಗಣಿಸಿ, ಗಳಿಸಿದ ಪ್ರತಿಫಲ ಮತ್ತು ವೆಚ್ಚಗಳನ್ನು ಅಂದಾಜು ಮಾಡುವುದು.
3. ಅನಿರೀಕ್ಷಿತ ಅವಘಡಗಳಿಗೆ ಹಾಗೂ ನಷ್ಟಕ್ಕೆ ಸೂಕ್ತವಾದ ರೀತಿಯಲ್ಲಿ ಸರಿದೂಗಿಸುವುದು ಅಥವಾ ಹೊಂದಿಸುವುದು.
4. ಕೈಗೆತ್ತಿಕೊಂಡು ಮಾಡಿದ ಯೋಜನೆಯ ಮೌಲ್ಯಮಾಪನವನ್ನು ಸೂಕ್ತವಾದ ರೀತಿಯಲ್ಲಿ ಮಾಡುವುದು.

ವೆಚ್ಚ-ಪ್ರತಿಫಲ ವಿಶ್ಲೇಷಣೆಯಲ್ಲಿ ಪರಿಗಣಿಸಬೇಕಾದದ್ದು:

- ಪ್ರತ್ಯಕ್ಷ ಹಾಗೂ ಪ್ರಾಥಮಿಕ ವೆಚ್ಚಗಳು.
- ಪರೋಕ್ಷ ಹಾಗೂ ಇತರ ವೆಚ್ಚಗಳು.
- ಪರೋಕ್ಷ ವೆಚ್ಚಗಳಲ್ಲಿ ಮರೆಮಾಚಿದ ಬೆಲೆಗಳೂ ಸೇರಿಕೊಳ್ಳುತ್ತವೆ.

ವಿಶ್ಲೇಷಣೆ ಮಾಡಿದ ಪ್ರತಿಫಲ-ವೆಚ್ಚಗಳ ಫಲಿತಾಂಶವು ಅದರಿಂದ ಶಿಕ್ಷಣದ ಕಾರ್ಯ ಸಾಮರ್ಥ್ಯ ಹೆಚ್ಚಾಗಿದೆ ಎಂದು ತೋರಿಸಿದರೆ, ಯೋಜನೆಯು ಫಲಪ್ರದವಾಯಿತೆಂದೂ ಇಲ್ಲವಾದರೆ ಯಾವ ಬಾಬಿನಲ್ಲಿ ಯಾವ ಬದಲಾವಣೆ ಮಾಡುವುದು ಅವಶ್ಯಕ ಎಂಬುದನ್ನು ಅರಿತು ಅದನ್ನು ಸರಿಪಡಿಸಿಕೊಂಡು, ಕಾರ್ಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ.

### ಶಿಕ್ಷಣದಲ್ಲಿ ಬೇಡಿಕೆ-ಪೂರೈಕೆ ಪರಿಕಲ್ಪನೆ

ಅರ್ಥಶಾಸ್ತ್ರದಲ್ಲಿ ಬೇಡಿಕೆ ಎಂದರೆ, ಒಂದು ಗೊತ್ತಾದ ಕಾಲದಲ್ಲಿ, ಒಂದು ಗೊತ್ತಾದ ಬೆಲೆಗೆ, ಮಾರುಕಟ್ಟೆಯಲ್ಲಿ ಪದಾರ್ಥ ಅಥವಾ ಸೇವೆಯನ್ನು ಜನರು ಕೊಂಡುಕೊಳ್ಳಲು ಸಿದ್ಧವಿರುವುದು ಎಂದು ಹೇಳಬಹುದು. ಅದೇ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಒಂದು ಗೊತ್ತಾದ ಕಾಲದಲ್ಲಿ, ಒಂದು ಗೊತ್ತಾದ ಬೆಲೆಗೆ, ಒದಗಿಸಲಾಗುವ ಪದಾರ್ಥ ಅಥವಾ ಸೇವೆಗಳನ್ನು ಪೂರೈಕೆ ಎಂದು ಹೇಳಬಹುದು.

ಶಿಕ್ಷಣ ಅರ್ಥಶಾಸ್ತ್ರದಲ್ಲಿ ಪದಾರ್ಥ ಅಥವಾ ಸೇವೆ ಎಂದರೆ ಅದು ಮಾನವ ಬಂಡವಾಳ ಮತ್ತು ಅದರ ಬೇಡಿಕೆ ಮತ್ತು ಪೂರೈಕೆ.

ಒಂದು ಉತ್ತಮ ಆರ್ಥಿಕ ವ್ಯವಸ್ಥೆಯಲ್ಲಿ ಯಾವ ಬಗೆಯ ಮಾನವ ಬಂಡವಾಳಕ್ಕೆ ಎಷ್ಟು ಬೇಡಿಕೆ ಇದೆ ಮತ್ತು ಅದನ್ನು ಹೇಗೆ ಪೂರೈಸುವುದು ಎಂಬುದನ್ನು ದೇಶವು ಅಂದಾಜು ಮಾಡಬೇಕಾಗುತ್ತದೆ. ಇದಕ್ಕಾಗಿ ಎಂದರೆ ಮಾನವ ಶಕ್ತಿಯ ಬೇಡಿಕೆ ಮತ್ತು ಪೂರೈಕೆಗಳನ್ನು ನಿರ್ಧರಿಸಿ ಅದರ ಸಂಪೂರ್ಣ ಉಪಯೋಗವನ್ನು ಮಾಡಿಕೊಳ್ಳಲು ಅರ್ಥಶಾಸ್ತ್ರಜ್ಞರು


Digitised by Bharatavani, CIIL

ಹಲವು ಮಾದರಿಗಳನ್ನು (ಮಾಡೆಲ್‌ಗಳು) ಸಿದ್ಧಪಡಿಸಿದ್ದಾರೆ. ಅಂತಹ ಹಲವು ಮಾದರಿಗಳು ಎಂದರೆ, ಮಾನವ ಶಕ್ತಿ ಅಗತ್ಯತೆಯ ಮಾದರಿ, ಭರಿತ–ಫಲಿತ (ಇನ್ಪುಟ್–ಔಟ್‌ಪುಟ್) ವಿಶ್ಲೇಷಣೆ, ಅಂತರರಾಷ್ಟ್ರೀಯ ಹೋಲಿಕೆಯ ಮಾದರಿ, ವೆಚ್ಚ–ಪ್ರತಿಫಲ ವಿಶ್ಲೇಷಣೆ, ಸಾಮಾಜಿಕ ಬೇಡಿಕೆಯ ಮಾದರಿ, ಮುಂತಾದವುಗಳು.

–ಎಚ್.ಎಸ್.ಆರ್.

## ಶಿಕ್ಷಣದಲ್ಲಿ ಮೇಲ್ವಿಚಾರಣೆ ಮತ್ತು ತನಿಖೆ

ಶಿಕ್ಷಣದಲ್ಲಿನ ಹಲವು ಪಾರಿಭಾಷಿಕ ಪದಗಳು ಹೊಂದಿರುವ ಅರ್ಥ ವ್ಯತ್ಯಾಸದಿಂದ ಮೇಲ್ವಿಚಾರಣೆ ಮತ್ತು ತನಿಖೆ ಈ ಪದಗಳೂ ಹೊರತಾಗಿಲ್ಲ. ಹಲವರು ಈ ಪದಗಳು ಭಿನ್ನ ಎಂದರೆ ಮತ್ತೆ ಕೆಲವರು ಇವುಗಳನ್ನು ಪರ್ಯಾಯ ಎಂಬಂತೆಯೂ ಬಳಸಿದ್ದಾಗ್ಯೂ ಇವುಗಳು ವಿಭಿನ್ನ ರೂಪದಲ್ಲಿಯೇ ಅರ್ಥೈಸಲ್ಪಟ್ಟಿವೆ. ಶಾಲಾ ಶಿಕ್ಷಣದಲ್ಲಿ ಕೆಲವು ವಿಶೇಷ ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ಹೊಂದಿರುವ ವ್ಯಕ್ತಿಯೇ ತನಿಖಾಧಿಕಾರಿಯಾಗಿದ್ದಾನೆ. ಪ್ರಸ್ತುತದಲ್ಲಿ ಜಿಲ್ಲಾ ಶಿಕ್ಷಣ ಅಧಿಕಾರಿ, ವಿಷಯ ಪರಿವೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳೇ ಅಧಿಕಾರಯುತ ತನಿಖಾಧಿಕಾರಿಗಳೆಂದು ತಿಳಿಯಲಾಗಿದೆ.

ವಾಸ್ತವದಲ್ಲಿ ತನಿಖೆ ಎಂಬುದು ಒಂದು ನಿರಂಕುಶ ಅಧಿಕಾರಯುತ ಮಾರ್ಗವಾಗಿದೆ. ಶಿಕ್ಷಣ ಸಂಸ್ಥೆಗಳ ಗುಣವಿಮರ್ಶೆಯ ಸಾಂಪ್ರದಾಯಿಕ ಮಾರ್ಗವಾಗಿದ್ದು ಕಠಿಣತಮವಾದ ಸಾಂಪ್ರದಾಯಿಕ, ವೃತ್ತಿಯಾತ್ಮಕ, ಆಡಳಿತಾತ್ಮಕ ಮತ್ತು ಮೇಲರಿಮೆಯೊಂದಿಗೆ ಶಾಲಾ ದಾಖಲೆಗಳನ್ನು ಮುಖ್ಯೋಪಾಧ್ಯಾಯರ ಮತ್ತು ಇತರರ ಕಾರ್ಯವೈಖರಿಯನ್ನು ಪರಿಶೀಲಿಸುವ ಹಾಗೂ ದೋಷ ನೈದಾನಿಕತೆಯ ಕಾರ್ಯವೇ ತನಿಖೆಯ ಪರಿಕಲ್ಪನೆಯಾಗಿದ್ದು, ಇದೊಂದು ಅಧಿಕಾರ ಸೂಚಕದ ಪದವಾಗಿದೆ. ಡಾ. ಝಾಕೀರ ಹುಸೇನ ಸಮಿತಿಯು ಮೇಲ್ವಿಚಾರಕರಾಗಿ ತನಿಖಾಧಿಕಾರಿಗಳು ಎಂದು ಶಿಫಾರಸ್ಸು ಮಾಡಿದಾಗಿನಿಂದ ಮೇಲ್ವಿಚಾರಣೆಯು ಶಿಕ್ಷಣ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ.

ಮೇಲ್ವಿಚಾರಣೆಯು ಒಂದು ಪ್ರಜಾಸತ್ತಾತ್ಮಕ ಪದ. ಇದರರ್ಥ ವೀಕ್ಷಿಸು (to see) ಅಥವಾ ಮೇಲ್ನೋಡು. (over see). ಇದು ಶಾಲಾ ಕಾರ್ಯ ನಿರ್ವಹಣೆಯ ಮೇಲ್ನೋಟ ಎಂದಾಗಿದೆ. ಮೇಲ್ವಿಚಾರಣೆಯು ಒಂದು ಸಹಕಾರಯುತವಾದ ತಂಡದ ಕಾರ್ಯವಾಗಿದ್ದು, ಪ್ರಜಾಸತ್ತಾತ್ಮಕ, ವೈಜ್ಞಾನಿಕ ಮತ್ತು ಸೃಜನಾತ್ಮಕ ಮಾರ್ಗದಲ್ಲಿ ಶಾಲಾ ಶಿಕ್ಷಣದ ವಿವಿಧ ಚಟುವಟಿಕೆಗಳ ಬಲವರ್ಧನೆಯೊಂದಿಗೆ ಸೂಕ್ತ ಶೈಕ್ಷಣಿಕ ನಾಯಕತ್ವವನ್ನು ಒದಗಿಸುವ ಶಿಕ್ಷಣದ ಸುಧಾರಣಾತ್ಮಕ ಸಮಸ್ಯಾ ಪರಿಹಾರಾತ್ಮಕ ಚಟುವಟಿಕೆ ಮತ್ತು ಶಿಕ್ಷಣ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ.

ಅಡಮ್ಸ್ ಮತ್ತು ಡಿಕ್ಕಿಯವರು "ಮೇಲ್ವಿಚಾರಣೆಯು ಬೋಧನೆಯ ಸುಧಾರಣೆಗಾಗಿ ಇರುವ ಯೋಜನೆಯಾಗಿದೆ'' ಎಂದಿದ್ದಾರೆ. ಬರ್ಟನ್‌ರವರು "ಮೇಲ್ವಿಚಾರಣೆಯ ಗುರಿಯು ಬೋಧನೆಯ ಸುಧಾರಣೆ" ಎಂದಿದ್ದಾರೆ.

"ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಸೂಕ್ತ ಸನ್ನಿವೇಶಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುವುದೇ ಮೇಲ್ವಿಚಾರಣೆ" ಎಂದು ವೇಲ್ಸ್‌ರವರು ಪ್ರತಿಪಾದಿಸಿದ್ದಾರೆ.

ಒಟ್ಟಾರೆಯಾಗಿ ಮೇಲ್ವಿಚಾರಣೆಯು ಬೋಧನೆಯನ್ನು ಸುಧಾರಿಸುವ ಶಿಕ್ಷಕರನ್ನು ಪ್ರೇರೇಪಿಸುವ, ಮಾರ್ಗದರ್ಶಿಸುವ ಸಮಸ್ಯೆ ಪರಿಹರಿಸುವ ಒಂದು ಸಹಕಾರಯುತವಾದ ಸೇವಾ ಚಟುವಟಿಕೆಯಾಗಿದೆ.

ಮೇಲ್ವಿಚಾರಣೆಯು ಬೋಧನಾಕಾರ್ಯ, ಸಹಪಠ್ಯ ಚಟುವಟಿಕೆಗಳು, ಶಾಲಾವಾತಾವರಣ, ಅಭಿವೃದ್ಧಿ ಕಾರ್ಯಗಳು, ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರ ಸಂಬಂಧ, ಶಾಲಾ ಸಮಸ್ಯೆಗಳು, ಸಮಾಜೋಭೌತಿಕ ವಾತಾವರಣ, ಬೋಧನಾ ಕಲಿಕಾ ವಾತಾವರಣದ ಮೌಲ್ಯಮಾಪನ, ತಾಂತ್ರಿಕ ಸೌಲಭ್ಯಗಳು, ವೃತ್ತಿ ಬೆಳವಣಿಗೆ, ಪಠ್ಯಕ್ರಮದೋಷಗಳು ಈ ಮೊದಲಾದವುಗಳನ್ನು ತನ್ನ ಚಟುವಟಿಕಾ ವ್ಯಾಪ್ತಿಯಲ್ಲಿ ಒಳಗೊಂಡಿದೆ.

**ಮೇಲ್ವಿಚಾರಣೆಯ ಉದ್ದೇಶಗಳು:** ತರಗತಿ ಬೋಧನೆಯನ್ನು ಸುಧಾರಿಸುವುದು, ಶಿಕ್ಷಕರ ಸೂಕ್ತ ಮತ್ತು ಗುಣಾತ್ಮಕ ಸೇವೆಯ ಭರವಸೆಯನ್ನೀಯುವುದು, ಪಠ್ಯಕ್ರಮದ ತೃಪ್ತಿಕರವಾದ ಅನುಷ್ಠಾನ, ಪಠ್ಯಕ್ರಮ ವಿಕಾಸ, ಬೋಧನೆಯ ಸಂಘಟನೆ, ಸೌಲಭ್ಯಗಳನ್ನು ಒದಗಿಸುವುದು, ಸೇವಾನಿರತ ಶಿಕ್ಷಣವನ್ನು ನೀಡುವುದು, ಸಾರ್ವಜನಿಕ ಸಂಬಂಧಗಳ ನಿರ್ವಹಣೆ, ಶಿಕ್ಷಣ ಚಟುವಟಿಕೆಗಳ ಮೌಲ್ಯಮಾಪನ, ಸಮಸ್ಯಾ ಪರಿಹಾರ, ಶಿಕ್ಷಕರ ಪ್ರಯತ್ನಗಳನ್ನು ಉತ್ತೇಜಿಸುವುದು, ಶೈಕ್ಷಣಿಕ ನಾಯಕತ್ವ ಒದಗಿಸುವುದು, ಶಿಕ್ಷಕರ ವ್ಯಕ್ತಿತ್ವದ ಅಳತೆ, ದುರ್ಬಲ ಶಿಕ್ಷಕರ ಸರ್ವೋತ್ತಮತೆಗೆ ಉತ್ತೇಜನ, ವೃತ್ತಿ ಬೆಳವಣಿಗೆಯ ಚಟುವಟಿಕೆಗಳ ಉತ್ತೇಜನ, ಮೇಲ್ವಿಚಾರಣೆ, ಬೋಧನೆ ಮತ್ತು ಆಡಳಿತಾತ್ಮಕ ತಂತ್ರಗಳ ಪ್ರಾತ್ಯಕ್ಷೀಕರಣ, ಪರಿಣಾಮಕಾರಿ ಬೋಧನಾ ವಿಧಾನಗಳ ಪರಿಚಯಿಸುವಿಕೆ, ಸಂಪನ್ಮೂಲಗಳ ಸದ್ಬಳಕೆ, ಶಾಲೆ ಮತ್ತು ಸಮುದಾಯದ ಸಂಬಂಧದ ಸುಧಾರಣೆ.

### ಮೇಲ್ವಿಚಾರಣೆಯ ಪ್ರಕಾರಗಳು

**೧) ಸರಿಪಡಿಸುವ ಕ್ರಮ**

ಈ ವಿಧದಲ್ಲಿ ಯಾವಾಗಲೂ ಮೇಲ್ವಿಚಾರಕನು ಶಿಕ್ಷಣದ ವಿವಿಧ ಚಟುವಟಿಕೆಗಳಲ್ಲಿ ಮುಖ್ಯೋಪಾಧ್ಯಾಯರ ಮತ್ತು ಶಿಕ್ಷಕರ ದೋಷಗಳನ್ನು ಕಂಡುಕೊಳ್ಳುತ್ತಾನೆ.

**೨) ತಡೆಗಟ್ಟುವ ವಿಧ**

ಈ ವಿಧವು ಸಮಸ್ಯೆಗಳು ಉಂಟಾಗುವ ಮೊದಲೇ ಅವುಗಳನ್ನು ತಡೆಗಟ್ಟಲು ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರಿಗೆ ಸಹಾಯಕವಾಗಿದೆ.

**೩) ಸೃಜನಾತ್ಮಕ ವಿಧ**

ಈ ವಿಧಾನದಲ್ಲಿ ಮೇಲ್ವಿಚಾರಕರು ಶಿಕ್ಷಕರ ಮಟ್ಟಕ್ಕಿಳಿದು ಅವರಲ್ಲಿ ಒಬ್ಬರಾಗಿ ನಿಂತು ವಿನೂತನ ಕ್ರಮಗಳನ್ನು ಸೂಚಿಸುತ್ತಾರೆ.

**೪) ನಿರಂಕುಶಾತ್ಮಕ ಮೇಲ್ವಿಚಾರಣೆ**

ಈ ವಿಧದಲ್ಲಿ ಶಿಕ್ಷಕರಿಗೆ ಎಲ್ಲವೂ ಪೂರ್ವ ನಿಗದಿತವಾಗಿರುತ್ತದೆ. ಶಿಕ್ಷಕರಿಗೆ ಸ್ವಾತಂತ್ರ್ಯ ನೀಡದಿರುವುದರಿಂದ ಬೋಧನೆಯ ಸುಧಾರಣೆಗೆ ವಿಧವು ಸಹಾಯಕಾರಿಯಾಗಿಲ್ಲ.

**೫) ಪ್ರಜಾಸತ್ತಾತ್ಮಕ ಮೇಲ್ವಿಚಾರಣೆ**

ಇಲ್ಲಿ ವ್ಯಕ್ತಿ ಗೌರವಕ್ಕೆ ಬೆಲೆಯಿದ್ದು ಮೇಲ್ವಿಚಾರಕರು ಶಿಕ್ಷಕರೊಡನೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕರಂತಿದ್ದು ಅತ್ಯಂತ ಸೂಕ್ತವಾದ ವಿಧಾನವಾಗಿದೆ.

**೬) ಸ್ಫೂರ್ತಿದಾಯಕ ಮಾನವತಾ ವಿಧ**

ಇದು ಶಿಕ್ಷಕರನ್ನು ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಸಂಶೋಧನೆ ಮತ್ತು ವ್ಯಕ್ತಿ ಹಾಗೂ ವ್ಯಕ್ತಿತ್ವದ ವಿಕಾಸಕ್ಕೆ ಉತ್ತೇಜಿಸುವ ಮಾನವೀಯ ದೃಷ್ಟಿಕೋನದ ವಿಧಾನವಾಗಿದೆ.

Digitised by Bharatavani, CIIL

**ಮೇಲ್ವಿಚಾರಣೆಯ ತಂತ್ರಗಳು**

ಬೋಧನೆಯನ್ನು ಸುಧಾರಿಸಲು ಮೇಲ್ವಿಚಾರಕರು ವಿವಿಧ ತಂತ್ರಗಳನ್ನು ಬಳಕೆ ಮಾಡಿಕೊಳ್ಳಬಹುದು.

**೧) ಶಾಲಾ ಭೇಟಿಗಳು**

ಅ) ಸೂಕ್ತ ಮುನ್ಸೂಚನೆ ನೀಡಿದ ನಂತರ ಆ) ಯಾರಿಗೂ ತಿಳಿಯದಂತೆ ಭೇಟಿ ಇ) ಶಾಲಾ ಆಮಂತ್ರಣದ ಮೇರೆಗೆ.

ಶಾಲೆಗೆ ಭೇಟಿ ನೀಡಿ ಶಾಲಾಕಾರ್ಯಗಳ ಸಮಗ್ರವಾದ ಪರಿಶೀಲನೆ ಮಾಡುವುದು, ಉಪಯುಕ್ತವಾದ ಹಳೆಯ ತಂತ್ರವಾಗಿದೆ. ಇದು ವರ್ಷಕ್ಕೊಂದು ಬಾರಿಯಾದರೂ ಆಗಬೇಕಾದ ಕಾರ್ಯವಾಗಿದೆ.

**೨) ಶಿಕ್ಷಕರ ಸಮ್ಮೇಳನಗಳು**

ಶಿಕ್ಷಕರ ಸಭೆಗಳಲ್ಲಿ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿ ಶಿಕ್ಷಕರ ಸಮಸ್ಯೆಗಳನ್ನು ಸುಧಾರಿಸಬಹುದು. ಇಂತಹ ಕಡೆಗಳಲ್ಲಿ ವಿವಿಧ ಮೇಲ್ವಿಚಾರಕರು ಒಂದೆಡೆ ಸೇರಿ ಇವುಗಳನ್ನು ಪರಿಹರಿಸಬಹುದು. ಇದು ಮೇಲ್ವಿಚಾರಕರ ಶ್ರಮ ಹಾಗೂ ಸಮಯದ ಉಳಿತಾಯ ಮಾಡುತ್ತದೆ. ಅಲ್ಲದೇ ಇಲ್ಲಿ ಸಾಮೂಹಿಕ ಸಮಸ್ಯಾ ಪರಿಹಾರ ಸಾಧ್ಯವಾಗುತ್ತದೆ.

**೩) ವೀಕ್ಷಣೆ**

ಈ ತಂತ್ರದಲ್ಲಿ ಶಿಕ್ಷಕರು ತಮ್ಮ ಶಾಲೆಯಲ್ಲಿ ಮತ್ತು ಇತರ ಶಾಲೆಗಳಲ್ಲಿ ಉತ್ತಮ ಶಿಕ್ಷಕರ ಪಾಠ ವೀಕ್ಷಿಸಲು ಅವಕಾಶ ಕೊಡಲಾಗುತ್ತದೆ. ಇದು ಶಿಕ್ಷಕರ ಬೆಳವಣಿಗೆಗೆ ಮತ್ತು ವಿಕಾಸಕ್ಕೆ ಉಪಯುಕ್ತವಾದ ತಂತ್ರವಾಗಿದೆ. ಶಿಕ್ಷಕರು ಚಿಕ್ಕ ಚಿಕ್ಕ ಗುಂಪುಗಳಾಗಿ ಪ್ರಭಾವಿ ಶಿಕ್ಷಕರ ಪಾಠ ವೀಕ್ಷಿಸಿ ಮಾಹಿತಿಯನ್ನು ಸಂಗ್ರಹಿಸಿ ಆನಂತರ ಮಾದರಿ ಬೋಧನೆಯ ಕುರಿತು ಚರ್ಚಿಸಿ ಕೈಗೆತ್ತಿಕೊಳ್ಳಬೇಕಾದ ಚಟುವಟಿಕೆಗಳನ್ನು ನಿರ್ಧರಿಸಿಕೊಳ್ಳಬೇಕು.

**೪) ಪ್ರಾತ್ಯಕ್ಷೀಕರಣ**

ಸ್ವತಃ ಮೇಲ್ವಿಚಾರಕರು ಅಥವಾ ಕೆಲವು ಪರಿಣಿತರಿಂದ ಶಿಕ್ಷಕರಿಗಾಗಿ ಪಾಠಬೋಧನಾ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುವ ತಂತ್ರವಿದಾಗಿದೆ. ಇದು ಶಿಕ್ಷಕರಿಗೆ ಬೋಧನಾ ಕೌಶಲ್ಯಗಳನ್ನು ಪ್ರದರ್ಶಿಸುವ, ಬೋಧನಾ ಉಪಕರಣಗಳ ಬಗ್ಗೆ ತಿಳಿಸುವ ನೂತನ ತಂತ್ರಗಳನ್ನು ಪರಿಚಯಿಸುವ ಮತ್ತು ನೂತನ ಸಾಮಗ್ರಿಗಳನ್ನು ಅನ್ವಯಿಸಿಕೊಳ್ಳುವ ಕುರಿತು ಆಗಿರಬಹುದು.

**೫) ಸಂಪರ್ಕ ಮತ್ತು ದಾಖಲೀಕರಣ**

ಮೇಲ್ವಿಚಾರಕನು ಶಾಲೆಯ ಹಲವಾರು ಮಾಹಿತಿಗಳನ್ನು ಸೂಕ್ತ ಪ್ರಶ್ನಾವಳಿಗಳನ್ನು ಕಳುಹಿಸುವ ಮತ್ತು ಅದನ್ನು ಹಿಂಪಡೆದು ದಾಖಲಿಸಿಕೊಳ್ಳುವಿಕೆಯಿಂದಾಗಿದೆ. ಇಲ್ಲಿ ಮೇಲ್ವಿಚಾರಕರು ತಮ್ಮ ಕಚೇರಿಯಲ್ಲಿ ಉತ್ತಮ ರೀತಿಯಲ್ಲಿ ದಾಖಲೆಗಳನ್ನು ನಿರ್ವಹಿಸುತ್ತಾರೆ. ಇಲ್ಲಿ ವೈಯಕ್ತಿಕ ಸಂಪರ್ಕವಿಲ್ಲದಿದ್ದರೂ ಶಾಲಾ ಸುಧಾರಣೆಗೆ ದಾಖಲೆಗಳ ಮೂಲಕ ಸಹಕಾರಿಯಾಗಿದೆ.

ಈ ಮೇಲಿನ ಎಲ್ಲ ತಂತ್ರಗಳಲ್ಲಿ ಯಾವುದು ಉತ್ತಮ ತಂತ್ರ ಎಂಬುದು ಚರ್ಚೆಯ ವಿಷಯ. ಆದರೆ ಶಿಕ್ಷಕರು ಶಾಲೆ, ಸನ್ನಿವೇಶ, ಸಮಸ್ಯೆ ಮತ್ತು ವಿಭಿನ್ನ ಹಿನ್ನೆಲೆಯಲ್ಲಿ ಒಂದಕ್ಕಿಂತ ಹೆಚ್ಚಿನ ತಂತ್ರಗಳ ಸಂಯೋಜನೆಯಿಂದ ತಂತ್ರಗಳ ಅನುಸರಣೆ ಮಾಡಬೇಕು.

**ಪ್ರಸ್ತುತ ಮೇಲ್ವಿಚಾರಣೆಯ ದೋಷಗಳು**

ಪ್ರಸ್ತುತದಲ್ಲಿ ಮೇಲ್ವಿಚಾರಣಾ ಪದ್ಧತಿಯ ಕುರಿತು ಸಾಮಾನ್ಯ ಭಾವನೆಯೆಂದರೆ ಮೇಲ್ವಿಚಾರಣಾ ಸುಧಾರಣೆಯ ಅಗತ್ಯವಿದೆ. ಅದಕ್ಕೆ ಕಾರಣ ಈ ಕೆಳಗಿನ ದೋಷಪೂರಿತ ಅಂಶಗಳಾಗಿವೆ.

- **ಸೂಕ್ತವಲ್ಲದ ಮೇಲ್ವಿಚಾರಕರು**

ಮೇಲ್ವಿಚಾರಕಾ ಕಾರ್ಯವನ್ನು ವಹಿಸುವ ವ್ಯಕ್ತಿಯು ಶಾಲಾ ಶಿಕ್ಷಣದ ಅನುಭವವನ್ನು ಹೊಂದಿರದೇ ಶಿಕ್ಷಕರ ಮಟ್ಟಕ್ಕೆ ಬರಲಾರನು. ಇಂತಹ ಮೇಲ್ವಿಚಾರಕರು ಅನನುಭವದಿಂದ ಸಮಸ್ಯೆಗಳನ್ನು ಪರಿಹರಿಸಲಾರರು.

- **ಎಲ್ಲ ಚಟುವಟಿಕೆಗಳು ತೋರಿಕೆಗಾಗಿ**

ಶಾಲೆಗಳಲ್ಲಿ ಇಂದಿಗೂ ಸಹ ಮೇಲ್ವಿಚಾರಕರು ಮೇಲ್ವಿಚಾರಣಾ ಕಾರ್ಯಕ್ಕೆ ಬರುತ್ತಿದ್ದಾರೆಂದರೆ ಅದು ತೋರಿಕೆಯ ಅವಾಸ್ತವ ದಿನವಾಗಿ ಪರಿಣಮಿಸಿ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ನಾಟಕೀಯವಾಗಿ ವರ್ತಿಸುತ್ತಾರೆ.

- **ನೀತಿಗಳ ಕೇಂದ್ರೀಕರಣ**

ಮೇಲ್ವಿಚಾರಣಾ ಕಾರ್ಯದ ನೀತಿಗಳು, ಯೋಜನೆಗಳು, ಕಾರ್ಯವಿಧಾನಗಳೆಲ್ಲವೂ ಉನ್ನತ ಪ್ರಾಧಿಕಾರಗಳಿಂದ ರೂಪಿಸಲ್ಪಟ್ಟಿದ್ದು ಕೇಂದ್ರೀಕೃತಗೊಂಡಿರುತ್ತವೆ.

- **ಹೆಚ್ಚಾಗಿ ಆಡಳಿತಾತ್ಮಕ ಕಾರ್ಯಕ್ಕೆ ಸಂಬಂಧಿಸಿದೆ**

ತನಿಖಾ ಸಮಯದಲ್ಲಿ ಮೇಲ್ವಿಚಾರಣೆಯು ತನ್ನ ಮೂಲ ಅರ್ಥವನ್ನು ಕಳೆದುಕೊಂಡು, ಕಡತಗಳ, ದಾಖಲಾತಿಗಳ ಮೇಲ್ವಿಚಾರಣೆ ಆದ್ಯತೆ ಪಡೆದುಕೊಂಡಿದೆ.

- **ಹೆಚ್ಚಿನ ಕಾರ್ಯಭಾರ**

ಪ್ರಸ್ತುತ ಮೇಲ್ವಿಚಾರಣೆಯಲ್ಲಿ ಮೇಲ್ವಿಚಾರಕರು ಮತ್ತು ಶಿಕ್ಷಕರ ಮಧ್ಯೆ ವೈಯಕ್ತಿಕ ಸಂಪರ್ಕದ ಅವಕಾಶವಿಲ್ಲ. ಕಾರಣ ಆಡಳಿತಾತ್ಮಕ ಪರಿಶೀಲನೆಯೇ ಹೊರೆಯಾದ ಕಾರ್ಯವಾಗಿದೆ.

- **ವಿಷಯಗಳ ಮೇಲ್ವಿಚಾರಕರಿಲ್ಲ**

ದಕ್ಷವಾದ ವಿಷಯ ಪರಿಣಿತರಿಲ್ಲದಿರುವುದರಿಂದ ಪರಿಣಾಮಕಾರಿಯಾದ ವಿಷಯ ಬೋಧನಾ-ಕಲಿಕಾ ಚಟುವಟಿಕೆಯ ಮೇಲ್ವಿಚಾರಣೆ ಸಾಧ್ಯವಾಗುತ್ತಿಲ್ಲ.

- **ಸರ್ವಾಧಿಕಾರತ್ವ**

ಮೇಲ್ವಿಚಾರಕರು ತಮ್ಮ ಅಧಿಕಾರ ಪರಮಾಧಿಕಾರ ಎಂದು ಭಾವಿಸಿ ತಪ್ಪು ಕಲ್ಪನೆಯಿಂದ ಕೇವಲ ಹೇಳಿಕೆಯ ರೂಪದ ಮೇಲ್ವಿಚಾರಣೆ ಮಾಡುತ್ತಾರೆ.

- **ಖಾಸಗಿ ಆಡಳಿತಮಂಡಳಿಗಳ ಪ್ರಭಾವ**

ಕೆಲವು ಖಾಸಗಿ ಶಾಲೆಗಳಲ್ಲಿ ಆಡಳಿತ ಮಂಡಳಿಗಳು ಮೇಲ್ವಿಚಾರಕರ ಮೇಲೆ ವಿವಿಧ ಹಿನ್ನೆಲೆಗಳಿಂದ ಪ್ರಭಾವ ಬೀರಿ ಸೂಕ್ತ ಮೇಲ್ವಿಚಾರಣೆಗೆ ಅವಕಾಶ ಕೊಡುತ್ತಿಲ್ಲ.

- **ಅಪೂರ್ಣವಾದ ಮೇಲ್ವಿಚಾರಣೆ**

ಪ್ರಸ್ತುತ ಮೇಲ್ವಿಚಾರಣೆಯು ಬೋಧನಾ-ಕಲಿಕಾ ಪ್ರಕ್ರಿಯೆಯ ವಿವಿಧ ಅಂಶಗಳಾದ ಸಹಪಠ್ಯ ಚಟುವಟಿಕೆಗಳು, ಮೌಲ್ಯಮಾಪನ, ಶಾಲೆ ಸಮುದಾಯದ ಸಂಬಂಧದ ಸುಧಾರಣೆ, ಪಠ್ಯಕ್ರಮವಿಕಾಸ ಮತ್ತು ವೃತ್ತಿ ಬೆಳವಣಿಗೆಯಂತಹ ಅಂಶಗಳಿಗೆ ಗಮನಕೊಡದೇ ಅಪೂರ್ಣವಾಗಿದೆ.


Digitised by Bharatavani, CIIL

- **ಶಾಲಾ ಮತ್ತು ಮೇಲ್ವಿಚಾರಕಾ ಸಿಬ್ಬಂದಿಯ ಮಧ್ಯೆ ಅಪನಂಬಿಕೆ**

ಮೇಲ್ವಿಚಾರಕರು ಹೇಳಿದಂತೆಯೂ, ಶಾಲಾ ಸಿಬ್ಬಂದಿಯು ಒಪ್ಪಿಕೊಂಡಂತೆಯೂ ವರ್ತಿಸಿದಾಗ್ಯೂ ಪರಸ್ಪರ ಅಪನಂಬಿಕೆ ಎದ್ದು ಕಾಣುತ್ತದೆ.

ಹೀಗೆ ಪ್ರಸ್ತುತ ಮೇಲ್ವಿಚಾರಣೆಯು ಹಲವು ಪ್ರಮುಖ ದೋಷಗಳಿಂದ ಕೂಡಿದೆ.

**ಮೇಲ್ವಿಚಾರಣೆಯ ಸುಧಾರಣೆಗಾಗಿ ಸಲಹೆಗಳು**

- ಮೇಲ್ವಿಚಾರಣಾ ಸಿಬ್ಬಂದಿಯನ್ನು ಅಧಿಕಾರದೊಂದಿಗೆ ಬಲಸಂವರ್ಧನೆ ಮಾಡುವುದು.
- ಆಡಳಿತಾತ್ಮಕ ಅಧಿಕಾರಗಳನ್ನು ಹಸ್ತಾಂತರಿಸುವುದು.
- ಶಾಲಾ ಮೌಲ್ಯಮಾಪನಕ್ಕೆ ಅಳತೆಗೋಲುಗಳನ್ನು ನಿಗದಿಪಡಿಸುವುದು.
- ಮೇಲ್ವಿಚಾರಕರ ತಂಡವನ್ನು ರಚಿಸುವುದು.
- ಮೇಲ್ವಿಚಾರಣಾ ಸಿಬ್ಬಂದಿಗೆ ಸೇವಾನಿರತ ತರಬೇತಿ ನೀಡುವುದು.
- ಕೆಲವೇ ಶಾಲೆಗಳನ್ನು ಮೇಲ್ವಿಚಾರಕರಿಗೆ ವಹಿಸುವುದು.
- ಮೇಲಿಂದ ಮೇಲೆ ಮೇಲ್ವಿಚಾರಣೆ ಕೈಗೊಳ್ಳುವುದು.
- ತರಗತಿಗೆ ಭೇಟಿ ನೀಡಿ ಮೇಲ್ವಿಚಾರಣೆ ಕೈಗೊಳ್ಳುವುದು.
- ಶಿಕ್ಷಕರ ವೃತ್ತಿ ಬೆಳವಣಿಗೆಯನ್ನು ಉತ್ತೇಜಿಸುವುದು.
- ವ್ಯಾಪಕವಾದ ಮೇಲ್ವಿಚಾರಣೆ ಕೈಗೊಳ್ಳುವುದು.
- ಪ್ರತಿಭಾನ್ವಿತ ಶಿಕ್ಷಕರನ್ನು ಮೇಲ್ವಿಚಾರಕರನ್ನಾಗಿಸುವುದು.
- ಮೇಲ್ವಿಚಾರಣೆಯ ನಂತರ ಅನುವರ್ತಿತ ಕಾರ್ಯಕೈಗೊಳ್ಳುವುದು.
- ಆಡಳಿತಾತ್ಮಕ ಮತ್ತು ಮೇಲ್ವಿಚಾರಣಾ ಕಾರ್ಯಗಳಿಗೆ ಪ್ರತ್ಯೇಕ ಅಧಿಕಾರಿಗಳ ನೇಮಕ ಮಾಡುವುದು.
- ಮೇಲ್ವಿಚಾರಕರು ಶಾಲೆ ಮತ್ತು ಸಮುದಾಯದ ಮಧ್ಯೆ ಸೇತುವೆಯಾಗಿರಬೇಕು.
- ವಾಸ್ತವಿಕ ತಳಹದಿಯ ಮೇಲೆ ಮೇಲ್ವಿಚಾರಣೆ ನಡೆಯಬೇಕು.
- ಮೇಲ್ವಿಚಾರಣಾ ಕಾರ್ಯದ ನಂತರ ಗುಂಪುಚರ್ಚೆ ಏರ್ಪಡಿಸಬೇಕು.

ಉತ್ತಮವಾದ ಮೇಲ್ವಿಚಾರಣೆಯು ಉತ್ತಮ ಬೋಧನಾ–ಕಲಿಕಾ ವಾತಾವರಣ ಸೃಷ್ಟಿಸುತ್ತದೆ. ಈ ಹಿನ್ನೆಲೆಯಲ್ಲಿ ಮೇಲ್ವಿಚಾರಣಾ ಕಾರ್ಯದಲ್ಲಿ ಈ ಮೇಲಿನ ಸಲಹೆಗಳನ್ನು ಅಳವಡಿಸಿಕೊಂಡು, ಶಿಕ್ಷಣದ ವಿಶೇಷವಾಗಿ ಬೋಧನೆಯ ಸುಧಾರಣೆಯಲ್ಲಿ ವಿಶೇಷ ಕಾಳಜಿಯಿಂದ ಸೇವಾಯುತ, ಸಹಕಾರಯುತವಾಗಿ ಉತ್ತಮ ನಾಯಕತ್ವದೊಂದಿಗೆ ಮೇಲ್ವಿಚಾರಣೆ ನಡೆಯಬೇಕಾಗಿದೆ. ಸಂಶೋಧಿತ ತಂತ್ರಗಳನ್ನು ಸಹ ಮೇಲ್ವಿಚಾರಣೆಯಲ್ಲಿ ಅನ್ವಯಿಸಿಕೊಳ್ಳಬೇಕು.

–ಕೊ.ಎನ್.ಬಿ.
– ಕ.ಎ.ವಿ.

## ಶಿಕ್ಷಣದಲ್ಲಿ ವೆಚ್ಚ – ಪ್ರತಿಫಲ ವಿಶ್ಲೇಷಣೆ

ಪ್ರಪಂಚದ ಎಲ್ಲಾ ದೇಶಗಳಲ್ಲೂ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಹಲವು ಯೋಜನೆಗಳನ್ನು ಕೈಗೊಳ್ಳುವುದು ಮತ್ತು ಅವುಗಳಿಗಾಗಿ ಮಾಡಿದ ವೆಚ್ಚಕ್ಕೆ ತಕ್ಕಷ್ಟು ಪ್ರತಿಫಲ ಪಡೆಯಲು ಪ್ರಯತ್ನಿಸುವುದು ಸಾಮಾನ್ಯ. ಯೋಜನೆಯು ಮುಗಿದಮೇಲೆ ಅದರಿಂದಾಗುವ ಸಂಪಾದನೆ ಅಥವಾ ಲಾಭ ಅಥವಾ ಪ್ರತಿಫಲವನ್ನು ಅಂದಾಜು ಮಾಡಲಾಗುವುದು. ಹೀಗೆ ಅಂದಾಜು ಮಾಡುವಾಗ ವೆಚ್ಚದ ಮತ್ತು ಪ್ರತಿಫಲಗಳ ಬಾಬ್ತು ಹಲವಾರು ರೀತಿಯ ವಿಶ್ಲೇಷಣೆಗಳನ್ನು ಮಾಡಲಾಗುತ್ತದೆ. ಇದಕ್ಕೆ "ವೆಚ್ಚ – ಪ್ರತಿಫಲ ವಿಶ್ಲೇಷಣೆ" ಎಂದು ಹೆಸರು.

ಹ್ಯಾವ್‌ಮನ್ ಎನ್ನುವವರು ವೆಚ್ಚ-ಪ್ರತಿಫಲ ವಿಶ್ಲೇಷಣೆಯನ್ನು ಆರ್ಥಿಕ ತೀರ್ಮಾನಗಳನ್ನು ತೆಗೆದುಕೊಳ್ಳುವವರ ಕೈಯಲ್ಲಿನ ಒಂದು ಉಪಕರಣ ಎಂದೂ, ಅದು ಸಾರ್ವಜನಿಕ ವೆಚ್ಚದ ಆರ್ಥಿಕ ಪರಿಣಾಮಗಳನ್ನು ತಿಳಿಸುತ್ತದೆ ಎಂದೂ ವ್ಯಾಖ್ಯಾನಿಸುತ್ತಾರೆ.

ವೆಚ್ಚ-ಪ್ರತಿಫಲ ವಿಶ್ಲೇಷಣೆಯು ಹಲವಾರು ಪ್ರಮುಖ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುತ್ತದೆ. ಉದಾಹರಣೆಗೆ : ಭಾರತವು ಹೊಸ ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸಬೇಕೆ? ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಬೇಕೆ? ಇತ್ಯಾದಿ.

ಪ್ರೆಸ್ಟ್ ಮತ್ತು ಟರ್ ವೇ (1965) ಎನ್ನುವವರು ಈ ವಿಶ್ಲೇಷಣೆಯನ್ನು ಒಂದು ಯೋಜನೆಯ ಆಗು ಹೋಗುಗಳ ಯಥಾಸ್ಥಿತಿಯನ್ನು ತಿಳಿಸುವ ಮಾರ್ಗವೆಂದೂ, ಇದು ಯೋಗಕ್ಷೇಮದ ಅರ್ಥಶಾಸ್ತ್ರ, ಸಾರ್ವಜನಿಕ ಹಣಕಾಸು, ಸಂಪನ್ಮೂಲ ಅರ್ಥಶಾಸ್ತ್ರ, ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಉಪಯುಕ್ತವೆಂದೂ ಹೇಳಿದ್ದಾರೆ

ಅರ್ಥಶಾಸ್ತ್ರದಲ್ಲಿ ಇಂತಹ ವಿಶ್ಲೇಷಣೆ ಅಗತ್ಯ. ಏಕೆಂದರೆ ಹೀಗೆ ವಿಶ್ಲೇಷಿಸಿದಮೇಲೆ ಪ್ರತಿಫಲವು ವೆಚ್ಚಕ್ಕಿಂತ ಅಧಿಕವಾಗಿದ್ದರೆ ಆ ಯೋಜನೆಯನ್ನು ಲಾಭದಾಯಕವೆಂದು ಪರಿಗಣಿಸಿ ಮುಂದೆಯೂ ಅದೇ ರೀತಿಯ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಒಂದು ವೇಳೆ ಬಂದ ಪ್ರತಿಫಲದ ಮೌಲ್ಯಕ್ಕಿಂತ ಮಾಡಿದ ವೆಚ್ಚವೇ ಹೆಚ್ಚಾಗಿದ್ದರೆ ಆ ಯೋಜನೆಯಲ್ಲಿ ಎಲ್ಲಿ ತಪ್ಪಾಗಿದೆ ಎಂಬುದನ್ನು ಪತ್ತೆಮಾಡಿ ಸರಿಪಡಿಸಬಹುದು ಅಥವಾ ಯೋಜನೆಯನ್ನೇ ಕೈಬಿಡಬಹುದು.

ವೆಚ್ಚ – ಪ್ರತಿಫಲದ ವಿಶ್ಲೇಷಣೆಯ ಉದ್ದೇಶವೇ ಯೋಜನೆಯ ದಿಕ್ಕನ್ನು ಸರಿಯಾಗಿ ತಿಳಿದುಕೊಳ್ಳುವುದು. ಏಕೆಂದರೆ ಹೂಡಿದ ಬಂಡವಾಳವು ಅಗಾಧವಾಗಿರುವಾಗ ಯೋಜನೆಯ ಯಶಸ್ಸು ಮುಖ್ಯವಾಗುತ್ತದೆ. ಅದರಿಂದ ಬಂದ ಲಾಭವು ಹೂಡಿದ ಬಂಡವಾಳಕ್ಕೆ ಅನುಗುಣವಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲು ಬಂಡವಾಳವನ್ನು ಹೂಡಿದವರು ಸಹಜವಾಗಿ ಕಾತುರರಾಗಿರುತ್ತಾರೆ. ವೆಚ್ಚ-ಪ್ರತಿಫಲ ವಿಶ್ಲೇಷಣೆಯು ಇದಕ್ಕೆ ಸಹಾಯ ಮಾಡುತ್ತದೆ.

ವೆಚ್ಚ-ಪ್ರತಿಫಲ ವಿಶ್ಲೇಷಣೆಯನ್ನು ಒಂದು ನಿರ್ದಿಷ್ಟವಾದ ವಿಧಾನದಲ್ಲಿ ಕೈಗೊಳ್ಳಬೇಕು. ಆದ್ದರಿಂದ ಅದಕ್ಕಾಗಿ ಹಲವು ಹಂತಗಳನ್ನು ಎಚ್ಚರಿಕೆಯಿಂದ ನಿಭಾಯಿಸಬೇಕಾಗುತ್ತದೆ. ಅವುಗಳೆಂದರೆ:

1. ಕೈಗೊಳ್ಳುವ ಯೋಜನೆಯನ್ನು ಸರಿಯಾಗಿ ಗುರುತಿಸುವುದು, ಅದರ ಮಹತ್ವವನ್ನು ಅರಿಯುವುದು ಮತ್ತು ಅದಕ್ಕಾಗಿ ವಿವಿಧ ಹಂತಗಳಲ್ಲಿನ ವೆಚ್ಚ-ಪ್ರತಿಫಲದ ಪ್ರಮಾಣವನ್ನು ಲೆಕ್ಕಾಚಾರ ಮಾಡುವುದು.

Digitised by Bharatavani, CIIL

2. ಇಂದಿನ ವೆಚ್ಚ – ಪ್ರತಿಫಲವನ್ನು ಹಿಂದಿನ ವೆಚ್ಚ – ಪ್ರತಿಫಲ ಮೌಲ್ಯಗಳಿಗೆ ಹೋಲಿಸಿ ಸರಿಯಾದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದು.

3. ಯೋಜನೆ ಜಾರಿಗೊಳಿಸುವಾಗ ಉಂಟಾಗಬಹುದಾದ ಹಲವು ಅನಿರೀಕ್ಷಿತ ಘಟನೆಗಳಿಗೆ ಸರಿಯಾದ ತಯಾರಿ ನಡೆಸುವುದು.

4. ಉತ್ತಮ ರೀತಿಯಲ್ಲಿ ಯೋಜನೆಯ ಜಾರಿಗೊಳಿಸುವಿಕೆಯನ್ನು ಮೌಲ್ಯಮಾಪನ ಮಾಡುವುದು.

ವೆಚ್ಚ ಪ್ರತಿಫಲ ವಿಶ್ಲೇಷಣೆ ಕೇವಲ ಆರ್ಥಿಕ ಯೋಜನೆಗಳಿಗೆ ಸೀಮಿತವಾಗಿಲ್ಲ. ಶಿಕ್ಷಣ ಕ್ಷೇತ್ರಕ್ಕೂ ಇದು ಮುಖ್ಯ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಮಾಡುವ ವೆಚ್ಚವನ್ನು ಸುಲಭವಾಗಿ ವಿಶ್ಲೇಷಿಸಬಹುದಾದರೂ ಅದರ ಪ್ರತಿಫಲವನ್ನು ವಿಶ್ಲೇಷಿಸುವುದು ಕಷ್ಟ. ಏಕೆಂದರೆ ಪ್ರತಿಫಲದ ವಿಶ್ಲೇಷಣೆಗೆ ಹಲವು ಊಹೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಪ್ರತಿಫಲವು ತಕ್ಷಣವೇ ದೊರಕುವುದಿಲ್ಲ. ದೊರಕುವ ಪ್ರತಿಫಲವನ್ನು ಪರಿಮಾಣೀಕರಿಸುವುದೂ ಸುಲಭವಲ್ಲ. ಇದು ಶಿಕ್ಷಣ ಕ್ಷೇತ್ರದಲ್ಲಿ ಕಂಡುಬರುವ ಸವಾಲಾಗಿದೆ.

ಈ ಬಗೆಯ ವೆಚ್ಚ-ಪ್ರತಿಫಲ ವಿಶ್ಲೇಷಣೆ ಮೊದಲು ಜಾರಿಗೆ ಬಂದದ್ದು ಮುಂದುವರೆದ ರಾಷ್ಟ್ರಗಳಲ್ಲಿ. ಏಕೆಂದರೆ ಅಂತಹ ದೇಶಗಳಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು, ದೊಡ್ಡ ಬಂಡವಾಳಗಳನ್ನು ತೊಡಗಿಸುವುದರ ಮೂಲಕ ಕೈಗೊಳ್ಳುವುದರಿಂದ ಅವುಗಳಿಂದ ಪಡೆಯುವ ಪ್ರತಿಫಲದ ಬಗ್ಗೆ ಆತಂಕವಿರುವುದು ಸಹಜ. ಇದು ಹೀಗೆ ಮೊದಲು ಪ್ರಾರಂಭವಾದದ್ದು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ. 1952ರಲ್ಲಿ ಡ್ಯೂಪಿಟ್ ಎಂಬ ಅರ್ಥಶಾಸ್ತ್ರಜ್ಞರು "ಸಾರ್ವಜನಿಕ ಉಪಯುಕ್ತ ಕೆಲಸಗಳ ಮೌಲ್ಯಮಾಪನ"ಎಂಬ ಲೇಖನವನ್ನು ಪ್ರಕಟಿಸಿದರು. ಮೊದಲು ಅದನ್ನು "ನೀರು ಸರಬರಾಜು" ಕ್ಷೇತ್ರಕ್ಕೆ ಅಳವಡಿಸಿ ಆ ಕೆಲಸದ ವೆಚ್ಚ-ಪ್ರತಿಫಲ ವಿಶ್ಲೇಷಣೆಯನ್ನು ಮಾಡಿದರು. ಅದರ ಉತ್ತಮ ಪರಿಣಾಮದ ಫಲವಾಗಿ ಈ ಬಗೆಯ ವಿಶ್ಲೇಷಣೆಯನ್ನು ಇತರ ಕ್ಷೇತ್ರಗಳಿಗೂ ವಿಸ್ತರಿಸಲಾಯಿತು. ಉದಾಹರಣೆಗೆ ಸಾರಿಗೆ ಮತ್ತು ಸಂಪರ್ಕ, ರಕ್ಷಣೆ, ನಗರಾಭಿವೃದ್ಧಿ, ಆರೋಗ್ಯ, ಶಿಕ್ಷಣ, ಇತ್ಯಾದಿ.

ವೆಚ್ಚ-ಪ್ರತಿಫಲ ವಿಶ್ಲೇಷಣೆಯಿಂದ ತೀರ್ಮಾನ ಕೈಗೊಳ್ಳಲು ಸಹಾಯಮಾಡುವ ಅಂಶಗಳೆಂದರೆ ಅದರಿಂದ ದೊರಕುವ ಅಂಕಿ-ಅಂಶಗಳು, ಪ್ರತಿಫಲದ ಮಾಹಿತಿ ಇತ್ಯಾದಿ.

ಯಾವುದೇ ಯೋಜನೆಗಾಗಿ ಸಾಮಾನ್ಯವಾಗಿ ಎರಡು ವಿಧವಾದ ವೆಚ್ಚಗಳನ್ನು ಮಾಡಲಾಗುತ್ತದೆ. ಅವುಗಳೆಂದರೆ,

1. ನೇರ ವೆಚ್ಚ. ಇದನ್ನು ಪ್ರಾಥಮಿಕ ವೆಚ್ಚ ಎನ್ನಬಹುದು.

2. ಪರೋಕ್ಷ ವೆಚ್ಚ. ಇದನ್ನು ಆನುಷಂಗಿಕ ವೆಚ್ಚ ಎನ್ನಬಹುದು.

ನೇರ ವೆಚ್ಚವೆಂದರೆ ವ್ಯಕ್ತಿಗಳು, ಸಂಸ್ಥೆಗಳು ಮತ್ತು ಸರ್ಕಾರ ಯೋಜನೆಗಾಗಿ ನೇರವಾಗಿ ವೆಚ್ಚಮಾಡುವ ಹಣ. ಈ ವೆಚ್ಚ ಉತ್ಪಾದಕವಾಗಿರಬಹುದು ಅಥವಾ ಉತ್ಪಾದಕವಾಗಿಲ್ಲದೇ ಇರಬಹುದು.

ಪರೋಕ್ಷ ವೆಚ್ಚಗಳು ಎಂದರೆ ವ್ಯಕ್ತಿ ಹಾಗೂ ಸಮಾಜಗಳು ತ್ಯಾಗಮಾಡಿದ ವೆಚ್ಚ. ಮೊದಲನೆಯ ವೆಚ್ಚ (ನೇರ ವೆಚ್ಚ) ವಾಸ್ತವ ವೆಚ್ಚವಾಗಿರುತ್ತದೆ. ಆದ್ದರಿಂದ ಅದನ್ನು ಗುರ್ತಿಸಬಹುದಾದ ವೆಚ್ಚ (ಟ್ಯಾಂಜಿಬಲ್) ಎನ್ನುವರು. ಎರಡನೆಯದು ಕಣ್ಣಿಗೆ ಕಾಣುವುದಿಲ್ಲ. ಅದು ಪರೋಕ್ಷ ವೆಚ್ಚ. ಅದು ಅವಕಾಶ ವೆಚ್ಚವಾಗಿರುವುದರಿಂದ ಅದನ್ನು ಗುರ್ತಿಸಲು ಸಾಧ್ಯವಾಗದ (ಇನ್ ಟ್ಯಾಂಜಿಬಲ್) ವೆಚ್ಚ ಎನ್ನಬಹುದು.

ಅವಕಾಶ ವೆಚ್ಚ ಎಂದರೆ ಒಂದು ಕೆಲಸವನ್ನು ಮಾಡಲು (ಇಲ್ಲಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುವುದು) ಮತ್ತೊಂದು ಕೆಲಸವನ್ನು ಮಾಡಿ ಸಂಪಾದಿಸುವುದನ್ನು ತ್ಯಾಗಮಾಡಿದಾಗ ಕಳೆದುಕೊಳ್ಳುವ ಹಣದ ಮೌಲ್ಯ. ಉದಾಹರಣೆಗೆ: ಒಬ್ಬ ವಿದ್ಯಾರ್ಥಿಯು ತನ್ನ ಹೊಲದಲ್ಲಿ ಅಥವಾ ಮತ್ತೆಲ್ಲಾದರೂ ಕೆಲಸ ಮಾಡಿದರೆ ದಿನಕ್ಕೆ ರೂ. 100 ಸಂಪಾದಿಸಬಹುದಾಗಿತ್ತು ಎಂದಿಟ್ಟುಕೊಳ್ಳೋಣ. ಆದರೆ ಅವನು ಅದನ್ನು ಮಾಡದೆ ಶಾಲೆಗೆ ಹಾಜರಾಗುತ್ತಿದ್ದರೆ ಅವನು ಸಂಪಾದನೆ ಮಾಡದೆ ತ್ಯಾಗಮಾಡಿದ ಪ್ರತಿ ದಿನದ ರೂ. 100/- ಇದನ್ನು ಅವನು ಶಿಕ್ಷಣ ಪಡೆಯಲು ಮಾಡಿದ ವೆಚ್ಚವೆಂದೇ ಪರಿಗಣಿಸಲಾಗುತ್ತದೆ. ಇದೆ ಅವಕಾಶ ವೆಚ್ಚ.

ಈ ಎಲ್ಲ ವೆಚ್ಚಗಳನ್ನೂ ಹಣದ ರೂಪದಲ್ಲಿ ವ್ಯಕ್ತಪಡಿಸುವುದು ಕಷ್ಟ ಸಾಧ್ಯ. ಇದೇ ಇಲ್ಲಿನ ಸಮಸ್ಯೆ. ಆದ್ದರಿಂದ ಇಂತಹ ವಿಶ್ಲೇಷಣೆಗಳಲ್ಲಿ ಮರೆಮಾಚಿದ ಬೆಲೆಗಳನ್ನು (ಶಾಡೋ ಪ್ರೈಜ್) ಬಳಸಲಾಗುವುದು. ಮರೆಮಾಚಿದ ಬೆಲೆ ಎಂದರೆ ಒಂದೇ ಬಗೆಯ ವಸ್ತುಗಳ ಬೆಲೆಗಳ ಸಂಬಂಧವನ್ನು ನಮ್ಮ ದೇಶದ ಮಾರುಕಟ್ಟೆಯಲ್ಲಿ ವೀಕ್ಷಿಸುವುದರ ಮೂಲಕ ಅಥವಾ ಅದೇ ಬಗೆಯ ವಸ್ತುಗಳಿಗೆ ವಿದೇಶಿ ಮಾರುಕಟ್ಟೆಯಲ್ಲಿರುವ ಬೆಲೆಯನ್ನು ಹೋಲಿಸುವ ಮೂಲಕ ಕಂಡುಹಿಡಿಯುವ ಬೆಲೆಯನ್ನು ಮರೆಮಾಚಿದ ಬೆಲೆ ಎನ್ನಬಹುದು.

**ಶಿಕ್ಷಣಕ್ಕಾಗಿ ಮಾಡುವ ವೆಚ್ಚಗಳಲ್ಲಿ ಮುಖ್ಯವಾಗಿ ಎರಡು ವಿಧಗಳು**

1. ಖಾಸಗಿ ವೆಚ್ಚಗಳು

2. ಸಾರ್ವಜನಿಕ ವೆಚ್ಚಗಳು

ಒಬ್ಬ ವ್ಯಕ್ತಿಯು ತಾನು ಪಡೆಯುವ ಶಿಕ್ಷಣಕ್ಕಾಗಿ ತಾನೇ ಮಾಡಬೇಕಾದ ಹಲವು ವೆಚ್ಚಗಳನ್ನು ಖಾಸಗಿ ವೆಚ್ಚ ಎನ್ನಬಹುದು. ಆದರೆ ಇದೇ ಉದ್ದೇಶಕ್ಕಾಗಿ ಸಮಾಜವು ಅಥವಾ ಸರ್ಕಾರವು ಮಾಡುವ ವೆಚ್ಚವು ಸಾರ್ವಜನಿಕ ವೆಚ್ಚ ಎನಿಸಿಕೊಳ್ಳುತ್ತದೆ.

ಅದೇ ರೀತಿ ಪ್ರತಿಫಲ ದರದ(ಪ್ರಮಾಣದ) ವಿಶ್ಲೇಷಣೆ ಮಾಡುವಾಗ, 1. ಖಾಸಗಿ ಪ್ರತಿಫಲ ದರ, 2. ಸಾಮಾಜಿಕ ಪ್ರತಿಫಲ ದರ, 3. ಸೀಮಾಂತ ಪ್ರತಿಫಲ ದರ, ಹಾಗೂ 4 ರಫ್ತು ಪ್ರತಿಫಲ ದರಗಳನ್ನು ಲೆಕ್ಕಾಚಾರ ಮಾಡಬೇಕಾಗುತ್ತದೆ.

ಉದಾಹರಣೆಗೆ : ಒಬ್ಬ ವ್ಯಕ್ತಿಯ 20,000 ರೂ.ಗಳಿಗೆ ಒಂದು ಯಂತ್ರವನ್ನು ಖರೀದಿಸಿದ್ದಾನೆ ಎಂದಿಟ್ಟುಕೊಳ್ಳೋಣ. ಆ ಯಂತ್ರ ಸುಮಾರು 20 ವರ್ಷ ಬಾಳಿಕೆ ಬರಬಹುದು. ಅದರಿಂದ ಪ್ರತಿವರ್ಷ 4,000 ರೂಪಾಯಿ ಆದಾಯ ಬರುತ್ತಿದೆ ಎಂದರೆ, ಆ ಯಂತ್ರದಲ್ಲಿ ತೊಡಗಿಸಲಾದ 20,000 ರೂಪಾಯಿ ಬಂಡವಾಳಕ್ಕೆ ಪ್ರತಿಫಲ ಶೇ. 20ಕ್ಕೆ ಸಮ. ಇದೇ ರೀತಿ ಒಬ್ಬ ವಿದ್ಯಾರ್ಥಿಯು ಒಂದು ವಿಶ್ವವಿದ್ಯಾನಿಲಯದ ಪದವಿ ಪಡೆಯಲು ನಾಲ್ಕು ವರ್ಷಗಳಲ್ಲಿ ಎಷ್ಟು ಖರ್ಚು ಮಾಡುವನು (ಖಾಸಗಿ ಹಾಗೂ ಸಾರ್ವಜನಿಕ ವೆಚ್ಚಗಳು ಸೇರಿ) ಮತ್ತು ಅವನು ಅದರಿಂದ ಪಡೆಯುವ ಪ್ರತಿಫಲದ ದರ ಎಷ್ಟು ಎಂಬುದನ್ನು ಅಂದಾಜು ಮಾಡಬಹುದು. ಈ ಪ್ರತಿಫಲದಲ್ಲಿ ಕೇವಲ ಖಾಸಗಿ ಪ್ರತಿಫಲವಲ್ಲದೆ, ಸಾಮಾಜಿಕ ಪ್ರತಿಫಲ ದರ ಮುಂತಾದವುಗಳೆಲ್ಲವನ್ನೂ ಅಂದಾಜು ಮಾಡಬೇಕಾಗುವುದು. ಇದಕ್ಕಾಗಿ

Digitised by Bharatavani, CIIL

ಅವನು ತನ್ನ ಜೀವಿತಾವಧಿಯ ಎಷ್ಟು ಕಾಲ ಎಷ್ಟು ಸಂಪಾದಿಸುವನೆಂಬುದನ್ನು ಅಂದಾಜು ಮಾಡಬೇಕಾಗುವುದು.

ಅಂದಾಜು ಮಾಡುವ ಕಾರ್ಯ ವಿಧಾನಕ್ಕೆ ಈ ಅಂಶಗಳು ಮುಖ್ಯವಾದವುಗಳು–

1. ಎಷ್ಟು ವರ್ಷಗಳ ಕಾಲ ಪ್ರತಿಫಲವನ್ನು ಪಡೆಯಲಾಗುತ್ತದೆ.
2. ಅಧ್ಯಯನದ ಸಮಯದಲ್ಲಿ ಏನಾದರೂ ಕೆಲಸವನ್ನು ಮಾಡಿ ಸಂಪಾದನೆ ಮಾಡುತ್ತಿದ್ದರೆ ಆ ಸಂಪಾದನೆಯನ್ನು ಅಧ್ಯಯನಕ್ಕಾಗಿ ಮಾಡಿದ ವೆಚ್ಚದಲ್ಲಿ ಕಳೆಯಬೇಕಾಗುತ್ತದೆ.
3. ಸಂಪಾದನೆ ಮಾಡಲು ಶಿಕ್ಷಣ ಒಂದೇ ಅಂಶ ಕಾರಣವಲ್ಲ. ಸಾಮಾನ್ಯ ತಿಳುವಳಿಕೆ, ಸಾಮಾಜಿಕ ಪರಿಸರ ಮುಂತಾದ ಹಲವಾರು ಅಂಶಗಳನ್ನೂ ಪರಿಗಣಿಸಬೇಕಾಗುತ್ತದೆ.

ವೆಚ್ಚ–ಪ್ರತಿಫಲ ವಿಶ್ಲೇಷಣೆಯನ್ನು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಹಾಗೂ ಇತರ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ.

–ಹೆಚ್.ಎಸ್. ರಾ

## ಶಿಕ್ಷಣದಲ್ಲಿ ಸಂಪನ್ಮೂಲಗಳ ಕ್ರೋಡೀಕರಣ

ಮಾನವ ಸಂಪನ್ಮೂಲಗಳ ಕ್ರೋಡೀಕರಣದ ಪರಿಕಲ್ಪನೆ ಮಾನವ ಸಂಪನ್ಮೂಲ ನಿರ್ವಹಣೆಗೆ ಬಹಳ ಮಹತ್ವದ್ದಾಗಿದೆ. ಶ್ರೇಷ್ಠ ವ್ಯಕ್ತಿ ದಕ್ಷತೆಯಿಂದ ಶ್ರೇಷ್ಠ ಸಾಧನ ಸಲಕರಣೆಗಳನ್ನು ಒದಗಿಸಿಕೊಡುತ್ತಾನೆ. ಈ ಮಾನವ ಸಂಪನ್ಮೂಲಗಳಲ್ಲಿ ಶಾಲೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಪಾಲಕರು ಮತ್ತು ಸಮುದಾಯದ ಮಾನವ ಸಂಪನ್ಮೂಲಗಳು ಬರುವುವು. ಇವುಗಳ ಪರಸ್ಪರ ಸಹಕಾರದಿಂದ ಶಾಲೆಯು ಆದರ್ಶ ಶಾಲೆಯಾಗುವುದು. ಆದುದರಿಂದ ಮಾನವ ಸಂಪನ್ಮೂಲ ಕ್ರೋಡೀಕರಣ ಮಹತ್ವದ್ದಾಗಿದೆ.

### ಭೌತಿಕ ಸಂಪನ್ಮೂಲಗಳ ಕ್ರೋಡೀಕರಣ

ಮಾನವ ಸಂಪನ್ಮೂಲಗಳು ಹಾಗೂ ಭೌತಿಕ ಸಂಪನ್ಮೂಲಗಳು ಶೈಕ್ಷಣಿಕ ನಿರ್ವಹಣೆಯ ರಥದ ಎರಡು ಚಕ್ರಗಳಿದ್ದಂತೆ. ತತ್ವಗಳು, ವಿಚಾರಗಳು ಮತ್ತು ನೀತಿಗಳು ಈ ರಥ ಓಡಲು ಸೂಕ್ತ ಪಥವಿದ್ದಂತೆ. ಸಾಧನ–ಸಲಕರಣೆಗಳಿಲ್ಲದೇ ಕೇವಲ ವ್ಯಕ್ತಿಗಳು ಏನನ್ನೂ ಸಾಧಿಸಲಾರರು. ಯಾವುದೇ ಶಾಲೆ ಶೂನ್ಯ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸಲಾರದು. ಸಾಧನ ಸಲಕರಣೆಗಳು ದೇಹಕ್ಕೆ ಆತ್ಮವಿದ್ದಂತೆ ಕಾರ್ಖಾನೆಗೆ ಯಂತ್ರವಿದ್ದಂತೆ ಹಾಗೂ ಉತ್ಪಾದನೆಗೆ ಭೂಮಿಯಿದ್ದಂತೆ ಕೆಟ್ಟ ಕೆಲಸಗಾರ ತನ್ನ ಉಪಕರಣಗಳನ್ನು ದೂಷಿಸುತ್ತಾನೆ. ಆದಾಗ್ಯೂ ಒಂದು ಅತ್ಯುತ್ತಮ ಕಾರ್ಯವು ಅತ್ಯುತ್ತಮ ಉಪಕರಣಗಳಿಂದ ಮಾತ್ರ ನೆರವೇರಬಲ್ಲದು. ಅತ್ಯಂತ ಸಮರ್ಥ ಆಡಳಿತಗಾರ ಅಥವಾ ಮುಖ್ಯೋಪಾಧ್ಯಾಯ ಸಹ ಸರಿಯಾದ ಉಪಕರಣಗಳಿಲ್ಲದೇ ಮುಗ್ಗರಿಸಬಲ್ಲ. ಕಲಿಸುವ–ಕಲಿಯುವ ಕಾರ್ಯ ಯಶಸ್ವಿಯಾಗಲು ಕುರ್ಚಿ, ಟೇಬಲ್ ಮುಂತಾದವು ಮುಖ್ಯ. ಆದ್ದರಿಂದ ಅಗತ್ಯ ಸಾಧನ–ಸಲಕರಣೆಗಳನ್ನು ಪೂರೈಸುವದು, ಅವುಗಳನ್ನು ಸಂಘಟಿಸುವುದು ಮತ್ತು ಈ ಮೂಲಕ ಪೂರ್ವ–ನಿರ್ಧಾರಿತ ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಲು ಪ್ರಯತ್ನಿಸುವುದು ಶಾಲಾ ನಿರ್ವಹಣೆಯ ಪ್ರಮುಖ ಜವಾಬ್ದಾರಿಯಾಗಿದೆ.

ಶಾಲೆ ಒಂದು ಅದ್ವಿತೀಯವಾದ ಸಾಮಾಜಿಕ ಸಂಸ್ಥೆ. ಇದು ಹೊರಗಿನ ಸಮಾಜದ ಒಂದು ಲಘುರೂಪ. ಸಮಾಜವು ಮಕ್ಕಳ ಸರ್ವತೋಮುಖವಾದ ವಿಕಾಸ ಸಾಧಿಸಲು ಸಂಘಟಿಸಿರುವ ಉದಾತ್ತ ಸಂಸ್ಥೆ. ಶಾಲೆ ಸಮಾಜದೊಂದಿಗೆ ಅನ್ಯೋನ್ಯವಾದ ಸಂಬಂಧವನ್ನು ಹೊಂದಿದೆ. ಆದ ಕಾರಣ ಶಾಲೆಗೆ ಸಮುದಾಯದ ಕೇಂದ್ರ ಎಂದು ಕರೆಯುವರು. ಮಕ್ಕಳಿಗೆ ಔಪಚಾರಿಕ ರೀತಿಯಲ್ಲಿ ವಿದ್ಯಾದಾನ ಮಾಡುವ ಮಂದಿರವಿದು. ಅವರು ಈ ಮಂದಿರದಲ್ಲಿ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ನಿರತರಾಗಿದ್ದು. ದಿನದ ಬಹು ಭಾಗದ ಸಮಯವನ್ನು ಕಳೆಯುವರು. ಆದುದರಿಂದ ಅವರಿಗೆ ಚೇತೋಹಾರಿ. ಉಲ್ಲಾಸದಾಯಕ ಹಾಗೂ ಉತ್ಸಾಹದಾಯಕ ಪರಿಸರವನ್ನು ಹಾಗೂ ವಾತಾವರಣವನ್ನು ಒದಗಿಸುವುದು ಶಾಲೆಯ ಪ್ರಮುಖವಾದ ಕರ್ತವ್ಯ. ಈ ಆದರ್ಶ ಧ್ಯೇಯವನ್ನು ಸಾಧಿಸುವಲ್ಲಿ ಶಾಲೆಯು ಕೆಲವೊಂದು ಅಗತ್ಯವಾದ ಸೌಕರ್ಯಗಳನ್ನು ಹೊಂದಿರಬೇಕಾಗಿರುವುದು. ಆದ್ದರಿಂದ ಭೌತಿಕ ಸಂಪನ್ಮೂಲಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಹಾಯಧನದಿಂದ ಮತ್ತು ಸಮಾಜದಲ್ಲಿಯ ದಾನಿಗಳಿಂದ ಹಾಗೂ ಸರ್ಕಾರೇತರ ಸಂಸ್ಥೆಗಳಿಂದ ಕ್ರೋಡೀಕರಿಸಬಹುದು.

ಶಿಕ್ಷಣ ವ್ಯವಸ್ಥೆಯಲ್ಲಿ ಹಣಕಾಸಿನ ಸಂಪನ್ಮೂಲಗಳ ಕ್ರೋಡೀಕರಣ ಪ್ರಮುಖವಾದ ಅಂಶವಾಗಿರುತ್ತದೆ. ಶೈಕ್ಷಣಿಕ ಆಡಳಿತದಲ್ಲಿ ಹಣಕಾಸಿನ ಪಾತ್ರ ಮಹತ್ವಪೂರ್ಣವಾದದ್ದು. ಇದು ಸರಿಯಾಗಿದ್ದರೆ ಉಳಿದೆಲ್ಲ ಸರಿಯಿದ್ದಂತೆಯೇ. ಮನುಷ್ಯನಿಗೆ ಪಂಚೇಂದ್ರಿಯಗಳು ಎಷ್ಟು ಪ್ರಮುಖವೋ ಹಾಗೆ ಶೈಕ್ಷಣಿಕ ನಿರ್ವಹಣೆಯ ಕಾರ್ಯದಲ್ಲಿ ಹಣಕಾಸು ಅಷ್ಟೇ ಪ್ರಮುಖ ಅಂಗವಾಗಿ ಕಾರ್ಯ ನಿರ್ವಹಿಸುತ್ತದೆ. ಹಣಕಾಸಿನ ಮೇಲೆ ಶೈಕ್ಷಣಿಕ ಆಡಳಿತ ಅವಲಂಬಿಸಿರುತ್ತದೆ. ಶಿಕ್ಷಣ ಕ್ಷೇತ್ರಕ್ಕೆ ಬರಬೇಕಾದ ಆದಾಯದ ಮೂಲಗಳು, ಖರ್ಚಿನ ಬಾಬುಗಳು ಪರಸ್ಪರ ಸಮನಾಗಿರುವುದು ಅಗತ್ಯವಾಗಿರುತ್ತದೆ. ಶೈಕ್ಷಣಿಕ ಆಡಳಿತದ ಶಿಸ್ತು ಹಣಕಾಸಿನ ನಿರ್ವಹಣೆಯ ಸಂಸ್ಥೆಯ ಮೇಲೆ ಅವಲಂಬಿಸಿದೆ. ಕಾರಣ ಮುಖ್ಯಸ್ಥರು ಪ್ರಾಮಾಣಿಕರಾಗಿದ್ದು ಸರಿಯಾದ ಲೆಕ್ಕವನ್ನು ಸರಕಾರಕ್ಕೆ ಆಡಳಿತಮಂಡಳಿಗೆ ತೋರಿಸುವುದು ಅಗತ್ಯವಾಗಿರುತ್ತದೆ. ಹಣಕಾಸು ನಿರ್ವಹಣೆಯಲ್ಲಿ ಪ್ರಮುಖವಾಗಿ ಲೆಕ್ಕದ ಪುಸ್ತಕಗಳು ಬರುತ್ತವೆ. ಅವುಗಳ ಬಗ್ಗೆ ಶೈಕ್ಷಣಿಕ ಮುಖ್ಯಸ್ಥರು ಗಮನಹರಿಸುವುದು ಅಗತ್ಯವಾಗಿರುತ್ತದೆ. ಸಾದಿಲ್ವಾರ್ ರಿಜಿಸ್ಟರ್, ರೋಜ, ಕಿರ್ದಿ, ಬಿಲ್ ಪುಸ್ತಕ, ಸರಕಾರಿ ಅನುದಾನ ಕಡತ ಮುಂತಾದವು ಪ್ರಾಮುಖ್ಯವನ್ನು ಹೊಂದಿವೆ.

ಹಣಕಾಸು ನಿರ್ವಹಣೆ ಶೈಕ್ಷಣಿಕ ಆಡಳಿತದ ಹೃದಯವಿದ್ದಂತೆ. ಸರಕಾರದಿಂದ, ಸಮುದಾಯದ ದಾನಿಗಳಿಂದ ಬಂದ ಹಣ ಸರಿಯಾದ ರೀತಿಯಲ್ಲಿ ಬಳಕೆಯಾಗಬೇಕು. ಲೆಕ್ಕಕ್ಕೆ ಸೂಕ್ತ ರಸೀದಿ ಇಟ್ಟು ಲೆಕ್ಕ ಪರಿಶೀಲನೆ ಮಾಡಿಸಿಕೊಳ್ಳಬೇಕು.

ಹಣಕಾಸಿನ ನಿರ್ವಹಣೆಯಲ್ಲಿ ಈ ಮೇಲಿನ ದಾಖಲೆಗಳೇ ಅಲ್ಲದೆ ವೇತನ ಪುಸ್ತಕ, ಶುಲ್ಕ ಸಂಗ್ರಹ ಪುಸ್ತಕ, ಸರಕಾರಿ ಅನುದಾನ ಕಡತ, ಶಿಷ್ಯವೇತನ, ದಾನದ ಪುಸ್ತಕ, ವಿದ್ಯಾರ್ಥಿ ನಿಧಿ ಪುಸ್ತಕ, ಆಯವ್ಯಯ ತೋರಿಸುವ ಪುಸ್ತಕ, ಪ್ರಾವಿಡೆಂಟ್ ಫಂಡ್ ಪುಸ್ತಕ ಮುಂತಾದವುಗಳು ಹಣಕಾಸಿನ ನಿರ್ವಹಣೆಯಲ್ಲಿ ಬರುವ ಪ್ರಮುಖ ದಾಖಲೆಗಳಾಗಿವೆ.

**ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳಿಂದ ಸಿಗುವ ಅನುದಾನಗಳು**

- ವೇತನ ಅನುದಾನ–ಸರಕಾರದ ನಿಯಮಾವಳಿಗಳಿಗೆ ಅನುಗುಣವಾಗಿ ನಿರ್ದೇಶಕರ ಒಪ್ಪಿಗೆ ಪಡೆದು ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಯ ನೇಮಕ ಮಾಡಿದರೆ ಸರಕಾರ ಅನುದಾನ ಕೊಡುತ್ತದೆ.

- ಆಕಸ್ಮಿಕ ಪ್ರಸಂಗಗಳ ಅನುದಾನ : ಸಾಮಾನ್ಯ ವಿಷಯಗಳಿಗೆ, ಹಲವು ಬಗೆಯ ಬಾಬತ್ತುಗಳಿಗೆ, ಗೃಹವಿಜ್ಞಾನ, ಇತರ ವಸ್ತುಗಳಿಗೆ, ಅನುದಾನ ಪಡೆಯಬಹುದು.

Digitised by Bharatavani, CIIL

• ಶಾಲೆಯ ಅಥವಾ ಸಂಸ್ಥೆಯ ಕಟ್ಟಡದ ಅನುದಾನ: ಶಾಲಾ ಅಥವಾ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಸಂಸ್ಥೆ ತನ್ನದೇ ಆದ ನಿವೇಶನ ಹೊಂದಿರಬೇಕು. ಶೈಕ್ಷಣಿಕ ಆಡಳಿತ ನಿರ್ವಹಣಾ ಕಮಿಟಿಯು ಶಾಲೆ ಅಥವಾ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಶಿಕ್ಷಣ ವಿಭಾಗದಿಂದ ಅನುಮತಿ ಪಡೆದ ನೀಲನಕ್ಷೆಗೆ ಅನುಗುಣವಾಗಿ ಸದರಿ ಕಟ್ಟಡವನ್ನು ನಿರ್ಮಿಸಬೇಕು. ಇದಕ್ಕೆ ಅನುದಾನವನ್ನು ನಾಲ್ಕು ಹಂತಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ.

• ಬಾಡಿಗೆಯ ಕಟ್ಟಡಕ್ಕೆ ಅನುದಾನ– ಇದಕ್ಕೆ ತಪಾಸಣಾಧಿಕಾರಿಗಳ ಅನುಮತಿ ಪತ್ರ ಬೇಕಾಗುತ್ತದೆ.

• ಶೈಕ್ಷಣಿಕ ಪ್ರವಾಸ ಅನುದಾನ– ಈ ರಿಯಾಯಿತಿಗಾಗಿ ಶಿಕ್ಷಣ ವಿಭಾಗದಿಂದ ಮೊದಲೇ ಒಪ್ಪಿಗೆ ಪಡೆದಿರಬೇಕು.

• ಶೈಕ್ಷಣಿಕ ಉಪಕರಣಗಳ ಅನುದಾನ– ಶೈಕ್ಷಣಿಕ ಉಪಕರಣಗಳನ್ನು ಕೊಳ್ಳಲು ಅನ್ವಯಿಸುವ ನಿಯಮಾವಳಿಗಳು ಇವುಗಳಿಗೆ ಅನ್ವಯಿಸುತ್ತವೆ. ಅನುದಾನವನ್ನು ರಾಜ್ಯ ಸರಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಶಿಫಾರಸ್ಸಿಗೆ ಅನುಗುಣವಾಗಿ ನೀಡುತ್ತದೆ.

ಶೈಕ್ಷಣಿಕ ಆಯವ್ಯಯ ತಯಾರಿಸುವುದು ಶೈಕ್ಷಣಿಕ ಆಡಳಿತಕ್ಕೆ ಸಂಬಂಧಿಸಿದ ಹಣಕಾಸಿನ ವ್ಯವಸ್ಥೆಯು ಒಂದು ಮಹತ್ವದ ಅಂಶವಾಗಿದೆ. ಖಾಸಗಿ ಶಿಕ್ಷಣ ವ್ಯವಸ್ಥೆಯ ಉತ್ತಮವಾದ ಆಡಳಿತಕ್ಕೆ ಭದ್ರವಾದ ಹಣಕಾಸಿನ ಸ್ಥಿತಿಯು ಅಗತ್ಯವಾಗಿದೆ. ಸಾಮಾನ್ಯವಾಗಿ ಅವುಗಳ ಹಣಕಾಸಿನ ಆದಾಯ ಅಲ್ಪಪ್ರಮಾಣದ್ದಾಗಿರುತ್ತದೆ. ಆದ್ದರಿಂದ ಆಡಳಿತಗಾರರು ಶಿಕ್ಷಣಕ್ಕೆ ಸಂಬಂಧಿಸಿದ ಹಣಕಾಸಿನ ಉತ್ಪತ್ತಿ ಮೂಲಗಳಿಗೆ ಚಾಲನೆ ನೀಡಬೇಕು. ಆಯವ್ಯಯದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಂಡು ವಾರ್ಷಿಕ ಆಯವ್ಯಯದ ಸಮತೋಲನವನ್ನು ಕಾಪಾಡಿಕೊಂಡು ಬರಲು ಪ್ರಯತ್ನಿಸಬೇಕು. ಆಯವ್ಯಯದ ಪಟ್ಟಿಯನ್ನು ತಯಾರಿಸುವುದರಿಂದ ಈ ಕೆಳಗಿನ ಲಾಭಗಳನ್ನು ಪಡೆಯಬಹುದಾಗಿದೆ.

i) ಅನಗತ್ಯವಾದ ಖರ್ಚುಗಳನ್ನು ಕಡಿಮೆ ಮಾಡಬಹುದು ಹಾಗೂ ತಡೆಯಬಹುದು.

ii) ಹಣಕಾಸಿನ ಕೊರತೆಯನ್ನು ನೀಗಿಸಬಹುದು.

iii) ಹಣಕಾಸಿನ ಕೊರತೆಯನ್ನು ಕಂಡುಹಿಡಿಯಲು ಸಾಧ್ಯ.

iv) ಹಣಕಾಸಿನ ಉತ್ಪನ್ನದ ಬಾಬತ್ತುಗಳನ್ನು ಕಂಡು ಹಿಡಿಯಲು ಹಾಗೂ ಅವುಗಳಿಗೆ ಚಾಲನೆ ನೀಡಲು ಸಹಾಯವಾಗುತ್ತದೆ.

v) ಪ್ರತಿಯೊಂದು ಖರ್ಚಿನ ಬಾಬತ್ತಿಗೆ ಬೇಕಾಗುವ ಹಣವನ್ನು ಒದಗಿಸಲು ಸಾಧ್ಯವಾಗುತ್ತದೆ.

vi) ಖರ್ಚು–ವೆಚ್ಚ (ಆಯವ್ಯಯ) ಪಟ್ಟಿ (Balance Sheet)ಯನ್ನು ಸಿದ್ಧಪಡಿಸಲು ಆಧಾರ ದೊರೆಯುತ್ತದೆ.

vii) ಮಾಸಿಕ ಹಾಗೂ ವಾರ್ಷಿಕ ಆಯವ್ಯಯ ಪಟ್ಟಿಯನ್ನು ಅಣಿಗೊಳಿಸಬಹುದು.

ಈ ಮೇಲಿನ ಎಲ್ಲಾ ಅಂಶಗಳ ವ್ಯವಸ್ಥೆಗೆ ಆಯವ್ಯಯ ಅಗತ್ಯವಾಗಿರುವುದರಿಂದ ಶೈಕ್ಷಣಿಕ ಆಯವ್ಯಯ ತಯಾರಿಸುವುದು ಅಗತ್ಯವಾಗಿದೆ. ಯೋಜಿಸುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಸುವ್ಯವಸ್ಥಿತವಾಗಿ ಚಾಲನೆಯಾಗಬೇಕಾದರೆ ಯೋಜನೆ ಬಹಳ ಮಹತ್ವವನ್ನು ಹೊಂದಿದೆ. ಮೊದಲೇ ಯೋಜನೆಯನ್ನು ತಯಾರಿಸದಿದ್ದರೆ ಯಾವ ಶಿಕ್ಷಣ ಸಂಸ್ಥೆಯೂ ಸರಿಯಾಗಿ ನಡೆಯಲಾರದು. ವ್ಯವಸ್ಥಾಪಕರು ಇಡೀ ವರ್ಷದುದ್ದಕ್ಕೂ ಯೋಜನೆಯನ್ನು ಮಾಡಬೇಕಾಗುತ್ತದೆ. ಶಿಕ್ಷಣ ಸಂಸ್ಥೆಯು ಪ್ರಾರಂಭವಾಗುವದಕ್ಕಿಂತಲೂ ಮೊದಲು ಸಂಸ್ಥೆಯು ಪ್ರಾರಂಭವಾದ ಮೊದಲ ವಾರದಲ್ಲಿ ಇಡೀ ವರ್ಷದಲ್ಲಿ ಹಾಗೂ ವರ್ಷದ ಕೊನೆಯ ಭಾಗದಲ್ಲಿ ಅವರು ಯೋಜನೆಗಳನ್ನು ತಯಾರಿಸಬೇಕಾಗುತ್ತದೆ. ಮುಖ್ಯಸ್ಥರು ಯೋಜನೆಯನ್ನು ತಯಾರಿಸುವಾಗ ಸರ್ವಾಧಿಕಾರಿಯಂತೆ ವರ್ತಿಸದೆ ತಮ್ಮ ಸಿಬ್ಬಂದಿಗಳ, ಪಾಲಕರ, ವಿದ್ಯಾರ್ಥಿಗಳ ಸಹಾಯವನ್ನು ಪಡೆಯುವುದು ಸೂಕ್ತವಾದುದು. ಶಿಕ್ಷಕರ ಸಭೆಗಳನ್ನು ಕರೆದು ಅವರೊಡನೆ ಶೈಕ್ಷಣಿಕ ಯೋಜನೆಗಳನ್ನು ಚರ್ಚಿಸಬೇಕಾಗುತ್ತದೆ.

ಶೈಕ್ಷಣಿಕ ಅವಧಿ ಪ್ರಾರಂಭವಾಗುವುದಕ್ಕಿಂತ ಮೊದಲೇ ಯೋಜನೆಯನ್ನು ತಯಾರಿಸುವುದು ಶಿಕ್ಷಣ ಸಂಸ್ಥೆಯ ಪ್ರಗತಿಯ ದೃಷ್ಟಿಯಿಂದ ಉತ್ತಮವಾದುದಾಗಿದೆ. ಶೈಕ್ಷಣಿಕ ಅವಧಿ ಪ್ರಾರಂಭವಾಗುವುದಕ್ಕಿಂತಲೂ ಮೊದಲೇ ಯೋಜನೆ ತಯಾರಿಸದಿದ್ದರೆ ಏನಾಗುವುದು ಎನ್ನುವುದನ್ನು ಜೇಕಬ್ಸನ್‌ರವರು ಬಹಳ ಮನೋಜ್ಞವಾಗಿ ಈ ಕೆಳಗಿನಂತೆ ವರ್ಣಿಸಿದ್ದಾರೆ.

"ವರ್ಗಗಳಲ್ಲಿ ವಿದ್ಯಾರ್ಥಿಗಳು ಇಲ್ಲದಂತಾಗಬಹುದು. ಉಪಕರಣಗಳ ಕೊರತೆ ಉಂಟಾಗಬಹುದು. ಸಾಕಷ್ಟು ಪುಸ್ತಕಗಳಿಲ್ಲದಿರಬಹುದು. ಎಲ್ಲ ಕಡೆಗೆ ಗೊಂದಲಮಯ ವಾತಾವರಣ ಉಂಟಾಗಬಹುದು." ಆದ್ದರಿಂದ ಶೈಕ್ಷಣಿಕ ಆಡಳಿತಗಾರರು ಶಾಲೆ ಪ್ರಾರಂಭದ ಪೂರ್ವದಲ್ಲೇ ಯೋಜನೆಗಳನ್ನು ತಯಾರಿಸಬೇಕು ಹಾಗೂ ಯೋಜನೆಗಳನ್ನು ತಯಾರಿಸುವಾಗ ಈ ಕೆಳಗಿನ ಸಂಗತಿಗಳನ್ನು ಗಣನೆಗೆ ತಂದುಕೊಳ್ಳಬೇಕು.

• ಶೈಕ್ಷಣಿಕ ವರ್ಷ ಪ್ರಾರಂಭವಾಗುವ ದಿನಾಂಕವನ್ನು ಮೊದಲೇ ತಿಳಿಸಬೇಕು.

• ವಿದ್ಯಾರ್ಥಿಗಳ ಪ್ರವೇಶದ ದಿನಾಂಕವನ್ನು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಬೇಕು.

• ಶಿಕ್ಷಣ ಸಂಸ್ಥೆಯಲ್ಲಿ ಉಪಕರಣಗಳ ಯಾದಿಯನ್ನು ಪರೀಕ್ಷಿಸಬೇಕು. ಒಂದು ವೇಳೆ ಅವು ಬರುವ ಶೈಕ್ಷಣಿಕ ವರ್ಷಕ್ಕೆ ಸಾಲದಿದ್ದ ಪಕ್ಷದಲ್ಲಿ ಅವುಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು.

• ಶಿಕ್ಷಕರ ಸಭೆಯನ್ನು ಕರೆದು ವೇಳಾಪತ್ರಿಕೆ ಮತ್ತು ಪಠ್ಯ ವಿಷಯಗಳ ಹಂಚಿಕೆಯ ಬಗ್ಗೆ ಚರ್ಚಿಸಬೇಕು.

• ಶಾಲೆಗಳಲ್ಲಿ ನಡೆಯಬೇಕಾದ ವಿವಿಧ ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಬೇಕು. ಹಾಗೂ ಪರೀಕ್ಷೆಗಳ ದಿನಾಂಕವನ್ನು, ಪಂದ್ಯಾಟಗಳ ದಿನಾಂಕವನ್ನು ಮುಂಚೆಯೇ ಗೊತ್ತುಪಡಿಸಬೇಕು.

• ಶಿಕ್ಷಕರನ್ನು ಹೊಸದಾಗಿ ನೇಮಿಸಿಕೊಳ್ಳುವುದಿದ್ದರೆ ಆ ವಿಷಯವನ್ನು ತಮ್ಮ ನಿರ್ವಹಣಾ ಮಂಡಳಿಗೆ ತಿಳಿಸಬೇಕು.

• ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಕ್ರಮವಾಗಿ ಪೀಠೋಪಕರಣಗಳ ಮತ್ತು ಪಾಠೋಪಕರಣಗಳ ವ್ಯವಸ್ಥೆಯನ್ನು ಮಾಡಿಸುವತ್ತ ಕ್ರಮ ಕೈಗೊಳ್ಳಬೇಕು.

**ಶಿಕ್ಷಣ ಸಂಸ್ಥೆಯು ಪ್ರಾರಂಭವಾದ ಮೊದಲ ವಾರದಲ್ಲಿ ಈ ಕೆಳಗಿನ ಕಾರ್ಯಗಳನ್ನು ಪೂರ್ಣಗೊಳಿಸಬೇಕು.**

• ಶಾಲೆ ಪ್ರಾರಂಭವಾದ ದಿನ ಎಲ್ಲ ವಿದ್ಯಾರ್ಥಿಗಳನ್ನು ಒಂದೆಡೆ ಕೂಡಿಸಿ ಅವರಿಗೆ ಉಪಯುಕ್ತವಾದ ಸಲಹೆ ಸೂಚನೆಗಳನ್ನು ಕೊಡುವುದು.


Digitised by Bharatavani, CIIL

- ವಿದ್ಯಾರ್ಥಿಗಳನ್ನು ಬೇರೆ ಬೇರೆ ವರ್ಗಗಳಲ್ಲಿ ವಿಂಗಡಿಸುವುದು.
- ಪಠ್ಯ ಪುಸ್ತಕಗಳ ಯಾದಿಯನ್ನು ತಿಳಿಸುವುದು.
- ವಿವಿಧ ವರ್ಗಗಳ ವೇಳಾಪಟ್ಟಿಗಳನ್ನು ತಯಾರಿಸುವುದು.
- ಶಿಕ್ಷಕರ ವೇಳಾಪತ್ರಿಕೆಯನ್ನು ತಯಾರಿಸುವುದು.
- ಪಾಠ ಕಲಿಸಲು ಅವಶ್ಯಕವಿರುವ ಪಾಠೋಪಕರಣಗಳನ್ನು ಶಿಕ್ಷಕರಿಗೆ ಒದಗಿಸುವುದು.
- ಶಿಕ್ಷಕರಿಗೆ ವರ್ಗಗಳನ್ನು ಹಂಚಿಕೊಡುವುದು.
- ವರ್ಗಶಿಕ್ಷಕರಿಗೆ ವರ್ಗಗಳಲ್ಲಿರುವ ವಿದ್ಯಾರ್ಥಿಗಳ ಯಾದಿಯನ್ನು ಹಾಗೂ ಹಾಜರಿ ಪುಸ್ತಕಗಳನ್ನು ಒದಗಿಸುವುದು.
- ಶಿಕ್ಷಕರಿಗೆ ಸಹಪಠ್ಯ ಚಟುವಟಿಕೆಗಳ ಕೆಲಸವನ್ನು ವಹಿಸಿಕೊಡುವುದು.

ಶೈಕ್ಷಣಿಕ ವರ್ಷದುದ್ದಕ್ಕೂ ಈ ಕೆಳಗಿನ ಕಾರ್ಯಗಳನ್ನು ಶೈಕ್ಷಣಿಕ ಮುಖ್ಯಸ್ಥರು ಪೂರ್ಣಗೊಳಿಸಬೇಕು.

- ಸಂಸ್ಥೆಯ ಆಯವ್ಯಯದ ಬಗ್ಗೆ ಯೋಜನೆಯನ್ನು ತಯಾರಿಸುವುದು.
- ಸಹಪಠ್ಯ ಚಟುವಟಿಕೆಗಳ ಯೋಜನೆಯನ್ನು ತಯಾರಿಸುವುದು.
- ಕಲಿಸುವ ಸಾಧನಗಳನ್ನು ಶಾಲೆಗೆ ಪಡೆಯುವ ಬಗ್ಗೆ ಯೋಜನೆ ತಯಾರಿಸುವುದು.
- ಕಲಿಕಾರ್ಥಿಗಳ ಪ್ರಗತಿಯ ಸಲುವಾಗಿ ಮಾರ್ಗದರ್ಶನವನ್ನು ನೀಡುವ ಬಗ್ಗೆ ಯೋಜನೆ ರೂಪಿಸುವುದು.

ಶೈಕ್ಷಣಿಕ ವರ್ಷದ ಕೊನೆಯ ವಾರದಲ್ಲಿ ಶೈಕ್ಷಣಿಕ ಮುಖ್ಯಸ್ಥರು ಈ ಕೆಳಗಿನ ಕಾರ್ಯಗಳನ್ನು ಪೂರ್ಣಗೊಳಿಸಬೇಕು.

- ವಾರ್ಷಿಕ ವರದಿಯನ್ನು ತಯಾರಿಸುವುದು.
- ವಿದ್ಯಾರ್ಥಿಗಳ ಹಾಜರಿ, ಪ್ರವೇಶ ಸಂಗ್ರಹಣೆ, ಮುಂತಾದವುಗಳ ಮೇಲ್ವಿಚಾರಣೆ.
- ಪರೀಕ್ಷೆಯ ಫಲಿತಾಂಶ ಪ್ರಕಟಣೆ.
- ಮುಂದಿನ ಶೈಕ್ಷಣಿಕ ವರ್ಷದ ಬಗ್ಗೆ ಯೋಜನೆ

ಹೀಗೆ ಶಾಲಾ ಮುಖ್ಯಸ್ಥರು ಈ ಯೋಜನಾ ಪ್ರಕ್ರಿಯೆಯನ್ನು ಶಾಲೆಯ ಆರಂಭದಿಂದ ಹಿಡಿದು ಶಾಲೆಯ ಪರೀಕ್ಷೆಯ ಫಲಿತಾಂಶ ಬರುವವರೆಗೆ ಜೀವಂತವಿರಿಸಬೇಕಾಗುತ್ತದೆ.

**ಸಂಪನ್ಮೂಲಗಳ ಕ್ರೋಡೀಕರಣ ಉಪಯೋಗಿಸುವಿಕೆ**

ಭೌತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಅನೇಕ ರೀತಿಗಳಲ್ಲಿ ಕ್ರೋಡೀಕರಿಸಬಹುದು. ಶಾಲೆಗೆ ಬೇಕಾದಂತಹ ಭೌತಿಕ ಸಂಪನ್ಮೂಲಗಳಾದ ಕಟ್ಟಡ, ಬೋಧನಾ ಸಾಧನಗಳು ಮತ್ತಿತರ ವಸ್ತುಗಳು, ಪುಸ್ತಕಗಳು, ಆಟಿಕೆಗಳು ಇವೆಲ್ಲವೂ ವಿದ್ಯಾರ್ಥಿಗಳ ಕಲಿಕೆಗೆ ಆಸಕ್ತಿಯನ್ನುಂಟು ಮಾಡುತ್ತವೆ. ರಾಜ್ಯ ಸರ್ಕಾರದ ಸಂಸ್ಥೆಗಳಾದ ಡಿ.ಎಸ್.ಇ.ಆರ್.ಟಿ. ಡಯಟ್, ಸಿ.ಟಿ.ಇ., ಜಿಲ್ಲಾ ಪಂಚಾಯತ್ ಮುಂತಾದ ಸಂಸ್ಥೆಗಳಿಂದ ಹಣದ ಸಹಾಯ ಪಡೆದು ಕಟ್ಟಡಗಳ ನಿರ್ಮಾಣಮಾಡಿ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕಾಗುವುದು. ರಾಷ್ಟ್ರಮಟ್ಟದ ಸಂಘಟನೆಗಳಾದ ಎನ್.ಸಿ.ಇ.ಆರ್.ಟಿ., ಎನ್.ಸಿ.ಟಿ.ಇ., ಐ.ಎ.ಎಸ್.ಇ, ನೂ.ಪಾ ಮುಂತಾದ ಸರ್ಕಾರಿ ಸಂಸ್ಥೆಗಳಿಂದ ಹಣಕಾಸಿನ ಹಾಗೂ ಮಾನವ ಸಂಪನ್ಮೂಲಗಳ ನೆರವನ್ನು ಪಡೆದು ಶಾಲೆಗಳ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವದು. ಅಲ್ಲದೆ ಈಗಾಗಲೇ ಸಾಕಷ್ಟು ಕಾರ್ಯಗಳಲ್ಲಿ ತೊಡಗಿರತಕ್ಕಂಥ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾಲಯ ಸಿ.ಟಿ.ಇ. ಬಿ.ಎಡ್. ಕಾಲೇಜ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳನ್ನು ಕ್ರೋಡೀಕರಿಸಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಬಹುದು.

ಶಿಕ್ಷಣವು ಪರಿಣಾಮಕಾರಿಯಾಗಬೇಕಾದರೆ ಹಣಕಾಸಿನ ಸೌಲಭ್ಯ ಹಾಗೂ ಮಾನವ ಸಂಪನ್ಮೂಲಗಳ ಪರಿಣಾಮಕಾರಿಯಾದ ಉಪಯೋಗಿಸುವಿಕೆ ಅವಶ್ಯಕವಾಗಿರುತ್ತದೆ. ಆದ್ದರಿಂದ ಇತರೆ ಮೂಲಗಳಿಂದ ಲಭ್ಯವಾಗಬಹುದಾದ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ಉಪಯೋಗಿಸುವುದಕ್ಕೆ ಸಂಸ್ಥೆಯ ಮುಖ್ಯಸ್ಥರು ಸದಾ ಪ್ರಯತ್ನಿಸಬೇಕು.

ಈ ಮೇಲೆ ತಿಳಿಸಿದಂತೆ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ಅವುಗಳನ್ನು ಸರಿಯಾಗಿ ಹಂಚಿಕೆ ಮಾಡಿ ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಹೋಗುವುದು ಸಂಸ್ಥೆಯ ಮುಖ್ಯಸ್ಥರು ಹಾಗೂ ಇತರ ಸಿಬ್ಬಂದಿಯ ಜವಾಬ್ದಾರಿಯಾಗಿದೆ. ಇವರೆಲ್ಲರೂ ಸಂಪನ್ಮೂಲಗಳನ್ನು ಸರಿಯಾಗಿ ಸಂದರ್ಭೋಚಿತವಾಗಿ ಉಪಯೋಗಿಸುವ ಕೌಶಲವನ್ನು ರೂಢಿಸಿಕೊಳ್ಳಬೇಕು. ಅವುಗಳನ್ನು ಕಾಲಕ್ಕೆ ತಕ್ಕಂತೆ ಸೂಕ್ತವಾಗಿ ನಿರ್ವಹಿಸಬೇಕು. ಮಾನವ ಸಂಪನ್ಮೂಲ, ಭೌತಿಕ ಸಂಪನ್ಮೂಲ, ಹಣಕಾಸಿನ ಸಂಪನ್ಮೂಲಗಳನ್ನು ಎಲ್ಲರೂ ಸರಿಯಾಗಿ ಸದ್ಬಳಕೆ ಮಾಡಿಕೊಂಡು ಕಾರ್ಯನಿರ್ವಹಿಸಿದಲ್ಲಿ ಎಲ್ಲ ಕಾರ್ಯಗಳು ಪರಿಣಾಮಕಾರಿಯಾಗಿ ಯಶಸ್ವಿಯಾಗುವುವು.

–ಎಸ್.ಪಿ.ಯಾ

**ಶೈಶವಾವಸ್ಥೆ – ಸಂಜ್ಞಾನಾತ್ಮಕ ಭಾಷೆ ಮತ್ತು ನೈತಿಕ ವಿಕಾಸ**

ಮಾನವನ ಜೀವಿತಾ ಅವಧಿಯಲ್ಲಿ ಶೈಶವಾವಸ್ಥೆಯು ಪ್ರಮುಖವಾದ ಘಟ್ಟವಾಗಿರುತ್ತದೆ. ಶೈಶವಾವಸ್ಥೆಯು ಉಳಿದೆಲ್ಲಾ ಅವಧಿಗಳಿಗಿಂತ ಬಹಳ ಕಿರಿದಾದುದು. ಇದರ ವ್ಯಾಪ್ತಿಯು ಮಗುವಿನ ಜನನಾನಂತರದ ಕೇವಲ ಎರಡು ವಾರಗಳು ಎಂದು ಹೇಳಲಾಗುತ್ತದೆ. ಕೆಲವು ಮನೋವಿಜ್ಞಾನಿಗಳು ಮಗು ಹುಟ್ಟಿನಿಂದ 12 ತಿಂಗಳುಗಳವರೆಗೆ ಎಂದು ಅಭಿಪ್ರಾಯ ಪಡುತ್ತಾರೆ. ಹೀಗೆ ಈ ಅವಧಿಯ ಬಗ್ಗೆ ಮನೋವಿಜ್ಞಾನಿಗಳಲ್ಲಿ ಒಂದು ನಿಶ್ಚಿತ ಅಭಿಪ್ರಾಯ ಕಂಡು ಬರುವುದಿಲ್ಲ. ಈ ಲೇಖನದಲ್ಲಿ ಮಗುವು ಹುಟ್ಟಿನಿಂದ ಎರಡು ವರ್ಷಗಳ ಅವಧಿಯನ್ನು ಶೈಶವದ ಅವಧಿ ಎಂದು ಪರಿಗಣಿಸಿ ಆ ಅವಧಿಯಲ್ಲಿ ಶಿಶುವಿನಲ್ಲಿ ಕಂಡುಬರುವ ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸಗಳ ಬಗ್ಗೆ ವಿವರಿಸಲಾಗಿದೆ.

ಶೈಶವ ಎಂಬುದು ಶಿಶುವಿನ ಅತಿಯಾದ ಅಸಹಾಯಕತೆಯ ಅವಧಿಯಾಗಿದ್ದು ಹುಟ್ಟಿನಿಂದ ಸುಮಾರು 18 ಅಥವಾ 24 ತಿಂಗಳುಗಳವರೆಗೆ ವ್ಯಾಪಿಸಿರುತ್ತದೆ. ಈ ಅವಧಿಯಲ್ಲಿ ಶಿಶುವು ಸಂಪೂರ್ಣವಾಗಿ ಅಸಹಾಯಕತೆಯಿಂದ ಕೂಡಿದ್ದು ಕ್ರಮೇಣವಾಗಿ ಸ್ವತಂತ್ರವಾಗುತ್ತಾ ಹೋಗುತ್ತದೆ. ಇದು ಜನನಾನಂತರದ ಶಿಶುವಿಗೆ ಬಾಹ್ಯವಾತಾವರಣಕ್ಕೆ ಹೊಂದಿಕೊಳ್ಳುವ ಪರ್ವಕಾಲವಾಗಿರುತ್ತದೆ. ಗರ್ಭಾವಸ್ಥೆಯಲ್ಲಿಯೇ ಮೆದುಳಿನ ಬೆಳವಣಿಗೆಯು ಪೂರ್ಣಗೊಂಡಿದ್ದು ಈ ಅವಧಿಯಲ್ಲಿ ಅದು ವಿಕಸನಗೊಳ್ಳುತ್ತಾ ಹೋಗುತ್ತದೆ. ಆರೋಗ್ಯಪೂರ್ಣವಾದ ಶಿಶುವು ಹುಟ್ಟಿದ ಕೆಲವು ಕ್ಷಣಗಳಲ್ಲಿಯೇ ಅಳುವುದು ಮೆದುಳಿನ ಬೆಳವಣಿಗೆ ಮತ್ತು ಕಾರ್ಯಚಟುವಟಿಕೆಗಳು ಸಮರ್ಪಕವಾಗಿ ನಡೆಯುತ್ತಿರುವುದನ್ನು ತೋರಿಸುತ್ತದೆ.

Digitised by Bharatavani, CIIL

## ಸಂಜ್ಞಾನಾತ್ಮಕ ಬೆಳವಣಿಗೆ

ಈ ಅವಧಿಯಲ್ಲಿ ಮಗುವು ದೈಹಿಕವಾಗಿ ಅಷ್ಟೇ ಅಲ್ಲದೆ ಸಂಜ್ಞಾನಾತ್ಮಕವಾಗಿ ಮತ್ತು ಮಾನಸಿಕವಾಗಿಯೂ ಬೆಳವಣಿಗೆಯನ್ನು ಹೊಂದುತ್ತದೆ. ಮೆದುಳಿನ ಬೆಳವಣಿಗೆ ಈ ಅವಧಿಯಲ್ಲಿ ವೇಗವಾಗಿ ಮುಂದುವರಿಯುತ್ತದೆ. ನರಕೋಶಗಳು ಬೆಳೆಯುತ್ತವೆ. ಪ್ರತಿನಿತ್ಯ ಮಗುವು ತನ್ನ ಪರಿಸರದೊಂದಿಗಿನ ಅಂತರ್‌ಕ್ರಿಯೆಯಿಂದಾಗಿ ಅದರ ಮೆದುಳಿನಲ್ಲಿ ಅನೇಕ ಹೊಸ ನರತಂತುಗಳ ಹೊಸ ಹೊಸ ಸಂಪರ್ಕಗಳು ಸೃಷ್ಟಿಗೊಳ್ಳುತ್ತವೆ. ಪರಿಪಕ್ವತೆಯ ಕಾರಣದಿಂದಾಗಿ ಈ ಬದಲಾವಣೆಗಳು ಆಗುತ್ತವೆಯಾದರೂ ಮರಿಯನ್ ಡೈಮೆಂಡ್ ಮತ್ತು ಸಹೋದ್ಯೋಗಿಗಳ ಅಧ್ಯಯನದ ಪ್ರಕಾರ ಜೀವನದ ಅನುಭವಗಳು ಮೆದುಳಿನ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತದೆ ಎಂದು ತಿಳಿದು ಬರುತ್ತದೆ. ದೈಹಿಕ ಬೆಳವಣಿಗೆ ಮತ್ತು ಬದಲಾವಣೆಗಳನ್ನು ಸರಳವಾಗಿ ಗಮನಿಸಬಹುದು ಮತ್ತು ತೂಕ ಮತ್ತು ಗಾತ್ರವನ್ನು ನಿಖರವಾಗಿ ಅಳತೆ ಮಾಡಬಹುದು. ಆದರೆ ಸಂಜ್ಞಾನಾತ್ಮಕ ಬದಲಾವಣೆ ಮತ್ತು ಬೆಳವಣಿಗೆಯನ್ನು ಸ್ಪಷ್ಟವಾಗಿ ನಿರ್ಧರಿಸಲು ಕಷ್ಟವಾಗುತ್ತದೆ. ಆದ್ದರಿಂದ ಪರಿಣಿತರು ಮತ್ತು ಮನೋವಿಜ್ಞಾನಿಗಳು ಮಾನಸಿಕ ಮತ್ತು ಸಂಜ್ಞಾನಾತ್ಮಕ ಬೆಳವಣಿಗೆಯನ್ನು ಪಿಯಾಜೆರವರ ಸಂಜ್ಞಾನಾತ್ಮಕ ಬೆಳವಣಿಗೆ ಸಿದ್ಧಾಂತದ ಆಧಾರದ ಮೇಲೆ ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದಾರೆ.

ಪಿಯಾಜೆರವರ ಪ್ರಕಾರ ನವಜಾತ ಶಿಶುವು ಸಂಪೂರ್ಣವಾಗಿ ಪರಾವರ್ತಿತ ಪ್ರತಿಕ್ರಿಯೆ (Reflex) ವರ್ತನೆಯ ಮುಖಾಂತರ ತನ್ನ ಪರಿಸರದೊಂದಿಗೆ ಸಂಪರ್ಕವನ್ನು ಹೊಂದುತ್ತದೆ. ಶಿಶುವು ತನ್ನ ಮೂಲ ಪ್ರೇರಣೆ ಮತ್ತು ಅನೈಚ್ಛಿಕ ಪ್ರತಿಕ್ರಿಯೆಗಳಾದ ಆಹಾರ, ಗಾಳಿ ಮತ್ತು ಗಮನದಂತಹ ಅವಶ್ಯಕತೆಗಳನ್ನು ಆಧರಿಸಿ ಅವುಗಳನ್ನು ಪಡೆಯುವುದಕ್ಕಾಗಿ ಚಟವಟಿಕೆಯನ್ನು ತೋರಿಸುತ್ತದೆಯೆ ಹೊರತು ಉದ್ದೇಶಪೂರ್ಣ ಯೋಚನೆಯಿಂದಲ್ಲ. ಶಿಶುಗಳು ತಮ್ಮ ಸಂವೇದನೆಗಳ ಮುಖಾಂತರ ತಮ್ಮ ಪರಿಸರದ ಬಗ್ಗೆ ಕಲಿಯುತ್ತಾ ಬೆಳೆಯಲು ಪ್ರಾರಂಭಿಸುತ್ತವೆ. ನಂತರದ ಹಂತಗಳಲ್ಲಿ ಉದ್ದೇಶ ಪೂರ್ವಕ, ಗುರಿ ನಿರ್ಧಾರಿತ ವರ್ತನೆಗಳಲ್ಲಿ ತೊಡಗಿಸಿಕೊಳ್ಳಲು ಪ್ರಾರಂಭಿಸುತ್ತವೆ. ಸರಳವಾಗಿ ಹೇಳವುದಾದರೆ ಶಿಶುವು ತನಗೆ ಏನು ಬೇಕು ಅದನ್ನು ಹೇಗೆ ಪಡೆಯಬೇಕು ಎಂಬುದನ್ನು ಯೋಚಿಸಲು ಪ್ರಾರಂಭಿಸುತ್ತದೆ. ಯಾವುದೇ ವಸ್ತುಗಳು ಕಣ್ಣಿಗೆ ಕಾಣದಿದ್ದಾಗಲೂ ಸಹ ಅವು ಅಸ್ತಿತ್ವದಲ್ಲಿ ಇವೆ ಎಂಬುದನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವೇ ವಸ್ತು ಸ್ಥಿರತೆಯ ಪರಿಕಲ್ಪನೆ. ಮತ್ತು ಈ ಅವಧಿ ಶಿಶುವು ವಸ್ತು ಸ್ಥಿರತೆಯನ್ನು ಬೆಳೆಸಿಕೊಳ್ಳುವ ಹಂತವಾಗಿರುತ್ತದೆ. ಗುರಿ ನಿರ್ಧಾರಿತ ವರ್ತನೆ ಮತ್ತು ವಸ್ತು ಸ್ಥಿರತೆಯ ವರ್ತನೆಗಳು ಶಿಶುವಿನ ಸಂಜ್ಞಾನಾತ್ಮಕ ಬೆಳವಣಿಗೆಯನ್ನು ಸೂಚಿಸುವ ಪ್ರಮುಖ ಸೂಚಕಗಳಾಗಿವೆ.

ಪ್ರಾರಂಭಿಕ ಹಂತದ ಸಂಜ್ಞಾನಾತ್ಮಕ ಬೆಳವಣಿಗೆ ಶಿಶುವಿನ ಸುತ್ತಮುತ್ತಲಿನ ಪರಿಸರದಲ್ಲಾಗುವ ಬದಲಾವಣೆಗಳ ಮೇಲೆ ಅವಲಂಬಿತವಾಗಿರುತ್ತದೆ. ಪಿಯಾಜೆರವರ ಪ್ರಕಾರ ಶಿಶುವು ತನ್ನ ಪರಿಸರದೊಂದಿಗೆ ಬೌದ್ಧಿಕವಾಗಿ ಹೊಂದಿಕೊಳ್ಳುವ ಮಾರ್ಗವೇ ಸಂಜ್ಞಾನಾತ್ಮಕ ಬೆಳವಣಿಗೆಯೆನಿಸುತ್ತದೆ. ಇತರ ಪ್ರಾಣಿಗಳ ಹಾಗೆ ಮಾನವ ಶಿಶುವಿನಲ್ಲಿ ಎಲ್ಲಾ ವರ್ತನೆಗಳು ಜೈವಿಕವಾಗಿ ನಿರ್ಧರಿಸಿದಂತಹ ಪ್ರತಿಕ್ರಿಯೆಗಳಿರುವುದಿಲ್ಲ. ಇದರಿಂದಾಗಿ ಮಕ್ಕಳಿಗೆ ತಮ್ಮ ವಯಸ್ಸಿಗೆ ತಕ್ಕ ಹಾಗೆ ಪ್ರಪಂಚದ ಅನುಭವಗಳನ್ನು ಆಲೋಚಿಸಲು ಮತ್ತು ವರ್ತನೆ ತೋರಿಸುವುದರಲ್ಲಿ ಹೆಚ್ಚು ನಮ್ಯತೆ ದೊರೆತಂತಾಗುತ್ತದೆ. ಮಕ್ಕಳಲ್ಲಿ ಆಂತರಿಕವಾಗಿ ವಸ್ತುಗಳನ್ನು ತಿಳಿದುಕೊಳ್ಳಲು ಮತ್ತು ಅರ್ಥೈಸಿಕೊಳ್ಳಲು ಅಭಿಪ್ರೇರಣೆಯುಂಟಾಗುತ್ತದೆ. ಇದರಿಂದಾಗಿ ಪ್ರಪಂಚವನ್ನು ಅರಿಯುವಲ್ಲಿ ಮಕ್ಕಳು ಕಾರ್ಯಪ್ರವೃತ್ತರಾಗಿ ಸಕ್ರಿಯ ಪಾತ್ರವಹಿಸುತ್ತಾರೆ.

ಪಿಯಾಜೆಯವರು ಶೈಶವಾವಸ್ಥೆಯಲ್ಲಿ ಸಂಜ್ಞಾನಾತ್ಮಕ ವಿಕಾಸದ ಆರು ಉಪ ಹಂತಗಳನ್ನು ಗುರ್ತಿಸಿದ್ದಾರೆ. ಈ ಉಪಹಂತಗಳೆ ಪರಾವರ್ತಿತ ಪ್ರತಿಕ್ರಿಯಾ ಚಟವಟಿಕೆ, ಪ್ರಾಥಮಿಕ ವರ್ತುಲಾಕಾರದ ಪ್ರತಿಕ್ರಿಯೆಗಳು, ಅನುಷಂಗಿಕ ವರ್ತುಲ ಪ್ರತಿಕ್ರಿಯೆಗಳು, ಅನುಷಂಗಿಕ ವರ್ತುಲ ಪ್ರತಿಕ್ರಿಯೆಗಳ ಸಂಯೋಜನೆ, ಮೂರನೆಯ ಮಟ್ಟದ ವರ್ತುಲ ಪ್ರತಿಕ್ರಿಯೆಗಳು ಮತ್ತು ಮಾನಸಿಕ ಪ್ರತಿನಿಧಿಕರಣಗಳು.

ಮೊದಲನೆಯ ಉಪಹಂತವು ಹುಟ್ಟಿನಿಂದ ಸುಮಾರು ಒಂದು ತಿಂಗಳವರೆಗೆ ಕಂಡುಬರುತ್ತವೆ. ಪಿಯಾಜೆಯವರ ಪ್ರಕಾರ ಶಿಶುವು ಸ್ತನಪಾನ ಮಾಡುವ ಪರಾವರ್ತನ ಪ್ರತಿಕ್ರಿಯಾ ಚಟುವಟಿಕೆಯಲ್ಲಿ ತೊಡಗಿದ್ದಾಗ, ಅದು ತನ್ನ ಪರಿಸರ ಮತ್ತು ಪರಿಸರದೊಂದಿಗೆ ತಾನು ಹೇಗೆ ಅನೋನ್ಯಕ್ರಿಯಿಸಬೇಕೆಂಬುದನ್ನು ಕಲಿಯುತ್ತಿರುತ್ತದೆ. ಶಿಶುವು ತನ್ನ ಜನ್ಮಜಾತ ಪ್ರತಿಕ್ರಿಯೆಗಳ ಬಗ್ಗೆ ಯೋಚಿಸುವುದಿಲ್ಲ. ಅದು ಸ್ವಯಂಚಾಲಿತವಾಗಿ ಅಂಥ ಚಟುವಟಿಕೆಗಳನ್ನು ತೋರಿಸುತ್ತದೆ. ಪ್ರತಿಕ್ರಿಯೆಗಳು ಶಿಶುವಿನ ದೇಹಕ್ಕೆ ಸೀಮಿತವಾಗಿರುತ್ತವೆ. ಘಟನೆಗಳ ಪೂರ್ವಾನುಮಾನ ಮಾಡುವಿಕೆ ಸ್ವಲ್ಪ ಮಟ್ಟಿಗೆ ಕಂಡುಬರುತ್ತದೆ.

ಪ್ರಾಥಮಿಕ ವರ್ತುಲ ಪ್ರತಿಕ್ರಿಯೆಗಳ ಎರಡನೆಯ ಉಪಹಂತ ಒಂದರಿಂದ ನಾಲ್ಕು ತಿಂಗಳವರೆಗೆ ಕಂಡುಬರುತ್ತದೆ. ಈ ಅವಧಿಯಲ್ಲಿ ಶಿಶುವು ಉದ್ದೇಶಪೂರ್ವಕವಾಗಿ ತನಗೆ ಸಂತೋಷವನ್ನು ಒದಗಿಸುವ ಕ್ರಿಯೆಗಳನ್ನು ಪುನಾರವರ್ತಿಸತೊಡಗುತ್ತದೆ. ಉದ್ದೇಶಪೂರ್ವಕವಾಗಿ ಕ್ರಿಯೆಗಳನ್ನು ಮಾಡುವುದರಿಂದ ತಮಗೆ ಬೇಕಾದುದು ದೊರೆಯುತ್ತದೆ ಎಂದಾಗ ಈ ವಯಸ್ಸಿನ ಶಿಶುಗಳು ಸಂದರ್ಭಗಳ ಕಾರಣ ಮತ್ತು ಪರಿಣಾಮಗಳ ಬಗ್ಗೆ ನಿರೀಕ್ಷಿಸುವಿಕೆಯನ್ನು ಸಹ ಬೆಳೆಸಿಕೊಳ್ಳುತ್ತದೆ. ಶಿಶುಗಳ ಸಂದರ್ಭಗಳು ವಿನ್ಯಾಸಗಳು ಒಂದಕ್ಕೊಂದು ಸಂಬಂಧ ಪಟ್ಟಿರುತ್ತವೆ ಮತ್ತು ಒಂದನೇ ಸಂದರ್ಭದ ನಂತರ ಎರಡನೆ ಸಂದರ್ಭವು ಬರಬಹುದೆಂದು ನಿರೀಕ್ಷಿಸಲು ಪ್ರಾರಂಭಿಸುತ್ತವೆ.

ಮೂರನೆಯ ಉಪಹಂತವಾದ ಅನುಷಂಗಿಕ ವರ್ತುಲ ಪ್ರತಿಕ್ರಿಯೆಗಳು ನಾಲ್ಕರಿಂದ ಎಂಟು ತಿಂಗಳವರೆಗೆ ಕಂಡು ಬರುತ್ತವೆ. ಈ ಹಂತದಲ್ಲಿ ಶಿಶುವು ಹೊರ ಪ್ರಪಂಚದೊಂದಿಗೆ ಆಕರ್ಷಕ ವಸ್ತುಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸುತ್ತದೆ. ಉದಾಹರಣೆಗೆ ಐದು ತಿಂಗಳ ಶಿಶುಗಳು ವಸ್ತುಗಳು ಮತ್ತು ದೃಷ್ಟಿಯ ನೇರ ರೇಖೆಯಿಂದ ದೂರ ಸರಿದಾಗಲೂ ವಸ್ತುಗಳನ್ನು ದೃಷ್ಟಿಯಲ್ಲಿ ಅನುಸರಿಸುತ್ತವೆ. ತಮ್ಮ ಗಮನವನ್ನು ಸೆಳೆಯುವ ವಸ್ತುವನ್ನು ಗಮನಿಸಲು ತಮ್ಮ ತಲೆಯನ್ನು ತಿರುಗಿಸುತ್ತವೆ. ಅಥವಾ ಅದನ್ನು ಗಮನಿಸಲು ಮುಂದುವರೆಸುವುದಕ್ಕೆ ಇಡೀ ದೇಹವನ್ನೇ ತಿರುಗಿಸುತ್ತವೆ. ಕಾರಣ ಮತ್ತು ಪರಿಣಾಮದ ಪ್ರತಿಕ್ರಿಯೆಗಳನ್ನು ತೋರಿಸುವುದರಿಂದ ನಡೆದಾಡುವಾಗ ಮತ್ತು ಮಾಹಿತಿಗಳನ್ನು ಸಂಗ್ರಹಿಸುವುದರಿಂದ ಶಿಶುವಿನ ನೆನಪಿನ ಶಕ್ತಿಯು ಬಲವಾಗುತ್ತವೆ. ನಾಲ್ಕನೆ ಹಂತವಾದ ವರ್ತುಲ ಕ್ರಿಯೆಗಳ ಸಂಯೋಜನೆ ಇರುವ ಎಂಟರಿಂದ ಹನ್ನೆರಡು ತಿಂಗಳಿನಲ್ಲಿ ಶಿಶುಗಳು ಉದ್ದೇಶಪೂರ್ವಕ ಗುರಿ ನಿರ್ಧಾರಿತ ವರ್ತನೆಯನ್ನು ತೋರಿಸುತ್ತವೆ. ಅಂದರೆ ಶಿಶುವು ಬೇರೆ ಬೇರೆ ಕ್ರಿಯೆಗಳನ್ನು ಒಟ್ಟುಗೂಡಿಸಿ ಒಂದು ಗುರಿಯನ್ನು ತಲುಪಲು ತಾನು ಕಲಿತ ಕಾರಣ ಮತ್ತು ಪರಿಣಾಮ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂದು ತಿಳಿಯಲು ಪ್ರಯತ್ನಿಸುತ್ತದೆ. ಶಿಶುವು ಮೊದಲ ಮೂರು ಹಂತಗಳಲ್ಲಿ ತಾನು ಕಲಿತಿರುವುದನ್ನು ಬಳಸಿ ತನಗೆ ಬೇಕಾದುದ್ದನ್ನು ಪಡೆಯಲು ಪ್ರಯತ್ನಿಸುತ್ತದೆ. ಶಿಶುವು ಈ ಹಂತದಲ್ಲಿ ಇತರರು ಮಾಡುವುದನ್ನು


Digitised by Bharatavani, CIIL

ನೋಡಿ ಅನುಕರಣೆಯಿಂದ ಅನುಸರಿಸುತ್ತದೆ. ಶಿಶುವು ಒಂದೇ ಪ್ರಯೋಗವನ್ನು ಬೇರೆ ಬೇರೆ ವಸ್ತುಗಳೊಂದಿಗೆ ಮಾಡುತ್ತಾ ಒಂದೇ ರೀತಿಯ ಮತ್ತು ಬೇರೆ ಬೇರೆ ಪರಿಣಾಮಗಳನ್ನು ಗಮನಿಸಿ ಕಲಿಯುತ್ತದೆ. ಉದಾ: ಪ್ಲಾಸ್ಟಿಕ್ ಆಟಿಕೆಗಳನ್ನು ಕೆಳಗೆ ಬೀಳಿಸಿದಾಗ ಹೇಗೆ ಶಬ್ದ ಬರುತ್ತದೆ, ಒಂದು ಬಟ್ಟೆಯಿಂದ ಮಾಡಿದ (ಟೆಡ್ಡಿ ಬೇರ್) ಗೊಂಬೆಯನ್ನು ನೆಲದ ಮೇಲೆ ಬೀಳಿಸಿದಾಗ ಹೇಗೆ ಶಬ್ದ ಬರುತ್ತದೆ ಎಂದು ಗಮನಿಸುತ್ತದೆ. ಈ ಹಂತದಲ್ಲಿ ಕಂಡು ಬರುವ ಮತ್ತೊಂದು ಬಹು ಮುಖ್ಯ ಬೆಳವಣಿಗೆಯೆಂದರೆ ವಸ್ತು ಸ್ಥಿರತೆಯ ಪರಿಕಲ್ಪನೆ ಅಂದರೆ ವಸ್ತುಗಳು ಕಣ್ಣಿಂದ ಮರೆಯಾಗಿದ್ದರೂ ಅವು ಇರುತ್ತವೆ ಎಂದು ಅರ್ಥವಾಗುವಿಕೆ. ಮುಂಚಿನ ಅವಧಿಯಲ್ಲಿ ಶಿಶುವು ವಸ್ತುಗಳು ಕಣ್ಣಿಂದ ಮರೆಯಾದಕ್ಷಣವೇ ಅವು ಇಲ್ಲ ಎಂದು ತಿಳಿದಿರುತ್ತದೆ.

ಉಪಹಂತ ಮೂರನೇ ಮಟ್ಟದ ವರ್ತುಲ ಪ್ರತಿಕ್ರಿಯಾ 12 ರಿಂದ 18 ತಿಂಗಳವರೆಗೆ ಕಂಡು ಬರುತ್ತದೆ. ಈ ಹಂತದಲ್ಲಿ ವಸ್ತುಗಳು ಹೇಗೆ ಕೆಲಸ ಮಾಡುತ್ತವೆ ಎನ್ನುವುದನ್ನು ಶಿಶು ತಿಳಿದುಕೊಳ್ಳುತ್ತದೆ ಮತ್ತು ತನ್ನ ಪರಿಸರವನ್ನು ತಿಳಿದುಕೊಳ್ಳುವುದನ್ನು ಮುಂದುವರಿಸುತ್ತವೆ. ಶಿಶುವು ತನಗೆ ಸಿಗುವ ಎಲ್ಲಾ ವಸ್ತುಗಳೊಂದಿಗೆ ಆಟವಾಡುತ್ತವೆ. ಶಿಶುವಿನ ನೆನಪಿನ ಶಕ್ತಿ ಬೆಳೆದಂತೆಲ್ಲಾ ಎಲ್ಲಾ ಇಂದ್ರಿಯಗಳಿಂದ ಬರುವ ಸಂವೇದನೆಗಳನ್ನು ಅರಿಯುತ್ತಾ ಅವುಗಳನ್ನು ಬಳಸುತ್ತಾ ಹೋಗುತ್ತದೆ. ಶಿಶುವು ಸಂವೇದನೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತದೆ. ವಸ್ತುವಿನ ರಚನೆ, ಅದರ ಗಾತ್ರ, ಅದರ ಶಬ್ದ ಮತ್ತು ಅದರ ವಾಸನೆ ಇಷ್ಟನ್ನೂ ನೆನಪಿನಲ್ಲಿಟ್ಟುಕೊಂಡಿರುತ್ತದೆ.

ಕೊನೆಯದಾಗಿ ಹದಿನೆಂಟರಿಂದ ಇಪ್ಪತ್ನಾಲ್ಕು ತಿಂಗಳವರೆಗೆ ಶಿಶುವು ಮಾನಸಿಕ ಪ್ರತಿನಿಧಿಕರಣದ ಆಲೋಚನಾ ಉಪ ಹಂತಕ್ಕೆ ಬರುತ್ತದೆ. ಈ ಹಂತದಲ್ಲಿ ಶಿಶುವು ವಸ್ತುಗಳ ಬಗ್ಗೆ ಸಾಂಕೇತಿಕವಾಗಿ ಆಲೋಚಿಸುತ್ತದೆ. ಅಂದರೆ ವಸ್ತುಗಳ ಸಾಮಾನ್ಯ ಬಿಂಬವನ್ನು ತನ್ನ ಮನಸ್ಸಿನಲ್ಲಿ ಸೃಷ್ಟಿಸಿಕೊಂಡು ಅದನ್ನು ಅದೇ ವರ್ಗದ ಕೆಲವು ವಸ್ತುಗಳಿಗೆ ಉದಾಹರಣೆಯಾಗಿ ಇಟ್ಟುಕೊಂಡಿರುತ್ತದೆ. ಹಾಗೇ ಈ ಹಂತದಲ್ಲಿ ಶಿಶುವಿನ ನೆನಪಿಸಿಕೊಳ್ಳುವಿಕೆ ಮತ್ತು ಗುರುತಿಸುವಿಕೆಯು ಚೆನ್ನಾಗಿ ಅಭಿವೃದ್ಧಿ ಹೊಂದುತ್ತವೆ. ಈ ಹಂತದಲ್ಲಿ ಶಿಶುಗಳು ಸಂಕೇತಗಳ ಮೂಲಕ ಯೋಚಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತವೆ. ಇಪ್ಪತ್ನಾಲ್ಕು ತಿಂಗಳ ಅವಧಿಯಲ್ಲಿ ಶಿಶುವು ತಮ್ಮ ಮುಂದಿರದ ವಸ್ತುಗಳನ್ನು ಕಲ್ಪಿಸಿಕೊಳ್ಳಲು ಮತ್ತು ಅದು ಇರುವಂತೆ ನಟಿಸಲು ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತವೆ. ಈ ಹೊಸ ಕಾಲ್ಪನಿಕ ಆಲೋಚನಾ ಹಂತವನ್ನು ಸಾಧಿಸುತ್ತಿದ್ದಂತೆ ಶಿಶು ಪ್ರತ್ಯಕ್ಷ ಸ್ಥಿರವಸ್ತು ಆಲೋಚನೆಯಿಂದ ಒಂದು ಹೆಜ್ಜೆ ಮುಂದೆ ಬರುತ್ತವೆ.

**ಭಾಷಾ ಬೆಳವಣಿಗೆ:** ಶಿಶುವು ಬೆಳೆದಂತೆಲ್ಲಾ ಸಂವಹನದ ಸಾಮರ್ಥ್ಯವು ಸಹ ಬೆಳವಣಿಗೆ ಹೊಂದುತ್ತಾ ಹೋಗುತ್ತದೆ. ಭಾಷಾ ಕಲಿಕೆಯಲ್ಲಿ ಕಣ್ಣು ಮತ್ತು ಕಿವಿಯಂತಹ ಇಂದ್ರಿಯಗಳ ಪಾತ್ರವು ಪ್ರಮುಖವಾಗಿದ್ದು ಶಿಶುವಿನಲ್ಲಿ ಈ ಇಂದ್ರಿಯಗಳ ಸಮರ್ಪಕ ಕಾರ್ಯನಿರ್ವಹಣೆಯಿಂದಾಗಿ ಶಿಶುವು ತನ್ನ ಕಿವಿಯಿಂದ ಕೇಳುವ ಶಬ್ದಗಳು ಮತ್ತು ಇತರರು ಮಾತಾನಾಡುವಾಗ ಮುಖದಲ್ಲಾಗುವ ಹಾವ ಭಾವಗಳ ಬದಲಾವಣೆ ಮತ್ತು ಶಬ್ದಗಳ ಉಚ್ಚರಿಸುವಿಕೆಯನ್ನು ಇತರರಲ್ಲಿ ಗಮನಿಸುವುದು ಮತ್ತು ಅದನ್ನು ಅನುಕರಣೆ ಮಾಡಲು ಪ್ರಯತ್ನಿಸುವುದರ ಮುಖಾಂತರ ಭಾಷಾ ಬೆಳವಣಿಗೆಯು ಉಂಟಾಗುತ್ತದೆ. ಶಿಶುವು ಕಲಿಯುವ ಭಾಷೆಯು ಅವರು ಆಲಿಸುವ ಮತ್ತು ಅವರೊಂದಿಗೆ ಇತರರು ಮಾತನಾಡುವ ಭಾಷೆಯಿಂದ ಗಾಢವಾದ ಪ್ರಭಾವ ಹೊಂದುತ್ತದೆ.

**ಮಾತು:** ಮಾತು ಸಂವಹನದ ಒಂದು ಉಪಕರಣವಾಗಿದೆ ಇತರರೊಂದಿಗೆ ಸಂವಹನ ನಡೆಸಲು ಎರಡು ಪ್ರತ್ಯೇಕ ಮತ್ತು ನಿಖರವಾದ ಚಟುವಟಿಕೆಗಳ ಸಾಮರ್ಥ್ಯವಿರಬೇಕು. ಅವೆಂದರೆ ಇತರರು ತಮ್ಮೊಂದಿಗೆ ಏನನ್ನು ಸಂವಹನ ನಡೆಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅರ್ಥೈಸಿಕೊಳ್ಳುವ ಸಾಮರ್ಥ್ಯ ಮತ್ತು ಇತರರು ತಮ್ಮನ್ನು ಅರ್ಥೈಸಿಕೊಳ್ಳುವ ಹಾಗೇ ಸಂವಹನ ನಡೆಸುವ ಸಾಮರ್ಥ್ಯ. ಶೈಶವಾವಸ್ಥೆಯಲ್ಲಿ ಅರ್ಥೈಸಿಕೊಳ್ಳುವ ಸಾಮರ್ಥ್ಯವು ಹೆಚ್ಚಾಗಿರುತ್ತದೆ.

**ಅರ್ಥೈಸಿಕೊಳ್ಳುವಿಕೆ:** ಇತರರೊಂದಿಗೆ ಸಂವಹನ ನಡೆಸಲು ಮೊದಲು ಕಲಿಯಬೇಕಾದ ಕ್ರಿಯೆಯಂದರೆ ಇತರರು ಏನು ಹೇಳುತ್ತಿದ್ದಾರೆ ಎಂದು ಅರ್ಥೈಸಿಕೊಳ್ಳುವುದು. ಶಿಶುವು ತನ್ನ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ವ್ಯಕ್ತಪಡಿಸಲು ಆಗದಿದ್ದರೂ ಇತರರ ಭಾವನೆ ಮತ್ತು ಅವರು ಏನು ಹೇಳುತ್ತಿದ್ದಾರೆ ಎಂಬುದನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಮಾತನಾಡುವವರ ಮುಖದ ಹಾವಭಾವ ಧ್ವನಿಯ ಧಾಟಿ ಮತ್ತು ಸನ್ನೆಗಳಿಂದ ಶಿಶು ತನಗೆ ಏನು ಹೇಳುತ್ತಿದ್ದಾರೆ ಎಂದು ಗ್ರಹಿಸಲು ಪ್ರಯತ್ನಿಸುತ್ತದೆ. ಶಿಶುವು ತನ್ನ ಮೂರನೇ ತಿಂಗಳಲ್ಲಿಯೇ ಇತರರ ಸಂತೋಷ, ಕೋಪ ಮತ್ತು ಭಯಗಳನ್ನು ಅರ್ಥೈಸಿಕೊಳ್ಳುತ್ತದೆ ಎಂದು ತಿಳಿದು ಬಂದಿದೆ. ಶಿಶುವಿನ ಅರ್ಥೈಸಿಕೊಳ್ಳುವಿಕೆಯು ಅದರ ಬುದ್ಧಿವಂತಿಕೆ ಸಾಮರ್ಥ್ಯದ ಮೇಲೆ ಮತ್ತು ಇತರರು ಶಿಶುವನ್ನು ಅರ್ಥೈಸಿಕೊಳ್ಳಲು ಹೇಗೆ ಪ್ರಚೋದಿಸುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ ಎಂಬುದರ ಮೇಲೂ ಆಧಾರಿತವಾಗಿರುತ್ತದೆ. ಶಿಶುವಿನ ಭಾಷಾ ಕಲಿಕೆಯಲ್ಲಿ ಮಾತಿನ ಕಲಿಕೆ ಮೊದಲ ವರ್ಷದಲ್ಲಿ ಕಷ್ಟಕರವಾಗಿರುತ್ತದೆ. ಮಾತಿನ ಸಂಪೂರ್ಣ ಕಲಿಕೆಯು ಆಗುವವರೆಗೂ ವ್ಯಕ್ತಪಡಿಸುವಿಕೆಯು ಇತರ ಮಾರ್ಗಗಳಾದ ಮಾತಿನ ಪೂರ್ವರೂಪಗಳ ಮುಖಾಂತರ ತನ್ನ ಅಗತ್ಯತೆ ಮತ್ತು ಆಸೆಗಳನ್ನು ವ್ಯಕ್ತಪಡಿಸುತ್ತದೆ. ಒಂದು ವೇಳೆ ಮಾತಿನ ಪೂರ್ವರೂಪಗಳ ಮೂಲಕ ಶಿಶುವು ಸಂವಹನ ನಡೆಸುವಾಗ ಸಂವಹನವೂ ಸಂಪೂರ್ಣವಾಗಿ ಗುರಿಮುಟ್ಟಿದೆ ಮತ್ತು ಸಮರ್ಪಕವಾಗಿದೆ ಎಂದು ಅನಿಸಿದರೆ ಶಿಶುವು ಮಾತು ಕಲಿಯಲು ಹೆಚ್ಚು ಆಸಕ್ತಿ ಮತ್ತು ಅಭಿಪ್ರೇರಣೆಯನ್ನು ತೋರಿಸುತ್ತದೆ.

**ಮಾತಿನ ಪೂರ್ವ–ಸಂವಹನ ರೂಪಗಳು**

ಮಾತಿನ ಕಲಿಕೆಯ ಬೆಳವಣಿಗೆಯ ವಿನ್ಯಾಸದಲ್ಲಿ ನಾಲ್ಕು ರೂಪಗಳಿವೆ. ಅಳುವುದು, ತೊದಲು ನುಡಿಯುವುದು, ಸನ್ನೆ ಮಾಡುವುದು, ಮತ್ತು ಸಂವೇಗಾತ್ಮಕ ತೋರ್ಪಡಿಸುವಿಕೆಯನ್ನು ಬಳಸುವುದು.

**ಅಳುವುದು:** ಆಸ್ಮ್‌ವಾಲ್ಡ್ ಮತ್ತು ಪೆಲ್ಜಮನ್‌ರವರ ಪ್ರಕಾರ ಪ್ರಪಂಚದೊಂದಿಗೆ ಸಂವಹನ ನಡೆಸುವ ಶಿಶುವು ಬಳಸುವ ಮೊದಲ ಮಾರ್ಗವೇ ಅಳುವಾಗಿರುತ್ತದೆ. ಶಿಶುವಿನ ಅಳುವು ಕ್ರಮೇಣವಾಗಿ ಬೇರೆ ಬೇರೆ ಅವಶ್ಯಕತೆಗಳಿಗೆ ಬೇರೆ ಬೇರೆಯಾಗಿರುತ್ತದೆ.

**ತೊದಲು ನುಡಿಯುವುದು:** ಧ್ವನಿಯ ಯಂತ್ರಕ್ರಿಯೆಯು ಬೆಳವಣಿಗೆ ಹೊಂದುತ್ತಿದ್ದ ಹಾಗೆ ಶಿಶುವು ಅನೇಕ ಧ್ವನಿಗಳನ್ನು ಮಾಡಲು ಪ್ರಾರಂಭಿಸುತ್ತದೆ. ಶಿಶುಗಳು ಆರನೇ ತಿಂಗಳಿಗೆ ಬರುವಷ್ಟರಲ್ಲಿ ಕೆಲವು ಸ್ವರಗಳು ಮತ್ತು ವ್ಯಂಜನಗಳನ್ನು ಕೂಡಿಸಿ ಹೇಳಲು ಪ್ರಾರಂಭಿಸುತ್ತವೆ.

**ಸನ್ನೆ ಮಾಡುವುದು:** ಮಾತುಗಳನ್ನು ಆಡಲು ಬಾರದ ಕಾರಣ ಮಾತಿನ ಬದಲಾಗಿ ಶಿಶುಗಳು ಸನ್ನೆಯನ್ನು ಬಳಸುತ್ತವೆ. ಸಂಪೂರ್ಣ ವಾಕ್ಯವನ್ನು ಮಾಡುವ ಸಲುವಾಗಿ ಮಾತುಗಳ ಜೊತೆ ಸನ್ನೆಗಳನ್ನು ಕೂಡ ಉಪಯೋಗಿಸಿ ತಮ್ಮ ವಾಕ್ಯವನ್ನು ಪೂರ್ಣಗೊಳಿಸುತ್ತವೆ.

Digitised by Bharatavani, CIIL

**ಸಂವೇಗಾತ್ಮಕ ತೋರ್ಪಡಿಸುವಿಕೆ:** ಮಾತಿನ ಪೂರ್ವದ ಒಂದು ಮುಖ್ಯ ರೂಪ ಸಂವೇಗಾತ್ಮಕ ತೋರ್ಪಡಿಸುವಿಕೆ. ತಮ್ಮ ಸಂವೇಗಾತ್ಮಕ ಸ್ಥಿತಿಯನ್ನು ವ್ಯಕ್ತಪಡಿಸಲು ಶಿಶುವು ಮುಖಚರ್ಯೆಯನ್ನು ಹೆಚ್ಚು ಬಳಸುತ್ತದೆ. ಇದರಿಂದ ಮುಖಚರ್ಯೆ ಮತ್ತು ದೈಹಿಕವಾಗಿ ತೋರ್ಪಡಿಸುವಿಕೆಯನ್ನು ಅರ್ಥೈಸಿಕೊಳ್ಳುವುದು ಸುಲಭವಾಗಿರುತ್ತದೆ. ಮಾತನಾಡುವ ಪ್ರಕ್ರಿಯೆಯು ಮೂರು ಬೇರೆ ಬೇರೆ ಮತ್ತು ಕಷ್ಟಕರವಾದ ಕೆಲಸಗಳನ್ನು ಒಳಗೊಂಡಿರುತ್ತದೆ. ಶಿಶುಗಳು ಶಬ್ದಗಳನ್ನು ಹೇಗೆ ಉಚ್ಚರಿಸಬೇಕು, ಅರ್ಥವನ್ನು ಒಳಗೊಂಡಿರುವಂತಹ ಶಬ್ದಗಳನ್ನು ಬಳಸಿ ಇತರರೊಂದಿಗೆ ಸಂವಹನ ನಡೆಸಬೇಕು, ಇತರರಿಗೆ ಅರ್ಥೈಸುವ ಹಾಗೆ ಮಾತನಾಡುವುದು ಹೇಗೆ ಮತ್ತು ಪದಗಳನ್ನು ಅರ್ಥಪೂರ್ಣ ವಾಕ್ಯವಾಗುವಂತೆ ಜೋಡಿಸುವುದು ಹೇಗೆ.

**ಉಚ್ಚರಿಸುವಿಕೆ:** ಶಿಶುವು ಭಾಗಶಃ ಪದಗಳನ್ನು ಪ್ರಯತ್ನದೋಷ ಕಲಿಕೆಯಿಂದ ಮತ್ತು ಇತರರ ಮಾತುಗಳನ್ನು ಅನುಕರಿಸುವುದರ ಮೂಲಕ ಕಲಿಯುತ್ತದೆ.

**ಪದಸಂಪತ್ತು:** ಶಿಶುಗಳು ಹೆಸರುಗಳು ಮತ್ತು ಕ್ರಿಯಾ ಪದಗಳನ್ನು ಸಂಗ್ರಹಿಸುತ್ತಾ ಬಳಸುತ್ತಾ ನಂತರದ ಹಂತದಲ್ಲಿ ಇನ್ನುಳಿದ ತರಹದ ಪದಗಳನ್ನು ಕ್ರಮೇಣವಾಗಿ ಬಳಸುತ್ತಾ ತಮ್ಮ ಪದಸಂಪತ್ತನ್ನು ಬೆಳೆಸಿಕೊಳ್ಳುತ್ತವೆ.

ಭಾಷಾ ಬೆಳವಣಿಗೆಯು ಒಂದು ವಿನ್ಯಾಸವನ್ನು ಅನುಸರಿಸುತ್ತದೆ. ಶಿಶುವು ಎರಡನೆ ತಿಂಗಳಿಗೆ ಅಕ್ಷರಗಳ ಧ್ವನಿಗಳನ್ನು ಹೊರಡಿಸಲು ಪ್ರಾರಂಭಿಸುತ್ತದೆ. ನಾಲ್ಕನೇ ತಿಂಗಳಿಗೆ ತೊದಲು ನುಡಿಯಲು ಮತ್ತು ಧ್ವನಿಗಳನ್ನು ಪುನರ್‌ರಾವರ್ತಿಸಲು ಪ್ರಾರಂಭಿಸುತ್ತದೆ. ನಂತರ ಕೆಲ ತಿಂಗಳಲ್ಲಿ ಅಕ್ಷರಗಳನ್ನು ರೂಢಿಸಿ ಶಬ್ದಗಳನ್ನು ಸರಳ ಹೇಳುತ್ತದೆ. ಕೊನೆಯಲ್ಲಿ ವಿವಿಧ ಶಬ್ದಗಳ ಒಟ್ಟುಗೂಡಿಸಿ ಹೇಳಲು ಪ್ರಾರಂಭಿಸುತ್ತವೆ. ನಾಲ್ಕರಿಂದ ಆರು ತಿಂಗಳ ಶಿಶುವು ಧ್ವನಿಗಳನ್ನು ಹೆಚ್ಚಿಸಿ ಮತ್ತು ತಗ್ಗಿಸಿ ಕೂಗುತ್ತದೆ ಮತ್ತು ಆ ಸಮಯದಲ್ಲಿ ತಮ್ಮ ಮಾತೃ ಭಾಷೆಯ ಮೂಲ ಧ್ವನಿಗಳನ್ನು ಕಲಿಯುತ್ತದೆ. ಶಿಶುಗಳು ಇತರರನ್ನು ಅನುಕರಿಸಲು ಮಾತ್ರವಲ್ಲ ಇತರರ ಗಮನ ತಮ್ಮತ್ತ ಸೆಳೆಯಲೂ ಸಹ ಧ್ವನಿಗಳನ್ನು ಬಳಸುತ್ತವೆ. ಪೋಷಕರು ಶಿಶುವು ಮಾತು ಕಲಿಯಲು ನೆರವಾಗಲಿ ಎಂದು ಶಿಶುವಿನೊಂದಿಗೆ ಮಾತನಾಡುವ ಪ್ರಕ್ರಿಯೆಯಿಂದ ಶಿಶುವಿನಲ್ಲಿ ಭಾಷಾ ಬೆಳವಣಿಗೆಗೆ ಹೆಚ್ಚು ಅನುಕೂಲವಾಗಿರುತ್ತದೆ. ಮಾತುಗಳನ್ನು ಸರಳವಾಗಿ ಸರಳ ವಾಕ್ಯಗಳಲ್ಲಿ ಬಳಸುವುದು ಮತ್ತು ಭಾವನೆಗಳಿಂದ ಕೂಡಿದ ಶಬ್ದೋಚ್ಚಾರಣೆ ಇವೆಲ್ಲವೂ ಶಿಶುವನ್ನು ಮಾತಿಗೆ ಗಮನ ನೀಡಿ ಶಬ್ದಗಳನ್ನು ಬೇರ್ಪಡಿಸಲು ಮತ್ತು ಭಾಷೆಯನ್ನು ಕಲಿಯಲು ನೆರವು ನೀಡುತ್ತವೆ ಎಂದು ಹ್ಯಾಪ್‌ಸನ್ ಮತ್ತು ನೆಲಸನ್ (1993) ರವರು ತಿಳಿಸುತ್ತಾರೆ. ಶಿಶುವು ಹನ್ನೆರಡನೆ ತಿಂಗಳಿಗೆ ಅಮ್ಮ – ಅಪ್ಪ ಎಂಬ ಪದಗಳು ತನ್ನ ಪೋಷಕರೊಂದಿಗೆ ಬಾಂಧವ್ಯ ಮತ್ತು ಅವರೊಂದಿಗೆ ಸಂಪರ್ಕಿಸುವುದಕ್ಕಾಗಿ ಕಲಿಯುವ ಪದಗಳಾಗಿರುತ್ತವೆ. ಮುಂದೆ ಹನ್ನೆರಡರಿಂದ ಹದಿನೈದು ತಿಂಗಳುಗಳವರೆಗೆ ಒಂದು ಪದದ ವಾಕ್ಯವನ್ನು ಮಾಡಲು ಪ್ರಯತ್ನಿಸುತ್ತವೆ. ಉದಾ: ಮೇಲೆ, ಕೆಳಗೆ, ಬಾ ಹೋಗು ಮುಂತಾದುವು. ಪ್ರಾರಂಭದಲ್ಲಿ ಈ ಪದಗಳನ್ನು ತಮ್ಮನ್ನೇ, ವರ್ಣಿಸಲು ಅಥವಾ ತಮ್ಮ ಚಟುವಟಿಕೆಗಳನ್ನು ವರ್ಣಿಸಲು ಬಳಸುತ್ತವೆ. ನಂತರ ಇತರರ ವರ್ತನೆಗಳನ್ನು ವರ್ಣಿಸಲು ಈ ಪದಗಳನ್ನು ಬಳಸುತ್ತವೆ. ನಂತರ ಎರಡು ಬೇರೆ ಬೇರೆ ಪದಗಳನ್ನು ಬಳಸಿ ವಾಕ್ಯಮಾಡಲು ಬಾರದ ಕಾರಣ ಎರಡು ಪದಗಳನ್ನು ಸೇರಿಸಿ ಒಂದು ಸಂಕೀರ್ಣ ಪದವಾಗಿ ಮಾಡುತ್ತವೆ. ಈ ವಯಸ್ಸಿನಲ್ಲಿ ಶಿಶುವು ವಸ್ತುಗಳಿಂದ ಆಕರ್ಷಿತವಾಗಿರುತ್ತದೆ. ಒಂದು ವೇಳೆ ವಸ್ತುವಿನ ಹೆಸರು ಗೊತ್ತಿಲ್ಲದಿದ್ದರೆ ಬೇರೆ ಯಾವುದಾದರೂ ಹೆಸರನ್ನು ಬಳಸುತ್ತಾರೆ. ಅಥವಾ ತಾವೇ ಒಂದು ಪದವನ್ನು ಹುಡುಕಿ ಅದನ್ನು ಕರೆಯುತ್ತಾರೆ. ಪೋಷಕರಿಂದ ಅದಕ್ಕೆ ಬರುವ ಹಿಮ್ಮಾಹಿತಿಯಿಂದ ಹೊಸ ಪದವನ್ನು ಕಲಿಯುತ್ತಾರೆ. ಅಂದರೆ ಶಿಶುವು ತಪ್ಪಾಗಿ ಹೇಳುವಾಗ ಪೋಷಕರು ಅದರ ಹೆಸರು ಹಾಗಲ್ಲ, ಹೀಗೆ ಎಂದು ಹೇಳಿದಾಗ ಹೊಸದಾಗಿ ಪದವನ್ನು ಕಲಿಯುತ್ತಾರೆ. ಪ್ರಾರಂಭಿಕ ಹಂತದಿಂದಲೂ ಶಿಶುವು ಪದಗಳನ್ನು ಹೇಳಲು ಪ್ರಯತ್ನಿಸಿದಾಗ ಪೋಷಕರು ಆ ವರ್ತನೆಗೆ ತಮ್ಮ ಮುಗುಳ್ನಗೆ ಮತ್ತು ಗಮನ ನೀಡುವುದರ ಮುಖಾಂತರ ಪುನರ್ಬಲನ ನೀಡುತ್ತಾರೆ.

ಬಹಳಷ್ಟು ಮನೋವಿಜ್ಞಾನಿಗಳು ಮತ್ತು ಭಾಷಾತಜ್ಞರುಗಳು ಒಂದು ಭಾಷೆಯನ್ನು ಕಲಿಯುವಾಗ ಶಿಶುವು ಭಾಷೆಯ ವೇಗ, ನಿಖರತೆ, ಮತ್ತು ಮೂಲಭೂತತೆಯನ್ನು ಕಲಿಕೆಯಿಂದಲೇ ವಿವರಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ನೋಮ್ ಚಾಮಸ್ಕಿ (1965, 1986) ರವರ ಪ್ರಕಾರ ಶಿಶುವಿಗೆ ಭಾಷೆಯನ್ನು ಕಲಿಯುವ ಆಂತರಿಕ ಸಾಮರ್ಥ್ಯವಿರುತ್ತದೆ. ಇದನ್ನು ಭಾಷಾ ಉಪಾರ್ಜನಾ ಸಾಧನವೆಂಬ (Language Acquifition Device-LAD) ಆಂತರಿಕ ತಂತ್ರ ಎನ್ನುತ್ತಾರೆ. ಮತ್ತು ಅದು ಭಾಷಾ ಕಲಿಯುವಿಕೆ ಮತ್ತು ಅದನ್ನು ಬಳಸುವಿಕೆಯಲ್ಲಿ ಸಹಾಯ ಮಾಡುತ್ತದೆ. ಈ ಭಾಷಾ ಉಪಾರ್ಜನಾ ಸಾಧನವು ಶಿಶುವಿಗೆ ಭಾಷೆಯ ವಾಕ್ಯರಣದ ಮೂಲ ನಿಯಮಗಳು, ತಾವು ಕೇಳಿಸಿಕೊಳ್ಳುವುದನ್ನು ಅರ್ಥೈಸಿಕೊಳ್ಳಲು ಮತ್ತು ತಮ್ಮದೇ ಆದ ವಾಕ್ಯವನ್ನು ಮಾಡಲು ಸಹಾಯ ಮಾಡುತ್ತದೆ. ಈ ಸಾಧನವು ಶಿಶುವಿನಲ್ಲಿ ಭಾಷಾ ನಕ್ಷೆಯು ಇದ್ದಂತೆ. ಶಿಶುವು ತನ್ನ ಸುತ್ತಮುತ್ತಲಿನ ಪರಿಸರದಿಂದ ಮಾಹಿತಿಗಳನ್ನು ಸಂಗ್ರಹಿಸಿ ಖಾಲಿ ಇಟ್ಟ ಸ್ಥಳಗಳನ್ನು ತುಂಬಿಕೊಳ್ಳುವುದರ ಮುಖಾಂತರ ಭಾಷೆಯನ್ನು ಕಲಿಯುತ್ತದೆ. ಜನರ ಮಾತಿನಿಂದ ಬರುವ ಸಾಮಾಜಿಕ ಪ್ರಚೋದನೆಯು ಭಾಷಾ ಕಲಿಕೆಗೆ ಸಹಾಯ ಮಾಡುತ್ತದೆ ಎಂದು ವೈಗೋಸ್ಕಿ ಅಭಿಪ್ರಾಯ ಪಡುತ್ತಾರೆ. ಪೋಷಕರು ಮತ್ತು ಶಿಶುವಿನ ಸುತ್ತಮುತ್ತಲಿರುವ ಹಿರಿಯರು ಶಿಶುವು ತೊದಲ್ನುಡಿಯುವಾಗ ಮುಗಳ್ನಗದೇ ಮತ್ತು ಪ್ರಶಂಸೆ ಮಾಡದೇ ಇದ್ದರೆ ಅಂತಹ ಶಿಶುಗಳು ಮಾತನಾಡಲು,ಕಲಿಯಲು ಹೆಚ್ಚು ಸಮಯ ತೆಗೆದುಕೊಳ್ಳುತ್ತವೆ.

**ನೈತಿಕ ವಿಕಾಸ:** ಹುಟ್ಟಿದ ಶಿಶುವಿನಲ್ಲಿ ಯಾವುದೇ ತರಹದ ಮೌಲ್ಯಗಳಾಗಲಿ ಅಥವಾ ಅದರ ಅರಿವಾಗಲಿ ಇರುವುದಿಲ್ಲ. ಆದ್ದರಿಂದ ಈ ಹಂತವನ್ನು ನೀತಿ ರಹಿತತೆಯ ಹಂತ ಎಂದು ಹೇಳಬೇಕು. ಶಿಶುವು ಬೆಳೆದಂತೆಲ್ಲಾ ಕ್ರಮೇಣವಾಗಿ ತಮ್ಮ ತಂದೆ ತಾಯಿಗಳಿಂದ ನೈತಿಕತೆಯನ್ನು ಕಲಿಯುತ್ತದೆ. ಹಾಗೆಯೇ ಮುಂದೆ ಬೆಳೆದಂತೆ ತಮ್ಮ ಹಿರಿಯರು, ಗುರುಗಳು ಮತ್ತು ಸಹಪಾಠಿಗಳಿಂದಲೂ ಸಹ ಕಲಿಯುತ್ತಾ ಹೋಗುತ್ತಾರೆ. ಸಾಮಾಜಿಕವಾಗಿ ಒಪ್ಪಿಗೆಯಾಗುವ ರೀತಿಯಲ್ಲಿ ವರ್ತಿಸಲು ಕಲಿಯುವುದು ದೀರ್ಘವಾದ ಮತ್ತು ನಿಧಾನವಾದ ಪ್ರಕ್ರಿಯೆ. ಆದರೆ ನೈತಿಕತೆಯನ್ನು ಕಲಿಯಲು ಅಡಿಪಾಯವು ಶೈಶವಾವಸ್ಥೆಯಲ್ಲೇ ಪ್ರಾರಂಭವಾಗುತ್ತದೆ.

ಶಿಶುವು ಪ್ರಾರಂಭದಲ್ಲಿ ತನ್ನ ವರ್ತನೆಯ ಸರಿ, ತಪ್ಪುಗಳನ್ನು ನಿರ್ಧರಿಸಲು ಯಾವ ವರ್ತನೆ ತನಗೆ ಸಂತೋಷವನ್ನು ನೀಡುತ್ತದೆ ಅಥವಾ ನೋವನ್ನು ನೀಡುತ್ತದೆ ಎಂಬುದರ ಆಧಾರದ ಮೇಲೆ ನಿರ್ಧರಿಸುತ್ತದೆ. ತಮ್ಮ ಮೇಲೆ ಯಾವುದೆ ರೀತಿಯಲ್ಲಿ ಹಾನಿಯುಂಟಾಗುವ ವರ್ತನೆಯನ್ನು ತಪ್ಪೆಂದು ಪರಿಗಣಿಸುತ್ತದೆ. ಶಿಶುವಿಗೆ ಯಾವುದೇ ರೀತಿಯ ಅಪರಾಧಿ ಮನೋಭಾವವಿರುವುದಿಲ್ಲ. ಇತರರ ವಸ್ತುಗಳನ್ನು ತೆಗೆದುಕೊಂಡಾಗ ಶಿಶುವಿಗೆ ಅಪರಾಧಿ ಮನೋಭಾವ ಕಾಡುವುದಿಲ್ಲ. ಏಕೆಂದರೆ ತಮ್ಮ ವಸ್ತುಗಳು ಮತ್ತು ಇತರರ ವಸ್ತುಗಳ ಹಕ್ಕುಗಳ ಬಗ್ಗೆ ಅವುಗಳಿಗೆ ತಿಳುವಳಿಕೆ ಇರುವುದಿಲ್ಲ.


Digitised by Bharatavani, CIIL

ಶಿಶುವು ತೋರುವ ಸರಿಯಾದ ವರ್ತನೆಗಳನ್ನು ಪೋಷಕರು ಪ್ರೋತ್ಸಾಹಿಸಿ ತಪ್ಪು ವರ್ತನೆಗಳಿಗೆ ತಮ್ಮ ಅಸಹನೆ, ಕೋಪ ಅಥವಾ ತಮಗೆ ಇಷ್ಟವಾಗಲಿಲ್ಲವೆಂದು ಪ್ರತಿ ಸಂದರ್ಭದಲ್ಲೂ ವ್ಯಕ್ತಪಡಿಸುವುದರಿಂದ ಶಿಶುವು ಕ್ರಮೇಣ ಸರಿ, ತಪ್ಪುಗಳ ಕಲ್ಪನೆಯನ್ನು ಬೆಳೆಸಿಕೊಳ್ಳುತ್ತದೆ.

ಎರಡನೇ ವರ್ಷಕ್ಕೆ ಬರುವ ಶಿಶುವು ತನ್ನ ವರ್ತನೆಗಳಲ್ಲಿ ಪ್ರಯೋಗಗಳನ್ನು ನಡೆಸಿರುತ್ತದೆ. ಅಂತಹ ಸಂದರ್ಭದಲ್ಲಿ ತಂದೆ ತಾಯಿಗಳು ಮತ್ತು ಇತರರು ಸರಿ, ವರ್ತನೆಗಳನ್ನು ಮಾತ್ರ ಪ್ರೋತ್ಸಾಹಿಸಬೇಕು ಮತ್ತು ತಪ್ಪು ವರ್ತನೆಯನ್ನು ಪ್ರತಿ ಬಾರಿಯೂ ತಪ್ಪೆಂದು ವ್ಯಕ್ತಪಡಿಸಬೇಕು. ಆಗಲೇ ಶಿಶುವು ಅರ್ಥೈಸಿಕೊಂಡು ಮುಂದೆ ತನ್ನ ವರ್ತನೆಯನ್ನು ತಿದ್ದಿಕೊಳ್ಳಲು ಸಹಾಯವಾಗುತ್ತದೆ.

ಶೈಶವಾವಸ್ಥೆಯಲ್ಲಿ ಶಿಶುವಿನ ತಪ್ಪು ವರ್ತನೆಗೆ ಅದನ್ನು ದಂಡಿಸಲಾಗುವುದಿಲ್ಲ. ಏಕೆಂದರೆ ಅದಕ್ಕೆ ಇನ್ನೂ ಸರಿ, ತಪ್ಪಿನ ಅರಿವು ಬಂದಿರುವುದಿಲ್ಲ. ಶಿಶುವಿಗೆ ಶಿಸ್ತು, ವಿನಯಗಳನ್ನು ಕಲಿಸುವುದರಿಂದ ಸರಿ, ತಪ್ಪುಗಳನ್ನು ಕಲಿಸಬಹುದು ಮತ್ತು ಆ ವರ್ತನೆಗಳಿಗೆ ಒಪ್ಪಿಗೆ ಮತ್ತು ವಾತ್ಸಲ್ಯಗಳನ್ನು ತೋರುವುದರಿಂದ ಶಿಶುವು ಆ ವರ್ತನೆಗಳನ್ನು ಮತ್ತೆ ಮತ್ತೆ ಮಾಡುತ್ತದೆ. ಶಿಶುವು ತಂದೆ ತಾಯಿಗಳ ಹೊಗಳಿಕೆ ಮಾತುಗಳು, ಶಬ್ದಗಳು ಮತ್ತು ಮುಖಚರ್ಯೆಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳುತ್ತದೆ ಮತ್ತು ಇವುಗಳ ಮುಖಾಂತರ ನೈತಿಕತೆಯ ಬೆಳವಣಿಗೆಯಾಗುತ್ತದೆ.

–ಎಸ್.ಸು

## ಶೈಕ್ಷಣಿಕ ಅರ್ಥಶಾಸ್ತ್ರ – ಸ್ವರೂಪ ಮತ್ತು ವ್ಯಾಪ್ತಿ

ಅರ್ಥಶಾಸ್ತ್ರ ಒಂದು ಸಮಾಜ ವಿಜ್ಞಾನ. **ಚಾಣಕ್ಯ**ನ ಅರ್ಥಶಾಸ್ತ್ರ ಅತ್ಯಂತ ಪುರಾತನವಾದುದು. ಆದರೆ ಅರ್ಥಶಾಸ್ತ್ರದ ಪಿತಾಮಹ ಎನಿಸಿಕೊಂಡವನು ಇಂಗ್ಲೆಂಡಿನ **ಆಡಂ ಸ್ಮಿತ್**. ಇವನು ಬರೆದ 'ಅನ್ ಎನ್ಕ್ವೊಯರಿ ಇನ್ ಟು ದಿ *ನೇಚರ್ ಅನ್ಡ್ ಕಾಸಸ್ ಆಫ್ ವೆಲ್ತ್ ಆಫ್ ನೇಶನ್ಸ್*' (*An Enquiry into the Nature and Causes of Wealth of Nations*) ಎಂಬ ಗ್ರಂಥವು ಮೊಟ್ಟ ಮೊದಲನೆಯ ಅರ್ಥಶಾಸ್ತ್ರದ ಗ್ರಂಥವೆಂದು ಪ್ರಸಿದ್ಧವಾಗಿದೆ.



**ಆಡಂ ಸ್ಮಿತ್**

ಅರ್ಥಶಾಸ್ತ್ರದಲ್ಲಿ ಮಾನವನ ದೈನಂದಿನ ಚಟುವಟಿಕೆಗಳಾದ ಹಣ ಸಂಪಾದಿಸುವುದು ಮತ್ತು ಅದನ್ನು ಖರ್ಚುಮಾಡಿ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ವಿಷಯವನ್ನು ಅಭ್ಯಾಸ ಮಾಡಲಾಗುತ್ತದೆ. ಈಗಿನ ಕಾಲದಲ್ಲಿ ಅರ್ಥಶಾಸ್ತ್ರವು ಕೇವಲ ಅಷ್ಟನ್ನು ಮಾತ್ರ ಒಳಗೊಂಡಿದೆ ಎಂದರೆ ಸರಿ ಹೋಗುವುದಿಲ್ಲ. ಅದು ಮಾನವನ ಎಲ್ಲ ಆರ್ಥಿಕ ಚಟುವಟಿಕೆಗಳನ್ನೂ ಒಳಗೊಂಡಿದೆ. ಅವನು ಮಾಡುವ ಉತ್ಪಾದನೆ, ಉಪಭೋಗ, ಸಂಪನ್ಮೂಲಗಳ ಹಂಚಿಕೆ, ಸಂಪಾದನೆ ಮುಂತಾದವುಗಳನ್ನು ಅರ್ಥಶಾಸ್ತ್ರ ಒಳಗೊಂಡಿದೆ. ಮಾನವನ ನಾಗರಿಕ ಜೀವನ ಮುಂದುವರೆದಂತೆ, ವಿಜ್ಞಾನ ಬೆಳೆದಂತೆ, ಅರ್ಥಶಾಸ್ತ್ರ ಒಳಗೊಂಡಿರುವ ವಿಷಯಗಳೂ ವಿಸ್ತಾರವಾಗುತ್ತಾ ಸಾಗಿದೆ.

**ಥಿಯೊಡರ್ ಶುಲ್ಟ್ಸ್**

ಅರ್ಥಶಾಸ್ತ್ರದ ಪ್ರಾಮುಖ್ಯವು ಎಲ್ಲಾ ಕ್ಷೇತ್ರಗಳಲ್ಲೂ ಕಂಡುಬರುತ್ತದೆ. ಅದನ್ನು ಕೇವಲ ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಲ್ಲದೆ, ವೈದ್ಯಕೀಯ ವಿದ್ಯಾರ್ಥಿಗಳು, ಇಂಜಿನಿಯರಿಂಗ್ ವಿದ್ಯಾರ್ಥಿಗಳು, ಗೃಹ ವಿಜ್ಞಾನದ ವಿದ್ಯಾರ್ಥಿಗಳು, ಎಲ್ಲರೂ ಅಭ್ಯಾಸ ಮಾಡುವುದು ಅವಶ್ಯವಾಗಿದೆ. ಅದರ ಪ್ರಾಮುಖ್ಯವನ್ನು ಎಲ್ಲಾ ಕ್ಷೇತ್ರಗಳ ಗಿಂತ ಮುಖ್ಯವಾಗಿ ಶಿಕ್ಷಣ ಶಾಸ್ತ್ರದಲ್ಲಿ, ಶೈಕ್ಷಣಿಕ ಅರ್ಥಶಾಸ್ತ್ರ ಎಂಬ ಹೆಸರಿನಲ್ಲಿ ಇತ್ತೀಚೆಗೆ ಪ್ರಸಿದ್ಧಿಯನ್ನು ಪಡೆದಿದೆ. ಸುಮಾರು 1962ರಿಂದೀಚೆಗೆ ಶೈಕ್ಷಣಿಕ ಅರ್ಥಶಾಸ್ತ್ರವು ಪ್ರಪಂಚದಾದ್ಯಂತ ಒಂದು ಪ್ರಮುಖ ವಿಷಯವಾಗಿ ಬೆಳೆಯುತ್ತಿದೆ. ಶೈಕ್ಷಣಿಕ ಅರ್ಥಶಾಸ್ತ್ರದ ಉಗಮವು 1960 ರಲ್ಲಿ ಶಿಕಾಗೋ ವಿಶ್ವವಿದ್ಯಾನಿಲಯದಲ್ಲಿ ವ್ಯವಸಾಯ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಥಿಯೋಡರ್ ಡಬ್ಲ್ಯೂ ಷೂಲ್ಟ್ಸ್‌ರವರು ಅಮೇರಿಕಾದ ಅರ್ಥಶಾಸ್ತ್ರದ ಸಂಘವನ್ನು ಉದ್ದೇಶಿಸಿ ಮಾಡಿದ ಭಾಷಣದಿಂದಾಯಿತು ಎನ್ನಬಹುದು. ಆಗಲೇ 'ಮಾನವ ಬಂಡವಾಳ' (Human Capital) ಎಂಬ ಪರಿಕಲ್ಪನೆ ಉಂಟಾದದ್ದು .

'ಶೈಕ್ಷಣಿಕ ಅರ್ಥಶಾಸ್ತ್ರ' ಎಂಬುದು ಒಂದು ಸಂಯುಕ್ತ ಪರಿಕಲ್ಪನೆ. ಅದು ಹಲವಾರು ವಿಷಯಗಳನ್ನೊಳಗೊಂಡಿದೆ. ಶಿಕ್ಷಣವು ಒಂದು ಉಪಭೋಗವಾಗಿದೆ, ಒಂದು ಬಂಡವಾಳ ಹೂಡಿಕೆಯಾಗಿದೆ ಎಂಬುದು ಮತ್ತು ಶಿಕ್ಷಣದ ವೆಚ್ಚ, ಶಿಕ್ಷಣದ ಪ್ರತಿಫಲ, ಶೈಕ್ಷಣಿಕ ಹಣಕಾಸು, ಶಿಕ್ಷಣದ ಉತ್ಪಾದಕತ್ವ, ಮಾನವ ಶಕ್ತಿ ಯೋಜನೆ ಮತ್ತು ಶಿಕ್ಷಣ, ಆರ್ಥಿಕ ಪ್ರಗತಿಯಲ್ಲಿ ಶಿಕ್ಷಣದ ಕೊಡುಗೆ, ಮುಂತಾದ ವಿಷಯಗಳು ಅದರಲ್ಲಿರುವ ವಿಷಯಗಳು. (ಜಾನ್ ವೇಜ್ ಮತ್ತು ಎಂ. ಡೆಬೇನುವೈಸ್: 'ಎಕನಾಮಿಕ್ ಆಸ್ಪೆಕ್ಟ್ಸ್ ಆಫ್ ಎಜುಕೇಷನಲ್ ಡೆವಲಪ್‌ಮೆಂಟ್' 1961–ನ್ಯೂಯಾರ್ಕ್–ಕ್ರೋವೆಲ್–ಕೋಲಿಯರ್).

ಶಿಕ್ಷಣದಲ್ಲಿ ಆರ್ಥಿಕ ವಿಶ್ಲೇಷಣೆಯನ್ನು ಮಾಡುವಾಗ ಉದ್ಭವವಾಗುವ ಹಲವು ಪ್ರಶ್ನೆಗಳು ಎಂದರೆ, ಒಂದು ದೇಶವು ಶಿಕ್ಷಣಕ್ಕಾಗಿ ಎಷ್ಟು ಹಣವನ್ನು ವೆಚ್ಚಮಾಡಬೇಕು? ಆ ವೆಚ್ಚಕ್ಕೆ ಹೇಗೆ ಹಣವನ್ನು ಒದಗಿಸಿಕೊಳ್ಳಬೇಕು? ಶಿಕ್ಷಣವು ಮುಖ್ಯವಾಗಿ ಒಂದು 'ಉಪಭೋಗ'ವೋ ಅಥವಾ 'ಬಂಡವಾಳ ಹೂಡಿಕೆ'ಯೋ? ಒಂದು ವೇಳೆ ಅದು ಬಂಡವಾಳ ಹೂಡಿಕೆಯಾದರೆ ಅದು ಇತರ ಕ್ಷೇತ್ರಗಳಲ್ಲಿ (ಎಂದರೆ ಶ್ರಮ ಮತ್ತು ವಸ್ತುಗಳಲ್ಲಿ) ಹೂಡಲಾಗುವ ಬಂಡವಾಳಕ್ಕೆ ಹೋಲಿಸಿದಾಗ ಉತ್ಪಾದಿಸುವ ಪ್ರತಿಫಲದ ಪ್ರಮಾಣವೇನು? ಒಂದು ವೇಳೆ ಅದು ಉಪಭೋಗವಾದರೆ, ಹೆಚ್ಚಿನ ಮತ್ತು ಉತ್ತಮ ಶಿಕ್ಷಣಕ್ಕಿರುವ ವ್ಯಕ್ತಿಗತ ಬೇಡಿಕೆಯ ನಿರ್ಧಾರಕಗಳು ಯಾವುವು? ಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿಯ ಸಮಯ, ಶಿಕ್ಷಕರು, ಕಟ್ಟಡ ಮತ್ತು ಬೋಧನೋಪಕರಣಗಳ ಅತ್ಯಂತ ಉತ್ತಮವಾದ ಸಂಯೋಗದ ಪ್ರಮಾಣವೇನು? ಶಿಕ್ಷಣದ ಪಿರಮಿಡ್‌ನ ಅತ್ಯಂತ ಉತ್ತಮವಾದ ಸಂರಚನೆ ಎಂದಾದರೆ ಶಿಕ್ಷಣದ ವಿವಿಧ ಹಂತಗಳಲ್ಲಿನ ಮತ್ತು ವಿವಿಧ ಶಾಖೆಗಳಲ್ಲಿನ ಪ್ರಮಾಣ ಯಾವುದು? ದೇಶದ ಮಾನವ ಸಂಪನ್ಮೂಲದ ಒಟ್ಟಾರೆ ಅಭಿವೃದ್ಧಿಯಲ್ಲಿ ಹಾಗೂ ದೇಶದ ಪ್ರಗತಿಯ ಕ್ಷಿಪ್ರತೆಗೆ ಶಿಕ್ಷಣದ ಕೊಡುಗೆ ಏನು? ಈ ಪ್ರಶ್ನೆಗಳು ಶೈಕ್ಷಣಿಕ ಅರ್ಥಶಾಸ್ತ್ರದ ಎರಡು ವಿಭಾಗಗಳನ್ನು ಪರಿಚಯಿಸುತ್ತವೆ: 1) ಶಿಕ್ಷಣದ ಆರ್ಥಿಕ ಮೌಲ್ಯದ ಸಮೀಕ್ಷೆ ಮತ್ತು 2) ಶಿಕ್ಷಣ ಪದ್ಧತಿಯ ಆರ್ಥಿಕ ನೋಟ. ಮೊದಲನೆಯದು, ಶ್ರಮದ ಉತ್ಪಾದಕ ಶಕ್ತಿ, ಉದ್ಯೋಗಗಳ ಮತ್ತು ಆದಾಯದ ಹಂಚಿಕೆಗಳ

Digitised by Bharatavani, CIIL

ಮೇಲೆ ಶಿಕ್ಷಣದ ಪ್ರಭಾವವೇನು ಎಂಬುದನ್ನು ಒಳಗೊಂಡಿದ್ದರೆ, ಎರಡನೆಯದು ಶಿಕ್ಷಣ ಸಂಸ್ಥೆಗಳ ದಕ್ಷತೆ, ಅವುಗಳು ಶಿಕ್ಷಣಕ್ಕಾಗಿ ಮಾಡುವ ವೆಚ್ಚ ಮತ್ತು ಅವುಗಳನ್ನು ಭರಿಸುವ ವಿಧಾನಗಳನ್ನು ಒಳಗೊಂಡಿದೆ. (ಎಂ. ಬ್ಲಾಗ್: 'ಎಕನಾಮಿಕ್ಸ್ ಆಫ್ ಎಜುಕೇಷನ್': ಎರಡನೇ ಸಂಪುಟ: ಇ.ಎಲ್.ಬಿ.ಎಸ್.1972) ಹೀಗೆ ಶೈಕ್ಷಣಿಕ ಅರ್ಥಶಾಸ್ತ್ರವು ತನ್ನದೇ ಆದ ಒಂದು ವಿಶಿಷ್ಟವಾದ ಸ್ವರೂಪವನ್ನು ಹೊಂದಿದೆ.

ಶೈಕ್ಷಣಿಕ ಅರ್ಥಶಾಸ್ತ್ರವು ಹೊಂದಿರುವ ವ್ಯಾಪ್ತಿ ಬಹಳ ವಿಶಾಲವಾದುದು. ಮೊದಲು ಅರ್ಥಶಾಸ್ತ್ರದ ವ್ಯಾಖ್ಯೆಯನ್ನು ಸೂಕ್ಷ್ಮವಾಗಿ ನೋಡೋಣ. ಅರ್ಥಶಾಸ್ತ್ರವನ್ನು ಕಾಲದಿಂದ ಕಾಲಕ್ಕೆ ಅನೇಕ ಅರ್ಥಶಾಸ್ತ್ರಜ್ಞರು ವಿಧ ವಿಧವಾದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಆಡಂ ಸ್ಮಿತ್‌ನು ಅದನ್ನು "ಒಂದು ಆರ್ಥಿಕ ವಿಜ್ಞಾನ" ಎಂದು ವಿವರಿಸಿದನು. ನಂತರ ಮಾರ್ಷಲನು ಅರ್ಥಶಾಸ್ತ್ರವನ್ನು "ದೈನಂದಿನ ಜೀವನದಲ್ಲಿ ನಿರತನಾದ ಮಾನವನ ಬಗ್ಗೆ ಅಭ್ಯಾಸಮಾಡುವ ಶಾಸ್ತ್ರ" ಎಂದು ಹೇಳಿದನು. ಇನ್ನೂ ಹೆಚ್ಚು ವಿವರವಾಗಿ ಆಧುನಿಕ ಅರ್ಥಶಾಸ್ತ್ರಜ್ಞನಾದ ರಾಬಿನ್ಸನು ಅದನ್ನು "ಅಭಾವದ ಶಾಸ್ತ್ರ" ಎಂದನು. ಮಾನವನ ಇಚೆಗಳು ಅಪರಿಮಿತ ಆದರೆ ಅವುಗಳನ್ನು ಈಡೇರಿಸಿಕೊಳ್ಳುವ ಮಾರ್ಗಗಳು ವಿರಳ. ಆದ್ದರಿಂದ ಹೇಗೆ ಮಾನವನು ತನ್ನ ಇಚ್ಛೆಗಳನ್ನು ಆಯ್ಕೆಮಾಡಿಕೊಂಡು ಅವುಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾನೆ ಎಂಬುದನ್ನು ಅದು ತಿಳಿಸುತ್ತದೆ". ಎಂದು ವಿವರಿಸಿದನು. ಈಗ ಅರ್ಥಶಾಸ್ತ್ರವನ್ನು ಇನ್ನೂ ವಿಶಾಲವಾದ ಅರ್ಥದಲ್ಲಿ ಅದು ದೇಶಗಳ ಉತ್ಪಾದನೆ, ಉದ್ಯೋಗ ವಕಾಶಗಳು, ಜನಸಂಖ್ಯೆ, ಹಣಕಾಸು ಮುಂತಾದವುಗಳನ್ನು ಅಭ್ಯಾಸಮಾಡುವ ಶಾಸ್ತ್ರ ಎಂದು ವಿವರಿಸಲಾಗಿದೆ. ಹೀಗೆ ಕಾಲದಿಂದ ಕಾಲಕ್ಕೆ ಅರ್ಥಶಾಸ್ತ್ರದ ಅರ್ಥವಿವರಣೆ ಬದಲಾಗುತ್ತಾ ಹೋದಂತೆ, ಅದರ ವ್ಯಾಪ್ತಿಯೂ ಹೆಚ್ಚುತ್ತಾ ಹೋಗಿದೆ.

**ಶೈಕ್ಷಣಿಕ ಅರ್ಥಶಾಸ್ತ್ರದ ವ್ಯಾಪ್ತಿಯಲ್ಲಿ ಬರುವ ವಿಷಯಗಳೆಂದರೆ**

1. **ಮಾನವ ಸಂಪನ್ಮೂಲ ಅಭಿವೃದ್ಧಿ:** ಶಿಕ್ಷಣದಿಂದ ಮಾನವ ಸಂಪನ್ಮೂಲವನ್ನು ಹೇಗೆ ಅಭಿವೃದ್ಧಿಪಡಿಸಬಹುದು. ಅದನ್ನು ಲಾಭದಾಯಕವಾದ ರೀತಿಯಲ್ಲಿ ಹೇಗೆ ಬಂಡವಾಳವನ್ನಾಗಿ ಪರಿವರ್ತಿಸಲು ಸಾಧ್ಯ. ಇದರಿಂದ ಆಗುವ ರಾಷ್ಟ್ರಾಭಿವೃದ್ಧಿಯ ಸೂಚಕಗಳಾವುವು. ಮಾನವ ಶಕ್ತಿ ಯೋಜನೆ ಎಂದರೇನು. ಇದರಲ್ಲಿ ನಿರುದ್ಯೋಗ ಮುಂತಾದವುಗಳಿಂದ ಉಂಟಾಗುವ ಹಿಂಜರಿತಗಳು ಯಾವುವು. ಅವುಗಳ ಪರಿಹಾರ ಮಾರ್ಗಗಳು ಯಾವುವು. ಪ್ರತಿಭಾ ಪಲಾಯನ ಹೇಗೆ ಉಂಟಾಗುತ್ತದೆ. ಅದರಿಂದಾಗುವ ಲಾಭ–ನಷ್ಟಗಳಾವುವು ಎಂಬ ಅನೇಕ ವಿಷಯಗಳನ್ನು ಇದು ಒಳಗೊಂಡಿದೆ.

2. **ಶಿಕ್ಷಣ ಮತ್ತು ಆರ್ಥಿಕಾಭಿವೃದ್ಧಿ:** ಒಂದು ದೇಶದ ಪ್ರಜೆಗಳಿಗೆ ದೊರಕುವ ಶಿಕ್ಷಣ ಹೇಗೆ ಆ ದೇಶದ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗುತ್ತದೆ ಮತ್ತು ಯಾವ ರೀತಿಯ ಶಿಕ್ಷಣ ಮತ್ತು ತರಬೇತಿಗಳು ದೇಶಗಳಿಗೆ ಅವಶ್ಯಕ, ಅವುಗಳನ್ನು ಬದಲಾಗುವ ಕಾಲಕ್ಕೆ ತಕ್ಕಂತೆ ವ್ಯವಸ್ಥೆಗೊಳಿಸುವುದು ಹೇಗೆ, ಶಿಕ್ಷಣವು ಹೇಗೆ ಮಾನವ ಬಂಡವಾಳವನ್ನು ಸೃಷ್ಟಿ ಮಾಡುತ್ತದೆ, ಶಿಕ್ಷಣವು ಒಂದು ಉಪಭೋಗವಾಗಿ ಹಾಗೂ ಒಂದು ಬಂಡವಾಳ ಹೂಡಿಕೆಯಾಗಿ ಕಂಡುಬರಲು ಕಾರಣಗಳೇನು ಎಂಬ ಹಲವಾರು ವಿಷಯಗಳನ್ನು ಇಲ್ಲಿ ಚರ್ಚಿಸಲಾಗುತ್ತದೆ.

3. **ಶಿಕ್ಷಣದ ಉತ್ಪಾದಕ ಶಕ್ತಿ:** ಶ್ರಮದ ಗುಣಮಟ್ಟವನ್ನು ಸುಧಾರಿಸುವುದರಲ್ಲಿ ಶಿಕ್ಷಣದ ಪಾತ್ರವೇನು, ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಶಿಕ್ಷಣದಿಂದ ಉತ್ಪಾದಕತೆ ಹಾಗೂ ದಕ್ಷತೆ ಹೇಗೆ ಹೆಚ್ಚುತ್ತದೆ, ಇದರಲ್ಲಿ ಶಿಕ್ಷಣದ ವಿವಿಧ ಹಂತಗಳ ಪಾತ್ರವೇನು, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಕಾರ್ಮಿಕ ಶಿಕ್ಷಣ ಮುಂತಾದವುಗಳಿಂದ ಉತ್ಪಾದಕ ಶಕ್ತಿಯ ಅಭಿವೃದ್ಧಿ, ಶಿಕ್ಷಣ ಪದ್ಧತಿಯಲ್ಲಿನ ಆಂತರಿಕ ಹಾಗೂ ಬಾಹ್ಯ ದಕ್ಷತೆಗಳ ಅವಶ್ಯಕತೆ, ಇವುಗಳಿಗಾಗಿ ಮಾಡುವ ವೆಚ್ಚ ಮತ್ತು ಅವುಗಳಿಂದಾಗಿ ಆಗುವ ಲಾಭಗಳ ಸಂಬಂಧ ಮತ್ತು ಅವುಗಳ ವಿಶ್ಲೇಷಣೆಗಳನ್ನು ಇದು ಒಳಗೊಂಡಿದೆ.

4. **ಶಿಕ್ಷಣದ ಸಂಪನ್ಮೂಲಗಳು ಮತ್ತು ಅವುಗಳಿಂದ ದೊರಕುವ ಪ್ರತಿಫಲಗಳು:** ಶಿಕ್ಷಣದ ಸಂಪನ್ಮೂಲಗಳಾದ ಶಿಕ್ಷಣ ವ್ಯವಸ್ಥೆ, ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಮತ್ತು ಅವುಗಳಲ್ಲಿನ ಮೂಲಭೂತ ಸೌಲಭ್ಯಗಳು ಮತ್ತು ಅವುಗಳನ್ನು ಹೇಗೆ ವ್ಯವಸ್ಥೆಗೊಳಿಸಿಕೊಳ್ಳಬೇಕು ಎಂಬುದು ಇಲ್ಲಿ ಅಭ್ಯಾಸಮಾಡುವ ವಿಷಯಗಳು. ಶಿಕ್ಷಣಕ್ಕಾಗಿ ಮಾಡುವ ವಿವಿಧ ವೆಚ್ಚಗಳು ಇಲ್ಲಿನ ಅಭ್ಯಾಸದ ಮುಖ್ಯ ವಿಷಯ. ಅಂತಹ ವೆಚ್ಚಗಳಿಂದಲೇ ಸಂಪನ್ಮೂಲಗಳ ಸೃಷ್ಟಿಯಾಗುವುದು. ಹಾಗೆ ಮಾಡುವ ವೆಚ್ಚಗಳ ಪ್ರಮಾಣ ಮತ್ತು ಅವುಗಳಿಂದ ಆಗುವ ಲಾಭದ ಪ್ರಮಾಣ ಹಾಗೂ ಅವುಗಳಿಗಿರುವ ಸಂಬಂಧಗಳ ವಿಶ್ಲೇಷಣೆ ಮುಖ್ಯವಾದ ವಿಷಯಗಳು. ಅನೇಕ ಬಗೆಯ ವೆಚ್ಚಗಳ ಪರಿಕಲ್ಪನೆಯನ್ನು ಇಲ್ಲಿ ಪರಿಚಯಿಸಲಾಗುತ್ತದೆ.

5. **ಶಿಕ್ಷಣದಲ್ಲಿ ವೆಚ್ಚ–ಪ್ರತಿಫಲ ವಿಶ್ಲೇಷಣೆ:** ಇದರ ವ್ಯಾಪ್ತಿಯಲ್ಲಿ ಶಿಕ್ಷಣದ ವೆಚ್ಚಗಳು ಮತ್ತು ಪ್ರತಿಫಲಗಳು, ಮರೆಮಾಚಿದ ಬೆಲೆಗಳು, ವಯೋಮಾನ–ಶಿಕ್ಷಣ–ಸಂಪಾದನೆಗಳಿಗಿರುವ ಸಂಬಂಧ, ಶಿಕ್ಷಣ ಮತ್ತು ಶ್ರಮದ ಮಾರುಕಟ್ಟೆಗಳಿಗಿರುವ ಸಂಬಂಧ ಮುಂತಾದವುಗಳು ಸೇರಿವೆ.

6. **ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಕೊಡುಗೆಯ ಪ್ರಮಾಣವನ್ನು ಅಳತೆಮಾಡುವುದು:** ದೇಶದಲ್ಲಿ ವಿಸ್ತರಿಸಿದ ಶಿಕ್ಷಣ ಮತ್ತು ತರಬೇತಿಗಳಿಂದ ಹಾಗೂ ತಾಂತ್ರಿಕ ಜ್ಞಾನದ ಬೆಳವಣಿಗೆಯಿಂದ ಅಧಿಕಗೊಳ್ಳುವ ಉತ್ಪಾದನೆಯ ಲೆಕ್ಕಾಚಾರ, ದೇಶದಲ್ಲಿ ಬೆಲೆಗಳ ಸ್ಥಿರತೆ, ಕಡಿಮೆ ನಿರುದ್ಯೋಗ, ಆದಾಯದಲ್ಲಿ ಸಮಾನ ಹಂಚಿಕೆ ಮುಂತಾದವುಗಳನ್ನು ಪರಿಗಣಿಸಿ ತೀರ್ಮಾನಿಸುವುದು, ವಿವಿಧ ರೀತಿಯ ಶಿಕ್ಷಣದ ಉಪಯುಕ್ತತೆಯನ್ನು ಗಮನಿಸಿ, ಅಗತ್ಯವಾದ ಕೋರ್ಸ್‌ಗಳಿಗೆ ಹೆಚ್ಚಿನ ಗಮನ ಕೊಡುವುದು ಮತ್ತು ಮಾನವ ಶಕ್ತಿ ಪೂರ್ವಾನುಮಾನದ ಸಹಾಯದಿಂದ ಶಿಕ್ಷಣ ಮತ್ತು ತರಬೇತಿಗಳನ್ನು ನಿಗದಿಗೊಳಿಸುವುದು ಮತ್ತು ಅದರ ಸಹಾಯದಿಂದ ಪೂರ್ಣಪ್ರಮಾಣದ ಉದ್ಯೋಗಾವಕಾಶಗಳನ್ನು ಉಂಟು ಮಾಡುವುದು ಇದರ ವ್ಯಾಪ್ತಿಗೆ ಸೇರುತ್ತದೆ.

7. **ಶಿಕ್ಷಣ ಸಮಾನತೆ ಮತ್ತು ಪ್ರತಿಫಲದ ಹಂಚಿಕೆ:** ಶಿಕ್ಷಣದಲ್ಲಿ ಸಮಾನತೆ ಎಂದರೇನು? ಶಿಕ್ಷಣದ ವಿವಿಧ ಹಂತಗಳಲ್ಲಿ ಸಮಾನತೆಯ ಅರ್ಥ ಬೇರೆ ಬೇರೆಯಾಗಿರಲು ಕಾರಣಗಳೇನು? ಶಿಕ್ಷಣವು ಹೇಗೆ ಆದಾಯದ ವ್ಯತ್ಯಾಸದ ನಿರ್ಧಾರಕವಾಗಿದೆ? ಗಿನಿ ಗುಣಾಂಕ ಮುಂತಾದವುಗಳಿಂದ ಆದಾಯದ ಅಸಮಾನತೆಗಳನ್ನು ಹೇಗೆ ಅಳತೆ ಮಾಡಬಹುದು? ಮುಂತಾದ ಪ್ರಶ್ನೆಗಳಿಗೆ ಇಲ್ಲಿ ಉತ್ತರಗಳನ್ನು ಒದಗಿಸಲಾಗುತ್ತದೆ.

– ಎಚ್.ಎಸ್.ಆರ್.


Digitised by Bharatavani, CIIL

## ಶೈಕ್ಷಣಿಕ ಅಳತೆ

"ಅಳೆಯುವುದು" ಎಂದರೆ, ಯಾವುದಾದರೂ ವಸ್ತುವನ್ನೋ, ವ್ಯಕ್ತಿಯನ್ನೋ, ಸ್ಥಳವನ್ನೋ, ಸಂಸ್ಥೆ ಸಂಘಟನೆಗಳನ್ನೋ ಅಥವಾ ಸಂದರ್ಭಗಳನ್ನೋ ಕುರಿತಂತೆ, ಅವುಗಳ ಗುಣಮಟ್ಟದ ನಿಷ್ಕರ್ಷೆಯೇ ಆಗಿರುತ್ತದೆ. ಅಂದರೆ ಇದೊಂದು ಪರಿಮಾಣಾತ್ಮಕವಾದ ನಿರ್ಧಾರವಾಗಿರುತ್ತದೆ; ಮತ್ತು "ಬೆಲೆ" ಕಟ್ಟುವ ಪ್ರಕ್ರಿಯೆಯಾಗಿರುತ್ತದೆ.

ಹಾಗೆ, 'ಅಳತೆ' ಎಂಬ ಪದವು ಸಂಕೀರ್ಣವಾಗಿದ್ದು ಬಹುಮುಖ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯನ್ನು ಅಳೆಯುವುದು ಎಂದರೆ, ಆತ ಒಳ್ಳೆಯವನೋ, ಕೆಟ್ಟವನೋ, ಬೇರೆಯವರಿಗೆ ಉಪಕಾರಿಯೋ ಅಲ್ಲವೋ, ಹೀಗೆ ಏನು ಬೇಕಾದರೂ ಆಗಬಹುದು. ಇಲ್ಲಿ ಅಳೆಯುವಿಕೆಯು ಗುಣಾತ್ಮಕವಾಗಿದೆ. ಆದರೆ ಒಂದು ಪದಾರ್ಥವನ್ನು ಅಂಗಡಿಯಲ್ಲಿ ಕೊಂಡುಕೊಂಡಾಗ, ನಾವು ಕಾಣುವ ಅಳೆಯುವಿಕೆಯೇ ಬೇರೆ ರೀತಿಯದು, ಇಲ್ಲಿ ಗ್ರಾಂ, ಕೆ.ಜಿ; ಲೀಟರ್; ಅಥವಾ ಮೀಟರ್; ಕಿಲೋಮೀಟರ್ ಇಂಥ ಮಾನಗಳನ್ನು ಬಳಸಿದ ಅಳತೆಯನ್ನು ಕಾಣುತ್ತೇವೆ. ವ್ಯಕ್ತಿಗಳ ಎತ್ತರ, ತೂಕ, – ಇವುಗಳ ಅಳತೆ ಒಂದು ರೀತಿಯದಾದರೆ, ಅವರ ಬುದ್ಧಿಶಕ್ತಿ, ಧೋರಣೆ, ಅಭಿರುಚಿ, ಅಸಕ್ತಿ–ಇವುಗಳ ಅಳೆಯುವಿಕೆಯ ಇನ್ನೊಂದು ರೀತಿಯಾಗಿ ಕಂಡುಬರುತ್ತವೆ. ಅಳೆಯುವಾಗ ನಾವು ಸಂಖ್ಯೆಗಳನ್ನು ಬಳಸುತ್ತೇವೆ. ಆದ್ದರಿಂದಲೇ. ಅಳೆಯುವಿಕೆಯಿಂದ ದೊರೆತ ಫಲಿತಾಂಶವು ಸಂಖ್ಯಾರೂಪದಲ್ಲಿರುತ್ತದೆ. ಮತ್ತು ಈ ಸಂಖ್ಯೆಗಳು ಅರ್ಥಪೂರ್ಣವಾಗಿರುತ್ತದೆ. ಉದಾಹರಣೆಗೆ.

- ಒಬ್ಬ ವ್ಯಕ್ತಿಯ ಎತ್ತರ 5 ಅಡಿ ಎಂದರೆ ಅದರ ಅರ್ಥವೂ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಹಾಗೇ ಇನ್ನೊಬ್ಬ ವ್ಯಕ್ತಿಯ ಎತ್ತರ 6 ಅಡಿ ಎಂದು ಗೊತ್ತಾದರೆ, ಇವನು ಮೊದಲಿನವನಿಗಿಂತ ಎತ್ತರ ಎಂಬ ಅರ್ಥವು ತಾನೇ ತಾನಾಗಿ ವ್ಯಕ್ತವಾಗುವುದು.

- 10 ಕೆ.ಜಿ. ಸಕ್ಕರೆಯು 2 ಕೆ.ಜಿ ಸಕ್ಕರೆಗಿಂತ ಹೆಚ್ಚು ತೂಕವಿರುವುದು. ಮತ್ತು ಪ್ರಮಾಣದಲ್ಲಿಯೂ ಹೆಚ್ಚಾಗಿರುವುದು.

- ಒಂದು ಶಾಲೆಯಲ್ಲಿನ ಹತ್ತನೇ ತರಗತಿಯ 40 ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರು ಶೇ. 65 ಕ್ಕಿಂತಲೂ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾಗಿದ್ದಾರೆ ಎಂದರೆ ಆ ಶಾಲೆಯು ಒಂದು ಉತ್ತಮ ಶಾಲೆ ಎನ್ನಿಸಿಕೊಳ್ಳುವುದು. ಆ ಶಾಲೆಗೆ ರ‍್ಯಾಂಕುಗಳು ಬಂದಿದ್ದರಂತೂ ಅದೊಂದು ಸರ್ವೋತ್ಕೃಷ್ಟ ಶಾಲೆ ಎಂದು ಸಮಾಜದಲ್ಲಿ ಗುರುತಿಸಲ್ಪಡುವುದು. ಇಲ್ಲಿ ಶಾಲೆಯ ಗುಣಮಟ್ಟವನ್ನು ಅಳೆಯಲಾಗುತ್ತಿದೆ ಎಂಬುದು ಗಮನಾರ್ಹವಾದ ವಿಚಾರ.

ಸಾಮಾನ್ಯವಾಗಿ ಶಾಲಾ ಪರಿಸರದಲ್ಲಿ, ವಿದ್ಯಾರ್ಥಿಗಳ ಸಾಧನಾ ಮಟ್ಟಗಳನ್ನು ತಿಳಿಯಲು, ಸಾಮರ್ಥ್ಯಗಳ ಮಟ್ಟಗಳನ್ನು ತಿಳಿಯಲು, ಕಿರು ಪರೀಕ್ಷೆಗಳನ್ನು, ಪರೀಕ್ಷೆಗಳನ್ನು ನಡೆಸುವರು. ಇವುಗಳ ಮೌಲ್ಯಮಾಪನದ ಸಾಧನಗಳು. ಆದರೆ ಇಂತಹ ಮೌಲ್ಯಮಾಪನದ ಸಾಧನಗಳೂ ಸಹ ಮೂಲತಃ ಅಳೆಯುವಿಕೆಯನ್ನೇ ಮಾಡುವುದು. ಆದ್ದರಿಂದ, ಪರೀಕ್ಷೆ, ಅಳತೆ, ಮೌಲ್ಯಮಾಪನ – ಇವು ಯಾವಾಗಲೂ ಒಟ್ಟೊಟ್ಟಿಗೆ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಪರಸ್ಪರ ಭೇದವೂ ಇದೆ, ಸಾಮ್ಯತೆಯೂ ಇದೆ.

ಪೂರ್ವ ನಿಗದಿತ ಉದ್ದೇಶಗಳನ್ನು ಆಧರಿಸಿ ರಚಿತವಾದ ಪ್ರಶ್ನೆಗಳಿಗೆ, ವಿದ್ಯಾರ್ಥಿಗಳು ಸ್ವತಂತ್ರವಾಗಿ ಮೌಖಿಕ ರೂಪದಲ್ಲಾಗಲೀ, ಲಿಖಿತರೂಪದಲ್ಲಾಗಲೀ ಉತ್ತರಿಸಿದಾಗ, ಅವುಗಳ ಸರಿ ತಪ್ಪುಗಳನ್ನು ಗಣನೆಗೆ ತಂದುಕೊಂಡು ನೀಡಲಾಗುವ ಪ್ರಾಪ್ತಾಂಕಗಳು ಮತ್ತು ಈ ಪ್ರಾಪ್ತಾಂಕಗಳಿಗೆ ಅನುಗುಣವಾಗಿ ಅವರ ಫಲಿತಾಂಶವನ್ನು ನಿರ್ಧರಿಸುವ ಪ್ರಕ್ರಿಯೆಯೇ ಪರೀಕ್ಷೆಯೆಂದಾಗುವುದು. ಈ ಪ್ರಕ್ರಿಯೆಯಲ್ಲಿ ಅಳೆಯುವಿಕೆ ಇದ್ದರೂ, ಪರೀಕ್ಷೆ ಮತ್ತು ಅಳತೆ – ಒಂದೇ ಆಗಿರುವುದಿಲ್ಲ ಎಂಬುದು ಸುಸ್ಪಷ್ಟ.

ಪರೀಕ್ಷೆಯ ತತ್ಫಲವೇ ಅಳತೆ. ಹಾಗೆಯೇ, ನಾವು ಬಳಸುವ ಅವಲೋಕನ, ದರ್ಜಾ ಮಾಪನ ಅಥವಾ ಇನ್ನಾವುದಾದರೂ ಮಾಹಿತಿ ಸಂಗ್ರಹಣ ತಂತ್ರಗಳೂ ಅಳೆಯುವಿಕೆಗೆ ಅವಕಾಶ ನೀಡುವುವು. ಇಲ್ಲಿ ಪರಿಮಾಣಾತ್ಮಕವಾದ ಅಳೆಯುವಿಕೆಯು ನಡೆಯುವುದು.

ಅಳೆಯುವಿಕೆಯು ಒಂದು ಪ್ರಕ್ರಿಯೆಯಾಗಿದ್ದು ಏನನ್ನಾದರೂ ಅಳೆದಾಗ, ಅದನ್ನು ಒಂದು ಸಂಖ್ಯೆಯ ಮೂಲಕ ವ್ಯಕ್ತಪಡಿಸುವುದೇ ಆಗಿದೆ. ಇಲ್ಲಿ ಸಂಖ್ಯೆಯು ಕೇವಲ ಸಂಖ್ಯೆಯಾಗಿರದೇ ಅರ್ಥಪೂರ್ಣವಾಗಿರುತ್ತದೆ. ಹೀಗೆ ಅಳೆಯುವಿಕೆಯು ಒಂದು ಪರಿಮಾಣಾತ್ಮಕವಾದ ಆರೋಪಣೆ ಎಂದರೆ ತಪ್ಪಾಗಲಾರದು. ನಾವು ಒಂದಲ್ಲಾ ಒಂದು ರೀತಿಯಲ್ಲಿ ಈ ಅಳೆಯುವಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿ ಕೊಂಡಿರುತ್ತೇವೆ. ಅಳೆಯುವಿಕೆ ಇಲ್ಲದ ಜೀವನವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ನಮ್ಮ ಎತ್ತರ, ಗಾತ್ರ, ತೂಕ, ವಯಸ್ಸು, ಬುದ್ಧಿಶಕ್ತಿ, ಸಾಮರ್ಥ್ಯ– ಎಲ್ಲವೂ ಅಳೆಯುವಿಕೆಗೆ ಒಳಪಟ್ಟವು.

ಅಳೆಯುವಿಕೆಯಲ್ಲಿ ಕೆಲವು ಭೌತಿಕವಾದುವುಗಳಾದರೆ, ಇನ್ನು ಕೆಲವು ಶೈಕ್ಷಣಿಕ ಮತ್ತು ಮನಃಶಾಸ್ತ್ರೀಯ ಅಳೆಯುವಿಕೆಯಾಗಿರಬಹುದು. ಆದ್ದರಿಂದ ಅಳೆಯುವಿಕೆಯಲ್ಲಿ ಸಾಮಾನ್ಯವಾಗಿ ಮೂರು ವಿಧಗಳನ್ನು ಕಾಣಬಹುದು. ಅವೆಂದರೆ,

1. ಪ್ರತ್ಯಕ್ಷ ಅಳೆಯುವಿಕೆ, 2. ಪರೋಕ್ಷ ಅಳೆಯುವಿಕೆ 3. ಸಾಪೇಕ್ಷ ಅಳೆಯುವಿಕೆ

ಒಂದು ಮೇಜನ್ನೋ, ಕುರ್ಚಿಯನ್ನೋ, ಅಳೆಯುವುದು ಪ್ರತ್ಯಕ್ಷ ಅಳೆಯುವಿಕೆ ಎಂದಾಗುವುದು. ಅಳತೆ ಮಾಡಲು ಬಳಸಿದ ಸಾಧನವು/ ಮಾಪನವು ಸರಿಯಾಗಿದ್ದದ್ದೇ ಆದರೆ, ಮಾಡಿದ ಅಳತೆಯು ನಿಖರವಾಗಿಯೇ ಇರುವುದು.

ಖಗೋಳ ವಿಜ್ಞಾನದಲ್ಲಿ ಮಾಡುವ ಅಳತೆ ಪರೋಕ್ಷ ರೀತಿಯದಾಗಿರುತ್ತದೆ. ವ್ಯಕ್ತಿಯ ಬುದ್ಧಿಶಕ್ತಿಯ ಅಳೆಯುವಿಕೆಯು ಸಾಪೇಕ್ಷ ಅಳೆಯುವಿಕೆಗೆ ಒಂದು ಉದಾಹರಣೆಯಾಗಿದೆ. ಏಕೆಂದರೆ ವಾಸ್ತವವಾಗಿ ಬುದ್ಧಿಶಕ್ತಿಯನ್ನು ಅತ್ಯಂತ ನಿಖರವಾಗಿ ಅಳೆಯಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ಬುದ್ಧಿಶಕ್ತಿಯನ್ನು ಬುದ್ಧಿಶಕ್ತಿ ಪರೀಕ್ಷೆಯ ಮೂಲಕ ಅಳತೆ ಮಾಡಿ, ಅದರಿಂದ ಪಡೆದ ಅಂಕಗಳನ್ನು ಸಾಮಾನ್ಯ ಜನ ಸಮೂಹಕ್ಕೆ ಹೋಲಿಸಿ ಅಳತೆಮಾಡಲ್ಪಟ್ಟ ವ್ಯಕ್ತಿ ಎಷ್ಟು ಬುದ್ಧಿವಂತ ಎಂದು ತೀರ್ಮಾನಿಸುತ್ತೇವೆ. ಇದು ಸಾಪೇಕ್ಷವಾದ ತೀರ್ಮಾನವಾಗಿರುತ್ತದೆ.

ಭೌತಿಕವಾಗಿ ಅಳೆದ ಫಲಿತಾಂಶಗಳು ನಿಖರವಾಗಿರುತ್ತದೆ. ಇವುಗಳನ್ನು ಅಳೆಯುವಾಗ ನಿಜವಾದ ಶೂನ್ಯದಿಂದ ಪ್ರಾರಂಭಿಸಲಾಗುತ್ತದೆ. ಮತ್ತು ಶೂನ್ಯದ ನಂತರ ಬರುವ ಅಂಕಗಳಲ್ಲಿ ನಡುವೆ ಸಮವಾದ ವ್ಯತ್ಯಾಸವಿರುವುದು. ಅಂದರೆ 3 ಮತ್ತು 4 ರ ನಡುವಿನ ವ್ಯತ್ಯಾಸ 1 ಹಾಗೆಯೇ 4 ಮತ್ತು 5 ರ ನಡುವಿನ ವ್ಯತ್ಯಾಸ 1. ಹೀಗೆ. ಭೌತ ವಿಜ್ಞಾನದಲ್ಲಿ ಬಳಸಲ್ಪಡುವ CGS ಪದ್ಧತಿಯು (ಸೆಂಟಿಮೀಟರ್–ಗ್ರಾಂ–ಸೆಕೆಂಡ್) ಅನುಪಾತ ಮಾಪನಿಯಾಗಿದೆ (ratio scale). ಇದನ್ನು ನಾವು ದ್ರವ್ಯರಾಶಿ, ಬಲ, ವೇಗ, ವಿದ್ಯುಚ್ಛಕ್ತಿ ಇತ್ಯಾದಿಗಳ ಅಳತೆಯಲ್ಲಿ

Digitised by Bharatavani, CIIL

ನೋಡಬಹುದು. ಇಂತಹ ಅಳತೆಯಿಂದ ಬರುವ ಸಂಖ್ಯೆಗಳನ್ನು ಪರಸ್ಪರ ಕೂಡಬಹುದು. ಕಳೆಯಬಹುದು. ಗುಣಿಸಬಹುದು ಮತ್ತು ಭಾಗಿಸಬಹುದು. ಅಂದರೆ ಅನುಪಾತ ಮಾಪನಿಯಲ್ಲಿ ಒಂದು ಪ್ರಾಪ್ತಾಂಕ 20 ಎಂದಾದರೆ, ಖಚಿತವಾಗಿ ಅದು 5 ಪ್ರಾಪ್ತಾಂಕದ 4 ರಷ್ಟು ಅಥವಾ 10 ಪ್ರಾಪ್ತಾಂಕದ 2 ರಷ್ಟು. ಉದಾಹರಣೆಗೆ, ಒಂದು ಮೇಜಿನ ಎತ್ತರ 1 ಮೀಟರ್ ಎಂದಾದರೆ, ಅದು ಕರಾರುವಾಕ್ಕಾಗಿ ಅರ್ಧಮೀಟರಿನ ಎರಡರಷ್ಟು ಎಂದೇ ಆಗುವುದು. ಹಾಗೆಯೇ ವೇಗದ ಅಳತೆ ಉದಾಹರಣೆಗೆ, 1200 ಮೀ/ಸೆಕೆಂಡ್ ಎಂಬ ವೇಗವು 600 ಮೀ/ಸೆಕೆಂಡ್ ಎಂಬ ವೇಗಕ್ಕಿಂತ ಎರಡರಷ್ಟು ಸ್ಪಷ್ಟವಾಗಿದೆ ಎಂಬುದು.

ಶೈಕ್ಷಣಿಕ ಅಳೆಯುವಿಕೆಯಲ್ಲಿ ಮತ್ತು ಮನೋವೈಜ್ಞಾನಿಕ ಅಳತೆಯಲ್ಲಿ ಸಂಖ್ಯೆಗಳು, ಪ್ರಾಪ್ತಾಂಕಗಳು ಕಂಡುಬರುತ್ತವೆ. ಆದರೆ ಇಲ್ಲಿ, ಕ್ರಮಬದ್ಧವಾಗಿ ಬರುವ ಅಂಕಗಳ ನಡುವೆ ಸಮಾನ ವ್ಯತ್ಯಾಸವಿರುವುದಿಲ್ಲ. ಏಕೆಂದರೆ ಇಲ್ಲಿನ ಅಳೆಯುವಿಕೆಯು ಶೂನ್ಯದಿಂದ ಪ್ರಾರಂಭವಾಗುವುದಿಲ್ಲ. ಮಾನವಿಕ ಶಾಸ್ತ್ರದ ಅಳೆಯುವಿಕೆಯಲ್ಲಿ ಸತ್ಯವಾದ ಶೂನ್ಯವು (true zero) ಇರುವುದಿಲ್ಲ. ಆದ್ದರಿಂದ ಇಲ್ಲಿ ದೊರೆಯುವ ಪ್ರಾಪ್ತಾಂಕಗಳು "ಮಧ್ಯಂತರ ಮಾಪನ" (Interval scales) ಗಳಾಗಿರುತ್ತವೆ. ಇವುಗಳನ್ನು ಪರಸ್ಪರ ಕೂಡುವುದಾಗಲೀ ಕಳೆಯುವುದಾಗಲೀ, ಗುಣಿಸಿ, ಭಾಗಿಸುವುದಾಗಲೀ ಸಾಧ್ಯವಿಲ್ಲ. ಹಾಗೆ ಮಾಡಿದರೆ ಅರ್ಥಹೀನವಾಗುತ್ತದೆ. ಮಧ್ಯಂತರ ಮಾಪನಿಯಲ್ಲಿನ ಒಂದು ಪ್ರಾಪ್ತಾಂಕವು 100 ಎಂದಾದರೆ, ಅದು 50 ಪ್ರಾಪ್ತಾಂಕದ ಎರಡರಷ್ಟು ಎಂಬ ಅರ್ಥ–ಬರುವುದಿಲ್ಲ. ಉದಾಹರಣೆಗೆ ಬುದ್ಧಿಲಬ್ಧ (IQ) 100 ಎಂಬುದು ಒಬ್ಬ ವ್ಯಕ್ತಿಯ ಪ್ರಾಪ್ತಾಂಕವಾಗಿದ್ದರೆ ಆತನು 50 ಪ್ರಾಪ್ತಾಂಕದ ವ್ಯಕ್ತಿಗಿಂತ ಎರಡಷ್ಟು ಬುದ್ಧಿವಂತನಾಗಿದ್ದಾನೆ ಎಂಬ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ. ಹಾಗೆಯೇ ಒಬ್ಬ ವಿದ್ಯಾರ್ಥಿಯು ಗಣಿತ ಮತ್ತು ವಿಜ್ಞಾನಗಳಲ್ಲಿ ಕ್ರಮೇಣ 70 ಮತ್ತು 80 ಅಂಕಗಳನ್ನು ಗಳಿಸಿದ್ದರೆ, ಅಂಕ 70 ಎಂಬುದು ಗಣಿತಕ್ಕೇ ಮೀಸಲು, ವಿಜ್ಞಾನದ ಅಂಕ 80ನ್ನು ಗಣಿತಕ್ಕೆ ಸೇರಿಸಿಕೊಳ್ಳಲು ಬರುವುದಿಲ್ಲ. ಹಾಗೆಯೇ ವಿಜ್ಞಾನದ ಅಂಕ 80ಕ್ಕೆ ಗಣಿತದ ಅಂಕವನ್ನು ಸೇರಿಸಿಕೊಂಡು, ಒಟ್ಟು ವಿಜ್ಞಾನದಲ್ಲಿ ಅವನು 150 ಅಂಕ ಗಳಿಸಿದ್ದಾನೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಗಣಿತದಲ್ಲಿ ಗಳಿಸಿದ ಅಂಕಗಳು ವಿಜ್ಞಾನದಲ್ಲಿ ಗಳಿಸಿದ ಅಂಕಗಳಿಗೆ ಯಾವತ್ತೂ ಸರ್ವಸಮವಾಗುವುದಿಲ್ಲ.

ಮೇಲೆ ಹೇಳಿದ ರೀತಿಯಲ್ಲಿ, ಒಬ್ಬ ಶಿಕ್ಷಕನಿಗೆ ವಿದ್ಯಾರ್ಥಿಗಳಿಂದ ಅನೇಕ ವಿಧವಾದ ಮಾಹಿತಿಗಳು, ಅಂಕ ಸಂಖ್ಯೆಗಳೂ ದೊರೆಯುತ್ತವೆ. ಈ ರೀತಿಯಾಗಿ ದೊರೆತ ಸಂಖ್ಯಾಮಾಹಿತಿಗಳನ್ನು ಸರಿಯಾಗಿ ಸಂಗ್ರಹಿಸಿ, ಜೋಡಿಸಿ, ವಿಶ್ಲೇಷಿಸಿ ನೋಡುವ ಅನಿವಾರ್ಯತೆ ಮತ್ತು ಅಗತ್ಯತೆ ಶಿಕ್ಷಕನಿಗೆ ಇರುತ್ತದೆ. ಸಂಖ್ಯಾಶಾಸ್ತ್ರೀಯವಾದ ವಿಶ್ಲೇಷಣೆಯಿಂದ ಯಾವುದೇ, ರೀತಿಯ ಪ್ರಾಪ್ತಾಂಕಗಳಿಗೂ ಗುಣಾತ್ಮಕವಾದ ದರ್ಜೆಯನ್ನು ಆರೋಪಿಸಲು ಸಾಧ್ಯವಿದೆ. ಹೀಗೆ ತೌಲನಾತ್ಮಕವಾಗಿ ಗುಣಮಟ್ಟವನ್ನು ನಿರ್ಧರಿಸಿದಾಗ, ಆ ಪ್ರಕ್ರಿಯೆಯು ಕೇವಲ ಅಳೆಯುವಿಕೆಯಾಗಿರದೆ ಮೌಲ್ಯಮಾಪನವೇ ಆಗಿರುತ್ತದೆ.

ಶೈಕ್ಷಣಿಕ ಅಳತೆಯು ಬಹಳಷ್ಟು ಸಲ ಗುಣಾತ್ಮಕವಾಗಿದ್ದು, ಶೈಕ್ಷಣಿಕ ಕಾರ್ಯಕ್ರಮಗಳ ಗುಣಮಟ್ಟವನ್ನು ಕುರಿತಂತೆ ಅನೇಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವುದು. ಇಲ್ಲಿ ಒಬ್ಬ ವ್ಯಕ್ತಿ ಅಥವಾ ಗುಂಪಿನ ಅಳೆಯುವಿಕೆ ಅಷ್ಟೇ ಆಗಿರದೆ, ಒಂದು ಗೊತ್ತಾದ ಅವಧಿಯಲ್ಲಿ ಅವರ ಸ್ಥಾನಮಾನಗಳೇನು ಮತ್ತು ಮುಂದೆ ಆಗಲೇಬೇಕಾದ ಧನಾತ್ಮಕವಾದ ಬದಲಾವಣೆಗಳೇನು ಎಂಬುದರೆಡೆಗೂ ಗಮನವೀಯಲು ಒಂದು ಗುರುತರವಾದ ಸೂಚನೆಯೂ ಆಗಿರುತ್ತದೆ. ಅಳೆಯುವಿಕೆಯು ಮೌಲ್ಯಮಾಪನಕ್ಕೆ ಸಹಾಯ ಮಾಡುತ್ತದೆಯಾದರೂ ಅವೆರಡೂ ಒಂದೇ ಅಲ್ಲ.

**ಅಳತೆ ಮತ್ತು ಮೌಲ್ಯಮಾಪನಗಳು ಪರಸ್ಪರ ಸಂಬಂಧ ಹೊಂದಿದ್ದು, ಒಂದಕ್ಕೊಂದು ಪೂರಕವಾಗಿರುತ್ತವೆ**

1. "ಪರೀಕ್ಷೆ" ಮತ್ತು "ಅಳತೆ" ಇವು ಮೌಲ್ಯಮಾಪನದ ಅಂಗಗಳಾಗಿದ್ದರೂ, ಮೌಲ್ಯಮಾಪನವು ಇವುಗಳಿಗೂ ಮೀರಿದ ವ್ಯಾಪ್ತಿಯನ್ನು ಹೊಂದಿದೆ.

2. ಮೌಲ್ಯಮಾಪನವು ಅಳತೆಯನ್ನು ಅವಲಂಬಿಸುತ್ತದೆಯಾದರೂ ಅಳತೆಯೇ ಮೌಲ್ಯಮಾಪನವಲ್ಲ.

3. ಅಳತೆಯು ಪರಿಮಾಣಾತ್ಮಕವಾಗಿದ್ದು, ಒಬ್ಬ ವ್ಯಕ್ತಿಯು "ಎಷ್ಟು ನಿರ್ವಹಿಸಿರುವನು?" ಎಂಬುದರ ದ್ಯೋತಕವಾಗಿರುತ್ತದೆ. ಆದರೆ, ಮೌಲ್ಯಮಾಪನವನ್ನು "ಎಂತಹ ನಿರ್ವಹಣೆ?" ; "ಎಷ್ಟು ಒಳ್ಳೆಯ ಅಥವಾ ಉತ್ಕೃಷ್ಟವಾದ ಅಥವಾ ತೃಪ್ತಿಕರವಾದ ನಿರ್ವಹಣೆ" ಎಂಬ ಗುಣಾತ್ಮಕ ನಿರ್ಧಾರವಾಗಿರುತ್ತದೆ.

4. ಶುದ್ಧವಾದ ಮೌಲ್ಯಮಾಪನವು ನಿಖರವಾದ ಮತ್ತು ಸಂಬಂಧಪಟ್ಟ ಅಳತೆಯಿಂದ ಮಾತ್ರ ಸಾಧ್ಯ.

5. ಅಳತೆಯು ಒಂದು ಸಂದರ್ಭದಲ್ಲಿ ವಿವರಿಸಬಲ್ಲುದಾದರೆ, ಮೌಲ್ಯಮಾಪನವು ಅದರ ಮೌಲ್ಯವನ್ನು ನಿರ್ಧರಿಸುತ್ತದೆ.

6. ಮೌಲ್ಯಮಾಪನದಲ್ಲಿ ಖಚಿತವಾಗಿ ಬಳಸಲ್ಪಡುವ ಸಾಧನವೆಂದರೆ ಅಳತೆಯೆಂಬುದೇನೋ ನಿಜವೆ; ಆದರೆ, ಅದರಷ್ಟಕ್ಕೇ ತೆಗೆದುಕೊಂಡರೆ ಅಳತೆಯೆಂಬುದು ಅರ್ಥಹೀನ, ಹಾಗೆಯೇ, ಅಳತೆಯನ್ನು ಆಧರಿಸದ ಮೌಲ್ಯಮಾಪನವು ಹಾದಿತಪ್ಪುವ ಸಾಧ್ಯತೆಯನ್ನು ಹೊಂದಿರುತ್ತದೆ.

7. ಮೌಲ್ಯಮಾಪನವೆಂಬುದು ಒಂದು ನಿರಂತರವಾದ, ಸಮಗ್ರವಾದ ಪ್ರಕ್ರಿಯೆ; ಆದ್ದರಿಂದ ಶಿಕ್ಷಣದ ಎಲ್ಲಾ ಆಯಾಮಗಳೆಡೆಗೂ ಮೌಲ್ಯಮಾಪನವು ತನ್ನ ಪ್ರಭಾವವನ್ನು ಬೀರಬಲ್ಲುದು. ಶಿಕ್ಷಣದ ಮೌಲ್ಯಮಾಪನದ ಈ ಪ್ರಕ್ರಿಯೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗೀದಾರರು. ಆದ್ದರಿಂದ ವಿದ್ಯಾರ್ಥಿಗಳ ಬೆಳವಣಿಗೆ ಮತ್ತು ವಿಕಾಸವನ್ನು ಮೌಲ್ಯಮಾಪನವು ಸಮರ್ಥಿಸುವುದು, ಆದರೆ ಅಳತೆಯಾದರೋ ಬೋಧನಾ ಫಲಗಳ ಒಂದು ಸಂಕ್ಷಿಪ್ತ ಪರೀಕ್ಷೆಯಾಗಿರುತ್ತದೆ.

8. ಮೌಲ್ಯಮಾಪನವು ಕೇವಲ ಪರೀಕ್ಷೆ ಮತ್ತು ಅಳತೆಗೆ ಸೀಮಿತಗೊಳ್ಳದೇ, ಶಿಕ್ಷಣದ ಇಡೀ ವ್ಯವಸ್ಥೆಯನ್ನು ವ್ಯಾಪಿಸಿಕೊಳ್ಳುವುದು.

9. ಮೌಲ್ಯಮಾಪನವು ಗುಣಾತ್ಮಕ ಮತ್ತು ಪರಿಮಾಣಾತ್ಮಕವಾದ ಲಕ್ಷಣವನ್ನು ಹೊಂದಿದ್ದು, ಮೌಲ್ಯಾಧಾರಿತ ನಿರ್ಧಾರಗಳನ್ನು ನೀಡುತ್ತದೆ. ಆದ್ದರಿಂದ ಮೌಲ್ಯಮಾಪನವು ಅಳತೆ ಮತ್ತು ಮೌಲ್ಯಾಧಾರಿತ ನಿರ್ಧಾರಗಳ ಮೊತ್ತವಾಗಿರುತ್ತದೆ.

ಮೌಲ್ಯಮಾಪನವನ್ನು ಅಳತೆ ಮತ್ತು ಮೌಲ್ಯಾಧಾರಿತ ನಿರ್ಧಾರದ ಸಂಕಲನ ಎಂದು ಹೇಳಬಹುದು.

–ಸಿ.ಎನ್.ಸು.


Digitised by Bharatavani, CIIL

## ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆ

ಕನ್ನಡದ 'ಆಡಳಿತ' ಎಂಬ ಪದವು, ಆಂಗ್ಲ ಭಾಷೆಯ 'Administration' ಮತ್ತು ಮೂಲತಃ ಲ್ಯಾಟಿನ್ ಭಾಷೆಯ 'Administer' ಎಂಬ ಪದದಿಂದ ಬಂದಿದೆ. ಅಡ್ಮಿನಿಸ್ಟರ್ ಎಂದರೆ "ಸರ್ವ ಪ್ರಜೆಗಳ ಕಲ್ಯಾಣವನ್ನು ಸಾಧಿಸುವುದಕ್ಕೆ ಮಾಡಿದ ಸೇವೆ." 'ಆಡಳಿತ' ಎಂದರೆ, ಸರ್ವ ಪ್ರಜೆಗಳ ವ್ಯವಹಾರ ನೋಡಿಕೊಳ್ಳುವುದು, ಎಲ್ಲಾ ಪ್ರಜೆಗಳಿಗೆ ಬೇಕಾದ ಅನುಕೂಲ, ಸೇವಾ ಸೌಲಭ್ಯಗಳನ್ನು ಅನುವು ಮಾಡುವುದು ಎಂದರ್ಥ.

ಶೈಕ್ಷಣಿಕ ಆಡಳಿತ ಎಂಬುದು ಶಿಕ್ಷಣದ ಒಟ್ಟು ವ್ಯವಸ್ಥೆಯ ಒಂದು ಅಂಗ. ಈ ಪ್ರಕ್ರಿಯೆಯು ಬೋಧನೆ, ಕಲಿಕೆ, ಶಿಸ್ತು, ಮಾನವೀಯ ಅಂಶಗಳ ವ್ಯವಸ್ಥೆ, ಜ್ಞಾನಾಭಿವೃದ್ಧಿ ಮುಂತಾದ ಅಂಶಗಳನ್ನು ಸಂಘಟಿಸುವ, ನಿರ್ವಹಿಸುವ ಹಾಗೂ ನಿರ್ದೇಶಿಸುವ ಅಂಶಗಳನ್ನು ಗುರಿಯಾಗಿ ಹೊಂದಿರುತ್ತದೆ. ಈಗಾಗಲೇ ಒಪ್ಪಿಕೊಂಡಿರುವ ನೀತಿನಿಯಮಗಳಿಗನುಸಾರವಾಗಿ ಶಿಕ್ಷಣವನ್ನು ಹಾಗೂ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳನ್ನು ನಡೆಸಲು, ನಿರ್ದೇಶಿಸಲು, ನಿಭಾಯಿಸಲು ಬಳಸುವ ಎಲ್ಲ ತಂತ್ರಗಳು ಹಾಗೂ ಕಾರ್ಯಕ್ರಮಗಳು ಶೈಕ್ಷಣಿಕ ಆಡಳಿತದ ಅನಿವಾರ್ಯ ಭಾಗವಾಗಿರುತ್ತವೆ. ಶೈಕ್ಷಣಿಕ ಆಡಳಿತವನ್ನು ಮೇಲ್ವಿಚಾರಣೆ ಅಥವಾ ಮಾರ್ಗದರ್ಶನವೆಂದು ಕರೆಯುವುದೂ ಉಂಟು.

ಶೈಕ್ಷಣಿಕ ಆಡಳಿತದ ಸ್ವರೂಪ ನಿರ್ದಿಷ್ಟವಾದುದು. ಇದು ಒಂದು ರೀತಿಯ ವ್ಯವಸ್ಥಿತ ಹೊಂದಾಣಿಕೆ. ಇದರ ಅನ್ವಯದಿಂದಾಗಿ ಶಿಕ್ಷಣದ ವಿವಿಧ ಭಾಗಗಳು ಮತ್ತು ವಿವಿಧ ಹಂತಗಳು (ಪ್ರಾಥಮಿಕ, ಪ್ರೌಢ ಇತ್ಯಾದಿ) ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತವೆ. ಶಿಕ್ಷಣದ ಪ್ರಾಯೋಗಿಕ ರೂಪವೇ ಶೈಕ್ಷಣಿಕ ಆಡಳಿತ. ಇದು ಶಿಕ್ಷಣ ರಂಗದ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವ ವಿಧಾನವೂ ಹೌದು. ಶೈಕ್ಷಣಿಕ ಆಡಳಿತವು ಶೈಕ್ಷಣಿಕ ಕಾರ್ಯಗಳನ್ನು ಯಶಸ್ವಿಗೊಳಿಸಿ ಶಿಕ್ಷಣದ ಗುರಿ ಸಾಧಿಸುವ ಸಾಧನ ಶಕ್ತಿಯಾಗಿದೆ. ಶಿಕ್ಷಣದ ಯೋಜನೆ, ಸಂಘಟನೆ, ವ್ಯವಸ್ಥೆ, ನಿಯಂತ್ರಣ, ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನಗಳ ಮೂಲಕ ಕಾರ್ಯನಿರ್ವಹಿಸುವ ವಿಧಾನವೇ ಶೈಕ್ಷಣಿಕ ಆಡಳಿತವಾದ್ದರಿಂದ ಶಾಲೆಯ ಎಲ್ಲ ಅಂಶಗಳೂ ಈ ಶೈಕ್ಷಣಿಕ ಆಡಳಿತದ ಮೇಲೆಯೇ ಅವಲಂಬಿತವಾಗಿವೆ. ಇದು ಶಾಲೆಗಳ ಮತ್ತು ಇತರ ಶಿಕ್ಷಣ ಸಂಸ್ಥೆಗಳ ವ್ಯವಹಾರವನ್ನು ಒಳಗೊಂಡಂತೆ ಅವುಗಳ ಎಲ್ಲ ಕಾರ್ಯಾಚರಣೆಗಳಿಗೂ ಸಂಬಂಧಿಸಿದಂತೆ ನಡೆಸುವ ನಿರ್ದೇಶನ, ನಿಯಂತ್ರಣ ಹಾಗೂ ಕಾರ್ಯನಿರ್ವಹಣೆಯ ಪ್ರಕ್ರಿಯೆಯಾಗಿರುತ್ತದೆ.

ಭಾರತದಲ್ಲಿ ಶೈಕ್ಷಣಿಕ ಆಡಳಿತಕ್ಕೆ ಸಂಬಂಧಿಸಿದಂತೆ ವುಡ್ಸ್ ವರದಿಯು ಹೆಚ್ಚಿನ ಪ್ರಾಮುಖ್ಯವನ್ನು ಪಡೆದಿರುತ್ತದೆ. ಶೈಕ್ಷಣಿಕ ಆಡಳಿತವನ್ನು ಪ್ರಾಂತೀಕರಣಗೊಳಿಸಲು ಮಹತ್ವ ನೀಡಲು ಮಾರ್ಗದರ್ಶನ ನೀಡಿದ ವಿಶಿಷ್ಟ ದಾಖಲೆ ಇದು. ಶೈಕ್ಷಣಿಕ ಆಡಳಿತದ ಸುಧಾರಣೆಗಾಗಿ ಈವರೆಗೆ ಅನೇಕ ಆಯೋಗಗಳು, ಸಮಿತಿಗಳು ನೇಮಕವಾಗಿರುವುದಾದರೂ ವುಡ್ಸ್ ವರದಿ ಶೈಕ್ಷಣಿಕ ಆಡಳಿತದ ಮೇಲೆ ವಿಶೇಷ ಬೆಳಕು ಚೆಲ್ಲಿದೆ.

ಶೈಕ್ಷಣಿಕ ಆಡಳಿತವು ಒಂದು ಕಲೆ. ಇದು ನಿರಂತರ ಬದಲಾವಣೆಯಾಗುವಂತಹುದು. ಇದು ಒಂದು ಚಟುವಟಿಕೆಯೂ ಹೌದು. ಶೈಕ್ಷಣಿಕ ಆಡಳಿತವು ಸಾಮುದಾಯಿಕ ಕಾರ್ಯ. ಇದರಿಂದಾಗಿ ಶಾಲಾ ಜೀವನದಲ್ಲಿ ವ್ಯಕ್ತಿ, ಸಮಾಜ, ಸಂಸ್ಕೃತಿ, ಸಾಹಿತ್ಯ, ಕಲೆಗಳಲ್ಲಿ ಅನ್ಯೋನ್ಯತೆಯನ್ನು ಸಾಧಿಸಲು ಸಹಾಯವಾಗುತ್ತದೆ. ಶಿಕ್ಷಣದ ಹಲವಾರು ಸಮಸ್ಯೆಗಳನ್ನು ಇದು ನಿವಾರಣೆ ಮಾಡುತ್ತದೆ. ಶೈಕ್ಷಣಿಕ ಆಡಳಿತ ಮತ್ತು ಶೈಕ್ಷಣಿಕ ಪ್ರಕ್ರಿಯೆ ಎರಡೂ ಪರ್ಯಾಯವಾದ ಅಂಶಗಳು. ಶೈಕ್ಷಣಿಕ ಆಡಳಿತವು ಸದಾ ಗತಿಶೀಲಾತ್ಮಕವಾದದ್ದು ಹಾಗೂ ಚೈತನ್ಯವುಳ್ಳದ್ದಾಗಿದೆ.

ಶೈಕ್ಷಣಿಕ ಆಡಳಿತದ ಉದ್ದೇಶಗಳು ಹಲವಾರು. ಅವು ಸಮಯ, ಸಂದರ್ಭ, ಕಾಲ, ಪರಿಸರಕ್ಕೆ ತಕ್ಕಂತೆ ಬದಲಾಗುತ್ತಾ ಹೋಗುತ್ತವೆ. ಶೈಕ್ಷಣಿಕ ಸಂಸ್ಥೆಗಳು ನಿಯಮಬದ್ಧವಾಗಿ ಸರಕಾರದ ಕಾನೂನು ಕಟ್ಟಳೆಗಳ ಪರಿಮಿತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡುವುದು ಶೈಕ್ಷಣಿಕ ಆಡಳಿತದ ಮುಖ್ಯ ಉದ್ದೇಶವಾಗಿರುತ್ತದೆ. ಶೈಕ್ಷಣಿಕ ಆಡಳಿತವು ಶಿಕ್ಷಣದ ಗುರಿಗಳನ್ನು ಸಾಧಿಸಲು ಅವಕಾಶ ಮಾಡಿಕೊಡುತ್ತದೆ, ಶಾಲೆ ಮತ್ತು ಸಮಾಜದ ಸಂಬಂಧವನ್ನು ಹೆಚ್ಚಿಸುತ್ತದೆ. ಆಡಳಿತಗಾರನಿಗೆ ದಕ್ಷತೆ, ಪ್ರಾಮಾಣಿಕತೆ, ಶಿಸ್ತು ಬೆಳೆಸಲು ತರಬೇತಿ ನೀಡುವುದು, ಶಾಲಾ ಕಟ್ಟಡ, ಪೀಠೋಪಕರಣ, ಪಾಠೋಪಕರಣಗಳನ್ನು ಒದಗಿಸುವುದು, ಆರ್ಥಿಕ ನೆರವು ನೀಡುವುದು, ಶಿಕ್ಷಕರಿಗೆ ವೇತನ ನೀಡುವುದು, ಶೈಕ್ಷಣಿಕ ಸಂಸ್ಥೆಗಳಿಗೆ ಆರ್ಥಿಕ ವರಮಾನ ಒದಗಿಸುವುದು, ಅವುಗಳ ಖರ್ಚು ವರಮಾನದ ಬಗ್ಗೆ ಆಗಾಗ್ಗೆ ಮೇಲ್ವಿಚಾರಣೆ ಮಾಡುವುದು – ಈ ರೀತಿ ಹತ್ತು ಹಲವು ಕಾರ್ಯಗಳು ಶೈಕ್ಷಣಿಕ ಆಡಳಿತದ ಜವಾಬ್ದಾರಿಯಾಗಿರುತ್ತದೆ. ಇದಲ್ಲದೆ ಶಿಕ್ಷಣದಲ್ಲಿ ಸಂಶೋಧನೆ ಮತ್ತು ಪ್ರಯೋಗಗಳಿಗೆ ಶೈಕ್ಷಣಿಕ ಆಡಳಿತ ಅವಕಾಶ ಮಾಡಿಕೊಡುತ್ತದೆ. ಶೈಕ್ಷಣಿಕ ಆಡಳಿತವು ಶಾಲೆಯ ಎಲ್ಲ ಚಟುವಟಿಕೆಗಳನ್ನು ಸಂಯೋಜಿಸಿ, ಕಲಿಕೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತದೆ.

ಶೈಕ್ಷಣಿಕ ಆಡಳಿತವು ಕಲಿಕೆಯ ವಿಷಯಕ್ಕಿಂತ ಕಲಿಕೆಯ ಉದ್ದೇಶಕ್ಕೆ ಹೆಚ್ಚು ಮಹತ್ವ ಕೊಡುತ್ತದೆ. ಆಡಳಿತವು ಮಾನವೀಯತೆಯ ತತ್ವದ ಆಧಾರದ ಮೇಲೆ ನಡೆಯಬೇಕೆಂದು ಹಲವು ಸಂಶೋಧನೆಗಳಿಂದ ವ್ಯಕ್ತವಾಗಿದೆ. ಜೀವನ ತತ್ವದ ಮೇಲೆ ಹೇಗೆ ಶಿಕ್ಷಣವು ರೂಪಿತವಾಗುತ್ತದೆಯೋ ಹಾಗೆ ಶಿಕ್ಷಣದ ತತ್ವಕ್ಕೆ ಅನುಗುಣವಾಗಿ ಆಡಳಿತವು ನಿರ್ಮಾಣವಾಗುತ್ತದೆ. ಶಿಕ್ಷಣವನ್ನು ಕುರಿತ ನಮ್ಮ ಧೋರಣೆ, ಇದಕ್ಕೆ ಬುನಾದಿಯಾದ ಜೀವನವನ್ನು ಕುರಿತ ನಮ್ಮ ಧೋರಣೆಯೇ ಆಡಳಿತದ ನಿರೂಪಣೆಗೆ ಅಡಿಪಾಯ. ಹೀಗೆ ಜೀವನವನ್ನು ಕುರಿತ, ಆ ಮೂಲಕ ಶಿಕ್ಷಣವನ್ನು ಕುರಿತ ನಮ್ಮ ಧೋರಣೆ ಶೈಕ್ಷಣಿಕ ಆಡಳಿತದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ಪ್ರಜಾಪ್ರಭುತ್ವದ ಆಧಾರದ ಮೇಲೆ ರೂಪಿತವಾದ ಶೈಕ್ಷಣಿಕ ಆಡಳಿತವನ್ನು ಪ್ರಜಾಪ್ರಭುತ್ವ ರೀತಿಯ ಶೈಕ್ಷಣಿಕ ಆಡಳಿತವೆನ್ನುತ್ತಾರೆ. ಇಲ್ಲಿ ನಂಬಿಕೆ, ಸಹನೆ, ಮತ್ತೊಬ್ಬರನ್ನು ಗೌರವಿಸುವುದು, ಅಭಿಪ್ರಾಯ ಸಂಗ್ರಹಿಸುವುದು, ಸ್ವಾತಂತ್ರ್ಯ ನೀಡುವುದು ಮೊದಲಾದವುಗಳ ಮೇಲೆ ಮಾತ್ರ ಆಡಳಿತ ನಡೆಯುತ್ತದೆ. ಪ್ರಜಾಪ್ರಭುತ್ವದ ಆಧಾರದ ಮೇಲೆ ನಮ್ಮ ರಾಷ್ಟ್ರದ ಆಡಳಿತವು ನಡೆಯುತ್ತಿರುವುದರಿಂದ ಶೈಕ್ಷಣಿಕ ಆಡಳಿತವು ಅದೇ ತತ್ವದ ಆಧಾರದ ಮೇಲೆ ನಡೆಯಬೇಕು. ಶೈಕ್ಷಣಿಕ ಆಡಳಿತದಲ್ಲಿ ನಾಯಕನ ಜವಾಬ್ದಾರಿಯನ್ನು ಆಡಳಿತಾಧಿಕಾರಿಗಳು ವಹಿಸುತ್ತಾರೆ. ನಾಯಕತ್ವವು ಅಧಿಕಾರ ರೂಢವಾಗಿರದೆ ಆದರ್ಶಗಳ, ಉದ್ದೇಶಗಳ ಆಧಾರದ ಮೇಲೆ ಚಲಾವಣೆಯಾಗಬೇಕು. ಪ್ರಜಾಪ್ರಭುತ್ವದ ಶೈಕ್ಷಣಿಕ ಆಡಳಿತದಲ್ಲಿ ಯೋಜನೆಯನ್ನು ಕುರಿತ ನಮ್ಯತೆ ಮತ್ತು ಅಗತ್ಯವಾದಾಗ ಹೊಸದರ ಅನ್ವಯ ಅನಿವಾರ್ಯ. ಅಂತಹ ಸಮಯದಲ್ಲಿ ಸರಿಯಾದುದನ್ನು ಆಯ್ಕೆಮಾಡಿಕೊಂಡು ಕಾರ್ಯವನ್ನು ನಿರ್ದಿಷ್ಟ ಆಡಳಿತದಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಹೆಚ್ಚಿನ ಅವಕಾಶವಿರುತ್ತದೆ

Digitised by Bharatavani, CIIL

ಅಥವಾ ಇದನ್ನು ಉತ್ತಮ ಶೈಕ್ಷಣಿಕ ಆಡಳಿತದ ಒರೆಗಲ್ಲು ಎಂದೂ ಹೇಳಬಹುದು. ಪ್ರತಿಯೊಬ್ಬ ವ್ಯಕ್ತಿಗೆ ವೃತ್ತಿಜ್ಞಾನವನ್ನು ಹೆಚ್ಚಿಸಿಕೊಳ್ಳಲು ಉತ್ತಮ ಶೈಕ್ಷಣಿಕ ಆಡಳಿತ ಸಾಧ್ಯಮಾಡಿಕೊಡುತ್ತದೆ.

ಶೈಕ್ಷಣಿಕ ಆಡಳಿತದ ಜೊತೆಗೆ ಶೈಕ್ಷಣಿಕ ನಿರ್ವಹಣೆಯ ಪರಿಕಲ್ಪನೆ ಮತ್ತು ಅನ್ವಯ ಇಂದು ಹೆಚ್ಚು ಜನಪ್ರಿಯವಾಗಿದೆ. 'ನಿರ್ವಹಣೆ' ಎಂಬ ಪದವು ಆಂಗ್ಲಭಾಷೆಯ 'management' ಪದದ ಭಾಷಾಂತರಿತ ರೂಪ. ಇದು 'man' ಮತ್ತು 'agere' ಎಂಬ ಎರಡು ಪದಗಳ ಜೋಡಣೆಯಿಂದ ರೂಪುಗೊಂಡಿದೆ ಎಂದು ಹೇಳಲಾಗುತ್ತದೆ. ಸಂಸ್ಕೃತದ 'ಮಾ' ಅರ್ಥಾತ್ 'ಅಳತೆ ಮಾಡು' ಹಾಗೂ ಲ್ಯಾಟಿನ್‌ನ 'manus' ಅರ್ಥಾತ್ 'ಕೈಗಳು' ಎಂಬ ಪದಗಳ ಅರ್ಥದ ಹಿನ್ನೆಲೆಯಲ್ಲಿ ಈ ಪದದ ವ್ಯುತ್ಪತ್ತಿಯನ್ನು ಕಂಡುಹಿಡಿಯುವ ಪ್ರಯತ್ನಗಳು ನಡೆದಿವೆ. ಎರಡನೇ ಶಬ್ದವಾದ agere ಗ್ರೀಕ್ ಭಾಷೆಯ 'ago' ನಿಂದ ಬಂದಿದೆ. 'ago' ಎಂದರೆ 'ತರುವುದು', 'ಹೇಳುವುದು' ಅಥವಾ 'ಮಾರ್ಗದರ್ಶನ ಮಾಡುವುದು' ಎಂಬರ್ಥ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

ಆಡಳಿತದ ಪರಿಕಲ್ಪನೆಯಂತೆ ನಿರ್ವಹಣೆಯೂ ಒಂದು ಪ್ರಕ್ರಿಯಾತ್ಮಕ ಪರಿಕಲ್ಪನೆ. ಸಂಸ್ಥೆಯ ಮೂಲ ಉದ್ದೇಶಗಳನ್ನು ಈಡೇರಿಸುವ ದೃಷ್ಟಿಯಿಂದ ಕೆಲಸ ಮಾಡುವಂತಹುದು. ಸಂಸ್ಥೆಯ ಮೂಲ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಹಲವಾರು ವ್ಯಕ್ತಿಗಳು ಕೂಡಿ ಕೆಲಸ ಮಾಡಬೇಕಾದಾಗ, ಅವರ ಕೆಲಸಗಳನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ಅಥವಾ ಅವರ ಕೆಲಸಗಳಲ್ಲಿ ಸಮನ್ವಯ ಸಾಧಿಸುವ ಪ್ರಕ್ರಿಯೆಯೇ ನಿರ್ವಹಣೆಯಾಗಿದೆ.

ಇತ್ತೀಚೆಗೆ ಶಿಕ್ಷಣರಂಗಕ್ಕೂ ನಿರ್ವಹಣೆಯ ಜೊತೆಗೆ ಅನೇಕ ನಿರ್ವಹಣಾತ್ಮಕ ಪರಿಕಲ್ಪನೆಗಳು ಪ್ರವೇಶಿಸಿವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿರ್ವಹಣೆಯನ್ನು ವಿಶ್ಲೇಷಿಸುವುದಾದರೆ ಶಿಕ್ಷಣದ ಸರ್ವಸಮಸ್ತ ಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸುವುದೇ ಶೈಕ್ಷಣಿಕ ನಿರ್ವಹಣೆ ಎಂದು ಹೇಳಬಹುದು. ಒಂದು ಸಂಸ್ಥೆಯ ಮಾನವೀಯ ಹಾಗೂ ಭೌತಿಕ ಅಂಶಗಳನ್ನು ಒಟ್ಟುಗೂಡಿಸಿ, ಉದ್ದೇಶಿತ ಗುರಿಗಳನ್ನು ತಲುಪುವುದೇ ಶೈಕ್ಷಣಿಕ ನಿರ್ವಹಣೆ ಎಂಬ ವ್ಯಾಖ್ಯೆ ಚುಟುಕಾದರೂ ಹೆಚ್ಚು ಸಮರ್ಪಕವಾದುದು. ಶೈಕ್ಷಣಿಕ ನಿರ್ವಹಣಾಶಾಸ್ತ್ರದಲ್ಲಿ ಸಾಮಾನ್ಯವಾಗಿ ಆಡಳಿತ, ನಿರ್ವಹಣೆ ಮತ್ತು ಸಂಘಟನೆ ಎಂಬ ಪದಗಳನ್ನು ಪರ್ಯಾಯ ಪದಗಳನ್ನಾಗಿ ಬಳಸುತ್ತಾರೆ. ಈ ಮೂರು ಪದಗಳ ಸಂಬಂಧವನ್ನು ಇಲ್ಲಿ ಗಮನಿಸಬಹುದು. ಶೈಕ್ಷಣಿಕ ಸಂಸ್ಥೆಗಳ ಸಂಘಟನೆಯ ಮತ್ತು ಆಡಳಿತದ ಮೊತ್ತವೇ ನಿರ್ವಹಣೆ. ಆದ್ದರಿಂದ ಸಂಘಟನೆ + ಆಡಳಿತ = ನಿರ್ವಹಣೆ ಎಂಬ ಸೂತ್ರ ಶೈಕ್ಷಣಿಕ ನಿರ್ವಹಣೆಗೆ ಮೂಲಭೂತವಾದುದು. ಶಿಕ್ಷಣದ ಪ್ರಮುಖ ಧ್ಯೇಯೋದ್ದೇಶಗಳನ್ನು, ನೀತಿ ಧೋರಣೆಗಳನ್ನು ನಿರ್ಧರಿಸುವ ಕಾರ್ಯ ಉನ್ನತ ಹಂತದಲ್ಲಿ ಆಗುವುದು. ಅದು ಆಡಳಿತ ಎಂದೆನಿಸುವುದು. ಆ ಶಿಕ್ಷಣದ ಧ್ಯೇಯೋದ್ದೇಶಗಳನ್ನು, ನೀತಿ ಧೋರಣೆಗಳನ್ನು ಕೆಳಹಂತದವರೆಗೆ ಕಾರ್ಯಗತಗೊಳಿಸವುದೇ ನಿರ್ವಹಣೆ. ಆ ಧ್ಯೇಯೋದ್ದೇಶಗಳನ್ನು ನೀತಿ ಧೋರಣೆಗಳನ್ನು ಕಾರ್ಯರೂಪಕ್ಕೆ ತರಲು ಅತ್ಯವಶ್ಯವಾಗಿ ಬೇಕಾಗಿರುವ ಮಾನವ ಹಾಗೂ ಭೌತಿಕ ಸಂಪನ್ಮೂಲಗಳನ್ನು ಸಂಗ್ರಹಿಸಿ, ಸಂಯೋಜಿಸುವುದೇ ಸಂಘಟನೆ.

ಶೈಕ್ಷಣಿಕ ನಿರ್ವಹಣೆಯು ಒಂದು ಜವಾಬ್ದಾರಿಯುತ ಕೆಲಸವಾಗಿದೆ. ಶೈಕ್ಷಣಿಕ ನಿರ್ವಹಣೆಯನ್ನು ನಿಭಾಯಿಸುವ ವ್ಯಕ್ತಿ ಚಾಣಾಕ್ಷನೂ ಜವಾಬ್ದಾರನೂ ಆಗಿರಬೇಕು. ಇದು ಹತ್ತು ಹಲವು ಜನರು ಕೂಡಿ ನಡೆಸುವ ಒಂದು ಒಗ್ಗಟ್ಟಿನ ಕಾರ್ಯ ಸಮಷ್ಟಿಯಿಂದ ನಡೆಯುವಂತಹದು. ಶೈಕ್ಷಣಿಕ ನಿರ್ವಹಣೆಯಲ್ಲಿ ಅನೇಕ ಹಂತಗಳಿವೆ. ಈ ಪ್ರಕ್ರಿಯೆಯಲ್ಲಿ ಬೇರೆ ಬೇರೆ ವ್ಯಕ್ತಿಗಳು ಭಿನ್ನಕಾರ್ಯಗಳನ್ನು ಮಾಡಬೇಕಾಗುತ್ತದೆ. ಕೆಲಸಗಳನ್ನು ನಿರ್ದಿಷ್ಟವಾಗಿ ಗುರುತಿಸುವಿಕೆ, ವಿವಿಧ ವ್ಯಕ್ತಿಗಳಿಗೆ ಹಂಚಿ ಒಪ್ಪಿಸುವಿಕೆ, ಯಶಸ್ವೀ ಕಾರ್ಯನಿರ್ವಹಣೆಯ ಮಾನದಂಡಗಳನ್ನು ಅವುಗಳ ಸ್ವರೂಪವನ್ನು ಅದಕ್ಕೆ ಬೇಕಾದ ಕಾರ್ಯನೀತಿಯನ್ನು ಗುರುತಿಸುವುದು, ಅವುಗಳನ್ನು ತಂಡದ ಎಲ್ಲರಿಗೂ ತಿಳಿಸುವುದು ನಿರ್ವಹಣೆಯ ಒಟ್ಟು ಕಾರ್ಯದಲ್ಲಿ ಪ್ರಧಾನವಾಗುತ್ತವೆ. ನಿರ್ವಾಹಕನು ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸಿ ಗುರಿ ಸಾಧಿಸಬೇಕಾಗುತ್ತದೆ.

ಶೈಕ್ಷಣಿಕ ನಿರ್ವಹಣೆಯು ಒಂದು ಪರಿಸರದ ಮೇಲೆ ಪ್ರಭಾವ ಬೀರುವ ಶಕ್ತಿಯಾಗಿದೆ. ಉತ್ತಮ ನಿರ್ವಹಣೆ ಉತ್ತಮ ಪರಿಸರವನ್ನು ನಿರ್ಮಿಸುವ ಶಕ್ತಿಯನ್ನು ಹೊಂದಿರುತ್ತದೆ. ನಿರ್ವಹಣೆಯು ಅಧಿಕಾರದ ಒಂದು ವಿಶಿಷ್ಟ ವಿಧಾನವೂ ಹೌದು. ಅಧಿಕಾರವು ನಿರ್ವಹಣಾ ಕಾರ್ಯಗಳ ತಳಪಾಯವಾಗಿದೆ. ಅಂದರೆ ಶೈಕ್ಷಣಿಕ ನಿರ್ವಹಣೆಯನ್ನು ಆದೇಶ ಮತ್ತು ನಿಯಂತ್ರಣಗಳ ಕ್ರಮಬದ್ಧ ಶ್ರೇಣಿಯಲ್ಲಿ ಅನ್ವಯಿಸಬೇಕಾಗುತ್ತದೆ.

ಶೈಕ್ಷಣಿಕ ನಿರ್ವಹಣೆಯು ಅನೇಕ ವೇಳೆ ಹೊಸದಾದ ನೀತಿ, ನಿಯಮಗಳನ್ನು ರೂಪಿಸುತ್ತದೆ. ಅವುಗಳನ್ನು ಕಾರ್ಯರೂಪಕ್ಕೆ ತರಲು ಸರ್ವಪ್ರಯತ್ನ ಮಾಡುತ್ತದೆ. ನಿರ್ವಾಹಕನು ರಚಿಸಿದ ನಿಯಮಗಳನ್ನು ಅವನ ಕೆಳಗಿನ ಸಿಬ್ಬಂದಿ ವರ್ಗದವರು ಒಪ್ಪಿಕೊಳ್ಳುವಂತೆ ಓಲೈಸುವುದೂ ನಿರ್ವಾಹಕನ ಕೆಲಸವೇ. ಏಕೆಂದರೆ ಒಪ್ಪದ ಕೆಲಸ ಮಾಡಿದರೆ ಅಷ್ಟರ ಮಟ್ಟಿಗೆ ಒಟ್ಟು ಉದ್ದೇಶಗಳ ಸಾಧನೆಗೆ ಧಕ್ಕೆಯಾಗುತ್ತದೆ. ಈ ನಿಟ್ಟಿನಲ್ಲಿ ನಿರ್ವಾಹಕನ ಪ್ರತಿ ಆಲೋಚನೆಯೂ ಅರ್ಥಗರ್ಭಿತವಾಗಿದ್ದು, ಒಟ್ಟು ಉದ್ದೇಶ ಸಾಧನೆಗಳ ಹಿನ್ನೆಲೆಯಲ್ಲಿ ಯಾರಿಗೇ ಆದರೂ ಅನಿವಾರ್ಯ ಅನ್ನಿಸುವಂತಿರಬೇಕು. ಇಲ್ಲಿ ನಿರ್ವಾಹಕನಿಗೆ ಹೆಚ್ಚಿನ ಸ್ವಾತಂತ್ರ್ಯ ಇರಬೇಕಾಗುತ್ತದೆ.

ಸಾಮಾನ್ಯವಾಗಿ ಶೈಕ್ಷಣಿಕ ಸಂಸ್ಥೆಗಳ ಉದ್ದೇಶಗಳೇ ಶೈಕ್ಷಣಿಕ ನಿರ್ವಹಣೆಯ ಉದ್ದೇಶಗಳಾಗಿರುತ್ತವೆ. ಶೈಕ್ಷಣಿಕ ನಿರ್ವಹಣೆಯ ಉದ್ದೇಶಗಳನ್ನು ಮುಖ್ಯವಾಗಿ ಐದು ಮಟ್ಟಗಳಲ್ಲಿ ನೋಡಬಹುದಾಗಿದೆ. ರಾಷ್ಟ್ರಮಟ್ಟ, ರಾಜ್ಯಮಟ್ಟ, ಸ್ಥಳೀಯ ಮತ್ತು ಖಾಸಗಿ ಮಟ್ಟ, ಶಾಲಾ ಮಟ್ಟ ಮತ್ತು ಶಾಲಾ ಸಭಾ ಮಟ್ಟದ ಉದ್ದೇಶಗಳು. ರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ಕೇಂದ್ರ ಶಿಕ್ಷಣ ಮಂತ್ರಾಲಯ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆಗಳಿದ್ದು ಇವು ದೇಶದ ಸಮಗ್ರ ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ವಹಿಸುತ್ತವೆ. ರಾಜ್ಯಮಟ್ಟದ ಶೈಕ್ಷಣಿಕ ನಿರ್ವಹಣೆಯ ಉದ್ದೇಶಗಳನ್ನು ಸಾಧಿಸಲು ರಾಜ್ಯ ಸರ್ಕಾರ ಅಧಿಕಾರಿಗಳನ್ನು ಹಲವು ಇಲಾಖೆಗಳಿಗೆ ಹಂಚಿ ಉದ್ದೇಶ ಈಡೇರಿಕೆಗೆ ಅವಿರತವಾಗಿ ಶ್ರಮಿಸುತ್ತಿದೆ. ಸಮಾಜದ ಒಂದು ಪ್ರಮುಖ ಅಂಗ ಶಾಲೆ. ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಯ ಪ್ರಮುಖ ಕೇಂದ್ರ. ಈ ಮಟ್ಟದಲ್ಲಿ ಶೈಕ್ಷಣಿಕ ಉದ್ದೇಶಗಳು ಸಾಕಷ್ಟಿವೆ. ಶಾಲೆಯ ಮುಖ್ಯಸ್ಥರೇ ಅವುಗಳನ್ನು ಈಡೇರಿಸುವ ನಿರ್ವಾಹಕರಾಗಿರುತ್ತಾರೆ.

ಶೈಕ್ಷಣಿಕ ನಿರ್ವಹಣೆಯ ತತ್ವಗಳು ಅನೇಕವಾಗಿವೆ. ನಿರ್ವಹಣಾ ಶಾಸ್ತ್ರದ ಪ್ರಪ್ರಥಮ ಚಿಂತಕನಾದ ಹೆನ್ರಿ ಫಾಯಲ್ (Henry Fayol) ಎಂಬ ತಜ್ಞನು ನಿರ್ವಹಣೆಯಲ್ಲಿ 14 ತತ್ವಗಳು ಪ್ರಮುಖವಾದವುಗಳು ಎಂದು ಗುರುತಿಸಿದ್ದಾನೆ. ಅವುಗಳು ಈ ಕೆಳಗಿನಂತಿವೆ.


Digitised by Bharatavani, CIIL




ಈ ಎಲ್ಲಾ ತತ್ವಗಳನ್ನು ಶೈಕ್ಷಣಿಕ ನಿರ್ವಹಣೆಯಲ್ಲಿ ಬಳಸಿದಲ್ಲಿ, ನಿರ್ವಹಣೆಯ ಕಾರ್ಯವು ಸುಗಮವಾಗುವುದು. ಶೈಕ್ಷಣಿಕ ನಿರ್ವಹಣೆಯಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ವ್ಯವಸ್ಥೆಯಲ್ಲಿ ಸೇರಿರುವ ಎಲ್ಲರಿಗೂ ಅವರವರ ಯೋಗ್ಯತೆ ಮತ್ತು ಕಾರ್ಯಕ್ಷಮತೆಗೆ ಅನುಗುಣವಾಗಿ ಕೆಲಸವನ್ನು ಹಂಚಬೇಕಾಗುತ್ತದೆ. ಶಾಲಾ ಮುಖ್ಯಸ್ಥರಾದವರು ನಿರ್ವಾಹಕ ಪದವಿಯ ಮುಖಾಂತರ ಅಧಿಕೃತವಾದ ಅಧಿಕಾರ ಹೊಂದಿದ್ದರೆ, ತಮ್ಮ ಜಾಣ್ಮೆ, ಅಪಾರ ಅನುಭವ, ಸೇವಾ ಜ್ಯೇಷ್ಠತೆ ಮುಂತಾದವುಗಳಿಂದ ವೈಯಕ್ತಿಕ ಅಧಿಕಾರವನ್ನು ಹೊಂದುವರು. ಶಿಸ್ತು ಕೇವಲ ಬಾಹ್ಯವಾಗಿರದೆ ಆಂತರಿಕವಾಗಿರಬೇಕು. ಶೈಕ್ಷಣಿಕ ನಿರ್ವಹಣೆಯಲ್ಲಿ ತತ್ವಶಃ ಪ್ರತಿಯೋರ್ವ ಉದ್ಯೋಗಿಯು ಕೇವಲ ಮುಖ್ಯಸ್ಥನಿಂದ ಮಾತ್ರ ಆಜ್ಞೆ ಪಡೆಯಬೇಕು. ಅಂತೆಯೇ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ನಿರ್ದೇಶನಗಳನ್ನು ನೀಡಬೇಕಾದಂತಹ ಸಮಯದಲ್ಲಿ ಒಬ್ಬ ವ್ಯಕ್ತಿ ಮಾತ್ರ ಆದೇಶ/ಆಜ್ಞೆ ನೀಡಬೇಕೇ ವಿನಃ ಎಲ್ಲರೂ ಪ್ರವೇಶಿಸಬಾರದು. ಶೈಕ್ಷಣಿಕ ರಂಗದಲ್ಲಿ ಶಿಕ್ಷಣದ ಸಿಬ್ಬಂದಿ ವರ್ಗದವರಿಗೆ ಕೊಡುವ ಪಗಾರ/ವೇತನವು ಸರಿಯಾಗಿರಬೇಕು ಮತ್ತು ಅದು ಅವರಿಗೆ ತೃಪ್ತಿಯನ್ನುಂಟು ಮಾಡುವಂತಿರಬೇಕು. ಶಿಕ್ಷಣರಂಗದಲ್ಲಿ ವೈಯಕ್ತಿಕ ಹಿತಕ್ಕೆ ಹೆಚ್ಚಿನ ಗಮನ ಕೊಡುವುದಕ್ಕಿಂತ ಸಾರ್ವಜನಿಕ ಹಿತಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾದುದು ಅವಶ್ಯಕ. ನಿರ್ವಹಣೆಯಲ್ಲಿ ಕೆಳಮಟ್ಟದ ಅಧಿಕಾರಿಯಿಂದ ಮೇಲ್ಮಟ್ಟದಲ್ಲಿರುವ ಅಧಿಕಾರಿಗಳವರೆಗೆ ಉತ್ತಮ ಸಂಬಂಧವಿರ ಬೇಕಾದುದು ಅತಿ ಅವಶ್ಯಕ. ಏಕೆಂದರೆ ಇಲ್ಲಿ ಒಬ್ಬರನ್ನೊಬ್ಬರು ಅರಿತು ಕಾರ್ಯವನ್ನು ನಿರ್ವಹಿಸುವುದರಿಂದ ಶೈಕ್ಷಣಿಕ ನಿರ್ವಹಣೆಯು ಸರಾಗವಾಗಿ, ಅಡೆತಡೆಯಿಲ್ಲದೆ ಸಾಗುವುದು. ಶೈಕ್ಷಣಿಕ ನಿರ್ವಹಣೆಯ ನೀತಿಯನ್ನು ಅರಿತು ಅಳವಡಿಸಿದರೆ ಅದು ಅಭಿವೃದ್ಧಿ ಪಥದತ್ತ ಸಾಗುವುದರಲ್ಲಿ ಸಂಶಯವಿಲ್ಲ. ಶೈಕ್ಷಣಿಕ ನಿರ್ವಹಣೆಯಲ್ಲಿ ನಿರ್ವಾಹಕನು ತಾನು ವಹಿಸಿಕೊಂಡಿರುವಂತಹ ಕಾರ್ಯದ ಜೊತೆಗೆ ಸೂಕ್ತವಾದ ಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಅದರಲ್ಲಿ ಯಶಸ್ಸನ್ನು ಹೊಂದಲು ಒಂದು ನಿರ್ದಿಷ್ಟವಾದ ಅವಧಿಯು ಬಹಳ ಮುಖ್ಯವಾದುದಾಗಿದೆ. ಅದನ್ನು ಸರಿಯಾಗಿ ಗುರುತಿಸಿಕೊಂಡು ಗುರುತಿಸಿಕೊಂಡ ಅವಧಿಯಲ್ಲಿ ಕೆಲಸಗಳು ಸಾಗುವಂತೆ, ಯಶಸ್ವಿಯಾಗುವಂತೆ ಗಮನಿಸಿಕೊಳ್ಳಬೇಕು. 'ಒಗ್ಗಟ್ಟೇ ಬಲ' ಎಂಬ ತತ್ವವು ಶೈಕ್ಷಣಿಕ ನಿರ್ವಹಣೆಯ ಪ್ರಮುಖ ತತ್ವಗಳಲ್ಲೊಂದಾಗಿದೆ. ಈ ಅಂಶ ನಿರ್ವಹಣೆಯ ಸಮಷ್ಟಿ ಸ್ವರೂಪವನ್ನು ತಿಳಿಸಿಕೊಡುವುದು. ಈ ತತ್ವವು ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಎಲ್ಲ ಸಿಬ್ಬಂದಿಯವರು ನಿರ್ದಿಷ್ಟ ಉದ್ದೇಶಗಳ ಸಾಧನೆಗಾಗಿ ಸಾಮೂಹಿಕವಾಗಿ ಕಾರ್ಯ ಮಾಡಬೇಕೆಂದು ತಿಳಿಸಿಕೊಡುತ್ತದೆ.

ಶೈಕ್ಷಣಿಕ ಆಡಳಿತ ನಿರ್ವಹಣೆಯು ತನ್ನದೇ ಆದ ಕಾರ್ಯ ನಿರ್ವಹಣಾ ಪ್ರಕ್ರಿಯೆಯನ್ನು ಒಳಗೊಂಡಿದೆ. ಶಿಸ್ತಿನಿಂದ, ಕ್ರಮಬದ್ಧತೆಯಿಂದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಆಡಳಿತ ಮತ್ತು ನಿರ್ವಹಣೆಯಾಗುವುದಕ್ಕೆ ಶೈಕ್ಷಣಿಕ ಆಡಳಿತ ಪ್ರಕ್ರಿಯೆ ಎನ್ನುವರು. ಇತರ ಕಾರ್ಯಗಳಂತೆ ಶೈಕ್ಷಣಿಕ ಆಡಳಿತವೂ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಲು ಕೆಲವು ತತ್ವಗಳನ್ನು ಒಳಗೊಂಡಿದೆ. ಇವು ಶಿಕ್ಷಣರಂಗದ ಅವ್ಯವಸ್ಥೆಯನ್ನು ಹೋಗಲಾಡಿಸಿ ಆಡಳಿತ ವ್ಯವಸ್ಥಿತವಾಗಿ ಸಾಗುವಂತೆ ಮಾಡುತ್ತವೆ. ಶಿಕ್ಷಣದ ಗುರಿ ಹಾಗೂ ಉದ್ದೇಶಗಳು ಕೈಗೂಡಬೇಕಾದರೆ ಆಡಳಿತದಲ್ಲಿ ತತ್ವ, ಶಿಸ್ತು ಮತ್ತು ಕ್ರಮಬದ್ಧತೆಗಳಿರಬೇಕು. ಇದರಿಂದ ಸಾಂಸ್ಥಿಕ ಹಾಗೂ ಸಾಮೂಹಿಕ ಶಿಸ್ತು ಉಂಟಾಗಿ ಶೈಕ್ಷಣಿಕ ನಿರ್ವಹಣೆಯು ಪರಿಣಾಮಕಾರಿಯಾಗಿ ಸಾಗುತ್ತದೆ. ಇವು ಆಯಾ ರಾಷ್ಟ್ರದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ರೂಪಿತವಾಗಿರುತ್ತವೆ. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ಅದಕ್ಕನುಗುಣವಾದ ರೀತಿಯಲ್ಲಿ ಶೈಕ್ಷಣಿಕ ಆಡಳಿತ ಯೋಜಿತವಾಗಿರಬೇಕು.

ಶೈಕ್ಷಣಿಕ ಆಡಳಿತ ನಿರ್ವಹಣೆಯ ಹಂತಗಳು ಈ ಕೆಳಗಿನಂತಿವೆ:




ನಿರ್ದಿಷ್ಟವಾದ ಗುರಿಯನ್ನು ತಲುಪಲು ಮಾಡಬೇಕಾದ ಕಾರ್ಯಗಳನ್ನು ಯೋಚಿಸುವುದೇ ಯೋಜನೆಯಾಗಿದೆ. ಶೈಕ್ಷಣಿಕ ಆಡಳಿತ ನಿರ್ವಹಣೆಯ ಯೋಜನೆಗಳಲ್ಲಿ ಧ್ಯೇಯೋದ್ದೇಶಗಳು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರಬೇಕಾಗಿರುತ್ತದೆ. ಇವುಗಳನ್ನು ನಿರೂಪಿಸುವಾಗ ಸಮಾಜದಲ್ಲಿರುವ ತಜ್ಞರ, ಶಿಕ್ಷಣತಜ್ಞರ ಸಹಾಯ ಪಡೆದುಕೊಳ್ಳಬೇಕು. ಪ್ರಸ್ತುತ ನಮ್ಮ ದೇಶದಲ್ಲಿ ಶೈಕ್ಷಣಿಕ ಯೋಜನೆಗಳನ್ನು ಈ ಕೆಳಗಿನ ನಾಲ್ಕು ಹಂತಗಳಲ್ಲಿ ಮಾಡಬಹುದಾಗಿದೆ. ಅವುಗಳೆಂದರೆ 1. ಕೇಂದ್ರ ಮಟ್ಟ 2. ರಾಜ್ಯಮಟ್ಟ 3. ಸ್ಥಾನಿಕ ಮಟ್ಟ ಮತ್ತು 4. ಸಾಂಸ್ಥಿಕ ಮಟ್ಟ. ಸಂಘಟಿಸುವಿಕೆ ಶೈಕ್ಷಣಿಕ ಆಡಳಿತ ನಿರ್ವಹಣೆಯ ಮಹತ್ವದ ಅಂಶವಾಗಿದೆ. ಶ್ರೇಷ್ಠ ತಜ್ಞ, ಜೆ. ವಿಲಿಯಂ ಇವರು "ಉದ್ದೇಶಿತ ಗುರಿ ಸಾಧಿಸಲು ಅವಶ್ಯಕವಾದ ಜನಬಲ, ಸಾಮಗ್ರಿ, ಉಪಕರಣ, ಕಾರ್ಯಸ್ಥಾನ, ಅವಕಾಶ ಮತ್ತು ಸಲಕರಣೆಗಳನ್ನು ಸಂಗ್ರಹಿಸಿ ಕ್ರಮಬದ್ಧವಾಗಿ ಹೊಂದಿಸುವುದೇ ಸಂಘಟನೆಯಾಗಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಶೈಕ್ಷಣಿಕ ಆಡಳಿತ ನಿರ್ವಹಣೆಯ ಸಂಘಟನೆಯಲ್ಲಿ ತರಗತಿ, ಶಾಲೆ, ಸಮಿತಿ, ಗುಂಪು, ಬೋಧಕ ವರ್ಗ ಮತ್ತು ತನಿಖಾದಳದವರನ್ನು ಹೆಸರಿಸುತ್ತೇವೆ. ಒಟ್ಟು

Digitised by Bharatavani, CIIL

ಸಂಘಟನೆಯಲ್ಲಿ ಇವರೆಲ್ಲರೂ ಭಿನ್ನ ಭಿನ್ನ ಪಾತ್ರವನ್ನು ವಹಿಸುತ್ತಾರೆ. ಶೈಕ್ಷಣಿಕ ಸಂಸ್ಥೆಗಳಿಗೆ ಅವುಗಳ ಕಾರ್ಯಗಳಿಗೆ ಸೂಕ್ತವಾದ ಮಾರ್ಗದರ್ಶನ ಒದಗಿಸುವುದನ್ನು ನಿರ್ದೇಶನ ಎನ್ನಲಾಗುತ್ತದೆ. ನಿರ್ದೇಶನದ ಕಾರ್ಯವು ಶೈಕ್ಷಣಿಕ ನಿರ್ವಹಣಾ ಪ್ರಕ್ರಿಯೆಯಲ್ಲಿ ಅದ್ವಿತೀಯ ಹಾಗೂ ಮಹತ್ವದ ಹಂತವಾಗಿದೆ. ಇದು ಉಳಿದ ಚಟುವಟಿಕೆಗಳಾದ ಯೋಜನೆ, ಸಂಘಟನೆ, ಸಹಯೋಗ, ಮೌಲ್ಯಮಾಪನ ಮುಂತಾದವುಗಳನ್ನು ಒಳಗೊಂಡಿದೆ. ಈ ಹಂತದಲ್ಲಿ ನಿರ್ದೇಶನ ಪ್ರಜಾಪ್ರಭುತ್ವ ಪರವಾಗಿದ್ದರೆ, ಅದು ಶೈಕ್ಷಣಿಕ ನಿರ್ವಹಣೆಗೆ ಸೂಕ್ತವಾಗಿರುತ್ತದೆ. ಶೈಕ್ಷಣಿಕ ಆಡಳಿತ ನಿರ್ವಹಣೆಯಲ್ಲಿ ಸಮನ್ವಯಗೊಳಿಸುವುದೆಂದರೆ ಶಾಲೆಯಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ಅರ್ಥವತ್ತಾಗಿ ಸಂಯೋಜನೆ ಮಾಡುವುದು ಎಂದರ್ಥ. ಸಂಘಟನೆ ಮತ್ತು ಯೋಜನೆಗಳ ಯಶಸ್ಸಿಗೆ ಸಹಯೋಗ ಅವಶ್ಯಕವಾಗಿದೆ. ಸಹಯೋಗವಿಲ್ಲದೆ ಯಾವ ನಿರ್ವಹಣೆಯೂ ಸರಾಗವಾಗಿ ಸಾಗುವುದಿಲ್ಲ. ಆದ್ದರಿಂದ ಎಲ್ಲ ನಿರ್ವಹಣಾ ಚಿಂತಕರು ಸಹಯೋಗಕ್ಕೆ ಪ್ರಾಶಸ್ತ್ಯವನ್ನು ನೀಡಿದ್ದಾರೆ. ಶಾಲೆಯ ಆಡಳಿತವು ಒಂದು ಸಂಕಿರಣದ, ಸಮಾಲೋಚನೆಯ ಸ್ವರೂಪದ್ದಾಗಿರುತ್ತದೆ. ಸಾಮಾನ್ಯವಾಗಿ ಸಂಸ್ಥೆಗಳ ಉದ್ದೇಶಗಳು ಸಹಯೋಗದಿಂದಲೇ ಸಾಧಿಸಲ್ಪಡುತ್ತವೆ. ಈ ಸಹಯೋಗದ ಯಶಸ್ಸಿಗೆ ಮೂರು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುವುದು. ಮೊದಲನೆಯದಾಗಿ, ಸಂಸ್ಥೆಯ ಪ್ರತಿ ಸದಸ್ಯನೂ ನಿರ್ವಹಿಸಬೇಕಾದ ಕಾರ್ಯವನ್ನು ನಿರ್ಧರಿಸುವುದು. ಎರಡನೆಯದಾಗಿ, ಪ್ರತಿಯೊಬ್ಬ ಸದಸ್ಯನಿಗೂ ಅವನು ಮಾಡಬೇಕಾದ ಕಾರ್ಯವನ್ನು ತಿಳಿಸುವುದು. ಕೊನೆಯದಾಗಿ, ಪ್ರತಿಯೊರ್ವನು ಸ್ವಯಂ ಪ್ರೇರಣೆಯಿಂದ ಯೋಜನೆಗೆ ಅನುಗುಣವಾಗಿ ಕಾರ್ಯಮಾಡಲು ಮನಃಪೂರ್ವಕವಾಗಿ ಒಪ್ಪುವ ಇತ್ಯಾತ್ಮಕ ಸನ್ನಿವೇಶವನ್ನು ಸೃಷ್ಟಿಸುವುದು. ಹೆಸರೇ ಸೂಚಿಸುವಂತೆ ಶೈಕ್ಷಣಿಕ ನಿರ್ವಹಣೆಯ ಪ್ರಕ್ರಿಯೆಯಲ್ಲಿನ ಮುಖ್ಯವಾದ ಕಾರ್ಯವೇ ಮೇಲ್ವಿಚಾರಣೆ. ನಿಯಂತ್ರಣವಿಲ್ಲದಿದ್ದರೆ ನಿರ್ದಿಷ್ಟ ಗುರಿಗಳನ್ನು ತಲುಪಲು ಮತ್ತು ಎಲ್ಲರೂ ಭಾಗಿಗಳಾಗುವಂತೆ ಮಾಡಲು ಸಾಧ್ಯವಿಲ್ಲ. ಶಾಲೆಯ ವೇಳಾಪಟ್ಟಿ, ಪಠ್ಯೇತರ ಚಟುವಟಿಕೆ, ಸಂಪನ್ಮೂಲ ಮುಂತಾದವುಗಳ ಬಗೆಗಿನ ನಿಯಂತ್ರಣ ಶೈಕ್ಷಣಿಕ ನಿರ್ವಹಣೆಯನ್ನು ಉತ್ತಮಗೊಳಿಸುವುದು. ಶೈಕ್ಷಣಿಕ ಆಡಳಿತ ನಿಯಂತ್ರಣ ಮಾತ್ರ ಗುರಿ ಮತ್ತು ವಿಷಯ/ವಸ್ತು ಹಾಗೆಯೇ ಗುರಿ ಮತ್ತು ವಿಧಾನಗಳ ನಡುವೆ ಉತ್ತಮ ಸಂಬಂಧವನ್ನು ಬೆಸೆಯುವುದು.

ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆಯು ಸಮಾಂತರವಾಗಿ ಚಲಿಸಿದರೆ ದೇಶದ ಶೈಕ್ಷಣಿಕ ಭವಿಷ್ಯ ಉತ್ತಮವಾಗಿ ರೂಪಿತವಾಗುತ್ತದೆ. ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆ ಒಂದೇ ನಾಣ್ಯದ ಎರಡು ಮುಖಗಳಂತೆ ಇದ್ದರೂ ಅವುಗಳ ನಡುವೆ ಕೆಲವೊಂದು ವ್ಯತ್ಯಾಸಗಳನ್ನು ಕಾಣಬಹುದು.

ಶೈಕ್ಷಣಿಕ ಆಡಳಿತವು ಚಿಂತನಶೀಲವಾದುದಾಗಿದೆ. ಈ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವ ಕೆಲಸವನ್ನು ನಿರ್ವಹಣೆ ಮಾಡುತ್ತದೆ. ಶೈಕ್ಷಣಿಕ ಆಡಳಿತವು ನಿರ್ಣಯ ಕೈಗೊಳ್ಳುವ ಹಂತದಲ್ಲಿ ಕಾರ್ಯಪ್ರವೃತ್ತವಾದರೆ, ಶೈಕ್ಷಣಿಕ ನಿರ್ವಹಣೆಯು ಕಾರ್ಯನಿರ್ವಹಣಾ ಹಂತದಲ್ಲಿ ಕಾರ್ಯಪ್ರವೃತ್ತವಾಗುತ್ತದೆ. ಆಡಳಿತವು ಶೈಕ್ಷಣಿಕ ನೀತಿಧೋರಣೆಗಳ, ಧ್ಯೇಯೋದ್ದೇಶಗಳ, ಯೋಜನೆಗಳ ರಚನೆಗೆ ಸಂಬಂಧಿಸಿದುದು. ಆದರೆ ಶೈಕ್ಷಣಿಕ ನಿರ್ವಹಣೆಯು ನೀತಿಧೋರಣೆಗಳನ್ನು ಧ್ಯೇಯೋದ್ದೇಶಗಳನ್ನು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತಹುದಾಗಿದೆ. ಶೈಕ್ಷಣಿಕ ಆಡಳಿತದ ಹರಹು ಸೀಮಿತವಾದರೆ ಶೈಕ್ಷಣಿಕ ನಿರ್ವಹಣೆಯ ಹರಹು ವಿಶಾಲವಾಗಿದೆ. ಆಡಳಿತವು ಶೈಕ್ಷಣಿಕ ಒಂದು ಮೇಲ್ಮಟ್ಟದ ಕಾರ್ಯವಾದರೆ, ಶೈಕ್ಷಣಿಕ ನಿರ್ವಹಣೆಯು ಕೆಳಮಟ್ಟದ ಕಾರ್ಯವಾಗಿದೆ. ಶೈಕ್ಷಣಿಕ ಆಡಳಿತವು ನಿರ್ವಹಣೆಯ ಒಂದು ಭಾಗ. ಶೈಕ್ಷಣಿಕ ನಿರ್ವಹಣೆ = ಶೈಕ್ಷಣಿಕ ಆಡಳಿತ + ಶೈಕ್ಷಣಿಕ ವ್ಯವಸ್ಥೆ ಎಂಬ ಸೂತ್ರವು ಶೈಕ್ಷಣಿಕ ನಿರ್ವಹಣೆ ಮತ್ತು ಆಡಳಿತಗಳ ಸಂಬಂಧವನ್ನು ಹೆಚ್ಚು ಸ್ಪಷ್ಟವಾಗಿ ಹೇಳಬಲ್ಲುದು. ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆಯ ಅನೇಕ ಅಂಶಗಳನ್ನು ಗಮನಿಸಿಕೊಂಡು ಇಂದಿನ ಶೈಕ್ಷಣಿಕ ಕಾರ್ಯ ಭಾರತರಾಷ್ಟ್ರ ಹಾಗೂ ರಾಜ್ಯಗಳಲ್ಲಿ ನಡೆಯುತ್ತಿದೆಯಾದರೂ ನಿರ್ವಹಿಸಬೇಕಾದುದು ಇನ್ನೂ ಬಹಳಷ್ಟು ಇದೆ. ಇಡೀ ಆಡಳಿತ ಹಾಗೂ ನಿರ್ವಹಣೆಯ ಪ್ರಕ್ರಿಯೆಯನ್ನು ಹೆಚ್ಚು ಸೈದ್ಧಾಂತಿಕವಾದ ಹಾಗೂ ವೈಜ್ಞಾನಿಕವಾದ ಹಿನ್ನೆಲೆಯಲ್ಲಿ ರೂಪಿಸಿ ಒಟ್ಟು ವ್ಯವಸ್ಥೆಯನ್ನು ಮತ್ತು ಶಕ್ತಿಯುತವಾಗಿ ಮಾಡಬೇಕಾಗಿದೆ. ಹಾಗಾದಾಗ ಹಲವಾರು ವರ್ಷಗಳಿಂದ ರೂಪಿಸಿಕೊಂಡಿರುವ ಉದ್ದೇಶಗಳು ಬೇಗನೆ ಸಾಧಿತವಾಗುವುದರಲ್ಲಿ ಸಂದೇಹವಿಲ್ಲ.

–ಎ.ಶ

–ಜಾ.ಎ.ಡಿ

## ಶೈಕ್ಷಣಿಕ ಉದ್ದೇಶಗಳ ಪರಿಷ್ಕೃತ ಮಾದರಿಗಳು

ಬೋಧನಾ ಉದ್ದೇಶಗಳಿಗಾಗಿ ಶೈಕ್ಷಣಿಕ ಉದ್ದೇಶಗಳನ್ನು ವರ್ಗೀಕರಿಸುವ ಪ್ರಯತ್ನ 1956ರಲ್ಲಿ ಬ್ಲೂಮ್ ಮತ್ತು ಅವನ ಸಹಚರತಜ್ಞರಿಂದ ಯಶಸ್ವಿಯಾಯಿತು. 1956ರಲ್ಲಿ ಬ್ಲೂಮ್ ಮತ್ತು ಸಹ ಶಿಕ್ಷಣ ತಜ್ಞರಿಂದ ಶೈಕ್ಷಣಿಕ ಉದ್ದೇಶಗಳ ವರ್ಗೀಕರಣವನ್ನು ಕುರಿತ 'Taxonomy of Educational Objectives, The classification of Educational Goals, Handbook I: Cognitive Domain'' ಎಂಬ ಕೃತಿ ಪ್ರಕಟವಾಯಿತು. ಆ ಕೃತಿಯ ಸಂಪಾದನೆಯ ಕಾರ್ಯವನ್ನು ಬ್ಲೂಮ್ ವಹಿಸಿಕೊಂಡಿದ್ದು ಅಂದಿನಿಂದಲೂ ಅದು ಶಿಕ್ಷಣರಂಗದಲ್ಲಿ ಬ್ಲೂಮನ ವರ್ಗೀಕರಣ ಎಂದೇ ಜನಪ್ರಿಯವಾಗಿದೆ. ಶಿಕ್ಷಣತಜ್ಞರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡುವವರಿಗೆ ಸಹಾಯಕವಾಗುವಂತೆ ಕಲಿಕೆಯ ಉದ್ದೇಶಗಳನ್ನು ಒಂದು ಶ್ರೇಣೀಕೃತ ವಿಧಾನದಲ್ಲಿ ವಿನ್ಯಾಸಗೊಳಿಸಲು ಒಟ್ಟು ಉದ್ದೇಶಗಳನ್ನು ಸಾಂಕೇತೀಕರಿಸುವುದೇ ಇದರ ಉದ್ದೇಶವಾಗಿತ್ತು. ಹಾಗೆಂದು ಬ್ಲೂಮನೇ ತನ್ನ ಹೊತ್ತಿಗೆಯ ಮೊದಲಲ್ಲಿ ಹೇಳಿಕೊಂಡಿದ್ದಾನೆ.

ಬೆಂಜಮಿನ್ ಬ್ಲೂಮ್

ಈ ನಿಟ್ಟಿನಲ್ಲಿ ಬ್ಲೂಮನು ಶಿಕ್ಷಣಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಅಗಾಧವಾದುದು. ಐದು ದಶಕಗಳ ನಂತರವೂ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಕ್ಷೇತ್ರಗಳಲ್ಲಿ ಅವನ ಪರಿಕಲ್ಪನೆಗಳನ್ನು ಬಳಸುತ್ತಿರುವುದೇ ಇದಕ್ಕೆ ಸಾಕ್ಷಿ. ಕಳೆದ ಶತಮಾನದ ಉತ್ತರಾರ್ಧದಲ್ಲಿ ಶೈಕ್ಷಣಿಕ ಕ್ಷೇತ್ರದ ಎಲ್ಲ ವಿಷಯಗಳ ಮೇಲೆ ಅತ್ಯಂತ ಪ್ರಭಾವ ಬೀರಿದ ದಾಖಲೆ ಇದು. ಪಠ್ಯಕ್ರಮ ಬೆಳವಣಿಗೆ, ಬೋಧನೆ, ಪ್ರಶಿಕ್ಷಣ, ಪರೀಕ್ಷೆ, ಮೌಲ್ಯಮಾಪನ ಇತ್ಯಾದಿ ಅನೇಕ ಕ್ಷೇತ್ರಗಳಲ್ಲಿನ ಚರ್ಚೆಗೆ ಅತ್ಯಂತ ಪ್ರಮಾಣೀಭೂತವೆನಿಸಿದ ಪರಿಕಲ್ಪನೆ ಇದಾಗಿದೆ. ಶಿಕ್ಷಣವನ್ನು ಕುರಿತ ನೂರಾರು ಅಧ್ಯಯನಗಳು ಬ್ಲೂಮನ ಪರಿಕಲ್ಪನೆಗಳನ್ನು ಪ್ರಸ್ತಾಪಿಸಿವೆ. ಶಿಕ್ಷಣಕ್ಷೇತ್ರದಲ್ಲಿ ಬಹುಶಃ ಬ್ಲೂಮನ ಹೆಸರು ಕೇಳದಿರುವವರಿಲ್ಲ ಎಂಬ ಮಾತು ಅತಿಶಯೋಕ್ತಿಯಲ್ಲ. ಪಠ್ಯಕ್ರಮ ಮತ್ತು ಮೌಲ್ಯಮಾಪನ ಸಮಸ್ಯೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಬ್ಲೂಮನ ಈ ಚಿಂತನೆ / ವರ್ಗೀಕರಣ ಶಿಕ್ಷಣದ ತಾತ್ವಿಕ ಮತ್ತು ಪ್ರಾಯೋಗಿಕ ಅಂಶಗಳೆರಡರ ಮೇಲೂ ಅಪಾರ ಪ್ರಭಾವವನ್ನು ಬೀರಿತು. ಇದು ಬೋಧನಾ ಉದ್ದೇಶಗಳ ಒಟ್ಟು ಚಳುವಳಿಗೆ ತನ್ನದೇ ಆದ ಮಹತ್ವದ ಕಾಣಿಕೆ ನೀಡಿದೆ.

Digitised by Bharatavani, CIIL

ಶಿಕ್ಷಣರಂಗದಲ್ಲಿ ಇಷ್ಟು ಪ್ರಭಾವವನ್ನು ಬೀರಿದ ಬ್ಲೂಮನ ವರ್ಗೀಕರಣ ಬಹಳ ಕಾಲದವರೆಗೆ ತಜ್ಞರ ಮತ್ತು ಅಭ್ಯಾಸಿಗರ ಒಪ್ಪಿಗೆ ಮುದ್ರೆಯೊಂದಿಗೆ ಸಾಗಿತು. ಕಾಲಕಳೆದಂತೆ ಜ್ಞಾನದ ರಚನೆ ಮತ್ತು ಮಾನವನ ಆಲೋಚನೆಗಳನ್ನು ಕುರಿತ ಹೊಸ ಬೆಳವಣಿಗೆ ಬೆಳಕಿಗೆ ಬಂದಿತು. ಈ ಸಮಯದಲ್ಲಿ ಶಿಕ್ಷಣತಜ್ಞರು ಹೊಸ ಚಿಂತನೆಗಳ ಹಿನ್ನೆಲೆಯಲ್ಲಿ ಬ್ಲೂಮನ ಆಲೋಚನೆಗಳನ್ನು ವಿಮರ್ಶಿಸಲಾರಂಭಿಸಿದರು. ಈ ಸಂದರ್ಭದಲ್ಲಿ ಕಂಡುಕೊಂಡ ಕೊರತೆಗಳನ್ನು ಮುಂದಿಡುತ್ತಲೇ ಶೈಕ್ಷಣಿಕ ಉದ್ದೇಶಗಳನ್ನು ತಮ್ಮದೇ ಆದ ರೀತಿಯಲ್ಲಿ ವರ್ಗೀಕರಿಸಿ ಹೊಸ ಹೊಸ ವರ್ಗೀಕರಣಗಳನ್ನು ಮುಂದಿಟ್ಟರು. ಹೀಗಾಗಿ ಬೋಧನಾ ಉದ್ದೇಶಗಳನ್ನು ಹೊಸಚಿಂತನೆಯ ಹಿನ್ನೆಲೆಯಲ್ಲಿ ವರ್ಗೀಕರಿಸುವ ಅನೇಕ ಪ್ರಯತ್ನಗಳು ನಡೆದಿವೆ.

ಬ್ಲೂಮನ ವರ್ಗೀಕರಣದ ಪರಿಷ್ಕರಣಕ್ಕೆ ಮತ್ತೊಂದು ಸನ್ನಿವೇಶವೂ ಒದಗಿ ಬಂದಿತು. 1980ರ ದಶಕದಲ್ಲಿ ಶಿಕ್ಷಣದಲ್ಲಿ ಉನ್ನತ ಮಟ್ಟದ ಆಲೋಚನೆಯ ಬೆಳವಣಿಗೆಗೆ ಪ್ರಯತ್ನಗಳು ನಡೆಯಬೇಕು ಎಂಬ ಕೂಗು ಕೇಳಿಬಂದಿತು. ಆ ಕಾಲದ ಶೈಕ್ಷಣಿಕ ಬರಹಗಳು ಆಲೋಚನಾ ಕೌಶಲ ಮತ್ತು ವಿವೇಚನಾ ಕೌಶಲಗಳ ಮಹತ್ವವನ್ನು ಎತ್ತಿ ಹಿಡಿದವು. ವಿದ್ಯಾರ್ಥಿಗಳಲ್ಲಿ ಉನ್ನತಮಟ್ಟದ ಆಲೋಚನೆ ಇಲ್ಲದಿರುವುದನ್ನು ಶಿಕ್ಷಣದ ಅನೇಕ ಪ್ರಕಟಣೆಗಳು ಹೊರಗೆಡಹಿದವು. ಈ ಹಿನ್ನೆಲೆಯಲ್ಲಿ ಪ್ರಾರಂಭವಾದ ಚಿಂತನೆ ಬ್ಲೂಮನ ವರ್ಗೀಕರಣದ ಪರಿಕಲ್ಪನೆಯನ್ನು ಪುನರ್ವಿಮರ್ಶೆ ಮಾಡಿದವು.

ಬ್ಲೂಮನ ವರ್ಗೀಕರಣವು ಸಂಜ್ಞಾನಾತ್ಮಕ (cognitive) ಪ್ರಕ್ರಿಯೆಯ ಆರು ಹಂತಗಳ ಚೌಕಟ್ಟನ್ನು ಮುಂದಿಟ್ಟಿದೆ. ಅವೆಂದರೆ, ಜ್ಞಾನ, ಗ್ರಹಿಕೆ, ಅನ್ವಯ, ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಮೌಲ್ಯಮಾಪನ. ಪ್ರತಿ ಹಂತವನ್ನು ನಿರ್ದಿಷ್ಟ ಲಕ್ಷಣಗಳಿಂದ, ವರ್ತನೆಗಳಿಂದ ಗುರುತಿಸಲಾಗಿದೆ. ಈ ವರ್ಗೀಕರಣವು ಅನೇಕ ಟೀಕೆಗಳಿಗೆ ಒಳಗಾಗಿದೆ. ಇದರಲ್ಲಿ ಬಹಳ ಪ್ರಮುಖ ಟೀಕೆ ಎಂದರೆ, ಈ ವರ್ಗೀಕರಣವು 'ಆಲೋಚನೆ' ಹಾಗೂ 'ಕಲಿಕೆಯೊಡನೆ ಆಲೋಚನೆ'ಗಿರುವ ಸಂಬಂಧವನ್ನು ಅತ್ಯಂತ ಸರಳೀಕರಿಸುತ್ತದೆ. ಬ್ಲೂಮನ ವರ್ಗೀಕರಣವು ನಿಜವಾಗಿಯೂ ಕಲಿಕೆಯ ಕಲ್ಪನೆಯನ್ನು ಸರಳವಾದ ಏಕ ಆಯಾಮದ ವರ್ತನಾ ಮಾದರಿಯಿಂದ ಬಹು ಆಯಾಮವುಳ್ಳ ಹೆಚ್ಚು ರಚನಾತ್ಮಕ ಸ್ವರೂಪಕ್ಕೆ ಕೊಂಡೊಯ್ದುದು ನಿಜ. ಆದರೆ ಅದು ವಿವಿಧ ಹಂತಗಳನ್ನು ಗುರುತಿಸಲು ಕಠಿಣತೆಯ ಮಟ್ಟವನ್ನು ಮಾನದಂಡವಾಗಿ ಬಳಸಿಕೊಂಡಿತು. ಬಳಸಿಕೊಂಡ ಈ ಮಾನದಂಡ ಬಹಳವೇ ಸರಳವಾದದ್ದಾಯಿತು ಎಂಬುದು ತಜ್ಞರ ಆಕ್ಷೇಪ. ಬ್ಲೂಮನ ವರ್ಗೀಕರಣದ ಪ್ರಕಾರ ಮೇಲಿನ ಹಂತದ ವರ್ತನೆಗಳು ಕೆಳಗಿನ ಹಂತದ ವರ್ತನೆಗಳಿಗಿಂತ ಹೆಚ್ಚು ಕಷ್ಟಕರವಾದ ಬೌದ್ಧಿಕ ಪ್ರಕ್ರಿಯೆಗಳನ್ನು ಒಳಗೊಳ್ಳುತ್ತದೆ ಎಂದು ತಿಳಿಯಲಾಗಿತ್ತು. ಆದರೆ ಬ್ಲೂಮನ ವರ್ಗೀಕರಣವನ್ನು ಕುರಿತ ಸಂಶೋಧನೆಗಳು ಇದನ್ನು ಪುಷ್ಟೀಕರಿಸಲಿಲ್ಲ. ಬ್ಲೂಮನ ವರ್ಗೀಕರಣ ರಚನೆಯಲ್ಲಿ ತರಬೇತಿ ಪಡೆದ ಶಿಕ್ಷಣತಜ್ಞರು ಕೆಳಮಟ್ಟದ ಪ್ರಶ್ನೆಗಳಿಗಿಂತ ಉನ್ನತಮಟ್ಟದ ಪ್ರಶ್ನೆಗಳು ಹೆಚ್ಚು ಕಷ್ಟಕರ ಎಂಬುದನ್ನು ಗುರುತಿಸದೇ ಹೋದರು.

ಬ್ಲೂಮನ ವರ್ಗೀಕರಣದ ಮಿತಿಗಳು ಬ್ಲೂಮನಿಂದಲೇ ಪರೋಕ್ಷವಾಗಿ ಗುರುತಿಸಲಾಗಿವೆ. ಅವನು ಮಾಡಿರುವ ವಿಶ್ಲೇಷಣೆಯಲ್ಲಿ ಹಾಗೂ ಚರ್ಚೆಯಲ್ಲಿ ಇದನ್ನು ನೋಡಬಹುದು. "ವಿಶ್ಲೇಷಣೆ ಸಂಪೂರ್ಣವಾದ ಗ್ರಹಿಕೆಯನ್ನು ಸೂಚಿಸುತ್ತದೆ ಎಂಬುದು ಶೈಕ್ಷಣಿಕವಾಗಿ ಸಮಂಜಸವಾದುದಷ್ಟೆ.... ಮೌಲ್ಯಮಾಪನವನ್ನು ಬೌದ್ಧಿಕವಲಯದ ಅತಿ ಉಚ್ಚಸ್ಥಾನದಲ್ಲಿ ಗುರುತಿಸಿ ಅದು ಸ್ವಲ್ಪಮಟ್ಟಿಗೆ ಕೆಳಗಿನ ಉಳಿದೆಲ್ಲ ಹಂತಗಳ ವರ್ತನೆಗಳನ್ನು ಬಯಸುತ್ತದೆ ಎಂದು ಗುರುತಿಸಲಾಗಿದ್ದರೂ ಅದು ಚಿಂತನೆಯ ಅಥವಾ ಸಮಸ್ಯಾಪರಿಹಾರದ ಕೊನೆಯ ಹಂತವೇನೂ ಅಲ್ಲ. ಮೌಲ್ಯಮಾಪನ ಪ್ರಕ್ರಿಯೆಯು ಕೆಲವು ಸಂದರ್ಭದಲ್ಲಿ ಹೊಸ ಜ್ಞಾನಕ್ಕೆ ಪೂರ್ವಾಪೇಕ್ಷಿತವಾಗಿರಬಹುದು. ಗ್ರಹಿಕೆ ಅಥವಾ ಅನ್ವಯದ ಹೊಸ ಪ್ರಯತ್ನವಾಗಿರಬಹುದು, ಇಲ್ಲವೇ ಒಂದು ಹೊಸ ವಿಶ್ಲೇಷಣೆ ಅಥವಾ ಸಂಶ್ಲೇಷಣೆಯೂ ಆಗಿರಬಹುದು."

ಒಟ್ಟಿನಲ್ಲಿ ಬ್ಲೂಮನ ವರ್ಗೀಕರಣ ಪ್ರಾಯೋಗಿಕ ದೃಷ್ಟಿಯಿಂದ ಚಿಂತಕರಿಗೆ ಹೆಚ್ಚು ಸಮರ್ಪಕವೆನಿಸಲಿಲ್ಲ. ಅದು ಒಂದು ಶ್ರೇಣಿಯಾಗಿ ರೂಪಿತವಾಗುವ ಅಪೇಕ್ಷೆಯಿಂದ ಮೊದಲುಗೊಂಡ ಪ್ರಯತ್ನವಾದರೂ ಅದು ಶ್ರೇಣಿಯನ್ನು ಹೋಲುತ್ತದೆಯಷ್ಟೇ ಎಂದು ತಜ್ಞರು ಅಭಿಪ್ರಾಯಪಟ್ಟರು.

ಶಿಕ್ಷಣದ ಉದ್ದೇಶಗಳ ವರ್ಗೀಕರಣವನ್ನು ಹೆಚ್ಚು ಸಮರ್ಪಕ ವಾಗಿಸುವ, ಬ್ಲೂಮನ ಪ್ರಯತ್ನಗಳನ್ನು ಪರಿಷ್ಕರಿಸುವ ಅನೇಕ ಪ್ರಯತ್ನಗಳು ನಡೆದಿವೆ. ಡೇಕಾಕ್, ಸ್ಲೀಗರ್ಸ್ ಮತ್ತು ವೀಟನ್ (2004) ಅವರು ಇಂತಹ ಅನೇಕ ಪರಿಷ್ಕರಣಗಳ ವಿಮರ್ಶೆ ಮಾಡಿದ್ದಾರೆ. ಇತ್ತೀಚಿನವುಗಳಲ್ಲಿ ಸುಮಾರು 20 ಪರಿಷ್ಕರಣಗಳನ್ನು ಗುರುತಿಸಬಹುದು. ಇವುಗಳಲ್ಲಿ ಎರಡು ಪರಿಷ್ಕರಣಗಳು ಪ್ರಮುಖವಾಗುತ್ತವೆ.

ಮೊದಲನೆಯದು ಬ್ಲೂಮನ ಮೂಲ ಪರಿಕಲ್ಪನೆಗೆ ಅತಿ ಹತ್ತಿರವಾದುದು. ಇದು 2001ರಲ್ಲಿ ಆ್ಯಂಡರ್‌ಸನ್ ಮತ್ತಿತರರು ಮಾಡಿದ ಪ್ರಯತ್ನ. "A Taxonomy for Learning, Teaching and Assessing: A Revision of Bloom's Taxonomy of Educational Objectives" ಎಂದವರು ಅದನ್ನು ಕರೆದಿದ್ದಾರೆ. ಮುಂದುವರಿದ ಬೌದ್ಧಿಕ ಮನೋವಿಜ್ಞಾನದ ಅಂಶಗಳ ಹಿನ್ನೆಲೆಯಲ್ಲಿ ಹೆಚ್ಚು ವಾಸ್ತವವಾದ ಉದಾಹರಣೆಗಳನ್ನು ಸಾಮಾನ್ಯರಿಗೂ ಅರ್ಥವಾಗುವ ಭಾಷೆಯಲ್ಲಿ ತಿಳಿಸುವ ದೃಷ್ಟಿಯಿಂದ ಈ ಪರಿಷ್ಕರಣ ಅಗತ್ಯ ಎಂಬುದು ಆ್ಯಂಡರ್‌ಸನ್ ಮತ್ತು ಅವನ ಸಹವರ್ತಿಗಳ ಅಭಿಪ್ರಾಯ. ಬ್ಲೂಮನ ವಿದ್ಯಾರ್ಥಿಯಾದ ಲಾರಿನ್ ಆಂಡರ್ ಸನ್ ಬ್ಲೂಮನ ಮೂಲ ಕೆಲಸದಲ್ಲಿ ಸಹವರ್ತಿಯಾಗಿದ್ದ ಕ್ರಾಥ್ ಮೋಲ್‌ನೊಡನೆ ಸೇರಿ 1995 ರಿಂದ 2000ದ ವರೆಗೆ ಮಾಡಿದ ಕೆಲಸವಿದು. ಇದರಲ್ಲಿನ ವ್ಯತ್ಯಾಸಗಳು ಕೇವಲ ಪದಗಳನ್ನು ಪಟ್ಟಿಮಾಡುವುದಾಗಲೀ ಅಥವಾ ನಾಮಪದಗಳನ್ನು ಕ್ರಿಯಾಪದಗಳಾಗಿ ಪರಿವರ್ತಿಸುವುದಾಗಲೀ ಅಲ್ಲ. ಅದಕ್ಕೆ ಬದಲಾಗಿ ವಿವಿಧ ರೀತಿಯ ಮತ್ತು ವಿವಿಧ ಹಂತಗಳ ಜ್ಞಾನವನ್ನು ಎಷ್ಟು ಚೆನ್ನಾಗಿ ವರ್ಗೀಕರಿಸಬಹುದು ಮತ್ತು ಅದನ್ನು ಅರ್ಥಮಾಡಿಕೊಳ್ಳಲು ವರ್ಗೀಕರಣದ ಒಟ್ಟು ಪರಿಕಲ್ಪನೆ ಹೇಗೆ ಸಹಾಯಕವಾಗುತ್ತದೆ ಎಂಬುದನ್ನು ಗಮನಿಸಿರುವುದು ಇದರ ವೈಶಿಷ್ಟ್ಯ.

ಆ್ಯಂಡರ್‌ಸನ್ ಮತ್ತಿತರರು ಮಾಡಿದ ವರ್ಗೀಕರಣಕ್ಕೆ ಎರಡು ಮೂಲಭೂತ ಆಯಾಮಗಳಿವೆ. ಮೊದಲನೆಯದು, ಜ್ಞಾನವಲಯವಾಗಿದ್ದು ನಾಲ್ಕು ರೀತಿಯ ಜ್ಞಾನವನ್ನು ಒಳಗೊಳ್ಳುತ್ತದೆ. ಅವುಗಳೆಂದರೆ, ತಾಥ್ಯಾಂಶಗಳ ಜ್ಞಾನ (factual knowledge), ಪರಿಕಲ್ಪನಾತ್ಮಕ ಜ್ಞಾನ (conceptual knowledge), ಕಾರ್ಯವಿಧಾನಾತ್ಮಕ ಜ್ಞಾನ (procedural knowledge) ಮತ್ತು ಪರಾಸಂಜ್ಞಾನಾತ್ಮಕ ಜ್ಞಾನ (metacognitive knowledge). ಮೊದಲನೆಯದು ವಾಸ್ತವಿಕ ಜ್ಞಾನ. ನಿರ್ದಿಷ್ಟ ಜ್ಞಾನಶಿಸ್ತುಗಳಿಗೆ ಮೂಲಭೂತವಾದ ಜ್ಞಾನವಿದು. ಒಂದು ಜ್ಞಾನಶಿಸ್ತನ್ನು (discipline) ಅರ್ಥಮಾಡಿಕೊಳ್ಳಲು ಅಥವಾ ಅದರಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾದ ವಾಸ್ತವಿಕ ಅಂಶಗಳು, ಪಾರಿಭಾಷಿಕ ಪದಗಳು, ವಿವಿಧ ಅಂಶಗಳು ಅಥವಾ ವಿವರಗಳು ಮುಂತಾದವುಗಳನ್ನು ಇದು

Digitised by Bharatavani, CIIL

ಒಳಗೊಳ್ಳುತ್ತದೆ. ಒಂದು ನಿರ್ದಿಷ್ಟ ಜ್ಞಾನಶಾಖೆಗೆ ಸಂಬಂಧಿಸಿದ ವರ್ಗೀಕರಣಗಳು, ತತ್ವಗಳು ಸಾಮಾನ್ಯೀಕರಣಗಳು, ಸಿದ್ಧಾಂತಗಳು, ಮಾದರಿಗಳು ಅಥವಾ ರಚನೆಗಳು ಇವುಗಳಿಗೆ ಸಂಬಂಧಿಸಿದ ಜ್ಞಾನವೇ ಪರಿಕಲ್ಪನಾತ್ಮಕ ಜ್ಞಾನ. ಒಂದು ನಿರ್ದಿಷ್ಟ ಜ್ಞಾನಶಾಲೆಗೆ ಸಂಬಂಧಿಸಿದಂತೆ ಏನನ್ನಾದರೂ 'ಮಾಡಲು' ಸಹಾಯಮಾಡುವ ಮಾಹಿತಿ ಅಥವಾ ಜ್ಞಾನವೇ ವಿಧಾನಾತ್ಮಕ ಜ್ಞಾನ. ಇದು ಅನ್ವೇಷಣಾ ವಿಧಾನಗಳು ಅತಿ ನಿರ್ದಿಷ್ಟವಾದ ಅಥವಾ ಪರಿಮಿತವಾದ ಕೌಶಲಗಳು, ತಂತ್ರಗಳು ಮತ್ತು ವಿಶೇಷವಾದ ವಿಧಾನಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿಗೆ ಅವನ ಜ್ಞಾನ ಹಾಗೂ ಚಿಂತನೆಯ ಪ್ರಕ್ರಿಯೆಗಳನ್ನು ಕುರಿತಂತೆ ಇರುವ ಅರಿವು ಪರಾಸಂಜ್ಞಾನಾತ್ಮಕ ಜ್ಞಾನವೆನಿಸಿಕೊಳ್ಳುತ್ತದೆ. ಈ ಕೊನೆಯ ಅಂಶ ಆ್ಯಂಡರ್‌ಸನ್‌ನ ವರ್ಗೀಕರಣದಲ್ಲಿ ಹೊಸದಾಗಿ ಸೇರಿಕೊಂಡಿದೆ. ಮೊದಲ ಮೂರು ರೀತಿಯ ಜ್ಞಾನಪ್ರಕಾರಗಳನ್ನು ಬ್ಲೂಮ್ ಹೇಳಿದ್ದರೂ ಅಧ್ಯಾಪಕರು ಅದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಮತ್ತು ಬಳಸಲು ಪ್ರಯತ್ನಿಸಲಿಲ್ಲ.

ಇದು ಮೊದಲನೆಯ ಆಯಾಮವಾದರೆ ಎರಡನೆಯದು ಸಂಜ್ಞಾನಾತ್ಮಕ ಪ್ರಕ್ರಿಯಾ ವಲಯ (cognitive process). ಇದು ಆರು ರೀತಿಯ ಚಿಂತನಾ ಕ್ರಮಗಳನ್ನು ಒಳಗೊಳ್ಳುತ್ತದೆ. ಬಹುಕಾಲಿಕ ಸ್ಮರಣೆಯಿಂದ ಅಗತ್ಯವಾದುದನ್ನು ಅರಿವಿಗೆ ತೆಗೆದುಕೊಳ್ಳುವುದನ್ನು ಅವನು 'ಸ್ಮರಿಸಿಕೊಳ್ಳುವುದು' (remembering) ಎಂದು ಕರೆದಿದ್ದಾನೆ. ಇಲ್ಲಿ ನಾಮಪದಗಳು ಕ್ರಿಯಾಪದಗಳಾಗಿರುವುದನ್ನು ಗಮನಿಸಬೇಕು. ಮೌಖಿಕ ಲಿಖಿತ ಅಥವಾ ನಕ್ಷಾತ್ಮಕ ಸಂವಹನವೂ ಸೇರಿದಂತೆ ಸೂಚನಾತ್ಮಕ ಸಂದೇಶಗಳಿಂದ ಅರ್ಥಕಟ್ಟುವುದನ್ನು 'ಅರಿತುಕೊಳ್ಳುವುದು'' Understanding ಎಂದು ಗುರುತಿಸಿದ್ದಾರೆ. ಒಂದು ನಿರ್ದಿಷ್ಟ ಸನ್ನಿವೇಶದಲ್ಲಿನ ಕ್ರಮ ಅಥವಾ ವಿಧಾನವನ್ನು ಕಾರ್ಯರೂಪಕ್ಕೆ ತರುವುದೇ 'ಅನ್ವಯಿಸುವುದು' (applying). ವಸ್ತು/ವಿಷಯಗಳನ್ನು ಅವುಗಳ ಅವಯವಗಳಿಗನುಗುಣವಾಗಿ ವಿಭಜಿಸುವುದು ಹಾಗೂ ಆ ಅವಯವಗಳ ನಡುವಿನ ಮತ್ತು ಅವಯವಗಳ ಜೊತೆಗೆ ಒಟ್ಟು ವಸ್ತು / ವಿಷಯದ ಸಂಬಂಧವನ್ನು ಗುರುತಿಸುವುದೇ 'ವಿಶ್ಲೇಷಿಸುವುದು' (analyzing). ಮಾನದಂಡಗಳು ಅಥವಾ ಗುಣಪ್ರಮಾಣಕಗಳ ಆಧಾರದ ಮೇಲೆ ತೀರ್ಪು ನೀಡುವುದೇ 'ಮೌಲ್ಯಮಾಪನ ಮಾಡುವುದು' (evaluating) ವಿವಿಧ ಘಟಕಗಳನ್ನು ಸಂಯೋಜನಾತ್ಮಕವಾಗಿ ಅಥವಾ ಕ್ರಿಯಾತ್ಮಕವಾಗಿ ಜೋಡಿಸುವುದು ಅಥವಾ ಘಟಕಗಳನ್ನು ಹೊಸ ವಿನ್ಯಾಸದಲ್ಲಿ ರಚನೆಯಲ್ಲಿ ಪುನಾರಚಿಸುವುದೇ 'ಸೃಜಿಸುವುದು' (creating). ಬ್ಲೂಮ್ ಮತ್ತು ಆ್ಯಂಡರ್ ಸನ್ ಇವರ ಮಾದರಿಗಳ ನಡುವಿನ ವ್ಯತ್ಯಾಸವನ್ನು ಕೆಳಗೆ ಸೂಚಿಸಲಾಗಿದೆ.

**ಜ್ಞಾನವಲಯದ ವರ್ಗೀಕರಣ ಬ್ಲೂಮ್ ಮತ್ತು ಅಂಡರ್‌ಸನ್ ಅವರ ಪ್ರಕಾರ ಹೀಗಿವೆ.**

| | **ಬ್ಲೂಮನ ವರ್ಗೀಕರಣ 1956** | **ಆ್ಯಂಡರ್ ಮತ್ತು ಕ್ರಾಥ್ ವೋಲ್ ರ ವರ್ಗೀಕರಣ 2000** |
|---|---|---|
| 1. | **ಜ್ಞಾನ** : ಈ ಹಿಂದೆ ಕಲಿತ ವಿಷಯಗಳನ್ನು ನೆನಪಿಸಿ ಕೊಳ್ಳುವುದು ಅಥವಾ ಸ್ಮರಣೆಯಿಂದ ಹೊರತೆಗೆಯುವುದು. ಈ ಕ್ರಿಯೆಗೆ ಸಂಬಂಧಿಸಿದಂತೆ ಅವನು ಬಳಸಿದ ಕ್ರಿಯಾ ಪದಗಳು ತಿಳಿ, ಗುರುತಿಸು, ಸಂಬಂಧಿಸು, ಪಟ್ಟಿಮಾಡು, ವ್ಯಾಖ್ಯೆಕೊಡು, ನೆನಪಿಸು, ಬಾಯಿಪಾಠ ಮಾಡು, ಪುನ ರುಚ್ಚರಿಸು, ದಾಖಲಿಸು, ಹೆಸರಿಸು, ಕಂಡುಕೊಳ್ಳು, ಪಡೆ. | **ಸ್ಮರಿಸುವುದು ಅಥವಾ ಗುರುತಿಸುವುದು,** ವ್ಯಾಖ್ಯೆ, ವಾಸ್ತವಾಂಶಗಳು, ಪಟ್ಟಿಗಳು ಇವುಗಳನ್ನು ಹೇಳಲು ಸ್ಮರಣೆಯಿಂದ ಜ್ಞಾನವನ್ನು ಬಳಸುವುದು. |
| 2. | **ಗ್ರಹಿಕೆ** : ವಿಷಯವನ್ನು ಗ್ರಹಿಸಲು ಅಥವಾ ಅರ್ಥಕಟ್ಟಲು ಬಳಸುವ ಸಾಮರ್ಥ್ಯ. ಈ ಕ್ರಿಯೆಗೆ ಸಂಬಂಧಿಸಿದ ಕ್ರಿಯಾ ಪದಗಳು–ಪುನಃ ಹೇಳು. ಗುರುತಿಸು, ವರದಿ ಮಾಡು ಕಂಡುಹಿಡಿ, ವಿವರಿಸು, ಅಭಿವ್ಯಕ್ತಿಸು, ಚರ್ಚಿಸು, ವಿಮರ್ಶಿಸು, ಊಹಿಸು, ತೀರ್ಮಾನಿಸು, ಉದಾಹರಿಸು, ವ್ಯಾಖ್ಯಾನಿಸು, ಪ್ರತಿನಿಧಿಸು, ವ್ಯತ್ಯಾಸ ಹೇಳು. | **ಅರ್ಥಮಾಡಿಕೊಳ್ಳುವುದು / ಅರಿತುಕೊಳ್ಳುವುದು:** ಲಿಖಿತ ಅಥವಾ ನಕ್ಷಾತ್ಮಕವಾದ ವಿವಿಧ ಕ್ರಿಯೆಗಳ ಮೂಲಕ ಅರ್ಥ ಕಟ್ಟುವಿಕೆ–ವ್ಯಾಖ್ಯಾನಿಸುವುದು, ಸಂಗ್ರಹಿಸುವುದು, ಊಹಿಸುವುದು, ಹೋಲಿಸುವುದು, ವಿವರಿಸುವುದು |
| 3. | **ಅನ್ವಯ** : ಕಲಿತ ವಿಷಯವನ್ನು ಬಳಸುವ ಸಾಮರ್ಥ್ಯ ಅಥವಾ ವಿಷಯವನ್ನು ಹೊಸದಾದ ಮತ್ತು ನಿಚ್ಚಳವಾದ ಸನ್ನಿವೇಶಗಳಲ್ಲಿ ಬಳಸುವುದು – ಅನ್ವಯಿಸು, ಹೊಂದಿಸು, ಬೆಳೆಸು, ರೂಪಾಂತರಿಸು, ಬಳಸು, ಕಾರ್ಯ ನಡೆಸು, ಸಂಘಟಿಸು, ಪುನರ್ರಚಿಸು, ವ್ಯಾಖ್ಯಾನಿಸು, ಮಾಡಿ ತೋರಿಸು, ಪ್ರಾತ್ಯಕ್ಷಿಕೆ ಕೊಡು, ಉದಾಹರಣೆ ಕೊಡು, ಅಭ್ಯಾಸಮಾಡು, ಗುಣಿಸು, ತೋರಿಸು, ಅಭಿನಯಿಸು. | **ಅನ್ವಯಿಸುವುದು:** ಅನ್ವಯಿಸುವುದರ ಮೂಲಕ ಒಂದು ವಿಧಾನವನ್ನು ಕಾರ್ಯರೂಪಕ್ಕೆ ತರುವುದು, ಕಲಿತ ವಿಷಯದ ಮಾದರಿ ತಯಾರಿ, ಪ್ರಾತ್ಯಕ್ಷಿಕೆ, ಅಣಕ, ಸಂದರ್ಶನ ಇತ್ಯಾದಿಗಳ ಮೂಲಕ ಬಳಕೆಯಾಗುವುದು. |
| 4 | **ವಿಶ್ಲೇಷಣೆ** : ವಿಷಯದ ಒಟ್ಟು ಸಂಘಟನೆಯ ಸ್ಪಷ್ಟ ತಿಳಿವಳಿಕೆಗಾಗಿ ವಿಷಯವನ್ನು ಭಾಗಗಳಲ್ಲಿ ವಿಭಾಗಿಸುವುದು ಅಥವಾ ವಿಭಜಿಸುವುದು. ಇದಕ್ಕೆ ಸಂಬಂಧಿಸಿದ ಕ್ರಿಯಾಪದಗಳು–ವಿಶ್ಲೇಷಿಸು, ಹೋಲಿಸು, ವಿಚಾರ ಮಾಡು, ಪರೀಕ್ಷಿಸು, ರಚಿಸು, ವರ್ಗೀಕರಿಸು, ವ್ಯತ್ಯಾಸ ಗುರುತಿಸು, ಕಂಡುಹಿಡಿ, ಸರ್ವೇಕ್ಷಣೆ ಮಾಡು, ಪ್ರಯೋಗಮಾಡು, ವಿಮರ್ಶೆ ಮಾಡು, ವಿಭಾಗಿಸು, ಬೇರೆ ಮಾಡು. | **ವಿಶ್ಲೇಷಿಸುವುದು:** ವಿಷಯ ಅಥವಾ ಪರಿಕಲ್ಪನೆಯನ್ನು ಅದರ ಭಾಗಗಳಾಗಿ ವಿಭಾಗಿಸುವುದು, ಭಾಗಗಳ ನಡುವಿನ ಸಂಬಂಧವನ್ನು ಹಾಗೂ ಒಟ್ಟು ವಿಷಯಗಳ/ಪರಿಕಲ್ಪನೆಗಳೊಂದಿಗೆ ಭಾಗಗಳ ಸಂಬಂಧವನ್ನು ಕಂಡುಹಿಡಿಯುವುದು ಈ ಕ್ರಿಯೆಯು ಒಳಗೊಂಡ ಕಾರ್ಯಗಳು–ವ್ಯತ್ಯಾಸ ತೋರಿಸುವುದು, ಸಂಘಟಿಸುವುದು ಅವಯವೀಕರಿಸುವುದು, ಭಾಗಗಳು ಮತ್ತು ಘಟಕಗಳನ್ನು ಗುರುತಿಸಲು ಸಮರ್ಥರಾಗುವುದು. ಒಬ್ಬ ವ್ಯಕ್ತಿ ವಿಶ್ಲೇಷಿಸುತ್ತಿರುವಾಗ ಅವನು ಹರಡು ಹಾಳೆಗಳು. (Spread Sheets) ಸರ್ವೇಕ್ಷಣಗಳು, ಚಾರ್ಟುಗಳು, ನಕ್ಷೆಗಳು ಇತ್ಯಾದಿಗಳ ಮೂಲಕ ಈ ಬೌದ್ಧಿಕ ಕ್ರಿಯೆಯನ್ನು ಉದಾಹರಿಸಬಹುದು. |


Digitised by Bharatavani, CIIL

| | |
|---|---|
| 5. **ಸಂಶ್ಲೇಷಣೆ** :ಸಂಬದ್ಧವಾದ ಅಥವಾ ಅನನ್ಯವಾದ ಹೊಸ ಪೂರ್ಣ ಪರಿಕಲ್ಪನೆಯನ್ನು ರೂಪಿಸಲು ಭಾಗಗಳನ್ನು ಸಂಘಟಿಸುವ ಸಾಮರ್ಥ್ಯ. ಇದಕ್ಕೆ ಸಂಬಂಧಿಸಿದ ಕ್ರಿಯಾಪದಗಳು –ರಚಿಸು, ರೂಪಿಸು, ವಿನ್ಯಾಸಗೊಳಿಸು, ಸೃಜಿಸು, ಶೋಧಿಸು, ಸೂತ್ರರೂಪಕ್ಕೆ ತಾ, ಸಂಗ್ರಹಿಸು, ಜೋಡಿಸು, ಸಾಮಾನ್ಯೀಕರಿಸು, ದಾಖಲಿಸು, ಸೇರಿಸು, ಸಂಬಂಧೀಕರಿಸು, ಸೂಚಿಸು, ಬೆಳೆಸು, ಸಂಘಟಿಸು, ಮೂಲ ಗುರುತಿಸು, ಬರೆ | **ಮೌಲ್ಯಮಾಪನಮಾಡು:** ಪರೀಕ್ಷೆ ಮತ್ತು ವಿಮರ್ಶೆಗಳ ಮೂಲಕ ಮಾನದಂಡಗಳು ಮತ್ತು ಪ್ರಮಾಣಗಳ ಆಧಾರದ ಮೇಲೆ ನಿರ್ಣಯಗಳನ್ನು ಕೈಗೊಳ್ಳುವುದು: ಟೀಕೆ, ಶಿಫಾರಸುಗಳು, ವರದಿಗಳು ಇತ್ಯಾದಿ. |
| 6. **ಮೌಲ್ಯಮಾಪನ** : ನಿರ್ದಿಷ್ಟ ಉದ್ದೇಶಕ್ಕೆ ಸಂಬಂಧಿಸಿದಂತೆ ವಿಷಯದ ಮೌಲ್ಯವನ್ನು ವಿಮರ್ಶಿಸುವುದು. ಟೀಕೆ ಮಾಡುವುದು, ಪರೀಕ್ಷಿಸುವುದು–ಇದಕ್ಕೆ ಸಂಬಂಧಿಸಿದ ಕ್ರಿಯಾಪದಗಳು–ತೀರ್ಪು ಕೊಡು, ಪರೀಕ್ಷಿಸು, ಹೋಲಿಸು ಮೌಲ್ಯಮಾಪನ ಮಾಡು, ನಿರ್ಣಯಕೈಗೊಳ್ಳು, ಉಪಸಂಹಾರಮಾಡು, ವಾದಮಾಡು, ನಿರ್ಧಾರಮಾಡು, ಆಯ್ಕೆಮಾಡು, ಬೆಲೆಕಟ್ಟು, ಮೌಲ್ಯೀಕರಿಸು, ಎಣಿಸು, ಪರ್ಯಾಲೋಚಿಸು, ಬೆಲೆಕಟ್ಟು, ಟೀಕೆಮಾಡು, ಊಹಿಸು. | **ಸೃಜಿಸುವುದು:** ಬಿಡಿ ಅಂಶಗಳನ್ನು ಸಂಬದ್ಧವಾದ ಸಂಪೂರ್ಣವಾದ ಸಮಷ್ಟಿಯಾಗಿ ಕೂಡಿಸುವುದು, ಹೊಸದನ್ನು ಸೃಷ್ಟಿಸುವುದರ ಮೂಲಕ, ಹೊಸದಾಗಿ ಯೋಜಿಸುವುದರ ಮೂಲಕ ಅಥವಾ ಉತ್ಪಾದಿಸುವುದರ ಮೂಲಕ ಘಟಕಾಂಶಗಳನ್ನು ಹೊಸವಿನ್ಯಾಸದಲ್ಲಿ ಪುನರ್ರಚಿಸುವುದು. ಈ ವರ್ಗೀಕರಣದ ಪ್ರಕಾರ ಇದು ಅತಿ ಕ್ಲಿಷ್ಟಕರವಾದ ಪ್ರಕ್ರಿಯೆ. ಇದನ್ನು ಬ್ಲೂಮನಲ್ಲಿ ಸಂಶ್ಲೇಷಣೆ ಎಂದು ಗುರುತಿಸಲಾಗಿತ್ತು. |

ಹೀಗೆ ಆ್ಯಂಡರ್‌ಸನ್ನನ ಪ್ರಕಾರ ಈ ಎರಡು ಆಯಾಮಗಳ ಹಿನ್ನೆಲೆಯಲ್ಲಿ ಶೈಕ್ಷಣಿಕ ಉದ್ದೇಶಗಳನ್ನು ವರ್ಗೀಕರಿಸಬಹುದು. ಆ್ಯಂಡರ್‌ಸನ್ನನ ವರ್ಗೀಕರಣದ ಪರಿಕಲ್ಪನೆಯ ಸ್ಪಷ್ಟೀಕರಣಕ್ಕೆ ಕೆಳಗಿನ ನಕ್ಷೆಯನ್ನು ಗಮನಿಸಬಹುದು. ಈ ವರ್ಗೀಕರಣದಲ್ಲಿ ನಾಮಪದಗಳು ಕ್ರಿಯಾಪದಗಳಾಗಿರುವುದು ಗಮನಾರ್ಹ.

| ಜ್ಞಾನದ ಆಯಾಮಗಳು | ಬೌದ್ಧಿಕ ಪ್ರಕ್ರಿಯೆಗಳು | | | | | |
|---|---|---|---|---|---|---|
| | 1. ನೆನಪಿಸಿಕೊ | 2. ಅರ್ಥ ಮಾಡಿಕೊ | 3. ಅನ್ವಯಿಸು | 4. ವಿಶ್ಲೇಷಿಸು | 5. ಮೌಲ್ಯಮಾಪನ ಮಾಡು | 6. ಸೃಜಿಸು |
| ವಾಸ್ತವಿಕ ಅಂಶಗಳು | | | | | | |
| ಪರಿಕಲ್ಪನಾತ್ಮಕ | | | | | | |
| ವಿಧಾನಾತ್ಮಕ | | | | | | |
| ಪರಾಸಂಜ್ಞಾನಾತ್ಮಕ | | | | | | |

ಆ್ಯಂಡರ್‌ಸನ್ನನ ವರ್ಗೀಕರಣಕ್ಕೆ ಒಂದು ಉದಾಹರಣೆಯನ್ನು ಹೀಗೆ ಕೊಡಬಹುದು. ಒಂದು ವಿಜ್ಞಾನ ತರಗತಿಯಲ್ಲಿ ವಿದ್ಯಾರ್ಥಿಗಳು ಪ್ರಕೃತಿ ರಕ್ಷಣೆಗೆ 'ಮಿತಿಗೊಳಿಸು–ಮರುಬಳಕೆ–ಆವರ್ತ ಬಳಕೆ'ಯ ಉಪಕ್ರಮವನ್ನು ಅನ್ವಯಿಸಲು ಕಲಿಯುತ್ತಾರೆ ಎಂಬುದು ಉದ್ದೇಶ. ಏನನ್ನೋ ಮಾಡುವುದು ಹೇಗೆ ಎಂಬುದನ್ನು ಇದು ತಿಳಿಸುವುದರಿಂದ ಜ್ಞಾನದ ಆಯಾಮಗಳ ಕೆಳಗೆ ಇದನ್ನು ವಿಧಾನಾತ್ಮಕ ಜ್ಞಾನದ ಕೆಳಗೆಯೂ ಇದು ಏನನ್ನೋ ಮಾಡುವ ವಿಷಯವಾದ್ದರಿಂದ ಬೌದ್ಧಿಕ ಪ್ರಕ್ರಿಯೆಯ ಕೆಳಗೆ ಇದನ್ನು 'ಅನ್ವಯ'ದ ಕೆಳಗೂ ಗುರುತಿಸಬಹುದು. ತಾಲಿಕೆಯಲ್ಲಿ '*' ಚಿಹ್ನೆ ಗಮನಿಸಿ.

**ಹೊಸ ವರ್ಗೀಕರಣಕ್ಕೆ ಸೈದ್ಧಾಂತಿಕ ಆಧಾರ**

ವರ್ಗೀಕರಣದ ವಿವಿಧ ಹಂತಗಳನ್ನು ಗುರುತಿಸಲು ಕಠಿಣತೆಯ ಮಟ್ಟವನ್ನು ಬ್ಲೂಮನ ವರ್ಗೀಕರಣ ಆಧಾರವಾಗಿಟ್ಟುಕೊಂಡಿತು ಎಂಬುದನ್ನು ಗಮನಿಸಿದ್ದೇವೆ. ಮೌಲ್ಯಮಾಪನ ಚಟುವಟಿಕೆಗಳು ಸಂಶ್ಲೇಷಣೆ ಮತ್ತು ವಿಶ್ಲೇಷಣೆಗಳ ಹಂತದ ಚಟುವಟಿಕೆಗಳಿಗಿಂತ ಹೆಚ್ಚು ಕಠಿಣ ಎಂದು ಅಲ್ಲಿ ಪರಿಗಣಿಸಲಾಗಿತ್ತು. ಇದು ಸಾಧುವಲ್ಲ ಎಂಬುದು ಮುಂದಿನವರ ಅಭಿಪ್ರಾಯ. ಏಕೆಂದರೆ ಮನೋವಿಜ್ಞಾನದ ತತ್ವಗಳ ಪ್ರಕಾರ ಅತಿ ಸಂಕೀರ್ಣವಾದ ಪ್ರಕ್ರಿಯೆಗಳನ್ನು ಅದರ ಸಹಜ ಸ್ಥಿತಿಯಲ್ಲಿಯೇ ಅತಿ ಕಡಿಮೆ ಅಥವಾ ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ಕಲಿಯಬಹುದು. (ಆ್ಯಂಡರ್‌ಸನ್ 1983). ಬೌದ್ಧಿಕ ಪ್ರಕ್ರಿಯೆಯ ಕಠಿಣತೆ ಮುಖ್ಯವಾಗಿ ಎರಡು ಅಂಶಗಳಿಗೆ ಸಂಬಂಧಿಸಿದುದು. ಒಂದು, ಪ್ರಕ್ರಿಯೆಯ ಮೂಲಭೂತ ಸಂಕೀರ್ಣತೆ. ಈ ಸಂಕೀರ್ಣತೆ ಆ ಪ್ರಕ್ರಿಯೆಯ ವಿವಿಧ ಹಂತಗಳಿಗೆ ಸಂಬಂಧಿಸಿದುದು. ಎರಡನೆಯದು, ಆ ಪ್ರಕ್ರಿಯೆಯನ್ನು ಕುರಿತಂತೆ ವ್ಯಕ್ತಿಗೆ ಇರುವ ಪರಿಚಯದ ಮಟ್ಟ. ಪ್ರಕ್ರಿಯೆಯ ಮೂಲಭೂತ ಸಂಕೀರ್ಣತೆ ಬದಲಾಗುವುದಿಲ್ಲ. ಆದರೆ ಪರಿಚಯದ ಮಟ್ಟ ಬದಲಾಗಬಹುದು. ಜನನಿಬಿಡ ಪ್ರದೇಶದಲ್ಲಿ ವಾಹನ ಓಡಿಸುವುದು

Digitised by Bharatavani, CIIL

ಸಂಕೀರ್ಣವಾದ ವಿಷಯವಾದರೂ ಅದರ ಪರಿಚಯ ಇರುವವರಿಗೆ ಅದು ಸುಲಭ. ರೇಡಿಯೋ ಕೇಳುತ್ತಲೂ ಮೊಬೈಲಿನಲ್ಲಿ ಮಾತನಾಡುತ್ತಲೂ ಅವರು ಓಡಿಸಬಲ್ಲರು. ಹೀಗೆ ಕಠಿಣತೆಯ ಮಟ್ಟಕ್ಕೆ ಅನುಗುಣವಾಗಿ ಬೌದ್ಧಿಕ ಪ್ರಕ್ರಿಯೆಗಳನ್ನು ಶ್ರೇಣೀಕರಿಸಲು ಸಾಧ್ಯವಿಲ್ಲವಾದರೂ ಅವು ಒಳಗೊಳ್ಳುವ 'ಹಿಡಿತ'ಕ್ಕೆ ಅನುಗುಣವಾಗಿ ಅವುಗಳನ್ನು ವರ್ಗೀಕರಿಸುವುದು ಎಂಬ ನಿಟ್ಟಿನಲ್ಲಿ ಮತ್ತೊಂದು ವರ್ಗೀಕರಣ ರೂಪುಗೊಂಡಿತು. ಅದೇ ರಾಬರ್ಟ್ ಮಾರ್ಝೋನಾ ಮತ್ತು ಜಾನ್ ಎಸ್ ಕೆಂಡೆಲ್ ಅವರು ಮುಂದಿಟ್ಟ ಮಾದರಿ. ಅವರು ತಮ್ಮ ಸಿದ್ಧಾಂತವನ್ನು 'The New Taxonomy of Educational Objectives' (2007) ಎಂಬ ಹೊತ್ತಿಗೆಯಲ್ಲಿ ಪ್ರಕಟಿಸಿದರು. ಇದರ ಪ್ರಕಾರ ಕೆಲವು ಬೌದ್ಧಿಕ ಪ್ರಕ್ರಿಯೆಗಳು ಇತರ ಪ್ರಕ್ರಿಯೆಗಳ / ಕಾರ್ಯಗಳ ಮೇಲೆ ಹಿಡಿತ ಸಾಧಿಸುತ್ತವೆ. ಈ ಆಧಾರದ ಮೇಲೆ ಇವರು ರೂಪಿಸಿದ ಶೈಕ್ಷಣಿಕ ಉದ್ದೇಶಗಳ ಹೊಸ ವರ್ಗೀಕರಣದ ಮಾದರಿ ಹೀಗಿದೆ.




ಈ ಮಾದರಿಯು ಒಂದು ಕಾಲಘಟ್ಟದಲ್ಲಿ ಮಾನವನು ಹೊಸ ಕಲಿಕೆ / ಕಾರ್ಯದಲ್ಲಿ ಭಾಗಿಯಾಗುವುದನ್ನು ಕುರಿತು ಹೇಗೆ ನಿರ್ಧರಿಸುತ್ತಾನೆ ಎಂಬುದನ್ನು ಸೂಚಿಸುವುದರ ಜೊತೆಗೆ ಒಮ್ಮೆ ನಿರ್ಧಾರ ತೆಗೆದುಕೊಂಡ ಮೇಲೆ ಮಾಹಿತಿಯನ್ನು ಹೇಗೆ ಬೌದ್ಧಿಕ ಪ್ರಕ್ರಿಯೆಗೆ ಒಳಪಡಿಸುತ್ತಾನೆ ಎಂಬುದನ್ನು ತಿಳಿಸುತ್ತದೆ.

ಈ ಮಾದರಿಯು ಮೂರು ರೀತಿಯ ಬೌದ್ಧಿಕ ವ್ಯವಸ್ಥೆಯನ್ನು ನಿರೂಪಿಸುತ್ತದೆ: ಸ್ವವ್ಯವಸ್ಥೆ (self system), ಪರಾಸಂಜ್ಞಾನಾತ್ಮಕ ವ್ಯವಸ್ಥೆ (Meta Cognitive System) ಮತ್ತು ಸಂಜ್ಞಾನಾತ್ಮಕ ವ್ಯವಸ್ಥೆ (cognitive system). ಈ ಮಾದರಿಯ ನಾಲ್ಕನೇ ಘಟಕವೇ 'ಜ್ಞಾನ' (Knowledge). ಈ ಮಾದರಿಯ ಪ್ರಕಾರ ಒಂದು ನಿರ್ದಿಷ್ಟ ಕಾಲದಲ್ಲಿ ವ್ಯಕ್ತಿ ಮಾಡುತ್ತಿರುವುದನ್ನು ಅಥವಾ ಆತ ಮಗ್ನನಾಗಿರುವುದನ್ನು ಬದಲಿಸಲು ಒದಗಿಸಿದ ಅವಕಾಶವೇ 'ಹೊಸ ಕಾರ್ಯ'. ಉದಾಹರಣೆಗೆ, ಒಂದು ಭಾಷಾ ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಯು ಅವನು ಆ ಸಂಜೆ ಭಾಗವಹಿಸುವ ಕ್ರಿಕೆಟ್ ಪಂದ್ಯದ ಕನಸು ಕಾಣುತ್ತಿದ್ದಾನೆ ಎಂದಿಟ್ಟುಕೊಳ್ಳೋಣ. ಅವನ ಗಮನ, ಆಲೋಚನೆ ಎಲ್ಲವೂ ಆ ಕ್ರಿಕೆಟ್ ಮ್ಯಾಚಿನ ಕಡೆಗೇ ಕೇಂದ್ರೀಕೃತವಾಗಿದೆ. ಅದೇ ಸಮಯದಲ್ಲಿ ಅಧ್ಯಾಪಕಿ ಭಾಷೆಗೆ ಸಂಬಂಧಿಸಿದ ಒಂದು ಆಸಕ್ತಿಯುತವಾದ ಕತೆಯನ್ನು ಹೇಳುತ್ತಾರೆ. ಆಗ ಕ್ರಿಕೆಟ್‌ನ ಬಗ್ಗೆ ಕನಸು ಕಾಣುವ ಮಗುವಿಗೆ ಹೊಸ ಕಾರ್ಯದಲ್ಲಿ ಪಾಲ್ಗೊಳ್ಳಬೇಕೇ ಬೇಡವೇ ಎಂಬ ನಿರ್ಧಾರ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿ ತೆಗೆದುಕೊಳ್ಳುವ ನಿರ್ಧಾರ ಹಾಗೂ ಅದರ ಮುಂದಿನ ಅವನ ಕ್ರಿಯೆಗಳು ವಿದ್ಯಾರ್ಥಿಯ ಸ್ವಯಂ ವ್ಯವಸ್ಥೆ, ಪರಾಸಂಜ್ಞಾನಾತ್ಮಕ ವ್ಯವಸ್ಥೆ ಮತ್ತು ಸಂಜ್ಞಾನಾತ್ಮಕ ವ್ಯವಸ್ಥೆ ಇವುಗಳ ಅನ್ಯೋನ್ಯ ಕ್ರಿಯೆಯ ಮೇಲೆ ನಿರ್ಧರಿತವಾಗುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ಸ್ವಯಂವ್ಯವಸ್ಥೆ (ಕೇಳಲೇ-ಬೇಡವೇ) ಮೊದಲಿಗೆ ಕಾರ್ಯಪ್ರವೃತ್ತವಾಗುತ್ತದೆ. ಹೇಗೆ ಪಾಲ್ಗೊಳ್ಳಲಿ ಎಂದು ಯೋಚಿಸುವಾಗ (ಹೇಗೆ ಆಲೋಚಿಸಲಿ ಎಂದು ಆಲೋಚಿಸುವುದು) ಪರಾಸಂಜ್ಞಾನಾತ್ಮಕ ಜ್ಞಾನ ವ್ಯವಸ್ಥೆ ಕೆಲಸಮಾಡುತ್ತದೆ. ಇದರ ಮುಂದುವರಿಕೆಯಾಗಿ ಸಂಜ್ಞಾನಾತ್ಮಕ ವ್ಯವಸ್ಥೆ ಕೆಲಸಮಾಡುತ್ತದೆ. ಈ ಎಲ್ಲ ವ್ಯವಸ್ಥೆಗಳು ವಿದ್ಯಾರ್ಥಿಯ/ವ್ಯಕ್ತಿಯ ಅರಿವಿನ ಸಂಗ್ರಹವನ್ನು ಬಳಸಿಕೊಳ್ಳುತ್ತವೆ.

### ಜ್ಞಾನ ಮತ್ತು ತ್ರಿವಿಧ ವ್ಯವಸ್ಥೆ

ಈ ಮಾದರಿ ಗುರುತಿಸಿರುವ ಸ್ವವ್ಯವಸ್ಥೆಯ ಅಂತಃಸಂಬಂಧವಿರುವ ನಂಬಿಕೆಗಳು ಹಾಗೂ ಗುರಿಗಳ ಒಂದು ಜಾಲ. ಒಂದು ಕಾರ್ಯದಲ್ಲಿ ಪಾಲ್ಗೊಳ್ಳುವುದರ ಅಪೇಕ್ಷಣೀಯತೆಯನ್ನು ನಿರ್ಧರಿಸಲು ಇದು ಬಳಕೆಯಾಗುತ್ತದೆ. ಒಂದು ಕಾರ್ಯದಲ್ಲಿ ಪಾಲ್ಗೊಳ್ಳುವುದನ್ನು ಕುರಿತ ಅಭಿಪ್ರೇರಣೆಯನ್ನು ನಿರ್ಧರಿಸುವ ಮುಖ್ಯ ಅಂಶವೂ ಸ್ವವ್ಯವಸ್ಥೆಯೇ. ಯಾವುದಾದರೂ ಕಾರ್ಯ ಹೆಚ್ಚು ಪ್ರಮುಖ ಎಂದು ಮನಸ್ಸು ತೀರ್ಮಾನಿಸಿದಾಗ ಇತ್ಯಾತ್ಮಕ ಪರಿಣಾಮದಿಂದಾಗಿ ಅಭಿಪ್ರೇರಣೆ ಹೆಚ್ಚಾಗಿ, ಕಲಿಕೆ ಯಶಸ್ವಿಯಾಗುವ ಸನ್ನಿವೇಶಗಳು ಹೆಚ್ಚು. ಕಾರ್ಯ ಕಡಿಮೆ ಪ್ರಮುಖವಾದುದು ಅಥವಾ ಪ್ರಮುಖವಲ್ಲ ಎಂದೆನಿಸಿದಾಗ ನೇತ್ಯಾತ್ಮಕ ಪರಿಣಾಮದಿಂದಾಗಿ ಅಭಿಪ್ರೇರಣೆಯೂ ಕಡಿಮೆಯಾಗಿ ಕಲಿಕೆ ಯಶಸ್ವಿಯಾಗುವ ಸನ್ನಿವೇಶವೂ ಕಡಿಮೆ.

ಒಂದು ಹೊಸ ಕಾರ್ಯವನ್ನು/ಕಲಿಕೆಯನ್ನು ಆಯ್ಕೆ ಮಾಡಿಕೊಂಡ ಮೇಲೆ ಪರಾಸಂಜ್ಞಾನಾತ್ಮಕ ವ್ಯವಸ್ಥೆ ಕಾರ್ಯತತ್ಪರವಾಗುತ್ತದೆ. ಈ ವ್ಯವಸ್ಥೆಯ ಮೊದಲ ಕೆಲಸವೆಂದರೆ ಹೊಸ ಕಾರ್ಯ ಅಥವಾ ಕಲಿಕೆಗೆ ಸಂಬಂಧಿಸಿದ ಗುರಿಗಳನ್ನು ರೂಪಿಸಿಕೊಳ್ಳುವುದು. ಇದೇ ವ್ಯವಸ್ಥೆ ನಿರ್ದಿಷ್ಟ


Digitised by Bharatavani, CIIL

ಗುರಿಗಳನ್ನು ತಲುಪಲು ಅಗತ್ಯವಾದ ಮಾರ್ಗೋಪಾಯಗಳನ್ನೂ ವ್ಯವಸ್ಥೆ ಮಾಡುತ್ತದೆ. ಈ ವ್ಯವಸ್ಥೆ ಒಮ್ಮೆ ಕಾರ್ಯೋನ್ಮುಖವಾದರೆ ಜ್ಞಾನ ವ್ಯವಸ್ಥೆಯ ಜೊತೆಗೆ ನಿರಂತರವಾಗಿ ಕೆಲಸಮಾಡುತ್ತಿರುತ್ತದೆ.

ಒಂದು ಕಾರ್ಯ ಅಥವಾ ಕಲಿಕೆ ಪೂರ್ಣವಾಗಲು ವಿಷಯ ಅಥವಾ ಮಾಹಿತಿಯನ್ನು ಪ್ರಕ್ರಿಯೆಗೆ ಒಳಪಡಿಸಬೇಕು. ಈ ಕೆಲಸವನ್ನು ಸಂಜ್ಞಾನಾತ್ಮಕ ವ್ಯವಸ್ಥೆ ಮಾಡುತ್ತದೆ–ವಿಶ್ಲೇಷಣಾತ್ಮಕ ಕ್ರಿಯೆಗಳು, ಊಹಿಸುವುದು, ಹೋಲಿಸುವುದು, ವರ್ಗೀಕರಿಸುವುದು ಇತ್ಯಾದಿ. ಉದಾಹರಣೆಗೆ, ವಿದ್ಯಾರ್ಥಿಗಳು ಹೊಸ ವಿಷಯಗಳನ್ನು ಕೇಳುತ್ತಾರೆ. ಹೀಗೆ ಕೇಳುವ ಪ್ರಕ್ರಿಯೆಯಲ್ಲಿ ಅವರು ಈ ಹಿಂದೆ ಕಲಿತಿರುವ ವಿಷಯಗಳನ್ನು ಹೊಸ ವಿಷಯಗಳ ಜೊತೆ ಹೋಲಿಸಿಕೊಳ್ಳಬಹುದು.

ಅವರದೇ ಆದ ತಾರ್ಕಿಕವಾದ ರೀತಿಯಲ್ಲಿ ಊಹೆಗಳನ್ನು ಮಾಡಬಹುದು. ಒಟ್ಟಿನಲ್ಲಿ ಯಾವುದೇ ಕಲಿಕೆಯ ಯಶಸ್ಸು ಆ ಕಾರ್ಯವನ್ನು ಕುರಿತಂತೆ ವ್ಯಕ್ತಿಗಿರುವ ಅರಿವನ್ನು ಅವಲಂಬಿಸಿರುತ್ತದೆ.

ಹೊಸ ಪರಿಷ್ಕರಣೆಯ ಪಕ್ಷಿನೋಟವನ್ನು ಮುಂದೆ ಗಮನಿಸಬಹುದು. ಕೆಳಗಿನ ಚಿತ್ರವು ಹೊಸ ವರ್ಗೀಕರಣದ ವಿನ್ಯಾಸವನ್ನು ತೋರಿಸುತ್ತದೆ.




ಎಡಭಾಗದ ಅಡ್ಡಸಾಲುಗಳು ಚಿಂತನೆಯ ಮೂರು ವ್ಯವಸ್ಥೆಯನ್ನು ಸಂಜ್ಞಾನಾತ್ಮಕ ವ್ಯವಸ್ಥೆಯಲ್ಲಿ ಆರು ಉಪ ಘಟಕಗಳನ್ನೂ ಸೂಚಿಸುತ್ತದೆ. ಬಲಭಾಗದ ಉದ್ದಸಾಲುಗಳು ಅರಿವಿನ ಮೂರು ವಲಯಗಳನ್ನು ಸೂಚಿಸುತ್ತದೆ. ಅವೆಂದರೆ ಮಾಹಿತಿ ವಲಯ (Information), ಬೌದ್ಧಿಕ ವಿಧಾನಾತ್ಮಕ ವಲಯ (Mental Procedure) ಮತ್ತು ಮನೋಗತ್ಯಾತ್ಮಕ ವಲಯ (Psychomotor Procedure). ವಿಜ್ಞಾನವನ್ನು ಕುರಿತ ವಿಷಯಗಳನ್ನು ಕಲಿಸುವ ಉದ್ದೇಶವಿರುವಾಗ ಅದು ಮಾಹಿತಿಯ ವಲಯದಲ್ಲೂ ಬರೆವಣಿಗೆಯನ್ನು ವಿಮರ್ಶಿಸುವ ರೀತಿಯನ್ನು ಕಲಿಸುವ ಉದ್ದೇಶವಿರುವಾಗ ಅದು ಸಂಜ್ಞಾನಾತ್ಮಕ ವಿಧಾನಾತ್ಮಕ ವಲಯದಲ್ಲೂ ಯೋಗದ ಹಲವು ಆಸನಗಳನ್ನು ಕಲಿಸುವ ಉದ್ದೇಶವಿರುವಾಗ ಅದು ಮನೋಭೌತಿಕ ವಲಯದಲ್ಲೂ ನಿರ್ದೇಶಿಸಲ್ಪಡುತ್ತದೆ.

ಒಟ್ಟಿನಲ್ಲಿ ಹೊಸವರ್ಗೀಕರಣವು ಎರಡು ಆಯಾಮಗಳ ಮಾದರಿಯಾಗಿದೆ. ಒಂದು ಆಯಾಮದಲ್ಲಿ ಬೌದ್ಧಿಕ ಪ್ರಕ್ರಿಯೆಗಳ ಆರು ವರ್ಗಗಳನ್ನು ಗುರುತಿಸಿದೆ. ಜ್ಞಾನದ ಮೂರು ವಲಯಗಳನ್ನು ಮತ್ತೊಂದು ಆಯಾಮವಾಗಿ ಗುರುತಿಸಿದೆ. ಆ ಆಯಾಮಗಳಲ್ಲಿ ಶೈಕ್ಷಣಿಕ ಉದ್ದೇಶಗಳನ್ನು ಸುಲಭವಾಗಿ ಗುರುತಿಸಬಹುದು. ಹಿಂದೆ ಸೂಚಿಸಿದಂತೆ, ಒಂದು ವಿಜ್ಞಾನ ತರಗತಿಯಲ್ಲಿ ವಿದ್ಯಾರ್ಥಿಗಳು "ಪ್ರಕೃತಿ ರಕ್ಷಣೆಗೆ ಮಿತಿಗೊಳಿಸು" ಮರುಬಳಕೆ – ಆವರ್ತ ಬಳಕೆ'ಯ ಉಪಕ್ರಮವನ್ನು ಅನ್ವಯಿಸಲು ಕಲಿಯುತ್ತಾರೆ ಎಂಬ ಉದ್ದೇಶ ಈ ವರ್ಗೀಕರಣದ ಪ್ರಕಾರ ವಿಶ್ಲೇಷಣಾತ್ಮಕ ಚಟುವಟಿಕೆಯಾಗಿದ್ದು ಬೌದ್ಧಿಕ ಪ್ರಕ್ರಿಯೆಯ ಅಡಿಯಲ್ಲಿ ವಿಶ್ಲೇಷಣೆಯ ಕೆಳಗೂ, ವಿದ್ಯಾರ್ಥಿಗಳು ಕಲಿಯಬೇಕಾದ ವಿಷಯವನ್ನು ಸೂಚಿಸುವುದರಿಂದ ಅದನ್ನು ಜ್ಞಾನದ ಆಯಾಮದ ಕೆಳಗೆ 'ಮಾಹಿತಿ'ಯ ಕೆಳಗೂ ಗುರುತಿಸಲಾಗುತ್ತದೆ.

ಈ ಹೊಸ ವರ್ಗೀಕರಣವನ್ನು ಮುಖ್ಯವಾಗಿ ಅನೇಕ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಶೈಕ್ಷಣಿಕ ಉದ್ದೇಶಗಳನ್ನು ರೂಪಿಸಿಕೊಳ್ಳಲು ಮತ್ತು ವರ್ಗೀಕರಿಸಿಕೊಳ್ಳಲು, ನಿಯೋಜಿತ ಕಾರ್ಯಗಳಿಗೆ ಒಂದು ಚೌಕಟ್ಟನ್ನು ರೂಪಿಸಿಕೊಳ್ಳಲು ಮತ್ತು ವಿವಿಧ ಹಂತಗಳಲ್ಲಿ ಶೈಕ್ಷಣಿಕ ಗುಣಮಟ್ಟದ ಮಾನದಂಡಗಳನ್ನು ರೂಪಿಸಿಕೊಳ್ಳಲು ಇದು ಉಪಯುಕ್ತವಾಗುತ್ತದೆ. ಪಠ್ಯಕ್ರಮ ವಿನ್ಯಾಸದ ಚೌಕಟ್ಟಿನ ರೀತಿಯಲ್ಲಿ ಇದು ಸಹಕಾರಿಯಾಗುತ್ತದೆ. ಪಠ್ಯಕ್ರಮದಲ್ಲಿ ಚಿಂತನಾಕೌಶಲಗಳನ್ನು ಬೆಳೆಸುವ ಉದ್ದೇಶದೊಂದಿಗಿನ ಪಠ್ಯಕ್ರಮ ವಿನ್ಯಾಸಕ್ಕಾಗಿ ಇದನ್ನು ಬಳಸಬಹುದು.

ಬ್ಲೂಮನ ಪ್ರಯತ್ನಗಳಿಗಿಂತ ಇದು ಹೇಗೆ ಮತ್ತು ಏಕೆ ಭಿನ್ನ ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಎರಡು ಉತ್ತರಗಳಿವೆ. ಮೊದಲನೆಯದಾಗಿ, ಬ್ಲೂಮನ ವರ್ಗೀಕರಣ ಒಂದು ಚೌಕಟ್ಟನ್ನು ಮುಂದಿಡುತ್ತದೆ. ಇದು ಹಾಗಲ್ಲದೆ ಒಂದು ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ತಾಂತ್ರಿಕವಾಗಿ ಹೇಳುವುದಾದರೆ, ಮಾದರಿಗಳು ಅಥವಾ ಸಿದ್ಧಾಂತಗಳು ಸನ್ನಿವೇಶಗಳನ್ನು ಊಹಿಸಲು ಅನುವು ಮಾಡಿಕೊಡುವ ವ್ಯವಸ್ಥೆಗಳು. ಚೌಕಟ್ಟು ಒಂದು ಸನ್ನಿವೇಶದ ಲಕ್ಷಣಗಳನ್ನು ವಿವರಿಸುವ ತತ್ವಗಳ, ಅಷ್ಟೇನೂ ಸಂಘಟಿತವಲ್ಲದ ಸಂಗ್ರಹ. ಇವು ವರ್ತಮಾನ ಹಾಗೂ ಭವಿಷ್ಯದ ಸನ್ನಿವೇಶಗಳನ್ನು ಊಹಿಸಲು ಸಾಧ್ಯಮಾಡಿಯೇ ಕೊಡುತ್ತವೆ ಎಂದೇನೂ ಇಲ್ಲ. ಬ್ಲೂಮನ ವರ್ಗೀಕರಣದ ವ್ಯಾಖ್ಯೆಗೆ ಅನುಗುಣವಾಗಿ ಅವನ ಪ್ರಯತ್ನ ಒಂದು ಚೌಕಟ್ಟು ಒದಗಿಸುವುದು. ಅದು ಮಾಹಿತಿ ಪ್ರಕ್ರಿಯೆಯ ಆರು ವಿಧಗಳನ್ನು ವಿವರಿಸುತ್ತದೆ. ಇದು ಕಲಿಕೆಯ ವಿಭಿನ್ನ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಶಿಕ್ಷಣ ಶಾಸ್ತ್ರಜ್ಞರಿಗೆ ನಿಜವಾಗಿಯೂ ಸಹಕಾರಿ. ಆದರೆ ನಿರ್ದಿಷ್ಟ ವರ್ತನೆಗಳನ್ನು ಊಹಿಸುವ ಉದ್ದೇಶ ಬ್ಲೂಮನಿಗೆ ಇರಲಿಲ್ಲ. ಹೊಸ ವರ್ಗೀಕರಣ ವರ್ತನೆಯನ್ನು ಊಹಿಸಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ, ಸ್ವವ್ಯವಸ್ಥೆಯ ಹಂತದಲ್ಲಿ ವ್ಯಕ್ತಿಯ ನಂಬಿಕೆಗಳು ಅರ್ಥವಾದರೆ, ನಿಶ್ಚಿತ ಕಲಿಕೆ ಅಥವಾ ಕಾರ್ಯಕ್ಕೆ ಅವನ ಗಮನ ಮತ್ತು ಅದನ್ನು ಕುರಿತ ಅವನ ಅಭಿಪ್ರೇರಣೆಯ ಮಟ್ಟವನ್ನು ಊಹಿಸಬಹುದು.

ಎರಡನೆಯದಾಗಿ, ಈ ಸಿದ್ಧಾಂತವು ಮಾನವನ ಆಲೋಚನೆಯ ಒಂದು ಶ್ರೇಣೀಕೃತ ವಿನ್ಯಾಸವನ್ನು ಎರಡು ಮಾನದಂಡಗಳ ಹಿನ್ನೆಲೆಯಲ್ಲಿ ನಿರೂಪಿಸುತ್ತದೆ. (1) ಮಾಹಿತಿಯ ಹರಿವು ಮತ್ತು (2) ಜಾಗೃತಿಯ ಮಟ್ಟ. ಮಾಹಿತಿಯು ಸ್ವವ್ಯವಸ್ಥೆಯಿಂದ ಪರಾಸಂಜ್ಞಾನಾತ್ಮಕ ವ್ಯವಸ್ಥೆಗೆ, ಅಲ್ಲಿಂದ ಸಂಜ್ಞಾನಾತ್ಮಕ ವ್ಯವಸ್ಥೆಗೆ ಹರಿಯುತ್ತದೆ. ಒಂದರಲ್ಲಿನ ವರ್ತನೆಯ ಇತ್ಯಾತ್ಮಕತೆ ಇನ್ನೊಂದರಲ್ಲಿನ ಇತ್ಯಾತ್ಮಕತೆಗೆ ಪೂರಕವಾಗಿರುತ್ತದೆ.

ಆ್ಯಂಡರ್‌ಸನ್ನನ ವರ್ಗೀಕರಣವೂ ಬ್ಲೂಮನ ವರ್ಗೀಕರಣದ ಗುಣ ಹಾಗೂ ಕೊರತೆಗಳನ್ನೇ ಕಾಣಿಸುತ್ತದೆ. ಕಠಿಣತೆಯ ಮಟ್ಟವನ್ನು ಕುರಿತ ಬ್ಲೂಮನ ವಿಂಗಡಣೆಯ ಹಾಗೂ ಶ್ರೇಣೀಕರಣದ ಮಿತಿ ಇಲ್ಲಿಯೂ ಕಾಣುತ್ತದೆ. ಮೂಲತಃ ಬ್ಲೂಮನ ವರ್ಗೀಕರಣವನ್ನು ಪರಿಶೀಲಿಸಿ

Digitised by Bharatavani, CIIL

ಪರಿಷ್ಕರಿಸುವುದೇ ಇದರ ಉದ್ದೇಶವಾಗಿತ್ತು. ಆದರೆ ಎಲ್ಲ ಜ್ಞಾನಾತ್ಮಕ ಉದ್ದೇಶಗಳೂ ಸಂವೇಗಾತ್ಮಕ ಆಯಾಮವನ್ನು ಹೊಂದಿರುತ್ತವೆ ಎಂಬ ಗಮನ ಅವನಿಗಿತ್ತು. ಆ ಕಾರಣಕ್ಕಾಗಿಯೇ ಅವನು ಪರಾಸಂಜ್ಞಾನಾತ್ಮಕ ಅಂಶಕ್ಕೆ ಗಮನಕೊಟ್ಟು ಇದು ಸಂಜ್ಞಾನಾತ್ಮಕ ಮತ್ತು ಸಂವೇಗಾತ್ಮಕ ಅಂಶಗಳೆರಡನ್ನೂ ಬೆಸೆಯುತ್ತದೆ ಎಂದು ಹೇಳಿದ್ದಾರೆ. ಮರ್ಝೋನಾ ಮತ್ತು ಕೆಂಡೆಲ್ಲರು ಪರಾಸಂಜ್ಞಾನಾತ್ಮಕ ಜ್ಞಾನ ವ್ಯವಸ್ಥೆಯನ್ನು ಆ್ಯಂಡರ್‌ಸನ್ನನಂತಲ್ಲದೆ ಸಂಜ್ಞಾನಾತ್ಮಕ ವ್ಯವಸ್ಥೆಗೂ ಮೇಲೆ ಇಟ್ಟಿರುವುದು ಈ ವರ್ಗೀಕರಣದ ಮತ್ತೊಂದು ವೈಶಿಷ್ಟ್ಯ. ಸ್ವವ್ಯವಸ್ಥೆಯನ್ನು ಆ್ಯಂಡರ್‌ಸನ್ ಪರಾಸಂಜ್ಞಾನಾತ್ಮಕ ಜ್ಞಾನ ಅಂಶದ ಭಾಗವಾಗಿ ನೋಡಿದರೆ ಈ ವರ್ಗೀಕರಣ ಅದನ್ನು ಅತ್ಯುನ್ನತ ಸ್ತರದಲ್ಲಿ ಇಟ್ಟಿರುವುದು ಇದರ ಮತ್ತೊಂದು ಅನನ್ಯತೆ.

ಹೀಗೆ ಶಿಕ್ಷಣ ರಂಗದಲ್ಲಿ ಉದ್ದೇಶಗಳ ವರ್ಗೀಕರಣವನ್ನು ಕುರಿತ ಹೊಸ ಚಿಂತನೆ ಮೂಡಿಬರುತ್ತಿರುವುದು ಶಿಕ್ಷಣದ ಬೆಳವಣಿಗೆಯನ್ನು ಕುರಿತ ಒಳ್ಳೆಯ ಸೂಚನೆ. ಇವುಗಳ ಆಯ್ಕೆ ಮತ್ತು ಅನ್ವಯ ಅಭ್ಯಾಸಿಗಳ ವಿಮರ್ಶೆಗೆ ಬಿಟ್ಟಿದ್ದು. ಭಾರತೀಯ ಜ್ಞಾನಮೀಮಾಂಸೆಯ ಆಧಾರದ ಮೇಲೆ ಹೊಸ ವರ್ಗೀಕರಣಗಳನ್ನು ರೂಪಿಸಿಕೊಳ್ಳುವ ಸಾಧ್ಯತೆಗಳಿದ್ದು ಅದನ್ನು ಗಂಭೀರವಾಗಿ ಚಿಂತಿಸಬೇಕಾಗಿದೆ.

–ಎ.ಶ.

## ಶೈಕ್ಷಣಿಕ ಕ್ರಿಯಾಶೀಲತೆ

ಇದು ಕಳೆದ ಇಪ್ಪತ್ತೈದು ವರ್ಷಗಳಿಂದೀಚೆಗೆ ಶೈಕ್ಷಣಿಕ ವಲಯ ಹಾಗೂ ಶಿಕ್ಷಣ ಶಾಸ್ತ್ರದಲ್ಲಿ ಬಳಕೆಯಾಗುತ್ತಿರುವ ಪಾರಿಭಾಷಿಕ ಪದ.

'ಸಮಾಜದ ವಿವಿಧ ವರ್ಗಗಳ ಜನ ಹಾಗೂ ಆಡಳಿತ ವ್ಯವಸ್ಥೆ ಇವು ಶಿಕ್ಷಣ ಕ್ಷೇತ್ರದಲ್ಲಿನ ಆಗುಹೋಗುಗಳನ್ನು ಗಮನಿಸುತ್ತಾ ಅದರ ಸುವ್ಯವಸ್ಥೆ ಹಾಗೂ ಉನ್ನತಿಕೆಯಲ್ಲಿ ಆಸಕ್ತಿ ವಹಿಸುವುದೇ 'ಶೈಕ್ಷಣಿಕ ಕ್ರಿಯಾಶೀಲತೆ' ಎಂದು ನಾವು ಈ ಪದವನ್ನು ವ್ಯಾಖ್ಯಾನಿಸಬಹುದು.

ಹಿಂದಿನ ತಲೆಮಾರಿಗಿಂತ ಇಂದಿನ ತಲೆಮಾರಿನ ಜನರು ಶಿಕ್ಷಣ ಕ್ಷೇತ್ರದಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ, ಅದರ ಒಳಿತುಕೆಡಕುಗಳ ಬಗ್ಗೆ ಅದನ್ನು ತಮಗೆ ಬೇಕಾದ/ಹಿತವೆನಿಸುವ ರೀತಿಯಲ್ಲಿ ಮಾರ್ಪಡಿಸುವ ಬಗ್ಗೆ ಆಸಕ್ತರಾಗಿದ್ದಾರೆ. ಈ ಸಂಬಂಧದ ಹಲವು ಚಟುವಟಿಕೆಗಳಲ್ಲಿ ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು, ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಇವೆಲ್ಲ ಭಾಗವಹಿಸುತ್ತಿವೆ. ಇದರಿಂದಾಗಿ ಶಿಕ್ಷಣ ಇಲಾಖೆಯ ಮೇಲೆ ಸರ್ಕಾರದ ಮೇಲೆ ಕೆಲಸ ಮಾಡಬೇಕಾದ ಒತ್ತಡ ಬೀಳುತ್ತದೆ. ಈ ವಿವಿಧ ಬಗೆಯ ಜನರೆಲ್ಲಾ ಶಿಕ್ಷಣ ವ್ಯವಸ್ಥೆಯ ಮೌಲ್ಯಮಾಪನ ಮಾಡುತ್ತಿದ್ದಾರೆ. ಹೀಗೆ ವಿವಿಧ ಜನಸಮುದಾಯಗಳು ಏಕಕಾಲದಲ್ಲಿ ಶಿಕ್ಷಣದ ಬಗ್ಗೆ ಸಕ್ರಿಯವಾಗಿದ್ದ ಕಾಲ ಹಿಂದೆ ಇರಲಿಲ್ಲ. ಈಗ ಅಂಥ ಸನ್ನಿವೇಶವಿದೆ. ಮಾಧ್ಯಮಗಳಲ್ಲಿ, ಕೋರ್ಟುಗಳಲ್ಲಿ ಶಿಕ್ಷಣ ಕ್ಷೇತ್ರದ ಆಗುಹೋಗುಗಳು ರೀತಿನೀತಿಗಳು ಚರ್ಚೆಯಾಗುತ್ತಿವೆ. ಇಂಥ ಚಟುವಟಿಕೆಯನ್ನೇ 'ಶೈಕ್ಷಣಿಕ ಕ್ರಿಯಾಶೀಲತೆ' (Educational Activism) ಎಂದು ಕರೆಯುತ್ತೇವೆ.

ಶೈಕ್ಷಣಿಕ ಕ್ರಿಯಾಶೀಲತೆ ಎಂಬುದು ವಿದ್ಯಾರ್ಥಿ ಅಶಾಂತಿಯಲ್ಲ. ಅದಕ್ಕಿಂತ ತುಂಬ ಭಿನ್ನವೂ ಸಕಾರಾತ್ಮಕವೂ ಆದದ್ದು. ಶಿಕ್ಷಣರಂಗದಲ್ಲಿ ಅಥವಾ ಅದರ ನಿರ್ದಿಷ್ಟ ವಿಭಾಗದಲ್ಲಿ ಏನಾಗುತ್ತಿದೆ ಎಂಬುದನ್ನು ಗಮನಿಸಿ ಅದು ಉತ್ತಮವಾಗಿದ್ದರೆ ಅದನ್ನು ಮೆಚ್ಚುತ್ತಾ ಶ್ರೇಯಸ್ಕರವಲ್ಲದಿದ್ದರೆ ಅದರ ಮಾರ್ಪಾಟಿಗೆ ಒತ್ತಾಯಿಸುತ್ತಾ ಆಗಬೇಕಾದ ಬದಲಾವಣೆಗಳನ್ನು ಸಲಹೆ ಮಾಡುತ್ತಾ ಇರುವುದು ಶೈಕ್ಷಣಿಕ ಕ್ರಿಯಾಶೀಲತೆ. ಇದು ಸಾರ್ವಜನಿಕ ವಿಚಾರಗಳಲ್ಲಿ ವ್ಯಕ್ತಿ ಪ್ರತಿಕ್ರಿಯಿಸದೆ ಮೌನವೀಕ್ಷಕನಾಗಿರುವ ನಿಷ್ಕ್ರಿಯ ಪಾತ್ರಕ್ಕೆ ವಿರುದ್ಧವಾದದ್ದು. ಅದೇ ರೀತಿ ದಾಂಧಲೆಗಿಳಿಯುವ, ಆಕ್ರೋಶಭರಿತರಾದ ಚಳುವಳಿಗಾರರ ಕೆಲಸಕ್ಕಿಂತಲೂ ಭಿನ್ನವಾದದ್ದು. ಇದು ವೈಚಾರಿಕವೂ ಸಕ್ರಿಯವೂ ಆದ ಶೈಕ್ಷಣಿಕ ಪಾಲುಗಾರಿಕೆ. ಇದು ರಚನಾತ್ಮಕವೂ ನಿಸ್ವಾರ್ಥವೂ ಆದದ್ದು. ಇದರಲ್ಲಿ ಭಾಗವಹಿಸುವವರು ಹಣ ಹೂಡುವುದೊಂದನ್ನು ಬಿಟ್ಟು ಉಳಿದೆಲ್ಲ ರೀತಿಯಲ್ಲಿ ತಮ್ಮನ್ನು ಶಿಕ್ಷಣ ಕ್ಷೇತ್ರದ ಉನ್ನತಿಗಾಗಿ ತೊಡಗಿಸಿಕೊಳ್ಳಲು ಸಿದ್ಧರಿರುತ್ತಾರೆ.

ಶೈಕ್ಷಣಿಕ ಕ್ರಿಯಾಶೀಲತೆಗೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಮೊದಲನೆಯದಾಗಿ ಈ ನಾಡಿನಲ್ಲಿ ಎರಡು ದಶಕಗಳ ಹಿಂದೆ ನಡೆದ ಗೋಕಾಕ ಚಳುವಳಿ. ಈ ಚಳುವಳಿಯಲ್ಲಿ ನಾಡಿನಾದ್ಯಂತ ಶಿಕ್ಷಕರು, ಬುದ್ಧಿಜೀವಿಗಳು, ಸಾಮಾನ್ಯ ಜನರು ಸಾಹಿತಿಗಳು 'ಶಾಲಾ ಶಿಕ್ಷಣದಲ್ಲಿ ಕನ್ನಡವೇ ಏಕೈಕ ಮೊದಲ ಭಾಷೆಯಾಗಿರಬೇಕು' ಎಂದು ಶಿಫಾರಸ್ಸು ಮಾಡಿದ ಗೋಕಾಕ್ ವರದಿಯನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿ ಸಭೆ, ಮೆರವಣಿಗೆಗಳನ್ನು ನಡೆಸಿದರು. ಒಂದೆರಡು ದಿನಗಳ ಜೈಲುವಾಸವನ್ನು ಅನುಭವಿಸಿದರು. ಡಾ. ರಾಜಕುಮಾರ್ ಸಹ ಈ ಚಳುವಳಿಗೆ ಧುಮುಕಿ ಅದಕ್ಕೆ ದೊಡ್ಡ ರಭಸವನ್ನು ತಂದುಕೊಟ್ಟರು. ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಗುಂಡೂರಾವ್ ಅವರ ಸರ್ಕಾರ ಈ ಜನಾಭಿಪ್ರಾಯಕ್ಕೆ ಮಣಿದು ಗೋಕಾಕ್‌ವರದಿಯನ್ನು ತುಸು ಮಾರ್ಪಾಡುಗೊಳಿಸಿ ಜಾರಿಗೊಳಿಸಲು ಆದೇಶ ನೀಡಿತು. ಇಡೀ ಜನಸಮೂಹವೇ ಶೈಕ್ಷಣಿಕವಾಗಿ ಇಷ್ಟು ದೊಡ್ಡ ಮಟ್ಟದಲ್ಲಿ ಕ್ರಿಯಾಶೀಲಗೊಂಡ ಉದಾಹರಣೆ ಈ ರಾಜ್ಯದಲ್ಲಿ (ಭಾರತ ಸ್ವತಂತ್ರವಾದ ಬಳಿಕ) ಅದೊಂದೇ.

ಈಗ್ಗೆ ಕೆಲವು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರವು ಕನ್ನಡಪರ ಸಂಘಟನೆಗಳ ಒತ್ತಾಯದ ಮೇರೆಗೆ ನಾಲ್ಕನೆಯ ತರಗತಿಯವರೆಗೆ ಕನ್ನಡವನ್ನೇ ಏಕೈಕ ಶಿಕ್ಷಣ ಮಾಧ್ಯಮವನ್ನಾಗಿ ಆದೇಶಿಸಿ ಆಜ್ಞೆ ಹೊರಡಿಸಿತು. ಇದೂ ಸಹ ಸಾರ್ವಜನಿಕರ ಶೈಕ್ಷಣಿಕ ಕ್ರಿಯಾಶೀಲತೆಯ ಪರಿಣಾಮವೇ. ಆದರೆ ಈ ಆಜ್ಞೆ ಮತ್ತೊಂದು ವರ್ಗದ ಜನರ ಶೈಕ್ಷಣಿಕ ಕ್ರಿಯಾಶೀಲತೆಗೆ ದಾರಿ ಮಾಡಿತು. ಇಂಗ್ಲಿಷು ಮಾಧ್ಯಮದಲ್ಲಿ ಓದಿಸಿದರೇ ತಮ್ಮ ಮಕ್ಕಳ ಉದ್ಧಾರ ಎಂದು ಭಾವಿಸಿದ ಇನ್ನೊಂದು ವರ್ಗದ ಜನ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ದಾಖಲಿಸಿದರು. ಮಕ್ಕಳನ್ನು ಯಾವ ಮಾಧ್ಯಮದಲ್ಲಿ ಓದಿಸಬೇಕೆಂದು ನಿರ್ಧರಿಸುವ ತಾಯ್ತಂದೆಯರ ಹಕ್ಕೆ ವಿನಃ ಸರ್ಕಾರದ್ದಲ್ಲ ಎಂದು ಅವರು ವಾದಿಸಿದರು. ಆ ವಾದಕ್ಕೆ ಜಯವಾಯಿತು.

ಶೈಕ್ಷಣಿಕ ಕ್ರಿಯಾಶೀಲತೆಗೆ ಇಂಥ ಇನ್ನೂ ಕೆಲವು ಉದಾಹರಣೆಗಳನ್ನು ಕೊಡಬಹುದು. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ನಡೆಸುವ ಸರ್ಕಾರಿ ಶಾಲೆಗಳ ಶಿಕ್ಷಣವನ್ನು ತಿರಸ್ಕರಿಸಿ, ಸ್ವದೇಶೀ ಶಿಕ್ಷಣ ಚಳುವಳಿಯನ್ನು ಆರಂಭಿಸಿ ಶಿಕ್ಷಣ ಪ್ರೇಮಿಗಳಾದ ಜನ ದೇಶಾದ್ಯಂತ ತಾವು ತಾವೇ ಗುಂಪುಗಳಾಗಿ ಸಂಘಟಿಸಿಕೊಂಡು ಸ್ವದೇಶಿ ಶಾಲೆಗಳನ್ನು ಆರಂಭಿಸಿದರು. ಅಂಥ ಸಂಸ್ಥೆಗಳಿಗೆ 'ರಾಷ್ಟ್ರೀಯ ಶಿಕ್ಷಣ ಸಂಸ್ಥೆ', 'ದೇಶೀಯ ವಿದ್ಯಾಶಾಲೆ', 'ಭಾರತೀಯ ಶಿಕ್ಷಣ ಸಂಸ್ಥೆ' ಎಂಬಿತ್ಯಾದಿಯಾಗಿ ದೇಸೀತನವನ್ನು ಎತ್ತಿ ಹೇಳುವ ಹೆಸರುಗಳನ್ನು ಇಡಲಾಯಿತು. ಕೆಲವರು ಪ್ರಸಿದ್ಧ ರಾಷ್ಟ್ರನಾಯಕರಾದ ಮಹಾತ್ಮಗಾಂಧಿ, ಸರ್ದಾರ್ ಪಟೇಲ್, ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಥವರ ಹೆಸರುಗಳನ್ನು ಇಟ್ಟರು. ಈ ಎಲ್ಲ ಸಂಸ್ಥೆಗಳು ಇಂದೂ ಉಳಿದಿವೆ. ಅಂದು ಕೇವಲ ಶಾಲೆಗಳನ್ನು ಆರಂಭಿಸಿದ ಈ ಸಂಸ್ಥೆಗಳ ಅನಂತರ ಬಹುಮುಖಿಯಾಗಿ ವಿಕಾಸಗೊಂಡು ವಿವಿಧ ಕಾಲೇಜುಗಳನ್ನು ಆರಂಭಿಸಿವೆ. ಇವುಗಳ ಜೊತೆಗೆ ವಿವಿಧ ಮಠಮಾನ್ಯಗಳೂ ಸಹ ಶಾಲೆ ಕಾಲೇಜುಗಳನ್ನು ನಡೆಸುತ್ತಿವೆ. ಇದೂ ಸಹ ಶೈಕ್ಷಣಿಕ


Digitised by Bharatavani, CIIL

ಕ್ರಿಯಾಶೀಲತೆಯ ಒಂದು ಮುಖ. ಈ ದೇಶದಲ್ಲಿ ಶೈಕ್ಷಣಿಕ ಸೌಲಭ್ಯಗಳ ಬೆಳವಣಿಗೆಯಲ್ಲಿ ಖಾಸಗಿ ಸಂಸ್ಥೆಗಳ ಪಾಲೇ ದೊಡ್ಡದು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಇಂಥ ಖಾಸಗಿ ಸಂಸ್ಥೆಗಳು ಆರಂಭವಾದದ್ದೇ ಶಿಕ್ಷಣಾಸಕ್ತರ ಈ ಬಗೆಯ 'ಶೈಕ್ಷಣಿಕ ಕ್ರಿಯಾಶೀಲತೆ'ಯಿಂದಾಗಿ. ಇದರಿಂದ ಈ ಪರಿಕಲ್ಪನೆ ಎಷ್ಟು ಮುಖ್ಯವಾದುದು ಎಂಬುದು ಅರ್ಥವಾಗುತ್ತದೆ.

ಈ ದೇಶದಲ್ಲಿ ಆಗಾಗ ವಿವಿಧ ಶಿಕ್ಷಣ ಆಯೋಗಗಳು ಸ್ಥಾಪನೆಯಾಗಿವೆ. ಅವುಗಳ ಶಿಫಾರಸ್ಸಿನ ಪ್ರಕಾರ ಶಿಕ್ಷಣದಲ್ಲಿ ಅನೇಕ ಬದಲಾವಣೆಗಳೂ ಆಗಿವೆ. ಆದರೆ ಇಂಥ ಆಯೋಗಗಳ ಸ್ಥಾಪನೆಯ ಹಿಂದೆ ಅನೇಕ ವೇಳೆ ಜನರ ಶೈಕ್ಷಣಿಕ ಕ್ರಿಯಾಶೀಲತೆ ಕೆಲಸಮಾಡಿ ಒಂದು ಒತ್ತಡವನ್ನು ಸೃಷ್ಟಿಸಿರುತ್ತದೆ. ಇನ್ನು ಕೆಲವು ವೇಳೆ ಸರ್ಕಾರದ ಮುಖ್ಯಸ್ಥರೊಬ್ಬರ ಚಿಂತನೆಯ ಫಲವಾಗಿಯೇ ಆಯೋಗವನ್ನು ಸ್ಥಾಪಿಸುವುದೂ ಉಂಟು. ಅದೇನೂ ತಪ್ಪಲ್ಲ. ಉದಾಹರಣೆಗೆ 1986ರಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ' ರೂಪುಗೊಂಡದ್ದು 1984ರ ಕೊನೆಯಲ್ಲಿ ಪ್ರಧಾನಿಯಾದ ದಿ। ರಾಜೀವ್ ಗಾಂಧಿಯವರ ವೈಯಕ್ತಿಕ ಆಸಕ್ತಿ ಆಲೋಚನೆಗಳ ಫಲವಾಗಿ. ಆಯೋಗದ ಶಿಫಾರಸು ಜನಕ್ಕೆ ಒಪ್ಪಿಗೆಯಾಗದಿದ್ದಾಗಲೂ ಜನರ ಶೈಕ್ಷಣಿಕ ಕ್ರಿಯಾಶೀಲತೆ ಕೆಲಸ ಮಾಡಿದೆ. ಉದಾಹರಣೆಗೆ, 1966ರಲ್ಲಿ ಕೊಠಾರಿ ಆಯೋಗದ ಶಿಫಾರಸ್ಸಿನ ಪ್ರಕಾರ 'ತ್ರಿಭಾಷಾ ಸೂತ್ರ'ವನ್ನು ಕಡ್ಡಾಯಗೊಳಿಸಿ ಕೇಂದ್ರ ಸರ್ಕಾರ ಆಜ್ಞೆಮಾಡಿದಾಗ ವಿಶೇಷವಾಗಿ ದಕ್ಷಿಣಭಾರತ ಹಾಗೂ ಬಂಗಾಳದ ಜನ ಅದನ್ನು ವಿರೋಧಿಸಿದರು. ಈ ಮೂಲಕ ದಕ್ಷಿಣದವರು ಮೂರು ಭಾಷೆಗಳನ್ನು ಕಲಿಯುವ ಕಷ್ಟ ಉಂಟಾದರೆ ಉತ್ತರದ ಬಹುತೇಕ ರಾಜ್ಯಗಳ ಜನ ಎರಡೇ ಭಾಷೆಗಳನ್ನು ಕಲಿತರೆ ಸಾಕಾಗುತ್ತದೆ (ಅಲ್ಲೆಲ್ಲ ಮಾತೃಭಾಷೆ ಹಾಗೂ ರಾಜ್ಯಭಾಷೆ ಎರಡೂ ಹಿಂದಿಯೇ ಆಗುವುದರಿಂದ ಉದಾ–ಬಿಹಾರ, ಉತ್ತರ ಪ್ರದೇಶ, ಉತ್ತರಾಂಚಲ, ಮಧ್ಯಪ್ರದೇಶ, ಛತ್ತೀಸಗಡ್, ಜಾರ್ಖಂಡ್, ಹರಿಯಾಣ ಇತ್ಯಾದಿ) ಎಂಬುದು ಈ ವಿರೋಧದ ಮೂಲಕಾರಣ. ಇದು ಕೊನೆಗೆ ಹಿಂದಿ ವಿರೋಧಿ ಚಳುವಳಿಯ ರೂಪ ತಾಳಿತು. ಅಲ್ಲಿಂದ ಮುಂದೆ ಅದು ಶೈಕ್ಷಣಿಕ ಕ್ರಿಯಾಶೀಲತೆಯಾಗಿ ಮಾತ್ರ ಉಳಿಯದೆ ಹಿಂಸಾರೂಪದ ಚಳುವಳಿಯಾಗಿ ಬೇರೆಯದೇ ಆದ ತಿರುವನ್ನು ಪಡೆಯಿತು.

ಅಹಿಂಸಾತ್ಮಕವೂ ಸಕ್ರಿಯವೂ ಆಗಿರುವವರೆಗೆ ಮಾತ್ರ ಒಂದು ಶೈಕ್ಷಣಿಕ ಚರ್ಚೆ ಶೈಕ್ಷಣಿಕ ಕ್ರಿಯಾಶೀಲತೆಯಾಗಿರುತ್ತದೆ. ಅದು ಹಿಂಸಾರೂಪ ಪಡೆದಾಗ ಈ ಹೆಸರು ಅದಕ್ಕೆ ಎಷ್ಟು ಮಾತ್ರವು ಹೊಂದಿಕೆಯಾಗುವುದಿಲ್ಲ.

ಶೈಕ್ಷಣಿಕ ಕ್ರಿಯಾಶೀಲತೆ ಶಾಂತವೂ ವಿವೇಚನಾಪೂರ್ಣವೂ ಆದ ಒಂದು ನಡವಳಿಕೆ. ಅದೊಂದು ವಿಚಾರಮಂಥನ. ಅಲ್ಲಿ ಹೊಮ್ಮಿದ ಬಹುಮತಾಭಿಪ್ರಾಯ ಶಿಕ್ಷಣದಲ್ಲಿ ಅಳವಡಿಸಲ್ಪಡಬೇಕೆಂಬುದೇ ಅದರ ಆಶಯ ಮತ್ತು ಆಗ್ರಹ. ಅದು ಎಂದೂ ಸಂವಿಧಾನ ವಿರುದ್ಧ ಮಾರ್ಗದಲ್ಲಿ ಹೋಗುವುದಿಲ್ಲ. ಅಲ್ಲಿ ಹಿಂಸೆಗೆ ಯಾವ ಜಾಗವೂ ಇಲ್ಲ, ಸಿಟ್ಟಿಗೂ ಸ್ಥಳವಿಲ್ಲ ಅಲ್ಲಿ.

**'ವಿದ್ಯಾರ್ಥಿ ಕ್ರಿಯಾಶೀಲತೆ'ಗಿಂತ ಭಿನ್ನ:** ವಿದ್ಯಾರ್ಥಿ ಕ್ರಿಯಾಶೀಲತೆ ಎಂಬ ಇನ್ನೊಂದು ಪರಿಕಲ್ಪನೆಯೂ ಶಿಕ್ಷಣ ಕ್ಷೇತ್ರದಲ್ಲುಂಟು. ವಿದ್ಯಾರ್ಥಿಗಳು ಯಾವುದೇ ರೀತಿಯಲ್ಲಿ ಸಕ್ರಿಯವಾಗಿರುವುದೇ ವಿದ್ಯಾರ್ಥಿ ಕ್ರಿಯಾಶೀಲತೆ (student activism). ನಮ್ಮ ದೇಶದಲ್ಲಿ ಸುಮಾರು 1974 ರಿಂದ 1985ರವರೆಗೆ ಅಸ್ಸಾಂನಲ್ಲಿ ವಿದ್ಯಾರ್ಥಿಗಳು ಬಹುದೊಡ್ಡ ಚಳುವಳಿಯೊಂದನ್ನು ಬಹುಮಟ್ಟಿಗೆ ಅಹಿಂಸಾತ್ಮಕವಾಗಿ ನಡೆಸಿದರು. ಬಾಂಗ್ಲಾದೇಶದಿಂದ ಅಕ್ರಮವಾಗಿ ಒಳನುಸುಳಿದ್ದ ವಲಸಿಗರನ್ನು ಅಲ್ಲಿನ ಪ್ರಜೆಗಳೆಂದು ಪರಿಗಣಿಸಬಾರದೆಂದೂ ಮೂಲ ಅಸ್ಸಾಂಮಿಯರಿಗೇ ಅಲ್ಲಿನ ಉದ್ಯೋಗಗಳಲ್ಲಿ ಹೆಚ್ಚಿನ ಪಾಲು ಮೀಸಲಾಗಿಡಬೇಕೆಂದೂ ನಡೆದ ಚಳುವಳಿ ಅದು. ಆ ಚಳುವಳಿಗೆ ಬಹುದೊಡ್ಡ ಮಟ್ಟದಲ್ಲಿ ಜನಬೆಂಬಲ ದೊರಕಿತು. ವಿದ್ಯಾರ್ಥಿ ಮುಖಂಡರೊಡನೆ ಒಪ್ಪಂದ ಮಾಡಿಕೊಂಡ ಬಳಿಕ ಅಲ್ಲಿ ಶಾಂತಿ ನೆಲೆಸಿತು. ಕೊನೆಗೆ ಚುನಾವಣೆ ನಡೆದು ವಿದ್ಯಾರ್ಥಿಮುಖಂಡರಾದ ಪ್ರಫುಲ್ಲಕುಮಾರ ಮಹಂತ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಇದೇ ರೀತಿ, ಸ್ವಾತಂತ್ರ್ಯಹೋರಾಟದಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದರು. ಇದೆಲ್ಲ ವಿದ್ಯಾರ್ಥಿ ಕ್ರಿಯಾಶೀಲತೆಗೆ ಉದಾಹರಣೆಗಳು.

ಶೈಕ್ಷಣಿಕ ಕ್ರಿಯಾಶೀಲತೆಯು ಶಿಕ್ಷಣದ ಯಾವುದಾದರೊಂದು ಅಂಶದ ಜೊತೆಗೆ (ಉದಾ–ಪಠ್ಯಕ್ರಮ ಸುಧಾರಣೆ, ಪರೀಕ್ಷಾ ಸುಧಾರಣೆ, ಹೊಸ ಕೋರ್ಸುಗಳ ಆರಂಭ ಇತ್ಯಾದಿ) ನೇರವಾಗಿ ತಳಕು ಹಾಕಿಕೊಂಡಿರುತ್ತದೆ. 'ವಿದ್ಯಾರ್ಥಿ ಕ್ರಿಯಾಶೀಲತೆ' ಹಾಗೇನೂ ಅಲ್ಲ

–ಎಸ್.ಪಿ.ಪ

## ಶೈಕ್ಷಣಿಕ ತತ್ವಶಾಸ್ತ್ರ

ಮಾನವ ಒಂದು ಸಂಕೀರ್ಣವಾದ ಪ್ರಾಣಿ. ಇದರಿಂದಲೇ ಗ್ರೀಕ್ ತತ್ವಜ್ಞಾನಿ **ಥೇಲ್ಸರು** "ಮಾನವನಿಗೆ ಮಾನವನನ್ನು ಅರ್ಥ ಮಾಡಿಕೊಳ್ಳುವುದೇ ಬಹು ಕಷ್ಟದ ಕೆಲಸ" ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗಿದ್ದರೂ ಮಾನವನನ್ನು ಅರ್ಥ ಮಾಡಿಕೊಳ್ಳಲು ಪ್ರಾಚೀನಕಾಲದಿಂದಲೂ ಪ್ರಯತ್ನ ನಡೆಯುತ್ತಲೇ ಇದೆ. ಅನೇಕ ತಜ್ಞರು ವಿವಿಧ ದೃಷ್ಟಿಕೋನಗಳಿಂದ ಮಾನವನನ್ನು ಮತ್ತು ಅವನ ವರ್ತನೆಯನ್ನು ಅರ್ಥೈಸಿದ್ದಾರೆ. ಆದರೆ ಮಾನವ, ಅವನ ಉದ್ದೇಶ ಮತ್ತು ಅವನು ತನ್ನ ಉದ್ದೇಶಗಳ ಸಾಧನೆಗೆ ಅನುಸರಿಸುವ ಮಾರ್ಗಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಲು ತತ್ವಶಾಸ್ತ್ರ ಸಹಾಯ ಮಾಡುತ್ತದೆ. ತತ್ವಶಾಸ್ತ್ರವು ವಿವಿಧ ಶಾಸ್ತ್ರಗಳ ಕೇಂದ್ರ ಬಿಂದುವಾಗಿದೆ. ಅಷ್ಟೇ ಗೌರವಾನ್ವಿತ ವಿಷಯವಾಗಿದೆ. ಇದರಿಂದಲೇ ತತ್ವಶಾಸ್ತ್ರವನ್ನು 'ಎಲ್ಲ ಶಾಸ್ತ್ರಗಳ ಮಾತೆ ಹಾಗೂ ವಿಜ್ಞಾನಗಳ ವಿಜ್ಞಾನ" ಎಂದು ಅನೇಕ ತತ್ವಜ್ಞಾನಿಗಳು ಕರೆದಿದ್ದಾರೆ. **ವಿ.ಆರ್. ತನೇಜಾರವರು** "ತತ್ವಶಾಸ್ತ್ರವು ವಿಷಯವಾಗಿದ್ದು ಎಲ್ಲ ಕಲೆ ಹಾಗೂ ವಿಜ್ಞಾನಗಳು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಅದರ ಕಡೆ ನೋಡುತ್ತವೆ" ಎಂದಿದ್ದಾರೆ. ಅದರಂತೆ ಜೀವನವನ್ನು ವಿಮರ್ಶಿಸಿ. ಜೀವನದ ಮೌಲ್ಯಗಳನ್ನು ನಿರ್ಧರಿಸಿ, ಸತ್ಯದ ಅರಿವುಂಟು ಮಾಡಿ ಮಾನವನಿಗೆ ತನ್ನ ವರ್ತನೆಯನ್ನು ತಿದ್ದಿಕೊಂಡು ಸನ್ನಡತೆಯಿಂದ ಸನ್ಮಾರ್ಗದಲ್ಲಿ ಜಯದ ಬಾಳು ಸಾಗಿಸಲು ಸಹಾಯ ಮಾಡುತ್ತದೆ.

ತತ್ವಶಾಸ್ತ್ರ ಎಂಬ ಶಬ್ದವು ಆಂಗ್ಲ ಪದವಾದ **ಫಿಲಾಸೋಫಿ** (Philosophy) ಗೆ ಸಮಾನವಾದುದು. ಈ ಆಂಗ್ಲಪದವು Philos & sophia ಎರಡು ಗ್ರೀಕ್ ಪದಗಳಿಂದ ಜನ್ಮ ತಾಳಿದೆ. ಫೀಲೋಸ್ ಎಂದರೆ ಪ್ರೀತಿಸು, ಸೋಫೀಯಾ ಎಂದರೆ ಬುದ್ಧಿವಂತಿಕೆ ಅಥವಾ ಜಾಣ್ಮೆ. ತತ್ವಶಾಸ್ತ್ರವೆಂದರೆ ಜ್ಞಾನ, ಬುದ್ಧಿವಂತಿಕೆಯನ್ನು ಪ್ರೀತಿಸುವುದು ಎಂದರ್ಥ. ತತ್ವಶಾಸ್ತ್ರವೆಂದರೆ ಜ್ಞಾನ ಹಾಗೂ ಜಾಣ್ಮೆಯ ಶೋಧ. ಸತ್ಯಾನ್ವೇಷಣೆ, ವಸ್ತು, ನಿಸರ್ಗ, ಮನುಷ್ಯನನ್ನು ನೋಡುವ ದೃಷ್ಟಿಕೋನ, ಜ್ಞಾನದಾಹವಾಗಿದೆ'. ಜಗತ್ತಿನಲ್ಲಿರುವ ಪ್ರತಿಯೊಂದರ ಕುರಿತು ಕ್ರಮಬದ್ಧ ಚಿಂತನಾ ಪ್ರಯತ್ನವಾಗಿದೆ. ತತ್ವಶಾಸ್ತ್ರವನ್ನು ಅರ್ಥೈಸಿಕೊಳ್ಳಲು ಈ ಕೆಳಗಿನ ಪ್ರಮುಖವಾದ ಪಂಚಮಾರ್ಗಗಳಿವೆ. ಅವುಗಳೆಂದರೆ,

1. ತತ್ವಶಾಸ್ತ್ರವು ವಿಶ್ವ ಮತ್ತು ಜೀವನದ ಕುರಿತು ವೈಯಕ್ತಿಕ ಭಾವನೆಯನ್ನು ಒಳಗೊಂಡಿದೆ.

Digitised by Bharatavani, CIIL

2. ತತ್ವಶಾಸ್ತ್ರವು ಪ್ರತಿಫಲಿತ ಆಲೋಚನಾ ವಿಧಾನ ಮತ್ತು ವಿವೇಚನಾಯುಕ್ತವಾದ ಸಂಶೋಧನೆಯಿಂದ ಕೂಡಿದೆ.

3. ತತ್ವಶಾಸ್ತ್ರವು ಅಖಂಡತೆಯ ಒಂದು ದೃಷ್ಟಿ ಸ್ವರೂಪವನ್ನು ಪಡೆಯುವ ಒಂದು ಪ್ರಯತ್ನವೆನಿಸಿದೆ.

4. ತತ್ವಶಾಸ್ತ್ರವು ತರ್ಕಬದ್ಧವಾಗಿ ಭಾಷೆಯ ವಿಶ್ಲೇಷಣೆ. ಶಬ್ದ ಮತ್ತು ಅವುಗಳ ಕಲ್ಪನೆಯ ಅರ್ಥವನ್ನು ವಿವರಿಸುವಂಥದ್ದು.

5. ತತ್ವಶಾಸ್ತ್ರ ಅಸಂಖ್ಯ ರೀತಿಯ ಸಮಸ್ಯೆಗಳನ್ನೊಳಗೊಂಡಿದ್ದು ಮತ್ತು ಆ ಸಮಸ್ಯೆಗಳಿಗೆ ಪರಿಹಾರವನ್ನೊದಗಿಸಬಲ್ಲ ಸಿದ್ಧಾಂತಗಳಿಂದ ಕೂಡಿದೆ.

ತತ್ವಶಾಸ್ತ್ರವು ಕೇವಲ ನಮ್ಮ ಕಣ್ಣಿಗೆ ಕಾಣುವ ವಸ್ತುಗಳನ್ನು ಮಾತ್ರ ನೋಡದೆ ಹುಡುಕುತ್ತಾ ಹೋಗುತ್ತದೆ. ಹೀಗಾಗಿ "ಜೀವನ ಮತ್ತು ವಿಶ್ವದ ಬಗೆಗೆ ವೈಯಕ್ತಿಕ ಅಭಿರುಚಿಯನ್ನು ಹುಟ್ಟಿಸುವುದೇ ತತ್ವಶಾಸ್ತ್ರ". ತತ್ವಶಾಸ್ತ್ರವು ಕೇವಲ ವ್ಯಕ್ತಿತ್ವ ಬೆಳವಣಿಗೆಗೆ ಅಷ್ಟೇ ಅಲ್ಲ, ಪ್ರಾಪಂಚಿಕ ಜ್ಞಾನದೊಂದಿಗೆ ಸರ್ವತೋಮುಖ ಬೆಳವಣಿಗೆಯಲ್ಲಿ ರಾಜ್ಯ, ರಾಷ್ಟ್ರ, ಜನಾಂಗ ಇವುಗಳ ಬಗೆಗೆ ತಿಳುವಳಿಕೆ ಕೊಡುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹಲವಾರು ತತ್ವಜ್ಞಾನಿಗಳು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದ ತತ್ವಜ್ಞಾನಿಗಳ ವ್ಯಾಖ್ಯೆಗಳು ಈ ರೀತಿಯಾಗಿವೆ.

ವೆಬ್‌ಸ್ಟರ್ ನಿಘಂಟಿನ ಪ್ರಕಾರ "ತತ್ವಶಾಸ್ತ್ರವು ನಿಸರ್ಗವನ್ನು ಸಮೀಕ್ಷಿಸುವ ಗ್ರಾಹಕ ವ್ಯಕ್ತಿಯನ್ನು ಹೊಂದಿದ್ದು ವಿಷಯ ಮತ್ತು ವಸ್ತುಗಳ ಸ್ವಭಾವವನ್ನು ಸಾರ್ವತ್ರಿಕವಾಗಿ ವಿವರಿಸುವ ಸಾಮರ್ಥ್ಯ ಹೊಂದಿರುವುದು. ಇದು ಪ್ರಕೃತಿಯ ಸಮಗ್ರ ದೃಷ್ಟಿ ಹಾಗೂ ಪ್ರಕೃತಿಯ ಸಾಮಾನ್ಯ ಲಕ್ಷಣಗಳ ವಿವರಣೆಯ ಒಂದು ಪ್ರಯತ್ನ."

ಎಸ್. ರಾಧಾಕೃಷ್ಣನ್‌ರವರು "ಪ್ರಕೃತಿಯ ವಾಸ್ತವಿಕತೆಯನ್ನು ತಾರ್ಕಿಕ ತಳಹದಿಯ ಮೇಲೆ ಸಂಶೋಧನೆಗೈಯುವ ದರ್ಶನವೇ ತತ್ವಶಾಸ್ತ್ರ" ಎಂದಿದ್ದಾರೆ.

ಈ ವ್ಯಾಖ್ಯೆಗಳನ್ನು ಗಮನಿಸಿದಾಗ ತತ್ವಶಾಸ್ತ್ರವನ್ನು ಮೂರು ರೀತಿಗಳಲ್ಲಿ ಅರ್ಥೈಸಬಹುದು.

ಅ) ತತ್ವಶಾಸ್ತ್ರವು ಒಂದು ಜೀವಂತ ಶಕ್ತಿ : ತತ್ವಶಾಸ್ತ್ರದ ಕಲ್ಪನೆ ಕಾಲ ಬದಲಾದಂತೆ ಬದಲಾಗುತ್ತಿರುತ್ತದೆ. ಏಕೆಂದರೆ ಸಾಮಾಜಿಕ ವಿಚಾರ ಹಾಗೂ ಆರ್ಥಿಕ ಸ್ಥಿತಿ ಅದರ ಕಲ್ಪನೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತವೆ. ಬದಲಾವಣೆ ಜೀವಂತ ವಸ್ತುವಿನ ಕುರುಹು. ಆದ್ದರಿಂದ ತತ್ವಶಾಸ್ತ್ರವು ನಿಂತ ನೀರಲ್ಲ. ಹರಿಯುತ್ತಿರುವ ನದಿ.

ಆ) ತತ್ವಶಾಸ್ತ್ರ ಜೀವನದ ದಾರಿ: ಪ್ರಾಚೀನ ತತ್ವಜ್ಞಾನಿಗಳು ಮಾನವನ ಜೀವನ ಮತ್ತು ಅವನ ವರ್ತನೆಗೆ ಸಂಬಂಧಪಟ್ಟ ಸಮಸ್ಯೆಗಳಲ್ಲಿ ಬಹು ಆಸಕ್ತರಾಗಿ ಚರ್ಚಿಸುತ್ತಿದ್ದರು. ಇದರಿಂದ ಜೀವನದ ಪ್ರತಿಯೊಂದು ಅಂಶವು ತತ್ವಶಾಸ್ತ್ರದಿಂದ ವಿಮರ್ಶಿಸಲ್ಪಡುತ್ತಿತ್ತು. ಇದರಿಂದ ಮಾನವನ ಜೀವನದ ಮೇಲೆ ಅದು ಸಾಕಷ್ಟು ಪ್ರಭಾವವನ್ನು ಸಹ ಬೀರುತ್ತದೆ. ತತ್ವಶಾಸ್ತ್ರವು ನಮ್ಮ ಸಂಸ್ಕೃತಿಯ ಒಂದು ಭಾಗ, ಪ್ರತಿಯೋರ್ವನು ಒಂದಲ್ಲ ಒಂದು ರೀತಿಯಲ್ಲಿ ತತ್ವಜ್ಞಾನಿ. ಅವನು ತನ್ನ ತತ್ವದಂತೆ ಜೀವನವನ್ನು ನಡೆಸುತ್ತಾನೆ."

ಕ) ಸತ್ಯ ಶೋಧನೆ : ಸತ್ಯ ಸಂಗತಿ ಹಾಗೂ ನೈಜ ವಿಚಾರವನ್ನು ಕಂಡು ಹಿಡಿಯುವುದೇ ತತ್ವಶಾಸ್ತ್ರದ ಮೂಲ ಉದ್ದೇಶವಾಗಿರುವುದರಿಂದ ಅದನ್ನು ಸತ್ಯ ಶೋಧನೆ ಎಂದು ಅರ್ಥೈಸುತ್ತಾರೆ. **ರೇಮಾಂಟರ** ಪ್ರಕಾರ ತತ್ವಶಾಸ್ತ್ರವು ಸತ್ಯಾನ್ವೇಷಣೆಯ ಪ್ರಯತ್ನದಲ್ಲಿ ನಿರಂತರವಾಗಿ ಕಾರ್ಯೋನ್ಮುಖವಾಗಿರುತ್ತದೆ. ಅದರಲ್ಲಿ ಸ್ವಲ್ಪ ತಿದ್ದುಪಡಿ ಮಾಡಿದರೆ ಅದರಿಂದ ಮಾನವನ ಜೀವನದಲ್ಲಿಯೂ ಬದಲಾವಣೆ ಉಂಟಾಗುತ್ತದೆ. ಹೀಗೆ ತತ್ವಶಾಸ್ತ್ರವು ಬದಲಾವಣೆ ಹೊಂದುವುದೂ ಆಗಿದೆ ಮತ್ತು ಬದಲಾವಣೆ ಮಾಡುವುದೂ ಆಗಿದೆ.

## ಶೈಕ್ಷಣಿಕ ತತ್ವಶಾಸ್ತ್ರ

ಶೈಕ್ಷಣಿಕ ತತ್ವಶಾಸ್ತ್ರವೆಂದರೆ ತತ್ವಶಾಸ್ತ್ರದ ದೃಷ್ಟಿಕೋನವನ್ನು ಅನುಭವಿಕ ಕ್ಷೇತ್ರವಾದ ಶಿಕ್ಷಣಕ್ಕೆ ಅನ್ವಯಿಸುವುದೇ ಆಗಿದೆ. ಶಿಕ್ಷಣ ತತ್ವಶಾಸ್ತ್ರವು ಶೈಕ್ಷಣಿಕ ಸಿದ್ಧಾಂತಗಳಿಗೆ ಮತ್ತು ನಿಯಮಗಳಿಗೆ ಸಂಬಂಧಿಸಿದ್ದು, ಶೈಕ್ಷಣಿಕ ಸಿದ್ಧಾಂತಗಳ ಚರ್ಚೆಯಲ್ಲಿ ಶೈಕ್ಷಣಿಕ ಪದ ಹಾಗೂ ಅರ್ಥಗಳ ಬಗ್ಗೆ ಅನುಮಾನ ಉಂಟಾದಾಗ, ಕ್ಲಿಷ್ಟತೆ ಕಂಡುಬಂದಾಗ, ತತ್ವಶಾಸ್ತ್ರ ಅಂತಹ ಸಮಸ್ಯೆಗಳಿಗೆ ಸೂಕ್ತವಾದ ಉತ್ತರಗಳನ್ನು ಕೊಡಲು ತೊಡಗುತ್ತದೆ. ಆಗ ಎಲ್ಲ ಶಿಕ್ಷಣ ತಜ್ಞರು ಸಹ ತಮ್ಮ ದೃಷ್ಟಿಯನ್ನು ಇತ್ತ ಹಾಯಿಸಬೇಕಾಗುತ್ತದೆ. ತತ್ವಶಾಸ್ತ್ರವು ಶಿಕ್ಷಣದಲ್ಲಿ ಯಾವ ರೀತಿಯ ಅಂಶಗಳಿರಬೇಕೆಂಬುದನ್ನು ತಿಳಿಸುತ್ತದೆ. ಶೈಕ್ಷಣಿಕ ತತ್ವಗಳ ಕೆಲವು ತೀರ್ಮಾನಗಳು ತತ್ವಶಾಸ್ತ್ರದ ವಿಶ್ಲೇಷಣೆಗೊಳಪಟ್ಟು ಅನೇಕ ತೀರ್ಮಾನಗಳ ಕಡೆ ಶಿಕ್ಷಣ ತತ್ವಶಾಸ್ತ್ರ ತನ್ನ ದೃಷ್ಟಿ ಹಾಯಿಸಬೇಕಾಗುತ್ತದೆ. ಉದಾಹರಣೆಗೆ ನೀತಿಶಿಕ್ಷಣ. ನೀತಿಶಿಕ್ಷಣದ ದೃಷ್ಟಿಕೋನವನ್ನು ಕೇವಲ ಮನಃಶಾಸ್ತ್ರ ದೃಷ್ಟಿಯಿಂದ ಮತ್ತು ಶಿಕ್ಷಣ ತತ್ವಗಳ ದೃಷ್ಟಿಯಿಂದ ನೋಡಿದರಷ್ಟೇ ಸಾಲದು. ಅಲ್ಲಿ ನೀತಿ ತೀರ್ಮಾನಗಳು ಎಂಥವುಗಳು ಅವು. ಇತರೆ ತೀರ್ಮಾನಗಳಿಗಿಂತ ಹೇಗೆ ಭಿನ್ನವಾದವು ಎಂಬುದನ್ನು ತಿಳಿಯಲು ಅಂತೆಯೇ ಶಿಕ್ಷಣದಲ್ಲಿ ಅವುಗಳನ್ನು ನಿರ್ಧರಿಸುವಲ್ಲಿ ತತ್ವಶಾಸ್ತ್ರದ ನೆರವು ಬೇಕು. ತತ್ವಶಾಸ್ತ್ರ ಶಿಕ್ಷಣ ಕ್ಷೇತ್ರಕ್ಕೆ ಯಾವ ಗುರಿಗಳಿರಬೇಕೆಂಬುದನ್ನು ಮತ್ತು ಪಠ್ಯಕ್ರಮವೇನು? ಬೋಧನಾ ಪದ್ಧತಿ ಹೇಗೆ? ಇದನ್ನು ಬೋಧನೆಯಲ್ಲಿ ಅಳವಡಿಸುವುದರ ಕುರಿತು ಮುಂತಾದ ವಿಷಯಗಳ ಬಗೆಗೆ ತತ್ವಶಾಸ್ತ್ರ ಸಹಾಯವನ್ನು ಒದಗಿಸುತ್ತದೆ. ತತ್ವಶಾಸ್ತ್ರದ ಸಂಶೋಧನೆಗಳೇ ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ಒದಗಿಸಿ ಕೊಡುವಂತಹದ್ದಾಗಿದೆ.

**ಶೈಕ್ಷಣಿಕ ತತ್ವಶಾಸ್ತ್ರದ ವ್ಯಾಪ್ತಿ:** ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಇನ್ನೂ ಹಲವಾರು ಸಮಸ್ಯೆಗಳಿಗೆ ಉತ್ತರಗಳನ್ನು ಹುಡುಕಬೇಕಾಗಿದೆ. ಉದಾಹರಣೆಗೆ, ಪ್ರೇರಣೆಯ ಪ್ರಾಮುಖ್ಯ, ಬೋಧನಾ ಸಲಕರಣೆಗಳನ್ನು ಉಪಯೋಗಿಸುವಿಕೆ, ಪರಿಣಾಮಕಾರಿ ಬೋಧನೆ ಮುಂತಾದ ಸಮಸ್ಯೆಗಳಿಗೂ ಇನ್ನೂ ಪರಿಹಾರ ದೊರಕಬೇಕಾಗಿದೆ. ಅದಕ್ಕೆ ತತ್ವಶಾಸ್ತ್ರದ ನೆರವು ಅತ್ಯವಶ್ಯಕ.

ಶಿಕ್ಷಣ ತತ್ವಶಾಸ್ತ್ರದ ಕಾರ್ಯಗಳು ಇಂತಿವೆ:

- ಶಿಕ್ಷಣದ ಉದ್ದೇಶ, ಗುರಿ ಹಾಗೂ ಕಾರ್ಯಗಳನ್ನು ನಿರ್ಧರಿಸುವುದು.
- ಶಿಕ್ಷಣದ ವಿಧಿ ವಿಧಾನಗಳನ್ನು, ಮಾರ್ಗವನ್ನು ಸಿದ್ಧಾಂತವನ್ನು ಪ್ರತಿಪಾದಿಸುವುದು.
- ಪಠ್ಯವಸ್ತುವಿನ ರಚನೆಗೆ ಸಹಾಯ ಮಾಡುವುದು.
- ಬೋಧನೆಯ ರೀತಿಯನ್ನು ಅಂದರೆ ವಿದ್ಯಾರ್ಥಿ ಮತ್ತು ವಿಷಯಗಳ ನಡುವಿನ ಸೇತುವೆಯಾಗಿ ಉಪಾಧ್ಯಾಯ ಹೇಗೆ ಕಾರ್ಯ ನಿರ್ವಹಿಸಬಲ್ಲ ಎಂಬುದನ್ನು ತೋರಿಸುವುದು.


Digitised by Bharatavani, CIIL

- ಜೀವನಕ್ಕೂ – ಶಿಕ್ಷಣಕ್ಕೂ ಇರುವ ಸಂಬಂಧವನ್ನು ತಿಳಿಸುವುದು.
- ಜೀವನದ ಮೌಲ್ಯದ ಬಗ್ಗೆ ಇರುವ ಪ್ರಜ್ಞೆ ಹಾಗೂ ಬೋಧನಾ ವಿಧಾನವನ್ನು ನಿರ್ದೇಶಿಸುವುದು.
- ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ಜೀವನಕ್ಕೆ ಸಂಬಂಧವನ್ನು ಕಲ್ಪಿಸುವುದು.
- ಶಿಕ್ಷಣದ ಬಗ್ಗೆ ಯೋಗ್ಯ ತಿಳಿವಳಿಕೆ ನೀಡುವುದು.
- ವಿವಿಧ ಶಾಸ್ತ್ರಗಳಿಗೂ ಶಿಕ್ಷಣಕ್ಕೂ ಇರುವ ಸಂಬಂಧವನ್ನು ತಿಳಿಸುವುದು.
- ಸಿದ್ಧಾಂತಗಳನ್ನು ಜೀವನದಲ್ಲಿ ಹೇಗೆ ಅಳವಡಿಸಿ ಕೊಳ್ಳಬೇಕೆಂಬುದರ ಅರಿವನ್ನು ಮೂಡಿಸುವುದು.
- ಶಿಕ್ಷಣ ರಂಗದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸುವುದು.

**ತತ್ವಶಾಸ್ತ್ರ ಮತ್ತು ಶಿಕ್ಷಣಕ್ಕಿರುವ ಸಂಬಂಧ:** ತತ್ವಶಾಸ್ತ್ರವು ತತ್ವಗಳಿಂದ ಕೂಡಿದ್ದು ಮತ್ತು ಊಹಾತ್ಮಕವಾದದ್ದು. ಶಿಕ್ಷಣವು ಅನುಷ್ಠಾನ ಯೋಗ್ಯವಾದದ್ದು ಮತ್ತು ಪ್ರಾಯೋಗಿಕವಾದದ್ದು. ತತ್ವಶಾಸ್ತ್ರವು ಪ್ರಶ್ನೆಗಳನ್ನು ಕೇಳುತ್ತದೆ. ಅನುಭವ ಮತ್ತು ವಾಸ್ತವಾಂಶಗಳನ್ನು ಪರೀಕ್ಷಿಸುತ್ತದೆ. ಅವುಗಳಲ್ಲನೇಕವು ಶಿಕ್ಷಣ ವಿಧಾನಗಳಿಗೆ ಸಂಬಂಧಿಸಿದವುಗಳಾಗಿವೆ.

ಶಿಕ್ಷಣಕ್ಕೂ, ತತ್ವಶಾಸ್ತ್ರಕ್ಕೂ ಎರಡು ವಿಧಗಳಲ್ಲಿ ನಿಕಟ ಸಂಬಂಧವಿದೆ: 1) ತತ್ವಶಾಸ್ತ್ರವು ಪ್ರಪಂಚದ ಸಮಗ್ರದೃಷ್ಟಿ ಮತ್ತು ವಾಸ್ತವತೆಯನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುವಿಕೆಗೆ ಸಹಾಯಕವಾಗುತ್ತದೆ. ಅವುಗಳನ್ನು ಶಿಕ್ಷಣದ ಉಪಯುಕ್ತವಾದ ಪ್ರಯೋಜನಕ್ಕಾಗಿ ಬಳಸಬಹುದಾಗಿದೆ.

2) ಮಗುವನ್ನು ಪಾಲಿಸುವ ಪೋಷಿಸುವ ಶಿಕ್ಷಕನ ಅನುಭವದ ವಾಸ್ತವತೆಯನ್ನರಿತುಕೊಳ್ಳಲು ತತ್ವಶಾಸ್ತ್ರ ಸಹಾಯ ಮಾಡುತ್ತದೆ. ಅವುಗಳನ್ನೇ ತಾತ್ವಿಕ ತೀರ್ಮಾನಗಳೆಂದು ಕರೆಯಲಾಗಿದೆ. ಶಿಕ್ಷಣದ ಪ್ರಾಯೋಗಿಕತೆಗೆ ತತ್ವಶಾಸ್ತ್ರವು ಮಾರ್ಗದರ್ಶಿಯಾಗಿದೆ. ಶಿಕ್ಷಣವು ಒಂದು ಸಂಶೋಧನಾ ಕ್ಷೇತ್ರವಾಗಿದ್ದು ಕೆಲವು ಅಂಕಿಅಂಶಗಳನ್ನು ತತ್ವಶಾಸ್ತ್ರದ ತೀರ್ಮಾನಗಳಿಗೆ ಒದಗಿಸಿಕೊಡುವಂಥದ್ದಾಗಿದೆ.

ತತ್ವಶಾಸ್ತ್ರ ಮತ್ತು ಶಿಕ್ಷಣಗಳ ನಡುವೆ ತೀರ ನಿಕಟ ಸಂಬಂಧವಿದೆ. **ರೂಸೋ** ಹೇಳುವಂತೆ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ತತ್ವಶಾಸ್ತ್ರ ಮತ್ತು ಶಿಕ್ಷಣ ತಮ್ಮ ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸುವುದರಲ್ಲಿ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡು–ಒಂದು ಜೀವ ಇನ್ನೊಂದು ಜೀವದಲ್ಲಿ ಸೇರಿಕೊಂಡಂತೆ ಸೇರಿಕೊಂಡಿವೆ ಎಂದು ಹೇಳಬಹುದು. ತತ್ವಶಾಸ್ತ್ರವು ಮಾನವನ ಬದುಕು ಬಂಗಾರವಾಗುವಂತೆ, ಇನ್ನೊಬ್ಬರು ಬೆಟ್ಟು ಮಾಡಿ ತೋರಿಸದಂತೆ ಸುಗಮವಾಗಿ ನಡೆಸಲು – ಒಂದು ರೂಪ ಕೊಡುತ್ತದೆ. ಅಂತೇ ಶಿಕ್ಷಣವು ಸಹ ವ್ಯಕ್ತಿಯು ಮಾನವನು ಯಾವುದೇ ದುರ್ಮಾರ್ಗತನದ ಜಾಡಿಗೆ ಹೋಗದಂತೆ ವ್ಯವಸ್ಥಿತ ಜೀವನ ನಡೆಸಿಕೊಂಡು ಹೋಗಲು ಮಾರ್ಗದರ್ಶನ ನೀಡುತ್ತದೆ. ಆದ್ದರಿಂದ ಶಿಕ್ಷಣ ಮತ್ತು ತತ್ವಶಾಸ್ತ್ರಗಳು ಅವಿನಾಭಾವ ಸಂಬಂಧದೊಂದಿಗೆ ಮಾನವನ ಏಳಿಗೆಗೆ ಶ್ರಮಿಸುತ್ತವೆ. ತತ್ವಶಾಸ್ತ್ರ ಮತ್ತು ಶಿಕ್ಷಣದ ನಡುವಿನ ಸಂಬಂಧದ ಬಗೆಗೆ ತತ್ವಜ್ಞಾನಿಗಳು ಈ ರೀತಿ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ.

**ಬರ್ಟರೆಂಡ್ ರಸಲ್** – "ಶಿಕ್ಷಣದ ಹಲವಾರು ಸಮಸ್ಯೆಗಳಿಗೆ ಉತ್ತರಿಸುವ ಪ್ರಯತ್ನವೇ ತತ್ವಶಾಸ್ತ್ರ."

**ಜಾನ್ ಡ್ಯೂಯಿ** – "ತತ್ವಶಾಸ್ತ್ರದ ಸಿದ್ಧಾಂತಗಳನ್ನೆಲ್ಲ ಪರೀಕ್ಷೆಗೆ ಒಳಪಡಿಸುವ ಪ್ರಯೋಗ ಶಾಲೆಯೇ ಶಿಕ್ಷಣವಾಗಿದೆ."

**ಫೀಟ್ಸ್ಟೆ** – "ತತ್ವಶಾಸ್ತ್ರವಿಲ್ಲದ ಶಿಕ್ಷಣ ಕಲಾಪೂರ್ಣವೆನಿಸಲಾರದು."

**ಜಾನ್ ಡೈಲ್** – "ತತ್ವಶಾಸ್ತ್ರದ ಸಂಸರ್ಗವಿಲ್ಲದ ಶಿಕ್ಷಣ ತನ್ನ ನೈಜ ಮತ್ತು ಯಥಾವತ್ತಾದ ಚಿತ್ರವನ್ನು ನೀಡಲು ಅಸಮರ್ಥವಾಗುತ್ತದೆ."

**ರೂಸೋ** – ಹೇಳುವಂತೆ "ತತ್ವಶಾಸ್ತ್ರದ ವೈವಿಧ್ಯಮಯ ರೂಪವೇ ಶಿಕ್ಷಣ".

**ಜೇಮ್ಸ್ ರಾಸ್** – "ತತ್ವಶಾಸ್ತ್ರ ಆಲೋಚನಾತ್ಮಕವಾದರೆ ಶಿಕ್ಷಣವು ಕ್ರಿಯಾತ್ಮಕವಾದದ್ದು"

ಒಟ್ಟಿನಲ್ಲಿ ತತ್ವಜ್ಞಾನವು ಒಳ್ಳೆಯ ಜೀವನದ ಮುಖ್ಯಾಂಶಗಳನ್ನು, ಜೀವನದ ಗುರಿಗಳನ್ನು ನಿರ್ಧರಿಸಿ. ಅವುಗಳನ್ನು ಸಾಧಿಸುವ ಉಪಾಯಗಳನ್ನು ಹೇಳುತ್ತದೆ. ತತ್ವಶಾಸ್ತ್ರವು ಶಿಕ್ಷಣದ ಕೆಲವು ಅಂಶಗಳಾದ ಶೈಕ್ಷಣಿಕ ಗುರಿ, ಪಠ್ಯವಸ್ತು, ಪಠ್ಯಪುಸ್ತಕ, ಬೋಧನಾ ಪದ್ಧತಿ, ಶಿಕ್ಷಕರ ಪಾತ್ರ ಮತ್ತು ಶಿಸ್ತು ಮುಂತಾದ ಅಂಶಗಳನ್ನು ನಿರ್ಧರಿಸಲು ನೆರವಾಗುತ್ತದೆ.

ಶಿಕ್ಷಣದ ತತ್ವಶಾಸ್ತ್ರವು ಶೈಕ್ಷಣಿಕ ಸಿದ್ಧಾಂತಗಳಿಗೆ ಸಂಬಂಧಿಸಿದ್ದು ಶೈಕ್ಷಣಿಕ ಸಿದ್ಧಾಂತಗಳ ಚರ್ಚೆಯಲ್ಲಿ ಶೈಕ್ಷಣಿಕ ಪದ ಮತ್ತು ಅರ್ಥಗಳ ಬಗ್ಗೆ ಜಿಜ್ಞಾಸೆ ಉಂಟಾದಾಗ, ಕಷ್ಟ ಕಂಡು ಬಂದಾಗ ಅಂದರೆ ಉದಾ: ಎಲ್ಲರಿಗೂ ಸಮಾನಾವಕಾಶ, ಶೀಲ ಶಿಕ್ಷಣ, ವ್ಯವಹಾರ ಶಿಕ್ಷಣ ಮುಂತಾದ ಪದಗಳ ಬಗ್ಗೆ ಚರ್ಚೆಯಲ್ಲಿ ವಾದವಿವಾದಗಳುಂಟಾದಾಗ ಅಂತಹ ಸಮಸ್ಯೆಗಳಿಗೆ ಅತ್ಯಂತ ಸೂಕ್ಷ್ಮವಾದ ಉತ್ತರವನ್ನು ಕೊಡಲು ತೊಡಗುತ್ತದೆ. ಆಗ ಎಲ್ಲ ಶಿಕ್ಷಣ ತಜ್ಞರೂ ಸಹ ಕೆಲವು ತತ್ವಗಳ ಕಡೆಗೆ ತಮ್ಮ ದೃಷ್ಟಿಯನ್ನು ಹಾಯಿಸಬೇಕಾಗುತ್ತದೆ.

**ಶೈಕ್ಷಣಿಕ ತತ್ವಶಾಸ್ತ್ರದ ಗುರಿಗಳು:** 1. ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಸಮಾಜದ ವ್ಯವಸ್ಥೆಯ ಮೇಲೆ ಶಿಕ್ಷಣದ ಪಾತ್ರವೇನು, ಎನ್ನುವುದನ್ನು ನಿರ್ಧರಿಸುವುದು 2. ಶಿಕ್ಷಣದ ಅಂತಿಮ ಗುರಿ ಏನು ಎಂಬುದನ್ನು ಕಂಡುಕೊಳ್ಳುವುದು.

ಶಿಕ್ಷಣ ತತ್ವಶಾಸ್ತ್ರವು ತಾತ್ವಿಕವಾಗಿಯೇ ಮೌಲ್ಯಗಳ ಪ್ರಶ್ನೆಯನ್ನು ಕುರಿತದ್ದು. ಅದರೊಂದಿಗೆ ನೈತಿಕ ಮತ್ತು ಸಾಮಾಜಿಕ ಸಮಸ್ಯೆಗಳೂ ಸಹ ಸೇರಿರುವಂಥವುಗಳಾಗಿವೆ.

ಜಾನ್‌ಡ್ಯೂಯಿಯ ಮಾತಿನಲ್ಲಿ ಹೇಳುವುದಾದರೆ "ನಾವು ಶಿಕ್ಷಣವನ್ನು ಮೂಲಭೂತವಾದ ವಿನ್ಯಾಸಗಳನ್ನು ಬುದ್ಧಿವಂತಿಕೆಯ ಮತ್ತು ಭಾವಪೂರಿತವಾದ ಕಲ್ಪನೆಗಳನ್ನು ರೂಪಿಸಿಕೊಳ್ಳುವ ವಿಧಾನವೆನ್ನುವುದಾದರೆ ತತ್ವಶಾಸ್ತ್ರವನ್ನೇ ಶಿಕ್ಷಣದ ಸಾಮಾನ್ಯ ಸಿದ್ಧಾಂತವೆಂದು ಕರೆಯಬಹುದಾಗಿದೆ.

ಶಿಕ್ಷಣ ವಿಧಾನದ ಗೊತ್ತುಗುರಿಗಳನ್ನು ನಿರ್ಧರಿಸುವುದು ಅಷ್ಟು ಸುಲಭವಾದ ಕಾರ್ಯವಲ್ಲ. ಅದಕ್ಕೆ ಮಾನವ ಜನಾಂಗದ ಸ್ವಭಾವ, ಅದರ ಸಂಸ್ಕೃತಿ, ಸಂಪ್ರದಾಯ ಮತ್ತು ವ್ಯಕ್ತಿ ಸಮಸ್ಯೆಗಳ ಕುರಿತು ಚಾರಿತ್ರಿಕವಾಗಿ, ಜೈವಿಕವಾಗಿ, ಮನೋವೈಜ್ಞಾನಿಕವಾಗಿ ಕೂಲಂಕಷವಾಗಿ ಅಧ್ಯಯನ ಮಾಡಬೇಕಾಗಿದೆ.

ಆದ್ದರಿಂದ ಶಿಕ್ಷಣ ತತ್ವಶಾಸ್ತ್ರವು ಬಹಳ ಬೆಲೆಯುಳ್ಳದ್ದಾಗಿದೆ. ಶಿಕ್ಷಣ ತತ್ವಶಾಸ್ತ್ರಜ್ಞರು ಮತ್ತು ಸಮಾಜದ ಇತರ ಬುದ್ಧಿವಂತ ಜನ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸಲು ಪ್ರಾರಂಭಿಸಿದರು. ಅಂದಿನಿಂದ ಶೈಕ್ಷಣಿಕ ತತ್ವಶಾಸ್ತ್ರದ ಉಗಮವಾಯಿತು.

–ಎಸ್.ಬಿ.ಯಾ.

Digitised by Bharatavani, CIIL

## ಶೈಕ್ಷಣಿಕ ದೂರದರ್ಶನ

ಇಂದು ದೂರದರ್ಶನ ಭಾರತದ ಬಹುತೇಕ ಪ್ರದೇಶಗಳನ್ನು ತಲುಪಿರುವ ಒಂದು ಮಾಯಾ ಮಾಧ್ಯಮವಾಗಿದೆ. ಇದರ ಆಕರ್ಷಣೆ ಎಷ್ಟರಮಟ್ಟಿಗೆ ಏರಿಬಿಟ್ಟಿದೆ ಎಂದರೆ ಇಂದು ಬಹುತೇಕ ಮನೆಗಳನ್ನು ಈ 'ದೂರದರ್ಶನ ಜಾಡ್ಯ' (Television mania) ದಿಂದ ಹೊರತರುವುದು ಹೇಗೆಂಬ ಬಗ್ಗೆ ಸಮಸ್ಯೆ ಉಂಟಾಗಿದೆ. ಒಂದು ಕಾಲದಲ್ಲಿ ಸಿನಿಮಾದ ಆವಿಷ್ಕಾರದಿಂದಾಗಿ ನಾಟಕ ಕಂಪೆನಿಗಳು ಮುಚ್ಚಿ ಹೋದವು. ಇಂದು ದೂರದರ್ಶನ ಮಾಧ್ಯಮದಿಂದಾಗಿ ಸಿನಿಮಾ ಮಂದಿರಗಳು ಜನಪ್ರಿಯತೆ ಕಳೆದುಕೊಂಡಿವೆ.

ಆದರೆ ಶೈಕ್ಷಣಿಕ ಉದ್ದೇಶಗಳಿಗಾಗಿ ರೂಪುಗೊಂಡು ಪ್ರಸಾರವಾಗುತ್ತಿರುವ ದೂರದರ್ಶನ ಕಾರ್ಯಕ್ರಮಗಳಿಂದಾಗಿ ಶಿಕ್ಷಣದಲ್ಲಿ ಹೆಚ್ಚಿನ ಆಕರ್ಷಣೆ ಹಾಗೂ ವೈವಿಧ್ಯತೆ ಮೂಡಿರುವುದು ನಿಜ.

ದೂರದರ್ಶನ ಎಂಬ ಶಬ್ದವನ್ನು 'ಟೆಲಿವಿಷನ್' ಎಂಬುದಕ್ಕೆ ಸಮಾಂತರವಾಗಿ ಬಳಸಲಾಗುತ್ತಿದೆ. ಇದು ಭಾರತದಲ್ಲಿ ಸರ್ಕಾರಿ ದೂರದರ್ಶನ ವ್ಯವಸ್ಥೆಯ ಅಧಿಕೃತ ಹೆಸರೂ ಹೌದು. ಆದ್ದರಿಂದ ಈ ಶಬ್ದ ಎರಡೂ ಅರ್ಥಗಳಲ್ಲಿ ಬಳಕೆಯಾಗುತ್ತಿದೆ. ಶೈಕ್ಷಣಿಕ ಉದ್ದೇಶದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ದೂರದರ್ಶನ ವಿಭಾಗವನ್ನೇ ಶೈಕ್ಷಣಿಕ ದೂರದರ್ಶನ ಎನ್ನಬಹುದು. ಶೈಕ್ಷಣಿಕ ದೂರದರ್ಶನ ಕಾರ್ಯಕ್ರಮಗಳನ್ನು ಸರ್ಕಾರಿ ಹಾಗೂ ಖಾಸಗಿಯವರಿಬ್ಬರೂ ಮಾಡುತ್ತಿದ್ದಾರೆ.

**ದೂರದರ್ಶನ : ಹುಟ್ಟು, ಬೆಳವಣಿಗೆ**

1924ರಲ್ಲಿ ಇಂಗ್ಲೆಂಡಿನ ಜಾನ್ ಲೋಗಿ ಬೆಯ್‌ರ್ಡ್‌ರ (John logie Baird) ಎಂಬುವನು ಮೊಟ್ಟಮೊದಲಾಗಿ ಚಿತ್ರವೊಂದನ್ನು ಕೆಲವು ಮೀಟರುಗಳಷ್ಟು ದೂರಕ್ಕೆ ಪ್ರಸಾರಮಾಡುವುದರಲ್ಲಿ ಯಶಸ್ವಿಯಾದ. ಇದಕ್ಕೂ ಮೊದಲು 1884ರಷ್ಟು ಹಿಂದೆಯೇ ನಿಪ್‌ಕಾನ್ ಎಂಬುವನು ಚಿತ್ರವೊಂದನ್ನು ಪ್ರಾಯೋಗಿಕ ನೆಲೆಯಲ್ಲಿ ಪ್ರಸಾರಮಾಡುವುದನ್ನು ಕಂಡುಹಿಡಿದಿದ್ದರೂ ಅದು ಮುಂದೆ ಉಪಯೋಗಕ್ಕೆ ಬರಲಿಲ್ಲ.

ಕ್ರಿ.ಶ. 1936ರಲ್ಲಿ ಲಂಡನ್ನಿನ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ (BBC) ತನ್ನ ಟೆಲಿವಿಷನ್ ಸೇವೆಯನ್ನು ಆರಂಭಿಸಿತು. ಆಗ ಇದ್ದದ್ದು ಕೇವಲ 300 ಟಿವಿ ಸೆಟ್‌ಗಳು ಮಾತ್ರ. ಮುಂದೆ ಎರಡನೇ ಮಹಾಯುದ್ಧದ ಕಾರಣವಾಗಿ ಟೆಲಿವಿಷನ್ ತಾಂತ್ರಿಕತೆಯ ಬೆಳವಣಿಗೆ ಕುಂಠಿತವಾಯಿತು. ಆದರೆ ಆ ಯುದ್ಧ ಸಮಾಪ್ತಿಯ ನಂತರ ವಿಶ್ವದಲ್ಲಿ ದೂರದರ್ಶನದ ಬೆಳವಣಿಗೆ ನಡೆದ ರೀತಿ ಅಚ್ಚರಿ ಹುಟ್ಟಿಸುವಂಥದ್ದು.

ಅಮೇರಿಕೆಯಲ್ಲಿ ಮೊದಲ ಟೆಲಿವಿಷನ್ ಪ್ರಸಾರ ಕೇಂದ್ರ ಆರಂಭವಾದದ್ದು ಕ್ರಿ.ಶ. 1945ರಲ್ಲಿ. ಅದರ ಮರುವರ್ಷ ಲಂಡನ್ನಿನಲ್ಲಿ ಮತ್ತೊಂದು ಪ್ರಸಾರ ಕೇಂದ್ರ ಆರಂಭಗೊಂಡಿತು.

ಪ್ರಾರಂಭದಲ್ಲಿ ದೂರದರ್ಶನ ಸೆಟ್‌ನ ತೆರೆ ಕೇವಲ ಐದು ಇಂಚುಗಳಷ್ಟಿತ್ತು. 21 ಇಂಚುಗಳ ಪರದೆಯ ಸೆಟ್‌ಗಳು ರೂಪುಗೊಂಡಿದ್ದು 1950ರ ಹೊತ್ತಿಗೆ. 1990ರ ನಂತರ 27 ಇಂಚು ಹಾಗೂ ಇನ್ನೂ ದೊಡ್ಡ ಆಳತೆಯ ಟೆಲಿವಿಷನ್ ಸೆಟ್‌ಗಳು ಚಾಲ್ತಿಗೆ ಬಂದವು.

ಮೊದಲು ದೂರದರ್ಶನ ಸೆಟ್‌ಗಳನ್ನು ಚಿತ್ರಗಳನ್ನು ಗ್ರಹಿಸಲು ಕ್ಯಾಥೋಡ್ ಕಿರಣಗಳ ಕೊಳವೆಗಳಿರುತ್ತಿದ್ದವು. ಇದರಿಂದಾಗಿಯೇ ಆ ಸೆಟ್‌ಗಳು ಪೆಟ್ಟಿಗೆಗಳಂತೆ ಕಾಣುತ್ತಿದ್ದವು. ಈಗ ಅವುಗಳ ಬದಲಾಗಿ 'ಲಿಕ್ವಿಡ್ ಕ್ರಿಸ್ಟಲ್ ಡಿವೈಸ್' (LCD) ಗಳು ಬಂದಿವೆ. ಇದರಿಂದಾಗಿ ಕೇವಲ ಚಪ್ಪಟೆ ಹಲಗೆಯಂತೆ ನಿಲ್ಲಿಸಬಹುದಾದ ದೂರದರ್ಶನ ಸೆಟ್‌ಗಳು ರೂಪುಗೊಂಡಿವೆ.

ಕೇವಲ ಮುನ್ನೂರು ಸೆಟ್‌ಗಳೊಂದಿಗೆ ಆರಂಭವಾದ BBC ದೂರದರ್ಶನ ಪ್ರಸಾರವು (1936), 1950ರ ವೇಳೆಗೆ ಇಂಗ್ಲೆಂಡಿನಾದ್ಯಂತ ಮೂರೂವರೆ ಲಕ್ಷ ಸೆಟ್‌ಗಳೊಂದಿಗೆ, 1960ರ ವೇಳೆಗೆ ಯುರೋಪ್ ಅಮೇರಿಕಗಳಲ್ಲಿ ಸೇರಿ ಒಂದು ನೂರು ಲಕ್ಷ ಸೆಟ್‌ಗಳನ್ನು ತಲುಪುತ್ತಿತ್ತು. ಎಂದರೆ ದೂರದರ್ಶನದ ತಾಂತ್ರಿಕತೆ ಹೇಗೆ ಜನರನ್ನು ಸೆಳೆದುಕೊಂಡಿತು ಎಂಬುದು ತಿಳಿಯುತ್ತದೆ.

**ಭಾರತದಲ್ಲಿ :** ಭಾರತದಲ್ಲಿ ದೂರದರ್ಶನ ಬೆಳವಣಿಗೆ ಉಂಟಾದದ್ದು ಯುನೆಸ್ಕೋ ತೋರಿಸಿದ ಆಸಕ್ತಿಯಿಂದ. 1956ರಲ್ಲಿ ನವದೆಹಲಿಯಲ್ಲಿ ಯುನೆಸ್ಕೋದ ಸಾಮಾನ್ಯ ಸಭೆ ನಡೆದು ಭಾರತದಲ್ಲಿ ಶಿಕ್ಷಣ ಮತ್ತು ಸಮುದಾಯದ ಬೆಳವಣಿಗೆಗೆ ದೂರದರ್ಶನವನ್ನು ಹೇಗೆ ಬಳಸಿಕೊಳ್ಳಬಹುದೆಂಬುದರ ಬಗ್ಗೆ ಅಧ್ಯಯನ ಮಾಡಲು ಒಂದು ಪ್ರಾಯೋಗಿಕ ಯೋಜನೆಯನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ಇದರ ಫಲವಾಗಿ ಯುನೆಸ್ಕೋ ಮತ್ತು 'ಆಲ್ ಇಂಡಿಯಾ ರೇಡಿಯೋ'ಗಳ ನಡುವೆ ಒಂದು ಒಪ್ಪಂದವೇರ್ಪಟ್ಟಿತು. ಇದರನ್ವಯ ರೂಪುಗೊಂಡ ಪ್ರಾಯೋಗಿಕ ದೂರದರ್ಶನ ಕೇಂದ್ರವನ್ನು ಆಗಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು 1959ರ ಸೆಪ್ಟೆಂಬರ್ 15ರಂದು ದೆಹಲಿಯ ಆಕಾಶವಾಣಿ ಸ್ಟುಡಿಯೋದ ಆವರಣದಲ್ಲೇ ಉದ್ಘಾಟಿಸಿದರು. ಹೊಸ ಮಾಧ್ಯಮದೊಂದಿಗೆ ಪ್ರಯೋಗ ನಡೆಸುವುದು, ಸಿಬ್ಬಂದಿಯ ತರಬೇತಿ ಹಾಗೂ ಶೈಕ್ಷಣಿಕ ಮತ್ತು ಸಂವಹನ ಮಾಧ್ಯಮವಾಗಿ ಹೊಸ ಮಾಧ್ಯಮದ ಬಳಕೆ– ಇವು ಈ ಯೋಜನೆಯ ಉದ್ದೇಶಗಳಾಗಿದ್ದವು. ಆಗ ಅದರ ಪ್ರಸಾರ 15–20 ಮೈಲುಗಳಷ್ಟು ಪ್ರದೇಶಕ್ಕೆ ಮಾತ್ರ ತಲುಪುತ್ತಿತ್ತು. ಕ್ರಮೇಣ ಇದರ ಪ್ರಸಾರ ಸಾಮರ್ಥ್ಯವನ್ನು ಹೆಚ್ಚಿಸಲಾಯಿತು. ಕಾರ್ಯಕ್ರಮಗಳ ವೈವಿಧ್ಯತೆಯೂ ಹೆಚ್ಚಿತು.

1972ರಲ್ಲಿ ದೇಶದ ಎರಡನೆಯ ಕೇಂದ್ರ ಮುಂಬೈಯಲ್ಲಿ ಸ್ಥಾಪಿತವಾಯಿತು. ಮರುವರ್ಷ (1973) ಶ್ರೀನಗರ, ಅಮೃತಸರ ಇತ್ಯಾದಿ ಇನ್ನೂ ಎಂಟು ಕಡೆಗಳಲ್ಲಿ ದೂರದರ್ಶನ ಪ್ರಸಾರ ಕೇಂದ್ರಗಳು ಆರಂಭವಾದವು.

1975ರಲ್ಲಿ ಮದ್ರಾಸ್, ಕಲ್ಕತ್ತಾ ಹಾಗೂ ಲಕ್ನೋ ದೂರದರ್ಶನ ಕೇಂದ್ರಗಳು ಪ್ರಾರಂಭಗೊಂಡವು. ಈಗ ಭಾರತದ ಬಹುತೇಕ ಎಲ್ಲ ರಾಜ್ಯಗಳಲ್ಲೂ ದೂರದರ್ಶನ ಕೇಂದ್ರಗಳಿವೆ. ಅಷ್ಟೇ ಅಲ್ಲ, ಈಗ ಇದು ಆಕಾಶವಾಣಿಯಿಂದ ಬೇರೆಯಾದ ಪ್ರತ್ಯೇಕ ವಿಭಾಗವಾಗಿದೆ. ಖಾಸಗಿ ಕಂಪೆನಿಗಳೂ ದೂರದರ್ಶನ ಪ್ರಸಾರದ ಚಾನೆಲ್‌ಗಳನ್ನು ಹೊಂದಿವೆ.

Digitised by Bharatavani, CIIL

ಆದರೆ 'ಪ್ರಸಾರ ಭಾರತಿ' ಸಂಸ್ಥೆ ಈ ಎಲ್ಲ ಪ್ರಸಾರಗಳನ್ನು ನಿಯಂತ್ರಿಸುವ ಅಧಿಕಾರ ಹೊಂದಿದೆ.

**ಶೈಕ್ಷಣಿಕ ದೂರದರ್ಶನ – ಭಾರತದಲ್ಲಿ**

ಭಾರತದಲ್ಲಿ ಶಾಲೆಗಳಿಗಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸಾರಮಾಡುವ ಕಾರ್ಯವನ್ನು ಪ್ರಾಯೋಗಿಕವಾಗಿ 1960ರ ಜನವರಿಯಿಂದ ಮಾರ್ಚ್‌ವರೆಗೆ ನಡೆಸಲಾಗಿದೆ. ಪ್ರತಿ ಮಂಗಳವಾರ ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಈ ಕಾರ್ಯಕ್ರಮ ನಡೆಯುತ್ತಿತ್ತು. ಇದನ್ನು ನಡೆಸುವಲ್ಲಿ ಅನೇಕ ಕಷ್ಟಗಳಿದ್ದರೂ ದೊರೆತ ಪ್ರತಿಕ್ರಿಯೆ ಉತ್ತೇಜನಕರವಾಗಿತ್ತು.

ಈ ದಿಸೆಯಲ್ಲಿ ಮಹತ್ವದ ಕಾರ್ಯಕ್ರಮ ಕೈಗೆತ್ತಿಕೊಳ್ಳಲು ಸಹಾಯ ಮಾಡಿದ್ದು ಅಮೇರಿಕೆಯ ಫೋರ್ಡ್ ಪ್ರತಿಷ್ಠಾನ. ಈ ಬಗ್ಗೆ ತೋರಿಸಿದ ಆಸಕ್ತಿ 1961ರ ಅಕ್ಟೋಬರ್ 23ರಂದು ಉದ್ಘಾಟನೆಗೊಂಡ ಈ ಕಾರ್ಯಕ್ರಮ ನಾಲ್ಕು ವರ್ಷ ಅವಧಿಯದಾಗಿತ್ತು. ಅವಧಿಯ ಕೊನೆಗೆ 600 ಟಿ.ವಿ. ಸೆಟ್‌ಗಳನ್ನು ಪ್ರೌಢಶಾಲೆಗಳಲ್ಲಿ ಸ್ಥಾಪಿಸಬೇಕೆಂದೂ ಪ್ರೌಢಶಾಲೆಯ ಮಕ್ಕಳಿಗಾಗಿ ಪ್ರತೀವಾರವೂ ತಲಾ ಇಪ್ಪತ್ತು ನಿಮಿಷಗಳ ಎಂಟು ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಬಿತ್ತರಿಸಬೇಕೆಂಬುದೂ ಷರತ್ತಾಗಿತ್ತು. ಕಾರ್ಯಕ್ರಮಗಳನ್ನು ಪ್ರತಿದಿನ ಎರಡೆರಡುಬಾರಿ (ವಿದ್ಯಾರ್ಥಿಗಳ ಬೇರೆ ಬೇರೆ ತಂಡಗಳಿಗೆ) ಪ್ರಸಾರ ಮಾಡಲಾಗುತ್ತಿತ್ತು. ಭೌತಶಾಸ್ತ್ರ, ರಸಾಯನಶಾಸ್ತ್ರ, ಹಿಂದಿ, ಇಂಗ್ಲಿಷ್, ಭೂಗೋಳ ಹಾಗೂ ಪ್ರಚಲಿತ ವಿದ್ಯಮಾನಗಳ ಕುರಿತಾಗಿ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ಕೊನೆಯಲ್ಲಿ ಈ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ವಿಜ್ಞಾನದಲ್ಲಿ 36 ಸಾವಿರವಾದರೆ, ಇಂಗ್ಲಿಷ್ ಭಾಷೆಗೆ ಸಂಬಂಧಿಸಿದ ಕಾರ್ಯಕ್ರಮಗಳ ಪ್ರಯೋಜನ ಪಡೆಯುತ್ತಿದ್ದ ವಿದ್ಯಾರ್ಥಿಗಳು 96 ಸಾವಿರವಾಗಿದ್ದರು.

ಈ ಒಪ್ಪಂದದ ಪ್ರಕಾರ ಆಕಾಶವಾಣಿಯ ಸಿಬ್ಬಂದಿಗೆ ಇಂಥ ಕಾರ್ಯಕ್ರಮಗಳನ್ನು ತಯಾರಿಸಲು ವಿದೇಶದಲ್ಲಿ ತರಬೇತಿಯೂ ಸಿಕ್ಕಿತು.

ಮುಂದೆ ಭಾರತದಲ್ಲಿ ಕ್ರಮಬದ್ಧವಾದ ಟಿ.ವಿ. ಕಾರ್ಯಕ್ರಮಗಳು 1965ರ ಸ್ವಾತಂತ್ರ್ಯದಿನದಿಂದ ಆರಂಭವಾದವು. 1966ರಲ್ಲಿ ಕೃಷಿ ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ 'ಕೃಷಿದರ್ಶನ' ಕಾರ್ಯಕ್ರಮವು ಕೃಷಿಸಂಬಂಧಿ ಶೈಕ್ಷಣಿಕ ಜ್ಞಾನವನ್ನು ನೀಡುವಲ್ಲಿ ಒಂದು ಮೈಲುಗಲ್ಲಾಯಿತು.

**'ಸೈಟ್' ಯೋಜನೆ**

ಶೈಕ್ಷಣಿಕ ದೂರದರ್ಶನ ಯೋಜನೆಯಲ್ಲಿ ಮುಂದಿನ ಮಹತ್ವದ ಹಂತವು 1975–76ರಲ್ಲಿ ಜಾರಿಗೊಳಿಸಲ್ಪಟ್ಟ 'ಉಪಗ್ರಹ ಆಧಾರಿತ ದೂರದರ್ಶನ ಶಿಕ್ಷಣ ಪ್ರಯೋಗ (Satellite Instructional Television Experiment - Site)ವಾಗಿತ್ತು. ಇದೂ ಕೂಡ ಯುನೆಸ್ಕೋದ ಪ್ರೋತ್ಸಾಹದಿಂದ 1965ರಲ್ಲೇ ರೂಪುಗೊಂಡಿದ್ದ ಯೋಜನೆ. ಇದರ ಸಿದ್ಧತೆಗಳು ಪೂರ್ಣಗೊಂಡು ಕಾರ್ಯಾರಂಭ ಮಾಡಲು ಮುಂದಿನ ಹತ್ತು ವರ್ಷಗಳು ಬೇಕಾದವು. ಅಮೇರಿಕೆಯ 'ನಾಸಾ' ದಿಂದ ನೀಡಲ್ಪಟ್ಟ ಉಪಗ್ರಹವೊಂದರಿಂದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮಗಳು ಬಿತ್ತರಗೊಳ್ಳಲಾರಂಭಿಸಿದವು. ವ್ಯವಸಾಯ, ಆರೋಗ್ಯ, ಕುಟುಂಬ ಯೋಜನೆ, ರಾಷ್ಟ್ರೀಯ ಏಕತೆ, ಶಿಕ್ಷಣ–ಇಂಥ ಹಲವು ವಿಷಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ತಯಾರಾಗಿ ಪ್ರಸಾರಗೊಂಡವು. ಪ್ರತಿದಿನ ನಾಲ್ಕು ಗಂಟೆಗಳ ಕಾಲ ಈ ಪ್ರಸಾರ ನಡೆಯುತ್ತಿತ್ತು. ಇದರಲ್ಲಿ ಬೆಳಗಿನ ಒಂದೂವರೆ ಗಂಟೆ ಕಾಲ ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ಪ್ರಸಾರ ನಡೆಯುತ್ತಿತ್ತು. ಸಂಜೆಯ ಎರಡೂವರೆ ಗಂಟೆ ಕಾಲದ ಪ್ರಸಾರ ವಯಸ್ಕರಿಗಾಗಿ ಇರುತ್ತಿತ್ತು. ದೇಶದ ಆರು ರಾಜ್ಯಗಳಿಗೆ ಮಾತ್ರ (ಆಂಧ್ರ, ಬಿಹಾರ, ಕರ್ನಾಟಕ, ಒರಿಸ್ಸಾ, ಮಧ್ಯಪ್ರದೇಶ ಮತ್ತು ರಾಜಸ್ಥಾನ) ಇದರ ಪ್ರಯೋಜನ (ತಾಂತ್ರಿಕ ಪರಿಮಿತಿಯಿಂದಾಗಿ) ಲಭ್ಯವಾಗುತ್ತಿತ್ತು. ಆದರೆ ಇದಕ್ಕಾಗಿ ವ್ಯಾಪಕ ಸಿದ್ಧತೆಗಳನ್ನು ಮಾಡಲಾಗಿತ್ತು.

**ಇತರ ಯೋಜನೆಗಳು**

ಸೈಟ್ ಯೋಜನೆಗೆ ದೊರೆತ ಪ್ರತಿಕ್ರಿಯೆಯಿಂದ ಉತ್ತೇಜಿತವಾದ ಭಾರತ ಸರ್ಕಾರವು ದೇಶದಲ್ಲಿ ದೂರದರ್ಶನ ಜಾಲವನ್ನು ವಿಸ್ತರಿಸಲು ಕ್ರಮಕೈಗೊಂಡಿತು. ರಾಜೀವ್‌ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ದೇಶದಲ್ಲಿ ಸಂಪರ್ಕ ಜಾಲ ಹಾಗೂ ಪ್ರಸಾರ ಜಾಲದ ವಿಸ್ತರಣೆಗೆ ತುಂಬ ಮಹತ್ವ ಕೊಟ್ಟರು. ಇದರಿಂದ ಈ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಉಂಟಾಯಿತು. 1984ರ ವೇಳೆಗೆ ದೆಹಲಿ ದೂರದರ್ಶನ ಕೇಂದ್ರವೊಂದೇ ವಾರಕ್ಕೆ 16 ಶೈಕ್ಷಣಿಕ ಹಾಗೂ ಸಹ ಪಾಠ್ಯ ಚಟುವಟಿಕೆ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿತ್ತು. ಶಾಲೆಗಳಲ್ಲಿ ಅಳವಡಿಸಿದ 900 ಟಿವಿ ಸೆಟ್‌ಗಳ ಮೂಲಕ ವಿದ್ಯಾರ್ಥಿಗಳು ಇವನ್ನು ವೀಕ್ಷಿಸುತ್ತಿದ್ದರು. ಇದಲ್ಲದೆ ಮುಂಬೈ, ಕೋಲ್ಕೋತ, ಚೆನ್ನೈ, ಜೈಪುರ ಮೊದಲಾದ ಕೇಂದ್ರಗಳೂ ಶಾಲೆಗಳಿಗಾಗಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದ್ದವು.

**ಇನ್ಸಾಟ್‌ಗಳ (INSAT- Indian Sattelite Aided Television) ಉಪಯೋಗ**

ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣವನ್ನು ಹೆಚ್ಚು ಜನರಿಗೆ ತಲುಪಿಸಬೇಕೆಂಬ ಗುರಿ ಹೊಂದಲಾಯಿತು. ಇದಕ್ಕಾಗಿ, ಆಗಲೇ ಲಭ್ಯವಿದ್ದ ಎರಡು ಇನ್ಸಾಟ್ ಉಪಗ್ರಹಗಳನ್ನು ಬಳಸಿಕೊಳ್ಳಬಹುದೆಂಬ ಯೋಚನೆ ಮೂಡಿತು. 1979ರ ಜುಲೈನಿಂದ 1980ರ ಡಿಸೆಂಬರ್‌ವರೆಗೂ ನಡೆದ ತಜ್ಞರ ಹಲವಾರು ಸುತ್ತಿನ ಮಾತುಕತೆಗಳು, ಚರ್ಚೆಗಳು ಪ್ರಯೋಗಗಳ ನಂತರ ವಿವಿಧ ಹಂತಗಳ ಶಿಕ್ಷಣಕ್ಕೆ (ಮುಖ್ಯವಾಗಿ ಶಾಲಾ ಹಂತದ ಶಿಕ್ಷಣಕ್ಕೆ) ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಎನ್.ಸಿ.ಇ.ಆರ್.ಟಿ. ಮೊದಲಾದ ಸಂಸ್ಥೆಗಳ ಮಾರ್ಗದರ್ಶನದಲ್ಲಿ ರೂಪುಗೊಳಿಸಿ ಪ್ರಸಾರವನ್ನು ಆರಂಭಿಸಲಾಯಿತು. ಈ ಪ್ರಸಾರಗಳು ತುಂಬ ಚೆನ್ನಾಗಿ ಮೂಡಿಬಂದವು.

**ಶೈಕ್ಷಣಿಕ ದೂರದರ್ಶನಕ್ಕಾಗಿ ಪಾಠಗಳನ್ನು ಬರೆಯುವುದು**

ಯಾವುದೇ ಪ್ರಸಾರ ಕಾರ್ಯಕ್ರಮ, ಸಿನೆಮಾ, ನಾಟಕಗಳ ತಯಾರಿಯಲ್ಲಿ ಹಸ್ತಪ್ರತಿ ತಯಾರಿಸುವುದು ತೀರಾ ಪ್ರಾಥಮಿಕವೂ ಬಹು ಮುಖ್ಯವೂ ಆದ ಕಾರ್ಯ. ಇದು ಕಟ್ಟಡಕ್ಕೆ ಬುನಾದಿ ಇದ್ದ ಹಾಗೆ.

ದೂರದರ್ಶನದಲ್ಲಿ ಪ್ರಸಾರಕ್ಕಾಗಿ ಪಾಠಗಳನ್ನು ಬರೆಯುವುದು ಪಠ್ಯಪುಸ್ತಕ ಇಲ್ಲವೇ ರೇಡಿಯೋಕ್ಕೆ ಬರೆಯುವುದಕ್ಕಿಂತ ತುಂಬ ಭಿನ್ನ. ರೇಡಿಯೋ ಪಾಠಗಳು ಕೇವಲ ಶಬ್ದ ಮಾಧ್ಯಮದ ಮೂಲಕ ಕೇಳುಗರನ್ನು ತಲುಪಬೇಕಾಗಿರುತ್ತದೆ. ಆದ್ದರಿಂದ ಅದು ಒಂದೇ ಇಂದ್ರಿಯದ ಮೂಲಕ ಗ್ರಹಣೆಯಾಗಬೇಕಾದಂಥದ್ದು. ಆದರೆ ಟೆಲಿವಿಷನ್ ಒಂದು ದೃಶ್ಯ–ಶ್ರವಣ ಮಾಧ್ಯಮ. ಇಲ್ಲಿ ಕಣ್ಣು, ಕಿವಿ ಎರಡೂ ಉಪಯೋಗಕ್ಕೆ ಬರುತ್ತವೆ. ಅಷ್ಟೇ ಅಲ್ಲ, ಬರಿಗಣ್ಣಿಗೆ ಸಾಮಾನ್ಯವಾಗಿ ಕಾಣಿಸದ ವಿವರಗಳನ್ನೂ ಸಹ ವಸ್ತುಗಳ ಸಮೀಪ ದೃಶ್ಯದ ಮೂಲಕ ಹೆಚ್ಚು ಸ್ಪಷ್ಟವಾಗಿ ತೋರಿಸಲು ಸಾಧ್ಯ. ಅಂದರೆ ನಿಜ ಜೀವನದ ನೋಟಗಳಲ್ಲೂ ದೊರೆಯಲಾರದ ಸ್ಪಷ್ಟತೆ ದೂರದರ್ಶನದಲ್ಲಿ ದೊರೆಯಲು ಸಾಧ್ಯ.

ದೂರದರ್ಶನದ ಶೈಕ್ಷಣಿಕ ಕಾರ್ಯಕ್ರಮಕ್ಕಾಗಿ ಪಾಠಗಳನ್ನು ಬರೆಯುವಾಗ ಇವೆಲ್ಲವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

Digitised by Bharatavani, CIIL

'ಎಜ್ಯುಕೇಷನಲ್ ಬ್ರಾಡ್‌ಕ್ಯಾಸ್ಟಿಂಗ್' ಕೃತಿಯ ಲೇಖಕರೂ, ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದವರೂ ಆದ ಡಾ. ಜಗನ್ನಾಥ್ ಮೊಹಂತಿಯವರು ದೂರದರ್ಶನಕ್ಕಾಗಿ ಹಸ್ತಪ್ರತಿ ಬರೆಯುವಾಗ ನೆನಪಿಡಬೇಕಾದ ಮುಖ್ಯಾಂಶಗಳನ್ನು ಹೀಗೆ ವಿವರಿಸುತ್ತಾರೆ

1. **ಪ್ರೇಕ್ಷಕ ವರ್ಗ:** ಪ್ರೇಕ್ಷಕ ವರ್ಗದ ವಯೋಮಾನ, ಆಸಕ್ತಿಗಳು, ಹಿನ್ನೆಲೆ, ಸಾಂಸ್ಕೃತಿಕ ಬದ್ಧತೆಗಳು, ಪ್ರೇಕ್ಷಕ ವರ್ಗ ಏಕರೂಪವೋ ಅಥವಾ ವಿಭಿನ್ನ ಗುಂಪುಗಳ ಸಮುದಾಯವೋ– ಇವೆಲ್ಲವನ್ನೂ ಗಮನಿಸಿ ಹಸ್ತಪ್ರತಿ ತಯಾರಿಸಬೇಕಾಗುತ್ತದೆ.

2. **ಕಾರ್ಯಕ್ರಮದ ಉದ್ದೇಶ:** ಕಾರ್ಯಕ್ರಮದ ಹಸ್ತಪ್ರತಿ ಬರೆಯುವ ಮುನ್ನ ಅದರ ಸಾಮಾನ್ಯ ಉದ್ದೇಶಗಳು ಹಾಗೂ ನಿರ್ದಿಷ್ಟ ಉದ್ದೇಶಗಳನ್ನು ಗುರುತಿಸಿಕೊಂಡಿರಬೇಕು.

3. **ಮಾಹಿತಿಗಳು ಅಧಿಕೃತವಾಗಿರಬೇಕು:** ಬರಹದಲ್ಲಿ ನಾವು ನೀಡುವ ಮಾಹಿತಿಗಳು, ಅಂಕಿ ಅಂಶಗಳು ನಕಾಶೆಗಳು ಸಮರ್ಪಕವಾದುದಾಗಿದ್ದು ಅವುಗಳನ್ನು ಅಧಿಕೃತ ಮೂಲಗಳಿಂದ ಪಡೆದಿರಬೇಕು.

4. **ವಸ್ತುವಿನ ನಿರ್ವಹಣೆ:** ಬರವಣಿಗೆಯ ಸಂದರ್ಭದಲ್ಲಿ ವಸ್ತುವನ್ನು ಸಮರ್ಪಕವಾದ ರೀತಿಯಲ್ಲಿ ಪ್ರೇಕ್ಷಕರಿಗೆ ಒದಗಿಸುವುದೇ ನಿರ್ವಹಣೆ. ಈ ಕೆಲಸ ಮಾಡುವಾಗ ಬರಹದ ಪ್ರಕಾರ (ಕಥೆ/ನಾಟಕ/ಭಾಷಣ/ಪತ್ರ/ನೇರ ನಿರೂಪಣೆ) ಯಾವುದಾಗಿರಬೇಕು ಎಂಬುದೂ ಸೇರಿದಂತೆ ಭಾಷಾ ಬಳಕೆ, ಲಭ್ಯವಿರುವ ದೃಶ್ಯಗಳ (ವಿಷುಯಲ್ಸ್) ಬಳಕೆ ಇತ್ಯಾದಿಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಅವನ್ನು ಅಲ್ಲಲ್ಲಿ ಸೇರಿಸಲು ಅನುಕೂಲವಾಗುವಂತೆ ಸೂಚನೆ ಕೊಟ್ಟು ಬರವಣಿಗೆ ಮಾಡಬೇಕು. ದೃಶ್ಯದಲ್ಲಿ ಏನನ್ನು ತೋರಿಸುತ್ತೇವೋ ಅದಕ್ಕೆ ವಿವರಣೆ ಅಗತ್ಯವಾದಲ್ಲಿ ಅದನ್ನು ಬರೆಯಬೇಕು. ಅಗತ್ಯವಿಲ್ಲದಿದ್ದರೆ ಅದನ್ನು ಬರೆಯಬಾರದು. (ಉದಾ. ಒಂದು ಹಳ್ಳ ಹರಿಯುತ್ತಿರುವುದರ ಚಿತ್ರ ತೋರಿಸುತ್ತಿದ್ದರೆ, ಅದರ ಹರಿವ ನೀರಿನ ಶಬ್ದ ಕೇಳುತ್ತಿದ್ದರೆ 'ನೋಡಿ, ಹಳ್ಳ ಜುಳು ಜುಳು ಶಬ್ದ ಮಾಡುತ್ತಾ ಹರಿಯುತ್ತಿದೆ' ಎಂದು ಬರೆಯಬಾರದು. ಆದರೆ ಆ ಶಬ್ದ ರೆಕಾರ್ಡ್ ಆಗದೇ ಇದ್ದಲ್ಲಿ ಅಂಥ ವಿವರಣೆ ಅಗತ್ಯವಾಗುತ್ತದೆ).

5. **ಕಾರ್ಯಕ್ರಮದ ಪ್ರಕಾರ:** ಈ ಹಿಂದೆ ಹೇಳಿದಂತೆ ಪ್ರಸಾರವಾಗಲಿರುವ ಕಾರ್ಯಕ್ರಮವು– ನೇರ ನಿರೂಪಣೆಯೋ, ನಾಟಕ/ಕಥೆ ಇತ್ಯಾದಿಯೋ ಅಥವಾ ತರಗತಿ ಬೋಧನೆಯೋ– ಹೀಗೆ ಯಾವ ಪ್ರಕಾರದ್ದು ಎಂಬುದನ್ನು ಅನುಸರಿಸಿ ಅದಕ್ಕೆ ಅನುಕೂಲವಾಗುವಂತೆ ಹಸ್ತಪ್ರತಿ ಸಿದ್ಧಪಡಿಸಬೇಕು.

6. **ಸಾಧ್ಯಾಸಾಧ್ಯತೆ:** ನಾವು ಮನಸ್ಸಿನಲ್ಲಿ ಏನೇ ರೂಪುರೇಷೆ ಹಾಕಿದರೂ ಸ್ಟುಡಿಯೋದಲ್ಲಿನ ಪರಿಮಿತಿಗಳು, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರ ಸಾಮರ್ಥ್ಯ, ಲಭ್ಯವಿರುವ ಕಾಲಾವಕಾಶ ಹಾಗೂ ವಿಷುಯಲ್‌ಗಳು– ಇವೆಲ್ಲ ಅಂತಿಮವಾಗಿ ಕಾರ್ಯಕ್ರಮಗಳ ಮಿತಿಯನ್ನು ನಿರ್ಧರಿಸುತ್ತವೆ. ಆದ್ದರಿಂದ ಈ ವಾಸ್ತವಿಕ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಹಸ್ತಪ್ರತಿ ಬರೆಯಬೇಕು. ಕೃಷ್ಣದೇವರಾಯನ ಆಡಳಿತವನ್ನು ಕುರಿತು ಒಂದು ನೃತ್ಯರೂಪವನ್ನು ಬರೆದರೆ ಕಾವ್ಯಾತ್ಮಕವಾಗಿ ಅದು ಎಷ್ಟೇ ಸೊಗಸಾಗಿದ್ದರೂ ಇತಿಹಾಸ ಬೋಧನೆಗೆ ಅದನ್ನು ಬಳಸಲಾಗದು. ಏಕೆಂದರೆ– ನೇರ ನಿರೂಪಣೆಯ ಬೋಧನೆಯ ಮೂಲಕ ಹೇಳಬಹುದಾದಷ್ಟು ಗುಣದೋಷಗಳನ್ನು ಈ ಬಗೆಯ ರೂಪಕದಲ್ಲಿ ಹೇಳಲಾಗುವುದಿಲ್ಲ. ಆದರೆ ನಿರೂಪಣೆಯ ನಡುವೆ ಹಿನ್ನೋಟ (ಫ್ಲ್ಯಾಷ್‌ಬ್ಯಾಕ್)ದ ತಂತ್ರವನ್ನು ಬಳಸಬಹುದು.

7. **ಮಾಧ್ಯಮದ ವೈಶಿಷ್ಟ್ಯತೆ ಮತ್ತು ಮಿತಿ:** ಟೆಲಿವಿಷನ್ ಕಾರ್ಯಕ್ರಮಗಳಿಗೆ ತನ್ನದೇ ಆದ ವೈಶಿಷ್ಟ್ಯವಿರುವಂತೆ ಮಿತಿಗಳೂ ಇವೆ. ಇಲ್ಲಿ ಒಂದು ಮಾತು ಹೇಳಿದ ಬಳಿಕ ಮುಂದಿನ ಮಾತು ಬರಬೇಕೇ ವಿನಃ ಹೇಳಿದ್ದನ್ನೇ ಹೇಳುತ್ತಿರಲಾಗದು. ವಸ್ತುಗಳನ್ನು, ಮುಖಭಾವಗಳನ್ನು, ಶಿಲ್ಪ/ ಚಿತ್ರದ ವಿವಿಧ ಭಾಗಗಳನ್ನು ಕ್ಯಾಮರಾದ ಮೂಲಕ ಸಮೀಪ ದೃಶ್ಯದಲ್ಲಿ ತೋರಿಸಲು ಸಾಧ್ಯವಿದೆ. ಇವನ್ನೆಲ್ಲ ಸರಿಯಾಗಿ ಬಳಸಿಕೊಂಡು, ಹಸ್ತಪ್ರತಿಯಲ್ಲಿ ಅಗತ್ಯಸೂಚನೆ ಅಳವಡಿಸಿ ಲೇಖನ ಬರೆಯಬೇಕು.

8. **ನಿರೂಪಣೆಯಲ್ಲಿ ಲಾಘವತೆ:** ಹಸ್ತಪ್ರತಿಯ ಶೈಲಿಯಲ್ಲಿ ಒಂದು ಹದವಾದ ಲಘುತ್ವವಿರಬೇಕು. ಅಂದರೆ– ಸರಸವಾದ ರೀತಿಯಲ್ಲಿ ಬರವಣಿಗೆ ಸಾಗಿರಬೇಕು. ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಗಂಭೀರ ಶೈಲಿ ಅಗತ್ಯ ನಿಜ. ಆದರೆ ಇನ್ನೆಷ್ಟೋ ವಿಷಯಗಳನ್ನು ಇಂಥ ಲಘು ಶೈಲಿಯಲ್ಲಿ ನಿರೂಪಿಸಲು ಸಾಧ್ಯ. ಇಂಥ ಶೈಲಿ ವಿಷಯವನ್ನು ಸುಲಭವಾಗಿ ಗ್ರಹಿಸುವಂತೆ ಮಾಡುತ್ತದೆ. ಆದ್ದರಿಂದ ಸಾಧ್ಯವಾದಲ್ಲೆಲ್ಲ ಇಂಥ ಭಾಷೆ ಮತ್ತು ಶೈಲಿಯನ್ನು ಅಳವಡಿಸಬೇಕು.

9. **ಪೋಷಕ ಬರಹದ ಸಿದ್ಧತೆ:** ಕಾರ್ಯಕ್ರಮದ ವೀಕ್ಷಣೆಗೆ ಮೊದಲು ಹಾಗೂ ನಂತರ ಏನು ಹೇಳಬೇಕು ಹಾಗೂ ಮಾಡಬೇಕೆಂಬುದನ್ನು ತಿಳಿಸುವ ಟಿಪ್ಪಣಿಯನ್ನೇ ಪೋಷಕ ಬರಹವೆನ್ನುತ್ತಾರೆ. ಕಾರ್ಯಕ್ರಮದ ತಯಾರಿಕೆಗೆ ಬೇಕಾದ ಹಸ್ತಪ್ರತಿಯನ್ನು ಸಿದ್ಧಪಡಿಸುವಷ್ಟೇ ಆಸಕ್ತಿಯಿಂದ ಈ ಟಿಪ್ಪಣಿಗಳನ್ನು ಸಿದ್ಧಪಡಿಸಬೇಕು. ಈ ಬಗ್ಗೆ ಬಿಬಿಸಿ ತುಂಬ ಎಚ್ಚರವಹಿಸುತ್ತದೆ. ಅದರ ಕಾರ್ಯಕ್ರಮಗಳ ಹಸ್ತಪ್ರತಿಯನ್ನು ಬರೆಯುವ ಲೇಖಕರು ಪ್ರತಿ ಕಾರ್ಯಕ್ರಮದ ನಿರ್ದಿಷ್ಟ ಉದ್ದೇಶಗಳು, ಪೂರ್ವಪರಿಚಯ ಹಾಗೂ ವೀಕ್ಷಣಾನಂತರದ ಚರ್ಚಾಂಶಗಳು– ಇಂಥ ವಿವರಗಳನ್ನು ಒದಗಿಸುವ ಪೂರಕ ಟಿಪ್ಪಣಿಗಳನ್ನು ಸಿದ್ಧಪಡಿಸುತ್ತಾರೆ. ಈ ಮಾದರಿ ನಮಗೆ ಅನುಕರಣ ಯೋಗ್ಯ. ನಿರೂಪಕನ ಸಾಮರ್ಥ್ಯ, ಕಡಿಮೆ ವೇಳೆಯಲ್ಲಿ ಬಹಳಷ್ಟನ್ನು ಹೇಳಲು ಹೋಗದಿರುವುದು– ಇವೂ ಸಹ ಹಸ್ತಪ್ರತಿ ಸಿದ್ಧತೆಯಲ್ಲಿ ಗಮನಿಸಬೇಕಾದ ಅಂಶಗಳು.

ಶೈಕ್ಷಣಿಕ ದೂರದರ್ಶನದ ಹಸ್ತಪ್ರತಿ ಸಿದ್ಧಪಡಿಸುವಿಕೆಯಲ್ಲಿ ಗಮನಿಸಬೇಕಾದ ಹಲವು ಅಂಶಗಳಿವೆ. ಇದರ ಜೊತೆಗೆ ನಿರ್ಮಾಣ ಹಂತದಲ್ಲೂ ಅನೇಕ ಅಂಶಗಳನ್ನು ಎಚ್ಚರಿಕೆಯಿಂದ ಗಮನಿಸಲಾಗುತ್ತದೆ. ನಿರೂಪಕನ ಧ್ವನಿಯ ಏರಿಳಿತ, ಉಚ್ಚಾರಣೆಯ ಸ್ಪಷ್ಟತೆ ತೋರಿಸುವ ದೃಶ್ಯಗಳಲ್ಲಿ ಯಾವುದೇ ಬಗೆಯ ಅಶ್ಲೀಲತೆ, ಅಸ್ಪಷ್ಟತೆ ಇಲ್ಲದಿರುವುದು, ಯೋಗ್ಯ ರೀತಿಯ ದೃಶ್ಯ ಸಂಕಲನ – ಇವೆಲ್ಲ ನಿರ್ಮಾಣ ಹಂತದಲ್ಲಿ ಗಮನಿಸಬೇಕಾದ ಅಂಶಗಳು. ಸರಿಯಾದ ಛಾಯಾಗ್ರಹಣ ಹಾಗೂ ಶಬ್ದಗ್ರಹಣ – ಇವಂತೂ ಅನಿವಾರ್ಯ ಅಂಶಗಳು.

ಭಾರತೀಯ ದೂರದರ್ಶನ ವಾಹಿನಿಗಳಲ್ಲಿ ಹಾಗೂ ವಿದೇಶಿ ವಾಹಿನಿ (ಚಾನಲ್)ಗಳಲ್ಲಿ ಅನೇಕ ಒಳ್ಳೆಯ ಶೈಕ್ಷಣಿಕ ಕಾರ್ಯಕ್ರಮಗಳು ಮೂಡಿಬರುತ್ತಿವೆ. ನಮ್ಮ ಡಿಡಿ–1ನಲ್ಲಿ ಬರುವ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯ (IGNOU) ಹಾಗೂ ಯು.ಜಿ.ಸಿ. ಪಾಠಗಳು, ಡಿಸ್ಕವರಿ ಹಾಗೂ ಅನಿಮಲ್ ಪ್ಲಾನೆಟ್ ವಾಹಿನಿಯ ಪ್ರಸಾರಗಳು, ಹಿಸ್ಟರಿ ವಾಹಿನಿಯ ಪ್ರಸಾರಗಳು– ಇವೆಲ್ಲ ಉತ್ತಮ ಶೈಕ್ಷಣಿಕ ದೂರದರ್ಶನ ಕಾರ್ಯಕ್ರಮಗಳಿಗೆ ಉದಾಹರಣೆಗಳು. ಚಂದನದಲ್ಲಿ ರಾತ್ರಿ ಪ್ರಸಾರವಾಗುವ 'ದೀವಿಗೆ' ಕೂಡ ಒಳ್ಳೆಯ ಶೈಕ್ಷಣಿಕ ಕಾರ್ಯಕ್ರಮ. ಇದರ ನಿರ್ಮಾಪಕರು– ಎಂ.ಎಸ್. ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.

–ಎಸ್.ಪಿ.ಪಿ


Digitised by Bharatavani, CIIL

## ಶೈಕ್ಷಣಿಕ ಪ್ರವಾಸ

ಶೈಕ್ಷಣಿಕ ಪ್ರವಾಸ ಏರ್ಪಡಿಸುವುದು ಈಗ ಶಾಲಾ ಕಾರ್ಯಕ್ರಮದ ಒಂದು ಪ್ರಮುಖ ಕಾರ್ಯವಾಗಿದೆ. ಇದು ಜ್ಞಾನಾನುಭವ ಹಾಗೂ ಸಂತೋಷ ಎರಡು ದೃಷ್ಟಿಯಿಂದಲೂ ಲಾಭಕರ. ಶೈಕ್ಷಣಿಕ ಪ್ರವಾಸ ಹೋಗುವ ಮೂಲಕ ವಿದ್ಯಾರ್ಥಿಗಳು ಹೆಚ್ಚು ವಿಷಯಗಳ ಸಂಗ್ರಹಣೆಯೊಂದಿಗೆ ವೈಯಕ್ತಿಕ ಅನುಭವವನ್ನು ಗಳಿಸುತ್ತಾರೆ ಹಾಗೂ ವಿದ್ಯಾರ್ಥಿಗಳ ಮಾನಸಿಕ ಚಿಂತನೆ ವಿಶಾಲವಾಗುತ್ತದೆ. ಇಂತಹ ಪ್ರವಾಸಗಳಿಗೆ ಹೋಗುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದಲೇ ವಸತಿ – ಊಟದ ವ್ಯವಸ್ಥೆಯನ್ನು ಮಾಡಿಸುವುದರಿಂದ ಅವರು ವೈಯಕ್ತಿಕ ತರಬೇತಿ ಪಡೆಯುವುದರ ಜೊತೆಗೇ ತಾವಾಗಿ ಕೆಲಸ ಮಾಡುವ ಸಾಮರ್ಥ್ಯ ಹಾಗೂ ಆತ್ಮವಿಶ್ವಾಸವನ್ನು ಗಳಿಸುತ್ತಾರೆ. ಶಾಲೆಯ ಪ್ರಮುಖ ಕೆಲಸಗಳಲ್ಲಿ ಒಂದೆಂದರೆ, ವಿದ್ಯಾರ್ಥಿಗಳನ್ನು ಉತ್ತಮ ಪೌರರನ್ನಾಗಿ ನಿರ್ಮಿಸುವುದು. ಉತ್ತಮ ಪೌರರಾಗಲು ನಮ್ಮ ದೇಶದ ಬಗೆಗೆ, ಸಮಾಜದ ಬಗೆಗೆ ನಮ್ಮ ಇತಿಹಾಸದ ಬಗೆಗೆ ಉತ್ತಮ ಭಾವನೆ ಹೊಂದಿರಬೇಕಾಗುತ್ತದೆ. ಕಿಶೋರಾವಸ್ಥೆಯಲ್ಲಿರುವಾಗಲೇ ವಿದ್ಯಾರ್ಥಿಗಳು ಹೊರ ಪ್ರಪಂಚಕ್ಕೆ ಕಾಲಿಡಬೇಕು. ಅಲ್ಲಿನ ಜ್ಞಾನ ಸಂಪಾದಿಸಬೇಕು. ಶೈಕ್ಷಣಿಕ ಪ್ರವಾಸಗಳು ವಿದ್ಯಾರ್ಥಿಗಳ ವಿಷಯ ಸಂಗ್ರಹಣೆಯ ಹಂಬಲಕ್ಕೆ ನೀರೆರೆದಂತಾಗುತ್ತದೆ. ಹೊಸ ಅನುಭವ ಪಡೆಯುವುದರೊಂದಿಗೆ ಹೊಸ ಹೊಸದನ್ನು ಅನ್ವೇಷಿಸಲು ಸಾಧ್ಯವಾಗುತ್ತದೆ.

### ವಿಧಗಳು ಹಾಗೂ ಗುರಿಗಳು

ಶೈಕ್ಷಣಿಕ ಪ್ರವಾಸಗಳು ಭಿನ್ನ ಭಿನ್ನ ಆಸಕ್ತಿಗಳೊಂದಿಗೆ ಚಾರಿತ್ರಿಕ, ಭೌಗೋಳಿಕ, ಆರ್ಥಿಕ, ಕೈಗಾರಿಕಾ, ವೈಜ್ಞಾನಿಕ ವಿಷಯಗಳನ್ನು ತಿಳಿಸುತ್ತದೆ. ವಿದ್ಯಾರ್ಥಿಗಳು ಚಾರಿತ್ರಿಕ ಅಂಶಗಳನ್ನು ತಿಳಿಯಲು ಐತಿಹಾಸಿಕ ಮೌಲ್ಯವುಳ್ಳ ಪ್ರದೇಶಗಳಿಗೆ ಉದಾಹರಣೆಗೆ – ಕೆಂಪುಕೋಟೆ, ಆಗ್ರಾಕೋಟೆ, ತಾಜ್‌ಮಹಲ್ ಸ್ಮಾರಕ, ಅಜಂತ, ಎಲ್ಲೋರಾ ಗುಹಾಂತರ ದೇವಾಲಯಗಳು, ಪುರಾತತ್ವ ಭಗ್ನಾವಶೇಷಗಳು ಬೇಲೂರು, ಹಂಪೆ ಮುಂತಾದವುಗಳನ್ನು ಸಂದರ್ಶಿಸಬಹುದು. ಭೌಗೋಳಿಕ ವಿಷಯಗಳನ್ನು ತಿಳಿಯಲು ಬೆಟ್ಟ ಪರ್ವತಗಳು, ಸರೋವರಗಳು, ಅಣೆಕಟ್ಟುಗಳು, ಸಮುದ್ರ ತೀರಗಳು, ಅರಣ್ಯ, ಕಣಿವೆ, ಹುಲ್ಲುಗಾವಲು ಮುಂತಾದುವುಗಳಿಗೆ ಭೇಟಿ ನೀಡಬಹುದು. ಅಂತೆಯೇ ಕೈಗಾರಿಕೆ, ಬ್ಯಾಂಕ್, ಆಫೀಸ್, ಫ್ಯಾಕ್ಟರಿ ಅಲ್ಲದೆ ವ್ಯವಹಾರ ನಡೆಸುವ ಕೇಂದ್ರಗಳಿಗೂ ಭೇಟಿ ನೀಡಬಹುದು. ಅದಲ್ಲದೇ ದೇಶದಲ್ಲಿ ಪ್ರಮುಖ ಸಂಸ್ಥೆಗಳೆನಿಸಿದ ರಾಷ್ಟ್ರೀಯ ಭೌತಿಕ ಪ್ರಯೋಗಾಲಯಗಳು, ಶಕ್ತಿ ಕೇಂದ್ರಗಳು, ಕ್ಷೇತ್ರಭೇಟಿ, ಆಕಾಶವಾಣಿ, ಅಂಚೆ ಮತ್ತು ತಂತಿಕೇಂದ್ರ, ಮುದ್ರಣಾಲಯ, ವಿಶ್ವವಿದ್ಯಾನಿಲಯಗಳು ಇವುಗಳಿಗೆ ಭೇಟಿ ನೀಡಿ ಅಲ್ಲಿನ ಕಾರ್ಯವಿಧಾನಗಳನ್ನು ತಿಳಿಯಬಹುದು. ದೊಡ್ಡ ನಗರಗಳಲ್ಲಂತೂ ನೋಡುವಂತಹ ಸ್ಥಳಗಳು ಸಾವಿರಾರು ಇದ್ದು ಶೈಕ್ಷಣಿಕ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ದೊರಕಿಸಿಕೊಡುತ್ತವೆ. ಒಬ್ಬ ಬುದ್ಧಿವಂತ ಶಿಕ್ಷಕ ಸ್ಥಳೀಯ ಇತಿಹಾಸವನ್ನು ರಾಷ್ಟ್ರೀಯ ಇತಿಹಾಸದೊಂದಿಗೆ ಸಂಬಂಧೀಕರಿಸಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಉಂಟುಮಾಡುವನು.

### ಸಂಘಟನೆ

ಶೈಕ್ಷಣಿಕ ಪ್ರವಾಸವನ್ನು ಸಿದ್ಧಗೊಳಿಸುವ ಮೊದಲ ಹಂತವೇ ಅದರ ತರ್ಕಬದ್ಧ ಯೋಜನೆ ಹಾಗೂ ಸಂಘಟನೆ. ರೈಲ್ವೆ ಅಥವಾ ಬಸ್ಸು ಟಿಕೇಟುಗಳನ್ನು ಕಾದಿರಿಸುವಿಕೆಯಿಂದ ಹಿಡಿದು ಹೋದಲ್ಲೆಲ್ಲಾ ಊಟ ತಿಂಡಿಯ ವ್ಯವಸ್ಥೆ ಹಾಗೂ ವಸತಿಯ ವ್ಯವಸ್ಥೆಯನ್ನು ಮಾಡಿರಬೇಕಾಗುತ್ತದೆ. ಪ್ರವಾಸಕ್ಕೆ ಹೊರಡುವ ಮೊದಲೇ ನಾವು ಹೋಗಬೇಕಾದ ಸ್ಥಳದ ಬಗೆಗೆ ಹೆಚ್ಚಿನ ವಿಷಯಗಳನ್ನು ತಿಳಿದಿರಬೇಕಾಗುತ್ತದೆ. ಈ ಕೆಲಸ ಅವಸರದಲ್ಲಿ ಆಗುವಂತಹದ್ದಲ್ಲ. ಎರಡನೆಯದಾಗಿ, ಪ್ರವಾಸದ ಸಂಪೂರ್ಣ ಜವಾಬ್ದಾರಿಯನ್ನು ತಂಡದ ನಾಯಕರುಗಳಿಗೆ ವಹಿಸಬೇಕು. ಮೂರನೆಯದಾಗಿ, ಹಣಕಾಸಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡಿಕೊಂಡಿದ್ದು ಮಿತವ್ಯಯವನ್ನು ಸಾಧಿಸಬೇಕಾಗುತ್ತದೆ. ನಾಲ್ಕನೆಯದಾಗಿ, ಮನೋರಂಜನಾತ್ಮಕ ಚಟುವಟಿಕೆಗಳಾದ ಹಾಡುವಿಕೆ, ಫೋಟೋ ತೆಗೆಯುವುದು, ಕಥೆ ಹೇಳುವುದು, ಪ್ರಯಾಣಿಸುವಾಗಲೇ ಆಡಬಹುದಾದ ಕೆಲವು ಆಟಗಳ ಬಗೆಗೆ ಸರಿಯಾದ ಸಿದ್ಧತೆ ಮಾಡಿಕೊಂಡಿರಬೇಕಾಗುತ್ತದೆ. ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯುವ ಜವಾಬ್ದಾರಿ ಹೊತ್ತಿರುವ ಅಧ್ಯಾಪಕ ಆ ಪ್ರದೇಶದ ಬಗೆಗೆ ಸಂಪೂರ್ಣ ಮಾಹಿತಿಯನ್ನು ಪಡೆದಿರಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಜ್ಞಾನ ಸಂಪಾದನೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಆಗ ಮಾತ್ರವೇ ಶೈಕ್ಷಣಿಕ ಪ್ರವಾಸ ಫಲಪ್ರದವಾಗುತ್ತದೆ.

ಶೈಕ್ಷಣಿಕ ಪ್ರವಾಸ ಹೊರಡುವಾಗ ಸರಿಯಾದ ಎಚ್ಚರಿಕೆ ವಹಿಸುವುದು ಅವಶ್ಯ. ಉತ್ತಮ ರೀತಿಯ ಶಿಸ್ತು ಪಾಲಿಸಬೇಕಾಗುತ್ತದೆ. ಕೆಲವು ವಿಷಯದಲ್ಲಿ ಬಿಗಿಯಾದ ನಿಯಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಹುಡುಗರ ಜೊತೆಯಲ್ಲಿ ವಿದ್ಯಾರ್ಥಿನಿಯರು ಹೊರಟರೆ ವಿದ್ಯಾರ್ಥಿನಿಯರ ಜವಾಬ್ದಾರಿ ವಹಿಸಿಕೊಳ್ಳಲು ಒಬ್ಬ ಅಧ್ಯಾಪಕಿಯೂ ಹೊರಡಬೇಕಾಗುತ್ತದೆ. ಅಧ್ಯಾಪಕ ಮಾರ್ಗದರ್ಶಕಿಯು ವಿದ್ಯಾರ್ಥಿನಿಯರ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳು ತಾವು ನೋಡಿದ ಎಲ್ಲ ವಿಚಾರಗಳ ಬಗೆಗೆ ವಿಷಯಗಳನ್ನು ಸಂಗ್ರಹಿಸಿ ಅವರ ದಿನಚರಿಯಲ್ಲಿ ಬರೆದಿಡಬೇಕಾಗುತ್ತದೆ. ಪ್ರವಾಸದಿಂದ ಹಿಂದಿರುಗಿದ ಮೇಲೆ ಪ್ರವಾಸದ ಬಗೆಗೆ ಒಂದು ಉತ್ತಮ ಲೇಖನವನ್ನು ಬರೆಯಬೇಕಾಗುತ್ತದೆ.

### ಮುನ್ನೆಚ್ಚರಿಕೆಗಳು

ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ ಹಲವು ಮುನ್ನೆಚ್ಚರಿಕೆಗಳನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅವುಗಳೆಂದರೆ–

1. ವಿದ್ಯಾರ್ಥಿಗಳು ಯಾವುದಾದರೂ ರೋಗದಿಂದ ಬಳಲುತ್ತಿದ್ದರೆ, ಅದಕ್ಕೆ ಬೇಕಾದ ಔಷಧಿಗಳನ್ನು ಮೊದಲಿಗೇ ಇಟ್ಟುಕೊಂಡಿರುವಂತೆ ಸೂಚಿಸಿರಬೇಕು.
2. ಪ್ರಯಾಣದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಕಂಡುಬರುವ ಸಣ್ಣ–ಪುಟ್ಟ ಕಾಯಿಲೆಗಳಿಗೆ ಬೇಕಾದ ಮಾತ್ರೆಗಳನ್ನು (ನೆಗಡಿ, ಕೆಮ್ಮು, ತಲೆನೋವು, ಹೊಟ್ಟೆನೋವು, ವಾಂತಿ–ಭೇದಿ, ಇತ್ಯಾದಿ) ವೈದ್ಯರ ಸಲಹೆಯಂತೆ ತೆಗೆದುಕೊಂಡಿರಬೇಕು.
3. ಸಣ್ಣ–ಪುಟ್ಟ ಗಾಯಗಳಾದರೆ ಹಾಕಲು ಡೆಟಾಲ್, ಹತ್ತಿ, ಬ್ಯಾಂಡ್‌ಏಡ್, ಬ್ಯಾಂಡೇಜ್ ಇವುಗಳನ್ನು ಕತ್ತರಿಯ ಜೊತೆಗೇ ಇಟ್ಟುಕೊಂಡಿರಬೇಕಾಗುತ್ತದೆ. [First Aid Box]
4. ಯಾವುದೇ ಬೆಲೆಬಾಳುವ ಪದಾರ್ಥಗಳನ್ನು ತರದಂತೆ ವಿದ್ಯಾರ್ಥಿಗಳಿಗೆ ಸೂಚಿಸಿರಬೇಕು.
5. ವಿದ್ಯಾರ್ಥಿನಿಯರು ಚಿನ್ನದ ಒಡವೆಗಳನ್ನು ಹಾಕಿಕೊಂಡು ಬರದಂತೆ ಸೂಚಿಸಿರಬೇಕು.
6. ವಿದ್ಯಾರ್ಥಿಗಳು ಹೆಚ್ಚು ಹಣ ತರದಂತೆ ಸೂಚಿಸಿರಬೇಕು.

Digitised by Bharatavani, CIIL

7. ವಿದ್ಯಾರ್ಥಿಗಳು ತರುವ ಬೈನಾಕ್ಯುಲರ್, ಕ್ಯಾಮೆರಾ, ಮೊಬೈಲ್‌ಗಳಿಗೆ ಅವರೇ ಹೊಣೆಯಾಗುವುದರಿಂದ ಅವುಗಳನ್ನು ಎಚ್ಚರಿಕೆಯಿಂದ ಇಟ್ಟುಕೊಂಡು, ಬಳಸುವಂತೆ ತಿಳಿಸಿರಬೇಕು.
8. ವಿದ್ಯಾರ್ಥಿಗಳು ಚಿಕ್ಕದೊಂದು ಟಾರ್ಚ್ ತರುವಂತೆ ಸೂಚಿಸಿರಬೇಕು.
9. ವಿದ್ಯಾರ್ಥಿ–ವಿದ್ಯಾರ್ಥಿನಿಯರು ಪ್ರವಾಸಕ್ಕೆ ಹೊರಟಾಗ ಅವರ ಜೊತೆಯಲ್ಲಿ ಉಪಾಧ್ಯಾಯರು ಹಾಗೂ ಉಪಾಧ್ಯಾಯಿನಿಯರೂ ಅವಶ್ಯವಾಗಿ ಇರಲೇಬೇಕು.
10. ಈ ಎಲ್ಲ ಸಿದ್ಧತೆಯ ಜೊತೆಗೇ ಅನಿರೀಕ್ಷಿತವಾಗಿ ಯಾವುದಾದರೂ ತೊಂದರೆ ಉಂಟಾದರೆ ಅದನ್ನು ಧೈರ್ಯವಾಗಿ ಎದುರಿಸಿ ಆ ಸಂದರ್ಭದಲ್ಲೇ ಅದಕ್ಕೆ ಬೇಕಾದ ಕ್ರಮವನ್ನು ಕೈಗೊಳ್ಳುವ ಚಾಕಚಕ್ಯತೆ, ಆತ್ಮವಿಶ್ವಾಸ ಅಧ್ಯಾಪಕ ವೃಂದದಲ್ಲಿ ಇರಬೇಕು.

**ಮೌಲ್ಯಮಾಪನ**

ಶೈಕ್ಷಣಿಕ ಪ್ರವಾಸ ಒಂದು ಪ್ರಮುಖವಾದ ಯೋಚನೆಯೇ ಸರಿ. ಇದನ್ನು ಕೈಗೊಳ್ಳುವಾಗ ನಾವು ಯಾವ ಯಾವ ಉದ್ದೇಶಗಳನ್ನು ಹಾಕಿಕೊಂಡಿದ್ದೇವೆ? ಆ ಉದ್ದೇಶಗಳು ಈಡೇರುತ್ತಾ ಸಾಗುತ್ತಿದೆಯೇ? ಎಂಬುದನ್ನು ಪ್ರವಾಸದ ಪ್ರತಿಹಂತದಲ್ಲೂ ಗಮನಿಸುತ್ತಿರಬೇಕು. ಉದ್ದೇಶಗಳು ಸರಿಯಾಗಿ ಈಡೇರುತ್ತಿಲ್ಲ ಎನಿಸಿದರೆ, ಅವುಗಳ ಈಡೇರಿಕೆಗೆ ಬೇಕಾದ ಕ್ರಮವನ್ನು ತಕ್ಷಣವೇ ತೆಗೆದುಕೊಳ್ಳಬೇಕು.

ವಿದ್ಯಾರ್ಥಿ ವೃಂದದಲ್ಲಿ ಸ್ವಮೌಲ್ಯಮಾಪನದ ಮೂಲಕ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದೇವೆಯೇ ಎಂಬುದನ್ನು ಹಂತ ಹಂತದಲ್ಲಿ ಗಮನಿಸುತ್ತಾ ಸಾಗಬೇಕು. ಶಿಕ್ಷಕ ಮಾರ್ಗದರ್ಶಕನಂತಿದ್ದು ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳಿಗೆ ಸಹಾಯ ಸಲ್ಲಿಸಬೇಕು. ಮತ್ತೆ ಮತ್ತೆ ಪುನರಾವಲೋಕನ ಮಾಡಿಕೊಂಡಾಗ ಮಾತ್ರವೇ ಯಾವುದೇ ಯೋಜನೆಯಾದರೂ ಪೂರ್ಣವಾಗುವುದು ಎಂಬುದನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಿಳಿದು, ಅದರಂತೆ ನಡೆದುಕೊಂಡಾಗ ಶೈಕ್ಷಣಿಕ ಪ್ರವಾಸ ಯಶಸ್ವಿ ಯೋಜನೆಯಾಗುವುದರಲ್ಲಿ ಸಂಶಯವಿಲ್ಲ.

–ಕೆ.ಶ್ಯಾ.ದೇ.

## ಶೈಕ್ಷಣಿಕ ಮನೋವಿಜ್ಞಾನದ ಅರ್ಥ ಮತ್ತು ವ್ಯಾಪ್ತಿ

ಶೈಕ್ಷಣಿಕ ಮನೋವಿಜ್ಞಾನವು ಆನ್ವಯಿಕ ಮನೋವಿಜ್ಞಾನದ ಶಾಖೆಗಳಲ್ಲಿ ಒಂದು. ಶೈಕ್ಷಣಿಕ ಮನೋವಿಜ್ಞಾನಕ್ಕೆ ಉತ್ತೇಜನ ದೊರೆತದ್ದು 20ನೇ ಶತಮಾನದಲ್ಲಿ. ಅದಕ್ಕೆ ಮೊದಲು ಈ ವಿಷಯಕ್ಕೆ ಸಂಬಂಧಪಟ್ಟ ವಿಮರ್ಶೆ ನಡೆದಿತ್ತೆಂಬುದು ಅರಿಸ್ಟಾಟಲ್‌ನ ಸಾದೃಶ್ಯ (Cimilarity) ವೈದೃಶ್ಯ (contrast) ಮತ್ತು ಸಾಮೀಪ್ಯ (contiglity) ತತ್ವಗಳಿಂದ ತಿಳಿದು ಬರುತ್ತದೆ. ಆದರೆ ಖಚಿತವಾಗಿ ಶಿಕ್ಷಣಕ್ಕೆ ಮನೋವಿಜ್ಞಾನದ ಆಧಾರ ಬೇಕೆಂದು ಅನುಷ್ಠಾನಕ್ಕೆ ತಂದವನು ಸ್ವಿಡ್ಜರ್‌ಲೆಂಡಿನ ಜಾನ್ ಹೆನ್ರಿಜ್ ಪೆಸ್ಟಾಲಜಿ. ಇವನು ಪ್ರಭಾವಶಾಲಿ ಬೋಧನೆಗೆ ಕಲಿಯುವ ಮಕ್ಕಳು ಶಾರೀರಿಕ ಹಾಗೂ ಮಾನಸಿಕ ಸಿದ್ಧತೆಗಳಿಗೆ ಇದು ಅತ್ಯವಶ್ಯಕ ಎಂದನು. ಇವರು 1804ರಲ್ಲಿ ಪ್ರತ್ಯೇಕ ಶಿಕ್ಷಕರ ತರಬೇತಿ ಶಾಲೆಯನ್ನು ಪ್ರಾರಂಭಿಸಿದನು. ನಂತರ ಜಾನ್‌ಫ್ರೆಡ್ರಿಕ್ ಹರ್ಬರ್ಟನ ಬೋಧನೆಯ ಪಂಚಸೋಪಾನಗಳು ಅಸ್ತಿತ್ವಕ್ಕೆ ಬಂದವು. ಇವು ಇಂದಿಗೂ ಉತ್ತಮ ಬೋಧನಾ ಕ್ರಮವೆಂದು ಪರಿಗಣಿಸಲ್ಪಟ್ಟಿವೆ. ನಂತರ ಶಿಕ್ಷಣದಲ್ಲಿ ಮನೋವೈಜ್ಞಾನಿಕ ಕ್ರಾಂತಿ ಎಬ್ಬಿಸಿದ ಅಮೆರಿಕಾದ ಹೆಸರಾಂತ ಮನೋವಿಜ್ಞಾನಿ ಎಡ್ವರ್ಡ್‌ಲೀಥಾರ್ನ ಡೈಕ್‌ನು ಶಿಕ್ಷಣದ ಸಮಸ್ಯೆಗಳನ್ನು ಸಂಶೋಧನೆಗೆ ಒಳಪಡಿಸಿ ಇದರಿಂದ ಹೊರಬಿದ್ದ ಅಂಶಗಳ ಮೇಲೆ 1903ರಲ್ಲಿ 'ಶೈಕ್ಷಣಿಕ ಮನೋವಿಜ್ಞಾನ' ಎಂಬ ಪುಸ್ತಕವನ್ನು ಪ್ರಕಟಿಸಿದನು.

ಶಿಕ್ಷಣದಲ್ಲಿ ಮಾನವನ ಸ್ವಭಾವವನ್ನು ಕುರಿತು ಚಿಂತಿಸುವ ಪ್ರಮುಖ ಜ್ಞಾನವೇ ಶೈಕ್ಷಣಿಕ ಮನೋವಿಜ್ಞಾನ. ಸಂಕ್ಷಿಪ್ತವಾಗಿ ಹೇಳುವುದಾದರೆ ಮನೋವಿಜ್ಞಾನ ಪರಿಕಲ್ಪನೆಗಳನ್ನು, ತತ್ವಗಳನ್ನು ಶಿಕ್ಷಣ ಪ್ರಕ್ರಿಯೆಗೆ ಅನ್ವಯಿಸುವ ಜ್ಞಾನ ಶಾಖೆಯೇ ಶೈಕ್ಷಣಿಕ ಮನೋವಿಜ್ಞಾನ.

**ವ್ಯಾಖ್ಯೆಗಳು**

1. ಜೆ.ಬಿ. ವ್ಯಾಟ್ಸನ್‌ರವರ ಪ್ರಕಾರ "ವ್ಯಕ್ತಿ ಸಮಾಜ ಜೀವನದಲ್ಲಿ ಸಂರಕ್ಷಣೆ ಮತ್ತು ತೃಪ್ತಿಗಳಿಂದ ಭಾಗವಹಿಸಲು ನೆರವಾಗುವಂತೆ ನಿರ್ದೇಶನ ನೀಡಲು ಅವನ ಕಲಿವಿಗೂ ಉಪಾಧ್ಯಾಯರ ಬೋಧನೆಗೂ ಹಲವಾರು ಮುಖಗಳಲ್ಲಿ ನೆರವಾಗುವ ಜ್ಞಾನವೇ ಶೈಕ್ಷಣಿಕ ಮನೋವಿಜ್ಞಾನ.
2. ಕ್ರೋ ಮತ್ತು ಕ್ರೊ ರವರ ಪ್ರಕಾರ "ಹುಟ್ಟಿನಿಂದ ಸಾವಿನವರೆಗೆ ವ್ಯಕ್ತಿಯ ಕಲಿಕೆಯ ಅನುಭವಗಳನ್ನು ಶೈಕ್ಷಣಿಕ ಮನೋವಿಜ್ಞಾನ ವಿವರಿಸುತ್ತದೆ."
3. ಸ್ಕಿನ್ನರ್‌ರವರ ಪ್ರಕಾರ "ಬೋಧನೆ ಮತ್ತು ಕಲಿಕೆಗಳೊಂದಿಗೆ ವ್ಯವಹರಿಸುವ ಮನೋವಿಜ್ಞಾನದ ಶಾಖೆಯೇ ಶೈಕ್ಷಣಿಕ ಮನೋವಿಜ್ಞಾನ"
4. ಪೀಲ್‌ನ ಪ್ರಕಾರ "ಶೈಕ್ಷಣಿಕ ಮನೋವಿಜ್ಞಾನವು ಶಿಕ್ಷಣದ ವಿಜ್ಞಾನವಾಗಿದೆ".

**ಶೈಕ್ಷಣಿಕ ಮನೋವಿಜ್ಞಾನದ ವ್ಯಾಪ್ತಿ**

**ಬೆಳವಣಿಗೆಯ ಲಕ್ಷಣಗಳನ್ನು ತಿಳಿಯುವುದು :** ಮಕ್ಕಳು ಆದಿಶೈಶವಾವಸ್ಥೆ, ಶೈಶವಾವಸ್ಥೆ ಮತ್ತು ಕಿಶೋರಾವಸ್ಥೆಗಳನ್ನು ತಮ್ಮ ಜೀವನದ ಬೆಳವಣಿಗೆಯ ಹಂತದಲ್ಲಿ ಸಾಗಿಬರುತ್ತಾರೆ. ಈ ಬೆಳವಣಿಗೆಯ ಹಂತಗಳು ತಮ್ಮದೇ ಆದ ವಿಶಿಷ್ಟ ಲಕ್ಷಣಗಳನ್ನೊಳಗೊಂಡಿವೆ. ಶಿಕ್ಷಕನಿಗೆ ಮಕ್ಕಳ ಬೆಳವಣಿಗೆಯ ವಿವಿಧ ಅವಸ್ಥೆಯ ಲಕ್ಷಣಗಳ ಅರಿವು ಇದ್ದರೆ ಮಾತ್ರ ಅವನು ನಿರ್ದಿಷ್ಟ ಶಿಕ್ಷಣದ ಗುರಿಗಳ ಅನ್ವಯ ಮಾಡಿ ಬೋಧನೆಯ ಮುಖಾಂತರ ಅವರ ವರ್ತನೆಯಲ್ಲಿ ಪರಿವರ್ತನೆ ತರಬಹುದು.

ವರ್ಗಕೋಣೆಯ ಕಲಿಕೆಯ ಸ್ವರೂಪವನ್ನು ಅರಿಯಲು. ಶೈಕ್ಷಣಿಕ ಮನೋವಿಜ್ಞಾನದ ಜ್ಞಾನವು ಶಿಕ್ಷಕನಿಗೆ ಸಾಮಾನ್ಯ ತರಗತಿಯಲ್ಲಿ ನಡೆಯುವ ಕಲಿಕೆಯ ಪ್ರಕ್ರಿಯೆಗಳು ಮತ್ತು ಸಮಸ್ಯೆಗಳ ಜ್ಞಾನವನ್ನು ಒದಗಿಸುವುದು. ಇದು ಅವನಿಗೆ ತರಗತಿಯ ಕಲಿಕೆಯ ಸಮಗ್ರ ಸಿದ್ಧಾಂತವನ್ನು ಅಭಿವೃದ್ಧಿಪಡಿಸಲು ಸಹಾಯಕವಾಗುವುದು. ಶಿಕ್ಷಕನು ತನ್ನ ವಿದ್ಯಾರ್ಥಿಗಳ ಬೆಳವಣಿಗೆಯ ಲಕ್ಷಣಗಳು, ಸಾಮರ್ಥ್ಯಗಳು ಹಾಗೂ ವ್ಯಕ್ತಿಯ ವ್ಯಕ್ತಿತ್ವದ ಪ್ರಕ್ರಿಯೆಯ ಮೇಲೆ ಅನುವಂಶೀಯತೆ ಮತ್ತು ಪರಿಸರದ ಪ್ರಭಾವ ಮತ್ತು ಪಾತ್ರವನ್ನು ತಿಳಿದುಕೊಳ್ಳುವುದು.

**ವ್ಯಕ್ತಿ ವಿಭಿನ್ನತೆಗಳನ್ನು ಅರಿತುಕೊಳ್ಳುವುದು: –** ಜಗತ್ತಿನಲ್ಲಿ ಒಬ್ಬ ವ್ಯಕ್ತಿಯಂತೆ ಮತ್ತೊಬ್ಬ ವ್ಯಕ್ತಿಯಿಲ್ಲ. ವರ್ಗಕೋಣೆಯಲ್ಲಿ ಇರುವ ಸುಮಾರು ೪೦ ವಿದ್ಯಾರ್ಥಿಗಳಲ್ಲಿ ವ್ಯಕ್ತಿ ವಿಭಿನ್ನತೆಯಿರುತ್ತದೆ. ತರಗತಿಯ ಅಗತ್ಯತೆಗಳು ಮತ್ತು ಸೌಕರ್ಯಗಳಿಗನುಗುಣವಾಗಿ ತನ್ನ ಬೋಧನೆಯನ್ನು ಹೊಂದಾಣಿಕೆ ಮಾಡಿಕೊಳ್ಳಲು ಶೈಕ್ಷಣಿಕ ಮನೋವಿಜ್ಞಾನದ ಅವಶ್ಯಕತೆ ಇದೆ.

**ಪರಿಣಾಮಕಾರಿ ಬೋಧನಾ ವಿಧಾನ ತಿಳಿದುಕೊಳ್ಳುವುದು: –** ಶೈಕ್ಷಣಿಕ ಮನೋವಿಜ್ಞಾನವು ಶಿಕ್ಷಕನಿಗೆ ತನ್ನ ಬೋಧನೆಯನ್ನು


Digitised by Bharatavani, CIIL

ಪರಿಣಾಮಕಾರಿಗೊಳಿಸಲು ಸಹಾಯಕವಾಗುವ ಸಮಂಜಸವಾದ ಬೋಧನಾ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ನೆರವಾಗುತ್ತದೆ.

**ಮಾನಸಿಕ ಆರೋಗ್ಯದ ಜ್ಞಾನ:–** ಶಿಕ್ಷಕನ ಮತ್ತು ಮಕ್ಕಳ ಮಾನಸಿಕ ಆರೋಗ್ಯವು ಪರಿಣಾಮಕಾರಿ ಬೋಧನೆ ಕಲಿಕೆಯ ಪ್ರಕ್ರಿಯೆಗೆ ಅತ್ಯವಶ್ಯಕ. ಶಿಕ್ಷಕನು ಮನೋವಿಜ್ಞಾನವನ್ನು ಅಭ್ಯಾಸಿಸಿದ್ದರೆ ಮಾತ್ರ ಅವನು ಮಾನಸಿಕ ಅಸ್ವಾಸ್ಥತೆ ಹಾಗೂ ಮಾನಸಿಕ ಅಪಸಮಾಯೋಜನೆಗೆ ಕಾರಣವಾದ ಅಂಶಗಳನ್ನು ಪತ್ತೆ ಹಚ್ಚಿ ಅವುಗಳನ್ನು ತಡೆಗಟ್ಟಲು ಸಾಧ್ಯ. ಮಕ್ಕಳ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಶಿಕ್ಷಕನಿಗೆ ಸಾಧ್ಯವಾಗುತ್ತದೆ.

**ಪಠ್ಯಕ್ರಮ ರಚನೆ:–** ಪಠ್ಯಕ್ರಮ ರಚನೆಯಲ್ಲಿ ಮನೋವೈಜ್ಞಾನಿಕ ತತ್ವಗಳನ್ನು ಅನುಸರಿಸಲಾಗುತ್ತದೆ. ಪಠ್ಯಕ್ರಮ ರಚನೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಅಗತ್ಯಗಳು ಅವರ ಬೆಳವಣಿಗೆಯ ಲಕ್ಷಣಗಳು ಸಾಮಾಜಿಕ ಕಲಿಕೆಯ ನಮೂನೆ ಮತ್ತು ಸಮುದಾಯದ ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮ ವಿನ್ಯಾಸಗೊಳಿಸಬೇಕು.

**ಕಲಿಕೆಯ ಫಲದ ಅಳತೆ:–** ಮನೋವೈಜ್ಞಾನಿಕ ಪರೀಕ್ಷೆಗಳು ಶಿಕ್ಷಕರಿಗೆ ವಿದ್ಯಾರ್ಥಿಗಳ ಕಲಿಕೆಯ ಫಲವನ್ನು ಅಳತೆ ಮಾಡಲು ಸಹಾಯಕವಾಗುತ್ತದೆ. ಅವನು ತನ್ನ ಬೋಧನಾ ವಿಧಾನಗಳನ್ನು ಸಹ ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟಕ್ಕನುಸರಿಸಿ ತನ್ನ ಬೋಧನಾವ್ಯೂಹ ಮತ್ತು ತಂತ್ರಗಳನ್ನು ಮಾರ್ಪಡಿಸಿಕೊಳ್ಳಬಹುದು.

**ಸಂಶೋಧನೆ: –** ವಿದ್ಯಾರ್ಥಿಗಳ ಸಾಧನೆ ಮತ್ತು ವರ್ತನೆಯ ಮೇಲೆ ಪ್ರಭಾವ ಬೀರುವ ವಿವಿಧ ಚಲಕಗಳನ್ನು ಅಳತೆಮಾಡಲು ಸಾಧನ ಮತ್ತು ತಂತ್ರಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾ ಸಂಶೋಧನೆ ಕೈಗೊಳ್ಳಲು ಶೈಕ್ಷಣಿಕ ಮನೋವಿಜ್ಞಾನ ಸಹಾಯವಾಗುತ್ತದೆ.

**ಅಸಾಧಾರಣ ಮಕ್ಕಳ ಶಿಕ್ಷಣಕ್ಕಾಗಿ ಮಾರ್ಗದರ್ಶನ:–** ಶೈಕ್ಷಣಿಕ ಮನೋವಿಜ್ಞಾನವು ಅಸಾಧಾರಣ ಮಕ್ಕಳ ಲಕ್ಷಣಗಳು, ನಿರ್ವಹಣೆ ಮತ್ತು ಶಿಕ್ಷಣದ ಬಗ್ಗೆ ಶಿಕ್ಷಕನಿಗೆ ಬೇಕಾದ ಜ್ಞಾನಾಂಶಗಳನ್ನು ಒದಗಿಸುತ್ತದೆ.

**ಸಮೂಹ ಗತಿಶೀಲತೆಯ ತಿಳುವಳಿಕೆ:–** ಇತ್ತೀಚಿನ ವರ್ಷಗಳಲ್ಲಿ ಶೈಕ್ಷಣಿಕ ಮನಶಾಸ್ತ್ರಜ್ಞರು ತರಗತಿಯ ಬೋಧನೆ ಕಲಿಕೆಯಲ್ಲಿ ಸಮೂಹ ಗತಿಶೀಲತೆಗಳ ಮತ್ತು ಸಾಮಾಜಿಕ ಪರಿಸರ ಮತ್ತು ಕಲಿಕೆಯ ಮೇಲೆ ಅದರ ಪ್ರಭಾವವನ್ನು ಅರಿತುಕೊಳ್ಳಲಿಕ್ಕೆ ಶೈಕ್ಷಣಿಕ ಮನೋವಿಜ್ಞಾನವು ಸಹಾಯ ಮಾಡುತ್ತದೆ ಎಂದಿದ್ದಾರೆ.

ಈ ರೀತಿಯಾಗಿ ಶೈಕ್ಷಣಿಕ ಮನೋವಿಜ್ಞಾನದ ವ್ಯಾಪ್ತಿಯನ್ನು ಅಭ್ಯಾಸಿಸಿದಾಗ ನಮಗೆ ತಿಳಿದು ಬರುವ ಪ್ರಮುಖ ಅಂಶವೆಂದರೆ ಅದು ಪ್ರಮುಖವಾಗಿ ಐದು ಅಂಶಗಳನ್ನು ಆಳವಾಗಿ ಅಭ್ಯಾಸಿಸುತ್ತದೆ. ಶಿಕ್ಷಕ, ವಿದ್ಯಾರ್ಥಿ, ಕಲಿಕೆಯ ಅನುಭವಗಳು, ಕಲಿಕೆಯ ಸನ್ನಿವೇಶಗಳು ಮತ್ತು ಕಲಿಕಾ ಪ್ರಕ್ರಿಯೆ. ಹೀಗೆ ಈ ಮೇಲಿನ ಐದು ಅಂಶಗಳು ಪ್ರಮುಖವಾಗಿ ಶೈಕ್ಷಣಿಕ ವಿಜ್ಞಾನದ ವ್ಯಾಪ್ತಿಯಲ್ಲಿ ಬರುತ್ತವೆ.

–ಎಸ್.ಎಸ್. ಹೂ

## ಶೈಕ್ಷಣಿಕ ಮೇಲ್ವಿಚಾರಣೆ

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅನುಕೂಲವಾಗುವಂತೆ, ಶಿಕ್ಷಣವು ಎಲ್ಲರಿಗೂ ಎಲ್ಲೆಡೆ ದೊರಕುವಂತೆ ಮಾಡಲು ಸರ್ಕಾರವು ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಆಡಳಿತ ಮತ್ತು ನಿರ್ವಹಣೆಯಲ್ಲಿ ಹೊಸ ಪರಿಕಲ್ಪನೆಗಳು ಮೂಡುತ್ತಿವೆ. ಶಾಲಾ ಮಟ್ಟದಲ್ಲಿ ಶೈಕ್ಷಣಿಕ ಕಾರ್ಯಗಳ ಪ್ರಗತಿ ಮತ್ತು ಉನ್ನತ ಮಟ್ಟದಲ್ಲಿ ಶೈಕ್ಷಣಿಕ ನಿರ್ವಹಣೆ ಮತ್ತು ಆಡಳಿತದ ಕಾರ್ಯಗಳು ಎಷ್ಟರ ಮಟ್ಟಿಗೆ ಪ್ರಗತಿ ಪರವಾಗಿದೆ? ಅವುಗಳ ಪರಿಣಾಮಗಳೇನು? ಅವುಗಳನ್ನು ನಿರ್ವಹಿಸಲು ರೂಪಿಸಿರುವ ನೀತಿ ನಿಯಮಗಳು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ? ಎಲ್ಲವೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೇ? ಅವುಗಳಿಂದುಂಟಾದ ಅಥವಾ ಅವುಗಳಲ್ಲಿನ ಲೋಪದೋಷಗಳನ್ನು ಗುರ್ತಿಸಿ, ಸರಿಪಡಿಸುವುದು ಹೇಗೆ? ಎಂಬ ನೂರಾರು ಪ್ರಶ್ನೆಗಳಿಗೆ ಉತ್ತರ ಸಿಗುವುದು ಸೂಕ್ತ ಮೇಲ್ವಿಚಾರಣೆ ಮಾಡುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಕಾಲ ಕಾಲಕ್ಕೆ ಶೈಕ್ಷಣಿಕ ಮೇಲ್ವಿಚಾರಣೆ ಮಾಡುವುದರಿಂದ ಶಿಕ್ಷಣದ ವಿವಿಧ ಹಂತಗಳ ನಡುವೆ ಸಂಬಂಧ ಕಲ್ಪಿಸಿದಂತಾಗಿ ಆಡಳಿತಾತ್ಮಕ ಲೋಪದೋಷಗಳನ್ನು ಆಗಿಂದಾಗ್ಗೆ ಸರಿಪಡಿಸುವುದರ ಮೂಲಕ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಮೇಲ್ವಿಚಾರಣೆಯು ಸಹಾಯಮಾಡುತ್ತದೆ.

ಮೇಲ್ವಿಚಾರಣೆ ಎಂಬುದು ಸುಮಾರು 15ನೇ ಶತಮಾನದಲ್ಲಿ ಪರಿವೀಕ್ಷಣೆ, ಸಮೀಕ್ಷೆ ಎಂಬರ್ಥ ಕೊಡುವ 'Supervision' ಎಂಬ ಪದದಿಂದ ಬೆಳಕಿಗೆ ಬಂದಿತು. ಇದಕ್ಕೆ ಮುಂಚಿತವಾಗಿ ತನಿಖೆ ಅಥವಾ 'Inspection' ಎಂಬ ಪದವನ್ನು ಬಳಸುತ್ತಿದ್ದರು. ಶಾಲೆಯಲ್ಲಿನ ಕಾರ್ಯಚಟುವಟಿಕೆಗಳು, ಶಿಕ್ಷಕರ ಬೋಧನಾವಿಧಾನ, ಮಕ್ಕಳ ಸಾಧನೆಗಳ ಬಗೆಗೆ ತನಿಖೆ ನಡೆಸಿ ತಪ್ಪುಗಳನ್ನು ಕಂಡುಹಿಡಿಯುವುದಾಗಿತ್ತು. ತನಿಖೆ ಮಾಡುವುದರಿಂದ ತಪ್ಪುಗಳನ್ನು ಕಂಡುಹಿಡಿದು ಶಿಕ್ಷೆಗಳನ್ನು ಕೊಡುವುದು ಅದರ ಉದ್ದೇಶವಾಗಿತ್ತೇ ವಿನಃ ಪರಿಹಾರ ಕಂಡುಕೊಳ್ಳಲು ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕೆ ಅವಕಾಶವಿರಲಿಲ್ಲ. ಆದರೆ ಮೇಲ್ವಿಚಾರಣೆ ಮಾಡುವಾಗ ಶಾಲಾಕಾರ್ಯಗಳಲ್ಲಿ, ಶಿಕ್ಷಕರ ಬೋಧನೆಯಲ್ಲಿ, ಶಿಕ್ಷಣದ ವಿವಿಧ ಹಂತಗಳ ಕಾರ್ಯಗಳಲ್ಲಿರುವ ಲೋಪದೋಷಗಳನ್ನು ಕಂಡುಹಿಡಿದು, ಅದಕ್ಕೆ ಕಾರಣಗಳನ್ನು ಹುಡುಕಿ ಪರಿಹಾರಕ್ಕಾಗಿ ಹಲವು ಮಾರ್ಗೋಪಾಯಗಳನ್ನು ಹುಡುಕುವುದು, ಸೂಕ್ತ ಸಲಹೆಗಳನ್ನು ಸಂಬಂಧ ಪಟ್ಟವರಿಗೆ ನೀಡಿ ಅವರ ಕಾರ್ಯಕ್ಷಮತೆಯನ್ನು ಹೆಚ್ಚುವಂತೆ ಮಾಡುವುದು ಮುಖ್ಯ. ತನಿಖೆ ಮತ್ತು ಮೇಲ್ವಿಚಾರಣೆ ಎಂಬ ಪರಿಕಲ್ಪನೆಗಳನ್ನು ಹೋಲಿಸಿದಾಗ ಮೇಲ್ವಿಚಾರಣೆಯು ಹೆಚ್ಚು ವ್ಯಾಪಕತೆಯನ್ನು ಹೊಂದಿರುವುದು ಮತ್ತು ಹೆಚ್ಚು ಸಂಕೀರ್ಣತೆಯನ್ನು ಹೊಂದಿರುವುದು ತಿಳಿದು ಬರುತ್ತದೆ.

### ಶೈಕ್ಷಣಿಕ ಮೇಲ್ವಿಚಾರಣೆಯ ಪ್ರಮುಖ ಉದ್ದೇಶಗಳು

- ಶಿಕ್ಷಣ ಸಂಸ್ಥೆಗಳು ನಿರ್ದಿಷ್ಟ ಗುರಿಗಳನ್ನು ನಿರ್ಧರಿಸಲು ಸಹಾಯ ಮಾಡುವುದು.
- ಶಿಕ್ಷಣ ಕೇಂದ್ರಗಳಿಗೆ ನಾಯಕತ್ವವನ್ನು ನೀಡಿ, ಅವುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಸರಿಯಾದ ದಾರಿಗೆ ತರುವುದು.
- ಶಿಕ್ಷಣ ಸಂಸ್ಥೆಗಳ ಉತ್ತಮ ಕಾರ್ಯಗಳನ್ನು ಶ್ಲಾಘಿಸುವುದು ಮತ್ತು ದೋಷಗಳಿದ್ದಲ್ಲಿ ಪರಿಹಾರ ಕಂಡುಕೊಳ್ಳಲು ಸಹಾಯಮಾಡುವುದು.
- ಶಿಕ್ಷಣ ವೃತ್ತಿಯಲ್ಲಿ ಅಭಿವೃದ್ಧಿ ತರುವುದು.
- ವಿದ್ಯಾರ್ಥಿಗಳ ಸಾಧನೆ ಮತ್ತು ವ್ಯಕ್ತಿತ್ವ ಬೆಳವಣಿಗೆಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ಎಲ್ಲ ಹಂತಗಳಲ್ಲೂ ಸಹಸಂಬಂಧವನ್ನು ಕಲ್ಪಿಸುವುದು.

ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ನಡೆಸಿ ಅವರ ಶೈಕ್ಷಣಿಕ ಸಾಧನೆಗಳನ್ನು, ಕಾರ್ಯಚಟುವಟಿಕೆಗಳನ್ನು ಮತ್ತು ತತ್ಸಂಬಂಧಿತ

Digitised by Bharatavani, CIIL

ದಾಖಲೆಗಳಲ್ಲಿರುವ ಉತ್ತಮಾಂಶಗಳನ್ನು ಹೆಸರಿಸಿ, ಅಂತಹ ಕಾರ್ಯಗಳನ್ನು ಮುಂದೆಯೂ ನಿರ್ವಹಿಸಲು ಉತ್ತೇಜನ ನೀಡುವುದು, ಅವುಗಳಲ್ಲಿ ದೋಷಗಳಿದ್ದಲ್ಲಿ ಸರಿಯಾಗಿ ತಿದ್ದಿಕೊಳ್ಳಲು ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದೂ ಇದರ ಉದ್ದೇಶ. ಮೇಲ್ವಿಚಾರಣೆಯ ಕಾರ್ಯವ್ಯಾಪ್ತಿಯು ಪಠ್ಯವಸ್ತು ಮತ್ತು ಶಾಲಾ ಪರಿಸರವನ್ನು ಕೂಡ ಒಳಗೊಂಡಿದೆಯಾದ್ದರಿಂದ, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ವಾತಾವರಣದ ಬಗೆಗೆ ಸೂಕ್ತ ಮಾರ್ಗದರ್ಶನವನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ, ಶಿಕ್ಷಕರಿಗೆ ನೀಡುವುದು – ಇವುಗಳಿಂದ ಮೇಲ್ವಿಚಾರಣೆಯ ವಿಶಾಲಾರ್ಥವು ನಮಗೆ ತಿಳಿಯುವುದು.

**ಶೈಕ್ಷಣಿಕ ಮೇಲ್ವಿಚಾರಣೆ**

| ಪಠ್ಯ | ಸಹಪಠ್ಯ ಚಟುವಟಿಕೆಗಳು |
|---|---|
| • ತರಗತಿ ಮೇಲ್ವಿಚಾರಣೆ | • ಕ್ರೀಡಾ ಕೂಟ |
| • ಶಿಕ್ಷಕ ಬೋಧನೆ | • ಚರ್ಚೆಗಳು |
| • ಯೋಜನೆ | • ವಿಚಾರ ಸಂಕಿರಣ |
| • ಮಕ್ಕಳ ಆರೋಗ್ಯ ಕಲಿಕಾ ಸಾಧನೆ | • ಸಾಂಸ್ಕೃತಿಕ ಚಟುವಟಿಕೆಗಳು |

## ಶೈಕ್ಷಣಿಕ ಮೇಲ್ವಿಚಾರಣೆಯ ಸ್ವರೂಪ

ಮೇಲ್ವಿಚಾರಣೆಯ ಸ್ವಭಾವ ಹಾಗೂ ಅವಶ್ಯಕತೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

1. **ಬೋಧನೆಯನ್ನು ಉತ್ತಮಗೊಳಿಸಲು ಮೇಲ್ವಿಚಾರಣೆ:** ಫ್ರೆಡ್ ಅಯರ್ ಅವರ ಪ್ರಕಾರ ಬೋಧನೆಯನ್ನು ಉತ್ತಮಪಡಿಸುವುದು ಮೇಲ್ವಿಚಾರಣೆಯ ಕಾರ್ಯವಾಗಿದೆ. ಬೋಧನೆ ಕಲಿಕೆಯನ್ನು ಉತ್ತಮಪಡಿಸುತ್ತದೆ. ಶಾಲೆಯ ಪ್ರಮುಖ ಕರ್ತವ್ಯ ಮಕ್ಕಳಿಗೆ ಕಲಿಕಾ ಅನುಭವಗಳನ್ನು ಒದಗಿಸುವುದಾಗಿದೆ. ಈ ಕಲಿಕಾ ಅನುಭವಗಳ ಸ್ವರೂಪ ಮತ್ತು ಗುಣಮಟ್ಟವನ್ನು ನಿರ್ಧರಿಸುವುದು ಮೇಲ್ವಿಚಾರಣೆ ಮತ್ತು ಮೇಲ್ವಿಚಾರಕರ ಕರ್ತವ್ಯವಾಗಿದೆ.

2. **ವೃತ್ತಿ ನಾಯಕತ್ವವನ್ನು ಉತ್ತೇಜಿಸುವುದು:** ವೃತ್ತಿ ನಾಯಕತ್ವವನ್ನು ಉತ್ತೇಜಿಸುವುದು ಮೇಲ್ವಿಚಾರಣೆಯ ಮತ್ತೊಂದು ಗುರಿಯಾಗಿದೆ. ವೃತ್ತಿ ನಾಯಕತ್ವವನ್ನು ಉತ್ತೇಜಿಸುವ ಮೂಲಕ ಅಧ್ಯಾಪಕರಲ್ಲಿ ತೃಪ್ತಿಯನ್ನು ಉಂಟುಮಾಡಬಹುದು.

3. **ಪ್ರೋತ್ಸಾಹ ನೀಡಲು ಮೇಲ್ವಿಚಾರಣೆ:** ತನಿಖಾಧಿಕಾರಿಯ ಪ್ರಮುಖ ಕರ್ತವ್ಯ ಶಾಲೆಗಳನ್ನು ತನಿಖೆ ಮಾಡುವುದಾಗಿದೆ. ತನಿಖಾಧಿಕಾರಿಯು ತನ್ನ ಜ್ಞಾನ ಮತ್ತು ಅನುಭವದ ಆಧಾರದ ಮೇಲೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಬೇಕು. ಇದರಿಂದ ಶಿಕ್ಷಕರಲ್ಲಿ ತಿಳುವಳಿಕೆ ಮೂಡುತ್ತದೆ. ಶಿಕ್ಷಕರನ್ನು ಹೊಗಳಲು ಅಥವಾ ತೆಗಳಲು ತನಿಖಾಧಿಕಾರಿ ಸಂಕೋಚ ಪಡಬಾರದು. ಆದರೆ ತನಿಖಾಧಿಕಾರಿ ಮಾಡುವ ವಿಮರ್ಶೆ ಶಿಕ್ಷಕರಿಗೆ ಪ್ರೋತ್ಸಾಹ ನೀಡುವಂತಿರಬೇಕು.

4. **ಉದ್ದೀಪಕವಾಗಿ ಮೇಲ್ವಿಚಾರಣೆ:** ಶಿಕ್ಷಕರಲ್ಲಿ ಸಮನ್ವಯತೆ ಸಾಧಿಸುವುದು, ಶಿಕ್ಷಕರ ಬೆಳವಣಿಗೆಯನ್ನು ಉದ್ದೀಪಿಸುವುದು ಮತ್ತು ನಿರ್ದೇಶಿಸುವುದು ಮೇಲ್ವಿಚಾರಣೆಯ ಕಾರ್ಯವಾಗಿದೆ. ಹಾಗೆಯೇ ಪ್ರತಿಯೊಬ್ಬ ವಿದ್ಯಾರ್ಥಿಯ ಬೆಳವಣಿಗೆಯನ್ನು ಉದ್ದೀಪಿಸಿ ನಿರ್ದೇಶನ ನೀಡಲಾಗುವುದು.

5. **ಶೈಕ್ಷಣಿಕ ಉನ್ನತೀಕರಣ ಮತ್ತು ಪ್ರಗತಿಗೆ ಮೇಲ್ವಿಚಾರಣೆ:** ಆಧುನಿಕ ಶಾಲಾ ತನಿಖಾಧಿಕಾರಿಯು ಗುಂಪುಗಳನ್ನು ಅರ್ಥೈಸಿಕೊಂಡು, ಸಮನ್ವಯತೆಯಿಂದ ಕೆಲಸ ಮಾಡಿ ಶೈಕ್ಷಣಿಕ ಉನ್ನತೀಕರಣ ಮತ್ತು ಪ್ರಗತಿಗೆ ಕಾರಣನಾಗುತ್ತಾನೆ.

6. **ಸೇವೆಯಾಗಿ ಮಾರ್ಗದರ್ಶನ:** ಮೇಲ್ವಿಚಾರಣೆಯನ್ನು ಒಂದು ಸೇವೆಯನ್ನಾಗಿ ಪರಿಗಣಿಸಬಹುದು. ಇದು ಶಿಕ್ಷಕರನ್ನು, ಸಮುದಾಯವನ್ನು, ಶೈಕ್ಷಣಿಕ ನೀತಿಗಳನ್ನು ಮತ್ತು ಆಧುನಿಕ ವಿಚಾರಗಳು ಮತ್ತು ವಿಧಾನಗಳನ್ನು ಅರ್ಥೈಸಲು ನೆರವಾಗುತ್ತದೆ.

7. **ಸಹಭಾಗಿತ್ವದ ಚಟುವಟಿಕೆಯಾಗಿ ಮೇಲ್ವಿಚಾರಣೆ:** ಮೇಲ್ವಿಚಾರಣೆಯು ಒಂದು ಸಹಭಾಗಿತ್ವದ ಚಟುವಟಿಕೆಯಾಗಿದ್ದು, ಇದರಲ್ಲಿ ಮೇಲ್ವಿಚಾರಕ ಮತ್ತು ಶಿಕ್ಷಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಪರಸ್ಪರ ಸಮಸ್ಯೆಗಳ ಅರಿವು ಇರಬೇಕು.

8. **ಶಿಕ್ಷಕರನ್ನು ವಿಮೋಚನೆಗೊಳಿಸುವ ಪ್ರಕ್ರಿಯೆಯಾಗಿ ಮೇಲ್ವಿಚಾರಣೆ:** ಶಿಕ್ಷಕರನ್ನು ನಿರ್ದಿಷ್ಟ ಕ್ರಮಗಳಿಂದ ಮುಕ್ತಗೊಳಿಸುವುದು. ಶಿಕ್ಷಕರಲ್ಲಿ ಸ್ವಾವಲಂಬನೆ ಉಂಟುಮಾಡುವುದು ಮತ್ತು ಅವರ ಕೆಲಸದಲ್ಲಿ ಆಸಕ್ತಿ ಮೂಡಿಸುವುದು ಮೇಲ್ವಿಚಾರಣೆಯ ಉದ್ದೇಶವಾಗಿದೆ.

9. **ಸಂಶೋಧನಾ ಪ್ರಕ್ರಿಯೆಯಾಗಿ ಮೇಲ್ವಿಚಾರಣೆ:** ಶೈಕ್ಷಣಿಕ ಸಿದ್ಧಾಂತ ಮತ್ತು ಆಚರಣೆಯಲ್ಲಿ ಶೀಘ್ರಗತಿಯಲ್ಲಿ ಬದಲಾವಣೆಗಳು ಉಂಟಾಗುತ್ತಿವೆ. ಈ ಬದಲಾವಣೆಗಳಿಗೆ ಹೊಂದಿಕೊಳ್ಳಲು ನೆರವಾಗಲು ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸುವುದು ಅವಶ್ಯಕ. ಈ ನಿಟ್ಟಿನಲ್ಲಿ ಕ್ರಿಯಾ ಸಂಶೋಧನೆ ಹೆಚ್ಚು ಉಪಯುಕ್ತವಾಗಿದೆ. ಶೈಕ್ಷಣಿಕ ಮೇಲ್ವಿಚಾರಕ ಶೈಕ್ಷಣಿಕ ಸಂಶೋಧನ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿನ ಜ್ಞಾನ ಮತ್ತು ಕೌಶಲ್ಯ ಹೊಂದಿರುವುದು ಅವಶ್ಯಕ. ಇದರಿಂದ ಶಿಕ್ಷಕರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಯೋಗಗಳನ್ನು ಕೈಗೊಳ್ಳಲು ನೆರವಾಗಲು ಸಾಧ್ಯವಾಗುತ್ತದೆ.

## ಮೇಲ್ವಿಚಾರಣೆಯ ಪ್ರಮುಖ ಲಕ್ಷಣಗಳು

1. ಇದು ಪ್ರಜಾಸತ್ತಾತ್ಮಕವಾಗಿರಬೇಕು.
2. ಯಾವುದೇ ರೀತಿಯ ಆಡಳಿತ ದರ್ಪ ಹಾಗೂ ದಬ್ಬಾಳಿಕೆಯಿಂದ ಕೂಡಿರಬಾರದು.
3. ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗಬೇಕು.
4. ನಿಷ್ಪಕ್ಷಪಾತವಾಗಿರಬೇಕು.
5. ವೈಜ್ಞಾನಿಕ ವಿವೇಚನೆಯಿಂದ ಕೂಡಿರಬೇಕು.
6. ಉತ್ತಮ ಸ್ನೇಹಮಯ ವಾತಾವರಣ ನಿರ್ಮಿಸಬೇಕು.
7. ಸೇವಾವಧಿ ತರಬೇತಿಯನ್ನು ವ್ಯವಸ್ಥೆಗೊಳಿಸಬೇಕು.
8. ರಚನಾತ್ಮಕವಾಗಿಯೂ ಹಾಗೂ ವಿಮರ್ಶಾತ್ಮಕವಾಗಿಯೂ ಆಗಿರಬೇಕು.
9. ಶಿಕ್ಷಣದ ಒಂದು ಅವಿಭಾಜ್ಯ ಭಾಗವಾಗಿರಬೇಕು.

## ಶೈಕ್ಷಣಿಕ ಮೇಲ್ವಿಚಾರಣೆಯ ಅಗತ್ಯತೆ

ಮೇಲ್ವಿಚಾರಣೆ ಮತ್ತು ತನಿಖೆಗಳು ಶಿಕ್ಷಣದ ಅವಿಭಾಜ್ಯ ಅಂಗಗಳಾಗಿದ್ದು ಶೈಕ್ಷಣಿಕ ಗುರಿ, ಉದ್ದೇಶಗಳನ್ನು ಸಾಧಿಸಲು ಹಾಗೂ


Digitised by Bharatavani, CIIL

ಶಾಲಾ ಸಮಸ್ಯೆಗಳನ್ನು ನಿವಾರಿಸಲು ಅಗತ್ಯವಾಗಿವೆ. ಮೇಲ್ವಿಚಾರಣೆಯು ಈ ಕೆಳಕಂಡ ಅಂಶಗಳಿಂದ ತನ್ನದೇ ಆದ ಅಗತ್ಯತೆಯನ್ನು ಹೊಂದಿದೆ.

1. ಉತ್ತಮ ಬೋಧನೆಗೆ ಅವಕಾಶ ಕಲ್ಪಿಸಿಕೊಡಲು
2. ಶಾಲೆಯ ಸಮಸ್ಯೆಗಳನ್ನು ನಿವಾರಿಸಲು
3. ಶಾಲಾ ಚಟುವಟಿಕೆಗಳನ್ನು ಸಂಘಟಿಸಲು
4. ದಾಖಲೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲು
5. ಸೂಕ್ತ ಮಾರ್ಗದರ್ಶನ ನೀಡಲು
6. ಶಿಕ್ಷಣ ಸಂಸ್ಥೆಗೆ ಪ್ರೋತ್ಸಾಹ ನೀಡಲು
7. ಸೇವಾ ನಿರತ ತರಬೇತಿ ನೀಡಲು
8. ಶೈಕ್ಷಣಿಕ ಸಂಸ್ಥೆಗಳಿಗೆ ಪ್ರಜಾಪ್ರಭುತ್ವ ನಾಯಕತ್ವ ಒದಗಿಸಲು
9. ವೃತ್ತಿ ಬೆಳವಣಿಗೆಗೆ ಪ್ರೇರಕವಾಗಲು
10. ಶಾಲಾ ವಾತಾವರಣವನ್ನು ಉತ್ತಮವಾಗಿಸಲು ಮೇಲ್ವಿಚಾರಣೆ ಅಗತ್ಯವಾಗಿದೆ.

## ಶೈಕ್ಷಣಿಕ ಮೇಲ್ವಿಚಾರಣೆಯ ವ್ಯಾಪ್ತಿ

ಮೇಲ್ವಿಚಾರಣೆಯು ಪ್ರಜಾ ಪ್ರಭುತ್ವದ ತತ್ವಗಳಾಧಾರವಾಗಿ ಕಾರ್ಯ ನಿರ್ವಹಿಸಿ ಎಲ್ಲಾ ಅಂಶಗಳೊಂದಿಗೆ ನಿಕಟ ಸಂಪರ್ಕ ಹೊಂದಿದೆ. ಆಡಮ್ಸ್ ಮತ್ತು ಡಿಕಿ ರವರು ವ್ಯಾಖ್ಯಾನಿಸಿರುವಂತೆ ಮೇಲ್ವಿಚಾರಣೆಯು ಸಂಸ್ಥೆಗಳ ಕಾರ್ಯಕ್ರಮಗಳ ಸುಧಾರಣೆಯ ಯೋಜನೆಯಾಗಿದೆ.

ಮೇಲ್ವಿಚಾರಣೆಯು ಬಹುಮುಖವಾದ ಕಾರ್ಯತಂತ್ರವಾಗಿದ್ದು ಇದರ ಕಾರ್ಯಕ್ಷೇತ್ರ, ವ್ಯಾಪ್ತಿ ವಿಶಾಲವಾಗಿದೆ. ಶಿಕ್ಷಣದ ಯಾವ ಯಾವ ಹಂತಗಳಲ್ಲಿ ಹೇಗೆ ವಿಸ್ತಾರಗೊಂಡಿದೆ ಎಂಬುದನ್ನು ಕೆಳಕಂಡ ಕಾರ್ಯಗಳ ಮೂಲಕ ಗುರ್ತಿಸಬಹುದಾಗಿದೆ.

1. ಶಿಕ್ಷಕರ ಬೋಧನಾ ಕಾರ್ಯದಲ್ಲಿ ನ್ಯೂನತೆಗಳನ್ನು ಗುರ್ತಿಸಿ ಸೂಕ್ತ ಸೂಚನೆ ನೀಡುವುದು.
2. ಶಾಲೆಯ ಮೂಲಭೂತ ಸೌಕರ್ಯಗಳನ್ನು ಪರೀಕ್ಷಿಸುವುದು.
3. ಶಾಲೆಯಲ್ಲಿ ಹಮ್ಮಿಕೊಳ್ಳುವ ಸಮಗ್ರ ಪಠ್ಯ, ಪಠ್ಯೇತರ ಚಟುವಟಿಕೆಗಳನ್ನು ಪರಿಶೀಲಿಸುವುದು.
4. ಶಾಲೆಯ ಸಮಗ್ರ ದಾಖಲೆಗಳ ಮೇಲ್ವಿಚಾರಣೆ.
5. ವಿದ್ಯಾರ್ಥಿಗಳ ಪ್ರಗತಿಯ ಮೇಲ್ವಿಚಾರಣೆ.
6. ಶಾಲೆ, ಶಿಕ್ಷಕ, ವಿದ್ಯಾರ್ಥಿ, ಪೋಷಕರು, ಸಮುದಾಯದ ಸಂಬಂಧಗಳ ಮೇಲ್ವಿಚಾರಣೆ.
7. ಶಾಲಾ ಮುಖ್ಯಸ್ಥರ ಕಾರ್ಯ ಮೇಲ್ವಿಚಾರಣೆ.
8. ವಿಭಿನ್ನ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಪರಿಶೀಲನೆ.
9. ಪ್ರತಿಭಾನ್ವಿತ ವಿದ್ಯಾರ್ಥಿಗಳ ಸೌಲಭ್ಯಗಳ ಪರಿಶೀಲನೆ.
10. ಮಧ್ಯಾಹ್ನ ಉಪಹಾರ, ಪ್ರವಾಸ, ಕೈತೋಟ, ಆಟೋಟ ಇತ್ಯಾದಿಗಳ ಮೇಲ್ವಿಚಾರಣೆ.

## ಶೈಕ್ಷಣಿಕ ಮೇಲ್ವಿಚಾರಣೆಯ ಕರ್ತವ್ಯಗಳು

1. **ಯೋಜಿಸುವುದು ಮತ್ತು ಸಂಘಟಿಸುವುದು:** ಕೆಲಸವನ್ನು ಯೋಜಿಸುವುದು ಮತ್ತು ಸಂಘಟಿಸುವುದು ಮೇಲ್ವಿಚಾರಕನ ಪ್ರಮುಖ ಕಾರ್ಯವಾಗಿದೆ. ಪ್ರತಿಯೊಬ್ಬ ಮೇಲ್ವಿಚಾರಕನು ತನ್ನ ಸಂಸ್ಥೆಯ ಕೆಲಸವನ್ನು ಯೋಜಿಸಬೇಕು. ವಾರದ ಕೆಲಸದ ವೇಳಾಪಟ್ಟಿಯನ್ನು ತಯಾರಿಸುವುದು, ಆದ್ಯತೆಗಳನ್ನು ಗುರುತಿಸುವುದು, ಉಳಿದಿರುವ ಕೆಲಸಗಳನ್ನು ಪಟ್ಟಿ ಮಾಡುವುದು ಮತ್ತು ಮುಂದೆ ಅಗತ್ಯವಿರುವ ಸೇವೆಗಳನ್ನು ನಿರೀಕ್ಷಿಸುವುದು ಮುಂತಾದವುಗಳನ್ನು ಇದು ಒಳಗೊಂಡಿದೆ.
2. **ದಾಖಲೆಗಳನ್ನು ನಿರ್ವಹಣೆ ಮಾಡುವುದು:** ಮೇಲ್ವಿಚಾರಕನು ಸಂಸ್ಥೆಯ ಅನೇಕ ದಾಖಲೆಯನ್ನು ನಿರ್ವಹಣೆ ಮಾಡಬೇಕಾದುದು ಅವಶ್ಯಕ.
3. **ಕೆಲಸವನ್ನು ಜಾರಿಗೊಳಿಸುವುದು:** ದಾಖಲೆಗಳನ್ನು ಯೋಜಿಸಿ ನಿರ್ವಹಣೆ ಮಾಡಿದರಷ್ಟೇ ಸಾಲದು, ಆಯಾ ದಿನದ ಕೆಲಸವನ್ನು ಜಾರಿಗೊಳಿಸಿ ಉತ್ತಮ ಫಲಿತಾಂಶ ಉಂಟು ಮಾಡುವುದು ಅಗತ್ಯ.
4. **ಗುಣಮಟ್ಟವನ್ನು ಕಾಪಾಡುವುದು:** ಕೆಲಸದ ಪ್ರತಿಯೊಂದು ಹಂತದಲ್ಲೂ ಗುಣಮಟ್ಟವನ್ನು ಕಾಪಾಡುವುದು ಅಗತ್ಯ. ಅಗತ್ಯವಿದ್ದಲ್ಲಿ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕು.
5. **ನಿಯಂತ್ರಿಸುವುದು:** ಮಾನವ ಮತ್ತು ಭೌತಿಕ ಸಂಪನ್ಮೂಲಗಳನ್ನು ನಿಯಂತ್ರಿಸುವುದು ಅಗತ್ಯ. ಇದರಿಂದಾಗಿ ಅಪವ್ಯಯವನ್ನು ತಡೆಯಬಹುದು.
6. **ಕಾರ್ಯನಿರ್ವಹಣಾ ಸ್ಥಿತಿಗತಿಗಳು ಮತ್ತು ಭದ್ರತೆಯನ್ನು ನೋಡಿಕೊಳ್ಳುವುದು:** ಸಂಸ್ಥೆಯ ಭದ್ರತೆಯನ್ನು ಕಾಪಾಡುವುದು, ಸಂಸ್ಥೆಯ ಏಕತೆ ಮತ್ತು ಸಮಗ್ರತೆ ಕಾಪಾಡುವುದು ಮೇಲ್ವಿಚಾರಕನ ಆದ್ಯ ಕರ್ತವ್ಯವಾಗಿದೆ.

## ಶೈಕ್ಷಣಿಕ ಮೇಲ್ವಿಚಾರಣೆಯ ಕ್ರಮಗಳು

ಉತ್ತಮ, ಸಮರ್ಥ, ದಕ್ಷ ಮೇಲ್ವಿಚಾರಣಾಧಿಕಾರಿಯು ತನ್ನ ಮೇಲ್ವಿಚಾರಣೆಯನ್ನು ಕೇವಲ ವರ್ಗಕೋಣೆಯ ಬೋಧನೆಗೆ ಮಾತ್ರ ಸೀಮಿತಗೊಳಿಸುವುದಿಲ್ಲ. ಅಲ್ಲದೆ ಕೇವಲ ಶಿಕ್ಷಕರನ್ನು ಸಂದರ್ಶಿಸುವುದಕ್ಕೆ ಮಾತ್ರ ಮಿತಿಗೊಳಿಸುವುದಿಲ್ಲ, ಅವನು ಶಿಕ್ಷಕರಿಗೆ ಸಹಾಯವನ್ನು ಒದಗಿಸುತ್ತಾನೆ. ಈ ಕೆಳಗಿನ ವಿಧಾನಗಳಿಂದ ಮೇಲ್ವಿಚಾರಣೆಯನ್ನು ಕೈಗೊಳ್ಳಬಹುದಾಗಿದೆ.

1. **ಮಾರ್ಗದರ್ಶನ:** ಶೈಕ್ಷಣಿಕ ಮೇಲ್ವಿಚಾರಣಾ ಅಧಿಕಾರಿಯು ವೈಯಕ್ತಿಕ ಹಾಗೂ ಶಿಕ್ಷಕರ ಸಮೂಹಕ್ಕೆ ಕಲಿಕೆಯ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಾಗಿ ಯೋಜನೆಗಳನ್ನು ಹಾಕಿಕೊಳ್ಳಲು ಮತ್ತು ವರ್ಗ ಕೋಣೆಯಲ್ಲಿ ಆ ಕಾರ್ಯಗಳನ್ನು ಕೈಗೊಳ್ಳಲು ಸಹಾಯ ಮಾಡುವುದಾಗಿದೆ. ಅವುಗಳೆಂದರೆ, ಕಾರ್ಯಕ್ರಮಗಳನ್ನು ಯೋಜಿಸುವುದು, ಪರೀಕ್ಷಣಗಳನ್ನು ತಯಾರಿಸುವುದು ಮತ್ತು ಯೋಜನೆ ಕಾರ್ಯಕ್ರಮಗಳನ್ನು ಪರೀಕ್ಷಿಸುವುದು, ಪರೀಕ್ಷಣದ ಫಲಿತಾಂಶಗಳನ್ನು ವಿಶ್ಲೇಷಿಸುವುದು, ನೈದಾನಿಕ ಮತ್ತು ಪರಿಹಾರೋಪಾಯದ ವಿಧಾನಗಳನ್ನು ಯೋಜಿಸುವುದು, ಹೆಚ್ಚುವರಿ ಮತ್ತು ಪುರವಣಿ ಸಾಮಗ್ರಿಗಳನ್ನು ಸಂಗ್ರಹಿಸುವುದು, ದೃಕ್–ಶ್ರವಣೋಪಕರಣಗಳ ಉಪಯೋಗಕ್ಕಾಗಿ ವಿಶೇಷ ಯೋಜನೆಗಳನ್ನು ಕೈಗೊಳ್ಳುವುದು ಮತ್ತು ವರ್ಗಕೋಣೆಯ ಬೋಧನೆಯನ್ನು ಶ್ರೀಮಂತಗೊಳಿಸಲು ಸಮುದಾಯದ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವುದು.
2. **ವರ್ಗಕೋಣೆಗಳಿಗೆ ಮತ್ತು ಶಾಲೆಗೆ ಸಂದರ್ಶನವನ್ನೀಯುವುದು:** ಸಂದರ್ಶನದ ವಿಧಾನಗಳು ಮತ್ತು ತಂತ್ರಗಳು ಹೀಗಿವೆ; ಪ್ರಾತ್ಯಕ್ಷಿಕಾ

Digitised by Bharatavani, CIIL

ಪಾಠಗಳನ್ನು ಬೋಧಿಸುವುದು, ನೈದಾನಿಕ ಉದ್ದೇಶಗಳಿಗಾಗಿ ವಿಶೇಷ ಉಪಕರಣಗಳೊಂದಿಗೆ ಶಿಕ್ಷಕರ ಪ್ರಭಾವವನ್ನು ದರ್ಜಾಮಾಪನ ಗೊಳಿಸುವುದು ಅಥವಾ ಬೆಲೆ ಕಟ್ಟುವುದು, ಸುಧಾರಣೆಗಾಗಿ ಅವಕಾಶಗಳನ್ನು ಕಂಡುಕೊಳ್ಳಲು ಶಿಕ್ಷಕರ ಕಾರ್ಯವನ್ನು ವೀಕ್ಷಿಸುವುದು ಅಥವಾ ಅವಲೋಕಿಸುವುದು.

3. **ಶಿಕ್ಷಕರೊಂದಿಗೆ ಭೇಟಿ ಮತ್ತು ಸಮಾಲೋಚನೆ:** ಶಿಕ್ಷಕರೊಂದಿಗೆ ವೈಯಕ್ತಿಕ ಸಮಾಲೋಚನೆಯನ್ನು ನೆರವೇರಿಸುವುದು. ಈ ರೀತಿಯ ಸಮಾಲೋಚನೆಯು ಸಾಮಾನ್ಯವಾಗಿ ಆ ಶಿಕ್ಷಕರ ವರ್ಗಕೋಣೆಗೆ ಭೇಟಿಯನ್ನು ಕೊಟ್ಟು ನಂತರ ನಡೆಸಬಹುದಾಗಿದೆ. ಇದು ಶಿಕ್ಷಕರ ದುರ್ಬಲ ಮತ್ತು ಉತ್ತಮ ಅಂಶಗಳ ವಿಮರ್ಶೆಯಾಗಿದೆ. ಹೆಚ್ಚಿನ ಸುಧಾರಣೆಗಾಗಿ ಮತ್ತು ಅಭಿವೃದ್ಧಿಗಾಗಿ ಅವಕಾಶಗಳನ್ನು ಮತ್ತು ವ್ಯಾಪ್ತಿಗಳನ್ನು ಕಂಡುಕೊಳ್ಳುವುದಾಗಿದೆ.

4. **ಶಿಕ್ಷಕ ಸಮೂಹದೊಂದಿಗೆ ಸಮಾಲೋಚನೆಯನ್ನು ನಡೆಸುವುದು:** ಈ ರೀತಿಯ ಸಮಾಲೋಚನೆಯು ಸಾಮಾನ್ಯವಾಗಿ ಬೋಧನೆಯ ಬೃಹತ್ ಸಮಸ್ಯೆಗಳನ್ನು ಚರ್ಚಿಸುವುದಾಗಿದೆ. ಸಾಮಾನ್ಯ ಅಭಿರುಚಿಯ ಅಂಶಗಳನ್ನು ಕೆಲವು ತೊಂದರೆಗಳನ್ನು, ಕೆಲವು ನೀತಿಗಳನ್ನು ಇಲ್ಲಿ ಚರ್ಚಿಸಲಾಗುವುದು ಹಾಗೂ ಸಲಹೆಗಳನ್ನು ಕೊಡಲಾಗುವುದು. ಶಾಲೆಯ ಕಾರ್ಯಕ್ರಮಗಳನ್ನು ಸುಧಾರಿಸುವುದಕ್ಕಾಗಿ ಕೆಲವು ಉತ್ತಮ ಸಲಹೆಗಳನ್ನು ಅಂಗೀಕರಿಸಲಾಗುವುದು. ಕಾರ್ಯದಲ್ಲಿ ಐಕ್ಯತೆಯನ್ನು ಸಾಧಿಸುವುದೇ ಈ ಸಮಾಲೋಚನೆಯ ಗುರಿಯಾಗಿದೆ.

ಶಿಕ್ಷಣದ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಣವನ್ನು ಹೂಡುತ್ತಿವೆ. ಈ ಹಣದ ಉಪಯೋಗವು ಸಫಲವಾಗುತ್ತಿದೆಯೋ ಅಥವಾ ವಿಫಲವಾಗುತ್ತಿದೆಯೋ ಎಂಬುದನ್ನು ತಿಳಿದುಕೊಳ್ಳುವುದು ಅವುಗಳ ಕಾರ್ಯವಾಗಿದೆ. ಈ ತಿಳಿದುಕೊಳ್ಳುವಿಕೆಯು ಮೇಲ್ವಿಚಾರಣೆಯಿಂದ ಮಾತ್ರ ಸಾಧ್ಯ. ಆದ್ದರಿಂದ ಶೈಕ್ಷಣಿಕ ರಂಗದಲ್ಲಿ ಮೇಲ್ವಿಚಾರಣೆಯು ಪ್ರಮುಖ ಪಾತ್ರವಹಿಸುತ್ತದೆ. ಕ್ರಿಯಾತ್ಮಕ ಮೇಲ್ವಿಚಾರಣೆಯ ವ್ಯವಸ್ಥೆಯನ್ನು ಭದ್ರ ಶೈಕ್ಷಣಿಕ ವ್ಯವಸ್ಥೆಯ ಮೈಲುಗಲ್ಲುಗಳ ಅಥವಾ ಬಹಳ ಪ್ರಮುಖವಾದ ವಿಷಯವಾಗಿವೆ. ಎಲ್ಲ ವ್ಯವಸ್ಥೆಗಳಲ್ಲಿ ಬದಲಾವಣೆಗಳನ್ನು ಪರಿಚಯಿಸಬೇಕಾದರೆ ಶಾಲೆಯ ಆಡಳಿತಾತ್ಮಕ ಶ್ರೇಣಿಯಲ್ಲಿ ಮೇಲ್ವಿಚಾರಣೆಯು ಮೇಲಿನಿಂದ ಕೆಳವರ್ಗಕ್ಕೆ ಸೇರಿಕೊಳ್ಳುತ್ತದೆ. ಈ ದಿಸೆಯಲ್ಲಿ ಮೇಲ್ವಿಚಾರಕರು ಅತ್ಯಂತ ಮಹತ್ವದ ಕೊಂಡಿಯಂತೆ ಕಾರ್ಯನಿರ್ವಹಿಸುವರು.

– ಆರ್.ಆರ್. ಮ

## ಶೈಕ್ಷಣಿಕ ಯೋಜನೆ

ಯೋಜನೆಯು ಎಲ್ಲ ಶೈಕ್ಷಣಿಕ ನಿರ್ವಹಣಾ ಕಾರ್ಯಗಳಲ್ಲಿ ಅತ್ಯಂತ ಮೂಲ ಕಾರ್ಯವಾಗಿದೆ. ಯೋಜನೆಯ ಮೂಲಕ ಮಾತ್ರವೇ ಏನು, ಹೇಗೆ, ಯಾವಾಗ, ಏಕೆ ಯಾವುದಾದರೂ ಒಂದು ನಿರ್ದಿಷ್ಟ ಕಾರ್ಯ ಮಾಡಬೇಕು ಎಂದು ನಿರ್ಧರಿಸಲಾಗುತ್ತದೆ. ಯೋಜನೆಯು ಒಂದು ಚಟುವಟಿಕೆಯಲ್ಲ, ಅದೊಂದು ಪ್ರಕ್ರಿಯೆಯಾಗಿದ್ದು, ಹಲವು ಪರ್ಯಾಯಗಳಲ್ಲಿ ಆಯ್ಕೆ ಮಾಡುವುದನ್ನು ಒಳಗೊಂಡಿರುತ್ತದೆ. ಶಿಕ್ಷಣ ಕ್ಷೇತ್ರದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸುಧಾರಣೆಯ ಎಲ್ಲ ಕಾರ್ಯಕ್ರಮಗಳಿಗೆ ಇದು ಆಧಾರವಾಗಿದೆ.

ವೆಬ್‌ಸ್ಟರ್ ಅಂತರರಾಷ್ಟ್ರೀಯ ನಿಘಂಟಿನ ಪ್ರಕಾರ ಯೋಜಿಸುವಿಕೆ ಎಂದರೆ ಯೋಜನೆಗಳನ್ನು ರೂಪಿಸುವ ಒಂದು ಕ್ರಿಯೆ ಅಥವಾ ಪ್ರಕ್ರಿಯೆಯಾಗಿದೆ. ಶೈಕ್ಷಣಿಕ ಯೋಜನೆಯು ಗುರುತಿಸಲ್ಪಟ್ಟ ಸೂಕ್ತ ಉದ್ದೇಶಗಳನ್ನು ಸಾಧಿಸಲು ಶಿಕ್ಷಣ ವ್ಯವಸ್ಥೆಯಲ್ಲಿ ತರಬೇಕಾದ ಉದ್ದೇಶಿತ ಪ್ರಯತ್ನಗಳನ್ನು ಸೂಚಿಸುತ್ತದೆ.

ಶೈಕ್ಷಣಿಕ ಯೋಜನೆಯು ಶಿಕ್ಷಣಕ್ಕೆ ಸಂಬಂಧಿಸಿದಂತೆ ಭವಿಷ್ಯದ ಕ್ರಿಯೆಗಳ ಕುರಿತು ನಿರ್ಣಯಗಳನ್ನು ಸಿದ್ಧಪಡಿಸುವ ಪ್ರಕ್ರಿಯೆಯಾಗಿದೆ. ಶೈಕ್ಷಣಿಕ ಯೋಜನೆಯನ್ನು ಶೈಕ್ಷಣಿಕ ಸಂಘಟನೆಗಾಗಿ ಸೂಕ್ತವಾದ ಗುರಿ ಮತ್ತು ಉದ್ದೇಶಗಳನ್ನು ರೂಪಿಸುವ ಒಂದು ಸಾಧನವೆಂದೂ ಗ್ರಹಿಸಬಹುದಾಗಿದೆ. ಅಲ್ಲದೆ ಇದೊಂದು ಕಾರ್ಯನಿರ್ವಹಣೆಯನ್ನು ಉತ್ತಮಪಡಿಸುವ ಕ್ರಿಯೆಯಾಗಿದೆ.

ಶೈಕ್ಷಣಿಕ ಯೋಜನೆಯನ್ನು ಸಂಘಟನೆಯಲ್ಲಿನ ಬದಲಾವಣೆಗಳನ್ನು ನಿರ್ವಹಿಸುವಿಕೆಯಾಗಿಯೂ ಗುರುತಿಸಬಹುದಾಗಿದೆ. MBO, PERT (Program Evaluation Review Technique)ಗಳಂತಹ ತಂತ್ರಗಳನ್ನು ಶೈಕ್ಷಣಿಕ ಯೋಜನಾ ಪ್ರಕ್ರಿಯೆಯ ಭಾಗವಾಗಿ ಪರಿಗಣಿಸಬಹುದಾಗಿದೆ.

ಶೈಕ್ಷಣಿಕ ಯೋಜನೆಯು ಶೈಕ್ಷಣಿಕ ವ್ಯವಸ್ಥೆಯಲ್ಲಿನ ಭವಿಷ್ಯತ್ತಿನ ಕಾರ್ಯಸೂಚಿಯನ್ನು ನಿರ್ಧರಿಸುತ್ತದೆ. ಶಿಕ್ಷಣದಲ್ಲಿ ಎದುರಾಗಬಹುದಾದ ಅನಿಶ್ಚಿತತೆ ಮತ್ತು ಆತಂಕದ ಸ್ಥಿತಿಯನ್ನು ಕಡಿಮೆ ಮಾಡುತ್ತದೆ. ಶಿಕ್ಷಣದ ಉದ್ದೇಶಗಳೆಡೆಗೆ ಗಮನ ಕೇಂದ್ರೀಕರಿಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಸಮನ್ವಯ ಸಾಧಿಸುತ್ತದೆ. ಶೈಕ್ಷಣಿಕ ಸಂಘಟನೆಯ ಪರಿಣಾಮಕತೆಯನ್ನು ಹೆಚ್ಚಿಸುತ್ತದೆ.

ಇದರ ಉದ್ದೇಶಗಳೆಂದರೆ ಶಿಕ್ಷಣದ ವಿಶಾಲವಾದ ಗುರಿಗಳೆಡೆಗೆ ಗಮನ ಕೇಂದ್ರೀಕರಿಸಿ ಎಲ್ಲ ಪ್ರಯತ್ನಗಳನ್ನು ಅವುಗಳೆಡೆಗೆ ಕೇಂದ್ರೀಕರಿಸುವುದು, ಶೈಕ್ಷಣಿಕ ಸಂಘಟನೆಯ ಸಂಪೂರ್ಣವಾದ ನಿಯಂತ್ರಣವನ್ನು ಸಾಧಿಸುವುದು, ಶಿಕ್ಷಣ ಕ್ಷೇತ್ರದಲ್ಲಿ ಮುಂದೆ ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ನಿರ್ಧರಿಸುವುದು, ಶಿಕ್ಷಣದ ಗುರಿ ಮತ್ತು ಉದ್ದೇಶಗಳಿಗನುಸಾರವಾಗಿ ಸೂಕ್ತವೆನಿಸುವ ಕ್ರಿಯಾಸೂಚಿಯನ್ನು ನಿರ್ಧರಿಸುವುದು, ಭವಿಷ್ಯತ್ತಿನಲ್ಲಿ ಯಾವುದೇ ತೊಂದರೆ ಎದುರಾಗದಂತೆ ಸೂಕ್ತ ನಿರ್ಣಯಗಳನ್ನು ಮೊದಲೇ ನಿರ್ಧರಿಸುವುದು, ಶೈಕ್ಷಣಿಕ ಸಂಘಟನೆಯ ಎಲ್ಲ ಅಂಗಗಳಲ್ಲಿ ಸಮನ್ವಯವನ್ನು ಸಾಧಿಸುವುದು, ಶೈಕ್ಷಣಿಕ ಸಂಘಟನೆಯ ದಕ್ಷತೆ ಮತ್ತು ಪರಿಣಾಮಕತೆಯನ್ನು ಹೆಚ್ಚಿಸುವುದು, ಶೈಕ್ಷಣಿಕ ಸಂಘಟನೆಯಲ್ಲಿನ ಬದಲಾವಣೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.

ಶೈಕ್ಷಣಿಕ ಯೋಜನೆಯು ಶಿಕ್ಷಣದಲ್ಲಿನ ಪ್ರಮುಖವಾದ ಅಂಶಗಳನ್ನು, ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಇದರಿಂದ ವಿಫಲತೆಯ ಭಯ ದೂರವಾಗುತ್ತದೆ. ಆದ್ದರಿಂದ ಒಂದು ಶೈಕ್ಷಣಿಕ ವ್ಯವಸ್ಥೆಯ ಯಶಸ್ಸಿಗಾಗಿ ಯೋಜನೆ ಅವಶ್ಯಕವಾಗಿದೆ. ಶೈಕ್ಷಣಿಕ ಯೋಜನೆಯು ಲಭ್ಯವಿರುವ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳುವ ಅವಕಾಶ ಒದಗಿಸುತ್ತದೆ. ಅಪವ್ಯಯವನ್ನು ತಡೆಗಟ್ಟುತ್ತದೆ. ಸಮಸ್ಯೆಗಳನ್ನು ಪರಿಹರಿಸುತ್ತದೆ. ಶಿಕ್ಷಣವು ಸಮಾಜದ ಮೌಲ್ಯಗಳು, ಜೀವನ ಶೈಲಿ, ಜ್ಞಾನ ಕೌಶಲ್ಯಗಳನ್ನು ಸಂರಕ್ಷಿಸುವ ಮತ್ತು ಸುಧಾರಿಸುವ ಸಾಧನವಾಗಿದೆ. ಅಲ್ಲದೆ ಶೈಕ್ಷಣಿಕ ಪ್ರಕ್ರಿಯೆಯು ರಾಷ್ಟ್ರದ ಪ್ರತಿಭಾವಂತ ಮಾನವ ಸಂಪನ್ಮೂಲವನ್ನು ಉಪಯೋಗಿಸಿಕೊಳ್ಳುವುದರಿಂದ ಶೈಕ್ಷಣಿಕ ಯೋಜನೆಯ ಅಗತ್ಯವಿದೆ. ಆರ್ಥಿಕತೆ, ಔದ್ಯೋಗಿಕ ಕ್ಷೇತ್ರ, ವಾಣಿಜ್ಯ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ತ್ವರಿತವಾದ ಬದಲಾವಣೆಗಳಾಗುತ್ತವೆ. ಆದ್ದರಿಂದ ಶಿಕ್ಷಣವು


Digitised by Bharatavani, CIIL

ಈ ಬದಲಾವಣೆಗಳಿಗನುಸಾರವಾಗಿ ನಿರಂತರವಾಗಿ ರೂಪುಗೊಳ್ಳಬೇಕಾಗುತ್ತದೆ. ಆದ್ದರಿಂದ ವ್ಯವಸ್ಥಿತವಾದ ಯೋಜನೆಯ ಅಗತ್ಯ ಕಂಡು ಬರುತ್ತದೆ. ಶೈಕ್ಷಣಿಕ ಯೋಜನೆಯು ಜಾಣ್ಮೆಯಿಂದ ಒಂದು ಕ್ರಿಯೆಯನ್ನು ಪ್ರಾರಂಭಿಸಲು, ನಿರ್ಣಯಗಳನ್ನು ಕೈಗೊಳ್ಳಲು ಮತ್ತು ನಿರಂತರವಾಗಿ ಪ್ರಗತಿಯನ್ನು ಪರೀಕ್ಷಿಸಲು ಅಗತ್ಯವಿದೆ. ಶೈಕ್ಷಣಿಕ ಸಂಘಟನೆಯನ್ನು ಬಾಹ್ಯವಾಗಿ ಮತ್ತು ಆಂತರಿಕವಾಗಿ ಮೇಲ್ವಿಚಾರಣೆ ಮಾಡಲು ಇದರ ಅಗತ್ಯವಿದೆ.

ಎಲಿಯಟ್ ಮತ್ತು ಮೌಸರ್‌ರವರ ಪ್ರಕಾರ ಶೈಕ್ಷಣಿಕ ಯೋಜನೆಯ ತತ್ವಗಳು ಕೆಳಗಿನಂತಿವೆ:

ಶೈಕ್ಷಣಿಕ ಯೋಜನೆಯು ರಾಷ್ಟ್ರದ ಸಾಮಾನ್ಯ ಯೋಜನೆಯ ಒಂದು ಅಂಶವಾಗಿರಲೇಬೇಕು, ಸಂಶೋಧನೆಯನ್ನಾಧರಿಸಿರಬೇಕು, ನಿರಂತರ ಪ್ರಕ್ರಿಯೆಯಾಗಿರಬೇಕು, ಲಭ್ಯವಿರುವ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಳ್ಳಬೇಕು, ವಾಸ್ತವವಾಗಿರಬೇಕು ಮತ್ತು ಪ್ರಾಯೋಗಿಕವಾಗಿರಬೇಕು, ನಿರಂತರ ಮೌಲ್ಯಮಾಪನದ ಅವಕಾಶವನ್ನು ಹೊಂದಿರಬೇಕು ಹಾಗೂ ನಮ್ಯತಾ ಗುಣವನ್ನು ಹೊಂದಿರಬೇಕು.

ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವುದು ಅತ್ಯಂತ ಸಂಕೀರ್ಣ ಕಾರ್ಯವಾಗಿದೆ. ಏಕೆಂದರೆ ಶೈಕ್ಷಣಿಕ ಯೋಜನೆಯಲ್ಲಿ ಕೈಗೊಳ್ಳುವ ನಿರ್ಣಯಗಳು ದೂರಗಾಮಿ ಪರಿಣಾಮಗಳನ್ನು ಹೊಂದಿರುತ್ತವೆ. ಆದ್ದರಿಂದ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವಾಗ ನಿರ್ದಿಷ್ಟವಾದ ಅವಶ್ಯಕ ಹಂತಗಳನ್ನು ಅನುಸರಿಸಬೇಕಾಗುತ್ತದೆ. ಅವುಗಳೆಂದರೆ,

ಅ) ಉದ್ದೇಶಗಳನ್ನು ನಿರ್ಧರಿಸುವುದು: ಸ್ಪಷ್ಟವಾದ, ನಿರ್ದಿಷ್ಟವಾದ ಉದ್ದೇಶಗಳನ್ನು ನಿರ್ಧರಿಸಲಾಗುವುದು.

ಆ) ಯೋಜನಾ ಸೂಚಿಯನ್ನು ರಚಿಸುವುದು: ಯೋಜನೆಯು ಮುಂದಾಲೋಚನೆಯ ಪ್ರಕ್ರಿಯೆಯಾಗಿದೆ. ಯೋಜನೆಯು ಭವಿಷ್ಯತ್ತನ್ನು ಊಹಿಸುತ್ತದೆ. ಇಂತಹ ಮುಂದಾಲೋಚನೆಯ ಸಂದರ್ಭದಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳನ್ನು ಉಪಯೋಗಿಸಬೇಕು.

ಇ) ಮಾಹಿತಿಯನ್ನು ಸಂಗ್ರಹಿಸುವುದು, ವಿಂಗಡಿಸುವುದು ಮತ್ತು ಸಂಸ್ಕರಿಸುವುದು: ಕೇವಲ ಸೂಕ್ತವಾದ ಮಾಹಿತಿಯನ್ನು ಮಾತ್ರ ಸ್ವೀಕರಿಸಬೇಕು, ವರ್ಗೀಕರಿಸಬೇಕು, ವಿಶ್ಲೇಷಿಸಬೇಕು ಮತ್ತು ಸಂಸ್ಕರಿಸಬೇಕು.

ಈ) ಪರ್ಯಾಯ ಕ್ರಿಯಾಸೂಚಿಯನ್ನು ನಿರ್ಧರಿಸುವುದು: ಉದ್ದೇಶಗಳನ್ನು ಸಾಧಿಸಲು ಸಾಧ್ಯವಿರುವ ಹಲವು ಕ್ರಿಯಾಸೂಚಿಗಳನ್ನು ನಿರ್ಧರಿಸಬೇಕು.

ಉ) ಪರ್ಯಾಯ ಕ್ರಿಯಾಸೂಚಿಗಳ ಮೌಲ್ಯಮಾಪನ: ಪ್ರತಿಯೊಂದು ಕ್ರಿಯಾಸೂಚಿಯನ್ನು ಪರಸ್ಪರ ಹೋಲಿಸಿ ನೋಡಬೇಕು. ಪ್ರತಿಯೊಂದು ಕಾರ್ಯಸೂಚಿಯ ವೆಚ್ಚ–ಲಾಭ ವಿಶ್ಲೇಷಣೆಯನ್ನು ಮಾಡಲೇಬೇಕು.

ಊ) ಯೋಜನೆಯ ಆಯ್ಕೆ: ಮೌಲ್ಯಮಾಪನದ ನಂತರ ಅವುಗಳಲ್ಲಿ ಅತ್ಯುತ್ತಮವಾದ ಯೋಜನೆಯನ್ನು ಆಯ್ಕೆ ಮಾಡಬೇಕು.

ಎ) ಸಹಾಯಕ ಯೋಜನೆ: ಆಯ್ಕೆ ಮಾಡಿದ ಪ್ರಮುಖ ಯೋಜನೆಯ ಪರಿಣಾಮಕಾರಿ ಅಳವಡಿಕೆಗಾಗಿ ಸಹಾಯಕ ಯೋಜನೆಯನ್ನು ಸಿದ್ಧಪಡಿಸಬೇಕು.

ಏ) ಯೋಜನೆಯ ನಿಯಂತ್ರಣ: ಪ್ರಮುಖ ಯೋಜನೆ ಮತ್ತು ಸಹಾಯಕ ಯೋಜನೆಯನ್ನು ಮೊದಲು ಪರೀಕ್ಷಾರ್ಥವಾಗಿ ಪರೀಕ್ಷಿಸಬೇಕು. ಈ ಸಂದರ್ಭದಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸಬೇಕು. ನಂತರ ಯೋಜನೆಯನ್ನು ಅಳವಡಿಸಬೇಕು.

ಹೀಗೆ ಮೇಲಿನ ಹಂತಗಳನ್ನು ಅನುಸರಿಸಿ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸಲಾಗುವುದು. ನಂತರ ಅದನ್ನು ನೈಜ ಸನ್ನಿವೇಶದಲ್ಲಿ ಅಳವಡಿಸಲಾಗುವುದು. ವ್ಯವಸ್ಥಿತವಾಗಿ ಸಿದ್ಧಪಡಿಸಿದ ಯೋಜನೆಯಿಂದ ಮಾತ್ರ ನಿರ್ಧರಿಸಲಾದ ಉದ್ದೇಶಗಳನ್ನು ಸಾಧಿಸಲು ಸಾಧ್ಯವಿದೆ.

### ಶೈಕ್ಷಣಿಕ ಯೋಜನೆಯ ವಿಧಗಳು

ಶೈಕ್ಷಣಿಕ ಯೋಜನೆಯಲ್ಲಿ ಹಲವು ವಿಧಗಳಿವೆ. ಅವುಗಳೆಂದರೆ:

1) ದೀರ್ಘಾವಧಿಯ ಯೋಜನೆ 2) ಲಘು ಅವಧಿಯ ಯೋಜನೆ 3) ನಿರ್ವಹಣಾ ಯೋಜನೆ 4) ಬೇರುಮಟ್ಟದ ಯೋಜನೆ 5) ಸಾಂಸ್ಥಿಕ ಯೋಜನೆ.

ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವಾಗ ಹಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಒಂದು ಶೈಕ್ಷಣಿಕ ಯೋಜನೆಯನ್ನು ಕೆಳಗಿನಂತೆ ವಿವಿಧ ವಿಧಾನಗಳ ಆಧಾರದ ಮೇಲೆ ರೂಪಿಸಬಹುದಾಗಿದೆ.

ಎ) ಅಂತರ್–ಶೈಕ್ಷಣಿಕ ವಿಧಾನ ಬಿ) ಜನಸಂಖ್ಯಾ ವಿಧಾನ ಸಿ) ಮಾನವ ಸಾಮರ್ಥ್ಯ ವಿಧಾನ ಡಿ) ಸಾಮಾಜಿಕ ಬೇಡಿಕೆ ವಿಧಾನ ಇ) ಉತ್ಪನ್ನದರ ವಿಧಾನ ಎಫ್) ಸಾಮಾಜಿಕ ನ್ಯಾಯ ವಿಧಾನ

ಹೀಗೆ ಶೈಕ್ಷಣಿಕ ಯೋಜನೆಯು ಶಿಕ್ಷಣ ಕ್ಷೇತ್ರದ ಪರಿಣಾಮಕಾರಿ ಪ್ರಗತಿಗೆ ಅತ್ಯವಶ್ಯಕ ಸಾಧನವಾಗಿದ್ದು, ವ್ಯವಸ್ಥಿತವಾಗಿ ರೂಪಿತವಾದ ಯೋಜನೆಯಿಂದ ಮಾತ್ರ ಶೈಕ್ಷಣಿಕ ಗುರಿಗಳನ್ನು ಸಾಧಿಸಲು ಸಾಧ್ಯವಿದೆ. ಶಿಕ್ಷಣ ಕ್ಷೇತ್ರವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಮಿತವಾದ ಸಂಪನ್ಮೂಲಗಳು ಮತ್ತು ಬದಲಾಗುತ್ತಿರುವ ಸಾಮಾಜಿಕ ಬೇಡಿಕೆಗಳನ್ನು ಆಧರಿಸಿ, ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವುದು ಪ್ರಸ್ತುತ ಅಗತ್ಯವಾಗಿದೆ.

–ಜಿ.ಎನ್.ಹಿ

## ಶೈಕ್ಷಣಿಕ ರೇಡಿಯೋ

ದೂರದರ್ಶನ ಚಾನೆಲ್‌ಗಳು ಬಹುಸಂಖ್ಯೆಯಲ್ಲಿ ಆರಂಭವಾಗಿ ಹಳ್ಳಿಗಳವರೆಗೂ ಆಕ್ರಮಿಸಿಕೊಂಡಿರುವ ಈ ದಿನಗಳಲ್ಲಿ ರೇಡಿಯೋವನ್ನು ಬಳಸುವ ಜನರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿರುವುದು ನಿಜ. ಇದೆಲ್ಲ ಕೇವಲ ಇಪ್ಪತ್ತು ವರ್ಷಗಳಿಂದೀಚಿನ ಬೆಳವಣಿಗೆ. ಅದಕ್ಕಿಂತ ಮೊದಲು, ಅಷ್ಟೇಕೆ– ಈಗಲೂ ರೇಡಿಯೋ (ಇದನ್ನೇ ಬಾನುಲಿ/ ಆಕಾಶವಾಣಿ ಎಂದೂ ಕರೆಯುತ್ತಾರೆ) ಮಾತ್ರವೇ ಏಕೈಕ ಸಂಪರ್ಕ ಹಾಗೂ ಮನರಂಜನಾ ಸಾಧನವಾಗಿ ಉಳಿದುಕೊಂಡಿರುವ ಜಾಗಗಳು ಭಾರತದಲ್ಲಿ ಸಾಕಷ್ಟಿವೆ.

### ರೇಡಿಯೋ ತಾಂತ್ರಿಕತೆಯ ಉಗಮ, ವಿಕಾಸ

ರೇಡಿಯೋವನ್ನು ಕಂಡುಹಿಡಿದವನು ಮಾರ್ಕೋನಿ ಎಂಬುದು ಖಚಿತವಿದ್ದರೂ ಅವರ ಆ ಚಿಂತನೆಯನ್ನು ಪ್ರೇರೇಪಿಸಿದವನು ಥಾಮಸ್ ಆಲ್ವ ಎಡಿಸನ್. ಮೊತ್ತ ಮೊದಲ ರೇಡಿಯೋ ಪ್ರಸಾರ 1906ರ ಕ್ರಿಸ್‌ಮಸ್ ಸಂದರ್ಭದಲ್ಲಿ ರೆಜಿನಾಲ್ಡ್ ಫೆಸೆನ್ಡೆನ್ (Reginald Fessenden) ಎಂಬುವನು ಮಾಡಿದ ಎಂದು ಹೇಳಲಾಗುತ್ತದೆ. ಆದರೆ ಇದರ ಬಗ್ಗೆ

Digitised by Bharatavani, CIIL




ಭಿನ್ನಾಭಿಪ್ರಾಯಗಳಿವೆ. ಚಾರ್ಲ್ಸ್ ಹೆರಾಲ್ಡ್ (Charles Herrold) ಹೆರಾಲ್ಡ್ 1909ರಲ್ಲಿ ಕ್ಯಾಲಿಫೋರ್ನಿಯಾದಿಂದ ರೇಡಿಯೋ ಪ್ರಸಾರ ಆರಂಭಿಸಿದನೆಂದೂ ಮರುವರ್ಷ ಅದನ್ನು ಹೆಚ್ಚು ಅಭಿವೃದ್ಧಿಪಡಿಸಿದನೆಂದೂ ವಿಜ್ಞಾನ ಇತಿಹಾಸಕಾರರು ದಾಖಲಿಸಿದ್ದಾರೆ. ಅಮೆರಿಕೆಯಲ್ಲಿ ವ್ಯಾಪಕವಾಗಿ ರೇಡಿಯೋ ಪ್ರಸಾರ ಚಾಲ್ತಿಗೆ ಬಂದದ್ದು 1920ರ ವೇಳೆಗೆ.

**ಭಾರತದಲ್ಲಿ ರೇಡಿಯೋ ಪ್ರಸಾರ**

1926–27ರಲ್ಲಿ ಮುಂಬೈ ಹಾಗೂ ಕೋಲ್ಕೋತಾಗಳಲ್ಲಿ ಎರಡು ಖಾಸಗಿ ಬಾನುಲಿ ಕೇಂದ್ರಗಳು ಕಾರ್ಯ ಪ್ರಾರಂಭಿಸುವ ಮೂಲಕ ಈ ದೇಶದಲ್ಲಿ ಬಾನುಲಿ ಪ್ರಸಾರ ಯುಗಕ್ಕೆ ನಾಂದಿಯಾಯಿತು. 1930ರಲ್ಲಿ ದೇಶದಲ್ಲಿನ ಇಂಥ ಖಾಸಗಿ ಪ್ರಸಾರ ಕೇಂದ್ರಗಳನ್ನು ಆಗಿನ ಬ್ರಿಟಿಷ್ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. 1936ರಲ್ಲಿ ನಿರ್ದಿಷ್ಟ ಉದ್ದೇಶಗಳುಳ್ಳ ಸರ್ಕಾರಿ ವ್ಯವಸ್ಥೆಯಾಗಿ ಇದು ಕಾರ್ಪೋರೇಷನ್ (ನಿಗಮ) ರೂಪ ತಳೆಯಿತು. 'ಆಲ್ ಇಂಡಿಯಾ ರೇಡಿಯೋ' ಎಂಬ ಹೆಸರು ಬಂದಿದ್ದು ಆಗ. ಮುಂದೆ ಇದಕ್ಕೆ ಸಂವಾದಿಯಾಗಿ 'ಆಕಾಶವಾಣಿ' ಎಂಬ ಹೆಸರನ್ನು ಅಂಗೀಕರಿಸಿದ್ದು 1957ರಲ್ಲಿ. 1997ರಲ್ಲಿ ರೇಡಿಯೋ ಹಾಗೂ ದೂರದರ್ಶನಗಳೆರಡನ್ನೂ ನಿರ್ವಹಿಸುವ ಸ್ವತಂತ್ರ ಸಂಸ್ಥೆಯೊಂದನ್ನು ಕಾಯ್ದೆಬದ್ಧವಾಗಿ ಸ್ಥಾಪಿಸಲಾಯಿತು. ಅದೇ 'ಪ್ರಸಾರಭಾರತಿ'.

1947ರಲ್ಲಿ ಭಾರತ ಸ್ವತಂತ್ರವಾದಾಗ ಈ ದೇಶದಲ್ಲಿ ಕೇವಲ ಆರು ಸ್ಟೇಷನ್‌ಗಳು ಮತ್ತು ಹದಿನೆಂಟು ಟ್ರಾನ್ಸ್‌ಮೀಟರ್‌ಗಳಿದ್ದವು. ಇವು ಈ ದೇಶದ ಕೇವಲ ಶೇ. 2.5ರಷ್ಟು ಪ್ರದೇಶದಲ್ಲಿನ ಶೇ. 11ರಷ್ಟು ಜನಸಂಖ್ಯೆಯನ್ನು ತಲುಪುತ್ತಿದ್ದವು. ಸ್ವಾತಂತ್ರ್ಯಾನಂತರ ಆಕಾಶವಾಣಿಯ ಶೀಘ್ರ ವಿಸ್ತಾರ ಆರಂಭವಾಯಿತು.

ಈಗ ಭಾರತದಲ್ಲಿ 232 ಪ್ರಸಾರ ಕೇಂದ್ರಗಳಿವೆ. ದೇಶದ ಶೇ. 91.79% ಪ್ರದೇಶವನ್ನೂ, ಶೇ. 99.14ರಷ್ಟು ಜನಸಂಖ್ಯೆಯನ್ನು ಆಕಾಶವಾಣಿ ಪ್ರಸಾರ ತಲುಪುತ್ತಿದೆ. ನಮ್ಮ ಬಾನುಲಿ ಪ್ರಸಾರ ವ್ಯವಸ್ಥೆ ವಿಶ್ವದ ಅತಿದೊಡ್ಡ ಪ್ರಸಾರ ವ್ಯವಸ್ಥೆಗಳಲ್ಲಿ ಒಂದಾಗಿದೆ. ದೇಶೀಯ ಪ್ರಸಾರ ಸೇವೆಯಲ್ಲಿ 24 ಭಾಷೆಗಳೂ 146 ಆಡುಮಾತಿನ ಪ್ರಭೇದಗಳೂ ಇವೆ. ಬಾಹ್ಯ ಪ್ರಸಾರಗಳಲ್ಲಿ 27 ಭಾಷೆಗಳನ್ನು ಹೊಂದಿದ್ದು ಇದರಲ್ಲಿ 17 ದೇಶೀಯ ಭಾಷೆಗಳೂ 10 ವಿದೇಶೀ ಭಾಷೆಗಳೂ ಒಳಗೊಂಡಿವೆ.

ನಮ್ಮ ದೇಶದ ಈ ವಿಸ್ತಾರವಾದ ಬಾನುಲಿ ಜಾಲವು ಜನರನ್ನು ಸುಶಿಕ್ಷಿತರನ್ನಾಗಿಸಲು ತುಂಬ ಸಹಕಾರಿಯಾಗಿದೆ.

**ಕರ್ನಾಟಕದಲ್ಲಿ ರೇಡಿಯೋ ಪ್ರಸಾರ**

ಕರ್ನಾಟಕದಲ್ಲಿ ಸರ್ಕಾರದಿಂದ ಸ್ಥಾಪಿತವಾದ ಪೂರ್ಣ ಪ್ರಮಾಣದ ಆಕಾಶವಾಣಿ ಕೇಂದ್ರ ಮೊದಲು ಇರಲಿಲ್ಲ. ಮೈಸೂರಿನಲ್ಲಿ ಆಗ ಮನೋವಿಜ್ಞಾನ ಪ್ರಾಧ್ಯಾಪಕರಾಗಿದ್ದ ಡಾ. ಗೋಪಾಲಸ್ವಾಮಿ ಎಂಬುವರು ನಡೆಸುತ್ತಿದ್ದ ಸಣ್ಣ ಪ್ರಮಾಣದ ಬಾನುಲಿ ಕೇಂದ್ರವಿತ್ತು. ಪೂರ್ಣ ಪ್ರಮಾಣದ ಆಕಾಶವಾಣಿ ಕೇಂದ್ರ ಸ್ಥಾಪನೆಯಾಗಬೇಕೆಂದು ಕನ್ನಡ ಜನ ಚಳವಳಿ ಮಾಡಿದ್ದರ ಪರಿಣಾಮವಾಗಿ 1950ರ ಜನವರಿ 8ನೇ ತಾರೀಖಿನಂದು ಧಾರವಾಡ ಆಕಾಶವಾಣಿ ಕೇಂದ್ರವು ತನ್ನ ಪ್ರಸಾರಕಾರ್ಯವನ್ನು ಆರಂಭಿಸಿತು. ಮುಂದೆ ಬೆಂಗಳೂರಿನ ಆಕಾಶವಾಣಿ ಕೇಂದ್ರವು 1955ರ ನವೆಂಬರ್ 2 ರಂದು ಕಾರ್ಯಾರಂಭ ಮಾಡಿತು. ಅನಂತರ ಭದ್ರಾವತಿ, ಗುಲಬರ್ಗಾ, ಮೈಸೂರು ಮೊದಲಾದೆಡೆಗಳಲ್ಲಿ ಸ್ವತಂತ್ರವಾದ ಪೂರ್ಣಪ್ರಮಾಣದ ಕೇಂದ್ರಗಳು ಆರಂಭವಾದವು. ಈಗ ಇವುಗಳ ಜೊತೆಗೆ ಇನ್ನೂ ಕೆಲವು ಕೇಂದ್ರಗಳು ಕೆಲಸಮಾಡುತ್ತಿವೆ.

**ಕಾರ್ಯಕ್ರಮ ವೈವಿಧ್ಯ**

ಆಕಾಶವಾಣಿ ವಿವಿಧ ವರ್ಗದ ಜನರಿಗಾಗಿ ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡುತ್ತಿದೆ. ರೈತರು, ಸ್ತ್ರೀಯರು, ಮಕ್ಕಳು, ಯುವಕರಿಗಾಗಿ ಅವರವರಿಗಾಗಿ ಉಪಯುಕ್ತವಾದ ಕಾರ್ಯಗಳನ್ನು ಶ್ರಮವಹಿಸಿ ರೂಪಿಸಿ ಪ್ರಸಾರ ಮಾಡಲಾಗುತ್ತಿದೆ. ಎಲ್ಲರಿಗೂ ರುಚಿಸುವಂತಹ– ಚಿತ್ರಗೀತೆಗಳೂ, ಚಲನಚಿತ್ರ ಧ್ವನಿವಾಹಿನಿ, ನಾಟಕಗಳು– ಇವನ್ನೂ ಆಕಾಶವಾಣಿ ಪ್ರಸಾರ ಮಾಡುತ್ತಿದೆ.


Digitised by Bharatavani, CIIL

ಇದೇ ರೀತಿ ರೇಡಿಯೋವನ್ನು ಉಪಯೋಗಿಸಿಕೊಂಡು ಮಾಡಲಾಗುತ್ತಿರುವ ಇನ್ನೊಂದು ಪ್ರಮುಖ ಕಾರ್ಯಕ್ರಮವೆಂದರೆ- ಶೈಕ್ಷಣಿಕ ಕಾರ್ಯಕ್ರಮಗಳು.

**ರೇಡಿಯೋದಲ್ಲಿ ಶೈಕ್ಷಣಿಕ ಪ್ರಸಾರಗಳು**

ರೇಡಿಯೋ ಪ್ರಸಾರ ತಾಂತ್ರಿಕತೆಯನ್ನು ಕೇವಲ ಮನರಂಜನೆಯಾಗಿ ಮಾತ್ರವಲ್ಲದೆ ಜನರಿಗೆ ಬೇಕಾದುದನ್ನು ಕಲಿಸುವ ಉದ್ದೇಶದಿಂದಲೂ ಬಳಸಿಕೊಳ್ಳಬಹುದೆಂಬ ಆಲೋಚನೆ ಮೊದಲು ಮೂಡಿದ್ದು ಅಮೆರಿಕೆಯಲ್ಲಿ. 1928ರ ವೇಳೆಗಾಗಲೇ ಅಲ್ಲಿನ ಕ್ಯಾಲಿಫೋರ್ನಿಯಾ ಪ್ರಾಂತ್ಯದ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ರೇಡಿಯೋ ಮೂಲಕ ಸಂಗೀತ ಕಲಿಸುವ `The Standard School Broadcast' ಕಾರ್ಯಕ್ರಮವು ಆರಂಭವಾಗಿತ್ತು. ಬಳಿಕ ಇತರ ವಿವಿಧ ಶೈಕ್ಷಣಿಕ ವಿಷಯಗಳನ್ನು ಕಲಿಸುವ ಪ್ರಸಾರ ಕಾರ್ಯಕ್ರಮಗಳು ಅಮೆರಿಕೆಯ ವಿವಿಧ ಕೇಂದ್ರಗಳಲ್ಲಿ ಆರಂಭವಾದವು. ಇವು ಅನಂತರ ಯುರೋಪಿಗೆ ಹರಡಿ ಅಲ್ಲಿಂದ ಭಾರತಕ್ಕೂ ಈ ಚಿಂತನೆ ಕಾಲಿಟ್ಟಿತು.

ಭಾರತದಲ್ಲಿ ಶೈಕ್ಷಣಿಕ ರೇಡಿಯೋ ಕಾರ್ಯಕ್ರಮಗಳು 1932ರಷ್ಟು ಹಿಂದೆಯೇ ಆರಂಭವಾದವು. ಇವು ಶಾಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಡೆಯುವ ಕಾರ್ಯಕ್ರಮಗಳಾಗಿದ್ದು, 1960ರ ವೇಳೆಗೆ ಆಸಕ್ತಿ ಸಾರ್ವಜನಿಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದಿಯನ್ನು ಕಲಿಸುವ ಕಾರ್ಯಕ್ರಮಗಳ ಪ್ರಸಾರ ಆರಂಭವಾಗಿತ್ತು. ಇವು ವಿವಿಧ ಪ್ರಾದೇಶಿಕ ಕೇಂದ್ರಗಳಿಂದ ಆಯಾ ಪ್ರಾದೇಶಿಕ ಭಾಷೆಗಳ ಮೂಲಕವೇ ಆಕರ್ಷಕ ರೀತಿಯಲ್ಲಿ ಹಿಂದಿ ಕಲಿಸುತಿದ್ದವು. ವಾರದಲ್ಲಿ ಸಾಮಾನ್ಯವಾಗಿ ಎರಡು ದಿನ ಬೆಳಗಿನ ವೇಳೆಯಲ್ಲಿ ಅರ್ಧಗಂಟೆ ಈ ಪಾಠಗಳು ಪ್ರಸಾರವಾಗುತ್ತಿದ್ದವು.

ಯುನೆಸ್ಕೋ ಸಹ ಶೈಕ್ಷಣಿಕ ರೇಡಿಯೋ ಕಾರ್ಯಕ್ರಮಗಳ ಬೆಳವಣಿಗೆಯಲ್ಲಿ ಆಸಕ್ತಿ ವಹಿಸಿತು. ಮುಖ್ಯವಾಗಿ ಏಷಿಯಾ ಖಂಡದ ದೇಶಗಳಲ್ಲಿ ಹೊಸ ಬಗೆಯ ಶೈಕ್ಷಣಿಕ ಕಾರ್ಯಕ್ರಮಗಳಿಗಾಗಿ ತಾಂತ್ರಿಕ ಕೆಲಸಗಾರರ ಗುಂಪುಗಳನ್ನು ಬೆಳೆಸಲು ಅದು ಪ್ರೋತ್ಸಾಹಿಸಿತು. ಆ ಉದ್ದೇಶದಿಂದ 1979ರ ನವೆಂಬರ್ 19 ರಿಂದ ಡಿಸೆಂಬರ್ 1ರವರೆಗೆ ಮಲೇಷ್ಯಾದ ಕೌಲಾಲಾಂಪುರದಲ್ಲಿ ಏಷ್ಯಾ ದೇಶಗಳ ಶೈಕ್ಷಣಿಕ ಪ್ರಸಾರ ತಂತ್ರಜ್ಞರ ಸಲುವಾಗಿ ಒಂದು ಕಾರ್ಯಾಗಾರವನ್ನು ನಡೆಸಿ ಅಂತಹ ಕಾರ್ಯಕ್ರಮಗಳನ್ನು ರೂಪಿಸಲು ಮಾರ್ಗದರ್ಶಿ ಸೂತ್ರಗಳನ್ನು ಸಲಹೆ ಮಾಡಿತು. ಈ ವೇಳೆಗಾಗಲೇ ಟೆಲಿವಿಷನ್ ಸಾಕಷ್ಟು ಬಳಕೆಗೆ ಬಂದಿತ್ತು ಎಂಬುದು ಗಮನಾರ್ಹ. ಅದು ಬಳಕೆಗೆ ಬಂದ ಮೇಲೂ ರೇಡಿಯೋದ ಶೈಕ್ಷಣಿಕ ಉಪಯುಕ್ತತೆಯನ್ನು ನಮ್ಮ ಶೈಕ್ಷಣಿಕ ತಂತ್ರಜ್ಞರು ಮತ್ತು ಶಿಕ್ಷಣ ಶಾಸ್ತ್ರಜ್ಞರು ಮನಗಂಡಿದ್ದರು. 1984ರ ವೇಳೆಗೆ ಭಾರತದ 16 ಭಾಷೆಗಳಲ್ಲಿ 38 ಸ್ಟೇಷನ್‌ಗಳ ಮೂಲಕ ಆಕಾಶವಾಣಿಯು ಶೈಕ್ಷಣಿಕ ಪ್ರಸಾರಗಳನ್ನು ಮಾಡುತ್ತಿದ್ದು ಅವು 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ತಲುಪುತ್ತಿದ್ದವು. ಬೆಟ್ಟ ಪ್ರದೇಶಗಳಲ್ಲಿನ ಹಾಗೂ ಕಡಿಮೆ ಜನಸಾಂದ್ರತೆಯುಳ್ಳ ಪ್ರದೇಶಗಳನ್ನೂ ತಲುಪಲು ಸಾಧ್ಯವಾಗುವಂತೆ ಈ ಶೈಕ್ಷಣಿಕ ರೇಡಿಯೋ ಪ್ರಸಾರಗಳನ್ನು 25 ಉಪಕೇಂದ್ರಗಳು ಪ್ರಸಾರ ಮಾಡುತ್ತಿದ್ದವು. ಈ ಕಾರ್ಯಕ್ರಮಗಳ ಪೈಕಿ ಇಂಗ್ಲಿಷಿಗೆ ಸಂಬಂಧಿಸಿದಂತೆ 150 ಕಾರ್ಯಕ್ರಮಗಳನ್ನು ಆಕಾಶವಾಣಿ ಮತ್ತು ಹೈದರಾಬಾದಿನಲ್ಲಿರುವ ಕೇಂದ್ರೀಯ ಆಂಗ್ಲ ಮತ್ತು ವಿದೇಶೀ ಭಾಷಾ ಸಂಸ್ಥೆ' (CIEFL) ಗಳು ಜಂಟಿಯಾಗಿ ತಯಾರಿಸಿ ಪ್ರಸಾರ ಮಾಡುತ್ತಿದ್ದವು ಹಾಗೂ ಇವುಗಳ ತಯಾರಿಯಲ್ಲಿ ಆಯಾ ರಾಜ್ಯಗಳ ಶಿಕ್ಷಣ ಇಲಾಖೆಯ ಸಲಹೆ ಪಡೆಯಲಾಗುತ್ತಿತ್ತು.

**ರೇಡಿಯೋ ಪಾಠಗಳ ವೈವಿಧ್ಯತೆ**

ಪ್ರೌಢಶಾಲೆಗಳಿಗೆಂದು ತಯಾರಾಗುತ್ತಿದ್ದ ರೇಡಿಯೋ ಪಾಠಗಳು ಪಠ್ಯಕ್ರಮಕ್ಕೆ ಅನುಸಾರವಾಗಿದ್ದವು. ಇವು ಇಂಗ್ಲಿಷ್, ಆಧುನಿಕ ಭಾರತೀಯ ಭಾಷೆಗಳು, ವಿಜ್ಞಾನ, ಸಮಾಜ ವಿಜ್ಞಾನ, ಸಂಸ್ಕೃತ ಮೊದಲಾದ ವಿಷಯಗಳಿಗೆ ಸಂಬಂಧಿಸಿದ್ದವು. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಆಯಾ ವಿಷಯಕ್ಕೆ ಸಂಬಂಧಿಸಿದ ಇತ್ತೀಚಿನ ಮಾಹಿತಿಯನ್ನು ಒದಗಿಸಿಕೊಟ್ಟು ಪಠ್ಯಕ್ರಮದಲ್ಲಿನ ಕೊರತೆಯನ್ನು ತುಂಬುವುದು ಹಾಗೂ ಹೊಸ ಹೊಸ ಬೋಧನಾ ವಿಧಾನಗಳನ್ನು ಪರಿಚಯಿಸುವುದು ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶ. ಒಂದೇ ಬಗೆಯ ಬೋಧನಾ ವಿಧಾನದ ಏಕತಾನತೆ ಯಿಂದ ಶಿಕ್ಷಣವ್ಯವಸ್ಥೆಯನ್ನು ಪಾರುಮಾಡುವುದು ಶೈಕ್ಷಣಿಕ ರೇಡಿಯೋ ಕಾರ್ಯಕ್ರಮಗಳ ಗುರಿ. 1984ರ ಹೊತ್ತಿಗೆ ದೇಶದ ಎಪ್ಪತ್ತು ಸಾವಿರ ಶಾಲೆಗಳು ಇದರ ಪ್ರಯೋಜನ ಪಡೆದಿದ್ದವು. ಈಗ ಈ ಸಂಖ್ಯೆ ಇನ್ನೂ ಹೆಚ್ಚಿದೆ.

ಪ್ರೌಢಶಾಲೆಗಳಿಗಷ್ಟೇ ಅಲ್ಲದೆ ಪ್ರಾಥಮಿಕ ಶಾಲೆಗಳಿಗಾಗಿಯೂ ಶೈಕ್ಷಣಿಕ, ರೇಡಿಯೋ ಪ್ರಸಾರಗಳು ನಡೆದಿವೆ, ನಡೆಯುತ್ತಿವೆ. ಆ ಹಂತದಲ್ಲಿ ಆಗುವ ಸ್ಥಗಿತತೆ ಹಾಗೂ ನಿರುಪಯೋಗ (Stagnation and Wastage) ವನ್ನು ತಡೆಗಟ್ಟುವುದು ಇದರ ಉದ್ದೇಶ.

ವಿಶ್ವವಿದ್ಯಾನಿಲಯ ಮಟ್ಟದ ವಿದ್ಯಾರ್ಥಿಗಳಿಗಾಗಿಯೂ ಶೈಕ್ಷಣಿಕ ಪ್ರಸಾರ ಕಾರ್ಯಕ್ರಮಗಳು ಆಕಾಶವಾಣಿಯಿಂದ ಪ್ರಸಾರವಾಗುತ್ತಿವೆ. ಇವುಗಳಲ್ಲಿ ಎರಡು ಬಗೆ. ಸಾಮಾನ್ಯ ಆಸಕ್ತಿಯ ಯುವಕಾರ್ಯಕ್ರಮಗಳು ಒಂದು ಬಗೆಯವು, ಪಠ್ಯಕ್ರಮ ಆಧಾರಿತ ಕಾರ್ಯಕ್ರಮಗಳು ಎರಡನೇ ಬಗೆಯವು. ಎರಡನೇ ಗುಂಪಿನ ಕಾರ್ಯಕ್ರಮಗಳು ದೂರಶಿಕ್ಷಣಕ್ಕೆ ಬೆಂಬಲವಾಗಿ ರೂಪುಗೊಂಡಿವೆ. 1984ರ ವೇಳೆಗೆ ದೇಶದ ಕೇವಲ ನಾಲ್ಕು ವಿಶ್ವವಿದ್ಯಾಲಯಗಳು ಮಾತ್ರ (ದೆಹಲಿ, ಪಂಜಾಬ್, ಮಧುರೈ ಮತ್ತು ಕಾಶ್ಮೀರ) ಈ ಸೌಲಭ್ಯವನ್ನು ಬಳಸಿಕೊಳ್ಳುತ್ತಿದ್ದವು. ಈಗ ಇನ್ನಷ್ಟು ವಿಶ್ವವಿದ್ಯಾಲಯಗಳು ಶೈಕ್ಷಣಿಕ ರೇಡಿಯೋದ ಬಳಕೆ ಮಾಡಿಕೊಳ್ಳುತ್ತಿವೆ.

**ಶೈಕ್ಷಣಿಕ ರೇಡಿಯೋ-ಪ್ರಯೋಜನಗಳು**

1. ಭಾರತದಂತಹ ಗ್ರಾಮೀಣದೇಶದಲ್ಲಿ ಎಲ್ಲರಿಗೂ ಔಪಚಾರಿಕ ಶಿಕ್ಷಣ ಪಡೆಯಲು ಸಾಧ್ಯವಾಗುವುದಿಲ್ಲ. ಅಂಥ ಜನರನ್ನು ಔಪಚಾರಿಕವಲ್ಲದ ಶಿಕ್ಷಣ (Non formal Education)ದ ಮೂಲಕ ಶಿಕ್ಷಿತರನ್ನಾಗಿಸಬೇಕಾಗುತ್ತದೆ. ಶೈಕ್ಷಣಿಕ ರೇಡಿಯೋ ಈ ದಿಸೆಯಲ್ಲಿ ಒಳ್ಳೆಯ ಸಹಾಯ ನೀಡುತ್ತಿದೆ. 1976ರಲ್ಲಿ ಕೇವಲ ಐದು ಬಾನುಲಿ ಕೇಂದ್ರಗಳಿಂದ ಇಂಥ ಪ್ರಸಾರವನ್ನು ಆರಂಭಿಸಲಾಯಿತು. ಔಪಚಾರಿಕವಲ್ಲದ ಶಿಕ್ಷಣದ ಅಧ್ಯಯನ ಕೇಂದ್ರಗಳಿಗೆ ಈ ಪ್ರಸಾರ ರಾತ್ರಿ 7 ರಿಂದ 8 ಅಥವಾ 9 ರಿಂದ 10 ಗಂಟೆಯ ಅವಧಿಯಲ್ಲಿ ತಲುಪುತ್ತಿತ್ತು. ಈಗ ಇದರ ವ್ಯಾಪ್ತಿ ಇನ್ನೂ ವಿಸ್ತಾರಗೊಂಡಿದೆ.

2. ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಭಾರತ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಮ್ಮಿಕೊಂಡಾಗ (1978) ಅದರ ಯಶಸ್ಸಿಗಾಗಿ ಶೈಕ್ಷಣಿಕ ರೇಡಿಯೋ ತುಂಬಾ ಶ್ರಮಿಸಿತು. ಆ ಯೋಜನೆಯ ಪ್ರಚಾರ, ಜನರನ್ನು ಪ್ರೇರೇಪಿಸುವುದು, ಶಿಕ್ಷಕರನ್ನು ತರಬೇತಿಗೊಳಿಸುವುದು- ಇಂಥ ಹಲವು ಕೆಲಸಗಳಿಗಾಗಿ ಶೈಕ್ಷಣಿಕ ರೇಡಿಯೋದ ಬಳಕೆಯಾಯಿತು. ಇದೂ ಕೂಡಾ ಔಪಚಾರಿಕವಲ್ಲದ ಶಿಕ್ಷಣವೇ ಆಗಿತ್ತು.

3. 'ಕೃಷಿ ಶಾಲೆಗಳು' (Farm Schools) ಆಕಾಶವಾಣಿ ನಡೆಸಿಕೊಟ್ಟ, ಇನ್ನೊಂದು ಬಗೆಯ ಶೈಕ್ಷಣಿಕ ರೇಡಿಯೋ ಕಾರ್ಯಕ್ರಮ. 1973ರಲ್ಲಿ

Digitised by Bharatavani, CIIL

ಈ ಕಾರ್ಯಕ್ರಮ ಆರಂಭವಾಯಿತು. ರೈತರು ಇದಕ್ಕಾಗಿ ಸರಳವಾಗಿ ತಮ್ಮ ಹೆಸರನ್ನು ದಾಖಲು ಮಾಡಬೇಕಿತ್ತು. ಸಾವಿರಾರು ರೈತರು ಇದರಲ್ಲಿನ ವಿವಿಧ ಕೋರ್ಸುಗಳಿಗೆ ಹೆಸರನ್ನು ದಾಖಲಿಸಿದರು. ಆಯ್ದ ಕೃಷಿ ಸಂಬಂಧಿ ವಿಚಾರಗಳ ಮೇಲೆ ಪಾಠಗಳ ಸರಣಿಯನ್ನೇ ಸಿದ್ಧಪಡಿಸಿ, ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಪ್ರಸಾರ ಮಾಡಲಾಯಿತು. ದೇಶಾದ್ಯಂತ ಅಸಂಖ್ಯ ರೈತರು ಇದರಿಂದ ಪ್ರಯೋಜನ ಪಡೆದುಕೊಂಡರು. ರೇಡಿಯೋದ ಬಳಕೆಯಿಲ್ಲದೆ ಇಂಥ ಶಿಕ್ಷಣ ಸಾಧ್ಯವಾಗುತ್ತಿರಲಿಲ್ಲ.

4. ದುಡಿಮೆಯ ಅಗತ್ಯಕ್ಕಾಗಿ ಶ್ರಮಿಕವರ್ಗದವರೇ ಹೆಚ್ಚಾಗಿರುವ ಭಾರತದಂಥ ದೇಶದಲ್ಲಿ ಅನೇಕರು ಬೇಗನೆ ಶಾಲೆ/ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಲಾಗದೆ ಕೈಬಿಡುತ್ತಾರೆ. ಆದರೆ ಅವರಿಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು ಶೈಕ್ಷಣಿಕ ರೇಡಿಯೋ ಸಹಾಯ ಮಾಡುತ್ತದೆ.

5. ರೇಡಿಯೋ ಪಾಠಗಳು ವಿದ್ಯಾರ್ಥಿಗಳಿಗೆ ಹೊಸ ಕಲಿಕಾನುಭವಗಳನ್ನು ಒದಗಿಸುತ್ತವೆ. ತರಗತಿಯ ಬೋಧನೆಯ ಏಕತಾನತೆಯನ್ನು ಇವು ದೂರಮಾಡುತ್ತವೆ. ಶಿಕ್ಷಕರು ಒದಗಿಸಲು ಸಾಧ್ಯವಿಲ್ಲದ ಮಳೆ, ಗುಡುಗು, ಹಕ್ಕಿ, ಪ್ರಾಣಿಗಳ ಕೂಗು, ವಿಮಾನ, ಮೋಟಾರು ವಾಹನಗಳ ಶಬ್ದ ಇಂಥ ವೈವಿಧ್ಯಮಯ ಶಬ್ದಗಳ ಶ್ರವಣಾನುಭವವನ್ನು ಶೈಕ್ಷಣಿಕ ರೇಡಿಯೋ ಒದಗಿಸುತ್ತದೆ.

6. ಶೈಕ್ಷಣಿಕ ರೇಡಿಯೋ ಕಾರ್ಯಗಳು ತರಗತಿಯ ಗೋಡೆಗಳಾಚೆ ವಿದ್ಯಾರ್ಥಿಗಳನ್ನು ಕರೆದೊಯ್ಯುತ್ತವೆ. ಕೋಣೆಯೊಳಗಿದ್ದೂ ಬಯಲಿನಲ್ಲಿರುವಂಥ ಅನುಭವ ಈ ಮೂಲಕ ಸಾಧ್ಯ.

7. ಈ ಪ್ರಸಾರಗಳಲ್ಲಿರುವಷ್ಟು ಧ್ವನಿ ವೈವಿಧ್ಯ ತರಗತಿಯ ಶಿಕ್ಷಕರ ಬೋಧನೆಯಲ್ಲಿರುವುದಿಲ್ಲ.

**ಮಿತಿಗಳು**

ಶೈಕ್ಷಣಿಕ ರೇಡಿಯೋ ಕಾರ್ಯಕ್ರಮಗಳಿಂದ ಪ್ರಯೋಜನಗಳಿವೆ ನಿಜ. ಆದರೆ ಇವಕ್ಕೆ ತಮ್ಮದೇ ಆದ ಮಿತಿಗಳೂ ಇವೆ. ಅವು ಈ ಕೆಳಗಿನಂತಿವೆ–

1. ಇಲ್ಲಿ ಎಲ್ಲವನ್ನೂ ಕೇವಲ ಶಬ್ದ, ಧ್ವನಿಗಳ ಮೂಲಕವೇ ಸಾಧಿಸಬೇಕಾಗಿರುತ್ತದೆ. ನಕಾಶೆ, ಪ್ರಾಯೋಗಿಕ ಉಪಕರಣಗಳು ಇತ್ಯಾದಿಗಳ ಬಳಕೆ ಇಲ್ಲಿ ಸಾಧ್ಯವಿಲ್ಲ. ವರ್ಣನೆಗಳ ಮೂಲಕವೇ ಈ ದೃಶ್ಯ ವಿವರಣೆಗಳನ್ನು ಪ್ರಸ್ತುತಪಡಿಸಬೇಕಾಗಿರುತ್ತದೆ. ಈ ರೀತಿಯಲ್ಲಿ ಪಾಠಗಳನ್ನು ಸಿದ್ಧಪಡಿಸುವುದು ತುಂಬ ಪ್ರಯಾಸಕರ ಕೆಲಸ.

2. ಶಿಕ್ಷಕ– ವಿದ್ಯಾರ್ಥಿಗಳ ನಡುವೆ ನೇರ ಸಂಪರ್ಕ ಇಲ್ಲದಿರುವುದರಿಂದ ಶಿಕ್ಷಕರ ವೈಯಕ್ತಿಕ ಪ್ರಭಾವ ಇಲ್ಲಿ ವಿದ್ಯಾರ್ಥಿಗಳ ಮೇಲೆ ಉಂಟಾಗುವುದಿಲ್ಲ. ಅದರಿಂದ ವಿದ್ಯಾರ್ಥಿಗಳು ವಂಚಿತರಾಗುತ್ತಾರೆ.

3. ತಾಂತ್ರಿಕ ಅಡಚಣೆಗಳಿಂದಾಗಿ ಪ್ರಸಾರ ಕಾರ್ಯಕ್ಕೆ ತೊಂದರೆಯಾಗಿ ಕೆಲ ಭಾಗಗಳಲ್ಲಿನ ವಿದ್ಯಾರ್ಥಿಗಳಿಗೆ ಕೆಲವು ಪಾಠಗಳು ತಪ್ಪಿಹೋಗಬಹುದು. ಆದರೆ ರೇಡಿಯೋ ಕೇಂದ್ರಗಳು ತಮ್ಮ ವೇಳಾಪಟ್ಟಿಯ ಪ್ರಕಾರ ಮುಂದಿನ ಪಾಠಗಳನ್ನೇ ಪ್ರಸಾರ ಮಾಡುತ್ತವೆ. ಹೀಗಾಗಿ ಕಲಿಕೆಯಲ್ಲಿ ಕಂದರ ಉಂಟಾಗುವುದು ಸಾಧ್ಯವಿದೆ. ಇದನ್ನು ವಿದ್ಯಾರ್ಥಿ ತನ್ನ ಸ್ವಂತ ಶ್ರಮದಿಂದ, ಇಲವೇ ಅಧ್ಯಾಪಕರ ಪೂರಕ ಬೋಧನೆಯಿಂದ ತುಂಬಿಕೊಳ್ಳಬೇಕಾಗುತ್ತದೆ.

ಇಂಥ ಕೆಲವು ಮಿತಿಗಳಿದ್ದರೂ ಇವನ್ನು ಮೀರಿ ಶೈಕ್ಷಣಿಕ ರೇಡಿಯೋದ ಪ್ರಯೋಜನವನ್ನು ನಮ್ಮ ದೇಶ ಪಡೆದುಕೊಳ್ಳುತ್ತಿದೆ. 1984ರಿಂದೀಚೆಗೆ ಶೈಕ್ಷಣಿಕ ರೇಡಿಯೋ ಔಪಚಾರಿಕ ಶಿಕ್ಷಣ ಹಾಗೂ ಔಪಚಾರಿಕವಲ್ಲದ ಶಿಕ್ಷಣಗಳಿಗಾಗಿ ಪ್ರತ್ಯೇಕ ವಿಜ್ಞಾನ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಪ್ರಸಾರ ಮಾಡುತ್ತಿದೆ. ಇದಕ್ಕಾಗಿ ಅನೇಕ ಸ್ಟೇಷನ್‌ಗಳಲ್ಲಿ ವಿಜ್ಞಾನ ವಿಭಾಗಗಳನ್ನೇ ಆಕಾಶವಾಣಿ ತೆರೆದಿದೆ. ಇದೇ ರೀತಿ ಶಿಕ್ಷಕರು ಹಾಗೂ ಶಿಕ್ಷಕ ತರಬೇತುದಾರರಿಗಾಗಿ (ಬಿ.ಎಡ್. ಕಾಲೇಜು ಉಪನ್ಯಾಸಕರು) ವಿಶೇಷ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಕಾಶವಾಣಿ ನಡೆಸಿದೆ. ಬೋಧನಾ ವಿಧಾನಗಳಲ್ಲಿನ ನೂತನ ಆವಿಷ್ಕಾರಗಳ ಬಗ್ಗೆ ಇವರಿಗೆ ಮಾಹಿತಿ ಕೊಡುವುದು ಈ ಕಾರ್ಯಕ್ರಮಗಳ ಉದ್ದೇಶವಾಗಿದೆ.

**ರೇಡಿಯೋ ಪಾಠಗಳ ಬರವಣಿಗೆ**

ರೇಡಿಯೋ ಪಾಠಗಳನ್ನು ಬರೆಯುವುದು ಪಠ್ಯಪುಸ್ತಕಕ್ಕಾಗಿ ಪಾಠ ಬರೆಯುವುದು ಅಥವಾ ಪತ್ರಿಕೆಯೊಂದಕ್ಕಾಗಿ ಲೇಖನ ಬರೆಯುವುದಕ್ಕಿಂತ ಭಿನ್ನ ಸ್ವರೂಪದ ಕೆಲಸ. ಈ ಹಸ್ತಪ್ರತಿ ತಯಾರಿಕೆಯ ಹಂತದಲ್ಲಿ ಈ ಕೆಳಕಂಡ ಅಂಶಗಳನ್ನು ಲೇಖಕ ನೆನಪಿಡಬೇಕು–

1. ಪಾಠಗಳ ಭಾಷೆ ಸರಳವಾಗಿದ್ದು ಆಯಾ ಪ್ರಾಂತ್ಯದಲ್ಲಿ ಎಲ್ಲರಿಗೂ ಅರ್ಥವಾಗುವಂತಿರಬೇಕು.
2. ನಿರೂಪಣೆ ನೇರವಾಗಿರಬೇಕು. ಸುತ್ತುಬಳಸಿದ ನಿರೂಪಣೆ ಅಥವಾ ಊಹಾಶಕ್ತಿಯ ಮೇಲೆ ಅವಲಂಬಿತವಾದ ನಿರೂಪಣೆ ಇರಬಾರದು.
3. ಯಾವುದೇ ಬಗೆಯ ಧ್ವನಿಯ ಸಂಗ್ರಹ ರೇಡಿಯೋ ಸ್ಟೇಷನ್‌ನಲ್ಲಿ ಇರುತ್ತದೆ. ಆದ್ದರಿಂದ ಪಾಠದ ಪರಿಣಾಮಕಾರಿ ಕೇಳುವಿಕೆಗೆ ಪೂರಕವಾದ ಎಲ್ಲ ಬಗೆಯ ಧ್ವನಿಗಳ ಅಳವಡಿಕೆಗೆ ಬರವಣಿಗೆಯಲ್ಲಿ ಅವಕಾಶ ಕಲ್ಪಿಸಿರಬೇಕು.
9. ರೇಡಿಯೋ ಪಾಠಗಳಿಗೆ ಕಿವಿಯೇ ಏಕೈಕ ಮಾಧ್ಯಮ. ಆದ್ದರಿಂದ ವಾಕ್ಯರಚನೆ ಸ್ಪಷ್ಟವೂ ಚಿಕ್ಕದೂ ನಿರ್ದಿಷ್ಟವೂ ಆಗಿರಬೇಕು. ದ್ವಂದ್ವಾರ್ಥ ವಾಕ್ಯಗಳು ಇರಲೇಬಾರದು.
10. ಪಾಠದ ಬರವಣಿಗೆ ಯಾವುದೇ ರೀತಿಯಲ್ಲೂ ಸಮಾಜದ ಹಾಗೂ ರಾಷ್ಟ್ರದ ಹಿತಾಸಕ್ತಿಗೆ ವಿರುದ್ಧವಾಗಿರಬಾರದು.
11. ವಿಷಯವನ್ನು ಚಿಕ್ಕ ಚಿಕ್ಕ ಅಂಶಗಳಾಗಿ ವಿಭಾಗಿಸಿಕೊಂಡು ಕ್ರಮಬದ್ಧವಾಗಿ ನಿರೂಪಿಸಬೇಕು.
12. ಅಗತ್ಯ ಕಲಿಕಾಂಶಗಳನ್ನು ಔಚಿತ್ಯಪೂರ್ಣವಾಗಿ ಪುನರಾವರ್ತಿಸಬೇಕು.

–ಹೀಗೆ ಹಲವು ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ರೇಡಿಯೋ ಪಾಠಗಳನ್ನು ಬರೆಯಬೇಕಾಗುತ್ತದೆ. ಕೇಳುಗನಿಗೆ ಒಂದು ಬಾರಿ ಮಾತ್ರ ಕೇಳುವ ಅವಕಾಶ ಇರುತ್ತದೆ. ಮತ್ತೆ ಅದು ಕೇಳಲು ಸಿಕ್ಕದು. ಆದ್ದರಿಂದ ಪ್ರತಿ ವಾಕ್ಯವೂ ಸಹ ಅರ್ಥಪೂರ್ಣವೂ, ಸರಳವೂ ನೇರವೂ ಆಗಿರಬೇಕಾದ್ದು ಅಗತ್ಯ.

**ರೇಡಿಯೋ ಪಾಠಗಳನ್ನು ಪ್ರಸಾರಕ್ಕೆ ಅಳವಡಿಸುವುದು**

ರೇಡಿಯೋ ಪಾಠವೊಂದರ ಹಸ್ತಪ್ರತಿ ಸಿದ್ಧವಾದ ಬಳಿಕ ಅದನ್ನು ರೇಡಿಯೋ ಕೇಂದ್ರದಲ್ಲಿ ಅಗತ್ಯವಿದ್ದಷ್ಟು ಜನರಿಂದ ಓದಿಸಿ ರೆಕಾರ್ಡ್ ಮಾಡಿಕೊಂಡು ಆ ಬಳಿಕ ಪ್ರಸಾರ ಮಾಡಲಾಗುತ್ತದೆ. ಇದು ಪಾಠದ ನಿರ್ಮಾಣದ ಹಂತ. ಈ ಹಂತದಲ್ಲಿ ನೆನಪಿಡಬೇಕಾದ ಅಂಶಗಳು ಇವು–

1. ಪಾಠವನ್ನು ಮಾತಿನ ಮೂಲಕ ನಿರೂಪಿಸಲು ಅಗತ್ಯವಾದಷ್ಟು ಸಂಖ್ಯೆಯ ಸೂಕ್ತ ರೀತಿಯ ಧ್ವನಿಯುಳ್ಳ ಜನರನ್ನು ಆರಿಸಿಕೊಂಡು ಅವರಿಗೆ ವಿವಿಧ 'ಪಾತ್ರ'ಗಳನ್ನು ಹಂಚುವುದು. ಉದಾ. ಶಿಕ್ಷಕ/ ಶಿಕ್ಷಕಿ,


Digitised by Bharatavani, CIIL

ವಿದ್ಯಾರ್ಥಿ/ ವಿದ್ಯಾರ್ಥಿನಿ, ಪಾಠದ ಬೇರೆ ಬೇರೆ ಪಾತ್ರಗಳು ಇತ್ಯಾದಿ.

2. ಇವರುಗಳಿಗೆ ತಾವು ಹೇಳಬೇಕಾದ ಮಾತುಗಳನ್ನು ಸೂಕ್ತ ಧ್ವನಿಯ ಏರಿಳಿತದೊಂದಿಗೆ ಉಚ್ಚರಿಸುವುದನ್ನು ಅಭ್ಯಾಸ ಮಾಡಿಸಬೇಕು. ಈ ಕಾರ್ಯಕ್ರಮಗಳಲ್ಲಿ ಕೇವಲ ಧ್ವನಿಯ ಮೂಲಕ ಮಾತ್ರವೇ ಕೇಳುಗರನ್ನು ತಲುಪಿ ಅರ್ಥಸಂವಹನ ಮಾಡಬೇಕಾಗಿರುವುದರಿಂದ ಅಗತ್ಯವಾದ ಧ್ವನಿ ಏರಿಳಿತದೊಂದಿಗೆ ಮಾತುಗಳನ್ನಾಡಬೇಕಾದುದು ತುಂಬ ಅಗತ್ಯ.

3. ಅಗತ್ಯವಿರುವ ಇತರ ಧ್ವನಿ/ ಶಬ್ದಗಳನ್ನು ನಿರ್ಮಾಣಕಾರರು ತಮ್ಮಲ್ಲಿನ ಶಬ್ದ ಸಂಗ್ರಹದಿಂದ ತೆಗೆದುಕೊಂಡು ಸೂಕ್ತವಾದಲ್ಲಿ ಜೋಡಿಸಿಕೊಳ್ಳಬೇಕು. ಇದು ಸಂಕಲನ ಹಂತದಲ್ಲಿ ನಡೆಯುವ ಕೆಲಸ.

**ಪ್ರಸಾರ ಹಂತದಲ್ಲಿ...**

1. ಶೈಕ್ಷಣಿಕ ಪಾಠಗಳ ಪ್ರಸಾರದ ವೇಳಾಪಟ್ಟಿಯನ್ನು ಸಾಕಷ್ಟು ಮುಂಚಿತವಾಗಿ ಸಂಬಂಧಿಸಿದ ಶಾಲೆ/ ಕಾಲೇಜುಗಳಿಗೆ ಕಳಿಸಬೇಕು.

2. ಪ್ರಸಾರವನ್ನು ಆಲಿಸುವ ಮುನ್ನ ವಿದ್ಯಾರ್ಥಿಗಳಿಗೆ ಶಿಕ್ಷಕರು ಕೊಡಬೇಕಾದ ವಿಶೇಷ ಸೂಚನೆಗಳೇನಾದರೂ ಇದ್ದಲ್ಲಿ ಅವನ್ನು ಆಯಾ ಶಾಲೆಗಳಿಗೆ ಕಳಿಸಿಕೊಡಬೇಕು. ಅದೇ ರೀತಿ ಪ್ರಸಾರದ ನಂತರ ಶಿಕ್ಷಕರು ಮಾಡಬೇಕಾದ ಅನುಸರಣ (ಫಾಲೋ-ಅಪ್) ಕೆಲಸದ ಬಗ್ಗೆಯೂ ಸೂಚನೆಗಳನ್ನು ಕೊಟ್ಟಿರಬೇಕು.

**ಪ್ರಸಾರದ ನಂತರ**

ಒಂದು ಶೈಕ್ಷಣಿಕ ಪ್ರಸಾರ ಕಾರ್ಯಕ್ರಮವನ್ನು ರೂಪಿಸಿ ಪ್ರಸಾರ ಮಾಡಿದ ಕೂಡಲೇ ಸಂಬಂಧಿಸಿದವರ ಜವಾಬ್ದಾರಿ ಮುಗಿದು ಬಿಡುವುದಿಲ್ಲ. ಆ ಕಾರ್ಯಕ್ರಮ ಎಷ್ಟರಮಟ್ಟಿಗೆ ಯಶಸ್ವಿಯಾಯಿತು, ಪರಿಣಾಮಗಳೇನು, ಆಗಬೇಕಾದ ಬದಲಾವಣೆಗಳೇನು ಎಂಬುದನ್ನು ತಿಳಿದುಕೊಳ್ಳಬೇಕಾದ್ದು ಅಗತ್ಯ. ಇದಕ್ಕಾಗಿ ಕಾರ್ಯಕ್ರಮ ನಿರ್ಮಾಪಕರು ಒಂದು ಮೌಲ್ಯಮಾಪನ ಪ್ರಶ್ನಾವಳಿ (Evaluation Questionnaire) ಅನ್ನು ರೂಪಿಸಿ ಸಂಬಂಧಿಸಿದವರಿಗೆ ಕಳಿಸಿಕೊಟ್ಟು ಅವರಿಂದ ಪ್ರತಿಕ್ರಿಯೆ ತರಿಸಿಕೊಳ್ಳಬೇಕು. ಅದರ ಆಧಾರದ ಮೇಲೆ ತಮ್ಮ ಕಾರ್ಯಕ್ರಮಗಳಲ್ಲಿ ಅಗತ್ಯ ಬದಲಾವಣೆ ಮಾಡಿಕೊಳ್ಳಬೇಕು.

**ಕರ್ನಾಟಕದಲ್ಲಿ ಇತ್ತೀಚಿನ ಶೈಕ್ಷಣಿಕ ರೇಡಿಯೋ ಪ್ರಸಾರಗಳು**

ಕರ್ನಾಟಕದಲ್ಲಿಯೂ ಭಾರತದ ಇತರ ರಾಜ್ಯಗಳಲ್ಲಿ ಆರಂಭವಾದಾಗಲೇ ಶೈಕ್ಷಣಿಕ ಪ್ರಸಾರಗಳು ಆರಂಭವಾದರೂ ಈಚಿನ ಹತ್ತು ವರ್ಷಗಳಲ್ಲಿ ಆದ ಪ್ರಯೋಗಗಳು ತುಂಬ ಉತ್ತೇಜಕ ಪರಿಣಾಮಗಳನ್ನು ನೀಡಿವೆ.

ಪ್ರಾಥಮಿಕ ಶಾಲಾ ಮಕ್ಕಳಿಗಾಗಿ 2000-01ರಲ್ಲಿ ಆರಂಭವಾದ 'ಕೇಳಿ-ಕಲಿ' ಕಾರ್ಯಕ್ರಮ ತುಂಬ ಪರಿಣಾಮಕಾರಿಯಾಗಿದೆ ಎಂದು ಮೌಲ್ಯಮಾಪನ ಸಮೀಕ್ಷೆಗಳು ತಿಳಿಸಿವೆ. ಇದು ದೂರಶಿಕ್ಷಣ ಯೋಜನೆಯ ನೆರವಿನೊಂದಿಗೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಪ್ರಾರಂಭವಾಯಿತು. ಮೊದಲು ಕೇವಲ ಮೂರನೆಯ ತರಗತಿ ಮಕ್ಕಳಿಗಾಗಿ ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಆರಂಭಗೊಂಡ ಈ ಕಾರ್ಯಕ್ರಮ ಮರುವರ್ಷ (2001-02) ಉತ್ತರ ಕರ್ನಾಟಕದ ಹನ್ನೊಂದು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಇ.ಪಿ.) ಜಿಲ್ಲೆಗಳ 3 ಮತ್ತು 4ನೇ ತರಗತಿಯ ಎಲ್ಲ ಮಕ್ಕಳಿಗೆ ವಿಸ್ತರಿಸಲ್ಪಟ್ಟಿತು. ಇದರ ಉಪಯುಕ್ತತೆಯ ಸ್ಪಷ್ಟ ಅರಿವಾದದ್ದರ ಫಲವಾಗಿ 2002-03ರಲ್ಲಿ ಕರ್ನಾಟಕ ಎಲ್ಲ ಜಿಲ್ಲೆಗಳ 3, 4, ಮತ್ತು 5ನೆಯ ತರಗತಿಯ ಎಲ್ಲ ಮಕ್ಕಳಿಗೆ ಇದರ ಪ್ರಯೋಜನ ದೊರೆಯುವಂತೆ ಕಾರ್ಯಕ್ರಮವನ್ನು ವಿಸ್ತಾರಗೊಳಿಸಲಾಯಿತು.

2005-06 ರಿಂದ ಕರ್ನಾಟಕದಲ್ಲಿ ಶೈಕ್ಷಣಿಕ ರೇಡಿಯೋ ಕಾರ್ಯಕ್ರಮಗಳನ್ನು ಇನ್ನಷ್ಟು ವೈವಿಧ್ಯಮಯಗೊಳಿಸಿ ಈ ಕೆಳಗಿನ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಆರಂಭ ಮಾಡಲಾಯಿತು.

(ಅ) 1 ಮತ್ತು 2ನೇ ತರಗತಿ ಮಕ್ಕಳಿಗಾಗಿ- 'ಚಿಣ್ಣರ ಹಕ್ಕಿ' ಕಾರ್ಯಕ್ರಮ.

(ಆ) 3 ಮತ್ತು 4ನೇ ತರಗತಿಯವರಿಗಾಗಿ- 'ಚುಕ್ಕಿ ಚಿನ್ನ' ಕಾರ್ಯಕ್ರಮ

(ಇ) 5, 6 ಮತ್ತು 7ನೇ ತರಗತಿಗಳಿಗಾಗಿ- 'ಕೇಳಿ ಕಲಿ' ಕಾರ್ಯಕ್ರಮ

ರಾಜ್ಯ ಶಿಕ್ಷಣ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಶೈಕ್ಷಣಿಕ ವಿಕಾಸ ಸಮಿತಿ ಇ.ಡಿ.ಸಿ. (Educational Developmental Council) ಸಂಸ್ಥೆಯೂ ಇದಕ್ಕೆ ಸಹಯೋಗ ನೀಡಿವೆ.

ಈ ಪಾಠಗಳಲ್ಲಿ ಕಷ್ಟದ ಘಟಕಗಳಲ್ಲಿ ಹಾಡು, ಕುಣಿತ ಹಾಗೂ ಧ್ವನಿ ಪರಿಣಾಮಗಳಿಂದ ಆಕರ್ಷಕವಾಗುವಂತೆ ಮಾಡಲಾಗುತ್ತಿದೆ. ಕನ್ನಡದ ವಿವಿಧ ಭಾಗಗಳಲ್ಲಿನ ಆಡುನುಡಿಗಳನ್ನು ಅಳವಡಿಸಲಾಗುತ್ತಿದೆ.

ಈ ಪಾಠಗಳಿಂದ ಒಳ್ಳೆಯ ಪರಿಣಾಮಗಳಾಗಿವೆ ಎಂದು ಅಧ್ಯಯನಗಳು ತಿಳಿಸಿವೆ. ಈ ಪ್ರಸಾರಗಳನ್ನು ಕೇಳಿದವರ ಶೈಕ್ಷಣಿಕ ಸಾಧನೆ ಉತ್ತಮಗೊಂಡಿದೆ ಎಂದೂ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ವಿದ್ಯಾರ್ಥಿಗಳ ಸಾಧನೆಗಳಲ್ಲಿ ಅಂತರ ಕಡಿಮೆಯಾಗಿದೆ ಎಂದೂ ಮೌಲ್ಯಮಾಪನ ವರದಿ ತಿಳಿಸಿದೆ. ಶೈಕ್ಷಣಿಕ ರೇಡಿಯೋಗಳಿಂದಾಗುವ ಲಾಭಕ್ಕೆ ಇದೇ ಸಾಕ್ಷಿ.

(ನೋಡಿ – ಶೈಕ್ಷಣಿಕ ದೂರದರ್ಶನ)

–ಎಸ್.ಪಿ.ಪಿ

**ಶೈಕ್ಷಣಿಕ ವೀಡಿಯೋಗಳು**

ಮುದ್ರಣ ತಂತ್ರಜ್ಞಾನ ಹಾಗೂ ಸಂದೇಶ ಸಂಪರ್ಕ ಮಾಧ್ಯಮಗಳು ಕೇವಲ ಪಠ್ಯ ಮಾಹಿತಿಯನ್ನು ಮಾತ್ರ ರವಾನಿಸುತ್ತಿದ್ದುದರಿಂದ, ಮುಂದೆ ರೇಖಾಚಿತ್ರ, ಛಾಯಾಚಿತ್ರ ಹಾಗೂ ಧ್ವನಿ ಸಹಿತವಾದ ಪಠ್ಯ ಮಾಹಿತಿಯನ್ನು ರವಾನಿಸುವ ಅತ್ಯಂತ ಸುಧಾರಿತ ತಂತ್ರಜ್ಞಾನದ ಆವಿಷ್ಕಾರವಾಯಿತು. ಈ ಸಂಶೋಧಿತ ತಂತ್ರಜ್ಞಾನವನ್ನು ಸುದ್ದಿ ಹಾಗೂ ಮನರಂಜನೆ ಮಾಧ್ಯಮದಲ್ಲಿ ಬಳಸಿಕೊಂಡಂತೆಯೇ ಶಿಕ್ಷಣ ಕ್ಷೇತ್ರದಲ್ಲಿಯೂ ಅತ್ಯಂತ ಪರಿಣಾಮಕಾರಿಯಾಗಿ ಬಳಕೆ ಮಾಡಲಾಗುತ್ತಿದೆ.

ಭಾರತದಲ್ಲಿ ಈ ಸಂಪರ್ಕ ಮಾಧ್ಯಮವನ್ನು ಬಳಸಿಕೊಂಡು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸಾರಮಾಡುತ್ತಿದೆ. ಹಾಗೆಯೇ NCERT, ಇಗ್ನೋ, ಜ್ಞಾನ್ ದರ್ಶನ್, ವ್ಯಾಸ್ – 24, ಏಕಲವ್ಯ-24 ಇವೇ ಮುಂತಾದವು ಭಾರತದಲ್ಲಿ ಜನಪ್ರಿಯವಾಗಿರುವ ಶೈಕ್ಷಣಿಕ ಸಂಪರ್ಕ ವ್ಯವಸ್ಥೆಗಳಾಗಿವೆ.

**ಶೈಕ್ಷಣಿಕ ಕಾರ್ಯಕ್ರಮಗಳ ಬಗೆಗಳು**

ಶೈಕ್ಷಣಿಕ ವೀಡಿಯೋಗಳನ್ನು ತಯಾರಿಸಿ, ಪ್ರಚುರಪಡಿಸುವಲ್ಲಿ ಹಲವಾರು ಸಂಸ್ಥೆಗಳು ಪಾತ್ರವಹಿಸಿವೆ. ಇವುಗಳಲ್ಲಿ ಕಂಡುಬರುವ

Digitised by Bharatavani, CIIL

ಕಾರ್ಯಕ್ರಮಗಳನ್ನು ಸಾಮಾನ್ಯವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು.

- ವೀಡಿಯೋ ಆಧಾರಿತ ಕಾರ್ಯಕ್ರಮಗಳು
- ಜಾಲಾಧಾರಿತ ಕಾರ್ಯಕ್ರಮಗಳು

- **ವೀಡಿಯೋ ಆಧಾರಿತ ಕಾರ್ಯಕ್ರಮಗಳು**

ಇವು ಮೂಲತಃ ವೀಡಿಯೋ ಉಪನ್ಯಾಸಗಳು, ಮಾಹಿತ್ಯಾತ್ಮಕ ಕಾರ್ಯಕ್ರಮಗಳು ಹಾಗೂ ಪ್ರಶ್ನಾಧಾರಿತ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಒಳಗೊಂಡಿವೆ.

- **ಜಾಲಾಧಾರಿತ ಕಾರ್ಯಕ್ರಮಗಳು**

ಇವು hypertext / XML ರೂಪದಲ್ಲಿದ್ದು, ಭಿತ್ತಿಚಿತ್ರಗಳು, ಚಾರ್ಟ್‌ಗಳು, ಅನಿಮೇಷನ್ ಮೂಲಕ ಸಿದ್ಧಪಡಿಸಿರುವ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತವೆ.

**ಶೈಕ್ಷಣಿಕ ವೀಡಿಯೋಗಳ ತಯಾರಿಕೆಯಲ್ಲಿ ಗಮನಿಸಬೇಕಾದ ಅಂಶಗಳು**

ವಿದ್ಯಾರ್ಥಿ ಹಾಗೂ ಶಿಕ್ಷಕ ಸಮುದಾಯ ಉಪಯುಕ್ತವಾದ ಶೈಕ್ಷಣಿಕ ವೀಡಿಯೋಗಳಿಗೆ ಇರಬೇಕಾದ ಕೆಲವೊಂದು ಗುಣಗಳು ಈ ರೀತಿಯಾಗಿರಬೇಕು ಎಂಬುದು ಶಿಕ್ಷಣತಜ್ಞರ ಅಭಿಪ್ರಾಯ. ಅವುಗಳೆಂದರೆ:

1. ಇವು ಮಾಹಿತಿಯ ಪ್ರಕ್ರಿಯೆ (information process) ಹಾಗೂ ವರದಿ ತಯಾರಿಕೆಗೆ ಆಸ್ಪದವೀಯುವಂತಿರಬೇಕು.
2. ಇವುಗಳಲ್ಲಿರುವ ಮಾಹಿತಿಯನ್ನು ಮೌಲಿಕವಾಗಿ ವಿಮರ್ಶಿಸುವ ಕಾರ್ಯಕ್ಕೆ ಇಂಬು ನೀಡುವಂತಿರಬೇಕು.
3. ಇವುಗಳಲ್ಲಿರುವ ವಿಷಯಗಳನ್ನು ವೀಕ್ಷಿಸಿದ ನಂತರ ಆ ವಿಷಯ ಕ್ಷೇತ್ರಗಳಲ್ಲಿರುವ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವಂತಿರಬೇಕು.
4. ಇವುಗಳಲ್ಲಿರುವ ಸಿದ್ಧಾಂತಗಳನ್ನು ನಿತ್ಯಜೀವನ ಸಂದರ್ಭಗಳಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತಿರಬೇಕು.
5. ಇವುಗಳ ಮಾಹಿತಿ ಜಾಗತಿಕ ಮಟ್ಟದಲ್ಲಿ ಮಾನವಾಭಿವೃದ್ಧಿಗೆ ಸಹಾಯಕವಾಗುವಂತಿರಬೇಕು.
6. ಅವುಗಳಲ್ಲಿರುವ ಜ್ಞಾನವನ್ನು ಇತರರಿಗೆ ಪರಿಣಾಮಕಾರಿಯಾಗಿ ವರ್ಗಾಯಿಸುವಂತಿರಬೇಕು.

**ಜಾಗತಿಕ ಮಟ್ಟದಲ್ಲಿ ಪ್ರಮುಖ ವಿಷಯ ಕ್ಷೇತ್ರಗಳಲ್ಲಿ ಲಭ್ಯವಿರುವ ಶೈಕ್ಷಣಿಕ ವೀಡಿಯೋಗಳು**

ಶೈಕ್ಷಣಿಕ ವಿಷಯಗಳ ಎಲ್ಲ ಪ್ರಮುಖ ಕ್ಷೇತ್ರಗಳಲ್ಲಿಯೂ ವೀಡಿಯೋಗಳು ಲಭ್ಯವಿದ್ದು ಅವುಗಳ ವಿವರ ಈ ರೀತಿಯಾಗಿದೆ.

1. ಇತಿಹಾಸ (History) : ಈ ವೀಡಿಯೋದ ಸಹಾಯದಿಂದ ಯಾವುದೇ ಐತಿಹಾಸಿಕ ಹಿನ್ನೆಲೆಗಳನ್ನು ಅರಿಯಬಹುದಾಗಿದೆ. ಇದರಲ್ಲಿ ಪ್ರಮುಖವಾದುವುಗಳೆಂದರೆ –Learn History, Elizabeth -I,A Brief History of Mankind ; Computer History ಮುಂತಾದವು.
2. ವಿಜ್ಞಾನ (Science) : ಇವುಗಳನ್ನು ಬಳಸಿಕೊಂಡು ವಿಜ್ಞಾನ ಕಲಿಕೆ ತರಗತಿಗಳನ್ನು ಕ್ರಿಯಾತ್ಮಕವಾಗಿಸಬಹುದು. ಪ್ರಮುಖ ವೀಡಿಯೋಗಳೆಂದರೆ : Rubber Hand Illusion; Theory of Everything; World of Chemistry; Physics of Superheroes; Chemistry Experiments ಮೊದಲಾದವು.
3. ಭಾಷೆ (Language) : ಇವುಗಳನ್ನು ತರಗತಿಗೆ ಪೂರಕವಾಗಿ ಭಾಷಾ ಉಪನ್ಯಾಸಗಳು ಹಾಗೂ ವ್ಯಾಕರಣ ಕಲಿಕೆಯಲ್ಲಿ ಬಳಸಬಹುದಾಗಿದೆ. ಇದರಲ್ಲಿ ದೊರೆಯುವ ಮುಖ್ಯ ವೀಡಿಯೋಗಳು Improving Listening Skills for FSL Teaching Tips ಮೊದಲಾದವು.
4. ಕಲೆ (Arts) : ಇದು ಕಲೆ ಹಾಗೂ ಅದರ ವಿನ್ಯಾಸಕ್ಕೆ ಸಂಬಂಧಿಸಿದ ವಿವಿಧ ಅಂಶಗಳ ಬಗ್ಗೆ ಸವಿವರ ಮಾಹಿತಿಯನ್ನು ನೀಡುವುದಾಗಿದೆ. ಇದರಲ್ಲಿ ಲಭ್ಯವಿರುವ ಪ್ರಮುಖ ವೀಡಿಯೋಗಳು ಈ ರೀತಿಯಾಗಿವೆ: Art Splash; A Tribute to Vincent Van Gogh, Pablo Picasso; Art Education for the Blind ಮುಂತಾದವು
5. ಸ್ಫೂರ್ತಿದಾಯಕ (Inspirational): ಇದು ಶಿಕ್ಷಕರಿಗೆ ಅತ್ಯಂತ ಉಪಯುಕ್ತವಾದ ಹಾಗೂ ಅವರು ತಮ್ಮ ದೈನಂದಿನ ಪಾಠ ಪ್ರವಚನ ಕಾರ್ಯದಲ್ಲಿ ಇಲ್ಲಿ ವಿವರಿಸಲಾದ ವಿಧಾನಗಳನ್ನು ಅಳವಡಿಸಿಕೊಂಡು ಉತ್ತಮ ಶೈಕ್ಷಣಿಕ ಅಂಶಗಳನ್ನು ಮೈಗೂಡಿಸಿಕೊಳ್ಳಲು ಸಹಾಯಕಾರಿಯಾಗಿದೆ. ಇವುಗಳಲ್ಲಿ ದೊರೆಯಬಹುದಾದ ಉತ್ತಮ ಗುಣಮಟ್ಟದ ವೀಡಿಯೋಗಳು ಹೀಗಿವೆ. Teachers Make a Difference. Teachers Are like Mirrors; What Teachers Make ಮೊದಲಾದವು.
6. ತರಗತಿ ನಿರ್ವಹಣೆ (Classroom Management) : ಇದು ಶಿಕ್ಷಕರಿಗೆ ತರಗತಿಯ ನಿರ್ವಹಣೆಯಲ್ಲಿ ಪೂರಕವಾದ ಅಂಶಗಳನ್ನೊಳಗೊಂಡ ವೀಡಿಯೋ ಶಿಕ್ಷಣ ಪ್ರಾತ್ಯಕ್ಷಿಕೆಯಾಗಿದ್ದು ಇದರಲ್ಲಿ ವಿದ್ಯಾರ್ಥಿಗಳು ತರಗತಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವಂತೆ ಮಾಡುವ ಹಾಗೂ ಅವರನ್ನು ನಿಯಂತ್ರಿಸುವ ಮಾಹಿತಿಯನ್ನು ಒಳಗೊಂಡಿದೆ. ಇವುಗಳಲ್ಲಿ ಪ್ರಮುಖವಾದುವೆಂದರೆ Mainataining Discipline ; Tips and Tricks for Classroom Management ; Teacher Training ಮುಂತಾದವು.
7. ತಂತ್ರಜ್ಞಾನ (Technology) : ಈ ವಿಡಿಯೋಗಳು ತರಗತಿಯ ಪರಸರದಲ್ಲಿ ತಾಂತ್ರಿಕ ಅಂಶಗಳನ್ನು ಸಮರ್ಪಕವಾಗಿ ಬಳಸಿಕೊಂಡು, ತಾವು ಬೋಧಿಸುವ ವಿಷಯುವನ್ನು ಇನ್ನಷ್ಟು ಆಕರ್ಷಣೀಯವಾಗಿಸಲು ಶಿಕ್ಷಕರಿಗೆ ಸಹಕಾರಿಯಾಗಿವೆ. ಉದಾಹರಣೆಗೆ Pod Casting for Teachers; Google Documents, Tutorial for Teachers; Microsoft Word Training for Teachers, Using Technology in Education ಮೊದಲಾದವು.
8. ಹಾಸ್ಯ (Humor): ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಮಗ್ನನಾಗಿ ಬಸವಳಿದ ಶಿಕ್ಷಕ ವಿದ್ಯಾರ್ಥಿಗಳ ಮನಸ್ಸಿಗೆ ಹಗುರವಾದ, ಚೇತೋಹಾರಿಯಾದ ಹಾಸ್ಯದ ತುಣುಕುಗಳ ಮೂಲಕ ಶಿಕ್ಷಣವನ್ನು ನೀಡುವ ವೀಡಿಯೋ ಇದಾಗಿದೆ. ಉದಾಹರಣೆಗೆ History of the World: Teachers Suck; Dramatic Chipmunk ಮುಂತಾದವು.


Digitised by Bharatavani, CIIL

**ಭಾರತದಲ್ಲಿ ಶೈಕ್ಷಣಿಕ ವೀಡಿಯೋದ ತಯಾರಿಕೆಯಲ್ಲಿ ಯು.ಜಿ.ಸಿ.ಯ ಪಾತ್ರ**

1984ರಲ್ಲಿ ಯು.ಜಿ.ಸಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲವೊಂದು ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿತು. ಆ ಸಮಯದಲ್ಲಿಯೇ ಉಪಗ್ರಹಾಧಾರಿತ ಕಾರ್ಯಕ್ರಮಗಳನ್ನು ತಯಾರಿಸುವ ಹಾಗೂ ಪ್ರಸಾರಮಾಡುವ ಸಲುವಾಗಿ EMRC (ವಿದ್ಯುನ್ಮಾನ ಮಾಧ್ಯಮ ಸಂಶೋಧನಾ ಕೇಂದ್ರ) ಹಾಗೂ AVRC (ದೃಕ್ ಶ್ರವಣ ಸಂಶೋಧನಾ ಕೇಂದ್ರ)ಗಳನ್ನು ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾಪಿಸಿ, ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಪ್ರಚಾರಪಡಿಸಲು ಅನುಕೂಲವಾಗುವಂತೆ Consortium for Educational Communication (CEC) ನ್ನು ಪ್ರಾರಂಭಿಸಿತು. ಕಳೆದ ಮೂರು ದಶಕಗಳಿಂದ CEC ಯು ಈ ಕೆಳಕಂಡ ಶೈಕ್ಷಣಿಕ ವೀಡಿಯೋಗಳನ್ನು ಪ್ರಮುಖವಾಗಿ ರೂಪಿಸಿದೆ.

1. ಸುಮಾರು 11 ವಿಷಯ ಕ್ಷೇತ್ರಗಳಲ್ಲಿ 30 ನಿಮಿಷ ಅವಧಿಯ ಪಠ್ಯಕ್ರಮ ಆಧಾರಿತ ಉಪನ್ಯಾಸಗಳು.
2. 15 ರಿಂದ 20 ನಿಮಿಷ ಅವಧಿಯ 49 ವಿಷಯಗಳ ಸುಮಾರು 8000 ವಿಷಯಾಧಾರಿತ ವೀಡಿಯೋಗಳು.
3. 2 ರಿಂದ 5 ನಿಮಿಷ ಅವಧಿಯ ವಿಷಯಾಧಾರಿತ ವೀಡಿಯೋ ತಂತ್ರಜ್ಞಾನ ರೂಪಿತ ಪ್ರಶ್ನಾವಳಿ ಹಾಗೂ ಪಾಠಾವಳಿಗಳು.

ಈ ಮೇಲ್ಕಂಡ ವೀಡಿಯೋಗಳನ್ನು ಭಾರತವಲ್ಲದೆ ವಿಶ್ವದ ಎಲ್ಲ ರಾಷ್ಟ್ರಗಳ ವಿದ್ಯಾರ್ಥಿ ಹಾಗೂ ಶಿಕ್ಷಕ ಸಮುದಾಯಕ್ಕೆ ದೊರೆಯುವಂತೆ ಮಾಡುವ ನಿಟ್ಟಿನಲ್ಲಿ ಯುಜಿಸಿ ಶ್ರಮಿಸಿ ಜನಪ್ರಿಯವಾಗಿದೆ.

UGC-Infonet ಸಂಪರ್ಕ ಹೊಂದಿರುವ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ತಾನು ತಯಾರಿಸಿರುವ ಶೈಕ್ಷಣಿಕ ವೀಡಿಯೋಗಳು ಲಭ್ಯವಾಗುವಂತೆ ಮಾಡುವಲ್ಲಿ UGC ಮುಖ್ಯಪಾತ್ರವಹಿಸಿದೆ. ಇವನ್ನು ಅಂತರ್ಜಾಲದ ಮೂಲಕ ಶೇಖರಿಸಿ, ಅವಶ್ಯಕತೆಗೆ ತಕ್ಕಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಯೋಗಿಸಬಹುದಾಗಿದೆ. CEC ಯಲ್ಲಿ ದೊರೆಯುವ ವಿವಿಧ ವಿಷಯಾಧಾರಿತ ಶೈಕ್ಷಣಿಕ ವೀಡಿಯೋಗಳನ್ನು ಸಂಗ್ರಹಿಸಿ, ವೀಡಿಯೋ ಗ್ರಂಥಾಲಯವನ್ನು ಸ್ಥಾಪಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಮುಂದುವರೆಯುವಲ್ಲಿ UGC ಸಹಾಯ ಹಸ್ತ ಚಾಚಿದೆ.

ವಿಶ್ವವಿದ್ಯಾನಿಲಯ ಧನಸಹಾಯ ಸಂಸ್ಥೆಯು (UGC) ಪ್ರಮುಖವಾಗಿ ಐದು ಬಗೆಯ ತಂತ್ರಜ್ಞಾನ/ತಾಂತ್ರಿಕತೆಗಳನ್ನು ಬಳಸಿ ಶೈಕ್ಷಣಿಕ ವೀಡಿಯೋಗಳ ತಯಾರಿಕೆಯಲ್ಲಿ ತೊಡಗಿದೆ.

1. METALEARN : ಇದು ಕಲಿಕೆಯ ಮೇಲ್ವಿಚಾರಣಾ ವ್ಯವಸ್ಥೆಯಾಗಿದೆ.
2. ADADO : ಇದು ಜಾಲಾಧಾರಿತ ತಾಣ ವ್ಯವಸ್ಥೆಯಾಗಿದೆ.
3. Opaltree : ಇದೂ ಸಹಾ ಕಲಿಕೆಯ ಮೇಲ್ವಿಚಾರಣಾ ವ್ಯವಸ್ಥೆಯಾಗಿದೆ.
4. Med Rc - Edutech : ಇದು ಕಂಪ್ಯೂಟರ್ ಆಧಾರಿತ ವೈದ್ಯಕೀಯ ವ್ಯವಸ್ಥೆಯಾಗಿದೆ.
5. Learning Object Repository : ಇದು ಕಲಿಕಾ ಶೇಖರಣಾ ವ್ಯವಸ್ಥೆಯಾಗಿದೆ.

ಈ ಎಲ್ಲ ತಂತ್ರಜ್ಞಾನಗಳನ್ನು ಬಳಸಿ ವಿವಿಧ ವಿಷಯಗಳಲ್ಲಿ ತಯಾರಿಸಿದ ಶೈಕ್ಷಣಿಕ ವೀಡಿಯೋಗಳನ್ನು ಶಿಕ್ಷಕ ಸಮುದಾಯ, ಆಡಳಿತಗಾರರು ಹಾಗೂ ವಿದ್ಯಾರ್ಥಿಗಳು ತಮ್ಮ ಅವಶ್ಯಕತೆಗೆ ತಕ್ಕಂತೆ ಮಾರ್ಪಡಿಸಿ ಉಪಯೋಗಿಸಬಹುದಾಗಿದೆ. ಶಿಕ್ಷಕರು ಶೈಕ್ಷಣಿಕ ವೀಡಿಯೋಧಾರಿತ ಮಾಹಿತಿಗಳನ್ನು ಪಡೆದು, ಅವುಗಳನ್ನು ನೇರ ಸಂಪರ್ಕ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸಿ, ಅವರ ಶೈಕ್ಷಣಿಕ ಸಾಧನೆಗಳನ್ನು ಉತ್ತಮಪಡಿಸಬಹುದಾಗಿದೆ. ಹಾಗೆಯೇ ಆಡಳಿತಗಾರರು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ವಿಮರ್ಶಿಸಿ, ಅವರಿಗೆ ಅಗತ್ಯವಾದ ಮಾಹಿತಿ ಸಂಪನ್ಮೂಲಗಳನ್ನು ಒದಗಿಸಬಹುದಾಗಿದೆ. ವಿದ್ಯಾರ್ಥಿಗಳು ನೇರ ಮಾಹಿತಿ ಸಂಪರ್ಕ ಮಾಧ್ಯಮದ ಮೂಲಕ ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಪೂರೈಸಿ, ಅದನ್ನು ಪ್ರತಿಪುಷ್ಟಿಯ ಮೂಲಕ ಶಿಕ್ಷಕರೊಡನೆ ಪ್ರತಿಕ್ರಿಯಿಸಬಹುದಾಗಿದೆ.

**ಅಂತರ್ಜಾಲದಲ್ಲಿ ಲಭ್ಯವಿರುವ ಶೈಕ್ಷಣಿಕ ವೀಡಿಯೋಗಳು**

ಅಂತರ್ಜಾಲದಲ್ಲಿ ಹಲವಾರು ವಿಷಯ ಕ್ಷೇತ್ರಗಳಿಗೆ ಸಂಬಂಧಿಸಿದ ಶೈಕ್ಷಣಿಕ ವೀಡಿಯೋಗಳು ಲಭ್ಯವಿದ್ದು, ಇವು ನೇರ ಸಂಪರ್ಕದ ಮೂಲಕ ಬಳಕೆದಾರರಿಗೆ ಲಭ್ಯವಾಗುತ್ತವೆ. ಇವುಗಳು ವಯೋಮಾನ ಹಾಗೂ ಅಭಿರುಚಿಗೆ ತಕ್ಕಂತೆ ತಯಾರಾಗಿರುವುದರಿಂದ ಎಲ್ಲ ವಯೋಮಾನದ ಬಳಕೆದಾರರೂ ತಮ್ಮ ತಮ್ಮ ಅಭಿರುಚಿ ಹಾಗೂ ಆಸಕ್ತಿಗೆ ತಕ್ಕಂತೆ ಇವುಗಳನ್ನು ಬಳಸಿ, ಮಾಹಿತಿಯನ್ನು ಪಡೆಯಬಹುದಾಗಿದೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ

1. ಸುದ್ದಿ ಮತ್ತು ಮಾಹಿತಿಗಾಗಿ – www.bbc.com
2. ವಾಣಿಜ್ಯ ಮತ್ತು ವಹಿವಾಟಿಗಾಗಿ–www.Amazon.com & www.ebay.com
3. ಶಿಕ್ಷಣ –ww.nationalgeograp hic.com & www.lego.com & http://kids.discovery.com/
4. ಚಲನಚಿತ್ರ – The movie matrix.com
5. ಆರೋಗ್ಯ – www.health.com
6. ವಿಜ್ಞಾನ ಮತ್ತು ಪರಿಸರ – www.bbc.co.ut./sn
7. ಕ್ರೀಡೆ – www.espn.com
8. ಹಣಕಾಸು ವಹಿವಾಟು – www.sec.gov
9. ಮಾಹಿತಿ – www.who.inf

**ಶೈಕ್ಷಣಿಕ ವೀಡಿಯೋಗಳ ಉಪಯೋಗ**

- ಸಿದ್ಧಪಡಿಸಿದ ವೀಡಿಯೋಗಳಲ್ಲಿ ಅಡಕವಾಗಿರುವ ಸಂಗತವಾಗಿರುವ ವಿಷಯದ ಮೂಲಾಂಶಗಳು, ಸಿದ್ಧಾಂತಗಳು ಹಾಗೂ ಪರಿಕಲ್ಪನೆಗಳ ಬಗೆಗೆ ದೃಶ್ಯಮಾಧ್ಯಮದ ಮೂಲಕ ಅಧ್ಯಯನಶೀಲರ ಗಮನಸೆಳೆಯುವುದು.
- ಈ ವೀಡಿಯೋಗಳ ವೀಕ್ಷಣೆಯ ಅಂತ್ಯದಲ್ಲಿ ಅಧ್ಯಯನಶೀಲರಿಗೆ ಉಂಟಾಗಬಹುದಾದ ಪರಿಣಾಮಗಳು ಹಾಗೂ ಅವುಗಳ ಪ್ರಭಾವವನ್ನು ತಿಳಿಯಬಹುದು.
- ಇವುಗಳಲ್ಲಿ ಅಡಕಗೊಳಿಸಿರುವ ವಿಷಯಗಳ ಬಗ್ಗೆ ತಿಳಿಸುವ ಸಲುವಾಗಿ ಪೀಠಿಕಾ ಭಾಗದಲ್ಲಿ ಉದಾಹರಣೆ ಸಹಿತವಾಗಿ ನಿರೂಪಿಸಿರುವ ಅಂಶಗಳ ಮೂಲಕ ವಿಷಯ ಪ್ರವೇಶ ಸರಳವಾಗಬಹುದಾಗಿದೆ.

Digitised by Bharatavani, CIIL

- ವಿಷಯವು ಮನದಟ್ಟಾಗುವಂತೆ ಇವುಗಳು ಬಳಸಿರುವ ರೇಖಾ ಚಿತ್ರಗಳು, ಗ್ರಾಫ್‌ಗಳು, ನಕ್ಷೆಗಳು, ಛಾಯಾಚಿತ್ರಗಳು ಇವೇ ಮೊದಲಾದ ಪೂರಕ ತಂತ್ರಗಳ ಮೂಲಕ ಬಳಕೆದಾರರು ವಿಷಯವನ್ನು ಆಮೂಲಾಗ್ರವಾಗಿ ಅರಿಯಬಹುದು.

- ಇವುಗಳಲ್ಲಿ ವಿಶದೀಕರಿಸಿರುವ ವಿಷಯಗಳನ್ನು ಸರಳವಾದ ಶೈಲಿಯಲ್ಲಿ ಕಠಿಣವಾದ ಸಿದ್ಧಾಂತಗಳನ್ನು ಕ್ರಮಬದ್ಧವಾದ ವಿಧಾನದಲ್ಲಿ ವಿವರಿಸಿರುವುದರಿಂದ ಓದುಗರಿಗೆ ಸುಲಭವಾಗಿ ಅರ್ಥವಾಗುತ್ತದೆ.

- ಕೆಲವು ವೀಡಿಯೋಗಳು ಪ್ರತಿಕ್ರಿಯಾತ್ಮಕ ತಂತ್ರಗಳಿಂದ ರೂಪಿಸಲ್ಪಟ್ಟಿರುವುದರಿಂದ ಓದುಗರ ವಿಶದೀಕೃತ ವಿಷಯಗಳ ಬಗ್ಗೆ ತಮಗಿರುವ ಸಂದೇಹಗಳನ್ನು ಪ್ರಶ್ನಿಸುವ ಮೂಲಕ ನಿವಾರಿಸಿಕೊಳ್ಳಬಹುದು.

- ಶೈಕ್ಷಣಿಕ ವೀಡಿಯೋಗಳು ವೀಕ್ಷಕರ ಕಲ್ಪನೆಗಳನ್ನು ಸಾಕಾರಗೊಳಿಸುವುದರಿಂದ ಇವು ಪ್ರತಿಪುಷ್ಟಿಗೆ ಅನುವು ಮಾಡಿಕೊಡುತ್ತವೆ.

- ಶೈಕ್ಷಣಿಕ ವೀಡಿಯೋಗಳಲ್ಲಿ ವೀಕ್ಷಿಸಿದ ವಿಚಾರಗಳನ್ನು ಮನದಟ್ಟು ಮಾಡಿಕೊಂಡು ಮುಂದಿನ ಹಂತಗಳಲ್ಲಿ ಇತರರಿಗೆ ಪರಿಣಾಮಕಾರಿಯಾದ ವಿಧಾನಗಳ ಮೂಲಕ ತಮ್ಮ ಜ್ಞಾನವನ್ನು ವರ್ಗಾಯಿಸಬಹುದು.

–ಎಂ. ಗೋ

## ಶೈಕ್ಷಣಿಕ ಸಮಾನಾವಕಾಶದ ಪರಿಕಲ್ಪನೆ

ಪ್ರತಿಯೊಬ್ಬರಿಗೂ ಶಿಕ್ಷಣವನ್ನು ಪಡೆಯುವ ಅವಕಾಶಗಳಿರಬೇಕು. ಏಕೆಂದರೆ ಶಿಕ್ಷಣವನ್ನು ಪಡೆಯುವುದು ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ. ಅಲ್ಲದೆ ಮಾನವರಾಗಿ ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆಯಲೇ ಬೇಕು ಎಂಬುದು ಸಾಮಾನ್ಯ ಭಾವನೆ. ಭಾರತ ಒಂದು ಸ್ವತಂತ್ರ ಪ್ರಜಾಪ್ರಭುತ್ವ ದೇಶ. ಜನರು ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಮತ್ತು ದೇಶದ ಆರ್ಥಿಕ ಪ್ರಗತಿಯಲ್ಲಿ ಆಸಕ್ತಿಯನ್ನು ತೋರಿಸಬೇಕಾದರೆ ಹಾಗೂ ತಮ್ಮದೇ ಆದ ಕೊಡುಗೆಯನ್ನು ನೀಡಬೇಕಾದರೆ ಅವರಿಗೆ ಸೂಕ್ತವಾದ ಶಿಕ್ಷಣದ ಅಗತ್ಯ ಇರುತ್ತದೆ. ಶಿಕ್ಷಣದ ಕೊರತೆಯು, ಉಳ್ಳವರು ಮತ್ತು ಉಳ್ಳದವರ ನಡುವೆ ಹೆಚ್ಚಿನ ವ್ಯತ್ಯಾಸವನ್ನು ಉಂಟುಮಾಡುತ್ತದೆ ಎಂದರೆ ಕಡಿಮೆ ಸಂಖ್ಯೆಯಲ್ಲಿ ಶ್ರೀಮಂತರನ್ನು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಬಡವರನ್ನು ನಿರ್ಮಾಣ ಮಾಡುತ್ತದೆ. ಈ ಸಮಸ್ಯೆಯ ನಿವಾರಣೆಗೆ ಎಲ್ಲರಿಗೂ ಶಿಕ್ಷಣವನ್ನು ಪಡೆಯುವ ಅವಕಾಶದಲ್ಲಿ ಸಮಾನತೆ ಇರಬೇಕು. ಇದನ್ನೇ ಶೈಕ್ಷಣಿಕ ಸಮಾನಾವಕಾಶ ಎನ್ನುವುದು.

ಶಿಕ್ಷಣದಲ್ಲಿ ಸಮಾನತೆ ಎನ್ನುವುದು, ಶೈಕ್ಷಣಿಕ ಸಮಾನಾವಕಾಶ, ಶಿಕ್ಷಣದ ವೆಚ್ಚ ಮತ್ತು ಅದರಿಂದ ಪಡೆಯುವ ಪ್ರತಿಫಲ ಮತ್ತು ಶಿಕ್ಷಣಕ್ಕಾಗಿ ವೆಚ್ಚ ಮಾಡುವ ಶಕ್ತಿ, ಮುಂತಾದವುಗಳನ್ನು ಒಳಗೊಂಡಿದೆ. ಅದು ಆದಾಯದಲ್ಲಾಗುವ ವ್ಯತ್ಯಾಸವನ್ನೂ ತೀರ್ಮಾನಿಸುವ ಸಾಧನವಾಗಿದೆ. ವಿವಿಧ ಹಂತಗಳಲ್ಲಿ ಶಿಕ್ಷಣದ ಕೊಡುಗೆ ಮತ್ತು ಅದರಿಂದ ಆಗುವ ಆದಾಯದ ಹಂಚಿಕೆ ಮುಂತಾದವುಗಳನ್ನು ಮೌಲ್ಯಮಾಪನ ಮಾಡಲು “ಜಿ”–ಕೋಎಫಿಶಿಯಂಟ್”, “ಲಾರೆನ್ಜ್ ಕರ್ವ್” ಮುಂತಾದ ಸಾಧನಗಳಿವೆ.

ಕೊಠಾರಿ ಶಿಕ್ಷಣ ಆಯೋಗ (1964–66) ವರದಿಯ ಪ್ರಕಾರ ದೇಶದ ಎಲ್ಲ ಅರ್ಹ ಮಕ್ಕಳೂ, ಅವರು ದೇಶದ ಯಾವ ಭಾಗದಲ್ಲೇ ಇರಲಿ, ಯಾವ ಪಂಥದವರೇ ಆಗಿರಲಿ, ಹೆಣ್ಣು ಮಕ್ಕಳಾಗಿರಲಿ ಅಥವಾ ಗಂಡು ಮಕ್ಕಳಾಗಿರಲಿ, ಶಿಕ್ಷಣ ಪಡೆಯುವ ಅವಕಾಶವನ್ನು ಹೊಂದಿರಬೇಕು.

ಆದ್ದರಿಂದ ಶಿಕ್ಷಣದ ಸಮಾನಾವಕಾಶವು ಅತಿ ಮುಖ್ಯವಾದುದು. ಏಕೆಂದರೆ ಶಿಕ್ಷಣವನ್ನು ಪಡೆಯುವುದು ಪ್ರತಿಯೊಂದು ಮಗುವಿನ ಸಾರ್ವತ್ರಿಕ ಹಕ್ಕು. ಇದು ಒಂದು ಮೂಲಭೂತ ಹಕ್ಕು. ಇದನ್ನು ಯಾರಿಂದಲೂ ಹೊರತುಪಡಿಸಲು ಸಾಧ್ಯವಿಲ್ಲ.

ಎರಡನೆಯದಾಗಿ, ಶಿಕ್ಷಣವು ಜನರ ಸಾಮಾಜಿಕ ಹಾಗೂ ಆರ್ಥಿಕ ಮಟ್ಟವನ್ನು ಉತ್ತಮಪಡಿಸುವುದೆಂಬುದೂ ಎಲ್ಲರೂ ಶಿಕ್ಷಣದಿಂದ ಆಕರ್ಷಿತರಾಗಲು, ಅದನ್ನು ಪಡೆಯಲು ಪ್ರಯತ್ನಿಸಲು ಮತ್ತೊಂದು ಕಾರಣವಾಗಿದೆ.

ಹೀಗೆ ಸಮಾಜದ ದೃಷ್ಟಿಯಿಂದ ಹೇಳುವುದಾದರೆ ಶಿಕ್ಷಣದ ಸಮಾನತೆಯು ದೇಶದ ಆರ್ಥಿಕ ಅಭಿವೃದ್ಧಿಯೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಈಗ ಪ್ರತಿಯೊಂದು ದೇಶವೂ ತಮ್ಮ ತಮ್ಮ ಹಿತದೃಷ್ಟಿಯಿಂದ ಶಿಕ್ಷಣದ ಸಮಾನತೆಯನ್ನು ಯಾವುದಾದರು ಒಂದು ರೀತಿಯಲ್ಲಿ ಸಾಧಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತದೆ.

ಶಿಕ್ಷಣದ ಸಮಾನತೆ ಎನ್ನುವ ಪರಿಕಲ್ಪನೆಯು ‘ಶಿಕ್ಷಣ’ ಎನ್ನುವ ಸೌಲಭ್ಯದ ಹಂಚಿಕೆಯ ಸಮಾನತೆ ಎನ್ನುವ ತತ್ವವನ್ನು ಅಳವಡಿಸುವುದೇ ಆಗಿದೆ. ಇಲ್ಲಿ ಶಿಕ್ಷಣವು ಪ್ರಾಥಮಿಕ ಹಂತದ ಉಚಿತ ಶಿಕ್ಷಣವಾಗಿರಬಹುದು, ಅಥವಾ ಪ್ರೌಢ ಶಿಕ್ಷಣವಾಗಿರಬಹುದು ಅಥವಾ ಉನ್ನತ ಶಿಕ್ಷಣವಾಗಿರಬಹುದು. ಆದರೆ ಪ್ರತಿಯೊಂದು ಹಂತವೂ ಬೇರೆ ಬೇರೆ. ಆದ್ದರಿಂದಲೇ ಸಮಾನತೆ ಎನ್ನುವುದರ ಅರ್ಥ ಮತ್ತು ಪ್ರಭಾವ ಬೇರೆ ಬೇರೆ ಹಂತದ ಶಿಕ್ಷಣಕ್ಕೆ ಅನ್ವಯಿಸುವ ರೀತಿ ಬೇರೆ ಬೇರೆಯಾಗಿರುತ್ತದೆ.

ಶಿಕ್ಷಣದ ಸಮಾನತೆ ಎನ್ನುವ ಪರಿಕಲ್ಪನೆಯು ಉನ್ನತ ಶಿಕ್ಷಣದ ವಿಷಯದಲ್ಲಿ ಅತ್ಯಂತ ಸೂಕ್ತವಾಗಿರುತ್ತದೆ. ಉನ್ನತ ಶಿಕ್ಷಣವು ತನ್ನದೇ ಆದ ಸ್ವಭಾವದಿಂದ, ಅದನ್ನು ಒಬ್ಬರು ಸಂಪಾದಿಸಬಹುದೇ ವಿನಃ, ಹಾಗೆಯೇ ದೊರೆಯುವುದಿಲ್ಲ. ಅದು ಎಲ್ಲರಿಗೂ ದಕ್ಕುವುದಾದರೆ ಅದರಿಂದ ಬೇಕಾದಷ್ಟು ಸಂಪನ್ಮೂಲಗಳ ನಷ್ಟ, ಗುಣ ಮಟ್ಟದ ಕುಸಿತ, ಮುಂತಾದವುಗಳು ಉಂಟಾಗುತ್ತವೆ. ಉನ್ನತ ಶಿಕ್ಷಣದ ವಿಚಾರದಲ್ಲಿ ಅದನ್ನು ಪಡೆಯುವ ‘ಹಕ್ಕು’ ಎಂಬುದೇನೂ ಇಲ್ಲ. ಆ ಹಕ್ಕು ದೊರೆಯಬೇಕಾದರೆ ಅದಕ್ಕೆ ತಕ್ಕ ಯೋಗ್ಯತೆ ಇರಬೇಕು. ಆ ‘ಯೋಗ್ಯತೆ’ ಎಂದರೆ ಶೈಕ್ಷಣಿಕ ಅರ್ಹತೆಯೇ ವಿನಃ ಬೇರೆ ಯಾವುದೂ ಅಲ್ಲ. ಮಾನವ ಹಕ್ಕಿನ ಸಾರ್ವತ್ರಿಕ ಪ್ರಕಟಣೆಯ ಪ್ರಕಾರ ‘ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವವರಿಗೆ ಉನ್ನತ ಶಿಕ್ಷಣವು ದೊರಕುವುದರಲ್ಲಿ ಯಾವ ತೊಂದರೆಯೂ ಇರಬಾರದು’. ಶೈಕ್ಷಣಿಕ ಅರ್ಥಶಾಸ್ತ್ರದ ಪ್ರಕಾರ, ಶೈಕ್ಷಣಿಕ ಸಮಾನತೆಯನ್ನು ಗಳಿಸುವುದು ಎಂದರೆ ಸಂಪಾದನೆಯಲ್ಲಿನ ಸಮಾನತೆ ಮತ್ತು ಅಂತಹ ಶಿಕ್ಷಣಕ್ಕಾಗುವ ವೆಚ್ಚದಲ್ಲಿನ ಸಮಾನತೆ. ಸಾಮಾಜಿಕ–ಆರ್ಥಿಕ ಜವಾಬ್ದಾರಿಯ ದೃಷ್ಟಿಕೋನದಿಂದ ಹೇಳುವುದಾದರೆ, ಉನ್ನತ ಶಿಕ್ಷಣದಲ್ಲಿನ ಶೈಕ್ಷಣಿಕ ಅವಕಾಶಗಳ ಸಮಾನತೆಯು ಕೇವಲ ‘ಅರ್ಹತೆ’ಯ ಆಧಾರವನ್ನು ಹೊಂದಿದ್ದು, ಅದರಿಂದ ಲಾಭಗಳಿಸಿ, ಆ ಮೂಲಕ ಸಮಾಜಕ್ಕೆ ಕೊಡುಗೆಯನ್ನು ನೀಡುವುದೇ ಆಗಿದೆ.

### 2. ಶಿಕ್ಷಣದಲ್ಲಿ ಸ್ವಾಯತ್ತತೆ ಮತ್ತು ಉತ್ತರದಾಯಿತ್ವ

ವಿವಿಧ ರೀತಿಯ ಶಿಕ್ಷಣವನ್ನು ನೀಡುವ ಉತ್ತಮ ಶಿಕ್ಷಣ ಸಂಸ್ಥೆಗಳು ತಾವು ಮಾಡುವ ಶೈಕ್ಷಣಿಕ ಕೆಲಸದಲ್ಲಿ ಹಲವು ರೀತಿಯ ಸ್ವಾತಂತ್ರ್ಯವನ್ನು ಬಯಸುತ್ತವೆ. ಅಂತಹ ಸ್ವಾತಂತ್ರ್ಯವನ್ನು ಅವುಗಳು ಪಡೆಯುವುದಕ್ಕೆ ಶಿಕ್ಷಣದಲ್ಲಿ ಸ್ವಾಯತ್ತತೆ ಎನ್ನುತ್ತಾರೆ. ಇಂತಹ ಸ್ವಾಯತ್ತತೆಯು ಶಿಕ್ಷಣ ಸಂಸ್ಥೆಗಳು ಸ್ವಾತಂತ್ರ್ಯದಿಂದ ವಿವಿಧ ಕೋರ್ಸುಗಳನ್ನು ಪ್ರಾರಂಭಿಸಲು, ಬೋಧನಾ ವಿಧಾನ ಹಾಗೂ ಮೌಲ್ಯಮಾಪನ ವಿಧಾನಗಳನ್ನು


Digitised by Bharatavani, CIIL

ಗೊತ್ತುಪಡಿಸಲು, ಪಠ್ಯ ವಿಷಯಗಳನ್ನು ರಚಿಸಲು, ಮುಂತಾದ ಶೈಕ್ಷಣಿಕ ಅಭಿವೃದ್ಧಿಗಳಿಗೆ ಅವಕಾಶ ಮಾಡಿಕೊಡುತ್ತದೆ. ಆದರೆ ಎಲ್ಲಿ ಸ್ವಾಯತ್ತತೆ ಇರುತ್ತದೆಯೋ ಅಲ್ಲಿ ಉತ್ತರದಾಯಿತ್ವದ ಅಗತ್ಯವೂ ಇರುತ್ತದೆ. ಆದ್ದರಿಂದಲೇ ಸ್ವಾಯತ್ತತೆ ಮತ್ತು ಉತ್ತರದಾಯಿತ್ವಗಳನ್ನು ಒಂದೇ ನಾಣ್ಯದ ಎರಡು ಮುಖಗಳೆಂದು ಕರೆಯುವರು. ಸ್ವಾಯತ್ತತೆ ಇದ್ದು ಉತ್ತರದಾಯಿತ್ವ ಇಲ್ಲದಿದ್ದರೆ ಅದೊಂದು ರೀತಿಯ ದಬ್ಬಾಳಿಕೆಯಾಗುತ್ತದೆ. ಆದ್ದರಿಂದ ಇವೆರಡರ ನಡುವೆ ಒಂದು ರೀತಿಯ ಸಮತೋಲನ ಅಗತ್ಯ.

ಉತ್ತರದಾಯಿತ್ವ ಎಂದರೆ ಮಾಡಿದ ಕೆಲಸದ ವಿಷಯದಲ್ಲಿ ವಹಿಸಬೇಕಾದ ಜವಾಬ್ದಾರಿ ಮತ್ತು ಅದಕ್ಕೆ ನೀಡಬೇಕಾದ ಸರಿಯಾದ ಮತ್ತು ತೃಪ್ತಿಕರವಾದ ಸಮಜಾಯಿಸಿ. ಶಿಕ್ಷಣದಲ್ಲಿ ಉತ್ತರದಾಯಿತ್ವವು ಶಿಕ್ಷಕರಿಗೆ ಮನವರಿಕೆ ಮಾಡಿಕೊಡುವುದೇನೆಂದರೆ, ಅವರು ಶಿಕ್ಷಕರಾಗಿ ಕೆಲಸಕ್ಕೆ ಸೇರಿದಮೇಲೆ ಅವರು ಮಕ್ಕಳಿಗೆ ಕೊಡುವ ಶಿಕ್ಷಣವು ಅವರಿಗೆ ಲಾಭದಾಯಕವಾಗಿರುತ್ತದೆ ಎಂಬುದನ್ನು ಖಾತ್ರಿ ಪಡಿಸುವುದೇ ಆಗಿರುತ್ತದೆ ಎನ್ನಬಹುದು. ಇದೇ ರೀತಿಯ ಉತ್ತರದಾಯಿತ್ವವನ್ನು ಸ್ವಾಯತ್ತ ಶಿಕ್ಷಣ ಸಂಸ್ಥೆಗಳೂ ಹೊಂದಿರುತ್ತವೆ.

ಉನ್ನತ ಶಿಕ್ಷಣದ ಹಂತದಲ್ಲಿ ಸ್ವಾಯತ್ತತೆ ಮತ್ತು ಉತ್ತರದಾಯಿತ್ವಕ್ಕೆ ಹೆಚ್ಚಿನ ಮಹತ್ವವಿದೆ. ಸ್ವಾಯತ್ತ ಶಿಕ್ಷಣ ಸಂಸ್ಥೆಗಳು ತಮ್ಮ ಕ್ರಿಯೆಗೆ ಮತ್ತು ಅದರಿಂದ ಅವುಗಳು ಎಷ್ಟರ ಮಟ್ಟಿಗೆ ಸಮಾಜದ ನಿರೀಕ್ಷೆಗೆ ಅನುಗುಣವಾಗಿ ಕೆಲಸವನ್ನು ನಿಭಾಯಿಸಿವೆ ಅಥವಾ ಸೋತಿವೆ ಎಂಬುವುಗಳ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

### 3. ಸಾಂಸ್ಥಿಕ ಮೌಲ್ಯಮಾಪನ ಮತ್ತು ಶಿಕ್ಷಣದ ಗುಣಾತ್ಮಕತೆ

ಪ್ರತಿಯೊಂದು ಸಂಸ್ಥೆಯೂ ತನ್ನ ಕೆಲಸ ಕಾರ್ಯಗಳನ್ನು ಒಂದು ಗೊತ್ತಾದ ಚೌಕಟ್ಟಿನಲ್ಲಿ ನಡೆಸಿಕೊಂಡು ಹೋಗುವುದು ಅತ್ಯವಶ್ಯಕ. ಇದು ಶಿಕ್ಷಣ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಎಲ್ಲಾ ಹಂತಗಳ ಶಿಕ್ಷಣ ಸಂಸ್ಥೆಗಳಿಗೂ ಅವುಗಳದೇ ಆದ ಕಾರ್ಯಗಳಿರುತ್ತವೆ. ಅವುಗಳನ್ನು ಯಾವ ಇತಿ–ಮಿತಿಯಲ್ಲಿ ಅವುಗಳು ನಡೆಸಿಕೊಂಡು ಹೋಗಬೇಕು ಎಂಬುದರ ಬಗ್ಗೆ ಯಾವಾಗಲೂ ಸ್ಪಷ್ಟವಾದ ನಿರ್ದೇಶನವಿರುತ್ತದೆ. ಕಟ್ಟುನಿಟ್ಟಾಗಿ ಎಲ್ಲಾ ನಿರ್ದೇಶನಗಳನ್ನೂ ಪಾಲಿಸಿಕೊಂಡು ತಮ್ಮ ಕಾರ್ಯಸಿದ್ಧಿಯನ್ನು ಪಡೆಯುವ ಸಂಸ್ಥೆಗಳಿಗೆ ಉತ್ತಮ ಆಡಳಿತವನ್ನು ಹೊಂದಿರುವ ಸಂಸ್ಥೆಗಳೆನ್ನಬಹುದು. ಅವುಗಳ ಕಾರ್ಯ ಸಾಮರ್ಥ್ಯವನ್ನು ಅಳತೆ ಮಾಡಿ, ಅವುಗಳ ಯಶಸ್ಸು ಅಥವಾ ಲೋಪದೋಷಗಳನ್ನು ತಿಳಿಸಬೇಕಾದರೆ, ಅವುಗಳನ್ನು ಹಲವು ಪರೀಕ್ಷೆಗಳಿಗೆ ಗುರಿಪಡಿಸಬೇಕಾಗುತ್ತದೆ. ಹೀಗೆ ಸಂಸ್ಥೆಗಳನ್ನು, ಅವುಗಳ ಕಾರ್ಯಸಿದ್ಧಿಯನ್ನು ತಿಳಿದುಕೊಳ್ಳುವ ಸಲುವಾಗಿ, ಪರೀಕ್ಷೆಗೆ ಗುರಿಪಡಿಸುವುದನ್ನು "ಸಾಂಸ್ಥಿಕ ಮೌಲ್ಯಮಾಪನ" ಎನ್ನುತ್ತಾರೆ. ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನ ಅವುಗಳ ಗುಣಾತ್ಮಕತೆಯನ್ನು ಪ್ರತಿಬಿಂಬಿಸುತ್ತದೆ. ಈಗಿನ ಕಾಲದಲ್ಲಿ ಶಿಕ್ಷಣದ ಗುಣದ ಪರಿಕಲ್ಪನೆ ಒಂದು ಕೈಗಾರಿಕಾ ವಸ್ತುವಿನ ಗುಣದ ಪರಿಕಲ್ಪನೆಗಿಂತ ಭಿನ್ನವಾಗಿಲ್ಲವೆಂದು ಹೇಳಬಹುದು. ಏಕೆಂದರೆ ಒಂದು ವಸ್ತುವಿಗೆ ಬೆಲೆ ಕೊಟ್ಟು ಕೊಂಡುಕೊಂಡಾಗ ಕೊಟ್ಟ ಹಣಕ್ಕೆ ತಕ್ಕ ಗುಣಮಟ್ಟವನ್ನು ಅದು ಹೊಂದಿದೆಯೇ, ಬಾಳಿಕೆ ಬರುತ್ತದೆಯೇ ಎಂದು ಪರೀಕ್ಷಿಸುವಂತೆ, ಶಿಕ್ಷಣಕ್ಕೂ ಹಣ ಕೊಡುವುದರಿಂದ ಅದರ ಗುಣಮಟ್ಟ ಮತ್ತು ಉಪಯೋಗಗಳ ಬಗ್ಗೆ ಯೋಚಿಸಬೇಕಾಗುತ್ತದೆ. ಇಲ್ಲಿ ಶಿಕ್ಷಣದ ಗುಣಮಟ್ಟ ಎಂದರೆ, ಶಿಕ್ಷಣದ ಚಟುವಟಿಕೆಗಳಾದ ಬೋಧನೆ, ಸಂಶೋಧನೆ ಮುಂತಾದವುಗಳ ವ್ಯಾಪ್ತಿಯನ್ನು ಶಿಕ್ಷಣ ಸಂಸ್ಥೆಯು ಎಷ್ಟರ ಮಟ್ಟಿಗೆ ವಿಸ್ತರಿಸಿದೆ, ವಿವಿಧ ವಿಷಯಗಳ ಬೋಧನೆಯನ್ನು ಯಾವ ರೀತಿಯಲ್ಲಿ ಮಾಡಲಾಗುತ್ತಿದೆ ಮತ್ತು ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಹೇಗಿದೆ ಸುಧಾರಣೆಗಾಗಿ ಸಂಸ್ಥೆಯು ಏನೇನು ಮಾಡುತ್ತದೆ ಎಂಬ ಅಂಶಗಳು ಒಳಗೊಂಡಿರುತ್ತವೆ, ವಸ್ತುಗಳಿಗಾಗಲಿ ಅಥವಾ ಶಿಕ್ಷಣಕ್ಕಾಗಲಿ ಮಾಡಿದ ವೆಚ್ಚ ಎಂದರೆ ಕೊಟ್ಟ ಬೆಲೆ ಹಲವು ಕಾಲಾನಂತರ ಮರೆತು ಹೋಗಬಹುದು. ಆದರೆ ಅವುಗಳ ಗುಣಮಟ್ಟ ಮಾತ್ರ ಯಾವಾಗಲೂ ಶಾಶ್ವತವಾಗಿ ನೆನಪಿನಲ್ಲುಳಿಯುತ್ತದೆ. ಆದ್ದರಿಂದ ಗುಣಮಟ್ಟ ಮುಖ್ಯವಾದುದು. ಹೀಗೆ ಶಿಕ್ಷಣದ ಗುಣಮಟ್ಟ ಎನ್ನುವುದನ್ನು ಈಗ ಒಂದು 'ದಾರ್ಶನಿಕ ಪರಿಕಲ್ಪನೆ' ಎಂದು ಭಾವಿಸಲಾಗುವುದಿಲ್ಲ, ಆದರೆ ಅದನ್ನು ವ್ಯಾಖ್ಯಾನಿಸಿ ಅಳತೆಯ ಮಾನಕ್ಕೆ ಒಳಪಡಿಸಲಾಗುವುದು.

ಶಿಕ್ಷಣದ ಗುಣಮಟ್ಟವು ಹಲವು ಆಯಾಮಗಳನ್ನು ಹೊಂದಿದೆ. ಅವುಗಳೆಂದರೆ, ಪಠ್ಯ ವಸ್ತುವಿನ ಗುಣಮಟ್ಟ, ಬೋಧನೆಯ ಗುಣಮಟ್ಟ, ಶಿಕ್ಷಣ ಸಂಸ್ಥೆಯಲ್ಲಿನ ಸಂಪನ್ಮೂಲದ ಹಂಚಿಕೆಯ ಗುಣಮಟ್ಟ ಮತ್ತು ಸಂಸ್ಥೆಯ ಆಡಳಿತದ ಗುಣಮಟ್ಟ.

### 4. ಶಿಕ್ಷಣ ಮತ್ತು ಆರ್ಥಿಕ ಬೆಳವಣಿಗೆಗಳಿಗಿರುವ ಸಂಬಂಧ

ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಶಿಕ್ಷಣವು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ದೇಶದ ಅಭಿವೃದ್ಧಿಗೆ ಶಿಕ್ಷಣದ ಕೊಡುಗೆಯು ಪ್ರತ್ಯಕ್ಷ ಅಥವಾ ಪರೋಕ್ಷವಾಗಿರಬಹುದು. ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ವಿಜ್ಞಾನ ವಿಷಯಗಳ ಶಿಕ್ಷಣ, ಮುಂತಾದವುಗಳು ತಮ್ಮ ಕೊಡುಗೆಯನ್ನು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಪ್ರತ್ಯಕ್ಷವಾಗಿ ನೀಡುತ್ತವೆ. ಇತರ ಬಗೆಯ ಶಿಕ್ಷಣವು ಜನರ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿ ಅವರು ದೇಶದ ಅಭಿವೃದ್ಧಿಯಲ್ಲಿ ಸಹಕರಿಸುವಂತೆ, ಆಧುನೀಕರಣಕ್ಕೆ ಕೈ ಜೋಡಿಸುವಂತೆ, ಕುಟುಂಬ ಯೋಜನೆಯನ್ನು ಕೈಗೊಳ್ಳುವಂತೆ, ದೇಶದ ಎಲ್ಲಾ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸುವಂತೆ ಪ್ರೇರೇಪಿಸುತ್ತದೆ. ಇದು ಶಿಕ್ಷಣವು ಪರೋಕ್ಷವಾಗಿ ದೇಶದ ಅಭಿವೃದ್ಧಿಗೆ ನೆರವು ನೀಡುವ ರೀತಿಯಾಗಿದೆ.

ಒಟ್ಟಿನಲ್ಲಿ ಶಿಕ್ಷಣ ದೇಶದ ಆರ್ಥಿಕಾಭಿವೃದ್ಧಿಗೆ ಅಗತ್ಯವಾದ ಕೌಶಲದಿಂದ ಕೂಡಿದ ಮಾನವ ಶಕ್ತಿಯನ್ನು ಒದಗಿಸುತ್ತದೆ. ಇಂತಹ ಮಾನವ ಶಕ್ತಿ ಇಲ್ಲದಿದ್ದರೆ ದೇಶದ ನೈಸರ್ಗಿಕ ಸಂಪನ್ಮೂಲಗಳು ಎಷ್ಟೇ ಇದ್ದರೂ ಪ್ರಯೋಜನವಾಗುವುದಿಲ್ಲ. ಎರಡನೆಯದಾಗಿ, ಶಿಕ್ಷಣವು ಆಲೋಚನಾ ಶಕಿಯುಳ್ಳ ಮಾನವ ಸಂಪನ್ಮೂಲವನ್ನು ಸೃಷ್ಟಿ ಮಾಡುತ್ತದೆ. ಅಂತಹ ಮಾನವ ಶಕ್ತಿಯಿಂದ ದೇಶಕ್ಕೆ ಈಗ ಮತ್ತು ಭವಿಷ್ಯಕ್ಕೆ ಬೇಕಾದ ವ್ಯವಸ್ಥೆಗಳ ರೂಪುರೇಷೆಗಳು ಸಿದ್ಧಗೊಂಡು ದೇಶದ ಆರ್ಥಿಕಾಭಿವೃದ್ಧಿ ತ್ವರಿತವಾಗಿ ಮುಂದಕ್ಕೆ ಸಾಗಲು ಸಾಧ್ಯವಾಗುತ್ತದೆ. ಈ ಕೆಲಸದಲ್ಲಿ ಎದುರಾಗುವ ಹಲವಾರು ಸವಾಲುಗಳನ್ನು ಸುಲಭವಾಗಿ ಎದುರಿಸಲು ಅವರು ಗಳಿಸಿದ ಶಿಕ್ಷಣ ನೆರವಿಗೆ ಬರುತ್ತದೆ. ಮೂರನೆಯದಾಗಿ, ವ್ಯವಸಾಯಗಾರರಿಗೆ ಶಿಕ್ಷಣವು ತಮ್ಮ ವ್ಯವಸಾಯವನ್ನು ಲಾಭದಾಯಕವಾದ ವೃತ್ತಿಯನ್ನಾಗಿ ಹೇಗೆ ಪರಿವರ್ತಿಸಿಕೊಳ್ಳಬಹುದೆಂಬ ತಿಳಿವಳಿಕೆಯನ್ನು ಉಂಟುಮಾಡುತ್ತದೆ. ಇದರಿಂದ ರೈತರ ಉತ್ಪಾದಕ ಶಕ್ತಿ ಹೆಚ್ಚುತ್ತದೆ. ಇದು ಅವರಿಗೆ ಎಷ್ಟು ಲಾಭದಾಯಕವೋ ದೇಶಕ್ಕೂ ಅಷ್ಟೇ ಲಾಭದಾಯಕವಾಗಿರುತ್ತದೆ.

ಹಲವು ಅರ್ಥಶಾಸ್ತ್ರಜ್ಞರು ಮಾಡಿರುವ ಸಮೀಕ್ಷೆಗಳಿಂದ ತಿಳಿದು ಬರುವುದೇನೆಂದರೆ, ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಅಲ್ಲಿನ ರಾಷ್ಟ್ರೀಯ ಆದಾಯಕ್ಕೆ ಕೊಡುಗೆಯನ್ನು ನೀಡುವ ವಸ್ತು ಮತ್ತು ಸೇವೆಗಳ ಮೌಲ್ಯದಷ್ಟೇ ಶಿಕ್ಷಣವನ್ನು ಪಡೆದ ಮಾನವ ಸಂಪನ್ಮೂಲವೂ ನೀಡುತ್ತದೆ. ಮಾನವ ಸಂಪನ್ಮೂಲದ ಅಭಿವೃದ್ಧಿಯು ಸಾಮಾನ್ಯ ಶಿಕ್ಷಣ, ಎಲ್ಲ ಬಗೆಯ ಔದ್ಯೋಗಿಕ ಶಿಕ್ಷಣ, ಸಂಶೋಧನೆ, ಸಂಘಟನೆ ಮುಂತಾದವುಗಳಿಂದ ಸಾಧ್ಯವಾಗುತ್ತದೆ.

–ಎಚ್.ಎಸ್.ಆರ್.

Digitised by Bharatavani, CIIL

## ಶೈಕ್ಷಣಿಕ ಸಂಶೋಧನೆಯ ಸ್ವರೂಪ

ಸಂಶೋಧನೆಯು ಪರಿಸರ ಹಾಗೂ ವ್ಯಕ್ತಿಗಳಿಗೆ ಸಂಬಂಧಪಟ್ಟ ಸಂಗತಿಗಳು ಅಥವಾ ಘಟನೆಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಅರ್ಥಪೂರ್ಣ ಉತ್ತರಗಳನ್ನು ನಿರೂಪಿಸಲು ವೈಜ್ಞಾನಿಕ ಕ್ರಮಗಳನ್ನು ಅನ್ವಯಿಸುವುದರ ವ್ಯವಸ್ಥಿತ ಪ್ರಯತ್ನವಾಗಿದೆ. ಇದು ದತ್ತಾಂಶಗಳ ನಿಯಂತ್ರಿತ ವೀಕ್ಷಣೆಯನ್ನು ವಸ್ತುನಿಷ್ಠವಾಗಿ, ನಿಷ್ಪಕ್ಷಪಾತವಾಗಿ, ಆಧಾರ ಸಹಿತ ಸಂಗ್ರಹಿಸಿ ಅವುಗಳನ್ನು ತಾರ್ಕಿಕವಾಗಿ ವಿಶ್ಲೇಷಣೆ ಮಾಡಿ ದಾಖಲಿಸುವುದಾಗಿದೆ. ಸಂಶೋಧನೆಯು ಸಾರ್ವತ್ರೀಕರಣಗಳು, ತತ್ವಗಳು ಅಥವಾ ಸಿದ್ಧಾಂತಗಳ ವಿಕಾಸಕ್ಕೆ ಸಹಾಯಕವಾಗುತ್ತದೆ. ಸ್ವಲ್ಪಮಟ್ಟಿಗೆ ನಿರ್ದಿಷ್ಟ ಸಂಗತಿಯ ಕಾರಕಗಳು ಮತ್ತು ಪರಿಣಾಮಗಳ ಊಹೆಗೂ ಮತ್ತು ಘಟನೆಗಳ ನಿಯಂತ್ರಣಕ್ಕೂ ಸಾಧ್ಯವಾಗಬಹುದು. ಸಂಶೋಧನೆಯು ವಸ್ತುಗಳ ನಿಜವಾದ ಸ್ವರೂಪವನ್ನು ಶೋಧಿಸುವುದಾಗಿದೆ. ಅದು ಅಸ್ತಿತ್ವದಲ್ಲಿರುವ ಸಂಗತಿಗಳು, ವಸ್ತುಗಳು, ಘಟನೆಗಳು, ಬದಲಾವಣೆ ಇತ್ಯಾದಿಗಳನ್ನು ವಿವರಿಸುವ ಪ್ರಯತ್ನ ಮಾಡುತ್ತದೆ. ಆದುದರಿಂದ ಸಂಶೋಧನೆಯನ್ನು ವೈಜ್ಞಾನಿಕ ವಿಧಾನದಿಂದ ವಿಶ್ಲೇಷಣೆಯನ್ನು ಕೈಗೊಳ್ಳುವ ಔಪಚಾರಿಕ, ವ್ಯವಸ್ಥಿತ ಮತ್ತು ಆಳವಾದ ಪ್ರಕ್ರಿಯೆ ಎಂದು ಪರಿಗಣಿಸಲಾಗುತ್ತದೆ.

ಶೈಕ್ಷಣಿಕ ಸಂಶೋಧನೆಯು ಶಿಕ್ಷಣವನ್ನು ಒಂದು ವಿಜ್ಞಾನವಾಗಿ ವಿಕಾಸಗೊಳಿಸುವುದನ್ನು ಅಂತಿಮ ಗುರಿಯಾಗಿ ಹೊಂದಿದ್ದು, ವೈಜ್ಞಾನಿಕ ಮತ್ತು ತತ್ವಶಾಸ್ತ್ರೀಯ ವಿಧಾನಗಳನ್ನು ಬಳಸುವುದರ ಮೂಲಕ ಶೈಕ್ಷಣಿಕ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಮತ್ತು ಪಾಂಡಿತ್ಯಪೂರ್ಣವಾಗಿ ಅಧ್ಯಯನ ಮಾಡುತ್ತದೆ. ಅದು ಸಹ–ಸಂಬಂಧಿ, ಕಾರಕ–ಪರಿಣಾಮ ಸಂಬಂಧಗಳಿಗೆ ಸಂಬಂಧಿಸಿದ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ವ್ಯವಸ್ಥಿತವಾಗಿ ಕಂಡುಹಿಡಿಯುವ ಪ್ರಯತ್ನವಾಗಿದೆ. ಶೈಕ್ಷಣಿಕ ಸಂಶೋಧನೆಯು ಶೈಕ್ಷಣಿಕ ಸನ್ನಿವೇಶಗಳಲ್ಲಿ ವರ್ತನೆಯ ವಿಜ್ಞಾನವನ್ನು ವಿಕಾಸಗೊಳಿಸುವೆಡೆಗೆ ನಿರ್ದೇಶಿತವಾದ ಚಟುವಟಿಕೆಯಾಗಿದೆ. ಇಂಥ ವಿಜ್ಞಾನದ ಅಂತಿಮ ಗುರಿ ಶಿಕ್ಷಣ ತಜ್ಞರಿಗೆ ಅತ್ಯಂತ ಪರಿಣಾಮಕಾರಿ ವಿಧಾನಗಳಿಂದ ಅವರ ಗುರಿಗಳನ್ನು ಸಾಧಿಸಲು ಅವಕಾಶ ಒದಗಿಸುವ ಜ್ಞಾನವನ್ನು ನೀಡುವುದಾಗಿದೆ.

ಶೈಕ್ಷಣಿಕ ಸಂಶೋಧನೆಯು ಶಿಕ್ಷಣದ ವಿದ್ಯಾರ್ಥಿಗಳ, ಶಿಕ್ಷಕರ, ಪ್ರಶಿಕ್ಷಕರ, ಶೈಕ್ಷಣಿಕ ಆಡಳಿತಗಾರರ ಮತ್ತು ಶೈಕ್ಷಣಿಕ ಯೋಜಕರ ಗಮನವನ್ನು ಸೆಳೆಯುವ ಶೈಕ್ಷಣಿಕ ಸಂಗತಿಗಳಿಗೆ ಸಂಬಂಧಿಸಿದ ಪ್ರಮುಖ ಕ್ಷೇತ್ರವಾಗಿದೆ. ಶೈಕ್ಷಣಿಕ ಸಂಶೋಧನೆಯನ್ನು ಉದ್ದೇಶಪೂರ್ಣವಾದ, ಅತ್ಯಂತ ವಿಶಿಷ್ಟವಾದ ಸಾಮಾಜಿಕ ಚಟುವಟಿಕೆ ಅಥವಾ ಶಿಕ್ಷಣದ ಬಹುಮುಖ ಕ್ಷೇತ್ರಗಳಲ್ಲಿ ಆಸಕ್ತಿಯಿರುವ ವ್ಯಕ್ತಿಗಳಿಗೆ ಎದುರಾಗುವ ಶಿಕ್ಷಣದ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದ ವೈಜ್ಞಾನಿಕ ಅಧ್ಯಯನ ಎಂದು ವ್ಯಾಖ್ಯಾನಿಸಬಹುದು.

### ಶೈಕ್ಷಣಿಕ ಸಂಶೋಧನೆಯ ಗುರಿಗಳು ಈ ಕೆಳಗಿನಂತಿವೆ

1. ಸೈದ್ಧಾಂತಿಕ ಜ್ಞಾನವನ್ನು ಅಭಿವೃದ್ಧಿಗೊಳಿಸುವುದು.
2. ಸುಧಾರಿತ ಅಭ್ಯಾಸಗಳನ್ನು ವಿಕಾಸಗೊಳಿಸುವುದು.
3. ನವೀನ ಶೈಕ್ಷಣಿಕ ತತ್ವಗಳನ್ನು ಕಂಡುಹಿಡಿಯುವುದು.
4. ವಿವಿಧ ಶೈಕ್ಷಣಿಕ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಹಿಡಿಯುವುದು.
5. ರೂಪಿಸಿದ ಮತ್ತು ಅಳವಡಿಸಿಕೊಂಡ ಅಭ್ಯಾಸಗಳನ್ನು ಮತ್ತು ಕ್ರಮಗಳನ್ನು ಮೌಲ್ಯಮಾಪನ ಮಾಡುವುದು.
6. ಈಗಾಗಲೇ ಇತರರು ಕಂಡುಹಿಡಿದ ತತ್ವಗಳನ್ನು ಬೇರೆ ಬೇರೆ ಸಂದರ್ಭಗಳಿಗೆ ಅನ್ವಯಿಸಿ ಅವುಗಳ ಸತ್ಯಾಸತ್ಯತೆಯನ್ನು ಬರೆದಿಡುವುದು.

### ಶೈಕ್ಷಣಿಕ ಸಂಶೋಧನೆಯ ಪ್ರಾಮುಖ್ಯ

ಶೈಕ್ಷಣಿಕ ಸಂಶೋಧನೆಯು ವಿಜ್ಞಾನವಾಗಿ ಶಿಕ್ಷಣದ ವಿಕಾಸಕ್ಕೆ ಮತ್ತು ಶಿಕ್ಷಣದ ಪ್ರಕ್ರಿಯೆ ಅಥವಾ ವ್ಯವಸ್ಥೆಯನ್ನು ಉತ್ತಮಗೊಳಿಸಲು ಅವಶ್ಯಕವಾಗಿದೆ. ಇದು ವಿದ್ಯಾರ್ಥಿಗಳ ಸ್ವಭಾವವನ್ನು ಮತ್ತು ವ್ಯಕ್ತಿ ವ್ಯತ್ಯಾಸಗಳನ್ನು ಕಂಡುಹಿಡಿಯಲು, ಕಲಿಕೆಯ ಪ್ರಕ್ರಿಯೆ ಮತ್ತು ಪ್ರೇರಣೆಗಳನ್ನು ವಿಶ್ಲೇಷಿಸಲು, ಪಠ್ಯಕ್ರಮವನ್ನು ರೂಪಿಸಲು, ಉತ್ತಮ ಕಲಿಕಾ ಸಾಮಗ್ರಿಗಳನ್ನು ತಯಾರಿಸಲು, ಶಾಲಾ ವಾತಾವರಣವನ್ನು ಉತ್ತಮಗೊಳಿಸಲು, ಶಾಲಾ ಸಂಘಟನೆ, ತರಗತಿ ನಿರ್ವಹಣೆ, ಶೈಕ್ಷಣಿಕ ಯಶಸ್ಸನ್ನು ಪೂರ್ವಾನುಮಾನ ಮಾಡಲು ಶಿಕ್ಷಣದಲ್ಲಿನ ವಿವಿಧ ಸಮಸ್ಯೆಗಳಿಗೆ, ಮಿತಿಗಳಿಗೆ ಕಾರಣಗಳನ್ನು ಅನ್ವೇಷಿಸಲು, ವಿವಿಧ ಶೈಕ್ಷಣಿಕ ಚಟುವಟಿಕೆಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಲು ಅವಶ್ಯಕವಾಗಿದೆ. ಈ ಕೆಳಗಿನ ಅಂಶಗಳು ಶೈಕ್ಷಣಿಕ ಸಂಶೋಧನೆಯ ಪ್ರಾಮುಖ್ಯವನ್ನು ಒತ್ತಿ ಹೇಳುತ್ತವೆ.

1. ಶಿಕ್ಷಣಕ್ಕೆ ತತ್ವಶಾಸ್ತ್ರ, ಮನೋವಿಜ್ಞಾನ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ಇತಿಹಾಸದಂತಹ ಕ್ಷೇತ್ರಗಳಲ್ಲಿ ಬಲವಾದ ಬೇರುಗಳಿವೆ. ಆಳವಾದ ವೈಜ್ಞಾನಿಕ ಪ್ರಕ್ರಿಯೆಯ ಮೂಲಕ ಶಿಕ್ಷಣದ ದೋಷರಹಿತ ಸಿದ್ಧಾಂತಗಳನ್ನು ಸ್ಥಾಪಿಸಲು ಶಿಕ್ಷಣದ ವಿವಿಧ ಅಂಶಗಳಮೇಲೆ ವಿವಿಧ ಶಾಸ್ತ್ರಗಳ ಪರಿಣಾಮವನ್ನು ಅಧ್ಯಯನ ಮಾಡಲಾಗುತ್ತದೆ.
2. ಶೈಕ್ಷಣಿಕ ಸಂಶೋಧನೆಯು ಶಿಕ್ಷಣ ವಲಯದಲ್ಲಿ ಜ್ಞಾನದ ಮುಂದುವರಿಕೆಗೆ ಸಹಾಯಕವಾಗಿದೆ.
3. ಇದು ಶಿಕ್ಷಣದ ಹಲವಾರು ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದರಿಂದ ಶಿಕ್ಷಕರು, ಆಡಳಿತಗಾರರು, ಶಿಕ್ಷಣತಜ್ಞರಿಗೆ ಸಹಾಯ ಮಾಡುತ್ತದೆ.
4. ಶಿಕ್ಷಣವನ್ನು ವೈಯಕ್ತಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ವಿಕಾಸಕ್ಕೆ ಮೂಲವೆಂದು ಗುರುತಿಸಲಾಗುತ್ತದೆ. ಶಿಕ್ಷಣದಲ್ಲಿ ಸಂಶೋಧನೆಯು ಶಿಕ್ಷಣದ ನೀತಿಗಳನ್ನು, ವ್ಯವಸ್ಥೆಗಳನ್ನು ಮತ್ತು ಅಭ್ಯಾಸಗಳನ್ನು ಉತ್ತಮಪಡಿಸಲು ಅತ್ಯಂತ ಮಹತ್ವದ್ದಾಗಿದೆ.
5. ಇದು ಕಲಿಕಾ ತಂತ್ರಗಳು, ಶಿಕ್ಷಣ ವ್ಯವಸ್ಥೆಯ ಮೌಲ್ಯಮಾಪನ, ಸಂಘಟನೆ ಮತ್ತು ಆಡಳಿತ ಇತ್ಯಾದಿಗಳ ವಿಕಾಸದಲ್ಲಿ ಅತ್ಯಂತ ಪ್ರಮುಖವಾಗಿದೆ.
6. ಇದು ಸುಧಾರಿತ ಬೋಧನಾ ಸಾಮಗ್ರಿಗಳನ್ನು, ಶೈಕ್ಷಣಿಕ ಪರಿಕರಗಳನ್ನು ಮತ್ತು ಸಾಧನಗಳನ್ನು, ಶೈಕ್ಷಣಿಕ ಪರಿವೀಕ್ಷಣೆ ಮತ್ತು ತಪಾಸಣಾ ಕ್ರಮಗಳನ್ನು ವಿಕಾಸಗೊಳಿಸುವಲ್ಲಿ ಸಹಾಯಕವಾಗಿದೆ.
7. ಇದು ಅಪವ್ಯಯ ಮತ್ತು ಸ್ಥಗಿತತೆಯ ಸಮಸ್ಯೆಯನ್ನು ಕಡಿಮೆ ಮಾಡಲು ಮತ್ತು ಅವುಗಳ ಕಾರಣಗಳನ್ನು ಅನ್ವೇಷಿಸಲು ಸಹಾಯಕವಾಗಿದೆ.
8. ಶೈಕ್ಷಣಿಕ ಸಂಶೋಧನೆಯು ಶೈಕ್ಷಣಿಕ ಹಣಕಾಸು ವ್ಯವಸ್ಥೆ, ಮಾನವ ಸಂಪನ್ಮೂಲಗಳ ವಿಕಾಸ ಮತ್ತು ರಾಷ್ಟ್ರದ ಆರ್ಥಿಕತೆಯನ್ನು ಸುಧಾರಿಸುವಲ್ಲಿ ಸಹಾಯಕವಾಗಿದೆ.


Digitised by Bharatavani, CIIL

9. ಶಿಕ್ಷಣದಲ್ಲಿ ವ್ಯವಸ್ಥಿತ ಸಂಶೋಧನೆಯನ್ನು ಆಧರಿಸಿ ಕೈಗೊಂಡ ನಿರ್ಣಯಗಳು ಹಣವನ್ನು ಮತ್ತು ಶಕ್ತಿಯನ್ನು ಉಳಿಸುತ್ತವೆ.
10. ಹಿಂದಿನ ಕೆಲವು ದಶಕಗಳಲ್ಲಿ ಜಗತ್ತಿನಾದ್ಯಂತ ಶಿಕ್ಷಣದ ಶೀಘ್ರ ವಿಸ್ತರಣೆ ಮತ್ತು ಬೆಳವಣಿಗೆಯನ್ನು ಕಾಣುತ್ತೇವೆ. ಇದು ಅನೇಕ ಸಮಸ್ಯೆಗಳಿಗೆ ದಾರಿ ಮಾಡಿಕೊಟ್ಟಿದೆ. ಇವುಗಳ ಸರಿಯಾದ ಪರಿಹಾರಕ್ಕೆ ಆಳವಾದ ಗುಣಾತ್ಮಕ ಸಂಶೋಧನೆಯ ಅವಶ್ಯಕತೆ ಇದೆ.
11. ಹಲವಾರು ಅನಪೇಕ್ಷಿತ ಸಂಗತಿಗಳಂತಹ ಕೆಳಮಟ್ಟದ ಶೈಕ್ಷಣಿಕ ಸಾಧನೆ, ಕಡಿಮೆ ಸಾಧನೆಗೆ ಕಾರಣಗಳು, ಅಶಿಸ್ತು, ಪರೀಕ್ಷಾ ವ್ಯವಸ್ಥೆಯಲ್ಲಿ ಸಮಸ್ಯೆ ಮುಂತಾದವುಗಳ ಪರಿಹಾರಕ್ಕೆ ಸಂಶೋಧನೆ ಅಗತ್ಯವಾಗಿದೆ.
12. ಶಿಕ್ಷಕ ಶಿಕ್ಷಣದ ವಿಕಾಸಕ್ಕೆ ಮಾಹಿತಿ ತಂತ್ರಜ್ಞಾನದ ಕೊಡುಗೆಯ ಬಗ್ಗೆ ಅಧ್ಯಯನ ಮಾಡುವುದು ಅಗತ್ಯವಾಗಿದೆ.
13. ವೈಜ್ಞಾನಿಕ ಮತ್ತು ತಾಂತ್ರಿಕ ವಿಕಾಸಗಳ ಪರಿಣಾಮವಾಗಿ ಹಲವು ಆಧುನಿಕ ಕಲಿಕಾ ಪ್ಯಾಕೇಜುಗಳು, e–ಪುಸ್ತಕ, e-ಕಲಿಕೆ, e–ನಿರ್ವಹಣೆ ಮತ್ತು ಕಂಪ್ಯೂಟರ್ ಶಿಕ್ಷಣ ಇತ್ಯಾದಿಗಳನ್ನು ಶಿಕ್ಷಣದಲ್ಲಿ ಬಳಸಲಾಗುತ್ತಿದೆ. ಇವುಗಳ ಪರಿಣಾಮಕಾರಿ ಬಳಕೆಗೆ ಸಂಶೋಧನೆಯ ಅಗತ್ಯವಿದೆ.
14. ವ್ಯಕ್ತಿ ಜೀವನದ ಎಲ್ಲ ಸನ್ನಿವೇಶಗಳು ಮತ್ತು ಸಂದರ್ಭಗಳಲ್ಲಿ ಶಿಕ್ಷಣ ಪಡೆಯುತ್ತಾನೆ. ಈ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಶೋಧನೆಯ ಅಗತ್ಯವಿದೆ.

### ವ್ಯವಸ್ಥಿತ ಪ್ರಕ್ರಿಯೆಯಾಗಿ ಶೈಕ್ಷಣಿಕ ಸಂಶೋಧನೆ

ಪ್ರತಿಯೊಂದು ಸಂಶೋಧನೆಯು ವಸ್ತುನಿಷ್ಠ, ಸಾಕ್ಷ್ಯಾಧಾರಿತ, ತಾರ್ಕಿಕ ಮತ್ತು ವ್ಯವಸ್ಥಿತ, ವೈಜ್ಞಾನಿಕ ವಿಧಾನವನ್ನು ಅನುಸರಿಸುತ್ತದೆ. ಸಂಶೋಧನೆ ಎಂದರೆ ಸತ್ಯದ ಶೋಧ. ಸಂಶೋಧನೆಯು ದತ್ತಾಂಶಗಳಿಂದ ಪ್ರಾರಂಭವಾಗುತ್ತದೆ ಮತ್ತು ಪ್ರಾಕಲ್ಪನೆಗಳನ್ನು ಪರೀಕ್ಷಿಸಲು ಮತ್ತು ಖಚಿತಪಡಿಸಿಕೊಳ್ಳಲು ದತ್ತಾಂಶಗಳಿಗೆ ಪುನಃ ಬರುತ್ತದೆ. ಸಂಶೋಧನೆಗೆ ವ್ಯವಸ್ಥಿತ ರೀತಿಯಲ್ಲಿ ಚಿಂತನೆ ಮತ್ತು ಸಮಸ್ಯೆಯ ಬಗೆಗೆ ಒಳನೋಟವು ಅತ್ಯಂತ ಪ್ರಮುಖವಾಗಿದೆ. ಸಂಶೋಧನಾ ಕಾರ್ಯದ ಯಶಸ್ಸು ವಿಜ್ಞಾನಿಗಳಿಂದ, ಶಿಕ್ಷಣ ತಜ್ಞರಿಂದ ಮತ್ತು ಸಂಶೋಧಕರಿಂದ ಅನುಸರಿಸಲಾಗುವ ವ್ಯವಸ್ಥಿತ ಪ್ರಕ್ರಿಯೆಗಳನ್ನು ಅವಲಂಬಿಸುತ್ತದೆ.

ವ್ಯಕ್ತಿಯಿಂದ ಆರ್ಜಿಸಲಾದ ವ್ಯವಸ್ಥಿತ ಜ್ಞಾನ, ಅವನ ತರಬೇತಿ ಮತ್ತು ವೈಯಕ್ತಿಕ ಜಾಣ್ಮೆ ಇವೆಲ್ಲ ವಿವಿಧ ಸಮಸ್ಯೆಗಳನ್ನು ಗ್ರಹಿಸಲು ಮತ್ತು ಸಮರ್ಪಕ ಪ್ರಾಕಲ್ಪನೆಗಳನ್ನು ರೂಪಿಸಲು ಸಹಾಯಕವಾಗುತ್ತವೆ. ಕಡಿಮೆ ಪ್ರತಿಭಾಶಾಲಿಯಾದವರು ಸಂದೇಹಗಳಿಂದ ತೊಂದರೆಗೊಳಗಾಗದೆ ಮುಂದುವರಿಯುತ್ತಾರೆ. ಹೊಸ ಪ್ರಶ್ನೆಗಳನ್ನು ಕೇಳುವುದು, ಹೊಸ ಸಾಧ್ಯತೆಗಳು ಅಥವಾ ಹಳೆಯ ಸಮಸ್ಯೆಗಳಿಗೆ ಹೊಸ ದೃಷ್ಟಿಕೋನವನ್ನು ನೀಡುವುದು ಇತ್ಯಾದಿಗಳಿಗೆ ವ್ಯವಸ್ಥಿತ ಸೃಜನಶೀಲ ಕಲ್ಪನೆಯ ಅಗತ್ಯವಿದೆ. ನ್ಯೂಟನ್ನನಿಗಿಂತ ಮೊದಲೂ ಸೇಬು ಹಣ್ಣುಗಳು ಕೆಳಕ್ಕೆ ಬೀಳುತ್ತಿದ್ದವು ಮತ್ತು ಜನರ ತಲೆಯ ಮೇಲೆ ಬಿದ್ದಿರುವ ಸಾಧ್ಯತೆಗಳೂ ಇವೆ. ಆದರೆ ಸಂವೇದನಾಶೀಲನಾದ ನ್ಯೂಟನ್ನನು ಗುರುತ್ವಾಕರ್ಷಣ ನಿಯಮಗಳ ಅನ್ವೇಷಣೆಗೆ ಕಾರಣವಾದ ತಾಂತ್ರಿಕ ಪ್ರಶ್ನೆಗಳನ್ನು ಎತ್ತಿದನು. ಶೈಕ್ಷಣಿಕ ಸಂಶೋಧನೆಯನ್ನು ಕೈಗೊಳ್ಳುವಾಗ ವ್ಯವಸ್ಥಿತ ಪ್ರಕ್ರಿಯೆಯನ್ನು ಅನುಸರಿಸಿ ಸಮಸ್ಯೆಯನ್ನು ನಿರ್ಧರಿಸಬೇಕು ನಂತರ ಸಮಸ್ಯೆಗೆ ಸಂಬಂಧಿಸಿದಂತೆ ರೂಪುರೇಷೆಗಳನ್ನು ನಿರ್ಧರಿಸಬೇಕು. ಸಂಶೋಧಕನು ತಾನು ಕೈಗೊಳ್ಳುವ ಸಂಶೋಧನಾ ಕ್ಷೇತ್ರದಲ್ಲಿ ವಿಷಯ ವಸ್ತುವನ್ನು ಚೆನ್ನಾಗಿ ಅರಿತಿರಬೇಕು.

### ಶೈಕ್ಷಣಿಕ ಸಂಶೋಧನೆಯ ಗುಣಲಕ್ಷಣಗಳು

ಶೈಕ್ಷಣಿಕ ಸಂಶೋಧನೆಯನ್ನು ಯಾವಾಗಲೂ ಕಟ್ಟುನಿಟ್ಟಾಗಿ ವೈಜ್ಞಾನಿಕ ಎಂದು ಹೇಳಲಾಗುವುದಿಲ್ಲ. ಅದು ಅನುಗಮನ ಮತ್ತು ನಿಗಮನ ಕ್ರಮಗಳನ್ನು ಅನುಸರಿಸಿದರೂ ಎಲ್ಲ ಸಂದರ್ಭಗಳಲ್ಲೂ ಅದರ ತೀರ್ಮಾನಗಳು ನಿಖರವಾದುವು ಎಂದು ಹೇಳಲಾಗುವುದಿಲ್ಲ. ಏಕೆಂದರೆ ಶೈಕ್ಷಣಿಕ ಸಂಶೋಧನೆಗಳಲ್ಲಿ ಪ್ರಯೋಗಗಳನ್ನು ಪ್ರಾಣಿಗಳ ಮತ್ತು ಮನುಷ್ಯರ ಮೇಲೆ ನಡೆಸುತ್ತೇವೆ. ಆದರೂ ಹೆಚ್ಚಿನ ಮಟ್ಟಿಗೆ ಸಂಶೋಧನೆಯಲ್ಲಿ ವೈಜ್ಞಾನಿಕ ಹಂತಗಳನ್ನು ಮತ್ತು ವಿಧಾನಗಳನ್ನು ಅನುಸರಿಸುತ್ತೇವೆ. ಆದಾಗ್ಯೂ ಸಜೀವ ಘಟಕಗಳಿಂದ ಮಾಹಿತಿ ದೊರೆಯುವುದರಿಂದ ಅದು ಸಂಪೂರ್ಣವಾಗಿ ವಸ್ತುನಿಷ್ಠವೆನಿಸುವುದಿಲ್ಲ. ಘಟನೆಗಳನ್ನು ಪ್ರಕ್ರಿಯೆಗಳನ್ನು ಮಾಪನ ಮಾಡುವುದು ಸುಲಭವೇನಲ್ಲ, ಶೈಕ್ಷಣಿಕ ಸಂಶೋಧನೆಯ ವ್ಯವಸ್ಥಿತ, ಸಾಮಾಜಿಕ ಮತ್ತು ಮಾನಸಿಕ ಅಧ್ಯಯನಗಳ ಗುಣಲಕ್ಷಣಗಳು ಈ ಕೆಳಗಿನಂತಿವೆ.

1. ಶೈಕ್ಷಣಿಕ ಸಂಶೋಧನೆಯ ಯಾವುದೇ ತತ್ವ ಅಥವಾ ಚಟುವಟಿಕೆಯನ್ನು ಮೌಲ್ಯಮಾಪನ ಮಾಡಲು ದೃಢವಾದ ಶಿಕ್ಷಣದ ತಾತ್ವಿಕ ಆಧಾರ ಒದಗಿಸುತ್ತದೆ.
2. ಶೈಕ್ಷಣಿಕ ಸಂಶೋಧನೆಯು ಅಭಿಪ್ರೇರಣೆ ಮತ್ತು ನೈತಿಕತೆಗೆ ಸಂಬಂಧಿಸಿದ ಸಮಸ್ಯೆಗಳೊಂದಿಗೆ ವ್ಯವಹರಿಸುತ್ತದೆಯಾದ್ದರಿಂದ ಅದು ಸಂಶೋಧಕರು ಮತ್ತು ಸಂಶೋಧನೆಗೆ ಒಳಗಾದ ವ್ಯಕ್ತಿಗಳ ವಿವಿಧ ರೀತಿಯ ವ್ಯಾಖ್ಯಾನಗಳನ್ನು ಒಳಗೊಂಡಿರುವುದು ಸಾಧ್ಯವಿದೆ. ಶೈಕ್ಷಣಿಕ ಸಂಶೋಧಕರಿಗೆ ಕಲ್ಪನೆ ಮತ್ತು ವೈಜ್ಞಾನಿಕ ಮನೋಭಾವ ಮತ್ತು ಒಳದೃಷ್ಟಿ ಇರುವುದರ ಅಗತ್ಯವಿದೆ.
3. ಶೈಕ್ಷಣಿಕ ಸಂಶೋಧನೆ ಅಂತರ್‌ಶಾಸ್ತ್ರೀಯ ಸ್ವರೂಪದ್ದಾಗಿದೆ. ಆದ್ದರಿಂದ ಸಂಶೋಧನೆಯ ಸಫಲತೆಗೆ ಮನೋವಿಜ್ಞಾನ, ಸಮಾಜಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ಮನೋವಿಜ್ಞಾನ, ರಾಜ್ಯಶಾಸ್ತ್ರಗಳಂತಹ ಹಲವಾರು ಶಾಸ್ತ್ರಗಳ ಜ್ಞಾನ ಮತ್ತು ಪರಿಣತರ ಸಹಕಾರದ ಅಗತ್ಯವಿದೆ.
4. ಶೈಕ್ಷಣಿಕ ಸಂಶೋಧನೆಯು ಐತಿಹಾಸಿಕ, ತತ್ವಶಾಸ್ತ್ರೀಯ ಅಥವಾ ತುಲನಾತ್ಮಕ ದತ್ತಾಂಶಗಳನ್ನು ಒಳಗೊಂಡಿದ್ದು ಕೆಲವೊಮ್ಮೆ ವ್ಯಕ್ತಿನಿಷ್ಠ ಅರ್ಥೈಸುವಿಕೆ ಮತ್ತು ತೀರ್ಮಾನಗಳಿಗೆ ಎಡೆಮಾಡಬಹುದು. ಆದ್ದರಿಂದ ಈ ವಿಷಯದಲ್ಲಿ ಎಚ್ಚರಿಕೆ ಅಗತ್ಯ.
5. ಶಿಕ್ಷಕರ ಬಹಳಷ್ಟು ಸಮಸ್ಯೆಗಳು ಸಾಮಾಜಿಕ ಸಮಸ್ಯೆಗಳಾಗಿವೆ. ಸಾಮಾಜಿಕ ಸಮಸ್ಯೆಗಳು ಸಂಕೀರ್ಣ ಚಲಕಗಳನ್ನು ಹೊಂದಿರುತ್ತವೆ ಮತ್ತು ಬಹುಮುಖ ಕಾರಣಗಳು ಕೆಲವು ಫಲಿತಾಂಶಗಳುಂಟಾಗುವುದಕ್ಕೆ ಕಾರಣವಾಗುತ್ತವೆ.
6. ಬಹಳಷ್ಟು ಶೈಕ್ಷಣಿಕ ಸಂಶೋಧನೆಗಳಿಗೆ ಬೆಲೆಬಾಳುವ ಪರಿಕರಗಳು ಮತ್ತು ಸಾಧನಗಳ ಅವಶ್ಯಕತೆ ಇಲ್ಲ.

ಶೈಕ್ಷಣಿಕ ಸಂಶೋಧನೆಯು ತನ್ನ ಸ್ವರೂಪದ ಕಾರಣದಿಂದಾಗಿ ಶೈಕ್ಷಣಿಕ ಧ್ಯೇಯಧೋರಣೆಗಳನ್ನು ಅಭಿವೃದ್ಧಿಗೊಳಿಸಲು, ಉತ್ತಮ ಪ್ರಗತಿಗಾಗಿ ನೀತಿಗಳನ್ನು ಮತ್ತು ಯೋಜನೆಗಳನ್ನು ಅಭಿವೃದ್ಧಿಗೊಳಿಸಲು ಸಹಾಯಕವಾಗಿದೆ. ಸ್ಪಷ್ಟವಾದ ಮತ್ತು ಬಲವಾದ ಸಿದ್ಧಾಂತದ ತಳಹದಿ ಇಲ್ಲದೆ ಶೈಕ್ಷಣಿಕ ಸಂಶೋಧನೆಯು ಯಾವುದೇ ದೃಢವಾದ ನಿರ್ಣಯಗಳಿಗೆ

Digitised by Bharatavani, CIIL

ದಾರಿ ಮಾಡಿಕೊಡುವುದಿಲ್ಲ. ಶಿಕ್ಷಣದ ವ್ಯವಸ್ಥಿತ ಜ್ಞಾನರಾಶಿ ವ್ಯಾಪಕ ತಳಹದಿಯ ಮೇಲೆ ನಿರ್ಮಿತವಾಗಬೇಕು. ಸುವ್ಯವಸ್ಥಿತ ಸಿದ್ಧಾಂತಗಳು ಅನ್ವೇಷಣೆಗೆ ಮಹತ್ವಪೂರ್ಣ ದಾರಿಗಳನ್ನು ಒದಗಿಸುವುದರ ಮೂಲಕ ಪ್ರತ್ಯೇಕ ಶೋಧನೆಗಳನ್ನು ಇತರ ಸಂಶೋಧನೆಗಳಿಗೆ ಸಂಬಂಧ ಕಲ್ಪಿಸುವುದರಿಂದ, ವೀಕ್ಷಿತ ಸಂಬಂಧಗಳಿಗೆ ವಿವರಣೆಯನ್ನು ಒದಗಿಸುವುದರ ಮೂಲಕ ಸಂಶೋಧನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತದೆ. ವ್ಯವಸ್ಥಿತ ಸಿದ್ಧಾಂತವನ್ನು ಆಧರಿಸಿದ ಶೈಕ್ಷಣಿಕ ಸಂಶೋಧನೆಯು ನೇರವಾಗಿ ಶಿಕ್ಷಣದ ವಿಕಾಸಕ್ಕೆ ಹೆಚ್ಚು ಕಾರಣವಾಗುತ್ತದೆ ಮತ್ತು ಮುಂದೆ ಜ್ಞಾನದ ಸಂಘಟನೆಗೆ ನೆರವಾಗುತ್ತದೆ.

–ಆರ್.ನಾ.ಕು.

## ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು

ದೇಶದ ಭವಿಷ್ಯವನ್ನು ರೂಪಿಸುವ ಕಾರ್ಯವು ಉನ್ನತ ಶಿಕ್ಷಣದಲ್ಲಿನ ಶಿಕ್ಷಕರ ಜವಾಬ್ದಾರಿಯಾಗಿದೆ. ಈ ಕಾರ್ಯವು ಮತ್ತು ಇಂತಹ ಪ್ರಕ್ರಿಯೆಯು ಉನ್ನತ ಶಿಕ್ಷಣದ ಶಿಕ್ಷಕರ ಗುಣಮಟ್ಟವನ್ನು ಸಹಾ ಅವಲಂಬಿಸಿರುತ್ತದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಹೇಳಲಾಗಿರುವಂತೆ, ಶಿಕ್ಷಣದ ಗುಣಮಟ್ಟವು ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿದೆ. ಆದ್ದರಿಂದ, ವೃತ್ತಿಪರ ವಿಕಾಸಕ್ಕಾಗಿ ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳ ಅನಿವಾರ್ಯತೆಯನ್ನು ಮನಗಂಡು, UGC ವತಿಯಿಂದ 1987ರಲ್ಲಿ ದೇಶದಾದ್ಯಂತ 48 ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳನ್ನು ಪ್ರಾರಂಭಿಸಲಾಯಿತು. ಈಗ ಇವುಗಳ ಒಟ್ಟು ಸಂಖ್ಯೆ 51ಕ್ಕೆ ಏರಿದೆ.

### ಉದ್ದೇಶಗಳು

ದೇಶದಾದ್ಯಂತ ಇರುವ ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿವೆ:

- ವಿದ್ಯಾರ್ಥಿಗಳ ಕಲಿಕೆಯನ್ನು ಪರಿಣಾಮಕಾರಿಯಾಗಿ ಪ್ರಭಾವಿಸುವಂತಹ ಶಿಕ್ಷಕರನ್ನು ತಯಾರಿಸುವುದು. ಇದನ್ನು ಸಾಧಿಸುವುದಕ್ಕಾಗಿ ಶಿಕ್ಷಕರಿಗೆ ಪುನಶ್ಚೇತನ ಕಾರ್ಯಕ್ರಮಗಳನ್ನು, ಪುನರ್ಮನನ ತರಬೇತಿ ಕಾರ್ಯಕ್ರಮಗಳನ್ನು, ಸಮ್ಮೇಳನಗಳನ್ನು ಮತ್ತು ವಿಚಾರ ಸಂಕಿರಣಗಳನ್ನು ನಡೆಸುವುದು ಮತ್ತು ವಿಭಾಗಗಳ ಮುಖ್ಯಸ್ಥರುಗಳಿಗೆ, ಪ್ರಾಂಶುಪಾಲರುಗಳಿಗೆಂದೇ ಹಲವಾರು ಅಭಿವೃದ್ಧಿದಾಯಕ ಕಾರ್ಯಕ್ರಮಗಳನ್ನು ರೂಪಿಸುವುದು ಇತ್ಯಾದಿ.

- ಶಿಕ್ಷಣ ಕ್ಷೇತ್ರದ ಗುಣಮಟ್ಟದ ಹೆಚ್ಚಳಕ್ಕೂ, ಶಿಕ್ಷಕರಲ್ಲಿನ ಅಭಿಪ್ರೇರಣೆಗಳಿಗೂ ಪರಸ್ಪರ ಸಂಬಂಧವನ್ನು ಕಲ್ಪಿಸುವುದು.

- ಶಿಕ್ಷಕರ ಜ್ಞಾನದಲ್ಲಿನ ಹೆಚ್ಚಳಕ್ಕೂ ಮತ್ತು ಅವರಲ್ಲಿ ಕೌಶಲಗಳ ಬೆಳೆಸುವಿಕೆಗೂ ಅನುವು ಮಾಡಿಕೊಡಲು, ಅವರವರ ನಿರ್ದಿಷ್ಟ ಬೋಧನಾ ವಿಷಯಗಳಿಗೆ ತಕ್ಕಂತಹ ತಂತ್ರಗಳ, ಕೌಶಲಗಳ ಮತ್ತು ಬೋಧನಾ ವಿಧಾನಗಳ ತರಬೇತಿಯನ್ನು ನೀಡುವುದು ಹಾಗೂ ಅವರು ತಮ್ಮದೇ ಆದ ಒಂದು ವಿನೂತನ ವಿಧಾನದಿಂದ ಅಥವಾ ಸೃಜನಶೀಲತೆಯಿಂದ ಕಾರ್ಯನಿರ್ವಹಿಸಲು ಮುಂದಾಗುವಂತೆ ಮಾಡುವುದು.

- ಹೊಸದಾಗಿ ಆಯ್ಕೆಯಾದಂತಹ ಉಪನ್ಯಾಸಕರುಗಳಿಗೆಂದೇ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಅಂದರೆ ಪ್ರಸ್ತುತ ಉಪನ್ಯಾಸಕ ಹುದ್ದೆಯನ್ನು ಅಲಂಕರಿಸಿದವರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಡುವುದು ಮತ್ತು ಉನ್ನತ ಶಿಕ್ಷಣದ ವ್ಯಾಪ್ತಿ ಮತ್ತು ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುವುದು ಹಾಗೂ ಮೇಲೆ ಹೇಳಿದ ಕಾರ್ಯಗಳನ್ನು ಭಾರತದ ದೃಷ್ಟಿಯಿಂದ ಮಾತ್ರವಲ್ಲದೇ ಇಡೀ ವಿಶ್ವದ ದೃಷ್ಟಿಯಿಂದಲೂ ತಿಳಿಸಿಕೊಡುವುದು.

- ಪ್ರಜಾಪ್ರಭುತ್ವದಲ್ಲಿ ಹೇಳುವ ಜಾತ್ಯಾತೀತತೆ ಮತ್ತು ಸಾಮಾಜಿಕ ಸಮಾನತೆ ಇತ್ಯಾದಿಗಳ ವಿಕಾಸಕ್ಕೂ ಮತ್ತು ಶಿಕ್ಷಣಕ್ಕೂ ಇರುವ ಪರಸ್ಪರ ಸಂಬಂಧದ ಬಗ್ಗೆ ಅರಿವು ಮೂಡಿಸುವುದು.

- ಶಿಕ್ಷಕರಲ್ಲಿ ಬೋಧನಾ ಕೌಶಲಗಳ ಸ್ವಾಂಗೀಕರಣ ಪ್ರಕ್ರಿಯೆಗೆ ವೇದಿಕೆಯನ್ನು ಸೃಷ್ಟಿಸುತ್ತಾ ಕಾಲೇಜು, ವಿಶ್ವವಿದ್ಯಾನಿಲಯದ ಮಟ್ಟದಲ್ಲಿನ ಹಾಗೂ ಉನ್ನತ ಶಿಕ್ಷಣದ ಹಂತದಲ್ಲಿನ ಗುರಿ ಮತ್ತು ಉದ್ದೇಶಗಳ ಸಾಧನೆಗೆ ಅನುಕೂಲ ಮಾಡಿಕೊಡುವುದು.

- ಶಿಕ್ಷಕರಿಗೆ ಅವರವರ ವಿಷಯಗಳಲ್ಲಿನ ವಿನೂತನ ಬೆಳವಣಿಗೆಗಳ ಬಗ್ಗೆ ಮತ್ತು ವಿಕಾಸಗಳ ಬಗ್ಗೆ ತಿಳುವಳಿಕೆ ಮೂಡಿಸುವುದು.

- ಶಿಕ್ಷಕರಲ್ಲಿ ಸೃಜನಶೀಲತೆಯನ್ನು ಹೊಂದಿದ, ಆಧುನೀಕರಣಗೊಂಡ, ಮುನ್ನುಗ್ಗುವ ಪ್ರವೃತ್ತಿಯನ್ನುಳ್ಳ ವ್ಯಕ್ತಿತ್ವವನ್ನು ನಿರ್ಮಿಸುವುದು.

- ಶಿಕ್ಷಕರಲ್ಲಿ ಕಂಪ್ಯೂಟರ್ ಸಾಕ್ಷರತೆಯನ್ನು ಬೆಳೆಸುವುದೇ ಅಲ್ಲದೆ ಅಂತರಜಾಲದ ಬಗ್ಗೆ ಅರಿವು ಮೂಡಿಸುವುದು. ಏಕೆಂದರೆ ಇಂದಿನ ಆಧುನೀಕರಣಗೊಂಡ ಸಮಾಜವು ಕಂಪ್ಯೂಟರ್ ತಂತ್ರಜ್ಞಾನವನ್ನು ಹೊಂದಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆಯಿರುವ ಶಿಕ್ಷಕರನ್ನು ಬಯಸುತ್ತದೆ.

- ಪ್ರಸ್ತುತ ದಿನಗಳಲ್ಲಿ ಆಗುತ್ತಿರುವ ಜ್ಞಾನಸ್ಫೋಟಕ್ಕೆ ಹೊಂದುವಂತಹ ಶಿಕ್ಷಕರುಗಳನ್ನು ನಿರ್ಮಿಸುವುದು, ಅವರವರ ಕ್ಷೇತ್ರದಲ್ಲಿ ಪ್ರತಿಯೊಬ್ಬ ಶಿಕ್ಷಕನೂ ಹೆಚ್ಚು ಹೆಚ್ಚು ಜ್ಞಾನಸಂಪಾದನೆಯನ್ನು ಮಾಡಿಕೊಳ್ಳುವಂತೆ ಮಾಡುವುದು, ವಿನೂತನವಾದ ಬೋಧನಾ ಕೌಶಲಗಳನ್ನು ಅಂತರ್ಗತ ಮಾಡಿಕೊಳ್ಳುವಂತೆ ಮಾಡುವುದು ಇತ್ಯಾದಿ, ಇವುಗಳನ್ನು UGC ಯ ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು ತಮ್ಮ ಮುಂಚೂಣಿಯಲ್ಲಿನ ಗುರಿಗಳನ್ನಾಗಿ ಉದ್ದೇಶಗಳನ್ನಾಗಿ ಮಾಡಿಕೊಂಡಿವೆ. ಆದರೆ UGC-ASC (Academic Staff College) ಗಳಲ್ಲಿ ಇದಕ್ಕಾಗಿ ನಡೆಸುವ ಕಾರ್ಯಕ್ರಮಗಳು ಬಹಳ ವಿಶೇಷವಾಗಿದ್ದು ಸಾಂಪ್ರದಾಯಿಕ B.Ed ಮತ್ತು M.Ed ಕಾರ್ಯಕ್ರಮಗಳಿಗಿಂತ ಭಿನ್ನವಾಗಿರುತ್ತವೆ.

- ಮೇಲೆ ಹೇಳಿದ ಎಲ್ಲ ಕಾರ್ಯಕ್ರಮಗಳು ಮತ್ತು ಅವುಗಳ ಉದ್ದೇಶಗಳು ಸಂಪೂರ್ಣವಾಗಿ ಈಡೇರಬೇಕೆಂದರೆ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಪ್ರಾಂಶುಪಾಲರುಗಳು, ನಿಕಾಯಗಳ ಡೀನರುಗಳು ಕಛೇರಿವರ್ಗದವರು ಸಹಕರಿಸಬೇಕಾದದ್ದು ಅನಿವಾರ್ಯ. ಆದ್ದರಿಂದ ಮೇಲೆ ಹೇಳಿದ ಎಲ್ಲ ಕಾರ್ಯಕ್ರಮಗಳನ್ನು ಅವರಿಗೂ ವಿಸ್ತರಿಸಿ, ಅವರ ಸಕ್ರಿಯವಾದ ಭಾಗವಹಿಸುವಿಕೆಗೆ ಅವಕಾಶ ನೀಡುವುದು.

- ಶೈಕ್ಷಣಿಕ ಕ್ಷೇತ್ರದಲ್ಲಿ ಆಡಳಿತ ಮತ್ತು ಶಿಕ್ಷಣ ಪರಿಸರವನ್ನು ಕುರಿತಂತೆ ವಿವಿಧ ಇಲಾಖೆಗಳಲ್ಲಿ ಬೇರೆ ಬೇರೆ ಶಿಕ್ಷಣ ಕೇಂದ್ರಗಳಲ್ಲಿನ ವಿಚಾರಗಳ ವಿನಿಮಯವನ್ನು ಪ್ರೋತ್ಸಾಹಿಸುವುದಕ್ಕಾಗಿ UGC-ASCಯು, ಸಂಬಂಧಪಟ್ಟ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ಮನವಿ ಮಾಡಿಕೊಳ್ಳುವುದು ಹಾಗೂ ದಕ್ಷ ಮತ್ತು ಪ್ರಭಾವೀ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಲು ಪ್ರೋತ್ಸಾಹಿಸುವುದು.

Digitised by Bharatavani, CIIL

**UGC-ASC ಯ ಕಾರ್ಯಗಳು**

- ಪುನರ್ಮನನ ತರಬೇತಿ ಕಾರ್ಯಕ್ರಮಗಳನ್ನು ನಿಯೋಜಿಸಿ, ಸಂಘಟಿಸಿ, ಕಾರ್ಯಗತಗೊಳಿಸಿ, ಅವುಗಳ ನಿರ್ವಹಣೆಯನ್ನು ಸರಿದೂಗಿಸಿ ಮೌಲ್ಯೀಕರಿಸುವುದು ಮತ್ತು ಒಂದು ರಾಜ್ಯದ ಅಥವಾ ಯಾವುದೇ ಒಂದು ವಿಶ್ವವಿದ್ಯಾನಿಲಯಕ್ಕೆ ಸೇರಲ್ಪಟ್ಟ ಕಾಲೇಜುಗಳ ಉಪನ್ಯಾಸಕರಿಗೆ ಇಂತಹ ಪುನರ್ಮನನ ತರಬೇತಿ ಕಾರ್ಯಕ್ರಮಗಳು ತಲುಪುವಂತೆ ಮಾಡುವ ಜವಾಬ್ದಾರಿಯು ASCಗಳದ್ದಾಗಿರುತ್ತದೆ.

- ಹಲವಾರು ಪುನಃಶ್ಚೇತನ ಕಾರ್ಯಕ್ರಮಗಳನ್ನು (Refresher Courses) ನಿಯೋಜಿಸಿ, ಸಂಘಟಿಸಿ, ಕಾರ್ಯಗತಗೊಳಿಸಿ ಅವುಗಳ ನಿರ್ವಹಣೆಯನ್ನು ಸರಿದೂಗಿಸಿ ಮೌಲ್ಯೀಕರಿಸುವುದು ಮತ್ತು ಒಂದು ರಾಜ್ಯದ ಅಥವಾ ಯಾವುದೇ ಒಂದು ವಿಶ್ವವಿದ್ಯಾಲಯಕ್ಕೆ ಸೇರಲ್ಪಟ್ಟ ಕಾಲೇಜುಗಳಲ್ಲಿ ಕಾರ್ಯನಿರತ ಉಪನ್ಯಾಸಕರುಗಳಿಗೆ ಇಂತಹ ಪುನಃಶ್ಚೇತನ ಕಾರ್ಯಕ್ರಮಗಳು ತಲುಪುವಂತೆ ಮಾಡುವ ಜವಾಬ್ದಾರಿಯು ASC ಗಳದ್ದಾಗಿರುತ್ತದೆ.

- ಶೈಕ್ಷಣಿಕ ಕ್ಷೇತ್ರಗಳಲ್ಲಿನ ವಿವಿಧ ತಜ್ಞರುಗಳನ್ನು ಗುರುತಿಸಿ, ASC-ಅಧ್ಯಕ್ಷರಿಂದ ಅನುಮೋದಿಸಲ್ಪಟ್ಟ ಇಂತಹ ತಜ್ಞರುಗಳ ಒಂದು ಪಟ್ಟಿಯನ್ನು ತಯಾರಿಸಿಟ್ಟುಕೊಳ್ಳುವುದು. ಪುನಃಶ್ಚೇತನ ಕಾರ್ಯಕ್ರಮಗಳಲ್ಲಿ, ಕಾರ್ಯಾಗಾರಗಳಲ್ಲಿ ಮತ್ತು ಪುನಃಶ್ಚೇತನ ತರಬೇತಿ ಕಾರ್ಯಕ್ರಮಗಳಲ್ಲಿ ಇಂತಹ ತಜ್ಞರುಗಳಿಗೆ ಬೋಧಿಸುವ ಅವಕಾಶವನ್ನು ಕಲ್ಪಿಸಿಕೊಡುವುದು.

- ASC ಗಳು ನಡೆಸುವ ಶೈಕ್ಷಣಿಕ ಕಾರ್ಯಕ್ರಮಗಳಿಗಾಗಿ ಅಗತ್ಯವಿರುವ ಸಂಪನ್ಮೂಲಗಳಿಗಾಗಿ, ಆಕರ ಗ್ರಂಥಗಳಿಗಾಗಿ, ಪರಾಮರ್ಶನ ಗ್ರಂಥಗಳಿಗಾಗಿ ಮತ್ತು ಇನ್ನಿತರ ವಾಸ್ತವ ದಾಖಲೆಗಳು ಮತ್ತು ಪರಿಕರಗಳಿಗಾಗಿ ಒಂದು ಗ್ರಂಥಾಲಯ ಮತ್ತು ದಾಖಲೆಗಳ ಕೇಂದ್ರದ ಸ್ಥಾಪನೆ.

- ಉನ್ನತ ಹಂತದಲ್ಲಿ, ಒಂದು ವಿಶಿಷ್ಟವಾದ ಕಲಿಕಾ ಸಂಸ್ಕೃತಿಯನ್ನು ನಿರ್ಮಿಸುವುದು ಹಾಗೂ ಶಿಕ್ಷಕರಲ್ಲಿ ಸ್ವ-ಸುಧಾರಣಾ ಗುಣವನ್ನು ಬೆಳೆಸುವುದು-ಇವುಗಳನ್ನು ಶಿಕ್ಷಣವ್ಯವಸ್ಥೆಯ ಅವಿಭಾಜ್ಯ ಅಂಗವಾಗುವಂತೆ ಮಾಡುವುದು.

- UGC-ASC ಗಳ ಕಾರ್ಯಗಳನ್ನು ಕುರಿತು ಇನ್ನಷ್ಟು ವಿವರಗಳನ್ನು ಒಂದೆರಡು ಉದಾಹರಣೆಗಳ ಮೂಲಕ ತಿಳಿಯಬಹುದಾಗಿದೆ.

(i) ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯ ದೆಹಲಿ (JNU) ಶೈಕ್ಷಣಿಕ ಸಿಬ್ಬಂದಿ ಕಾಲೇಜು. ಇದು ವಿಶ್ವ ತರಗತಿ ಶಿಕ್ಷಣದ ರೂಪದಲ್ಲಿ (World Class Education) ಪ್ರತಿ ವರ್ಷವೂ ದೇಶ ವಿದೇಶಗಳಿಂದ ಬಂದು ಭಾಗವಹಿಸುವ ಸುಮಾರು 600 ಶಿಕ್ಷಕರಿಗೆ ತನ್ನ ಸೇವೆಯನ್ನು ನೀಡುತ್ತಿದೆ. ಪ್ರತಿ ತಿಂಗಳೂ ಪುನಃಶ್ಚೇತನ ತರಗತಿಗಳು ಪುನರ್ಮನನ ತರಬೇತಿ ಕಾರ್ಯಕ್ರಮಗಳು ನಿರಂತರವಾಗಿ ಘಟಿಸುತ್ತಲೇ ಇರುತ್ತವೆ. ಒಂದೇ ಸಮಯದಲ್ಲಿ ಎರಡು ವಿಭಿನ್ನ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ ವರ್ಷಕ್ಕೆ ಒಟ್ಟಾರೆ 20 ಕಾರ್ಯಕ್ರಮಗಳನ್ನು ನಡೆಸಿಕೊಡುತ್ತದೆ. ಇದರಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಜೀವಶಾಸ್ತ್ರ, ಪರಿಸರವಿಜ್ಞಾನ, ಭೌತಶಾಸ್ತ್ರ, ಜೈವಿಕ ತಂತ್ರಜ್ಞಾನ, ಕಂಪ್ಯೂಟರ್ ಸೈನ್ಸ್ ಇತ್ಯಾದಿ ವಿಷಯಗಳು ಸೇರಿದಂತೆ ಇನ್ನೂ ವಿವಿಧ ವಿಭಾಗಗಳ ವಿಷಯಗಳಿಗೂ JNUವತಿಯಿಂದ ಕಾರ್ಯಕ್ರಮಗಳು ನಡೆಯುತ್ತವೆ.

(ii) ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಸಿಬ್ಬಂದಿ ಕಾಲೇಜು. ಇದು 10ನೇ ಜುಲೈ 1987ರಂದು ಸ್ಥಾಪಿಸಲ್ಪಟ್ಟಿತು. ಪ್ರಸ್ತುತ ಫೆಬ್ರುವರಿ 2010ರ ವರೆಗೆ ಇದು 269 ಪುನಃಶ್ಚೇತನ ತರಗತಿಗಳನ್ನು 85 ಪುನರ್ಮನನ ತರಬೇತಿ ತರಗತಿಗಳನ್ನು (ವಿವಿಧ ವಿಷಯಗಳನ್ನು ಕುರಿತಂತೆ) ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಇದಲ್ಲದೆ ಇನ್ನೂ 52 ವಿವಿಧ ರೀತಿಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ಅವುಗಳಲ್ಲಿ ಹೆಸರಿಸಬಹುದಾದ ಕೆಲವು ಇಂತಿವೆ:

- Workshop for Teahers on Stress Management.
- Workshop for the principals of degree colleges.
- Workshop on E-learning.
- Workshop for Heads of the Department
- Workshop for project investigators.
- Computer Awareness Training Programmes.
- Workshop for Drawing and Disbursing officers.
- Workshop for Academic Administrators.
- Orientation Programme for Research Scholars.
- Orientation Programme for Non-Teaching Staff of Affiliated Colleges of University of Mysore.
- Orientation Programmes for Non-Teaching Staff of the University of Mysore.
- Seminars, Public Lecturers.

**ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳ ಸಂರಚನೆ**

**ಸಿಬ್ಬಂದಿ ನಿಯಮಗಳು / ವಿನ್ಯಾಸಗಳು**

a) **ಬೋಧಕ ಸಿಬ್ಬಂದಿ**

(i) ಪ್ರೊಫೆಸರ್ - ನಿರ್ದೇಶಕರು (ಪ್ರೊಫೆಸರ್ ವೇತನ)-1.
(ii) ಪ್ರವಾಚಕ - (ಪ್ರವಾಚಕರ ವೇತನ)-1.
(iii) ಉಪನ್ಯಾಸಕ - (ಉಪನ್ಯಾಸಕರ ವೇತನ)-1.

b) **ಬೋಧಕೇತರ ಸಿಬ್ಬಂದಿ**

(i) ಹಿರಿಯ ಅಧಿಕಾರಿ-1
(ii) ಹಿರಿಯ ಸಹಾಯಕ ಅಧಿಕಾರಿ-1
(iii) ಕಿರಿಯ ಸಹಾಯಕ ಅಧಿಕಾರಿ-1
(iv) ಗ್ರಂಥಪಾಲಕ / ತಾಂತ್ರಿಕ-1
(v) ಶೀಘ್ರಲಿಪಿ-ಬೆರಳಚ್ಚುಗಾರ/ ಕಂಪ್ಯೂಟರ್ ಆಪರೇಟರ್-1
(vi) ಜವಾನ-1
(vii) ಹಾಸ್ಟೆಲ್ ಅಟೆಂಡರ್-1 (ಹಾಸ್ಟೆಲ್-ಅನುಕೂಲ ಇರುವಂತಹ ASC ಗಳಲ್ಲಿ)

- ನಿರ್ದೇಶಕ, ಪ್ರವಾಚಕ ಮತ್ತು ಉಪನ್ಯಾಸಕ-ಇವರುಗಳ ನೇಮಕಾತಿಯು 5 ವರ್ಷಗಳು ಅಥವಾ ಒಂದು ನಿಗದಿತ

Digitised by Bharatavani, CIIL

ಸಮಯದವರೆಗಿದ್ದು ನಂತರದಲ್ಲಿ ಅವರುಗಳನ್ನೇ ಮುಂದುವರೆಸುವ ಸಾಧ್ಯತೆಯನ್ನು ಹೊಂದಿದೆ. ಇವರುಗಳ ನಿವೃತ್ತಿಯ ವಯಸ್ಸು 62 ಅಥವಾ ವಿಶ್ವವಿದ್ಯಾನಿಲಯಗಳ ನಿಯಮಕ್ಕನುಸಾರವಾಗಿ ಇರುವುದು.

• ಇಂತಹ ASC ಗಳಲ್ಲಿ ಸಲ್ಲಿಸಿದ ಸೇವೆಯು ಸಿಬ್ಬಂದಿ ವರ್ಗದವರ ಸೇವೆಯ ಬಡ್ತಿಗೆ ಪೂರಕವಾಗಿ ಅವರವರ ಇಲಾಖೆಗಳಲ್ಲಿ ಅನ್ವಯಗೊಳ್ಳುವುದು.

**ಆಡಳಿತಾತ್ಮಕ ರಚನೆ**

• ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು UGC ಯ ಸ್ವಾಯತ್ತತೆಯನ್ನು ಪಡೆದ ಒಂದು ಪ್ರತ್ಯೇಕ ಸಂಘಟನೆ. ಇದು ಒಂದು ಅಂತರ ವಿಶ್ವವಿದ್ಯಾನಿಲಯಗಳ ಸಂಸ್ಥೆಯಾಗಿದ್ದು ಒಂದು ರಾಜ್ಯದಲ್ಲಿನ ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯಗಳ ಹಿತರಕ್ಷಣೆಗಾಗಿ ಶ್ರಮಿಸುತ್ತವೆ.

• ವಿಶ್ವವಿದ್ಯಾನಿಲಯವು ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳಿಗೆ ಸ್ವಾಯತ್ತ ಕಾರ್ಯಗಳನ್ನು ನಡೆಸಲು ಪರವಾನಗಿ ನೀಡುವುದು.

• UGC ಯು ಪ್ರತಿ 5 ವರ್ಷಗಳಿಗೊಮ್ಮೆ ASC ಗಳ ಚಟುವಟಿಕೆಗಳನ್ನು ಪುನರಾವಲೋಕನ ನಡೆಸುವುದು ಅಥವಾ UGC ಯ ನಿರ್ಧಾರದಂತೆ ಆಗಾಗ್ಗೆ ಪುನರಾವಲೋಕನ ಕಾರ್ಯವು ನಡೆಯಬಹುದು. ಅಗತ್ಯಬಿದ್ದಲ್ಲಿ, ಪುನರಾವಲೋಕನದ ವಿಶ್ಲೇಷಣೆಯನ್ನು ಆಧರಿಸಿ UGC ಯು ಯಾವುದೇ ASC ಯ ಅಮಾನ್ಯ ಮಾಡಬಹುದು.

• UGC-ASC ಗಳಲ್ಲಿ ವರ್ಷಪೂರ್ತಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಆದ್ದರಿಂದ ಇವು ರಜಾ ರಹಿತವಾಗಿರುತ್ತವೆ.

–ಸಿ.ಎನ್.ಸು.

# ಸ

## ಸಮಾಯೋಜಿತ ವ್ಯಕ್ತಿತ್ವ

ಸಮಾಯೋಜಿತ ವ್ಯಕ್ತಿತ್ವವುಳ್ಳ ವ್ಯಕ್ತಿಯನ್ನು ಮಾನಸಿಕ ಆರೋಗ್ಯವಂತ ವ್ಯಕ್ತಿ ಎಂದು ಸಹ ಹೇಳುತ್ತಾರೆ. ಸಮಾಯೋಜನೆಯನ್ನು ಒಂದು ಪ್ರಕ್ರಿಯೆಯಾಗಿ ಅಥವಾ ಒಂದು ಉತ್ಪನ್ನವಾಗಿ ನೋಡುತ್ತಾರೆ. ಅದೇನೆ ಇರಲಿ, ಸಮಾಯೋಜಿತ ವ್ಯಕ್ತಿತ್ವವು ಸ್ವಾತಂತ್ರ್ಯ, ಸ್ವ-ನಿಯಂತ್ರಣ, ನಮ್ಯತೆ, ಹೊಂದಿಕೊಳ್ಳುವಿಕೆ, ಪಕ್ವತೆ, ಆಂತರಿಕ ದ್ವಂದ್ವಗಳಿಂದ ಮುಕ್ತಿ, ಇತ್ಯಾದಿ ಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ. ವ್ಯಕ್ತಿಯ ಸಮಾಯೋಜನೆಯು ಅವನ ಮಾನಸಿಕ ಆರೋಗ್ಯ, ಜೀವನದ ಸಂವೇಗಾತ್ಮಕ, ಸಾಮಾಜಿಕ, ಬೌದ್ಧಿಕ, ದೈಹಿಕ ಕ್ಷೇತ್ರಗಳ ಪರಿಪೂರ್ಣತೆಯನ್ನು ಅವಲಂಬಿಸಿರುತ್ತದೆ. ವ್ಯಕ್ತಿ ಪ್ರಕಟಿಸುವ ಅಥವಾ ತೋರುವ ಕೆಲವು ಲಕ್ಷಣಗಳ ಆಧಾರದ ಮೇಲೆ ಆ ವ್ಯಕ್ತಿಯ ವ್ಯಕ್ತಿತ್ವವನ್ನು ಸಮಾಯೋಜಿತ ವ್ಯಕ್ತಿತ್ವ ಎಂದು ನಿರ್ಧರಿಸಬಹುದು. ಸಮಾಯೋಜಿತ ವ್ಯಕ್ತಿತ್ವವುಳ್ಳ ವ್ಯಕ್ತಿಯ ಲಕ್ಷಣಗಳನ್ನು ಈ ಕೆಳಗಿನಂತೆ ವರ್ಣಿಸಬಹುದು.

ಸಮಾಯೋಜಿತ ವ್ಯಕ್ತಿತ್ವವುಳ್ಳ ವ್ಯಕ್ತಿಯು ಪ್ರಜ್ಞಾಪೂರ್ವಕವಾಗಿ ತನ್ನ ವರ್ತಯನ್ನು, ತನ್ನ ಜೀವನವನ್ನು ನಿಯಂತ್ರಿಸುವ ಸಾಮರ್ಥ್ಯವುಳ್ಳವನಾಗಿರುತ್ತಾನೆ. ಅವನಿಗೆ ತನ್ನ ಬಲಗಳ, ಸಾಮರ್ಥ್ಯಗಳ ಮತ್ತ ದೌರ್ಬಲ್ಯಗಳ ಅರಿವಿರುತ್ತದೆ. ಅವನು ತನ್ನ ಸಾಮರ್ಥ್ಯಗಳನ್ನು ಬಂಡವಾಳವಾಗಿಸಿಕೊಂಡು ತನ್ನ ದೌರ್ಬಲ್ಯಗಳನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಅವನು ವಾಸ್ತವಿಕವಾಗಿ ಮತ್ತು ತಾರ್ಕಿಕವಾಗಿ ಚಿಂತಿಸುತ್ತಾನೆ. ಈತನು ಸುತ್ತಲು ಇರುವ ಜಗತ್ತನ್ನು ಅತಿಯಾಗಿ ಟೀಕಿಸುವುದಿಲ್ಲ. ಇತರರಲ್ಲಿ ತಪ್ಪು ಹುಡುಕುವ ಮನೋಭಾವವಿರುವುದಿಲ್ಲ. ಈತನಿಗೆ ಧನಾತ್ಮಕ ಸ್ವ-ಕಲ್ಪನೆಯಿರುತ್ತದೆ ಮತ್ತು ಆಂತರಿಕವಾಗಿ ಪ್ರೇರೇಪಿತನಾಗುತ್ತಾನೆ. ಅವನು ವಾಸ್ತವಿಕತೆಯನ್ನು ಸ್ವೀಕರಿಸುತ್ತಾನೆ ಮತ್ತು ಅದನ್ನು ಗುರುತಿಸಿ ಅದಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿಗಳನ್ನು ಗುರುತಿಸುತ್ತಾನೆ. ಇವನು ವಾಸ್ತವ ಜಗತ್ತಿನಲ್ಲಿ ಜೀವಿಸುತ್ತಾನೆ ಮತ್ತು ಅವನ ಆಸೆ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಕಾಲ್ಪನಿಕ ಜಗತ್ತಿನ ಮೊರೆ ಹೋಗುವುದಿಲ್ಲ. ಈತನು ಭೂತಕಾಲದಲ್ಲಿ ಜೀವಿಸುವುದಿಲ್ಲ ಮತ್ತು ಅವನ ದಿಶಾನಿರ್ದೇಶನ ಭವಿಷ್ಯದ ಗುರಿಯೆಡಗಿರುತ್ತದೆ.

ಸಮಾಯೋಜಿತ ವ್ಯಕ್ತಿತ್ವವುಳ್ಳ ವ್ಯಕ್ತಿಯು ತನ್ನದೇ ಆದ ವ್ಯಕ್ತಿತ್ವ ಒಂದಿದೆ ಎಂಬ ಅರಿವನ್ನು ಹೊಂದಿರುತ್ತಾನೆ. ಸ್ವತಂತ್ರವಾಗಿ ಕಾರ್ಯನಿರ್ವಹಿಸಬಲ್ಲೆ ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದು, ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಾನೆ. ಸದಾ ಜವಾಬ್ದಾರಿಯುತ ವರ್ತನೆಯನ್ನು ಪ್ರಕಟಿಸುತ್ತಾನೆ ಮತ್ತು ವಹಿಸಿಕೊಂಡ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಾನೆ. ಯಾವುದೇ ಕಾರ್ಯ ಕೈಗೊಳ್ಳುವ ಮುನ್ನ ಅದರ ದೀರ್ಘಕಾಲಿಕ ಪರಿಣಾಮಗಳನ್ನು ವಿವೇಚಿಸುತ್ತಾನೆ. ಅವನ ಚಟುವಟಿಕೆಗಳಿಗೆ ನಿರ್ದಿಷ್ಟ ಉದ್ದೇಶ ಇರುತ್ತದೆ. ಉದ್ದೇಶ ಸಾಧನೆಗಾಗಿ ಸಾಕಷ್ಟು ಪೂರ್ವ ಸಿದ್ಧತೆಯನ್ನು ಮಾಡಿಕೊಂಡ ಬಳಿಕ ಕಾರ್ಯೋನ್ಮುಖನಾಗುತ್ತಾನೆ. ಸಮಯದ ಮಹತ್ವವನ್ನು ಆತ ಸಂಪೂರ್ಣವಾಗಿ ಅರಿತಿರುತ್ತಾನೆ. ಕಾರ್ಯ ನಿರ್ವಹಣೆಯ ವಿಧಾನದಲ್ಲಿ ಪರಿಪೂರ್ಣತೆಯನ್ನು ಹೊಂದಿರುತ್ತಾನೆ. ಈತನಿಗೆ ಇತರರ ಸಾಮರ್ಥ್ಯದ ಬಗೆಗೆ ನಂಬಿಕೆ ಇರುತ್ತದೆ. ತಾನು ಕ್ಷಮತೆಯಿಂದ ಕಾರ್ಯ ನಿರ್ವಹಿಸಬಲ್ಲೆ ಮತ್ತು ಇತರರೂ ಮಾಡಬಲ್ಲರು ಎಂದು ನಂಬಿರುತ್ತಾನೆ.

ಸಮಾಯೋಜಿತ ವ್ಯಕ್ತಿತ್ವವುಳ್ಳ ವ್ಯಕ್ತಿಯು ಸಾಮಾಜಿಕ ಪ್ರಜ್ಞೆಯುಳ್ಳವನಾಗಿರುತ್ತಾನೆ. ಬದಲಾಗುವ ಪರಿಸರದ ಸ್ಥಿತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಸಾಮರ್ಥ್ಯವುಳ್ಳವನಾಗಿರುತ್ತಾನೆ. ಈತನು ಇತರರೊಂದಿಗೆ ಜೀವಿಸುತ್ತಾನೆ ಮತ್ತು ಸಾಮಾಜಿಕ ಸಂಪರ್ಕ ಮತ್ತು ಆಸಕ್ತಿಗಳನ್ನು ಅನುಭವಿಸುತ್ತಾನೆ. ಅವನು ಇತರರೊಂದಿಗೆ ಉತ್ತಮ ಮಾನವೀಯ ಸಂಬಂಧವನ್ನು ಹೊಂದಿರುತ್ತಾನೆ. ಅವನು ಇತರರನ್ನು ಅರ್ಥ ಮಾಡಿಕೊಳ್ಳುತ್ತಾನೆ ಮತ್ತು ಅಪನಂಬಿಕೆ, ಅಸೂಯೆ, ದ್ವಂದ್ವ ಮತ್ತು ಜಗಳಗಳಿಂದ ದೂರವಿರುತ್ತಾನೆ. ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾನೆ ಮತ್ತು ಉತ್ಸಾಹ, ತೃಪ್ತಿ, ಆನಂದವನ್ನು ಪ್ರಕಟಿಸುತ್ತಾನೆ.

ಸಮಾಯೋಜಿತ ವ್ಯಕ್ತಿತ್ವವು ಅಹಂನ ವಿಕಾಸವನ್ನು ಮತ್ತು ಪರಿಣಾಮಕಾರಿ ಬುದ್ಧಿಶಕ್ತಿಯನ್ನು ಪ್ರತಿಬಿಂಬಿಸುತ್ತದೆ. ಉತ್ತಮ

Digitised by Bharatavani, CIIL

ಸಮಾಯೋಜನೆಯುಳ್ಳ ವ್ಯಕ್ತಿಯು ಜೀವನದ ಸಮಸ್ಯೆಗಳನ್ನು ಪರಿಹರಿಸಲು ತನ್ನ ಬುದ್ಧಿವಂತಿಕೆಯನ್ನು ಅನ್ವಯಿಸಲು ಕಲಿತಿರುತ್ತಾನೆ. ಹಿಂದೆ ಆದ ತಪ್ಪಿನಿಂದ ಪಾಠ ಕಲಿತು ಮುಂದೆ ಭವಿಷ್ಯದಲ್ಲಿ ಅದೇ ತಪ್ಪನ್ನು ಪುನಃ ಮಾಡುವುದಿಲ್ಲ. ಈತನ ಬುದ್ಧಿಶಕ್ತಿಯ ಪರಿಣಾಮಕಾರಿ ಬಳಕೆಯು ಅವನ ಕೆಲಸ ಮಾಡುವ ಸಾಮರ್ಥ್ಯ, ಕೆಲಸದಲ್ಲಿ ದಕ್ಷತೆ ಮತ್ತು ಸಮರ್ಪಕ ಕಾರ್ಯ ನಿರ್ವಹಣೆಯಲ್ಲಿ ಪ್ರತಿಬಿಂಬಿತವಾಗುತ್ತದೆ. ಅವನು ತನ್ನದೇ ಆದ ಜೀವನದ ಆದರ್ಶ ಮತ್ತು ಮೌಲ್ಯಗಳನ್ನು ರೂಢಿಸಿಕೊಂಡಿರುತ್ತಾನೆ.

ಸಮಾಯೋಜಿತ ವ್ಯಕ್ತಿತ್ವವುಳ್ಳ ವ್ಯಕ್ತಿಯು ಈ ಜಗತ್ತನ್ನು ಅಪ್ಯಾಯಮಾನವಾದ ಮತ್ತು ಸ್ನೇಹಮಯಿ ಜನರಿರುವ, ಆದರಿಸುವ ಮತ್ತು ಸ್ನೇಹಮಯ ಸ್ಥಳವೆಂದು ಗ್ರಹಿಸುತ್ತಾನೆ. ಅವನು ಆಶಾವಾದಿಯಾಗಿದ್ದು, ಅವನ ಸುತ್ತಲು ಇರುವ ಪ್ರತಿಯೊಬ್ಬ ವ್ಯಕ್ತಿಯಿಂದ ಉತ್ಕೃಷ್ಟತೆಯನ್ನೇ ಅಪೇಕ್ಷಿಸುತ್ತಾನೆ. ಈತನು ಇತರರಲ್ಲಿ ನಂಬಿಕೆ ಇಡುವವನು ಮತ್ತು ವಿಶ್ವಾಸಾರ್ಹನು ಆಗಿರುತ್ತಾನೆ. ಇಂಥ ವ್ಯಕ್ತಿಯು ಸ್ವ-ನಿಯಂತ್ರಣ ಸಾಮರ್ಥ್ಯದೊಂದಿಗೆ ತನ್ನ ಸಂವೇಗಗಳನ್ನು ಸಮರ್ಪಕವಾಗಿ ನಿಯಂತ್ರಿಸಿಕೊಳ್ಳುವ (ನಿಗ್ರಹಿಸುವ) ಮತ್ತು ಹಂಚಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಅವನು ಒತ್ತಡ ಮತ್ತು ತುಯ್ತದ ಸಮಯದಲ್ಲಿ ವಿಚಲಿತನಾಗುವುದಿಲ್ಲ. ಸಂವೇಗಾತ್ಮಕವಾಗಿ ತೃಪ್ತನಾಗಿರುತ್ತಾನೆ ಮತ್ತು ಸಂವೇಗಾತ್ಮಕ ಬೇಡಿಕೆಗಳು ಮತ್ತು ಸಾಮಾಜಿಕ ಒಂಟಿತನದಿಂದ ನರಳುವುದಿಲ್ಲ. ಅವನು ಅತಿಯಾದ ಆತಂಕ, ಖಿನ್ನತೆ, ಚಿಂತೆ ಮತ್ತು ತೊಂದರೆ ಉಂಟುಮಾಡುವ ಭಯಗಳಿಂದ ದೂರವಾಗಿರುತ್ತಾನೆ.

ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ಯಹೂದಿ ಕುಟುಂಬದಲ್ಲಿ 1908ರಲ್ಲಿ ಜನಿಸಿದ ಅಬ್ರಹಾಂ ಮಾಸ್ಲೋ ಮಾನವತಾವಾದಿ ಮನೋವಿಜ್ಞಾನ (Humantic psychology) ಪಂಥದ ಪ್ರವರ್ತಕರಲ್ಲಿ ಪ್ರಮುಖವಾದ ಮನೋವಿಜ್ಞಾನಿ. ಇವನು ತನ್ನ ಶ್ರೇಣೀಕೃತ ಮಾನವ ಅಗತ್ಯದ ಮಾದರಿಗೆ, ಆತ್ಮ ವಾಸ್ತವೀಕರಣ (Self Actualization) ಪರಿಕಲ್ಪನೆಗೆ ಪ್ರಸಿದ್ಧನಾಗಿದ್ದಾನೆ. ಇವನ ವಿಚಾರಗಳು ಮನೋವಿಜ್ಞಾನ, ಮನೋಚಿಕಿತ್ಸೆ ಹಾಗೂ ನಿರ್ವಹಣೆ ಕ್ಷೇತ್ರಗಳ ಮೇಲೆ ಗಾಢವಾದ ಪ್ರಭಾವ ಬೀರಿವೆ.

ಮಾಸ್ಲೋ ತಮ್ಮ ಜೀವನದ ಅವಧಿಯಲ್ಲಿ ಮಹತ್ತರವಾದ ಸಾಧನೆ ಮಾಡಿದ ಕೆಲವು ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ವಿವಿಧ ಮೂಲಗಳಿಂದ, ವಿಧಾನಗಳಿಂದ ಮೌಲ್ಯಮಾಪನ ಮಾಡಿದನು. ಮಾಸ್ಲೋ ಅಧ್ಯಯನ ಮಾಡಿದ ವ್ಯಕ್ತಿಗಳಲ್ಲಿ ಥಾಮಸ್ ಜೆಫರ್‌ಸನ್ ಅಬ್ರಹಾಂ ಲಿಂಕನ್, ವಾಲ್ಟ್ ವಿಟ್‌ಮನ್, ಡೇವಿಡ್ ಥೋರೋ, ಬಿಥೋವನ್, ವಿಲಯಂ ಜೇಮ್ಸ್, ಆಲ್ಬರ್ಟ್ ಸ್ವೇಟ್ಜರ್, ಅಲ್ಡಸ್ ಹಕ್ಸೆ, ಫ್ರೆಡರಿಕ್ ಡಗಲಸ್, ಜೇನ್ ಆಡ್ಯಂ, ಆಲ್ಬರ್ಟ್ ಐನ್‌ಸ್ಟೈನ್, ಎಲಿನೋರ್ ರೂಸ್‌ವೆಲ್ಟ್ ಸೇರಿದ್ದರು. ಇವರಲ್ಲಿ ಕಡೆಯ ಐದು ಮಂದಿ ಐತಿಹಾಸಿಕ ವ್ಯಕ್ತಿಗಳು ಹಾಗೂ ಉಳಿದವರು ಮ್ಯಾಸ್ಲೋನ ಸಮಕಾಲೀನರಾಗಿದ್ದರು. ಮ್ಯಾಸ್ಲೋ ಈ ವ್ಯಕ್ತಿಗಳು ಆತ್ಮ ವಾಸ್ತವೀಕರಣವನ್ನು ಸಾಧಿಸಿದ್ದರೆಂದು ತನ್ನ ಅಧ್ಯಯನದಿಂದ ತೀರ್ಮಾನಿಸಿದನು. ಇವರೆಲ್ಲರ ವ್ಯಕ್ತಿತ್ವ ಲಕ್ಷಣಗಳನ್ನು ವಿವರವಾಗಿ ಅಧ್ಯಯನ ಮಾಡಿ ಅದರ ಆಧಾರದ ಮೇಲೆ ಮಾಸ್ಲೋ ಈ ವ್ಯಕ್ತಿಗಳು ಆತ್ಮ-ವಾಸ್ತವೀಕರಣವನ್ನು ಸಾಧಿಸಿದ್ದರೆಂದು ತನ್ನ ಅಧ್ಯಯನದಿಂದ ತೀರ್ಮಾನಿಸಿದನು. ಇವರೆಲ್ಲರ ವ್ಯಕ್ತಿತ್ವ ಲಕ್ಷಣಗಳನ್ನು ವಿವರವಾಗಿ ಅಧ್ಯಯನ ಮಾಡಿ ಅದರ ಆಧಾರದ ಮೇಲೆ ಮಾಸ್ಲೋ ಆತ್ಮ-ವಾಸ್ತವೀಕರಣ ಅಥವಾ ಆತ್ಮ ಸಾಕ್ಷಾತ್ಕಾರದ (Self Actualization) ಗುರಿಯನ್ನು ಸಾಧಿಸಿದ ವ್ಯಕ್ತಿಯ 16 ಲಕ್ಷಣಗಳನ್ನು ಪಟ್ಟಿಮಾಡಿದ್ದಾನೆ. ಆ ಪಟ್ಟಿ ಹೀಗಿದೆ-

1. ಹೊರಗಿನ ವಾಸ್ತವಿಕತೆಯನ್ನು ನಿಖರವಾಗಿ ಪ್ರತ್ಯಕ್ಷಾನುಭವಿಸುವ ಸಾಮರ್ಥ್ಯ.
2. ವಾಸ್ತವಿಕತೆ ಹೇಗಿದ್ದರೂ ಅದನ್ನು ಒಪ್ಪಕೊಂಡು ಸ್ವೀಕರಿಸುವ ಮನಃಸ್ಥಿತಿ.
3. ಸ್ವಾಭಾವಿಕ ಹಾಗೂ ಸ್ವಯಂಸ್ಫೂರ್ತಿಯ ಸ್ವಭಾವ.
4. ವ್ಯಕ್ತಿಗಳಿಗಿಂತ ಹೆಚ್ಚಾಗಿ ಸಮಸ್ಯೆಗಳ ಮೇಲೆ ಗಮನವನ್ನು ಕೇಂದ್ರೀಕರಿಸುವ ಸಾಮರ್ಥ್ಯ.
5. ಏಕಾಂತವನ್ನು ಹೆಚ್ಚಾಗಿ ಇಷ್ಟಪಡುವುದು.
6. ಸ್ವಪರಿಪೂರ್ಣತೆ ಮತ್ತು ಸ್ವಾತಂತ್ರ್ಯಪ್ರಿಯತೆ
7. ತಾವು ಎದುರಿಸುವ ವಸ್ತುಗಳನ್ನು, ಘಟನೆಗಳನ್ನು ಮತ್ತು ವ್ಯಕ್ತಿಗಳನ್ನು ನಿರ್ಮಲ ಮನಸ್ಸಿನಿಂದ, ಸ್ವಯಂಸ್ಫೂರ್ತಿಯಿಂದ ಏಕರೂಪತೆಯಿಲ್ಲದೆ ಪ್ರಶಂಸಿಸುವ ಸಾಮರ್ಥ್ಯ.
8. ವ್ಯಕ್ತಿಗತ ಮಾನಸಿಕ ಮಟ್ಟವನ್ನು ಮೀರಿ ವ್ಯಕ್ತ್ಯೇತರ ಇಂದ್ರಿಯಾತೀತ ಮಟ್ಟದ ಅನುಭವ ಪಡೆಯುವ ಸಾಮರ್ಥ್ಯ. ಇಂಥ ಅನುಭಾವವನ್ನು ಮ್ಯಾಸ್ಲೋ 'ಶಿಖರಾನುಭಾವ' (Peak Experience) ಎಂದು ಕರೆದಿದ್ದಾನೆ. ಇದು ನಮ್ಮ ದೇಶದ ಆಧ್ಯಾತ್ಮಿಕ ಭಾಷೆಯಲ್ಲಿ 'ಅನುಭಾವ' ಎನ್ನುವ ಇಂದ್ರಿಯಾತೀತ ಅನುಭವಕ್ಕೆ ಸಮನಾದುದು.
9. ಇಡೀ ಮಾನವ ಕುಲದೊಂದಿಗೆ ತಾದಾತ್ಮ್ಯತೆ ಹೊಂದಿರುವುದು ಮತ್ತು ಇತರರೊಂದಿಗೆ ಸಾಮಾಜಿಕ ಸಂಬಂಧಗಳನ್ನು ಹಂಚಿಕೊಳ್ಳುವುದು.
10. ಕೆಲವೇ ಸ್ನೇಹಿತರನ್ನು ಹೊಂದಿದ್ದರೂ, ಅಂಥ ಸ್ನೇಹಿತರೊಂದಿಗೆ ಗಾಢವಾದ ಸಂಬಂಧವನ್ನು ಹೊಂದಿರುವುದು.
11. ಪ್ರಜಾಸತ್ತಾತ್ಮಕವಾದ, ಸಮಾನತೆ ಮನೋಭಾವ ಹೊಂದಿರುವುದು.
12. ತಾವು ಸ್ವೀಕರಿಸಿದ ಮೌಲ್ಯಗಳೊಂದಿಗೆ ಪ್ರಬಲವಾದ ಬದ್ಧತೆ ಹೊಂದಿರುವುದು ಮತ್ತು ಸಾಧನ ಮತ್ತು ಗುರಿಗಳ ನಡುವೆ ವ್ಯತ್ಯಾಸದ ಬಗ್ಗೆ ಸ್ಪಷ್ಟ ಅರಿವು ಹೊಂದಿರುವುದು.
13. ವಸ್ತುಗಳನ್ನು ಮತ್ತು ಘಟನೆಗಳನ್ನು ಹೊಸ ದೃಷ್ಟಿಕೋನದಿಂದ ನೋಡುವ ಅರ್ಥೈಸುವ ಆವಿಷ್ಕಾರಿ ಹಾಗೂ ಸೃಜನಶೀಲ ಸಾಮರ್ಥ್ಯ ಹೊಂದಿರುವುದು.
14. ಸಹಿಷ್ಣುತೆಯಿಂದ ಕೂಡಿದ ವ್ಯಾಪಕವಾದ ಹಾಸ್ಯಪ್ರಜ್ಞೆ.
15. ಸಾಮಾಜಿಕ ಒತ್ತಡಗಳಿಗೆ ಹೊಂದಿಕೊಳ್ಳುವುದನ್ನು ಒಳಗಾಗುವುದನ್ನು ವಿರೋಧಿಸುವುದು.
16. ದ್ವಂದ್ವಗಳನ್ನು ಮೀರಿ ಹೋಗುವ ಮತ್ತು ವಿರೋಧ ನಿಲುವುಗಳನ್ನು ಘಟನೆಗಳನ್ನು ಸಮನ್ವಯಗೊಳಿಸುವ ಸಾಮರ್ಥ್ಯ.

ಮೇಲಿನ ಲಕ್ಷಣಗಳನ್ನು ಹೊಂದಿರುವ ಆತ್ಮ ಸಾಕ್ಷಾತ್ಕಾರ (ವಾಸ್ತವೀಕರಣ) ಸಾಧಿಸಿದ ವ್ಯಕ್ತಿ 'ಸಂಪೂರ್ಣ ಕಾರ್ಯಗತ' (Fully

Digitised by Bharatavani, CIIL

Functioning) ವ್ಯಕ್ತಿಯಾಗಿದ್ದು ತನ್ನ ಅಂತಃಸತ್ವಗಳನ್ನು ಗರಿಷ್ಠ ಮಟ್ಟದಲ್ಲಿ ಅಭಿವ್ಯಕ್ತಗೊಳಿಸುತ್ತಾನೆ ಎಂದು ಮ್ಯಾಸ್ಲೋ ಹೇಳುತ್ತಾನೆ.

ಮ್ಯಾಸ್ಲೋವಿನ ಆತ್ಮಸಾಕ್ಷಾತ್ಕಾರ ಗುರಿ ಸಾಧಿಸಿದ ವ್ಯಕ್ತಿಯನ್ನು ಭಗವದ್ಗೀತೆಯಲ್ಲಿ ವಿವರಿಸಿರುವ ಸ್ಥಿತಪ್ರಜ್ಞನ ಲಕ್ಷಣಗಳಿಗೆ ಹೋಲಿಸಬಹುದು. ಇವುಗಳ ನಡುವೆ ಸಾಕಷ್ಟು ಸಮಾನತೆ ಇರುವುದು ಕಂಡು ಬರುತ್ತದೆ.

ನೋಡಿ: ಸ್ಥಿತ ಪ್ರಜ್ಞತ್ವದ ಪರಿಕಲ್ಪನೆ

–ಶೈ. ಶಾ.

## ಸರತಿ ವ್ಯವಸ್ಥೆ

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣದ ವಿಸ್ತೀರ್ಣ ಅನಿವಾರ್ಯ ಮತ್ತು ಅಗತ್ಯವುಳ್ಳದ್ದಾಗಿದೆ. ಅದರಲ್ಲಿಯೂ ಪ್ರಸ್ತುತ ಜನಸಂಖ್ಯಾ ಹೆಚ್ಚಳದಿಂದಾಗಿ ಪ್ರಾಥಮಿಕ ಶಿಕ್ಷಣವನ್ನು ಶೀಘ್ರವಾಗಿ ವಿಸ್ತರಿಸುವ ಜವಾಬ್ದಾರಿಯನ್ನು ಸರ್ಕಾರ ಹೊಂದಿದೆ. ಶಿಕ್ಷಣದ ವಿಸ್ತೀರ್ಣದೊಂದಿಗೆ ಅದರ ಗುಣಾತ್ಮಕ ಮತ್ತು ಪರಿಮಾಣಾತ್ಮಕತೆಯನ್ನು ಸಾಧಿಸುವ ಉದ್ದೇಶವನ್ನೂ ಹೊಂದಿದೆ. ಆದರೆ ಅದಕ್ಕೆ ಹಲವಾರು ಸಮಸ್ಯೆಗಳಿವೆ. ಅಂತಹ ಸಮಸ್ಯೆಗಳಲ್ಲಿ ಹಣಕಾಸಿನ ಮತ್ತು ಕಟ್ಟಡ ಸಮಸ್ಯೆ ಪ್ರಮುಖವಾದುದಾಗಿದೆ.

ರಾಷ್ಟ್ರದ ಎಲ್ಲ ರಾಜ್ಯಗಳ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿಯೂ ಶಿಕ್ಷಣದ ವಿಸ್ತೀರ್ಣಕಾರ್ಯ ಆಗಲೇಬೇಕಾಗಿದೆ. ಅದಕ್ಕಾಗಿ ಸರ್ಕಾರ ಸರತಿ (ಶಿಫ್ಟ್) ವ್ಯವಸ್ಥೆಯನ್ನು ರೂಪಿಸಿ ಜಾರಿಗೆ ತಂದಿದೆ. ಸರತಿಕ್ರಮ ಅಥವಾ ಶಿಫ್ಟ್ ವ್ಯವಸ್ಥೆ ಎಂದರೆ ಇರುವ ಒಂದೇ ಕಟ್ಟಡದಲ್ಲಿ ಎರಡು ಶಾಲೆಗಳನ್ನು ವಿವಿಧ ಅವಧಿಗಳಲ್ಲಿ ನಡೆಸುವುದು. ಸಹಜವಾಗಿ ಆ ಕಟ್ಟಡದಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ದ್ವಿಗುಣಗೊಂಡತಾಗುತ್ತದೆ. ಉದಾಹರಣೆಗೆ: ಇರುವ ಕಟ್ಟಡ ಒಂದು, ಅಲ್ಲಿ ಬೆಳಿಗ್ಗೆ ಸಮಯ 8 ಗಂಟೆಯಿಂದ 11.30ರ ವರೆಗೆ ಪ್ರಾಥಮಿಕ/ ಮಾಧ್ಯಮಿಕ ಶಾಲೆ ನಡೆದರೆ, ಅದೇ ದಿನ ಬೆಳಿಗ್ಗೆ 11.30 ರಿಂದ ಸಂಜೆ 5 ಗಂಟೆ ವರೆಗೆ ಪದವಿ ಪೂರ್ವ / ಪದವಿ ತರಗತಿಗಳನ್ನು ನಡೆಸುವುದು. ಅಂದರೆ, ಕಟ್ಟಡ ಒಂದೇ ಇದ್ದು, ಒಂದೇ ದಿನ ಶಾಲೆ / ಕಾಲೇಜು ವಿವಿಧ ಸಮಯಗಳಲ್ಲಿ ಕಾರ್ಯ ನಿರ್ವಹಿಸುವುವು.

ಕೆಲವು ವೇಳೆ ಈ ಪದ್ಧತಿಯಲ್ಲಿ ಮೊದಲ ಶಾಲೆಯು 2 ರಿಂದ 3 ಗಂಟೆಗಳ ಕಾಲ ತನ್ನ ಕಾರ್ಯ ನಡೆಸುತ್ತದೆ ಅಥವಾ ವಿವಿಧ ಗುಂಪಿನ ವಿದ್ಯಾರ್ಥಿಗಳು ದಿನ ಬಿಟ್ಟು ದಿನ ಶಾಲೆಗೆ ಬರುವರು ಅಥವಾ ವಾರದ ಮೂರು ದಿನ ನಿರಂತರವಾಗಿ ಶಾಲೆಗೆ ಬರುತ್ತಾರೆ. ಪ್ರತಿದಿನ ಶಾಲೆಯ ಅವಧಿಯು ಕನಿಷ್ಠ ಮೂರು ಗಂಟೆ ಕಾಲದ್ದಾಗಿರುತ್ತದೆ. ವಾರದ ಸರತಿ ಪದ್ಧತಿಯು ಮೂರು ದಿನದ ಅವಧಿಯುಳ್ಳದ್ದಾಗಿದೆ.

ಈ ಪದ್ಧತಿಗೆ ಒಳಪಟ್ಟ ಪ್ರತಿ ಶಾಲೆಯು ಅಲ್ಲಿಯ ಒಟ್ಟು ಶಿಕ್ಷಕರ ಸಂಖ್ಯೆಗಿಂತ ಒಬ್ಬರು ಹೆಚ್ಚುವರಿ ಶಿಕ್ಷಕರನ್ನು ಅಲ್ಲಿಯ ಕಾರ್ಯವನ್ನಾಧರಿಸಿ ನೇಮಕ ಮಾಡಲಾಗುವುದು ಅಥವಾ ಬೋಧನಾ ಕಾರ್ಯದಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗುವುದು. ಇಲ್ಲಿ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ವಿಷಯಗಳಿಗೆ ಬಹು ಎಚ್ಚರಿಕೆಯಿಂದ ವೇಳಾಪಟ್ಟಿಯನ್ನು ರೂಪಿಸಲಾಗುವುದು.

–ಎಂ.ಸಿ.ಮೂ

## ಸಹಕಾರಾತ್ಮಕ ಬೋಧನೆ

20ನೇ ಶತಮಾನದ ಪ್ರಾರಂಭದಲ್ಲಿ ಲೇಹಿಯಾ ವಿಶ್ವವಿದ್ಯಾನಿಲಯದಲ್ಲಿ ಹೆರ್‌ಮ್ಯಾನ್ ಶೆನ್ನೈಡರ್ (1872–1939) ಶಿಲ್ಪಕಾರ, ಇಂಜಿನಿಯರ್ ಮತ್ತು ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಾಂಪ್ರದಾಯಕ ತರಗತಿಯ ಕಲಿಕೆ ವಿದ್ಯಾರ್ಥಿಗಳಿಗೆ ತೃಪ್ತಿಯನ್ನು ತರಲಾರದು(ಶೊಲಿನ್ಸ್–1999) ಎಂದು ಇವರು ಅಭಿಪ್ರಾಯ ಪಟ್ಟರು.ಇವರು ಸ್ನಾತಕ ಪದವಿ ವಿದ್ಯಾರ್ಥಿಗಳನ್ನು ಅವಲೋಕನ ಮಾಡುವ ಮೂಲಕ ಸಹಕಾರಾತ್ಮಕ ಶಿಕ್ಷಣ (1901)ದ ಒಂದು ವಿನ್ಯಾಸವನ್ನು ತಯಾರಿಸಿದರು ಲೇಹಿಯಾ ವಿಶ್ವವಿದ್ಯಾನಿಲಯದ ಅಕ್ಕ–ಪಕ್ಕದ ಶಾಲೆಗಳಲ್ಲಿ ಈ ಯೋಜನೆಯನ್ನು 'ಶೆನ್ನೈಡರ್–ಯೋಜನೆ' ಎಂದು ಪ್ರಾರಂಭಿಸಿದರು.1903ರಲ್ಲಿ ಸಿನ್ಸಿನಾಟಿ ವಿಶ್ವವಿದ್ಯಾನಿಲಯ ಶೆನ್ನೈಡರ್‌ರವರನ್ನು ಈ ಯೋಜನೆ ಜಾರಿ ಗೊಳಿಸಲು ನೇಮಕ ಮಾಡಿದರು. 1906ರಲ್ಲಿ ಸಹಕಾರಾತ್ಮಕ ಶಿಕ್ಷಣ ಯೋಜನೆ ಜಾರಿಗೆ ತರಲು ಯೋಜನೆ ರೂಪಿಸಿ ಅನುಷ್ಠಾನಗೊಳಿಸಿದ್ದರು. ಇವರು 30 ವರ್ಷಗಳ ಕಾಲ ಈ ನಿಟ್ಟಿನಲ್ಲಿ ಸೇವೆ ಸಲ್ಲಿಸಿದರು. ಹೀಗೆ ಸಹಕಾರಾತ್ಮಕ ಶಿಕ್ಷಣ ಯೋಜನೆಯ ಕೀರ್ತಿ ಸಿನ್ಸಿನಾಟಿ ವಿಶ್ವವಿದ್ಯಾನಿಲಯಕ್ಕೆ ಸೇರುತ್ತದೆ. ಇಡೀ ವಿಶ್ವದಲ್ಲಿ 'ಶೆನ್ನೈಡರ್' – ಸಹಕಾರಾತ್ಮಕ ಶಿಕ್ಷಣ ಯೋಜನೆಯ ಪ್ರತಿಪಾದಕರಾಗಿ ಹೆಸರನ್ನು ಗಳಿಸಿದ್ದಾರೆ. 1965ರಲ್ಲಿ, ಈ ವಿಶ್ವವಿದ್ಯಾನಿಲಯ 'ಡೀನ್ ಹೆರ್ ಮ್ಯಾನ್ ಶೆನ್ನೈಡರ್ ಪ್ರಶಸ್ತಿ'ಯನ್ನು CEIA ಸಂಸ್ಥೆಯಿಂದ ಪಡೆಯಿತು. 2005 ರಲ್ಲಿ ವಿಶ್ವ ಸಹಕಾರಾತ್ಮಕ ಶಿಕ್ಷಣ ಸಂಸ್ಥೆ ನಾಮಕರಣ ಮಾಡಲಾಗುತ್ತದೆ. ಈ ಸಂಸ್ಥೆಯಲ್ಲಿ ಜಗತ್ತಿನ ವಿವಿಧ ದೇಶಗಳ 1000 ವಿದ್ವಾಂಸರು ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಇದೊಂದು ಹೊಸ ಮಾದರಿಯ ಬೋಧನಾ ಕ್ರಮವಾಗಿ ಇತ್ತೀಚೆಗೆ ಹೊರ ಹೊಮ್ಮಿದೆ.

### ಸಹಕಾರಾತ್ಮಕ ಬೋಧನೆ (Co-operative Teaching) :-

ಸಹಕಾರಾತ್ಮಕ ಬೋಧನೆಯ ಹೊಸದಾಗಿ ಕಂಡರೂ ಇದು ಹೊಸ ಬೋಧನಾ ವಿಧಾನವಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಈ ವಿಧಾನ ಹಿಂದಿನಿಂದಲೂ ಆಚರಣೆಯಲ್ಲಿತ್ತು. ಆದರೆ ಶಿಕ್ಷಣ ಕ್ಷೇತ್ರದಲ್ಲಿನ ಸಕಾರಾತ್ಮಕ ಬದಲಾವಣೆಗಳ ದೃಷ್ಟಿಯಿಂದ ಈ ಬೋಧನಾ ವಿಧಾನವು ಒಂದು ಹೊಸ ತಿರುವನ್ನು ಪಡೆದು ಕೊಂಡಿತು. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದ ವಿದ್ಯಮಾನಗಳು ಕ್ರಾಂತಿಕಾರಕ ಬದಲಾವಣೆಗೆ ಈ ವಿಧಾನ ಮುನ್ಸೂಚನೆಯಾಗಿ ಪರಿಣಮಿಸಿದೆ.

ತರಗತಿಯ ಕೊಠಡಿಯಲ್ಲಿ ಶಿಕ್ಷಕರು ಕಲಿಕಾ ವಾತಾವರಣ ರೂಪಿಸಲು ವೈವಿಧ್ಯಮಯವಾದ ಬೋಧನಾ ವಿಧಾನ, ತಂತ್ರಗಳನು ಬಳಸುವುದುಂಟು / ಆಚರಣೆಗೆ ತರುತ್ತಿರುವುದುಂಟು. ಅಂತಹ ಬೋಧನಾ ತಂತ್ರಗಳಲ್ಲಿ 'ಸಹಕಾರಾತ್ಮಕ ಬೋಧನೆ' 'Co-operative Teaching' ಒಂದು ಹೊಸ ತಂತ್ರವಾಗಿ ರೂಪುಗೊಂಡಿದೆ. ಇದನ್ನೂ ಸಂಕ್ಷಿಪ್ತವಗಿ (Co-teaching) ಎನ್ನುತ್ತಾರೆ.

'ಸಹಕಾರಾತ್ಮಕ ಬೋಧನೆ' – ತರಗತಿ ಕೊಠಡಿಯಲ್ಲಿ ಇಬ್ಬರು / ಮೂರು ಜನ ಶಿಕ್ಷಕರು ಸೇರಿ ಸಹಕಾರಾತ್ಮಕವಾಗಿ ಬೋಧನೆ ಮಾಡವ / ಆಚರಣೆಗೆ ತರುವ ಕಾರ್ಯವಾಗಿರುತ್ತದೆ. ಪ್ರತಿದಿನದ ಸಾಂಪ್ರದಾಯಕ ತರಗತಿಯಲ್ಲಿ / ದೈನಂದಿನ ಕಾರ್ಯಚರಣೆ ತರಗತಿಯಲ್ಲಿ ಮಕ್ಕಳ ಕಲಿಕೆಗೆ ಸಹಕಾರ ನೀಡುವ / ಸಹಾಯ ಮಾಡುವ ಮೂಲಕ ಬೋಧನಾ ಕಾರ್ಯವನ್ನು ಆಚರಣೆಗೆ ತರುವುದಾಗಿದೆ. ಈ ವಿಧಾನವು ವಿದೇಶೀಯ ಶಾಲೆಗಳಲ್ಲಿ ಹೆಚ್ಚಾಗಿ ಆಚರಣೆಯಲ್ಲಿರುವುದು ಕಂಡು ಬರುತ್ತದೆ. ದೇಶೀಯ ಶಾಲೆಗಳಲ್ಲಿ ಕೆಲವು ಕಡೆಗಳಲ್ಲಿ ಈ ಕಾರ್ಯಾಚರಣೆ ನಡೆಸಲು ಪ್ರಯತ್ನಿಸುವ


Digitised by Bharatavani, CIIL

ಕಾರ್ಯಸೂಚನೆ ಇತ್ತೀಚೆಗೆ ಕಂಡು ಬರುವ ನಿರೀಕ್ಷೆಯಲ್ಲಿದೆ. ಮಕ್ಕಳ ಕಲಿಕೆಗೆ ನೆರವಾಗುವ ಪರ್ಯಾಯ ಮಾರ್ಗಗಳು / ತಂತ್ರಗಳನ್ನು ಬಳಸಿ ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಯನ್ನು ಪೂರೈಸುವ ಬೋಧನಾ ವಿಧಾನ ಇದಾಗಿದೆ.

ಸಹಕಾರಾತ್ಮಕ ಬೋಧನೆಯನ್ನು ವಿವಿಧ ಬಗೆಯಲ್ಲಿ ಕಾರ್ಯಚರಣೆಗೆ ತರಬಹುದು. ಇಬ್ಬರು ಮೂರು ಜನ ಶಿಕ್ಷಕರು ಸೇರಿ ತರಗತಿ ಪಾಠ / ತರಗತಿ ಕಲಿಕೆ / ತರಗತಿ ಬೋಧನಾ ವಾತಾವರಣವನ್ನು ಸುಧಾರಣೆಗೊಳಿಸುವ ಒಂದು ಪ್ರಕ್ರಿಯೆಯಾಗಿ ಪರಿಣಮಿಸುತ್ತದೆ. ವಿದ್ಯಾರ್ಥಿಗಳ ಕಲಿಕೆ ಸುಲಭವಾಗಲು ಪರ್ಯಾಯ ತಂತ್ರ ಬಳಸುವ ಮೂಲಕ ಸಹಕಾರ ನೀಡುವುದುದಾಗಿದೆ. ಶಿಕ್ಷಕರ ಈ ತಂಡ ಬೋಧನೆ Team Teaching ಎಲ್ಲರೂ ಒಟ್ಟಿಗೆ ಸೇರಿ ಪಾಠ ಯೋಜನೆ, ಬೋಧನೆ ಮತ್ತು ಮೌಲ್ಯ ಮಾಪನ ತಯಾರಿಸಿ ಒಟ್ಟಾಗಿ ಸೇರಿ ವಿಶೇಷವಾಗಿ ಬೋಧನೆ ಮಾಡುವ ಒಂದು ಪ್ರಯತ್ನ ಇದಾಗಿದೆ.

'ಸಹಕಾರಾತ್ಮಕ ಬೋಧನೆ' ಒಂದು ಶಿಷ್ಟ ಶಿಕ್ಷಣ ಮಾರ್ಗವಾಗಿ ಪರಿಣಮಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಬಗೆಯ ಬೋಧನೆಯ ಅಗತ್ಯ ಕಂಡು ಬರುತ್ತಿದೆ. ಕೆಲವು ಶಾಲಾ-ಕಾಲೇಜುಗಳಲ್ಲಿ ಸಹಕಾರಾತ್ಮಕ ಬೋಧನಾ ವಿಧಾನ ಆಚರಣೆಗೆ ತರುತ್ತಿರುವುದು ಕಂಡು ಬರುತ್ತದೆ. ಈ ಬೋಧನಾ ವಿಧಾನ ವಿಶೇಷವಾಗಿ ಶಿಕ್ಷಣ ನೀಡಲು/ವಿದ್ಯಾರ್ಥಿಗಳಲ್ಲಿ ವಿಶೇಷ ಕಲಿಕೆ ಉಂಟುಮಾಡಲು ಸಹಾಯಕವಾಗುವ ಪರ್ಯಾಯ ವಿಧಾನ ಇದಾಗಿದೆ. ಸಾಂಪ್ರದಾಯಿಕ ತರಗತಿ ಬೋಧನಾ ಕಲಿಕಾ ವಿಧಾನವನ್ನು ದೃಢಗೊಳಿಸುವ ನಿಟ್ಟಿನಲ್ಲಿ ಸಹಕಾರಾತ್ಮಕ ಬೋಧನೆ ತುಂಬ ಸಹಾಯಕವಾಗುತ್ತದೆ. ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳ ಪೂರೈಕೆಗೆ ತುಂಬ ಸಹಕಾರಿಯಾಗುತ್ತದೆ.

### ಸಹಕಾರಾತ್ಮಕ ಬೋಧನೆ ಎಂದರೇನು?
## (What is Co-operative Teaching?)

**ಸಹಕಾರಾತ್ಮಕ ಬೋಧನೆ:**

- ಸಾಮಾನ್ಯ ಮತ್ತು ವಿಶೇಷ ಪರಿಣತಿ ಶಿಕ್ಷಕರ ಮಧ್ಯ ನಡೆಯುವ ಸಹಭಾಗಿತ್ವ / ಪಾಲುಗಾರಿಕೆ ಕಾರ್ಯಾಚರಣೆ.
- ಎಲ್ಲಾ ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಗಮನ ಹರಿಸುವ ಕಾರ್ಯಾಚರಣೆ.
- ವೈವಿದ್ಯಮಯ ಬೋಧನಾ ವಿಧಾನಗಳ ಮೂಲಕ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಕಲ್ಪಿಸಿ ಕೊಡುವುದು.
- ವಿದ್ಯಾರ್ಥಿಗಳಿಗೆ ವಿಶೇಷ ಅಗತ್ಯತೆಗಳನ್ನು ಪೂರೈಸುವ ಹಾಗೂ ವಿದ್ಯಾರ್ಥಿಗಳ ವಿನಿಮಯ ಕಾರ್ಯ ಹೆಚ್ಚಿಸುವ ಕ್ರಮವಾಗಿದೆ.

**ಸಹಕಾರಾತ್ಮಕ ಬೋಧನೆಯ ತಾರ್ಕಿಕ ಆಧಾರ**

**ಸಹಕಾರಾತ್ಮಕ ಬೋಧನೆ ಏಕೆ**

- ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಒದಗಿಸ ಬಹುದು.
- ಬೋಧನೆಯಲ್ಲಿ ಸಮಂಜಸತೆ ಕಾಪಾಡಬಹುದು.
- ವಿದ್ಯಾರ್ಥಿಗಳ ಕಲಿಕಾ ದೋಷಗಳನ್ನು ಕಡಿಮೆ ಮಾಡಬಹುದು.
- ಶಿಕ್ಷಕ ವೃತ್ತಿ ವಿಕಾಸ ಮತ್ತು ಪ್ರೋತ್ಸಾಹ ದೊರೆಯುವುದು.
- ಸಹ-ಯೋಜನೆ ತಯಾರಿಸಲು ನೆರವಾಗುವುದು.

ಕಲಿಕಾ ಶೈಲಿ ಮತ್ತು ಸಾಮರ್ಥ್ಯಗಳನ್ನು ವೈವಿಧ್ಯಮಯ ಬೋಧನಾ ಕಾರ್ಯಾಚರಣೆ ಮೂಲಕ ಪ್ರೋತ್ಸಾಹಿಸಬಹುದು.

**ಸಹಕಾರಾತ್ಮಕ ಬೋಧನೆಯ ಘಟಕಾಂಶಗಳು**

ಸಹಕಾರಾತ್ಮಕ ಬೋಧನೆಯ ಬಗ್ಗೆ ಹಲವು ವಿದ್ವಾಂಸರು ವಿಭಿನ್ನವಾಗಿ ವ್ಯಾಖ್ಯಾನಿಸುತ್ತಾರೆ. ವೆಲ್ಲಾ ಮತ್ತು ಶೌಜಂಡ (2004)-ವೈವಿಧ್ಯತೆಯುಳ್ಳ ಕಲಿಕಾ ವಾತಾವರಣ ಎಂದಿದ್ದಾರೆ. ಜಾನ್‌ಸನ್ ಮತ್ತು ಜಾನ್‌ಸನ್ (1999) - ಗುಂಪಿನ ಸಹಕಾರಾತ್ಮಕ ಕಲಿಕೆ ಎಂದಿದ್ದಾರೆ. ಪಿಸ್‌ಬಗ್ಗ್ (1997), ಫ್ರೈಂಡ್ ಮತ್ತು ಕೂಕ್ (2002) - ಸಹಭಾಗಿತ್ವ ಮತ್ತು ಸಲಹಾತ್ಮಕ ಬೋಧನೆ ಎಂದು ಅಭಿಪ್ರಾಯ ಪಡುತ್ತಾರೆ.

**ಸಹಕಾರಾತ್ಮಕ ಘಟಕಾಂಶಗಳು :-**

**೧. ಸಾಮಾನ್ಯ, ಸಾರ್ವತ್ರಿಕ ಧ್ಯೆಯ ಹೊಂದಿರುವುದು.**

ಶಾಲೆಯಲ್ಲಿ ನಾಲ್ಕು / ಆರುವಾರಗಳ ಕಾಲಾವಧಿಯಲ್ಲಿ ಒಂದು ಬೋಧನಾ ಕಾರ್ಯಕ್ರಮ ರೂಪಿಸುವುದು. ಬೋಧನಾ ಧ್ಯೇಯಗಳನ್ನು ತಲುಪಲು ಸಮರೋಪಾದಿಯಲ್ಲಿ ಒಂದು ಶಿಕ್ಷಕ ತಂಡ ರಚಿಸುವುದು. ಬೋಧನಾ ಕೌಶಲ, ತಂತ್ರ, ಸಂಪನ್ಮೂಲಗಳನ್ನು ವಿಸ್ತರಿಸಿ ಕೊಳ್ಳುವ ಒಂದು ಕಾರ್ಯಚರಣೆಯಾಗಿರುತ್ತದೆ. ಧ್ಯೇಯೋದ್ದೇಶಗಳನ್ನು ತಲುಪಲು ರಚಿಸಿದ ಒಂದು ಶೈಕ್ಷಣಿಕ ಕಾರ್ಯಕ್ರಮ.

**೨. ವಿಚಾರ ವಿನಿಮಯ ಆಧಾರ**

ಗುಂಪಿನ ಶಿಕ್ಷಕರು ಪರಿಣಾಮಕಾರಿ ಬೋಧನೆ ಮಾಡುವುದು ಮಾತ್ರವಲ್ಲ, ವಿದ್ಯಾರ್ಥಿಗಳು ಕಲಿಕಾ ಪರಿಣಾಮ ಉಂಟಾಗಬೇಕು. ವೈವಿಧ್ಯಮಯ ಬೋಧನಾ ಕೌಶಲ, ತಂತ್ರ ಸಂಪನ್ಮೂಲಗಳನ್ನು ಮುಕ್ತವಾಗಿ ಶಿಕ್ಷಕರು ವಿಚಾರ ವಿನಿಮಯ ಮಾಡಿ ಕೊಳ್ಳಲು ತುಂಬ ಸಹಕಾರಿಯಾಗುತ್ತದೆ. ಶಿಕ್ಷಕರೆಲ್ಲ ಸೇರಿ ಕಲಿಕೆ ಮತ್ತು ಬೋಧನೆಯ ಸಾಧಕ - ಬಾಧಕಗಳನ್ನು ಚರ್ಚಿಸಿ, ಬಲಗೊಳಿಸಿ ಕೊಳ್ಳಲು ಈ ಕ್ರಮ ನೆರವಾಗುವುದು.

**೩. ಸಾಮ್ಯತೆ / ಸಾದೃಶ್ಯ / ಸಮತೆ (Parity)**

ಸಹಭಾಗಿತ್ವ ಶಿಕ್ಷಕರ (Co-Teachers) ವೈವಿಧ್ಯಮಯ ಕೊಡುಗೆಯಿಂದ ಸಮತೆ ಉಂಟಾಗುತ್ತದೆ. ಸಹಭಾಗಿತ್ವ ಶಿಕ್ಷಕರ ತಂಡವು ಒಂದು ಸಮತೆ / ಸೌದೃಶ್ಯತೆಯ ಬೋಧನಾ ನಿಲುವಿಗೆ ಬರಲು ಪ್ರತಿಯೊಬ್ಬ ಶಿಕ್ಷಕರೂ ಸಹಮಿತಿ, ಸಹಕಾರ, ಗೌರವ, ಆದರಗಳಿಂದ ವಿಷಯವನ್ನು ಚರ್ಚಿಸಿ, ಆದರ್ಶಗಳನ್ನು ಕ್ರೂಢೀಕರಿಸಿ ಮುಕ್ತವಾದ ನಿರ್ಣಯಕ್ಕೆ ಸಹಮತ ನೀಡುವ ಒಂದು ವಿಶಿಷ್ಟ ವಿಧಾನ ಇದಾಗಿದೆ. ಕಲಿಕೆಗೆ ಸಂಬಂಧಿಸಿದ ಜ್ಞಾನ, ಕೌಶಲಗಳು, ಮನೋಭಾವನೆ, ಅಭಿಪ್ರಾಯ, ಸಲಹೆಗಳನ್ನು ವಿಶೇಷವಾಗಿ ಸಹಭಾಗಿತ್ವ ಹಂಚಿಕೆ ಮೂಲಕ ಒಂದು ಅಂತಿಮ ಸಮಂಜಸ ನಿರ್ಣಯಕ್ಕೆ ಬರುತ್ತಾರೆ. ಶಿಕ್ಷಕರು ಮತ್ತು ಪ್ರಶಿಕ್ಷಕರು / ಹೊಸ ಶಿಕ್ಷಕರ ಮಧ್ಯ ವೃತ್ತಿ ಸಾಮರ್ಥ್ಯ ಹೆಚ್ಚಿಸಿ ಕೊಳ್ಳಲು ಪಾಠ ಬೋಧನಾವಿಕಾಸ ಸಾಮರ್ಥ್ಯ ಹೆಚ್ಚಿಸಿ ಕೊಳ್ಳಲು ಈ ಕ್ರಮ ನೆರವಾಗುವುದು. ಅಲ್ಲದೆ ಶಿಕ್ಷಕರು ಸಾಮರ್ಥ್ಯ ಬಲಗೊಳಿಸಿ ಕೊಳ್ಳಲು, ಶಿಕ್ಷಕರ ಮಧ್ಯೆ ಸಹ ಸಂಬಂದ ವೃದ್ಧಿಯಾಗಲು ನೆರವಾಗುವುದು. ಅಲ್ಲದೆ ವಿದ್ಯಾರ್ಥಿಗಳ ನಿರೀಕ್ಷೆಯನ್ನು ಬಲಗೊಳಿಸಲು / ಸಾಧಿಸಲು ಅನುಕೂಲವಾಗುತ್ತದೆ.

**೪. ನಾಯಕತ್ವ ಕಾರ್ಯ ಹಂಚಿಕೆ**

ಗುಂಪಿನ ಶಿಕ್ಷಕರು ತಮ್ಮ ತರಗತಿಯ ಕಾರ್ಯವನ್ನು ನಾಯಕತ್ವ ಹಂಚಿಕೆ ಆಧಾರದ ಮೇಲೆ ಪ್ರತಿ ತರಗತಿಗಳನ್ನು ನಡೆಸುವರು. ಅಂದರೆ

Digitised by Bharatavani, CIIL

ಶಿಕ್ಷಕರ ತಂಡ ತರಗತಿಯ ನಾಯಕತ್ವವನ್ನು ಪ್ರತಿಯೊಬ್ಬ ಶಿಕ್ಷಕರಿಗೂ ವಿಕೇಂದ್ರಿಕರಣಗೊಳಿಸಿ ಕೊಳ್ಳುವ ಮೂಲಕ ತಮ್ಮ ತಮ್ಮ ಜವಾಬ್ದಾರಿಗಳನ್ನು ತರಗತಿಯಲ್ಲಿ ಒಟ್ಟಾಗಿ ನಿರ್ವಹಿಸುತ್ತಾರೆ. ಶಿಕ್ಷಕರು ತರಗತಿಯ ವಿಷಯ ಮಂಡನೆಯನ್ನು ಹಂತ ಹಂತವಾಗಿ ಕ್ರಮಾನುಗತಿಯಲ್ಲಿ ಹಂಚಿಕೊಳ್ಳುತ್ತಾರೆ. ಉದಾ:– ಒಬ್ಬ ಶಿಕ್ಷಕರು ಬೋಧಿಸಿದರೆ, ಮತ್ತೊಬ್ಬರು ಚಟುವಟಿಕೆಗಳಿಗೆ ಸಹಕಾರ ನೀಡುವುದು. ಮತ್ತೊಬ್ಬ ಶಿಕ್ಷಕರು ಪೋಷಕರಿಗೆ ಮಾಹಿತಿ ನೀಡುವ ಕಾರ್ಯ, ಹಾಗೆಯೇ ತರಗತಿ ಗುಂಪಿನ ಶಿಕ್ಷಕರು ಆಯಾಯ ದಿನದಲ್ಲಿ ತಮ್ಮ ತಮ್ಮ ಕಾರ್ಯಗಳನ್ನು ಸರದಿಯಲ್ಲಿ ಹಂಚಿಕೊಂಡು ತರಗತಿ ನಾಯಕತ್ವವನ್ನು ಬವಾಬ್ದಾರಿಯುತವಾಗಿ ನಿರ್ವಹಿಸುತ್ತಾರೆ.

**ಸಹಕಾರಾತ್ಮಕ ಪ್ರಕ್ರಿಯೆ**

ಸಹಕಾರಾತ್ಮಕ ಪ್ರಕ್ರಿಯೆಯು ಐದು ಪ್ರಮುಖ ಘಟಕಾಂಶಗಳನು ಒಳಗೊಂಡಿರುತ್ತದೆ.

1. ಮುಖಾಮುಖಿ ಪ್ರಕ್ರಿಯೆ. 2. ಧನಾತ್ಮಕ ಆಂತರಿಕ ಸಹ ಸಂಬಂಧ / ಅನ್ಯೋನ್ಯ ಸಂಬಂಧ. 3. ವೈಯಕ್ತಿಕ ಆಂತರಿಕ ಕೌಶಲಗಳು 4. ತರಗತಿ ಮೇಲ್ವಿಚಾರಣೆ ಪ್ರಗತಿ. 5. ವೈಯಕ್ತಿಕ ಜವಾಬ್ದಾರಿಗಳು.

**೧. ಮುಖಾಮುಖಿ ಪ್ರಕ್ರಿಯೆ**

ಸಹಕಾರಾತ್ಮಕ ಶಿಕ್ಷಕರಿಗೆ (Co-Teachers) ಮುಖಾಮುಖಿ ಪ್ರಕ್ರಿಯೆ ತುಂಬಾ ಪ್ರಮುಖ ಘಟಕಾಂಶವಾಗಿದೆ. ಏಕೆ, ಹೇಗೆ, ಎಷ್ಟು ಎಂಬುದರ ಬಗ್ಗೆ ವಿಚಾರ ವಿನಿಮಯ, ಕಾಲಾವಧಿ, ತೀರ್ಮಾನಗಳನ್ನು ತೆಗೆದು ಕೊಳ್ಳುವುದು ತುಂಬಾ ಮುಖ್ಯವಾದ ಅಂಶವಾಗಿರುತ್ತದೆ. ಪ್ರತಿಯೊಬ್ಬ ಶಿಕ್ಷಕರು ಈ ಕಾರ್ಯದಲ್ಲಿ ಪರಸ್ಪರ ಭಾಗಿಯಾಗುವುದು ಹಾಗೂ ಪರಸ್ಪರ ತರಗತಿ ಕಾರ್ಯ ಹಂಚಿಕೆ ಮಾಹಿತಿಯನ್ನು ಶಿಕ್ಷಕರಿಗೆ ಒದಗಿಸುವುದು ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳಲು ಮುಖಾ ಮುಖಿ ಪ್ರಕ್ರಿಯೆ ಬಹಳ ಅಗತ್ಯವಾಗಿರುತ್ತದೆ. ಅಲ್ಲದೆ ಕಠಿಣ ನಿಲುವುಗಳನ್ನು ತೆಗೆದು ಕೊಳ್ಳಲು ನೆರವಾಗುವುದು.

**೨. ಧನಾತ್ಮಕ ಅಂತರ್ ಸಂಬಂಧ / ಅನ್ಯೋನ್ಯ ಸಂಬಂಧ**

ಸಹಕಾರಾತ್ಮಕ ಬೋಧನೆಗೆ ಅನ್ಯೋನ್ಯತೆಯ ಸಂಬಂಧ ಬಹಳ ಮುಖ್ಯವಾಗಿರುತ್ತದೆ. ವಿದ್ಯಾರ್ಥಿಗಳ ವೈವಿಧ್ಯಮಯ ಅಗತ್ಯತೆಗಳನ್ನು ಪೂರೈಸಲು ಸಹಕಾರಾತ್ಮಕ ಶಿಕ್ಷಕರಲ್ಲಿ ಆಂತರಿಕ ಸಂಬಂಧ ಬಹಳ ಮುಖ್ಯವಾಗಿರುತ್ತದೆ. ಪ್ರತಿಯೊಬ್ಬ ಶಿಕ್ಷಕರು ಎಲ್ಲಾ ಮಕ್ಕಳ / ವಿದ್ಯಾರ್ಥಿಗಳಲ್ಲಿ ಸಮಾನ ಕಲಿಕೆ ಉಂಟುಮಾಡಬೇಕಿದೆ. ಇದಕ್ಕೆ ಪೂರಕವಾಗಿ ಸಹಕಾರಾತ್ಮಕ ಶಿಕ್ಷಕರೆಲ್ಲರೂ ತಮ್ಮದೇ ಆದ ಕೌಶಲ, ತಂತ್ರ, ಸಂಪನ್ಮೂಲ ಸಾಮಗ್ರಿಗಳನ್ನು ಒದಗಿಸುವ ಮೂಲಕ ತಮ್ಮದೇ ಆದ ಜವಾಬ್ದಾರಿಗಳನ್ನು ನಿರ್ವಹಿಸಬೇಕಿದೆ. ಅನ್ಯೂನ್ಯ ಸಂಬಂಧದಿಂದ ಸಾಮಾನ್ಯ ಧ್ಯೇಯ, ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಹಾಗೂ ಅಲ್ಲದೇ ಬೋಧನಾ ಕಾರ್ಯ ಸುಲಭವಾಗುತ್ತದೆ. ಬೋಧನಾ ಕಾರ್ಯ ಯಶಸ್ವಿಯಾಗಿದೆ.

**೩. ಅಂತರ್ ವೈಯಕ್ತಿಕ ಕೌಶಲಗಳು.**

ವೈಯಕ್ತಿಕ ಅಂತರಿಕ ಕೌಶಲಗಳಾದ – ಶಾಬ್ದಿಕ, ಆಶಾಬ್ದಿಕ, ನಂಬಿಕೆ, ಸಂಘರ್ಷ ನಿರ್ವಹಣೆ, ಸಮಸ್ಯೆ ಪರಿಹಾರ ಕಾರ್ಯ ಕೈಗೊಳ್ಳುವುದು ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ. ಈ ಬಗೆಯ ಸಾಮಾಜಿಕ ಅಂತರ್ ಕ್ರಿಯೆಗಳಿಂದ ನಿರ್ದಿಷ್ಟ ಗುರಿ ಸಾಧನೆಯನ್ನು ತಲುಪಲು ಸಾಧ್ಯವಾಗುತ್ತದೆ. ಯಾವ ವಿದ್ಯಾರ್ಥಿಯನ್ನೂ ಕಲಿಕೆಯಲ್ಲಿ ಕಡೆಗಣಿಸದಂತೆ ನೋಡಿ ಕೊಳ್ಳಲು ಸಹಾಯಕವಾಗುತ್ತದೆ. ಸಹಕಾರಾತ್ಮಕ ಶಿಕ್ಷಕರ ವೈಯಕ್ತಿಕ ಕೌಶಲಗಳು, ಪಡೆದ ತರಬೇತಿ, ಸಾಮರ್ಥ್ಯದ ಮಟ್ಟ ಮತ್ತು ಸಂವಹನ ಸಾಮರ್ಥ್ಯ–ಇತ್ಯಾದಿ ಅಂಶಗಳ ಆಧಾರದ ಮೇಲೆ ತರಗತಿ ಕಾರ್ಯ ನಿರ್ವಹಿಸಲಾಗುತ್ತದೆ / ಕಾರ್ಯನಿರ್ವಹಿಸಬೇಕಿದೆ. ಪ್ರತಿಯೊಬ್ಬ ಶಿಕ್ಷಕರ ಸಹಭಾಗಿತ್ವ ಪ್ರೋತ್ಸಾಹ, ಉತ್ಸಾಹ, ಪುಷ್ಟೀಕರಣ ನೀಡುವುದರಿಂದ ತಮ್ಮ ವೈಯಕ್ತಿಕ ಸಾಮಾಜಿಕ ಕೌಶಲ – ಸಾಮರ್ಥ್ಯಗಳು ಶಿಕ್ಷಕರಲ್ಲಿ ಹೆಚ್ಚುತ್ತವೆ.

**೪. ಶಿಕ್ಷಕರ ಪ್ರಗತಿಯ ಮೇಲ್ವಿಚಾರಣೆ**

ಮೇಲ್ವಿಚಾರಣೆಯು ತರಗತಿ ಬೋಧನೆಗೆ ಸಂಬಂಧಿಸಿದ ಸವಾಲುಗಳ ಮತ್ತು ಯಶಸಿನ ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ. ವಿದ್ಯಾರ್ಥಿಗಳ ತರಗತಿ ಪಾಠಗಳ ಕಲಿಕಾ ಸಾಧನೆ ಸಹಕಾರಾತ್ಮಕ ಶಿಕ್ಷಕರು ಬಳಸಬಹುದಾದ ಉತ್ತಮ ಸಂವಹನ ಕೌಶಲಗಳು ಅಗತ್ಯ ಕಲಿಕಾ ಚಟುವಟಿಕೆಗಳ ಆಯೋಜನೆ / ಹೊಂದಾಣಿಕೆ ಮಾಡುವುದು. ಸರಳ ಬೋಧನಾ ಕ್ರಮ – ಇತ್ಯಾದಿಗಳನ್ನು ನಿರ್ಧರಿಸಿ ಕೊಳ್ಳುವ ಪ್ರಕ್ರಿಯೆ ಇದಾಗಿದೆ. ಪ್ರತಿಯೊಬ್ಬ ಶಿಕ್ಷಕರು ವಿಚಾರ ವಿನಿಮಯ, ಹಂಚಿಕೆ, ಸಲಹೆ, ಸಹಕಾರದ ಮೂಲಕ ಬೋಧನಾ ಕಾರ್ಯ/ವಿದ್ಯಾರ್ಥಿಯ ಕಲಿಕೆ ಪ್ರಗತಿಯನ್ನು ಹೆಚ್ಚಿಸಬಹುದು.

**೫. ವೈಯಕ್ತಿಕ ಹೊಣೆಗಾರಿಕೆ**

ಸಹಕಾರಾತ್ಮಕ ಬೋಧನೆಗೆ ವೈಯಕ್ತಿಕ ಹೊಣೆಗಾರಿಕೆಯು ಒಂದು ಯಂತ್ರವಿದ್ದಂತೆ, ಪ್ರತಿ ಸಹಕಾರಾತ್ಮಕ ಶಿಕ್ಷಕರ ವೈಯಕ್ತಿಕ ಸಾಮರ್ಥ್ಯಗಳ ಆಧಾರದ ಮೇಲೆ ಸಹಕಾರಾತ್ಮಕ ಬೋಧನೆ ನಡೆಯುತ್ತದೆ. ಪ್ರತಿ ಸಹಕಾರಾತ್ಮಕ ಶಿಕ್ಷಕರ ಸಹಭಾಗಿತ್ವ ಹೊಣೆಗಾರಿಕೆಯ ಪರಿಕಲ್ಪನೆ ವೃದ್ಧಿಸುತ್ತದೆ. ತಮ್ಮದೇ ಆದ ಕೊಡುಗೆ ನೀಡಲು ನೆರವಾಗುವುದು. ವೈಯಕ್ತಿಕ ಹೊಣೆಗಾರಿಕೆಯಿಂದ ಕ್ರಮಾನುಗತಿ ಅನುಸರಿಸುವ ಮೂಲಕ ಬೋಧನೆ ಪರಿಣಾಮಕಾರಿಗೊಳಿಸಬಹುದು. ಸಹಕಾರಾತ್ಮಕ ಶಿಕ್ಷಕರ ಸಹಭಾಗಿತ್ವ ಹೊಣೆಗಾರಿಕೆ ಪರಿಕಲ್ಪನೆ ವೃದ್ಧಿಸುತ್ತದೆ. ಸಹಕಾರಾತ್ಮಕ ಬೋಧನೆಗೆ ನೆರವಾಗಬಹುದಾದ ಕ್ರಿಯಾತ್ಮಕ ಕಾರ್ಯಚಟುವಟಿಕೆಗಳಿಗೆ ಸಲಹೆ ನೀಡುವುದು, ತಮ್ಮ ಪಾತ್ರಗಳ ಬಗ್ಗೆ ಶಿಕ್ಷಕರಲ್ಲಿ ಜ್ಞಾನ ವೃದ್ಧಿಯಾಗುವುದು. ಅಲ್ಲದೇ ಹೆಚ್ಚಿನ ಹೊಣೆಗಾರಿಕೆ, ಪಾತ್ರ ನಿರ್ವಹಣೆಯನ್ನು ವಹಿಸಿ ಕೊಡುವ ಮೂಲಕ ತಮ್ಮದೇ ಆದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗುವುದು.

ಈ ಮೇಲಿನ ಐದು ಘಟಕಾಂಶಗಳು ಸಹಕಾರಾತ್ಮಕ ಪ್ರಕ್ರಿಯೆಗೆ ಹೇಗೆ ನೆರವಾಗ ಬಹುದೆಂಬುದನ್ನು ಈ ಕೆಳಗಿನ ಆರು ವಿಧಾನದ ಮೂಲಕ ಸಹಕಾರಾತ್ಮಕ ಬೋಧನೆ ಕಾರ್ಯ ಹೇಗೆ ನಿರ್ವಹಿಸಬಹುದೆಂಬುದನ್ನು ತಿಳಿಸಿಕೊಳ್ಳಬಹುದು.

**ಸಹಕಾರಾತ್ಮಕ ಬೋಧನಾ ವಿಧಾನಗಳು**

ಸಹಕಾರಾತ್ಮಕ ಬೋಧನೆಯನ್ನು ಪ್ರಮುಖವಾಗಿ ಆರು ವಿಧಾನಗಳಲ್ಲಿ ನಡೆಸಬಹುದು

**೧. ಒಬ್ಬರು ಬೋಧಿಸುವುದು ಮತ್ತೊಬ್ಬರು ವೀಕ್ಷಿಸುವುದು.**

ಈ ವಿಧಾನದ ಮೂಲಕ ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ವೀಕ್ಷಿಸಲು ಸಾಧ್ಯವಾಗುತ್ತದೆ. ಸಹಕಾರಾತ್ಮಕ ಶಿಕ್ಷಕರು ಮುಂಚಿತವಾಗಿ ಯಾವ ವಿಧಾನದ ಮೂಲಕ ವೀಕ್ಷಣಾ ಕಾರ್ಯ ನಿರ್ವಹಿಸಬೇಕು, ದತ್ತಾಂಶವನ್ನು ಹೇಗೆ ಸಂಗ್ರಹಿಸಬೇಕೆಂಬುದನ್ನು ಪೂರ್ವ ಯೋಜನೆಯಲ್ಲಿ ರೂಪಿಸಲಾಗುತ್ತದೆ. ನಂತರ ಸಂಗ್ರಹಿಸಿದ ದತ್ತಾಂಶವನ್ನು ಒಟ್ಟಿಗೆ ಸೇರಿ ವಿಶ್ಲೇಷಣೆ ಮಾಡಲಾಗುತ್ತದೆ.

Digitised by Bharatavani, CIIL

ಈ ವಿಧಾನದಲ್ಲಿ ಒಬ್ಬ ಬೋಧಕೇತರ ಸಿಬ್ಬಂದಿಯ ನೆರವನ್ನು / ಸಹಭಾಗಿತ್ವವನ್ನು ಪಡೆದು ಕೊಳ್ಳಬಹುದು. ಆ ಸಿಬ್ಬಂದಿಗೆ ವಿಷಯ / ಸನ್ನಿವೇಶದ ಬಗ್ಗೆ ಪೂರ್ವ ತರಬೇತಿ ನೀಡಬೇಕು.

**೨. ಒಬ್ಬರು ಬೋಧಿಸುವುದು ಮತ್ತೊಬ್ಬರು ಸಹಾಯ ನೀಡುವುದು.**

ಇದು ಸಹಕಾರಾತ್ಮಕ ಬೋಧನೆಯ ಎರಡನೆ ವಿಧಾನ. ಒಬ್ಬರು ಬೋಧನೆಯ ಜವಾಬ್ದಾರಿಯನ್ನು ವಹಿಸಿಕೊಂಡರೆ ಮತ್ತೊಬ್ಬರು ತರಗತಿಯ ಕೋಣೆಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ನೆರವಾಗುವಂತೆ ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳನ್ನು ಪೂರೈಸುವರು. ವಿದ್ಯಾರ್ಥಿಗಳಿಗೆ, ಬೇಕಾದ ಅಗತ್ಯ ಸಾಮಗ್ರಿಗಳನ್ನು ಒದಗಿಸಿ ಸಹಾಯ ನೀಡಲಾಗುತ್ತದೆ. ಸಹಾಯಕ ಸಿಬ್ಬಂದಿ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಸಂಪನ್ಮೂಲ ಸಾಮಗ್ರಿಗಳನ್ನು ಒದಗಿಸಿ ನೆರವಾಗುತ್ತಾನೆ.

**೩. ಸಮನಾಂತರ ಬೋಧನೆ**

ಒಂದು ಸನ್ನಿವೇಶದಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚು ನೆರವು ನೀಡುವ ಸಲುವಾಗಿ, ಅಗತ್ಯಕ್ಕಿಂತ ಹೆಚ್ಚು ಮೇಲ್ವಿಚಾರಣೆ ವಹಿಸುವ ಕಾರ್ಯವಿಧಾನವಾಗಿದೆ. ಈ ವಿಧಾನದಲ್ಲಿ ಒಂದು ತರಗತಿಯ ವಿದ್ಯಾರ್ಥಿಗಳ ಗುಂಪನ್ನು ಎರಡು ಗುಂಪುಗಳಾಗಿ ವರ್ಗೀಕರಿಸಿ ಈ ಗುಂಪುಗಳಿಗೆ ಬೇರೆ ಬೇರೆ ಶಿಕ್ಷಕರು ಒಂದೇ ವಿಷಯವನ್ನು ಎರಡೂ ಗುಂಪುಗಳಿಗೆ ಬೋಧಿಸುವುದು. ಇಬ್ಬರು ಶಿಕ್ಷಕರು ಎರಡು ಗುಂಪುಗಳ ವಿದ್ಯಾರ್ಥಿಗಳಲ್ಲಿ ಕಲಿಕಾ ಪರಿಣಾಮ ಉಂಟುಮಾಡುವ ತಂತ್ರಗಾರಿಕೆ ಬಳಕೆಯಿಂದ ಹೆಚ್ಚು ಕಲಿಕಾ ಅವಕಾಶವನ್ನು ಒದಗಿಸಿ ಕೊಡುವರು ಮತ್ತು ವಿದ್ಯಾರ್ಥಿಗಳ ಪ್ರಕ್ರಿಯೆಗೆ ಸಮಾನಾಂತರವಾಗಿ ಸ್ಪಂದಿಸುವರು.

**೪. ನೆಲೆ / ಸ್ಥಾನ ಬೋಧನೆ (Station Teaching)**

ಈ ಕ್ರಮದಲ್ಲಿ ಇಬ್ಬರು ಶಿಕ್ಷಕರಿಗೆ ತರಗತಿಯಲ್ಲಿ ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸುವದು ಶಿಕ್ಷಕರು ವಿಷಯ ಮತ್ತು ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಭಾಗಿಸವರು ವಿದ್ಯಾರ್ಥಿಗಳನ್ನು ಸರದಿಯ ಆಧಾರದ ಮೇಲೆ ಒಬ್ಬ ಶಿಕ್ಷಕರ ನಂತರ ಮತ್ತೊಬ್ಬರು ಬರುವಂತೆ ಸರದಿ ಮಾಡುವರು ಪ್ರತಿ ಶಿಕ್ಷಕ ತನ್ನದೇ ಆದ ಸ್ಥಾನ ಬೋಧನೆ ಸ್ವತಂತ್ರವಾಗಿ ನಿಭಾಯಿಸುವುದು. ಹೀಗೆ ಪ್ರತಿಯೊಬ್ಬ ಶಿಕ್ಷಕ ಪ್ರತಿ ಗುಂಪಿಗೆ ಮೂರು ಸಾರಿ ಸರದಿಯ ಆಧಾರದ ಮೇಲೆ ಸ್ಥಾನ / ನೆಲೆ ಬೋಧನೆ ಪುನರಾವರ್ತನೆ ಮಾಡುವನು. ಪ್ರತಿಯೊಬ್ಬ ಶಿಕ್ಷಕ ಪ್ರತಿಯೊಬ್ಬ ವಿದ್ಯಾರ್ಥಿಯ ಪರಿಚಯ ಇರುವಂತೆ ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಬೋಧನೆ ಮಾಡುವನು. ಈ ಬೋಧನೆಯನ್ನು ಇನ್ನೂ ಉತ್ತಮ ಪಡಿಸಲು ಮೂರನೆ ನೆಲೆ/ಸ್ಥಾನ ಬೋಧನೆ (Station Teaching)ಯನ್ನು ಏರ್ಪಡಿಸಬಹುದು. ವಿದ್ಯಾರ್ಥಿಗಳಿಗೆ ಕ್ರಮಬದ್ಧವಾದ ದತ್ತಕಾರ್ಯಒದಗಿಸಿ ಬೋಧನೆ ನೆಲೆಗೊಳಿಸುವ ವಿಧಾನ ಇದಾಗಿದೆ. ಉದಾ:- ಕಲಾ / ಭಾಷೆ ಬೋಧನೆಯಲ್ಲಿ ಒಂದು ನೆಲೆ / ಸ್ಥಾನದಲ್ಲಿ ಇತ್ತೀಚಿನ ಹೊಸ ಸಾಹಿತ್ಯ ಓದಿನ ಗ್ರಹಿಕೆಯನ್ನುಂಟು ಮಾಡಿದರೆ, ಮತ್ತೊಂದು ಹಂತ / ನೆಲೆ / ಸ್ಥಾನದಲ್ಲಿ ಸಾಹಿತ್ಯದಲ್ಲಿನ ಲೋಪದೋಷಗಳನ್ನು / ಕಾಗುಣಿತವನ್ನು ತಿದ್ದುವ ದತ್ತಕಾರ್ಯ ವಹಿಸುವುದು. ಮತ್ತೊಂದು ನೆಲೆಯಲ್ಲಿ ವಾಚಕ ಮಾಡುವ ಕೌಶಲ ಚಟುವಟಿಕೆಯನ್ನು ಒದಗಿಸುವುದು. ಹೀಗೆ ಸರದಿಯೋಪಾದಿಯಲ್ಲಿ ಸ್ಥಾನ / ನೆಲೆ ಗೊಳಿಸುವ ಬೋಧನಾ ವಿಧಾನ ಇದಾಗಿದೆ.

**೫. ಪರ್ಯಾಯ ಬೋಧನೆ (Alternative Teaching)**

ಈ ವಿಧಾನದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಒಂದು ಚಿಕ್ಕ ಗುಂಪಿನ ವಿದ್ಯಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ಒಬ್ಬ ಶಿಕ್ಷಕನನ್ನು ದೊಡ್ಡ ಗುಂಪಿನ ವಿದ್ಯಾರ್ಥಿಗಳ ಗುಂಪಿಗೆ ಮತ್ತೊಬ್ಬ ಶಿಕ್ಷಕನನ್ನು ನೇಮಿಸಲಾಗುವುದು. ದೊಡ್ಡ ಗುಂಪಿಗೆ ಪಾಠ ಪೂರ್ಣಗೊಳಿಸಿದರೆ, ಚಿಕ್ಕ ಗುಂಪಿಗೆ ಅದೇ ಪಾಠವನ್ನು ವಿವಿಧ ವಿಧಾನ / ಹಂತಗಳಲ್ಲಿ ಬೋಧಿಸಲಾಗುವುದು. ಈ ಕ್ರಮವನ್ನು ಇಡೀ ತರಗತಿಗೆ ಅನ್ವಯಿಸಬಹುದು.

**೬. ತಂಡ ಬೋಧನೆ (Team Teaching)**

ತಂಡ ಬೋಧನೆಯಲ್ಲಿ ಇಬ್ಬರು ಶಿಕ್ಷಕರು ಒಂದೇ ಕಾಲಾವಧಿಯಲ್ಲಿ ಒಂದೇ / ಅದೇ ವಿಷಯವನ್ನು ಬೋಧಿಸುವುದು. ದೊಡ್ಡ ಗುಂಪಿನ ವಿದ್ಯಾರ್ಥಿಗಳಿಗೆ ಮುಕ್ತವಾಗಿ ತರಗತಿಯಲ್ಲಿ ಚಲಿಸುತ್ತಾ ಸ್ವತಂತ್ರವಾಗಿ ಮಾತನಾಡುತ್ತಾ ಬೋಧನೆ ಮಾಡುವ ಕ್ರಮ ಇದಾಗಿದೆ. ಸಂಭಾಷಣೆಯಿಂದ ಕೂಡಿದ ಬೋಧನೆ ಇದಾಗಿದೆ. ಬೋಧನೆ ಮತ್ತು ಯೋಜನೆ ಹಂಚಿಕೆಯ ರೂಪದಲ್ಲಿ ಇರುತ್ತದೆ. ಶಿಕ್ಷಕರಲ್ಲಿ ಮುಕ್ತ ವಾತಾವರಣ ಮೂಡಿಸುತ್ತದೆ. ಮುಕ್ತ ಚರ್ಚೆ ಹಂಚಿಕೆಯ ರೂಪದಲ್ಲಿ ಇರುತ್ತದೆ. ಶಿಕ್ಷಕರಲ್ಲಿ ಮುಕ್ತ ವಾತಾವರಣ ಮೂಡಿಸುತ್ತದೆ. ಮುಕ್ತ ಚರ್ಚೆ, ಸಂವಾದ ನಡೆಯುತ್ತದೆ. ವೈಯಕ್ತಿಕ ಗಮನಹರಿಸಿ ಬೋಧಿಸುವ ಪರಿಣಾಮಕಾರಿ ಬೋಧನೆ ಇದಾಗಿದೆ.

**ಸಹಕಾರಾತ್ಮಕ ಬೋಧನೆಯಲ್ಲಿ ಶಿಕ್ಷಕರು ಚರ್ಚಿಸಿ ವಿನಿಮಯಮಾಡಿ ಕೊಳ್ಳಬಹುದಾದ ಅಂಶಗಳು**

1. ಬೋಧನಾ ವಿಷಯ ಮತ್ತು ವಿದ್ಯಾರ್ಥಿಯ ನಿರೀಕ್ಷೆಗಳು.
2. ಯೋಜನೆ-ಕಲಾವಧಿ, ಮಾಡಬೇಕಾದುದು, ಯಾರು ಯಾವ ಕಾರ್ಯನಿರ್ವಹಿಸಬೇಕು.
3. ಬೋಧನಾ ವಿನ್ಯಾಸ – ಯಾವ ಭಾಗವನ್ನು ಯಾರು ಬೋಧನೆ ಮಾಡಬೇಕು, ಹೇಗೆ ಬೋಧಿಸಬೇಕು.
4. ಸಮತೆ – ಪ್ರತಿಯೊಬ್ಬ ಶಿಕ್ಷಕರಿಗೂ ಸಮಾನ ಅವಕಾಶ ಕಲ್ಪಿಸಿ ಕೊಳ್ಳುವುದು ತರಗತಿಯಲ್ಲಿ ಇಬ್ಬರಿಗೂ ಒಂದೇ ಸ್ಥಾನಮಾನ ಕಲ್ಪಿಸುವುದು.
5. ಸ್ಥಳ ಅವಕಾಶ – ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ.
6. ಗಲಾಟೆ / ಗೊಂದಲಗಳಲ್ಲಿ ನಿರ್ವಹಣೆ
7. ಬೋಧನಾ ದಿನಚರಿಗಳು.
8. ಸಂಘಟನಾ ದಿನಚರಿ.
9. ಸಹಾಯ / ನೆರವು. ನೀಡುವುದು.
10. ತರಗತಿ ಶಿಸ್ತನ್ನು ಕಾಪಾಡುವುದು.
11. ಉತ್ತಮ ವಿಷಯಗಳ ಚರ್ಚೆ.
12. ಹಿಮ್ಮಾಹಿತಿ ಪಡೆದು ಪರಸ್ಪರ ಚರ್ಚಿಸುವುದು.
13. ವಿದ್ಯಾರ್ಥಿಗಳ ಮೌಲ್ಯಮಾಪನ ಮತ್ತು ದರ್ಜೆ.
14. ಬೋಧನೆಗೆ ಸಂಬಂಧಿಸಿದ ಪೂರ್ವಸಿದ್ಧತೆ, ದತ್ತಕಾರ್ಯ ಇತ್ಯಾದಿ.
15. ಪರ್ಯಾಯ ಜವಾಬ್ದಾರಿಗಳ ಹಂಚಿಕೆ.

Digitised by Bharatavani, CIIL

16. ವಿಶ್ವಾಸಾರ್ಹತೆ ಹೊಂದಿರುವುದು.

17. ಸಿಡುಕುತನ / ಮುಂಗೋಪಿತನ

**ಶಿಕ್ಷಣಕ್ಕೆ ಸಹಕಾರಾತ್ಮಕ ಬೋಧನೆಯ ಅನುಕೂಲಗಳು**

- ಕಲಿಕಾರ್ಥಿಗಳಿಗೆ ಪ್ರೋತ್ಸಾಹ ದೊರೆಯುತ್ತದೆ.
- ವಿದ್ಯಾರ್ಥಿ ಮತ್ತು ಶಿಕ್ಷಕ ಅನುಪಾತ ಕಡಿಮೆಗೊಳಿಸಬಹುದು.
- ಸ್ಮರಣೆ, ಧಾರಣೆ, ಪ್ರಗತಿ, ಗ್ರಹಿಕೆ ಹೆಚ್ಚುತ್ತದೆ.
- ಸಾಮಾನ್ಯ ಶಿಕ್ಷಣ ಬೋಧಿಸುವ ಶಿಕ್ಷಕರಿಗೆ ಪ್ರೋತ್ಸಾಹ ದೊರೆಯುವುದು.
- ವೈವಿಧ್ಯಮಯ ಬೋಧನೆಗೆ ಪ್ರೋತ್ಸಾಹ ದೊರೆಯುತ್ತದೆ.
- ತರಗತಿ ಗೊಂದಲ ಕಡಿಮೆಯಾಗುವುದು.
- ತರಗತಿಯಲ್ಲಿ ಕಣ್ಗಾವಲು ಹೆಚ್ಚುತ್ತದೆ.
- ಪುನರ್ ಪುಷ್ಟೀಕರಣ ದೊರೆಯುವುದು.
- ಶಿಕ್ಷಕರ ಸಹಭಾಗಿತ್ವದಿಂದ ಅವರ ಬೋಧನಾ ಸಾಮರ್ಥ್ಯ ಹೆಚ್ಚುತ್ತದೆ.
- ವೈವಿಧ್ಯತೆ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಭಾಗಿಸಹುದು.

–ಎ.ಬ.

## ಸಂಪನ್ಮೂಲ ಕೇಂದ್ರಗಳು

**ಸಂಪನ್ಮೂಲ ಕೇಂದ್ರದ ಪರಿಕಲ್ಪನೆ:** ಸ್ವಾತಂತ್ರ್ಯ ಪೂರ್ವ ಹಾಗೂ 1994ರ ಹಿಂದಿನ ಎಲ್ಲಾ ಶಿಕ್ಷಣ ಯೋಜನೆಗಳು ರಾಷ್ಟ್ರ ಮಟ್ಟದಲ್ಲಿ ಯೋಜಿತಗೊಂಡು ಶಾಲಾ ಮಟ್ಟಕ್ಕೆ ಜಾರಿಗೊಂಡಂಥವುಗಳು. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ತರಬೇತಿ, ಸಮಾಲೋಚನೆ, ಮಾರ್ಗದರ್ಶನ ಮುಂತಾದುವು ಜಿಲ್ಲಾ ಮಟ್ಟಕ್ಕೆ ಹೆಚ್ಚಾಗಿ ಸೀಮಿತಗೊಂಡಿದ್ದವು. ಆದರೆ 1994ರಲ್ಲಿ ಜಾರಿಗೆ ಬಂದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಲ್ಲಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಯೋಜನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆ ಮುಂತಾದವು ವಿಕೇಂದ್ರೀಕರಣ ಹೊಂದಿ ಶಾಲೆಯ ಮಟ್ಟಕ್ಕೆ ಬಂದವು. ಶಿಕ್ಷಣ ಕ್ಷೇತ್ರದ ಮೂಲ ಘಟಕವಾದ ಶಾಲೆಗೆ ಅಗತ್ಯವಿರುವ ಸೌಲಭ್ಯಗಳನ್ನು ಪಡೆಯುವ ಬಗ್ಗೆ ಯೋಜನೆ ತಯಾರಿಸುವ ಜವಾಬ್ದಾರಿ ಶಾಲೆಗೆ ಬಂದಿತು. ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಸಮುದಾಯ ಸೇರಿ ಯೋಜನೆ ರೂಪಿಸುವಂತಾಯಿತು. ಇಂತಹ ಸಂದರ್ಭದ ಹಾಗೂ ಹಿನ್ನೆಲೆಯಲ್ಲಿ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳು ಸ್ಥಾಪನೆಯಾದವು.

ಈ ಸಂಪನ್ಮೂಲ ಕೇಂದ್ರಗಳು ಶೈಕ್ಷಣಿಕ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಶಿಕ್ಷಕರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಿ, ಸಾಮರ್ಥ್ಯವರ್ಧನೆ, ಗುಣಮಟ್ಟ ಸುಧಾರಣೆ, ಸಂಪನ್ಮೂಲಗಳ ಬಳಕೆಯೊಂದಿಗೆ ಶಾಲಾ ಅಭಿವೃದ್ಧಿಗೆ ಅಗತ್ಯವಾದ ಕಾರ್ಯಯೋಜನೆಯನ್ನು ಸ್ಥಳೀಯ ಮಟ್ಟದಲ್ಲಿ ರೂಪಿಸುವ ಉದ್ದೇಶದಿಂದ ರಚನೆಯಾದವು. ಈ ಸಂಪನ್ಮೂಲ ಕೇಂದ್ರಗಳನ್ನು ರಾಜ್ಯಾದ್ಯಂತ ಶೈಕ್ಷಣಿಕ ಗುಣಮಟ್ಟಕ್ಕೆ ನೆರವು ಮತ್ತು ಸುಧಾರಣೆ ಮಾಡಲು ಕರ್ನಾಟಕ ರಾಜ್ಯವು ಡಿ.ಪಿ.ಇ.ಪಿ ಹಾಗೂ ಡಿ.ಪಿ.ಇ.ಪಿ ಇಲ್ಲದ ಜಿಲ್ಲೆಗಳಲ್ಲಿ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳನ್ನು ತೆರೆಯಿತು. ಎಸ್.ಎಸ್.ಎ ಮೂಲಕ ಹೊಸ ತರಬೇತಿ ಸರಣಿಯಡಿಯಲ್ಲಿ ಈ ಸಂಪನ್ಮೂಲ ಕೇಂದ್ರ ಜಿಲ್ಲಾಮಟ್ಟದಲ್ಲಿ ಡಯಟ್‌ನೊಂದಿಗೆ ಕಾರ್ಯ ನಿರ್ವಹಿಸಲು ಅಪೇಕ್ಷಿಸಲಾಗಿದೆ.

**ಕ್ಷೇತ್ರ ಸಂಪನ್ಮೂಲ ಕೇಂದ್ರ:** ಶಿಕ್ಷಣ ಸಾರ್ವತ್ರೀಕರಣದ ಮೂಲ ಉದ್ದೇಶದ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಿಸುವ ದಿಸೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಸ್ಥಾಪಿಸಲ್ಪಟ್ಟಿರುವ ಶೈಕ್ಷಣಿಕ ಕೇಂದ್ರವೇ ಕ್ಷೇತ್ರ ಸಂಪನ್ಮೂಲ ಕೇಂದ್ರ. ಸಂಪನ್ಮೂಲ ಕೇಂದ್ರಗಳನ್ನು ಎರಡು ಮಟ್ಟಗಳಲ್ಲಿ ಸ್ಥಾಪಿಸಲಾಗಿದೆ. ಶೈಕ್ಷಣಿಕ ಬ್ಲಾಕ್ ಮಟ್ಟದಲ್ಲಿ ಇರುವ ಸಂಪನ್ಮೂಲ ಕೇಂದ್ರವನ್ನು ಬ್ಲಾಕ್ ಸಂಪನ್ಮೂಲ ಕೇಂದ್ರ (Block Resource Centre-BRC) ಎನ್ನುತ್ತಾರೆ. ಬ್ಲಾಕ್ ಶಿಕ್ಷಣಾಧಿಕಾರಿ (BEO) ಈ ಕೇಂದ್ರದ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ ಹೈಸ್ಕೂಲ್ ಅಧ್ಯಾಪಕರೊಬ್ಬರು ಬಿ.ಆರ್.ಸಿ.ಯ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಒಂದು ಬ್ಲಾಕ್‌ನಲ್ಲಿರುವ ಪ್ರಾಥಮಿಕ ಶಾಲೆಗಳನ್ನು ಗುಂಪು ಮಾಡಿ ಗುಚ್ಛ ಸಂಪನ್ಮೂಲ ಕೇಂದ್ರಗಳನ್ನು (Cluster Resource Centre-CRC) ಗಳನ್ನು ತೆರೆಯಲಾಗಿದೆ. ಒಂದೊಂದು ಸಿ.ಆರ್.ಸಿ.ಯಲ್ಲಿ 4 ರಿಂದ 5 ಪ್ರಾಥಮಿಕ ಶಾಲೆಗಳನ್ನು ಸೇರಿಸಲಾಗುತ್ತದೆ. ಅನುಭವಿ ಪ್ರಾಥಮಿಕ ಶಿಕ್ಷಕ ಸಿ.ಆರ್.ಸಿ.ಯ ಅಧಿಕಾರಿಯಾಗಿರುತ್ತಾನೆ.

**ಕ್ಷೇತ್ರ ಸಂಪನ್ಮೂಲ ಕೇಂದ್ರದ ಕಾರ್ಯಚಟುವಟಿಕೆಗಳು**

**ಜ್ಞಾನ ಭಂಡಾರ ಮತ್ತು ಮಾರ್ಗದರ್ಶಕ :** ಶಿಕ್ಷಕರಿಗೆ ಬೋಧನೆಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಸ್ಪಂದಿಸುವಂತಹ ಪೂರಕ ಸಾಹಿತ್ಯ ಹಾಗೂ ಸಂಪನ್ಮೂಲಗಳನ್ನು ಒಳಗೊಂಡ ಗ್ರಂಥಾಲಯದ ವ್ಯವಸ್ಥೆ ಮಾಡುವುದು. ವಿಶೇಷವಾಗಿ ಸಮೂಹ ಸಂಪನ್ಮೂಲ ವ್ಯಕ್ತಿಗಳ ಸಬಲೀಕರಣಕ್ಕೆ ಸೂಕ್ತ ವಾತಾವರಣ ಕಲ್ಪಿಸುವುದು. ಶಿಕ್ಷಕರ ಸಮಾಲೋಚನಾ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಪೂರ್ವಭಾವಿಯಾಗಿ ಸಿಆರ್‌ಪಿಗಳಿಗೆ ಮಾರ್ಗದರ್ಶನ.

**ಸಂಘಟನೆ, ವಿಸ್ತರಣೆ ಮತ್ತು ಸಂಪರ್ಕ/ಸೇವೆಗಳನ್ನು ಒದಗಿಸುವುದು** ವಿವಿಧ ಸಂಘ ಸಂಸ್ಥೆಗಳು, ಸಮುದಾಯದ ನೆರವು ಪಡೆಯಲು ಶೈಕ್ಷಣಿಕ ಸಂಪನ್ಮೂಲಗಳ ಸಬಲೀಕರಣ. ಶಿಕ್ಷಣದ ಬಗ್ಗೆ ಅರಿವು ಮೂಡಿಸುವ ಜನಜಾಗೃತಿ ಕಾರ್ಯಕ್ರಮಗಳು ಹಾಗೂ ಸಮುದಾಯ ಬಲವರ್ಧನಾ ತರಬೇತಿಗಳ ಆಯೋಜನೆ.

**ಶಾಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು, ಅನುಪಾಲನೆ ಕಾರ್ಯತಂತ್ರಗಳನ್ನು ವಿನ್ಯಾಸಗೊಳಿಸುವುದು:** ಪ್ರಾಥಮಿಕ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣದ ವೃತ್ತಿ ದಕ್ಷತೆ ಹೆಚ್ಚಿಸಲು, ಸಬಲೀಕರಣಗೊಳಿಸುವ ವಿವಿಧ ತರಬೇತಿಗಳನ್ನು ನೀಡುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದೊಂದಿಗೆ ಸಮನ್ವಯ ಸಾಧಿಸಿ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಶಾಲಾ ಹಂತ, ಕ್ಲಸ್ಟರ್ ಹಂತ, ಬ್ಲಾಕ್ ಹಂತದ ಯೋಜನೆಗಳನ್ನು ಸಿದ್ಧಪಡಿಸುವುದು. ವಿಶೇಷ ಅವಶ್ಯಕತೆಯುಳ್ಳ ಮಕ್ಕಳನ್ನು ಗುರ್ತಿಸಿ ಶಿಕ್ಷಣ ಸಾರ್ವತ್ರೀಕರಣದಲ್ಲಿ ತೊಡಗಿಸುವುದು.

1. ಸಮೀಕ್ಷೆ ನಡೆಸುವುದು. 2. ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸುವುದು. 3. ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ವೈದ್ಯಕೀಯ ಶಿಬಿರ ನಡೆಸುವುದು. 4. ಸಂಘ ಸಂಸ್ಥೆಗಳ, ದಾನಿಗಳ ನೆರವಿನಿಂದ ಸಾಧನ ಸಲಕರಣೆಗಳನ್ನು ಪೂರೈಸುವುದು.

Digitised by Bharatavani, CIIL




ಶಾಲೆ ಬಿಟ್ಟ / ಶಾಲೆಗೆ ದಾಖಲಾಗದ 6–14 ವಯೋಮಾನದ ಮಕ್ಕಳನ್ನು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಒಳಪಡಿಸುವುದು. ಈ ಸಂಬಂಧ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಮಕ್ಕಳ ಪ್ರತಿಭೆ ಹೊರ ಹೊಮ್ಮಿಸುವ ವಿವಿಧ ಕಾರ್ಯಕ್ರಮಗಳನ್ನು ತಾಲ್ಲೂಕು ಹಂತದಲ್ಲಿ ಆಯೋಜಿಸುವುದು. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿನ 21 ಕಾರ್ಯಚಟುವಟಿಕೆಗಳ ಬಗ್ಗೆ ಯೋಜನೆ, ಅನುಷ್ಠಾನ, ಅನುಪಾಲನೆ, ದಾಖಲೀಕರಣ ನಿರ್ವಹಣೆ. ಒಬ್ಬರಿಗೆ ವರ್ಷಕ್ಕೆ ಕನಿಷ್ಠ 10 ದಿನಗಳ ತರಬೇತಿ ಅಡಿಯಲ್ಲಿ ಅವಶ್ಯಕತೆ ಆಧರಿಸಿ ತರಬೇತಿ ಕ್ರಿಯಾ ಯೋಜನೆ ಸಿದ್ಧಪಡಿಸುವುದು. ಎಸ್.ಡಿಎಂ.ಸಿ. (ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ) ಸದಸ್ಯರಿಗೆ ತರಬೇತಿ

**ಶೈಕ್ಷಣಿಕ ಸಾಮಗ್ರಿಗಳನ್ನು ಮತ್ತು ಪೂರಕ ಉಪಕರಣಗಳನ್ನು ಅಭಿವೃದ್ಧಿಪಡಿಸುವುದು**

ಸಾಮರ್ಥ್ಯ ಆಧಾರಿತವಾಗಿ ತರಗತಿವಾರು ಕಲಿಕೆಯ ಸಾಮಗ್ರಿಗಳನ್ನು ತಯಾರಿಸುವ / ಬಳಸುವ ನಿಟ್ಟಿನಲ್ಲಿ ಸಿಆರ್‌ಪಿ ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ. ಶಿಕ್ಷಕರಿಗೆ ಅಗತ್ಯವಿರುವ ಮೂಲಭೂತ ಮಾಹಿತಿಗಳು ಲಭ್ಯವಿರಬೇಕು. 1–8ನೇ ತರಗತಿಯವರೆಗಿನ ಪಠ್ಯಪುಸ್ತಕಗಳು ಲಭ್ಯವಿರಬೇಕು. ಸೇವಾನಿರತ ಶಿಕ್ಷಕರ ತರಬೇತಿಗಾಗಿ ರಚಿತವಾದ ಎಲ್ಲ ತರಬೇತಿ ಸಂಚಿಕೆಗಳು ಲಭ್ಯವಿರಬೇಕು. ಶಿಕ್ಷಕರ ಸೇವಾ ನಿಯಮಗಳು ಲಭ್ಯವಿರಬೇಕು. ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದ ಮಾಸಪತ್ರಿಕೆಗಳು ಲಭ್ಯವಿರಬೇಕು. ಕಲಿಕೋಪಕರಣಗಳ ಮಾದರಿ ಲಭ್ಯವಿರಬೇಕು. ಕೇಂದ್ರದ ವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳ ಬಗ್ಗೆ ಸಂಪೂರ್ಣ ಮಾಹಿತಿ ಲಭ್ಯವಿರಬೇಕು.

**ಶಾಲೆಗಳಿಗೆ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಅಭಿವೃದ್ಧಿಪಡಿಸುವುದು:** ಬೋಧನೆ ಕಲಿಕೆಯ ಪ್ರಕ್ರಿಯೆಯಲ್ಲಿನ ಸಮಸ್ಯೆಗಳನ್ನು ಗುರ್ತಿಸಿ ಕ್ರಿಯಾಯೋಜನೆಗೆ ಮಾರ್ಗದರ್ಶನವನ್ನು ಶಿಕ್ಷಕರಿಗೆ ನೀಡುವುದು. ಯೋಜನಾ ಸಭೆ ನಡೆಸುವುದು.

**ದಾಖಲೀಕರಣ ಹಾಗೂ ವಿಂಗಡನೆ:** ಶಾಲೆಗಳ ಶೈಕ್ಷಣಿಕ ಅಂಕಿ ಅಂಶಗಳ ಸೂಚ್ಯಾಂಕ ಸಿದ್ಧಪಡಿಸುವುದು. ಮಕ್ಕಳ ಗಣತಿ ಕಾರ್ಯ ನಿರ್ವಹಿಸುವುದು. ಅಂಕಿ ಅಂಶಗಳು ಇನ್ನಿತರ ಮಾಹಿತಿಗಳನ್ನು ಸಂಗ್ರಹಿಸಿ ಕ್ರೋಡೀಕರಿಸಿ ಸಲ್ಲಿಸುವ ಕಾರ್ಯ.

**ಸಂಪನ್ಮೂಲ ವ್ಯಕ್ತಿ:** ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ನಿಟ್ಟಿನಲ್ಲ ಮಕ್ಕಳ ಕಲಿಕೆಯ ಗುಣಮಟ್ಟ ಸುಧಾರಿಸುವ ಗುರಿಯೊಂದಿಗೆ ತಾಲ್ಲೂಕು ಮಟ್ಟದಲ್ಲಿ ಹಾಗೂ ಕ್ಲಸ್ಟರ್ ಮಟ್ಟದಲ್ಲಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸಲು ಸಂಪನ್ಮೂಲ ವ್ಯಕ್ತಿಗಳನ್ನು ನೇಮಿಸಲಾಗಿದೆ. ಸರ್ಕಾರದ ಯೋಜನೆಗಳನ್ನು ಶಾಲೆಗಳಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಿ ಶಿಕ್ಷಕನಾಗಿ, ಮಾರ್ಗದರ್ಶಕನಾಗಿ, ಶಾಲೆ, ಸಮುದಾಯ, ಎಸ್.ಡಿ.ಎಂ.ಸಿ.ಗಳೊಂದಿಗೆ ಸಮನ್ವಯ ಸಾಧಿಸಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಮತ್ತು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಹೊಣೆ ಹೊತ್ತು, ದಕ್ಷ ನಾಯಕನಾಗಿ, ಸಹೃದಯಿಯಾಗಿ, ಸಲಹೆಗಾರನಾಗಿ ಕಾರ್ಯನಿರ್ವಹಿಸಬಲ್ಲ ಶೈಕ್ಷಣಿಕ ಪ್ರತಿನಿಧಿಯೇ ಸಮೂಹ ಸಂಪನ್ಮೂಲ ವ್ಯಕ್ತಿ.

**ಸಾಮಾನ್ಯ ಕೌಶಲಗಳು**

1. ವಯಸ್ಕರೊಡನೆ ಕೆಲಸ ಮಾಡುವಂತಿರಬೇಕು. ಅಂದರೆ ಶಿಕ್ಷಕರು ಅವರು ಹೇಳುವುದನ್ನು ಆಲಿಸುವುದನ್ನು ಕಲಿಯುವುದು, ಅವರನ್ನು ಉದ್ಯೋಗಸ್ಥರನ್ನಾಗಿ ಗೌರವಿಸುವುದು ಹಾಗೂ ಸಲಹೆಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಿಸುವುದು ಹಾಗೂ ಜವಾಬ್ದಾರಿಯನ್ನು ಬೆಳೆಸುವುದು.

Digitised by Bharatavani, CIIL

2. ಸಮೂಹದಲ್ಲಿ ಹಾಗೂ ಶಾಲೆಯಲ್ಲಿ ತಂಡಗಳ ನಿರ್ಮಾಣ ಮಾಡುವುದು ಸುಲಭ ಸಾಧ್ಯ. ಮಾಡುವಂತಹ ನಾಯಕತ್ವ ಹಾಗೂ ನೆರವು ನೀಡುವುದನ್ನು ಕಲಿಯುವುದು.
3. ಶಾಲೆಯ ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಬಿ.ಆರ್.ಸಿ. ಸಮನ್ವಯಾಧಿಕಾರಿ, ಬಿ.ಇ.ಓ. ಹೀಗೆ ಮುಖ್ಯವಾದ ಅಧಿಕಾರ ವರ್ಗದೊಡನೆ ಕೆಲಸ ಮಾಡುವಂತಹವರಾಗಿರಬೇಕು.
4. ಪ್ರೋತ್ಸಾಹದಾಯಕವಾಗಿ ಪರಿಣಾಮಕಾರಿಯಾಗಿ ಸಭೆಗಳನ್ನು ನಡೆಸುವಂತಹವರಾಗಿರಬೇಕು.

**ವೃತ್ತಿ ಕೌಶಲ್ಯ**

1. ಶಿಕ್ಷಕರಿಗೆ ವಿನಿಯೋಗ ಮಾಡಲು ಕೆಲವು ವಿಷಯಗಳಲ್ಲಿ ಪರಿಣಿತಿ ಬೆಳೆಸಿಕೊಳ್ಳಲು ಅಂದರೆ, ಏನನ್ನು ಹೇಗೆ ಬೋಧನೆ ಮಾಡಬೇಕು ಹಾಗೂ ಶಿಕ್ಷಕರಿಗೆ ಹೇಗೆ ಸಲಹೆಗಳನ್ನು ನೀಡಬೇಕು ಎಂಬುದು.
2. ಅತಿ ಮುಖ್ಯವಾದ ತರಗತಿ ಅವಲೋಕನ ಹಾಗೂ ಶಿಕ್ಷಕರಿಗೆ ಹಿಮ್ಮಾಹಿತಿಯನ್ನು ಪರಿಣಾಮಕಾರಿಯಾಗಿ ನೀಡಬೇಕು. ಶಿಕ್ಷಕರು, ಪದ್ಧತಿಯ ಬದಲಾವಣೆಯನ್ನು ಅರ್ಥಮಾಡಿಕೊಳ್ಳುವಂತೆ ಮೇಲುಸ್ತುವಾರಿ ಮಾಡಬೇಕು.
3. ಶಿಕ್ಷಕರೊಂದಿಗೆ ಬದಲಾವಣೆಗಳನ್ನು ಅಪೇಕ್ಷಿಸಲಾಗಿದೆ ಎಂದು ಹಂಚಿಕೊಳ್ಳಬೇಕು ಹಾಗೂ ಇವು ಮಕ್ಕಳ ಕಲಿಕೆ ಹಾಗೂ ಶಿಕ್ಷಕರ ಕಲಿಕೆಗೆ ಹೇಗೆ ನೆರವು ನೀಡುವುದೆಂಬುದರ ಬಗ್ಗೆ ಆಳವಾದ ಅರಿವಿರಬೇಕು.
4. ಶಿಕ್ಷಕರು ಪಡೆದುಕೊಂಡ ತರಬೇತಿಗಳನ್ನು ತರಗತಿಗಳಲ್ಲಿ ಅನುಷ್ಠಾನಗೊಳಿಸಲು, ನೆರವು ನೀಡಲು ಆ ತರಬೇತಿಗಳಲ್ಲಿ ಒತ್ತು ನೀಡಿದ ಅಂಶಗಳನ್ನು ಅದರ ಉದ್ದೇಶಗಳನ್ನು ಅರ್ಥಮಾಡಿ ಕೊಳ್ಳಬೇಕು.
5. ಶಾಲಾ ಸಮೂಹ ಹಾಗೂ ಕ್ಷೇತ್ರ ಮಟ್ಟದಲ್ಲಿ ಶೈಕ್ಷಣಿಕ ಗುಣಮಟ್ಟದ ನಕ್ಷೆ ತಯಾರಿಸಲು ಮೇಲುಸ್ತುವಾರಿ ಹಾಗೂ ಸುಧಾರಿಸಲು ತಿಳಿಯುವುದು.

**ಗುಚ್ಛ (ಬ್ಲಾಕ್) ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸಬೇಕಾದ ಕಾರ್ಯಗಳು**

1. ಬಿ.ಆರ್.ಸಿ.ಯ ಮಾಸಿಕ ಯೋಜನಾ ಸಭೆಯಲ್ಲಿ ಪಾಲ್ಗೊಂಡು ತಮ್ಮ ಶಾಲೆಗಳಿಗೆ ಭೇಟಿ ನೀಡುವುದು ಸಿಆರ್‌ಸಿಗೆ ಭೇಟಿ ನೀಡುವುದು.
2. ತರಬೇತಿ ಶಿಬಿರಗಳನ್ನು ಏರ್ಪಡಿಸಿ, ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಎಲ್ಲಾ ಅವಧಿಗಳಲ್ಲೂ ಭಾಗವಹಿಸಿ ಕಾರ್ಯನಿರ್ವಹಿಸುವುದು.
3. ಸಮೂಹ ಸಂಪನ್ಮೂಲ ವ್ಯಕ್ತಿಗಳು ಕಾರ್ಯಾಗಾರದಲ್ಲಿ ಭಾಗವಹಿಸುವಂತೆ ಮಾಡುವುದರ ಮೂಲಕ ಅವರ ಸಾಮರ್ಥ್ಯವನ್ನು ಹೆಚ್ಚಿಸಿ ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಳ್ಳುವುದು.
4. ನವೀನ ಕಲಿಕಾ ಸಾಮಗ್ರಿ ತಯಾರಿ ಮತ್ತು ಬಳಕೆಯ ಬಗ್ಗೆ ಅವಕಾಶ ಕಲ್ಪಿಸುವುದು.
5. ತಮಗೆ ವಹಿಸಿರುವ ಸಿಆರ್‌ಸಿಗಳಲ್ಲಿ ನಡೆಯುವ ಶಿಕ್ಷಕರ ಮಾಸಿಕ ಸಭೆಗಳಲ್ಲಿ ನಡೆಯುವ ಶಿಕ್ಷಕರ ಮಾಸಿಕ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು.
6. ಸಭೆಗಳಲ್ಲಿ ಚರ್ಚೆಗೆ ಬರುವ ಶೈಕ್ಷಣಿಕ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸಿ ಮಾರ್ಗದರ್ಶನ ನೀಡುವುದು.
7. ಸಮೂಹ ಸಂಪನ್ಮೂಲ ವ್ಯಕ್ತಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸುವುದು.
8. ತಮ್ಮ ವ್ಯಾಪ್ತಿಯಲ್ಲಿನ ಸಿಆರ್‌ಸಿ ಕೇಂದ್ರಗಳ ಬಗ್ಗೆ ಎಲ್ಲಾ ರೀತಿಯ ದಾಖಲೆ ಹಾಗೂ ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ದಾಖಲೆ ನಿರ್ವಹಿಸುವುದು.
9. ದುರ್ಬಲ ಕಲಿಕೆಯುಳ್ಳ ಶಾಲೆಗಳಲ್ಲಿ ಕಲಿಕೆ ಸುಧಾರಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು.
10. ಸಮೂಹ ಸಂಪನ್ಮೂಲ ಕೇಂದ್ರದೊಂದಿಗೆ ಸದಾ ನಿಕಟ ಸಂಬಂಧ ಹೊಂದುವುದು.
11. ಶಾಲೆಯ ಭೇಟಿ ಸಂದರ್ಭದಲ್ಲಿ ನಿಗದಿತ ಸಮಯ ಪಾಲನೆ ಕಡ್ಡಾಯವಾಗಿ ನಿರ್ವಹಿಸುವುದು.
12. ಶಾಲೆ ಬಿಟ್ಟ ಮಕ್ಕಳು ಹಾಗೂ ದಾಖಲಾಗದ ಮಕ್ಕಳ ಬಗ್ಗೆ ವಿಶೇಷ ಕಾರ್ಯಕ್ರಮಗಳೊಂದಿಗೆ ಶಾಲೆಗೆ ದಾಖಲಿಸುವುದು.
13. ಕಾಮಗಾರಿಗಳ ಗುಣಮಟ್ಟ, ಅನುದಾನಗಳ ಸದ್ಬಳಕೆಯ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು. ಲೋಪದೋಷಗಳು ಕಂಡು ಬಂದರೆ ಮೇಲಾಧಿಕಾರಿಗಳ ಗಮನಕ್ಕೆ ತರುವುದು.

**ಗುಚ್ಛ (ಬ್ಲಾಕ್) ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸಬೇಕಾದ ಪ್ರಮುಖ ಕಾರ್ಯಗಳು**

1. ಪ್ರತಿ ಮಾಹೆ ಕನಿಷ್ಠ 15 ದಿನಗಳಾದರೂ ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಭೇಟಿ ನೀಡುವುದು.

**ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸಬೇಕಾದ ಕಾರ್ಯಗಳು**




Digitised by Bharatavani, CIIL

2. ಶಿಕ್ಷಕರ ಮಾಸಿಕ ಸಮಾಲೋಚನೆ ಸಭೆಗಳನ್ನು ಪೂರ್ವಸಿದ್ಧತೆಯೊಂದಿಗೆ ಕ್ಲಷ್ಟರ್ ಕೇಂದ್ರದಲ್ಲಿಯೇ ನಡೆಸುವುದು.
3. ತಮ್ಮ ವ್ಯಾಪ್ತಿಯಲ್ಲಿನ ಶಾಲೆಗಳ ಬಗ್ಗೆ ಎಲ್ಲಾ ರೀತಿಯ ದಾಖಲೆ ಹಾಗೂ ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ಸ್ಪಷ್ಟ ತಿಳುವಳಿಕೆ ಹೊಂದಿರುವುದು.
4. ದುರ್ಬಲ ಕಲಿಕೆಯುಳ್ಳ ಶಾಲೆಗಳಲ್ಲಿ ಕಲಿಕೆ ಸುಧಾರಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು.
5. ತನ್ನ ವ್ಯಾಪ್ತಿಯ ಎಲ್ಲಾ ಶಾಲೆಗಳೂ ಶಿಕ್ಷಕರಿಗೆ ಅವಶ್ಯವಿರುವ ತರಬೇತಿ ಲಭ್ಯತೆ ಬಗ್ಗೆ ಖಚಿತಪಡಿಸಿಕೊಳ್ಳುವುದು.
6. ಕ್ಷೇತ್ರ ಸಂಪನ್ಮೂಲ ಕೇಂದ್ರದೊಂದಿಗೆ ಸದಾ ನಿಕಟ ಸಂಬಂಧ ಹೊಂದಿರುವುದು.
7. ಶಾಲೆಯ ಭೇಟಿ ಸಂದರ್ಭದಲ್ಲಿ ನಿಗದಿತ ಸಮಯ ಪಾಲನೆ ಕಡ್ಡಾಯವಾಗಿ ನಿರ್ವಹಿಸುವುದು.
8. ಶಾಲೆ ಬಿಟ್ಟ ಮಕ್ಕಳು ಹಾಗೂ ದಾಖಲಾಗದ ಮಕ್ಕಳನ್ನು ವಿಶೇಷ ಕಾರ್ಯಕ್ರಮಗಳೊಂದಿಗೆ ಶಾಲೆಗೆ ದಾಖಲಿಸುವುದು.
9. ಕಾಮಗಾರಿಗಳ ಗುಣಮಟ್ಟ, ಅನುದಾನಗಳ ಸದ್ಬಳಕೆ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು. ಲೋಪ-ದೋಷಗಳು ಕಂಡು ಬಂದರೆ ಮೇಲಾಧಿಕಾರಿಗಳ ಗಮನಕ್ಕೆ ತರುವುದು.

**ಕ್ಷೇತ್ರ ಸಮನ್ವಯ ಅಧಿಕಾರಿಗಳ ಪ್ರಮುಖ ಕಾರ್ಯಗಳು**

1. ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳು ಸಹಾ ಸಂಪನ್ಮೂಲ ವ್ಯಕ್ತಿಯಾಗಿರುತ್ತಾರೆ.
2. ಎಸ್.ಎಸ್.ಎ. ಡಿ.ಎಸ್.ಈ.ಆರ್.ಟಿ. ಹಾಗೂ ಡಯಟ್‌ಗಳ ಸಹಕಾರದೊಡನೆ ಕಾರ್ಯಕ್ರಮಗಳನ್ನು ನಿರ್ವಹಿಸುವುದು.
3. ಸಿ.ಆರ್.ಪಿ. ಮತ್ತು ಬಿ.ಆರ್.ಪಿ.ಗಳ ಕರ್ತವ್ಯಗಳ ಬಗ್ಗೆ ಮಾರ್ಗದರ್ಶನ ನೀಡುವುದು.
4. ಬಿ.ಈ.ಓ. ಸಿ.ಆರ್.ಪಿ. ಮತ್ತು ಬಿ.ಆರ್.ಪಿ. ಮತ್ತು ಈ.ಸಿ.ಓ.ಗಳೊಂದಿಗೆ ಚರ್ಚಿಸಿ ಕ್ಷೇತ್ರ ಮಟ್ಟದ ಕ್ರಿಯಾ ಯೋಜನೆ ತಯಾರಿಸುವುದು.
5. ಅಗತ್ಯಗಳಿಗೆ ಅನುಸಾರವಾಗಿ, ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬಿ.ಈ.ಓ.ಗೆ ನೆರವು ನೀಡುವುದು.
6. ಕ್ಷೇತ್ರ ಹಾಗೂ ಸಮೂಹಮಟ್ಟದಲ್ಲಿ ನಡೆಯುವ ತರಬೇತಿಗಳಿಗೆ ಪೂರಕವಾದ ಸೌಲಭ್ಯಗಳನ್ನು ಒದಗಿಸುವುದು.
7. ಶಿಕ್ಷಕ ತರಬೇತಿಯ ಅಂಶಗಳನ್ನು ಶಾಲೆಗಳಲ್ಲಿ ಅನುಷ್ಠಾನವಾಗುವಂತೆ ಸಿ.ಆರ್.ಪಿ. ಮತ್ತು ಬಿ.ಆರ್.ಪಿ.ಯವರನ್ನು ಪ್ರೇರೇಪಿಸುವುದು.
8. ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳ ದಾಖಲೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು.

**ಕ್ಷೇತ್ರ ಹಾಗೂ ಸಮೂಹ ಕೇಂದ್ರಗಳ ಕಾರ್ಯದಕ್ಷತೆ ಹೆಚ್ಚಿಸುವುದು**

1. ಸಂಪನ್ಮೂಲ ವ್ಯಕ್ತಿಗಳ ಸಾಮರ್ಥ್ಯ ವೃದ್ಧಿಸುವುದು.
2. ಮೂಲಸೌಕರ್ಯಗಳು ಮತ್ತು ಸಂಪನ್ಮೂಲಗಳನ್ನು ಬಿ.ಆರ್.ಸಿ.ಯಲ್ಲಿ ದೊರಕಿಸುವುದು.
3. ಬೋಧನಾ-ಕಲಿಕೆಗಳ ರಚನೆ ಹಾಗೂ ಅವುಗಳ ತರಬೇತಿಯಲ್ಲಿನ ಬಳಕೆ.
4. ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಶಿಕ್ಷಕರಿಗೆ ಬೇಕಾದ ಉತ್ತಮ ಪುಸ್ತಕಗಳನ್ನು ದೊರೆಯುವಂತೆ ಮಾಡುವುದು.
5. ಸಂಪನ್ಮೂಲ ವ್ಯಕ್ತಿಗಳು ಹಾಗೂ ಶಿಕ್ಷಕರಿಂದ ತಯಾರಾಗುತ್ತಿರುವ ಸಂಪನ್ಮೂಲಗಳ ಬಳಕೆ.
6. ಹೊಸ ಬೋಧನಾ ವಿಷಯಗಳನ್ನು ಪ್ರೋತ್ಸಾಹಿಸಲು ಹಾಗೂ ಕಾರ್ಯಾಗಾರಗಳ ಕಲಿಕೆಯ ಅಂಶಗಳನ್ನು ಮನನ ಮಾಡಿಕೊಳ್ಳಲು ಪೂರ್ವಸಭೆಯ ಯೋಜನೆಯನ್ನು ಕ್ಷೇತ್ರ ಮಟ್ಟದಲ್ಲಿ ಮಾಡುವುದು.
7. ನಿಯಮಿತವಾಗಿ ಶೈಕ್ಷಣಿಕ ಸಮಾಲೋಚನೆಗಳನ್ನು ಮಾಡುವುದು ಹಾಗೂ ಅದರ ನಡಾವಳಿಗಳನ್ನು ದಾಖಲಿಸುವುದು. ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ಶಿಕ್ಷಕರ ಸಭೆಯನ್ನು ಅನುಷ್ಠಾನಗೊಳಿಸುವುದು.

–ರ.ಬೀ.ಚ

## ಸಂಪ್ರದಾಯ ರಹಿತ ಶಿಕ್ಷಣದ ಉದ್ದೇಶಗಳು ಮತ್ತು ವ್ಯಾಪ್ತಿ

ಒಂದು ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಆ ರಾಷ್ಟ್ರದ ಪ್ರಜೆಗಳ ಜ್ಞಾನವಂತಿಕೆ ಮತ್ತು ರಾಷ್ಟ್ರ ಪ್ರಗತಿಯಲ್ಲಿ ಅವರ ಪರಿಣಾಮಕಾರಿ ಭಾಗವಹಿಸುವಿಕೆಯ ಸಾಮರ್ಥ್ಯದ ಮೇಲೆಯೇ ಅವಲಂಬಿತವಾಗಿದೆ. ಇಂತಹ ಸಾಮರ್ಥ್ಯವನ್ನು ಅವರಲ್ಲಿ ತರುವುದು ಶಿಕ್ಷಣದಿಂದ ಮಾತ್ರ ಸಾಧ್ಯ. ಆದರೆ ಅನಕ್ಷರತೆಯು ಒಂದು ರಾಷ್ಟ್ರದ ಅಭಿವೃದ್ಧಿಗೆ ಮಾರಕವಾಗಿದೆ.

1967ರಲ್ಲಿ ವಿಲಿಯಂಬರ್ಗ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾಡಿರುವ ವಿಶ್ಲೇಷಣೆಯಿಂದ ವಿಶ್ವದಲ್ಲಿ ಬೆಳೆಯುತ್ತಿರುವ ಸಮಸ್ಯೆಗಳಿಗೆ ಈ ಮುಂದಿನ ಕಾರಣಗಳನ್ನು ಸೂಚಿಸಿದ್ದಾರೆ. ಅವುಗಳೆಂದರೆ, ಸೂಕ್ತವಾಗಿಲ್ಲದ ಪಠ್ಯಕ್ರಮ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿ ಏಕರೂಪವಾಗಿಲ್ಲದಿರುವುದು, ಶಿಕ್ಷಣ ಮತ್ತು ಉದ್ಯೋಗಗಳಿಗೆ ಪ್ರತ್ಯಕ್ಷ ಸಂಬಂಧವಿಲ್ಲದಿರುವುದು ಮತ್ತು ಸಾಂಪ್ರದಾಯಿಕ ಶಿಕ್ಷಣಕ್ಕೆ ಆಗುವ ಅಧಿಕ ವೆಚ್ಚ. ಕಳೆದ ಮೂರು ದಶಕಗಳಿಂದ ವಿಶ್ವದಾದ್ಯಂತ ಜ್ಞಾನ, ಪದವಿ ಮತ್ತು ಪ್ರಮಾಣ ಪತ್ರಗಳಿಗಾಗಿ ಸಾಮಾಜಿಕ ಬೇಡಿಕೆ ಹೆಚ್ಚಾಗುತ್ತಿದೆ. ಆದರೆ ಈ ಬೇಡಿಕೆಗೆ ತಕ್ಕಂತೆ ಶಿಕ್ಷಣವನ್ನು ಅದೇ ವೇಗದಲ್ಲಿ ಪೂರೈಸಲು ಸಾಧ್ಯವಾಗುತ್ತಿಲ್ಲ. ಈ ಸಂದರ್ಭದಲ್ಲಿ ಔಪಚಾರಿಕ ಶಿಕ್ಷಣಕ್ಕೆ ಬದಲಾಗಿ ವಯಸ್ಕರ ಶಿಕ್ಷಣ, ಮುಂದುವರೆದ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ ಮುಂತಾದ ಕಾರ್ಯಕ್ರಮಗಳು ಆರಂಭಗೊಂಡಿವೆ. ಔಪಚಾರಿಕ ಶಿಕ್ಷಣಕ್ಕೆ ಪರ್ಯಾಯ ವ್ಯವಸ್ಥೆಯಾಗಿರುವ ಈ ವಿದ್ಯಮಾನಕ್ಕೆ ಸಂಪ್ರದಾಯರಹಿತ ಶಿಕ್ಷಣವೆಂದು ಕರೆಯಲಾಯಿತು.

### ಸಂಪ್ರದಾಯ ರಹಿತ ಶಿಕ್ಷಣದ ಉದ್ದೇಶಗಳು

ಸಂಪ್ರದಾಯ ರಹಿತ ಶಿಕ್ಷಣವು ಸಂಪ್ರದಾಯ ಶಿಕ್ಷಣದ ಅವಿಭಾಜ್ಯ ಅಂಗವಾಗಿರುವುದರಿಂದ ಇದನ್ನು ಪರಿಣಾಮಕಾರಿಯಾಗಿ ಮಾಡಲು ಸ್ಪಷ್ಟವಾದ ಉದ್ದೇಶಗಳ ಅವಶ್ಯಕತೆ ಇದೆ. ಈ ಉದ್ದೇಶಗಳು ಸಂಪ್ರದಾಯ ರಹಿತ ಶಿಕ್ಷಣದ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಸಂಘಟಿಸಲು ಸರಿಯಾದ ಅಡಿಪಾಯಗಳನ್ನು ಹಾಕಿಕೊಳ್ಳಲು ಮಾರ್ಗದರ್ಶಕವಾಗಿರುತ್ತವೆ. ಈ ಶಿಕ್ಷಣ ಪದ್ಧತಿಯು ಒಂದು ದೀರ್ಘ ಪ್ರಕ್ರಿಯೆಯಾಗಿದ್ದು ಇದು ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿಯೂ

Digitised by Bharatavani, CIIL

ಪ್ರಚಲಿತವಿದೆ. ಹೀಗಾಗಿ ಆಯಾ ದೇಶದವರು ಅವರದೇ ಆದ ಉದ್ದೇಶಗಳನ್ನು ಸಂಪ್ರದಾಯರಹಿತ ಶಿಕ್ಷಣಕ್ಕೆ ನಿಷ್ಕರ್ಷಿಸಿರುವರು. ವಿಶ್ವಸಂಸ್ಥೆಯ ಹಾಗೂ ಭಾರತದಲ್ಲಿ ಹಾಕಿಕೊಂಡ ಉದ್ದೇಶಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ.

**೧೯೭೮ ರ UNESCOವಿನ ಡಾಕ್ಯೂಮೆಂಟಿನ ಪ್ರಕಾರ ಸಂಪ್ರದಾಯ ರಹಿತ ಶಿಕ್ಷಣದ ಮುಖ್ಯ ಉದ್ದೇಶಗಳು**

1. ಪೂರ್ವ ಸಾಕ್ಷರತಾ ಕಾರ್ಯಕ್ರಮಗಳಿಂದ ವೈಯಕ್ತಿಕ ಹಾಗೂ ರಾಷ್ಟ್ರೀಯ ಶೈಕ್ಷಣಿಕ ಜಾಗೃತಿಯನ್ನು ಉತ್ತೇಜಿಸುವುದು.
2. ಸ್ವಾವಲಂಬಿ ಮತ್ತು ಸ್ವಯಂ ಸೇವಾ ಸಮುದಾಯಗಳನ್ನು ರಚಿಸಿ ಸಂಪ್ರದಾಯ ರಹಿತ ಶಿಕ್ಷಣದ ಕಾರ್ಯಕ್ರಮಗಳನ್ನು ಯೋಜಿಸಲು, ಸಂಘಟಿಸಲು ಹಾಗೂ ಅನುಷ್ಠಾನಗೊಳಿಸಲು ಸಹಾಯಕವಾಗುವುದು.
3. ಸೂಕ್ತವಾದ ಬೋಧನಾ–ಕಲಿಕಾ ತಂತ್ರಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದು.
4. ತೀಕ್ಷ್ಣವಾಗಿ ಬೆಳೆಯುತ್ತಿರುವ ಔದ್ಯೋಗಿಕ ಸಮಾಜಗಳ ಬೇಡಿಕೆಗಳಿಗೆ ತಕ್ಕಂತೆ ಸಾಮಾಜಿಕ ಮತ್ತು ಸಮುದಾಯದ ಶೈಕ್ಷಣಿಕ ಕಾರ್ಯಕ್ರಮಗಳನ್ನು ರಚಿಸುವುದು.

**ಭಾರತದಲ್ಲಿ ಸಂಪ್ರದಾಯ ರಹಿತ ಶಿಕ್ಷಣದ ಸಾಮಾನ್ಯ ಉದ್ದೇಶಗಳು ಈ ಕೆಳಗಿನಂತಿವೆ**

ಭಾರತದಲ್ಲಿ ಸಂಪ್ರದಾಯ ರಹಿತ ಶಿಕ್ಷಣ ಪದ್ಧತಿಯು ತನ್ನದೇ ಆದ ಮಹತ್ವವನ್ನು ಪಡೆದಿದೆ. ಸಾಮಾನ್ಯವಾಗಿ ಈ ಶಿಕ್ಷಣ ಪದ್ಧತಿಯ ಉದ್ದೇಶಗಳನ್ನು 6–14 ವರ್ಷ ಹಾಗೂ 15–35 ವರ್ಷದ ಗುಂಪಿನ ಜನರಿಗೆ ಬೇರೆ ಬೇರೆಯಾಗಿ ಈ ಕೆಳಗಿನ ರೀತಿಯಲ್ಲಿ ಪಟ್ಟಿ ಮಾಡಲಾಗಿದೆ:

**೬–೧೪ ವಯೋಮಾನದವರಿಗೆ ಉದ್ದೇಶಗಳು**

1. ಶಾಲೆಯನ್ನು ಬಿಟ್ಟು ಹೋದವರನ್ನು ಪುನಃ ಶಾಲೆಗೆ ಬರುವಂತೆ ಪ್ರೇರೇಪಿಸುವುದು.
2. ಕಾರ್ಯಾನುಭವ ಮತ್ತು ಉದ್ಯೋಗದಲ್ಲಿ ಪ್ರಾವೀಣ್ಯತೆಯನ್ನು ಹೆಚ್ಚಿಸುವುದು.
3. ಭಾಷಾಕೌಶಲ್ಯವನ್ನು ಬೆಳೆಸುವುದು.
4. ಆರೋಗ್ಯವಂತ ಜೀವನಕ್ಕಾಗಿ ಒಳ್ಳೆಯ ಹವ್ಯಾಸವನ್ನು ಬೆಳೆಸುವುದು.
5. ಪರಿಸರದ ಮೂಲತತ್ವಗಳನ್ನು ತಿಳಿದುಕೊಳ್ಳುವುದು ಮತ್ತು ಪ್ರಶಂಸಿಸುವುದು.
6. ನಾಗರಿಕ ಪ್ರಜ್ಞೆಯನ್ನು ಬೆಳೆಸುವುದು.
7. ಕಾರ್ಯಪರ ಸಾಕ್ಷರತೆ ಅಂಕಿ ಸಂಖ್ಯೆ ಮತ್ತು ತಾಂತ್ರಿಕತೆ ಜ್ಞಾನ ನೀಡುವುದು.
8. ಸಮಾಜದ ಶಿಕ್ಷಣದಲ್ಲಿ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಸೌಕರ್ಯ ನೀಡುವುದು.
9. ಶಾಲೆ ಬಿಟ್ಟು ಹೋದವರಿಗೆ ಪರಿಹಾರಾತ್ಮಕ ಬೋಧನಾ ಕಾರ್ಯಕ್ರಮಗಳನ್ನು ಒದಗಿಸುವುದು.
10. ಕಲಿಯುವವರ ಅವಶ್ಯಕತೆ, ಆಸಕ್ತಿ, ಮನೋಭಾವ ಮತ್ತು ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧನಾ ಕಾರ್ಯಕ್ರಮ ಯೋಜಿಸುವುದು.

**೧೫–೨೫ ವರ್ಷದ ವಯಸ್ಸಿನವರಿಗಾಗಿ ಉದ್ದೇಶಗಳು**

1. ಯುವಕರಿಗೆ ಪ್ರಾಥಮಿಕ ವೈಜ್ಞಾನಿಕ ಜ್ಞಾನ ಮತ್ತು ವೈಚಾರಿಕ ದೃಷ್ಟಿಕೋನವನ್ನು ಪಡೆಯಲು ಸಾಧ್ಯವಾಗುವಂತೆ ಮಾಡಲು ಅವರ ಸುತ್ತಮುತ್ತಲಿನ ಜೀವನದಲ್ಲಿಯ ಸಾಮಾಜಿಕ ಜ್ಞಾನ ಮತ್ತು ಪರಿಸರ ಜ್ಞಾನವನ್ನು ನೀಡುವುದು.
2. ಯುವಕರಿಗೆ ತಾವು ಜೀವಿಸುತ್ತಿರುವ ಪರಿಸರದ ಮೂಲಜ್ಞಾನವನ್ನು ನೀಡುವುದು.
3. ಯುವಕರು ತಮ್ಮ ಬಗೆಗೆ ಮತ್ತು ಸಮಾಜದ ಬಗೆಗೆ ಧನಾತ್ಮಕ ಮನೋಭಾವನೆ ಹೊಂದುವಂತೆ ಪ್ರೋತ್ಸಾಹಿಸುವುದು.
4. ಉದ್ಯೋಗದ ಮೂಲಕ ತಮ್ಮ ಜೀವನಮಟ್ಟ ಸುಧಾರಿಸಿಕೊಳ್ಳುವುದಲ್ಲದೇ ಸಮಾಜದ ಆರ್ಥಿಕ ಅಭಿವೃದ್ಧಿಗೆ ಕಾರಣರಾಗುವಂತೆ ಮಾಡುವುದು.
5. ಪ್ರಾಥಮಿಕ ತತ್ವಗಳಾದ ಆರೋಗ್ಯ, ನೈರ್ಮಲ್ಯ ಮತ್ತು ಮಕ್ಕಳ ಪೋಷಣೆ ಬಗ್ಗೆ ಮೂಲ ಜ್ಞಾನವನ್ನು ಹೊಂದುವಂತೆ ಪ್ರೋತ್ಸಾಹಿಸುವುದು.
6. ಸ್ವಯಂ ಉದ್ಯೋಗಕ್ಕಾಗಿ ವೃತ್ತಿ ಕೌಶಲ್ಯವನ್ನು ಒದಗಿಸುವುದು.
7. ಸಾಮಾಜಿಕ, ಆರ್ಥಿಕ ಹಾಗೂ ತಾಂತ್ರಿಕ ಬದಲಾವಣೆಗಳ ಬಗೆಗೆ ಮೂಲಜ್ಞಾನವನ್ನು ಒದಗಿಸುವುದು.
8. ಓದುವುದು, ಬರೆಯುವುದು ಹಾಗೂ ಅಂಕಗಣಿತದ ಬಗೆಗೆ ಮೂಲ ಕೌಶಲ್ಯವನ್ನು ಒದಗಿಸುವುದು.
9. ಯಶಸ್ವಿ ಗೃಹಸ್ಥ ಜೀವನವನ್ನು ನಡೆಸಲು ಸಹಾಯಕಾರಿಯಾಗುವಂತೆ ಅವರು ಮಾನಸಿಕವಾಗಿ ಬೆಳೆಯಲು ಮತ್ತು ಕಾರ್ಯದಕ್ಷತೆಯನ್ನು ಬಲಪಡಿಸಿಕೊಳ್ಳಲು ನೆರವಾಗುವುದು.
10. ಕುಟುಂಬದ ಮತ್ತು ಸಮಾಜದ ಮಟ್ಟವನ್ನು ಮಾನಸಿಕವಾಗಿ ಮತ್ತು ಕಾರ್ಯಾತ್ಮಕವಾಗಿ ಉತ್ತಮಗೊಳ್ಳುವಂತೆ ಮಾಡುವುದು.

**ಸಂಪ್ರದಾಯ ರಹಿತ ಶಿಕ್ಷಣದ ವ್ಯಾಪ್ತಿ**

ಸಂಪ್ರದಾಯ ರಹಿತ ಶಿಕ್ಷಣದ ಎಲ್ಲ ಕಟ್ಟುಗಳ ಕುರಿತ ಜ್ಞಾನ ಮತ್ತು ಈ ಶಿಕ್ಷಣವು ಎಲ್ಲಿಯವರೆಗೆ ಚಾಚಿಕೊಳ್ಳುತ್ತದೆಯೋ ಹಾಗೂ ಎಲ್ಲಿಗೆ ನಿಲ್ಲುತ್ತದೆ ಎಂಬುದನ್ನು ಸಂಪ್ರದಾಯ ರಹಿತ ಶಿಕ್ಷಣದ ವ್ಯಾಪ್ತಿ ಎನ್ನುತ್ತೇವೆ.

ಇದು 6 ರಿಂದ 14 ಮತ್ತು 15 ರಿಂದ 25 ವರ್ಷದ ಸಮೂಹಗಳೆರಡನ್ನೂ ಒಳಗೊಳ್ಳುವ ಯೋಜನೆಯಾಗಿದೆ. ಅಲ್ಲದೆ ಕಲಿಯಲು ಇಚ್ಛಿಸುವ ಎಲ್ಲ ವಯಸ್ಕರನ್ನು ಸಹ ಒಳಗೊಂಡಿದೆ. ಇದರ ವ್ಯಾಪ್ತಿ ಸಂಪ್ರದಾಯ ಶಿಕ್ಷಣದ ವ್ಯಾಪ್ತಿಯಷ್ಟೇ ವಿಶಾಲವಾಗಿದೆ. ಇದರ ಚಟುವಟಿಕೆಗಳನ್ನು ವಿಶ್ಲೇಷಿಸುತ್ತಾ ಹೋದಂತೆ ಇದರ ವ್ಯಾಪ್ತಿಯ ವಿಶಾಲತೆಯ ಅರಿವು ನಮಗೆ ಉಂಟಾಗುತ್ತಾ ಹೋಗುತ್ತದೆ.

ಇದು ಔಪಚಾರಿಕ ಶಿಕ್ಷಣದ ವ್ಯಾಪ್ತಿಯಿಂದ ಹೊರಗಣ ಕಾರ್ಯಗಳನ್ನು ನಿರ್ವಹಿಸುತ್ತದೆ. ಸಂಪ್ರದಾಯಿಕ ವಿಧಾನಗಳಿಂದ ಯಾರಿಗೆ ಪ್ರಯೋಜನ ಲಭಿಸಿಲ್ಲವೋ ಅಂತಹವರಿಗೆ ಸೌಲಭ್ಯಗಳನ್ನು ಒದಗಿಸುತ್ತದೆ.

Digitised by Bharatavani, CIIL

ಇದರ ವ್ಯಾಪ್ತಿಯನ್ನು ಸಂಕ್ಷೇಪವಾಗಿ ಈ ಕೆಳಗಿನ ರೀತಿಯಲ್ಲಿ ಪಟ್ಟಿ ಮಾಡಬಹುದು:

ಔಪಚಾರಿಕ ಶಿಕ್ಷಣದಿಂದ ವಂಚಿತರಾದ ಜನರಿಗೆ ಶಿಕ್ಷಣದ ಸೌಲಭ್ಯಗಳನ್ನು ಕಲ್ಪಿಸಿ ಕೊಡುವುದು, ಸಂಪದಾಯ ರಹಿತ ಶಿಕ್ಷಣಕಾರ್ಯಕ್ರಮಗಳ ಅಭಿವೃದ್ಧಿ, ಶಾಲೆ ಸೇರ ಬಯಸುವ ಮಕ್ಕಳನ್ನು ಸೂಕ್ತ ವರ್ಗಕ್ಕೆ ಸೇರಿಸುವ ಕಾರ್ಯ, ಯುವ ಸಂಘಟನಾಕಾರರ ಆಯ್ಕೆ ಮತ್ತು ತರಬೇತಿ, ಪಠ್ಯಕ್ರಮದ ಅಭಿವೃದ್ಧಿ, ಕಲಿಕಾ ಸಾಮಗ್ರಿಗಳ ಅಭಿವೃದ್ಧಿ, ಬೋಧನಾ ಪದ್ಧತಿಗಳ ಅಭಿವೃದ್ಧಿ, ಮೌಲ್ಯಮಾಪನ ತಂತ್ರಗಳ ಅಭಿವೃದ್ಧಿ, ಆಧುನಿಕ ತಂತ್ರಜ್ಞಾನ ಬಳಕೆ, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಕಾರ್ಯಕ್ರಮದ ಅನುಷ್ಠಾನ, ಸಮೂಹ ಮಾಧ್ಯಮಗಳಿಂದ ಕಾರ್ಯಕ್ರಮಗಳ ವಿತರಣೆ.

**ಈ ಕೆಳಗಿನ ಇತರ ಅಂಶಗಳೂ ಸಂಪ್ರದಾಯ ರಹಿತ ಶಿಕ್ಷಣದ ವ್ಯಾಪ್ತಿಯನ್ನು ಸೂಚಿಸುತ್ತವೆ**

1. 6 ರಿಂದ 14 ವರ್ಷದ ಒಳಗಿನ ಶಿಕ್ಷಣ ಪಡೆಯದೇ ಇರುವ ಮಕ್ಕಳು ಶಾಲೆಗೆ ಹೋಗಬಯಸಿದರೆ ಅವರನ್ನು ಯಾವ ವರ್ಗಕ್ಕೆ ಸೇರಿಸಬೇಕೆಂಬುದಕ್ಕೆ ಅನೌಪಚಾರಿಕ ಶಿಕ್ಷಣ ಸಂಸ್ಥೆಗಳು ಸಹಾಯಕವಾಗುತ್ತವೆ.

2. ಕಲಿಯಲು ಇಚ್ಛಿಸುವವರಿಗೆ ಅವಶ್ಯಕತೆಗಳಿಗೆ ತಕ್ಕಂತೆ ಸಂಪ್ರದಾಯ ರಹಿತ ಶಿಕ್ಷಣ ಕಾರ್ಯಕ್ರಮಗಳನ್ನು ಅಭಿವೃದ್ಧಿಗೊಳಿಸುವುದು, ಕಲಿಯುವವರ ಅಗತ್ಯಗಳಿಗೆ ಸೂಕ್ತವಾಗಿರುವಂತಹ ಮಾದರಿಗಳನ್ನು ವಿನ್ಯಾಸಗೊಳಿಸುವುದು ಮತ್ತು ಅಳವಡಿಸುವುದು.

3. ಸ್ಥಳೀಯ ವಿದ್ಯಾವಂತ ಮತ್ತು ಪ್ರತಿಭಾವಂತ ಯುವಜನತೆಯನ್ನು ಆಯ್ಕೆ ಮಾಡುವುದು ಮತ್ತು ಅವರಿಗೆ ತರಬೇತಿಯನ್ನು ನೀಡಿ ಸಂಪ್ರದಾಯ ರಹಿತ ಶಿಕ್ಷಣ ಕೇಂದ್ರಗಳಲ್ಲಿ ಸಂಘಟನಾಕಾರರನ್ನಾಗಿ ನೇಮಿಸುವುದು.

4. ಉತ್ತಮ ಗುಣಮಟ್ಟದ ಕಲಿಕಾ ಸಾಮಗ್ರಿಯನ್ನು ಅಭಿವೃದ್ಧಿ ಪಡಿಸುವುದು ಮತ್ತು ಅವನ್ನು ಉಚಿತವಾಗಿ ಒದಗಿಸುವುದು.

5. ಸೂಕ್ತ ಬೋಧನಾ ಪದ್ಧತಿಗಳ ಅಭಿವೃದ್ಧಿ.

6. ಮೌಲ್ಯಮಾಪನ ತಂತ್ರಗಳ ಅಭಿವೃದ್ಧಿ.

7. ಕಲಿಕಾ ವಾತಾವರಣವನ್ನು ಅಭಿವೃದ್ಧಿಗೊಳಿಸುವುದಕ್ಕೆ ಆಧುನಿಕ ತಾಂತ್ರಿಕ ಸಾಮಗ್ರಿಗಳನ್ನು ಬಳಸುವುದು.

8. ಪಂಚಾಯತ್‌ರಾಜ್ ಸಂಸ್ಥೆಗಳು, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು, ಸಾಮಾಜಿಕ ಸಂಸ್ಥೆಗಳು ಮುಂತಾದ ಸಂಸ್ಥೆಗಳ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸುವುದು.

9. ಬಾನುಲಿ, ದೂರದರ್ಶನ, ಉಪಗ್ರಹ ಮುಂತಾದ ಸಮೂಹಮಾಧ್ಯಮಗಳ ಮೂಲಕ ಸಂಪ್ರದಾಯರಹಿತ ಶಿಕ್ಷಣದ ಕಾರ್ಯಕ್ರಮಗಳ ವಿತರಣೆ.

10. ಪಟ್ಟಣದಲ್ಲಿ ವಾಸಿಸುವ ಸಂತ್ರಸ್ಥರು ಮತ್ತು ವ್ಯಾಪಾರಿಗಳು, ಕುಶಲಕರ್ಮಿಗಳು ಮುಂತಾದವರಿಗೆ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು.

11. ಔಪಚಾರಿಕ ಶಿಕ್ಷಣದಿಂದ ವಂಚಿತರಾದ ಈ ಕೆಳಗಿನ ವರ್ಗದ ಜನರಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸುವುದು: ಶಾಲೆಯನ್ನು ಬಿಟ್ಟು ಶಾಲೆಯನ್ನು ಸೇರ ಬಯಸುವವರು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಲಾಗದ ಮಕ್ಕಳು, ಭೌಗೋಳಿಕವಾಗಿ ಶಿಕ್ಷಣ ಪಡೆಯಲು ತೊಂದರೆ ಉಳ್ಳವರಿಗೆ, ವಿದ್ಯಾವಂತ ನಿರುದ್ಯೋಗಿಗಳಿಗೆ, ಕೂಲಿಕಾರರಿಗೆ, ಆಸಕ್ತಿ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನಗಳಿಸುವ ಅಪೇಕ್ಷೆ ಉಳ್ಳವರಿಗೆ, ಸುಶಿಕ್ಷಿತರಿಗೆ, ಹೆಣ್ಣು ಮಕ್ಕಳಿಗೆ, ಬಿಡುವಿನ ವೇಳೆಯ ಸದುಪಯೋಗಕ್ಕಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ತಿರಸ್ಕೃತರಾದವರಿಗೆ ಸಂಪ್ರದಾಯ ರಹಿತ ಶಿಕ್ಷಣವು ಔಪಚಾರಿಕ ಶಿಕ್ಷಣಕ್ಕೆ ವ್ಯಾಪಕ ಅರ್ಥವನ್ನು ಕಲ್ಪಿಸುವುದು, ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದು ಮತ್ತು ಕಲಿಯುವವರ ಕಲಿಕಾ ಶಕ್ತಿಯನ್ನು ಹೆಚ್ಚಿಸುವುದನ್ನೇ ಮುಖ್ಯಗುರಿಯಾಗಿ ಹೊಂದಿದೆ. ಸಂಪ್ರದಾಯ ರಹಿತ ಶಿಕ್ಷಣವು ಆರೋಗ್ಯ, ಉದ್ಯೋಗ, ಪರಿಸರ, ಸಾಮಾಜಿಕ ಅರಿವು ಮತ್ತು ಪ್ರಜ್ಞೆ, ಸಾಕ್ಷರತೆ, ಹೊಂದಾಣಿಕೆ, ಸಂಖ್ಯಾಜ್ಞಾನ ಎಂಬ ಮುಖ್ಯಉದ್ದೇಶಗಳನ್ನು ಹೊಂದಿ ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

ಸಂಪ್ರದಾಯ ರಹಿತ ಶಿಕ್ಷಣವು ಒಂದು ಬಹುಮುಖ ಪ್ರಕ್ರಿಯೆಯಾಗಿದ್ದು, ಸಾಂಪ್ರದಾಯಿಕ ವಿಧಾನಗಳಿಂದ ಪ್ರಯೋಜನ ಲಭಿಸಿಲ್ಲದಂತಹ ಎಲ್ಲ ಜನರಿಗೆ ವಿದ್ಯಾ ಸೌಲಭ್ಯಗಳನ್ನು ಒದಗಿಸುತ್ತದೆ. ಇದರ ವ್ಯಾಪ್ತಿ ಔಪಚಾರಿಕ ಶಿಕ್ಷಣದಿಂದ ವಂಚಿತರಾದ ಜನರ ಶಿಕ್ಷಣಕ್ಕೆ ಸೀಮಿತವಾಗಿರದೇ ಶೈಕ್ಷಣಿಕ ಕಾರ್ಯಕ್ರಮಗಳ ನಿರೂಪಣೆ, ಯೋಗ್ಯ ಸಮೂಹ ಮಾಧ್ಯಮಗಳ ಮೂಲಕ ವಿತರಣೆ ಮತ್ತು ಇದಕ್ಕಾಗಿ ಆರ್ಥಿಕ ನೀತಿ ಮತ್ತು ಉಪಕರಣಗಳ ವಿತರಣೆ, ನಿರ್ವಾಹಕರ ಆಯ್ಕೆ ಮತ್ತು ತರಬೇತಿ ಮುಂತಾದವುಗಳನ್ನು ಒಳಗೊಂಡಿದೆ.

–ವಿ.ಅ.ಕು.

## ಸಂಬಂಧ ಅಭಿವೃದ್ಧಿ ತಂತ್ರಗಳು

**ವಿದ್ಯಾರ್ಥಿ–ಶಿಕ್ಷಕ ಸಂಬಂಧ:** ಶಾಲಾ ಜೀವನದಲ್ಲಿ ಮಾನವ ಸಂಬಂಧಗಳು ಬಹು ಪ್ರಮುಖ ಪಾತ್ರ ವಹಿಸುತ್ತವೆ. ಶಿಕ್ಷಕರು–ವಿದ್ಯಾರ್ಥಿಗಳು, ಮುಖ್ಯೋಪಾಧ್ಯಾಯರು, ಸಹಶಿಕ್ಷಕರು, ಶಿಕ್ಷಕ–ಶಿಕ್ಷಕರು, ವಿದ್ಯಾರ್ಥಿಗಳು, ಸಹಾಯಕ ಸಿಬ್ಬಂದಿ, ಶಾಲಾ ಸಿಬ್ಬಂದಿ, ನಿರ್ವಹಣ ಸಮಿತಿ ಸದಸ್ಯರು, ಸಮುದಾಯ ಸದಸ್ಯರು ಈ ಎಲ್ಲಾ ರೀತಿಯ ಮಾನವ ಸಂಬಂಧಗಳು ಮಧುರವಾಗಿಯೂ ಪರಸ್ಪರರ ತಿಳುವಳಿಕೆ, ಗೌರವಗಳಿಂದಲೂ, ಸ್ನೇಹಭಾವನೆಯಿಂದಲೂ ಕೂಡಿರಬೇಕು. ಹಾಗಿದ್ದಾಗ ಮಾತ್ರ ಶಾಲಾಜೀವನ ಸಂತೋಷದಾಯಕವಾದುದಾಗಿರುತ್ತದೆ. ಇಲ್ಲದಿದ್ದಲ್ಲಿ ಪರಸ್ಪರರನ್ನು ಅರ್ಥಮಾಡಿಕೊಳ್ಳದ ತಪ್ಪು ತಿಳಿವಳಿಕೆಗಳಿಗೆ ಪೂರ್ವಗ್ರಹಗಳಿಗೆ ಅಸಮಾಯೋಜಿತ ಸಂಬಂಧಗಳಿಗೆ ಮತ್ತು ಕೆಲವು ವೇಳೆ ಸಂಘರ್ಷಗಳಿಗೆ ಅವಕಾಶ ದೊರೆತಂತಾಗುತ್ತದೆ. ಅಂಥ ವಾತಾವರಣವಿರುವ ಶಾಲಾಜೀವನ ಅಸಂತೋಷಕ್ಕೆ ಎಡೆಮಾಡಿಕೊಡುತ್ತದೆ. ಆದ್ದರಿಂದ ಶಾಲೆಗಳಲ್ಲಿ ಮಾನವ ಸಂಬಂಧಗಳನ್ನು ಧನಾತ್ಮಕ ದಿಶೆಯಲ್ಲಿ ಅಭಿವೃದ್ಧಿಪಡಿಸಬೇಕು. ಇದಕ್ಕಾಗಿ ಅನೇಕ ತಂತ್ರಗಳನ್ನು ಉಪಯೋಗಿಸಬೇಕು.

ಶಾಲೆಯಲ್ಲಿ ಅತಿ ಮಹತ್ವಪೂರ್ಣವಾದ ಮಾನವ ಸಂಬಂಧ ಶಿಕ್ಷಕ–ವಿದ್ಯಾರ್ಥಿಗಳ ನಡುವಿನದು. ಏಕೆಂದರೆ ಈ ಸಂಬಂಧ ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಬೀರುವುದಲ್ಲದೆ ಮಕ್ಕಳ ಸಾಮಾಜಿಕ, ನೈತಿಕ

Digitised by Bharatavani, CIIL

ವಿಕಾಸಗಳ ಮೇಲೂ ಪ್ರಭಾವ ಬೀರುತ್ತದೆ. ಅದರಲ್ಲೂ ಪ್ರಾಥಮಿಕ ಮಟ್ಟದಲ್ಲಿ ಶಿಕ್ಷಕ ವಿದ್ಯಾರ್ಥಿ ನಡುವಣ ಸಂಬಂಧ ಸ್ಥಾಯಿ ರೂಪದ ದೀರ್ಘಕಾಲದ ಪ್ರಭಾವ ಬೀರುತ್ತದೆ.

ವಿದ್ಯಾರ್ಥಿಗಳೊಂದಿಗೆ ಶಿಕ್ಷಕನ ಸಂಬಂಧ ಉತ್ತಮವಾಗಿರಬೇಕಾದರೆ:

1. ಶಿಕ್ಷಕನು ತನ್ನ ಶಾಲೆಯ ಕೆಲಸದ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು.
2. ಪೂರ್ವಸಿದ್ಧತೆಯ ನಂತರವೆ ಪಾಠಗಳನ್ನು ಬೋಧಿಸಬೇಕು.
3. ಎಲ್ಲ ವಿದ್ಯಾರ್ಥಿಗಳಿಗೂ ಪ್ರೀತಿ ಮತ್ತು ಮಮತೆಯನ್ನು ತೋರಿಸಬೇಕು. ಅವರ ಜಾತಿ, ಅಂತಸ್ತು, ಲಿಂಗ, ಧರ್ಮ, ಭಾಷೆಗಳನ್ನು ಗಣನೆಗೆ ತೆಗೆದುಕೊಳ್ಳಬಾರದು.
4. ವಿದ್ಯಾರ್ಥಿಗಳ ಭೌತಿಕ, ಸಾಮಾಜಿಕ, ಬೌದ್ಧಿಕ, ಭಾವನಾತ್ಮಕ, ನೈತಿಕ ಮತ್ತು ಅಧ್ಯಾತ್ಮಿಕ ಬೆಳವಣಿಗೆಗೆ ಮಾರ್ಗದರ್ಶನ ನೀಡಬೇಕು.
5. ವಿದ್ಯಾರ್ಥಿಗಳ ವ್ಯಕ್ತಿಭಿನ್ನತೆ, ಸಾಮಾಜಿಕ, ಸಾಂಸ್ಕೃತಿಕ ಹಿನ್ನಲೆಯನ್ನು ಪರಿಗಣಿಸಿ ಬೋಧಿಸಬೇಕು.
6. ಬೋಧನೆ ಹಾಗೂ ಪರಿಹಾರ ಬೋಧನೆಗೆ ವಿದ್ಯಾರ್ಥಿಗಳಿಂದ ಯಾವುದೇ ಬಗೆಯ ಸಂಭಾವನೆ, ಪ್ರತಿಫಲವನ್ನು ತೆಗೆದುಕೊಳ್ಳಬಾರದು.
7. ವೇಷಭೂಷಣ ನಡೆನುಡಿಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕನು ಮಾದರಿಯಾಗಿರಬೇಕು.
8. ವಿದ್ಯಾರ್ಥಿಗಳಿಗೆ ಗೌರವ ನೀಡಿ ಶಾಲಾ ಶಿಸ್ತನ್ನು ಕಾಪಾಡಬೇಕು.
9. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವದ ಬೆಳವಣಿಗೆಗೆ ಶಿಕ್ಷಕನು ಪ್ರೇರಣೆ ನೀಡಬೇಕು.

**ಶಿಕ್ಷಕ ಮತ್ತು ಪೋಷಕರ ಸಂಬಂಧ**

ವ್ಯವಸ್ಥಿತ ಶಿಕ್ಷಣವು ಎರಡು ವಿಧವಾದ ಮಾರ್ಗವಿದ್ದಂತೆ (two way traffic). ಶಾಲೆಗೆ ಸಮಾಜವನ್ನು ತರಬೇಕು ಮತ್ತು ಶಾಲೆಯನ್ನು ಸಮಾಜಕ್ಕೆ ಕೊಂಡೊಯ್ಯಬೇಕು. ಶಾಲೆಯೊಂದೇ ತನ್ನಷ್ಟಕ್ಕೆ ತಾನೇ ಕೆಲಸ ಮಾಡಲಾರದು. ಸಮಾಜವು ತನ್ನ ಕಾಣಿಕೆಯನ್ನು ಶಾಲೆಗೆ ಅರ್ಪಿಸಬೇಕು. ಪ್ರಜ್ಞಾಪೂರ್ವಕವಾಗಿ ಆಗಲಿ ಅಥವಾ ಪ್ರಜ್ಞೆಯಿಂದ ದೂರವಿದ್ದಾಗಲೀ ಶಾಲೆ ಮತ್ತು ಸಮಾಜಗಳು ಒಂದರ ಮೇಲೆ ಇನ್ನೊಂದರ ಪ್ರಭಾವವನ್ನು ಹೊಂದಿದವುಗಳಾಗಿವೆ. ಶಾಲೆ ಮತ್ತು ಸಮಾಜಗಳಿಗಿರುವ ನಿಕಟ ಸಂಬಂಧವನ್ನು ಬೆಸೆಯುವ ವಿಧಾನಗಳಲ್ಲಿ ಪೋಷಕ ಬೋಧಕ ಸಂಘದ ಪಾತ್ರ ಅತ್ಯಂತ ಹೆಚ್ಚಿನದು. ಶಾಲೆಯ ಅಧಿಕಾರ ವರ್ಗದಲ್ಲಿ ಪೋಷಕರು ಸಂಪೂರ್ಣ ನಂಬುಗೆ ಮತ್ತು ವಿಶ್ವಾಸಗಳನ್ನು ಹೊಂದಿರಬೇಕು. ಅಂತೆಯೇ ಶಾಲೆಯ ಆಡಳಿತ ವರ್ಗದವರೂ ಸಹ ಶಾಲೆ ಪೋಷಕ ವರ್ಗದವರಿಗೆ ಸಂಬಂಧಿಸಿದ್ದು ಎಂಬ ಭಾವನೆ ಮೂಡುವಂತೆ ಮಾಡಬೇಕು. 'ಶಾಲೆ ನಮ್ಮದು' ಎಂದು ಪೋಷಕರು ಹೇಳಿಕೊಳ್ಳುವಂತೆ ಮಾಡಬೇಕು. ಪೋಷಕರ ಸಲಹೆಗಳನ್ನು ಸ್ವಾಗತಿಸಿ ಶಾಲೆಗೆ ಲಭ್ಯವಾಗಬಹುದಾದ ಸಂಪನ್ಮೂಲಗಳಿಂದಲೇ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ಪೋಷಕ-ಬೋಧಕ ಸಂಘವು ಶಾಲೆಯ ಸಮಸ್ಯೆಗಳನ್ನು ನಿವಾರಿಸಿ ಪ್ರಗತಿ ಮಾರ್ಗಕ್ಕೆ ದಾರಿ ದೀಪವಾಗುವಂತಿರಬೇಕು.

ಶಿಕ್ಷಕ ಪೋಷಕನ ಜೊತೆಗಿರುವ ಸಂಬಂಧವು ಉತ್ತಮವಾಗಿರಬೇಕಾದರೆ ಶಿಕ್ಷಕನು ಶಾಲೆ ಮತ್ತು ಪೋಷಕರ ನಡುವೆ ಮಧ್ಯಸ್ಥಗಾರನಾಗಿ ಅವರ ಪ್ರಗತಿ, ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಪೋಷಕರಿಗೆ ಮಾಹಿತಿ ತಿಳಿಸಬೇಕಾಗುವುದು. ವಿದ್ಯಾರ್ಥಿಗಳ ಪ್ರಗತಿಗೆ ಪೋಷಕರ ನೆರವು ಅತ್ಯಗತ್ಯವಾಗಿರುವುದರಿಂದ ಅವರ ಜೊತೆ ನಿರಂತರ ಹಾಗೂ ಗಾಢವಾದ ಸಂಬಂಧ ಅಗತ್ಯವಿದೆ. ಶಾಲೆಯ ಪ್ರಗತಿಗೆ ಪೋಷಕರ ನೆರವನ್ನು ಪಡೆಯಬೇಕು. ಅವರ ಜೊತೆ ಸೌಜನ್ಯದಿಂದ ವರ್ತಿಸಿ, ಅವರ ಸಮಸ್ಯೆಗಳಿಗೆ ಪರಿಹಾರವನ್ನು ದೊರಕಿಸಿಕೊಡಬೇಕು. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಸ್ಪರ ಮುಕ್ತವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು.

ಪೋಷಕರು ಶಾಲೆಗೆ ಆಗಿಂದಾಗ್ಗೆ ಭೇಟಿ ಕೊಡುತ್ತಿದ್ದು ತಮ್ಮ ಮಕ್ಕಳ ಚಟುವಟಿಕೆಗಳನ್ನು ಆಗಾಗ್ಗೆ ಅವಲೋಕಿಸುತ್ತಿರಬೇಕು. ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಶಕ್ತಿ ಮತ್ತು ಆಸಕ್ತಿಗಳನ್ನು ಪೋಷಕರಿಗೆ ತಿಳಿಸಬೇಕು. ಅಂತೆಯೇ ಪೋಷಕರು ತಮ್ಮ ಮಕ್ಕಳ ಸಾಮರ್ಥ್ಯಗಳ ಬಗ್ಗೆ ಶಿಕ್ಷಕರಿಗೆ ಪರಿಚಯಿಸಿಕೊಡಬೇಕು. ಪೋಷಕರೂ-ಶಿಕ್ಷಕರೂ ಕಲೆತು ಮಕ್ಕಳ ವರ್ತನೆಗಳನ್ನು ತಿದ್ದುವಂತಹ ಯೋಜನೆಗಳನ್ನು ರೂಪಿಸಬೇಕು. ಈ ರೀತಿ ಅನಧಿಕೃತ ಪೋಷಕ-ಬೋಧಕ ಸಮಾವೇಶಗಳು ಶಿಕ್ಷಣ ಕ್ಷೇತ್ರಗಳಲ್ಲಿ ಅಗಣಿತ ಪ್ರಭಾವವನ್ನು ಬೆಳೆಸಲು ಸಹಾಯಕಗಳಾಗಿ ಉತ್ತಮ ಸಂಬಂಧವನ್ನು ಬೆಳೆಸಲು ಪೂರಕವಾಗುತ್ತವೆ.

ವಿದ್ಯಾರ್ಥಿ, ಶಿಕ್ಷಕ ಮತ್ತು ಪೋಷಕ ಈ ಮೂರು ಪಾತ್ರಗಳು ಶೈಕ್ಷಣಿಕ ಪ್ರಗತಿಯಲ್ಲಿ ಪಾಲುಗಾರಿಕೆಯನ್ನು ಹೊಂದಿದವರಾಗಿದ್ದಾರೆ. ಸಾಮಾಜಿಕ ಬೆಳವಣಿಗೆ ಎನ್ನುವುದು ವಿದ್ಯಾರ್ಥಿ, ಶಿಕ್ಷಕ, ಪೋಷಕರ ವರ್ತುಲದಲ್ಲಿಯೇ ಸಾಗಬೇಕು. ಏಕಾಂಗಿಯಾಗಿ ಅದು ಸಾಗಲಾರದು. ಆದ್ದರಿಂದ ಹಲವಾರು ತಂತ್ರ/ಸಾಧನಗಳಿಂದ ಸಂಬಂಧಗಳನ್ನು ಅಭಿವೃದ್ಧಿಪಡಿಸಬಹುದು. ಅವು ಯಾವುವೆಂದರೆ:

1. ಸಹಪಠ್ಯ ಚಟುವಟಿಕೆಗಳು
2. ಶಾಲಾ ವಾರ್ಷಿಕೋತ್ಸವ
3. ಮಾರ್ಗದರ್ಶನ ಮತ್ತು ಸಲಹೆ
4. ಪೋಷಕ ಮತ್ತು ಶಿಕ್ಷಕರ ಸಂಘ
5. ವೀಕ್ಷಣೆ
6. ವ್ಯಕ್ತಿ ಅಧ್ಯಯನ
7. ಸಮೂಹಗತಿ ಶಾಸ್ತ್ರ
8. ಸಂದರ್ಶನ
9. ಸಂವಹನ

1. **ಸಹಪಠ್ಯ ಚಟುವಟಿಕೆಗಳು:** ಮಾನವ ಸಂಘಜೀವಿಯಾದ್ದರಿಂದ ಸಮುದಾಯದಲ್ಲಿ ಉತ್ತಮ ಜೀವನ ನಿರ್ವಹಣೆ ಮಾಡಬೇಕಾದರೆ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಸಹಪಠ್ಯ ಚಟುವಟಿಕೆಗಳ ಮೂಲಕ ಪರಿಣಾಮಕಾರಿಯಾಗಿ ಬೆಳೆಸಲು ಹಾಗೂ ಉತ್ತಮ ಬಾಂಧವ್ಯ ಹಾಗೂ ಸಂಬಂಧಗಳನ್ನು ಬೆಳೆಸಲು ನೆರವಾಗುತ್ತವೆ.

ಸಾಮಾಜಿಕ ಮೌಲ್ಯಗಳಾದ ಪರಸ್ಪರ ಸಹಕಾರ, ಜಾತ್ಯತೀತತೆ, ಸ್ವಾತಂತ್ರ್ಯ, ಶಿಸ್ತು, ಸಹಾನುಭೂತಿ, ಸಂಯಮ, ನಿಸ್ವಾರ್ಥ, ನೈರ್ಮಲೀಕರಣ ಮುಂತಾದವುಗಳನ್ನು ಕ್ರೀಡೆಗಳು, ಗುಂಪು ಯೋಜನೆಗಳು, ಆಟಗಳು, ವಿವಿಧ ಆಚರಣೆ ಮುಂತಾದವುಗಳ ಮೂಲಕ ವಿದ್ಯಾರ್ಥಿಗಳಲ್ಲಿ ಬೆಳೆಸಲು ನೆರವಾಗುತ್ತವೆ.

**ನೈತಿಕ ಮೌಲ್ಯಗಳು:** ಶಾಲಾ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತೆ, ಪರೋಪಕಾರ, ಸಹಕಾರ, ಸಹನೆ, ತಾಳ್ಮೆ, ಗೌರವ, ತ್ಯಾಗ, ನಿಸ್ವಾರ್ಥ,

Digitised by Bharatavani, CIIL

ಪ್ರೇಮ, ಕರುಣೆ, ಮಮತೆ, ವಿಧೇಯತೆ, ಆತ್ಮವಿಶ್ವಾಸ ಮುಂತಾದ ನೈತಿಕ ಮೌಲ್ಯಗಳನ್ನು ವಿವಿಧ ಬಗೆಯ ಸಹಪಠ್ಯ ಚಟುವಟಿಕೆಗಳ ಮೂಲಕ ಪರಿಣಾಮಕಾರಿಯಾಗಿ ಬೆಳೆಸಲು ಸಾಧ್ಯವಿದೆ. ಶಾಲಾ ಸಮಿತಿ, ಶಾಲಾ ಪ್ರಾರ್ಥನೆ, ಪ್ರವಾಸ, ವಿವಿಧ ಆಟ ಮತ್ತು ಕ್ರೀಡೆಗಳು ಉತ್ತಮ ಸಂಬಂಧವನ್ನು ನಿರ್ವಹಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

**ಸಾಂಸ್ಕೃತಿಕ ಮೌಲ್ಯಗಳು:** ಸಂಸ್ಕೃತಿಯ ಪ್ರಮುಖ ಅಂಶಗಳಾದ ಆಚರಣೆ, ಸಂಪ್ರದಾಯ, ಪದ್ಧತಿ, ರೀತಿ-ನೀತಿ, ಉಡುಗೆ ತೊಡುಗೆ, ಆಚಾರ-ವಿಚಾರ, ಪರಂಪರೆ ಮುಂತಾದವುಗಳನ್ನು ನಾಟಕಗಳು, ಜನಪದಗೀತೆ, ಜನಪದನೃತ್ಯ, ಗಾಯನ, ಧಾರ್ಮಿಕ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ, ಪ್ರದರ್ಶನಗಳು, ಪ್ರವಾಸ, ಭೇಟಿ, ಮುಂತಾದ ಸಹಪಠ್ಯ ಚಟುವಟಿಕೆಗಳ ಮೂಲಕ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಿ ಅವುಗಳನ್ನು ಪೋಷಿಸಲು ಸಾಧ್ಯ.

2. **ಶಾಲಾ ವಾರ್ಷಿಕೋತ್ಸವ:** ಆಯಾ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಶಾಲೆ ಆಚರಿಸುವ ಒಂದು ಉತ್ಸವ. ಆಟಪಾಠಗಳೂ, ಸಾಂಸ್ಕೃತಿಕ ಕಾರ್ಯಕ್ರಮಗಳೂ ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ ಬಹುಮಾನ ವಿತರಣೆಯೂ, ಉಪದೇಶಾದಿ ಭಾಷಣ ಕಾರ್ಯಕ್ರಮಗಳೂ ಇರುತ್ತವೆ. ಹಳೆಯ ವಿದ್ಯಾರ್ಥಿಗಳಿಗೆ ಮತ್ತೆ ಶಾಲೆಯ ಸಂಪರ್ಕ ಕಲ್ಪಿಸಿಕೊಡುವುದಕ್ಕೂ ಇದು ಒಂದು ಪ್ರಮುಖ ಸಂದರ್ಭವಾಗಿದೆ. ವಾರ್ಷಿಕೋತ್ಸವದ ಪೂರ್ವಭಾವಿಯಾಗಿ ವಿವಿಧ ಸಮಿತಿಗಳನ್ನು ರಚಿಸಿ, ಅವುಗಳ ಮೂಲಕ ವಿವಿಧ ಬಗೆಯ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಶಾಲಾ ವಾರ್ಷಿಕೋತ್ಸವಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡುವುದು ಮತ್ತು ವಿದ್ಯಾರ್ಥಿಗಳಲ್ಲಿರುವ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯನ್ನು ಕಲ್ಪಿಸಿ ಕೊಡಲಾಗುವುದು.

ಈ ವಾರ್ಷಿಕೋತ್ಸವಗಳಲ್ಲಿ ವಿದ್ಯಾರ್ಥಿಗಳ ಪೋಷಕರು ಹಾಗೂ ಸಮುದಾಯದವರು ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಶಾಲೆ ಮತ್ತು ಸಮುದಾಯದ ನಡುವಿನ ಸಂಬಂಧವು ಕೂಡ ವೃದ್ಧಿಗೊಳ್ಳುವುದು.

3. **ಮಾರ್ಗದರ್ಶನ ಮತ್ತು ಆಪ್ತ ಸಮಾಲೋಚನೆ:** ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವೃತ್ತಿ ಹಾಗೂ ವೈಯಕ್ತಿಕ ಮಾರ್ಗದರ್ಶನ ಮತ್ತು ಸಲಹೆ ನೀಡಲು ಶಾಲೆಗಳಲ್ಲಿ ಮಾರ್ಗದರ್ಶನ ಸೇವಾ ಕೇಂದ್ರಗಳನ್ನು ಸ್ಥಾಪಿಸಿ ವಿದ್ಯಾರ್ಥಿಗಳ ಸಾಮರ್ಥ್ಯ, ಅವಶ್ಯಕತೆ ಮತ್ತು ಆಸಕ್ತಿಗಳನ್ನು ಗಮನಿಸಿ ಅವರಿಗೆ ಶೈಕ್ಷಣಿಕ ಹಾಗೂ ವೃತ್ತಿ ಮಾರ್ಗದರ್ಶನ ನೀಡಬೇಕು. ಮಕ್ಕಳಲ್ಲಿ ಉತ್ತಮ ಓದುವ ಕೌಶಲ್ಯಗಳನ್ನು ಬೆಳೆಸಲು, ಅವರ ಸಾಮರ್ಥ್ಯಕ್ಕನುಸಾರವಾಗಿ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮತ್ತು ಭವಿಷ್ಯದ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳಲು ಶೈಕ್ಷಣಿಕ ಮಾರ್ಗದರ್ಶನ ನೆರವಾಗುತ್ತದೆ. ವಿದ್ಯಾರ್ಥಿಗಳು ಅವರ ಆಸಕ್ತಿ ಮತ್ತು ಅಭಿಕ್ಷಮತೆಗಳಿಗನುಸಾರವಾಗಿ ವೃತ್ತಿಯನ್ನು ಆಯ್ಕೆಮಾಡಿಕೊಳ್ಳಲು ಮತ್ತು ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಲು ವೃತ್ತಿ ಮಾರ್ಗದರ್ಶನ ನೆರವಾಗುತ್ತದೆ. ವಿದ್ಯಾರ್ಥಿಗಳು ಎದುರಿಸುವ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮಾರ್ಗದರ್ಶಕರಾಗಿ, ಸಲಹೆಗಾರರಾಗಿ ಅಥವಾ ಅನುಭವಿಗಳಾಗಿ ಸೂಕ್ತ ಮಾರ್ಗದರ್ಶನ ಮತ್ತು ಸಲಹೆಯನ್ನು ನೀಡಿದಾಗ ವಿದ್ಯಾರ್ಥಿ-ಶಿಕ್ಷಕ ವೃಂದದಲ್ಲಿ ಉತ್ತಮ ಸಂಬಂಧವನ್ನು ಕಾಣಬಹುದು.

4. **ಪೋಷಕ-ಶಿಕ್ಷಕರ ಸಂಘ:** ಒಂದು ಪ್ರದೇಶದಲ್ಲಿರುವ ಶಾಲೆಯ ಶಿಕ್ಷಕರೂ ಅಲ್ಲಿನ ವಿದ್ಯಾರ್ಥಿಗಳ ಪೋಷಕರೂ ಕೂಡಿ ಏರ್ಪಡಿಸಿರುವ ಶಿಕ್ಷಣ ಸಾಮಾಜಿಕ ಸಂಘವೇ ಪೋಷಕ ಶಿಕ್ಷಕರ ಸಂಘ. ಶಾಲೆ ಮತ್ತು ಮನೆ ಇವುಗಳ ನಡುವಿನ ಸಂಬಂಧವನ್ನು ಬಲಪಡಿಸುವ ಹಾಗೂ ಇವುಗಳ ನಡುವಿನ ಸಹಕಾರ ಬೆಳೆಸುವ ಒಂದು ಸಾಧನವೇ ಪೋಷಕ-ಶಿಕ್ಷಕರ ಸಂಘ.

ಶಾಲೆಯ ಕಾರ್ಯಕ್ರಮಗಳನ್ನು ಸಮಾಜಕ್ಕೆ ಪರಿಚಯ ಮಾಡಿಕೊಡುವುದಕ್ಕೂ ಸಮಾಜದ ಸಹಕಾರವನ್ನು ಶಾಲೆಯ ಕಾರ್ಯಕ್ರಮಗಳಿಗೆ ದೊರಕಿಸಿಕೊಡುವುದಕ್ಕೂ ಅನುಕೂಲಿಸುವಂಥ ಕಾರ್ಯಕ್ರಮಗಳನ್ನು ಈ ಸಂಘದಲ್ಲಿ ಏರ್ಪಡಿಸಲಾಗುವುದು.

ಈ ಸಂಘವು ಶಾಲೆ ಮತ್ತು ಸಮುದಾಯದ ನಡುವೆ ಕೊಂಡಿಯಾಗಿ ಕಾರ್ಯ ನಿರ್ವಹಿಸಲು ಇವೆರಡರ ಸಹಕಾರವನ್ನು ಬಯಸುತ್ತದೆ. ಇಂತಹ ಸಂಘಗಳನ್ನು ಎಲ್ಲಾ ಶಾಲೆಗಳಲ್ಲಿಯೂ ಪೋಷಿಸಬೇಕು. ವರ್ಷದಲ್ಲಿ ಎರಡು ಮೂರು ಬಾರಿಯಾದರೂ ಸಭೆ ಸೇರಿ ವಿದ್ಯಾರ್ಥಿಗಳ ಪ್ರಗತಿ, ಸಮಸ್ಯೆಗಳು, ಇನ್ನಿತರ ವಿಷಯಗಳ ಬಗೆಗೆ ಚರ್ಚಿಸಬೇಕು. ಪೋಷಕರಲ್ಲಿ ಸಂಪನ್ಮೂಲ ವ್ಯಕ್ತಿಗಳಿದ್ದರೆ ಅವರಿಂದಲೂ ಪ್ರಾತ್ಯಕ್ಷಿಕೆ, ಭಾಷಣ, ಕಾರ್ಯಾಗಾರಗಳನ್ನು ಏರ್ಪಡಿಸಬಹುದು. ಈ ರೀತಿ ಮಾಡುವುದರಿಂದ ವಿದ್ಯಾರ್ಥಿಗಳ ಮತ್ತು ಶಾಲೆಯ ಗುಣಮಟ್ಟವು ಸುಧಾರಿಸುವುದು.

5. **ವೀಕ್ಷಣೆ:** ವೀಕ್ಷಣಾ ತಂತ್ರದಿಂದ ವಿದ್ಯಾರ್ಥಿಯ ಬಾಹ್ಯ ವರ್ತನೆಯನ್ನು ಅಧ್ಯಯನ ಮಾಡಿ ವಿಶ್ಲೇಷಿಸಿದಾಗ ಶಿಕ್ಷಕರಿಗೆ ವಿದ್ಯಾರ್ಥಿಗಳ ಬೆಳವಣಿಗೆಯ ಲಕ್ಷಣಗಳನ್ನು ತಿಳಿಯಲು ಸಹಾಯಕವಾಗುತ್ತದೆ.

ತರಗತಿಯ ಶಿಕ್ಷಕ ತನ್ನ ವಿದ್ಯಾರ್ಥಿಗಳನ್ನು ವೀಕ್ಷಿಸುವ ಮೂಲಕ ಅವರ ಹಲವಾರು ವರ್ತನಾ ಸಮಸ್ಯೆಗಳಿಗೆ ಕಾರಣ ತಿಳಿದು ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಂಡಾಗ ಶಿಕ್ಷಕ-ವಿದ್ಯಾರ್ಥಿ ಸಂಬಂಧ ಉತ್ತಮಪಡಿಸಲು, ಬೆಳೆಸಲು ಸಹಾಯಕವಾಗುತ್ತದೆ.

6. **ವ್ಯಕ್ತಿ ಅಧ್ಯಯನ :** ಶಿಕ್ಷಕನು ತರಗತಿಯಲ್ಲಿ ವಿವಿಧ ರೀತಿಯ ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ತರಗತಿಯ ವಿದ್ಯಾರ್ಥಿ ಶಾಲಾ ಕಲಿಕೆಯಲ್ಲಿ ಸಂಪೂರ್ಣ ನಿರಾಸಕ್ತನಾಗಿದ್ದರೆ, ಬಾಲಾಪರಾಧಿಯಾಗಿದ್ದರೆ, ನಿರ್ದಿಷ್ಟ ವಿಷಯದ ಕಲಿಕೆಯಲ್ಲಿ ಹಿಂದುಳಿದಿದ್ದರೆ ಅಪೂರ್ಣಸಾಧಕನಾಗಿದ್ದರೆ, ಸಂವೇಗಾತ್ಮಕ ಸಮಸ್ಯೆಗಳನ್ನು ಹೊಂದಿದ್ದರೆ, ತರಗತಿಯ ಮಕ್ಕಳೊಡನೆ ಸರಿಯಾದ ಹೊಂದಾಣಿಕೆಯಿಲ್ಲದಿದ್ದರೆ ಇಂತಹ ಸಮಸ್ಯಾತ್ಮಕ ವರ್ತನೆಗಳಿಗೆ ಮೂಲ ಕಾರಣಗಳನ್ನು ಪತ್ತೆ ಹಚ್ಚಿ, ಸೂಕ್ತ ನಿವಾರಣೋಪಾಯಗಳನ್ನು ಕೈಗೊಳ್ಳಬೇಕಾದ್ದು ಶಿಕ್ಷಕನ ಆದ್ಯ ಕರ್ತವ್ಯ. ಅವು ಅಂತರ್ ಸಂಬಂಧವನ್ನು ಸೂಚಿಸುವುದರಿಂದ ಶಿಕ್ಷಕನು ವಿದ್ಯಾರ್ಥಿಯ ಸಮಸ್ಯೆಯ ಕಾರಣಗಳನ್ನು ಪರಿಶೋಧಿಸಿ ಸೂಕ್ತ ನಿವಾರಣಾ ಕ್ರಮಗಳನ್ನು ಕೈಗೊಳ್ಳುವುದರಿಂದ ವಿದ್ಯಾರ್ಥಿ-ಶಿಕ್ಷಕರಲ್ಲಿ ಉತ್ತಮ ಸಂಬಂಧವನ್ನು ಏರ್ಪಡಿಸಬಹುದು.

7. **ಸಮೂಹ ಗತಿ ಶಾಸ್ತ್ರ /ಸಮಾಜ ಮಿತಿ ತಂತ್ರ :** ವಿದ್ಯಾರ್ಥಿ-ವಿದ್ಯಾರ್ಥಿಗಳ ನಡುವಿನ ಸಂಬಂಧವನ್ನು ತಿಳಿಯಲು ಹಾಗೂ ಏರ್ಪಡಿಸಲು ಸಮೂಹದ ರಚನೆಯನ್ನು ವಿಶ್ಲೇಷಿಸಿ ಕ್ರಮಬದ್ಧವಾಗಿ ಅಧ್ಯಯನ ಮಾಡಲು ಸಮಾಜ ಮಿತಿ ತಂತ್ರವನ್ನು ಬಳಸಬೇಕು. ಈ ತಂತ್ರವು ಒಂದು ಸಮೂಹದ/ ವಿದ್ಯಾರ್ಥಿಗಳ ಗುಂಪಿನ ಸ್ವರೂಪ, ರಚನೆ, ಅಂತರ್ ವ್ಯಕ್ತಿ ಸಂಬಂಧಗಳನ್ನು ಅರಿತುಕೊಳ್ಳಲು ನೆರವಾಗುತ್ತದೆ. ಆಕರ್ಷಣೆಗಳು, ತಿರಸ್ಕಾರ ಮತ್ತು ವಿಭಿನ್ನತೆ, ಜನಪ್ರಿಯತೆ, ಒಂಟಿಗಳು, ಉಪಗುಂಪುಗಳು, ಬಳಗಗಳು ಹೀಗೆ ಹತ್ತು ಹಲವಾರು ರೀತಿಯಲ್ಲಿ ಉತ್ತಮ ಸಂಬಂಧವನ್ನೇರ್ಪಡಿಸಲು ಸಹಾಯಕವಾಗಿದೆ.

8. **ಸಂದರ್ಶನ:** ಶಿಕ್ಷಕರು ಸಂದರ್ಶನವನ್ನು ಸಲಹಾ ಕಾರ್ಯಕ್ರಮಗಳಲ್ಲಿ ಬಳಸಿ, ಶೈಕ್ಷಣಿಕ ಸನ್ನಿವೇಶಗಳಲ್ಲಿ / ತರಗತಿಗಳಲ್ಲಿ ವಿದ್ಯಾರ್ಥಿಗಳ

Digitised by Bharatavani, CIIL

ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಈ ತಂತ್ರವನ್ನು ಉಪಯೋಗಿಸಿ ಉತ್ತಮ ಬಾಂಧವ್ಯವನ್ನು ಬೆಳೆಸಲು ಪೂರಕವಾಗಿದೆ. ಶಿಕ್ಷಕನು ಹಲವಾರು ಸಂದರ್ಭಗಳಲ್ಲಿ ಸಂದರ್ಶಕನಾಗಿ ಅವಶ್ಯವಾದ ಕೌಶಲ ಹಾಗೂ ಚತುರತೆಯಿಂದ ನಿರ್ದಿಷ್ಟ ಮಾಹಿತಿ ಸಂಗ್ರಹಿಸಿ, ಸಂದರ್ಶಿತ ವ್ಯಕ್ತಿಯ ಸಾಮಾನ್ಯ ವರ್ತನೆ, ಅವನ ಧ್ವನಿ, ಮಾತು, ಅವನು ನೀಡಿದ ಉತ್ತರಗಳನ್ನು ಅವಲೋಕಿಸುತ್ತಾನೆ. ನಂತರ ಅವಲೋಕನೆಯಲ್ಲಿ ಕಂಡುಬಂದ ಅಂಶಗಳನ್ನು ವಿಶ್ಲೇಷಿಸುತ್ತಾನೆ, ಅರ್ಥೈಸುತ್ತಾನೆ ಮತ್ತು ತನ್ನ ಅಧ್ಯಯನದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಬಳಸುತ್ತಾನೆ.

ಸಂದರ್ಶನವನ್ನು ವಿದ್ಯಾರ್ಥಿಗಳ ಹೊಂದಾಣಿಕೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ, ವ್ಯಕ್ತಿಗಳ ಮನೋಧೋರಣೆ, ಆಸಕ್ತಿಗಳು ಹಾಗೂ ಮೌಲ್ಯಗಳನ್ನು ತಿಳಿಯಲು, ಹದಿಹರೆಯದವರ ಮಾನಸಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ವ್ಯಕ್ತಿತ್ವವನ್ನು ಬೆಳೆಸಲು ಬಳಸಬಹುದು.

9. **ಸಂವಹನ:** ಶಿಕ್ಷಕನು ಹಲವು ವೇಳೆಯಲ್ಲಿ ಸಂವಹನಕಾರನಾಗಿ ಧನಾತ್ಮಕವಾದ ಪ್ರಭಾವವನ್ನು ಬೀರುವುದರಿಂದ ಉತ್ತಮ ಸಂಬಂಧವನ್ನು ವಿದ್ಯಾರ್ಥಿಗಳಲ್ಲಿ ಹಾಗೂ ಶಿಕ್ಷಕ-ವಿದ್ಯಾರ್ಥಿಗಳಲ್ಲಿ ಕಾಣಬಹುದು.

–ಸಿ.ವ.ಕು

## ಸಂವೇಗಾತ್ಮಕ ಬುದ್ಧಿಶಕ್ತಿ

ಇಂದಿನ ಪೋಷಕರು ಹಾಗೂ ಶಿಕ್ಷಣ ತಜ್ಞರು ಮಕ್ಕಳಿಗೆ ಕೇವಲ ಸಾಂಪ್ರದಾಯಿಕ ಶಾಲಾ ಪಠ್ಯಕ್ರಮವನ್ನು ಮಾತ್ರ ಕಲಿಸಲು ಇಚ್ಛಿಸದೇ, ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳಲು ಅಗತ್ಯವಾದಂತಹ ಶಿಕ್ಷಣವನ್ನು ನೀಡಲು ಬಯಸುತ್ತಿದ್ದಾರೆ. ಜಾಗತೀಕರಣದ ಪರಿಣಾಮವಾಗಿ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶಗಳು ಹಾಗೂ ಹೊಸ ಹೊಸ ವೃತ್ತಿಗಳನ್ನು ಕೈಗೊಳ್ಳಲು ಅಗತ್ಯವಾದ ಶಿಕ್ಷಣ ನೀಡಬೇಕಾಗಿದೆ. ಪ್ರಸ್ತುತ ಕುಟುಂಬಗಳಲ್ಲಿ ಹಾಗೂ ಸಮುದಾಯದ ವ್ಯಕ್ತಿಗಳಲ್ಲಿ ಭಾವನಾತ್ಮಕ ಹೊಂದಾಣಿಕೆಯಿಲ್ಲದಿರುವುದು, ಹತಾಶ ಭಾವನೆ, ಭಾವನಾತ್ಮಕ ಸಂಘರ್ಷಗಳು ಕಂಡುಬರುತ್ತವೆ. ಇಂದಿನ ಯುವ ಜನತೆ ಹಾಗೂ ಮಕ್ಕಳಲ್ಲಿ ಆಕ್ರಮಣ ಪ್ರವೃತ್ತಿ, ಖಿನ್ನತೆ, ಆತ್ಮಹತ್ಯಾ ಪ್ರಯತ್ನ, ಮಾನಸಿಕ ಉದ್ವೇಗ ಮತ್ತು ಮಾನಸಿಕ ಒತ್ತಡಗಳು ಹೆಚ್ಚಾಗಿರುವುದನ್ನು ಕಾಣುತ್ತಿದ್ದೇವೆ.

ಡೇನಿಯಲ್ ಗೋಲ್ಮನ್

ಈ ಹಿನ್ನೆಲೆಯಲ್ಲಿ ಮಕ್ಕಳು ಹಾಗೂ ಯುವಕ-ಯುವತಿಯರು ಜೀವನವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗಲು ಅಗತ್ಯವಾದಂತಹ ಸಾಮರ್ಥ್ಯಗಳನ್ನು ಬೆಳೆಸುವುದರ ಮೂಲಕ ಸರಿಯಾದ ಮಾರ್ಗದಲ್ಲಿ ಮುನ್ನಡೆಯಲು ಮಾರ್ಗದರ್ಶನ ನೀಡಬೇಕಾಗಿದೆ. ತನ್ನ ಹಾಗೂ ಇತರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದರ ಮೂಲಕ ಇತರರ ಭಾವನೆಗಳಿಗೆ ಸ್ಪಂದಿಸುವ ಹಾಗೂ ರಚನಾತ್ಮಕವಾಗಿ ವರ್ತಿಸುವ ಸಾಮರ್ಥ್ಯವನ್ನು ಬೆಳೆಸಬೇಕಾಗಿದೆ. ಇದನ್ನೇ ಸಂವೇಗಾತ್ಮಕ ಬುದ್ಧಿಶಕ್ತಿ ಎನ್ನುವರು.

### ಸಂವೇಗಾತ್ಮಕ ಬುದ್ಧಿಶಕ್ತಿಯ ಪರಿಕಲ್ಪನೆ

ಬುದ್ಧಿಶಕ್ತಿಯ ಸಿದ್ಧಾಂತಗಳಲ್ಲಿ ಬೌದ್ಧಿಕ ಹಾಗೂ ಸಂವೇಗಾತ್ಮಕ ಸಾಮರ್ಥ್ಯಗಳ ಮಧ್ಯೆ ಸ್ಪಷ್ಟವಾದ ವ್ಯತ್ಯಾಸವನ್ನು ತಮ್ಮ "ಬಹು ಬುದ್ಧಿಶಕ್ತಿ" ಸಿದ್ಧಾಂತದ ಮೂಲಕ 1983 ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ ಹೋವರ್ಡ್ ಗಾರ್ಡ್ನರ್‌ರವರು ತೋರಿಸಿಕೊಟ್ಟರು. ಸಂವೇಗಾತ್ಮಕ ಬುದ್ಧಿಶಕ್ತಿಯ ವ್ಯಾಪಕವಾದ ಸಿದ್ಧಾಂತವನ್ನು 1990ರಲ್ಲಿ ಯೇಲ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ ಪೀಟರ್ ಸಾಲೋವಿ ಮತ್ತು ನ್ಯೂ ಹ್ಯಾಂಪ್‌ಶೈರ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ ಜಾನ್ ಮೇಯರ್‌ರವರು ಮೊಟ್ಟ ಮೊದಲು ಪ್ರತಿಪಾದಿಸಿದರು. ಇವರ ನಂತರ ಅಮೇರಿಕಾದ ಮನೋವಿಜ್ಞನಿ ಮತ್ತು ಲೇಖಕರಾದ ಡೇನಿಯಲ್ ಗೋಲ್‌ಮನ್‌ರವರು 1995ರಲ್ಲಿ **"ಎಮೋಷನಲ್ ಇಂಟೆಲಿಜೆನ್ಸ್"** ಎಂಬ ಪುಸ್ತಕ ಪ್ರಕಟಿಸುವ ಮೂಲಕ ಈ ಪರಿಕಲ್ಪನೆಯನ್ನು ಹೆಚ್ಚು ಪ್ರಚುರಗೊಳಿಸಿದರು. ಇವರು ಪ್ರಕಟಿಸಿದ ಪುಸ್ತಕ ಪೀಟರ್ ಸಾಲೋವಿ ಮತ್ತು ಜಾನ್ ಮೇಯರ್‌ರವರ ಸಂವೇಗಾತ್ಮಕ ಬುದ್ಧಿಶಕ್ತಿ ಸಿದ್ಧಾಂತವನ್ನು ಆಧರಿಸಿ ರೂಪಿತವಾಗಿದೆ.

**ಜಾನ್ ಮೇಯರ್ ಮತ್ತು ಪೀಟರ್ ಸಾಲೋವಿ (1990) ಯವರು** "ತನ್ನ ಹಾಗೂ ಇತರರ ಭಾವನೆಗಳನ್ನು ನಿಯಂತ್ರಿಸುವ ಮತ್ತು ನಿರ್ವಹಣೆ ಮಾಡುವ ಸಾಮರ್ಥ್ಯ ಹಾಗೂ ತಮ್ಮ ಆಲೋಚನೆಗಳು ಮತ್ತು ಕ್ರಿಯೆಗಳನ್ನು ಮಾರ್ಗದರ್ಶಿಸಿಕೊಳ್ಳಲು ಆ ಭಾವನೆಗಳನ್ನು ಬಳಸಿಕೊಳ್ಳುವಿಕೆಯನ್ನು ಸಂವೇಗಾತ್ಮಕ ಬುದ್ಧಿಶಕ್ತಿ" ಎಂದಿದ್ದಾರೆ.

**ಡೇನಿಯಲ್ ಗೋಲ್‌ಮನ್ (1995) ರವರು** "ನಮ್ಮ ಹಾಗೂ ಇತರರ ಭಾವನೆಗಳನ್ನು ಗುರುತಿಸುವ ಸಾಮರ್ಥ್ಯ, ಸ್ವಯಂ ಪ್ರೇರಿತರಾಗುವುದು, ನಮ್ಮಲ್ಲಿ ಮತ್ತು ನಮ್ಮ ಸಂಬಂಧಗಳಲ್ಲಿ ಭಾವನೆಗಳನ್ನು ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಸಂವೇಗಾತ್ಮಕ ಬುದ್ಧಿಶಕ್ತಿ" ಎನ್ನುವರು.

ವ್ಯಕ್ತಿ ತನ್ನ ಒಳಗಿನ ಮತ್ತು ಬಾಹ್ಯ ಪರಿಸರದ ವಿವಿಧ ರೀತಿಯ ಭಾವನಾತ್ಮಕ ಪ್ರಚೋದನೆಗಳಿಗೆ ಸೂಕ್ತವಾಗಿ ಮತ್ತು ಯಶಸ್ವಿಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವೇ ಸಂವೇಗಾತ್ಮಕ ಬುದ್ಧಿಶಕ್ತಿ. ಸಂವೇಗಾತ್ಮಕ ಬುದ್ಧಿಶಕ್ತಿ ಮೂರು ಆಯಾಮಗಳನ್ನು ಒಳಗೊಂಡಿದೆ. ಅವುಗಳೆಂದರೆ, ಸಂವೇಗಾತ್ಮಕ ಸಾಮರ್ಥ್ಯ, ಸಂವೇಗಾತ್ಮಕ ಪರಿಪಕ್ವತೆ ಮತ್ತು ಸಂವೇಗಾತ್ಮಕ ಸಂವೇದನಾಶೀಲತೆ – ಈ ಅಂಶಗಳು ಮಾನವನ ವರ್ತನೆಯನ್ನು ಚತುರತೆಯಿಂದ ಗುರುತಿಸಲು, ಅರ್ಥೈಸಲು ಮತ್ತು ನಿಭಾಯಿಸಲು ವ್ಯಕ್ತಿಯನ್ನು ಪ್ರಚೋದಿಸುತ್ತವೆ.





Digitised by Bharatavani, CIIL

ಮೇಲಿನ ವ್ಯಾಖ್ಯೆಗಳನ್ನು ಗಮನಿಸಿದಾಗ ಸಂವೇಗಾತ್ಮಕ ಬುದ್ಧಿಶಕ್ತಿಯು ಬುದ್ಧಿಶಕ್ತಿ ಸೂಚ್ಯಂಕ (I.Q.) ದ ಆಧಾರದ ಮೇಲೆ ಅಳೆಯಬಹುದಾದ ಬೌದ್ಧಿಕ ಸಾಮರ್ಥ್ಯಕ್ಕಿಂತ ಭಿನ್ನವಾದುದು ಎಂದು ತಿಳಿದುಬರುತ್ತದೆ. ಆದರೆ ಇದು ಶೈಕ್ಷಣಿಕ ಬುದ್ಧಿಶಕ್ತಿಗೆ ಪೂರಕವಾದುದಾಗಿದೆ. ಅನೇಕ ಜನರು ಉತ್ತಮ ಪುಸ್ತಕ ಜ್ಞಾನವನ್ನು ಹೊಂದಿದವರಾಗಿರುತ್ತಾರೆ. ಆದರೆ ಅವರಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯ ಕೊರತೆ ಕಂಡುಬರುತ್ತದೆ. ಮತ್ತೆ ಕೆಲವರಲ್ಲಿ ಬುದ್ಧಿಶಕ್ತಿ ಸೂಚ್ಯಂಕ ಕಡಿಮೆಯಿರಬಹುದು. ಆದರೆ ಅವರಲ್ಲಿ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಬಲ್ಲ ಸಂವೇಗಾತ್ಮಕ ಬುದ್ಧಿಶಕ್ತಿ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಹೆಚ್ಚು ಬುದ್ಧಿಶಕ್ತಿಯುಳ್ಳ ಮಕ್ಕಳು ಶಾಲಾ – ಕಾಲೇಜುಗಳಲ್ಲಿ ಸಾಧನೆ ಮಾಡಬಹುದು. ಆದರೆ ಜೀವನದಲ್ಲಿ ಯಶಸ್ಸು ಸಾಧಿಸುತ್ತಾರೆಂದು ಹೇಳಲು ಸಾಧ್ಯವಿಲ್ಲ.

ಬೌದ್ಧಿಕ ಹಾಗೂ ಸಂವೇಗಾತ್ಮಕ ಬುದ್ಧಿಶಕ್ತಿಗಳು ಮೆದುಳಿನ ವಿಭಿನ್ನ ಭಾಗಗಳ ಚಟುವಟಿಕೆಯನ್ನು ಪ್ರತಿನಿಧಿಸುತ್ತವೆ. ಬೌದ್ಧಿಕ ಸಾಮರ್ಥ್ಯವು ಮೆದುಳಿನ ಮೇಲ್ಭಾಗದಲ್ಲಿ ಹೊಸದಾಗಿ ಬೆಳವಣಿಗೆಯಾಗಿರುವ ನಿಯೋ ಕಾರ್ಟೆಕ್ಸ್ (ಹೊಸ ಮಸ್ತಿಷ್ಕ) ಭಾಗದ ಕಾರ್ಯ ನಿರ್ವಹಣೆಯ ಮೇಲೆ ಅವಲಂಬಿಸಿರುತ್ತದೆ.

ಭಾವನಾತ್ಮಕ ಕೇಂದ್ರಗಳು ಮೆದುಳಿನ ತಳಭಾಗದಲ್ಲಿದ್ದು, ಸಂವೇಗಾತ್ಮಕ ಬುದ್ಧಿಶಕ್ತಿ ಬಹಳ ಹಿಂದೆಯೇ ಬೆಳವಣಿಗೆಯಾಗಿರುವ ಮೆದುಳಿನ ತಳಭಾಗದಲ್ಲಿರುವ ಸಬ್‌ಕಾರ್ಟೆಕ್ಸ್ (ಉಪಮಸ್ತಿಷ್ಕ) ಭಾಗದ ಕಾರ್ಯ ನಿರ್ವಹಣೆಯ ಮೇಲೆ ಅವಲಂಬಿಸಿರುತ್ತದೆ.

ಜಾನ್ ಮೇಯರ್ ಮತ್ತು ಪೀಟರ್ ಸಾಲೋವಿಯವರ ಪ್ರಕಾರ ಸಂವೇಗಾತ್ಮಕ ಬುದ್ಧಿಶಕ್ತಿ ನಾಲ್ಕು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ;

| | | |
|---|---|---|
| 1) | ಸಂವೇಗಗಳನ್ನು ಗುರುತಿಸುವಿಕೆ | ವ್ಯಕ್ತಿ ತನ್ನ ಹಾಗೂ ಇತರರ ಭಾವನೆಗಳನ್ನು ಗುರುತಿಸುವ ಸಾಮರ್ಥ್ಯ |
| 2) | ಸಂವೇಗಗಳ ಬಳಕೆ | ತನ್ನ ಆಲೋಚನೆಗಳು ಹಾಗೂ ನಿರ್ಧಾರಗಳಲ್ಲಿ ಸಂವೇಗಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಿಕೆ |
| 3) | ಸಂವೇಗಗಳನ್ನು ಅರ್ಥಮಾಡಿಕೊಳ್ಳುವಿಕೆ | ಸಂವೇಗಗಳ ಜ್ಞಾನ, ಒಂದು ಸಂವೇಗ ಇನ್ನೊಂದು ಸಂವೇಗವಾಗಿ ಬದಲಾಗುವುದನ್ನು ಗುರುತಿಸುವಿಕೆ ಹಾಗೂ ಗುರುತಿಸುವಿಕೆಯ ಸಾಮರ್ಥ್ಯ |
| 4) | ಸಂವೇಗಗಳ ನಿರ್ವಹಣೆ | ಭಾವೋದ್ವೇಗಗಳ ಸ್ವಯಂ ನಿಯಂತ್ರಣ ಮಾಡಿಕೊಳ್ಳುವ ಸಾಮರ್ಥ್ಯ ಮತ್ತು ಇತರರೊಂದಿಗೆ ಹೊಂದಿಕೊಳ್ಳುವ ಸಾಮರ್ಥ್ಯ |

**ಸಂವೇಗಾತ್ಮಕ ಬುದ್ಧಿಶಕ್ತಿಯ ಮೂಲ ಸಾಮರ್ಥ್ಯಗಳು**

ಡೇನಿಯಲ್ ಗೋಲ್‌ಮನ್‌ರವರು ತಮ್ಮ ಅಧ್ಯಯನದಲ್ಲಿ ಸಂವೇಗಾತ್ಮಕ ಹಾಗೂ ಸಾಮಾಜಿಕ ಸಾಮರ್ಥ್ಯಗಳು ಹೇಗೆ ವೃತ್ತಿ ಜೀವನದಲ್ಲಿ ನೆರವಾಗುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಮೇಯರ್ ಮತ್ತು ಸಾಲೋವಿಯವರ ಸಂವೇಗಾತ್ಮಕ ಬುದ್ಧಿಶಕ್ತಿಯ ಸಿದ್ಧಾಂತದಲ್ಲಿ ಗೋಲ್‌ಮನ್‌ರವರು ಐದು ಮೂಲ ಸಂವೇಗಾತ್ಮಕ ಹಾಗೂ ಸಾಮಾಜಿಕ ಸಾಮರ್ಥ್ಯಗಳನ್ನು ಗುರುತಿಸಿರುತ್ತಾರೆ. ಅವುಗಳೆಂದರೆ:

1) **ಸ್ವಯಂ ಅರಿವು:** ಪ್ರತಿ ಕ್ಷಣದಲ್ಲಿ ಉಂಟಾಗುವ ಭಾವನೆಗಳನ್ನು ತಿಳಿಯುವುದು, ನಿರ್ಧಾರ ಕೈಗೊಳ್ಳುವಲ್ಲಿ ಆದ್ಯತೆಗಳಿಗನುಗುಣವಾಗಿ ಸಾಮರ್ಥ್ಯಗಳ ಬಳಕೆ, ತಮ್ಮ ಸಾಮರ್ಥ್ಯಗಳ ನೈಜವಾದ ಅಳತೆ ಮತ್ತು ಆತ್ಮವಿಶ್ವಾಸ ಹೊಂದಿರುವಿಕೆಯನ್ನು ಸ್ವಯಂ ಅರಿವು ಎನ್ನುವರು.

2) **ಸ್ವಯಂ ನಿಯಂತ್ರಣ:** ನಾವು ಕೈಗೊಂಡಿರುವ ಕಾರ್ಯದ ಸಾಧನೆಗಾಗಿ ಸಂವೇಗಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಿಕೆ, ಪ್ರಜ್ಞಾಪೂರ್ವಕವಾಗಿರುವುದು ಮತ್ತು ಗುರಿ ಸಾಧನೆಯಾಗುವವರೆಗೆ ತಾಳ್ಮೆ ಬೆಳೆಸಿಕೊಳ್ಳುವುದು; ಭಾವನಾತ್ಮಕ ವಿಚಲನೆಯಿಂದ ಚೇತರಿಸಿಕೊಳ್ಳುವುದನ್ನು ಸ್ವಯಂ ನಿಯಂತ್ರಣ ಎನ್ನುವರು.

3) **ಸ್ವಯಂ ಪ್ರೇರಣೆ:** ನಮ್ಮ ಗುರಿಗಳ ಸಾಧನೆಗಳ ಕಡೆಗೆ ಸಾಗಲು ಮತ್ತು ಮಾರ್ಗದರ್ಶನ ಪಡೆಯಲು ನಮ್ಮ ಆದ್ಯತೆಗಳನ್ನು ಬಳಸಿಕೊಳ್ಳುವುದು. ಸ್ವಯಂ ಪ್ರೇರಿತರಾಗುವುದು ಮತ್ತು ಸಾಧನೆಯನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸುವುದು, ಹಿಂಜರಿತ, ಸೋಲು ಹಾಗೂ ಹತಾಶೆಗಳುಂಟಾದಾಗ ಅವುಗಳನ್ನು ತಾಳ್ಮೆಯಿಂದ ಎದುರಿಸುವ ಸಾಮರ್ಥ್ಯಗಳಿಸಿಕೊಳ್ಳುವಿಕೆಯನ್ನು ಸ್ವಯಂ ಪ್ರೇರಣೆ ಎನ್ನುವರು.

4) **ಅನುಭೂತಿ:** ಇದು ಇತರರ ಭಾವನೆಗಳಿಗೆ ಸ್ಪಂದಿಸುವುದು. ಅವರ ದೃಷ್ಟಿಕೋನವನ್ನು ಪರಿಗಣಿಸುವುದು, ವಿಭಿನ್ನ ಮನೋಭಾವದ ವ್ಯಕ್ತಿಗಳೊಂದಿಗೆ ಬಾಂಧವ್ಯ ರೂಪಿಸಿಕೊಳ್ಳುವಿಕೆ ಮತ್ತು ಹೊಂದಾಣಿಕೆ ಮಾಡಿಕೊಳ್ಳುವುದಾಗಿದೆ.

5) **ಸಾಮಾಜಿಕ ಕೌಶಲಗಳು :** ಸಾಮಾಜಿಕ ಸನ್ನಿವೇಶಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು ಅದಕ್ಕನುಗುಣವಾಗಿ ನಮ್ಮ ಸಾಮಾಜಿಕ ಸಂಬಂಧಗಳಲ್ಲಿ ಭಾವನೆಗಳನ್ನು ಬಳಸಿಕೊಳ್ಳುವಿಕೆ, ಇತರರೊಂದಿಗೆ ಅಂತರ್‌ಕ್ರಿಯಿಸುವಿಕೆ, ಸಹಕಾರ ಮನೋಭಾವ ಹಾಗೂ ಗುಂಪು ಕಾರ್ಯವನ್ನು ಉತ್ತೇಜಿಸುವ ಸಲುವಾಗಿ ಸಾಮಾಜಿಕ ಕೌಶಲಗಳನ್ನು ಇತರರ ಮನ ಒಪ್ಪಿಸಲು, ಕಲಹಗಳನ್ನು ಬಗೆಹರಿಸಲು, ಸಂಧಾನಮಾಡಲು ಬಳಸಿಕೊಳ್ಳಬಹುದಾಗಿದೆ.

**ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅಳೆಯುವಿಕೆ**

ಸಂವೇಗಾತ್ಮಕ ಸೂಚ್ಯಂಕ (E.Q) ವು ವ್ಯಕ್ತಿಯು ಜೀವನದ ನಿರ್ದಿಷ್ಟ ಕಾಲದಲ್ಲಿ ಹೊಂದಿರುವ ಸಂವೇಗಾತ್ಮಕ ಬುದ್ಧಿಶಕ್ತಿಯ ಸಾಪೇಕ್ಷ ಅಳತೆಯಾಗಿದೆ.

ಬುದ್ಧಿಶಕ್ತಿ ಸೂಚ್ಯಂಕ (I.Q) ವನ್ನು ಅಳೆಯಲು ಇರುವ ಬುದ್ಧಿಶಕ್ತಿ ಪರೀಕ್ಷಣಗಳಂತೆ ನಿಖರವಾಗಿ ಸಂವೇಗಾತ್ಮಕ ಸೂಚ್ಯಂಕ (E.Q) ವನ್ನು ಅಳೆಯುವಂತಹ ಸಮಂಜಸವಾದ ಹಾಗೂ ವಿಶ್ವಸನೀಯವಾದ ಮಾಪನಗಳು ಹೆಚ್ಚಾಗಿ ದೊರೆಯುತ್ತಿಲ್ಲ. ಆದರೂ ಸಹ ವ್ಯಕ್ತಿಯ ಜೀವನದ ಹಲವಾರು ಸನ್ನಿವೇಶಗಳಲ್ಲಿ ಅವರ ಸಂವೇಗಾತ್ಮಕ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಸ್ವಯಂ ಮೌಲ್ಯಮಾಪನದ ಮೂಲಕ ತಮ್ಮ ಸಂವೇಗಾತ್ಮಕ ಸಾಮರ್ಥ್ಯಗಳನ್ನು ಅರಿತುಕೊಳ್ಳಬಹುದು. ತಮ್ಮ ಭಾವನೆಗಳನ್ನು ತಾವು ಅರ್ಥಮಾಡಿಕೊಳ್ಳದವರು, ಸ್ವಯಂ ಅರಿವು

Digitised by Bharatavani, CIIL

# ಸಂವೇಗಾತ್ಮಕ ಬುದ್ಧಿಶಕ್ತಿಯ ಸಾಮರ್ಥ್ಯಗಳು

## ವೈಯಕ್ತಿಕ ಸಾಮರ್ಥ್ಯಗಳು

**ಸ್ವಯಂ ಅರಿವು :** ತನ್ನ ಆಂತರಿಕ ಸ್ಥಿತಿ, ಆಯ್ಕೆಗಳು, ಸಂಪನ್ಮೂಲಗಳು ಹಾಗೂ ಒಳನೋಟಗಳನ್ನೊಳಗೊಂಡಿದೆ.

**ಸಂವೇಗಾತ್ಮಕ ಅರಿವು :** ತನ್ನ ಸಂವೇಗಗಳು (ಭಾವನೆಗಳು) ಮತ್ತು ಅವುಗಳ ಪರಿಣಾಮಗಳನ್ನು ಗುರ್ತಿಸುವುದು

**ನಿಖರವಾದ ಸ್ವಯಂ ಮಾಪನ :** ತನ್ನ ಸಾಮರ್ಥ್ಯಗಳು ಹಾಗೂ ಮಿತಿಗಳನ್ನು ಅರ್ಥಮಾಡಿಕೊಳ್ಳುವುದು

**ಆತ್ಮ ವಿಶ್ವಾಸ :** ತನ್ನ ಸಾಮರ್ಥ್ಯಗಳಲ್ಲಿರುವ ದೃಢವಿಶ್ವಾಸ

**ಸ್ವಯಂ ನಿಯಂತ್ರಣ :** ತನ್ನ ಆಂತರಿಕ ಸ್ಥಿತಿ, ಒಲವುಗಳು ಮತ್ತು ಸಂಪನ್ಮೂಲಗಳ ನಿರ್ವಹಣೆಯನ್ನೊಳಗೊಂಡಿದೆ

**ಸ್ವಯಂ ನಿಯಂತ್ರಣ :** ವಿಚಲಿತ ಭಾವನೆಗಳನ್ನು ಮತ್ತು ವರ್ತನೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಸಾಮರ್ಥ್ಯ

**ವಿಶ್ವಾಸಾರ್ಹತೆ :** ಪ್ರಾಮಾಣಿಕತೆ ಹಾಗೂ ಒಗ್ಗಟ್ಟಿನ ಭಾವನೆ ಕಾಯ್ದುಕೊಳ್ಳುವುದು.

**ಪ್ರಜ್ಞಾ ಪೂರ್ವಕ ವರ್ತನೆ :** ವೈಯಕ್ತಿಕ ಕಾರ್ಯದಕ್ಷತೆಯ ಜವಾಬ್ದಾರಿ ತೆಗೆದುಕೊಳ್ಳುವುದು.

**ಹೊಂದಾಣಿಕೆ :** ಬದಲಾವಣೆಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯ.

**ನಾವೀನ್ಯತೆ :** ಹೊಸವಿಚಾರಗಳಿಗೆ, ಹೊಸ ವಿಧಾನಗಳಿಗೆ ಹಾಗೂ ಹೊಸ ಮಾಹಿತಿಗೆ ಹೊಂದಿಕೊಳ್ಳುವಿಕೆ

**ಅಭಿಪ್ರೇರಣೆ :** ಗುರಿ ತಲುಪಲು ಪೂರಕವಾಗುವ ಅಥವಾ ಮಾರ್ಗದರ್ಶನ ನೀಡುವ ಭಾವನಾತ್ಮಕ ವರ್ತನೆಗಳು

**ಸಾಧನೆಯ ಬಯಕೆ :** ಸಾಧನೆಯನ್ನು ಸುಧಾರಿಸಿಕೊಳ್ಳಲು ಅಥವಾ ಶ್ರೇಷ್ಠತೆಯ ಮಟ್ಟ ತಲುಪಲು ಇರುವ ಪ್ರೇರಣೆ

**ಬದ್ಧತೆ :** ಗುಂಪಿನ ಅಥವಾ ಸಂಘಟನೆಯ ಉದ್ದೇಶಗಳಿಗೆ ಬದ್ಧರಾಗಿರುವುದು

**ಉಪಕ್ರಮಿಸುವಿಕೆ :** ಅವಕಾಶಗಳು ದೊರೆತಾಗ ಪ್ರತಿಕ್ರಿಯಿಸಲು ಸಿದ್ಧನಾಗಿರುವುದು.

**ಆಶಾವಾದ :** ಯಾವುದೇ ತೊಂದರೆಗಳು ಅಥವಾ ಹಿನ್ನಡೆಗಳು ಉಂಟಾದರೂ ಗುರಿಯನ್ನು ತಲುಪುವ ವಿಶ್ವಾಸ ಮತ್ತು ತಾಳ್ಮೆ ಹೊಂದಿರುವುದು.

## ಸಾಮಾಜಿಕ ಸಾಮರ್ಥ್ಯಗಳು

**ಅನುಭೂತಿ :** ಇತರರ ಭಾವನೆಗಳು, ಅಗತ್ಯಗಳು ಹಾಗೂ ಆಸಕ್ತಿಗಳ ಅರಿವು

**ಇತರರನ್ನು ಅರ್ಥಮಾಡಿಕೊಳ್ಳುವಿಕೆ :** ಇತರರ ಭಾವನೆಗಳು ಮತ್ತು ಒಲವುಗಳನ್ನು ಗ್ರಹಿಸುವುದು ಮತ್ತು ಅವರಿಗೆ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿ ತೋರುವುದು.

**ಇತರರನ್ನು ವಿಕಸನಗೊಳಿಸುವುದು :** ಇತರರ ಬೆಳವಣಿಗೆಯ ಅಗತ್ಯತೆಗಳನ್ನು ಗ್ರಹಿಸುವುದು ಮತ್ತು ಅವರ ಸಾಮರ್ಥ್ಯಗಳನ್ನು ಅರಿಯುವುದು.

**ಸೇವಾ ಮನೋಭಾವ :** ಗ್ರಾಹಕರ ಅಗತ್ಯತೆಗಳನ್ನು ನಿರೀಕ್ಷಿಸುವುದು ಗುರ್ತಿಸುವುದು ಮತ್ತು ಅವುಗಳನ್ನು ಪೂರೈಸುವುದು

**ವೈವಿಧ್ಯತೆಯನ್ನು ಸಾಧಿಸುವುದು :** ವಿವಿಧ ರೀತಿಯ ಜನರ ಮೂಲಕ ಅವಕಾಶಗಳನ್ನು ಹೆಚ್ಚಿಸುವುದು

**ರಾಜಕೀಯ ಪ್ರಜ್ಞೆ :** ಗುಂಪಿನ ಭಾವನಾತ್ಮಕ ವರ್ತನೆಗಳು ಮತ್ತು ಅಧಿಕಾರದ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ

**ಸಾಮಾಜಿಕ ಕೌಶಲಗಳು :** ಇತರರಲ್ಲಿ ಅಪೇಕ್ಷಿತ ಅನುಕ್ರಿಯೆಗಳನ್ನು ಬೆಳೆಸುವಲ್ಲಿನ ಚತುರತೆ

**ಪ್ರಭಾವ :** ಇತರರ ಮನ ಒಲಿಸಲು ಅಥವಾ ಒಡಂಬಡಿಸಲು ಪರಿಣಾಮಕಾರಿ ತಂತ್ರಗಳ ಬಳಕೆ

**ಸಂವಹನ :** ಇತರರ ಮಾತುಗಳನ್ನು ಕೇಳುವುದು ಮತ್ತು ಒಪ್ಪುವಂತಹ ಸಂದೇಶ ಕಳಿಸುವುದು.

**ಘರ್ಷಣೆಯ ನಿರ್ವಹಣೆ :** ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವಿಕೆ ಮತ್ತು ಒಮ್ಮತಕ್ಕೆ ಬರುವಂತೆ ಮಾಡುವುದು

**ನಾಯಕತ್ವ :** ವ್ಯಕ್ತಿಗಳು ಮತ್ತು ಸಮೂಹಗಳಿಗೆ ಮಾರ್ಗದರ್ಶನ ನೀಡುವಿಕೆ ಮತ್ತು ಉತ್ತೇಜಿಸುವಿಕೆ

**ಬದಲಾವಣೆಯ ವರ್ಧನೆ :** ಬದಲಾವಣೆ ತರುವಂತಹ ಅಥವಾ ಅದನ್ನು ನಿರ್ವಹಿಸುವ ಸಾಮರ್ಥ್ಯ

**ಸಂಬಂಧಗಳನ್ನು ಬೆಳೆಸುವಿಕೆ :** ಉತ್ತಮ ಸಂಬಂಧಗಳನ್ನು ಕಾಪಾಡಿಕೊಳ್ಳುವಿಕೆ

**ಜೊತೆಗೂಡಿ ಕಾರ್ಯನಿರ್ವಹಿಸುವಿಕೆ ಮತ್ತು ಸಹಕಾರ** ಗುರಿಗಳ ಸಾಧನೆಗೆ ಇತರರ ಜೊತೆಗೂಡಿ ಕಾರ್ಯನಿರ್ವಹಿಸುವಿಕೆ.

**ತಂಡ ಸಾಮರ್ಥ್ಯಗಳು :** ಸಮೂಹ ಗುರಿಗಳನ್ನು ತಲುಪಲು ತಂಡ ಸ್ಫೂರ್ತಿಯನ್ನು ಸೃಜಿಸುವಿಕೆ.

Digitised by Bharatavani, CIIL

ಇಲ್ಲದವರು ತಮ್ಮ ಸಂವೇಗಾತ್ಮಕ ಸಾಮರ್ಥ್ಯವನ್ನು ಅರಿತುಕೊಳ್ಳಲು ಸಾಧ್ಯವಾಗದೇ ಹೋಗಬಹುದು.

ಸಂವೇಗಾತ್ಮಕ ಸೂಚ್ಯಂಕ (**E.Q**) ದ ಆಧಾರದ ಮೇಲೆ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅಳೆಯುವಂತಹ ಹಲವಾರು ಪ್ರಯತ್ನಗಳು ನಡೆದಿವೆ. ಇವುಗಳಲ್ಲಿ ಪ್ರಮುಖವಾದ ಪರೀಕ್ಷಣಗಳೆಂದರೆ,

- ಮೇಯರ್ – ಸಾಲೋವಿ ಎಮೋಷನಲ್ ಇಂಟೆಲಿಜೆನ್ಸ್ ಟೆಸ್ಟ್
- ಮಲ್ಟಿ ಫ್ಯಾಕ್ಟರ್ ಎಮೋಷನಲ್ ಇಂಟಲಿಜೆನ್ಸ್ ಟೆಸ್ಟ್
- ಎಮೋಷನಲ್ ಕಾಂಪಿಟೆನ್ಸ್ ಇನ್ವೆಂಟರಿ 360 [**EQI-360**]
- ರೇವನ್ ಬಾರ್ ಆನ್ ಎಮೋಷನಲ್ ಕೊಟೇಷನ್ ಇನ್ವೆಂಟರಿ [**EQ-I**]

ಡೇನಿಯಲ್ ಗೋಲ್‌ಮನ್‌ರವರ ಎಮೋಷನಲ್ ಕಾಂಪಿಟೆನ್ಸ್ ಇನ್ವೆಂಟರಿ ಪರೀಕ್ಷಣದಿಂದ ಒಂದು ಪರೀಕ್ಷಾಂಶವನ್ನು ಆಯ್ದು ಉದಾಹರಣೆಗಾಗಿ ನೀಡಲಾಗಿದೆ.

ಉದಾ: ನಾಲ್ಕು ವರ್ಷದ ಮಕ್ಕಳ ಒಂದು ಗುಂಪನ್ನು ತಾವು ಉದ್ಯಾನವನಕ್ಕೆ ಕರೆದುಕೊಂಡು ಹೋಗಿರುತ್ತೀರಿ. ಅಲ್ಲಿ ಒಂದು ಮಗು ತನ್ನ ಜೊತೆಗೆ ಯಾವ ಮಕ್ಕಳೂ ಆಡಲು ಬರದಿದ್ದರಿಂದ ಅಳುತ್ತಾ ನಿಂತಿರುತ್ತದೆ. ಇಂತಹ ಸನ್ನಿವೇಶದಲ್ಲಿ ನೀವೇನು ಮಾಡುವಿರಿ?

ಅ) ಆ ಸನ್ನಿವೇಶದಿಂದ ದೂರ ಉಳಿಯುವುದು ಹಾಗೂ ಮಕ್ಕಳೇ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಬಿಡುವುದು

ಆ) ಆ ಮಗುವಿನೊಂದಿಗೆ ಮಾತನಾಡಿ ಬೇರೆ ಮಕ್ಕಳನ್ನು ತನ್ನೊಡನೆ ಆಟವಾಡಲು ಆಕರ್ಷಿಸುವ ಮಾರ್ಗವನ್ನು ಮಗುವಿಗೆ ತಿಳಿಸುವುದು

ಇ) ಅಳದಿರುವಂತೆ ಮಗುವಿಗೆ ನಯವಾಗಿ ತಿಳಿಸುವುದು

ಈ) ಬೇರೆ ಆಟಗಳಲ್ಲಿ ಪಾಲ್ಗೊಳ್ಳುವಂತೆ ಮಗುವಿನ ಗಮನ ಬದಲಾಯಿಸುವುದು.

ಭಾರತದಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅಳೆಯಲು ಹಲವಾರು ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

1) ಶೈಲೇಂದ್ರ ಸಿಂಗ್‌ರವರ ಸಂವೇಗಾತ್ಮಕ ಬುದ್ಧಿಶಕ್ತಿ ಪರೀಕ್ಷೆ – ಡಾ॥ ಶೈಲೇಂದ್ರ ಸಿಂಗ್

2) ಮಂಗಲ್‌ರವರ ಸಂವೇಗಾತ್ಮಕ ಬುದ್ಧಿಶಕ್ತಿ ತಪಶೀಲುಪಟ್ಟಿ – ಡಾ॥ ಎಸ್.ಕೆ. ಮಂಗಲ್

3) ಸಂವೇಗಾತ್ಮಕ ಬುದ್ಧಿಶಕ್ತಿಯ ಮಾಪನ – ಅನುಕೂಲ್ ಹೈಡ್ ಮತು ಸಂಜೋತ್

ಶೈಲೇಂದ್ರಸಿಂಗ್‌ರವರು ಸಂವೇಗಾತ್ಮಕ ಬುದ್ಧಿಶಕ್ತಿಯ ಐದು ಸಾಮರ್ಥ್ಯಗಳನ್ನು ಅಳೆಯುವಂತಹ ಮಾಪನವನ್ನು ರೂಪಿಸಿರುತ್ತಾರೆ. ಅದರ ಪರೀಕ್ಷಾಂಶಗಳು ಈ ಕೆಳಕಂಡಂತಿವೆ.

| | | SA | A | N | DA | SDA* |
|---|---|---|---|---|---|---|
| 1) | **ಸ್ವಯಂ ಅರಿವು** | | | | | |
| | 1. ನಾನು ನನ್ನ ಭಾವನೆಗಳನ್ನು ಗುರುತಿಸಲು ಸಮರ್ಥನಿದ್ದೇನೆ. | ☐ | ☐ | ☐ | ☐ | ☐ |
| | 2. ನನಗೆ ನನ್ನ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಬಗ್ಗೆ ಅರಿವಿದೆ | ☐ | ☐ | ☐ | ☐ | ☐ |
| 2) | **ಸ್ವಯಂ ನಿಯಂತ್ರಣ** | | | | | |
| | 1. ನಾನು ಸಮಸ್ಯೆಯೊಂದನ್ನು ಎದುರಿಸುವಾಗ ಅದನ್ನು ಪರಿಹರಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಯೋಚಿಸಬಲ್ಲೆ. | ☐ | ☐ | ☐ | ☐ | ☐ |
| | 2. ಹೊಸ ಸವಾಲುಗಳು, ಸಮಸ್ಯೆಗಳು ಹಾಗೂ ಮಾಹಿತಿಗಳಿಗೆ ನಾನು ಬಹುಬೇಗ ಹೊಂದಿಕೊಳ್ಳುತ್ತೇನೆ. | ☐ | ☐ | ☐ | ☐ | ☐ |
| 3) | **ಅಭಿಪ್ರೇರಣೆ** | | | | | |
| | 1. ನನ್ನ ಕಾರ್ಯನಿರ್ವಹಣೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ನಾನು ಸದಾ ಪ್ರಯತ್ನಿಸುತ್ತೇನೆ. | ☐ | ☐ | ☐ | ☐ | ☐ |
| 4) | **ಅನುಭೂತಿ** | | | | | |
| | ಜನರು ತಮ್ಮ ಭಾವನೆಗಳನ್ನು ಹೇಳದೆ ಇದ್ದರೂ ಸಹ ಅವುಗಳನ್ನು ಅರಿತುಕೊಳ್ಳಬಲ್ಲೆ | ☐ | ☐ | ☐ | ☐ | ☐ |
| 5) | **ಸಾಮಾಜಿಕ ಕೌಶಲಗಳು** | | | | | |
| | 1. ನಾನು ಜನರಲ್ಲಿ ಉತ್ಸಾಹ ಮೂಡಿಸುವಲ್ಲಿ ಸಮರ್ಥನಾಗಿದ್ದೇನೆ. | ☐ | ☐ | ☐ | ☐ | ☐ |
| | 2. ನಾನು ತಂಡದಲ್ಲಿ ಅನನ್ಯತೆಯನ್ನು ನಿರ್ಮಿಸಿ ಸದಸ್ಯರನ್ನು ತಂಡದ ಅಭಿವೃದ್ಧಿಗಾಗಿ ಬದ್ಧರಾಗಿರುವಂತೆ ಮಾಡುತ್ತೇನೆ. | ☐ | ☐ | ☐ | ☐ | ☐ |

* SA–ಪ್ರಬಲವಾಗಿ ಒಪ್ಪುತ್ತೇನೆ, A–ಒಪ್ಪುತ್ತೇನೆ, N–ತಟಸ್ಥ, DA–ಒಪ್ಪುವುದಿಲ್ಲ, SDA–ಪ್ರಬಲವಾಗಿ ಒಪ್ಪುವುದಿಲ್ಲ.

Digitised by Bharatavani, CIIL

**ಸಂವೇಗಾತ್ಮಕ ಬುದ್ಧಿಶಕ್ತಿ ಹೆಚ್ಚಿಸಲು ಕೈಗೊಳ್ಳಬಹುದಾದ ಶೈಕ್ಷಣಿಕ ಕ್ರಮಗಳು**

ಸಂವೇಗಾತ್ಮಕ ಬುದ್ಧಿಶಕ್ತಿ ಪರಿಕಲ್ಪನೆಯ ಬಳಕೆ ಮನೋವೈಜ್ಞಾನಿಕ ಸಂಶೋಧನೆ ಹಾಗೂ ಚಿಕಿತ್ಸಾ ಕ್ಷೇತ್ರಗಳ ಹೊರಗೂ ಹರಡಿರುವುದನ್ನು ಕಾಣಬಹುದಾಗಿದೆ. ವೃತ್ತಿಪರ, ಶೈಕ್ಷಣಿಕ ಹಾಗೂ ಸಮುದಾಯದ ಸಂಸ್ಥೆಗಳು ಸಂವೇಗಾತ್ಮಕ ಬುದ್ಧಿಶಕ್ತಿಯ ತತ್ವಗಳನ್ನು ತಮ್ಮ ಸಂಸ್ಥೆಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು, ಉತ್ತಮ ಬಾಂಧವ್ಯಗಳನ್ನು ಬೆಳೆಸಲು, ಉತ್ತಮ ಫಲಿತಾಂಶ ಪಡೆಯಲು ಮತ್ತು ವೈಜ್ಞಾನಿಕ ತೃಪ್ತಿಯನ್ನು ಹೆಚ್ಚಿಸಲು ಅಳವಡಿಸಿಕೊಂಡಿವೆ.

**ಶಿಕ್ಷಣದ ಮೂಲಕ ಮಕ್ಕಳಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೆಚ್ಚಿಸಬಹುದಾದ ಕ್ರಮಗಳೆಂದರೆ**

- ತರಗತಿಯಲ್ಲಿ ಯಾವುದೇ ಕಲಿಕೆಯ ಸಂದರ್ಭದಲ್ಲಿ ಉತ್ತಮ ಸಾಮಾಜಿಕ – ಭಾವನಾತ್ಮಕ ವಾತಾವರಣವಿರುವಂತೆ ನೋಡಿಕೊಳ್ಳಬೇಕು. ಶಿಕ್ಷಕ ತರಗತಿಯ ಎಲ್ಲಾ ಮಕ್ಕಳೊಡನೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕು ಮತ್ತು ಅವರ ಸಕಾರಾತ್ಮಕ ವರ್ತನೆಗಳನ್ನು ಉತ್ತೇಜಿಸಬೇಕು. ತರಗತಿಯಲ್ಲಿ ಉತ್ತಮ ಶಿಸ್ತಿನ ನೀತಿ – ನಿಯಮಗಳೊಂದಿಗೆ ಸ್ವಯಂ ಶಿಸ್ತನ್ನು ಬೆಳೆಸಲು ಪ್ರಯತ್ನಿಸಬೇಕು. ಮಕ್ಕಳ ಶಾಲೆಯ ಹೊರಗಿನ ಜೀವನದ ಬಗ್ಗೆಯೂ ಆಸಕ್ತಿವಹಿಸಬೇಕು.
- **ಜೀವನ ಕೌಶಲಗಳ ಶಿಕ್ಷಣ:** ಶಿಕ್ಷಣದ ಪ್ರತಿಯೊಂದು ಹಂತದಲ್ಲಿಯೂ ಸಹ ಸಾಮಾಜಿಕ – ಭಾವನಾತ್ಮಕ ಕಲಿಕೆಯನ್ನು ಉತ್ತೇಜಿಸುವಂತಹ ಜೀವನ ಕೌಶಲಗಳನ್ನು ಬೆಳೆಸಬೇಕು. ಶಾಲೆ ಮತ್ತು ಶಾಲೆಯ ಹೊರಗೆ ಅವರ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಮಾರ್ಗದರ್ಶನ ಮತ್ತು ನಿರ್ದೇಶನ ನೀಡುವಂತಹ ಕೌಶಲಗಳನ್ನು ಬೆಳೆಸಬೇಕು.

ಜೀವನ ಕೌಶಲಗಳೆಂದರೆ ವ್ಯಕ್ತಿಯ ಹೊಂದಾಣಿಕೆ ಮತ್ತು ಒಳ್ಳೆಯ ನಡವಳಿಕೆಯಿಂದ ದಿನ ನಿತ್ಯದ ಜೀವನದ ಬೇಡಿಕೆಗಳು ಮತ್ತು ಕಷ್ಟ ಸುಖಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಸಾಮರ್ಥ್ಯ (ವಿಶ್ವ ಆರೋಗ್ಯ ಸಂಸ್ಥೆ 1997).

ಮಕ್ಕಳಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೆಚ್ಚಿಸಬೇಕಾದರೆ ವಿಶ್ವ ಆರೋಗ್ಯ ಸಂಸ್ಥೆಯವರು ಗುರುತಿಸಿರುವ ಹತ್ತು ಜೀವನ ಕೌಶಲಗಳನ್ನು ಬೆಳೆಸಬೇಕು. ಅವುಗಳೆಂದರೆ;

- ವಿಮರ್ಶಾತ್ಮಕ ಆಲೋಚನೆ
- ಸೃಜನಾತ್ಮಕ ಅಥವಾ ಕ್ರಿಯಾತ್ಮಕ ಆಲೋಚನೆ
- ನಿರ್ಧಾರ ಕೈಗೊಳ್ಳುವ ಕೌಶಲ
- ಸಮಸ್ಯಾ ನಿರ್ವಹಣಾ ಕೌಶಲ
- ಅಂತರ್ ವ್ಯಕ್ತಿ ಸಂಬಂಧ ಅಥವಾ ಇತರರೊಂದಿಗೆ ಹೊಂದಾಣಿಕೆ
- ಭಾವನೆಗಳ ನಿಯಂತ್ರಣ
- ಪರಿಣಾಮಕಾರಿ ಸಂವಹನ
- ಆತ್ಮ ಪ್ರಜ್ಞೆ
- ಒತ್ತಡಗಳ ನಿರ್ವಹಣೆ
- ಅನುಭೂತಿ

ಜೀವನ ಕೌಶಲಗಳು ವಿವಿಧ ವ್ಯಾಪಕವಾದ ಆಲೋಚನೆ, ನಡವಳಿಕೆ ಮತ್ತು ಭಾವನೆಗಳನ್ನು ಸವಿಸ್ತಾರವಾಗಿ ಒಳಗೊಂಡಿವೆ ಎಂದು ವ್ಯಕ್ತವಾಗಿದೆ. ಇವುಗಳ ಅಂತಿಮ ಗುರಿಯು ಆತ್ಮಪ್ರಜ್ಞೆ, ಆತ್ಮಗೌರವ, ಇತರರನ್ನು ಒಪ್ಪಿಕೊಳ್ಳುವುದು ಮತ್ತು ಆರೋಗ್ಯಕರ ಜೀವನ ನಡೆಸುವುದು ಮುಂತಾದವುಗಳನ್ನು ಬೆಳೆಸುವುದಾಗಿದೆ. ಇಂತಹ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಮೂಲಕ ಅವರ ಸಂವೇಗಾತ್ಮಕ ಸಾಮರ್ಥ್ಯವನ್ನು ಬೆಳೆಸಬಹುದಾಗಿದೆ.

- **ಮಾನಸಿಕ ಒತ್ತಡ ನಿರ್ವಹಣೆಯ ತರಬೇತಿ:** ಇಂದಿನ ದಿನಗಳಲ್ಲಿ ನಮ್ಮ ಭಾವನೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದೇ ಕಷ್ಟದ ಕೆಲಸವಾಗಿದೆ. ನಮ್ಮ ಮಕ್ಕಳು ಬಾಳುತ್ತಿರುವಂತಹ ಈ ಸಮಸ್ಯಾಭರಿತ ಪ್ರಪಂಚದಲ್ಲಿ ಕೋಪ, ಭಯ, ಉದ್ವೇಗ, ಹತಾಶೆ, ಮಾನಸಿಕ ಘರ್ಷಣೆ, ಮಾನಸಿಕ ಒತ್ತಡ ಇವುಗಳು ಹೆಚ್ಚಾಗಿ ಮಕ್ಕಳ ಶೈಕ್ಷಣಿಕ ಹಾಗೂ ಬೌದ್ಧಿಕ ಹಿನ್ನಡೆಗೆ ಕಾರಣವಾಗಿದೆ. ಇಂತಹ ಸಮಸ್ಯೆಗಳಿಂದ ಮಕ್ಕಳು ಹೊರಬರಬೇಕಾದರೆ ಅವರಿಗೆ ಮಾನಸಿಕ ಒತ್ತಡ ನಿರ್ವಹಣೆಯ ತರಬೇತಿಯ ಅಗತ್ಯಯಿದೆ. ಇವುಗಳಲ್ಲಿ ಪ್ರಮುಖವಾಗಿ ಸ್ನಾಯು ವಿರಮಿಸುವಿಕೆ, ಆಳವಾದ ಉಸಿರಾಟ ಕ್ರಿಯೆ, ಯೋಗ ಶಿಕ್ಷಣ, ಧ್ಯಾನ ಮುಂತಾದ ಕ್ರಿಯಾತ್ಮಕ ಅಭ್ಯಾಸಗಳಲ್ಲಿ ತೊಡಗಿಸುವುದರ ಮೂಲಕ ಅವರನ್ನು ಉದ್ವೇಗ ಮತ್ತು ಚಿಂತೆಗಳಿಂದ ದೂರಮಾಡಬಹುದು. ಸೋಲುಗಳನ್ನು ತಾಳಿಕೊಳ್ಳುವ ಮತ್ತು ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುವ ಸಾಮರ್ಥ್ಯ ಬೆಳೆಸಬೇಕಾಗಿದೆ. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವಂತಹ ಮತ್ತು ಆತ್ಮಹತ್ಯಾ ಪ್ರವೃತ್ತಿಯನ್ನು ತಡೆಯಲು ನೆರವಾಗುವಂತಹ ತರಬೇತಿಯ ಅಗತ್ಯತೆಯಿದೆ.
- ಸಾಮಾಜಿಕ – ಭಾವನಾತ್ಮಕ ಶಿಕ್ಷಣವನ್ನು ಶಾಲೆಯ ಇತರೆ ಸೇವೆಗಳೊಂದಿಗೆ ಸಂಬಂಧ ಕಲ್ಪಿಸಿ ನೀಡಬೇಕು. ಶಾಲಾ ಪಠ್ಯಕ್ರಮದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಕಲಿಸಲು ಅವಕಾಶವಿರಬೇಕು. ಮಕ್ಕಳಿಗೆ ಆರೋಗ್ಯಕರ ಜೀವನಶೈಲಿ, ಉತ್ತಮ ಆಹಾರಾಭ್ಯಾಸಗಳು, ನಿದ್ರಿಸುವಿಕೆ, ಓದುವ ಹಾಗೂ ಕಾರ್ಯನಿರ್ವಹಿಸುವ ಪರಿಸರ ಹೇಗಿರಬೇಕು ಎಂಬ ಬಗ್ಗೆ ಮಾಹಿತಿ ನೀಡಬೇಕು.

ಶಾಲಾ ಕಾಲೇಜುಗಳಲ್ಲಿ ಮಾರ್ಗದರ್ಶನ ಹಾಗೂ ಸಲಹಾ ಸೇವೆಗಳನ್ನು ಒದಗಿಸುವ ಮೂಲಕ ಮಕ್ಕಳು ಶೈಕ್ಷಣಿಕ, ವೃತ್ತಿಪರ ಹಾಗೂ ವೈಯಕ್ತಿಕ ಸಮಸ್ಯೆಗಳನ್ನು ಎದುರಿಸುವ ಬಗ್ಗೆ ಹಾಗೂ ಪರಿಹರಿಸಿಕೊಳ್ಳುವ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

- ಬೋಧನೆಯಲ್ಲಿ ವೈವಿಧ್ಯಮಯ ವಿಧಾನಗಳನ್ನು ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾಮಾಜಿಕ–ಭಾವನಾತ್ಮಕ ಕಲಿಕೆಗೆ ಪೂರಕವಾಗುವಂತಹ ಕಲೆ, ನಾಟ್ಯ, ನಾಟಕ, ಪಾತ್ರಾಭಿನಯ, ಮಾದರಿ ನಿರ್ಮಾಣ, ಡಿಜಿಟಲ್ ಮಾಧ್ಯಮ, ಕಂಪ್ಯೂಟರ್ ತಂತ್ರಜ್ಞಾನ, ಅಂತರ್ಜಾಲ ಮುಂತಾದವುಗಳನ್ನು ಬಳಸಿಕೊಳ್ಳಬೇಕು.
- ವಿದ್ಯಾರ್ಥಿಗಳನ್ನು ಸಮುದಾಯ ಸೇವೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಅವರಲ್ಲಿ ಅನುಭೂತಿ ಶಕ್ತಿಯನ್ನು ಹೆಚ್ಚಿಸಬೇಕು.
- ಕುಟುಂಬ ಮತ್ತು ಶಾಲೆಗಳು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಮಕ್ಕಳಲ್ಲಿ ಉತ್ತಮ ಸಾಮಾಜಿಕ ಹಾಗು ಭಾವನಾತ್ಮಕ ಕಲಿಕೆಯನ್ನು ಉಂಟು ಮಾಡಬಹುದು. ಈ ಹಿನ್ನೆಲೆಯಲ್ಲಿ ಪೋಷಕರು ಶಾಲೆಗಳಿಗೆ ಭೇಟಿ ನೀಡುವ ಮೂಲಕ ಅಥವಾ ಶಾಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ತಮ್ಮ ಮಕ್ಕಳ ಬಗ್ಗೆ ಸೂಕ್ತ ಮಾಹಿತಿ ಪಡೆದು ಅವರನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ಸಾಧ್ಯವಾಗುತ್ತದೆ.
- ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು ವಿಶ್ಲೇಷಿಸಿಕೊಳ್ಳಲು ಮತ್ತು ಜೀವನ ಕೌಶಲಗಳನ್ನು ಕಲಿಯಬೇಕಾದರೆ ಪೋಷಕರು ಮತ್ತು

Digitised by Bharatavani, CIIL

ಶಿಕ್ಷಕರು **ಅನುಕರಣೀಯ ಮಾದರಿ**ಗಳಾಗಿರಬೇಕು. ಅವರನ್ನು ವೀಕ್ಷಿಸುವ ಮೂಲಕ ಅಪೇಕ್ಷಿತ ಗುಣಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

- ಶಾಲೆಯಲ್ಲಿ ಹಲವಾರು ಶೈಕ್ಷಣಿಕ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮಕ್ಕಳ ವ್ಯಕ್ತಿತ್ವದ ವಿಕಾಸ ಮತ್ತು ಮೌಲ್ಯಗಳ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳಬೇಕು.

ಪ್ರತಿಯೊಬ್ಬ ಶಿಕ್ಷಕರು ಮತ್ತು ಪೋಷಕರು ತಮ್ಮ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಮಾತ್ರ ಒತ್ತು ಕೊಡದೆ, ಜೀವನವನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗಲು ಅಗತ್ಯವಾದಂತಹ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ನಾವು ಸದೃಢ ಹಾಗೂ ಸೃಜನಾತ್ಮಕ ವ್ಯಕ್ತಿ ಮತ್ತು ಸಮಾಜವನ್ನು ನಿರ್ಮಿಸಲು ಸಾಧ್ಯ.

–ಎಚ್.ವಿ.ವಾ.

## ಸಂವೇದನೆ

ಹುಟ್ಟಿದಾಗ ಏನನ್ನೂ ಅರಿಯದ ಮಗು ಬೆಳೆದಂತೆಲ್ಲಾ ಬಾಹ್ಯ ಪ್ರಪಂಚದ ಪರಿಚಯ ಮಾಡಿಕೊಳ್ಳುತ್ತದೆ. ಈ ಹೊರಜಗತ್ತಿನೊಂದಿಗೆ ಸಂಪರ್ಕ ಕಲ್ಪಿಸುವ ಸಾಧನೆಗಳೆಂದರೆ ಪಂಚೇಂದ್ರಿಯಗಳು. ಒಂದು ವೇಳೆ ಪಂಚೇಂದ್ರಿಯಗಳು ಇಲ್ಲದಿದ್ದರೆ ನಾವು ಹೇಗೆ ಇರುತ್ತಿದ್ದೆವು ಎಂಬುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅತ್ಯಂತ ಸರಳ ರೂಪದ ಜೀವಿಗಳಲ್ಲಿಯೂ ಸಹ ಇಂದ್ರಿಯಗಳಿದ್ದು ಅವು ಬಾಹ್ಯ ಜಗತ್ತಿನೊಂದಿಗೆ ಸಂಪರ್ಕವೇರ್ಪಡಿಸುತ್ತವೆ. ಹೊರಗಿನಿಂದ ಬರುವ ಸಮಾಚಾರಕ್ಕೆ ಒಳಗಾಲುವೆಗಳಂತಿರುವ ಈ ಅಂಗವ್ಯವಸ್ಥೆಗಳು ನಮ್ಮ ಸುತ್ತಮುತ್ತ ಇರುವ ದೃಶ್ಯಗಳು, ಶಬ್ದಗಳು ಮತ್ತು ವಾಸನೆಗಳನ್ನು ಅನುಭವಿಸಿ ಆನಂದಿಸಲು ನಮಗೆ ನೆರವಾಗುತ್ತವೆ. ಹಾಗೆಯೇ ಸ್ಪರ್ಶಸುಖದ, ರುಚಿಯ ಆಹ್ಲಾದದ ಅನುಭವವನ್ನು ನಮಗೆ ಒದಗಿಸುತ್ತವೆ. ಹೀಗೆ ಜಗತ್ತಿನ ವಿಶಾಲವಾದ ಅರಿವಿಗೆ, ಜ್ಞಾನಕ್ಕೆ ಇಂದ್ರಿಯಗಳು ಮನೆಯ ಕಿಟಕಿಗಳಿದ್ದಂತೆ. ಅಂತೆಯೇ ಇವುಗಳನ್ನು "ಜ್ಞಾನದ ಹೆಬ್ಬಾಗಿಲುಗಳು" ಎನ್ನುವರು. ಇಂದ್ರಿಯಗಳ ಮೂಲಕ ಪರಿಚಯಿಸಲ್ಪಟ್ಟ ಸಂಗತಿಗಳು ಮೆದುಳನ್ನು ತಲುಪಿದಾಗ ನಮಗೆ ಅರಿವುಂಟಾಗುತ್ತದೆ. ಇದನ್ನೇ ಜ್ಞಾನ ಎನ್ನುವೆವು. ಇದು ನಡೆಯುವುದು ಮೂರು ಹಂತಗಳಲ್ಲಿ–ಇಂದ್ರಿಯಾನುಭವ, ಸಂವೇದನೆ, ಪ್ರತ್ಯಕ್ಷಾನುಭವ ಭಾವನೆಗಳು.

"ಸಂವೇದನೆ ಎಂದರೆ ಒಂದು ಪ್ರಚೋದನೆ ಅಥವಾ ಘಟನೆಯ ಅವಿಶ್ಲೇಷಿತ, ಅರ್ಥರಹಿತ, ಇಂದ್ರಿಯಗಳ ಮೂಲಕ ಮೆದುಳಿನೊಂದಿಗೆ ಏರ್ಪಡುವ ಒಂದು ಯಾಂತ್ರಿಕ ಅನುಭವ."

1. **ಇಂದ್ರಿಯಾನುಭವ:** ಬಾಹ್ಯ ಪ್ರಪಂಚದ ವಸ್ತುಗಳು ಇಂದ್ರಿಯಗಳ ಸೀಮಾವ್ಯಾಪ್ತಿಗೆ ಬಂದರೆ ಇಂದ್ರಿಯಾನುಭವ ಉಂಟಾಗುತ್ತದೆ. ಅಂದರೆ ಬಾಹ್ಯ ವಸ್ತುಗಳು ನಮ್ಮ ಇಂದ್ರಿಯಗಳ ಸೀಮಿತ ವ್ಯಾಪ್ತಿಯಲ್ಲಿದ್ದರೆ ಅವುಗಳಿಂದ ಉಂಟಾದ ಪ್ರಚೋದನೆ ಇಂದ್ರಿಯಗಳನ್ನು ಪ್ರಚೋದಿಸುತ್ತದೆ. ಇದರಿಂದ ಇಂದ್ರಿಯಗಳು ಕ್ರಿಯಾಶೀಲವಾಗುತ್ತವೆ. ಇದನ್ನು 'ಇಂದ್ರಿಯನುಭವ' ಎನ್ನುವರು. ಇದು ಕೇವಲ ಅನುಭವ ಮಾತ್ರವೇ ವಿನಹ ಅರಿವಲ್ಲ. ರೇಡಿಯೋ ತರಂಗಗಳನ್ನು ಏರಿಯಲ್ ಸ್ವೀಕರಿಸುವಂತೆ, ದೂರದರ್ಶನ ತರಂಗಗಳನ್ನು ಆಂಟೇನಾ ಗ್ರಹಿಸುವಂತೆ ಇಂದ್ರಿಯಗಳು ಕೇವಲ ಗ್ರಾಹಕಗಳಂತೆ ಕೆಲಸ ನಿರ್ವಹಿಸುತ್ತವೆ.

ಇಂದ್ರಿಯಾನುಭವ ನಾಲ್ಕು ಹಂತಗಳಲ್ಲಿ ನಡೆಯುತ್ತವೆ. ಮೊದಲನೆಯದಾಗಿ, ಒಳಗಿನಿಂದಲೋ, ಹೊರಗಿನಿಂದಲೋ ಒಂದು ಪ್ರಚೋದಕ ಒದಗಬೇಕು. ಎರಡನೆಯದಾಗಿ, ಈ ಪ್ರಚೋದಕ ಯಾವುದಾದರೊಂದು ಗ್ರಾಹಕ ಕಣಗಳನ್ನು ಉತ್ತೇಜಿಸಿ, ಕ್ರಿಯಾಶೀಲಗೊಳಿಸಬೇಕು. ನಿರ್ದಿಷ್ಟ ಪ್ರಚೋದಕ, ನಿರ್ದಿಷ್ಟ ಗ್ರಾಹಕ ಕಣಗಳನ್ನು ಪ್ರಚೋದಿಸುತ್ತದೆ. ಉದಾ: ದೃಷ್ಟಿಗ್ರಾಹಕಗಳು ಭೌತಿಕ ಕಿರಣಗಳಿಂದ, ಶ್ರವಣ ಗ್ರಾಹಕ ಕಣಗಳು ಶಬ್ದ ತರಂಗಗಳಿಂದ ಉತ್ತೇಜಿಸಲ್ಪಡುತ್ತವೆ. ಮೂರನೆಯದಾಗಿ, ಗ್ರಾಹಕ ಕಣಗಳು ಉತ್ತೇಜಿತವಾದಾಗ ಉದ್ಭವವಾದ ಉದ್ರೇಕದ ಅಲೆಗಳು ಜ್ಞಾನವಾಹಿ ನರಗಳ ಮೂಲಕ ಮೆದುಳನ್ನು ಸೇರುತ್ತವೆ. ನಾಲ್ಕನೆಯದಾಗಿ, ಇವು ಮೆದುಳಿನಲ್ಲಿನ ತಂತು ಕಣಗಳನ್ನು ಕ್ರಿಯಾಶೀಲಗೊಳಿಸುತ್ತವೆ. ಈ ಹಂತಗಳಲ್ಲಿ ಯಾವುದೇ ಲೋಪವಾದರೂ ಇಂದ್ರಿಯಾನುಭವ ವಾಗುವುದಿಲ್ಲ.

2. **ಸಂವೇದನೆ:** ಜ್ಞಾನಾರ್ಜನೆಯಲ್ಲಿ ಇಂದ್ರಿಯಾನುಭವದ ನಂತರದ ಹಂತವೇ ಸಂವೇದನೆ. ಮೇಲಿನ ವಿವರಣೆಯಿಂದ ಪ್ರತಿಯೊಂದು ಜ್ಞಾನೇಂದ್ರಿಯವೂ ತನ್ನದೇ ಆದ ಕ್ರಿಯಾವಿಶೇಷತೆಯಿಂದ ಕೂಡಿದ್ದು ತನ್ನ ಮೂಲಕ ಹೊರಜಗತ್ತಿನ ಪರಿಚಯವನ್ನು ನಮಗೆ ಮಾಡಿಸುತ್ತಿರುತ್ತವೆ. ಹೀಗೆ ಹೊರಜಗತ್ತಿನ ಸಂಗತಿಗಳು ಮೆದುಳಿನೊಂದಿಗೆ ಜ್ಞಾನೇಂದ್ರಿಯಗಳ ಮೂಲಕ ಸಂಪರ್ಕಕ್ಕೆ ಬರುವಿಕೆಗೆ ಅಥವಾ ಹೊರಜಗತ್ತಿನ ಇಂದ್ರಿಯ ಸಂಪರ್ಕಕ್ಕೆ ಸಂವೇದನೆ ಎನ್ನುವರು.

ಸಂವೇದನೆಯ ಮೂಲಕ ಹೊರ ಸಂಗತಿಗಳು ಹೇಗಿರುತ್ತವೆಯೋ ಅವುಗಳ ಪಡಿಯಚ್ಚು ಮಾತ್ರ ನಮ್ಮ ಮೆದುಳಿನಲ್ಲಿ ಮೂಡಿ ಬರುತ್ತವೆ. ಅಂದರೆ ನಾವು ಪ್ರಚೋದನೆಯ ಅಥವಾ ಸಂಗತಿಯೊಂದಿಗೆ ಕೇವಲ ಸಂಪರ್ಕಕ್ಕೆ ಮಾತ್ರ ಬರುತ್ತೇವೆಯೇ ವಿನಹ ಆ ಸಂವೇದನೆ ಏನು? ಹೇಗೆ? ಏಕೆ? ಎಂಬುದು ತಿಳಿದು ಬರುವುದಿಲ್ಲ. ಟೆಲಿಗ್ರಾಫ್ ಯಂತ್ರದಿಂದ ಉಂಟಾಗುವ ಸಂಜ್ಞೆಯಂತೆ ಸಂವೇದನೆಗಳು. ಟೆಲಿಗ್ರಾಫ್ ಯಂತ್ರ ಕೇವಲ ಟಿಕ್ ಟಿಕ್ ಶಬ್ದವನ್ನುಂಟುಮಾಡುತ್ತದೆ. ಅವುಗಳನ್ನು ವಿಶ್ಲೇಷಿಸದ ಹೊರತು ವಿಷಯವೇನೆಂಬುದು ತಿಳಿದು ಬರುವುದಿಲ್ಲ. ಇಂತಹ ಅವಿಶ್ಲೇಷಿತ ಅರ್ಥರಹಿತ ಸಂವೇದನೆಗಳು ಮೆದುಳನ್ನು ತಲುಪಿದಾಗ ಅಲ್ಲಿ ಅವು ಉನ್ನತ ಮಾನಸಿಕ ಕ್ರಿಯೆಗಳಿಗೆ ಒಳಪಟ್ಟು ವಿಶ್ಲೇಷಿಸಲ್ಪಟ್ಟಾಗ ಆ ಸಂವೇದನೆಯ ಅರ್ಥವು ತಿಳಿದು ಬರುತ್ತದೆ. ಅದನ್ನೇ ನಾವು 'ಗೊತ್ತಾಯಿತು', 'ತಿಳಿದುಕೊಂಡೆವು' ಎನ್ನುತ್ತೇವೆ. ತಿಳಿಯುವಿಕೆ ಮಾನಸಿಕ ಕ್ರಿಯೆಗಳ ಕೊನೆಯ ಹಂತವಾದರೆ ಸಂವೇದನೆ ಮೊದಲ ಹಂತ.

ಅ) **ಸಂವೇದನಾ ಕ್ರಿಯೆ:** ಸಂವೇದನಾ ಕ್ರಿಯೆಯು ಸಂವೇದನೆ ಹೇಗೆ ಉಂಟಾಗುತ್ತದೆ ಮತ್ತು ಅವು ಹೇಗೆ ಮೆದುಳನ್ನು ತಲುಪುತ್ತವೆ ಎಂಬುದನ್ನು ವಿವರಿಸುತ್ತದೆ. ಸಂವೇದನೆಯ ಹಿಂದಿನ ಶಕ್ತಿಯ ರೂಪವು ಅಂದರೆ ಜ್ಞಾನೇಂದ್ರಿಯಗಳು ಪ್ರಚೋದಿಸಲ್ಪಟ್ಟಾಗ ಅವುಗಳ ಮೇಲ್ಮೈನಲ್ಲಿರುವ ಗ್ರಾಹಕ ನರಕೋಶಗಳನ್ನು ತಲುಪುತ್ತವೆ. ಈ ನರಕೋಶಗಳು ಉತ್ತೇಜಿಸಲ್ಪಟ್ಟು ಅದರಲ್ಲಿ ನರ ವಿದ್ಯುತ್ ಪ್ರವಾಹ ಉಂಟಾಗುತ್ತದೆ. ಜ್ಞಾನವಾಹಿ ನರಕೋಶಗಳಲ್ಲಿ 'ಬಾಹ್ಯ ಗ್ರಾಹಕಗಳು' ಮತ್ತು 'ಅಂತರ್ ಗ್ರಾಹಕ'ಗಳೆಂದು ಎರಡು ವಿಧಗಳಿವೆ.

i) **ಬಾಹ್ಯ ಗ್ರಾಹಕಗಳು (Exteroceptors):** ದೇಹದ ಹೊರ ಭಾಗದಲ್ಲಿ ಅಂದರೆ ಚರ್ಮದ ಮೇಲ್ಪದರಗಳಲ್ಲಿದ್ದು, ಹೊರಗಿನಿಂದ ಬರುವ ಸಂವೇದನೆಗಳನ್ನು ಗ್ರಹಿಸುತ್ತವೆ. ಉದಾ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಇವೆಲ್ಲಾ ಬಾಹ್ಯ ಗ್ರಾಹಕಗಳೇ ಆಗಿವೆ.

ii) **ಅಂತರ್ ಗ್ರಾಹಕಗಳು (Interoceptors):** ದೇಹದ ತೀರಾ ಒಳಭಾಗದಲ್ಲಿರುತ್ತವೆ. ರಕ್ತನಾಳಗಳಲ್ಲಿ, ಮಾಂಸಖಂಡಗಳಲ್ಲಿ, ಕೀಲುಗಳಲ್ಲಿ

Digitised by Bharatavani, CIIL

ನೆಲೆಸಿದ್ದು ದೇಹದ ಒಳಭಾಗದ ಸಂವೇದನೆಗಳನ್ನು ಗ್ರಹಿಸಿ ಮೆದುಳಿಗೆ ತಲುಪಿಸುತ್ತವೆ. ಆದ್ದರಿಂದ ನಮಗೆ ಶರೀರದ ಒಳಗೆ ಉಂಟಾಗುವ ಹಸಿವು, ನೋವು ಇತ್ಯಾದಿಗಳ ಅರಿವುಂಟಾಗುವುದು. ಒಟ್ಟಿನಲ್ಲಿ ಜ್ಞಾನವಾಹಿನಿ ನರಕೋಶಗಳ ಜಾಲ ಶರೀರದ ಒಳಗೆ ಮತ್ತು ಹೊರಗೆಲ್ಲ ಪಸರಿಸಿದೆ.

ಸಂವೇದನೆಗಳು ಮೆದುಳನ್ನು ಸೇರಿದಾಗ ಅವುಗಳನ್ನು ಸಮರ್ಪಕವಾಗಿ ಸ್ವೀಕರಿಸಲು ಅಲ್ಲಿ ನಿರ್ದಿಷ್ಟ ಪ್ರದೇಶಗಳಿರುತ್ತವೆ. ಚರ್ಮ ಮತ್ತು ಮಾಂಸಖಂಡಗಳಿಂದ ಬರುವ ಸಂವೇದನೆಯನ್ನು ಪೆರೈಟಲ್ (Parietal) ಪ್ರದೇಶವೂ, ಕಣ್ಣಿನ ಸಂವೇದನೆಗಳನ್ನು ಆಕ್ಸಿಪಿಟಲ್ (Occipital) ಭಾಗವೂ, ಕಿವಿಯಿಂದ ಬರುವ ವಿವರಗಳನ್ನು ಟೆಂಪೊರಲ್ (Temporal) ಪ್ರದೇಶವೂ ಸ್ವೀಕರಿಸುತ್ತವೆ. ಈ ಪ್ರದೇಶಗಳಿಗೆ ಯಾವುದೇ ಕಾರಣದಿಂದ ಆಘಾತವಾದರೆ ಇಂದ್ರಿಯಗಳು ಸರಿಯಿದ್ದೂ ನಿಷ್ಕ್ರಿಯವಾಗುತ್ತವೆ. ಉದಾ: ಮೆದುಳಿನ ಆಕ್ಸಿಪೆಟಲ್ ಭಾಗಕ್ಕೆ ಆಘಾತವಾದರೆ ಕಣ್ಣು ಸರಿಯಾಗಿದ್ದರೂ ಕಾಣಿಸುವುದಿಲ್ಲ.

**ಆ) ಸಂವೇದನೆಯ ಲಕ್ಷಣಗಳು**

ಸಂವೇದನೆ ಇಂದ್ರಿಯ ಜನ್ಯ ವ್ಯಾಪಾರವಾಗಿದ್ದು ಕೆಲವು ವಿಶಿಷ್ಟ ಲಕ್ಷಣಗಳನ್ನೊಳಗೊಂಡಿದೆ.

1) ಸಂವೇದನೆ ಬಾಹ್ಯ ಜಗತ್ತಿನೊಡನೆ ಮೆದುಳಿನೊಂದಿಗೆ ಕೇವಲ ಸಂಪರ್ಕವನ್ನೇರ್ಪಡಿಸುತ್ತದೆ.

2) ಸಂವೇದನೆಯಿಂದ ವಸ್ತುವಿನ ಪೂರ್ಣ ಪರಿಚಯವಾಗುವುದಿಲ್ಲ.

3) ಸಂವೇದನೆ ಅವಿಶ್ಲೇಷಿತ, ಅರ್ಥರಹಿತ, ಸಂಜ್ಞಾ ರೂಪದಲ್ಲಿರುತ್ತದೆ.

4) ಇದು ಇಂದ್ರಿಯಗಳ ಪ್ರಚೋದನೆಯನ್ನು ನೇರವಾಗಿ ಅವಲಂಬಿಸಿದೆ. ಯಾವುದೇ ಸಂವೇದನೆ ಉಂಟಾಗಬೇಕಾದರೂ ಒಂದು ಕನಿಷ್ಠ ಮಟ್ಟದ ಇಂದ್ರಿಯ ಪ್ರಚೋದನೆ ಇರಲೇಬೇಕು.

5) ಇಂದ್ರಿಯಗಳಲ್ಲಿ ದೋಷವಿದ್ದರೆ ಸಂವೇದನೆಯೂ ದೋಷಪೂರಿತ ವಾಗಿರುತ್ತದೆ.

6) ಸಂವೇದನೆ ಬಾಹ್ಯ ವಸ್ತುಗಳ ಪಡಿಯಚ್ಚನ್ನು ಮೂಡಿಸುತ್ತದೆ. ವಸ್ತುಗಳು ಹೇಗಿರುತ್ತವೆಯೋ ಹಾಗೆ ಸಂವೇದನೆ ಉಂಟಾಗುತ್ತದೆ.

ಹೀಗೆ ಸಂವೇದನೆಗಳು ವ್ಯಕ್ತಿಯ ದೇಹದ ಹೊರಗೆ ಹಾಗೂ ಒಳಭಾಗದಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು, ಸಂಗತಿಗಳನ್ನು ಸೂಕ್ಷ್ಮಗ್ರಾಹಕ ನರಗಳ ಮೂಲಕ ಗ್ರಹಿಸಿ ಅವುಗಳನ್ನು ಕೇಂದ್ರ ನರವ್ಯವಸ್ಥೆಗೆ (ಮೆದುಳಿಗೆ) ತಲುಪಿಸುವುದರ ಮೂಲಕ ವ್ಯಕ್ತಿ ತನ್ನ ಪರಿಸರವನ್ನು ದೇಹದ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಂಡು ಬದುಕಿನ ಹೋರಾಟದಲ್ಲಿ ಸಮರ್ಪಕವಾಗಿ ಹೊಂದಿಕೊಳ್ಳುವಲ್ಲಿ ಸಹಾಯಕವಾಗಿವೆ.

–ಹೊ.ಗಾ.

## ಸಂವೇದನಾಂಗಗಳು

ಸಂವೇದನೆಗಳು ಜ್ಞಾನದ ಮೊದಲ ಹಂತ. ಯಾವುದಾದರೂ ಇಂದ್ರಿಯ, ಒಳಗಿನ ಅಥವಾ ಹೊರಗಿನ ಪರಿಸರದಿಂದ ಬಂದ, ಸಂಬಂಧಿಸಿದ ಪ್ರಚೋದನೆಯಿಂದ ಪ್ರಚೋದಿಸಲ್ಪಟ್ಟಾಗ ಅಲ್ಲಿರುವ ಗ್ರಾಹಿಗಳು ನರವಾಹಿಯನ್ನು (impulse) ಸಂಕೇತ ರೂಪದಲ್ಲಿ ಬಿಡುಗಡೆ ಮಾಡುತ್ತವೆ. ಈ ಸಂದೇಶ ಜ್ಞಾನವಾಹಿ ನರಗಳ ಮೂಲಕ ಇಂದ್ರಿಯಕ್ಕೆ ಸಂಬಂಧಪಟ್ಟ ಕೇಂದ್ರ ನರಮಂಡಲದಲ್ಲಿರುವ ಸಂವೇದನಾ ಕೇಂದ್ರವನ್ನು ತಲುಪುತ್ತದೆ. ಈ ಸಂದೇಶರೂಪಿ ಸಂದೇಶಕ್ಕೆ ಸಂವೇದನೆ ಎಂದು ಹೆಸರು. ಬೆಳಕಿನ ಕಿರಣಗಳು ಕಣ್ಣುಗಳ ಮೇಲೆ ಮಾಡುವ ಪರಿಣಾಮ ದರ್ಶನಕ್ಕೆ ಕಾರಣವಾದರೆ, ಶಬ್ದ ತರಂಗಗಳು ಕಿವಿಯ ಮೇಲೆ ಮಾಡುವ ಪರಿಣಾಮ ಶ್ರವಣಕ್ಕೆ ಕಾರಣವಾಗುತ್ತವೆ. ಲಾಲಾರಸದಲ್ಲಿ ವಿಲೀನವಾದ ರಾಸಾಯನಿಕಗಳು ನಾಲಗೆಯ ಮೇಲೆ ಮಾಡುವ ಪರಿಣಾಮ ರಸನಕ್ಕೆ ಕಾರಣವಾದರೆ, ಅನಿಲ ರೂಪದ ರಾಸಾಯನಿಕ ವಸ್ತುಗಳು ಮೂಗಿನ ಮೇಲೆ ಮಾಡುವ ಪರಿಣಾಮ ಘ್ರಾಣಕ್ಕೆ ಕಾರಣವಾಗುತ್ತವೆ. ವಿವಿಧ ಉಷ್ಣತೆಯಲ್ಲಿರುವ ವಸ್ತುಗಳು ಚರ್ಮದ ಮೇಲೆ ಮಾಡುವ ಪರಿಣಾಮ ಸ್ಪರ್ಶಕ್ಕೆ ಕಾರಣವಾದರೆ, ಒತ್ತಡ, ಭಾರ ಮತ್ತು ಚಲನೆ ಮಾಂಸ ಖಂಡದಲ್ಲಿರುವ ಕದಿರುಗಳು ಮತ್ತು ಸ್ನಾಯು ರಜ್ಜುಗಳ ಮೇಲೆ ಮಾಡುವ ಪರಿಣಾಮ ಚಲನೆ ಮತ್ತು ತೂಕದ ಸಂವೇದನೆಗೆ ಕಾರಣವಾಗುತ್ತವೆ. ಅರ್ಧವೃತ್ತಾಕಾರದ ನಾಳದಲ್ಲಿರುವ ದ್ರವದ ಕಲಕುವಿಕೆ ಒಳಗಿವಿಯಲ್ಲಿರುವ ಶ್ರವಣಾತೀತ ಅಂಗದ ಮೇಲೆ ಮಾಡುವ ಪರಿಣಾಮ ದೈಹಿಕ ಸಮತೋಲನಕ್ಕೆ ಕಾರಣವಾದರೆ ಜಠರದ ಮಥನ ಮತ್ತು ಗಂಟಲು ಒಣಗುವುದು ಇತ್ಯಾದಿಗಳು ಜಠರ ಅನ್ನನಾಳಗಳ ಮೇಲೆ ಮಾಡುವ ಪರಿಣಾಮ ದೈಹಿಕ ಸಂವೇದನೆಗೆ ಕಾರಣವಾಗುತ್ತವೆ.

ಸಾಮಾನ್ಯವಾಗಿ ಐದು ಇಂದ್ರಿಯಗಳನ್ನು ಪ್ರಮುಖವಾಗಿ ಹೆಸರಿಸಿದರೂ ಚಲನೆ ಮತ್ತು ತೂಕದ ಸಂವೇದನೆ (Kinesthetics) ದೈಹಿಕ ಸಂವೇದನೆ (Organic) ಸಮತೋಲನ ಸಂವೇದನೆಗಳೂ (Static) ಪ್ರಮುಖ ಸಂವೇದನೆಗಳಾಗಿವೆ.

### ಸಂವೇದನಾಂಗಗಳು

#### ಕಣ್ಣುಗಳು

"ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಎನ್ನುವಂತೆ ಇಂದ್ರಿಯಗಳಲ್ಲಿ ಕಣ್ಣುಗಳಿಗೆ ಪ್ರಾಮುಖ್ಯ ಕೊಡಲಾಗಿದೆ. ಕಣ್ಣುಗಳು ಬೇರೆ ಇಂದ್ರಿಯಗಳೊಡನೆ ಸಹಕರಿಸಿ ಪ್ರತ್ಯಕ್ಷಾನುಭವಕ್ಕೆ ಹೆಚ್ಚಿನ ಅರ್ಥಕೊಡುತ್ತವೆ.

ಕಣ್ಣಿನ ರಚನೆ ಒಂದು ಕ್ಯಾಮರಾವನ್ನು ಹೋಲುತ್ತದೆ. ಕಣ್ಣುಗಳಿಗೆ ಒಂದು ಬಿಳಿಯಾದ ಹೊರ ಹೊದಿಕೆ ಇದೆ. ಅದಕ್ಕೆ ದೃಷ್ಟಿಪಟಲ (Sclerotic coat) ಎನ್ನುತ್ತಾರೆ.




**ಕಣ್ಣಿನ ಭಾಗಗಳು**

#### ಕಣ್ಣು

ದೃಷ್ಟಿಪಟಲದ ಒಳಗೆ ಇನ್ನೊಂದು ಕಪ್ಪಾದ ಪದರವಿದ್ದು ಅದನ್ನು ರಕ್ತಪಟಲ (Choroid coat) ಎಂದು ಕರೆಯುತ್ತಾರೆ. ಇದರ ಒಳಗೆ ಮತ್ತೊಂದು ತೆಳುವಾದ ಪದರವಿದ್ದು ಇದನ್ನು ದೃಷ್ಟಿಪಟಲ (Retina) ಎನ್ನುತ್ತಾರೆ. ಇದರಲ್ಲೇ ಸಲಾಕೆಗಳು (Rods) ಮತ್ತು ಶಂಖುಗಳು

Digitised by Bharatavani, CIIL

(Cones) ಹರಡಿಕೊಂಡಿವೆ. ಈ ಶಂಖು ಮತ್ತು ಸಲಾಕೆಗಳು ನೋಟವನ್ನು ಗ್ರಹಿಸುತ್ತವೆ. ಸಲಾಕೆಗಳು ಕತ್ತಲು ಮತ್ತು ಮಂದ ಬೆಳಕಿನಲ್ಲೂ ಕೆಲಸ ಮಾಡಿದರೆ ಶಂಖುಗಳು ಬೆಳಕಿನಲ್ಲಿ ಕೆಲಸ ಮಾಡುತ್ತವೆ. ಇವು ಅಂಧ ಬಿಂದುವಿನ ಅನತಿ ದೂರದಲ್ಲಿ ಅಸಂಖ್ಯಾತವಾಗಿ ಹರಡಿಕೊಂಡಿರುತ್ತವೆ. ಈ ಸಾಂದ್ರ ಕ್ಷೇತ್ರಕ್ಕೆ 'ಪೋವಿಯ' ಎಂದು ಹೆಸರು. ಯಾವುದೇ ಪ್ರಚೋದನೆ ಈ ಜಾಗವನ್ನು ತಲುಪಿದರೆ ಸ್ಪಷ್ಟವಾಗಿ ಗ್ರಹಿಸಲ್ಪಡುತ್ತದೆ. ಆದರೆ ಅಂಧ ಬಿಂದುವಿನಲ್ಲಿ ಪ್ರಚೋದನೆಗಳು ಗ್ರಹಿಸಲ್ಪಡುವುದಿಲ್ಲ. ಕಣ್ಣಿನ ಮುಂಭಾಗದಲ್ಲಿ ಉಬ್ಬಿಕೊಂಡಿರುವ ಪಾರದರ್ಶಕ ಪದರವನ್ನು ಕಾರ್ನಿಯ ಎನ್ನುತ್ತಾರೆ. ಕಾರ್ನಿಯದ ಹಿಂದಿರುವ ಬಿಲ್ಲೆಯಂತಹ ನೀಲಿಮಿಶ್ರಿತ ಬೂದು ಅಥವಾ ಕಂದುಬಣ್ಣದ ರಚನೆಯೇ ಕಾನೀನಿಕಾ ಪಟಲ (Iris). ಇದರ ಕೇಂದ್ರದಲ್ಲಿ ಪಾಪೆ (Pupil) ಎನ್ನುವ ಚಿಕ್ಕ ರಂಧ್ರವಿದೆ. ಇದು ಪ್ರಚೋದನೆಯ ತೀವ್ರತೆ ಅನುಸರಿಸಿ ಹಿರಿ ಕಿರಿದಾಗಬಲ್ಲದು. ಇದರ ಹಿಂಭಾಗದಲ್ಲಿ ಮಸೂರವಿದೆ. ಮಸೂರವೂ ಎರಡೂ ಪಕ್ಕದಲ್ಲಿ ಸಿಲಿಯರಿ ಮಾಂಸ ಖಂಡಗಳಿಂದ ಹಿಡಿಯಲ್ಪಟ್ಟು ಅನುಕೂಲಕ್ಕೆ ತಕ್ಕಂತೆ ಆಕಾರ ಬದಲಿಸಬಲ್ಲದು. ಮಸೂರ ಮತ್ತು ಕಾನೀನಿಕಾ ಪಟಲದ ನಡುವೆ ಆಕ್ವಿಯಸ್ ಎನ್ನುವ ದ್ರವವೂ, ಮಸೂರದ ಹಿಂಭಾಗದಲ್ಲಿ ಕಣ್ಣಿನ ಗರ್ಭದಲ್ಲಿ ವಿಟ್ರಿಯಸ್ ಎನ್ನುವ ದ್ರವವೂ ಇದ್ದು ಇವುಗಳು ಕಣ್ಣಿನ ಆಕಾರವನ್ನು ರಕ್ಷಿಸುತ್ತವೆ. (ಚಿತ್ರ ನೋಡಿ)

ಬೆಳಕಿನ ಕಿರಣಗಳು ಕಾರ್ನಿಯ ಮೂಲಕ ಒಳ ಹೊಕ್ಕು ಪಾಪೆಯನ್ನು ಹಾದು ದೃಷ್ಟಿ ಪಟಲದ ಮೇಲೆ ಬೀಳುತ್ತವೆ. ಅಲ್ಲಿರುವ ಶಂಖುಗಳು ಪ್ರಚೋದನೆ ಹೊಂದಿ ಸಂದೇಶವನ್ನು ಬಿಡುಗಡೆ ಮಾಡುತ್ತವೆ. ಈ ಸಂದೇಶ ಜ್ಞಾನವಾಹಿ ನರಗಳ ಮೂಲಕ ಮಸ್ತಿಷ್ಕವನ್ನು ತಲುಪುತ್ತದೆ.

**ಕಿವಿ**




**ಕಿವಿಯ ಭಾಗಗಳು**

ಕಿವಿಯ ರಚನೆಯಲ್ಲಿ ಹೊರ, ನಡು ಮತ್ತು ಒಳಕಿವಿ ಎನ್ನುವ ಮೂರು ಭಾಗಗಳನ್ನು ಗುರುತಿಸಬಹುದು. ನಮಗೆ ಹೊರಕಾಣುವ ಕಿವಿಯ ಭಾಗವನ್ನು ಪಿನ್ನ ಎನ್ನುತ್ತೇವೆ. ಅಲ್ಲಿಂದ S ಆಕಾರದ ಮಾರ್ಗವೊಂದಿದ್ದು ಅದು ಕಿವಿಯ ತಮಟೆಯಲ್ಲಿ ಕೊನೆಗೊಳ್ಳುತ್ತದೆ. ಪಿನ್ನದಿಂದ ಈ ತಮಟೆಯವರೆಗಿನ ಭಾಗವನ್ನು ಹೊರಗಿವಿ ಎಂದು ಕರೆಯಬಹುದು. ಅಲ್ಲಿಂದ ಮುಂದೆ ಇರುವ ಪೊಟರೆಯನ್ನು ನಾವು ನಡುಗಿವಿ ಎನ್ನುತ್ತೇವೆ. ಈ ಪೊಟರೆಯಲ್ಲಿ ತಮಟೆಯಿಂದ ಒಳಗಿವಿಯ ಬಾಗಿಲವರೆಗೆ ಸುತ್ತಿಗೆ (Malus) ಇಂಕಸ್ (Incus) ರಿಕಾಪು (Staple) ಎನ್ನುವ ಮೂರು ಮೂಳೆಗಳಿವೆ. ರಿಕಾಪು ಕರ್ಣಾವರ್ತದ (Chochlia) ಕಿಟಕಿಗೆ ತಾಗಿಕೊಂಡಿರುತ್ತದೆ. ಒಳಗಿವಿಯಲ್ಲಿ ಕರ್ಣಾವರ್ತ ಮತ್ತು ಸಮತೋಲನೇಂದ್ರಿಯಗಳಿವೆ (Vestibular organ). ಕರ್ಣಾವರ್ತದಲ್ಲಿ ಮೂರು ನಾಳಗಳಿವೆ. ಮೇಲಿನ ನಾಳಕ್ಕೆ ವೆಸ್ಟಿಬ್ಯುಲಾರ್ ನಾಳ ಎಂದೂ ನಡುವಿನದಕ್ಕೆ ಕಾಕ್ಲಿಯಾರ್ ಎಂದೂ ಕೆಳಗಿನದಕ್ಕೆ ಟಿಂಪ್ಯಾನಿಕ್ ನಾಳ ಎಂದೂ ಹೆಸರು. ಕಾಕ್ಲಿಯಾರ್ ನಾಳ ತ್ರಿಕೋನಾಕಾರವಾಗಿದ್ದು ಖಾಲಿಯಾಗಿರುತ್ತದೆ. ಮೇಲಿನ ಮತ್ತು ಕೆಳಗಿನ ನಾಳಗಳಲ್ಲಿ ಪೆರಿಲಿಂಫ್ ಮತ್ತು ಎಂಡೊಲಿಂಫ್ ಎನ್ನುವ ದ್ರವಗಳು ತುಂಬಿರುತ್ತವೆ. ಈ ಎರಡೂ ನಾಳಗಳು ಕರ್ಣಾವರ್ತದ ಚಾಲದ ತುದಿಯಲ್ಲಿ ಸೇರುತ್ತವೆ. ಅಲ್ಲಿ ಹೆಲ್ಕೊಟ್ರಾಮ ಎನ್ನುವ ರಂಧ್ರವಿದೆ. ಈ ರಂಧ್ರದಿಂದ ಎರಡೂ ನಾಳಗಳಿಗೆ ಸಂಬಂಧ ಏರ್ಪಡುತ್ತದೆ. ವೆಸ್ಟಿಬ್ಯುಲಾರ್ ಮತ್ತು ಕಾಕ್ಲಿಯಾರ್ ನಾಳಗಳನ್ನು ರೆಸ್ನರ್ ಪದರ ಎನ್ನುವ ತೆಳು ಪದರ ಬೇರ್ಪಡಿಸಿದರೆ, ಕಾಕ್ಲಿಯಾರ್ ಮತ್ತು ಟಿಂಪ್ಯಾನಿಕ್ ನಾಳಗಳನ್ನು ಬೇಸಿಲಾರ್ ಪೊರೆ ಎನ್ನುವ ದಪ್ಪ ಪದರ ಬೇರ್ಪಡಿಸುತ್ತದೆ. ಬೇಸಿಲಾರ್ ಪೊರೆಯಲ್ಲಿ ಸಣ್ಣ ತಂತುಗಳಿದ್ದು ಇವಕ್ಕೆ ತಾಕಿದಂತೆ ಕಾರ್ಟಿ ಎನ್ನುವ ಅಂಗವಿದೆ. ಕಾರ್ಟಿಯ ಹೊರಮೈಮೇಲಿರುವ ನಾಲ್ಕು ಸಾಲು ಕೂದಲಿನ ಕೋಶಗಳ ಬುಡದಲ್ಲಿ ಶ್ರವಣ ನರಗಳಿರುತ್ತವೆ.

ಶಬ್ದ ತರಂಗಗಳು ಹೊರಗಿವಿಯಿಂದ S ಮಾರ್ಗದ ಮೂಲಕ ಕಿವಿಯ ಒಳಹೊಕ್ಕು ತಮಟೆಯ ಮೇಲೆ ಅಪ್ಪಳಿಸುತ್ತವೆ. ತಮಟೆಯ ಸ್ಪಂದನ ಸುತ್ತಿಗೆ, ಇಂಕಸ್, ರಿಕಾಪುಗಳಿಗೆ ವರ್ಗಾಯಿಸಲ್ಪಡುತ್ತವೆ. ರಿಕಾಪು ಅಂಡಾಕಾರದ ಕಿಟಕಿಯ ಮುಚ್ಚಳ ಬಡಿಯುವುದರಿಂದ ಒಳಗೆ ದ್ರವದಲ್ಲಿ ಕಂಪನ ಉಂಟಾಗಿ ಬೇಸಿಲಾರ್ ಪೊರೆ ಕಂಪಿಸತೊಡಗುತ್ತದೆ. ಮೇಲಿನ ತಂತುಗಳು ಅದುರಿ ಕಾರ್ಟಿಯ ಕೋಶಗಳ ಕೆಳಗಿರುವ ನರಗಳನ್ನು ಪ್ರಚೋದಿಸುತ್ತವೆ. ಶ್ರವಣ ಸಂದೇಶ ಬಿಡುಗಡೆಯಾಗಿ ಮಸ್ತಿಷ್ಕವನ್ನು ಸೇರುತ್ತದೆ.

**ಮೂಗು**

ಮಾನವನ ಮೂಗಿನ ರಚನೆ ಅವಲೋಕಿಸಿದಾಗ ಅಲ್ಲಿ ಒಂದರ ಮೇಲೆ ಒಂದರಂತೆ ನಾಲ್ಕು ಕೋಣೆಗಳನ್ನು ಗಮನಿಸಬಹುದು. ಮೇಲ್ಭಾಗದ ಕಡೆಯ ಕೋಣೆಯಲ್ಲಿ ಘ್ರಾಣೇಂದ್ರಿಯ ಗ್ರಾಹಿಗಳಾದ ಎಪಿಥೀಲಿಯಂಗಳು ಮತ್ತು ಟ್ರೈಜಮೀನಲ್ ನರಗಳಿವೆ. ಈ ಗ್ರಾಹಿಗಳು ಜ್ಞಾನವಾಹಿ ನರಗಳಿಗೆ ಆತುಕೊಂಡಿದ್ದು ನಾವು ಮೂಗಿನಿಂದ ಸೆಳೆದ ವಾಸನೆ ಈ ಗ್ರಾಹಿಗಳನ್ನು ಪ್ರಚೋದಿಸಿ ಜ್ಞಾನವಾಹಿ ನರಗಳ ಮೂಲಕ ಸಂದೇಶ ಮೆದುಳಿನ ಘ್ರಾಣ ಕೇಂದ್ರವನ್ನು ತಲುಪುತ್ತದೆ.



**ಎಪಿಥೀಲಿಯಂ ಮತ್ತು ಟ್ರೈಜಮೀನಲ್ ನರಗಳು**

Digitised by Bharatavani, CIIL

**ನಾಲಗೆ**



ದೊಡ್ಡ ರುಚಿಮೊಗ್ಗುಗಳು, ಚಿಕ್ಕ ರುಚಿ ಮೊಗ್ಗುಗಳು

ನಾಲಗೆಯಲ್ಲಿ ಗುಳ್ಳೆಗಳಂತೆ ಕಾಣುವ ರಚನೆಗಳಿವೆ. ಅವುಗಳನ್ನು ಪ್ಯಾಪಿಲೆ ಎನ್ನುತ್ತೇವೆ. ನಾಲಗೆಯ ಹಿಂಭಾಗದಲ್ಲಿ ದಪ್ಪವಾಗಿ ಇರುವ ಏಳು ಅಥವಾ ಒಂಬತ್ತು ಪ್ಯಾಪಿಲೆಗಳಿವೆ. ಇವುಗಳಿಗೆ ಸರ್ಕಂವಲೇ ಪಾಪಿಲೆಗಳೆಂದು ಕರೆಯುತ್ತೇವೆ. ಇವು 'V' ಆಕಾರದಲ್ಲಿ ವಿತರಿಸಲ್ಪಟ್ಟಿವೆ. ಸಣ್ಣ ಸಣ್ಣ ಪ್ಯಾಪಿಲೆಗಳು ನಾಲಗೆಯ ಮೇಲೆ ಹರಡಿವೆ. ಅವುಗಳನ್ನು ಫಂಗಿ ರೂಪದ ಪ್ಯಾಪಿಲೆ ಎನ್ನುತ್ತಾರೆ (fungi form). ಒಂದೊಂದು ಪಾಪಿಲೆ ಕೂಡಾ ಸುಮಾರು 245 ರಸನ (ರುಚಿ) ಮೊಗ್ಗುಗಳನ್ನು ಹೊಂದಿರುತ್ತವೆ. ಸೇವಿಸಿದ ಆಹಾರ ದ್ರವದಲ್ಲಿ ಕರಗಿ ರಸನ ಮೊಗ್ಗುಗಳಿಗೆ ತಲುಪುತ್ತವೆ. ಅಲ್ಲಿ ಮೊಗ್ಗುಗಳು ಪ್ರಚೋದಿಸಲ್ಪಟ್ಟು ಸಂದೇಶವನ್ನು ಜ್ಞಾನವಾಹಿಗಳ ಮೂಲಕ ಮಸ್ತಿಷ್ಕಕ್ಕೆ ತಲುಪಿಸುತ್ತವೆ. ನಾಲಗೆಯ ಮುಂಭಾಗ ಸಿಹಿ ರುಚಿಯನ್ನು ಹಿಂಭಾಗ ಕಹಿ ರುಚಿಯನ್ನು, ಉಭಯ ಪಾರ್ಶ್ವಗಳು ಹುಳಿರುಚಿಯನ್ನು ಇಡೀ ನಾಲಗೆ ಉಪ್ಪು ರುಚಿಯನ್ನು ಗ್ರಹಿಸುತ್ತವೆ.

ರಸನ ಮತ್ತು ಘ್ರಾಣೇಂದ್ರಿಯಗಳನ್ನು ಯಮಳೇಂದ್ರಿಯಗಳೆಂದು ಕರೆಯುತ್ತಾರೆ. ಇವೆರಡೂ ಒಂದನ್ನೊಂದು ಅವಲಂಬಿಸಿವೆ.

**ಚರ್ಮ**




ಚರ್ಮದ ರಚನೆ

ಚರ್ಮದಡಿಯಲ್ಲಿ ಐದು ವಿಧವಾದ ಇಂದ್ರಿಯ ಬಿಂದುಗಳಿವೆ. ಅವುಗಳನ್ನು ಮೇಸ್ನರನ ಕರ್ಣಿಕೆ, ನರಗಳ ಮುಕ್ತ ಕೊನೆಗಳು, ಕ್ರೂಸೆಕೊನೆ ಬಲ್ಬುಗಳು, ರೂಫಿನಿ ಕೊನೆಗಳು, ಪೆಸಿನಿಯನ್ ಕರ್ಣಿಕೆ ಎಂದು ಹೆಸರಿಸಬಹುದು. ಮೇಸ್ನರನ ಕರ್ಣಿಕೆಗಳು ಸ್ಪರ್ಶ ಮತ್ತು ಒತ್ತಡವನ್ನು ಗ್ರಹಿಸುತ್ತವೆ. ನರಗಳ ಮುಕ್ತ ಕೊನೆಗಳು ಮತ್ತು ಕ್ರೂಸೆಕೊನೆ ಬಲ್ಬುಗಳು ಶೀತವನ್ನು ಗ್ರಹಿಸುತ್ತವೆ. ರೂಫಿನಿ ಕೊನೆಗಳು ಬಿಸಿಯನ್ನು ಪೆಸಿನಿಯನ್ ಕರ್ಣಿಕೆಗಳು ಅಂಗಗಳ ಚಲನೆಯನ್ನು ಗ್ರಹಿಸುತ್ತವೆ.

ಗಾಲ್ಗಿಸ್ ಟೆಂಡನ್ನುಗಳು ಮತ್ತು ಮಾಂಸದ ಸ್ಪಿಂಡಲ್ಲುಗಳು ವಸ್ತುಗಳ ತೂಕವನ್ನೂ, ಅಂಗಾಂಗಗಳ ವಿವಿಧ ಭಂಗಿಗಳನ್ನೂ ಸಂವೇದಿಸುತ್ತವೆ.

ಸಂವೇದನೆಗಳೇ ಅರಿವಿನ ಮೊದಲ ಹಂತವಾಗಿರುವುದರಿಂದ ಸಂವೇದನೆಗಳು ಮತ್ತು ಸಂವೇದನಾಂಗಗಳ ಬಗೆಗಿನ ಜ್ಞಾನ ಅತ್ಯಗತ್ಯ. ಸ್ಪಷ್ಟ ಅರಿವಿಗೆ ಸಂವೇದನಾ ತರಬೇತಿಯ ಅಗತ್ಯವಿದೆ. ಪೂರ್ವ–ಪ್ರಾಥಮಿಕ ಮತ್ತು ಪ್ರಾಥಮಿಕ ಹಂತದಲ್ಲಿ ಸಂವೇದನಾ ತರಬೇತಿ ಅತಿ ಪ್ರಮುಖ ಪಾತ್ರ ವಹಿಸುತ್ತದೆ. ಮಾಂಟಿಸ್ಸೋರಿಯಂತಹ ಬೋಧನಾ ವಿಧಾನಗಳು ಸಂವೇದನಾ ತರಬೇತಿಗೆ ಒತ್ತು ಕೊಡುತ್ತವೆ. ಸಂವೇದನಾಂಗಗಳಲ್ಲಿರುವ ಆಂಶಿಕ ಯಾ ಪೂರ್ಣಕೊರತೆಗಳು ವಿಶೇಷ ಶಿಕ್ಷಣ ಕ್ರಮಗಳಿಗೆ ಎಡೆ ಮಾಡಿ ಕೊಡುತ್ತದೆ. ವಿಶೇಷ ಶಿಕ್ಷಣ ಅಥವಾ ಅಸಾಧಾರಣ ಮಕ್ಕಳ ಶಿಕ್ಷಣದಲ್ಲಿ ಈ ಬಗೆಯ ಮಕ್ಕಳಿಗೆ ಶಿಕ್ಷಣ ಒದಗಿಸುವ ಚಿಂತನೆ ಮಾಡಲಾಗುತ್ತದೆ.

–ಎ.ಜಿ.ಗೋ.ಕೊ.

## ಸಂಶೋಧನಾ ಸಮಸ್ಯೆಯ ಆಯ್ಕೆ

ಸಂಶೋಧನೆಗೆ ಸೂಕ್ತವಾದ ಸಮಸ್ಯೆಯನ್ನು ಆಯ್ಕೆ ಮಾಡುವುದು ಸಂಶೋಧನಾ ಪ್ರಕ್ರಿಯೆಯ ಮೊದಲ ಹಂತ. ಸಮಸ್ಯಾ ಸನ್ನಿವೇಶವಿದ್ದಾಗ ಮತ್ತು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾದಾಗ ನಾವು ಸಂಶೋಧನೆಯನ್ನು ಕೈಗೊಳ್ಳುತ್ತೇವೆ. ಶೈಕ್ಷಣಿಕ ಸಂಶೋಧನೆಯ ಪ್ರತಿಯೊಂದು ಕ್ಷೇತ್ರದಲ್ಲೂ ಅನೇಕ ಸಮಸ್ಯೆಗಳಿದ್ದು ಅವು ಶುದ್ಧ, ಅನ್ವಯಿಕ ಮತ್ತು ಕ್ರಿಯಾ ಸಂಶೋಧನೆಗೆ ಸಂಬಂಧಿಸಿರಬಹುದು. ಅಂತಹ ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಪರಿಹಾರ ಕಂಡುಹಿಡಿಯುವ ಮೂಲಕ ಶೈಕ್ಷಣಿಕ ಜ್ಞಾನವನ್ನು ಸಮೃದ್ಧಿಗೊಳಿಸುವ ಅವಶ್ಯಕತೆಯಿದೆ. ಸಂಶೋಧನಾ ಸಮಸ್ಯೆಯ ಆಯ್ಕೆಯು ಸುಲಭವಾದ ಪ್ರಕ್ರಿಯೆ ಅಲ್ಲದಿದ್ದರೂ ಅದು ಸಂಶೋಧನಾ ಪ್ರಕ್ರಿಯೆಯ ಮಹತ್ವಪೂರ್ಣ ಹಂತವಾಗಿದೆ. ಇದಕ್ಕಾಗಿ ಸಂಶೋಧಕನು ಹೆಚ್ಚಿನ ಸಂಯಮ ಮತ್ತು ತರ್ಕಬದ್ಧವಾಗಿ ಆಲೋಚಿಸುವ ಸಾಮರ್ಥ್ಯವನ್ನು ಹೊಂದಿರಬೇಕಾದುದು ಅವಶ್ಯಕ. ಸಂಶೋಧಕನು ಮೊದಲಿಗೆ ವಿಸ್ತಾರವಾದ ವಿಷಯವೊಂದನ್ನು ಆಯ್ಕೆ ಮಾಡಿಕೊಂಡು ನಂತರ ಅದನ್ನು ನಿರ್ದಿಷ್ಟವಾದ ಸಮಸ್ಯೆಯ ಮಟ್ಟಕ್ಕೆ ಸಂಕುಚಿತಗೊಳಿಸಬೇಕು. ಈ ರೀತಿ ಸಮಸ್ಯೆಯೊಂದನ್ನು ಆಳವಾಗಿ ಅಭ್ಯಾಸ ಮಾಡುವುದು ಶ್ರಮದಾಯಕ ಮತ್ತು ಜವಾಬ್ದಾರಿಯುತ ಕಾರ್ಯವಾಗಿದೆ.

### ಸಂಶೋಧನಾ ಸಮಸ್ಯೆಯ ಅವಶ್ಯಕತೆ

ಸಂಶೋಧನಾ ಸಮಸ್ಯೆಯ ಆಯ್ಕೆ ಸಂಶೋಧಕನು ತನ್ನ ಅಧ್ಯಯನದಲ್ಲಿ ನಿರ್ದಿಷ್ಟವಾಗಿ ಏನನ್ನು ಸಾಧಿಸಬಯಸುತ್ತಾನೆ ಎಂಬುದರೊಡನೆ ನೇರ ಸಂಬಂಧ ಹೊಂದಿದೆ. ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಸಮಸ್ಯೆಯನ್ನು ಅಂತಿಮಗೊಳಿಸುವಲ್ಲಿ ಸಂಶೋಧಕನ ಅಗತ್ಯತೆಗಳು ಮತ್ತು ಉದ್ದೇಶಗಳು ಯಾವುವು? ಉದ್ದೇಶಿತ ಅಧ್ಯಯನ ಯಾವ ರೀತಿಯಲ್ಲಿ ಅಸ್ತಿತ್ವದಲ್ಲಿರುವ ಜ್ಞಾನ ಶಾಖೆಗಳನ್ನು

Digitised by Bharatavani, CIIL

ಶ್ರೀಮಂತಗೊಳಿಸುತ್ತದೆ? ಹೊಸ ಸಂಶೋಧನೆಗೆ ಮಾಹಿತಿ ಸಂಗ್ರಹಣೆಯ ಮೂಲ ಯಾವುದು? ಈ ಎಲ್ಲ ಪ್ರಶ್ನೆಗಳಿಗೆ ಸಂಶೋಧಕ ಉತ್ತರಿಸಬೇಕಾಗುತ್ತದೆ. ಅನಂತರವೇ ಸಂಶೋಧನಾ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಲು ಸಂಶೋಧಕ ಸಮರ್ಥನಾಗುತ್ತಾನೆ.

ಸಂಶೋಧಕನು ತನ್ನ ಅಧ್ಯಯನವು ಯಾವ ರೀತಿಯಲ್ಲಿ ಪ್ರಚಲಿತ ಜ್ಞಾನದ ಕೊರತೆಯನ್ನು ತುಂಬಲು ಪ್ರಯತ್ನಿಸುತ್ತದೆ, ಯಾವ ರೀತಿಯಲ್ಲಿ ಹಿಂದಿನ ಸಂಶೋಧನೆಗಳಲ್ಲಿನ ಕೊರತೆಗಳನ್ನು ಹೋಗಲಾಡಿಸಲು ಸಹಾಯ ಮಾಡುತ್ತದೆ ಅಥವಾ ಯಾವ ರೀತಿಯಲ್ಲಿ ಸರ್ವವಿದಿತವಾದ ವಿಷಯಗಳ ಅವಲೋಕಿತ ಘಟನೆಗಳ ವ್ಯಾಖ್ಯಾನಕ್ಕೆ ಅವಕಾಶ ಮಾಡಿಕೊಡುತ್ತದೆ ಎಂಬುದನ್ನು ಸಾಬೀತುಪಡಿಸಬೇಕು. ಸಂಶೋಧನೆಯ ಫಲಿತಾಂಶಗಳು ಸಿದ್ಧಾಂತ, ಸಾಮಾನ್ಯೀಕರಣ ಮತ್ತು ತತ್ವಗಳ ತಳಹದಿಯಾಗಿ ಮಾರ್ಪಟ್ಟು ಹೊಸ ಸಂಶೋಧನಾ ಕ್ಷೇತ್ರಗಳಿಗೆ ದಾರಿ ಮಾಡಿಕೊಡಬೇಕು. ಈ ರೀತಿ ಸಂಶೋಧಿಸಲ್ಪಟ್ಟ ಸಂಶೋಧನಾ ಫಲಿತಾಂಶಗಳು ಯಾವುದೇ ತತ್‌ಕ್ಷಣದ ನಿಹಿತಾರ್ಥಗಳನ್ನು ಹೊಂದಿಲ್ಲದಿದ್ದರೂ, ಅವು ಸ್ವಲ್ಪ ಮಟ್ಟಿನ ಪ್ರಾಯೋಗಿಕ ಅನ್ವಯಿಕತೆ ಹೊಂದಿರುವುದು ಅವಶ್ಯಕ.

**ಸಂಶೋಧನಾ ಸಮಸ್ಯೆಯ ಮೂಲಗಳು**

ಸಂಶೋಧನಾ ಸಮಸ್ಯೆಯ ಆಯ್ಕೆ ಯಾವಾಗಲೂ ಕ್ಲಿಷ್ಟವಾದದ್ದು. ವಿಸ್ತಾರವಾದ ಕ್ಷೇತ್ರವೊಂದನ್ನು ಆಯ್ಕೆ ಮಾಡಿಕೊಂಡ ನಂತರ ಸಂಶೋಧಕ ಅದನ್ನು ನಿರ್ದಿಷ್ಟ ಸಮಸ್ಯೆಯನ್ನಾಗಿ ಪರಿವರ್ತಿಸಿಕೊಳ್ಳಬೇಕಾಗುತ್ತದೆ. ಆತ ತಾನು ವೈಜ್ಞಾನಿಕ ವಿಧಾನಗಳನ್ನು ಬಳಸಿ ಪರಿಹಾರ ಕಂಡುಕೊಳ್ಳಬಯಸುವ ಸಮಸ್ಯೆಯನ್ನು ನಿರ್ದಿಷ್ಟವಾಗಿ ರೂಪಿಸಬೇಕು. ಸಂಶೋಧನೆ ಮಾಡಬೇಕಾದ ಎಲ್ಲ ಶೈಕ್ಷಣಿಕ ಸಮಸ್ಯೆಗಳನ್ನು ಪಟ್ಟಿ ಮಾಡುವುದು ಅಸಾಧ್ಯ. ಸಂಶೋಧಕನು ತನ್ನ ಅಗತ್ಯಗಳು ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಸಂಶೋಧನಾ ಸಮಸ್ಯೆಯನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ನಡೆಸುವುದು ಅತ್ಯಂತ ಜವಾಬ್ದಾರಿಯುತ ಕಾರ್ಯವಾಗಿದ್ದು ಶ್ರಮ ಮತ್ತು ಸಮಯಗಳೆರಡನ್ನು ಅದರ ಮೇಲೆ ವಿನಿಯೋಗಿಸುವ ಅವಶ್ಯಕತೆ ಇದೆ. ಸಂಶೋಧಕನು ಸಮಸ್ಯೆಯನ್ನು ಆಯ್ಕೆ ಮಾಡಲು ಮತ್ತು ವ್ಯಾಖ್ಯಾನಿಸಲು ಅನೇಕ ಮೂಲಗಳನ್ನು ಅನ್ವೇಷಿಸಬೇಕಾಗುತ್ತದೆ. ಕೆಲವು ಮುಖ್ಯವಾದ ಆಕರಗಳು ಸಂಶೋಧಕನಿಗೆ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅತ್ಯಂತ ಉಪಯುಕ್ತವಾಗಿವೆ.

1. **ವೃತ್ತಿ ಅನುಭವ:** ಸಂಶೋಧಕನಿಗೆ ಅತ್ಯಂತ ಪ್ರಯೋಜನಕಾರಿಯಾದ ಸಂಶೋಧನಾ ಮೂಲವೆಂದರೆ ವೃತ್ತಿಯಿಂದ ಶಿಕ್ಷಕನಾಗಿ ಆತ ಪಡೆದುಕೊಂಡಿರುವ ಸ್ವ-ಅನುಭವ. ತರಗತಿಯಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿ ಮತ್ತು ವಸ್ತುಗಳ ನಡುವೆ ಅನ್ಯೋನ್ಯಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ. ಈ ಅನ್ಯೋನ್ಯಕ್ರಿಯೆ ಶೈಕ್ಷಣಿಕ ಸಂಶೋಧನೆಗೆ ಅವಶ್ಯಕವಾದ ಸಮಸ್ಯೆಗಳನ್ನು ಒದಗಿಸುತ್ತದೆ. ತರಗತಿಯಲ್ಲಿನ ಉಪನ್ಯಾಸಗಳು ಮತ್ತು ಚರ್ಚೆಗಳು ಅನೇಕ ಉತ್ತೇಜನಕಾರಿಯಾದ ಸಮಸ್ಯೆಗಳನ್ನು ಸೂಚಿಸುತ್ತವೆ. ಸಂಶೋಧಕನು ಶಿಕ್ಷಕ, ಬೋಧನಾ ಉದ್ದೇಶಗಳು, ಕಲಿಕಾ ಅನುಭವಗಳು ಮತ್ತು ವಿದ್ಯಾರ್ಥಿಗಳ ವರ್ತನಾ ಬದಲಾವಣೆಗಳ ನಡುವೆ ಸಂಬಂಧ ಸ್ಥಾಪಿಸುವ ದೃಷ್ಟಿಯಿಂದ ತರಗತಿಯಲ್ಲಿನ ಬೋಧನೆ ವಿದ್ಯಾರ್ಥಿಗಳ ನಡವಳಿಕೆಯ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳ ನಡವಳಿಕೆಗಳನ್ನು ಅವರ ಸಾಧನೆ, ಆಸಕ್ತಿ, ಮನೋಭಾವನೆ, ಬುದ್ಧಿ, ಸಾಮರ್ಥ್ಯ, ಪ್ರೇರಣೆ ಮತ್ತು ವ್ಯಕ್ತಿತ್ವದ ಆಧಾರದ ಮೇಲೆ ವಿಶ್ಲೇಷಿಸಬಹುದು. ವಿದ್ಯಾರ್ಥಿಗಳ ಅನುಭವಗಳು, ಅವರ ಮನೋಭಾವನೆಗಳು, ಮನೆಯ ವಾತಾವರಣ, ಸಮಾನ ವಯಸ್ಕರ ಪ್ರಭಾವ, ಪ್ರೇರಣೆಯ ಮಟ್ಟ ಇವುಗಳೂ ಸಹ ಸಂಶೋಧನಾ ಸಮಸ್ಯೆಯ ಮೂಲಗಳಾಗಿವೆ.

2. **ವೃತ್ತಿ ಸಾಹಿತ್ಯ:** ಸಂಶೋಧಕನಿಗೆ ಆಸಕ್ತಿಯಿರುವ ಕ್ಷೇತ್ರದಲ್ಲಿ ಲಭ್ಯವಿರುವ ಸಾಹಿತ್ಯದ ಬಗ್ಗೆ ಪೂರ್ಣ ಪರಿಚಯವಿರಬೇಕು. ವೃತ್ತಿ ಸಾಹಿತ್ಯದ ಅವಲೋಕನ ಸಂಶೋಧಕನಿಗೆ ಪ್ರಮುಖವಾದ ಪ್ರಚಲಿತ ಸಂಶೋಧನಾ ಸಮಸ್ಯೆಗಳ ಬಗ್ಗೆ ಪರಿಚಯ ಮಾಡಿಕೊಡುವುದಷ್ಟೇ ಅಲ್ಲದೆ ಸಂಶೋಧನೆಯನ್ನು ನಡೆಸುವ ವಿಧಾನಗಳ ಬಗ್ಗೆಯೂ ಮಾಹಿತಿ ನೀಡುತ್ತದೆ. ಸಂಶೋಧನ ಸಮಸ್ಯೆಯ ಆಯ್ಕೆಗೆ ಪರೋಕ್ಷ ಮೂಲಗಳೆಂದರೆ ಸಂಶೋಧನಾ ವರದಿಗಳು, ಪ್ರೌಢ ಪ್ರಬಂಧಗಳು, ಶೈಕ್ಷಣಿಕ ಸಂಚಿಕೆಗಳು, ನಿಯತಕಾಲಿಕೆಗಳು, ಸರ್ಕಾರಿ ಪ್ರಕಟಣೆಗಳು ಇತ್ಯಾದಿ. ಇವುಗಳಲ್ಲದೆ ಶಿಕ್ಷಣದ ವಿಶ್ವಕೋಶ, ಶೈಕ್ಷಣಿಕ ಸಂಶೋಧನೆಯ ವಿಶ್ವಕೋಶ, ಅಂತರರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಸಂಗ್ರಹಗಳು, ಶಿಕ್ಷಣ ಸಂಶೋಧನಾ ಕೈಪಿಡಿ, ಮನಃಶಾಸ್ತ್ರೀಯ ಕೈಪಿಡಿಗಳು ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆಗೆ ಅಗತ್ಯವಿರುವ ವಿಷಯಗಳು ಮತ್ತು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ.

3. **ಸಿದ್ಧಾಂತಗಳ ತಾರ್ಕಿಕ ತೀರ್ಮಾನಗಳು:** ವಿವಿಧ ಶೈಕ್ಷಣಿಕ ಮತ್ತು ಮನಃಶಾಸ್ತ್ರೀಯ ಸಿದ್ಧಾಂತಗಳಿಂದ ತೆಗೆದುಕೊಳ್ಳಬಹುದಾದ ತಾರ್ಕಿಕ ತೀರ್ಮಾನಗಳು ಸಂಶೋಧನಾ ಸಮಸ್ಯೆಗಳ ಒಂದು ಪ್ರಮುಖ ಮೂಲವಾಗಿದೆ. ಕಲಿಕಾ ಸಿದ್ಧಾಂತಗಳು, ವ್ಯಕ್ತಿತ್ವ ಸಿದ್ಧಾಂತಗಳು, ಬುದ್ಧಿಶಕ್ತಿ ಸಿದ್ಧಾಂತಗಳು, ಪ್ರೇರಣಾ ಸಿದ್ಧಾಂತಗಳು, ಸಮಾಜ ಶಾಸ್ತ್ರೀಯ ಸಿದ್ಧಾಂತಗಳು ಮತ್ತು ಇತರ ಸಿದ್ಧಾಂತಗಳು ತರಗತಿ ಸನ್ನಿವೇಶದಲ್ಲಿ ಸಂಶೋಧನೆ ನಡೆಸಲು ಅನೇಕ ಸಮಸ್ಯೆಗಳನ್ನು ಒದಗಿಸುತ್ತವೆ. ವೈಜ್ಞಾನಿಕ ವಿಧಾನವನ್ನು ಅನ್ವಯಿಸುವುದರ ಮೂಲಕ ಮಾತ್ರ ಶೈಕ್ಷಣಿಕ ಸನ್ನಿವೇಶಗಳಲ್ಲಿ ವಿವಿಧ ಸಿದ್ಧಾಂತಗಳ ಸಿಂಧುತ್ವ, ವ್ಯಾಪ್ತಿ ಮತ್ತು ಪ್ರಾಯೋಗಿಕತೆಯನ್ನು ಪರೀಕ್ಷಿಸಬಹುದು.

4. **ತಾಂತ್ರಿಕ ಮತ್ತು ಸಾಮಾಜಿಕ ಬದಲಾವಣೆಗಳು:** ತಾಂತ್ರಿಕ ಮತ್ತು ಸಾಮಾಜಿಕ ಬದಲಾವಣೆಗಳು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ಹೊಸ ಪಠ್ಯಕ್ರಮಗಳು ಮತ್ತು ಕಲಿಕಾ ಕ್ರಮಗಳ ಅಳವಡಿಕೆಯನ್ನು ಅನಿವಾರ್ಯಗೊಳಿಸುತ್ತವೆ. ಈ ಹೊಸ ಬೆಳವಣಿಗೆಗಳು ನಿರಂತರವಾಗಿ ಸಂಶೋಧನೆಗೆ ಅಗತ್ಯವಾದ ಹೊಸ ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತವೆ. ನಾವಿಂದು ತಾಂತ್ರಿಕ ಮತ್ತು ಕಂಪ್ಯೂಟರ್ ಯುಗದಲ್ಲಿ ಬದುಕುತ್ತಿದ್ದೇವೆ. ಇವು ಪ್ರಬಲ ಮಾಧ್ಯಮಗಳಾಗಿದ್ದು ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗೆ ಬೇಕಾದ ಅವಕಾಶಗಳನ್ನು ಒದಗಿಸುತ್ತವೆ. ಅಂತರ್‌ಜಾಲ, ಇ-ಕಲಿಕಾ ತರಗತಿಗಳು, ಇ-ಪುಸ್ತಕ, ಇ-ನಿರ್ವಹಣೆ, ವಿದ್ಯುನ್ಮಾನ ಯಂತ್ರಗಳು ಇವುಗಳ ಪರಿಣಾಮವಾಗಿ ನಾವು ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ತರಗತಿ ಸನ್ನಿವೇಶದಲ್ಲಿ ವಿವಿಧ ತಾಂತ್ರಿಕ ಉಪಕರಣಗಳ ಬಳಕೆಗೆ ಸಂಬಂಧಿಸಿದಂತೆ ನವೀನ ಪ್ರಯೋಗಗಳನ್ನು ಮಾಡಲಾಗುತ್ತಿದೆ. ದೂರದರ್ಶನದ ಮೂಲಕ ಬೋಧನೆ, ಯೋಜಿತ ಬೋಧನೆ, ಕಂಪ್ಯೂಟರ್ ಸಹಾಯಕ ಬೋಧನೆ ಮತ್ತು ಕಲಿಕೆ, ಮೊದಲಾದ ಹೊಸ ವಿಧಾನಗಳನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಿ ಸಂಶೋಧನೆಗೆ ಒಳಪಡಿಸಬೇಕಾಗಿದೆ.

**ಸಂಶೋಧನಾ ಸಮಸ್ಯೆಯ ಆಯ್ಕೆಯ ಮಾನದಂಡಗಳು**

ಸಂಶೋಧಕನು ಸಂಶೋಧನಾ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವಾಗ ಕೆಲವು ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು.

Digitised by Bharatavani, CIIL

1. ಸಮಸ್ಯೆಯು ಪ್ರಚಲಿತ ವಿಷಯ ಮತ್ತು ವೃತ್ತಿಗೆ ಅಗತ್ಯವಾದ ಸಮಂಜಸತೆ ಮತ್ತು ಮಹತ್ವವನ್ನು ಹೊಂದಿರಬೇಕು.
2. ಸಿದ್ಧಾಂತ ಅಥವಾ ತಂತ್ರಜ್ಞಾನಕ್ಕೆ ಅರ್ಥಪೂರ್ಣವಾದ ಕೊಡುಗೆ ನೀಡುವ ಸಾಧ್ಯತೆಯಿರಬೇಕು.
3. ವ್ಯವಸ್ಥೆ ಅಥವಾ ವೃತ್ತಿ ಆಚರಣೆಯ ಯಾವುದೇ ಅಂಶವನ್ನು ಉತ್ತಮಪಡಿಸಲು ನೆರವಾಗಬೇಕು.
4. ಸಂಶೋಧಕ ತನ್ನ ಆಸಕ್ತಿಗಳ ಆಧಾರದ ಮೇಲೆ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಬೇಕು.
5. ಸಂಶೋಧನೆಯಲ್ಲಿ ಬಳಸುವ ವಿಧಾನಗಳು, ಸಾಧನಗಳು ಮತ್ತು ತಂತ್ರಗಳು ಸುಲಭವಾಗಿ ಲಭ್ಯವಾಗುವಂತಿರಬೇಕು.
6. ಸಂಶೋಧಕನು ತಾನು ಆಯ್ಕೆ ಮಾಡಿಕೊಂಡ ಸಮಸ್ಯೆಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ಬೇಕಾದ ಜ್ಞಾನಾಂಶಗಳನ್ನು, ಕೌಲಗಳನ್ನು ಹೊಂದಿರಬೇಕು.
7. ಸಂಶೋಧಕನು ಸಂಶೋಧನೆಗೆ ಸಂಬಂಧಿಸಿದಂತೆ ತರಬೇತಿ ಪಡೆದಿರಬೇಕು.
8. ಸಂಶೋಧಕ ತನ್ನ ಅಧ್ಯಯನಕ್ಕಾಗಿ ಅಗತ್ಯವಾದ ಸಮಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.
9. ಸಂಶೋಧನೆಗೆ ಅಂಕಿ ಅಂಶಗಳನ್ನು / ಮಾಹಿತಿಗಳನ್ನು ಸಂಗ್ರಹಿಸಲು ಸೂಕ್ತವಾದ ಸಾಧನಗಳು ಅಗತ್ಯ. ಸಂಶೋಧಕ ಕೆಲವು ಸಾಧನಗಳನ್ನು ಸ್ವತಃ ಸಿದ್ಧಪಡಿಸಿಕೊಳ್ಳಲು ಸಮರ್ಥನಾಗಿರಬೇಕು ಅಥವಾ ಲಭ್ಯವಿರುವ ಸಾಧನಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು.
10. ಸಂಶೋಧನೆಗೆ ಅಗತ್ಯವಾದ ಹಣದ ಲಭ್ಯತೆಯನ್ನು ಪರಿಗಣಿಸಬೇಕು.
11. ಸಂಶೋಧಕನು ವ್ಯಾಪ್ತಿಯಲ್ಲಿ ಮಿತಿಯುಳ್ಳ ಸಮಸ್ಯೆಯನ್ನು ಆಯ್ಕೆ ಮಾಡಿಕೊಂಡು ಅದನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಅಗತ್ಯ.
12. ಸಂಶೋಧನೆಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಶಿಕ್ಷಣ ತಜ್ಞರು ಮತ್ತು ವಿದ್ವಾಂಸರ ಕೃತಿಗಳಿಂದ ಪಡೆಯಬೇಕು.
13. ಸಂಶೋಧನಾ ಸಮಸ್ಯೆಯು ಹೊಸ ಜ್ಞಾನಕ್ಕೆ ದಾರಿ ಮಾಡಿಕೊಡಬೇಕು.
14. ಸಂಶೋಧನಾ ಸಮಸ್ಯೆ ನವೀನವಾಗಿರಬೇಕು. ಈ ಹಿಂದೆ ಆ ವಿಷಯದ ಮೇಲೆ ಸಂಶೋಧನೆ ನಡೆದಿದ್ದರೆ ಸಂಶೋಧಕನ ಶ್ರಮ ಮತ್ತು ಸಮಯ ವ್ಯರ್ಥವಾಗುತ್ತದೆ.

### ಸಂಶೋಧನಾ ಸಮಸ್ಯೆಯ ಮೌಲ್ಯಮಾಪನ

ಸಂಶೋಧಕನು ಸಮಸ್ಯೆಯೊಂದನ್ನು ಅಧ್ಯಯನಕ್ಕೆ ಆರಿಸಿಕೊಂಡಾಗ ತನ್ನನ್ನು ತಾನು ಅನೇಕ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ. ಈ ಪ್ರಶ್ನೆಗಳು ಸಮಸ್ಯೆಯನ್ನು ಅದರ ಸಮರ್ಪಕತೆ ಮತ್ತು ಸಾಮಾಜಿಕ ಮೌಲ್ಯದ ಆಧಾರದ ಮೇಲೆ ಮೌಲ್ಯಮಾಪನ ಮಾಡಲು ಸಹಾಯ ಮಾಡುತ್ತವೆ. ಪ್ರಾಸ್ತಾವಿಕ ಸಂಶೋಧನಾ ಸಮಸ್ಯೆಯೊಂದನ್ನು ಅಧ್ಯಯನಕ್ಕೆ ಯೋಗ್ಯವೆಂದು ಪರಿಗಣಿಸಲು ಈ ಪ್ರಶ್ನೆಗಳನ್ನು ಸಕಾರಾತ್ಮಕವಾಗಿ ಉತ್ತರಿಸಬೇಕಾಗುತ್ತದೆ.

1. **ಸಮಸ್ಯೆ ಸಂಶೋಧನಾರ್ಹವೇ?:** ಸಂಶೋಧನೆಯ ಮೂಲಕ ಎಲ್ಲ ಸಮಸ್ಯೆಗಳಿಗೂ ಸಮರ್ಪಕವಾದ ಉತ್ತರ ಕಂಡುಕೊಳ್ಳಲು ಸಾಧ್ಯವಿಲ್ಲ. ಉದಾಹರಣೆಗೆ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ವೈಜ್ಞಾನಿಕ ವಿಧಾನಗಳ ಮೂಲಕ ಉತ್ತರ ಕಂಡುಹಿಡಿಯುವುದು ಕಷ್ಟ. ಆದುದರಿಂದ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವಾಗ ಅದು ಸಂಶೋಧನಾರ್ಹವೇ ಎಂಬುದನ್ನು ಪರಿಗಣಿಸುವುದು ಸೂಕ್ತ.

2. **ಸಮಸ್ಯೆ ನವೀನವಾಗಿದೆಯೆ?:** ಈಗಾಗಲೇ ತೃಪ್ತಿಕರವಾಗಿ ಅಧ್ಯಯನ ಮಾಡಿರುವ ಸಮಸ್ಯೆಯನ್ನು ಪುನಃ ಅಧ್ಯಯನ ಮಾಡುವುದರಲ್ಲಿ ಅರ್ಥವಿಲ್ಲ. ಆದುದರಿಂದ ನಿಗದಿತ ಕ್ಷೇತ್ರದಲ್ಲಿ ಇದುವರೆಗೆ ನಡೆದಿರುವ ಅಧ್ಯಯನಗಳ ಪೂರ್ವ ಪರಿಚಯ ಸಂಶೋಧಕನಿಗೆ ಇರಬೇಕಾದದ್ದು ಅತ್ಯವಶ್ಯಕ. ಸಂಶೋಧಕನು ಅಧ್ಯಯನದ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ಅದು ಹೊಸ ವಿಷಯವೆಂದು ಖಾತ್ರಿಯಾಗುವವರೆಗೆ ತನ್ನ ಸಂಶೋಧನೆಯನ್ನು ಪ್ರಾರಂಭಿಸಬಾರದು. ಸಂಶೋಧಕನು ಈ ಹಿಂದಿನ ಅಧ್ಯಯನಗಳ ಫಲಿತಾಂಶಗಳ ಸಮರ್ಪಕತೆಯನ್ನು ಪರೀಕ್ಷಿಸಬಯಸಿದ್ದಲ್ಲಿ ಅಥವಾ ಅವುಗಳನ್ನು ಹೊಸ ವಿದ್ಯಮಾನಗಳಿಗೆ ಅನ್ವಯಿಸಬಯಸಿದಲ್ಲಿ ಅಂತಹ ಅಧ್ಯಯನವನ್ನು ಪುನರಾವರ್ತಿಸಬಹುದು.

3. **ಸಮಸ್ಯೆ ಮಹತ್ವವಾದದ್ದೇ?:** ಸಂಶೋಧಕ ತನ್ನ ಅಧ್ಯಯನದ ಮೂಲಕ ಏನನ್ನು ಸಾಧಿಸಬಯಸುತ್ತಾನೆ ಎಂಬುದರೊಡನೆ ಸಂಶೋಧನಾ ಸಮಸ್ಯೆಯ ಮಹತ್ವ ನಿಕಟ ಸಂಬಂಧ ಹೊಂದಿದೆ. ನಿರ್ದಿಷ್ಟ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸಂಶೋಧಕನ ಉದ್ದೇಶಗಳೇನು? ತನ್ನ ಅಧ್ಯಯನದ ಮೂಲಕ ಯಾವ ಹೊಸ ಜ್ಞಾನವನ್ನು ಅಸ್ತಿತ್ವದಲ್ಲಿರುವ ಜ್ಞಾನಶಾಖೆಗೆ ನೀಡಬಯಸುತ್ತಾನೆ? ಹೊಸ ಜ್ಞಾನವು ಮೌಲ್ಯವನ್ನು ಉಳ್ಳದ್ದಾಗಿರುತ್ತದೆಯೆ? ಈ ಎಲ್ಲ ಪ್ರಶ್ನೆಗಳಿಗೂ ಸಂಶೋಧಕ ಸೂಕ್ತವಾಗಿ ಉತ್ತರಿಸಬೇಕಾಗುತ್ತದೆ. ಸಂಶೋಧಕನು ತನ್ನ ಸಂಶೋಧನೆಯ ಫಲಿತಾಂಶಗಳು ಹೇಗೆ ಪ್ರಚಲಿತ ಜ್ಞಾನದ ಪುನರ್ ಅರ್ಥೈಕೆಗೆ ಅವಕಾಶ ಮಾಡಿಕೊಡುತ್ತವೆ ಎಂಬುದನ್ನು ಸಾಬೀತುಪಡಿಸಬೇಕು.

4. **ಸಂಶೋಧಕನಿಗೆ ಸಮಸ್ಯೆಯ ಸಂಶೋಧನಾ ಕಾರ್ಯ ಸಾಧ್ಯವೇ** ಸಂಶೋಧಕನಿಗೆ ವೈಯಕ್ತಿಕ ಕಾರಣಗಳಿಂದಾಗಿ ತಾನು ಆಯ್ಕೆ ಮಾಡಿಕೊಂಡ ಸಮಸ್ಯೆ ಕಾರ್ಯಸಾಧುವಲ್ಲದೆ ಇರಬಹುದು.

a) **ಸಂಶೋಧನಾ ಸಾಮರ್ಥ್ಯ:** ಸಂಶೋಧಕನು ತನಗೆ ಆಸಕ್ತಿ ಮತ್ತು ಸಾಮರ್ಥ್ಯವಿರುವ ಕ್ಷೇತ್ರದಿಂದ ಸಮಸ್ಯೆಯನ್ನು ಆಯ್ಕೆಮಾಡಿಕೊಳ್ಳಬೇಕು. ಸಂಶೋಧನಾ ಸಮಸ್ಯೆಯನ್ನು ಗುರುತಿಸಲು ಪ್ರಸ್ತುತ ಇರುವ ಸಿದ್ಧಾಂತಗಳು, ಪರಿಕಲ್ಪನೆಗಳು ಮತ್ತು ನಿಯಮಗಳ ಪರಿಚಯವಿರಬೇಕು. ದತ್ತಾಂಶವನ್ನು ಸಂಗ್ರಹಿಸಲು ಬೇಕಾದ ಸಾಧನಗಳನ್ನು ರಚಿಸಲು, ಉಪಯೋಗಿಸಲು ಮತ್ತು ಅರ್ಥೈಸಲು ಅಗತ್ಯವಾದ ಕೌಶಲ್ಯ ಇರಬೇಕು. ಇವುಗಳಲ್ಲದೆ ಸಂಶೋಧಕನಿಗೆ ಸಂಶೋಧನಾ ವಿನ್ಯಾಸಗಳು ಮತ್ತು ಸಂಖ್ಯಾಶಾಸ್ತ್ರೀಯ ತಂತ್ರಗಳ ಅಗತ್ಯ ತಿಳುವಳಿಕೆ ಇರಬೇಕು.

b) **ಆಸಕ್ತಿ ಮತ್ತು ಉತ್ಸಾಹ:** ಸಂಶೋಧಕನು ತಾನು ಆಯ್ಕೆ ಮಾಡಿಕೊಂಡಿರುವ ಸಮಸ್ಯೆ ಬಗ್ಗೆ ಆಸಕ್ತಿ ಮತ್ತು ಉತ್ಸಾಹ ಹೊಂದಿರಬೇಕು. ಸಮಸ್ಯೆಯು ಅರ್ಥಪೂರ್ಣವಾಗಿದ್ದು ಸಂಶೋಧಕನ ಕುತೂಹಲವನ್ನು ಕೆರಳಿಸುವಂತಿರಬೇಕು. ಆಸಕ್ತಿರಹಿತ ವಿಷಯದ ಅಧ್ಯಯನವು ಹೆಚ್ಚು ಶ್ರಮದಾಯಕ ಮತ್ತು ನಿರರ್ಥಕವಾಗುತ್ತದೆ.

c) **ಆರ್ಥಿಕ ಪರಿಗಣನೆಗಳು:** ಸಂಶೋಧಕನು ತನ್ನ ಅಧ್ಯಯನವನ್ನು ಪೂರ್ಣಗೊಳಿಸಲು ಬೇಕಾದ ಆರ್ಥಿಕ ಸಂಪನ್ಮೂಲಗಳನ್ನು ಹೊಂದಿದ್ದಾನೆಯೇ ಎಂಬುದನ್ನು ಪರಿಗಣಿಸಬೇಕು. ದತ್ತಾಂಶ ಸಂಗ್ರಹಣೆಗೆ

Digitised by Bharatavani, CIIL

ಬೇಕಾದ ಸಾಧನೆಗಳ ಮುದ್ರಣ, ಪ್ರಯಾಣ, ಸಹಾಯಕರಿಗೆ ಸಂಭಾವನೆ ಇವುಗಳಿಗೆ ತಗಲುವ ವೆಚ್ಚದ ಅಂದಾಜು ಇರಬೇಕು.

**d) ಕಾಲಮಿತಿ:** ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯವು ನಿಗದಿತ ಸಮಯದೊಳಗೆ ಪೂರ್ಣಗೊಳ್ಳುವಂತಿರಬೇಕು. ಸಾಧನಗಳ ರಚನೆ, ದತ್ತಾಂಶ ಸಂಗ್ರಹಣೆ, ದತ್ತಾಂಶ ವಿಶ್ಲೇಷಣೆ ಮತ್ತು ಸಂಶೋಧನಾ ವರದಿ ತಯಾರಿಕೆ ಇವುಗಳ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು ಸಂಶೋಧಕನ ಕರ್ತವ್ಯ. ಸಮಸ್ಯೆ ವಿಸ್ತಾರವಾಗಿದ್ದರೆ ಬೇರೆ ಸಂಶೋಧಕರ ಸಹಕಾರವನ್ನು ಕೋರಬಹುದು.

**e) ಆಡಳಿತಾತ್ಮಕ ಪರಿಗಣನೆಗಳು:** ಸಂಶೋಧಕನು ತನಗೆ ಅಗತ್ಯವಾದ ದತ್ತಾಂಶಗಳು ಸುಲಭವಾಗಿ ಲಭ್ಯವಾಗುತ್ತವೆಯೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಸಂಪರ್ಕಿಸಲು, ಸಾಧನಗಳನ್ನು ಬಳಸಲು, ಪ್ರಯೋಗಗಳನ್ನು ನಡೆಸಲು ಮತ್ತು ದಾಖಲೆಗಳನ್ನು ಪರಿಶೀಲಿಸಲು ಅನುಮತಿ ನೀಡಲು ಸಿದ್ಧವಿದೆಯೋ ಎಂಬುದನ್ನು ದೃಢಪಡಿಸಿಕೊಳ್ಳಬೇಕು.

–ಆರ್. ಎನ್

## ಸಂಶೋಧನಾ ವರದಿ ತಯಾರಿಕೆ

ಪ್ರತಿಯೊಂದು ಸಂಶೋಧನಾ ವರದಿಯು ವಿಧಾನಕ್ಕೆ ಅನುಗುಣವಾಗಿ ಮುಖ್ಯ ಮೂರು ಭಾಗಗಳನ್ನು ಒಳಗೊಂಡಿರುತ್ತದೆ. (1) ಪ್ರಾಥಮಿಕ ಭಾಗ (2) ಮುಖ್ಯಭಾಗ (Body) (3) ಆಕರಗಳು ಪ್ರತಿಯೊಂದು ವಿಭಾಗವು ಉಪಹಂತಗಳನ್ನು ಒಳಗೊಂಡಿರುತ್ತದೆ ಸಂಶೋಧಕನ್ನು ತನ್ನ ಅಧ್ಯಯನದ ಅಂತಿಮ ಹಂತದ ತಿಳಿಯಪಡಿಸುವಿಕೆಯೇ ಸಂಶೋಧನಾವರದಿ ಸಂಶೋಧನಾ ವರದಿಯು ಕೇವಲ ಸಂಶೋಧನೆಯನ್ನು ಮುಕ್ತಾಯಗೊಳಿಸುವುದಲ್ಲದೆ ಅದು ಸಂಶೋಧನೆಯ ಉದ್ದೇಶ ಮತ್ತು ಕಾರ್ಯಗಳನ್ನು ತುಂಬಿಕೊಡುತ್ತದೆ. ಇತರ ಸಂಶೋಧಕರಿಗೆ ಮಾರ್ಗದರ್ಶಕವಾಗಲು ಮತ್ತು ಸಂಶೋಧಕನು ತನ್ನ ಆಲೋಚನೆಯನ್ನು ಮನರಾವಲೋಕಿಸಲು ಸೂಕ್ತವಾಗಿ ಮತ್ತು ವಸ್ತುನಿಷ್ಠವಾದ ಸಂಶೋಧನಾ ವರದಿ ಮಾಡುವಿಕೆ ಅಗತ್ಯವಾಗಿದೆ.

**ಅರ್ಥ ಮತ್ತು ಅಗತ್ಯತೆ:** ಕೈಗೊಂಡ ಸಂಶೋಧನೆಯ ಕುರಿತು, ಅದರ ಶೀರ್ಷಿಕೆ, ಸಂಶೋಧಕರು, ಸಂಶೋಧಿಸಿದ ವರ್ಷ, ವಿಭಾಗ, ಪದವಿ ಉದ್ದೇಶಗಳು, ಸೈದ್ಧಾಂತಿಕ ಹಿನ್ನೆಲೆ, ಸಂಬಂಧಿತ, ಸಾಹಿತ್ಯ ವಿಮರ್ಶೆ, ಪ್ರಾಕಲ್ಪನೆಗಳು, ಪ್ರಾಕ್ಕಲ್ಪನೆಗಳ ಪರೀಕ್ಷಿಸುವಿಕೆ, ಮಾಹಿತಿ ಸಂಗ್ರಹ, ನಮೂನೆಗಳು, ಮಾಹಿತಿ ವಿಶ್ಲೇಷಣಾ ತಂತ್ರಗಳು, ಫಲಿತಾಂಶಗಳು ಮತ್ತು ಬಳಸಿದ ಆಕರಗಳು ಈ ಎಲ್ಲ ಸಮಗ್ರ ಮಾಹಿತಿಯನ್ನೊಳಗೊಂಡ ವಸ್ತುನಿಷ್ಠ, ಉಚಿತವಾದ, ನಂಬಲರ್ಹವಾದ ವ್ಯವಸ್ಥಿತ ದಾಖಲೆಯೇ ಸಂಶೋಧನಾ ವರದಿಯಾಗಿದೆ.

ಸಂಶೋಧನಾ ವರದಿಯು ಕೈಗೊಂಡ ಸಂಶೋಧನೆ ಸಮಸ್ಯೆಯ ಸ್ವರೂಪ, ವ್ಯಾಖ್ಯಾನ, ಅದರ ಕಾರಣಗಳು ಮತ್ತು ಪರಿಹಾರೋಪಾಯಗಳನ್ನು ಪುರಾವೆಗಳ ಸಮೇತವಾಗಿ ಇತರ ಆಸಕ್ತ ಸಂಶೋಧಕರಿಗೆ ಒದಗಿಸುತ್ತದೆ. ಅಲ್ಲದೆ ಸಂಶೋಧನೆಯ ಕುರಿತಾದ ತಂತ್ರಗಳು, ಪ್ರಕ್ರಿಯೆ, ವಿಧಾನ, ಚರ್ಚೆ ಈ ಮೊದಲಾದವುಗಳಕುರಿತು ವರದಿಮಾಡಲು ಸಂಶೋಧಕನಿಗೆ ಮತ್ತು ಸಂಶೋಧನೆಯ ವಸ್ತುನಿಷ್ಠತೆಯನ್ನು ತೀರ್ಮಾನಿಸಲು ಇತರರಿಗೆ ಸಹಾಯಕಾರಿಯಾಗುತ್ತದೆ. ಸಂಶೋಧನಾ ವರದಿಯು ವಸ್ತುನಿಷ್ಠ ಮಾಹಿತಿಯನ್ನಾಧರಿಸಿದ್ದಾಗಿದ್ದು, ಹಿಂದಿನ ಮತ್ತು ಮುಂದಿನ ಅಧ್ಯಯನಗಳಿಗೆ ಕೊಂಡಿಯನ್ನು ನಿರ್ಮಿಸುತ್ತದೆ.

### ಸಂಶೋಧನಾ ವರದಿಯ ನಮೂನೆ (Format of Research Report)

ಸಂಶೋಧನೆಗಳ ವರದಿ ಮಾಡುವಿಕೆಯಲ್ಲಿ ಸಂಶೋಧನಾ ವಿಧಾನಕ್ಕೆ ಅನುಗುಣವಾಗಿ ಈ ಭಾಗಗಳು ಮತ್ತು ಹಂತಗಳನ್ನು ಕಾಣಬಹುದಾಗಿದೆ.

1. ಪ್ರಾಥಮಿಕ ಭಾಗ, 2. ವರದಿಯ ಮುಖ್ಯ ಭಾಗ, 3. ಆಕರಗಳ ಭಾಗ

ಈ ಮೇಲಿನ ಪ್ರಮುಖ ಮೂರೂ ಭಾಗಗಳು ಉಪವಿಭಾಗಗಳನ್ನು ಹೊಂದಿವೆ.

**I. ಪ್ರಾಥಮಿಕ ಭಾಗ:**

**೧. ಮುಖಪುಟ**

**ಮುಖಪುಟ ಒದಗಿಸುವ ಮಾಹಿತಿಗಳೆಂದರೆ**

- ಅಧ್ಯಯನದ ಶೀರ್ಷಿಕೆ
- ಸಂಶೋಧಕರ ಹೆಸರು
- ಉದ್ದೇಶಿತ ಪದವಿ
- ವರದಿಯನ್ನು ಸಲ್ಲಿಸಲಾದ ವಿಶ್ವವಿದ್ಯಾನಿಲಯ ಅಥವಾ ಪ್ರಾಧಿಕಾರ
- ಆರ್ಥಿಕ ಸಹಾಯ ಪಡೆದಿದ್ದರೆ ಅದರ ಮೂಲ
- ಮಾರ್ಗದರ್ಶಕರು
- ವರದಿ ಸಲ್ಲಿಸಿದ ವರ್ಷ ಮತ್ತು ತಿಂಗಳು
- ಅಧ್ಯಯನದ ಶೀರ್ಷಿಕೆಯನ್ನು ಮುಖಪುಟದ ಮಧ್ಯ ಮೇಲ್ಭಾಗದಲ್ಲಿ, ಸಂಶೋಧಕರ ಹೆಸರನ್ನು ಮಧ್ಯ ಪುಟದಲ್ಲಿಯೂ ಉಲ್ಲೇಖಿಸಬೇಕು. ಹಾಗೂ ಅಧ್ಯಯನದ ಶೀರ್ಶಿಕೆಯನ್ನು ಸ್ಪಷ್ಟವಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸಿರಬೇಕು.

**೨. ಪ್ರಮಾಣ ಪತ್ರ**

ಸಂಶೋಧನಾವರದಿಯ ಪ್ರಾಥಮಿಕ ಭಾಗದಲ್ಲಿ ಪ್ರಸ್ತುತ ಕೈಗೊಂಡ ಅಧ್ಯಯನವನ್ನು ಈ ವರೆಗೂ ಬೇರೆಲ್ಲೂ, ಯಾರೂ ಯಾವುದೇ ಪದವಿ ಅಥವಾ ಡಿಪ್ಲೊಮಾದ ಅವಶ್ಯಕತೆಗಾಗಿ ಕೈಗೊಂಡಿಲ್ಲ ಎಂದು ಸಂಶೋಧಕ ಮತ್ತು ಅವನ ಮಾರ್ಗದರ್ಶಕ ಪ್ರಮಾಣೀಕರಿಸಿರಬೇಕು.

**೩. ಕೃತಜ್ಞತಾ ಪತ್ರ**

ಸಂಶೋಧಕನು ಸಂಶೋಧನಾ ಕಾರ್ಯವನ್ನು ಯಶಸ್ವಿಯಾಗಿ ಏರ್ಪಡಿಸುವಲ್ಲಿ ಮತ್ತು ಪೂರ್ಣಗೊಳಿಸುವಲ್ಲಿ ಅಮೂಲ್ಯವಾದ, ಅಸಾಧಾರಣ ಸಹಾಯ ಪಡೆದದ್ದನ್ನು ಸರಳ ಪದಗಳಲ್ಲಿ ಸ್ಮರಣಿಸುವುದನ್ನು ದಾಖಲಿಸುವ ಪುಟ ಇದಾಗಿದೆ. ಸಂಶೋಧಕನು ಯಾವುದೇ ಸಂಬಂಧಿತ ಸಂಸ್ಥೆ ಅಥವಾ ವ್ಯಕ್ತಿ ಗ್ರಂಥಾಲಯಗಳಿಂದ ಮಾಹಿತಿಯ ಸಹಾಯ ಪಡೆಯುವುದು ಅಪೇಕ್ಷಿತ. ಆದರೆ ಅನಾವಶ್ಯಕ ಆಡಂಬರಿಕವಾಗಿ ಹೆಸರುಗಳ, ಕುಟುಂಬದ ಹಾಗೂ ಇತರ ಮುಖ್ಯವಲ್ಲದ ಹೆಸರುಗಳ ಪಟ್ಟಿಯನ್ನು ಬೆಳೆಸುವುದು ಅನವಶ್ಯ.

**೪. ವಿಷಯ ಸೂಚಿ**

ವಿಷಯ ಸೂಚಿಯು ಸಂಶೋಧನ ವರದಿಯ ಮೂರೂ ಭಾಗಗಳೂ ಒಳಗೊಂಡಿರುವ ಅಧ್ಯಾಯಗಳ/ಅನುಬಂಧಗಳ ಸ್ಪಷ್ಟ ನೋಡಿ ಮತ್ತು ಪುಟಸಂಖ್ಯೆಗಳನ್ನು ಒದಗಿಸುತ್ತದೆ. ಸಂಶೋಧನೆಯು ಪ್ರಾಥಮಿಕ ಭಾಗದ

Digitised by Bharatavani, CIIL

ಪುಟಗಳಾದ ಪ್ರಮಾಣ ಪತ್ರ, ಕೃತಜ್ಞತೆ, ಕೋಸ್ಟಕಗಳು ಇತ್ಯಾದಿಗಳಿಗೆ ಚಿಕ್ಕ ರೋಮನ್ (i, ii, iii ಇತ್ಯಾದಿ) ಅಂಕಿಗಳನ್ನು ಕೊಡಬೇಕು. ಅಧ್ಯಯನವು ಒಳಗೊಂಡ ಎಲ್ಲ ಅಧ್ಯಾಯಗಳು ಮತ್ತು ಅವುಗಳ ಉಪಶೀರ್ಶಿಕೆಗಳ ಅನುಕ್ರಮಣಿಕೆಯನ್ನು ಆಕರಗಳ ವಿಭಾಗವನ್ನು ಪುಟ ಸಂಖ್ಯೆಗಳೊಂದಿಗೆ ಈ ವಿಭಾಗದಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

**೫. ಕೋಷ್ಟಕಗಳು, ಧಾರಾಚಿತ್ರಗಳು ಮತ್ತು ನಕ್ಷೆಗಳು**

ಸಂಶೋಧನಾ ವರದಿಯು ಪ್ರತಿಯೊಂದು ಅಧ್ಯಾಯದಲ್ಲಿ ಒಳಗೊಂಡ ಕೋಷ್ಟಕಗಳು ಧಾರಾಚಿತ್ರಗಳು, ನಕ್ಷೆಗಳು ಫೋಟೋಗಳನ್ನು ಅನುಕ್ರಮವಾಗಿ ಪುಟ ಸಂಖ್ಯೆಗಳೊಂದಿಗೆ ಅವುಗಳ ಶೀರ್ಷಿಕೆ ಸಹಿತವಾಗಿ ಪ್ರಸ್ತುತೀಕರಿಸಬೇಕು.

**II. ವರದಿಯ ಮುಖ್ಯಭಾಗ**

ಸಂಶೋಧನಾ ವರದಿಯಲ್ಲಿ ಪಠ್ಯ ಭಾಗವು ಪ್ರಮುಖ ಮತ್ತು ದೊಡ್ಡದಾದ ಭಾಗವಾಗಿದ್ದು ವಿವಿಧ ಅಧ್ಯಾಯಗಳನ್ನು ಒಳಗೊಂಡಿದೆ.

1. ಪೀಠಿಕೆ
2. ಸಾಹಿತ್ಯದ ಪುನರಾವಲೋಕನ
3. ಅಧ್ಯಯನದ ವಿಧಾನ
4. ದತ್ತಾಂಶಗಳ ವಿಶ್ಲೇಷಣೆ ಮತ್ತು ನಿರೂಪಣೆ
5. ಸಾರಾಂಶ ಮತ್ತು ಉಪಸಂಹಾರ

ಹೀಗೆ ವರದಿಯ ಪಠ್ಯಭಾಗವು ಐದು ಪ್ರಮುಖ ಅಧ್ಯಾಯಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಒಳಗೊಂಡ ಮುಖ್ಯಾಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ.

**ಅಧ್ಯಾಯ –೧ ಪೀಠಿಕೆ**

- ಪೀಠಿಕೆ
- ಸಮಸ್ಯೆಯ ಹೇಳಿಕೆ
- ಸಮಸ್ಯೆಯ ಪ್ರಾಮುಖ್ಯ
- ಅಧ್ಯಯನದ ಉದ್ದೇಶಗಳು
- ಚಲಕಗಳ ವ್ಯಾಖ್ಯಾನ
- ಸೈದ್ಧಾಂತಿಕ ಹಿನ್ನೆಲೆ
- ಪಾರಿಭಾಷಿಕ ಪದಗಳ ವ್ಯಾಖ್ಯಾನ
- ಸಂಶೋಧನ ಪ್ರಶ್ನೆಗಳಿಗೆ ಪ್ರಾಕ್ಕಲ್ಪನೆಗಳು
- ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು
- ಅಧ್ಯಯನದ ವಿಕಾಸ

**ಅಧ್ಯಾಯ –೨ ಸಂಬಂಧಿತ ಸಾಹಿತ್ಯಾವಲೋಕನ**

ಇದು ಸಂಶೋಧನಾ ವರದಿಯ ಮುಖ್ಯಭಾಗ ಎರಡನೇ ಅಧ್ಯಾಯವು ಪ್ರಸ್ತುತ ಸಂಶೋಧನೆಗೆ ಕೈಗೆತ್ತಿಕೊಂಡ ಸಮಸ್ಯೆಯ ಸಂಬಂಧಿತ ಪೂರ್ವಾಧ್ಯಯನಗಳ ಅವಲೋಕನವಾಗಿದೆ. ಇಲ್ಲಿ ಸಂಬಂಧಿತ ಸಂಶೋಧನೆಗಳ ಸಾರಸಂಗ್ರಹಗಳನ್ನು ಕಾಲಾನುಕ್ರಮದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಸಂಬಂಧಿತ ಸಂಶೋಧನೆಗಳ ಸಾಹಿತ್ಯದ ಅಧ್ಯಯನವು ಕೈಗೆತ್ತಿಕೊಂಡ ಸಮಸ್ಯೆಯ ಮೇಲೆ ಮಾಡಲಾದ ಅಧ್ಯಯನಗಳ ಫಲಿತಾಂಶಗಳು ಅವುಗಳ ನಡುವೆ ಕಾಲಾಂತರ ಮೊದಲಾದವುಗಳ ಜ್ಞಾನವನ್ನು ಒದಗಿಸುತ್ತದೆ. ಈ ಅಧ್ಯಾಯವು ಪೀಠಿಕೆ, ಪೂರ್ವಾಧ್ಯಯನಗಳು ಮತ್ತು ಉಪಸಂಹಾರ ಎಂದು ಮೂರು ಭಾಗಗಳನ್ನು ಒಳಗೊಂಡಿದೆ.

**ಅಧ್ಯಾಯ –೩ ಅಧ್ಯಯನದ ವಿನ್ಯಾಸ**

ಸಂಶೋಧನಾ ವರದಿಯ ಈ ಭಾಗವು ಸಂಶೋಧನೆಯ ತಾಂತ್ರಿಕ ಮತ್ತು ತಾರ್ಕಿಕ ಚಿತ್ರಣವನ್ನು ಕೆಳಗಿನ ಅಂಶಗಳ ಮೂಲಕ ಒದಗಿಸುತ್ತದೆ.

- ಅಧ್ಯಯನದ ವಿಧಾನ
- ಪ್ರತಿದರ್ಶ ಚಯನ
- ಮಾಹಿತಿಯ ಮೂಲಗಳು
- ಮಾಹಿತಿ ಸಂಗ್ರಹ ವಿಧಾನ
- ಸಂಶೋಧನ ಸಾಧನಗಳು
- ಮಾಹಿತಿ ವಿಶ್ಲೇಷಣಾ ತಂತ್ರಗಳು
- ಸಲಕರಣೆಗಳು

**ಅಧ್ಯಾಯ –೪ ದತ್ತಾಂಶಗಳ ವಿಶ್ಲೇಷಣೆ ಮತ್ತು ನಿರೂಪಣೆ**

ಪ್ರಸ್ತುತ ಅಧ್ಯಾಯವು ಸಂಶೋಧನೆಗಾಗಿ ಸಂಗ್ರಹಿಸಿದ ಮಾಹಿತಿಯನ್ನು ಐತಿಹಾಸಿಕ ಸಂಶೋಧನೆಯಾಗಿದ್ದರೆ ಆಂತರಿಕ ಮತ್ತು ಬಾಹ್ಯವಿಮರ್ಶೆ ಹಾಗೂ ವಿಶ್ಲೇಷಣೆ, ಸಂಶ್ಲೇಷಣೆಗಳ ಮೂಲಕ ನಿರೂಪಿಸುತ್ತದೆ. ಸಮೀಕ್ಷೆ ಅಥವಾ ಪ್ರಾಯೋಗಿಕ ವಿಧಾನಗಳನ್ನೊಳಗೊಂಡ ಸಂಶೋಧನೆಯಾಗಿದ್ದರೆ ವಿವರಣಾತ್ಮಕ ಅಥವಾ ವರ್ಣನಾತ್ಮಕ ಸಾಂಖ್ಯಿಕತಂತ್ರ, ವಿಭೇದನಾತ್ಮಕ ಸಾಂಖ್ಯಿಕತಂತ್ರ, ಸಹ ಸಂಬಂಧಾತ್ಮಕ ಸಾಂಖ್ಯಿಕ ತಂತ್ರ, ಹಿಮ್ಮುಖ ಸಾಂಖ್ಯಿಕ ತಂತ್ರ ಅಥವಾ ಗಣಕ ಯಂತ್ರ ಸಾಂಖ್ಯಿಕ ಸಾಫ್ಟ್‌ವೇರ್ ಬಳಕೆಯ ಮೂಲಕ ಕೋಷ್ಟಕಗಳು, ಚಾರ್ಟುಗಳ ಮೂಲಕ ಸ್ಪಷ್ಟವಾದ ವಿಶ್ಲೇಷಣೆ ಮತ್ತು ನಿರೂಪಣೆಯನ್ನು ಮಾಡಲಾಗುತ್ತದೆ.

**ಅಧ್ಯಾಯ – ೫ ಸಾರಾಂಶ ಮತ್ತು ಉಪಸಂಹಾರ**

ಈ ಅಧ್ಯಾಯವು ಪಠ್ಯಭಾಗದ ಕೊನೆಯ ಅಧ್ಯಾಯವಾಗಿದ್ದು, ಕೆಳಗಿನ ಅಂಶಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರುತ್ತದೆ.

- ಸಮಸ್ಯೆಯ ನಿರೂಪಣೆ
- ಅಧ್ಯಯನದ ವಿಧಾನ
- ಚಲಕಗಳು
- ಉದ್ದೇಶಗಳು
- ಪ್ರಾಕ್ಕಲ್ಪನೆಗಳು
- ಪ್ರತಿದಶನ ಮಾಹಿತಿ ಸಂಗ್ರಹಣೆ ಸಾಧನಗಳು
- ಮಾಹಿತಿ ಸಂಗ್ರಹ
- ಫಲಿತಾಂಶಗಳು ಮುಖ್ಯ ತೀರ್ಮಾನಗಳು
- ನಿಹಿತಾರ್ಥಗಳು
- ಸಲಹೆಗಳು
- ಇತರ ಅಧ್ಯಯನಗಳಿಗೆ ಸೂಚನೆಗಳು.


Digitised by Bharatavani, CIIL

**ಭಾಗ – ೩ ಆಕರಗಳು**

ಸಂಶೋಧನಾ ವರದಿಯ ಮೂರನೇ ಮತ್ತು ಕೊನೆಯ ಭಾಗವು ಸಂಶೋಧನೆಗಾಗಿ ಬಳಸಲಾದ ಆಕರಗಳನ್ನು ಒಳಗೊಂಡಿರುತ್ತದೆ.

- ಆಕರ ಗ್ರಂಥಗಳು
- ಅಡಿ ಟಿಪ್ಪಣಿಗಳು
- ಸರ್ವೆಗಳು
- ವೆಬ್ ಸೈಟ್‌ಗಳು
- ಗ್ಯಾಜೆಟಿಯರ್‌ಗಳು ಇತ್ಯಾದಿ.

ಈ ಮೊದಲಾದವುಗಳನ್ನು ನಿರ್ದಿಷ್ಟ ಸಂಶೋಧನಾ ಶೈಲಿಯಲ್ಲಿ ನಮೂದಿಸಲಾಗುತ್ತದೆ. ಅಲ್ಲದೇ ಅನುಬಂಧಗಳನ್ನೂ ಒಳಗೊಂಡಿರುತ್ತದೆ.

ಸಂಶೋಧನಾ ವರದಿಯಲ್ಲಿ ಅನುಲಕ್ಷಿಸಬೇಕಾದ ಅಂಶಗಳು:

- ವರದಿ ನಿರೂಪಣೆಯಲ್ಲಿ ಭೂತಕಾಲದ ವಾಕ್ಯಗಳನ್ನು ಬಳಸಬೇಕು.
- ವೈಯಕ್ತಿಕ ಅನ್ವರ್ಥಕಗಳನ್ನು ಉದಾ: ಡಾ॥, ಶ್ರೀ, ಶ್ರೀಮತಿ, ಬಳಸಬಾರದು.
- ನಿರ್ದಿಷ್ಟತೆ, ವಸ್ತುನಿಷ್ಠತೆ, ಸ್ಪಷ್ಟತೆ, ಸೃಜನಶೀಲತೆ ಮತ್ತು ವೈಜ್ಞಾನಿಕತೆಯಿಂದ ಕೂಡಿರಬೇಕು.
- ಸಂಶೋಧನಾ ಭಾಷೆಯನ್ನೇ ಬಳಸಬೇಕು.
- ಭಾಷೆ ಮತ್ತು ವ್ಯಾಕರಣ ಶುದ್ಧಿಗೆ ಗಮನವಿರಬೇಕು.
- ಸಂಕೇತಗಳನ್ನು ಸ್ಪಷ್ಟಪಡಿಸಬೇಕು.
- ಆಕರಗಳನ್ನು ಸಂಶೋಧನಾ ಪದ್ಧತಿಯಲ್ಲಿಯೇ ನಮೂದಿಸಬೇಕು.
- ಸಂಬಂಧಿತ ಸಾಹಿತ್ಯ ನಿರೂಪಣೆಯು ಕಾಲಾನುಕ್ರಮದಲ್ಲಿರಬೇಕು.
- ಕೋಷ್ಟಕಗಳು ಅನುಕ್ರಮವಾಗಿರಬೇಕು.
- ನಿರ್ದಿಷ್ಟ ಪಾರಿಭಾಷಿಕ ಪದಗಳನ್ನೇ ಬಳಕೆ ಮಾಡಬೇಕು.
- ವರದಿಯ ಅಂತ್ಯದಲ್ಲಿ ಅಭಿವೃದ್ಧಿಯ ಅನ್ವಯಗಳನ್ನು ಪ್ರಸ್ತುತಪಡಿಸಬೇಕು.
- ವರದಿಯ ಅಂತ್ಯದಲ್ಲಿ ಅನುಬಂಧಗಳನ್ನು ಕೊಡಬೇಕು.
- ಸೂಕ್ತವಾದ ಮುದ್ರಣ, ಉತ್ತಮಕಾಗದ ಮತ್ತು ಬೈಂಡಿಂಗನ್ನು ಹೊಂದಿರಬೇಕು.

–ಎನ್.ವಿ.ಕೊ. ಮತ್ತು ಎ.ವಿ.ಕ.

## ಸಂಸ್ಕೃತಿ ಮತ್ತು ಶಿಕ್ಷಣ

ಸಂಸ್ಕೃತಿ ಮಾನವನ ಪ್ರತಿಯೊಂದು ವಿಚಾರವನ್ನು, ಚಟುವಟಿಕೆಯನ್ನು ಅಧ್ಯಯಿಸುತ್ತದೆ. ಆತನು ತನ್ನ ಸಮಾಜದಲ್ಲಿ ಬಾಳಬೇಕಾದರೆ ಕೆಲವು ನಿರ್ದಿಷ್ಟ ತತ್ವ, ನಂಬಿಕೆ, ಆದರ್ಶ, ವರ್ತನೆ, ನಡತೆಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಸಂಸ್ಕೃತಿ ಮಾನವ ನಿರಂತರವಾಗಿ ತನ್ನ ಸ್ವ–ಸಾಮರ್ಥ್ಯದಿಂದ ಗಳಿಸಿದ ಗಳಿಕೆ ಅಥವಾ ಆಸ್ತಿಯಾಗಿದೆ. ಇದನ್ನೇ ಸಮಾಜಶಾಸ್ತ್ರಜ್ಞರು "ಸಂಸ್ಕೃತಿ" ಎಂದು ಕರೆದಿದ್ದಾರೆ. ಮ್ಯಾಕ್‌ಐವರ್ ಮತ್ತು ಪೇಜ್ ಎಂಬ ಸಮಾಜಶಾಸ್ತ್ರಜ್ಞರು ತಿಳಿಸಿರುವಂತೆ, ನಾವು ಏನನ್ನು ಪಡೆದಿದ್ದೇವೆ? (What we have?) ಎಂಬುದನ್ನು "ನಾಗರಿಕತೆ"ಯು ತಿಳಿಸಿದರೆ, ನಾವು ಏನಾಗಿದ್ದೇವೆ? (What we are?) ಎಂಬುದನ್ನು "ಸಂಸ್ಕೃತಿ" ತಿಳಿಸುತ್ತದೆ.

"ಸಂಸ್ಕೃತಿ" ಎಂದಾಕ್ಷಣ ಸುಂದರವಾದ ಮನೆ, ವೈಭವಯುತ ಜೀವನ, ಮೃಷ್ಟಾನ್ನ ಭೋಜನ, ಇವುಗಳೇ ಅಲ್ಲ. ಸಂಸ್ಕೃತಿಯು ಮಾನವನ ಆಚಾರ–ವಿಚಾರ, ನಡೆ–ನುಡಿ ಇತ್ಯಾದಿಗಳನ್ನು ಒಳಗೊಂಡ ಸಂಕೀರ್ಣ ಅರ್ಥವನ್ನು ಹೊಂದಿದೆ. ಅವನು ತನ್ನ ಆಸೆ–ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಂಸ್ಕೃತಿ ಎಂಬ ಪದವನ್ನು ಬಳಸುತ್ತಾನೆ. ವ್ಯಕ್ತಿಯಲ್ಲಿ ವ್ಯಕ್ತಿತ್ವ ಬೆಳವಣಿಗೆಯಾಗಲು ಸಂಸ್ಕೃತಿಬೇಕು. ಸಂಸ್ಕೃತಿಯಿಂದ ಮಾನವನು ಸಮಾಜದಲ್ಲಿ ಮಾನವನಾಗಲು ಅವಕಾಶ ದೊರೆತಂತಾಗುತ್ತದೆ. ಹುಟ್ಟಿದ ಮಗು ಸಂಸ್ಕೃತಿಯ ಬೆಳವಣಿಗೆಯನ್ನು ತಕ್ಷಣ ಕಾಣಲು ಸಾಧ್ಯವಿಲ್ಲ. ತನ್ನ ಕುಟುಂಬದಲ್ಲಿ ಮೊದಲು ಕಲಿತು ನಂತರ ಪರಿಸರದ ಮೂಲಕ ತಾನೂ ಒಬ್ಬ ಸುಸಂಸ್ಕೃತ ಪ್ರಜೆಯಾಗಿ ಬಾಳುವುದನ್ನು ಕಲಿಯುತ್ತದೆ. ಸಂಸ್ಕೃತಿಯಿಂದ ಸಮಾಜಕ್ಕೆ ದೃಢತೆ ಮತ್ತು ನಿಶ್ಚಯತೆ ದೊರೆಯುತ್ತದೆ ಹಾಗೂ "ನಾಗರಿಕತೆಯ ಮೆಟ್ಟಿಲೇ ಸಂಸ್ಕೃತಿ". ನಮ್ಮ ಮಾನವಶಾಸ್ತ್ರಜ್ಞರು (Anthropologists) "ಸಂಸ್ಕೃತಿಯನ್ನು ಮಾನವ ತನ್ನ ಸಮಾಜದಲ್ಲಿ ಕಲಿತು ಗಳಿಸಿದ ಆಸ್ತಿ" ಎಂದು ತಿಳಿಸಿರುತ್ತಾರೆ. ಸಂಸ್ಕೃತಿಯು ಮಾನವ ಮತ್ತು ಸಮಾಜಶಾಸ್ತ್ರ ಇವೆರಡರ ಅಧ್ಯಯನದಲ್ಲಿ ಬರುವ ಪ್ರಮುಖ ಪರಿಕಲ್ಪನೆ (Concept) ಆಗಿದೆ. ಸಂಸ್ಕೃತಿಯು ಮಾನವ ಸಮಾಜಕ್ಕೆ ಸೀಮಿತವಾಗಿದೆ. ಮಾನವನಿಗಿಂತ ಕೆಳಮಟ್ಟದಲ್ಲಿ ಸಂಸ್ಕೃತಿಯ ಪರಂಪರೆ ಕಾಣುವುದಿಲ್ಲ. ಉದಾ: ಪ್ರಾಣಿ ಸಮಾಜ, ಪ್ರಾಣಿ ಸಮಾಜದಿಂದ ಮಾನವ ಸಮಾಜ ವಿಭಿನ್ನವಾಗಿದೆ ಎಂಬುದಕ್ಕೆ ಸಂಸ್ಕೃತಿಯ ವಿಚಾರವೇ ಸಾಕ್ಷಿ. ಸಂಸ್ಕೃತಿಯು ಕಚ್ಚಾ ಮಾನವನನ್ನು ಅವನ ವರ್ತನೆಯನ್ನು, ಅವನ ಸಮಗ್ರ ಜೀವನವನ್ನು, ಆಲೋಚನೆಯನ್ನು, ವ್ಯವಹಾರವನ್ನು ಪರಿಪಕ್ವಗೊಳಿಸಿ ಅವನನ್ನು ಶುದ್ಧ ಮಾನವನನ್ನಾಗಿ ಪರಿವರ್ತಿಸುತ್ತದೆ.

**ಸಂಸ್ಕೃತಿಯು ಎರಡು ಬಗೆಗಳಲ್ಲಿ ಕಂಡುಬರುತ್ತದೆ. ಅವುಗಳೇ,**

1. ಗೋಚರ ಅಥವಾ ಭೌತ ಸಂಸ್ಕೃತಿ (Materialistic)
2. ಅಗೋಚರ ಅಥವಾ ಅಭೌತ ಸಂಸ್ಕೃತಿ (Non-Materialistic)

ಭೌತ ಸಂಸ್ಕೃತಿಯು ಮಾನವ ನಿರ್ಮಿತವಾಗಿದ್ದು ಗೋಚರಿಸುವ ವಸ್ತುಗಳನ್ನು ಒಳಗೊಂಡಿರುತ್ತದೆ. ಇದು ಉಪಕರಣಗಳು (Tools), ಕಟ್ಟಡಗಳು (Buildings), ಯಂತ್ರಗಳು–ತಂತ್ರಗಳು (Machines), ಮೋಟಾರುಗಳು (Motors), ಮೊದಲಾದವು. ಮಾನವನು ತನ್ನ ಉಪಯೋಗಕ್ಕಾಗಿ ತಯಾರಿಸಿಕೊಂಡಿರುವ ಅಂಶಗಳನ್ನು ಒಳಗೊಂಡಿದೆ. ಈ ವಸ್ತುಗಳು ಹೊರ ಹಾಗೂ ಒಳ ಸ್ವರೂಪಗಳನ್ನು ಹೊಂದಿದ್ದು ಉಪಯೋಗಗಳನ್ನು ಹೊಂದಿರುತ್ತದೆ.

ಅಗೋಚರ ಅಥವಾ ಅಭೌತ ಸಂಸ್ಕೃತಿಯು ಅಲೌಕಿಕ ರೀತಿಯದ್ದು. ಇದು ಭಾಷೆ, ಸಾಹಿತ್ಯ, ನಂಬಿಕೆಗಳು, ಆಚರಣೆಗಳು, ಲೋಕಾರೂಢಿಗಳು, ಸಂಪ್ರದಾಯಗಳು, ಮೌಲ್ಯಗಳು, ಮತ, ಧರ್ಮ, ನೀತಿ, ಹವ್ಯಾಸಗಳು, ಸಂಸ್ಕಾರಗಳು, ಇತ್ಯಾದಿಗಳನ್ನು ಒಳಗೊಂಡಿದೆ. ಇವುಗಳೆಲ್ಲವೂ ಆಂತರಿಕ ಅಂತರಾಳವನ್ನು ಹೊಂದಿವೆ. ಇವುಗಳೆಲ್ಲವೂ ಮಾನವನ ನಂಬಿಕೆ, ಪಾರಮಾರ್ಥಿಕ, ಆಸ್ತಿಕ, ಉನ್ನತ ಮಟ್ಟದ ಚಿಂತನೆಯನ್ನು ಹೊಂದಿರುವ ವಿಚಾರವೇದಿಕೆಯಾಗಿವೆ.

ಸಂಸ್ಕೃತಿಯ ಬೆಳವಣಿಗೆಯು ಮಾನವನ ಜ್ಞಾನ, ಭಾಷೆ, ಅವಶ್ಯಕತೆ, ತಾಂತ್ರಿಕ ಹಾಗೂ ವೈಜ್ಞಾನಿಕ ಬೆಳವಣಿಗೆ, ಪರಿಸರದಲ್ಲಿ ಉಂಟಾಗುವ

Digitised by Bharatavani, CIIL

ವೈವಿಧ್ಯತೆ (ಭೂ–ವಾತಾವರಣ, ಋತುಮಾನ, ಹವಾಗುಣ), ಇತ್ಯಾದಿಗಳಿಂದ ಆಗಿದೆ.

## I. ಸಂಸ್ಕೃತಿಯ ವ್ಯಾಖ್ಯೆಗಳು

"ಸಂಸ್ಕೃತಿ" ಶಬ್ದವು ಇಂಗ್ಲಿಷಿನ "culture" ಎಂಬುದರ ಕನ್ನಡ ಭಾಷಾಂತರ. ಮೂಲತಃ ಲ್ಯಾಟಿನ್ ಭಾಷೆಯ "ಕಲ್ಚರೇ" ಎಂಬ ಶಬ್ದದಿಂದ ಜನ್ಯವಾಗಿದೆ. ಅದರ ಅರ್ಥ ಬೆಳೆಸು, ಅಭಿವೃದ್ಧಿ ಕಾಣು, ಸಂಸ್ಕಾರ ಹೊಂದು ಎಂಬುದಾಗಿದೆ, ಇದು ನಿನ್ನೆ ಇಂದಿನದಲ್ಲ. ತಲೆ ತಲಾಂತರದಿಂದ ಹಿರಿಯರಿಂದ ಬಂದ ಧಾರ್ಮಿಕ, ಸಾಮಾಜಿಕ ಮೌಲ್ಯಗಳಿರುವ ನೆಲಗಟ್ಟು ಇದಾಗಿದೆ. ಸಂಸ್ಕೃತಿ ಹಾಗೂ ನಾಗರಿಕತೆಯನ್ನು ಒಂದೇ ಎಂದು ಆಲೋಚಿಸಲಾಗಿದೆ. ಆದರೆ ಹಲವು ಚಿಂತಕರು ಸಮಾಜದಲ್ಲಿ ಕಂಡು ಅನುಭವಿಸಿ ಜ್ಞಾನ ಹಾಗೂ ಅನುಭವಕ್ಕೆ ಅನುಸಾರವಾಗಿ "ಸಂಸ್ಕೃತಿ" ಪದವನ್ನು ಇ.ಬಿ. ಟೈಲರ್ ತಿಳಿಸಿದಂತೆ – "ಸಂಸ್ಕೃತಿಯು ಜ್ಞಾನ, ನಂಬಿಕೆ, ನೀತಿ, ಕಾನೂನು, ರೂಢಿ, ಪದ್ಧತಿಗಳು ಹಾಗೂ ಮಾನವ ಸಮಾಜದಲ್ಲಿ ಸದಸ್ಯನಾಗಿ ಗಳಿಸಿದಂತಹ ಯಾವುದೇ ಇತರ ಸಾಮರ್ಥ್ಯಗಳು ಮತ್ತು ಅಭ್ಯಾಸಗಳನ್ನೊಳಗೊಂಡ ಒಂದು ಸಂಕೀರ್ಣ ಮೊತ್ತವೇ ಆಗಿದೆ". ರಾಲ್ಫ್‌ಲಿಂಟನರ ಪ್ರಕಾರ – "ಸಂಸ್ಕೃತಿಯು ಗಳಿಸಿದ ವರ್ತನೆಯ ಸಮೂಹ ಮತ್ತು ಈ ವರ್ತನೆಯು ಸಮಾಜದ ಹಿರಿಯ ಸದಸ್ಯರಿಂದ ಕಿರಿಯ ಸದಸ್ಯರುಗಳಿಗೆ ವರ್ಗಾವಣೆಯ ಪರಂಪರೆಯ ರೀತಿಯಲ್ಲಿ ಹರಿದು ಬರುವ ವಿಚಾರವಾಗಿದೆ". ಅವರು ಮುಂದುವರಿದು "ಸಂಸ್ಕೃತಿಯು ಸಾಮಾಜಿಕ ಅನುವಂಶೀಯತೆಗೆ ಸಮವಾಗಿದೆ" ಎಂದಿರುತ್ತಾರೆ.

### ಅ) ಸಂಸ್ಕೃತಿಯ ಸಾಮಾನ್ಯ ಗುಣಲಕ್ಷಣಗಳು

ಎಲ್ಲಾ ಸಂಸ್ಕೃತಿಗಳು ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿರುತ್ತವೆ.

1. ಸಂಸ್ಕೃತಿಯು ಎಲ್ಲಾ ಸಮಾಜಗಳಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ, ಎಲ್ಲಾ ಜನಾಂಗಗಳಲ್ಲಿಯೂ ಏಕರೂಪತೆಯನ್ನು ಹೊಂದಿಲ್ಲ. ಪ್ರತಿಯೊಂದು ದೇಶ, ಸಮಾಜ ಅಥವಾ ಜನಾಂಗ ತನ್ನದೇ ಆದ ವೈಯಕ್ತಿಕ ಸಂಸ್ಕೃತಿಯ ಪರಂಪರೆಯನ್ನು ಹೊಂದಿ ಇತರ ಸಮಾಜದಿಂದ ಸಂಸ್ಕೃತಿಯಲ್ಲಿ ಬೇರ್ಪಡೆ ಇದೆ ಎಂಬುದನ್ನು ಸೂಚಿಸುತ್ತದೆ. ಉದಾಹರಣೆಗೆ: ಹಿಂದೂ ಸಂಸ್ಕೃತಿಯಲ್ಲಿ ಮೂರ್ತಿಪೂಜೆ ಇದೆ. ಆದರೆ ಕ್ರೈಸ್ತ ಸಂಸ್ಕೃತಿಯಲ್ಲಿ ಮೂರ್ತಿಪೂಜೆ ನಿಷೇಧ. ಸಾಂಸ್ಕೃತಿಕ ಲಕ್ಷಣಗಳು ಆಯಾಯ ಜನಾಂಗ ಅಥವಾ ಸಮಾಜ ಹಿಂದಿನಿಂದ ರೂಢಿಸಿಕೊಂಡು ಬಂದಂತಹವು. ಅದು ಅವರವರ ಜನಾಂಗ ಅಥವಾ ಸಮಾಜಕ್ಕೆ ಸೀಮಿತವಾಗಿದೆ.
2. ಸಂಸ್ಕೃತಿಯು ಕಾಲಕಾಲಕ್ಕೆ ಬದಲಾಗುವ ಪರಂಪರೆಯನ್ನು ಹಾಗೂ ಪ್ರಕ್ರಿಯೆಯನ್ನು ಹೊಂದಿದೆ: ಸಂಸ್ಕೃತಿಯು ಪರಿವರ್ತನಾಶೀಲ ವಿಷಯವಾಗಿದೆ. ಆಯಾಯ ಕಾಲಧರ್ಮಕ್ಕೆ, ಜ್ಞಾನಕ್ಕೆ, ಅನುಭವಕ್ಕೆ ತಕ್ಕಂತೆ ಬದಲಾಗುವ ಮಹತ್ವವಿದೆ. ಇದರಿಂದ ಸನ್ನಿವೇಶಕ್ಕೆ ತಕ್ಕ ಸಂಸ್ಕೃತಿಯ ಬಳಕೆಗೆ ಅನುಕೂಲವಾಗುತ್ತದೆ. ಉದಾ: ಜನತೆ ಹಿಂದೆ ಧೋತಿ–ಪಂಚೆಗಳನ್ನು ಧರಿಸುತ್ತಿದ್ದರು. ಆದರೆ ಇಂದು ಕೋಟು, ಪ್ಯಾಂಟು, ಶರಟು, ಇತ್ಯಾದಿಗಳನ್ನು ಧರಿಸುತ್ತಿದ್ದಾರೆ.
3. ಸಂಸ್ಕೃತಿಯು ಕಟ್ಟಡಗಳು, ಲೋಹಗಳು, ಉಪಕರಣಗಳು, ಸಾಮಗ್ರಿಗಳೆಂಬ ಲೌಕಿಕ ವಿಚಾರಗಳನ್ನು, ಜ್ಞಾನ, ನೀತಿ, ನಿಯಮ, ನಂಬಿಕೆ, ನ್ಯಾಯ, ಆಲೋಚನೆ, ಜೀವನ ಮೌಲ್ಯಗಳು ಇತ್ಯಾದಿ ವರ್ತನ ಸಂಬಂಧಿತ ಅಲೌಕಿಕ ವಿಚಾರಗಳನ್ನು ವಿವರಿಸುತ್ತದೆ.
4. ಸಂಸ್ಕೃತಿಯು ನಿರಂತರ ಪ್ರಕ್ರಿಯೆ. ಏಕೆಂದರೆ ಜೀವಿಯ ಹುಟ್ಟಿನಿಂದ ಸಾಯುವತನಕ ಇದು ಮುಂದುವರಿಯುತ್ತದೆ. ಕುಟುಂಬದಿಂದ ಚಿಕ್ಕದಾಗಿ ಪ್ರಾರಂಭಗೊಂಡು ವ್ಯಕ್ತಿಯಲ್ಲಿ ಸೇರಿ ವಿವಿಧ ಮಾಧ್ಯಮಗಳ ಮೂಲಕ ಜೀವನಪೂರ್ತಿ ಇರುತ್ತದೆ.
5. ಸಂಸ್ಕೃತಿಯಿಂದ ಮಾನವನ ಬಯಕೆಗಳು, ಆಸೆ ಆಕಾಂಕ್ಷೆಗಳು ಪೂರೈಸುತ್ತವೆ. ಪ್ರತಿಯೊಬ್ಬ ಮನುಷ್ಯನಿಗೂ ಆಸೆ–ಆಕಾಂಕ್ಷೆಗಳಿರುತ್ತವೆ. ಈ ಆಸೆ–ಆಕಾಂಕ್ಷೆಗಳನ್ನು ಸಾಧಿಸಲು ಸಂಸ್ಕೃತಿರೂಪದ ಸಾಧನ ಅಥವಾ ಅದನ್ನು ಮಾಧ್ಯಮವನ್ನಾಗಿ ಬಳಸುತ್ತಾನೆ. ವ್ಯಕ್ತಿಗೆ ಸಮಾಜದಲ್ಲಿ ಉನ್ನತ ಗೌರವಸ್ಥಾನ ಪಡೆಯುವ ಆಸೆ ಇದ್ದರೆ, ಆತನು ತನ್ನ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯಿಂದ ಇದನ್ನು ಈಡೇರಿಸಿಕೊಳ್ಳಬಹುದು.
6. ಸಂಸ್ಕೃತಿ ಮಾನವನ ಸುಖ–ಶಾಂತಿಗೆ ಅನುಕೂಲಕರ ಪರಿಸ್ಥಿತಿಗಳನ್ನು ನಿರ್ಮಿಸುತ್ತದೆ. ಮನುಷ್ಯ ಹಾಗೂ ಸಂಸ್ಕೃತಿಗೂ ಮೀನು ಹಾಗೂ ನೀರಿಗಿರುವ ಸಂಬಂಧದಷ್ಟೇ ಹತ್ತಿರವಾದುದು. ಇದು ಮನುಷ್ಯನಿಗೆ ಜೀವಿತದ ಬೀಗ ಹಾಗೂ ಕೀಲಿಗಳಂತಿದ್ದು ನಂಬಿಕೆಯಿಂದ ಆತನ ಸುಖ ಸಂತೋಷಗಳಲ್ಲಿ ಭಾಗಿಯಾಗುತ್ತದೆ.
7. ಸಂಸ್ಕೃತಿಯು ಹಿಂದಿನ ಪೀಳಿಗೆಯ ಅನುಕರಣೆಯಿಂದ ಮುಂದುವರಿಯುತ್ತದೆ
8. ಸಂಸ್ಕೃತಿಯು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ವರ್ಗಾಯಿಸಲ್ಪಡುತ್ತದೆ. ಸಂಪ್ರದಾಯಗಳು, ನಂಬಿಕೆಗಳು, ಪರಂಪರೆಗಳು, ಇತ್ಯಾದಿಗಳಲ್ಲಿ ಸಂಸ್ಕೃತಿಯ ಪ್ರತಿಬಿಂಬವಿರುವುದರಿಂದ ಇದು ಭವಿಷ್ಯದಲ್ಲಿ ನಿಂತ ನೀರಿನಂತಿರದೆ ಸರಾಗವಾಗಿ ಹರಿದು ಮುಂದಿನ ಜನಾಂಗಕ್ಕೂ ಹೋಗಬೇಕಾಗುತ್ತದೆ.
9. ಸಂಸ್ಕೃತಿಯು ಮಾನವನ ಎಲ್ಲಾ ವಿಷಯಗಳನ್ನು, ಚಟುವಟಿಕೆಗಳನ್ನು ಒಳಗೊಂಡಿದೆ: ಸಂಸ್ಕೃತಿಯು ವ್ಯಕ್ತಿಯ ಬಾಹ್ಯ ಹಾಗೂ ಆಂತರಿಕ ವಿಚಾರಗಳನ್ನು ವಿವರಿಸುತ್ತದೆ. ಆತನ ರೀತಿ – ನೀತಿಗಳಲ್ಲಿ, ಉದ್ಯೋಗದಲ್ಲಿ, ಉಡುಗೆ–ತೊಡುಗೆಯಲ್ಲಿ, ನೀತಿಯಲ್ಲಿ, ಗಾಂಭೀರ್ಯ, ಇತ್ಯಾದಿಗಳಿಂದ ಆತನ ಸಂಸ್ಕೃತಿಯನ್ನು ಗುರುತಿಸಬಹುದು.
10. ಸಂಸ್ಕೃತಿಯು ಸ್ವಪ್ರೇರಿತವಾದುದು: ವ್ಯಕ್ತಿಯ ಯೋಚನೆ, ಜೈವಿಕ, ಮನೋವೈಜ್ಞಾನಿಕ ಅವಶ್ಯಕತೆಗಳನ್ನು, ಕಲಿಯುವ ಶಕ್ತಿ, ಬರೆವಣಿಗೆ, ಭಾಷಾ ಸಂಪರ್ಕದ ಆಯ್ಕೆ, ಸ್ವಾಭಿಮಾನ, ಸಂಶೋಧನೆ, ಇತ್ಯಾದಿಗಳಿಗೆ ಅನುಗುಣವಾಗಿವೆ.
11. ಸಂಸ್ಕೃತಿಯು ಕೇವಲ ಕುರುಡು ಸಂಪ್ರದಾಯ, ಕಂದಾಚಾರ, ಮೂಢನಂಬಿಕೆಗಳಿಂದಲೇ ರೂಪಿತವಾಗಿಲ್ಲ. ಕಾಲಕ್ಕೆ ತಕ್ಕಂತೆ ಸಂಸ್ಕೃತಿ ತನ್ನ ಕಾರ್ಯಾಚರಣೆಯಲ್ಲಿ ಹೆಚ್ಚಿನ ಬದಲಾವಣೆಗಳನ್ನು ತಂದು ವ್ಯಕ್ತಿ ತಾನು ಯಾವ ವಾತಾವರಣದಲ್ಲಿ ಜೀವಿಸುವನೋ ಅದೇ ಪರಿಸರದಿಂದ, ಆ ಕಾಲಕ್ಕೆ ಸೇರಿದಂತೆ ಸಂಸ್ಕೃತಿಯನ್ನು ರೂಪಿಸಿಕೊಂಡು ಸಮಕಾಲೀನ ತತ್ವ ಹೊಂದಿರುತ್ತದೆ.
12. ಸಂಸ್ಕೃತಿಯು ತನ್ನದೇ ಆದ ಪರಂಪರೆಯನ್ನು, ಇತಿಹಾಸವನ್ನು ಹೊಂದಿದೆ. ಸಂಸ್ಕೃತಿಯು ಜನತೆಯ ಜೀವನದಲ್ಲಿ ಅತಿ ವೇಗಗತಿಯಲ್ಲಿ ಬೆಳೆಯುವುದಾಗಲಿ, ಪ್ರಚಾರವಾಗುವುದಾಗಲಿ ಸಾಧ್ಯವಿಲ್ಲ. ವಿಶಿಷ್ಟ ಸಂಸ್ಕೃತಿಯ ಬೆಳವಣಿಗೆ ರೀತಿಯಲ್ಲಿದ್ದು ನಾಗರಿಕತೆಯ ಬೆಳವಣಿಗೆಯನ್ನು ಅಳೆಯುವಂತೆ ಸಂಸ್ಕೃತಿಯ

Digitised by Bharatavani, CIIL

ಬೆಳವಣಿಗೆಯನ್ನು ಬೇಗ ಅಳೆಯಲು ಸಾಧ್ಯವಿಲ್ಲ. ಸಂಸ್ಕೃತಿಯು ವ್ಯವಸ್ಥಿತವಾಗಿ ವಿಕಾಸ ಹೊಂದುವುದು.

ಭಾರತ ದೇಶದ ಸಂಸ್ಕೃತಿ ಹೆಚ್ಚೋ, ಅಮೆರಿಕಾದ ಸಂಸ್ಕೃತಿ ಹೆಚ್ಚೋ ಎಂದು ಅಳೆಯಲಾದೀತೆ? ಆದರೆ ಪ್ರಗತಿ ಅಥವಾ ರಾಜಕೀಯ ಪ್ರಗತಿಯನ್ನು ವಸ್ತು ಅಂಶಗಳಿಂದ ಮಾತ್ರ ಇದನ್ನು ಅಳೆಯಬಹುದಾಗಿದೆ.

### ಅ) ಸಂಸ್ಕೃತಿಯ ವಿಶಿಷ್ಟ ಗುಣಲಕ್ಷಣಗಳು (Particularity of Culture)

ಎಲ್ಲಾ ಸಂಸ್ಕೃತಿಗಳೂ ಈ ಹಿಂದೆ ವಿವರಿಸಿದಂತೆ ಕೆಲವು ಸಾಮಾನ್ಯ ಲಕ್ಷಣಗಳನ್ನು ಹೊಂದಿರುತ್ತವೆ. ಸಂಸ್ಕೃತಿಗಳು ಮಾನವನ ಕೆಲವು ಮೂಲಭೂತ ಜೈವಿಕ, ಸಾಮಾಜಿಕ ಅಗತ್ಯಗಳ ಸಂದರ್ಭದಲ್ಲಿ ರೂಪುಗೊಳ್ಳುವುದರಿಂದ ಅದರ ಕೆಲವು ಸಾಮಾನ್ಯ ಲಕ್ಷಣಗಳನ್ನು ಎಲ್ಲಾ ಸಂಸ್ಕೃತಿಗಳಲ್ಲಿಯೂ ಗುರ್ತಿಸಲು ಸಾಧ್ಯವಿದೆ. ಆದರೆ ಎಲ್ಲಾ ಸಂಸ್ಕೃತಿಗಳೂ ತಮ್ಮ ಎಲ್ಲಾ ಲಕ್ಷಣಗಳಲ್ಲೂ ಸಂಪೂರ್ಣವಾಗಿ ಏಕರೂಪವಾಗಿರುತ್ತವೆ ಎಂದರ್ಥವಲ್ಲ. ಹಾಗಾಗಿದ್ದರೆ ಮಾನವನ ಸಂಸ್ಕೃತಿಗಳಲ್ಲಿ ಕಂಡು ಬರುವ ವೈವಿಧ್ಯ ವಿಶಿಷ್ಟತೆ ಸಾಧ್ಯವಾಗುತ್ತಿರಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಗಳಿಗೂ ಅರಬ್ ಸಂಸ್ಕೃತಿಗೂ, ಚೀನಾ ಸಂಸ್ಕೃತಿಗೂ ಮತ್ತು ಭಾರತೀಯ ಸಂಸ್ಕೃತಿಗೂ ನಡುವೆ ಎಷ್ಟೊಂದು ವ್ಯತ್ಯಾಸಗಳು ಕಂಡುಬರುತ್ತವೆ. ಹೀಗೆ ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ಆದ ಅಪೂರ್ವವಾದ, ವಿಶಿಷ್ಟವಾದ ಕೆಲವು ಲಕ್ಷಣಗಳನ್ನು ಹೊಂದಿರುತ್ತವೆ. ಇದನ್ನು ಸಂಸ್ಕೃತಿಯ ವಿಶಿಷ್ಟತೆ ಎನ್ನಬಹುದು. ಈ ವ್ಯತ್ಯಾಸ ನೀತಿ ಸಂಹಿತೆ, ಸಾಮಾಜಿಕ ವಿಧಿ–ವಿಧಾನಗಳು, ಕಟ್ಟುಪಾಡುಗಳು, ಆಹಾರ–ವಿಹಾರಗಳು, ಉಡುಪುಗಳ ರೀತಿ, ಭಾಷೆ ಮುಂತಾದ ಅಂಶಗಳಿಗೆ ಸಂಬಂಧಿಸಿದಂತೆ ಕಂಡು ಬರಬಹುದು. ಹೀಗೆ ಸಂಸ್ಕೃತಿಯ ಸಾಮಾನ್ಯ ಲಕ್ಷಣಗಳು ಮಾನವ ಸಂಸ್ಕೃತಿಗಳ ಸಾಮಾನ್ಯ ಸ್ವರೂಪವನ್ನು ಪರಿಚಯಿಸಿದರೆ, ವಿಶಿಷ್ಟ ಲಕ್ಷಣಗಳೂ ಪ್ರತಿಯೊಂದು ಸಂಸ್ಕೃತಿಯ ಪ್ರತ್ಯೇಕತೆಯನ್ನು, ಅಪೂರ್ವತೆಯನ್ನು ಪರಿಚಯಿಸುತ್ತವೆ.

ಸಂಸ್ಕೃತಿಯು ಮಾನವನ ಒಂದು ವಿಶಿಷ್ಟ ಸಂಸ್ಕಾರವಾಗಿರುತ್ತದೆ. ಈ ಸಂಸ್ಕಾರವನ್ನು ಹೊಂದಬೇಕಾದರೆ ಮಾನವನು ತನ್ನ ಯಾವತ್ತೂ ವ್ಯವಹಾರಗಳಲ್ಲಿ ರೀತಿ–ನೀತಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ರೀತಿ–ನೀತಿಗಳು ಮನುಷ್ಯರನ್ನು ಮನುಷ್ಯರನ್ನಾಗಿ ಮಾಡುತ್ತವೆ. ವ್ಯಕ್ತಿಗಳು ಸಮಾಜದಲ್ಲಿ ತಮ್ಮಷ್ಟಕ್ಕೆ ತಾವು ಒಳ್ಳೆಯವರಾದರೆ ಸಾಲದು. ಅವರಿಗೆ ಸಮಾಜ ರೂಪಿಸಿದ ಸಂಸ್ಕೃತಿಯ, ರೀತಿ–ನೀತಿ, ಪದ್ಧತಿ ಪರಂಪರೆಗಳ ಅರ್ಥವಾಗಬೇಕು. ಸಂಸ್ಕೃತಿಯ ರೀತಿ ನೀತಿಗಳ ಅರ್ಥವ್ಯಾಪ್ತಿ ಬಹು ವ್ಯಾಪಕವಾದದ್ದು ಹಾಗೂ ವೈಯಕ್ತಿಕವಾದದ್ದು. ಒಂದೆರಡು ವಾಕ್ಯಗಳಲ್ಲಿ ಹೇಳಲು ಆಗುವುದಿಲ್ಲ. ಅದರಲ್ಲಿ ಕೆಲವನ್ನು ಉಲ್ಲೇಖಿಸುವುದಾದರೆ:

1. ವ್ಯಕ್ತಿ ವ್ಯಕ್ತಿಯೊಡನೆ ಹೇಗೆ ನಡೆದುಕೊಳ್ಳಬೇಕು.
2. ವ್ಯಕ್ತಿ ಸಮಾಜದೊಡನೆ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ರೀತಿ–ನೀತಿಗಳಿಂದ ತಿಳಿಯಲು ಸಾಧ್ಯವಾಗುತ್ತದೆ. ಸಮಾಜದಲ್ಲಿಂದು ನಡೆಯುವ ಯಾವತ್ತೂ ಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯಲೆಂದು ಕೆಲವೊಂದು ನಿಯಮಗಳನ್ನು ಹಾಕಿಕೊಂಡಿರುತ್ತದೆ. ಉದಾಹರಣೆಗೆ: ಸಾರ್ವಜನಿಕ ಸಭೆಗಳಲ್ಲಿ ವ್ಯವಹರಿಸುವಾಗ, ಭಾಷಣ ಮಾಡುವಾಗ, ಉಪನ್ಯಾಸ ಕೇಳುವಾಗ, ಗುರು–ಹಿರಿಯರೊಡನೆ ಮಾತನಾಡುವಾಗ, ಮದುವೆ, ಮುಂಜಿ, ನಾಮಕರಣ, ಪಾರ್ಟಿಗಳನ್ನು ಸಂದರ್ಶಿಸುವಾಗ, ಹೀಗೆಯೇ ಮುಂತಾದವುಗಳು. ಒಂದು ವೇಳೆ ಮನುಷ್ಯ ಇವುಗಳಿಗೆ ಅನುಗುಣವಾಗಿ ನಡೆಯದಿದ್ದರೆ ವ್ಯವಸ್ಥಿತವಾಗಿ ನಡೆಯಬೇಕಾದ ಸಾಮಾಜಿಕ ವ್ಯವಸ್ಥೆ ಅಸ್ತವ್ಯಸ್ತವಾಗುತ್ತದೆ. ಆಗ ಆತನನ್ನು ಅನಾಗರಿಕ/ಸಂಸ್ಕೃತಿ ಇಲ್ಲದವನೆಂದು ಗುರುತಿಸುತ್ತಾರೆ.
3. ರೀತಿ–ನೀತಿಗಳು ಆಯಾ ಕಾಲಮಾನ, ಪರಿಸ್ಥಿತಿ, ಸುತ್ತಲಿನ ಪರಿಸರ, ಸಮಾಜ, ಜನರ ಸ್ವಭಾವ, ಮುಂತಾದವುಗಳಿಂದ ರೂಪಿತವಾಗಿರುತ್ತವೆ. ರೀತಿ–ನೀತಿಗಳು, ನಡವಳಿಕೆಗಳು ಅವು ನಮಗಾಗಿ, ಸಮಾಜದ ವ್ಯವಸ್ಥೆಗಾಗಿ ಎಂದು ತಿಳಿಯಬೇಕು. ರೀತಿ–ನೀತಿಗಳ ಆಚರಣೆ ಅತಿಯಾದಾಗ ಬುದ್ಧಿಗೆ ಮಂಕು ಹಿಡಿದಂತಾಗುತ್ತದೆ. ಜೀವನದ ಘನ ಮೌಲ್ಯಗಳನ್ನು ಕಡೆಗಣಿಸಿ ರೀತಿ–ನೀತಿಗಳನ್ನು ಆಚರಿಸುವುದಾದರೆ ವಸ್ತುವನ್ನು ಬಿಟ್ಟು ವಸ್ತುವಿನ ನೆರಳನ್ನು ಬೆನ್ನು ಹತ್ತಿದಂತೆ ಆಗುತ್ತದೆ.
4. ಆಹಾರ–ವಿಹಾರಗಳಲ್ಲಿ, ರೀತಿ–ನೀತಿಗಳಲ್ಲಿ, ಉಡುಗೆ ತೊಡುಗೆಗಳಲ್ಲಿ, ಸಭೆ ಸಮಾರಂಭಗಳಲ್ಲಿ ರೀತಿ–ನೀತಿಗಳು ಕಂಡುಬರುತ್ತವೆ. ನಾಗರಿಕ ನಡವಳಿಕೆಗೆ ಕೆಲವು ರೀತಿ ನೀತಿಗಳನ್ನು ಅನುಸರಿಸುವುದು ಸೂಕ್ತ. ಅಂದರೆ ಅವು ಅತಿಯಾದಾಗ ಉಂಟಾಗುವ ಆಭಾಸ ಮತ್ತು ಅನರ್ಥಗಳು ಅಸಹನೀಯ. ಆದ್ದರಿಂದ ರೀತಿ, ನೀತಿಗಳ ಹಿತಮಿತವಾದ ಬಳಕೆಯ ಮಹತ್ವವನ್ನು ತಿಳಿದು ನಡೆದರೆ ನಮ್ಮ ನಿತ್ಯದ ಬದುಕಿಗೆ ಸುಖ, ಶಾಂತಿ ದೊರೆತಂತಾಗುತ್ತದೆ.
5. ಸಾಮಾಜೀಕರಣ ಬಗೆಯಲ್ಲಿ ಮಾನವ ಸಾಮಾಜಿಕವಾಗಿರುವ ಕಟ್ಟುಪಾಡುಗಳನ್ನು ಸಮೂಹದಲ್ಲಿ ಕಲಿಯುತ್ತಾನೆ. ಸಂಸ್ಕೃತಿಯು ಮಾನವನ ವೈಯಕ್ತಿಕ ಸ್ವತ್ತು. ಅದನ್ನು ಸಮಾಜದ ಗೌರವಕ್ಕೆ ಧಕ್ಕೆ ಬಾರದಂತೆ ಬಳಸಬೇಕು. ಹಾಗೂ ಇತರ ಸದಸ್ಯರಿಗೆ ನೋವಾಗದಂತೆ ಉಪಯೋಗಿಸಬೇಕಾಗಿರುವುದು ಪ್ರತಿಯೊಬ್ಬರ ಕರ್ತವ್ಯ.

### ಸಂಸ್ಕೃತಿಯ ಹಿಂಬೀಳಿಕೆ (Culture-Lag)

ಪ್ರಸಿದ್ಧ ಸಮಾಜಶಾಸ್ತ್ರಜ್ಞ ಆಗ್‌ಬರ್ನ್ ಸಂಸ್ಕೃತಿಯಲ್ಲಿ ಭೌತಿಕ ಮತ್ತು ಅಭೌತಿಕ ಅಂಶಗಳಿರುತ್ತವೆ ಎಂದು ಹೇಳುತ್ತಾನೆ. ಸಂಸ್ಕೃತಿ ವಿಕಸನಗೊಳ್ಳುವಾಗ ಈ ಎರಡು ಅಂಶಗಳು ಒಂದೇ ರೀತಿಯಲ್ಲಿ, ಒಂದೇ ವೇಗದಲ್ಲಿ ವಿಕಸನಗೊಳ್ಳುವುದಿಲ್ಲವೆಂಬುದನ್ನು ಆಗ್‌ಬರ್ನ್ ಗುರ್ತಿಸಿದ್ದಾನೆ. ಭೌತಿಕ ಅಂಶಗಳು ಮಾನವನ ನೇರ ಪ್ರಯೋಜನಕ್ಕೆ ಸಂಬಂಧಿಸಿದವುಗಳು ಶ್ರಮ ವೇಳೆಯನ್ನು ಕಡಿಮೆಗೊಳಿಸುವ ಯಂತ್ರಗಳು, ಸಾಧನಗಳು ಇತ್ಯಾದಿ. ಇವುಗಳನ್ನು ಮಾನವ ಬಹಳ ಬೇಗ ಅಳವಡಿಸಿಕೊಂಡು ಅವುಗಳ ಪ್ರಯೋಜನ ಪಡೆಯುತ್ತಾನೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಪ್ರಯೋಜನಗಳನ್ನು ಯಾವುದೇ ಸಂಸ್ಕೃತಿ ಬಹಳ ಬೇಗ ಪಡೆದುಕೊಳ್ಳುತ್ತದೆ. ಸಂಸ್ಕೃತಿಯ ಅಭೌತಿಕ ಅಂಶಗಳು ಮೌಲ್ಯಗಳು ಆದರ್ಶಗಳು, ಜೀವನದ ರೀತಿ–ನೀತಿಗಳು, ಕಲೆ, ಸಾಹಿತ್ಯ ಇತ್ಯಾದಿಗಳು ಮಾನವನ ಮನಸ್ಸಿಗೆ ಮತ್ತು ಹೃದಯಕ್ಕೆ ಸಂಬಂಧಿಸಿದವುಗಳು. ಅವುಗಳಲ್ಲಿ ಬದಲಾವಣೆ ಆಗುವುದು ನಿಧಾನವಾಗಿಯೇ, ಶಿಕ್ಷಣ, ವಿಚಾರ–ಚಿಂತನೆ, ಪ್ರಚಾರಗಳಿಂದ ಹಾಗೆ ಬದಲಾವಣೆಗಳು ಉಂಟಾದಾಗ ಸಾಮಾನ್ಯ ಜನರು ಅವುಗಳನ್ನು ನಿಧಾನವಾಗಿ ಅಳವಡಿಸಿಕೊಳ್ಳುತ್ತಾರೆ. ಹೀಗಾಗಿ ಜನರು ಭೌತಿಕ ಸಂಸ್ಕೃತಿಯ ಬದಲಾವಣೆಗಳನ್ನು, ಅಭೌತಿಕ ಸಂಸ್ಕೃತಿಯ ಬದಲಾವಣೆಗಳಿಗಿಂತ ವೇಗವಾಗಿ ಒಪ್ಪಿಕೊಂಡು ಅಳವಡಿಸುತ್ತಾರೆ. ಈ ರೀತಿ ಸಂಸ್ಕೃತಿ ಸಂಕೀರ್ಣ ಒಂದರ ಒಂದು ಅಂಶದ ಬೆಳವಣಿಗೆಗಿಂತ ಮತ್ತೊಂದು ಅಂಶದ ಬೆಳವಣಿಗೆ ಹಿಂದೆ ಬೀಳುತ್ತದೆ. ಎರಡರ ನಡುವೆ ಅಂತರವೇರ್ಪಡುತ್ತದೆ. ಈ ಪ್ರಕ್ರಿಯೆಯನ್ನು 'ಸಂಸ್ಕೃತಿಯ ಹಿಂಬೀಳಿಕೆ' ಎಂದು ಕರೆದಿದ್ದಾರೆ. ಉದಾಹರಣೆಗೆ, ಭಾರತದಲ್ಲಿ ಜನರು ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗಳ ಪ್ರಯೋಜನಗಳನ್ನು ಬಹಳ ಬೇಗ ಅಳವಡಿಸಿಕೊಂಡಿದ್ದಾರೆ.

Digitised by Bharatavani, CIIL

ಟಿವಿ, ಮೊಬೈಲ್ ಇತ್ಯಾದಿಗಳನ್ನು ಬಳಸುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆದರೆ ನಮ್ಮ ಜೀವನ ವಿಧಾನದಲ್ಲಿ, ನಂಬಿಕೆಗಳಲ್ಲಿ ಆಹಾರ–ವಿಹಾರದ ಕಟ್ಟುಪಾಡುಗಳಲ್ಲಿ ನಿರೀಕ್ಷಿತ ಬದಲಾವಣೆ ಇನ್ನೂ ಕಂಡು ಬಂದಿಲ್ಲ. ಸಾಮಾನ್ಯ ಜನರಲ್ಲಿ ಇನ್ನೂ ಮೂಢನಂಬಿಕೆಗಳು, ತಪ್ಪು ತಿಳುವಳಿಕೆಗಳು, ಅವೈಜ್ಞಾನಿಕ ಆಚರಣೆಗಳು ಇನ್ನೂ ಹಾಗೆಯೇ ಉಳಿದಿವೆ. ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕ ಧೋರಣೆ, ವೈಜ್ಞಾನಿಕ ಧೋರಣೆ ಇನ್ನೂ ಬೆಳೆದು ಬಂದಿಲ್ಲ. ಒಬ್ಬ ಸಾಮಾನ್ಯ ಭಾರತೀಯ ಮೊಬೈಲ್, ಕಾರ್, ಟಿ.ವಿ. ಇತ್ಯಾದಿಗಳನ್ನು ಬಳಸಬಹುದು. ಆದರೆ ಅವನ ಮನೋಭಾವಗಳು, ನಂಬಿಕೆಗಳು ಹಾಗೆಯೇ ಉಳಿದಿರಬಹುದು. ವಿಕಾಸಶೀಲ ಮತ್ತು ವಿಕಾಸಾಧೀನ ದೇಶಗಳ ಸಂಸ್ಕೃತಿಗಳಲ್ಲಿ ಸಾಂಸ್ಕೃತಿಕ ಹಿಂಬೀಳಿಕೆಯನ್ನು ಗುರ್ತಿಸಬಹುದು.

### ಮಹತ್ವ (Importance)

ಸಂಸ್ಕೃತಿ ಮಾನವನ ಒಂದು ಅಮೂಲ್ಯ ಸಂಪತ್ತು. ಅದು ಮಾನವನ ಸರ್ವತೋಮುಖ ವಿಕಾಸಕ್ಕೆ ಕಾರಣವಾಗಿದೆ. ಸಂಸ್ಕೃತಿ ಇಲ್ಲದಿದ್ದರೆ ಶಿಷ್ಟಾಚಾರ ಜೀವನದಲ್ಲಿ ಹಾಸು ಹೊಕ್ಕಾಗುತ್ತಿರಲಿಲ್ಲ. ಸಂಸ್ಕೃತಿಯು ಪುರಾಣ, ಇತಿಹಾಸ ಕಾಲದಿಂದಲೂ ದೇಶ ವಿದೇಶಗಳಲ್ಲಿ ವಿಧವಿಧ ರೀತಿಯ ಭಾಷೆ, ವೇಷ, ಆಹಾರ, ವಿಹಾರ, ಆಚಾರ, ವಿಚಾರ, ಸಂಪ್ರದಾಯ ರೂಪದಲ್ಲಿ ಮೈದೋರುತ್ತಿದೆ. ಭಾರತ ರಾಷ್ಟ್ರವನ್ನು ನೂರಾರು ವರ್ಷಗಳು ಪರಕೀಯರು ದಾಳಿ ಮಾಡಿದರು. ತಮ್ಮದೇ ಆದ ಸಂಸ್ಕೃತಿಯ ಬೀಜವನ್ನು ಬಿತ್ತಿದರು. ಆದರೂ ನೂತನ ಸಂಸ್ಕತಿಗಳ ಒಳಿತನ್ನು ತನ್ನಲ್ಲಿ ಅರಗಿಸಿಕೊಂಡು ಸನಾತನ ಭಾರತೀಯ ಸಂಸ್ಕೃತಿ ತನ್ನತನವನ್ನು ಕಾಪಾಡಿಕೊಂಡಿದೆ. ಸ್ವಾತಂತ್ರ್ಯ ಲಭಿಸಿದ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಾಬಲ್ಯ ಕಡಿಮೆಯಾಗಿ ವಿದೇಶೀಯರೂ ಭಾರತೀಯ ಸಂಸ್ಕೃತಿಯನ್ನು ಅನುಸರಿಸುವಂತಾಗಿದೆ. ಭಾರತೀಯ ಸಂಸ್ಕೃತಿಗೆ ವಿಶ್ವದೆಲ್ಲೆಡೆ ಹೊಗಳಿಕೆ ಹಾಗೂ ಪ್ರಾಮುಖ್ಯತೆ ಇದೆ. ಸಂಸ್ಕೃತಿಯ ಆಂತರಿಕ ಮೌಲ್ಯಗಳಿಂದ ಮಾನವನಿಗೆ ಬೆಲೆ ಬರುತ್ತದೆ. ದಯೆ, ದಾನ, ಧರ್ಮ, ಸಹಿಷ್ಣುತೆ, ಪರೋಪಕಾರ, ತ್ಯಾಗ ಮೊದಲಾದವುಗಳು ಸಂಸ್ಕೃತಿಯ ರೂಪಗಳು.

ಅತಿಥಿ ಸತ್ಕಾರ, ಗುರುಭಕ್ತಿ, ಹಿರಿಯರಲ್ಲಿ ಗೌರವ, ಹಿತಮಿತವಾಗಿ ನಡೆಯುವುದು–ಉತ್ತಮ ಸಂಸ್ಕೃತಿಯ ಲಕ್ಷಣಗಳು. ಮಾನವನಲ್ಲಿ ಸಂಸ್ಕೃತಿಯು ಸಂಗೀತ, ಸಾಹಿತ್ಯ, ನೃತ್ಯ, ಶಿಲ್ಪ ರೂಪದಲ್ಲಿ ಹೊರ ಹೊಮ್ಮುತ್ತದೆ. ಇದು ಕೇವಲ ಮನೋರಂಜನೆಗಾಗಿ ಬೆಳೆದುದಲ್ಲ, ಗುರಿ, ಆದರ್ಶ, ಆನಂದ, ಸೌಂದರ್ಯ, ಸಾತ್ವಿಕತೆಗಳ ನೆಲಗಟ್ಟು ಹೊಂದಿದೆ.

ಲೋಕದಲ್ಲಿ ಉತ್ತಮ ಆಚಾರ–ವಿಚಾರ, ನಡೆ–ನುಡಿ ಇರುವವರನ್ನು ಸುಸಂಸ್ಕೃತರು ಎನ್ನುತ್ತಾರೆಯೇ ಹೊರತು ಅನಾಗರಿಕನಾಗಿ, ಅಸಭ್ಯವಾಗಿ ಅಹಿತಕರ ವರ್ತನೆಯಿರುವ ವ್ಯಕ್ತಿಯನ್ನಲ್ಲ. ಸಂಸ್ಕೃತಿ ಎಂಬುದು ಡಂಭಾಚಾರದಲ್ಲಿ ಕಾಣಲು ಸಾಧ್ಯವಿಲ್ಲ. ಇದು ಸುಗುಣ, ಸುಶೀಲ, ಸಹಬಾಳ್ವೆ, ಸಹನೆ, ಲೋಕಾನುಭವ, ಧರ್ಮಗಳ ಸಾರ. ಸಂಸ್ಕಾರ ಅಥವಾ ಸಂಸ್ಕರಣೆಯೇ ಸಂಸ್ಕೃತಿ.

ನಾವು ನಮ್ಮ ಜೀವನದ ವಿಕಾಸ ಮತ್ತು ಆನಂದಕ್ಕಾಗಿ ಸಂಸ್ಕೃತಿಯ ಕಡೆಗೆ ಗಮನಹರಿಸಬೇಕು. ಮನುಷ್ಯನು ಲಕ್ಷೋಪಲಕ್ಷ ಪ್ರಾಣಿ ಪಕ್ಷಿ, ಕ್ರಿಮಿ–ಕೀಟಗಳಿಗಿಂತ ಶ್ರೇಷ್ಠ ಜೀವನದ ಶ್ರೇಷ್ಠತೆಗಾಗಿ ಸತ್ವಗುಣ, ರಜೋಗುಣ ಹಾಗೂ ತಮೋಗುಣಗಳನ್ನು ಜಯಿಸಲು, ಆಧ್ಯಾತ್ಮಕ ಗುರಿಗಳನ್ನು ತಲುಪಲು ಧ್ಯಾನ, ಯೋಗ, ಧರ್ಮ, ತ್ಯಾಗಗಳನ್ನು ಅನುಸರಿಸಬೇಕು. ವೇದ, ಪುರಾಣ, ಶಾಸ್ತ್ರ, ಇತಿಹಾಸ, ಇವುಗಳನ್ನು ಸವಿಸ್ತಾರವಾಗಿ ತಿಳಿಯಬೇಕು. ಇದರಿಂದ ಪರಸ್ಪರ ವೈರತ್ವ, ಅನೀತಿ, ಅಸತ್ಯಗಳಿಂದ ಮುಕ್ತವಾದ ಸಮಾಜ ನಿರ್ಮಾಣ ಸಾಧ್ಯ.

### ಸಂಸ್ಕೃತಿಯ ವರ್ಗಾವಣೆ, ರಕ್ಷಣೆ ಹಾಗೂ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರ

ಸಂಸ್ಕೃತಿಯು ಶಿಕ್ಷಣದೊಂದಿಗೆ ಉತ್ತಮ ಸಂಪರ್ಕವನ್ನು ಹೊಂದಿದೆ. ಶಿಕ್ಷಣದ ವಿಧಾನಗಳು ಸಮಾಜದ ಸಂಸ್ಕೃತಿಗೆ ಅನುಗುಣವಾಗಿರುತ್ತವೆ. ಮಕ್ಕಳಿಗೆ ಶಾಲೆಗಳಲ್ಲಿ ನೈತಿಕ ಮತ್ತು ಧಾರ್ಮಿಕ ವಿಚಾರಗಳನ್ನು ಬೋಧಿಸುವುದರಿಂದ ಹಾಗೂ ಸಮಾಜದ ಆದರ್ಶಗಳನ್ನು ತಿಳಿಸುವುದರಿಂದ ಅವರು ಸಂಸ್ಕೃತಿಯ ಅವಶ್ಯಕತೆಯನ್ನು ತಿಳಿಯಬಹುದು. ನಮ್ಮ ಶಿಕ್ಷಣದ ಎಲ್ಲಾ ಆಯೋಗಗಳೂ ಶಿಫಾರಸ್ಸು ಮಾಡಿ ಮಾನವನ ಸಂಸ್ಕೃತಿಯ ಸಂರಕ್ಷಣೆಗೆ (Protection), ಉಳಿಸಿಕೊಳ್ಳುವಿಕೆಗೆ (Preservation) ಹಾಗೂ ಅಭಿವೃದ್ಧಿಗೆ (Promotion) ಶಿಕ್ಷಣವನ್ನು ಮಾಧ್ಯಮವೆಂದು ಪರಿಗಣಿಸಿ "ಸಂಸ್ಕೃತಿಗಾಗಿ ಶಿಕ್ಷಣ" ಎಂಬುದನ್ನು ರಾಷ್ಟ್ರೀಯ ಶಿಕ್ಷಣದ ಗುರಿ ಎಂದು ಘೋಷಿಸಿದೆ. ಯಾವುದೇ ಪಠ್ಯ ವಿಷಯವನ್ನು ಕಲಿಯುವುದರಿಂದ ಮಕ್ಕಳಲ್ಲಿ ಹಾಗೂ ಬೋಧಕರಲ್ಲಿ ಸಾಂಸ್ಕೃತಿಕ ಮೌಲ್ಯದ ಅರಿವು ಮೂಡಿಸಬಹುದು. ಶಿಕ್ಷಣವು ಇದಕ್ಕೆ ಅನುಗುಣವಾದ ಕೆಲವು ಪೂರ್ವಭಾವೀ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಈ ಎಲ್ಲಾ ಯೋಜನೆಗಳು:

- ಮುಂದಿನ ಜನಾಂಗ ಸಂಸ್ಕೃತಿಯನ್ನು ಕಲಿತುಕೊಳ್ಳಲು ಸಹಕರಿಸಬೇಕು.
- ಇತರ ಸಮಾಜದ ಸಾಂಸ್ಕೃತಿಕ ವಿನ್ಯಾಸಗಳನ್ನು ಅನುಸರಿಸಲು ಸಹಕರಿಸಬೇಕು.
- ಸಮಾಜ ಬದಲಾದಂತೆ ಸಂಸ್ಕೃತಿಯು ಬದಲಾಗಲು ಸೂಕ್ತ ಮನೋಭಾವಗಳನ್ನು ರೂಪಿಸಬೇಕು.
- ಸಂಸ್ಕೃತಿಯ ಪುರಾತನವಾದ, ಸಾರ್ವಕಾಲಿಕವಾದ ಲಕ್ಷಣಗಳನ್ನು ಪೋಷಿಸಿ ರಕ್ಷಿಸಬೇಕು.
- ಯುವ ಜನಾಂಗದಲ್ಲಿ ಐತಿಹಾಸಿಕ ಹಾಗೂ ಮೌಲ್ಯಯುತ ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಬೇಕು.
- ಬದಲಾಗುವ ಸಾಮಾಜಿಕ ಚಿಂತನೆ ಅಡಿಯಲ್ಲಿ ಸಂಸ್ಕೃತಿಯ ಪರಿವರ್ತನೆಗೂ ಕ್ರಮ ಕೈಗೊಳ್ಳಬೇಕು.

ಶಿಕ್ಷಣದ ಗುರಿಗಳು ಸಮಾಜದ ಸಂಸ್ಕೃತಿಯ ಮೇಲೆ ಪೂರ್ವಭಾವಿಯಾಗಿ ನಿಂತಿವೆ. ಮಾನವನ ವ್ಯಕ್ತಿತ್ವವು ಸಂಸ್ಕೃತಿಯಿಂದ ಪ್ರಭಾವಗೊಳ್ಳುವ ಬಗೆಯನ್ನು ವಿವರಿಸುವಂತೆ ಸಂಸ್ಕೃತಿಯು ಶಿಕ್ಷಣಕ್ಕೆ ದಾರಿದೀಪವಾಗಿದೆ ಹಾಗೂ ಸಂಸ್ಕೃತಿಯ ಬೆಳವಣಿಗೆಯು ಶಿಕ್ಷಣದಿಂದ ಸಾಧ್ಯವಾಗುತ್ತದೆ. ಸಂಸ್ಕೃತಿ ಹೇಗೆ ಮಾನವನ ವ್ಯಕ್ತಿತ್ವವನ್ನು ರೂಪಿಸಲು ನೆರವಾಗಿದೆ ಎಂಬುದನ್ನು ಶಿಕ್ಷಣ ವಿವರಿಸುತ್ತದೆ. ಶಿಕ್ಷಣದಿಂದ ಮಾನವ ಸುಸಂಸ್ಕೃತನಾಗುತ್ತಾನೆ. ಶಿಕ್ಷಣ ಸಾಧನದಿಂದ ಆತನಲ್ಲಿಯ ವರ್ತನೆಗಳು, ಹವ್ಯಾಸಗಳು, ಸಾಮಾಜಿಕವಾಗಿ ಒಪ್ಪುವಂತಾಗುತ್ತದೆ. ಸಮಾಜದ ವಿವಿಧ ಮುಖಗಳ ಪರಿಚಯವಾಗುತ್ತದೆ ಹಾಗೂ ಆತನನ್ನು ಸಮಾಜದ ಗಣ್ಯ ಪ್ರಜೆಯನ್ನಾಗಿ ಪರಿವರ್ತಿಸುತ್ತದೆ.

ಶಿಕ್ಷಣದ ಮತ್ತೊಂದು ಕಾರ್ಯಾಚರಣೆಯು ಹಿಂದಿನ ಸಾಂಸ್ಕೃತಿಕ ಪರಂಪರೆಯನ್ನು ಹೊಸ ಜನಾಂಗಕ್ಕೆ ಒಯ್ಯುವಂತಹದ್ದು. ಈ ಕಾರ್ಯವನ್ನು ಶಿಕ್ಷಣ ಉಳಿಸಿಕೊಳ್ಳುವ ಕಾರ್ಯ (Conservative


Digitised by Bharatavani, CIIL

Function of Education) ಎಂದು ಪರಿಗಣಿಸಬಹುದು. ಶಿಕ್ಷಣವು ವ್ಯಕ್ತಿಗಳನ್ನು ಕೇವಲ ವಿದ್ಯಾವಂತರನ್ನಾಗಿ ಮಾಡುವುದಲ್ಲದೆ ಜೀವನದಲ್ಲಿ ಶಿಕ್ಷಣದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸೂಚನೆಗಳನ್ನು ನೀಡುತ್ತದೆ. ಸಮಾಜ ಮುಂದುವರಿಯುವ ಪ್ರಕ್ರಿಯೆಯನ್ನು ಹೊಂದಿದೆ ಎನ್ನಲು ಸಂಸ್ಕೃತಿಯು ಅಳತೆಗೋಲು. ಇದೇ ಸಮಾಜದ ಮೂಲ ತತ್ವ. ಎಮಿಲಿ ಡರ್ಕಿಯು ತಿಳಿಸಿರುವಂತೆ "ಶಿಕ್ಷಣವು ಸಾಮಾಜಿಕ ಜೀವನಕ್ಕೆ ಯಾರು ತಯಾರಿರುವುದಿಲ್ಲವೋ ಅಂತಹವರಿಗೆ ತರಬೇತಿ ನೀಡುತ್ತದೆ."

ಶಿಕ್ಷಣವು ಸಂಸ್ಕೃತಿಯನ್ನು ಮಾರ್ಪಡಿಸುತ್ತದೆ. ಸಂಸ್ಕೃತಿಯ ಬದಲಾವಣೆಯು ಸಮಾಜದ ಅವಶ್ಯಕತೆಗೆ, ಬದಲಾವಣೆಗೆ ನೆರವಾಗಿರಬೇಕು. ಸಂಸ್ಕೃತಿಯ ಬದಲಾವಣೆಯು ಪರಿಸರ, ಜೈವಿಕ, ಭೌಗೋಳಿಕ, ತಾಂತ್ರಿಕ ಮತ್ತು ಸಾಮಾನ್ಯ ಜ್ಞಾನ, ಅನುಭವ, ಸ್ವಾಭಿಮಾನ, ಕೌಶಲ್ಯ, ಕ್ರಿಯಾಶೀಲತೆ, ಇತ್ಯಾದಿ ಅಂಶಗಳನ್ನು ಅವಲಂಬಿಸಿರುವುದರಿಂದ ಶಿಕ್ಷಣವು ಇದಕ್ಕೆ ಪೂರಕವಾದ ಪಾತ್ರವನ್ನು ನಿರ್ವಹಿಸಬೇಕು. ಶಾಲೆಗೆ ತನ್ನದೇ ಆದ ಒಂದು ಸಂಸ್ಕೃತಿಯು ಇರುತ್ತದೆ. ಶಾಲಾ ಸಂಸ್ಕೃತಿಯು ಸಮಾಜದ ಸಂಸ್ಕೃತಿಯನ್ನು ಪುನರ್ ಚೇತನಗೊಳಿಸಿ ಸುಧಾರಿಸುತ್ತದೆ. ಮಕ್ಕಳಲ್ಲಿ ಸಮಾಜದ ವಿಶಿಷ್ಟವಾದ ಪರಂಪರೆಯನ್ನು ತಿಳಿಸಲು ನೆರವಾಗುತ್ತದೆ. ಶಾಲೆಯು ಶಿಕ್ಷಣದ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು (Social order). ಉತ್ತಮಗೊಳಿಸುತ್ತದೆ. ಮಕ್ಕಳು ವಿದ್ಯಾವಂತರಾಗಿ ಸಮಾಜ ಸೇರಿ ಸುಸಂಸ್ಕೃತರಾಗಿ ಬಾಳ್ವೆ ನಡೆಸಿ ಸಮಾಜದ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗಿಯಾಗಲು ಸಹಾಯ ಮಾಡುತ್ತದೆ.

ಸಂಸ್ಕೃತಿಗೂ ಶಿಕ್ಷಣಕ್ಕೂ ನೇರ ಹಾಗೂ ಅನ್ಯೋನ್ಯ ಸಂಬಂಧವಿದ್ದು ವ್ಯಕ್ತಿಯ ಹಾಗೂ ಸಮಾಜದ ಬೆಳವಣಿಗೆಗೆ ಸಹಕಾರಿಯಾಗುತ್ತವೆ. ಶಿಕ್ಷಣದಿಂದ ಸಮಾಜದ ಒಳಿತು ಹಾಗೂ ಕೆಡಕುಗಳನ್ನು ಪತ್ತೆ ಮಾಡಬಹುದು. ಶಿಕ್ಷಣ ಕಾರ್ಯದಿಂದ ಸಾಂಪ್ರದಾಯಿಕ, ಪ್ರಸ್ತುತ ಹಾಗೂ ಭವಿಷ್ಯದ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬಹುದು. ಗಾಂಧೀಜಿಯವರ ಅಭಿಪ್ರಾಯದಂತೆ "ಶಿಕ್ಷಣದಿಂದ ನಡತೆಯ ಬೆಳವಣಿಗೆ ಸಾಧ್ಯ". ಶಿಕ್ಷಣವು ಮಾನವನ ಸರ್ವತೋಮುಖ ಬೆಳವಣಿಗೆಗೆ ಸಹಕರಿಸಿ ಅವನನ್ನು ವಿದ್ಯಾವಂತನಾಗಿಸಿ, ಜ್ಞಾನವಂತನಾಗಿಸಿ, ಸುಸಂಸ್ಕೃತನಾಗಿಸಿ, ಸಮಾಜಕ್ಕೆ ಅನುಗುಣವಾದ ವರ್ತನೆಗಳನ್ನು ಕಲಿಯುವಂತೆ ಮಾಡುವ ಸಮರ್ಥವಾದ ಸಾಮಾಜಿಕ ಪ್ರಕ್ರಿಯೆಯಾಗಿದೆ. ಸಮಾಜದಿಂದ ಸಂಸ್ಕೃತಿ ರೂಪಿತವಾಗಿದೆ. ಅದೇ ರೀತಿ ಸಂಸ್ಕೃತಿಗೆ ಅನುಸಾರವಾದ ಶಿಕ್ಷಣವಿರಬೇಕು. ಸಮಾಜದ ಸಂಸ್ಕೃತಿಯನ್ನು ಹಾಗೂ ವ್ಯಕ್ತಿಗಳ ವ್ಯಕ್ತಿತ್ವ ಲಕ್ಷಣಗಳನ್ನು ಅವರು ಪಡೆದ ಶಿಕ್ಷಣದ ಮೂಲಕ ಅರ್ಥಮಾಡಿಕೊಳ್ಳಬಹುದು. ಸಾಮಾನ್ಯ ಪ್ರಜೆಗೆ "ಸಂಸ್ಕೃತಿ" ಎಂಬ ಪದ ಸರಳವಾದ ಅರ್ಥವನ್ನು ಧ್ವನಿಸಿದರೆ ಶಿಕ್ಷಣತಜ್ಞರಿಗೆ, ಸಮಾಜತಜ್ಞರಿಗೆ ಅದೊಂದು "ಸಂಕೀರ್ಣವಾದ ಉನ್ನತವಾದ, ಕಲಿತ, ಗಳಿಸಿದ ಪ್ರಮುಖ ವಸ್ತು ವಿಷಯವಾಗಿದೆ". ಆದ್ದರಿಂದ ಶಾಲೆಗಳಲ್ಲಿ ಇಂದು ಸಾಂಸ್ಕೃತಿಕ ಅಂಶಗಳಿಗೆ ಆದ್ಯತೆ ನೀಡಲಾಗುತ್ತಿದೆ.

ಶಿಕ್ಷಣವು ಸಂಸ್ಕೃತಿಯಿಂದ ಬಂದ ಪರಿಣಾಮ. ಶಿಕ್ಷಣದ ಮೂಲ ಉದ್ದೇಶವು ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡಿ, ಸಮಾಜದ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಜನಾಂಗಕ್ಕೆ ವರ್ಗಾಯಿಸುವುದೂ, ಕಾಪಾಡುವುದೂ ಆಗಿದೆ. ಸಂಸ್ಕೃತಿಯು ಜಡಶೀಲವಲ್ಲ. ಸಂಸ್ಕೃತಿಯು ಬದಲಾಗಲು ಶಿಕ್ಷಣ ಬೇಕಾಗುತ್ತದೆ. ಸಮಾಜದಲ್ಲಿ ಸಂಸ್ಕೃತಿಯ ವಿನ್ಯಾಸಗಳು ಬದಲಾದಂತೆ ಅವುಗಳಿಗೆ ತಕ್ಕಂತೆ ಮಾನವನು ವರ್ತನೆಗಳನ್ನು ಕಲಿತುಕೊಳ್ಳಲು ತಿಳುವಳಿಕೆ ನೀಡಲು ಶಿಕ್ಷಣ ಸಹಕಾರಿಯಾಗಿದೆ.

–ಕೆ.ರ.

## ಸಂಸ್ಕೃತೀಕರಣ ಮತ್ತು ಶಿಕ್ಷಣ

ಸಂಸ್ಕೃತೀಕರಣ ಒಂದು ಪ್ರಮುಖವಾದ ಸಾಮಾಜಿಕ ಕಲ್ಪನೆ. ಈ ಕಲ್ಪನೆಯನ್ನು ಬೆಳಕಿಗೆ ತಂದವರು ಡಾ. ಎಂ.ಎನ್. ಶ್ರೀನಿವಾಸ್‌ರವರು. ಅವರು ತಮ್ಮ ಸಮಾಜಶಾಸ್ತ್ರೀಯ ಅಧ್ಯಯನವಾದ "ರಿಲಿಜನ್ ಅಂಡ್ ಸೊಸೈಟಿ ಅಮಾಂಗ್ ಕೂರ್ಗ್ಸ್–1952" ಎಂಬ ಪುಸ್ತಕದಲ್ಲಿ ಮೊದಲಿಗೆ 'ಬ್ರಾಹ್ಮಣೀಕರಣ' ಎಂದು ಪರಿಚಯಿಸಿದ ಕಲ್ಪನೆಯನ್ನು ಪರಿಷ್ಕರಣ ಮಾಡಿಕೊಂಡು ತಮ್ಮ ಅನಂತರದ ಮತ್ತೊಂದು ಬರವಣಿಗೆಯಾದ 'ಸೋಷಿಯಲ್ ಚೇಂಜ್ ಇನ್ ಮಾಡರ್ನ್ ಇಂಡಿಯಾ' ಎಂಬ ಹೊತ್ತಿಗೆಯಲ್ಲಿ 'ಬ್ರಾಹ್ಮಣೀಕರಣ' ಕಲ್ಪನೆಯ ಬದಲಾಗಿ 'ಸಂಸ್ಕೃತೀಕರಣ'(Sanskritization) ಎಂಬುದಕ್ಕೆ ವಿವರಣೆ ನೀಡಿದ್ದಾರೆ. ಸಂಸ್ಕೃತೀಕರಣ ಎಂದರೆ ಕೆಳಸ್ತರದ ಹಿಂದೂ ಜಾತಿ ಅಥವಾ ಆದಿವಾಸಿ ಹಾಗೂ ಇನ್ನಿತರ ಕೆಳಸ್ತರದ ಸಮೂಹವು ತನ್ನ ರೂಢಿ ಅಥವಾ ಪದ್ಧತಿಗಳನ್ನು ಕ್ರಿಯಾವಿಧಿಗಳನ್ನು ತತ್ವಾದರ್ಶಗಳನ್ನು ಮತ್ತು ಜೀವನ ವಿಧಾನವನ್ನು ಉಚ್ಚ ಜಾತಿಯ ಅದರಲ್ಲೂ ಹೆಚ್ಚಾಗಿ ದ್ವಿಜರ ರೀತಿನೀತಿಗಳಿಗನುಸಾರವಾಗಿ ಮಾರ್ಪಡಿಸಿಕೊಳ್ಳುವ ಪ್ರಕ್ರಿಯೆ. ಇದೊಂದು ರೀತಿಯಲ್ಲಿ ಸಾಮಾಜಿಕ ಚಲನೆಗೆ ಎಡೆಮಾಡಿಕೊಟ್ಟಿತು ಎನ್ನಬಹುದು. ಭಾರತೀಯ ಸಮಾಜದಲ್ಲಿ ಜಾತಿಪದ್ಧತಿಯು ಒಂದು ಮುಚ್ಚಿದ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಒಂದು ಜಾತಿ ಮತ್ತೊಂದು ಜಾತಿಯ ಜೊತೆ ಒಡನಾಟ ಮಾಡುವುದು ಅತ್ಯಂತ ಕಷ್ಟದ ಮಾತು. ಜಾತಿಯು ಒಂದು ಭದ್ರವಾದ ಮುಚ್ಚಳ ಮುಚ್ಚಿದ ಡಬ್ಬಿಯಂತಿತ್ತು. ಆದರೆ ಕಾಲಕ್ರಮೇಣ ಇದೇ ಜಾತಿವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗಿನ ಚಲನೆ ಉಂಟಾಗತೊಡಗಿತು.

ಬಹುಶಃ ಈ ದಿಕ್ಕಿನಲ್ಲಿ ಶಿಕ್ಷಣದ ಪಾತ್ರವನ್ನು ಮರೆಯುವ ಹಾಗಿಲ್ಲ. ಶಿಕ್ಷಣವು ಸಾಮಾಜಿಕ ಚಲನೆಯ ದಿಕ್ಕಿನಲ್ಲಿ ಅತ್ಯಂತ ಮುಖ್ಯವಾದ ಒಂದು ಆಯುಧವೆನ್ನಬಹುದು. ಈ ಹಿಂದೆ ಶಿಕ್ಷಣವು ಮೇಲ್ಜಾತಿಯವರ ಸೊತ್ತಷ್ಟೇ ಅಲ್ಲದೆ ಅದು ಅವರ ಬದುಕಿನ ಸಂಪೂರ್ಣ ಬಂಡವಾಳವಾಗಿತ್ತು. ಅಲ್ಲದೆ ಅದು ಧಾರ್ಮಿಕ ಶಿಕ್ಷಣವಾಗಿತ್ತು. ಕಾಲಾನಂತರ ಶಿಕ್ಷಣವು ಸಾರ್ವಜನಿಕವಾಗತೊಡಗಿತು. ಮೇಲ್ಜಾತಿಯವರಿಗೆ ಮಾತ್ರ ಮೀಸಲಿದ್ದ ಶಿಕ್ಷಣ ಉಳಿದ ಜಾತಿಯವರಿಗೂ ಲಭ್ಯವಾಗತೊಡಗಿತು. ಆ ಹಂತದಲ್ಲಿ ಸಂಸ್ಕೃತೀಕರಣ ಕಾರ್ಯಕ್ಕೆ ಶಿಕ್ಷಣವು ಹೆಚ್ಚು ಹೆಚ್ಚು ಪ್ರೋತ್ಸಾಹ ನೀಡಿ ಕೆಳವರ್ಗದ ಜನ ಜೀವನದಲ್ಲಿ ಉತ್ತಮ ಮಾರ್ಪಾಡಿಗೆ ಅವಕಾಶ ಮಾಡಿಕೊಟ್ಟಿತು. ಶಿಕ್ಷಣವು ಬುದ್ಧಿಶಕ್ತಿಯನ್ನು ಹೆಚ್ಚಿಸಿದುದಲ್ಲದೆ ತರ್ಕಜ್ಞಾನ, ವಿಮರ್ಶಾ ಶಕ್ತಿ, ಒಳಿತು ಕೆಡುಕಿನ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳಲು ವ್ಯಕ್ತಿಗೆ ಅವಕಾಶ ಮಾಡಿಕೊಟ್ಟಿತು. ಅದರಿಂದಾಗಿ ಜಾತಿಬಗೆಗಿನ ಕಲ್ಪನೆ ತನ್ನ ಅರ್ಥವನ್ನು ಸ್ಥಾನಗಳಲ್ಲಿ ಚಲನೆಯನ್ನು ಪಡೆದುಕೊಳ್ಳಲು ಸಾಧ್ಯವಾಯಿತೆನ್ನಬಹುದು. ಶಿಕ್ಷಣವು ಮಾನವನಲ್ಲಿದ್ದ ಅಂಧಕಾರವನ್ನು ಅಳಿಸಲು ಪ್ರಯತ್ನಿಸಿದುದಲ್ಲದೆ ಅವನಿಗೆ ಜೀವನಕ್ಕೆ ಬೇಕಾದ ಒಳ್ಳೆಯ ಮಾರ್ಗೋಪಾಯಗಳತ್ತ ದಾರಿತೋರಿಸಲು ಅನುವಾಯಿತು. ಹೀಗಾಗಿ ಸಂಸ್ಕೃತೀಕರಣ ಪ್ರಕ್ರಿಯೆಯು ಮತ್ತಷ್ಟು ಪ್ರಬಲವಾಗಿ ಕೆಳಜಾತಿಯವರನ್ನು ಪ್ರೋತ್ಸಾಹಿಸಿ ಅವರು ಮೇಲ್ಜಾತಿಯವರ ರೀತಿನೀತಿ ಸಂಪ್ರದಾಯ ಹಬ್ಬ ಹರಿದಿನಗಳನ್ನು ಆಚರಿಸುವಂತೆ ಹುರಿದುಂಬಿಸಿತು.

ಶಿಕ್ಷಣ ಪಡೆಯಲಾರಂಭಿಸಿದ ಕೆಳವರ್ಗದ ಜನರು ಬಹಳ ಬೇಗ ಮೇಲ್ಜಾತಿಯವರನ್ನು ಅನುಕರಿಸುವಲ್ಲಿ ಯಶಸ್ವಿಯಾದರಲ್ಲದೆ, ಸಾಮಾಜಿಕ ಏಣಿಶ್ರೇಣಿಯಲ್ಲಿ ಸ್ವಲ್ಪ ಮಟ್ಟಿಗೆ ಸಾಮಾಜಿಕವಾಗಿ ಮೇಲ್ಬರಲು ಸಾಧ್ಯವಾಯಿತಲ್ಲದೆ, ಒಂದು ಜಾತಿಗೂ ಮತ್ತೊಂದು ಜಾತಿಗೂ ಇದ್ದ ಸಾಮಾಜಿಕ ದೂರವನ್ನು ಕಡಿಮೆಗೊಳಿಸಿತು. ಹೀಗೆ ಶಿಕ್ಷಣದ

Digitised by Bharatavani, CIIL

ಪ್ರಭಾವವಿದ್ದರೂ ಸಹ ಮೇಲ್ಜಾತಿಯವರಂತೆ ದಿಟ್ಟತನದಿಂದ ಕೆಳಜಾತಿಯವರು ವರ್ತಿಸಲು ಕೆಲವು ದಶಕಗಳೇ ಬೇಕಾಯಿತೆನ್ನಬಹುದು. ಜೊತೆಗೆ ಶತಶತಮಾನಗಳಿಂದ ಅನುಷ್ಠಾನಕ್ಕೆ ಬಂದಿರುವ ಮೇಲ್ಜಾತಿಯ ರೀತಿನೀತಿಗಳನ್ನು ಒಮ್ಮೆಲೇ ಇದ್ದಕ್ಕಿದ್ದಂತೆ ಕೆಳವರ್ಗದವರು ಅನುಸರಿಸಲಾಗಲಿಲ್ಲ. ಹಾಗೆ ಕೆಳಜಾತಿಯವರು ಸಾಮಾಜಿಕವಾಗಿ, ಬದಲಾದರೂ ಸ್ಥಳೀಯರು ಒಪ್ಪಿಕೊಳ್ಳದಿರಲೂಬಹುದು. ಇದಕ್ಕೆ ಕರ್ನಾಟಕದಲ್ಲೇ ಬಹಳಷ್ಟು ಉದಾಹರಣೆಗಳಿವೆ. ಉದಾ. ಅಕ್ಕಸಾಲಿಗರು ತಮ್ಮನ್ನು ವಿಶ್ವಕರ್ಮ ಬ್ರಾಹ್ಮಣರೆಂದು ಕರೆದುಕೊಂಡಿದ್ದರೂ ಮೈಸೂರಿನ ಸುತ್ತಮುತ್ತ ವಾಸಿಸುವ ಹರಿಜನರು ಅವರಿಂದ ಕುಡಿಯುವ ನೀರನ್ನೂ ಸ್ವೀಕರಿಸುವುದಿಲ್ಲ ಮತ್ತು ಅವರ ಮನೆಗಳಲ್ಲಿ ಊಟವನ್ನೂ ಸಹ ಮಾಡುವುದಿಲ್ಲ.

ಕೆಲವೊಮ್ಮೆ ಸಮಾಜದ ಕೆಳಸ್ತರದ ಜನರು ತಮ್ಮ ಸಾಮಾಜಿಕ ಅಂತಸ್ತನ್ನು ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಎತ್ತರಿಸಿಕೊಳ್ಳಲು ಯತ್ನಿಸುವುದು ಕೇವಲ ಸಂಸ್ಕೃತೀಕರಣದಿಂದಲೇ ಎಂದೂ ಹೇಳುವಂತಿಲ್ಲ. ಚಲನೆಯು ಸ್ಥಾನಮಾನದ ಬದಲಾವಣೆಯಿಂದಲೇ ಹೊರತು ಇಡೀ ಜಾತಿ ವ್ಯವಸ್ಥೆಗೆ ಸಂಬಂಧಿಸಿದ ರಚನೆಯ ಬದಲಾವಣೆಯಾಗಿರುವುದಿಲ್ಲ. ಬಹುಶಃ ಕೆಳಸ್ತರದ ಜನರ ಪ್ರಾರಂಭದ ಬದಲಾವಣೆಗಳು ಶಿಕ್ಷಣವೆಂಬ ಪ್ರಕ್ರಿಯೆಯಿಂದಲೂ ಸಾಧ್ಯವಾಗಬಹುದು. ವ್ಯಕ್ತಿಯ ಅನುಭವಗಳ ನಿರಂತರ ಪುನರ್ರಚನೆ ಶಿಕ್ಷಣದಿಂದಾಗುವುದರಿಂದ ಆ ಮೂಲಕ ಸಾಮಾಜಿಕ ಬದಲಾವಣೆಗೂ ಪ್ರೋತ್ಸಾಹಿಸಬಹುದು. ಆ ನಿಟ್ಟಿನಲ್ಲಿ ಸಂಸ್ಕೃತೀಕರಣವು ನಡೆಯಬಹುದೆನ್ನಬಹುದು.

ಮಾನವ ಸಮಾಜದ ಅನೇಕ ಚಟುವಟಿಕೆಗಳಲ್ಲಿ ಶಿಕ್ಷಣವು ಒಂದು ಮುಖ್ಯ ಪ್ರಕ್ರಿಯೆಯಾಗಿದ್ದು ಇದರ ಮೂಲಕ ಸಮೂಹಗಳ ಸಾಮಾಜಿಕ ಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲಾಗುತ್ತದೆ. ವಿಶಾಲಾರ್ಥದಲ್ಲಿ ಶಿಕ್ಷಣ ಎಂದರೆ ಜೀವನಾನುಭವಗಳನ್ನು ಕಲಿಯುವ ಹಾಗೂ ಕಲಿಸುವ ನಿರಂತರ ಪ್ರಕ್ರಿಯೆ. ಸಮ್ನರ್‌ರವರ ಪ್ರಕಾರ ಶಿಕ್ಷಣವೆಂದರೆ ಮಗುವಿಗೆ ಸಮೂಹದ ನೈತಿಕ ನಿಯಮಗಳನ್ನು ವರ್ಗಾಯಿಸುವ ಪ್ರಯುತ್ನವಾಗಿದ್ದು ಇದರಿಂದ ಅದು ಯಾವ ನಡತೆಯು ಅಂಗೀಕೃತವಾದದ್ದು ಮತ್ತು ಯಾವುದು ತಿರಸ್ಕೃತವಾದದ್ದು, ಅದು ಹೇಗಿರಬೇಕು, ಯಾವುದನ್ನು ನಂಬಬೇಕು ಮತ್ತು ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನು ಕಲಿಯುವುದಾಗಿದೆ. ಈ ವ್ಯಾಖ್ಯೆಯನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸುವುದಾದರೆ ಸಂಸ್ಕೃತೀಕರಣದಲ್ಲಿ ಅಡಗಿರುವ ಕೆಳಜಾತಿಯವರು ಮೇಲ್ಜಾತಿಯನ್ನು ಅನುಕರಿಸುವುದು ಶಿಕ್ಷಣದಿಂದ ವ್ಯಾಪಕವಾಗಿ ನಡೆದಿದೆ ಎನ್ನಬಹುದು. ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದರಿಂದ ಜಾತಿಜಾತಿಗಳ ನಡುವಿನ ಸಾಮಾಜಿಕ ಅಂತರವನ್ನು ಸಾಕಷ್ಟು ಕಡಿಮೆ ಮಾಡಿಕೊಳ್ಳಬಹುದು

ಶಿಕ್ಷಣವು ಮಾನವನಿಗೆ ಜ್ಞಾನಾಭಿವೃದ್ಧಿ ಮಾಡುವುದರಿಂದ ಅನುಕರಣೆಯ ಮೂಲಕ ತನ್ನ ಅಂತಸ್ತನ್ನು ಹೆಚ್ಚಿಸಿಕೊಳ್ಳಬೇಕೆಂಬ ಇಚ್ಛೆ ಹೆಚ್ಚಾಗುತ್ತದಲ್ಲದೆ ಆ ಮೂಲಕ ಬದಲಾವಣೆಗೊಂಡು ತನ್ನ ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಲಾಗುತ್ತಾನೆ ಎನ್ನಬಹುದು. ಹಿಂದೆ ಕೆಳಜಾತಿಯವರು ಅನುಸರಿಸುತ್ತಿದ್ದ ಬಹುತೇಕ ಸಾಮಾಜಿಕ ಹಾಗೂ ಆರ್ಥಿಕ ತೊಂದರೆಗಳು ಸಂಸ್ಕೃತೀಕರಣ ಕ್ರಿಯೆಯಿಂದ ಕಡಿಮೆಯಾಯಿತೆನ್ನಬಹುದಲ್ಲದೆ ಇದರೊಂದಿಗೆ ಶಿಕ್ಷಣವೂ ಬೆರೆತು ಮನುಷ್ಯರನ್ನು ಮಾನವರನ್ನಾಗಿಸಲು ಮತ್ತು ಉತ್ತಮ ಸಮಾಜ ಜೀವಿಗಳಾಗಲು ಪ್ರೋತ್ಸಾಹಿಸಿತೆನ್ನಬಹುದು.

ಶಿಕ್ಷಣದ ಜೊತೆಜೊತೆಯಲ್ಲಿಯೇ ವಿಜ್ಞಾನ, ತಂತ್ರಜ್ಞಾನ, ಕೈಗಾರಿಕೀಕರಣ, ವಾಣಿಜ್ಯೀಕರಣ ಮತ್ತು ಅನೇಕ ರಾಜಕೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿದ್ದೂ ಸಂಸ್ಕೃತೀಕರಣ ಮತ್ತಷ್ಟು ಸಕ್ರಿಯವಾಗಿ ಚಲನಾತ್ಮಕವಾಗಲು ಸಾಧ್ಯವಾಯಿತೆನ್ನಬಹುದು. ಇಂದು ವಿದ್ಯಾವಂತರಲ್ಲಿ ಜಾತಿಯ ಬಗೆಗಿನ ಒಲವೇ ಬೇರೆ, ಅನಕ್ಷರಸ್ಥರಲ್ಲಿನ ಜಾತಿಯ ಬಗೆಗಿನ ಒಲವೇ ಬೇರೆಯಾಗಿರುತ್ತದೆ. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಪಾಲಿನ ಅನಕ್ಷರಸ್ತರು ಇಂದಿಗೂ ಅನೇಕ ಸಾಮಾಜಿಕ ಹಾಗೂ ಆರ್ಥಿಕ ದೌರ್ಬಲ್ಯಗಳಿಂದ ನರಳುತ್ತಿದ್ದಾರೆ. ಸ್ವಾತಂತ್ರ್ಯ ಬಂದು 63 ವರ್ಷಗಳು ಕಳೆದರೂ ಅನೇಕ ಹಿಂದುಳಿದ ಜಾತಿಗಳು ಇಂದಿಗೂ ಅಸಹನೀಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿವೆ. ಅದೇ ನಗರ ಪ್ರದೇಶಗಳಲ್ಲಿ ಹಾಗೂ ವಿದ್ಯಾವಂತರಿರುವ ಕೆಲವು ಸಣ್ಣ ಪುಟ್ಟ ಪಟ್ಟಣಗಳಲ್ಲಿ ಜಾತಿ ಇಂದು ತನ್ನ ಪ್ರಬಲ ಲಕ್ಷಣಗಳನ್ನು ತನ್ನ ಉತ್ಕೃಷ್ಟ ಸ್ಥಾನವನ್ನು, ಶ್ರೇಷ್ಠತೆಯಲ್ಲಿನ ಅಧಿಕಾರವನ್ನು ಬಹುಪಾಲು ಕಳೆದುಕೊಂಡಿದೆ. ಬಹುಶಃ ಶಿಕ್ಷಣ ತೋರಿದ ಮಾರ್ಗದಿಂದ, ಮೌಲ್ಯಗಳಿಂದ ಹಾಗೂ ಶಿಕ್ಷಣದ ಉದ್ದೇಶಗಳಿಂದ ಮೇಲಿನ ಸ್ಥಿತಿ ಸಾಧ್ಯವಾಗಿದೆ ಎನ್ನಬಹುದು. ಇದರಿಂದ ಪರಂಪರಾನುಗತ ಸಮಾಜದ ಕೆಳವರ್ಗದ ಜನರ ಅಸ್ಥಿರ ಬದುಕು ಇಂದು ಶಿಕ್ಷಣದಿಂದಾಗಿ ಸಂಸ್ಕೃತೀಕರಣಗೊಂಡು ಸಮಾಜದ ಒಳಿತಿಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಶಿಕ್ಷಣವು ವ್ಯಕ್ತಿಯ ಮನೋಧರ್ಮದಲ್ಲಿ ಬದಲಾವಣೆಯನ್ನು ಕಂಡುಕೊಳ್ಳಲು ಶ್ರಮಿಸುತ್ತದೆ. ಶಿಕ್ಷಣವು ವ್ಯಕ್ತಿಯಲ್ಲಿ ಸ್ವಯಂ ಚಿಂತನೆ, ಸ್ವಯಂ ನಿರ್ಧಾರ ಮತ್ತು ಸ್ವಯಂಶಕ್ತಿಯನ್ನು ಬೆಳೆಸುವುದರಿಂದ, ಜಾತಿ ಪದ್ಧತಿಯಲ್ಲಿನ ತೊಡಕುಗಳನ್ನು ಸಂಸ್ಕೃತೀಕರಣ ಕ್ರಿಯೆಯಿಂದ ಬಗೆಹರಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಸಾಮಾಜಿಕ ಪರಿವರ್ತನೆಗೆ ಶಿಕ್ಷಣ ಒತ್ತು ಕೊಡುವುದರಿಂದ ಸಮಾಜದ ಅನೇಕ ನ್ಯೂನತೆಗಳು ಶಿಕ್ಷಣದಿಂದ ದೂರವಾಗಬಹುದು.

ಶಿಕ್ಷಣದ ಪ್ರಗತಿಯು ಸಾಮಾಜಿಕ ಸಂಸ್ಥೆಗಳಲ್ಲಿ ಪ್ರಮುಖ ಬದಲಾವಣೆಗಳನ್ನು ತಂದಿರುವುದನ್ನು ನಾವು ಕಾಣುತ್ತೇವೆ. ಅಂತೆಯೇ ಜಾತಿವ್ಯವಸ್ಥೆಯಲ್ಲಿದ್ದ ಪ್ರಮುಖ ನಕಾರಾತ್ಮಕ ಅಂಶಗಳನ್ನು ತೊಡೆದುಹಾಕಿ ನಿಶ್ಚಯಾತ್ಮಕ ನಿಲುವಿನ ಪ್ರಸಾರಕ್ಕೆ ಶಿಕ್ಷಣ ಪ್ರೋತ್ಸಾಹ ಕೊಟ್ಟಿದೆ ಎನ್ನಬಹುದು. ಉದಾಹರಣೆಗೆ' ಕೆಳಜಾತಿಯವರಿಗೆ ಈ ಹಿಂದೆ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವಿರಲಿಲ್ಲ, ಕೆರೆಕಟ್ಟೆಗಳಲ್ಲಿ ನೀರು ಪಡೆಯುವಂತಿರಲಿಲ್ಲ, ಛತ್ರಿ, ಚಪ್ಪಲಿ, ಒಡವೆ, ಬಿಳಿ ವಸ್ತ್ರ ಮುಂತಾದವುಗಳನ್ನು ಧರಿಸುವಂತಿರಲಿಲ್ಲ. ಇಂತಹ ಅನೇಕ ಕೀಳರಿಮೆಗಳನ್ನು ಕೆಳಜಾತಿಯವರು ಅನುಭವಿಸುತ್ತಿದ್ದರು. ಆದರೆ ಇಂದಿನ ಶಿಕ್ಷಣ ಹಾಗೂ ಸಂಸ್ಕೃತೀಕರಣದಿಂದಾಗಿ ಜಾತಿಸಂಸ್ಥೆಯಲ್ಲಿದ್ದ ಬಹುತೇಕ ಕೀಳರಿಮೆಗಳು ದೂರವಾಗಿವೆ. ರಾಜ್ಯಾಂಗವೂ ಈ ದಿಕ್ಕಿನಲ್ಲಿ ಅನೇಕ ಕಾನೂನುಗಳನ್ನು ಜಾರಿಗೆ ತಂದಿದೆ. ಶಿಕ್ಷಣದಿಂದ ಸ್ತ್ರೀಯರ ಸ್ಥಾನಮಾನದಲ್ಲಿ ಬದಲಾವಣೆಯಾಗಿದೆ. ವ್ಯಕ್ತಿಯ ಅಂತಸ್ತು ಮತ್ತು ಪಾತ್ರಗಳಲ್ಲಿ ಬದಲಾವಣೆಯಾಗಿದೆ. ವೈವಿಧ್ಯಮಯವಾದ ಸಾಮಾಜಿಕ ಸುಧಾರಣೆಗಳುಂಟಾಗಿವೆ. ಆರ್ಥಿಕ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಯುಂಟಾಗಿದೆ. ಬಾಲ್ಯವಿವಾಹ ಪದ್ಧತಿ ದೂರವಾಗಿದೆ. ಸತಿಸಹಗಮನ ಪದ್ಧತಿ ಇಲ್ಲವಾಗಿದೆ.

ಶಿಕ್ಷಣವು ಸಾರ್ವತ್ರಿಕ ಲಕ್ಷಣವಾದರೂ ಇದು ಕಾಲದಿಂದ ಕಾಲಕ್ಕೆ ಮತ್ತು ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸಗೊಳ್ಳುತ್ತಿರುತ್ತದೆ. ಪ್ರಾಚೀನ ಕಾಲದಲ್ಲಿ ವ್ಯಕ್ತಿತ್ವದ ವಿಕಾಸಕ್ಕೆ ಪೂರಕವಾದ ಪ್ರಕೃತಿಯ ಮಡಿಲಲ್ಲಿ ದೊರಕುವ ಸಾಧನಗಳಿಂದ ಶಿಕ್ಷಣವನ್ನು ಪಡೆಯುತ್ತಿದ್ದರೆ ಆಧುನಿಕ ಯುಗದಲ್ಲಿ ಜೀವನೋಪಾಯಕ್ಕೆ ಪೂರಕವಾದ ಸಾಮಾನ್ಯಜ್ಞಾನವನ್ನು,

Digitised by Bharatavani, CIIL

ವೃತ್ತಿ ಶಿಕ್ಷಣವನ್ನು ಪಡೆಯಲಾಗುತ್ತದೆ. ಬಹುಶಃ ಅನೌಪಚಾರಿಕ ಶಿಕ್ಷಣವಿದ್ದ ಕಾಲದಲ್ಲಿ ಶಿಕ್ಷಣವು ಒಂದು ಸ್ವಾಭಾವಿಕ ಪ್ರಕ್ರಿಯೆಯಾಗಿದ್ದು ಅದನ್ನು ನೇರ ಅವಲೋಕನ, ಸಂಪರ್ಕ ಮತ್ತು ಸ್ವಯಂಪ್ರೇರಿತವಾಗಿ ಪಡೆಯಲಾಗುತ್ತಿತ್ತು. ಈ ಬಗೆಯ ಅನೌಪಚಾರಿಕ ಶಿಕ್ಷಣದಿಂದಾಗಿ ಸಮಾಜದ ಸಂಪ್ರದಾಯ, ಲೋಕರೂಢಿ, ನೈತಿಕ ನಿಯಮ ಮುಂತಾದುವುಗಳನ್ನು ಅನೂಚಾನವಾಗಿ ನಡೆಸಿಕೊಂಡು ಬಂದ ಜಾತಿವ್ಯವಸ್ಥೆಯಿಂದ ಬಹಳಷ್ಟು ಕಷ್ಟ ನಷ್ಟಗಳನ್ನು ಶತಶತಮಾನಗಳ ಕಾಲ ಅನುಭವಿಸಲಾಯಿತು.

ಅನೌಪಚಾರಿಕ ಶಿಕ್ಷಣದಿಂದ ಔಪಚಾರಿಕ ಶಿಕ್ಷಣ ಬೆಳಕಿಗೆ ಬಂದಂದಿನಿಂದ ಮನುಷ್ಯನು ವಿಚಾರವಂತನೂ, ಬುದ್ಧಿವಂತನೂ, ತರ್ಕಜ್ಞಾನಿಯೂ ಆಗಿ ಇಂದು ವಿಮರ್ಶಾತ್ಮಕ ಶಕ್ತಿಯನ್ನು ಪಡೆದು ಅವೈಜ್ಞಾನಿಕವಾದ ಎಲ್ಲ ಬಗೆಯ ರೀತಿ ನೀತಿಗಳಿಂದ ದೂರವಾಗತೊಡಗಿದ್ದಾನೆ. ಅಷ್ಟೇ ಅಲ್ಲ. ವಿಜ್ಞಾನ, ತಂತ್ರಜ್ಞಾನ, ಕೈಗಾರಿಕ ನಗರಗಳ ಬೆಳವಣಿಗೆ ಇಂದು ಮಾನವನ ಸಾಂಪ್ರದಾಯಿಕ ವ್ಯವಸ್ಥೆಯನ್ನು ಅಲುಗಾಡಿಸತೊಡಗಿದ್ದಲ್ಲದೆ ಜಾತಿ ಪದ್ಧತಿಯ ಬುನಾದಿಯನ್ನೇ ಪ್ರಶ್ನೆ ಮಾಡತೊಡಗಿದೆ. ಜಾತಿ ಉಗಮದ ಬಗೆಗಿದ್ದ ದೈವಿಕ ಸಿದ್ಧಾಂತವನ್ನೇ ಪ್ರಶ್ನಿಸತೊಡಗಿದ್ದಾರೆ. ಅದೆಂದರೆ ಸೃಷ್ಟಿಕರ್ತನ ಬಾಯಿಯಿಂದ ಬ್ರಾಹ್ಮಣರು, ತೋಳಿನಿಂದ ಕ್ಷತ್ರಿಯರ, ತೊಡೆಯಿಂದ ವೈಶ್ಯರು, ಪಾದದಿಂದ ಶೂದ್ರರು ಹುಟ್ಟಿದರೆಂಬುವುದು ಅದೆಷ್ಟು ವೈಜ್ಞಾನಿಕವೋ ಅವೈಜ್ಞಾನಿಕವೋ ಯಾರು ಬೇಕಾದರೂ ಯೋಚಿಸಬಹುದು. ಡಾರ್ವಿನ್ನನ ವಿಕಾಸವಾದವು ಮಾನವನ ಹುಟ್ಟಿನ ಬಗ್ಗೆ ಬಹು ಅರ್ಥಪೂರ್ಣವಾದ ವೈಜ್ಞಾನಿಕ ಮಾಹಿತಿಯನ್ನು ನೀಡಿದೆ. ಇದನ್ನರಿತ ವಿದ್ಯಾವಂತರು ಜಾತಿಯ ಉಗಮದ ಬಗೆಗಿನ ಸಿದ್ಧಾಂತಗಳೆಲ್ಲವೂ ಅತ್ಯಂತ ಅನರ್ಥಕಾರಿ ಎಂದು ಪರಿಗಣಿಸಿದ್ದಾರೆ. ಹೀಗಾಗಿ ಜಾತಿಯ ಉಗಮದ ಬಗೆಗಿನ ಸಿದ್ಧಾಂತಗಳಾಗಲಿ ಜಾತಿಯಲ್ಲಿರುವ ಅಂಶಗಳಾಗಲಿ, ಅವುಗಳ ಲಕ್ಷಣಗಳಾಗಲಿ ಖಂಡಿತವಾಗಿಯೂ ಮಾನವ ನಿರ್ಮಿತವಾದುದೆಂದು ತಿಳಿದು ಬರುವುದರ ಜೊತೆಗೆ ಜಾತಿಯೇ ಮಾನವ ನಿರ್ಮಿತವಾದ ಒಂದು ಸಾಮಾಜಿಕ ಸಂಸ್ಥೆ ಎಂದೇ ಪರಿಗಣಿಸಬಹುದು.

ಇಷ್ಟೇ ಅಲ್ಲದೆ ಶಿಕ್ಷಣವು ವ್ಯಕ್ತಿಯನ್ನು ಸಮಾಜೀಕರಣ ಗೊಳಿಸುವುದಲ್ಲದೆ ಮಕ್ಕಳಿಗೆ ಶಿಸ್ತು, ಪ್ರಾಮಾಣಿಕತೆ, ಸಮಾಜ ಹಾಗೂ ಕಾಳಜಿ, ತಪ್ಪು ಒಪ್ಪಿನ ಪರಿಜ್ಞಾನ ಇವುಗಳೆಲ್ಲವನ್ನೂ ಕಲಿಸುತ್ತದೆ. ಶಿಕ್ಷಣವು ಮಕ್ಕಳಲ್ಲಡಗಿರುವ ಸುಪ್ತ ಶಕ್ತಿಯನ್ನು ಹೊರಹೊಮ್ಮಿಸಿ ಅವರ ಸಾಮರ್ಥ್ಯವನ್ನು ಪ್ರಕಾಶಗೊಳಿಸುತ್ತದೆ. ಹೀಗೆಂದಾಗ ಸಂಸ್ಕೃತೀಕರಣ ಶಿಕ್ಷಣದ ಒಂದು ಪ್ರಮುಖ ಬದಲಾವಣೆಯ ಅಂಗವಾಗಿದ್ದು ಸಮಾಜದಲ್ಲಿ ಜಾತಿಪದ್ಧತಿಗಳಿಗಂಟಿಕೊಂಡಿದ್ದ ತೊಡಕುಗಳನ್ನು ಅಳಿಸಿ ಹಾಕಿ ಜನರ ಜೀವನದ ಸ್ಥಿತಿಗತಿಗಳಲ್ಲಿ ಸುಧಾರಣೆ ತಂದಿದೆ ಎನ್ನಬಹುದು. ಸಾಮಾಜಿಕ ಅವ್ಯವಸ್ಥೆಯ ಆಗರವಾಗಿದ್ದ ಜಾತಿ ವ್ಯವಸ್ಥೆ ಇಂದು ಅತ್ಯಂತ ಉತ್ತಮ ರೀತಿಯಲ್ಲಿ ಮಾರ್ಪಾಡಾಗಿದ್ದರೂ ಜಾತಿಯ ಪಾತ್ರ ಒಂದಲ್ಲ ಒಂದು ರೀತಿಯಲ್ಲಿ ಸಮಾಜದಲ್ಲಿ ಇದ್ದೇ ಇದೆ. ರಾಜಕೀಯ ಕ್ಷೇತ್ರವಂತು ಇಂದು ಜಾತಿಮಯವಾಗಿದೆ. ಅಷ್ಟೇ ಅಲ್ಲ, ವ್ಯಕ್ತಿಯ ಸೋಲುಗೆಲುವು ಬಹುಪಾಲು ಜಾತಿಯನ್ನಾಧರಿಸಿದೆ. ಇದರ ಜೊತೆಗೆ ಹಣದ ಪ್ರಭಾವವೂ ಇಲ್ಲದಿಲ್ಲ. ನಿಜವಾಗಲೂ ಹೇಳಬೇಕಾದರೆ ಜಾತಿ ಮತ್ತು ಪ್ರಜಾಪ್ರಭುತ್ವ ಕಡು ವಿರೋಧಿಗಳು. ಇವು ಒಂದನ್ನೊಂದು ಹೊಂದಿಕೊಂಡು ಹೋಗಲು ಸಾಧ್ಯವಿಲ್ಲ. ಜಾತಿ ಅಸಮಾನತೆಯ ಆಗರ, ಪ್ರಜಾಪ್ರಭುತ್ವ ಸಮಾನತೆಯ ಸಾಕಾರದ ಮೇಲೆ ನಿಂತಿರುತ್ತದೆ. ಆದರೂ ಇವೆರಡು ಈ ದೇಶದಲ್ಲಿ ಭುಜಕ್ಕೆ ಭುಜಕೊಟ್ಟು ಹೋಗುತ್ತಿರುವುದನ್ನು ನೋಡಿದರೆ ಆಶ್ಚರ್ಯವುಂಟಾಗುತ್ತದೆ.

–ಹೆಚ್.ಎಮ್.ವ

## ಸಂಸ್ಕೃತಿಯ ವರ್ಗಾವಣೆ ಮತ್ತು ಶಿಕ್ಷಣ

'ಸಂಸ್ಕೃತಿ' ಈ ಶಬ್ದವು ಇಂಗ್ಲಿಷಿನ 'ಕಲ್ಚರ್' ಎಂಬ ಪದದ ಕನ್ನಡ ಅನುವಾದವಾಗಿದೆ. ಈ ಶಬ್ದವು ಲ್ಯಾಟಿನ್ ಭಾಷೆಯ ಕಲ್ಚರೆ ಎಂದರೆ ಬೆಳಸು, ಅಭಿವೃದ್ಧಿಪಡಿಸು, ಸಂಸ್ಕಾರ ನೀಡು ಎಂಬ ಅರ್ಥವನ್ನು ಕೊಡುತ್ತದೆ. ಅಭಿವೃದ್ಧಿಪಡಿಸುವುದರಿಂದ ಅಥವಾ ಸಂಸ್ಕಾರದಿಂದಾಗುವ ಸುಧಾರಣೆ ಎಂಬ ಅರ್ಥವನ್ನು ಈ ಶಬ್ದವು ನೀಡುತ್ತದೆ.

### ವ್ಯಾಖ್ಯೆಗಳು

"ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗಿ ಬರುವ ಸಾಮಾಜಿಕ ಪರಂಪರೆಯೇ ಸಂಸ್ಕೃತಿ" – ಆರ್. ಲಿಂಟನ್

"ಮೌಲ್ಯಗಳ ಬಗ್ಗೆ ನಡೆಯುವ ಮಾನವನ ಚಟುವಟಿಕೆಗಳ ಸಂಕಲನವೇ ಸಂಸ್ಕೃತಿ"–ಕಿಂಬಾಲ್ ಯಂಗ್

"ವ್ಯಕ್ತಿತ್ವವು ವಿಕಾಸಗೊಳ್ಳಲು ಬೇಕಾದ ಅಡಿಪಾಯವೇ ಸಂಸ್ಕೃತಿ" – ಅಲ್ಪೋಟ್.

"ಸಂಸ್ಕೃತಿ ಎಂಬುದು ಸಾಂಪ್ರದಾಯಕ ತಿಳುವಳಿಕೆ, ಸಂಘಟಿತ ರೂಪ, ಇದು ಕಲೆ ಕೈಗಾರಿಕೆಗಳ ರೂಪದಲ್ಲಿ ಪ್ರಕಟಿತವಾಗುತ್ತದೆ. ಪರಂಪರೆಯ ರೂಪದಲ್ಲಿ ಮುಂದುವರೆಯುತ್ತಾ ಅದು ಮಾನವ ಸಮುದಾಯದ ವೈಶಿಷ್ಟ್ಯವನ್ನು ಸೂಚಿಸುತ್ತದೆ" – ರೆಡ್‌ಫೀಲ್ಡ್

"ಜ್ಞಾನ, ಕಲೆ, ನೀತಿ, ನಿಯಮ, ನಂಬಿಕೆ ಸಂಪ್ರದಾಯಗಳು ಮತ್ತು ಮನುಷ್ಯನು ಸಮಾಜದ ಒಬ್ಬ ಸದಸ್ಯನಾಗಿ ಪಡೆದ ಎಲ್ಲ ಸಾಮರ್ಥ್ಯ ಮತ್ತು ಹವ್ಯಾಸಗಳನ್ನು ಒಳಗೊಂಡ ಒಟ್ಟು ವ್ಯವಸ್ಥೆ." – ಇ.ವಿ.ಟೈಲರ್

### ಸಂಸ್ಕೃತಿಯ ಲಕ್ಷಣಗಳು

- ಸಂಸ್ಕೃತಿಯು ಎಲ್ಲಾ ಸಮಾಜದಲ್ಲಿ, ಎಲ್ಲಾ ದೇಶಗಳಲ್ಲಿ ಮತ್ತು ಎಲ್ಲ ಜನಾಂಗಗಳಲ್ಲಿಯೂ ಏಕರೂಪತೆಯನ್ನು ಹೊಂದಿಲ್ಲ.
- ಸಂಸ್ಕೃತಿಯು ಕಾಲ ಕಾಲಕ್ಕೆ ಬದಲಾಗುವ ಪರಂಪರೆಯನ್ನು ಹೊಂದಿದೆ.
- ಪ್ರತಿಯೊಂದು ಸಂಸ್ಕೃತಿಗೂ ತನ್ನದೇ ಆದ ಐತಿಹಾಸಿಕ ಹಿನ್ನೆಲೆ ಇರುತ್ತದೆ.
- ಸಂಸ್ಕೃತಿಯು ವ್ಯಕ್ತಿಯ ಬಾಹ್ಯ ಹಾಗೂ ಆಂತರಿಕ ವಿಚಾರಗಳನ್ನು ವಿವರಿಸುತ್ತದೆ.
- ಜೀವಿಯ ಜನನದಿಂದ ಮರಣದವರೆಗೆ ಪಾತ್ರ ವಹಿಸುವ ನಿರಂತರ ಪ್ರಕ್ರಿಯೆ.
- ಸಂಸ್ಕೃತಿಯು ಆಂತರಿಕ ಮೌಲ್ಯಗಳನ್ನು ಹೊಂದಿರುವುದರಿಂದ ಅದನ್ನು ಆದರ್ಶವಾದುದೆಂದು ಪರಿಗಣಿಸಲಾಗಿದೆ.
- ಸಂಸ್ಕೃತಿಯು ಮಾನವನಿಗೆ ಕಲಿಯುವಿಕೆಯಿಂದ ಬಂದಿದ್ದು.
- ಸಂಸ್ಕೃತಿಯು ವೇಗ ಕ್ರಿಯೆಯಲ್ಲಿ ಬೆಳವಣಿಗೆಯಾಗುವುದಿಲ್ಲ. ನಿಧಾನವಾಗಿ ಸುವ್ಯವಸ್ಥಿತವಾಗಿ ಮುಂದುವರೆಯುತ್ತದೆ.
- ಮಾನವನ ಆಸೆ, ಆಕಾಂಕ್ಷೆಗಳನ್ನು ಸಾಧಿಸಲು ಸಂಸ್ಕೃತಿಯು ಒಂದು ಮಾಧ್ಯಮ ಅಥವಾ ಸಾಧನವಾಗಿದೆ.
- ಎಲ್ಲಾ ಸಂಸ್ಕೃತಿಗಳೂ ಸಮ್ಮಿಲನಗೊಳ್ಳುವ ಗುಣವನ್ನು ಹೊಂದಿವೆ.

Digitised by Bharatavani, CIIL

- ಸಂಸ್ಕೃತಿಯು ಅನುಕರಣೀಯವಾದುದು.
- ಸಂಸ್ಕೃತಿಯು ಸಮಕಾಲೀನ ತತ್ವವನ್ನು ಹೊಂದಿದೆ.
- ಸಂಸ್ಕೃತಿಯು ಸ್ವಪ್ರೇರಿತವಾದುದು. ಇದರಿಂದ ಮಾನವನಿಗೆ ಸುಖ–ಶಾಂತಿ ಯಶಸ್ಸು ದೊರೆಯುತ್ತದೆ.

**ಸಂಸ್ಕೃತಿಯ ವರ್ಗಾವಣೆ**

ಸಂಸ್ಕೃತಿಯು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಅದು ನಿಂತ ನೀರಲ್ಲ. ನಮ್ಮ ತಂದೆ ತಾತನಂತೆ ನಾವಿಲ್ಲ. ನಮ್ಮಂತೆಯೇ ನಮ್ಮ ಮುಂದಿನ ಪೀಳಿಗೆ ಇರಲಾರದು. ಹೀಗೆ ಸಂಸ್ಕೃತಿಯಲ್ಲಿ ಬದಲಾವಣೆಗಳಾಗುವುದಕ್ಕೆ ಕಾರಣ ನಾವು ಮತ್ತೊಬ್ಬರ ಸಂಪರ್ಕಕ್ಕೊಳಗಾಗುವುದರ ಪರಿಣಾಮ. ಹಿಂದೆ ಸಂಪರ್ಕ ಸಾಧನ ಕೊರತೆಯಿದ್ದುದರಿಂದ ಸಂಸ್ಕೃತಿ ವರ್ಗಾವಣೆ ನಿಧಾನವಾಗಿ ಸಾಗುತ್ತಿತ್ತು. ಇಂದು ಸಮೂಹ ಮಾಧ್ಯಮಗಳಾದ ರೇಡಿಯೋ, ದೂರದರ್ಶನ, ಪತ್ರಿಕೆ, ಚಲನಚಿತ್ರ ಮುಂತಾದವು ಈ ಕೆಲಸದಲ್ಲಿ ಸಹಕಾರಿಯಾಗಿವೆ. ಸಂಸ್ಕೃತಿಯು ಇವೆಲ್ಲದರ ಪರಿಣಾಮವಾಗಿ ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ಸಾಗಿ ಬರುತ್ತದೆ. ಇದನ್ನೇ ಸಂಸ್ಕೃತಿಯ ವರ್ಗಾವಣೆ ಎಂದು ಕರೆಯಲಾಗಿದೆ.

ಸಮಾಜದ ಒಂದು ವರ್ಗದ ಜನರ ತಲೆತಲಾಂತರಗಳಿಂದ ಬಂದಿದ್ದ ಭವ್ಯ ಪರಂಪರೆಗಳನ್ನು ಧಾರ್ಮಿಕ ಮತ್ತು ಆಧ್ಯಾತ್ಮಿಕ ರೀತಿ, ನೀತಿ, ನಿಯಮಗಳನ್ನು ಕಾಪಾಡಿಕೊಂಡು ಎಷ್ಟೇ ಕಷ್ಟ ಬಂದರೂ ಅವುಗಳನ್ನು ಮುಂದುವರೆಸಿಕೊಂಡು ಜೀವನದ ಮೌಲ್ಯಗಳೊಂದಿಗೆ ಸಮ್ಮಿಳಿಸಿಕೊಂಡು ಹೋಗುವುದೇ ಸಂಸ್ಕೃತೀಕರಣ ಎನ್ನಿಸಿಕೊಳ್ಳುತ್ತದೆ.

**ಸಂಸ್ಕೃತೀಕರಣದ ವಿಧಗಳು**

1. **ಅಸಂಸ್ಕೃತೀಕರಣ :** ಅಸಂಸ್ಕೃತೀಕರಣ ಎಂದರೆ ಹಿಂದಿನ ಸಾಂಸ್ಕೃತಿಕ ವಿಧಿ ವಿಧಾನಗಳನ್ನು ನಿಲ್ಲಿಸಿಬಿಡುವುದು. ಉದಾ:– ಬಹಳಷ್ಟು ಬ್ರಾಹ್ಮಣ ಸಮಾಜಕ್ಕೆ ಸೇರಿದ ಮಕ್ಕಳು ಉಪನಯನವಾದ ಮೇಲೆ ಸಂಧ್ಯಾವಂದನೆ ಮಾಡದಿರುವುದು ಮತ್ತು ಜನಿವಾರ ಧರಿಸದೆ ಇರುವುದು. ಇದರಂತೆ ಬೇರೆ ಬೇರೆ ವರ್ಗದ ಜನರು ತಮ್ಮ ಧರ್ಮದ ಸಾಂಸ್ಕೃತಿಕ ಮಟ್ಟವನ್ನು ಮುಂದುವರೆಸದೆ ಬಿಟ್ಟುಬಿಡುವುದು ಅಸಂಸ್ಕೃತೀಕರಣ ಎನ್ನಿಸಿಕೊಳ್ಳುತ್ತದೆ.
2. **ಸುಸಂಸ್ಕೃತೀಕರಣ :** ಸಮುದಾಯದಲ್ಲಿನ ಜನರು ತಲೆ ತಲಾಂತರದಿಂದ ತಮ್ಮ ಹಿರಿಯರಿಂದ ಬಂದಿದ್ದ ಸಂಸ್ಕೃತಿಯನ್ನು ಚಾಚೂ ತಪ್ಪದೇ ಪಾಲಿಸಿ ಅದನ್ನು ವೈಜ್ಞಾನಿಕ ರೀತಿಯಲ್ಲಿ ಹಾಗೂ ಆಧುನಿಕ ರೀತಿಯಲ್ಲಿ ಉತ್ತಮ ಮಾರ್ಪಾಡುಗಳನ್ನು ಮಾಡಿ ಮುಂದುವರೆಸುವುದು. ಉದಾಹರಣೆಗೆ : ದೇವತಾ ಪೂಜೆ, ಹೋಮ ಹವನ, ಜಾತ್ರೆಗಳು, ಹರಕೆ ಮುಂತಾದವುಗಳನ್ನು ವೈಜ್ಞಾನಿಕ ರೀತಿಯಲ್ಲಿ ಅರ್ಥೈಸಿ ಆಚರಿಸುವುದು. ಇದರಂತೆ ಗ್ರಹಣಗಳು, ಅಮಾವಾಸ್ಯೆಗಳು ಅನಿಷ್ಟವೆಂದು ತಿಳಿಯದೆ ವೈಜ್ಞಾನಿಕ ಕಾರಣಗಳೆಂದು ತಿಳಿಯುವುದು.

**ಸಾಂಸ್ಕೃತಿಕ ವರ್ಗಾವಣೆಯಲ್ಲಿ ಶಿಕ್ಷಣದ ಪಾತ್ರ**

1. ಜನರಿಗೆ ಯಾವುದು ಉಪಯುಕ್ತವೋ ಅದು ಬಹುದಿನಗಳವರೆಗೆ ಅವರ ಜೀವನದಲ್ಲಿ ಉಳಿಯುವುದು. ಹೀಗೆ ಒಳ್ಳೆಯದನ್ನು ನಮ್ಮ ಇರುವಿಕೆಯಲ್ಲಿ ಅಳವಡಿಸಿಕೊಳ್ಳುವುದೇ ಸಂಸ್ಕೃತಿಯ ಸುಧಾರಣೆ. ಸಂಸ್ಕೃತಿಯು ಸುಧಾರಣೆ ಹೊಂದುತ್ತಲೇ ಇರುತ್ತದೆ. ಸಂಸ್ಕೃತಿಯ ವರ್ಗಾವಣೆ ಮತ್ತು ಸುಧಾರಣೆಯಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ.
2. ಶಿಕ್ಷಣವು ವ್ಯಕ್ತಿ ಇರುವಿಕೆಯನ್ನು ಬದಲಾಯಿಸುತ್ತದೆ ಇಲ್ಲವೇ ಸುಧಾರಿಸುತ್ತದೆ. ಶಿಕ್ಷಣವು ವ್ಯಕಿಗೆ ಹೊಣೆ, ಜವಾಬ್ದಾರಿ, ಕರ್ತವ್ಯ ಮುಂತಾದವುಗಳನ್ನು ಕಲಿಸುತ್ತದೆ. ಜನರು ಅನೇಕ ಪ್ರಸಿದ್ಧ ವ್ಯಕ್ತಿಗಳ ಹಾಗೂ ಮಹಾನ್ ಪುರುಷರ ಚರಿತ್ರೆಯನ್ನು ಓದುವುದರಿಂದ ಅವರಂತೆ ತಾವೂ ಆಗಬೇಕೆಂದು ಬಯಸಿ ಅವರ ರೀತಿ–ನೀತಿಗಳನ್ನು ಅನುಸರಿಸುತ್ತಾರೆ. ಹೀಗೆ ಸಂಸ್ಕೃತಿಯ ವರ್ಗಾವಣೆ ಮತ್ತು ಸುಧಾರಣೆಯಲ್ಲಿ ಶಿಕ್ಷಣವು ಬಹುಮುಖ ಪಾತ್ರವನ್ನು ವಹಿಸುತ್ತದೆ.
3. ಸಂಸ್ಕೃತಿ ಕರಣವೆಂದರೆ ಒಂದು ಸಮಾಜದಿಂದ ಮತ್ತೊಂದು ಸಮಾಜಕ್ಕೆ ಅಥವಾ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಂಸ್ಕೃತಿಯ ವರ್ಗಾವಣೆ ಎಂದರ್ಥ. ಶಾಲಾ ಕಾಲೇಜುಗಳು ಇಲ್ಲದಿದ್ದ ಸಂದರ್ಭದಲ್ಲಿ ಮನೆ, ಸಮುದಾಯ, ಧರ್ಮ ಮುಂತಾದ ನಿಯೋಗಿಗಳು ಸಂಸ್ಕೃತಿ ಕರಣದ ಜವಾಬ್ದಾರಿಯನ್ನು ನಿರ್ವಹಿಸಿದವು. ಆದರೆ ಇಂದು ಔಪಚಾರಿಕ ನಿಯೋಗಗಳಾದ ಶಾಲೆ–ಕಾಲೇಜುಗಳು ಈ ಕಾರ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸುತ್ತಿವೆ.
4. ಶಿಕ್ಷಣವು ಕೇವಲ ಸಂಸ್ಕೃತಿಯನ್ನು ರವಾನಿಸುವ ಕಾರ್ಯವನ್ನು ಮಾತ್ರ ಹೊಂದಿರುವುದಿಲ್ಲ. ಅದರ ಜೊತೆಗೆ ನೂತನ ಮತ್ತು ಯುಕ್ತವಾದ ಸಾಂಸ್ಕೃತಿಕ ರೂಪಗಳನ್ನು ಬೆಳೆಸಿಕೊಂಡು ಬರುತ್ತದೆ.
5. ವೈಜ್ಞಾನಿಕ ಹಾಗೂ ತಾಂತ್ರಿಕ ಯುಗಕ್ಕೆ ಯೋಗ್ಯವಾಗಿ ಶೈಕ್ಷಣಿಕ ಸಂಸ್ಕೃತಿಯು ಮುಂದುವರೆಯುವದು. ಇಂದಿನ ಪರಿಸ್ಥಿತಿಗೆ ತಕ್ಕಂತೆ ಪಠ್ಯವನ್ನು ಬದಲಾಯಿಸಿ ಉತ್ತಮ ಬೋಧನಾ ಪದ್ಧತಿಗಳನ್ನು ಅನುಸರಿಸುವುದು ಶಾಲೆಯ ಶಿಸ್ತನ್ನು ಅಕ್ಷರ ಸಹಿತ ಪಾಲಿಸುವುದು ಅಗತ್ಯ. ಶಿಕ್ಷಕರು ಮೊದಲು ಶಿಸ್ತನ್ನು ಅನುಸರಿಸಿ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು. ಅವನು ಬೆಳೆದು ಬಂದಿರುವ ಶಾಲಾ ವಾತಾವರಣವು ಉತ್ತಮ ದರ್ಜೆಯಲ್ಲಿ ಇರಬೇಕು.
6. ಶಾಲಾ ಪಠ್ಯಕ್ರಮದಲ್ಲಿ ಅಪೇಕ್ಷಿತ ಸಾಂಸ್ಕೃತಿಕ ಅಂಶಗಳನ್ನು ಸೇರಿಸುವ ಮೂಲಕ ಶಿಕ್ಷಣ ಕ್ರಮ ಈ ದಿಕ್ಕಿನಲ್ಲಿ ಮಹತ್ವದ ಪಾತ್ರವನ್ನು ವಹಿಸಬಲ್ಲದು. ಸಮಾಜ ತನ್ನ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲೋಸುಗ ಶಿಕ್ಷಣವನ್ನು ಸಂಸ್ಕೃತಿಯಿಂದ ಮತ್ತು ಸಂಸ್ಕೃತಿಗಾಗಿ ಎನ್ನುವ ನಿಲುವಿನಲ್ಲಿ ರೂಪಿಸುತ್ತದೆ.
7. ಮಕ್ಕಳಲ್ಲಿ ನಾವು ಬೆಳೆಸುವ ಉತ್ತಮ ಭಾವನೆಗಳು. ಅನುಧೋರಣೆಗಳು, ಆದರ್ಶಗಳು, ಹೊಂದಿಕೆಗಳು, ಯೋಗ್ಯ ನಡೆವಳಿಕೆಗಳು ಮುಂತಾದವುಗಳೆಲ್ಲ ಸಂಸ್ಕೃತಿಯ ಉತ್ಪನ್ನಗಳು. ಆದರೆ ಇವುಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು ಶಿಕ್ಷಣದ ಪ್ರಥಮ ಗುರಿಯಾಗಿದೆ.
8. ಸಂಸ್ಕೃತಿಯು ಮಾನವನ ಸಾಮಾಜಿಕ ನೈತಿಕ, ಆಧ್ಯಾತ್ಮಿಕ ಅವಶ್ಯಕತೆಗಳನ್ನು ಈಡೇರಿಸಬಲ್ಲದು. ಆದ್ದರಿಂದ ಇವುಗಳೆಲ್ಲ ಯಶಸ್ವಿಯಾಗಿ ಮುಂದುವರೆಯಬೇಕಾದರೆ ಶೈಕ್ಷಣಿಕ ಅನುಭವವು ಆದರ್ಶ ರೂಪದ್ದಾಗಿರಬೇಕು. ಶಿಕ್ಷಣದ ಮೂಲಕ ಸಮಾಜ, ಸಂಸ್ಕೃತಿ, ವ್ಯಕ್ತಿ, ರಾಷ್ಟ್ರಗಳೆಲ್ಲ ಉತ್ತಮ ರೀತಿಯಲ್ಲಿ ರೂಪಿಸಲ್ಪಡುವುವು.

**ಸಂಸ್ಕೃತೀಕರಣದಲ್ಲಿ ಶಿಕ್ಷಕನ ಪಾತ್ರ**

ಮಕ್ಕಳಲ್ಲಿ ಸುಸಂಸ್ಕೃತೀಕರಣ ತರುವುದು ಶಿಕ್ಷಕನ ಆದ್ಯ ಕರ್ತವ್ಯವಾಗಿದೆ. ಮಕ್ಕಳ ಮೇಲೆ ಶಾಲಾ ಪರಿಸರಕ್ಕಿಂತಲೂ ಶಿಕ್ಷಕನ ವ್ಯಕ್ತಿತ್ವದ ಪ್ರಭಾವ ಹೆಚ್ಚಾಗಿ ಬೀಳುತ್ತದೆ. ಇದಕ್ಕಾಗಿ ಮೊದಲು ಪ್ರತಿಯೊಬ್ಬ

Digitised by Bharatavani, CIIL

ಶಿಕ್ಷಕನು ಸುಸಂಸ್ಕೃತನಾಗಬೇಕಾಗತ್ತದೆ. ನಂತರ ಈ ಕೆಳಗಿನ ಕಾರ್ಯ ಚಟುವಟಿಕೆಗಳನ್ನು ಹಾಕಿಕೊಂಡು ಮಕ್ಕಳಲ್ಲಿ ಸುಸಂಸ್ಕೃತೀಕರಣವನ್ನು ತರಬಹುದಾಗಿದೆ.

- ಮಕ್ಕಳಿಗೆ ಮಹಾ ಪುರುಷರ, ಋಷಿಮುನಿಗಳ ಜೀವನ ಚರಿತ್ರೆಯೊಂದಿಗೆ ಅವರುಗಳು ಪಾಲಿಸುತ್ತಿದ್ದ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಮೌಲ್ಯಗಳ ಬಗೆಗೆ ತಿಳಿಸಿಕೊಡುವುದು. ಇದಕ್ಕಾಗಿ ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳಲ್ಲಿಯ ಉದಾಹರಣೆಗಳನ್ನು ಹೇಳುವುದು.

- ಮಕ್ಕಳಿಗೆ ಸಾಮೂಹಿಕ ಪ್ರಾರ್ಥನೆ, ವಿವಿಧ ಧರ್ಮಗಳ ನೀತಿಯ ತತ್ವಗಳನ್ನು ನೈಜವಾಗಿ ಬೋಧಿಸುವುದು. ಸತ್ ಸಂಪ್ರದಾಯಗಳ ಬಗ್ಗೆ ಮತ್ತು ಅವುಗಳನ್ನು ಪಾಲಿಸುವ ಬಗ್ಗೆ ವಿವರಿಸುವುದು.

- ಶಾಲೆಯಲ್ಲಿ ಮಹಾಪುರುಷರ ಭಾವಚಿತ್ರಗಳು, ಅವರುಗಳ ನುಡಿಮುತ್ತುಗಳು, ಆದರ್ಶನೀತಿಗಳನ್ನು ಚಿತ್ರಪಟಗಳು ಇವುಗಳನ್ನು ಗೋಡೆಗೆ ಹಾಕುವುದು.

- ಧಾರ್ಮಿಕ, ಸಾಮಾಜಿಕ ಹಿನ್ನೆಲೆಯುಳ್ಳ ಸ್ಥಳಗಳಿಗೆ ಪ್ರವಾಸ ಕೈಕೊಳ್ಳವದು.

- ಶ್ಲೋಕಗಳ ಕಂಠ–ಪಾಠ, ಸಂಸ್ಕೃತ ನೀತಿಯ ಶ್ಲೋಕಗಳು ಇವುಗಳನ್ನು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಯೋಜಿಸುವುದು.

- ಧಾರ್ಮಿಕ ಅನುಭಾವಿಗಳನ್ನು, ಶರಣರನ್ನು ಆಮಂತ್ರಿಸಿ ಭಾಷಣವನ್ನು ಏರ್ಪಡಿಸುವುದು.

- ಸುಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಲನಚಿತ್ರಗಳು, ದೂರದರ್ಶನದ ಕಾರ್ಯಕ್ರಮಗಳು ಮುಂತಾದವುಗಳನ್ನು ಏರ್ಪಡಿಸುವುದು.

–ಆರ್.ಟಿ.ಜಂ.

## ಸಂಸ್ಕೃತಿಯ ಹಿಂಬೀಳುವಿಕೆ ಮತ್ತು ಶಿಕ್ಷಣ

ಸಂಸ್ಕೃತಿಯು ಮಾನವನ ಜೀವನ ವಿಧಾನದ ಪ್ರತೀಕವಾಗಿದೆ. ಸಂಸ್ಕೃತಿಯು ಮಾನವನು ಈವರೆಗಿನ ತನ್ನ ಜೀವನದಲ್ಲಿ ರೂಢಿಸಿಕೊಂಡ ಸ್ವಯಂ ನಿರ್ಮಿತ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಮಾನವನ ಸಮಸ್ತ ಸಾಧನೆಗಳನ್ನೂ, ಸಂಪೂರ್ಣ ಸಾಮಾಜಿಕ ಬಳುವಳಿಗಳನ್ನೂ ಪ್ರತಿಬಿಂಬಿಸುತ್ತದೆ. ಈ ಸಂಸ್ಕೃತಿಯ ಬಗ್ಗೆ ಅನೇಕ ವ್ಯಾಖ್ಯೆಗಳಿದ್ದರೂ ಇ.ಬಿ. ಟೈಲರ್‌ರವರ ವ್ಯಾಖ್ಯೆ ಬಹಳ ಮುಖ್ಯವಾದುದು. ಎಡ್ವರ್ಡ್ ಬಿ. ಟೇಲರ್‌ರವರ ಪ್ರಕಾರ ಸಮಾಜದ ಒಬ್ಬ ಸದಸ್ಯನಾಗಿ, ಮಾನವನು ಗಳಿಸಿಕೊಳ್ಳುವ ಜ್ಞಾನ, ನಂಬಿಕೆ, ಕಲೆ, ನೀತಿ, ಕಾನೂನು, ಸಂಪ್ರದಾಯ ಮತ್ತು ಇತರ ಯಾವುದೇ ಸಾಮರ್ಥ್ಯಗಳನ್ನು ಹೊಂದಿರುವ ಅಖಂಡವಾದ, ಸಂಕೀರ್ಣವಾದ ವ್ಯವಸ್ಥೆಯನ್ನು ಸಂಸ್ಕೃತಿ ಎನ್ನುತ್ತೇವೆ. ಸಾಂಸ್ಕೃತಿಕ ಹಿಂಬೀಳುವಿಕೆಯನ್ನು ಅಭ್ಯಾಸಿಸಲು ಅದರ ಬಗೆಗಳ ಅಧ್ಯಯನ ಅವಶ್ಯಕ. ಸಂಸ್ಕೃತಿಯಲ್ಲಿ ಎರಡು ಬಗೆ ಇವೆ. 1. ಅಭೌತ ಸಂಸ್ಕೃತಿ 2. ಭೌತ ಸಂಸ್ಕೃತಿ.

**ಅಭೌತ ಸಂಸ್ಕೃತಿ:** ಭೌತ ಸ್ವರೂಪವಿಲ್ಲದ ಸಂಸ್ಕೃತಿಯನ್ನು ಅಭೌತ ಸಂಸ್ಕೃತಿ ಎನ್ನುತ್ತೇವೆ. ಅದು ಮಾನವನ ಎಲ್ಲ ಅಭೌತ ಸಂಪತ್ತನ್ನು ಒಳಗೊಂಡಿರುತ್ತದೆ. ಅದು ದೃಷ್ಟಿಗೆ ಅಥವಾ ಕಣ್ಣಿಗೆ ಗೋಚರವಾಗುವಂತಹದ್ದಲ್ಲ. ಅದು ಅಮೂರ್ತ ಸ್ವರೂಪದ್ದಾಗಿರುತ್ತದೆ. ಅಭೌತ ಸಂಸ್ಕೃತಿಯು ಮಾನವನ ಆಚಾರ ವಿಚಾರಗಳು, ರೀತಿ ನೀತಿಗಳು, ಸಂಘಸಂಸ್ಥೆಗಳು, ಜೀವನದ ಬಗೆಗಿನ ದೃಷ್ಟಿಕೋನಗಳು, ಧ್ಯೇಯಗಳು, ಆದರ್ಶಗಳು, ಮೌಲ್ಯಗಳು, ಭಾಷೆ, ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ, ಕಾನೂನು, ಸರ್ಕಾರ, ಧರ್ಮ, ಶಿಕ್ಷಣ, ಚಿಂತನೆಗಳು, ಆಸಕ್ತಿಗಳು, ಅಭಿರುಚಿಗಳು, ಹವ್ಯಾಸಗಳು, ಸಭ್ಯತೆ, ಶಿಷ್ಟಾಚಾರ, ಮನೋರಂಜನೆ, ಶೋಭಾಚಾರ ಮೊದಲಾದ ಎಲ್ಲ ಅಮೂರ್ತ ಅಂಶಗಳನ್ನು ಒಳಗೊಂಡಿರುತ್ತದೆ. ಅಭೌತ ಸಂಸ್ಕೃತಿಯು ಮಾನವನ ಆಂತರಿಕ ಪ್ರಗತಿಗೆ ಸಂಬಂಧಪಟ್ಟದ್ದಾಗಿರುತ್ತದೆ.

**ಭೌತ ಸಂಸ್ಕೃತಿ:** ಭೌತ ಸಂಸ್ಕೃತಿಯು ಮಾನವನ ಎಲ್ಲ ಭೌತಿಕ ಸಂಪತ್ತನ್ನು ಪ್ರತಿನಿಧಿಸುತ್ತದೆ. ಅದು ಮಾನವ ನಿರ್ಮಿತವಾದ ಎಲ್ಲ ವಸ್ತುಗಳನ್ನು ಒಳಗೊಂಡಿರುವುದು. ಅದು ಮೂರ್ತ ಸ್ವರೂಪದ್ದಾಗಿರುತ್ತದೆ. ಅದು ದೃಷ್ಟಿಗೆ ಗೋಚರವಾಗುವಂತಹದ್ದಾಗಿರುತ್ತದೆ. ಅದು ಮಾನವನ ಪರಂಪರಾನುಗತ ಹಾಗೂ ಪ್ರಾಚೀನ ಕಾಲದಿಂದ ಪ್ರಸ್ತುತ ಕಾಲದವರೆಗೆ ಬಳಸಲಾಗಿರುವ ವಸ್ತುಗಳೆಲ್ಲವನ್ನೂ ಪ್ರತಿಬಿಂಬಿಸುತ್ತದೆ. ಅದು ನಾವು ಉಪಯೋಗಿಸುವ ಆಹಾರ ಪದಾರ್ಥಗಳು, ಉಡುಪುಗಳು, ವಾಸಿಸುವ ಮನೆಗಳು, ಬಳಸುವ ಗೃಹೋಪಕರಣ ಪದಾರ್ಥಗಳು, ವಸ್ತುಗಳ ಉತ್ಪಾದನಾ ನೆಲೆಗಳು, ಉಪಕರಣಗಳು, ಯಂತ್ರಗಳು, ಸಂಪರ್ಕ ಮತ್ತು ಸಮಾಚಾರ ಸಾಧನಗಳು, ಕಟ್ಟಡಗಳು, ಅಣೆಕಟ್ಟುಗಳು, ಸೇತುವೆಗಳು ಮೊದಲಾದ ಎಲ್ಲ ಮೂರ್ತ ವಸ್ತುಗಳನ್ನು ಒಳಗೊಂಡಿರುತ್ತದೆ. ಅವು ಮಾನವನ ಬಾಹ್ಯ ಪ್ರಗತಿಗೆ ಸಂಬಂಧಿಸಿದ್ದಾಗಿರುತ್ತವೆ.

ಭೌತ ಮತ್ತು ಅಭೌತ ಸಂಸ್ಕೃತಿಗಳ ನಡುವಿನ ಅಂತರವನ್ನು ತಿಳಿಯುವುದು ಅತ್ಯವಶ್ಯಕ. ಏಕೆಂದರೆ ಈ ಎರಡು ಸಂಸ್ಕೃತಿಗಳ ನಡುವೆ ಇರುವ ಅಂತರವನ್ನೇ ವಿಲಿಯಂ ಎಫ್. ಆಗ್‌ಬರ್ನ್‌ರವರು ಸಂಸ್ಕೃತಿಯ ಹಿಂಬೀಳುವಿಕೆ (Cultarelag) ಎಂದಿದ್ದಾರೆ. ಏಕೆಂದರೆ ಸಂಸ್ಕೃತಿಯು ಪರಿವರ್ತನಾಶೀಲವಾದುದು. ಭೌತ ಸಂಸ್ಕೃತಿಯಲ್ಲಿ ಬದಲಾವಣೆಯಾಗುವುದರಿಂದ ಅಭೌತ ಸಂಸ್ಕೃತಿಯಲ್ಲಿಯೂ ಬದಲಾವಣೆಯಾಗುತ್ತದೆ. ಭೌತಸಂಸ್ಕೃತಿಯ ಬದಲಾವಣೆಯ ವೇಗದ ದರ ಹೆಚ್ಚು. ಆದರೆ ಅಭೌತ ಸಂಸ್ಕೃತಿಯ ಬದಲಾವಣೆಯ ವೇಗದ ದರ ಕಡಿಮೆ. ಇವೆರಡರ ನಡುವೆ ಬಹಳ ಅಂತರ ಅಥವಾ ಕಂದಕ ಉಂಟಾಗುತ್ತದೆ. ಅಮೆರಿಕಾದ ಸಮಾಜಶಾಸ್ತ್ರಜ್ಞರಾದ ವಿಲಿಯಂ ಎಫ್. ಆಗ್‌ಬರ್ನ್‌ರವರು ತಮ್ಮ 'ಸಾಮಾಜಿಕ ಪರಿವರ್ತನೆ' ಎಂಬ ಗ್ರಂಥದಲ್ಲಿ ಸಾಂಸ್ಕೃತಿಕ ಹಿಂಬೀಳುವಿಕೆಯ ಕಲ್ಪನೆಯನ್ನು ಪ್ರಪ್ರಥಮವಾಗಿ ಬೆಳಕಿಗೆ ತಂದಿದ್ದಾರೆ. ಈಗ ಈ ಕಲ್ಪನೆ ಸಾಮಾಜಿಕ ವಿಜ್ಞಾನಗಳಲ್ಲಿ ಹೇರಳವಾಗಿ ಬಳಕೆಯಲ್ಲಿದೆ.

ಶಿಕ್ಷಣವು ಸಮಾಜದಲ್ಲಿ ಅತ್ಯಂತ ಪ್ರಮುಖವಾದ ಒಂದು ಸಾಮಾಜಿಕ ಪ್ರಕ್ರಿಯೆ. ಸಾಮಾನ್ಯವಾಗಿ ಸಂಸ್ಕೃತಿ ಹಾಗೂ ನಾಗರಿಕತೆ ಕ್ಷೇತ್ರದಲ್ಲಿ ಶಿಕ್ಷಣದ ಪಾತ್ರ ಬಹಳ ಗಂಭೀರವಾಗಿರುತ್ತದೆ. ಶ್ರೀಸಾಮಾನ್ಯನು ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಬಳಸುವುದಿದೆ. ಆದರೆ ಈ ಎರಡು ಪದಗಳ ನಡುವಿನ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಶಿಕ್ಷಣವು ಅತ್ಯಂತ ಸಹಾಯಕವಾಗಿರುತ್ತದೆ. ಅಷ್ಟೇ ಅಲ್ಲ. ಅದರಲ್ಲಿ ಪ್ರಮುಖವಾಗಿರುವ ಕೆಲವು ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುವುದರ ಮುಖಾಂತರ ಈ ಎರಡರ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬಹುದು.

ಮೊದಲನೆಯದಾಗಿ, ನಾಗರಿಕತೆ ಎಂಬ ಪದವು 'ಸಿವಿಲೈಝೇಶನ್' ಎಂಬ ಪದದ ಕನ್ನಡ ಅನುವಾದ. ಅಷ್ಟೇ ಅಲ್ಲ, 'ಸಿವಿಲೈಝೇಶನ್' ಎಂಬ ಪದದ ಉತ್ಪತ್ತಿ ಲ್ಯಾಟಿನ್ ಭಾಷೆಯ 'ಸಿವಿಟಾಸ್' ಎಂಬ ಪದದಿಂದ ಆಗಿದೆ. ಮಾನವನ ಇತಿಹಾಸದಲ್ಲಿ ನಗರದಿಂದ ಆರಂಭವಾಗುವುದೇ

Digitised by Bharatavani, CIIL

ನಾಗರಿಕತೆ. ಗೋಲ್ಡನ್ ವೈಸರ್‌ರವರ ಪ್ರಕಾರ 'ನಾಗರಿಕತೆಯು ಮಾನವನ ಎಲ್ಲ ಸಾಧನೆಗಳ ಪ್ರತಿಬಿಂಬವಾಗಿದೆ'. ಮಾನವನ ಸಾಧನೆಗಳು ಬೆಳಕಿಗೆ ಬರಲು ಶಿಕ್ಷಣ ಅತ್ಯವಶ್ಯಕ. ಇಡೀ ಪ್ರಪಂಚದಲ್ಲಿ ಶಿಕ್ಷಣವು ಬಹುತೇಕ ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಅವಕಾಶ ಮಾಡಿಕೊಟ್ಟಿದೆ. ಶಿಕ್ಷಣ ಕ್ಷೇತ್ರ ಬೆಳಕಿಗೆ ಬರದಿದ್ದಲ್ಲಿ ನಾಗರಿಕತೆ ಅಸ್ತಿತ್ವಕ್ಕೆ ಬರುತ್ತಿರಲಿಲ್ಲವೇನೋ ಎನಿಸುತ್ತದೆ. 16ನೇ ಶತಮಾನದ ಕೊನೆಯಿಂದ ಪ್ರಾರಂಭವಾದ ಕೈಗಾರಿಕೆಗಳ ಬೆಳವಣಿಗೆ, ನಗರಗಳ ಬೆಳವಣಿಗೆ, ಹೊಸ ಹೊಸ ಯಂತ್ರಗಳ ಆವಿಷ್ಕಾರ ಇವೆಲ್ಲವೂ ಶಿಕ್ಷಣದಿಂದಲೇ ಸಾಧ್ಯವಾಗಿರುವುದು.

ಶಿಕ್ಷಣವು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು ಮಾನವನು ಪ್ರಾಣಿಗಿಂತ ಭಿನ್ನವಾಗಿ ಕಲಿಕೆಯನ್ನೇ ಆಧಾರವಾಗಿಟ್ಟುಕೊಂಡು ಪಡೆಯುವ ಜ್ಞಾನವಾಗಿದೆ. ಶಿಕ್ಷಣ ಎಂಬ ಪದವು ಆಂಗ್ಲಭಾಷೆಯ 'ಎಜುಕೇಶನ್' ಎಂಬ ಪದದ ಅನುವಾದವಾಗಿದೆ. 'ಎಜುಕೇಶನ್' ಎಂಬ ಪದವು 'ಎಜುಕೇರ್' ಎಂಬ ಲ್ಯಾಟಿನ್ ಪದದಿಂದ ಬಂದಿದೆ. 'ಎಜುಕೇರ್' ಎಂಬ ನಾಮಪದದ ಅರ್ಥವು "ಪೋಷಿಸಿ ಬೆಳಸು" ಮತ್ತು ಕ್ರಿಯಾಪದವಾಗಿ "ಮುಂದೆ ತರು" ಎಂಬ ಅರ್ಥವನ್ನು ಹೊಂದಿದೆ. ಈ ಮೂಲಾರ್ಥವನ್ನು ಆಧಾರವಾಗಿಟ್ಟುಕೊಂಡು ಅನೇಕ ಸಮಾಜ ಶಾಸ್ತ್ರಜ್ಞರು ಮತ್ತು ಶಿಕ್ಷಣ ತಜ್ಞರು ಶಿಕ್ಷಣವನ್ನು ವ್ಯಾಖ್ಯಾನಿಸಿದ್ದಾರೆ.

ಸಮ್ನರ್‌ರವರ ಪ್ರಕಾರ ಶಿಕ್ಷಣವೆಂದರೆ ಮಗುವಿಗೆ ಸಮೂಹದ ನೈತಿಕ ನಿಯಮಗಳನ್ನು ವರ್ಗಾಯಿಸುವ ಪ್ರಯತ್ನವಾಗಿದ್ದು ಇದರಿಂದ ಅದು ಯಾವ ನಡತೆಯನ್ನು ಅಂಗೀಕೃತವಾದದ್ದು ಮತ್ತು ಯಾವುದು ಅಂಗೀಕೃತವಲ್ಲದ್ದು, ಅದು ಹೇಗಿರಬೇಕು, ಯಾವುದನ್ನು ನಂಬಬೇಕು ಮತ್ತು ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನು ಕಲಿಯುವುದಾಗಿದೆ ಎಂದಿದ್ದಾರೆ. ಈ ವ್ಯಾಖ್ಯೆಯನ್ನು ನೋಡಿದಾಗ ಶಿಕ್ಷಣವು ಮಾನವನ ಮನಸ್ಸಿನಾಳದಲ್ಲಿರುವ ಅಂಧಕಾರವನ್ನು ತೊಡೆದು ಹಾಕಿ ಅವನಿಗೆ ನವ ಚೈತನ್ಯವನ್ನು ನೀಡುವುದೇ ಅಲ್ಲದೆ ಅವನ ಬದುಕಿಗೆ ಬೇಕಾದ ಉತ್ತಮ ಆದರ್ಶಗಳನ್ನು ಉತ್ತಮ ಮಾರ್ಗೋಪಾಯಗಳನ್ನು ತಿಳಿಸುತ್ತದೆ ಎನಿಸುತ್ತದೆ. ಮಾನವನು ತರ್ಕಜ್ಞಾನಿಯಾಗಿ, ಕ್ರಿಯಾತ್ಮಕವಾಗಿ ಹಾಗೂ ಸಮಾಜಮುಖಿಯಾಗಿ ಬೆಳೆಯಲು ಶಿಕ್ಷಣವು ಅತ್ಯವಶ್ಯಕ. ಮಾನವನ ಅನೇಕ ಮೂಲಭೂತ ಚಟುವಟಿಕೆಗಳಲ್ಲಿ ಶಿಕ್ಷಣವು ಮಹತ್ವ ಪೂರ್ಣವಾದ ಪಾತ್ರವನ್ನು ವಹಿಸುತ್ತದೆ. ಸುಶಿಕ್ಷಿತರಾದ ಜನರು ಇಂದು ಸಮಾಜದಲ್ಲಿ ನೆಮ್ಮದಿಯ ಬದುಕನ್ನು ನಡೆಸುವುದರ ಜೊತೆಗೆ ಸಮಾಜವೂ ಪ್ರೋತ್ಸಾಹಿಸುತ್ತಿದೆ. ಅಷ್ಟೇಏಕೆ, ಕಳೆದ 4–5 ಶತಮಾನಗಳಿಂದ ಮಾನವನ ಸುತ್ತ ಮುತ್ತಲೂ ನಡೆಯುತ್ತಿರುವ ಬಹುತೇಕ ವೈಜ್ಞಾನಿಕ ಸಂಶೋಧನೆಗಳು, ಕೈಗಾರಿಕಾ ಕಾರ್ಖಾನೆಗಳಲ್ಲಿ ನಡೆಯುತ್ತಿರುವ ಆವಿಷ್ಕಾರಗಳು, ನಗರಗಳ ಬೆಳವಣಿಗೆ, ಹೊಸ ಹೊಸ ಉದ್ಯೋಗಗಳ ಸೃಷ್ಟಿ ಇವೆಲ್ಲವೂ ಇಂದು ಶಿಕ್ಷಣವನ್ನೇ ಆಧರಿಸಿವೆ ಎನ್ನಬಹುದು. ಬಹುಶಃ ಶಿಕ್ಷಣ ಕ್ಷೇತ್ರವು ಇಷ್ಟೊಂದು ವಿಶಾಲವಾಗಿ ಬೆಳೆಯದಿದ್ದಲ್ಲಿ ಸಮಾಜವು ಇಷ್ಟೊಂದು ವೈವಿಧ್ಯಮಯವಾಗಿರಲು ಸಾಧ್ಯವಾಗುತ್ತಿರಲಿಲ್ಲ. ಇಂದು ನಾಗರಿಕತೆಯ ಕ್ಷೇತ್ರದಲ್ಲಿ ನಡೆದಿರುವುದಾದರೂ ಏನು ಎಂಬುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಲ್ಲಿ ಶಿಕ್ಷಣದ ಪಾತ್ರವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಸಂಸ್ಕೃತಿಯು ಸಹ ಒಂದಲ್ಲ ಒಂದು ರೀತಿಯಲ್ಲಿ ಶಿಕ್ಷಣದಿಂದ ಪ್ರಭಾವಿತವಾಗುತ್ತಿದೆ. ಆದರೆ ಅದು ನಾಗರಿಕತೆಯಷ್ಟು ಸ್ಪಷ್ಟವಾಗಿ, ವೇಗವಾಗಿ ಹಾಗೂ ಜನರೆಲ್ಲರೂ ಒಂದೇ ರೀತಿಯಲ್ಲಿ ಒಪ್ಪಿಕೊಳ್ಳುವ ಹಾಗೆ ಮಾಡಲು ಸಾಧ್ಯವಿಲ್ಲ. ಮಾನವನ ಆಚಾರ, ವಿಚಾರಗಳು, ನೀತಿ ನಿಯಮಗಳು, ಧರ್ಮ, ಶಿಕ್ಷಣ, ಸಾಹಿತ್ಯ, ಸಂಗೀತ, ಆಸಕ್ತಿ, ಅಭಿರುಚಿ ಮುಂತಾದ ಅನೇಕ ಅಂಶಗಳು ಶಿಕ್ಷಣದಿಂದ ಸಂಪೂರ್ಣವಾಗಿಯಲ್ಲದಿದ್ದರೂ ಬಹುಪಾಲು ಬದಲಾವಣೆಗೆ ಒಂದಲ್ಲ ಒಂದು ರೀತಿಯಲ್ಲಿ ಒಳಗಾಗಿರುತ್ತವೆ. ಉದಾಹರಣೆಗೆ 'ಹಿಂದಿನ ಕಾಲದ ವಿವಾಹ ಸಂಸ್ಥೆಯನ್ನಾಗಲಿ, ಕುಟುಂಬವನ್ನಾಗಲಿ ನಮ್ಮ ಕಣ್ಮುಂದೆ ತಂದುಕೊಂಡಾಗ ಬಹು ಬಗೆಯ ಬದಲಾವಣೆಗಳನ್ನು ಈ ಎರಡೂ ಸಂಸ್ಥೆಗಳಲ್ಲಿ ಕಾಣಬಹುದಾಗಿದೆ. ಸಾಮೂಹಿಕ ವಿವಾಹ, ಬಹುಪತಿತ್ವ ಈಗ ಇಲ್ಲ. ಈಗ ಏಕಪತ್ನಿತ್ವ ಸಮಾಜದ ಬಹುಮುಖ್ಯವಾದ ವಿವಾಹದ ಬಗೆಯಾಗಿದೆ ಅಷ್ಟೇ ಏಕೆ, ಈ ದಿಕ್ಕಿನಲ್ಲಿ ರಾಜ್ಯಾಂಗದಲ್ಲಿ ಕಾನೂನು ಸಹ ಇದೆ. ಆದರೆ ಶತಶತ ಮಾನಗಳು ಬೇಕಾಯಿತು ಈ ಬಗೆಯ ಬದಲಾವಣೆಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾಣಲು. ಆದರೆ ನಾಗರಿಕತೆ ಹಾಗಲ್ಲ. ಅದು ನಿಚ್ಚಳವಾಗಿ, ವೇಗವಾಗಿ ಸಮಾಜದಲ್ಲಿ ಒಂದೇ ರೀತಿಯಾಗಿ ಬೆಳೆಯುತ್ತಿದೆ.

ಮಾನವ ಸಮಾಜಗಳು ಹೆಚ್ಚು ಹೆಚ್ಚು ನಾಗರಿಕತೆಗೆ ಒಳಪಟ್ಟಂತೆಲ್ಲಾ ಅತ್ಯಂತ ಉತ್ಕೃಷ್ಟವಾಗಿ ಬೆಳೆಯುತ್ತಿದೆ. ನಾವು ನಾಗರಿಕತೆಯನ್ನು ಬಳಸಿ ಒಂದು ಮನೆಕಟ್ಟುವ ರೀತಿಯಲ್ಲಿ ಬದಲಾವಣೆಯನ್ನು ಒಪ್ಪುವಷ್ಟು ಸುಲಭವಾಗಿ ನಮ್ಮ ವಿವಾಹ ಪದ್ಧತಿಯಲ್ಲಾಗಲಿ, ಇಲ್ಲವೇ ಧಾರ್ಮಿಕ ಪದ್ಧತಿಯಲ್ಲಾಗಲಿ ಬದಲಾವಣೆ ಮಾಡಿಕೊಳ್ಳಲು ಸಮ್ಮತಿ ಸಿಗುವುದಿಲ್ಲ. ಅಷ್ಟೇ ಅಲ್ಲ, ಅನೇಕ ಹಬ್ಬ ಹರಿದಿನಗಳು, ಸಂಪ್ರದಾಯ ಲೋಕಾರೂಢಿಗಳು ಇಂದಿಗೂ ತಮ್ಮ ಮೂಲಭೂತ ಅಸ್ತಿತ್ವವನ್ನೇ ಉಳಿಸಿಕೊಂಡು ಮುಂದುವರೆಯುತ್ತಿವೆ. ಬೇರೆ ರಾಷ್ಟ್ರದಿಂದ ರೇಡಿಯೊ, ಟೆಲಿವಿಷನ್, ಕಾರು, ವಿಮಾನ, ರೈಲು ಮುಂತಾದ ತಂತ್ರಜ್ಞಾನಗಳನ್ನು ಅದೇ ರೀತಿಯಲ್ಲಿ ಪಡೆದು ಯಾವುದೇ ಬದಲಾವಣೆ ಇಲ್ಲದೆ ಬಳಸುತ್ತಿದ್ದೇವೆ. ಆದರೆ ಅಷ್ಟೇ ಸುಲಭವಾಗಿ ಹಾಗೂ ಸರಳವಾಗಿ ಬೇರೆ ರಾಷ್ಟ್ರದ ಆಚಾರ ವಿಚಾರಗಳನ್ನು, ಊಟ–ಉಪಚಾರಗಳನ್ನು, ರೀತಿನೀತಿಗಳನ್ನು, ಧ್ಯೇಯ ಧೋರಣೆಗಳನ್ನು ಅನುಸರಿಸಲು ಸಿದ್ಧರಿರುವುದಿಲ್ಲ. ಉದಾಹರಣೆಗೆ ಪಾಶ್ಚಿಮಾತ್ಯರು ಇಂದಿಗೂ ಸಹ ಬ್ರೆಡ್ಡನ್ನೇ ಅವರ ಮುಖ್ಯ ಆಹಾರವನ್ನಾಗಿಸಿಕೊಂಡಿದ್ದಾರೆ. ಆದರೆ ಭಾರತದಲ್ಲಿ ಅನ್ನ, ಚಪಾತಿ, ರೊಟ್ಟಿ ಮುಂತಾದುವು ಸಾಮಾನ್ಯವಾಗಿ ಆಹಾರ ಕ್ಷೇತ್ರದಲ್ಲಿ ನಿರಂತರವಾಗಿ ಬಳಕೆಯಲ್ಲಿವೆ. ಅವರ ಆಹಾರ ನಮ್ಮ ಆಹಾರಕ್ಕೆ ಹೊಂದಿಕೊಳ್ಳುವುದು ತುಂಬಾ ಕಷ್ಟ. ಪಾಶ್ಚಿಮಾತ್ಯರಾದರೋ ನಮ್ಮ ದೇಶಗಳಿಗೆ ಬಂದಾಗ ಅನೇಕ ಬಗೆಯ ತಿಂಡಿತಿನಿಸುಗಳನ್ನು ನೋಡಿ ಸವಿಯುತ್ತಾರೆ. ಭಾರತೀಯರು ಎಷ್ಟೇ ವಿದ್ಯಾವಂತರಾದರೂ ಪಾಶ್ಚಿಮಾತ್ಯರ ಆಹಾರಕ್ಕೆ ಹೊಂದಿಕೊಳ್ಳುವುದು ಕಷ್ಟ. ಹಾಗೆಯೇ ಪಾಶ್ಚಿಮಾತ್ಯರ ಸಂಗೀತಕ್ಕೆ ಎಲ್ಲರೂ ಮಾರುಹೋಗಲು ಸಾಧ್ಯವಿಲ್ಲ. ಏಕೆಂದರೆ ಅವರವರ ಅಭಿರುಚಿ, ಆಸೆ ಹಾಗೂ ಅಭಿಪ್ರಾಯಗಳಿಗನುಗುಣವಾಗಿ ಸಾಂಸ್ಕೃತಿಕ ಅಂಶಗಳನ್ನು ಸವಿಯಬಹುದು, ಷೇಕ್ಸ್‌ಪಿಯರ್‌ನ ನಾಟಕ ಉತ್ತಮ ಎಂದು ಪ್ರಪಂಚದಾದ್ಯಂತ ಎಲ್ಲರೂ ಒಕ್ಕೊರಲಿನಿಂದ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅನೇಕ ಜನರು ಕಾಳಿದಾಸನ ನಾಟಕಗಳನ್ನು ಸಹ ಮೆಚ್ಚಬಹುದು. ಹೀಗೆ ಸಂಸ್ಕೃತಿಯನ್ನು ನಿರ್ದಾಕ್ಷಿಣ್ಯವಾಗಿ ಹಾಗೂ ನಿರಂತರವಾಗಿ ಒಂದೇ ರೀತಿಯಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದರೆ ಶಿಕ್ಷಣವನ್ನು ಪಡೆದ ವಿದ್ಯಾವಂತರು ಸ್ವಲ್ಪ ಮಟ್ಟಿಗಿನ ಸಾಂಸ್ಕೃತಿಕ ಬದಲಾವಣೆಗೆ ಒಳಗಾಗಿದ್ದರೂ ನಾಗರಿಕತೆಯಷ್ಟು ನಿಶ್ಚಿತವಾಗಿ ಸಂಸ್ಕೃತಿ ಬದಲಾಗುತ್ತಿಲ್ಲ. ಉದಾಹರಣೆಗೆ ಬಹುಪಾಲು ಭಾರತೀಯ ಸ್ತ್ರೀಯರ ಉಡುಗೆ ಸೀರೆ. ಆದರೆ ಇಂದು ಯುವ ಜನಾಂಗ ಪಾಶ್ಚಿಮಾತ್ಯ ಶೈಲಿಯ ಉಡುಪನ್ನು ಧರಿಸುತ್ತಾರಾದರೂ ವಿವಾಹ, ಹಬ್ಬ ಹರಿದಿನಗಳಲ್ಲಿ ಹೆಣ್ಣು ಮಕ್ಕಳಿಗೆ ಸೀರೆ ಅನಿವಾರ್ಯ. ಹೀಗೆ ಶಿಕ್ಷಣ, ನಾಗರಿಕತೆ ಹಾಗೂ ಸಂಸ್ಕೃತಿ ಎರಡರ ಸಮ್ಮಿಳನದಿಂದ ಜನರ ಬದುಕು ಹಸನಾಗಲು ಸಹಕರಿಸುತ್ತದೆ.

ಈ ಸಂಸ್ಕೃತಿಯ ಹಿಂಬೀಳುವಿಕೆಯು ಕೆಲವೊಮ್ಮೆ ಹಲವಾರು ಸಮಸ್ಯೆಗಳಿಗೂ ಎಡೆಮಾಡಿ ಕೊಡುತ್ತದೆ. ಬರ್ನ್‌ರವರ ಅಭಿಪ್ರಾಯದಂತೆ

Digitised by Bharatavani, CIIL

ಇಂದಿನ ವೈಜ್ಞಾನಿಕ ಮತ್ತು ಆಧುನಿಕ ಯುಗದಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳ ಮೂಲವು ಸಾಂಸ್ಕೃತಿಕ ಹಿಂಬೀಳುವಿಕೆ (Culturelag) ಎಂದು ತಿಳಿಯಲಾಗುವುದು ಎಂದಿದ್ದಾರೆ. ಮತ್ತೊಬ್ಬ ಸಮಾಜಶಾಸ್ತ್ರಜ್ಞರಾದ ಸ್ಯಾಮ್ಯುಯಲ್ ಕೊಯ್‌ನಿಗ್‌ರವರು ಅಭಿಪ್ರಾಯಪಟ್ಟಿರುವಂತೆ ಇಂದಿನ ಆಧುನಿಕ ಜೀವನದ ಹೊಂದಾಣಿಕೆಯ ಸಮಸ್ಯೆಯು ಮುಖ್ಯವಾಗಿ ಭೌತ ಮತ್ತು ಅಭೌತ ಸಂಸ್ಕೃತಿಯೊಂದಿಗೆ ಹೊಂದಿಕೊಳ್ಳುವುದೇ ಆಗಿದೆ. ಈ ಹೊಂದಾಣಿಕೆಯ ಜಂಜಾಟದಿಂದಲೇ ನಾವಿಂದು ಮತ್ತೊಂದು ಸಮಾಜಶಾಸ್ತ್ರೀಯ ಕಲ್ಪನೆಯನ್ನು ಅಸ್ತಿತ್ವಕ್ಕೆ ತಂದುಕೊಂಡಿದ್ದೇವೆ. ಅದೆಂದರೆ 'ಜನರೇಶನ್ ಗ್ಯಾಪ್'. ಅಂದರೆ ತಾತ–ಮೊಮ್ಮಕ್ಕಳಿಗಿರುವ ಅಂತರ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆಳೆಯಿತು ಎಂಬಂತೆ ವೃದ್ಧರ ಮೌಲ್ಯಗಳನ್ನು ಯುವಕರು ಒಪ್ಪುವುದಿಲ್ಲ. ಯುವಕರ ಆಚಾರ–ವಿಚಾರಗಳು ವೃದ್ಧರಿಗೆ ಸಮ್ಮತವಿಲ್ಲ. ಇಂತಹ ತೊಳಲಾಟದಲ್ಲಿ ಇಂದಿನ ಮಾನವ ಸಮಾಜ ನರಳುವಂತಾಗಿದೆ. ಈ ಜಂಜಾಟವೂ ಸಹ ಭೌತ ಹಾಗೂ ಅಭೌತ ಸಂಸ್ಕೃತಿಗಳ ತಿಕ್ಕಾಟವೇ ಎನ್ನಬಹುದು. ಹಿಂದೆಂದೂ ಕಾಣದ ಭಿನ್ನತೆ ಇಂದು ವೃದ್ಧರ ಹಾಗೂ ಯುವಕರ ನಡುವೆ ಕಂಡು ಬಂದಿದೆ. ಸಂಸ್ಕೃತಿ ಹಾಗೂ ನಾಗರಿಕತೆಯ ನಡುವೆ ಹೊಂದಾಣಿಕೆ ಅನಿವಾರ್ಯವೂ ಹೌದು, ಅವಶ್ಯಕವೂ ಹೌದು. ಆದರೆ ಆ ಕಾರ್ಯ ಮಾನವರಿಂದ ಅಷ್ಟು ಸುಲಭ ಸಾಧ್ಯವಾಗುತ್ತಿಲ್ಲ. ಇಂದು ಅನೇಕ ಪಾಶ್ಚಿಮಾತ್ಯರಾಷ್ಟ್ರಗಳಲ್ಲಿ ಬದುಕೆಲ್ಲವು ಯಾಂತ್ರಿಕತೆಯಿಂದ ತುಂಬಿ ಮೈಕೈನೋವು ಸಂಪೂರ್ಣವಾಗಿ ಕಡಿಮೆಯಾಗಿದೆ. ಅದೇ ಭಾರತದಲ್ಲಿ ಯಾಂತ್ರಿಕತೆ ಇದ್ದರೂ ಹೆಚ್ಚು ಸಾಂಸ್ಕೃತಿಕ ಬದುಕಿಗೆ ಒಗ್ಗಿ ಹೋಗಿ ವ್ಯವಸಾಯ ಕ್ಷೇತ್ರದಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ. ಮರದ ನೇಗಿಲಿಗೆ ಬದಲಾಗಿ ಕಬ್ಬಿಣದ ನೇಗಿಲು ಭೂಮಿಯನ್ನು ಆಳವಾಗಿ ಭೇದಿಸಿ ಬೇರು ಆಳವಾಗಿ ಹೋಗಿ ಫಲವತ್ತಾಗಿ ಬೆಳೆ ಬೆಳೆಯುತ್ತದೆಂಬ ವೈಜ್ಞಾನಿಕ ಸತ್ಯವನ್ನು ನಮ್ಮವರು ಒಪ್ಪಿಕೊಳ್ಳಲು ಅನೇಕ ದಶಕಗಳೇ ಬೇಕಾಯಿತು. ಇದಕ್ಕೆ ಬಹುಶಃ ಕಾರಣ ನಮ್ಮ ರೈತರಲ್ಲಿರುವ ಅಜ್ಞಾನ ಹಾಗೂ ಶಿಕ್ಷಣದ ಕೊರತೆ.

ಭೂಮಿತಾಯಿ ಒಂದು ಜೀವಂತ ವಸ್ತು. ಕಬ್ಬಿಣದ ನೇಗಿಲು ಆಳವಾಗಿ ಹೊಕ್ಕು ಅವಳ ಮೈನಲ್ಲಿ ರಕ್ತ ಬರಿಸುತ್ತದೆಂಬುದು ಅವೈಜ್ಞಾನಿಕವಾದವಾಗಿತ್ತು. ಇತ್ತೀಚೆಗೆ ಶಿಕ್ಷಣದ ಪ್ರಸಾರದಿಂದಾಗಿ ಭಾರತದಲ್ಲಿ ಸ್ವಲ್ಪ ಮಟ್ಟಿಗೆ ವ್ಯವಸಾಯ ಕ್ಷೇತ್ರ ಬದಲಾಗುತ್ತಿದೆ. ಕೆಲವು ದೇಶಗಳಲ್ಲಿ ಭೌತ ಹಾಗೂ ಅಭೌತ ಸಂಸ್ಕೃತಿಗಳೆರಡೂ ಅತ್ಯಂತ ಪ್ರಮುಖವಾಗಿ ಪರಿಗಣಿಸಲ್ಪಟ್ಟಿವೆ. ಅಮೆರಿಕಾದಂತಹ ಮುಂದುವರೆದ ದೇಶಗಳಲ್ಲಿ ಭೌತ ಸಂಸ್ಕೃತಿಯೇ ಪ್ರಧಾನ. ವಿದ್ಯಾವಂತರಾಗಲಿ, ಬುದ್ಧಿವಂತರಾಗಲಿ ವಿಜ್ಞಾನಿಗಳಾಗಲಿ ವೈಯಕ್ತಿಕ ಬದುಕಿನಲ್ಲಿ ಅವರಿಗೆ ನೆಮ್ಮದಿ ಇಲ್ಲ. ಸುಖ ಇಲ್ಲ, ಸಂಸ್ಕೃತಿ ಇಲ್ಲ. ಕುಟುಂಬ ಜೀವನ ಸ್ವೇಚ್ಛಾಪರವಾಗಿರುತ್ತದೆ. ಫ್ರೀಸೆಕ್ಸ್, ಸೆಕ್ಸ್ ಜೀವನಕ್ಕೆ ಬೆಲೆ ಇಲ್ಲ. ಬಹಳವಾಗಿ ಭೌತ ವಸ್ತುಗಳಿಗೆ ಮಾರು ಹೋಗುವವರು. ಅವರ ಕುಟುಂಬಗಳು ಸುಲಭವಾಗಿ ಭಗ್ನವಾಗುತ್ತವೆ. ಅನೇಕ ಮಕ್ಕಳು ಅನಾಥರಾಗುತ್ತಿದ್ದಾರೆ. ಅಷ್ಟೇ ಅಲ್ಲ, ವಿವಾಹಗಳು ಏಕೆ, ಹೇಗೆ ಎಂಬ ಪ್ರಶ್ನೆಗಳು ಕಾಡುತ್ತಿವೆ. ವಿಚ್ಛೇದನಗಳು ಹೆಚ್ಚುತ್ತಿವೆ. ಏನಿದ್ದರೇನು, ಬಾಳು ಹಸನಾಗದಿದ್ದರೆ ಎಂಬ ನಾಣ್ಣುಡಿ ಪಾಶ್ಚಿಮಾತ್ಯರ ವಿಷಯದಲ್ಲಿ ನಿಜವಾಗಿದೆ. ಇದು ಬದುಕೆ? ಇದು ಜೀವನವೆ? ಮಾನವನಿಗೆ ಸಾರ್ಥಕತೆ ದೊರೆಯುವುದಾದರೂ ಹೇಗೆ? ಇವೆಲ್ಲವನ್ನು ಪಾಶ್ಚಿಮಾತ್ಯರು ಚಿಂತಿಸಿ ಭಾರತದತ್ತ ದೌಡಾಯಿಸುವ ಪ್ರವೃತ್ತಿಗೆ ಒಳಗಾಗುತ್ತಿದ್ದಾರೆ. ಇದು ಅವರ ಸಮಾಜದ ಹಾಗೂ ಸಂಸ್ಕೃತಿಯ ದೌರ್ಭಾಗ್ಯ. ಭಾರತೀಯರ ಸಂಪ್ರದಾಯ, ಲೋಕಾರೂಢಿ, ನೈತಿಕ ನಿಯಮಗಳಿಂದಾಗಿ ಇಲ್ಲಿನ ಕುಟುಂಬಗಳು ಸದೃಢವಾಗಿವೆ. ವೈವಾಹಿಕ ಸಂಬಂಧ ಅಚ್ಚುಕಟ್ಟಾಗಿದೆ. ಮಕ್ಕಳು ಆರೋಗ್ಯದಾಯಕವಾಗಿ ಬೆಳೆಯುತ್ತಿದ್ದಾರೆ. ಆದರೆ ಶಿಕ್ಷಣದ ಕೊರತೆಯಿಂದಾಗಿ ನಾಗರಿಕತೆಯಲ್ಲಿ ಹಿಂದೆ ಬಿದ್ದಿರುವುದಂತೂ ನಿಜ. ಗ್ರಾಮೀಣ ಸಮಾಜದಲ್ಲಿ ಅಡಗಿರುವ ಸಂಪ್ರದಾಯ, ಲೋಕಾರೂಢಿ ನಿಯಮಗಳು ಅವರನ್ನು ಅನೇಕ ಸಮಸ್ಯೆಗಳನ್ನು ಎದುರಿಸುವಂತೆ ಮಾಡುತ್ತಿವೆ. ಬಾಲ್ಯವಿವಾಹ, ವಿಧವಾ ವಿವಾಹಕ್ಕೆ ಮನ್ನಣೆ ಇಲ್ಲ. ಅತಿ ಹೆಚ್ಚು ಮಕ್ಕಳ ಉತ್ಪಾದನೆ, ಹೆಣ್ಣುಮಕ್ಕಳಿಗೆ ಸರಿಯಾದ ಸ್ಥಾನಮಾನ ಇಲ್ಲದಿರುವಿಕೆಗಳಿಗೆ ಶಿಕ್ಷಣದ ಕೊರತೆಯೇ ಕಾರಣ. ನಗರಗಳ ಸುಶಿಕ್ಷಿತ ಸಮಾಜದಲ್ಲಿ ಮೇಲ್ಕಂಡ ಸಮಸ್ಯೆಗಳ ಪ್ರಮಾಣ ಅತ್ಯಂತ ಕಡಿಮೆ. ಹೀಗೆ ಶಿಕ್ಷಣವು ಅಭೌತ ಸಂಸ್ಕೃತಿಯ ಅಂಶಗಳನ್ನು ಸುಧಾರಿಸಿ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡುತ್ತಿದೆ. ನಗರ ಸಮಾಜಗಳು ಸುಶಿಕ್ಷಿತವಾದರೂ ಅವುಗಳ ಸಮಸ್ಯೆಗಳೇ ಬೇರೆ. ಜನಸಂಖ್ಯಾ ಹೆಚ್ಚಳ, ವಸತಿ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ಕೊಳಚೆ ಪ್ರದೇಶಗಳು, ಮಾದಕದ್ರವ್ಯಗಳ ಬಳಕೆ, ಕೊಲೆ, ಸುಲಿಗೆ, ದರೋಡೆ ಮುಂತಾದ ಸಮಸ್ಯೆಗಳು ನಗರ ಸಮಾಜಗಳನ್ನು ಆವರಿಸಿವೆ. ಬಹುಶಃ ಈ ಸಮಸ್ಯೆಗಳು ಬೆಳಕಿಗೆ ಬರಲು ಶಿಕ್ಷಣವು ಕಾರಣವೇನೋ ಎನಿಸುತ್ತದೆ. ಉದಾಹರಣೆಗೆ ಅಪರಾಧಶಾಸ್ತ್ರದ ಅಭ್ಯಾಸ ಕೊಲೆ ಮಾಡುವ ರೀತಿಗಳನ್ನು ತಿಳಿಸುತ್ತದೆ.

ಹೀಗೆ ಶಿಕ್ಷಣವು ಸಮಾಜದ ಒಳಿತಿಗಾಗಿ ನೀಡುವ ಅಂಶಗಳನ್ನು ದುರ್ಬಳಕೆ ಮಾಡಿಕೊಳ್ಳುವ ಮುಖಾಂತರ ವಿದ್ಯಾವಂತರೂ ಸಮಸ್ಯೆಗಳನ್ನು ಸೃಷ್ಟಿಸಬಹುದು. ಇದರಿಂದ ಶಿಕ್ಷಣ ಕೆಲವೊಮ್ಮೆ ಸಮಾಜಕ್ಕೆ ಮಾರಕವಾಗಲೂಬಹುದು. ಸಿನಿಮಾಗಳನ್ನು ನೋಡಿ ಅದರಂತೆ ಪ್ರೀತಿಸುವುದು, ಕೊಲೆಮಾಡುವುದು, ಸರ್ವೇಸಾಮಾನ್ಯವಾಗಿದೆ. ವಿದ್ಯಾವಂತರಲ್ಲೂ ರೊಮ್ಯಾಂಟಿಕ್ ಲೌವ್ ಹೆಚ್ಚುತ್ತಿದೆ. ಹಾಲಿವುಡ್ ಬಗೆಯ ಮದುವೆಗಳು ಹೆಚ್ಚಾಗುತ್ತಿವೆ. ದುರಂತವೆಂದರೆ ವಿದ್ಯಾವಂತರಲ್ಲಿ "ಲೌವ್ ಅಟ್ ಫಸ್ಟ್ ಸೈಟ್,' ಮ್ಯಾರೇಜ್ ಅಟ್ ಸೆಕೆಂಡ್ ಸೈಟ್, ಡೈವೋರ್ಸ್ ಅಟ್ ಥರ್ಡ್ ಸೈಟ್" ಎಂಬುದು ಬಹಳವಾಗಿ ಕಂಡು ಬರತೊಡಗಿದೆ. ಬಹುತೇಕ ಮುಂದುವರಿದ ರಾಷ್ಟ್ರಗಳು ಸುಶಿಕ್ಷಿತವೂ ಆಗಿದ್ದು ಹೆಚ್ಚು ಹೆಚ್ಚು ಸಮಸ್ಯೆಗಳಿಗೆ ತಲೆಕೊಡಬೇಕಾಗಿದೆ. ಪ್ರಪಂಚದಾದ್ಯಂತ ಬೆಳೆಯುತ್ತಿರುವ ಉಗ್ರಗಾಮಿಗಳು ಸುಸಂಸ್ಕೃತರೇ ಅಥವಾ ನಾಗರಿಕರೇ ಎಂಬ ಪ್ರಶ್ನೆ ಎಲ್ಲರನ್ನು ಕಾಡುತ್ತಿದೆ. ಭಾರತದಲ್ಲಿರುವ ನಕ್ಸಲರನೇಕರು ಸುಶಿಕ್ಷಿತರು. ಇವರ ಸಂಸ್ಕೃತಿ ಇಂದು ಏನಾಗಿದೆ? ಇವುಗಳಿಗೆಲ್ಲಾ ಶಿಕ್ಷಣದಿಂದ ಉತ್ತರ ಸಿಗದು, ನಿಜ. ಆದರೆ ಒಂದು ಸಮಾಜದ ಸಂಸ್ಕೃತಿ ಜನರನ್ನು ಸುಶಿಕ್ಷಿತರನ್ನಾಗಿ, ಮಾನವಂತರನ್ನಾಗಿ ಬಾಳುವಂತೆ ಮಾಡುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಂದು ಬಂಡವಾಳ ಕೇವಲ ಕೆಲವರ ಸ್ವತ್ತಾಗುತ್ತಿದೆ. ಇದಕ್ಕೆ ಶಿಕ್ಷಣವೂ ಕಾರಣ. ಬಡವರು ಇನ್ನೂ ಬಡವರಾಗುವಂತೆಯೂ ಶ್ರೀಮಂತರು ಮತ್ತೂ ಶ್ರೀಮಂತರಾಗುವಂತೆಯೂ ಇಂದಿನ ಸರ್ಕಾರಗಳು ಪ್ರೋತ್ಸಾಹಿಸುತ್ತಿವೆ.

ರಾಷ್ಟ್ರದ ಬೊಕ್ಕಸಕ್ಕೆ ಎಲ್ಲ ಜನರ ಕಾಣಿಕೆಯಿದ್ದರೆ ಇಂದು ಭ್ರಷ್ಟಾಚಾರ ಎಲ್ಲ ಹಂತಗಳಲ್ಲೂ ತಾಂಡವವಾಡತೊಡಗಿದೆ. ಅವಿದ್ಯಾವಂತರಿಗಿಂತಲೂ ವಿದ್ಯಾವಂತರಲ್ಲಿ ಭ್ರಷ್ಟಾಚಾರ ಹೆಚ್ಚಾಗಿ ಕಾಣುತ್ತಿದೆ. ಇದು ನಾಗರಿಕತೆಯೇ ಅಥವಾ ಅವರ ಸಂಸ್ಕೃತಿಯೇ, ಅವರೇ ತಿಳಿಸಬೇಕು. ಮಾನವನ ದಿನನಿತ್ಯ ಬದುಕಿಗೆ ಎಷ್ಟು ಬೇಕು ಅಷ್ಟನ್ನು ಮಾತ್ರ ದುಡಿಯುವ ಜನರೇ ವಿರಳವಾಗತೊಡಗಿದ್ದಾರೆ. ಸಂಸ್ಕೃತಿಯೂ ತನ್ನ ರೀತಿನೀತಿಗಳಲ್ಲಿಂದು ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗಿದೆ. ಕೆಲವರಿಗೆ ಹಣ ಕಷ್ಟಪಟ್ಟು ಸಂಪಾದನೆ ಮಾಡುವುದಾದರೆ ಮತ್ತೆ ಕೆಲವರಿಗೆ ಆ ಹಣ ಸುಲಭವಾಗಿ ಹರಿದು ಬರತೊಡಗಿದೆ. ರಾಜಕಾರಣಿಗಳು, ರಿಯಲ್ ಎಸ್ಟೇಟ್ ಹಾಗೂ ಗೂಂಡಾಗಳು ಇದೆಲ್ಲಾ ಯಾವ ಸಂಸ್ಕೃತಿ? ಇದೆಲ್ಲವುಗಳಿಗೆ ಎಲ್ಲಿದೆ ಉತ್ತರ? ಈ ದಿಕ್ಕಿನಲ್ಲಿ ಶಿಕ್ಷಣದ ಪಾಲೇನು? ಸುಶಿಕ್ಷಿತರು ಅವರವರ

Digitised by Bharatavani, CIIL

ಪಾಲಿನ ಜವಾಬ್ದಾರಿಯನ್ನು ಅವರು ಮಾತ್ರ ಕಂಡುಕೊಂಡರೆ ಸಾಲದು. ಉಳಿದವರಿಗೂ ಮಾರ್ಗದರ್ಶನವನ್ನು ನೀಡಬೇಕು. ಹಾಗಾದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗಬಹುದು.

ನಾಗರಿಕತೆಗೆ ಒಂದು ನಿರ್ದಿಷ್ಟ ಮಾನದಂಡವಿರುತ್ತದೆ. ಇದನ್ನು ಅಶಿಕ್ಷಿತರಿಗಿಂತ ಸುಶಿಕ್ಷಿತರು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ಆ ಮಾನದಂಡ ಸಂಸ್ಕೃತಿಯಲ್ಲಿಲ್ಲದಿರುವುದು ಅನೇಕ ಅಡಚಣೆಗಳಿಗೆ ದಾರಿಮಾಡಿಕೊಟ್ಟಿದೆ. ಸಂಸ್ಕೃತಿ ಅತ್ಯಂತ ವಿಭಿನ್ನವಾದುದು. ದೇಶದಿಂದ ದೇಶಕ್ಕೆ ಬೇರೆಯಾದುದು

ಸಾಹಿತ್ಯ, ಸಂಗೀತ, ಚಿತ್ರಕಲೆಯಲ್ಲಿ ಒಂದೇ ಬಗೆಯ ನಿರ್ಧಾರ ಸಾಧ್ಯವೇ ಇಲ್ಲ. ರೈಲು–ವಿಮಾನ ಇವುಗಳು ಎತ್ತಿನಗಾಡಿಗಿಂತ ಉತ್ತಮ. ಇದಕ್ಕೆ ಎಲ್ಲರ ಸಮ್ಮತವಿದೆ. ಹಾಗೆಯೇ ನಾಗರಿಕತೆಯು ಸದಾಕಾಲ ಮುನ್ನಡೆಯುತ್ತಲೇ ಇರುತ್ತದೆ. ಇದಕ್ಕೆ ಶಿಕ್ಷಣವು ಅತಿ ಹೆಚ್ಚಿನ ಪ್ರೋತ್ಸಾಹ ನೀಡುತ್ತದೆ. ಆದರೆ ಅದೇ ಸಂಸ್ಕೃತಿಯು ಹಾಗಲ್ಲ. ಪ್ರಪಂಚದ ಇತಿಹಾಸದಲ್ಲಿ ಧರ್ಮ, ಕಲೆ ಊರ್ಜಿತವಾದ ದಿನಗಳೂ ಇವೆ, ಸ್ಥಗಿತವಾದ ಕಾಲವೂ ಇದೆ. ಆದರೆ ಕೆಲವೊಮ್ಮೆ ಸ್ಥಿರವಾಗಿ ಮಾನ್ಯತೆ ಪಡೆದುಕೊಳ್ಳುತ್ತದೆ. ಉದಾಹರಣೆಗೆ ಬೇಲೂರು, ಹಳೇಬೀಡು, ಎಲ್ಲೋರ ಅಜಂತಾದ ಗುಹಾಂತರ ದೇವಾಲಯಗಳು ಇಂದಿಗೂ ಮನ್ನಣೆಯನ್ನು ಪಡೆದಿವೆ. ಅವುಗಳನ್ನು ಸಂರಕ್ಷಿಸಲು ಶಿಕ್ಷಣವು ಸಹಾಯ ಮಾಡುತ್ತಿದೆ.

ನಾಗರಿಕತೆಯ ಪ್ರಸಾರ ಸುಲಭ ಸಾಧ್ಯವಾಗಿರುತ್ತದೆ. ಆದರೆ ಸಂಸ್ಕೃತಿ ಹಾಗಲ್ಲ. ಅದು ವ್ಯಕ್ತಿಯ ಅಭಿರುಚಿಯನ್ನು ಅವಲಂಬಿಸಿರುತ್ತದೆ. ಭಾರತೀಯರಿಗೆ ಪಾಶ್ಚಿಮಾತ್ಯ ನೃತ್ಯ ಕೋತಿ ಕುಣಿತ. ಆದರೆ ಭರತನಾಟ್ಯ ಅತ್ಯಂತ ಪ್ರಿಯ. ಹಾಗೆಯೇ ಪಾಶ್ಚಿಮಾತ್ಯರಿಗೆ ನಮ್ಮ ಯೋಗ ಅವರಿಗೆ ಬೇಕು, ನಮಗೆ ಬೇಡ. ಹೀಗೆ ಸಂಸ್ಕೃತಿ–ನಾಗರಿಕತೆಗಳ, ಭೌತ–ಅಭೌತ ಸಂಸ್ಕೃತಿಗಳ ವ್ಯತ್ಯಾಸಗಳನ್ನು ಪಟ್ಟಿಮಾಡಬಹುದು.

ನಾಗರಿಕತೆಯನ್ನು ಯಾವುದೇ ನಷ್ಟ ಇಲ್ಲದೆ, ಪರಿವರ್ತನೆ ಇಲ್ಲದೆ ಪಡೆದುಕೊಳ್ಳಬಹುದು. ಆದರೆ ಸಂಸ್ಕೃತಿ ಹಾಗಲ್ಲ, ಪಾಶ್ಚಿಮಾತ್ಯರ ಕಾರು, ವಿಮಾನ ಹಾಗೆಯೇ ಬಳಸಬೇಕು. ಆದರೆ ವೇಷಭೂಷಣ ಮಿನಿ, ಮಿಡಿ, ಮ್ಯಾಕ್ಸಿಗಳಾಗಿ ಪರಿವರ್ತನೆ ಅವರ ಪ್ಯಾಂಟುಗಳು, ಬೆಲ್‌ಬಾಟಮ್, ಎಲಿಫೆಂಟ್ ಬಾಟಮ್, ಕೊನೆಗೆ ಮೂಲಂಗಿ ಪ್ಯಾಂಟುಗಳು ಹೀಗೆ ಅನೇಕ ಬದಲಾವಣೆ ಅಭೌತ ಸಂಸ್ಕೃತಿಯ ಕ್ಷೇತ್ರದಲ್ಲಿ ಕಾಣುತ್ತಿವೆ. ಶಿಕ್ಷಣವೂ ಇದಕ್ಕೆ ಸ್ವಲ್ಪಮಟ್ಟಿಗೆ ಪ್ರೇರಕ ಹಾಗೂ ಪೂರಕ.

ನಾಗರಿಕತೆಯು ಬಾಹ್ಯವಾದುದು. ಅದು ಒಂದು ಸಾಧನ. ಆದರೆ ಸಂಸ್ಕೃತಿಯು ಆಂತರಿಕವಾದುದು. ಅದು ಒಂದು ಗುರಿಯಷ್ಟೇ ಫಲಿತಾಂಶ ಭಿನ್ನ. ಚಿಂತನೆ, ಭಾವನೆ, ಆದರ್ಶ, ಮೌಲ್ಯ ಇವೇ ಬೇರೆ. ಗೃಹ ನಿರ್ಮಾಣ ಗೃಹೋಪಕರಣ, ವಾಹನ ಕಾರ್ಖಾನೆಗಳು ವೈವಿಧ್ಯತೆಯಿಂದ ಕೂಡಿದ್ದರೂ ಸ್ವಲ್ಪ ಬದಲಾವಣೆಗಳೊಂದಿಗೆ ಹಾಗೆಯೇ ಬಳಸಬಹುದು. ಸಂಸ್ಕೃತಿಯ ಉತ್ಪನ್ನಗಳು ವ್ಯಕ್ತಿ ಇಲ್ಲವೇ ಸಾಮಾಜಿಕ ಸಮೂಹ ಇಲ್ಲವೇ ರಾಷ್ಟ್ರದ ಸ್ವಭಾವವನ್ನು ಅಭಿವ್ಯಕ್ತಪಡಿಸುತ್ತವೆ. ಆದರೆ ನಾಗರಿಕತೆಯ ಉತ್ಪನ್ನಗಳಲ್ಲಿ ಇವೆರಡನ್ನೂ ಸರಿಯಾದ ರೀತಿಯಲ್ಲಿ ಉಪಯೋಗಿಸಿ ಜೀವನವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಶಿಕ್ಷಣವು ಅತ್ಯಂತ ಸಮರ್ಪಕವಾಗಿ ಪ್ರೋತ್ಸಾಹ ನೀಡುತ್ತದೆ. ಶಿಕ್ಷಣವಿಲ್ಲದಿದ್ದಲ್ಲಿ ಹೊಂದಾಣಿಕೆ ಖಂಡಿತಾ ಸಾಧ್ಯವಾಗದೆ ಜನರು ಬಳಲಿ ಸೊರಗಬಹುದು. ಇದರಿಂದ ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ಅಂತರ ಅವಲಂಬನೆ ಮತ್ತು ಪರಸ್ಪರ ಸಂಬಂಧಗಳ ಅರ್ಥಮಾಡಿಕೊಳ್ಳುವಿಕೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯಕವಾಗಿದೆ. ಒಂದು ಮತ್ತೊಂದನ್ನು ಅವಲಂಬಿಸಿದೆ. ನಿಕಟ ಸಂಬಂಧವನ್ನು ಹೊಂದಿ ಅವೆರಡೂ ಪರಸ್ಪರ ಪೂರಕವಾಗಿಯೇ ಇರುತ್ತವೆ.

ಸಂಸ್ಕೃತಿಯೂ ನಾಗರಿಕತೆಯ ಮೇಲೆ ಪ್ರಭಾವಬೀರುತ್ತದೆ. ನಾಗರಿಕತೆಯು ಸಂಸ್ಕೃತಿಯವಾಹಕ. ಸಂಸ್ಕೃತಿ ಮತ್ತು ನಾಗರಿಕತೆಗಳಲ್ಲಿ ಒಂದಕ್ಕೆ ಮತ್ತೊಂದನ್ನು ರೂಪಿಸುವ ಶಕ್ತಿ ಇದೆ. ಸಂಸ್ಕೃತಿಯು ಮಾನವನ ಜೀವನದ ಆದರ್ಶಗಳನ್ನು ಕಲ್ಪಿಸಿದರೆ ನಾಗರಿಕತೆಯ, ಈ ಆದರ್ಶಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಇನ್ನು ಸಂಸ್ಕೃತಿಯ ಹಿಂಬೀಳುವಿಕೆಗೆ ಸ್ಥಾನವೆಲ್ಲಿ? ಒಂದು ಸಮಾಜವು ಶಿಕ್ಷಣ ಕ್ಷೇತ್ರದ ಧ್ಯೇಯ ಉದ್ದೇಶಗಳನ್ನು ಸಮರ್ಪಕವಾಗಿ ಬಳಸಿಕೊಂಡರೆ ಸಂಸ್ಕೃತಿ ಹಿಂದೆ ಬೀಳದೆ ನಾಗರಿಕತೆಯ ಜೊತೆ ಬೆರೆಯಬಹುದು, ಸಂಸ್ಕೃತಿಯು ದೇಹವಾದರೆ ನಾಗರಿಕತೆಯು ಅದರ ಆತ್ಮ ಎಂದರೆ ಹಿಂಬೀಳುವುದಾದರೂ ಹೇಗೆ ಸಾಧ್ಯ? ಮಾನವನ ಪರಿಪೂರ್ಣ ಜೀವನಕ್ಕೆ ಆದರ್ಶಗಳು ಹಾಗೂ ಜೀವನ ವಿಧಾನವನ್ನು ರೂಪಿಸುವ ಸಂಸ್ಕೃತಿ ಹಿಂದೆ ಬೀಳಲೂ ಸಹ ಶಿಕ್ಷಣವೇ ಕಾರಣವಾಗುತ್ತವೆ. ನಾಗರಿಕತೆಯು ಉತ್ಪಾದಿಸಿದ ಸಾಧನ ಸಾಮಗ್ರಿಗಳನ್ನು ಹಿತಮಿತವಾಗಿ ಬೆಳೆಸಲು ಸಂಸ್ಕೃತಿ ಪ್ರೋತ್ಸಾಹ ನೀಡುತ್ತದೆ. ಉದಾಹರಣೆಗೆ ಅಣುಬಾಂಬ್, ನ್ಯೂಕ್ಲಿಯರ್ ಬಾಂಬ್‌ಗಳನ್ನು ಅಪಾಯಕಾರಿ ವಿನಾಶಕ್ಕೆ ಬಳಸದೆ ತನ್ನ ಒಳಿತಿಗಾಗಿ ಬಳಸಲು ಕರೆಕೊಡುತ್ತದೆ.

ಒಟ್ಟಿನಲ್ಲಿ ಇವುಗಳ ಅಂತರ ಕೇವಲ ಕಾಲ್ಪನಿಕ. ಶಿಕ್ಷಣ ಬೆಂಬಲ ನೀಡಿದಲ್ಲಿ ಯಾವ ಅಂತರವನ್ನು ಬೇಕಾದರೂ ಜಯಿಸಬಹುದು. ಶಿಕ್ಷಣದ ಸದುಪಯೋಗದಿಂದ ಸಾಂಸ್ಕೃತಿಕ ಹಿಂಬೀಳುವಿಕೆಗೆ ತಡೆಯೊಡ್ಡಿ ಇವೆರಡು ಪರಸ್ಪರ ಪ್ರೇರಕ ಹಾಗೂ ಪೂರಕಗಳಾಗಿ ಮುಂದುವರೆಯಬಹುದು. ಮೆಕೈವರ್ ಮತ್ತು ಹೆಚ್. ಪೇಜ್‌ರವರು ಅಭಿಪ್ರಾಯಪಟ್ಟಿರುವಂತೆ ನಾಗರಿಕತೆಯು ಒಂದು ಹಡಗಿದ್ದಂತೆ. ಸಂಸ್ಕೃತಿಯು ಅದನ್ನು ನಡೆಸುವ ನಾವಿಕನಿದ್ದಂತೆ. ಇನ್ನು ಹಿಂಬೀಳುವಿಕೆಗೆ ಅವಕಾಶವಾದರೂ ಎಲ್ಲಿ ಎನಿಸುತ್ತದೆ. ಇವೆರಡರ ಅರ್ಥವನ್ನು ಸಮರ್ಪಕವಾಗಿ ಮಾಡಿಕೊಂಡು ಮೇಳೈಸಿ ನೋಡಿದಾಗ ಇವುಗಳ ಹೊಂದಾಣಿಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಶಿಕ್ಷಣ ಬೆರೆತು ಮಾರ್ಗದರ್ಶನ ನೀಡಿದಲ್ಲಿ ಸಾಂಸ್ಕೃತಿಕ ಹಿಂಬೀಳುವಿಕೆಯನ್ನು ತಡೆದು ಮುನ್ನಡೆಸಬಹುದು.

–ಹೆಚ್.ಎಮ್. ವ.

## ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತಗಳು

ಸಂಜ್ಞಾನ ಪದವು ಇಂಗ್ಲಿಷ್‌ನ `Cognition' ಎಂಬ ಪದಕ್ಕೆ ಸಂವಾದಿಯಾದುದು. ಆ ಇಂಗ್ಲಿಷ್ ಪದವು ಲ್ಯಾಟಿನ್‌ನ cognicere ಎಂಬ ಮೂಲಪದದಿಂದ ಬಂದಿದೆ. ಇದರ ಅರ್ಥ `to know' ಎಂದಾಗುತ್ತದೆ. ಅಂದರೆ 'ತಿಳಿಯುವುದು' ಅಥವಾ 'ಜ್ಞಾನ ಪಡೆಯುವುದು' ಎಂದು ಅರ್ಥೈಸಬಹುದು. ಬಾಹ್ಯ ಪ್ರಪಂಚದಲ್ಲಿ ಘಟನೆಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ತಿಳಿಯುವುದು ಮತ್ತು ವೈಯಕ್ತಿಕ ಅನುಭವಗಳನ್ನು ಗಳಿಸುವ ಪ್ರಕ್ರಿಯೆ ಎಂದೂ ವಿವರಿಸಬಹುದು. ಮನೋವಿಜ್ಞಾನ ವಿಶ್ವಕೋಶವು ನಿರೂಪಿಸಿದಂತೆ, ಸಂಜ್ಞಾನವೆಂದರೆ ಜೀವಿಯು ಪರಿಸರದ ಬಗ್ಗೆ ಅರಿವನ್ನು ಹೊಂದುವುದು ಅಥವಾ ಒಂದು ವಸ್ತುವಿನ ಬಗ್ಗೆ ಜ್ಞಾನ ಹೊಂದುವ ಪ್ರಕ್ರಿಯೆಯಾಗಿದೆ.

ಜ್ಞಾನಾತ್ಮಕ ಕಾರ್ಯನಿರ್ವಹಣೆಯಲ್ಲಿ ಆಲೋಚಿಸುವಿಕೆ, ಯೋಜಿಸುವಿಕೆ, ತಿಳಿಯುವಿಕೆ, ಸಂಬಂಧಿಸುವಿಕೆ, ಪರಿಕಲ್ಪಿಸುವಿಕೆ, ವರ್ಗೀಕರಿಸುವಿಕೆ, ಸೃಷ್ಟಿಸುವಿಕೆ ಮತ್ತು ಸಮಸ್ಯೆಯ ಪರಿಹರಿಸುವಿಕೆ ಕ್ರಿಯೆಗಳು ಒಳಗೊಳ್ಳುತ್ತವೆ.

---

ಜೀನ್ ಪಿಯಾಜೆ (1896–1980), ಸ್ವಿಟ್ಜರ್‌ಲೆಂಡಿನ ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞ, ಗಣಿತಜ್ಞ, ತತ್ವಜ್ಞಾನಿ ಮತ್ತು ಮಕ್ಕಳ ಮನೋವಿಜ್ಞಾನಿ, ಇವರು 1926ರಲ್ಲಿ The Language and Thought of the Child ಎಂಬ ಪುಸ್ತಕ ಪ್ರಕಟಿಸಿದರು.

Digitised by Bharatavani, CIIL

ಮಕ್ಕಳೂ ವಯಸ್ಕರಂತೆ ಆಲೋಚಿಸುತ್ತಾರಾ? ವಿವೇಚಿಸುತ್ತಾರಾ? ಸ್ಮರಿಸುತ್ತಾರಾ? ಈ ಪ್ರಶ್ನೆಗಳಿಗೆ 20ನೇ ಶತಮಾನದವರೆಗೆ 'ಹೌದು' ಎಂದು ವ್ಯಾಪಕವಾಗಿ ತಿಳಿಯಲಾಗಿತ್ತು. ಇದಕ್ಕೆ ವಿರುದ್ಧವಾಗಿ ಕೆಲವರು, ಮಕ್ಕಳ ಸಂಜ್ಞಾನ ಪ್ರಕ್ರಿಯೆಗಳು ವಯಸ್ಕ ವ್ಯಕ್ತಿಗಳ ಸಂಜ್ಞಾನ ಪ್ರಕ್ರಿಯೆಗಳಿಗಿಂತ 'ಸರಳ'ವಾಗಿರುತ್ತವೆ ಎಂದು ವಾದಿಸಿದ್ದಾರೆ.

ಈ ತರ್ಕಗಳನ್ನು ಸ್ವಿಸ್ ಮನಶ್ಶಾಸ್ತ್ರಜ್ಞನಾದ ಜೀನ್ ಪಿಯಾಜೆ ಗಂಭೀರವಾದ ಸವಾಲಾಗಿ ಪರಿಗಣಿಸಿದರು. ಇವರು ತಮ್ಮ ಸ್ವಂತ ಮಕ್ಕಳ ಮತ್ತು ಇತರ ಅನೇಕ ಮಕ್ಕಳ ಜ್ಞಾನಾತ್ಮಕ ವಿಕಾಸವನ್ನು ಅವಲೋಕಿಸಿ ಮಕ್ಕಳು ವಯಸ್ಕರಂತೆ ಆಲೋಚಿಸುವುದಿಲ್ಲ ಮತ್ತು ವಿವೇಚಿಸುವುದಿಲ್ಲ ಎಂಬ ತೀರ್ಮಾನಕ್ಕೆ ಬಂದರು.

ಪಿಯಾಜೆರವರ ಸಂಜ್ಞಾನಾತ್ಮಕ ಸಿದ್ಧಾಂತವು ಹಂತ ಸಿದ್ಧಾಂತವಾಗಿದೆ (stage theory). ಅಂದರೆ ಮಾನವ ಜೀವಿಗಳು ಕ್ರಮಾನುಗತವಾದ ಮತ್ತು ಪೂರ್ವಾನುಮಾನ ಮಾಡಬಹುದಾದ ಬದಲಾವಣೆಯ ಸರಣಿಯನ್ನು ಅನುಸರಿಸಿ ವಿಕಾಸ ಹೊಂದುವುದು ಎಂದು ಅರ್ಥ, ಪಿಯಾಜೆ ತಮ್ಮ ವಿಕಾಸ ಸಿದ್ಧಾಂತ ಮಂಡನೆಗೆ ಜೀವಶಾಸ್ತ್ರ ಮತ್ತು ತತ್ವಶಾಸ್ತ್ರದ ಹಿನ್ನೆಲೆಗಳನ್ನು ಬಳಸಿದರು. ಜೀವಶಾಸ್ತ್ರದ ದೈಹಿಕ ವಿಕಾಸವು ಕ್ರಮಬದ್ಧವಾದುದು ಎಂಬ ಅಂಶದ ಅಳವಡಿಕೆಯನ್ನು ತತ್ವಶಾಸ್ತ್ರ ಪರಿಧಿಗೆ ಸೇರುವ 'ಆಲೋಚನೆಯ' ಬೆಳವಣಿಗೆಗೆ ಅನ್ವಯಿಸಿ ನೋಡಿದ್ದಾರೆ.

ಜೀನ್‌ಪಿಯಾಜೆ

ಮಕ್ಕಳ ಆಲೋಚನೆಯಲ್ಲಿ ಎರಡು ರೀತಿಯ ಬೌದ್ಧಿಕ ಗುಣಗಳನ್ನು ಪಿಯಾಜೆ ಗುರುತಿಸಿದ್ದಾರೆ. (ಇವು ಮಕ್ಕಳ 'ಅಹಂ' ಕೇಂದ್ರದಿಂದ ಹುಟ್ಟಿಕೊಳ್ಳುತ್ತವೆ.) ಮಕ್ಕಳು ತಮ್ಮ ಮತ್ತು ಪರಿಸರದ ನಡುವಿನ ವ್ಯತ್ಯಾಸಗಳನ್ನರಿಯದೆ ಮಾನಸಿಕ ಘಟನೆಗಳನ್ನು ಭೌತಿಕ ಘಟನೆಗಳನ್ನಾಗಿಸಿ ಕೊಳ್ಳುವ ಪ್ರವೃತ್ತಿಯ ಒಂದು ವಿಶಿಷ್ಟ ಗುಣವಾಗಿದ್ದು ಅದನ್ನು ಪಿಯಾಜೆ 'ವಾಸ್ತವತೆ' ಎಂದಿದ್ದಾರೆ. ಭೌತಿಕ ಘಟನೆಗಳಿಗೆ ಮಾನಸಿಕ ಗುಣಲಕ್ಷಣಗಳ ಆರೋಪಿಸುವಿಕೆಯನ್ನು "ಜೀವತ್ವಾರೋಪಣೆ" (Animism) ಎಂಬ ಮತ್ತೊಂದು ವಿಶಿಷ್ಟ ಗುಣವಾಗಿ ಹೆಸರಿಸಿದ್ದಾರೆ.

ಮಕ್ಕಳು ತಮ್ಮ ಸುತ್ತಲಿರುವ ಪ್ರಪಂಚದ ಬಗ್ಗೆ ನಿಖರವಾದ ಜ್ಞಾನ ಪಡೆಯಲು ತವಕದಿಂದ ಕ್ರಿಯಾಶೀಲರಾಗಿ ಆಲೋಚಿಸುತ್ತಿರುತ್ತಾರೆ. ಮತ್ತು ಜ್ಞಾನಗಳಿಸುತ್ತಿರುತ್ತಾರೆ. ಪಿಯಾಜೆರವರು 'ಸಂಘಟನ' ಮತ್ತು 'ಹೊಂದಾಣಿಕೆ' ಎಂಬ ಎರಡು ಮೂಲ ಪ್ರಕ್ರಿಯೆಗಳಿಂದ ಮಕ್ಕಳು ಜ್ಞಾನ ಪಡೆಯುವರು ಎಂದಿದ್ದಾರೆ.

ಸಂಘಟನೆಯು ಅನುವಂಶಿಕವಾದ ಲಕ್ಷಣವಾಗಿದ್ದು ಪರಿಸರವನ್ನು ಅರ್ಥೈಸಿಕೊಳ್ಳಲು ಮಕ್ಕಳು ಕೈಗೊಳ್ಳುವ ಕ್ರಿಯೆಯಾಗಿದೆ. ಹೊಂದಾಣಿಕೆ ಆಂತರಿಕ ಪ್ರವೃತ್ತಿಯಾಗಿದ್ದು, ಪರಿಸರಕ್ಕೆ ತೋರುವ ಅನುಕ್ರಿಯೆ ತೋರಿಸುವ ಮೂಲಭೂತ ಕ್ರಿಯೆಯಾಗಿದೆ. ಹೊಂದಾಣಿಕೆಯು (adaptation) ಸ್ವಾಂಗೀಕರಣ (assimilation) ಮತ್ತು ಅನುಕೂಲನ (accomodation)ಗಳೆಂಬ ಅನ್ಯೋನ್ಯ ಸಂಬಂಧವನ್ನು ಹೊಂದಿರುವ ಎರಡು ಕ್ರಿಯೆಗಳನ್ನು ಒಳಗೊಂಡಿದೆ. ಸ್ವಾಂಗೀಕರಣವು ಈಗಾಗಲೇ ಇರುವ ಮಾನಸಿಕ ರಚನೆಗಳಲ್ಲಿ ಬಾಹ್ಯ ವಾಸ್ತವತೆಯನ್ನು ಅಂತರೀಕರಣ ಮಾಡಿಕೊಳ್ಳುವಿಕೆಯಾಗಿರುತ್ತದೆ. ಅಂದರೆ ಮಕ್ಕಳು ಪೂರ್ವಜ್ಞಾನದ ಆಧಾರದಿಂದ ತಾವೀಗಾಗಲೆ ಕಂಡುಕೊಂಡಿರುವ ಪರಿಸರವನ್ನು ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಅನುಕೂಲನವು ಮಾನಸಿಕ ರಚನೆಗಳನ್ನು ಪರಿಸರದ ನಿರ್ದಿಷ್ಟಾಂಶಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮಾಡಿ ಸ್ವಾಂಗೀಕರಣದಲ್ಲಿನ ಮಾದರಿಯನ್ನು ಉತ್ತಮಪಡಿಸುವ ಕ್ರಿಯೆಯಾಗಿದೆ.

ವರ್ತನೆಗಳನ್ನು ಸಂಘಟಿಸಿ ಪರಿಸರಕ್ಕೆ ಹೊಂದಿಕೊಳ್ಳುವಾಗ ಹೊಸ ಮಾನಸಿಕ ರಚನೆಗಳು ಉಂಟಾಗುತ್ತವೆ. ಇವನ್ನು 'ಆಕೃತಿ ಕಲ್ಪ' (schema)ಗಳೆಂದು ಪಿಯಾಜೆ ಕರೆದಿದ್ದಾರೆ. ಪ್ರಾರಂಭಿಕ ವಿನ್ಯಾಸಗಳು ಮಗುವಿನ ಪ್ರತಿವರ್ತಿತ ಪ್ರತಿಕ್ರಿಯೆಗಳು (Reflexes). ಇವು ಸರಳ ಸ್ವರೂಪದವುಗಳಾಗಿರುತ್ತವೆ. ಹಿಡಿಯುವುದು, ಚೀಪುವುದು, ಎಳೆದುಕೊಳ್ಳುವುದು, ಬೆರಳಾಡಿಸುವುದು ಇಂತಹ ಜನ್ಮಜಾತ ಆಕೃತಿ ಕಲ್ಪಗಳು ಪ್ರಾರಂಭಿಕ ಸಂಘಟನೆಗಳಾಗಿರುತ್ತವೆ. ಅವು ಮೂಲ ಘಟಕಗಳಾಗಿ ಕಾರ್ಯ ನಿರ್ವಹಿಸಿದ ನಂತರ ಅವುಗಳಿಗೆ ಸಾಮ್ಯವುಳ್ಳಂತಹ ಇನ್ನಿತರ ಆಕೃತಿ ಕಲ್ಪಗಳು ಮೂಡತೊಡಗುತ್ತವೆ. ಇವು ಹೆಚ್ಚು ಸಂಕೀರ್ಣ ಸ್ವರೂಪದವುಗಳಾಗತೊಡಗುತ್ತವೆ. ಪರಿಸರ ಬದಲಾದಂತೆ, ಅನುಭವ ದೊರಕಿದ ಹಾಗೆ ಹೆಚ್ಚು ವಿಭೇದಕ ಆಕೃತಿ ಕಲ್ಪಗಳು ಸರಳ ಆಕೃತಿ ಕಲ್ಪಗಳನ್ನು ಸ್ಥಳಾಂತರಿಸುತ್ತವೆ. ಇದಕ್ಕೆ ಇನ್ನೊಂದು ಉದಾಹರಣೆಯನ್ನು ಈ ಕೆಳಗಿನಂತೆ ನೀಡಬಹುದು.

ಎರಡು ವರ್ಷದ ಮಗು ವಿವಿಧ ರೀತಿಯ ಬೆಕ್ಕುಗಳನ್ನು ನೋಡಬಹುದು. ಅದರ ಅಂತಹ ಅನುಭವಗಳ ಆಧಾರದ ಮೇಲೆ ಬೆಕ್ಕುಗಳ ಬಗ್ಗೆ 'ಆಕೃತಿ ಕಲ್ಪ'ವನ್ನು ರಚಿಸಿಕೊಳ್ಳುವುದು. (ಅಂದರೆ ನಾಲ್ಕು ಚಿಕ್ಕ ಕಾಲುಗಳಿರುವ ಪ್ರಾಣಿಯಂತೆ) ಅನಂತರ ಅಳಿಲುಗಳನ್ನು ನೋಡಿದಾಗ ಸ್ವಾಂಗೀಕರಣ ಪ್ರಕ್ರಿಯೆಯಿಂದ ಅದನ್ನು ಆಕೃತಿ ಕಲ್ಪಕ್ಕೆ ಸೇರಿಸಿಕೊಳ್ಳುವುದು. ಇನ್ನು ಹೆಚ್ಚು ಹೆಚ್ಚು ಅಳಿಲುಗಳನ್ನು ನೋಡಿದಾಗ ಅವುಗಳ ಆಕಾರ, ಕಾರ್ಯ ಚಟುವಟಿಕೆಗಳನ್ನು ಗಮನಿಸುತ್ತಾ ಕ್ರಮೇಣ ಅಳಿಲಿಗೆ ಇನ್ನೊಂದು 'ಆಕೃತಿ ಕಲ್ಪವನ್ನು' ರಚಿಸಿಕೊಳ್ಳುತ್ತದೆ. ಇದು ವ್ಯವಸ್ಥೀಕರಣವನ್ನು ವಿವರಿಸುತ್ತದೆ. ಹೊಸ ಮಾಹಿತಿ ದೊರಕಿದುದರಿಂದ ಪ್ರಸಕ್ತ ಜ್ಞಾನ ಸಂರಚನೆಯಲ್ಲಿ ಬದಲಾವಣೆಗಳಾಗುವುವು. ಪಿಯಾಜೆ ರವರು ಈ ಎರಡು




Digitised by Bharatavani, CIIL

ಪ್ರಕ್ರಿಯೆಗಳ ನಡುವಣ ಅಸಮತೋಲನವೇ ಸಂಜ್ಞಾನ (ಬೌದ್ಧಿಕ) ವಿಕಾಸಕ್ಕೆ ಉತ್ತೇಜನವಾಗುವುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಮಕ್ಕಳು ಹೀಗೆ ನಿರಂತರವಾಗಿ ತಮ್ಮ ಸುತ್ತಲಿರುವ ಸಂಕೀರ್ಣ ಪ್ರಪಂಚದತ್ತ ಗಮನವಿಡುತ್ತ ಹೆಚ್ಚು ಹೆಚ್ಚು ನಿಖರವಾದ ಅರ್ಥಗಳನ್ನು ಹುಡುಕುತ್ತಿರುತ್ತಾರೆ.

ಪಿಯಾಜೆರವರ ಪ್ರಕಾರ ಈ ಬದಲಾವಣೆಗಳುಂಟಾದಾಗ ಮಕ್ಕಳು ತಮ್ಮ ಸುತ್ತಲಿನ ಸಂಕೀರ್ಣ ಪ್ರಪಂಚದ ಬಗ್ಗೆ ನಿಖರವಾದ ಅರ್ಥವನ್ನು ಕಂಡುಕೊಳ್ಳಬಲ್ಲರು. ಸಂಜ್ಞಾನಾತ್ಮಕ (ಬೌದ್ಧಿಕ) ವಿಕಾಸವು ಈ ಮುಂದಿನ ನಾಲ್ಕು ಹಂತಗಳಲ್ಲಿ ಸಾಗುತ್ತದೆಯೆಂದು ಪಿಯಾಜೆ ಹೇಳಿದ್ದಾರೆ. ಗತಿ ಸಂವೇದನಾ ಹಂತ, ಪೂರ್ವ ಸಂಕ್ರಿಯಾತ್ಮಕ ಹಂತ, ಮೂರ್ತ ಸಂಕ್ರಿಯಾತ್ಮಕ ಹಂತ ಮತ್ತು ನಿಯಮಬದ್ಧ ಸಂಕ್ರಿಯಾತ್ಮಕ ಹಂತ. ಪಿಯಾಜೆರವರ ಪ್ರಕಾರ ಈ ಹಂತಗಳು ಸಾಂಸ್ಕೃತಿಕ ಅನುಭವ, ವೈಯಕ್ತಿಕ ಅನುಭವಗಳು, ಪರಿಸರದೊಂದಿಗೆ ಸಂಪರ್ಕ, ಬೇರೆಯವರ ಪ್ರಭಾವ, ನಂಬಿಕೆಗಳು ಮತ್ತು ಮಾರ್ಗದರ್ಶನಗಳನ್ನು, ಅವಲಂಬಿಸುತ್ತವೆ. ವ್ಯಕ್ತಿಗಳು ಈ ಹಂತಗಳನ್ನು ತಲುಪುವ ವಯಸ್ಸು, ವೇಗ ಮತ್ತು ಹಂತ ಲಕ್ಷಣಗಳು ಪರಿಸರದಿಂದ ದೊರಕುವ ಅನುಭವ ಇತರರ ಪ್ರಭಾವ, ವಿವಿಧ ನಂಬಿಕೆಗಳ)ನ್ನು ಅವಲಂಬಿಸುವುವು.

### ಗತಿ–ಸಂವೇದನಾ ಹಂತ (Sensory Motor Stage)

ಈ ಹಂತವು ಜನನದಿಂದ 18 ಅಥವಾ 24 ತಿಂಗಳ ನಡುವಿನ ಅವಧಿಯನ್ನು ವ್ಯಾಪಿಸುವುದು. ಈ ಹಂತದಲ್ಲಿ ಮಗುವು ಕ್ರಮೇಣ ತನ್ನ ಕ್ರಿಯೆಗೂ ಬಾಹ್ಯ ಪರಿಸರಕ್ಕೂ ಸಂಬಂಧವಿದೆ ಎಂದು ಅರಿಯುತ್ತದೆ. ವಸ್ತುಗಳನ್ನು ಬಳಸಿ ಪರಿಣಾಮಗಳನ್ನುಂಟು ಮಾಡಿ ಕಾರ್ಯ–ಕಾರಣ ಸಂಬಂಧವನ್ನು ತಿಳಿಯುತ್ತದೆ. ಆದ್ದರಿಂದ ಮಗು ವಿವಿಧ ರೀತಿಯ ಕ್ರಿಯೆಗಳನ್ನು ಕೈಗೊಳ್ಳುವ ಪ್ರಯೋಗ ಮಾಡಿ ಅವುಗಳ ಪರಿಣಾಮಗಳನ್ನುಂಟು ಮಾಡುತ್ತದೆ. ಈ ಹಂತದಲ್ಲಿ ಮಗು ಆಂಗಿಕ ಚಲನೆಯ ಚಟುವಟಿಕೆಗಳು ಮತ್ತು ಸಂವೇದನಾನುಭವಗಳ ಮೂಲಕ ಪ್ರಪಂಚವನ್ನು ತಿಳಿಯುತ್ತದೆ. ವಸ್ತು ಅಥವಾ ಘಟನೆಗಳನ್ನು ಪ್ರತಿನಿಧಿಸಲು ಮಾನಸಿಕ ಸಂಕೇತಗಳನ್ನು ಬಳಸಲು ತಿಳಿದಿರುವುದಿಲ್ಲ. ಉದಾಹರಣೆಗೆ, ವಸ್ತುವೊಂದನ್ನು ಮಗುವಿನ ದೃಷ್ಟಿಯಿಂದ ಮುಚ್ಚಿಟ್ಟರೆ ನಾಲ್ಕು ತಿಂಗಳ ಮಗುವು ಹುಡುಕಲು ಪ್ರಯತ್ನಿಸುವುದಿಲ್ಲ. ಆದರೆ ಎಂಟು ಅಥವಾ ಒಂಬತ್ತು ತಿಂಗಳ ಮಗುವು ಮುಚ್ಚಿಟ್ಟ ವಸ್ತುಗಳನ್ನು ಹುಡುಕುವುದು. ಅಂದರೆ ಆ ಮಗು ವಸ್ತುಸ್ಥಿರತೆ (Object permanance)ಯ ಮೂಲ ಪರಿಕಲ್ಪನೆಯನ್ನು ಹೊಂದಿರುವುದು. ವಸ್ತು ಮರೆಯಾದರೂ ವಸ್ತು ಇರುವಿಕೆಯ ವಿಚಾರವನ್ನು ಮಗು ಕಂಡುಕೊಂಡಿರುತ್ತದೆ. (ಇತ್ತೀಚಿನ ಅಧ್ಯಯನಗಳು ಪಿಯಾಜೆಯ ಸಿದ್ಧಾಂತವನ್ನು ವಿಮರ್ಶೆ ಮಾಡಿ ವಸ್ತು ಶಾಶ್ವತತೆ ಅಥವಾ ವಸ್ತು ಸ್ಥಿರತೆ ಬಗ್ಗೆ ಪಿಯಾಜೆರವರು ಗುರುತಿಸುವ ವಯಸ್ಸಿಗಿಂತ ಮೊದಲೇ ಆ ಸಾಮರ್ಥ್ಯ ಕಾಣಿಸಿಕೊಳ್ಳುತ್ತದೆ ಎಂದು ತೋರಿಸಿಕೊಟ್ಟಿವೆ) ಈ ಹಂತದ ಅಂತಿಮ ಭಾಗದ ಹೊತ್ತಿಗೆ ಭಾಷೆ ವಿಕಾಸಗೊಳ್ಳತೊಡಗುತ್ತದೆ. ಈ ಹಂತದಲ್ಲಿ ಪಿಯಾಜೆ ಆರು ಉಪಹಂತಗಳನ್ನು ಗುರುತಿಸಿದ್ದಾರೆ.

### ಪೂರ್ವ–ಸಂಕ್ರಿಯಾತ್ಮಕ ಹಂತ (Pre-operational stage)

ಶಿಶುವು 18 ರಿಂದ 24 ತಿಂಗಳ ಅವಧಿಯೊಳಗೆ ವಸ್ತು ಮತ್ತು ಘಟನೆಯ ಬಗ್ಗೆ ಮಾನಸಿಕ ಬಿಂಬ(mental images)ಗಳನ್ನು ನಿರ್ಮಿಸಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳುವುದು. ಇದೇ ಸಮಯದಲ್ಲಿ ಶಿಶು ಶಾಬ್ದಿಕ ಸಂಕೇತ (verbal symbols) - (ಪದಗಳನ್ನು) ಬಳಸಿಕೊಂಡು ಆಲೋಚನೆಗೆ ತೊಡಗುವುದು. ಇದು ಭಾಷಾ ವಿಕಾಸವನ್ನು ಸೂಚಿಸುವುದು. ಈ ಬೆಳವಣಿಗೆಯು ಪೂರ್ವಸಂಕ್ರಿಯಾತ್ಮಕ ಹಂತದ ಸಂಧಿಕಾಲವನ್ನು ಸೂಚಿಸುತ್ತದೆ. ಪೂರ್ವ ಸಂಕ್ರಿಯಾತ್ಮಕ ಹಂತವೆಂದರೆ ಪಿಯಾಜೆರವರ ದೃಷ್ಟಿಯಲ್ಲಿ ಮಗು ಇನ್ನೂ ತರ್ಕ ಮತ್ತು ಮಾನಸಿಕ ಕ್ರಿಯೆಗಳನ್ನು ವ್ಯಕ್ತಮಾಡಲಾಗದ ಹಂತವೆಂದು ಅರ್ಥವಾಗುವುದು. ಪೂರ್ವಸಂಕ್ರಿಯಾತ್ಮಕ ಹಂತವು 7ನೇ ವಯಸ್ಸಿನವರೆಗೂ ವ್ಯಾಪಿಸಿರುವುದು. ಈ ಹಂತಕ್ಕೆ ಮುನ್ನ ಮಾಡಲಾಗದ ಎಷ್ಟೋ ಕಾರ್ಯಗಳನ್ನು ಈ ಹಂತದಲ್ಲಿ ಮಕ್ಕಳು ತೋರುವರು. ಉದಾಹರಣೆಗೆ, ಸಾಂಕೇತಿಕ ಆಟ (symbolic play)ಗಳಾಗಿರಬಹುದು. ಪೆನ್ಸಿಲ್ ಅನ್ನು ರಾಕೆಟ್‌ನಂತೆಯೂ, ಮರದ ತುಂಡನ್ನು ಕಪ್ಪೆಯಂತೆಯೂ, ಅಜ್ಜನ ಕೋಲನ್ನು ಕುದುರೆಯಂತೆಯೂ ಭಾವಿಸಿ ಆಡುವುದುಂಟು. ಈ ಆಟಗಳು ಮಕ್ಕಳ ಸಂಜ್ಞಾನ ಸಾಮರ್ಥ್ಯಗಳು ಈ ಹಂತದಲ್ಲಿ ಹೇಗೆ ಬದಲಾಗುವುವು ಎಂದು ತೋರಿಸುವುವು. ಇಂತಹ ಆಟ ಮಾನಸಿಕ ಚಟುವಟಿಕೆಗಳ ಮೂರು ಹಂತಗಳನ್ನು ಗುರುತಿಸುತ್ತವೆ.

1. **ವಿಕೇಂದ್ರೀಕರಿಸುವಿಕೆ (Decentralisation)** ಆಟದ ಕ್ರಿಯೆಗಳಿಗೆ ತಮ್ಮ ಬದಲು ಇತರರನ್ನು ಬಳಸಿಕೊಳ್ಳುವುದು. ಉದಾಹರಣೆಗೆ ಗೊಂಬೆಗಳಿಗೆ ಉಣಿಸುವುದು, ಬಟ್ಟೆ ತೊಡಿಸುವುದು.

2. **ವಿಸಂದರ್ಭೀಕರಿಸುವುದು (Deconexualisation)** ವಸ್ತುಗಳನ್ನು ಪರಸ್ಪರ ಬದಲಿಸಿ ಬಳಸಿಕೊಳ್ಳುವುದು. ಕಡ್ಡಿಯನ್ನು ಚಮಚದಂತೆ ಬಳಸಿಕೊಳ್ಳುವುದು.

3. **ಸಂಘಟಿಸಿಕೊಳ್ಳುವುದು (Integration)** ಆಟದ ಕ್ರಿಯೆಗಳನ್ನು ಸಂಕೀರ್ಣ ಸರಣಿಗಳಿಗೆ ಸೇರಿಸಿಕೊಳ್ಳುವುದು. ಉದಾಹರಣೆಗೆ 'ನಾನು ಚಿಕ್ಕ ಹುಡುಗನಾಗಿದ್ದಾಗ ನನ್ನ ಹತ್ತಿರ ಆಟದ ಕಾರುಗಳ ಸಂಗ್ರಹವಿತ್ತು. ನಾನು ಈಗ ಬೆಳೆದು ದೊಡ್ಡವನಾಗಿ ತಿಳಿದುಕೊಂಡಿರುವುದೇನೆಂದರೆ, ನಾನು ಆಗ ಆ ಕಾರುಗಳನ್ನು ಕಲ್ಪಿತ ಕಾರು ಓಡಿಸುವ ಸ್ಪರ್ಧೆಗೆ (car race) ಬಳಸಿಕೊಂಡಿದ್ದೆ ಎಂಬುದು, ಅಲ್ಲದೆ ಆ ಕಾರುಗಳನ್ನು ಸರ್ವಿಸ್ ಮಾಡಿಸಲು ಸರ್ವಿಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗುತ್ತಿದ್ದೆ ಇತ್ಯಾದಿ. ಈ ಮೇಲಿನ ವಿವರಣೆಯು ಮಕ್ಕಳು ಸಂಜ್ಞಾನಾತ್ಮಕವಾಗಿ ಬೆಳೆಯುವುದನ್ನು ಪ್ರತಿನಿಧಿಸುತ್ತದೆ. ಈ ಹಂತದ ಮಕ್ಕಳ ಆಲೋಚನಾ ಪ್ರಕ್ರಿಯೆಗಳು ಹಿಂದಿನ ಹಂತದ್ದಕ್ಕಿಂತ ಮೇಲ್ಮಟ್ಟದ್ದಾಗಿರುತ್ತವೆ. ಆದರೂ ಅನೇಕ ರೀತಿಯಲ್ಲಿ ಇನ್ನೂ ಅಪಕ್ವವೆಂದು ಪಿಯಾಜೆರವರು ಒತ್ತಿ ಹೇಳಿದ್ದಾರೆ. ಮಕ್ಕಳು ಮಾನಸಿಕ ಸಂಕೇತಗಳನ್ನು ಬಳಸಿ ಆಲೋಚನೆ ಕೈಗೊಂಡರೂ, ಅವರ ಆಲೋಚನೆಗಳು ಬಿಡಿಬಿಡಿ ಭಾಗಗಳಂತೆಯೂ, ಬದಲಾವಣೆಗೆ ಗುರಿಯಾಗದ, ತರ್ಕರಹಿತವಾದುವುಗಳು, ಒಂದೇ ನಿರ್ದಿಷ್ಟ ಸನ್ನಿವೇಶಕ್ಕೆ ಸೀಮಿತವಾದುವುಗಳಾಗಿರುತ್ತವೆ. ಈ ಹಂತದ ಮಕ್ಕಳ ಆಲೋಚನೆಗಳು ಅಪಕ್ವವಾಗಿರುತ್ತವೆ. ಪಿಯಾಜೆರವರು ಅದಕ್ಕೆ ಅಹಂ ಕೇಂದ್ರಿತ ಪ್ರವೃತ್ತಿ (egocentrism) ಕಾರಣವೆನ್ನುತ್ತಾರೆ. ಮಕ್ಕಳು ಇತರರು ಅವರಂತಲ್ಲದೆ ಭಿನ್ನ ರೀತಿ ಆಲೋಚಿಸಬಲ್ಲರೆಂಬುದನ್ನು ಅರ್ಥಮಾಡಿಕೊಳ್ಳಲಾರರು. ಮಕ್ಕಳು ತಮ್ಮನ್ನೇ (ಅಹಂ) ಕೇಂದ್ರವಾಗಿಸಿಕೊಂಡು ಯೋಚಿಸುತ್ತಾರೆ. ಬೇರೆಯವರ ದೃಷ್ಟಿಕೋನವನ್ನು (ನಿಲುವನ್ನು) ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಮಕ್ಕಳಿಗೆ ಇರುವುದಿಲ್ಲ.

ಈ ಹಂತದಲ್ಲಿರುವ ಮಕ್ಕಳು ಸಂಬಂಧ ಸೂಚಕ ಪದಗಳಾದ 'ಹಗುರವಾದ, ದೊಡ್ಡದಾದ, ನುಣುಪಾದ' ಎಂಬವುಗಳನ್ನು ಅರ್ಥ

Digitised by Bharatavani, CIIL

ಮಾಡಿಕೊಳ್ಳಲಾರರು. ಸೂಚಿಸಿದ ಅನುಕ್ರಮಣಿಕೆಯಲ್ಲಿ ವಸ್ತುಗಳನ್ನು ಜೋಡಿಸಲಾರರು (seriation). ಕೊನೆಯದಾಗಿ, ಪಿಯಾಜ್ಞೆರವರ ಮಾತಿನಂತೆ ಸ್ಥಾಯಿತ್ವದ ತತ್ವವನ್ನು (principle of conservation) ಗ್ರಹಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ವಸ್ತುವಿನ ಆಕಾರ ಬದಲಿಸಿದರೆ ಅದರ ದ್ರವ್ಯರಾಶಿ ಬದಲಾಗುವುದಿಲ್ಲ ಎಂಬುದನ್ನು ತಿಳಿಯಲಾರರು. ಉದಾಹರಣೆಗೆ, ಒಂದು ಮಣ್ಣಿನ ಉಂಡೆಯನ್ನು ವಿವಿಧ ಆಕಾರಕ್ಕೆ ತಂದಾಗ ಮಣ್ಣಿನ ಪ್ರಮಾಣ ಬದಲಾಗದು ಎಂಬುದನ್ನು ಮಕ್ಕಳು ಅರ್ಥಮಾಡಿಕೊಳ್ಳುವುದಿಲ್ಲ.

**3. ಮೂರ್ತ ಸಂಕ್ರಿಯಾತ್ಮಕ ಹಂತ (Concrete operational stage)** (7 ರಿಂದ 11ರವರೆಗೆ) ಆರು ಅಥವಾ ಏಳು ವರ್ಷಕ್ಕೆ (ಇನ್ನೂ ಮೊದಲೇ) ಕಾಲಿಡುತ್ತಿದ್ದಂತೆ ಅನೇಕ ಮಕ್ಕಳು ಈ ಹಿಂದೆ ತಿಳಿಸಿದ ಸಮಸ್ಯೆಗಳನ್ನು ಬಿಡಿಸಬಲ್ಲರು. ಪಿಯಾಜ್ಞೆರವರ ಪ್ರಕಾರ ಮಕ್ಕಳು ಸ್ಥಾಯಿತ್ವದ ಪರಿಕಲ್ಪನೆ ಹೊಂದುವ ಲಕ್ಷಣದಿಂದ ಮೂರ್ತ ಸಂಕ್ರಿಯಾತ್ಮಕ ಹಂತಕ್ಕೆ ಕಾಲಿಡುತ್ತಾರೆ. ಈ ಹಂತದಲ್ಲಿ ಅನೇಕ ಮುಖ್ಯವಾದ ಕೌಶಲಗಳು ಮೂಡುತ್ತವೆ. ಮಕ್ಕಳು ಸಂಬಂಧಸೂಚಕ ಪದಗಳನ್ನು, ಸರಣಿ ಗೊಳಿಸುವಿಕೆಯನ್ನು ಅರ್ಥಮಾಡಿಕೊಳ್ಳುತ್ತಾರೆ. ಹಿಂದುಮುಂದಾಗಿಸುವ ಕ್ರಮವನ್ನು ಅರ್ಥ ಮಾಡಿಕೊಳ್ಳುತ್ತಾರೆ. ಭೌತಿಕ ವ್ಯತ್ಯಾಸಗಳನ್ನು ಪುನಃ ಹಿಂದಿನ ರೂಪಕ್ಕೆ ತರಬಹುದೆಂದು ಮನಗಾಣುತ್ತಾರೆ. ತರ್ಕಬದ್ಧ ಆಲೋಚನೆಯನ್ನು ಮಾಡಬಲ್ಲರು. ಆದರೆ ಭಾಷೆಗೆ ಸಂಬಂಧಿಸಿದ ಊಹಾ ಸಿದ್ಧಾಂತವನ್ನು ಮಾಡಲಾರರು. ಭಾಷೆಯಲ್ಲಿ ಸಮಭಾಜಕತೆ ಕಂಡುಬರುತ್ತದೆ. ಇದನ್ನು ಸಾಮೂಹಿಕ ಭಾಷೆ ಎನ್ನಲಾಗಿದೆ. ವಸ್ತುಗಳು ಆಕಾರದಲ್ಲಿ ಬದಲಾವಣೆಗೊಂಡರೂ ಅವುಗಳ ದ್ರವ್ಯರಾಶಿಯಲ್ಲಿ (mass) ಬದಲಾವಣೆಯಾಗುವುದಿಲ್ಲವೆನ್ನುವ ಪರಿಕಲ್ಪನೆ.

### ನಿಯಮ (ತರ್ಕ)ಬದ್ಧ ಸಂಕ್ರಿಯಾತ್ಮಕ ಹಂತ (Formal operation stage)

ಈ ಹಂತವು 11 ನೇ ವಯಸ್ಸಿನಿಂದ ಮುಂದಿನ ಕಾಲವಾಗಿದೆ. ಪಿಯಾಜ್ಞೆರವರು ಇದನ್ನು ಸಂಜ್ಞಾನ ವಿಕಾಸದ ಕೊನೆಯ ಹಂತವೆಂದಿದ್ದಾರೆ. ಈ ಹಂತದಲ್ಲಿ ಮಕ್ಕಳು ಅಮೂರ್ತವಾಗಿ ಆಲೋಚಿಸಬಲ್ಲರು. ತರ್ಕ ಬದ್ಧವಾಗಿಯೂ ಚಿಂತಿಸಬಲ್ಲರು. ಸಿದ್ಧಾಂತಗಳನ್ನು ರೂಪಿಸಬಲ್ಲರು. ಸಿದ್ಧಾಂತಗಳನ್ನು ಭಾಷಾರೂಪದಲ್ಲಿ, ಸಂಕೇತಗಳ ರೂಪದಲ್ಲಿ ಕೈಗೊಳ್ಳಬಲ್ಲರು. ತೀರ್ಮಾನ ತೆಗೆದುಕೊಳ್ಳಬಲ್ಲರು. ವಿಮರ್ಶಿಸಿ ಮೌಲ್ಯ ನಿರ್ಧರಿಸಬಲ್ಲರು. ನೈಜ ಮತ್ತು ಮೂರ್ತವಲ್ಲದ ಆದರೆ ಸಾಧ್ಯತೆ ಇರಬಲ್ಲ ಸನ್ನಿವೇಶ ಮತ್ತು ಸಂಬಂಧಗಳನ್ನು ಅರಿಯಬಲ್ಲರು. ಕಲ್ಪನೆ ಮಾಡಿಕೊಳ್ಳಬಲ್ಲರು. ದತ್ತ ಮಾಹಿತಿಯಿಂದ ಮುಂದುವರೆದು ಪೂರ್ವಾನುಮಾನ ಮಾಡಬಲ್ಲರು.

ಈ ಹಂತದಲ್ಲಿ ಮಕ್ಕಳು ಪೂರ್ವಾನುಮಾನ ಮಾಡಬಲ್ಲರು. ಪಿಯಾಜ್ಞೆರವರು ತಿಳಿಸಿದಂತೆ ಊಹಾತ್ಮಕ ನಿಗಮನ ವಿವೇಚನಾ ಶಕ್ತಿ ಹೊಂದಿರುತ್ತಾರೆ. ಅಂದರೆ ಪ್ರಾಕಲ್ಪನೆಗಳನ್ನು ರೂಪಿಸಬಲ್ಲರು, ಆ ಪ್ರಾಕಲ್ಪನೆಗಳನ್ನು ಒರೆಹಚ್ಚಿ ನೋಡಲೂ ಸಮರ್ಥರಾಗಿರುವರು. ಈ ಹಂತದ ಕೊನೆಯಲ್ಲಿರುವವರ ಆಲೋಚನೆ ವಯಸ್ಕರ ಆಲೋಚನಾ ಸ್ವರೂಪಕ್ಕೆ ಸಮೀಪವಾಗುವುದು.

ಅಂತಿಮವಾಗಿ ಹೇಳಬಹುದಾದುದೆಂದರೆ ಕೆಲವರು ಕೊನೆಯ ಹಂತ ತಲುಪಿದ್ದರೂ ಮೇಲೆ ಹೇಳಿದ ಮೇಲ್ಮಟ್ಟದ ಆಲೋಚನಾ ಸಾಮರ್ಥ್ಯ ಹೊಂದದೇ ಇರಲೂಬಹುದು. ಕೌಮಾರ್ಯದಲ್ಲಿರುವವರೂ, ವಯಸ್ಕರೂ ಸಾಕಷ್ಟು ಸಂಜ್ಞಾನ ಪ್ರಯತ್ನ ಹಾಕದೆ ಕೆಳಗಿನ ಹಂತದ ಮಾನಸಿಕ ಕಾರ್ಯಗಳನ್ನೇ ತೋರುವವರೂ ಇರುತ್ತಾರೆ.

### ಪಿಯಾಜ್ಞೆರವರ ಸಿದ್ಧಾಂತದ ಆಧುನಿಕ ವಿಮರ್ಶೆ

ಸಂಜ್ಞಾನಾತ್ಮಕ ವಿಕಾಸದಲ್ಲಿ ಪಿಯಾಜ್ಞೆರವರ ಅಧ್ಯಯನ ಗಮನಾರ್ಹವಾದುದು. ಮುಂದಿನ ಅನೇಕರಿಗೆ ಆಧಾರಭೂತವಾದು ದಾದಾಗ್ಯೂ ಟೀಕೆಗೆ ಗುರಿಯಾಗಿದೆ. ವಿಕಾಸ ಮನೋವಿಜ್ಞಾನಿಗಳು ಪಿಯಾಜ್ಞೆರವರ ಸಿದ್ಧಾಂತವನ್ನು ಮೂರು ಮುಖ್ಯ ಅಂಶಗಳ ಆಧಾರದ ಮೇಲೆ ಪರಿಷ್ಕರಿಸಲು ಸೂಚಿಸಿದ್ದಾರೆ.




ಮೂಲ: Baron R.A. (5th Edition), Psychology, Prentice-Hall of India Pvt. Ltd. New Delhi, 2007, P. 303

Digitised by Bharatavani, CIIL

1. ಶಾಲಾಪೂರ್ವ ಹಂತದ ಮಕ್ಕಳ ಸಂಜ್ಞಾನ ಸಾಮರ್ಥ್ಯಗಳು ಪಿಯಾಜೆ ಪರಿಗಣಿಸಿರುವುದಕ್ಕಿಂತ ಮೇಲ್ಮಟ್ಟದ್ದಾಗಿರುತ್ತವೆ.
2. ಸಂಜ್ಞಾನ ವಿಕಾಸದ ಹಂತಗಳ ಪ್ರತ್ಯೇಕತೆ ಪ್ರಶ್ನಾರ್ಹವಾಗಿದೆ.
3. ಮಕ್ಕಳ ಮತ್ತು ಅವರ ಕ್ಷೇಮ ಪಾಲಕರ ನಡುವಿನ ಸಾಮಾಜಿಕ ಅನ್ಯೋನ್ಯ ಕ್ರಿಯೆಯು ಮಕ್ಕಳ ಸಂಜ್ಞಾನ ವಿಕಾಸದಲ್ಲಿ ಮಹತ್ವವಾದುದು.

ಅ) ಎಂಟು ಅಥವಾ ಒಂಬತ್ತು ತಿಂಗಳಿಗಿಂತ ಕಡಿಮೆ ವಯಸ್ಸಿನ ಮಗು ವಸ್ತು ಶಾಶ್ವತೆಯನ್ನು ಗುರುತಿಸುವುದಿಲ್ಲವೆಂದು ಪಿಯಾಜೆ ನಿರೂಪಿಸಿರುವುದು ಟೀಕೆಗೆ ಗುರಿಯಾಗಿದೆ. ಪ್ರಯೋಗಾತ್ಮಕವಾಗಿ ಕಂಡು ಕೊಂಡಿರುವುದೇನೆಂದರೆ ಬಟ್ಟೆಯ 'ಕೆಳಗೆ' ವಸ್ತುವನ್ನಿಡುವ ಬದಲು ಪರದೆಯ ಹಿಂದೆ ಇಟ್ಟಾಗ ನಾಲ್ಕು ಅಥವಾ ಐದು ತಿಂಗಳ ಮಗುವೂ ವಸ್ತು ಶಾಶ್ವತೆಯನ್ನು ಕಂಡುಕೊಂಡಿದೆ.

ಆ) ಬೈಲಾರ್‌ಜಿಯಾನ್, ನೀಡ್ಹಾಮ್ ಮುಂತಾದವರು (1987) ಕೈಗೊಂಡ ಅಧ್ಯಯನದಿಂದ ಮಕ್ಕಳು ವಿವಿಧ ಸನ್ನಿವೇಶಗಳಲ್ಲಿ ಭೌತಿಕ ವಸ್ತುಗಳು ಹೇಗೆ ವರ್ತಿಸುತ್ತವೆ ಎಂಬ ಮೂಲ ತಿಳಿವಳಿಕೆಯನ್ನು ಗ್ರಹಿಸಬಲ್ಲರು ಎಂದು ತಿಳಿದುಬಂದಿದೆ. ಉದಾಹರಣೆಗೆ, ಆರೂವರೆ ತಿಂಗಳ ವಯಸ್ಸಿನ ಮಕ್ಕಳು ಕೈಚೀಲ ಧರಿಸಿದ ಕೈಯೊಂದು ವಸ್ತುವೊಂದನ್ನು ಒಂದು ಹಲಗೆಯ ಮೇಲೆ ತಳ್ಳುತ್ತಾ ಹಲಗೆಯ ತುದಿಗೆ ಬಂದಾಗ ಕೈ ತಳ್ಳುವುದನ್ನು ನಿಲ್ಲಿಸಿದ್ದನ್ನು ಘಟನೆಯ ಸಾಧ್ಯತೆಯ ಸನ್ನಿವೇಶವನ್ನಾಗಿ ವೀಕ್ಷಿಸಿದರು. ಘಟನೆಯ ಅಸಾಧ್ಯತೆಯ (impossible event) ಸನ್ನಿವೇಶದಲ್ಲಿ ವಸ್ತುವು ಹಲಗೆಯಿಂದ ಹೊರ ಚಾಚುವಷ್ಟರವರೆಗೆ ತಳ್ಳಲಾಯಿತು. ಮಕ್ಕಳು ಅಸಾಧ್ಯ ಸನ್ನಿವೇಶವನ್ನು ಹೆಚ್ಚು ಸಮಯ ವೀಕ್ಷಿಸಿದರೂ ಅಂದರೆ ಶೂನ್ಯದಲ್ಲಿ (empty space) ವಸ್ತುವನ್ನು ನಿಲ್ಲಿಸಲಾಗದೆಂದು ತಿಳಿದರು. ಇನ್ನೊಂದು ಸನ್ನಿವೇಶದಲ್ಲಿ ಕೈಚೀಲಧರಿಸಿದ ಕೈಯಿಂದ ವಸ್ತುವನ್ನು ಹಾಗೆಯೇ ಬೀಳದಂತೆ ಹಿಡಿದುಕೊಂಡು ಹಲಗೆಯ ತುದಿಯಿಂದ ಹೊರ ಚಾಚಿದ್ದರೂ ಬೀಳದೆ ನಿಂತಿದ್ದನ್ನು ವೀಕ್ಷಿಸಿದರೂ ಮಕ್ಕಳು ಹೆಚ್ಚು ಕಾಲ ನೋಡಲಿಲ್ಲ ಮತ್ತು ಆಶ್ಚರ್ಯ ವ್ಯಕ್ತಪಡಿಸಲಿಲ್ಲ. ಮಕ್ಕಳು ಪಿಯಾಜೆ ತಿಳಿದುಕೊಂಡಿರುವುದಕ್ಕಿಂತ ಭಿನ್ನವಾಗಿ ಕೇವಲ ಮೂರು ನಾಲ್ಕು ತಿಂಗಳಿರುವಾಗಲೇ ವಸ್ತುಗಳ ಭೌತಿಕ ಸ್ವಭಾವದ ಬಗ್ಗೆ ತಿಳಿಯಬಲ್ಲರು ಎಂಬ ಹೊಸ ವಿಚಾರ ಈ ಅಧ್ಯಯನದಿಂದ ತಿಳಿದುಬರುತ್ತದೆ.

ಅಹಂಕೇಂದ್ರತ್ವದಿಂದಾಗಿ 6 ಅಥವಾ 7 ವರ್ಷದ ಮಕ್ಕಳೂ ತಾವು ಪ್ರಪಂಚವನ್ನು ತಿಳಿದುಕೊಳ್ಳುವುದಕ್ಕಿಂತ ಭಿನ್ನವಾಗಿ ಬೇರೆಯವರು ತಿಳಿಯಲಾರರು ಎಂಬುದನ್ನು ಕಂಡುಕೊಂಡ ಪಿಯಾಜೆರವರ ಅಭಿಪ್ರಾಯವನ್ನು ಕೆಲವು ಮನೋವಿಜ್ಞಾನಿಗಳು ಟೀಕಿಸಿದ್ದಾರೆ. (ಬೊರ್ಕ್, ನ್ಯೂಕೊಂಬೆ ಮತ್ತು ಹಟನ್ ಲೋಚರ್‌ರವರು ಟೀಕಿಸಿದ್ದಾರೆ.) ಮೂರು ಅಥವಾ ನಾಲ್ಕು ವರ್ಷದ ಮಕ್ಕಳೇ ನಿಖರವಾಗಿ ಬೇರೆಯವರು ಭಿನ್ನವಾಗಿ ತಿಳಿಯಬಲ್ಲರೆಂದು ಅಧ್ಯಯನದ ಆಧಾರದಿಂದ ಸಾಬೀತು ಮಾಡಿದ್ದಾರೆ. ಒಂದೂವರೆ ವರ್ಷದ ಮಕ್ಕಳೂ ಸ್ವಲ್ಪ ಮಟ್ಟಿಗೆ ಇತರರ ವೀಕ್ಷಣೆಯ ಭಿನ್ನತೆಯನ್ನು ತಿಳಿಯಬಲ್ಲರೆಂದು (schickedanz et.al 1998) ಕಂಡುಕೊಂಡಿದ್ದಾರೆ.

(ಇ) ಸಂಖ್ಯೆಗಳ ಮತ್ತು ಗಾತ್ರದ ಸ್ಥಾಯಿತ್ವದ ಬಗ್ಗೆ (conservation) ಅರಿವು ಪಿಯಾಜೆರವರು ಗುರುತಿಸಿರುವ ವಯಸ್ಸಿಗಿಂತ ಮೊದಲೇ ಕಾಣಿಸಿಕೊಳ್ಳುತ್ತದೆ (Mandler, Baver etal 1991) ಎಂದು ಮನೋವಿಜ್ಞಾನಿಗಳು ತೋರಿಸಿದ್ದಾರೆ.

ಪಿಯಾಜೆ ಸೂಚಿಸಿದ ಹಂತಗಳು ಆಲೋಚನೆಯ ಏಕೀಕೃತ ಸಂರಚನೆಯಾಗಿದ್ದು, ಆಯಾ ಹಂತದಲ್ಲಿ ವಿವಿಧ ಅಂಶಗಳು ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಮಕ್ಕಳು ಒಂದು ಹಂತ ಮುಗಿಸಿದ ನಂತರವೇ ಇನ್ನೊಂದು ಹಂತಕ್ಕೆ ಕಾಲಿಡಬೇಕು. ಆದರೆ ಅನೇಕ ಸಂಶೋಧನಾ ಅಧ್ಯಯನಗಳು ತಿಳಿಸುವಂತೆ ಸಂಜ್ಞಾನಾತ್ಮಕ ಬದಲಾವಣೆಗಳು ಬಹುತೇಕ ಕಾಲಕ್ರಮೇಣ ಆಗುವುವು. ಎಲ್ಲೋ ಅಪರೂಪವಾಗಿ ಒಂದು ಸಾಮರ್ಥ್ಯ ಒಂದು ಹಂತದಲ್ಲಿ ಸಂಪೂರ್ಣ ಇಲ್ಲವಾಗಿದ್ದು ಮತ್ತೆ ಇನ್ನೊಂದು ಹಂತದಲ್ಲಿ ತಕ್ಷಣವೇ ಬರುವಂತದ್ದಾಗಿರುವುದು. ಈ ಬದಲಾವಣೆಗಳೆಲ್ಲ ಬಹುಮಟ್ಟಿಗೆ ವರ್ತನಾ ವಲಯ ಸಂಬಂಧಿಯಾದುವು. ಕೆಲವು ವಿಧದ ಆಲೋಚನೆಗಳಲ್ಲಿ ಮಕ್ಕಳು ಮೇಲ್ಮಟ್ಟದಲ್ಲಿದ್ದು ಇತರ ಆಲೋಚನೆಗಳಲ್ಲಿ ಕೆಳಮಟ್ಟದಲ್ಲಿರಬಹುದು. (Gopnik-1996)

(ಉ) ಸಂಜ್ಞಾನಾತ್ಮಕ ವಿಕಾಸದ ಮೇಲೆ ಸಾಮಾಜಿಕ ಅಂಶಗಳ ಪ್ರಭಾವ: ಪಿಯಾಜೆರವರು ಪ್ರಪಂಚದ ಅರ್ಥಪೂರ್ಣ ಮತ್ತು ಪ್ರಯತ್ನ ಪೂರ್ವಕ ಅರಿವಿನೊಂದಿಗೆ ಪಕ್ವತೆಯ ಅಂಶಗಳಿಂದ ಸಂಜ್ಞಾನ ವಿಕಾಸವಾಗುವುದೆಂದು ವಾದಿಸಿರುವುದನ್ನು ಸಾಮಾಜಿಕ–ಸಾಂಸ್ಕೃತಿಕ ಸಿದ್ಧಾಂತವು ಟೀಕಿಸಿದೆ. (ಈ ಹೊಸ ಸಿದ್ಧಾಂತವನ್ನು ರೂಪಿಸಿದವರು ಲೆವ್ ವೈಗೋಸ್ಕಿ (Lev Vygotsky-1987). ಶಾಲಾ ವಯಸ್ಸಿನ ಮಕ್ಕಳಲ್ಲಿ ಅಂತರ್ ವ್ಯಕ್ತಿ ಸಂಬಂಧ, ಸಾಮಾಜಿಕ ಹಿನ್ನೆಲೆ ಮಹತ್ವದ ಪಾತ್ರ ವಹಿಸುತ್ತವೆ ಎಂದು ವಾಗೋಸ್ಕಿ ಅಭಿಪ್ರಾಯ ಪಡುತ್ತಾರೆ. ಮಕ್ಕಳು ಯಾರ ಸಹಾಯವೂ ಇಲ್ಲದೆ ಸಾಧಿಸುವ ತಮ್ಮ ವಾಸ್ತವ ವಿಕಾಸಮಟ್ಟಕ್ಕಿಂತ (Level of Actual Development) (LPD) ಮುಂದಕ್ಕೆ ತಮ್ಮ ಮೂಲ ಸತ್ವದ ವಿಕಾಸದ ಹಂತವನ್ನು (Level of Potential Development (LPD)ಹಿರಿಯರ ಮಾರ್ಗದರ್ಶನದಿಂದ ಸಾಧಿಸಬಲ್ಲರು. ಈ ಎರಡೂ ಹಂತಗಳ ವಿಕಾಸ ಮಟ್ಟಗಳ ವ್ಯತ್ಯಾಸವನ್ನು ಸಾಮೀಪ್ಯ ವಿಕಾಸದ ವಲಯ (Zone of Proximal Development) (LPD) ಎಂದು ವೈಗೋಸ್ಕಿ ಹೆಸರಿಸಿದ್ದಾರೆ.

ಶಿಕ್ಷಕ ಅಥವಾ ಹಿರಿಯರು ನೀಡುವ ಸಾಮಾಜಿಕ ಅನ್ಯೋನ್ಯ ಕ್ರಿಯೆಯು ವಿದ್ಯಾರ್ಥಿಗೆ ವ್ಯಕ್ತಿತ್ವ ಮಾದರಿ (model)ಯನ್ನು ಒದಗಿಸಬಹುದು. ಇದು ಪರಸ್ಪರ ಬೋಧೆಯೂ ಆಗಬಹುದು. ಇದಲ್ಲದೆ ಹಿರಿಯರು, ಶಿಕ್ಷಕರು, ವಿದ್ಯಾರ್ಥಿಗಳು ಅನ್ಯೋನ್ಯಕ್ರಿಯೆಯಲ್ಲಿ ತೊಡಗಿದಾಗ ಅವರು 'ಆಕೃತಿ ಕಲ್ಪ' (schema) ಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವರು, ಹೊಸ ಕಾರ್ಯಗಳನ್ನು ಮತ್ತು ಹೊಸ ಆಲೋಚನಾ ರೀತಿಗಳನ್ನು ಕಲಿತು – ಪ್ರಾವೀಣ್ಯಗಳಿಸುವಾಗ ಆ ಆಕೃತಿಕಲ್ಪಗಳನ್ನು ವಿದ್ಯಾರ್ಥಿಗಳು ಬಳಸಿಕೊಳ್ಳಬಹುದು. ಇಂತಹ ಸಾಮಾಜಿಕ ಅಂತರ್ ಕ್ರಿಯೆಗಳು ಕಿರಿಯರಿಗೆ ಅವರ ವಾಚನ ಸಾಮರ್ಥ್ಯ, ಆಂತರಿಕ ಹೊಳವು (insight) ಮತ್ತು ಅನುಮಾನಾತ್ಮಕ ಆಲೋಚನೆಗಳಲ್ಲಿ (Inferential thinking) ಸುಧಾರಣೆಗಳನ್ನು ಮೂಡಿಸುವುವು. ಮಕ್ಕಳು ಇತರ ಮಕ್ಕಳಿಂದಲೂ ಕಲಿಯಬಲ್ಲರು – ಸಾಮಾಜಿಕ ಕೌಶಲಗಳಿಂದ ಸಹಪಾಠಿಗಳೊಡನೆ ಹೊಂದಾಣಿಕೆ ಕಲಿಯಬಹುದು. ಸಾಮಾಜಿಕ ಕೌಶಲವಿರುವ ಮಕ್ಕಳು ಇತರರು ಆಲೋಚಿಸುವ ಬಗೆಯನ್ನು ಅರಿತುಕೊಳ್ಳಬಲ್ಲರು. ಇದು ಸಂಜ್ಞಾನ ವಿಕಾಸದ ಮುಖ್ಯ ಅಂಶವೂ ಆಗಿದೆ.

Digitised by Bharatavani, CIIL

ಪಿಯಾಜ್ಞೆಯವರ ಅಧ್ಯಯನಕ್ಕೂ ಮೀರಿ ಮಕ್ಕಳ ಮನಸ್ಸಿನ ಅಧ್ಯಯನ ಬೆಳೆದಿದೆ ಮತ್ತು ಬೆಳೆಯುತ್ತಿದೆ, ಮಾಹಿತಿ ಸಂಸ್ಕರಣ ದೃಷ್ಟಿಯಿಂದಲೂ ಸಂಶೋಧನೆ ಬೆಳೆಯುತ್ತಿದೆ.

ಪಿಯಾಜ್ಞೆಯವರ ಅಧ್ಯಯನವು ಮನಶ್ಶಾಸ್ತ್ರದ ಇತಿಹಾಸದಲ್ಲಿ ದೈತ್ಯವಾದ ಪ್ರಭಾವವನ್ನು ಬೀರಿದೆ. ಈಚಿನ ಸಂಜ್ಞಾನ ಮನೋವಿಜ್ಞಾನಿಗಳು ತಮ್ಮ ಸಂಶೋಧನೆಗಳಲ್ಲಿ, ಪಿಯಾಜ್ಞೆಯವರು ಪರಿಗಣಿಸದಿದ್ದ ವಿಚಾರಗಳನ್ನು (topics) ದೃಷ್ಟಿಕೋನಗಳನ್ನು ಕಂಡುಕೊಂಡಿದ್ದಾರೆ. ಅಂತಹ ಅಧ್ಯಯನಗಳಲ್ಲಿ ಮನಸ್ಸಿನ ಸಿದ್ಧಾಂತವು (theory of mind) ಮಕ್ಕಳು ತಮ್ಮ ಮತ್ತು ಇತರರ ಮಾನಸಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವಿಕೆಯನ್ನು ಒಳಗೊಂಡಿದೆ. ಇದು ಮಾಹಿತಿ ಸಂಸ್ಕರಣೆ ದೃಷ್ಟಿಕೋನವನ್ನು ಬಳಸಿಕೊಂಡು ಮಾನಸಿಕ ವಿಕಾಸದ ವಿವಿಧ ಅಂಶಗಳನ್ನು ಅಧ್ಯಯನ ಮಾಡಿದೆ.

### ಮನಸ್ಸನ್ನು ಕುರಿತ ಸಿದ್ಧಾಂತ : ಆಲೋಚನೆಯ ಬಗ್ಗೆ ಆಲೋಚನೆ (thinking about thinking)

ವಯಸ್ಕರಾದ ನಾವು, ಆಲೋಚನೆಗಳ ಬಗ್ಗೆ ಮತ್ತು ಆಲೋಚನಾ ಪ್ರಕ್ರಿಯೆಯ ಬಗ್ಗೆ ನಾಜೂಕಾದ ತಿಳಿವಳಿಕೆಯನ್ನು ಹೊಂದಿದ್ದೇವೆ. ಕಾಲಕ್ರಮದಲ್ಲಿ ನಮ್ಮ ಆಲೋಚನೆಗಳು ಬದಲಾಗುವುವು ಇಲ್ಲವೇ ನಮ್ಮ ಆಲೋಚನೆಗಳು ತಪ್ಪೆಂದು ತಿಳಿಯುವೆವು. ಹಾಗೆಯೇ ಇತರರೂ ತಮ್ಮ ಆಲೋಚನೆಗಳಿಂದ ಭಿನ್ನವಾಗಿ ಆಲೋಚಿಸುತ್ತಾರೆ ಅಥವಾ ಅವರ ಆಲೋಚನೆಗಳನ್ನು ನಮ್ಮಿಂದ ಮರೆ ಮಾಚುತ್ತಾರೆ ಎಂದೂ ನಾವು ಬಲ್ಲೆವು. ಒಂದೇ ಮಾಹಿತಿ ಬಗ್ಗೆ ಇತರರು ನಮ್ಮಿಂದ ಭಿನ್ನವಾದ ತೀರ್ಮಾನ ಅಥವಾ ಮುಕ್ತಾಯ (ಅಂತಿಮ ಹೇಳಿಕೆ) ನೀಡಬಲ್ಲರೆಂದು ನಾವು ತಿಳಿದಿದ್ದೇವೆ. ಸಾರಸಂಗ್ರಹವಾಗಿ ಹೇಳುವುದಾದರೆ ನಾವು ಮತ್ತು ಇತರರು ಹೇಗೆ ಆಲೋಚಿಸುತ್ತೇವೆ/ ಆಲೋಚಿಸುತ್ತಾರೆ ಎಂಬ ಬಗ್ಗೆ ಸ್ವಲ್ಪಮಟ್ಟಿಗೆ ಅರಿತಿದ್ದೇವೆ. ಸಂಜ್ಞಾನ ವಿಕಾಸದ ಬಗ್ಗೆ ಇತ್ತೀಚೆಗೆ ಕೈಗೊಂಡ ಸಂಶೋಧನೆಗಳಿಂದ ಪ್ರಕಟವಾಗಿರುವ ಅಚ್ಚರಿಯ ಫಲಿತಾಂಶಗಳು ಈ ಕೆಳಗಿನಂತಿವೆ.



ಮೂಲ: Baron R.A. (5th Edition), Psychology, Prentice-Hall Pvt. Ltd., New Delhi (2007), P 305

1. ನಾಲ್ಕು ವರ್ಷ ವಯಸ್ಸಿನ ನಂತರದ ಮಕ್ಕಳು ಇತರರು ತಮಗಿಂತ ಭಿನ್ನವಾಗಿ ನಂಬಿಕೆಗಳನ್ನು ಹೊಂದಿರಬಹುದು ಮತ್ತು ಆ ನಂಬಿಕೆಗಳು ತಪ್ಪಾಗಿರಬಹುದೆಂದು ತಿಳಿಯಬಹುದು ಎಂದು ಅರ್ಥಮಾಡಿಕೊಳ್ಳಬಲ್ಲರು. ಇದನ್ನು ಪ್ರತಿಪಾದಿಸಲು ಒಂದು ಸಂಶೋಧನೆಯನ್ನು ಕೈಗೊಂಡಿದ್ದಾರೆ.

ಕಥೆಯ ನಾಯಕ (ಚಿತ್ರ 1) ಕ್ಯಾಂಡಿಯನ್ನು X ಸ್ಥಾನದಲ್ಲಿಟ್ಟು ಹೊರಗೆ ಹೋಗುತ್ತಾನೆ (ಚಿತ್ರ 2) ಅವನ ತಾಯಿ ಕ್ಯಾಂಡಿಯನ್ನು ತೆಗೆದು Y ನಲ್ಲಿಡುತ್ತಾಳೆ (ಚಿತ್ರ 3, 4, 5). ನಾಯಕ ವಾಪಸ್ ಬಂದಾಗ ಕ್ಯಾಂಡಿಯನ್ನು ಎಲ್ಲಿ ಹುಡುಕುತ್ತಾನೆ ಎನ್ನುವುದೇ ಪ್ರಶ್ನೆ (ಚಿತ್ರ 6).

ಮೇಲಿನ ಚಿತ್ರಸರಣಿಯ ಕತೆಯನ್ನು ಮೂರು ವರ್ಷದ ಎಳೆಯ ಮಕ್ಕಳಿಗೆ ಹೇಳಿದರೆ, ಕತೆಯ ಪಾತ್ರಧಾರಿಯು ತನ್ನ ತಾಯಿ ಕ್ಯಾಂಡಿಯನ್ನು ಎಲ್ಲಿಟ್ಟಿರಬಹುದೆಂದು ಊಹಿಸುವರೇ ಹೊರತು, ಕತೆಯ ನಾಯಕನು ಏನು ತಿಳಿದಿರುವವನು ಎಂಬುದು, ತಾವು ತಿಳಿದಿರುವುದಕ್ಕಿಂತ ಭಿನ್ನವಿರಬಹುದೆಂದು ಆ ಮಕ್ಕಳು ತಿಳಿಯಲಾರರು. ಅಂದರೆ ಆ ಕತೆಯ ನಾಯಕ ತಪ್ಪು ನಂಬಿಕೆ ಹೊಂದಿದ್ದಾನೆ ಎಂದು ತಿಳಿಯಲಾರರು. ನಾಲ್ಕು ವರ್ಷದ ಮಕ್ಕಳು ಕತೆಯ ಹುಡುಗ ಎಲ್ಲಿ ಕ್ಯಾಂಡಿಯನ್ನು ಇಟ್ಟನೋ ಅಲ್ಲಿಯೇ ಹುಡುಕಬಹುದೆಂದು ಊಹಿಸುವರು. ಹೀಗೆ ತಾವು ಮತ್ತು ಇತರರು ಭಿನ್ನವಾಗಿ ಆಲೋಚಿಸಲು ಸಾಧ್ಯವೆಂಬುದನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಪ್ರಕಟಿಸುತ್ತಾರೆ.

II ಕಾಲ ಕಳೆದಂತೆ ಮಕ್ಕಳು ಹೊಂದಿರುವ ಮನಸ್ಸಿನ ಸಿದ್ಧಾಂತವು ಬಹು ನಾಜೂಕಾಗುತ್ತಾ ಹೋಗುವುದು.

- ಎರಡು ಅಥವಾ ಮೂರು ತಿಂಗಳ ಮಕ್ಕಳು ವಯಸ್ಕನೊಬ್ಬ ತನ್ನತ್ತ ಇಲ್ಲವೇ ಬೇರೆತ್ತಲೋ ನೋಡುತ್ತಿದ್ದಾನೋ ಎಂಬುದನ್ನು ತಿಳಿಯಬಲ್ಲರು (Veera & Johnson 1995)

- ಎರಡು ವರ್ಷದ ಮಕ್ಕಳು, ವ್ಯಕ್ತಿಯೊಬ್ಬ ದಿಟ್ಟಿಸಿ ನೋಡುವುದನ್ನು ಆಧರಿಸಿ ಆ ವ್ಯಕ್ತಿ ಏನನ್ನು ನೋಡುತ್ತಿದ್ದಾನೆ ಅಥವಾ ಏನನ್ನು ಆಶಿಸುತ್ತಿದ್ದಾನೆ ಎಂಬುದನ್ನು ನಿರ್ಧರಿಸಬಲ್ಲರು. (Baron-etal 1995) ಎರಡು ಅಥವಾ ಮೂರು ವರ್ಷದ ಮಕ್ಕಳು ದೂರದರ್ಶನ ಪರದೆಯ ಮೇಲೆ ವಿದೂಷಕನ ಬಿಂಬವನ್ನು ವೀಕ್ಷಿಸಿ, ಹರಡಿದ್ದ ವಸ್ತುಗಳಲ್ಲಿ ಆ ವಿದೂಷಕನಿಗೆ ಯಾವ ವಸ್ತು ಬೇಕಾಗಿದೆ ಎಂಬುದನ್ನು ಖಚಿತವಾಗಿ ಗುರುತಿಸಬೇಕಾಗಿತ್ತು. ಆ ಎಳೆಯ ಮಕ್ಕಳು ವಿದೂಷಕನಿಗೆ ಏನು ಬೇಕಾಗಿತ್ತೆಂಬುದನ್ನು ಹೇಳಬಲ್ಲವರಾದರು. ಆದರೆ ಮೂರು ವರ್ಷದ ಮಕ್ಕಳು ಎರಡು ವರ್ಷದ ಮಕ್ಕಳಿಗಿಂತ ಅತಿ ನಿಖರವಾದ ಉತ್ತರ ನೀಡಿದರು. (ಅಂದರೆ ಎರಡು ವರ್ಷದ ಮಕ್ಕಳು ಯಶಸ್ವಿಯಾಗಿ ಒಬ್ಬ ವ್ಯಕ್ತಿ ಏನು ವಸ್ತುವನ್ನು ಪಡೆಯಲಾಶಿಸಿದ್ದಾನೆ ಎಂಬುದನ್ನು ಅವನ ದೃಷ್ಟಿಯನ್ನು ಆಧರಿಸಿ ನಿರ್ಧರಿಸಬಲ್ಲರು. ಮೂರು ವರ್ಷದ ಮಕ್ಕಳು ಹೆಚ್ಚಿನ ಸುಳುಹುಗಳ ಸಹಾಯದಿಂದ ಇನ್ನೂ ಉತ್ತಮ ಪ್ರತಿಕ್ರಿಯೆ ತೋರಿಸಿದರು.

III ಎಳೆಯ ಮಕ್ಕಳು ಇತರರ ಆಲೋಚನೆಗಳನ್ನು ತಿಳಿಯಬಲ್ಲವರಾದರೂ ಒಬ್ಬ ವ್ಯಕ್ತಿ ಯಾವಾಗ ಆಲೋಚನೆಗೆ ತೊಡಗುತ್ತಾನೆ ಎಂಬುದನ್ನು ಗುರುತಿಸುವಲ್ಲಿ ನಿಖರತೆಯನ್ನು ತೋರರು. ಇದಕ್ಕೆ ಕಾರಣ ಆಲೋಚನೆಯು ಸ್ವಂತವಾದ (ಖಾಸಗಿಯಾದ) ಒಂದು ಮಾನಸಿಕ ಸಂಗತಿ ಎಂದು ಕೆಲವು ಮನೋವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. (Flavell, Green-1995) ಎಳೆಯ ಮಕ್ಕಳು ಹೊಸ ಜ್ಞಾನವನ್ನು ಪಡೆದಾಗ ಆ ಜ್ಞಾನದ ಅರಿವಿದ್ದರೂ

Digitised by Bharatavani, CIIL

ಆ ಜ್ಞಾನದ ಮೂಲದ ಬಗ್ಗೆ ಅಸ್ಪಷ್ಟತೆ ಹೊಂದಿರುತ್ತಾರೆ. ಅಂದರೆ ಹೇಗೆ ಆ ಜ್ಞಾನ ಗಳಿಸಿದರೆಂದು ತಿಳಿಯರು.

IV **ಸಂಜ್ಞಾನ ವಿಕಾಸ–ಮಾಹಿತಿ / ಸುದ್ದಿ ಸಂಸ್ಕರಣೆ ದೃಷ್ಟಿಕೋನ:** ಪಿಯಾಜೆ ಹೇಳಿರುವುದಕ್ಕಿಂತ ಆಳವಾಗಿ ಅಧ್ಯಯನಗಳು ನಡೆದು, ಸಂಜ್ಞಾನ ವಿಕಾಸವನ್ನು ಮಾಹಿತಿ ಸಂಸ್ಕರಣೆ ದೃಷ್ಟಿಕೋನ ಅನ್ವಯಿಸಿ ವಿವರಿಸಲಾಗಿದೆ. ಸಂಜ್ಞಾನದ ಮೂಲ ಅಂಶಗಳಾದ ಅವಧಾನ (attention) ಸ್ಮೃತಿ (memory) ಮತ್ತು ಪರಾಸಂಜ್ಞಾನ (metacognition) (ಆಲೋಚನೆಯ ಬಗ್ಗೆಯೇ ಆಲೋಚಿಸುವುದು ಮತ್ತು ಯೋಜಿತ ರೀತಿಯಲ್ಲಿ ನಮ್ಮ ಸಂಜ್ಞಾನ ಸಾಮರ್ಥ್ಯಗಳನ್ನು ಬಳಸುವುದು ಮತ್ತು ನಿಯಂತ್ರಿಸುವುದು) ಇವುಗಳನ್ನು ತಿಳಿಯುವುದರ ಮೂಲಕ ಸಂಜ್ಞಾನ ವಿಕಾಸವನ್ನು ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಮಕ್ಕಳು ಬೆಳೆಯುತ್ತಾ ಹೋದಂತೆ ಮಾಹಿತಿಯನ್ನು ಕ್ರಿಯಾತ್ಮಕ ಸ್ಮೃತಿ (ಅಲ್ಪಾವಧಿ)ಯಲ್ಲಿ ಉಳಿಸಿಕೊಳ್ಳಲು ಪರಿಣಾಮಕಾರಿ ಯೋಜನೆಗಳನ್ನು ಮಾಡಿಕೊಳ್ಳುತ್ತಾರೆ. ಐದು ಅಥವಾ ಆರು ವರ್ಷದವರು ವಯಸ್ಕರಿಗಿಂತ ಕಡಿಮೆ ಪುನರಾವರ್ತಿಸುವಿಕೆಯನ್ನು (rehearsal) ಯನ್ನು ಬಳಸಿಕೊಳ್ಳುತ್ತಾರೆ. ಮಕ್ಕಳು ಎಂಟು ವರ್ಷದವರಾಗುವ ವೇಳೆಗೆ ಇದನ್ನು ಇನ್ನೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುವರು. ದೊಡ್ಡ ಮಕ್ಕಳು ತಮ್ಮಲ್ಲಿರುವ ಜ್ಞಾನಕ್ಕೆ ಹೊಸ ಜ್ಞಾನವನ್ನು ಸೇರಿಸಿಕೊಳ್ಳುವಲ್ಲಿ ಕಿರಿಯ ಮಕ್ಕಳಿಗಿಂತ ಹೆಚ್ಚು ಸಮರ್ಥರಾಗಿರುತ್ತಾರೆ.

ಹಾಗೆಯೇ ಮಕ್ಕಳು ತಮ್ಮ ಅವಧಾರಣೆಯನ್ನು ಕೇಂದ್ರೀಕರಿಸಿಕೊಳ್ಳಲು ಕ್ರಮೇಣ ಪರಿಣಾಮಕಾರಿ ಯೋಜನೆಗಳನ್ನು ಬಳಸುತ್ತಾರೆ. ಹಾಗೆಯೇ ಸಮಸ್ಯೆ ಪರಿಹಾರ ಪ್ರಕ್ರಿಯೆಯನ್ನು ನಿಯಂತ್ರಿಸುವುದು ಮತ್ತು ನಡೆಸುವುದು ಹೇಗೆ ಮತ್ತು ಸ್ಮೃತಿಯಲ್ಲಿಡುವುದು ಹೇಗೆ ಎಂಬುದನ್ನು ಹೆಚ್ಚು ಹೆಚ್ಚು ಪರಿಣಾಮಕಾರಿಗೊಳಿಸಿಕೊಳ್ಳುತ್ತಾ ಹೋಗುವರು.

– ಕೆ.ಆರ್.ನಾ.

## ಸಮಾಜಮಿತಿ ತಂತ್ರ

ಒಂದು ಸಮಾಜ, ಸಮುದಾಯ, ಗುಂಪು, ಶಾಲೆ ಇನ್ನಿತರ ಯಾವುದೇ ಸಾಮಾಜಿಕ ಸನ್ನಿವೇಶದಲ್ಲಿ ಜೀವಿಸುವಾಗ ಒಬ್ಬ ವ್ಯಕ್ತಿಯು ಇತರೇ ವ್ಯಕ್ತಿಗಳೊಡನೆ ನಿಶ್ಚಯವಾಗಿ ಸಂಪರ್ಕಕ್ಕೆ ಬರುತ್ತಾನೆ. ಹಾಗೆ ಸಂಪರ್ಕಕ್ಕೆ ಬಂದಾಗ ಆ ಗುಂಪಿನ ಸದಸ್ಯರ ನಡುವೆ ಯಾವುದಾದರೊಂದು ರೀತಿಯ ಸಂಬಂಧವೇರ್ಪಡುವುದು ಖಚಿತ. ಕೆಲವು ವ್ಯಕ್ತಿಗಳ ನಡುವೆ ಅತಿ ಮಧುರ ಬಾಂಧವ್ಯ ಏರ್ಪಟ್ಟರೆ, ಇನ್ನಿತರ ವ್ಯಕ್ತಿಗಳ ನಡುವೆ ಸಾಧಾರಣ ಮಟ್ಟದ ಸಂಬಂಧ ಏರ್ಪಟ್ಟಿರುತ್ತದೆ. ಹಾಗೆಯೇ ಕೆಲ ವ್ಯಕ್ತಿಗಳು ಗುಂಪಿನ ಇತರರಿಗಿಂತ ಹೆಚ್ಚು ಹೆಸರುವಾಸಿಯಾದರೆ ಇನ್ನೂ ಕೆಲವರು ಯಾರೊಂದಿಗೂ ಬೆರೆಯದೆ ಏಕಾಂಗಿಗಳಾಗಿರುತ್ತಾರೆ.

ಹೀಗೆ ಒಂದು ಸಮೂಹದ ಸದಸ್ಯರು ಪರಸ್ಪರ ಹೊಂದಿರುವ ಒಲವು ಮತ್ತು ತಿರಸ್ಕಾರ, ಗುಂಪಿನ ಪ್ರತಿಯೊಬ್ಬ ಸದಸ್ಯನ ಜನಪ್ರಿಯತೆ ಹಾಗೂ ಪ್ರತಿಯೊಬ್ಬ ಸದಸ್ಯ ಇತರರಿಂದ ಎಷ್ಟರ ಮಟ್ಟಿಗೆ ಸ್ವೀಕರಿಸಲ್ಪಟ್ಟಿದ್ದಾನೆ ಎನ್ನುವ ಅಂತರ್ ವ್ಯಕ್ತಿ ಸಂಬಂಧವನ್ನು ಅಳತೆ ಮಾಡುವ ತಂತ್ರವೇ 'ಸಮಾಜಮಿತಿ ತಂತ್ರ'. ಸಮಾಜ ಮಿತಿ ಒಂದು ಸಮೂಹದ ರಚನೆಯನ್ನು ವಿಶ್ಲೇಷಿಸಿ ಕ್ರಮಬದ್ಧವಾಗಿ ಅಧ್ಯಯನ ನಡೆಸುವ ತಂತ್ರವಾಗಿದೆ.

ಜೇಕಬ್ ಮೊರೆನೊ

Sociometry (ಸಮಾಜಮಿತಿ) ಎಂಬ ಪದವು ಲ್ಯಾಟಿನ್ ಭಾಷೆಯ Socius (ಸೋಶಿಯಸ್)ನಿಂದ ಬಂದುದಾಗಿದೆ. ಇದರ ಅರ್ಥ 'ಸಂಗಾತಿ' ಹಾಗೂ Metrum (ಮೆಟ್ರಮ್) ಎಂದರೆ ಅಳತೆ (Measure) ಮಾಡುವುದು ಎಂಬುದಾಗಿದೆ. ಜೇಕಬ್ ಲೆವಿ ಮೊರೆನೋ ಎಂಬುವವರು Sociometry ಎಂಬ ಪದವನ್ನು ಬಳಕೆಗೆ ತಂದವರು. ಅವರು 1932 ರಿಂದ 38ರ ವರೆಗೆ ನ್ಯೂಯಾರ್ಕ್‌ನ ಒಂದು ಬಾಲಕಿಯರ ಶಾಲೆಯಲ್ಲಿ ಸಮಾಜಮಿತಿ ತಂತ್ರವನ್ನು ಮೊಟ್ಟಮೊದಲಿಗೆ ದೀರ್ಘಕಾಲ ಬಳಸಿ ಅಧ್ಯಯನ ನಡೆಸಿದ್ದಾರೆ. 1934ರಲ್ಲಿ ಪ್ರಕಟಿಸಿದ Who shall survive? ಎನ್ನುವ ತಮ್ಮ ಗ್ರಂಥದಲ್ಲಿ ಮೊರೇನೋ ಸಮಾಜಮಿತಿ ತಂತ್ರವನ್ನು ವಿವರಿಸಿದರು. ಜೇಕಬ್ ಮೊರೆನೋರವರು ಸಮಾಜ ಮಿತಿಯನ್ನು "ಒಂದು ಗುಂಪಿನ ಉಗಮ ಮತ್ತು ಸಂಘಟನೆಯ ಬಗೆಗೆ ಸಂಶೋಧನೆ ನಡೆಸುವ ಹಾಗೂ ಆ ಗುಂಪಿನಲ್ಲಿ ಒಬ್ಬ ವ್ಯಕ್ತಿಯ ಸ್ಥಾನವನ್ನು ಗುರುತಿಸುವ ಪರಿಶೀಲನೆ" ಎಂಬುದಾಗಿ ವಿವರಿಸುತ್ತಾರೆ.

ಅಂತರ್ ಸಂಬಂಧಗಳಲ್ಲಿ ವ್ಯಕ್ತಿಗಳು ಯಾವ ರೀತಿಯಾಗಿ ಪಾರಸ್ಪರಿಕವಾಗಿ ಆಯ್ಕೆ ಮಾಡುತ್ತಾರೆ ಎಂಬುದರ ಆಧಾರದ ಮೇಲೆ ಸಮಾಜಮಿತಿಯು ಅವಲಂಬಿತವಾಗಿದೆ. ವ್ಯಕ್ತಿಗಳು ಒಟ್ಟಾಗಿ ಸೇರಿದಾಗ, ಅವರು ಎಲ್ಲಿ ಕುಳಿತುಕೊಳ್ಳುತ್ತಾರೆ, ನಿಂತುಕೊಳ್ಳುತ್ತಾರೆ ಯಾರೊಡನೆ ಮಾತನಾಡುತ್ತಾರೆ, ಯಾರೊಡನೆ ಊಟ ಮಾಡುತ್ತಾರೆ, ಯಾರು ಗುಂಪಿನಲ್ಲಿ ಕೇಂದ್ರಬಿಂದುವಾಗಿರುತ್ತಾರೆ, ಯಾರು ಗುಂಪಿನಲ್ಲಿ ಯಾರೊಡನೆಯೂ ಬೆರೆಯುವುದಿಲ್ಲ ಮುಂತಾದ ಅನೇಕ ವಿಷಯಗಳು ಬೆಳಕಿಗೆ ಬರುತ್ತವೆ.

ಒಂದು ಸಮೂಹದ ಗುಂಪಿನ ಸದಸ್ಯರ ಸಾಮರ್ಥ್ಯ, ಅಭಿರುಚಿ, ವ್ಯಕ್ತಿಭಿನ್ನತೆ, ಆಸಕ್ತಿ, ಜನಪ್ರಿಯತೆ, ಪ್ರತ್ಯೇಕತೆ ಮುಂತಾದ ವಿಷಯಗಳ ಬಗೆಗೆ ಪರೀಕ್ಷೆ ಕೈಗೊಳ್ಳುವ ಈ ಸಮಾಜಮಿತಿ ತಂತ್ರ ಒಬ್ಬ ವ್ಯಕ್ತಿ ತನ್ನ ಗುಂಪಿನ ಸದಸ್ಯರೊಂದಿಗೆ ಹೇಗೆ ವರ್ತಿಸುತ್ತಾನೆ, ಹೇಗೆ ಹೊಂದಿಕೊಂಡಿರುತ್ತಾನೆ, ಆತನ ನಾಯಕತ್ವ ಅಥವ ಜನಪ್ರಿಯತೆ ಹೇಗಿದೆ ಎಂಬುದನ್ನು ವಿವರವಾಗಿ ತಿಳಿಸಿಕೊಡುತ್ತದೆ.

ಸಮೂಹದ (ತರಗತಿ, ಶಾಲೆ, ವಸತಿಗೃಹ, ಉದ್ಯಮ ಇತ್ಯಾದಿ) ಪ್ರತಿ ಸದಸ್ಯರಿಗೂ ತನ್ನ ಗುಂಪಿಗೆ ಸಂಬಂಧಿಸಿದ ಕೆಲವು ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ಮೂರು ಆಯ್ಕೆಗಳನ್ನು ನೀಡಿ ಅವುಗಳಲ್ಲೊಂದನ್ನು ಆಯ್ಕೆ ಮಾಡಲು ಸೂಚಿಸಲಾಗುವುದು. ಉದಾಹರಣೆಗೆ "ನಿಮ್ಮ ತರಗತಿಯಲ್ಲಿ ಯಾರೊಂದಿಗೆ ನೀನು ಹೆಚ್ಚು ಮಾತನಾಡಲು ಇಷ್ಟಪಡುತ್ತೀಯೆ?" "ನಿಮ್ಮ ತರಗತಿಯ ನಾಯಕನ ಸ್ಥಾನಕ್ಕೆ ಯಾರ ಹೆಸರನ್ನು ಸೂಚಿಸುವೆ?" "ನೀವು ಯಾರೊಂದಿಗೆ ಗುಂಪು ಚಟುವಟಿಕೆಯಲ್ಲಿ ತೊಡಗಲು ಇಚ್ಛಿಸುವೆ?" "ನಿನ್ನ ತರಗತಿಯಲ್ಲಿ ಅತಿ ಹೆಚ್ಚು ಏಕಾಂಗಿ ಯಾರೆಂದು ಗುರುತಿಸುವೆ?" ಮುಂತಾದ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಿ ವ್ಯಕ್ತಿಗಳ ಪರಸ್ಪರ ಆಯ್ಕೆಗಳನ್ನು ಲೆಕ್ಕ ಮಾಡಿ ಅವುಗಳ ಆಧಾರದ ಮೇಲೆ ನಕ್ಷೆಯೊಂದನ್ನು ರೂಪಿಸಲಾಗುತ್ತದೆ. ಈ ನಕ್ಷೆಗೆ ಸಮಾಜ ಆಲೇಖ (Sociogram) ಎಂದು ಹೆಸರು.

**ಸಮಾಜ ಮಾತೃಕೆ (Socio Matrix):** ಇದು ಸಮಾಜದ ಸದಸ್ಯರು ನೀಡಿದ ಆಯ್ಕೆಗಳ ಆಧಾರದ ಮೇಲೆ ರಚಿಸಲಾಗುವ ಒಂದು

Digitised by Bharatavani, CIIL

ಆಯತಾಕಾರದ ತಾಲಿಕೆಯಾಗಿದೆ. ಇದರಲ್ಲಿ ಕಂಬಸಾಲುಗಳು ಮತ್ತು ಅಡ್ಡಸಾಲುಗಳು ಸಮನಾಗಿರುತ್ತವೆ. ಈ ಮಾತೃಕೆಯ ಸಹಾಯದಿಂದ ತರಗತಿಯ ಎಲ್ಲಾ ಸದಸ್ಯರ ಆಯ್ಕೆಗಳನ್ನು ತಿಳಿಯಬಹುದು. ಈ ಕೆಳಗೆ ನೀಡಿರುವ ಉದಾಹರಣೆಯಲ್ಲಿ 5 ಜನರ ಗುಂಪಿನ ಪರಸ್ಪರ ಆಯ್ಕೆಗಳ ವಿವರಗಳನ್ನು ನೀಡಲಾಗಿದ್ದು ಪ್ರತಿಯೊಬ್ಬರೂ ಗುರುತಿಸಿರುವ ಆಯ್ಕೆಗಳ ಆಧಾರದ ಮೇಲೆ ಸಮಾಜ ಮಾತೃಕೆಯನ್ನು ರಚಿಸಲಾಗಿದೆ.

**ಪರಸ್ಪರ ಆಯ್ಕೆಗಳು**

| **ಸದಸ್ಯರು** | **ಆಯ್ಕೆಗಳು** |
|---|---|
| ರಾಜು | ಮೋಹನ್ |
| ಶಶಿ | ರಾಜು, ಮೋಹನ್, ಕುಮಾರ |
| ಮೋಹನ್ | ಕುಮಾರ್, ಗಿರೀಶ್ |
| ಕುಮಾರ | ಮೋಹನ್, ಗಿರೀಶ್ |
| ಗಿರೀಶ್ | ಮೋಹನ್, ಕುಮಾರ್ |

ಈ ವಿವರಗಳನ್ನು ಸಮಾಜಮಾತೃಕೆಯಲ್ಲಿ ಈ ಕೆಳಕಂಡಂತೆ ನೀಡಬಹುದಾಗಿದೆ. '√' ಗುರುತು ಆಯ್ಕೆಯನ್ನು ಸೂಚಿಸಿದರೆ 'X' ಗುರುತು ಆಯ್ಕೆ ಮಾಡಿಲ್ಲ ಎಂದು ಸೂಚಿಸುತ್ತದೆ.

| **ಸಮಾಜ ಮಾತೃಕೆ** | | | | | |
|---|---|---|---|---|---|
| | **ರಾಜು** | **ಶಶಿ** | **ಮೋಹನ** | **ಕುಮಾರ** | **ಗಿರೀಶ** |
| **ರಾಜು** | X | X | √ | X | X |
| **ಶಶಿ** | √ | X | √ | √ | X |
| **ಮೋಹನ** | X | X | X | √ | √ |
| **ಕುಮಾರ** | X | X | √ | X | √ |
| **ಗಿರೀಶ** | X | X | √ | √ | X |
| **ಒಟ್ಟು** | 1 | 0 | 4 | 3 | 2 |

ಈ ಮಾತೃಕೆಯ ಸಹಾಯದಿಂದ ಯಾವ ಸದಸ್ಯರು ಹೆಚ್ಚಿನ ಜನರಿಂದ ಆಯ್ಕೆ ಮಾಡಲ್ಪಟ್ಟಿದ್ದಾರೆ ಎಂದು ತಿಳಿಯಬಹುದು. ಮೇಲಿನ ಮಾತೃಕೆಯಿಂದ ಮೋಹನನು ಅತಿ ಹೆಚ್ಚು ಜನರಿಂದ ಆಯ್ಕೆ ಪಡೆದಿದ್ದು, ಶಶಿಯು ಯಾರಿಂದಲೂ ಆಯ್ಕೆಯಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ವಿವರಗಳನ್ನು ಸಮಾಜ ಅಲೇಖದ ಮೂಲಕವೂ ತೋರಿಸಬಹುದು.

**ಸಮಾಜ ಅಲೇಖ**

ಒಂದು ಗುಂಪಿನ ಸದಸ್ಯರನ್ನು ಒಂದು ನಿರ್ಣಾಯಕಾಂಶದ ಆಧಾರದ ಇತರರನ್ನು ಆಯ್ಕೆ ಮಾಡುವಂತೆ ಹೇಳಿದಾಗ, ಗುಂಪಿನ ಎಲ್ಲ ಸದಸ್ಯರೂ ಪರಸ್ಪರ ಆಯ್ಕೆಗಳನ್ನು ಮಾಡುತ್ತಾರೆ. ಈ ರೀತಿಯಾಗಿ ಮಾಡಿದ ಆಯ್ಕೆಗಳಿಂದ ಒಂದು ಗುಂಪಿನ ಒಳಗೆ ಇರುವಂತಹ ಅಂತರ ಸಂಬಂಧ ಸ್ಪಷ್ಟವಾಗುತ್ತದೆ. ಒಂದು ನಕ್ಷೆಯ ರೂಪದಲ್ಲಿ ಈ ಅಂತರ್ ಸಂಬಂಧಗಳ ಪೂರ್ಣ ಚಿತ್ರವನ್ನು ಪ್ರತಿನಿಧಿಸಬಹುದು. ಈ ನಕ್ಷೆಗೆ ಸಮಾಜ ಅಲೇಖ (Sociogram) ಎನ್ನುತ್ತಾರೆ.

ಈ ಸಮಾಜ ಆಲೇಖದ ಮೂಲಕ ನಮಗೆ ಮೋಹನನು ಈ ಗುಂಪಿನಲ್ಲಿ ಅತಿ ಹೆಚ್ಚು ಹೆಸರುವಾಸಿಯಾಗಿದ್ದಾನೆ ಎಂಬುದು ತಿಳಿಯುತ್ತದೆ. ಇಂಥ ಸದಸ್ಯನನ್ನು 'ತಾರೆ' (Star) ಎನ್ನುತ್ತಾರೆ. ಶಶಿಯು ಯಾರಿಂದಲೂ




Digitised by Bharatavani, CIIL

ಆಯ್ಕೆಯಾಗದೆ 'ಏಕಾಂಗಿ' (Isolate)ಯಾಗಿದ್ದಾನೆ ಮತ್ತು ಮೋಹನ–ಕುಮಾರ, ಮೋಹನ–ಗಿರೀಶ, ಕುಮಾರ್–ಗಿರೀಶ ಮತ್ತು ಮೋಹನ, ಕುಮಾರ್, ಗಿರೀಶ ನಿಕಟ ಗೆಳೆಯರ ಉಪಗುಂಪುಗಳಾಗಿವೆ ಎಂಬುದು ಸ್ಪಷ್ಟವಾಗುತ್ತದೆ.

ಈ ಎಲ್ಲಾ ಆಯ್ಕೆಗಳು ಕೆಲವೊಂದು ನಿರ್ಣಾಯಕಾಂಶಗಳ ಮೇಲೆ ಆಧಾರಿತವಾಗಿರುತ್ತವೆ. ಈ ನಿರ್ಣಾಯಕಾಂಶಗಳು ವ್ಯಕ್ತಿನಿಷ್ಠವಾಗಿರ ಬಹುದು. ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿಯು ಮೊದಲ ನೋಟದಲ್ಲೇ ಇಷ್ಟಪಡುವುದು ಅಥವಾ ಇಷ್ಟಪಡದೇ ಇರುವುದು. ವ್ಯಕ್ತಿನಿಷ್ಠ ನಿರ್ಣಾಯಕಾಂಶವಾದರೆ, ಒಬ್ಬ ವ್ಯಕ್ತಿಯು ಒಂದು ಗುಂಪಿನ ಕೆಲಸಕ್ಕೆ ಅವಶ್ಯಕತೆ ಇರುವಂತಹ ಕೌಶಲಗಳನ್ನು ಹೊಂದಿದ್ದಾನೆಯೇ, ಇಲ್ಲವೇ ಎಂದು ನಿರ್ಧರಿಸಿ ಆಯ್ಕೆ ಮಾಡುವುದು ವಸ್ತುನಿಷ್ಠ ನಿರ್ಣಾಯಕಾಂಶಗಳಿಗೆ ಉದಾಹರಣೆಯಾಗಿದೆ.

ಸಮಾಜ ಮಿತಿ ತಂತ್ರವನ್ನು ಬಳಸುವಾಗ ಮತ್ತು ಅರ್ಥೈಸುವಾಗ ಈ ಅಂಶಗಳನ್ನು ಗಮನದಲ್ಲಿಡಬೇಕು.

1. ಅಧ್ಯಯನವು ಯಾವಾಗಲ ಒಂದು ಗುಂಪಿನ ಮೇಲೆ ಮಾತ್ರ ಕೇಂದ್ರೀಕೃತವಾಗಿರಬೇಕು.
2. ಸದಸ್ಯರು ಮಾಡಿದ ಮತ್ತು ಪಡೆದ ಆಯ್ಕೆಗಳನ್ನು ವಿವರವಾಗಿ ವಿಶ್ಲೇಷಣೆ ಮಾಡಬೇಕು.
3. 'ಏಕಾಂಗಿ'ಗಳನ್ನು ಮತ್ತು 'ತಾರೆ'ಗಳನ್ನು ಗುರ್ತಿಸಿಕೊಳ್ಳಬೇಕು.
4. ಒಂದು ಗುಂಪಿನಲ್ಲಿ ಎಲ್ಲರಿಂದಲೂ ಆಯ್ಕೆಯಾದ ಸದಸ್ಯರಲ್ಲಿ ಯಾವ ರೀತಿಯ ನಾಯಕತ್ವದ ಗುಣಗಳಿವೆ ಎಂಬುದನ್ನು ಪರೀಕ್ಷಿಸಬೇಕು.
5. ಗುಂಪಿನಲ್ಲಿ ಒಬ್ಬ ಸದಸ್ಯ ಏಕಾಂಗಿಯಾಗಿರಲು ಕಾರಣಗಳನ್ನು ಪತ್ತೆ ಹಚ್ಚಲು ಪ್ರಯತ್ನಿಸಬೇಕು.
6. ಸದಸ್ಯರು ಆಯ್ಕೆಗಳನ್ನು (ಯಾವುದೇ ಪೂರ್ವಾಗ್ರಹಗಳಿಲ್ಲದೆ ಮಾಡಿದ್ದಾರೆಂದು ಸ್ಪಷ್ಟಪಡಿಸಿಕೊಳ್ಳಬೇಕು.)

ಸಮಾಜಮಿತಿ ತಂತ್ರವನ್ನು ಒಂದು ಗುಂಪಿನ ಸದಸ್ಯನ ನಾಯಕತ್ವದ ಗುಣ ಗುರ್ತಿಸಲು ಹಾಗೂ ಅವುಗಳನ್ನು ಬೆಳೆಸಲು ಅಥವಾ ತಿರಸ್ಕೃತರನ್ನು ಕಂಡು ಹಿಡಿದು ಅವರನ್ನು ಸಾಮಾಜೀಕರಣಗೊಳಿಸಲು, ಗುಂಪಿನ ಸಾಮಾಜಿಕ ಸಂರಚನೆಯನ್ನು ತಿಳಿಯಲು, ಉತ್ತಮ ಅಂತರ್ ವ್ಯಕ್ತಿ ಸಂಬಂಧಗಳನ್ನು ಉಂಟುಮಾಡಲು, ಸಮಾಯೋಜನ ಸಮಸ್ಯೆಗಳನ್ನು ವಿಶ್ಲೇಷಿಸಲು ಮತ್ತು ಒಂದು ಗುಂಪನ್ನು ಇನ್ನೊಂದು ಗುಂಪಿನೊಡನೆ ಹೋಲಿಸಲು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

–ಎಚ್.ಸಿ.ಹೇ.

## ಸಮಾಜವಾದ ಮತ್ತು ಶಿಕ್ಷಣ

ಸಮಾಜವಾದದ ಮೂಲ ತತ್ವವೆಂದರೆ ಸಮಾಜದಲ್ಲಿರುವವರೆಲ್ಲರೂ ಸರಿಸಮಾನರು. ಈ ತತ್ವವನ್ನು ಪ್ರಾರಂಭಿಸಿದವರು **ಕಾರ್ಲ್‌ಮಾರ್ಕ್ಸ್**. ಅವನು ಪ್ರತಿಪಾದಿಸಿದ ತತ್ವವು ಸಮಾಜವಾದವೆಂದು ಮೊದಲಿಗೆ ಬಳಕೆಗೆ ಬಂದು ನಂತರ ಸಮತಾವಾದ ಎಂಬ ಹೆಸರಿನಲ್ಲಿ ಪ್ರಚಲಿತವಾಯಿತು. ಈ ವಾದದ ಪ್ರಕಾರ ಬಂಡವಾಳ ಶಾಹಿಗಳನ್ನು ಮತ್ತು ಕಾರ್ಮಿಕರನ್ನು ಯಾವುದೇ ರೀತಿಯಿಂದಾಗಲಿ ಸಮಾನರು ಎಂದು ಜಾರಿಗೆ ತರುವುದು. ಈ ತತ್ವವನ್ನು ಗಾಂಧೀಜಿಯವರು ಸಹಾ ಬೆಂಬಲಿಸಿದರೂ ಹಿಂಸಾಚಾರಕ್ಕೆ ಅವರು ಒಪ್ಪಲಿಲ್ಲ.


ಕಾರ್ಲ್‌ಮಾರ್ಕ್ಸ್

ಸಮಾಜವಾದದಲ್ಲಿ ಎರಡು ವಿಧ. ಅವುಗಳೆಂದರೆ ಉಗ್ರವಾದ ಮತ್ತು ಸೌಮ್ಯವಾದ. ಉಗ್ರವಾದದಲ್ಲಿ ಹಿಂಸಾತ್ಮಕವಾದ ಕಾರ್ಯಗಳಿಂದಾದರೂ ಸಮಾನತೆಯನ್ನು ಸಮಾಜದಲ್ಲಿ ಜಾರಿಗೊಳಿಸುವುದು ಇದನ್ನು ಕಮ್ಯೂನಿಸಂ ಎಂದು ಕರೆಯಲಾಗಿದೆ. ಈ ವಾದವನ್ನು ರಷ್ಯಾ ಮತ್ತು ಚೈನಾ ದೇಶಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗೆ ನಡೆದ ಕ್ರಾಂತಿಗಳಲ್ಲಿ ಅನುಸರಿಸಲಾಯಿತು. ಸೌಮ್ಯ ವಾದದಲ್ಲಿ ಹಂತಹಂತವಾಗಿ ಸಮಾಜವಾದದ ಗುರಿಯನ್ನು ತಲುಪುವುದಾಗಿದೆ. ಇಲ್ಲಿ ಹಿಂಸೆಗೆ ಅವಕಾಶವಿರುವುದಿಲ್ಲ. ಬಡವ ಬಲ್ಲಿದರ ಅಂತರವನ್ನು ಕ್ರಮೇಣ ಹೋಗಲಾಡಿಸಿ ಸಮಾನತೆಯನ್ನು ತರುವುದು. ನಿತ್ಯ ಜೀವನಕ್ಕೆ ಬೇಕಾದ ಸೌಲಭ್ಯಗಳಿಗೆ ಸರಕಾರದ ಏಕಸ್ವಾಮ್ಯವಿರಬೇಕು. ಭಾರತವು ಸಮಾಜವಾದದಲ್ಲಿನ ತತ್ವಗಳನ್ನು ಒಪ್ಪಿಕೊಂಡರೂ ಅದನ್ನು ಪ್ರಜಾಪ್ರಭುತ್ವದ ಮೂಲಕ ಸಾಧಿಸಲು ಪ್ರಯತ್ನಿಸುತ್ತದೆ. ಇದಕ್ಕಾಗಿಯೇ ಭಾರತ ಶಿಕ್ಷಣದ ವ್ಯವಸ್ಥೆಯಲ್ಲಿ ಸಮಾಜವಾದದ ಅಂಶಗಳನ್ನು ಸೇರಿಸಲಾಗಿದೆ.

ಸಮಾಜವಾದವು ಸಮಾಜ ಮತ್ತು ಮಾನವ ಕಲ್ಪನೆಯ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಮಹತ್ವ ಹೊಂದಿರುವ ಒಂದು ರಾಜಕೀಯ ತತ್ವಸಿದ್ಧಾಂತ. ಈ ವಾದವನ್ನು ನಂಬಿದವರಿಗೆ ಜೀವನದ ನಿಜವಾದ ಅರ್ಥವನ್ನು ಕಲ್ಪಿಸುತ್ತದೆ ಸಮಾಜವಾದದಲ್ಲಿರುವ ಪ್ರಮುಖ ಮೌಲ್ಯಗಳೆಂದರೆ ಸಮಾನತೆ ಮತ್ತು ಸಾಮಾಜಿಕ ನ್ಯಾಯ, ಉತ್ಪಾದನೆ ಮತ್ತು ಸಮಾನವಿತರಣೆ, ವರ್ಗರಹಿತವಾದ ಸಮಾಜ, ಸಮಪಾಲು, ಸರ್ವರೂ ಸಮಾನರು, ಗಾಂಧೀಜಿಯವರ ಸರ್ವೋದಯದ ಪರಿಕಲ್ಪನೆ, ದೇಶಾಭಿಮಾನ, ಸಂಪತ್ತಿನ ಸಮಾನ ಹಂಚಿಕೆ ಮುಂತಾದವುಗಳು.

ಒಂದು ದೇಶದ ಪ್ರಗತಿಯು ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಅವಲಂಬಿಸಿದೆ. ಭಾರತದಲ್ಲಿರುವ ಶಿಕ್ಷಣ ಪದ್ಧತಿಯು ಉಚಿತ, ಕಡ್ಡಾಯ ಹಾಗೂ ಸಮಾನ ಶಿಕ್ಷಣದ ವ್ಯವಸ್ಥೆಯನ್ನು ಹೊಂದಿದೆ. ಶಿಕ್ಷಣದ ಸೌಲಭ್ಯಗಳಲ್ಲಿ ಹಲವಾರು ರೀತಿಯ ರಿಯಾಯಿತಿಗಳನ್ನು ಒದಗಿಸಿರುವುದಲ್ಲದೆ, ದುರ್ಬಲ ಮತ್ತು ವಯಸ್ಕ ಶಿಕ್ಷಣ, ದೂರ ಶಿಕ್ಷಣ ಮುಂತಾದವುಗಳಲ್ಲಿ ಸಮಾನತೆಯನ್ನು ನೀಡುವಲ್ಲಿ ಮುಂದಾಗಿದೆ.

**ಸಮಾಜವಾದದಲ್ಲಿನ ಪ್ರಮುಖ ಶೈಕ್ಷಣಿಕ ನಿಹಿತಾರ್ಥಗಳನ್ನು ಈ ಮುಂದಿನಂತೆ ಗುರುತಿಸಬಹುದು.**

- ಶಿಕ್ಷಣದ ಮುಖಾಂತರ ವರ್ಗರಹಿತ ಸಮಾಜದ ನಿರ್ಮಾಣ.
- ಸರ್ವತೋಮುಖವಾದ ಅಭಿವೃದ್ಧಿ ಹಾಗೂ ಸಮಾಜದ ಪ್ರತಿಯೊಬ್ಬ ಸದಸ್ಯರ ಸಮಾನ ಬೆಳವಣಿಗೆಗೆ ಅವಕಾಶ
- ಎಲ್ಲರಿಗೂ ಸೂಕ್ತವಾದ ರೀತಿಯಲ್ಲಿ ಜ್ಞಾನದ ಪ್ರಸಾರ ಮಾಡುವಿಕೆ.

Digitised by Bharatavani, CIIL

- ಪ್ರತಿಯೊಬ್ಬರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿ, ಇನ್ನೊಬ್ಬರನ್ನು ಶೋಷಿಸದಂತಹ ಮನೋಭಾವದ ಬೆಳವಣಿಗೆ.

- ಶಿಕ್ಷಣದ ಮುಖಾಂತರ ವೈಜ್ಞಾನಿಕ ಸಮಾಜವಾದವನ್ನು ಪ್ರಾಯೋಗಿಕವಾಗಿ ಜಾರಿಗೆ ತರುವುದು.

- ಸರಕಾರಿ ಅಧಿಕಾರದ ವ್ಯಾಪಕ ಹಂಚಿಕೆ ಮತ್ತು ಅಧಿಕಾರದ ವಿಕೇಂದ್ರೀಕರಣಗೊಳಿಸುವಿಕೆ.

- ಸಾಮಾಜಿಕ ಹೊಣೆಗಾರಿಕೆಗಳನ್ನು ಮತ್ತು ಕರ್ತವ್ಯಗಳನ್ನು ಅರಿತು ಬಲಿಷ್ಠ ಸಮಾಜವನ್ನು ನಿರ್ಮಿಸುವಂತಹ ತರಬೇತಿ ನೀಡುವುದು.

- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಭ್ರಾತೃತ್ವದ ಬೆಳವಣಿಗೆಯನ್ನು ಶಿಕ್ಷಣದ ಮೂಲಕ ಬೆಳೆಸುವಿಕೆ.

- ವಿಜ್ಞಾನ, ತಂತ್ರಜ್ಞಾನ, ಕೃಷಿ ಮುಂತಾದ ಉದ್ಯೋಗಪರ ಕ್ಷೇತ್ರಗಳಲ್ಲಿ ಪರಿಣತಿಯನ್ನು ಹೆಚ್ಚಿಸುವುದು.

- ವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆಯನ್ನು ಸಮಾಜದಲ್ಲಿ ಶಿಕ್ಷಣದ ಮೂಲಕ ಬೆಳೆಸುವುದು. ಈ ಮೇಲಿನ ಅಂಶಗಳನ್ನು ಸಮಾಜವಾದವು ಶಿಕ್ಷಣದ ಮೂಲಕ ಸಾಧಿಸಲು ಪ್ರಯತ್ನಿಸಬಹುದು.

–ವೈ.ಎನ್.ಶ್ರೀ

## ಸಮಾಜಶಾಸ್ತ್ರ ಮತ್ತು ಶಿಕ್ಷಣ

ಸಮಾಜಶಾಸ್ತ್ರ ಎಂಬ ಪದವು ಆಂಗ್ಲ ಭಾಷೆಯ ಸೋಷಿಯಾಲಜಿ ಎಂಬ ಪದದ ಕನ್ನಡದ ಅನುವಾದವಾಗಿದೆ. ಸೋಷಿಯಾಲಜಿ ಎಂಬ ಪದವು ಲ್ಯಾಟಿನ್ ಭಾಷೆಯ ಸೊಸೈಟಿಸ್ ಎಂಬ ಪದದಿಂದಲೂ ಲಾಗಸ್ ಎಂಬ ಗ್ರೀಕ್ ಪದದಿಂದಲೂ ಸಂಯೋಜಿತಗೊಂಡಿದೆ. ಸೊಸೈಟಸ್ ಎಂದರೆ ಸಮಾಜ ಮತ್ತು ಲಾಗಸ್ ಎಂದರೆ ಅಭ್ಯಾಸ ಅಥವಾ ವಿಜ್ಞಾನ ಎನ್ನಲಾಗಿದೆ.

ಆಗಸ್ಟ್ ಕಾಮ್ಟೆ

ಹೀಗೆ ನಾವು ಶಬ್ದಾರ್ಥಗಳನ್ನು ಗ್ರಹಿಸಿದರೆ ಸಮಾಜಶಾಸ್ತ್ರವು ಸಾಮಾಜಿಕ ವಿಜ್ಞಾನವಾಗಿದ್ದು, ಮಾನವರ ಪರಸ್ಪರ ಸಂಬಂಧಗಳನ್ನು ವಿವರಿಸುತ್ತದೆ ಎನ್ನಬಹುದು. ಆದ್ದರಿಂದ ಸಮಾಜವನ್ನು ಅಭ್ಯಸಿಸುವ ವಿಜ್ಞಾನವನ್ನು ನಾವು ಸಮಾಜಶಾಸ್ತ್ರವೆಂದು ಕರೆಯಬಹುದು.

18ನೇ ಶತಮಾನಕ್ಕೆ ಮೊದಲು ಸಮಾಜಶಾಸ್ತ್ರಕ್ಕೆ ಸ್ವತಂತ್ರ ಅಸ್ತಿತ್ವವಿರಲಿಲ್ಲ. ಆಗಸ್ಟ್ ಕಾಮ್ಟೆ ಎಂಬ ತತ್ವಜ್ಞಾನಿ ಮೊದಲು 'ಸಮಾಜಶಾಸ್ತ್ರ' ಪದವನ್ನು ಬಳಸಿದರು.

### ವ್ಯಾಖ್ಯೆಗಳು

- ಆಗಸ್ಟ್ ಕಾಮ್ಟೆಯ ಪ್ರಕಾರ ಸಾಮಾಜಿಕ ಕ್ರಮ ಹಾಗೂ ಸಾಮಾಜಿಕ ಪ್ರಗತಿಗೆ ಸಂಬಂಧಿಸಿದ ವಿಷಯಗಳನ್ನು ಅಧ್ಯಯನ ಮಾಡುವ ವಿಜ್ಞಾನವೇ ಸಮಾಜಶಾಸ್ತ್ರ.

- ಮೈಕೈವರ್ ಮತ್ತು ಪೇಜ್‌ರವರ ಪ್ರಕಾರ, "ಮಾನವನ ಸಾಮಾಜಿಕ ಬಾಂಧವ್ಯಗಳ ಅಧ್ಯಯನವೇ ಸಮಾಜಶಾಸ್ತ್ರ."

- ಎಮಿಲಿ ಡರ್ಕೀಮ್‌ನ ಪ್ರಕಾರ "ಸಾಮಾಜಿಕ ಸಂಸ್ಥೆಗಳನ್ನು ಅಧ್ಯಯನ ಮಾಡುವ ವಿಜ್ಞಾನವೇ ಸಮಾಜಶಾಸ್ತ್ರ."

ವ್ಯಾಪ್ತಿ ಎಂದರೆ ಎಲ್ಲೆ, ಕಟ್ಟು. ಯಾವ ಯಾವ ಅಧ್ಯಯನ ವಸ್ತುಗಳನ್ನು ಒಳಗೊಂಡಿದೆ ಎನ್ನುವುದನ್ನು ಸೂಚಿಸುವುದೇ ಆಗಿದೆ. ವ್ಯಾಪ್ತಿ ಅಥವಾ ವೈಶಾಲ್ಯವೆಂದರೆ ವಿಷಯದ ಬಗ್ಗೆ ಸಮಗ್ರ ತಿಳುವಳಿಕೆ. ಸಮಾಜಶಾಸ್ತ್ರವು ಒಂದು ಸಾಮಾನ್ಯ ಸಾಮಾಜಿಕ ವಿಜ್ಞಾನ. ಇದು ಸಮಾಜವನ್ನು ಸಮಗ್ರವಾಗಿ ಅಭ್ಯಸಿಸುವ ಏಕೈಕ ವಿಜ್ಞಾನ. ಸಾಮಾಜಿಕ ಪ್ರಸಂಗಗಳಿಗೆ ಸಂಬಂಧಿಸಿದ ಸಾಮಾನ್ಯ ತತ್ವಗಳನ್ನು ಅಭ್ಯಸಿಸುತ್ತದೆ. ಬಾರ್ನೆಸ್ ಮತ್ತು ಬೆಕ್ಕರ್ ಎಂಬ ತಜ್ಞರ ಪ್ರಕಾರ ಸಮಾಜಶಾಸ್ತ್ರವು ಇನ್ನಿತರ ಸಾಮಾಜಿಕ ವಿಜ್ಞಾನಗಳೊಂದಿಗೆ ಸಹೋದರಿಯಂತಿದೆ. ವಿ.ಎಫ್. ಕಾಲ್‌ಬರ್ಟ್ಸನ್‌ರವರು ಹೇಳಿರುವಂತೆ "ಸಮಾಜಶಾಸ್ತ್ರವು ಸ್ಥಿತಿಸ್ಥಾಪಕ ವಿಜ್ಞಾನವಾಗಿದ್ದು ಅದರ ಎಲ್ಲೆ ಎಲ್ಲಿ ಆರಂಭವಾಗುತ್ತದೆ ಮತ್ತು ಎಲ್ಲಿ ಅಂತ್ಯಗೊಳ್ಳುತ್ತದೆ ಎಂಬುದನ್ನು ನಿರ್ಧರಿಸುವುದು ಕಷ್ಟ."

ಸಮಾಜಶಾಸ್ತ್ರದ ವ್ಯಾಪ್ತಿಗೆ ಸಂಬಂಧಿಸಿದಂತೆ ಸಮಾಜಶಾಸ್ತ್ರಜ್ಞರಲ್ಲಿಯೇ ಎರಡು ಪಂಥಗಳಿವೆ. ಅವು–

ಔಪಚಾರಿಕ ಪಂಥ ಮತ್ತು ಸಮನ್ವಯ ಪಂಥ.

ಔಪಚಾರಿಕ ಪಂಥದವರು ಸಮಾಜಶಾಸ್ತ್ರದ ವ್ಯಾಪ್ತಿಯನ್ನು ಸೀಮಿತಗೊಳಿಸಲು ಪ್ರಯತ್ನಿಸಿದ್ದಾರೆಂದು ಹಲವು ಸಮಾಜಶಾಸ್ತ್ರಜ್ಞರು ಅಭಿಪ್ರಾಯಿಸುತ್ತಾರೆ. ಇವರಲ್ಲಿ ಮ್ಯಾಕ್ಸ್ ವೆಬರ್ ಈ ಪಂಥದ ಮುಖ್ಯಸ್ಥನೆಂದು ಗುರುತಿಸಲಾಗಿದೆ.

ಔಪಚಾರಿಕ ಪಂಥದವರ ಪ್ರಕಾರ ಸಮಾಜಶಾಸ್ತ್ರವು ಶುದ್ಧ ಶಾಸ್ತ್ರ, ಸ್ವತಂತ್ರ ವಿಜ್ಞಾನ, ವಿಶಿಷ್ಟ ವಿಜ್ಞಾನ, ವಿಶೇಷ ವಿಜ್ಞಾನವಾಗಿದೆ. ಯಾವುದೇ ಸಾಮಾಜಿಕ ವಿಜ್ಞಾನಗಳೊಂದಿಗೆ ಸಂಬಂಧವನ್ನು ಹೊಂದಿಲ್ಲ.

ಸಾಮಾಜಿಕ ಸಂಬಂಧಗಳನ್ನು ಅದೃಶ್ಯ ಹಾಗೂ ಸದೃಶ್ಯ ರೂಪಗಳೆಂದು ಎರಡು ಬಗೆಗಳಾಗಿ ವಿಭಾಗಿಸಿ ಸಾಮಾಜಿಕ ಸಂಬಂಧಗಳನ್ನು ಮಾತ್ರ ಅಭ್ಯಸಿಸುತ್ತದೆ.

ಸಾಮಾಜಿಕ ಸಂಬಂಧಗಳನ್ನು ಅಭ್ಯಸಿಸುವ ಒಂದೇ ಒಂದು ವಿಜ್ಞಾನ ಅದುವೇ ಸಮಾಜಶಾಸ್ತ್ರ.

ಸಮಾಜಶಾಸ್ತ್ರ ಮತ್ತು ಸಾಮಾಜಿಕ ವಿಜ್ಞಾನಗಳಿಗೆ ಇರುವ ಸಂಬಂಧವು ರೇಖಾಗಣಿತ ಹಾಗೂ ಭೌತವಿಜ್ಞಾನಗಳಿಗಿರುವ ಸಂಬಂಧದ ಮಾದರಿಯಲ್ಲೇ ಇದೆ.

ಇದು ಸಾಮಾಜೀಕರಣದ ಪ್ರಕ್ರಿಯೆಯನ್ನು ಹಾಗೂ ಸಾಮಾಜಿಕ ಸಂಘಟನೆಯನ್ನು ಮಾತ್ರ ಅಭ್ಯಸಿಸಬೇಕು.

ಜಾರ್ಜ್ ಸಿಮೆಲ್‌ನ ಪ್ರಕಾರ "ಮಾನವನ ಆಂತರಿಕಕ್ಕೆ ಸಂಬಂಧಪಟ್ಟ ಹಾಗೂ ಅವುಗಳ ಸ್ವರೂಪಗಳ ಅಧ್ಯಯನವೇ ಸಮಾಜಶಾಸ್ತ್ರ. ಸಮಾಜ ಶಾಸ್ತ್ರವು ಸ್ಪರ್ಧೆಯಂತಹ ಒಂದು ಸಾಮಾಜಿಕ ಪ್ರಕ್ರಿಯೆ ಬಗ್ಗೆ ಬಾಹ್ಯ ಸ್ವರೂಪವನ್ನು ಅಭ್ಯಾಸಿಸಲು ವಿಭಾಗಿಸಬೇಕೇ ಹೊರತು ಸ್ಪರ್ಧೆಯಲ್ಲಿನ ವ್ಯಕ್ತಿಗಳ ಬಗ್ಗೆ ವಿಚಾರ ಮಾಡಲೇಬಾರದು." ವೀರ್‌ಕಾಂಟ್‌ನ ಅಭಿಪ್ರಾಯದಂತೆ, "ಇದು ಸಮಾಜದಲ್ಲಿನ ಮಾನವರನ್ನು ಪರಸ್ಪರ ಬೆಸೆಯುವ ಮಾನಸಿಕ ಬಾಂಧವ್ಯಗಳ ರೂಪಗಳಿಗೆ ಸಂಬಂಧಿಸಿದ ಅಧ್ಯಯನ." ಮ್ಯಾಕ್ಸ್ ವೆಬರ್‌ನ ಪ್ರಕಾರ, "ಸಾಮಾಜಿಕ ವರ್ತನೆಯ ಅರ್ಥ ವಿವರಣೆಯೇ ಸಮಾಜಶಾಸ್ತ್ರದ ಗುರಿ. ಸಾಮಾಜಿಕ ಸಂಬಂಧಗಳ ವಿಶ್ಲೇಷಣೆಯನ್ನು ಮಾಡುವುದೇ ಸಮಾಜಶಾಸ್ತ್ರದ ವ್ಯಾಪ್ತಿಯಾಗಿದೆ."

Digitised by Bharatavani, CIIL

**ಟೀಕೆಗಳು**

ಸಮಾಜಶಾಸ್ತ್ರವು ಒಂದು ಶುದ್ಧ ವಿಜ್ಞಾನ ಎಂದು ಔಪಚಾರಿಕ ಪಂಥದವರು ಹೇಳಿರುವುದು ಸಮಂಜಸವಲ್ಲ. ಇಲ್ಲಿಯವರೆಗೆ ವಾಸ್ತವಿಕವಾಗಿ ಯಾವುದೇ ಸಾಮಾಜಿಕ ವಿಜ್ಞಾನವನ್ನು ಸ್ವತಂತ್ರ ವಿಜ್ಞಾನವೆಂದು ಕರೆಯಲು ಸಾಧ್ಯವಿಲ್ಲವಾಗಿದೆ.

ಸಮಾಜ ಶಾಸ್ತ್ರವು ಮಾತ್ರ ಸಾಮಾಜಿಕ ಸಂಬಂಧಗಳನ್ನು ಅಭ್ಯಸಿಸುತ್ತದೆ. ಬೇರೆ ಯಾವ ಶಾಸ್ತ್ರಗಳು ಈ ತರಹದ ಅಧ್ಯಯನ ಮಾಡುವುದೇ ಇಲ್ಲ ಎನ್ನುವ ಅಭಿಪ್ರಾಯವು ಸತ್ಯಕ್ಕೆ ದೂರವಾದದ್ದು.

ಸಾಮಾಜಿಕ ಸಂಬಂಧವನ್ನು, ಇದು ಮೂರ್ತವಾದುದು, ಅದು ಅಮೂರ್ತವಾದುದು ಎಂದು ವಿಂಗಡಿಸಲು ಸಾಧ್ಯವಿಲ್ಲ.

ಸ್ಮಾಲ್‌ನ ಪ್ರಕಾರ ಸಮಾಜಶಾಸ್ತ್ರದ ವ್ಯಾಪ್ತಿ ನಿರ್ದಿಷ್ಟವಾಗಿ ಇದ್ದಾಗಲೇ ಇದೊಂದು ಉತ್ತಮ ವಿಜ್ಞಾನವಾಗಬಲ್ಲದು ಎಂಬ ಅಭಿಪ್ರಾಯವು ಸರಿಯಲ್ಲ. ಕಾರಣ ಸಾಮಾಜಿಕ ವಿಜ್ಞಾನಗಳಲ್ಲಿ ಭದ್ರ ಶಾಸ್ತ್ರವೊಂದರ ಅತ್ಯಗತ್ಯವಿದೆ. ಅದು ಸಮಾಜ ಶಾಸ್ತ್ರವೇ ಆಗಿದೆ, ಹೀಗಾಗಿ ಸಮಾಜಶಾಸ್ತ್ರದ ವ್ಯಾಪ್ತಿಯು ವಿಶಾಲವಾಗಿ ಸಂವೃದ್ಧವಾಗಿರಬೇಕು.

ಸಾಮಾಜಿಕ ಸಂಬಂಧವನ್ನು ರೇಖಾಗಣಿತ ಸಂಬಂಧಕ್ಕೆ ಔಪಚಾರಿಕ ಪಂಥದವರು ಹೋಲಿಸಿರುವುದು ಸರಿಯಲ್ಲ.

**ಸಮನ್ವಯಾತ್ಮಕ ಪಂಥ**

ಸಮನ್ವಯಾತ್ಮಕ ಪಂಥದವರ ಪ್ರಕಾರ ಸಮಾಜ ಶಾಸ್ತ್ರವು ಇನ್ನಿತರ ಸಾಮಾಜಿಕ ವಿಜ್ಞಾನಗಳ ಜೊತೆಗೆ ನಿಕಟ ಸಂಬಂಧವನ್ನು ಹೊಂದಿರಬೇಕು. ಎಲ್ಲ ಸಾಮಾಜಿಕ ವಿಜ್ಞಾನಗಳ ಪರಸ್ಪರ ಸಂಬಂಧದ ವಿಚಾರ ವಿನಿಮಯವೂ ಇಲ್ಲಿ ನಡೆಯುವಂತಾಗಿ ಸಮಾಜಶಾಸ್ತ್ರದ ವ್ಯಾಪ್ತಿ ವಿಶಾಲವಾಗಬೇಕು. ಸಮಾಜದ ಸಮಗ್ರ ದರ್ಶನವನ್ನು ನೀಡುವ ಶಾಸ್ತ್ರ ಸಮಾಜಶಾಸ್ತ್ರ ವಾಗಬೇಕೆಂದು ಅಭಿಪ್ರಾಯಿಸುತ್ತಾರೆ. ಈ ಪಂಥದ ಅನುಯಾಯಿ ಗಳಾರೆಂದರೆ ಡಕೀಂ, ಹಾಬ್ ಹೌಸ್, ಸಾರೋಕಿನ್ ಮೊದಲಾದವರು.

ಸಮಾಜಶಾಸ್ತ್ರದ ವ್ಯಾಪ್ತಿ

- ಸಾಮಾಜಿಕ ಸ್ವರೂಪ ಶಾಸ್ತ್ರ ಅಥವಾ ಸಮಾಜ ರಚನಾ ಶಾಸ್ತ್ರ
- ಸಾಮಾಜಿಕ ಶರೀರ ಶಾಸ್ತ್ರ
- ಸಾಮಾನ್ಯ ಸಮಾಜಶಾಸ್ತ್ರ

ಅಲೆಕ್ಸ್ ಇಂಕೆಲ್ಸೈಸ್‌ರವರ ಅಭಿಪ್ರಾಯದಂತೆ ಸಮಾಜಶಾಸ್ತ್ರದ ವ್ಯಾಪ್ತಿಯು

1) ಸಾಮಾಜಿಕ ವಿಶ್ಲೇಷಣೆ 2) ಸಾಮಾಜಿಕ ಜೀವನದ ಮೂಲಕಲ್ಪನೆಗಳು 3) ಮೂಲಭೂತ ಸಾಮಾಜಿಕ ಸಂಸ್ಥೆಗಳು 4) ಸಾಮಾಜಿಕ ಪ್ರಕ್ರಿಯೆಗಳನ್ನು ಒಳಗೊಂಡಿದೆ.

ಮೌರಿಸ್ ಗಿನ್ಸ್‌ಬರ್ಗ್‌ರ ಅಭಿಪ್ರಾಯದಂತೆ ಸಮಾಜಶಾಸ್ತ್ರದ ವ್ಯಾಪ್ತಿಯನ್ನು,

1) ಸಾಮಾಜಿಕ ಸ್ವರೂಪ ಶಾಸ್ತ್ರ 2) ಸಾಮಾಜಿಕ ನಿಯಂತ್ರಣ 3) ಸಾಮಾಜಿಕ ಪ್ರಕ್ರಿಯೆ 4) ಸಾಮಾಜಿಕ ವಿಕೃತಿ ಶಾಸ್ತ್ರ ಅಥವಾ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನ ಮಾಡುವುದೇ ಆಗಿದೆ.

ಅಮೆರಿಕಾದ ಕಿಂಗ್ಸ್ ಲೇ ಡೇವಿಸ್‌ರವರ ಪ್ರಕಾರ

ಸಮಾಜಶಾಸ್ತ್ರದ ವ್ಯಾಪ್ತಿ

- ಸಮಾಜ ರಚನೆ
- ಸಾಮಾಜಿಕ ಕಾರ್ಯಗಳು
- ಸಾಮಾಜಿಕ ಅನ್ಯೋನ್ಯ ಕ್ರಿಯೆ
- ವ್ಯಕ್ತಿ ಮತ್ತು ಸಮಾಜ
- ಸಾಮಾಜಿಕ ಬದಲಾವಣೆಗಳು

ಸಮಾಜಶಾಸ್ತ್ರವು ಸಾಮಾಜಿಕ ಸಂಬಂಧಗಳ ವಿಜ್ಞಾನವಾಗಿದೆ. ಇದು ಸಾಮಾಜಿಕ ಸಂಬಂಧಗಳನ್ನು ಎಳೆ ಎಳೆಯಾಗಿ ಬಿಡಿಸಿ ಅಭ್ಯಸಿಸುತ್ತದೆ. ಇದು ಸಾಮಾನ್ಯ ವಿಜ್ಞಾನವೂ ಹೌದು ವಿಶೇಷ ಶಾಸ್ತ್ರವೂ ಹೌದು.

ಹೀಗೆ ಸಮಾಜಶಾಸ್ತ್ರವು ಮಾನವನ ಬಹುಮುಖವಾದ ಮತ್ತು ಸಂಕೀರ್ಣವಾದ ಸಾಮಾಜಿಕ ಜೀವನವನ್ನು ಅಧ್ಯಯನ ಮಾಡುವುದು. ವ್ಯಕ್ತಿ ಮತ್ತು ಸಮಾಜಗಳ ನಡುವಣ ಸಂಬಂಧ ಮತ್ತು ವ್ಯಕ್ತಿ ಜೀವನದ ಮೇಲೆ ಸಮಾಜ ಬೀರುವ ಪ್ರಭಾವವನ್ನು ಅಧ್ಯಯನ ಮಾಡುವುದು. ಗ್ರಿನ್ಸ್‌ಬರ್ಗ್ ಎಂಬ ಸಮಾಜಶಾಸ್ತ್ರಜ್ಞನು ಸಮಾಜಶಾಸ್ತ್ರದ ವ್ಯಾಪ್ತಿಯನ್ನು ನಾಲ್ಕು ದೃಷ್ಟಿಯಿಂದ ಸ್ಪಷ್ಟಪಡಿಸಿದ್ದಾರೆ. ಅವು 1. ಸಾಮಾಜಿಕ ರಚನಾ ರೂಪಕ ಶಾಸ್ತ್ರ ಅಂದರೆ ಮಾನವ ಜನಸಂಖ್ಯೆಯ ಗುಣಮೊತ್ತಗಳನ್ನು ಅಭ್ಯಸಿಸುವುದು. 2. ಸಾಮಾಜಿಕ ನಿಯಂತ್ರಣ ಅಂದರೆ ಸಂಪ್ರದಾಯ ಲೋಕ ನೀತಿ, ರೂಢಿಗಳು ಸಮಾಜವನ್ನು ಹೇಗೆ ನಿಯಂತ್ರಿಸುವುದೆಂಬುದನ್ನು ಅಭ್ಯಸಿಸುವುದು. 3. ಸಾಮಾಜಿಕ ಪ್ರಕ್ರಿಯೆ ಅಂದರೆ ಸ್ಪರ್ಧೆ ಸಹಕಾರ ಸಂಯೋಜನೆ ಸಂಘಟನೆ ಮೊದಲಾದವುಗಳನ್ನು ಅಭ್ಯಸಿಸುವುದು (4) ಸಾಮಾಜಿಕ ಪಿಡುಗುಗಳ ನಿಯಂತ್ರಣ ಅಂದರೆ ಸಮಾಜದ ವ್ಯಕ್ತಿ ವ್ಯಕ್ತಿಗಳ ಆಂತರಿಕ ಕ್ರಿಯೆಯಲ್ಲಿ ಉಂಟಾಗುವ ತೊಡಕುಗಳು ಮತ್ತು ಅಂತಹ ಸಾಮಾಜಿಕ ಪಿಡುಗುಗಳ ಪರಿಹಾರಕ್ಕೆ ಮಾರ್ಗಗಳನ್ನು ಹುಡುಕುವುದು

**ಸಮಾಜಶಾಸ್ತ್ರ ಮತ್ತು ಶಿಕ್ಷಣ**

ಎಮಿಲಿ ಡರ್ಕಿಮ್‌ರವರು ಮೊದಲಿಗೆ ಇವೆರಡರ ಸಂಬಂಧವನ್ನು ಗುರುತಿಸಿದರು. ಶಿಕ್ಷಣ ಮತ್ತು ಸಮಾಜ ಎರಡೂ ಒಂದೇ ನಾಣ್ಯದ ಎರಡು ಮುಖಗಳಂತೆ ಎಂದು ಸಾಮಾಜಿಕ ಮತ್ತು ಸಾಂಸ್ಕೃತಿಕ

Digitised by Bharatavani, CIIL

ಅವಶ್ಯಕತೆಗಳಿರುವ ಸಮಾಜಕ್ಕೆ ಅನುಗುಣವಾಗಿ ಶಿಕ್ಷಣವಿರುತ್ತದೆಂದು ಡರ್ಕೀಮ್ ಸ್ಪಷ್ಟಪಡಿಸಿದ್ದಾರೆ. ಶಿಕ್ಷಣವಿಲ್ಲದೆ ವ್ಯಕ್ತಿ ಉತ್ತಮ ಸಂಸ್ಕೃತಿ ಸಾಮಾಜೀಕರಣ ಸಾಮಾಜಿಕ ಬದಲಾವಣೆ, ಆಧುನೀಕರಣ ಹೊಂದಲು ಸಾಧ್ಯವಿಲ್ಲ. ಸಮಾಜಶಾಸ್ತ್ರದ ಎಲ್ಲ ಬದಲಾವಣೆಗೆ ಮತ್ತು ಉತ್ತಮ ಅಂಶಗಳಿಗೆ ಶಿಕ್ಷಣ ಅಗತ್ಯ. ಮಕ್ಕಳಿಗೆ ಹೇಗೆ ಶಿಕ್ಷಣ ಕೊಡಲಾಗುತ್ತದೆಯೋ ಹಾಗೆ ಸಮಾಜವೂ ಬೆಳೆಯುತ್ತದೆ.

1. ಸಮಾಜಶಾಸ್ತ್ರದ ವ್ಯಾಪ್ತಿಯಲ್ಲಿ ಬರುವ ಪ್ರಮುಖವಾದ ಭಾಗವೇ ಶೈಕ್ಷಣಿಕ ಸಮಾಜಶಾಸ್ತ್ರ. ಸಮಾಜ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ಉನ್ನತಿಗೆ ಹಾಗೂ ಅವುಗಳಲ್ಲಿನ ಸಮಸ್ಯೆಗಳಿಗೆ ನಿವಾರಣೋಪಾಯಗಳನ್ನು ತಿಳಿಸಲು ಶೈಕ್ಷಣಿಕ ಸಮಾಜಶಾಸ್ತ್ರ ಪ್ರಯತ್ನಿಸುತ್ತದೆ. ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಕ್ರಿಯೆ ಪ್ರತಿಕ್ರಿಯೆಗಳನ್ನು ಅಭ್ಯಾಸಮಾಡುತ್ತದೆ. ಇದು ಮಕ್ಕಳಿಗೆ ಕೊಡಬಹುದಾದ ಶಿಕ್ಷಣ ಅಳವಡಿಸಬಹುದಾದ ಪಠ್ಯಕ್ರಮ ಬೋಧನಾ ವಿಧಾನ ಮಕ್ಕಳು ಮಾಡುವ ತಪ್ಪಿಗೆ ಕಾರಣ ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ ಪೀಟರ್‌ಸ್‌ರವರು ಶಿಕ್ಷಣದ ಉದ್ದೇಶಗಳನ್ನು ಶೈಕ್ಷಣಿಕ ಸಮಾಜಶಾಸ್ತ್ರ ನಿರ್ಧರಿಸುತ್ತದೆಂದು ಹೇಳಿದ್ದಾರೆ. ಸಮಾಜದಲ್ಲಿ ಶಿಕ್ಷಕರ ಸ್ಥಾನಮಾನ, ಗುರು–ಶಿಷ್ಯ ಸಂಬಂಧ, ಸಮೂಹ ಮಾಧ್ಯಮಗಳ ಪ್ರಭಾವ ಇತ್ಯಾದಿಯನ್ನು ಅಧ್ಯಯನ ಮಾಡಲಾಗುತ್ತದೆ.

2. ಶಿಕ್ಷಣದ ಸಮಾಜಶಾಸ್ತ್ರವು ಸಮಾಜಶಾಸ್ತ್ರಕ್ಕೂ ಶಿಕ್ಷಣ ಶಾಸ್ತ್ರಕ್ಕೂ ಇರುವ ಸಂಬಂಧವನ್ನು ಪ್ರಯೋಗಾತ್ಮಕವಾಗಿ ಅಧ್ಯಯನ ಮಾಡಲು ಸಹಕಾರಿಯಾಗಿದೆ. ಶಿಕ್ಷಣವನ್ನು ಸಾಮಾಜಿಕವಾಗಿ ಅಧ್ಯಯನ ಮಾಡುವುದೇ ಶಿಕ್ಷಣದ ಸಮಾಜಶಾಸ್ತ್ರ.

ಶಿಕ್ಷಣದ ಮೂಲಕವೇ ಸಮಾಜದ ಅಭಿವೃದ್ಧಿ ಮತ್ತು ಬೆಳವಣಿಗೆ ಉಂಟಾಗುವುದೆಂದೂ ಹಾಗೆಯೇ ಅದರ ಗುರಿ ವಿಧಾನಗಳು, ಆಯಾ ಸಮಾಜದ ಸನ್ನಿವೇಶಗಳಿಗೆ ಅನುಗುಣವಾಗಿರುತ್ತಿರುವುದು ಎಂದು ಸಮಾಜ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

–ಆರ್. ಗೋ.

## ಸಮಾಯೋಜನೆ–ಅರ್ಥ, ಪ್ರಕ್ರಿಯೆ

ಜೀವಿಗೂ ಅದು ವಾಸಿಸುವ ಪರಿಸರಕ್ಕೂ ನಡುವೆ ನಿಕಟ ಸಂಬಂಧವಿದೆ. ಜೀವಿ ತನ್ನ ಪರಿಸರದೊಂದಿಗೆ ಅನ್ಯೋನ್ಯವಾಗಿ ಪ್ರತಿ ಕ್ರಿಯಿಸಿ ತನ್ನ ಬೇಡಿಕೆ (ಅಗತ್ಯ)ಗಳನ್ನು ತೃಪ್ತಿಪಡಿಸಿಕೊಳ್ಳುತ್ತದೆ. ಆದರೆ ಈ ಕಾರ್ಯ ಸುಲಭವಾದುದೇನಲ್ಲ. ಜೀವಿ ಪರಿಸರದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬೇಕಾಗುತ್ತದೆ. ಅಗತ್ಯಗಳನ್ನು ಪೂರೈಸಿಕೊಳ್ಳುವಾಗ ಪರಿಸರದಿಂದ ಅನೇಕ ಅಡ್ಡಿಗಳು ಉಂಟಾಗುತ್ತವೆ. ಇವುಗಳನ್ನು ಜೀವಿ ನಿವಾರಿಸಿಕೊಳ್ಳಬೇಕಾಗುತ್ತದೆ ಅಥವಾ ಇವುಗಳನ್ನು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ. ಹೀಗೆ ಜೀವಿ ಪರಿಸರಕ್ಕೆ ಹೊಂದಿಕೊಂಡು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ಜೀವಶಾಸ್ತ್ರಜ್ಞರು ಹೊಂದಾಣಿಕೆ (Adaptation) ಎಂದು ಕರೆದಿದ್ದಾರೆ. ಪ್ರಸಿದ್ಧ ಜೀವಶಾಸ್ತ್ರಜ್ಞ ಚಾರ್ಲ್ಸ್ ಡಾರ್ವಿನ್ (1809–82) ತನ್ನ ಜೀವ ವಿಕಾಸ ಸಿದ್ಧಾಂತದಲ್ಲಿ ಈ ಪ್ರಕ್ರಿಯೆಗೆ ಮಹತ್ವ ನೀಡಿದ್ದಾನೆ. ಈ ಹೊಂದಾಣಿಕೆ ಪ್ರಕ್ರಿಯೆಯಲ್ಲಿ ಜೀವಿಗಳು ತಮ್ಮ ಉಳಿವಿಗಾಗಿ ಹೋರಾಡುತ್ತವೆ. ಇದೇ ಉಳಿವಿಗಾಗಿ ಹೋರಾಟದ ಪರಿಕಲ್ಪನೆ (Struggle for Existance). ಈ ಹೋರಾಟದಲ್ಲಿ ಪ್ರಬಲವಾದ ಜೀವಿಗಳು ಉಳಿದುಕೊಳ್ಳುತ್ತವೆ (Survival of the Fittest) ಎಂದು ಹೇಳಿದ್ದಾನೆ. ಮಾನವನನ್ನು ಹೊರತು ಪಡಿಸಿ ಉಳಿದ ಜೀವ ವರ್ಗಗಳಲ್ಲಿ ಹೊಂದಾಣಿಕೆ ಜೈವಿಕ ರೂಪದ್ದಾಗಿದ್ದು, ಅನಿಚ್ಛಾಪೂರ್ವಕವಾಗಿ ನಡೆಯುತ್ತದೆ. ಒಂದು ಜೀವ ವರ್ಗಕ್ಕೆ (specis) ಸೇರಿದ ಎಲ್ಲಾ ಜೀವಿಗಳಲ್ಲಿಯೂ ಹೊಂದಾಣಿಕೆ ಪ್ರಕ್ರಿಯೆ ಏಕರೂಪವಾಗಿರುತ್ತದೆ. ಈ ರೀತಿಯ ಹೊಂದಾಣಿಕೆ ಪ್ರಕ್ರಿಯೆಯು ಒಂದು ಜೀವ ವರ್ಗದಿಂದ ಮತ್ತೊಂದು ಜೀವ ವರ್ಗಕ್ಕೆ ಭಿನ್ನವಾಗಿರುತ್ತದೆ. ಪ್ರತಿಯೊಂದು ಜೀವವರ್ಗವು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಪರಿಸರಕ್ಕೆ ಹೊಂದಿಕೊಳ್ಳುತ್ತದೆ.

ಆದರೆ ಮಾನವ ವರ್ಗವನ್ನು ಪರಿಗಣಿಸಿದಾಗ ಹೊಂದಾಣಿಕೆ ಪ್ರಕ್ರಿಯೆಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಮಾನವ ಜೀವಿಯೂ ತನ್ನ ಪರಿಸರಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಮಾನವ ಭೌತಿಕ ಪರಿಸರವಲ್ಲದೆ ತನ್ನ ಸಾಮಾಜಿಕ, ಆಂತರಿಕ, ಮಾನಸಿಕ ಪರಿಸ್ಥಿತಿಗಳಿಗೂ ಹೊಂದಿಕೊಳ್ಳಬೇಕಾಗುತ್ತದೆ. ಹೀಗಾಗಿ ಮಾನವ ಮತ್ತು ಪರಿಸರದ ನಡುವಣ ಅನ್ಯೋನ್ಯಕ್ರಿಯೆ ಸಂಕೀರ್ಣ ರೂಪ ತಾಳುತ್ತದೆ. ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಮಾನಸಿಕ ಪರಿಸ್ಥಿತಿಗಳು, ಪ್ರೇರಕಗಳು, ಅಗತ್ಯಗಳನ್ನು, ಆಸೆ ಆಕಾಂಕ್ಷೆಗಳನ್ನು ಹೊಂದಿರುವುದರಿಂದ ಪರಿಸರದೊಂದಿಗೆ ಅವನು ಅನ್ಯೋನ್ಯಕ್ರಿಯಿಸುವ ರೀತಿಯಲ್ಲಿ ಸಂಕೀರ್ಣಗೊಳ್ಳುತ್ತದೆ. ಆದ್ದರಿಂದ ವ್ಯಕ್ತಿಗಳು ತಮ್ಮ ಪರಿಸರಕ್ಕೆ ಹೊಂದಿಕೊಳ್ಳುವುದರಲ್ಲಿ ಸಂಪೂರ್ಣವಾಗಿ ಏಕರೂಪತೆ ಇರುವುದಿಲ್ಲ. ಕೆಲವು ಜೈವಿಕ ಪ್ರಕ್ರಿಯೆಗಳಲ್ಲಿ ಮಾತ್ರ (ಉಷ್ಣ–ಶೀತದ ಏರುಪೇರಿಗೆ ದೇಹ ಹೊಂದಿಕೊಳ್ಳುವುದು, ದೇಹದ ಹೊರಗಿನ ವಸ್ತುಗಳಿಗೆ ಪ್ರತಿರೋಧ ವ್ಯಕ್ತಪಡಿಸುವುದು, ತೀವ್ರತರ ಒತ್ತಡ ಉಂಟಾದಾಗ ಯಾಂತ್ರಿಕ ರೀತಿಯಲ್ಲಿ ಪ್ರತಿಕ್ರಿಯಿಸುವುದು ಇತ್ಯಾದಿ) ಏಕರೂಪತೆ ಕಂಡು ಬರುತ್ತದೆ. ಪರಿಸರಕ್ಕೆ ವರ್ತನಾತ್ಮಕವಾಗಿ, ಮಾನಸಿಕವಾಗಿ ಹೊಂದಿಕೊಳ್ಳುವಾಗ ವ್ಯಕ್ತಿ ತನ್ನ ಅನುಭವ, ದೇಹ/ಮಾನಸಿಕ ಸ್ಥಿತಿಗಳನ್ನು ಅವಲಂಬಿಸುವುದರಿಂದ ತನ್ನದೇ ಆದ ರೀತಿಯಲ್ಲಿ ಪರಿಸರಕ್ಕೆ ಹೊಂದಿಕೊಳ್ಳುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯ ಹೊಂದಾಣಿಕೆಯನ್ನು ಪ್ರತ್ಯೇಕವಾಗಿಯೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಹೊಂದಾಣಿಕೆಯ ಜೈವಿಕ ಪರಿಕಲ್ಪನೆ ಮಾನವನ ಹೊಂದಾಣಿಕೆ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಸೂಕ್ತವಾದುದಲ್ಲ. ಇದಕ್ಕಾಗಿ ಮನೋವಿಜ್ಞಾನಿಗಳು 'ಸಮಾಯೋಜನೆ' (Adjustment) ಎಂಬ ಪರಿಕಲ್ಪನೆಯನ್ನು ಉಪಯೋಗಿಸುತ್ತಾರೆ. 'ಸಮಾಯೋಜನೆ' ಪ್ರಕ್ರಿಯೆ ಮನೋವೈಜ್ಞಾನಿಕವಾಗಿದ್ದು, ಸಂವೇಗಾತ್ಮಕವಾದ ಪ್ರಕ್ರಿಯೆಯಾಗಿದೆ.

ಪ್ರತಿಯೊಂದು ಕ್ಷಣದಲ್ಲೂ ವ್ಯಕ್ತಿಗೆ ಒಂದಲ್ಲ ಒಂದು ಅಗತ್ಯ ಕಾಡುತ್ತಲೇ ಇರುತ್ತದೆ. ಕೆಲವು ಅಗತ್ಯಗಳನ್ನು ವ್ಯಕ್ತಿ ಶಾಶ್ವತವಾಗಿ ಪೂರೈಸಿಕೊಳ್ಳಲು ಸಾಧ್ಯವೇ ಇಲ್ಲ. ಉದಾಹರಣೆಗೆ, ಗಾಳಿ, ನೀರು, ಆಹಾರ, ವಿಶ್ರಾಂತಿ, ನಿದ್ರೆ. ಆದ್ದರಿಂದ ವ್ಯಕ್ತಿ ನಿರಂತರವಾಗಿ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಲೇ ಇರುತ್ತಾನೆ. ಮಾನವನು ಈ ಅಗತ್ಯಗಳ ಪೂರೈಕೆಗೆ ಬಾಹ್ಯ ಪರಿಸರವನ್ನು ಅವಲಂಬಿಸಿರುತ್ತಾನೆ. ಪ್ರತಿಕೂಲ ಪರಿಸರ, ಸಾಮರ್ಥ್ಯದ ಅಭಾವ, ವ್ಯಕ್ತಿಯ ಅಗತ್ಯಗಳ ಪೂರೈಕೆಗೆ ಅಡ್ಡಿಯಾಗಬಹುದು. ಯಾವುದೇ ಒಂದು ಅಗತ್ಯದ ಪೂರೈಕೆ ಆಗದೆ ಇದ್ದರೆ ವ್ಯಕ್ತಿಗೆ ಅತೃಪ್ತಿ ಮತ್ತು ಅಸಂತುಷ್ಟತೆ ಉಂಟಾಗುತ್ತದೆ. ವ್ಯಕ್ತಿಯ ಅಗತ್ಯಗಳು ಅವನಲ್ಲಿ ತುಯ್ತ, ತಳಮಳ, ಉದ್ವೇಗ, ಆತಂಕವನ್ನು ಉಂಟುಮಾಡುತ್ತವೆ. ಇವು ಆಂತರಿಕ ಅಸಮತೋಲನ ಸ್ಥಿತಿ ಉಂಟಾಗುವುದಕ್ಕೆ ಕಾರಣವಾಗುತ್ತವೆ. ಇದರಿಂದಾಗಿ ವ್ಯಕ್ತಿಯು ತನ್ನ ಅಗತ್ಯಗಳನ್ನು ಪೂರೈಸಬಲ್ಲ ಗುರಿಗಳಲ್ಲಿ ನಿರ್ದಿಷ್ಟವಾದುದನ್ನು ಆಯ್ದುಕೊಂಡು ಅದನ್ನು ಪೂರೈಸಿಕೊಳ್ಳಲು ಮುಂದಾಗುತ್ತಾನೆ. ವ್ಯಕ್ತಿಯಲ್ಲಿ ಉಂಟಾಗುವ ಚಾಲನಶಕ್ತಿ ಮತ್ತು ಅಭಿಪ್ರೇರಣೆಗಳು ವ್ಯಕ್ತಿ ಅಗತ್ಯವನ್ನು ಪೂರೈಸಿಕೊಳ್ಳಲು ಗುರಿಯೆಡೆಗೆ

Digitised by Bharatavani, CIIL

ಸಾಗುವಂತೆ ಮಾಡುತ್ತವೆ. ಅನೇಕ ಸಲ ವ್ಯಕ್ತಿ ತನ್ನ ಅಗತ್ಯವನ್ನು ಪೂರೈಸಿಕೊಳ್ಳುವ ಕಾರಣಕ್ಕಾಗಿ ಗುರಿಯತ್ತ ಸಾಗುವಾಗ ಅಡಚಣೆಗಳನ್ನು ಅಥವಾ ತಡೆಗಳನ್ನು ಎದುರಿಸಬೇಕಾಗುತ್ತದೆ. ವ್ಯಕ್ತಿಗೆ ತಡೆಗಳನ್ನು ಭೇದಿಸದೆ ಗುರಿ ತಲುಪಲು ಸಾಧ್ಯವಾಗುವುದಿಲ್ಲ. ಗುರಿಯನ್ನು ತಲುಪದೆ ಅಗತ್ಯವನ್ನು ಪೂರೈಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಗತ್ಯದ ಪೂರೈಕೆ ಆಗಬೇಕಾದರೆ ವ್ಯಕ್ತಿ ತನ್ನ ಕಾರ್ಯ ವಿಧಾನವನ್ನು ಬದಲಾಯಿಸಿಕೊಳ್ಳಬೇಕು ಅಥವಾ ಗುರಿಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕು. ಅಂದರೆ ವ್ಯಕ್ತಿ ಅಗತ್ಯಗಳ ಪೂರೈಕೆಗಾಗಿ ತನ್ನ ವರ್ತನೆಯನ್ನು ಬದಲಿಸಬೇಕು ಮತ್ತು ಗುರಿ ತಲುಪಬೇಕು. ಅಗತ್ಯದ ಪೂರೈಕೆ ಆಗಬೇಕು. ಆಗ ವ್ಯಕ್ತಿಯ ತುಯ್ತ, ತಳಮಳ, ಉದ್ವೇಗ ನಿಲ್ಲುತ್ತವೆ. ಇದನ್ನೇ ಸಮಾಯೋಜನೆಯ ಪ್ರಕ್ರಿಯೆ ಎನ್ನುತ್ತಾರೆ. ಆದ್ದರಿಂದ ವ್ಯಕ್ತಿ ತನಗೂ ತನ್ನ ಪರಿಸರಕ್ಕೂ ನಡುವೆ ಸಾಮರಸ್ಯವನ್ನು ಏರ್ಪಡಿಸುವುದಕ್ಕಾಗಿ ತನ್ನ ವರ್ತನೆಯನ್ನು ಬದಲಿಸುವ ಪ್ರಕ್ರಿಯೆಯನ್ನು 'ಸಮಾಯೋಜನೆ' ಎಂದು ಕರೆಯುತ್ತಾರೆ.

ವ್ಯಕ್ತಿಯು ಜೀವನದಲ್ಲಿ ನಿರಂತರವಾಗಿ ಒಂದಲ್ಲ ಒಂದು ಅಗತ್ಯದ ಪೂರೈಕೆಗಾಗಿ ಚಟುವಟಿಕೆಯಲ್ಲಿ ನಿರತನಾಗಿರುತ್ತಾನೆ. ಆದ್ದರಿಂದ ಸಮಾಯೋಜನೆ ಒಂದು ನಿರಂತರ ಪ್ರಕ್ರಿಯೆಯಾಗಿದೆ.

ಕೋಲಮನ್, ಜೇಮ್ಸ್ ಪ್ರಕಾರ ಸಮಾಯೋಜನೆಯು "ವ್ಯಕ್ತಿಯ ಒತ್ತಡವನ್ನು ನಿಭಾಯಿಸಲು ಮತ್ತು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಅಲ್ಲದೆ ಪರಿಸರದೊಂದಿಗೆ ಸುಸಂಗತವಾದ ಸಂಬಂಧವನ್ನು ನಿರ್ವಹಿಸಲು ಮಾಡುವ ಪ್ರಯತ್ನದ ಫಲಿತವಾಗಿದೆ".

ಗೇಟ್ಸ ಎ.ಎಸ್. ಮತ್ತು ಜರ್ಸಿಲ್ಡ್ ಎ.ಟಿ. ಅವರ ದೃಷ್ಟಿಯಲ್ಲಿ "ವ್ಯಕ್ತಿ ತನ್ನ ಮತ್ತು ತನ್ನ ಪರಿಸರದ ನಡುವೆ ಹೆಚ್ಚು ಸಾಮರಸ್ಯವುಳ್ಳ ಸಂಬಂಧವನ್ನು ಉಂಟುಮಾಡಲು ತನ್ನ ವರ್ತನೆಯನ್ನು ಬದಲಾಯಿಸುವ ಒಂದು ನಿರಂತರ ಪ್ರಕ್ರಿಯೆಯಾಗಿದೆ."

### ಸಮಾಯೋಜನೆಯ ಮಹತ್ವ

ವ್ಯಕ್ತಿಯ ವಿಕಾಸಕ್ಕೆ ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವು ಮುಖ್ಯ. ಉತ್ತಮ ಸಮಾಯೋಜನೆಯು ದೈಹಿಕ ಆರೋಗ್ಯವನ್ನು ವೃದ್ಧಿಸುತ್ತದೆ ಮತ್ತು ದಕ್ಷತೆಯನ್ನು ಹೆಚ್ಚಿಸುತ್ತದೆ. ಉತ್ತಮ ಸಮಾಯೋಜನೆ ಹೊಂದಿದ ವ್ಯಕ್ತಿಯು ಪರಿಸರದಲ್ಲಿ ಎದುರಾಗುವ ಸಮಸ್ಯೆಗಳನ್ನು ಸುಲಭವಾಗಿ ಎದುರಿಸುತ್ತಾನೆ.

ಮಾನಸಿಕ ಅನಾರೋಗ್ಯ ಉಂಟಾಗಲು ಸಮರ್ಪಕ ಸಮಾಯೋಜನೆ ಇಲ್ಲದಿರುವುದು ಒಂದು ಪ್ರಮುಖ ಕಾರಣ. ಏಕೆಂದರೆ ವ್ಯಕ್ತಿ ಬಾಹ್ಯ ಜಗತ್ತಿನೊಂದಿಗೆ ಮತ್ತು ತನ್ನೊಂದಿಗೆ ಉತ್ತಮ ಸಮಾಯೋಜನೆಯನ್ನು ಹೊಂದಿರುವ ಸ್ಥಿತಿಯೇ ಮಾನಸಿಕ ಆರೋಗ್ಯವಂತ ಸ್ಥಿತಿಯಾಗಿದೆ. ಉತ್ತಮ ಸಮಾಯೋಜನೆ ವ್ಯಕ್ತಿಯ ಆಂತರಿಕ ದ್ವಂದ್ವಗಳು, ಮನೋಕ್ಷೋಭೆ ಮತ್ತು ಭಾವೋದ್ವೇಗಗಳಿಂದ ದೂರವಾಗುವಂತೆ ಮಾಡುತ್ತದೆ. ಇದು ವ್ಯಕ್ತಿ ತನ್ನ ಅಂತಃಸತ್ವ ಮತ್ತು ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವ್ಯಕ್ತಗೊಳಿಸಲು ಸಹಾಯಕವಾಗಿದೆ.

ಉತ್ತಮ ಸಮಾಯೋಜನೆ ಹೊಂದಿದ ವ್ಯಕ್ತಿಯಲ್ಲಿ ಸಾಮಾಜಿಕ ಅರಿವು ಇರುತ್ತದೆ. ಅಂಥ ವ್ಯಕ್ತಿ ಸಮಾಜಕ್ಕೆ ಒಳಿತು ಉಂಟು ಮಾಡುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾನೆ. ವ್ಯಕ್ತಿಯು ಆರೋಗ್ಯಕರವಾದ ಹಾಗೂ ಸಂತೋಷಕರವಾದ ಜೀವನ ಸಾಗಿಸಲು ಬಹಳ ಮಟ್ಟಿಗೆ ಸಮಾಯೋಜನೆ ಕಾರಣವಾಗುತ್ತದೆ.

ಮಕ್ಕಳಲ್ಲೂ ಸಮಾಯೋಜನೆಯಿಂದ ಆಗುವ ಲಾಭಗಳು ಅನೇಕ. ಮಕ್ಕಳು ಕಲಿಕೆಯಲ್ಲಿ ಗಮನ ಕೇಂದ್ರೀಕರಿಸಲು ಮತ್ತು ತರಗತಿಯಲ್ಲಿ ಗಳಿಸಿದ ಜ್ಞಾನವನ್ನು ಉಳಿಸಿಕೊಳ್ಳಲು ಉತ್ತಮ ಸಮಾಯೋಜನೆ ಆವಶ್ಯಕ.

ಉತ್ತಮ ಸಮಾಯೋಜನೆ ಹೊಂದಿದ ವ್ಯಕ್ತಿ ಆಧ್ಯಾತ್ಮಿಕವಾಗಿ ಮುಂದಿನ ಹಂತ ತಲುಪಲು ಸಾಧ್ಯವಾಗುತ್ತದೆ. ವ್ಯಕ್ತಿಯ ದೈಹಿಕ ಆರೋಗ್ಯ, ಮಾನಸಿಕ ತೃಪ್ತಿ, ಸಂವೇಗಗಳ ಸಮರ್ಪಕ ನಿಯಂತ್ರಣ, ಸಾಮಾಜಿಕ ಸ್ವೀಕಾರ ಇತ್ಯಾದಿಗಳಿಗೆ ಉತ್ತಮ ಸಮಾಯೋಜನೆ ಸಹಾಯಕ ಇವುಗಳ ಮೂಲಕ ವ್ಯಕ್ತಿ ಸರ್ವತೋಮುಖ ವಿಕಾಸವನ್ನು ಸಾಧಿಸಲು ಸಾಧ್ಯವಾಗುತ್ತದೆ.

–ಎಸ್.ಪಿ.ಎಸ್.

## ಸಮಾಯೋಜನೆ ಮತ್ತು ಧ್ಯಾನ

ಪ್ರತಿಯೊಂದು ಜೀವಿಯೂ ತನ್ನ ಪರಿಸರಕ್ಕೆ ಹೊಂದಿಕೊಳ್ಳಲೇ ಬೇಕು ಎಂದು ಜೀವವಿಜ್ಞಾನಿ ಡಾರ್ವಿನ್ ತನ್ನ ಜೀವವಿಕಾಸ ಸಿದ್ಧಾಂತದಲ್ಲಿ ಮಂಡಿಸಿದ್ದಾನೆ.

***"ವ್ಯಕ್ತಿ ತನ್ನ ಪರಿಸರದೊಂದಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹೊಂದಿಕೊಳ್ಳುವ ಪ್ರಕ್ರಿಯೆಯೇ ಸಮಾಯೋಜನೆ".***

ಸಮಾಯೋಜನೆಯು ವ್ಯಕ್ತಿಯ ಜೀವನಪರ್ಯಂತ ನಡೆಯುವ ನಿರಂತರ ಪ್ರಕ್ರಿಯೆ. ಇದು ವ್ಯಕ್ತಿಯು ತನ್ನ ಅಗತ್ಯತೆಗಳು ಮತ್ತು ಸಮಾಜದ ಬೇಡಿಕೆಗಳ ಮಧ್ಯೆ ಸಾಧಿಸುವ ಅನ್ಯೋನ್ಯ ಸಂಬಂಧ. ತನಗೆ ಎದುರಾಗುವ ಸಮಸ್ಯೆಗಳನ್ನು ಎದುರಿಸಿ ತನ್ನ ಗುರಿಯನ್ನು ಸಾಧಿಸುವ ರೀತಿಯೇ ಸಮಾಯೋಜನೆ. ಇದು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಿನ್ನೆಲೆಯಲ್ಲಿ ಗುಂಪಿನ ಆದರ್ಶಗಳೊಂದಿಗೆ ಹೊಂದಿರುವ ಸ್ಥಿರತೆಯಾಗಿದೆ. ವ್ಯಕ್ತಿಯ ಸಹಜ ಗುಣಗಳು ಮತ್ತು ಆತನನ್ನು ಆವರಿಸಿರುವ ಪರಿಸರದ ಸ್ಥಿತಿಗಳ ನಡುವಿನ ಸುಸಾಂಗತ್ಯವನ್ನು ಕಾಪಾಡಿಕೊಂಡು ಹೋಗುವ ನಿರಂತರ ಕಾರ್ಯಗತಿ. ವ್ಯಕ್ತಿಯು ಸತತವಾಗಿ ತನ್ನ ಪರಿಸರಕ್ಕೆ ಹೊಂದಿಕೊಳ್ಳುವಾಗ ತನ್ನ ನಿಯಂತ್ರಣಕ್ಕೆ ಮೀರಿದ ಅನೇಕ ಆಂತರಿಕ ಹಾಗೂ ಬಾಹ್ಯ ಕಾರಣಗಳು ಪ್ರಭಾವ ಬೀರುತ್ತವೆ. ವ್ಯಕ್ತಿ ತನ್ನ ಅಗತ್ಯ ಮತ್ತು ಇತರರ ಅಗತ್ಯತೆಗಳನ್ನು ಪೂರೈಸುವಲ್ಲಿ ಪ್ರಭಾವ ಬೀರುವ ಸನ್ನಿವೇಶಗಳನ್ನು ಸಮತೋಲನದಲ್ಲಿ ಕಾಯ್ದಿಟ್ಟುಕೊಳ್ಳುವ ಪ್ರಕ್ರಿಯೆಯನ್ನು ಸಮಾಯೋಜನೆಯೆಂದು **ಲಾರೆನ್ಸ್ ಎಫ್ ಶಾಫರ್** ವ್ಯಾಖ್ಯಾನಿಸಿದ್ದಾರೆ.

ವ್ಯಕ್ತಿತ್ವ ನಿರ್ಮಾಣದಲ್ಲಿ ಈ ಸಮಾಯೋಜನೆ ಅತಿ ಮುಖ್ಯ ಪಾತ್ರ ವಹಿಸುವುದರಿಂದ ಯಾವ ವ್ಯಕ್ತಿಯು ಉತ್ತಮ ಹೊಂದಾಣಿಕೆಯನ್ನು ತನ್ನ ಪರಿಸರದೊಂದಿಗೆ ಪರಿಣಾಮಕಾರಿಯಾಗಿ ಸಾಧಿಸ ಬಲ್ಲನೋ ಅವನು ಜೀವನದಲ್ಲಿ ಯಶಸ್ಸನ್ನು ಪಡೆಯುತ್ತಾನೆ. ಅವನು ತನ್ನ ಜನರೊಡನೆ ಯೋಗ್ಯ ಸಂಬಂಧವನ್ನು ಬೆಳೆಸಿಕೊಂಡು ತೃಪ್ತ ಜೀವನವನ್ನು ನಡೆಸುತ್ತಿರುತ್ತಾನೆ. ಇದು ವ್ಯಕ್ತಿಯ ಬಾಹ್ಯ ಸಮಾಯೋಜನೆಗೇ ಅಲ್ಲದೇ ಆಂತರಿಕ ಸ್ಥಿತಿಯಲ್ಲಿಯೂ ಸಮಾಯೋಜನೆಯನ್ನು ಹೊಂದಿರುತ್ತಾನೆ.

ವ್ಯಕ್ತಿಯಲ್ಲಿ ಸಮಾಯೋಜನೆ ತರಲು ಅವನ ಮೂಲ ಅಗತ್ಯತೆಗಳನ್ನು ಪೂರೈಸಬೇಕು. ಈ ಅಗತ್ಯತೆಗಳನ್ನು ಮಾಸ್ಲೋ (Maslow) ಶ್ರೇಣಿಯ ರೂಪದಲ್ಲಿ ಈ ರೀತಿ ಶ್ರೇಣೀಬದ್ಧಗೊಳಿಸಿದ್ದಾರೆ.

Digitised by Bharatavani, CIIL




ಮಾನವನ ಶಾರೀರಿಕ ಮೂಲ ಅಗತ್ಯತೆಗಳಾದ ಆಹಾರ, ನೀರು, ಗಾಳಿ ಪೂರೈಕೆಗೊಂಡಾಗ ಮಾತ್ರ, ಆಶ್ರಯಕ್ಕಾಗಿ ಪರಿತಪಿಸುತ್ತಾನೆ. ನಂತರ ಮಾನಸಿಕ ಮತ್ತು ಸಾಮಾಜಿಕ ಅಗತ್ಯತೆಗಳಾದ ಪ್ರೀತಿ, ವಿಶ್ವಾಸ, ಗೌರವ ಮತ್ತು ಪ್ರತಿಷ್ಠೆ ಇವುಗಳ ಚಿಂತನೆ ಇರುತ್ತದೆ. ವ್ಯಕ್ತಿ ಸುಖಜೀವನ ನಡೆಸಬೇಕಾದರೆ ಈ ಎಲ್ಲಾ ಅಗತ್ಯತೆಗಳು ಪೂರೈಕೆಯಾಗಬೇಕು. ಅವನು ತನ್ನ ಅಖಂಡ ಸಾಮರ್ಥ್ಯವನ್ನು ಗುರುತಿಸಿಕೊಂಡು ಆತ್ಮ ಸಾಕ್ಷತ್ಕಾರವನ್ನು ಪಡೆಯುತ್ತಾನೆ. ಆಗ ಅವನು ಸಮಂಜಸವಾದ ವ್ಯಕ್ತಿತ್ವವನ್ನು ಹೊಂದಿರುವನೆಂದು ಹೇಳಬಹುದು.

ಮನೋವಿಶ್ಲೇಷಣೆಯ ಪಿತಾಮಹನೆನಿಸಿರುವ ಸಿಗ್ಮಂಡ್ ಫ್ರಾಯ್ಡ್‌ನ ಸಿದ್ಧಾಂತದ ಪ್ರಕಾರ ವ್ಯಕ್ತಿತ್ವವು ಮೂರು ಪ್ರಧಾನವಾದ ಅಂಶಗಳಿಂದ ಸಂರಚನೆಯಾಗಿರುತ್ತದೆ. ಇದ್, ಈಗೋ (ಅಹಂ), ಸೂಪರ್ ಈಗೋ (ಪರಸ್ವ).

ಈ ಮೂರು ವ್ಯವಸ್ಥೆಗಳ ಚಟುವಟಿಕೆಗಳು, ಗುಣಲಕ್ಷಣಗಳು ಹಾಗೂ ಕಾರ್ಯ ನಿರ್ವಹಣಾ ತತ್ವಗಳಲ್ಲಿ ವಿಭೇದಯನ್ನು ಹೊಂದಿದ್ದರೂ ಅವುಗಳ ನಿಕಟವಾದ ಪರಸ್ಪರಾನುವರ್ತನೆಯ ಪ್ರತಿಫಲವೇ ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ಪ್ರದರ್ಶಿಸುವ ವರ್ತನೆ ಹಾಗೂ ವ್ಯಕ್ತಿಯ ಸಮಾಯೋಜನೆಗೆ ನೇರವಾಗಿ ಸಂಬಂಧ ಹೊಂದಿದೆ. ಮನುಷ್ಯನ ಅತಿಯಾದ ಆಸೆ ಮತ್ತು ಆಕಾಂಕ್ಷೆಗಳು ವ್ಯಕ್ತಿಯ ಸಮತೋಲನ ಸ್ಥಿತಿಯನ್ನು ಹಾಳು ಮಾಡುವುದರಿಂದ ಇದ್, ಈಗೋ ಮತ್ತು ಸೂಪರ್ ಈಗೋಗಳಲ್ಲಿ ನಡೆಯುವ ಹೊಂದಾಣಿಕೆ ಅವನ ವ್ಯಕ್ತಿತ್ವಕ್ಕೆ ಸಹಾಯ ಮಾಡುತ್ತದೆ. ಯಾವ ವ್ಯಕ್ತಿಯೂ ತನ್ನನ್ನು ತಾನು ಸುಖಿ ಎಂದು ಕರೆದುಕೊಳ್ಳುವುದು ಕಡಿಮೆ.

ಉತ್ತಮ ಸಮತೋಲಿತ ವ್ಯಕ್ತಿತ್ವವನ್ನು ಹೊಂದಿರುವ ವ್ಯಕ್ತಿಗಳಲ್ಲಿ ಈ ರೀತಿಯ ಗುಣಗಳನ್ನು ಕಾಣಬಹುದು. ಟೀಕೆಗಳಿಗೆ ಬೆಲೆ ಕೊಡುವುದಿಲ್ಲ ಹಾಗೂ ಇತರರನ್ನು ಟೀಕೆ ಮಾಡುವುದಿಲ್ಲ. ಅರ್ಪಣಾ ಮನೋಭಾವವನ್ನು ಹೊಂದಿದ್ದು, ಇತರರ ಏಳಿಗೆ ಮತ್ತು ಶ್ರೇಯಸ್ಸಿಗೋಸ್ಕರ ಶ್ರಮಿಸುತ್ತಾನೆ. ಒಬ್ಬಂಟಿಯಾಗಿರಲು ಇಚ್ಛಿಸದೇ ಎಲ್ಲರೊಂದಿಗೆ ಬೆರೆತು ಸಹಕಾರದಿಂದ ಇರುತ್ತಾನೆ. ಸದಾ ಹಸನ್ಮುಖಿಯಾಗಿ, ಉತ್ಸಾಹಿಯಾಗಿ ಹಾಸ್ಯ ಪ್ರವೃತ್ತಿಉಳ್ಳವನಾಗಿರುತ್ತಾನೆ. ನಿತ್ಯ ಜೀವನದ ಏರು ಪೇರುಗಳಿಗೆ ಧೃತಿಗೆಡದೆ ಮಾನಸಿಕವಾಗಿ ಪ್ರಬಲನಾಗಿರುತ್ತಾನೆ. ತಾಳ್ಮೆ ಕಳೆದುಕೊಳ್ಳದೆ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುತ್ತಾನೆ. ಆಡಂಬರ, ಹೊಗಳಿಕೆ ಮತ್ತು ತೆಗಳಿಕೆಗಳನ್ನು ಸಮಾನ ಮನಸ್ಸಿನಿಂದ ಸ್ವೀಕರಿಸುತ್ತಾನೆ. ಸಮಯಪ್ರಜ್ಞೆ, ಕಾರ್ಯ ವೈಖರಿಯಲ್ಲಿ ಪ್ರಾಮಾಣಿಕತೆಯನ್ನು ಮೆರೆಯುತ್ತಾನೆ. ಬೇರೆಯವರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾನೆ. ಸಾಮಾಜಿಕ ಕಾರ್ಯಗಳಲ್ಲಿ ಶ್ರಮಿಸುತ್ತಾನೆ. ತಮ್ಮ ಜೀವನದ ಮೌಲ್ಯ ಮತ್ತು ತತ್ವಗಳಿಗೆ ಬದ್ಧನಾಗಿರುತ್ತಾನೆ.

ಧ್ಯಾನ ಎಂಬುದು ಸಮಾಯೋಜನೆಗೆ ಸಂಬಂಧಪಟ್ಟ ಮತ್ತೊಂದು ಪ್ರಕ್ರಿಯೆಯಾಗಿದೆ. ಉತ್ತಮ ಮಾನಸಿಕ ಆರೋಗ್ಯಕ್ಕಾಗಿ ಸಕಾರಾತ್ಮಕ ಮನೋಭಾವ, ಪ್ರೀತಿ, ಕ್ಷಮೆ, ವಾತ್ಸಲ್ಯ, ಹೃದಯ ವೈಶಾಲ್ಯ, ಪರಮಾತ್ಮನಲ್ಲಿ ಶ್ರದ್ಧೆ, ಸತ್ಯತೆ, ಆರೋಗ್ಯಕರ ವಿಶ್ಲೇಷಣಾತ್ಮಕತೆ, ನಮ್ರತೆ, ವೈರಾಗ್ಯ, ಒಳ್ಳೆಯ ಜ್ಞಾಪಕಶಕ್ತಿ, ಜ್ಞಾನ, ನಿರ್ಣಯಕ್ಷಮತೆ, ಕೃತಜ್ಞತೆ, ನೇತೃತ್ವಗುಣ, ಹಸನ್ಮುಖತೆ, ನಿಸ್ವಾರ್ಥತೆ, ಔದಾರ್ಯ, ಅಮಿತ ಆತ್ಮವಿಶ್ವಾಸ, ಧೈರ್ಯ, ಕರ್ತವ್ಯದಕ್ಷತೆ ಹಾಗೂ ಭರವಸೆಗೆ ಪಾತ್ರತೆ–ಗುಣಗಳನ್ನು ಬೆಳೆಸಿಕೊಳ್ಳಲು ಸಕಾರಾತ್ಮಕ ಪ್ರಯತ್ನವನ್ನು ಮಾಡಬೇಕು.

ಮನಸ್ಸಿನಲ್ಲಿರುವ ವಿಚಾರಗಳು ಕಡಿಮೆಯಾಗಲು, ಮಾನಸಿಕ ಒತ್ತಡವನ್ನು ಕಡಿಮೆ ಮಾಡಲು ಭಯ, ಕಾತರ, ತವಕ, ನಿರರ್ಥಕ, ಉದ್ವಿಗ್ನತೆ ಇತ್ಯಾದಿ ವಿಚಾರಗಳಿಂದ ಹೊರಬರಲು ಮನಸ್ಸನ್ನು ಶುದ್ಧ, ಸೂಕ್ಷ್ಮ ಹಾಗೂ ಸಾತ್ವಿಕವಾಗಿಡಲು ಧ್ಯಾನ ಸಹಾಯ ಮಾಡುತ್ತದೆ. "ಸತತವಾಗಿ ಮನಸ್ಸಿನಂತರಾಳದಲ್ಲಿರುವ ಸಂಸ್ಕಾರಗಳ ಕಡೆಗೆ ಗಮನ ನೀಡದೆ ಅವುಗಳನ್ನು ಕಡೆಗಣಿಸಿ ಅವುಗಳನ್ನು ಲಯ ಮಾಡುವ ಪ್ರಯತ್ನಕ್ಕೆ ಧ್ಯಾನ ಎನ್ನುವರು."

ಧ್ಯಾನವನ್ನು ಪತಂಜಲಿ ಅಷ್ಟಾಂಗ ಯೋಗದ ಏಳನೇ ವಿಧಾನವೆಂದು ವಿವರಿಸುತ್ತಾರೆ. ಧ್ಯಾನ ಎಲ್ಲ ಮತಧರ್ಮೀಯರಿಗೂ ಅನ್ವಯಿಸುತ್ತದೆ. ಸ್ವಮತಾಂಧತೆ ಮತ್ತು ಮೂಢನಂಬಿಕೆಗಳನ್ನು ದೂರವಿಟ್ಟು ತನ್ನ ಮತಧರ್ಮದಲ್ಲಿ ಹೇಳಿರುವಂತೆ ಧ್ಯಾನಮಾಡುವವನಿಗೆ ಅಧ್ಯಾತ್ಮದಲ್ಲಿ ಮೇಲೇರಲು ಸಾಧ್ಯವಿದೆ. ಅಧ್ಯಾತ್ಮ ವಿಕಾಸದ ಗುರಿಯಾದ ಆತ್ಮ ಸಾಕ್ಷಾತ್ಕಾರಕ್ಕಾಗಿ ಮನಸ್ಸಿನ ಒಳಹೊಕ್ಕು ನೋಡುವುದೇ ಧ್ಯಾನ. ಸ್ವಾಭಾವಿಕವಾಗಿ ಒಂದೆಡೆ ನಿಲ್ಲುವ ಅಭ್ಯಾಸವಿಲ್ಲದ ಮನಸ್ಸು ಧ್ಯಾನ ಮಾಡುವಾಗ ಸ್ಥಿರಗೊಳ್ಳುತ್ತದೆ. ಈ ರೀತಿಯ ಮನಸ್ಸಿನ ಸ್ಥಿರತೆಗೆ ಸೂಕ್ತ ಪರಿಸರ ಅವಶ್ಯಕ. ಪರಿಸರವು ನಿಶ್ಶಬ್ಧವಾಗಿ, ಸರಳವಾಗಿ ಮತ್ತು ಶುದ್ಧವಾಗಿರಬೇಕು. ಪ್ರತ್ಯೇಕ ಕೊಠಡಿ ಅಥವಾ ಕೊಠಡಿಯ ಒಂದು ಮೂಲೆ ಸರಳವೂ, ಶುಚಿಯೂ ಆದ ಉಡುಪು, ಅನಾಯಾಸವಾಗಿ ಕುಳಿತುಕೊಳ್ಳುವ ಆಸನ ಸ್ಥಿತಿ, ಮುಚ್ಚಿದ ಕಣ್ಣುಗಳು ಮತ್ತು ಆಯ್ದುಕೊಂಡ ಲಕ್ಷ್ಯದ ಮೇಲೆ ಕೇಂದ್ರೀಕೃತ ಮನಸ್ಸು ಇವು ಧ್ಯಾನಿಸಲು ಅಗತ್ಯವಾದುವು. ಯಾಕೆಂದರೆ ಸ್ವಾಮಿ ಶಿವಾನಂದರ ಪ್ರಕಾರ ಕೇಂದ್ರೀಕರಣವೇ ಧ್ಯಾನದ ಮುಖ್ಯ ಮೆಟ್ಟಿಲು. ಪ್ರಾರಂಭದಲ್ಲಿ ಧ್ಯಾನವನ್ನು ಅಲ್ಪಾವಧಿಗೆ ಮಿತಿಗೊಳಿಸಿ ಕ್ರಮೇಣ ಅದರ ಅವಧಿಯನ್ನು ಹೆಚ್ಚಿಸುತ್ತಾ ಹೋಗಬೇಕು. ನಿರಂತರವಾಗಿ ಅಭ್ಯಾಸ ಮಾಡುವ ಧ್ಯಾನವನ್ನು ಸತತವಾಗಿ ಹರಿಯುವ ಎಣ್ಣೆಯ ಪ್ರವಾಹಕ್ಕೆ ಹೋಲಿಸುತ್ತಾರೆ (**ತೈಲಧಾರವತ್**). 12 ಸೆಕೆಂಡಿನಷ್ಟು ಕಾಲ ಮನಸ್ಸಿನ ಏಕಾಗ್ರತೆ ಮೂಡಿದಲ್ಲಿ ಧಾರಣೆ ಆಗುವುದು. ಎರಡು ನಿಮಿಷಗಳಷ್ಟು ಕಾಲ ಏಕಾಗ್ರತೆ ಸಾಧಿಸಿದಲ್ಲಿ ಧ್ಯಾನ ಆಗುವುದು. 30

Digitised by Bharatavani, CIIL

ನಿಮಿಷಗಳಷ್ಟು ಕಾಲ ಏಕಾಗ್ರತೆ ಸಾಧಿಸಿದಲ್ಲಿ ಸಮಾಧಿ ಆಗುವುದು. ಧಾರಣೆ, ಧ್ಯಾನ ಮತ್ತು ಸಮಾಧಿಗಳು ಅಷ್ಟಾಂಗಯೋಗದ ಕೊನೆಯ ಮೂರು ಹಂತಗಳು. ಸಮಾಯೋಜನ ಪ್ರಕ್ರಿಯೆಗೆ ಮನಸ್ಸಿನ ಮೇಲೆ ಹತೋಟಿ ಇಟ್ಟುಕೊಳ್ಳಲು ಧ್ಯಾನ ಸಹಾಯ ಮಾಡುತ್ತದೆ.

ಧ್ಯಾನ ಎಂಬುದೊಂದು ಸ್ಥಿತಿ. ಈ ಸ್ಥಿತಿಗೆ ಹೋಗಲು ಅನೇಕ ಪದ್ಧತಿಗಳಿವೆ. ಯಾರಿಗೆ ಯಾವ ಪದ್ಧತಿ ಅನುಕೂಲವೋ ಆ ಪದ್ಧತಿಯನ್ನು ಅವರು ಅನುಸರಿಸಬಹುದು. ಒಂದು ಸರಳ ಸುಲಭ ಪದ್ಧತಿಯನ್ನು ಇಲ್ಲಿ ವಿವರಿಸಲಾಗಿದೆ. ನೆಲದ ಮೇಲೆ ಚಾಪೆ ಅಥವಾ ಬಟ್ಟೆ ಹಾಕಿ ಅದರ ಮೇಲೆ ನಿಮಗೆ ಆರಾಮದಾಯಕವಾದ ಪದ್ಮಾಸನ, ವಜ್ರಾಸನ ಅಥವಾ ಸುಖಾಸನದಲ್ಲಿ ಕುಳಿತುಕೊಳ್ಳಬಹುದು. ಕಣ್ಣುಗಳನ್ನು ಸಾವಕಾಶವಾಗಿ ಮುಚ್ಚಿಕೊಳ್ಳಿರಿ. ಇಡೀ ಮೈಯನ್ನು ಸಡಿಲಗೊಳಿಸಿರಿ, ಶ್ವಾಸೋಚ್ಛ್ವಾಸ ಸಾಮಾನ್ಯ ಸ್ಥಿತಿಯಲ್ಲಿರಲಿ. ಮೂಗಿನ ಬುಡದಲ್ಲಿ, ಶ್ವಾಸೋಚ್ಛ್ವಾಸದ ಗಾಳಿಯ ಚಲನೆಯ ಕಡೆ ಗಮನ ಕೇಂದ್ರೀಕರಿಸಿರಿ. ನಿಮ್ಮ ಉಸಿರು ಹೊರಗೆ ಹೋಗುತ್ತಿರುವುದನ್ನು ಹಾಗೂ ಒಳಗೆ ಬರುತ್ತಿರುವುದನ್ನು ಮನಸ್ಸಿಟ್ಟು ಗಮನಿಸಿರಿ. ಇದು ಹಿತಕರ ಅನುಭವವನ್ನು ನೀಡುತ್ತದೆ. ಹೀಗೆ ಹಿತಕರ ಅನುಭವದ ಪರಿಣಾಮ ಹೆಚ್ಚಾಗುವವರೆಗೆ ಮುಂದುವರಿಸಿ. ಇದೇ ಧ್ಯಾನ ಸ್ಥಿತಿ. ಹೀಗೆ ಸಾಧಿಸುತ್ತ ಬಂದಂತೆಲ್ಲ ಧ್ಯಾನದ ಆಳದ ಸ್ಥಿತಿ ಪ್ರಾಪ್ತವಾಗುತ್ತದೆ. ಮನಸ್ಸು ಉಲ್ಲಸಿತ ಸ್ಥಿತಿಯನ್ನು ಅನುಭವಿಸುತ್ತದೆ. ಆಗ ಮನಸ್ಸಿನ ಬಾಹ್ಯದ ಅರಿವು ಕಡಿಮೆ ಆಗುತ್ತದೆ. ಮನಃಪಟಲ ಬಿಂಬ ಮಾಯವಾಗಬಹುದು. ಶ್ವಾಸೋಚ್ಛ್ವಾಸದ ಮೇಲೆ ಗಮನ ಇಲ್ಲದೇ ಹೋಗಬಹುದು. ಇದು ಧ್ಯಾನದ ಆಳದ ಸ್ಥಿತಿ. ಈ ಸ್ಥಿತಿಯಲ್ಲಿ ಆದಷ್ಟು ಹೆಚ್ಚು ಸಮಯ ಇದ್ದರೆ ಮನಸ್ಸು ಪ್ರಸನ್ನಗೊಳ್ಳುವುದು.

ಆದರೆ ಆರಂಭದಲ್ಲಿ ಶ್ವಾಸೋಚ್ಛ್ವಾಸದ ಮೇಲೆ ಏಕಾಗ್ರತೆ ಸಾಧಿಸಲಾಗದಿದ್ದ ಸಂದರ್ಭದಲ್ಲಿ ದೃಷ್ಟಿಯನ್ನು ಮೂಗಿನ ತುದಿಯಲ್ಲಿ ಕೇಂದ್ರೀಕರಿಸಿ ಮನಸ್ಸಿನಲ್ಲೇ 'ಓಂ' ಕಾರದ ಅಥವಾ ಇಷ್ಟದೇವತೆಯ ಮಾನಸ ಜಪವನ್ನು ಮಾಡುತ್ತಾ ಅದನ್ನೇ ಗಮನಿಸುತ್ತಿರಬೇಕು. **ಧ್ಯಾನದಿಂದ ಮನುಷ್ಯನಿಗೆ ಸಮಾಯೋಜನೆಯನ್ನು ಪಡೆಯಲು ಸಾಧ್ಯವಾಗುತ್ತದೆ.** ಧ್ಯಾನದಿಂದ ಮನಃಶಾಂತಿ ದೊರಕುತ್ತದೆ. ಧ್ಯಾನದ ಸ್ಥಿತಿಯಲ್ಲಿ ಬೇರೆ ಸಂವೇದನೆಗಳು ನಿರ್ಮಾಣವಾಗುವುದಿಲ್ಲ. ಸತತವಾಗಿ ಧ್ಯಾನಾವಸ್ಥೆಯಲ್ಲಿ ಈಗಾಗಲೇ ಇರುವ ಸಂವೇದನೆಗಳಿಗೆ ಗಮನ ನೀಡದಿರುವುದರಿಂದ ಅವು ಕ್ಷೀಣಿಸುತ್ತವೆ. ಹೀಗೆ ಒಟ್ಟಾರೆ ಸಂಸ್ಕಾರಗಳು ಕಡಿಮೆಯಾಗುತ್ತವೆ. ಆದ್ದರಿಂದ ಅಂತರ್ಮನದಿಂದ ಬಾಹ್ಯಮನಕ್ಕೆ ಬರುವ ಸಂವೇದನೆಗಳು ಕಡಿಮೆಯಾಗಿ ಮನಃಶಾಂತಿ ಉಂಟಾಗುತ್ತದೆ. ಮಾನಸಿಕ ಒತ್ತಡ ಹಾಗೂ ಉದ್ವಿಗ್ನತೆ ಕಡಿಮೆಯಾಗುತ್ತದೆ. ಭಾವನೆಗಳ ಮೇಲೆ ಹಿಡಿತ ಇರುವುದರಿಂದ, ದಿನನಿತ್ಯದ ಘಟನೆಗಳಲ್ಲಿ ನಮ್ಮ ಪ್ರತಿಕ್ರಿಯೆಗಳ ಮೇಲೆ ಸಕಾರಾತ್ಮಕತೆ ಹಾಗೂ ಹತೋಟಿ ಲಭ್ಯವಾಗುತ್ತದೆ. ಬುದ್ಧಿ ಶುದ್ಧವಾಗುತ್ತದೆ. ವಿವೇಕ ಜಾಗೃತವಾಗುತ್ತದೆ. ನಿರ್ಣಯಾತ್ಮಕ ಕ್ಷಮತೆ ಮತ್ತು ವಿಶ್ಲೇಷಣಾತ್ಮಕತೆ ಹೆಚ್ಚಾಗುತ್ತದೆ. ಒಟ್ಟಾರೆ ಸಕಾರಾತ್ಮಕತೆ ನಿರ್ಮಾಣವಾಗುತ್ತದೆ. ಮನಸ್ಸಿನ ಶುದ್ಧೀಕರಣ ಆಗುವುದರಿಂದ ಉತ್ತಮ ಮಾನಸಿಕ ಸ್ವಾಸ್ಥ್ಯ ಲಭಿಸಿ ಜೀವನದಲ್ಲಿ ಸಮಾಯೋಜನೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಧ್ಯಾನದಿಂದ ಅಂತಃಶಕ್ತಿ ಜಾಗೃತವಾಗುತ್ತದೆ. ಮಾನಸಿಕ ಸಂತುಲತೆ ಮತ್ತು ಸ್ಥಿಮಿತವನ್ನು ಕಾಪಾಡಲು ಧ್ಯಾನ ಸಹಾಯ ಮಾಡುತ್ತದೆ. ಧ್ಯಾನದ ಅವಧಿಯನ್ನು ಹೆಚ್ಚಿಸುತ್ತಾ ಹೋದಾಗ ಮೋಕ್ಷ ಪ್ರಾಪ್ತಿಯಾಗಿ ಆತ್ಮ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂದು ನಂಬಲಾಗಿದೆ. ಕೇಂದ್ರೀಕರಣ ಮತ್ತು ಧ್ಯಾನದಿಂದ ಪ್ರಾಪಂಚಿಕ ದುಃಖಗಳಿಂದ ಬಿಡುಗಡೆ, ಒಳ್ಳೆಯ ಆರೋಗ್ಯ, ಹಸನ್ಮುಖಿ ಮತ್ತು ಉತ್ತಮ ಕಾರ್ಯದಕ್ಷತೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಮನಸ್ಸು ವಿಷಯ ವಾಸನೆಗಳಿಂದಲೂ ದುಷ್ಟಪ್ರವೃತ್ತಿಗಳಿಂದಲೂ ದೂರ ಇರುತ್ತದೆ. ಸಂಸಾರದಲ್ಲಿ ತಾವರೆ ಎಲೆಗೆ ನೀರು ಹೇಗೆ ಅಂಟಿಕೊಂಡು ನಿಲ್ಲುವುದಿಲ್ಲವೋ ಹಾಗೆ ಅಂಟಿಕೊಳ್ಳದೆ ಬದುಕನ್ನು ಸಾಗಿಸಬೇಕು ಎಂಬ ಭಾವನೆಯಿಂದ ಮನುಷ್ಯನ ಜೀವನದಲ್ಲಿ ಸಮಾಯೋಜನೆಯನ್ನು ಮೂಡಿಸಲು ಧ್ಯಾನ ಸಹಾಯ ಮಾಡುವುದು.

–ಕೆ. ಜಯ.

## ಸಮುದಾಯ ಮತ್ತು ಶಿಕ್ಷಣ

### ಅರ್ಥ

"ಸಮುದಾಯ" ಎಂಬ ಪದವನ್ನು ಬಹಳ ಶಿಥಿಲ ಅರ್ಥದಲ್ಲಿ ಬಳಸಲಾಗುತ್ತಿದೆ. ಜನಸಾಮಾನ್ಯರು ತಮ್ಮ ಆಡುಮಾತಿನಲ್ಲಿ ಈ ಪದವನ್ನು ಬಹಳ ಧಾರಾಳವಾಗಿ ಆದರೆ ವಿಭಿನ್ನ ಅರ್ಥಗಳಲ್ಲಿ ಬಳಸುತ್ತಾರೆ. ಉದಾ: ಧಾರ್ಮಿಕ ಸಮುದಾಯ, ಭಾಷಾ ಸಮುದಾಯ, ಜಾತಿ ಸಮುದಾಯ, ಬುಡಕಟ್ಟಿನ ಸಮುದಾಯ, ಸಾಂಸ್ಕೃತಿಕ ಸಮುದಾಯ, ಔದ್ಯೋಗಿಕ ಸಮುದಾಯ, ಶಿಕ್ಷಕ ವಿದ್ಯಾರ್ಥಿ ಸಮುದಾಯ, ರಾಷ್ಟ್ರೀಯ ಸಮುದಾಯ, ಮಾನವ ಸಮುದಾಯ ಮುಂತಾದ ಹಲವು ಅರ್ಥಗಳಲ್ಲಿ ಸಂದರ್ಭಕ್ಕನುಸರಿಸಿ ಈ ಪದವು ಬಳಸಲ್ಪಡುತ್ತಿದೆ. ಕುಟುಂಬ ಅಥವಾ ನಾಲ್ಕೈದು ಮಂದಿಯ ಚಿಕ್ಕ ಸಂಘದಿಂದ ಹಿಡಿದು ಇಡೀ ಮಾನವ ಕೋಟಿಯಂತಹ ಬೃಹತ್ ಸಮೂಹವನ್ನು ಸೂಚಿಸಲು "ಸಮುದಾಯ" ಎಂಬ ಪದವನ್ನು ಪ್ರಯೋಗಿಸುವುದುಂಟು. ಸಮಾಜಶಾಸ್ತ್ರದಲ್ಲಿ ಮಾತ್ರ "ಸಮುದಾಯ" ಎಂಬುದು ಒಂದು ಮೂಲಕಲ್ಪನೆಯಾಗಿದ್ದು ಅದಕ್ಕೊಂದು ವಿಶೇಷವಾದ ವ್ಯಾಖ್ಯಾನವನ್ನು ನೀಡಲಾಗಿದೆ.

### ಒಂದು ಸಾಮಾಜಿಕ ಘಟಕವಾಗಿ ಸಮುದಾಯ

ಸಮುದಾಯ ಎಂಬ ಶಬ್ದವನ್ನು ಇಂದು ಸಮಾಜಶಾಸ್ತ್ರದಲ್ಲಿ ಎಲ್ಲರೂ ಬಳಸುತ್ತಿದ್ದರೂ ಅವರುಗಳಲ್ಲಿ ಅದರ ಅರ್ಥ ನಿಖರತೆಯ ಬಗ್ಗೆ ಸಹಮತವಿಲ್ಲ. ಅದನ್ನು ಹಲವರು ಹಲವು ವಿಧಗಳಲ್ಲಿ ಒಮ್ಮೊಮ್ಮೆ ತೀರಾ ಅಸ್ಪಷ್ಟ ಅರ್ಥದೊಂದಿಗೆ ಬಳಸುವುದುಂಟು.

### ಸಮುದಾಯದ ವ್ಯಾಖ್ಯೆಗಳು

1. ***ಕಿಂಗ್ಸ್‌ಲೇ ಡೇವೀಸ್*** : "ಸಾಮಾಜಿಕ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಂದು ಅತಿ ಚಿಕ್ಕ ಸ್ಥಾನೀಯ ಜನಸಮೂಹವನ್ನು ಸಮುದಾಯ" ಎನ್ನಬಹುದು.
2. ***ಎಮೊಲ ಬೋಗಾರ್ಡಸ್*** : "ನಾವು ನಮ್ಮವರು ಎಂಬ ಭಾವನೆಯೊಂದಿಗೆ ಒಂದು ನಿಶ್ಚಿತ ಭೂಪ್ರದೇಶದಲ್ಲಿ ವಾಸಿಸುವ ಜನಸಮೂಹವನ್ನು ಸಮುದಾಯ ಎನ್ನಬಹುದು."
3. ***ಮೆಕೈವರ್ ಮತ್ತು ಪೇಜ್*** : "ಸಾಮಾಜಿಕ ಸಾಮರಸ್ಯ ಅಥವಾ ಸಾಮಂಜಸ್ಯವನ್ನು ಹೊಂದಿರುವ ಒಂದು ಸಾಮಾಜಿಕ ನೆಲೆಯನ್ನು ಸಮುದಾಯ" ಎನ್ನಬಹುದು.
4. ***ಮ್ಯಾನ್ ಹೀಮ್*** : "ಒಂದೆಡೆ ಕಲೆತು ವಾಸಿಸುವ ಮತ್ತು ಯಾವುದೇ ಕೆಲವು ನಿರ್ದಿಷ್ಟ ಹಿತಾಸಕ್ತಿಗಳು ಮಾತ್ರವಲ್ಲದೆ, ಸಮಾನ ಹಿತಾಸಕ್ತಿಗಳ ರಾಶಿಯನ್ನೇ ಹೊಂದಿರುವ ಕಾರಣದಿಂದಾಗಿ ಒಟುಗೂಡಿರುವ ಜನಸಮೂಹವನ್ನು ಸಮುದಾಯ ಎನ್ನಬಹುದು.

ಈ ಮೇಲಿನ ವ್ಯಾಖ್ಯೆಗಳು 'ಸಮುದಾಯ'ವು ಬಹಳ ವಿಶಾಲಾರ್ಥದ ಮತ್ತು ಸರ್ವಸಮಾವೇಶಕ ಕಲ್ಪನೆಯಾಗಿದೆ ಎಂಬ ಅಂಶವನ್ನು

Digitised by Bharatavani, CIIL

ಸ್ಪಷ್ಟಪಡಿಸುತ್ತವೆ. ಅದು ತನ್ನ ವ್ಯಾಪ್ತಿಯಲ್ಲಿ ಅನೇಕ ಸಂಘಗಳನ್ನು ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಸಮುದಾಯವು ನಮ್ಮ ಸಾಮಾಜಿಕ ಜೀವನವನ್ನು ಒಳಗೊಂಡಿರುವ ಒಂದು ವಿಶಾಲ ವ್ಯವಸ್ಥೆ. ಉದಾ: ಗ್ರಾಮ, ಪಟ್ಟಣ, ನಗರ, ಆದಿವಾಸಿ ಜನಸಮೂಹ ತಾಲ್ಲೂಕ್, ಜಿಲ್ಲೆ, ಪ್ರಾಂತ, ದೇಶ ಇತ್ಯಾದಿ.

**ಸಮುದಾಯದ ಮೂಲಾಂಶಗಳು**

ಸ್ಥಾನೀಯತೆ ಅಥವಾ ನಿಶ್ಚಿತ ಪ್ರದೇಶ ಮತ್ತು ಸಾಮುದಾಯಿಕ ಭಾವನೆ ಇವು ಸಮುದಾಯದ ಮುಖ್ಯ ತಳಹದಿಯಾಗಿವೆ.

**1. ಸ್ಥಾನೀಯತೆ ಅಥವಾ ನಿಶ್ಚಿತ ಭೂಪ್ರದೇಶ**

ಸಮುದಾಯವು ಒಂದು ಸ್ಥಾನೀಯ ಸಮೂಹವಾಗಿದೆ. ಸಮುದಾಯದ ಕಲ್ಪನೆಯು ಯಾವಾಗಲೂ ನಿಶ್ಚಿತ ಭೂಪ್ರದೇಶವನ್ನು ಅವಲಂಬಿಸಿರುತ್ತದೆ. ನಿರ್ದಿಷ್ಟ ಸ್ಥಳವು ಸಮುದಾಯದ ಭೌತಿಕ ಆಧಾರವಾಗಿದೆ. ಅಲೆಮಾರಿಗಳಾಗಿರುವ ಜಿಪ್ಸಿ ಜನಾಂಗದವರೂ ಆಗಾಗ್ಗೆ ಬದಲಾಗುತ್ತಿದ್ದರೂ ಒಂದು ಗೊತ್ತಾದ ನೆಲೆಯನ್ನು ಹೊಂದಿರುವ ಒಂದು ನಿಶ್ಚಿತ ಪ್ರದೇಶದಲ್ಲಿ ಶಾಶ್ವತವಾಗಿ ನೆಲೆ ನಿಲ್ಲಲು ಆರಂಭಿಸಿದ ಮೇಲೆಯೇ ಅವರ ಸಮೂಹವು ಸಮುದಾಯ ಎನ್ನಿಸಿಕೊಳ್ಳುವುದು. ಒಂದೆಡೆ ನೆಲೆಸುವುದರಿಂದ ಜನರು ತಮ್ಮೊಳಗೆ ನಿರಂತರ ಸಂಪರ್ಕ ಸಂಬಂಧಗಳನ್ನು ಹೊಂದಿರಲು ಸಾಧ್ಯ. ಈ ಶಾಶ್ವತ ನೆಲೆಯು ಜನರಿಗೆ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸುವುದು. ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲೂ ಅದು ಸಹಕಾರಿಯಾಗಿದೆ. ಈ ಭೌತಿಕ ನೆಲೆಯು ಜನರ ಸಾಮಾಜಿಕ ಜೀವನದ ಮೇಲೆ, ಅವರ ಕುಟುಂಬ, ಮತ-ಧರ್ಮ, ನಂಬಿಕೆ-ಶ್ರದ್ಧೆ, ಆಹಾರ-ವಿಹಾರ, ಆಚಾರ-ವಿಚಾರ ವ್ಯವಹಾರ ಇವುಗಳ ಮೇಲೆ ಗಣನೀಯ ಪ್ರಭಾವವನ್ನು ಬೀರುತ್ತದೆ.

ಆಧುನಿಕ ಜಗತ್ತಿನಲ್ಲಿ ಸಾರಿಗೆ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನದ ಸಾಧನಗಳು ಅತಿಯಾಗಿ ಹೆಚ್ಚಿದ್ದರಿಂದ ಸಮುದಾಯದ ಭೌತಿಕ ನೆಲೆಯ ಪರಿಧಿಯೂ ವಿಸ್ತಾರವಾಗಿದೆ. ಆದರೂ ಸಮುದಾಯ ವಸತಿಸ್ಥಾನಗಳ ಸಂಬಂಧ ಕಡಿದಿಲ್ಲ. ಸಮುದಾಯದ ಈ ಭೌತಿಕ ನೆಲೆಗೆ ಸಂಬಂಧಿಸಿದಂತೆ ಸತ್ವಯುಕ್ತ ಭೂಸಾರ, ಖನಿಜಗಳು, ಅರಣ್ಯ, ಜಲ ಮತ್ತು ಮತ್ಸ್ಯ ಸಂಪತ್ತು ಸಸ್ಯ ಸಂಪತ್ತು ಹವಾಮಾನ ಮುಂತಾದ ಅನೇಕ ಭೌತಿಕಾಂಶಗಳು ಸಮುದಾಯದ ಒಟ್ಟು ಜೀವನವನ್ನು ಅನೇಕ ರೀತಿಯಲ್ಲಿ ಪ್ರಭಾವೀಗೊಳಿಸುತ್ತವೆ. ಇವುಗಳಿಗೂ ಸಮುದಾಯದ ಆರ್ಥಿಕ ಚಟುವಟಿಕೆಗಳಿಗೂ ನೇರ ಸಂಬಂಧವಿದೆ.

**2. ಸಾಮುದಾಯಿಕ ಭಾವನೆ** [Community Sentiment]

ಸ್ಥಾನೀಯತೆಯು ಒಂದು ಅವಶ್ಯವಾದ ಅಂಶವಾಗಿದ್ದರೂ ಅದೊಂದೇ ಸಮುದಾಯವನ್ನು ನಿರ್ಮಿಸಲಾರದು. ನಿರ್ದಿಷ್ಟ ಜಾಗದಲ್ಲಿ ವಾಸಿಸುವ ಜನರು ನಾವು-ನಮ್ಮವರು [we-feeling] ಅಥವಾ ನಾವು ಪರಸ್ಪರ ಒಂದುಗೂಡಿದವರು ಎಂಬ ಭಾವನೆಗಳನ್ನು ಹೊಂದಿಲ್ಲದೇ ಹೋದಲ್ಲಿ ಸಮುದಾಯ ನಿರ್ಮಾಣವಾಗದು. "ಸಾಮುದಾಯಿಕ ಭಾವನೆ"ಯಿರುವ ಸಮೂಹ ಮಾತ್ರವೇ 'ಸಮುದಾಯ' ಎನ್ನಿಸಿಕೊಳ್ಳುವುದು. ಸಮುದಾಯವು ಸುಖ-ದುಃಖಗಳಲ್ಲಿ ಪರಸ್ಪರ ಭಾಗಿಯಾಗುವ ವ್ಯಕ್ತಿಗಳ ಸಮೂಹ. ಅವರಲ್ಲಿ ಸಾಮೂಹಿಕ ಐಕ್ಯದ ಭಾವನೆ ಇರುತ್ತದೆ. ಮಾನಸಿಕ ಏಕರೂಪತೆ ವ್ಯಕ್ತಿಗಳಲ್ಲಿ ನಿಕಟ ಸಂಬಂಧವನ್ನೇರ್ಪಡಿಸುತ್ತದೆ. ಏಕತೆಯ ಅನುಭವವಿಲ್ಲದೆ ಪರಸ್ಪರ ಆತ್ಮೀಯತೆಯ ಭಾವನೆ ಹುಟ್ಟುವುದಿಲ್ಲ. ಆತ್ಮೀಯತೆಯ ಭಾವನೆಯಿಲ್ಲದೆ ಸಾಮುದಾಯಿಕ ಭಾವನೆಯಿರಲು ಸಾಧ್ಯವಿಲ್ಲ.

ಸಾಮುದಾಯಿಕ ಭಾವನೆ ಸದಾ ಜಾಗ್ರತವಾಗಿರಬೇಕಾದರೆ ಜನರಲ್ಲಿ ಸಮಾನ ಆಸಕ್ತಿಗಳು, ದೃಷ್ಟಿಕೋನ, ಜೀವನ ವಿಧಾನವೂ ಇರಬೇಕಾಗುವುದು. ಈ ಸಾಮ್ಯ ಅಥವಾ ಸಾದೃಶ್ಯವಿಲ್ಲದೇ ಇದ್ದಲ್ಲಿ ಸಾಮುದಾಯಕ ಭಾವನೆಗೆ ಯಾವುದೇ ಅರ್ಥವಿರಲಾರದು. ಒಂದೇ ಸ್ಥಳದಲ್ಲಿ ಶಾಶ್ವತವಾಗಿ ಸಿಲುಕಿಕೊಳ್ಳುತ್ತಾರೆ. ಈ ಭಾವನಾತ್ಮಕತೆ ಕ್ಷಣಿಕವಾಗಿರದೆ, ಶಾಶ್ವತ ವಾಗಿರುವುದು. ಅದೇ ಅವರಿಗೆ ಮಾನಸಿಕ ಶಾಂತಿ ಸಮಾಧಾನವನ್ನು ಸ್ವಲ್ಪಮಟ್ಟಿಗೆ ನೀಡುವುದು ತನ್ನನ್ನು ತಾನು ತನ್ನ ಸಮುದಾಯದೊಂದಿಗೆ ಭಾವನಾತ್ಮಕವಾಗಿ ಬೆಸೆದುಕೊಂಡ ವ್ಯಕ್ತಿಯೋರ್ವ ಇದ್ದಕ್ಕಿದ್ದಂತೆಯೇ ಈ ಎಲ್ಲಾ ಬಂಧನಗಳನ್ನು ಕಿತ್ತೊಗೆದು ಇನ್ನೊಂದು ಪರಿಸರದಲ್ಲಿ ನೆಲೆಸಬೇಕಾದ ಪರಿಸ್ಥಿತಿಯೊದಗಿದಾಗ, ಭಾವನಾಜೀವಿಗಳಾದ ಅನೇಕರು ತಮ್ಮ ಮಾನಸಿಕ ಸಮತೋಲನವನ್ನೇ ಕಳೆದುಕೊಳ್ಳುವುದುಂಟು. ಈ ಸ್ಥಿತಿಯನ್ನು ಸಮಾಜಶಾಸ್ತ್ರಜ್ಞರು 'ಸಾಮುದಾಯಿಕ ಭಾವನಾಭಂಗ' [loss of community] 'ಅನಾಥ ಪ್ರಜ್ಞೆ' [alienation] ಎಂದು ವಿವರಿಸಿರುವುದುಂಟು. ಆದಾಗ್ಯೂ ಸಾಮುದಾಯಿಕ ಭಾವನೆಯು ಒಂದು ಮೂಲಪ್ರವೃತ್ತಿಯಲ್ಲ. ಅದನ್ನು ಪ್ರತಿಯೊಬ್ಬನೂ ಬೆಳೆಸಿಕೊಳ್ಳಬೇಕಾಗುವುದು.

**ಸಮುದಾಯದ ಇತರ ಲಕ್ಷಣಗಳು**

1. **ಸ್ಥಿರತೆ :** ಸಮುದಾಯವು ಜನಮಂದೆ ಅಥವಾ ಶ್ರೋತೃವರ್ಗದ ಸಮೂಹದಂತೆ ಕ್ಷಣಿಕವಾದುದಲ್ಲ; ಆದರೆ ಸ್ಥಿರವಾದುದು. ಜನರು ಒಂದೆಡೆ ನೆಲೆನಿಂತು ವಾಸಿಸಲು ಆರಂಭಿಸಿದ ಮೇಲೆ ಅದನ್ನು ಅಷ್ಟು ಬೇಗನೆ ಬಿಟ್ಟು ಇನ್ನೊಂದೆಡೆಗೆ ಪಯಣಿಸಲಾರರು. ಅದರಲ್ಲೂ (ಸ್ಥಿರಾಸ್ತಿಯನ್ನು, ಮನೆ, ಮಾರು, ಜಮೀನು, ವ್ಯವಹಾರ) ಮಾಡಿಕೊಂಡ ಮೇಲಂತೂ ಆ ಜಾಗವನ್ನು ಬಿಟ್ಟು ಹೊರಡುವುದೂ ದೂರವೇ ಉಳಿಯಿತು.

2. **ಸ್ವಾಭಾವಿಕತೆ :** ಸಮುದಾಯವು ಉದ್ದೇಶಪೂರ್ವಕ ಪ್ರಯತ್ನದಿಂದ ಮತ್ತು ಬುದ್ಧಿಪೂರ್ವಕ ಸೃಷ್ಟಿಯಾದುದಲ್ಲ. ಸಾಮಾನ್ಯವಾಗಿ ಅದು ಸಹಜವಾಗಿ ತನ್ನಿಂದ ತಾನೇ ವಿಕಾಸಹೊಂದಿ ಅಸ್ತಿತ್ವಕ್ಕೆ ಬರುವಂತಹದು. ಜನರು ಸಮುದಾಯದ ಸದಸ್ಯರಾಗುವುದೂ ಕೂಡ ಹುಟ್ಟಿನಿಂದಲೇ. ಆದ್ದರಿಂದ ಅದರ ಸದಸ್ಯತ್ವವು ಅನೈಚ್ಛಿಕವಾದುದು. ಸಮುದಾಯವು ಸ್ವತಃಪ್ರವರ್ತಿತವಾದರೂ ಆಕಸ್ಮಿಕವಾದುದಾಗಲೀ, ಕೃತ್ರಿಮವಾದುದಾಗಲೀ ಅಲ್ಲ. ಇದ್ದಕ್ಕಿದ್ದಂತೆ ದಿಢೀರನೆ ಸಮುದಾಯವೆಂದಿಗೂ ಉದಯಿಸದು. ಅದು ಕ್ರಮೇಣವಾಗಿ ಮಂದಗತಿಯಿಂದ ವಿಕಾಸ ಹೊಂದಿರುವುದು.

3. **ಸಾಮಾಜಿಕ ನಿಯಂತ್ರಣ :** ಪ್ರತಿಯೊಂದು ಸಮುದಾಯವೂ ಕಾಲಾನುಕ್ರಮದಲ್ಲಿ ತನ್ನದೇ ಆದ ರೂಢಿ ಸಂಪ್ರದಾಯಗಳು, ಲೋಕಾಚಾರ ಮತ್ತು ನೈತಿಕ ನಿಯಮಗಳು, ಆಚರಣೆ, ನಂಬುಗೆಗಳು ಇವುಗಳನ್ನು ಬೆಳೆಸಿಕೊಂಡು ತನ್ನ ಸದಸ್ಯರುಗಳ ನಡತೆಯನ್ನು ನಿಯಂತ್ರಿಸುವುದು.

4. **ಗಾತ್ರ :** ಸಮುದಾಯವು ಗಾತ್ರದಲ್ಲಿ ಚಿಕ್ಕದಾಗಿರಬಹುದು. ಇಲ್ಲವೇ ದೊಡ್ಡದಾಗಿರಬಹುದು. ಹಳ್ಳಿ ಪಟ್ಟಣಗಳಂತಹ ಚಿಕ್ಕ ಸಮುದಾಯಗಳಿರುವಂತೆ ನಗರ, ರಾಷ್ಟ್ರಗಳಂತಹ ಸಮುದಾಯಗಳೂ ಇವೆ.

5. **ವಿಶಿಷ್ಟ ಅಭಿದಾನ ಅಥವಾ ಹೆಸರು :** ಪ್ರತಿಯೊಂದು ಸಮುದಾಯವೂ, ಅದು ಹಳ್ಳಿಯಾಗಿರಲಿ, ನಗರವಾಗಿರಲಿ, ದೇಶವಾಗಿರಲಿ ತನ್ನದೇ

Digitised by Bharatavani, CIIL

ಆದ ಹೆಸರನ್ನು ಹೊಂದಿದ್ದು ಅದರ ಮೂಲಕವೇ ಗುರುತಿಸಲ್ಪಡುತ್ತದೆ. ಒಟ್ಟಿನಲ್ಲಿ ಸಮುದಾಯವು ನಿಂತ ನೀರಾಗಿರದೆ ನಿರಂತರ ಗತಿಶೀಲತೆಯನ್ನು ಹೊಂದಿದೆ.

ಶಿಕ್ಷಣದಲ್ಲಿ ಸಮುದಾಯಗಳನ್ನು ಗುರುತಿಸಿಕೊಂಡಾಗ ಸ್ಥಳೀಯ ಮತ್ತು ಪ್ರಾಚೀನ ಕಲೆ ಇತ್ಯಾದಿಗಳಿಗೆ ಮಾನ್ಯತೆ ಪ್ರೋತ್ಸಾಹ ದೊರಕುವುದು. ದೇಶದ ವೈವಿಧ್ಯವೆಂಬ ವೈಶಿಷ್ಟ್ಯವನ್ನು ಉತ್ತೇಜಿಸಬಹುದು. ಸೌಹಾರ್ದಯುತ ಆರೋಗ್ಯಕರ ಸ್ಪರ್ಧಾಭಾವನೆಯನ್ನು ಬಳಸಿಕೊಂಡು ಒಟ್ಟು ದೇಶದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಬಹುದು. ಸ್ವದೇಶಿತನ ತೋರಲು ಅವಕಾಶ ದೊರಕುವುದು ಗ್ರಾಮೀಣ ಪ್ರತಿಭೆಗಳ ವಿಕಾಸ, ಪುರಸ್ಕಾರ, ಲೋಕಸತ್ತಾತ್ಮಕ ಮೌಲ್ಯಕ್ಕೆ ಮಹತ್ವ ದೊರಕುವುದು. ಸಂಕುಚಿತ ಭಾವನೆ ನಿವಾರಣೆಯಾಗಲು ಸಾಧ್ಯ.

–ಎನ್.ಬಿ.ಕೊ.

## ಸಮೂಹ ಗತಿಶಾಸ್ತ್ರ

ಪ್ರತಿಯೊಬ್ಬ ವ್ಯಕ್ತಿ ಒಂಟಿಯಾಗಿ ಹುಟ್ಟಿ ಬಂದರೂ ಒಬ್ಬೊಬ್ಬನೇ ಬದುಕುವುದಿಲ್ಲ. ತಾಯಿಯ ಸಂಗಡ ಜೀವನ ಆರಂಭವಾಗಿ ಕ್ರಮೇಣ ಕುಟುಂಬದ ಇತರ ಸದಸ್ಯರೊಡನೆ ನೆರೆಹೊರೆಯವರೊಡನೆ, ಸಮವಯಸ್ಕರೊಡನೆ ಕೂಡಿ, ಅವನು ಬೆಳೆಯುತ್ತಾನೆ ಮತ್ತು ಜೀವಿಸುತ್ತಾನೆ. ಕೊನೆಗೆ ಆ ವ್ಯಕ್ತಿ ಒಂದು ಸಮುದಾಯಕ್ಕೆ ಸೇರಿದವನಾಗಿ ಅದರ ನಿಯಮಗಳಿಗೆ ಬದ್ಧನಾಗಿ ನಡೆದುಕೊಳ್ಳುತ್ತಾನೆ. ತಾನು ಸೇರಿದ ಸಮೂಹದ ಇತರರೊಂದಿಗೆ ಕೊಡು–ಕೊಳ್ಳುವ ವ್ಯವಹಾರವನ್ನು ನಡೆಸುತ್ತಾನೆ. ಆದ್ದರಿಂದ ಸಮೂಹ ಅವನ ಮೇಲೆ ಪ್ರಭಾವ ಬೀರುತ್ತದೆ. ಅವನೂ ಕೂಡ ಸಮೂಹದ ಮೇಲೆ ಪ್ರಭಾವ ಬೀರುತ್ತಾನೆ. ಈ ಸಮೂಹ ಜೀವನವನ್ನು ಅಂದರೆ ವ್ಯಕ್ತಿಯ ಸಾಮಾಜಿಕ ವರ್ತನೆಯನ್ನು 'ಸಮೂಹ ಗತಿಶಾಸ್ತ್ರ'ವು ಅಧ್ಯಯನ ಮಾಡುತ್ತದೆ.

ಕುರ್ಟ್ ಲೆವಿನ್

ಗತಿಶಾಸ್ತ್ರ (Dynamics) ಎಂಬ ಪದ ಗ್ರೀಕ್ ಶಬ್ದ ಮೂಲದಿಂದ ಬಂದಿದೆ. ಇದರ ಅರ್ಥ ಶಕ್ತಿ ಅಥವಾ ಬಲ (Force) ಎಂಬುದಾಗಿದೆ. ಸಮೂಹಗತಿಶಾಸ್ತ್ರ ಎಂಬ ಪದಗುಚ್ಛವು ಒಂದು ಸಮೂಹದಲ್ಲಿ ಪ್ರಯೋಗವಾಗುವ ಬಲ ಅಥವಾ ಪ್ರಭಾವಿಶಕ್ತಿ ಎಂದು ಅರ್ಥ ನೀಡುತ್ತದೆ. ಅಂತಹ ಪ್ರಭಾವಿ ಶಕ್ತಿಗಳ ಅಧ್ಯಯನವೇ 'ಸಮೂಹಗತಿಶಾಸ್ತ್ರದ ವಿಷಯ ವಸ್ತುವಾಗಿದೆ. ಇದು 20ನೇ ಶತಮಾನದಲ್ಲಿ ಹೆಚ್ಚು ವ್ಯಾಪ್ತಿಯನ್ನು ಮತ್ತು ಪ್ರಾಮುಖ್ಯವನ್ನು ಪಡೆಯಿತು. ಇದನ್ನು ಮೊದಲು ಪ್ರಸ್ತಾಪಿಸಿದ ಕೀರ್ತಿ ಕುರ್ಟ್‌ಲೆವಿನ್‌ರಿಗೆ ಸಲ್ಲುತ್ತದೆ. 1890ರಲ್ಲಿ ಕುರ್ಟ್‌ಲೆವಿನ್ ಪ್ರಷ್ಯದೇಶದಲ್ಲಿ ಜನಿಸಿದರು. ಇವರು 1944ರಲ್ಲಿ ಸಮೂಹ ಗತಿಶಾಸ್ತ್ರಕ್ಕಾಗಿಯೇ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದರು. ಎರಡನೇ ವಿಶ್ವಮಹಾಯುದ್ಧದ ನಂತರ ಸಮೂಹಗಳ ಸ್ವರೂಪವನ್ನು ಅಧ್ಯಯನ ಮಾಡಲು 'ಸಮೂಹಗತಿಶಾಸ್ತ್ರ' ಎಂಬ ಉಪಕ್ರಮವು ಜನಪ್ರಿಯವಾಯಿತು.

ಸಮೂಹ ಗತಿಶಾಸ್ತ್ರವೆಂದರೆ ಸಮೂಹದೊಂದಿಗೆ ವ್ಯಕ್ತಿಹೊಂದಿರುವ ಅನ್ಯೋನ್ಯಕ್ರಿಯೆಯ ಅಧ್ಯಯನವಾಗಿದೆ. ಸಮೂಹಗಳು ಹೇಗೆ ರೂಪುಗೊಳ್ಳುತ್ತವೆ? ಸಮೂಹಗಳುಂಟಾಗಲು ಯಾವ ಸನ್ನಿವೇಶಗಳು ಅಗತ್ಯ? ಸಮೂಹವು ವ್ಯಕ್ತಿಯ ವರ್ತನೆಯನ್ನು ಹೇಗೆ ಪ್ರಭಾವಿಸುವುದು? ಹಾಗೆಯೇ ವ್ಯಕ್ತಿಯು ಸಮೂಹದ ಮೇಲೆ ಹೇಗೆ ಪ್ರಭಾವಿಸುತ್ತಾನೆ? ಹೀಗೆ ಪ್ರಭಾವಿಸುವ ಸಮೂಹದೊಳಗಿನ ಕ್ರಿಯಾತ್ಮಕ ಶಕ್ತಿಗಳ ವರ್ತನಾ ವಿನ್ಯಾಸ ಹೇಗಿರುವುದು? ಈ ಎಲ್ಲ ವಿಚಾರಗಳ ಬಗ್ಗೆ ಅಧ್ಯಯನ ಮಾಡುವುದೇ ಈ ಶಾಸ್ತ್ರದ ಮುಖ್ಯ ಕಾರ್ಯವಾಗಿದೆ. ಅಂದರೆ ಮಾನವ ವರ್ತನೆ ಮತ್ತು ಸಮೂಹದಲ್ಲಿ ನೆಲೆಯಾಗಿರುವ ಸಾಮಾಜಿಕ ಸಂಬಂಧಗಳ ಅರಿವನ್ನುಂಟು ಮಾಡುವುದು ಸಮೂಹ ಗತಿಶಾಸ್ತ್ರದ ಗುರಿ ಎಂದು ಹೇಳಬಹುದು.

ಗುಡನ ನಿಘಂಟು ಸಮೂಹ ಗತಿಶಾಸ್ತ್ರವನ್ನು ವ್ಯಕ್ತಿಗಳ ನಡುವಣ ಅಂತರ್ ಕ್ರಿಯಾತ್ಮಕ ಮನೋವೈಜ್ಞಾನಿಕ ಸಂಬಂಧವೆಂದು ಅರ್ಥೈಸುತ್ತದೆ. ವ್ಯಕ್ತಿಗಳು ತಮ್ಮ ಭಾವನೆಗಳನ್ನು, ಸಂವೇಗಗಳನ್ನು ಆಧರಿಸಿ ಒಂದು ಸಮೂಹದ ಸದಸ್ಯರಾಗಿ ಅದನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯೇ ಸಮೂಹ ಗತಿಶಾಸ್ತ್ರ.

ಡಬ್ಲ್ಯು. ಸಿ. ಟ್ರೋರವರು "ಸಮೂಹ ಗತಿಶಾಸ್ತ್ರವು ವಿವಿಧ ಸಮೂಹ ಸಂಬಂಧಗಳಲ್ಲಿ ವ್ಯಕ್ತಿಗಳ ವರ್ತನೆಯ ವೈಜ್ಞಾನಿಕ ಅಧ್ಯಯನವಾಗಿದೆ" ಎಂದು ವ್ಯಾಖ್ಯಾನಿಸಿದ್ದಾರೆ.

ಶರೀಫ್ ಮತ್ತು ಶರೀಫ್ ರವರ ಅಭಿಪ್ರಾಯದಲ್ಲಿ "ಸಮೂಹ ಗತಿಶಾಸ್ತ್ರ ಪರಸ್ಪರ ಪಾತ್ರ ಮತ್ತು ಸ್ಥಾನ ಸಂಬಂಧ ಹೊಂದಿರುವ ಒಂದು ಸಾಮಾಜಿಕ ಘಟಕ, ಸ್ವಲ್ಪ ಮಟ್ಟಿಗೆ ಸ್ಥಿರತೆಯನ್ನು ಹೊಂದಿದ್ದು, ಗುಂಪಿನ ಮೇಲೆ ಪರಿಣಾಮ ಬೀರುವ ಅಂಶಗಳಿಗೆ ಸಂಬಂಧಿಸಿದಂತೆ ಅವರ ವರ್ತನೆಯನ್ನು ನಿಯಂತ್ರಿಸಬಲ್ಲ ನಿಯಮಗಳನ್ನು ಅಥವಾ ಮೌಲ್ಯಗಳನ್ನು ಕುರಿತ ಅಧ್ಯಯನವಾಗಿದೆ."

ಈ ಎಲ್ಲ ಪರಿಭಾಷೆಗಳಿಂದ ಗತಿಶೀಲತೆ ಎಂಬ ಪದವು ಬದಲಾವಣೆಯಾಗುವಿಕೆ ಎಂದೂ, ಸಮೂಹ ಗತಿಶೀಲತೆ ಎಂದರೆ ಗುಂಪಿನಲ್ಲಾಗುವ ಅನ್ಯೋನ್ಯಕ್ರಿಯೆಯ ಮೂಲಕ ಗುಂಪಿನಲ್ಲಿರುವವರ ವರ್ತನೆಯಲ್ಲಾಗುವ ಬದಲಾವಣೆಗಳು ಎಂದಾಗುತ್ತದೆ. ಗುಂಪಿನ ಸದಸ್ಯರು ಸಾಮಾನ್ಯ ಗುರಿಸಾಧನೆಗಾಗಿ ಒಂದೇ ರೀತಿಯಲ್ಲಿ ಆಲೋಚಿಸುತ್ತಾರೆ, ಭಾವಿಸುತ್ತಾರೆ ಮತ್ತು ಕಾರ್ಯ ನಿರ್ವಹಿಸುತ್ತಾರೆ. ಅವರು ಒಂದೇ ಭಾಷೆಯನ್ನಾಡುವವರೂ, ಒಂದೇ ಸಂಸ್ಕೃತಿಯನ್ನು ಮತ್ತು ನೀತಿ ಸಂಹಿತೆಯನ್ನು ಹೊಂದಿದವರೂ ಆಗಿರುತ್ತಾರೆ. ಸಮಾಜಶಾಸ್ತ್ರಜ್ಞರಾದ ಮ್ಯಾಕೈವರ್ ಮತ್ತು ಪೇಜ್‌ರವರು ಪರಸ್ಪರ ಸಂಪರ್ಕ (reciprocity) ಎಂಬ ಮನೋವೈಜ್ಞಾನಿಕ ಅಂಶವೇ ಸಮೂಹ ರಚನೆಯ ಕೇಂದ್ರ ಅಂಶ ಎಂದಿರುವುದನ್ನು ಇಲ್ಲಿ ಗಮನಿಸಬೇಕಾದುದು.

ವ್ಯಕ್ತಿಯೊಬ್ಬ ಸ್ವಾಭಾವಿಕವಾಗಿಯೇ ಕುಟುಂಬ, ಧರ್ಮ, ಜಾತಿ ಮುಂತಾದ ಸಾಮಾಜಿಕ ಸಮೂಹಗಳ ಸದಸ್ಯನಾಗಿ ಬಿಡುತ್ತಾನೆ. ಸಂಘ, ಸಂಸ್ಥೆ ಮತ್ತು ರಾಜಕೀಯ ಪಕ್ಷಗಳಲ್ಲಿ ಮಾತ್ರ ವ್ಯಕ್ತಿಯ ಆಯ್ಕೆಯಿಂದ ಸದಸ್ಯತ್ವ ದೊರಕುತ್ತದೆ. ವ್ಯಕ್ತಿಯೊಬ್ಬ ಏಕೆ ಸಮೂಹದ ಸದಸ್ಯನಾಗುತ್ತಾನೆ ಅಥವಾ ಸಮೂಹ ಹೇಗೆ ರಚನೆಯಾಗುತ್ತದೆ ಎಂಬುದನ್ನು ಸಮೂಹ ಗತಿಶಾಸ್ತ್ರದಲ್ಲಿ ತಿಳಿಯುತ್ತೇವೆ. ಸಮೂಹಕ್ಕೆ ಸೇರಿದವನಾಗಬೇಕೆಂಬ ಮೂಲ ಪ್ರೇರಣೆಯಿಂದ (instinct) ವ್ಯಕ್ತಿ ಅದರ ಸದಸ್ಯನಾಗುತ್ತಾನೆ ಮತ್ತು ಮಾನ್ಯತೆ ಪಡೆದ ತೃಪ್ತಿಹೊಂದುತ್ತಾನೆ. ಸಮೂಹ ರಚನೆಯಾಗಲು ಕಾರಣ ವ್ಯಕ್ತಿಗಳು ಆ ಮೂಲಕ ಜೀವನಕ್ಕೆ ಅಗತ್ಯವಾದ ವಿವಿಧ ಮಾಹಿತಿಗಳನ್ನು ಪಡೆಯಲು ಮತ್ತು ಜೀವನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ದೊರೆಯುವುದು. ಒಟ್ಟಿನಲ್ಲಿ ವ್ಯಕ್ತಿ ತನ್ನ ಗುರಿಗಳ ಸಾಧನೆಗಾಗಿ ಸಮೂಹದ ಸದಸ್ಯನಾಗುವನು.

Digitised by Bharatayani, CIIL




1. ವೃತ್ತೀಯ ವಿನ್ಯಾಸ

2. ಸರಪಳಿ ವಿನ್ಯಾಸ




3. ಕವೆ ವಿನ್ಯಾಸ




4. ಚಕ್ರೀಯ ವಿನ್ಯಾಸ

ಸಮೂಹಗಳಲ್ಲಿ ಅನೇಕ ವಿಧಗಳಿವೆ. ದ್ವಿಸದಸ್ಯ ಸಮೂಹ, ತ್ರಿಸದಸ್ಯರ ಸಮೂಹಗಳೂ ಇರುತ್ತವೆ. ಇವು ದೀರ್ಘಕಾಲ ಉಳಿಯುವ ಬಂಧ ಹೊಂದಿರುತ್ತವೆ. ಪ್ರಾಥಮಿಕ ಮತ್ತು ಆನುಷಂಗಿಕ ಸಮೂಹಗಳು ಇರುತ್ತವೆ. ಕುಟುಂಬದಂತಹ ಸಮೂಹಗಳು ಪ್ರಾಥಮಿಕ ಸಮೂಹಗಳಾಗಿರುತ್ತವೆ. ಸಾಮಾನ್ಯ ಉದ್ದೇಶ ಅಥವಾ ಆಸಕ್ತಿಯಿಂದ ರಚನೆಯಾಗುವ ಸಮೂಹಗಳೇ ಆನುಷಂಗಿಕ (ಗೌಣ) ಸಮೂಹಗಳಾಗಿರುತ್ತವೆ. ವೃತ್ತಿ ಸಮೂಹಗಳಂತಹ ಔಪಚಾರಿಕ ಸಮೂಹಗಳು ಸಾಂಸ್ಕೃತಿಕ ಸಮೂಹಗಳಂತಹ ಅನೌಪಚಾರಿಕ ಸಮೂಹಗಳು, ವಸತಿ ಗೃಹದಲ್ಲಿನ ಸಮೂಹಗಳಂತಹ ಅರೆಔಪಚಾರಿಕ ಸಮೂಹಗಳು ಇರುತ್ತವೆ. ಸಮೂಹಗಳನ್ನು ಸ್ವಾಭಾವಿಕ ಮತ್ತು ಕೃತಕ ಸಮೂಹಗಳೆಂದೂ, ಮುಖಾಮುಖಿ ಮತ್ತು ದೂರಸಮೂಹ, ಹೊರಸಮೂಹ ಮತ್ತು ಒಳಸಮೂಹಗಳೆಂದೂ, ತೆರೆದ ಸಮೂಹ ಮತ್ತು ಮುಚ್ಚಿದ ಸಮೂಹಗಳೆಂದೂ ವರ್ಗೀಕರಿಸುವುದನ್ನು ಕಾಣುತ್ತೇವೆ. ಕುಟುಂಬವನ್ನು ತೆಗೆದುಕೊಂಡರೆ ಅದು ಸ್ವಾಭಾವಿಕ, ಪ್ರಾಥಮಿಕ, ತೆರೆದ ಅನೌಪಚಾರಿಕವಾದ ಸಮೂಹವಾಗಿ ಕಾಣಬಹುದು. ಒಟ್ಟಿನಲ್ಲಿ ಗಾತ್ರ ಮತ್ತು ಸಾಮೀಪ್ಯದಿಂದ ಸಮೂಹಗಳ ವಿಧ ಗುರುತಿಸಬಹುದು.

ಸಮೂಹವು ಅಸ್ತಿತ್ವಕ್ಕೆ ಬರುತ್ತಿದ್ದಂತೆ ಅದು ಕೆಲವು ನೀತಿ ನಿಯಮಾವಳಿಗಳನ್ನು ರೂಪಿಸಿಕೊಳ್ಳುತ್ತದೆ. ಅವು ವರ್ತನೆ, ಚಟುವಟಿಕೆ, ನಂಬಿಕೆ, ಆಚರಣೆಗಳಿಗೆ ಸಂಬಂಧಿಸಿದ ನಿಯಮಗಳಾಗಿರಬಹುದು. ಅವು ಸ್ಥಿರವಾಗಿಯೂ ಇರಬಹುದು, ಬದಲಾವಣೆಗೂ ಗುರಿಯಾಗಬಹುದು. ಸಮೂಹದ ವ್ಯಕ್ತಿಗಳ ಪಾತ್ರವು ನಿಯಮಗಳಿಂದ ನಿಯಂತ್ರಿಸಲ್ಪಡುತ್ತದೆ.

ವ್ಯಕ್ತಿಯೊಬ್ಬನ ವರ್ತನೆಯ ಮೇಲೆ ಸಮೂಹವು ಪ್ರಭಾವಿಸುತ್ತದೆ ಎಂದು ಫ್ಲಾಯ್ಡ್ ಆಲ್‌ಪೋರ್ಟ್‌ರ ಅಧ್ಯಯನವು ತಿಳಿಸುತ್ತದೆ. ಅದರಂತೆ ಸಮೂಹದಲ್ಲಿದ್ದಾಗ ವ್ಯಕ್ತಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾನೆ. ಸಮೂಹವು ಸಮಸ್ಯಾ ಪರಿಹಾರ ಕಾರ್ಯದಲ್ಲಿ ತೊಡಗಿದಾಗ ಉತ್ತಮ ಪರಿಹಾರ ದೊರಕುವುದು. ಅಲ್ಲದೆ ವಿಚಾರ ಪ್ರಚೋದನ ತಂತ್ರ (Brain-storming) ಯಿಂದ ಸಮಸ್ಯೆಗಳಿಗೆ ಸೃಜನಾತ್ಮಕ ಪರಿಹಾರಗಳನ್ನು ಉತ್ಪಾದಿಸಬಹುದು.

ಸಮೂಹ ಗತಿಶಾಸ್ತ್ರವು ಸಮೂಹದ ರಚನೆಯನ್ನು ಅಧ್ಯಯನ ಮಾಡುತ್ತದೆ. ಗುಂಪು ಒಂದು ರೀತಿಯ ಶ್ರೇಣೀಕೃತ ರಚನೆಯನ್ನು ಹೊಂದಿರುತ್ತದೆ. ಅದರಲ್ಲಿ ಕೆಲವು ಸದಸ್ಯರು ಬಹು ಪ್ರಾಮುಖ್ಯ ಗಳಿಸುವ ಪ್ರಧಾನ ಪಾತ್ರವನ್ನು ಪಡೆಯುವವರಾಗಬಹುದು. ಸಮೂಹ ರೂಪುಗೊಳ್ಳುತ್ತಲೇ ವಿವಿಧ ಕಾರ್ಯ ಜವಾಬ್ದಾರಿಗಳು, ಪಾತ್ರಗಳು, ಸ್ಥಾನಮಾನಗಳು ಆ ಸಮೂಹದ ವ್ಯಾಪ್ತಿಯೊಳಗೇ ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತವೆ. ನಾಯಕರಹಿತ ಸಮೂಹ, ನಾಯಕ ಅನುಯಾಯಿ ಸಂಬಂಧದ ಸಮೂಹಗಳು ಇರಬಹುದು.

ಸಮೂಹಗತಿ ಶಾಸ್ತ್ರವು ನಾಯಕತ್ವ ವಿಧಗಳನ್ನು ಅಧ್ಯಯನ ಮಾಡುತ್ತದೆ. ನಿರ್ಬಂಧರಹಿತ ನಾಯಕತ್ವ, ನಿರಂಕುಶ ನಾಯಕತ್ವ ಮತ್ತು ಪ್ರಜಾಪ್ರಭುತ್ವ ನಾಯಕತ್ವಗಳ ಸ್ವರೂಪ, ಅವುಗಳ ಗುಣಾವಗುಣಗಳನ್ನು ವಿವರಿಸುತ್ತದೆ. ನಾಯಕತ್ವ ನಮೂನೆಗಳ ಪರಿಣಾಮಕಾರಕತ್ವವನ್ನು ವಿವರವಾಗಿ ಅಧ್ಯಯನ ಮಾಡುತ್ತದೆ.

ಸಮೂಹಕ್ಕೆ ಸದಸ್ಯರು ಬದ್ಧರಾಗಿರಲು ಅಥವಾ ಸಮೂಹಕ್ಕೆ ಆಕರ್ಷಿತರಾಗಲು ಕಾರಣವಾದ ಪ್ರಭಾವಿ ಅಂಶವೇ ಸಂಬದ್ಧತೆ (co-hesiveness). ಹೆಚ್ಚಿನ ಸಂಬದ್ಧತೆ ಸದಸ್ಯರಿಗೆ ಹೆಚ್ಚಿನ ತೃಪ್ತಿಯನ್ನು ಕೊಡುತ್ತದೆ. ಜೊತೆಗೆ ಗುಂಪಿನ ದಕ್ಷತೆಯನ್ನು ಹೆಚ್ಚಿಸುತ್ತದೆ.

ಒಂದು ಸಮೂಹದ ಸದಸ್ಯರು ಸಂವಹನ ಕ್ರಿಯೆಯಲ್ಲಿ ತೊಡಗಿ ಕಾರ್ಯನಿರ್ವಹಿಸುವ ನಮೂನೆಗಳನ್ನು ಅಧ್ಯಯನ ಮಾಡಲಾಗಿದೆ. ಸಮೂಹದ ಸಂವಹನ ಪ್ರಕ್ರಿಯೆಯನ್ನು ಅಧ್ಯಯನ ಮಾಡಿ ಲೆವಿಟ್‌ರವರು (Leavitt-1951) ಅದರ ವಿಧಗಳನ್ನು ಈ ಕೆಳಗಿನಂತೆ ಹೆಸರಿಸಿದ್ದಾರೆ. [ಉದಾಹರಣೆಗೆ ಐವರು ಸದಸ್ಯರಿರುವ ಒಂದು ಗುಂಪನ್ನು ಬಳಸಿಕೊಳ್ಳಲಾಗಿದೆ]

ನೆಡ್ ಫ್ಲಾಂಡರ್‌ರವರು ತರಗತಿ ಸಮೂಹದಲ್ಲಿ ನಡೆಯುವ ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸಿದ್ದಾರೆ. ಅದಕ್ಕೆ ಶಿಕ್ಷಕರ ಮಾತು, ವಿದ್ಯಾರ್ಥಿಗಳ ಮಾತು ಮತ್ತು ಮೌನ ಎಂಬ ವರ್ಗಗಳಲ್ಲಿ ವಿವಿಧ ಸಂವಹನ ಪ್ರಕ್ರಿಯೆಗಳನ್ನು ಆಧಾರ ಮಾಡಿಕೊಂಡಿದ್ದಾರೆ. ಪರಿಣಾಮಕಾರಿ ಸಮೂಹ ಅನ್ಯೋನ್ಯಕ್ರಿಯೆಯನ್ನು ಉಂಟುಮಾಡಲು ಈ ತಂತ್ರ ಉಪಯುಕ್ತ ಮಾಹಿತಿ ಒದಗಿಸುವುದು.

ಸಮೂಹದಲ್ಲಿರುವ ಸದಸ್ಯರ ಸ್ಥಾನಮಾನ ಹಾಗೂ ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡಲು ಸಮಾಜಮಿತಿ (Socio metry ) ಎಂಬ ತಂತ್ರವನ್ನು ಸಮೂಹ ಗತಿಶಾಸ್ತ್ರವು ರೂಪಿಸಿದೆ. ಸಮಾಜಮಿತಿ ತಂತ್ರ ಬಳಸಿ ದೊರಕುವ ಮೌಲ್ಯಗಳ ಸಹಾಯದಿಂದ ಸಮಾಜ ಆಲೇಖವನ್ನು (Sociogram) ಚಿತ್ರಿಸಿ ಸಮೂಹದ ಸಾಮಾಜಿಕ

Digitised by Bharatavani, CIIL

ರಚನೆಯನ್ನು ಸುಲಭವಾಗಿ ಗ್ರಹಿಸಬಹುದು ಮತ್ತು ಸದಸ್ಯರ ಸಾಮಾಜಿಕ ಸಂಬಂಧವನ್ನು ಸುಧಾರಿಸುವ ಕ್ರಮಗಳನ್ನು ಬಳಸಿಕೊಳ್ಳಬಹುದು.

ಒಟ್ಟಿನಲ್ಲಿ ಸಮೂಹ ಗತಿಶಾಸ್ತ್ರದಿಂದ ವ್ಯಕ್ತಿಯೊಬ್ಬ ಸಮಷ್ಟಿ ಜೀವನದಿಂದ ಸಮರ್ಥ ಸಮಾಜಜೀವಿಯಾಗುವ ಬಗೆಯನ್ನು ತಿಳಿಯಬಹುದು.

### ಕುರ್ಟ್ ಲೆವಿನ್‌ರವರು ಸಾಮಾಜಿಕ ಸಮೂಹಗಳ ಗತಿಶೀಲತೆಯ ಬಗ್ಗೆ ಮಾಡಿದ ಅಧ್ಯಯನ

ಕುರ್ಟ್‌ಲೆವಿನ್‌ರವರು (1890–1947) ಸಾಮಾಜಿಕ ಸಮೂಹಗಳ ಗತಿಶೀಲತೆಯ ಬಗ್ಗೆ ಮಾಡಿದ ಅಧ್ಯಯನವು ಸಾಮಾಜಿಕ ಮನಶ್ಶಾಸ್ತ್ರದಲ್ಲಿ ಅಗಾಧ ಪ್ರಭಾವ ಬೀರಿತು. ಅದರಲ್ಲೂ ಸಮೂಹಗಳ ಅಧ್ಯಯನವು ಅನುಭವಾತ್ಮಕ ಕಲಿಕೆ, ಸಮೂಹ ಗತಿಶಾಸ್ತ್ರ ಮತ್ತು ಕ್ರಿಯಾಸಂಶೋಧನೆಯ ಕ್ಷೇತ್ರಗಳಲ್ಲಿ ವಿಶೇಷ ಪ್ರಭಾವ ಬೀರಿತು.

ಕುರ್ಟ್ ಲೆವಿನ್‌ರವರ ವಿಚಾರವಾದ ಅನುಭವ ಕ್ಷೇತ್ರ, ಸಂಜ್ಞಾತ್ಮಕ ಕ್ಷೇತ್ರದ ಪರಿಕಲ್ಪನೆಗಳು ಗೆಸ್ಟಾಲ್ಟ್ ಸಿದ್ಧಾಂತಕ್ಕೆ ಸಂಬಂಧಿಸಿವೆ. ಇವರ ಪ್ರಕಾರ ವ್ಯಕ್ತಿಯ ವರ್ತನೆಯು ಅವನು ಜೀವಿಸುವ ಸನ್ನಿವೇಶದ ಸಮಗ್ರತೆಯನ್ನು ಅವಲಂಬಿಸಿರುತ್ತದೆ. ಲೆವಿನ್ನರ ಸಂಜ್ಞಾನಾತ್ಮಕ ಕ್ಷೇತ್ರ ಸಿದ್ಧಾಂತದಲ್ಲಿ ಕ್ಷೇತ್ರ ಎಂದರೆ ಪರಸ್ಪರ ಅಂತರಾವಲಂಬಿತ ಸಹ ಅಸ್ತಿತ್ವ (ಒಟ್ಟಿಗೆ ಇರುವುದು)ದಲ್ಲಿರುವಂತೆ ಪರಿಗ್ರಹಿಸಲ್ಪಡುವ ತಥ್ಯಗಳ (facts) ಸಮಗ್ರತೆ. ವ್ಯಕ್ತಿಯು ತನ್ನ ಸ್ವಯಂ ಅರಿವಿನ (self) ಬಗ್ಗೆ ಮತ್ತು ಪರಿಸರದ ಬಗ್ಗೆ ಹೊಂದುವ ತಿಳಿವಳಿಕೆಯ ನಡುವಿನ ಬಿಕ್ಕಟ್ಟಿರುವುದರಿಂದ ವ್ಯಕ್ತಿಗಳು ಭಿನ್ನವಾಗಿ ವರ್ತಿಸುವಂತೆ ಕಂಡುಬರುವುದು. ಒಬ್ಬ ವ್ಯಕ್ತಿಯ ಪೂರ್ಣ ಮನೋವೈಜ್ಞಾನಿಕ ಜೀವಿತ ಕ್ಷೇತ್ರ (lifespace) ವನ್ನು ಪರಿಗಣಿಸಿದರೆ ಮಾತ್ರ ಆತನ ವರ್ತನೆಯನ್ನು ಅರ್ಥ ಮಾಡಿಕೊಳ್ಳಬಹುದು. ವ್ಯಕ್ತಿಯು ಕುಟುಂಬ, ಶಾಲೆ, ಸಮುದಾಯ, ಮತಧರ್ಮ ಮುಂತಾದ ರೀತಿಯ ಮನೋವೈಜ್ಞಾನಿಕ ಕ್ಷೇತ್ರಗಳ ಸರಣಿಯಲ್ಲಿ ಭಾಗವಹಿಸುತ್ತಾನೆ. ಇವೆಲ್ಲವೂ ವಿವಿಧ ಶಕ್ತಿ (force vectors)ಗಳ ಪ್ರಭಾವದಿಂದ ರಚನೆಯಾಗಿರುತ್ತವೆ.

ಲೆವಿನ್‌ರವರು ವರ್ತನೆಯನ್ನು ನಿರ್ಧರಿಸುವ ಆಂತರಿಕ ಬಲಗಳನ್ನು (ಅಗತ್ಯ–needs) ಗಮನಿಸಿದ್ದಾರೆ. ಆದ್ದರಿಂದ ಭೌತಿಕ (physical) ಶಾರೀರಕ (physiological) ಪರಿಕಲ್ಪನೆಗಳಿಗೆ ವಿರುದ್ಧವಾಗಿ ಮನೋವೈಜ್ಞಾನಿಕ ಪರಿಕಲ್ಪನೆಗಳನ್ನು ಕ್ಷೇತ್ರದ ವಿವರಣೆಗೆ ಬಳಸಿದ್ದಾರೆ. ಹೀಗೆ ಲೆವಿನ್‌ರವರು ಜೀವಿತಕ್ಷೇತ್ರ (lifespace) ಮನೋವೈಜ್ಞಾನಿಕ (ಅಗತ್ಯ, ಆಕಾಂಕ್ಷೆ ಇತ್ಯಾದಿ) ಮತ್ತು ಸಾಮಾಜಿಕ ಅಂಶಗಳು (ಕ್ಷೇತ್ರ ಸಮೂಹದ ಪ್ರಭಾವಗಳು) ಈ ಮೂರನ್ನು ಪ್ರಧಾನವಾಗಿ ಪರಿಗಣಿಸಿ ವರ್ತನೆಯನ್ನು ಅರಿಯುವ ಪ್ರಯತ್ನ ಮಾಡಿದ್ದಾರೆ (ಈ ಮೂರು ಅಂಶಗಳನ್ನು ಪ್ರತ್ಯೇಕಿಸಲಾಗದೆಂಬುದು ಗಮನಾರ್ಹ).

ಕ್ಷೇತ್ರ ಸಿದ್ಧಾಂತದಿಂದ ಮಾಡಿದ ಎರಡು ಕೇಂದ್ರ ವಿಚಾರಗಳಾದ ವಿಧಿಯ ಅಂತರ್ ಅವಲಂಬನ ಮತ್ತು ಕಾರ್ಯದ ಅಂತರ್ ಅವಲಂಬನ ಎಂಬುವು (Interdependence of fate and Task interdependence.. Brown 1988: 28-32) ಸಮೂಹದ ಪ್ರಕ್ರಿಯೆಗಳನ್ನು ಅರಿಯಲು ಅತಿಮುಖ್ಯವಾಗಿವೆ.

ವಿಧಿಯ ಅಂತರ್ ಅವಲಂಬನ ದೃಷ್ಟಿಯಿಂದ ಸಮೂಹ ಪ್ರಕ್ರಿಯೆ ನಡೆಯುವುದು ಸದಸ್ಯರು ಪರಸ್ಪರ ಒಂದೇ ರೀತಿಯಿರುವುದರಿಂದಲ್ಲ, ಬದಲು ಗುಂಪಿನ ಒಟ್ಟು ಅದೃಷ್ಟ ಅಥವಾ ವಿಧಿ (fate) ಯಲ್ಲಿ ತಮ್ಮ ಅದೃಷ್ಟವು ನಿಂತಿದೆ ಎಂಬುದನ್ನು ನಂಬುವುದರಿಂದ ಎಂದು ಮನೋವೈಜ್ಞಾನಿಕವಾಗಿ ಅರ್ಥೈಸಲಾಗಿದೆ. (ಲೆವಿನ್‌ರವರು 1939ರಲ್ಲಿ ಯಹೂದಿಗಳು ವಾಸ್ತವವಾಗಿ ನಂಬಿದ್ದು ಸಮಾನ ವಿಧಿಯ ಲಾಭದ ದೃಷ್ಟಿಯಿಂದ ಎಂಬುದನ್ನು ಅಧ್ಯಯನ ಮಾಡಿ ಈ ವಾದವನ್ನು ನೀಡಿದರು.)

ಕಾರ್ಯ ಅಂತರ್ ಅವಲಂಬನ ನಿಲುವು ಉಳ್ಳವರು ವಿಧಿಯ ಅಂತರ್ ಅವಲಂಬನವು ಕೆಲವು ಸಮೂಹಗಳಲ್ಲಿ ಕೆಲಮಟ್ಟಿಗೆ ದುರ್ಬಲವಾದ ಅವಲಂಬನವಾಗಬಹುದೆಂದು ವಾದಿಸಿದ್ದಾರೆ. ಕಾರಣ ಸಮೂಹದ ಸದಸ್ಯರ ಗುರಿಗಳಲ್ಲಿ ಅಂತರ್ ಅವಲಂಬನವೇ ಮಹತ್ವವಾದ ಅಂಶವಾಗಬಹುದೆಂದು ಪರಿಗಣಿಸಬಹುದು. ಗುರಿಸಾಧನೆಗಾಗಿ ಸದಸ್ಯರು ಪರಸ್ಪರ ಅವಲಂಬಿಸಿದ್ದರೆ ಆಗ ಪ್ರಬಲವಾದ ಗತಿಶೀಲತೆ (Powerful dynamics) ಸೃಷ್ಟಿಯಾಗುತ್ತದೆ. ಸಮೂಹ ವರ್ತನೆಯಲ್ಲಿ ಸಾಮ್ಯತೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಸಮೂಹ ಕಾರ್ಯದ ಸ್ವರೂಪವನ್ನು ಪರಿಗಣಿಸಬೇಕು. ಮನೋವಿಶ್ಲೇಷಣ ಸಿದ್ಧಾಂತ ಹೇಳುವ ವ್ಯಕ್ತಿಯ ಅಭಿಪ್ರೇರಣ ಪರಿಕಲ್ಪನೆ ಬಗ್ಗೆ ಲೆವಿನ್ ಪೂರ್ಣವಾಗಿ ಒಪ್ಪಿಕೊಂಡಂತೆ ಕಾಣುವುದಿಲ್ಲ. ಒಬ್ಬ ಸದಸ್ಯನ ಗೆಲುವು ಇತರರ ಯಶಸ್ಸಿಗೆ ಧನಾತ್ಮಕ ಪ್ರೇರಣೆಯನ್ನು ಒದಗಿಸಬಹುದು. ಋಣಾತ್ಮಕ ಅಂತರ್ ಸಂಬಂಧದಲ್ಲಿ ಒಬ್ಬನ ಗೆಲುವು ಇನ್ನೊಬ್ಬನ ಸೋಲಾಗಬಹುದು. (ಕೆಲವು ಸ್ಪರ್ಧೆಗಳಲ್ಲಿ ಹೀಗಾಗಬಹುದು). ಅಂತರ್ ಅವಲಂಬನವು (ವಿಧಿಯ ಮತ್ತು ಕಾರ್ಯದ) ಗುಂಪಿನಲ್ಲಿ 'ಗತಿಶೀಲ ಸಮಗ್ರ' (dynamic whole)ವಾಗಿ ಪರಿಣಮಿಸುವುದು. ಧನಾತ್ಮಕ ಅಂತರ್ ಅವಲಂಬನವು ಸಾಮಾನ್ಯವಾಗಿ ಸಹಕಾರಿ ತತ್ವದಲ್ಲಿದ್ದು ಸದಸ್ಯರು ಸಂವಹನ ಕೈಗೊಂಡು ಬಹುವಾಗಿ ಚರ್ಚೆಯಲ್ಲಿ ಭಾಗವಹಿಸುವಂತೆ ಮಾಡುವುದು. ಸದಸ್ಯರು ಆಕ್ರಮಣಕಾರಿಗಳಾಗದೆ ಪರಸ್ಪರ ಸ್ನೇಹದಿಂದ ಉತ್ಪಾದನಾಶೀಲರಾಗಿರುತ್ತಾರೆ. ಆದರೆ ಋಣಾತ್ಮಕ ಕಾರ್ಯ ಅಂತರ್ ಅವಲಂಬನ ಸಮೂಹಗಳಲ್ಲಿ ಇಂತಹ ಲಕ್ಷಣಗಳು ಕಂಡು ಬರುವುದಿಲ್ಲ. ಹೀಗೆ ಲೆವಿನ್‌ರವರು ಸಮೂಹಗಳ ಸ್ವರೂಪದ ಬಗ್ಗೆ ಕೈಗೊಂಡ ಅಧ್ಯಯನದಿಂದ 'ಸಮೂಹ ಗತಿಶಾಸ್ತ್ರವು' ಇನ್ನೂ ಆಳವಾಗಿ ಮತ್ತು ವಿಸ್ತೃತವಾಗಿ ಬೆಳೆಯಿತು.

### ನಾಯಕತ್ವ ಶೈಲಿಗಳು ಅಥವಾ ವಿಧಗಳು (Styles or Types of Leadership)

ಕುರ್ಟ್ ಲೆವಿನ್‌ರವರು ರೊನಾಲ್ಡ್ ಲಿಪೆಟ್‌ರವರೊಡನೆ ಕೈಗೊಂಡ ಅಧ್ಯಯನದಲ್ಲಿ ಪ್ರಜಾಪ್ರಭುತ್ವ, ನಿರಂಕುಶ ಮತ್ತು ಅರಾಜಕ ಸ್ವರೂಪದ ಮೂರು ಶಾಸ್ತ್ರೀಯ ಸಮೂಹ ನಾಯಕತ್ವ ಮಾದರಿಗಳನ್ನು ಅನ್ವೇಷಿಸಿದರು. ಈ ಅಧ್ಯಯನದಿಂದ ಪ್ರಜಾಪ್ರಭುತ್ವ ಸಮೂಹಗಳಲ್ಲಿ ಸೃಜನಾತ್ಮಕತೆ, ಸಮೂಹ ಮನೋವೃತ್ತಿ ಮತ್ತು ಸ್ನೇಹಪರತೆ ಗುಣಗಳು ಹೆಚ್ಚು ಪ್ರಮಾಣದಲ್ಲಿ ಇರುತ್ತದೆ. ನಿರಂಕುಶ ಮತ್ತು ಅರಾಜಕ ಸಮೂಹಗಳಲ್ಲಿ ಆಕ್ರಮಣ ಪ್ರವೃತ್ತಿ, ದೂಷಿಸುವಿಕೆ, ಕ್ರೌರ್ಯ ಮತ್ತು ಅತೃಪ್ತಿ ಗುಣಗಳು ಇರುತ್ತವೆ ಎಂದು ತಿಳಿದು ಬಂದಿದೆ. ಈ ಮೂರು ವಿಧದ ಸನ್ನಿವೇಶಗಳಲ್ಲಿ ವರ್ತನೆಯ ವ್ಯತ್ಯಾಸಗಳು ಸಂಪೂರ್ಣವಾಗಿ ವ್ಯಕ್ತಿ ವ್ಯತ್ಯಾಸಗಳ ಪರಿಣಾಮದಿಂದಲ್ಲ ಎಂದು ಲೆವಿನ್‌ರವರು ಅಭಿಪ್ರಾಯ ಪಟ್ಟಿದ್ದಾರೆ. ಮಕ್ಕಳೊಂದಿಗೆ ನಡೆಸಿದ ಸಮೂಹ ಪ್ರಯೋಗದಿಂದ ಲೆವಿನ್‌ರವರು ನಿರಂಕುಶ ನಾಯಕತ್ವವು ಒತ್ತಾಯದಿಂದ ಹೇರಿದ್ದಾದರೆ, ಪ್ರಜಾಪ್ರಭುತ್ವವನ್ನು ಕಲಿತದ್ದಾಗುತ್ತದೆ ಎಂದು ಖಚಿತಪಡಿಸಿಕೊಂಡರು. ಕುರ್ಟ್ ಲೆವಿನ್ ಮತ್ತು ಸಂಗಡಿಗರು ನಾಯಕತ್ವ ಪ್ರಭೇದಗಳ ಪ್ರಾಯೋಗಿಕ ಸಂಶೋಧನೆ ಕೈಗೊಳ್ಳಲು 10–11 ವಯಸ್ಸಿನ ಮಕ್ಕಳನ್ನು ನಾಟಕಗಳಲ್ಲಿ ಉಪಯೋಗಿಸುವ ಮುಖವಾಡಗಳನ್ನು ತಯಾರಿಸುವುದನ್ನು ಕಲಿಸುವ ನೆಪದಿಂದ ಕರೆಯಿಸಿಕೊಂಡು ಪ್ರಯೋಗ ಕೈಗೊಂಡರು. ಸ್ವಇಚ್ಛೆಯಿಂದ ಬಂದ ಮಕ್ಕಳನ್ನು ಮೂರು ಗುಂಪು

Digitised by Bharatavani, CIIL

ಮಾಡಿ ಮೂರು ನಾಯಕತ್ವ ವಿಧಗಳಲ್ಲಿ ತರಬೇತು ನೀಡಲು ಮೂವರು ವಿದ್ಯಾರ್ಥಿ ನಾಯಕರನ್ನು ಆಯ್ಕೆ ಮಾಡಿಕೊಂಡರು.

ಪ್ರಜಾಪ್ರಭುತ್ವ ನಾಯಕನು ಅನುಚರರೊಡನೆ ಚರ್ಚಿಸಿ ಅವರ ಸಲಹೆಗಳನ್ನು ಪಡೆದು ಅನಂತರ ಕೆಲಸವನ್ನು ಪ್ರಾರಂಭ ಮಾಡಿದನು. ಪ್ರತಿಯೊಂದು ಕೆಲಸಕ್ಕೂ ಸಾಮೂಹಿಕ ತೀರ್ಮಾನ ಆಧಾರವಾಗಿತ್ತು.

ಪ್ರಜಾನಿಷ್ಠನಾಯಕ ಅಥವಾ ನಿರಂಕುಶ ನಾಯಕನು ತನ್ನ ಅನುಚರರಿಗೆ ಆಜ್ಞೆಯನ್ನು ಕೊಟ್ಟು, ಅದರಂತೆ ಅವರು ನಡೆದುಕೊಳ್ಳಬೇಕೆಂದು ಆದೇಶ ಮಾಡಿದನು. ಅವರ ಸಲಹೆಗಳಿಗೆ ಗಮನ ಕೊಡಲಿಲ್ಲ. ತನ್ನ ಉದ್ದೇಶಗಳನ್ನು ಅವರಿಗೆ ವಿವರಿಸಿ ಹೇಳಲಿಲ್ಲ. ನಾಯಕನು ಹೇಳಿದಂತೆ ಅವರು ನಡೆದುಕೊಳ್ಳಬೇಕೆಂಬುದನ್ನು ಸ್ಪಷ್ಟ ಮಾಡಿದನು.

ಅರಾಜಕ ಅಥವಾ ತಟಸ್ಥ ನಾಯಕನು ತನ್ನ ಗುಂಪಿನವರನ್ನು ಯಾವ ವಿಧವಾಗಿಯೂ ಒಪ್ಪಿಸಲು ಪ್ರಯತ್ನಿಸಲಿಲ್ಲ. ಅವರೊಡನೆ ಚರ್ಚೆಯನ್ನು ಮಾಡಲಿಲ್ಲ "ನೀವು ಹೇಗೆ ಬೇಕಾದರೂ ಮಾಡಿಕೊಳ್ಳಿ" ಎನ್ನುವ ಧೋರಣೆ ಆತನದು.

ನಾಯಕತ್ವ ವಿಧಗಳ ಪ್ರಾಯೋಗಿಕ ಸಂಶೋಧನೆಯ ಫಲಿತಾಂಶ ಈ ಕೆಳಗಿನಂತೆ ಕಂಡು ಬಂದಿತು.

ಪ್ರಜಾಸತ್ತಾತ್ಮಕ ನಾಯಕನ ಅನುಚರರು ಗುಂಪಿನೊಡನೆ ತಮ್ಮ ವ್ಯಕ್ತಿತ್ವವನ್ನು ವಿಲೀನಮಾಡಿ ಬಹಳ ಆಸಕ್ತಿಯಿಂದ ಕೆಲಸ ಮಾಡಿದರು. ಕೆಲಸದ ಬಗ್ಗೆ ಮಾತನಾಡುವಾಗ 'ನಾವು, ನಮ್ಮ, ನಮಗೆ, ಎಂಬ ಗುಂಪಿನಲ್ಲಿ ವಿಲೀನವನ್ನು ಸೂಚಿಸುವ ಪದಗಳನ್ನು ಹೆಚ್ಚಿಗೆ ಬಳಸಿ ಆತ್ಮಗ್ರಸ್ತತೆ (ego involvement) ತೋರಿದರು.

ನಿರಂಕುಶ ನಾಯಕನ ಅನುಚರರಲ್ಲಿ ಕೆಲವರು ನಾಯಕನ ದಬ್ಬಾಳಿಕೆಯನ್ನು ಸಹಿಸದೆ ವಿರೋಧಿಸಿದರು. ಮಿಕ್ಕವರು ತಮ್ಮ ಸ್ವಂತ ಅಭಿಪ್ರಾಯಗಳನ್ನು ನುಂಗಿ, ಹೇಳಿದಷ್ಟನ್ನು ಮಾತ್ರ ಮಾಡಿ ಹೋದರು. ಹೀಗೆ ಎರಡು ರೀತಿಯ ಪ್ರತಿಕ್ರಿಯೆಗಳು ಕಂಡುಬಂದವು.

ತಟಸ್ಥ ನಾಯಕನ ಗುಂಪಿನಲ್ಲಿ ಮಕ್ಕಳು ಕೆಲಸಕ್ಕೆ ಹೆಚ್ಚು ಗಮನ ಕೊಡದೆ ಆಟವಾಡುತ್ತಾ ಅಥವಾ ಹರಟೆ ಹೊಡೆಯುತ್ತಾ ಕಾಲವನ್ನು ಕಳೆದರು. ಗುಂಪಿನಲ್ಲಿ ಸಂಘಟಿತವಾಗಿ ಕೆಲಸ ನಡೆಯಲಿಲ್ಲ.

ಒಟ್ಟಿನಲ್ಲಿ ನಾಯಕತ್ವ ಪರಿಣಾಮದ ದೃಷ್ಟಿಯಿಂದ ಪ್ರಜಾಪ್ರಭುತ್ವ ನಾಯಕತ್ವ ಹೆಚ್ಚು ಪ್ರಭಾವಯುತವಾದುದೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ಕ್ರಿಯಾ ಸಂಶೋಧನೆ (Action Research)

'ಕ್ರಿಯಾ ಸಂಶೋಧನೆ' ಎಂಬ ಪದವನ್ನು ಮೊಟ್ಟ ಮೊದಲಿಗೆ ಕುರ್ಟ್‌ಲೆವಿನ್‌ರವರು ಬಳಸಿದರು. ಈ ಸಂಶೋಧನೆ ಸಾಮಾಜಿಕ ನಿರ್ವಹಣೆ (Management) ಅಥವಾ ಸಾಮಾಜಿಕ ಅಭಿಯಂತರಿಸುವಿಕೆ (engineering)ಗಾಗಿಯೇ ರೂಪಿತವಾಗಿರುವುದು. ಇದು ಸಾಮಾಜಿಕ ಕಾರ್ಯದ ಸನ್ನಿವೇಶ (condition) ಮತ್ತು ವಿವಿಧ ರೂಪದ ಪರಿಣಾಮಗಳ ಅಧ್ಯಯನಕ್ಕಾಗಿಯೇ ನಿರ್ಮಿತವಾದುದು.

ಲೆವಿನ್‌ರವರ ಉಪಕ್ರಮವು (approach) ಹಂತಗಳ ಸುರುಳಿ (spiral) ಕ್ರಮವನ್ನು ಅನುಸರಿಸಿದೆ. ಕ್ರಿಯೆಯ ಫಲಿತಾಂಶದ ಬಗ್ಗೆ ಯೋಜನೆ–ಕ್ರಿಯಾ ನಿರ್ವಹಣೆ–ತಥ್ಯಗಳ ಸಂಗ್ರಹ ಎಂಬ ಚಕ್ರ ಕ್ರಮದಲ್ಲಿ ಕ್ರಿಯಾಸಂಶೋಧನೆ ನಡೆಯುತ್ತದೆ.

ಈ ರೀತಿ ಲೆವಿನ್‌ರವರು ಕ್ರಿಯಾ ಸಂಶೋಧನೆಯ ಆರಂಭಿಕ ಚಕ್ರವನ್ನು ವಿವರಿಸಿದ್ದಾರೆ. ಮೇಲಿನ ನಮೂನೆಯಲ್ಲಿ ಮುಂದುವರೆಯುತ್ತಾ ಮೂರನೇ ಹಂತಕ್ಕೆ ತಾರ್ಕಿಕ ಆಧಾರ ಕಂಡುಕೊಳ್ಳಬೇಕು. ಅಗತ್ಯವಿದ್ದರೆ ಸಮಗ್ರಯೋಜನೆಯನ್ನೇ ಸುಧಾರಿಸಿಕೊಳ್ಳಬೇಕು ಎಂಬುದು ಲೆವಿನ್‌ರ ಅಭಿಪ್ರಾಯವಾಗಿದೆ. ಸಾಮಾಜಿಕ ಮತ್ತು ಸಂಸ್ಥೆಗಳ ಸನ್ನಿವೇಶಗಳಲ್ಲಿ ಸಮಸ್ಯೆ ಪರಿಹಾರ ಹುಡುಕುವ ಸ್ವರೂಪವನ್ನು ಈ ಸಂಶೋಧನೆಯಲ್ಲಿ ಕಾಣಬಹುದು.

## ಶಿಕ್ಷಣದಲ್ಲಿ ಸಮೂಹ ಗತಿಶಾಸ್ತ್ರದ ಮಹತ್ವ

ಶಿಕ್ಷಕರು ಸಮೂಹ ಗತಿಶಾಸ್ತ್ರದ ಜ್ಞಾನದಿಂದ ಶಾಲೆಗಳಲ್ಲಿ ದೊರಕುವ ವಿವಿಧ ಸಾಮಾಜಿಕ ಸನ್ನಿವೇಶಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಲ್ಲಿ ಹಿತಕರವಾದ ಸಾಮಾಜಿಕ ಕೌಶಲಗಳನ್ನು ಬೆಳೆಸಬಹುದು. (ಅ) ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಪ್ರಚೋದಿಸಬಹುದು. ಪ್ರತಿವಿದ್ಯಾರ್ಥಿ ಎಲ್ಲರೊಡನೆ ಒಂದಾಗಿ ಸಮಾನ ಮನಸ್ಕನಾಗುವಂತೆ ಮಾಡಬಹುದು. (ಆ) ಸದಸ್ಯರು ಪ್ರತ್ಯೇಕವಾಗಿ ಕೈಗೊಂಡ ಸಾಧನೆಯ ಪ್ರಮಾಣಕ್ಕಿಂತ ಸಮೂಹದ ಮೂಲಕ ಒಟ್ಟಿಗೆ ಕೈಗೊಂಡಾಗ ಕಾರ್ಯಸಾಧನೆಯ ಪ್ರಮಾಣ ಹೆಚ್ಚಿನದಾಗಿರುತ್ತದೆ. ಈ ಬಗ್ಗೆ ಸೆಗಲ್‌ರವರು ಕಂಡುಕೊಂಡಂತೆ ಸದಸ್ಯರು ಹೆಚ್ಚಿನ ರೀತಿಯಲ್ಲಿ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬಲ್ಲರು. (ಇ) ಸಮೂಹದ ಪಾರಸ್ಪರಿಕ ಅರಿವು ವ್ಯಕ್ತಿಗಳಲ್ಲಿ ಭಾವನಾ ಸಮತೋಲನವನ್ನು ತರಬಲ್ಲದು. (ಈ) ಸದಸ್ಯರುಗಳಲ್ಲಿ ಶತ್ರು ಅಥವಾ ವೈರಭಾವ ಕಡಿಮೆಯಾಗಿ ಹೊಂದಾಣಿಕೆಯುಂಟಾಗಿ ಕಾರ್ಯಸಾಧನೆ ಹೆಚ್ಚಾಗುವುದು. (ಉ) ಕೀಳರಿಮೆಯಾಗಲಿ ಮೇಲರಿಮೆಯಾಗಲಿ ತಲೆದೋರದಿರಬಹುದು (ಊ) ಸದಸ್ಯರುಗಳ ಕಾರ್ಯನಿರ್ವಹಣೆ, ಚಿಂತನೆ ಮತ್ತು ಭಾವನೆಗಳಲ್ಲಿ ಸಾಮರಸ್ಯ ಮೂಡುವುದು. (ಋ) ಸಮರ್ಥ ವಿದ್ಯಾರ್ಥಿಗಳಲ್ಲಿ ಎಳವೆಯಲ್ಲೇ ಸೂಕ್ತ ನಾಯಕತ್ವ ಗುಣಗಳನ್ನು ಪೋಷಿಸಬಹುದು (ಎ) ಸದಸ್ಯರುಗಳ ನಡುವೆ ಉಂಟಾಗಬಹುದಾದ ಘರ್ಷಣೆಗಳನ್ನು ಕಡಿಮೆ ಮಾಡಬಹುದು ಮತ್ತು ನಿವಾರಿಸಬಹುದು (ಏ) ಸಮಾನ ಸಾಮರ್ಥ್ಯ ಮತ್ತು ಅಭಿರುಚಿಯ ಮಕ್ಕಳೇ ಸೇರಿ ಸಮೂಹದ ಸಾಧನೆಗೆ ಬದ್ಧಗೊಳಿಸಿಕೊಂಡು ತಮ್ಮ ತಮ್ಮತನವನ್ನು ಬೆಳೆಸಿಕೊಳ್ಳಬಹುದು. (ಐ) ತಿರಸ್ಕೃತ ಅಥವಾ ಒಂಟಿಯಾಗಿ ಉಳಿಯುವ ಅಪಾಯ ನಿವಾರಣೆಯಾಗಬಹುದು. (ಒ) ಪಠ್ಯ ಚಟುವಟಿಕೆಗಳಲ್ಲಿ ಪುಟ್ಟ ಸಮೂಹಗಳ ಚರ್ಚೆ, ಸಂವಾದಗಳ ಮೂಲಕ ಆಳವಾದ ಕಲಿಕೆ ಸಾಧ್ಯವಾಗುವುದು. ಪರಿಣಾಮಕಾರಿ ಸಂವಹನ ಕೌಶಲಗಳು ಬೆಳೆಯುವವು (ಜಿ) ಪ್ರವಾಸ, ಕ್ಷೇತ್ರಭೇಟಿ, ಸಾಂಸ್ಕೃತಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಏರ್ಪಡಿಸಬಹುದು.

–ಕೆ.ಆರ್.ನಾ.

## ಸಮೂಹ ಘರ್ಷಣೆಗಳ ಪರಿಹಾರ

ಘರ್ಷಣೆಯು ಒಂದು ಮುಖ್ಯ ಮತ್ತು ತೀವ್ರ ರೀತಿಯ ಸಾಮಾಜಿಕ ಅಂತರ್‌ಕ್ರಿಯೆ. ಇದು ಎಲ್ಲಾ ಜೈವಿಕ ವರ್ಗಗಳಲ್ಲಿಯೂ ಇವೆ. ಮಾನವ ಸಂಬಂಧಗಳಲ್ಲಿ ಘರ್ಷಣೆ ಸಹಜ ಮತ್ತು ಅನಿವಾರ್ಯ.

ಪಾರ್ಕ್ ಮತ್ತು ಬರ್ಗೆಸ್‌ರ ಮೇರೆಗೆ "ಆಳವಾದ ಭಾವನೆಗಳನ್ನು, ಬಲವಾದ ಭಾವೋದ್ರೇಕವನ್ನು ಮತ್ತು ಆಸಕ್ತಿ ಹಾಗೂ ಪ್ರಯತ್ನಗಳ ಹೆಚ್ಚಾದ ಪ್ರಬಲತೆಯನ್ನು ದಾಖಲಿಸುವುದೇ ಘರ್ಷಣೆ." ಘರ್ಷಣೆ ಆಗಾಗ್ಗೆ ಆಗುತ್ತಿರುತ್ತದೆ. ತೀವ್ರವಾದಾಗ ಹಿಂಸೆಯಲ್ಲಿ ಪರ್ಯಾವಸಾನ

Digitised by Bharatavani, CIIL

ಗೊಳ್ಳುತ್ತದೆ. ಘರ್ಷಣೆಯಲ್ಲಿ ವ್ಯಕ್ತಿ ಅಥವಾ ಸಮೂಹಗಳ ದೃಷ್ಟಿ ಗುರಿಗಳಿಗಿಂತ ಹೆಚ್ಚಾಗಿ ಎದುರಾಳಿಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ.

**ಘರ್ಷಣೆಯ ಮುಖ್ಯ ಲಕ್ಷಣಗಳು**

1. **ಪ್ರಜ್ಞಾಪೂರ್ವಕ ಪ್ರಕ್ರಿಯೆ:** ಘರ್ಷಣೆಯು ಒಂದು ಪ್ರಜ್ಞಾಪೂರ್ವಕ ಪ್ರಕ್ರಿಯೆ. ಇದರಲ್ಲಿ ತೊಡಗಿರುವ ವ್ಯಕ್ತಿ, ಸಮೂಹಗಳು, ಎದುರಾಳಿಗಳನ್ನು ಚೆನ್ನಾಗಿ ಅರಿತಿರುತ್ತಾರೆ. ಆಳವಾದ ಭಾವನೆ, ಬಲಿಷ್ಠ ಭಾವೋದ್ರೇಕಗಳಿಂದ ಬೇರೊಂದು ಗುಂಪನ್ನು ಸೋಲಿಸಲು ಅಥವಾ ಮುಗಿಸಲು, ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಾರೆ.

2. **ಆಗಾಗ್ಗೆ ನಡೆಯುವ ಪ್ರಕ್ರಿಯೆ:** ಇದು ಒಂದು ಸಾರ್ವತ್ರಿಕ ಪ್ರಕ್ರಿಯೆಯಾಗಿದ್ದು ಎಲ್ಲಾ ಕಾಲ, ಸಮೂಹ, ರಾಷ್ಟ್ರಗಳಲ್ಲಿ ಸಂಭವಿಸುತ್ತದೆ. ಕುಟುಂಬದಿಂದ ಹಿಡಿದು ದೊಡ್ಡ ಸಮಾಜಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ.

ಘರ್ಷಣೆಯಲ್ಲಿ ಸಂಶಯ, ದ್ವೇಷ, ಅಸೂಯೆ, ಒತ್ತಾಯ, ಬಲಾತ್ಕಾರ, ಬಲಪ್ರಯೋಗ, ಹಿಂಸೆ ಮುಂತಾದವು ಕಂಡುಬರುತ್ತವೆ. ಘರ್ಷಣೆಯು ಅಹಿಂಸಾತ್ಮಕವಾಗಿ ಅಥವಾ ಹಿಂಸಾತ್ಮಕವಾಗಿ ಇರಬಹುದು. ಗಾಂಧೀಜಿಯವರ ಚಳುವಳಿಗಳು ಅಹಿಂಸಾ ಘರ್ಷಣೆಗೆ ಉತ್ತಮ ಉದಾಹರಣೆಗಳು.

ಘರ್ಷಣೆಗೆ ಕಾರಣಗಳು ಹಲವಾರು. ಅನ್ಯೋನ್ಯತೆ, ಸಾಮರಸ್ಯ, ಹೊಂದಾಣಿಕೆಗಳ ಅಭಾವಗಳಿಂದ ಸಹಜವಾಗಿ ಘರ್ಷಣೆಗಳಾಗುತ್ತವೆ. ಗುಂಪುಗಳು ತಮ್ಮ ಹಿತಾಸಕ್ತಿಗಳಿಗೆ ಭಂಗವುಂಟಾದಾಗ, ಧ್ಯೇಯಗಳು, ಆಚಾರ–ವಿಚಾರಗಳು, ನೀತಿ–ನಿಯಮಗಳು, ಧಾರ್ಮಿಕ ನಂಬಿಕೆಗಳಲ್ಲಿನ ವ್ಯತ್ಯಾಸಗಳಿಂದಾಗಿ ಘರ್ಷಣೆಗಳಾಗುತ್ತವೆ. ಪೀಳಿಗೆಗಳಲ್ಲಿನ ಮೌಲ್ಯಗಳ ಅಂತರದಿಂದಾಗಿಯೂ ಇವು ಆಗುತ್ತವೆ. ಆರ್ಥಿಕ ಕಾರಣಗಳಿಂದಾಗಿಯೂ ಇವುಗಳ ಸಾಧ್ಯತೆ ಹೆಚ್ಚು. ಬಂಡವಾಳಗಾರರು–ಕಾರ್ಮಿಕರ, ಬಡವ–ಶ್ರೀಮಂತರ, ಮೇಲ್ವರ್ಗ, ಅಸ್ಪೃಶ್ಯತೆ, ಹಕ್ಕುಗಳ ಚ್ಯುತಿ, ಗಡಿ ಪ್ರಶ್ನೆ, ನೀರಿನ ಹಂಚಿಕೆಯ ಸಮಸ್ಯೆ, ಹೊಂದಾಣಿಕೆಯ ಅಭಾವ ಮೊದಲಾದವು ಘರ್ಷಣೆಗೆ ಇತರ ಕಾರಣಗಳು.

ಗುರಿಗಳ ಬಗ್ಗೆ ಒಮ್ಮತದಿಂದ ಒಗ್ಗಟ್ಟಾಗಿ ಜನರು ಕೆಲಸ ಮಾಡುವುದನ್ನೇ ಸಹಕಾರ ಎನ್ನುತ್ತೇವೆ. ಪರಸ್ಪರ ವಿರುದ್ಧವಾಗಿ ಕಾರ್ಯಪ್ರವೃತ್ತರಾದಾಗ ಅದು ಘರ್ಷಣೆ. ಸಹಕಾರ ಮತ್ತು ಘರ್ಷಣೆಗಳು ಸಾಮಾಜಿಕ ಜೀವನದ ಎರಡು ಮೂಲ ಪ್ರಕ್ರಿಯೆಗಳು. ಇವು ಮೂರು ಸ್ತರಗಳಲ್ಲಿ ನಡೆಯುತ್ತವೆ – ಗುಂಪುಗಳ ನಡುವೆ, ಗುಂಪು ಮತ್ತು ವ್ಯಕ್ತಿಯ ನಡುವೆ ಹಾಗೂ ವ್ಯಕ್ತಿಗಳ ನಡುವೆ.

ಗುಂಪಿನ ಏಕತೆಗೆ ಭಂಗ ಬರುವುದು ಹೆಚ್ಚಾಗಿ ಗುಂಪಿನಲ್ಲಿನ ಆಂತರಿಕ ಘರ್ಷಣೆಗಳಿಂದಲೇ ಹೊರತು ಬೇರೆ ಗುಂಪುಗಳಿಂದಲ್ಲ. ಯುದ್ಧಗಳಲ್ಲಾಗುವಂತೆ ಗುಂಪುಗಳ ನಡುವೆಯೂ ಘರ್ಷಣೆ ಇಲ್ಲವೆಂದಿಲ್ಲ. ಆದರೆ ಒಂದು ರಾಷ್ಟ್ರದ ಎಲ್ಲಾ ಜನರು ಇನ್ನೊಂದು ರಾಷ್ಟ್ರದ ಜನರ ಬಗ್ಗೆ ವಿರೋಧ ಅಥವಾ ದ್ವೇಷವನ್ನು ವ್ಯಕ್ತಪಡಿಸುವುದಿಲ್ಲ. (ಉದಾ.: ಭಾರತ ಮತ್ತು ಪಾಕಿಸ್ತಾನ)

ಗುಂಪಿನೊಳಗಿನ ಆಂತರಿಕ ಘರ್ಷಣೆಗಳು (ಸದಸ್ಯರ ಪರಸ್ಪರ ವೈರುಧ್ಯಗಳಿಂದಾದ) ಗುಂಪಿನ ಏಕತೆಗೆ ಅಪಾಯಕಾರಿಯಾದಾಗ ಆ ಏಕತೆಯು ಪುನಃ ನೆಲೆಗೊಳ್ಳಲು ಕೆಲವೊಮ್ಮೆ ಸಾಧ್ಯ. ಆದರೆ ಎಲ್ಲಾ ರೀತಿಯ ಘರ್ಷಣೆಗಳು ಗುಂಪಿನ ರಚನೆಗೆ ಲಾಭದಾಯಕವಾಗುವುದಿಲ್ಲ.

ಸ್ಪರ್ಧೆಯು ಹೆಚ್ಚಿನ ಘರ್ಷಣೆಗಳಿಗೆ ಕಾರಣ, ಇದು ಸಾಮಾಜಿಕ ಹೋರಾಟದ ಮೂಲ ಸ್ವರೂಪ. ಸರಬರಾಜಿಗಿಂತ ಬೇಡಿಕೆಯೇ ಹೆಚ್ಚಾದಾಗ ಸ್ಪರ್ಧೆಗಳುಂಟಾಗುತ್ತವೆ. ತೃಪ್ತಿಪಡಿಸಲು ಅಸಾಧ್ಯವಾದ 'ಬೇಕು'ಗಳನ್ನು ಬಯಸುವ ಜನಸಂಖ್ಯೆ ಮತ್ತು ಮಿತವಾದ ಸಂಪನ್ಮೂಲಗಳ ಮೊಮಡು ಜಗತ್ತು ಈ ಸನ್ನಿವೇಶದಲ್ಲಿ ಸ್ಪರ್ಧೆ ಮತ್ತು ಪರಿಣಾಮವಾಗಿ ಘರ್ಷಣೆ ಸಹಜ ಮತ್ತು ಬಹುಶಃ ಅನಿವಾರ್ಯ.

ಉದಾಹರಣೆಗೆ, ಉದ್ಯೋಗಗಳ ಸಂಖ್ಯೆಗಿಂತ ಅವುಗಳನ್ನು ಬಯಸುವವರ ಸಂಖ್ಯೆ ಅಪಾರವಿದ್ದಾಗ, ಇನ್ನೂ ಉತ್ತಮ ಹುದ್ದೆಗಳಿಗಾಗಿ ಸ್ಪರ್ಧೆಯೂ ನಡೆಯುತ್ತದೆ. ಐಷಾರಾಮೀ ವಸ್ತುಗಳು, ಅಧಿಕಾರ, ಸಾಮಾಜಿಕ ಸ್ಥಾನಮಾನ, ಗೌರವ, ಪ್ರಸಿದ್ಧಿಗಳಿಗಾಗಿಯೂ ಸ್ಪರ್ಧೆಯನ್ನು ಕಾಣುತ್ತೇವೆ. ಇವು ಗುಂಪುಗಳ ನಡುವೆಯೂ ಉಂಟು, ವ್ಯಕ್ತಿಗಳ ನಡುವೆಯೂ ಉಂಟು. ವೈಯಕ್ತಿಕ ಸ್ಪರ್ಧೆಗಳು ವಿರೋಧದಲ್ಲಿ ಪರಿಣಮಿಸುತ್ತವೆ. ಜಗಳ ಆಗಲು ಇಬ್ಬರಾದರೂ ಬೇಕು. ಏಟಿಗೆ ಎದಿರೇಟು ಕೊಡದಿದ್ದಾಗ ಘರ್ಷಣೆ ಸ್ವಲ್ಪ ಮಟ್ಟಿಗೆ ತಣ್ಣಗಾಗಬಹುದು. ಗುಂಪುಗಳ ನಡುವಿನ ಘರ್ಷಣೆಯು ಒಳಗುಂಪುಗಳ ಸಹಕಾರಕ್ಕೆ ಎಡೆಮಾಡಿಕೊಡಬಹುದು. ಶತ್ರುಗಳಿಂದ ಅಪಾಯವಿದ್ದಾಗ, ಯುದ್ಧದ ಸಮಯದಲ್ಲಿ ಸಹಕಾರ ಮತ್ತು ರಾಷ್ಟ್ರೀಯ ಮನೋಭಾವನೆಗಳು ಹೆಚ್ಚುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಎರಡನೇ ಮಹಾಯುದ್ಧದ ಕಾಲದಲ್ಲಿ ಸಮ್ಮಿಶ್ರ ಸರ್ಕಾರಗಳು ಅಸ್ತಿತ್ವಕ್ಕೆ ಬಂದವು. ಅಂತೆಯೇ ಸರ್ಕಾರಗಳು ಸೋಲುವ ಪರಿಸ್ಥಿತಿ ಇದ್ದಾಗ, ರಾಜಕಾರಣಿಗಳು ಯುದ್ಧ ಬಂತೆಂದು ಬೊಬ್ಬಿಡುವುದನ್ನೂ ಕಾಣುತ್ತೇವೆ.

ಬಹಳಷ್ಟು ಘರ್ಷಣೆಗಳು, ನಿಯಮಗಳು ಸರಿಯಾಗಿ ಅನ್ವಯವಾಗಬೇಕೆಂಬುದರ ಬಗ್ಗೆಯೇ ಆಗುವುದನ್ನು ನಾವು ಕಾಣಬಹುದು. ಉದಾಹರಣೆಗೆ, ಕ್ರೀಡೆ ಮತ್ತು ಪಂದ್ಯಾಟಗಳಲ್ಲಿ ತೀರ್ಪುಗಾರರ ತೀರ್ಮಾನಗಳ ಬಗ್ಗೆಯೇ ಉಂಟಾಗುವ ವಿವಾದಗಳು. ಹಾಗೆಯೇ ಕಾರ್ಮಿಕ ಮತ್ತು ಮಾಲೀಕರ ನಡುವೆ, ವಿಧಾನಸಭೆ, ಪಾರ್ಲಿಮೆಂಟಿನಲ್ಲಿ ಅಧಿಕಾರ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಿನ ಎಷ್ಟೋ ಘರ್ಷಣೆಗಳು. ಹೊಸ ಸ್ಪರ್ಧಿಗಳು ಯಾವುದೇ ರಂಗವನ್ನು ಪ್ರವೇಶಿಸಿದಾಗ ಹಳಬರಿಗೂ ಹೊಸಬರಿಗೂ ಯಶಸ್ಸನ್ನು ಪಡೆಯಲು ಸ್ಪರ್ಧೆ ಮತ್ತು ಪರಿಣಾಮವಾಗಿ ಘರ್ಷಣೆಗಳಾಗುತ್ತವೆ. ಸ್ಪರ್ಧೆಯಲ್ಲಿ ಗೆಲ್ಲಲು ಪೂರ್ವಾಗ್ರಹಗಳ ಬಳಕೆಯೂ ಆಗುತ್ತದೆ. ಉದ್ಯೋಗಗಳನ್ನು ಪಡೆಯಲು, ನಿವೇಶನ, ಮನೆಗಳನ್ನು ಪಡೆಯಲು, ವ್ಯಾಪಾರ–ಉದ್ದಿಮೆಗಳಲ್ಲಿ ಅಲ್ಪಸಂಖ್ಯಾತರನ್ನು ಸೋಲಿಸಲು ಘರ್ಷಣೆಯು ಒಂದು ಅಸ್ತ್ರವಾಗುತ್ತದೆ.

**ಅನುಸರಣೆ**

ವಿರೋಧಿ ವ್ಯಕ್ತಿಗಳು, ಗುಂಪುಗಳು ಕೆಲವು ವೇಳೆ, ತಾತ್ಕಾಲಿಕವಾಗಿ, ಅನಿವಾರ್ಯವಾಗಿ ಹೊಂದಿಕೊಳ್ಳಬೇಕಾಗುತ್ತದೆ. ಇದನ್ನೇ ವಿರೋಧಿ ಸಹಕಾರ ಎನ್ನಬಹುದು (Sumner). ಘರ್ಷಣೆಗಳು ತೀವ್ರ ಸ್ವರೂಪ ತಾಳಿದಾಗ, ಒಂದು ಗುಂಪು ಪ್ರಬಲವಾಗಿ ಯಶಸ್ಸನ್ನು ಗಳಿಸಿದಾಗ, ವಿರೋಧಿ ಗುಂಪು ಸೋಲನ್ನು ಒಪ್ಪಿಕೊಳ್ಳುವುದಲ್ಲದೆ, ಕೀಳರಿಮೆಗೆ ಒಳಗಾಗಬಹುದು (ಕೆಲವೊಮ್ಮೆ ಗುಂಪು ನಾಶವಾಗಲೂಬಹುದು).

**ಹೊಂದಾಣಿಕೆ ಅಥವಾ ರಾಜಿಯಾಗುವುದು (Adjustment or Compromise)**

ಸ್ಪರ್ಧಿಗಳಲ್ಲಿ ಅಸಮತೋಲನವಿದ್ದಾಗ ಅಥವಾ ಒಂದು ಗುಂಪು ಇನ್ನೊಂದರ ಮೇಲೆ ಗೆಲುವು ಸಾಧಿಸಿದಾಗ, ಹೊಂದಾಣಿಕೆಯ ಸಾಧ್ಯತೆಯೂ ಇದೆ. ರಾಜಕಾರಣಿಗಳು ವಾಸ್ತವವಾದಿಗಳು. ಏನೂ ಇಲ್ಲದಿರುವುದಕ್ಕಿಂತ ಅರ್ಧ ರೊಟ್ಟಿಯಾದರೂ ವಾಸಿ ಎನ್ನುವರು ಅವರು. ಇದು ಅವರ

Digitised by Bharatavani, CIIL

ಯಶಸ್ಸಿನ ಕಲೆ. ಆದರ್ಶವಾದಿಗಳಿಗೆ ಈ ಬಗೆಯ ರಾಜೀಸೂತ್ರ ಅನೂಹ್ಯ. ಹುತಾತ್ಮ ಮನೋಭಾವದವರಿಗೆ ಈ ವಿಚಾರವೂ ಅಗ್ರಾಹ್ಯ. ಬಂಡಾಯಗಾರರು ಹೊಂದಾಣಿಕೆಯನ್ನು ತಿರಸ್ಕರಿಸುತ್ತಾರೆ. ಧಾರ್ಮಿಕ ತತ್ವಗಳು, ಪಂಥಗಳು ಹೊಂದಾಣಿಕೆಯಿಂದ ಬಹುದೂರ.

**ಸಹನೆ (Tolerance)**

ಹೊಂದಾಣಿಕೆಯು ಅಸಾಧ್ಯವಾದಾಗ ಸಹನೆ ಅಥವಾ ತಾಳ್ಮೆಗೆ ಅವಕಾಶವಾಗಬಹುದು. ಇಂತಹ ಸನ್ನಿವೇಶಗಳಲ್ಲಿ ಯಾವುದೇ ಗುಂಪು ಇನ್ನೊಂದು ಅಥವಾ ಬೇರೆ ಗುಂಪುಗಳಿಗೆ ರಿಯಾಯಿತಿಗಳನ್ನು ತೋರಿಸುವುದಿಲ್ಲ. ಮೂಲಭೂತವಾಗಿ ತನ್ನ ರೀತಿ ನೀತಿಗಳಲ್ಲಿ ಬದಲಾವಣೆಗಳನ್ನೂ ಮಾಡಿಕೊಳ್ಳುವುದಿಲ್ಲ. ಆದರೆ ಪ್ರತಿ ಗುಂಪು ಇತರ ಗುಂಪುಗಳ ಅಸ್ತಿತ್ವವನ್ನು ಸಹಿಸಿಕೊಳ್ಳಬೇಕಾಗುತ್ತದೆ.

**ಗುಂಪು ಘರ್ಷಣೆಗಳಿಗೆ ಪರಿಹಾರ**

ಮಾಹಿತಿ ಪ್ರಸಾರ, ಶಿಕ್ಷಣ, ಸೂಕ್ತ ಕಾನೂನುಗಳ ರಚನೆ, ಕಾನೂನುಗಳ ಯಶಸ್ವೀ ಜಾರಿ, ಸೂಕ್ತ ಸಾಮಾಜಿಕ ಸಂಘಟನೆಗಳು ಈ ಘರ್ಷಣೆಗಳನ್ನು ಕಡಿಮೆ ಮಾಡಲು ಉಪಯುಕ್ತ ಕ್ರಮಗಳಾಗಲು ಸಾಧ್ಯ. ಗುಂಪುಗಳ ನಡುವಣ ವ್ಯತ್ಯಾಸಗಳಿಗೆ ಒತ್ತು ಕೊಡುವುದರ ಬದಲಾಗಿ ಅವುಗಳ ಸಾಮಾನ್ಯ ಮೌಲ್ಯಗಳ ಬಗ್ಗೆ ಹೆಚ್ಚಿನ ಒತ್ತನ್ನು ಪ್ರಚಾರದ ಮೂಲಕ ನೀಡುವುದೂ ಒಂದು ಉತ್ತಮ ಕ್ರಮ. ವ್ಯಕ್ತಿಗಳ ಮೇಲೆ ದಾಳಿ ಮಾಡದಂತೆ, ಅವರು ತಮ್ಮ ವಿರೋಧಿ ವಿಚಾರಗಳನ್ನೂ, ಅಭಿವ್ಯಕ್ತಗೊಳಿಸಲು ತಿಳಿಯಾದ ವಾತಾವರಣ ಸೃಷ್ಟಿಯಾದಲ್ಲಿ, ನಿಜಾಂಶಗಳನ್ನು ಅವರೇ ಕಂಡುಕೊಳ್ಳಲು ಸಾಧ್ಯ.

ಗುಂಪಿನಲ್ಲಿನ ಒಳಘರ್ಷಣೆಗಳು ಗುಂಪಿನ ಶಕ್ತಿಯನ್ನು ಕುಂಠಿತಗೊಳಿಸುವುದರಿಂದ, ಗುಂಪುಗಳು ಅಂತಹ ಘರ್ಷಣೆಗಳು ಹೆಚ್ಚಾಗದಂತೆ ನೋಡಿಕೊಳ್ಳುತ್ತವೆ. ಪರಸ್ಪರ ಅನುಸರಣೆ, ಹೊಂದಾಣಿಕೆ ಮತ್ತು ರಾಜೀ ಪಂಚಾಯತಿಗಳ ಮೂಲಕ ಘರ್ಷಣೆಗಳನ್ನು ಮುಕ್ತಾಯಗೊಳಿಸುತ್ತವೆ.

ಪರಸ್ಪರ ವಿರುದ್ಧವಿರುವ ಮೌಲ್ಯಗಳನ್ನು ಹೊಂದಿದ ಗುಂಪುಗಳಲ್ಲಿ ಹೊಂದಾಣಿಕೆ ಅಸಾಧ್ಯ. ಇದು ಸಾಮಾಜಿಕ ವಿಘಟಣೆಯಲ್ಲಿ ಪರಿಣಮಿಸುತ್ತದೆ. ಇಂತಹ ಗುಂಪುಗಳಿಂದ ಕೂಡಿದ ಸಮಾಜ, ಜನಾಂಗೀಯ, ಧಾರ್ಮಿಕ, ಆರ್ಥಿಕ ಗುಂಪುಗಳಿಂದ ಕೂಡಿದ ಸಮಾಜ, ವಿಘಟನೆಗೆ ದಾರಿ ಮಾಡಿಕೊಡುತ್ತದೆ. ಗುರಿ ಮತ್ತು ಸಾಧನಾ ಮಾರ್ಗಗಳ ನಡುವಣ ಸಂಘರ್ಷವೂ ಇದಕ್ಕೆ ಪೂರಕವಾಗಬಲ್ಲದು.

**ಘರ್ಷಣೆಗಳ ಉಪಶಮನಕ್ಕೆ ಉಪಯುಕ್ತ ತಂತ್ರಗಳು**

ಮಾನವ ಸಮಾಜಕ್ಕೆ ಘರ್ಷಣೆಗಳು ಒಂದು ನಿರಂತರ ರೋಗವಿದ್ದಂತೆ. ಅವು ಸರ್ವವ್ಯಾಪಿ ಮತ್ತು ಸರ್ವದಾ ಇರುವಂತಹವು. ಸಾಮಾನ್ಯವಾಗಿ ಅವು ತೊಂದರೆ ಉಂಟುಮಾಡುವುವು. ಆದರೂ ವಿವಿಧ ತಂತ್ರಗಳ ಬಳಕೆಯಿಂದ ಅವನ್ನು ನಿಯಂತ್ರಿಸಬಹುದು. ಅವು ಈ ಕೆಳಗಿನಂತಿವೆ:

**1. ಬಲ ಪ್ರದರ್ಶನ ಮತ್ತು ಹಿಂಸೆ**

ಎದುರಾಳಿಯನ್ನು ಬಗ್ಗು ಬಡಿಯಲು ವ್ಯಕ್ತಿಗಳು, ಗುಂಪುಗಳು, ರಾಷ್ಟ್ರಗಳು ತಮ್ಮ ತೋಳ್ಬಲವನ್ನೂ, ಶಸ್ತ್ರಾಸ್ತ್ರಗಳನ್ನೂ ಬಳಸುವುದು ಸಾಮಾನ್ಯ. ಇಂತಹ ಕ್ರಮಗಳಿಂದ ಘರ್ಷಣೆಗಳು ತಾತ್ಕಾಲಿಕವಾಗಿ ಶಮನವಾಗುತ್ತವೆ. ಇವು ಸಾಮಾನ್ಯವಾಗಿ ಬಳಕೆಯಾಗುವ ತಂತ್ರಗಳು. ಆದರೆ ಇವುಗಳಿಂದ ಶಾಶ್ವತ ಪರಿಹಾರ ಸಿಗದು. ಯುದ್ಧಗಳನ್ನು ಯುದ್ಧದಿಂದಲೇ ಕೊನೆಗಾಣಿಸುವುದು ಅಸಾಧ್ಯ. ದುರ್ಬಲಗೊಂಡ ಗುಂಪು ಮುಂದೆ ಸಶಕ್ತಗೊಂಡು ಪುನಃ ಹೋರಾಟ ಮಾಡುವುದು ಸಹಜ. ಎರಡೂ ಪಕ್ಷಗಳು ಶಕ್ತಿಯುತವಿದ್ದಾಗ ಹೋರಾಟದ ಅಂತ್ಯ ದುರ್ಲಭ. ಇದು ಘರ್ಷಣೆಗಳ ಸುರುಳಿಯನ್ನೇ ಸೃಷ್ಟಿಸುತ್ತದೆ.

**2. ಹಲವು ಹಂತಗಳ/ಪರಸ್ಪರ ಒತ್ತಡ ಕಡಿಮೆ ಮಾಡುವ ವಿಧಾನ (Graduated Reciprocation in Tension Reduction-GRIT)**

1962ರಲ್ಲಿ ಖ್ಯಾತ ಮನೋವಿಜ್ಞಾನಿ ಚಾರ್ಲ್ಸ್ ಆಸ್‌ಗುಡ್‌ರವರು ಅಂತಾರಾಷ್ಟ್ರೀಯ ಮಟ್ಟದಲ್ಲಿನ ಘರ್ಷಣೆಗಳ ವಿನಾಶೀ ಪರಿಣಾಮಗಳನ್ನು ಗುರುತಿಸಿದರು. ಅಮೆರಿಕಾದ ಸಂಯುಕ್ತ ರಾಷ್ಟ್ರಗಳು ಮತ್ತು ಸೋವಿಯತ್ ಒಕ್ಕೂಟದ ನಡುವಣ ಶೀತಲ ಸಮರದ ಚರ್ಚೆಗಳು, ಘರ್ಷಣೆಯನ್ನು ಅಂತ್ಯಗೊಳಿಸುವ ವಿರುದ್ಧವಾಗಿಯೇ ನಡೆಯುತ್ತಿವೆ ಎಂದು ಅವರು ಭಾವಿಸಿದರು. ಜಗತ್ತಿನ ಸರ್ವನಾಶಕ್ಕೆ ಮಾರಕಾಸ್ತ್ರಗಳ ಸತತ ಸಂಗ್ರಹದಿಂದ ಜೀವಜಾಲಕ್ಕಿರುವ ಅಪಾಯವನ್ನು ಮನಗಂಡರು. ಹೆಚ್ಚುತ್ತಿರುವ ಘರ್ಷಣೆಗೆ ಕಡಿವಾಣ ಹಾಕಲು ಅವರು ಒಂದು ಮಾರ್ಗವನ್ನು ಸೂಚಿಸಿದರು. ಅದೇ GRIT.

ಮೊದಲ ಹಂತದಲ್ಲಿ ಸಾರ್ವಜನಿಕ ಬೆಂಬಲ ಪಡೆದು, ಒಂದು ಪಕ್ಷವು ಘರ್ಷಣೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಪ್ರಕಟಿಸುವಂತೆ ಮಾಡುವುದು ಮತ್ತು ಎದುರಾಳಿ ಪಕ್ಷವು ಇದೇ ನೀತಿಯನ್ನು ಅನುಸರಿಸುವಂತೆ ಆಹ್ವಾನಿಸುವುದು. ಎರಡನೇ ಹಂತದಲ್ಲಿ ಪ್ರಕಟಿತ ನೀತಿಯ ಅನ್ವಯದ ಕ್ರಮಗಳು ಪಾರದರ್ಶಕ ಮತ್ತು ಪರೀಕ್ಷೆಗೆ ಒಳಗಾಗುವಂತೆ ಮಾಡುವುದರ ಮೂಲಕ ಪ್ರಾರಂಭಿಕ ಪಕ್ಷದ ವಿಶ್ವಾಸನೀಯತೆ ಮತ್ತು ಪ್ರಾಮಾಣಿಕತೆಯನ್ನು ದೃಢಗೊಳಿಸುವುದು. ಕೊನೆಯ ಹಂತದಲ್ಲಿ ಪ್ರಾರಂಭಿಕ ಪಕ್ಷವು ತಾನು ಶೋಷಣೆಗೆ ಒಳಗಾಗದಿರುವಷ್ಟು ಬಲವನ್ನು ಉಳಿಸಿಕೊಂಡಿರುವುದು. GRITಯ ಗುರಿಯೇ, ಒಂದು ಪಕ್ಷವು ತನ್ನ ಶಸ್ತ್ರಾಸ್ತ್ರಗಳನ್ನು ಕಡಿಮೆಮಾಡಿ ಎದುರಾಳಿ ಪಕ್ಷವೂ ಅಂತೆಯೇ ತನ್ನ ಯುದ್ಧಾಸ್ತ್ರಗಳನ್ನು ಕಡಿಮೆಮಾಡಲು ಪ್ರೇರೇಪಿಸುವುದು. ಈ ಮೂಲಕ ಒತ್ತಡ ಕಡಿಮೆಯಾಗಿ, ಮುಕ್ತ ಸಹಕಾರಿ ವಾತಾವರಣದಲ್ಲಿ ಪರಸ್ಪರ ಚರ್ಚೆಗಳು ಸಾಧ್ಯ. ಈ ತಂತ್ರ ಬಳಸಿಯೇ ಹೆನ್ರಿ ಕಿಸ್ಸಿಂಗ್‌ರರು ಸುಯೇಜ್ ಕಾಲುವೆಯ ಸಮೀಪದಿಂದ ಇಸ್ರೇಲ್ ಹಿಂದೆ ಸರಿಯುವಂತೆ ಮಾಡಿ, ಈಜಿಪ್ಟ್ ಸೂಯೆಜ್ ಕಾಲುವೆಯನ್ನು ಬಳಸಲು ಅನುವು ಮಾಡಿಕೊಟ್ಟರು. ಈ ಹೆಜ್ಜೆಯೇ ಈ ಎರಡೂ ರಾಷ್ಟ್ರಗಳು ಶಾಂತಿ ಒಪ್ಪಂದ ಮಾಡಿಕೊಳ್ಳಲು ನೆರವಾಯಿತು.

**3. ಸಂವಹನ ಮತ್ತು ಸಂಪರ್ಕ (Communication and Contact)**

ಕೆಲವು ಸಂದರ್ಭಗಳಲ್ಲಿ ಸಂವಹನ ಮತ್ತು ಸಂಪರ್ಕಗಳಿಂದ ಘರ್ಷಣೆಗಳು ಕಡಿಮೆಯಾಗುವುದೆಂದು ಸಂಶೋಧಕರ ಅಭಿಪ್ರಾಯ. ಸಂಪರ್ಕವನ್ನು ನೇರವಾಗಿ ಅಥವಾ ಮಧ್ಯವರ್ತಿಗಳ ಮೂಲಕ ಮಾಡಬಹುದು. ಇದರಿಂದ ವಿವಿಧ ಪಕ್ಷಗಳವರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ ದೃಷ್ಟಿಕೋನಗಳನ್ನು ಬದಲಾಯಿಸಿಕೊಂಡು ಪರಸ್ಪರರ ಬಗ್ಗೆ ಮನೋವೃತ್ತಿಗಳಲ್ಲಿ ಮಾರ್ಪಾಡುಗಳನ್ನು ತರಲು ಸಾಧ್ಯ.

ಕೆಲವೊಮ್ಮೆ ಅನಿವಾರ್ಯತೆಗಳು ಘರ್ಷಣೆಯನ್ನು ದೂರವಿಡಲು ಸಹಾಯವಾಗಬಹುದು. ಇತ್ತೀಚಿನ ಉದಾಹರಣೆ ಎಂದರೆ ಅಮೆರಿಕಾದ ಸಂಯುಕ್ತ ರಾಷ್ಟ್ರಗಳು ಮತ್ತು ರಷ್ಯಾ, ತಮ್ಮ ಅಣ್ವಸ್ತ್ರಗಳ ಕೋಠಿಗಳಲ್ಲಿ

Digitised by Bharatavani, CIIL

1/3 ಭಾಗದಷ್ಟನ್ನು 8 ಏಪ್ರಿಲ್ 2010 ರಿಂದ ಕಡಿಮೆ ಮಾಡಲು ನಿರ್ಧರಿಸಿರುವುದು ಶೀತಲ ಯುದ್ಧದ ಮುಕ್ತಾಯದ ನಂತರದ ಎರಡು ದಶಕಗಳಲ್ಲಿ ಇಂತಹ ಒಪ್ಪಂದವಾಗುತ್ತಿರುವುದು ಜಗತ್ತಿಗೇ ಶುಭದಾಯಕ ಮತ್ತು ಮಾರ್ಗದರ್ಶಕ.

### 4. ಗಾಂಧೀಜಿಯವರ ಅಹಿಂಸೆ ಮತ್ತು ಸತ್ಯಾಗ್ರಹ ವಿಧಾನ

ಗಾಂಧೀಜಿಯವರು ಇಡೀ ಜೀವಮಾನದುದ್ದಕ್ಕೂ ಈ ವಿಧಾನ ಬಳಸಿ ಭಾರತಕ್ಕೆ ಸ್ವಾತಂತ್ರ್ಯ ಬರಲು ನೆರವಾದರು. ಈ ವಿಧಾನವು ಎದುರಾಳಿಯ ಹೃದಯ ಪರಿವರ್ತನೆಯನ್ನು ಮಾಡುವ ತಂತ್ರ. ಸತ್ಯ, ಪ್ರೀತಿ, ಅಹಿಂಸೆಗಳನ್ನು ಆಧರಿಸಿದ ಶಕ್ತಿಯ ಬಳಕೆಯೇ ಈ ವಿಶಿಷ್ಟ ತಂತ್ರ. ಹಿಂಸೆಯ ಗೈರುಹಾಜರಿ ಮಾತ್ರವಲ್ಲದೆ, ಇಲ್ಲಿ ಎದುರಾಳಿಯ ಬಗ್ಗೆ ಧನಾತ್ಮಕ ಪ್ರೀತಿ ಮತ್ತು ಗೌರವ, ಸಹಾನುಭೂತಿಗಿಂತ ಹೆಚ್ಚಾಗಿ ಎದುರಾಳಿಗಳು ಪರಸ್ಪರ ಅನುಭವಗಳ ವಿನಿಮಯ ಮತ್ತು ಅನುಭೂತಿ (empathy) ಬೆಳೆಸಿಕೊಳ್ಳುವುದು ಇಲ್ಲಿ ಮುಖ್ಯ. ಮಾರ್ಟಿನ್ ಲೂಥರ್ ಕಿಂಗ್ ಅಂತಹವರು ಈ ತಂತ್ರವನ್ನು ಸಾಮಾಜಿಕ ಅನ್ಯಾಯ, ಅಣ್ವಸ್ತ್ರ ವರ್ಧನೆಗಳ ವಿರುದ್ಧದ ಹೋರಾಟದಲ್ಲಿ ಯಶಸ್ವಿಯಾಗಿ ಬಳಸಿದ್ದಾರೆ.

### 5. ಘರ್ಷಣೆಯ ನಿವಾರಣೆಯಲ್ಲಿ ಶಿಕ್ಷಣದ ಪಾತ್ರ

ವ್ಯಕ್ತಿ ಮತ್ತು ಸಮೂಹಗಳಲ್ಲಿ ಅಪೇಕ್ಷಣೀಯ ಪರಿವರ್ತನೆಯನ್ನು ತರುವುದೇ ಶಿಕ್ಷಣ. ಬದಲಾಗುತ್ತಿರುವ ಸವಾಲುಗಳನ್ನೆದುರಿಸಲು ಮತ್ತು ಮಾನವ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಶಿಕ್ಷಣ ಗುರಿಯೂ ಹೌದು ಮತ್ತು ಸಾಧನವೂ ಹೌದು.

ಈ ದಿಶೆಯಲ್ಲಿ ನಾವು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ, ಅನೌಪಚಾರಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣದಲ್ಲೂ ಕೆಲವು ಮುಖ್ಯ ಗುರಿಗಳ ಮೂಲಕ ಅಗತ್ಯ ಪರಿವರ್ತನೆ ತರಲು ಶ್ರಮಿಸಬೇಕಾಗಿದೆ.

ಭಾರತವು ಒಂದು ಬಹು ಸಂಸ್ಕೃತಿಗಳ, ಧರ್ಮಗಳ, ಭಾಷೆಗಳ, ಪ್ರದೇಶಗಳ ವಿಶಿಷ್ಟ ರಾಷ್ಟ್ರ. ಪ್ರತಿ ವ್ಯಕ್ತಿ ಆತ್ಮಗೌರವವನ್ನು ಬೆಳೆಸಿಕೊಳ್ಳುವುದಲ್ಲದೆ, ಇತರರನ್ನು ಪ್ರೀತಿಸಲು, ಗೌರವಿಸಲು, ಅರ್ಥ ಮಾಡಿಕೊಳ್ಳಲು ನಾವು ಅನುಭವಗಳನ್ನು ಪ್ರತಿ ಹಂತದಲ್ಲಿ ನಿರಂತರವಾಗಿ ನೀಡಬೇಕಾಗಿದೆ.

ಉತ್ತಮ ಹೊಣೆಗಾರಿಕೆಯ ಪೌರತ್ವ ಬೆಳೆಸಿಕೊಂಡು, ಸ್ವತಂತ್ರ ಮನೋಭಾವ ರೂಪಿಸಿ, ಪೂರ್ವಾಗ್ರಹಗಳನ್ನು ದೂರವಿಟ್ಟು ವೈಜ್ಞಾನಿಕ ಪ್ರವೃತ್ತಿಯನ್ನು ಆರಂಭ ಶಿಕ್ಷಣದಿಂದಲೇ ನೀಡುವುದರ ಮೂಲಕ ಮತ್ತು ಸ್ಪರ್ಧೆಗೆ ಬದಲಾಗಿ ಸಹಕಾರಕ್ಕೆ ಒತ್ತು ಕೊಟ್ಟಾಗ ಘರ್ಷಣೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಲು ಸಾಧ್ಯವಿದೆ. ವಿಶ್ವ ಸಂಸ್ಥೆ ಪ್ರತಿಪಾದಿಸುವ ಹತ್ತು ಮೂಲ ಜೀವನ ಕೌಶಲಗಳನ್ನು (Life Skills) ಬೆಳೆಸಿಕೊಳ್ಳಲು ನಾವು ಪ್ರಾಮಾಣಿಕ ಯತ್ನ ಮಾಡಿದಾಗ ನಮ್ಮ ಕನಸುಗಳು ನನಸಾಗುತ್ತವೆ.

–ಡಿ.ಹ.ರಾ.

## ಸಮೂಹ ಸಂಘರ್ಷ ಮತ್ತು ಶಿಕ್ಷಣ

ಸಮಾಜ ಎಂದ ಮೇಲೆ ಹಲವಾರು ರೀತಿಯ ಭಿನ್ನ ಭಿನ್ನ ವಿಚಾರಗಳನ್ನು ಹೊಂದಿರುವ ಜನರಿರುತ್ತಾರೆ. ಆ ಹಲವಾರು ವಿಚಾರಗಳನ್ನು ಹೊಂದಿದ ಜನರಿಗೆ ತಮ್ಮ ವಿಚಾರಗಳಿಗೆ ಧಕ್ಕೆಯುಂಟಾದಾಗ ಭಿನ್ನಾಭಿಪ್ರಾಯಗಳು ತಲೆದೋರುತ್ತವೆ. ಆ ಭಿನ್ನಾಭಿಪ್ರಾಯಗಳು ತೀವ್ರ ಸ್ವರೂಪವನ್ನು ತಾಳಿದಾಗ ಸಂಘರ್ಷಗಳು ಉಂಟಾಗುತ್ತವೆ. ಘರ್ಷಣೆಯು ಒಂದು ಸಾಮಾಜಿಕ ಪ್ರಕ್ರಿಯೆ ಆಗಿದೆ. ಕೇವಲ ಸಹಕಾರ ಅಥವಾ ಕೇವಲ ಸ್ಪರ್ಧೆಗಳಿಂದ ಕೂಡಿದ ಸಮಾಜ ರೂಢಿಯಲ್ಲಿರುವುದು ಅಸಾಧ್ಯ. ಜನರು ಸಹಕಾರ ಮತ್ತು ಸ್ಪರ್ಧೆಯ ನಿಯಮಗಳನ್ನು ಉಲ್ಲಂಘಿಸಿದರೆ ಅವು ಘರ್ಷಣೆಗಳಾಗಿ ಮಾರ್ಪಾಡುಗೊಳ್ಳುವುವು. ವ್ಯಕ್ತಿ ವ್ಯಕ್ತಿಗಳ ನಡುವೆ ಸಮೂಹ ಸಮೂಹಗಳ ನಡುವೆ ನಡೆಯುವ ಹೋರಾಟಕ್ಕೆ ಸಂಘರ್ಷ ಎಂದು ಕರೆಯುತ್ತಾರೆ.

ಸಮಾಜ ಎಂದ ಮೇಲೆ ಸಂಘರ್ಷಗಳು ಸಹಜ. ಅದರಲ್ಲಿಯೂ ಸಮಾಜದಲ್ಲಿ ಬೇರೆ ಬೇರೆ ರೀತಿಯ ಜನಾಂಗ, ಜಾತಿ, ಧರ್ಮ, ಭಾಷೆ, ವೇಷ ಭೂಷಣಗಳು ಆರ್ಥಿಕ ಏರಿಳಿತ, ರಾಜಕೀಯ ಹೀಗೆ ಹಲವಾರು ರೀತಿಯ ವ್ಯತ್ಯಾಸಗಳು ತೀವ್ರ ರೂಪ ಹೊಂದಿದ್ದಾಗ ಅಲ್ಲಿ ಸಂಘರ್ಷಗಳು ತಲೆ ಎತ್ತುತ್ತವೆ. ಯಾವುದೇ, ರೀತಿಯ ಸಂಘರ್ಷಗಳಾದರೂ ಅವುಗಳ ಪರಿಣಾಮ ಹಾನಿಕಾರಕವೇ. ಆದ್ದರಿಂದ ಅವು ಉಂಟಾಗದಂತೆ ನೋಡಿಕೊಳ್ಳುವುದೇ ಶಿಕ್ಷಣ.

**ಸಂಘರ್ಷ:** ಸಮಾಜದಲ್ಲಿ ಸಹಕಾರ ಮತ್ತು ಪರಸ್ಪರ ತಿಳುವಳಿಕೆಗಳ ಕೊರತೆಯಿಂದ ಕಂಡುಬರುವ ಸ್ಥಿತಿಯೇ ಸಂಘರ್ಷ. ಸಾಮಾನ್ಯ ಅರ್ಥದಲ್ಲಿ ಸಹಕಾರವಿಲ್ಲದ ಸಮಾಜದ ಸ್ಥಿತಿಯನ್ನು ಸಂಘರ್ಷವೆಂದು ಕರೆಯಬಹುದು. ಅದೇ ರೀತಿ ಸ್ಪರ್ಧೆಯು ವೈಯಕ್ತಿಕ ಅನಾರೋಗ್ಯಕರ ಮತ್ತು ಹಿಂಸಾತ್ಮಕವಾದಾಗ ಸಂಘರ್ಷವಾಗಿ ಪರಿವರ್ತನೆಹೊಂದುತ್ತದೆ. ಸಂಘರ್ಷದಲ್ಲಿ ಸೇಡು ಮತ್ತು ಪ್ರತೀಕಾರದ ಭಾವನೆಗಳು ಕಂಡುಬರುತ್ತವೆ. ಆದರೆ ಸಹಕಾರ ಮತ್ತು ಸ್ಪರ್ಧೆಗಳಂತೆ ಸಂಘರ್ಷವೂ ಸಾಮಾಜಿಕ ಬದುಕಿನ ಸಹಜ ಪ್ರಕ್ರಿಯೆಯಾಗಿದೆ.

**ಅರ್ಥ ವಿವರಣೆ:** ಗಿಲಿನ್ ಮತ್ತು ಗಿಲಿನ್ "ಎದುರಾಳಿಗಳನ್ನು ಹಿಂಸಿಸಿ ಅಥವಾ ಹಿಂಸೆಯ ಬೆದರಿಕೆ ಹಾಕಿ ವ್ಯಕ್ತಿ ಮತ್ತು ಸಮೂಹಗಳು ತಮ್ಮ ಗುರಿಯನ್ನು ಸಾಧಿಸಲು ಹಾಕುವ ಸವಾಲೇ ಸಂಘರ್ಷವಾಗಿದೆ. ಎ. ಡಬ್ಲ್ಯು ಗ್ರೀನ್ "ಬೇರೆಯವರ ಬಯಕೆಗಳನ್ನು ಉದ್ದೇಶಪೂರ್ವಕವಾಗಿ ಪ್ರತಿಭಟಿಸುವ, ದಮನ ಮಾಡುವ ವಿರೋಧಿಸುವ ಪ್ರವೃತ್ತಿಯೇ ಸಂಘರ್ಷ" ಹಾರ್ಟನ್ ಮತ್ತು ಹಂಟ್ "ಎದುರಾಳಿಗಳನ್ನು ದಮನ ಮಾಡಿ ಸೇಡು ತೀರಿಸಿಕೊಳ್ಳುವ ಸಲುವಾಗಿ ಕಂಡುಬರುವ ಪ್ರಕ್ರಿಯೆಯೇ ಸಂಘರ್ಷವಾಗಿದೆ."

ಈ ವ್ಯಾಖ್ಯೆಗಳ ಆಧಾರದಿಂದ ಸಂಘರ್ಷದ ಸ್ವರೂಪವನ್ನು ಈ ರೀತಿಯಾಗಿ ವಿವರಿಸಬಹುದಾಗಿದೆ. ಸಂಘರ್ಷವು ತಿಳುವಳಿಕೆಯಿಂದ ಕೂಡಿದೆ. ಇಲ್ಲಿ ಸ್ಪರ್ಧಿಗಳು ಉದ್ದೇಶಪೂರ್ವಕವಾಗಿ ತಮ್ಮ ಸ್ಪರ್ಧಿಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾರೆ. ಸಂಘರ್ಷವು ಸಾಮೂಹಿಕ ಮತ್ತು ವೈಯಕ್ತಿಕ ಪ್ರಕ್ರಿಯೆಯಾಗಿದೆ. ಸಂಘರ್ಷವು ಅಹಿತದಿಂದ ಹಿಂಸೆಯಿಂದ ಕೂಡಿರುತ್ತದೆ. ಸಂಘರ್ಷವು ಸಾರ್ವತ್ರಿಕ ಸಾಮಾಜಿಕ ಪ್ರಕ್ರಿಯೆಯಾಗಿದೆ.

### ಸಂಘರ್ಷದ ಸ್ವರೂಪ

**ಅ. ಸಂಘರ್ಷವು ಪ್ರಜ್ಞಾ ಪೂರ್ಣಪ್ರಕ್ರಿಯೆಯಾಗಿದೆ:** ಉದ್ದೇಶಪೂರ್ವಕವಾಗಿ ಎದುರಾಳಿಗಳನ್ನು ಅಥವಾ ವೈರಿಗಳನ್ನು ದಮನ ಮಾಡಬೇಕೆಂಬ ಮನೋಭಾವನೆಗಳು ಸಂಘರ್ಷದಲ್ಲಿ ಬೆಳೆದು ಬಂದಿರುತ್ತವೆ. ಅಲ್ಲಿ ವ್ಯಕ್ತಿಗತ ಸೇಡು ಮತ್ತು ಪ್ರತೀಕಾರವಿರುತ್ತದೆ. ಭಾವಾವೇಶದಿಂದ ಹಾಗೂ ಉದ್ವೇಗದಿಂದ ಕೂಡಿದ ವ್ಯಕ್ತಿಯು ತನ್ನ ಗುರಿಯನ್ನು ತಲುಪಲು ಯಾರೇ ಕಂಟಕಪ್ರಾಯರಾಗಿ ಕಂಡು ಬಂದರೂ ಅವರನ್ನು ನಾಶಮಾಡಲು ಹಿಂದೇಟು ಹಾಕಲಾರನು. ಉದ್ದೇಶಪೂರ್ವಕವಾಗಿಯೇ ಎದುರಾಳಿಗಳಿಗೆ ಹಿಂಸೆ ಕೊಡುವುದನ್ನು

Digitised by Bharatavani, CIIL

ಸಂಘರ್ಷದಲ್ಲಿ ಕಾಣುತ್ತೇವೆ. ಇಲ್ಲಿ ಎಲ್ಲ ಚಟುವಟಿಕೆಗಳೂ ಪೂರ್ವಸಂಚಿತ ಹಾಗೂ ಪೂರ್ವ ಯೋಜಿತವಾಗಿರುತ್ತವೆ.

ಆ. **ಸಂಘರ್ಷವು ತಾತ್ಕಾಲಿಕ ಪ್ರಕ್ರಿಯೆಯಾಗಿದೆ:** ಸಂಘರ್ಷವು ಸಹಕಾರ ಮತ್ತು ಸ್ಪರ್ಧೆಗಳಂತೆ ನಿರಂತರ ಪ್ರಕ್ರಿಯೆಯಾಗಿರದೆ ಕ್ಷಣಿಕ ಮತ್ತು ತಾತ್ಕಾಲಿಕವಾಗಿದೆ. ಕಾರಣಾಂತರಗಳಿಂದ ಹಠಾತ್ತನೆ ಯುದ್ಧ, ಭೀಕರ ಬಂಡಾಯ, ಕೊಲೆ ಮುಂತಾದ ಅಹಿತಕರ ಘಟನೆಗಳನ್ನು ಕಾಣುತ್ತೇವೆ. ಘಟನೆ ಮುಗಿದ ನಂತರ ಮತ್ತೆ ಸಹಜ ಸ್ಥಿತಿ ತಲೆದೋರುವ ಸಾಧ್ಯತೆಗಳು ಕಂಡುಬರುತ್ತವೆ. ಕೆಲವೊಂದು ಸಲ ಘರ್ಷಣೆಯು ಸಮಂಜಸದಲ್ಲಿ ಮುಕ್ತಾಯವಾಗುವುದನ್ನು ಕಾಣಬಹುದಾಗಿದೆ.

ಇ. **ಸಂಘರ್ಷವು ವೈಯಕ್ತಿಕವಾಗಿರುತ್ತದೆ:** ಸಂಘರ್ಷದಲ್ಲಿ ವ್ಯಕ್ತಿಗಿಂತಲೂ ಗುರಿಯು ಪ್ರಮುಖವಾಗಿರುತ್ತದೆ. ಏನಾದರೂ ಮಾಡಿ ಗುರಿಯನ್ನು ತಲುಪಿದರೆ ಸಾಕೆಂಬ ಭಾವಾವೇಶದಲ್ಲಿ ಎದುರಾಳಿಗೆ ಬೇಕಾದ ರೀತಿಯ ಹಿಂಸೆಯನ್ನು ಕೊಡಲು ವ್ಯಕ್ತಿ ಸಿದ್ಧನಾಗಿರುತ್ತಾನೆ. ಘರ್ಷಣೆಯಲ್ಲಿ ಎದುರಾಳಿಯನ್ನು ಸೋಲಿಸಬೇಕೆ, ಅವನ ಮೇಲೆ ಸೇಡು ತೀರಿಸಿಕೊಳ್ಳಬೇಕೆ ಎಂಬ ಭಾವನೆಗಳು ಪ್ರಬಲವಾಗಿರುವುದರಿಂದ ಅದು ವ್ಯಕ್ತಿಗತ ಪ್ರಕ್ರಿಯೆಯಾಗಿರುತ್ತದೆ. ಕೆಲವೊಂದು ಸಲ ಸಂಘರ್ಷದಲ್ಲಿ ಗುರಿಯ ಸಾಧನೆಗಿಂತಲೂ ಎದುರಾಳಿಯನ್ನು ನಾಶಮಾಡಬೇಕೆಂಬ ಉದ್ವೇಗವೇ ಪ್ರಬಲವಾಗಿ ಕಂಡುಬರಬಹುದು.

ಈ. **ಸಂಘರ್ಷವು ಸಾರ್ವತ್ರಿಕ ಪ್ರಕ್ರಿಯೆಯಾಗಿದೆ:** ಸಹಕಾರ ಮತ್ತು ಸ್ಪರ್ಧೆಗಳಂತೆ ಸಂಘರ್ಷವು ಸಾರ್ವತ್ರಿಕ ಪ್ರಕ್ರಿಯೆಯಾಗಿದೆ. ಮಾನವ ಸಮಾಜದ ಉಗಮದಿಂದಲೂ ಒಂದಿಲ್ಲೊಂದು ರೀತಿಯ ಘರ್ಷಣೆಯನ್ನು ಎಲ್ಲ ಸಮೂಹಗಳಲ್ಲೂ ಸಹಜವಾಗಿ ಕಾಣಬಹುದಾಗಿದೆ. ಕೆಲವೊಂದು ಸಲ ಅದು ಉಗ್ರ ಸ್ವರೂಪದ್ದಾಗಿದ್ದಿರಬಹುದು ಅಥವಾ ಸೌಮ್ಯ ರೂಪದಲ್ಲಿರಬಹುದು. ಗೋಚರವಿರಬಹುದು ಇಲ್ಲವೇ ಅಗೋಚರವಾಗಿರಬಹುದು. ಸಂಘರ್ಷವೇ ಇಲ್ಲದ ಯಾವ ಪ್ರದೇಶವನ್ನಾಗಲಿ, ಸಮಯವನ್ನಾಗಲಿ ಊಹಿಸಲು ಸಾಧ್ಯವಿಲ್ಲ. ಸಂಘರ್ಷಕ್ಕೆ ಹಲವಾರು ಕಾರಣಗಳನ್ನು ಕೊಡಬಹುದಾಗಿದೆ. ಮಾಲ್ಥಸ್‌ನ ಪ್ರಕಾರ ಜನಸಂಖ್ಯಾ ಬೆಳವಣಿಗೆ ಹಾಗೂ ಆಹಾರದ ಉತ್ಪಾದನೆಯಲ್ಲಿ ಕಂಡುಬರುವ ಅಸಮಾನತೆಯೆ ಸಂಘರ್ಷಕ್ಕೆ ಪ್ರಮುಖ ಕಾರಣ. ಸಿಗ್ಮಂಡ ಫ್ರೈಡ್ ಮತ್ತು ಇತರ ಮನೋವಿಜ್ಞಾನಿಗಳ ಪ್ರಕಾರ ಆಕ್ರಮಣ ಮತ್ತು ಸಂಗ್ರಹಣ ಪ್ರವೃತ್ತಿಗಳೇ ಘರ್ಷಣೆಗೆ ನಾಂದಿಯಾಗುತ್ತವೆ. ಪ್ರಸಿದ್ಧ ಜೀವವಿಜ್ಞಾನಿಯಾದ ಡಾರ್ವಿನ್ನನ ಅಭಿಪ್ರಾಯದಲ್ಲಿ ಬದುಕುವ ಸಲುವಾಗಿ ನಡೆಯುವ ಹೋರಾಟವೇ ಸಂಘರ್ಷಕ್ಕೆ ಕಾರಣವಾಗಿರುತ್ತದೆ.

ವೈಯಕ್ತಿಕ ಭಿನ್ನಾಭಿಪ್ರಾಯಗಳಿಂದ ಪರಸ್ಪರ ತಿಳುವಳಿಕೆ ಸ್ನೇಹ ಮತ್ತು ಸಹಕಾರ ಭಾವನೆಗಳ ಕೊರತೆಯಿಂದಲೂ ಘರ್ಷಣೆಗಳು ತಲೆದೋರಬಹುದಾಗಿದೆ. ಒಬ್ಬ ವ್ಯಕ್ತಿಯ ಹಿತಾಸಕ್ತಿಗಳ ಪೂರೈಕೆಯಲ್ಲಿ ಇತರರು ಕಂಟಕಪ್ರಾಯರಾಗಿ ಕಂಡು ಬಂದಾಗ ಸಹಜವಾಗಿ ಸಂಘರ್ಷವು ಕಂಡು ಬರುತ್ತದೆ. ಸಾಂಸ್ಕೃತಿಕ ಭಿನ್ನತೆ ಹಾಗೂ ಜನಾಂಗೀಯ ಭಿನ್ನತೆಗಳೂ ಘರ್ಷಣೆಗೆ ಎಡೆಮಾಡಿಕೊಡುತ್ತವೆ. ತೀವ್ರಗತಿಯ ಸಾಮಾಜಿಕ ಬದಲಾವಣೆಗಳಿಂದಲೂ ಸಮಾಜದಲ್ಲಿ ಜಗಳ, ವೈಮನಸ್ಸು ಮತ್ತು ಹೋರಾಟಗಳು ಕಂಡುಬರಬಹುದಾಗಿದೆ. ಜಾತಿ–ಜಾತಿ, ದೇಶ–ದೇಶ, ಧರ್ಮ–ಧರ್ಮ, ವರ್ಗ–ವರ್ಗಗಳಲ್ಲಿರುವ ಹಲವಾರು ಭಿನ್ನತೆಗಳಿಂದ ಘರ್ಷಣೆಗಳನ್ನು ಮೇಲಿಂದಮೇಲೆ ಗಮನಿಸುತ್ತೇವೆ.

**ಸಂಘರ್ಷದ ಪ್ರಕಾರಗಳು**

ಗಿಲಿನ್ ಮತ್ತು ಗಿಲಿನ್ ಸಂಘರ್ಷವನ್ನು ವೈಯಕ್ತಿಕ ಸಂಘರ್ಷ, ಜನಾಂಗೀಯ ಸಂಘರ್ಷ, ವರ್ಗ ಸಂಘರ್ಷ, ರಾಜಕೀಯ ಸಂಘರ್ಷ ಹಾಗೂ ಅಂತಾರಾಷ್ಟ್ರೀಯ ಸಂಘರ್ಷಗಳೆಂದು 5 ಪ್ರಕಾರಗಳಲ್ಲಿ ವರ್ಗೀಕರಿಸಿದ್ದಾರೆ. ಜಾರ್ಜಸಿಮೆಲ್ ಸಂಘರ್ಷವನ್ನು ಯುದ್ಧ, ಪಕ್ಷಭೇದ, ಕಾಯ್ದೆಯ ತೊಡಕು ಮತ್ತು ಅವೈಯಕ್ತಿಕ ವಿಚಾರಗಳ ತಾಕಲಾಟಗಳೆಂದು 4 ಪ್ರಕಾರಗಳಲ್ಲಿ ವರ್ಗೀಕರಣ ಮಾಡಿರುತ್ತಾರೆ.

**ಯುದ್ಧ** : ಪ್ರತಿಯೊಂದು ರಾಷ್ಟ್ರದ ಒಂದಿಲ್ಲೊಂದು ಕಾರಣಕ್ಕಾಗಿ ಯುದ್ಧಗಳು ಸಂಭವಿಸುತ್ತಾ ಬಂದಿವೆ. ಇವುಗಳ ಫಲ ಸಾವಿರಾರು ಜನರ ನಾಶ ಮತ್ತು ಆಸ್ತಿ ಪಾಸ್ತಿಗಳ ನಷ್ಟ. **ಅಂತಃಕಲಹ** : ಇದು ಸಮೂಹದಲ್ಲಿ ವಾಸಿಸುವ ಜನರಲ್ಲಿ ನಡೆಯುವ, ಪರಸ್ಪರರಲ್ಲಿ ನಡೆಯುವ ಕಲಹವಾಗಿದೆ. ಕುಟುಂಬದ ಸದಸ್ಯರು ಹಲವು ಕಾರಣಗಳಿಗಾಗಿ ಪರಸ್ಪರ ಬಡಿದಾಟದಲ್ಲಿ ತೊಡಗಿದ್ದನ್ನು ಕಾಣಬಹುದು. ಇದರ ಪರಿಣಾಮ ಕೌಟುಂಬಿಕ ಬಡಿದಾಟದಲ್ಲಿ ತೊಡಗಿದ್ದನ್ನು ಕಾಣಬಹುದು. ಇದರ ಪರಿಣಾಮ ಕೌಟುಂಬಿಕ ವಿಘಟನೆ. **ದಾವೆ** : ವ್ಯಕ್ತಿ ಅಥವಾ ಸಮೂಹದ ಹಕ್ಕು ಮತ್ತು ಕರ್ತವ್ಯಕ್ಕೆ ಚ್ಯುತಿ ಬಂದಾಗ ನ್ಯಾಯಾಲಯದ ಮುಖಾಂತರ (ಕೋರ್ಟು ಮತ್ತು ಕಚೇರಿ) ಅದನ್ನು ಸಮದೂಗಿಸುವುದೇ ದಾವೆ. **ಆದರ್ಶಗಳ ತಾಕಲಾಟ** : ಸಮತಾವಾದ, ಸಮಾಜವಾದ ಮುಂತಾದವುಗಳನ್ನು ಪ್ರತಿಪಾದಿಸುವ ರಾಜಕೀಯ ಪಕ್ಷಗಳು ತಮ್ಮ ಚುನಾವಣೆಯ ಕಾಲದಲ್ಲಿ ಆಸೆ ಆಮಿಷಗಳನ್ನು ಒಡ್ಡಿ ಜನರ ಜನರ ನಡುವೆ ಭಿನ್ನಾಭಿಪ್ರಾಯ ಮೂಡಿಸಿದಾಗ ಜನರು ತಮ್ಮ ತಮ್ಮಲ್ಲಿ ಬಡಿದಾಡಲು ಪ್ರಾರಂಭಿಸುತ್ತಾರೆ.

**ಸಂಘರ್ಷದ ಮಹತ್ವ:** ಸಂಘರ್ಷವನ್ನು ಸಮಾಜದಲ್ಲಿ ಕಂಡುಬರುವ ಮೂಲಭೂತ ಮಾನವೀಯ ಮತ್ತು ಸಾಮಾಜಿಕ ಪ್ರಕ್ರಿಯೆಯೆಂದು ಕರೆಯಲಾಗುತ್ತದೆ. ರ್‍ಯಾನೋಫರ್ ಮತ್ತು ಗುಂಪ್ಲೋವಿಜ್‌ರು ಸಂಘರ್ಷವನ್ನು "ಸಾಮಾಜಿಕ ವಿಕಸನ ಮತ್ತು ಪ್ರಗತಿಯ ಸಂಕೇತ" ಎಂದು ವರ್ಣಿಸಿರುತ್ತಾರೆ.

ಹೋಲಿಕೆ ಮತ್ತು ಭೇದ ಇವೆರಡನ್ನೂ ಸಮಾಜವು ತನ್ನಲ್ಲಿ ಅಳವಡಿಸಿಕೊಂಡಿರುತ್ತದೆ. ಸಮಾಜದಲ್ಲಿ ಸಹಕಾರದಂತೆ ಸಂಘರ್ಷವೂ ಅನಿವಾರ್ಯವಾದ ಪ್ರಕ್ರಿಯೆಯಾಗಿದೆ. ಸಮಾಜದ ಪ್ರಗತಿಗಾಗಿ ಭಿನ್ನತೆ, ಸಂಘಟನೆಯಂತೆ ವಿಘಟನೆ ಅತಿ ಅವಶ್ಯಕವಾಗಿರುತ್ತದೆ. ಭಿನ್ನ ಸಮೂಹ, ಜನಾಂಗ ಮತ್ತು ಸಂಸ್ಕೃತಿಗಳ ಸಂಘರ್ಷದಿಂದ ಸಮೂಹಗಳಲ್ಲಿ ಆಂತರಿಕ ಸಾಮರಸ್ಯ ಬೆಳೆದು ಭಾವೈಕ್ಯತೆ ಮತ್ತಷ್ಟು ಪ್ರಬಲವಾಗುವ ಸಾಧ್ಯತೆಗಳುಂಟು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಂಡುಬರುವ ಯುದ್ಧ ಹಾಗೂ ಇನ್ನಿತರ ರಾಷ್ಟ್ರೀಯ ಆಂದೋಲನಗಳಿಂದ ಸ್ವದೇಶಾಭಿಮಾನ, ರಾಷ್ಟ್ರಪ್ರೇಮ ಜಾಗೃತವಾಗುವುದರೊಂದಿಗೆ, ಬಾಹ್ಯ ಗಂಡಾಂತರಗಳನ್ನೆದುರಿಸಲು ಜನರಲ್ಲಿ ಧೈರ್ಯ ಹಾಗೂ ಸಾಹಸ ಪ್ರವೃತ್ತಿಗಳನ್ನು ಜಾಗೃತಗೊಳಿಸಿದಂತಾಗುತ್ತದೆ. ನಿದ್ರಾವಸ್ಥೆಯಲ್ಲಿರುವ ಜನರನ್ನು ಬಡಿದೆಬ್ಬಿಸುವ, ಜಾಗೃತಗೊಳಿಸುವ ಕಾರ್ಯವನ್ನು ಬಾಹ್ಯ ಸಂಘರ್ಷಗಳು ಮಾಡಬಲ್ಲವು.

ಚರಿತ್ರೆಯ ಪುಟಗಳನ್ನು ಅವಲೋಕನ ಮಾಡುತ್ತಾ ಬಂದಾಗ ಸಂಘರ್ಷವಾಗದೆ ಶಾಂತಿ ಹಾಗೂ ಸ್ವಾತಂತ್ರ್ಯ ನಮಗೆ ಲಭ್ಯವಾಗಿಲ್ಲವೆಂಬ ಸಂಗತಿಯು ಮನವರಿಕೆಯಾಗುತ್ತದೆ. ಎರಡು ಜಾಗತಿಕ ಯುದ್ಧಗಳ ನಂತರವೇ "ಸಂಯುಕ್ತ ರಾಷ್ಟ್ರ ಸಂಘ" ಎಂಬ ಅಂತಾರಾಷ್ಟ್ರೀಯ

Digitised by Bharatavani, CIIL

ಸಂಸ್ಥೆ ಜನ್ಮ ತಾಳಿತು. ಮಹಾತ್ಮಾ ಗಾಂಧೀಜಿ ಹಾಗೂ ರಾಷ್ಟ್ರ ನಾಯಕರ ಹೋರಾಟದಿಂದಲೇ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾಯಿತು. ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳ ನಿವಾರಣೆಯಲ್ಲಿ ಸಂಘರ್ಷವು ಒಂದು ಪ್ರಬಲ ಅಸ್ತ್ರವಾಗಿ ಕಂಡು ಬರುತ್ತದೆ. ವರ್ಗರಹಿತ ಸಮಾಜವು ಅಸ್ತಿತ್ವದಲ್ಲಿ ಬರಬೇಕಾದರೆ ವರ್ಗ ಸಂಘರ್ಷವು ಅನಿವಾರ್ಯವಾಗಿದೆಯೆಂದು ಕಾರ್ಲ್‌ಮಾರ್ಕ್ಸ್ ಅಭಿಪ್ರಾಯಪಟ್ಟಿರುತ್ತಾನೆ. ಮಾಲೀಕರಿಂದಾಗುವ ದಬ್ಬಾಳಿಕೆ ಹಾಗೂ ಕಿರುಕುಳಗಳನ್ನು ತಡೆಯಲು ಕಾರ್ಮಿಕರು ಒಂದಾಗಿ ಹೋರಾಟ ಮಾಡಲೇಬೇಕಾಗುತ್ತದೆ. ಸಮಾಜದಲ್ಲಿ ಶಾಂತ ಮತ್ತು ಸೌಹಾರ್ದಮಯ ವಾತಾವರಣ ನಿರ್ಮಾಣವಾಗಬೇಕಾದರೆ ಘರ್ಷಣೆ ಮತ್ತು ಹೋರಾಟಗಳು ಅನಿವಾರ್ಯವೆಂದು ಹೇಳಬೇಕಾಗುತ್ತದೆ.

ಎಚ್.ಟಿ. ಮುಜುಮದಾರರ ಸಂಘರ್ಷದ ಲಾಭಗಳನ್ನು ಈ ರೀತಿಯಾಗಿ ವಿವರಿಸಿದ್ದಾರೆ.

ಅ) ಒಳ ಸಮೂಹಗಳಲ್ಲಿ ಕಂಡುಬರುವ ಘರ್ಷಣೆಯು ಆರ್ಥಿಕ ಭದ್ರತೆಯನ್ನು ದೊರಕಿಸಿಕೊಡುತ್ತದೆ. ಆ) ವಿಜಯ ಸಾಧಿಸಿದ ಸಮೂಹಗಳು ಮತ್ತಷ್ಟು ಬಲಿಷ್ಠವಾಗುತ್ತವೆ. ಇ) ಜೀವನ ಮೌಲ್ಯಗಳನ್ನು ಹೊಸ ದೃಷ್ಟಿಕೋನದಿಂದ ಪರಾಮರ್ಶೆ ಮಾಡಲು ಸಾಧ್ಯ. ಈ) ಹಿಂಸೆ ದಬ್ಬಾಳಿಕೆ ಅನ್ಯಾಯ ಮತ್ತು ಶೋಷಣೆಗಳನ್ನು ನಿರ್ಮೂಲನೆ ಮಾಡುತ್ತದೆ. ಉ) ಘರ್ಷಣೆ ಮಾಡುತ್ತಿರುವ ಸಮೂಹಗಳ ಸ್ಥಿತಿಗತಿಗಳನ್ನು ಸುಧಾರಣೆ ಮಾಡುತ್ತದೆ. ಊ) ಜನರಲ್ಲಿ ವಿವೇಕ, ಹೊಸ ವಿಚಾರಗಳ ಬೆಳವಣಿಗೆಗೆ ಆಸ್ಪದ ನೀಡುತ್ತದೆ.

**ಸಮಂಜನ (ಹೊಂದಾಣಿಕೆ) :** ಸ್ವಭಾವತಃ ಮಾನವನು ತೃಪ್ತಿ ಹಾಗೂ ನೆಮ್ಮದಿಯನ್ನರಸುವ ಜೀವಿ. ಜೀವನ ಪರ್ಯಂತರವೂ ಕೇವಲ ಸಂಘರ್ಷವನ್ನೇ ಮುಂದುವರೆಸಿಕೊಂಡು ಬಂದರೆ ಬದುಕು ನೀರಸ ಮತ್ತು ಅರ್ಥಹೀನವೆನಿಸುತ್ತದೆ. ಬದುಕು ಸಂತೋಷದಾಯಕವಾಗಲು ಸಂಘರ್ಷವನ್ನು ಕೊನೆಗಾಣಿಸಿ ಸಾಮಾಜಿಕ ಸ್ಥಿತಿಗತಿಗಳೊಂದಿಗೆ ಸಮಂಜನ ಅಥವಾ ಹೊಂದಾಣಿಕೆ ಅನಿವಾರ್ಯವೆನಿಸುತ್ತದೆ. ಒಂದು ವೇಳೆ ಸಮಂಜನ ಪ್ರಕ್ರಿಯೆಯಿರದಿದ್ದರೆ ಜೀವನ ಕೇವಲ ಅತೃಪ್ತಿ ಹಾಗೂ ಅಸಂತೋಷಗಳ ಆಗರವಾಗುತ್ತದೆ.

ಸಂಘರ್ಷವಿರುವಲ್ಲಿ ಹೊಂದಾಣಿಕೆ ಅಥವಾ ಸಮಂಜನವಿದ್ದೇ ಇರುತ್ತದೆ. ಸಂಘರ್ಷದ ಅಂತಿಮ ಹಾಗೂ ಅನಿವಾರ್ಯದ ನಿರ್ಧಾರವನ್ನೇ ಸಮಂಜನವೆಂದು ಕರೆಯಬಹುದು. ಸಂಘರ್ಷವಿಲ್ಲದಿದ್ದರೆ ಸಮಂಜನ ಪ್ರಕ್ರಿಯೆಯು ಕೆಲವೊಂದು ಸಂದರ್ಭಗಳಲ್ಲಿ ಪ್ರಜ್ಞಾಪೂರ್ವಕವಾಗಿ ನಡೆದಿದ್ದರೆ ಬಹಳ ಪ್ರಸಂಗಗಳಲ್ಲಿ ನಮಗರಿವಿಲ್ಲದೆಯೇ ಸ್ಥಿತಿಗತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುತ್ತೇವೆ.

ಸಂಘರ್ಷಣೆಗಳನ್ನು ಉತ್ತಮ ರೀತಿಯ ಶಿಕ್ಷಣವನ್ನು ಕೊಡುವುದರ ಮೂಲಕ ತಡೆಗಟ್ಟಬಹುದು. ಜಾತ್ಯತೀತ ಬಾಂಧವ್ಯ, ಸಹೋದರತೆಯನ್ನು ಬೆಳೆಸುವಂತಹ ವಿಚಾರಗಳನ್ನು ಶಿಕ್ಷಣದಲ್ಲಿ ಸೇರಿಸಬೇಕು. ಉತ್ತಮ ಶಿಕ್ಷಣವೆಂದರೆ ಸಮಾನತೆ, ನೈತಿಕತೆಯನ್ನು ಬೆಳೆಸುವುದು. ಶಿಕ್ಷಣದ ಮೂಲಕ ಉತ್ತಮ ವಿಚಾರಗಳನ್ನು ನೀಡಿದಾಗ ಆರೋಗ್ಯಯುತ ಸಮಾಜವನ್ನು ನಿರ್ಮಿಸಬಹುದು.

ಸಂಘರ್ಷಕ್ಕೆ ಆಸ್ತಿ ಅಥವಾ ಸಂಪತ್ತು ಕಾರಣವೆಂದು ಮಾರ್ಕ್ಸ ಹೇಳುತ್ತಾನೆ. ಸಂಪತ್ತು ಅಸಮಾನವಾಗಿ ಹಂಚಿಕೆಯಾಗುವುದರಿಂದ ಸಂಘರ್ಷಗಳು ಸಮಾಜದಲ್ಲಿ ತಲೆಎತ್ತುತ್ತವೆ.

–ಎಸ್.ಎಸ್.ಹೂ

## ಸರ್ವ ಶಿಕ್ಷಣ ಅಭಿಯಾನ (ಎಸ್.ಎಸ್.ಎ)

2011ರಲ್ಲಿ ಪ್ರಾರಂಭವಾದ ಸರ್ವ ಶಿಕ್ಷಣ ಅಭಿಯಾನ (ಎಸ್.ಎಸ್.ಎ) ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಉದ್ದೇಶ ಹೊಂದಿರುವ ನಿರ್ದಿಷ್ಟವಾದ ಕಾಲಮಿತಿಯ ಕಾರ್ಯಕ್ರಮವಾಗಿದೆ. ಪ್ರಾಥಮಿಕ ಶಿಕ್ಷಣ ಕುರಿತಂತೆ ದೇಶದಾದ್ಯಂತ ಉತ್ತಮ ಗುಣಮಟ್ಟಕ್ಕೆ ಇರುವ ಬೇಡಿಕೆಯ ಫಲವೇ ಸರ್ವ ಶಿಕ್ಷಣ ಅಭಿಯಾನ. ಸರ್ವ ಶಿಕ್ಷಣ ಅಭಿಯಾನವು ಮೂಲ ಶಿಕ್ಷಣವನ್ನು ಒದಗಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುತ್ತದೆ. ಈ ಕಾರ್ಯಕ್ರಮವು ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ನಡುವಿನ ಪಾಲುದಾರಿಕೆಯನ್ನು ಒಳಗೊಂಡಿದ್ದು, ಪ್ರತಿಯೊಂದು ರಾಜ್ಯವೂ ಪ್ರಾಥಮಿಕ ಶಿಕ್ಷಣದ ಕುರಿತು ತನ್ನದೇ ಆದ ದೃಷ್ಟಿಕೋನವನ್ನು ಹೊಂದುವ ಅವಕಾಶ ಒದಗಿಸುತ್ತದೆ.

ಸರ್ವ ಶಿಕ್ಷಣ ಅಭಿಯಾನವು 2010ರ ವೇಳೆಗೆ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಪಯುಕ್ತವಾದ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಗುರಿ ಹೊಂದಿದೆ. ಶಾಲಾ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಸಮುದಾಯವನ್ನು ಪಾಲ್ಗೊಳ್ಳುವಂತೆ ಮಾಡಿ, ಸಾಮಾಜಿಕ ಲಿಂಗ ತಾರತಮ್ಯವನ್ನು ಕಡಿಮೆ ಮಾಡುವುದಾಗಿದೆ. ವಿದ್ಯಾರ್ಥಿಗಳು ಭೌತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ತಮ್ಮ ಮಾನವ ಸಾಮರ್ಥ್ಯಗಳನ್ನು ಉಪಯೋಗಿಸುವುದರ ಮೂಲಕ ತಮ್ಮ ಸುತ್ತಲಿನ ಪರಿಸರದ ಕುರಿತು ತಿಳಿದುಕೊಳ್ಳುವ ಅವಕಾಶ ಒದಗಿಸುವುದಾಗಿದೆ. ಜೊತೆಗೆ 0–14 ವರ್ಷದವರ ಶಿಕ್ಷಣಕ್ಕೂ ಗಮನಹರಿಸುವ ಗುರಿ ಹೊಂದಿದ್ದು ಶಾಲಾ ಪೂರ್ವ ಕಲಿಕೆಗೆ ಪೂರಕವಾದ ಪ್ರಯತ್ನಗಳನ್ನೂ ಕೂಡಾ ಹಮ್ಮಿಕೊಳ್ಳುತ್ತದೆ.

### ಉದ್ದೇಶಗಳು

- 2005ರ ವೇಳೆಗೆ ಎಲ್ಲಾ ಮಕ್ಕಳು ಶಾಲೆಗಳಲ್ಲಿ ಶಿಕ್ಷಣ ಖಾತರಿ ಕೇಂದ್ರಗಳಲ್ಲಿ ಪರ್ಯಾಯ ಶಾಲೆಗಳಲ್ಲಿ. "ಮರಳಿ ಶಾಲೆಗೆ" ಶಿಬಿರಗಳಲ್ಲಿ ಕಲಿಯುವಂತೆ ಮಾಡುವುದು.
- 2007ರ ವೇಳೆಗೆ ಎಲ್ಲಾ ಮಕ್ಕಳು 5 ವರ್ಷಗಳ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮಾಡುವುದು.
- 2010ರ ವೇಳೆಗೆ ಎಲ್ಲಾ ಮಕ್ಕಳು 8 ವರ್ಷಗಳ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮಾಡುವುದು.
- ಬದುಕಿಗಾಗಿ ಶಿಕ್ಷಣದ ಮೇಲೆ ಒತ್ತು ನೀಡುವುದರೊಂದಿಗೆ ತೃಪ್ತಿಕರ ಗುಣಮಟ್ಟದ ಪ್ರಾಥಮಿಕ ಶಿಕ್ಷಣಕ್ಕೆ ಗಮನಹರಿಸುವುದು.
- 2007ರ ವೇಳೆಗೆ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮತ್ತು 2010ರ ವೇಳೆಗೆ ಹಿರಿಯ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಎಲ್ಲಾ ಅಂಗ ಮತ್ತು ಸಾಮಾಜಿಕ ಪ್ರವರ್ಗದ ಅಂತರಗಳನ್ನು ಕಡಿಮೆ ಮಾಡುವುದು.

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣದ ಯೋಜನೆಗಳ ಅನುಷ್ಠಾನಕ್ಕೆ ವಿಸ್ತಾರವಾದ ಚೌಕಟ್ಟನ್ನು ಒದಗಿಸುತ್ತಿದ್ದು, 2010ನೇ ಇಸವಿಯನ್ನು ಅಂತಹ ಸಾಧನೆಗೆ ಅಂತಿಮ ಕಾಲಮಿತಿಗಾಗಿ ನಿಗದಿ ಪಡಿಸಲಾಗಿದೆ. ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವು ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿದ್ದು, ಈ ಕೆಳಗಿನಂತೆ ಧನ ಸಹಾಯವನ್ನು ಒದಗಿಸುತ್ತದೆ.

Digitised by Bharatavani, CIIL

| | | | | | |
|---|---|---|---|---|---|
| 9ನೇ ಯೋಜನೆ | ಕೇಂದ್ರ | : | ರಾಜ್ಯ | = | 85:15 |
| 10ನೇ ಯೋಜನೆ | ಕೇಂದ್ರ | : | ರಾಜ್ಯ | = | 75:25 |
| ನಂತರದ ಯೋಜನೆ | ಕೇಂದ್ರ | : | ರಾಜ್ಯ | = | 50:50 |

ಪ್ರಸ್ತುತ ಇರುವ ಪ್ರಾಥಮಿಕ ಶಿಕ್ಷಣದ ವಿವಿಧ ಯೋಜನೆಗಳನ್ನು (ರಾಷ್ಟ್ರೀಯ ಬಾಲ ಭವನ, ಮಹಿಳಾ ಸಮಖ್ಯ ಮತ್ತು NCTE ಹೊರತು ಪಡಿಸಿ) 9ನೇ ಯೋಜನೆಯ ನಂತರ ಸರ್ವ ಶಿಕ್ಷಣ ಅಭಿಯಾನದಲ್ಲಿ ವಿಲೀನಗೊಳಿಸಲಾಗುತ್ತದೆ.

**ಪ್ರಮುಖ ಕಾರ್ಯತಂತ್ರಗಳು**

• ಸರ್ವಶಿಕ್ಷಣ ಅಭಿಯಾನದ ಉದ್ದೇಶದಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವು ಸುಧಾರಣಾ ಕ್ರಮಗಳನ್ನು ಕೈಗೊಳ್ಳುತ್ತವೆ.

• ಈ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಯತ್ನಗಳಿಗೆ ನಿರಂತರ ಹಣಕಾಸು ಒದಗಿಸಲಾಗುತ್ತದೆ.

• ಮಹಿಳಾ ಗುಂಪುಗಳು, ಗ್ರಾಮ ಶಿಕ್ಷಣ ಸಮಿತಿ, ಪಂಚಾಯಿತಿ ಸದಸ್ಯರ ಪಾಲ್ಗೊಳ್ಳುವಿಕೆಯ ಮೂಲಕ ಪರಿಣಾಮಕಾರಿ ಅಧಿಕಾರ ವಿಕೇಂದ್ರೀಕರಣ ಸಾಧ್ಯವಾಗುತ್ತದೆ.

• NCTE, NCERT, DSERT, SIEMAT, DIET ಗಳಂತಹ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳನ್ನು ಒಳಗೊಳ್ಳುತ್ತದೆ.

• ಹೆಣ್ಣು ಮಕ್ಕಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳಿಗೆ ವಿಶೇಷ ಆದ್ಯತೆ ಇದೆ.

• ಪಠ್ಯ ವಸ್ತು, ಮಗು ಕೇಂದ್ರಿತ ಚಟುವಟಿಕೆಗಳು ಪರಿಣಾಮಕಾರಿ ಬೋಧನೆ, ಕಲಿಕೆಯ ಕಾರ್ಯ ತಂತ್ರಗಳ ಮೂಲಕ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.

• ಈ ಕಾರ್ಯಕ್ರಮವು ಶಿಕ್ಷಕರ ಪ್ರಾಮುಖ್ಯತೆಯನ್ನು ಗುರುತಿಸಿ CRC, BRCಗಳ ರಚನೆ, ಅರ್ಹ ಶಿಕ್ಷಕರ ನೇಮಕಾತಿ, ಸೇವಾನಿರತ ಶಿಕ್ಷಕರ ತರಬೇತಿ, ಬೋಧನೋಪಕರಣಗಳನ್ನು ಅಭಿವೃದ್ಧಿಪಡಿಸುವಿಕೆ, ಮುಂತಾದ ಕಾರ್ಯಕ್ರಮಗಳನ್ನು ಒಳಗೊಂಡಿದೆ.

• ಮೇಲುಸ್ತುವಾರಿ ವ್ಯವಸ್ಥೆಯ ಸುಧಾರಣೆಗಾಗಿ ಸಮುದಾಯ ಆಧಾರಿತ ಸೂಕ್ಷ್ಮ ಯೋಜನೆ ತಯಾರಿಕೆ, ಶಾಲಾ ನಕ್ಷೆ ತಯಾರಿಕೆ ಸಮುದಾಯ ಮುಖಂಡರಿಗೆ ತರಬೇತಿ, ನೈದಾನಿಕ ಅಧ್ಯಯನ ಮುಂತಾದವುಗಳಿಗೆ ಹಣದ ಸಹಾಯ ಒದಗಿಸಲಾಗುತ್ತದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಕಪ್ಪು ಹಲಗೆ ಕಾರ್ಯಕ್ರಮ, ಅನೌಪಚಾರಿಕ ಶಿಕ್ಷಣ, ಮಹಿಳಾ ಸಮಖ್ಯ, ಶಿಕ್ಷಕರ ಶಿಕ್ಷಣ, ಡಿಪಿಇಪಿಗಳಂತಹ ಯೋಜನೆಗಳನ್ನು ಸರ್ವ ಶಿಕ್ಷಣ ಅಭಿಯಾನದೊಳಗೆ ವಿಲೀನಗೊಳಿಸಲಾಗಿದೆ.

**ಸರ್ವ ಶಿಕ್ಷಣ ಅಭಿಯಾನದ ನಿಬಂಧನೆಗಳು**

| | | | |
|---|---|---|---|
| 1. | ಶಿಕ್ಷಕ | : | ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ 40 ಮಕ್ಕಳಿಗೆ ಒಬ್ಬ ಶಿಕ್ಷಕ. |
| 2. | ಶಾಲೆ/ಪರ್ಯಾಯ ಶಾಲಾ ಸೌಲಭ್ಯ | : | ಪ್ರತಿ ಜನವಸತಿ ಪ್ರದೇಶದ ಕಿ.ಮೀ. ವ್ಯಾಪ್ತಿಯೊಳಗೆ |
| 3. | ತರಗತಿ ಕೊಠಡಿಗಳು | : | ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ಶಿಕ್ಷಕನಿಗೆ ಅಥವಾ ಪ್ರತಿ ವರ್ಗ/ತರಗತಿ ಯಾವುದು ಕನಿಷ್ಠವೋ ಅಲ್ಲಿ ಒಂದು ಕೊಠಡಿ ಹಾಗೂ ಪ್ರತಿ ಪ್ರಾಥಮಿಕ ಶಾಲೆಗೆ ಕನಿಷ್ಠ ಇಬ್ಬರು ಶಿಕ್ಷಕರು ಮತ್ತು ವರಾಂಡ ಹೊಂದಿಕೊಂಡಂತೆ ಎರಡು ಕೊಠಡಿಗಳಿಗೆ ಅವಕಾಶ. |
| 4. | ಉಚಿತ ಪಠ್ಯ ಪುಸ್ತಕಗಳು | : | ಒಂದು ಮಗುವಿಗೆ 150ರೂ.ಗಳ ಗರಿಷ್ಠ ಪರಿಮಿತಿಯೊಳಗೆ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿರುವ ಎಲ್ಲಾ ಹೆಣ್ಣುಮಕ್ಕಳು, ಪರಿಶಿಷ್ಟ ಜಾತಿ/ಪಂಗಡದ ಮಕ್ಕಳಿಗೆ |
| 5. | ನಿರ್ಮಾಣ ಕಾಮಗಾರಿಗಳು | : | ಶಾಲಾ ಸೌಲಭ್ಯಗಳ ಸುಧಾರಣೆ, ಬಿ.ಆರ್.ಸಿ/ಸಿ.ಆರ್.ಸಿ ಕಟ್ಟಡ ನಿರ್ಮಾಣ |
| 6. | ಶಿಕ್ಷಣ ಖಾತರಿ ಯೋಜನೆಯ | : | ಪ್ರತಿ ಶಾಲೆಗೆ 10,000/- ರೂ.ಗಳಂತೆ ಬೋಧನೆ ಮತ್ತು ಕಲಿಕೆಯ ಸಾಮಗ್ರಿಗಳಿಗೆ ಹಣಕಾಸಿನ ಅಡಿಯಲ್ಲಿನ ಕೇಂದ್ರಗಳನ್ನು ವ್ಯವಸ್ಥೆ ಮಾಡುವುದು ಔಪಚಾರಿಕ ಶಾಲೆಗಳನ್ನಾಗಿ ಉನ್ನತೀಕರಿಸುವುದು. |
| 7. | ಶಿಕ್ಷಕರ ತರಬೇತಿ | : | ಸೇವೆಯಲ್ಲಿರುವ ಎಲ್ಲಾ ಶಿಕ್ಷಕರಿಗೆ 20 ದಿನಗಳ ತರಬೇತಿಗೆ ಅವಕಾಶ ಕಲ್ಪಿಸುವುದು. |
| 8. | ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಹಣಕಾಸಿನ ಸೌಲಭ್ಯ ಕಲ್ಪಿಸುವುದು | : | ನಿರ್ದಿಷ್ಟ ಪ್ರಸ್ತಾವನೆಯ ಪ್ರಕಾರ ವಿಶೇಷ ಅಗತ್ಯವುಳ್ಳ ಮಕ್ಕಳ ಸಮನ್ವಯ ಶಿಕ್ಷಣಕ್ಕಾಗಿ ಪ್ರತಿ ಮಗುವಿಗೆ ಒಂದು ವರ್ಷಕ್ಕೆ ರೂ.1,200/- ಗಳವರೆಗೆ ನೆರವು. |

**ಹೆಣ್ಣು ಮಕ್ಕಳ ಶಿಕ್ಷಣ:** ಸರ್ವ ಶಿಕ್ಷಣ ಅಭಿಯಾನದಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಡಗಳ ಬಾಲಕಿಯರಿಗೆ ವಿಶೇಷವಾದ ಮಹತ್ವ ನೀಡಲಾಗಿದೆ. ಶಿಕ್ಷಕರ ನೇಮಕ. ಪ್ರಾಥಮಿಕ ಶಾಲೆಗಳ ಉನ್ನತೀಕರಣ, ಮಧ್ಯಾಹ್ನದ ಉಪಹಾರ, ಸಮವಸ್ತ್ರ, ವಿದ್ಯಾರ್ಥಿ ವೇತನ ಮುಂತಾದ ಕಾರ್ಯಕ್ರಮಗಳೆಲ್ಲವನ್ನು ಅಂಗ ಸಮಾನತೆಯ ಆಧಾರದ ಮೇಲೆ ಕೈಗೊಳ್ಳಲಾಗುತ್ತದೆ. ಮರಳಿ ಶಾಲೆಗೆ ಶಿಬಿರಗಳು, ಬ್ರಿಡ್ಜ್ ಕೋರ್ಸ್‌ಗಳು ಸಹಜ ಶಿಕ್ಷಣ ಕೇಂದ್ರಗಳು, ಬಾಲಿಕಾ ಶಿಕ್ಷಣ ಶಿಬಿರಗಳು ಮುಂತಾದವುಗಳನ್ನು ಸ್ಥಾಪಿಸಲಾಗುತ್ತದೆ.

Digitised by Bharatavani, CIIL

**ಪರಿಶಿಷ್ಟ ಜಾತಿ/ಪಂಗಡದ ಮಕ್ಕಳ ಶಿಕ್ಷಣ:** ಈ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳಿಗಾಗಿ ವಿಸೇಷ ಒತ್ತು ನೀಡಲಾಗಿದೆ. ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಶಾಲೆ/ ಶಿಕ್ಷಣ ಖಾತರಿ ಯೋಜನೆ, ಪರ್ಯಾಯ ಮತ್ತು ಆವಿಷ್ಕೃತ ಶಿಕ್ಷಣ ಘಟಕಗಳು, ವಿಶೇಷ ಶಿಬಿರಗಳು, ಸೇತುಬಂಧ ಕಾರ್ಯಕ್ರಮಗಳು 8ನೇ ತರಗತಿಯವರೆಗೆ ಉಚಿತ ಪಠ್ಯ ಪುಸ್ತಕಗಳು, ನೇಮಕಾತಿಯಲ್ಲಿ ಶೇ. 50 ರಷ್ಟು ಮಹಿಳೆಯರಿಗೆ ಅವಕಾಶ ಇವುಗಳು ಕೆಲವು ಪ್ರಮುಖ ಅವಕಾಶಗಳಾಗಿವೆ.

**ವಿಶೇಷ ಅಗತ್ಯವಿರುವ ಮಕ್ಕಳ ಶಿಕ್ಷಣ:** SSAಯು ವಿಶೇಷ ಅಗತ್ಯವಿರುವ ಮಕ್ಕಳ ಶಿಕ್ಷಣಕ್ಕಾಗಿ ಶೂನ್ಯ ತಿರಸ್ಕಾರ ನೀತಿಯ ಆಧಾರದ ಮೇಲೆ ತಾರತಮ್ಯರಹಿತ ಶಿಕ್ಷಣವನ್ನು ಒದಗಿಸುತ್ತದೆ. ಇವರಿಗಾಗಿ ಮುಕ್ತ ಶಾಲೆಗಳು, ಅನೌಪಚಾರಿಕ ಶಾಲಾ ವ್ಯವಸ್ಥೆ. ದೂರ ಶಿಕ್ಷಣ. ವಿಶೇಷ ಶಾಲೆಗಳು, ಕುಟುಂಬ ಆಧಾರಿತ ಶಿಕ್ಷಣ ಸಂಚಾರಿ ಶಿಕ್ಷಕ ಮಾದರಿ, ಅರೆಕಾಲಿಕ ತರಗತಿಗಳನ್ನು ಒಳಗೊಂಡಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ 'ಮರಳಿ ಶಾಲೆಗೆ' ಶಿಬಿರಗಳು, ಬಾಲಿಕಾ ಶಿಬಿರಗಳು, ಸಮುದಾಯ ಶಾಲೆಗಳು, ಮಕ್ಕಳನ್ನು ಮುಖ್ಯ ವಾಹಿನಿಗೆ ಕರೆತರುವ ಬ್ರಿಡ್ಜ್ ಕೋರ್ಸ್‌ಗಳು ಮುಂತಾದ ಆಯ್ಕೆಗಳಿವೆ. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (NPEGEL) ಎಂಬ ಹೊಸ ಕಾರ್ಯಕ್ರಮವಿದೆ. NPEGEL ಕಾರ್ಯಕ್ರಮವನ್ನು ಶಿಕ್ಷಣ ವಂಚಿತ 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗಾಗಿ ರೂಪಿಸಲಾಗಿದೆ.

SSA ಅಡಿಯಲ್ಲಿ ಏಕೋಪಾಧ್ಯಾಯ ಶಾಲೆ ಇಲ್ಲದಂತೆ ಶಾಲಾ ಶಿಕ್ಷಕರನ್ನು ಒದಗಿಸಲಾಗುತ್ತದೆ. ಶಿಕ್ಷಕರ ಸಂಬಳಕ್ಕೆ 10 ವರ್ಷಗಳ ಅವಧಿಗೆ ನೆರವು ನೀಡಲಾಗುತ್ತದೆ. ಶಿಕ್ಷಕರ ವೃತ್ತಿಪರ ಅಭಿವೃದ್ಧಿಗೆ ಅವಕಾಶಗಳನ್ನು ನೀಡಲಾಗುತ್ತದೆ.

SSA ಯು ಮಕ್ಕಳ ಸಂಪೂರ್ಣ ಬೆಳವಣಿಗೆಗೆ ಗಮನ ನೀಡಿದ್ದು, ಕ್ರೀಡೆಗಳು ಸಾಂಸ್ಕೃತಿಕ ಚಟುವಟಿಕೆಗಳು, ಚಟುವಟಿಕೆ ಆಧಾರಿತ, ಕಲಿಕೆ, ಆರೋಗ್ಯ, ಪೌಷ್ಠಿಕತೆ, ವೃತ್ತಿ ಸಂಬಂಧಿಸಿದ ಜೀವನ ಕೌಶಲ್ಯಗಳನ್ನು ಪ್ರೋತ್ಸಾಹಿಸುತ್ತದೆ.

ಒಟ್ಟಿನಲ್ಲಿ ಸರ್ವ ಶಿಕ್ಷಣ ಅಭಿಯಾನವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಒಂದು ಪ್ರಮುಖ ಮೈಲಿಗಲ್ಲಾಗಿದೆ ಶಿಕ್ಷಕರು ಪೋಷಕರು, ಸಮುದಾಯ ಪಂಚಾಯತ ರಾಜ್ ಸಂಸ್ಥೆಗಳು ಇತರರ ಭಾಗವಹಿಸುವಿಕೆಯ ಮೂಲಕ ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನವನ್ನು ಕೈಗೊಳ್ಳುತ್ತದೆ. ಮಕ್ಕಳಿಗೆ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆತು. ಅವರು ಪ್ರಜ್ಞಾವಂತ ನಾಗರಿಕರಾಗಿ ರೂಪುಗೊಳ್ಳುವುದು ಇದರ ಪ್ರಮುಖ ಗುರಿಯಾಗಿದೆ.

–ಜಿ.ಎನ್.ಹಿ.

## ಸರ್ವಜ್ಞನ ವಚನಗಳಲ್ಲಿ ಶೈಕ್ಷಣಿಕ ಚಿಂತನೆಗಳು

ಕನ್ನಡವನ್ನಾಡುವವರ ಮನಸ್ಸಿನಲ್ಲಿ ದೃಢವಾಗಿ ನೆಲೆಸಿದ ಕವಿ, ತ್ರಿಕಾಲಜ್ಞಾನಿ, ನಿತ್ಯ ಜೀವನವನ್ನು ಬಲ್ಲ, ತೆರೆದ ಕಣ್ಣಿನಿಂದ ವೀಕ್ಷಿಸಿ ಅಪಾರ ಅನುಭವವನ್ನು ಸಂಗ್ರಹಿಸಿದ, ಜಗತ್ತಿನ ಮಾರ್ಗದರ್ಶಕನಾಗಿ ಹೊರ ಹೊಮ್ಮಿದ ವ್ಯಕ್ತಿಯೇ ಸರ್ವಜ್ಞ.

ಸರ್ವಜ್ಞ 16–17ನೇ ಶತಮಾನದಲ್ಲಿದ್ದನೆನ್ನಲಾದ ಒಬ್ಬ ವಚನಕಾರ ಇವನಿದ್ದ ಕಾಲ ಯಾವುದೆಂಬುದರ ಬಗ್ಗೆ ನಿಖರತೆ ಇಲ್ಲ. ಇವನು ಜನಿಸಿದ್ದು ಧಾರವಾಡ ಜಿಲ್ಲೆಯ ಅಂಬಲೂರು ಎಂಬ ಸ್ಥಳ. ಬಸವರಸ ಇವನ ತಂದೆ, ತಾಯಿ ಕೀಳು ಜಾತಿಯಲ್ಲಿ ಹುಟ್ಟಿದ್ದ ಮಾಳೆ ಎಂಬಾಕೆ. ಇವರ ವಿವಾಹದ ಬಗ್ಗೆ ಸಾಮಾಜಿಕ ಒಪ್ಪಿಗೆ ಇರಲಿಲ್ಲವಾದ್ದರಿಂದ ಸಾಮಾಜಿಕ ಬಹಿಷ್ಕಾರವನ್ನು ಎದುರಿಸಬೇಕಾಗಿ ಬಂತು. ಸರ್ವಜ್ಞನ ನಿಜವಾದ ಹೆಸರು ಪುಷ್ಪದತ್ತು. ಬಹಳ ಕಷ್ಟದಿಂದ ಬೆಳೆದು ದೊಡ್ಡವನಾಗಿ ದೇಶ ಸಂಚಾರ ಮಾಡಿ ಜ್ಞಾನಾರ್ಜನೆ ಮಾಡಿಕೊಂಡು ತನ್ನನ್ನು ಸರ್ವಜ್ಞ, ಎಲ್ಲವನ್ನು ತಿಳಿದವನು ಎಂದು ಕರೆದುಕೊಂಡಿದ್ದಾನೆ.


ಸರ್ವಜ್ಞ

ಸುಮಾರು ಸಾವಿರಕ್ಕೂ ಹೆಚ್ಚು ತ್ರಿಪದಿಗಳನ್ನು ರಚಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇಂದಿಗೂ ಜನಮನದಲ್ಲಿ ಸರ್ವಜ್ಞನ ವಚನಗಳು ಮಸಕಾಗದೇ ಮಿಂಚಿನಂತೆ ಹೊಳೆಯುತ್ತಿವೆ. ಅನೇಕರಿಗೆ ಉತ್ತಮ ಮಾರ್ಗದರ್ಶಕನಂತೆ ಕಾರ್ಯನಿರ್ವಹಿಸುತ್ತಿವೆ. ವ್ಯಾಪಕ ಲೋಕಾನುಭವ ಪಡೆದ ಮಹಾನುಭಾವಿ ಸರ್ವಜ್ಞನ ಶೈಕ್ಷಣಿಕ ವಿಚಾರಗಳು ಜನಮಾನಸದಲ್ಲಿ ಅಚ್ಚಳಿಯದೇ ಉಳಿಯುವಂತಹುಗಳಾಗಿವೆ. ಯುಗಯುಗಗಳು ಕಳೆದರೂ ಹೊಸಯುಗಕ್ಕೆ ದಿಕ್ಸೂಚಿಯಾಗಬಲ್ಲಂತಹ ಶೈಕ್ಷಣಿಕ ವಿಚಾರಗಳು ಸರ್ವಜ್ಞನ ವಚನಗಳಲ್ಲಿ ಅಡಗಿರುವುದನ್ನು ಕಾಣುತ್ತೇವೆ. ಅವನ ಅನೇಕ ಶೈಕ್ಷಣಿಕ ವಿಚಾರಗಳು ಇಂದಿನ ಶೈಕ್ಷಣಿಕ ಸಂದರ್ಭದಲ್ಲಿ ಪ್ರಸ್ತುತವೆನಿಸಿವೆ.

ಸರ್ವಜ್ಞ ಕವಿಯು ಕಲಿಕೆಯ ಬಗ್ಗೆ ಹೀಗೆ ಹೇಳಿದ್ದಾನೆ:

**"ಸರ್ವಜ್ಞನೆಂಬುವನು ಗರ್ವದಿಂದಾದವನೆ**
**ಸರ್ವರೊಳೊಂದೊಂದು ನುಡಿಗಲಿತು**
**ವಿದ್ಯೆಯ ಪರ್ವತವೇ ಆದ ಸರ್ವಜ್ಞ"**

ಅಂದರೆ ಲೋಕ ವ್ಯವಹಾರವನ್ನೆಲ್ಲಾ ಅರಿತ ಕವಿ ಸರ್ವಜ್ಞ ಕನ್ನಡದ ಒಬ್ಬ ಶ್ರೇಷ್ಠ ಕವಿಯಾಗಬೇಕಾದರೆ ಕೇವಲ ಜಂಬ ಕೊಚ್ಚಿಕೊಂಡ ಹಾಗಲ್ಲ. 'ಕೆಲವಂ ಬಲ್ಲವರಿಂದ ಕಲಿತು ಕೆಲವಂ ಮಾಳ್ಪವರಿಂದ ನೋಡುತಂ' ಎಂದು ಸೋಮೇಶ್ವರ ಕವಿ ಹೇಳಿದಂತೆ ಸರ್ವರೊಳಗೆ ಒಂದೊಂದು ನುಡಿಗಲಿತು ಮಹಾವಿದ್ಯಾ ಸಂಪತ್ತನ್ನು ಸಂಪಾದಿಸಿದೆ ಎಂದಿದ್ದಾನೆ. ಬೇರೆ ಬೇರೆ ಮೂಲಗಳಿಂದ ವಿದ್ಯೆ ಕಲಿತು ವಿದ್ಯಾವಂತನಾಗಬೇಕೆನ್ನುತ್ತಾನೆ ಸರ್ವಜ್ಞ.

ಹೀಗೆ ಅನುಭವದ ಮೂಲಕ ಕಲಿಕೆಯಾಗಬೇಕು. ಕಲಿತ ಕಲಿಕೆ ಅನುಭವದ ಆನಂದವನ್ನು ಉಣಬಡಿಸಬೇಕು. ವಿದ್ಯಾವಂತನ ಬಾಹ್ಯ ಲಕ್ಷಣವನ್ನು ಸರ್ವಜ್ಞ ಹೀಗೆ ವರ್ಣಿಸಿದ್ದಾನೆ.

**"ವಿದ್ಯೆಯುಳ್ಳವನ ಮುಖ ಮುದ್ದು ಬರುವಂತಿಕ್ಕು**
**ವಿದ್ಯೆಯಿಲ್ಲದವನ ಬರಿ ಮುಖವು**
**ಹಾಳೂರ ಹದ್ದಿನಂತಕ್ಕು ಸರ್ವಜ್ಞ"**

ವಿದ್ಯಾವಂತನ ಮುಖವು ಮುದ್ದು ಬರುವಂತಿರುವುದು, ವಿದ್ಯೆಯಿಲ್ಲದವರ ಬರಿದಾದ ಮುಖವು ಹಾಳೂರಿನಲ್ಲಿರುವ ಹದ್ದಿನಂತಿರುವುದೆಂದು ವಿದ್ಯಾವಂತರ ಬಗ್ಗೆ ಸರ್ವಜ್ಞ ಹೇಳಿದ್ದಾನೆ.

**"ವಿದ್ಯೆಯೇ ತಾಯ್ತಂದೆ ಬುದ್ಧಿಯೇ ಸೋದರರು**
**ಆದ್ವಾನಕಾದವ ನೆಂಟ ಸುಖದಿ ತಾ**
**ನಿದ್ದುದೇ ರಾಜ್ಯ ಸರ್ವಜ್ಞ"**


Digitised by Bharatavani, CIIL

ವಿದ್ಯೆಯೇ ತಾಯಿ ತಂದೆಯಂತೆ, ಬುದ್ಧಿಯೇ ಸೋದರರನಂತೆ, ಉಪಕಾರವನ್ನು ಮಾಡಿದವರೇ ನೆಂಟರಾಗುವರು. ಸರ್ವಜ್ಞ ಕವಿಯ ಶೈಕ್ಷಣಿಕ ವಿಚಾರ ಅದ್ಭುತವಾದಂತಹದ್ದಾಗಿದೆ. ಆತನು ವಿದ್ಯೆಯೇ ತಂದೆ, ತಾಯಿ, ಬಂಧು ಬಳಗ, ಸಹೊದರ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ವಿದ್ಯೆಯ ಮಹತ್ವವನ್ನು ತಿಳಿಸುತ್ತಾನೆ. ಹಾಗೆಯೇ.

**"ವಿದ್ಯೆಕ್ಕೆ ಕೊನೆಯಿಲ್ಲ ಬುದ್ಧಿಗೆ ಬೆಲೆಯಿಲ್ಲ**
**ನಿದ್ರಿಸುವವಗೆ ಗತಿಯಿಲ್ಲ ಮರಣಕ್ಕೆ**
**ಮದ್ದುಗಳಿಲ್ಲ ಸರ್ವಜ್ಞ"**

ವಿದ್ಯೆ ಕಲಿಯುವುದಕ್ಕೆ ಕೊನೆಯಿಲ್ಲ. ಬುದ್ದಿಯ ಬೆಲೆ ಕಟ್ಟಲು ಸಾಧ್ಯವಿಲ್ಲ. ಬೇಧ ಮಾಡುವವನಿಗೆ ಉತ್ತಮ ಗತಿ ಇರುವುದಿಲ್ಲ. ಮರಣಕ್ಕೆ ಯಾವುದೇ ಮದ್ದಿಲ್ಲವೆಂದು ಸರ್ವಜ್ಞ ಹೇಳಿದ್ದಾನೆ. ಈ ತ್ರಿಪದಿಯಲ್ಲಿ ಸರ್ವಜ್ಞ ವಿದ್ಯೆಯ ಆಳ, ವೈಶಾಲ್ಯ ತಿಳಿಸಿದ್ದಾನೆ.

**"ಓದಿದಾ ಓದು ತಾ ಮೇದ ಕಬ್ಬಿನ ಸಿಪ್ಪೆ**
**ಓದಿನಾ ಒಡಲನರಿದಿಹರೆ ಆ ಸಿಪ್ಪೆ ಕ**
**ಬ್ಬಾದಂತೆ ಕಾಣೋ ಸರ್ವಜ್ಞ"**

ಸರಿಯಾಗಿ ಓದಿ ಅಭ್ಯಾಸ ಮಾಡಿದರೆ ಕಬ್ಬಿನ ಸಿಪ್ಪೆಯಂತೆ ಕಠಿಣ ಶ್ರಮವೆನಿಸಲಾರದು. ಓದಿನ ತಿರುಳ ಅರಿತ ನಂತರವೇ ಸಿಪ್ಪೆಯೇ ಕಬ್ಬಾದಂತೆ ಹಿತವೆನಿಸುವುದು. ಕವಿ ಸರ್ವಜ್ಞನ ಮೇಲಿನ ವಚನದಲ್ಲಿ ಆತನ ಶೈಕ್ಷಣಿಕ ದೃಷ್ಟಿಕೋನ ಎಷ್ಟೊಂದು ಸುಲಭ, ಸರಳ ಮತ್ತು ವಾಸ್ತವಾಂಶವನ್ನು ಒಳಗೊಂಡಿರುವುದನ್ನು ಕಾಣಬಹುದು. ಓದು ಯಾಕೆ ಕಠಿಣವೆನಿಸುತ್ತದೆ ಅಂದರೆ ನಾವು ಅದರ ತಿರುಳನ್ನು ಅರಿಯದೇ ಓದುತ್ತಿದ್ದೇವೆ. ಓದಿದ ತಿರುಳನ್ನು ಅರ್ಥ ಮಾಡಿಕೊಂಡಾಗ ಸಿಪ್ಪೆಯೇ ಮತ್ತೆ ಕಬ್ಬಿನಂತೆ ಮೃದುವಾದಂತಹ ಅನುಭವ ನೀಡುತ್ತದೆ.

ಹಾಗೆಯೇ ಕವಿ ಸರ್ವಜ್ಞ ತನ್ನ ಶೈಕ್ಷಣಿಕ ವಿಚಾರವನ್ನು ಮುಂದುವರೆಸುತ್ತಾ ಹೇಳುತ್ತಾನೆ. ಓದು, ವಿದ್ಯೆ ಯಾವಾಗಲೂ ಆನಂದವನ್ನು ನೀಡುವಂತಹದ್ದಾಗಿರಬೇಕು. ವಿದ್ಯೆ ಕಲಿತಿದ್ದೇನೆ ಎಂಬ ಅಹಂಕಾರ ಭಾವ ಮೂಡಬಾರದು ಎನ್ನುತ್ತಾನೆ.

**ಪರ್ವತವನೇರಿದೊಡೆ ಗರ್ವತನಗೇಕಯ್ಯ?**
**ಸರ್ವಾಂತರಯಾಮಿ ಶಿವನಿರಲು**
**ತನ್ನೊಳಗೆ ಗರ್ವವಿಹುದೇಕೆ? ಸರ್ವಜ್ಞ**

ವಿದ್ಯಾವಂತರಾದರೆ ಅದರ ಬಗ್ಗೆ ಗರ್ವವೇಕೆ? ಪರ್ವತವನ್ನು ಏರಿದರೆ ಸೊಕ್ಕು ಯಾಕೆ? ತನ್ನಲ್ಲಿ ಸರ್ವಾಂತರಯಾಮಿಯಾದ ಶಿವನು ವ್ಯಾಪಿಸಲಾಗಿ ದ್ವೇಷ ಬುದ್ಧಿಯೇಕೆ? ದೇವರು ಎಲ್ಲರಲ್ಲಿಯೂ ತುಂಬಿರಲಾಗಿ ನೀನು ಹೆಚ್ಚು ನಾನು ಹೆಚ್ಚು ಎಂದು ಜಗಳವಾಡುವ ಕಾರಣವೇನು? ವಿದ್ಯೆಯಿಂದ ವಿನಯ ಭಾವನೆ ಮೂಡಬೇಕೇ ಹೊರತು ಅಹಂಕಾರ ಭಾವವಲ್ಲ ಎಂದು ಸರ್ವಜ್ಞ ಎಚ್ಚರಿಸುತ್ತಾನೆ.

ಕಲಿಕೆ ಕೇವಲ ಪದವಿಗಳ ಸರಮಾಲೆಯಾಗಬಾರದು, ಯಾಂತ್ರಿಕವಾಗಬಾರದು, ಯಾಂತ್ರಿಕವಾಗಿ ವಿಚಾರ ತುಂಬುವಿಕೆಯ ಕಲಿಕೆಯಿಂದ ಏನೂ ಪ್ರಯೋಜನವಿಲ್ಲ, ಏಕೆಂದರೆ,

**"ಕೋಟಿ ಗೀತವನೋದಿ ಪಾಠಯಿಸಿ ಫಲವೇನು?**
**ಕೂಟಸ್ಥ ನಲ್ಲದವನೋದ ಗಿಳಿ ಕಲಿತ**
**ಪಾಠದಂತಕ್ಕು ಸರ್ವಜ್ಞ"**

ಯಾವನಿಗೆ ಪರಬ್ರಹ್ಮ ವಸ್ತುವಿನ ಜ್ಞಾನವಾಗುವುದಿಲ್ಲವೋ ಅವನು ಕೋಟಿ ಗೀತೆಗಳನ್ನು ಓದಿದರೂ ಪಾಠ ಮಾಡಿದರು ಏನೂ ಪ್ರಯೋಜನವಾಗುವುದಿಲ್ಲ, ಅದು ಗಿಳಿಯು ಕಲಿತ ಪಾಠದಂತೆ ಆಗುವುದು. ವಾಸ್ತವವಾಗಿ ಮಾನವ ಏನನ್ನು ತಿಳಿದುಕೊಳ್ಳಬೇಕೋ ಆ ಪರಮಾರ್ಥ ಸತ್ಯವನ್ನು ತಿಳಿಯಬೇಕು ಎನ್ನುವುದೇ ಇದರ ಅರ್ಥ.

ಅವನ ಶೈಕ್ಷಣಿಕ ವಿಚಾರ ಎಷ್ಟೊಂದು ನೇರ ಸ್ಪಷ್ಟ ಮತ್ತು ಸರಳತೆಯಿಂದ ಕೂಡಿದೆಯೆಂದರೆ ಮಾನವರಾಗಿ ಮೊದಲು ನಾವೆಲ್ಲರೂ ಏನನ್ನು ತಿಳಿದುಕೊಳ್ಳಬೇಕಾಗಿದೆ ಎಂಬುದನ್ನು ನೇರವಾಗಿ ತಿಳಿಸುತ್ತಿದ್ದಾನೆ ತನ್ನ ವಚನದಲ್ಲಿ.

**ಸಾಲು ವೇದಗಳೇಕೆ? ಮೂಲಮಂತ್ರಗಳೇಕೆ?**
**ಮೆಲುಕೀಳು ನುಡಿಯೇಕೆ? ತತ್ವದಾ**
**ಶೀಲನರಿದವಗೆ ಸರ್ವಜ್ಞ**

ಶೀಲವಂತಿಕೆಯ ಮರ್ಮವನ್ನರಿತವನಿಗೆ ವೇದಾಧ್ಯಯನವು ಯಾತಕ್ಕೆ ಬೇಕು? ಇದು ಒಳ್ಳೆಯದು ಇದು ಕೆಡಕು ಎಂಬ ಮಾತು ಯಾತಕ್ಕೆ ಬೇಕು? ತತ್ವಜ್ಞಾನಿಗೆ ಚಾರಿತ್ರ್ಯವಂತನಿಗೆ ಎಲ್ಲವೂ ಒಳ್ಳೆಯದೇ ಆಗಿರುತ್ತದೆ.

ವಿದ್ಯೆ ಕಲಿತ ವ್ಯಕ್ತಿ ಯಾವಾಗಲೂ ಧನಾತ್ಮಕ ಯೋಚನೆಯಲ್ಲಿ ತೊಡಗಿರಬೇಕು. ಋಣಾತ್ಮಕವಾದ ಅಂಶಗಳತ್ತ ಗಮನ ಕೊಡಬಾರದು ಎಷ್ಟೊಂದು ಧನಾತ್ಮಕ ಆಲೋಚನೆ ನಮ್ಮಲ್ಲಿರಬೇಕೆಂದರೆ ಗೊತ್ತಿರುವುದನ್ನು ಗೊತ್ತಿದೆ ಎಂದು ಹೇಳಬೇಕು. ಗೊತ್ತಿರದ ವಿಚಾರದ ಬಗ್ಗೆ ಗೊತ್ತಿರುವಂತೆ ನಟನೆ ಮಾಡಬಾರದು ಎನ್ನುತ್ತಾನೆ.

**ಎಲ್ಲವೂ ಬಲ್ಲಡೇ ಬಲ್ಲೆನೆಂದೆನಬೇಕು.**
**ಅಲ್ಲಲ್ಲಿ ಗೊಂದಲವಿರಲು**
**ಬಲುಮಗೇ ಕಲ್ಲು ಹೊತ್ತಂತೆ ಸರ್ವಜ್ಞ**

ಯಾವುದೊಂದು ವಿಷಯವು ತನಗೆ ಸಂಪೂರ್ಣವಾಗಿ ಗೊತ್ತಿದ್ದರೆ ಮಾತ್ರ ಗೊತ್ತಿದೆಯೆಂದು ಅನ್ನಬೇಕು, ಹಾಗಿಲ್ಲದೇ ಅಲ್ಲಲ್ಲಿ ಗೊತ್ತಿದ್ದ ಅದನ್ನೇ ಬಣ್ಣಿಸಿ ಹೇಳಹೋದರೆ ಬಲವಂತಕ್ಕೆ ಕಲ್ಲು ಹೊತ್ತಂತೆ (ಮನಸ್ಸಿಲ್ಲದೆ ಮಾಡಿದ ಕೆಲಸವಿದ್ದಂತೆ) ಆಗುವುದು.

ಸರ್ವಜ್ಞ ನಿಂತ ನೀರಿನಂತಿರಲಿಲ್ಲ. ಸದಾ ಚಲನಶೀಲ ವ್ಯಕ್ತಿ. ಸದಾ ಕ್ರಿಯಾಶೀಲನಾಗಿರಬೇಕೆಂಬ ಉತ್ಕಟ ಇಚ್ಛೆ ಅವನದಾಗಿತ್ತು. ಹೀಗಾಗಿ ಸರ್ವಜ್ಞ ಎಲ್ಲೂ ಒಂದು ಕಡೆ ನಿಲ್ಲದವನಾದ.

ಸರ್ವಜ್ಞನ ವಚನಗಳಲ್ಲಿನ ಶೈಕ್ಷಣಿಕ ವಿಚಾರಗಳಲ್ಲಿ ಯಾವ ಅಂಶಗಳಿದ್ದವು ಎಂಬ ಪ್ರಶ್ನೆ ಕೇಳಿಕೊಂಡರೆ ಆಡು ಮುಟ್ಟದ ಗಿಡವಿಲ್ಲ ಸರ್ವಜ್ಞ ಹೇಳದ ಶೈಕ್ಷಣಿಕ ವಿಚಾರಗಳಿಲ್ಲವೇನೋ ಎನ್ನಿಸುತ್ತದೆ.

–ಎಂ.ವಿ.

## ಸವಾಲುಳ್ಳ ಮಕ್ಕಳ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ

ಬುದ್ಧಿಮಾಂದ್ಯತೆ, ಆಟಿಸಂ, ಕಿವುಡುತನ, ಮಾತನಾಡುವಲ್ಲಿ ತೊಡಕು, ತೊದಲುವಿಕೆ ಇವೆಲ್ಲ ನಮ್ಮ ನಿತ್ಯದ ಬದುಕಿನಲ್ಲಿ ಕಾಣುವ ಕೆಲವು ಮಕ್ಕಳಲ್ಲಿ ಎದುರಾಗುವ ಅಡ್ಡಿ–ಆತಂಕಗಳು. ಇಂತಹ ಮಕ್ಕಳ ಬಗ್ಗೆ ಸಮಾಜ ಕನಿಕರವನ್ನು ತೋರಿಸುತ್ತದೆ. ಆದರೆ ಇವರಲ್ಲೂ ಜೀವನವನ್ನು ಸಾಗಿಸುವ ಸಾಮರ್ಥ್ಯ ಇರುತ್ತದೆ. ಇವರಿಗೆಲ್ಲ ಸೂಕ್ತ ಮಾರ್ಗದರ್ಶನ, ಚಿಕಿತ್ಸೆ ನೀಡಿ ಆಯಾ ತೊಂದರೆಗಳನ್ನು ಸ್ವಲ್ಪಮಟ್ಟಿಗೆ ಕಡಿಮೆಗೊಳಿಸಿ ಯಾರಿಗೂ ಹೊರೆಯಾಗದಂತೆ, ಆಶ್ರಯಿಸದೆ ಸ್ವಂತ ಕಾಲ ಮೇಲೆ ನಿಲ್ಲುವಂತೆ ಮಾಡುವ ಧೈರ್ಯ ತುಂಬುವ, ಅನೇಕ ರೀತಿಯ ಸಹಾಯ ಸಹಕಾರ ಮೀಸಲಾತಿಗಳನ್ನು ನೀಡಿ, ಸ್ವಾಭಿಮಾನದಿಂದ

Digitised by Bharatavani, CIIL

ಬದುಕುವ ಅವಕಾಶ ಮಾಡಿಕೊಡುವ ಸಂಸ್ಥೆಗಳು, ಚಿಕಿತ್ಸಾಲಯಗಳು, ಯುವಕ ಸಂಘಗಳು, ಸಹಕಾರಿ ಸಂಘ ಸಂಸ್ಥೆಗಳು, ತಲೆ ಎತ್ತುತ್ತೊಡಗಿವೆ. ಇವುಗಳೇ ಜೀವನಾಸಕ್ತಿ ಕಳೆದುಕೊಂಡ ಇಂತಹವರ ಪಾಲಿಗೆ ಆಶಾಕಿರಣಗಳಾಗಿವೆ. ವಿವಿಧ ರೀತಿಯ ಮಾನಸಿಕ, ದೈಹಿಕ ನ್ಯೂನತೆಗಳ ಸವಾಲುಳ್ಳ ಮಕ್ಕಳ ನಿರ್ವಹಣೆಯಲ್ಲಿ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಸಮುದಾಯ ಮಹತ್ವಪೂರ್ಣ ಪಾತ್ರ ವಹಿಸಲು ಅವಕಾಶವಿದೆ. ಅದರಿಂದಾಗಿ ಈ ಮಕ್ಕಳ ನಿರ್ವಹಣೆ, ಮಾರ್ಗದರ್ಶನದ ಬಗ್ಗೆ ಇಡೀ ಸಮುದಾಯವನ್ನು ಎಚ್ಚರಿಸಿ ಈ ದಿಶೆಯಲ್ಲಿ ಸಲಹೆ ಸೂಚನೆಗಳನ್ನು ಒದಗಿಸುವ ಆವಶ್ಯಕತೆ ಇದೆ.

ಸವಾಲುಳ್ಳ ಮಕ್ಕಳ ನಿರ್ವಹಣೆಯಲ್ಲಿ ಸಮುದಾಯ ಅನೇಕ ರೀತಿಗಳಲ್ಲಿ ನೆರವು ನೀಡಬಹುದು. ಮುಖ್ಯವಾಗಿ ಸಮುದಾಯವು ಸವಾಲುಳ್ಳ ಮಕ್ಕಳ ಬಗ್ಗೆ ಧನಾತ್ಮಕ (ಸಕಾರಾತ್ಮಕ) ಮನೋಭಾವ ರೂಢಿಸಿಕೊಳ್ಳಬೇಕು. ಇಂತಹ ಮಕ್ಕಳಿಗೆ ನಮ್ಮ ಕರುಣೆ, ಸಹಾನುಭೂತಿಗಿಂತ ಹೆಚ್ಚಾಗಿ ಅವರನ್ನೂ ಬೇರೆ ಮಕ್ಕಳಂತೆ ನಾವು ಸ್ವೀಕರಿಸುವುದು ಬೇಕಾಗುತ್ತದೆ. ಆದ್ದರಿಂದ ಸಮುದಾಯ ಇಂಥ ನ್ಯೂನತೆಯುಳ್ಳ ಮಕ್ಕಳನ್ನು ಇತರ ಮಕ್ಕಳಂತೆಯೇ ಎಂದು ಪರಿಗಣಿಸಿ ಅವರೊಡನೆ ಸಹಜ ರೀತಿಯಲ್ಲಿಯೇ ನಡೆಸಿಕೊಳ್ಳಬೇಕಾದುದು ಆವಶ್ಯಕ. ಸವಾಲುಳ್ಳ ಮಕ್ಕಳ ಪೋಷಕರಿಗೆ ಆ ಮಕ್ಕಳನ್ನು ಸಾಮಾಜಿಕ ಪರಿಸ್ಥಿತಿಗಳಲ್ಲಿ ನಿರ್ವಹಣೆ ಮಾಡಲು ಸಮುದಾಯ ಸದಸ್ಯರ ಮುಕ್ತ ಮನಸ್ಸು, ಸಹಕಾರ, ಸಹಯೋಗ ಬೇಕಾಗುತ್ತದೆ. ಈ ದಿಶೆಯಲ್ಲಿ ಸಮುದಾಯ ಸವಾಲುಳ್ಳ ಮಕ್ಕಳ ನಿರ್ವಹಣೆಯಲ್ಲಿ ಪೋಷಕರಿಗೆ ಸಾಧ್ಯವಾದಷ್ಟು ಸಹಾಯ ಮಾಡಲು ಮುಂದಾಗಬೇಕು. ಅವಶ್ಯಕತೆ ಬಿದ್ದಾಗ ಅಂಥ ಮಕ್ಕಳನ್ನು ಪೋಷಕರು ಹೊರಗೆ ಹೋದಾಗ ನೋಡಿಕೊಳ್ಳುವುದು, ಪರಿಸರದಲ್ಲಿ ಓಡಾಡುವಾಗ ಅವರ ಮೇಲೆ ನಿಗಾ ಇಡುವುದು, ಸಾಮಾಜಿಕ ಸಮಾರಂಭಗಳಲ್ಲಿ ಅಂತಹ ಮಕ್ಕಳೊಡನೆ ಪ್ರೀತಿ, ಸೌಜನ್ಯತೆಯಿಂದ ವರ್ತಿಸುವುದು, ಸಮುದಾಯದ ಇತರ ಮಕ್ಕಳೊಡನೆ ಆಟಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವುದು ಈ ರೀತಿಯ ಸಹಾಯ ನೀಡಬಹುದು.

ಸಮುದಾಯದ ವಿದ್ಯಾವಂತ ಸದಸ್ಯರು-ಅಧ್ಯಾಪಕರು, ವೈದ್ಯರು ಮತ್ತು ಇತರ ಉದ್ಯೋಗಿಗಳು ಸವಾಲುಳ್ಳ ಮಕ್ಕಳಿಗೆ ಸರ್ಕಾರ/ಸರ್ಕಾರೇತರ ಸಂಸ್ಥೆಗಳಿಂದ ದೊರೆಯುವ ಸವಲತ್ತುಗಳ ವಿವರಗಳನ್ನು ಆ ಮಕ್ಕಳ ಪೋಷಕರಿಗೆ ತಿಳಿಸಬಹುದು. ಈ ಸವಲತ್ತುಗಳ ಪ್ರಯೋಜನ ಪಡೆಯಲು ಬೇಕಾದ ಸಲಹೆ ಸೂಚನೆಗಳನ್ನು ಕೊಡಬಹುದು. ವೈದ್ಯರು ಅವಕಾಶವಾದಾಗ ಸವಾಲುಳ್ಳ ಮಕ್ಕಳ ವೈದ್ಯಕೀಯ ಪರೀಕ್ಷೆ ಮಾಡಿ, ಚಿಕಿತ್ಸೆಗೆ ಸಹಾಯ ಮಾಡಬಹುದು. ಶಿಕ್ಷಕರು ಮತ್ತು ಇತರ ವಿದ್ಯಾವಂತರು ಮಕ್ಕಳಿಗೆ ಶಿಕ್ಷಣ ನೀಡಬಹುದು. ಇಂತಹ ಸಹಾಯಗಳಿಂದ ಪೋಷಕರ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಸಮುದಾಯದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ (ನೃತ್ಯ, ಸಂಗೀತ, ನಾಟಕ, ಸಾರ್ವಜನಿಕ ಆಟಗಳು ಇತ್ಯಾದಿ) ಸವಾಲುಳ್ಳ ಮಕ್ಕಳಿಗೂ ಸಾಮಾನ್ಯ ಮಕ್ಕಳಷ್ಟೇ ಅವಕಾಶ ನೀಡಬೇಕು. ಈ ಮಕ್ಕಳು ಸಾಮಾನ್ಯ ಮಕ್ಕಳೊಂದಿಗೆ ಬೆರೆತಷ್ಟು ಅವರಿಗೆ ತಮ್ಮ ನ್ಯೂನತೆಯ ಬಗ್ಗೆ ಗಮನ ಕಡಿಮೆಯಾಗಿ ಅವರ ಆತ್ಮವಿಶ್ವಾಸ ಹೆಚ್ಚಾಗುತ್ತದೆ.

ಸಮನ್ವಯ ಶಿಕ್ಷಣದಡಿಯಲ್ಲಿ ಮಕ್ಕಳಿಗೆ ವೈದ್ಯಕೀಯ ಮತ್ತು ಶೈಕ್ಷಣಿಕ ಅಗತ್ಯಗಳನ್ನು ಶಾಲೆಗಳಲ್ಲಿ ಪೂರೈಸಬೇಕಾದರೆ ಸಮುದಾಯದ ಬೆಂಬಲ ಅತಿ ಅವಶ್ಯವಾಗಿದೆ. ಅಂದರೆ ಶಿಕ್ಷಣ ಇಲಾಖೆ, ಪ್ರಾಥಮಿಕ ಆರೋಗ್ಯ ಘಟಕಗಳು, ಅಂಗನವಾಡಿ ಕೇಂದ್ರಗಳು, ಗ್ರಾಮ ಶಿಕ್ಷಣ ಸಮಿತಿ, ಪಂಚಾಯಿತಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಲಯನ್ಸ್ ಮತ್ತು ರೋಟರಿ ಸಂಸ್ಥೆಗಳು ಇತ್ಯಾದಿ ಇವರೆಲ್ಲರ ಪರಸ್ಪರ ಸಹಕಾರ, ಸಮನ್ವಯ ಶಿಕ್ಷಣಕ್ಕೆ ಪೂರಕವಾಗಿರುತ್ತದೆ.

- ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸವಾಲುಳ್ಳ ಮಕ್ಕಳ ಶಿಕ್ಷಣ ಮತ್ತು ಕ್ಷೇಮಪಾಲನೆಗೆ ಹತ್ತು ಹಲವಾರು ಯೋಜನೆಗಳನ್ನು ರೂಪಿಸಿವೆ. ಸಮನ್ವಯ ಶಿಕ್ಷಣ ಯೋಜನೆಯಡಿಯಲ್ಲಿ ಬರುವ ಕಾರ್ಯಕ್ರಮಗಳು ಮತ್ತು ದೊರೆಯುವ ಸೌಲಭ್ಯಗಳನ್ನು ಸವಾಲುಳ್ಳ ಮಕ್ಕಳಿಗೆ ಸಮುದಾಯದ ಮೂಲಕವೇ ತಲುಪಿಸಬೇಕಾಗುತ್ತದೆ.

- ಸಮುದಾಯವು ಸವಾಲುಗಳನ್ನೆದುರಿಸುವ ಮಕ್ಕಳ ಜೀವನದ ಗುರಿ ಸಾಧನೆಗಾಗಿ ಯಾವುದೇ ರೀತಿಯಾಗಿ ಭೇದ-ಭಾವ ಮಾಡದೆ, ಜಾತಿ, ಮತ, ಕೋಮುಗಳಿಗೆ ಮಿತಿಯಾಗಿಸದೆ ಅವರನ್ನು ಎಲ್ಲರಂತೆ ಬದುಕಲು ಪ್ರೇರೇಪಿಸಬೇಕು.

- ಸಮುದಾಯದ ಸಹಕಾರ ಪ್ರೋತ್ಸಾಹದಿಂದ ಸರ್ಕಾರಗಳಿಂದ ಸಿಗುವ ಸೌಲಭ್ಯಗಳನ್ನು ಕೇವಲ ದಾಖಲೆ ರೂಪದಲ್ಲಿಡದೆ ಅವುಗಳನ್ನು ಫಲಾನುಭವಿಗಳಾದ ಮಕ್ಕಳಿಗೆ ನೀಡುವ ಮೂಲಕ ಕಾರ್ಯಗತಗೊಳಿಸಬೇಕು.

- ಸಮುದಾಯದ ಸಹಭಾಗಿತ್ವದಿಂದ ಆ ಮಕ್ಕಳ ನೈಜ ಸ್ಥಿತಿಗತಿ ಬೆಳಕಿಗೆ ಬರಲು ಸಾಧ್ಯ. ಅದರಲ್ಲಿ ಸಮುದಾಯದ ಸಕ್ರಿಯ ಪಾತ್ರ ಅಗತ್ಯ ಮತ್ತು ಅಪೇಕ್ಷಣೀಯ.

- ಸಮುದಾಯ ಎಂದರೆ ಜನರು. ಸರ್ಕಾರ ಕೊಟ್ಟ ಸೌಲಭ್ಯಗಳನ್ನು ಆ ಮಕ್ಕಳು ನೈಜವಾಗಿ ಅನುಭವಿಸಿದಲ್ಲಿ ಮಾತ್ರ ಅದಕ್ಕೊಂದು ಅರ್ಥವಿರುತ್ತದೆ ಮತ್ತು ಸವಾಲುಗಳನ್ನೆದುರಿಸುವ ಛಲ ಹಾಗೂ ಸಾಧನೆಯ ಹಾದಿ ಆ ಮಕ್ಕಳಿಗೆ ಸುಗಮವಾಗುತ್ತದೆ ಮತ್ತು ಸಮಾಜದಲ್ಲಿ ಎಲ್ಲರಂತೆ ಬದುಕು ರೂಪಿಸಲು ಸಾಧ್ಯವಾಗುತ್ತದೆ.

ಸಮುದಾಯದ ಅಂಗಗಳೇ ಆದ ಪೋಷಕರು ಸವಾಲುಳ್ಳ ಮಕ್ಕಳ ನಿರ್ವಹಣೆ ಮತ್ತು ಶಿಕ್ಷಣದಲ್ಲಿ ಮಹತ್ವಪೂರ್ಣ ಪಾತ್ರ ವಹಿಸಬೇಕಾಗುತ್ತದೆ.

**ಪೋಷಕರ ಪಾತ್ರ;** "ಮನೆಯೇ ಮೊದಲ ಪಾಠಶಾಲೆ. ಜನನಿ ತಾನೇ ಮೊದಲಗುರು" ಎಂಬಂತೆ ಕುಟುಂಬವು ಮಗುವಿನ ವ್ಯಕ್ತಿತ್ವ ರೂಪಿಸುವ ಪ್ರಾಥಮಿಕ ಅಂಗ. ಸಮಾಜದ ನಿಯೋಗಗಳಲ್ಲಿ ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ತನ್ನದೇ ಆದ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.

ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪೋಷಕರ ಪಾತ್ರ ಅತಿ ಮಹತ್ವವುಳ್ಳದ್ದಾಗಿದೆ. ಪೋಷಕರು ತಮ್ಮ ಮಕ್ಕಳ ನ್ಯೂನತೆಗಳನ್ನು ಒಪ್ಪಿಕೊಳ್ಳಬೇಕು ಹಾಗೂ ಮಕ್ಕಳಿಗೆ ಪ್ರಾರಂಭದಲ್ಲೇ ವೈದ್ಯಕೀಯ ಮತ್ತು ಶೈಕ್ಷಣಿಕ ಅಗತ್ಯಗಳನ್ನು ಪೂರೈಸಬೇಕು. ಶಾಲೆಯ/ಶಿಕ್ಷಕರೊಂದಿಗೆ ಅವರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ನಿಕಟವಾಗಿ ಕಾರ್ಯನಿರ್ವಹಿಸಬೇಕು.

ದೈಹಿಕ, ಮಾನಸಿಕ ನ್ಯೂನತೆಗಳನ್ನು ಸವಾಲಾಗಿ ಎದುರಿಸುವ ಮಕ್ಕಳಿಗೆ ಪೋಷಕರ ಪ್ರೋತ್ಸಾಹದಾಯಕ ಪೋಷಣೆ ಅಗತ್ಯ. ಅಂತಹ ಮಕ್ಕಳಿಗಾಗಿ ಸರ್ಕಾರ ಒದಗಿಸುವ ಸೌಲಭ್ಯಗಳನ್ನು ತಿಳಿದುಕೊಂಡು ಒದಗಿಸುವ ಪ್ರಯತ್ನ ಮಾಡಬೇಕು. ಅವರ ಕಲಿಕೆಯಲ್ಲಿನ ದೋಷಗಳನ್ನು ಪರಿಹರಿಸಿ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಧೈರ್ಯ, ಆತ್ಮ ವಿಶ್ವಾಸ ಬೆಳೆಸಬೇಕು. ಕಾಲಕಾಲಕ್ಕೆ ಆ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆಗಳನ್ನು ಕೊಡಿಸಿ ಅವರ ಆರೋಗ್ಯವನ್ನು ಎಚ್ಚರಿಕೆಯಿಂದ ಕಾಪಾಡಬೇಕು. ಅಂತಹ ಮಕ್ಕಳಿಗೆ ಜೀವನದಲ್ಲಿ ಜಿಗುಪ್ಸೆ ಮನೋಭಾವನೆ ಬಾರದಂತೆ ಅವರಿಗೆ ಆಸಕ್ತಿಯುತ ಕ್ಷೇತ್ರಗಳನ್ನು ಆಯ್ದುಕೊಂಡು ಸಾಧನೆಯತ್ತ ಮುನ್ನುಗ್ಗಲು

Digitised by Bharatavani, CIIL

ಸಹಾಯ ಕಲ್ಪಿಸಿಕೊಡಬೇಕು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿವಿಧ ಸಂಘ ಸಂಸ್ಥೆಗಳು ನೀಡುವಂತಹ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಅವರ ಕೊರತೆಗಳನ್ನು ನೀಗಿಸಲು ಪ್ರಯತ್ನಿಸಬೇಕು. ಪೋಷಕರು ಆ ಮಕ್ಕಳೊಂದಿಗೆ ದಿನವೆಲ್ಲ ಇರುವುದರಿಂದ ಕೊರತೆ ತೊಂದರೆ ಎಲ್ಲಿದೆ ಎಂಬುದನ್ನು ಅರಿತು ಅದಕ್ಕೆ ಸೂಕ್ತ ಪರಿಹಾರ ಒದಗಿಸಬೇಕು. ಆ ಮಕ್ಕಳನ್ನು ಅಲಕ್ಷಿಸಬಾರದು. ಇಂತಹ ಮಕ್ಕಳನ್ನು ಇತರ ಮಕ್ಕಳೊಂದಿಗೆ ಹೋಲಿಸಿ ತುಲನೆ ಮಾಡಿ ನಿನ್ನ ಸಾಧನೆ ಕಡಿಮೆ ಎಂದು ಹೀಯಾಳಿಸುವುದು, ಅವರ ಸಾಮರ್ಥ್ಯಕ್ಕೂ ಮೀರಿದ ಅಪೇಕ್ಷೆ ಬಯಸುವುದು ಪೋಷಕರಿಂದಾಗುವ ಪ್ರಮಾದವಾಗುತ್ತದೆ. ಶಿಕ್ಷಕರೊಂದಿಗೆ ಚರ್ಚಿಸಿ ಮಗುವಿನ ದಿನಚರಿಯನ್ನು ಕಾಲಕಾಲಕ್ಕೆ ಪರಿಶೀಲಿಸಬೇಕಾಗುತ್ತದೆ.

–ಹೂ.ಎಸ್.ಎಸ್.

## ಸವಾಲುಳ್ಳ ಮಕ್ಕಳಿಗೆ (ವಿಶೇಷ ಅಗತ್ಯವುಳ್ಳ ಮಕ್ಕಳಿಗೆ) ವೃತ್ತಿ ಶಿಕ್ಷಣ

ಸಮಾಜದ ಬೆಳವಣಿಗೆ/ಅಭಿವೃದ್ಧಿಗೆ ತಮ್ಮ ಕೈಲಾದ ಕೊಡುಗೆಯನ್ನು ನೀಡುವಂತೆ ವಿದ್ಯಾರ್ಥಿಗಳನ್ನು ತಯಾರಿಸುವುದು ಶಿಕ್ಷಣದ ಮೂಲ ಉದ್ದೇಶಗಳಲ್ಲಿ ಒಂದಾಗಿದೆ. ಇದಕ್ಕಾಗಿ ಶಾಲೆ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ವೃತ್ತಿಯೊಂದನ್ನು ಆರಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತದೆ. ಆ ವೃತ್ತಿಗೆ ಪೂರಕವಾಗಿ ಶಾಲಾ ವಯಸ್ಸಿನಲ್ಲೇ ನಿರ್ದಿಷ್ಟ ಕೌಶಲಗಳನ್ನು ಅಭಿವೃದ್ಧಿಪಡಿಸಲು ವೃತ್ತಿ ಶಿಕ್ಷಣವನ್ನು ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ವಿಶೇಷ ಶಿಕ್ಷಣದ ಪಾತ್ರ ಮಹತ್ವದ್ದು.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕೌಟುಂಬಿಕ ವೃತ್ತಿಯನ್ನೇ ಮಕ್ಕಳಿಗೆ ಕಲಿಸುವುದು ಅನಾದಿ ಕಾಲದಿಂದಲೂ ನಡೆದು ಬಂದ ಸಂಪ್ರದಾಯ. ಇದು ವಿಶೇಷ ಅಗತ್ಯವಿರುವ ಮಕ್ಕಳಿಗೂ ಅನ್ವಯವಾಗಬಹುದು. ಹಿಂದಿನ ಕಾಲದಲಿ ತಮ್ಮ ವೃತ್ತಿಗೆ ಬೇಕಾದ ತರಬೇತಿಯನ್ನು ಚಿಕ್ಕಂದಿನಿಂದಲೇ ಮನೆಯ ಹಿರಿಯರು ಮಕ್ಕಳಿಗೆ ಕಲಿಸಿ ಅವರನ್ನು ಸ್ವಾವಲಂಬಿಗಳಾಗಿ ಮಾಡುತ್ತಿದ್ದರು. ನಿಧಾನವಾಗಿ ಆದ ಸಾಮಾಜಿಕ ಬದಲಾವಣೆಯಿಂದಾಗಿ ಕೌಟುಂಬಿಕ ವೃತ್ತಿಯನ್ನು ತೊರೆದು ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಿ ಸ್ಪರ್ಧೆಗಿಳಿಯುವ ಮನೋಭಾವ ಮೂಡಿತು. ಕುಟುಂಬದ ವೃತ್ತಿಗೇ ಜೋತು ಬೀಳುವ ಬದಲಿಗೆ ಅವರವರ ಅಭಿರುಚಿ ಹಾಗೂ ಸಾಮರ್ಥ್ಯಕ್ಕೆ ತಕ್ಕುದಾದ ವೃತ್ತಿ ಬೆಳವಣಿಗೆ ಪ್ರತಿಯೊಬ್ಬನ ಹಕ್ಕು ಎಂಬ ಭಾವನೆ ಬೆಳೆಯಿತು. ಈ ಭಾವನೆಯನ್ನು ಬೆಂಬಲಿಸಿ ಸರಕಾರ ವಿಶೇಷ ಅಗತ್ಯವುಳ್ಳ ಮಕ್ಕಳಲ್ಲಿ ನಿರ್ದಿಷ್ಟ ವೃತ್ತಿಕೌಶಲವನ್ನು ಬೆಳೆಸಲು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿತು. ಸರಕಾರೇತರ ಸಂಸ್ಥೆಗಳೂ ಈ ದಿಸೆಯಲ್ಲಿ ತಮ್ಮ ಕೈಜೋಡಿಸಿದವು.

ವಿಶೇಷ ಅಗತ್ಯವುಳ್ಳ ಮಕ್ಕಳ ಸಾಮರ್ಥ್ಯವನ್ನು ತಿಳಿದುಕೊಳ್ಳುವುದು ಸ್ವಲ್ಪ ಕಷ್ಟ. ಅವರ ಸಾಮರ್ಥ್ಯ ಹೊರಸೂಸಲು ಅವಕಾಶ ಬೇಕು. ಅವರಿಗೆ ಸೂಕ್ತವಾದ ಕಾರ್ಯಕ್ರಮಗಳನ್ನು ವೃತ್ತಿ ಶಿಕ್ಷಣದಲ್ಲಿ ಸೇರಿಸಬೇಕು.

ವಿಶೇಷ ಅಗತ್ಯವುಳ್ಳ ಮಕ್ಕಳ ವೃತ್ತಿ ಶಿಕ್ಷಣಕ್ಕಾಗಿ ಹಲವಾರು ಪುನರ್ವಸತಿ ಕೇಂದ್ರಗಳನ್ನು ಭಾರತ ಸರಕಾರ ಸ್ಥಾಪಿಸಿದೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವರ ಅಂಗವಿಕಲತೆಯನ್ನು ಗಮನದಲ್ಲಿಟ್ಟು ಕೊಂಡು, ಅವರ ಸಾಮರ್ಥ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಸರಕಾರೇತರ ಸಂಸ್ಥೆಗಳು ವೃತ್ತಿ ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿವೆ. ಹೀಗಾಗಿ ಇತ್ತೀಚೆಗೆ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅನೇಕ ಉದ್ಯೋಗ ಅವಕಾಶಗಳು ಸಿಗುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಗವಿಕಲರಿಗೆ ಉದ್ಯೋಗಗಳಲ್ಲಿ ಸ್ಥಾನಗಳನ್ನು ಕಾಯ್ದಿರಿಸಲು ಕಾನೂನುಗಳನ್ನು ಜಾರಿಗೊಳಿಸಿವೆ. ವೃತ್ತಿ ಶಿಕ್ಷಣದಲ್ಲಿ ತರಬೇತಿ ನೀಡಬೇಕಾದ ಮೂಲ ಕ್ಷೇತ್ರಗಳು ಆರ್ಥಿಕ ಸ್ವಾವಲಂಬನೆಗಾಗಿ ವಿಶೇಷ ಅಗತ್ಯವುಳ್ಳ ಮಕ್ಕಳು ತಮ್ಮ ಸಾಮಾಜಿಕ ಹಾಗೂ ವೈಯಕ್ತಿಕ ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಂತೆ ಈ ಕೆಳಗಿನ ಪ್ರಮುಖ ಕ್ಷೇತ್ರಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಸಂವಹನ ಕೌಶಲ – ತಮ್ಮ ಸುತ್ತಲಿನ ಸಹೋದ್ಯೋಗಿಗಳ ಜೊತೆ ಸಂಪರ್ಕವಿರಿಸಿಕೊಳ್ಳುವಂತೆ ವಿಶೇಷ ಅಗತ್ಯವುಳ್ಳ ಮಕ್ಕಳು ತಮ್ಮ ಸಂವಹನ ಕೌಶಲವನ್ನು ಉತ್ತಮಪಡಿಸಿಕೊಳ್ಳಲು ಈ ತರಬೇತಿ ಸಹಾಯಕ.

ಸಾಮಾಜಿಕ ಕೌಶಲ–ಔದ್ಯೋಗಿಕ ಕ್ಷೇತ್ರದಲ್ಲಿ ಎಲ್ಲರೊಂದಿಗೆ ಬೆರೆತು ಕೆಲಸ ಮಾಡಲು ವೃತ್ತಿ ಶಿಕ್ಷಣದಲ್ಲಿ ಕೆಲವೊಂದು ವಿಶಿಷ್ಟ ತರಬೇತಿ ನೀಡಲಾಗುತ್ತದೆ. ತನ್ನ ವೃತ್ತಿ ಜೀವನದಲ್ಲಿ ತೃಪ್ತಿಯಿಂದಿರಲು ಮತ್ತು ಎಲ್ಲರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಕಲಿಸುವುದೇ ಈ ತರಬೇತಿ ಉದ್ದೇಶ.

ತಾಂತ್ರಿಕ ಕೌಶಲ –ಎಲ್ಲ ವೃತ್ತಿ ಶಿಕ್ಷಣಕ್ಕೂ ಮೂಲ ಕೌಶಲವಾಗಿ ಇಂದು ಗಣಕಯಂತ್ರ ಉಪಯೋಗಿಸುವ ಕೌಶಲಗಳನ್ನು ಕಲಿಸಲಾಗುತ್ತದೆ. ಜೊತೆಗೆ ನಿರ್ದಿಷ್ಟ ವೃತ್ತಿಗೆ ಅನುಗುಣವಾದ ತಾಂತ್ರಿಕ ಮಾಹಿತಿ, ಕೌಶಲಗಳನ್ನು ಕಲ್ಪಿಸಲಾಗುತ್ತದೆ.

ಶಾಲೆಯಪಾತ್ರ–ಪ್ರಸ್ತುತ ಶಿಕ್ಷಣ ನೀತಿಯಲ್ಲಿ ಓದು ಬರಹಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಇದರ ಜೊತೆಗೆ ಶಾಲೆ ವಿಶೇಷ ಅಗತ್ಯವುಳ್ಳ ಮಕ್ಕಳ ಸಾಮರ್ಥ್ಯದ ಕ್ಷೇತ್ರವನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಮಾಡುತ್ತದೆ. ಈ ಕೆಳಗಿನ ಅಂಶಗಳತ್ತ ಶಾಲೆಯು ಗಮನಹರಿಸಬೇಕು.

ಶಾಲೆಯ ಸೂಚನಾ ಫಲಕದಲ್ಲಿ ವೃತ್ತಿಯ ಬಗ್ಗೆ ವೃತ್ತಿ ಮಾಹಿತಿ ನೀಡುವುದು.

ಹೆಚ್ಚಿನ ವಿದ್ಯಾಭ್ಯಾಸದ ವಿವರಗಳನ್ನೊಳಗೊಂಡ ಕೈಪಿಡಿಗಳನ್ನು ಸಂಗ್ರಹಿಸಿ ಮಕ್ಕಳಿಗೆ ನೀಡುವುದು.

ವಿಶೇಷ ಅಗತ್ಯವುಳ್ಳ ವೃತ್ತಿ ತರಬೇತಿ ಸಂಸ್ಥೆಗಳಿಗೆ ಮಕ್ಕಳ ಭೇಟಿ ಏರ್ಪಡಿಸುವುದು.

ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಆಹ್ವಾನಿಸಿ ಶಾಲಾ ಮಕ್ಕಳಿಗೆ ಅವರೊಂದಿಗೆ ಸಂವಾದದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವುದು.

ಮಕ್ಕಳಲ್ಲಿ ಸುಪ್ತವಾಗಿರುವ ಸೃಜನಾತ್ಮಕ ಸಾಮರ್ಥ್ಯಗಳನ್ನು ಗುರುತಿಸುವುದು.,

ಮಕ್ಕಳ ವೃತ್ತಿ ಆಯ್ಕೆಯಬಗ್ಗೆ ಚರ್ಚಿಸಿ ಅದಕ್ಕೆ ಬೇಕಾದ ಕೌಶಲಗಳನ್ನು ಮತ್ತು ಜ್ಞಾನಾಂಶಗಳನ್ನು ಕಲಿಯಲು ಮಾರ್ಗದರ್ಶನ ನೀಡುವುದು.

ವೃತ್ತಿಯ ಆಯ್ಕೆ–ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವರ ನ್ಯೂನತೆಯ ವಿಧ ಮತ್ತು ಮಟ್ಟಕ್ಕೆ ಅನುಗುಣವಾಗಿ ಈ ಕೆಳಗಿನ ನಾಲ್ಕು ರೀತಿಯಲ್ಲಿ ಸೌಕರ್ಯವನ್ನೂ ಆಯ್ಕೆ ಮಾಡಿಕೊಳ್ಳಬಹುದು.

1. ಸ್ಪರ್ಧಾತ್ಮಕ ನೌಕರಿ (Competitive employment) ಎಲ್ಲ ಮಕ್ಕಳಂತೆ ಗುಂಪಿನಲ್ಲಿ ಸ್ಪರ್ಧಿಸಿ, ತನ್ನ ಸಾಮರ್ಥ್ಯಕ್ಕೆ ಸರಿ ಹೊಂದುವ ನೌಕರಿಯನ್ನು ಆರಿಸಿಕೊಳ್ಳಬಹುದು.

2. ಸ್ಥಿತ್ಯಂತರದ ನೌಕರಿ (Transitional employment) ಸ್ವಲ್ಪ ಅವಧಿವರೆಗೆ ಕೆಲಸಕ್ಕೆ ಸೇರಿ ತಾನೇ ಸ್ವತಃ ಮಾಡುವ ಹಂತಕ್ಕೆ ಬರುವವರೆಗೆ ಇತರರ ಮಾರ್ಗದರ್ಶನದಲ್ಲಿ ಕೆಲಸ ಮಾಡಿ ನಿಧಾನವಾಗಿ ಸ್ವತಃ ಕಾರ್ಯ ನಿರ್ವಹಿಸುವುದು.

Digitised by Bharatavani, CIIL

3. ಬೆಂಬಲಿತ ನೌಕರಿ (Supported employment) ವೃತ್ತಿ ಜೀವನ ದ್ದುದ್ದಕ್ಕೂ ಇತರರ ಸಹಾಯದೊಂದಿಗೆ ಕೆಲಸ ಮಾಡುವುದು.
4. ಆಶ್ರಯದಲ್ಲಿ ನೌಕರಿ (Sheltered employment) ತೀವ್ರ ಮಟ್ಟದಲ್ಲಿ ನ್ಯೂನತೆಯಿದ್ದರೆ, ಕೆಲಸದ ಸ್ಥಳದಲ್ಲಿ ಮಾರ್ಪಾಡುಗಳನ್ನು ಮಾಡಿ, ಮೇಲ್ವಿಚಾರಕರ ಗಮನದಲ್ಲಿ ಪೂರ್ತಿಇದ್ದು, ಕಾರ್ಯನಿರ್ವಹಿಸುವುದು.

–ಗೌ.ಐ.ಪಿ.

## ಸರ್ವೋದಯ ಆಂದೋಲನ ಮತ್ತು ಶಿಕ್ಷಣ

ಆಚಾರ್ಯ ವಿನೋಬಾಭಾವೆಯವರು ರಾಜಕಾರಣಿಯಾಗಿ, ಸಮಾಜ ಸುಧಾರಕರಾಗಿ, ದಾರ್ಶನಿಕರಾಗಿ, ತತ್ವಜ್ಞಾನಿಯಾಗಿ, ಸತ್ಯಾನ್ವೇಷಿಯಾಗಿ ಪ್ರಸಿದ್ಧಿ ಹೊಂದಿದವರು ಶ್ರೇಷ್ಠ ಶಿಕ್ಷಣತಜ್ಞರೂ ಆಗಿದ್ದರು. 1916ರಲ್ಲಿ ವಿನೋಬಾರವರು ಗಾಂಧೀಜಿಯವರ ಸಂಪರ್ಕದಲ್ಲಿ ಬಂದರು. ಅಂದಿನಿಂದ ಅವರ ಅನುಯಾಯಿಯಾದರು. 1940ರಲ್ಲಿ ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಸ್ವಾತಂತ್ರ್ಯದ ನಂತರ ಅವರು ಯಾವುದೇ ಉನ್ನತ ಹುದ್ದೆಗಾಗಿ ಪ್ರಯತ್ನಿಸಲಿಲ್ಲ. ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುಂದುವರಿದು ಅವರ ಆದರ್ಶಗಳನ್ನು ಸಮಾಜದಲ್ಲಿ ಬೆಳೆಸುವ ಕಾರ್ಯವನ್ನು ಮುನ್ನಡೆಸಿದರು.

**ವಿನೋಬಾಭಾವೆ**

ಆಚಾರ್ಯ ವಿನೋಬಾಭಾವೆಯವರು ವ್ಯಕ್ತಿತ್ವವನ್ನು ಶ್ರೀಮಂತಗೊಳಿಸಲು ಮಾಡಿದ ಕಾರ್ಯಗಳು ಮತ್ತು ಆದರ್ಶಗಳು, ಅವರನ್ನು ಉನ್ನತ ಮಟ್ಟಕ್ಕೆ ಏರಿಸಿದವು. ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಬಗ್ಗೆ ಬೋಧಿಸಿದ ಅವರು ಸಮಾಜವಾದದ ಬಗ್ಗೆ ಒಂದು ಹೊಸ ಪರಿಕಲ್ಪನೆಯನ್ನು ನೀಡಿದರು.

ವಿನೋಬಾ ಭಾವೆಯವರು ಕ್ರಿ.ಶ. 1894ರ ಡಿಸೆಂಬರ್‌ನಲ್ಲಿ ಮಹಾರಾಷ್ಟ್ರದ ಚಿಕ್ಕ ಹಳ್ಳಿಯಲ್ಲಿ ಒಂದು ಧಾರ್ಮಿಕ ಕುಟುಂಬದಲ್ಲಿ ಜನಿಸಿದರು. ಅವರ ಜೀವನದ ಪ್ರಾರಂಭದ ದಿನಗಳಲ್ಲಿ ನಿಸರ್ಗ ಸೌಂದರ್ಯ ಮತ್ತು ಕುಟುಂಬದ ಪರಿಸರದಿಂದ ಪ್ರಭಾವಿತರಾದರು. ಸ್ವಾಮಿ ಶಂಕರಾಚಾರ್ಯ ಮತ್ತು ಸಮರ್ಥ ಗುರು ರಾಮದಾಸ ಅವರ ಆದರ್ಶಗಳಿಂದ ಸಂಪ್ರದಾಯ ಮತ್ತು ಭಕ್ತಿ ಪೂರ್ವಕ ಜೀವನ ನಡೆಸಿದರು. ವಿನೋಬಾ ಅವರು ಇಡೀ ಜೀವನವನ್ನು ಜನರ ಸೇವೆಗಾಗಿ ಮುಡಿಪಾಗಿಡಲು ಮತ್ತು ಅವಿವಾಹಿತವಾಗಿರಲು ನಿರ್ಧರಿಸಿದರು. ಕ್ರಿ.ಶ. 1905ರ ಬಂಗಾಳ ವಿಭಜನೆ ಇವರ ಮೇಲೆ ಅಗಾಧವಾದ ಪರಿಣಾಮ ಬೀರಿತು. ಅವರು ತಮ್ಮ ಮನೆಯನ್ನು ಬಿಟ್ಟು ತಮ್ಮ ಜೀವನವನ್ನು ದೇಶ ಸೇವೆಗಾಗಿ ಮುಡಿಪಾಗಿಟ್ಟರು. ವಿನೋಬಾ ಭಾವೆ ಅವರು ಮಹಾತ್ಮ ಗಾಂಧೀಜಿಯವರ ಅನುಯಾಯಿ ಆಗಿ 1916ರಲ್ಲಿ ಗಾಂಧೀಜಿಯವರೊಡನೆ ವಾಸಿಸಲು ಸಬರಮತಿ ಆಶ್ರಮಕ್ಕೆ ಹೋದರು. ಅವರು ಸತ್ಯಾಗ್ರಹದ ಸಮಯದಲ್ಲಿ ಅನೇಕ ಸಲ ಜೈಲು ಶಿಕ್ಷೆಗೂ ಒಳಗಾದರು ಸ್ವಾತಂತ್ರ್ಯ ಹೋರಾಟದಲ್ಲಿ ವಿನೋಬಾ ಅವರು ಸ್ವಾತಂತ್ರ್ಯ ಸಿಕ್ಕಾಗ ಯಾವುದೇ ಅಧಿಕಾರವನ್ನು ಬಯಸಲಿಲ್ಲ. ಅವರ ಜೀವನ ಅತ್ಯಮೂಲ್ಯ ಸೇವೆಯನ್ನು ಸಬರಮತಿ ಆಶ್ರಮಕ್ಕೆ ನೀಡಿದರು. ಮಹಾತ್ಮ ಗಾಂಧೀಜಿಯವರು ಮರಣದ ನಂತರ ಅವರು ಮಾಡುತ್ತಿದ್ದ ಅರ್ಧಕ್ಕೆ ನಿಂತ ಅನೇಕ ಕೆಲಸಗಳನ್ನು ಕೈಗೆತ್ತಿಕೊಂಡು ಮುಂದುವರೆಸಿದರು. ಇವರು ಭೂ ದಾನ, ಸರ್ವೋದಯ ಮತ್ತು ಸಾಮಾಜಿಕ ಬೆಳವಣಿಗೆಯ ಬಗ್ಗೆ ಹೇಳಿದ್ದಾರೆ.

ಸರ್ವೋದಯ ಎಂಬುದರ ಕಲ್ಪನೆ ಭಾರತಕ್ಕೆ ಹೊಸದಲ್ಲ. ಜೈನ ಧರ್ಮದ ಧಾರ್ಮಿಕ ಪುಸ್ತಕಗಳಲ್ಲಿ ಸರ್ವೋದಯ ಸಮಾಜವೆಂಬ ಹೆಸರಿನಡಿಯಲ್ಲಿ ವಿಚಾರಗಳನ್ನು ವ್ಯಕ್ತಪಡಿಸಲಾಗಿದೆ. ಆಧುನಿಕ ಯುಗದಲ್ಲಿ ಗಾಂಧೀಜಿಯವರು ಈ ತತ್ವದ ಬಗ್ಗೆ ಒತ್ತನ್ನು ನೀಡಿದವರಲ್ಲಿ ಮೊದಲಿಗರು. ವಿನೋಬಾ ಭಾವೆ ಅವರು ನೀಡಿದ ಸರ್ವೋದಯ ಪರಿಕಲ್ಪನೆಯು ಗಾಂಧೀಜಿಯವರ ವಿಚಾರದ ಆಧಾರವಾಗಿಯೇ ಇದ್ದರೂ ವಿನೋಬಾ ಭಾವೆಯವರು ಅದಕ್ಕೂ ಒಂದು ಹೊಸ ರೂಪವನ್ನು ಕೊಟ್ಟರು ಮತ್ತು ಅದನ್ನು ಚಳುವಳಿಯಾಗಿ ಪರಿವರ್ತಿಸುವಲ್ಲಿ ಸಫಲರಾದರು.

ಸರ್ವೋದಯೆಂಬ ಪದದ ಅರ್ಥವು ಅದರಲ್ಲಿಯೇ ಅಡಗಿದೆ. ಇದನ್ನು ಸರ್ವ (ಎಲ್ಲರ) ಉದಯ (ಹುಟ್ಟು ಅಥವಾ ಬೆಳವಣಿಗೆ) ಆದ್ದರಿಂದ ಸರ್ವೋದಯ ಎಂದರೆ ಎಲ್ಲರ ಬೆಳವಣಿಗೆ, ಎಲ್ಲರ ಪ್ರಗತಿ ಎಂಬ ಅರ್ಥವನ್ನು ಕೊಡುತ್ತದೆ. ಅಂದರೆ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸುವುದು ಎಂಬುದಾಗಿದೆ. ಸಮಾಜದ ಎಲ್ಲಾ ವರ್ಗದ ಜನರ ಸಮಾನತೆಯನ್ನು ಸರ್ವೋದಯ ತತ್ವವು ಒಳಗೊಂಡಿದೆ. ಮಾನವ ಜೀವನವು ನಿರಂತರವಾದ ಪ್ರವಾಸವಿದ್ದಂತೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ದೊರೆಯುವ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಮಾನ ಅವಕಾಶ ಹೊಂದಿದ್ದಾರೆ.

### ಸರ್ವೋದಯದ ವ್ಯಾಪ್ತಿ

ಸರ್ವೋದಯದ ವ್ಯಾಪ್ತಿಯು ಅದರ ಚಟುವಟಿಕೆಯ ಆಧಾರದ ಮೇಲೆ ನೋಡಿದರೆ ಬಹಳ ವಿಶಾಲವಾಗಿದೆ. ಇದು ಸಮಾಜ ಮತ್ತು ಸರಕಾರದ ಮೇಲೆ ಪ್ರಭಾವ ಬೀರುವ ಅಂಶಗಳು ಮತ್ತು ಎಲ್ಲರ ಪ್ರಗತಿಯನ್ನು ಒಳಗೊಂಡಿದೆ. ಸರ್ವೋದಯದ ತತ್ವವು ಸಮಾಜದಲ್ಲಿರುವ ಜಾತಿ ಮತ್ತು ವರ್ಗಭೇದ ಮತ್ತು ಇತರ ಸಮಾಜ ವಿರೋಧಿ ವಿಚಾರ ತೊಡೆದು ಹಾಕುವಲ್ಲಿ ತನ್ನ ಪಾತ್ರವನ್ನು ವಹಿಸಿದೆ. ಸರ್ವೋದಯದ ತತ್ವದ ಗುರಿ ಎಂದರೆ ಸಮಾಜ ಮತ್ತು ಸರಕಾರದ ನಡುವೆ ತಿಳುವಳಿಕೆಯ ಮತ್ತು ಸಂಬಂಧಗಳನ್ನು ಅರಿತುಕೊಳ್ಳುವ ಪ್ರಜಾಪ್ರಭುತ್ವ ಸರಕಾರ ನಿರ್ಮಾಣ ಮಾಡುವುದಾಗಿದೆ. ಸರ್ವೋದಯ ತತ್ವದ ವಿಚಾರಗಳು ನಿಸರ್ಗ ಮತ್ತು ಸಮಾಜದ ಉನ್ನತೀಕರಣಕ್ಕೆ ವಿಜ್ಞಾನದ ಕೊಡುಗೆ ಮತ್ತು ನಿಸರ್ಗದ ಪ್ರಶಂಸೆಗೆ ಜನರಲ್ಲಿ ನೈಸರ್ಗಿಕ ಸೌಂದರ್ಯ ಪ್ರಜ್ಞೆ ಬೆಳೆಸುವುದು. ಆದ್ದರಿಂದ ಸರ್ವೋದಯದ ತತ್ವವು ನಿಸರ್ಗದ ಅಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡಿದೆ.

ಇಡೀ ಸರ್ವೋದಯವೇ ಈ ಒಂದು ಹೇಳಿಕೆ ಮೇಲೆ ನಿಂತಿದೆ. "ಒಳ್ಳೆಯದನ್ನೇ ಮಾಡು. ಆಗ ನಿನಗೆ ಇತರರು ಒಳ್ಳೆಯದನ್ನೇ ಮಾಡುವರು".

ಇದು ಪ್ರತಿಯೊಬ್ಬರಿಗೂ ಒಳ್ಳೆಯದನ್ನೇ ಮಾಡಲು ಸ್ಫೂರ್ತಿ ನೀಡುತ್ತದೆ. ಸರ್ವೋದಯ ವಿಚಾರಗಳು ವ್ಯಕ್ತಿಯ ಸ್ವಾರ್ಥತೆಯನ್ನು ಮತ್ತು ಕೀಳರಿಮೆ ಭಾವನೆಯನ್ನು ಕಟುವಾಗಿ ಟೀಕಿಸುತ್ತದೆ. ಸರ್ವೋದಯದ ಮತ್ತೊಂದು ಗುರಿಯೆಂದರೆ ಕಲ್ಯಾಣ ಸಮಾಜವನ್ನು ನಿರ್ಮಾಣ ಮಾಡುವುದಾಗಿದೆ. ಭೂದಾನ ಮತ್ತು ಸಂಪತ್ತು ದಾನಗಳು ಸಮಾಜದಲ್ಲಿ ಆರ್ಥಿಕ ಅಸಮಾನತೆ ಹೋಗಲಾಡಿಸುವುದೇ ಇದರ ಉದ್ದೇಶವಾಗಿತ್ತು.

Digitised by Bharatavani, CIIL

ಗಾಂಧೀಜಿಯವರ ಮೂಲ ಶಿಕ್ಷಣವನ್ನು ವಿನೋಬಾ ಅವರು ತಮ್ಮದೇ ಆದ ರೀತಿಯಲ್ಲಿ ವಿವರಣೆ ನೀಡಿದ್ದಾರೆ. ವಿನೋಬಾ ಅವರು ಶಿಕ್ಷಣವನ್ನು ಎರಡು ಭಾಗಗಳಾಗಿ ವಿಂಗಡಿಸಿದರು. ಅವು ಆಂತರಿಕ ಶಿಕ್ಷಣ ಮತ್ತು ಬಾಹ್ಯ ಶಿಕ್ಷಣ.

**ಆಂತರಿಕ ಶಿಕ್ಷಣ :** ಆಂತರಿಕ ಶಿಕ್ಷಣವೆಂದರೆ ಒಬ್ಬ ವ್ಯಕ್ತಿಯ ಆಂತರಿಕ ಅಂದರೆ ಆತ್ಮವನ್ನು ಶುಚಿಯಾಗಿಡುವುದು ಮತ್ತು ಎಲ್ಲ ಜ್ಞಾನೇಂದ್ರಿಯಗಳ ಸರ್ವತೋಮುಖ ಬೆಳವಣಿಗೆಯನ್ನುಂಟು ಮಾಡುವಂತಹುದು.

**ಬಾಹ್ಯ ಶಿಕ್ಷಣವು** ಶಾಲೆ ಮತ್ತು ನಿಸರ್ಗದಿಂದ ವಿದ್ಯಾರ್ಥಿಗಳನ್ನು ಬೇರ್ಪಡಿಸುವುದೇ ಬಾಹ್ಯ ಶಿಕ್ಷಣ. ವಿನೋಬಾ ಭಾವೆ ಅವರ ಶೈಕ್ಷಣಿಕ ವಿಚಾರಧಾರೆಗಳು ಮೂಲತಃ ಅವರ ಸರ್ವೋದಯ ಕಲ್ಪನೆಯಲ್ಲಿ ಕಾಣುತ್ತೇವೆ. ಅವರು ಸಾಮಾಜಿಕ, ಆರ್ಥಿಕ ಮತ್ತು ಆಧ್ಯಾತ್ಮಿಕ ಅಂಶಗಳ ಶಿಕ್ಷಣದ ಮೇಲೆ ಒತ್ತನ್ನು ನೀಡಿದ್ದಾರೆ.

ವಿನೋಬಾಭಾವೆ ಅವರ ಪ್ರಕಾರ ಮೂಲ ಶಿಕ್ಷಣದ ಗುರಿ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿ ಮತ್ತು ಆಧುನಿಕ ಪದ್ಧತಿಯು ತೋರುತ್ತಿರುವ ಸಮಸ್ಯೆಗಳ ಪರಿಹಾರ. ಈ ಮೂಲ ಪರಿಹಾರ ಮೂಲ ಶಿಕ್ಷಣ ಪದ್ಧತಿ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯನ್ನು ಒಳಗೊಂಡಿದೆ.

ವಿನೋಬಾ ಅವರು ತಮ್ಮ ಜೀವನದ ಅನೇಕ ಅನುಭವಗಳಿಂದ ಶಿಕ್ಷಣದ ಬಗ್ಗೆ ಹೇಳಿದ್ದಾರೆ. ಅವರು ಸ್ವತಃ ತಾವೇ ವಿದ್ಯಾರ್ಥಿ ಮತ್ತು ಶಿಕ್ಷಕರಾಗಿ ಅನುಭವಿಸಿದ್ದಾರೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದರು. ಅವರು ತಮ್ಮ ಭೂದಾನ ಮತ್ತು ಗ್ರಾಮದಾನಗಳ ಬಗ್ಗೆ ಪ್ರಚಾರ ಮಾಡುವಾಗ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ಅವರು ಶಿಕ್ಷಕರ ಪಾತ್ರವನ್ನು ವಹಿಸಿದರು. ಅವರ ಜೀವನದ ಅನುಭವಗಳ ಮೇಲೆ ಉದ್ದೇಶಗಳು ರೂಪಿತವಾಗಿವೆ.

ವಿನೋಬಾ ಭಾವೆ ಅವರ ಶಿಕ್ಷಣದ ಮೊದಲ ಉದ್ದೇಶ ವಿದ್ಯಾರ್ಥಿಯನ್ನು ಕಡಿಮೆ ಸಮಯದಲ್ಲಿ ಸ್ವಾವಲಂಬಿಯನ್ನಾಗಿ ಮಾಡುವುದು. ವಿದ್ಯಾರ್ಥಿಯಲ್ಲಿ ಅತಿ ಕಡಿಮೆ ಅವಧಿಯಲ್ಲಿ ಅವನಿಗೆ ಸಾಧ್ಯವಾದಷ್ಟು ಸ್ವಂತ ದುಡಿಯುವುದರ ಮೂಲಕ ಗಳಿಸುವಂತೆ ಮಾಡುವುದು. ಅಸಮರ್ಥರಾದರೆ ಅವರು ಸಮಾಜಕ್ಕೆ ಉಪಯುಕ್ತವಾಗದೆ ಹೊರೆಯಾಗಿ ಪರಿಣಮಿಸುತ್ತಾರೆ. ಆರ್ಥಿಕ ಸ್ವಾವಲಂಬನೆಯು ಶಿಕ್ಷಣದ ಒಂದು ಮುಖ್ಯ ಉದ್ದೇಶವಾಗಿದೆ.

ಆರ್ಥಿಕ ಸ್ವಾವಲಂಬನೆಯ ಜೊತೆಗೆ ವಿದ್ಯಾರ್ಥಿ, ಸ್ವಕಲಿಕೆ, ಸ್ವಅನುಭವಗಳಿಂದ ಪ್ರಯೋಗಗಳಿಂದ ಕಲಿಕೆಯನ್ನು ಪ್ರೋತ್ಸಾಹಿಸಿದರು. ವಿದ್ಯಾರ್ಥಿಯು 15 ವರ್ಷಗಳವರೆಗೆ ಶಿಕ್ಷಕರ ಮೇಲೆ ಅವಲಂಬಿತರಾಗಿರುವುದು ಲಾಭದಾಯಕವಲ್ಲ ಎಂದಿದ್ದಾರೆ.

ವಿನೋಬಾ ಅವರ ಪ್ರಕಾರ 16ನೇ ವಯಸ್ಸಿನ ವಿದ್ಯಾರ್ಥಿ ಅವನಷ್ಟಕ್ಕೆ ಅವನೇ ಸ್ವತಃ ಕಲಿಯಲು ಸಮರ್ಥನಾಗಿರಬೇಕು. ಈ ಹಂತದಲ್ಲಿ ಅವನು ನಿಘಂಟು, ವ್ಯಾಕರಣ, ವಿಶ್ವಕೋಶ ಮತ್ತು ಇತರ ಮಾರ್ಗದರ್ಶಿ ಪುಸ್ತಕಗಳ ಉಪಯೋಗ ತಿಳಿದಿರಬೇಕು. ಅದೇ ರೀತಿ ನಕಾಶೆ ಮತ್ತು ಚಾರ್ಟ್‌ಗಳ ಬಗ್ಗೆ ತಿಳಿದಿರಬೇಕು. ಈ ಹಂತದಲ್ಲಿ ಬೇರೆ ಭಾಷೆಗಳನ್ನು ತನ್ನ ಸ್ವಂತ ಪ್ರಯತ್ನಗಳಿಂದ ಕಲಿಯಬೇಕು. ಜಗತ್ತಿನ ಬಗ್ಗೆ ಅವನು ಜ್ಞಾನವನ್ನು ತಾನೇ ಹೆಚ್ಚಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಶಾಲೆಯಲ್ಲಿ ಅನೇಕ ವಿಷಯಗಳನ್ನು ಕಲಿಯುತ್ತಾರೆ. ಆದರೆ ಒಂದು ಭಾಷೆಯನ್ನು ಎಷ್ಟು ಪರಿಪೂರ್ಣತೆಯಿಂದ ಕಲಿಸಬೇಕೆಂದು ಒಂದು ಭಾಷೆಯಲ್ಲಿ ಕಂಡ ತತ್ವಗಳನ್ನು ಬೇರೆ ಭಾಷೆ ಅಥವಾ ವಿಷಯಗಳನ್ನು ಕಲಿಯುವಾಗ ಅನುಕೂಲವಾಗಬೇಕು ಹೀಗೆ ಪ್ರತಿಯೊಬ್ಬರೂ ಸ್ವಕಲಿಕೆಯಲ್ಲಿ ಸಾಮರ್ಥ್ಯ ಹೊಂದಿದವರಾಗಿರಬೇಕು.

ಶಿಕ್ಷಣ ಯಾವಾಗಲೂ ವೈಯಕ್ತಿಕ ಉದ್ದೇಶ ಮತ್ತು ಸಾಮಾಜಿಕ ಉದ್ದೇಶವನ್ನು ಹೊಂದಿರುತ್ತದೆ. ವೈಯಕ್ತಿಕ ಉದ್ದೇಶ ಎಂದರೆ ಮೊದಲನೇ ಉದ್ದೇಶದಲ್ಲಿ ಕಲಿತಂತೆ, ಸ್ವಯಂ ಕಲಿಕೆ ಮತ್ತು ಸಾಮಾಜಿಕ ಉದ್ದೇಶ ಎಂದು ಕೇವಲ ಒಂದು ದೇಶವನ್ನಲ್ಲ ಇಡೀ ವಿಶ್ವವನ್ನೇ ಭಯದ ವಾತಾವರಣದಿಂದ ಹೊರದೂಡುವುದು. ವಿನೋಬಾ ಅವರು ನಮ್ಮ ಮುಂದಿರುವ ಮಹತ್ ಕಾರ್ಯ ಎಂದರೆ ಈ ಗುರಿಗಳನ್ನು ಸಾಧನೆ ಮಾಡುವುದು ಎಂದು ವಿಚಾರ ಮಾಡುತ್ತಿದ್ದರು. ಪ್ರೀತಿ ಮತ್ತು ಶಾಂತಿಯನ್ನು ಯಾವುದು ಬಲಗೊಳಿಸುತ್ತಿದೆಯೋ ಅದುವೇ ನಿಜವಾದ ಶಿಕ್ಷಣ ಮತ್ತು ರಕ್ಷಣೆ ಪೋಲೀಸ್ ಎರಡು ಬೇರೆ ಬೇರೆ ವಿಭಾಗಗಳಾಗಿ ಮಾಡದೇ ದೇಶದ ರಕ್ಷಣೆಗಾಗಿ ಶಿಕ್ಷಣ ಮತ್ತು ನಾವು ನಿಜವಾಗಿಯೇ ಪೊಲೀಸ್ ಮತ್ತು ಸೈನಿಕರ ನಿರ್ವಹಣೆಗೆ ಮಾಡಲು ವೆಚ್ಚವನ್ನು ಕಡಿಮೆಗೊಳಿಸಿದರೆ ಮತ್ತು ಆ ರಕ್ಷಣಾ ಇಲಾಖೆಗೆ ನಾವು ನಮ್ಮ ದೇಶದ ಒಟ್ಟು ವರಮಾನದ ಇಲ್ಲವೇ ಅದು ವ್ಯಯದ ಅರ್ಧಭಾಗವನ್ನು ಖರ್ಚುಮಾಡುತ್ತಿದ್ದೇವೆ. ಇದನ್ನು ಭಾವೆಯವರು ಖಂಡಿಸಿದರು. ಅದನ್ನೇ ಶಿಕ್ಷಣದ ಮೇಲೆ ವ್ಯಯಮಾಡಿದರೆ ಗಣನೀಯ ಸಾಧನೆ ಮಾಡಬಹುದು.

ಭಾವೆ ಅವರ ಪ್ರಕಾರ ಮೂರನೇ ಉದ್ದೇಶ ಶಿಕ್ಷಣವನ್ನು ಕಲಿಕೆ ಮತ್ತು ಕೆಲಸವನ್ನು ಬೇರೆ ಬೇರೆಯಾಗಿ ಮಾಡದೆ ಒಟ್ಟಿಗೆ ಮಾಡುವಂತೆ ಅವಕಾಶ ಮಾಡಿಕೊಡುವುದು. ವಿದ್ಯಾರ್ಥಿಗಳು ಕೇವಲ ಪುಸ್ತಕಗಳಿಂದ ಜ್ಞಾನ ಪಡೆಯುತ್ತಾರೆ ಎಂದು ತಪ್ಪಾಗಿ ಭಾವಿಸಿದ್ದಾರೆ ಹಾಗೂ ಇದು ಕೇವಲ ಹಣ ಮತ್ತು ಸಮಯದ ಅಪವ್ಯಯವಾಗಿರುತ್ತದೇ ಹೊರತು ವಿದ್ಯಾರ್ಥಿಗಳು ನಿಜವಾಗಿ ಏನನ್ನೂ ಕಲಿಯುವುದಿಲ್ಲ. ವಿನೋಬಾ ಅವರ ಪ್ರಕಾರ ಪುಸ್ತಕದಿಂದ ಪಡೆದ ಜ್ಞಾನ ನಿಜವಾದ ಜ್ಞಾನ ಅಲ್ಲ, ಅವನ ಕೆಲಸದಿಂದ ಅನುಭವದಿಂದ ಪಡೆದುಕೊಂಡಿದ್ದು ನಿಜವಾದ ಜ್ಞಾನ.

ಸಮಾಜವನ್ನು ಕೆಲಸ ಮತ್ತು ಶಿಕ್ಷಣದ ಆಧಾರದ ಮೇಲೆ ವಿಂಗಡಿಸಿದರೆ ಅಲ್ಲಿ ಎರಡು ವರ್ಗಗಳು ಹುಟ್ಟಿಕೊಳ್ಳುತ್ತವೆ ಮತ್ತು ಅನೇಕ ಸಾಮಾಜಿಕ ಕೆಡಕುಗಳು ಹುಟ್ಟಿಕೊಳ್ಳುತ್ತವೆ ಅದರಲ್ಲಿ ಪ್ರಮುಖವಾಗಿ ಎರಡು ವರ್ಗಗಳು ಹುಟ್ಟಿಕೊಳ್ಳುತ್ತವೆ. ಒಂದು ಕೇವಲ ಕಲಿಕೆಯನ್ನು ಮಾಡಿದವರು ಇನ್ನೊಂದು ವರ್ಗ ಕೇವಲ ಕೆಲಸದ ಬಗ್ಗೆ ಕಲಿತವರು ಈಗ ಮೊದಲನೇ ವರ್ಗಕ್ಕೆ ದಿನಕ್ಕೆ 3 ರಿಂದ 4 ರೂ. ವೇತನ ನೀಡಿದರೆ ಎರಡನೇ ವರ್ಗಕ್ಕೆ ಸುಮಾರು 50–60 ರೂ. ವೇತನ ಪಡೆದುಕೊಳ್ಳುತ್ತಾರೆ. ಇದನ್ನು ಆರ್ಥಿಕ ಅಸಮಾನತೆ ಎನ್ನುವರು. ಇದನ್ನು ಭಾವೆ ಅವರು ಖಂಡಿಸಿದರು.

ಶಿಕ್ಷಣವು ಜೀವನವನ್ನು ಸಾಗಿಸುವ ಸರಿಯಾದ ಮಾರ್ಗವನ್ನು ಕಲಿಸುತ್ತದೆ ಎಂಬುದು ನಾಲ್ಕನೇ ಉದ್ದೇಶ. ಈ ಉದ್ದೇಶದ ಈಡೇರಿಕೆ ಆಗದೇ ಹೋದರೆ ಕಲ್ಯಾಣ ಸಮಾಜವನ್ನು ನಿರ್ಮಾಣ ಮಾಡುವುದು ಅಸಾಧ್ಯ ಎಂದು ವಿನೋಬಾ ಅವರು ನಂಬಿದ್ದರು. ಏನೆಂದರೆ ಅನೇಕ ಜನರು ನಿಸರ್ಗದಿಂದ ದೂರ ಹೋಗುತ್ತಿದ್ದಾರೆ. ಆದರೆ ನಿಜವಾದ ಪ್ರಶಾಂತತೆ ಮತ್ತು ಶಾಂತಿ ನಮ್ಮ ಜೀವನದಲ್ಲಿ ಪಡೆದುಕೊಳ್ಳಬೇಕಾದರೆ ನಾವು ಜೀವನದ ಪ್ರತಿ ಹಂತದಲ್ಲಿ ನಿಸರ್ಗದೊಂದಿಗೆ ಕಲಿಯಬೇಕು. ಪ್ರಕೃತಿಯ ನಿಯಮಗಳಿಗೂ ಮತ್ತು ಜೀವನದ ಪ್ರತಿ ಹಂತದಲ್ಲಿ ನಿಸರ್ಗದೊಂದಿಗೆ ಕಲಿಯಬೇಕು. ಪ್ರಕೃತಿಯ ನಿಯಮಗಳಿಗೂ ಮತ್ತು ಜೀವನದ ಮಾರ್ಗಗಳಿಗೂ ನೇರವಾದ ಸಂಬಂಧವಿದೆ. ಕೃಷಿ ಕೆಲಸಕ್ಕೆ ಪ್ರತಿಯೊಬ್ಬರು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಭೂಮಿಯಿಂದ

Digitised by Bharatavani, CIIL

ಸಂಬಂಧ ಹೊಂದಿರಬೇಕು ಎಂದರು. ಆದರೆ ಭಾವೆಯವರು ಇತರ ಕೆಲಸಗಳನ್ನು ಕಡೆಗಣಿಸಲಿಲ್ಲ. ಉಳಿದ ಜನರು ಇತರ ಉತ್ಪಾದಕ ಕಾರ್ಯಗಳಲ್ಲಿ ತೊಡಗುವಂತೆ ಸಲಹೆ ಮಾಡಿದರು. ಅವರ ಆರ್ಥಿಕ ಸ್ವಾವಲಂಬನೆ ಮತ್ತು ಕಾರ್ಯಗಳಲ್ಲಿ ತೊಡಗುವಂತೆ ಸಲಹೆ ಮಾಡಿದರು.

ವಿದ್ಯಾರ್ಥಿಗಳು ಅತಿ ಹೆಚ್ಚು ಸಮಯವನ್ನು ಶಾಲೆಯಲ್ಲಿಯೇ ಹಾಳು ಮಾಡುತ್ತಾರೆ ಎಂದು ವಾದಿಸಿದರು. ವಿದ್ಯಾರ್ಥಿಗಳು ಅಥವಾ ಮಕ್ಕಳೂ ಸತತ 5 ತಾಸುಗಳವರೆಗೆ ಕಲಿಸಿದರೆ ಅವರ ದೈಹಿಕ ಸಾಮರ್ಥ್ಯ ಕಡಿಮೆ ಇರುವುದರಿಂದ ಕಲಿಯುವುದೆ ಇಲ್ಲ ಮತ್ತು ಶಾಲೆಗಳಲ್ಲಿ ಕಲಿಸುವ ಶಿಕ್ಷಣ ನಿಜ ಜೀವನಕ್ಕೆ ಉಪಯುಕ್ತಕರವಾಗಿಲ್ಲ ಎಂದು ವಾದಿಸಿ ತಮ್ಮದೇ ಆದ ಒಂದು ಬೋಧನೆ ಸಿದ್ಧಾಂತ ಮಂಡಿಸಿದರು. ಮಕ್ಕಳು ದಿನದ ವೇಳೆಯಲ್ಲಿ ತಮ್ಮ ತಂದೆ ತಾಯಿಗಳಿಗೆ ಕೆಲಸದಲ್ಲಿ ಸಹಾಯ ಮಾಡುವುದರಿಂದ ಶಾಲೆಗೆ ಬರದೇ ಇರಬಹುದು.

ವಿನೋಬಾ ಭಾವೆಯವರು ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಒಂದು ತಾಸಿನ ಯೋಜನೆ ಜಾರಿಗೆ ತಂದರು. ಮಕ್ಕಳಿಗೆ ದಿನಕ್ಕೊಂದು ತಾಸು ಮಾತ್ರ ಪಾಠವನ್ನು ಬೋಧಿಸುವುದು. ಅದು ವಿಶೇಷವಾಗಿ ಬೆಳಗಿನ ಜಾವ ಸೂರ್ಯ ಉದಯಿಸುವಾಗ ಅಂತಹ ವಾತಾವರಣ ಶಾಂತವಾಗಿರುತ್ತದೆ. ಮಕ್ಕಳ ಮನಸ್ಸು ಹಗುರವಾಗಿರುತ್ತದೆ ಮತ್ತು ಅವರು ಯಾವುದೇ ಮಾನಸಿಕ ಒತ್ತಡಗಳಿಗೆ ಒಳಗಾಗಿರುವುದಿಲ್ಲ. ಕಲಿಸಿದ ವಿಷಯವನ್ನು ಬೇಗನೇ ಅರ್ಥ ಮಾಡಿಕೊಳ್ಳಬಲ್ಲರು ಮತ್ತು ಆ ಒಂದು ತಾಸಿನ ಬಳಿಕ ಅವರು ಯಾವುದೇ ಕೆಲಸ ಮಾಡಲು ಹೋಗಬಹುದು ಎಂಬ ಉದ್ದೇಶದಿಂದ ಇದನ್ನು ಜಾರಿಗೆ ತಂದರು.

ಈ ತಾಸಿನ ಯೋಜನೆಯನ್ನು ವಯಸ್ಕರಿಗೂ ನೀಡಲು ಭಾವೆಯವರು ಸಲಹೆ ನೀಡಿದರು. ಆದರೆ ವಯಸ್ಕರಿಗೆ ನೀಡಬೇಕಾದರೆ ಅವರ ಸಂಜೆಯ ಸಮಯದಲ್ಲಿ ಒಂದು ಘಂಟೆ ಪಾಠ ಹೇಳಿ ಕೊಡಬೇಕು ಇಲ್ಲವೇ ಈ ತರಗತಿಗೆ ಬೆಳಿಗ್ಗೆ ಕಲಿತ ಮಕ್ಕಳು ಮತ್ತೆ ಕಲಿಯಲು ಬರಬಹುದು. ಇದರಿಂದ ಅವರಿಗೆ ಹೆಚ್ಚಿಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ಅವರ ವಿಚಾರ. ಆದರೆ ಈಗಾಗಲೇ ಅವರು ಹೇಳಿದಂತೆ ಬೆಳಗಿನ ಜಾವ ಪಾಠ ನೀಡಿದರೆ ಗ್ರಹಿಕೆ ಜಾಸ್ತಿ. ಆದರೆ ಸಂಜೆಯ ಸಮಯದಲ್ಲಿ ಪಾಠ ಮಾಡಿದರೆ (ದಿನದ ವೇಳೆಯಲ್ಲಿ ಕೆಲಸ ಮಾಡಿರುವುದರಿಂದ ಅವರಿಗೆ ಆಯಾಸವಾಗಿರುವುದು ಸಹಜ) ಅವರು ಆಸಕ್ತಿಯಿಂದ ಕೇಳಲು ಸಾಧ್ಯವಾಗದು ಎಂಬುವುದು ಭಾವೆಯವರ ಅಭಿಪ್ರಾಯ. ಅದಕ್ಕಾಗಿಯೇ ಸಂಜೆಯ ಪಾಠದಲ್ಲಿ ಹೆಚ್ಚಾಗಿ ಸಂಗೀತ, ಕಥೆಗಳು, ಭಕ್ತಿಗೀತೆಗಳನ್ನು ಕಲಿಸುವುದರಿಂದ ಅವರ ಆಯಾಸ ಕಡಿಮೆಗೊಳಿಸಬಹುದು. ಅದೇ ರೀತಿ ಬೆಳಗಿನ ಜಾವ ಮಕ್ಕಳಿಗೆ ಕಲಿಸಬೇಕಾದ ವಿಷಯಗಳೆಂದರೆ ಹಳ್ಳಿಗಳಲ್ಲಿಯ ಸಮಸ್ಯೆಗಳು, ಅವಶ್ಯಕತೆಗಳು, ಕೃಷಿಗೆ ಸಂಬಂಧಿಸಿದ ವಿಷಯಗಳಾಗಿರಲೆಂದು ಭಾವೆಯವರು ತಿಳಿಸಿದ್ದಾರೆ.

ಇದರ ಒಂದು ಪ್ರಯೋಜನವೆಂದರೆ ಬೆಳಿಗ್ಗೆ ಕೇವಲ ಒಂದು ತಾಸಿನವರೆಗೆ ಮಾತ್ರ ಇರುವುದರಿಂದ ಶಿಕ್ಷಕರಿಗೆ ಹೆಚ್ಚಿನ ಸಂಬಲ ಕೊಡುವ ಅಗತ್ಯತೆ ಇಲ್ಲ. ಯಾವುದೇ ಹಳ್ಳಿಯಲ್ಲಿ ಅತಿ ಕಡಿಮೆ ಖರ್ಚಿನಲ್ಲಿ ಶಾಲೆಗಳನ್ನು ಪ್ರಾರಂಭಿಸಬಹುದು.

ವಿನೋಬಾ ಅವರ ಪ್ರಕಾರ ಶಿಕ್ಷಣವು "ದೇಹಕ್ಕೆ ಆಹಾರ ಹೇಗೆ ಅಗತ್ಯವೋ ಹಾಗೆ ಮೆದುಳಿಗೆ ಜ್ಞಾನ ಅವಶ್ಯ." ಆದ್ದರಿಂದ ನಾವು ಆಹಾರವನ್ನು ಹೇಗೆ ಸೀಮಿತವಾಗಿ ತಿನ್ನುತ್ತೇವೆಯೋ ಹಾಗೆಯೇ ಶಿಕ್ಷಣವನ್ನು ಒಂದು ತಾಸಿಗಿಂತ ಹೆಚ್ಚಿಗೆ ಕೊಡಬಾರದು ಜೀರ್ಣವಾಗುವುದಿಲ್ಲ ಎಂದಿದ್ದಾರೆ.

ವಿನೋಬಾ ಅವರು ಹಳ್ಳಿಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದರ ಬಗ್ಗೆ ಪ್ರಸ್ತಾಪಿಸಿದರು. ಅವರು ಪ್ರತಿಯೊಂದು ವಿಶ್ವವಿದ್ಯಾಲಯವು ಪ್ರತಿಯೊಂದು ತರಹದ ವಿಷಯವನ್ನು ಬೋಧಿಸಬೇಕೆಂದು ಹೇಳಿದರು. ಆದರೆ ಈಗಿನ ಆಧುನಿಕ ವಿಶ್ವವಿದ್ಯಾಲಯಗಳು ಪ್ರತಿಯೊಂದು ವಿಷಯವನ್ನು ಬೋಧಿಸುವುದಿಲ್ಲ. ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳಿಗೆ ಸೇರುವ ಮೊದಲು ಯಾವ ಶಿಕ್ಷಕ, ಯಾವ ವಿಷಯವನ್ನು ಹೆಚ್ಚು ದಕ್ಷತೆಯಿಂದ ಬೋಧಿಸುತ್ತಾನೆ ಎಂದು ನೋಡಿ ಸೇರುತ್ತಿದ್ದರು. ಆ ಸ್ಥಳದಲ್ಲಿ ದೊರೆಯುವ ಮೂಲ ಸಾಮಗ್ರಿಗಳಿಗೆ ಅನುಗುಣವಾಗಿ ವಿಷಯಗಳನ್ನು ಮತ್ತು ವಿಶ್ವವಿದ್ಯಾನಿಲಯಗಳ ಶಾಖೆಗಳನ್ನು ತೆರೆಯುತ್ತಿದ್ದರು. ಉದಾಹರಣೆಗೆ, ಒಂದು ವೇಳೆ ಅಲ್ಲಿ ಅರಣ್ಯವಿದ್ದರೆ ಗ್ರಾಮೀಣ ಹಳ್ಳಿ ವಿಶ್ವವಿದ್ಯಾಲಯದ ಸಮೀಪದಲ್ಲಿ ಅರಣ್ಯದಿಂದ ತಯಾರಿಸುವ ಉಪಕರಣಗಳು ಮತ್ತು ಕಟ್ಟಿಗೆ ಕೆಲಸಗಳ ಬಗ್ಗೆ ಹೇಳುತ್ತಿದ್ದರು. ವೈಜ್ಞಾನಿಕ ಸಂಶೋಧನೆಗೆ ಪ್ರಮುಖವಾಗಿ ಮೂರು ಅಂಶಗಳು ಮುಖ್ಯ. 1. ಆಲೋಚನಾ ಸಾಮರ್ಥ್ಯ 2. ವೈಜ್ಞಾನಿಕ ತರಬೇತಿ ಪಡೆದ ವ್ಯಕ್ತಿಗಳು 3. ಉಪಕರಣಗಳು. ಹೀಗೆ ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳನ್ನು ಹಳ್ಳಿಗಳಲ್ಲಿಯೂ ಪ್ರಾರಂಭಿಸಿದರು.

ವಿನೋಬಾ ಅವರು ಪ್ರಸ್ತುತ ಶಾಲೆಗಳಲ್ಲಿ ಸಂಘಟಿಸಿರುವ ಮೂಲ ಶಿಕ್ಷಣವನ್ನು ವಿಮರ್ಶಿಸಿದರು. ಅವರ ಪ್ರಕಾರ ಈ ಶಾಲೆಗಳು ಹೊರಗಿನ ವಾತಾವರಣದೊಂದಿಗೆ ಯಾವುದೇ ಸಂಬಂಧ ಹೊಂದಿಲ್ಲ. ಆದ್ದರಿಂದ ಈ ಶಾಲೆಗಳನ್ನು ಪುನರ್‌ಸಂಘಟಿಸಬೇಕಾಗಿದೆ ಎಂದರು. ಕೆಲವು ವಿಮರ್ಶಕರು ಮೂಲ ಶಿಕ್ಷಣ ವೆಚ್ಚದಾಯಕವಾಗಿದೆ ಎಂದು ವಿಮರ್ಶೆ ಮಾಡಿದರು. ಆದ್ದರಿಂದ ಸರಕಾರಕ್ಕೆ ಅದನ್ನು ನೀಡಲು ಸಾಧ್ಯವಿಲ್ಲ ಎಂದರು. ಆದರೆ ವಿನೋಬಾ ಅವರು ಈ ವಾದವನ್ನು ಒಪ್ಪಲಿಲ್ಲಾ ಏಕೆಂದರೆ ಮೂಲ ಶಿಕ್ಷಣ ಸಂಪೂರ್ಣವಾಗಿ ಆರ್ಥಿಕವಾಗಿ ಹೊರೆ ಬೀಳದ ಶಿಕ್ಷಣವಾಗಿದೆ.

ಹಳ್ಳಿಗಳು ಮೂಲ ಶಿಕ್ಷಣವನ್ನು ಅಳವಡಿಸಲು ಹೆಚ್ಚು ಸೂಕ್ತವಾಗಿವೆ. ಏಕೆಂದರೆ ಹಳ್ಳಿಗರು ಹೆಚ್ಚಾಗಿ ಬೇರೆಯವರ ಮೇಲೆ ಅವಲಂಬಿತವಾಗಿರದೆ ಸಾಧ್ಯವಾದಷ್ಟು ತಾವೇ ವಸ್ತುಗಳನ್ನು ಉತ್ಪಾದಿಸುತ್ತಾರೆ. ದಕ್ಷ ಶಿಕ್ಷಕನಿಗೆ ಶಾಲೆಯ ಕಟ್ಟಡ, ಕಪ್ಪು ಹಲಗೆ, ಸೀಮೆಸುಣ್ಣ ಯಾವುದರ ಅಗತ್ಯವೂ ಇಲ್ಲ. ಪುಸ್ತಕಗಳು ದೊರೆತರೆ ಅವರಿಗೆ ಹೆಚ್ಚು ಉಪಯುಕ್ತ.

ಮೂಲ ಶಿಕ್ಷಣ ಮಾನಸಿಕ ಮತ್ತು ದೈಹಿಕ ಕೆಲಸ ಎಂದು ಬೇರ್ಪಡಿಸುವುದಿಲ್ಲ. ಆದ್ದರಿಂದ ಶಿಕ್ಷಣ ಮಂತ್ರಿ, ಆಡಳಿತಾಧಿಕಾರಿ ಮತ್ತು ಶಿಕ್ಷಕರ ಸಂಬಳದಲ್ಲಿ ವ್ಯತ್ಯಾಸ ಇರದು. ಅವರ ಬದಲಾಗಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮೂಲ ಶಿಕ್ಷಣದ ಬಗ್ಗೆ ಯಾವುದೇ ಗೌರವ ಮನೋಭಾವನೆ ತಳೆಯುವುದಿಲ್ಲ. ಆದ್ದರಿಂದ ಶಿಕ್ಷಕರಿಗೆ ನೀಡುವ ಸಂಭಾವನೆಯನ್ನು 'ಸಂಬಳ' ಎಂದು ಕರೆಯುವುದಕ್ಕಿಂತ 'ಕೊಡುಗೆ' ಎಂದು ಕರೆಯಬೇಕು. ಆದರೆ ವಿನೋಬಾ ಭಾವೆಯವರು ಹೇಳುವುದೇನೆಂದರೆ ಪ್ರತಿಯೊಬ್ಬರು ಮೂಲ ಶಿಕ್ಷಣಕ್ಕಾಗಿ ಹೊಸ ನಿಯಮಗಳನ್ನು ಸಲಹೆಗಳನ್ನು ನೀಡಬೇಕು. ಮೂಲ ಶಿಕ್ಷಣದ ಯಶಸ್ಸಿಗೆ ಮಾನಸಿಕ ಬದಲಾವಣೆ ಮಾನಸಿಕ ಕ್ರಾಂತಿ ಅವಶ್ಯಕತೆ ಇದೆ. ಮಾನಸಿಕ ಕೆಲಸಕ್ಕೂ ಮತ್ತು ದೈಹಿಕ ಕೆಲಸಕ್ಕೂ ಬೇರೆ ಬೇರೆ ಮಾಡದೆ ಎರಡನ್ನೂ ಒಂದೇ ಪರಿಗಣಿಸಿ ವೇತನವನ್ನು ನೀಡುವಾಗ ಶಿಕ್ಷಕರಿಗೆ ಮತ್ತು ಇತರರಿಗೆ ವೇತನ ಒಂದೇ ರೀತಿಯಾಗಿರಬೇಕು.

Digitised by Bharatavani, CIIL

ಅಸಮಾನತೆಯಲ್ಲಿ ಮೂಲ ಶಿಕ್ಷಣದ ಯಶಸ್ಸು ಸಾಧ್ಯವಿಲ್ಲ. ಸರಕಾರ ಕೇವಲ ಹೊಸ ನಿಯಮಗಳನ್ನು ಜಾರಿಗೆ ತಂದರೆ ಸಾಧ್ಯವಿಲ್ಲ, ಸರಕಾರದವರು ಜನರ ಮನೋಧೋರಣೆಯಲ್ಲಿ ಕ್ರಾಂತಿಯನ್ನುಂಟು ಮಾಡಿದರೆ ಮಾತ್ರ ಮೂಲ ಶಿಕ್ಷಣದ ಯಶಸ್ಸು ಸಾಧ್ಯ.

ವಿನೋಬಾ ಅವರ ಅಭಿಪ್ರಾಯದ ಪ್ರಕಾರ ಮೂಲ ಶಿಕ್ಷಣದ ಉದ್ದೇಶಗಳು ಈಡೇರದೇ ಇರುವುದು ವಿಪರ್ಯಾಸ. ರಾಜ್ಯ ಸರಕಾರ ಮೂಲ ಶಿಕ್ಷಣಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದರು ಅದು ಫಲಕಾರಿಯಾಗಿಲ್ಲ. ಅದು ತನ್ನ ಬಲವನ್ನು ಗಳಿಸುವುದರ ಬದಲು ಕಳೆದುಕೊಳ್ಳುತ್ತಿದೆ. ಏಕೆಂದರೆ ವಿನೋಬಾ ಅವರ ಮೂಲ ಶಿಕ್ಷಣ ಜೀವನದ ತತ್ವಶಾಸ್ತ್ರದ ಮೇಲೆ ಅವಲಂಬಿಸಿದೆ. ಆದ್ದರಿಂದ ಆ ತತ್ವವನ್ನು ಒಪ್ಪಿಕೊಳ್ಳದೇ ಹೋದರೆ ನಿರೀಕ್ಷಿತ ಫಲ ದೊರೆಯುವುದಿಲ್ಲ.

ವಿನೋಬಾ ಭಾವೆಯವರ ದೃಷ್ಟಿಯಲ್ಲಿ ಮೂಲ ಶಿಕ್ಷಣದ ಅಧಿಕಾರವನ್ನು ಸರಕಾರಕ್ಕೆ ನೀಡಿರುವುದು ಮೂರ್ಖತನ. ಇದರ ಜವಾಬ್ದಾರಿಯನ್ನು ಸರಕಾರಕ್ಕೆ ಕೊಡುವ ಬದಲಾಗಿ ಇದನ್ನು ಅಳವಡಿಸುವಂತೆ ಸರಕಾರಕ್ಕೆ ಒತ್ತಾಯ ಮಾಡುವವರಿಗೆ ನೀಡಬೇಕು ಎಂದಿದ್ದಾರೆ. ಅದರ ಯಶಸ್ಸಿಗಾಗಿ ಅದನ್ನು ಜನರು ಆಕರ್ಷಿತರಾಗುವ ರೀತಿಯಲ್ಲಿ ಅಳವಡಿಸಬೇಕು. ಮೂಲ ಶಿಕ್ಷಣದ ಜವಾಬ್ದಾರಿಯನ್ನು ಎರಡು ರೀತಿಯಿಂದ ವರ್ಗೀಕರಿಸಿದ್ದಾರೆ. ಕೆಲವು ಆಡಳಿತಗಾರರು ಕೇವಲ ಗುಣಲಕ್ಷಣಗಳನ್ನು ಮೂಲ ಶಿಕ್ಷಣ ಮಾತ್ರ ಒಪ್ಪಿಕೊಂಡಿದ್ದಾರೆ. ಇನ್ನೊಂದು ಗುಂಪಿನ ಜನ ಸಂಪೂರ್ಣವಾಗಿ ಮೂಲ ಶಿಕ್ಷಣವನ್ನು ದೂಷಿಸುತ್ತಾರೆ. ಇವರ ಪ್ರಕಾರ ವೆಚ್ಚದಾಯಕ, ಇದು ಸಮರ್ಪಕವಾದದ್ದು ಅಲ್ಲ ಎನ್ನುವರು. ವಿನೋಬಾ ಅವರ ಮೂಲ ಶಿಕ್ಷಣ ಅವಶ್ಯಕ ಇದನ್ನು ಅಳವಡಿಸಿಕೊಳ್ಳಬೇಕು ಎನ್ನುವರು.

– ಜ.ಗು.ರೊ.

## ಸೃಜನಶೀಲತೆ ಮತ್ತು ಮಾನವ ಸಂಬಂಧಗಳು

ಮಾನವನ ಸಂಸ್ಕೃತಿಯ ಮತ್ತು ನಾಗರಿಕತೆಯ ಬೆಳವಣಿಗೆಯಲ್ಲಿ ಸೃಜನಶೀಲತೆಯ ಪಾತ್ರ ಅತ್ಯಂತ ಪ್ರಮುಖವಾದುದು. ಒಂದು ವರ್ಗಕ್ಕೆ ಸೇರಿದ ಒಂದು ವಸ್ತು ಅಥವಾ ವಾಸ್ತವಾಂಶವನ್ನೇ ಬೇರೊಂದು ವಿಭಿನ್ನ ವಾಸ್ತವಾಂಶ ಅಥವಾ ಘಟನೆಯೊಂದಿಗೆ ಹೊಂದಿಸಿ ಬಿಡುವ ವಿಶಿಷ್ಟ ದ್ವಿಸಾಹಚರ್ಯವನ್ನು ಸೃಜನಶೀಲತೆ ಎಂದು ಕರೆಯಬಹುದು (ಆಲ್ ಪೋರ್ಟ್). ಆದುದರಿಂದ ಸೃಜನಶೀಲತೆಯು ವ್ಯಕ್ತಿನಿಷ್ಠವಾದುದು. ಅದು ವಸ್ತು ನಿಷ್ಠವಲ್ಲ. ಅದು ಸ್ವೋಪಜ್ಞ (original) ವಾದುದು. ಸೃಜನಶೀಲತೆ ಎನ್ನುವುದು ಕೇವಲ ಸಾಹಿತ್ಯ ಮತ್ತು ಕಲಾ ವಿಷಯಗಳಿಗೆ ಸಂಬಂಧಿಸಿದುದಲ್ಲ. ಅದು ಮಾನವನ ಪ್ರತಿಯೊಂದು ಸಕಾರಾತ್ಮಕ ಚಿಂತನೆಗೆ ಮತ್ತು ಕ್ರಿಯೆಗೆ ಪ್ರತಿಯೊಂದು ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ವಿಚಾರ.

ಇದರ ಅಭಿವ್ಯಕ್ತಿಗೆ ಸತತ ಪ್ರಯತ್ನಬೇಕು. ಮೇರೆ ಇಲ್ಲದ ತಾಳ್ಮೆ ಬೇಕು. ವಿಷಯ ಯಾವುದೇ ಆಗಿರಲಿ, ಸೃಜನಶೀಲ ಕ್ರಿಯೆಯ ಆರಂಭ ಸೃಜನಶೀಲ ಯೋಚನೆಯಿಂದ ಮಾತ್ರ. ಗತಕಾಲದ ಬಹಳಷ್ಟು ವಿಜ್ಞಾನಿಗಳು ಮತ್ತು ಲೇಖಕರು ಶಾಲೆ ಕಾಲೇಜುಗಳ ಉತ್ಪನ್ನಗಳಲ್ಲ. ಬಹಳ ಮಂದಿ ಶಾಲೆ ಕಾಲೇಜನ್ನು ಅರ್ಧದಲ್ಲಿ ಬಿಟ್ಟವರು. ಅಂಥವರು ಶ್ರೇಷ್ಠ ಸಂಸ್ಥೆಗಳನ್ನು ಕಟ್ಟಿದ್ದಾರೆ.

### ಸೃಜನಶೀಲತೆಯನ್ನು ಪ್ರಭಾವಗೊಳಿಸುವ ಅಂಶಗಳು

1) ಅನುವಂಶೀಯತೆ: ವಂಶಪಾರಂಪರ್ಯವಾಗಿ ಪಡೆದುಕೊಂಡು ಬಂದ ಬುದ್ಧಿಶಕ್ತಿ, ಆಲೋಚನಾಶಕ್ತಿ, ವಿಚಾರಶಕ್ತಿ, ರಚನಾತ್ಮಕ ಶಕ್ತಿ, ಕ್ರಿಯಾಶಕ್ತಿ ಮತ್ತಿತರ ಅಂಶಗಳು ಸೃಜನಶೀಲತೆಯನ್ನು ಪ್ರಭಾವಿತಗೊಳಿಸುತ್ತದೆ. 2) ಪರಿಸರ: ಮಾನವನ ಮೇಲೆ ಪರಿಸರದ ಪ್ರಭಾವ ಅಪಾರ. ಅವನಲ್ಲಿರುವ ಚೈತನ್ಯಶೀಲತೆಗೆ ಪರಿಸರ ಪೂರಕವಾಗಿದ್ದರೆ ಸೃಜನಶೀಲತೆ ಹೂವಾಗಿ ಅರಳಬಹುದು. 3) ಅವಶ್ಯಕತೆಗಳು: ಬಹುಮುಖ್ಯವಾಗಿ ಮಾನವ ಹುಟ್ಟಿ ಬಂದ ಬಳಿಕ ಬದುಕುವುದಕ್ಕಾಗಿ ಕೊರತೆ ಉಂಟಾದಾಗ ಹೊಸದನ್ನು ಹುಡುಕ ತೊಡಗುತ್ತಾನೆ. 4) ಸಮಸ್ಯೆಗಳು: ಬದುಕು ಎಂಬುದು ಸಮಸ್ಯೆಗಳ ಆಗರ. ಇದರಿಂದ ಮುಕ್ತನಾಗಲು ವ್ಯಕ್ತಿಯು ಹಗಲಿರುಳು ಯೋಚಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವಾಗ ಹೊಸತು ಸೃಷ್ಟಿಯಾಗುತ್ತದೆ. 5) ಅನುಕೂಲತೆಗಳು: ಸೃಜನಾತ್ಮಕ ಕೆಲಸಗಳಿಗೆ ಇನ್ನಷ್ಟು ಅನುಕೂಲತೆಗಳು ದೊರೆತಾಗ ಅವರಿಗೆ ಪ್ರಚೋದನೆ ದೊರೆಯುತ್ತದೆ. 6) ಪ್ರೋತ್ಸಾಹ: ಯಾವುದೇ ಒಳ್ಳೆಯ ಕಾರ್ಯಗಳನ್ನು ಪ್ರೋತ್ಸಾಹಿಸಿದಾಗ ಸಾಧಕರಿಗೆ ಉತ್ತೇಜನ ದೊರೆಯುತ್ತದೆ. 7) ಮಾರ್ಗದರ್ಶನ: ಸಂಶೋಧನೆಗಳಿಗೆ ಸೂಕ್ತ ಮಾರ್ಗದರ್ಶನ ದೊರೆತಾಗ ಸೃಜನಾತ್ಮಕತೆಗೆ ಇಂಬು ದೊರೆಯುವುದು. 8) ಪೂರ್ವಾನುಭವ: ಸೃಜನಾತ್ಮಕತೆಯು ಮುಂದುವರಿಯಬೇಕಾದರೆ ಪೂರ್ವಾನುಭವ ಅತಿ ಅಗತ್ಯ.

### ಸೃಜನಶೀಲತೆಯನ್ನು ಬೆಳೆಸುವುದು

ಸೃಜನಶಕ್ತಿಯು ಯಾವುದೇ ಒಂದು ಜನಾಂಗ ಅಥವಾ ದೇಶಕ್ಕೆ ಸಂಬಂಧಿಸಿದುದಲ್ಲ. ಪ್ರತಿಯೊಬ್ಬರಲ್ಲೂ ಸ್ವಲ್ಪಮಟ್ಟಿಗೆ ಇದು ವ್ಯಕ್ತಗೊಳ್ಳುತ್ತದೆ. ಆದರೆ ಮಕ್ಕಳಲ್ಲಿ ಇದು ಸ್ವಲ್ಪ ಅಧಿಕ. ಇದಕ್ಕೆ ಶಾಲೆಯಲ್ಲಿ ಸೂಕ್ತ ಆರೈಕೆ, ಪೋಷಣೆ, ತರಬೇತಿ ಮತ್ತು ಶಿಕ್ಷಣ ಪೋಷಕರು ಮತ್ತು ಶಿಕ್ಷಕರಿಂದ ದೊರೆಯಬೇಕು. ಮಕ್ಕಳಲ್ಲಿ ಅಂತಹ ಶಕ್ತಿಯನ್ನು ಗುರುತಿಸಿ ಅದನ್ನು ಪೋಷಿಸಬೇಕು. ಭಾಷಾ ಪ್ರಭುತ್ವ, ಅಪೂರ್ವ ಸಾಮರ್ಥ್ಯ, ವಿಭಿನ್ನ ದೃಷ್ಟಿಗಳಿಂದ ಯೋಚಿಸುವಿಕೆ, ಹಿಡಿದ ಕಾರ್ಯವನ್ನು ಬಿಡದ ಛಲ, ಸೂಕ್ಷ್ಮ ದೃಷ್ಟಿ ಹೊಂದಿರುವಂತಹ ಗುಣಗಳನ್ನು ಬೆಳೆಸುವುದರಲ್ಲಿ ವ್ಯಕ್ತಿಯ ಹಾಗೂ ಶಿಕ್ಷಣದ ಪ್ರಗತಿ ಅಡಗಿದೆ. ನಮ್ಮ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಬಹಳಷ್ಟು ಪರಿವರ್ತನೆಗಳಾಗಬೇಕು. ಸೃಜನಶೀಲ, ಪ್ರತಿಭಾವಂತ ಮತ್ತು ಕ್ರಿಯಾಶೀಲ ಮಕ್ಕಳಿಗೆ ನೆರವಾಗುವ ಪಠ್ಯಕ್ರಮ ಮತ್ತು ಪಠ್ಯ ವಿಷಯಗಳನ್ನು ಅದು ಒಳಗೊಂಡಿರಬೇಕು. ಆದುದರಿಂದ ತರಗತಿಗಳಲ್ಲಿ –

1. ಪ್ರೋತ್ಸಾಹಕ ವಾತಾವರಣ ನಿರ್ಮಾಣ ಅಂದರೆ ಮಕ್ಕಳಿಗೆ ಸ್ವತಂತ್ರವಾಗಿ ವಿಚಾರಿಸಲು ಮತ್ತು ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು.
2. ವೈವಿಧ್ಯಮಯ ಸ್ಪಂದನಗಳಿಗೆ ಅವಕಾಶ ಎಂದರೆ ಬೇರೆ ಬೇರೆ ಸಮಸ್ಯೆಗಳನ್ನು ಬಿಡಿಸುವ ಯಾವುದೇ ತಂತ್ರಗಳನ್ನು ಉಪಯೋಗಿಸಲು ಅವಕಾಶ.
3. ಕಲಿತುದನ್ನು ನಿತ್ಯ ಜೀವನಕ್ಕೆ ಅನ್ವಯಿಸುವಂತೆ ನೋಡಿಕೊಳ್ಳುವುದು.
4. ಮುಕ್ತಕಂಠದಿಂದ ಸಾಧನೆಗಳನ್ನು ಪ್ರಶಂಸಿಸುವುದು.
5. ಸ್ವಪ್ರೇರಿತ ಕಲಿಕೆಗೆ ಅವಕಾಶ.
6. ಅಧ್ಯಾಪಕರು ಬೋಧಿಸಿದ ವಿಷಯವನ್ನು ಬೇರೆ ಬೇರೆ ಆಯಾಮಗಳಲ್ಲಿ ಯೋಚಿಸುವಂತೆ ಪ್ರೋತ್ಸಾಹ.

Digitised by Bharatavani, CIIL

7. ಆದಷ್ಟು ಹೆಚ್ಚು ಓದು, ಮಾಹಿತಿ ಸಂಗ್ರಹ ಮತ್ತು ಅಭಿವ್ಯಕ್ತಿಗೆ ಹೆಚ್ಚಿನ ಅವಕಾಶ.

**ಸೃಜನಾತ್ಮಕ ನಾಟಕ ಕಲೆ**

ಇತ್ತೀಚೆಗೆ ಶಾಲಾ ಪಠ್ಯಕ್ರಮದಲ್ಲಿ ಸೃಜನಾತ್ಮಕ ನಾಟಕಗಳನ್ನು ಸೇರಿಸಬೇಕೆಂಬುದು ಕೆಲವರ ವಾದ. ಇದರಿಂದ ವಾಕ್ಸರಣೆ ಮುಖಭಾವ, ಮನಸ್ಸು ಮತ್ತು ಕಲ್ಪನೆಗೆ ಪ್ರಧಾನ ಸ್ಥಾನ ದೊರಕುತ್ತದೆ. ಜನರ ಮತ್ತು ಪಾತ್ರಗಳು ಮಾನವ ಸಂಬಂಧಗಳು, ಗುಣಲಕ್ಷಣಗಳು, ಸಂದರ್ಭಗಳು, ಕಥೆಗಳು ಮತ್ತು ಭಾವನೆಗಳ ಮರುಸೃಷ್ಟಿಯೇ ನಾಟಕ. ಶೈಕ್ಷಣಿಕ ನಾಟಕ ಮುಖ್ಯವಾಗಿ ಭಾಗವಹಿಸುವವರ ಮೇಲಿನ ಪರಿಣಾಮಗಳ ಬಗ್ಗೆ ಆಸಕ್ತಿ ವಹಿಸುತ್ತದೆ.

**ಶೈಕ್ಷಣಿಕ ಸೃಜನಾತ್ಮಕ ನಾಟಕದ ಮೂಲಭೂತ ಗುರಿಗಳು**

- ಕಲ್ಪನೆ, ಭಾವನೆಗಳನ್ನು ಉತ್ತೇಜಿಸಿ ಸುಸಂಸ್ಕೃತಗೊಳಿಸಿ, ಶಿಸ್ತುಬದ್ಧವಾಗಿ ಪ್ರಕಟಗೊಳ್ಳುವಂತೆ ಮಾಡುವುದು.
- ಮಾತು, ಕ್ರಿಯೆ, ಚಲನೆ, ಧ್ವನಿ ಹಾಗೂ ಪ್ರಾಸದ ಮೂಲಕ ಸಂವಹನ.
- ಶಾರೀರಿಕ ಮತ್ತು ಸಾಮಾಜಿಕ ಕೌಶಲದಲ್ಲಿ ತರಬೇತಿ.
- ಹೊಂದಾಣಿಕೆ ಮತ್ತು ತಂಡದಲ್ಲಿ ಒಟ್ಟಾಗಿ ಕೆಲಸ ಮಾಡುವುದು.
- ಪ್ರತಿಯೊಂದು ಮಗುವಿನಲ್ಲಿ ಹುದುಗಿರುವ ಸೃಜನಾತ್ಮಕ ಸಾಮರ್ಥ್ಯ ಪ್ರಕಟಗೊಳ್ಳುವಂತೆ ಮಾಡುವುದು ಮತ್ತು ಸ್ವಂತ ಅಭಿಪ್ರಾಯಗಳನ್ನು ಹೇಳುವ ಅವಕಾಶಗಳನ್ನು ಕಲ್ಪಿಸುವುದು.
- ಉತ್ತೇಜನ, ಪ್ರೋತ್ಸಾಹ, ಹೊಸವಿಚಾರಗಳ ಅಭಿವ್ಯಕ್ತಿ, ಅರಿವು ಮೂಡಿಸುವಿಕೆ, ಶೀಘ್ರಗ್ರಹಣ ಮುಂತಾದುವು ಸೃಜನಶೀಲ ನಾಟಕದ ಲಾಭಗಳಾಗಿವೆ.

**ಸೃಜನಶೀಲತೆಯ ಮಹತ್ವ**

ವ್ಯಕ್ತಿಗಳು ಪಡೆದ ಅನುವಂಶೀಯ ಗುಣಗಳು ಮತ್ತು ಅದಕ್ಕೆ ಸಂಬಂಧಿಸಿ ಪರಿಸರದ ಅನುಕೂಲತೆ ಇದರಿಂದ ಸೃಜನಶೀಲತೆ ಪ್ರಭಾವಿತಗೊಳ್ಳುತ್ತದೆ. ಮಾನವನಲ್ಲಿ ಈ ಸಾಮರ್ಥ್ಯವು ಸುಸಂಸ್ಕೃತ ಸಮಾಜದ ನಿಜವಾದ ಸಂಪತ್ತು ಎನಿಸಿದೆ. ಸೃಜನಶೀಲತೆಗೆ ಅವಶ್ಯಕತೆಗಳು ಕಾರಣ. ಏಕೆಂದರೆ ಅವನಿಗೆ ಯಾವುದೇ ಕೊರತೆಯಾದರೂ ಆತ ಅವುಗಳ ಬಗ್ಗೆ ಯೋಚಿಸಲು ಆರಂಭಿಸುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದ ಹೋರಾಟದಲ್ಲಿ ಏನಾದರೂ ದಾರಿಯನ್ನು ಹುಡುಕುತ್ತಿರುತ್ತಾನೆ. ಆದರೆ ವೈಯಕ್ತಿಕ ಸೃಜನಾತ್ಮಕತೆಗಿಂತ ಸಾಮಾಜಿಕ ಸೃಜನಾತ್ಮಕತೆಯು ಉತ್ತಮವೆಂದು ಬ್ಯಾನರ್ ಎಂಬುವರು ಅಭಿಪ್ರಾಯಪಡುತ್ತಾರೆ. ಏಕೆಂದರೆ ಶ್ರೇಷ್ಠ ವಿಚಾರಗಳು ಕೇವಲ ವ್ಯಕ್ತಿಗೆ ಮಾತ್ರವಲ್ಲ ಎಲ್ಲರಿಗೂ ಹೊಸದು. ಸೃಜನಾತ್ಮಕ ಕೆಲಸಗಳು ಅರ್ಥಪೂರ್ಣ ಮತ್ತು ಜಗತ್ಪ್ರಸಿದ್ಧ. ಏನೇ ಆದರೂ ಸೃಜನಾತ್ಮಕತೆಯಿಂದ ಮಾನವನ ಸ್ಥಿತಿಗತಿಗಳು ಬದಲಾಗುತ್ತವೆ. ಅಂತಿಮವಾಗಿ ಸೃಜನಾತ್ಮಕತೆ ಅಭಿವ್ಯಕ್ತಿಯ ಮೂಲಕ ಪ್ರಕಟಗೊಳ್ಳಬೇಕು. ಇದಕ್ಕೆ ಸಾಮಾಜಿಕ ಮೌಲ್ಯ ಮತ್ತು ಬೌದ್ಧಿಕ ಹಿನ್ನೆಲೆ ಅಗತ್ಯ. ಸೃಜನಾತ್ಮಕತೆ ಎಂದರೆ ಅಸಾಮಾನ್ಯವಾದುದನ್ನು ಕಂಡುಹಿಡಿಯುವುದು. ಹೀಗಾಗಿ ಸೃಜನಶೀಲ ವ್ಯಕ್ತಿಗಳು ದೇಶದ ಸಂಪತ್ತು. ಅದರಿಂದ ದೇಶದ ಪ್ರಗತಿ ಸಾಧ್ಯ.

ಸೃಜನಶೀಲತೆ ಈ ನೆಲದ ಸೃಷ್ಟಿ. ಇದು ಮನುಷ್ಯ ಮಾತ್ರರಲ್ಲಿ ಮಾತ್ರ ಕಂಡು ಬರುವುದು. ಇದು ಉತ್ತಿ ಬಿತ್ತಿ ಹಸನು ಮಾಡಿ ತೆಗೆಯುವ ಬೆಳೆ. ಜಗತ್ತಿನ ಸಂಸ್ಕೃತಿ, ನಾಗರಿಕತೆ ಮಾನವನ ಸ್ಮೃತಿ ಪರಂಪರೆ ಹಾಗೂ ಅನುವಂಶೀಯತೆಯ ಫಲವಾಗಿದೆ. ಜಗತ್ತಿನ ಜನಜೀವನದ ಮೇಲೆ ಸೃಜನಶೀಲತೆ ಬೀರಿರುವ ಪ್ರಭಾವ ಅನನ್ಯ. ಪರಿಣಾಮ ಅಸಾಧಾರಣ. ಕಾಳ್ಗಿಚ್ಚನ್ನು ಕಂಡು ಕಲ್ಲುಗಳನ್ನು ಉಜ್ಜಿ ಬೆಂಕಿಯನ್ನು ಕಂಡುಹಿಡಿದ ಮೊದಲ ಮಾನವ ಅತ್ಯಂತ ಸೃಜನಶೀಲ ಮಾತ್ರವಲ್ಲ, ಅದು ಮಾನವ ಪ್ರಗತಿಯ ಪ್ರಮುಖ ಹೆಜ್ಜೆ. ಮುಂದೆ ಅವನು ನಾನಾ ಯಂತ್ರಗಳನ್ನು ಕಂಡು ಹಿಡಿದು ಯಂತ್ರ ಜಗತ್ತನ್ನೇ ಮಾನವನ ಕಣ್ಮುಂದೆ ತಿರುಗುವಂತೆ ಮಾಡಿದ.

–ಪಿ.ಮ.

**ಸೃಜನಶೀಲ ಮಕ್ಕಳ ಲಕ್ಷಣಗಳು**

ಸೃಜನಶೀಲತೆಯ ಬಗ್ಗೆ ಸರ್ವಸಮ್ಮತವಾದ ವ್ಯಾಖ್ಯೆ ದೊರೆಯುವುದಿಲ್ಲ. ಕೆಲವರು ಸೃಜನಶೀಲತೆಯನ್ನು ಫಲವಾಗಿ, ಕೆಲವರು ಪ್ರಕ್ರಿಯೆಯಾಗಿ, ಇನ್ನು ಕೆಲವರು ವ್ಯಕ್ತಿತ್ವದ ಲಕ್ಷಣಗಳಾಗಿ ನಿರ್ವಚಿಸಿದ್ದಾರೆ. ಮನೋವಿಜ್ಞಾನಿಗಳಲ್ಲಿ ಸೃಜನಶೀಲತೆಯ ಸ್ವರೂಪವನ್ನು ಕುರಿತು ಅಭಿಪ್ರಾಯ ಭಿನ್ನತೆಗಳಿವೆ. ಹಲವಾರು ವ್ಯಾಖ್ಯೆಗಳು ಲಭ್ಯವಿವೆ. ಒಂದೊಂದು ವ್ಯಾಖ್ಯೆಯೂ ಕೆಲವು ಗುಣಗಳಿಂದ ಕೂಡಿದ್ದರೆ ಕೆಲವು ಮಿತಿಗಳಿಂದ ಕೂಡಿವೆ. ಆದರೆ ಸೃಜನಶೀಲತೆ ಎಂದಾಗ ಅದು ಉತ್ಪಾದನಾ ಸಾಮರ್ಥ್ಯಕ್ಕೆ ಸೇರಿದ ಪರಿಕಲ್ಪನೆಯು ಎನ್ನುವುದರ ಬಗ್ಗೆ (ಮತ್ತು ಒಂದು ರಾಷ್ಟ್ರ ನಿರ್ಮಾಣದಲ್ಲಿ ಸೃಜನಶೀಲರ ಪಾತ್ರ ಅತ್ಯಂತ ಮಹತ್ವದ್ದು ಎನ್ನುವ ಬಗೆಗೆ) ಭಿನ್ನಾಭಿಪ್ರಾಯಗಳಿರುವುದಿಲ್ಲ. ಸೃಜನಶೀಲ ಮಕ್ಕಳನ್ನು ಗುರುತಿಸಿ ಅವರನ್ನು ವಿಶೇಷ ಕ್ರಮಗಳಿಂದ ಪೋಷಿಸಬೇಕು ಎನ್ನುವ ವಿಚಾರವೂ ಸರ್ವ ಮಾನ್ಯವಾಗಿದೆ. ಹೀಗೆ ಸೃಜನಶೀಲರನ್ನು ಗುರುತಿಸಲು ಅಂಥ ಮಕ್ಕಳ ಲಕ್ಷಣಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಮನೋವಿಜ್ಞಾನಿಗಳು ಅನೇಕ ಅಧ್ಯಯನಗಳ ಆಧಾರದ ಮೇಲೆ ಅಂಥ ಲಕ್ಷಣಗಳನ್ನು ಪಟ್ಟಿ ಮಾಡಿದ್ದಾರೆ.

ಸೃಜನಶೀಲ ವ್ಯಕ್ತಿಗಳ ಬಗೆಗೆ ಇದ್ದ ಅನೇಕ ತಪ್ಪು ಪರಿಕಲ್ಪನೆಗಳು ಈಗ ಮಾಯವಾಗಿದೆ. ಸೃಜನಶೀಲರು ಸಾಮಾನ್ಯವಾಗಿ ತಿಕ್ಕಲರು, ಅಸ್ತವ್ಯಸ್ತರು, ಅಸಭ್ಯರು, ಒರಟರು ಮುಂತಾದ ನೇತ್ಯಾತ್ಮಕ ಮಿಥ್ಯಾಕಲ್ಪನೆಗಳು ಮಾಯವಾಗಿ ಅವರು ಕಲ್ಪನಾಶೀಲರು, ತೀವ್ರ ಸಂವೇದನಾಶೀಲರು, ಮಹಾನ್ ಕುತೂಹಲಿಗಳು, ವಿಶಿಷ್ಟ ಒಳನೋಟವುಳ್ಳವರು, ಸ್ವಂತಿಕೆ ನಾವೀನ್ಯ ಹೊಂದಿದವರು ಎನ್ನುವ ಧನಾತ್ಮಕ ಭಾವನೆಗಳು ಬಲಿತಿವೆ. ಇ.ಎಲ್ ಟೊರೆನ್ಸ್ ಈ ಕ್ಷೇತ್ರದಲ್ಲಿ ಆಳವಾದ ಹಲವಾರು ಅಧ್ಯಯನಗಳನ್ನು ನಡೆಸಿ ತಮ್ಮ 'ಸೃಜನಶೀಲ ಪ್ರತಿಭೆಗಳಿಗೆ ಮಾರ್ಗದರ್ಶನ' ಎನ್ನುವ ಗ್ರಂಥದಲ್ಲಿ ಸುಮಾರು 84 ಲಕ್ಷಣಗಳ ಪಟ್ಟಿಯನ್ನು ಕೊಟ್ಟಿರುವ ಈ ಕ್ಷೇತ್ರದಲ್ಲಿ ಟೋರೆನ್ಸ್ ಪರಿಣಿತರಾಗಿರುವುದರಿಂದ ಅವರು ನೀಡಿದ ಲಕ್ಷಣಗಳ ಪಟ್ಟಿಯನ್ನು ಸೃಜನಶೀಲ ಮಕ್ಕಳನ್ನು ಗುರುತಿಸುವಲ್ಲಿ ಉಪಯೋಗಿಸ ಬಹುದು. ಸೃಜನಶೀಲ ಮಕ್ಕಳು

1. ವ್ಯವಸ್ಥೆಯ ನಿರ್ಬಂಧಗಳನ್ನು ವಿರೋಧಿಸುವವರು.
2. ಅವ್ಯವಸ್ಥೆಯಲ್ಲೂ ವ್ಯವಸ್ಥೆಯನ್ನು ಗುರುತಿಸುವರು.
3. ನವ ನವೀನ ವಿಚಾರಗಳ ಬಗ್ಗೆ ಆಸಕ್ತಿ ಹೊಂದಿರುವರು.
4. ಸೋಲುಗಳಿಗೆ ಹೆದರುವುದಿಲ್ಲ.
5. ಸಾಮಾನ್ಯವಾಗಿ ಆಶಾವಾದಿಗಳಾಗಿರುವರು.
6. ದೂರದೃಷ್ಟಿ ಹೊಂದಿರುವರು.
7. ಸ್ವಾವಲಂಬಿಗಳಾಗಿರುವರು.

Digitised by Bharatavani, CIIL

8. ಏಕಾಂಗಿತನ ಬಯಸುವವರು
9. ಅತೀವ ಸ್ನೇಹಪರರಾಗಿರುವುದಿಲ್ಲ.
10. ನೇರ ನಡೆನುಡಿ ಹೊಂದಿರುವರು.
11. ಸೌಂದರ್ಯಾರಾಧಕರಾಗಿರುವರು.
12. ಮೌಲ್ಯಾದರ್ಶಗಳನ್ನು ಹೊಂದಿರುವರು.
13. ಪ್ರಾಮಾಣಿಕರಾಗಿರುವರು.
14. ತಮ್ಮ ಚಿತ್ತ ಸ್ಥಿತಿಗೆ ತಕ್ಕಂತೆ ವರ್ತಿಸುವರು.
15. ಸಂಕೋಚ ದಾಕ್ಷಿಣ್ಯ ಸ್ವಭಾವ ಹೊಂದಿರುವುದಿಲ್ಲ.
16. ಉನ್ನತ ಮಟ್ಟದ ಹಾಸ್ಯಪ್ರಜ್ಞೆಯುಳ್ಳವರು.
17. ನಡೆ, ನುಡಿಗಳಲ್ಲಿ ಗಾಂಭೀರ್ಯ ಹೊಂದಿರುವರು.
18. ಒತ್ತಡಗಳಿಗೆ ಮಣಿಯಲಾರರು.
19. ಕ್ರಾಂತಿಕಾರಕ ಗುಣ ಹೊಂದಿರುವರು.
20. ವ್ಯವಸ್ಥಾ ಭಂಜಕ ಗುಣ ಹೊಂದಿರುವರು.
21. ಬಂಡುಕೋರ ಗುಣ ಹೊಂದಿರುವರು.
22. ವಿಶಿಷ್ಟ ಹವ್ಯಾಸ ಹೊಂದಿರುವರು.
23. ಸಾಮಾನ್ಯರಂತೆ ವ್ಯವಹಾರ ನೈಪುಣ್ಯ ಹೊಂದಿರುವುದಿಲ್ಲ.
24. ಜನಪ್ರಿಯತೆ ಗಳಿಸಿರುವುದಿಲ್ಲ.
25. ಅಂತರ್ಮುಖಿಗಳು.
26. ವ್ಯಕ್ತಿನಿಷ್ಠರು.
27. ದಣಿವರಿದ ದುಡಿಮೆಗಾರರು.
28. ಸ್ವತಂತ್ರ ನಿರ್ಧಾರ ಮಾಡುವ ಶಕ್ತಿವುಳ್ಳವರು.
29. ಯಾವಾಗಲು ಕುತೂಹಲಿಗಳಾಗಿರುವರು.
30. ತಮ್ಮ ಒಂಟಿತನದ ಬಗ್ಗೆ ವ್ಯಥೆ ಪಡಲಾರರು.
31. ಹರಿತವಾದ ವಿಮರ್ಶಾ ಶಕ್ತಿ ಹೊಂದಿರುವರು.
32. ತಟ್ಟನೆ ದೋಷಗಳನ್ನು ಗುರುತಿಸುವರು.
33. ಭಾವಜೀವಿಗಳು.
34. ಸೂಕ್ಷ್ಮ ಸಂವೇದನಾಶೀಲರು.
35. ಮಹತ್ವಾಕಾಂಕ್ಷಿಗಳು.
36. ಅಲ್ಪ ತೃಪ್ತರಲ್ಲ.
37. ನಿರ್ಧಾರ ದೃಢರು.
38. ಪರರ ಸಾಧನೆಗಳನ್ನು ಮೀರಲು ಪ್ರಯತ್ನಿಸುವರು.
39. ತಮ್ಮ ಸಾಧನೆಗಳನ್ನು ತಾವೇ ಮೀರ ಬಯಸುವರು.
40. ತಮ್ಮಲ್ಲಿ ತಾವು ಅಪಾರ ವಿಶ್ವಾಸ ಹೊಂದಿರುವರು.
41. ಸಾಂಪ್ರದಾಯಿಕ ಚಿಂತನೆ ಹೊಂದಿರುವರು.
42. ನಮ್ರತೆ ಹೊಂದಿರುವರು.
43. ಸ್ವಂತಿಕೆ ಹೊಂದಿರುವರು.
44. ಮಾತು ಅಥವಾ ಕೃತಿಗಳಲ್ಲಿ ನಿರರ್ಗಳತೆ ಹೊಂದಿರುವರು.
45. ದಿನನಿತ್ಯದ ಮಾಮೂಲಿ ಸಂಗತಿಗಳಲ್ಲಿ ಅನಾಸಕ್ತರು.
46. ಸುತ್ತಲಿನ ಆಗುಹೋಗುಗಳಿಗೆ ತೀವ್ರವಾಗಿ ಸ್ಪಂದಿಸುವರು.
47. ತಮ್ಮ ತಪ್ಪುಗಳಿಂದ ಮಾರ್ಗದರ್ಶನ ಹೊಂದುವರು.
48. ಹೊಸ ಕಲ್ಪನೆ ವಿಚಾರಗಳನ್ನು ಸ್ವೀಕರಿಸುವ ಶಕ್ತಿ ಉಳ್ಳವರು.
49. ಶೀಘ್ರವಾಗಿ ಉದ್ರೇಕ ಹೊಂದುವ ಪ್ರವೃತ್ತಿಯವರು.
50. ಸಹಜ ಸ್ವಭಾವದವರು.
51. ಸ್ವಯಂ ಸ್ಫೂರ್ತರು.
52. ಬುದ್ಧಿವಂತರು.
53. ವಿಶಿಷ್ಟ ಆತ್ಮಬಲವುಳ್ಳವರು.
54. ಹೊಸ ಅನುಭವಗಳನ್ನು ಬಯಸುವವರು.
55. ಸುಲಭವಾಗಿ ದ್ವಂದ್ವಗಳಿಗೆ ಬಲಿಯಾಗುವರು.
56. ಕರ್ತವ್ಯ ಪ್ರಜ್ಞೆಯುಳ್ಳವರು.
57. ಅರ್ಪಣಾಮನೋಭಾವವುಳ್ಳವರು.
58. ಸ್ವಂತ ಭದ್ರತೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.
59. ಕಾರ್ಯನಿರತರಾದಾಗ ಮೈಮರೆಯುವವರು.

ಬಿ. ಕ್ಲಾರ್ಕವರು ಸೃಜನಶೀಲರನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ ಪ್ರತಿ ಗುಂಪಿನ ಲಕ್ಷಣಗಳನ್ನು ಪಟ್ಟಿ ಮಾಡಿರುತ್ತಾರೆ.

**ಸಂಜ್ಞಾನಾತ್ಮಕ ತಾರ್ಕಿಕ ಸೃಜನಶೀಲರ ಲಕ್ಷಣಗಳು**

ಸ್ವಯಂ ಶಿಸ್ತಿನವರು, ಸ್ವತಂತ್ರರು, ಹಲವು ಬಾರಿ ಸರ್ವಾಧಿಕಾರಿ ಧೋರಣೆಯ ವಿರೋಧಿಗಳು.

ತಾತ್ವಿಕ ಹಾಸ್ಯಪ್ರಜ್ಞೆಯುಳ್ಳವರು.

ಗುಂಪಿನ ಒತ್ತಡ ತಡೆದುಕೊಳ್ಳಬಲ್ಲವರು.

ಹೊಂದಿಕೊಳ್ಳಬಲ್ಲವರು.

ಸಾಹಸಿಗಳು.

ಅನಾನುಕೂಲ ಮತ್ತು ಅನಿರ್ದಿಷ್ಟ ಪರಿಸ್ಥಿತಿಗಳನ್ನು ತಾಳಿಕೊಳ್ಳಬಲ್ಲರು.

ಬೇಸರದ ಸ್ಥಿತಿ ತಾಳಲಾರದವರು.

ಮುಕ್ತ ಮನಸ್ಕರು, ಸಂಕೀರ್ಣತೆ ಮತ್ತು ಅಸಮಂಜಸತೆಗೆ ಆದ್ಯತೆ ಕೊಡುವವರು.

ವಿಗಮನಶೀಲ (ಕೇಂದ್ರಾಪಗಾಮಿ Divergent) ಚಿಂತನೆ

ಉತ್ತಮ ಅವಧಾನ ಮತ್ತು ಸ್ಮೃತಿ ಹೊಂದಿರುವವರು.

ವಿಶಾಲವಾದ ಜ್ಞಾನದ ಹಿನ್ನೆಲೆ ಹೊಂದಿರುವರು.

Digitised by Bharatavani, CIIL

ಚಿಂತನ ಅವಧಿಗಳನ್ನು ಬಯಸುವವರು.

ಪರಿಸರ ಸೂಕ್ಷ್ಮತೆ ಹೊಂದಿರುವವರು, ಪೂರಕ ವಾತಾವರಣ ಬಯಸುವವರು.

ಗುರುತಿಸುವಿಕೆ ಮತ್ತು ಹಂಚಿಕೊಳ್ಳುವಿಕೆಯ ಅಗತ್ಯವಿರುವವರು.

ಉನ್ನತ ಸೌಂದರ್ಯಾತ್ಮಕ ಮೌಲ್ಯಗಳು ಮತ್ತು ನಿರ್ಧಾರಗಳನ್ನು ಹೊಂದಿರುವವರು.

**ಭಾವನಾತ್ಮಕ [ಸಂವೇಗಾತ್ಮಕ] ಸೃಜನಶೀಲರ ಲಕ್ಷಣಗಳು**

ವಿಶೇಷವಾದ ಗ್ರಹಿಕೆ ಉಳ್ಳವರು.

ಸ್ವಯಂಸ್ಫೂರ್ತ ಅಭಿವ್ಯಕ್ತಿ ಸಾಮರ್ಥ್ಯ ಹೊಂದಿದವರು.

ಅಪರಿಚಿತ, ಒಗಟಾದ, ರಹಸ್ಯಮಯವಾದ ವಿಷಯಗಳಿಗೆ ಹೆದರದವರು. ಅವುಗಳ ಬಗ್ಗೆ ಆಸಕ್ತಿ ತೋರುವರು.

ಸ್ವಾರ್ಥ–ನಿಸ್ವಾರ್ಥ, ಕರ್ತವ್ಯ–ಸಂತಸ, ಕೆಲಸ–ಆಟ, ಅಭಿಮಾನ–ನಿರಭಿಮಾನ ಮುಂತಾದ ದ್ವಂದ್ವಗಳನ್ನು ಪರಿಹರಿಸಿಕೊಳ್ಳ ಬಲ್ಲವರು.

ಸಮನ್ವಯ ಮಾಡಬಲ್ಲರು.

ಸ್ವಯಂ ಸ್ವೀಕೃತಿ ಇರುವವರು, ಸ್ವಂತ ಪ್ರವೃತ್ತಿ, ಚಿಂತನೆ, ಭಾವನೆಗಳ ಬಗ್ಗೆ ಭಯವಿಲ್ಲದವರು.

ತಮ್ಮನ್ನು ಹೆಚ್ಚು ಪ್ರಯೋಜನ, ಸಂತಸ ಮತ್ತು ಸೃಜನಶೀಲತೆ ಹಚ್ಚಿಕೊಂಡು ಕಡಿಮೆ ಸಮಯವನ್ನು ಸ್ವಂತ ರಕ್ಷಣೆಗೆ ಬಳಸುವವರು.

ಶಿಖರಾನುಭವಗಳನ್ನು (ಮೇಲ್ಮಟ್ಟದ ಅನುಭವಗಳು) (Peak Experiences) ಹೊಂದಿರುವವರು.

ಏಕಾಗ್ರತೆ ಹೊಂದಿರುವವರು.

ತಾವು ಸೃಜನಶೀಲರು ಅನ್ನುವುದನ್ನು ಅನುಭವಿಸಬಲ್ಲರು.

ನಿತ್ಯ ನವೀನರು.

ಒತ್ತಡ ಮತ್ತು ದ್ವಂದ್ವಗಳಿಂದ ತಪ್ಪಿಸಿಕೊಳ್ಳುವುದಕ್ಕಿಂತ ಅವುಗಳನ್ನು ಸ್ವೀಕರಿಸುವರು.

ಪರರ ನಿರೀಕ್ಷೆ ಮತ್ತು ಭಾವನೆಗಳಿಗೆ ಸ್ಪಂದಿಸುವರು.

ಕಡಿಮೆ ಪ್ರಮಾಣದಲ್ಲಿ ರಕ್ಷಣಾ ತಂತ್ರಗಳನ್ನು ಬಳಸುವರು.

ಸ್ವತಂತ್ರರು ಮತ್ತು ಸ್ವಯಮಾಧಿಕಾರ ಮಾಡಬಲ್ಲವರು.

**ಸಂವೇದನಾಶೀಲ (Sensitive) ಸೃಜನಶೀಲರ ಲಕ್ಷಣಗಳು**

ಹೊಸ ಅನುಭವ ಮತ್ತು ಹೊಸ ಕಲ್ಪನೆಗಳಿಗೆ ಮುಕ್ತತೆ.

ಆಂತರಿಕ ಮೌಲ್ಯಮಾಪನ ಶೀಲತೆ.

ಪರಿಕಲ್ಪನೆ ಮತ್ತು ಅಂಶಗಳೊಡನೆ ಆಡುವ ಸಾಮರ್ಥ್ಯ.

ತಾಜಾತನವುಳ್ಳ ಗ್ರಹಿಕೆ.

ಒಳ ಹೊರಗಿನ ವಿಶ್ವದ ಬಗ್ಗೆ ಕಳಕಳಿ.

ಮುಗಿತಾಯ ಮತ್ತು ನಿರ್ಧಾರಗಳಿಗೆ ಹಾರದಿರುವ ಗುಣ.

ಸಾಂಪ್ರದಾಯಿಕ ಕಲೆಗಳ ಕೌಶಲಪೂರ್ಣ ಅಭಿವ್ಯಕ್ತಿ.

ಉನ್ನತ ಸೈದ್ಧಾಂತಿಕ ಮತ್ತು ಸೌಂದರ್ಯಾತ್ಮಕ ಮೌಲ್ಯಗಳು.

**ಅಂತರ್ಬೋಧವುಳ್ಳ (Intutive) ಸೃಜನಶೀಲರ ಲಕ್ಷಣಗಳು**

ಒಳಗಿನ ದ್ವಂದ್ವಗಳ ಬಗ್ಗೆ ಹೆಚ್ಚು ಅಂತರ್ಬೋಧೆ ಮತ್ತು ಮುಕ್ತತೆ ಉಳ್ಳವರು.

ತಮ್ಮ ಸಾಮರ್ಥ್ಯ ಕ್ಷೇತ್ರ ಬಳಸಿಕೊಳ್ಳಬಲ್ಲವರು.

ಅಪ್ರಜ್ಞಾವಸ್ಥೆ ಮತ್ತು ಅರೆಪ್ರಜ್ಞಾವಸ್ಥೆಯಲ್ಲಿರುವ ಚಿಂತನೆಗಳನ್ನು ಹೊರಗೆಡವಬಲ್ಲರು.

ಸಂವೇದನಾಶೀಲರು.

ಹಗಲುಗನಸು ಕಾಣುವವರು, ಭ್ರಮಾತ್ಮಕ ವಿಶ್ವ ಹೊಂದಿರುವವರು.

ಉತ್ಸಾಹಶೀಲರು ಮತ್ತು ಪ್ರವೃತ್ತಿಯಂತೆ ವರ್ತಿಸುವವರು.

ಬಣ್ಣಗಳನ್ನು ಆಸ್ವಾದಿಸುವ, ಶಬ್ದವನ್ನು ನೋಡುವ, ವಾಸನೆಗಳನ್ನು ಕೇಳುವ ವಿಶಿಷ್ಟವಾದ ಸಾಮರ್ಥ್ಯ (ಸೈನೆಸ್ಥೀಸಿಯ) ಹೊಂದಿರುವವರು.

ಸೃಷ್ಟಿ ಸಮಯದಲ್ಲಿ ಅಸಾಮಾನ್ಯವಾಗಿ ಮಿದುಳಿನ ತರಂಗ ವಿನ್ಯಾಸ ಹೊಂದಿರುವವರು.

ಈ ಲಕ್ಷಣಗಳ ಪಟ್ಟಿ ಸೃಜನಶೀಲ ಮಕ್ಕಳನ್ನು ಗುರುತಿಸಲು ಸಹಾಯ ಮಾಡುತ್ತದೆ.

–ಎ.ಜಿ. ಗೊ.

## ಸಾಮಾಜಿಕ ಸಕ್ರಿಯತೆ

'Activism' ಎಂಬ ಪದಕ್ಕೆ ಪರ್ಯಾಯವಾಗಿ Protest / Dissent ಎಂದು ಹೇಳಬಹುದು. ಈ ಪದ ತುಂಬಾ ವಿಶಾಲವಾದ ಅರ್ಥವನ್ನು ಒಳಗೊಂಡಿರುತ್ತದೆ. Protest– ಅಂದರೆ ಪ್ರತಿಭಟನೆ / ಅಕ್ಷೇಪಣೆ / ವಿರೋಧ ಸೂಚನೆ ಎಂದಾಗುತ್ತದೆ. Dissent – ಅಂದರೆ 'ಅಸಮ್ಮತ' ಎಂದಾಗುತ್ತದೆ ಈ ಪದಗಳನ್ನು ಗಮನಿಸಿದಾಗ ಸಕ್ರಿಯತೆ ಶಬ್ದ ತುಂಬಾ ವಿಸ್ತೃತ ಅರ್ಥವನ್ನು ಹೊಂದಿರುವುದು ಕಂಡು ಬರುತ್ತದೆ. ಸಕ್ರಿಯತೆ ರಾಜಕೀಯ ಅಭಿಪ್ರೇರಿತ ಲಕ್ಷಣವನ್ನು ಹೊಂದಿರುವುದು. ರಾಜಕೀಯ, ಆರ್ಥಿಕ, ಸಾಮಾಜಿಕ ಅರಾಜಕತೆಯ ವಿರುದ್ಧ ನಡೆಯ ಬಹುದಾದ ಮುಷ್ಕರಗಳು, ರ್‍ಯಾಲಿಗಳು, ರಸ್ತೆ ಮೆರವಣಿಗೆ, ಉಪವಾಸ ಮುಷ್ಕರಗಳು, ಗೆರಿಲ್ಲಾ ಮುಷ್ಕರ ಇತ್ಯಾದಿ ತಂತ್ರಗಳನ್ನು ಒಳಗೊಂಡ ಒಂದು ಸಹಭಾಗಿತ್ವ ಕಾರ್ಯ ಚಟುವಟಿಕೆಯಾಗಿರುತ್ತದೆ. ಸಮಾಜದ ಬೇರೆ ಬೇರೆ ಗುಂಪುಗಳು ಒಂದು ವಿಚಾರಧಾರೆಯಿಂದ ಪ್ರಭಾವಿರಾಗಿ, ನಾಯಕನಿಂದ ಪ್ರೇರಣೆ ಪಡೆಸುವುದು ಸಾಮಾಜಿಕ, ನ್ಯಾಯಿಕ, ಶೈಕ್ಷಣಿಕ, ಆರ್ಥಿಕ ಬದಲಾವಣೆಗಳಿಗೆ ಸಕ್ರಿಯವಾಗಿ ನಡೆಸುವ ಹೋರಾಟವನ್ನು 'ಸಾಮಾಜಿಕ ಸಕ್ರಿಯತೆ' ಎನ್ನುತ್ತಾರೆ.

'ಸಾಮಾಜಿಕ ಸಕ್ರಿಯತೆ' ಕೆಲವೊಮ್ಮೆ ಪ್ರತಿಭಟನಾ ರೂಪದಲ್ಲಿರದೆ ಬೇರೆ ರಾಷ್ಟ್ರದಲ್ಲಿ ಬದಲಾವಣೆ ಹೊಂದಿವೆ. ಉದಾಹರಣೆಗೆ ಸಹಕಾರ ಚಳವಳಿಯ ತತ್ವಗಳ ಆಧಾರದ ಮೇಲೆ ನೇರವಾಗಿ ವರ್ತನೆಗಳನ್ನು ಬದಲಾವಣೆ ಮಾಡುವ ವಿಧಾನ, ಅಂದರೆ, ಸಕ್ರಿಯ ಸಹಕಾರ ಚಟುವಟಿಕೆಗಳ ಮೂಲಕ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಪರಿವರ್ತನೆ ಮಾಡುವ ವಿಧಾನವಾಗಿದೆ. ಉದಾಹರಣೆಗೆ : ಹೆಸರಾಂತ ಸಕ್ರಿಯಗಾರರಾದ ಮಹಾತ್ಮ ಗಾಂಧೀಜಿ, ಲೆನಿನ್, ಮಾರ್ಟಿನ್ ಲೂಥರ್, ಸೀಜರ್ ಚಾವೇಜ್, ಚಿಗುವೇರ – ಮುಂತಾದವರು ತಮ್ಮದೇ ಆದ


Digitised by Bharatavani, CIIL

ತತ್ವ ಆಧಾರಿತ ಅಸಹಕಾರ ಚಳವಳಿಗಳ ಮೂಲಕ ಹೊಸ ಅಲೆಯನ್ನು ಸಮಾಜದಲ್ಲಿ ಮೂಡಿಸಿದ್ದಾರೆ.

**ಪರಿವರ್ತನೆ**

ಸಕ್ರಿಯತೆಯು ಪರಿವರ್ತನೆಯ ಅಂಶವನ್ನು ಒಳಗೊಂಡಿರುತ್ತದೆ. ಅಂದರೆ ಜಗತ್ತಿನ ರಾಷ್ಟ್ರಗಳ ಜನರ ಒಳ – ಹೊರಗಿನ ಸೃಜನಶೀಲ ಪರಿವರ್ತನೆ ಅಂದರೆ ಅರ್ಥಪೂರ್ಣ ಪರಿವರ್ತನೆ ಮಾಡುವುದಾಗಿದೆ. ಉದಾಹರಣೆಗೆ : ಶಾಂತಿಯನ್ನು ಕಾಪಾಡುವುದು. ಸಂಯುಕ್ತ ರಾಷ್ಟ್ರಗಳ ವ್ಯಾಖ್ಯಾನ ಪ್ರಕಾರ – "ಹಲವಾರು ಸಂಘರ್ಷಗಳಿಂದ ಉಂಟಾದ ತೀವ್ರತೆಯನ್ನು ಹೋಗಲಾಡಿಸಿ ಆಯಾಯ ರಾಷ್ಟ್ರಗಳಲ್ಲಿ ಶಾಂತಿ ನೆಲೆಸುವಂತೆ ಮಾಡುವುದು" – ಎಂಬ ಅಭಿಪ್ರಾಯವಿದೆ. ಇಂತಹ 'ಶಾಂತಿ ಪಾಲಕರು ಶಾಂತಿ ಒಪ್ಪಂದ ಒಡಂಬಡಿಕೆ ಮಾಡಿ ಕೊಂಡ ನಂತರ ಶಾಂತಿ ಪ್ರಕ್ರಿಯೆಯನ್ನು ಅವಲೋಕಿಸುವುದು ಮತ್ತು ಶಾಂತಿ ಕಾಪಾಡಲು, ಅನುಷ್ಠಾನಗೊಳಿಸಲು ಕೈಗೊಳ್ಳಬಹುದಾದ ಕೆಲವು ಸಹಾಯಕ ತಂತ್ರಗಳನ್ನು ಅನುಸರಿಸಲಾಗುತ್ತದೆ. ಸಹಾಯಕ ತಂತ್ರಗಳಾದ – ಭರವಸೆ ಮೂಡಿಸುವುದು, ಶಕ್ತಿ ಸಾಮರ್ಥ್ಯ ಹಂಚಿಕೆ, ವಿದ್ಯುನ್ಮಾನ ಸಹಾಯ, ಕಾನೂನು ಬಲಗೊಳಿಸುವುದು, ಸಾಮಾಜಿಕ ಮತ್ತು ಆರ್ಥಿಕ ಬಲಗೊಳಿಸುವುದು–ಈ ಬಗೆಯ ತಂತ್ರಗಳಾಗಿವೆ ಜನ ಸಮುದಾಯಗಳಲ್ಲಿ ವಿಭಿನ್ನತೆ / ವೈವಿಧ್ಯತೆ ಉಂಟು ಮಾಡುವುದು. ಜನಾಂಗೀಯ ಸಮುದಾಯದಲ್ಲಿ ಹೊಸ ಆದರ್ಶ, ಹೊಸ ಸಂಸ್ಕೃತಿ, ಹೊಸ ದೃಷ್ಟಿಕೋನ ವಿಶಾಲ ದೃಷ್ಟಿ ರೂಪಿಸಿ ಒಂದು ಹೊಸ ರೂಪಕ್ಕೆ ತರುವ 'ಸಾಕ್ಷರತಾ ಪರಿವರ್ತನೆ'ಯನ್ನು ಇದು ಉಂಟು ಮಾಡಬಹುದು. ಹಾಗೆಯೇ ಆರ್ಥಿಕ ಬದಲಾವಣೆ ತರುವುದು – ಇತ್ಯಾದಿ ಅಂಶಗಳನ್ನು ಗಮನಿಸಿದಾಗ ಪರಿವರ್ತನೆ ಸಕ್ರಿಯತೆಯ ನೈಜ ಮೌಲ್ಯವನ್ನು ಕಾಪಾಡುವುದಾಗಿದೆ. ಹೀಗಾಗಿ 'ಸಕ್ರಿಯತೆ' ಒಂದು ಪರಿವರ್ತನಾ ಶೀಲತೆಯ ಅಂಶವನ್ನು ಒಳಗೊಂಡ ಸಾಮೂಹಿಕ ಸಹಭಾಗಿತ್ವ ಹಾಗೂ ಸೃಜನಶೀಲತೆ ರೂಪಿಸುವ ಮಹತ್ವದ ಅಂಶವಾಗಿ ಪರಿಣಮಿಸುತ್ತದೆ. 'ಪರಿವರ್ತನಾ ಸಕ್ರಿಯತೆ' – ತುಂಬಾ ಆತ್ಮೀಯತೆ, ಪ್ರೀತಿ, ವಿಶ್ವಾಸ, ಶಾಂತಿ, ಸಹಾನುಭೂತಿ, ಅನುರೂಪತೆಯ ಅಂಶಗಳನ್ನು ಒಳಗೊಂಡಿರುತ್ತದೆ. ಸಕ್ರಿಯತೆ – ಸಾಮಾನ್ಯ ಕನಸುಗಳು, ಸಾಮಾಜಿಕ ಚಳುವಳಿ, ನೈಜ ಸ್ವಯಂ ಸೇವೆ – ಇತ್ಯಾದಿ ಉತ್ತಮ ಅಂಶಗಳನ್ನು ಒಳಗೊಂಡಿರುತ್ತದೆ.

**ಸಕ್ರಿಯತೆ ವಿಧಗಳು:** ಸಕ್ರಿಯತೆ ಅನೇಕ ರೂಪಗಳಲ್ಲಿ ವ್ಯಕ್ತವಾಗಬಹುದು.

1. ನಾಗರಿಕ ಅವಿಧೇಯತೆ (Civil Disobediance)
2. ಸಮುದಾಯ ನಿರ್ಮಾಣ (Community Building)

ಅ) ಕೈಗಾರಿಕೆ ಸಕ್ರಿಯತೆ (Activism Industry)

ಆ) ಸಂಘರ್ಷ ಪರಿವರ್ತನೆ (Conflict Transformation)

ಇ) ಸಹಕಾರ ಚಳವಳಿ (Co-operative Movement)

ಈ) ಹಸ್ತಕೌಶಲ್ಯವಾದ (Craftivism)

3. ಆರ್ಥಿಕ ಸಕ್ರಿಯತೆ (Economic Activism)

ಅ) ಬಹಿಷ್ಕಾರ (Boycott)

ಆ) ತಪ್ಪಿಸುವುದು (Divestment)

4. ಮತದಾನಾಧಿಕಾರ ಸಕ್ರಿಯತೆ (Franchise Activism)
5. ಒಲೈಕೆ / ಪ್ರಭಾವ ಬೀರುವುದು (Lobbying)
6. ಮಾಧ್ಯಮ ಸಕ್ರಿಯತೆ (Media Activism)

ಎ) ಸಂಸ್ಕೃತಿ ಸ್ಥಗಿತಗೊಳಿಸುವುದು (Culture Jamming)

ಬಿ) ಗುಲಾಮಗಿರಿತನ (Hacktivism)

ಸಿ) ಅಂತರ್ಜಾಲ ಸಕ್ರಿಯತೆ (Internet Activism)

7. ಅಹಿಂಸಾ ಹೋರಾಟ (Non-violent Confrontation)

ಎ) ರಾಜಕೀಯ ಆಂದೋಲನ (Political Campaign)

8. ಪ್ರಚಾರ (Propaganda)

ಎ) ಗೆರಿಲ್ಲಾ ಸಂಪರ್ಕ / ಸಮರದೋಪಾದಿ ಸಂಪರ್ಕ

9. ಪ್ರತಿಭಟನೆ (Protest)

ಎ) ಪ್ರದರ್ಶನ (Demonstration)

ಬಿ) ನೇರ ಪ್ರತಿಕ್ರಿಯೆ (Direct Action)

ಸಿ) ಬೀದಿನಾಟಕ ಪ್ರತಿಭಟನೆ / ರಂಗಾಭಿನಯ ಮೂಲಕ ಬದಲಾವಣೆ (Theater for Social Change)

ಡಿ) ಹಾಡಿನ ಮೂಲಕ ಪ್ರತಿಭಟನೆ (Protest Songs)

10. ಮುಷ್ಕರ ಪ್ರತಿಕ್ರಿಯೆ (Strike Action)
11. ಯುವ ಸಕ್ರಿಯತೆ (Youth Activism)

ಎ) ವಿದ್ಯಾರ್ಥಿ ಸಕ್ರಿಯತೆ (Student Activism)

ಬಿ) ಯುವಕರ ಮುಖಂಡತ್ವ (Youth - Led Media)

**ಯುವ ಜನ ಸಕ್ರಿಯತೆ**

ಯುವ ಜನತೆ ಸಮುದಾಯ ಸಂಘಟನೆ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ತನ್ನ ಧ್ವನಿ ಎತ್ತಲು ಪ್ರಯತ್ನಿಸುತ್ತದೆ. ಇಡೀ ವಿಶ್ವದಲ್ಲಿಯೇ ಯುವ ಜನತೆ ಸಕ್ರಿಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತದೆ. ಯುವ ಜನತೆ–ಯೋಜನಾಗಾರರಾಗಿ, ಸಂಶೋಧಕರಾಗಿ, ಬೋಧಕರಾಗಿ, ಮೌಲ್ಯಮಾಪಕರಾಗಿ, ಸಾಮಾಜಿಕ ಕಾರ್ಯಕರ್ತರಾಗಿ, ತೀರ್ಪುಗಾರರಾಗಿ, ವಕೀಲರಾಗಿ ಮತ್ತು ಉತ್ತಮ ನಟರಾಗಿ ಭಾಗವಹಿಸುತ್ತಾರೆ. ಯುವ ಜನತೆ – ಪರಿಸರ ಆಂದೋಲನ, ಸಾಮಾಜಿಕ ನ್ಯಾಯ ಸಂಘಟನೆ, ಸಹಾಯ, ನ್ಯಾಯ ಸಮ್ಮತ ಹೋರಾಟ, ಮತ್ತು ಜನಾಂಗೀಯ ಧೋರಣೆ ವಿರುದ್ಧ ಹೋರಾಟ. ಅಸಮಾನತೆ ವಿರುದ್ಧ ಧ್ವನಿ ಎತ್ತುತ್ತದೆ ಯುವ ಜನತೆ ಸಕ್ರಿಯತೆಯು ವಿದ್ಯಾರ್ಥಿಗಳ ಶಾಲಾ ಸೌಲಭ್ಯಗಳು, ಬದಲಾವಣೆಗಳು, ಪಠ್ಯ ಬದಲಾವಣೆ – ಇತ್ಯಾದಿ ವಿಷಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದುಂಟು.

**ಯುವಜನ ಸಕ್ರಿಯತೆ ಮಾದರಿಗಳು**

ಯುವಜನ ಸಕ್ರಿಯತೆ ಮಾದರಿಗಳನ್ನು ಪ್ರಮುಖವಾಗಿ ಮೂರು ಮಾದರಿಗಳಲ್ಲಿ ಕಾಣಬಹುದು.

**೧. ಸಾಮಾಜಿಕ ಬದಲಾವಣೆಯಲ್ಲಿ ಯುವಜನರ ಸಕ್ರಿಯತೆ**

ಇಡೀ ಜಗತ್ತಿನಲ್ಲಿ ಯುವ ಜನಾಂಗ ಸಾಮಾಜಿಕ ಸಂಘಟನೆ, ಸಂರಚನೆ, ನಾಯಕತ್ವ ಇತ್ಯಾದಿಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

Digitised by Bharatavani, CIIL

ವಿದ್ಯಾರ್ಥಿ ಯುವ ಶಕ್ತಿ–ಶಿಕ್ಷಣ ಸುಧಾರಣೆ, ಮಕ್ಕಳ ಹಕ್ಕುಗಳು, ಆಡಳಿತ ಸುಧಾರಣೆಯಲ್ಲಿ ಸಹಭಾಗಿತ್ವ, ಇತರೆ ವಿಷಯಗಳಲ್ಲಿ ಯುವಜನತೆ ಧ್ವನಿ ಎತ್ತುವುದುಂಟು.

**೨. ಯುವಜನ ಚಾಲಿತ ಸಕ್ರಿಯತೆ**

ಯುವಜನತೆ ತನ್ನದೇ ಆದ ಬಳಗ/ಒಕ್ಕೂಟಗಳನ್ನು ರಚನೆ ಮಾಡಿಕೊಳ್ಳುವ ಮೂಲಕ ಸಮವಯಸ್ಕರ ಗುಂಪುರಚನೆ, ಸಂಘಟನೆ, ಸಾಮಾಜಿಕ ಚಳುವಳಿಯಲ್ಲಿ ಭಾಗವಹಿಸುವರು. ಉದಾಹರಣೆಗೆ– ಯುವ ಜನರ‍್ಯಾಲಿ, ರಾಷ್ಟ್ರೀಯ ಯುವಜನ ಹಕ್ಕು ಸಂಘ.

**೩. ಯುವಜನ ಚಾಲಿತ ಸಾಮಾಜಿಕ ಸಂಘಟನೆಗಳು**

ಸಾಮಾಜಿಕ ಪರಿಸರದಲ್ಲಿ ಸಕ್ರಿಯ ಕಾರ್ಯಚಟುವಟಿಕೆ ವಿನ್ಯಾಸಗಳೂ, ಸವಾಲುಗಳು – ಇತ್ಯಾದಿ ಅವುಗಳನ್ನು ಒಳಗೊಂಡಂತೆ ಯುವಜನತೆ ಪ್ರಮುಖ ಪಾತ್ರ ವಹಿಸುತ್ತದೆ. ಇಡೀ ಜಗತ್ತಿನಲ್ಲಿಯೇ ಯುವ ಜನತೆ ಇಲ್ಲದ ಕಾರ್ಯಗಳಿಲ್ಲ. ವಿಶ್ವ ಮಟ್ಟದಲ್ಲಿ World Federation of Democratic Youth , UNNGO ರಚನೆಯಾಗಿವೆ.

**ಅಮೇರಿಕಾ ಸಂಯುಕ್ತ ಸಂಸ್ಥಾನ (USA) ರಾಷ್ಟ್ರಗಳ ಯುವಜನ ಸಕ್ರಿಯತೆ :–**

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಯುವಜನ ಸಕ್ರಿಯತೆ ಒಂದು ಸಾಮಾಜಿಕ ಪರಿವರ್ತನ ವಿದ್ಯಮಾನವಾಗಿ ಬೆಳೆದಿದೆ. 19ನೇ ಶತಮಾನದ ಅಂತ್ಯದಲ್ಲಿ ಯುವಜನತೆ ಕಾರ್ಮಿಕರ ಸಮಸ್ಯೆಗಳು, ಸಂಬಳ/ಕೂಲಿ, ಸಮಯದ ಬಗ್ಗೆ ಮುಷ್ಕರ ಪ್ರಾರಂಭಿಸಿತು. ಗಣಿಗಾರಿಕೆಯಲ್ಲಿ ಬಾಲಕಾರ್ಮಿಕರು ದುಡಿಯುವ ಬಗ್ಗೆ ಹೋರಾಟಗಳನ್ನು ಪ್ರಾರಂಭಿಸಿತು. ಪುನರ್ ವಸತಿಗಾಗಿ ಚಳವಳಿಯನ್ನು ಪ್ರಾರಂಭಿಸಿತು. 1930ರಲ್ಲಿ ಅಮೇರಿಕಾ ಯುವ ಕಾಂಗ್ರೆಸ್ (Bill of Youth Rights - US Congress) ರಚನೆಯಾಯಿತು.1940ರ ಸಮಯಕ್ಕೆ ಇಡೀ ಸಂಯುಕ್ತ ಸಂಸ್ಥಾನದಲ್ಲಿ ವಿದ್ಯಾರ್ಥಿ ಸಮೂಹವು ಅಹಿಂಸಾ ಚಳವಳಿಯನ್ನು ಪ್ರಾರಂಭಿಸಿ ನಾಗರೀಕ ಹಕ್ಕುಗಳಿಗಾಗಿ ಹೋರಾಟ ಮಾಡಿದರು. 1960ರ ವೇಳೆಗೆ ಯುವಜನತೆ ಸಕ್ರಿಯತೆ ಪ್ರಬಲವಾಗಿ ಬೆಳೆಯಿತು. ಮೇರಿ ಹಾಸಿಸ್–ತಾಯಿ ಜೋನ್ಸನ್‌ರವರು ಸಂಯುಕ್ತ ರಾಷ್ಟ್ರಗಳಲ್ಲಿ ಪ್ರಥಮವಾಗಿ ಬಾಲಕಾರ್ಮಿಕರ (ಕಲ್ಲಿದ್ದಲ್ಲು ಗಣಿ) ಪುನರ್ ವಸತಿ ಹೋರಾಟಕ್ಕೆ ಯುವಜನತೆ ಸಕ್ರಿಯತೆಯನ್ನು ಬಲಪಡಿಸಿದರು. ಹಾಗೆಯೇ ಮಾರ್ಟಿನ್ ಲೂಥರ್, ಫೌಲೋ ಫ್ರೈಯರಿ ಮತ್ತು ಇತರರು ಯುವ ಸಕ್ರಿಯತೆಯನ್ನು ಸಂಘಟಿಸುವ ಮೂಲಕ ಸಾಮಾಜಿಕ ಅಸಮಾನತೆ, ಹಕ್ಕು ಹೋರಾಟ, ಪರಿಸರ ರಕ್ಷಣೆ ಇತ್ಯಾದಿ ವಿಷಯಗಳ ಬಗ್ಗೆ ಹೋರಾಟ ಪ್ರಾರಂಭಿಸಿದರು. ಇಂದು ಇಡೀ ವಿಶ್ವದಲ್ಲಿ ಯುವಜನ ಸಕ್ರಿಯತೆ ಒಂದು ಶಕ್ತಿಯಾಗಿ ಪರಿಣಮಿಸಿ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ.

**ಸಮುದಾಯ ಸಂಘಟನಾ ಗುಂಪುಗಳು**

ಸಮುದಾಯ ಸಂಘಟನೆ ಒಂದು ಪ್ರಕ್ರಿಯೆ. ಸಮುದಾಯದ ಎಲ್ಲಾ ಜನಾಂಗಗಳು ಸೌಹಾರ್ದಯುತ ಜೀವನ ನಡೆಸಲು ರೂಪಿಸಬಹುದಾದ ಒಂದು ಸಂಘಟನಾಕ್ರಿಯೆ. ಸಮುದಾಯ ಬಲವರ್ಧನೆ ಮಾಡುವುದು, ಸಾಮಾಜಿಕ ಬದಲಾವಣೆ, ಸವಾಲುಗಳು, ಹೋರಾಟ, ಇತ್ಯಾದಿ ಧನಾತ್ಮಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಳ್ಳುವ ಮೂಲಕ ಧ್ವನಿ ಇಲ್ಲದವರಿಗೆ ಧ್ವನಿ ಕೊಡುವ ಒಂದು ಸಂಘಟನೆಯೇ ಸಮುದಾಯ ಸಂಘಟನೆ ಸಾಮುದಾಯಿಕ ಗುಂಪುಗಳು ಆಂದೋಲನಗಳ ಮೂಲಕ ಸಾಮಾಜಿಕ, ಆರ್ಥಿಕ, ಆಡಳಿತ, ಸಾಂಸ್ಕೃತಿಕ ಬದಲಾವಣೆಗಳನ್ನು ತರುವ ತ್ವರಿತ ಚಳುವಳಿಗಳನ್ನು ಹಮ್ಮಿಕೊಳ್ಳುತ್ತವೆ. ತ್ವರಿತ ಸುಧಾರಣೆ ತರುವಲ್ಲಿ ಉಂಟಾಗುವ ಸಮಸ್ಯೆಗಳನ್ನು ಧರಣಿ, ಮುಷ್ಕರ, ಜಮಾವಣೆ, ಚಳವಳಿ ಇತ್ಯಾದಿ ಕಾರ್ಯಾಚಟುವಟಿಕೆಗಳ ಮೂಲಕ ಬಗೆಹರಿಸುವ ಕಾರ್ಯವನ್ನು ಗುಂಪುಗಳು ಮಾಡುತ್ತದೆ. ಈ ಗುಂಪುಗಳು ಸಾಮಾನ್ಯವಾಗಿ ಯುವ ಜನತೆಯನ್ನು ಒಳಗೊಂಡ ಶಕ್ತಿ ಸಂಘಟನೆಯಾಗುತ್ತವೆ.

ಸಮುದಾಯ ಗುಂಪುಗಳ ಸಂಘಟನಾ ಮಾದರಿಗಳನ್ನು ಸ್ಯಾಹುಲ್ ಆಲಿಂಕ್‌ಸ್ಕೈರವರು ಜನ ಸಾಮಾನ್ಯ ಗುಂಪು, ಸಂಘಟನೆ, ಗುಂಪು ನಂಬಿಕೆ ಆಧಾರಿತ ಗುಂಪು, ಶಕ್ತಿ v/s ವಿರೋಧದ ಗುಂಪು, ರಾಜಕೀಯ ಅಭಿಸ್ಥಾಪನೆ, ಹಣಕಾಸು ಸಂಘಟಿತ ಗುಂಪು–ಇತ್ಯಾದಿಗಳಾಗಿ ಹೆಸರಿಸುತ್ತಾರೆ. ಕೆಳಮಟ್ಟದ ಗುಂಪಿನ (Grass roots and door - Knocking Groups) ಉದ್ದೇಶ ಅಸಂಘಟಿತ ಹಾಗೂ ಸ್ಥಳೀಯ ಸೌಲಭ್ಯ ವಂಚಿತ ಜನ ಸಾಮಾನ್ಯರಿಗೆ ನ್ಯಾಯ ಒದಗಿಸುವುದಾಗಿದೆ. ಮಧ್ಯಮವರ್ಗದ ಜನ ಮತ್ತು ದಲಿತ ವರ್ಗವನ್ನು ಮುಖ್ಯ ವಾಹಿನಿಗೆ ತರುವುದು, ಸಂಘಟಿತ ಸಂಘಟನೆಗಳ ಮೂಲಕ ಭಾಷೆ, ಸಂಸ್ಕೃತಿ ಉಳಿವಿಗಾಗಿ ಹೋರಾಟ ನಡೆಸುವುದಾಗಿದೆ. ಸಮುದಾಯ ಸಂಘಟನಾ ಶಕ್ತಿಯಿಂದ ಪ್ರಬಲವಾದ ಬಲಪ್ರಯೋಗ ಮಾಡುವ ಮೂಲಕ ಸಂಘಟನಾ ಶಕ್ತಿಯನ್ನು ಬಲಪಡಿಸಿಕೊಳ್ಳುವುದುಂಟು. ರಾಜಕೀಯ ಅಭಿಸ್ಥಾಪನಾ ಗುಂಪುಗಳು ಸಹ ರಾಜಕೀಯ ವಿಕಾಸ ದತ್ತ ಸಾಗುತ್ತವೆ. ಉದಾಹರಣೆಗೆ 2008ರಲ್ಲಿ ಅಮೇರಿಕಾ ಜನತಂತ್ರ ಗಣ ರಾಜ್ಯದಲ್ಲಿ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಕ್ರಿಶ್ಚಿಯನ್ ಗುಂಪನ್ನು ಕಾಣಬಹುದು. ಹಾಗೆಯೇ ಹಣಕಾಸಿನ ಬಲವರ್ಧನೆಗಾಗಿ ಗುಂಪು ಸಂಘಟನೆ ರೂಪಿಸಿ ಕೊಳ್ಳುವ ಮೂಲಕ ಸಂಘ, ಸಂಸ್ಥೆಗಳ ವಿಕಾಸಕ್ಕೆ ಸರ್ಕಾರದಿಂದ ನೆರವನ್ನು ಪಡೆಯುವುದು.

**ಸಕ್ರಿಯತೆ ಮತ್ತು ಶಿಕ್ಷಣ**

ಜಗತ್ತಿನಲ್ಲಿ ಸಾಮಾಜಿಕ ಪರಿವರ್ತನೆಗೆ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಇಲ್ಲಿ ಶಿಕ್ಷಣದಲ್ಲಿ ಸಕ್ರಿಯತೆ ಮತ್ತು ಸಕ್ರಿಯತೆಯಲ್ಲಿ ಶಿಕ್ಷಣದ ವ್ಯತ್ಯಾಸವನ್ನೂ ಸೂಕ್ಷ್ಮವಾಗಿ ಗಮನಿಸಬಹುದು.

ಸಕ್ರಿಯತೆಗೆ ಶಿಕ್ಷಣ ನೆರವು ನೀಡಿದರೆ, ಸಕ್ರಿಯತೆಯು ಶಿಕ್ಷಣಕ್ಕೆ ನೆರವಾಗುತ್ತದೆ. ಶಿಕ್ಷಣ ಮತ್ತು ಸಕ್ರಿಯತೆ ಪರಸ್ಪರ ಅನ್ಯೋನ್ಯತೆ ಹೊಂದಿವೆ. ಶಿಕ್ಷಣದಲ್ಲಿ ಸಕ್ರಿಯತೆಯು ಶಿಕ್ಷಣ ಕ್ರಮದಲ್ಲಿ ಬದಲಾವಣೆ, ಶಿಕ್ಷಣ ಸಾರ್ವತ್ರೀಕರಣ ಹಕ್ಕು, ಶಾಲಾ ಕಾರ್ಯಕ್ರಮಗಳಲ್ಲಿ ಸಕ್ರಿಯತೆ, ಶಿಕ್ಷಣ ನೀತಿಗಳ ಬದಲಾವಣೆ, ಪಠ್ಯವಸ್ತು ಬದಲಾವಣೆ, ಪಠ್ಯೇತರ ಕಾರ್ಯಕ್ರಮಗಳ ಪೈಯರಿ ವಿನ್ಯಾಸ, ಪರಿಸರ ಸಂರಕ್ಷಣೆ, ವಯಸ್ಕರ ಶಿಕ್ಷಣ ಆಂದೋಲನ ಇತ್ಯಾದಿ ವಿಷಯಗಳಲ್ಲಿ ಅಭಿಸ್ಥಾಪನೆ ಮಾಡಲು ನೆರವಾಗುವುದು.

ಸಕ್ರಿಯತೆ ಸಮುದಾಯದಲ್ಲಿ ಜಾಗೃತಿ, ಬಲವರ್ಧನೆ ಉಂಟುಮಾಡಿದರೆ, ಶಿಕ್ಷಣ ವಿಮೋಚನೆ ದೊರಕಿಸಿ ಕೊಡುತ್ತದೆ ಅಂದರೆ ಜನ ಸಮುದಾಯದಲ್ಲಿ ಹೊಸ ಆಲೋಚನೆ, ಚಿಂತನೆ, ಹೊಸಮಾರ್ಗಗಳನ್ನು ತೋರಿಸುತ್ತದೆ. ಜಗತ್ತಿನ ಸವಾಲುಗಳನ್ನು ಅರಿತು ಅವುಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳಲು ಜಾಗೃತಿ ಮೂಡಿಸುತ್ತದೆ. ಶಿಕ್ಷಣದಲ್ಲಿ ಹೊಸ ಕ್ರಾಂತಿ ರೂಪಿಸಿ ಬದಲಾವಣೆಗಳನ್ನು ತರುತ್ತದೆ. ಸಕ್ರಿಯತೆ ವೈಜ್ಞಾನಿಕ ಮನೋಭಾವನೆ, ಸಂಶೋಧನೆ, ಅಂತರಾವಲೋಕನ ಮೂಡಿಸುವ ಒಂದು ಪ್ರಬಲ ಪ್ರಕ್ರಿಯೆಯಾಗಿರುತ್ತದೆ. ಸಕ್ರಿಯತೆ As Activism is to Education, Education is to Liberate ಎನ್ನುವ ಘೋಷಣೆಯನ್ನು ಒಳಗೊಂಡಿರುತ್ತದೆ.

Digitised by Bharatavani, CIIL

**ಸಕ್ರಿಯತೆ ಮತ್ತು ಸಂಘಟನೆ**

ಸಾಮಾಜಿಕ ಬದಲಾವಣೆಯ ವಿಚಾರಗಳು ವ್ಯಕ್ತಿಗಳಿಂದ ಬರುತ್ತವೆ ಈ ವಿಚಾರಗಳು ವ್ಯಕ್ತಿಗಳೊಂದಿಗೆ ಚರ್ಚೆ, ಸಂವಾದ, ಸಹಭಾಗಿತ್ವ ಸಕ್ರಿಯತೆ ಮೂಲಕ ರೂಪುಗೊಳ್ಳುತ್ತವೆ. ವಿಚಾರಗಳು ಪರಿಣಾಮಕಾರಿ ಕ್ರಿಯೆಗಳಾಗಿ ಪರಿಣಮಿಸುತ್ತವೆ. ಪರಿಣಾಮಕಾರಿ ವಿಚಾರಗಳು ಗುಂಪಿನ/ಸಮುದಾಯದ ಬದಲಾವಣೆಗೆ ನಾಂದಿಯಾಗುತ್ತವೆ. ಪರಿಣಾಮಕಾರಿ ವಿಚಾರಗಳು ಸಂಘಟಿತ ಕ್ರಮದಿಂದ ಹೊರ ಬರುತ್ತವೆ. ಈ ಸಂಘಟನೆ ಮೂಲಸ್ಥರದ ಜನಸಮುದಾಯದಿಂದ ಹೊರ ಹೊಮ್ಮುತ್ತದೆ. ಸಂಘಟಿತ ವಿಚಾರಗಳು ಸಾಮಾಜಿಕ ಬದಲಾವಣೆ ತರುತ್ತವೆ. ಅಲ್ಲದೆ ವ್ಯಕ್ತಿಯ, ಸಮಾಜದ ಹಾಗೂ ರಾಜ್ಯ, ರಾಷ್ಟ್ರೀಯ ಧ್ಯೇಯಗಳನ್ನು ತಲುಪಲು ನೆರವಾಗುತ್ತವೆ. ಸಮುದಾಯ, ರಾಷ್ಟ್ರದಲ್ಲಿ ಗೌರವ, ಪ್ರತಿಷ್ಠೆ, ಐಕಮತ್ಯ ಹೆಚ್ಚಿಸುತ್ತವೆ. ಸಂಘಟಿತ ಗುಂಪು ಸಕ್ರಿಯರಾಗಿ ಪರಿಣಮಿಸುತ್ತದೆ. ಈ ಸಕ್ರಿಯ ಗುಂಪು ರಾಜಕೀಯ ಸಂಘಟನೆಯಾಗಿ ರೂಪುಗೊಳ್ಳುತ್ತದೆ ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆ, ಹೊಸನೀತಿ, ಮೌಲ್ಯ, ಹೊಸ ತಂತ್ರ, ಉಪಾಯಗಳು ರೂಪುಗೊಳ್ಳುತ್ತವೆ. ಸಕ್ರಿಯತೆ ಒಂದು ಸಂಘಟಿತ ಶಕ್ತಿ, ಇದೊಂದು ಸಕ್ರಿಯ ಸಂಸ್ಥಾ ಮಾಧ್ಯಮವಾಗಿ ಪರಿಣಮಿಸುತ್ತದೆ.

**ಸಕ್ರಿಯತೆ ಮತ್ತು ಪರಿವರ್ತನೆ**

ಸಾಮಾಜಿಕ ಪಿಡುಗುಗಳಲ್ಲಿ ಒಂದಾದ ಭ್ರಷ್ಟಾಚಾರ ಮತ್ತು ಒತ್ತಾಯ ಪೂರಕವಾದ ಕೆಲವು ಶೋಷಣೆಗಳನ್ನು ಹೋಗಲಾಡಿಸುವುದು ಸಾಧ್ಯವಾಗದ ಮಾತಾಗಿತ್ತು. ಇಂತಹ ಪಿಡುಗನ್ನು ಹೋಗಲಾಡಿಸಲು ಹೋರಾಟ ಅನಿವಾರ್ಯವಾಗುತ್ತದೆ. ಉದಾಹರಣೆಗೆ : ಅಮೇರಿಕಾದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುವಲ್ಲಿ ಪ್ರಯತ್ನಿಸಿರುವುದು ಸಾಮಾಜಿ ಪುನರ್ ನಿರ್ಮಾಣವಾಗಿ ಪರಿಣಮಿಸಿತು. ಸಮಾಜದಲ್ಲಿ ವ್ಯಕ್ತಿಗಳ ಮಾನವನ ನೈತಿಕ ಮೌಲ್ಯಗಳ ಅಧೋಗತಿಗೆ ಕಾರಣವಾಗಿ ಇಡೀ ಸಮಾಜ ಶೋಷಣೆ ಮತ್ತು ಭ್ರಷ್ಟತೆಯಲಿ ಮುಳುಗಿರುವುದು ಒಂದು ಸವಾಲಾಗಿ ಪರಿಣಮಿಸಿದೆ ಇಂತಹ ಸವಾಲುಗಳನ್ನು ಎದುರಿಸಲು ಸಕ್ರಿಯತೆಯ ಅಗತ್ಯವಿರುತ್ತದೆ. ಆಂದೋಲನದ ಮೂಲಕ ಸಾಮಾಜಿಕ ಮೌಲ್ಯ, ನಂಬಿಕೆಗಳನ್ನು ಬಿತ್ತುವ ಕಾರ್ಯ ಸಕ್ರಿಯ ಚಟುವಟಿಕೆಗಳ ಮೂಲಕ ನಡೆಯುತ್ತದೆ ಇದರಿಂದ ಸಾಮಾಜಿಕ ಬದಲಾವಣೆಗೆ ನಾಂದಿಯಾಗುತ್ತದೆ. ಸಾಮಾಜಿಕ ಪರಿವರ್ತನೆಯಾಗುವ ಸಾಧ್ಯತೆ ಇರುತ್ತದೆ.

**ಸಕ್ರಿಯತೆ ಮತ್ತು ರಾಜಕೀಯ ಹಕ್ಕುಗಳು**

ಪ್ರಸ್ತುತ ದಿನಗಳಲ್ಲಿ ಪ್ರತಿಯೊಬ್ಬ ನಾಗರಿಕ ತನ್ನ ಹಕ್ಕು ಮತ್ತು ಕರ್ತವ್ಯ, ಸಂವಿಧಾನ, ನೀತಿ, ನಿಯಮಗಳನ್ನು ತಿಳಿದುಕೊಂಡು ತನ್ನದೇ ಆದ ನೈತಿಕ ಜೀವನ ನಡೆಸಬೇಕಾಗುತ್ತದೆ. ಇಡೀ ಜಗತ್ತಿನಲ್ಲಿ ಇತ್ತೀಚೆಗೆ ಮಾನವನ ಹಕ್ಕುಗಳ ತಿಳುವಳಿಕೆ ಕಾರ್ಯಕ್ರಮಗಳು ಭರದಿಂದ ಸಾಗಿವೆ. ಸಮಾನತೆ, ನ್ಯಾಯ, ಅಧಿಕಾರ, ಹಕ್ಕು, ಮೌಲ್ಯ, ನಿಯಮಗಳನ್ನು ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಆದ್ಯಕರ್ತವ್ಯ. ಈ ನಿಟ್ಟಿನಲ್ಲಿ ಅಂದೋಲನಗಳು ನಡೆಯುತ್ತಿವೆ. ಉದಾಹರಣೆಗೆ ಸಾರ್ವತ್ರಿಕ ಮಾನವ ಹಕ್ಕುಗಳ ಹೋರಾಟ, ಪರಿಸರ ಸಂರಕ್ಷಣೆ, ಈ ಬಗೆಯ ಹಕ್ಕುಗಳ ಹೋರಾಟ ಆಂದೋಲನಗಳಿಗೆ ಉದಾಹರಣೆಯಾಗಿ ವಾಷಿಂಗ್‌ಟನ್ ನ್ಯಾಯಾವಾದಿಗಳ ಸಂಘ ಇತ್ಯಾದಿಗಳನ್ನು ಗಮನಿಸಬಹುದು. ಭಾರತದಲ್ಲಿ ವಿದ್ಯಾರ್ಥಿ ಸಂಘಗಳು, ಇಂತಹ ಅನೇಕ ಸಂಘಟನೆಗಳು, ಸಂಸ್ಥೆಗಳು ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಆಂದೋಲನಗಳನ್ನು ಪ್ರಾರಂಭಿಸಿರುವುದು ಗಮನಾರ್ಹ. ಈ ಆಂದೋಲನಗಳು ಸಾಮಾಜಿಕ ರಾಷ್ಟ್ರ ಅಂತರಾಷ್ಟ್ರೀಯ ಶಾಂತಿ ಕಾಪಾಡಲು ಮತ್ತು ಸಾಮಾಜಿಕ ಬದಲಾವಣೆ ತರುವಲ್ಲಿ ನೆರವಾಗುತ್ತವೆ. ಇಂತಹ ಆಂದೋಲನಗಳು ಜನ ಸಾಮಾನ್ಯರ, ಸಂಘ, ಸಂಸ್ಥೆಗಳ ಸಕ್ರಿಯತೆಯು ಒಂದು ಶಕ್ತಿಯಾಗಿ ಪರಿಣಮಿಸಿ ಹೊಸ ಪುನರ್ ಜೀವನ ಸ್ಥಾಪಿಸಲು ನೆರವಾಗುತ್ತವೆ.

**ಸಕ್ರಿಯತೆ ಮತ್ತು ಸ್ತ್ರೀ ಆಂದೋಲನ**

1942ರ 'ಭಾರತ ಬಿಟ್ಟು ತೊಲಗಿ' ಆಂದೋಲನ ಭಾರತದ ಇತಿಹಾಸದಲ್ಲಿ ಸ್ತ್ರೀಯರ ಪಾತ್ರ ವಿಸ್ತಾರದಲ್ಲಿ ಒಂದು ಮೈಲುಗಲ್ಲಾಗಿದೆ. ಪುರುಷನಷ್ಟೇ ಸ್ತ್ರೀಯು ಭಾರತದ ಸಮಾಜದಲ್ಲಿ ಸಮಾನತೆ ಹೊಂದಿರುತ್ತಾಳೆ. ಸ್ತ್ರೀಯು ಕೌಟುಂಬಿಕ ಮತ್ತು ಸಾಮಾಜಿಕ, ರಾಜಕೀಯ ಬದಲಾವಣೆಗೆ ಕಾರಣೀಭೂತಳಾಗಿದ್ದಾಳೆ. ಸ್ವತಂತ್ರ ಸಂಗ್ರಾಮದಿಂದ ಹಿಡಿದು ಇಲ್ಲಿಯವರೆಗೆ ಮಹಿಳೆ ತನ್ನದೇ ಆದ ಸಹಭಾಗಿತ್ವ ಹೊಂದಿ, ಸಕ್ರಿಯತೆಯಿಂದ ಸಾಮಾಜಿಕ ಬದಲಾವಣೆಗಳಲ್ಲಿ ಭಾಗವಹಿಸಿದ್ದಾಳೆ. ಇತ್ತೀಚಿನ ದಿನಗಳಲ್ಲಿ ಸ್ತ್ರೀ ಶಕ್ತಿ ಸಂಘ, ಸಂಸ್ಥೆಗಳು ಶೋಷಣೆ, ಭ್ರಷ್ಟಾಚಾರ, ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ, ಧರಣಿ, ಮುಷ್ಕರ, ರ್‍ಯಾಲಿಗಳು ಇತ್ಯಾದಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಾಮಾಜಿಕ ಬದಲಾವಣೆ ಕಾರ್ಯದಲ್ಲಿ ಧ್ವನಿಗೂಡಿಸುತ್ತಿದ್ದು ಗಮನಾರ್ಹ ವಿಷಯವಾಗಿದೆ. ಸ್ತ್ರೀ ಸಬಲೀಕರಣ, ಸ್ತ್ರೀಶಕ್ತಿ, ಹಕ್ಕು, ಕರ್ತವ್ಯ, ಸಂವಿಧಾನ, ಸಮಾನತೆ ಇತ್ಯಾದಿ ಅಂಶಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಮಹಿಳಾ ವಿದ್ಯಾರ್ಥಿನಿಯರು ಭಾಗವಹಿಸುವುದು ಮತ್ತು ಸಾಮಾಜಿಕ ವಿಕಾಸ ಕಾರ್ಯದಲ್ಲಿ ಸಕ್ರಿಯತೆ ಬೆಳೆಸಿ ಕೊಂಡಿರುವುದು ಮೆಚ್ಚುವಂತಹ ಕಾರ್ಯವಾಗಿದೆ. ಸ್ತ್ರೀ ಸಕ್ರಿಯತೆಯು ಸಹ ಸಾಮಾಜಿಕ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ನೈತಿಕ ಕ್ಷೇತ್ರಗಳ ಪ್ರಗತಿಗೆ ನೆರವಾಗುತ್ತದೆ.

2010–11ರಲ್ಲಿ 'ಸಿವಿಲ್ ಸೊಸೈಟಿ' ಎಂಬ ಸಂಘವನ್ನು ರೂಪಿಸಿಕೊಂಡು ಗಾಂಧಿವಾದಿ, ಸಾಮಾಜಿಕ ಹೋರಾಟಗಾರ ಅಣ್ಣಾಹಜಾರೆ, ನಿವೃತ್ತ ಪೋಲಿಸ್ ಅಧಿಕಾರಿ ಕಿರಣ್‌ಬೇಡಿ, ಕರ್ನಾಟಕದ ನ್ಯಾಯಮೂರ್ತಿ ಸಂತೋಷ ಹೆಗ್ಡೆ, ಅರವಿಂದ್ ಕೇಜರಿವಾಲ್, ನ್ಯಾಯಮೂರ್ತಿಗಳಾದ ಶಾಂತಿಭೂಷಣ್, ಪ್ರಶಾಂತ ಭೂಷಣ್ ಮುಂತಾದವರು ದೇಶದಲ್ಲಿ ಆಳವಾಗಿ ಬೇರು ಬಿಟ್ಟಿರುವ ಭ್ರಷ್ಟಾಚಾರವನ್ನು ದೂರಮಾಡಲು ಪ್ರಬಲ ಜನಲೋಕಪಾಲ್ ಕಾಯ್ದೆಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ದೇಶವ್ಯಾಪಿ ಆಂದೋಲನವನ್ನು ಅಹಿಂಸಾತ್ಮಕವಾಗಿ ಆರಂಭಿಸಿದರು. ಇದರಲ್ಲಿ ಸಮಾಜದ ಎಲ್ಲಾ ವರ್ಗದವರು ಹೆಚ್ಚಾಗಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಹೋರಾಟದ ಫಲವಾಗಿ ಕೇಂದ್ರಸಂಸತ್ತು ಜನಲೋಕಪಾಲ್ ಕಾಯ್ದೆ ತರಲು ಕಾರ್ಯ ಆರಂಭಿಸಿತು.

ಇದೇ ಸಮಯದಲ್ಲಿ ಪ್ರಸಿದ್ಧ ಯೋಗ ಗುರು ಬಾಬಾ ರಾಂದೇವ್ ಹೊರದೇಶಗಳಲ್ಲಿ ಬಚ್ಚಿಟ್ಟಿರುವ ಕೋಟಿಗಟ್ಟಲೆ ಕಪ್ಪು ಹಣವನ್ನು ವಾಪಸ್ ತರಲು ಕಾಯ್ದೆ ರೂಪಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಈ ಹೋರಾಟದಲ್ಲಿ ಸಮಾಜದ ಬಹುಭಾಗ ಸಕ್ರಿಯವಾಗಿ ಭಾಗವಹಿಸಿತ್ತು. ಈ ಹೋರಾಟ ಯಶಸ್ವಿಯಾಯಿತೆಂದು ಹೇಳಲು ಸಾಧ್ಯವಿಲ್ಲವಾದರೂ ಸಮಾಜದ ಗಮನವನ್ನು ಬಚ್ಚಿಟ್ಟಿರುವ ಕಪ್ಪು ಹಣದ ಕಡೆಗೆ ಸೆಳೆಯುವಲ್ಲಿ ಈ ಸಕ್ರಿಯತೆ ಯಶಸ್ವಿಯಾಯಿತು ಎನ್ನಬಹುದು.

–ಎ.ಬ

Digitised by Bharatavani, CIIL

## ಸಾಧನಾ ಅಭಿಪ್ರೇರಣೆ

ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ನಾವು ಅವಲೋಕಿಸಿದಾಗ ಕೆಲವು ವ್ಯಕ್ತಿಗಳು ಏನನ್ನಾದರೂ ಸಾಧಿಸಬೇಕೆನ್ನುವ ತೀವ್ರ ಬಯಕೆಯನ್ನು ಹೊಂದಿದವರಾಗಿರುವುದನ್ನೂ, ಇನ್ನೂ ಕೆಲವರು ಯಾವುದೇ ರೀತಿಯಾದ ಬಯಕೆಯನ್ನು ಹೊಂದಿಲ್ಲದೆ ನಿರ್ಲಿಪ್ತರಾಗಿರುವುದನ್ನು ಗಮನಿಸುತ್ತೇವೆ. ವ್ಯಕ್ತಿ ತನ್ನ ಅಗತ್ಯತೆಗಳ ಹಾಗೂ ಆಕಾಂಕ್ಷೆಗಳ ಪೂರೈಕೆಗಾಗಿ ಯಾವುದಾದರೂ ನಿರ್ದಿಷ್ಟ ಗುರಿಯನ್ನು ಆಯ್ದುಕೊಂಡು ಅದನ್ನು ಸಾಧಿಸಬೇಕಾಗುತ್ತದೆ. ಈ ಸಾಧನೆಗೆ ಒತ್ತು ನೀಡುವಂತೆ ವ್ಯಕ್ತಿಯ ಆಂತರಿಕ ಹಾಗೂ ಬಾಹ್ಯ ಪರಿಸರಗಳು ಅವನಿಗೆ ಪ್ರಚೋದನೆ ನೀಡುತ್ತವೆ. ಈ ಪ್ರಚೋದನೆಗಳು ವ್ಯಕ್ತಿಯಲ್ಲಿ ಸಾಧಿಸಬೇಕೆಂಬ ಪ್ರೇರಣೆಯನ್ನು ಉಂಟುಮಾಡುತ್ತವೆ. ಬಾಹ್ಯ ಪ್ರೇರಣೆಗಳು ಹೊರಗಿನ ಪ್ರಪಂಚದಿಂದ ವ್ಯಕ್ತಿಗೆ ದೊರಕುವ ಪ್ರಚೋದನೆಗಳಾದರೆ ಆಂತರಿಕ ಪ್ರೇರಣೆಗಳು ವ್ಯಕ್ತಿಯ ಒಳಗಿನಿಂದ ಹೊರಹೊಮ್ಮುತ್ತವೆ ಮತ್ತು ವ್ಯಕ್ತಿಗೆ ಆತ್ಮ ಸಂತೋಷ ನೀಡುತ್ತವೆ. ಅಭಿಪ್ರೇರಣೆಗಳ ಮೇಲೆ ಅಧ್ಯಯನ ಮಾಡಿದ ಮನಃಶಾಸ್ತ್ರಜ್ಞರು, ಸಾಧನಾ ಅಭಿಪ್ರೇರಣೆಯು (Achievement Motivation) ಸಾಂದರ್ಭಿಕ ಚಲಕಗಳು ಹಾಗೂ ವ್ಯಕ್ತಿಯ ಆಂತರಿಕ ಪ್ರೇರಣೆಯ ನಡುವಿನ ಕ್ರಿಯೆ–ಪ್ರತಿಕ್ರಿಯೆಗಳ ಉತ್ಪನ್ನ ಎಂಬುದಾಗಿ ತಿಳಿಸಿದ್ದಾರೆ.

ಒಬ್ಬ ವ್ಯಕ್ತಿಯಲ್ಲಿ ಏನನ್ನಾದರೂ ಸಾಧಿಸಬೇಕೆನ್ನುವ ತೀವ್ರ ಆಂತರಿಕ ಪ್ರೇರಣೆಯನ್ನು ಸಾಧನಾ ಅಭಿಪ್ರೇರಣೆ ಎನ್ನುತ್ತೇವೆ. ಒಬ್ಬ ವ್ಯಕ್ತಿಯ ಎಲ್ಲಾ ಕ್ರಿಯೆಗಳ ಹಿಂದಿನ ಚಾಲನಾ ಶಕ್ತಿಯೇ ಸಾಧನಾ ಅಭಿಪ್ರೇರಣೆ ಎನ್ನಬಹುದು. ಸಾಧನಾ ಅಭಿಪ್ರೇರಣೆಯು ಯಾವಾಗಲೂ ಒಬ್ಬ ವ್ಯಕ್ತಿಯ ಮನೋಭಾವನೆಗಳು ಹಾಗೂ ಸಾಮರ್ಥ್ಯಗಳ ಮೇಲೆ ಅವಲಂಬಿತವಾಗಿರುತ್ತದೆ. ಒಬ್ಬ ವ್ಯಕ್ತಿಯ ಅವಶ್ಯಕತೆಗಳು, ಆಸೆಗಳು, ಆಕಾಂಕ್ಷೆಗಳು ಹಾಗೂ ಜೀವನಾದರ್ಶಗಳು ಸಾಧನಾ ಅಭಿಪ್ರೇರಣೆಗೆ ಮೂಲಕಾರಣಗಳಾಗಿರುತ್ತವೆ. ಸಾಧನಾ ಅಭಿಪ್ರೇರಣೆಯು ವ್ಯಕ್ತಿಯ ಸಾಧನೆಗೆ ಸಂಬಂಧಪಟ್ಟ ಮನೋಧೋರಣೆ ಹಾಗೂ ವರ್ತನೆಗಳ ಮೇಲೆ ಪರಿಣಾಮ ಬೀರುತ್ತದೆ. ಸಾಧನಾ ಅಭಿಪ್ರೇರಣೆಗೆ ಸಂಬಂಧಪಟ್ಟಂತೆ ಎರಡು ರೀತಿಯಾದ ಮನೋಧೋರಣೆಳನ್ನು ಕಾಣಬಹುದು.

1. ಕ್ರಿಯಾಭಾಗಿತ್ವ ಮನೋಧೋರಣೆ
2. ಅಹಂ – ಭಾಗಿತ್ವ ಮನೋಧೋರಣೆ

**ಸಾಧನಾ ಪ್ರೇರಣೆಯ ಸ್ವರೂಪ** – ಮೆಕ್ಲೆಲ್ಯಾಂಡ್ ಸಾಧನಾ ಪ್ರೇರಣೆಯ(n-ach) ಸ್ವರೂಪವನ್ನು ಅಧ್ಯಯನ ಮಾಡಲು ಆ ಪ್ರೇರಣೆಗೆ ಸಂಬಂಧಿಸಿದಂತೆ ಅಮೆರಿಕಾ ಸಮಾಜದಲ್ಲಿ, ಇತರ ಸಂಸ್ಕೃತಿಗಳಲ್ಲಿ ಇರಬಹುದಾದ ವ್ಯಕ್ತಿ ವ್ಯತ್ಯಾಸಗಳ ಬಗ್ಗೆ ಅನೇಕ ಅಧ್ಯಯನಗಳನ್ನು ಮಾಡಿದರು. ಭಾರತದಲ್ಲಿಯೂ ಅವರ ಮಾರ್ಗದರ್ಶನದಲ್ಲಿ ಸಾಧನಾ ಪ್ರೇರಣೆಯ ಬಗ್ಗೆ ಅಧ್ಯಯನಗಳು ನಡೆದವು

ಮೆಕ್ಲೆಲೆಂಡರ್ ಅನುಯಾಯಿಯಾದ ಅಟ್ಕಿನ್‌ಸನ್ ಸಾಧನಾ ಪ್ರೇರಣೆಯ ಸಿದ್ಧಾಂತವನ್ನು ಇನ್ನೂ ವಿವರವಾಗಿ ರೂಪಿಸಿದರು. ಸಾಧನಾ ಪ್ರೇರಣೆಯ ಸ್ವರೂಪವನ್ನು ವಿವರಿಸಲು ಅಟ್ಕಿನ್‌ಸನ್ ಈ ಕೆಳಗಿನ ಚರಾಂಶಗಳನ್ನು ಆಧಾರಸೂತ್ರಗಳಾಗಿ ಊಹಿಸಿಕೊಂಡಿದ್ದಾರೆ.

| | |
|---|---|
| (ಎ) ಸಾಧಿಸಬೇಕೆಂಬ ಪ್ರೇರಣೆ ಅಥವಾ ಸಫಲತೆಯ ಪ್ರೇರಣೆ (Motive for Success) | Ms. |
| ಸಫಲತೆಯ ಸಂಭಾವ್ಯತೆ (Probabiloy of Success) | Ps. |
| ಪ್ರೋತ್ಸಾಹಕದ ಮೌಲ್ಯ (Value of incentive) | Is |
| ಸಾಧನೆಯ ಗುರಿಯೆಡೆಗೆ ಮುಂದುವರಿಯುವ ಪ್ರವೃತ್ತಿ (Tendency to approach the goal) | Ts. |

ಈ ಚಲಕಗಳಿಂದ ಈ ಸೂತ್ರ ರೂಪಿತವಾಗಿದೆ.
Ts = (Ms) x (Ps) X (Is)

| | |
|---|---|
| (ಬಿ) ವಿಫಲತೆಯನ್ನು ತಪ್ಪಿಸಿಕೊಳ್ಳುವ ಪ್ರೇರಣೆ (Motive to avoid failure) | Maf |
| ವಿಫಲತೆಯ ಸಂಭಾವ್ಯತೆ (Probability of Failure) | Pf |
| ವಿಫಲತೆಯ ಮೌಲ್ಯ (Value of failure) | If |
| ವಿಫಲತೆಯನ್ನು ತಪ್ಪಿಸಿಕೊಳ್ಳುವ ಪ್ರವೃತ್ತಿ (Tendency to avoid failure) | Taf |

ಈ ಚಲಕಗಳಿಂದ ಮತ್ತೊಂದು ಸೂತ್ರ ರೂಪಿತವಾಗುತ್ತದೆ.

Taf = (Maf) x (Pf) x (-If)

ಮೊದಲನೇ ಸೂತ್ರ ಸಾಧಿಸಬೇಕೆಂಬ ಸಫಲವಾಗಬೇಕೆಂಬ ಪ್ರೇರಣೆ (Ms) ಸಫಲತೆಯ ಸಂಭಾವ್ಯತೆ ಗುರಿ ಸಾಧನೆಗೆ ಇರುವ ಪ್ರೋತ್ಸಾಹಕದ ಮೌಲ್ಯ ಮತ್ತು ಗುರಿಯೆಡೆಗೆ ಮುಂದುವರಿಯಬೇಕೆನ್ನುವ ಆಂತರಿಕ ಪ್ರೇರಣೆ ಈ ಚಲಕಗಳ ಸಂಯುಕ್ತ ಫಲಿತವಾಗಿರುತ್ತದೆ ಎಂದು ವಿವರಿಸುತ್ತದೆ. ಇದಕ್ಕೆ ವಿರುದ್ಧವಾಗಿ ವಿಫಲತೆಯನ್ನು ತಪ್ಪಿಸಿಕೊಳ್ಳುವ ಪ್ರೇರಣೆ (Taf) ವಿಫಲತೆಯ ಸಂಭಾವ್ಯತೆ, ವಿಫಲತೆಯ ಮೌಲ್ಯ ಮತ್ತು ವಿಫಲತೆಯನ್ನು ತಪ್ಪಿಸಿಕೊಳ್ಳುವ ಪ್ರವೃತ್ತಿ ಈ ಚರಾಂಶಗಳ ಸಂಯುಕ್ತ ಫಲಿತವಾಗಿರುತ್ತದೆ ಎಂಬುದನ್ನು ಎರಡನೇ ಸೂತ್ರ ವಿವರಿಸುತ್ತದೆ.

ಸಾಧಿಸಬೇಕೆನ್ನುವ ಪ್ರೇರಣೆ ಮತ್ತು ವಿಫಲತೆಯನ್ನು ತಪ್ಪಿಸಿಕೊಳ್ಳುವ ಪ್ರೇರಣೆ ಎರಡೂ ವ್ಯಕ್ತಿಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಇರುತ್ತವೆ. ಈ ಎರಡೂ ಪ್ರೇರಣೆಗಳು ವ್ಯಕ್ತಿಯ ಸಾಧನಾ ಅಭಿಪ್ರೇರಣೆಯ ಮಟ್ಟವನ್ನು ಪ್ರಭಾವಗೊಳಿಸುತ್ತವೆ ಎಂದು ಅಟ್ಕಿನ್‌ಸನ್ ಊಹಿಸಿಕೊಂಡಿದ್ದಾರೆ. ಒಬ್ಬ

Digitised by Bharatavani, CIIL

ವ್ಯಕ್ತಿ ತನ್ನ ಸಾಧನೆಯ ಸಾಧ್ಯತೆ ಬಗ್ಗೆ ಎಷ್ಟೇ ಭರವಸೆಯನ್ನು ಹೊಂದಿದ್ದರೂ ಅವನಲ್ಲಿ ಎಲ್ಲೋ ಒಂದೆಡೆ ವಿಫಲವಾದೇನೆಂಬ ಆತಂಕ ಸ್ವಲ್ಪವಾದರೂ ಇರುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯ ಸಾಧನಾ ಪ್ರೇರಣೆಯ ಮಟ್ಟ ಆ ವ್ಯಕ್ತಿಯಲ್ಲಿ ಇರುವ ಗುರಿಯೆಡೆಗೆ ಮುಂದುವರಿಯುವ ಪ್ರವೃತ್ತಿ ಮತ್ತು ವಿಫಲತೆ ಸಂಭಾವ್ಯತೆ ಬಗ್ಗೆ ವ್ಯಕ್ತಿಯಲ್ಲಿರುವ ಪ್ರವೃತ್ತಿ ಈ ಎರಡೂ ಚರಾಂಶಗಳ ನಿವ್ವಳ ಮೊತ್ತವಾಗಿರುತ್ತದೆ. ಈ ಊಹೆಗಳಿಂದ ಅಟ್ಕಿನ್‌ಸನ್ ಇನ್ನೂ ಎರಡು ಸೂತ್ರಗಳನ್ನು ರೂಪಿಸಿದ್ದಾನೆ.

ಸಫಲತೆಯ ಪ್ರೇರಣೆ ಅಥವಾ ಸಾಧಿಸಬೇಕೆಂಬ ಪ್ರೇರಣೆ (Ms) ವಿಫಲತೆಯನ್ನು ತಪ್ಪಿಸಿಕೊಳ್ಳುವ ಪ್ರೇರಣೆಗಿಂತ (Maf)ಹೆಚ್ಚಾಗಿದ್ದಷ್ಟು ಸಾಧನಾ ಪ್ರೇರಣೆ (Need to achieve More Nach = Ms > Maf) ಹೆಚ್ಚಾಗಿರುತ್ತದೆ.

ವಿಫಲತೆಯನ್ನು ತಪ್ಪಿಸಿಕೊಳ್ಳುವ ಪ್ರೇರಣೆ (Maf) ಸಾಧಿಸಬೇಕೆಂಬ ಪ್ರೇರಣೆಗಿಂತ (Ms) ಹೆಚ್ಚಿದ್ದಷ್ಟು ವ್ಯಕ್ತಿಯ ಸಾಧನಾ ಪ್ರೇರಣೆಯ ಮಟ್ಟ ಕಡಿಮೆಯಾಗುತ್ತದೆ. (Less Nach = Maf > Ms.)

ವಿದ್ಯಾರ್ಥಿಗಳಲ್ಲಿ ವಿಫಲತೆಯ ಆತಂಕದ ಸಂಭಾವ್ಯತೆಯನ್ನು ಕಡಿಮೆಮಾಡಿ, ಸಫಲತೆಯ ಸಾಧ್ಯತೆಯನ್ನು ಹೆಚ್ಚು ಮಾಡಿದರೆ ಅವರ ಸಾಧನೆಯ ಮಟ್ಟ ಹೆಚ್ಚಾಗುತ್ತದೆ. ಇದರ ಜೊತೆಗೆ ಗುರಿಯನ್ನು ಸಾಧಿಸಿದಾಗ ಲಭಿಸಬಹುದಾದ ಸಾಮಾಜಿಕ, ಮಾನಸಿಕ, ಆರ್ಥಿಕ ಪ್ರತಿಫಲಗಳ ಮೌಲ್ಯವೂ ಸಾಧನಾ ಪ್ರೇರಣೆಯನ್ನು ಪ್ರಭಾವಗೊಳಿಸುತ್ತದೆ. ಸಫಲತೆ ಅಥವಾ ಗುರಿಸಾಧನೆಯ ನಿರೀಕ್ಷೆಯೂ ಸಾಧನಾ ಪ್ರೇರಣೆಯನ್ನು ಅಧಿಕಗೊಳಿಸಬಹುದು ಎಂದು ಕಂಡುಬಂದಿದೆ. ವ್ಯಕ್ತಿಗಳಿಗೆ ಒಂದು ಕಾರ್ಯವನ್ನು ವಹಿಸಿದಾಗ, ಅವರು ಏನನ್ನು ಸಾಧಿಸಬೇಕು, ಯಾವ ಮಟ್ಟದಲ್ಲಿ ಸಾಧಿಸಬೇಕೆಂಬುದನ್ನು ಪೂರ್ವಭಾವಿಯಾಗಿ ತಿಳಿಸಿದಾಗ, ಅವರ ಸಾಧನೆಯ ಮಟ್ಟ ಉತ್ತಮಗೊಂಡಿರುವುದು ಕಂಡುಬಂದಿದೆ. ಪ್ರಾವೀಣ್ಯತಾ ಕಲಿಕೆಯಲ್ಲಿ (Mastery Learning) ವಿದ್ಯಾರ್ಥಿಗಳಿಗೆ ಅವರು ಸಾಧಿಸಬೇಕಾದ ಮಟ್ಟವನ್ನು ಮೊದಲೇ ತಿಳಿಸುವುದರಿಂದ ಅವರಲ್ಲಿ ಸಾಧನಾ ಪ್ರೇರಣೆ ಹೆಚ್ಚಾಗಿ ಅವರ ಶೈಕ್ಷಣಿಕ ಸಾಧನೆಯ ಮಟ್ಟ ಉತ್ತಮಗೊಳ್ಳುತ್ತದೆ.

ಕ್ರಿಯಾಭಾಗಿತ್ವ ಮನೋಧೋರಣೆಯು ಒಬ್ಬ ವ್ಯಕ್ತಿಯ ಗ್ರಹಿಸುವಿಕೆ, ಅರ್ಥೈಸಿಕೊಳ್ಳುವಿಕೆ ಹಾಗೂ ಕೌಶಲಗಳನ್ನು ಗಳಿಸಿಕೊಳ್ಳುವಿಕೆಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಅಹಂ ಭಾಗಿತ್ವ ಮನೋಧೋರಣೆಯು ಒಬ್ಬ ವ್ಯಕ್ತಿ ತನ್ನಲ್ಲಿನ ಉತ್ಕೃಷ್ಟ ಸಾಮರ್ಥ್ಯಗಳನ್ನು ಇತರರಿಗೆ ತೋರ್ಪಡಿಸಿಕೊಳ್ಳುವುದರ ಮೇಲೆಯೇ ಕೇಂದ್ರೀಕೃತವಾಗಿರುತ್ತದೆ. ಉದಾಹರಣೆಗೇ ಮಕ್ಕಳು ಶಾಲೆಯಲ್ಲಿ ವಿವಿಧ ಕೌಶಲಗಳನ್ನು ಗಳಿಸಿಕೊಳ್ಳುವುದನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡು ಅವುಗಳನ್ನು ಗಳಿಸಿ ಸಾಧಿಸುವುದು ಕ್ರಿಯಾ ಭಾಗಿತ್ವ ಮನೋಧೋರಣೆಯಾದರೆ, ವ್ಯಕ್ತಿಗಳು, ಸಭೆ-ಸಮಾರಂಭಗಳು, ಚರ್ಚಾಗೋಷ್ಠಿಗಳು ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸುವ ಮೂಲಕ ತಮ್ಮಲ್ಲಿನ ಉತ್ಕೃಷ್ಟ ಸಾಮರ್ಥ್ಯಗಳನ್ನು ಇತರರಿಗೆ ತೋರ್ಪಡಿಸಿಕೊಳ್ಳುವುದು ಅಹಂಭಾಗಿತ್ವ ಮನೋಧೋರಣೆಯಾಗಿರುತ್ತದೆ. ವ್ಯಕ್ತಿಯ ಅಹಂ ತೃಪ್ತಿ ಇಲ್ಲಿ ಸಾಧನೆ ಮಾಡಲು ಮೂಲ ಪ್ರೇರಣೆಯಾಗಿರುತ್ತದೆ.

ಡೇವಿಡ್ ಮ್ಯಾಕ್ಲೆಲ್ಯಾಂಡ್‌ರವರು ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಪ್ಪತ್ತು ವರ್ಷಗಳಕಾಲ ಅಧ್ಯಯನ ನಡೆಸಿ ಸಾಧನಾ ಅಭಿಪ್ರೇರಣೆಯ ಬಗೆಗಿನ ಕೆಲವು ಅಂಶಗಳನ್ನು ಸ್ಪಷ್ಟಪಡಿಸಿದ್ದಾರೆ. ಇವರ ಪ್ರಕಾರ ಸಾಧನೆ ಮಾಡಬೇಕೆನ್ನುವ ಅವಶ್ಯಕತೆಯು ಒಂದು ಮಾನವ ಪ್ರೇರಿತ ವರ್ತನೆಯಾಗಿದ್ದು ಇದು ಮಾನವನ ಬೇರೆ ಅವಶ್ಯಕತೆಗಳಿಗಿಂತ ಭಿನ್ನವಾಗಿರುತ್ತದೆ ಹಾಗೂ ಇದನ್ನು ಇತರೇ ಪ್ರೇರಣೆಗಳಿಂದ ಬೇರ್ಪಡಿಸಬಹುದಾಗಿದ್ದು ಅದನ್ನು ಪ್ರತ್ಯೇಕವಾಗಿ ಅಳತೆ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ. ಮೆಕ್ಲೆಲೆಂಡ ಅವರಿಗಿಂತ ಮೊದಲು ಮಾನವನ ಮೂಲಭೂತ ಅಗತ್ಯತೆಗಳ ಮಾನಸಿಕ ಅಂಶಗಳ ಪ್ರಭಾವದಿಂದ ಮಾನವನಲ್ಲಿ ಮೂಡಿಬರುತ್ತವೆ ಎಂದು ಮರ್ರೆ ಎಂಬುವರು ಮಾನವನು ಮೂಲಭೂತ ಅಗತ್ಯಗಳ ಪಟ್ಟಿ ಸಾಧಿಸುವ ಅಗತ್ಯತೆಯನ್ನು ಸೇರಿಸಿದ್ದರು. ತನಗೆ ಸಾಧ್ಯವಿದ್ದಷ್ಟು ಉತ್ತಮವಾಗಿ ಕಾರ್ಯಮಾಡುವುದು ಸಫಲಪೂರ್ಣ ವ್ಯಕ್ತಿಯಾಗಲು ಯತ್ನಿಸುವುದು, ಕೌಶಲ ಹಾಗೂ ಪ್ರಯತ್ನಗಳಿಂದ ಕೂಡಿದ ಕಾರ್ಯಗಳನ್ನು ಮಾಡುವುದು ಪರಿಣತ, ತಜ್ಞ ಎಂದು ಮಾನ್ಯತೆ ಪಡೆಯುವುದು ಮಹತ್ವಪೂರ್ಣವಾದುದನ್ನು ಮಾಡುವುದು, ಕಠಿಣ ಕಾರ್ಯವೊಂದನ್ನು ಮಾಡಬೇಕೆಂಬ ಅಗತ್ಯತೆಯೇ ಸಾಧನಾ ಅಗತ್ಯತೆ ಎಂದು ಮರ್ರೆ ಸಾಧನಾ ಅಗತ್ಯತೆಯನ್ನು ವ್ಯಾಖ್ಯಾನಿಸಿದ್ದರು. ಮೆಕ್ಲೆಲೆಂಡ್ ಮತ್ತು ಅಟ್ಕಿನ್‌ಸನ್ ತಮ್ಮ ದೀರ್ಘಕಾಲಿಕ ಅಧ್ಯಯನ ಆಧಾರದ ಮೇಲೆ ಸಾಧನಾ ಪ್ರೇರಣೆಯುಳ್ಳವರ ಗುಣಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

- ಸಾಧನಾ ಅಭಿಪ್ರೇರಣೆಯುಳ್ಳವರು ಜೂಜುಕೋರರಲ್ಲ, ಅವರು ಯಾವುದೇ ಕೆಲಸದ ಫಲವನ್ನು ಅದೃಷ್ಟದ ಕೈಗೆ ಬಿಡುವುದಿಲ್ಲ. ಬದಲಾಗಿ ಯಾವುದೇ ಸಾಧನೆಯ ಫಲವನ್ನು ಸ್ವಪ್ರಯತ್ನದಿಂದ ಪಡೆಯಲು ಅಪೇಕ್ಷಿಸುತ್ತಾರೆ.

- ಸಾಧನಾ ಅಭಿಪ್ರೇರಣೆಯುಳ್ಳವರು ಅತಿ ಹೆಚ್ಚಿನ ಅಥವಾ ಅತಿ ಕಡಿಮೆ ಸವಾಲುಗಳನ್ನು ಒಳಗೊಂಡ ಕೆಲಸಗಳನ್ನು ಮಾಡಲಿಚ್ಛಿಸುವುದಿಲ್ಲ. ಬದಲಿಗೆ ಮಧ್ಯಮ ಮಟ್ಟದ ಸವಾಲುಗಳನ್ನು ಒಳಗೊಂಡ ಕೆಲಸಗಳನ್ನು ಮಾತ್ರ ಕೈಗೆತ್ತಿಕೊಳ್ಳುತ್ತಾರೆ. ತಮ್ಮ ಸಾಮರ್ಥ್ಯಕ್ಕೆ ತಕ್ಕಂತಹ ಸಾಧಿಸಬಹುದಾದ ಕಾರ್ಯಗಳಲ್ಲಿ ಮಾತ್ರ ಭಾಗಿಯಾಗುತ್ತಾರೆ.

- ಸಾಧನಾ ಅಭಿಪ್ರೇರಣೆಯುಳ್ಳವರು ಯಾರಿಂದಲೂ ಪ್ರಶಂಸೆಯನ್ನು ನಿರೀಕ್ಷಿಸುವುದಿಲ್ಲ ಬದಲಾಗಿ ವೈಯಕ್ತಿಕ ಸಾಧನೆಯ ಮೇಲೆ ಹೆಚ್ಚು ಗಮನ ನೀಡುತ್ತಾರೆ.

- ಸಾಧನಾ ಅಭಿಪ್ರೇರಣೆಯುಳ್ಳವರು ಹಣವನ್ನು ಅಂತಸ್ತು ಅಥವಾ ಆರ್ಥಿಕ ಭದ್ರತೆಯ ಸಂಕೇತವಾಗಿ ಗುರುತಿಸುವುದಿಲ್ಲ. ಬದಲಾಗಿ ಹಣವನ್ನು ತಮ್ಮ ಕಾರ್ಯಕ್ಷಮತೆಯ ಅಳತೆಗೋಲು ಮತ್ತು ಇತರೇ ವ್ಯಕ್ತಿಗಳೊಂದಿಗೆ ತಮ್ಮ ಬೆಳವಣಿಗೆಯ ಮಟ್ಟವನ್ನು ಅಳೆಯುವ ಸಾಧನ ಎಂಬುದಾಗಿ ಪರಿಗಣಿಸುವವರಾಗಿರುತ್ತಾರೆ.

- ಇತರರಿಗೆ ತಾವೆಷ್ಟು ಸಹಕಾರ ನೀಡುತ್ತೇವೆ, ಸಹಾಯ ಹಸ್ತ ನೀಡುತ್ತೇವೆ ಎಂಬಂತಹ ವೈಯಕ್ತಿಕ ವಿಚಾರಗಳ ಬಗೆಗಿನ ಇತರರ ಅಭಿಪ್ರಾಯಗಳ ಬಗೆಗೆ ಇವರು ಹೆಚ್ಚು ಆಸಕ್ತಿ ವಹಿಸುವುದಿಲ್ಲ.

- ಸಾಧನಾ ಅಭಿಪ್ರೇರಣೆಯುಳ್ಳವರು ತಮ್ಮ ಕೆಲಸಕಾರ್ಯಗಳಿಗೆ ಸಂಬಂಧಿಸಿದ ವಿಷಯಗಳ ಬಗೆಗೆ ಪ್ರತಿಪುಷ್ಟಿಯನ್ನು ಬಯಸುತ್ತಾರೆ ಹಾಗೂ ತಮ್ಮ ಕೆಲಸವನ್ನು ಇನ್ನೂ ಉತ್ತಮ ರೀತಿಯಲ್ಲಿ ಹೇಗೆ ನಿರ್ವಹಿಸಬಹುದು ಎಂದು ಚಿಂತಿಸುತ್ತಾರೆ.

- ಅತಿ ಹೆಚ್ಚು ಸಾಧಿಸಬೇಕೆನ್ನುವ ಛಲ ಹೊಂದಿರುವ ಕಾಲೇಜು ವಿದ್ಯಾರ್ಥಿಗಳು ದುರ್ಬಲ ಸಾಧನಾ ಅಭಿಪ್ರೇರಣೆ ಹೊಂದಿರುವ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ದರ್ಜೆಯನ್ನು ಪಡೆಯುತ್ತಾರೆ.

- ಸಾಧನಾ ಅಭಿಪ್ರೇರಣೆಯುಳ್ಳವರು ತಮ್ಮ ಕೆಲಸದಲ್ಲಿ ಅತಿ ಬೇಗ ಮೇಲೇರುತ್ತಾರೆ ಮತ್ತು ಪ್ರಗತಿ ಸಾಧಿಸುತ್ತಾರೆ.

Digitised by Bharatavani, CIIL

• ಅತಿ ಹೆಚ್ಚು ಸಾಧನಾ ಅಭಿಪ್ರೇರಣೆ ವ್ಯಕ್ತಿಗಳನ್ನು ಹೊಂದಿರುವ ಸಂಸ್ಥೆಗಳು ಅತಿ ವೇಗವಾಗಿ ಹಾಗೂ ಉತ್ತಮ ರೀತಿಯಲ್ಲಿ ಬೆಳೆಯುತ್ತವೆ.

• ಸಾಧನಾ ಅಭಿಪ್ರೇರಣೆಯುಳ್ಳವರು ತಮ್ಮ ಸಂಸ್ಥೆಗೆ ಬೆನ್ನೆಲುಬಾಗಬಲ್ಲರು, ಏಕೆಂದರೆ ಅವರು ತಮ್ಮ ಸಂಸ್ಥೆಯ ಇತರ ವ್ಯಕ್ತಿಗಳಿಂದ ಚೆನ್ನಾಗಿ ಕೆಲಸ ಮಾಡಿಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ.

ಸಾಧನ ಅಭಿಪ್ರೇರಣೆಯುಳ್ಳವರು ವೃತ್ತಿಪರರು, ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ಮಾಡುತ್ತಾರೆ. ಹಾಗೂ ಇತರೇ ಕೆಲಸಗಾರರಿಂದಲೂ ಅದನ್ನೇ ನಿರೀಕ್ಷೆ ಮಾಡುತ್ತಾರೆ. ಈ ಕಾರಣಗಳಿಂದಾಗಿ ಕೆಲವೊಮ್ಮೆ ಅವರಲ್ಲಿ ಮಾನವ ಕೌಶಲಗಳು ಕಡಿಮೆ ಇದ್ದಂತೆ ಹಾಗೂ ತಾಳ್ಮೆ ಕಡಿಮೆಯಾದಂತೆ ಕಾಣಿಸಿಕೊಳ್ಳುತ್ತಾರೆ. ಇತರರು ತಮ್ಮ ನೀರಿಕ್ಷೆಗೆ ತಕ್ಕಂತೆ ಕೆಲಸ ನಿರ್ವಹಿಸದೆ ಇದ್ದಾಗ ಸಾಧನಾ ಅಭಿಪ್ರೇರಣೇಯುಳ್ಳವರು ನಿರಾಶಾ ಭಾವನೆಯನ್ನು ಹೊಂದುತ್ತಾರೆ ಈ ನಿರಾಶೆಯು ಕೆಲವೊಮ್ಮೆ ಅವರ ಸಾಮರ್ಥ್ಯವನ್ನು ಮೊಟಕುಗೊಳಿಸಬಹುದು. ಆದ್ದರಿಂದ ಯಾವುದೇ ಸಂಸ್ಥೆಯಲ್ಲಿ ನಿರ್ವಾಹಕರಾಗಿ ಕೆಲಸ ಮಾಡುವಾಗ ಸಾಧನಾ ಅಭಿಪ್ರೇರಣೆಯುಳ್ಳವರನ್ನು ಸರಿಯಾಗಿ ಬಳಸಿಕೊಳ್ಳದಿದ್ದರೆ ಅವರ ಸಾಮರ್ಥ್ಯ ಪರಿಣಾಮಕಾರಿಯಾಗಿ ಉಪಯೋಗಕ್ಕೆ ಬರುವುದಿಲ್ಲ. ಒಳ್ಳೆಯ ಮಾನವ ಕೌಶಲಗಳನ್ನು ಪಡೆದ ಇಂಥ ವ್ಯಕ್ತಿಗಳು ಯಾವುದೇ ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಬಲ್ಲರು.

ಸಾಧಿಸಿ ತೃಪ್ತಿಪಡೆಯುವ ಬಯಕೆ ಎಲ್ಲರಲ್ಲಿಯೂ ಭಿನ್ನ ಮಟ್ಟಗಳಲ್ಲಿ ಸ್ವಾಭಾವಿಕವಾಗಿ ಇರುತ್ತದೆ. ನಿರ್ದಿಷ್ಟ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು, ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಇದು ಪ್ರೇರೇಪಣೆ ನೀಡುತ್ತದೆ. ಶಾಲೆಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಸಾಮರ್ಥ್ಯಕ್ಕನುಗುಣವಾದ ಕ್ಲಿಷ್ಟ ಕಾರ್ಯಗಳನ್ನು ಮತ್ತು ಯೋಜನೆಗಳನ್ನು ನೀಡುವುದರ ಮೂಲಕ ವಿದ್ಯಾರ್ಥಿಗಳನ್ನು ಸಾಧಿಸುವಂತೆ ಪ್ರೇರೇಪಿಸಬೇಕು, ಶಿಕ್ಷಕರು ವಿದ್ಯಾರ್ಥಿಗಳ ಸಾಧನಾ ಆಕಾಂಕ್ಷೆಯನ್ನು ಧನಾತ್ಮಕವಾಗಿ ಪುಷ್ಟೀಕರಿಸಬೇಕು ಹಾಗೂ ಸಾಧಿಸಲು ಅನುಕೂಲವಾಗುವಂತಹ ತರಗತಿ ವಾತಾವರಣವನ್ನು ಸೃಷ್ಟಿಸಿಕೊಡಬೇಕು. ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಹೆಚ್ಚಾಗಿ ಒದಗಿಸಿಕೊಡಬೇಕು ಮತ್ತು ವಿದ್ಯಾರ್ಥಿಗಳು ತಮ್ಮ ಸಾಧನೆಗೆ ತಕ್ಕಂತಹ ಆಕಾಂಕ್ಷೆಯ ಮಟ್ಟವನ್ನು ರೂಪಿಸಿಕೊಳ್ಳಲು ಸಹಾಯ ಮಾಡಬೇಕು.

–ಎನ್.ಸಿ.ಹೇ

## ಸ್ಕೌಟ್ಸ್ ಮತ್ತು ಗೈಡ್ಸ್

ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಜನಕರು ರಾಬರ್ಟ್ ಬೇಡನ್ ಪೋವೆಲ್‌ರವರು. 1907 ಆಗಸ್ಟ್‌ನಲ್ಲಿ ಇಂಗ್ಲೆಂಡಿನ ಬ್ರೌನ್ ಸೀ ದ್ವೀಪದಲ್ಲಿ ಸ್ಕೌಟ್ಸ್ ಚಳವಳಿ ಪ್ರಾರಂಭವಾಯಿತು. ಸ್ಕೌಟ್ ಒಂದು ನಿರಂತರ ಚಳವಳಿ. ಶಾಲೆ ಮತ್ತು ಮನೆ ಇವೆರಡೂ ಪೂರೈಸಲಾಗದ ಅಗತ್ಯಗಳನ್ನು ಪೂರೈಸುವ ಒಂದು ಸಂಸ್ಥೆಯೆಂದರೆ ಅದು ಸ್ಕೌಟ್.

ಬೇಡನ್ ಪೋವೆಲ್

ಪ್ರಾರಂಭದಲ್ಲಿ ಸ್ಕೌಟ್ಸ್ ಎಂಬ ಸಂಸ್ಥೆ ಕೇವಲ ಹುಡುಗರಿಗಾಗಿ ಪ್ರಾರಂಭವಾಗಿತ್ತು. ಆದರೆ ಒಮ್ಮೆ ಹೆಣ್ಣುಮಕ್ಕಳ ಚಿಕ್ಕ ಗುಂಪೊಂದು ಸ್ಕೌಟ್ ವೇಷ ಧರಿಸಿ 'ಗರ್ಲ್ಸ್ ಸ್ಕೌಟ್' ಆಗ ಬಯಸಿದರು. ನಂತರ 'ಗರ್ಲ್ಸ್ ಸ್ಕೌಟ್' ನ್ನು ಬಾಲಕಿಯರು ಸ್ವ ಪ್ರೇರಣೆಯಿಂದ ಪ್ರಾರಂಭಿಸಿದರು. ನಂತರ ಬಿ.ಪಿ.ಯವರು ಅದರ ಹೆಸರನ್ನು ಬದಲಿಸಿ 'ಗರ್ಲ್ ಗೈಡ್ಸ್' ಎಂದು ನಾಮಕರಿಸಿದರು.

5 ರಿಂದ 10 ವರ್ಷದ ಬಾಲಕರನ್ನು ಕಬ್ಸ್ ಎಂದು ಮತ್ತು ಬಾಲಕಿಯರನ್ನು ಬುಲ್ ಬುಲ್ಸ್ ಎನ್ನುತ್ತಾರೆ.

10 ರಿಂದ 17 ವರ್ಷದ ಬಾಲಕರನ್ನು ಸ್ಕೌಟ್ಸ್ ಎಂದು ಮತ್ತು ಬಾಲಕಿಯರನ್ನು ಗೈಡ್ಸ್ ಎನ್ನುತ್ತಾರೆ.

18 ರಿಂದ 25 ವರ್ಷದ ಯುವಕರನ್ನು ರೋವರ್ಸ್ ಎಂದು ಮತ್ತು ಯುವತಿಯರನ್ನು ರೇಂಜರ್ಸ್ ಎನ್ನುತ್ತಾರೆ.

**ವಿಶ್ವ ಸ್ಕೌಟ್ಸ್ ಸಂಸ್ಥೆಗೆ ಆರು ವಲಯಗಳಿವೆ:**

ವಿಶ್ವ ಗೈಡ್ಸ್ ಸಂಸ್ಥೆಗೆ ಐದು ವಲಯಗಳಿವೆ:

1. ಆಫ್ರಿಕಾ 2. ಅರಬ್ 3. ಏಷಿಯಾ ಪೆಸಿಫಿಕ್ 4. ಯೂರೇಷಿಯಾ 5. ಯೂರೋಪಿಯನ್ ಮತ್ತು 6. ಅಂತರ ಅಮೆರಿಕಾ

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಎಲ್ಲರಿಗೂ ಮುಕ್ತವಾಗಿರುವ ಸ್ವಯಂ ಸೇವಾ ಸಂಸ್ಥೆಯಾಗಿದೆ. ಇದು ಯುವಜನತೆಗಾಗಿರುವ ಸ್ವಯಂ ಪ್ರೇರಿತವಾದ, ರಾಜಕೀಯವಲ್ಲದ, ಶೈಕ್ಷಣಿಕ ಚಳವಳಿಯಾಗಿದೆ.

**ಉದ್ದೇಶಗಳು**

ವೈಯಕ್ತಿಕವಾಗಿ, ಜವಾಬ್ದಾರಿಯುತ ಪ್ರಜೆಗಳಾಗಿ ಹಾಗೂ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರಿಯ ಸಮುದಾಯದ ಸದಸ್ಯರಾಗಿ, ತಮ್ಮಲ್ಲಿ ಅಡಗಿರುವ ಶಾರೀರಿಕ, ಸಾಮಾಜಿಕ ಹಾಗೂ ಪಾರಮಾರ್ಥಿಕ ಚೈತನ್ಯಗಳನ್ನು ಪೂರ್ಣವಾಗಿ ಹೊಂದುವುದರಲ್ಲಿ ಯುವಜನತೆಯ ಬೆಳವಣಿಗೆಗೆ ಸಹಕರಿಸುವುದೇ ಚಳವಳಿಯ ಉದ್ದೇಶ.

**ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ತೊಡಗುವ ಚಟುವಟಿಕೆಗಳು**

1. ಸ್ವಚ್ಛತಾ ಕಾರ್ಯಕ್ರಮ 2. ಆರೋಗ್ಯ (ಪಲ್ಸ್ ಪೋಲಿಯೋ ಹನಿ ನೀಡಿಕೆ, ಮೌಖಿಕ ಜಲೀಕರಣ ಚಿಕಿತ್ಸೆ) 3. ಸಾಕ್ಷರತೆ 4. ಸಸಿ ನೆಡುವುದು 5. ಪರಿಸರ ಸುರಕ್ಷಣೆ 6. ಏಡ್ಸ್ ರೋಗ ಜಾಗೃತಾ ಕಾರ್ಯಕ್ರಮ 7. ಕುಷ್ಠ ರೋಗ ನಿವಾರಣೆ 8. ಕುಡಿಯುವ ನೀರಿನ ಸಂರಕ್ಷಣೆ ಮತ್ತು ಜಾಗ್ರತಿ ಬಗ್ಗೆ ಪ್ರಚಾರ 8. ಕುಟುಂಬ ಜೀವನ ಶಿಕ್ಷಣ 9. ಸಮುದಾಯ ಸೇವೆ 10. ನೇತ್ರ ಚಿಕಿತ್ಸಾ ಶಿಬಿರ 11. ರಕ್ತದಾನ ಶಿಬಿರ ಇತ್ಯಾದಿ.

ಈಗ ವಿಶ್ವದ 216 ರಾಷ್ಟ್ರಗಳು ಮತ್ತು ಪ್ರಾಂತ್ಯಗಳಲ್ಲಿ 28 ದಶಲಕ್ಷಕ್ಕೂ ಹೆಚ್ಚು ಜನ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ವಾಹಿನಿಗೆ ಸೇರಿದ್ದಾರೆ. ವಿಶ್ವದ 151 ದೇಶಗಳಲ್ಲಿ ಅಂತರರಾಷ್ಟ್ರೀಯ ಮನ್ನಣೆ ಪಡೆದ ರಾಷ್ಟ್ರೀಯ ಸ್ಕೌಟ್ ಸಂಸ್ಥೆಗಳಿವೆ.

**ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಬಗ್ಗೆ ವಿಶ್ವನಾಯಕರು ಹೀಗೆ ಉದ್ಗರಿಸಿದ್ದಾರೆ:**

**ಅ. ಮಹಾತ್ಮ ಗಾಂಧೀಜಿ:**

ಭಾರತದ ಪ್ರತಿಯೊಂದು ಮನೆಯಲ್ಲೂ ಸ್ಕೌಟ್ ಮತ್ತು ಗೈಡ್‌ಗಳಂತಹ ಮಕ್ಕಳಿರಬೇಕೆಂದು ನಾನು ಅಪೇಕ್ಷಿಸುತ್ತೇನೆ.


Digitised by Bharatavani, CIIL

**ಆ. ಜವಾಹರಲಾಲ್ ನೆಹರು:**

ನನ್ನ ದೃಷ್ಟಿಯಲ್ಲಿ ಸ್ಕೌಟ್ ಮತ್ತು ಗೈಡ್‌ಗಳು ಅತ್ಯುತ್ತಮ ಆಸ್ತಿ. ಅವರು ಹೆಚ್ಚು ವಿಕಾಸಗೊಂಡಷ್ಟು ರಾಷ್ಟ್ರಕ್ಕೆ ಹೆಚ್ಚು ಒಳಿತಾಗುತ್ತದೆ.

**ಇ. ಎಸ್. ನಿಜಲಿಂಗಪ್ಪ:**

ಸ್ಕೌಟ್ ಮತ್ತು ಗೈಡ್ ಇದು ಮೂಲತಃ ಚಾರಿತ್ರ್ಯ ಬೆಳೆಸುವ ಒಂದು ಚಳವಳಿಯಾಗಿದ್ದು ನಮ್ಮ ರಾಷ್ಟ್ರದ ಅಷ್ಟೇ ಏಕೆ–ಇಡೀ ಪ್ರಪಂಚದ ಪ್ರಜಾಪ್ರಭುತ್ವ ಸಮಾಜದ ಭಾರವನ್ನು ಹೊರಲು ಹಾಗೂ ನಾವು ಯೋಗ್ಯ ನಾಗರಿಕರಾಗಲು ತರಬೇತಿ ನೀಡುತ್ತದೆ.

ವಿಶ್ವ ಸ್ಕೌಟ್ ಸಂಸ್ಥೆಯ ಕೇಂದ್ರ ಕಛೇರಿ ಜಿನೀವಾದಲ್ಲಿದೆ. ವಿಶ್ವ ಗರ್ಲ್‌ಗೈಡ್ಸ್ ಸಂಸ್ಥೆಯು ಲಂಡನ್‌ನ ಅಂಗ ಸಂಸ್ಥೆಯಾಗಿದೆ.

ಭಾರತದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪ್ರಧಾನ ಪೋಷಕರು ಘನತೆವೆತ್ತ ರಾಷ್ಟ್ರಪತಿಗಳಾಗಿರುತ್ತಾರೆ. ಘನತೆವೆತ್ತ ಉಪರಾಷ್ಟ್ರಪತಿಗಳು ಪೋಷಕರಾಗಿರುತ್ತಾರೆ.

–ಜಿ.ರ.ಮ.

## ಸ್ವತಂತ್ರ ಭಾರತದಲ್ಲಿ ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳ ಪಾತ್ರ

ಶಿಕ್ಷಣ ಹಂತಗಳಲ್ಲಿ +2 ಹಂತದ ನಂತರ ಬರುವ ಶಿಕ್ಷಣವೇ ಉನ್ನತ ಶಿಕ್ಷಣ. ಇದನ್ನು ವಿಶ್ವವಿದ್ಯಾನಿಲಯ ಶಿಕ್ಷಣವೆಂತಲೂ ಕರೆಯುತ್ತಾರೆ. ಉನ್ನತ ಶಿಕ್ಷಣ ಮನುಕುಲವು ಎದುರಿಸುತ್ತಿರುವ ಸಂದಿಗ್ಧವಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ನೈತಿಕ ಹಾಗೂ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಚಿಂತನ ಮಂಥನ ಮಾಡಲು ಅವಕಾಶ ಮಾಡಿಕೊಡುತ್ತದೆ. ವಿಶೇಷ ಜ್ಞಾನ ಮತ್ತು ಕೌಶಲಗಳನ್ನು ಹರಡುವುದರ ಮೂಲಕ ರಾಷ್ಟ್ರೀಯ ಅಭಿವೃದ್ಧಿಗೆ ತನ್ನ ಕಾಣಿಕೆಯನ್ನು ನೀಡುತ್ತದೆ. ವಿಶ್ವವಿದ್ಯಾಲಯ ಎನ್ನುವ ಪದಕ್ಕೆ ಆಂಗ್ಲ ಭಾಷೆಯಲ್ಲಿ **university** ಎನ್ನುವ ಪದವನ್ನು ಉಪಯೋಗಿಸುತ್ತಾರೆ. **university** ಎಂಬ ಪದವು ಲ್ಯಾಟಿನ್ ಪದವಾದ **universita** ಎಂಬ ಪದದಿಂದ ಬಂದಿದೆ. ಇದರ ಅರ್ಥ ಒಂದು ಸಮುದಾಯ ಅಥವಾ ಒಟ್ಟುಗೂಡಿದ ಒಂದು ಅಂಗ. ವಿಶ್ವವಿದ್ಯಾಲಯ ಎಂದರೆ "ಯಾರು ಕಲಿಯುವ ಮತ್ತು ಕಲಿಸುವ ಪ್ರಕ್ರಿಯೆಯಲ್ಲಿ ನಿರತರಾಗಿರುವರೋ ಅಂತಹ ವಿದ್ಯಾರ್ಥಿ ಮತ್ತು ಶಿಕ್ಷಕರ ಸಮುದಾಯ".

ವಿಶ್ವವಿದ್ಯಾಲಯಗಳು ನಿರಕ್ಷರಿಗಳನ್ನು ವಿದ್ಯಾವಂತರನ್ನಾಗಿ ಮಾಡುವ ಹೊಣೆಯನ್ನು ಹೊರುವುದು ವಿಹಿತ. ಯಾವುದೇ ಶೈಕ್ಷಣಿಕ ಸಿದ್ಧಾಂತವಾದರೂ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಜೀವನಾದ್ಯಂತ ಶಿಕ್ಷಣವೊದಗಬೇಕೆಂಬುದನ್ನು ಅಲ್ಲಗಳೆಯುವಂತಿಲ್ಲ. ಯೋಜನೆಯನ್ನು ತಯಾರಿಸುವವರು, ನೀತಿ ನಿಯಮಾವಳಿಗಳನ್ನು ರೂಪಿಸುವವರು ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಉನ್ನತ ಶಿಕ್ಷಣಕ್ಕೆ ಯಾವುದೇ ವಿಶೇಷ ಪ್ರಾಧಾನ್ಯತೆಯನ್ನು ನೀಡಿಲ್ಲದಿರುವುದು ದುರ್ದೈವದ ಸಂಗತಿಯಾಗಿದೆ. ಯಾವುದೇ ಒಂದು ಕಟ್ಟಡದ ಅಡಿಪಾಯವು ಸುಭದ್ರವಾಗಿರಬೇಕೆಂಬುದು ಸತ್ಯ ಸಂಗತಿಯಾದರೂ, ಕಟ್ಟಡದ ಕಾರ್ಯ ಸಾಗಿದಂತೆ ಅದರ ಮೇಲ್ಭಾಗಕ್ಕೂ ಅಷ್ಟೇ ಮಹತ್ವ ಕೊಡಬೇಕೆನ್ನುವುದು ನಿರ್ವಿವಾದ ಸಂಗತಿಯಾಗಿದೆ. ನೆಹರೂರವರು ಹೇಳಿದಂತೆ ಅಂದರೆ 'ವಿಶ್ವವಿದ್ಯಾಲಯಗಳು ಉತ್ತಮ ಸ್ಥಿತಿಯಲ್ಲಿದ್ದರೆ, ರಾಷ್ಟ್ರವು ಉತ್ತಮ ಸ್ಥಿತಿಯಲ್ಲಿರುತ್ತದೆ.'

ಶಿಕ್ಷಣದ ಈ ಹಂತದಲ್ಲಿಯೇ ಶಿಕ್ಷಕರು, ಶಿಕ್ಷಕರನ್ನು ತರಬೇತಿಗೊಳಿಸುವವರು, ಆಡಳಿತಗಾರರು, ವಿಜ್ಞಾನಿಗಳು, ತಂತ್ರಜ್ಞರು, ವೈದ್ಯರು, ರಾಜಕೀಯ ತಜ್ಞರು ರೂಪುಗೊಳ್ಳುತ್ತಾರೆ. ರಾಷ್ಟ್ರದ ಬೆಳವಣಿಗೆಗಾಗಿ ಆರ್ಥಿಕ, ರಾಜಕೀಯ, ಸಾಮಾಜಿಕ ಮುಂತಾದ ವಲಯಗಳಲ್ಲಿ ತಜ್ಞ ಹಾಗೂ ಕೌಶಲ ಪೂರ್ಣ ಮಾನವಶಕ್ತಿ ರೂಪಿಸುವುದು ಮತ್ತು ಬೆಳೆಸುವುದು ಈ ಶಿಕ್ಷಣ ಹಂತದ ಪ್ರಮುಖ ಕರ್ತವ್ಯವಾಗಿದೆ.

ಭಾರತದಲ್ಲಿನ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲವು ವಿಶ್ವವಿದ್ಯಾಲಯಗಳು ಎಲ್ಲ ಅತ್ಯಾಧುನಿಕ ಸೌಲಭ್ಯಗಳನ್ನು ಪಡೆದಿದ್ದರೆ, ಇನ್ನು ಕೆಲವು ವಿಶ್ವವಿದ್ಯಾಲಯಗಳು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವುದು ಒಂದು ವೈಪರೀತ್ಯವಾಗಿದೆ. ಇದೊಂದು ಸಮಸ್ಯೆಯಾಗಿ ವಿವಾದದ ರೂಪವನ್ನು ಪಡೆದಿದೆ. ಇದನ್ನು ಹೋಗಲಾಡಿಸಿ, ವ್ಯವಸ್ಥೆಯಲ್ಲಿ ಸಮತೋಲನವನ್ನು ತರಬೇಕಾದರೆ ಎಲ್ಲ ವಿಶ್ವವಿದ್ಯಾಲಯಗಳಿಗೂ ಅವಶ್ಯಕ ಸೌಲಭ್ಯಗಳನ್ನು ಒದಗಿಸಬೇಕು.

ಇಂದಿನ ಉನ್ನತ ಶಿಕ್ಷಣ ವ್ಯವಸ್ಥೆಯು ಕೇವಲ ನಿರುದ್ಯೋಗಿ ಪದವೀಧರರನ್ನು ಮಾತ್ರ ತಯಾರಿಸುತ್ತಿದೆ. ಆ ಅಭ್ಯರ್ಥಿಗಳು ಕೇವಲ ಪರೀಕ್ಷೆಗೆ ಸಂಬಂಧಪಟ್ಟ ಜ್ಞಾನವನ್ನು ಮಾತ್ರ ಪಡೆದಿರುತ್ತಾರೆ. ತಮ್ಮ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಅವರು ಸಮರ್ಥರಾಗಿರುವುದಿಲ್ಲ. ಇಂತಹ ಪುಸ್ತಕೀಯ ಜ್ಞಾನ ಪಡೆದ ಇವರಲ್ಲಿ ಪ್ರಾಯೋಗಿಕ ಜ್ಞಾನ ಇರುವುದಿಲ್ಲ. ಇಂತಹ ವ್ಯಕ್ತಿಗಳಿಂದ ಸಮಾಜದ ಯಾವುದೇ ಕ್ಷೇತ್ರಕ್ಕೆ ಯಾವುದೇ ಕೊಡುಗೆಯನ್ನು ನಿರೀಕ್ಷಿಸುವಂತಿಲ್ಲ. ತಮ್ಮ ಕಾಲ ಮೇಲೆ ತಾವು ನಿಲ್ಲಲು ಅಸಮರ್ಥರಾದ ವ್ಯಕ್ತಿಗಳು ದೇಶಕ್ಕೆ ಏನನ್ನು ತಾನೇ ನೀಡಬಲ್ಲರು.

ಈಗ ನಮ್ಮ ವಿಶ್ವವಿದ್ಯಾಲಯಗಳು ಆರ್ಥಿಕವಾಗಿ ತೊಂದರೆ ಎದುರಿಸುತ್ತಿವೆ. ಆರ್ಥಿಕ ಏರುಪೇರುಗಳಿಂದಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ ಆರ್ಥಿಕ ತೊಂದರೆ ಉಂಟಾಗಿದೆ. ಈ ತೊಂದರೆಯಿಂದ ಹೊರಬಂದು ವಿಶ್ವವಿದ್ಯಾಲಯಗಳಿಗೆ ಅವಶ್ಯಕ ಸಂಪನ್ಮೂಲಗಳನ್ನು ಒದಗಿಸುವುದು ಕಷ್ಟಕರ ಕೆಲಸವಾಗಿದೆ. ಭಾರತದಲ್ಲಿನ ವಿಶ್ವವಿದ್ಯಾಲಯಗಳು ಈ ಒಂದು ಸವಾಲನ್ನು ವಾಸ್ತವಿಕ ರೂಪದಲ್ಲಿ ಸ್ವೀಕರಿಸಬೇಕು. ಇದಕ್ಕಾಗಿ ಆಂತರಿಕ ಸಂಪನ್ಮೂಲಗಳನ್ನು ವಿವೇಚನಾಯುಕ್ತವಾಗಿ ಪುನರ್‌ರಚಿಸಬೇಕು ಮತ್ತು ಬಾಹ್ಯ ಸಂಪನ್ಮೂಲಗಳನ್ನು ಸಮಾಲೋಚನೆ ಮತ್ತು ಇನ್ನಿತರ ಯೋಜನೆಗಳ ಮೂಲಕ ಹೆಚ್ಚಿಸಬೇಕು. ಹಣಕಾಸಿನ ಸಮಿತಿಯಲ್ಲಿರುವ ಸದಸ್ಯರು ಬಾಹ್ಯಸಂಪನ್ಮೂಲಗಳನ್ನು ಹೆಚ್ಚಿಸುವಲ್ಲಿ ಶ್ರಮಿಸಬೇಕು. ಉನ್ನತ ಶಿಕ್ಷಣದಲ್ಲಿ ಕಂಡು ಬರುವ ವಿವಾದಗಳನ್ನು ಬಗೆಹರಿಸಲು ಕೆಳಗಿನ ಕೆಲವು ಶಿಫಾರಸ್ಸುಗಳನ್ನು ಬಳಸಿಕೊಳ್ಳಬಹುದಾಗಿದೆ.

1. ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು (UGC) ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಬೇಕು. ಈ ಸಮಿತಿಯು ಉನ್ನತ ಶಿಕ್ಷಣಕ್ಕೆ ಸಂಬಂಧಿತ ಸಲಹೆ ಸೂಚನೆಗಳನ್ನು ನೀಡಬೇಕು.
2. ಪ್ರತಿಯೊಂದು ವಿಭಾಗವು ಪಠ್ಯಕ್ರಮ ಸುಧಾರಣಾ ಕೇಂದ್ರವನ್ನು ಹೊಂದಿರಬೇಕು. ಈ ಕೇಂದ್ರವು ಸ್ಥಳೀಯ, ವಿಭಾಗೀಯ ಮತ್ತು ರಾಷ್ಟ್ರೀಯ ಅವಶ್ಯಕತೆಗಳನ್ನು, ಹೊಸ ಸಂಶೋಧನೆ ಮತ್ತು ಹೊಸ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮದಲ್ಲಿ ಬದಲಾವಣೆಗೆ ಸಲಹೆ ನೀಡಬೇಕು.
3. ಭಾರತೀಯ ಭಾಷೆಗಳನ್ನು ಆಧುನೀಕರಣಗೊಳಿಸಬೇಕು. ಈ

Digitised by Bharatavani, CIIL

ಮೂಲಕ ಅವು ಬೋಧನಾ ಮಾಧ್ಯಮವಾಗಿ ರೂಪಗೊಳ್ಳಲು ಅವಕಾಶ ಕಲ್ಪಿಸಬೇಕು.

4. ವಿದ್ಯಾರ್ಥಿಗಳಿಗೆ ಅವರ ನಿಜ ಜೀವನಕ್ಕೆ ಹತ್ತಿರವಾದ ಶಿಕ್ಷಣ ನೀಡಬೇಕು. ಅವರು ಪಡೆದ ಶಿಕ್ಷಣದ ಆಧಾರದ ಮೇಲೆ ಅವರು ವೃತ್ತಿಯನ್ನು ಗಳಿಸುವಂತಿರಬೇಕು.

ಇದಕ್ಕಾಗಿ ಪದವಿಗಳನ್ನು ವಿದ್ಯಾರ್ಥಿಗಳಿಗೆ ಅವರ ಅಧ್ಯಯನದ ವರ್ಷಗಳ ಆಧಾರದ ಮೇಲೆ ನೀಡದೇ ಅವರು ನಿಜವಾಗಿಯೂ ಪಡೆದ ಜ್ಞಾನ ಮತ್ತು ಸಂಸ್ಕಾರದ ಆಧಾರದ ಮೇಲೆ ನೀಡಬೇಕು.

ಭಾರತವು ವಿಶ್ವದ ಒಂದು ಅಂಗವೇ ಆಗಿದ್ದು, ಈ ಪ್ರಪಂಚದಿಂದ ಹೊರತಾಗಿರಲು ಅದಕ್ಕೆ ಸಾಧ್ಯವಿಲ್ಲ. ಭಾರತದಲ್ಲಿ ಕೂಡ ಸಂಶೋಧಕರು, ವಿಚಾರವಂತರು ಇದ್ದಾರೆ. ಅವರ ವಿಚಾರಗಳಿಗೆ ಮಾನ್ಯತೆ ನೀಡುವಲ್ಲಿ ನಮ್ಮ ಜಾಣ್ಮೆ ಅಡಗಿದೆ. ಈ ದಿಶೆಯಲ್ಲಿ ಶಿಕ್ಷಕರು ಆಡಳಿತಗಾರರು ಕಾರ್ಯತತ್ಪರರಾಗಬೇಕು.

**ಉನ್ನತ ಶಿಕ್ಷಣದ ಉದ್ದೇಶಗಳು :** ಪಂಡಿತ್ ನೆಹರೂರವರು ವಿಶ್ವವಿದ್ಯಾಲಯವನ್ನು ಕುರಿತು ಈ ರೀತಿ ನಿಲುವನ್ನು ತಳೆದಿದ್ದರು. "ಮಾನವೀಯತೆಗೆ, ಸಹಿಷ್ಣುತೆಗೆ, ವಿವೇಚನೆಗೆ, ಸಾಹಸಪೂರ್ಣ ಆದರ್ಶ ಭಾವನೆಗಳಿಗೆ, ಸತ್ಯಾನ್ವೇಷಣೆಗೆ ಪೂರಕ ಮತ್ತು ಪೋಷಕವಾಗಿರುವುದೇ ವಿಶ್ವವಿದ್ಯಾಲಯದ ಪ್ರಮುಖ ಉದ್ದೇಶ. ಮಹೋದ್ದಾತ್ತವಾದ ಉದ್ದೇಶಗಳತ್ತ ಜನತೆಯನ್ನು ಕೊಂಡೊಯ್ಯುವ ಪ್ರಯತ್ನ ಸತತವಾಗಿ ನಡೆಯಬೇಕು. ಇಂತಹ ಕಾರ್ಯಗಳನ್ನು ವಿಶ್ವವಿದ್ಯಾಲಯಗಳು ಸಮರ್ಪಕವಾಗಿ ಮಾಡಿದಲ್ಲಿ ರಾಷ್ಟ್ರಕ್ಕೆ ಮತ್ತು ಜನತೆಗೆ ಮಹತ್ತರವಾದ ಸೇವೆಯನ್ನು ಸಲ್ಲಿಸಿದಂತೆಯೇ." ವಿಶ್ವವಿದ್ಯಾಲಯದ ಕೇಂದ್ರ ಉದ್ದೇಶ, ಮನುಷ್ಯನ ಸರ್ವಶಕ್ತಿಗಳನ್ನು ಬೆಳೆಸಿ, ಬಿಡುಗಡೆ ಮಾಡಿ ಅವುಗಳ ಸಹಾಯದಿಂದ ಹೊಸ ಪ್ರಪಂಚವನ್ನು ನಿರ್ಮಿಸಿ, ಸಮೃದ್ಧ ಜೀವನವನ್ನು ಸಾಧ್ಯವಾಗಿಸುವುದು. ಉನ್ನತ ಶಿಕ್ಷಣದ ಉದ್ದೇಶಗಳನ್ನು ಕೆಳಕಂಡಂತೆ ನಮೂದಿಸಬಹುದು:

1. ಹೊಸ ಜ್ಞಾನವನ್ನು ಪಡೆದು ಅದನ್ನು ಪರಿಷ್ಕರಿಸುವುದು, ಹಳೆಯ ಸಂಪ್ರದಾಯ ನಂಬಿಕೆಗಳನ್ನು ಇಂದಿನ ಅವಶ್ಯಕತೆಗೆ, ಪರಿಸರಕ್ಕೆ ಅನುಗುಣವಾಗಿ ವಿಶ್ಲೇಷಿಸಿ ಉತ್ತಮವಾದುದನ್ನು ಉಳಿಸಿ ಅನುತ್ತಮವಾದುದನ್ನು ತ್ಯಜಿಸುವುದು.

2. ಯೋಗ್ಯ ಮುಖಂಡತ್ವವನ್ನು ಒದಗಿಸುವ ವ್ಯಕ್ತಿಗಳನ್ನು ಸೃಷ್ಟಿಸುವುದು. ಪ್ರತಿಭಾನ್ವಿತ ವ್ಯಕ್ತಿಗಳನ್ನು ಗುರುತಿಸಿ ಅವರ ಶಾರೀರಿಕ, ಮಾನಸಿಕ ಬೆಳವಣಿಗೆಗಳಿಗೆ ಸೂಕ್ತ ವ್ಯವಸ್ಥೆ ಮಾಡಿ, ಅವರ ಅಭಿರುಚಿ, ಮನೋಭಾವ, ನೈತಿಕ ಮತ್ತು ಬೌದ್ಧಿಕವಾದ ಮೌಲ್ಯಗಳನ್ನು ವಿಕಸಿಸುವಂತೆ ಮಾಡಿ ಅವು ಸಮಾಜಕ್ಕೆ ಉಪಯುಕ್ತವಾಗುವಂತೆ ಮಾಡುವುದು.

3. ಸಮಾಜವನ್ನು ವ್ಯವಸಾಯ, ವೈದ್ಯಕೀಯ, ವಿಜ್ಞಾನ, ತಾಂತ್ರಿಕ ಜ್ಞಾನ ಮತ್ತು ಇತರ ವೃತ್ತಿಗಳಲ್ಲಿ ತರಬೇತಿ ಪಡೆದ ಸಮರ್ಥ ಸ್ತ್ರೀ ಪುರುಷರಿಂದ ಸಮೃದ್ಧಗೊಳಿಸಿ, ಅವರಿಂದ ಸಮಾಜಕ್ಕೆ ಅನನ್ಯವಾದ ಸೇವೆ ದೊರೆಯುವಂತೆ ಮಾಡುವುದು.

4. ಸಮಾನ ಅವಕಾಶಗಳನ್ನು, ಸಾಮಾಜಿಕ ನ್ಯಾಯವನ್ನು ದೊರಕಿಸಲು ಹೋರಾಟ ನಡೆಸಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ವೈತ್ಯಯಗಳನ್ನು ಹಿತಮಿತಗೊಳಿಸಲು ಶಿಕ್ಷಣ ಪ್ರಸಾರ ನಡೆಸುವುದು.

5. ಓದಿಗೂ, ಜೀವನಕ್ಕೂ ಸಂಬಂಧ ಕಲ್ಪಿಸಿ, ಗ್ರಹಿಸಿದ ಜ್ಞಾನ ನಿತ್ಯೋಪಯೋಗಿಯಾಗುವಂತೆ ಮಾಡಬೇಕು. ಇಲ್ಲಿನ ವ್ಯಾಸಂಗ ವಿಷಯಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗಿ ಅವರ ಸ್ವತಂತ್ರ ಜೀವನಕ್ಕೆ ನಾಂದಿಯಾಗುವಂತೆ ಮಾಡುವುದು.

6. ಸಮುದಾಯದ ಜೀವನ ಗತಿವಿನ್ಯಾಸವನ್ನು ಪ್ರತ್ಯಕ್ಷವಾಗಿ ಅರಿಯಲು ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಒದಗಿಸುವುದು.

7. ವ್ಯಕ್ತಿ ಮತ್ತು ಸಮಾಜ ಜೀವನವನ್ನು ಸುಂದರಗೊಳಿಸಲು ಉತ್ತಮ ಜೀವನ ಮೌಲ್ಯ, ವರ್ತನೆಗಳನ್ನು ಶಿಕ್ಷಕ ವೃಂದದಲ್ಲಿ, ವಿದ್ಯಾರ್ಥಿ ಸಮೂಹದಲ್ಲಿ ಬೆಳೆಸುವುದು.

8. ಮಾನವಿಕ ಸಂಘ ಸಂಸ್ಥೆಗಳ ಸಂಪರ್ಕವನ್ನು ಹೆಚ್ಚಿಸಿ, ಸಂಕುಚಿತ ದೃಷ್ಟಿಯನ್ನು ವಿಶಾಲಗೊಳಿಸಿ ವ್ಯಾಪಕ ಸಮಾಜದಲ್ಲಿ ಹೊಣೆಯನ್ನು ನಿರ್ವಹಿಸುವಂತೆ ಮಾಡುವುದು.

ಸರಕಾರವು ಉನ್ನತ ಶಿಕ್ಷಣಕ್ಕಾಗಿ ಧನಸಹಾಯವನ್ನು ಅವಶ್ಯಕವಾಗಿ ಕೊಡಬೇಕು. ಆದರೆ ಅದನ್ನು ಯಾವ ವಿಧದಲ್ಲಿ, ಯಾವ ಪ್ರಮಾಣದಲ್ಲಿ ನೀಡಬೇಕೆಂಬ ಸ್ಪಷ್ಟ ರೂಪುರೇಷೆ ಇಲ್ಲ. ಇದರ ಪರಿಣಾಮವಾಗಿ ಧನಸಹಾಯ ನೀಡುವಿಕೆ ಅಸಮರ್ಪಕವಾಗಿದೆ. ಇದಕ್ಕಾಗಿ ಈಗ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಪುನ್ನಯ್ಯಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಒಂದು ಉತ್ತಮ ಸೂತ್ರವನ್ನು ರಚಿಸುವ ಕಾರ್ಯದಲ್ಲಿ ತೊಡಗಿದೆ. ಸಮಿತಿಯ ಸಲಹೆಯ ಮೇರೆಗೆ ಆಯೋಗವು ಕಾರ್ಯನಿರ್ವಹಿಸತೊಡಗಿದೆ. ಅನಂತರ ಮಾಹಿತಿಯನ್ನು ಉಪಕುಲಪತಿಗಳು, ರಾಜ್ಯ ಸರಕಾರಗಳ ಶಿಕ್ಷಣ ವಿಭಾಗದ ಕಾರ್ಯದರ್ಶಿಯವರು ಇವರುಗಳಿಗೆ ತಿಳಿಸುತ್ತದೆ. ಎಲ್ಲ ಸವಿಸ್ತಾರವಾದ ಮಾಹಿತಿ, ಸಲಹೆಗಳನ್ನು ಭಾರತ ಸರಕಾರಕ್ಕೆ ತಿಳಿಸಿ ಅನುಷ್ಠಾನಕ್ಕೆ ತರಲು ಅವಗಾಹನೆಗೆ ನೀಡಲಾಗುತ್ತದೆ.

### ಶೈಕ್ಷಣಿಕ ನಿರ್ವಹಣೆಯಲ್ಲಿ ವಿಶ್ವವಿದ್ಯಾಲಯಗಳ ಪಾತ್ರ

ಶೈಕ್ಷಣಿಕ ಸಂಸ್ಥೆಗಳನ್ನು ಸಮರ್ಥವಾಗಿ ನಡೆಸುವುದು. ಶೈಕ್ಷಣಿಕ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ನಿರ್ಧರಿಸುವುದು. ಸಮಸ್ತ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಕಲ್ಪಿಸುವುದು. ಶೈಕ್ಷಣಿಕ ಕಾರ್ಯಕರ್ತರಲ್ಲಿ ಸೌಹಾರ್ದವನ್ನು ಏರ್ಪಡಿಸುವುದು. ಪ್ರಗತಿಗೆ ಸಹಾಯಕವಾಗುವ ಯೋಜನೆಯನ್ನು ಸಿದ್ಧಪಡಿಸುವುದು. ಸಮರ್ಥವಾದ ನಿರ್ದೇಶನಗಳನ್ನು ಒದಗಿಸುವುದು. ಯೋಗ್ಯ ಸಿಬ್ಬಂದಿ ವರ್ಗವನ್ನು ನೇಮಿಸುವುದು. ಆಡಳಿತ ಯಂತ್ರವು ಸುಗಮವಾಗಿ ಸಾಗಲು ತಕ್ಕ ಕ್ರಮ ಕೈಗೊಳ್ಳುವುದು. ಶೈಕ್ಷಣಿಕ ವಿಷಯಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಂತೆ ಮಾಡುವುದು. ಶೈಕ್ಷಣಿಕ ನಿರ್ವಹಣೆಯ ವಿವಿಧ ಸಂಸ್ಥೆಗಳೊಡನೆ ಸಂಪರ್ಕವೇರ್ಪಡಿಸುವುದು. ಸಿಬ್ಬಂದಿ ವರ್ಗದವರ ತರಬೇತಿಗೆ ವ್ಯವಸ್ಥೆ ಮಾಡುವುದು. ಶೈಕ್ಷಣಿಕ ಸಂಸ್ಥೆಗಳನ್ನು ಉಪಕರಣಗಳಿಂದ ಸಜ್ಜುಗೊಳಿಸುವುದು. ಸಂಶೋಧನೆಗೆ ಅವಕಾಶ ಕಲ್ಪಿಸುವುದು. ಶಿಕ್ಷಣ ಪ್ರಪಂಚದಲ್ಲಿ ಸಾಧಿತವಾಗಿರುವ ಪ್ರಗತಿಯ ಪ್ರಮಾಣ ಮತ್ತು ಅದರ ಮೌಲ್ಯವನ್ನು ನಿರ್ಧರಿಸುವ ವ್ಯವಸ್ಥೆ ಮಾಡುವುದು. ವಿಶ್ವವಿದ್ಯಾಲಯಗಳು ಶಿಕ್ಷಣ, ಸಾಹಿತ್ಯ, ವಿಜ್ಞಾನ, ಕಲಾವಿಷಯ, ಕೃಷಿ, ತಾಂತ್ರಿಕ, ವಾಣಿಜ್ಯ, ಔದ್ಯೋಗಿಕ ವಿಷಯಗಳ ಜ್ಞಾನವನ್ನು ಒದಗಿಸುವುದು. ಈ ವಿಷಯಗಳನ್ನು ಕುರಿತು ಸಂಶೋಧನೆಗೆ ಪ್ರೋತ್ಸಾಹವಿತ್ತು ಈ ಜ್ಞಾನಗಳ ಗಡಿರೇಖೆಗಳನ್ನು ವಿಸ್ತರಿಸುವಂತೆ ಮಾಡುವುದು. ವೇದಾಂತ, ಚರಿತ್ರೆ, ವೈದ್ಯಶಾಸ್ತ್ರ, ಶಿಲ್ಪ ಮೊದಲಾದ ವಿಷಯಗಳ ವ್ಯಾಸಂಗಗಳಿಗೂ ಅವಕಾಶ ಕಲ್ಪಿಸಿ ದೈಹಿಕ ಮತ್ತು ನೈತಿಕ ತರಬೇತಿಗೂ ಆದ್ಯತೆ ಕೊಡುವುದು.

Digitised by Bharatavani, CIIL

ಉಚಿತವೆಂದು ಕಂಡುಬಂದ ಜ್ಞಾನ ವಿಭಾಗಗಳ ಮಾಹಿತಿಯನ್ನು, ತರಬೇತಿಯನ್ನು ಒದಗಿಸುವುದು. ವಿಶ್ವವಿದ್ಯಾಲಯ ಇಲ್ಲವೇ ಮನ್ನಣೆ ಪಡೆದ ಕಾಲೇಜುಗಳಲ್ಲಿ ನಿರ್ದಿಷ್ಟ ಕಾಲದವರೆಗೆ ಅಲ್ಲಿನ ನಿಯಮಗಳ ಪ್ರಕಾರ ಅಭ್ಯಾಸ ಮುಗಿಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ, ಇಲ್ಲವೇ ಸಂಶೋಧನಾ ಪ್ರಬಂಧವನ್ನು ಮಂಡಿಸಿದವರಿಗೆ ಪ್ರಶಸ್ತಿ ಪತ್ರ ವಿತರಿಸುವುದು.

**ವಿಶ್ವ ವಿದ್ಯಾಲಯಗಳ ಅಧಿಕಾರ ವ್ಯಾಪ್ತಿ ಕಾರ್ಯಗಳು**

1. ಉಚಿತವೆಂದು ಕಂಡು ಬಂದ ಜ್ಞಾನ ವಿಭಾಗಗಳಿಗೆ ಮಾಹಿತಿಯನ್ನು, ತರಬೇತಿಯನ್ನು ಒದಗಿಸುವುದು ಮತ್ತು ಸಂಶೋಧನೆಗೆ ಅನುಕೂಲ ಕಲ್ಪಿಸಿ ಜ್ಞಾನ ವಿಸ್ತರಣೆ ಮತ್ತು ಅದರ ಪ್ರಸಾರಕ್ಕೆ ಆದ್ಯತೆ ಕೊಡುವುದು.
2. ವಿಶ್ವವಿದ್ಯಾಲಯ ಇಲ್ಲವೇ ಮನ್ನಣೆ ಪಡೆದ ಕಾಲೇಜುಗಳಲ್ಲಿ ನಿರ್ದಿಷ್ಟ ಕಾಲದವರೆಗೆ ಅಲ್ಲಿನ ನಿಯಮಗಳ ಪ್ರಕಾರ ಅಭ್ಯಾಸ ಮುಗಿಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಇಲ್ಲವೇ ಸಂಶೋಧನಾ ಪ್ರಬಂಧವನ್ನು ಬರೆದು ವಿಶ್ವವಿದ್ಯಾಲಯದಿಂದ ನೇಮಕಗೊಂಡು ಪರೀಕ್ಷಾ ಮಂಡಳಿಗೆ ಒಪ್ಪಿಸಿದವರಿಗೆ ಅದು ಅಂಗೀಕೃತವಾದಲ್ಲಿ ಪದವಿ ಪ್ರಶಸ್ತಿ ಪತ್ರಗಳನ್ನು, ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವುದು.
3. ಪರೀಕ್ಷೆಗಳನ್ನು ನಡೆಸುವುದು, ವಿಶ್ವವಿದ್ಯಾಲಯದ ವಿಧಿಯಲ್ಲಿ ನಮೂದಿತ ನಿಯಮಗಳಿಗೆ ಅನುಗುಣವಾಗಿ ಮೇಧಾವಿ ವ್ಯಕ್ತಿಗಳಿಗೆ ವಿಜ್ಞಾನಿಗಳಿಗೆ ಗೌರವ ಪದವಿಗಳನ್ನು ನೀಡುವುದು.
4. ವಿಶ್ವವಿದ್ಯಾಲಯದ ಉದ್ದೇಶಗಳನ್ನು ಸಾಧಿಸಲು ಸಹಾಯಕವಾಗುವ ವಿಶ್ವವಿದ್ಯಾಲಯ, ಕಾಲೇಜುಗಳನ್ನು, ಪ್ರಯೋಗಶಾಲೆಗಳನ್ನು ಸಂಶೋಧನಾ ಸಂಸ್ಥೆಗಳನ್ನು ಹಾಗೂ ಗ್ರಂಥಾಲಯಗಳನ್ನು ಸ್ಥಾಪಿಸಿ ನಿರ್ವಹಿಸುವುದು.
5. ಸಂಶೋಧನಾ ವೇತನ, ಶಿಷ್ಯ ವೇತನ, ವಿದ್ಯಾರ್ಥಿ ವೇತನ, ಪ್ರಯಾಣ ಭತ್ಯೆ, ಬಹುಮಾನ, ಪದಕ ಮೊದಲಾದವುಗಳನ್ನು ನಿರ್ಮಿಸಿ ವಿತರಣೆ ಮಾಡುವುದು.
6. ವಿದ್ಯಾರ್ಥಿ ನಿಲಯಗಳನ್ನು ನಡೆಸುವುದು ಇಲ್ಲವೇ ಇತರರು ನಡೆಸುವ ವಿದ್ಯಾರ್ಥಿ ನಿಲಯಗಳಿಗೆ ಮನ್ನಣೆ ಕೊಡುವುದು, ಅವು ಸಮರ್ಪಕವಾಗಿ ನಡೆಯದಿದ್ದಲ್ಲಿ ಮನ್ನಣೆಯನ್ನು ಕಿತ್ತುಕೊಳ್ಳುವುದು.
7. ವಿಶ್ವವಿದ್ಯಾಲಯಗಳ ಅಧೀನದಲ್ಲಿರುವ ಕಾಲೇಜುಗಳ ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆ ಮತ್ತು ಶಿಸ್ತುಗಳ ಬಗ್ಗೆ ಗಮನ ನೀಡುವುದು.
8. ಶುಲ್ಕದ ಪ್ರಮಾಣವನ್ನು ನಿಗದಿ ಮಾಡುವುದು ಹಾಗೂ ವಸೂಲಿ ಮಾಡುವುದು.
9. ಉತ್ಕೃಷ್ಟ ಸಂಶೋಧನೆ, ಪ್ರಬಂಧಗಳ ಹಾಗೂ ಇನ್ನಿತರ ಗಮನಾರ್ಹ ಕೃತಿಗಳ ಪ್ರಕಟನೆಯನ್ನು ಕೈಗೊಳ್ಳುವುದು.
10. ವಿಶ್ವವಿದ್ಯಾಲಯದ ಸಂಘಗಳನ್ನು ವ್ಯವಸ್ಥೆಗೊಳಿಸುವುದು, ಪ್ರೋತ್ಸಾಹಿಸುವುದು, ನಿಯಂತ್ರಣದಲ್ಲಿಡುವುದು.
11. ಉದ್ಯೋಗ ಕಛೇರಿಯನ್ನು ವ್ಯವಸ್ಥೆಗೊಳಿಸುವುದು.
12. ಸರಕಾರವು ಸಿಂಡಿಕೇಟಿನ ಅನುಮತಿಯ ಮೇರೆಗೆ ಸರಕಾರಿ ಕಾಲೇಜನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಬಹುದು. ಇಲ್ಲವೇ ವಿಶ್ವವಿದ್ಯಾಲಯದ ಕಾಲೇಜನ್ನು ಸರಕಾರಿ ಕಾಲೇಜನ್ನಾಗಿ ಪರಿವರ್ತಿಸಬಹುದು.
13. ಮನ್ನಣೆ ಪಡೆದ ಸಂಸ್ಥೆಗಳ ತನಿಖೆ ನಡೆಸಿ, ಅವುಗಳ ಗುಣಮಟ್ಟವನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳುವುದು. ಅವುಗಳು ಸಂಯೋಜಿಸುವ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ಧನ ಸಹಾಯ ಒದಗಿಸುವುದು.
14. ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಶಿಕ್ಷಣ ಪ್ರಚಾರಕ್ಕೆ ವ್ಯವಸ್ಥೆ ಮಾಡುವುದು.
15. ಕುಲಪತಿಗಳು ತಮಗೆ ಉಚಿತವೆಂದು ತೋರಿದಲ್ಲಿ ವಿಶ್ವವಿದ್ಯಾಲಯದ ಯಾವ ವ್ಯಕ್ತಿ ಇಲ್ಲವೇ, ಕಟ್ಟಡಗಳ, ಪ್ರಯೋಗಶಾಲೆಗಳ, ಗ್ರಂಥಾಲಯಗಳ, ಪ್ರದರ್ಶನಾಲಯಗಳ, ಕಮ್ಮಟಗಳ, ಕಾಲೇಜುಗಳ, ಅಧ್ಯಾಪಕರ ಬೋಧನೆಯ ಬಗ್ಗೆ ಮತ್ತು ಇತರ ಘಟನೆಗಳನ್ನು ತನಿಖೆ ಮಾಡಬಹುದು.
16. ಈ ತನಿಖೆಯ ಫಲಿತಾಂಶಗಳನ್ನು ಸೆನೆಟ್ ಮತ್ತು ಸಿಂಡಿಕೇಟಿನ ಅವಗಾಹನೆಗೆ ತಂದು ಆ ಸಮಿತಿಗಳ ಅಭಿಪ್ರಾಯ ಪಡೆದ ನಂತರ ಕ್ರಮ ಕುರಿತು ವಿಶ್ವವಿದ್ಯಾಲಯಕ್ಕೆ ಆದೇಶವೀಯುವುದು.

**ವಿಶ್ವವಿದ್ಯಾಲಯವು ಕೆಳಗೆ ಸೂಚಿಸಿದ ಅಧಿಕಾರಿಗಳಿಂದ ತನ್ನ ಆಡಳಿತ ಸಂಘಟನೆಯನ್ನು ಹೊಂದಿರುವುದು.**

1. ಕುಲಪತಿ – ರಾಜ್ಯದ ರಾಜ್ಯಪಾಲರು (Chancellor)
2. ಸಹ ಕುಲಪತಿ – ರಾಜ್ಯದ ಉನ್ನತ ಶಿಕ್ಷಣ ಮಂತ್ರಿಗಳು (Pro-Chancellor)
3. ಉಪ ಕುಲಪತಿ – ವಿಶ್ವವಿದ್ಯಾಲಯ (Vice - Chancellor)
4. ಕುಲಸಚಿವರು (Registrar)
5. ಮೌಲ್ಯಮಾಪನ ಕುಲಸಚಿವರು (Registrar Evaluation)
6. ಗ್ರಂಥಪಾಲಕ (Librarian)
7. ಮಹಾಮಂಡಳಗಳ ಅಧ್ಯಕ್ಷರು (Deans)
8. ಹಣಕಾಸಿನ ಅಧಿಕಾರಿಗಳು (Finance Officer)
9. ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರು (Director of Students Welfare)
10. ಸಿಬ್ಬಂದಿ ವರ್ಗ (Staff)

**ವಿಶ್ವವಿದ್ಯಾನಿಲಯಗಳ ಪ್ರಕಾರಗಳು**

ಪ್ರಸ್ತುತ ನಮ್ಮ ದೇಶದಲ್ಲಿ ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆಯನ್ನು ಕೊಡಲಾಗಿದೆ. ಸರಕಾರಗಳು ಅನವಶ್ಯಕವಾಗಿ ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ಮತ್ತು ಇತರೇ ಚಟುವಟಿಕೆಗಳಲ್ಲಿ ಕೈ ಹಾಕುವುದಿಲ್ಲ. ಸದ್ಯ ಭಾರತದಲ್ಲಿ ಸುಮಾರು 208 ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿವೆ. ಈ ವಿಶ್ವವಿದ್ಯಾಲಯಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

- ಕೇಂದ್ರ ವಿಶ್ವವಿದ್ಯಾಲಯಗಳು
- ರಾಜ್ಯ ವಿಶ್ವವಿದ್ಯಾಲಯಗಳು
- ಕಾಲೇಜುಗಳನ್ನು ಹೊಂದಿಕೊಳ್ಳುವ ವಿಶ್ವವಿದ್ಯಾಲಯಗಳು

Digitised by Bharatavani, CIIL

- ಸಂಯುಕ್ತ ವಿಶ್ವವಿದ್ಯಾಲಯಗಳು
- ಖಾಸಗಿ ವಿಶ್ವವಿದ್ಯಾಲಯಗಳು

**ಕೇಂದ್ರ ವಿಶ್ವವಿದ್ಯಾನಿಲಯಗಳು**

ಭಾರತೀಯ ಸಂವಿಧಾನದಲ್ಲಿ ಕೇಂದ್ರ ಪಟ್ಟಿ, ರಾಜ್ಯಪಟ್ಟಿ ಮತ್ತು ಸಮವರ್ತಿಪಟ್ಟಿ ಎಂದು ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಮೂರು ವಿಭಾಗಗಳಾಗಿ ಮಾಡಿ ಹಂಚಿಕೊಡಲಾಗಿದೆ.

ಸಂಪೂರ್ಣವಾಗಿ ಕೇಂದ್ರ ಸರಕಾರದಿಂದ ನಿಯಂತ್ರಿಸಲ್ಪಡುವ ವಿಶ್ವವಿದ್ಯಾನಿಲಯಗಳನ್ನು ಕೇಂದ್ರವಿಶ್ವವಿದ್ಯಾನಿಲಯಗಳು ಎನ್ನುವರು. ಇವುಗಳಿಗೆ ಹಣಕಾಸಿನ ನೆರವನ್ನು ಸಂಪೂರ್ಣವಾಗಿ ಕೇಂದ್ರ ಸರಕಾರವು ನೀಡುತ್ತದೆ. ಇವುಗಳ ಸಂಪೂರ್ಣ ಜವಾಬ್ದಾರಿಯನ್ನು ಕೇಂದ್ರವೇ ವಹಿಸಿಕೊಳ್ಳುತ್ತದೆ. ಉದಾ. : ಕೇಂದ್ರಪಟ್ಟಿಯ 63ನೇ ಕ್ರಮ ಸಂಖ್ಯೆಯಲ್ಲಿ ಬರುವ ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಅಲೀಘಡ್ ಮುಸ್ಲಿಂ ವಿಶ್ವವಿದ್ಯಾಲಯ ಮತ್ತು ದೆಹಲಿ ವಿಶ್ವವಿದ್ಯಾಲಯ ಮುಂತಾದವುಗಳು.

**ರಾಜ್ಯ ವಿಶ್ವವಿದ್ಯಾನಿಲಯಗಳು**

ಸಂಪೂರ್ಣವಾಗಿ ಸಮಗ್ರವಾಗಿ ರಾಜ್ಯದ ಆಡಳಿತ ವ್ಯವಸ್ಥೆಗೆ ರಾಜ್ಯ ವಿಶ್ವವಿದ್ಯಾನಿಲಯಗಳು ಒಳಪಟ್ಟಿರುತ್ತವೆ. ಹಣಕಾಸಿನ ನೆರವನ್ನು ರಾಜ್ಯಗಳೇ ಕೊಡುತ್ತವೆ. ಅಲ್ಪಪ್ರಮಾಣದಲ್ಲಿ ಕೇಂದ್ರ ಮತ್ತು ಯುಜಿಸಿ ಸಹ ನೆರವನ್ನು ಕೊಡುತ್ತವೆ.

ಈ ವಿಶ್ವವಿದ್ಯಾಲಯಗಳ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಣಯವು ಸಾಮಾನ್ಯವಾಗಿ ಆಯಾ ರಾಜ್ಯದ ರಾಜ್ಯಪಾಲರಿಗಿರುತ್ತದೆ. ಅವರು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಕೆಲ ನೀತಿ ನಿಯಮಗಳನ್ನು ನಿರೂಪಿಸುವರು. ಉದಾ. : ಕನ್ನಡ ವಿಶ್ವವಿದ್ಯಾಲಯ, ತೆಲುಗು ವಿಶ್ವವಿದ್ಯಾಲಯ, ತಮಿಳು ವಿಶ್ವವಿದ್ಯಾಲಯ ಮುಂತಾದವು.

**ಕಾಲೇಜುಗಳನ್ನು ಹೊಂದಿಕೊಳ್ಳುವ ವಿಶ್ವವಿದ್ಯಾನಿಲಯಗಳು (Affiliated Universities)**

ಈ ವಿಶ್ವವಿದ್ಯಾಲಯಗಳ ಅಧಿಕಾರ ವ್ಯಾಪ್ತಿಯು ವೈವಿಧ್ಯಮಯ ಮತ್ತು ವಿಶಾಲವಾಗಿರುವುದು. ಈ ವಿಶ್ವವಿದ್ಯಾಲಯಗಳಿಗೆ ಹೊಂದಿಕೊಂಡಿರುವ ಕಾಲೇಜುಗಳು ಬಹಳಷ್ಟು ವಿಸ್ತಾರವಾಗಿ ಹಬ್ಬಿರುತ್ತವೆ. ಈ ವಿಶ್ವವಿದ್ಯಾಲಯಗಳು ಯುಜಿಸಿಯು ನಿರ್ದೇಶಿಸಿರುವ ನೀತಿ ನಿಯಮಗಳ ರೀತಿಯಲ್ಲಿ ಕಾರ್ಯವನ್ನು ನಡೆಸುತ್ತವೆ. ಪಠ್ಯಕ್ರಮ ಬೋಧನಾ ವ್ಯವಸ್ಥೆಗೆ ಸಂಬಂಧಿಸಿದಂತೆ ಆಯೋಗಗಳ ಶಿಫಾರಸ್ಸಿನ ಮೇರೆಗೆ ನಡೆದುಕೊಳ್ಳುತ್ತದೆ. ಯುಜಿಸಿಯು ಆರ್ಥಿಕ ಸಹಾಯವನ್ನು ಕೊಡುತ್ತದೆ. ಉದಾ. : ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲ್ಕತ್ತಾ ವಿಶ್ವವಿದ್ಯಾನಿಲಯ, ಮದ್ರಾಸ್ ವಿಶ್ವವಿದ್ಯಾನಿಲಯ ಮುಂತಾದವು.

**ಸಂಯುಕ್ತ ವಿಶ್ವವಿದ್ಯಾನಿಲಯಗಳು (Federal Universities)**

ಈ ಪ್ರಕಾರದ ವಿಶ್ವವಿದ್ಯಾಲಯಗಳ ಅಧಿಕಾರದ ವ್ಯಾಪ್ತಿಯು ಒಂದು ಕೇಂದ್ರ ಸ್ಥಳಕ್ಕೆ ಮಾತ್ರ ಸೀಮಿತವಾಗಿರುವುದು. ಆದಾಗ್ಯೂ ಕೆಲವು ಕಾಲೇಜುಗಳಿಗೆ ಸೇರ್ಪಡೆಯ ಅನುಮತಿಯನ್ನು ನೀಡುತ್ತವೆ. ಪ್ರತಿಯೊಂದು ಕಾಲೇಜು ವಿಶ್ವವಿದ್ಯಾಲಯದ ಆಡಳಿತದಲ್ಲಿ ಭಾಗವಹಿಸುವುದಲ್ಲದೆ ಅದು ಕೆಲವು ಮಟ್ಟಿಗೆ ತನ್ನ ಸ್ವಾತಂತ್ರ್ಯವನ್ನು ಮತ್ತು ಸ್ವಾಯತ್ತತೆಯನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಬೇಕಾಗುವುದು. ಉದಾ: ಮುಂಬೈ, ಪಣಜಿ, ಜಬಲ್‌ಪೂರ ಮುಂತಾದವು.

**ಪರಿಗಣಿತ ವಿಶ್ವವಿದ್ಯಾನಿಲಯಗಳು (Deemed Universities)**

ಈ ವಿಶ್ವವಿದ್ಯಾನಿಲಯಗಳು ಸಾಮಾನ್ಯವಾಗಿ ಯುಜಿಸಿಯಿಂದ ನಿಯಂತ್ರಿಸಲ್ಪಡುವ, ವಿಶ್ವವಿದ್ಯಾನಿಲಯಗಳು ಹೊಂದಿರುವ ಎಲ್ಲ ರೀತಿಯ ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತವೆ. ಪದವಿ ಪ್ರದಾನ ಸಂಬಂಧ ಕುರಿತು ನಿರ್ಣಯ ಕೈಗೊಳ್ಳುವ, ಸಮಾರಂಭ ನಡೆಸುವ ಅಧಿಕಾರ ಅವುಗಳಿಗಿರುತ್ತದೆ. ಇವು ಯುಜಿಸಿಯಿಂದ ಮಾನ್ಯತೆಯನ್ನು ಸಹ ಪಡೆದಿರುತ್ತವೆ. ಉದಾ. : ವೀರಶೈವ ವಿಶ್ವವಿದ್ಯಾಲಯ, ಸತ್ಯ ಸಾಯಿಬಾಬಾ ವಿಶ್ವವಿದ್ಯಾಲಯ, ವಿಶ್ವಭಾರತಿ ವಿಶ್ವವಿದ್ಯಾಲಯ, ಮಣಿಪಾಲ ವಿಶ್ವವಿದ್ಯಾಲಯ, ಮಾತಾ ಅಮೃತಾನಂದಮಯಿ ವಿಶ್ವವಿದ್ಯಾನಿಲಯ, ಮುಂತಾದವು.

**ವಿಶ್ವವಿದ್ಯಾನಿಲಯಗಳ ಪರೀಕ್ಷಾ ವ್ಯವಸ್ಥೆ ಮತ್ತು ಸುಧಾರಣೆಗಳು**

"ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಸುಧಾರಣೆಗಳನ್ನು ತರುವುದಾದಲ್ಲಿ ಪರೀಕ್ಷೆಗಳಿಗೆ ಸಂಬಂಧಿಸದಂತಹುಗಳನ್ನು ಮೊದಲು ತರವುದು ಸೂಕ್ತ." ಡಾ. ಎಸ್. ರಾಧಾಕೃಷ್ಣನ್ ಆಯೋಗದ ಅಭಿಪ್ರಾಯ.

"ಪ್ರಸ್ತುತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಭವಿಷ್ಯವು ವರ್ಷದ ಕೊನೆಯಲ್ಲಿ ನಡೆಯುವ ಪರೀಕ್ಷೆಯನ್ನು ಅವಲಂಬಿಸಿರುವುದರಿಂದ, ಸ್ವಂತವಾಗಿ ಹೆಚ್ಚಿನದನ್ನು ಓದದೇ ಪರೀಕ್ಷೆಗಾಗಿ ಬಾಯಿಪಾಠ ಮಾಡುವುದರಲ್ಲಿ ಇವರು ತೊಡಗಿದ್ದಾರೆ. ಈ ಹೊರಗಣ ಪರೀಕ್ಷೆಯ ಪ್ರಭಾವವು ಉನ್ನತ ಶಿಕ್ಷಣದ ಗುಣಮಟ್ಟದ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡುವುದರಿಂದ ಈ ಪರೀಕ್ಷೆಗಳನ್ನು ಚಿಕಿತ್ಸೆಗೆ ಒಳಪಡಿಸುವುದು ಅವಶ್ಯಕ". ಕೊಠಾರಿ ಆಯೋಗದ ಈ ಮೇಲಿನ ಹೇಳಿಕೆಗಳು ಪರೀಕ್ಷಾ ಪದ್ಧತಿಯನ್ನು ಬದಲಿಸಬೇಕೆಂಬುದನ್ನು ಸಮರ್ಥಿಸುತ್ತವೆ. ತತ್ಪರಿಣಾಮವಾಗಿ ಯುಜಿಸಿಯು ಪರೀಕ್ಷೆಗಳನ್ನು ಸುಧಾರಿಸುವ ಪ್ರಯತ್ನವನ್ನು ಕೈಗೊಂಡಿದೆ. ಸುಧಾರಣೆಯನ್ನು ಕುರಿತು ಯೋಜನೆಗಳನ್ನು ತಯಾರಿಸಿ ಪ್ರತಿಕ್ರಿಯೆಗಾಗಿ ಕೆಲವು ವಿಶ್ವವಿದ್ಯಾಲಯಗಳಿಗೆ ಕಳುಹಿಸಿತು. ಯುಜಿಸಿಯ ಉದ್ದೇಶ ಪರೀಕ್ಷೆಗೆ ಹೊಸ ತಿರುವನ್ನು ಕೊಡುವುದು. ಅದಕ್ಕೆ ಸೃಜನಾತ್ಮಕ ಆಯಾಮವನ್ನು ಒದಗಿಸುವುದು. ವಿದ್ಯಾರ್ಥಿಗಳ ಮೇಲಣ ಪಠ್ಯವಿಷಯಗಳ ಹೆಣಭಾರವನ್ನು ಹಗುರಗೊಳಿಸುವುದು. ಪರೀಕ್ಷಾ ಪದ್ಧತಿಯನ್ನು ವಿಕೇಂದ್ರಗೊಳಿಸುವುದು. ಹೊಸ ಪರೀಕ್ಷಾ ಪದ್ಧತಿಯು ಬೌದ್ಧಿಕ ಸಂಪತ್ತು ಅಪವ್ಯಯವಾಗದಂತೆ ನೋಡಿಕೊಳ್ಳುವುದಲ್ಲದೆ, ಅವರ ಶ್ರಮ ಸಾರ್ಥಕವಾಗುವಂತೆ ಮಾಡಲು ಪ್ರಯತ್ನಿಸುತ್ತದೆ. ಈ ಹೊಸ ಪದ್ಧತಿಯನ್ನು ಪ್ರಾಯೋಗಿಕವಾಗಿ 12 ವಿಶ್ವವಿದ್ಯಾಲಯಗಳಲ್ಲಿ ಜಾರಿಗೆ ತರಲು ನಿರ್ಧರಿಸಿತು. ಅವುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯವೂ ಒಂದು.

ವಿಶ್ವವಿದ್ಯಾನಿಲಯಗಳ ಪರೀಕ್ಷೆ ಎಂಬುದು ಅತ್ಯಂತ ಮಹತ್ವವನ್ನು ಪಡೆದ ಅಂಶವಾಗಿದೆ. ಇಲ್ಲಿ ಪರೀಕ್ಷೆ ಎಂಬುದು ಮೌಲ್ಯಾಧಾರಿತ ವಾಗಿರಬೇಕು. ಉತ್ತಮಗುಣ ಮಟ್ಟವನ್ನು ಹೊಂದಿರಬೇಕು ಮತ್ತು ವಸ್ತುನಿಷ್ಠವಾಗಿರಬೇಕು ಎಂಬುದು ವಿಶ್ವವಿದ್ಯಾನಿಲಯ ಆಯೋಗದ ಮುಖ್ಯ ಉದ್ದೇಶವಾಗಿರುತ್ತದೆ. ಈ ಪರೀಕ್ಷಾ ವ್ಯವಸ್ಥೆ ಎಂಬುದು ಕಲಿಸುವ, ಕಲಿಯುವ ಹಾಗೂ ಗ್ರಹಣ ಶಕ್ತಿಯ ಅಳತೆ ಎಂದು ಹೇಳಬಹುದು.

ಉನ್ನತ ಶಿಕ್ಷಣವು ವ್ಯಕ್ತಿಯ ಜೀವನದ ಭದ್ರವಾದ ಕೋಟೆ ಇದ್ದಂತೆ. ಅದರ ಅಡಿಯಲ್ಲಿ ಆತ ತನ್ನ ಜೀವನವನ್ನು ಅತ್ಯಂತ ಉತ್ತಮ ರೀತಿಯಲ್ಲಿ ನಿರ್ಮಿಸಿಕೊಳ್ಳಬಹುದಾಗಿದೆ. ಆದ್ದರಿಂದ ವಿಶ್ವವಿದ್ಯಾನಿಲಯಗಳು ವ್ಯಕ್ತಿಯ


Digitised by Bharatavani, CIIL

ಜೀವನ ನಿರೂಪಣೆಗೆ ಅವಶ್ಯಕವಾದ, ಮೌಲ್ಯಯುತವಾದ ಶಿಕ್ಷಣವನ್ನು ನೀಡಬೇಕು. ಆಗ ಶೈಕ್ಷಣಿಕ ನಿರ್ವಹಣೆಯಲ್ಲಿ ಸಾರ್ಥಕತೆ ಉಂಟು.

–ಆರ್.ಆರ್.ಮ

## ಸ್ಪರ್ಧಾತ್ಮಕ ಪರೀಕ್ಷೆಗಳು

ಸರ್ಕಾರಿ ಅಥವಾ ಸರ್ಕಾರೇತರ ಯಾವುದೇ ಖಾಸಗೀ ಸಂಸ್ಥೆಗಳಲ್ಲಿಯೇ ಆಗಲಿ ಇಂದಿನ ದಿನಗಳಲ್ಲಿ ಉದ್ಯೋಗ ಗಿಟ್ಟಿಸಬೇಕಾದರೆ ಯೋಗ್ಯತೆಯ ಅನುಸಾರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದುವುದು ಅಥವಾ ಹೆಚ್ಚು ಅಂಕಗಳನ್ನು ಪಡೆದುಕೊಳ್ಳುವುದು ಅತ್ಯವಶ್ಯಕವಾಗಿದೆ. ಇಂದಿನ ಸ್ಪರ್ಧಾತ್ಮಕ ಪರೀಕ್ಷೆಗಳು ಜಟಿಲತೆಯ್ಲಿ ಅಥವಾ ಕ್ಲಿಷ್ಟತೆಯ ಮಟ್ಟದಲ್ಲಿ ತಮ್ಮ ರೂಪುರೇಶೆಯನ್ನೇ ಬದಲಾಯಿಸಿಕೊಂಡಿವೆ. ಅದಕ್ಕೆ ಕಾರಣ ಓದುಗರ ಸಂಖ್ಯೆ, ಜನಸಂಖ್ಯೆ ಹೆಚ್ಚಳ, ಲಿಂಗ–ವರ್ಗ–ಜಾತಿ ಯಾವುದೇ ತಾರತಮ್ಯವಿಲ್ಲದೇ ಪಡೆದ ಸಾರ್ವತ್ರಿಕ ಶಿಕ್ಷಣದ ಪರಿಕಲ್ಪನೆ ಹಾಗೂ ಓದುವ ಉದ್ಯೋಗ ಗಿಟ್ಟಿಸಿಕೊಳ್ಳಬೇಕೆಂಬ ಯುವ ಜನತೆಯ ಹಂಬಲ ಇದಕ್ಕೆ ಕಾರಣವಿರಬಹುದು. ಅದೇನೇ ಇದ್ದರೂ ನಾವು ಸಾರ್ವತ್ರಿಕವಾಗಿ ಹೇಳುವಂತೆ ಇಂದು ನಾವು "ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ". ಸ್ಪರ್ಧಾತ್ಮಕ ಪರೀಕ್ಷೆಗಳು ಭಾರತದಲ್ಲಿ ಹೇಗೆ ನೆಲೆಗೊಂಡವು ಇಂದಿನ ದಿನಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ರೂಪುರೇಶೆ ಏನೆಂಬುದನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಬ್ರಿಟಿಷ್ ಆಳ್ವಿಕೆಯಲ್ಲಿ "ICS" (Indian Civil Service) (ಭಾರತೀಯ ನಾಗರಿಕ ಸೇವೆ) ಎಂಬ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುತ್ತಿತ್ತು. ಮೊದಮೊದಲು ಇದು ಇಂಗ್ಲೆಂಡ್‌ನಲ್ಲಿ ಮಾತ್ರ ನಡೆಯುತ್ತಿತ್ತು. ಇದರಲ್ಲಿ ತೇರ್ಗಡೆ ಹೊಂದಿದವರಿಗೆ ತರಬೇತಿ ನೀಡಿ ಭಾರತ ಸರ್ಕಾರದಲ್ಲಿ ಉದ್ಯೋಗಕ್ಕೆ ನೇಮಿಸಿಕೊಳ್ಳಲಾಗುತ್ತಿತ್ತು. ಉದಾಹರಿಸುವುದಾದರೆ ಈ ICS ಪರೀಕ್ಷೆಯಲ್ಲಿ ಅರಬಿಂದ್ ಘೋಷ್‌ರವರು ತೇರ್ಗಡೆ ಹೊಂದಿದ್ದರು. ಅಂತೆಯೇ ಸುಭಾಷ್ ಚಂದ್ರ ಭೋಸ್‌ರವರು ಸಹ ICS ತೇರ್ಗಡೆ ಹೊಂದಿದ್ದರೂ ಇಂಗ್ಲಿಷರ ಅಧೀನದ ಸೇವೆಯನ್ನು ಧಿಕ್ಕರಿಸಿ ಸ್ವತಂತ್ರ್ಯ ಹೋರಾಟಕ್ಕೆ ಧುಮುಕಿದರು. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಈ "ICS" ಪರೀಕ್ಷೆಯು "IAS" (Indian Administrative Service) ಭಾರತೀಯ ಆಡಳಿತಾತ್ಮಕ ಸೇವೆಯಾಗಿ ಮರು ರೂಪ ಪಡೆದು ಭಾರತದಲ್ಲೇ ಈ ಪರೀಕ್ಷೆ ಸಮರ್ಥವಾಗಿ ರೂಪುಗೊಂಡಿತು. ಇದು ಸರ್ಕಾರಿ ಸೇವೆಯಲ್ಲಿಯೇ ಆಡಳಿತಾತ್ಮಕವಾಗಿ ಇಂದಿಗೂ ಉನ್ನತ ಸ್ಥಾನದಲ್ಲಿದೆ. IAS ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾದರೆ ಆ ವ್ಯಕ್ತಿಯು ಯಾವುದಾದರೂ ಭಾರತೀಯ ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಗಳಿಸಿರಬೇಕು. ಭಾರತೀಯ ಆಡಳಿತ ಸೇವಾ ಪರೀಕ್ಷೆಗೆ ನಿಗದಿತ ಪಠ್ಯಕ್ರಮವಿರುತ್ತದೆ. ಈ ಪಠ್ಯಕ್ರಮದಲ್ಲಿ ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನಗಳು, ಮನೋವಿಜ್ಞಾನ, ಮಾನಸಿಕ ಸಾಮರ್ಥ್ಯ ಹಾಗೂ ಆಯ್ದ ನಿಗದಿತ ವಿಷಯಗಳ ಕುರಿತಾಗಿ ಪಠ್ಯಕ್ರಮ ಇರುತ್ತವೆ. ಈ ಪರೀಕ್ಷಣದಲ್ಲಿ ಎರಡು ಮುಖ್ಯ ಭಾಗಗಳಿರುತ್ತವೆ. ಒಂದು ಪೂರ್ವಭಾವೀ ಪರೀಕ್ಷೆ, ಅಭ್ಯರ್ಥಿಯು ಇದರಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಿ ಮುಖ್ಯ ಪರೀಕ್ಷೆಗೆ ಆ ಅಭ್ಯರ್ಥಿಯನ್ನು ಆಯ್ಕೆಮಾಡಲಾಗುತ್ತದೆ. ಪರೀಕ್ಷೆಯು ಮುಖ್ಯವಾಗಿ ಲಿಖಿತ ರೂಪದಲ್ಲಿದ್ದು, ಮೌಖಿಕ ಪರೀಕ್ಷೆಯನ್ನೂ ಸಹ ವಿದ್ಯಾರ್ಥಿ ಎದುರುಗೊಳ್ಳಬೇಕಾಗುತ್ತದೆ. ಅಂತೆಯೇ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಸದೃಢಗೊಳಿಸುವುದರೊಂದಿಗೆ ತರಬೇತಿ ಕೇಂದ್ರದಲ್ಲಿ ಇವರನ್ನು ದೈಹಿಕವಾಗಿಯೂ ಸದೃಢಗೊಳಿಸಲಾಗುತ್ತದೆ. ನಂತರ ಅಂಕಗಳನ್ನು ಆಧರಿಸಿ ಅಭ್ಯರ್ಥಿಗಳನ್ನು ವಿವಿಧ ನಾಗರೀಕ ಸೇವಾ ವಿಭಾಗಗಳಿಗೆ ನಿಯೋಜಿಸಲಾಗುವುದು.

ಮೇಲ್ದರ್ಜೆಯಿಂದ ಆ ಸೇವಾ ವಿಭಾಗಗಳನ್ನು ಹೀಗೆ ಗುರುತಿಸಬಹುದು

IFS (ಭಾರತೀಯ ವಿದೇಶಾಂಗ ಸೇವೆ)

IAS (ಭಾರತೀಯ ಆಡಳಿತ ಸೇವೆ)

IPS (ಭಾರತೀಯ ರಕ್ಷಣಾ ಸೇವೆ)

IFS (ಭಾರತೀಯ ಅರಣ್ಯ ಸೇವೆ)

ಅಖಿಲ ಭಾರತ ಮಟ್ಟದಲ್ಲಿ UPSC-Union Public Service Commission ಕೇಂದ್ರೀಯ ಸಾರ್ವಜನಿಕ ಸೇವಾ ಆಯೋಗ ಈ ಪರೀಕ್ಷೆಗಳನ್ನು ನಡೆಸುತ್ತದೆ.

ಹೀಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಆಯಾ ಸಾರ್ವಜನಿಕ ಸೇವೆಯ ವಿಭಾಗಗಳಿಗೆ ಅಭ್ಯರ್ಥಿಯನ್ನು ನಿಯೋಜಿಸಲಾಗುವುದು.

ಹೀಗೆ ಸ್ಪರ್ಧಾತ್ಮಕ ಪರೀಕ್ಷೆಗಳು ರಾಷ್ಟ್ರಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ನಡೆಯುವುದನ್ನು ಗಮನಿಸಬಹುದು. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಕೆಲಸಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳು ಅನಿವಾರ್ಯವಾಗಿಬಿಟ್ಟಿವೆ. ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳು ಉತ್ತಮ ಸಾಧನವಾಗಿ ಹೊರಹೊಮ್ಮಿವೆ. ಕರ್ನಾಟಕ ಲೋಕಸೇವಾ ಆಯೋಗ (Karnataka Public Service Commission - KPSC) ಕರ್ನಾಟಕ ಸರ್ಕಾರದ ಆಡಳಿತ ಹಣಕಾಸು ಪೋಲಿಸ್, ಶಿಕ್ಷಣ ಮುಂತಾದ ಇಲಾಖೆಗಳಿಗೆ ಪತ್ರಾಂಕಿತ (ಗೆಜೆಟೆಡ್) ಅಧಿಕಾರಿಗಳನ್ನು ಆಯ್ಕೆ ಮಾಡಲು ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತದೆ. FDA (ಪ್ರಥಮ ದರ್ಜೆ ಸಹಾಯಕ), BDA (ದ್ವಿತೀಯ ದರ್ಜೆ ಸಹಾಯಕ) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ನಿಲಯ ಮೇಲ್ವಿಚಾರಕರಿಗೆ ಅಭಿಯಂತರರಿಗೆ, ವೈದ್ಯಕೀಯ ರಂಗಕ್ಕೆ, ಪ್ರಾಥಮಿಕ ಶಾಲಾ ಶಿಕ್ಷಕರಿಂದ ಪದವಿಪೂರ್ವ ಕಾಲೇಜು ಉಪನ್ಯಾಸಕರ ಆಯ್ಕೆಗೆ, ಬ್ಯಾಂಕಿಂಗ್, ಗ್ರಂಥಾಲಯ ಹೀಗೆ ಎಲ್ಲ ಸರ್ಕಾರಿ ಹುದ್ದೆಗಳಿಗೂ ಕೆ.ಪಿ.ಎಸ್.ಸಿ. ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಹಾಗೂ ಸರಿಹೊಂದುವ ಯೋಗ್ಯ ಪಠ್ಯಕ್ರಮವೂ ಪರೀಕ್ಷೆಯಲ್ಲಿ ನಿಯೋಜನೆಗೊಂಡಿರುತ್ತದೆ. ಮೌಖಿಕ ಪರೀಕ್ಷೆಯು ಅಗತ್ಯವಿರುವ ಕೆಲವು ಪರೀಕ್ಷೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

ಇಂದಿನ ದಿನಗಳಲ್ಲಿ ಅನೇಕ ಅರೆ ಖಾಸಗಿ, ಖಾಸಗಿ ಸಂಸ್ಥೆಗಳು ಸಹ ತಮಗೆ ಬೇಕಾದ ಸಿಬ್ಬಂದಿಯನ್ನು ಆಯ್ಕೆ ಮಾಡಿಕೊಳ್ಳಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತವೆ.

–ಜಿ.ಎನ್.ಕೆ.

## ಸ್ಮರಣೆಯ ಮಾದರಿಗಳು

ಕೆಲವು ಮನೋವಿಜ್ಞಾನಿಗಳು ಮಾಹಿತಿಯನ್ನು ಗ್ರಹಿಸಿ, ಸಂಸ್ಕರಿಸಿ, ಸಂಗ್ರಹಿಸಿ ಬೇಕಾದಾಗ ಬೇಕಾದುದನ್ನು ಒದಗಿಸುವ ಕಂಪ್ಯೂಟರ್‌ಗಳ ಕಾರ್ಯಕ್ಕೆ ಸ್ಮರಣೆಯನ್ನು ಹೋಲಿಸುತ್ತಾರೆ. ಇಂತಹ ಪರಿಕಲ್ಪನೆಯನ್ನು ಆಧರಿಸಿ ರೂಪಿಸಿದ ಸ್ಮರಣೆಯ ಮಾದರಿಗಳಿಗೆ ಮಾಹಿತಿ ಸಂಸ್ಕರಣ

Digitised by Bharatavani, CIIL

ಮಾದರಿಗಳು (Information Processing Models) ಎಂದು ಕರೆಯುತ್ತಾರೆ. ಇದು ಸ್ಮರಣೆಯ ಪ್ರಕ್ರಿಯೆಯನ್ನು ವಿವರಿಸುವ ಇತ್ತೀಚಿನ ಆಧುನಿಕ ಮಾದರಿ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಹೊಸ ಆವಿಷ್ಕಾರದಿಂದಾಗಿ ಸ್ಮರಣೆಯ ಪ್ರಕ್ರಿಯೆಯನ್ನು ಈ ದೃಷ್ಟಿಕೋನದಿಂದ ನೋಡುವ ಪ್ರಯತ್ನಗಳು ಇತ್ತೀಚೆಗೆ ಆರಂಭವಾಗಿ ಇದನ್ನು ನಾವು "ಮಾಹಿತಿ ಸಂಸ್ಕರಣೆ" ಎಂಬ ಹೆಸರಿನಲ್ಲಿ ಕರೆಯುತ್ತೇವೆ.

ಮಾನವನ ಮಿದುಳಿನ ಕಾರ್ಯಾಚರಣೆಯನ್ನು, ಕಂಪ್ಯೂಟರ್ ಕಾರ್ಯಾಚರಣೆಗೆ ಹೋಲಿಸಿ ಅದನ್ನು ವರ್ಣಿಸುವ ಪರಿಭಾಷೆಯಲ್ಲಿಯೇ ವಿವರಿಸಲು ಪ್ರಯತ್ನಿಸಿದ್ದಾರೆ. ಅಂತಹ ಮಾದರಿಗಳನ್ನು ಮಾಹಿತಿ ಸಂಸ್ಕರಣ ಮಾದರಿಗಳೆಂದು ಕರೆಯುತ್ತಾರೆ. ಅಟ್‌ಕಿನ್ಸನ್ ಮತ್ತು ಶಿಫ್ರಿನ್ (1968) ಸ್ಮರಣೆಯ ಮಾಹಿತಿ ಸಂಸ್ಕರಣ ಮಾದರಿಯೊಂದನ್ನು ಪ್ರತಿಪಾದಿಸಿದ್ದಾರೆ.

ಈ ಮಾಹಿತಿ ಸಂಸ್ಕರಣ ಮಾದರಿಯ ವಿವರಣೆ ಹೀಗಿದೆ–

ಯಾವುದೇ ಮಾದರಿಯಾದರೂ ಮಾಹಿತಿಗಳನ್ನು ಸಂಸ್ಕರಣಕ್ಕೆ ಒಳಗು ಮಾಡುವ ಸಂಸ್ಕರಣಾ ಘಟಕದ ಅವಶ್ಯಕತೆ ಇರುತ್ತದೆ. ಯಾಂತ್ರಿಕ ಸಂಸ್ಕರಣಗಳಲ್ಲಿ ಗಣಕಯಂತ್ರಗಳು ಕೆಲಸ ನಿರ್ವಹಿಸುವ ಹಾಗೆ ಮಾಹಿತಿ ಸಂಸ್ಕರಣಾ ಮಾದರಿಗಳಲ್ಲಿ ಮಾನವನ ಇಂದ್ರಿಯಗಳು ಆ ಕಾರ್ಯ ನಿರ್ವಹಿಸುತ್ತವೆ.

ಈ ಮಾದರಿಯಲ್ಲಿ ಬಾಹ್ಯ ಜಗತ್ತಿನ ವಿಷಯಗಳು ಅಥವಾ ಮಾಹಿತಿ ಜ್ಞಾನೇಂದ್ರಿಯಗಳ ಮೂಲಕ ಒಳ ಹೋಗುತ್ತವೆ. ಹೀಗೆ ಒಳ ಹೊಕ್ಕ ಮಾಹಿತಿ ಜ್ಞಾನಾತ್ಮಕ ಪಥಗಳಲ್ಲಿ ಕೆಲವು ಕ್ಷಣ ಉಳಿಯುತ್ತದೆ. ಈ ಕ್ರಿಯೆಯನ್ನು ಜ್ಞಾನವಾಹಕ ದಾಖಲೆ (ಸೆನ್ಸರಿ ರಿಜಿಸ್ಟರ್) ಎಂದು ಕರೆಯುತ್ತಾರೆ. ಜ್ಞಾನವಾಹಕ ದಾಖಲೆಯಲ್ಲಿ ದಾಖಲಾದ ಹೆಚ್ಚಿನ ಮಾಹಿತಿ ಕಳೆದು ಹೋಗುತ್ತದೆ. ನಮ್ಮ ಗಮನ ಸೆಳೆದ ಮಾಹಿತಿ ಅಥವಾ ನಮಗೆ ಉಪಯುಕ್ತವಾದ ಮಾಹಿತಿ ಅಲ್ಪಾವಧಿ ಉಗ್ರಾಣಕ್ಕೆ ಸಾಗುತ್ತದೆ. ಈ ಜ್ಞಾನೇಂದ್ರಿಯಗಳಿಂದ ಪಡೆದ ಮಾಹಿತಿಗಳು ಮಾನವರಲ್ಲಿ ಕಂಪ್ಯೂಟರ್‌ನ ಉಣಿಸುವಿಕೆಯ ಸಾಧನಗಳಾದ ಕೀಬೋರ್ಡ್, ಸ್ಕ್ಯಾನರ್, ಮೈಕ್ರೋಫೋನ್, ಪೆನ್‌ಡ್ರೈವ್, ಸಿಡಿ ಇತ್ಯಾದಿಗಳಂತೆ ವರ್ತಿಸುತ್ತದೆ. ಈ ರೀತಿಯಾಗಿ ವ್ಯಕ್ತಿಯ ಗಮನ ಸೆಳೆದ ಮಾಹಿತಿಗಳು ಮಾತ್ರ ಜ್ಞಾನವಾಹೀ ನರಗಳ ಮೂಲಕ ಮಿದುಳಿಗೆ ರವಾನೆಯಾಗುತ್ತವೆ. ವಾಸ್ತವವಾಗಿ ಈ ಸನ್ನಿವೇಶದಲ್ಲಿ ಅವಧಾನವು 'ಕಾರ್ಯ ನಿರ್ವಾಹ ನಿಯಂತ್ರಕ'ವಾಗಿ ವರ್ತಿಸುತ್ತದೆ.

ಕಂಪ್ಯೂಟರ್‌ನಲ್ಲಿ ಈ ಉಣಿಸಲಾದ ಮಾಹಿತಿಗಳು ಹೆಚ್ಚು ಕಮ್ಮಿ ಮಾನವನ ಮಿದುಳಿನಂತೆ ಕಾರ್ಯ ನಿರ್ವಹಿಸುವ 'ಕೇಂದ್ರ ಸಂಸ್ಕರಣ ಘಟಕ'ಕ್ಕೆ ವರ್ಗಾವಣೆ ಆಗುತ್ತದೆ. ಮಾನವನ ಮಿದುಳಿನಂತೆ ಕಂಪ್ಯೂಟರ್ ವರ್ತಿಸುವುದು ಒಂದು ಅಚ್ಚರಿಯ ವಿಷಯವೇ ಆಗಿದೆ. ಮಿದುಳನ್ನು ಬಹುಶಃ ಪ್ರಕೃತಿಯಿಂದ ನಿರ್ಮಿಸಲ್ಪಟ್ಟಿರುವ ಒಂದು ಸೂಪರ್–ಕಂಪ್ಯೂಟರ್ ಎಂದು ಪರಿಗಣಿಸಬಹುದು. ಕೇಂದ್ರ ಸಂಸ್ಕರಣ ಘಟಕ ಮಾಹಿತಿಗಳನ್ನು ಸಂಸ್ಕರಿಸಿ 'ಫಲಿತ'ವನ್ನು ಉತ್ಪಾದಿಸುತ್ತದೆ. ಈ ಉತ್ಪಾದಿತ (ಫಲಿತ) ಮಾಹಿತಿಗಳನ್ನು ಕಂಪ್ಯೂಟರ್‌ನ ಪರದೆಯ ಮೇಲೆ ಕಾಣಬಹುದು. ಅಥವಾ ಪ್ರಿಂಟರ್ ಮೂಲಕ ಪಡೆಯಬಹುದು. ಇದೇ ರೀತಿ ಮಿದುಳು ಕೂಡ ಮಾಹಿತಿ ಸಂಸ್ಕರಿಸಿ 'ಫಲಿತ'ವನ್ನು ಉತ್ಪಾದಿಸುತ್ತದೆ.

ಮಾನವರಲ್ಲಿ 'ವರ್ತನೆಗಳು' ಫಲಿತವಾದರೂ, ನರ–ಸ್ನಾಯು ಮಂಡಲ ಫಲಿತವನ್ನು ಪ್ರಕಟಿಸುವ ಸಾಧನವಾಗಿರುತ್ತದೆ. ಕಂಪ್ಯೂಟರ್ ಉಣಿಸಿದ ಫಲಿತ ಮಾಹಿತಿಗಳನ್ನು ಅಲ್ಪಾವಧಿ ಅಥವಾ ದೀರ್ಘಾವಧಿ ಸ್ಮೃತಿಯಲ್ಲಿ ದಾಸ್ತಾನು ಮಾಡುತ್ತದೆ. ಮಾಹಿತಿ ಸಂಸ್ಕರಣ ಮಾದರಿ ಪ್ರಕಾರ ಮಾನವರಲ್ಲಿ ಒಳಬಂದ ಮಾಹಿತಿ 'ಅಲ್ಪಾವಧಿ ಉಗ್ರಾಣದಲ್ಲಿ

ಸ್ಮರಣೆಯ ಮಾಹಿತಿ ಸಂಸ್ಕರಣಾ ಮಾದರಿ




ಆಧಾರ: Bower G.H. and Hillgat E.R. (3rd Edition) Theories of Learner Prentice-Hall of India (1986), P.427

**ಚಿತ್ರ 1 ಕಂಪ್ಯೂಟರ್‌ನಲ್ಲಿ ಮಾಹಿತಿ ಸಂಸ್ಕರಣೆ ಆಗುವುದನ್ನು ತೋರಿಸುವ ಚಿತ್ರ**

Digitised by Bharatavani, CIIL

'ಮೆಲಕು' ಹಾಕುವ ತಂತ್ರದ ಮೂಲಕ 'ಪೂರ್ವಾಭ್ಯಾಸ ಕಾಪು ತಡೆ' ಎಂಬ ಭಾಗದಲ್ಲಿ ಕೆಲವು ಕ್ಷಣಗಳ ಕಾಲ ದಾಸ್ತಾನಾಗುತ್ತದೆ. ಈ ಭಾಗವೇ 'ಫಲಿತ'ವನ್ನೂ ಕೂಡ ನೀಡಬಹುದು. ಆದರೆ ಕೆಲ ಸಮಯದ ನಂತರ ಅಲ್ಪಾವಧಿ ಉಗ್ರಾಣದ ದಾಸ್ತಾನು ಸಾಮರ್ಥ್ಯ ಬಹಳ ಕಡಿಮೆ ಇರುವುದರಿಂದ ದಾಸ್ತಾನಾದ ಮಾಹಿತಿ ಕಳೆದು ಹೋಗುತ್ತದೆ. ಒಳ ಬಂದ ಹೊಸ ಮಾಹಿತಿ ಹಳೆಯವನ್ನು ಹೊರ ತಳ್ಳುತ್ತದೆ. ಅಲ್ಪಕಾಲದ ಸ್ಮೃತಿಯಲ್ಲಿ ಮಾಹಿತಿಯನ್ನು ಕಾಪಾಡಿಕೊಳ್ಳುವುದಕ್ಕೆ ಸರಳ ಪುನರುಚ್ಚಾರಣೆ ಬೇಕಾಗುತ್ತದೆ. ಅದನ್ನು ದೀರ್ಘಕಾಲಿಕ ಸ್ಮೃತಿಗೆ ವರ್ಗಾಯಿಸಲು ಹೆಚ್ಚು ವಿಸ್ತಾರವಾದ ಸಂಸ್ಕರಣೆ ಬೇಕಾಗುತ್ತದೆ. ಅಲ್ಪಾವಧಿ ಉಗ್ರಾಣದಲ್ಲಿ ಸಂಗ್ರಹವಾಗಿರುವ ಮಾಹಿತಿ "ಮೆಲಕು ಹಾಕುವ" ಪ್ರಕ್ರಿಯೆಯ ಮೂಲಕ ದೀರ್ಘಾವಧಿ ಉಗ್ರಾಣಕ್ಕೆ ವರ್ಗಾವಣೆಯಾಗುತ್ತದೆ. ಈ ಪ್ರಕ್ರಿಯೆಯನ್ನು ಸಂಕೇತೀಕರಣಗೊಳಿಸುವಿಕೆ (Encoding) ಎನ್ನುವರು.

ಯಾವ ವಿಷಯವನ್ನು ನಾವು ಅರ್ಥಪೂರ್ಣವಾಗಿ ಕಲಿಯುತ್ತೇವೆಯೋ ಅದು ದೀರ್ಘಕಾಲದ ಸ್ಮೃತಿಯಲ್ಲಿ ಶಾಶ್ವತವಾಗಿ ಸಂಗ್ರಹವಾಗುತ್ತದೆ. ಕಲಿಯುವ ವ್ಯಕ್ತಿ ಅಗತ್ಯವಾದಾಗ ಅದನ್ನು ಪುನಃ ಪುನಃ ಸ್ಮೃತಿ ಪಟಲಕ್ಕೆ ತಂದುಕೊಳ್ಳಲು ಸಾಧ್ಯವಾಗುತ್ತದೆ. ಇದನ್ನೇ ಜ್ಞಾಪಿಸಿಕೊಳ್ಳುವಿಕೆ ಎನ್ನುವರು.

ದೀರ್ಘಾವಧಿ ಸ್ಮೃತಿಯು ಮಾಹಿತಿ ಸಂಸ್ಕರಣೆಯಲ್ಲಿ ಅತಿ ಮುಖ್ಯವಾದುದು ಮತ್ತು ಸಂಕೀರ್ಣವಾದುದು. ದೀರ್ಘಾವಧಿ ಸ್ಮೃತಿಗೆ ವಿಷಯಗಳನ್ನು ಒಳಪಡಿಸಬೇಕಾದರೆ ಹೆಚ್ಚಿನ ಕಾಲ ಹಾಗೂ ಶ್ರಮದ ಅಗತ್ಯವಿದೆ. ಇದು ಒಳಗೊಳ್ಳುವ ಮಾಹಿತಿಗಳ ಸಂಖ್ಯೆ ಅಪಾರ. ಅಲ್ಪಾವಧಿ ಸ್ಮೃತಿಗೆ ಹೋಲಿಸಿದಾಗ ಇದು ಪಡೆದುಕೊಳ್ಳುವ ಮಾಹಿತಿಗಳು ಸಾಪೇಕ್ಷವಾಗಿ ಹೆಚ್ಚು ಸ್ಥಿರತೆಯನ್ನು ಪಡೆದುಕೊಂಡಿರುತ್ತವೆ. ಆದರೆ ಮಾಹಿತಿಗಳ ಅಲ್ಪಾವಧಿ ಸ್ಮೃತಿಗೆ ಒಳಪಡಿಸುವಷ್ಟು ಸುಲಭದಲ್ಲಿ ಈ ಸ್ಮೃತಿಗೆ ಒಳಪಡಿಸಲಾಗುವುದಿಲ್ಲ. ದೀರ್ಘಾವಧಿ ಸ್ಮೃತಿಗೆ ಮಾಹಿತಿ ರವಾನಿಸುವಿಕೆ ಅಲ್ಪಾವಧಿಯ ಮೂಲಕವೇ ಆಗಬೇಕು. ಆದ್ದರಿಂದ ಅಲ್ಪಾವಧಿ ಸ್ಮೃತಿಗೆ ಮಾಹಿತಿಗಳನ್ನು ಸೇರಿಸುವಲ್ಲಿ ಯಾವ ಪ್ರಕ್ರಿಯೆಗಳು ನಿಬಂಧನೆಗಳು ಕಾರ್ಯ ನಿರ್ವಹಿಸುತ್ತವೆಯೋ ಅವೆಲ್ಲವೂ ಇದರ ಮಾಹಿತಿ ಸಂಸ್ಕರಣೆಗೂ ಅನ್ವಯಿಸಲ್ಪಡುತ್ತವೆ. ಅದರಲ್ಲೂ ನಿರಂತರ ಅಭ್ಯಾಸ ಬಹಳ ಮುಖ್ಯವಾದುದು. ಮಾಹಿತಿಯನ್ನು ಅಲ್ಪಾವಧಿಯಿಂದ ದೀರ್ಘಾವಧಿಗೆ ವರ್ಗಾಯಿಸುವಲ್ಲಿ ಅಭ್ಯಾಸದ್ದೇ ಪ್ರಮುಖ ಪಾತ್ರ. ಅಟಕಿನ್‌ಸನ್ ಮತ್ತು ಶಿಫರನ್‌ರ ಮಾಹಿತಿ ಸಂಸ್ಕರಣ ಮಾದರಿಯಲ್ಲಿ ಇವೆರಡೂ ಪ್ರತ್ಯೇಕವಾದವುಗಳಲ್ಲ. ದೀರ್ಘಾವಧಿ ಸ್ಮೃತಿಯ ಒಂದು ಲಕ್ಷಣವೆಂದರೆ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳುವ ಬಗೆ. ಇದರಲ್ಲಿ ಮಾಹಿತಿಗಳನ್ನು ಸಣ್ಣ ತುಣುಕುಗಳನ್ನಾಗಿಸದೆ. ಅವುಗಳನ್ನು ಖಚಿತವಾದ ಸಂರಚನೆಗೆ ಒಳಪಡಿಸಲಾಗುತ್ತದೆ. ಇಂತಹ ವ್ಯವಸ್ಥಿತವಾದ ಸಂಘಟನೆಯಿಂದಾಗಿ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲು ಸಾಧ್ಯ. ಈ ರೀತಿಯಾಗಿ ಮಾಹಿತಿಗಳನ್ನು ವ್ಯವಸ್ಥಿತವಾಗಿ ಸಂಘಟಿಸಿ ದೀರ್ಘಕಾಲದ ದಾಸ್ತಾನಿಗೆ ಅಣಿಗೊಳಿಸಬೇಕು. ಈ ಪ್ರಕ್ರಿಯೆಯನ್ನು ಸಂಕೇತೀಕರಿಸುವಿಕೆ ಎಂದು ಕರೆಯಬಹುದು. ಇದು 'ಪೂರ್ವಾಭ್ಯಾಸ ಕಾಪು ತಡೆ'ಯಲ್ಲಿ ನಡೆಯುತ್ತದೆ. ಈ ಸಂಕೇತೀಕರಿಸಿದ ಮಾಹಿತಿಗಳು ದೀರ್ಘಾವಧಿ ಉಗ್ರಾಣದಲ್ಲಿ ದಾಸ್ತಾನಾಗುತ್ತವೆ. ಕಂಪ್ಯೂಟರ್ ಕೂಡ ಇದೇ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಸಂಕೇತೀಕರಿಸುವ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಿರ್ವಹಿಸಿದರೆ, ಮಾಹಿತಿಗಳನ್ನು ಜ್ಞಾಪಿಸಿಕೊಳ್ಳಲು ಬಹಳ ಸುಲಭವಾಗುತ್ತದೆ. ಜ್ಞಾಪಿಸಿಕೊಳ್ಳಲು ಯೋಗ್ಯವಾಗಿರುವ ಈ ಮಾಹಿತಿಗಳನ್ನು 'ಉಣಿಕೆ'ಯಾಗಿಟ್ಟುಕೊಂಡು ಕಂಪ್ಯೂಟರ್ ಹಾಗೂ ಮಾನವರಲ್ಲಿ ಫಲಿತ'ವನ್ನು ಉತ್ಪಾದಿಸಬಹುದು.

ಮೇಲಿನ ಎಲ್ಲಾ ಕ್ರಿಯೆಗಳನ್ನು ನಿಯಂತ್ರಿಸುವ ಸಂಯೋಜಿಸುವ ಕಾರ್ಯವನ್ನೇ ಕೇಂದ್ರ ಕಾರ್ಯನಿರ್ವಾಹಕ ಘಟಕ ಕೈಗೊಳ್ಳುತ್ತದೆ. ವ್ಯಕ್ತಿಗೆ ಬಾಹ್ಯಸೂಚನೆಯಂತೆ ಅಥವಾ ಸ್ವಇಚ್ಛೆಯಿಂದ ದೀರ್ಘಾವಧಿ ಸ್ಮೃತಿಯಿಂದ ನಿರ್ದಿಷ್ಟ ಮಾಹಿತಿ ಬೇಕೆನಿಸಿದಾಗ ಮಿದುಳಿನ ಕೇಂದ್ರ ಕಾರ್ಯನಿರ್ವಾಹಕ ಭಾಗ ಹುಡುಕುವ ಪ್ರಕ್ರಿಯೆಯನ್ನು ಆರಂಭಿಸಿ ಬೇಕಾದ ಮಾಹಿತಿಯನ್ನು ದೀರ್ಘಾವಧಿ ಸ್ಮೃತಿಯಿಂದ ತೆಗೆದು ಅದನ್ನು ಶಬ್ದಗಳ/ಕ್ರಿಯೆಗಳ ರೂಪದಲ್ಲಿ ವರ್ತನೆಯ ಮಟ್ಟದಲ್ಲಿ ಅಭಿವ್ಯಕ್ತಗೊಳ್ಳುವಂತೆ ಮಾಡುತ್ತದೆ. ಈ ಪ್ರಕ್ರಿಯೆಯನ್ನು ವಿಸಂಕೇತಿಸುವಿಕೆ (Decoding) ಎನ್ನುತ್ತೇವೆ.

– ಎಂ.ಸ.ಪಾಂ.

## ಸ್ಮರಣೆಯ ಸ್ವರೂಪ

ಬುದ್ಧಿವಂತ ಪ್ರಾಣಿ ಎನಿಸಿಕೊಂಡ ಮನುಷ್ಯ ಜನ್ಮ ತಾಳಿದಂದಿನಿಂದ ತನ್ನ ಜೀವನದುದ್ದಕ್ಕೂ ಅನೇಕ ವಿಷಯಗಳನ್ನು ಕಲಿಯುತ್ತಲೇ ಇರುತ್ತಾನೆ. ಕಲಿಕೆಗೆ ಬೆಲೆ ಇರುವುದು ಕೇವಲ ಏನು ಕಲಿತಿದ್ದೇವೆ ಮತ್ತು ಹೇಗೆ ಕಲಿತಿದ್ದೇವೆ ಎಂಬುದಕ್ಕಾಗಿ ಅಲ್ಲ. ಕಲಿತದ್ದನ್ನು ಉಳಿಸಿಕೊಂಡು ಜೀವನದ ಸಮಸ್ಯೆಗಳನ್ನು ಬಿಡಿಸಲು ಉಪಯೋಗಿಸಬಹುದು ಎಂದಾಗ ಮಾತ್ರ. ಅಂದರೆ ಕಲಿತದ್ದು ಉಳಿಯಬೇಕು. ಉಳಿದದ್ದು ಜೀವನದಲ್ಲಿ ಉಪಯೋಗವಾಗಬೇಕು. ಆಗ ಮಾತ್ರ ಕಲಿಕೆ ಸಾರ್ಥಕವಾಗುತ್ತದೆ. ಆದ್ದರಿಂದ ಈ ಕಲಿತ ವಿಷಯಗಳನ್ನು ಅಳಿಸಿ ಹೋಗದ ಹಾಗೆ ಸಂರಕ್ಷಿಸಿ, ಅಗತ್ಯಬಿದ್ದಾಗ ಅವನ್ನು ನೆನಪಿಸಿಕೊಳ್ಳುವುದು ಅನಿವಾರ್ಯ.

ಮಾನವ ಹೊರಜಗತ್ತಿನ ವಿಷಯಗಳನ್ನು ಕೇಳಿ, ಕೆಲವನ್ನು ನೋಡಿ, ಕೆಲವನ್ನು ಅನುಭವಿಸಿ ತನ್ನ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳುತ್ತಾನೆ. ಅಂದರೆ ಈ ಮಾಹಿತಿಗಳನ್ನು ಮಾನವ ಆಂತರಿಕವಾಗಿ ಸಂಸ್ಕರಿಸಿಕೊಳ್ಳುತ್ತಾನೆ. ಕಲಿತ ಮಾಹಿತಿಯನ್ನು ತನ್ನಲ್ಲಿ ಉಳಿಸಿಕೊಂಡು ಅಗತ್ಯ ಬಂದಾಗ ಅದನ್ನು ಪುನಃ ಪಡೆದುಕೊಂಡು ಉಪಯೋಗಿಸಿಕೊಳ್ಳುವ ಪ್ರಕ್ರಿಯೆಯನ್ನು ಮನೋವಿಜ್ಞಾನದಲ್ಲಿ ಸ್ಮರಣೆ ಅಥವಾ ಸ್ಮೃತಿ ಎಂದು ಕರೆಯುತ್ತಾರೆ.

ಸ್ಮರಣೆಯು ಒಂದು ಮಾನಸಿಕ ಪ್ರಕ್ರಿಯೆ. ಇಂದ್ರಿಯಗಳ ಮೂಲಕ ಪಡೆದಂತಹ ಅನುಭವಗಳನ್ನು ಅಥವಾ ಕಲಿಕೆ ನಮ್ಮ ಮಿದುಳಿನಲ್ಲಿ/ ಮನಸ್ಸಿನಲ್ಲಿ ಬಿಂಬಗಳ ರೂಪದಲ್ಲಿ ದಾಖಲೆ ಆಗುತ್ತದೆ. ಈ ಬಿಂಬಗಳು ಮುದ್ರೆಗಳ ರೂಪದಲ್ಲಿ ರಕ್ಷಿಸಲ್ಪಡುತ್ತವೆ. ಮಿದುಳು ಅಥವಾ ಕೇಂದ್ರ ನರ ಮಂಡಲದಲ್ಲಿ (Central Nervous systems)ರಕ್ಷಿಸಲ್ಪಟ್ಟಿರುವ ಈ ಮುದ್ರೆಗಳು/ಸ್ಮೃತಿಯ ಕುರುಹುಗಳು (Memory traces). ನೀವು ಎಷ್ಟು ಸಮಯದವರೆಗೆ ಅವುಗಳನ್ನು ನಿಮ್ಮ ಮಿದುಳಿನಲ್ಲಿ ಉಳಿಸಿಕೊಳ್ಳುವಿರಿ ಎನ್ನುವುದು ಅವುಗಳ ಪ್ರಬಲತೆ, ಅವುಗಳ ಬಳಸುವಿಕೆಯ ಮೇಲೆ ಅವಲಂಬಿತವಾಗಿದೆ. ಹೆಚ್ಚು, ಹೆಚ್ಚು ಸಮಯ ಅದೇ ಮುದ್ರೆಗಳನ್ನು ಬಳಸುವುದರಿಂದ ಅವುಗಳ ಬಲ ಹೆಚ್ಚಾಗುತ್ತದೆ. ಅರ್ಥಾತ್ ಸ್ಮೃತಿ ಪಟಲದಲ್ಲಿ ಹೆಚ್ಚು ಕಾಲ ಹಸಿರಾಗಿ ಉಳಿಯುತ್ತವೆ. ಈ ಸಾಮರ್ಥ್ಯವನ್ನು ಉತ್ತಮ ಜ್ಞಾಪಕಶಕ್ತಿ ಎಂದೂ ಕರೆಯುತ್ತಾರೆ.

ಈ ಮುದ್ರೆಗಳನ್ನು ಹೆಚ್ಚು ಹೆಚ್ಚು ಬಳಸದಿದ್ದರೆ ಅವುಗಳು ಕ್ಷೀಣಿಸುತ್ತಾ ಹೋಗುತ್ತವೆ. ಈ ಪ್ರಕ್ರಿಯೆಯನ್ನು ಮರೆವು/ವಿಸ್ಮೃತಿ ಎಂದು ಕರೆಯುತ್ತಾರೆ. ಈ ಸ್ಮೃತಿಶಕ್ತಿ ಇತರ ಎಲ್ಲ ಮಾನಸಿಕ ಕ್ರಿಯೆಗಳಿಗೂ ಆಧಾರವಾಗಿದ್ದು ಇತರ ಮಾನಸಿಕ ಕ್ರಿಯೆಗಳು ಸಮರ್ಪಕವಾಗಿ ಪ್ರಯೋಜನಕಾರಿಯಾಗಿ ನಡೆಯಬೇಕಾದರೆ ಸ್ಮೃತಿ ಶಕ್ತಿ ಉತ್ತಮವಾಗಿರಬೇಕಾದದ್ದು ಅತೀ ಅವಶ್ಯಕ. ಕುರುಹುಗಳು ನಶಿಸಿಹೋಗಿದ್ದರೆ, ಕಲಿತ ವಿಷಯವನ್ನು ಪುನರುತ್ಪಾದಿಸಲು ಸಾಧ್ಯವಾಗುವುದಿಲ್ಲ.

Digitised by Bharatavani, CIIL

ಈ ಎಲ್ಲ ವಿವರಣೆಯ ಆಧಾರದ ಮೇಲೆ ಸ್ಮೃತಿಯನ್ನು ಈ ರೀತಿಯಾಗಿ ಅರ್ಥೈಸಬಹುದು.

ಪಂಚೇಂದ್ರಿಯಗಳ ಸಹಾಯದಿಂದ ಬಾಹ್ಯ ಜಗತ್ತಿನಿಂದ ಪಡೆದಂತಹ ಮಾಹಿತಿಗಳು ಮಿದುಳಿನಲ್ಲಿ ಬಿಂಬಗಳಾಗಿ ಮುದ್ರೆ ಒತ್ತಿ ಅಗತ್ಯ ಬಿದ್ದಾಗ ಅವುಗಳನ್ನು ಪುನಃ ಪಡೆದುಕೊಳ್ಳುವ ಪ್ರಕ್ರಿಯೆಯನ್ನೇ ಸ್ಮೃತಿ ಎಂದು ಕರೆಯಬಹುದು.

ಸ್ಮರಣೆಯನ್ನು ಅನೇಕ ಮನೋವಿಜ್ಞಾನಿಗಳು ತಮ್ಮ ಅಧ್ಯಯನಗಳ ಆಧಾರದಿಂದ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ ಇಂಥ ಒಂದು ಪರಿಭಾಷೆ ಹೀಗಿದೆ:

ಸ್ಮರಣೆ ಅಥವಾ ಜ್ಞಾಪಿಸಿಕೊಳ್ಳುವ ಪ್ರಕ್ರಿಯೆಯನ್ನು ಕೇವಲ ಹಿಂದಿನ ಅನುಭವಗಳನ್ನು ಅಥವಾ ಕಲಿತದ್ದನ್ನು ಮರಳಿ ಪಡೆಯುವುದು ಎಂದು ಅರ್ಥೈಸಿದರೆ ಸಾಲದು. ಏಕೆಂದರೆ ಅದು ಕಲಿಕೆ, ಧಾರಣೆ ಮತ್ತು ಸ್ಮರಿಸುವಿಕೆ ಹಾಗೂ ಗುರುತಿಸುವಿಕೆ ಮೂಲಕ ಜ್ಞಾಪಿಸಿಕೊಳ್ಳುವುದು ಎಂಬ ಉಪ ಪ್ರಕ್ರಿಯೆಗಳಿಂದ ಕೂಡಿದ ಸಂಕೀರ್ಣ ಪ್ರಕ್ರಿಯೆ.

ಈ ಸ್ಮರಣೆಯ ಪ್ರಕ್ರಿಯೆಯನ್ನು ಎರಡು ಮಾದರಿಗಳ ಸಹಾಯದಿಂದ ವಿವರಿಸಬಹುದು. ಅವುಗಳೆಂದರೆ ಸಾಂಪ್ರದಾಯಿಕ ಮಾದರಿ ಮತ್ತು ಮಾಹಿತಿ ಸಂಸ್ಕರಣ ಮಾದರಿ.

**ಸಾಂಪ್ರದಾಯಿಕ ಮಾದರಿ**

ಈ ಮಾದರಿಯಲ್ಲಿ ಸ್ಮರಣೆಯನ್ನು ಅರ್ಥೈಸಲು ಮೂರು ಹಂತಗಳಲ್ಲಿ ವಿಶ್ಲೇಷಿಸಲಾಗಿದೆ.

1. **ಆರ್ಜನೆ ಅಥವಾ ಕಲಿಕೆ**

ಸ್ಮರಣೆಯ ಮೊದಲ ಹಂತವೇ ಆರ್ಜನೆ/ಕಲಿಕೆ. 'ಆರ್ಜನೆ' ಎಂದರೆ ಸಂಪಾದಿಸು/ಗಳಿಸು ಎಂದರ್ಥ. ಹೊರ ಜಗತ್ತಿನಿಂದ ವಿಷಯವನ್ನು ಅಥವಾ ಅನುಭವವನ್ನು ಆರ್ಜಿಸುವುದು ಸ್ಮರಣೆ ಪ್ರಕ್ರಿಯೆಯ ಪ್ರಾರಂಭಿಕ ಹಂತ. ಆದ ಕಾರಣ ಪರಿಣಾಮಕಾರಿ ಸ್ಮೃತಿಗೆ ಕಲಿಕೆಯು ಒಂದು ಪ್ರಾಥಮಿಕ ಅವಶ್ಯಕತೆಯಾಗಿದೆ. ಕಲಿಕೆ ಯಾವ ವಿಧವಾದದ್ದಾದರೂ ಆಗಿರಬಹುದು. ಅದಕ್ಕೆ ಪೂರ್ಣ ಗಮನ ಮತ್ತು ಶ್ರದ್ಧೆ ಅಗತ್ಯ. ಕಲಿತ ವಿಷಯಕ್ಕೆ ಸಂಬಂಧಿಸಿದ ಅಂಶಗಳಿಗೆ ಒಂದಕ್ಕೊಂದು ಸಂಬಂಧ ಉಂಟಾದಾಗಲೇ ಅದನ್ನು ಕಲಿಕೆ ಎಂದು ಪರಿಗಣಿಸಬಹುದು. ಕಲಿತದ್ದನ್ನು ಪದೇ ಪದೇ ಉಪಯೋಗಿಸುವ ರೂಢಿ ಮಾಡಿಕೊಳ್ಳಬೇಕು. ಮೊದಲೇ ತಿಳಿಸಿರುವ ಹಾಗೆ ಹೊರ ಜಗತ್ತಿನ ಈ ಮಾಹಿತಿ/ಅನುಭವ ಮಿದುಳಿನಲ್ಲಿ ಒಂದು ಗುರುತನ್ನು ಮಾಡುತ್ತದೆ. ಇದನ್ನೇ ನಾವು ದಾಸ್ತಾನು ಆಗುವಿಕೆ ಅಥವಾ ಕಲಿಕೆಯ ನಂತರದ ಪರಿಣಾಮ ಎನ್ನುತ್ತೇವೆ. ಅಂದರೆ, ಪರಿಣಾಮಕಾರಿಯಾಗಿ ಕಲಿತಾಗ ಮಾತ್ರ ವಿಷಯವನ್ನು ದಾಸ್ತಾನು ಮಾಡಲು ಸಾಧ್ಯ. ಆದಕಾರಣ ಕಲಿಕೆ ಹೆಚ್ಚುಕಾಲ ಜ್ಞಾಪಕದಲ್ಲಿರಬೇಕಾದರೆ ಕಲಿಯುವಾಗ ಮನೋವೈಜ್ಞಾನಿಕ ವಿಧಾನ ಅನುಸರಿಸಿಯೇ ಕಲಿತರೆ ಉತ್ತಮ. ಆಗ ಮಾತ್ರ ಈ ಕಲಿಕೆಯು ಮಿದುಳಿನಲ್ಲಿ ಅಳಿಸಲಾಗದ ಮುದ್ರೆ ಒತ್ತಲು ಸಾಧ್ಯ.

ಕಲಿಕೆಯ ವಿಧಾನಗಳ ಫಲಾಫಲಗಳು ಮತ್ತು ಗುಣಾವಗುಣಗಳು ಕಲಿಯುವ ವ್ಯಕ್ತಿಯ ವಯಸ್ಸು, ಬುದ್ಧಿಯ ಮಟ್ಟ, ಕಲಿಯುವ ವಸ್ತು, ಅದರ ಪ್ರಮಾಣ, ಕಲಿಯುವ ಕಾಲಾವಧಿ ಮತ್ತು ಪರಿಸರಗಳನ್ನು ಅವಲಂಬಿಸಿವೆ.

2. **ಧಾರಣೆ :** ಪಡೆದ ಅನುಭವ ಅಥವಾ ಕಲಿಕೆಯನ್ನು ದಾಸ್ತಾನು ಮಾಡುವುದಕ್ಕೆ ಧಾರಣೆ ಎಂದು ಹೆಸರು.

ನಮ್ಮ ಅನುಭವಗಳನ್ನು ಮನಸ್ಸಿನಲ್ಲಿ ಉಳಿಸಿಕೊಳ್ಳುವುದಕ್ಕೆ ಧಾರಣೆ ಎಂದು ಕರೆಯಬಹುದು. ಕಲಿತ ವಿಷಯವೆಲ್ಲವೂ ಮಿದುಳಿನಲ್ಲಿ ಮುದ್ರೆಯೊತ್ತುತ್ತವೆ. ಈ ಮುದ್ರೆಗಳು ಶೇಖರವಾಗಿ ರಕ್ಷಿಸಲ್ಪಡುತ್ತವೆ. ಇದನ್ನೇ ಧಾರಣೆ ಎನ್ನುವರು. ಅವಶ್ಯವಿದ್ದಾಗ ಸೂಕ್ತ ಪ್ರಚೋದನೆಯಿಂದ ಇವುಗಳನ್ನು ಜ್ಞಾಪಿಸಿಕೊಳ್ಳಬಹುದು. ಈ ಧಾರಣೆ ಸಾಮರ್ಥ್ಯ ಎಲ್ಲರಲ್ಲಿಯೂ ಒಂದೇ ಆಗಿರದೆ ಭಿನ್ನವಾಗಿರುತ್ತದೆ. ಧಾರಣೆ ಅಥವಾ ಸ್ಮೃತಿಯ ಗುರುತುಗಳು ಯಾವಾಗ ಬಲಯುತವಾಗುತ್ತವೆ ಅಥವಾ ದುರ್ಬಲವಾಗುತ್ತವೆ ಎಂಬುದು ಅದನ್ನು ಬಳಸುವುದರ ಮೇಲೆ ಅವಲಂಬಿತವಾಗಿದೆ. ದೈಹಿಕ ಮತ್ತು ಮಾನಸಿಕ ಆರೋಗ್ಯದಲ್ಲಿ ಏರುಪೇರಾದರೂ ಧಾರಣೆಯಲ್ಲೂ ವೈಪರೀತ್ಯ ಕಾಣಿಸಿಕೊಳ್ಳುತ್ತವೆ. ನಾವು ಪ್ರತಿನಿತ್ಯದ ಜೀವನದಲ್ಲಿ ಕಲಿಯುವುದು ಅಥವಾ ಅನುಭವಿಸುವುದೆಲ್ಲವೂ ಅಚ್ಚುಗಳು ಎಂದು ಕರೆಯಲ್ಪಡುವ ನೆನಪಿನ ಕುರುಹುಗಳಿಗೆ ಕಾರಣವಾಗುತ್ತವೆ. ಅಂದರೆ ಏನನ್ನು ಕಲಿತರೂ ಅದನ್ನು ನಮ್ಮ ಸ್ಮರಣ ಸಂಗ್ರಹದಲ್ಲಿ ಉಳಿಸಿಕೊಳ್ಳುತ್ತೇವೆ ಮತ್ತು ಅವು ನಮ್ಮ ಚೇತನಾವಸ್ಥೆಯಲ್ಲಿ ಬೇಕಾದಾಗ ಪ್ರಕಟಗೊಳ್ಳುತ್ತವೆ.

3. **ಜ್ಞಾಪಿಸಿಕೊಳ್ಳುವಿಕೆ :** ಮಾಹಿತಿಗಳನ್ನು ಕೇವಲ ದಾಖಲಿಸುವುದರಿಂದ ಹೆಚ್ಚು ಉಪಯೋಗವಿಲ್ಲ. ಅಗತ್ಯವಾದಾಗ ಮರಳಿ ಪಡೆದರೆ ಮಾತ್ರ ಅದನ್ನು ಉಪಯೋಗಿಸಬಹುದು. ಅಂದರೆ ಅನುಭವಗಳು ಸ್ಮರಣ ಸಂಗ್ರಹದಲ್ಲಿ ಸಂಗ್ರಹಿಸಲ್ಪಟ್ಟು ಅಗತ್ಯಬಿದ್ದಾಗ ನೆನಪಿಗೆ ಬರುತ್ತವೆ. ಈ ಸ್ಮರಣಸಂಗ್ರಹ ಒಂದು ದೊಡ್ಡ ಸಾಗರದಂತೆ. ಸಮಸ್ತ ಅನುಭವಗಳೂ ಅಲ್ಲಿಗೆ ಹರಿದು ಹೋಗಿ ತುಂಬಿಕೊಳ್ಳುತ್ತವೆ. ಸೂಕ್ತವಾದ ಮಾಹಿತಿಯನ್ನು ಸೂಕ್ತವಾದ ಸಮಯದಲ್ಲಿ ನೆನಪಿಗೆ ತಂದುಕೊಳ್ಳುವುದೇ ಜ್ಞಾಪಿಸಿಕೊಳ್ಳುವಿಕೆ. ಈ ಜ್ಞಾಪಿಸಿಕೊಳ್ಳುವಿಕೆ ಪ್ರಕ್ರಿಯೆಯೂ ಎರಡು ರೀತಿಯಲ್ಲಿ ಆಗಬಹುದು. ಅವುಗಳೆಂದರೆ ಪುನಸ್ಮರಣೆ / ಸ್ಮರಿಸುವಿಕೆ ಮತ್ತು ಗುರುತಿಸುವಿಕೆ.

**ಸ್ಮರಿಸುವಿಕೆ/ಪುನಃಸ್ಮರಣೆ :** ಪುನಃಸ್ಮರಣೆ ಎಂದರೆ ಈಗಾಗಲೇ ಕಲಿತ ವಿಷಯಗಳನ್ನು ನೆನಪಿಸಿಕೊಳ್ಳುವುದು. ಇದನ್ನು ಪುನರ್ ಉತ್ಪಾದಿಸುವುದು ಎಂದೂ ಸಹ ಕರೆಯುತ್ತಾರೆ. ಕಲಿತ ವಿಷಯಗಳನ್ನು ಉಳಿಸಿಕೊಂಡಿದ್ದರೆ ಮಾತ್ರ ಪುನಃಸ್ಮರಣೆ ಸಾಧ್ಯವಾಗುತ್ತದೆ. ಅಂದರೆ ಪುನಃ ಸ್ಮರಿಸಿಕೊಂಡ ವಸ್ತುವಿನ ಪ್ರಮಾಣವು. ಉಳಿಸಿಕೊಂಡ (ಕಲಿತ) ವಿಷಯದ ಪ್ರಮಾಣದ ಸೂಚಿಯಾಗಿದೆ.

**ಗುರುತಿಸುವಿಕೆ :** ಪುನಶ್ಚೇತನಗೊಳಿಸಿದ ಬಿಂಬ ಹಿಂದೆ ಕಲಿತ ವಸ್ತುವಿನ (ಮಾಹಿತಿಯ) ಬಿಂಬವಾಗಿದೆ ಎಂದು ಗುರುತಿಸುವುದನ್ನು ಸ್ಮರಣೆಯ ಗುರುತಿಸುವಿಕೆ ಎಂದು ಪರಿಗಣಿಸಬಹುದು. ಇದಕ್ಕೆ ಪ್ರತ್ಯಭಿಜ್ಞಾನ ಎಂದು ಹೆಸರು. ಇದರಿಂದ ಈ ಹಿಂದೆ ಕಲಿತುಕೊಂಡ ಅಥವಾ ಉಳಿಸಿಕೊಂಡ ಅನುಭವಗಳ ಅರಿವು ವ್ಯಕ್ತಿಗೆ ಆಗುತ್ತದೆ. ಹಾಗೂ ಒಂದು ನಿರ್ದಿಷ್ಟ ವಿಷಯವನ್ನು ನೋಡುವುದರ ಕಡೆಗೆ ಒಲವು ತೋರಿಸುತ್ತಾನೆ. ಗುರ್ತಿಸುವಿಕೆ ಪುನಃಸ್ಮರಣೆಗಿಂತ ಸ್ವಲ್ಪ ಸುಲಭವಾದ ಪ್ರಕ್ರಿಯೆ. ಒಟ್ಟಾರೆ ಸಾಂಪ್ರದಾಯಿಕ ಮಾದರಿಯ ಪ್ರಕಾರ ಸ್ಮರಣೆ ಪ್ರಕ್ರಿಯೆಯು ಕಲಿಕೆ ಅಥವಾ ಅರ್ಜನೆಯಿಂದ ಏಕೆಂದರೆ ಕಲಿತಾಗ ಇದ್ದ ಪ್ರಚೋದನೆಗಳು ಪುನಃ ವ್ಯಕ್ತಿಯ ಮುಂದೆ ಇರುತ್ತವೆ.

ಪ್ರಾರಂಭವಾಗಿ ಜ್ಞಾಪಿಸಿಕೊಳ್ಳುವುದರಲ್ಲಿ ಕೊನೆಗೊಳ್ಳುತ್ತದೆ. ಈ ಸ್ಮರಣೆಯ ಪ್ರಕ್ರಿಯೆಯನ್ನು ಈ ರೀತಿಯಾಗಿ ಪ್ರತಿನಿಧಿಸಬಹುದು.

Digitised by Bharatavani, CIIL




– ಎಂ.ಸ.ಪಾಂ.

## ಸ್ವನಿರ್ದೇಶಿತ ಕಲಿಕೆ

ಶಿಕ್ಷಣವು ವ್ಯಕ್ತಿಯಲ್ಲಿ ಸಮಗ್ರ ವ್ಯಕ್ತಿತ್ವ ವಿಕಾಸಮಾಡುವ ಉದ್ದೇಶದಿಂದಲೇ ಇದೆ. ವಿದ್ಯಾರ್ಥಿ ವ್ಯಕ್ತಿತ್ವ ಬೆಳವಣಿಗೆಯನ್ನು ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಶಿಕ್ಷಣದ ಮೂಲಕ ಉಂಟು ಮಾಡಬಹುದು. ಸಾಂಪ್ರದಾಯಿಕ ಶಿಕ್ಷಣದಲ್ಲಿ ಕಲಿಕೆಯ ವಿಷಯ ಶಿಕ್ಷಕನ ಬೋಧನೆ, ಆತ ನೀಡುವ ಕಲಿಕೆಯ ಅನುಭವಗಳು ಇತ್ಯಾದಿ ಪ್ರಧಾನ ಪಾತ್ರ ವಹಿಸುತ್ತವೆ. ಹಾಗಾಗಿ ವಿದ್ಯಾರ್ಥಿಗಳಲ್ಲಿ ಉದ್ದೇಶಿತ ವರ್ತನಾ ಬದಲಾವಣೆಗಳನ್ನು ತರಲಿಕ್ಕೆ ಸಾಧ್ಯವಾಗುತ್ತದೆ.

### ಸ್ವನಿರ್ದೇಶಿತ ಕಲಿಕೆಯ ಅರ್ಥ

ಸ್ವನಿರ್ದೇಶಿತ ಕಲಿಕೆಯು ಒಂದು ಪ್ರಕ್ರಿಯೆ. ವಿದ್ಯಾರ್ಥಿಯು ತನ್ನ ಕಲಿಕೆಯ ಅಗತ್ಯಗಳನ್ನು ನೈದಾನೀಕರಣ ಮಾಡಲು ಉತ್ಸುಕತೆ ಹೊಂದುತ್ತಾನೆ. ತನ್ನ ಕಲಿಕೆಯ ಗುರಿಗಳನ್ನು ರೂಪಿಸುತ್ತಾನೆ. ಕಲಿಕೆಗೆ ಇರುವ ಸಂಪನ್ಮೂಲಗಳನ್ನು ಗುರುತಿಸುತ್ತಾನೆ. ಕಲಿಕೆಯ ಕ್ರಮಗಳನ್ನು ಆಯ್ದು ಕಾರ್ಯರೂಪಕ್ಕೆ ತರುತ್ತಾನೆ ಮತ್ತು ತನ್ನ ಕಲಿಕೆಯ ಫಲಗಳನ್ನು ಮೌಲ್ಯಮಾಪನ ಮಾಡುತ್ತಾನೆ ಹಾಗಾಗಿ ಇಂತಹ ಸನ್ನಿವೇಶದಲ್ಲಿ ಶಿಕ್ಷಕನ ಪಾತ್ರವು ತನ್ನ ಸಂಪ್ರದಾಯಿಕತೆಯನ್ನು ಕಳೆದುಕೊಳ್ಳುತ್ತದೆ.

"ಯಾವುದೇ ವ್ಯಕ್ತಿಯ ವೈಯಕ್ತಿಕ ಕಲಿಕೆಯ ಕ್ರಮದಿಂದ ಆತನ ಜ್ಞಾನ, ಕೌಶಲ ಹಾಗೂ ಕಾರ್ಯನಿರ್ವಹಣೆಯಲ್ಲಿ ವೃದ್ಧಿಯು ಯಾವುದೇ ರೀತಿಯಲ್ಲಿ, ಹಾಗೂ ವಯಸ್ಸಿನಲ್ಲಿ, ಸ್ಥಳ ಹಾಗೂ ಕಾಲದಲ್ಲಿ. ಆದರೆ ಅದು ಸ್ವನಿರ್ದೇಶಿತ ಕಲಿಕೆ."

ಕಲಿಕೆಯ ಸಮಸ್ಯೆಗೆ ಅನುಗುಣವಾಗಿ ಜ್ಞಾನಕೌಶಲಗಳನ್ನು ಹೊಂದುವ, ಅನ್ವಯಿಸುವ ಹಾಗೂ ಸೃಷ್ಟಿಸುವ ನಿರಂತರ ತೊಡಗುವಿಕೆಯ ಸ್ವನಿರ್ದೇಶಿತ ಕಲಿಕೆಯಲ್ಲಿ ಇದೆ. ಇದು ಕಲಿಕಾ ತಂತ್ರಜ್ಞಾನಕ್ಕೆ ಹೊಸ ಸವಾಲುಗಳನ್ನು ಒಡ್ಡುತ್ತದೆ.

"ಉತ್ತಮ ಕಲಿಕೆಗೆ ನೋಡುವಿಕೆ, ಆಲಿಸುವಿಕೆ, ಕೇಳುವಿಕೆ ಮತ್ತು ವಾಚನವಷ್ಟೇ ಸಾಲದು. ಅವು ಕಲಿಕೆಗೆ ಪೂರಕವಷ್ಟೆ. ಕಲಿಯುವವನು ಆಲೋಚಿಸಬೇಕು ಹಾಗೂ ಅಭಿವ್ಯಕ್ತಿಗೊಳಿಸಬೇಕು". ವಿತರಿಸಿದ ಪ್ರಯತ್ನ, ಹೆಚ್ಚೆಚ್ಚು ಕಲಿಕೆ, ಸಕ್ರಿಯ ಸ್ಮರಣೆ ಹಾಗೂ ಅವಯಿಸುವಿಕೆಗಳು ಕಲಿಕೆಗೆ ಬೇಕು. ಒಂದು ಉಪನ್ಯಾಸ ಆಲಿಸುವುದು, ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು. ಅನುಭವ ಹೊಂದುವುದು, ಕಂಠಪಾಠ ಮಾಡುವುದು ಹಾಗೂ ಚರ್ಚಿಸುವುದು ಇಂತಹವುಗಳನ್ನು ಸ್ವನಿರ್ದೇಶಿತ ಕಲಿಕೆ ಒಳಗೊಂಡಿದೆ."

### ಸ್ವನಿರ್ದೇಶಿತ ಕಲಿಕೆಯ ಲಕ್ಷಣಗಳು

ಹೈಮಸ್ತ್ರಾ (1994) ಪ್ರಕಾರ ಸ್ವನಿರ್ದೇಶಿತ ಕಲಿಕೆಯ ಲಕ್ಷಣಗಳು ಹೀಗಿವೆ:

ಅ) ಪ್ರತಿಯೊಬ್ಬ ಕಲಿಯುವವನು ಸಹ ಕಲಿಕೆಗೆ ಸಂಬಂಧಿಸಿದ ತೀರ್ಮಾನ ಕೈಗೊಳ್ಳುವ ಹೊಣೆಗಾರಿಕೆ ಹೊರುವಲ್ಲಿ ಸಬಲನಾಗಿರುತ್ತಾನೆ.

ಆ) ಪ್ರತಿಯೊಬ್ಬ ವ್ಯಕ್ತಿ ಹಾಗೂ ಪ್ರತಿಯೊಂದು ಕಲಿಕೆಯು ತಕ್ಕ ಮಟ್ಟಿಗೆ ಸ್ವ ನಿರ್ದೇಶಿತ ಕಲಿಕೆಯನ್ನು ತೋರಿಸಬಹುದು.

ಇ) ಸ್ವನಿರ್ದೇಶಿತ ಕಲಿಕೆಯು ಏಕಾಂತದಲ್ಲಿಯೇ ಸಾಗಬೇಕಾದ ಅಗತ್ಯವಿಲ್ಲ.

ಈ) ಕಲಿಯುವವನ ಕಲಿಕೆ ಹಾಗೂ ಕೌಶಲಗಳನ್ನು ಒಂದು ಸನ್ನಿವೇಶದಿಂದ ಇನ್ನೊಂದು ಸನ್ನಿವೇಶಕ್ಕೆ ವರ್ಗಾವಣೆ ಮಾಡಬಹುದು.

ಉ) ಸ್ವನಿರ್ದೇಶಿತ ಕಲಿಕೆಯು ಹಲವಾರು ಚಟುವಟಿಕೆ ಹಾಗೂ ಸಂಪನ್ಮೂಲಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ, ಸ್ವಮಾರ್ಗದರ್ಶಿತ ವಾಚನ, ಅಧ್ಯಯನ ಗುಂಪುಗಳಲ್ಲಿ ಪಾಲ್ಗೊಳ್ಳುವಿಕೆ, ಸ್ಥಳದಲ್ಲೇ ವಾಸ, ಎಲೆಕ್ಟ್ರಾನಿಕ್ ಸಂವಾದಗಳು ಮತ್ತು ಪರಿಣಾಮಕಾರಿ ಬರವಣಿಗೆ ಚಟುವಟಿಕೆಗಳು.

ಊ)ಈ ಕಲಿಕೆಯಲ್ಲಿ ಶಿಕ್ಷಕರು ವಿದ್ಯಾರ್ಥಿ ಜೊತೆ ಸಂವಾದ ಮಾಡುವುದು ಸಂಪನ್ಮೂಲಗಳನ್ನು ದೊರಕಿಸುವ, ಕಲಿಕೆಯ ಫಲಮೌಲ್ಯಮಾಪನ ಮಾಡುವ, ವಿಮರ್ಶಾ ಚಿಂತನೆಯನ್ನು ವೃದ್ಧಿಗೊಳಿಸುವ ಪರಿಣಾಮಕಾರಿ ಪಾತ್ರವನ್ನು ನಿರ್ವಹಿಸಬಹುದು.

ಋ) ಕೆಲವು ಶೈಕ್ಷಣಿಕ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಸ್ವನಿರ್ದೇಶಿತ ಕಲಿಕೆಯನ್ನು ತೆರವಿನ ಕಲಿಕೆ ಕಾರ್ಯಕ್ರಮಗಳು, ವೈಯಕ್ತಿಕ ಅಧ್ಯಯನ ಆಯ್ಕೆಗಳು, ಅಸಾಂಪ್ರದಾಯಿಕ ಕೋರ್ಸ್‌ಗಳು ಹಾಗೂ ಅನ್ವೇಷಣಾ ಕಾರ್ಯಕ್ರಮಗಳ ಮೂಲಕ ಉತ್ತೇಜಿಸುತ್ತವೆ.

ಹೀಗೆ ವಿದ್ಯಾರ್ಥಿಯು ಯಾರ ಒತ್ತಾಯವೂ ಇಲ್ಲದೇ ಕಲಿಯುತ್ತಾನೆ. ಕಲಿಕೆಯಲ್ಲಿನ ತೊಡಕುಗಳನ್ನು ತಾನೇ ಹೋಗಲಾಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ, ಕಲಿಕೆಯಲ್ಲಿ ವಿಶ್ವಾಸಮೂಡಿ ತೃಪ್ತಿ ಹಾಗೂ ಸಂತೋಷ ಹೊಂದುತ್ತಾನೆ.

**ಸ್ವನಿರ್ದೇಶಿತ ಕಲಿಕೆಗೆ ಸಂಬಂಧಿಸಿದ ಪರಿಕಲ್ಪನೆಗಳು:** ಸ್ವನಿರ್ದೇಶಿತ ಕಲಿಕೆಯನ್ನು ಅರಿಯುವಲ್ಲಿ ಶಿಕ್ಷಕರು, ಆಡಳಿತಗಾರರು, ಪೋಷಕರು ಹಾಗೂ ವಿದ್ಯಾರ್ಥಿಗಳು ಮುಖ್ಯ ಪರಿಕಲ್ಪನೆಗಳಾದ ವಿದ್ಯಾರ್ಥಿ ಅಭಿಪ್ರೇರಣೆ, ಗುರಿನಿರ್ದೇಶನ, ಆತ್ಮ ಪ್ರಾವೀಣ್ಯ, ಆತ್ಮ ನಿಯಂತ್ರಣ ಬಿಂದು ಹಾಗೂ ಸ್ವಸಂಜ್ಞಾನ ಇವುಗಳನ್ನು ಅರಿಯಬೇಕಾಗುತ್ತದೆ.

Digitised by Bharatavani, CIIL

**ವಿದ್ಯಾರ್ಥಿ ಪ್ರೇರಣೆ:** ವಿದ್ಯಾರ್ಥಿ ಪ್ರೇರಣೆಯು ಒಂದು ಸಂಕೀರ್ಣ ಹಾಗೂ ವ್ಯಾಪಕ ಆಯಾಮ ಹೊಂದಿದೆ. ವಿದ್ಯಾರ್ಥಿಯು ಒಂದು ಚಟುವಟಿಕೆ ಅಥವಾ ಕಲಿಕೆ ಕೈಗೊಳ್ಳಲು ಆತಂರಿಕ ಹಾಗೂ ಬಾಹ್ಯ ಅಭಿಪ್ರೇರಣೆ ಹೊಂದಿರಬಹುದು. ಏಕೆಂದರೆ ಅದು ಆತ್ಮ ತೃಪ್ತಿಗೆ ಅಥವಾ ತನ್ನ ದರ್ಜೆ ಸುಧಾರಿಸಿಕೊಳ್ಳಲೂ ಆಗಿರಬಹುದು.

**ಗುರಿ ನಿರ್ದೇಶನ:** ಗುರಿ ನಿರ್ದೇಶನವು ವಿದ್ಯಾರ್ಥಿ ಅಭಿಪ್ರೇರಣೆಗಿಂತ ಸೀಮಿತ ಪರಿಕಲ್ಪನೆ, ಇದನ್ನು 'ಯೋಜನೆ ಮಾಡುವ ಹಾಗೂ ಗುರಿಗಳನ್ನು ನಿಗದಿಪಡಿಸುವ ಸಾಮರ್ಥ್ಯವೆಂದು ಹೇಳಬಹುದು (ಕರವೆ, ಟೂಕರ್, ರೈನ್‌ಕಿ ಮತ್ತು ಹಾಲ್, 2003)

**ಸ್ವಪ್ರಾವೀಣ್ಯತೆ:** ಸ್ವಪ್ರಾವೀಣ್ಯತೆಯು ನಿಗದಿತ ಕಾರ್ಯನಿರ್ವಹಣೆಗೆ ಬೇಕಾದ ಕಾರ್ಯವಿಧಾನವನ್ನು ವ್ಯವಸ್ಥೆಗೊಳಿಸಿ ಕಾರ್ಯರೂಪಕ್ಕೆ ತರುವಲ್ಲಿ ವ್ಯಕ್ತಿ ಮಾಡುವ ತೀರ್ಮಾನವನ್ನು ಅವಲಂಭಿಸಿದೆ ಸ್ವಪ್ರಾವೀಣ್ಯತೆ ಒಂದು ಕಾರ್ಯಕ್ಕೆ ನಿರ್ದಿಷ್ಟವಾಗಿದೆ.

**ನಿಯಂತ್ರಣ ಕೇಂದ್ರ:** ವಿದ್ಯಾರ್ಥಿಯು ತನ್ನ ಸಾಧನೆ ಹಾಗೂ ಸೋಲನ್ನು ಆತಂರಿಕ ಹಾಗೂ ಬಾಹ್ಯ ಅಂಶಗಳಿಗೆ ಆರೋಪಿಸುವ ಪ್ರವೃತ್ತಿ.

ಶಿಕ್ಷಕ ನಿರ್ದೇಶಿತ ಕಲಿಕೆಯು ಸ್ವ ನಿರ್ದೇಶಿತ ಕಲಿಕೆಗಿಂತ ಭಿನ್ನವಾಗಿದೆ. ಶಿಕ್ಷಕ ಅಥವಾ ಅಧಿಕಾರಿಯು ಏನನ್ನು ಕಲಿಯಬೇಕು, ಯಾರು ಕಲಿಯಬೇಕು. ಹೇಗೆ ಕಲಿಯಬೇಕು, ಯಾವಾಗ, ಯಾವ ವಯಸ್ಸಿನಲ್ಲಿ ಮುಂತಾದ ವಿಷಯಗಳನ್ನು ಮುನ್ನವೆ ನಿರ್ಧರಿಸುತ್ತಾನೆ. ಆದರೆ ಸ್ವ ನಿರ್ದೇಶನ ಕಲಿಕೆಯಲ್ಲಿ ಶಿಕ್ಷಕನ ಪಾತ್ರವು ಬದಲಾದ ಆಯಾಮಗಳನ್ನು ಹೊಂದಿದೆ.

ವಿದ್ಯಾರ್ಥಿಗಳಿಗೆ ಸೂಕ್ತ ತಸ್ವನಿರ್ದೇಶನದ ಹಂತವನ್ನು ಹೊಂದಿಸುವುದು ಶಿಕ್ಷಕನ ಉದ್ದೇಶ, ವಿದ್ಯಾರ್ಥಿಯನ್ನು ಉನ್ನತ ಹಂತಕ್ಕೆ ಮುಂದುವರಿಸುವುದೆ ಶಿಕ್ಷಕನ ಕಾರ್ಯವಾಗಿದೆ. ಇಂತಹ ಒಂದು ಯೋಜನೆ ಕೆಳಗೆ ನೀಡಿದೆ.

| ಹಂತ | ವಿದ್ಯಾರ್ಥಿ | ಶಿಕ್ಷಕ | ಉದಾಹರಣೆಗಳು |
|---|---|---|---|
| ಹಂತ 1 | ಅವಲಂಬಿತ | ಅಧಿಕಾರಿ ತರಬೇತುದಾರ ವಿದ್ಯಾರ್ಥಿಗಳನ್ನು ಕಲಿಯುವಂತೆ ಮಾಡುತ್ತಾರೆ | ತಕ್ಷಣ ಪುನರ್ಬಲನದಿಂದ ತರಬೇತಿ/ಅಭ್ಯಾಸ. ಮಾಹಿತಿಯುಕ್ತ ಉಪನ್ಯಾಸ, ತಡೆ ಹಾಗೂ ಕೊರತೆಯನ್ನು ಹೋಗಲಾಡಿಸುವುದು. |
| ಹಂತ 2 | ಆಸಕ್ತ | ಅಭಿಪ್ರೇರಕ ಮತ್ತು ಮಾರ್ಗದರ್ಶಕ | ಪ್ರೇರಕ, ಉಪನ್ಯಾಸ ಹಾಗೂ ಮಾರ್ಗದರ್ಶಿತ ಚರ್ಚೆ, ಗುರಿ ನಿಗದಿಪಡಿಸುವಿಕೆ ಹಾಗೂ ಕಲಿಕೆಯ ಕ್ರಮಗಳು |
| ಹಂತ 3 | ಪೂರ್ಣ ಅಳವಡಿಕೆ | ಸೌಕರ್ಯ ಒದಗಿಸುವವ | ಶಿಕ್ಷಕ ಹಾಗೂ ವಿದ್ಯಾರ್ಥಿ ನಡುವೆ ಚರ್ಚೆ ವಿಚಾರಗೋಷ್ಠಿ, ಸಮೂಹ ಯೋಜನೆಗಳು |
| ಹಂತ 4 | ಸ್ವ ನಿರ್ದೇಶಿತ | ಸಂಪರ್ಕಿಸುವ ಜವಾಬ್ದಾರಿವಹಿಸುವವ | ಶಾಲೆಯಲ್ಲಿಯೇ ವಾಸ, ವೈಯಕ್ತಿಕ ಕಾರ್ಯ, ನಿಯೋಜಿತ ಕಾರ್ಯ ನಿರ್ದೇಶಿತ ಅಧ್ಯಯನ ಗುಂಪು. |

ಸ್ವ ನಿರ್ದೇಶಿತ ಕಲಿಕೆಯಲ್ಲಿರುವ ವ್ಯಾಪ್ತಿಯನ್ನು ಈ ಕೆಳಗೆ ವಿವರಿಸಲ್ಪಟ್ಟಿದೆ.

**ಆಗಾಗ ಸ್ವ ನಿರ್ದೇಶಿತ ಕಲಿಕೆ:** ಶಿಕ್ಷಕ ನಿರ್ದೇಶಿತ ಕಲಿಕೆಯಲ್ಲಿ ಆಗಾಗ ಸ್ವ ನಿರ್ದೇಶಿತ ಕಲಿಕೆಯನ್ನು ಅಳವಡಿಸುವುದು.

ಉದಾ: ವೈಯಕ್ತಿಕ ಯೋಜನೆ ಅಥವಾ ಯಾವುದಾದರೂ ಸ್ವ ನಿರ್ದೇಶಿತ ಕಲಿಕೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

**ವಿದ್ಯಾರ್ಥಿಗಳಿಗೆ ಸ್ವಂತ ಆಲೋಚಿಸುವಂತೆ ಬೋಧಿಸುವುದು:** ಹುಡುಕುವಿಕೆ, ತಪಾಸಿಸುವಿಕೆ, ಸಮಸ್ಯೆ ಪರಿಹಾರ ಹಾಗೂ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಜ್ಞಾನದ ಸ್ವಂತ ಅರ್ಥವನ್ನು ವಿದ್ಯಾರ್ಥಿಯು ಹುಡುಕುವುದು.

**ಸ್ವ ನಿರ್ವಹಿಸಿದ ಕಲಿಕೆ:** ಕಲಿಕಾ ಮಾರ್ಗದರ್ಶಿಯಿಂದ ಕೊಡಲ್ಪಟ್ಟ ಕೋರ್ಸ್ ಅಥವಾ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಮನಗಾಣುವುದು.

**ಸ್ವಯೋಜಿತ ಕಲಿಕೆ:** ತಾವೇ ವಿನ್ಯಾಸಗೊಳಿಸಿದ ಚಟುವಟಿಕೆಗಳ ಮೂಲಕ ಪದವಿಯ ಫಲಗಳನ್ನು ವಿದ್ಯಾರ್ಥಿಗಳು ಮನಗಾಣುವುದು.

**ಸ್ವ ನಿರ್ದೇಶಿತ ಕಲಿಕೆ:** ವಿದ್ಯಾರ್ಥಿಗಳು ಕಲಿಕೆ ಫಲಿತಗಳನ್ನು ಆಯ್ಕೆ ಮಾಡಿ ಅವರದೇ ಆದ ಚಟುವಟಿಕೆಗಳನ್ನು ವಿನ್ಯಾಸಗೊಳಿಸುತ್ತಾರೆ. ಹಾಗೂ ಅವುಗಳನ್ನು ತಮ್ಮದೇ ರೀತಿ ನಿಭಾಯಿಸುತ್ತಾರೆ.

ವಿದ್ಯಾರ್ಥಿಯು ಪ್ರೇರಿತನಾಗಿ ಗುರಿಯೆಡೆಗೆ ಕೇಂದ್ರೀಕೃತನಾಗಿದ್ದಲ್ಲಿ ಸ್ವ ನಿರ್ದೇಶಿತ ಕಲಿಕೆಯು ಯಶಸ್ವಿ ವಿಧಾನವೇ ಹೌದು. ವಿದ್ಯಾರ್ಥಿ ಆಸಕ್ತಿ ಹಾಗೂ ಅವಧಾನಗಳ ಪಾತ್ರವನ್ನು ಕಡೆಗಣಿಸುವಂತಿಲ್ಲ. ಆದರೆ, ವಿದ್ಯಾರ್ಥಿ ಪೂರ್ಣ ಪ್ರಮಾಣದ ಸ್ವ ನಿರ್ದೇಶಿತ ಕಲಿಕೆಯನ್ನು ಮೊದಮೊದಲೇ ರೂಢಿಸಿಕೊಳ್ಳಲಾರ, ಇಲ್ಲಿ ಶಿಕ್ಷಕ ನಿರ್ದೇಶನದ ಅಗತ್ಯವು ಕಂಡುಬರುವುದು. ಕಲಿಕೆಯಲ್ಲಿ ಆಸಕ್ತಿ ಮೂಡಿದಂತೆ ಸ್ವ ನಿರ್ದೇಶಿತ ಕಲಿಕೆಯನ್ನು ಆತ ರೂಢಿಸಿಕೊಳ್ಳಲಿಕ್ಕೆ ಪ್ರೇರೇಪಿಸಬಹುದು. ಆಗಾಗ ಕಲಿಕೆಯು ಸರಾಗವಾಗಿ ಸಂತೋಷದಿಂದ ಸಾಗುತ್ತದೆ. "ಕಲಿಕೆಯ ಜಾಣ ಬಲ್ಲ ಶ್ರಮ, ಕಲಿಯದೆ ಉಳಿಯುವ ಅಜ್ಞಾನಿಗೇಕೆ ಶ್ರಮ" ಎಂಬ ಕವಿನುಡಿಗೆ ಅರ್ಥ ಬರುತ್ತದೆ. ಕಲಿಕೆಯು ತೃಪ್ತಿ ತರುವ ಕೆಲಸವಾಗುತ್ತದೆ. ಅದರಲ್ಲಿ ನಿರಂತರತೆ ಮೂಡುತ್ತದೆ. ಪ್ರತಿಹಂತದಲ್ಲೂ ಉತ್ಸಾಹ ಮೂಡಿ ವಿದ್ಯಾರ್ಥಿ ಹೆಚ್ಚು ಹೆಚ್ಚು ಕಲಿಕೆಯಲ್ಲಿ ತೊಡಗಲಿಕ್ಕೆ ಸಹಕರಿಸಿ ಆತನನ್ನು ಪೂರ್ಣತ್ವದ ಕಡೆ ಕೊಂಡೊಯ್ಯುವ ಪ್ರಯತ್ನ ಸಾಗುತ್ತದೆ. ಹಾಗಾಗಿ ಸ್ವ ನಿರ್ದೇಶಿತ ಕಲಿಕೆಯು ತನ್ನ ಪ್ರಧಾನ ಪಾತ್ರ ಉಳಿಸಿಕೊಳ್ಳುತ್ತದೆ.

Digitised by Bharatavani, CIIL

ವಿಶಾಲ ಕಲಿಕೆಯ ಮೊತ್ತವು ಸ್ವಕಲಿಕೆಯಿಂದಲೇ ಉಂಟಾಗುತ್ತದೆ. ಕಲಿಯುವವನು ಅಭಿಪ್ರೇರಿತನಾಗಿ ಕಲಿಕೆಯ ಗುರಿಯನ್ನು ನಿರ್ಧರಿಸುತ್ತಾನೆ. ಗುರಿಗೆ ಸಂಬಂಧವಾಗಿ ಕಲಿಕೆಯ ಸನ್ನಿವೇಶವನ್ನು ಅವಲೋಕಿಸುತ್ತಾನೆ. ಆರಂಭಿಕ ಯತ್ನಗಳನ್ನು ಮಾಡುತ್ತಾನೆ. ತಾನು ಕಲಿತ ಸಂಜ್ಞಾನಾತ್ಮಕ ಹಾಗೂ ಮನೋಕ್ರಿಯಾಜನ್ಯ ಕೌಶಲಗಳನ್ನು ಕಾರ್ಯಕ್ಕೆ ಅನ್ವಯಿಸುತ್ತಾನೆ. ಸರಿಯಾದ ಅನುಕ್ರಿಯೆ ಆಯ್ದು ಸರಿಯಲ್ಲದ್ದನ್ನು ಬಿಡುತ್ತಾನೆ. ಗುರಿಮುಟ್ಟುತ್ತಾನೆ. ಗೆಲುವು ತೃಪ್ತಿ ಪ್ರೇರಣೆ ಹಾಗೂ ಆತ್ಮವಿಶ್ವಾಸ ಹೊಂದುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಕಲಿಯುವವ ಸೂಕ್ತ ಅನುಕ್ರಿಯೆಗಳನ್ನು ಬೆಳೆಸಿಕೊಳ್ಳದಿದ್ದಲ್ಲಿ ಅಥವಾ ಖಾತರಿ ಪಡಿಸಿಕೊಳ್ಳದಿದ್ದಲ್ಲಿ ಆತನಿಗೆ ಗುರಿಹೊಂದಲಿಕ್ಕೆ ಸಾಧ್ಯವಾಗುವುದಿಲ್ಲ. ಆಗ ನಿರಾಶೆ ಹೊಂದುತ್ತಾನೆ. ಪುನಃ ಗುರಿಯನ್ನು ನಿಗದಿಪಡಿಸಿಕೊಂಡು ಅದನ್ನು ಹೊಂದಲಿಕ್ಕೆ ಪ್ರಯತ್ನಿಸುತ್ತಾನೆ. ತನ್ನ ಅನುಕ್ರಿಯೆ ಸುಧಾರಿಸಿಕೊಂಡು ಯಶಸ್ಸು ಹೊಂದಲು ಮರಳಿ ಯತ್ನ ಮಾಡುತ್ತಾನೆ. ಹಾಗೂ ಗುರಿ ಮುಟ್ಟುವುದೇ ಅಸಾಧ್ಯವಾದಲ್ಲಿ ಆತ ಹೊರಗೆ ಉಳಿದು ತನ್ನ ಪ್ರಯತ್ನ ನಿಲ್ಲಿಸಬಹುದು. ಆದರೆ ಸ್ವ ನಿರ್ದೇಶಿತ ಕಲಿಕೆಯು ವಿದ್ಯಾರ್ಥಿ ಉತ್ಸಾಹ ಕುತೂಹಲವನ್ನು ಅತ್ಯುನ್ನತ ಮಟ್ಟದಲ್ಲಿ ನಿರೀಕ್ಷಿಸುತ್ತದೆ. ವಿದ್ಯಾರ್ಥಿ ನಿರಂತರ ಕಲಿಕೆಯಲ್ಲಿ ತೊಡಗುವುದನ್ನು ಉತ್ತೇಜಿಸುತ್ತದೆ. ಹಾಗಾಗಿ, ದಿನನಿತ್ಯದ ಸಮಸ್ಯೆ ಪರಿಹಾರ ಕೌಶಲಗಳು ಕರಗತವಾಗುವುದೇ ಸ್ವನಿರ್ದೇಶಿತ ಕಲಿಕೆಯ ಮೂಲಕ, ಶಿಕ್ಷಕರು ಪೋಷಕರು ಹಾಗೂ ಶಾಲಾ ಅಧಿಕಾರಿಗಳು ಮಕ್ಕಳ ಆಲೋಚನೆಯನ್ನು ವೃದ್ಧಿಸಲಿಕ್ಕೆ ಸ್ವ–ನಿದೇಶಿತ ಕಲಿಕೆಯನ್ನು ಪ್ರೋತ್ಸಾಹಿಸಬೇಕು.

– ಎಸ್.ಗೀ

## ಸ್ವಮೌಲ್ಯಮಾಪನ

ಶಿಕ್ಷಣಶಾಸ್ತ್ರದ ಪಾರಿಭಾಷಿಕ ನಿಘಂಟಿನ ಪ್ರಕಾರ ಮೌಲ್ಯನಿರ್ಧಾರ, ಮೌಲ್ಯನಿಷ್ಕರ್ಷೆ, ಬೆಲೆಕಟ್ಟುವಿಕೆ ಇಂತಹ ಅರ್ಥವನ್ನು ಮೌಲ್ಯಮಾಪನ ಒಳಗೊಂಡಿದೆ. ಇದು ಒಂದು ಪದಾರ್ಥದ ಅಥವಾ ಸನ್ನಿವೇಶದ ಬೆಲೆ, ಮೌಲ್ಯ ಅಥವಾ ಪರಿಣಾಮವನ್ನು ಎಚ್ಚರಿಕೆಯಿಂದ ನಿರ್ಧರಿಸುವ ಕಾರ್ಯ. ಸಮಾನ ರೀತಿಯ ಸನ್ನಿವೇಶಗಳ ಪ್ರಾಮುಖ್ಯತೆ ಬಗ್ಗೆ ಯಾವುದಾದರೂ ನಿಖರವಾದ ರೂಪದಲ್ಲಿ ಸಾಪೇಕ್ಷವಾಗಿ ಅರ್ಥವನ್ನು ನಿರ್ಧರಿಸುವುದು ಎಂದೂ ಹೇಳಲ್ಪಡುತ್ತದೆ. ಒಬ್ಬ ವ್ಯಕ್ತಿಯ ಅಥವಾ ಒಂದು ವರ್ಗದ ಸ್ಥಿತಿಗತಿ, ಸ್ಥಾನ ಅಥವಾ ಅಭಿವೃದ್ಧಿಯನ್ನು ಅಧ್ಯಾಪಕರು ತರಗತಿಯ ವಿದ್ಯಾರ್ಥಿಗಳು ಇತರರೂ ಸಹಕರಿಸಿ ಬೆಲೆಕಟ್ಟುವ ಕಾರ್ಯ.

'ಮೌಲ್ಯ' ಎಂದರೆ 'ಬೆಲೆ' ಮಾಪನ ಎಂದರೆ 'ಅಳತೆ' ಎಂದರ್ಥ. ಮೌಲ್ಯವನ್ನು ನಿರ್ಧರಿಸುವ ಕ್ರಿಯೆ ಅಥವಾ ಕಾರ್ಯವಿಧಾನವೇ ಮೌಲ್ಯಮಾಪನ. ಸ್ವಮೌಲ್ಯಮಾಪನ ಎಂದರೆ 'ಸ್ವಯಂಮೌಲ್ಯ ನಿಷ್ಕರ್ಷೆ' 'ಆತ್ಮಪರೀಕ್ಷೆ' ಎಂದರ್ಥ. ವ್ಯಕ್ತಿ ತನ್ನನ್ನು ಹಾಗೂ ತನ್ನ ಸಾಧನೆಯ ಮೌಲ್ಯವನ್ನು ತಾನೇ ನಿರ್ಧರಿಸಿಕೊಳ್ಳುವ ಕಾರ್ಯ. ನಿರ್ದಿಷ್ಟ ಗುರಿಯತ್ತ ತನ್ನ ಸಾಧನೆ ಅಥವಾ ಮುನ್ನಡೆಯನ್ನು ತಾನೇ ಅಳೆದುಕೊಳ್ಳುವ ಕಾರ್ಯ.

ಸ್ವಮೌಲ್ಯಮಾಪನ ಒಂದು ಪ್ರಕ್ರಿಯೆಯಾಗಿದ್ದು, ಗುರಿಹೊಂದುವುದಕ್ಕೆ ಬೇಕಾದ ನಮ್ಮ ಬಲಾಬಲಗಳನ್ನು ಗುರುತಿಸಿಕೊಳ್ಳಲಿಕ್ಕೆ, ನಮಗಿರುವ ಅವಕಾಶಗಳನ್ನು ಕಂಡುಕೊಳ್ಳಲಿಕ್ಕೆ ಹಾಗೂ ನಮಗಿರಬಹುದಾದ ತೊಡಕುಗಳನ್ನು ಮುನ್ನವೇ ತಿಳಿಯಲಿಕ್ಕೆ ಸಾಗುವ ಒಂದು ಪ್ರಕ್ರಿಯೆ.

ಸ್ವಮೌಲ್ಯಮಾಪನ ಒಂದು ಪ್ರಕ್ರಿಯೆಯಾಗಿದ್ದು. ಗುರಿಹೊಂದುವುದಕ್ಕೆ ಬೇಕಾದ ನಮ್ಮ ಬಲಾಬಲಗಳನ್ನು ಗುರುತಿಸಿಕೊಳ್ಳಲಿಕ್ಕೆ, ನಮಗಿರುವ ಅವಕಾಶಗಳನ್ನು ಕಂಡುಕೊಳ್ಳಲಿಕ್ಕೆ ಹಾಗೂ ನಮಗಿರಬಹುದಾದ ತೊಡಕುಗಳನ್ನು ಮುನ್ನವೇ ತಿಳಿಯಲಿಕ್ಕೆ ಸಾಗುವ ಒಂದು ಪ್ರಕ್ರಿಯೆ.

ಸ್ವಮೌಲ್ಯಮಾಪನವು ನಾವು ಗುರಿಮುಟ್ಟಲು ಆತುರದ ಕ್ರಮಗಳನ್ನು ತೆಗೆದುಕೊಂಡು ಕಾರ್ಯೋನ್ಮುಖರಾಗದಂತೆ ನಮ್ಮನ್ನು ತಡೆಯುತ್ತವೆ. ಹಾಗಾಗಿ, ಸ್ವಮೌಲ್ಯಮಾಪನವು ಯಶಸ್ಸಿಗೆ ಅಗತ್ಯವಾದ ಪ್ರಕ್ರಿಯೆಯೇ ಸರಿ. ಸ್ವಮೌಲ್ಯಮಾಪನವು ನಮ್ಮನ್ನು ನಾವು ಅರಿಯಲಿಕ್ಕೆ ಮಾಡುವ ಪ್ರಯತ್ನ. ನಮ್ಮ ಸಾಮರ್ಥ್ಯ. ಕೌಶಲಗಳು ಹಾಗೂ ದೌರ್ಬಲ್ಯಗಳ ಅರಿವು ಹೊಂದುವುದರ ಮೂಲಕ ನಮ್ಮ ಬಗ್ಗೆ ನಾವೇ ಅರಿತುಕೊಳ್ಳಲಿಕ್ಕೆ ಸಹಾಯ ಮಾಡುತ್ತವೆ. ಹಾಗಾಗಿ, ವಿದ್ಯಾಭ್ಯಾಸ, ಉದ್ಯೋಗ ಮುಂತಾದ ಜೀವನದ ವಿವಿಧ ಮಜಲುಗಳಲ್ಲಿ ಯಶಸ್ಸನ್ನು ಕಾಣಬಹುದು. ನಮ್ಮ ಬದುಕಿಗೆ ಒಂದು ಅರ್ಥ ಪಡೆದು ನಮಗೆ ಹಾಗೂ ಸಮಾಜಕ್ಕೆ ನ್ಯಾಯ ಒದಗಿಸಬಹುದು. ಸ್ವಮೌಲ್ಯಮಾಪನ ವ್ಯಕ್ತಿ ತನ್ನನ್ನು ಹೇಗೆ ನೋಡುತ್ತಾನೆ/ಳೆ ಎಂಬುದನ್ನು ವ್ಯಾಖ್ಯಾನಿಸುತ್ತದೆ. ಇದು ವ್ಯಕ್ತಿಯ ವೈಯಕ್ತಿಕ ಹಾಗೂ ನಿರಂತರ ಬೆಳವಣಿಗೆ ಹಾಗೂ ಪ್ರಗತಿಯನ್ನು ನಿರ್ಧರಿಸುವ ನಿರಂತರ ಪ್ರಕ್ರಿಯೆ.

ಸ್ವಮೌಲ್ಯಮಾಪನ ಮಾಡಿಕೊಳ್ಳಲಿಕ್ಕೆ ನಾವು ಗಮನಿಸಿಕೊಳ್ಳಬೇಕಾದ ಅಂಶಗಳು:

**ಆಸಕ್ತಿಗಳು:** ನಮ್ಮ ಇಷ್ಟಗಳನ್ನು ಆಸಕ್ತಿಗಳೆನ್ನುತ್ತೇವೆ. ನಾವು ಜೀವನದ ವಿವಿಧ ಚಟುವಟಿಕೆಗಳಲ್ಲಿ ಹಾಗೂ ಕಾರ್ಯಗಳಲ್ಲಿ ತೊಡಗಲು ಇಚ್ಛಿಸುತ್ತೇವೆ. ಬೌದ್ಧಿಕ ಕೆಲಸ, ಸಂಗೀತ, ನೃತ್ಯ, ಕಲೆ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ ವ್ಯಾಪಾರ... ಇತ್ಯಾದಿ. ಜೀವನದ ವಿವಿಧ ಮಜಲುಗಳಲ್ಲಿ ಯಶಸ್ಸನ್ನು ಕಾಣಲು ನಮಗಿರುವ ಆಸಕ್ತಿಗಳನ್ನು ಗುರುತಿಸಿಕೊಳ್ಳಬೇಕು. ಅವುಗಳನ್ನು ವೃದ್ಧಿಸಿಕೊಂಡಲ್ಲಿ ಕಾರ್ಯದಕ್ಷತೆ ಹೆಚ್ಚಿಸಿಕೊಳ್ಳುವ ಸಾಧ್ಯತೆ ಇಮ್ಮಡಿಸುವುದು. ಹಾಗಾಗಿ ನಮ್ಮ ಜೀವನದಲ್ಲಿ ವೈಯಕ್ತಿಕ ಹಾಗೂ ವೃತ್ತಿಪರ ಆಯ್ಕೆಗಳು ನಮ್ಮ ಆಸಕ್ತಿ ಅನುಸಾರವಾಗಿದ್ದಲ್ಲಿ ನಾವು ಇಷ್ಟಪಟ್ಟು ಕಾರ್ಯನಿರ್ವಹಿಸುತ್ತೇವೆ. ಪ್ರಗತಿ ಕಟ್ಟಿಟ್ಟಬುತ್ತಿಯೇ ಸರಿ. ಇಷ್ಟದಿಂದ ಹಿಡಿದ ಕಾರ್ಯ ಯಾವುದಾದರೇನು. ಕಷ್ಟವಾಗಲಿಕ್ಕೆ ಸಾಧ್ಯವೇ ಇಲ್ಲ. ಹಾಗಾಗಿ ನಾವು ಯಾವುದರಿಂದ ಹರ್ಷಪಡುತ್ತೇವೆ ಹಾಗೂ ಖುಷಿಪಡುತ್ತೇವೆ ಎಂಬುದು ನಮ್ಮಿಂದಲೇ ಖಾತರಿಯಾಗಬೇಕು ನಾವು ಅದನ್ನು ನಮಗೆ ನಾವೇ ಕೇಳಿಕೊಳ್ಳಬೇಕು ಹಾಗೂ ಪತ್ತೆಮಾಡಿಕೊಳ್ಳಬೇಕು.

**ವ್ಯಕ್ತಿತ್ವ:** ನಮ್ಮ ವ್ಯಕ್ತಿತ್ವದಲ್ಲಿ ಅಂತರ್ಮುಖಿ, ಬಹಿರ್ಮುಖಿ ಹಾಗೂ ಉಭಯಮುಖಿ ಎಂಬ ವಿಧಗಳಿವೆ. ನಮ್ಮನ್ನು ನಾವು ಯಾವ ಗುಂಪಿನವರೆಂದು ಕರೆದುಕೊಳ್ಳಬಹುದು. ಇದು ಸ್ವಮೌಲ್ಯಮಾಪನ ವಾಗಬೇಕು. ಪ್ರಪಂಚದೊಡನೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ?" ನಮ್ಮ ಸಾಮರ್ಥ್ಯ ಹಾಗೂ ಕೌಶಲಗಳನ್ನು ಯಾವುದಕ್ಕೆ ಹರಿಯಗೊಡುತ್ತೇವೆ? ಎಂತಹ ವ್ಯಕ್ತಿಗಳೊಡನೆ ಬೆರೆಯುತ್ತೇವೆ? ಎಂತಹ ಮಾಹಿತಿಯನ್ನು ಸಹಜವಾಗಿ ಗಮನಿಸಿ ಸ್ವೀಕರಿಸುತ್ತೇವೆ? ಹೇಗೆ ನಮ್ಮನ್ನು ನಾವೇ ನಿಯಂತ್ರಿಸಿಕೊಳ್ಳುತ್ತೇವೆ... ಇತ್ಯಾದಿ ಅಂಶಗಳ ಬಗ್ಗೆ ನಾವೇ ಮೌಲ್ಯಮಾಪನ ಮಾಡಿಕೊಳ್ಳಬೇಕು. ಎಂತಹ ಕೆಲಸಗಳನ್ನು ಪ್ರೀತಿಸುತ್ತೇವೆ ಅಥವಾ ತಿರಸ್ಕರಿಸುತ್ತೇವೆ ಎಂಬುದರ ಮೇಲೆ ನಮ್ಮ ಯಶಸ್ಸು ಅವಲಂಬಿತವಾಗಿದೆ.

**ಕೌಶಲಗಳು:** ದಿನಿತ್ಯದ ವಿವಿಧ ಕಾರ್ಯಕ್ಷೇತ್ರಗಳ ನಮ್ಮ ಪರಿಣಿತಿಯ ನಾವು ರೂಢಿಸಿಕೊಳ್ಳುವ ಕೌಶಲಗಳನ್ನು ಅವಲಂಬಿಸಿದೆ. ಅವು ಬಹಳ ಕುಶಲತೆಯುಳ್ಳವುಗಳಿಂದ ತೀರಾ ಸಾಧಾರಣವಾದವೂ ಇರಬಹುದು. ಕೌಶಲಗಳ ಜ್ಞಾನ, ಅಭ್ಯಾಸ ಹಾಗೂ ಗುಣಮಟ್ಟದ ಅರಿವು ನಮ್ಮನ್ನು ಹೆಚ್ಚು ವಿಶ್ವಾಸಿಗಳಾಗಿ ಕಾರ್ಯನಿರ್ವಹಿಸುವಂತೆ ಉತ್ತೇಜಿಸುತ್ತದೆ. ಹಾಗಾಗಿ ನಾವು ಕಲಿತಂತಹ ಕೌಶಲಗಳು ನಮ್ಮ ಸಾಮರ್ಥ್ಯಗಳಂತೆಯೇ ನಮ್ಮ ಬಲಗಳಾಗುತ್ತವೆ. ಇತರರು ನಮ್ಮನ್ನು ಮೆಚ್ಚುವಂತೆ ಮಾಡುತ್ತವೆ.

Digitised by Bharatavani, CIIL

ಉದಾಹರಣೆಗೆ ಉತ್ತಮ ಬರವಣಿಗೆ ಮಾತುಗಾರಿಕೆ, ಆಲಿಸುವಿಕೆ, ವಾಚನ, ಕಂಪ್ಯೂಟರ್ ಕೌಶಲ, ಲೆಕ್ಕ ಬಿಡಿಸುವ ಸಾಮರ್ಥ್ಯ, ಚಿತ್ರ ಬಿಡಿಸುವಿಕೆ, ಬಣ್ಣ ಹಚ್ಚುವ ಕೆಲಸ, ಕಸೂತಿ ಕೆಲಸ.. ಇತ್ಯಾದಿ ನಮ್ಮ ಈ ಬಲಗಳ ಬಗ್ಗೆ ಅರಿವು ನಮಗೆ ಇರಲೇಬೇಕು. ಇದು ನಮ್ಮಲ್ಲಿ ವಿಶ್ವಾಸ ಹೆಚ್ಚಿಸುವುದಂತೂ ನಿಜ.

ಹೀಗಾಗಿ ಸ್ವಮೌಲ್ಯಮಾಪನದ ಮೂಲಕ ನಮ್ಮ ವಿಶಾಲ ಆಸಕ್ತಿಯ ಕ್ಷೇತ್ರಗಳನ್ನು, ನಮ್ಮ ವ್ಯಕ್ತಿತ್ವವನ್ನು ಹಾಗೂ ನಮ್ಮಲ್ಲಿರುವ ಕೌಶಲಗಳನ್ನು ಗುರುತಿಸುವುದರ ಮೂಲಕ ನಮಗಿರುವ ಅವಕಾಶಗಳನ್ನು ಕಂಡುಕೊಳ್ಳುವ ಹಾಗೂ ಅವಕಾಶಗಳನ್ನು ಹೊಂದಲಿಕ್ಕೆ ಇರುವ ಕಂಟಕಗಳನ್ನು ಪತ್ತೆ ಮಾಡಿಕೊಳ್ಳಬಹುದು. ಅವುಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಬಹುದು. ಇದೇ ಸ್ವಮೌಲ್ಯಮಾಪನದ ಪ್ರಾಮುಖ್ಯ.

**ನಮ್ಮ ಸ್ವಮೌಲ್ಯಮಾಪನ ಹೇಗೆ ಸಾಧ್ಯವಾಗುವುದು?**

ಇದಕ್ಕೆ ಬೇಕಾದದ್ದು ಸ್ವ ಅಭಿವ್ಯಕ್ತಿ, ನಮ್ಮನ್ನು ಅಭಿವ್ಯಕ್ತಿಗೊಳಿಸಲಿಕ್ಕೆ ಹಲವಾರು ರೀತಿನೀತಿಗಳಿವೆ. ಮಾತುಗಾರಿಕೆ ಮೂಲಕ ಅಭಿವ್ಯಕ್ತಿ ಸಾಧ್ಯ. ಆದರೆ, ಹೆಚ್ಚು ಮಾತನಾಡದವರಾಗಿದ್ದರೆ ನಮ್ಮ ಭಾವನೆ ಅಭಿವ್ಯಕ್ತಿ, ಹಾಡುಗಾರಿಕೆ, ಸಂಗೀತ, ನೃತ್ಯ, ಬಣ್ಣ ಹಚ್ಚುವಿಕೆ, ಕ್ರೀಡೆ ಮುಂತಾದವುಗಳಲ್ಲಿ ತೊಡಗಬಹುದು. ಇಲ್ಲಿ ಉದ್ದೇಶವು ಸಂವಹನ, ಅಗತ್ಯವಿದ್ದಲ್ಲಿ ಇತರರ ಸಲಹೆಗಳನ್ನು ಪಡೆಯಬಹುದು. ನಮ್ಮ ಸಾಮರ್ಥ್ಯ, ಆಸಕ್ತಿ, ಅಗತ್ಯ, ಹವ್ಯಾಸ, ಮೌಲ್ಯಗಳ ಸ್ವಮೌಲ್ಯಮಾಪನ ಆಗಬೇಕು. ನಮ್ಮ ಹಿಂದಿನ ಕಾರ್ಯ ನಿರ್ವಹಣೆ ಹಾಗೂ ಇಂದಿನದನ್ನು ಹೋಲಿಸಬಹುದು. ಹಾಗೂ ಮುಂದಿನ ಕಾರ್ಯನಿರ್ವಹಣೆ ಹೇಗಿರಬೇಕೆಂಬುದನ್ನು ನಿರ್ಧರಿಸಬಹುದು.

ನಮ್ಮ ಆಸಕ್ತಿ, ಕೌಶಲ ಹಾಗೂ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಅಂಶಗಳನ್ನು ಅಳತೆಮಾಡಲಿಕ್ಕೆ ಪರೀಕ್ಷೆಗಳನ್ನು ನಾವೇ ತೆಗೆದುಕೊಳ್ಳಬಹುದು. ನಮ್ಮ ಬಲ ಹಾಗೂ ಮಿತಿಗಳನ್ನು ಅರಿಯುವುದರ ಜೊತೆಗೆ ನಮ್ಮ ಆದ್ಯತೆಗಳನ್ನು ನಾವೇ ಗುರುತಿಸಿಕೊಳ್ಳಬಹುದು. ಯಾವ ಮಾಹಿತಿಯನ್ನು ಹೇಗೆ ಸ್ವೀಕರಿಸುತ್ತೇವೆ? ಯಾವಾಗ ಕಾರ್ಯನಿರ್ವಹಣೆ ಸುಲಭ? ಎಂತಹ ಕೆಲಸ ಇಷ್ಟ? ಯಾವಾಗ ನಮ್ಮ ನಿಯಂತ್ರಣ ಕಳೆದುಕೊಳ್ಳುತ್ತೇವೆ? ಯಾವಾಗ ಮನಸ್ಸಿನ ಸಮತೋಲನ ಸಾಧ್ಯ? ಇತ್ಯಾದಿ. ಮಾಹಿತಿಗಳಿಂದ ನಮ್ಮನ್ನು ನಾವು ಅರ್ಥಮಾಡಿಕೊಂಡು ಸಂತೋಷಪಡುತ್ತೇವೆ. ನಮ್ಮ ಅದ್ವಿತೀಯತೆ ಪತ್ತೆಮಾಡಿಕೊಳ್ಳುತ್ತೇವೆ. ಹಾಗೂ ನಮ್ಮ ಮಿತಿಗಳನ್ನು ಗುರುತಿಸಿಕೊಂಡು ಅವುಗಳನ್ನು ಹೋಗಲಾಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಸ್ವಯಂ-ಚಟುವಟಿಕೆಗಳ ಮೂಲಕ ನಮ್ಮಲ್ಲಿರುವ ಸೃಜನಶೀಲತೆಯನ್ನು ಉತ್ತೇಜಿಸಿಕೊಳ್ಳಬಹುದು. ಹೊಸ ಹೊಸ ಕಲ್ಪನೆಗಳ ಮೂಲಕ ನಮ್ಮನ್ನು ಪತ್ತೆಹಚ್ಚಿಕೊಳ್ಳಬಹುದು. ಇಂತಹ ಪ್ರಯತ್ನಗಳಿಗೆ ಸ್ವಮೌಲ್ಯಮಾಪನ ಸಹಾಯಕ.

ಸ್ವಮೌಲ್ಯಮಾಪನ ಪ್ರಕ್ರಿಯೆಯು 5 ಗುರುತಿಸಲ್ಪಡುವ ಲಕ್ಷಣಗಳನ್ನು ಹೊಂದಿದೆ.

- ಚಟುವಟಿಕೆಯ ಆರಂಭದಲ್ಲಿಯೇ ಉತ್ತೇಜಿಸಲ್ಪಡುತ್ತದೆ.
- ಬದಲಾವಣೆಗೆ ಹಾಗೂ ಪುನರಾವಲೋಕನಕ್ಕೆ ಇರುವ ನಿರಂತರ ಪ್ರಕ್ರಿಯೆ.
- ಮೌಲ್ಯಮಾಪನ ಪ್ರಕ್ರಿಯೆಯ ಒಡೆತನವನ್ನು ವ್ಯಕ್ತಿಗೆ ನೀಡುತ್ತವೆ.
- ಕೌಶಲಗಳನ್ನ ವೃದ್ಧಿಸುವ ಕಲಿಕೆಯನ್ನು ಸಬಲೀಕರಣ ಗೊಳಿಸುವ ಪ್ರಕ್ರಿಯೆ.
- ಸಂಬಂಧಿಸಿದವರನ್ನು ಅಳವಡಿಸಿಕೊಂಡು ಹೆಚ್ಚಿನ ಪಾಲ್ಗೊಳ್ಳುವಿಕೆ ಹಾಗೂ ಪುನರ್ಬಲನ ನೀಡುವ ಪ್ರಕ್ರಿಯೆ.

ಶಿಕ್ಷಕರು : ವಿದ್ಯಾರ್ಥಿಗಳಿಗೆ ಸ್ವಮೌಲ್ಯಮಾಪನಮಾಡಲು ಪ್ರೋತ್ಸಾಹಿಸಿ ಅದರ ಅನುಕೂಲಗಳು ಅವರ ಗಮನಕ್ಕೆ ಬರುವಂತೆ ಮಾಡಿ ಕಾರ್ಯದ ಮೊದಲು ಮತ್ತು ಮುಂದುವರೆದಾಗಲು ಅದರ ಅನುಕೂಲ ಹಾಗೂ ಲಾಭಗಳ ಬಗ್ಗೆ ಪ್ರಜ್ಞಾಪೂರ್ವಕವಾಗಿ ಗಮನಿಸಲಿಕ್ಕೆ ಹೇಳಬೇಕು. ಸ್ವಮೌಲ್ಯಮಾಪನವನ್ನು ಚಿಕ್ಕದಾಗಿ ಪ್ರಾರಂಭಿಸಿ ಹಲವು ಪುಟ್ಟ ಸ್ವಮೌಲ್ಯಮಾಪನ ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿ, ಮೊದಲೇ ತಯಾರಿಸಿದ ನಮೂನೆಗಳನ್ನು ತರಗತಿಯ ವಿದ್ಯಾರ್ಥಿ ಕಾರ್ಯಗಳನ್ನು ಮೌಲ್ಯಮಾಪನ ಮಾಡಲು ಬಳಸಿ. ತಮ್ಮ ಮೌಖಿಕ ಅಭಿವ್ಯಕ್ತಿ, ಸಂಶೋಧನೆ ವರದಿ, ವಿವರಣಾತ್ಮಕ ಬರವಣಿಗೆಯನ್ನು ವಿದ್ಯಾರ್ಥಿಗಳೇ ಮೌಲ್ಯಮಾಡಲು ತಿಳಿಸಿ ವಿದ್ಯಾರ್ಥಿಗಳಿಂದ ಅವರ ಕಾರ್ಯನಿರ್ವಹಣೆ ಬಗ್ಗೆ ವರದಿ ಪಡೆಯಬೇಕು.

ಸ್ವಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪ್ರೊ. ದಂಡಪಾಣಿಯವರು ಕೈಗೊಂಡ ಕ್ರಿಯಾ ಸಂಶೋಧನೆಯನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ಈ ಕ್ರಿಯಾ ಸಂಶೋಧನೆ ಉದ್ದೇಶವು, "ಪರೀಕ್ಷಾ ಕಾರ್ಯನಿರ್ವಹಣೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಸೂಕ್ತ ಅವಲೋಕನವಿದೆಯೇ?" ಎಂಬುದನ್ನು ಅಭ್ಯಾಸಿಸುವುದೇ ಆಗಿತ್ತು. ಇದಕ್ಕಾಗಿ ಅವರು 51 ಮಂದಿ ಪದವೀಧರರನ್ನು (28 ಹೆಣ್ಣು ಹಾಗೂ 23 ಗಂಡು)ಬಿ.ಎಡ್.ಗೆ ದಾಖಲಾದವರನ್ನು ಆಯ್ಕೆ ಮಾಡಿಕೊಂಡರು. ಶೈಕ್ಷಣಿಕ ಮನೋವಿಜ್ಞಾನದ ಮೂರು ಘಟಕಗಳನ್ನು ಬೋಧಿಸಿ ಅವುಗಳಿಗೆ ಮೂರು ಪ್ರತ್ಯೇಕ ಪರೀಕ್ಷೆಗಳನ್ನು ನೀಡುವ ಉದ್ದೇಶ ಹೊಂದಿದ್ದರು. ಮೊದಲು ಘಟಕವನ್ನು ಬೋಧಿಸಿದ ನಂತರ ನಾಲ್ಕು ಪ್ರಶ್ನೆಗಳನ್ನು ನೀಡಿ ಅವುಗಳಿಗೆ ಉತ್ತರ ಸಿದ್ಧಮಾಡಿಕೊಂಡು ಬರಲಿಕ್ಕೆ ತಿಳಿಸಿದರು. ವಿದ್ಯಾರ್ಥಿಗಳಿಗೆ ಬೇರೆ ಬೇರೆ ಪ್ರಶ್ನೆಗಳನ್ನು ಉತ್ತರಿಸಲಿಕ್ಕೆ ತಿಳಿಸಿದರು. ಇದು ನಕಲು ಮಾಡುವುದನ್ನು ತಡೆಯಿತು. ಪರೀಕ್ಷೆಗೆ 25 ನಿಮಿಷಗಳನ್ನು ನೀಡಲಾಯ್ತು. ನಂತರ ಪ್ರತಿ ವಿದ್ಯಾರ್ಥಿಗೆ ತನ್ನ ಉತ್ತರ ತಾನೇ ಮೌಲ್ಯ ಮಾಡಲಿಕ್ಕೆ ತಿಳಿಸಲಾಯ್ತು. ಅದಕ್ಕಾಗಿ ಪ್ರತ್ಯೇಕ ಹಾಳೆಯನ್ನು ಎಲ್ಲರಿಗೂ ನೀಡಲಾಯ್ತು. ವಿದ್ಯಾರ್ಥಿಯು ತನ್ನ ಹೆಸರು ಹಾಗೂ ಇತರ ವಿವರದೊಂದಿಗೆ ಅಂಕವನ್ನು (10ಕ್ಕೆ) ಗುರುತಿಸಿ ಕೊಟ್ಟನು. ಉತ್ತರ ಪತ್ರಿಕೆಯೊಂದಿಗೆ ಈ ಹಾಳೆಯನ್ನು ಸಹ ಸಂಗ್ರಹಿಸಲಾಯ್ತು. ನಂತರ ಆ ಉತ್ತರ ಪತ್ರಿಕೆಗಳನ್ನು ಅದಲು ಬದಲು ಮಾಡಿ ವಿದ್ಯಾರ್ಥಿಗಳಿಗೆ ತಮ್ಮ ಉತ್ತರ ಪತ್ರಿಕೆ ಬರದಿರುವಂತೆ ಬೇರೆಯವರ ಉತ್ತರ ಪತ್ರಿಕೆ ನೀಡಲಾಯ್ತು. ಇದರ ಜೊತೆ ಪ್ರತ್ಯೇಕ ಹಾಳೆಗಳಲ್ಲಿ ವಿದ್ಯಾರ್ಥಿಯ ಹೆಸರು ಆತನ ಅಂಕ ಗುರುತಿಸುವಂತೆ ತಿಳಿಸಲಾಯ್ತು. ಮೌಲ್ಯಮಾಪನವಾದನಂತರ ಉತ್ತರ ಪತ್ರಿಕೆಗಳು ಹಾಗೂ ಹಾಳೆಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಯಿತು. ನಂತರ ಶಿಕ್ಷಕರು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ ಪ್ರತ್ಯೇಕ ಹಾಳೆಗಳಲ್ಲಿ ಅಂಕಗಳನ್ನು ಬರೆದುಕೊಂಡರು. ಹೀಗೆ ಉಳಿದ ಎರಡು ಪರೀಕ್ಷೆಗಳಾಯ್ತು. ದೊರೆತ ಮೂರು ಪ್ರತ್ಯೇಕ ಅಂಕಗಳಿಗೆ ಸರಾಸರಿ ಹಾಗೂ ಆದರ್ಶವಿಚಲನೆಗಳನ್ನು ಕಂಡುಹಿಡಿಯುವ ಮೂಲಕ ಅವುಗಳನ್ನು 'T' ಅಂಕಗಳಾಗಿ ಪರಿವರ್ತಿಸಲಾಯಿತು. ವಿದ್ಯಾರ್ಥಿ ಸ್ವಮೌಲ್ಯಮಾಪನ ಅಂಕ ಹಾಗೂ ಸಹಪಾಠಿಗಳ ಮೌಲ್ಯಮಾಪನದ ಅಂಕ ಮತ್ತು ಶಿಕ್ಷಕ ಮೌಲ್ಯಮಾಪನ ಅಂಕ-ಈ ಮೂರಕ್ಕೂ ಸಹಸಂಬಂಧವನ್ನು ಪ್ರಾಡಕ್ಟ್ ಮೊಮೆಂಟ್ ವಿಧಾನದಿಂದ ಕಂಡುಹಿಡಿಯಲಾಯಿತು.

ಮೂರು ಪರೀಕ್ಷೆಗಳಲ್ಲಿ ಮೊದಲ ಹಾಗೂ ಎರಡನೆಯದರಲ್ಲಿ ಕ್ರಮವಾಗಿ .05 ಹಾಗೂ .01 ಮಟ್ಟಗಳಲ್ಲಿ ಸಹಸಂಬಂಧ ಗುರುತರವಾಗಿ ವಿದ್ಯಾರ್ಥಿ ಸ್ವಮೌಲ್ಯಮಾಪನ ಹಾಗೂ ಶಿಕ್ಷಕರ ಮೌಲ್ಯಮಾಪನಕ್ಕೆ ಇದ್ದಿತ್ತು.

Digitised by Bharatavani, CIIL

ಹಾಗೆಯೇ ವಿದ್ಯಾರ್ಥಿ ಸ್ವಮೌಲ್ಯಮಾಪನ ಹಾಗೂ ಸಹಪಾಠಿ ಮೌಲ್ಯಮಾಪನಗಳಲ್ಲಿ ಸಹಸಂಬಂಧದಲ್ಲಿ ಎರಡನೇ ಹಾಗೂ ಮೂರನೇ ಪರೀಕ್ಷೆಗಳಲ್ಲಿ ಕ್ರಮವಾಗಿ 0.01 ಹಾಗೂ 0.01 ಮಟ್ಟಗಳಲ್ಲಿ ಗುರುತರ ಸಹಸಂಬಂಧ ಕಂಡುಬಂದಿತು. ನಂತರ ಶಿಕ್ಷಕ ಮೌಲ್ಯಮಾಪನ ಹಾಗೂ ಸಹಪಾಠಿ ಮೌಲ್ಯಮಾಪನಕ್ಕೆ ಸಹ ಸಂಬಂಧಿಸಿದಂತೆ 2 ಮತ್ತು 3ನೇ ಪರೀಕ್ಷೆಗಳ ನಡುವಣ ಸಂಬಂಧವು ಕ್ರಮವಾಗಿ .01 ಹಾಗೂ .01 ಮಟ್ಟಗಳಲ್ಲಿ ಮಹತ್ವಪೂರ್ಣವಾಗಿ ಇದ್ದಿತು. ಈ ಕ್ರಿಯಾ ಸಂಶೋಧನೆ ಸ್ವ–ಮೌಲ್ಯಮಾಪನದ ದೃಷ್ಟಿಯಿಂದ ಮುಖ್ಯವೆನಿಸುತ್ತದೆ ಸರಿ.

ಹೀಗಾಗಿ ವೈಯಕ್ತಿಕ ಅಧ್ಯಯನ ಹಾಗೂ ಕಾರ್ಯಕ್ಷೇತ್ರಗಳಲ್ಲಿ ವ್ಯಕ್ತಿಯ ಸ್ವಮೌಲ್ಯಮಾಪನವು ಪ್ರೇರೇಪಿಸಲ್ಪಡಬೇಕು. ಇದು ವ್ಯಕ್ತಿ ಪ್ರಗತಿಗೆ ಪೂರಕ. ಸಾಧನೆಯ ಹಾಗೂ ಕಾರ್ಯದ ಗುಣಮಟ್ಟವನ್ನು ಇದು ವೃದ್ಧಿಸುತ್ತದೆ. ಹಾಗಾಗಿ ಸ್ವಮೌಲ್ಯಮಾಪನ ಉಳಿದೆಲ್ಲ ಮೌಲ್ಯಮಾಪನ ಪ್ರಕ್ರಿಯೆಗಳಿಗಿಂತ ಉತ್ತಮ ಹಾಗೂ ಪ್ರಯೋಜನಕಾರಿ.

–ಎಸ್.ಗೀ

## ಸ್ವ–ಸಂಸ್ಕೃತೀಕರಣ

ಸ್ವ–ಸಂಸ್ಕೃತಿ (Enculturization)ಎಂಬ ಪದದಲ್ಲೇ ಅದರ ಅರ್ಥ ಅಡಗಿದೆ. ಇದೊಂದು ಸಮಾಜಶಾಸ್ತ್ರೀಯ ಹಾಗೂ ಮಾನವ ಶಾಸ್ತ್ರೀಯ ಪರಿಕಲ್ಪನೆ ಹಾಗೂ ಪ್ರಕ್ರಿಯೆ. ವ್ಯಕ್ತಿಗಳು ತಾವು ವಾಸಿಸುತ್ತಿರುವ ಸಮಾಜದಲ್ಲಿ ರೂಢಿಯಲ್ಲಿರುವ ಸಂಸ್ಕೃತಿ ಅನುಸರಿಸುವುದಿಲ್ಲ. ಹಾಗೆ ಅನುಸರಿಸಿದಾಗ ವ್ಯಕ್ತಿಯು ಆ ಸಮಾಜದಲ್ಲಿ ನಿರ್ಧರಿತವಾಗಿರುವ ಪಾತ್ರಗಳನ್ನು ಹಾಗೂ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಲು ಸಹಾಯವಾಗುತ್ತದೆ. ವ್ಯಕ್ತಿಯು ತನ್ನ ಸುತ್ತಮುತ್ತಲಿನ ಸಮಾಜದಲ್ಲಿ ನಡೆಯುವ ಒಳ್ಳೆಯ ಹಾಗೂ ಕೆಟ್ಟದ್ದರ ನಡುವೆ ವಿಮರ್ಶೆ ಮಾಡಿ ಸಮಾಜ ಒಪ್ಪಿಕೊಳ್ಳುವಂತಹ ನಡವಳಿಕೆಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ತನ್ನ ಸಮಾಜದ ಸಾಂಸ್ಕೃತಿಕ ನಡವಳಿಕೆಗಳಿಗೂ ಕೆಲವು ನಿರ್ದಿಷ್ಟವಾದ ಅಡೆತಡೆಗಳು ಸಹ ಇರುತ್ತವೆ. ಹೀಗೆ ಆ ವ್ಯಕ್ತಿಯು ತನ್ನ ಸಮಾಜದ ಸುತ್ತಮುತ್ತಲಿನ ಪರಿಸ್ಥಿತಿಗನುಗುಣವಾಗಿ ಬದುಕನ್ನು ನಡೆಸುವ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುವುದು ಸ್ವಸಂಸ್ಕೃತಿಯ ಪ್ರಮುಖವಾದ ಕಾರ್ಯ.

ಬಹುಶಃ ಈ ಸ್ವ–ಸಂಸ್ಕೃತಿಯ ಕ್ಷೇತ್ರದಲ್ಲಿ ಶಿಕ್ಷಣದ ಪಾತ್ರವನ್ನು ಅರ್ಥಮಾಡಿಕೊಂಡಲ್ಲಿ ಸಾಮಾನ್ಯ ಶಿಕ್ಷಣದ ಗುಣಲಕ್ಷಣಗಳನ್ನು ಒಂದು ಸಮಾಜದ ಸಂಸ್ಕೃತಿಯನ್ನು ಎಲ್ಲ ವ್ಯವಸ್ಥೆಯಲ್ಲೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಶಿಕ್ಷಣದ ಅತಿ ಮುಖ್ಯ ಕರ್ತವ್ಯವೆಂದರೆ ವ್ಯಕ್ತಿಗೆ ಸೂಕ್ತವಾದ ಮಾರ್ಗದರ್ಶನವನ್ನು ನೀಡಿ ವ್ಯಕ್ತಿಯು ತನ್ನ ಸಮಾಜದ ಸಂಸ್ಕೃತಿಗನುಗುಣವಾಗಿ ಜೀವನವನ್ನು ರೂಪಿಸಿಕೊಳ್ಳುವಂತಹ ಕಾರ್ಯ. ಇದು ಶಿಕ್ಷಣದಿಂದ ಸರಳವಾಗಿ ಅತ್ಯಂತ ಅರ್ಥಪೂರ್ಣವಾಗಿ ನಡೆಯುತ್ತದೆ. ಶಿಕ್ಷಣವು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು ಮಾನವನ ಕಲಿಕೆಗೆ ಆಧಾರವಾಗಿದೆ. ಎಫ್.ಎ. ಬ್ರೌನ್ ಮತ್ತು ಜೆ.ಎಸ್. ರೌಸೆಕ್‌ರವರು ಮಕ್ಕಳ ಮತ್ತು ಯುವಕರ ನಡತೆಯನ್ನು ನಿರ್ಧರಿಸುವ ಮತ್ತು ಅವರ ಮನೋಧರ್ಮವನ್ನು ರೂಢಿಸುವ ಒಟ್ಟು ಅನುಭವಗಳೇ ಶಿಕ್ಷಣವೆಂದು ಹೇಳುತ್ತಾರೆ. ಮಕ್ಕಳ ಹಾಗೂ ಯುವಕರ ನಡತೆಯನ್ನು ನಿರ್ಧರಿಸುವಲ್ಲಿ ಸಂಸ್ಕೃತಿಯ ಪಾತ್ರ ಅತ್ಯಂತ ಮಹತ್ತರವಾದುದು. ಏಕೆಂದರೆ ಕಲಿಕೆ ಪ್ರಾರಂಭವಾಗುವುದು ಕುಟುಂಬದಲ್ಲೇ ಆದರೂ, ಪ್ರತಿ ಕುಟುಂಬಕ್ಕೂ ತನ್ನದೇ ಆದ ಸಂಸ್ಕೃತಿ, ಪರಂಪರೆ, ಸಂಪ್ರದಾಯ, ಲೋಕಾರೂಢಿ, ನೈತಿಕ ನಿಯಮಗಳಿರುತ್ತವೆ. ಈ ಬಗೆಯ ಸ್ವ–ಸಂಸ್ಕೃತಿಯ ಆಧಾರದ ಮೇಲೆ ವ್ಯಕ್ತಿಯ ವ್ಯಕ್ತಿತ್ವ ಕುಟುಂಬದಲ್ಲಿ ರೂಪುಗೊಳ್ಳಬೇಕಾಗುತ್ತದೆ. ಜೊತೆಗೆ ಶಿಕ್ಷಣ ಇನ್ನೂ ಮುಂದುವರೆದು ವ್ಯಕ್ತಿಯ ಮನೋಧರ್ಮವನ್ನು ರೂಪಿಸುತ್ತದೆ. ಸಮಾಜದ ಸಂಸ್ಕೃತಿಗೂ ವ್ಯಕ್ತಿಯ ಮನೋಧರ್ಮಕ್ಕೂ ಇರುವ ಸಂಬಂಧ ಅಷ್ಟಿಷ್ಟಲ್ಲ. ಒಂದು ಸಮಾಜದ ಸಂಸ್ಕೃತಿಯ ಆಧಾರದ ಮೇಲೆಯೇ ವ್ಯಕ್ತಿಯ ಮನೋಧರ್ಮ ಬೆಳೆಯಬೇಕಾಗುತ್ತದೆ. ಹೀಗೆ ವ್ಯಕ್ತಿಗೆ ಮನೋಧರ್ಮಕ್ಕನುಗುಣವಾದಂತಹ ವಾತಾವರಣವನ್ನು ಸೃಷ್ಟಿ ಮಾಡುವ ಶಿಕ್ಷಣದ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಅವಶ್ಯಕವಾದುದು. ಜೊತೆಗೆ ಶಿಕ್ಷಣವು ಸಂಸ್ಕೃತಿಯನ್ನು, ಪರಂಪರೆಯನ್ನೂ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವ ವಾಹಕವೂ ಆಗಿದೆ. ಇತ್ತೀಚೆಗಂತೂ ಸಂಸ್ಕೃತಿಯ ಕ್ಷೇತ್ರ ಅತ್ಯಂತ ವ್ಯಾಪಕವಾಗುತ್ತಿದ್ದು, ಸಂಕೀರ್ಣವೂ ಆಗುತ್ತಿರುವುದರಿಂದ ಅದರ ಕಲಿಕೆ, ಉಪಯೋಗ ಮತ್ತು ವರ್ಗಾವಣೆಯ ನಿರಂತರ ಪ್ರಕ್ರಿಯೆ ಕುಟುಂಬ, ಶಾಲೆ ಮತ್ತಿತರ ಹಲವಾರು ನಿಯೋಗಗಳ ಮುಖಾಂತರ ವರ್ಗಾವಣೆಯಾಗುತ್ತಿದೆ. ಈ ಹಿಂದೆ ಕುಟುಂಬ ಶಿಶುವಿಗೆ ಹಾಗೂ ವಯಸ್ಕರಿಗೆ ಸಂಸ್ಕೃತಿಯ ಪಾಠ ಕಲಿಸುತ್ತಿದ್ದುದು ಈಗ ಶಾಲೆ ಶಿಕ್ಷಣದ ಮುಖಾಂತರ ಸಂಸ್ಕೃತಿಯ ಪ್ರಸಾರವಾಗಬೇಕಾಗಿದೆ. ಸಾಮಾಜಿಕ ಕಲಿಕೆಗೆ ಅಂತ್ಯವೇ ಇರುವುದಿಲ್ಲ. ಹಾಗೆಯೇ ಸಂಸ್ಕೃತಿಯ ಬೆಳವಣಿಗೆ ಹಾಗೂ ಕಲಿಕೆಗೂ ಕೊನೆ ಎಂಬುದಿಲ್ಲ.

ಮಾನವನು ತನ್ನ ಜೀವನದಲ್ಲಿ ಹೋರಾಡಲು ಬೇಕಾದ ಯಶಸ್ವೀ ಮಾರ್ಗದರ್ಶನವನ್ನು ಶಿಕ್ಷಣ ನೀಡುವುದರಿಂದ ಸಂಸ್ಕೃತಿಯನ್ನೂ ಅದು ರವಾನಿಸುತ್ತದೆ. ಸ್ವ ಸಂಸ್ಕೃತಿಯಲ್ಲಿ ಚಿಕ್ಕವರಿಂದ ಮಕ್ಕಳು ಸಭ್ಯ ನಡವಳಿಕೆಯನ್ನು ಕಲಿತು, ಬೇರೆಯವರ ಸಮರ್ಥ ಅಭಿಪ್ರಾಯಗಳನ್ನು ಗೌರವಿಸಿ, ಹಿರಿಯರ ಹಿತವಚನವನ್ನು ಪಾಲಿಸಿ ಸಂಪ್ರದಾಯ ಲೋಕ ರೂಢಿಗೆ ಹೊಂದಿಕೊಳ್ಳುವಂತಹ ಕುಟುಂಬಗಳು ಹೆಚ್ಚುತ್ತಿರುವುದು ಶೈಕ್ಷಣಿಕ ವಾತಾವರಣದಿಂದಲೇ ಎಂದು ಹೇಳಬಹುದು.

ವ್ಯಕ್ತಿಯು ಸೈದ್ಧಾಂತಿಕ ಶಿಕ್ಷಣದಿಂದ ಅಪೂರ್ವ ಹಾಗೂ ಅರ್ಥಪೂರ್ಣ ಜ್ಞಾನಾರ್ಜನೆಯನ್ನು ಹೊಂದಿ ಇಂದಿನ ಪ್ರಾಯೋಗಿಕ ಹಾಗೂ ತಾಂತ್ರಿಕ, ವೈಜ್ಞಾನಿಕ ಶಿಕ್ಷಣದಿಂದ ಪಡೆದ ಜ್ಞಾನವನ್ನು ಜೀವನಾವಶ್ಯಕತೆಗಳಿಗೆ ಅಳವಡಿಸಿಕೊಳ್ಳುವುದನ್ನು ಕಲಿತು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಲು ಶ್ರಮಿಸುತ್ತಾನೆ. ಈ ಕೆಲಸ ಸಂಸ್ಕೃತಿ, ಸಮಾಜ ಹಾಗೂ ಶಿಕ್ಷಣ ಈ ಮೂರು ಪರಿಕಲ್ಪನೆಗಳ ಹಾಗೂ ಪ್ರಕ್ರಿಯೆಗಳ ಪ್ರಭಾವದಿಂದಲೇ ಆಗುವುದು.

ಶಿಕ್ಷಣ ವ್ಯಕ್ತಿಯನ್ನು ಸಮಾಜೀಕರಣಗೊಳಿಸಲು ಬಳಸುವ ಪ್ರಕ್ರಿಯೆಯಾದರೂ ಸ್ವ–ಸಂಸ್ಕೃತಿ ಬಹಳ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತದೆ. ಈ ಹಿಂದೆ ಸ್ವ–ಸಂಸ್ಕೃತೀಕರಣವನ್ನು ಬೋಧಿಸುತ್ತಿದ್ದ ಕುಟುಂಬ ಈಗ ಈ ಕಾರ್ಯವನ್ನು ಶಿಕ್ಷಣ ಸಂಸ್ಥೆಗಳಿಗೆ ವರ್ಗಾಯಿಸಿದೆ. ಹಿಂದೆ ಮಕ್ಕಳಿಗೆ ಶಿಸ್ತು, ಸಂಯಮ, ಪ್ರಾಮಾಣಿಕತೆ, ಹಿರಿಯರಿಗೆ ಗೌರವ ಮುಂತಾದುವುಗಳು ಸ್ವ–ಸಂಸ್ಕೃತೀಕರಣದಿಂದಲೇ ಬರುತ್ತಿದ್ದವು. ಆದರೆ ಇಂದು ಶಿಕ್ಷಣ ಸಂಸ್ಥೆಗಳ ಮುಖಾಂತರ ಮಕ್ಕಳು ಗಂಭೀರವಾದ ಶಿಸ್ತು, ಸಂಯಮ, ಪ್ರಾಮಾಣಿಕತೆ ಮುಂತಾದುವುಗಳನ್ನು ಅತ್ಯಂತ ಸಮರ್ಪಕವಾಗಿ ಕಲಿಯುತ್ತಿದ್ದಾರೆ. ಬಹುಶಃ ಕುಟುಂಬಗಳಲ್ಲಿ ಈ ಹಿಡಿತ ಕಡಿಮೆಯಾಗಲು ಶಿಕ್ಷಣವೇ ಕಾರಣವಾಗಿದೆಯಾ ಎಂಬ ಸಂಶಯಕ್ಕೂ ಎಡೆಮಾಡಿಕೊಟ್ಟಿದೆ. ಏಕೆಂದರೆ ಭಾರತೀಯ ಸಮಾಜದಲ್ಲಿ ಈ ಹಿಂದೆ ಅವಿಭಕ್ತ ಕುಟುಂಬಗಳು ಸ್ವ–ಸಂಸ್ಕೃತೀಕರಣ ಪ್ರಕ್ರಿಯೆಯನ್ನು ಬಹಳ ಸಮರ್ಪಕವಾಗಿ ತಲೆಮಾರಿನಿಂದ ತಲೆಮಾರಿಗೆ ಧಾರೆ ಎರೆಯುತ್ತಿದ್ದವು. ಆದರೆ ಇಂದು ಅವಿಭಕ್ತ ಕುಟುಂಬಗಳು ವಿನಾಶವಾಗಿ ವಿಭಕ್ತ ಕುಟುಂಬಗಳು ಹೆಚ್ಚಿರುವುದು, ಈ ಕುಟುಂಬ ವ್ಯವಸ್ಥೆಯಲ್ಲಿ ಗಂಡಹೆಂಡಿರಿಬ್ಬರೂ ಕುಟುಂಬದ ಹೊರಗೆ ದುಡಿಯುವವರಾಗಿದ್ದು ಮಕ್ಕಳನ್ನು ಸಾಕುವ

Digitised by Bharatavani, CIIL

ಹೊಣೆ ಬೇರೆಯವರ ಅಂದರೆ ಮನೆಗೆಲಸದವರದ್ದಾಗಿರುತ್ತದೆ. ಇತ್ತೀಚಿನ ನಗರದ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಅಜ್ಜಿ ತಾತಂದಿರ ಬಳಿ ಬೆಳೆಯುವುದನ್ನು ವಿರೋಧಿಸುತ್ತಾರೆ. ಹೀಗಾಗಿ ಅವಿಭಕ್ತ ಕುಟುಂಬದ ಹಿರಿಯರು ನೀಡುತ್ತಿದ್ದ ಧರ್ಮ, ನೀತಿಯಕತೆಗಳು, ಬುದ್ಧಿವಾದ, ಹಿರಿಯರನ್ನು ಗೌರವಿಸುವಿಕೆ ಇವೆಲ್ಲವೂ ಇಂದಿನ ಕುಟುಂಬಗಳಲ್ಲಿ ಮಾಯವಾಗಿ ಅವಿಧೇಯತೆ, ಅನೀತಿ ನಡವಳಿಕೆ, ಅಧರ್ಮದ ದಾರಿ ತುಳಿಯುವತ್ತ ಯುವ ಜನಾಂಗ ಸಾಗುತ್ತಿದೆ. ಇಂತಹ ಅತಂತ್ರದ ಬದುಕಿಗೆ ಇಂದಿನ ಕುಟುಂಬಗಳು ಕಾರಣ. ಸಂಸ್ಕೃತಿಯ ಮೌಲ್ಯಗಳಿಗೆ ಈಗ ಬೆಲೆಯಿಲ್ಲ. ಸ್ವ ಸಂಸ್ಕೃತಿಯನ್ನು ಯುವ ಜನಾಂಗ ತಿರಸ್ಕರಿಸಿ ಅರ್ಥವಿಲ್ಲದ ಬದುಕಿಗೆ ಕಾಲಿಡುತ್ತಿದೆ. ಶಿಕ್ಷಣವೂ ಸಹ ಅವರ ತಲೆಯನ್ನು ಬೇರೆ ರೀತಿಯಲ್ಲಿ ಕೆಡಿಸುತ್ತಿದೆ. ಕಾಸಿನ ಹೊಳೆ, ನಿಯಂತ್ರಣ (ಹಿರಿಯರ ತಂದೆತಾಯಿಗಳ)ವಿಲ್ಲದಿರುವುದರಿಂದ ಅವರು ಸ್ವಸಂಸ್ಕೃತಿಯನ್ನು ತಿರಸ್ಕರಿಸುವತ್ತ ಮುನ್ನಡೆಯುತ್ತಿದ್ದಾರೆ. ಯಾವುದು ನಮ್ಮ ಸಂಸ್ಕೃತಿ, ಯಾವುದು ಪರರ ಸಂಸ್ಕೃತಿ, ಯಾರು ಯಾವುದನ್ನು ಅನುಕರಣೆ ಮಾಡಬೇಕು, ಬೇಡ ಎಂಬೆಲ್ಲ ಜಿಜ್ಞಾಸೆಗಳೂ ಉಂಟಾಗಿ ವೇಸ್ಟ್ ಬಾಡಿ, ವಿಕೃತ ಕಾಮಿ, ರೋಡ್ ರೋಮಿಯೋ, ಲಂಪಟ, ಕೊಲೆ, ಸುಲಿಗೆ, ದರೋಡೆ, ಮೋಸ ಎಂಬೆಲ್ಲಾ ಬಗೆಯ ಸಮಸ್ಯೆಗಳಿಗೆ ಎಡೆಮಾಡಿ ಕೊಟ್ಟಿದೆ. ಅನೈತಿಕ ಚಟುವಟಿಕೆಗಳಲ್ಲೂ ಭಾಗಿಯಾಗಿ ಬೇಜವಾಬ್ದಾರಿ ವ್ಯಕ್ತಿಯಾಗಿರುತ್ತಾನೆ ಇಂದಿನ ಯುವಕ. ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ದಾರಿ ತಪ್ಪಿದ ಮಗ, ಕೈಗೆ ಸಿಕ್ಕದ ಮಗ–ಮಗಳು ಎಂಬ ಶಿರೋನಾಮೆಗಳನ್ನು ಪಡೆದುಕೊಳ್ಳುತ್ತಾರೆ. ಇಂತಹವರನ್ನು ಯಾವ ಸಂಸ್ಕೃತಿಯೂ, ಯಾವ ಶಿಕ್ಷಣವೂ ಹಾಗೂ ಯಾವ ಆರಕ್ಷಕ ಠಾಣೆಗಳೂ ನಿಯಂತ್ರಿಸಲಾರದವಾಗುತ್ತವೆ.

ಮಕ್ಕಳಲ್ಲಿ ರಾಷ್ಟ್ರಪ್ರೇಮ, ಗುರುಭಕ್ತಿ ಮತ್ತು ಶೌರ್ಯ, ಸಾಹಸವನ್ನು ಬೆಳೆಸುವುದು ಕುಟುಂಬದ ಜವಾಬ್ದಾರಿ. ಸ್ವ–ಸಂಸ್ಕೃತಿಯನ್ನು ಎಳೆಯರಿಗೆ ಪರಿಚಯಿಸುವುದು ನಿಜವಾಗಲೂ ಅತ್ಯಂತ ಅವಶ್ಯಕವಾದುದು. ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ಅತ್ಯಂತ ಗರಿಷ್ಠಮಟ್ಟದ ಶಿಸ್ತು, ಸಂಯಮ ಕಂಡು ಬಂದಿದ್ದು ಅವರು ಅಂತಹ ಸಂಸ್ಥೆಗಳಿಂದ ಹೊರಗೆ ಬಂದ ಕೂಡಲೇ ಎಲ್ಲ ಬಗೆಯ ಸಂಸ್ಕೃತಿಯನ್ನು ಮರೆತು ಅಬ್ಬೆಪಾರಿಗಳಾಗಿ ಬಿಡುತ್ತಾರೆ. ಮನುಷ್ಯನ ಬುದ್ಧಿಶಕ್ತಿ ಅವನಿಂದ ಹೆಚ್ಚು ನಿಯಂತ್ರಣಕ್ಕೊಳಪಡುವಂತಹ ಸ್ವ–ಸಾಂಸ್ಕೃತಿಕ ಅಂಶಗಳನ್ನು ಬಹಳ ಚಿಕ್ಕಂದಿನಿಂದಲೇ ತಿಳಿಯ ಹೇಳಿ ಮಾರ್ಗದರ್ಶನ ನೀಡಬೇಕು. ಇಲ್ಲದಿದ್ದಲ್ಲಿ ಯಾವ ಬಗೆಯ ಸಂಸ್ಕೃತಿ, ಹಾಗೂ ಎಂತಹ ಶಿಕ್ಷಣವೇ ಆದರೂ ಅವರನ್ನು ತಿದ್ದಿ ತೀಡಲು ಸಾಧ್ಯವಿಲ್ಲ.

ಸ್ವಸಂಸ್ಕೃತಿ ಸಾಮಾನ್ಯವಾಗಿ ಕಲಿಕೆಯಿಂದಲೇ ಬಂದೊದಗುತ್ತದೆ. ಸಮಾಜದಲ್ಲಿ ಶಿಶು ಬೆಳೆದಂತೆಲ್ಲಾ ತನ್ನ ತಂದೆ ತಾಯಿಗಳನ್ನು ಹಾಗೂ ನೆರೆಹೊರೆಯವರನ್ನು ಗುರು–ಹಿರಿಯರನ್ನು ನೋಡಿ ಕಲಿಯುತ್ತದೆ. ಸಾಮಾಜೀಕರಣ ಕ್ರಿಯೆಯಲ್ಲಿ ಶಿಶುವು ತನ್ನ ಸ್ವ–ಸಂಸ್ಕೃತಿಯನ್ನು ಕಲಿಯುತ್ತದೆ. ಅದನ್ನು ಬೇರೆಯವರಿಂದಲೇ ಕಲಿಯುವುದರಿಂದ ಅವರೆಲ್ಲರೊಡನೆ ಅದನ್ನು ಹಂಚಿಕೊಳ್ಳುವ ಪ್ರವೃತ್ತಿಯನ್ನೂ ಸಹ ಪಡೆದಿರುತ್ತದೆ. ಮಕ್ಕಳು ಕೇಳುವ ಯಾರು, ಏನು, ಏಕೆ, ಎಲ್ಲಿ ಎಂಬ ಪ್ರಶ್ನೆಗಳಿಗೆಲ್ಲಾ ಸಮರ್ಪಕವಾದ ಉತ್ತರ ಹಿರಿಯರಿಂದಲೇ ಕಿರಿಯರಿಗೆ ಲಭ್ಯವಾಗಬೇಕು. ಈ ಹಂತದಲ್ಲಿ ಸ್ವ–ಸಂಸ್ಕೃತಿ ಹಾಗೂ ಶಿಕ್ಷಣ ಎರಡು ಪರಿಕಲ್ಪನೆಗಳೂ ಕಾರ್ಯಭಾರವನ್ನು ಹೊರಬೇಕಾಗುತ್ತದೆ.

ಸಮಾಜಶಾಸ್ತ್ರ, ಮಾನವಶಾಸ್ತ್ರವನ್ನು ಅಭ್ಯಾಸಿಸುವ ವಿದ್ಯಾರ್ಥಿ ವೃಂದಕ್ಕೆ ಸ್ವ–ಸಂಸ್ಕೃತಿ, ಶಿಕ್ಷಣ, ಪರ ಸಂಸ್ಕೃತಿ, ನಾಗರಿಕತೆ ಈ ಪರಿಕಲ್ಪನೆಗಳು ಅತ್ಯಂತ ಅರ್ಥಪೂರ್ಣವಾದ ಮಾರ್ಗದರ್ಶನವನ್ನು ನೀಡುತ್ತವೆ. ಅವರುಗಳಿಗೆ ಇಡೀ ಸಮಾಜವೇ ಒಂದು ಪ್ರಯೋಗಾಲಯವಾಗಿ ಪರಿಣಮಿಸಿ ಕಲಿಯುವಿಕೆಗೆ ಮತ್ತಷ್ಟು ಒತ್ತು ಕೊಡುತ್ತದೆ. ಶಿಕ್ಷಣ ಹಾಗೂ ಸಂಸ್ಕೃತಿಗಳೆರಡೂ ಸಾಮಾಜಿಕ ಚಲನೆಗೆ ಪ್ರೋತ್ಸಾಹ ನೀಡುವುದಷ್ಟೇ ಅಲ್ಲದೆ ಶಿಕ್ಷಣವು ಜೀವನವನ್ನು ಯಶಸ್ವಿಯಾಗಿ ನಿರ್ವಹಿಸಲು ಪ್ರಪಂಚದಲ್ಲಿ ಯಶಸ್ವಿಯಾಗಿ ಬಾಳಲು ಬೇಕಾಗುವ ಅಭ್ಯಾಸ ಮನೋಧರ್ಮವನ್ನು ದೊರಕಿಸುತ್ತದೆ. ಇವೆರಡರ ಸಮ್ಮಿಲನ (ಸ್ವ ಸಂಸ್ಕೃತೀಕರಣ ಹಾಗೂ ಶಿಕ್ಷಣ)ದಿಂದ ಮಕ್ಕಳ ನಡತೆ ರೂಪಿತವಾಗುತ್ತದೆ. ಶಿಕ್ಷಣವು ಮಾನವನ ಜೀವನವನ್ನು ನಿಯಮಬದ್ಧ ಮತ್ತು ಶಿಸ್ತುಬದ್ಧಗೊಳಿಸುತ್ತದೆ. ಶಿಕ್ಷಣವು ಮಕ್ಕಳಲ್ಲಿ ಸಾಮಾಜಿಕ ಮೌಲ್ಯಗಳನ್ನು ರೂಢಿಸಿ ನಿಯಮಗಳನ್ನು ಪಾಲಿಸಿ ಸಮಾಜಮುಖಿಯನ್ನಾಗಿಸುತ್ತದೆ. ವ್ಯಕ್ತಿ ಮತ್ತು ಸಮಾಜಗಳ ನಡುವೆ ಸಾಮರಸ್ಯವನ್ನು ಏರ್ಪಡಿಸುತ್ತದೆ. ಈ ದಿಕ್ಕಿನಲ್ಲಿ ಸ್ವ–ಸಂಸ್ಕೃತೀಕರಣದ ಪಾತ್ರವೂ ಇದ್ದೇ ಇರುತ್ತದೆ. ಸ್ವ–ಸಂಸ್ಕೃತಿಯಲ್ಲಿ ಕೆಲವು ಸಾಮಾಜಿಕ ಕಟ್ಟಳೆಗಳು ಸಹ ಇರುತ್ತವೆ. ಪ್ರತಿಯೊಬ್ಬ ವ್ಯಕ್ತಿಯಿಂದಲೂ ನಿರೀಕ್ಷಿಸುವ ಪ್ರಮಾಣೀಕೃತ ಸಾಮಾನ್ಯ ನಡವಳಿಕೆಗಳೇ ಸಾಮಾಜಿಕ ಕಟ್ಟಳೆಗಳು ಎನ್ನಿಸುತ್ತವೆ. ಸ್ವ–ಸಂಸ್ಕೃತಿಯಲ್ಲಿ ಇರುವ ಕೆಲವು ನೈತಿಕ ನಿಯಮಗಳೂ ಮಾನವನ ನಡತೆಯನ್ನು ನಿಯಂತ್ರಿಸುತ್ತದೆ. ಇಂತಹ ನೈತಿಕ ನಿಯಮಗಳು ಐಕ್ಯತೆಯನ್ನು ಸಾಧಿಸುತ್ತವೆ. ಒಂದೇ ಬಗೆಯ ಸಂಸ್ಕೃತಿಯನ್ನು ಹೊಂದಿರುವ ಜನಗಳಲ್ಲಿ ಒಂದೇ ಬಗೆಯ ನೈತಿಕ ನಿಯಮಗಳಿರುವುದಲ್ಲದೆ ಎಲ್ಲ ಜನರೂ ಹೆಚ್ಚು ಐಕ್ಯತೆಯಿಂದಿರುತ್ತಾರೆ. ಆತ್ಮೀಯತೆ ಹೆಚ್ಚುತ್ತದೆ. ಪ್ರಮಾಣೀಕೃತವಾದ ನಡವಳಿಕೆಗಳನ್ನು ನಿಗದಿಪಡಿಸಿ ನೆಮ್ಮದಿಯ ಬದುಕಿಗೆ ಸಹಕರಿಸುತ್ತದೆ.

ಕೆಲವೊಮ್ಮೆ ಸ್ವ–ಸಂಸ್ಕೃತಿಯಲ್ಲಿ ಕೆಲವು ನೈತಿಕ ನಿಯಮಗಳು ಮಾನವನ ನಡವಳಿಕೆಯನ್ನು ನಿಯಂತ್ರಿಸುತ್ತವೆ. ಲೋಕಾರೂಢಿಗಳು, ನೈತಿಕ ನಿಯಮಗಳು, ಶೋಭಾಚಾರಗಳೂ ಸಹ ಶಿಕ್ಷಣದಿಂದ ಪ್ರಭಾವಿತವಾಗಿ ಜನಜೀವನಕ್ಕೆ ಪ್ರೋತ್ಸಾಹ ನೀಡಿ ಉತ್ತಮ ಸಮಾಜದ ನಿರ್ಮಾಣಕ್ಕೆ ನಾಂದಿಯಾಗುತ್ತದೆ. ಸಾಮಾನ್ಯ ಸಂಸ್ಕೃತಿ ಪ್ರಕ್ರಿಯೆಗಿರುವ ಪ್ರತಿಯೊಂದು ಲಕ್ಷಣವೂ ಸಹ ಸ್ವ–ಸಂಸ್ಕೃತೀಕರಣಕ್ಕೆ ಇರುತ್ತದೆ.

ಸಂಸ್ಕೃತೀಕರಣವು ಜೀವನಪರ್ಯಂತ ನಡೆಯುವ ಅತ್ಯಂತ ಸಮರ್ಥವಾದ ಒಂದು ಪ್ರಕ್ರಿಯೆ. ಮಾನವ ಮಾಡುವ ಪ್ರತಿಯೊಂದು ಕ್ರಿಯೆಯು ಸ್ವ ಸಂಸ್ಕೃತಿಯಿಂದ ಪ್ರಭಾವಿತವಾಗಿರುತ್ತದೆ. ಸ್ವ ಸಂಸ್ಕೃತಿ ಜನರನ್ನು ಒಂದುಗೂಡಿಸುವ ನಿಶ್ಚಯಾತ್ಮಕ ಪ್ರಕ್ರಿಯೆಯಾಗಿದೆ. ಕೆಲವೊಮ್ಮೆ ಸ್ವ ಸಂಸ್ಕೃತಿಯಲ್ಲೂ ಕೆಲವು ಬದಲಾವಣೆಗಳಾದರೂ ಅಲ್ಲಿನ ಮೂಲ ಸಂಸ್ಕೃತಿಗಳಲ್ಲಿ ಯಾವುದೇ ಬದಲಾವಣೆಗಳು ಸಾಧ್ಯವಿರುವುದಿಲ್ಲ. ಉದಾ: ಕುಟುಂಬದ ನಂಬಿಕೆ, ಮೌಲ್ಯಗಳು, ಪ್ರಾಪಂಚಿಕ ದೃಷ್ಟಿಕೋನ, ಮಕ್ಕಳನ್ನು ಪಾಲಿಸಿ, ಪೋಷಿಸುವ ಬಗೆ ಇದ್ದ ಹಾಗೆಯೇ ಇರುತ್ತವೆ. ಶಿಕ್ಷಣವೂ ಸಹ ಕೆಲವು ಬದಲಾವಣೆಗೆ ಒತ್ತು ಕೊಟ್ಟರೂ ಮತ್ತೆ ಕೆಲವು ಮೂಲ ಸ್ವ–ಸಂಸ್ಕೃತಿ ಹಾಗೇ ಉಳಿಯುತ್ತದೆ. ಉದಾ. ಭಾರತದಲ್ಲಿ ಮನೆಮನೆಗೊಂದು ದೇವರು. ನಮ್ಮ ಮನೆದೇವರು ಅದನ್ನು ಇಲ್ಲಿಯೇ, ಹೀಗೆಯೇ ಪೂಜಿಸಬೇಕೆಂಬ ನಂಬಿಕೆ. ಅವನು Soft ware ಆಗಿರಲಿ ಅಥವಾ ಡಬ್ಬಲ್ ಪಿಹೆಚ್.ಡಿಗಳ ವಿಜ್ಞಾನಿಯಾಗಿರಲಿ ಆ ಸ್ವ ಸಂಸ್ಕೃತಿಕ ನಂಬಿಕೆಗೆ ಅಡ್ಡಿ ಬರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಣ ಜನರಿಗೆ ಸ್ವಲ್ಪ ಸಮಾಧಾನಕರ ರೀತಿಯಲ್ಲಿ ನಡೆದುಕೊಳ್ಳುವಂತೆ ಪ್ರೋತ್ಸಾಹಿಸುತ್ತದೆ. ಅಶಿಕ್ಷಿತರು ಹಲವಾರು ಬಾರಿ ಮನೆದೇವರ ದರ್ಶನಕ್ಕೆ ಹೊರಟರೆ ಸುಶಿಕ್ಷಿತರು ಜೀವನದಲ್ಲಿ ಒಂದೆರಡು ಬಾರಿ ಹೋಗಬಹುದು. ಶಿಕ್ಷಣ ಸ್ವ ಸಂಸ್ಕೃತಿಗೆ ಸಾತ್ ಕೊಡುವಂತಹುದ್ದಾಗಿರುತ್ತದೆ. ಬಲಾತ್ಕಾರ, ಹಿಂಸೆ ಇವುಗಳು ಸ್ವ ಸಂಸ್ಕೃತಿಯಲ್ಲಿದ್ದರೆ ಅದನ್ನು ತಿರಸ್ಕರಿಸಲು ಶಿಕ್ಷಣ ಪ್ರೋತ್ಸಾಹ ನೀಡುತ್ತದೆ.

Digitised by Bharatavani, CIIL

ಶಿಕ್ಷಣವು ಸಂಸ್ಕೃತಿಯಿಂದಾದ ಅನೇಕ ವಸ್ತುಸ್ಥಿತಿಗಳನ್ನು ತಿದ್ದಿ ತೀಡುವ ಪ್ರಕ್ರಿಯೆಯ ಜೊತೆಗೆ ಸಾಂಸ್ಕೃತಿಕ ಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುತ್ತದೆ. ಶಿಕ್ಷಣದ ಮೂಲಕ ಈ ಪರಂಪರೆಯನ್ನು ಉಳಿಸಿ ಬೆಳೆಸಿ ಮುಂದಿನ ಜನಾಂಗಕ್ಕೆ ವರ್ಗಾಯಿಸಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಶಿಕ್ಷಣದ ಮೂಲಕ ಈ ಸಾಂಸ್ಕೃತಿಕ ಮೌಲ್ಯಗಳು ಬೆಳೆದು ಪರಿಪಕ್ವವಾದರೆ ಆತನ ಆತ್ಮವಿಶ್ವಾಸ, ಅಂತರ್‌ಶಕ್ತಿ ವೃದ್ಧಿಯಾಗುತ್ತದೆ. ಆತ್ಮವಿಕಾಸದ ಮುಖಾಂತರ, ಬೌದ್ಧಿಕ ಹಾಗೂ ನೈತಿಕ ಮಟ್ಟ ಹೆಚ್ಚಿ ವ್ಯಕ್ತಿಯು ಅತ್ಯಂತ ಆದರ್ಶವ್ಯಕ್ತಿಯಾಗುತ್ತಾನೆ. ಹೀಗೆ ಸ್ವ–ಸಂಸ್ಕೃತಿ ಹಾಗೂ ಶಿಕ್ಷಣ ಎರಡು ಪ್ರಕ್ರಿಯೆಗಳು ಅತ್ಯಂತ ಸಮರ್ಥವಾಗಿ ಇಡೀ ಸಮಾಜವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ.

–ಹೆಚ್.ಎಂ. ವ.

## ಸ್ವಯಂ–ನಿರ್ವಹಣಾ ತಂತ್ರಗಳು

ಒಂದು ಕೆಲಸವನ್ನು ನಿರ್ವಹಿಸುವುದು ಭವಿಷ್ಯದಲ್ಲಿ ಬೇಕಾಗಿರುವ ಉದ್ದೇಶಗಳನ್ನು ಒಳಗೊಂಡಿರುತ್ತದೆ. ಈ ಉದ್ದೇಶಗಳು ಗುರಿಯನ್ನು ತಲುಪಲು ನಮ್ಮಲ್ಲಿ ಆಸಕ್ತಿ, ಸಂಘಟನೆಯ ಜೊತೆಗೆ ನಮ್ಮನ್ನು ಹುರಿದುಂಬಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಗುರಿಗಳನ್ನು ಹಾಕಿಕೊಳ್ಳುವುದೆಂದರೆ, ಸಾಧ್ಯವಾದ ಮತ್ತು ಸಾಮರ್ಥ್ಯಕ್ಕೆ ಅನುಗುಣವಾದುದನ್ನು ಸಾಧಿಸಲು ಬೇಕಾಗುವ ಉದ್ದೇಶಗಳನ್ನು ಒಂದು ಸಂಘಟನೆ ಅಥವಾ ಒಬ್ಬ ನೌಕರ ರೂಪಿಸಿಕೊಳ್ಳುವುದಾಗಿದೆ.

ಲೋಕೆ (1968) ಇವರ ಪ್ರಕಾರ ಗುರಿಗಳನ್ನು ಹಾಕಿಕೊಳ್ಳುವುದು ಮತ್ತು ಉದ್ದೇಶಿತ ಗುರಿಗಳನ್ನು ತಲುಪಲು ಅಭಿಪ್ರೇರಣೆಯು ಸಾಧನಾ ತಂತ್ರವಾಗಿ ಕೆಲಸ ಮಾಡುತ್ತದೆ. ಇದರ ಮೂಲಕ ಒಂದು ಗುರಿಯನ್ನು ತಲುಪುವಾಗ ಉಂಟಾಗುವ ಮಾನಸಿಕ ಚಟುವಟಿಕೆಗಳು ನಂತರ ಸಾಧಿಸಿದಾಗ ಆ ಚಟುವಟಿಕೆಗಳಲ್ಲಿ ಆಗುವ ಬದಲಾವಣೆಗೆ ಸಂಬಂಧಿಸಿದ್ದಾಗಿದೆ. ಸ್ವ–ಸಾಮರ್ಥ್ಯವು ಒಂದು ಗುರಿಯನ್ನು ಯಶಸ್ವಿಯಾಗಿ ತಲುಪಲು ಬಹಳಷ್ಟು ಸಹಾಯ ಮಾಡುತ್ತದೆ. ಸ್ವ–ಸಾಮರ್ಥ್ಯವೆಂದರೆ ತನ್ನ ಆಂತರಿಕ ಸಾಮರ್ಥ್ಯವನ್ನು ನಂಬಿ ಕಾರ್ಯ ನಿರ್ವಹಿಸುವುದು.

ಈ ಕೆಳಗಿನ ನಾಲ್ಕು ಅಂಶಗಳು ಗುರಿಯನ್ನು ಹಾಕಿಕೊಳ್ಳುವಾಗ ಮತ್ತು ಅದನ್ನು ಯಶಸ್ವಿಯಾಗಿಸುವಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ.

1. ಗುರಿಯ ಸ್ವೀಕಾರ (Goal Acceptance)
2. ನಿರ್ದಿಷ್ಟ ಗುರಿಗಳು (Specific Goals)
3. ಸವಾಲಿನ ಗುರಿಗಳು (Challenging Goals)
4. ಸಾಧನಾ ನಿರ್ವಹಣೆ / ಪುಷ್ಟೀಕರಣ (Performance Monitoring/Feedback)




**ಗುರಿಯ ಸ್ವೀಕಾರ (Goal Acceptance)**

ಪರಿಣಾಮಕಾರಿಯಾದ ಗುರಿಗಳಿಗೆ ಕೇವಲ ಒಪ್ಪಿಗೆ ಅಷ್ಟೇ ಅಲ್ಲದೇ ಜೊತೆಗೆ ಸ್ವೀಕರಿಸುವಿಕೆ ಕೂಡ ಅಗತ್ಯವಾಗಿದೆ. ಸ್ವೀಕರಿಸಿದ ಗುರಿಗಳು ಕೊನೆಯವರೆಗೂ ಅಧಿಕ ಗುಣವುಳ್ಳ ಅಂಶಗಳನ್ನು ನಿಯೋಜಿಸಿ ಗುರಿಯನ್ನು ತಲುಪಲು ಸಹಾಯಕವಾಗುತ್ತವೆ. ಅವು ಜನರಿಗೆ ಕೊನೆಯವರೆಗೂ ತಮ್ಮ ಗುರಿಯ ಅಂಶಗಳನ್ನು ಜೋಡಣೆಮಾಡಿಕೊಳ್ಳಲು ಯಥೇಚ್ಛವಾದ ನಿದರ್ಶನಗಳಿಂದ ಪರಿಹಾರೋಪಾಯಗಳನ್ನು ತಿಳಿಸುತ್ತವೆ.

**ನಿರ್ದಿಷ್ಟ ಗುರಿಗಳು (Specific Goals)**

ಗುರಿಗಳು ಯಾವಾಗಲೂ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಮತ್ತು ಅಳೆಯಲು ಸಾಧ್ಯವಿರಬೇಕು. ನಿರ್ದಿಷ್ಟ ಗುರಿಗಳು ಯಾವಾಗಲೂ ಸಾಮಾನ್ಯ ಗುರಿಗಳಿಗಿಂತ ಅತ್ಯುತ್ತಮವಾಗಿರುತ್ತವೆ. ಉದಾ: ಕಳೆದ ವರ್ಷ ತಲುಪಿದ ಗುರಿಗಿಂತ ಇನ್ನೂ ಹೆಚ್ಚಿನದನ್ನು ಸಾಧಿಸು ಎಂಬುದನ್ನು ಕುರಿತಾಗಿರುತ್ತದೆ.

**ಸವಾಲು ಗುರಿಗಳು (Challenging Goals)**

ಕೊಟ್ಟ ಗುರಿಗಳು ಸರಳವಾಗಿರದೆ ಕಠಿಣವಾಗಿದ್ದಾಗ ಮಾತ್ರ ಬಹಳಷ್ಟು ನೌಕರರು ತುಂಬ ಶ್ರಮವಹಿಸಿ ಕೆಲಸಮಾಡುತ್ತಾರೆ ಎಂಬುದು ಸಂಶೋಧನೆಯಿಂದ ತಿಳಿದುಬಂದಿದೆ.

ಉದಾ: ಶಾಲಾ ವಿದ್ಯಾರ್ಥಿಗಳು ಗಣಿತ, ವಿಜ್ಞಾನ ಮುಂತಾದ ಕೆಲವು ವಿಷಯಗಳನ್ನು ಕಠಿಣವೆಂದು ಭಾವಿಸಿದರೂ ಸಹ ಪರೀಕ್ಷೆಯಲ್ಲಿ ಅತ್ಯುತ್ತಮವಾದ ಅಂಕಗಳನ್ನು ಬೇರೆ ವಿಷಯಗಳಿಗೆ ಹೋಲಿಸಿದಾಗ ಪಡೆದದ್ದು ಕಂಡುಬರುತ್ತದೆ.

Digitised by Bharatavani, CIIL

ಕಠಿಣ ವಿಷಯಗಳಿದ್ದರೂ ಸಹ ಅವುಗಳನ್ನು ವಿದ್ಯಾರ್ಥಿಗಳು ಹಿಂಜರಿಯದೆ ಸವಾಲಾಗಿ ಸ್ವೀಕರಿಸಿ ಯಶಸ್ವಿಯಾಗಲು ಸಾಧ್ಯವಿದೆ.

**ಸಾಧನಾ ನಿರ್ವಹಣೆ / ಪುಷ್ಟೀಕರಣ (Performance Monitoring / Feedback)**

ಸಾಧನಾ ನಿರ್ವಹಣೆ ಮತ್ತು ಪುಷ್ಟೀಕರಣಗಳೆರಡೂ ಒಂದಕ್ಕೊಂದು ಅತ್ಯಂತ ಸಹಸಂಬಂಧ ಹೊಂದಿದಂತಹ ವಿಷಯಗಳಾಗಿದ್ದು ಇವೆರಡು ಗುರಿಗಳನ್ನು ಮುಕ್ತಾಯಗೊಳಿಸುವ ಪ್ರಕ್ರಿಯೆಯಲ್ಲಿ ತಮ್ಮದೇ ಆದಂತಹ ಮಹತ್ತರ ಪಾತ್ರವನ್ನು ವಹಿಸಿವೆ. ಒಬ್ಬ ವಿದ್ಯಾರ್ಥಿಯ ಸಾಧನೆಯನ್ನು ನಿರ್ವಹಣೆ ಮಾಡುವುದೆಂದರೆ ಅವನ ವರ್ತನೆಯನ್ನು ಪರೀಕ್ಷಿಸುವುದು, ನೋಡುವುದು ಅದನ್ನು ಯಾವ ರೀತಿ ವ್ಯಕ್ತಿ ಮಾಡುತ್ತಾನೆಂಬುದನ್ನು ಕುರಿತಾಗಿದೆ. ಇದು ಪರಿಣಾಮಕಾರಿ ಸಂಘಟನೆಯಲ್ಲಿ ಅವನು ನೀಡುವ ಕೊಡುಗೆಯನ್ನು ಮತ್ತು ಅದರ ಗುಣಮಟ್ಟವನ್ನು ನಿರ್ಧರಿಸುತ್ತದೆ.

ಒಬ್ಬ ವ್ಯಕ್ತಿ, ವಸ್ತು ಯೋಜನೆ ಮುಂತಾದವುಗಳು ಯಶಸ್ವಿಯಾಗಿದ್ದಾವೋ ಇಲ್ಲವೋ ಎಂಬುದು ನೌಕರನು ಅವಲೋಕನದ ನಂತರ ಸಾಧನಾ ಪುಷ್ಟೀಕರಣ ಮಾಡಿದಾಗ ಮಾತ್ರ ತಿಳಿದುಬರುತ್ತದೆ. ಒಟ್ಟಿನಲ್ಲಿ ಸಾಧನಾ ಪುಷ್ಟೀಕರಣವು ಒಂದು ಉದ್ದೇಶಿತ ಯೋಜನೆಯು ಅತ್ಯುತ್ತವಾದ ರೀತಿಯಲ್ಲಿ ಯಶಸ್ವಿಯಾಗುವಂತೆ ಮಾಡುವ ಅಥವಾ ಉದ್ದೇಶಿಸುವ ಒಂದು ಸಾಧನವಾಗಿದೆ.

**ಸಾಧನೆ ಮತ್ತು ಚಟುವಟಿಕೆಯಿಂದ ಕೂಡಿದ ಉತ್ತಮ ಗುರಿಗಳು**

ಅತ್ಯುತ್ತಮ ಗುಣಮಟ್ಟದ ಗುರಿಗಳನ್ನು ಸಾಧಿಸುವಲ್ಲಿ SMART ಎಂಬ ತಂತ್ರವು ಈ ಕೆಳಗಿನ ರೀತಿಯಲ್ಲಿ ಬಹು ಮಹತ್ತರವಾದ ಅಂಶವಾಗಿ ಪರಿಗಣಿಸಲ್ಪಡುತ್ತದೆ.

**S-Specific ನಿರ್ದಿಷ್ಟ**

ನಾವು ಯಾರಿಗೂ ನಿನ್ನನ್ನು ಸುಧಾರಣೆ ಮಾಡುತ್ತೇವೆ ಎನ್ನವುದರ ಬದಲು ಯಾವ ಕ್ಷೇತ್ರದಲ್ಲಿ ಹಾಗೂ ಯಾವ ವಿಧಾನದಲ್ಲಿ ಸುಧಾರಿಸುತ್ತೇವೆ ಎನ್ನುವುದನ್ನು ನಿರ್ದಿಷ್ಟವಾಗಿ ತಿಳಿಸಬೇಕು.

**M-Measurable ಅಳೆಯಬಹುದಾದ, ಮಾಪಿಸಬಹುದಾದ**

ಯಾವುದೇ ಗುರಿಯನ್ನು ಸಾಧಿಸಬೇಕಾದರೆ ಅದನ್ನು ಅಳೆಯಲು ಸಾಧ್ಯವಿರಬೇಕು. ಅಂದಾಗ ಮಾತ್ರ ನಿರ್ದಿಷ್ಟ ಗುರಿಯ ಬೆಳವಣಿಗೆಗೆ ಮತ್ತು ಅದನ್ನು ಸಾಧಿಸಲು ಕ್ರಮಿಸಬೇಕಾದ ದಾರಿ, ಸಮಯ ಮುಂತಾದುವುಗಳನ್ನು ತಿಳಿದುಕೊಳ್ಳಲು ಸಾಧ್ಯ. ಇಲ್ಲದಿದ್ದರೆ ಆ ಗುರಿಯ ನಿರ್ದಿಷ್ಟತೆಗೆ ಧಕ್ಕೆ ಬರುತ್ತದೆ.

**A-Attainable – ಸಾಧಿಸುವಂತಿರುವ / ನಿಲುಕುವಂತಿರುವ / ಸಾಧ್ಯವಿರುವ**

ಹಾಕಿಕೊಂಡ ಯಾವುದೇ ಒಂದು ಗುರಿಯು ನಮ್ಮ ಸಾಮರ್ಥ್ಯಕ್ಕೆ ನಿಲುಕುವಂತಿರಬೇಕು ಹಾಗೂ ಸಾಧಿಸುವಂತಿರಬೇಕು.

ಡೆವಿಡ್ ಮೆಕ್ಲಲೆಂಡ್‌ರವರ ಸಾಧನಾ ಅಭಿಪ್ರೇರಣೆಯ ಸಂಶೋಧನೆಯ ಪ್ರಕಾರ ಅತ್ಯುತ್ತಮ ಸಾಧಕರು ಸಾಧ್ಯವಾದಷ್ಟು ಕಠಿಣವಾದ ಗುರಿಗಳನ್ನು ಹಾಕಿಕೊಳ್ಳುತ್ತಾರೆ. ಆದರೆ ಅವು ಸಾಧಿಸುವಂತಿರುತ್ತವೆ. ಅಂದರೆ ಗುರಿಗಳು ಒಬ್ಬ ವ್ಯಕ್ತಿಯ ಸಾಮರ್ಥ್ಯಕ್ಕೆ ಸಾಧನೆಗೆ ನಿಲುಕುವಂತಿರುತ್ತವೆ.

**R-Relevant ಸಮಂಜಸ, ಪ್ರಾಸಂಗೋಚಿತ**

ಸಮಂಜಸವಾದ ಗುರಿಗಳನ್ನು ಹಾಕಿಕೊಳ್ಳುವುದು ನಮ್ಮ ವೃತ್ತಿಕ್ಷೇತ್ರಕ್ಕೆ ಬಹಳ ಮುಖ್ಯವಾದುದು.

**T-Trackable - ಅನುಸರಿಸಬಹುದಾದ ದಾರಿ**

ಮಧ್ಯಂತರ ಗುರಿಗಳನ್ನು ರೂಪಿಸಿ ಅವನ್ನು ಶ್ಲಾಘಿಸುವುದರ ಮೂಲಕ ಜನರ ಪ್ರಗತಿಯನ್ನು ಹೆಚ್ಚಿಸಬಹುದು. ಗುರಿಯನ್ನು ಮುಟ್ಟುವಾಗ ಒಳ್ಳೆಯ ಸಾಧನಾ ಚಟುವಟಿಕೆಯ ಪ್ರಯಾಣದಂತಾದರೆ ತಲುಪಬೇಕಾದ ಗುರಿಯು ಊರಿನಂತೆ. ಕಾರಣ ಗುರಿಯನ್ನು ತಲುಪಬೇಕಾದರೆ ನಮ್ಮ ಕಾರ್ಯಸಮರ್ಥ್ಯವು ಸರಿಯಾದ ದಾರಿಯಲ್ಲಿ ಸಾಗಬೇಕು. ಅಂದಾಗ ಮಾತ್ರ ನಿರ್ದಿಷ್ಟ ಗುರಿಗಳನ್ನು ತಲುಪಲು ಸಾಧ್ಯ.

– ಎಚ್.ಎಂ.ಶೈ.

## ಸಾಂಖ್ಯದರ್ಶನ ಮತ್ತು ಶಿಕ್ಷಣ

ಯಾವುದರ ಮುಖಾಂತರ ನೋಡುವೆವೋ ಅದು ದರ್ಶನ. ನೋಟವು ದರ್ಶನ. ನೋಟಸಾಧನವೂ ದರ್ಶನ. ಈಕ್ಷಣೆಯು ದರ್ಶನ. ಬಾಹ್ಯವಸ್ತುಗಳ ಸಂಪರ್ಕದಿಂದ ಪಂಚೇಂದ್ರಿಯಗಳಿಗಾಗುವ ಅನುಭವವೂ ದರ್ಶನ. ನಾವು ಯಾರು? ಎಲ್ಲಿಂದ ಬಂದಿದ್ದೇವೆ! ಎಲ್ಲಿಗೆ ಹೋಗುತ್ತೇವೆ! ಈ ವಿಶ್ವಸೃಷ್ಟಿಯಾದ ಬಗೆ ಹೇಗೆ? ಹಿಂದೆ ಹೀಗೇ ಇತ್ತೆ! ಮುಂದೆ ಹೀಗೆ ಇರುವುದೇ! ಇದಕ್ಕೆ ಕಾರಣಕರ್ತೃ ಇರುವನೇ! ಇದ್ದರೆ ಅವನಾರು? ಅವನ ಸ್ವರೂಪವೇನು? ಇತ್ಯಾದಿ ನಾನಾ ರೀತಿಯ ಸಂಶಯಗಳನ್ನು ದೂರೀಕರಿಸಿ, ತನ್ನದೇ ಕ್ರಮದಲ್ಲಿ ಸ್ವಾನುಭವವಾಗುವುದು ದರ್ಶನವೇ ಆಗಿದೆ.

ದರ್ಶನಗಳ ವಿಭಾಗಗಳಲ್ಲಿ ಏಕಾಭಿಪ್ರಾಯ ಕಂಡುಬಂದಿಲ್ಲ. ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತೆ ಚಾರ್ವಾಕ, ವೈಭಷಿಕ, ಸೌತ್ರಾಂತಿಕ, ಯೋಗಾಚಾರ ಮತ್ತು ಜೈನ ದರ್ಶನಗಳು, ನಾಸ್ತಿಕ ದರ್ಶನಗಳು ಮತ್ತು ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ ಮತ್ತು ವೇದಾಂತದರ್ಶನಗಳು ಆಸ್ತಿಕ ದರ್ಶನಗಳು.

ಕಪಿಲ ಮಹರ್ಷಿಗಳಿಂದ ಪ್ರವೃತ್ತವಾದ ದರ್ಶನವೇ ಸಾಂಖ್ಯದರ್ಶನ. ಸಂಖ್ಯಾ ಪದದಿಂದ ಸಾಂಖ್ಯ ಎಂಬ ಪದ ಬಂದಿದೆ. ಪ್ರಾರಂಭದಲ್ಲಿ ಎಣಿಕೆಯಿಂದ ಸಂಖ್ಯೆ ಪ್ರಾರಂಭವಾಯಿತು. ಈ ಶಾಸ್ತ್ರದಲ್ಲಿ 25 ತತ್ತ್ವಗಳಲ್ಲಿ ಎಣಿಸಿ ಕೊಟ್ಟಿದೆ. ತತ್ತ್ವಗಳಲ್ಲಿ 25ಕ್ಕಿಂತ ಹೆಚ್ಚು ಇಲ್ಲ. 25ಕ್ಕಿಂತ ಕಡಿಮೆಯೂ ಇಲ್ಲ. ಇಲ್ಲಿ ತತ್ತ್ವ ಎಂದರೆ ಪದಾರ್ಥ. ಹಾಗಾಗಿ ಇದು ಸಾಂಖ್ಯವಾಗಿದೆ. 25 ತತ್ತ್ವಗಳನ್ನು ಪ್ರಕೃತಿ, ವಿಕೃತಿ, ಪ್ರಕೃತಿ–ವಿಕೃತಿ ಹಾಗೂ ಪ್ರಕೃತಿಯೂ ಅಲ್ಲ, ವಿಕೃತಿಯೂ ಅಲ್ಲ, ಎಂಬುದಾಗಿ ವಿಂಗಡಿಸಿ, ಸ್ವರೂಪ ನಿರ್ಣಯವನ್ನು ಮಾಡುತ್ತಾರೆ. ಸಂಖ್ಯೆಯ ವಿವೇಕ ಜ್ಞಾನದಿಂದ ಶುದ್ಧಾತ್ಮನಕತ್ತ್ವದ ಅರಿವು ಉಂಟಾಗುವುದರಿಂದ ಇದು ಸಾಂಖ್ಯದರ್ಶನವಾಗಿದೆ. ಸಾಂಖ್ಯ ಎಂದರೆ ವಿವೇಕಿ ಎಂಬ ಅರ್ಥವೂ ಇದೆ. ಇವರು ನೀಡಿರುವ ತತ್ತ್ವಗಳು ವೈಜ್ಞಾನಿಕವಾಗಿವೆ. ವಿಜ್ಞಾನದಲ್ಲಿ ಮಾಡುವಂತೆ ಒಂದು ಸ್ವಯಂ ಸಿದ್ಧಾಂತವನ್ನು ಒಪ್ಪಿಕೊಂಡು ಸಾಂಖ್ಯರು ಮುಂದುವರೆಯುತ್ತಾರೆ. ಇಲ್ಲದಿದ್ದಲ್ಲಿ ಸೃಷ್ಟಿಯ ಪ್ರಕ್ರಿಯೆಯಲ್ಲಿ ಒಂದು ಮತ್ತೊಂದಕ್ಕೆ ಕಾರಣ ಎಂಬಲ್ಲಿ ಅವವಸ್ಥಾ ಎಂಬ ದೋಷ ಬರುತ್ತದೆ. ಉದಾಹರಣೆಗೆ, ಈಶ್ವರನಿಂದ ವಿಶ್ವ ಸೃಷ್ಟಿಯಾಗಿದೆಯೆಂದು ಒಪ್ಪಿಕೊಂಡರೆ, ಈಶ್ವರ ಸೃಷ್ಟಿಗೆ ಕಾರಣನು ಯಾರು? ಎಂಬ ಪ್ರಶ್ನೆ ಜೀವಂತವಾಗಿರುತ್ತವೆ. ಹಾಗೆಯೇ ಜ್ಞಾನವು ವ್ಯಕ್ತಿಗತವಾಗಿದ್ದು, ಅಪೂರ್ಣವಾಗಿದ್ದು

Digitised by Bharatavani, CIIL

ಸಾಂಖ್ಯದ ಪ್ರಕಾರ ಜಗತ್ತಿನ ವಿಕಾಸವನ್ನು ಈ ರೀತಿ ತೋರಿಸಬಹುದು.




ಸಾಂಖ್ಯದ ನಾಲ್ಕು ಪ್ರಮುಖ ಭಾಗಗಳು




Digitised by Bharatavani, CIIL

ಋಣಾತ್ಮಕವಾಗಿದೆ. ಇದನ್ನು ಹೀಗೆ ಒಪ್ಪದೆ ಜ್ಞಾನವನ್ನು ಪೂರ್ಣವೆಂದು ಒಪ್ಪಿದರೆ ಅಖ್ಯಾತಿ ಎಂಬ ದೋಷ ಬರುತ್ತದೆ. ಈ ರೀತಿ ದೋಷಗಳನ್ನು, ಸತ್ತ್ವ-ರಜಸ್-ತಮಸ್ ಎಂಬ ತ್ರಿಗುಣಗಳನ್ನೂ ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಎಂಬ ಪ್ರಯೋಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಚಾರಮಾಡಿ, ಯಾವುದೋ ಒಂದು ಅರ್ಥವನ್ನು ಉದ್ದೇಶಿಸಿ ತಿಳಿಸುವ ಜ್ಞಾನವೇ ಸಾಂಖ್ಯವಾಗಿದೆ. ದ್ವೈತಿಗಳಾದ ಸಾಂಖ್ಯರು ಜ್ಞಾನಶಾಸ್ತ್ರವಾದಿಗಳು.

ಪ್ರಕೃತಿಯೂ ಮೂಲದಲ್ಲಿದ್ದು, ಇದು ಯಾವುದರಿಂದಲೂ ಹುಟ್ಟಿಲ್ಲ. ಹಾಗಾಗಿ ಪ್ರಧಾನವಾಗಿದೆ. ಇದು ಎಲ್ಲರ ತಾಯಿ. ಇದು ಯಾರ ಮಗಳೂ ಅಲ್ಲ, ಇದು ಸಾಂಖ್ಯರ ಸ್ವಯಂ ಸಿದ್ಧಾಂತ. ಆದರೆ ಪುರುಷನ ಸಾನ್ನಿಧ್ಯದಿಂದಾಗಿ ವಿಶ್ವ ಸೃಷ್ಟಿಯನ್ನು ಅಚ್ಚುಕಟ್ಟಾಗಿ ಮಾಡಿದೆ. ವಿಶ್ವದಲ್ಲಿರುವ ಸಮಸ್ತಕ್ಕೂ ಇದೇ ಮೂಲ. ಇದು ಬಹಳ ಸಂಕೀರ್ಣವಾಗಿದ್ದು, ಸಕ್ರಿಯವಾಗಿದ್ದು, ಚಲನಾತ್ಮಕವಾಗಿದೆ. ಹಾಗಾಗಿ ಇದು ಸ್ಥಳಾಂತರಗೊಳ್ಳುತ್ತದೆ. ಇದು ಸರ್ವವ್ಯಾಪೀ, ಸ್ವತಂತ್ರ್ಯ, ಅವ್ಯಕ್ತ. ಆದ್ದರಿಂದಲೇ ಇದು ಪ್ರಧಾನ. ಇದು ಅಪರಿಮಿತ, ಇದು ಯಾವುದರ ವಿಕೃತಿಯೂ (ಕಾರ್ಯವೂ) ಅಲ್ಲ. ಇದು ವಿಶ್ವಕ್ಕೆ ಉಪಾದಾನ ಕಾರಣ. ಆದ್ದರಿಂದಲೇ ಪ್ರಕೃತಿ ಎಂಬ ನಾಮಧೇಯ.

ಪುರುಷನಾದರೋ ಅಜ, ನಿತ್ಯ ಹಾಗೂ ಸರ್ವವ್ಯಾಪೀ ಸೃಷ್ಟಿಯಲ್ಲಿ ಇವನು ಧ್ಯೇಯಕಾರಣ. ಇವನು ಅನೇಕ, ಸರಳ, ನಿಷ್ಕ್ರಿಯ, ಅಚಲ, ರೂಪಾಂತರ ಹೊಂದದೇ ಇರುವ ಸಾಕ್ಷಿ. ಇವನು ಅಸ್ವತಂತ್ರ. ಆದರೆ ಎಲ್ಲವನ್ನು ನೋಡಬಲ್ಲವನು. ಪ್ರಕೃತಿ ಪುರುಷನ ಸಂಯೋಗದಿಂದ ಜಗತ್ತಿನ ಸೃಷ್ಟಿ. ನಂತರದಲ್ಲಿ ವಿಕಾಸ. ಪ್ರಾರಂಭದ ಹಂತದಲ್ಲಿ ಪ್ರಕೃತಿ ಪುರುಷರ ಸಂಯೋಗದಿಂದ ಮಹತ್ ತತ್ತ್ವ ಉದಯವಾಯಿತು. ಅರ್ಥಾತ್ ಅಚೇತನವಾದ ಪ್ರಕೃತಿ ಮತ್ತು ಚೇತನವಾದ ಪುರುಷನ ಸಾಮೀಪ್ಯದಿಂದ ವ್ಯಕ್ತವಾದದ್ದು ಮಹತ್ ತತ್ತ್ವ ಅಥವಾ ಬುದ್ಧಿ. ಪ್ರಕೃತಿಯಿಂದ ಕಾರ್ಯವಾಗಲು ಪುರುಷನು ಕಾರಣನಾದನು. ಅವ್ಯಕ್ತವಾದ ಈ ಪ್ರಕೃತಿಯು ಮೂಲ ಪ್ರಕೃತಿಯಾಗಿದ್ದು ಯಾವುದೊಂದರ ಕಾರ್ಯವೂ ಆಗದೆ, ಎಲ್ಲದಕ್ಕೂ ಕಾರಣವಾಯಿತು. ಇದು ಅನಾದಿಯಾಗಿದ್ದು, ಹುಟ್ಟದೇ ಇರುವುದರಿಂದ ಯಾವುದರ ವಿಕಾರವೂ (ಕಾರ್ಯವೂ) ಆಗಿಲ್ಲ. ಮಹತ್ ತತ್ತ್ವಕ್ಕೆ ಬುದ್ಧಿತತ್ತ್ವವೆಂದು ಹೆಸರು.

ಸಾಂಖ್ಯರ ಪ್ರಕಾರ ಇದೇ ಅಂತಃಕರಣ. ಬುದ್ಧಿಪೂರ್ವಕವಾಗಿ ಅಹಂಕಾರ ಬರುವುದರಿಂದ, ಅಹಂಕಾರವು ಬುದ್ಧಿತತ್ತ್ವದ ಕಾರ್ಯದ್ರವ್ಯವಾಗಿದೆ. ನಾನು ನನ್ನದು ಎಂಬುದು ಪ್ರಾಮೇರ್ಭಾವವಾಗುತ್ತದೆ. ಸತ್ತ್ವ, ರಜಸ್ ಮತ್ತು ತಮೋ ಗುಣಗಳ ಸಾಮ್ಯಾವಸ್ಥೆಯು ಪ್ರಕೃತಿಯಾಗಿದ್ದು, ಸತ್ತ್ವ-ರಜಸ್ಸುಗಳಲ್ಲಿ ಬುದ್ಧಿ ಪ್ರವೇಶವಾದಾಗ ಮನಸ್ಸು ಪ್ರಾವಿರ್ಭವಿಸುತ್ತದೆ. ಹಾಗೆಯೇ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಎಂಬ ಐದು ಜ್ಞಾನೇಂದ್ರಿಯಗಳೂ (ಬುದ್ಧೀಂದ್ರಿಯಗಳೂ, ವಾಕ್, ಪಾದ, ಪಾಣಿ, ಪಾಯು (ಗುಹ / ಮತ್ತು ಉಪಸ್ಥಾ ಎಂಬ ಐದು ಕರ್ಮೇಂದ್ರಿಯಗಳೂ ವ್ಯಕ್ತವಾಗುತ್ತವೆ. ರಜಸ್ ಮತ್ತು ತಮೋಗುಣಗಳಲ್ಲಿ ಬುದ್ಧಿಪ್ರವೇಶವಾದಾಗ ರೂಪ, ಶಬ್ದ, ಗಂಧ, ರಸ ಮತ್ತು ಸ್ಪರ್ಶ ಎಂಬ ಐದು ತನ್ಮಾತ್ರೆಗಳೂ (ಪ್ರಚ್ಛನ್ನ ಮೂಲಗಳೂ / ಭೂಮಿ, ನೀರು, ತೇಜಸ್, ವಾಯು ಮತ್ತು ಆಕಾಶ ಎಂಬ ಐದು ಭೂತಗಳು ವ್ಯಕ್ತವಾಗುತ್ತವೆ.

ಕಾರಣವೇ ಕಾರ್ಯರೂಪವಾಗಿ ಪರಿಚಯ ಹೊಂದುತ್ತದೆ. ಕಾರ್ಯ-ಕಾರಣಗಳು ಸತ್ತ್ವವಾಗಿವೆ. ಕಾರ್ಯ-ಕಾರಣಗಳಿಗೆ ಅಭೇದ ಸಂಬಂಧವೂ ಇದೆ. ಹಾಲು ಮೊಸರಾಗುತ್ತದೆ. ಹಾಲು ಎಂಬುದು ಕಾರಣ ಮತ್ತು ಮೊಸರು ಎಂಬುದು ಕಾರ್ಯ. ಹಾಲಿನಲ್ಲಿ ಮೊಸರು ಸೂಕ್ಷ್ಮರೂಪದಲ್ಲಿ ಇದೆ. ಬೀಜವೃಕ್ಷ ನ್ಯಾಯದಲ್ಲಿ ಬೀಜದಿಂದ ವೃಕ್ಷವೋ ವೃಕ್ಷದಿಂದ ಬೀಜವೋ ಎಂಬ ಸಂಶಯ ಬಂದರೆ, ಬೀಜದಲ್ಲಿ ವೃಕ್ಷವು ಸೂಕ್ಷ್ಮ ರೂಪದಲ್ಲಿದೆ. ಈ ಉದಾಹರಣೆಗಳಲ್ಲಿ ಹಾಲೆ ಮೊಸರಿನ ರೂಪವನ್ನು ತಾಳುತ್ತದೆ. ಬೀಜವೇ ವೃಕ್ಷದ ರೂಪವನ್ನು ತಾಳುತ್ತದೆ. ಇದನ್ನು ಪರಿಣಾಮವಾದ ಅಥವಾ ಸತ್ಕಾರ್ಯವಾದ ಎನ್ನುತ್ತಾರೆ.

ಸತ್ವ, ರಜಸ್ ತಮೋ ಗುಣಗಳನ್ನೂ ಬಿಳಿ, ಕೆಂಪು ಮತ್ತು ಕಪ್ಪು ಬಣ್ಣಗಳಿಗೂ, ಸುಖ, ದುಃಖ, ಮೋಹಗಳಿಗೂ ಹೋಲಿಸುತ್ತಾರೆ. ಸತ್ವಗುಣವು ಬಹಳ ಲಘುವಾಗಿದ್ದು, ಸ್ವಯಂ ಪ್ರಕಾಶಕವಾಗಿದೆ. ಹಾಗಾಗಿಯೇ ಇದು ಎಲ್ಲರಿಗೂ ಇಷ್ಟವಾಗಿದ್ದು ಆನಂದದಾಯಕವಾಗಿವೆ. ರಜೋ ಗುಣವು ಸ್ವಯಂ ಚಂಚಲವಾಗಿದ್ದು, ತನ್ನ ಸಂಪರ್ಕಕ್ಕೆ ಬಂದ ಸಮಸ್ತವನ್ನು ಚಂಚಲಗೊಳಿಸುತ್ತದೆ. ತಮೋಗುಣವಾದರೋ ಬಹಳ ಭಾರವಾಗಿದ್ದು ಸತ್ವದ ವಿರೋಧಿಯಾಗಿದೆ. ಜಡತ್ವದಿಂದ ಕೂಡಿದ್ದು ನಿಷ್ಕ್ರಿಯತೆಯ ಪ್ರತೀಕವಾಗಿದೆ. ಹಾಗಾಗಿ ಎಲ್ಲರೂ ಮೋಹಗೊಳ್ಳುತ್ತಾರೆ.

ಪುರುಷನು ಯಾವುದಕ್ಕೂ ಪ್ರಕೃತಿಯೂ ಅಲ್ಲ, ವಿಕೃತಿಯೂ ಅಲ್ಲ. ಹೀಗಿದ್ದರೂ ಅನೇಕ ಪುರುಷರಿದ್ದಾರೆ. ಒಬ್ಬನೇ ಪುರುಷನಾದಲ್ಲಿ ನಮ್ಮ ದೈನಂದಿನ ವ್ಯವಹಾರದಲ್ಲಿ ದೋಷ ಕಾಣಿಸುತ್ತದೆ. ಏಕೆಂದರೆ ಇವನು ಸಂಸಾರಿ, ಇವನು ಮುಕ್ತ ಎಂಬ ವ್ಯವಹಾರದಲ್ಲಿ, ಒಬ್ಬನು ಸಂಸಾರಿಯಾದರೆ, ಜಗತ್ತಿನಲ್ಲಿ ಇರುವವರೆಲ್ಲರೂ ಸಂಸಾರಿಗಳಾಗಬೇಕು. ಒಬ್ಬನು ಮುಕ್ತನಾದರೆ, ಜಗತ್ತಿನಲ್ಲಿ ಇರುವವರೆಲ್ಲರೂ ಮುಕ್ತರಾಗಬೇಕಾಗುತ್ತದೆ. ಒಬ್ಬರು ಸುಖವಾಗಿದ್ದರೆ, ಎಲ್ಲರೂ ಸುಖಿಗಳು. ಒಬ್ಬನು ದುಃಖಿಯಾದರೆ ಎಲ್ಲರೂ ದುಃಖಿಗಳು. ಇದು ವ್ಯವಹಾರಕ್ಕೆ ವಿರೋಧವಾಗಿದೆ. ಆದ್ದರಿಂದ ವ್ಯಾವಹಾರಿಕ ಜೀವಾತ್ಮನನ್ನೂ ನಾವು ಪುರುಷನೆಂದೇ ಸಂಬೋಧಿಸುತ್ತಿದ್ದೀವೆಂದು ತಿಳಿಯಬೇಕು. ಈ ದೃಷ್ಟಿಯಲ್ಲಿ ಜೀವಾತ್ಮರು ಅನೇಕರಾದ್ದರಿಂದ ಪುರುಷರು ಅನೇಕರು. ಹಾಗಾಗಿಯೇ ಒಬ್ಬನಿಗೆ ಗೋಚರಿಸುವ ವಸ್ತು ಪ್ರಪಂಚವು, ಮತ್ತೊಬ್ಬರಿಗೆ ಬೇರೆಯದಾಗಿ ಏಕೆ ಕಾಣುತ್ತದೆ? (ಇಲ್ಲಿ ಎಲ್ಲರಿಗೂ ಸಹನೆ ಇರಬೇಕು. ಎಲ್ಲರಿಗೂ ವಿಚಾರವನ್ನು ವಿಶಾಲ ದೃಷ್ಟಿಯಿಂದ ನೋಡುವ ಮನಸ್ಸಿರಬೇಕು. ವಿಚಾರ ವೈಶಾಲ್ಯತೆಯಿಂದಾಗಿ ಹೃದಯ ಶುದ್ಧಿಯಾದರೆ ಅಂತಹವರಿಗೆ ತತ್ತ್ವದರ್ಶನವಾಗುತ್ತದೆ. ಇದರಿಂದ ವಿವೇಕಜ್ಞಾನ ಲಭಿಸುತ್ತದೆ. ಇದು ಮುಕ್ತಿಗೆ ಮಾರ್ಗವಾಗುತ್ತದೆ. ಎಲ್ಲರೂ ಸತತ ಪ್ರಯತ್ನದಿಂದ ಅಂತರ್ದರ್ಶನ ಪಡೆದು ಮುಕ್ತಿಯನ್ನು ಪಡೆಯಬಹುದು)

ಮೂಲಪ್ರಕೃತಿಯಲ್ಲಿ ಸತ್ವ-ರಜ-ತಮೋಗುಣಗಳು ಸಾಮಾನ್ಯಾವಸ್ಥೆಯಲ್ಲಿದ್ದು ಯಾವ ಪರಿಣಾಮವೂ ಗೋಚರಿಸುವುದಿಲ್ಲ. ಬುದ್ಧಿಯಲ್ಲಿ ಸತ್ತ್ವಾಧಿಕ್ಯದಿಂದ ಸೌಖ್ಯ ಲಭಿಸಿದರೆ, ರಜಸ್ಸಿನಿಂದ ದುಃಖವೂ ಮತ್ತು ತಮಸ್ಸಿನಿಂದ ಮೋಹವೂ ಉಂಟಾಗುತ್ತದೆ. ರಜೋಗುಣದಿಂದ ಉಂಟಾಗುವ ದುಃಖದಲ್ಲಿ ಆಧ್ಯಾತ್ಮಿಕ, ಆಧಿದೈವಿಕ ಹಾಗೂ ಆಧಿಭೌತಿಕ ತಾಪತ್ರಯಗಳಿವೆ. ವೈದ್ಯಶಾಸ್ತ್ರ, ನೀತಿಶಾಸ್ತ್ರ ಮತ್ತು ಮಂತ್ರಶಾಸ್ತ್ರಗಳು ದುಃಖದ ನಿವೃತ್ತಿಗೆ ಸಹಾಯ ಮಾಡುತ್ತವೆ. ದುಃಖ ನಿವಾರಣೆಯಾದ ಮೇಲೆ ಸತತ ಪ್ರಯತ್ನಗಳಿಂದ ಪರಿಪೂರ್ಣವಾದ ತತ್ವಜ್ಞಾನ ಲಭಿಸುತ್ತದೆ. ಪ್ರಕೃತಿ-ಪುರುಷರ ವಿವೇಕ ಅರಿವಿನಿಂದ ಅಹಂಕಾರ ನಾಶವಾದಾಗ ಜೀವಾತ್ಮನು ಮುಕ್ತನಾಗುತ್ತಾನೆ. ಬುದ್ಧಿ ಮತ್ತು ಅಹಂಕಾರ ನಾಶಗಳು ಆದಾಗ ಸುಖದುಃಖಾದಿಗಳು ಆತ್ಮನಲ್ಲಿ ತೋರುವುದಿಲ್ಲ. ಆತ್ಮನ ಈ ಶುದ್ಧಾವಸ್ಥೆಯೇ ಮೋಕ್ಷವು. ಮುಕ್ತನಾದವನಿಗೆ ಪ್ರಕೃತಿಯ ಸಂಬಂಧವು ಕಳಚಿಹೋಗಿರುತ್ತದೆ. ತತ್ತ್ವಸಾಕ್ಷಾತ್ಕಾರವಾದ ಮೇಲೆಯೂ ಪ್ರಾರಬ್ಧಕರ್ಮ ಉಳಿದಿದ್ದರೆ ಅವನು ಜೀವನ್ಮುಕ್ತನಾಗುತ್ತಾನೆ. ಪ್ರಾರಬ್ಧಕರ್ಮ ಮುಗಿದುಹೋಗಿದ್ದು ನಂತರ ತತ್ತ್ವ ಸಾಕ್ಷಾತ್ಕಾರವಾದರೆ ಅವನು ವಿದೇಹ ಮುಕ್ತನಾಗುತ್ತಾನೆ.

Digitised by Bharatavani, CIIL

ವೇದಾಂತಿಗಳಲ್ಲಿ ಕೆಲವು ಸಾಂಖ್ಯರು ಲಿಂಗ ಶರೀರವನ್ನೂ ಒಪ್ಪುವುದಿಲ್ಲ. ಜೀವಿತ ಕಾಲದಲ್ಲಿ ಸ್ಥೂಲಶರೀರದಿಂದ ಕಾರ್ಯಗಳಾಗುತ್ತವೆ. ಸತ್ತನಂತರ ಮನಸ್ಸಿನ ಮೂಲಕ ಆತ್ಮನು ಬೇರೆ ದೇಹಕ್ಕೆ ಪ್ರವೇಶಿಸುತ್ತಾನೆ. ಆದರೆ ಮತ್ತೆ ಕೆಲವು ಸಾಂಖ್ಯರು (ಪ್ರಶಸ್ತ ಪಾದಾಚಾರ್ಯರು / 18 ತತ್ತ್ವಗಳ ಲಿಂಗ ಶರೀರವನ್ನು ಒಪ್ಪಿಕೊಳ್ಳುತ್ತಾರೆ) ವೇದಾಂತಿಗಳು 17 ತತ್ತ್ವಗಳ ಲಿಂಗ ಶರೀರವನ್ನು ಒಪ್ಪಿದ್ದಾರೆ. ಇಲ್ಲಿ ಅಹಂಕಾರಕ್ಕೆ ಸ್ಥಾನವಿಲ್ಲ. 18 ತತ್ತ್ವಗಳು ಯಾವುವೆಂದರೆ ಮಹತ್, ಅಹಂಕಾರ, ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಮತ್ತು ಪಂಚತನ್ಮಾತ್ರೆಗಳು, ಸೃಷ್ಟಿಯ ಪ್ರಾರಂಭದಿಂದಲೇ ಒಂದೊಂದು ಲಿಂಗಶರೀರವು ಪ್ರತಿಯೊಬ್ಬ ಆತ್ಮನಿಗೂ ಇದ್ದು, ಇದು ಪ್ರಳಯದ ಕೊನೆಯವರೆವಿಗೂ ಇರುತ್ತವೆ.

ಆಯುರ್ವೇದದಲ್ಲಿ ರೋಗ, ರೋಗಕಾರಣ, ರೋಗನಿವಾರಣ, ರೋಗನಿವಾರಣೋಪಾಯಗಳೆಂಬ ನಾಲ್ಕು ವಿಷಯಗಳಿರುವಂತೆ, ಸಾಂಖ್ಯದಲ್ಲಿ ದುಃಖ, ದುಃಖಕರಣ, ದುಃಖನಾಶ, ದುಃಖನಾಶಕೋಪಾಯಗಳೆಂಬ ನಾಲ್ಕು ವಿಷಯಗಳಿವೆ. ದುಃಖವು ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿ ವೈದಿಕವೆಂದು ಮೂರು ಬಗೆಯಾಗಿದೆ. ಸ್ಥೂಲದೇಹಕ್ಕೆ ಬರುವ ರೋಗ ರುಜಿನಾದಿ ದುಃಖಗಳೂ, ಕಾಮಾದಿಗಳಿಂದ ಮನಸ್ಸಿಗುಂಟಾಗುವ ದುಃಖವೂ ಆಧ್ಯಾತ್ಮಿಕ ದುಃಖವಾಗಿದೆ. ಗಾಳಿ, ಮಳೆ, ಬೆಂಕಿ ಮುಂತಾದವುಗಳಿಂದ ನೈಸರ್ಗಿಕವಾಗಿ ಉಂಟಾಗುವ ದುಃಖಗಳು ಆಧಿ ದೈವಿಕ ದುಃಖವಾಗಿದೆ. ಪ್ರಾಣಿ, ಕೊಲೆ, ಸುಲಿಗೆ ಮುಂತಾದುವುಗಳಿಂದ ಉಂಟಾಗುವ ದುಃಖಗಳು ಆಧಿಭೌತಿಕವಾಗಿರುತ್ತವೆ. ಈ ರೀತಿಯ ದುಃಖನಾಶದಿಂದ ಕೈವಲ್ಯ ಪ್ರಾಪ್ತಿಯಾಗುತ್ತವೆ. ಕೈವಲ್ಯ ಪ್ರಾಪ್ತಿಯ ವಿಷಯದಲ್ಲಿ ಪಂಗು-ಅಂಧನ್ಯಾಯವು ಪ್ರಕೃತಿ-ಪುರುಷರ ಸಂಬಂಧದಿಂದ ಸೃಷ್ಟಿಯಾಗುವಿಕೆಯನ್ನು ತಿಳಿಸುತ್ತದೆ. ಪ್ರಕೃತಿಯು ಭೋಗ್ಯವಸ್ತುವಾಗಿರುವುದರಿಂದ ಇನ್ನೊಬ್ಬ ಭೋಕ್ತೃವನ್ನೂ (ಪುರುಷನನ್ನು ಅಪೇಕ್ಷಿಸುತ್ತದೆ. ಪುರುಷನಿಗೆ ಪ್ರಕೃತಿಯು ತನಗಿಂತ ಬೇರೆ ಎಂಬ ಭೇದಜ್ಞಾನವಿಲ್ಲದಿರುವುದರಿಂದ ಬುದ್ಧಿಯ ಪ್ರತಿಬಿಂಬದಿಂದಾಗಿ ತನ್ನದು ಎಂದು ಭಾವಿಸಿರುವ ದುಃಖತ್ರಯ ನಿವಾರಣೆಗೆ ಕೈವಲ್ಯವನ್ನು ಅಪೇಕ್ಷಿಸುತ್ತಾನೆ. ಪುರುಷನ ಕೈವಲ್ಯಕ್ಕೋಸ್ಕರ ಪ್ರಕೃತಿಯು ಪ್ರವರ್ತಿಸುತ್ತದೆ. ಅಂದರೆ ಪ್ರಕೃತಿ ಪುರುಷರ ಸಂಬಂಧವು ಕುಂಟ-ಕುರುಡರಂತೆ, ಪರಸ್ಪರ ಅಪೇಕ್ಷೆಯನ್ನು ಅವಲಂಬಿಸಿದೆ. ಇದಕ್ಕೆ ಪಂಗು-ಅಂಧನ್ಯಾಯವೆಂದು ಹೆಸರು.

ಒಂದು ದೊಡ್ಡ ಪ್ರಯಾಣಿಕರ ಗುಂಪಿದೆ. ಎಲ್ಲರೂ ಯಾವುದೋ ಪ್ರದೇಶಕ್ಕೆ ಹೋಗಬೇಕಾಗಿದೆ. ಹೀಗೆ ಹೋಗುವಾಗ ಆ ಗುಂಪಿನಲ್ಲಿ ಬೇರೆಯವರ ಸಹಾಯದಿಂದ ಗುಂಪಿನ ಜೊತೆಯಲ್ಲಿಯೇ ಹೋಗುತ್ತಿದ್ದ ಕುಂಟ-ಕುರುಡರು ಅದೃಷ್ಟಹೀನರಾಗಿ ಗುಂಪಿನಿಂದ ಬೇರ್ಪಡುತ್ತಾರೆ. ಭಯಗ್ರಸ್ತರಾಗಿ ಹೇಗೆ ಹೇಗೋ ಬಹಳ ಕಷ್ಟಪಟ್ಟು ನಿಧಾನವಾಗಿ ಎಲ್ಲೆಲ್ಲಿಯೋ ಸುತ್ತಾಡುತ್ತಿರುವಾಗ, ಅದೃಷ್ಟದ ದೆಸೆಯಿಂದ ಎಲ್ಲೋ ಒಂದು ಕಡೆ ಭೇಟಿಯಾಗುತ್ತಾರೆ. ಈಗ ಪರಸ್ಪರ ಒಬ್ಬರಿಗೊಬ್ಬರು ಕೂಡಿಕೊಂಡು, ಕುರುಡನು ಕುಂಟನನ್ನು ತನ್ನ ಹೆಗಲಮೇಲೆ ಕೂರಿಸಿಕೊಳ್ಳುತ್ತಾನೆ. ಕುಂಟನು ದಾರಿತೋರಿಸುತ್ತಾನೆ. ಕುರುಡನು ಮುಂದೆ-ಮುಂದೆ ಹೋಗುತ್ತಾನೆ. ಇಬ್ಬರೂ ತಾವು ಸೇರಬೇಕಾಗಿದ್ದ ಸ್ಥಳಕ್ಕೆ ಹೋಗಿ ಸೇರುತ್ತಾರೆ. ಇದರಂತೆಯೇ ಅಂಧನಂತಿರುವ ಪ್ರಕೃತಿಯು ಕುಂಟನಂತಿರುವ ಪುರುಷನೊಡಗೂಡಿ ಆದಿಯಲ್ಲಿ ಸೃಷ್ಟಿಯೂ, ಅಂತ್ಯದಲ್ಲಿ ಪ್ರವಲ್ಯವೂ ಉಂಟಾಗುತ್ತದೆ.

ಆಧುನಿಕ ಶಿಕ್ಷಣಶಾಸ್ತ್ರದಲ್ಲಿ ಸಾಂಖ್ಯದರ್ಶನದ ಮಾರ್ಗಗಳು ಅತ್ಯಂತ ಸೂಕ್ತವಾಗಿರುವಂತೆ ಕಾಣುತ್ತದೆ. ಆಧುನಿಕ ಭೌತಶಾಸ್ತ್ರದಲ್ಲಿ ಶಕ್ತಿ ಮತ್ತು ದ್ರವ್ಯಗಳಿಂದ ಈ ವಿಶ್ವ ಸೃಷ್ಟಿಯಾಗಿದೆ. ಶಕ್ತಿಯನ್ನೂ ದ್ರವ್ಯವನ್ನಾಗಿ, ದ್ರವ್ಯವನ್ನೂ ಶಕ್ತಿಯನ್ನಾಗಿ ಮಾಡಲು ಸಾಧ್ಯವಿದೆ. ಇದು ಅದ್ವೈತ ವೇದಾಂತವಾಗುತ್ತದೆ. ಸಾಂಖ್ಯರು ದ್ವೈತವಾದಿಗಳು. ಆದ್ದರಿಂದ ಅದ್ವೈತಕ್ಕಿಂತ ಒಂದು ಹಂತ ಹಿಂದೆ ವಿಚಾರ ಮಾಡಿರುತ್ತಾರೆಂದೇ ತಿಳಿಯಬೇಕಾಗಿದೆ. ಈ ಹಂತದಲ್ಲಿ ವಿಚಾರ ಮಾಡಿದಾಗ ಕಾರಣವಾದ ಶಕ್ತಿಯೇ ಕಾರ್ಯರೂಪವಾಗಿ ಅರ್ಥಾತ್ ದ್ರವ್ಯರೂಪವಾಗಿ (ರೂಪಾಂತರ) ಪರಿಣಾಮ ಹೊಂದುತ್ತದೆ ಎಂಬುದು ನೂರಕ್ಕೆ ನೂರು ಸತ್ಯವಾಗಿದೆ. ಈ ವಿಷಯದಲ್ಲಿ ಆಧುನಿಕ ಭೌತಶಾಸ್ತ್ರಜ್ಞರೂ, ಸಾಂಖ್ಯರು ಸರಿಸಮನಾಗುತ್ತಾರೆ. ಹಾಗೆಯೇ ಈ ಜಗತ್ತು ತನ್ನ ಸ್ವರೂಪದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದು ಅಥವಾ ಮಾಡಿಕೊಳ್ಳದಿರಬಹುದು. ಉದಾಹರಣೆಗೆ ಚಿನ್ನದಿಂದ ಯಾವ ರೀತಿಯ ಆಭರಣಗಳನ್ನಾದರೂ ಮಾಡಬಹುದು. ಬೇರೆ ಬೇರೆ ಆಭರಣಗಳು ಬೇರೆ ಬೇರೆ ರೀತಿಯಾಗಿ ತೋರುತ್ತವೆ. ಪುನಃ ಇವುಗಳನ್ನು ಕರಗಿಸಿದಾಗ ಮೊದಲಿನ ಚಿನ್ನವೇ ದೊರೆಯುತ್ತದೆ. ಹಾಗೆಯೇ ಹಾಲನ್ನೂ ತೆಗೆದುಕೊಂಡರೆ ಇದರಿಂದ ಕೆನೆ, ಮೊಸರು, ಬೆಣ್ಣೆ, ತುಪ್ಪ ಇವುಗಳನ್ನು ಪಡೆಯಬಹುದಾಗಿದೆ. ಆದರೆ ತುಪ್ಪದಿಂದ ಬೆಣ್ಣೆಯನ್ನಾಗಲೀ, ಬೆಣ್ಣೆಯಿಂದ ಮೊಸರನ್ನಾಗಲಿ, ಮೊಸರಿನಿಂದ ಹಾಲನ್ನಾಗಲೀ ಪಡೆದುಕೊಳ್ಳಲು ಸಾಧ್ಯವಿಲ್ಲ. ಮತ್ತೊಂದು ಉದಾಹರಣೆಗೆ ಸೀಮೆಸುಣ್ಣವನ್ನು ತೆಗೆದುಕೊಂಡರೆ, ಇದೊಂದು ಸಂಯುಕ್ತವಸ್ತು. ಇದರಲ್ಲಿ ಕ್ಯಾಲ್ಸಿಯಂ, ಇಂಗಾಲ ಮತ್ತು ಆಮ್ಲಜನಕವಿದೆ. ಇದರ ಸಂಕೇತ $Caco_3$, ಸೀಮೆಸುಣ್ಣವನ್ನೂ ಪುಡಿಮಾಡಿದಾಗ ಕ್ಯಾಲ್ಸಿಯಂ ಅಥವಾ ಇಂಗಾಲ ಅಥವಾ ಆಮ್ಲಜನಕವನ್ನು ಪಡೆಯಲಾಗುವುದು. ಆದರೆ ಮೂಲವಸ್ತುಗಳು ಎಲ್ಲಿದ್ದರೂ, ಹೇಗಿದ್ದರೂ ತಮ್ಮ ತಮ್ಮ ಸ್ವಭಾವಗಳನ್ನು ಕಳೆದುಕೊಳ್ಳುವುದಿಲ್ಲ. ಆಧುನಿಕ ವಿಜ್ಞಾನದ ಎಲ್ಲಾ ವಿಭಾಗಗಳು, ತಾಂತ್ರಿಕವಿಜ್ಞಾನದ ಎಲ್ಲಾ ವಿಭಾಗಗಳು ಮುಂದುವರಿಯಲು ಸಾಧ್ಯವಾಗಿದೆ. ಮೂಲವಸ್ತುಗಳು ಅಥವಾ ಮೂಲಕಣಗಳು ತಮ್ಮತನವನ್ನು ಕಳೆದುಕೊಂಡಿದ್ದರೆ ಜಗತ್ತಿನ ಸೃಷ್ಟಿಯೇ ಸಾಧ್ಯವಿರಲಿಲ್ಲ. ಈ ಕ್ರಮದಲ್ಲಿಯೇ ಸಾಂಖ್ಯರು ಹೇಳಿರುವ 15 ತತ್ತ್ವಗಳನ್ನು ವಿಚಾರಮಾಡಬಹುದಾಗಿದೆ. ಸಾಂಖ್ಯರ ತಾರ್ಕಿಕವಿಧಾನ, ವಿಮರ್ಶನಾವಿಧಾನ, ದೃಷ್ಟಾಂತಗಳ ವಿಧಾನ, ನ್ಯಾಯಗಳ ವಿಧಾನ ಶಿಕ್ಷಣ ಶಾಸ್ತ್ರಕ್ಕೆ ಅತ್ಯಂತ ಆವಶ್ಯಕವಾಗಿರುವ ವಿಧಾನಗಳಿವೆ.

-ಸಿ.ಗು.ಮೂ.

## ಸಾಂಸ್ಕೃತಿಕ ಕಟ್ಟಳೆಗಳು ಮತ್ತು ಶಿಕ್ಷಣ

ಸಮಾಜದ ಹಲವಾರು ಮುಖಗಳನ್ನು ಲೋಕರೂಢಿಗಳು, ಸಂಪ್ರದಾಯಗಳು ಮತ್ತು ನೈತಿಕ ನಿಯಮಗಳು ಪ್ರತಿನಿಧಿಸುತ್ತವೆ. ಸಾಮಾಜಿಕ ಮಾದರಿಗಳು ಗುಂಪಿನ ವರ್ತನೆಯ ಸ್ತರಗಳನ್ನು ಪ್ರತಿನಿಧಿಸುತ್ತವೆ. ವೈಯಕ್ತಿಕ ವರ್ತನೆಯು ವೈಯಕ್ತಿಕ ಮಾದರಿಯು ಇತಿ ಮಿತಿಗೊಳಪಟ್ಟಿರುತ್ತದೆ. ಮಾದರಿಗಳು ನೀಲನಕ್ಷೆಗಳಾಗಿರುತ್ತವೆ. ಅವು ಸಾಮಾಜಿಕ ಜೀವನದ ನಿಯಮಗಳಾಗಿವೆ. ಅವು ವರ್ತನೆಯನ್ನು ನಿರ್ಣಯಿಸುತ್ತವೆ ಮತ್ತು ನಿರ್ದೇಶಿಸುತ್ತವೆ. ಮಾನವ ಸಂಘ ಜೀವಿ. ಆತನು ಜೀವಿಸುವ ಸಮಾಜದಲ್ಲಿ ಅನೇಕ ರೀತಿಯ ಸಂಪ್ರದಾಯಗಳು ಲೋಕಾರೂಢಿ ಮತ್ತು ನೈತಿಕ ನಿಯಮಗಳು ಆತನ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಅದೇ ರೀತಿಯಾಗಿ ಅನೌಪಚಾರಿಕ ಸಾಮಾಜಿಕ ನಿಯಂತ್ರಣ ಶಕ್ತಿಗಳು ಸಮಾಜದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಪರಂಪರಾನುಗತ ಗ್ರಾಮೀಣ ಸಮುದಾಯ ಮತ್ತು ಆದಿವಾಸಿ ನೆಲೆಗಳಲ್ಲಿ ಸಂಪ್ರದಾಯ, ಲೋಕಾರೂಢಿ ಮತ್ತು ನೈತಿಕ ನಿಯಮಗಳ ಪಾತ್ರವು

Digitised by Bharatavani, CIIL

ಗಮನಾರ್ಹವಾಗಿರುತ್ತದೆ. ಪ್ರಾಚೀನ ಕಾಲದಿಂದಲೂ ನಮ್ಮೊಂದಿಗೆ ಬೆಳೆದುಕೊಂಡು ಬಂದಿರುವ ಈ ಸಾಮಾಜಿಕ ನಿಯಮಗಳನ್ನು ಸಮಾಜದ ಸಂಪೋಷಣಾಶಕ್ತಿಗಳೆಂದು ಕರೆಯಲಾಗುತ್ತದೆ.

**ಸಂಪ್ರದಾಯ ಅಥವಾ ಪದ್ಧತಿ (Custom) :** ನಮ್ಮ ದೈನಂದಿನ ಜೀವನದಲ್ಲಿ ಬಟ್ಟೆ ಬರೆಗಳನ್ನು ಧರಿಸುವದು, ಊಟ ಮಾಡುವುದು, ಮಕ್ಕಳ ಪಾಲನೆ ಪೋಷಣೆ, ಹಿರಿಯರಿಗೆ ಮನ್ನಣೆ ನೀಡುವುದು, ಧಾರ್ಮಿಕ ಕ್ರಿಯಾ ವಿಧಾನಗಳ ಆಚರಣೆ, ವಿವಾಹ, ಅಂತ್ಯ ಸಂಸ್ಕಾರ ಮುಂತಾದ ಚಟುವಟಿಕೆಗಳನ್ನು ಕೆಲವೊಂದು ಕ್ರಮ ಹಾಗೂ ನಿಯಮಗಳಿಗೆ ಅನುಗುಣವಾಗಿ ಪೂರೈಸಿಕೊಳ್ಳುತ್ತೇವೆ. ಸಮಾಜವು ಕೆಲವೊಂದು ವರ್ತನೆಗಳನ್ನು ನಮ್ಮಿಂದ ಅಪೇಕ್ಷಿಸುತ್ತದೆ. ಅವುಗಳಿಗೆ ಅನುಗುಣವಾಗಿ ನಾವು ವರ್ತಿಸಬೇಕಾಗುತ್ತದೆ. ಈ ರೀತಿಯ ಸಾಮಾಜಿಕ ಬಯಕೆಗಳಿಗೆ ಅನುಗುಣವಾಗಿ ವರ್ತಿಸುವುದನ್ನೇ ಪದ್ಧತಿ ಅಥವಾ ಸಂಪ್ರದಾಯಗಳು ನಮಗೆ ತಿಳಿಸಿಕೊಡುತ್ತವೆ. ದೀರ್ಘ ಕಾಲದಿಂದಲೂ ನಾವು ಆಚರಿಸುತ್ತ ಬಂದಿರುವ ವಿಧಿ ವಿಧಾನಗಳೇ ಸಂಪ್ರದಾಯಗಳು. ಸಂಪ್ರದಾಯದ ಬಗೆಗೆ ಕೆಲವೊಂದು ವ್ಯಾಖ್ಯೆಗಳು ಈ ರೀತಿಯಾಗಿವೆ:

**ಆಂಡರ್‌ಸನ್ ಮತ್ತು ಪಾರ್ಕರ್:** "ನಾವು ಅನುಸರಿಸುತ್ತಲಿರುವ ಏಕರೂಪದ ಅಂಗೀಕೃತ ವರ್ತನೆಗಳೇ ಸಂಪ್ರದಾಯಗಳು. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗಿಬಂದಿರುವ ಇಂಥ ಪರಂಪರೆಗಳನ್ನು ಸಾಮಾಜಿಕ ಒಪ್ಪಿಗೆಯಿಂದ ಪರಿಣಾಮಕಾರಿಯನ್ನಾಗಿ ಮಾಡಲಾಗುತ್ತದೆ."

**ಗಿನ್ಸ್‌ಬರ್ಗ್ :** "ಸಾಮಾಜಿಕ ವರ್ತನೆಗಳಿಗೆ ಆಧಾರಗಳಾದ ಸಂಪ್ರದಾಯಗಳು ಪುನರಾವರ್ತನೆಗೊಳ್ಳುತ್ತ ಬಂದಿರುವ ಸಾಮಾಜಿಕ ಅಭ್ಯಾಸಗಳು."

**ಮೆಕೈವರ್ ಮತ್ತು ಪೇಜ್ :** ಸಾಮಾಜಿಕವಾಗಿ ಸ್ವೀಕೃತವಾದ ಆಚರಣೆಯ ಮಾರ್ಗಗಳೇ ಸಂಪ್ರದಾಯಗಳು. ಸಂಪ್ರದಾಯಗಳು ಕೇವಲ ಅಭ್ಯಾಸ ಅಥವಾ ಚಟಗಳಾಗಿರದೆ ನಿಯಮ ಮತ್ತು ಕ್ರಮಗಳಾಗಿರುತ್ತವೆ. ಇಂಥ ನಿಯಮಗಳ ಬಗೆಗೆ ಜನರಲ್ಲಿ ಹೆಚ್ಚಿನ ಭಾವನಾತ್ಮಕ ಸಂಬಂಧಗಳು ಬೆಳೆದು ಬಂದಿರುತ್ತವೆ. ಸಂಪ್ರದಾಯಗಳನ್ನು ಉಲ್ಲಂಘನೆ ಮಾಡಲು ಯಾರೂ ಬಯಸಲಾರರು. ಪ್ರತಿಯೊಬ್ಬ ವ್ಯಕ್ತಿ ಸಮೂಹವನ್ನವಲಂಬಿಸಿಯೇ ಬದುಕಬೇಕಾಗುವುದರಿಂದ ಅದರ ಬಗೆಗೆ ವ್ಯಕ್ತಿಯಲ್ಲಿ ಅಪಾರ ಗೌರವಾದರಗಳು ಕಂಡು ಬರುತ್ತವೆ. ಈ ಎಲ್ಲ ಕಾರಣಗಳಿಂದ ಜನರು ಸಮೂಹದ ಬಯಕೆಗಳಾದ ಸಂಪ್ರದಾಯಗಳಿಗೆ ಬದ್ಧರಾಗಿ ಬದುಕಲು ಬಯಸುತ್ತಾರೆ. ಸಂಪ್ರದಾಯಗಳನ್ನು, ದೀರ್ಘಕಾಲದವರೆಗೂ ಕಾಯ್ದುಕೊಂಡು ಬರಲಾಗುತ್ತದೆ. ಸಂಪ್ರದಾಯದ ಪ್ರಮುಖ ಲಕ್ಷಣಗಳನ್ನು ಈ ರೀತಿಯಾಗಿ ಅಧ್ಯಯನ ಮಾಡಬಹುದಾಗಿದೆ:

**ಸಂಪ್ರದಾಯಗಳು ಸಾಮಾಜಿಕ ನಿರೀಕ್ಷೆಗಳಾಗಿವೆ: (Customs are social expectations) :** ಸಾಮಾಜಿಕ ವರ್ತನೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಸಂಪ್ರದಾಯಗಳೆಂದು ಕರೆಯಲಾಗುತ್ತದೆ. ಪ್ರತಿಯೊಂದು ಸಮೂಹವು ತನ್ನದೇ ಆದ ಕೆಲವೊಂದು ನಿಯಮ, ಕ್ರಮ, ವಿಧಿ-ವಿಧಾನ ಹಾಗೂ ವರ್ತನಾಂಶಗಳನ್ನು ಹೊಂದಿರುತ್ತದೆ. ಪ್ರತಿಯೊಬ್ಬ ವ್ಯಕ್ತಿ ತಾನು ಮನ್ನಿಸಿದ ಹಾಗೂ ಅಂಗೀಕರಿಸಿದ ನಿಯಮಗಳಿಗೆ ತಕ್ಕಂತೆ ವರ್ತಿಸಬೇಕೆಂದು ಸಮೂಹವು ಬಯಸುತ್ತದೆ. ಸಾಮೂಹಿಕ ಬಯಕೆಗೆ ಅನುಗುಣವಾಗಿ ಎಲ್ಲ ಸದಸ್ಯರು ವರ್ತನೆ ಮಾಡಲೇಬೇಕಾಗುತ್ತದೆ. ಸಂಪ್ರದಾಯಗಳನ್ನು ವಿರೋಧಿಸುವ ವ್ಯಕ್ತಿಯನ್ನು ಸಮಾಜಬಾಹಿರ ವ್ಯಕ್ತಿಯೆಂದು ದೂಷಿಸಲಾಗುತ್ತದೆ.

**ಸಂಪ್ರದಾಯಗಳು ವೈವಿಧ್ಯಮಯವಾಗಿರುತ್ತವೆ: (Customs are variable) :** ವಿವಾಹ, ಅಂತ್ಯ ಸಂಸ್ಕಾರ, ಅತಿಥಿ ಸತ್ಕಾರ, ಕುಟುಂಬ ರಚನೆ ಮುಂತಾದ ಸಂದರ್ಭಗಳಲ್ಲಿ ಆಚರಿಸುವ ಸಂಪ್ರದಾಯಗಳು ಸಮೂಹದಿಂದ ಸಮೂಹಕ್ಕೆ ಭಿನ್ನವಾಗಿರುವುದನ್ನು ಗಮನಿಸುತ್ತೇವೆ. ವೀರಶೈವರಲ್ಲಿ ಮೃತ ದೇಹವನ್ನು ಹೂಳುವ ಪದ್ಧತಿ ಇದೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮೀಯರು ಇದೇ ವಿಧಾನವನ್ನು ಅನುಕರಣೆ ಮಾಡುತ್ತಾ ಬಂದಿರುತ್ತಾರೆ. ಬ್ರಾಹ್ಮಣರು ಮತ್ತು ವಿಶ್ವಕರ್ಮರು ಮೃತದೇಹಕ್ಕೆ ಅಗ್ನಿ ಸಂಸ್ಕಾರ ಕೊಡುವುದನ್ನು ಕಾಣುತ್ತೇವೆ. ವಿವಾಹ ಪದ್ಧತಿಯ ಕ್ರಿಯಾವಿಧಾನಗಳು ಜಾತಿ – ಜಾತಿಯಲ್ಲಿ ಧರ್ಮ-ಧರ್ಮಗಳಲ್ಲಿ ವೈವಿಧ್ಯಮಯವಾಗಿರುವುದನ್ನು ಕಾಣುತ್ತೇವೆ.

**ಸಂಪ್ರದಾಯಗಳು ಸಾರ್ವತ್ರಿಕವಾಗಿರುತ್ತವೆ: (Customs are Universal) :** ಪ್ರತಿಯೊಂದು ಸಮೂಹವು ಒಂದಿಲ್ಲೊಂದು ಪ್ರಕಾರದ ಸಂಪ್ರದಾಯಗಳನ್ನು ಹೊಂದಿರಲೇಬೇಕು. ಒಂದು ತಲೆಮಾರಿಗೆ ಸಂಬಂಧಿಸಿದ ಜನರು ಹಲವಾರು ರೀತಿ ನೀತಿಗಳನ್ನು ಕ್ರಮನಿಯಮಗಳನ್ನು ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡುತ್ತಾರೆ. ಇದು ಹಿರಿಯರು ಮಾಡುತ್ತಾ ಬಂದಿರುವ ರೀತಿ ಎಂದು ಎಲ್ಲರೂ ಅದಕ್ಕೆ ಅನುಗುಣವಾಗಿ ವರ್ತಿಸಲು ಬಯಸುತ್ತಾರೆ. ಸಂಪ್ರದಾಯದಲ್ಲೇ ಇಲ್ಲದ ಸಮೂಹಗಳು ಎಂದಿಗೂ ಕಂಡು ಬರದು. ಸಮಯ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಸಂಪ್ರದಾಯಗಳಲ್ಲಿ ಮಾರ್ಪಾಡನ್ನು ಕಾಣಬಹುದೇ ಹೊರತು ಅವಿಲ್ಲದ ಸಮಾಜವನ್ನು ಊಹಿಸಲು ಸಾಧ್ಯವಿಲ್ಲ.

**ಸಂಪ್ರದಾಯಗಳ ಉಗಮವನ್ನು ಗುರುತಿಸುವುದು ಸಾಧ್ಯವಿಲ (Difficult to trace the origin of customs) :** ಅನೇಕ ಸಮಾಜಶಾಸ್ತ್ರಜ್ಞರು ಸಂಪ್ರದಾಯಗಳ ಉಗಮದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದಾರೆ. ಹೆನ್ರಿಮೇನ್, ಸಿಗ್ಮಂಡ್ ಫ್ರಾಯಿಡ್ ಹಾಗೂ ವಿಲಿಯಂ ಮ್ಯಾಕ್ಡುಗಲ್ ಮೊದಲಾದವರು ಅಭಿಪ್ರಾಯಪಟ್ಟಿರುವಂತೆ ಸಂಪ್ರದಾಯಗಳ ಉಗಮವನ್ನು ಕುರಿತಂತೆ ಆಲೋಚನೆ ಮಾಡುವುದೆಂದರೆ ಮಾನವ ಸಮಾಜದ ಉಗಮದ ಬಗೆಗೆ ವಿಚಾರ ಮಾಡಿದಂತೆಯೇ ಸರಿ. ವಿಲಿಯಂ ಮ್ಯಾಕ್ಡುಗಲ್ ಸಂಪ್ರದಾಯಗಳ ಉದ್ದೇಶ ಮತ್ತು ಗುರಿಗಳು ಕಾಲಗರ್ಭದಲ್ಲಿ ಕಣ್ಮರೆಯಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾನೆ. ಸಂಪ್ರದಾಯಗಳ ಉಗಮಕ್ಕೆ ಯಾವುದೇ ವಿಶಿಷ್ಟ ಕಾರಣವನ್ನು ಹುಡುಕುವುದು ಸಾಧ್ಯವಿಲ್ಲ. ಹಲವಾರು ಕಾರಣಗಳಿಂದ ಮಾನವನ ವಿವಿಧ ರೀತಿಯ ಬೇಡಿಕೆಗಳ ಪೂರೈಕೆಗಾಗಿ ವಿವಿಧ ಪ್ರಕಾರದ ಸಂಪ್ರದಾಯಗಳು ಜನ್ಮತಾಳಿವೆ ಎಂದು ಮಾತ್ರ ಹೇಳಬಹುದಾಗಿದೆ.

**ಸಂಪ್ರದಾಯಗಳಿಗೆ ನಿರ್ದಿಷ್ಟ ಗುರಿಯಿರುತ್ತದೆ: (Customs are goal oriented) :** ಸಮೂಹಗಳ ಪ್ರಗತಿ, ಸಾಮೂಹಿಕ ವರ್ತನೆಗಳನ್ನು ಸುಗಮಗೊಳಿಸುವುದು ಮತ್ತು ಮಾರ್ಗದರ್ಶನ ನೀಡುವುದು, ಜನರ ಚಟುವಟಿಕೆಗಳ ಮೇಲೆ ಹತೋಟಿಯನ್ನು ತರುವುದು ಮುಂತಾದ ಕಾರಣಗಳಿಂದ ಸಂಪ್ರದಾಯಗಳು ಜನ್ಮ ತಾಳಿರುತ್ತವೆ. ವಿಚಾರ ಮತ್ತು ವಿವೇಕಗಳಿಲ್ಲದೆ ಸಂಪ್ರದಾಯಗಳು ಆಚರಣೆಯಲ್ಲಿ ಬಂದಿಲ್ಲ. ಜನರ ಅನುಕೂಲಕ್ಕಾಗಿ ಹಾಗೂ ಕಲ್ಯಾಣಕ್ಕಾಗಿ ಸಂಪ್ರದಾಯಗಳ ಆಚರಣೆಯನ್ನು ಗಮನಿಸುತ್ತೇವೆ. ಕೆಲವೊಂದು ಸಂಪ್ರದಾಯಗಳು ಶುಷ್ಕಾಚಾರ, ಕಂದಾಚಾರಗಳಾಗಿ ಕಂಡು ಬರಬಹುದು. ಇದರರ್ಥ, ಎಲ್ಲ ಸಂಪ್ರದಾಯಗಳೂ ವ್ಯರ್ಥ ಮತ್ತು ವಿನಾಕಾರಣ ಆಚರಣೆಯಲ್ಲಿವೆಯೆಂದು ಹೇಳಲು ಬರಲಾರದು.


Digitised by Bharatavani, CIIL

7. **ಸಂಪ್ರದಾಯಗಳು ಪರಿವರ್ತನಾಶೀಲವಾಗಿರುತ್ತವೆ : (Customs are dy namil)** ಸಾಮಾಜಿಕ ಪರಿವರ್ತನೆಯೊಂದಿಗೆ ಕೆಲವೊಂದು ಅಹಿತಕಾರಿ, ಕ್ರೂರ ಹಾಗೂ ಅರ್ಥಹೀನವಾದ ಸಂಪ್ರದಾಯಗಳನ್ನು ಕೈ ಬಿಡುತ್ತ ಬಂದಿದ್ದೇವೆ. ಶೈಕ್ಷಣಿಕ ಪ್ರಗತಿ, ನಗರೀಕರಣ, ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ, ಔದ್ಯೋಗೀಕರಣ ಮುಂತಾದ ಪರಿಣಾಮಗಳಿಂದ ಜನರಲ್ಲಿ ವಿಮರ್ಶಾತ್ಮಕ ದೃಷ್ಟಿ ಹಾಗೂ ಚಿಕಿತ್ಸಕ ಬುದ್ಧಿಗಳು ಹೆಚ್ಚುತ್ತಲೇ ಇವೆ. ಹಿಂದಿನ ಜನರಂತೆ ಆಧುನಿಕ ಜನಾಂಗದ ಜನರು ಪ್ರತಿಯೊಂದು ನಿಯಮ ಹಾಗೂ ಪದ್ಧತಿಯನ್ನು ವಿಚಾರ ಹಾಗೂ ವಿಮರ್ಶೆ ಮಾಡದೆ ಆಚರಿಸಲಾರರು. ತಮಗೆ ಅನುಕೂಲಕರ ಹಾಗೂ ಹಿತಕರವಾದ ಸಂಪ್ರದಾಯಗಳನ್ನು ಮಾತ್ರ ಅನುಕರಣೆ ಮಾಡಲು ಜನರು ಬಯಸುತ್ತಾರೆ. ಸತಿ ಸಹಗಮನ, ದೇವದಾಸಿ ಪದ್ಧತಿ, ವಿಧವಾ ಮರು ವಿವಾಹ ಮೇಲೆ ನಿರ್ಬಂಧನೆ, ಅಸ್ಪೃಶ್ಯತೆ, ಮಡಿ ಮೈಲಿಗೆ ಮುಂತಾದ ಪದ್ಧತಿಗಳು ದಿನಕಳೆದಂತೆ ಕಣ್ಮರೆಯಾಗುತ್ತಿರುವುದನ್ನು ಕಾಣುತ್ತೇವೆ. ಕೆಲವೊಂದು ಸಂಪ್ರದಾಯಗಳಿಗೆ ಆಧುನಿಕತೆಯ ರೂಪ ಕೊಟ್ಟು ಅವುಗಳಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಲಾಗುತ್ತಿದೆ. ಜಾತ್ರೆ ಉತ್ಸವಗಳಲ್ಲಿ ಪ್ರಾಣಿ, ಪಶುಗಳ ಬಲಿ ಹಾಗೂ ಇನ್ನಿತರ ಕ್ರಿಯಾ ವಿಧಾನಗಳ ಆಚರಣೆಗಳ ಬದಲಾಗಿ ಇಂದು ಅವುಗಳಿಗೆ ಸಾಂಸ್ಕೃತಿಕ ರೂಪ ಕೊಡಲಾಗುತ್ತಿದೆ. ವಿಧವೆಯಾದ ಹೆಣ್ಣು ತಾಳಿ ಕಿತ್ತೊಗೆಯುವುದು, ಕುಂಕುಮ ಅಳಿಸಿ ಹಾಕುವುದು, ಕೈ ಬಳೆಗಳನ್ನು ಧರಿಸದೆ ಇರುವುದು ಮುಂತಾದವುಗಳನ್ನು ಆಧುನಿಕ ಮಹಿಳೆಯರು ವಿರೋಧಿಸುತ್ತಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಪರಿವರ್ತನೆ ಗತಿಗೆ ತಕ್ಕಂತೆ ಸಂಪ್ರದಾಯಗಳು ಕೂಡ ಬದಲಾವಣೆ ಹೊಂದುತ್ತಾ ಬಂದಿವೆ. ಮೊದಲಿನ ಅಜ್ಞಾನ, ಅಂಧಾನುಕರಣೆಗಳು ಇಂದು ಕಂಡುಬರಲಾರವು.

### ಸಂಪ್ರದಾಯಗಳ ಮಹತ್ವ

### ಸಾಮಾಜಿಕ ಪರಂಪರೆ (ಬಳುವಳಿ)ಯ ರಕ್ಷಣೆ

ಸಂಪ್ರದಾಯಗಳು ನಮ್ಮ ಪ್ರಾಚೀನ ಪರಂಪರೆ ಹಾಗೂ ಸಂಸ್ಕೃತಿಯನ್ನು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡುತ್ತವೆ. ಜನರನ್ನು ಒಂದುಗೂಡಿಸಿ ಅವರಲ್ಲಿ ಭಾವೈಕ್ಯತೆಗಳು ಬೆಳೆದು ಬರುವಂತೆ ಸಂಪ್ರದಾಯಗಳು ಪ್ರಯತ್ನಿಸುತ್ತವೆ. ಸಾಮಾಜಿಕ ಕಲಿಕೆಯಲ್ಲಿ ಸಂಪ್ರದಾಯದ ಪಾತ್ರವು ಗಮನಾರ್ಹವಾಗಿರುತ್ತದೆ. ಮಗು ತಂದೆ ತಾಯಂದಿರ ಭಾಷೆ, ವೇಷಭೂಷಣ ಗುರು ಹಿರಿಯರಿಗೆ ಮನ್ನಣೆ, ಧಾರ್ಮಿಕ, ಕ್ರಿಯಾ ವಿಧಾನಗಳ ಆಚರಣೆ ಮುಂತಾದ ಸಾಮಾಜಿಕ ವರ್ತನೆಗಳನ್ನು ಕಲಿತುಕೊಳ್ಳುತ್ತದೆ. ಸಾಮಾಜಿಕ ಸಮಸ್ಯೆಗಳನ್ನೆದುರಿಸುವ ಕಲೆಯನ್ನು ಸಂಪ್ರದಾಯಗಳು ಕಲಿಸುತ್ತವೆ. ವ್ಯಕ್ತಿಯ ಸಮಯ ಮತ್ತು ಶಕ್ತಿಯನ್ನು ಸಂಪ್ರದಾಯಗಳು ಉಳಿಸುತ್ತವೆ. ವಿವಾಹ, ಅಂತ್ಯಸಂಸ್ಕಾರ, ಜಾತ್ರೆ, ಉತ್ಸವಗಳ ಆಚರಣೆ, ಗುರುಹಿರಿಯರಿಗೆ ಮರ್ಯಾದೆ ಕೊಡುವುದು, ಮಕ್ಕಳ ಪಾಲನೆ ಪೋಷಣೆ ಮುಂತಾದ ಚಟುವಟಿಕೆಗಳನ್ನು ಪ್ರಾಚೀನ ಕಾಲದಿಂದಲೂ ನಾವು ಬೆಳೆಸಿಕೊಂಡು ಬಂದಿರುವ ಸಂಪ್ರದಾಯಗಳಿಗೆ ಅನುಗುಣವಾಗಿ ನಿರ್ವಹಿಸುತ್ತೇವೆ. ಆದುದರಿಂದಲೇ ಸಂಪ್ರದಾಯಗಳನ್ನು ಪರಂಪರೆ ಮತ್ತು ಸಂಸ್ಕೃತಿಯ ಉಗ್ರಾಣವೆಂದು ಕರೆಯಲಾಗುತ್ತದೆ.

### ೨. ಸಾಮಾಜಿಕ ನಿಯಂತ್ರಣ

ಸದ್ಯದ ಚಟುವಟಿಕೆಗಳನ್ನು ನಿಯಂತ್ರಿಸಿ ಅವುಗಳಿಗೆ ಸರಿಯಾದ ಮಾರ್ಗದರ್ಶನ ನೀಡುವುದು ಸಂಪ್ರದಾಯಗಳ ಮತ್ತೊಂದು ಮಹತ್ವದ ಉದ್ದೇಶವಾಗಿದೆ. ಬ್ಯಾಗೊಚರ್ ಅಭಿಪ್ರಾಯದಂತೆ ಸಾಮಾಜಿಕ ವಿಕಸನದಲ್ಲಿ ಸಂಪ್ರದಾಯಬದ್ಧವಾದ ಸಮೂಹಗಳು ಮಾತ್ರ ಉಳಿದುಕೊಂಡು ಬಂದಿರುತ್ತವೆ. "ಸಂಪ್ರದಾಯಗಳು ಜನರನ್ನು ಒಂದುಗೂಡಿಸುತ್ತವೆ. ಸಮಾಜದ ನಿಯಮಗಳಿಗೆ ಅನುಗುಣವಾಗಿ ಅವರೆಲ್ಲರೂ ವರ್ತಿಸುವಂತೆ ನಿರ್ಬಂಧನೆಗಳನ್ನು ವಿಧಿಸುತ್ತವೆ. ವ್ಯಕ್ತಿಯಲ್ಲಿರುವ ಅಹಂ ಭಾವನೆ ಮತ್ತು ಮೇಲರಿಮೆಗಳನ್ನು ದಮನಮಾಡಿ, ಸಮಾಜದೊಂದಿಗೆ ಹೊಂದಿಕೊಂಡು ಹೋಗುವಂತೆ ಪ್ರೇರೇಪಿಸುತ್ತವೆ." ಪ್ರತಿಯೊಬ್ಬ ವ್ಯಕ್ತಿಯು ಸಂಪ್ರದಾಯಗಳಿಗೆ ವಿಧೇಯನಾಗಿ ವರ್ತಿಸಲು ಬಯಸುತ್ತಾನೆ. ಪ್ರಾಚೀನ ಸಮೂಹಗಳಲ್ಲಿ ಸಂಪ್ರದಾಯಗಳನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳಿಗೆ ತಪ್ಪಿಗೆ ತಕ್ಕಂತೆ ದಂಡ ಅಥವಾ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಆದಿವಾಸಿ ನೆಲೆಗಳಲ್ಲಿ ಕೆಲವೊಂದು ಕ್ರೂರ ಸಂಪ್ರದಾಯಗಳಿದ್ದರೂ ಅವುಗಳನ್ನೆಲ್ಲರೂ ಪಾಲಿಸಬೇಕೆಂಬ ನಿಯಮಗಳಿರುತ್ತವೆ. ಸಮಾಜವು ಎಷ್ಟೇ ಮುಂದುವರೆದರೂ ಜನರು ಸಂಪ್ರದಾಯಗಳನ್ನು ಉಲ್ಲಂಘಿಸಿ ಬದುಕಲು ಬಯಸಲಾರರು.

**ವ್ಯಕ್ತಿತ್ವದ ವಿಕಸನ :** ಸಮಾಜದಲ್ಲಿ ವ್ಯಕ್ತಿಯ ಜನನ, ಆತನ ನಾಮಕರಣ, ಶಿಕ್ಷಣ, ವಿವಾಹ, ಉದ್ಯೋಗ, ಅಂತ್ಯ ಮುಂತಾದ ಚಟುವಟಿಕೆಗಳೆಲ್ಲವೂ ಸಂಪ್ರದಾಯದ ಚೌಕಟ್ಟಿನಲ್ಲಿಯೇ ನೆರವೇರುತ್ತವೆ. ತೊಟ್ಟಿಲಿನಿಂದ ಮಸಣದವರೆಗೂ ಮಾನವನ ಪ್ರತಿಯೊಂದು ವರ್ತನೆಗಳು ಸಂಪ್ರದಾಯಬದ್ಧವಾಗಿಯೇ ನಡೆಯುತ್ತವೆ. ಅವು ವ್ಯಕ್ತಿಯ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುತ್ತವೆ. ತಪ್ಪು ದಾರಿ ತುಳಿಯದಂತೆ ಮೇಲ್ವಿಚಾರಣೆ ವಹಿಸುತ್ತವೆ. ಸಾಮಾಜಿಕ ನಿಯಮಗಳನ್ನು ಪಾಲಿಸುವ ವ್ಯಕ್ತಿಗೆ ಸಮಾಜದಲ್ಲಿ ಮಾನ ಮರ್ಯಾದೆಗಳಿರುತ್ತವೆ.

**ಶಾಸನಗಳ ರಚನೆ :** ಒಂದು ಸಮಾಜದ ಸಂಪ್ರದಾಯದ ಮತ್ತು ಪರಂಪರೆಗಳಿಗೆ ಅನುಗುಣವಾಗಿ ಕಾಯ್ದೆ ಕಾನೂನುಗಳನ್ನು ರಚಿಸಬೇಕಾಗುತ್ತದೆ. ಬ್ರಿಟಿಷರು ನಮ್ಮ ದೇಶಕ್ಕೆ ಬಂದ ಮೇಲೆ ಮಿತಾಕ್ಷರ, ಮನುಸ್ಮೃತಿ, ಅರ್ಥಶಾಸ್ತ್ರ, ಮಹಾಭಾರತ ಮುಂತಾದ ಪ್ರಾಚೀನ ಗ್ರಂಥಗಳನ್ನು ಅಧ್ಯಯನ ಮಾಡಿ ಭಾರತೀಯರ ಪರಂಪರೆ ಹಾಗೂ ಪದ್ಧತಿಗಳಿಗೆ ಪೂರಕವಾಗಿ ಆಡಳಿತ ನಡೆಸಲು ಪ್ರಯತ್ನಿಸಿದರು. ಶಾಸನಗಳನ್ನು ಪಾಸುಮಾಡುವಾಗ ಪದ್ಧತಿ ಮತ್ತು ಪರಂಪರೆಗಳಿಗೆ ಯಾವುದೇ ರೀತಿಯ ದ್ರೋಹವಾಗದಂತೆ ಜಾಗರೂಕತೆ ವಹಿಸಬೇಕಾಗುತ್ತದೆ. ಆದಿವಾಸಿ ಶಾಸನಗಳು ಅವರ ಪದ್ಧತಿಗಳಿಗೆ ಪೂರಕವಾಗಿರಬೇಕು. ಅಹಿತಕಾರಿ ಹಾಗೂ ಕ್ರೂರ ಪದ್ಧತಿಗಳಿಗೆ ಮಾತ್ರ ಶಾಸನಗಳು ಮಾರಕವಾಗಿ ಕಂಡು ಬರಬಹುದು. ಸಂಪ್ರದಾಯಗಳನ್ನು ಕಾಯ್ದೆಯ ರಚನೆಯಲ್ಲಿ ಮೂಲ ಘಟಕಗಳು ಎಂದು ಪರಿಗಣಿಸಲಾಗುತ್ತದೆ. ಸಾಮಾಜಿಕ ಬದುಕಿನಲ್ಲಿ ಸಂಪ್ರದಾಯಗಳ ಮಹತ್ವವನ್ನು ಕುರಿತು ಷೇಕ್ಸ್‌ಪಿಯರ್ ಸಂಪ್ರದಾಯಗಳನ್ನು "ದಬ್ಬಾಳಿಕೆಯ ರಾಜ" ಎಂದು ಕರೆದರೆ, ಬೇಕನ್ ಮಾನವನ ಬದುಕಿನ ಮುಖ್ಯ ನ್ಯಾಯಾಧೀಶ ಎಂದು ಕರೆದಿರುತ್ತಾನೆ.

ಸಂಪ್ರದಾಯಗಳಿಂದ ಕೇವಲ ಲಾಭಗಳಷ್ಟೇ ಅಗಿದೆಯೆಂದು ಹೇಳುವುದು ಸಮಂಜಸವೆನಿಸಲಾರದು. ಕೆಲವೊಂದು ಸಂಪ್ರದಾಯಗಳು ಸಾಮಾಜಿಕ ಪ್ರಗತಿಯನ್ನೇ ಕುಂಠಿತಗೊಳಿಸಿರುವ ಅಸುರೀಶಕ್ತಿಗಳಾಗಿ ಕಂಡುಬರುತ್ತವೆ. ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಗೆಜ್ಜೆಪೂಜೆ, ಅಸ್ಪೃಶ್ಯತೆ, ಮದ್ಯಪಾನ ಮತ್ತು ಮಾದಕ ಪದಾರ್ಥಗಳ ಸೇವನೆ, ಗೋಹತ್ಯೆ, ಸ್ತ್ರೀಹತ್ಯೆ, ಪ್ರಾಣಿಹತ್ಯೆ, ಸಹಗಮನ, ಬಾಲ್ಯ ಮತ್ತು ನಗ್ನಿಕಾ ವಿವಾಹಗಳು, ವರದಕ್ಷಿಣೆ, ತೆರವು ಪದ್ಧತಿ ಮುಂತಾದವುಗಳು ಸಂಪ್ರದಾಯಬದ್ಧವಾಗಿಯೇ ಸಮಾಜದಲ್ಲಿ ಆಚರಣೆಯಲ್ಲಿರುವುದನ್ನು ಕಾಣುತ್ತೇವೆ. ಈ ರೀತಿಯ ಪದ್ಧತಿಗಳು ಸಾಮಾಜಿಕ ಪ್ರಗತಿಗೆ ಪ್ರತಿಕೂಲವಾಗಿರುತ್ತವೆ.

**ಲೋಕರೂಢಿಗಳು:** ವಿಲಿಯಂ ಗ್ರಹಾಂ ಸಮ್ನರ್ 1907ರಲ್ಲಿ ತನ್ನ ಫೋಕ್ವೇಜ್ ಎಂಬ ಪುಸ್ತಕದಲ್ಲಿ ಲೋಕರೂಢಿಗಳು ಎಂಬ ಪರಿಕಲ್ಪನೆಯನ್ನು

Digitised by Bharatavani, CIIL

ಪರಿಚಯಿಸಿದ್ದಾನೆ. ಸಮ್ನರನ ಲೋಕರೂಢಿ ಮತ್ತು ನೈತಿಕ ನಿಯಮಗಳನ್ನು ವಿಶಿಷ್ಟ ಅರ್ಥದಲ್ಲಿ ಬಳಸಿರುತ್ತಾನೆ. ಅವನ ಪ್ರಕಾರ 'ಫೋಕ್' ಅಂದರೆ "ಜನರು" 'ವೇಜ್' ಅಂದರೆ "ವರ್ತನೆಗಳು" ಅಥವಾ "ಆಚರಣೆಗಳು". ಜನರ ದೈನಂದಿನ ವರ್ತನೆಯ ನಿಯಮಗಳನ್ನೇ ಸಮ್ನರ್ 'ಫೋಕವೇಜ್' ಅಥವಾ 'ಲೋಕರೂಢಿ'ಗಳೆಂದು ಕರೆದಿರುತ್ತಾನೆ. ವ್ಯಕ್ತಿಯು ತನ್ನ ಬದುಕಿನಲ್ಲಿ ಅರಿವಿಲ್ಲದೆಯೇ ಹಲವಾರು ಲೋಕರೂಢಿಗಳನ್ನು ಬೆಳೆಸಿಕೊಂಡು ಬಂದಿರುತ್ತಾನೆ. ಸಮಾಜದಿಂದ ಮನ್ನಣೆಯನ್ನು ಪಡೆದ ಈ ವರ್ತನೆಯ ನಿಯಮಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಹಜವಾಗಿ ಮುಂದುವರೆದುಕೊಂಡು ಬಂದಿರುತ್ತದೆ.

**ಲೋಕರೂಢಿಗಳ ಲಕ್ಷಣಗಳು :** ಲೋಕರೂಢಿಗಳು ಯೋಜನೆ ಹಾಗೂ ಸಂಕಲ್ಪಗಳಿಲ್ಲದೆ ಬೆಳೆದು ಬಂದಿರುತ್ತವೆ ಲೋಕರೂಢಿಗಳ ಉಗಮಕ್ಕಾಗಿ ಯಾವುದೇ ವ್ಯಕ್ತಿಯು ಪ್ರಯತ್ನಪಟ್ಟಿರುವುದಿಲ್ಲ. ಯಾವುದೇ ಶಾಸ್ತ್ರ ಗ್ರಂಥ ಅಥವಾ ದಾರ್ಶನಿಕ ವ್ಯಕ್ತಿಯ ಸಂದೇಶಗಳ ತಳಹದಿಯ ಮೇಲೆ ಲೋಕರೂಢಿಗಳು ಬೆಳೆದು ಬಂದಿಲ್ಲ. ನಮಗರಿವಿಲ್ಲದೆಯೇ ಸ್ವಾಭಾವಿಕವಾಗಿ ಲೋಕರೂಢಿಗಳು ಬೆಳೆದು ಬಂದಿರುತ್ತವೆ. ಪ್ರಾರಂಭದಲ್ಲಿ ಯಾವುದೋ ವ್ಯಕ್ತಿಯು ಕೂದಲು ಕತ್ತರಿಸುವ ಅಥವಾ ಉಡಿಗೆಯಲ್ಲಿ ನಾವೀನ್ಯತೆಯನ್ನು ತರುವುದನ್ನು ಪ್ರಾರಂಭಿಸುತ್ತಾನೆ. ಕಾಲ ಗತಿಸಿದಂತೆ ಅದು ಜನಪ್ರಿಯ ಹಾಗೂ ಆಕರ್ಷಣೀಯವೆನಿಸಿದಾಗ ಆ ಪ್ರದೇಶದ ಬಹುಸಂಖ್ಯಾತ ಜನರು ಆ ವಿಧಾನವನ್ನು ಅನುಕರಣೆ ಮಾಡಲು ಪ್ರಾರಂಭಿಸುತ್ತಾರೆ. ಕೆಲವೊಂದು ಅವಧಿಯ ನಂತರ ಇಂಥ ಚಟುವಟಿಕೆಗಳೇ ಲೋಕರೂಢಿಗಳಾಗುತ್ತವೆ. ಟೇಬಲ್ ಪದ್ಧತಿಯ ಊಟ, ಬಾಬ್‌ಕಟ್ ಮುಂತಾದವುಗಳನ್ನು ಯಾರು ಎಂದು ಪ್ರಾರಂಭಿಸಿದರೆಂಬುದು ಯಾರಿಗೂ ತಿಳಿಯದು ಹಾಗೂ ಈ ಕ್ರಿಯೆಗಳ ಹಿಂದೆ ಯಾವುದೇ ಮಹತ್ವದ ಉದ್ದೇಶವೂ ಕಂಡುಬರದು.

ಲೋಕರೂಢಿಗಳು ಸಾಮಾಜಿಕವಾಗಿರುತ್ತವೆ. ಲೋಕರೂಢಿಗಳು ಮಾನವನ ಸಾಮೂಹಿಕ ಬದುಕಿನ ಕೊಡುಗೆಗಳಾಗಿವೆ. ಸಮಾಜವು ತನ್ನ ಅಸ್ತಿತ್ವಕ್ಕಾಗಿ ಹಾಗೂ ಕಾರ್ಯ ಚಟುವಟಿಕೆಗಳ ಸುಗಮತೆಗಾಗಿ ಲೋಕರೂಢಿಗಳನ್ನು ಸೃಷ್ಟಿಸಿರುತ್ತದೆ. ಲೋಕರೂಢಿಗಳನ್ನು ಪಾಲಿಸುವುದರಿಂದ ಮಾತ್ರ ವ್ಯಕ್ತಿಗೆ ಸಮಾಜದಲ್ಲಿ ಯೋಗ್ಯ ಸ್ಥಾನಮಾನಗಳು ಲಭ್ಯವಾಗುತ್ತವೆ. ಮಾನವನ ದೈನಂದಿನ ಚಟುವಟಿಕೆಗಳು ಸುಗಮವಾಗಿ ಸಾಗಲು ಲೋಕರೂಢಿಗಳು ಸಹಾಯ ಸಲ್ಲಿಸುತ್ತವೆ.

ಲೋಕರೂಢಿಗಳಲ್ಲಿ ನಿರಂತರತೆಯು ಕಂಡುಬರುತ್ತದೆ. ಯಾವುದೇ ಒಂದು ಕ್ರಿಯೆಯನ್ನು ನಿರಂತರವಾಗಿ ಆಚರಿಸುತ್ತ ಬರುವುದರಿಂದ ಅದು ಲೋಕರೂಢಿಯಾಗಿ ಪರಿಣಮಿಸುತ್ತದೆ. ಸಮಾಜದ ಬಹುಸಂಖ್ಯಾತ ಜನರು ಸತತವಾಗಿ ಮುಂದುವರೆಸಿಕೊಂಡು ಬಂದ ಚಟುವಟಿಕೆಗಳೇ ಲೋಕರೂಢಿಗಳು. ಇಂಥ ಚಟುವಟಿಕೆಗಳು ಪ್ರಮಾಣೀಕೃತ ಕ್ರಿಯೆಗಳಾಗಿ ಕಂಡು ಬರುವುದರಿಂದ ಸಮಾಜದ ಎಲ್ಲ ಜನರೂ ಅವುಗಳನ್ನು ಪಾಲಿಸಲು ಇಷ್ಟಪಡುತ್ತಾರೆ.

ಅನೌಪಚಾರಿಕ ಸ್ವರೂಪದ ನಿಯಂತ್ರಣ ಲೋಕರೂಢಿಗಳನ್ನು ಅನೌಪಚಾರಿಕ ಸ್ವರೂಪದ ಸಾಮಾಜಿಕ ನಿಯಂತ್ರಣವೆಂದು ಪರಿಗಣಿಸಲಾಗುತ್ತದೆ. ಲೋಕರೂಢಿಗಳನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗೆ ಯಾವುದೇ ರೀತಿಯ ಉಗ್ರವಾದ ಶಿಕ್ಷೆಯಾಗಲೀ ಅಥವಾ ದಂಡವಾಗಲೀ ಇರಲಾರದು. ಕಾಯ್ದೆ ಕಾನೂನುಗಳಂತೆ ಲೋಕರೂಢಿಗಳಿಗೆ ಯಾವುದೇ ಪ್ರಬಲವಾದ ಶಕ್ತಿಯಿರಲಾರದು. ಕಾಯ್ದೆಗಳನ್ನು ಸರಕಾರದ ಆಜ್ಞೆಯೆಂದು ಪರಿಗಣಿಸಲಾಗುತ್ತದೆ. ಶಾಸನಗಳ ಬೆಂಬಲಕ್ಕಾಗಿ ಕೋರ್ಟು ಕಚೇರಿಗಳು ಹಾಗೂ ಕಾರಾಗೃಹಗಳು ಕಂಡುಬರುವಂತೆ, ಲೋಕರೂಢಿಗಳಿಗೆ ಬೆಂಬಲವಾಗಿ ಯಾವುದೇ ಘಟಕ ಅಥವಾ ಶಕ್ತಿಗಳು ಇರಲಾರವು. ಪ್ರತಿದಿನವೂ ಸ್ನಾನ ಮಾಡದ, ಹಿರಿಯರಿಗೆ ಮನ್ನಣೆ ಕೊಡದ ವ್ಯಕ್ತಿಯನ್ನು ಶಾಸನರೀತ್ಯ ದಂಡಿಸಲು ಅಥವಾ ಶಿಕ್ಷಿಸಲು ಬರಲಾರದು. ಇಂಥ ಜನರನ್ನು ಅಸಭ್ಯ, ಅಸಂಸ್ಕೃತ ಹಾಗೂ ಸಮಾಜ ವಿರೋಧಿಯೆಂದು ಮಾತ್ರ ಆರೋಪ ಮಾಡಬಹುದು.

ಲೋಕರೂಢಿಗಳು ವೈವಿಧ್ಯಮಯವಾಗಿರುತ್ತವೆ. ಸಮ್ನರ್‌ನ ಪ್ರಕಾರ ಲೋಕರೂಢಿಗಳು ಆಕಸ್ಮಿಕ ಬದಲಾವಣೆಗಳನ್ನೆದುರಿಸಿ ಬದುಕುತ್ತವೆ. ಸಮೂಹದಿಂದ ಸಮೂಹಕ್ಕೆ ಸಮಯದಿಂದ ಸಮಯಕ್ಕೆ, ಜನಾಂಗ ಹಾಗೂ ಸಂಸ್ಕೃತಿಗಳಿಗೆ ತಕ್ಕಂತೆ ಲೋಕರೂಢಿಗಳಲ್ಲಿಯೂ ವೈವಿಧ್ಯತೆಗಳನ್ನು ಗಮನಿಸುತ್ತೇವೆ. ಸ್ತ್ರೀಯರ ಸ್ಥಾನಮಾನ, ಉಡುಗೆ ತೊಡಿಗೆ, ಧಾರ್ಮಿಕ ಕ್ರಿಯಾವಿಧಾನಗಳ ಆಚರಣೆ ಮುಂತಾದ ಚಟುವಟಿಕೆಗಳಲ್ಲಿ ಕಾಲಕ್ಕೆ ತಕ್ಕಂತೆ ಸಾಕಷ್ಟು ಅನುಕೂಲತೆಗಳನ್ನು ಕಾಣುತ್ತೇವೆ. ಒಂದು ಪ್ರದೇಶದಲ್ಲಿ ಆಚರಣೆಯಲ್ಲಿರುವ ಲೋಕರೂಢಿಯು ಬೇರೆ ಪ್ರದೇಶದಲ್ಲಿ ಆಚರಣೆಯಲ್ಲಿ ಇರಲಿಕ್ಕಿಲ್ಲ. ಟೇಬಲ್ ಪದ್ಧತಿಯ ಊಟವು ಒಂದು ಸಮೂಹದಲ್ಲಿ ಲೋಕರೂಢಿಯಾಗಿದ್ದರೆ ಮಣೆಯ ಮೇಲೆ ಕುಳಿತು ಊಟಮಾಡುವುದು ಮತ್ತೊಂದು ಸಮೂಹದಲ್ಲಿ ರೂಢಿಯಲ್ಲಿರುತ್ತದೆ. ನಮಸ್ಕಾರ ಪದ್ಧತಿ, ವಸ್ತ್ರವಿನ್ಯಾಸ, ಅಲಂಕಾರ, ಆಹಾರ ಸೇವನೆ ಮುಂತಾದವುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದನ್ನು ಗಮನಿಸಬಹುದಾಗಿದೆ.

ಲೋಕರೂಢಿಗಳು ಅಗಣಿತವಾಗಿರುತ್ತವೆ. ಒಂದು ಸಂಸ್ಕೃತಿಯ ವಿವಿಧ ಘಟಕಗಳನ್ನು ಲೆಕ್ಕ ಹಾಕಲು ಯಾವ ರೀತಿಯಾಗಿ ಸಾಧ್ಯವಿಲ್ಲವೋ ಅದೇ ರೀತಿಯಾಗಿ ನಮ್ಮ ಸಮಾಜದಲ್ಲಿರುವ ಎಲ್ಲ ಲೋಕರೂಢಿಗಳನ್ನೂ ಲೆಕ್ಕ ಮಾಡಿ ನೋಡಲು ಸಾಧ್ಯವಿಲ್ಲ. ಲೋಕರೂಢಿಗಳು ಅನಂತ ಮತ್ತು ಅಗಣಿತವಾಗಿರುತ್ತವೆ. ಪ್ರತಿಯೊಂದು ಸಮಾಜವೂ ತನ್ನದೇ ಆದ ಹಲವಾರು ಲೋಕರೂಢಿಗಳನ್ನು ಹೊಂದಿರುತ್ತದೆ. ಉದಾಹರಣೆಗಾಗಿ: ಸ್ತ್ರೀಯರು ಉದ್ದವಾಗಿ ಕೂದಲು ಬೆಳೆಸುವುದು, ಬಾಬ್‌ಕಟ್ ಮಾಡಿಕೊಳ್ಳುವುದು, ಚಾಪೆ ಅಥವಾ ಮಣೆಯ ಮೇಲೆ ಕುಳಿತು ಊಟ ಮಾಡುವುದು, ಟೇಬಲ್ ಪದ್ಧತಿಯ ಊಟ, ಪುರುಷರು ಕೋಟು, ಪ್ಯಾಂಟು, ನೆಕ್ ಟೈ ಧರಿಸುವುದು, ಮಹಿಳೆಯರು ತಲೆಬಾಚಿಕೊಂಡು ಹೂ ಮುಡಿದುಕೊಳ್ಳುವುದು, ಸಾಯಂಕಾಲ ಮಲಗುವುದಕ್ಕಿಂತ ಮೊದಲು ಸಂಧ್ಯಾವಂದನೆ ಮಾಡುವುದು, ದಿನವೂ ಹಲ್ಲುಜ್ಜುವುದು, ಮನೆಗೆ ಬಂದ ಮಹಿಳೆಯರಿಗೆ ಅರಿಷಿಣ ಕುಂಕುಮ ಕೊಡುವುದು, ಮುಂದುವರೆದ ಜಾತಿಯ ಜನರು ಮದ್ಯಮಾಂಸ ಸೇವಿಸದಿರುವುದು, ಹಿರಿಯರಿಗೆ ಮನ್ನಣೆ ಕೊಡುವಾಗ ಕೈ ಜೋಡಿಸಿ ನಮಸ್ಕರಿಸುವುದು, ಪಾದಸ್ಪರ್ಶ ಮಾಡುವುದು, ದಂಡವತ್ಪ್ರಣಾಮವನ್ನು ಸಲ್ಲಿಸುವುದು, ಜೈನ ಧರ್ಮೀಯರು ಮೊಸರನ್ನು ಸೇವಿಸದಿರುವುದು ಮುಂತಾದವುಗಳು ಲೋಕರೂಢಿಗಳ ಹಲವಾರು ಉದಾಹರಣೆಗಳಾಗಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಬೆಳಗಿನ ಪ್ರಾತರ್ವಿಧಿಯಿಂದ ಪ್ರಾರಂಭವಾದ ಲೋಕರೂಢಿಗಳು ವ್ಯಕ್ತಿಯ ಅಂತ್ಯ ಸಂಸ್ಕಾರದವರೆಗೂ ವ್ಯಾಪಿಸಿರುವುದನ್ನು ಗಮನಿಸುತ್ತೇವೆ.

ಸಂಪ್ರದಾಯ ಮತ್ತು ಲೋಕರೂಢಿಗಳಲ್ಲಿ ಕೆಲವೊಂದು ಪ್ರಮುಖವಾದ ಅಂತರವನ್ನು ಗಮನಿಸುತ್ತೇವೆ. ಲೋಕರೂಢಿಗಳು ಹೆಚ್ಚು ಸಾಮಾನ್ಯ ಹಾಗೂ ವ್ಯಾಪಕವಾಗಿದ್ದರೆ, ಸಂಪ್ರದಾಯಗಳು ನಿಶ್ಚಿತ ಮತ್ತು ಖಚಿತವಾಗಿರುತ್ತವೆ. ವ್ಯಕ್ತಿ ಸುಲಭವಾಗಿ ಲೋಕರೂಢಿಗಳನ್ನು ಉಲ್ಲಂಘನೆ ಅಥವಾ ಅಲಕ್ಷ್ಯ ಮಾಡಿದಂತೆ ಸಂಪ್ರದಾಯಗಳನ್ನು ಉಲ್ಲಂಘಿಸಲು ಹಾಗೂ ಕಡೆಗಾಣಿಸಲು ಬರಲಾರದು. ಲೋಕರೂಢಿಗಳಿಗಿಂತಲೂ ಸಂಪ್ರದಾಯಗಳು ಹೆಚ್ಚು ಪ್ರಬಲ ಮತ್ತು ಕಠಿಣವಾಗಿರುತ್ತವೆ. ಸಂಪ್ರದಾಯಗಳು ಸಮೂಹದ ಅಸ್ತಿತ್ವ ಮತ್ತು ಪ್ರಗತಿಗೆ ನೇರವಾಗಿ

Digitised by Bharatavani, CIIL

ಸಂಬಂಧಪಟ್ಟಿರುತ್ತವೆ. ಆದರೆ ಲೋಕರೂಢಿಗಳು ಈ ರೀತಿಯ ಸಂಬಂಧ ಹೊಂದಿರಲಾರವು.

**ಲೋಕರೂಢಿಗಳ ಸಾಮಾಜಿಕ ಮಹತ್ವ:** ಸಾಮಾಜಿಕ ನಿಯಂತ್ರಣದಲ್ಲಿ ಲೋಕರೂಢಿಗಳ ಪಾತ್ರವನ್ನು ಕಡೆಗಣಿಸಲು ಬರಲಾರದು. ಲೋಕರೂಢಿಗಳು ಜನರ ಶಕ್ತಿ ಹಾಗೂ ಸಮಯವನ್ನು ಉಳಿಸುತ್ತವೆ. ಹಲವಾರು ವರ್ಷಗಳಿಂದ ಆಚರಿಸುತ್ತ ಬಂದಿರುವ ಲೋಕರೂಢಿಗಳು ರಕ್ತಗತವಾಗಿ ರೂಢಿಯಾಗಿರುವುದರಿಂದ ವ್ಯಕ್ತಿ ಅವುಗಳನ್ನು ಆಲೋಚನೆ, ವಿಚಾರ ಮಾಡದೆ ಅನುಸರಿಸುತ್ತಾನೆ. ಇದರಿಂದ ಜನರಿಗೆ ಮಾನಸಿಕ ನೆಮ್ಮದಿಯೂ ದೊರೆತಂತಾಗುವುದಲ್ಲದೆ, ಮಾಡುವ ಕಾರ್ಯವೂ ಸರಳ ಮತ್ತು ಸುಗಮವೆನಿಸುತ್ತದೆ.

ಲೋಕರೂಢಿಗಳನ್ನು ಪಾಲಿಸದ ವ್ಯಕ್ತಿ ಅಸಭ್ಯ ಮತ್ತು ಅಸಂಸ್ಕೃತನೆಂದು ಆರೋಪಕ್ಕೆ ಗುರಿಯಾಗುತ್ತಾನೆ. ಯಾವ ಸಮೂಹದಲ್ಲಿ ವ್ಯಕ್ತಿ ಜೀವಿಸುತ್ತಾನೆಯೋ ಆ ಸಮೂಹದ ರೂಢಿ ಪರಂಪರೆಗಳನ್ನು ಆತ ಪಾಲಿಸಲೇಬೇಕಾಗುತ್ತದೆ. ಲೋಕರೂಢಿಗಳಿಗೆ ವಿಧೇಯಕರಾಗಿ ವರ್ತಿಸುವವರನ್ನು ಸಮಾಜವು ಸಭ್ಯ ಸುಸಂಸ್ಕೃತ ವ್ಯಕ್ತಿಗಳೆಂದು ಗೌರವದಿಂದ ಕಾಣುತ್ತದೆ. ಹೆಜ್ಜೆ ಹೆಜ್ಜೆಗೂ ಅವುಗಳನ್ನು ವಿರೋಧಿಸುವ ಜನರನ್ನು ವಿಚಿತ್ರ ಪ್ರಾಣಿಗಳಂತೆ ಕಾಣುತ್ತಾರೆ.

ಲೋಕರೂಢಿಗಳ ಸಾಮಾಜಿಕ ಮಹತ್ವತೆಯ ಬಗೆಗೆ ಸಮ್ನರ್ "ಸಾಮಾಜಿಕ ಬದುಕು ಲೋಕರೂಢಿಗಳನ್ನು ಬೆಳೆಸುವದು ಮತ್ತು ಅವುಗಳನ್ನು ಪಾಲಿಸುವುದಾಗಿದೆ" ಎಂದು ಹೇಳುತ್ತಾನೆ. ಸಮಾಜಶಾಸ್ತ್ರವೆಂದರೆ ಲೋಕರೂಢಿಗಳನ್ನು ಅಧ್ಯಯನ ಮಾಡುವ ಶಾಸ್ತ್ರ ಎಂದು ಅಭಿಪ್ರಾಯಪಡುತ್ತಾನೆ. ಲೋಕರೂಢಿಗಳಿಲ್ಲದ ಸಮಾಜವನ್ನು ಊಹಿಸಲು ಸಾಧ್ಯವಿಲ್ಲ, ಕಾರಣ ಲೋಕರೂಢಿಗಳು ಸಾಮಾಜಿಕ ರಚನೆಯ ಆಧಾರಗಳು.

ಲೋಕರೂಢಿಗಳನ್ನು ಪಾಲಿಸದ ವ್ಯಕ್ತಿಯಲ್ಲಿ ತಪ್ಪಿತಸ್ಥ ಪ್ರಜ್ಞೆ ಬೆಳೆಯುವುದಲ್ಲದೆ ಸಮಾಜದಿಂದ ತಾನು ಭಿನ್ನವಾಗಿದ್ದೇನೆ ಎಂಬ ಒಂಟಿತನ, ಏಕಾಂಗಿತನ (Feeling of Isolation) ಆತನನ್ನು ಕಾಡುತ್ತದೆ. ಅಪಹಾಸ್ಯ, ಟೀಕೆ, ಮೂದಲಿಕೆಗಳಿಂದ ಲೋಕರೂಢಿಗಳನ್ನು ಉಲ್ಲಂಘಿಸುವ ವ್ಯಕ್ತಿಗಳನ್ನು ಪುನಃ ಸತ್ಪಥಕ್ಕೆ ತರಲು ಜನರು ಪ್ರಯತ್ನಿಸುತ್ತಾರೆ. ವೃತ್ತಿ ಘನತೆಯನ್ನು, ಅಂತಸ್ತಿಗೆ ಅನುಗುಣವಾಗಿ ಪಾತ್ರ ನಿರ್ವಹಣೆ (Status & Role) ಯನ್ನು ಲೋಕರೂಢಿಗಳು ಕಲಿಸಿಕೊಡುತ್ತವೆ. ಪೋಲೀಸ್ ಪಡೆ, ಮಿಲಿಟರಿ ಹಡುಗುಪಡೆ, ವಾಯುಪಡೆ, ಎನ್.ಸಿ.ಸಿ. ಮುಂತಾದ ಭದ್ರತಾ ಪಡೆಗಳಲ್ಲಿ ಹೆಜ್ಜೆ ಹೆಜ್ಜೆಗೂ ಹಲವಾರು ಲೋಕರೂಢಿಗಳನ್ನು ಕಾಣುತ್ತೇವೆ. ಅಧಿಕಾರ ಸ್ವೀಕಾರ, ಉದ್ಘಾಟನೆ, ಮುಕ್ತಾಯ, ಅಡಿಗಲ್ಲು ಸಮಾರಂಭ ಮುಂತಾದವುಗಳು ರಾಜಕೀಯರಂಗದಲ್ಲಿ ಲೋಕರೂಢಿಗಳಿಗೆ ಅನುಗುಣವಾಗಿ ಮುಂದುವರೆದಿರುತ್ತವೆ.

ಲೋಕರೂಢಿಗಳು ಸಮಾಜದಲ್ಲಿ ಐಕ್ಯತೆ, ಸಾರೂಪ್ಯತೆ ಹಾಗೂ ಭದ್ರತೆಗಳನ್ನು ತರುತ್ತವೆ. ಒಂದೇ ರೀತಿಯ ಜೀವನ ವಿಧಾನವನ್ನು ಹೊಂದಿರುವ ಜನರಲ್ಲಿ ನಾವೆಲ್ಲ ಒಂದು (We Feeling) ಎಂಬ ಭಾವನೆಗಳು ಸಹಜವಾಗಿ ಬೆಳೆದು ಬಂದಿರುತ್ತವೆ. ಸಾಮಾಜೀಕರಣ ಪ್ರಕ್ರಿಯೆಯಲ್ಲಿಯೂ ಲೋಕರೂಢಿಗಳ ಪಾತ್ರವು ಅವಿಸ್ಮರಣೀಯವಾಗಿರುತ್ತದೆ. ಮಗು ಕುಟುಂಬದ ಲೋಕರೂಢಿಗಳನ್ನು ಬಾಲ್ಯಾವಸ್ಥೆಯಲ್ಲಿ ಅನುಕರಣೆ ಮಾಡುತ್ತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತದೆ.

**ನೈತಿಕ ನಿಯಮಗಳು** (Morals) : ಸಾಮಾಜಿಕ ನಿಯಮಗಳ ಮತ್ತೊಂದು ಪ್ರಬಲವಾದ ರೂಪವೇ ನೈತಿಕ ನಿಯಮಗಳಾಗಿವೆ. ಪ್ರತಿಯೊಂದು ಸಮಾಜವು ತನ್ನದೇ ಆದ ಕೆಲವೊಂದು ಲೋಕರೂಢಿಗಳನ್ನು ಹೊಂದಿರುತ್ತದೆ. ಇಂಥ ಲೋಕರೂಢಿಗಳಲ್ಲಿ ಕೆಲವೊಂದು ಮಾತ್ರ ಅತಿ ಮಹತ್ವದ್ದಾಗಿಯೂ ಸಮಾಜ ಕಲ್ಯಾಣಕ್ಕೆ ಪೂರಕವಾಗಿಯೂ ಕಂಡು ಬರುತ್ತವೆ. ಇವುಗಳಿಗೆ ಧರ್ಮದ ಬೆಂಬಲ ಹಾಗೂ ಸಮಾಜದ ಮನ್ನಣೆಯೂ ದೊರೆತಿರುತ್ತದೆ. ಜನಸಾಮಾನ್ಯರು ಇಂಥ ನಿಯಮಗಳನ್ನು ಪಾಲಿಸುವುದರಿಂದ ತಮ್ಮ ಬದುಕು ಸಾರ್ಥಕವಾಗುತ್ತದೆಯೆಂದು ಬಲವಾಗಿ ನಂಬಿರುತ್ತಾರೆ. ಈ ರೀತಿಯ ಸತ್ವಯುತ ಹಾಗೂ ಶಕ್ತಿಶಾಲಿ ಲೋಕರೂಢಿಗಳೇ ನೈತಿಕ ನಿಯಮಗಳಾಗಿ ರೂಪುಗೊಳ್ಳುತ್ತವೆ.

ಲೋಕರೂಢಿಗಳಂತೆ "ನೈತಿಕ ನಿಯಮಗಳು" ಎಂಬ ಪರಿಕಲ್ಪನೆಯನ್ನೂ ಪರಿಚಯಿಸಿದ ವ್ಯಕ್ತಿ ವಿಲಿಯಂ ಗ್ರಾಹಾಮ ಸಮ್ನರ್, ತನ್ನ ಫೋಕ್‌ವೇಸ್ (1907) ಎಂಬ ಗ್ರಂಥದಲ್ಲಿ ನೈತಿಕ ನಿಯಮಗಳನ್ನು ನಿಶ್ಚಿತ ಅರ್ಥದಲ್ಲಿ ಉಪಯೋಗಿಸಿರುತ್ತಾನೆ.

**ಅರ್ಥವಿವರಣೆ**

**ವಿಲಿಯಂ ಜಿ. ಸಮ್ನರ್** "ಪ್ರಬಲವಾದ ಅಧಿಕಾರವಿದ್ದರೂ ಸಮಾಜ ಕಲ್ಯಾಣವನ್ನು ಸಾಧಿಸಬಲ್ಲ ಹಾಗೂ ನಿಯಮಗಳಿಗೆ ಹೊಂದಿಕೊಂಡು ಹೋಗುವಂತೆ ವ್ಯಕ್ತಿಯ ಮೇಲೆ ಒತ್ತಡವನ್ನು ತರಬಲ್ಲ ಪದ್ಧತಿ ಮತ್ತು ಪರಂಪರೆಗಳೇ ನೈತಿಕ ನಿಯಮಗಳು".

**ಮೆಕೈವರ್ ಮತ್ತು ಪೇಜ್** "ಲೋಕರೂಢಿಗಳು ಸಮಾಜ ಕಲ್ಯಾಣ ಹಾಗೂ ಸರಿ ತಪ್ಪುಗಳೆಂಬ ಪ್ರಮಾಣಗಳನ್ನು ತನ್ನಲ್ಲಿ ಅಳವಡಿಸಿಕೊಂಡಾಗ ಅವು ನೈತಿಕ ನಿಯಮಗಳಾಗಿ ಪರಿವರ್ತನೆ ಹೊಂದುತ್ತವೆ."

ಮೇಲಿನ ಹಲವಾರು ವ್ಯಾಖ್ಯೆಗಳನ್ನು ಅವಲೋಕನ ಮಾಡಿದಾಗ ನೈತಿಕ ನಿಯಮಗಳು ಲೋಕರೂಢಿಗಳೇ ಆಗಿದ್ದರೂ, ಅವುಗಳು ಸಾಮಾನ್ಯವಾದ ಲೋಕರೂಢಿಗಳಿಗಿಂತಲೂ ಹೆಚ್ಚು, ಜನಪ್ರಿಯ, ಪ್ರಾಮಾಣೀಕೃತ, ಅರ್ಥಪೂರ್ಣ ಮತ್ತು ಮಹತ್ವದ್ದಾಗಿರುತ್ತವೆ. ನ್ಯಾಯ-ಅನ್ಯಾಯ, ಸರಿ-ತಪ್ಪು, ನೀತಿ-ಅನೀತಿ ಮುಂತಾದ ತಾರತಮ್ಯಗಳನ್ನು ನೈತಿಕ ನಿಯಮಗಳು ಸ್ಪಷ್ಟವಾಗಿ ಜನಸಾಮಾನ್ಯರಿಗೆ ತಿಳಿಸಿಕೊಡುತ್ತವೆ.

ಸಾಮಾನ್ಯವಾಗಿ ನೈತಿಕ ನಿಯಮಗಳನ್ನು ಇತ್ಯಾತ್ಮಕ (Positive Moral) ಹಾಗೂ ನಿಷೇಧಾತ್ಮಕ (Negative Morals) ಎಂದು ಎರಡು ಪ್ರಕಾರಗಳಲ್ಲಿ ವರ್ಗೀಕರಣ ಮಾಡಲಾಗುತ್ತದೆ. ಇವುಗಳನ್ನೇ ವಿಧಿ ನಿಯಮಗಳು ಹಾಗೂ ವಿಧಿ ನಿಷೇಧಗಳೆಂದು ಕರೆಯಲಾಗುತ್ತದೆ. ಹೀಗೇ ಇರು, ಹೀಗೇ ವರ್ತಿಸು, ಹೀಗೆಯೇ ಮಾತನಾಡು, ಹೀಗೆಯೇ ಆಚರಿಸು ಎಂದು ನಿಬಂಧನೆ ವಿಧಿಸುವ ನೈತಿಕ ನಿಯಮಗಳನ್ನು ಇತ್ಯರ್ಥಕ ನೈತಿಕ ನಿಯಮ ಅಥವಾ ವಿಧಿ ನಿಯಮಗಳೆಂದು ಹೇಳುತ್ತೇವೆ. ಉದಾಹರಣೆಗಾಗಿ-ಸತ್ಯವನ್ನೇ ಹೇಳು, ಒಳ್ಳೆಯ ರೀತಿಯಿಂದ ನಡೆ, ಗುರು ಹಿರಿಯರಿಗೆ ವಿಧೇಯನಾಗಿರು, ತಂದೆ ತಾಯಂದಿರ ಸೇವೆ ಮಾಡು, ಮಕ್ಕಳಿಗೆ ಯೋಗ್ಯ ತರಬೇತಿ ಶಿಕ್ಷಣ ಕೊಡು, ದೇವರನ್ನು ನಂಬು ಮುಂತಾದವುಗಳು ವಿಧಿನಿಯಮಗಳಾಗಿವೆ. ಇದಕ್ಕೆ ಪ್ರತಿಯಾಗಿ ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ, ಅಹಂಕಾರದಿಂದ ವರ್ತಿಸಬೇಡ, ಪ್ರಾಣಿ ಹಿಂಸೆ ಮಾಡಬೇಡ, ಶಾಲೆ ತಪ್ಪಿಸಬೇಡ, ಮೋಸ ಮಾಡಬೇಡ ಮುಂತಾದವುಗಳು ವಿಧಿ ನಿಷೇಧದ ಉದಾಹರಣೆಗಳಾಗಿವೆ.

ನೈತಿಕ ನಿಯಮಗಳಲ್ಲಿ ಕಂಡುಬರುವ ನಿಯಮ ಮತ್ತು ನಿಷೇಧಗಳು ಸ್ಥಿರವಾಗಿರದೆ ಪರಿವರ್ತನಾಶೀಲವಾಗಿರುತ್ತವೆ. ಒಂದು ಸಮಯದಲ್ಲಿ ನಿಯಮವಾದದ್ದು ಕೆಲವೊಂದು ಅವಧಿಯ ನಂತರ ನಿಷೇಧವಾಗಬಹುದು. ಉದಾಹರಣೆಗಾಗಿ, ವೇದಕಾಲದಲ್ಲಿ ಪ್ರಾಣಿಹತ್ಯೆ ನಿಯಮವಾಗಿದ್ದಿತು. ಆದರೆ ಇಂದಿನ ವಿಜ್ಞಾನಯುಗದಲ್ಲಿ ಅದು ನಿಷೇಧವಾಗಿರುವುದನ್ನು ಕಾಣುತ್ತೇವೆ. ಅದೇ ರೀತಿಯಾಗಿ ಸಹಗಮನ, ಅಸ್ಪೃಶ್ಯತೆ, ವಿಧವಾ ವಿವಾಹದ

Digitised by Bharatavani, CIIL

ಮೇಲೆ ನಿಬಂಧನೆ ಮುಂತಾದ ಪದ್ಧತಿಗಳು ಪ್ರಾಚೀನ ಕಾಲದಲ್ಲಿ ನಿಯಮಗಳೆನಿಸಿ ಇಂದು ಅಪರಾಧವೆಂದು ಪರಿಗಣಿಸಲ್ಪಡುತ್ತಿವೆ.

**ನೈತಿಕ ನಿಯಮಗಳ ಲಕ್ಷಣಗಳು** : ನೈತಿಕ ನಿಯಮಗಳ ಪ್ರಮುಖವಾದ ಲಕ್ಷಣಗಳನ್ನು ಈ ರೀತಿಯಾಗಿ ಅಧ್ಯಯನ ಮಾಡಬಹುದಾಗಿದೆ.

ನೈತಿಕ ನಿಯಮಗಳಿಗೆ ಧರ್ಮದ ಹಾಗೂ ಮೌಲ್ಯಗಳ ಆಧಾರವಿರುತ್ತದೆ. ಸಾಮಾನ್ಯವಾಗಿ ನೈತಿಕ ನಿಯಮಗಳು ಮೌಲ್ಯಗಳ ಹಾಗೂ ಧರ್ಮದ ಬೆಂಬಲವನ್ನು ಪಡೆದಿರುತ್ತವೆ. ಧರ್ಮದ ನೆಲೆಗಟ್ಟಿನ ಮೇಲೆ ಬೆಳೆದು ಬಂದಿರುವ ನೈತಿಕ ನಿಯಮಗಳು ಹೆಚ್ಚು ಪ್ರಬಲ ಹಾಗೂ ಶಕ್ತಿಯುತ ಸಾಮಾಜಿಕ ನಿಯಂತ್ರಣ ಶಕ್ತಿಗಳಾಗಿ ನಮಗೆ ಕಂಡುಬರುತ್ತವೆ. ಜನರು ಲೋಕರೂಢಿಗಳನ್ನು ಸುಲಭವಾಗಿ ಉಲ್ಲಂಘನೆ ಮಾಡುವಂತೆ ನೈತಿಕ ನಿಯಮಗಳನ್ನು ಉಲ್ಲಂಘನೆ ಮಾಡಲಾರರು.

ನೈತಿಕ ನಿಯಮಗಳು ಹೆಚ್ಚು ಸ್ಥಿರ ಮತ್ತು ನಿರಂತರವಾಗಿರುತ್ತವೆ. ಲೋಕರೂಢಿಗಳಂತೆ ನೈತಿಕ ನಿಯಮಗಳು ಅಸ್ಥಿರ ಮತ್ತು ಕ್ಷಣಿಕವಾಗಿರಲಾರವು. ಕ್ರೈಸ್ತ ಧರ್ಮದ ಬೆಟ್ಟದ ಮೇಲಿನ ಹತ್ತು ಆಜ್ಞೆಗಳು, ಜೈನಧರ್ಮದ ಅಹಿಂಸಾ ತತ್ವ, ಹಿಂದೂ ಧರ್ಮದ ಸಮನ್ವಯ ದೃಷ್ಟಿ ಮುಂತಾದವುಗಳು ಶಾಶ್ವತವಾದ ನೈತಿಕ ನಿಯಮಗಳಾಗಿ ಪ್ರಾಚೀನಕಾಲದಿಂದಲೂ ಬೆಳೆದು ಬಂದಿರುವುದನ್ನು ಗಮನಿಸುತ್ತೇವೆ.

ನೈತಿಕ ನಿಯಮಗಳು ವೈವಿಧ್ಯಮಯವಾಗಿರುತ್ತವೆ.

ವಿವಿಧ ಸಮೂಹ ಮತ್ತು ಸಂಸ್ಕೃತಿಗಳಲ್ಲಿ ಭಿನ್ನ ಭಿನ್ನ ರೀತಿಯ ನೈತಿಕ ನಿಯಮಗಳನ್ನು ಕಾಣಬಹುದಾಗಿದೆ. ಒಂದು ಪ್ರದೇಶದಲ್ಲಿ ನೀತಿಯೆನಿಸಿರುವುದು ಮತ್ತೊಂದು ಪ್ರದೇಶದಲ್ಲಿ ಅನೀತಿಯಾಗಿ ಕಾಣಬಹುದು. ಒಂದು ಸಮಯದಲ್ಲಿ ಸರಿ ಎನಿಸುವುದು ಬೇರೆ ಸಮಯದಲ್ಲಿ ತಪ್ಪು ಎನಿಸಬಹುದು. ಹಿಂದೂಗಳಲ್ಲಿ ಗೌರವ ಸೂಚಿಸಲು ಪಾದಮುಟ್ಟಿ ನಮಸ್ಕರಿಸುವ ಪದ್ಧತಿಯಿದ್ದರೆ, ಪಾಶ್ಚಿಮಾತ್ಯರಲ್ಲಿ ಕೈ ಕುಲುಕುವುದು, ಮುಗುಳು ನಗೆ ಬೀರುವುದು, ಹ್ಯಾಟು ತೆಗೆಯುವುದು ಮುಂತಾದವುಗಳು ಗೌರವದ ಸಂಕೇತಗಳಾಗಿವೆ.

ನೈತಿಕ ನಿಯಮಗಳು ಹೆಚ್ಚು ಶಕ್ತಿಯುತ ಮತ್ತು ಪರಿಣಾಮಕಾರಿಯಾಗಿರುತ್ತವೆ. ಲೋಕರೂಢಿಗಳಂತೆ ನೈತಿಕ ನಿಯಮಗಳು ಹೆಚ್ಚು ಶಿಥಿಲ ಹಾಗೂ ಶಕ್ತಿಹೀನವಾಗಿರದೆ, ಬಲಿಷ್ಟ ಹಾಗೂ ಮಹತ್ವಪೂರ್ಣವಾಗಿರುವುದನ್ನು ಗಮನಿಸುತ್ತೇವೆ. ಕೆಲವೊಂದು ಸಂದರ್ಭಗಳಲ್ಲಿ ಎಂಥ ಚಟುವಟಿಕೆಗಳನ್ನೂ ನೈತಿಕ ನಿಯಮಗಳು 'ಸರಿ' ಎಂದು ಘೋಷಿಸಬಹುದಾಗಿದೆ.

ಸಮಾಜ ಜೀವನದಲ್ಲಿ ನೈತಿಕ ನಿಯಮಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ವ್ಯಷ್ಟಿ ಮತ್ತು ಸಮಷ್ಟಿಯ ಹಿತಕ್ಕಾಗಿ ನೈತಿಕ ನಿಯಮಗಳು ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ಮೆಕೈವರ್ ಮತ್ತು ಸಿ.ಎಚ್. ಫೇಜರು ನೈತಿಕ ನಿಯಮಗಳ ಮಹತ್ವವನ್ನು ಈ ರೀತಿಯಾಗಿ ವಿವರಿಸಿರುತ್ತಾರೆ.

1. ವ್ಯಕ್ತಿಯ ವರ್ತನೆಗಳ ಮೇಲೆ ಪ್ರಭಾವ ನೈತಿಕ ನಿಯಮಗಳು ವ್ಯಕ್ತಿಯ ವರ್ತನೆಗಳನ್ನು ನಿರ್ಧರಿಸುತ್ತವೆ. ವ್ಯಕ್ತಿಯು ಯಾವ ಕಾರ್ಯಗಳನ್ನು ಮಾಡಬೇಕು ಹಾಗೂ ಯಾವ ಕಾರ್ಯಗಳನ್ನು ಮಾಡಬಾರದು ಎಂಬ ವಿಷಯದ ಬಗೆಗೆ ನೈತಿಕ ನಿಯಮಗಳು ಆತನಿಗೆ ಮಾರ್ಗದರ್ಶನ ನೀಡುತ್ತವೆ. ಅನೈತಿಕ ವರ್ತನೆಗಳಲ್ಲಿ ತೊಡಗದಂತೆ ನಿರ್ಬಂಧನೆಗಳನ್ನು ವಿಧಿಸುತ್ತವೆ. ವ್ಯಕ್ತಿತ್ವದ ವಿಕಸನಕ್ಕೆ ಸಹಾಯಕಾರಿ ಅಂಶಗಳಾಗಿ ಕಾರ್ಯನಿರ್ವಹಿಸುತ್ತವೆ.

2. ವ್ಯಕ್ತಿಯನ್ನು ಸಂಘಜೀವಿಯನ್ನಾಗಿ ಮಾಡುವುದು : ನೈತಿಕ ನಿಯಮಗಳು ವ್ಯಕ್ತಿಯನ್ನು ಸಮೂಹದೊಂದಿಗೆ ಗುರುತಿಸಿ ಅನ್ಯ ಸದಸ್ಯರೊಂದಿಗೆ ಆತ ಸಮರಸವಾಗಿ, ಬೆರೆತುಕೊಳ್ಳುವಂತೆ ಪ್ರೇರೇಪಿಸುತ್ತವೆ. ವ್ಯಕ್ತಿ–ಅನ್ಯವ್ಯಕ್ತಿಗಳನ್ನು ಸರಿಯಾಗಿ ಅರಿತುಕೊಂಡು ಅವರೊಂದಿಗೆ ಒಂದಾಗಿ ಕಾರ್ಯ ಮಾಡಲು ನೈತಿಕ ನಿಯಮಗಳು ಸಹಾಯ ಮಾಡುತ್ತವೆ.

3. ಸಾಮಾಜಿಕ ಭದ್ರತೆ ಮತ್ತು ಐಕ್ಯತೆಯನ್ನು ಹೆಚ್ಚಿಸುವುದು.

ನೈತಿಕ ನಿಯಮಗಳು ಸಮಾಜದಲ್ಲಿ ಭಾವೈಕ್ಯತೆಯನ್ನು ಬೆಳೆಸುತ್ತವೆ. ಸದಸ್ಯರಲ್ಲಿ ನಾವೆಲ್ಲ ಒಂದು ಎಂಬ ಮನೋಭಾವನೆ ಕಂಡುಬರುತ್ತವೆ. ನೈತಿಕ ನಿಯಮಗಳ ಬಗೆಗೆ ಜನರಲ್ಲಿ ಹೆಚ್ಚಿನ ವಿಶ್ವಾಸವಿರುವುದರಿಂದ ಸಮಾಜದಲ್ಲಿ ವಿನಾಶಕಾರಕ ಚಟುವಟಿಕೆಗಳು ಕಡಿಮೆಯಾಗಿ ಪ್ರತಿಯೊಬ್ಬ ವ್ಯಕ್ತಿಯು ನಿರ್ಭೀತ ಮತ್ತು ನಿಶ್ಚಿತ ಬದುಕನ್ನು ಸಾಗಿಸುವಂತಾಗುತ್ತದೆ. ನೈತಿಕ ನಿಯಮಗಳು ವಿವಿಧ ಜಾತಿ, ವರ್ಗ, ಪ್ರದೇಶ ಹಾಗೂ ಸಂಸ್ಕೃತಿಗಳ ಜನರಿಗೆ ರಕ್ಷಾ ಕವಚದಂತೆ ಕಾರ್ಯನಿರ್ವಹಿಸುತ್ತವೆ.

4. ಶಾಸನಗಳ ರಚನೆಗೆ ಸಹಾಯ: ಸಂಪ್ರದಾಯ ಮತ್ತು ಲೋಕರೂಢಿಗಳಲ್ಲಿ ನೈತಿಕತೆ ಇಲ್ಲದಿರುವುದನ್ನು ಕೆಲವೊಂದು ಸಂದರ್ಭಗಳಲ್ಲಿ ಗಮನಿಸುತ್ತೇವೆ. ಉದಾಹರಣೆಗಾಗಿ; ಪ್ರಾಣಿಬಲಿ, ದೇವದಾಸಿ ಪದ್ಧತಿ, ಅಸ್ಪೃಶ್ಯತೆ, ಮಡಿ–ಮೈಲಿಗೆ ಮುಂತಾದ ಸಂಪ್ರದಾಯಗಳು ವಿಚಾರ ಮತ್ತು ವಿವೇಕಗಳಿಲ್ಲದೆ ಬೆಳೆದು ಬಂದಿರುತ್ತವೆ. ಇಂಥ ನಂಬಿಕೆಗಳನ್ನು ನೀತಿಬಾಹಿರವೆಂದು ಪರಿಗಣಿಸಲಾಗುತ್ತದೆ. ಶಾಸನಬದ್ಧವಾಗಿಯೂ ಇವುಗಳನ್ನು ಶಾಸನಬಾಹಿರ ಚಟುವಟಿಕೆಗಳೆಂದು ತಿಳಿಯಲಾಗುತ್ತದೆ. ಯಾವ ಚಟುವಟಿಕೆಗಳನ್ನು ನೈತಿಕ ನಿಯಮಗಳು ವಿರೋಧಿಸುತ್ತವೆಯೋ, ಅಂಥ ಚಟುವಟಿಕೆಗಳನ್ನು ಶಾಸನಗಳೂ ವಿರೋಧಿಸುತ್ತವೆ. ಅಂದರೆ ಶಾಸನಬಾಹಿರ ಚಟುವಟಿಕೆಗಳು ನೀತಿಬಾಹಿರವೂ ಹೌದು. ಯಾವದೇ ಸಂಪ್ರದಾಯ ನೀತಿಯುಕ್ತವಾದದ್ದೋ ಅಥವಾ ಅನೀತಿಯಿಂದ ಕೂಡಿದ್ದೋ ಎಂಬುದನ್ನು ನೈತಿಕ ನಿಯಮಗಳು ನಿರ್ಧರಿಸುತ್ತವೆ. ಕಾಯ್ದೆ ಕಾನೂನುಗಳ ರಚನೆಯಲ್ಲಿ ನೈತಿಕ ನಿಯಮಗಳು ಸಂಪೋಷಣಾಶಕ್ತಿಗಳಂತೆ ಕಾರ್ಯನಿರ್ವಹಿಸುತ್ತವೆ. ನೈತಿಕ ನಿಯಮಗಳ ತಳಹದಿಯ ಮೇಲೆಯೇ ಶಾಸನಗಳನ್ನು ರಚಿಸಲಾಗಿರುತ್ತದೆ.

ಕೆಲವೊಂದು ಚಟುವಟಿಕೆಗಳು ನೈತಿಕವಾಗಿ ಹಾಗೂ ಶಾಸನಬದ್ಧವಾಗಿ ಸರಿಯೆನಿಸಿದರೂ ಸಂಪ್ರದಾಯ ವಿರುದ್ಧವಾಗಿ ವಿವಾಹ ಕಂಡುಬರುತ್ತವೆ. ಉದಾಹರಣೆಗಾಗಿ; ಅಂತರ್ಜಾತಿಯ, ಒಂದು ಜಾತಿಗೆ ಸಂಬಂಧಿಸಿದ ವ್ಯಕ್ತಿ ಅದೇ ಜಾತಿಯಲ್ಲಿಯೇ ಮದುವೆಯಾಗಬೇಕೆಂದು ಸಂಪ್ರದಾಯ ಹೇಳಿದರೆ, ವ್ಯಕ್ತಿ ತನ್ನ ಮನಸ್ಸಿಗೆ ಬಂದ ಜಾತಿ, ಮತ ಹಾಗೂ ಧರ್ಮಗಳಿಂದ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಬಹುದೆಂದು ಶಾಸನ ಹಾಗೂ ನೈತಿಕ ನಿಯಮಗಳು ಹೇಳುತ್ತವೆ.

ಲೋಕರೂಢಿ ಹಾಗೂ ನೈತಿಕ ನಿಯಮಗಳಲ್ಲಿ ಕೆಲವೊಂದು ಮೂಲಭೂತವಾದ ಅಂತರಗಳನ್ನು ಕಾಣುತ್ತೇವೆ.

ನ್ಯಾಯ–ಅನ್ಯಾಯ, ನೀತಿ–ಅನೀತಿ ಮುಂತಾದ ವಿಚಾರಗಳು ನೈತಿಕ ನಿಯಮಗಳನ್ನು ಅವಲಂಬಿಸಿರುತ್ತವೆಯೇ ಹೊರತು ಲೋಕರೂಢಿಗಳನ್ನಲ್ಲ. ನೈತಿಕ ನಿಯಮಗಳ ಉಲ್ಲಂಘನೆಯು ಲೋಕರೂಢಿಗಳ ಉಲ್ಲಂಘನೆಯಷ್ಟು ಸುಲಭವಲ್ಲ. ನೈತಿಕ ನಿಯಮಗಳನ್ನು ಪಾಲಿಸದ ವ್ಯಕ್ತಿಗಳಿಗೆ ಸಮೂಹವು ದಂಡ ಅಥವಾ ಇತರ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಲೋಕರೂಢಿಗಳನ್ನು ಪಾಲಿಸದವರ ಮೇಲೆ ಯಾವುದೇ ಕ್ರಮಗಳನ್ನು ತೆಗೆದುಕೊಂಡ ಉದಾಹರಣೆಗಳಿಲ್ಲ. ಲೋಕರೂಢಿಗಳನ್ನು ತೀವ್ರಗತಿಯಲ್ಲಿ ಬದಲಾವಣೆ ಮಾಡಿಕೊಂಡಂತೆ

Digitised by Bharatavani, CIIL

ನೈತಿಕ ನಿಯಮಗಳನ್ನು ಬದಲಾವಣೆ ಮಾಡಿಕೊಳ್ಳಲು ಬರಲಾರದು. ನೈತಿಕ ನಿಯಮಗಳು ಲೋಕರೂಢಿಗಳಿಗಿಂತಲೂ ಸುದೀರ್ಘವಾಗಿ ಮತ್ತು ಆಳವಾಗಿ ಬೇರು ಬಿಟ್ಟಿರುತ್ತವೆ.

ಕೊನೆಯದಾಗಿ, ನೈತಿಕ ನಿಯಮಗಳು ಸಮಾಜಕಲ್ಯಾಣ ಮತ್ತು ಸಮಾಜದ ಏಳ್ಗೆಗೆ ಹೆಚ್ಚು ಮಹತ್ವ ನೀಡುತ್ತವೆ. ಲೋಕರೂಢಿಗಳೆಲ್ಲವೂ ಸಮಾಜ ಕಲ್ಯಾಣ ಮತ್ತು ಸಮಾಜದ ಹಿತವನ್ನು ಸಾಧಿಸುತ್ತವೆಯೆಂದು ಹೇಳಲು ಬರಲಾರದು. ಕೆಲವೊಂದು ಲೋಕರೂಢಿಗಳನ್ನು ಅಜ್ಞಾನ ಮತ್ತು ಅಂಧಾನುಕರಣೆಗಳ ತಳಹದಿಯ ಮೇಲೆ ಮುಂದುವರೆಸಿಕೊಂಡು ಬಂದಿರುತ್ತೇವೆ. ಸಾಮಾನ್ಯವಾಗಿ ನೈತಿಕ ನಿಯಮಗಳಲ್ಲಿ ಅಂಧಾನುಕರಣೆಗೆ ಆಸ್ಪದವಿರಲಾರದು.

**ಅರ್ಥ ವಿವರಣೆ: ವಿಲಿಯಂ ಜಿ ಸಮ್ನರ:** "ಯಾವ ಪೂರ್ವಯೋಜನೆ, ಸಂಕಲ್ಪ ಹಾಗೂ ಉದ್ದೇಶಗಳಿಲ್ಲದೇ ಸಹಜವಾಗಿ ಬೆಳೆದು ಬಂದ ಕಾರ್ಯ ಚಟುವಟಿಕೆ ಹಾಗೂ ರೀತಿ ನೀತಿಗಳೇ ಲೋಕರೂಢಿಗಳು."

**ಎ. ಡಬ್ಲು ಗ್ರೀನ್ :** "ಒಂದು ಸಮಾಜ ಅಥವಾ ಸಮೂಹಕ್ಕೆ ಸಾಮಾನ್ಯವಾಗಿ ಅನ್ವಯಿಸುವ ಹಾಗೂ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸಲ್ಪಡುವ ವರ್ತನೆಯ ನಿಯಮಗಳೇ ಲೋಕರೂಢಿಗಳು."

**ಗಿಲಿನ್ ಮತ್ತು ಗಲಿನ್ :** "ದಿನನಿತ್ಯದ ಬದುಕಿನಲ್ಲಿಯ ವರ್ತನೆಯ ನಿಯಮಗಳೇ ಲೋಕರೂಢಿಗಳು. ಸಮೂಹದಲ್ಲಿ ಅರಿವಿಲ್ಲದೆಯೇ ಇವು ಬೆಳೆದು ಬಂದಿರುತ್ತವೆ."

**ಮೆರಿಲ್ :** "ಲೋಕರೂಢಿಗಳು ಹೆಸರಿಗೆ ತಕ್ಕಂತೆ ಜನಸಾಮಾನ್ಯರ ಜೀವನ ರೀತಿಗಳಾಗಿವೆ. ಸಮೂಹದ ದೈನಂದಿನ ಬದುಕಿನಲ್ಲಿ ಸಾಮಾಜಿಕ ಅಭ್ಯಾಸ ಹಾಗೂ ಸಾಮಾಜಿಕ ಬಯಕೆಗಳಾಗಿ ಅವು ಕಂಡುಬರುತ್ತವೆ."

ಮಾನವನು ತನ್ನ ವೈವಿಧ್ಯಮಯವಾದ ಬೇಡಿಕೆಗಳ ಪೂರೈಕೆಗಾಗಿ ಕೆಲವೊಂದು ಕ್ರಮ ಹಾಗೂ ನಿಯಮಗಳನ್ನು ಬೆಳೆಸಿಕೊಂಡು ಬಂದಿರುತ್ತಾನೆ. ಕಾಲ ಗತಿಸಿದಂತೆ ಇಂಥ ಆಚರಣೆಯ ಮಾರ್ಗಗಳಿಗೆ ಸಮಾಜದ ಮನ್ನಣೆ ದೊರೆಯುತ್ತದೆ. ವ್ಯಕ್ತಿಯ ಬದುಕಿನಲ್ಲಿ ಲೋಕರೂಢಿಗಳು ವ್ಯಕ್ತಿಯ ಬದುಕಿನ ಅನಿವಾರ್ಯ ಚಟುವಟಿಕೆಗಳಾಗಿ ಕಂಡುಬರುತ್ತವೆ. ನಮ್ಮ ಆಹಾರ ವಿಹಾರ, ವೇಷಭೂಷಣ, ಆಟ ಪಾಠ. ಸಂಭಾಷಣೆ ಮುಂತಾದವುಗಳೆಲ್ಲವೂ ಲೋಕರೂಢಿಗಳಿಗೆ ತಕ್ಕಂತೆ ಮುಂದುವರೆದುಕೊಂಡು ಬಂದಿರುತ್ತವೆ. ರಸ್ತೆಯ ಬಲಬದಿಗೆ ನಡೆಯುವುದು ವಾಹನಗಳನ್ನು ಎಡಗಡೆಯಿಂದ ನಡೆಸುವುದು ಋತುಮಾನಕ್ಕೆ ತಕ್ಕಂತೆ ಬಟ್ಟೆಬರೆಯನ್ನು ಧರಿಸುವುದು, ಕೈ ಜೋಡಿಸಿ ನಮಸ್ಕರಿಸುವುದು, ಮಣೆಯ ಮೇಲೆ ಕುಳಿತು ಊಟ ಮಾಡುವುದು, ಟೇಬಲ್ ಪದ್ಧತಿಯ ಊಟ, ಸ್ತ್ರೀಯರು ಹೂ ಮುಡಿದುಕೊಳ್ಳುವುದು ಮುಂತಾದ ಹಲವಾರು ಲೋಕರೂಢಿಗಳು ನಮ್ಮ ಸಮಾಜದಲ್ಲಿ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ.

**ಶೈಕ್ಷಣಿಕ ಮಹತ್ವ**

ಅ) ಸಾಂಸ್ಕೃತಿಕ ಲಕ್ಷಣಗಳನ್ನು ಶಿಕ್ಷಣದ ಮೂಲಕ ಮಕ್ಕಳಿಗೆ ಕೊಟ್ಟಾಗ ಅವುಗಳಿಂದ ಮಗು ವ್ಯಕ್ತಿತ್ವದಲ್ಲಿ ಸಂಸ್ಕೃತಿಯನ್ನು ಬೆಳೆಸಿಕೊಂಡು ಉತ್ತಮ ನಾಗರಿಕನಾಗಿ ಬೆಳೆಯುತ್ತದೆ.

ಆ) ವ್ಯಕ್ತಿತ್ವ ವಿಕಾಸ ಉತ್ತಮವಾಗಿ ಸಾಗಬೇಕಾದರೆ ಅದಕ್ಕೆ ಸಾಂಸ್ಕೃತಿಕ ನಿಯಮಗಳು ಪರಸ್ಪರಬಾಂಧವ್ಯ, ಸಹೋದರತೆ ಮುಂತಾದವುಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕೊಟ್ಟಾಗ ಮಗುವಿನ ವ್ಯಕ್ತಿತ್ವ ಸುಸಂಸ್ಕೃತವಾಗುತ್ತದೆ. ಪರಿಣಾಮವಾಗಿ ರಾಷ್ಟ್ರೀಯ ಐಕ್ಯತೆ, ಭಾವೈಕ್ಯತೆಯನ್ನು ಬೆಳೆಸಿಕೊಳ್ಳುತ್ತಾನೆ. ಇ) ರಾಷ್ಟ್ರದಲ್ಲಿ ಸಮಾಜದಲ್ಲಿ ಉಂಟಾಗುತ್ತಿರುವ ವಿಛಿದ್ರಕಾರಕ ಶಕ್ತಿಗಳನ್ನು ತಡೆಗಟ್ಟಬೇಕಾದರೆ ಅದಕ್ಕೆ ಸಾಂಸ್ಕೃತಿಕ ಹಿನ್ನೆಲೆಯ ಶಿಕ್ಷಣ ನೀಡಬೇಕು. ಈ. ಶಿಕ್ಷಣದ ಪಠ್ಯಕ್ರಮದಲ್ಲಿ ಸಂಪ್ರದಾಯ ಲೋಕರೂಢಿಗಳು ನೈತಿಕ ನಿಯಮಗಳನ್ನು ಅಳವಡಿಸಿದಾಗ ಮಗುವಿನ ಬೆಳವಣಿಗೆ ನೈಜವಾಗಿ ಬೆಳೆದು ಉತ್ತಮ ಸಮಾಜವನ್ನು ನಿರ್ಮಾಣಮಾಡಬಹುದು. ಉ. ಶಿಕ್ಷಣದ ಪ್ರಮುಖ ಪ್ರಕ್ರಿಯೆ ವಿದ್ಯಾರ್ಥಿ – ಶಿಕ್ಷಕ ಸಮಾಜಗಳ ನಡುವಣ ಸಂಬಂಧದ ಚಟುವಟಿಕೆಗಳು ವಿದ್ಯಾರ್ಥಿ ನೇರವಾಗಿ ಸಮಾಜದಲ್ಲಿ ಬಾಳಿ ಬದುಕಬೇಕಾಗುತ್ತದೆ. ಅದಕ್ಕಾಗಿ ಸಾಂಸ್ಕೃತಿಕ ಕಟ್ಟಳೆಗಳಿಗೆ ಸಂಬಂಧಿಸಿದ ಶಿಕ್ಷಣ ಕೊಟ್ಟರೆ ಉತ್ತಮವಾದ ಆರೋಗ್ಯಯುತ ಸಮಾಜವನ್ನು ನಿರ್ಮಾಣ ಮಾಡಬಹುದು.

ಈ ರೀತಿಯಾಗಿ ವ್ಯಕ್ತಿ ಬಿಟ್ಟು ಸಮಾಜವಿಲ್ಲ ಸಮಾಜವೆಂದರೆ ಜನರ ಸಮೂಹ. ಸಮಾಜ ಮತ್ತು ವ್ಯಕ್ತಿ ಉತ್ತಮವಾಗಿ ಆರೋಗ್ಯಯುತವಾಗಿರಬೇಕೆಂದರೆ ಸಾಂಸ್ಕೃತಿಕ ಶಿಕ್ಷಣ ಬೇಕು.

–ಎಸ್.ಎಸ್.ಹೂ

## ಸಾಂಸ್ಥಿಕ ಯೋಜನೆ

ಯಾವುದೇ ಕಾರ್ಯವನ್ನು ರೂಢಿಗತವಾಗಿ, ಸಮಯಕ್ಕೆ ತೋಚಿದಂತೆ, ಗೊತ್ತುಗುರಿ ಇಲ್ಲದೆ ಮಾಡುವುದಕ್ಕಿಂತ ಅದೇ ಕಾರ್ಯವನ್ನು ಚೆನ್ನಾಗಿ ಯೋಚನೆ ಮಾಡಿ ಯೋಜನೆ ರೂಪಿಸಿಕೊಂಡು ವ್ಯವಸ್ಥಿತ ರೀತಿಯಲ್ಲಿ ಮಾಡುವುದು ಉತ್ತಮ ಫಲಿತಾಂಶಗಳನ್ನು ಕೊಡುತ್ತದೆ ಎನ್ನುವುದು ಅನುಭವದ ವಿಷಯವಾಗಿದೆ. ಯಾವುದೇ ಕಾರ್ಯದ ಬಗ್ಗೆ ಯೋಜನೆ ಮಾಡುವಾಗ ಈಗ ಇರುವ ಪರಿಸ್ಥಿತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಮತ್ತು ಆ ಪರಿಸ್ಥಿತಿಗಳನ್ನು ಇನ್ನೂ ಉತ್ತಮಗೊಳಿಸಲು ಯೋಚಿಸಬೇಕು. ಹಾಗೆ ಯೋಚಿಸುವಾಗ ಈಗ ಇರುವ ನಿರ್ಬಂಧ ಅಥವಾ ಮಿತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯೋಜನೆಯನ್ನು ರೂಪಿಸುವುದೆಂದರೆ ಅಡೆತಡೆಗಳನ್ನು ಗುರ್ತಿಸಿ ಅವುಗಳನ್ನು ನಿವಾರಣೆ ಮಾಡಬಹುದಾದ ಸಕಾಲಿಕ ಪರಿಹಾರ ಕ್ರಮಗಳನ್ನು ಯೋಜನೆಯಲ್ಲಿಯೇ ಒಳಗೊಳ್ಳುವಂತೆ ಯೋಜನೆಯನ್ನು ಮೇಲ್ವಿಚಾರಣೆ ಮಾಡುವ ಮತ್ತು ಮೌಲ್ಯಮಾಪನ ಮಾಡುವ ಪ್ರಭಾವಯುತ ತಂತ್ರಗಳೂ ಸೇರಿದಂತೆ ರೂಪಿಸಬೇಕೆಂದು ಅರ್ಥ.

ಭಾರತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ವ್ಯವಸ್ಥಿತ ಯೋಜನೆಯನ್ನು ರೂಪಿಸುವ ಕ್ರಮ 60 ವರ್ಷಗಳ ಹಿಂದೆಯೆ ಆರಂಭವಾಯಿತು. ಶೈಕ್ಷಣಿಕ ಯೋಜನೆಯು ಸಾಮಾಜಿಕ, ಆರ್ಥಿಕ ಯೋಜನೆಯ ಅವಿಭಾಜ್ಯ ಭಾಗವೆನಿಸಿದೆ. ಆದರೆ ಈ ಕ್ಷೇತ್ರಗಳಲ್ಲಿ ಯಾವುದೇ ಯೋಜನೆಯನ್ನು ರೂಪಿಸುವಾಗ ಬಹಳ ಕಾಲದವರೆಗೆ ಮೇಲಿನಿಂದ ಅಂದರೆ ರಾಷ್ಟ್ರಮಟ್ಟದಿಂದ ಆರಂಭಿಸಿ, ಕೆಳಗಿನ ಮಟ್ಟಗಳಿಗೆ ಅಂದರೆ ಸಂಸ್ಥೆ / ಹಳ್ಳಿ ಇತ್ಯಾದಿ ಘಟಕಗಳ ಕಡೆಗೆ ಮುಂದುವರೆಯಲಾಗುತ್ತಿತ್ತು. ಆದರೆ ಶೈಕ್ಷಣಿಕ ಕ್ಷೇತ್ರಕ್ಕೆ ಈ ರೀತಿಯ ಯೋಜನಾಕ್ರಮ ಹೆಚ್ಚು ಫಲಕಾರಿಯಾಗಲಿಲ್ಲ. ಹೀಗಾಗಿ ಅನೇಕ ಶೈಕ್ಷಣಿಕ ಯೋಜನೆಗಳು ಕಾರ್ಯಾನ್ವಯಗೊಂಡರೂ, ನಮ್ಮ ದೇಶದ ಮೂಲ ಮಟ್ಟದ ಶೈಕ್ಷಣಿಕ ಸಂಸ್ಥೆಗಳು (ಶಾಲೆಗಳು) ಈ ಯೋಜನೆಗಳ ಬಗ್ಗೆ ಆಸ್ಥೆ ವಹಿಸದೆ ಇದ್ದುದರಿಂದ ಅವುಗಳ ಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆ ಆಗಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಕೊಥಾರಿಯವರ ಅಧ್ಯಕ್ಷತೆಯ ಭಾರತೀಯ ಶಿಕ್ಷಣ ಆಯೋಗ (1964–66) ಹೀಗೆ ಅಭಿಪ್ರಾಯ ಪಟ್ಟಿದೆ: "ಶೈಕ್ಷಣಿಕ ವಿಕಾಸದ ಯಾವುದೇ ವ್ಯಾಪಕ ಕಾರ್ಯಕ್ರಮ ಅದರಲ್ಲಿ ಒಳಗೊಳ್ಳುವ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯನ್ನು ಮತ್ತು ಅದಕ್ಕೆ

Digitised by Bharatavani, CIIL

ಸಂಬಂಧಿಸಿದ ಮಾನವ ಕಾರಣಾಂಶಗಳನ್ನು– ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯ– ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳದಿದ್ದರೆ ಅದನ್ನು ಸಫಲವಾಗಿ ಪೂರ್ಣಗೊಳಿಸಲು ಎಂದಿಗೂ ಸಾಧ್ಯವಾಗುವುದಿಲ್ಲ".

ಇತ್ತೀಚಿನ ದಶಕಗಳಲ್ಲಿ ಸಾಂಸ್ಥಿಕಮಟ್ಟದ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಗಳನ್ನು ವಿಕೇಂದ್ರೀಕರಣಗೊಳಿಸುವ ಕ್ರಮ ಯೋಜನಾ ಪ್ರಕ್ರಿಯೆಯ ಆಧಾರವಾಗುತ್ತಿದೆ. ಒಂದೊಂದು ಸಂಸ್ಥೆಯನ್ನೂ ಆಧಾರವಾಗಿಟ್ಟುಕೊಂಡು ಅದರ ಪ್ರಗತಿಗೆ ಯೋಜನೆಯನ್ನು ರೂಪಿಸಲಾಗುತ್ತಿದೆ. ಇದರಿಂದಾಗಿ ಆಯಾ ಸಂಸ್ಥೆಗೆ ನೇರವಾಗಿ ಸಂಬಂಧಿಸಿದ ಎಲ್ಲ ಶೈಕ್ಷಣಿಕ ಕಾರ್ಯಕರ್ತರು ಅಂದರೆ ಶಾಲಾ ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರು, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಮತ್ತು ಇತರ ಸಮುದಾಯ ಸದಸ್ಯರು ಸಕ್ರಿಯವಾಗಿ ಯೋಜನೆಯಲ್ಲಿ ಪಾಲ್ಗೊಂಡು, ತಮ್ಮ ನಿರ್ದಿಷ್ಟ ಕೊಡುಗೆಗಳನ್ನು ನೀಡಲು ಸಾಧ್ಯವಾಗುತ್ತದೆ.

ಒಂದು ನಿರ್ದಿಷ್ಟ ಶೈಕ್ಷಣಿಕ ಸಂಸ್ಥೆಯ ಪ್ರಗತಿಗಾಗಿ ವ್ಯವಸ್ಥಿತ ರೀತಿಯಲ್ಲಿ ಸಿದ್ಧಪಡಿಸುವ ಯೋಜನೆಗೆ ಸಾಂಸ್ಥಿಕ ಯೋಜನೆ (Institutional Planning) ಎಂದು ಹೆಸರು. ಈ ರೀತಿಯ ಯೋಜನೆ ಯೋಜನೆಯ ನಿರ್ವಹಣೆಯನ್ನು ಒಳಗೊಳ್ಳುತ್ತದೆ. ಸಾಮಾನ್ಯವಾಗಿ ಯೋಜನೆಗಳಲ್ಲಿ ಮೂರು ರೀತಿಗಳಿವೆ– ದೀರ್ಘಕಾಲೀನ, ಮಧ್ಯಮ ಕಾಲೀನ ಮತ್ತು ಅಲ್ಪಕಾಲೀನ. ಶೈಕ್ಷಣಿಕ ಯೋಜನೆ ಹೆಚ್ಚಿನ ಮಟ್ಟಿಗೆ ಅಲ್ಪಕಾಲೀನ ಅಥವಾ ಮಧ್ಯಮ ಕಾಲೀನ ಅವಧಿಯದಾಗಿರುತ್ತವೆ. ಅಲ್ಪಕಾಲೀನ ಯೋಜನೆ ಒಂದು ವರ್ಷದ ಅವಧಿಯದು, ಮಧ್ಯಮಕಾಲೀನ ಯೋಜನೆ 2 ರಿಂದ 3 ವರ್ಷದ ಅವಧಿಯದೂ ಆಗಿರುತ್ತದೆ.

ಎಂ.ಬಿ. ಬುಚ್‌ರವರು ಸಾಂಸ್ಥಿಕ ಯೋಜನೆಯ ಅರ್ಥವನ್ನು ಈ ರೀತಿ ಪರಿಭಾಷಿಸಿದ್ದಾರೆ–"ಒಂದು ಶೈಕ್ಷಣಿಕ ಸಂಸ್ಥೆಯ ಶಾಲಾ–ಉತ್ತಮಿಕೆಗಾಗಿ, ಅದರ ಅನುಭವಿತ ಅಗತ್ಯಗಳ ಮತ್ತು ಲಭ್ಯವಿರುವ ಸಂಪನ್ಮೂಲಗಳ ಕಾರ್ಯಕ್ರಮಗಳ ಮತ್ತು ಆಚರಣೆ ಲಭ್ಯವಾಗಬಹುದಾದ ಆಧಾರದ ಮೇಲೆ ಸಿದ್ಧಪಡಿಸುವ ಯೋಜನೆಗೆ ಸಾಂಸ್ಥಿಕ ಯೋಜನೆ ಎಂದು ಹೇಳಲಾಗುತ್ತದೆ."

ಈ ಅರ್ಥದಲ್ಲಿ ಸಾಂಸ್ಥಿಕ ಯೋಜನೆ ಎಂದರೆ ಅದು ಒಂದು ಸಂಸ್ಥೆಯನ್ನು ಉತ್ತಮಪಡಿಸುವ ಒಂದು ವ್ಯವಸ್ಥಿತ ಯೋಜನೆಯಾಗಿದೆ. ಸಂಸ್ಥೆಯನ್ನು ಯಾವ ರೀತಿ ಪ್ರಗತಿಪಥದಲ್ಲಿ ಕೊಂಡೊಯ್ಯಬೇಕೆನ್ನುವುದನ್ನು ಪೂರ್ವಭಾವಿಯಾಗಿಯೇ ಯೋಚಿಸುವುದಾಗಿದೆ. ಸಂಸ್ಥೆಯ ಪ್ರಗತಿಗೆ ನಿರ್ದಿಷ್ಟ ಉದ್ದೇಶಗಳನ್ನು ರೂಪಿಸಿ, ಆ ಉದ್ದೇಶಗಳನ್ನು ಹೇಗೆ ಕಾರ್ಯಗತಗೊಳಿಸಬೇಕೆನ್ನುವುದರ ಬಗ್ಗೆ ನಿರ್ದಿಷ್ಟ ಕ್ರಮಗಳನ್ನು ರೂಪಿಸುವ ಯೋಜನೆ ಎನ್ನಿಸುತ್ತದೆ.

"ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯೂ ತನ್ನದೇ ಆದ ರೀತಿಯಲ್ಲಿ ಅಪೂರ್ವವಾಗಿರುವುದರಿಂದ ಪ್ರತಿಯೊಂದು ಸಂಸ್ಥೆಗೂ ಅದರದೇ ಆದ ಸಾಂಸ್ಥಿಕ ಯೋಜನೆಯನ್ನು ರೂಪಿಸಬೇಕಾಗುತ್ತದೆ. ಪ್ರತಿಯೊಂದು ಸಂಸ್ಥೆಯೂ ಶಿಕ್ಷಣದ ಬಗ್ಗೆ ಇರುವ ರಾಷ್ಟ್ರೀಯ ನೀತಿಯ ಚೌಕಟ್ಟಿನ ಪರಿಧಿಗೆ ಒಳಪಟ್ಟಂತೆ ತನ್ನ ಪ್ರಗತಿಗಾಗಿ ತನ್ನದೇ ಆದ ಸಾಂಸ್ಥಿಕ ಯೋಜನೆಯನ್ನು ರೂಪಿಸುವುದನ್ನು ಕಲಿತುಕೊಳ್ಳಬೇಕು"ಎಂದು ಅರ್ಥಶಾಸ್ತ್ರಜ್ಞ ವಿ.ಕೆ.ಆರ್.ವಿ. ರಾವ್ ಅಭಿಪ್ರಾಯಪಟ್ಟಿದ್ದಾರೆ. ಈ ದೃಷ್ಟಿಯಿಂದ ಪ್ರತಿಯೊಂದು ಸಾಂಸ್ಥಿಕ ಯೋಜನೆಯೂ ಅಪೂರ್ವವಾದುದೆಂದು, ಅದು ಆ ಸಂಸ್ಥೆಯ ಅಗತ್ಯಗಳಿಗೆ, ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿರುತ್ತದೆ ಎಂದೂ ತಿಳಿಯಬೇಕು.

ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯೂ ತನ್ನದೇ ಆದ ಯೋಜನೆಯನ್ನು ರೂಪಿಸಿಕೊಂಡು ತನ್ನ ಅಗತ್ಯಗಳನ್ನು ಮತ್ತು ಸಮಸ್ಯೆಗಳನ್ನು ಗುರ್ತಿಸಿಕೊಳ್ಳಬೇಕು. ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಅಗತ್ಯಗಳನ್ನು ಪೂರೈಸಿಕೊಳ್ಳಲು ಮಾರ್ಗೋಪಾಯಗಳನ್ನು ಯೋಚಿಸಿ, ಚರ್ಚಿಸಿ ಅವುಗಳನ್ನು ಕಾರ್ಯಾನ್ವಯಗೊಳಿಸುವ ಮಾರ್ಗಗಳನ್ನು ನಿರ್ಣಯಿಸಿ, ವ್ಯವಸ್ಥಿತವಾದ ಯೋಜನೆಯನ್ನು ಸಿದ್ಧಪಡಿಸಬೇಕು.

ಕೆಲವು ವೇಳೆ ಶಾಲಾ ಕ್ಯಾಲೆಂಡರನ್ನು ಸಾಂಸ್ಥಿಕ ಯೋಜನೆ ಎಂದು ತಪ್ಪಾಗಿ ತಿಳಿಯಲಾಗುತ್ತದೆ. ಶಾಲಾ ಕ್ಯಾಲೆಂಡರಿಗೂ, ಸಾಂಸ್ಥಿಕ ಯೋಜನೆಗೂ ವ್ಯತ್ಯಾಸವಿದೆ. ಶಾಲಾ ಕ್ಯಾಲೆಂಡರ್ ಶಾಲೆಯ ವಾರ್ಷಿಕ ಕಾರ್ಯಯೋಜನೆ ದೃಷ್ಟಿಯಿಂದ ಮುಖ್ಯವೆನಿಸಿದರೂ, ಅದು ಸಾಂಸ್ಥಿಕ ಯೋಜನೆ ಎನಿಸುವುದಿಲ್ಲ. ಏಕೆಂದರೆ ಶಾಲಾ ಕ್ಯಾಲೆಂಡರ್ ಸಂಸ್ಥೆಯ ಅಭಿವೃದ್ಧಿ ಬಗ್ಗೆ ಏನೂ ಹೇಳುವುದಿಲ್ಲ. ಆದರೆ ಸಾಂಸ್ಥಿಕ ಯೋಜನೆಯ ಮುಖ್ಯ ಉದ್ದೇಶ ಸಂಸ್ಥೆಯ ಅಭಿವೃದ್ಧಿಯತ್ತ ಕೇಂದ್ರೀಕೃತವಾಗಿರುತ್ತದೆ. ಆದ್ದರಿಂದ ಸಾಂಸ್ಥಿಕ ಯೋಜನೆಯ ವ್ಯಾಪ್ತಿ ಶಾಲಾ ಕ್ಯಾಲೆಂಡರಿಗಿಂತ ವಿಸ್ತೃತವಾಗಿದ್ದು, ಶಾಲೆಯ ವಿಕಾಸದ ಕಾರ್ಯಕ್ರಮಗಳನ್ನು ಒಳಗೊಳ್ಳುತ್ತದೆ ಮತ್ತು ಇದು ಸಂಸ್ಥೆಯ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದರತ್ತ ಗಮನ ಹರಿಸುತ್ತದೆ.

ಸಾಂಸ್ಥಿಕ ಯೋಜನೆ ಈ ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ.

1. ಸಂಸ್ಥೆ ಸ್ಥಾಪಿತವಾಗಿರುವ ಭೌಗೋಳಿಕ ಕ್ಷೇತ್ರದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯಲ್ಲಿನ ಬೇರೆ ಬೇರೆ ವಯೋಮಾನದ ಮಕ್ಕಳ ಗುಂಪುಗಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದು.
2. ಸಂಸ್ಥೆಯ ಕಾರ್ಯವನ್ನು ಗುಣಾತ್ಮಕವಾಗಿ, ಆರ್ಥಿಕ ದೃಷ್ಟಿಯಿಂದ ಮತ್ತು ಪರಿಮಾಣಾತ್ಮಕವಾಗಿ ಉತ್ತಮಗೊಳಿಸುವುದು.
3. ಸಂಸ್ಥೆಯಲ್ಲಿ ಆಗುತ್ತಿರುವ ಸ್ಥಗಿತತೆ ಮತ್ತು ವ್ಯರ್ಥತೆಯನ್ನು ನಿವಾರಣೆ ಮಾಡುವುದು.
4. ಸಂಸ್ಥೆಯ ಕಾರ್ಯದಲ್ಲಿ ಇರಬಹುದಾದ ಲೋಪದೋಷಗಳನ್ನು ಗುರ್ತಿಸಿ, ಅವುಗಳ ನಿವಾರಣೆಗೆ ಕ್ರಮಗಳನ್ನು ಯೋಜಿಸುವುದು.
5. ಸಂಸ್ಥೆಯ ಮಾನವ ಸಂಪನ್ಮೂಲಗಳನ್ನು ಇನ್ನೂ ಹೆಚ್ಚು ದಕ್ಷತೆಯಿಂದ ಉಪಯೋಗಿಸಿಕೊಳ್ಳುವುದು.
6. ಸಂಸ್ಥೆಯ ಕಾರ್ಯವನ್ನು ವಿಸ್ತಾರಗೊಳಿಸಲು ಯೋಜನೆಯನ್ನು ರೂಪಿಸುವುದು.
7. ಸಂಸ್ಥೆಗೆ ಹೆಚ್ಚಿನ ಸಂಪನ್ಮೂಲಗಳನ್ನು ಗುರ್ತಿಸಿ, ಅವುಗಳನ್ನು ಕ್ರೋಢೀಕರಿಸಲು ಕ್ರಮ ತೆಗೆದುಕೊಳ್ಳುವುದು.
8. ಸಂಸ್ಥೆಯಲ್ಲಿ ಹೊಸ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆರಂಭಿಸುವ ಸಾಧ್ಯತೆಗಳನ್ನು ಯೋಜಿಸುವುದು.
9. ಸಿಬ್ಬಂದಿಯ (ಶಿಕ್ಷಕ/ಶಿಕ್ಷಕೇತರ) ಕಾರ್ಯದಕ್ಷತೆಯನ್ನು ಹೆಚ್ಚಿಸಲು ಮಾರ್ಗಗಳನ್ನು ರೂಪಿಸುವುದು.
10. ಸಂಸ್ಥೆಯಲ್ಲಿ ನವೀನ ಕಾರ್ಯಕ್ರಮಗಳನ್ನು ನಡೆಸಲು ಯೋಜಿಸುವುದು.


Digitised by Bharatavani, CIIL

ಯಾವುದೇ ಸಾಂಸ್ಥಿಕ ಯೋಜನೆ ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕು.

–ಸಾಂಸ್ಥಿಕ ಯೋಜನೆಯು ಸಹಭಾಗಿತ್ವ ಯೋಜನೆ ತತ್ವವನ್ನು ಆಧರಿಸಬೇಕು. ಅಂದರೆ ಯೋಜನೆಯಲ್ಲಿ ಮುಖ್ಯಸ್ಥರಿಂದ ಆರಂಭಿಸಿ, ಪೋಷಕರವರೆಗೆ – ಎಲ್ಲರೂ ಒಳಗೊಂಡಿರಬೇಕು.

–ಅದು ಸಂಸ್ಥೆಯ ಅನುಭವಕ್ಕೆ ಬಂದಿರುವ ಅಗತ್ಯತೆಗಳು ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವಂತಿರಬೇಕು.

–ಅದು ಶಾಲೆಯ ಒಳಗೆ ಮತ್ತು ಹೊರಗಣ ಸಮುದಾಯದಲ್ಲಿರುವ ಸಂಪನ್ಮೂಲಗಳನ್ನು ಗರಿಷ್ಠ ಮಟ್ಟದಲ್ಲಿ ಉಪಯೋಗಿಸಿಕೊಳ್ಳಲು ಕ್ರಮಗಳನ್ನು ಸೂಚಿಸುವಂತಿರಬೇಕು.

–ಸಾಂಸ್ಥಿಕ ಯೋಜನೆಯಲ್ಲಿ ನಮ್ಯತೆಗೆ ಅವಕಾಶವಿರಬೇಕು ಅಂದರೆ ಪರಿಸ್ಥಿತಿಗಳು ಬದಲಾದಂತೆ ಯೋಜನೆಯಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವಂತಿರಬೇಕು.

–ಯೋಜನೆ ವೈಜ್ಞಾನಿಕವಾಗಿರಬೇಕು. ಅಂದರೆ ಅದನ್ನು ರೂಪಿಸುವಾಗ ಲಭ್ಯವಿರುವ ಎಲ್ಲ ತಥ್ಯಾಂಶಗಳನ್ನು ಅಂಕಿ–ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

–ಸಾಂಸ್ಥಿಕ ಯೋಜನೆ ಅಸಾಧ್ಯವಾದ, ವಾಸ್ತವಿಕವಲ್ಲದ ಗುರಿಗಳನ್ನು ಹೊಂದಿರಬಾರದು. ಅದು ಸೂಚಿಸುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ವಾಸ್ತವಿಕ ಸಾಧ್ಯತೆ ಇರಬೇಕು.

ಸಾಂಸ್ಥಿಕ ಯೋಜನೆಯನ್ನು ರೂಪಿಸುವಾಗ ಈ ಕೆಳಕಂಡ ಹಂತಗಳನ್ನು ಸಾಮಾನ್ಯವಾಗಿ ಅನುಸರಿಸಲಾಗುತ್ತದೆ.

1. ಮೊದಲು ಸಂಸ್ಥೆಯಲ್ಲಿರುವ ಎಲ್ಲ ಸಂಪನ್ಮೂಲಗಳನ್ನೂ, ನಡೆಸುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನೂ, ಭೌತಿಕ ಅನುಕೂಲತೆಗಳನ್ನೂ ಸ್ಥೂಲವಾಗಿ ಮೌಲ್ಯಮಾಪನ ಮಾಡಿ ಅವುಗಳಲ್ಲಿ ಇರಬಹುದಾದ ಮಿತಿಗಳನ್ನು, ತೊಂದರೆಗಳನ್ನು, ಸಮಸ್ಯೆಗಳನ್ನು ಗುರ್ತಿಸಿಕೊಳ್ಳಬೇಕು.
2. ಮುಂದಿನ ವರ್ಷಗಳಲ್ಲಿ ಹೆಚ್ಚಾಗಬಹುದಾದ ದಾಖಲಾತಿ, ವರ್ಷವಾರು ಸಂಖ್ಯೆಗಳನ್ನು ಅಂದಾಜು ಮಾಡಿಕೊಳ್ಳಬೇಕು.
3. ಹೀಗೆ ಅಧಿಕಗೊಳ್ಳಬಹುದಾದ ವಿದ್ಯಾರ್ಥಿ ಸಂಖ್ಯೆಗೆ ಬೇಕಾಗುವ ಭೌತಿಕ ಸೌಲಭ್ಯಗಳು, ಅತಿರಿಕ್ತ ಸಿಬ್ಬಂದಿ ಸಂಖ್ಯೆಯನ್ನು ಅಂದಾಜು ಮಾಡುವುದು.
4. ಮುಂದಿನ ಒಂದೆರಡು ವರ್ಷಗಳಲ್ಲಿ ಸರ್ಕಾರ ಮತ್ತು ಸರ್ಕಾರೇತರ ಮೂಲಗಳಲ್ಲಿ ದೊರೆಯಬಹುದಾದ ಹಣಕಾಸಿನ ನೆರವನ್ನು ಮತ್ತು ಸಂಸ್ಥೆಗೆ ವರಮಾನ ಬರಬಹುದಾದ ಮಾರ್ಗಗಳನ್ನು ಮೌಲ್ಯಮಾಪನ ಮಾಡುವುದು.
5. ಹೀಗೆ ಅಂದಾಜು ಮಾಡಿದ ಸಂಪನ್ಮೂಲಗಳು ಮತ್ತು ಹಣಕಾಸಿನ ಮೂಲಗಳ ಆಧಾರದ ಮೇಲೆ ಯೋಜನೆಯಲ್ಲಿ ಸೂಚಿಸಲಿರುವ ಕಾರ್ಯಗಳ ಆದ್ಯತೆಗಳನ್ನು ನಿರ್ಣಯಿಸುವುದು. ಪ್ರತಿಯೊಂದು ಕಾರ್ಯದ ಸಲಹೆಗೂ ಒಂದೆರಡು ಪರ್ಯಾಯ ಮಾರ್ಗಗಳನ್ನು ಸಲಹೆ ಮಾಡುವುದು.
6. ಪ್ರತಿಯೊಂದು ಕಾರ್ಯಕ್ರಮದ ವಿವರಗಳನ್ನು, ಅವುಗಳನ್ನು ಕೈಗೊಳ್ಳುವಾಗ ಅನುಸರಿಸಬೇಕಾದ ಕ್ರಮಗಳನ್ನು ಚರ್ಚಿಸಿ ಅಂತಿಮವಾಗಿ ವಿವರಿಸುವುದು.
7. ಸಲಹೆ ಮಾಡಲಾಗುವ ವಿಸ್ತರಣಾ ಕಾರ್ಯಕ್ರಮಗಳಿಗೆ (ಹೊಸ ಶೈಕ್ಷಣಿಕ ಕಾರ್ಯಕ್ರಮದ ಆರಂಭ, ಕಟ್ಟಡದ ವಿಸ್ತಾರ, ಅನುಕೂಲತೆಗಳ ವಿಸ್ತಾರ ಇತ್ಯಾದಿ) ತಗಲುವ ವೆಚ್ಚವನ್ನು ವಿವರಗಳೊಂದಿಗೆ ಅಂದಾಜು ಮಾಡುವುದು. ಹೀಗೆ ಅಂದಾಜು ಮಾಡುವಾಗ ಪ್ರಸ್ತುತ ಇರುವ ಸಂಪನ್ಮೂಲಗಳ ಇನ್ನೂ ಉತ್ತಮ ರೀತಿಯ ಉಪಯೋಗಕ್ಕೂ, ಮುಂದಿನ ವರ್ಷಗಳಲ್ಲಿ ಹೆಚ್ಚಾಗಬಹುದಾದ ಬೆಲೆಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು.
8. ಯೋಜನೆಯನ್ನು ಜಾರಿಗೊಳಿಸಲು ಎರಡು ಅಥವಾ ಹೆಚ್ಚಿನ ಘಟ್ಟಗಳನ್ನು ಯೋಜಿಸಿ, ಪ್ರತಿಯೊಂದು ಘಟ್ಟಕ್ಕೆ ಬೇಕಾಗುವ ವೆಚ್ಚದ ಮೊತ್ತವನ್ನು ಪ್ರತ್ಯೇಕವಾಗಿ ಸೂಚಿಸಬೇಕು.
9. ಪೋಷಕರನ್ನು ಸಂಸ್ಥೆಗೆ ಆಹ್ವಾನಿಸಿ ಯೋಜನೆಯನ್ನು ಕೂಲಂಕಶವಾಗಿ ಚರ್ಚಿಸಿ, ಅವರ ಸಲಹೆಗಳನ್ನು ತಡೆಯಬೇಕು.
10. ಈ ಸಲಹೆಗಳನ್ನು ಗಮನಕ್ಕೆ ತೆಗೆದುಕೊಂಡು ಯೋಜನೆಗೆ ಅಂತಿಮ ರೂಪಕೊಟ್ಟು ಅದನ್ನು ಜಾರಿಗೊಳಿಸಲು ಆರಂಭಿಸಬೇಕು.

ಸಾಂಸ್ಥಿಕ ಯೋಜನೆಯನ್ನು ರೂಪಿಸುವಾಗ ಸಂಸ್ಥೆಯ ಮುಖ್ಯಸ್ಥರು, ಅಧ್ಯಾಪಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಮುದಾಯದ ಸದಸ್ಯರು– ಈ ಎಲ್ಲರೂ ಪಾಲ್ಗೊಳ್ಳುವುದರಿಂದ ಆ ಯೋಜನೆಯನ್ನು ಕಾರ್ಯಾನ್ವಯಗೊಳಿಸುವುದು ಕಷ್ಟವಾಗುವುದಿಲ್ಲ. ಏಕೆಂದರೆ ಎಲ್ಲರೂ ಸೇರಿ ಯೋಜನೆಯನ್ನು ಜಾರಿಗೊಳಿಸಲು ಸಹಜವಾಗಿಯೇ ಸಹಕರಿಸುತ್ತಾರೆ. ಯೋಜನೆಯು ಆರಂಭವಾದ ನಂತರ ನಿಗದಿತ ಅವಧಿಗಳಲ್ಲಿ ಎಲ್ಲರನ್ನು ಸಭೆಗೆ ಆಹ್ವಾನಿಸಿ ಅವರ ಸಲಹೆ, ಸೂಚನೆಗಳನ್ನು ಪಡೆಯುವುದು ಒಳ್ಳೆಯದು. ಜೊತೆಗೆ, ಯೋಜನೆಯ ಪ್ರಗತಿ ಬಗ್ಗೆ ಅವರಿಗೆ ತಿಳುವಳಿಕೆಯನ್ನು ನೀಡಬಹುದು. ಯೋಜನೆ ಪ್ರಗತಿ ಹೊಂದಿದಂತೆ ಸಂಸ್ಥೆಯ ಇನ್ನೂ ಕೆಲವು ಅಗತ್ಯಗಳು ಗಮನಕ್ಕೆ ಬಂದಾಗ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬಹುದು. ಈ ಸಭೆಗಳಲ್ಲಿ ಯೋಜನೆಯಲ್ಲಿ ಒಳಗೊಂಡಿರುವ ಗುರಿಗಳ ಆದ್ಯತೆಯನ್ನು ನಿರ್ಧರಿಸಿ, ಪ್ರತಿಯೊಂದು ಗುರಿ ಸಾಧನೆಗೂ ಪ್ರತ್ಯೇಕ ಪ್ರಾಯೋಜನೆಯನ್ನು (project) ಸಿದ್ಧಪಡಿಸಲಾಗುತ್ತದೆ. ಯೋಜನೆ ಮುಂದುವರಿದಂತೆ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಗುತ್ತದೆ.

ಯೋಜನೆಯಲ್ಲಿಯೇ ನಿರ್ದಿಷ್ಟ ಪ್ರಾಯೋಜನೆಗಳನ್ನು ರೂಪಿಸುವಾಗ ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು: ಪ್ರಾಯೋಜನೆಯ ಅಗತ್ಯತೆ ಮತ್ತು ಅದಕ್ಕೆ ಸಮರ್ಥನೆ, ಅಳತೆ ಮಾಡುವ ರೂಪದಲ್ಲಿ ಪ್ರಾಯೋಜನೆಯ ನಿರ್ದಿಷ್ಟ ಉದ್ದೇಶಗಳ ನಿರೂಪಣೆ, ಪ್ರಾಯೋಜನೆಗೆ ಬೇಕಾದ ಸಿಬ್ಬಂದಿ ವಿವರ, ಜಾರಿಗೊಳಿಸಲು ಬೇಕಾದ ಅವಧಿ, ಬೇಕಾಗುವ ಸಂಪನ್ಮೂಲಗಳು, ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನದ ವಿಧಾನಗಳು, ಪ್ರತಿಯೊಂದು ಪ್ರಾಯೋಜನೆಯಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳ ವಿವರ.

ಸಾಂಸ್ಥಿಕ ಯೋಜನೆಯನ್ನು ಕಾರ್ಯಗತಗೊಳಿಸುವ ಅವಧಿಯಲ್ಲಿ ಅದನ್ನು ಪ್ರತಿ ಘಟ್ಟದಲ್ಲಿಯೂ ಮೇಲ್ವಿಚಾರಣೆ ಮಾಡಬೇಕಾದುದು ಅವಶ್ಯಕ. ಇದರ ಹೊಣೆಗಾರಿಕೆಯನ್ನು ಸಂಸ್ಥೆಯ ಮುಖ್ಯಸ್ಥ ಹೊರಬೇಕಾಗುತ್ತದೆ. ಮೇಲ್ವಿಚಾರಣೆ ಮಾಡುವಾಗ ಯೋಜನೆ ಮುಂದುವರಿಯುತ್ತಿರುವುದರಲ್ಲಿ ಇರುವ ಲೋಪದೋಷಗಳ ಬಗ್ಗೆ ಸಂಬಂಧಪಟ್ಟ ಸಿಬ್ಬಂದಿಗೆ ಮಾಹಿತಿ ನೀಡಿ ಮಾರ್ಗದರ್ಶನ ನೀಡಬೇಕು. ಹಾಗೆಯೇ ಉತ್ತಮರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ

Digitised by Bharatavani, CIIL

ಪ್ರೋತ್ಸಾಹ ನೀಡಿ ಅವರ ಉತ್ಸಾಹವನ್ನು ಹೆಚ್ಚು ಮಾಡಬೇಕಾದುದು ಅಷ್ಟೇ ಮುಖ್ಯ.

ಯೋಜನೆಯ ಅವಧಿ ಮುಗಿದ ನಂತರ ಯೋಜನೆಯು ತನ್ನ ಗುರಿಗಳನ್ನು ಸಾಧಿಸುವಲ್ಲಿ ಎಷ್ಟರಮಟ್ಟಿಗೆ ಸಫಲವಾಗಿದೆ ಎಂದು ತಿಳಿದುಕೊಳ್ಳಲು ಇಡೀ ಯೋಜನೆಯ ಮೌಲ್ಯಮಾಪನ ಮಾಡಬೇಕಾದುದು ಅವಶ್ಯಕವೆನಿಸುತ್ತದೆ. ಈ ರೀತಿಯ ಮೌಲ್ಯಮಾಪನದಿಂದ ಯೋಜನೆಯನ್ನು ಜಾರಿಗೊಳಿಸುವಲ್ಲಿ ಉಂಟಾಗಿರಬಹುದಾದ ಲೋಪದೋಷಗಳನ್ನು ಗುರ್ತಿಸಲು ಸಹಾಯವಾಗುತ್ತದೆ. ಹಾಗೆಯೇ ಯೋಜನೆಯ ಉತ್ತಮ ಅಂಶಗಳು ಮುಂದಿನ ಸಾಂಸ್ಥಿಕ ಯೋಜನೆಯನ್ನು ಇನ್ನೂ ಉತ್ತಮ ರೀತಿಯಲ್ಲಿ ರೂಪಿಸಲು ಸಹಾಯಕವಾಗುತ್ತವೆ.

– ಮಂ.ಬಿ.ಎನ್.

## ಸಾಧನಾ ಪರೀಕ್ಷೆಗಳು

ಕಲಿಕಾಗುರಿಗಳ ಸಾಧನೆಯ ಮಟ್ಟವನ್ನು ನಿರ್ಧರಿಸುವ ಪರೀಕ್ಷೆಗಳಿಗೆ ಸಾಧನಾ ಪರೀಕ್ಷೆಗಳು ಎನ್ನುವರು. ಶಿಕ್ಷಣ ವ್ಯವಸ್ಥೆಯಲ್ಲಿ ಮೌಲ್ಯಮಾಪನಕ್ಕಾಗಿ ಬಳಸುತ್ತಿರುವ 'ಕಾಗದ ಮತ್ತು ಪೆನ್ಸಿಲ್' ವರ್ಗಕ್ಕೆ ಸೇರಿದ ಪರೀಕ್ಷೆ ಇದಾಗಿದೆ. ಸಾಮಾನ್ಯವಾಗಿ 'ಸಾಧನೆ' ಎನ್ನುವ ಪದವು ವಿಶಾಲಾರ್ಥ ಹೊಂದಿದ್ದು ಮೂರು ವಲಯಗಳಿಗೆ ಸೇರಿದ ಅಪೇಕ್ಷಣೀಯ ವರ್ತನಾ ಬದಲಾವಣೆಯ ಸಿದ್ಧಿಸುವಿಕೆಯನ್ನು ಸೂಚಿಸುತ್ತದೆ. ಆದರೆ ಸಾಧನಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 'ಸಾಧನೆ' ಪದದ ಅರ್ಥವನ್ನು ಸಂಕುಚಿತಗೊಳಿಸಿ 'ಶೈಕ್ಷಣಿಕ ಸಿದ್ಧಿ'ಯಷ್ಟಕ್ಕೇ ಸೀಮಿತಗೊಳಿಸಲಾಗಿದೆ. ಅಂದರೆ ತರಗತಿ ಬೋಧನೆಯಿಂದಾಗಿ ವಿದ್ಯಾರ್ಥಿಗಳಲ್ಲಿ ಸಿದ್ಧಿಸಿರುವ ಕಲಿಕಾ ಫಲಿತವನ್ನು ಅಳೆಯುವುದೇ 'ಸಾಧನಾ ಪರೀಕ್ಷೆ'ಯಾಗಿದೆ.

ಸೂಪರ್‌ರವರ ಪ್ರಕಾರ ಸಾಧನಾ ಪರೀಕ್ಷೆಯು "ಏನನ್ನು ಮತ್ತು ಎಷ್ಟನ್ನು ಕಲಿತಿದ್ದಾರೆ? ಇಲ್ಲವೆ? ಒಂದು ಕೆಲಸವನ್ನು ಎಷ್ಟು ಪರಿಣಾಮಕಾರಿಯಾಗಿ ಮಾಡುವರು? ಎಂದು ಪರೀಕ್ಷಿಸುವುದೇ ಆಗಿದೆ".

### ಸಾಧನಾ ಪರೀಕ್ಷೆಗಳ ಉದ್ದೇಶಗಳು

ವಿವಿಧ ಉದ್ದೇಶಗಳಿಗೆ ಈ ಪರೀಕ್ಷೆಗಳನ್ನು ಬಳಸಬಹುದು.

1) ವಿದ್ಯಾರ್ಥಿಗೆ ಪ್ರಸ್ತುತ ಕೋರ್ಸಿನಿಂದ ಲಾಭ ಪಡೆಯಲು ಬೇಕಾದ ಅವಶ್ಯಕ ಪೂರ್ವಜ್ಞಾನವನ್ನು ಪರೀಕ್ಷಿಸಲು, (ಪೂರ್ವ ಪರೀಕ್ಷೆ)
2) ಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳು ಕೋರ್ಸಿನ ಅಂತ್ಯದಲ್ಲಿ ಕಲಿತಿರಲೇಬೇಕಾದ ಅವಶ್ಯಕ ವಿಷಯಗಳ ಪಾಂಡಿತ್ಯವನ್ನು ಅಳೆಯಲು, (Mastery of minimum essentials)
3) ಸೂಕ್ತ ಪರಿಹಾರ ನೀಡುವ ದೃಷ್ಟಿಯಿಂದ ವಿದ್ಯಾರ್ಥಿಗಳ ನಿರ್ದಿಷ್ಟ ಕಲಿಕಾ ನ್ಯೂನತೆಗಳನ್ನು ಪತ್ತೆ ಹಚ್ಚಲು (ನೈದಾನಾತ್ಮಕ)
4) ಕೋರ್ಸಿನ ಉದ್ದೇಶಗಳೆಡೆಗೆ ವಿದ್ಯಾರ್ಥಿ ಬೆಳವಣಿಗೆಯನ್ನು ಕಂಡು ಕೊಳ್ಳಲು (ಸಾಮಾನ್ಯ ಸಾಧನಾ ಪರೀಕ್ಷೆಗಳು–General achievement tests)

ಸಾಮಾನ್ಯ ಸಾಧನಾ ಪರೀಕ್ಷೆಗಳು ಶಿಕ್ಷಕರಿಗೆ ಚಿರಪರಿಚಿತವಾಗಿರುವ ಪರೀಕ್ಷೆಗಳು. ಬೋಧನೋದ್ದೇಶಗಳ ಸಾಧನೆ ಅಳೆಯುವ ಸಲುವಾಗಿ ಈ ಪರೀಕ್ಷೆಗಳ ವ್ಯಾಪ್ತಿ ಹೆಚ್ಚುವಂತೆ ರಚಿಸಲಾಗುತ್ತದೆ. ಇದರಲ್ಲಿ ಹೆಚ್ಚು ವಿಷಯವನ್ನು ಹಾಗೂ ಬೌದ್ಧಿಕ ವರ್ತನೆಗಳನ್ನು ವ್ಯಾಪಕವಾಗಿ ಪ್ರತಿನಿಧಿಸಲು ಸಾಧ್ಯವಿದೆ. ಕ್ಲಿಷ್ಟತೆಯ ಮಟ್ಟದ ಹರವು ಹೆಚ್ಚಿನದಾಗಿರುತ್ತದೆ.

ಸಾಧನ ಪರೀಕ್ಷೆಗಳಲ್ಲಿ ಎರಡು ವಿಧ: ಅವೆಂದರೆ,
–ಶಿಕ್ಷಕ – ನಿರ್ಮಿತ ಸಾಧನ ಪರೀಕ್ಷೆಗಳು
–ಆದರ್ಶೀಕೃತ ಸಾಧನ ಪರೀಕ್ಷೆಗಳು

**ಶಿಕ್ಷಕ ನಿರ್ಮಿತ ಪರೀಕ್ಷೆಗಳು:** ಒಂದು ಕೋರ್ಸಿನ ವಿಷಯ ವಸ್ತುವನ್ನು ಹಾಗೂ ಅದನ್ನು ಸಿದ್ಧಿಸುವತ್ತ ತಾನು ಗುರುತಿಸಿರುವ ಉದ್ದೇಶಗಳಿಗೆ ಅನುಗುಣವಾಗಿ ಶಿಕ್ಷಕ ಈ ಪರೀಕ್ಷೆಗಳನ್ನು ನಿರ್ಮಿಸುತ್ತಾನೆ. ಈ ಪರೀಕ್ಷೆಗಳು ಕೇವಲ ಶಿಕ್ಷಕರಿಂದ (ಆಂತರಿಕ ಪರೀಕ್ಷೆ) ಮಾತ್ರವಲ್ಲದೆ ಮೌಲ್ಯಮಾಪನ ಸಮಿತಿಯ ಬಾಹ್ಯ ಪರೀಕ್ಷಕರೂ (ಬಾಹ್ಯ ಪರೀಕ್ಷೆ) ಬಳಸಬಹುದಾಗಿದೆ. ಭಾರತದಲ್ಲಿ ಬಹುಪಾಲು ಮೌಲ್ಯಮಾಪನ ಶಿಕ್ಷಕ ನಿರ್ಮಿತ ಹಂತದಲ್ಲೇ ನಡೆಯುತ್ತವೆ. ಹಾಗಾಗಿ ಇದು ಮೌಲ್ಯಮಾಪನದ ಪ್ರಮುಖ ಸಾಧನವಾಗಿವೆ.

**ಸಾಧನಾ ಪರೀಕ್ಷೆಗಳ ರಚನೆ:** ಇದರ ರಚನೆ ಸುಲಭವಾದರೂ, ಮೌಲ್ಯಮಾಪನದ ಪರಿಣಾಮಕಾರಿ (effective) ಹಾಗು ದಕ್ಷ (efficient) ಸಾಧನವಾಗಬೇಕಾದರೆ ಕೆಲವು ಮುನ್ನೆಚ್ಚರಿಕೆಯ ಕ್ರಮಗಳನ್ನು ಪರಿಗಣಿಸಿ ರಚಿಸಬೇಕಾಗುತ್ತದೆ.

ಒಂದು ಉತ್ತಮ 'ಸಾಧನ ಪರೀಕ್ಷೆ'ಯ ರಚನೆಯು ಸೂಕ್ತವಾಗಿ ನಿರೂಪಿಸಲ್ಪಟ್ಟ ಹಂತಗಳ ವ್ಯವಸ್ಥಿತ ಪ್ರಕ್ರಿಯೆಯಾಗಿದೆ.

**ಹಂತಗಳು**

ಅ) ಪರೀಕ್ಷಾ ಯೋಜನೆ.

ಆ) ಪರೀಕ್ಷಾ ಪ್ರಶ್ನೆಗಳನ್ನು ಬರೆಯುವುದು.

ಇ) ಪ್ರಶ್ನೆಗಳನ್ನು ವ್ಯವಸ್ಥಿತಗೊಳಿಸುವುದು.

ಈ) ನಿರ್ದೇಶನ / ಸೂಚನೆ ನೀಡುವುದು.

ಉ) ಉತ್ತರ ಸೂಚಿ ಹಾಗೂ ಅಂಕ ನೀಡಿಕೆ ಕ್ರಮ ತಯಾರಿಸುವುದು.

ಊ) ಪುನರ್ ವಿಮರ್ಶಿಸಿ ಪರಿಷ್ಕರಿಸುವುದು.

ಎ) **ಪರೀಕ್ಷಾ ಯೋಜನೆ:** ಈ ಹಂತವು ಪರೀಕ್ಷಾ ತಯಾರಿಕೆಯಲ್ಲಿನ ಪ್ರಮುಖ ಕ್ರಿಯೆಗಳನ್ನು ಒಳಗೊಂಡಿರುತ್ತದೆ.

**ಪರೀಕ್ಷೆಯ ರೂಪುರೇಷೆ:** ಪರೀಕ್ಷಾ ಸಾಧನದ ಪ್ರಮುಖ ಗುಣಲಕ್ಷಣಗಳೆಂದರೆ ಸಿಂಧುತ್ವ, ವಿಶ್ವಸನೀಯತೆ, ವಸ್ತುನಿಷ್ಠತೆ ಹಾಗೂ ಉಪಯುಕ್ತತೆ. ಇವುಗಳನ್ನು ಕಾಯ್ದುಕೊಳ್ಳಲು ಪರೀಕ್ಷಾ ರಚನಕಾರ ಅನೇಕ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ.

ಪಠ್ಯ ವಿಷಯ ಬೋಧನೆಯ ಗುರಿಗಳು ಅನೇಕ. ಹಾಗೆಯೇ ಬೋಧಿಸಬೇಕಾದ ವಿಷಯ ವಸ್ತು ಅನೇಕ. ಅಂದರೆ ಈ ಎಲ್ಲಾ ಗುರಿಗಳ ಸಾಧನೆಯ ಮಟ್ಟ ಹಾಗೂ ಬೋಧಿಸಲ್ಪಟ್ಟ ವಿಷಯಗಳ ಗ್ರಹಿಕೆಯ ಆಳ ಮುಂತಾದವನ್ನು ಪರೀಕ್ಷೆ ನಿರ್ಧರಿಸಬೇಕಾಗುತ್ತದೆ. ಇದಕ್ಕಾಗಿ ಯಾವ ವಿಧದ ಪ್ರಶ್ನೆಗಳನ್ನು ಎಷ್ಟು ಕೇಳಬೇಕು? ಯಾವ ಸೂಚನೆಯನ್ನು ಪ್ರಶ್ನೆಪತ್ರಿಕೆ ಒಳಗೊಂಡಿರಬೇಕು? ಯಾವ ಅವಶ್ಯಕ ವಿಷಯ ವಸ್ತುಗಳನ್ನಾಧರಿಸಿ ಪ್ರಶ್ನೆ ರಚನೆಯಾಗಬೇಕು? ಮುಂತಾದ ಅಂಶಗಳನ್ನು ಒಂದು ಉತ್ತಮ ಸಾಧನ ಪರೀಕ್ಷಕರಾಗಿ ನಿರ್ಧರಿಸಬೇಕಾಗುತ್ತದೆ. ಇಲ್ಲಿ ಶಿಕ್ಷಕ ಒಬ್ಬ ಕಟ್ಟಡ ನಿರ್ಮಿಸುವ ಇಂಜಿನಿಯರ್ ತರಹ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇಂಜಿನಿಯರ್ ಕಟ್ಟಡದ ಉದ್ದೇಶ ಆಧರಿಸಿ ಯೋಜನೆ ತಯಾರಿಸುತ್ತಾನೆ. ಇದಕ್ಕಾಗಿ ಕಟ್ಟಡ ನಿರ್ಮಿಸಬೇಕಾದ ಭೂಮಿಯ ಅಳತೆ, ಅಗತ್ಯವಿರುವ ಹಣದ ಮೊತ್ತ, ಖರೀದಿಸಬೇಕಾಗಿರುವ ಪದಾರ್ಥಗಳು, ನಿರ್ಮಿಸ ಬೇಕಾಗಿರುವ ಕೋಣೆಗಳ ಸಂಖ್ಯೆ ಇತ್ಯಾದಿಗಳ ಬಗ್ಗೆ ನಿರ್ಧರಿಸ


Digitised by Bharatavani, CIIL

ಬೇಕಾಗುತ್ತದೆ. ಹಾಗೆಯೇ ಒಬ್ಬ ಶಿಕ್ಷಕ / ಪರೀಕ್ಷಾ ರಚನಕಾರ, ಪರೀಕ್ಷೆಯ ಉದ್ದೇಶ, ವಿದ್ಯಾರ್ಥಿಗಳು ಓದುತ್ತಿರುವ ತರಗತಿ, ತಾನು ಬೋಧಿಸಿರುವ ಪಠ್ಯಾಂಶ ಹಾಗೂ ಬೋಧಿಸಿದ ವಿಧಾನ ಮುಂತಾದವುಗಳನ್ನು ಪರಿಗಣಿಸಬೇಕಾಗುತ್ತದೆ. ಇವುಗಳ ಆಧಾರದ ಮೇರೆಗೆ, ಶಿಕ್ಷಕ ಕೆಲವು ಪೂರ್ವಭಾವಿ ನಿರ್ಧಾರಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಹೀಗೆ ಕೈಗೊಂಡ ನಿರ್ಧಾರಗಳೇ ಪರೀಕ್ಷೆಯ ರೂಪುರೇಷೆಯಾಗಲಿವೆ. (Design)

ಪರೀಕ್ಷೆಯ ನಕ್ಷೆ / ರೂಪುರೇಷೆಯಲ್ಲಿ ಶಿಕ್ಷಕ ಈ ಕೆಳಕಂಡ ಅಂಶಗಳನ್ನು ನಿರ್ಧರಿಸುತ್ತಾನೆ.

### 1) ಬೋಧನೋದ್ದೇಶಗಳಿಗೆ ಅನುಗುಣವಾಗಿ ಅಂಕ ನಿರ್ಧಾರ

ಯಾವ ಉದ್ದೇಶಗಳ ಈಡೇರಿಕೆಯನ್ನು ಪರೀಕ್ಷಿಸಬೇಕೆಂಬ ನಿರ್ಧಾರ ಪರೀಕ್ಷಾ ಯೋಜನೆಯಲ್ಲಿ ಬಹಳ ಮುಖ್ಯವಾದ ಹಂತ. ಹಾಗೆ ಗುರುತಿಸಲ್ಪಟ್ಟ ನಿರ್ದಿಷ್ಟ ಉದ್ದೇಶಗಳನ್ನು ಬೇರ್ಪಡಿಸಿ ಅವುಗಳಿಗೆ ನಿಗದಿಪಡಿಸ ಬೇಕೆಂದಿರುವ ಅಂಕವನ್ನು ಸೂಚಿಸಬೇಕು. ಅಂಕ ನಿಗದಿಪಡಿಸಲು ಗಮನಿಸಬೇಕಾದ ಅಂಶಗಳು

- ಉದ್ದೇಶ ಈಡೇರುವಿಕೆಗೆ ತೆಗೆದುಕೊಂಡ ಕಾಲ, ಶ್ರಮ ಹಾಗೂ ಸಂಪನ್ಮೂಲ
- ಉದ್ದೇಶಗಳಿಗಿರುವ ಸಾಮಾಜಿಕ ಪ್ರಾಮುಖ್ಯತೆ.
- ಧಾರಣೆ ಹಾಗೂ ವರ್ಗಾವಣೆ ಮೌಲ್ಯದ ದೃಷ್ಟಿಯಿಂದ ಪ್ರಮುಖವಾದ ಉದ್ದೇಶಗಳು.

ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ 'ಮುಖ್ಯ' ಎಂದು ಪರಿಗಣಿಸಲಾದ ಉದ್ದೇಶಗಳಿಗೆ ಹೆಚ್ಚು ವೇಳೆ ವ್ಯಯ ಮಾಡುವ ಪ್ರಕೃತಿ ಇದೆ. ಹಾಗಾಗಿ ಪೂರ್ಣ ತೃಪ್ತಿಕರವಲ್ಲದಿದ್ದರೂ ನಿರ್ದಿಷ್ಟ ಬೋಧನೋದ್ದೇಶಗಳಿಗೆ ಅಂಕ ನಿರ್ಧರಿಸುವಾಗ ಈ ಅಂಶವನ್ನು ತಳಹದಿಯನ್ನಾಗಿ ಇಟ್ಟುಕೊಳ್ಳಬಹುದು. ಕೆಳಕಂಡ ಉದಾಹರಣೆ ಗಮನಿಸಬಹುದು.

| ಕಲಿಕೆಯ ಫಲಿತಗಳು | ಅಂಕ | ಶೇಕಡಾ ಅಂಕ |
|---|---|---|
| ಜ್ಞಾನ | 10 | 40 |
| ತಿಳಿವಳಿಕೆ | 10 | 40 |
| ಉಪಯೋಗಿಸುವಿಕೆ | 05 | 20 |
| ಕುಶಲತೆ | – | – |
| ಒಟ್ಟು | 25 | 100 |

### 2) ಪಠ್ಯಾಂಶಕ್ಕೆ ಅನುಗುಣವಾಗಿ ಅಂಕ ನಿರ್ಧಾರ

ಬೋಧನೋದ್ದೇಶಗಳಲ್ಲಿ ಪ್ರಕ್ರಿಯೆ ಹಾಗೂ ಪಠ್ಯಾಂಶಗಳೆರಡೂ ಅಡಕವಾಗಿದ್ದರೂ ಪರೀಕ್ಷಾ ರಚನೆಯ ಸಂದರ್ಭದಲ್ಲಿ ಪಠ್ಯಾಂಶಕ್ಕೆ ಅಂಕ ನಿರ್ಧಾರ ಬೇರೆಯಾಗಿಯೇ ಮಾಡುವುದು ಸೂಕ್ತ. ಬೋಧನೋದ್ದೇಶಗಳ ಸಾಧನೆಗೆ ಪಠ್ಯಾಂಶಗಳು ಮಾಧ್ಯಮವಾದದ್ದರಿಂದ ವಿವಿಧ ಪಠ್ಯಾಂಶಗಳಿಗೆ ಅಂಕ ನಿರ್ಧಾರ ಮಾಡುವುದು ಅವಶ್ಯಕತೆಯೂ ಹೌದು.

ಇಡೀ ಪಠ್ಯವಸ್ತುವಿನ ಕಲಿಕೆಯನ್ನು ಒಂದು ಪರೀಕ್ಷೆಯಲ್ಲಿ ಅಳೆಯಲು ಸಾಧ್ಯವಿಲ್ಲ. ಹಾಗಾಗಿ ಪ್ರತಿ ಪಠ್ಯಾಂಶಕ್ಕೆ ಸಂಬಂಧಿಸಿದಂತೆ, ಕೆಲವು ಕಲಿಕಾಂಶಗಳನ್ನು ಪ್ರತಿನಿಧಿಯನ್ನಾಗಿ ಆಯ್ಕೆ ಮಾಡಿ ಅಂಕ ನಿರ್ಧಾರ ಮಾಡಬೇಕಾಗುತ್ತದೆ ಇದಕ್ಕಾಗಿ,

- ಇಡೀ ಪಠ್ಯವಸ್ತುವನ್ನು ಕೆಲವು ಘಟಕಗಳನ್ನಾಗಿ ವಿಭಜನೆ ಮಾಡಬೇಕು.
- ಪ್ರತಿ ಘಟಕದಲ್ಲೂ ಒಂದಕ್ಕೊಂದು ಸಂಬಂಧವಿರುವ / ಸಾಮಾನ್ಯ ಕೊಂಡಿಯಿರುವ ಕಲಿಕಾಂಶಗಳಿರುವಂತೆ ನೋಡಿಕೊಳ್ಳಬೇಕು.
- ಹೀಗೆ ಬೇರ್ಪಡಿಸಿದ ಪ್ರತಿ ಘಟಕಕ್ಕೂ ನಿಗದಿಪಡಿಸಬೇಕಾದ ಅಂಕವನ್ನು ನಿರ್ಧರಿಸುವುದು. ಇದು ಪರೋಕ್ಷವಾಗಿ ಆ ಘಟಕದಲ್ಲಿರುವ ಪಠ್ಯಾಂಶದ ಬೋಧನೆಗೆ ನೀಡಬೇಕಾದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.
- ಪ್ರತಿ ಘಟಕಕ್ಕೆ ನಿಗದಿಪಡಿಸಬೇಕಾದ ಅಂಕದ ನಿರ್ಧಾರ ಮಾಡುವಾಗ ಕೆಳಕಂಡ ಪ್ರಶ್ನೆಗಳತ್ತ ಗಮನ ಕೊಡುವುದು ಸೂಕ್ತ.

ಶೈಕ್ಷಣಿಕ ಅವಧಿಯಲ್ಲಿ ನೀಡುವ ಒಟ್ಟಾರೆ ಕಲಿಕಾ ಅನುಭವಗಳಲ್ಲಿ ಈ ಘಟಕದ ಪ್ರಾಮುಖ್ಯತೆ ಏನು?

ನಿರ್ದಿಷ್ಟ ಘಟಕದ ಬೋಧನೆಗೆ ವ್ಯಯ ಮಾಡುವ ಕಾಲ ಎಷ್ಟು?

ವಿಷಯ ತಜ್ಞರು ಆ ಘಟಕಕ್ಕೆ ಯಾವ ಮಹತ್ವ ನೀಡುತ್ತಾರೆ?

ಈ ಮೇಲಿನ ಅಂಶಗಳನ್ನು ಸ್ಪಷ್ಟ ಪಡಿಸಲು ಉದಾಹರಣೆ ನೀಡಲಾಗಿದೆ.

| ಪಠ್ಯಾಂಶ | ಅಂಕ | ಶೇಕಡಾ ಅಂಕ |
|---|---|---|
| ಜೀವಿಗಳು | 10 | 40 |
| ಜೀವಿಗಳ ಲಕ್ಷಣಗಳು | 15 | 60 |
| ಒಟ್ಟು | 25 | 100 |

### 3) ಪ್ರಶ್ನೆ ವಿಧಗಳಿಗೆ ಅನುಗುಣವಾಗಿ ಅಂಕ ನಿರ್ಧಾರ

ಈಗಾಗಲೇ ತಿಳಿದಿರುವಂತೆ ಪ್ರಶ್ನೆಗಳಲ್ಲಿ ಅನೇಕ ವಿಧಗಳಿವೆ. ಪ್ರತಿ ವಿಧದ ಪ್ರಶ್ನೆಗೂ ತನ್ನದೇ ಆದ ಇತಿ–ಮಿತಿಗಳಿವೆ. ಹಾಗಾಗಿ ವಿವಿಧ ರೀತಿಯ ಪ್ರಶ್ನೆಗಳ ಯುಕ್ತ ಸಂಯೋಜನೆಯನ್ನು ಸಾಧನಾ ಪರೀಕ್ಷೆಯಲ್ಲಿ ಬಳಸಬೇಕಾಗುತ್ತದೆ.

ಈ ಹಂತದಲ್ಲಿ ಎರಡು ಅಂಶಗಳು ನಿರ್ಧಾರವಾಗಬೇಕು, ಬಳಸಬೇಕಾದ ಪ್ರಶ್ನಾ ವಿಧ, ಬಳಸಿದ ವಿಧಗಳಿಗೆ ನಿಗದಿಪಡಿಸಬೇಕಾದ ಅಂಕ. ಪರೀಕ್ಷೆಯಲ್ಲಿ ಬಳಸಬಹುದಾದ ಪ್ರಶ್ನೆಗಳ ಸಂಖ್ಯೆಯು ಅದಕ್ಕಾಗಿ ನಿಗದಿಪಡಿಸಿರುವ ಕಾಲಾವಕಾಶದ ಮೇಲೆ ಅವಲಂಬಿತವಾಗಿವೆ. ಸೈದ್ಧಾಂತಿಕವಾಗಿ, ಪರೀಕ್ಷೆಯ ಉದ್ದ ಹೆಚ್ಚಿದ್ದಷ್ಟೂ ಅದರ ಸಿಂಧುತ್ವ ಹೆಚ್ಚುತ್ತದೆ. ಆ ಕಾರಣಕ್ಕಾಗಿ ಪರೀಕ್ಷೆ ಯೋಜನೆಯಲ್ಲಿ ಪ್ರಬಂಧ ಮಾದರಿ ಪ್ರಶ್ನೆಗಳ ಸಂಖ್ಯೆಯನ್ನು ಕುಗ್ಗಿಸಿ ಪರೀಕ್ಷೆಯ ಉದ್ದವನ್ನು ಹೆಚ್ಚಿಸಬೇಕಾಗುತ್ತದೆ.

ಮೇಲಿನ ಅಂಶಗಳನ್ನು ಸ್ಪಷ್ಟಪಡಿಸಲು, ಕೆಳಕಂಡ ಉದಾಹರಣೆ ನೀಡಲಾಗಿದೆ.

| ಪ್ರಶ್ನೆ ವಿಧ | ಅಂಕ (ಪ್ರಶ್ನೆಗಳ ಒಟ್ಟು ಸಂಖ್ಯೆ) | ಶೇಕಡಾ ಶೇಕಡಾ ಅಂಕ |
|---|---|---|
| ಪ್ರಬಂಧ | 5 (1) | 20 |
| ಪುಟ್ಟ ಉತ್ತರ | 10 (5) | 40 |
| ವಿಷಯನಿಷ್ಠ | 10 (10) | 40 |
| ಒಟ್ಟು | 25 (16) | 100 |

Digitised by Bharatavani, CIIL

**4) ಕ್ಲಿಷ್ಟತೆ ಮಟ್ಟದ ಹಂಚಿಕೆಗೆ ಅನುಗುಣವಾಗಿ ಅಂಕ ನಿರ್ಧಾರ**

ಪರೀಕ್ಷೆಯಲ್ಲಿ ಕ್ಲಿಷ್ಟತೆ ಮಟ್ಟದ ಹಂಚಿಕೆಯು ಪರೀಕ್ಷೆಯ ಉದ್ದೇಶ ಹಾಗೂ ಪರೀಕ್ಷೆಗೆ ಒಳಗಾಗುವ ವಿದ್ಯಾರ್ಥಿಗಳೂ ಇವೆರಡರ ಮೇಲೆ ಅವಲಂಬಿತವಾಗಿವೆ.

ಪರೀಕ್ಷೆಯಲ್ಲಿ ಒಂದು ಪ್ರಶ್ನೆಯ ಕ್ಲಿಷ್ಟತೆಯ ಮಟ್ಟವು ಅದನ್ನು ಸರಿಯಾಗಿ ಉತ್ತರಿಸಿದ ಶೇಕಡಾವಾರು ವಿದ್ಯಾರ್ಥಿಗಳ ಸಂಖ್ಯೆಯಿಂದ ಸೂಚಿಸಲ್ಪಡುತ್ತದೆ. ಪ್ರಶ್ನೆಗಳ ಕ್ಲಿಷ್ಟತೆಯ ಮಟ್ಟವು ಈ ಕೆಳಕಂಡ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ.

1) ಅದರ ಉತ್ತರಿಸುವಿಕೆಯಲ್ಲಿ ಒಳಗೊಂಡಿರುವ ಬೌದ್ಧಿಕ / ಮಾನಸಿಕ ಪ್ರಕ್ರಿಯೆಗಳ (Mental processes involved) ಸಂಕೀರ್ಣತೆಯ ಮಟ್ಟ.

2) ಪರೀಕ್ಷೆಗೆ ಒಳಪಡಿಸಬೇಕಾದ ಪಠ್ಯವಸ್ತುವಿನ ಕಲಿಕಾಂಶಗಳು.

3) ಉತ್ತರಿಸಲು ಲಭ್ಯವಿರುವ ಕಾಲಾವಕಾಶ.

ಕ್ಲಿಷ್ಟತೆಯ ಮಟ್ಟವನ್ನು ಅಂದಾಜು ಮಾಡಲು ಸೂತ್ರ.

ಕ್ಲಿ.ಮ $= \frac{R}{T} \times 100$

ಇಲ್ಲಿ R = ಸರಿಯಾಗಿ ಉತ್ತರಿಸಿದ ವಿದ್ಯಾರ್ಥಿಗಳ ಸಂಖ್ಯೆ.

T = ಆ ಪ್ರಶ್ನೆಯನ್ನು ಉತ್ತರಿಸಲು ಪ್ರಯತ್ನಿಸಿದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ.

ಪ್ರಶ್ನೆ ಪತ್ರಿಕೆಯಲ್ಲಿ ಸಾಮಾನ್ಯವಾಗಿ 15% ಅತಿ ಸುಲಭದ ಪ್ರಶ್ನೆಗಳು, 35% ಸುಲಭದ ಪ್ರಶ್ನೆಗಳು, 35% ಕ್ಲಿಷ್ಟ ಪ್ರಶ್ನೆಗಳು ಹಾಗೂ 15% ಅತಿ ಕ್ಲಿಷ್ಟದ ಪ್ರಶ್ನೆಗಳು ಇರಬೇಕಾದದ್ದು ಅಪೇಕ್ಷಣೀಯ.

**ವಿಭೇದಕ ಶಕ್ತಿಯ ಸೂಚ್ಯಂಕ:** ಒಂದು ಪರೀಕ್ಷೆಯ ವಿಭೇದಕ ಶಕ್ತಿಯು, ಕನಿಷ್ಠ ಹಾಗೂ ಗರಿಷ್ಠ ಮಟ್ಟದ ಸಾಧಕರನ್ನು ವಿಭೇದಿಸುವ ಸಾಮರ್ಥ್ಯವೇ ಆಗಿದೆ. ಮೇಲ್ಮಟ್ಟದ ಗುಂಪಿನವರು (ಗರಿಷ್ಠ ಮಟ್ಟದ ಸಾಧಕರು) ಮಾತ್ರ ಒಂದು ಪ್ರಶ್ನೆಗೆ ಸರಿ ಉತ್ತರ ನೀಡಲು ಸಮರ್ಥರಾಗಿದ್ದರೆ, ಆ ಪ್ರಶ್ನೆಯು ಬಹಳ ಪರಿಣಾಮಕಾರಿಯಾಗಿದೆ ಎಂದರ್ಥ. ಇಲ್ಲಿ ಆ ಪ್ರಶ್ನೆಯಿಂದ ಮೇಲ್ಮಟ್ಟದ ಗುಂಪನ್ನು ಕೆಳಮಟ್ಟದ (ಕನಿಷ್ಟ ಮಟ್ಟದ ಸಾಧಕರು) ಗುಂಪಿನಿಂದ ಬೇರ್ಪಡಿಸಲು ಸಮರ್ಥವಾಗಿವೆ. ಪ್ರಶ್ನೆಯು ಮೇಲ್ಮಟ್ಟದ ಗುಂಪು ಹಾಗೂ ಕೆಳಮಟ್ಟದ ಗುಂಪನ್ನು ಯಾವ ಮಟ್ಟದಲ್ಲಿ ವಿಭೇದಿಸಲು ಸಾಧ್ಯವಿದೆಯೋ ಆ ಮಟ್ಟವನ್ನು ವಿಭೇದಕ ಶಕ್ತಿಯ ಸೂಚ್ಯಂಕ ಎನ್ನುತ್ತೇವೆ.

ಪ್ರಶ್ನೆಯ ವಿಭೇದಕ ಶಕ್ತಿಯನ್ನು ಈ ಕೆಳಕಂಡ ಸೂತ್ರದ ಸಹಾಯದಿಂದ ಕಂಡುಹಿಡಿಯಬಹುದು;

ವಿಭೇದಕ ಶಕ್ತಿಯ ಸೂಚ್ಯಂಕ: $\frac{R_H}{N_H} - \frac{R_L}{N_L}$

$R_H$ = ಮೇಲ್ಮಟ್ಟದ ಗುಂಪಿನಲ್ಲಿ ಸರಿ ಉತ್ತರ ನೀಡಿದವರ ಸಂಖ್ಯೆ

$R_L$ = ಕೆಳಮಟ್ಟದ ಗುಂಪಿನಲ್ಲಿ ಸರಿ ಉತ್ತರ ನೀಡಿದವರ ಸಂಖ್ಯೆ

$N_H$ = ಮೇಲ್ಮಟ್ಟದ ಗುಂಪಿನಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ

$N_L$ = ಕೆಳಮಟ್ಟದ ಗುಂಪಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ.

**5) ಆಯ್ಕೆ ಪ್ರಶ್ನೆಗಳಿಗೆ ಅವಕಾಶ ಕಲ್ಪಿಸುವುದು (Optional Questions)**

ಸಾಧನಾ ಪರೀಕ್ಷೆಯನ್ನು ರಚಿಸುವಾಗ ಮಾಡಬೇಕಾದ ಮತ್ತೊಂದು ಮುಖ್ಯ ನಿರ್ಧಾರವೆಂದರೆ ಆಯ್ಕೆ ಪ್ರಶ್ನೆಗಳಿಗೆ ಅವಕಾಶ ಕೊಡಬೇಕೇ? ಯಾವ ವಿನ್ಯಾಸದಲ್ಲಿ? ಆಯ್ಕೆಗೆ ಅವಕಾಶ ನೀಡಬೇಕೆಂದರೆ ಈ ಕೆಳಕಂಡ ವಿನ್ಯಾಸಗಳಲ್ಲಿ ಆಯ್ಕೆ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡಲು ಸಾಧ್ಯವಿದೆ.

- ಪರೀಕ್ಷೆಯಲ್ಲಿ ಕೇಳಿರುವ ಒಟ್ಟಾರೆ ಪ್ರಶ್ನೆಗಳಲ್ಲಿ 'ಇಂತಿಷ್ಟು' ಎಂದು ನಿಗದಿಪಡಿಸಿದ ಸಂಖ್ಯೆಯಷ್ಟು ಪ್ರಶ್ನೆಗಳನ್ನು ಮಾತ್ರ ಆರಿಸಿ ಉತ್ತರಿಸಿದರೆ ಸಾಕು. ಇದಕ್ಕೆ over all option ಎಂದು ಹೇಳಬಹುದು. ಉದಾಹರಣೆ: 10 ಪ್ರಶ್ನೆಗಳನ್ನು ನೀಡಿ ಯಾವುದಾದರೂ ಐದಕ್ಕೆ ಉತ್ತರಿಸಿ.
- ಪರೀಕ್ಷೆಯನ್ನು 'ಎ'; 'ಬಿ'; ಹಾಗೂ 'ಸಿ' ಎಂದು ವಿಭಜಿಸಲಾಗಿದ್ದರೆ, ಪ್ರತಿ ಅಂತರ ವಿಭಾಗದಲ್ಲಿಯೂ (within sections) ಆಯ್ಕೆಗೆ ಅವಕಾಶ ಕೊಡಬಹುದು.

  ಉದಾ: ಪ್ರಶ್ನೆ 1) ಅಥವಾ 2) ನ್ನು ಉತ್ತರಿಸಿ. ಇಂತಹ ಆಯ್ಕೆಗೆ ಆಂತರಿಕ ಆಯ್ಕೆ ಎಂದು ಹೇಳಬಹುದು.

ಈ ಎರಡು ಮುಖ್ಯ ವಿಧಗಳಲ್ಲಿ ಆಯ್ಕೆಗೆ ಅವಕಾಶವಿದ್ದರೂ, ಇವೆರಡನ್ನೇ ವಿವಿಧ ಸಂಯೋಜನೆಗಳಲ್ಲಿ ಬಳಸಿ ಆಯ್ಕೆ ಅವಕಾಶದ ವಿಧಗಳನ್ನು ಹೆಚ್ಚಿಸಲು ಸಾಧ್ಯವಿದೆ. ಆಯ್ಕೆ ಪ್ರಶ್ನೆಗಳಿಗೆ ಅವಕಾಶ ಕಲ್ಪಿಸುವುದು ವ್ಯಕ್ತಿ ವಿಭಿನ್ನತೆಯನ್ನು ಗಣನೆಗೆ ತಂದುಕೊಂಡಂತಾಯಿತು ಎಂದುಕೊಂಡರೂ ಅದು (ಎಲಿಮಿನೇಟಿವ್) ಬೋಧನೆ–ಕಲಿಕೆ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಿದಂತಾಗುತ್ತದೆ. ವಿದ್ಯಾರ್ಥಿಗೆ, ಕೊಟ್ಟಿರುವ ಹತ್ತು ಪ್ರಶ್ನೆಗಳಲ್ಲಿ ಕೇವಲ ಐದನ್ನು ಮಾತ್ರ ಉತ್ತರಿಸಬೇಕೆಂದು ಅರಿವಾದಾಗ, ಆತ ಕೇವಲ 50% ಪಠ್ಯವಸ್ತುವನ್ನು ಮಾತ್ರ ಅಧ್ಯಯನ ನಡೆಸಲು ಮುಂದಾಗುತ್ತಾನೆ. ಅಲ್ಲದೆ ಆಯ್ಕೆಗೆ ಅವಕಾಶ ನೀಡಿದಾಗ ಬೇರೆ, ಬೇರೆ ಅಳತೆಗೋಲಿರುವ ಸಲಕರಣೆ ಬಳಸಲು ವಿದ್ಯಾರ್ಥಿಗಳಿಗೆ ಅನುಮತಿ ನೀಡಿದಂತಾಗುತ್ತದೆ. ಉದಾ: ಅಂಕ/ರೇಖಾ ಗಣಿತದಲ್ಲಿ ಕಿಲೋಮೀಟರ್ ಹಾಗೂ ಮೈಲಿ ಎರಡನ್ನೂ ಬಳಸಬಹುದು. ಏಕೆಂದರೆ, ಅವುಗಳನ್ನು 'ಒಂದರಿಂದ ಮತ್ತೊಂದಕ್ಕೆ' ಪರಿವರ್ತನೆ ಮಾಡಲು ಸಾಧ್ಯವಿದೆ. ಆದರೆ ಬೇರೆ ಬೇರೆ ಅಳತೆಗೋಲು ಇರುವ ಪ್ರಶ್ನೆಗಳನ್ನು ಆಯ್ಕೆ ಮಾಡಿರುವ ವಿದ್ಯಾರ್ಥಿಗಳ ಸಾಮರ್ಥ್ಯದ ಹೋಲಿಕೆ ಹೇಗೆ ಸಾಧ್ಯವಾಗುತ್ತದೆ?

(ಸಾಧ್ಯವಿದ್ದಷ್ಟು ಒಂದೇ ಉದ್ದೇಶ, ಒಂದೇ ಕ್ಲಿಷ್ಟತೆ ಮಟ್ಟ ಇರುವ ಪ್ರಶ್ನೆಗಳ ನಡುವೆ ಆಯ್ಕೆಗೆ ಅವಕಾಶ ಕೊಡುವುದು ಉತ್ತಮ. ಇಂತಹ ಪ್ರಶ್ನೆಗಳ ರಚನೆ ಶಿಕ್ಷಕನ ಬೌದ್ಧಿಕ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುವುದೂ ಸತ್ಯ).

**ನೀಲಿ ನಕ್ಷೆಯ ತಯಾರಿಕೆ**

ಇಲ್ಲಿಯತನಕ ಕೈಗೊಂಡ ವಿಭಿನ್ನ ನಿರ್ಧಾರಗಳನ್ನು ಒಗ್ಗೂಡಿಸಿ ದ್ವಿಮುಖಿ ಚೌಕಟ್ಟಿನ ರೂಪದಲ್ಲಿ ನೀಲಿ ನಕ್ಷೆ ರಚಿಸುವುದು. ಇದು ಪರೀಕ್ಷೆ ರಚನಾ ಯೋಜನೆಯ ಕೊನೆಯ ಹಂತ.

ನಿರ್ಧರಿಸಿದ ಎಲ್ಲಾ ಅಂಶಗಳನ್ನು ನೀಲಿ ನಕ್ಷೆಯಿಂದ ಚೌಕಗಳಲ್ಲಿ ತುಂಬಿದಾಗ, ಅದು ಒಟ್ಟಾರೆ ಪ್ರಶ್ನೆಪತ್ರಿಕೆಯ ರೂಪುರೇಷೆಯನ್ನು ನೀಡಲು ಸಾಧ್ಯವಾಗಬೇಕು. ನೀಲಿ ನಕ್ಷೆಯ ಅಡ್ಡ ಹಾಗೂ ಕಂಬ ಸಾಲುಗಳಲ್ಲಿನ ಅಂಕಗಳು ಸಮತೋಲನವುಳ್ಳದ್ದಾಗಿದ್ದರೆ, ನೀಲಿ ನಕ್ಷೆಯು ಸಿದ್ಧವಾಗಿದೆ ಎಂದರ್ಥ. ಒಂದು ನೀಲಿನಕ್ಷೆಯ ನಮೂನೆ ಕೆಳಕಂಡಂತಿದೆ.


Digitised by Bharatavani, CIIL

| ಕಲಿಕೆಯ ಫಲಿತಗಳ ವರ್ಗ | ಜ್ಞಾನ | | | ತಿಳುವಳಿಕೆ | | | ಅನ್ವಯ | | | ಕೌಶಲ್ಯ | | | ಅಂಕ/ಪ್ರಶ್ನೆ |
|---|---|---|---|---|---|---|---|---|---|---|---|---|---|
| ಪ್ರಶ್ನೆವಿಧ ಪಠ್ಯಾಂಶಗಳು | ಪ್ರ | ಪು | ವ | ಪ್ರ | ಪು | ವ | ಪ್ರ | ಪು | ವ | ಪ್ರ | ಪು | ವ | |
| ಜೀವಿಗಳು | – | 2(1) | 4(4) | | 2(1) | 2(2) | – | – | – | – | – | – | 10(8) |
| ಜೀವಿ ಲಕ್ಷಣಗಳು | – | 4(2) | – | – | 2(1) | 4(4) | 5(1) | – | – | – | – | – | 15(8) |
| ಒಟ್ಟು | – | 6(3) | 4(4) | – | 4(2) | 6(6) | 5(1) | – | – | – | – | – | 25(16) |

### ಬಿ) ಪ್ರಶ್ನೆಗಳನ್ನು ಬರೆಯುವುದು

ನೀಲಿ ನಕ್ಷೆ ರಚನೆಯ ನಂತರ ಮುಂದಿನ ಹಂತದಲ್ಲಿ ಅದಕ್ಕೆ ಅನುಗುಣವಾಗಿ ಪ್ರಶ್ನೆಗಳನ್ನು ರಚಿಸಬೇಕು. ನೀಲಿನಕ್ಷೆಯ ಪ್ರತಿ ಚೌಕದಲ್ಲಿರುವ ಅಂಶ ಪರಿಗಣಿಸಿ ಅದಕ್ಕೆ ಪ್ರಶ್ನೆ ರಚಿಸಬೇಕು. ಹೀಗೆ ರಚಿಸುವಾಗ ಅದು ಯಾವ ಉದ್ದೇಶದ್ದಾಗಿರಬೇಕು? ಯಾವ ವಿಷಯ ವಸ್ತುವಿನ ಬಗ್ಗೆ ಕೇಳಬೇಕು? ಯಾವ ಪ್ರಶ್ನಾ ವಿಧ ಇದಕ್ಕೆ ಸೂಕ್ತ? ಮುಂತಾದವುಗಳನ್ನು ನೀಲಿನಕ್ಷೆಯಲ್ಲಿ ದೊರಕುವ ಮಾಹಿತಿಯಿಂದಲೇ ಸಂಗ್ರಹಿಸಿ ಬರೆಯಬೇಕು.

### ಸಿ) ಪ್ರಶ್ನೆಗಳನ್ನು ಜೋಡಿಸುವುದು

ಮೊದಲಿಗೆ ಪ್ರಶ್ನೆಗಳನ್ನು ಅವುಗಳ ವಿಧಗಳಿಗೆ (ವಸ್ತುನಿಷ್ಠ, ಲಘು ಉತ್ತರ, ಪ್ರಬಂಧ ಮಾದರಿ) ಅನುಗುಣವಾಗಿ ಸಿದ್ಧಗೊಳಿಸಬೇಕು. ಪ್ರತಿಯೊಂದು ವಿಧದ ಪ್ರಶ್ನೆಗೂ ಪ್ರತಿಕ್ರಿಯಿಸುವ ಮಾರ್ಗ ವಿಭಿನ್ನವಾಗಿವೆಯಾದ್ದರಿಂದ ಈ ಹಂತ ಬಹಳ ಮುಖ್ಯ.

ಎರಡನೆಯದಾಗಿ, ಪ್ರತಿ ವಿಧದ ಪ್ರಶ್ನೆ ವಿಭಾಗಗಳಲ್ಲೂ, ಪ್ರಶ್ನೆಗಳನ್ನು ಅವುಗಳ ವಿಷಯ ವಸ್ತುವಿಗೆ ಅನುಗುಣವಾಗಿ ಜೋಡಿಸಿರಬೇಕು. ನಂತರ ಈ ಪ್ರಶ್ನೆಗಳನ್ನು ಅವುಗಳ ಕ್ಲಿಷ್ಟತೆಯ ಮಟ್ಟಕ್ಕೆ ಅನುಗುಣವಾಗಿ ಜೋಡಿಸಬೇಕು. ಇದು ವಿದ್ಯಾರ್ಥಿಗೆ ಆರಂಭದಲ್ಲಿ 'ಸರಿ ಉತ್ತರ' ನೀಡಿದ ತೃಪ್ತಿಯೊಂದಿಗೆ ಮಾನಸಿಕ ಸ್ಥೈರ್ಯ ತುಂಬುತ್ತದೆ. ಆದರೆ ಮುಂದೆ ಬರುವ ಎಲ್ಲಾ ಪ್ರಶ್ನೆಗಳೂ ಈಗ ಬರೆದದ್ದಕ್ಕಿಂತ ಕಷ್ಟವಾಗಿರುತ್ತವೆ ಎಂಬ ಭಾವನೆ ಬಂದ ಕೂಡಲೇ ಕೆಲವೊಮ್ಮೆ ಸ್ಥೈರ್ಯ ಕಳೆದುಕೊಳ್ಳುವ ಸಾಧ್ಯತೆ ಕೂಡ ಇವೆ. ಆದ್ದರಿಂದ ಕ್ಲಿಷ್ಟತೆ 'ಚಕ್ರೀಯ ಕ್ರಮ' (cyclic order)ವನ್ನು ಅನುಸರಿಸಿ ಅತಿಸುಲಭ, ಸುಲಭ, ಕ್ಲಿಷ್ಟ, ಅತಿ ಕ್ಲಿಷ್ಟ ಪ್ರಶ್ನೆಗಳು ನಿಯಮಿತ ಮಧ್ಯಂತರಗಳಲ್ಲಿ ಬರುವಂತೆ ಜೋಡಿಸಬೇಕಾಗುತ್ತದೆ.

ಇನ್ನೊಂದು ವಿಧಾನವೆಂದರೆ ಒಂದು ಘಟಕಕ್ಕೆ ಸೇರಿದ ಪಠ್ಯಾಂಶದ ಬಗ್ಗೆ ಒಟ್ಟಿಗೆ ಜೋಡಿಸುವುದು. ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳು ಬೇರೆ ಬೇರೆ ವಿಷಯಗಳ ಪಠ್ಯಾಂಶಗಳ ಬಗ್ಗೆ ಯೋಚಿಸದೆ ಕೇವಲ ನಿರ್ದಿಷ್ಟವಾದ ಒಂದು ಘಟಕದ ಪ್ರಶ್ನೆಗಳ ಬಗ್ಗೆ ಆಲೋಚಿಸಲು ಅವಕಾಶ ನೀಡುತ್ತವೆ. ಹೀಗೆ ಜೋಡಿಸಿದಾಗ ಅವುಗಳಲ್ಲಿನ ಕ್ಲಿಷ್ಟತೆಯ ಮಟ್ಟವನ್ನು ಆಧಾರವನ್ನಾಗಿಟ್ಟುಕೊಂಡರೆ ಮತ್ತಷ್ಟು ಉತ್ತಮವಾದ ವ್ಯವಸ್ಥೆಯಾಗುತ್ತದೆ.

ಪ್ರಶ್ನೆಗಳ ವ್ಯವಸ್ಥೆ ಜೋಡಣೆಗಾಗಿ ಮೇಲೆ ತಿಳಿಸಿದ ಎಲ್ಲ ವಿಧಾನಗಳೂ ಗುಣ ಹಾಗೂ ಅವಗುಣಗಳನ್ನು ಹೊಂದಿವೆ. ಹಾಗಾಗಿ ಒಂದು ಒಟ್ಟಾಭಿಪ್ರಾಯಕ್ಕೆ / ಒಪ್ಪಂದಕ್ಕೆ ಬಂದು ಪ್ರಶ್ನೆಗಳನ್ನು ಪ್ರಶ್ನಾವಿಧಕ್ಕೆ ಅನುಗುಣವಾಗಿ ಗುಂಪುಮಾಡಿ ಪ್ರತಿ ಗುಂಪಿನಲ್ಲೂ ಮೊದಲ ಕೆಲವು ಪ್ರಶ್ನೆಗಳು ಸರಳವಾಗಿದ್ದು ನಂತರ ಅಡ್ಡಾದಿಡ್ಡಿಯಾಗಿ ಕ್ಲಿಷ್ಟತೆಯ ಮಟ್ಟಬರುವ ಹಾಗೆ ಮಾಡಬೇಕು.

### ಡಿ) ನಿರ್ದೇಶನಗಳು / ಸೂಚನೆಗಳು

ನಿರ್ದೇಶನಗಳು / ಸೂಚನೆಗಳು ಪರೀಕ್ಷೆಯ ಅವಿಭಾಜ್ಯ ಅಂಗವಾಗಿವೆ. ಸೂಕ್ತ ನಿರ್ದೇಶನವಿಲ್ಲದ ಪರೀಕ್ಷೆಗಳಲ್ಲಿ ಸಿಂಧುತ್ವದ ಕೊರತೆ ಕಾಣಬಹುದು. ನಿರ್ದೇಶನಗಳು ಸರಳ, ನಿರ್ದಿಷ್ಟವಾಗಿರುವುದರ ಜೊತೆಗೆ ಈ ಕೆಳಕಂಡವುಗಳ ಸೂಕ್ತ ಮಾಹಿತಿ ನೀಡಲು ಬೇಕಾದಷ್ಟು ಇರಬೇಕಾಗುತ್ತದೆ.

- ಪರೀಕ್ಷೆಗಾಗಿ ಮೀಸಲಿಟ್ಟ ಕಾಲಾವಕಾಶ
- ಪರೀಕ್ಷೆಯ ಗರಿಷ್ಠ ಅಂಕ
- ವಿದ್ಯಾರ್ಥಿಗಳು ಉತ್ತರಿಸಬೇಕಾದ ಪ್ರಶ್ನೆಗಳ ಸಂಖ್ಯೆ
- ಉತ್ತರಿಸಬೇಕಾದ ಜಾಗ (ಪ್ರಶ್ನೆ ಪತ್ರಿಕೆಯಲ್ಲೇ ಉತ್ತರಿಸಬೇಕೆ? ಅಥವಾ ಅದಕ್ಕಾಗಿಯೇ ಬೇರೆ ಪುಸ್ತಕ ಇದೆಯೇ)
- ಪ್ರತಿ ವಿಭಾಗ ಹಾಗೂ ಪ್ರತಿ ಪ್ರಶ್ನೆಗೆ ಮೀಸಲಿಟ್ಟಿರುವ ಅಂಕ
- ಬೇಡಿಕೆಯ ಮೇರೆಗೆ ಅವರಿಗೆ ದೊರಕಬಹುದಾದ ವಸ್ತುಗಳು ಉದಾ: ಗ್ರಾಫ್ ಪೇಪರ್, ಲಾಗ ಟೇಬಲ್, ಕ್ಯಾಲುಕ್ಯುಲೇಟರ್, ನಕ್ಷೆ, ಇತ್ಯಾದಿ.

### ಇ) ಉತ್ತರಸೂಚಿ ಮತ್ತು ಅಂಕ ನೀಡಿಕೆಯ ತಯಾರಿಕೆ

ದತ್ತ ವಸ್ತುನಿಷ್ಠ ಪ್ರಶ್ನೆಗಳಿಗೆ ಪಟ್ಟಿಯ ರೂಪದಲ್ಲಿ ಉತ್ತರಿಸಿಟ್ಟುಕೊಳ್ಳುವುದೇ (Scoring key). ಮೌಲ್ಯಮಾಪಕ ಈ ಪಟ್ಟಿಯಲ್ಲಿರುವ ಉತ್ತರವನ್ನು ವಿದ್ಯಾರ್ಥಿಗಳ ಉತ್ತರ ಪತ್ರಿಕೆಯ ಉತ್ತರದ ಜೊತೆ ಹೋಲಿಸಿ ಅಂಕ ನಿರ್ಧರಿಸುತ್ತಾನೆ.

ಪೂರೈಕೆ ವಿಧದ ಪ್ರಶ್ನೆಗಳ (ಲಘು ಉತ್ತರ, ಪ್ರಬಂಧ ಮಾದರಿ) ಉತ್ತರಕ್ಕೆ ವಿದ್ಯಾರ್ಥಿಗಳಿಗೆ ಸೊನ್ನೆ ಅಥವಾ ನಿಗದಿಪಡಿಸಿದ ಅಷ್ಟೂ ಅಂಕಗಳು ಲಭಿಸುವುದು ಸಾಧ್ಯವಿಲ್ಲ. ಹಾಗಾಗಿ ಈ ಪ್ರಶ್ನೆಗಳ ಮೌಲ್ಯಮಾಪನ ಹೆಚ್ಚು ವ್ಯಕ್ತಿನಿಷ್ಠತೆಯಿಂದ ಕೂಡಿರುತ್ತದೆ. ಇಂತಹ ಪ್ರಶ್ನೆಗಳಿಗೆ ಅಂಕ ನೀಡುವಾಗಿನ ವ್ಯಕ್ತಿನಿಷ್ಠತೆ ನಿಯಂತ್ರಿಸಲು ಪ್ರಶ್ನೆಯ ವಿವಿಧ ಹಂತಗಳಿಗೆ ಹಂಚಿಕೆಯಾಗಿರುವ ಅಂಕಗಳನ್ನು ಬರೆದಿಡುವುದೇ ಅಂಕಸೂಚಿ (Marking Scheme).

### ಎಫ್)ಪುನರ್ ವಿಮರ್ಶಿಸಿ ಪರಿಷ್ಕರಿಸುವುದು

ಸಾಧನಾ ಪರೀಕ್ಷೆ ರಚನೆಯ ಕಡೆಯ ಹಂತ ಇದಾಗಿದೆ. ಪರೀಕ್ಷೆಯಲ್ಲಿ ಈ ಕೆಳಕಂಡ ಅಂಶಗಳನ್ನು ಸ್ಪಷ್ಟಪಡಿಸಿ / ದೃಢಪಡಿಸಿಕೊಳ್ಳಲು ಈ ಹಂತವನ್ನು ಅನುಸರಿಸಲಾಗುತ್ತದೆ.

Digitised by Bharatavani, CIIL

ನೀಲಿನಕ್ಷೆಗೆ ಅನುಗುಣವಾಗಿ ರಚನೆಯಾಗಿದೆಯೇ? (ಪ್ರಶ್ನೆವಿಧಕ್ಕೆ ಅನುಗುಣ, ಉದ್ದೇಶವಾರು ಹಾಗೂ ವಿಷಯವಾರು ಅಂಕ ನಿರ್ಧಾರ, ಇತ್ಯಾದಿ) ಈಗ ಪ್ರಶ್ನೆಗಳಲ್ಲಿ ಬಳಸಿರುವ ಪದಗಳ ಸೂಕ್ತತೆ ಪರೀಕ್ಷಿಸಿ ಪರಿಷ್ಕರಿಸಬೇಕು. ಲೋಪದೋಷಗಳಿದ್ದಾಗ ಅವನ್ನು ಸರಿಪಡಿಸಬೇಕಾಗುತ್ತವೆ.

–ಬಿ.ಎನ್. ಆ

## ಸಾಮಾಜಿಕ ಅಂತರ್‌ಕ್ರಿಯೆ ಮತ್ತು ಶಿಕ್ಷಣ

ಮಾನವನು ಕೇವಲ ಸಮಾಜ ಜೀವಿಯಾಗಿರದೇ ಸಾಂಸ್ಕೃತಿಕ ಜೀವಿಯೂ ಸಹ ಆಗಿದ್ದಾನೆ. ಹೀಗಾಗಿ ಸಮಾಜವು ಮಾನವನಿಗೆ ಸಹಜವಾಗಿಯೇ ಅನಿವಾರ್ಯವಾಗಿದೆ. ಸಮಾಜದಲ್ಲಿ ಪ್ರತಿಯೊಬ್ಬರು ಪರಸ್ಪರ ಸಂಬಂಧಗಳನ್ನು ಹೊಂದಿರುತ್ತಾರೆ. ಈ ತೆರನಾದ ಅಂತರಕ್ರಿಯೆ ಸಮೂಹ ಜೀವನದ ತಿರುಳಾಗಿವೆ. ಪರಸ್ಪರ ಸಂಬಂಧ ಅಥವಾ ಅಂತರಕ್ರಿಯೆಗಳ ಜಾಲವೇ ಸಮಾಜ. ವರ್ತನಾಶೈಲಿ ಹಾಗೂ ಮಾದರಿಗಳು ಸಾಮಾಜಿಕ ಅಂತರಕ್ರಿಯೆಯ ಮೂಲಕ ಬೆಳೆದು ಬರುತ್ತವೆ. ವ್ಯಕ್ತಿಗಳ ನಡುವೆ ಅಂತರಕ್ರಿಯೆಯು ಅಂದರೆ ಕೊಡುತೆಗೆದುಕೊಳ್ಳುವ ವ್ಯವಹಾರವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯೂ ಇರಬಹುದು. ಇಬ್ಬರು ವ್ಯಕ್ತಿಗಳು ಸಂಧಿಸಿದಾಗ ಒಂದಿಲ್ಲೊಂದು ರೀತಿಯ ಅನ್ಯೋನ್ಯಕ್ರಿಯೆ ಅಥವಾ ಅಂತರ್‌ಕ್ರಿಯೆ ಸಂಭವಿಸುತ್ತದೆ. ಆದರೆ ಅದು ಅವರಲ್ಲಿ ಸಹಕಾರ ಭಾವ ಮೂಡಿ ಅನುರಾಗ ಬೆಳೆಯಬಹುದು. ಇಲ್ಲವೇ ತಿರಸ್ಕಾರ ಮೂಡಿ ಸಂಘರ್ಷ ಏರ್ಪಡಿಸಬಹುದು. ಹೀಗೆ ಒಂದಿಲ್ಲೊಂದು ವಿಧವಾದ ಪ್ರಕ್ರಿಯೆ ಸಮಾಜದ ಪ್ರತಿಯೊಬ್ಬರಲ್ಲೂ ಸಂಭವಿಸುವುದು.

### ಸಾಮಾಜಿಕ ಅಂತರ್‌ಕ್ರಿಯೆಯ ವ್ಯಾಖ್ಯಾನಗಳು

ಕೆಲವು ಸಮಾಜಶಾಸ್ತ್ರಜ್ಞರು ಸಾಮಾಜಿಕ ಅಂತರ್‌ಕ್ರಿಯೆಯನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ.

ಎ. ಡಬ್ಲ್ಯೂ. ಗ್ರೀನರು ತಮ್ಮ ಎಂಬ "Sociology" ಎಂಬ ಗ್ರಂಥದಲ್ಲಿ ಸಾಮಾಜಿಕ ಅಂತರಕ್ರಿಯೆಯನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ. "ಸಮೂಹ ಜೀವನದಲ್ಲಿ ಜನರು ತಮ್ಮ ಸಮಸ್ಯೆಗಳನ್ನು ಪರಿಹರಿಸಿ ಧ್ಯೇಯೋದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುವರು, ಈ ಸಂಬಂಧದಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಪ್ರಭಾವ ಬೀರುವರು, ಇಂತಹ ಪಾರಸ್ಪರಿಕ ಪ್ರಭಾವವೇ ಸಾಮಾಜಿಕ ಅಂತರಕ್ರಿಯೆಯಾಗಿದೆ."

ಡಾಸನ್ ಮತ್ತು ಗೆಟಿಸರು ತಮ್ಮ "An Introduction to Sociology" ಎಂಬ ಗ್ರಂಥದಲ್ಲಿ "ಸದಸ್ಯರು ಪರಸ್ಪರರ ಮನಸ್ಸನ್ನು ಒಳಹೊಕ್ಕು, ಪಾರಸ್ಪರಿಕ ಆಶಯವನ್ನು ಅಭಿವ್ಯಕ್ತಿಸುವ ಪ್ರಕ್ರಿಯೆಗೆ ಸಾಮಾಜಿಕ ಅಂತರಕ್ರಿಯೆ ಎನ್ನುವರು" ಎಂದು ಹೇಳಿದ್ದಾರೆ.

ವಿಲ್‌ರಿಜ್ ಮತ್ತು ಮಿಲ್ ಅವರು ತಮ್ಮ "Culture and Society" ಎಂಬ ಗ್ರಂಥದಲ್ಲಿ "ಇಬ್ಬರು ಅಥವಾ ಹೆಚ್ಚು ಜನರು ಅರ್ಥಪೂರ್ಣವಾದ ಸಂಪರ್ಕ ಸಾಧಿಸುವರು ಇದರ ಪರಿಣಾಮವಾಗಿ ಅವರ ವರ್ತನೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಉಂಟಾಗುತ್ತವೆ. ಈ ಪ್ರಕ್ರಿಯೆಗೆ ಸಾಮಾಜಿಕ ಅಂತರಕ್ರಿಯೆ" ಎಂದು ಹೇಳಿದ್ದಾರೆ.

ಗಿಶ್, ಎಸ್.ಪಿ. (1965) ತಮ್ಮ "Fundamentals of Sociology" ಎಂಬ ಗ್ರಂಥದಲ್ಲಿ "ಪರಸ್ಪರರನ್ನು ಉದ್ದೀಪನಗೊಳಿಸಿದಾಗ ಪ್ರಕ್ರಿಯೆಯು ಉಂಟಾಗುವುದು. ತನ್ಮೂಲಕ ಮಾನವ ಜೀವಿಗಳು ಪರಸ್ಪರರ ಮೇಲೆ ಪ್ರಭಾವ ಬೀರುವರು. ಈ ಪ್ರಕ್ರಿಯೆಯನ್ನು ಸಾಮಾಜಿಕ ಅಂತರಕ್ರಿಯೆ" ಎಂದು ಹೇಳಿದ್ದಾರೆ.

ಎಲ್‌ಡ್ರಿಜ್ ಮತ್ತು ಮೆರಿಲ್ ಎಂಬುವವರು "ಎರಡು ಇಲ್ಲವೇ ಎರಡಕ್ಕಿಂತ ಹೆಚ್ಚು ವ್ಯಕ್ತಿಗಳ ನಡುವೆ ಅರ್ಥಪೂರ್ಣ ಸಂಬಂಧ ಕಲ್ಪಿಸಿ ಅವರ ವರ್ತನೆ ವಿಧಾನಗಳಲ್ಲಿ ಅಲ್ಪಮಟ್ಟಿಗಾದರೂ ಪರಿವರ್ತನೆ ತರಬಲ್ಲ ಒಂದು ಸಾಮಾನ್ಯ ಪ್ರಕ್ರಿಯೆಗೆ ಸಾಮಾಜಿಕ ಅಂತರಕ್ರಿಯೆ" ಎಂದು ವ್ಯಾಖ್ಯಾನಿಸಿದ್ದಾರೆ.

ಪಾರ್ಕ ಮತ್ತು ಬರ್ಗೆಸ್ ಎಂಬುವರು "ಸಾಮಾಜಿಕ ಅಂತರಕ್ರಿಯೆಯು ಎರಡು ಮೂಲಭೂತ ಅಂಶಗಳಾದ ಸಮಾಜದ ಸಂಪರ್ಕ ಹಾಗೂ ಸಂದೇಶ ಇವುಗಳನ್ನು ಒಳಗೊಂಡಿರುತ್ತದೆ ಎಂದು ಹೇಳಿದ್ದಾರೆ.

ಗಿಲಿನ್ ಮತ್ತು ಗಿಲಿನ್ ಎಂಬುವರು "ಸಾಮಾಜಿಕ ಅಂತರಕ್ರಿಯೆಯಲ್ಲಿ ಸಾಮಾಜಿಕ ಸಂಪರ್ಕವು ಬಹುಮುಖ್ಯವಾದ ಅಂಶವಾಗಿದೆ" ಎಂದು ಹೇಳಿದ್ದಾರೆ.

ಸಾಮಾಜಿಕ ಅಂತರಕ್ರಿಯೆಯ ಮೂರು ಮಟ್ಟದಲ್ಲಿ ನಡೆಯುತ್ತದೆ.

a. ವ್ಯಕ್ತಿ.......ವ್ಯಕ್ತಿ ಅಂತರಕ್ರಿಯೆ

ಉದಾ : ಡಾಕ್ಟರ್ – ರೋಗಿ, ತಂದೆ–ಮಗ, ಗುರು–ಶಿಷ್ಯ.

b. ವ್ಯಕ್ತಿ.....ಸಮೂಹ ಅಂತರಕ್ರಿಯೆ

ಉದಾ : ಮುಖಂಡ–ಅನುಯಾಯಿಗಳು, ನೃತ್ಯಗಾರ್ತಿ–ಪ್ರೇಕ್ಷಕರು

c. ಸಮೂಹ......ಸಮೂಹ ಅಂತರಕ್ರಿಯೆ

ಗ್ರಾಮೀಣ ಸಮೂಹ–ನಗರ ಸಮೂಹ, ವಿದ್ಯಾರ್ಥಿ ಸಮೂಹ–ಶಿಕ್ಷಕ ಸಮೂಹ, ಹಿಂದೂ ಸಮೂಹ–ಮುಸ್ಲಿಂ ಸಮೂಹ.

ಈ ಮೇಲಿನ ಮೂರು ಮಟ್ಟದ ಅಂತರಕ್ರಿಯೆ ಸಹಕಾರ, ಸ್ಪರ್ಧೆ ಅಥವಾ ಸಂಘರ್ಷ ರೂಪದಲ್ಲಿ ಪ್ರಕಟವಾಗುವುದು.

### 1. ಸಾಮಾಜಿಕ ಅಂತರಕ್ರಿಯೆಯ ಹಿನ್ನೆಲೆ

ಸಾಮಾಜಿಕ ಅಂತರಕ್ರಿಯೆಯು ಯಾವ ಹಿನ್ನೆಲೆ ಆಧಾರದ ಮೇಲೆ ನಡೆಯುತ್ತದೆ ಎಂಬುದನ್ನು ಈ ರೀತಿಯಾಗಿ ತಿಳಿಯಬಹುದು.

1. ಸಾಮಾಜಿಕ ಸಂಪರ್ಕ (Social Contact)
2. ಸಾಮಾಜಿಕ ಸಂವಹನ (Social Communication)

ಸಾಮಾಜಿಕ ಸಂಪರ್ಕವು ಜೈವಿಕ ಸಂಪರ್ಕದಿಂದ ಭಿನ್ನವಾಗಿದೆ ಸಾಮಾಜಿಕ ಸಂಪರ್ಕವನ್ನು ಆಕಾಶವಾಣಿ, ಅಂಚೆ, ದೂರವಾಣಿ, ತಂತಿ, ದೂರದರ್ಶನಗಳ ಮೂಲಕ ಸ್ಥಾಪಿಸಬಹುದು. ಸಾಮಾಜಿಕ ಸಂಪರ್ಕವು ಸಾಮಾಜಿಕ ಅಂತರ್‌ಕ್ರಿಯೆಯನ್ನು ಪ್ರಾರಂಭಿಸುವುದು. ಸಾಮಾಜಿಕ ಅಂತರಕ್ರಿಯೆಗಳು ನೇತ್ಯಾತ್ಮಕ ಅಥವಾ ಇತ್ಯಾತ್ಮಕವಾಗಿರಬಹುದು. ಇತ್ಯಾತ್ಮಕ (Positive) ಸಾಮಾಜಿಕ ಅಂತರಕ್ರಿಯೆಯು ಜನರಲ್ಲಿ ಸಹಕಾರ, ಪರಸ್ಪರ ಅರಿವು ಸಮಂಜನ ಬೆಳೆಸುತ್ತದೆ ಇದರ ತದ್ವಿರುದ್ಧವಾಗಿ ನೇತ್ಯಾತ್ಮಕ (Negative) ಸಾವಾಜಿಕ ಸಂಪರ್ಕಗಳು ದ್ವೇಷ, ಅವಿಶ್ವಾಸ, ತಪ್ಪುಅಭಿಪ್ರಾಯ ಹಾಗೂ ಸಂಘರ್ಷಕ್ಕೆ ದಾರಿಮಾಡಿಕೊಡುತ್ತದೆ.

### 2. ಸಾಮಾಜಿಕ ಸಂವಹನ (Social Communication)

ಸಾಮಾಜಿಕ ಸಂವಹನ ಯಾವತ್ತೂ ಜ್ಞಾನೇಂದ್ರಿಯಗಳ ಮೂಲಕ ಸ್ಥಾಪಿಸಲ್ಪಡುತ್ತದೆ. ಸಾಮಾಜಿಕ ಸಂವಹನ ಅಥವಾ ಸಂಬಂಧವು ಭಾಷೆ, ಲಿಪಿ, ಸನ್ನೆ, ಸಂಕೇತ, ಆಕಾಶವಾಣಿ, ದೂರವಾಣಿ, ಅಂಚೆ ತಂತಿ ಸೇವೆ, ವೃತ್ತಪತ್ರಿಕೆ, ದೂರದರ್ಶನಗಳ ಮೂಲಕ ಸ್ಥಾಪಿಸಲ್ಪಡುತ್ತದೆ. ಈ ಸಂಪರ್ಕ ಮಾಧ್ಯಮಗಳ ಮೂಲಕ ಸಾಮಾಜಿಕ ಅಂತರಕ್ರಿಯೆ ಏರ್ಪಡುವುದು.


Digitised by Bharatavani, CIIL

ಸಂಪರ್ಕ ಸಂವಹನಗಳ ನಡುವೆ ಭೇದವಿಲ್ಲ. ಸಂಪರ್ಕ ಮತ್ತು ಸಂವಹನಗಳು ಅಂತರಕ್ರಿಯೆಯ ಎರಡು ಕಣ್ಣುಗಳಿದ್ದಂತೆ. ಇವೆರಡರ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರಕ್ರಿಯೆ ಮತ್ತು ಅದರ ಮೂಲಕ ಸಾಮಾಜಿಕ ಪ್ರಕ್ರಿಯೆ ನಡೆಯುವುದು.

### 3. ಸಾಮಾಜಿಕ ಅಂತರಕ್ರಿಯೆಯ ಪ್ರಕಾರಗಳು (Types of Social Interaction)

ಸಾಮಾಜಿಕ ಅಂತರಕ್ರಿಯೆಯು ಐದು ಪ್ರಕಾರಗಳನ್ನು ಒಳಗೊಂಡಿದೆ.

I. ಸಹಕಾರ (Co-operation)

II. ಸ್ಪರ್ಧೆ (Competition)

III. ಸಂಘರ್ಷ (Conflict)

IV. ಸಮಂಜನ (Accommodation)

V. ಸ್ವಾಂಗೀಕರಣ (Assimilation)

ಇವುಗಳಲ್ಲಿ ಪ್ರಮುಖವಾಗಿ ಸಹಕಾರ, ಸ್ಪರ್ಧೆ ಹಾಗೂ ಸಂಘರ್ಷದ ಮೂಲಕವೇ ಹೆಚ್ಚಾಗಿ ಸಾಮಾಜಿಕ ಅಂತರಕ್ರಿಯೆ ಏರ್ಪಡುತ್ತದೆ ಎನ್ನಲಾಗಿದೆ.

#### ಸಹಕಾರ

#### ಸಹಕಾರದ ಅರ್ಥ ಮತ್ತು ವ್ಯಾಖ್ಯಾನಗಳು

ಸಹಕಾರವು ಸಾಮಾಜಿಕ ಪ್ರಕ್ರಿಯೆಯ ಅತ್ಯಂತ ಮಹತ್ವದ ಹಾಗೂ ಸಾರ್ವತ್ರಿಕ ಅಂಗವಾಗಿದೆ. ಸಹಕಾರ ಈ ಶಬ್ದವನ್ನು ಸಂಸ್ಕೃತದ ಮೂಲ ಧಾತುಗಳಾದ 'ಸಹ', 'ಕೃ'ಗಳಿಂದ ತೆಗೆದುಕೊಳ್ಳಲಾಗಿದೆ. ಅಂದರೆ ಕೂಡಿ ಕೆಲಸ ಮಾಡುವುದೇ ಸಹಕಾರವಾಗಿದೆ. ಇದರ ಆಂಗ್ಲ ಸಮಾನಾರ್ಥ ಶಬ್ದ "Co-operation" ಎಂಬುದು ಲ್ಯಾಟಿನ್ ಭಾಷೆಯ "Co" ಮತ್ತು "Operari" ಎಂದರೆ ಕಾರ್ಯ. ಪ್ರಜ್ಞಾಪೂರ್ವಕವಾದ ಧ್ಯೇಯದಿಂದ ಪ್ರೇರಿತವಾದ ಸಾಮಾಜಿಕ ಅಂತರಕ್ರಿಯೆ ಸಹಕಾರವೆನಿಸಿದೆ. ಇದು ಎರಡು ಮೂಲ ಅಂಶಗಳನ್ನು ಒಳಗೊಂಡಿದೆ.

a. ಸಾಮಾನ್ಯ ಧ್ಯೇಯ

b. ಸಂಘಟಿತ ಪ್ರಯತ್ನ

#### ವ್ಯಾಖ್ಯೆಗಳು

ಮೆರಿಲ್ ಮತ್ತು ಎಲಿಜ್‌ರ ಪ್ರಕಾರ "ಇಬ್ಬರು ಅಥವಾ ಹೆಚ್ಚು ಜನರು ಸರ್ವಸಾಮಾನ್ಯ ಧ್ಯೇಯೋದ್ದೇಶವನ್ನು ಸಾಧಿಸಲು ಕೂಡಿ ಕಾರ್ಯ ಪ್ರವೃತ್ತರಾಗುವ ಪ್ರಕ್ರಿಯೆಗೆ ಸಹಕಾರವೆನ್ನಬಹುದು.

ಫೇಯರ್ ಚೈಲ್ಡ್ ರವರು "ಸಾಮಾನ್ಯ ಗುರಿಯನ್ನು ಸಫಲಗೊಳಿಸುವ ಆಶಯದಿಂದ ವ್ಯಕ್ತಿ ಹಾಗೂ ಸಮೂಹಗಳು ನಡೆಸುವ ಸಂಘಟಿತ ಪ್ರಯತ್ನವನ್ನು ಸಹಕಾರವೆಂದು" ತಮ್ಮ ಸಮಾಜಶಾಸ್ತ್ರದ ನಿಘಂಟಿನಲ್ಲಿ ವ್ಯಾಖ್ಯಾನಿಸಿದ್ದಾರೆ.

ಅರ್ನಾಲ್ಡ ಗ್ರೀನರು ತಮ್ಮ ``Sociology'' ಎಂಬ ಕೃತಿಯಲ್ಲಿ "ಎಲ್ಲರೂ ಬಯಸುವಂತಹ ಸಾಮಾನ್ಯ ಗುರಿ ಅಥವಾ ಕಾರ್ಯಭಾರವನ್ನು ಸಫಲಗೊಳಿಸಲು ಇಬ್ಬರು ಅಥವಾ ಹೆಚ್ಚು ಜನರು ಕೂಡಿ ನಡೆಸುವ ನಿರಂತರ ಪ್ರಯತ್ನವೇ ಸಹಕಾರ" ಎಂದು ಹೇಳಿದ್ದಾರೆ.

#### ಸಹಕಾರದ ಪ್ರಕಾರಗಳು

i. **ಪ್ರತ್ಯಕ್ಷ ಸಹಕಾರ:** ಸದಸ್ಯರು ಒಟ್ಟಿಗೆ ಸೇರಿ ಒಂದೇ ಕಾರ್ಯದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಸಾಮಾಜಿಕ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸುವರು.

ii. **ಅಪ್ರತ್ಯಕ್ಷ ಸಹಕಾರ:** ಒಂದು ಸಾಮಾನ್ಯ ಧ್ಯೇಯೋದ್ದೇಶವನ್ನು ಸಾಧಿಸುವುದಕ್ಕಾಗಿ ಬೇರೆ ಬೇರೆ ಜನರು ತಮ್ಮ ವೈಯಕ್ತಿಕ ಯೋಗ್ಯತೆಯ ಮೇಲೆ ವಿವಿಧ ರೀತಿಯ ಕಾರ್ಯವನ್ನು ಮಾಡುತ್ತಾರೆ. ಇಲ್ಲಿ ಒಬ್ಬರು ಇನ್ನೊಬ್ಬರಿಗೆ ಅಪರೋಕ್ಷವಾಗಿ ಸಹಕಾರ ನೀಡುವುದನ್ನು ಕಾಣಬಹುದು.

iii. **ಪ್ರಾಥಮಿಕ ಸಹಕಾರ:** ಕುಟುಂಬ ಮತ್ತು ಚಿಕ್ಕ ಸಮೂಹ ಹಾಗೂ ಸಂಘಗಳಲ್ಲಿ ಪ್ರಾಥಮಿಕ ಸಹಕಾರ ಕಂಡುಬರುವುದು. ಇಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವೆ ನಿಕಟ ಹಾಗೂ ಮುಖಾ-ಮುಖಿ ಸಂಬಂಧಗಳು ಕಂಡುಬರುತ್ತವೆ.

iv. **ಆನುಷಂಗಿಕ ಸಹಕಾರ:** ವಿಶಾಲ ಸಮೂಹಗಳಲ್ಲಿ ಸದಸ್ಯರ ನಡುವೆ ನೇರವಾದ, ಮುಖಾಮುಖಿ ಸಂಬಂಧ ಕಡಿಮೆಯಾಗುತ್ತ ಹೋಗುವುದು. ಮಾಧ್ಯಮಿಕ ಸಮೂಹಗಳಲ್ಲಿ ಅಪರೋಕ್ಷ ಸಂಬಂಧ ಕಂಡುಬರುತ್ತದೆ.

v. **ಮೂರನೆಯ ಸ್ತರದ ಸಹಕಾರ:** ಒಂದು ವಿಶಿಷ್ಟ ಸನ್ನಿವೇಶವನ್ನು ಎದುರಿಸುವ ಆಶಯದಿಂದ ಎರಡು ಭಿನ್ನ ಗುಂಪುಗಳು ಅಥವಾ ದೊಡ್ಡ-ಸಣ್ಣ ಸಮೂಹಗಳು ಪರಸ್ಪರ ಸಹಕರಿಸಲು ಮುಂದೆ ಬರುವುವು.

#### ಸ್ಪರ್ಧೆ

ಆಧುನಿಕ ಸಮಾಜ ಜೀವನ ಸ್ಪರ್ಧಾತ್ಮಕವಾಗಿದೆ. ಸಮಾಜಶಾಸ್ತ್ರವು ಸ್ಪರ್ಧೆಯ ಸಾಮಾಜಿಕ ಹಿನ್ನೆಲೆ ಹಾಗೂ ಸ್ವರೂಪವನ್ನು ವಿಶ್ಲೇಷಿಸುತ್ತದೆ. ಮಾನವನು ಸಾಮಾಜಿಕ ಅಂತಸ್ತನ್ನು ಎತ್ತರಿಸಲು ಇತರರೊಂದಿಗೆ ಸ್ಪರ್ಧಿಸುವನು.

#### ವ್ಯಾಖ್ಯೆಗಳು

ಇ.ಎಸ್. ಬೊಗಾರ್ಡಸ್ ಇವರ ಪ್ರಕಾರ "ಎಲ್ಲರೂ ಹಂಚಿಕೊಳ್ಳಲು ಸಾಧ್ಯವಾಗದ ಸೀಮಿತ ಉದ್ದೇಶಕ್ಕಾಗಿ ಇಬ್ಬರು ಅಥವಾ ಅದಕ್ಕೂ ಹೆಚ್ಚು ಜನರ ನಡುವೆ ನಡೆಯುವ ಹೋರಾಟವೇ ಸ್ಪರ್ಧೆ" ಎನ್ನಬಹುದು.

ಬೆರ್ಝ : "ಎಲ್ಲರಿಗೂ ಲಭ್ಯವಾಗದ ಸೀಮಿತ ಉದ್ದೇಶವನ್ನು ಪಡೆಯಲು ಇಬ್ಬರು ಅಥವಾ ಹೆಚ್ಚು ಜನರು ನಡೆಸುವ ನಿರಂತರ ಪ್ರಯತ್ನವೇ ಸ್ಪರ್ಧೆ."

#### ಸ್ಪರ್ಧೆಯ ಗುಣಲಕ್ಷಣಗಳು

a. ಸ್ಪರ್ಧೆಯು ಅವೈಯಕ್ತಿಕ ಹೋರಾಟವಾಗಿದೆ.

b. ಸ್ಪರ್ಧೆಯು ಪ್ರಜ್ಞಾಪೂರ್ವಕವಲ್ಲದ ಕ್ರಿಯೆಯಾಗಿದೆ

c. ಸ್ಪರ್ಧೆ ಸಾರ್ವತ್ರಿಕವಾಗಿದೆ.

#### ಸ್ಪರ್ಧೆಯ ಪ್ರಕಾರಗಳು

i. ಸಾಮಾಜಿಕ ಸ್ಪರ್ಧೆ

ii. ಆರ್ಥಿಕ ಸ್ಪರ್ಧೆ

Digitised by Bharatavani, CIIL

iii. ರಾಜಕೀಯ ಸ್ಪರ್ಧೆ

iv. ಸಾಂಸ್ಕೃತಿಕ ಸ್ಪರ್ಧೆ

v. ಜನಾಂಗೀಯ ಸ್ಪರ್ಧೆ

**ಸ್ಪರ್ಧೆಯ ಕಾರ್ಯಗಳು**

a. ವ್ಯಕ್ತಿಗೆ ಯೋಗ್ಯಸ್ಥಾನವನ್ನು ದೊರಕಿಸಿಕೊಡುವುದು

b. ಪ್ರೇರಣೆಯ ಉಗಮವಾಗಿದೆ

c. ಪ್ರಗತಿಗೆ ಕಾರಣವಾಗಿದೆ

ಹೀಗೆ ಸ್ಪರ್ಧೆ ಸಾಮಾಜಿಕ ಪಾತ್ರವನ್ನು ನಿರ್ವಹಿಸುತ್ತದೆ.

**ಸಂಘರ್ಷ**

ಮಾನವ ಸಮಾಜದಲ್ಲಿ ಸಂಘರ್ಷ ಅನಾದಿಕಾಲದಿಂದ ಬೆಳೆದು ಬಂದ ಒಂದು ಪ್ರಮುಖ ಪ್ರಕ್ರಿಯೆಯಾಗಿದೆ.

**ವ್ಯಾಖ್ಯೆಗಳು**

ಗ್ರೀನ್, ಎ.ಡಬ್ಲ್ಯೂ ರ ಪ್ರಕಾರ "ಇತರರ ಅಥವಾ ಬೇರೆ ಸಮೂಹದ ಸಂಕಲ್ಪ-ಶಕ್ತಿ ಅಥವಾ ಇಚ್ಛೆಯನ್ನು ಉದ್ದೇಶಪೂರ್ವಕ ವಿರೋಧಿಸಿ ಪ್ರತಿಭಟಿಸಿ ಹತ್ತಿಕ್ಕುವ ಪ್ರಯತ್ನವೇ ಸಂಘರ್ಷ"ವಾಗಿದೆ.

ಗಿಲಿನ್ ಮತ್ತು ಗಿಲಿನ್ "ವ್ಯಕ್ತಿ ಅಥವಾ ಸಮೂಹವು ಹಿಂಸೆ ಅಥವಾ ಹಿಂಸೆಯ ಬೆದರಿಕೆಯ ಮೂಲಕ ವಿರೋಧಿಗಳನ್ನು ಎದುರಿಸಿ ತಮ್ಮ ಧ್ಯೇಯವನ್ನು ಸಾಧಿಸುವ ಪ್ರಕ್ರಿಯೆಗೆ ಸಂಘರ್ಷವೆಂದು ಕರೆಯಬಹುದು.

**ಸಂಘರ್ಷದ ಗುಣಲಕ್ಷಣಗಳು**

i. ಸಂಘರ್ಷವು ಅರಿವಿನಿಂದ (ಪ್ರಜ್ಞೆ) ಕೂಡಿದ ಕ್ರಿಯೆ.

ii. ಇದು ವೈಯಕ್ತಿಕ ಕ್ರಿಯೆ

iii. ಸಂಘರ್ಷವು ನಿರಂತರವಾಗಿ ನಡೆಯುವ ಕ್ರಿಯೆ

iv. ಸಂಘರ್ಷವು ಸರ್ವಕಾಲೀನ ಹಾಗೂ ಸಾರ್ವತ್ರಿಕವಾದುದು

v. ಸಂಘರ್ಷವು ಸಂಸ್ಕೃತಿಯಿಂದ ಪ್ರಭಾವಿತವಾಗಿದೆ.

vi. ಸಂಘರ್ಷದ ನಿಯಮಗಳು

**ಸಂಘರ್ಷದ ಕಾರಣಗಳು (Causes ofConflict)**

a. ವೈಯಕ್ತಿಕ ಭಿನ್ನಾಭಿಪ್ರಾಯ

b. ಆಸಕ್ತಿಗಳ ತಾಕಲಾಟ

c. ಸಾಮಾಜಿಕ ಪರಿವರ್ತನೆ

**ಸಂಘರ್ಷದ ಪ್ರಕಾರಗಳು**

a. ಯುದ್ಧ (War)

b. ಆಂತರಿಕ ಕಲಹ, ಕುಲ-ಕಲಹ (Feud)

c. ನ್ಯಾಯಿಕ ವಿವಾದ (ದಾವೆ ಅಥವಾ ಮೊಕದ್ದಮೆ) (Litigation)

d. ವ್ಯಕ್ತಿ - ಅತೀತ ಹಾಗೂ ಸೈದ್ಧಾಂತಿಕ ಸಂಘರ್ಷ

e. ಸಾಂಸ್ಥಿಕ ಹಾಗೂ ವೈಯಕ್ತಿಕ ಸಂಘರ್ಷ

f. ಜನಾಂಗೀಯ ಸಂಘರ್ಷ

g. ಜಾತಿ ಸಂಘರ್ಷ

h. ಅಂತಾರಾಷ್ಟ್ರೀಯ ಸಂಘರ್ಷ

ಹೀಗೆ ಸಹಕಾರ, ಸ್ಪರ್ಧೆ ಹಾಗೂ ಸಂಘರ್ಷ ಇವುಗಳು ಸಾಮಾಜಿಕ ಅಂತರಕ್ರಿಯೆಯಲ್ಲಿ ಪ್ರಮುಖವಾಗಿದೆ.

**ಸಾಮಾಜಿಕ ಅಂತರ್‌ಕ್ರಿಯೆ ಮತ್ತು ಶಿಕ್ಷಣ**

ಮಕ್ಕಳಲ್ಲಿ ಸಾಮಾಜಿಕ ಅಂತರ್‌ಕ್ರಿಯೆಯನ್ನು ಬೆಳೆಸುವುದರಲ್ಲಿ ಅನೌಪಚಾರಿಕ ಮತ್ತು ಔಪಚಾರಿಕ ಶಿಕ್ಷಣ ಈ ಎರಡೂ ಪ್ರಧಾನ ಪಾತ್ರ ವಹಿಸುತ್ತವೆ. ತಂದೆ, ತಾಯಿ, ಕುಟುಂಬದ ಹಿರಿಯರು ಮಕ್ಕಳಿಗೆ ಸಾಮಾಜಿಕ ಅಂತರ್‌ಕ್ರಿಯೆಯ ನಿಯಮಗಳನ್ನು ತಮ್ಮದೇ ಆದ ರೀತಿಗಳಲ್ಲಿ ಸತತವಾಗಿ ಕಲಿಸುತ್ತಾರೆ. ಪರಸ್ಪರ ಭೇಟಿ ಮಾಡಿದಾಗ ಅಭಿನಂದಿಸುವುದು (ಕೈ ಮುಗಿಯುವುದು, ಹಸ್ತಲಾಘವ ಕೊಡುವುದು), ದೃಷ್ಟಿಯನ್ನು ಭೇಟಿ ಮಾಡುವ ವ್ಯಕ್ತಿಯ ಮೇಲೆ ಕೇಂದ್ರೀಕರಿಸುವ, ಮುಖಚರ್ಯೆ ಬದಲಾಯಿಸುವುದು, ಹೊಸಬರನ್ನು, ಪರಿಚಿತರನ್ನು ಭೇಟಿ ಮಾಡಿದಾಗ ಬೇರೆ ಬೇರೆ ರೀತಿಗಳಲ್ಲಿ ವರ್ತಿಸುವುದು, ಸಾಮಾಜಿಕ ಸನ್ನಿವೇಶಗಳಲ್ಲಿ ಯಥೋಚಿತವಾಗಿ ನಡೆದುಕೊಳ್ಳುವುದು, ಪರಿಸ್ಥಿತಿಗಳಿಗೆ ತಕ್ಕಂತೆ ಮಾತನಾಡುವುದು, ಸಾಮಾಜಿಕ ಸನ್ನಿವೇಶಗಳಲ್ಲಿ ಸಂವೇಗಗಳನ್ನು (ಹರ್ಷ, ಕೋಪ, ಭಯ, ಹಾಸ್ಯ ಇತ್ಯಾದಿ) ನಿಯಂತ್ರಿತ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದು, ಸಾಮಾಜಿಕ ಸಂದರ್ಭಗಳಲ್ಲಿ ಇರುವ ನಿಯಮಗಳನ್ನು ಪಾಲಿಸುವುದು, ಯಥೋಚಿತವಾಗಿ ಸಂಭಾಷಿಸುವುದು- ಇವೇ ಮುಂತಾದ ಸಾಮಾಜಿಕ ಅಂತರ್‌ಕ್ರಿಯೆಗಳನ್ನು ಕುಟುಂಬದ ಸದಸ್ಯರು ಮಕ್ಕಳಿಗೆ ಶಿಕ್ಷಣ ನೀಡಿ ಕಲಿಸುತ್ತಾರೆ. ಮಗು ವಯಸ್ಸಿನಲ್ಲಿ ಮುಂದುವರಿದಂತೆ ಸಾಮಾಜಿಕ ಅಂತರ್‌ಕ್ರಿಯಾ ವಿನ್ಯಾಸಗಳನ್ನು ಗೆಳೆಯರಿಂದ, ಸಹಪಾಠಿಗಳಿಂದ, ಸಮೂಹ ಮಾಧ್ಯಮ (ದೂರದರ್ಶನ)ಗಳಿಂದ ಕಲಿತುಕೊಳ್ಳುವುದರಿಂದ, ಕ್ರಮೇಣ ಅದರ ಸಾಮಾಜಿಕ ಅಂತರ್‌ಕ್ರಿಯಾ ವರ್ತನೆ ಪರಿಮಾರ್ಜಿತಗೊಳ್ಳುತ್ತದೆ. ಭಾಷೆಯನ್ನು ಕಲಿತ ನಂತರ ಮಗುವಿಗೆ ಸಾಮಾಜಿಕ ಅಂತರ್‌ಕ್ರಿಯೆಗೆ ಒಂದು ಪ್ರಬಲ ಸಾಧನ ದೊರೆತಂತಾಗುತ್ತದೆ.

ಶಾಲಾ ಜೀವನಕ್ಕೆ ಪ್ರವೇಶಿಸಿದ ನಂತರ ಶಾಲೆ ಸಾಮಾಜಿಕ ಅಂತರ್‌ಕ್ರಿಯಾ ಕೌಶಲಗಳನ್ನು ಮಗುವಿಗೆ ವ್ಯವಸ್ಥಿತ ರೀತಿಯಲ್ಲಿ ಕಲಿಸುವುದರಲ್ಲಿ ಶಾಲೆ ಮುಖ್ಯ ಪಾತ್ರ ವಹಿಸುತ್ತದೆ. ಪೂರ್ವ-ಪ್ರಾಥಮಿಕ ಹಂತದಿಂದ, ಉನ್ನತ ಶಿಕ್ಷಣದ ಹಂತದವರೆಗೆ ಮಕ್ಕಳಿಗೆ ಸಾಮಾಜಿಕ ವರ್ತನೆ ಶಿಕ್ಷಣದ ಹಂತದವರೆಗೆ ಮಕ್ಕಳಿಗೆ ಸಾಮಾಜಿಕ ವರ್ತನೆಯನ್ನೂ, ಬೇರೆಯವರೊಂದಿಗೆ ವ್ಯವಹರಿಸುವುದನ್ನು ಕಲಿಸುವುದು ಶಿಕ್ಷಣದ ಉದ್ದೇಶಗಳಲ್ಲಿ ಒಂದಾಗಿದೆ. ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳ ಮೂಲಕ ಮಕ್ಕಳು ಸಾಮಾಜಿಕ ಅಂತರ್‌ಕ್ರಿಯೆಗಳನ್ನು ಕಲಿತುಕೊಳ್ಳುತ್ತಾರೆ. ವಿದ್ಯಾರ್ಥಿ-ವಿದ್ಯಾರ್ಥಿ ನಡುವಣ ಹಾಗೂ ವಿದ್ಯಾರ್ಥಿ-ಅಧ್ಯಾಪಕರ, ವಿದ್ಯಾರ್ಥಿ-ಇತರ ಶಾಲಾಸಿಬ್ಬಂದಿಯವರೊಂದಿಗೆ ವ್ಯವಹರಿಸುವುದರ ಮೂಲಕ ವಿದ್ಯಾರ್ಥಿಗಳು ಸಾಮಾಜಿಕ ಅಂತರ್‌ಕ್ರಿಯೆಗಳನ್ನು ಕಲಿತುಕೊಳ್ಳುತ್ತಾರೆ. ಮಕ್ಕಳು ಬೇರೆಯವರೊಂದಿಗೆ ಮಾತನಾಡುವ, ಬೇರೆ ಬೇರೆ ವ್ಯಕ್ತಿಗಳನ್ನು ಭೇಟಿ ಮಾಡುವ, ಸಮೂಹ ಕಾರ್ಯಗಳಲ್ಲಿ ಪಾಲ್ಗೊಳ್ಳುವ, ಶಾಲೆಯ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ಶಾಲೆ ವಿಫುಲವಾಗಿ ಒದಗಿಸಬೇಕು. ಕೆಲವು ಶಾಲೆಗಳು ಮಕ್ಕಳಿಗೆ ನಿರ್ದೇಶಿತ

Digitised by Bharatavani, CIIL

ಕ್ರಮದಲ್ಲಿ ಸಂಭಾಷಣೆ ಮಾಡುವ ಸಂದರ್ಶನಗಳಲ್ಲಿ ಭಾಗವಹಿಸುವ ಕೌಶಲಗಳನ್ನು ಬೆಳೆಸುವ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುತ್ತವೆ. ಮಕ್ಕಳಲ್ಲಿ ಸಹಕಾರದ ಮನೋಭಾವನೆಯನ್ನು ಸ್ಪರ್ಧಿಸುವ ಧೈರ್ಯವನ್ನು ಬೆಳೆಸುವ ಕಾರ್ಯವನ್ನು ಶಾಲೆಗಳು ಮಾಡುತ್ತವೆ. ವಿದ್ಯಾರ್ಥಿಗಳಲ್ಲಿ ಯಾವುದೇ ಕಾರಣದಿಂದ ಸಂಘರ್ಷಗಳು ಉಂಟಾದಲ್ಲಿ ಅನಾವಶ್ಯಕ ದುಷ್ಪರಿಣಾಮಗಳಿಗೆ ಎಡೆಕೊಡದಂತೆ ಅವುಗಳನ್ನು ಪರಿಹರಿಸಲು ಶಿಕ್ಷಕರು ಪ್ರಯತ್ನಿಸಬೇಕು. ಸಂಘರ್ಷದಲ್ಲಿ ಒಳಗೊಳ್ಳುವ ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸಂಘರ್ಷದ ಕಾರಣಗಳನ್ನು ಪತ್ತೆಮಾಡಿ ಅದನ್ನು ಸಮಾಧಾನಕರ ರೀತಿಯಲ್ಲಿ ಪರಿಹರಿಸಲು ಶಾಲೆ ಪ್ರಯತ್ನಿಸಬೇಕು.

– ಎಚ್.ಎಂ.ಶೈ

## ಸಾಮಾಜಿಕವಾಗಿ ಉಪಯುಕ್ತ ಉತ್ಪಾದನಾ ಕಾರ್ಯ

ಮಾನವ ತನ್ನ ಕಾರ್ಯದಿಂದ ತನ್ನ ಸಮಾಜವನ್ನು ಸೃಷ್ಟಿಸುತ್ತಾನೆ ಮತ್ತು ಸಮಾಜದಿಂದ ಅವನ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಮಾನವ ತನ್ನ ಹೆಚ್ಚಿನ ಜಾಗೃತ ಸಮಯವನ್ನು ಒಂದಿಲ್ಲೊಂದು ಕಾರ್ಯದಲ್ಲಿ ವ್ಯಯಿಸುತ್ತಾನೆ. ಕಾಯಕವು ಹೆಚ್ಚಿನ ಜನರ ಜೀವನೋಪಾಯ ಮಾರ್ಗವಾಗಿದೆ. ಮಾನವನ ಎಲ್ಲಾ ಅಗತ್ಯಗಳನ್ನು ಈಡೇರಿಸುವ ಏಕೈಕ ಚಟುವಟಿಕೆ ಎಂದರೆ ಕಾರ್ಯ ಅಥವಾ ಕೆಲಸ. ಹೀಗೆ ಮಾನವನ ಜೀವನದಲ್ಲಿ ಕೆಲಸವು ಮಹತ್ವದ ಸ್ಥಾನ ಪಡೆದಿದೆ. ಕಾರ್ಯಾನುಭವ ಎನ್ನುವ ಪದವನ್ನು ಮೊದಲ ಬಾರಿಗೆ ಭಾರತದ ಶೈಕ್ಷಣಿಕ ಸಾಹಿತ್ಯದಲ್ಲಿ ಉಪಯೋಗಿಸಿದುದು 1964–66ರ ಕೊಠಾರಿ ಶಿಕ್ಷಣ ಆಯೋಗದಲ್ಲಿ ಯುರೋಪಿನ ಸಾಮಾಜಿಕ ತತ್ವ ಆಧಾರಿತ ದೇಶಗಳಿಂದ ಕಾರ್ಯಾನುಭವ ಎನ್ನುವ ಪರಿಕಲ್ಪನೆಯನ್ನು ಪರಿಚಯಿಸಲಾಗಿತ್ತು.

1964–66ರ ಆಯೋಗವು ಕಾರ್ಯಾನುಭವವನ್ನು "ಶಾಲೆಯಲ್ಲಿ. ಕಾರ್ಯಾಗಾರದಲ್ಲಿ, ಕಾರ್ಖಾನೆಯಲ್ಲಿ ಅಥವಾ ಇತರ ಯಾವುದೇ ಸನ್ನಿವೇಶದಲ್ಲಿ ಉತ್ಪಾದಕ ಕಾರ್ಯದಲ್ಲಿ ಪಾಲ್ಗೊಳ್ಳುವುದಾಗಿದೆ" ಎಂದು ವಿವರಿಸಿದೆ.

ನಂತರ ಈಶ್ವರಭಾಯಿ ಪಟೇಲ ಸಮಿತಿಯು ಕಾರ್ಯಾನುಭವ ಎನ್ನುವ ಪದಕ್ಕೆ ನಿರ್ದಿಷ್ಟವಾಗಿ ಸಾಮಾಜಿಕವಾಗಿ ಉಪಯುಕ್ತತೆ ಎನ್ನುವ ಅಂಶವನ್ನು ಪರಿಚಯಿಸಿ ಅದನ್ನು ಸಾಮಾಜಿಕವಾಗಿ ಉಪಯುಕ್ತ ಉತ್ಪಾದನಾ ಕಾರ್ಯ (SUPW) ಎಂದು ವ್ಯಾಖ್ಯಾನಿಸಿದೆ. ಈ ಸಮಿತಿಯ ಪ್ರಕಾರ ಇದು ಉದ್ದೇಶಿತ ಅರ್ಥಯುತ ದೈಹಿಕ ಕಾರ್ಯವಾಗಿದ್ದು, ಸಮುದಾಯಕ್ಕೆ ಉಪಯುಕ್ತವಿರುವ ಸರಕು ಅಥವಾ ಸೇವೆಗಳನ್ನು ಉತ್ಪಾದಿಸುವುದಾಗಿದೆ.

"ಉತ್ಪಾದಕ ದೈಹಿಕ ಕಾರ್ಯದ ಮೂಲಕ ಶಿಕ್ಷಣ" ಸಾಕಷ್ಟು ಇತಿಹಾಸ ಹೊಂದಿದೆ. ಹಿಂದಿನ ಗುರುಕುಲ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಗುರುವಿನ ಮನೆಯಲ್ಲಿದ್ದು ಜೀವನಕ್ಕೆ ಅವಶ್ಯಕವಾದ ವಿವಿಧ ಪ್ರಕಾರದ ಕಾರ್ಯವನ್ನು ಮಾಡಬೇಕಾಗಿತ್ತು. ಬ್ರಿಟಿಷರ ಅವಧಿಯಲ್ಲಿ ಶಿಕ್ಷಣದ ಕುರಿತಾದ ಆಯೋಗಗಳಾದ ವುಡ್, ಹಂಟರ್, ಹರ್ಟಾಗ್ ಸಮಿತಿಗಳೆಲ್ಲವೂ ಉಪಯುಕ್ತತಾ ಮತ್ತು ಉತ್ಪಾದಕ ಶಿಕ್ಷಣದ ಕುರಿತು ಮಹತ್ವದ ಶಿಫಾರಸ್ಸುಗಳನ್ನು ಮಾಡಿದ್ದವು. ಮಹಾತ್ಮ ಗಾಂಧೀಜಿಯವರ ಮೂಲ ಶಿಕ್ಷಣ ಯೋಜನೆಯಂತೂ ಇಂತಹ ಉತ್ಪಾದಕ ಕಾರ್ಯದ ತತ್ವಗಳನ್ನೇ ಆಧರಿಸಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದ ಆಯೋಗಗಳಾದ ಮುದಲಿಯಾರ್ ಆಯೋಗ, ಕಾರ್ಯಾನುಭವ ಅಥವಾ ಉತ್ಪಾದಕ ಕಾರ್ಯದ ಮಹತ್ವವನ್ನು ಸೂಚಿಸಿದ್ದವು. 1966ರಲ್ಲಿ ಭಾರತ ಸರ್ಕಾರವು ಕಾರ್ಯಾನುಭವದ ಕುರಿತು ಶಿಫಾರಸ್ಸುಗಳನ್ನು ಮಾಡಲು ಪ್ರೊ. ಎಸ್.ಕೆ. ಬೋಸ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿತು. ಅದರಂತೆ 1977ರಲ್ಲಿ ನೇಮಿಸಲಾದ ಈಶ್ವರಭಾಯಿ ಪಟೇಲ ಸಮಿತಿಯು ಕಾರ್ಯಾನುಭವವನ್ನು ಸಾಮಾಜಿಕವಾಗಿ ಉಪಯುಕ್ತತಾ ಉತ್ಪಾದಕ ಕಾರ್ಯ (SUPW) ಎಂದು ಪುನರ್‌ನಾಮಕರಣ ಮಾಡಿತು.

ಸಾಮಾಜಿಕವಾಗಿ ಉಪಯುಕ್ತ ಎಂದರೆ ಕಲಿಕಾರ್ಥಿ ಅವನ ಕುಟುಂಬ, ಅವನ ಶಾಲೆ ಅಥವಾ ಸಮುದಾಯಕ್ಕೆ ಸಂಬಂಧಿಸಿದ ಅಗತ್ಯಗಳ ಆಧಾರದ ಮೇಲೆ ಕಾರ್ಯ ಕೈಗೊಳ್ಳುವುದಾಗಿದೆ. ಉತ್ಪಾದಕ ಕಾರ್ಯವೆಂದರೆ,

1. ಅನುಪಯುಕ್ತ ವಸ್ತುಗಳನ್ನು ಸಂಪನ್ಮೂಲ ವಸ್ತುವಾಗಿಸುವುದು.
2. ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯಗಳಾದ ಶಾಲಾ ಉಪಕರಣಗಳು, ಬಟ್ಟೆ ಮುಂತಾದವುಗಳ ಖರ್ಚನ್ನು ಉಳಿಸುವ ಕಾರ್ಯ
3. ಜೀವನವನ್ನು ಅಮೂಲ್ಯವಾಗಿಸುವ ಕಾರ್ಯ

### ಉದ್ದೇಶಗಳು

ಕೊಠಾರಿ ಶಿಕ್ಷಣ ಆಯೋಗ, ರಾಷ್ಟ್ರೀಯ ಶಿಕ್ಷಣ ನೀತಿ (1986), ಈಶ್ವರಭಾಯಿ ಪಟೇಲ ಸಮಿತಿಗಳು SUPWನ ಹಲವು ಉದ್ದೇಶಗಳನ್ನು ಸೂಚಿಸಿವೆ. ಅಂತಹ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ–

- ಕಾರ್ಯ ಜಗತ್ತಿನ ಕುರಿತು ತಿಳುವಳಿಕೆ ಮೂಡಿಸುವುದರ ಮೂಲಕ ವಿದ್ಯಾರ್ಥಿಯನ್ನು ಹೊಸ ವಾತಾವರಣಕ್ಕೆ ಸಮರ್ಥನನ್ನಾಗಿಸುವುದು.
- ವಿದ್ಯಾರ್ಥಿಯಲ್ಲಿ ಉತ್ಪಾದಕ ಕಾರ್ಯವನ್ನು ಯೋಚಿಸುವ, ಘಟಿಸುವ, ಅನುಷ್ಠಾನಗೊಳಿಸುವ ಸಾಮರ್ಥ್ಯವನ್ನು ಬೆಳೆಸುವುದು.
- ಉತ್ಪಾದಕ ಕಾರ್ಯದಲ್ಲಿ ಅಡಕವಾಗಿರುವ ವೈಜ್ಞಾನಿಕ, ನೈತಿಕ ಮತ್ತು ಜಾತ್ಯತೀತ ಮೌಲ್ಯಗಳನ್ನು ಅರ್ಥೈಸುವುದು.
- ಪರಿಸರವನ್ನು ಸಂರಕ್ಷಿಸುವ, ಬೆಳೆಸುವ ಅಗತ್ಯ ಕುರಿತು ತಿಳುವಳಿಕೆ ಬೆಳೆಸುವುದು.
- ವೈಯಕ್ತಿಕ ಮತ್ತು ಸಮುದಾಯದ ಅಗತ್ಯಗಳ ಈಡೇರಿಕೆಯಲ್ಲಿ ಸ್ವಾವಲಂಬನೆಯ ಗುಣಗಳನ್ನು ಬೆಳೆಸುವುದು.
- ಕಾರ್ಯಕ್ಕೆ ಸಂಬಂಧಿಸಿದ ನೈತಿಕ ಅಂಶಗಳಾದ ನಿಯಮಿತತನ, ಕಠಿಣ ಪ್ರಯತ್ನ, ಪ್ರಾಮಾಣಿಕತನ, ಸಮಯ ಪ್ರಜ್ಞೆ, ಜವಾಬ್ದಾರಿ, ಸಹಚಾರ, ಪ್ರಶಂಸೆ ಮುಂತಾದ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
- ದೈಹಿಕ ಕಾರ್ಯದ ಕುರಿತು ಆರೋಗ್ಯಕರ ಮನೋಭಾವನೆ ಮತ್ತು ದೈಹಿಕ ಶ್ರಮದ ಕುರಿತು ಗೌರವವನ್ನು ಬೆಳೆಸುವುದು.

**ಮಹತ್ವ:** ಸಾಮಾಜಿಕವಾಗಿ ಉಪಯುಕ್ತವಿರುವ ಉತ್ಪಾದಕ ಕಾರ್ಯಗಳಲ್ಲಿ ತೊಡಗುವುದರಿಂದ ಮಾನವ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕವಾಗಿ ಬೆಳೆಯಲು ಉತ್ತಮ ಅವಕಾಶ ದೊರಕುತ್ತದೆ. ಇಂತಹ ಕಾರ್ಯಗಳು ವ್ಯಕ್ತಿ ತನ್ನ ಪ್ರಗತಿ ಮತ್ತು ಸ್ವ–ಬೆಳವಣಿಗೆಯನ್ನು ಮೌಲ್ಯಮಾಪನ ಮಾಡಿಕೊಳ್ಳಲು ಉತ್ತಮ ಸಾಧನವಾಗಿವೆ. ವ್ಯಕ್ತಿಗೆ

Digitised by Bharatavani, CIIL

ಆತ್ಮ-ಸಾಕ್ಷಾತ್ಕಾರಕ್ಕೆ ದಾರಿ ಮಾಡಿಕೊಡುತ್ತವೆ. ಉದ್ದೇಶಿತ ರಚನಾತ್ಮಕ ಕಾರ್ಯಗಳಿಂಥ ಬಡತನ, ಬೇಸರಿಕೆಗಳನ್ನು ದೂರ ಮಾಡಬಹುದಾಗಿದೆ. ಉಪಯುಕ್ತ ಕಾರ್ಯಗಳಿಂದ ವ್ಯಕ್ತಿ ಸ್ವಾವಲಂಬಿಯಾಗಲು ಸಾಧ್ಯ.

**ಚಟುವಟಿಕೆಗಳು:** SUPWನ ಚಟುವಟಿಕೆಗಳನ್ನು ವ್ಯಕ್ತಿಯ ಅಗತ್ಯಗಳು, ಮತ್ತು ಅವನ ಸಮಾಜದ ಅಗತ್ಯಗಳ ಆಧಾರದ ಮೇಲೆ ಹಲವು ಪ್ರಕಾರವಾಗಿ ವರ್ಗೀಕರಿಸಬಹುದಾಗಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಆಧಾರದ ಮೇಲೆ NCERTಯು SUPWನ ಕೆಲವು ಚಟುವಟಿಕೆಗಳನ್ನು ಕೆಳಗಿನಂತೆ ಪಟ್ಟಿಮಾಡಿದೆ.

1. ಹೂದೋಟ ಮತ್ತು ತರಕಾರಿಗಳನ್ನು ಬೆಳೆಸುವುದು.
2. ಕಡತಗಳು, ಲಕೋಟೆಗಳಂತಹ ವಸ್ತುಗಳನ್ನು ಸಿದ್ಧಪಡಿಸುವುದು.
3. ಗೃಹೋಪಯೋಗಿ ವಿದ್ಯುತ್ ಉಪಕರಣಗಳನ್ನು ರಿಪೇರಿ ಮಾಡುವುದು ಮತ್ತು ನಿರ್ವಹಿಸುವುದು.
4. ವಿದ್ಯಾರ್ಥಿ ಬ್ಯಾಂಕನ್ನು ಸಂಘಟಿಸುವುದು.

ಇವುಗಳಲ್ಲದೆ ಇನ್ನೂ ಕೆಲವು ಚಟುವಟಿಕೆಗಳನ್ನು ಕೆಳಗಿಂತೆ ಪಟ್ಟಿ ಮಾಡಬಹುದಾಗಿದೆ.

ಕೃಷಿ, ತೋಟಗಾರಿಕೆ, ಗೃಹ ವಿಜ್ಞಾನ, ಬಟ್ಟೆ ಹೊಲಿಯುವುದು, ಕಸೂತಿ, ಚರ್ಮ ಕಾರ್ಯ, ಫೋಟೋಗ್ರಾಫಿ, ಪುಸ್ತಕ ಜೋಡಣೆ, ಮಣ್ಣಿನ ಮಾದರಿ ತಯಾರಿಕೆ, ಮೇಣದಬತ್ತಿ ತಯಾರಿಕೆ, ಸೀಮೆಸುಣ್ಣ ತಯಾರಿಕೆ.

SUPWನ ಚಟುವಟಿಕೆಗಳು ವಿವಿಧ ಪ್ರಕಾರದ ಮಾನಸಿಕ. ದೈಹಿಕ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಒಳಗೊಂಡಿದ್ದು, ವಿದ್ಯಾರ್ಥಿ ತನ್ನ ಸ್ವ-ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ. ಸಹಕಾರಾತ್ಮಕ ಕಾರ್ಯ ಮತ್ತು ಸಾಮಾಜಿಕ ಸೇವೆಯು ಆರೋಗ್ಯಕರ ಸಾಮಾಜಿಕ ಸಂಬಂಧಗಳನ್ನು ಬೆಳೆಸುತ್ತವೆ. ವಿದ್ಯಾರ್ಥಿ ಇಂಥ ಚಟುವಟಿಕೆಗಳಲ್ಲಿ ಆನಂದವನ್ನು ಹೊಂದುತ್ತಾನೆ. ಹೀಗೆ SUPW ಚಟುವಟಿಕೆಗಳು ವಿದ್ಯಾರ್ಥಿಯ ಅಗತ್ಯಗಳನ್ನು ಆಧರಿಸಿದ್ದು, ಅವನ ಊಹಾತ್ಮಕ ಮತ್ತು ಸೃಜನಾತ್ಮಕ ಚಟುವಟಿಕೆಗಳಿಗೆ ಉತ್ತಮ ಅವಕಾಶ ಒದಗಿಸುತ್ತವೆ.

SUPWನ ಚಟುವಟಿಕೆಗಳು ವಿದ್ಯಾರ್ಥಿಯ ವರ್ತನೆಯ ಎಲ್ಲಾ ಮೂರು ವಲಯಗಳಲ್ಲಿ ಬದಲಾವಣೆಯನ್ನು ತರುತ್ತವೆ. ಅವುಗಳೆಂದರೆ.

**ಜ್ಞಾನಾತ್ಮಕ ವಲಯದಲ್ಲಿ:** ವಿದ್ಯಾರ್ಥಿ ಕಚ್ಚಾ ಸಾಮಗ್ರಿಗಳ, ಅವುಗಳ ಗುಣಮಟ್ಟದ ಪರಿಣಾಮ ಮತ್ತು ವೆಚ್ಚದ ಜ್ಞಾನವನ್ನು ಪಡೆಯುತ್ತಾನೆ. ಉಪಯುಕ್ತ ಉತ್ಪಾದನಾ ಪ್ರಕ್ರಿಯೆಯ ಜ್ಞಾನ ಪಡೆಯುತ್ತಾನೆ. ಸಮಸ್ಯಾ ಪರಿಹಾರ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾನೆ.

**ಸಂವೇಗಾ ವಲಯದಲ್ಲಿ:** ಗುಂಪು ಚಟುವಟಿಕೆ ಸಹಕಾರ, ನಾಯಕತ್ವ ಮುಂತಾದ ಸಾಮಾಜಿಕ ಕೌಶಲ್ಯಗಳನ್ನು ಇವು ಬೆಳೆಸುತ್ತವೆ. ಸ್ವಾವಲಂಬನೆ, ನಿಯಮಿತತನ, ಸಮಯಪ್ರಜ್ಞೆ, ವೈಜ್ಞಾನಿಕ ಮನೋಭಾವನೆ, ಪ್ರಶಂಸೆ, ಸೌಂದರ್ಯ ಪ್ರಜ್ಞೆ ಹೊಸತನ ಮುಂತಾದ ವ್ಯಕ್ತಿತ್ವದ ಲಕ್ಷಣಗಳನ್ನು ಬೆಳೆಸುತ್ತವೆ.

**ಮನೋಗತ್ಯಾತ್ಮಕ ವಲಯದಲ್ಲಿ:** ಕಾರ್ಯದಲ್ಲಿ ನಿಖರತೆ, ಉಪಕರಣಗಳ ಬಳಕೆ ಕೌಶಲ್ಯ, ಉತ್ಪಾದನೆಯ ವಿನ್ಯಾಸ, ಉಪಕರಣಗಳ ಆಯ್ಕೆ, ಪ್ರಯತ್ನದಲ್ಲಿ ದಕ್ಷತೆ ಮುಂತಾದ ಕೌಶಲ್ಯಗಳನ್ನು ಬೆಳೆಸುತ್ತವೆ. ನಿಯಮಿತತನ, ಹೊಸತನ ಮುಂತಾದ ವ್ಯಕ್ತಿತ್ವದ ಲಕ್ಷಣಗಳನ್ನು ಬೆಳೆಸುತ್ತವೆ.

SUPWನ ಕಾರ್ಯಕ್ರಮವು ವೈವಿಧ್ಯಮಯ ಉತ್ಪಾದಕ ಮತ್ತು ಸೇವಾ ಚಟುವಟಿಕೆಗಳನ್ನು ಒಳಗೊಂಡಿದ್ದು. ಮಕ್ಕಳನ್ನು ಸಮಾಜದ ವಿವಿಧ ಪ್ರಕಾರದ ಉದ್ಯೋಗಾವಕಾಶಗಳಿಗೆ ಅರ್ಹರನ್ನಾಗಿಸುತ್ತದೆ. ಜೊತೆಗೆ ಈ ಕಾರ್ಯಕ್ರಮವು ಮಕ್ಕಳು ತಮ್ಮ ಸ್ವಂತ ಅಭಿಕ್ಷಮತೆ, ಆಸಕ್ತಿ ಮತ್ತು ಸಾಮರ್ಥ್ಯಗಳನ್ನು ಶೋಧಿಸಲು ಸಹಾಯ ಮಾಡುತ್ತದೆ.

ಸೇವೆ ಉದ್ದೇಶಿತ ಚಟುವಟಿಕೆಗಳಾದ ಶಾಲೆ ಮತ್ತು ಸಮುದಾಯದ ಸ್ವಚ್ಛತೆ, ಶೌಚಾಲಯಗಳ ನಿರ್ಮಾಣ, ಸೊಳ್ಳೆ ನಿಯಂತ್ರಣ, ಸಾಂಕ್ರಾಮಿಕ ರೋಗ ತಡೆಗಟ್ಟುವಿಕೆ ಕ್ರಮಗಳು ಆರೋಗ್ಯ ಪ್ರಜ್ಞೆಯನ್ನು ಬೆಳೆಸುತ್ತದೆ. SUPW ಕಾರ್ಯಕ್ರಮದಲ್ಲಿ ಅಡಕವಾಗಿರುವ ಗಳಿಕೆ ಮತ್ತು ಕಲಿಕೆ ತತ್ವವು ಸ್ವಾವಲಂಬನೆ ಮತ್ತು ಶ್ರಮದ ಮಹತ್ವವನ್ನು ತಿಳಿಸುತ್ತದೆ.

ಒಟ್ಟಿನಲ್ಲಿ ಸಾಮಾಜಿಕವಾಗಿ ಉಪಯುಕ್ತತಾ ಉತ್ಪಾದಕ ಕಾರ್ಯದ ಶಿಕ್ಷಣವು ಮಗುವಿನ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಜೀವನಕ್ಕಾಗಿ ಶಿಕ್ಷಣ ಎಂಬ ಶಿಕ್ಷಣದ ವಿಶಾಲ ಗುರಿಯನ್ನು ತಲುಪಲು SUPW ಅತ್ಯಂತ ಸೂಕ್ತವಾದ ಮತ್ತು ಏಕೈಕ ಕ್ರಮವಾಗಿದೆ.

– ಜಿ.ಎಸ್.ಹಿ.

## ಸಾಮಾಜಿಕ ಚಲನೆ ಮತ್ತು ಶಿಕ್ಷಣ

ಮಾನವ ಸಮಾಜವು ನಿತ್ಯಪರಿವರ್ತನಾಶೀಲವಾದದ್ದು. ಸಮಾಜದ ವ್ಯಕ್ತಿಗಳಲ್ಲಿ ಮತ್ತು ಸಮೂಹಗಳಲ್ಲಿ ಏಕತೆ, ಸಮಾನತೆಗಿಂತ ಬಹುರೂಪತೆ, ವಿಭಿನ್ನತೆ ವ್ಯಾಪಕವಾಗಿರುತ್ತದೆ. ಈ ವ್ಯತ್ಯಾಸ ವಿಭಿನ್ನತೆಗನುಗುಣವಾಗಿ ಸಮಾಜದಲ್ಲಿ ವ್ಯಕ್ತಿ ಮತ್ತು ಸಮೂಹಗಳ ಅಂತಸ್ತನ್ನು ನಿರ್ಧರಿಸಲಾಗುತ್ತದೆ. ಮೇಲು ಕೀಳೆಂಬ ಸಾಮಾಜಿಕ ಮೌಲ್ಯಮಾಪನ ಎಲ್ಲ ಸಮಾಜಗಳಲ್ಲೂ ಕಂಡುಬರುತ್ತದೆ. ಸಾಮಾಜಿಕ ಮೌಲ್ಯಮಾಪನದಲ್ಲಿ ಬದಲಾವಣೆಗಳಾದಂತೆ ಸಮೂಹ ಹಾಗೂ ವ್ಯಕ್ತಿಗಳ ಅಂತಸ್ತಿನಲ್ಲೂ ವ್ಯತ್ಯಾಸ ಉಂಟಾಗುತ್ತದೆ. ವ್ಯಕ್ತಿಗಳ ಅಂತಸ್ತು ಮೇಲೇರಲೂಬಹುದು ಅಥವಾ ಕೆಳಗಿಳಿಯಲೂಬಹುದು. ಈ ಬಗೆಯ ಸಾಮಾಜಿಕ ಮೌಲ್ಯಮಾಪನದಲ್ಲಿ ವ್ಯಕ್ತಿ ಮೇಲೇರುವ ಹಾಗೂ ಕೆಳಗಿಳಿಯುವ ಕ್ರಿಯೆಗೆ ಸಾಮಾಜಿಕ ಚಲನೆ ಎನ್ನಬಹುದು. ಶ್ರೇಣೀಕೃತ ಸಮಾಜದ ವ್ಯವಸ್ಥೆಯಲ್ಲಿ ಹಾಗೂ ಅದರ ರಚನೆಯಲ್ಲಿ ವ್ಯಕ್ತಿಗಳು ಮತ್ತು ಸಮೂಹಗಳ ಅಂತಸ್ತಿನ ಬದಲಾವಣೆಗೆ ಸಾಮಾಜಿಕ ಚಲನೆ (Social Mobility) ಎಂದು ಹೆಸರು.

ಶಿಕ್ಷಣವು ಸಾಮಾಜಿಕ ಚಲನೆಯನ್ನು ನಿರಂತರವಾಗಿ ಪ್ರೋತ್ಸಾಹಿಸುವ ಒಂದು ಅತ್ಯಂತ ಪ್ರಮುಖ ಕಲ್ಪನೆ. ಸಮಾಜವು ನಿತ್ಯಪರಿವರ್ತನಾಶೀಲವಾದದ್ದು. ಹಾಗಾಗಿ ಚಲನಾತ್ಮಕವಾದುದು. ಸಮಾಜದ ಎಲ್ಲ ಸಂಘಸಂಸ್ಥೆಗಳು, ಅವುಗಳ ರಚನೆ ಹಾಗೂ ಕಾರ್ಯಕ್ಷೇತ್ರದಲ್ಲಿ ಬದಲಾವಣೆಗಳು ಅನಿವಾರ್ಯ ಹಾಗೂ ಅವಶ್ಯಕ. ಈ ವ್ಯವಸ್ಥೆಯಲ್ಲಿಯೇ ಸಾಮಾಜಿಕ ಚಲನೆಯೂ ಸಹ ಶಿಕ್ಷಣ ಎಂಬ ಪ್ರಕ್ರಿಯೆಯಿಂದ ಪ್ರಭಾವಿತವಾಗುತ್ತಿದೆ. ಸಾಮಾಜಿಕ ಚಲನೆಯು ಎಲ್ಲ ಸಮಾಜಗಳಲ್ಲಿ ನಿರಂತರವಾಗಿ ಕಂಡು ಬಂದರೂ ಒಂದೇ ರೀತಿ ಇರುವುದಿಲ್ಲ ಹಾಗೂ ಒಂದೇ ದಿಕ್ಕಿನಲ್ಲಿ ಏರ್ಪಡುವುದಿಲ್ಲ. ಕೆಲವೊಮ್ಮೆ ಅದು ಮೂರುದಿಕ್ಕುಗಳಲ್ಲಿ ಉಂಟಾಗಬಹುದು. 1. ಕೆಳಗಿನಿಂದ ಮೇಲಕ್ಕೆ 2. ಮೇಲಿನಿಂದ ಕೆಳಕ್ಕೆ 3. ಒಂದೇ ಮಟ್ಟದ ಎರಡು ಸ್ಥಾನಗಳಲ್ಲಿ. ಇಷ್ಟಲ್ಲದೆ ನಿರ್ಬಂಧಿತ ಸಮಾಜದಲ್ಲಿ ಸಾಮಾಜಿಕ ಚಲನೆಯು ನಿರ್ಬಂಧಕ್ಕೊಳಗಾಗಿದ್ದು ನಿಧಾನಗತಿಯಲ್ಲಿ ಬದಲಾವಣೆಯಾದರೆ ತೆರೆದ ಸಮಾಜದಲ್ಲಿ ಚಲನೆಯು ಸರಾಗವಾಗಿರುತ್ತದೆ. ಉದಾಹರಣೆಗೆ, ಆಧುನಿಕ ಭಾರತದ ಸಮಾಜ ಹಾಗೂ ವರ್ಗಾಧಾರಿತ ಅಮೆರಿಕ ಸಮಾಜ. ಕೆಲವೊಮ್ಮೆ ಬದಲಾವಣೆಗಳು ಪೀಳಿಗೆಯಿಂದ ಪೀಳಿಗೆಗೆ ಅಥವಾ ಒಂದೇ


Digitised by Bharatavani, CIIL

ಪೀಳಿಗೆಯಲ್ಲಿಯೂ ಉಂಟಾಗಬಹುದು. ಹೀಗೆ ಸಾಮಾಜಿಕ ಚಲನೆಯ ವಿವಿಧ ಹಂತಗಳಲ್ಲಿ ಶಿಕ್ಷಣದ ಪಾತ್ರವನ್ನು ಮರೆಯುವ ಹಾಗಿಲ್ಲ. ವ್ಯಕ್ತಿಗಳು ಸ್ತರವಿನ್ಯಾಸದ ಏಣಿಯಲ್ಲಿ ಸ್ಥಾನಗಳನ್ನು ಹುಟ್ಟಿನಿಂದ ಅಥವಾ ಸಾಧನೆ, ಪ್ರೇರಣೆ ಮತ್ತು ಸ್ವಪ್ರಮಾಣತೆಯಿಂದ ಗಳಿಸುತ್ತಾರೆ. ಆದರೆ ಈ ಗಳಿಸಿದ ಸ್ಥಾನಮಾನಗಳೂ ಸಹ ಶಿಕ್ಷಣದಿಂದ ಬದಲಾಗುತ್ತವೆ. ಸಾಮಾಜಿಕ ಚಲನೆ ಅತ್ಯಂತ ವೇಗವಾಗಿ, ಅತ್ಯಂತ ಸಮರ್ಪಕವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಯುತ್ತಿರುವ ರೀತಿನೀತಿಗಳನ್ನು ನೋಡಿದರೆ ಕೊನೆಯಲ್ಲಿ ಶಿಕ್ಷಣದಿಂದಲೇ ಸಾಮಾಜಿಕ ಚಲನೆಗೆ ಪ್ರೋತ್ಸಾಹ ಲಭಿಸಿದೆ ಎಂದೆನ್ನಬಹುದು. ಕೆಲವೊಮ್ಮೆ ಸಾಮಾಜಿಕ ಚಲನೆಯ ಇನ್ನೊಂದು ಅಂಶವೆಂದರೆ ಚಲನೆಯ ಘಟಕ. ಅದು ವ್ಯಕ್ತಿಗಳು, ಕುಟುಂಬಗಳು, ಸಮೂಹಗಳು ಹಾಗೂ ಇಡೀ ಸಮಾಜವಾಗಬಹುದು. ಇದರ ಮತ್ತೊಂದು ಅಂಶ ಅಂತಸ್ತಿನ ಬದಲಾವಣೆಯಲ್ಲಿನ ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ಅಂಶಗಳ ವ್ಯತ್ಯಾಸ. ಈ ಹಂತದಲ್ಲೂ ಸಹ ಸಾಮಾಜಿಕ ಚಲನೆ ಅತ್ಯಂತ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತದೆ. ಇಂದು ಅಂತಸ್ತು, ಸ್ಥಾನ, ವೃತ್ತಿ ಅಥವಾ ಅಧಿಕಾರದಲ್ಲಿ ಬದಲಾವಣೆಗಳೆಲ್ಲಾ ಲಂಬಾಂತರ ಚಲನೆ ಎನಿಸಿಕೊಂಡಿದೆ. ಈ ಬಗೆಯ ಲಂಬಾಂತರ ಚಲನೆಯಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಹಾಸುಹೊಕ್ಕಾಗಿದೆ ಎನ್ನಬಹುದು. ಇಂದು ವ್ಯಕ್ತಿಯ ಅಂತಸ್ತು ಕೇವಲ ಜಾತಿಯಿಂದಲೇ ಅಲ್ಲದೆ ಅವನು ಪಡೆಯುವ ಶಿಕ್ಷಣ, ಗಳಿಸುವ ಉದ್ಯೋಗ ಹಾಗೂ ಪಡೆಯುವ ವೇತನ ಇವೆಲ್ಲವೂ ಶಿಕ್ಷಣದಿಂದಲೇ ಬದಲಾಗುತ್ತವೆ ಎನ್ನಬಹುದು. ಅಂತೆಯೇ ಸಾಮಾಜಿಕ ಚಲನೆಯಲ್ಲಿ ಮುಕ್ತ ಚಲನೆ ಹಾಗೂ ನಿರ್ಬಂಧಿತ ಚಲನೆ ಕಂಡುಬರುತ್ತದೆ. ನಿರ್ಬಂಧಿತ ಚಲನೆಯಲ್ಲಿ ಅಂತಸ್ತು ಜನ್ಮದತ್ತವಾದರೂ ಶಿಕ್ಷಣದಿಂದಾಗಿ ಅಲ್ಲಿಯೂ ಬದಲಾವಣೆಗಳು ಕಂಡು ಬರಬಹುದು. ಉದಾಹರಣೆಗೆ, ಜಾತಿಯು ಜನ್ಮದತ್ತವಾದುದು. ಇಂದು ಅನೇಕ ಬದಲಾವಣೆಗಳು ಜಾತಿ ವ್ಯವಸ್ಥೆಯಲ್ಲಿ ಕಂಡುಬಂದಿದೆ. ಜೊತೆಗೆ ಒಳಬಾಂಧವ್ಯ ವಿವಾಹ ಜಾತಿಯ ತಿರುಳು ಎಂಬುದು ಇಂದು ಸುಳ್ಳಾಗಿ ಅನೇಕ ಅಂತರ್‌ಜಾತಿಯ ವಿವಾಹಗಳನ್ನು ಕಾಣಬಹುದು. ಈ ಬಗೆಯ ವಿವಾಹ, ವಿದ್ಯಾವಂತರಲ್ಲಿ ಹೆಚ್ಚಾಗಿ ಕಾಣುತ್ತೇವೆ. ಆದುದರಿಂದ ಶಿಕ್ಷಣದಿಂದ ಸಾಮಾಜಿಕ ಚಲನೆಗೆ ಹಾಗೂ ಅದರ ನಿಶ್ಚಯಾತ್ಮಕ ಬೆಳವಣಿಗೆಗೆ ಶಿಕ್ಷಣ ಅತ್ಯಂತ ಯಶಸ್ವಿ ಪಾತ್ರ ವಹಿಸುತ್ತದೆ. ಶಿಕ್ಷಣದ ಜೊತೆಗೆ ನಗರೀಕರಣ, ಸಂಕೀರ್ಣ ಶ್ರಮವಿಭಜನೆ, ತೀವ್ರ ಸಾಮಾಜಿಕ ಬದಲಾವಣೆಗಳು ಮುಕ್ತ ಚಲನೆಗೆ ಪೂರಕವಾದ ಅಂಶಗಳು. ಇಲ್ಲಿ ಅಂತಸ್ತು ಗಳಿಸಿದ್ದಾಗಿರುತ್ತದೆ. ಆ ಗಳಿಸಿದ ಅಂತಸ್ತಿನಲ್ಲಿ ಶಿಕ್ಷಣದ ಪಾತ್ರ ಅವ್ಯಾಹಿತವಾಗಿರುತ್ತದೆ.

ಹಾಗೆಯೇ ಸಾಮಾಜಿಕ ಚಲನೆಯಲ್ಲಿ ಅಂತರ್‌ಪೀಳಿಗಾ ಚಲನೆ ಮತ್ತು ಆಂತರಿಕ ಪೀಳಿಗಾ ಚಲನೆ ಎಂಬ ಮತ್ತೆರಡು ಬಗೆಗಳಿವೆ. ಅಂತರ್ ಪೀಳಿಗಾ ಚಲನೆ ಎಂಬುದು ಮತ್ತೊಂದು ಪೀಳಿಗೆಯ ಅಂತರದಲ್ಲಾಗುವ ಬದಲಾವಣೆ. ಉದಾಹರಣೆಗೆ, ಅಂತಸ್ತು, ಸ್ಥಾನ, ವೃತ್ತಿ ಮತ್ತು ಅಧಿಕಾರ ಇವುಗಳಲ್ಲಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಬದಲಾವಣೆಗೊಳ್ಳುವುದು. ಈ ಚಲನೆಯು ಮೇಲ್ಮುಖದ್ದಾಗಿರಬಹುದು. ಇಲ್ಲವೇ ಕೆಳಮುಖದ್ದಾಗಿರಬಹುದು. ವೃತ್ತಿಯ ಬದಲಾವಣೆಯಿಂದ ಹಿರಿಯ ಪೀಳಿಗೆಯವರು ಕಿರಿಯ ಪೀಳಿಗೆಯವರಿಗಿಂತ ಅಂತಸ್ತು ಹೆಚ್ಚಿ ಅಥವಾ ಇಳಿದು ಸಾಮಾಜಿಕ ಚಲನೆ ಏರ್ಪಡಬಹುದು. ಶಿಕ್ಷಣವೇ ಇಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎನ್ನಬಹುದು. ಹಳೆಯ ತಲೆಮಾರಿನವರಿಗಿಂತಲೂ ಹೊಸತಲೆಮಾರಿನ ಜನರು ಮೇಲ್ಕಂಡ ತ್ವರಿತ ಬದಲಾವಣೆಗೆ ಶಿಕ್ಷಣದ ಮೂಲಕ ಒಳಪಡಬಹುದು. ರೈತನ ಮಗ ವೈದ್ಯ ಅಥವಾ ವಿಜ್ಞಾನಿ ಅಥವಾ ಪ್ರಾಧ್ಯಾಪಕನಾಗುವುದು ಒಂದು ಉದಾಹರಣೆ. ಇಂದಿನ ಯುಗದಲ್ಲಿ ಈ ಬಗೆಯ ಚಲನೆಯು ಬಹಳ ಪ್ರಮುಖವಾಗಿದೆ. ಶಿಕ್ಷಣ, ತರಬೇತಿ, ವೃತ್ತಿ ಚಲನೆ, ಅನಿರ್ಬಂಧಿತ ಅವಕಾಶಗಳು, ಸಾಮಾಜಿಕ ಬದಲಾವಣೆ ರಾಜಕೀಯ ಅಧಿಕಾರ, ನಗರೀಕರಣ ಮುಂತಾದವು ಈ ಚಲನೆಯ ಪೂರಕ ಅಂಶಗಳು.

ಸಾಮಾಜಿಕ ಚಲನೆಯ ಪೂರಕ ಅಂಶಗಳಲ್ಲೊಂದಾದ ಸಾಮಾಜಿಕ ಬದಲಾವಣೆಯು ಶಿಕ್ಷಣದ ಪಾತ್ರದಿಂದಲೇ ನಡೆಯುತ್ತೆನ್ನಬಹುದು. ಶ್ರಮವಿಭಜನೆಯು ಸಾಮಾಜಿಕ ಚಲನೆಯ ಪ್ರಮುಖ ಅಂಶಗಳಲ್ಲೊಂದು. ಶ್ರಮವಿಭಜನೆ ವ್ಯಾಪಕವಾಗಿ ಬೆಳೆದು ಸಾಮಾಜಿಕ ಚಲನೆ ನಿರಂತರವಾಗಿ ಏರ್ಪಡಲು ಶಿಕ್ಷಣವೇ ಪ್ರೇರಕ ಅಂಶ. ಶಿಕ್ಷಣ ಕ್ಷೇತ್ರದಲ್ಲಾದ ಗಂಭೀರ ಹಾಗೂ ಅರ್ಥಪೂರ್ಣ ಬದಲಾವಣೆಗಳು ಶ್ರಮ ವಿಭಜನೆಯ ಪ್ರಮಾಣವನ್ನು ಅತ್ಯಂತ ಮಹತ್ವವಾಗಿ ವೈಭವೀಕರಿಸಿವೆ. ಉದಾಹರಣೆಗೆ ಈ ಹಿಂದೆ ವೈದ್ಯಕೀಯ ಶಿಕ್ಷಣದಲ್ಲಿ ಮೆಡಿಸಿನ್ ಸರ್ಜರಿ ಎಂಬೆರಡು ವಿಷಯಗಳಷ್ಟೇ ಇತ್ತು. ಆದರೆ ಇಂದು ವೈದ್ಯಕೀಯ ಕ್ಷೇತ್ರದಲ್ಲಿ ಆಗುತ್ತಿರುವ ಸಂಶೋಧನೆ, ಆವಿಷ್ಕಾರ ಇವುಗಳು ಅತ್ಯಂತ ವೈವಿಧ್ಯಮಯವಾದ ವಿಭಾಗಗಳ ಬೆಳವಣಿಗೆಗೆ ಪ್ರೋತ್ಸಾಹ ಕೊಟ್ಟಿವೆ. ಉದಾಹರಣೆಗೆ ಪೆಥಾಲಜಿ, ಗೈನಕಾಲಜಿ ಆರ್‌ತೋಪಿಡಿಕ್, ಡಯಾಬಿಟಾಲಜಿ, ಪೀಡಿಯಾಟ್ರಿಕ್ಸ್, ಎನ್‌ಡೊಕ್ರೈನಾಲಜಿ ಹೀಗೆ ನೂರಾರು ವಿಷಯಗಳು ಪ್ರಾಮುಖ್ಯತೆಗೆ ಬರುತ್ತಿದೆ. ವೈದ್ಯಕೀಯ ವಿಜ್ಞಾನ ಈ ತನಕ 5 + 2 ಇದ್ದದ್ದು ಈ ದಿನ 5 + 2 + 3. ಹೀಗೆ ನಿರಂತರ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿದೆ.

ಸಾಮಾಜಿಕ ಚಲನೆಯನ್ನು ಉತ್ತೇಜಿಸುವ ಮತ್ತೊಂದು ಮುಖ್ಯವಾದ ಅಂಶವೆಂದರೆ ಆರ್ಥಿಕಾಭಿವೃದ್ಧಿ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದ ಬೆಳವಣಿಗೆಯಷ್ಟೇ ಅಲ್ಲದೆ ಕೈಗಾರಿಕೀಕರಣ, ನಗರೀಕರಣ, ಮುಕ್ತ ಮಾರುಕಟ್ಟೆ ವ್ಯವಸ್ಥೆ, ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಮುಂತಾದ ಆರ್ಥಿಕ ಅಂಶಗಳು ಸಾಮಾಜಿಕ ಚಲನೆಯನ್ನು ಉತ್ತೇಜಿಸುತ್ತವೆ. ಹಿಂದುಳಿದ ದೇಶಗಳಿಗಿಂತ ಮುಂದುವರಿದ ಹಾಗೂ ಮುಂದುವರೆಯುತ್ತಿರುವ ದೇಶಗಳಲ್ಲಿ ಸಾಮಾಜಿಕ ಚಲನೆಯು ಹೆಚ್ಚು ಸರಳ, ಸುಗಮ ಹಾಗೂ ಉತ್ತಮವಾದುದಾಗಿರುತ್ತದೆ. ಈ ಅಭಿಪ್ರಾಯವನ್ನು ಸಮಾಜಶಾಸ್ತ್ರಜ್ಞರಾದ ಒಸ್ಸಾವಾಸ್ಕಿ ತಮ್ಮ ಅಧ್ಯಯನದಲ್ಲಿ ಸಮರ್ಥಿಸಿದ್ದಾರೆ. ಕೆಲವೊಮ್ಮೆ ಸಾಮಾಜಿಕ ಚಲನೆಯನ್ನು ನಿರ್ಧರಿಸುವ ಅಂಶಗಳಲ್ಲಿ ಒಂದು ಸಮಾಜವು ಮುಕ್ತವೇ ಅಥವಾ ನಿರ್ಬಂಧವೇ ಎಂಬುದರ ಆಧಾರದ ಮೇಲೆ ನಿರ್ಧರಿತವಾಗಿರುತ್ತದೆ. ಸಮಾಜವು ಮುಕ್ತವಾಗಿದ್ದಷ್ಟೂ ಶಿಕ್ಷಣ ವ್ಯಾಪಕವಾಗಿರುತ್ತದೆ. ಹಾಗಾಗಿ ಚಲನೆ ವ್ಯಕ್ತಿಗಳ ಅಂತಸ್ತಿನ ಏಣಿ ಶ್ರೇಣಿಯಲ್ಲಿ ಮೇಲೇರಲು ಮುಕ್ತ ಅವಕಾಶವಿದ್ದಲ್ಲಿ ಸಾಮಾಜಿಕ ಚಲನೆಯು ಸುಗಮವಾಗಿರುತ್ತವೆ. ಯಾವುದೇ ಮಾನವ ಸಮಾಜದಲ್ಲಾಗಲಿ ಶಿಕ್ಷಣ ಪ್ರೇರಿತ ಸಮಾಜವು ಒಂದು ಬಗೆಯ ಆರೋಗ್ಯದಾಯಕ ಚಲನೆಗೆ ಒಳಗಾಗುವುದರಲ್ಲಿ ಸಂಶಯವಿರುವುದಿಲ್ಲ.

ಜಾತಿ ಪದ್ಧತಿಯಂತಹ ಜಡವ್ಯವಸ್ಥೆಯನ್ನು ಹೊಂದಿರುವ ಭಾರತೀಯ ಸಮಾಜದಲ್ಲಿ ಸಾಮಾಜಿಕ ಚಲನೆಗೆ ಹೆಚ್ಚು ಅವಕಾಶಗಳಿಲ್ಲ ಎಂಬ ನಂಬಿಕೆಗೆ ಇಂದು ಯಾವ ಅರ್ಥವೂ ಇಲ್ಲ. ಶಿಕ್ಷಣ ಇಂದು ಸಾರ್ವತ್ರಿಕವಾಗಿ ಆರೋಗ್ಯದಾಯಕವಾದ ರೀತಿಯಲ್ಲಿ ತನ್ನ ತಿರುಳನ್ನು ಸಮಾಜಕ್ಕೆ ನೀಡುತ್ತಿರುವುದರಿಂದ ಇಂದು ಏನು? ಯಾರು? ಏಕೆ? ಹೇಗೆ? ಎಂಬ ಪ್ರಶ್ನೆಗಳನ್ನು ಕೆರಳಿಸುವ ಹಾಗೆ ಕೇಳುವಂತಹ ಉತ್ತಮ ಜ್ಞಾನವನ್ನು ಶಿಕ್ಷಣವು ತನ್ನ ಜನಸಮೂಹಕ್ಕೆ ನೀಡುತ್ತಿದೆ. ಇಂದಿನ ಬದಲಾದ ವಿವಿಧ ಸನ್ನಿವೇಶಗಳಿಂದಾಗಿ ಭಾರತವು ಗಣನೀಯ ಪರಿವರ್ತನೆಯ ಸ್ಥಿತಿಯಲ್ಲಿದೆ. ಉದಾಹರಣೆಗೆ, ಒಂದು ಶತಮಾನದ ಹಿಂದಿನ ಸಮಾಜದ ಸ್ಥಿತಿಗತಿಗಳನ್ನು ಇಂದಿನ ಸಮಾಜದ ಸ್ಥಿತಿಗತಿಗಳಿಗೆ ಹೋಲಿಸಿ ನೋಡಿದಾಗ

Digitised by Bharatavani, CIIL

ಶಿಕ್ಷಣ ಹಾಗೂ ಇನ್ನಿತರ ಪ್ರಜಾಪ್ರಭುತ್ವ ಅಂಶಗಳು ಹೇಗೆ ಜನಜೀವನವನ್ನು ನಿಶ್ಚಯಾತ್ಮಕವಾದ ಗುರಿಗಳತ್ತ ಕೊಂಡೊಯ್ಯುತ್ತಿದೆ ಎಂಬುದನ್ನು ಕಾಣಬಹುದು. ಶಿಕ್ಷಣದ ಜೊತೆ ಜೊತೆಯಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಉತ್ಕರ್ಷಕ್ಕಾಗಿ ನಡೆಯುತ್ತಿರುವ ಹಿಂದುಳಿದ ಜಾತಿಗಳ ಸಂಘಟಿತ ಯತ್ನ.

ಒಟ್ಟಾರೆ ಶಿಕ್ಷಣವು ಸಮಾಜೀಕರಣದ ನಿಯೋಗಿ ಹೇಗೋ ಹಾಗೆ ಸಾಮಾಜಿಕ ಚಲನೆಯ ನಿಯೋಗಿಯೂ ಹೌದು. ಈ ಹಿಂದೆ ಸಮಾಜೀಕರಣದ ಜವಾಬ್ದಾರಿಯನ್ನು ಕುಟುಂಬ ವಹಿಸಿಕೊಂಡಿತ್ತು. ಆದರೆ ಸಾಮಾಜಿಕ ಚಲನೆಯೊಂದಿಗೆ ಸಮಾಜೀಕರಣವೂ ಸೇರಿ ಇಂದು ಆ ಕಾರ್ಯವನ್ನು ಶೈಕ್ಷಣಿಕ ಸಂಸ್ಥೆಗಳು ವಹಿಸಿಕೊಂಡಿವೆ. ಸಾಮಾಜಿಕ ಚಲನೆಯ ಕ್ಷೇತ್ರದಲ್ಲೂ ಇತರರ ಬಗ್ಗೆ ಕಾಳಜಿ ತಪ್ಪು ಒಪ್ಪಿನ ಪರಿಜ್ಞಾನ ಇವುಗಳನ್ನು ಶಿಕ್ಷಣವು ಕಲಿಸುವುದರಿಂದ ಶಿಕ್ಷಣವು ಮಕ್ಕಳಲ್ಲಿನ ಸುಪ್ತ ಶಕ್ತಿಗಳನ್ನು ಹೊರಹೊಮ್ಮಿಸಿ ಅವರಲ್ಲಿರುವ ಸಾಮರ್ಥ್ಯಗಳನ್ನು ಪ್ರಕಾಶಗೊಳಿಸುತ್ತದೆ.

ಸಾಮಾಜಿಕ ಚಲನೆಯು ಸಾಂಸ್ಕೃತಿಕ ಪರಂಪರೆಯನ್ನು ವರ್ಗಾಯಿಸುವಲ್ಲಿ ಸಮಾಜದ ಸಂಘ ಸಂಸ್ಥೆ ಹಾಗೂ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡುತ್ತದೆ. ಸಾಂಸ್ಕೃತಿಕ ಪರಂಪರೆಯ ನಮ್ಮ ಜೀವನ ಕ್ರಮ, ಜೀವನ ಶೈಲಿ, ಕಲೆ, ಸಾಹಿತ್ಯ, ಸಂಗೀತ, ನೃತ್ಯ, ತತ್ವಶಾಸ್ತ್ರ, ನಂಬಿಕೆಗಳು, ಕೌಶಲ್ಯಗಳು, ಶೋಭಾಚಾರ, ನಾಟಕ ಇನ್ನೂ ಮುಂತಾದ ಸಾಂಸ್ಕೃತಿಕ ಅಂಶಗಳು ಸಾಮಾಜಿಕ ಚಲನೆಗೆ ಪ್ರೋತ್ಸಾಹ ನೀಡುತ್ತವೆ. ಜೊತೆಗೆ ಈ ಸಾಂಸ್ಕೃತಿಕ ಅಂಶಗಳ ಪರಂಪರೆ ಸಮಾಜದಲ್ಲಿ ಮುಂದುವರೆಯಲೇಬೇಕು. ಮಾನವನಿಗೂ ಸಂಸ್ಕೃತಿಗೂ ಅಚ್ಚಳಿಯದ ನಂಟು. ಮಾನವ ಸಮಾಜದ ಅಸ್ತಿತ್ವಕ್ಕೆ ಸಾಂಸ್ಕೃತಿಕ ಅಂಶಗಳೇ ಪ್ರೇರಕ. ಹಾಗೆಯೇ ಇವನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಬೇಕಾದರೆ ಶಿಕ್ಷಣದ ಮೂಲಕ ಮಾತ್ರ ಸಾಧ್ಯ. ಇಲ್ಲದಿದ್ದಲ್ಲಿ ಮನುಷ್ಯ ಸಂಕುಲವೇ ನಾಶವಾಗಿ ಹೋಗುವುದರಲ್ಲಿ ಸಂಶಯವಿಲ್ಲ. ಶಿಕ್ಷಣದ ಮೂಲಕ ಮಾತ್ರ ಈ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ, ಬೆಳಸಿ ಮುಂದಿನ ಜನಾಂಗಕ್ಕೆ ವರ್ಗಾಯಿಸುವುದರ ಮುಖಾಂತರ ವ್ಯಕ್ತಿಯಲ್ಲಿ ಸಾಂಸ್ಕೃತಿಕ ಮೌಲ್ಯಗಳು ಬೆಳೆದು ಪರಿಪಕ್ವವಾದರೆ ಆತನ ಅಂತರ್‌ಶಕ್ತಿ ವೃದ್ಧಿಯಾಗಿ ಆತ್ಮವಿಕಾಸವಾಗುತ್ತದೆ. ಬೌದ್ಧಿಕ ಹಾಗೂ ನೈತಿಕ ಮಟ್ಟ ಹೆಚ್ಚುತ್ತದೆ. ಆತನು ಆದರ್ಶ ವ್ಯಕ್ತಿಯಾಗುತ್ತಾನೆ. ಸಾಮಾಜಿಕ ಚಲನೆಗೂ ಒಳ್ಳೆಯ ಪ್ರೋತ್ಸಾಹ ನೀಡಿ ಸಮಾಜಮುಖಿಯಾಗುತ್ತಾನೆ.

ಶಿಕ್ಷಣವು ವ್ಯಕ್ತಿಯ ವರ್ತನೆಗಳನ್ನು ಸುಧಾರಿಸಿ ಆ ಮೂಲಕ ಸಾಮಾಜಿಕ ಚಲನೆಗೆ ಉತ್ತಮ ಚಾಲನೆ ನೀಡುತ್ತದೆ. ಶಿಕ್ಷಣವು ವ್ಯಕ್ತಿಗಳ ಅವರವರ ಮನೋಭಿಲಾಷೆ, ಸಂಪ್ರದಾಯ, ಸಾಮರ್ಥ್ಯ ಮತ್ತು ಕುಶಲತೆಗಳಿಗನುಗುಣವಾಗಿ ವೃತ್ತಿಶಿಕ್ಷಣ ಮತ್ತು ತರಬೇತಿಯನ್ನು ನೀಡಿ ವೃತ್ತಿ ನಿರ್ವಹಣೆಗೆ ಅಣಿಗೊಳಿಸುವ ಹಂತದಲ್ಲಿ ಸಾಮಾಜಿಕ ಚಲನೆಗೆ ಹೆಚ್ಚು ಪ್ರಲೋಭನೆ ನೀಡುವುದು ಈ ಬಗೆಯ ಶಿಕ್ಷಣದಿಂದಲೇ. ಇಂದಿನ ನಾಗರಿಕ ಸಮಾಜದಲ್ಲಿ ವೈವಿಧ್ಯಮಯವಾದ ವೃತ್ತಿ ನಿರ್ವಹಣೆಗೆ ಶಿಕ್ಷಣ ತರಬೇತಿ, ಶ್ರಮ ಪರಿಣತಿ, ಅನೇಕ ಕ್ಷೇತ್ರಗಳಲ್ಲಿ ವಿಶೇಷ ಪರಿಣತಿ ಮುಂತಾದುವೆಲ್ಲವನ್ನು ನೆರವೇರಿಸಿ ಕೊಡುತ್ತದೆ. ಹೀಗೆ ವ್ಯಕ್ತಿ ಸ್ಥಾನೀಕರಣದಲ್ಲಿ ಸಾಮಾಜಿಕ ಚಲನೆಯು ಅತ್ಯಂತ ಮಹತ್ವಪೂರ್ಣ ಪಾತ್ರ ವಹಿಸುವುದು ಶಿಕ್ಷಣದ ಮೂಲಕ ಮಾತ್ರ.

ಶಿಕ್ಷಣವು ವ್ಯಕ್ತಿಯ ಅಂತಸ್ತನ್ನು ನಿಗದಿಗೊಳಿಸುತ್ತದೆ. ಅದರಲ್ಲೂ ಮುಖ್ಯವಾಗಿ ಔಪಚಾರಿಕ ಶಿಕ್ಷಣವು ವ್ಯಕ್ತಿಗೆ ಘನತೆ, ಗೌರವ, ಸ್ಥಾನಮಾನ ಮತ್ತು ಅಧಿಕಾರವನ್ನು ಒದಗಿಸುತ್ತದೆ. ಸಾಮಾಜಿಕ ಚಲನೆಯೂ ಇವುಗಳ ಬೆಳವಣಿಗೆಗೆ ಪ್ರೋತ್ಸಾಹಿಸುತ್ತದೆ. ಶಿಕ್ಷಣ ಮಟ್ಟವು ವ್ಯಕ್ತಿಯ ವರ್ಗ ಸ್ಥಾನವನ್ನು ನಿರ್ಧರಿಸುತ್ತದಲ್ಲದೆ ಅವನ ಸ್ಥಾನ ಹೆಚ್ಚಲು ಸಹಾಯನೀಡುತ್ತದೆ. ಪರಿಸರಕ್ಕೆ ಹೊಂದಿಕೊಳ್ಳುವುದನ್ನು ಕಲಿಸುವುದು ಶಿಕ್ಷಣ. ಆ ಮೂಲಕ ಸಾಮಾಜಿಕ ಚಲನೆಗೆ ಪ್ರೋತ್ಸಾಹಿಸಿ ಉತ್ತಮ ವ್ಯವಸ್ಥೆಯನ್ನು ನಿರ್ಮಾಣ ಮಾಡುತ್ತದೆ. ಕಲಿಯುವಿಕೆಯು ಪ್ರಾಣಿಗಳಲ್ಲಿ ಜೈವಿಕವಾಗಿದ್ದರೆ ಮಾನವನಲ್ಲಿ ಸಾಮಾಜಿಕ ಕ್ರಿಯೆಯಾಗಿದೆ. ಶಿಕ್ಷಣವು ಪರಿಸರಕ್ಕೆ ಮಾನವನು ಹೊಂದಿಕೊಳ್ಳುವುದಕ್ಕೆ ಮಾತ್ರವಲ್ಲದೆ ಪರಿಸರವನ್ನು ವಿಸ್ತರಿಸಿ ಶ್ರೀಮಂತಗೊಳಿಸುವುದನ್ನು ಕಲಿಸುತ್ತದೆ. ವಿಶ್ವದಲ್ಲಿ ಇಂದು ನಡೆಯುತ್ತಿರುವ ಸಾರಿಗೆ, ಸಂಪರ್ಕ ಮಾಧ್ಯಮಗಳ ಕ್ಷೇತ್ರದಲ್ಲಿ ಪ್ರಗತಿ, ಹೊಸ ಸಂಪನ್ಮೂಲಗಳ ಶೋಧನೆ, ವಿಶ್ವವ್ಯಾಪಕ ಅರ್ಥವ್ಯವಸ್ಥೆ, ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮುಂತಾದವುಗಳು ಮಾನವನ ಸುತ್ತಮುತ್ತಲಿನ ಪರಿಸರವನ್ನು ವಿಶಾಲಗೊಳಿಸುವುದರ ಜೊತೆಗೆ ಸಂಸ್ಕೃತಿಯ ವ್ಯಾಪಕ ವಿಸ್ತರಣೆ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುತ್ತವೆ. ಈ ದಿಕ್ಕಿನಲ್ಲಿ ಸಾಮಾಜಿಕ ಚಲನೆಯೂ ಸಹ ಪ್ರಮುಖ ಪಾತ್ರವಹಿಸುತ್ತದೆ. ಇತ್ತೀಚೆಗೆ ಪ್ರಪಂಚದಾದ್ಯಂತ ಅದರಲ್ಲೂ ಮುಖ್ಯವಾಗಿ ಭಾರತದಲ್ಲಿ ಮಾನವನು ಪರಿಸರದ ನಾಶಕ್ಕೆ ಪಣತೊಟ್ಟಿದ್ದಾನೇನೋ ಎನಿಸುತ್ತದೆ. ಪ್ರಕೃತಿಯಲ್ಲಿ ಕಂಡುಬರುತ್ತಿರುವ ಅಸಮತೋಲನ ಮಾನವನ ನೆಮ್ಮದಿಯ ಬಾಳ್ವೆಗೆ ಸವಾಲೊಡ್ಡಿರುವುದರಿಂದ ಪರಿಸರ ರಕ್ಷಣೆ ಮತ್ತು ಅದರ ಆರೋಗ್ಯದಾಯಕ ವಿಸ್ತರಣೆ ಮಾನವ ಸಂಕುಲವನ್ನು ಸಂರಕ್ಷಿಸುತ್ತದೆ. ಈ ಕಾರ್ಯವನ್ನು ಶಿಕ್ಷಣದ ಮೂಲಕ ಪರಿಣಾಮಕಾರಿಯಾಗಿ ಸಾಧಿಸುವುದರ ಜೊತೆಯಲ್ಲಿಯೇ ಮಾನವ ಜೀವನವನ್ನು ಸಮಗ್ರಗೊಳಿಸಿ ವೃತ್ತಿ ಮೌಲ್ಯ, ಪ್ರಾಮಾಣಿಕತೆ, ಕರ್ತವ್ಯಪಾಲನೆ, ಭ್ರಷ್ಟರಹಿತತೆ, ದಕ್ಷತೆ, ಪರೋಪಕಾರ ಅದರೊಂದಿಗೆ ಮಾನವೀಯ ಮೌಲ್ಯಗಳ ಪ್ರಸಾರ (ಪ್ರೀತಿ, ಪ್ರೇಮ, ಅನುಕಂಪ, ದಯೆ, ಕರುಣೆ ಮುಂತಾದವು)ಕ್ಕೆ ಶಿಕ್ಷಣವು ಪ್ರೋತ್ಸಾಹಿಸುತ್ತದೆ. ಇದರಿಂದ ಸಾಮಾಜಿಕ ಚಲನೆಯು ಉತ್ತಮಗೊಳ್ಳಲು ಶಿಕ್ಷಣ ಶ್ರಮಿಸುತ್ತದೆನ್ನಬಹುದು.

–ಹೆಚ್.ಎಮ್.ವ.

## ಸಾಮಾಜಿಕ ನಿಯಂತ್ರಣ ಮತ್ತು ಶಿಕ್ಷಣ

ಸಾಮಾಜಿಕ ನಿಯಂತ್ರಣ ಪದವನ್ನು ಸಮಾಜಶಾಸ್ತ್ರದಲ್ಲಿ ಬಹಳ ವ್ಯಾಪಕವಾದ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. ಸಮಾಜದಲ್ಲಿನ ಹಲವು ಸದಸ್ಯರು ಸಮಾಜದ ಹಿತಕ್ಕೆ ಧಕ್ಕೆ ಬಾರದಂತೆ ಯೋಗ್ಯ ರೀತಿಯಲ್ಲಿ ವರ್ತಿಸುತ್ತಾರೆ. ಇನ್ನು ಕೆಲವರು ತಮ್ಮ ವೈಯಕ್ತಿಕ ಹಿತಾಸಕ್ತಿಗಳಿಗೆ ಹೆಚ್ಚಿನ ಗಮನಕೊಡುತ್ತಾ ಆ ನೀತಿಯುತ ಕಾರ್ಯಗಳಲ್ಲಿ ತೊಡಗುತ್ತಾರೆ. ಈ ವರ್ತನೆಯನ್ನು ತಡೆಯುವುದು, ನಡೆಯದಂತೆ ನೋಡಿಕೊಳ್ಳುವುದು ಸಮಾಜದ ಕರ್ತವ್ಯ. ಇದರಿಂದ ಸಮಾಜವು ತನ್ನ ಅಸ್ತಿತ್ವ ಹಾಗೂ ಪ್ರಗತಿಗಾಗಿ ತನ್ನ ಸದಸ್ಯರ ಮೇಲೆ ಹತೋಟಿಯನ್ನು ಅಥವಾ ನಿಯಂತ್ರಣವನ್ನು ಹೊಂದುತ್ತದೆ. ಇಂತಹ ಹತೋಟಿ ಅಥವಾ ನಿಯಂತ್ರಣವನ್ನೇ ನಾವು ಸಾಮಾಜಿಕ ನಿಯಂತ್ರಣ ಎಂದು ಕರೆಯುತ್ತೇವೆ. ಸಮಾಜದ ನಿರಂತರ ಮುಂದುವರಿಕೆಯನ್ನು ಕಾಪಾಡಿಕೊಳ್ಳಲು ಸಾಮಾಜಿಕ ಐಕ್ಯವನ್ನು ಸಾಧಿಸಬೇಕಾಗುತ್ತದೆ. ಸಾಮಾಜಿಕ ಐಕ್ಯವನ್ನು ಕಾಯ್ದು ಮುಂದುವರಿಸಿಕೊಂಡು ಹೋಗಲು ಸಾಮಾಜಿಕ ನಿಯಂತ್ರಣ ಅತ್ಯಂತ ಅವಶ್ಯಕವಾಗಿದೆ.

### ಸಾಮಾಜಿಕ ನಿಯಂತ್ರಣದ ಅರ್ಥ

ಮಾನವ ಸಮಾಜವು ನಿರಾತಂಕವಾಗಿ ಬಾಳಬೇಕಾದರೆ ಮತ್ತು ಸುಗಮವಾಗಿ ಕಾರ್ಯ ನಿರ್ವಹಿಸಬೇಕಾದರೆ ಸಮಾಜದಲ್ಲಿ ಸಾಮರಸ್ಯ ಮತ್ತು ಐಕ್ಯಭಾವ ಇರಬೇಕಾದದ್ದು ಅಗತ್ಯ. ಆದರೆ ಸಾಮಾಜಿಕ ಐಕ್ಯ

Digitised by Bharatavani, CIIL

ಅಥವಾ ಸಾಮರಸ್ಯ ಇದ್ದಕ್ಕಿದ್ದಂತೆ ಮೂಡಿಬರುವುದಿಲ್ಲ. ಸಮಾಜದ ಸದಸ್ಯರುಗಳ ಉದ್ದೇಶಪೂರ್ವಕ ಪ್ರಯತ್ನದಿಂದ ಮಾತ್ರ ಅದು ಸಾಧ್ಯ. ಸಮಾಜದ ಸ್ಥಾಪಿತ ನಿಯಮಗಳಿಗೆ ಅನುಸಾರವಾಗಿ ಎಲ್ಲಾರು ನಡೆದುಕೊಳ್ಳುವುದರಿಂದ ಸಮಾಜದಲ್ಲಿ ಸ್ಥಿರತೆ ಮತ್ತು ಐಕ್ಯಮತ ನೆಲೆಸಲು ಸಾಧ್ಯ. ಸಾಮಾಜಿಕ ನಿಯಮಗಳ ಕಾರ್ಯಾಚರಣೆಯನ್ನು ಸಾಮಾಜಿಕ ನಿಯಂತ್ರಣ ಎನ್ನುತ್ತೇವೆ.

**ವ್ಯಾಖ್ಯೆ**

1) ಇ.ಎ. ರೋಸ್‌ರವರ ಪ್ರಕಾರ "ಸಾಮಾಜಿಕವಾಗಿ ಅಂಗೀಕರಿಸಲ್ಪಟ್ಟ ನಡವಳಿಕೆಗಳಿಗೆ ಸದಸ್ಯರನ್ನು ಬದ್ಧರನ್ನಾಗಿಸಲು ಬಳಸುವ ಸಾಮಾಜಿಕ ನಡವಳಿಕೆಗಳೇ ಸಾಮಾಜಿಕ ನಿಯಂತ್ರಣಗಳಾಗಿವೆ."

2) ಕಾರ್ಲ್ ಮ್ಯಾನ್‌ಹಿವರ್‌ರವರ ಅಭಿಪ್ರಾಯದಂತೆ, "ಕ್ರಮಬದ್ಧತೆಯನ್ನು ಸ್ಥಾಪಿಸಲು ಸಮಾಜವು ಶಕ್ತಿಯ ನಡತೆಯ ಮೇಲೆ ಬೀರುವ ವಿಧಾನಗಳೇ ಸಾಮಾಜಿಕ ನಿಯಂತ್ರಣ ಎನ್ನಬಹುದು."

**ಸಾಮಾಜಿಕ ನಿಯಂತ್ರಣದ ಪ್ರಾಮುಖ್ಯ**

ಪ್ರತಿಯೊಬ್ಬ ವ್ಯಕ್ತಿಯು ಸಮಾಜದ ಶಿಶು/ಆತನ ಬಯಕೆ ಬೇಡಿಕೆಗಳನ್ನು ಪೂರೈಸುವಲ್ಲಿ ಸಮಾಜವು ಬಹುವಾಗಿ ಶ್ರಮಿಸುತ್ತದೆ. ಆದರೆ ಸಮಾಜವು ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುವ ಅನೀತಿಯಿಂದ ವರ್ತಿಸುವ, ಅಸಂಸ್ಕೃತಿ ವ್ಯಕ್ತಿಯಂತೆ ನಡೆಯುವವರನ್ನು ಒಪ್ಪುವುದಿಲ್ಲ. ವ್ಯಕ್ತಿಯು ಸಮಾಜದಲ್ಲಿ ವಿಧಿಸುವ ಕಾನೂನು ಕಟ್ಟಳೆಗಳ ಸಂಸ್ಕಾರಗಳು ಕ್ರಮಬದ್ಧವಾಗಿ ಅಳವಡಿಸಿಕೊಳ್ಳದಿದ್ದಲ್ಲಿ ಸಮಾಜವು ಕ್ರಮ ಕೈಗೊಂಡು ವ್ಯಕ್ತಿಯನ್ನು ಹತೋಟಿಯಲ್ಲಿಡಲು ಸಹಕರಿಸುತ್ತದೆ. ಸಾಮಾಜಿಕ ನಿಯಂತ್ರಣದ ಪ್ರಾಮುಖ್ಯತೆಯನ್ನು ಸಾಮಾಜಿಕ ನಿಯಂತ್ರಣದ ಗುಣಗಳನ್ನು ಆಧರಿಸಿ ಹೀಗೆ ವಿವರಿಸಬಹುದು.

**1) ಸಾಮಾಜಿಕ ನಿಯಂತ್ರಣವು ಒಂದು ವಿಶಿಷ್ಟ ಪ್ರಭಾವವಾಗಿದೆ**

ಸಾಮಾಜಿಕ ನಿಯಂತ್ರಣ ಕಾರ್ಯದಲ್ಲಿ ಜನಾಭಿಪ್ರಾಯ, ಒತ್ತಾಯ ಮಾರ್ಗದರ್ಶನ ಮತ್ತು ಸಲಹೆಗಳು ಧರ್ಮ ಮುಂತಾದವು ಹೆಚ್ಚಿನ ಪ್ರಭಾವ ಬೀರುತ್ತವೆ.

**2) ಸಾಮಾಜಿಕ ನಿಯಂತ್ರಣವು ಸಾಮೂಹಿಕವಾಗಿರುತ್ತದೆ**

ಕುಟುಂಬ, ಧಾರ್ಮಿಕ ಸಂಸ್ಥೆ, ರಾಜ್ಯ, ರಾಷ್ಟ್ರ, ಶೈಕ್ಷಣಿಕ ಸಂಸ್ಥೆ, ಔಪಚಾರಿಕ ಸಂಸ್ಥೆ ಮೊದಲಾದವುಗಳಲ್ಲಿ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ ಸದಸ್ಯರನ್ನು (ವ್ಯಕ್ತಿಗಳಿಗೆ) ತಮ್ಮದೇ ಆದ ರೀತಿಯಲ್ಲಿ ನಿಯಂತ್ರಿಸುತ್ತಾರೆ. ಆದರೂ ಕೂಡ ಈ ಎಲ್ಲಾ ರೀತಿಯ ಸಮೂಹಗಳಲ್ಲಿಯೂ ಸಾಮೂಹಿಕ ರೀತಿಯ ನಿಯಂತ್ರಣ ಮಾಧ್ಯಮಗಳಿರುತ್ತವೆ.

**3) ಸಾಮಾಜಿಕ ನಿಯಂತ್ರಣವು ಪ್ರಗತಿಯುಳ್ಳದ್ದಾಗಿರುತ್ತದೆ**

ಯಾವುದೇ ಸಾಮಾಜಿಕ ನಿಯಂತ್ರಣದ ಮಾಧ್ಯಮವಾಗಲಿ ತಾನು ನಿರ್ವಹಿಸುವ ಕಾರ್ಯಕೌಶಲ್ಯದಿಂದ ಸಾಮಾಜಿಕ ಪ್ರಗತಿಗೆ, ವ್ಯಕ್ತಿಗೆ, ತನ್ನ ಬಯಕೆ ಬೇಡಿಕೆಗಳನ್ನು ಚಿಂತಿಸುವಾಗ ಇವರು ಇತರರನ್ನು ಚಿಂತಿಸುವಂತೆ ಅರಿವು ಉಂಟುಮಾಡಿಸಲು ಸಹಕರಿಸುತ್ತದೆ.

ಹೀಗೆ ಸಾಮಾಜಿಕ ನಿಯಂತ್ರಣವು ವಿವಿಧ ಮಾಧ್ಯಮಗಳ ಮೂಲಕ ಜನತೆಯನ್ನು ವಿವಿಧ ಸಮೂಹಗಳಲ್ಲಿ ನಿಯಂತ್ರಿಸಿ ಸೂಕ್ತ ಮಾರ್ಗಗಳಲ್ಲಿ ಹೋಗಲು ಹಾಗೂ ಇದರ ದೆಸೆಯಿಂದ ಸಮಾಜದ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಸಹಕರಿಸುವ ಮಹೋನ್ನತ ಉದ್ದೇಶವನ್ನು ಒಳಗೊಂಡಿದೆ.

**ಸಾಮಾಜಿಕ ನಿಯಂತ್ರಣದ ನಿಯೋಗಗಳು**

ಸಾಮಾಜಿಕ ನಿಯಂತ್ರಣದಲ್ಲಿ ಅನೇಕ ನಿಯೋಗಗಳು ಪಾತ್ರ ವಹಿಸುತ್ತವೆ. ಕೆಲವು ನಿಯೋಗಗಳು ಸಮಾಜದಲ್ಲಿಯೇ ಅಂತರ್‌ನಿಹಿತವಾಗಿರುತ್ತವೆ. ಜಾತಿ ಗುಂಪುಗಳು, ಧಾರ್ಮಿಕ ಸಂಸ್ಥೆಗಳು, ಸಂಪ್ರದಾಯಗಳು, ನೀಡಿ ಸಂಹಿತೆ, ಜಾನಪದ ರೀತಿ ನೀತಿಗಳು, ಸಾಮಾಜಿಕ ಕಟ್ಟಳೆಗಳು, ಕುಟುಂಬದ ಸಂಪ್ರದಾಯಗಳು ಪ್ರಬಲ ಸಾಮಾಜಿಕ ನಿಯಂತ್ರಣದ ನಿಯೋಗಗಳಿಗಾಗಿ ಕಾರ್ಯ ನಿರ್ವಹಿಸುತ್ತವೆ ಸಾಮಾಜಿಕ ನೀತಿ–ನಿಬಂಧನೆಗಳು ಲಿಖಿತ ರೂಪದಲ್ಲಿಲ್ಲದಿದ್ದರೂ ಅವು ಐತಿಹಾಸಿಕವಾಗಿ ಸಮಾಜದಲ್ಲಿ ಸದಸ್ಯರ ವರ್ತನೆಯನ್ನು ನಿಯಂತ್ರಿಸುವುದರಲ್ಲಿ, ನಿರ್ದೇಶಿಸುವುದರಲ್ಲಿ ಪ್ರಭಾವ ಬೀರುತ್ತಾ ಬಂದಿವೆ. ದೀರ್ಘಕಾಲದ ಸಾಮಾಜಿಕ ಬದಲಾವಣೆಗಳಿಂದಾಗಿ ಇವುಗಳ ಕಾರ್ಯ ವ್ಯಾಪ್ತಿಯಲ್ಲಿ ವ್ಯತ್ಯಾಸ ಕಂಡು ಬರುವ ಸಾಧ್ಯತೆ ಇದೆ. ಇನ್ನೂ ಕೆಲವು ನಿಯೋಗಗಳು ವ್ಯವಸ್ಥಿತ ರೀತಿಯಲ್ಲಿ ಅಸ್ತಿತ್ವಕ್ಕೆ ಬಂದು ಜನಗಳ ಪರೋಕ್ಷ ಸಮ್ಮತಿಯಿಂದಾಗಿ ಸಾಮಾಜಿಕ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತವೆ. ಸರ್ಕಾರದ ನಿಯಂತ್ರಣ ಕಾಯ್ದೆಗಳು, ನ್ಯಾಯಾಲಯಗಳು, ಪೋಲೀಸ್ ಇಲಾಖೆ, ಸಂಘ–ಸಂಸ್ಥೆಗಳು ವ್ಯವಸ್ಥಿತ ನಿಯಮಾವಳಿಗಳು ಸರ್ಕಾರದ ಶಾಸನ ಬದ್ಧತೆಯ ಆಧಾರದ ಮೇಲೆ ಸಮಾಜದ ಸದಸ್ಯರ ವರ್ತನೆಗಳನ್ನು ಕ್ರಮಬದ್ಧವಾಗಿ ನಿಯಂತ್ರಿಸುತ್ತವೆ. ಸಮಾಜದ ಅಂದರೆ ರಾಷ್ಟ್ರದ ನಿಯಮಗಳನ್ನು ಉಲ್ಲಂಘಿಸುವವರನ್ನು ಗುರ್ತಿಸಿ, ಸೂಕ್ತ ದಂಡನೆ ನೀಡುವುದರ ಮೂಲಕ ರಾಷ್ಟ್ರದ ಕಾನೂನು ಆಯೋಗಗಳು (ನ್ಯಾಯಾಲಯ, ಪೋಲೀಸ್) ಸಾಮಾಜಿಕ ನಿಯಂತ್ರಣದ ಕಾರ್ಯ ನಿರ್ವಹಿಸುತ್ತವೆ.

**ಸಾಮಾಜಿಕ ನಿಯಂತ್ರಣದಲ್ಲಿ ಶಿಕ್ಷಣದ ಪಾತ್ರ**

ಸಾಮಾಜಿಕ ನಿಯಂತ್ರಣ ಕಾರ್ಯವು ಶಿಕ್ಷಣದ ಮೂಲಕ ವಿಶಿಷ್ಟವಾಗಿ ನಡೆಯುತ್ತದೆ. ಇತರ ಸಾಧನ ಅಥವಾ ಪ್ರಕಾರಗಳಿಗೆ ಹೋಲಿಸಿದಾಗ ಕ್ಷಣದಿಂದ ಉಂಟಾಗುವ ನಿಯಂತ್ರಣ ಕಾರ್ಯವು ಪ್ರಬಲವಾದುದು. ಶಿಕ್ಷಣ ಜನತೆಯಲ್ಲಿ ಬಾಹ್ಯ ಹಾಗೂ ಆಂತರಿಕವಾಗಿ ಅಹಿತ ವರ್ತನೆಗಳನ್ನು ಬದಲಾಯಿಸಿ ಹಿತಕರ ವರ್ತನೆಯುಂಟುಮಾಡಿ ಅವುಗಳಿಂದ ಸಮಾಜದಲ್ಲಿ ವೃದ್ಧಿಯನ್ನು ಸಾಧಿಸುತ್ತದೆ. ರಸ್ಕಿನ್ ಪ್ರಕಾರ ಶಿಕ್ಷಣವು ಜನತೆಯನ್ನು ಸುಶಿಕ್ಷಿತರನ್ನಾಗಿ ಹಾಗೂ ಸುಸಂಸ್ಕೃತರನ್ನಾಗಿ ಮಾಡಿ ಅವರು ಭವಿಷ್ಯದಲ್ಲಿ ಏನು ಕರ್ತವ್ಯಗಳನ್ನು ಕೈಗೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಸಮಾಜದಿಂದ ಸಮಾಜಕ್ಕೆ ಸಂಸ್ಕೃತಿಯು ವಿಭಿನ್ನವಾಗಿದ್ದರೂ ಏಕ ರೀತಿಯ ಶಿಕ್ಷಣ ವ್ಯವಸ್ಥೆಯಿಂದ ಅವರವರ ಸಮಾಜಕ್ಕೆ ಅನುಗುಣವಾದ ಸಂಸ್ಕೃತಿಯ ಪರಂಪರೆಯನ್ನು ರಕ್ಷಿಸಬಹುದು, ಕ್ರೋಡಿಕರಿಸಬಹುದು ಹಾಗೂ ಬೆಳೆಸಬಹುದು. ಶಿಕ್ಷಣವು ಜನತೆಯನ್ನು ಅಕ್ಷರಸ್ಥರನ್ನಾಗಿಸುವುದರ ಜೊತೆಗೆ ಸಮಾಜದ ಚಿಂತನೆಯನ್ನು ಮೂಡಿಸುತ್ತದೆ. ಶಿಕ್ಷಣವು ಜನತೆಗೆ ತಮ್ಮ ಸಾಮರ್ಥ್ಯವನ್ನು ಬುದ್ಧಿವಂತಿಕೆಯನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ತಮ್ಮ ಉಳಿವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಆಯಾಯ ಸನ್ನಿವೇಶಗಳಲ್ಲಿ ಹೇಗೆ ಹೊಂದಿಕೊಳ್ಳಬೇಕು, ಬದಲಾಗಬೇಕು, ಬದಲಾದ ಸಮಾಜದಲ್ಲಿ ತನ್ನ ಕರ್ತವ್ಯಗಳೇನು ಎಂಬುದನ್ನು ಮನದಟ್ಟು ಮಾಡುತ್ತದೆ. ಶಿಕ್ಷಣದಿಂದ ಸಮಾಜದಲ್ಲಿ ವ್ಯಕ್ತಿಯು ಇತರರೊಂದಿಗೆ ಸುಸಂಘಟಿಸುವುದನ್ನು ಕಲಿಯಬಹುದು. ಸಮಾಜವು ತನಗೆ ನೀಡಿದ ಹಕ್ಕುಗಳನ್ನು ಸೂಕ್ತವಾಗಿ ಬಳಸಲು ಹಾಗೂ ತನ್ನ ಕರ್ತವ್ಯಗಳನ್ನು

Digitised by Bharatavani, CIIL

ಸಮಾಜಕ್ಕೆ ಸಲ್ಲಿಸಲು ವ್ಯಕ್ತಿಯು ಸಮಾಜಕ್ಕೆ ಹೊಂದಿಕೊಳ್ಳುತ್ತಾನೆ. ಆತನಲ್ಲಿ ಸ್ವಾರ್ಥ ಚಿಂತನೆ ಬಯಕೆ ಕ್ಷೀಣಿಸಿ ಸಮೂಹ ಭಾವನೆಗಳು ಬೆಳೆಯುತ್ತದೆ. ಇತರರಿಗಾಗಿ ಬಾಳುವ ಮನಸ್ಸು ಬೆಳೆಯುತ್ತದೆ.

ಶಿಕ್ಷಣವು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಔಪಚಾರಿಕವಾಗಿ ಅನೌಪಚಾರಿಕವಾಗಿ ದೊರೆಯುತ್ತದೆ. ಸಮಾಜದಿಂದ ರಚಿಸಲ್ಪಟ್ಟು ಜನತೆಯ ಅಜ್ಞಾನ, ಅಂಧಕಾರ ನಿರ್ಮೂಲನಕ್ಕೆ ಪಣತೊಟ್ಟ ಶಾಲೆಯು ಶಿಕ್ಷಿತ, ಸುಸಂಸ್ಕೃತ ಸಮಾಜದ ಉಪಯುಕ್ತ ಜೀವಿಯನ್ನಾಗಿ ತಯಾರಿಸುತ್ತದೆ. ಶಾಲೆಯಲ್ಲಿ ಶಾಲಾಕಾನೂನುಗಳ ಜೊತೆಗೆ ತಾನು ವಾಸಿಸುವ ಸಮಾಜ ಅಥವಾ ಕುಟುಂಬದ ಎಲ್ಲಾ ಮುಖಗಳ ಪರಿಚಯ ಪಡೆಯುತ್ತಾನೆ. ರವೀಂದ್ರನಾಥ ಠಾಕೂರರು ಹೇಳುವಂತೆ ಎಲ್ಲ ಮುಖದ ಜೀವನದೊಡನೆ ಸಾಮರಸ್ಯ ಉಂಟುಮಾಡಬಲ್ಲದೇ ಶ್ರೇಷ್ಠ ವಿದ್ಯಾಭ್ಯಾಸ ಕಲಿತ ತಾತ್ವಿಕ ವಿಚಾರಗಳಿಗೆ ಅವಕಾಶವಿರಬೇಕು. ಶಿಕ್ಷಣ ಕಾರ್ಯದಿಂದ ಜನತೆಯನ್ನು ದುರಾಲೋಚನೆಗಳು ಪೂರ್ವಗ್ರಹ ಪೀಡನೆ, ವ್ಯಾಪಾರಿ ಮನೋಭಾವನೆಗಳ ವಿಘಟಿತ ವಾತಾವರಣಗಳು ಮಾಯವಾಗಿ ಅವರಲ್ಲಿ ಪರಸ್ಪರ ಸೌಹಾರ್ದತೆ ಸಹಕಾರ, ಸಹಾಯ ಸಮಾಜದ ಅಭಿವೃದ್ಧಿಯ ಭಾವನೆಗಳು, ವರ್ತನೆಗಳು, ಮಾರ್ಪಾಟು ಸ್ವನಿಯಂತ್ರಣವಾಗಿ ಸಾಮಾಜಿಕ ರಕ್ಷಣೆ ಆಗುತ್ತದೆ. ಶಾಲೆಗಳಲ್ಲಿ ಕಾಣುವ ವೇಳಾಪಟ್ಟಿಗಳು, ಶಿಸ್ತು, ಸಮವಸ್ತ್ರಗಳು, ಕಾನೂನುಗಳು, ಹಬ್ಬಹರಿದಿನಗಳು ಶಾಲಾ ಸಂಪ್ರದಾಯಗಳು, ಸಾಮಾಜಿಕ ನಿಯಂತ್ರಣಕ್ಕೆ ಉತ್ತಮ ಉದಾಹರಣೆ ಆಗಿವೆ. ಸಾಮಾಜಿಕ ಮನ್ನಣೆಪಡೆದ ಲೋಕಾರೂಢಿಗಳ ಪಾಲನೆಯ ಅರಿವನ್ನು ಶಿಕ್ಷಣ ನೀಡುತ್ತದೆ.

–ಆರ್.ಗೋ.

## ಸಾಮಾಜಿಕ ನ್ಯಾಯ ಮತ್ತು ಶಿಕ್ಷಣ

ಭಾರತದೇಶದಲ್ಲಿ ಜನವರಿ 26, 1950 ರಿಂದ ಜಾರಿಗೆ ಬಂದ ಸಂವಿಧಾನದ ಪ್ರಸ್ತಾವನೆಯಲ್ಲಿ "ಭಾರತದ ಜನಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರಚಿಸಲು, ಹಾಗೂ ಅದರ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ, ವಿಚಾರ ಅಭಿವ್ಯಕ್ತಿ, ಧರ್ಮ, ಶ್ರದ್ಧೆ, ನಂಬಿಕೆ ಮತ್ತು ಉಪಾಸನಾ ಸ್ವಾತಂತ್ರ್ಯವನ್ನು ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು (ರಾಷ್ಟ್ರದ ಏಕತೆ ಮತ್ತು ಅಖಂಡತೆಯನ್ನು) ಖಾತ್ರಿ ಮಾಡಿ ಅವರಲ್ಲಿ ಎಲ್ಲರಲ್ಲೂ ಸಹೋದರ ಭಾವನೆಯನ್ನು ವೃದ್ಧಿಗೊಳಿಸುವುದಕ್ಕಾಗಿ ಶ್ರದ್ಧಾಪೂರ್ವಕ ದೃಢ ಸಂಕಲ್ಪ ಮಾಡಿದವರಾಗಿ ನಮ್ಮ ಸಂವಿಧಾನ ಸಭೆಯಲ್ಲಿ ಈ 1949ನೇ ನವೆಂಬರ್ 26ನೇ ದಿನಾಂಕವಾದ ಇಂದಿನ ದಿವಸ ಈ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿತಗೊಳಿಸಿ ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ" ಎಂಬ ಪರಿಪೂರ್ಣ ಧ್ಯೇಯ ನಿರ್ಣಯವನ್ನು ಅಂಗೀಕರಿಸಲಾಗಿದೆ ಹಾಗೂ ಸಂವಿಧಾನದ ಆಶಯವೂ ಇದರಲ್ಲಿ ಅಡಗಿದೆ. ಮೂಲ ಸಂವಿಧಾನದ ಪೀಠಿಕೆಯಲ್ಲಿ "ಸಮಾಜವಾದಿ" ಎಂಬ ಶಬ್ದ ಇರಲಿಲ್ಲ, 1976ರಲ್ಲಿ (03–01–1977ರಿಂದ ಜಾರಿಗೆ ಬರುವಂತೆ) 42ನೇ ತಿದ್ದುಪಡಿ ಮಾಡಿ ಸೇರಿಸಲಾಯಿತು. ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಕಾಲದಿಂದಲೂ ಜನರಿಗೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ನ್ಯಾಯ ಒದಗಿಸುವ ಸಲುವಾಗಿ ಈ ತತ್ವವನ್ನು ಅಳವಡಿಸಿದರೂ ಜನರಿಗೆ ಸಾಮಾಜಿಕ ನ್ಯಾಯ ಎಂಬ ಪದವೇ ವಿಶಿಷ್ಟ ಪೂರ್ಣ. ಕಾನೂನಿನ ಕಣ್ಣಿನಲ್ಲಿ ಎಲ್ಲರೂ ಸಮಾನತೆ. ಯಾವುದೇ ಜಾತಿ, ವರ್ಣ, ಲಿಂಗ, ಸಮುದಾಯ ಧರ್ಮದ ಹಿನ್ನೆಲೆಯಲ್ಲಿ ಭೇದ–ಭಾವ ಮಾಡಲಾಗದು. ಸಮಸ್ತ ಜನತೆಯ ಕಲ್ಯಾಣವೇ ಸರಕಾರದ ಗುರಿ. ಇದು ಸಾಮಾಜಿಕ ನ್ಯಾಯವೇ ಹೊರತು ಮತ್ತೇನಿಲ್ಲ. ಮೂಲಭೂತ ಹಕ್ಕುಗಳನ್ನು ಸರ್ವರಿಗೂ ನೀಡಲಾಗಿದೆ. ರಷ್ಯಾ, ಫ್ರಾನ್ಸ್ ಹಾಗೂ ಅಮೇರಿಕದಲ್ಲಿ ನಡೆದ ಕ್ರಾಂತಿಗಳ ಉದ್ದೇಶವೂ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಕ್ಕಾಗಿ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ (ಸಹೋದರತ್ವ)ಕ್ಕಾಗಿ ಎಂಬುದನ್ನು ಮರೆಯುವಂತಿಲ್ಲ. ಗಾಂಧೀಜಿಯವರ ಕನಸು ಡಾ॥ ಅಂಬೇಡ್ಕರ್‌ರ ನೇತೃತ್ವದಲ್ಲಿ ರಚಿಸಿದ ಸಂವಿಧಾನದ ಪೀಠಿಕೆಯಲ್ಲಿ ಚಿತ್ರಿತವಾಗಿದೆ.

ಜನರ ಜೀವನ ಮಟ್ಟ ಎತ್ತರಗೊಳ್ಳುತ್ತಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನ, ಹೆಣ್ಣುಗಂಡುಗಳ ಲಿಂಗ ತಾರತಮ್ಯ ನಿವಾರಣೆ ಕೂಡ ಸೇರಿದೆ.

ಪ್ರಾಕೃತಿಕ ಸಂಪತ್ತುಗಳು ವಿಶ್ವದ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಿದ್ದರೆ ಯಾರೂ ಸಾಮಾಜಿಕ ನ್ಯಾಯದ ಬಗ್ಗೆ ಹೋರಾಡುತ್ತಿರಲಿಲ್ಲ. ಸಂವಿಧಾನಾತ್ಮಕ ಹಕ್ಕುಗಳಿಗಾಗಿ ಒತ್ತಾಯಿಸುತ್ತಿರಲಿಲ್ಲ. ಮೀಸಲಾತಿ ಸೌಲಭ್ಯಗಳ ವಿಸ್ತರಣೆ ಕೂಗುತ್ತಿರಲಿಲ್ಲ. ಶ್ರೀಮಂತ–ಶ್ರೀಮಂತನಾಗಿಯೇ ಹೋದ, ಬಡವ–ಬಡವನಾಗಿಯೇ ಉಳಿದ. ಶ್ರೀಮಂತ–ಬಡವ, ಮೇಲು–ಕೀಳು, ಹೆಣ್ಣು–ಗಂಡು ಎಂಬ ವ್ಯತ್ಯಾಸಗಳು ಎಲ್ಲಿಯವರೆಗೂ ಈ ಭೂಮಿಯ ಮೇಲೆ ಇರುತ್ತದೆಯೋ ಅಲ್ಲಿಯವರೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯಕ್ಕಾಗಿ ಹೋರಾಟ, ಮೀಸಲಾತಿ ನಿಯಮಗಳು ಮುಂದುವರಿಯುತ್ತಲೇ ಇರುತ್ತವೆ.

ಸಂವಿಧಾನ ರಚನೆಯ ವೇಳೆಯಲ್ಲಿ ಸಂವಿಧಾನ ರಚನಾ ಕಾರ್ಯದಲ್ಲಿ ತೊಡಗಿದ್ದವರು ವಿಶ್ವದ, ವಿವಿಧ ರಾಷ್ಟ್ರಗಳ ಸಂವಿಧಾನಗಳನ್ನು ಅಭ್ಯಾಸ ಮಾಡಿದ್ದರು. ಐರ್ಲೆಂಡ್ ಮತ್ತು ಸ್ಪೇನ್‌ಗಳ ಸಂವಿಧಾನ, ವಿಶ್ವಸಂಸ್ಥೆಯ ಸಂವಿಧಾನ, ಮಾನವ ಹಕ್ಕುಗಳ ಘೋಷಣೆ, ಸಮಾಜದ ತತ್ವಗಳನ್ನು ಸಮರ್ಥವಾಗಿ ಅಭ್ಯಾಸ ಮಾಡಿದ್ದರು.

ಕಾನೂನು ತಜ್ಞ ಶ್ರೀ ಡಿ.ಡಿ. ಬಸು ರಾಷ್ಟ್ರ ನಿರ್ದೇಶಕ ತತ್ವಗಳನ್ನು ಹೀಗೆ ತಿಳಿಸುತ್ತಾರೆ:

| | ರಾಷ್ಟ್ರದ ಆದರ್ಶಗಳು (ಜನತೆಗೆ) | ರಾಷ್ಟ್ರ ನೀತಿ ನಿರ್ಧಾರಕ ಅಂಶಗಳು (ಕಾರ್ಯಕ್ರಮಗಳು) | ನ್ಯಾಯ ಸಮರ್ಥನೀಯ ನಾಗರಿಕ ಹಕ್ಕುಗಳು |
|---|---|---|---|
| 1. | ಸಾಮಾಜಿಕ, ಆರ್ಥಿಕ ರಾಜಕೀಯ, ನ್ಯಾಯ ಒದಗಿಸುವುದು | 1. ಗ್ರಾಮ ಪಂಚಾಯಿತಿ ಸ್ಥಾಪನೆ (ಅಧಿನಿಯಮ–40) | ಜೀವನಾವಶ್ಯಕ ವಸ್ತುಗಳನ್ನು ಒದಗಿಸುವುದು. |
| 2. | ಆರ್ಥಿಕ ಅಸಮಾನತೆ ಹೋಗಲಾಡಿಸುವುದು | ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ (ಅಧಿನಿಯಮ–42) | ಆರ್ಥಿಕ ಶೋಷಣೆ ನಿಲ್ಲಿಸುವುದು |

Digitised by Bharatavani, CIIL

| | | | |
|---|---|---|---|
| 3. | ಸಂಪತ್ತು ಉತ್ಪಾದನಾ ಸಾಧನವನ್ನು ವಿಕೇಂದ್ರೀಕರಿಸುವುದು | ಉಚಿತ, ಕಡ್ಡಾಯ, ಪ್ರಾಥಮಿಕ/ಶಿಕ್ಷಣ ನೀಡುವುದು. ವಿದ್ಯಾಭ್ಯಾಸ ಮತ್ತು ಉದ್ಯೋಗ-ಅಂಗವಿಕಲರಿಗೆ ವೃದ್ಧರಿಗೆ ಅಸಹಾಯಕರಿಗೆ ಸಹಾಯಧನ (ಅಧಿನಿಯಮ-41 ಮತ್ತು-45) | ಲಿಂಗ ಭೇದ ನಿಯಂತ್ರಣ |
| 4. | ಕಾರ್ಮಿಕರಿಗೆ ಉತ್ತಮ ಜೀವನ ನಡೆಸಲು ಅವಕಾಶ ಕಲ್ಪಿಸುವುದು | ಏಕರೂಪದ ನಾಗರಿಕ ಸಂಹಿತೆ ಜಾರಿ (ಅಧಿನಿಯಮ-42, 43) | ಕೆಲಸದ ಹಕ್ಕು ಜಾರಿಗೆ ತರುವುದು |
| 5. | ಸಾರ್ವಜನಿಕ ಆರೋಗ್ಯ ಕಾಪಾಡುವುದು | ಪಾನ ನಿರೋಧಿ ಶಾಸನ ಜಾರಿ (ಅಧಿನಿಯಮ-47) | ಆರೋಗ್ಯ ಹಾಗೂ ಸ್ವತಂತ್ರ್ಯ ಪರಿಸರದಲ್ಲಿ ಮಕ್ಕಳ ಅಭಿವೃದ್ಧಿ |
| 6. | ಅಂತಾರಾಷ್ಟ್ರೀಯ ಶಾಂತಿ ಹಾಗೂ ಸೌಹಾರ್ದತೆ ಬೆಳೆಸುವುದು | ಪಶುಸಂಗೋಪನೆ, ಕೃಷಿ ಪದ್ಧತಿ ಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ (ಅಧಿನಿಯಮ-48)<br>-ಗೋಹತ್ಯೆ ನಿಷೇಧ ಕಾಯಿದೆ<br>-ವನ್ಯ, ವನ, ಸಂಪತ್ತಿನ ರಕ್ಷಣೆ<br>-ಐತಿಹಾಸಿಕ ಸ್ಥಳ, ವಸ್ತುಗಳ<br>-ರಕ್ಷಣೆ (ಅಧಿನಿಯಮ-49)<br>-ನ್ಯಾಯಾಂಗದ ಅಸ್ತಿತ್ವ | ಕೆಲಸ ಮಾಡಲು ನ್ಯಾಯಸಮ್ಮತ, ಮಾನವೀಯ ಸ್ಥಿತಿ ನಿರ್ಮಾಣ, ಪ್ರಸೂತಿ ಪರಿಹಾರ<br>ಜೀವನ ಮಜೂರಿ ಹಾಗೂ ಯೋಗ್ಯ ಜೀವನ ಮಟ್ಟ ರೂಪಿಸುವುದು<br>ಕೈಗಾರಿಕೆಗಳ ಬೆಳವಣಿಗೆ<br>ಉಚಿತ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿ |

**ಶೈಕ್ಷಣಿಕ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಸಂವಿಧಾನದಲ್ಲಿ ಒದಗಿಸಿರುವ ಅವಕಾಶಗಳು ಮತ್ತು ಅದರಂತೆ ತೆಗೆದುಕೊಂಡಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕ್ರಮಗಳು**

ಇಡಿ ವಿಶ್ವದಲ್ಲೇ ಎರಡನೇ ಅತಿ ದೊಡ್ಡ ಜನಸಂಖ್ಯೆಯುಳ್ಳ ಭಾರತದಲ್ಲಿ ಪ್ರಜಾಪ್ರಭುತ್ವ ಮಾದರಿಯ ಸಂವಿಧಾನದಲ್ಲಿ ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಭ್ರಾತೃತ್ವ, ಭದ್ರತೆ, ಮೊದಲಾದ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿರುವುದನ್ನು ಕಾಣಬಹುದು. ಅದರಲ್ಲಿ ಮುಖ್ಯವಾಗಿ-

1) ಅಧಿನಿಯಮ (14 ರಿಂದ 18ರವರೆಗೆ):- ಕಾನೂನಿನ ಮುಂದೆ ಎಲ್ಲರೂ ಸಮಾನರು ಯಾರನ್ನೂ ಧರ್ಮ, ಜಾತಿ, ಲಿಂಗ, ಸ್ಥಳದ ಹಿನ್ನೆಲೆಯಲ್ಲಿ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ.

2) ಅಧಿನಿಯಮ 15(3)ರಲ್ಲಿ: ಮಹಿಳೆ ಹಾಗೂ ಮಕ್ಕಳಿಗೆ ವಿಶೇಷ ಅವಕಾಶ ನೀಡಲಾಗಿದೆ (1953ರಲ್ಲಿ ಕೇಂದ್ರೀಯ ಸಮಾಜ ಕಲ್ಯಾಣ ಮಂಡಲಿ ರಚಿಸಲಾಗಿದೆ, ಅದರಂತೆ ಪ್ರತಿರಾಜ್ಯವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರಚಿಸಿದೆ).

3) ಅಧಿನಿಯಮ 15(3): ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಜನರ ಅಥವಾ ವಿಶೇಷವಾಗಿ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟಪಂಗಡಗಳಿಗೆ ವಿಶೇಷ ಆದ್ಯತೆ ನೀಡಲಾಗಿದೆ. (ಅದರಂತೆ ಪ್ರತಿ ರಾಜ್ಯದಲ್ಲೂ ಸರ್ಕಾರ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟಪಂಗಡಗಳ ಅಭಿವೃದ್ಧಿ ನಿಗಮ, ಸಮಾಜ ಕಲ್ಯಾಣ ಇಲಾಖೆ ರೂಪಿಸಿದೆ).

4) ಅ) ಅಧಿನಿಯಮ 16(1)(2)(3)(4)ರಲ್ಲಿ: ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿದೆ.

ಅದರಂತೆ ವಿದ್ಯಾಭ್ಯಾಸ ಹಾಗೂ ಉದ್ಯೋಗಗಳಲ್ಲಿ ಶೇ. 50ರ ಮೀಸಲಾತಿ ಹಾಗೂ ಉಳಿದವನ್ನು ಸಾಮಾನ್ಯ ವರ್ಗಕ್ಕೆ ಕಾಯ್ದಿರಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಮೀಸಲಾತಿ ನಿಯಮದಂತೆ (ಪ್ರತಿ 100 ಸ್ಥಾನಗಳಿಗೆ) ಈ ಕೆಳಕಂಡಂತೆ ನಿಗದಿಗೊಳಿಸಲಾಗಿದೆ.

| | | |
|---|---|---|
| ಸಾಮಾನ್ಯ ವರ್ಗಗಳು | – | 50 |
| ಪರಿಶಿಷ್ಟಜಾತಿ | – | 15 |
| ಪರಿಶಿಷ್ಟ ಪಂಗಡ | – | 03 |
| ವರ್ಗ ೧ | – | 04 |
| ವರ್ಗ ೨A | – | 15 |
| ವರ್ಗ ೨B | – | 04 |
| ವರ್ಗ ೩A | – | 04 |
| ವರ್ಗ ೩B | – | 05 ನೀಡಿದೆ |

ಅದರಂತೆ ಪ್ರತಿ ರಾಜ್ಯವೂ ಪ್ರತ್ಯೇಕ ಮೀಸಲಾತಿ ನಿಯಮ ರೂಪಿಸಿದೆ (Roaster system), ಅಲ್ಲದೆ ಅಧಿನಿಯಮ 308 ರಿಂದ 314ರವರೆಗೆ ಕೇಂದ್ರ ಹಾಗೂ ರಾಜ್ಯಗಳಲ್ಲಿನ ಸೇವಾ ವಿಚಾರಗಳನ್ನು ತಿಳಿಸಿದೆ. 315ರ ನಿಯಮ ಲೋಕಸೇವಾ ಆಯೋಗದ ರಚನೆಯನ್ನು, 312 ರಾಷ್ಟ್ರಮಟ್ಟದ ಸೇವೆಯನ್ನು ಉಲ್ಲೇಖಿಸಿದೆ. (ವ್ಯತ್ಯಾಸವಾದಲ್ಲಿ 323(A)(B) ಆಡಳಿತಾತ್ಮಕವಾದ ಟ್ರಿಬ್ಯುನಲ್‌ಗೆ ಹೋಗುವ ಬಗ್ಗೆ ವಿವರಿಸಿದೆ).

ಬಿ) ಹಿಂದುಳಿದ ವರ್ಗಗಳ ಜನರ ಹಿತರಕ್ಷಣೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತನ್ನ ನಿಯಮದಲ್ಲಿ ಮೀಸಲಾಗಿ ಅವಕಾಶ ಕಲ್ಪಿಸುವಾಗ ಕೇವಲ ಆರ್ಥಿಕ ಅಂಶಗಳನ್ನೇ ಆಧಾರವಾಗಿಸಿಕೊಳ್ಳದೆ ಸಾಮಾಜಿಕ ಹಿಂದುಳಿದಿರುವಿಕೆಯ ಅಂಶಗಳನ್ನು ಗಮನಿಸಲು ಸೂಚಿಸಿದೆ.

5) ಅಧಿನಿಯಮ 17ರಂತೆ:- ಅಸ್ಪೃಶ್ಯತೆ ಆಚರಣೆ ಕಾನೂನು ಪ್ರಕಾರ ಅಪರಾಧ, ಮೇಲು-ಕೀಳು ಭಾವನೆ ಸಲ್ಲದು ಎಂಬುದನ್ನು ಸ್ಪಷ್ಟಪಡಿಸಿದೆ. (1976ರಲ್ಲಿ ಇದನ್ನು ಅಂಗೀಕರಿಸಿ, ಈ ರೀತಿ ಆಚರಿಸಿದರೆ ಉಗ್ರ ಶಿಕ್ಷೆ ನೀಡಲಾಗುವುದೆಂದು ಸೂಚಿಸಿದೆ)

Digitised by Bharatavani, CIIL

6) ಅಧಿನಿಯಮ 24: 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಉದ್ಯೋಗದಲ್ಲಿ ದುಡಿಸಿಕೊಳ್ಳುವುದನ್ನು ನಿಷೇಧಿಸಿದೆ (ಪ್ರತಿ ರಾಜ್ಯದಲ್ಲಿ ಇದಕ್ಕಾಗಿ Labour Department ಇದೆ)

7) ಅಧಿನಿಯಮ 25 ರಿಂದ 28ರವರೆಗೆ ವ್ಯಕ್ತಿಯು ಅನುಸರಿಸುವ ಧಾರ್ಮಿಕ ನಂಬಿಕೆಯನ್ನು ಬೆಂಬಲಿಸಿದೆ, ಅಲ್ಲದೆ ಇತರರ ಧಾರ್ಮಿಕ ನಂಬಿಕೆಯನ್ನು ವಿರೋಧಿಸುವುದನ್ನು ನಿಯಂತ್ರಿಸಿದೆ.

8) ಅಧಿನಿಯಮ (29) ಹಾಗೂ (30)ರಲ್ಲಿ:

   1) ಜನರು ತಮ್ಮ ಭಾಷೆ ಹಾಗೂ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವುದನ್ನು ಹಕ್ಕಾಗಿ ಹೊಂದುವರು.

   2) ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮ, ಜಾತಿ, ಜನಾಂಗ, ಭಾಷೆ, ಆಧಾರದಲ್ಲಿ ಯಾರಿಗೂ ಪ್ರವೇಶವನ್ನು ನಿರಾಕರಿಸಲು ಸಾಧ್ಯವಿಲ್ಲ.

   3) ಭಾಷೆ ಹಾಗೂ ಧಾರ್ಮಿಕ ಅಲ್ಪಸಂಖ್ಯಾತ ರರು ಶಿಕ್ಷಣ ಸಂಸ್ಥೆ ಸ್ಥಾಪಿಸುವ ಅವಕಾಶದ ಹಕ್ಕು ಪಡೆದಿದ್ದಾರೆ ಹಾಗೂ ಇವರಿಗೆ ಧನ ಸಹಾಯವನ್ನು ರಾಜ್ಯ ಸರ್ಕಾರಗಳು ವಿಸ್ತರಿಸಬೇಕೆಂದು ತಿಳಿಸಿದೆ. (ಇದರಂತೆ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಹಾಗೂ ಇಲಾಖೆಗಳು ಪ್ರತಿ ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟಿವೆ).

9) ಅಧಿನಿಯಮ 45: 6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುವುದಾಗಿ ಉಲ್ಲೇಖಿಸಿದೆ. ಇತ್ತೀಚೆಗೆ 2009 ಆಗಸ್ಟ್ ಮಾಹೆಯಲ್ಲಿ "ಶಿಕ್ಷಣವನ್ನು ಹಕ್ಕೆಂದು" ಕೇಂದ್ರ ಸರ್ಕಾರ ಘೋಷಿಸಿದೆ, ಸರ್ವ ಶಿಕ್ಷಣ ಅಭಿಯಾನ, ಜ್ಞಾನ ಆಯೋಗ, ಶಿಕ್ಷಣದ ವಿವಿಧ ಆಯೋಗಗಳ ರಚನೆ ಶಿಕ್ಷಣಕ್ಕೆ ಮಹತ್ವ ನೀಡಿ, ಶಿಕ್ಷಣವೆಂಬ ಪ್ರಮುಖ ಸಾಧನದ ಮೂಲಕ ಅನಕ್ಷರತೆ, ಬಡತನ, ಅಜ್ಞಾನವನ್ನು ಹೋಗಲಾಡಿಸಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ವೈಜ್ಞಾನಿಕ ಸಾಧನೆಗೆ ಮುನ್ನುಗ್ಗುತ್ತಿದೆ (ಸಾರ್ವಜನಿಕ ಶಿಕ್ಷಣ ಇಲಾಖೆಯು ಈ ಜವಾಬ್ದಾರಿಯನ್ನು ಪ್ರತಿರಾಜ್ಯದಲ್ಲಿ ಹೊತ್ತಿದೆ).

10) ಅಧಿನಿಯಮ 46: ಸಮಾಜದ ದುರ್ಬಲ ವರ್ಗ (ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟಪಂಗಡ)ಗಳ ಶೈಕ್ಷಣಿಕ ಹಾಗೂ ಆರ್ಥಿಕ ಹಿತಾಸಕ್ತಿ ಕಾಪಾಡಲು ಹಾಗೂ ವಿಶೇಷ ಕಾಳಜಿ ವಹಿಸಿ ಅವರಿಗೆ ಅನ್ಯಾಯ ಮತ್ತು ಶೋಷಣೆಯನ್ನು ತಪ್ಪಿಸಲು ತಿಳಿಸಿದೆ.

11) ಶಿಕ್ಷಣ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಜರುಗುವ ಪ್ರಕ್ರಿಯೆ, ಪ್ರಾಚ್ಯವಸ್ತು, ಸ್ಮಾರಕಗಳು, ವಿಶ್ವವಿದ್ಯಾನಿಲಯಗಳು, ಇವುಗಳ ನಿರ್ವಹಣೆ, ಅನುದಾನಕ್ಕೆ ಸಂಬಂಧಿಸಿದಂತೆ, ಆಂಗ್ಲೋ-ಇಂಡಿಯನ್ ಶಿಕ್ಷಣ ನೀಡುವುದಕ್ಕೆ ಕೇಂದ್ರ ಸರ್ಕಾರ ಭಾಗಿಯಾದರೆ, ಸ್ಥಳೀಯ ಅವಶ್ಯಕತೆಗೆ ಅನುಗುಣವಾದ ಪರಿಸರ, ಪ್ರಾಣಿ-ಪಕ್ಷಿ ಸಂರಕ್ಷಣೆ, ಗ್ರಂಥಾಲಯಗಳು, ಸ್ಮಾರಕ, ದಾಖಲೆಗಳು, ಜನರ ಆಸ್ತಿ-ಪಾಸ್ತಿ ಸಂರಕ್ಷಣೆ, ಶಿಕ್ಷಣ ಪ್ರಸಾರದ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳು ಹೊತ್ತಿವೆ. ಅಲ್ಲದೆ ಸಮವರ್ತಿ ಪಟ್ಟಿಯ ಪ್ರಕಾರದಂತೆ (ರಾಜ್ಯ ಹಾಗೂ ಕೇಂದ್ರ ಸರ್ಕಾರ ಒಟ್ಟಾಗಿ ಕಾರ್ಯನಿರ್ವಹಿಸುವ) ಜವಾಬ್ದಾರಿಗಳು ಯಾವುವೆಂದರೆ- ವೈಜ್ಞಾನಿಕ ಸಂಶೋಧನೆ, ಅಂಗವಿಕಲರ ಶಿಕ್ಷಣ, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ, ಹಿಂದಿ ಪ್ರಚಾರ, ಸ್ಥಳೀಯ ಭಾಷಾಭಿವೃದ್ಧಿ, ಪ್ರಾಥಮಿಕ ಶಿಕ್ಷಣ, ಉನ್ನತ ಶಿಕ್ಷಣ, ಸಂಸ್ಕೃತಿ, ಆರೋಗ್ಯ-ನೈರ್ಮಲ್ಯ, ಬಡತನ ನಿರ್ಮೂಲನೆ. ಹೀಗೆ ಹಲವು ವಿಷಯಗಳಲ್ಲಿ ಜನರ ಕಲ್ಯಾಣಕ್ಕಾಗಿ ಹಮ್ಮಿಕೊಳ್ಳುವ ಸೇವಾ ಕಾರ್ಯಕ್ರಮ ಸೇರುತ್ತವೆ. ದುರ್ಬಲ ವರ್ಗದವರ ವಸತಿ ಸಮಸ್ಯೆಗೆ ಇಂದಿರಾ ವಸತಿ ಯೋಜನೆ (1986), ಗ್ರಾಮೀಣ ಗೃಹ ನಿವೇಶನ ಹಾಗೂ ಸಹಾಯತಾ ಯೋಜನೆ ಹಾಗೂ ಆಶ್ರಯ ಯೋಜನೆ (1991)ಗಳನ್ನು ಜಾರಿಗೆ ತರಲಾಗಿದೆ.

ಸಂವಿಧಾನದ ಮತ್ತೊಂದು ಅಂಶ ಗಮನಿಸಿದಾಗ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗವೂ ಕಾರ್ಯ ನಿರ್ವಹಿಸುತ್ತಿದೆ. ನ್ಯಾಯಾಂಗದ ಮುಖ್ಯ ಕರ್ತವ್ಯಗಳಲ್ಲಿ-

1) ನಿರ್ಧಾರ ಕೈಗೊಳ್ಳುವಾಗ ಅಧಿಕಾರಿಯು ತನ್ನ ನಿರ್ಧಾರಗಳನ್ನು ವ್ಯತಿರಿಕ್ತಗೊಳಿಸದಂತೆ ನಿಯಂತ್ರಿಸುವುದು.

2) ನ್ಯಾಯ ನಿರ್ಣಯದಲ್ಲಿ ದೋಷಬಾರದಂತೆ ರಕ್ಷಿಸುವುದು.

3) ಸಹಜ ನ್ಯಾಯದ ಪರಿಧಿಯಿಂದ ದೂರ ಸರಿದು ವ್ಯತ್ಯಾಸವಾಗದಂತೆ ಕಾಪಾಡುವುದು.

4) ಸಕಾರಣಯುತವಾಗಿ ಟ್ರಿಬ್ಯುನಲ್‌ಗಳು ತಮ್ಮ ನಿರ್ಧಾರಗಳನ್ನು ಕೈಗೊಳ್ಳುವಂತೆ ದೃಢಪಡಿಸುವುದು ಇತ್ಯಾದಿ ಸೇರಿವೆ. ಇದರಿಂದ ಜನತೆಗೆ ನ್ಯಾಯಾಂಗದ ಮೇಲೆ ಎಲ್ಲಿಲ್ಲದ ಅಪಾರ ನಂಬಿಕೆ ಇದೆ. ನ್ಯಾಯಾಂಗದ ನಿರ್ಧಾರವನ್ನು ಪಾಲಿಸಲು ಪೊಲೀಸ್ ಇಲಾಖೆ ಹಾಗೂ ಜೈಲುಗಳು ಇವೆ.

ಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸಲು ಸರ್ಕಾರಗಳು ತೆಗೆದುಕೊಂಡಿರುವ ಕ್ರಮಗಳನ್ನು ಮೇಲೆ ವಿವರಿಸಿದೆ. ಈ ಎಲ್ಲಾ ಕ್ರಮಗಳ ಅರಿವು ಪ್ರತಿಯೊಬ್ಬ ಅಧ್ಯಾಪಕನಿಗೂ ಇರಬೇಕಾದುದು ಅಗತ್ಯವಾಗಿದೆ. ಶಿಕ್ಷಣ ತರಗತಿಯಲ್ಲಿ ಬೋಧಿಸುವಾಗ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯದ ಪರಿಕಲ್ಪನೆ ಭಾರತೀಯ ಸಮಾಜದಲ್ಲಿ ಅದರ ಅವಶ್ಯಕತೆ ಮತ್ತು ಅದನ್ನು ಒದಗಿಸಲು ಸರ್ಕಾರಗಳು ಇದುವರೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಬೋಧಿಸಬೇಕು. ಸಾಮಾಜಿಕ ನ್ಯಾಯ ಪಡೆಯಲು ಸಮಾಜ ವ್ಯವಸ್ಥೆಗಳನ್ನು ಎದುರಿಸುವ ಸಕಾರಾತ್ಮಕ ಮನೋಭಾವ ಮತ್ತೆ ಆತ್ಮವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕು.

-ಕೆ.ರ.

## ಸಾಮಾಜಿಕ ಬದಲಾವಣೆ ಮತ್ತು ಶಿಕ್ಷಣ

'ಬದಲಾವಣೆಯು ಒಂದು ಪ್ರಕೃತಿ ನಿಯಮವಾಗಿದೆ'. ನಿಸರ್ಗವು ಜಡವಾದುದಲ್ಲ ಅದು ಚಲನಶೀಲವಾದುದು. ಬದಲಾವಣೆಯು ಅದರಲ್ಲಿ ಅಂತರ್ಗತವಾಗಿದೆ. ಬದಲಾವಣೆಯು ಜಗತ್ತಿನ ಎಲ್ಲ ರಂಗಗಳಲ್ಲಿಯೂ ಕಂಡು ಬರುವುದು. ಬದಲಾವಣೆಯು ನಿಸರ್ಗದ ನಿಯಮ. ಅಂತೆಯೇ, ಮಾನವ ಸಮಾಜವೂ ಕೂಡಾ ಈ ನಿಯಮಕ್ಕೆ ಬದ್ಧವಾಗಿದೆ. ಮಾನವ ಸಮಾಜವು ಆದಿಯಿಂದಲೂ ಅವ್ಯಾಹತವಾಗಿ ಬದಲಾಗುತ್ತಲೇ ಇದೆ. ಸಮಾಜವೂ ಈ ನಿಯಮಕ್ಕೆ ಬದ್ಧವಾಗಿದೆ. ಸಮಾಜವೂ ಬಾವಿಯಲ್ಲಿನ ಅಥವಾ ಕೊಳದಲ್ಲಿನ ನಿಂತ ನೀರಿನಂತಲ್ಲ. ಅದು ಯಾವಾಗಲೂ ಹರಿಯುತ್ತಲೇ ಇರುವ ನದಿಯ ನೀರಿನಂತಿದೆ. ಬಹಳ ಸಾಂಪ್ರದಾಯಿಕವೆಂದು ಕರೆಯಲ್ಪಡುವ ಸಮಾಜಗಳು ಮತ್ತು ಸಂಸ್ಕೃತಿಗಳು ಕೂಡಾ ಬದಲಾವಣೆಯ ಪ್ರಕ್ರಿಯೆಗೆ ಒಳಪಟ್ಟಿವೆ. ಚಲನಶೀಲತೆಯು ಸಮಾಜದ ಒಂದು ಆಂತರಿಕ ಗುಣ. ಅವ್ಯಾಹತವಾಗಿ ಈ ಪರಿವರ್ತನೆ ಸಂಭವಿಸಿದ್ದರಿಂದಲೇ ಮಾನವನು ಇಂದು ಅನಾಗರಿಕ ಸ್ಥಿತಿಯಿಂದ

Digitised by Bharatavani, CIIL

ನಾಗರಿಕ ಸ್ಥಿತಿಗೆ ಬರಲು ಮತ್ತು ಇನ್ನೂ ಹೆಚ್ಚಿನ ಪರಿಪೂರ್ಣತೆಯ ಸ್ಥಿತಿಗೆ ಸಾಗಲು ಸಾಧ್ಯವಾಗಿದೆ. ಇಂದಿನದು ನಿನ್ನೆಯಂತಿಲ್ಲ. ಹಾಗೆಯೇ ನಾಳೆಯದು ಇಂದಿನಂತಿರಬೇಕಾಗಿಲ್ಲ. ಒಂದೆರಡು ದಶಕಗಳ ಹಿಂದಿನ ಭಾರತಕ್ಕೂ ಇಂದಿನ ಭಾರತಕ್ಕೂ ವ್ಯತ್ಯಾಸವಿದೆ. ನಾಳಿನ ಭಾರತದ ಸ್ಥಿತಿ ಹೇಗಿದ್ದೀತು? ಎಂದು ಹೇಳುವುದೂ ಸುಲಭವಲ್ಲ. ಒಂದೆರಡು ದಶಕಗಳಲ್ಲಿಯೇ ಕ್ರಾಂತಿಕಾರಕ ಬದಲಾವಣೆಗಳು ಸಂಭವಿಸುವುದು ಸಾಧ್ಯವಿದೆ. ಬದಲಾವಣೆಯ ಅಗಾಧತೆಯನ್ನು ಊಹಿಸುವುದು ಮತ್ತು ಅಳೆಯುವುದು ಅಷ್ಟೇ ಕಷ್ಟದ ಕೆಲಸವಾಗಿದೆ.

ಒಂದು ವಸ್ತು ಅಥವಾ ಪರಿಸ್ಥಿತಿ ಅಥವಾ ಜೀವಿಯಲ್ಲಿ ಸಾಮೂಹಿಕವಾಗಿ ಕಂಡು ಬರುವ ವ್ಯತ್ಯಾಸ, ಪಲ್ಲಟ ಅಥವಾ ಮಾರ್ಪಾಟನ್ನು 'ಬದಲಾವಣೆ' ಎಂದು ಕರೆಯಬಹುದು. "ಸಾಮಾಜಿಕ ಬದಲಾವಣೆ"ಯ ಪರಿಕಲ್ಪನೆಯು ಮಾನವನ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಕಂಡು ಬರುವ ವ್ಯತ್ಯಾಸಗಳನ್ನು ಅಥವಾ ಮಾರ್ಪಾಟುಗಳನ್ನು ಸಂಕೇತಿಸುವುದು. ಸಾಮಾಜಿಕ ಸಂಬಂಧಗಳೇ ಸಾಮಾಜಿಕ ಪ್ರಕ್ರಿಯೆಗಳು. ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಸಂಘಟನೆಗೆ ಕಾರಣ ವಾಗಿರುವುದರಿಂದ ಇವುಗಳಲ್ಲಿ ಕಂಡು ಬರುವ ಪರಿವರ್ತನೆಯನ್ನೇ "ಸಾಮಾಜಿಕ ಬದಲಾವಣೆ" ಎಂದು ಅರ್ಥೈಸಲಾಗಿದೆ. ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಕಂಡು ಬರುವ ಬದಲಾವಣೆಯೇ "ಸಾಮಾಜಿಕ ಬದಲಾವಣೆ" ಎಂದೂ ಹೇಳಲಾಗಿದೆ.

ಸಮಾಜದ ಭೌತಿಕ ಮತ್ತು ಸಾಂಸ್ಕೃತಿಕ ಅಂಶಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳೆಂದರೆ ಸ್ಥಿತಿಯಲ್ಲಿ ಬದಲಾವಣೆ ಹೊಂದುವುದು. ಇದು ಒಂದು ನಿರಂತರ ಕ್ರಿಯೆ. ಅದರಂತೆ ಸಮಾಜದಲ್ಲಿಯೂ ಅನೇಕ ಬದಲಾವಣೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಸಮಾಜ ಜೀವಿಯಾದ ಮಾನವನ ಹೊಂದಾಣಿಕೆ ಸ್ವಭಾವ, ವಿನಿಮಯ ಮಾಡಿಕೊಳ್ಳುವ ಸ್ವಭಾವ, ಪರಸ್ಪರ ಅವಲಂಬನೆ, ಅನ್ಯೋನ್ಯಕ್ರಿಯೆ ಮತ್ತು ವೈಜ್ಞಾನಿಕ ಪ್ರಗತಿಯ ಫಲವಾಗಿ ಸಮಾಜದ ಜನರು ಎಲ್ಲ ರೀತಿಯಲ್ಲೂ ಪರಿವರ್ತಿತರಾಗುತ್ತಾರೆ. ಹಳೆಯ ಸಂಪ್ರದಾಯದ ಜಾಡುಗಳನ್ನು ತ್ಯಜಿಸಿ ನವೀನತೆಯನ್ನು ಪ್ರಕಟಿಸುತ್ತಾರೆ. ಈ ಪರಿವರ್ತನೆಯೇ ಸಾಮಾಜಿಕ ಬದಲಾವಣೆ/ಪರಿವರ್ತನೆ. ಸಮಾಜ ಎಂಬುದು ಅನೇಕ ವ್ಯಕ್ತಿಗಳ ಗುಂಪು. ಈ ಗುಂಪಿನಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಯಿಂದ ಸಂಸ್ಕೃತಿ ಸಂಕ್ರಮಣಗಳ ಫಲವಾಗಿ ಕ್ಷಣ ಕ್ಷಣಗಳಲ್ಲಿ ಕ್ರಮವಾಗಿ ಸಮಾಜದ ರಚನೆಯಲ್ಲಿ ಜನರ ನಡೆನುಡಿಗಳಲ್ಲಿ, ಆಹಾರ, ವಿಹಾರ, ಉಡುಗೆ ತೊಡುಗೆಗಳಲ್ಲಿ, ವೈವಿಧ್ಯಮಯ ವರ್ತನೆಗಳಲ್ಲಿ, ಮೌಲ್ಯ ನಿರ್ಧಾರಗಳಲ್ಲಿ ಆಗುತ್ತಿರುವ ಬದಲಾವಣೆಯಿಂದ ಸಮಾಜದ ಗಾತ್ರ ವ್ಯವಸ್ಥೆ ಮತ್ತು ರಚನೆಯಲ್ಲಿ ಬದಲಾವಣೆಯನ್ನು ಕಾಣಬಹುದು.

ಸಾಮಾಜಿಕ ಬದಲಾವಣೆಯನ್ನು ಕುರಿತು ಸಮಾಜಶಾಸ್ತ್ರಜ್ಞರು ಅನೇಕ ವ್ಯಾಖ್ಯೆಗಳನ್ನು ನೀಡಿದ್ದಾರೆ. ಕೆಲವು ವ್ಯಾಖ್ಯೆಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

"ಜೀವಿತದ ರೀತಿ ನೀತಿಗಳಲ್ಲಿ ಭೌತಿಕ ಸನ್ನಿವೇಶಗಳಿಂದ, ಜನಸಂಖ್ಯಾ ಸಂಯೋಜನೆಯಿಂದ, ಪ್ರಗತಿಯಿಂದ, ಸಂಸ್ಕೃತಿಯ ಸಾಧನಗಳಿಂದ ಸಮಾಜದಲ್ಲಿ ಏರ್ಪಡುವ ಬದಲಾವಣೆಯೇ ಸಾಮಾಜಿಕ ಬದಲಾವಣೆ."

–ಗಿಲಿನ್ ಮತ್ತು ಗಿಲಿನ್

"ಸಾಮಾಜಿಕ ಕ್ರಮದಲ್ಲುಂಟಾಗುವ ಬದಲಾವಣೆಯನ್ನು ಸಾಮಾಜಿಕ ಬದಲಾವಣೆ ಎಂದು ಕರೆಯುವರು. ಅಂದರೆ ಸಮಾಜದ ಗಾತ್ರ, ಸಮಾಜದ ವಿವಿಧ ಭಾಗಗಳ ಜೋಡಣೆ, ಇವುಗಳ ಸಾಂಸ್ಥಿಕ ವ್ಯವಸ್ಥೆ ಇವುಗಳಲ್ಲಿ ಉಂಟಾಗುವ ಬದಲಾವಣೆಗಳು."

–ಎಂ. ಗಿನ್‌ಬರ್ಗ್

"ಒಂದು ಸಾಮಾಜಿಕ ವ್ಯವಸ್ಥೆಯಲ್ಲಿಯ ಸಂಬಂಧಗಳು ನಿರ್ದಿಷ್ಟ ಅವಧಿಯಲ್ಲಿ ತೋರುವ ಬದಲಾವಣೆಗೆ ಸಾಮಾಜಿಕ ಬದಲಾವಣೆ ಎನ್ನುತ್ತಾರೆ."

–ಡಿ.ಸಿ. ಮಿಲ್ಲರ್

"ಸಾಮಾಜಿಕ ಬದಲಾವಣೆಯು ಅನೇಕ ವಿಧದ ಬದಲಾವಣೆಗಳಿಂದಾಗಿ ನಡೆಯುವ ಕ್ರಿಯೆ. ಮಾನವ ನಿರ್ಮಿತ ವಿಧಾನ ಬದಲಾವಣೆ, ಮಾನವನ ವರ್ತನೆಯ ಬದಲಾವಣೆ ಮತ್ತು ಮನುಷ್ಯನ ನಿಯಂತ್ರಣ ಮೀರಿ ನಡೆಯುವ ಬದಲಾವಣೆಯಿಂದಾಗಿ ಈ ಕ್ರಿಯೆ ನಡೆಯುತ್ತದೆ."

–ಮೆಕೈವರ್

"ಸಾಮಾಜಿಕ ಪ್ರಕ್ರಿಯೆಗಳು, ಸಾಮಾಜಿಕ ಮಾದರಿಗಳು, ಸಾಮಾಜಿಕ ಅಂತರ್‌ಕ್ರಿಯೆಗಳು ಅಥವಾ ಸಾಮಾಜಿಕ ಸಂಘಟನೆಗಳು ಇವುಗಳ ಯಾವುದೇ ಮುಖದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಅಥವಾ ಮಾರ್ಪಾಟುಗಳನ್ನು ವಿವರಿಸಲು ಸಾಮಾಜಿಕ ಬದಲಾವಣೆ ಎಂಬ ಪರಿಕಲ್ಪನೆಯನ್ನು ಬಳಸಲಾಗುತ್ತದೆ."

–ಎಮ್.ಇ. ಜೋನ್ಸ್

"ಸಾಮಾಜಿಕ ಬದಲಾವಣೆಯು ಹಲವು ರೀತಿಯ ಪರಿವರ್ತನೆಗಳಿಗೆ ಜೀವನದ ಮಾನವ ನಿರ್ಮಿತ ಪರಿಸ್ಥಿತಿಗಳಲ್ಲಿನ ಬದಲಾವಣೆಗಳಿಗೆ, ಮಾನವರ ಮನೋಭಾವನೆಗಳಲ್ಲಿ ಮತ್ತು ನಂಬುಗೆಗಳಲ್ಲಿನ ಬದಲಾವಣೆಗಳಿಗೆ ಮತ್ತು ಮಾನವನ ನಿಯಂತ್ರಣಕ್ಕೆ ನಿಲುಕದ ಪರಿವರ್ತನೆಗಳಿಗೆ ಮತ್ತು ವಸ್ತುಗಳ ಭೌತಿಕ ಹಾಗೂ ಜೈವಿಕ ಸ್ವರೂಪಗಳಲ್ಲಿನ ಬದಲಾವಣೆಗಳಿಗೆ ಪ್ರತಿಕ್ರಿಯಾತ್ಮಕವಾದ ಪ್ರಕ್ರಿಯೆಯಾಗಿದೆ".

–ಮೆಕೈವರ್ ಮತ್ತು ಪೇಜ್

ಒಟ್ಟಿನಲ್ಲಿ ಸಾಮಾಜಿಕ ಬದಲಾವಣೆ ಎಂಬುದು ಸಮಾಜದ ಕ್ರಿಯೆ, ರಚನೆಯಲ್ಲಿ ಸಮಗ್ರವಾಗಿ ಮತ್ತು ಆಮೂಲಾಗ್ರವಾಗಿ ಬದಲಾವಣೆಯನ್ನು ಮತ್ತು ಹೊಸ ಸಮಾಜ ಕಟ್ಟುತ್ತಾ ಹಾಗೂ ನೋಡುತ್ತಾ ಪ್ರಕೃತಿಯ ನಿಯಮದಂತೆ ನಡೆಯುತ್ತಾ ಹೋಗುತ್ತದೆ.

ಸಾಮಾಜಿಕ ಬದಲಾವಣೆಯ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ. ಮೌಲ್ಯಾಧಾರಿತ ವ್ಯಕ್ತಿಯ ಪ್ರಭಾವ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿ, ಆರ್ಥಿಕ ಮತ್ತು ಜೈವಿಕ ಅಂಶಗಳು, ನೈಸರ್ಗಿಕ ವಿಕೋಪಗಳು, ವಿವಿಧ ಸಂಸ್ಕೃತಿಗಳ ಪ್ರಭಾವ, ಶೈಕ್ಷಣಿಕ ಪ್ರಸಾರ, ಸರಕಾರದ ಕಾಯ್ದೆ ಕಾನೂನುಗಳು ಮುಂತಾದ ಅಂಶಗಳು ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವ ಬೀರುತ್ತವೆ. ಅವುಗಳನ್ನು ಸವಿವರವಾಗಿ ಈ ರೀತಿಯಾಗಿ ನೋಡಬಹುದು.

**1. ಭೌಗೋಳಿಕ ಅಂಶಗಳಲ್ಲಿನ ಬದಲಾವಣೆ :** "ಮಾನವ ನಿಸರ್ಗದ ಕೂಸು", ನಿಸರ್ಗದ ನಿಯಮಾನುಸಾರವಾಗಿಯೇ ಅವನು ತನ್ನ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳುತ್ತಾನೆ. ಅಂದರೆ ಮಾನವ ನಿಸರ್ಗದ ಸೂತ್ರದ ಗೊಂಬೆ ಎಂದು ಅಭಿಪ್ರಾಯಪಡಬಹುದು. ಭೌಗೋಳಿಕ ಅಂಶಗಳಾದ ಬಿರುಗಾಳಿ, ಚಂಡಮಾರುತ, ಭೂಕಂಪ, ಜ್ವಾಲಾಮುಖಿ, ಅತಿವೃಷ್ಟಿ, ಅನಾವೃಷ್ಟಿ, ಸಾಂಕ್ರಾಮಿಕ ರೋಗಗಳು, ವಾಯುಗುಣ

Digitised by Bharatavani, CIIL

ಮುಂತಾದವುಗಳಿಗೆ ಅನುಗುಣವಾಗಿ ಸಮಾಜದ ಜನರ ಜೀವನದಲ್ಲಿ ಅನೇಕ ರೀತಿ ಬದಲಾವಣೆಗಳುಂಟಾಗುತ್ತವೆ. ಭೌಗೋಳಿಕ ಸನ್ನಿವೇಶದಲ್ಲಿ ಆರ್ಥಿಕ ಪ್ರಗತಿ ಉಂಟಾದಾಗ ಜನರ ಜೀವನಮಟ್ಟ, ಆಚಾರ ವಿಚಾರಗಳಲ್ಲಿ ಬದಲಾವಣೆಗಳಾಗುತ್ತವೆ. ಬರ್ಟ್ರಂಡ್ ರಸಲ್‌ರ ಪ್ರಕಾರ "ಪ್ರತಿಯೊಂದು ನಾಗರಿಕತೆ ಮತ್ತು ಸಂಸ್ಕೃತಿ ಬೆಳೆಯಬೇಕಾದರೂ ಮೂಲ ಸಾಮಗ್ರಿಗಳನ್ನು ಪ್ರಕೃತಿಯೇ ಒದಗಿಸುತ್ತದೆ. ಸಾಮಾಜಿಕ ಪರಿಸರ ನಿರ್ಮಾಣದಲ್ಲಿ ಪ್ರಕೃತಿ ಮಹತ್ತರ ಪಾತ್ರ ವಹಿಸುತ್ತದೆ."

**2. ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿ :** ಆಧುನಿಕ ಸಮಾಜದಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಅಂಶಗಳು ಸಾಮಾಜಿಕ ಬದಲಾವಣೆಯ ಮೇಲೆ ಬಹಳಷ್ಟು ಪ್ರಭಾವ ಬೀರುತ್ತವೆ. ಔದ್ಯೋಗಿಕ ಕ್ರಾಂತಿಯಿಂದಾಗಿ ಸಾಮಾಜಿಕ ಬದಲಾವಣೆ ಹಾಗೂ ಆರ್ಥಿಕ ಬದಲಾವಣೆಗಳು ಏರ್ಪಟ್ಟಿವೆ. ವೈದ್ಯಕೀಯ ಸೌಲಭ್ಯಗಳಿಂದ ಜನನದ ಪ್ರಮಾಣ ಹೆಚ್ಚಿ, ಮರಣದ ಪ್ರಮಾಣ ಕಡಿಮೆಯಾಗಿದೆ. ಹೆಚ್ಚಿನ ಜನಸಂಖ್ಯೆಗೆ ಆಹಾರ, ವಸತಿ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದು ಕಷ್ಟವಾಗುತ್ತಿದೆ. ವಿಜ್ಞಾನದ ಅಭಿವೃದ್ಧಿಯಿಂದ ವ್ಯವಸಾಯ, ವ್ಯವಹಾರ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಬದಲಾವಣೆಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ವ್ಯವಸಾಯ ಉಪಕರಣಗಳು, ರಾಸಾಯನಿಕ ಗೊಬ್ಬರಗಳು, ಹೊಸ ಹೊಸ ತಳಿಗಳನ್ನು ಉತ್ಪಾದನೆಯಲ್ಲಿ ಬಳಸುವುದರಿಂದ ಹೆಚ್ಚು ಹೆಚ್ಚು ಇಳುವರಿ ಪಡೆದು ಅವಶ್ಯಕವಾದ ಆಹಾರ ಸಾಮಗ್ರಿಗಳನ್ನು ಹೆಚ್ಚುತ್ತಿರುವ ಜನತೆಗೆ ಒದಗಿಸಿಕೊಡಲಾಯಿತು, ಸಂಪರ್ಕ ಸಾಧನಗಳಲ್ಲಂತೂ ತೀವ್ರ ಬದಲಾವಣೆ ಹೊಂದಲು ತಾಂತ್ರಿಕ ನೆರವೇ ಕಾರಣ. ಮುದ್ರಣ, ರೇಡಿಯೋ, ದೂರದರ್ಶನ, ಕಂಪ್ಯೂಟರ್ ಮುಂತಾದ ತಾಂತ್ರಿಕ ವಸ್ತುಗಳು ಸಮಾಜ ಪರಿವರ್ತನೆಯ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಅಣುಬಾಂಬ್, ಜಲಜನಕ ಬಾಂಬ್‌ಗಳಿಂದ ಕ್ಷಣ ಮಾತ್ರದಲ್ಲಿ ವಿಶ್ವವನ್ನು ಸುಟ್ಟು ಹಾಕುವ ಸಾಮರ್ಥ್ಯ ತಂತ್ರಜ್ಞಾನದ ಕೊಡುಗೆಯಿಂದ ದೊರೆತಿದೆ. ಒಟ್ಟಿನಲ್ಲಿ ತಾಂತ್ರಿಕ ಪ್ರಗತಿಯಿಂದ ಸಾಮಾಜಿಕ ಬದಲಾವಣೆ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಪ್ರಭಾವ ಉಂಟಾಗುತ್ತದೆ.

**3. ಸಾಂಸ್ಕೃತಿಕ ಅಂಶಗಳು :** ಸಂಸ್ಕೃತಿ ಎಂಬುದು ಆಂತರಿಕ ಅನುಭವಗಳು ಮತ್ತು ಸಂಬಂಧಗಳಿಗೆ ಸಂಬಂಧಿಸಿರುವುದರಿಂದ ಒಂದು ಸಮಾಜದ ಸಾಂಸ್ಕೃತಿಕ ಸಂಬಂಧಗಳು ಬೆಳೆಯುತ್ತಾ ಹೋದಂತೆ ನಾಗರಿಕತೆಯ ಚಿಹ್ನೆಯಾದ ಮನುಷ್ಯನ ಸ್ವಭಾವವು ಬದಲಾಗುತ್ತಾ ಹೋಗುತ್ತದೆ. ಒಂದೊಂದು ಸಮಾಜದ ಹೊಸ ಹೊಸ ಅನುಭವಗಳು ಮತ್ತು ಆಲೋಚನೆಗಳು ನಮ್ಮ ಜೀವನದ ರೀತಿಗಳನ್ನು ಬದಲಾಯಿಸುತ್ತಾ ಹೋಗಬಹುದು. ಇತಿಹಾಸವನ್ನು ಅವಲೋಕಿಸಿದಾಗ ಆದರ್ಶ ವ್ಯಕ್ತಿಗಳು, ಸಂತರು, ಸಮಾಜ ಸುಧಾರಕರು, ಮತ ಪ್ರಚಾರಕರು, ರಾಜಕೀಯ ವ್ಯಕ್ತಿಗಳು ಸಾಮಾಜಿಕ ಪರಿವರ್ತನೆಗೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಉದಾಹರಣೆಗೆ, ಕಾರ್ಲ್‌ಮಾರ್ಕ್ಸ್‌ರವರ "ಸಮಾಜವಾದ ಸಿದ್ಧಾಂತವೇ" ರಷ್ಯಾದ ಕ್ರಾಂತಿಗೆ ಪ್ರೇರಣೆಯಾಯಿತು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಹಿಂಸಾತ್ಮಕ ಚಳುವಳಿ ಮುಂತಾದವುಗಳಿಂದ ಜನತೆಯ ಮೇಲೆ ಅತ್ಯಧಿಕ ಪ್ರಭಾವಬೀರಿ ಸಾಮಾಜಿಕ ಬದಲಾವಣೆಗೆ ಕಾರಣಕರ್ತರಾದರು. ಹೀಗೆಯೇ ಅಬ್ರಾಹಂ ಲಿಂಕನ್, ರೂಸೋ, ಜಾನ್ ಡ್ಯೂಯಿ ಮುಂತಾದವರು ಪ್ರಜಾಪ್ರಭುತ್ವದ ಪ್ರಭಾವವನ್ನು ವಿಶ್ವಕ್ಕೆ ಸಾರಿದರು. ಸಮಾಜದ ಬದಲಾವಣೆಯಲ್ಲಿ ಆಚಾರ-ವಿಚಾರ, ವಿವಾಹ, ಆಭರಣ, ಜೀವಿಸುವ ರೀತಿಯಲ್ಲಿ ಬಳಸುವ ಉಪಕರಣಗಳಲ್ಲಿ ಬದಲಾವಣೆಯನ್ನು ಕಾಣುತ್ತೇವೆ.

**4. ಯುದ್ಧಗಳು :** ಇತಿಹಾಸವನ್ನು ಅವಲೋಕಿಸಿದಾಗ ರಾಜ ರಾಜರ ನಡುವೆ ಯುದ್ಧಗಳಾಗಿ ಜನರು, ಕಲೆ, ಸಾಹಿತ್ಯ, ಶಿಲ್ಪಗಳು ಹಾಳಾಗಿ ಅದರ ಜೊತೆಗೆ ಆರ್ಥಿಕ ಸಂಪತ್ತನ್ನು ಅಪಹರಿಸುವುದರಿಂದ ಸಮಾಜದಲ್ಲಿ ಬದಲಾವಣೆ ಕಾಣುತ್ತೇವೆ. ಉದಾಹರಣೆಗೆ, 1945ರಲ್ಲಿ ದ್ವಿತೀಯ ಪ್ರಪಂಚದ ಮಹಾಯುದ್ಧದಲ್ಲಿ ಅಮೆರಿಕಾ ದೇಶವು ಜಪಾನ್ ಮೇಲೆ ಅಣುಬಾಂಬನ್ನು ಎಸೆದಾಗಿನಿಂದ ಅಲ್ಲಿಯ ಜನರ ಜೀವನ ಕ್ರಮವೇ ಬದಲಾವಣೆಯಾಯಿತು. ಈಗಲೂ ಅಲ್ಲಿ ಹುಟ್ಟುವ ಮಕ್ಕಳು ಅಂಗವಿಕಲರಾಗಿರುತ್ತಾರೆ ಎಂದರೆ ಆಶ್ಚರ್ಯಪಡುವಂತಹದ್ದು. ಹೀಗೆ ಯಾವುದೇ ಸಂದರ್ಭದಲ್ಲಿ ದೇಶ ದೇಶಗಳ ನಡುವೆ ಯುದ್ಧಗಳು ನಡೆದರೆ ಆಯಾ ಸಮಾಜದಲ್ಲಿ ಹಲವು ಅಂಶಗಳು ಬದಲಾವಣೆಯಾಗಲು ಕಾರಣವಾಗುತ್ತವೆ.

## ಸಾಮಾಜಿಕ ಬದಲಾವಣೆಯ ಗುಣಲಕ್ಷಣಗಳು

**ಸಾಮಾಜಿಕ ಬದಲಾವಣೆಯು ಸಾರ್ವತ್ರಿಕವಾಗಿದೆ :** ಪ್ರತಿಯೊಂದು ಸಮಾಜದ ರಚನೆ ಮತ್ತು ಕಾರ್ಯ ಕ್ಷೇತ್ರದಲ್ಲಿ ಬದಲಾವಣೆ ಉಂಟಾಗುತ್ತದೆ. ಅತ್ಯಂತ ಪ್ರಾಚೀನ ಸಮಾಜದಿಂದ ಆಧುನಿಕ ಸಮಾಜದವರೆಗೂ ಬದಲಾವಣೆಯು ಸಾಗುತ್ತಲಿದೆ. ಆದಿವಾಸಿ, ಗ್ರಾಮೀಣ ಮತ್ತು ನಗರ ಸಮಾಜದಲ್ಲಿ ಸಹ ಬದಲಾವಣೆ ಉಂಟಾಗುತ್ತದೆ. ಇದರಿಂದಾಗಿ ಬದಲಾವಣೆಯು ಸಾರ್ವತ್ರಿಕವಾಗಿದೆ ಎಂದು ಹೇಳಬಹುದು.

**ಸಾಮಾಜಿಕ ಬದಲಾವಣೆಯ ಗತಿ ಮತ್ತು ರೂಪ :** ಪ್ರತಿಯೊಂದು ಸಮಾಜದಲ್ಲಿ ಸಾಮಾಜಿಕ ಬದಲಾವಣೆಯ ಗತಿ ಮತ್ತು ರೂಪ ಏಕರೂಪವಾಗಿರುವುದಿಲ್ಲ. ಕೆಲವು ಸಮಾಜಗಳಲ್ಲಿ ಸಾಮಾಜಿಕ ಬದಲಾವಣೆಯು ನಿಧಾನ ಗತಿಯಲ್ಲಿ ಉಂಟಾದರೆ, ಇನ್ನು ಕೆಲವು ಸಮಾಜಗಳಲ್ಲಿ ಇದು ತೀವ್ರಗತಿಯಲ್ಲಾಗುತ್ತದೆ. ಉದಾಹರಣೆಗೆ, ಅತ್ಯಂತ ಪ್ರಾಚೀನ ಸಮಾಜ, ಹಿಂದುಳಿದ ಸಮಾಜ ಮತ್ತು ಗ್ರಾಮೀಣ ಸಮಾಜಗಳಲ್ಲಿ ನಿಧಾನ ಗತಿಯ ಬದಲಾವಣೆಯಾದರೆ, ಆಧುನಿಕ, ಮುಂದುವರೆದ ಸಮಾಜಗಳಲ್ಲಿ ತೀವ್ರಗತಿಯ ಬದಲಾವಣೆ ಆಗುತ್ತದೆ. ಈ ತೆರನಾದ ಸಾಮಾಜಿಕ ಬದಲಾವಣೆಯು ವಿವಿಧ ಕ್ಷೇತ್ರಗಳಾದ ತಾಂತ್ರಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಇತ್ಯಾದಿಗಳ ಪ್ರಗತಿಯನ್ನು ಅವಲಂಬಿಸಿರುವುದು.

**ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯು ಸರಪಳಿಯನ್ನು ನಿರ್ಮಿಸಬಹುದು :** ಸಾಮಾಜಿಕ ಜೀವನದ ಯಾವುದೇ ಒಂದು ಕ್ಷೇತ್ರದಲ್ಲಿ ಇಲ್ಲವೇ ಒಂದು ವಿಭಾಗದಲ್ಲಿ ಉಂಟಾಗುವ ಬದಲಾವಣೆಯು ಸಾಮಾಜಿಕ ಜೀವನದ ಎಲ್ಲ ಕ್ಷೇತ್ರಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಉದಾಹರಣೆಗೆ, ಔದ್ಯೋಗಿಕ ಕ್ರಾಂತಿಯ ಫಲದಿಂದ ವಿವಿಧ ಧಾರ್ಮಿಕ ಮತ್ತು ಇಡೀ ಸಾಮಾಜಿಕ ಜೀವನದ ಕ್ಷೇತ್ರಗಳು ಬದಲಾವಣೆಗೊಂಡವು.

**ಸಾಮಾಜಿಕ ಬದಲಾವಣೆಯ ಬಗೆಗೆ ನಿಶ್ಚಿತವಾಗಿ ಹೇಳುವುದು ಅಸಾಧ್ಯ** ಮುಂದಿನ ಸಮಾಜವು ಯಾವ ರೀತಿಯಲ್ಲಿ ಬದಲಾವಣೆಗೊಳ್ಳುತ್ತದೆ? ಎಂಬುದರ ಬಗೆಗೆ ನಿಶ್ಚಿತವಾಗಿ ಹೇಳುವುದು ಕಠಿಣ. ಪ್ರಚಲಿತವಾಗಿರುವ ಕೆಲವು ಸಾಮಾಜಿಕ ರೀತಿ-ನೀತಿಗಳಾದ ಅಸ್ಪೃಶ್ಯತೆ, ಸ್ತ್ರೀ ಹಾಗೂ ಪುರುಷರ ಮಧ್ಯದಲ್ಲಿ ಅಸಮಾನತೆ ಮತ್ತು ಆರ್ಥಿಕ ಅಸಮಾನತೆ ಮುಂತಾದವುಗಳನ್ನು ನಿರ್ಮೂಲನೆಗೊಳಿಸಿ ಮಾರ್ಪಾಡನ್ನುಂಟು ಮಾಡುವ ಕುರಿತು ಭವಿಷ್ಯ ನುಡಿಯುವುದು ಅಸಾಧ್ಯ.

**ಯೋಜನೆ ಮತ್ತು ಅಯೋಜನೆ ಬದಲಾವಣೆ :** ಸಾಮಾಜಿಕ ಬದಲಾವಣೆಯು ಮಾನವ ನಿರ್ಮಿತಗೊಳಿಸಿರುವ

Digitised by Bharatavani, CIIL

ಯೋಜನೆಯನುಸಾರವಾಗಿ ಸಂಭವಿಸುತ್ತದೆ. ಉದಾಹರಣೆಗೆ, ಜನಸಂಖ್ಯಾ ನಿಯಂತ್ರಣ ಉದ್ದೇಶಕ್ಕಾಗಿ ಯೋಜನೆ ಹಮ್ಮಿಕೊಳ್ಳುವುದರಿಂದ ಬದಲಾವಣೆಯುಂಟಾಗುತ್ತದೆ. ಅಯೋಜನೆ ಬದಲಾವಣೆಯು ನೈಸರ್ಗಿಕವಾಗಿ ಸಂಭವಿಸುವ ಬದಲಾವಣೆಯಾಗಿದೆ.

**ಸಾಮಾಜಿಕ ಬದಲಾವಣೆಯ ವಿಧಗಳು**

ಸಮಾಜವು ಹೀನಾವಸ್ಥೆಯನ್ನೂ ಮುಟ್ಟಬಹುದು, ಉನ್ನತ ಸ್ಥಿತಿಗೂ ಏರಬಹುದು. ಸಮಾಜದಲ್ಲಿ ಒಂದು ಘಟಕವು ಬದಲಾದರೆ ಅದರ ಪರಿಣಾಮವು ಇಡೀ ಸಮಾಜದ ಮೇಲಾಗುವುದು. ಸಮಾಜದ ಆರ್ಥಿಕ ಪರಿಸ್ಥಿತಿಯು ಬದಲಾದರೆ ಅದರ ಪರಿಣಾಮವು ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನದ ಮೇಲೆಯೂ ಆಗುವುದು. ಪರಿಸರವು ಬದಲಾದರೆ ಅದರ ಪರಿಣಾಮವು ಸಮಾಜದ ಮೇಲಾಗುವುದು. ಸಾಮಾಜಿಕ ಬದಲಾವಣೆ ಅನೇಕ ವಿಧಗಳಲ್ಲಿ ಉಂಟಾಗಬಹುದು.

**ವ್ಯಕ್ತಿಗಳ ವೈಚಾರಿಕ ಬದಲಾವಣೆ:** ಒಂದು ದೇಶದಲ್ಲಿ ಅಲ್ಲಿಯ ಮಹಾನ್ ವ್ಯಕ್ತಿಗಳು ಸಾಮಾಜಿಕ ಬದಲಾವಣೆಗೆ ಕಾರಣಕರ್ತರಾಗಿರುತ್ತಾರೆ. ತುರ್ಕಸ್ತಾನದಲ್ಲಿ ಮುಸ್ತಾಕ್ ಕೆಮಾಲ ಪಾಷ್‌ನು ಅನೇಕ ಬದಲಾವಣೆಗಳನ್ನು ಮಾಡಿದನು. ಅವನು ಹಳೆಯ ಸಂಪ್ರದಾಯಗಳನ್ನು ಕಿತ್ತು ಹಾಕಿದನು. ತುರ್ಕಸ್ಥಾನವು ಹಿಂದುಳಿದ ದೇಶವಾಗಿತ್ತು. ಅದನ್ನು ಪ್ರಬಲ ದೇಶವನ್ನಾಗಿ ಮಾಡಿದನು. ಅಲ್ಲಿಯ ಸಮಾಜದಲ್ಲಿಯ ಕಂದಾಚಾರ, ಮೂಢನಂಬಿಕೆಗಳನ್ನು ಇಲ್ಲದಂತೆ ಮಾಡಿದನು. ಅವರಲ್ಲಿರುವ ಘೋಷಾಪದ್ಧತಿಯನ್ನು ತೆಗೆದುಹಾಕಿದನು. ತಾಂತ್ರಿಕ ಶಿಕ್ಷಣವನ್ನು ಪ್ರಚಾರದಲ್ಲಿ ತಂದನು. ಫ್ರಾನ್ಸ್‌ದಲ್ಲಿ ರೂಸೋ ಮತ್ತು ವಾಲ್ಟೇರ ತಮ್ಮ ಬರಹಗಳಿಂದ ರಾಜನ ವಿರುದ್ಧವಾಗಿ ಕ್ರಾಂತಿ ಮಾಡುವಂತೆ ಜನರನ್ನು ಬಡಿದೆಬ್ಬಿಸಿದರು. ಇಟಲಿಯಲ್ಲಿ ಮ್ಯಾಝಿನಿಯ ಪ್ರಯತ್ನದಿಂದ ಸ್ವಾತಂತ್ರ್ಯದ ಜ್ಯೋತಿಯು ಪ್ರಜ್ವಲಿಸಿತು. ಕ್ರಿಸ್ತನು ಯಹೂದಿಗಳಲ್ಲಿದ್ದ ಡಂಭಾಚಾರಗಳನ್ನು ಖಂಡಿಸಿ ಮಾನವತಾವಾದವನ್ನು ಪ್ರತಿಪಾದಿಸಿದನು. ಅವನು ಧರ್ಮದಲ್ಲಿ ಕರುಣೆಯೇ ಮುಖ್ಯವಾದದ್ದು ಎಂದು ಪ್ರತಿಪಾದಿಸಿದನು. ರಷ್ಯಾದಲ್ಲಿ ಝಾರನ ವಿರುದ್ಧವಾಗಿ ಲೆನಿನ್ ಕ್ರಾಂತಿಯನ್ನು ಪ್ರಾರಂಭ ಮಾಡಿದನು. ಕಾರ್ಮಿಕರ ರಾಜ್ಯವು ಪ್ರಾರಂಭವಾಯಿತು. ಅಬ್ರಾಹಂ ಲಿಂಕನ್ ಗುಲಾಮರ ವ್ಯಾಪಾರವನ್ನು ನಿಲ್ಲಿಸಿ, ಎಲ್ಲರಿಗೂ ಸಮಾನ ಹಕ್ಕುಗಳನ್ನು ದಯಪಾಲಿಸಿದನು. ಅಂದಿನಿಂದ ಗುಲಾಮರ ವ್ಯಾಪಾರವು ಅಮೆರಿಕೆಯಲ್ಲಿ ನಿಂತಿತು. ಗುಲಾಮರ ವ್ಯಾಪಾರವನ್ನು ತಡೆಯುವುದಕ್ಕೆ ಉತ್ತರ ಮತ್ತು ದಕ್ಷಿಣ ಅಮೆರಿಕೆಯಲ್ಲಿ ಯುದ್ಧವಾಯಿತು. ಅದರಲ್ಲಿ ಲಿಂಕನ್ ಯಶಸ್ವಿಯಾದನು. ಭಾರತದಲ್ಲಿ ಬುದ್ಧ, ಗಾಂಧೀಜಿ ಮೊದಲಾದ ಮಹಾಪುರುಷರು ಮಾಡಿದ ಸಾಮಾಜಿಕ ಕ್ರಾಂತಿ ಸರ್ವರಿಗೂ ತಿಳಿದೇ ಇದೆ. ಮಹಾಪುರುಷರು ಸಮಾಜದಲ್ಲಿ ಬದಲಾವಣೆಗಳನ್ನು ಮಾಡುವರು. ಅವರ ಜೀವನವೇ ಸಮಾಜಕ್ಕೆ ಮಾರ್ಗದರ್ಶನ ಮಾಡುವುದು. ಉಳಿದ ಜನರು ಅವರ ಹಾದಿಯನ್ನು ತುಳಿಯುವರು.

ಕೆಲವು ವಿಚಾರಗಳು ಮಾನವ ಜೀವನವನ್ನು ಬದಲಿಸುವುವು. ಕಾರ್ಲ್‌ಮಾರ್ಕ್ಸ ಸಾಮ್ಯವಾದಿ ತತ್ವಗಳನ್ನು ಬೋಧಿಸಿದನು. ಎಲ್ಲ ಕಾರ್ಮಿಕರು ಒಂದಾಗಿರಿ, ಮನುಷ್ಯರಲ್ಲಿ ಎರಡೇ ವರ್ಗಗಳಿರುವುವು. ಒಂದು ಶ್ರೀಮಂತ ವರ್ಗ, ಎರಡನೆಯದು ಬಡವರು. ಜಗತ್ತಿನಲ್ಲಿ ಬಡವರೇ ಹೆಚ್ಚಾಗಿ ಇರುವುದರಿಂದ ಅವರು ಒಗ್ಗಟ್ಟಾಗಿ ಹೋರಾಡಲು ಅವನು ಕರೆಕೊಟ್ಟನು. ಅವನ ತತ್ವಗಳನ್ನು ಅನುಸರಿಸಿ ಲೆನಿನ್ ರಷ್ಯಾದಲ್ಲಿ ಸಾಮ್ಯವಾದಿ ಸರಕಾರವನ್ನು ಸ್ಥಾಪಿಸಿದನು. ಫ್ರೆಂಚ್ ರಾಜ್ಯಕ್ರಾಂತಿಯ ಪ್ರಭಾವದಿಂದ ಸ್ವಾತಂತ್ರ್ಯ, ವಿಶ್ವಬಂಧುತ್ವ ಉದಯವಾಯಿತು. ಸಮಾಜವಾದಿ ತತ್ವಗಳ ಪ್ರಭಾವದಿಂದ ಸಮಾನತೆಯು ನೆಲೆಗೊಂಡಿತು.

**ಪರಿಸರದಲ್ಲಿ ಬದಲಾವಣೆ :** ನಮ್ಮ ಸುತ್ತಲಿನ ಪರಿಸರವು ನಮ್ಮ ಮೇಲೆ ಪ್ರಭಾವ ಬೀರುವುದು. ನಮ್ಮ ಆಹಾರ, ಉಡುಗೆತೊಡುಗೆ, ಸಂಸ್ಕೃತಿ ಇವು ಅದರಿಂದ ಪ್ರಭಾವಿತವಾಗುವುವು. ಅಫಘಾನಿಸ್ತಾನದ ಜನರು ದೈಹಿಕವಾಗಿ ಬಹಳ ಗಟ್ಟಿಗರು. ಇದಕ್ಕೆ ಅಲ್ಲಿಯ ಪರಿಸರವೇ ಕಾರಣ. ಅವರು ಕಷ್ಟಪಟ್ಟು ದುಡಿಯಬೇಕಾಗುವುದು. ಇಲ್ಲದಿದ್ದರೆ ಅವರಿಗೆ ಆಹಾರವು ದೊರೆಯುವುದಿಲ್ಲ. ಆದ್ದರಿಂದ ಸ್ವಾಭಾವಿಕವಾಗಿ ಅವರು ಕಷ್ಟಸಹಿಷ್ಣುಗಳಾಗಿರುವರು. ಜಪಾನದಲ್ಲಿ ಮೇಲಿಂದ ಮೇಲೆ ಭೂಕಂಪಗಳಾಗುವುವು. ಆದ್ದರಿಂದ ಅವರು ರಟ್ಟಿನ, ಮರದ ಮನೆಗಳನ್ನು ಕಟ್ಟುವರು. ಉತ್ತರ ಪ್ರದೇಶದಲ್ಲಿ ನದಿಗಳಿಗೆ ಆಗಾಗ ಮಹಾಪೂರಗಳು ಬಂದು ಊರೆಲ್ಲ ನೀರಿನಲ್ಲಿ ಮುಳುಗಿ ಹೋಗುತ್ತದೆ. ದನಕರುಗಳು ನಾಶವಾಗುವುವು. ಇದರಿಂದ ಅವರ ಜೀವನವೇ ಬದಲಾಗುವುದು. ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿಯ ಜನರು ತಿಂಗಳ ಆಹಾರವನ್ನು ಸಂಗ್ರಹಿಸುವರು. ಅಲ್ಲಿ ಆರು ತಿಂಗಳು ಹಗಲು ಮತ್ತು ಆರು ತಿಂಗಳು ರಾತ್ರಿ ಇರುವುದು. ಅಲ್ಲಿ ಅತಿ ಶೀತವಿರುವುದರಿಂದ ಅವರು ಯಾವಾಗಲೂ ಚರ್ಮದ ಬಟ್ಟೆಗಳನ್ನು ಧರಿಸುವರು. ಅರಬಸ್ತಾನದಲ್ಲಿಯ ಜನರು ನೀರನ್ನು ಹುಡುಕುತ್ತ ಅಲೆಯುವರು.

ಮಾನವನು ಪರಿಸರಕ್ಕೆ ಹೊಂದಿಕೊಳ್ಳಬೇಕು. ಇಲ್ಲವಾದರೆ ಅವನು ಜೀವಿಸುವುದು ಸಾಧ್ಯವಿಲ್ಲ. ಅವನೂ ಪರಿಸರದಲ್ಲಿ ಬದಲಾವಣೆಗಳನ್ನು ಮಾಡಿರುವನು. ಆದರೂ ಎಲ್ಲ ಸಮಯದಲ್ಲಿ ಅವನು ಪರಿಸರವನ್ನು ಬದಲಿಸಲಾರನು. ಅರಬಸ್ತಾನದಲ್ಲಿ ಏನು ಮಾಡಿದರೂ ನೀರು ದೊರೆಯಲಾರದು. ಅದಕ್ಕಾಗಿ ನೀರನ್ನು ಹುಡುಕಿಕೊಂಡು ಅಲೆಯದೇ ಬೇರೆ ಮಾರ್ಗವಿಲ್ಲ. ಇಸ್ರೇಲ್‌ದಲ್ಲಿ ಯಹೂದಿ ಜನರು ಮರುಭೂಮಿಯನ್ನು ನಂದನವನವನ್ನಾಗಿ ಮಾಡಿರುವರು. ಮಾನವನ ಪ್ರಯತ್ನಕ್ಕೆ ಇದೊಂದು ಉತ್ತಮ ಉದಾಹರಣೆ. ಮರುಭೂಮಿಯಲ್ಲಿ ಅವರು ಹೂವಿನ ಗಿಡಗಳನ್ನು ಬೆಳೆಸುತ್ತಿರುವರು. ಪಟ್ಟಣಗಳು ಹೋಗಿ ಹಳ್ಳಿಗಳಾಗುವುವು. ಹಳ್ಳಿಗಳು ಪಟ್ಟಣಗಳಾಗುವುವು. ಮುಂಬಯಿ ಮೊದಲು ಒಂದು ಮೀನುಗಾರರ ಹಳ್ಳಿ, ಇಂದು ಅದು ಭಾರತದ ಅತಿದೊಡ್ಡ ನಗರಗಳಲ್ಲಿ ಒಂದಾಗಿರುವುದು. ಅದರ ಬೆಳವಣಿಗೆ ಅಲ್ಲಿಯ ಜೀವನವನ್ನು ಬದಲಾಯಿಸುವುದು.

ಮನುಷ್ಯ ಕಾಡುಗಳನ್ನು ನಾಶಮಾಡಿ ಕಟ್ಟಿಗೆಯನ್ನು ಉರುವಲು ಮತ್ತು ಮನೆ ಕಟ್ಟಲು ಉಪಯೋಗಿಸಿದನು. ಇದರಿಂದ ಮಳೆಯು ಕಡಿಮೆಯಾಗಿರುವುದು. ನದಿ, ಕೆರೆಗಳಲ್ಲಿ ನೀರಿಲ್ಲ. ಹಳ್ಳಿ ಪಟ್ಟಣಗಳಲ್ಲಿ ಕಾರಖಾನೆಗಳು ತಲೆ ಎತ್ತಿರುವುವು. ಅವುಗಳ ಕಲ್ಮಷದಿಂದ ನೀರು ದೂಷಿತವಾಗಿ ಅನೇಕ ಸಮಸ್ಯೆಗಳನ್ನು ನಿರ್ಮಿಸಿರುವುದು. ಹಳ್ಳಿಯಲ್ಲಿಯ ಜನರು ಪಟ್ಟಣಗಳನ್ನು ಸೇರುತ್ತಿರುವುದರಿಂದ ಅಲ್ಲಿ ವಸತಿ ಸಮಸ್ಯೆಯು ಭೀಕರವಾಗಿರುವುದು. ಕಾರಖಾನೆಗಳು ದೂಷಿತವಾದ ಹವೆಯನ್ನು ಬಿಡುವುದರಿಂದ ಅಲ್ಲಿಯ ಜನರ ಆರೋಗ್ಯದ ಮೇಲೆ ಅಡ್ಡ ಪರಿಣಾಮವಾಗಿರುವುದು. ಸೃಷ್ಟಿಯಲ್ಲಿರುವ ಸಮತೋಲನವನ್ನು ನಾವು ಕಾಯ್ದುಕೊಳ್ಳದಿದ್ದರೆ ನಾವು ವಿನಾಶದ ಹಾದಿಯನ್ನು ಹಿಡಿಯಬೇಕಾಗುವುದು.

**ಸಂಸ್ಕೃತಿಯ ಬದಲಾವಣೆ :** ಭಾರತದ ಮೂಲ ನಿವಾಸಿಗಳು ಆರ್ಯರ ಪ್ರಭಾವಕ್ಕೆ ಒಳಗಾದವರು. ಇದರಿಂದ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಸಂಗಮವಾಯಿತು. ಅವುಗಳ ಸಂಗಮದಿಂದ ಭಾರತೀಯ ಸಂಸ್ಕೃತಿಯು ನಿರ್ಮಾಣವಾಯಿತು. ಆರ್ಯರು ಪ್ರಬಲರಾದ್ದರಿಂದ ಅವರ ಸಂಸ್ಕೃತಿಯ ಪ್ರಭಾವವು ವಿಶೇಷವಾಯಿತು. ಇದರಿಂದಾಗಿ ಆರ್ಯರಲ್ಲಿ ಮತ್ತು ದ್ರಾವಿಡರಲ್ಲಿ ಬದಲಾವಣೆಗಳಾದವು. ಯುರೋಪಿಯನ್ ಸಂಸ್ಕೃತಿಯು ರೋಮ, ಗ್ರೀಸ್ ದೇಶದ ಸಂಸ್ಕೃತಿಗಳಿಂದ ಪ್ರಭಾವಿತವಾಗಿರುವುದು.

Digitised by Bharatavani, CIIL

ಅವರು ಅರಬರಿಂದ ಅಂಕಿಗಳನ್ನು ಕಲಿತರು. ಈ ಅಂಕಿಗಳನ್ನು ಅರಬರು ಭಾರತೀಯರಿಂದ ಕಲಿತರು. ಭಾರತವು ಇಸ್ಲಾಂ ಮತ್ತು ಯುರೋಪಿಯನ್ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿರುವುದು. ನಮ್ಮ ಶಿಲ್ಪಕಲೆ, ವಾಸ್ತು ಶಿಲ್ಪ ಇಸ್ಲಾಂ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಯಿತು. ಇಂಗ್ಲಿಷರ ಸಂಪರ್ಕದಿಂದ ನಮ್ಮ ವೇಷಭೂಷಣಗಳು, ರೀತಿ ನೀತಿಗಳು, ಜೀವನ ದೃಷ್ಟಿ ಬದಲಾಯಿತು. ನಮ್ಮಲ್ಲಿಯ ಜಾತಿ ಜಾತಿಗಳಲ್ಲಿ ಸಂಪರ್ಕ ಉಂಟಾಯಿತು. ಮೂಢ ನಂಬಿಕೆಗಳು ಇಲ್ಲದಂತಾದವು. ಬಾಲ್ಯವಿವಾಹ ಪದ್ಧತಿಯು ಮಾಯವಾಯಿತು. ಸ್ತ್ರೀಯರಿಗೆ ಸಮಾನ ಹಕ್ಕುಗಳು ದೊರೆತವು. ಅಸ್ಪೃಶ್ಯತೆಯು ಸಮಾಜದಿಂದ ದೂರವಾಗಿದೆ. ಹಳ್ಳಿಯಲ್ಲಿಯೂ ಜನರು ರೋಗ ಬಂದರೆ ದೇವರ ಕಾಟವೆಂದು ತಿಳಿಯದೇ ಔಷಧಗಳನ್ನು ತೆಗೆದುಕೊಳ್ಳಲು ಡಾಕ್ಟರರ ಕಡೆಗೆ ಬರುವರು. ಮಂತ್ರ ಮಾಟಗಳ ಪ್ರಭಾವ ಕಡಿಮೆಯಾಗಿದೆ. ಭಾರತೀಯ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಯಲ್ಲಿಯ ಕೆಲವು ಒಳ್ಳೆಯ ಅಂಶಗಳನ್ನು ಸ್ವೀಕರಿಸಿದೆ. ನಮ್ಮಲ್ಲಿ ವೈಜ್ಞಾನಿಕ ದೃಷ್ಟಿಯು ಉದಯವಾಗಿರುವುದರಿಂದ ನಮ್ಮ ಜೀವನದಲ್ಲಿ ಬದಲಾವಣೆಗಳಾಗಿರುವುವು.

**ವಿಜ್ಞಾನದ ಮತ್ತು ತಂತ್ರಜ್ಞಾನ ಬದಲಾವಣೆ :** ಆಧುನಿಕ ಯುಗವನ್ನು ವೈಜ್ಞಾನಿಕ ಯುಗವೆಂದು ಹೇಳಬಹುದು. ವಿಜ್ಞಾನದ ಸಹಾಯದಿಂದ ಮಾನವನ ಸುಖ ಸಾಧನಗಳು ಹೆಚ್ಚಾಗಿರುವುವು. ಅವನು ವಿದ್ಯುತ್ತಿನ ಸಹಾಯದಿಂದ ತನ್ನ ಜೀವನವನ್ನು ಸುಖಮಯವನ್ನಾಗಿ ಮಾಡಿರುವನು. ಅವನು ಆಯಾಸವಿಲ್ಲದೆ ತನ್ನ ಬೇಡಿಕೆಗಳನ್ನು ಪೂರೈಸಿಕೊಳ್ಳಬಲ್ಲನು. ಸಂಚಾರ ಸಾಧನೆಗಳು ಪ್ರವಾಸವನ್ನು ಸುಖಕರವನ್ನಾಗಿ ಮಾಡಿವೆ. ಜನರಲ್ಲಿ ಸಂಪರ್ಕವು ಹೆಚ್ಚಾಗಿರುವುದು. ಮಾನವನು ಯಂತ್ರಗಳ ಸಹಾಯದಿಂದ ಬಟ್ಟೆಗಳನ್ನು ತಯಾರಿಸುವನು. ಮೋಟಾರು ಸಾಯಕಲ್, ರೇಡಿಯೋ, ದೂರದರ್ಶನ, ಗಣಕಯಂತ್ರಗಳನ್ನು ನಿರ್ಮಿಸಿರುವನು. ಯುರೋಪಿನಲ್ಲಿ ಕಳೆದ ಶತಮಾನದಲ್ಲಿ ಔದ್ಯೋಗಿಕ ಕ್ರಾಂತಿಯಾಯಿತು. ಇದರಿಂದ ಕಾರಖಾನೆಗಳು ಸ್ಥಾಪಿಸಲ್ಪಟ್ಟವು. ಹೊಸ ಹೊಸ ನಗರಗಳು ನಿರ್ಮಾಣವಾದವು. ಹಳ್ಳಿಗಳಿಂದ ಜನರು ಕಾರಖಾನೆಗಳಿಗೆ ದುಡಿಯಲು ಬಂದರು. ತಂತ್ರಜ್ಞಾನದಲ್ಲಿ ಪ್ರಗತಿಯಾದ್ದರಿಂದ ಹೊಸ ಹೊಸ ಕಾರಖಾನೆಗಳು ತಲೆ ಎತ್ತಿದವು. ಬಾನುಲಿ, ದೂರದರ್ಶನಗಳು ಜನರ ಜೀವನವನ್ನೇ ಬದಲಿಸಿರುವುವು. ಯಂತ್ರಗಳನ್ನು ಬಳಸುವುದರಿಂದ ಮಾನವನಿಗೆ ಹೆಚ್ಚಿನ ವಿರಾಮ ದೊರೆತಿರುವುದು. ವಿಜ್ಞಾನಿಗಳು ಅಣುಶಕ್ತಿಯನ್ನು ಕಂಡುಹಿಡಿದಿದ್ದಾರೆ. ಇದರ ಸಹಾಯದಿಂದ ವಿದ್ಯುತ್ತನ್ನು ನಿರ್ಮಿಸಬಹುದು, ಕಾರಖಾನೆಗಳನ್ನು ನಡೆಸಬಹುದು.

ರೋಗಗಳಿಗೆ ಪ್ರತಿಬಂಧಕ ಔಷಧಗಳನ್ನು ತಯಾರಿಸಲಾಗಿದೆ. ಇದರಿಂದ ಪ್ಲೇಗು, ಕಾಲರಾ, ಮಲೇರಿಯಾ ಮುಂತಾದ ರೋಗಗಳು ಕಾಣದಂತಾದವು. ಮನುಷ್ಯನ ಆಯುಷ್ಯವು ವೃದ್ಧಿಯಾಗಿರುವುದು. ಇಂದು ಮನುಷ್ಯರು ಎಂಬತ್ತು ವರ್ಷದವರೆಗೆ ಆರೋಗ್ಯದಿಂದ ಕೆಲಸ ಮಾಡುತ್ತ ಇರಬಹುದು. ಮಕ್ಕಳ ಮರಣ ಸಂಖ್ಯೆಯ ಕಡಮೆಯಾಗಿರುವುದು. ಇದರಿಂದ ನಮ್ಮ ದೇಶದ ಜನಸಂಖ್ಯೆ ವಿಪರೀತವಾಗಿ ಬೆಳೆಯುತ್ತಿರುವುದು. ನಮ್ಮ ಜನಸಂಖ್ಯೆಯು ನಾಗಾಲೋಟದಿಂದ ಬೆಳೆಯುತ್ತಿರುವುದರಿಂದ ನಾವು ಎಷ್ಟು ಯೋಜನೆಗಳನ್ನು ಮಾಡಿದರೂ ಅದರ ಪ್ರಯೋಜನವಾಗುತ್ತಿಲ್ಲ. ಸರಕಾರದವರು ಜನಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಅನೇಕ ಯೋಜನೆ ಕೈಗೊಂಡಿರುವರು. ವಿಜ್ಞಾನದ ಸಹಾಯದಿಂದ ನಾವು ನಮ್ಮ ಜನಸಂಖ್ಯೆಗೆ ಕಡಿವಾಣವನ್ನು ಹಾಕಬಲ್ಲೆವು.

**ಸರಕಾರದ ಯೋಜನೆ ಮತ್ತು ನೀತಿ ನಿಯಮಗಳಲ್ಲಿ ಬದಲಾವಣೆ:** ಸರಕಾರವು ಸಮಾಜದಲ್ಲಿ ಬದಲಾವಣೆಯನ್ನು ಮಾಡಬಲ್ಲದು. ನಮ್ಮಲ್ಲಿ ಸತಿ ಸಹಗಮನ ಪದ್ಧತಿಯು ಬಳಕೆಯಲ್ಲಿತ್ತು. ರಾಜಾರಾಮಮೋಹನರಾಯರು ಈ ಪದ್ಧತಿಯನ್ನು ವಿರೋಧಿಸಿ ಜನರಲ್ಲಿ ಜಾಗೃತಿಯನ್ನುಂಟು ಮಾಡಿದರು. ಲಾರ್ಡ್‌ಬೆಂಟಿಂಕ್ ಕಾಯ್ದೆಯನ್ನು ಮಾಡಿ ಸತಿ ಸಹಗಮನ ಪದ್ಧತಿಯನ್ನು ತಡೆದನು. ಜನರ ಬೆಂಬಲವಿಲ್ಲದೆ ಬರಿಯ ಕಾಯ್ದೆಯಿಂದ ಯಾವದೇ ಬದಲಾವಣೆ ಸಾಧ್ಯವಿಲ್ಲ. ಅಮೇರಿಕೆಯಲ್ಲಿ ಮದ್ಯಪಾನ ನಿಷೇಧಿಸಿದರು. ಆದರೆ ಅಲ್ಲಿಯ ಜನರು ಅದಕ್ಕೆ ಬೆಂಬಲ ಕೊಡದಿದ್ದರಿಂದ ಅದು ನಿಷ್ಫಲವಾಯಿತು. ನಮ್ಮ ದೇಶದಲ್ಲಿಯೂ ಮದ್ಯಪಾನ ನಿರ್ಬಂಧ ಕಾಯ್ದೆಯು ಯಶಸ್ವಿಯಾಗಲಿಲ್ಲ. ಸರಕಾರವು ಕಾಯ್ದೆ ಮಾಡಬಹುದು ಆದರೆ ಜನರು ಅದನ್ನು ಪಾಲಿಸಬೇಕಲ್ಲವೆ? ಜನರ ಸಹಕಾರವಿಲ್ಲದೆ ಯಾವ ಕಾಯ್ದೆಯೂ ಯಶಸ್ವಿಯಾಗಲಾರದು. ಸರಕಾರವು ಲಂಚ ಸ್ವೀಕರಿಸುವುದು ಅಪರಾಧವೆಂದು ಸಾರಿರುವರು. ಆದರೆ ನಮ್ಮಲ್ಲಿ ಲಂಚಗುಳಿತನವು ಮುಗಿಲು ಮುಟ್ಟಿರುವುದು.

ಸರಕಾರವು ಅನೇಕ ದೇಶಗಳಲ್ಲಿ ಕಾಯ್ದೆಯನ್ನು ಮಾಡಿ ಮಕ್ಕಳನ್ನು ಕಾರಖಾನೆಗಳಲ್ಲಿ ದುಡಿಸಿಕೊಳ್ಳುವುದು ಅಪರಾಧವೆಂದು ಸಾರಿದೆ. ಆದ್ದರಿಂದ ಕಾರಖಾನೆಗಳಲ್ಲಿ ಮಕ್ಕಳಿಂದ ದುಡಿಸಿಕೊಳ್ಳುವುದು ಕಡಿಮೆಯಾಗಿದೆ. ಕೂಲಿಕಾರರ ಸಂಬಳ ಮತ್ತು ಕ್ಷೇಮನಿಧಿಗಳನ್ನು ಗೊತ್ತುಮಾಡಲಾಗಿದೆ. ಆದ್ದರಿಂದ ಕೂಲಿಕಾರರಿಗೆ ಸೇವಾ ಭದ್ರತೆಯು ದೊರೆತಿರುವುದು. ಸರಕಾರವು ಕಾಯ್ದೆಗಳ ಮುಖಾಂತರ ಸಮಾಜದಲ್ಲಿ ಪರಿವರ್ತನೆಯನ್ನು ಮಾಡಬಹುದು.

**ಜೈವಿಕ ಬದಲಾವಣೆ:** ಮನುಷ್ಯನು ಅನುವಂಶಿಕವಾಗಿ ಹಲವು ಗುಣಗಳನ್ನು ಪಡೆಯುವನು. ಅಮೇರಿಕೆಯಲ್ಲಿ ಅನುವಂಶಿಕ ಗುಣಗಳ ಬಗ್ಗೆ ವಿಜ್ಞಾನಿಗಳು ಸಂಶೋಧನೆ ನಡೆಸಿ ಪರಿಸರದ ಪ್ರಭಾವ ಅರ್ಧ ಮತ್ತು ಅನುವಂಶಿಕ ಪ್ರಭಾವ ಅರ್ಧ ಇರುವುದೆಂದು ಕಂಡು ಹಿಡಿದಿರುವರು. ಆದರೆ ತಂದೆ ತಾಯಿಗಳನ್ನು ಮಕ್ಕಳು ಪೂರ್ಣವಾಗಿ ಹೋಲುವುದಿಲ್ಲ. ತಂದೆ ತಾಯಿಗಳ ಮಕ್ಕಳು ಎಲ್ಲರೂ ಒಂದೇ ರೀತಿಯಾಗಿ ಇರುವುದಿಲ್ಲ. ಬುದ್ಧಿಯಲ್ಲಿಯೂ, ಸ್ವಭಾವದಲ್ಲಿಯೂ ಅವರು ಬೇರೆ ಬೇರೆಯಾಗಿರುವರು. ಅವರು ತಮ್ಮ ವಂಶದಲ್ಲಿಯ ಪೂರ್ವಜರ ಗುಣ ಸ್ವಭಾವಗಳನ್ನು ಪಡೆಯಬಹುದು. ಬೇರೆ ಬೇರೆ ಜಾತಿಗಳಲ್ಲಿ ವಿವಾಹವಾದರೆ ಸಮಾಜವು ಪರಿವರ್ತನೆಗೊಳ್ಳುವುದು.

**ಸಾಮಾಜಿಕ ಬದಲಾವಣೆಯ ನಿಯೋಗಗಳು:** ಮನೆ, ಶಾಲೆ ಮತ್ತು ಸಮಾಜ, ಸಾಮಾಜಿಕ ಬದಲಾವಣೆಯ ನಿಯೋಗಗಳಾಗಿವೆ. ಇವು ಒಂದಕ್ಕೊಂದು ನಿಕಟ ಸಂಬಂಧ ಹೊಂದಿವೆ. ಮನೆಯು ಮೊದಲ ಪಾಠಶಾಲೆ, ತಾಯಿ ಮೊದಲ ಗುರು ಎಂಬ ಹೇಳಿಕೆಯಂತೆ ಮನೆಯು ಶಾಲೆ ಮತ್ತು ಸಮಾಜಕ್ಕೆ ಅಡಿಪಾಯವನ್ನು ಹಾಕುತ್ತದೆ. ಸಮಾಜ ಸಂಕೀರ್ಣವಾಗಿಲ್ಲದ ಕಾಲದಲ್ಲಿ ಮನೆಯೆ ಶಿಕ್ಷಣದ ಪ್ರಮುಖ ಪ್ರತಿನಿಧಿಯಾಗಿತ್ತು. ಮನೆಯಲ್ಲಿ ಆಚಾರ ವಿಚಾರ, ಸಂಪ್ರದಾಯ, ಹಬ್ಬ ಹರಿದಿನ, ಉಡುಗೆ ತೊಡುಗೆಗಳಲ್ಲಿ ಆಗುವ ಬದಲಾವಣೆ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ.

**ಸಾಮಾಜಿಕ ಬದಲಾವಣೆಯಲ್ಲಿ ಶಾಲೆಯ ಪಾತ್ರ**

- ಸಾಮಾಜಿಕ ಬದಲಾವಣೆಯನ್ನು ತೀವ್ರಗೊಳಿಸಲು ಅನುಕೂಲವಾಗುವಂತೆ ಶಾಲಾ ಕಾಲೇಜುಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಾಗುವ ಬದಲಾವಣೆಗಳನ್ನು, ವಿದ್ಯಾರ್ಥಿಗಳಿಗೆ ಒದಗಿಸುವುದು ಯೋಗ್ಯ. ಜಗತ್ತಿನ ಎಲ್ಲ ಭಾಗಗಳಲ್ಲಿಯೂ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ವಿವರಗಳನ್ನು ಕೊಡಬೇಕು. ವಿವಿಧ ದೇಶಗಳಲ್ಲಿಯ ಬದಲಾವಣೆಯ ಒಳ್ಳೆಯ ಪ್ರಭಾವವು ನಮ್ಮ ಯುವಕರ ಮೇಲಾಗಬೇಕು.

Digitised by Bharatavani, CIIL

- ವೈಜ್ಞಾನಿಕ ಬದಲಾವಣೆಗಳ ಜೊತೆಗೆ ಸಮಾಜ ವಿಜ್ಞಾನಗಳಲ್ಲಿಯೂ ನಡೆದ ಸಂಶೋಧನೆಗಳ ಬಗ್ಗೆ ಅಥವಾ ಹೊಸ ಸಂಗತಿಗಳ ಬಗ್ಗೆ ತಿಳುವಳಿಕೆಯು ಸಾಮಾಜಿಕ ಬದಲಾವಣೆಗೆ ಸಹಾಯಕವಾಗಬಲ್ಲದು. ಇತಿಹಾಸ, ಧರ್ಮ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದವುಗಳ ಅಭ್ಯಾಸ ಬೆಳೆಯಬೇಕು. ದೇಶದ ಸಮಸ್ಯೆಗಳಿಗೆ ಜನರು ಸರಿಯಾಗಿ ಸ್ಪಂದಿಸುವಂತೆ ಅವರ ಮನಸ್ಸನ್ನು ಇವು ಬದಲಾಯಿಸಬಲ್ಲವು. ದೇಶದಲ್ಲಿ ಜನಸಂಖ್ಯೆಯು ಸ್ಫೋಟವಾಗುವ ಗತಿಯಲ್ಲಿ ಬೆಳೆಯುತ್ತಿದೆ. ಇದು ಅಭಿವೃದ್ಧಿಗೆ ಆಂತಕಕಾರಿ, ಗಂಡಾಂತರಕಾರಿ ಎಂಬುದನ್ನು ಮನದಟ್ಟಾಗುವಂತೆ ಈ ವಿಷಯಗಳು ತಿಳಿಸುತ್ತವೆ. ಇದರಿಂದ ಜನರು ತಮ್ಮ ಮನಸ್ಸು ಬದಲಾಯಿಸಿ ಚಿಕ್ಕಕುಟುಂಬ ಹೊಂದುವುದರಲ್ಲಿ ತೃಪ್ತಿ ಪಡೆಯಬಯಸುತ್ತಾರೆ, ಆದಕಾರಣ ಸಮಾಜಶಾಸ್ತ್ರಗಳ ಪರಿಚಯ ಶಾಲೆಯಲ್ಲಾಗಬೇಕು.

- ವೃತ್ತಿ ಶಿಕ್ಷಣದ ವ್ಯವಸ್ಥೆಯಾಗಬೇಕು. ಬದಲಾದ ವ್ಯವಸ್ಥೆಗೆ ಹೊಂದುವಂತಹ ಹೊಸ ಹೊಸ ಉದ್ಯೋಗ ಕೈಕೊಳ್ಳಲುಬೇಕಾದ ತರಬೇತಿ ಕೊಡುವುದು ಅವಶ್ಯ. ಅಂದರೆ ಮಾತ್ರ ಜನರು ಹೊಸತನವನ್ನು ಒಪ್ಪಿಕೊಳ್ಳುತ್ತಾರೆ. ಇದರ ಜೊತೆಗೆ ವೃತ್ತಿ ಮಾರ್ಗದರ್ಶನದ ವ್ಯವಸ್ಥೆಯಾಗಬೇಕು.

- ವಿದ್ಯಾರ್ಥಿಗಳ ವರ್ತನೆಯು ಬದಲಾವಣೆಗೊಳ್ಳಬೇಕು. ಹೊಸತನವನ್ನು ಸ್ವೀಕರಿಸಬೇಕು. ಸಂಪ್ರದಾಯಗಳನ್ನು, ಗೊಡ್ಡು ವಿಚಾರಗಳನ್ನು, ಹಳೆಯ ರೂಢಿಗಳನ್ನು ಬಿಟ್ಟು ಕೊಡಲು ತಯಾರಾಗುವಂತೆ ಶಾಲೆಯು ಅವರಲ್ಲಿ ಮನಸ್ಸಿನ ಪರಿವರ್ತನೆ ಮಾಡಬೇಕು. ಇದಕ್ಕೆ ಅನುಕೂಲವಾದ ಕಾರ್ಯಕ್ರಮಗಳನ್ನು ನಡೆಸುವುದು ನಿಯಮಿತವಾಗಬೇಕು.

- ಶಾಲೆಯು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಬೇಕು. ಸಂಪ್ರದಾಯಗಳ ವಿರುದ್ಧ ಹೋರಾಡಲು ಧೈರ್ಯ, ಸಾಹಸ, ಜಾಣತನಗಳೆಲ್ಲಬೇಕು. ಇವು ಒಳ್ಳೆಯ ನಾಯಕರಲ್ಲಿರಬೇಕಾದ ಗುಣಗಳು. ಆದ್ದರಿಂದ ನಾಯಕತ್ವದ ಗುಣಗಳನ್ನು ಶಾಲೆಯು ಬೆಳೆಸಿದರೆ ಸಾಮಾಜಿಕ ಬದಲಾವಣೆಯು ತೀವ್ರಗೊಳ್ಳಲು ಅನುಕೂಲವಾಗುತ್ತದೆ.

- ಬದಲಾವಣೆಯಿಂದ ಶಾಲೆಯುಲ್ಲಿ ಎಲ್ಲವೂ ಹಾರಿ ಹೋಗುವುದು ಸರಿಯಲ್ಲ. ನಮ್ಮ ಹಿರಿಯರಿಂದ ಬಂದ ಜೀವನದ ಅನೇಕ ಮೌಲ್ಯಗಳು ನಮ್ಮ ಬಾಳು ನೆಮ್ಮದಿಯದಾಗಿರಲು ಸಹಾಯ ಮಾಡುತ್ತವೆ. ದಯೆ, ಪರೋಪಕಾರ, ಅಹಿಂಸೆ, ಸತ್ಯ ಮುಂತಾದವುಗಳಿಗೆ ಎಂದೂ ಮುಪ್ಪಿಲ್ಲ. ಅವನ್ನು ಬಿಟ್ಟು ಹೊಸತನಕ್ಕೆ ಹೋಗುವುದರಲ್ಲಿ ಅರ್ಥವಿಲ್ಲ. ಕಾರಣ ಶಾಲೆಯು ಅಂಥ ಮೌಲ್ಯಗಳನ್ನು ಕಾಪಾಡುವ ಕೆಲಸ ಮಾಡಬೇಕು.

**ಸಾಮಾಜಿಕ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರ :** ಸಾಮಾಜಿಕ ಬದಲಾವಣೆಗೂ ಶಿಕ್ಷಣಕ್ಕೂ ನಿಕಟ ಸಂಬಂಧವಿದೆ. ಆ ಸಂಬಂಧವನ್ನು ಮೂರು ವಿಧದಲ್ಲಿ ಕಾಣಬಹುದು.

**ಶಿಕ್ಷಣವು ಸಾಮಾಜಿಕ ಬದಲಾವಣೆಗೆ ಅವಶ್ಯಕ :** ಶಿಕ್ಷಣವಿಲ್ಲದೆ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ. ಈ ಅರ್ಥದಲ್ಲಿ ಮೊದಲು ಶಿಕ್ಷಣ ನಂತರ ಸಾಮಾಜಿಕ ಬದಲಾವಣೆ ಎಂಬುದು ತಜ್ಞರ ಅಭಿಪ್ರಾಯ, ಅನೇಕ ಪ್ರದೇಶಗಳಲ್ಲಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡರು ಅವು ಪರಿಣಾಮಕಾರಿಯಾಗಿ ಕಾರ್ಯ ರೂಪಕ್ಕೆ ಬರಲಿಲ್ಲ, ಶಿಕ್ಷಣದ ಕೊರತೆಯೇ ಇದಕ್ಕೆಲ್ಲ ಕಾರಣ. ಶಿಕ್ಷಣವು ಜನರ ವರ್ತನೆ ಮತ್ತು ಭಾವನೆಗಳನ್ನು ಪರಿವರ್ತಿಸುತ್ತದೆ. ಇದರಿಂದಾಗಿ ಜನರಲ್ಲಿ ಬದಲಾವಣೆಯ ಬಯಕೆ ಮೂಡುತ್ತದೆ. ಇತ್ತೀಚಿನ ಘಟನೆಗಳು, ವೈಜ್ಞಾನಿಕ ಸುಧಾರಣೆಗಳು ಮತ್ತು ಸಾಂಸ್ಕೃತಿಕ ವಿಚಾರಗಳೆಲ್ಲ ಶಿಕ್ಷಣದಿಂದಾಗಿಯೇ ಜನರಲ್ಲಿ ಪಸರಿಸಲ್ಪಡುತ್ತವೆ. ಇದರಿಂದ ಜನ ಜಾಗೃತಿಯಾಗುತ್ತದೆ. ಹೊಸದನ್ನು ತಮ್ಮಲ್ಲಿಯೂ ಮೈಗೂಡಿಸಿಕೊಳ್ಳಬೇಕೆಂಬ ಭಾವನೆಯು ಬಲಗೊಳ್ಳುತ್ತದೆ. ಆದ್ದರಿಂದಲೇ ಶಿಕ್ಷಣ ತಜ್ಞರು, ಯೋಜಕರು ಮತ್ತು ರಾಜಕೀಯ ನಾಯಕರುಗಳೆಲ್ಲ ಸಮಾಜದಲ್ಲಿ ಬದಲಾವಣೆ ತರಲು ಶಿಕ್ಷಣ ಅವಶ್ಯವೆಂಬುದನ್ನು ಖಚಿತಪಡಿಸಿದ್ದಾರೆ. ಅದಕ್ಕಾಗಿಯೇ ಶಿಕ್ಷಣ ವ್ಯವಸ್ಥೆಯ ವಿಸ್ತರಣೆ ತೀವ್ರಗತಿಯಿಂದ ನಡೆಯುತ್ತದೆ. ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ತಾಂತ್ರಿಕ ಸಂಸ್ಥೆ, ಸಂಶೋಧನಾ ಸಂಸ್ಥೆಗಳ ಸಂಖ್ಯೆಯು ಬೆಳೆಯುತ್ತದೆ. ಸೇವೆಯಲ್ಲಿರುವ ಶಿಕ್ಷಕರಿಗೆ ಹೊಸ ಹೊಸ ವಿಷಯಗಳ ಬಗ್ಗೆ ತಿಳುವಳಿಕೆ ಕೊಡಲಾಗುವುದು. ಶಿಕ್ಷಣದ ವೆಚ್ಚವೂ ಕಡಿಮೆಯಾಗಿದೆ. ಇದೆಲ್ಲ ಬದಲಾವಣೆಗಾಗಿಯೇ ನಡೆದ ತಯಾರಿ. ಇದರ ಪರಿಣಾಮವಾಗಿಯೇ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ವಿಚಾರವು ಎಲ್ಲ ವರ್ಗದ ಪಾಲಕರಲ್ಲಿಯೂ ಮೂಡಿದೆ. ಬಡವರು, ಗ್ರಾಮೀಣ ಜನರು, ಹಿಂದುಳಿದವರು ಮುಂತಾಗಿ ಎಲ್ಲರೂ ಶಿಕ್ಷಣ ಪಡೆಯಲು ಹಾತೊರೆಯುತ್ತಿರುತ್ತಾರೆ. ಇದರಿಂದಾಗಿ ಸಾಮಾಜಿಕ ಬದಲಾವಣೆಯು ತೀವ್ರಗೊಳ್ಳುವುದು ಸಾಧ್ಯವಾಗುತ್ತದೆ.

**ಶಿಕ್ಷಣವು ಸಾಮಾಜಿಕ ಬದಲಾವಣೆಯ ಸಾಧನ:** ಸಮಾಜವು ಸುಧಾರಣೆ ಮತ್ತು ಪ್ರಗತಿಯನ್ನು ಬಯಸುವುದು ಸಹಜ ಆದರೆ ಈ ಉದ್ದೇಶವನ್ನು ಈಡೇರಿಸಿಕೊಳ್ಳಲು ಕೆಲವು ಸಾಧನಗಳು ಅವಶ್ಯ. ಅವುಗಳಲ್ಲಿ ಅತಿ ಮುಖ್ಯವಾದುದೇ ಶಿಕ್ಷಣ. ಶಿಕ್ಷಣವು ಜ್ಞಾನ, ತರಬೇತಿ, ಕುಶಲತೆ ಮುಂತಾದವುಗಳನ್ನು ಕೊಡಬಲ್ಲುದು. ಅದರ ಜೊತೆಗೆ ಅನೇಕ ಹಳೆಯ ಮೂಢನಂಬಿಕೆಗಳು ಮತ್ತು ನಿರುಪಯುಕ್ತ ವಿಚಾರಗಳು ಪ್ರಗತಿಗೆ ಅಡ್ಡ ಬರುತ್ತವೆ. ಅವನ್ನೆಲ್ಲ ಶಿಕ್ಷಣವೆಂಬ ಅಸ್ತ್ರವು ತೊಡೆದುಹಾಕುತ್ತದೆ. ಜನರು ವಿಚಾರಪರರಾಗಲು ಅವರನ್ನು ಪ್ರೇರೇಪಿಸುತ್ತದೆ. ಗಾಂಧೀಜಿಯವರು ಹೇಳಿದಂತೆ ಬಹಳಷ್ಟು ಜನರ ಹಿಂದುಳಿಯುವಿಕೆ ಮತ್ತು ಬಡತನಕ್ಕೆ ಅವರಲ್ಲಿ ಹೆಚ್ಚಿರುವ ಅನಕ್ಷರತೆ ಮತ್ತು ಅಜ್ಞಾನಗಳೇ ಕಾರಣ. ಈ ವಿಷವರ್ತುಲದಿಂದ ಅವರೆಲ್ಲ ಹೊರಬರಲು ಶಿಕ್ಷಣವು ನೆರವಾಗಬಲ್ಲದು. ಗಾಂಧೀಜಿಯವರ ಆಶ್ರಮಕ್ಕೆ ಹೋಗಿ ಬಂದವರಿಗೆ ಈ ದಿಸೆಯಲ್ಲಿ ಸಂಪೂರ್ಣ ಮನವರಿಕೆಯಾಗಿದೆ. ಅದರಂತೆ ಬ್ರಹ್ಮ ಸಮಾಜ, ಆರ್ಯ ಸಮಾಜ, ರಾಮಕೃಷ್ಣ ಮಿಶನ್, ಕ್ರೈಸ್ತ ಸಂಸ್ಥೆಗಳು ಮತ್ತು ಇತರ ಧಾರ್ಮಿಕ ಸಂಸ್ಥೆಗಳೆಲ್ಲವೂ ಬದಲಾವಣೆ ತರಲು ಶಿಕ್ಷಣವನ್ನೇ ಪ್ರಮುಖ ಸಾಧನವನ್ನಾಗಿ ಬಳಸಿದವು. ಆದ್ದರಿಂದ ಅವುಗಳ ಕೆಲಸ ಬಹಳ ಪರಿಣಾಮಕಾರಿಯಾಯಿತು. ಅನೇಕ ಪಂಡಿತರು, ಪರಿಣಿತರು, ನಾಯಕರು ಇಂಥ ಸಂಸ್ಥೆಗಳಿಂದಲೇ ಬಂದಿದ್ದಾರೆ. ಇಂದು ಶಿಕ್ಷಣ ಪಡೆದವರ ಸಂಖ್ಯೆಯು ಸಾಕಷ್ಟು ಬೆಳೆದಿದೆ. ಆದರೆ ಅವು ಸಾಮಾಜಿಕ ಬದಲಾವಣೆಯನ್ನು ತರಬಲ್ಲ ಸಾಧನಗಳೆಂಬುದನ್ನು ಅವರು ತಿಳಿದುಕೊಂಡಿಲ್ಲ. ಆ ಕಾರ್ಯಕ್ರಮದತ್ತ ಗಮನಹರಿಸುತ್ತಿಲ್ಲ. ಶಾಲೆಗಳು ತಮ್ಮ ಈ ಜವಾಬ್ದಾರಿಯನ್ನರಿತು ಕಾರ್ಯ ಮಾಡಿದರೆ ಅವು ಬಹು ಪರಿಣಾಮಕಾರಿಯಾಗಿ ಕಾರ್ಯ ಮಾಡಬಲ್ಲವು.

**ಶಿಕ್ಷಣವು ಸಾಮಾಜಿಕ ಬದಲಾವಣೆಯ ಪರಿಣಾಮ:** ಶಿಕ್ಷಣವು ಸಾಮಾಜಿಕ ಬದಲಾವಣೆಯ ಪರಿಣಾಮವೂ ಹೌದು. ಅಂದರೆ ಯಾವ ದಿಸೆಯಲ್ಲಿ ಬದಲಾವಣೆ ಸಾಗಿದೆಯೋ ಆ ಕ್ಷೇತ್ರಕ್ಕೆ ಸಂಬಂಧಿಸಿದ ಶಿಕ್ಷಣ ಪಡೆಯಲು ಜನರು ಪ್ರಯತ್ನಿಸುತ್ತಾರೆ. ಔದ್ಯಮಿಕ ಕ್ರಾಂತಿಯ ನಂತರ ತಾಂತ್ರಿಕ ಶಿಕ್ಷಣದತ್ತ ಜನರ ಒಲವು ಹೆಚ್ಚಿದುದರಿಂದ ಇಂದು ಅವರು ಕಂಪ್ಯೂಟರ್ ಶಿಕ್ಷಣ ಪಡೆಯಲು ಹಾತೊರೆಯುತ್ತಿದ್ದಾರೆ. ಯೋಗಾಭ್ಯಾಸವು ಆರೋಗ್ಯ ಸುಧಾರಿಸುತ್ತದೆ. ಅದು ಎಲ್ಲ ರೋಗಗಳನ್ನು ಗುಣಪಡಿಸುತ್ತದೆ ಎಂದು ಕೆಲವು ತಜ್ಞರು ತಮ್ಮ ಶಿಷ್ಯರಿಗೆ ಹೇಳಿದರು. ಕೆಲವರು ಯೋಗಾಸನದ

Digitised by Bharatavani, CIIL

ಕಡೆಗೆ ತಮ್ಮ ಮನಸ್ಸನ್ನು ಬದಲಾಯಿಸಿದರು. ಈ ಬದಲಾವಣೆಯಿಂದಾಗಿ ಈಗ ಯೋಗಾಭ್ಯಾಸವು ಜನಪ್ರಿಯವಾಗುತ್ತಿದೆ. ಹೀಗೆ ಸಮಾಜದಲ್ಲಿಯ ಬದಲಾವಣೆಯಿಂದಾಗಿ ಶಿಕ್ಷಣಕ್ಕಾಗಿ ಬೇಡಿಕೆಯು ಬದಲಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಶಾಲೆಗಳ ಸಂಖ್ಯೆಯು ಸಾಕಷ್ಟು ಬೆಳೆದಿದೆ. ಹಿಂದೆ ಕಾಲೇಜುಗಳು ಕೇವಲ ನಗರಗಳಲ್ಲಿ ಇದ್ದವು. ಈಗ ಗ್ರಾಮಾಂತರ ಪ್ರದೇಶಗಳಲ್ಲಿಯೂ ಬಂದಿವೆ. ಅವೆಲ್ಲವೂ ವಿದ್ಯಾರ್ಥಿಗಳಿಂದ ಕಿಕ್ಕಿರಿದು ತುಂಬಿವೆ. ಹಲವರಿಗೆ ಪ್ರವೇಶ ಸಿಗದಷ್ಟು ಅವು ಭರ್ತಿಯಾಗಿವೆ. ಇದು ಸಾಮಾಜಿಕ ಬದಲಾವಣೆಯ ಫಲ. ಪ್ರಗತಿಯ ಪರಿಣಾಮವಾಗಿ ಪಾಲಕರೆಲ್ಲ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡುವುದೇ ಸರಿಯಾದುದೆಂದು ಬಯಸಿದ್ದಾರೆ. ಹೀಗೆ ಸಮಾಜ ಬದಲಾದಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಬದಲಾವಣೆಯನ್ನು ಕಾಣುತ್ತೇವೆ. ಆದ್ದರಿಂದ ಶಿಕ್ಷಣವು ಸಾಮಾಜಿಕ ಬದಲಾವಣೆಯ ಪರಿಣಾಮವೂ ಹೌದು.

–ಎಸ್.ಬಿ. ಯಾ

## ಸಾಮಾಜಿಕ ವ್ಯವಸ್ಥೆ ಮತ್ತು ಶಿಕ್ಷಣ

ಶಿಕ್ಷಣವು ಮಾನವನಿಗೆ ಅವಶ್ಯವಾಗಿದ್ದು ಆಧುನಿಕ ಸಮಾಜಗಳ ಮೂಲಭೂತ ಚಟುವಟಿಕೆಗಳಲ್ಲಿ ಒಂದೆನಿಸಿದೆ. ಇದೊಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ಸಮಾಜದ ಸಂಸ್ಕೃತಿ, ಸಂಪ್ರದಾಯ, ಸಾಮಾಜಿಕ ಮೌಲ್ಯ ಮೊದಲಾದವುಗಳನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲಾಗುವುದು. ನಾಗರಿಕ ಜೀವನದ ಐಸಿರಿ, ಶಿಕ್ಷಣವು ಮಾನವರ ಜೀವನಕ್ಕೆ ಒಂದು ನಿಶ್ಚಿತ ಅರ್ಥ ಹಾಗೂ ಸೌಂದರ್ಯವನ್ನು ಒದಗಿಸುತ್ತದೆ. ಸಾಮಾಜಿಕ ಜೀವನ ನಡೆಸುವ ಜನತೆಯಲ್ಲಿ ಯೋಗ್ಯ ಮನೋವೃತ್ತಿಯನ್ನು ಉಂಟುಮಾಡುವುದರೊಂದಿಗೆ ಮಾನವರ ಪರಂಪರೆಯನ್ನು ಕಾಪಾಡಿ ಮುಂದಿನ ಪೀಳಿಗೆಗೂ ವರ್ಗಾಯಿಸುವುದಾಗಿದೆ.

ಅನೇಕ ಕುಟುಂಬಗಳು ಒಂದೆಡೆ ಜೀವಿಸುವಾಗ ಒಂದು ವ್ಯವಸ್ಥೆ ಅಗತ್ಯ. ಯಾರು ಯಾರನ್ನು ಅನುಸರಿಸಬೇಕು. ಒಬ್ಬರು ಇನ್ನೊಬ್ಬರೊಂದಿಗೆ ಹೇಗೆ ನಡೆದುಕೊಳ್ಳಬೇಕು. ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು. ಯಾವುದು ಶಿಷ್ಟಾಚಾರವಲ್ಲ. ಯಾವುದು ಶಿಷ್ಟಾಚಾರ ಇಂತಹ ಹಲವಾರು ಅಂಶಗಳು ಉತ್ತಮ ಸಾಮಾಜಿಕ ಜೀವನಕ್ಕೆ ಅಗತ್ಯವಾಗುವುವು. ಅವೇ ಮುಂದೆ ವ್ಯವಸ್ಥೆಗಳೂ ಆಗಲು ಕಾರಣವಾಗುತ್ತವೆ. ಸಾಮಾಜಿಕ ಜೀವನದ ಅಡಿಪಾಯವಾಗಿ ಕುಟುಂಬಗಳು ಉಳಿಯಿತು. ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳು ಸ್ಥಾಪನೆಯಾದನಂತರ ಸಾಮಾಜಿಕ ವ್ಯವಸ್ಥೆಯಲ್ಲೂ ಮಾರ್ಪಡುಗಳಾಗಿವೆ. ಉದಾಹರಣೆಗೆ, ಭಾರತದಲ್ಲಿನ ಜಾತಿಪದ್ಧತಿ ಸಮಾಜದಲ್ಲಿ ಒಂದು ವ್ಯವಸ್ಥೆಯನ್ನು ಮೂಡಿಸಿತು. ಜಾತಿಪದ್ಧತಿ ವ್ಯಕ್ತಿಯ ಧರ್ಮ ಕರ್ತವ್ಯಗಳನ್ನು ಸ್ಪಷ್ಟಪಡಿಸಿ ವೃತ್ತಿಯವರನ್ನು ಒಂದುಗೂಡಿಸಿತು. ಅವರಿಗೆ ಇತರರಿಂದ ಅನ್ಯಾಯವಾಗದಂತೆ ಒಗ್ಗಟ್ಟನ್ನು ತಂದು ಕೊಟ್ಟಿತು. ಪೀಳಿಗೆಯಿಂದ ಪೀಳಿಗೆಗೆ ಹಿಂದಿನ ಜ್ಞಾನವನ್ನು ರಕ್ಷಿಸಿ ತಲುಪಿಸಿತು. ಆದರೆ ಭಾರತದಲ್ಲಿ ಜಾತಿಪದ್ಧತಿ ಗಟ್ಟಿಯಾದಂತೆ ಅದರಲ್ಲಿ ದೋಷ ಉಂಟಾದುದನ್ನು ಕಾಣುತ್ತೇವೆ. ಸಂಪ್ರದಾಯಗಳು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅಡ್ಡಬಂದವು. ಆರ್ಥಿಕ ಕಾರಣಕ್ಕಾಗಿ ರೂಪುಗೊಂಡ ಈ ಪದ್ಧತಿ ಕ್ರಮೇಣ ಬೇರೆ ಬೇರೆ ಪ್ರಭಾವಗಳಿಂದ ಸಮಾಜದ ಪ್ರಗತಿಗೆ ಅಡ್ಡಿಯಾಯಿತು.

ಪ್ರತಿಸಮಾಜದಲ್ಲಿ ಸಾಮೂಹಿಕ ಜೀವನ ಅಸ್ತವ್ಯಸ್ತವಾಗದಂತೆ ಶಾಂತಿ ಮತ್ತು ವ್ಯವಸ್ಥೆಗಳ ಪಾಲನೆಗೆ ಬಾಧಕವಾಗದಂತೆ ನೋಡಿಕೊಳ್ಳುವುದು ಅತ್ಯಗತ್ಯ. ಸರಿ–ತಪ್ಪು, ನ್ಯಾಯ–ಅನ್ಯಾಯ, ಶಿಕ್ಷಾರ್ಹ ಶಿಕ್ಷಾರ್ಹವಲ್ಲ ಎಂದು ಸಾಮೂಹಿಕ ಪ್ರಜ್ಞೆ ನಿರ್ಧರಿಸುತ್ತದೆ. ಇವೇ ಆಧುನಿಕ ಸಮಾಜದಲ್ಲಿ ಕಾನೂನುಗಳಾದರೆ ಪ್ರಾಚೀನ ಪಂಗಡಗಳಲ್ಲಿ ಸಂಪ್ರದಾಯಗಳೆನಿಸಿ ಕೊಂಡಿದ್ದವು. ಇಲ್ಲವೇ ಲೋಕಾರೂಢಿಗಳೆನಿಸಿಕೊಂಡಿದ್ದವು.

### ಲೋಕಾರೂಢಿಗಳು

ಜನರ ನಿತ್ಯದ ನಡತೆಯನ್ನು ನಿಯಂತ್ರಿಸುವ ನಿಯಮಗಳಿಗೆ ಲೋಕಾರೂಢಿ (Folk ways) ಎನ್ನುತ್ತಾರೆ. ಸರ್ವರೂ ಒಪ್ಪಿದ ನಡತೆಯ ರೀತಿ ಪರಂಪರೆಯೇ ಲೋಕಾರೂಢಿ ಎನ್ನಬಹುದು. ಸಮ್ನರ್ ಎಂಬ ಅಮೇರಿಕಾದ ಸಮಾಜಶಾಸ್ತ್ರಜ್ಞರು 1906 ರಲ್ಲಿ Folk ways ಎಂಬ ಗ್ರಂಥವನ್ನು ಬರೆದು ಪ್ರಥಮಬಾರಿಗೆ Folk ways ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ್ದಾರೆ. Folk ಎಂದರೆ ಜನರು, ways ಎಂದರೆ ರೂಢಿ, ಆಚಾರ ಎಂದರ್ಥ. ಹೀಗೆ ಜನರ ದೈನಂದಿನ ಆಚಾರ ಕ್ರಮವನ್ನೇ ಲೋಕಾರೂಢಿ, ಲೋಕಾಚಾರ ಎಂದು ಕರೆಯಲಾಗುತ್ತದೆ. ಗ್ರೀನ್ ಎಂಬ ತಜ್ಞರ ಪ್ರಕಾರ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಿಹೋಗುವಂತಿದ್ದು ಸಮೂಹ ಅಥವಾ ಸಮಾಜವೊಂದರಲ್ಲಿ ಕಾಣಬರುವ ಸಾಮಾನ್ಯ ವರ್ತನೆಯ ಕ್ರಮಗಳೇ ಲೋಕಾರೂಢಿ.

ಲುಂಡ್‌ಬರ್ಗ್‌ರವರ ಪ್ರಕಾರ ಸಮೂಹ ಅಥವಾ ಸಮುದಾಯ ವೊಂದರಲ್ಲಿ ಕಾಣಬರುವ ವಿಶಿಷ್ಟ ಆಚರಣೆಯ ನಂಬಿಕೆಗಳು ಮನೋಭಾವನೆಗಳು ಮತ್ತು ನಡತೆಯ ಶೈಲಿಗಳನ್ನು ಲೋಕಾರೂಢಿಗಳು ಎಂದು ಕರೆಯಬಹುದು. ಸದಾ ಪುನರಾವರ್ತಿತವಾಗುತ್ತಿರುವ ಜನರ ಸಾಮಾನ್ಯ ಲಘುವಾದ ವರ್ತನೆಗಳೇ ಲೋಕಾರೂಢಿಗಳಾಗುತ್ತವೆ. ಸಂಭಾಷಣೆ, ಊಟ, ಉಡಿಗೆ–ತೊಡಿಗೆ, ವೇಷ–ಭೂಷಣ, ಗುರು ಹಿರಿಯರನ್ನು ಗೌರವಿಸುವುದು, ಹೆಂಡತಿ ಮಕ್ಕಳನ್ನು ಪ್ರೀತಿಸುವುದು ಇಂತಹ ವರ್ತನೆಗಳೆಲ್ಲವೂ ಲೋಕಾರೂಢಿಗಳಿಗೆ ಉದಾಹರಣೆಯಾಗಿವೆ.

ಲೋಕಾರೂಢಿಗಳು ಮಾನವನ ಸಮೂಹ ಜೀವನದ ಸೃಷ್ಟಿಯಾಗಿವೆ. ವ್ಯಕ್ತಿಗಳಲ್ಲಿ ಪರಸ್ಪರ ಐಕ್ಯತೆಯನ್ನು ಮೂಡಿಸುವುದಲ್ಲದೇ ಸಾಮಾಜಿಕ ಸಂಬಂಧಗಳಲ್ಲಿಯೇ ಸಾಮಾಜಿಕ ನಿಯಮಗಳೂ ಸಹ ಉಗಮಗೊಳ್ಳುತ್ತವೆ. ಲೋಕಾರೂಢಿಗಳು ಸಾಮೂಹಿಕ ಘಟನೆಯಾಗಿವೆ. ಇದರಿಂದಾಗಿಯೇ ಬಹುಕಾಲ ಉಳಿಯುವಂಥವೂ ಆಗಿರುತ್ತವೆ. ಸಮಾಜದಲ್ಲಿ ಬಹುಸಂಖ್ಯಾತ ಜನರಲ್ಲಿ ಕಂಡುಬರುವ ಮತ್ತು ಪುನರಾವರ್ತನೆ ಹೊಂದುವ ನಡತೆಯ ಉದಾಹರಣೆಗಳೇ ಕಾಲಾನುಕ್ರಮದಲ್ಲಿ ಲೋಕಾಚಾರಗಳೆನಿಸಿಕೊಳ್ಳುತ್ತವೆ.

ಲೋಕಾರೂಢಿಗಳ ಉಗಮ ತೀರ ಅಸ್ಪಷ್ಟವಾಗಿರುತ್ತದೆ. ಯಾರೊಬ್ಬರಿಂದ ಸಹಜವಾಗಿ ಆರಂಭವಾದ ಹೊಸ ರೀತಿಗಳು ಕಾಲಾನಂತರದಲ್ಲಿ ಜನಪ್ರಿಯವಾಗಿ ಬಳಕೆಯಲ್ಲಿ ಬಂದು ಲೋಕಾರೂಢಿ ಯಾಗುತ್ತವೆ. ಪೂರ್ವಾಪರತೆಗಳಿಂದ ಕ್ರಮಬದ್ಧವಾಗೇನೂ ಇವು ಪ್ರಾರಂಭಗೊಳ್ಳುವುದಿಲ್ಲ. ಲೋಕಾರೂಢಿಗಳು ವೈವಿಧ್ಯಪೂರ್ಣವಾದವು ಪ್ರತಿಯೊಂದು ಸಮಾಜವು ತನ್ನದೇ ಆದ ರೀತಿಯ ಲೋಕಾಚಾರಗಳನ್ನು ಹೊಂದಿರುತ್ತದೆ. ಭಾರತೀಯರು ನೆಲದ ಮೇಲೆ ಕುಳಿತು ಊಟ ಮಾಡಿದರೆ ಪಾಶ್ಚಾತ್ಯರು ಊಟೋಪಚಾರಕ್ಕೆ ಮೇಜು–ಕುರ್ಚಿಗಳನ್ನು ಬಳಸುತ್ತಾರೆ. ಭಾರತೀಯರು ಕೈಗಳಿಂದಲೇ ಊಟ ಮಾಡಿದರೆ ಪಾಶ್ಚಾತ್ಯರು ಚಮಚದಿಂದ ಊಟ ಮಾಡುತ್ತಾರೆ. ಲೋಕಾರೂಢಿಗಳು ಪ್ರತಿಯೊಂದು ಸಮಾಜದಲ್ಲಿ ಅಸಂಖ್ಯಾತವಾದವುಗಳಾಗಿರುತ್ತವೆ. ಪ್ರತಿನಿತ್ಯವೂ ಅರಿತೋ ಅರಿಯದೆಯೋ ನಾವು ನಾನಾ ರೀತಿಯ ಲೋಕಾರೂಢಿಗಳನ್ನು ಅನುಸರಿಸುತ್ತೇವೆ. ನಾವು ಹುಟ್ಟಿನಿಂದ ಸಾವಿನವರೆಗೂ ಕೂಡ ಅಸಂಖ್ಯಾತ ರೂಢಿಗಳನ್ನು ಅಳವಡಿಸಿಕೊಂಡಿರುತ್ತೇವೆ.

ಲೋಕಾರೂಢಿಗಳಿಗೆ ಸಮಾಜದಲ್ಲಿ ಅಷ್ಟೇನೂ ಹೆಚ್ಚು ಮಹತ್ವವಿರುವುದಿಲ್ಲ. ಇವು ಅನೌಪಚಾರಿಕ ವಾಹಕಗಳಾಗಿರುತ್ತವೆ. ಇದನ್ನು

Digitised by Bharatayani, CIIL

ಪಾಲಿಸಬೇಕೆಂಬ ಒತ್ತಾಯವೇನೂ ಇಲ್ಲ. ಒಂದು ವೇಳೆ ಲೋಕ ರೂಢಿಯನ್ನು ಮೀರಿ ನಡೆದರೆ ಶಿಕ್ಷೆಯನ್ನೇನೂ ವಿಧಿಸಲಾಗುವುದಿಲ್ಲ. ಆದರೆ ಅನೌಪಚಾರಿಕ ಸಾಮಾಜಿಕ ನಿಯಂತ್ರಣಗಳ ಮುಖಾಂತರವೇ ಶಿಕ್ಷೆಯಾಗುತ್ತಿದೆ. ಲೋಕಾರೂಢಿಗಳು ನಿಂತ ನೀರಿನ ಮಡುವಲ್ಲ, ಜಡಸ್ವರೂಪವಾದವೂ ಅಲ್ಲ. ಅವು ಬದಲಾವಣೆಗೆ ಒಳಪಟ್ಟಿವೆ. ಒಳಪಡುತ್ತಲೂ ಇರುತ್ತದೆ. ಆದರೂ ಶೀಘ್ರವಾಗಿ ಪರಿವರ್ತನೆಗೆ ಹೊಂದಿಕೊಳ್ಳುವುದೂ ಇಲ್ಲ. ಉದಾ: ಶೋಭಾಚಾರ ಮತ್ತು ಗೀಳು (Fashion and food) ಇವುಗಳಿಗೆ ಸಂಬಂಧಿಸಿದ ಲೋಕಾರೂಢಿಗಳು ಬಹಳ ತ್ವರಿತವಾಗಿ ಬದಲಾಗುತ್ತವೆ. ಅದೇ ಕುಟುಂಬ ಮತ–ಧರ್ಮಗಳಿಗೆ ಸಂಬಂಧಿಸಿದ ಲೋಕಾರೂಢಿಗಳು ಅಷ್ಟು ಸುಲಭವಾಗಿ ಪರಿವರ್ತನೆಯನ್ನು ಹೊಂದುವುದಿಲ್ಲ.

### ಲೋಕಾರೂಢಿಗಳ ಸಾಮಾಜಿಕ ಮಹತ್ವ

ಲೋಕಾರೂಢಿಗಳು ಸಮಾಜದಲ್ಲಿ ಜನರ ಜೀವನ ಸುಗಮವಾಗಿ ಸಾಗಲು ಸಹಾಯವಾಗುತ್ತವೆ. ಇವುಗಳಲ್ಲಿರುವ ಆಚಾರ–ವಿಚಾರಗಳಿಗೆ ಜನ ಜೀವನದಲ್ಲಿ ಉತ್ತಮ ಸ್ಥಾನಮಾನವೂ ಲಭ್ಯವಾಗುತ್ತದೆ.

ವ್ಯಕ್ತಿಗಳಿಗೆ ಸಾಮಾಜಿಕ ಸ್ಥೈರ್ಯವು ಪ್ರಾಪ್ತವಾಗಲೂ ಇವು ಇಂಬನ್ನು ನೀಡುತ್ತವೆ. ಕಾಲಕ್ಕೆ ತಕ್ಕಂತೆ ಹೇಗೆ ವರ್ತಿಸುವುದು, ಹೇಗೆ ಬಾಳುವುದು ಮೊದಲಾದವುಗಳನ್ನು ತಿಳಿಯಪಡಿಸುತ್ತವೆ. ಈ ರೀತಿಯ ತಿಳುವಳಿಕೆಯನ್ನು ಸಮಾಜಶಾಸ್ತ್ರದ ಅಧ್ಯಯನದಿಂದಲೂ ತಿಳಿದುಕೊಳ್ಳ ಬಹುದಾಗಿದೆ ಎಂಬ ಸಮ್ನರ್‌ರವರ ಹೇಳಿಕೆಯು ಉಲ್ಲೇಖಾರ್ಹ. ವಿಶ್ವದಲ್ಲಿ ಇವು ಸಾರ್ವತ್ರಿಕವಾಗಿವೆ. ಸಾಮಾಜಿಕ ರಚನೆಯ ಮುಖ್ಯ ಅಂಶಗಳೇ ಲೋಕಾರೂಢಿಗಳು ಆಗಿವೆ. ಸಾಮಾಜಿಕ ಕ್ರಮದ ಭದ್ರತೆಗೂ ಇವು ಮೂಲವಾಗಿವೆ. ಸಮಾಜದಲ್ಲಿ ವ್ಯಕ್ತಿಗಳ ನಡವಳಿಕೆಗೆ ನಿಶ್ಚಿತತೆ ಹಾಗೂ ಭವಿಷ್ಯ ಸೂಚಕತೆಯ ಲಭ್ಯತೆಯೂ ಕೂಡ ಲೋಕಾರೂಢಿಗಳಿಂದಲೇ ದೊರೆಯುವುದು. ಹೀಗಾಗಿ ಲೋಕರೂಢಿಗಳು ಪ್ರತಿಯೊಂದು ಸಮಾಜದ ತಳಹದಿಯಿದ್ದಂತೆ.

### ನೈತಿಕ ನಿಯಮಗಳು

ಮಾನವನ ಯಾವುದೇ ವರ್ತನೆಯ ಸರಿ, ತಪ್ಪುಗಳನ್ನು ನಿರ್ಧರಿಸುವ ನಿಯಮಗಳೇ ನೈತಿಕ ನಿಯಮಗಳಾಗಿವೆ. ಮಾನವರ ವರ್ತನೆಗೆ ಒಂದು ಗುರಿ ಕೊಡಬಲ್ಲಂತಹ ಸಾಧನವೆಂದರೆ ನೈತಿಕ ನಿಯಮವೇ ಆಗಿದೆ. ಲೋಕಾರೂಢಿಗಳು ಸಮಾಜಕ್ಕೆ ಹಿತಕರವೆಂದು ಸದಸ್ಯರು ನಂಬಿದರೆ ಅವುಗಳಿಗೆ ಸವಾಜದಿಂದ ಮನ್ನಣೆಯೂ ಲಭಿಸುತ್ತದೆ. ಹೀಗೆ ಸವಾಜದಿಂದ ಮನ್ನಣೆ ಅನುಮತಿಗಳನ್ನು ಪಡೆದುಕೊಂಡ ಲೋಕಾರೂಢಿಗಳೇ ನೈತಿಕ ನಿಯಮಗಳಾಗುತ್ತವೆ. ಹಿರಿಯರಿಗೆ ನಮಸ್ಕರಿಸುವುದು, ಸ್ತ್ರೀಯರನ್ನು ಗೌರವಿಸುವುದು ನೈತಿಕ ನಿಯಮಗಳಿಗೆ ಉದಾಹರಣೆಗಳಾಗಿವೆ. ನೈತಿಕ ನಿಯಮಗಳನ್ನು ಎಲ್ಲರೂ ಪಾಲಿಸಬೇಕಾಗುತ್ತದೆ. ಇದರಿಂದ ಸಮಾಜದ ಹಿತವಲ್ಲದೆ ಸಾಮಾಜಿಕ ವ್ಯವಸ್ಥೆಗೂ ಅನುಕೂಲವಾಗುವುದು. ಉದಾಹರಣೆಗೆ, ಕಳ್ಳತನ ಮಾಡದಿರುವುದು, ಬೇರೆಯವರ ಆಸ್ತಿಯನ್ನು ಅಪಹರಿಸದಿರುವುದು ಇವೇ ಮೊದಲಾದವು.

ನೈತಿಕ ನಿಯಮಗಳ ಪಾಲನೆಯನ್ನು ಪ್ರತಿಯಬ್ಬರೂ ಚಾಚು ತಪ್ಪದೆ ಪಾಲಿಸಬೇಕಾಗುತ್ತದೆ. ಒಂದು ವೇಳೆ ಇದನ್ನು ಮೀರಿದರೆ ಅಥವಾ ಉಲ್ಲಂಘಿಸಿದರೆ ಸಾಮಾಜಿಕವಾಗಿ ವಿಧಿಸಿದ ಶಿಕ್ಷೆಯನ್ನು ಅನುಭವಿಸಬೇಕಾಗುವುದು. ಸಮ್ನರನ ಪ್ರಕಾರ ಪ್ರಚಲಿತ ಸಂಪ್ರದಾಯಗಳ ಅನುಕರಣೆಯಿಂದ ಸಮಾಜ ಕಲ್ಯಾಣ ಉಂಟಾಗುತ್ತವೆ ಎಂಬ ನಂಬಿಕೆ ಹಾಗೂ ಅವುಗಳ ಪಾಲನೆಗೆ ಒತ್ತಾಯವನ್ನು ತರಲಾಗುತ್ತದೆ. ಇದಕ್ಕೆ ನಾವು ನೈತಿಕ ನಿಯಮ ಎಂದು ಕರೆಯುತ್ತೇವೆ. ಡಾಸನ್ ಮತ್ತು ಗೆಟ್ಟೈಸ್‌ರವರ ಪ್ರಕಾರ ಸಮೂಹದ ಕಲ್ಯಾಣವನ್ನು ಸಾಧಿಸುವಂತಹ ಲೋಕಾರೂಢಿಗಳೇ ನೈತಿಕ ನಿಯಮಗಳು. ಮೆಕೈವರ್ ಮತ್ತು ಪೇಜ್‌ರವರ ಪ್ರಕಾರ ಲೋಕಾರೂಢಿಗಳೇ ಸಮೂಹ ಕಲ್ಯಾಣದ ಕಲ್ಪನೆಯನ್ನು ಹಾಗೂ ಸರಿ ತಪ್ಪುಗಳೆಂಬ ಮೌಲ್ಯಗಳನ್ನು ಒಳಗೊಂಡಾಗ ನೈತಿಕ ನಿಯಮಗಳಾಗುತ್ತವೆ. ನೈತಿಕ ನಿಯಮಗಳನ್ನು ಒಟ್ಟಾಗಿ ನೀತಿಸಂಹಿತೆ (Moral Code) ಎಂದೂ ಹೇಳುತ್ತಾರೆ.

### ನೈತಿಕ ನಿಯಮಗಳ ಲಕ್ಷಣಗಳು

ನೈತಿಕ ನಿಯಮಗಳಿಗೆ ಇಡೀ ಸಮಾಜವು ಮನ್ನಣೆಯನ್ನು ನೀಡುವುದರಿಂದ ಅವು ಎಲ್ಲರಿಗೂ ಸರಿಸಮಾನವಾಗಿ ಕಂಡುಬರುತ್ತವೆ ಯಲ್ಲದೆ, ಅತ್ಯಗತ್ಯವೂ ಹಾಗೂ ಪರಿವರ್ತನಾರಹಿತವೂ ಆಗಿರುತ್ತವೆ. ಇವು ಒಳ್ಳೆಯದ್ದು ಕೆಟ್ಟದ್ದು, ಸರಿ ತಪ್ಪುಗಳನ್ನು ತಿಳಿಯಪಡಿಸಿ ಜನತೆಯ ನಡತೆಯನ್ನು ಸರಿಪಡಿಸುವ, ನಿರ್ದೇಶಿಸುವ ವಾಹಕವೂ ಆಗಿವೆ. ನೈತಿಕ ನಿಯಮಗಳು ಜನರ ನಡತೆಯ ಮೇಲೆ ಇತಿ–ಮಿತಿಗಳನ್ನು ಹೇರಿ ವ್ಯಕ್ತಿಗಳ ಮೇಲೆ ನಿಯಂತ್ರಣವನ್ನು ತರುವುದರ ಮೂಲಕ ತಿಳುವಳಿಕೆಯನ್ನು ಮೂಡಿಸುತ್ತವೆ. ಈ ನಿಟ್ಟಿನಲ್ಲಿ ಒತ್ತಾಯದ ಮೂಲಕವಾದರೂ ಸರಿ ಆಗ್ರಹಪೂರ್ವಕವಾದರೂ ಸರಿ, ಸಾಮಾಜಿಕ ಜೀವಿಯಾದ ವ್ಯಕ್ತಿಗಳ ಮೇಲೆ ಹೇರಲ್ಪಡುತ್ತದೆ. ನೈತಿಕ ನಿಯಮಗಳ ಪಾಲನೆಯ ಹಿಂದೆ ಮೌಲ್ಯಗಳ ಅಂಶವೂ ಸೇರಿದ್ದು ಇವು ಸಮಾಜದಲ್ಲಿ ಹೆಚ್ಚು ಶಾಶ್ವತವಾಗಿರುತ್ತವೆ. ಇವು ಎಲ್ಲಾ ಸಮಾಜಗಳಲ್ಲೂ ಇದ್ದೇ ಇರುತ್ತವೆ.

ಉದಾ: ಶಾಂತಪ್ರಿಯರಾಗಿರುವುದು, ದಯೆ ಬೆಳೆಸಿಕೊಳ್ಳುವುದು, ಪರೋಪಕಾರಿತನ, ಸತ್ಯವಂತನಾಗಿರುವುದು ಮೊದಲಾದವು. ಮತಧರ್ಮದ ಬೆಂಬಲವೂ ಸಹ ನೈತಿಕ ನಿಯಮಗಳಿಗೆ ಇರುತ್ತದೆ. ಇದರಿಂದಾಗಿ ಇವುಗಳು ಹೆಚ್ಚು ಪ್ರಭಾವಯುತವಾಗುತ್ತವೆ. ಉದಾ: ಬೌದ್ಧರಿಗೆ ಬುದ್ಧನ ನವರತ್ನಗಳ ಪಾಲನೆಯೂ, ಕ್ರೈಸ್ತರಿಗೆ ಹತ್ತು ಕಟ್ಟಳೆಗಳು (Ten commandments) ನಿಯಮಗಳೂ ಪ್ರಮುಖವಾದವು ಎಂದು ಭಾವಿಸುತ್ತಾರೆ. ಎಲ್ಲಾ ನೈತಿಕ ನಿಯಮಗಳು ಸಮಾಜ ಕಲ್ಯಾಣಕ್ಕೆ ಮೂಲ ಪ್ರೇರಣೆಗಳಾಗಿವೆ ಎಂದೇನೂ ಹೇಳಲಾಗದು. ಕೆಲವೊಂದು ನೈತಿಕ ನಿಯಮಗಳು ಸಮಾಜದ ಪ್ರಗತಿಗೆ ಅಡ್ಡಿಯನ್ನುಂಟು ಮಾಡುತ್ತವೆ. ಉದಾ: ಹಿಂದೆ ನಮ್ಮ ಭಾರತದಲ್ಲಿಯೇ ಜಾರಿಯಲ್ಲಿದ್ದ ಬಾಲ್ಯವಿವಾಹ, ಸತಿಪದ್ಧತಿಯ ಆಚರಣೆ ಹೆಣ್ಣು ಶಿಶುಹತ್ಯೆ ಮೊದಲಾದವು.

ಕೆಲವೊಂದು ನೈತಿಕ ನಿಯಮಗಳು ಒಂದು ಸಮಾಜದಿಂದ ಮತ್ತೊಂದು ಸಮಾಜಕ್ಕೆ ಭಿನ್ನವಾಗಿರುತ್ತವೆ. ಒಂದು ಸಮಾಜದಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತೊಂದು ಸಮಾಜದಲ್ಲಿ ಇಲ್ಲದೆಯೂ ಇರಬಹುದು.

ಉದಾ: ಬಾಲ್ಯ ವಿವಾಹ ಬಹುಪತ್ನಿತ್ವ ಸತಿಪದ್ಧತಿ ಮೊದಲಾದವು ಒಂದೆಡೆ ಜಾರಿಯಲ್ಲಿದ್ದು ಸಾಮಾಜಿಕ ಮನ್ನಣೆ ಪಡೆದಿದ್ದರೆ ಮತ್ತೊಂದೆಡೆ ತಿರಸ್ಕರಿಸಲ್ಪಟ್ಟಿರುತ್ತವೆ.

ಸಮಾಜವು ದಿನದಿಂದ ದಿನಕ್ಕೆ ಬೆಳೆದಂತೆಲ್ಲಾ ನೈತಿಕ ನಿಯಮಗಳೂ ಕೂಡ ಬೆಳೆಯುತ್ತಾ ರೂಪುಗೊಳ್ಳುತ್ತಾ ಬರುತ್ತವೆ. ಆದರೆ ಇವುಗಳು ಶೀಘ್ರವಾದ ಬದಲಾವಣೆಗೆ ಒಳಗಾಗುವುದೂ ಇಲ್ಲ. ಇತ್ತೀಚಿನ ದಿನಗಳಲ್ಲಂತೂ ಕಾನೂನಿನ ಬೆಂಬಲವೂ ಕೂಡ ನೈತಿಕ ನಿಯಮಗಳಿಗೆ ದೊರೆಯುತ್ತಿದ್ದು ಹೌಬ್‌ಹಾಸ್ ಎಂಬ ತಜ್ಞರ ಪ್ರಕಾರ ಕಾನೂನು ಮತ್ತು ಶಾಸನಗಳಿಗೆ ನೈತಿಕ ನಿಯಮಗಳು ಪೂರಕವಾಗಿವೆ ಎನ್ನಬಹುದು.

Digitised by Bharatavani, CIIL

ನೈತಿಕ ನಿಯಮಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು.

1) ನಿಶ್ಚಯಾತ್ಮಕ ನೈತಿಕ ನಿಯಮಗಳು [Positive rules]

2) ನಿಷೇಧಾತ್ಮಕ ನೈತಿಕ ನಿಯಮಗಳು [Prohibitive rules]

ಸಮಾಜದಲ್ಲಿ ವ್ಯಕ್ತಿಗಳ ನಡತೆಯು ಇದೇ ರೀತಿ ಇರಬೇಕು. ಇದನ್ನು ಮೀರಿರಬಾರದು ಎಂದು ನಿಗದಿಪಡಿಸುವ ನೈತಿಕ ನಿಯಮವನ್ನೂ ನಿಶ್ಚಯಾತ್ಮಕ ನೈತಿಕ ನಿಯಮವೆಂದೂ ಕರೆಯಲಾಗುವುದು.

ಉದಾ: ಸತ್ಯವನ್ನೇ ಹೇಳುವುದು, ಪರೋಪಕಾರಿ ಜೀವನ, ಗುರುಹಿರಿಯರ ಬಗ್ಗೆ ಗೌರವ, ಅಶಕ್ತರ ಬಗೆಗಿನ ಕರುಣೆ. ಇವೇ ಮೊದಲಾದವು.

ಅದೇರೀತಿ ಸಮಾಜದಲ್ಲಿನ ವ್ಯಕ್ತಿಗಳ ಕೆಲವೊಂದು ನಡತೆಗಳನ್ನು ನೈತಿಕ ನಿಯಮಗಳು ನಿಷೇಧಿಸಿವೆ. ಇಂತಹ ನೈತಿಕ ನಿಯಮಗಳನ್ನು ನಿಷೇಧಾತ್ಮಕ ನೈತಿಕ ನಿಯಮಗಳೆಂದು ಕರೆಯಲಾಗಿದೆ. ಉದಾ: ದರೋಡೆಕಾರರಾಗಿ ವರ್ತಿಸುವುದು, ಸಮಾಜಕಂಟಕ ಕಾರ್ಯಗಳಲ್ಲಿ ತೊಡಗುವುದು, ಕುಟುಂಬದ ಸದಸ್ಯರೊಡನೆ ಕ್ರೂರವಾಗಿ ವರ್ತಿಸುವುದು ಮೊದಲಾದವು.

### ನೈತಿಕ ನಿಯಮಗಳ ಸಾಮಾಜಿಕ ಮಹತ್ವ

ನೈತಿಕ ನಿಯಮಗಳು ವ್ಯಕ್ತಿಯ ನಡತೆಯ ಮೇಲೆ ಪ್ರಭಾವ ಬೀರುತ್ತಾ ಇರುವುದರಿಂದ ನೈತಿಕ ನಿಯಮಗಳು ವ್ಯಕ್ತಿತ್ವದ ಭಾಗಗಳೇ ಆಗುತ್ತವೆ. ಹೀಗಾಗಿ ವ್ಯಕ್ತಿಗಳನ್ನು ನಿಯಂತ್ರಿಸುವುದರಿಂದ ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಯವರೆಗೂ ಇವು ಪ್ರಧಾನ ಪಾತ್ರವಹಿಸುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದೊಡನೆ ಬೆರೆಯಲು ಇವು ಸಹಕರಿಸುತ್ತವೆ. ವ್ಯಕ್ತಿಗಳು ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಂಡು ಸಹಭಾಗಿಗಳಾಗಿ ಬಾಳಲು ಸಹಕಾರಿಯಾಗುತ್ತವೆ. ಇವು ಜನರನ್ನು ಒಂದುಗೂಡಿಸುವ ಸಾಧನಗಳಾಗಿವೆ. ಸಮಾನ ನೀತಿಗಳು ಒಂದೇ ಭಾವನೆಯ ಐಕ್ಯತೆಯನ್ನುಂಟು ಮಾಡುತ್ತವೆ. ಒಟ್ಟಿನಲ್ಲಿ ನೈತಿಕ ನಿಯಮಗಳು ಸಮಾಜದಲ್ಲಿ ಏಕತೆ ಮೂಡಲು ಕಾರಣವಾಗುತ್ತವೆ. ಕಾನೂನು ಸಂಹಿತೆಗಳಿಗೆ ಆಧಾರಪ್ರಾಯವಾಗುತ್ತವೆ. ಹೀಗಾಗಿ ಕಾನೂನು ನಿಯಮಗಳನ್ನು ಕ್ರೋಡೀಕರಿಸಿದ ನೈತಿಕ ನಿಯಮಗಳು ಎನ್ನಲಾಗಿದೆ.

ಸಮಾಜವು ವ್ಯವಸ್ಥಿತವಾದುದು. ಪ್ರಪಂಚದಾದ್ಯಂತ ಸಮಾಜಗಳು ಭಿನ್ನವಾಗಿರುವುವು ಅಂದರೆ ಸಾಮಾಜಿಕ ವ್ಯವಸ್ಥೆಯಲ್ಲೂ ಭಿನ್ನವಾಗಿರುವುವು ಸಮಾಜಶಾಸ್ತ್ರವು ಅನೇಕ ರೀತಿಯ ಸಾಮಾಜಿಕ ವ್ಯವಸ್ಥೆಗಳನ್ನು ಗುರುತಿಸಿದ್ದಾರೆ. ಸಾಮಾಜಿಕ ವ್ಯವಸ್ಥೆಗಳನ್ನು ಸಾಮಾಜಿಕ ಸ್ತರೀಕರಣ ಎನ್ನಲಾಗಿದೆ. ಅಂದರೆ ಸಮಾಜದ ವಿವಿಧ ಸ್ತರಗಳು ಹೇಗೆ ವ್ಯವಸ್ಥೆಯಾಗಿವೆ ಎಂಬುದನ್ನು ಇದು ತಿಳಿಸುತ್ತದೆ. ಶಿಕ್ಷಣ ಸಾಮಾಜಿಕ ವ್ಯವಸ್ಥೆಯನ್ನು ಪ್ರಭಾವಿಸುವಂತೆ ಸಾಮಾಜಿಕ ವ್ಯವಸ್ಥೆಯೂ ಶಿಕ್ಷಣವನ್ನು ಪ್ರಭಾವಿಸುವುದು.

ಸಮಾಜಶಾಸ್ತ್ರಜ್ಞರು ಎರಡು ವಿಧದ ಸಾಮಾಜಿಕ ಸ್ತರಗಳನ್ನು ಗುರುತಿಸಿದ್ದಾರೆ. ಒಂದು ಆರ್ಥಿಕ ವರ್ಗದ ಆಧಾರದ ಮೇಲೆ ಮಾಡುವ ಸ್ತರೀಕರಣ (ಇದು ಬಹುತೇಕ ಆಧುನಿಕ ಸಮಾಜಗಳು ಹೊಂದಿರುವಂತಹವು), ಮತ್ತೊಂದು ರೀತಿಯ ಸ್ತರೀಕರಣವೆಂದರೆ ಜಾತಿ ಆಧಾರಿತ ವರ್ಗಗಳು. ಇದು ಭಾರತೀಯ ಸಮಾಜಕ್ಕೆ ವಿಶಿಷ್ಟವಾದುದು. ಯಾವ ಸಮಾಜವೂ ತಟಸ್ಥವಾದುದಲ್ಲ. ಸಮಾಜವು ಸದಾ ಬದಲಾವಣೆಗೆ ಗುರಿಯಾಗುಂಥದು ಸಮಾಜದ ಭಾಗಗಳು ಪ್ರದೇಶದಿಂದ ಪ್ರದೇಶಕ್ಕೆ ಸ್ಥಳಾಂತರ ಹೊಂದುವುವು. ಜನರು ಸಮಾಜದಲ್ಲಿ ತಮ್ಮ ಅಂತಸ್ತಿಗೆ ಅನುಗುಣವಾಗಿ ಬದಲಾವಣೆ ತೋರುತ್ತಿರುತ್ತಾರೆ. ಇದನ್ನೇ ಸಾಮಾಜಿಕ ಚಲನೆ ಎನ್ನುತ್ತಾರೆ. ಶಿಕ್ಷಣವು ಇದನ್ನು ಪ್ರಭಾವಿಸುತ್ತದೆ.

ಸಮಾಜಗಳು ಮಾನವರ ಸಮೂಹಗಳನ್ನೊಳಗೊಂಡಿರುವುವು, ಸಮೂಹಗಳು ಜಾತಿ, ಭಾಷೆ ಧರ್ಮ, ಆದರ್ಶಗಳು, ಪ್ರಾಂತೀಯಂತೆ, ಸಾಂಸ್ಕೃತಿಕ ಭಿನ್ನತೆ, ರಾಜಕೀಯ ಅಂಶಗಳು ಮುಂತಾದವುಗಳಿಂದ ರೂಪಿತವಾಗುತ್ತವೆ. ಸಮಾಜದಲ್ಲಿ ಸಂಘರ್ಷಗಳು ಉಂಟಾಗುವುವು. ಅವು ಧರ್ಮ, ಭಾಷೆ, ಜಾತಿ ಆಧಾರಿತವಾಗಿರಬಹುದು. ಜನರು ಸಮಾಜದಲ್ಲಿ ವಿವಿಧ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಪೂರ್ವ– ಕಲ್ಪಿತ ಅಭಿಪ್ರಾಯಗಳನ್ನು ಹೊಂದಬಹುದು. ಇವುಗಳನ್ನೇ ಪೂರ್ವಗ್ರಹಗಳೆನ್ನುವರು. ಇದನ್ನೂ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಣುತ್ತೇವೆ.

ಇಪ್ಪತ್ತನೇ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್‌ನಿಂದ ಸಮತಾವಾದವೆಂಬ ಸಾಮಾಜಿಕ ವ್ಯವಸ್ಥೆ ರೂಪಿತವಾಯಿತು. ಮುಂದೆ ಸಮಾಜವಾದದ ತತ್ವಗಳು ಮೂಡಿದವು. ಅವುಗಳಲ್ಲಿ ಜಾತಿ, ವರ್ಗ ಆಧಾರದ ಸಮಾಜ ಸ್ತರೀಕರಣ ಇರದು. ಎಲ್ಲ ವ್ಯಕ್ತಿಗಳೂ ಸಮಾನರು. ಸ್ವಾತಂತ್ರ್ಯಾನಂತರ ಅಂದಿನ ಪ್ರಧಾನ ಮಂತ್ರಿಗಳಾದ ಜವಾಹರಲಾಲ ನೆಹರೂರವರು ಸಮಾಜವಾದಿ ಸ್ವರೂಪದ ಸಮಾಜವನ್ನು ಸೂಚಿಸಿದರು. ಇದರಲ್ಲಿ ಲೋಕಸತ್ತಾತ್ಮಕ ಸಮಾಜದೊಳಗೆ ಸಮಾಜವಾದದ ಗುಣವೂ ಅಂತರ್ಗತವಾಗಿರಬೇಕೆಂದು ಬಯಸಿದರು. ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಅವಕಾಶ ಮತ್ತು ಸಮಾನ ಸ್ಥಾನಮಾನವಿರುತ್ತದೆ. ಅಂದರೆ ಜನಸಮೂಹಗಳಲ್ಲಿ ಸಂಪೂರ್ಣ ಏಕರೂಪತೆಯಾಗಲಿ, ಅತಿಯಾದ ಸಾಮಾಜಿಕ ಭಿನ್ನತೆಗಳಾಗಲಿ ಇರುವುದಿಲ್ಲ. ಜನರು ಸಮೂಹಗಳಲ್ಲಿ ವಾಸಿಸುವಾಗ ಸ್ವಇಚ್ಛೆಯೊಂದರಿಂದಲೇ ಇರಲಾಗದು. ಅದು ಸಾಮಾಜಿಕ ಅವ್ಯವಸ್ಥೆಗೆ ಕಾರಣವಾಗುವುದು. ಸಾಮಾಜಿಕ ನಿಯಮಾವಳಿಗಳಿಂದ ಸ್ವೇಚ್ಛಾಚಾರದ ವರ್ತನೆ ನಿಯಂತ್ರಿತವಾಗಬೇಕು. ಪ್ರತಿ ಸಮಾಜವೂ ಸಾಮಾಜಿಕ ನಿಯಂತ್ರಣಗಳನ್ನು ಹೊಂದಿರುತ್ತದೆ. ಕುಟುಂಬ, ರಾಜ್ಯ, ಆರಕ್ಷಕ, ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆಗಳೆಲ್ಲವೂ ಸಾಮಾಜಿಕ ನಿಯಂತ್ರಣದಲ್ಲೊಳಗೊಳ್ಳುತ್ತವೆ. ಶಿಕ್ಷಣವೂ ಸಮಾಜದಲ್ಲಿ ವ್ಯಕ್ತಿಯ ವರ್ತನೆಯನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ.

### ಸಾಮಾಜಿಕ ವ್ಯವಸ್ಥೆ ಮತ್ತು ಶಿಕ್ಷಣ

ಸಮಾಜದ ವ್ಯವಸ್ಥೆಯಲ್ಲಿ ಅಧ್ಯಯನ ಮಾಡಲಾಗುವ ಕುಟುಂಬ ಸಾಮಾಜಿಕ ವರ್ಗ, ಲೋಕಾರೂಢಿ, ಗುಂಪು, ಸಂಪರ್ಕ ಮಾಧ್ಯಮಗಳು, ಸಾಮಾಜಿಕ ಚಲನೆ, ಸಾಮಾಜಿಕ ನಿಯಂತ್ರಣ, ಸಾಮಾಜಿಕ ಬದಲಾವಣೆ, ಆಧುನೀಕರಣ ಮುಂತಾದ ಸಾಮಾಜಿಕ ವಿಷಯಗಳನ್ನು ಶಿಕ್ಷಣದ ಮೂಲಕವೇ ತಿಳಿಯಬೇಕಾಗುತ್ತದೆ. ವ್ಯಕ್ತಿಯ ಉತ್ತಮ ಸಂಸ್ಕೃತಿ ಉತ್ತಮ ಸಾಮಾಜಿಕ ಬದಲಾವಣೆಗೆ ಶಿಕ್ಷಣದ ಫಲದಿಂದಲೇ ಕುಟುಂಬ ವ್ಯವಸ್ಥೆಯನ್ನು ಜಾತಿವ್ಯವಸ್ಥೆಯನ್ನು ಲೋಕಾರೂಢಿಗಳನ್ನು ಸದಾಚಾರಗಳನ್ನು ಸುರಕ್ಷಿತ ರೀತಿಯಿಂದ ಅರಿಯುವ ಮತ್ತು ಅನುಸರಿಸುವ ಅಗತ್ಯವಿದೆ. ಮಕ್ಕಳು ಹೇಗೆ ಶಿಕ್ಷಣ ಪಡೆಯುತ್ತಾರೋ ಹಾಗೆ ಸಮಾಜವೂ ಬೆಳೆಯುತ್ತದೆ. ಆದ್ದರಿಂದ ಸಾಮಾಜಿಕ ವ್ಯವಸ್ಥೆಯ ಅರಿವು ಶಿಕ್ಷಣದ ಮೂಲಕ ದೊರಕುತ್ತದೆ.

–ಆರ್.ಗೋ.

Digitised by Bharatavani, CIIL

## ಸಾಮಾಜಿಕ ಸಮೂಹ

ಸಾಮಾಜಿಕ ಸಮೂಹಗಳು ಮಾನವನಿಗೆ ಸಂಸ್ಕೃತಿಯನ್ನು ಧಾರೆಯೆರೆದುಕೊಡುತ್ತವೆ. ಮಾನವನ ಜೀವನವು ಸರ್ವಸಾಮಾನ್ಯವಾಗಿ ಸಾಮೂಹಿಕ ಜೀವನವೇ ಆಗಿದೆ. ಅವನು ಸಮೂಹದಲ್ಲಿ ಹುಟ್ಟಿ, ಬೆಳೆದು ಸಾಯುವವರೆಗೆ ಅಲ್ಲಿಯೇ ವಾಸಿಸುತ್ತಾನೆ. ಪ್ರತಿಯೊಂದು ಮಾನವ ಸಮಾಜವು ಕುಟುಂಬ, ನೆರೆಹೊರೆ, ಆಟದ ಗುಂಪು, ಗೆಳೆಯರ ಗುಂಪು, ರಾಜಕೀಯ ಪಕ್ಷ, ಕಾರ್ಮಿಕರ ಸಂಘ ಮುಂತಾದ ಸಾಮಾಜಿಕ ಸಮೂಹಗಳನ್ನು ಹೊಂದಿರುತ್ತದೆ. ಸಮೂಹವು ವ್ಯಕ್ತಿಗೆ ಜೀವನದ ಗೊತ್ತು ಗುರಿ ಮೌಲ್ಯ ಇತ್ಯಾದಿಗಳ ಪರಿಚಯ ಮಾಡಿಕೊಡುತ್ತದೆ. ನಂತರ ಮತ, ಶಾಲೆ ಮುಂತಾದ ಸಮೂಹಗಳು ಈ ಕಾರ್ಯದಲ್ಲಿ ಸಹಾಯ ಸಲ್ಲಿಸುತ್ತವೆ. ಸಾಮಾಜಿಕ ಸಮೂಹಗಳು ವ್ಯಕ್ತಿಯ ಜೀವನದ ಮೇಲೆ ನಿಯಂತ್ರಣ ಹೇರಿ ಸಾಮಾಜೀಕರಣದ ದೀಕ್ಷೆಕೊಟ್ಟು ಅವನ ಸರ್ವಾಂಗೀಣ ಪ್ರಗತಿಗೆ ನೆರವಾಗುತ್ತವೆ. ಒಟ್ಟಿನಲ್ಲಿ ಮಾನವನ ಜೀವನವು ಸಾಮೂಹಿಕ ಜೀವನವಾಗಿದೆ. "ಪರಸ್ಪರ ಸಾಮಾಜಿಕ ಸಂಬಂಧಗಳನ್ನು ಹೊಂದಿರುವ ಜನರ ಗುಂಪಿಗೆ ಸಾಮಾಜಿಕ ಸಮೂಹ"ವೆಂದು ಕರೆಯುತ್ತಾರೆ. ಉದಾ: ಕುಟುಂಬ, ನೆರೆ–ಹೊರೆ ಮುಂತಾದವು. "ಒಟ್ಟಿನಲ್ಲಿ ಇಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ನಿಕಟ ಸಂಪರ್ಕವನ್ನು ಹೊಂದಿ ಒಂದೇ ಬಗೆಯಾದ ಗುರಿ, ಆಶೆ, ಆಕಾಂಕ್ಷೆ, ಭಾವನೆ ಇತ್ಯಾದಿಗಳನ್ನು ಹೊಂದಿ ಪರಸ್ಪರ ಸಂಬಂಧಗಳನ್ನು ಕಲ್ಪಿಸಿಕೊಂಡಿರುವ ಜನರ ಗುಂಪಿಗೆ" ಸಮೂಹವೆಂದು ಕರೆಯುವರು. ಉದಾ: ಮಕ್ಕಳ ಆಟದ ಗುಂಪು, ಶಾಲೆ, ಕಾರ್ಮಿಕರ ಸಂಘ, ರಾಜ್ಯ ಮುಂತಾದವು.

### ಸಾಮಾಜಿಕ ಸಮೂಹದ ಕೆಲವು ವ್ಯಾಖ್ಯಾನಗಳು ಇಂತಿವೆ

ಅ) ಮಾರ್ಶಲ್ ಜೋನ್ಸ್‌ರವರ ಪ್ರಕಾರ "ಎಲ್ಲಿ ಎರಡು ಇಲ್ಲವೇ ಹೆಚ್ಚು ಜನರು ಕೂಡಿ ಪರಸ್ಪರ ಅಂತರ ಸಂಬಂಧಗಳನ್ನು ಹೊಂದಿ ಸಾಮೂಹಿಕ ಜೀವನವನ್ನು ನಡೆಸುವರೋ ಅಲ್ಲಿ ಸಾಮಾಜಿಕ ಸಮೂಹವು ಉದಯವಾಗುತ್ತದೆ".

ಆ) ಮೆಕೈವರ್ ಮತ್ತು ಪೇಜ್ (1962)ರವರ ಪ್ರಕಾರ "ಪರಸ್ಪರ ಸಾಮಾಜಿಕ ಸಂಬಂಧಗಳಿಂದ ಯಾವುದೇ ಸಂಖ್ಯೆಯಲ್ಲಿ ಕೂಡಿದ ಮಾನವ ಜೀವಿಗಳ ಗುಂಪೇ ಸಾಮಾಜಿಕ ಸಮೂಹ".

ಇ) ಬೋಗಾರ್ಡಸ್ ರವರ ಪ್ರಕಾರ "ಗಮನ ಸೆಳೆಯುವ ಸಾಮಾನ್ಯ ಉದ್ದೇಶಗಳನ್ನು ಹೊಂದಿದ ಪರಸ್ಪರ ಪ್ರಚೋದಿಸುವ, ಸಮಾನ ನಿಷ್ಠೆಯುಳ್ಳ ಹಾಗೂ ಒಂದೇ ಬಗೆಯಾದ ಚಟುವಟಿಕೆಗಳಲ್ಲಿ ಭಾಗ ತೆಗೆದುಕೊಳ್ಳುತ್ತಿರುವ ಎರಡು ಇಲ್ಲವೇ ಎರಡಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಕೂಡಿದ ಜನರ ಗುಂಪೇ ಸಾಮಾಜಿಕ ಸಮೂಹ".

ಈ) ಆಗಬರ್ನ ಮತ್ತು ನಿಮ್‌ಕಾಫ್ (1966)ರವರ ಪ್ರಕಾರ "ಇಬ್ಬರು ಇಲ್ಲವೇ ಇಬ್ಬರಿಗಿಂತ ಹೆಚ್ಚು ಜನರು ಸೇರಿ ಪರಸ್ಪರ ಚಟುವಟಿಕೆಗಳಲ್ಲಿ ಪ್ರಭಾವ ಉಂಟಾದಾಗ ಸಾಮಾಜಿಕ ಸಮೂಹವು ಏರ್ಪಡುತ್ತದೆ".

ಉ) ಎಲಿಯಟ್ ಮತ್ತು ಮೆರಿಲ್ಲ್‌ರವರ ಪ್ರಕಾರ "ಅಧಿಕ ಕಾಲಾವಧಿಯವರೆಗೆ ಸಂಪರ್ಕ ಹೊಂದಿದ್ದು ಸಾಮಾನ್ಯ ಕ್ರಿಯೆ ಹಾಗೂ ಉದ್ದೇಶಕ್ಕನುಸಾರವಾಗಿ ಕಾರ್ಯಕೈಗೊಳ್ಳುವ ಇಬ್ಬರು ಇಲ್ಲವೇ ಅಧಿಕ ವ್ಯಕ್ತಿಗಳಿಂದ ಕೂಡಿರುವ ಗುಂಪಿಗೆ ಸಾಮಾಜಿಕ ಸಮೂಹ ಎನ್ನುವರು."

### ಸಾಮಾಜಿಕ ಸಮೂಹದ ಲಕ್ಷಣಗಳು

ಸಾಮಾಜಿಕ ಸಮೂಹದ ಲಕ್ಷಣಗಳನ್ನು ಕಂಡುಹಿಡಿಯುವುದು ಅಷ್ಟೊಂದು ಸುಲಭ ಸಾಧ್ಯವಿಲ್ಲವಾದರೂ ಮೇಲೆ ವಿವರಿಸಿದ ವಿವಿಧ ವ್ಯಾಖ್ಯೆಗಳನ್ನು ಸೂಕ್ಷ್ಮವಾಗಿ ಪರಿಗಣಿಸಿದಾಗ ಅದರ ಸಾಮಾನ್ಯ ಲಕ್ಷಣಗಳನ್ನು ತಿಳಿದುಕೊಳ್ಳಲು ಸಾಧ್ಯ. ಸಮಾನ ಉದ್ದೇಶ, ಸಾಮಾಜಿಕ ಅಂತರ ಕ್ರಿಯೆ, ಗಾತ್ರದ ಕಲ್ಪನೆ, ಏಕತೆಯ ಭಾವನೆ ಹಾಗೂ ಅಂಗೀಕೃತವಾದ ಕಟ್ಟಳೆಗಳ ಎಲ್ಲ ಸಾಮಾಜಿಕ ಸಮೂಹಗಳು ಸಾಮಾನ್ಯಗಳೆಂದು ಭಾವಿಸಬಹುದು.

i **ಸಮಾನ ಉದ್ದೇಶಗಳು :** ಯಾವುದಾದರೊಂದು ಜನರ ಗುಂಪು ಸಾಮಾಜಿಕ ಸಮೂಹವೆಂದು ಕರೆಯಿಸಿಕೊಳ್ಳಬೇಕಾದರೆ ಆ ಗುಂಪಿನಲ್ಲಿ ವಾಸಿಸುವ ಜನರು ಸಮಾನ ಉದ್ದೇಶಗಳನ್ನು ಹೊಂದಿರುವುದು ಅತಿ ಅವಶ್ಯಕವಾಗಿದೆ. ಪ್ರತಿಯೊಂದು ಸಮೂಹಕ್ಕೂ ಒಂದಿಲ್ಲೊಂದು ಉದ್ದೇಶವಿರುತ್ತದೆ. ಅದರಂತೆ ಪರಸ್ಪರ ತಿಳುವಳಿಕೆ ಮತ್ತು ಸಮಾನ ಉದ್ದೇಶಗಳನ್ನು ಹೊಂದಿರುತ್ತಾರೆ.

ii **ಸಾಮಾಜಿಕ ಅಂತರಕ್ರಿಯೆ :** ಸಾಮಾಜಿಕ ಸಮೂಹಗಳು ಅಂತರ ಕ್ರಿಯೆಗಳನ್ನು ಒಳಗೊಂಡಿರುತ್ತವೆ. ಇವು ಸಹಕಾರ, ಸ್ಪರ್ಧೆ, ತಿಕ್ಕಾಟ, ಹೊಂದಾಣಿಕೆ ಮುಂತಾದ ಪ್ರಕ್ರಿಯೆಗಳಲ್ಲಿ ಯಾವುದಾದರೊಂದು ಸ್ವರೂಪವನ್ನು ತಾಳಿರಬಹುದು. ಸಾಮಾಜಿಕ ಅಂತರಕ್ರಿಯೆಯೇ ಇಲ್ಲವೇ ಸಾಮಾಜಿಕ ಸಂಬಂಧವೇ ಸಾಮೂಹಿಕ ಜೀವನ ಎನ್ನುವರು.

iii **ಗಾತ್ರದ ಕಲ್ಪನೆ :** ಪ್ರತಿಯೊಂದು ಸಮೂಹವು ತನ್ನದೇ ಆದ ಆಕಾರ, ರಚನೆಯನ್ನು ಹೊಂದಿರುತ್ತದೆ. ಪ್ರತಿಯೊಂದು ಸಮೂಹವು ಇಬ್ಬರಿಗಿಂತ ಹೆಚ್ಚು ಜನರನ್ನು ಹೊಂದಿರುತ್ತದೆ. ಅಂದರೆ ಸಮೂಹದ ಗಾತ್ರ ಚಿಕ್ಕದಾಗಿರಬಹುದು ಇಲ್ಲವೇ ದೊಡ್ಡದಾಗಿರಬಹುದು ಎಂದು ತಿಳಿದುಬರುತ್ತದೆ.

iv **ಏಕತೆಯ ಭಾವನೆ :** ಸಮೂಹದಲ್ಲಿ ವಾಸಿಸುವ ಜನರು ಸಾಮಾನ್ಯವಾಗಿ ತಮ್ಮೊಳಗೆ ಒಗ್ಗಟ್ಟಿನಿಂದ ಏಕತೆಯ ಭಾವನೆಯನ್ನು ಬೆಳೆಸಿಕೊಂಡಿರಬೇಕಾಗುತ್ತದೆ. ತಾವೆಲ್ಲರೂ ಒಂದೇ ಸಮೂಹಕ್ಕೆ ಸೇರಿದವರೆಂಬ ಭಾವನೆಯು ಸಮೂಹದ ಏಳ್ಗೆಗಾಗಿ ಅತಿ ಅವಶ್ಯವಾದದ್ದು.

v **ಅಂಗೀಕೃತವಾದ ಕಟ್ಟಳೆಗಳು :** ಪ್ರತಿಯೊಂದು ಸಮೂಹಕ್ಕೂ ಅಂಗೀಕೃತವಾದ ಕಟ್ಟಳೆಗಳು ಇರುತ್ತವೆ. ಸಾಂಪ್ರದಾಯಿಕವಾಗಿ ಬಂದ ನಿಯಮಗಳಿಗೆ ಕಾನೂನಿನ ಬಲವಿಲ್ಲದಿರಬಹುದು. ಈ ಕಟ್ಟಳೆ, ನಿಯಮ, ಪದ್ಧತಿಗಳಿಗೆ ಅನುಗುಣವಾಗಿ ಸಮೂಹದಲ್ಲಿ ವಾಸಿಸುವ ಎಲ್ಲ ವ್ಯಕ್ತಿಗಳು ನಡೆದುಕೊಳ್ಳಬೇಕು. ಇವುಗಳನ್ನು ಉಲ್ಲಂಘಿಸಿದರೆ ಸಮೂಹವು ಶಿಕ್ಷೆ ವಿಧಿಸುತ್ತದೆ. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸಾಮಾಜಿಕ ನಿಯಮಗಳನ್ನು ಸರಿಯಾಗಿ ಪಾಲಿಸಬೇಕಾಗುತ್ತದೆ. ಇಂತಹ ಕಟ್ಟಳೆಗಳು ಇಲ್ಲದಿದ್ದರೆ ಶಿಸ್ತಿನ ಸಾಮಾಜಿಕ ಜೀವನ ಅಸಾಧ್ಯ.

vi **ಪ್ರೀತಿ–ವಿಶ್ವಾಸಗಳ ಬಂಧನ :** ಸಮೂಹದಲ್ಲಿ ವಾಸಿಸುವ ಜನರು ಹೆಚ್ಚಾಗಿ ಪ್ರೀತಿ, ವಿಶ್ವಾಸಗಳಿಂದ ಪರಸ್ಪರ ಬಂಧಿತರಾಗುತ್ತಾರೆ. ಕುಟುಂಬದಲ್ಲಿ ಪತಿ, ಪತ್ನಿ ಹಾಗೂ ಮಕ್ಕಳು, ಪಾಠಶಾಲೆಯಲ್ಲಿ ಗುರು–ಶಿಷ್ಯರು ಪ್ರೀತಿ ವಿಶ್ವಾಸಗಳಿಂದ ಬಂಧಿತರಾಗುತ್ತಾರೆ.

### ಸಾಮಾಜಿಕ ಸಮೂಹಗಳ ವರ್ಗೀಕರಣ

ಇವುಗಳನ್ನು ಎರಡು ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ.

(1) ಪ್ರಾಥಮಿಕ ಸಮೂಹ (2) ಆನುಷಂಗಿಕ

Digitised by Bharatavani, CIIL

## ೧) ಪ್ರಾಥಮಿಕ ಸಮೂಹ

"ಯಾವ ಸಮೂಹದಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವೆ ಅನ್ಯೋನ್ಯವಾದ ನೇರ ಸಂಬಂಧಗಳು ಏರ್ಪಟ್ಟಿರುತ್ತದೆಯೋ ಅಂತಹ ಸಮೂಹಗಳನ್ನು ಪ್ರಾಥಮಿಕ ಸಮೂಹ ಎನ್ನುವರು.

ಒಂದು ಆಟಗಾರರ ಸಂಘ ಇಲ್ಲವೇ ಗೆಳೆಯರ ಗುಂಪಿನಂತೆ ಇರುವುದೇ ಪ್ರಾಥಮಿಕ ಸಮೂಹ. ಕುಟುಂಬ ಪ್ರಾಥಮಿಕ ಸಮೂಹಕ್ಕೆ ಒಳ್ಳೆಯ ಉದಾಹರಣೆ.

### i) ಬಾಹ್ಯ ಲಕ್ಷಣಗಳು

1) **ಚಿಕ್ಕ ಗಾತ್ರ :** ಪ್ರಾಥಮಿಕ ಸಮೂಹಗಳು ಗಾತ್ರದಲ್ಲಿ ಚಿಕ್ಕದಾಗಿರುತ್ತದೆ. ಕಿರಿದಾದ ಸಮೂಹವು ಸದಸ್ಯರಲ್ಲಿ ಭಾವನಾತ್ಮಕ ಐಕ್ಯತೆಯನ್ನು ಹುಟ್ಟಿಸಿ ಇಡೀ ಸಾಮಾಜಿಕ ಸಂಬಂಧಗಳಿಗೆ ತಳಹದಿಯನ್ನು ಹಾಕಿಕೊಡುತ್ತದೆ.

2) **ಭೌತಿಕ ಸಾಮೀಪ್ಯ :** ಪ್ರಾಥಮಿಕ ಸಮೂಹದ ಸದಸ್ಯರು ಭೌತಿಕವಾಗಿ ಸಾಮೀಪ್ಯ ಹೊಂದುವುದು ಅತೀ ಅವಶ್ಯಕವಾಗಿದೆ. ಅನ್ಯೋನ್ಯತೆ ಬೆಳೆದು ಬರಲು ವ್ಯಕ್ತಿಗಳ ನಡುವೆ ಭೌತಿಕ ಸಾತತ್ಯ ಇರಲೇಬೇಕು ಮತ್ತು ಅನ್ಯೋನ್ಯತೆಯು ಸಹಜವಾಗಿ ಬೆಳೆದುಬರುತ್ತದೆ.

3) **ಸ್ಥಿರತೆ :** ಪ್ರಾಥಮಿಕ ಸಮೂಹಗಳಲ್ಲಿ ಎಲ್ಲಿಯವರೆಗೆ ಸಮೂಹಗಳು ತಮ್ಮ ಚಿಕ್ಕ ಗಾತ್ರವನ್ನು ಮುಂದುವರೆಸಿಕೊಂಡು ಬರುತ್ತವೆಯೋ ಅಲ್ಲಿಯವರೆಗೆ ಈ ಗುಂಪುಗಳು ಸ್ಥಿರವಾಗಿ ಉಳಿಯುತ್ತವೆ.

4) **ಸ್ಥಿರವಾದ ಬಾಂಧವ್ಯ :** ಅನ್ಯೋನ್ಯತೆಯು ಜನರಲ್ಲಿ ಬೆಳೆಯಬೇಕಾದರೆ ಸದಸ್ಯರು ಪರಸ್ಪರ ಸ್ಥಿರವಾದ ಸಂಬಂಧಗಳನ್ನು ಹೊಂದುವುದು ಅಗತ್ಯವಾಗಿದೆ.

### ii) ಆಂತರಿಕ ಲಕ್ಷಣಗಳು

1. **ಸಮಾನ ಉದ್ದೇಶ :** ಪ್ರಾಥಮಿಕ ಸಮೂಹದ ಸದಸ್ಯರು ಹೆಚ್ಚಾಗಿ ಸಮಾನ ಉದ್ದೇಶ ಹಾಗೂ ಗುರಿಗಳನ್ನು ಹೊಂದಿರುತ್ತಾರೆ ಮತ್ತು ಎಲ್ಲ ಸದಸ್ಯರು ಕೆಲವು ಸಮಾನ ಉದ್ದೇಶಗಳಿಗಾಗಿ ಶ್ರಮಿಸುತ್ತಾರೆ.

2. **ಸಂಬಂಧದ ಗುರಿ :** ಸದಸ್ಯರ ನಡುವೆ ಸಂಬಂಧಗಳು ವ್ಯಾಪಾರೀ ದೃಷ್ಟಿಕೋನದಿಂದ ಸ್ಥಾಪಿತವಾಗಿರದೇ ಆತ್ಮೀಯ ದೃಷ್ಟಿಯಿಂದ, ಉಂಟಾಗಿರುತ್ತವೆ. ಆದರೆ ಸಂಬಂಧಗಳು ಸಾಧನಗಳಾಗಿರದೆ ಗುರಿಯೇ ಆಗಿರುತ್ತವೆ.

3. **ವೈಯಕ್ತಿಕ ಸಂಬಂಧ :** ಪ್ರಾಥಮಿಕ ಸಮೂಹಗಳಲ್ಲಿ ವಾಸಿಸುವ ಸದಸ್ಯರ ಸಂಬಂಧ ವೈಯಕ್ತಿಕವಾಗಿರುತ್ತದೆ. ಪ್ರಾಥಮಿಕ ಸಂಬಂಧಗಳು ವ್ಯಕ್ತಿಗೆ ಸಂಬಂಧಿಸಿವೆ. ಆ ವ್ಯಕ್ತಿಗಳು ಇರುವುದ ರಿಂದಲೇ ಆ ಸಂಬಂಧಗಳು ಇರುತ್ತವೆ.

4. **ಸರ್ವಾಂಗೀಯ ಸಂಬಂಧ :** ಇದರಲ್ಲಿ ಸದಸ್ಯರು ಪರಸ್ಪರ ಬಹುಮುಖ ವ್ಯಕ್ತಿತ್ವದ ಪರಿಚಯ ಪಡೆಯುತ್ತಾರೆ. ಒಬ್ಬರು ಮತ್ತೊಬ್ಬರನ್ನು ಸಂಪೂರ್ಣವಾಗಿ ತಿಳಿದುಕೊಂಡಿರುತ್ತಾರೆ. ಅವರಲ್ಲಿ ಆತ್ಮೀಯತೆ, ನಂಬಿಕೆ, ತಾವೆಲ್ಲರೂ ಒಂದೇ ಎಂಬ ಭಾವನೆಗಳು ಉಂಟಾಗುತ್ತವೆ.

### ಪ್ರಾಥಮಿಕ ಸಮೂಹದ ಮಹತ್ವ

- ವ್ಯಕ್ತಿತ್ವ ವಿಕಾಸವಾಗುತ್ತದೆ
- ಮಾನಸಿಕ ಅಗತ್ಯಗಳ ಪೂರೈಕೆ
- ಕಾರ್ಯದಕ್ಷತೆ ವೃದ್ಧಿ
- ಸಮಾಜ ರಚನೆಗೆ ಸುಭದ್ರತೆ
- ಸಾಮಾಜಿಕ ನಿಯಂತ್ರಣ

## ೨) ಆನುಷಂಗಿಕ ಸಮೂಹ

ಅನ್ಯೋನ್ಯ ಸಂಬಂಧಗಳು ಯಾವ ಸಮೂಹಗಳಲ್ಲಿ ಅಬಾಧಿತವಾಗಿರುತ್ತದೆಯೋ ಅಂತಹ ಸಮೂಹಗಳಿಗೆ ಮಾಧ್ಯಮಿಕ ಸಮೂಹಗಳೆಂದು ಕರೆಯುವರು. ಪ್ರಾಥಮಿಕ ಸಮೂಹಗಳಿಗೆ ವಿರುದ್ಧ ಲಕ್ಷಣಗಳನ್ನು ಹೊಂದಿರುವ ಸಮೂಹಗಳಿಗೆ ಆನುಷಂಗಿಕ ಸಮೂಹಗಳೆಂದು ಕರೆಯುವರು.

ಉದಾಹರಣೆ-ಕ್ರೀಡಾ ತಂಡಗಳು, ಮನರಂಜನೆ ಸಮೂಹಗಳು ಇತ್ಯಾದಿ.

### (I) ಬಾಹ್ಯ ಲಕ್ಷಣಗಳು

a. **ಹೆಚ್ಚಿನ ಗಾತ್ರ :** ಆನುಷಂಗಿಕ ಸಮೂಹಗಳು ಪ್ರಾಥಮಿಕ ಸಮೂಹಗಳಿಗಿಂತ ಆಕಾರದಲ್ಲಿ ಹೆಚ್ಚು ಗಾತ್ರವನ್ನು ಹೊಂದಿರುತ್ತವೆ. ಜನರು ಅಧಿಕ ಪ್ರಮಾಣದಲ್ಲಿ ತಮ್ಮ ವಿವಿಧ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಮಾಧ್ಯಮಿಕ ಸಮೂಹ ಸದಸ್ಯತ್ವವನ್ನು ಸ್ವೀಕರಿಸುತ್ತಾರೆ.

b. **ಭೌತಿಕ ಸಂಬಂಧ :** ಮಾಧ್ಯಮಿಕ ಸಮೂಹಗಳು ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದರಿಂದ ಜನರಲ್ಲಿ ನೇರವಾದ ಭೌತಿಕ ಸಂಬಂಧಗಳು ಏರ್ಪಡಲಾರವು. ಹೀಗಾಗಿ ಅವರು ಸಂಪರ್ಕಸಾಧನಗಳ ಸಹಾಯದಿಂದ ಅಪ್ರತ್ಯಕ್ಷವಾಗಿಯೇ ತಮ್ಮ ಎಲ್ಲ ವ್ಯವಹಾರಗಳನ್ನು ಸುಲಭವಾಗಿ ನಿರ್ವಹಿಸುತ್ತಾರೆ.

c. **ಅಸ್ಥಿರ ಬಾಂಧವ್ಯ :** ಮಾಧ್ಯಮಿಕ ಸಮೂಹಗಳು ಪ್ರಾಥಮಿಕ ಸಮೂಹಗಳಂತೆ ಅಷ್ಟೊಂದು ಸ್ಥಿರವಾದವುಗಳಲ್ಲ. ಮಾಧ್ಯಮಿಕ ಸಮೂಹಗಳಲ್ಲಿ ವ್ಯಕ್ತಿಗಳು ತಮ್ಮ ವೈಯಕ್ತಿಕ ಉದ್ದೇಶಗಳನ್ನು ಇಟ್ಟುಕೊಂಡು ಒಪ್ಪಂದ ಕರಾರುಗಳ ಮೇಲೆ ಸಂಬಂಧಗಳನ್ನು ಬೆಳೆಸಿಕೊಂಡಿರುತ್ತಾರೆ.

### (II) ಆಂತರಿಕ ಲಕ್ಷಣಗಳು

i. **ಅಸಮಾನ ಉದ್ದೇಶ :** ಆನುಷಂಗಿಕ ಸಮೂಹದ ಸದಸ್ಯರು ಹೆಚ್ಚಾಗಿ ಸಮಾನ ಉದ್ದೇಶ ಹಾಗೂ ಗುರಿಗಳನ್ನು ಹೊಂದಿರಲಾರರು. ತಮ್ಮ ಸಾಮರ್ಥ್ಯವನ್ನು ಹಾಗೆಯೇ ಇಟ್ಟುಕೊಂಡು ಸಮೂಹದ ಸದಸ್ಯರಾಗಿರುತ್ತಾರೆ. ಎಲ್ಲಿಯವರೆಗೆ ತಮ್ಮ ಸ್ವಾರ್ಥವನ್ನು ಸಾಧಿಸಲಿಕ್ಕೆ ಅವರಿಗೆ ಸಾಧ್ಯವಾಗುತ್ತದೆಯೋ ಅಲ್ಲಿಯವರೆಗೆ ಅವರು ಆ ಸಮೂಹದ ಸದಸ್ಯರಾಗಿ ಮುಂದುವರಿಯುತ್ತಾರೆ.

ii. **ಸಂಬಂಧವೇ ಸಾಧನ :** ಆನುಷಂಗಿಕ ಸಂಬಂಧಗಳು ಕಟ್ಟುನಿಟ್ಟಾದ ಒಪ್ಪಂದದ ಕರಾರುಗಳ ಮೇಲೆ ನಿಂತಿರುತ್ತವೆ. ಸದಸ್ಯರು ಲಾಭದ ದೃಷ್ಟಿಯಿಂದಲೇ ಒಟ್ಟುಗೂಡಿರುತ್ತಾರೆ. ಇಲ್ಲಿ ಪ್ರೀತಿ ವಿಶ್ವಾಸಗಳಿಗೆ ಹೆಚ್ಚಿನ ಮಹತ್ವವಿಲ್ಲ.

iii. **ಅವೈಯಕ್ತಿಕ ಸಂಬಂಧ :** ಸಮೂಹದ ಸದಸ್ಯರ ಮಧ್ಯದಲ್ಲಿ ವೈಯಕ್ತಿಕ ಹಾಗೂ ಆತ್ಮೀಯ ಸಂಬಂಧಗಳು ಇರಲಾರವು. ನಮ್ಮ ದೃಷ್ಟಿ


Digitised by Bharatavani, CIIL

ವಸ್ತುಗಳ ಮೇಲೆ ಇರುತ್ತದೆಯೇ ಹೊರತು ವ್ಯಕ್ತಿಯ ಮೇಲೆ ಅಲ್ಲ.

iv. **ಸಂಬಂಧಗಳ ನಿಯಂತ್ರಣದಲ್ಲಿ ಸಡಿಲತೆ:** ಆನುಷಂಗಿಕ ಸಮೂಹಗಳಲ್ಲಿಯ ಸದಸ್ಯರ ಸಂಬಂಧಗಳು ಅಸ್ಥಿರವುಳ್ಳವುಗಳಾಗಿದ್ದರಿಂದ ನಿಕಟವಿಲ್ಲದ್ದಕ್ಕಾಗಿ ಪ್ರಾಥಮಿಕ ಸಮೂಹಗಳಂತೆ ಇವು ತಮ್ಮ ಸದಸ್ಯರನ್ನು ಎಲ್ಲ ರೀತಿಯಿಂದ ತಮ್ಮ ಬಿಗುವಿನಲ್ಲಿ ಇಡಲಾರವು.

### (III) ಆನುಷಂಗಿಕ ಸಮೂಹಗಳ ಮಹತ್ವ

- ಪ್ರಾಥಮಿಕ ಸಮೂಹಗಳಂತೆ ಆನುಷಂಗಿಕ ಸಮೂಹಗಳು ಕೂಡ ವ್ಯಕ್ತಿಗೆ ಸಾಮಾಜೀಕರಣಕ್ಕೆ ಸ್ವಲ್ಪಮಟ್ಟಿಗೆ ಸಹಾಯ ಮಾಡುತ್ತವೆ.
- ಪ್ರಾಥಮಿಕ ಸಮೂಹಗಳಲ್ಲಿ ರೂಪುಗೊಂಡ ವ್ಯಕ್ತಿಯ ವ್ಯಕ್ತಿತ್ವವು ಆನುಷಂಗಿಕ ಸಮೂಹಗಳ ಸಹಾಯದಿಂದ ಮುಂದುವರಿದ ಬೆಳವಣಿಗೆ ಹೊಂದುತ್ತದೆ.
- ಆನುಷಂಗಿಕ ಸಮೂಹಗಳು ವ್ಯಕ್ತಿಗೆ ವಿವಿಧ ಬಗೆಯ ಅವಕಾಶಗಳನ್ನು ಒದಗಿಸಿ ಆತನಲ್ಲಿರುವ ವಿಶಿಷ್ಟ ಲಕ್ಷಣಗಳನ್ನು ಹೊರಹಾಕಲು ಸಹಾಯ ಸಲ್ಲಿಸುತ್ತವೆ.
- ವ್ಯಕ್ತಿಯ ವಿವಿಧ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಆನುಷಂಗಿಕ ಸಮೂಹಗಳು ಸಹಾಯ ಮಾಡುತ್ತದೆ.

– ಎಚ್.ಎಂ.ಶೈ.

## ಸಾಮಾಜಿಕ ಸ್ತರೀಕರಣ ಮತ್ತು ಶಿಕ್ಷಣ

ವೈವಿಧ್ಯತೆಯು ನಿಸರ್ಗ ನಿಯಮ. ಮಾನವ ಸಮಾಜದ ಬಗೆಗೂ ಈ ಮಾತು ನಿಜ. ಸಮಾಜವು ಆದಿ ಕಾಲದಿಂದಲೂ ಏಕರೂಪತೆಯನ್ನು ಹೊಂದಿರುವುದಕ್ಕಿಂತ ಹೆಚ್ಚಾಗಿ ವೈವಿಧ್ಯತೆಯನ್ನು ಹೊಂದಿದುದಾಗಿದ್ದು ಉಗಮವಾದಾಗಿನಿಂದಲೂ ಒಂದಲ್ಲ ಒಂದು ರೀತಿಯ ಸ್ತರೀಕರಣಕ್ಕೆ (ಸ್ತರವ್ಯವಸ್ಥೆಗೆ) ಒಳಗಾಗಿದೆ. ಸ್ತರೀಕರಣದ ವಿನ್ಯಾಸ ಕಾಲ–ಕಾಲಕ್ಕೆ ಸಮಾಜದ ಅಗತ್ಯತೆಗೆ ತಕ್ಕಂತೆ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಬಂದಿದೆ. ಜನರ ಶಾರೀರಿಕ ರೂಪ, ಮಾನಸಿಕ ಪ್ರವೃತ್ತಿ, ಬೌದ್ಧಿಕ ಶಕ್ತಿ ಮತ್ತು ದೈಹಿಕ ಶಕ್ತಿಯಲ್ಲಿ ವ್ಯತ್ಯಾಸವಿರುವಂತೆ ಅವರ ಆರ್ಥಿಕ, ನೈತಿಕ, ತಾತ್ವಿಕ ಹಾಗೂ ಮಾನಸಿಕ ಶಕ್ತಿ–ಪ್ರವೃತ್ತಿಗಳಲ್ಲಿ ಮಹದಂತರವಿದೆ. ವೈವಿಧ್ಯತೆ ಮತ್ತು ಅಸಮಾನತೆ ಮಾನವ ಸಮಾಜದ ಆಂತರಿಕ ಗುಣಗಳಾಗಿದ್ದು ಇದು ಸಾಮಾಜಿಕ ಸ್ತರೀಕರಣಕ್ಕೆ ದಾರಿಮಾಡಿಕೊಟ್ಟಿದೆ.

'ಸಾಮಾಜಿಕ ಅಸಮಾನತೆ' ಎಂಬುದು ಸಮಾಜದಷ್ಟೇ ಪುರಾತನವಾದುದು. ಅಧಿಕಾರ, ಅಂತಸ್ತು, ಸಂಪತ್ತು, ಆಸ್ತಿಯ ಒಡೆತನ ಮುಂತಾದುವುಗಳ ಅಸಮಾನ ಹಂಚಿಕೆಯಿಂದಾಗಿ ಸಮಾಜದಲ್ಲಿ ದೌರ್ಜನ್ಯ, ಶೋಷಣೆ, ಸಂಘರ್ಷ ಮುಂತಾದ ಸಾಮಾಜಿಕ ಸಮಸ್ಯೆಗಳು ಉದ್ಭವವಾಗಿರುವುದನ್ನು ಕಾಣಬಹುದು. ಇತಿಹಾಸ ಕಾಲದಿಂದಲೂ ಸಾಮಾಜಿಕ ಅಸಮಾನತೆಯನ್ನು ಸಾಮಾಜಿಕ ರಚನೆಯ ಒಂದು ಅಂಗವಾಗಿಯೇ ಬೆಳೆಸಿಕೊಂಡು ಬಂದಿರುವುದರಿಂದ ಅದು ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುತ್ತಾ ಬಂದಿದೆ. ಹೀಗಾಗಿ ಸಾಮಾಜಿಕ ಅಸಮಾನತೆಯ ಪ್ರಕಟಿತ ರೂಪವೇ 'ಸಾಮಾಜಿಕ ಸ್ತರೀಕರಣ' ಅಥವಾ 'ಸಾಮಾಜಿಕ ಸ್ತರ ವ್ಯವಸ್ಥೆ' ಎಂದು ಕರೆಯಲಾಗುತ್ತದೆ.

ಶಿಕ್ಷಣವು ಆದಿಕಾಲದಿಂದಲೂ ಸಮಾಜದ ಅಸ್ಥೆಯ ವಿಷಯವಾಗಿ ಬೆಳೆದು ಬಂದಿದೆ. ಆದರೆ ಶಿಕ್ಷಣದ ರೂಪ–ಸ್ವರೂಪ ಆಯಾಯ ಕಾಲಮಾನದ ಸಾಮಾಜಿಕ ವಿಕಾಸ ಮತ್ತು ಅಗತ್ಯತೆಗಳಿಗೆ ತಕ್ಕಂತೆ ಬದಲಾಗುತ್ತಾ ಬಂದಿದೆ. ಮಾನವ ತಪ್ಪಾಗಿ ಕಲಿತದ್ದನ್ನು, ಅನುಭವಿಸಿದ್ದನ್ನು ದೂರಮಾಡಿ, ಸರಿಯಾದುದನ್ನು ಆತನಿಗೆ ತಿಳಿಸಿಕೊಡುವಲ್ಲಿ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಇಂದಿನ ಆಧುನಿಕ ದಿನಗಳಲ್ಲಿ ಹೆಚ್ಚು–ಹೆಚ್ಚು ವೈವಿಧ್ಯತೆ ರೂಢಿಸಿಕೊಳ್ಳುತ್ತಿರುವ, ಅದರಂತೆ ಬದುಕುತ್ತಿರುವ ಮಾನವನನ್ನು ಶಿಕ್ಷಣ ಹೆಚ್ಚು ಸಂಘಟಿತನಾಗುವಂತೆ ಮಾಡಿದೆ.

ಶಿಕ್ಷಣ ಮಾನವ ಸಮಾಜದ ಉಸಿರಾಗಿದ್ದು "ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಯ ಸಾಧನ" ಎಂಬುದಾಗಿ ಪರಿಗಣಿಸಬಹುದು. ಇಂದಿನ ಆಧುನಿಕ ಯುಗದಲ್ಲಿಯೂ ಮಾನವ ಜೀವನದ ದಿಕ್ಕು–ದೆಸೆ, ಗುರಿ–ಗಂತವ್ಯಗಳನ್ನು ನಿರ್ಧರಿಸುವ ಪ್ರಭಾವೀ ಮಾಪನವೇ ಶಿಕ್ಷಣ. ಶೈಕ್ಷಣಿಕ ಪ್ರಗತಿ ಅಥವಾ ಮುನ್ನಡೆ ಇಂದು ಯಾವುದೇ ರಾಷ್ಟ್ರದ ಬೆಳವಣಿಗೆಗೆ ಪೂರ್ವಭಾವಿಯಾಗಿ ಬೇಕಾಗಿರುವ ಅವಶ್ಯಕತೆಯಾಗಿದೆ. ದೇಶದ ಅಭ್ಯುದಯಕ್ಕೆ ಅಮೂಲ್ಯ ಸಂಪತ್ತಾಗಿರುವ ಮಾನವ ಸಂಪನ್ಮೂಲವನ್ನು ಪ್ರತಿಭಾವಂತರನ್ನಾಗಿ, ಜವಾಬ್ದಾರಿಯುತ ಪ್ರಜೆಗಳನ್ನಾಗಿ ಬೆಳೆಸುವಲ್ಲಿ ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕಿ ವ್ಯಕ್ತಿಯ ಸ್ಥಾನ–ಮಾನ ಉತ್ತಮೀಕರಿಸುವಲ್ಲಿ ಯಶಸ್ವಿ ಸಾಧನವಾಗಿ ಕೆಲಸ ಮಾಡುತ್ತದೆ.

### ಸಾಮಾಜಿಕ ಸ್ತರೀಕರಣ

ಮಾನವ ಸಮಾಜವು ಆದಿಯಿಂದಲೂ ಒಂದಲ್ಲ ಒಂದು ರೀತಿಯ ಸ್ತರೀಕರಣಕ್ಕೆ ಒಳಗಾಗಿದೆ. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ಬಗೆಯ ಅವಕಾಶ, ಸ್ಥಾನ–ಮಾನ ನೀಡಲಾಗದಿದ್ದುದರಿಂದ ಅವರನ್ನು ವಿಭಿನ್ನ ಸ್ತರಗಳಾಗಿ ವಿಂಗಡಿಸಲಾಗಿದೆ. ಆರಂಭದಲ್ಲಿ ಈ ವಿಂಗಡಣೆ ಸರಳ ಶ್ರಮವಿಭಜನೆಯ ತತ್ವವನ್ನಾಧರಿಸಿತ್ತು. ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ ಸಮಾಜಗಳಲ್ಲೂ ಅವುಗಳ ಸದಸ್ಯರನ್ನು ಮೇಲು–ಕೀಳು, ಸರಿಸಮಾನ, ಶ್ರೇಷ್ಠ–ಕನಿಷ್ಠ, ಮಧ್ಯಮ ಎಂದು ವರ್ಗೀಕರಿಸಿ ಅವರುಗಳಿಗೆ ಬೇರೆ–ಬೇರೆ ಕಸುಬು, ಸಾಮಾಜಿಕ ಸ್ಥಾನ–ಮಾನ ಮತ್ತು ಪಾತ್ರಗಳನ್ನು ನೀಡುವ ಕ್ರಮವಿದೆ. ಹೀಗೆ ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ಅಥವಾ ಅವರನ್ನು ಏಣಿ–ಶ್ರೇಣಿಗಳಿಂದ ಕೂಡಿರುವ ವಿಭಿನ್ನ ಸ್ಥಾನ–ಮಾನಗಳಲ್ಲಿ ಹಂಚಿಹಾಕುವ ಏರ್ಪಾಡಿಗೆ ಸಾಮಾಜಿಕ ಸ್ತರೀಕರಣ ಅಥವಾ ಸ್ತರವ್ಯವಸ್ಥೆ ಎನ್ನಲಾಗುತ್ತದೆ. ಪ್ರಸಿದ್ಧ ಸಮಾಜಶಾಸ್ತ್ರಜ್ಞರಾದ **ಆಗ್ಬರ್ನ್ ಮತ್ತು ನಿಮ್ಕಾಫ್** ರವರು ಅಭಿಪ್ರಾಯಪಟ್ಟಿರುವಂತೆ **"ವ್ಯಕ್ತಿಗಳು ಹಾಗೂ ಸಮೂಹಗಳನ್ನು ಹೆಚ್ಚು ಕಡಿಮೆ ಶಾಶ್ವತವಾದ ಏಣಿ–ಶ್ರೇಣಿಗಳನ್ನೊಳಗೊಂಡ ಅಂತಸ್ತಿನ ಆಧಾರದ ಮೇಲೆ ವರ್ಗೀಕರಿಸುವ ಪ್ರಕ್ರಿಯೆಯನ್ನು ಸಾಮಾಜಿಕ ಸ್ತರೀಕರಣ ಎಂದಿದ್ದಾರೆ"**.

ಸಾಮಾಜಿಕ ಸ್ತರೀಕರಣದಲ್ಲಿ ಮುಖ್ಯವಾಗಿ ಎರಡು ರೀತಿಯ ವ್ಯವಸ್ಥೆಗಳನ್ನು ಗುರ್ತಿಸಬಹುದು. ಭಾರತದಲ್ಲಿ ಸಾಮಾಜಿಕ ಸ್ತರೀಕರಣ ಹುಟ್ಟಿದ ಜಾತಿಯ ಆಧಾರದ ಮೇಲೆ ಆಗಿದೆ. ಇದು ಭಾರತಕ್ಕೆ ವಿಶಿಷ್ಟವಾದ ವ್ಯವಸ್ಥೆ. ಇದನ್ನು ಜಾತಿ ವ್ಯವಸ್ಥೆ ಎನ್ನುತ್ತೇವೆ. ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಸಾಮಾಜಿಕ ಸ್ತರೀಕರಣ ಸಾಮಾನ್ಯವಾಗಿ ಆರ್ಥಿಕ ಆಧಾರವನ್ನು ಅವಲಂಬಿಸಿದೆ. ಇದಕ್ಕೆ ವರ್ಗ ವ್ಯವಸ್ಥೆ ಎಂದು ಹೆಸರು. ಈ ಎರಡು ಆಧಾರಗಳ ಜೊತೆಗೆ ಆಫ್ರಿಕಾದ ಕೆಲವು ಸಮುದಾಯಗಳಲ್ಲಿ ಧಾರ್ಮಿಕ ಅಂಶ ಸ್ತರೀಕರಣದ ಆಧಾರವಾಗಿದೆ. ಗ್ರೀಕ್ ರೋಮನ್ನರ ಕಾಲದಲ್ಲಿ ಸಮಾಜವನ್ನು ಪ್ರತಿಷ್ಠಿತರು ಮತ್ತು ಗುಲಾಮರು ಎಂದು ಸ್ತರೀಕರಿಸಿ ಈ

Digitised by Bharatavani, CIIL

ವರ್ಗಗಳಿಗೆ ನಿರ್ದಿಷ್ಟ ಸವಲತ್ತುಗಳನ್ನು ನೀಡಲಾಗಿತ್ತು. ಕೆಲವು ಸಮಾಜಗಳಲ್ಲಿ ಉದಾಹರಣೆಗೆ ಭಾರತದಲ್ಲಿ ವ್ಯಕ್ತಿ ಅನುಸರಿಸುವ ವೃತ್ತಿ ಸ್ತರೀಕರಣದ ಆಧಾರವಾಗಿತ್ತು. ಪ್ರಾಚೀನ ಭಾರತದಲ್ಲಿ ಪ್ರಚಲಿತವಿದ್ದ ವರ್ಣ ವ್ಯವಸ್ಥೆಯಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವ್ಯವಸ್ಥೆ ವೃತ್ತಿಯನ್ನು ಆಧರಿಸಿತ್ತು. ಜನ್ಮ, ಶಿಕ್ಷಣ, ರಾಜಕೀಯ ನಿಲುವು ಸಹ ಸಾಮಾಜಿಕ ಸ್ತರದ ಆಧಾರವಾಗಬಹುದು.

ಸ್ತರೀಕರಣ ವ್ಯವಸ್ಥೆಯು ಸಾಮಾಜಿಕ ನೀತಿ ನಿಯಮಗಳಿಗೆ ಒಳಗಾಗಿದ್ದು ಸ್ಥಿರವಾಗಿರದೆ ಗತಿಶೀಲ ಸ್ವರೂಪದ್ದಾಗಿದೆ. ಇದರ ಜೊತೆಗೆ ರಾಜಕೀಯ, ಧಾರ್ಮಿಕ, ಆರ್ಥಿಕ, ಕೌಟುಂಬಿಕ ಮತ್ತಿತರ ವ್ಯವಸ್ಥೆಗಳೊಂದಿಗೆ ಬೇರ್ಪಡಿಸಲಾಗದ ಅಂತರ್ ಸಂಬಂಧವನ್ನು ಹೊಂದಿದುದಾಗಿದ್ದು ಮಾನವನ ದೈನಂದಿನ ಜೀವನದ ಮೇಲೆ ಹಾಗೂ ಅವನ ಪ್ರತಿ ಸಾಮಾಜಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತದೆ.

ಸಾಮಾಜಿಕ ಸ್ತರವ್ಯವಸ್ಥೆ ಎದ್ದು ಕಾಣುವಂತಹ ಸಾಮಾಜಿಕ ಅಸಮಾನತೆಯನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಇದನ್ನು ವ್ಯಾಖ್ಯಾನಿಸಲು ಸ್ತರೀಕರಣ ವಿನ್ಯಾಸವನ್ನು ಶ್ರೇಣಿ ವ್ಯವಸ್ಥೆಯಾಗಿ ಪರಿಗಣಿಸಲಾಗುತ್ತದೆ. ಇಡೀ ಮಾನವ ಸಮಾಜವೇ ಏಣಿ-ಶ್ರೇಣಿಗಳುಳ್ಳ ಒಂದು ವ್ಯವಸ್ಥೆಯಂತೆ ಗೋಚರಿಸುತ್ತದೆ. ಏಣಿಯೊಂದರಲ್ಲಿರುವ ವಿಭಿನ್ನ ಮೆಟ್ಟಿಲುಗಳು ನಿರ್ದಿಷ್ಟ ಅಂತರದೊಂದಿಗೆ ಒಂದರ ಮೇಲೊಂದರಂತೆ ಕಂಡ ಬರುವ ರೀತಿಯಲ್ಲಿ ಮಾನವ ಸಮೂಹಗಳು ಸಾಮಾಜಿಕ ಶ್ರೇಣಿಗಳಲ್ಲಿ ಕಂಡುಬರುತ್ತವೆ. ಈ ಸಾಮಾಜಿಕ ಏಣಿಯ ಮೆಟ್ಟಿಲುಗಳು ಜನ ಸಮೂಹಗಳು ವಿಭಿನ್ನ ಅಂತಸ್ತುಗಳೊಂದಿಗೆ, ಸ್ಥಾನಗಳೊಂದಿಗೆ, ಪಾತ್ರಗಳೊಂದಿಗೆ, ಕಾರ್ಯಭಾರ ಮತ್ತು ಹೊಣೆಗಾರಿಕೆಗಳೊಂದಿಗೆ ವಾಸಿಸುವುದರ ಸೂಚಕಗಳಾಗಿವೆ.

ಸ್ತರೀಕರಣದ ವಿನ್ಯಾಸವು ಸಾಮಾಜಿಕ ಅನಿವಾರ್ಯವೆನಿಸುವಷ್ಟು ಪ್ರಚಲಿತವಿದೆ. ಏಕೆಂದರೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಅಂತಸ್ತು, ಹೊಣೆಗಾರಿಕೆ, ಕರ್ತವ್ಯ ಮತ್ತು ಪಾತ್ರಗಳನ್ನು ನಿಗದಿಪಡಿಸುವುದು ಕನಸಿನ ಮಾತು. ಹೀಗಾಗಿ ಸ್ತರೀಕೃತ ಸಾಮಾಜಿಕ ವ್ಯವಸ್ಥೆ ಜಗತ್ತಿನ ಎಲ್ಲಾ ಮುಂದುವರಿದ, ಹಿಂದುಳಿದ, ಆದಿವಾಸಿ ಸಮಾಜಗಳಲ್ಲೂ ಕಂಡುಬರುತ್ತದೆ ಇದಕ್ಕೆ ಪ್ರಖ್ಯಾತ ಮಾನವಶಾಸ್ತ್ರಜ್ಞ **"ಗುನ್ನಾರ್ ಲ್ಯಾಂಡ ಮನ್"** ತನ್ನ ಅಧ್ಯಯನದಲ್ಲಿ ತಿಳಿಸಿರುವ ನ್ಯೂಗಿನಿಯಾದ **'ಕಿವಾಯಿ ಪಾಪುವ'** ಎಂಬ ಅತ್ಯಂತ ಸರಳ ಆದಿವಾಸಿ ಸಮುದಾಯವೇ ಉತ್ತಮ ಉದಾಹರಣೆ, ಈ ಸಮುದಾಯದಲ್ಲಿ **'ಯಾರು ಹೆಚ್ಚು ಮಂದಿ ಅತಿಥಿಗಳನ್ನು ಸತ್ಕರಿಸುವನೋ ಆತನೇ ಉಳಿದವರಿಗಿಂತ ಸಮಾಜದಲ್ಲಿ ಹೆಚ್ಚು ಉನ್ನತ ಮಟ್ಟದವ ಹಾಗೂ ಪ್ರತಿಷ್ಠಿತ ವ್ಯಕ್ತಿ'** ಎಂದು ಪರಿಗಣಿಸಲಾಗಿತ್ತು.

ಇಂದಿನ ಆಧುನಿಕ ಸಂಕೀರ್ಣ ಸಮಾಜದಲ್ಲಿ ಸಾಮಾಜಿಕ ಸ್ತರೀಕರಣ ವ್ಯವಸ್ಥೆಯು ವೈವಿಧ್ಯಮಯವೂ ಸಂಕೀರ್ಣತೆಯಿಂದ ಕೂಡಿದುದೂ ಆಗಿದೆ. ಸಮಾಜ ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗಿದಂತೆ ವ್ಯಕ್ತಿಯ ಹಾಗೂ ಸಮೂಹದ ಸಾಮಾಜಿಕ ಅಂತಸ್ತು, ಸ್ಥಾನಮಾನ, ಕರ್ತವ್ಯ ಮತ್ತು ಪಾತ್ರಗಳೂ ಕೂಡ ಸಂಕೀರ್ಣಗೊಂಡಿವೆ.

**ಶಿಕ್ಷಣ**

ಶಿಕ್ಷಣವು ಮಾನವ ಜೀವನದ ಉಸಿರು. ಆಧುನಿಕ ಸಮಾಜಗಳ ಮೂಲಭೂತ ಚಟುವಟಿಕೆಗಳಲ್ಲಿ ಒಂದಾಗಿದ್ದು, ನಾಗರಿಕ ಜೀವನದ ಸಾಧನೆ ಸಾರ್ಥಕತೆಗಳು ಶಿಕ್ಷಣವನ್ನವಲಂಬಿಸಿವೆ. ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಯ ದೃಷ್ಟಿಯಿಂದಷ್ಟೇ ಅಲ್ಲದೆ ಇಂದಿನ ಆಧುನಿಕ ಸಮಾಜದಲ್ಲಿ ಶಿಕ್ಷಣ ವ್ಯಕ್ತಿಯ ಹಾಗೂ ಸಮೂಹಗಳ ಸಾಮಾಜಿಕ ಸ್ಥಾನಮಾನ, ಅಂತಸ್ತು, ಪಾತ್ರ, ಕರ್ತವ್ಯ ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ ಮತ್ತು ಆತನ ಸಾಮಾಜಿಕ ಚಲನೆಯಲ್ಲಿ ಪ್ರಮುಖ ಪಾತ್ರವಹಿಸುವ ಪ್ರಭಾವೀ ಅಂಶವಾಗಿದೆ.

ವ್ಯಕ್ತಿಯ ವ್ಯಕ್ತಿತ್ವ ಸಂವರ್ಧನೆಯಲ್ಲಿ ಶಿಕ್ಷಣ ಎಷ್ಟು ಅಮೂಲ್ಯ ಮಾರ್ಗವೋ ಹಾಗೆಯೆ ಸಮಾಜದ ಸ್ಥಿರತೆಗೆ, ಭದ್ರತೆಗೆ ಮತ್ತು ಐಕ್ಯಮತ್ಯ ಸ್ಥಾಪನೆಗೆ ಶಿಕ್ಷಣ ಅಷ್ಟೇ ಅವಶ್ಯ. ಇಂದಿನ ಆಧುನಿಕ ಸಮಾಜದಲ್ಲಿ ಉದ್ಯೋಗ ಕ್ಷೇತ್ರದ ತರಬೇತಿ ಕೇಂದ್ರವಾಗಿ ಶಿಕ್ಷಣದ ಮಹತ್ವ ದಿನೇ ದಿನೇ ಹೆಚ್ಚುತ್ತಲಿದೆ. ಮಾತ್ರವಲ್ಲ, ಸಾಮಾಜಿಕ ಅಂತಸ್ತಿನ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ವ್ಯಕ್ತಿ ಕೆಳ ಸ್ತರದಿಂದ ಮೇಲುಸ್ತರಕ್ಕೆ ಸಾಗಿ ಹೋಗಲು ಮತ್ತು ಉತ್ತಮ ಅಂತಸ್ತು ಹಾಗೂ ಸ್ಥಾನ-ಮಾನಗಳನ್ನು ಗಳಿಸಿ ಕಾಪಾಡಿಕೊಳ್ಳಲು ಶಿಕ್ಷಣ ಪ್ರಮುಖ ಮತ್ತು ಏಕೈಕ ಸಾಧನವಾಗಿರುವುದರಿಂದ ಆ ಕ್ಷೇತ್ರವನ್ನು ಮುಕ್ತವಾಗಿರಿಸಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಅವಕಾಶ ಕಲ್ಪಿಸಿಕೊಡಬೇಕೆಂಬ ಘೋಷಣೆ ಈಗ ಎಲ್ಲೆಡೆ ಕೇಳಿಬರುತ್ತಿದೆ. ಹೀಗಾಗಿ ಜಗತ್ತಿನ ಎಲ್ಲ ದೇಶಗಳೂ ಶಿಕ್ಷಣ ಕ್ಷೇತ್ರದ ಮೇಲೆ ಹೆಚ್ಚು ಹೆಚ್ಚು ಹಣವನ್ನು ವಿನಿಯೋಗಿಸುತ್ತಿವೆ.

ಶಿಕ್ಷಣದ ಬಗ್ಗೆ ಹಲವಾರು ಸಮಾಜಶಾಸ್ತ್ರಜ್ಞರು ಸಾಕಷ್ಟು ನೀಡಿದ್ದಾರೆ. ಅದರಲ್ಲಿ ಪ್ರಖ್ಯಾತ ಸಮಾಜಶಾಸ್ತ್ರಜ್ಞರಾದ **'ಎಮೈಲ್ ಡರ್ಖಿಂ' "ಶಿಕ್ಷಣವು ತರುಣ ಪೀಳಿಗೆಯನ್ನು ಸಾಮಾಜೀಕರಿಸುವ ಪ್ರಕ್ರಿಯೆ. ಇದು ಮಗುವು ತನಗೆ ತಾನೇ ಬೆಳೆಸಿಕೊಳ್ಳಲಾಗದ ನಿರೀಕ್ಷೆ, ಸಂವೇದನೆ ಮತ್ತು ಚಟುವಟಿಕೆಗಳನ್ನು ನಿರಂತರವಾಗಿ ಮಗುವಿನ ಮೇಲೆ ಹೇರುವ ಪ್ರಯತ್ನವೇ ಆಗಿದೆ"** ಎಂದಿದ್ದಾರೆ.

ಇಂದಿನ ಆಧುನಿಕ ಸಮಾಜಗಳು ಜಾಗತೀಕರಣಕ್ಕೆ ಸಿಲುಕಲೇಬೇಕಾದ ಅನಿವಾರ್ಯತೆಯಿಂದಾಗಿ ಸಂಕೀರ್ಣಗೊಂಡಿರುವ ಅವುಗಳ ಅರ್ಥವ್ಯವಸ್ಥೆಯು ಉನ್ನತ ಶಿಕ್ಷಣ ಮತ್ತು ವಿಶೇಷ ಪರಿಣತಿಯನ್ನು ಬಹಳವಾಗಿ ಅವಲಂಬಿಸಿದೆ. ಮುಕ್ತ ಶಿಕ್ಷಣದ ಹೆಸರಿನಲ್ಲಿ ಪ್ರಜಾಸತ್ತಾತ್ಮಕ ಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಪ್ರಬಲ ಸಮೂಹಗಳು ಶಿಕ್ಷಣದ ಮೇಲೆ ಹಿಡಿತವನ್ನು ಹೊಂದಿರುವುದರಿಂದ ಶಿಕ್ಷಣ ಪಡೆಯುವುದು ಮತ್ತು ಮೇಲ್ಮುಖ ಸಾಮಾಜಿಕ ಚಲನೆ ಹೊಂದುವುದು ಸವಾಲಿನ ವಿಷಯವಾಗಿದೆ. ಆಧುನಿಕ ಉತ್ಪಾದನ ವ್ಯವಸ್ಥೆಯು ಯಂತ್ರ-ತಂತ್ರಗಳನ್ನೇ ಹೆಚ್ಚಾಗಿ ಅವಲಂಬಿಸಿರುವುದರಿಂದ ಜನರಿಗೆ ವಿಶೇಷವಾದ ಕಲೆ, ಪರಿಜ್ಞಾನ, ತರಬೇತಿ ಮತ್ತು ಅಗತ್ಯವಾಗಿದ್ದು ಇದೆಲ್ಲವಕ್ಕೂ ಶಿಕ್ಷಣ ಮೂಲವಾಗಿದೆ.

ಸಾಮಾಜಿಕ ಸ್ಥಾನ-ಮಾನಗಳನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ವ್ಯಕ್ತಿ ಮತ್ತು ಸಮೂಹಗಳಿಗೆ ಶಿಕ್ಷಣವು ಒಂದು ಸಾಧನವಾಗಿದೆ. ಮುಕ್ತ ಮತ್ತು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಬಡವರು ಮತ್ತು ತಳವರ್ಗದ ಜನ ಸಮುದಾಯಗಳ ಸಾಮಾಜಿಕ ಚಲನೆಗೆ ಶಿಕ್ಷಣ ವರದಾನವಾಗಿದೆ. ಭಾರತದಂತಹ ರಾಷ್ಟ್ರಗಳಲ್ಲಿ ಜಾಗತೀಕರಣದಿಂದಾಗಿ ಉದ್ಯೋಗ ವ್ಯವಸ್ಥೆಯು ಜಾತಿ ಮತ್ತು ವರ್ಗ ವ್ಯವಸ್ಥೆಯ ಕಪಿಮುಷ್ಟಿಯಿಂದ ಹೊರಬಂದಿದೆ. ಹೀಗಾಗಿ ಉದ್ಯೋಗಗಳಿಸಿಕೊಳ್ಳುವುದರಲ್ಲೂ ಶಿಕ್ಷಣಾರ್ಹತೆ ಪ್ರಮುಖ ಅಂಶವಾಗಿದೆ. ಶಿಕ್ಷಣದಿಂದ ಸಾಮಾಜಿಕ ಚಲನೆ ಮಾತ್ರವಲ್ಲದೆ ಭೌಗೋಳಿಕ ಹಾಗೂ ಔದ್ಯೋಗಿಕ ಚಲನೆ ಕೂಡ ಸಾಧ್ಯ. ಹೆಚ್ಚು ಶಿಕ್ಷಣ ಪಡೆದ ಜನರು ಉತ್ತಮ ಉದ್ಯೋಗಗಳ ಅವಕಾಶಕ್ಕಾಗಿ ಭೌಗೋಳಿಕವಾಗಿ ಚಲನೆ ಹೊಂದುತ್ತಾರೆ, ಇಷ್ಟಲ್ಲದೆ ಹೆಚ್ಚು-ಕಡಿಮೆ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಇಂದು ಯಾವುದೇ ತಾರತಮ್ಯವಿಲ್ಲದೆ ಸಮಾಜದ ಎಲ್ಲಾ ವರ್ಗದ ಜನರಿಗೂ ನೀಡಬೇಕೆಂಬುದನ್ನು ಎಲ್ಲಾ ಸರ್ಕಾರಗಳೂ ಒಪ್ಪಿಕೊಂಡಿರುವುದರಿಂದ ಅದರ ಮಹತ್ವ ಜಗತ್ತಿಗೇ ಅರಿವಾಗಿದೆಯೆಂದು ಹೇಳಬಹುದು.

Digitised by Bharatavani, CIIL

ಮುಕ್ತ ಶಿಕ್ಷಣ ಪದ್ಧತಿ ಮತ್ತು ಉದ್ಯೋಗ ನೀಡುವಿಕೆಗೆ ಶಿಕ್ಷಣವೇ ಪ್ರಥಮ ಅವಶ್ಯಕತೆಯ ವಿಷಯವಾಗಿರುವುದರಿಂದ ಪ್ರತಿಯೊಬ್ಬ ಪುರುಷ ಮತ್ತ ಮಹಿಳೆ ತಮ್ಮ ಸ್ಥಾನಮಾನ ಮತ್ತು ಜೀವನ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಬಹುದಾಗಿದೆ. ಸ್ತರವ್ಯವಸ್ಥೆಯಲ್ಲಿ ಕೆಳಮಟ್ಟದ ಸ್ಥಾನ-ಮಾನ, ಅಂತಸ್ತು ಮತ್ತು ಕಳಪೆ ಜೀವನ ಗುಣಮಟ್ಟ ಹೊಂದಿದ ಯಾವುದೇ ವ್ಯಕ್ತಿ ಉತ್ತಮ ಶಿಕ್ಷಣ ಪಡೆಯುವ ಮುಖಾಂತರ ಶೈಕ್ಷಣಿಕ ಸಾಧನೆಗಳನ್ನು ಮಾಡಿ ತಮ್ಮ ಸಾಮಾಜಿಕ ಸ್ಥಾನ-ಮಾನ, ಅಂತಸ್ತು ಮತ್ತು ಜೀವನ ಗುಣಮಟ್ಟವನ್ನು ಉತ್ತಮೀಕರಿಸಿಕೊಂಡು ಸಾಮಾಜಿಕವಾಗಿ ಮೇಲ್ಮುಖ ಚಲನೆ ಹೊಂದಬಹುದು.

–ಮೋ.ಕು.ಹೆಚ್.ಎಸ್.

## ಸಾಮಾಜೀಕರಣ ಮತ್ತು ಶಿಕ್ಷಣ

ಮಾನವ ಹುಟ್ಟಿನಿಂದ ಸ್ವತಂತ್ರವಾಗಿ ಹುಟ್ಟುತ್ತಾನೆ. ನಂತರ ಸಾಮಾಜಿಕ ಸಂಕೋಲೆಗಳಿಂದ ಬಂಧಿಸಲ್ಪಡುತ್ತಾನೆ. – ರುಸ್ಸೊ

### ಸಾಮಾಜೀಕರಣ

**ಅರ್ಥ:–** ಸಮಾಜವು ವ್ಯಕ್ತಿಯ ಶಾರೀರಿಕ, ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ವಿಕಾಸಕ್ಕೆ ಕಾರಣವಾಗಿದೆ. ಇದು ವ್ಯಕ್ತಿಯ ವ್ಯಕ್ತಿತ್ವವನ್ನು ಮತ್ತು ಸರ್ವತೋಮುಖ ಉನ್ನತಿಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹೀಗೆ ಸಮಾಜವು ವಹಿಸುವ ಪಾತ್ರ ಮತ್ತು ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಕರೆಯುತ್ತಾರೆ.

ಜೈವಿಕ ವ್ಯಕ್ತಿಯನ್ನು ಸಮಾಜ ಜೀವಿಯನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎನ್ನುವರು. ಪ್ರಾಣಿ ಸಹಜ ಬಯಕೆಗಳನ್ನು ಹೊಂದಿರುವ ಮಾನವ ಶಿಶು ಕಾಲಕ್ರಮೇಣ ಸಮಾಜ ನಿರೀಕ್ಷಣೆಗಳಿಗೆ, ಧ್ಯೇಯೋದ್ದೇಶಗಳಿಗೆ ಮತ್ತು ಆದರ್ಶಗಳಿಗೆ ತಕ್ಕಂತೆ ತನ್ನಲ್ಲಿರುವ ಮಾನವೀಯ ಗುಣಗಳನ್ನು ಹೊಂದಿರುವುದು ಅಥವಾ ರೂಢಿಸಿ ಕೊಳ್ಳುವುದೇ ಸಾಮಾಜೀಕರಣ.

### ವ್ಯಾಖ್ಯೆಗಳು

"ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಲು ಮಾನವನನ್ನು ಸಮರ್ಥನನ್ನಾಗಿಸುವ ಕಲಿಕೆಯೇ ಸಾಮಾಜೀಕರಣವಾಗಿದೆ" ಹ್ಯಾರಿ ಎಂ.ಜಾನ್ಸನ್ "ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಸಮಾಜದ ನಿಯಮಗಳಿಗೆ ಅನುಗುಣವಾಗಿ ನಡತೆಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯೇ ಸಾಮಾಜೀಕರಣ." ಡಬ್ಲ್ಯೂ.ಎಫ್. ಆಗ್‌ಬರ್ನ್. "ವ್ಯಕ್ತಿಯನ್ನು ಮಾನವನನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯೇ ಸಾಮಾಜೀಕರಣ" ಎಚ್.ಟಿ. ಮುಜುಮದಾರ. "ಕೂಡಿ ಬದುಕುವ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಿ ಪರಸ್ಪರ ಕ್ಷೇಮಾಭಿವೃದ್ಧಿಯ ಬೇಡಿಕೆಗಳನ್ನು ಈಡೇರಿಸುವ ಉದ್ದೇಶ ಹೊಂದಿದ ಕ್ರಮಕ್ಕೆ ಸಾಮಾಜೀಕರಣ ಎನ್ನಬಹುದು" – ಬೋಗಾರ್ಡಸ್.

### ಸಾಮಾಜೀಕರಣದ ಪ್ರಯೋಜನಗಳು

- ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಸಾಮಾಜೀಕರಣ ಸಹಾಯಕವಾಗಿದೆ.
- ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮುಂತಾದ ಅಂಶಗಳ ನಿರ್ವಹಣೆಗೆ ಬೇಕಾದ ಕೌಶಲ್ಯಗಳು ಮೂಡಿಬರುತ್ತವೆ.
- ಸಾಮಾಜೀಕರಣವು ಮಾನವನನ್ನು ಪಶುತ್ವದಿಂದ ಮನುಷ್ಯತ್ವದ ಕಡೆಗೆ ಕೊಂಡೊಯ್ಯುತ್ತದೆ.
- ಸಾಮಾಜೀಕರಣವು ಮಾನವನನ್ನು ಸಮೂಹ ಜೀವಿಯನ್ನಾಗಿ ಮಾಡುವುದು. ಆತನಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಮತ್ತು ಸಾಮಾಜಿಕ ಅಂತರವನ್ನು ಕಡಿಮೆಗೊಳಿಸುತ್ತದೆ.
- ವ್ಯಕ್ತಿಯಲ್ಲಿ ಸಾಮಾಜಿಕ ಮೌಲ್ಯಗಳಾದ ಸಹಕಾರ, ಹೊಂದಾಣಿಕೆ, ಸಾಮಾಜಿಕ ಶಿಸ್ತನ್ನು ಮತ್ತು ಸೇವಾ ಮನೋಭಾವ ಮುಂತಾದವುಗಳು ಬೆಳೆದು ಬರುತ್ತವೆ.
- ಸಾಮಾಜೀಕರಣದಿಂದ ಸಮಾಜದ ರೀತಿ-ನೀತಿಗಳು ರೂಢಿ-ಸಂಪ್ರದಾಯಗಳು ಬೆಳೆದು ಬರುತ್ತವೆ.
- ಸಾಮಾಜಿಕ ವ್ಯವಸ್ಥೆಯ ಭದ್ರತೆಗೆ ಸಹಾಯಕವಾಗುವುದು.
- ಸಂಸ್ಕೃತಿಯು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗಲು ಹಾಗೂ ಮುಂದುವರೆಯಲು ಸಾಮಾಜೀಕರಣವು ಸಹಾಯಕವಾಗುತ್ತದೆ.
- ಸಾಮಾಜೀಕರಣವು ವ್ಯಕ್ತಿಗೆ ಜೀವನ ಕೌಶಲ್ಯಗಳನ್ನು ಒದಗಿಸುತ್ತದೆ.

### ಸಾಮಾಜೀಕರಣದಲ್ಲಿ ಶಿಕ್ಷಣದ ಪಾತ್ರ

ಶಿಕ್ಷಣವೆಂದರೆ ಹೊಸದನ್ನು ಸಮಾಜಕ್ಕೆ ಸೇರಿಸಿಕೊಳ್ಳುವುದು ಎಂದು ಡಿ.ಎಫ್. ಸ್ವೀಫ್ ಅವರ ಅಭಿಪ್ರಾಯ. ಶಿಕ್ಷಣವು ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಇರಬಹುದು. ಸಾಮಾಜೀಕರಣದಲ್ಲಿ ವ್ಯಕ್ತಿಗಳು ವ್ಯವಸ್ಥಿತ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಶಿಕ್ಷಣ ಬೇಕಾಗುತ್ತದೆ. ಮಹಾತ್ಮಾ ಗಾಂಧೀಜಿಯವರ ಪ್ರಕಾರ ವ್ಯಕ್ತಿಯ ಸರ್ವತೋಮುಖ ವಿಕಾಸವೇ ಶಿಕ್ಷಣ. (Education is all round development of the Human Personality). ವ್ಯಕ್ತಿಯನ್ನು ಸಾಮಾಜೀಕರಣಗೊಳಿಸುವ ಅನೇಕ ಅಂಶಗಳಲ್ಲಿ ಶಿಕ್ಷಣವು ಅತ್ಯಂತ ಪ್ರಮುಖವಾದುದಾಗಿದೆ.

- ಸಮಾಜದ ಅವಶ್ಯಕತೆಗೆ ಅನುಗುಣವಾಗಿ ಜ್ಞಾನ ಮತ್ತು ಕೌಶಲ್ಯಗಳನ್ನು ಒದಗಿಸಿಕೊಡುವುದೇ ಶಿಕ್ಷಣ.
- ಮಗುವು ಸಾಮೂಹಿಕವಾಗಿ ಕಲಿಯುವ ಅವಕಾಶವನ್ನು ಶಿಕ್ಷಣವು ಒದಗಿಸುತ್ತದೆ.
- ಶಾಲೆಯಲ್ಲಿ ವಿವಿಧ ಸಹಪಠ್ಯ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುವುದರಿಂದ ಮಗುವಿನ ಗುಂಪು ಪ್ರಕ್ರಿಯೆ ಆರಂಭವಾಗುತ್ತದೆ.
- ಸಾಮೂಹಿಕ ಕಲಿಯುವಿಕೆಗೆ ಸಾಮೂಹಿಕ ಕಾರ್ಯ ಮಾಡಲು ಸಾಮೂಹಿಕ ಪಂದ್ಯಾಟಗಳಲ್ಲಿ ಪಾಲ್ಗೊಳ್ಳುವ ಚಟುವಟಿಕೆಗಳನ್ನು ಶಾಲೆಯಲ್ಲಿ ಕೈಗೊಳ್ಳುವುದರಿಂದ ಮಗುವನ್ನು ಸಾಮಾಜೀಕರಣ ಗೊಳಿಸಬಹುದು.
- ಶಾಲೆಯಲ್ಲಿ ಮಗುವು ತನ್ನ ಮನ ಬಂದಂತೆ ವರ್ತಿಸದೆ ಸಾಮಾಜಿಕ ನಿಯಮದಂತೆ ವರ್ತಿಸುತ್ತದೆ. ಅಲ್ಲಿ ಸ್ವಹಿತಾಸಕ್ತಿಗಳನ್ನು ಬದಿಗಿರಿಸಿ ತಮ್ಮ ವರ್ಗದ ಮತ್ತು ಶಾಲೆಯ ಹಿತಾಸಕ್ತಿಗಳನ್ನು ಮುಂದಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತದೆ.
- ಶಾಲೆಗಳಲ್ಲಿ ಎನ್.ಸಿ.ಸಿ., ಎನ್.ಎಸ್.ಎಸ್. ಸ್ಕೌಟ್ ಮತ್ತು ಗೈಡ್ ಮುಂತಾದವುಗಳನ್ನು ಹಮ್ಮಿಕೊಳ್ಳುವುದರಿಂದ ಸಾಮಾಜೀಕರಣ ವಾಗುತ್ತದೆ.
- ಪ್ರಜಾಪ್ರಭುತ್ವ ವಾತಾವರಣದಿಂದ ಶಾಲೆಯಲ್ಲಿ ಐಕ್ಯತಾ ಮನೋಭಾವ ಬೆಳೆಯುತ್ತದೆ.

Digitised by Bharatavani, CIIL

• ಶಿಕ್ಷಕರ ಆದರ್ಶ ಮತ್ತು ವ್ಯಕ್ತಿತ್ವ ಮಕ್ಕಳನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡುತ್ತವೆ.

**ಪರಿಣಾಮಕಾರಿ ಸಾಮಾಜೀಕರಣದ ಷರತ್ತುಗಳು**

ಜಾನ್ ಡ್ಯೂಯಿ ಅವರ ಪ್ರಕಾರ ಶಾಲೆ ಒಂದು ಪುಟ್ಟ ಸಮಾಜವಿದ್ದಂತೆ. ಅಲ್ಲಿಗೆ ವಿವಿಧ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದ ಮಕ್ಕಳು ಬರುತ್ತಾರೆ. ಅವರ ಸಂಪೂರ್ಣ ವ್ಯಕ್ತಿತ್ವ ವಿಕಾಸದ ಹೊಣೆಯನ್ನು ಶಾಲೆ ವಹಿಸಿಕೊಂಡಿದೆ. ಈ ಕಾರಣಕ್ಕಾಗಿ ಶಾಲೆಯು ಸಾಮಾಜೀಕರಣದ ಪರಿಣಾಮಕಾರಿ ಸಂಸ್ಥೆಯಾಗಿದೆ.

• ಶಾಲೆಯಲ್ಲಿ ಪ್ರಜಾಪ್ರಭುತ್ವದ ಪರಿಸರವಿದ್ದರೆ ಅದು ಸಾಮಾಜೀಕರಣಕ್ಕೆ ಹೆಚ್ಚು ಸಹಾಯವಾಗಬಲ್ಲದು ಎಂಬುದು ಆ್ಯಂಡರ್ಸನ್ ಮತ್ತು ಲೆನಿನ್ ರವರು ನಡೆಸಿದ ಪ್ರಯೋಗದಿಂದ ತಿಳಿದುಬರುತ್ತದೆ. ಶಾಲೆಯಲ್ಲಿ ಶಾಲಾ ಸಂಸತ್ತು ರಚಿಸಲ್ಪಡಬೇಕು. ಇದರಿಂದ ನಾಯಕತ್ವ, ವಿಶ್ವಾಸಾರ್ಹ ನಡತೆ, ಸ್ವ-ನಿಯಂತ್ರಣ, ವಿಧೇಯತೆ ಮುಂತಾದ ಗುಣಗಳು ಮಕ್ಕಳಲ್ಲಿ ಬೆಳೆದು ಬರುತ್ತವೆ.

• ಶಿಕ್ಷಕರು ಹೊಂದಿರುವ ಉತ್ತಮ ಮೌಲ್ಯಗಳು ವಿದ್ಯಾರ್ಥಿಗಳಲ್ಲಿ ಬೆಳೆದು ಬರಲು ಸಹಾಯ ಮಾಡಬೇಕು.

• ಮುಖ್ಯೋಪಾಧ್ಯಾಯರು – ಶಿಕ್ಷಕರು, ಶಿಕ್ಷಕರು – ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವೆ ಪರಸ್ಪರ ಸೌಹಾರ್ದಯುತ ಸಂಬಂಧ ಇರಬೇಕು.

• ಶಾಲೆ ಹಾಗೂ ಸಮುದಾಯಗಳ ನಡುವೆ ನಿಕಟ ಸಂಬಂಧವನ್ನು ಏರ್ಪಡಿಸಬೇಕು.

• ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿಯಮಿತವಾಗಿ ನಡೆಸುವುದರಿಂದ ಸಾಮಾಜೀಕರಣಕ್ಕೆ ಬಹಳ ನೆರವಾಗುತ್ತದೆ.

• ಸಮಾಜ ಸೇವೆಗೆ ಅವಕಾಶವಿರಬೇಕು. ಈ ದಿಶೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯು ಸಹಾಯ ಮಾಡಬಲ್ಲದು.

• ಸಾಮೂಹಿಕ ದೈಹಿಕ ಚಟುವಟಿಕೆಗಳಿಗೆ ಅವಕಾಶ ಕೊಡುವುದರಿಂದ ಗುಂಪು ಜೀವನಕ್ಕೆ ಮಹತ್ವ ಬರುವುದಲ್ಲದೆ ಸಾಮಾಜಿ ಕರಣಕ್ಕೆ ಅನುಕೂಲವಾಗುತ್ತದೆ.

• ಗುಂಪು ಚರ್ಚೆ, ವಿಚಾರ ಸಂಕಿರಣ, ಭಾಷಣ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಏರ್ಪಡಿಸಬೇಕು.

• ಸಾಮಾಜೀಕರಣದ ಅನೇಕ ತಂತ್ರಗಳನ್ನು ಹಾಗೂ ಶಿಸ್ತಿನ ಕ್ರಮಗಳನ್ನು ಬೋಧನಾ ಪದ್ಧತಿಗಳಲ್ಲಿ ಅಳವಡಿಸಬೇಕು.

• ಶಿಕ್ಷಕ – ವಿದ್ಯಾರ್ಥಿ – ಪಾಲಕರ ಸಭೆಯನ್ನು ಮೇಲಿಂದ ಮೇಲೆ ಕರೆಯಬೇಕು. ವ್ಯಕ್ತಿ ಭೂಮಿಗೆ ಬಂದ ಕ್ಷಣದಿಂದಲೇ ಸಾಮಾಜಿಕ ಪ್ರಕ್ರಿಯೆ ಆರಂಭವಾಗುತ್ತದೆ. ಮಗುವಿಗೆ ತನ್ನ ಮನೆಯೇ ಮೊದಲ ಪಾಠಶಾಲೆಯಾಗುತ್ತದೆ. ಜನನಿಯೇ ಅವನ ಮೊದಲ ಗುರು ಆಗುತ್ತಾಳೆ. ತಾಯಿ ಮಗುವಿಗೆ ಉತ್ತಮ ಸಂಸ್ಕಾರ ನೀಡಿದರೆ ಮಗುವು ಅದಷ್ಟು ಬೇಗನೆ ಸಾಮಾಜೀಕರಣಗೊಳ್ಳುತ್ತದೆ.

**ಸಾಮಾಜೀಕರಣದಲ್ಲಿ ಶಿಕ್ಷಕನ ಪಾತ್ರ**

ಮಕ್ಕಳಲ್ಲಿ ಸಾಮಾಜೀಕರಣ ತರುವಲ್ಲಿ ಶಾಲೆಯು ಎಷ್ಟು ಮಹತ್ವದ ಪಾತ್ರ ವಹಿಸುತ್ತದೆಯೋ ಅಷ್ಟೇ ಮಹತ್ವದ ಪಾತ್ರವನ್ನು ಪ್ರತಿಯೊಬ್ಬ ಶಿಕ್ಷಕನೂ ವಹಿಸಬೇಕಾಗುತ್ತದೆ. ಶಿಕ್ಷಕರು ಈ ಕೆಳಗಿನಂತೆ ಮಕ್ಕಳಲ್ಲಿ ಸಾಮಾಜೀಕರಣ ತರುವಲ್ಲಿ ಕಾರ್ಯ ಪ್ರವೃತ್ತರಾಗುವರು.

• ಮಕ್ಕಳಲ್ಲಿ ಏಕೋಭಾವನೆಗಳನ್ನು ಉಂಟುಮಾಡಿ ದೇಶಪ್ರೇಮ, ದೇಶಾಭಿಮಾನ, ಏಕತೆ ಅಖಂಡತೆಗಳನ್ನು ಉಂಟಾಗುವಂತೆ ಮಾಡಿ ದೇಶಭಕ್ತಿ ಹೆಚ್ಚಿಸುವುದು.

• ಮಕ್ಕಳಲ್ಲಿ ಒಗ್ಗಟ್ಟು, ಪರಸ್ಪರರಲ್ಲಿ ಸೋದರಭಾವ, ಆದರ ಭಾವ ಹುಟ್ಟಿಸಿ ಕೂಡಿ ಆಡುವ, ಕೂಡಿ ಕಲಿಯುವ, ಕೂಡಿ ಅನುಭವಿಸುವ ಯುಕ್ತಿಯನ್ನು ಬೆಳೆಸುವುದು.

• ಸರ್ವಧರ್ಮ ಸಮಾನತೆ ಪ್ರತಿಯೊಬ್ಬರಿಗೂ ಸಮಾನಾವ ಕಾಶಗಳನ್ನು ಬೆಳೆಸುವುದು.

• ಮಕ್ಕಳಿಗೆ ಸಾಮಾಜೀಕರಣದ ಬಗ್ಗೆ ಭಾಷಣ ಸ್ಪರ್ಧೆ, ಚರ್ಚಾ ಸ್ಪರ್ಧೆ, ನಿಬಂಧ ಸ್ಪರ್ಧೆ ಮುಂತಾದವುಗಳನ್ನು ಏರ್ಪಡಿಸುವುದು.

• ಮಕ್ಕಳು ಮತ್ತು ಶಿಕ್ಷಕರು ಕೂಡಿ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳುವುದು.

• ರೇಡಿಯೋ, ದೂರದರ್ಶನ ಕಾರ್ಯಕ್ರಮಗಳನ್ನು ನೀಡುವುದು.

• ಚಲನಚಿತ್ರಗಳು, ಭಿತ್ತಿಚಿತ್ರಗಳು ಮುಂತಾದವುಗಳ ಪ್ರದರ್ಶನ.

–ಆರ್.ಟಿ.ಜಂ.

**ಸಾರ್ವಜನಿಕ ಶಿಕ್ಷಣ ಇಲಾಖೆ**

ಸಂವಿಧಾನಾತ್ಮಕವಾಗಿ ಶಿಕ್ಷಣವು ಸಮವರ್ತಿ ಪಟ್ಟಿಯ ವಿಷಯವಾಗಿದೆ. ಶಿಕ್ಷಣವು ರಾಷ್ಟ್ರನಿರ್ಮಾಣ ಕಾರ್ಯದ ಹೊಣೆ ಹೊತ್ತಿರುವುದರಿಂದ ಕೇಂದ್ರ ಸರಕಾರದ ರಾಷ್ಟ್ರೀಯ ಶಿಕ್ಷಣದ ನೀತಿಗೆ(1986) ಅನುಗುಣವಾಗಿ ರಾಜ್ಯ ಸರ್ಕಾರಗಳು ಶಿಕ್ಷಣ ವ್ಯವಸ್ಥೆಯನ್ನು ರೂಪಿಸುತ್ತವೆ ಹಾಗೂ ನಿರ್ವಹಿಸುತ್ತವೆ. ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಮಾರ್ಗದರ್ಶನ ನೀಡುತ್ತದೆ ಮತ್ತು ಧನ ಸಹಾಯ ಒದಗಿಸುತ್ತದೆ.

ರಾಜ್ಯ ಮಟ್ಟದಲ್ಲಿ ಶೈಕ್ಷಣಿಕ ಆಡಳಿತದ ಮುಖ್ಯಸ್ಥರು ಶಿಕ್ಷಣ ಸಚಿವರು. ರಾಜ್ಯ ಮಟ್ಟದಲ್ಲಿ ಶಿಕ್ಷಣ ನೀತಿ ರೂಪಿಸಲು ಹಾಗೂ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲು ಶಿಕ್ಷಣ ಮಂತ್ರಿಗಳು ಮಂತ್ರಿಮಂಡಲದ ಅನುಮತಿ ಪಡೆಯುತ್ತಾರೆ. ಇವರು ಇತರ ಇಲಾಖೆಗಳ ಸಚಿವರುಗಳಂತೆಯೇ ಶಿಕ್ಷಣ ಇಲಾಖೆಯ ಸೂತ್ರಗಳನ್ನು ನಿರ್ವಹಿಸುವುದರಲ್ಲಿ ಪ್ರಥಮರು. ಶಿಕ್ಷಣ ಇಲಾಖೆಯ ಕಾರ್ಯಾಂಗದ (Secretariat) ಅಧಿಕಾರಿಗಳಾಗಿ ಓರ್ವ ಮುಖ್ಯ ಕಾರ್ಯದರ್ಶಿ (Chief Secretary) ಹಾಗೂ ಓರ್ವ ಆಯುಕ್ತರು (Commissioner) ಇರುತ್ತಾರೆ. ಇವರಿಗೆ ಸಹಾಯ ಒದಗಿಸಲು ಮೂವರು ಡೆಪ್ಯೂಟಿ ಸೆಕ್ರೆಟರಿ ಹಾಗೂ ಆರು (6) ಅಂಡರ್ ಸೆಕ್ರೆಟರಿಗಳು ಇರುತ್ತಾರೆ.

**ಶಿಕ್ಷಣ ಸಚಿವರ ಆಡಳಿತ ಕ್ಷೇತ್ರದಲ್ಲಿ ಈ ಕೆಳಗಿನ ಶಾಖೆಗಳಿವೆ**

1. ಸಾರ್ವಜನಿಕ ಶಿಕ್ಷಣ ಇಲಾಖೆ.
2. ತಾಂತ್ರಿಕ ಶಿಕ್ಷಣ ಇಲಾಖೆ.
3. ಕಾಲೇಜು ಶಿಕ್ಷಣ ಇಲಾಖೆ.
4. ವಿಶ್ವವಿದ್ಯಾಲಯಗಳು
5. ಮುದ್ರಣ ಹಾಗೂ ಪ್ರಕಾಶನ ಇಲಾಖೆ.

Digitised by Bharatavani, CIIL

6. ಪ್ರಾಚ್ಯ ಸಂಶೋಧನ ಇಲಾಖೆ.
7. ಪಠ್ಯ ಪುಸ್ತಕಗಳ ಇಲಾಖೆ.
8. ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ,
9. ಯುವಜನ ಸೇವಾ ಇಲಾಖೆ.
10. ಭಾಷೆ ಮತ್ತು ಸಂಸ್ಕೃತಿ ಇಲಾಖೆ.

**೨. ಸಾರ್ವಜನಿಕ ಶಿಕ್ಷಣ ಇಲಾಖೆ (Department of Public Instruction)**

ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಮುಖ್ಯಸ್ಥರನ್ನು ಆಯುಕ್ತರು (Commissioner) ಎಂದು ಕರೆಯಲಾಗುತ್ತದೆ. ಇಲಾಖೆಯ ಉಪಾಂಗಗಳಲ್ಲಿ ಶಿಸ್ತು ರೂಪಿಸಲು ಇವರೇ ಹೊಣೆಗಾರರು, ಇವರ ನೆರವಿಗಾಗಿ ದೊಡ್ಡ ಸಿಬ್ಬಂದಿ ಉಂಟು. ಆಯುಕ್ತರ ನೆರವಿಗೆ ಆರು (6) ಜನ ನಿರ್ದೇಶಕರು (Directors) ಇದ್ದು, ಒಂದೊಂದು ವಿಭಾಗಕ್ಕೆ ಒಬ್ಬೊಬ್ಬರನ್ನು ನೇಮಿಸಲಾಗಿರುತ್ತದೆ. ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ಪಠ್ಯ ಪುಸ್ತಕ, ವೃತ್ತಿ ಶಿಕ್ಷಣ, ಪರೀಕ್ಷಾ ಆಡಳಿತ, ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಈ ವಿಭಾಗಗಳ ನೇತೃತ್ವವಹಿಸಿ ಅಧಿಕಾರ ನಿರ್ವಹಿಸುತ್ತಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ನಾಲ್ಕು (4) ಸಹನಿರ್ದೇಶಕರು (Joint Directors) ಕಾರ್ಯ ನಿರ್ವಹಿಸುತ್ತಾರೆ. ರಾಜ್ಯದ ಶೈಕ್ಷಣಿಕ ಆಡಳಿತ ಕ್ಷೇತ್ರವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಪ್ರತಿ ವಿಭಾಗದ ಮುಖ್ಯಸ್ಥರಾಗಿ ಒಬ್ಬ ಸಹ ನಿರ್ದೇಶಕರು ಅಥವಾ ಜಂಟೀ ನಿರ್ದೇಶಕರನ್ನು ನೇಮಿಸಲಾಗಿರುತ್ತದೆ. ಸಹ ನಿರ್ದೇಶಕರ ಕಚೇರಿಯಲ್ಲಿ ಓರ್ವ ಶಿಕ್ಷಣಾಧಿಕಾರಿ ಹಾಗೂ ಸಂಗೀತ, ವಾಣಿಜ್ಯ, ವೈದ್ಯಕೀಯ, ಚಿತ್ರಕಲೆ, ಕನ್ನಡೇತರ ಭಾಷೆ ಇತ್ಯಾದಿ ವಿಭಾಗಗಳಿಗೆ ದ್ವಿತೀಯ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಗಿರುತ್ತದೆ. ಕರ್ನಾಟಕ ರಾಜ್ಯದ ನಾಲ್ಕು ವಿಭಾಗಗಳೆಂದರೆ, ಬೆಂಗಳೂರು, ಮೈಸೂರು, ಗುಲಬರ್ಗಾ ಹಾಗೂ ಬೆಳಗಾವಿ ವಿಭಾಗಗಳು.

**ಜಿಲ್ಲಾ ಮಟ್ಟದ ಆಡಳಿತ:**

ಶೈಕ್ಷಣಿಕ ಆಡಳಿತ ಏಣಿ ಶ್ರೇಣಿ (Hierarchy)ಯಲ್ಲಿ ಜಿಲ್ಲಾ ಮಟ್ಟದಲ್ಲಿ ಮುಖ್ಯ ಅಧಿಕಾರಿ ಶಿಕ್ಷಣ ಇಲಾಖೆಯ ಉಪನಿರ್ದೇಶಕ (Deputy Director of Public Instruction) ಆಗಿರುತ್ತಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿ ಪ್ರೌಢಶಾಲೆಗಳ ಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ಒಬ್ಬರು, ಇಬ್ಬರು ಅಥವಾ ಮೂವರು ಕಿರಿಯ ಪ್ರಥಮ ದರ್ಜೆಯ ಶಿಕ್ಷಣಾಧಿಕಾರಿಗಳನ್ನು ನೇಮಿಸಲಾಗುತ್ತದೆ. ಈ ಶಿಕ್ಷಣಾಧಿಕಾರಿಗಳು ಪ್ರೌಢಶಾಲೆಗಳ ತನಿಖೆ ಹಾಗೂ ಮೇಲ್ವಿಚಾರಣೆ ನಿರ್ವಹಿಸುತ್ತಾರೆ. ಉಪನಿರ್ದೇಶಕರಿಗೆ ಅಗತ್ಯ ನೆರವು ಒದಗಿಸಿ ಮಾಹಿತಿ ಹಾಗೂ ಸೇವಾಕಾರ್ಯದಲ್ಲಿ ಸಹಾಯಗೈಯುತ್ತಾರೆ. ವಿಜ್ಞಾನ, ಗಣಿತ, ಇಂಗ್ಲಿಷ್, ಕನ್ನಡ, ಸಾಮಾಜಿಕ ಅಭ್ಯಾಸ ಹೀಗೆ ವಿವಿಧ ನಿರ್ದಿಷ್ಟ ವಿಷಯಗಳಿಗೆ ಸಂಬಂಧಪಟ್ಟ ವಿಷಯ ತನಿಖಾಧಿಕಾರಿ (Subject Inspectors)ಗಳನ್ನು ನೇಮಿಸಲಾಗಿರುತ್ತದೆ. ಇವರು ದ್ವಿತೀಯ ದರ್ಜೆ ಅಥವಾ 'ಬಿ' ಗುಂಪಿನ ಅಧಿಕಾರಿಗಳು. ಒಟ್ಟಿನಲ್ಲಿ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (D.D.P.I) ಜಿಲ್ಲೆಯ ಆಡಳಿತವನ್ನು ನಿಭಾಯಿಸುತ್ತಾರೆ. ಜಿಲ್ಲಾ ಮಟ್ಟದ ಸಿಬ್ಬಂದಿವರ್ಗ ಇವರಿಗೆ ನೆರವಾಗಿ ಕಾರ್ಯನಿರ್ವಹಿಸುತ್ತದೆ.

**೩. ಸಾರ್ವಜನಿಕ ಶಿಕ್ಷಣ ಇಲಾಖೆಯ ಶೈಕ್ಷಣಿಕ ಘಟಕಗಳು (Academic Units)**

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ನೇತೃತ್ವದಲ್ಲಿ ಮತ್ತು ಮೇಲ್ವಿಚಾರಣೆಯಲ್ಲಿ ಅನೇಕ ಶೈಕ್ಷಣಿಕ ಘಟಕಗಳು ಕೆಲಸ ಮಾಡುತ್ತವೆ. ಅವುಗಳಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (Department of State Educational Research and Training.) ಯೂ ಒಂದು.

ಬೇರೆ ಬೇರೆ ರಾಜ್ಯಗಳಲ್ಲಿ ಈ ಸಂಸ್ಥೆಯನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ State Council of Educational Research and Training - (SCERT) ಎಂದು ಕರೆದರೆ ಕರ್ನಾಟಕದಲ್ಲಿ ಇದನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಎಂದು ಕರೆಯುವರು. ಈ ಸಂಸ್ಥೆಯು ನಿರ್ದೇಶಕರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಸಂಸ್ಥೆಯ ಮುಖ್ಯ ಕಾರ್ಯಗಳೆಂದರೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ತರಬೇತಿಗೆ ಸಂಬಂಧಿಸಿದಂತೆ ಸಂಶೋಧನೆ, ತರಬೇತಿ ಮತ್ತು ವಿಸ್ತರಣ ಸೇವೆಗಳನ್ನು ಕೈಗೊಳ್ಳುತ್ತದೆ. ಸೇವಾವಧಿ ಶಿಕ್ಷಕರಿಗಾಗಿ ಅನೇಕ ತರಬೇತಿಗಳನ್ನು ಸಂಘಟಿಸಿ ನಡೆಸಿಕೊಂಡು ಬರುತ್ತಿದೆ. ಈ ಸಂಸ್ಥೆ ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ಪಠ್ಯವಸ್ತು ಮತ್ತು ಮಾರ್ಗದರ್ಶಿ ಪುಸ್ತಕಗಳನ್ನು ರಚಿಸುತ್ತದೆ. ರಾಷ್ಟ್ರಮಟ್ಟದಲ್ಲಿ ಎನ್. ಸಿ.ಇ.ಆರ್.ಟಿ ನವದೆಹಲಿ ಕಾರ್ಯಗಳನ್ನು ರಾಜ್ಯ ಮಟ್ಟದಲ್ಲಿ ಈ ಇಲಾಖೆ ನಿರ್ವಹಿಸುತ್ತಿದೆ.

ಡಿ. ಎಸ್.ಇ.ಆರ್.ಟಿ ಈ ಕೆಳಗಿನ ವಿಭಾಗಗಳನ್ನು ಹೊಂದಿದೆ.

**ರಾಜ್ಯ ವಿಜ್ಞಾನ ಶಿಕ್ಷಣ ಸಂಸ್ಥೆ (State Institute of Science Education):**

ಕರ್ನಾಟಕ ರಾಜ್ಯದಲ್ಲಿ ವಿಜ್ಞಾನ ಬೋಧನೆ ಸುಧಾರಣೆಗಾಗಿ 1964–65ನೇ ಸಾಲಿನಲ್ಲಿ ಇದನ್ನು ಪ್ರಾರಂಭಿಸಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಜ್ಞಾನ ಬೋಧನಾ ಶಿಕ್ಷಕರಿಗಾಗಿ ಅಲ್ಪಾವಧಿ ಮತ್ತು ದೀರ್ಘಾವಧಿ ಸೇವಾನಿರತ ತರಬೇತಿ ನಡೆಸುತ್ತದೆ. ವಿಜ್ಞಾನ ಬೋಧನೋಪಕರಣಗಳ ಸುಧಾರಣೆಗಾಗಿ ಕಾರ್ಯಾಗಾರಗಳನ್ನು ಸಂಘಟಿಸಿ ನಡೆಸಿಕೊಂಡು ಬರುತ್ತದೆ.

**ರಾಜ್ಯ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಕೇಂದ್ರ (State Bureau of Educational and Vocational Guidance)**

ಈ ಕೇಂದ್ರವನ್ನು 1958ರಲ್ಲಿ ಪ್ರಾರಂಭಿಸಲಾಯಿತು. ಇದರ ಪ್ರಮುಖ ಕಾರ್ಯಗಳೆಂದರೆ ಶೈಕ್ಷಣಿಕ ಮಾರ್ಗದರ್ಶನದಲ್ಲಿ ನಾಯಕತ್ವ ಒದಗಿಸುವುದು, ಸಾಧನ ಮತ್ತು ತಂತ್ರಗಳನ್ನು ಬೆಳೆಸುವುದು ಮತ್ತು ಸಂಶೋಧನೆ ಕೈಗೊಳ್ಳುವುದು. ಇದರ ಕಾರ್ಯವ್ಯಾಪ್ತಿ ಕೇವಲ ಪ್ರೌಢ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿದೆ. ವಿದ್ಯಾರ್ಥಿ ಸಂಚಿತಾಭಿವೃದ್ಧಿ ಪತ್ರವನ್ನು (Cumulative Record) ರಚಿಸುತ್ತದೆ. ಕರ್ನಾಟಕ ರಾಜ್ಯದ ಎಲ್ಲ ಪ್ರೌಢಶಾಲೆಗಳ ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿದ ಮಾಹಿತಿಗಳನ್ನು ಇದರಲ್ಲಿ ತುಂಬಿ ಸುವ್ಯವಸ್ಥಿತವಾಗಿ ಇಟ್ಟಿರುತ್ತದೆ. ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಣದ ನಂತರ ಸಾಮಾನ್ಯ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದ ವಿದ್ಯಾರ್ಥಿಗಳಿಗಾಗಿ ಆರು ವೃತ್ತಿಪರ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿದೆ.

Digitised by Bharatavani, CIIL

**ರಾಜ್ಯ ಶೈಕ್ಷಣಿಕ ಸಂಶೋಧನಾ ಕೇಂದ್ರ (State Educational Research Bureau)**

ಈ ಕೇಂದ್ರವನ್ನು 1958ರಲ್ಲಿ ಪ್ರಾರಂಭಿಸಲಾಯಿತು. ಇದು ನಾಲ್ಕು ಗುರಿಗಳನ್ನು ಹೊಂದಿದೆ. ಅವುಗಳು ಪಠ್ಯಕ್ರಮ ರಚನೆ, ಮಕ್ಕಳಿಗಾಗಿ ಪಠ್ಯಪುಸ್ತಕಗಳ ರಚನೆ, ಶಿಕ್ಷಕರಿಗಾಗಿ ಮಾರ್ಗದರ್ಶಿ ಪುಸ್ತಕಗಳ ರಚನೆ ಮತ್ತು ಶೈಕ್ಷಣಿಕ ಸಂಶೋಧನೆಗಳನ್ನು ನಡೆಸುವುದು. ಈ ಕೇಂದ್ರವು ಪಠ್ಯಪುಸ್ತಕ ನಿರ್ದೇಶಕರ ನಿರ್ದೇಶನದಲ್ಲಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಸ್ಥಾನಮಾನವನ್ನು ಹೊಂದಿರುವ ಅಧಿಕಾರಿಯು ಈ ಕೇಂದ್ರದ ಎಲ್ಲಾ ಕಾರ್ಯಗಳನ್ನು ನೋಡಿಕೊಳ್ಳುವರು. ಈ ಕೇಂದ್ರವು ಮಕ್ಕಳ ಬರಹದಲ್ಲಿ ತಂತ್ರಗಳು ಮತ್ತು ಮಕ್ಕಳ ಸಾಹಿತ್ಯ ರಚನೆಗಾಗಿ ಶಿಕ್ಷಕರಿಗೆ ಮತ್ತು ಬರಹಗಾರರಿಗೆ ತರಬೇತಿ ಕೊಡಲು ಕಾರ್ಯಾಗಾರಗಳನ್ನು ನಡೆಸುತ್ತದೆ.

**ರಾಜ್ಯ ಮೌಲ್ಯಮಾಪನ ಘಟಕ (State Evaluation Unit)**

ಈ ಘಟಕವು 1963–64 ರಿಂದ ಕಾರ್ಯವನ್ನು ನಿರ್ವಹಿಸುತ್ತಿದೆ. ಪ್ರೌಢಶಾಲಾ ಹಂತದಲ್ಲಿ ಬೋಧನೆಯನ್ನು ಮತ್ತು ಪರೀಕ್ಷಾ ಪದ್ಧತಿಯನ್ನು, ಮೌಲ್ಯಮಾಪನ ತಂತ್ರಗಳನ್ನು ಸುಧಾರಿಸುವುದು ಇದರ ಪ್ರಮುಖ ಗುರಿಯಾಗಿರುತ್ತದೆ. ಶಿಕ್ಷಣ ಮಹಾವಿದ್ಯಾಲಯದ ಶಿಕ್ಷಕರಿಗಾಗಿ ಮತ್ತು ಮೌಲ್ಯಮಾಪನದ ಆಧುನಿಕ ಪರಿಕಲ್ಪನೆಯನ್ನು ಶಿಕ್ಷಕರಿಗೆ ತಿಳಿಸಿಕೊಡಲು ಕಾರ್ಯಾಗಾರಗಳನ್ನು ಸಂಘಟಿಸಿ ನಡೆಸುತ್ತದೆ. ಬೇರೆ ಬೇರೆ ಪರೀಕ್ಷೆಗಳ ಪರಿಣಾಮಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸುತ್ತದೆ. ಅನೇಕ ಶೈಕ್ಷಣಿಕ ಪತ್ರಿಕೆಗಳನ್ನು ಪ್ರಕಟಿಸಿದೆ.

**ರಾಜ್ಯ ಶೈಕ್ಷಣಿಕ ಸಮೀಕ್ಷೆ ಘಟಕ (State Educational Survey Unit) :**

ಈ ಘಟಕವನ್ನು 1–1–1965ರಲ್ಲಿ ಪ್ರಾರಂಭಿಸಲಾಯಿತು. ಇದರ ಮುಖ್ಯ ಉದ್ದೇಶ 1967ರಲ್ಲಿ ರಾಜ್ಯದ ಎರಡನೆಯ ಶೈಕ್ಷಣಿಕ ಸಮೀಕ್ಷೆ ನೆಡೆಸುವುದು ಮತ್ತು 1957ರಲ್ಲಿ ನಡೆಸಿದ ಪ್ರಥಮ ಶೈಕ್ಷಣಿಕ ಸಮೀಕ್ಷೆಯನ್ನು ಪರಿಷ್ಕರಿಸುವುದಾಗಿತ್ತು. ಈಗಲೂ ಸಹ ಅನೇಕ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಸಮೀಕ್ಷೆ ನಡೆಸುತ್ತಿದೆ.

**ದೃಕ್ – ಶ್ರವಣೋಪಕರಣಗಳ ಘಟಕ (Audio-visual aids Unit)**

ಈ ಘಟಕವು ಅನೇಕ ವರ್ಷಗಳಿಂದ ಅಸ್ತಿತ್ವದಲ್ಲಿದ್ದು ಕ್ಲಾಸ್ – I ಅಧಿಕಾರಿಯ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಅನೇಕ ಶೈಕ್ಷಣಿಕ ಚಿತ್ರಗಳು, ಚಿತ್ರಸುರುಳಿಗಳನ್ನು ಮತ್ತು ಬೋಧನೋಪಕರಣಗಳನ್ನು ಪರಿಷ್ಕರಿಸುತ್ತದೆ ಮತ್ತು ಖರೀದಿಸುತ್ತದೆ. ಬೋಧನೋಪಕರಣಗಳಾದ ನಕಾಶೆ, ಚಾರ್ಟು ಮುಂತಾದುವುಗಳು ಜಾರಿಗೆ ಬರಲು ತನ್ನ ಅನುಮತಿಯ ಮುದ್ರೆಯನ್ನು ಒತ್ತುತ್ತದೆ. ಇದು ಚಿತ್ರಗಳ ದೊಡ್ಡ ಸಂಗ್ರಹವನ್ನೇ ಹೊಂದಿರುತ್ತದೆ. ಭಾರತ ಆಕಾಶವಾಣಿ ಕೇಂದ್ರದೊಂದಿಗೆ ಸಹಕರಿಸುತ್ತದೆ ಮತ್ತು ಅನೇಕ ಶೈಕ್ಷಣಿಕ ಪ್ರದರ್ಶನವನ್ನು ರಾಜ್ಯದಲ್ಲಿ ಏರ್ಪಡಿಸುತ್ತದೆ.

**ಸಂಖ್ಯಾಶಾಸ್ತ್ರ ಘಟಕ (Statistics Unit)**

ಸಂಖ್ಯಾಶಾಸ್ತ್ರ ಘಟಕವು ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಒಂದು ಭಾಗವೇ ಆಗಿರುತ್ತದೆ. ಸಂಖ್ಯಾಶಾಸ್ತ್ರದ ಘಟಕದ ಕ್ಲಾಸ್ – II ಅಧಿಕಾರಿಯ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತದೆ. ರಾಜ್ಯದಲ್ಲಿ ಶಾಲಾಹಂತ, ಕಾಲೇಜು ಹಂತ, ವಿಶ್ವವಿದ್ಯಾಲಯ ಶಿಕ್ಷಣ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅಂಕಿ–ಅಂಶಗಳನ್ನು ಸಂಗ್ರಹಿಸಿ ಪ್ರಕಟಿಸುತ್ತದೆ. ಭಾರತ ಸರಕಾರಕ್ಕೆ ಶೈಕ್ಷಣಿಕ ಅಂಕಿಸಂಖ್ಯೆಗಳನ್ನು ಕಳುಹಿಸುವುದು ಇದರ ಕಾರ್ಯವಾಗಿರುತ್ತದೆ.

**ಪಠ್ಯಪುಸ್ತಕಗಳ ನಿರ್ದೇಶನಾಲಯ (Directorate of Text Books)**

ರಾಜ್ಯ ಸರಕಾರವು 1970–71ರಲ್ಲಿ 1ನೆಯ ತರಗತಿಯಿಂದ 10ನೆಯ ತರಗತಿಯವರೆಗೆ ಎಲ್ಲ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣಗೊಳಿಸಲಾಗಿದೆ. 1969ರ ವರೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಪಠ್ಯಪುಸ್ತಕಗಳ ಉತ್ಪಾದನೆ, ಪ್ರಿಂಟಿಂಗ್, ಸಂಗ್ರಹಣೆ, ವಿತರಣೆ ಮತ್ತು ಮಾರಾಟವನ್ನು ನೋಡಿಕೊಳ್ಳುತ್ತಿದ್ದರು. ಇವರಿಗೆ ಈ ಕಾರ್ಯದಲ್ಲಿ ಸಹಾಯ ಮಾಡಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿದ್ದರು. ಅಲ್ಲದೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪುಸ್ತಕಗಳ ಆಯ್ಕೆಯ ಎರಡು ಕಮಿಟಿಗಳ ಅಧ್ಯಕ್ಷರಾಗಿದ್ದರು. ಉಪನಿರ್ದೇಶಕರು ಈ ಕಮಿಟಿಗಳ ಕಾರ್ಯದರ್ಶಿ ಎಂದು ಕಾರ್ಯ ನಿರ್ವಹಿಸುತ್ತಿದ್ದರು. ಇವರ ಕಾರ್ಯಬಾಹುಳ್ಯದ ಕಾರಣ ಕರ್ನಾಟಕ ಸರಕಾರ ಪಠ್ಯಪುಸ್ತಕ ವಿಭಾಗಕ್ಕೆ ಪ್ರತ್ಯೇಕವಾದ ನಿರ್ದೇಶಕರ ಹುದ್ದೆಯನ್ನು ನಿರ್ಮಿಸಿತು. ಶೈಕ್ಷಣಿಕ ಸಂಶೋಧನಾ ವಿಭಾಗದ ಉಪನಿರ್ದೇಶಕರು ಇವರ ಕಾರ್ಯದಲ್ಲಿ ಸಹಾಯ ಮಾಡುವರು. ಇವರು ತಮ್ಮ ಸ್ಥಾನಬಲದಿಂದ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಭಾಗದ ನಿರ್ದೇಶಕರಾಗಿ, ಸಂಗೀತ, ನಾಟಕ ಮತ್ತು ಲಲಿತಕಲಾ ವಿಭಾಗಗಳ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುವರು,

**ಕರ್ನಾಟಕ ರಾಜ್ಯದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ**

1966ರಲ್ಲಿ ಕರ್ನಾಟಕ ರಾಜ್ಯದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಾರಂಭವಾಯಿತು. ಇದರ ಅಧ್ಯಕ್ಷರು ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ನಿರ್ದೇಶಕರ ಸ್ಥಾನಮಾನವನ್ನು ಹೊಂದಿರುವರು. ಈ ಇಲಾಖೆಯು ಅನೇಕ ಪರೀಕ್ಷೆಗಳನ್ನು ನಡೆಸುತ್ತದೆ ಹಾಗೂ ಪರಿಣಾಮಗಳನ್ನು ಪ್ರಕಟಿಸುತ್ತದೆ. ಅವುಗಳು ಎಸ್.ಎಸ್.ಎಲ್.ಸಿ. ಪರೀಕ್ಷೆ, ಪ್ರಾಥಮಿಕ ಶಿಕ್ಷಕರ ತರಬೇತಿ ಪರೀಕ್ಷೆ, ಬಾಲವಾಡಿ ಶಿಕ್ಷಕರ ತರಬೇತಿ ಪರೀಕ್ಷೆ, ದೈಹಿಕ ಶಿಕ್ಷಣ ಸರ್ಟಿಫಿಕೇಟ್ ಪರೀಕ್ಷೆ, ಮೂಲ ಡಿಪ್ಲೋಮಾ ಪರೀಕ್ಷೆ, ಬೇರೆ ಬೇರೆ ಹಂತಗಳಲ್ಲಿರುವ ಸಂಸ್ಕೃತ ಪರೀಕ್ಷೆ, ಬೇರೆ ಬೇರೆ ಹಂತಗಳಲ್ಲಿರುವ ನೃತ್ಯ, ಸಂಗೀತ ಮತ್ತು ನಾಟಕ ಪರೀಕ್ಷೆಗಳು, ಬೇರೆ ಬೇರೆ ಹಂತಗಳಲ್ಲಿರುವ ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಗಳು, ಕನ್ನಡ ಪಂಡಿತ ಮತ್ತು ಉರ್ದು ಮೌಲ್ವಿ ಪರೀಕ್ಷೆಗಳು, ಹೊಲಿಗೆ, ಕಸೂತಿ ಮತ್ತು ಎಂಬ್ರಾಯಡರಿ ಪರೀಕ್ಷೆಗಳು ಮುಂತಾದವುಗಳು.

**ಸಲಹಾ ಸಮಿತಿಗಳು (Advisory Bodies)**

ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರಕಾರಕ್ಕೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಿರ್ದೇಶಕರಿಗೆ ಶೈಕ್ಷಣಿಕ ಸಲಹೆ–ಸೂಚನೆಗಳನ್ನು ಕೊಡಲು ಅಂತಹ ಸಲಹಾ ಸಮಿತಿಗಳಿವೆ.

**೧. ರಾಜ್ಯ ಶಿಕ್ಷಣ ಸಲಹಾ ಸಮಿತಿ (The State Council for Teacher Education)**

ಈ ಸಮಿತಿಯ 1957ರಲ್ಲಿ ಪ್ರಾರಂಭವಾಗಿರುತ್ತದೆ. ಇದು ಶಿಕ್ಷಣದ ಪ್ರಮುಖ ಸಮಿತಿಯಾಗಿರುತ್ತದೆ. ರಾಜ್ಯ ಶಿಕ್ಷಣ ಮಂತ್ರಿಗಳು ಇದರ ಅಧ್ಯಕ್ಷರು. ಉಪಶಿಕ್ಷಣ ಮಂತ್ರಿಗಳು ಉಪಾಧ್ಯಕ್ಷರಾಗಿರುತ್ತಾರೆ. ಶಿಕ್ಷಣ ಇಲಾಖೆ ಕಾರ್ಯದರ್ಶಿಗಳು ಇದರ ಕಾರ್ಯದರ್ಶಿಗಳಾಗಿರುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶಕರು,

Digitised by Bharatavani, CIIL

ಕಾಲೇಜು ಶಿಕ್ಷಣ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು, ಆರೋಗ್ಯ ವಿಭಾಗದ ನಿರ್ದೇಶಕರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರು, ಜಿಲ್ಲಾ ಹಂತದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮತ್ತು ಶಿಕ್ಷಣ ತಜ್ಞರು ಇದರ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ. ಎಲ್ಲ ಹಂತದ ಶಿಕ್ಷಣಕ್ಕೆ ಕಾನೂನುಗಳಿಗೆ ಸಂಬಂಧಿಸಿದಂತೆ ಸರಕಾರಕ್ಕೆ ಸಲಹೆ ಸೂಚನೆ ಕೊಡುವ ಅಧಿಕಾರ ಹೊಂದಿರುತ್ತದೆ. ವರ್ಷಕ್ಕೆ ಎರಡು ಸಲವಾದರೂ ಸಭೆ ಸೇರುತ್ತದೆ.

**೨. ಶಿಕ್ಷಕರ ಶಿಕ್ಷಣದ ಪರಿಷತ್ತು** (The State Council for Teacher Education)

ಕರ್ನಾಟಕ ರಾಜ್ಯದಲ್ಲಿ 29 ಅಕ್ಟೋಬರ್ 1969ರಲ್ಲಿ ಇದನ್ನು ಪ್ರಾರಂಭಿಸಲಾಯಿತು. ಇದರ ಪುನರ್‍ರಚನೆಯನ್ನು 18–02–1972ರಲ್ಲಿ ಮಾಡಲಾಯಿತು. ರಾಜ್ಯ ಸರಕಾರದ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳು ಇದರ ಅಧ್ಯಕ್ಷರು. ವಿಶ್ವವಿದ್ಯಾಲಯಗಳ ಕುಲಪತಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ನಿರ್ದೇಶಕರು, ಪ್ರಾಂಶುಪಾಲರು ಅಥವಾ ಬೇರೆ ಬೇರೆ ಶೈಕ್ಷಣಿಕ ಹಂತಗಳ ಮುಖ್ಯಸ್ಥರ ಪ್ರತಿನಿಧಿಗಳು ಇದರ ಸದಸ್ಯರಾಗಿ ಕಾರ್ಯ ನಿರ್ವಹಿಸುವರು. ಇದರ ಪ್ರಮುಖ ಕಾರ್ಯಗಳು ಈ ಮುಂದಿನಂತಿವೆ:

1. ತರಬೇತಿ ಸಂಸ್ಥೆಗಳ ಗುಣಮಟ್ಟವನ್ನು ನಮೂದಿಸುವುದು.
2. ಶೈಕ್ಷಣಿಕ ಸಂಸ್ಥೆಗಳ ಮನ್ನಣೆಗಾಗಿ ನಿಯಮಾವಳಿಗಳನ್ನು ರಚಿಸುವುದು.
3. ಶಿಕ್ಷಕರ ತರಬೇತಿಗಾಗಿ ಯೋಜನೆಗಳನ್ನು ಮತ್ತು ಕಾರ್ಯಗಳನ್ನು ತಯಾರಿಸುವುದು.
4. ರಾಜ್ಯದಲ್ಲಿ ಲಭ್ಯವಿರುವ ತರಬೇತಿ ಸೌಲಭ್ಯಗಳನ್ನು ಒದಗಿಸುವುದು.
5. ಪ್ರಶಿಕ್ಷಕರ ಶೈಕ್ಷಣಿಕ ಅರ್ಹತೆ ಮತ್ತು ಸೇವಾ ನಿಯಮಗಳನ್ನು ರಚಿಸಿ ನಮೂದಿಸುವುದು.

**೩. ಶಿಕ್ಷಕರ ತರಬೇತಿ ಸಮಿತಿ** (Teacher Training Board)

ಸಾರ್ವಜನಿಕ ಶಿಕ್ಷಣ ಇಲಾಖೆಯ ನೇತೃತ್ವ ಹಾಗೂ ಅಧ್ಯಕ್ಷತೆಯಲ್ಲಿ 1957ರಲ್ಲಿ ಈ ಸಮಿತಿಯನ್ನು ಪ್ರಾರಂಭಿಸಲಾಯಿತು. ಈ ಸಮಿತಿಯ ಪ್ರಮುಖ ಕಾರ್ಯಗಳೆಂದರೆ ಶಿಕ್ಷಕರ ತರಬೇತಿಯ ಪಠ್ಯಕ್ರಮ, ಪಠ್ಯಪುಸ್ತಕಗಳು, ಶಿಕ್ಷಕರ ಅರ್ಹತೆಗಳು, ತರಬೇತಿ ಸಂಸ್ಥೆಗಳ ಪ್ರವೇಶಾತಿ ನಿಯಮಾವಳಿಗಳು, ಪರೀಕ್ಷಾ ಪದ್ಧತಿಯ ಯೋಜನೆ ಮುಂತಾದವುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಮತ್ತು ಶಿಕ್ಷಣ ವಿಭಾಗಕ್ಕೆ ಸಲಹೆ ಸೂಚನೆಗಳನ್ನು ಕೊಡುತ್ತದೆ. ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣದ ಶಿಕ್ಷಕರ ತರಬೇತಿಗೆ ಸಂಬಂಧಿಸಿದಂತೆ ವ್ಯವಹರಿಸುತ್ತದೆ. ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷೆ ಮಂಡಳಿಯ ರಚನೆಯ ಪೂರ್ವದಲ್ಲಿ ಶಿಕ್ಷಕರ ತರಬೇತಿ ಪರೀಕ್ಷೆಗಳನ್ನು ಈ ಸಮಿತಿಯೇ ನಡೆಸಿ ಫಲಿತಾಂಶಗಳನ್ನು ಪ್ರಕಟಿಸುತ್ತಿತ್ತು.

**೪. ಪ್ರಾಥಮಿಕ ಶಿಕ್ಷಣ ಸಮಿತಿ** (The Primary Education Board)

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಈ ಸಮಿತಿಯ ಅಧ್ಯಕ್ಷರಾಗಿ ಮತ್ತು 61 ಜನರು ಸದಸ್ಯರನ್ನು ಹೊಂದಿದ್ದು ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ, ಕಡ್ಡಾಯ ಪ್ರಾಥಮಿಕ ಶಿಕ್ಷಣ, ಮಧ್ಯಾಹ್ನದ ಅಲ್ಪೋಪಹಾರ, ಶಿಕ್ಷಕರ ಆಯ್ಕೆ ಮತ್ತು ತರಬೇತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರಕ್ಕೆ ಸಲಹೆ ಸೂಚನೆ ಕೊಡುತ್ತದೆ.

**೫. ಪಠ್ಯ ಪುಸ್ತಕ ಕಮಿಟಿಗಳು** (Text Book Committees)

ರಾಜ್ಯ ಹಂತದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎರಡು ಪಠ್ಯಪುಸ್ತಕಗಳ ಕಮಿಟಿಗಳು ರಚನೆಯಾಗಿದ್ದು ರಾಷ್ಟ್ರೀಕೃತ ಪಠ್ಯಪುಸ್ತಕಗಳ ಆಯ್ಕೆ ಪ್ರಕಟಣೆಗೆ ಸಂಬಂಧಿಸಿದಂತೆ ರಾಜ್ಯ ಸರಕಾರಕ್ಕೆ ಸಲಹೆ ಸೂಚನೆ ನೀಡುತ್ತದೆ. ರಾಷ್ಟ್ರೀಕರಣಗೊಳ್ಳದ ಪುಸ್ತಕಗಳನ್ನು ಪ್ರಕಾಶಕರಿಂದ ಮತ್ತು ಲೇಖಕರಿಂದ ಆಹ್ವಾನಿಸುತ್ತದೆ. ಪಠ್ಯಪುಸ್ತಕದ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರು ಈ ಎರಡು ಕಮಿಟಿಗಳಿಗೆ ಕಾರ್ಯದರ್ಶಿಗಳಾಗಿರುತ್ತಾರೆ. ಈ ಕಮಿಟಿಗಳು ಪಠ್ಯಪುಸ್ತಕಗಳ ಕಾಗದದ ಗುಣಮಟ್ಟ, ಬೈಂಡಿಂಗ್, ಪ್ರಿಂಟ್, ಆಕಾರ, ವಿಷಯ ವಿವರಣೆ ಮುಂತಾದವುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಸೂಚಿಸುತ್ತವೆ.

ಈ ಮೇಲೆ ಸೂಚಿಸಿದ ಸಮಿತಿಗಳಲ್ಲದೆ, ಹಿಂದೀ ಅಧ್ಯಯನ ಸಮಿತಿ, ನೃತ್ಯ, ಸಂಗೀತ ಹಾಗೂ ನಾಟಕ ಸಮಿತಿ, ಕಲಾ ಸಮಿತಿ, ಸಂಸ್ಕೃತ ಶಿಕ್ಷಣ ಸಮಿತಿ, ವಾಣಿಜ್ಯ ಶಿಕ್ಷಣ ಸಮಿತಿ, ಬಾಲಕಿಯರ ಮತ್ತು ಸ್ತ್ರೀ ಶಿಕ್ಷಣ ರಾಜ್ಯ ಪರಿಷತ್ತು ಮುಂತಾದವುಗಳು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತ ನಿರ್ವಹಣೆ**

ವಿಭಾಗೀಯ ಹಂತದ ಶೈಕ್ಷಣಿಕ ಆಡಳಿತ ನಿರ್ವಹಣೆ (Management of Education at Divisional Level) :

ಕರ್ನಾಟಕ ರಾಜ್ಯವನ್ನು ಶೈಕ್ಷಣಿಕ ಆಡಳಿತ ನಿರ್ವಹಣೆಯ ದೃಷ್ಟಿಯಿಂದ 4 ವಿಭಾಗಗಳನ್ನಾಗಿ ವಿಂಗಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು 27 ಜಿಲ್ಲೆಗಳು ಇವೆ. ಈ ನಾಲ್ಕು ವಿಭಾಗಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿರುತ್ತದೆ.

1. ಬೆಂಗಳೂರು–ವಿಭಾಗ (ಮುಖ್ಯ ಕಚೇರಿ – ಬೆಂಗಳೂರು): ಈ ವಿಭಾಗದಲ್ಲಿ ಬರುವ ಜಿಲ್ಲೆಗಳೆಂದರೆ – ಬೆಂಗಳೂರು ಗ್ರಾಮಾಂತರ, ನಗರ, ಕೋಲಾರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ.
2. ಮೈಸೂರು ವಿಭಾಗ (ಮುಖ್ಯ ಕಛೇರಿ – ಮೈಸೂರು): ಈ ವಿಭಾಗದಲ್ಲಿ ಬರುವ ಜಿಲ್ಲೆಗಳೆಂದರೆ – ಮೈಸೂರು, ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು, ಉಡುಪಿ, ಚಾಮರಾಜನಗರ,
3. ಬೆಳಗಾಂವ ವಿಭಾಗ (ಮುಖ್ಯ ಕಚೇರಿ – ಬೆಳಗಾಂವ): ಈ ವಿಭಾಗದಲ್ಲಿ ಬರುವ ಜಿಲ್ಲೆಗಳೆಂದರೆ – ಬೆಳಗಾಂವ, ಧಾರವಾಡ, ಉತ್ತರ ಕನ್ನಡ, ವಿಜಾಪೂರ, ಬಾಗಲಕೋಟೆ, ಗದಗ, ಹಾವೇರಿ,
4. ಗುಲ್ಬರ್ಗಾ ವಿಭಾಗ (ಮುಖ್ಯ ಕಚೇರಿ – ಗುಲ್ಬರ್ಗಾ): ಈ ವಿಭಾಗದಲ್ಲಿ ಬರುವ ಜಿಲ್ಲೆಗಳೆಂದರೆ ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಬೀದರ.

ದಿನಾಂಕ 1–7–1970ರಿಂದ ಪ್ರತಿ ವಿಭಾಗಕ್ಕೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು (Join Director of Public Instruction) ಮುಖ್ಯಸ್ಥರಾಗಿರುತ್ತಾರೆ. ಇವರ ಪ್ರಮುಖ

Digitised by Bharatavani, CIIL

ಕಾರ್ಯಗಳೆಂದರೆ ತಮ್ಮ ವಿಭಾಗದಲ್ಲಿ ಬರುವ ಶಿಕ್ಷಣ ಮಹಾವಿದ್ಯಾಲಯಗಳು, ಜಿಲ್ಲಾ ಶಿಕ್ಷಣ ಕಚೇರಿಗಳು, ಶೇಕಡಾ 25 ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳು, ಕೆಲವು ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ ಮತ್ತು ಪ್ರೌಢಶಾಲೆಗಳ ಮೇಲ್ವಿಚಾರಣೆ ಮತ್ತು ತಪಾಸಣೆ ಮಾಡುವುದು. ಇವರ ಕಾರ್ಯದಲ್ಲಿ ಸಹಾಯ ಮಾಡಲು ಈ ಹಂತದಲ್ಲಿ ಕಿರಿಯ ಶ್ರೇಣಿಯ ಕ್ಲಾಸ್–I ಶಿಕ್ಷಣಾಧಿಕಾರಿಗಳು, ಕ್ಲಾಸ್ – I ಅಧಿಕಾರಿಗಳು, ವಿಷಯ ತಜ್ಞರು ಮತ್ತು ಶಿಕ್ಷಕೇತರ ಸಿಬ್ಬಂದಿಯವರಿರುತ್ತಾರೆ.

**ಜಿಲ್ಲಾ ಹಂತದ ಶೈಕ್ಷಣಿಕ ಆಡಳಿತ ನಿರ್ವಹಣೆ** (Management of Education at District Level).

ದಿನಾಂಕ 1 ಜುಲೈ 1970 ರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಜಿಲ್ಲಾ ಹಂತದ ಶಿಕ್ಷಣದ ಮುಖ್ಯ ಅಧಿಕಾರಿಯಾಗಿರುತ್ತಾರೆ. ಇವರ ಕಾರ್ಯದಲ್ಲಿ ಸಹಾಯ ಮಾಡಲು ಈ ಹಂತದಲ್ಲಿ ಕ್ಲಾಸ್ – 3 ಶಾಲಾ ತನಿಖಾಧಿಕಾರಿಗಳು. ಸಹಾಯಕ ಶಿಕ್ಷಣಾಧಿಕಾರಿಗಳು, ವಿಷಯ ತಜ್ಞರು ಮತ್ತು ಶಿಕ್ಷಕೇತರ ಸಿಬ್ಬಂದಿಯವರಿರುತ್ತಾರೆ.

ಇವರು ತಮ್ಮ ಜಿಲ್ಲೆಯಲ್ಲಿ ಬರುವ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಹಾಯಕ ಶಿಕ್ಷಣಾಧಿಕಾರಿಗಳ ಕಚೇರಿಗಳನ್ನು, ಪ್ರಾಥಮಿಕ ಶಿಕ್ಷಣ ತರಬೇತಿ ಸಂಸ್ಥೆಗಳನ್ನು, ಕೆಲವು ಪ್ರೌಢಶಾಲೆಗಳನ್ನು, ಸಂಗೀತ, ಸಂಸ್ಕೃತ ಮತ್ತು ಕಲಾ ಸಂಸ್ಥೆಗಳನ್ನು ಮೇಲ್ವಿಚಾರಣೆ ಮತ್ತು ತಪಾಸಣೆ ಮಾಡುವರು. ಉಳಿದ ಪ್ರೌಢಶಾಲೆಗಳನ್ನು ಶಿಕ್ಷಣಾಧಿಕಾರಿಗಳು ಮೇಲ್ವಿಚಾರಣೆ ಮತ್ತು ತಪಾಸಣೆ ಮಾಡುವರು. ದೈಹಿಕ ಶಿಕ್ಷಣವನ್ನು ದೈಹಿಕ ಶಿಕ್ಷಣ ಅಧಿಕಾರಿ ನಿರ್ವಹಿಸುವರು.

೩. **ತಾಲ್ಲೂಕು ಹಂತದ ಶೈಕ್ಷಣಿಕ ಆಡಳಿತ ನಿರ್ವಹಣೆ** (Management of Education at Taluka Level):

ಕ್ಷೇತ್ರ ಶಿಕ್ಷಣಾಧಿಕಾರಿಗಳು ತಾಲ್ಲೂಕು ಹಂತದ ಶಿಕ್ಷಣಾಧಿಕಾರಿಗಳಾಗಿರುತ್ತಾರೆ. ಇವರುಗಳು ತಮ್ಮ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳನ್ನು ಮೇಲ್ವಿಚಾರಣೆ ಮತ್ತು ತಪಾಸಣೆ ಮಾಡುವರು.

ಈ ಹಂತದಲ್ಲಿ ದಿನಾಂಕ 1–7–1970 ರಿಂದ ಕ್ಲಾಸ್ –3 ಸಹಾಯಕ ಶಿಕ್ಷಣಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುವರು. ಇವರಿಗೆ ಕೆಲಸದಲ್ಲಿ ಸಹಾಯ ಮಾಡಲು ಶಾಲಾ ತನಿಖಾಧಿಕಾರಿಗಳು ಶಿಕ್ಷಣ ಸಹಾಯಕ, ದೈಹಿಕ ಶಿಕ್ಷಣ ಅಧಿಕಾರಿ ಮತ್ತು ಶಿಕ್ಷಕೇತರ ಸಿಬ್ಬಂದಿ ಇರುತ್ತಾರೆ. ಹಿರಿಯ ಪ್ರಾಥಮಿಕ ಶಾಲೆಗಳನ್ನು ಮತ್ತು ಉರ್ದು ಶಾಲೆಗಳ ಮೇಲ್ವಿಚಾರಣೆ ಮತ್ತು ತಪಾಸಣೆಯನ್ನು ಸಹಾಯಕ ಶಿಕ್ಷಣಾಧಿಕಾರಿ ಮಾಡಿದರೆ ಕಿರಿಯ ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆ ಮತ್ತು ತಪಾಸಣೆಯನ್ನು ಹಾಗೂ ಮಧ್ಯಾಹ್ನ ಉಪಹಾರದ ನಿರ್ವಹಣೆಯನ್ನು ಶಿಕ್ಷಣ ಸಹಾಯಕರು ನೋಡಿಕೊಳ್ಳುವರು. ದೈಹಿಕ ಶಿಕ್ಷಣ ಅಧಿಕಾರಿ ದೈಹಿಕ ಶಿಕ್ಷಣದ ನಿರ್ವಹಣೆ ನೋಡಿಕೊಳ್ಳುವರು. ಆದರೆ ಜುಲೈ 1999 (6–7–1999) ರಿಂದ ಸಹಾಯಕ ಶಿಕ್ಷಣಾಧಿಕಾರಿಗಳ ಹುದ್ದೆ ರದ್ದಾಗಿರುತ್ತದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳೇ ಎಲ್ಲ ಕಾರ್ಯ ನಿರ್ವಹಿಸುವರು.

–ಆ.ಪ್ರೇ

## ಸಾಹಿತ್ಯ ಬೋಧನೆ

**ಸಾಹಿತ್ಯ ಬೋಧನೆ ಮತ್ತು ಅದರ ಗುರಿಗಳು**

ಸಾಹಿತ್ಯ ಬೋಧನೆ ಎಂದರೆ ಜೀವನ ಬೋಧನೆ, ಜೀವನವನ್ನು ಮತ್ತು ಜೀವನ ಮೌಲ್ಯಗಳನ್ನು ಹೇಳುವ ಯಾವ ಸಾಹಿತ್ಯ ಪ್ರಕಾರವಾಗಲಿ ಅದೆಲ್ಲವನ್ನು ಬೋಧಿಸುವುದು ಸಾಹಿತ್ಯ ಬೋಧನೆ, ಇದು ಸುವಿಶಾಲ, ಸಮಗ್ರತೆಯನ್ನು ಬಿಂಬಿಸುತ್ತದೆ. ಕವನ, ಕಾವ್ಯ, ಕತೆ, ಕಾದಂಬರಿ, ಜೀವನಚರಿತ್ರೆ–ಆತ್ಮಚರಿತ್ರೆ ನಾಟಕ, ಪ್ರಬಂಧ ಇತರೇ ಪ್ರಕಾರಗಳನ್ನು ಬೋಧಿಸುವ ಗುರಿಗಳೇ ಸಾಹಿತ್ಯ ಬೋಧನೆಯ ಗುರಿಗಳಾಗುತ್ತವೇ ವಿನಃ ಪ್ರತ್ಯೇಕ ಬೋಧನಾ ಗುರಿಗಳೆಂದು ವಿಭಾಗಿಸುವುದು ಅಷ್ಟು ಸಮಂಜಸವಲ್ಲ. ಸಂಗೀತ–ಸಾಹಿತ್ಯ–ಕಲೆ ಇವುಗಳನ್ನು ಆಮೂಲಾಗ್ರವಾಗಿ ಬೋಧಿಸುವುದೇ ಸಾಹಿತ್ಯ ಬೋಧನೆ. ಸಾಹಿತ್ಯ ಬೋಧನೆ ಸುವಿಶಾಲ. ಸುಮಧುರ, ಜೀವನ ಮೌಲ್ಯಗಳನ್ನು ನೀಡುವ ಮತ್ತು ರಸದೌತಣವನ್ನು ಎರಕ ಹೊಯ್ಯುವುದಾಗಿದೆ.

**೧. ಸಾಹಿತ್ಯ ಸವಿಯುವ ಮನೋಭಾವನೆ ಬೆಳೆಸುವುದು**

ಸಾಹಿತ್ಯ ಮನುಷ್ಯನ ಮನಸ್ಸನ್ನು ಸಂಸ್ಕರಿಸುತ್ತದೆ. ವಿಶಾಲ ಹೃದಯವಂತಿಕೆಯನ್ನು ಬೆಳೆಸುತ್ತದೆ. ಇಂತಹ ಜೀವನವನ್ನು ಹೇಳುವ/ಬೋಧಿಸುವ ಸಾಹಿತ್ಯದ ಸಾರಸ್ವತ ಲೋಕಕ್ಕೆ ಮಕ್ಕಳು ಸ್ವಯಾರ್ಜಿತವಾಗಿ ಪ್ರವೇಶಿಸಿ ಸಾಹಿತ್ಯದಲ್ಲಿ ಆನಂದವನ್ನು ಸವಿಯುವ ಮನೋಭಾವನೆಯನ್ನು ಬೆಳೆಸಬೇಕೆಂಬುದೇ ಸಾಹಿತ್ಯ ಬೋಧನೆಯ ಗುರಿಯಾಗಿದೆ. ಸಾಹಿತ್ಯದಲ್ಲಿ ಬರುವ ಕಥೆ, ಕವನ, ನಾಟಕ, ಕಾವ್ಯ ಇತ್ಯಾದಿ ಪ್ರಕಾರಗಳನ್ನು ಬರುವ ಉತ್ಕೃಷ್ಟವಾದ ಸಂದರ್ಭಗಳನ್ನು ಹೆಕ್ಕಿ ಮಕ್ಕಳಿಗೆ ಉಣಬಡಿಸಬೇಕು.

ಯಾವುದೇ ಕಾವ್ಯ, ನಾಟಕ, ಕತೆ (ಗದ್ಯ–ಪದ್ಯಗಳಲ್ಲಿ)ಗಳ ಒಂದು ಸಂದರ್ಭ, ಘಟನೆ, ಸನ್ನಿವೇಶ, ಪಾತ್ರಗಳನ್ನು ಬೋಧಿಸುವಾಗ ಕೇವಲ ಸನ್ನಿವೇಶ, ಪಾತ್ರಗಳಿಗೆ ಮಾತ್ರ ಮೀಸಲಾಗಿರದೆ ಅದರಾಚೆ ಹೋಗಿ ಬೋಧಿಸುವ ವಿಷಯಕ್ಕೆ ಪೂರಕವಾದ ಇತರ ಸನ್ನಿವೇಶಗಳು, ಸಂದರ್ಭಗಳು, ಘಟನೆಗಳು, ಪಾತ್ರಗಳು ವೈಶಿಷ್ಟ್ಯತೆ, ಮಹತ್ವವನ್ನು ಬೋಧಿಸುವಾಗ ಮಕ್ಕಳಲ್ಲಿ ಸಾಹಿತ್ಯ ಸವಿಯುವ ಮನೋಭಾವನೆ ಬೆಳೆದು ತಾವೇ ಸ್ವತಃ ಸಾಹಿತ್ಯದ ಮಜಲುಗಳನ್ನು ಸವಿಯಲು ಮುಂದಾಗುತ್ತಾರೆ.

ಒಂದು ವಿಷಯ ಬೋಧಿಸುವಾಗ ಹಲವು ಹನ್ನೊಂದು ವಿಷಯಗಳನ್ನು ಪರಿಚಯಿಸುವುದರ ಮೂಲಕ ಸಾಹಿತ್ಯ ಸವಿಯುವ ಮನೋಭಾವನೆ ಬೆಳೆಸಬೇಕು.

**೨. ಸಾಹಿತ್ಯ ಅಧ್ಯಯನದ ಆಸಕ್ತಿ ಉಂಟುಮಾಡುವುದು**

ವಿದ್ಯಾರ್ಥಿ/ಮಕ್ಕಳು ಸಾಹಿತ್ಯದ ಆಳ ಅಗಲಕ್ಕೆ ಇಳಿದು ಸಾಹಿತ್ಯದ ಎಲ್ಲಾ ಪರಿಕರಗಳನ್ನು ಅಧ್ಯಯನ ಮಾಡಿ ವರ್ತಮಾನ ಮತ್ತು ಭವಿಷ್ಯದಲ್ಲಿ ಉತ್ತಮ ಜೀವನ ನಡೆಸಲು ಆಸಕ್ತಿ, ಅಭಿರುಚಿಯನ್ನುಂಟು ಮಾಡಬೇಕು. ಮಕ್ಕಳು ಸದಾ ಹಸನ್ಮುಖಿಗಳಾಗಿ ಕಾರ್ಯೋನ್ಮುಖವಾಗಿ ಜೀವನ ನಡೆಸಲು ಉತ್ಕೃಷ್ಟ ಸಾಹಿತ್ಯವನ್ನು ಅಧ್ಯಯನ ಮಾಡುವ ಹವ್ಯಾಸವನ್ನು ಬೆಳೆಸುವುದು ಸಾಹಿತ್ಯ ಬೋಧನೆಯ ಗುರಿಯಾಗಿದೆ. ಇದಕ್ಕಾಗಿ ಭಾಷಾ ಬೋಧಕ ಸಾಹಿತ್ಯ ಅಧ್ಯಯನಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನು ಮಾರ್ಗದರ್ಶನವನ್ನು ಪ್ರೋತ್ಸಾಹವನ್ನು ಚಾಚೂತಪ್ಪದೆ ನೀಡಿದಾಗ ಮಕ್ಕಳಲ್ಲಿ ಸಾಹಿತ್ಯ ಅಧ್ಯಯನದ ಆಸಕ್ತಿ ಬೆಳೆಯುತ್ತದೆ.

**೩. ಪ್ರಾಚೀನ ಸಾಹಿತ್ಯದ ಕವಿಕುಲಕೋಟಿಗಳನ್ನು ಪರಿಚಯಿಸುವುದು**

ಕನ್ನಡ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಪ್ರಾಚೀನ ಸಾಹಿತ್ಯದಲ್ಲಿ ಬರುವ ಮತ್ತು ಕನ್ನಡ ಸಾಹಿತ್ಯಕ್ಕೆ ಬೇರುಗಳಾದ/ಕುಲ

Digitised by Bharatavani, CIIL

ಪುರೋಹಿತರಾದ/ಕವಿಗಳಾದ ಶ್ರೀವಿಜಯ, ಶಿವಕೋಟಾಚಾರ್ಯ, ಪಂಪ, ಪೊನ್ನ,ರನ್ನ, ಒಂದನೇ ನಾಗವರ್ಮ, ಬಸವಣ್ಣ, ಅಕ್ಕಮಹಾದೇವಿ, ಇತರೆ ನೂರಾರು ವಚನಕಾರರು, ಜನ್ನ, ಹರಿಹರ, ರಾಘವಾಂಕ, ದಾಸರು, ಸರ್ವಜ್ಞ, ಕುಮಾರವ್ಯಾಸ, ಲಕ್ಷ್ಮೀಶ, ಹೀಗೆ ಪಂಪಪೂರ್ವ, ಪಂಪಯುಗ, ಬಸವಯುಗ, ಕುಮಾರವ್ಯಾಸ ಯುಗಗಳಲ್ಲಿ ಬರುವ ನೂರಾರು ಕವಿಗಳನ್ನು ಪರಿಚಯಿಸುವುದು ಹಾಗೂ ರತ್ನತ್ರಯರು, ಕವಿಚಕ್ರವರ್ತಿಗಳು ಸಮಾಜ ಬದಲಾವಣೆಯ ಪುರಸ್ಕೃತರು ಮುಂತಾದವರನ್ನು ಮಕ್ಕಳಿಗೆ ಪರಿಚಯಿಸುವುದು ಸಾಹಿತ್ಯ ಬೋಧನೆಯ ಪ್ರಮುಖ ಗುರಿಯಾಗಿದೆ.

**೪. ಪ್ರಾಚೀನ ಸಾಹಿತ್ಯದ ಮಜಲುಗಳನ್ನು ಮತ್ತು ವೈಶಿಷ್ಟ್ಯತೆಯನ್ನು ಪರಿಚಯಿಸುವುದು**

ಗತಕಾಲದ ಸಾಹಿತ್ಯದ ವೈಭವವನ್ನು ಪರಿಚಯಿಸುತ್ತಾ ಅದರ ವಿಶೇಷತೆಯನ್ನು ಪರಿಚಯಿಸುವುದು ಸಾಹಿತ್ಯ ಬೋಧನೆಯ ಗುರಿಯಾಗಿದೆ. ಪ್ರಾಚೀನ ಸಾಹಿತ್ಯ ಮಜಲುಗಳಾದ ಪಂಪಪೂರ್ವಯುಗ (ಹಳೆಗನ್ನಡ ಪೂರ್ವಯುಗ), ಪಂಪಯುಗ (ಕನ್ನಡ ಸಾಹಿತ್ಯದ ಸುವರ್ಣಯುಗ), ಬಸವಯುಗ, (ವಚನಸಾಹಿತ್ಯಯುಗ, ಕುಮಾರವ್ಯಾಸಯುಗ, ಈ ರೀತಿಯ ಸಾಹಿತ್ಯದ ನಾಲ್ಕು ಘಟ್ಟಗಳನ್ನು ಪರಿಚಯಿಸುವುದು. ಅಂದರೆ ಪಂಪಪೂರ್ವಯುಗದಲ್ಲಿ ಗ್ರಂಥಗಳ ಸ್ವರೂಪ, ಭಾಷೆಯ ಸ್ವಭಾವ, ವಿಷಯಗಳ ಲಕ್ಷಣ, ಗ್ರಂಥಕಾರರ ವಿಶೇಷತೆಗಳನ್ನು ಪಂಪಯುಗವನ್ನು ಕನ್ನಡ ಸಾಹಿತ್ಯದಲ್ಲಿಯೇ ಸಾಹಿತ್ಯದ ಸುವರ್ಣಯುಗವೆಂದೂ ಕ್ಷಾತ್ರಯುಗವೆಂದೂ ಏಕೆ ಕರೆಯಲಾಗಿದೆ ಎಂಬುದನ್ನೂ ಬಸವ ಯುಗವನ್ನು ಕನ್ನಡ ಸಾಹಿತ್ಯದಲ್ಲಿಯೇ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕವಾಗಿ ಕ್ರಾಂತಿಯನ್ನು ಮಾಡಿದ ಚಳವಳಿಯುಗವೆಂದು ಏಕೆ ಕರೆಯಲಾಗಿದೆ ಎಂಬುದನ್ನೂ ದಾಸ ಸಾಹಿತ್ಯ ಸಾಮಾಜಿಕ, ತಾತ್ವಿಕವಾಗಿ ಭಕ್ತಿರಸವಾಗಿ ಹೇಗೆ ಸಮಾಜದ ಸಂಜೀವಿನಿ ಸಾಹಿತ್ಯವಾಯಿತೆಂಬುದನ್ನೂ ಕುಮಾರವ್ಯಾಸಯುಗದಲ್ಲಿ ಬರುವ ಸಾಹಿತ್ಯದ ವೈಶಿಷ್ಟ್ಯತೆಯನ್ನೂ ಅರ್ಥೈಸುವುದು. ಹೀಗೆ ವೈವಿಧ್ಯಮಯವಾದ ಪ್ರಾಚೀನ ಸಾಹಿತ್ಯದ ಘಟ್ಟಗಳನ್ನು ಪರಿಚಯಿಸುವುದೂ ಸಾಹಿತ್ಯ ಬೋಧನೆಯ ಗುರಿಯಾಗಿದೆ.

**೫. ಆಧುನಿಕ ಸಾಹಿತ್ಯದ ಲೇಖಕರ ಬಗ್ಗೆ ಅಭಿಮಾನವನ್ನುಂಟು ಮಾಡುವುದು**

ಪ್ರಾಚೀನ ಸಾಹಿತ್ಯ ಚರಿತ್ರೆಯು ಹಳಗನ್ನಡ, ನಡುಗನ್ನಡದ ಸಾಹಿತ್ಯದಿಂದ ಸ್ಥಿತ್ಯಂತರಗೊಂಡು ಹೊಸಗನ್ನಡದ ಕಾಲ ಉದಯ ವಾಯಿತು. ಆಧುನಿಕ ಸಾಹಿತ್ಯ ಹಳೆಯ ಸಂಪ್ರದಾಯ ಮತ್ತು ಪರಂಪರೆಯ ಹಾದಿಯಿಂದ ಸ್ಥಿತ್ಯಂತರಗೊಂಡು ಸಂಕ್ರಮಣ ಬದುಕಿಗೆ ತನ್ನ ಗತಕಾಲದ ಪರಂಪರೆಯ ಮತ್ತು ಸಂಪ್ರದಾಯಗಳನ್ನು ಮೆಟ್ಟಿ ಒಂದು ಹೊಸ ಚಿಂತನೆಯ ಸೃಜನಾತ್ಮಕ ಚಳವಳಿಯ ಮನೋಧರ್ಮ ಸಿದ್ಧತೆ ಹೇಗಾಯಿತೆಂಬುದನ್ನು ಪರಿಚಯಿಸುವುದು ಕನ್ನಡ ಸಾಹಿತ್ಯದ ಬೋಧನೆಯಾಗಿದೆ.

ಆಧುನಿಕ/ಹೊಸಗನ್ನಡ ಸಾಹಿತ್ಯದ ಪಂಥಗಳು/ಪ್ರಾಕಾರಗಳಾದ ನವೋದಯಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ನವ್ಯಸಾಹಿತ್ಯ, ದಲಿತಸಾಹಿತ್ಯ, ಬಂಡಾಯಸಾಹಿತ್ಯ, ಈ ಸಾಹಿತ್ಯ ಸಂಘಟನಾ ಪಂಥಗಳ ವೈಶಿಷ್ಟತೆ, ಆಶ್ರಯ, ಪ್ರೇರಣೆ, ಪ್ರಭಾವ, ಅದಮ್ಯ ಒಲವು, ಬದಲಾವಣೆಯ ಮನೋಭಾವ ಮುಂತಾದವುಗಳ ಒಳ ಮತ್ತು ಹೊರ ಅರಿವಿನ ಮೌಲ್ಯಗಳನ್ನು ಪರಿಚಯಿಸುವುದೂ ಸಾಹಿತ್ಯ ಬೋಧನೆಯ ಗುರಿಯಾಗಿದೆ.

**೬. ಆಧುನಿಕ ಸಾಹಿತ್ಯದ ಲೇಖಕರ ಬಗ್ಗೆ ಅಭಿಮಾನವನ್ನುಂಟು ಮಾಡುವುದು**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬರುವ ಕವಿಗಳನ್ನು, ಲೇಖಕರನ್ನು ಪರಿಚಯಿಸಿ ಅವರ ಬಗ್ಗೆ ಅಭಿಮಾನ ಮೆಚ್ಚುಗೆಯನ್ನುಂಟು ಮಾಡುವುದು ಸಾಹಿತ್ಯ ಬೋಧನೆಯ ಮುಖ್ಯ ಗುರಿಯಾಗಿದೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಮುಂಗೋಳಿ ಕೂಗಿದ ಬಿ.ಎಂ. ಶ್ರೀಕಂಠಯ್ಯ ಅವರಿಂದ ಹಿಡಿದು ಇಂದಿನ ಲೇಖಕರವರೆಗೂ ಅಂದರೆ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಸಾಹಿತ್ಯದವರೆಗೂ ಅದರಲ್ಲಿ ಬರುವ ಕವಿಗಳು, ಕತೆಗಾರರು ಕಾದಂಬರಿಕಾರರು, ಪ್ರಬಂಧಕರು, ವಿಮರ್ಶಕರು, ಮುಂತಾದವರ ಸಾಹಿತ್ಯ ಕೈಂಕರ್ಯವನ್ನು, ಸಾಧನೆಯನ್ನು, ಹೋರಾಟವನ್ನು ನಾಡುನುಡಿಗೆ ಸೇವೆ ಸಲ್ಲಿಸಿರುವುದನ್ನು ಪರಿಚಯಿಸುವುದೂ ಸಾಹಿತ್ಯ ಬೋಧನೆಯ ಗುರಿಯಾಗಿದೆ.

**೭. ಸೃಜನಶೀಲತೆಯನ್ನು ಬೆಳೆಸುವುದು**

ಮಕ್ಕಳಿಗೆ ಕೇವಲ ವಿಷಯ ಮತ್ತು ಸಾಹಿತ್ಯ ಪರಿಚಯಿಸಿದರೆ ಸಾಲದು, ಮತ್ತು ಕಥೆ, ಕವನ, ಕಾದಂಬರಿ, ಪ್ರಬಂಧ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಓದಿದರೆ ಸಾಲದು. ಮಕ್ಕಳು ಭವಿಷ್ಯದಲ್ಲಿ ಸಾಹಿತ್ಯದ ಬೆಳೆಯನ್ನು ಕೃಷಿ ಮಾಡಬೇಕು. ಹಾಗಾಗಿ ಮಕ್ಕಳು ಪದ್ಯ. ಕಥೆ, ಲೇಖನಗಳನ್ನು ಬರೆಯಲು ತರಬೇತಿಗೊಳಿಸುವುದರೊಂದಿಗೆ ಅವರಿಗೆ ಬರೆಯಲು ವಸ್ತು, ಪರಿಕಲ್ಪನೆ, ಘಟನೆ, ಸನ್ನಿವೇಶ ಮುಂತಾದುವುಗಳನ್ನು ಕೊಟ್ಟು ಆಲೋಚನೆಗಳಿಗೆ ಅಭಿವ್ಯಕ್ತಿಗೆ, ಪೂರ್ಣ ಸ್ವತಂತ್ರ ವಾತಾವರಣ ಕಲ್ಪಿಸಿ ಹೊಸದನ್ನು ನವನವೀನತೆಯನ್ನು ನಿರ್ಮಾಣ ಮಾಡಲು ಅವಕಾಶ, ಮಾರ್ಗದರ್ಶನ, ಪ್ರೇರಣೆ ಪ್ರೋತ್ಸಾಹಗಳನ್ನು ನೀಡಿ ಮಕ್ಕಳನ್ನು ಸೃಜನಶೀಲರನ್ನಾಗಿ ತಯಾರು ಮಾಡುವುದು ಸಾಹಿತ್ಯ ಬೋಧನೆ ಗುರಿಯಾಗಿದೆ.

**೮. ನಾಡಿನ ಸಂಸ್ಕೃತಿ-ನಾಡು ನುಡಿಗೆ ತ್ಯಾಗ ಮಾಡಿದವರನ್ನು ಪರಿಚಯಿಸುವುದು**

ನಾಡಿನ ಮತ್ತು ನುಡಿಯ ಬಗ್ಗೆ ಹಿರಿದಾದ ಅಭಿಮಾನ ಮೂಡಬೇಕಾದರೆ ಮಕ್ಕಳಿಗೆ ನಾಡಿನ ಉತ್ಕೃಷ್ಟ ಸಂಸ್ಕೃತಿ ಮತ್ತು ಕನ್ನಡಕ್ಕಾಗಿ ಸೇವೆಸಲ್ಲಿಸಿದ ತ್ಯಾಗಮಯಿಗಳ ಪರಿಚಯ ಮಾಡುವುದರ ಮೂಲಕ ಮತ್ತು ಗತಕಾಲದ ಸಾಹಿತ್ಯ, ವೈಭವ ಮತ್ತು ತ್ಯಾಗಮಯಿಗಳ ಪ್ರಾಮಾಣಿಕ, ನಿಷ್ಠ ಬದುಕನ್ನು ಪರಿಚಯಿಸುವುದೂ ಸಾಹಿತ್ಯ ಬೋಧನೆಯ ಗುರಿಯಾಗಿದೆ.

**೯. ರಸಾಸ್ವಾದನೆ, ಸೌಂದರ್ಯಪ್ರಜ್ಞೆ, ಕಲ್ಪನಾಶಕ್ತಿಯನ್ನು ಬೆಳೆಸುವುದು**

ಸಾಹಿತ್ಯ ಜೀವನದ ಪ್ರತಿಬಿಂಬ ಮತ್ತು ಗತಿಬಿಂಬ ಕಲ್ಪನಾತೀತ ವಾದದ್ದು, ಸಾಹಿತ್ಯ ರಸಘಟ್ಟಿಗಳ ಸೌರಭವಾಗಿರುವುದರಿಂದ ಸಾಹಿತ್ಯವು ನಮ್ಮ ಹೃದಯ ವಿಶಾಲಗೊಳಿಸುತ್ತದೆ. ಪ್ರಫುಲ್ಲಗೊಳಿಸುತ್ತದೆ. ಸಾಹಿತ್ಯ ಜೀವನದ ಅವಿಭಾಜ್ಯ ಅಂಗವಾಗಿ ಜೀವನದ ನೈಜ ಸಂಗತಿಗಳಿಗೆ ತಕ್ಕಂತೆ ಉತ್ಪ್ರೇಕ್ಷೆ ಉಪಮೆಗಳಿಂದ ವರ್ಣನೆ ಮಾಡುವುದರೊಂದಿಗೆ ಜೀವನದ ಸತ್ಯ ಮತ್ತು ಸೌಂದರ್ಯಗಳನ್ನು ರೂಢಿಸಿಕೊಂಡು ಆನಂದ, ಖುಷಿ, ನೆಮ್ಮದಿ, ಲವಲವಿಕೆ, ಕಲಾತ್ಮಕ ಜೀವನ ರೂಢಿಸುವುದೂ ಸಾಹಿತ್ಯ ಬೋಧನೆಯ ಗುರಿಯಾಗಿದೆ.

**೧೦. ಜೀವನದ ಮೌಲ್ಯಗಳನ್ನು ಬೆಳೆಸುವುದು**

ಸಾಹಿತ್ಯ ನಮ್ಮ ಬಾಳನ್ನು ಪ್ರತಿಬಿಂಬಿಸುತ್ತದೆ ಮತ್ತು ನಮ್ಮ ಬಾಳನ್ನು ಬೆಳಗುತ್ತದೆ. ಬಾಳಿನ ಜೀವನ ತತ್ವಗಳು ಸಾಹಿತ್ಯದ ಪ್ರಕಾರಗಳಾದ ಕಥೆ,

Digitised by Bharatavani, CIIL

ಕಾದಂಬರಿ, ಕಾವ್ಯ, ನಾಟಕಗಳಲ್ಲಿ ಅವಿನಾಭಾವವಾಗಿ ಮೇಳೈಸಿಕೊಂಡು ಬಂದಿರುವುದರಿಂದ ನಮ್ಮ ಬಾಳಿನ ಅಮೂಲ್ಯ ಮೌಲ್ಯಗಳು ಮಾರ್ಮಿಕವಾಗಿ ಇಟ್ಟಿದ್ದು ಅವುಗಳು ನಮ್ಮನ್ನು ಸಂದರ್ಭೋಚಿತವಾಗಿ ಎಚ್ಚರಗೊಳಿಸುತ್ತಲೇ ಇರುತ್ತವೆ. ಇಂತಹ ಸನ್ನಿವೇಶಗಳನ್ನು ಘಟನೆಗಳನ್ನು ಹೆಕ್ಕಿ ಜೀವನಕ್ಕೆ ಬೇಕಾದ ಮೌಲ್ಯಗಳನ್ನು ನೀಡಿ ಮಾನವನ ಜಡತ್ವ, ಬೇಸರಿಕೆ, ಅಪ್ರಾಮಾಣಿಕತೆ, ನೀತಿಬಾಹಿರತೆ, ಕ್ರೂರತ್ವಗಳನ್ನು ತೊಡೆದುಹಾಕಿ ಸತ್ಯಸಂಧತೆ, ನೈತಿಕತೆ, ಪ್ರಾಮಾಣಿಕತೆ, ತ್ಯಾಗ, ಸಹನೆ, ಸಹಬಾಳ್ವೆ, ನೆಮ್ಮದಿ, ಸಂತೋಷ, ಕರ್ತವ್ಯನಿಷ್ಠೆ ಮುಂತಾದ ಶ್ರೇಷ್ಠತೆಗಳನ್ನು ಬೆಳೆಸುವುದೂ ಸಾಹಿತ್ಯ ಬೋಧನೆಯ ಗುರಿಯಾಗಿದೆ.

**೧೧. ಸಹೃದಯ ಗುಣಗಳನ್ನು ಬೆಳೆಸುವುದು**

'ಕಿವಿ ಇದ್ದರೆ ಕವಿ'. ಕೇಳುವವನಿದ್ದರೆ ಕತೆ. ನೋಡುವವನಿದ್ದರೆ ನಾಟಕ ಅಂದರೆ ಬರೆದದ್ದನ್ನು ವಿಮರ್ಶಿಸುವ, ಗ್ರಹಿಸುವ ಸಂತೋಷಿಸುವ, ಲೇಖಕನ ಹೃದಯವಂತಿಕೆಯನ್ನು ಮತ್ತು ಸಾಮರ್ಥ್ಯ ಗುಣಗಳನ್ನು ಬೆಳೆಸುವುದೂ ಸಾಹಿತ್ಯ ಬೋಧನೆಯ ಗುರಿಯಾಗಿದೆ.

ಗದ್ಯ ಪ್ರಕಾರಗಳನ್ನು ಮತ್ತು ಕಾವ್ಯ ಪ್ರಕಾರಗಳನ್ನು ಯಾವ ಪೂರ್ವ ಗ್ರಹವಿಲ್ಲದೆ ಅತ್ಯಂತ ಆಸಕ್ತಿಯಿಂದ ಪ್ರೀತಿಯಿಂದ ಸತತ ಅಭ್ಯಾಸ ಮಾಡಿ ಅವುಗಳ ಬೆಲೆಕಟ್ಟಲು ಮತ್ತು ಅರ್ಥಮಾಡಿಕೊಳ್ಳಲು ಸಹೃದಯ ಗುಣವಿದ್ದರೆ ಮಾತ್ರ ಸಾಧ್ಯ. ಸಾಹಿತಿಯ ಹೃದಯ (ಸಾಹಿತ್ಯ ಗುಣಗಳು) ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಮಿಡಿದು ಸ್ಪಂದಿಸಿದಾಗ ಮಾತ್ರ ಸಹೃದಯ ಸ್ಪಂದನವಾಗುತ್ತದೆ. ಹೀಗೆ ಇಬ್ಬರ ಹೃದಯಗಳು ಶ್ರುತಿಮಿಡಿದ ವೀಣೆಯ ತಂತಿಗಳಾಗುವಂತೆ ಕವಿಯ ಅಥವಾ ಲೇಖಕರ ಅನುಭವವನ್ನು ಓದುಗನ ಹೃದಯದಲ್ಲಿ ಸಂವಾದ ಮಾಡುವ ಶಕ್ತಿಯುಳ್ಳವರಾಗುವಂತೆ ಮಾಡುವುದು ಸಾಹಿತ್ಯ ಬೋಧನೆ ಗುರಿಯಾಗಿದೆ.

**೧೨. ಸಾಂಸ್ಕೃತಿಕ – ತಾತ್ವಿಕ – ವೈಜ್ಞಾನಿಕ ಗುಣಗಳನ್ನು ಬೆಳೆಸುವುದು**

ಮಗು ಕೇವಲ ಸಾಹಿತ್ಯದ ಕವಿ–ಕೃತಿಗಳನ್ನು ಓದುವ ವಿಷಯ ತಿಳಿದುಕೊಳ್ಳುವುದಷ್ಟೇ ಅಂತಿಮವಾಗುವುದಿಲ್ಲ. ಅದರಾಚೆ ಇರುವ ಜೀವನದ ನಾನಾ ಮುಖಗಳ ಮೌಲ್ಯಗಳು ಮತ್ತು ಸಂಗತಿಗಳು, ಹಾಗಾಗಿ ಸಾಹಿತ್ಯ ಬೋಧನೆಯ ಗುರಿಗಳಲ್ಲಿ ವ್ಯಕ್ತಿ/ಮಗು ಸಮಾಜದಲ್ಲಿ ಮತ್ತು ಸಮೂಹದಲ್ಲಿ ಸುಸಂಸ್ಕೃತನಾಗಿ ಸಾಂಸ್ಕೃತಿಕ ನೆಲೆಗಳಾದ ಸಂಗೀತ, ನಾಟ್ಯ, ಕುಣಿತ, ಹಾಡು ಮುಂತಾದ ಗೀತಗಾಯನ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮತ್ತು ಅವುಗಳನ್ನು ರೂಢಿಸಿಕೊಳ್ಳುವುದನ್ನು ಬೆಳೆಸುವುದೂ ಸಹ ಸಾಹಿತ್ಯ ಬೋಧನೆಯ ಗುರಿಯಾಗಿದೆ. ಬದುಕಿಗೆ ಬೇಕಾದ ತಾತ್ವಿಕ ಗುಣಗಳಾದ ತ್ಯಾಗ, ಪ್ರೇಮ, ಪ್ರೀತಿ, ಅಹಿಂಸೆ, ಪ್ರಾಮಾಣಿಕತೆ, ಶುದ್ಧಜೀವನ ನಡೆಸುವ ಗುಣಗಳನ್ನು ಬೆಳೆಸುವುದೂ ಸಹ ಸಾಹಿತ್ಯ ಬೋಧನೆಯ ಗುರಿಯಾಗಿದೆ.

ಸಾಹಿತ್ಯ ಕೇವಲ ಮೃದುವಾದ, ಕೋಮಲವಾದ, ಸಂತೋಷದ ಸಂಗತಿಗಳನ್ನು ಮಾತ್ರ ಕೊಡದೆ ಜೀವನಕ್ಕೆ ಬೇಕಾದ ವೈಜ್ಞಾನಿಕ ಗುಣಗಳನ್ನು ಸಹ ನೀಡುವುದು ಉದ್ದೇಶವಾದ್ದರಿಂದ ವ್ಯಕ್ತಿಗೆ/ಮಗುವಿಗೆ ತನ್ನ ಬದುಕಿನ ನಾದ ಸ್ವರಗಳಲ್ಲಿ ಸಂದರ್ಭಗಳಲ್ಲಿ ಯಾವುದು ಸತ್ಯ–ಮಿಥ್ಯ ಯಾವುದು ವಾಸ್ತವ–ಅವಾಸ್ತವ, ಯಾವುದು ಮೌಢ್ಯ, ಯಾವುದು ವೈಜ್ಞಾನಿಕ ಯಾವುದು ಅವೈಜ್ಞಾನಿಕ ಹೀಗೆ ತಾರ್ಕಿಕ ಮತ್ತು ವೈಚಾರಿಕ ಪ್ರಶ್ನೆಗಳನ್ನು ಹಾಕಿಕೊಂಡು ಶುದ್ಧ ಜೀವನ ನಡೆಸಲು ವೈಜ್ಞಾನಿಕ, ವಾಸ್ತವ ಗುಣಗಳನ್ನು ಬೆಳೆಸುವುದೂ ಸಾಹಿತ್ಯ ಬೋಧನೆಯ ಗುರಿಗಳಲ್ಲಿ ಒಂದಾಗಿದೆ.

**೧೩. ಜಾನಪದ ಸಾಹಿತ್ಯದ ಮಹತ್ವ ಮತ್ತು ಮಜಲುಗಳನ್ನು ಪರಿಚಯಿಸುವುದು**

ಶಿಷ್ಟ ಸಾಹಿತ್ಯಕ್ಕೆ ಜನಪದ ಸಾಹಿತ್ಯ ಬೇರು ಮತ್ತು ಹೂವು, ಜಾನಪದ ಸಾಹಿತ್ಯ ಮನುಷ್ಯನ ಜೀವನದಲ್ಲಿ ಅದ್ಭುತ ಲೋಕ ಮತ್ತು ಚಿನ್ನದ ಗಣಿ, ಈ ಲೋಕದಲ್ಲಿ ಮನುಷ್ಯ ಒಂದು ಕೂಸು. ಈ ಕೂಸು ಬೆಳೆದು ಪಕ್ವವಾಗಿರುವುದು ಜನಪದ ಮಣ್ಣಿನ ಮಹಾ ಮನೆಯಲ್ಲಿ. ಹಾಗಾಗಿ ಜಾನಪದ ಸಾಹಿತ್ಯದಲ್ಲಿ ಬರುವ ಗದ್ಯ ಸಾಹಿತ್ಯವಾದ: ಕತೆ, ಗಾದೆ, ಒಗಟು, ಒಡಪು, ಜನಪದಕಲೆ, ಜನಪದವೈದ್ಯ, ಜನಪದ ಅಡುಗೆ, ಪುರಾಣಗಳು, ಐತಿಹ್ಯ, ಗೀತಸಾಹಿತ್ಯವಾದ ಬೀಸುವಪದ, ಕುಟ್ಟುವಪದ, ನಾಟಿಯ, ಲಾಲಿಯ, ಆಚರಣೆ, ಅಂಟಿಗೆ–ಪಂಟಿಗೆ, ಲಾವಣಿ, ಮದುವೆ – ಒಸಗೆಪದಗಳು, ಗರತಿಹಾಡು ಇತ್ಯಾದಿ, ಹಾಡುಗಳನ್ನು ಜನಪದ ಕುಣಿತಗಳಾದ ಡೊಳ್ಳುಕುಣಿತ, ವೀರಗಾಸೆ, ಬೀಸುಕಂಸಾಳೆ, ಜೋಗತಿಹಾಡು ಹೆಜ್ಜೆಮೇಳ, ನಂದಿಕೋಲು, ಕರಗಕುಣಿತ, ಪಂಜಿನಕುಣಿತ, ಹುತ್ತರಿಕುಣಿತ, ಭೂತಕುಣಿತ, ಸೋಮನಕುಣಿತ, ಸಮೂಹನೃತ್ಯ, ಉಮ್ಮತ್ತಾಟ, ಮುಂತಾದುವುಗಳನ್ನು ಜನಪದ ವೃತ್ತಿಗಾಯಕರಾದ ಕಂಸಾಳೆಯವರು, ನೀಲಗಾರರು, ಚೌಡಿಕೆಯವರು, ಗೊರವರು, ಕರಪಾಲದವರು, ದೊಂಬಿದಾಸರು, ತಂಬೂರಿಯವರು, ಗೊಂದಲಿಗರು, ಕಿನ್ನರಿ ಜೋಗಿಗಳು, ಹೆಳವರು, ಸಾರವಯ್ಯನವರು, ತೆಲುಗ ಜಂಗಮರು, ಸಿದ್ದಿಕಿಸದ್ದಿ, ಮುಂತಾದವರನ್ನು, ಜನಪದ ಪ್ರದರ್ಶನ ಕಲೆಗಳಾದ ಮೂಡಲಪಾಯ, ಬಯಲಾಟ, ದೊಡ್ಡಾಟ, ಯಕ್ಷಗಾನ ಸಣ್ಣಾಟ, ದಾಸರಾಟ, ಸೂತ್ರದಗೊಂಬೆಯಾಟ, ಶ್ರೀಕೃಷ್ಣ ಪಾರಿಜಾತ ಮುಂತಾದವುಗಳನ್ನು ಹೀಗೆ ಜಾನಪದ ಸಾಹಿತ್ಯದಲ್ಲಿ ಬರುವ ವಿಭಿನ್ನ ಮುಖಗಳ ಪರಿಚಯ ಮತ್ತು ಅವುಗಳ ವೈಶಿಷ್ಟ್ಯತೆ, ಅರ್ಥಪೂರ್ಣತೆ ಗುಣಶೀಲಗಳನ್ನು ತಿಳಿಸುವುದು ಸಾಹಿತ್ಯ ಬೋಧನೆಯ ಗುರಿಯಾಗಿದೆ.

**ಸಾಹಿತ್ಯ ಬೋಧನಾ ವಿಧಾನ**

ಪ್ರಕೃತಿಯ ಅದ್ಭುತಗಳಲ್ಲೊಂದಾದ ಸಾಗರವನ್ನು ಬೊಗಸೆ ಯಲ್ಲಿಟ್ಟುಕೊಳ್ಳುತ್ತೇವೆಂದು ಹೇಳುವುದು ಹೇಗೆ ಅನೌಚಿತ್ಯವೆನಿಸುತ್ತದೆಯೋ ಹಾಗೆ ವಿಪುಲವಾಗಿ ವಿಶಾಲವಾಗಿ ವಿಸ್ಮಯವಾಗಿ ಬೆಳೆದ ಸಾಹಿತ್ಯ ಸಾಗರವನ್ನು ಒಂದೇ ವರ್ಷ ಬೋಧಿಸುತ್ತೇವೆ ಮತ್ತು ಗುರಿಗಳನ್ನು ಸಾಧಿಸುತ್ತೇವೆಂಬುದು ದುಸ್ಸಾಧ್ಯ. ಹಾಗಾಗಿ ಸಾಹಿತ್ಯ ಬೋಧನೆಯ ಗಹನವಾದ ಉದ್ದೇಶ–ಗುರಿಗಳನ್ನು ವಿಭಿನ್ನ ಮುಖಗಳಲ್ಲಿ ತಯಾರಿ ಮಾಡಿಕೊಳ್ಳಬಹುದು. ಆದರೆ ಸಾಹಿತ್ಯ ಬೋಧನೆ ಹೇಗೆ ಬೋಧಿಸಬೇಕು? ಯಾವ ವಿಧಾನದಲ್ಲಿ ಬೋಧಿಸಬೇಕು? ಎಂಬ ಪ್ರಶ್ನೆ ನಮ್ಮ ಮುಂದೆ ಇದೆ.

ಸಾಹಿತ್ಯ ಬೋಧನೆಗೆಂದೇ ಪ್ರತ್ಯೇಕವಾದ ಬೋಧನಾ ವಿಧಾನವಿಲ್ಲ, ಅದರ ಅಗತ್ಯವೂ ಬೇಡ, ಪ್ರೌಢಶಾಲೆಗಳಲ್ಲಿ ಇದಕ್ಕೆಂದೇ ಬೋಧನಾವಿಧಾನ ಇಲ್ಲ. ಗದ್ಯ, ಪದ್ಯ, ನಾಟಕ, ಪ್ರಬಂಧಗಳ ಬೋಧನಾ ಪದ್ಧತಿ/ವಿಧಾನಗಳೇ ಸಾಹಿತ್ಯ ಬೋಧನಾ ವಿಧಾನಗಳು, ಸಾಹಿತ್ಯ ಬೋಧನೆಯಲ್ಲಿ ಗದ್ಯ, ಪದ್ಯ, ಪ್ರಬಂಧ, ನಾಟಕಗಳು ಸಾಹಿತ್ಯದ ಇತ್ಯಾದಿ ಪ್ರಕಾರಗಳು ಅವಿಭಾಜ್ಯ ಅಂಗ, ಒಂದಕ್ಕೊಂದು ಅವಿನಾಭಾವ ಸಂಬಂಧ. ಹಾಗಾಗಿ ಸಾಹಿತ್ಯಬೋಧನೆಗೆ ಪ್ರತ್ಯೇಕವಾದ ಮಾರ್ಗ ವಿಧಾನ ಹುಡುಕುವುದು, ಸೂಕ್ತವಲ್ಲ ಮತ್ತು ಅನಗತ್ಯವಾದ್ದರಿಂಧ ಗದ್ಯ, ಪದ್ಯ, ಪ್ರಬಂಧ, ನಾಟಕಗಳನ್ನು ಬೋಧಿಸುವ ಸಂದರ್ಭದಲ್ಲಿ ಅಥವಾ ಅವುಗಳ ಬೋಧನಾವಿಧಾನಗಳನ್ನು ಬಳಸಿ ಬೋಧಿಸುವಾಗ ಸಾಹಿತ್ಯ ಬೋಧನೆ ನಡೆದೇ ನಡೆಯುತ್ತದೆ.

Digitised by Bharatavani, CIIL

## ಶಾಲೆಗಳಲ್ಲಿ ಸಾಹಿತ್ಯಾಭಿರುಚಿ ಬೆಳೆಸುವ ಚಟುವಟಿಕೆಗಳು

1. ಕವಿ/ಲೇಖಕರ ಜಯಂತಿಗಳು, ಆಚರಿಸುವುದು
2. ಕವಿ/ಸಾಹಿತಿಗಳ ಭಾವಚಿತ್ರಗಳ ಪ್ರದರ್ಶನ ಮತ್ತು ಭಾವಚಿತ್ರಗಳನ್ನು ಬರೆಯುವ ಸ್ಪರ್ಧೆ ಏರ್ಪಡಿಸುವುದು.
3. ಸಾಹಿತ್ಯ ಸಂಘಟನೆಗಳನ್ನು ರಚಿಸಿಕೊಂಡು ಉತ್ತಮ ಕಾರ್ಯಕ್ರಮಗಳನ್ನು ರೂಪಿಸುವುದು.
4. ಕನ್ನಡ ನಾಡು, ನುಡಿ, ಜಲ ಇವುಗಳ ಬಗ್ಗೆ ಭಾಷಣ, ಚರ್ಚಾಸ್ಪರ್ಧೆ, ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು.
5. ಮಕ್ಕಳ ಕವಿಗೋಷ್ಠಿ ಏರ್ಪಡಿಸುವುದು.
6. ಕತೆ, ಕವನ, ನಾಟಕ ಬರೆಯುವ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
7. ಕನ್ನಡ ನಾಡು ನುಡಿ, ಸಂಸ್ಕೃತಿ, ಸಾಹಿತ್ಯ, ಸಾಹಿತಿಗಳ ಸಾಕ್ಷ್ಯಚಿತ್ರಗಳನ್ನು ಏರ್ಪಡಿಸುವುದು.
8. ಕವಿ/ಸಾಹಿತಿಗಳ ಜೀವನ ಚರಿತ್ರೆ ಪರಿಚಯಿಸುವುದು.
9. ಕನ್ನಡ ಭಾವಗೀತೆಗಳನ್ನು ಜನಪದ ಗೀತೆಗಳ ಗೀತ ಗಾಯನ ಸ್ಪರ್ಧೆ ಏರ್ಪಡಿಸುವುದು.
10. ನಾಡು, ನುಡಿ ಹಬ್ಬಗಳನ್ನು ಆಚರಿಸುವುದು.
11. ಆಲಿಸುವ, ಮಾತನಾಡುವ, ಓದುವ, ಬರೆಯುವ, ಚಿಂತಿಸುವ, ಕೌಶಲ್ಯ ಬೆಳೆಸುವ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
12. ಕವಿ/ಲೇಖಕನ ಸಂದರ್ಶನ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
13. ನಾಟಕಾಭಿನಯ / ನಾಟಕೋತ್ಸವ ಸಮಾರಂಭಗಳನ್ನು ಏರ್ಪಡಿಸುವುದು.
14. ಕನ್ನಡ ಕೈಬರಹ ಸಾಹಿತ್ಯ ಪತ್ರಿಕೆ ಹೊರ ತರುವುದು.
15. ಚುಟುಕು, ಹನಿಗವನ, ಪ್ರಬಂಧಗಳು ಬರೆಸುವ/ ಬರೆಯುವ ಕಾರ್ಯಕ್ರಮ ಕೈಗೊಳ್ಳುವುದು.
16. ಸಾಹಿತ್ಯಗೋಷ್ಠಿ, ಸಾಹಿತ್ಯ ಸಮ್ಮೇಳನಗಳಿಗೆ ಕರೆದೊಯ್ಯುವುದು.
17. ಪ್ರಸಾರ ಮಾಧ್ಯಮಗಳೊಂದಿಗೆ ಸಾಹಿತ್ಯ ಮತ್ತು ಕಾರ್ಯಕ್ರಮಗಳು ನೋಡುವ, ಕೇಳುವ ಅವಕಾಶಗಳನ್ನು ಏರ್ಪಡಿಸುವುದು.
18. ಜನಪದ ಗೀತೆಗಳನ್ನು ಹಾಡುವ ಸ್ಪರ್ಧೆಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
19. ಗಾದೆಗಳ ಗಮ್ಮತ್ತು, ಒಗಟು-ಜಿಗಟು, ಅವುಗಳನ್ನು ಹೇಳಿಸುವ, ಬಿಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
20. ಪತ್ರಿಕೆಗಳಲ್ಲಿ ಬರುವ ಸುಭಾಷಿತಗಳನ್ನು ಸಂಗ್ರಹಿಸಿ ಅವುಗಳ ಅರ್ಥವನ್ನು ಬಿಡಿಸುವ ಕಾರ್ಯಕ್ರಮ ಏರ್ಪಡಿಸುವುದು.
21. ಪತ್ರಿಕೆಗಳಲ್ಲಿ ಬರುವ ಲೇಖಕರ ಪರಿಚಯ ಲೇಖನಗಳ ಸಂಗ್ರಹ ಮಾಡಿಸುವುದು.
22. ಸಾಹಿತ್ಯ-ಸಾಂಸ್ಕೃತಿಕ ಸಂಜೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

–ಆರ್.ಓ.ಫ.

## ಸ್ವಾಮಿ ವಿವೇಕಾನಂದ


ಸ್ವಾಮಿ ವಿವೇಕಾನಂದ

ಪ್ರಾತಃಸ್ಮರಣೀಯರಾದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯಾಗ್ರಣಿಯಾದ ಸ್ವಾಮಿ ವಿವೇಕಾನಂದರು ಆಧುನಿಕ ಯುಗದಲ್ಲಿ ಭರತ ಖಂಡದಲ್ಲಿ ಮೂಡಿಬಂದ ಜಗದ್ವಂದ್ಯ ಹಿಂದೂ ಯತಿ ಪುಂಗವರು. ಸನಾತನ ಹಿಂದೂಧರ್ಮದ ನೂತನ ಭಾಷ್ಯಕಾರರಾಗಿ ಬಾಳಿ ಬೆಳಗಿದ ಸ್ವಾಮಿ ವಿವೇಕಾನಂದರು ಅನುಭಾವಿ ಮಹಾತ್ಮರು, ವೀರ ವೇದಾಂತಿಗಳು ಆಗಿದ್ದರು. ನಡೆನುಡಿಗಳಲ್ಲಿ ಹಿಂದೂ ಧರ್ಮದ ತತ್ತ್ವ ಸಿದ್ಧಾಂತಗಳನ್ನು ಮೈಗೂಡಿಸಿ ಪೂರ್ವ ಪಶ್ಚಿಮ ರಾಷ್ಟ್ರಗಳಲ್ಲಿ ಧರ್ಮದ ನಿಜವಾದ ಅರಿವು ಹಾಗೂ ಮೈತ್ರಿಯನ್ನು ಪರಿಣಾಮಕಾರಿಯಾಗಿ ಪ್ರಚುರಪಡಿಸಿದ ನವ ಯುಗಾಚಾರ್ಯರು ಸ್ವಾಮಿ ವಿವೇಕಾನಂದರು. ಶತಮಾನಗಳ ಪರಾಡಳಿತದಿಂದ ತತ್ತರಿಸಿ ಹೋಗಿದ್ದ ಭಾರತೀಯರಲ್ಲಿ ಆತ್ಮವಿಶ್ವಾಸವನ್ನು ತುಂಬಿ ನವಜಾಗರಣಕ್ಕೆ ಕಾರಣರಾದ ಸ್ವಾಮೀಜಿಯವರನ್ನು 'ಭಾರತೀಯ ರಾಷ್ಟ್ರೀಯತೆ ಜನಕ' ಎಂದು ಕರೆಯಲಾಗುತ್ತದೆ.

ಸ್ವಾಮಿ ವಿವೇಕಾನಂದರ ಪೂರ್ವಾಶ್ರಮದ ಹೆಸರು ನರೇಂದ್ರನಾಥ ದತ್ತ. ಇವರು ದತ್ತ ವಂಶಕ್ಕೆ ಸೇರಿದವರು. ಭಗವಂತನ ಅನುಗ್ರಹದಿಂದ 1863ನೇ ಜನವರಿ 12ನೆಯ ದಿವಸ ಪ್ರಾತಃಕಾಲದಲ್ಲಿ ಸ್ವಾಮೀಜಿಯವರು ಜನ್ಮ ತಾಳಿದರು. ತಂದೆ ವಿಶ್ವನಾಥ ದತ್ತ, ತಾಯಿ ಭುವನೇಶ್ವರಿ ದೇವಿ. ಅವರು ಜನ್ಮತಾಳಿದ ವಂಶದಲ್ಲಿ ಎರಡು ಲಕ್ಷಣಗಳು ಮೇಲೆದ್ದು ಕಾಣುವುವು. ಅವುಗಳೇ ವಕೀಲಿಯ ವೃತ್ತಿ ಮತ್ತು ವೈರಾಗ್ಯ ಪ್ರವೃತ್ತಿ. ಸ್ವಾಮೀಜಿಯವರ ತಂದೆ ವಕೀಲರು, ಅಜ್ಜ ವಕೀಲರು, ಮುತ್ತಜ್ಜ ವಕೀಲರು ವಿವೇಕಾನಂದರೂ ಕೂಡ ಕಾನೂನು ಕಾಲೇಜಿನಲ್ಲಿ ಓದಿ ಇನ್ನೇನು ವಕೀಲಿ ವೃತ್ತಿಗೆ ಕೈಹಾಕಬೇಕೆಂದಿದ್ದವರು. ವಿವೇಕಾನಂದರು ಸಭಿಕರೆದುರಿಗೆ ವಿಷಯಗಳನ್ನು ಪ್ರತಿಪಾದನೆ ಮಾಡುವ ರೀತಿ ಮತ್ತು ವಿಷಯವನ್ನು ಜೋಡಿಸುವ ರೀತಿಯನ್ನು ಗಮನಿಸಿದರೆ ವಕೀಲ ವೃತ್ತಿಯ ತಮ್ಮ ನೈಪುಣ್ಯವನ್ನೆಲ್ಲ ಉಪಯೋಗಿಸಿಕೊಂಡಿರುವುದು ವ್ಯಕ್ತವಾಗುತ್ತದೆ. ಬಾಲ್ಯದಲ್ಲಿ ತನ್ನ ತಾಯಿಯಿಂದ 'ಬಿಲೆ' ಎಂದು ಮುದ್ದಾಗಿ ಕರೆಸಿಕೊಂಡು, ನೆರೆಹೊರೆಯವರಲ್ಲಿ ನರೇಂದ್ರನೆಂದು ಪ್ರಖ್ಯಾತರಾಗಿದ್ದ ಇವರು ಮುಂದೆ ಸ್ವಾಮಿ ವಿವೇಕಾನಂದರಾಗಿ ಜಗತ್‌ಪ್ರಸಿದ್ಧರಾದುದು ಒಂದು ಮಹತ್ತರ ಘಟನೆ.

### ಬಾಲ್ಯ ಮತ್ತು ಆಧ್ಯಾತ್ಮ ಗುರುವಿನ ಪರಿಚಯ

ನರೇಂದ್ರನಿಗೆ ತಾಯಿಯೇ ಮೊದಲು ಮನೆಯಲ್ಲಿ ವಿದ್ಯೆಯನ್ನು ಹೇಳಿಕೊಟ್ಟಳು. ಎಳನೆಯ ವಯಸ್ಸಿನ ಹೊತ್ತಿಗೆ ಮುಗ್ಧ ಬೋಧವೆಂಬ ಸಂಸ್ಕೃತ ವ್ಯಾಕರಣವನ್ನೆಲ್ಲ ತಾಯಿ ಕಂಠಪಾಠ ಮಾಡಿಸಿದ್ದರು. ನರೇಂದ್ರನಿಗೆ ಬಾಲ್ಯದಿಂದಲೂ ಸಾಧುಗಳು, ಭಿಕ್ಷುಕರುಗಳನ್ನು ಕಂಡರೆ ಪ್ರೀತಿ ಮತ್ತು ಕರುಣೆ ತುಂಬಿ ಬರುತ್ತಿತ್ತು. ಮನೆಗೆ ಭಿಕ್ಷುಕರು ಬಂದಾಗ ತನ್ನ ಕೈಗೆ ಏನು ಸಿಗುತ್ತದೋ ಅದನ್ನೇ ಕಿಟಕಿ ಮೂಲಕ ಕೊಟ್ಟುಬಿಡುತ್ತಿದ್ದರು.

ನರೇಂದ್ರ ನಿದ್ರೆಗೆ ಹೋಗುವ ಸಮಯದಲ್ಲಿ ಒಂದು ಪ್ರಕಾಶಮಾನವಾದ ಬೆಳಕನ್ನು ನೋಡುತ್ತಿದ್ದ. ಅದು ಇವನ ಹತ್ತಿರ ಬಂದು ದೊಡ್ಡದಾಗಿ ನಂತರ ಭ್ರೂಮಧ್ಯೆ ಇವನನ್ನು ಪ್ರವೇಶಿಸುತ್ತಿತ್ತು.

Digitised by Bharatavani, CIIL

ಎಲ್ಲರಿಗೂ ನಿದ್ರೆ ಬರುವಾಗ ಆಗುವ ಅನುಭವ ನನಗೂ ಆಗುತ್ತಿದೆ ಎಂದು ಆತ ಭಾವಿಸಿದ್ದ. ತದನಂತರ ಎಲ್ಲೋ ಕೆಲವು ನಿತ್ಯ ಸಿದ್ಧರಿಗೆ ಆಗುವ ಅನುಭವಗಳಿವು ಎಂಬುದನ್ನು ಅರಿತುಕೊಂಡನು.

ನರೇಂದ್ರನಿಗೆ ಎಂಟು ವರ್ಷಗಳಾದಾಗ ಅವನನ್ನು ಈಶ್ವರಚಂದ್ರ ವಿದ್ಯಾಸಾಗರರ ಪಾಠಶಾಲೆಗೆ ಸೇರಿಸಿದರು. ಶಾಲಾ ದಿನಗಳಲ್ಲಿ ಒಂದು ಸಲ ಕೇಳಿದರೆ ಸಾಕು, ಓದಿದರೆ ಸಾಕು ಎಲ್ಲವನ್ನೂ ತಿಳಿದುಕೊಂಡು ಬಿಡುತ್ತಿದ್ದ. ಶಾಲೆಯ ಉಪಾಧ್ಯಾಯರಿಗೆ ಅಚ್ಚುಮೆಚ್ಚಾದ ವಿದ್ಯಾರ್ಥಿಯಾದ. ಪಾಠದ ವಿಷಯದಲ್ಲಿ ಎಷ್ಟು ಮುಂದೋ ಅಷ್ಟೇ ಆಟದ ವಿಷಯದಲ್ಲಿಯೂ ನರೇಂದ್ರ ಗುಂಪು ನಾಯಕನಾಗುತ್ತಿದ್ದನು. ಕೆಲವು ವೇಳೆ ಹುಡುಗರಲ್ಲಿ ಎರಡು ಗುಂಪು ಮಾಡಿ ಒಬ್ಬರಿಗೊಬ್ಬರು ಯುದ್ಧ ಮಾಡುವಂತೆ ಮಾಡಿ, ಅವರುಗಳು ಸೋಲಿನ ಸ್ಥಿತಿಗೆ ಬಂದಾಗ, ಆಟ ವಿರಸವಾಗುವ ಸ್ಥಿತಿಗೆ ಬಂದಾಗ ನರೇಂದ್ರ ಮಧ್ಯದಲ್ಲಿ ಬಂದು ಶಾಂತಿ ಮತ್ತು ಸಮಾಧಾನ ನೆಲೆಸುವಂತೆ ಮಾಡುತ್ತಿದ್ದ.

ಶಾಲೆಗೆ ರಜಾ ದಿನಗಳು ಬಂದಾಗ, ನರೇಂದ್ರ ತನ್ನ ಸ್ನೇಹಿತರುಗಳನ್ನೆಲ್ಲಾ ಕಲ್ಕತ್ತೆಯ ಹತ್ತಿರವಿರುವ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋಗುತ್ತಿದ್ದ. ಗರಡಿ ಮನೆಯಲ್ಲಿ ಕುಸ್ತಿ, ಬೈಠಕ್, ಲಾಠಿ, ಈಜುವುದು ಇವುಗಳನ್ನೆಲ್ಲಾ ಕಲಿತ. ತದನಂತರ ಕಾಲೇಜು ಸೇರಿದ ಮೇಲೆ ಜ್ಞಾನಾರ್ಜನೆಯ ಕಡೆಗೆ ಹೆಚ್ಚಿನ ಗಮನ ಕೊಟ್ಟ. ನರೇಂದ್ರ ಪಠ್ಯಪುಸ್ತಕಗಳನ್ನು ಓದುತ್ತಿದ್ದರೆ ಏಕಾಗ್ರತೆ ಮೂಡಿಬರುತ್ತಿತ್ತು. ಉಪಾಧ್ಯಾಯರು ಹೇಳುತ್ತಿದ್ದುದನ್ನು ಗಮನವಿಟ್ಟು ಕೇಳುತ್ತಿದ್ದ, ಎಂದಿಗೂ ಮರೆಯುತ್ತಿರಲಿಲ್ಲ. ನರೇಂದ್ರನ ಜ್ಞಾನದಾಹ ತೀವ್ರವಾಗಿತ್ತು. ಸಾಹಿತ್ಯ, ಭೂಗೋಳ, ಇತಿಹಾಸ, ವಿಜ್ಞಾನ, ತತ್ವಶಾಸ್ತ್ರ, ತರ್ಕ ಮುಂತಾದ ಪುಸ್ತಕಗಳನ್ನು ಓದುವುದರ ಜೊತೆಗೆ ಕಾಲೇಜಿನ ಪ್ರಾಧ್ಯಾಪಕರ ಜೊತೆ ಚರ್ಚಿಸುತ್ತಿದ್ದ. ಕಾಲೇಜಿನ ಪ್ರಿನ್ಸಿಪಾಲರಾದ ವಿಲಿಯಂ ಹೇಸ್ಟಿ ಎನ್ನುವವರು "ನರೇಂದ್ರನದು ಅದ್ಭುತ ಪ್ರತಿಭೆ. ಪ್ರಪಂಚದಲ್ಲಿ ತತ್ವಶಾಸ್ತ್ರವನ್ನು ಅಧ್ಯಯನ ಮಾಡುವ ವಿದ್ಯಾರ್ಥಿ ವರ್ಗದಲ್ಲಿಯೂ ಇಷ್ಟೊಂದು ಬುದ್ಧಿವಂತನಾದ ಹುಡುಗನನ್ನು ನಾನು ಕಂಡಿಲ್ಲ. ನರೇಂದ್ರ ಮುಂದಿನ ಜೀವನದಲ್ಲಿ ಖ್ಯಾತಿಯನ್ನು ಗಳಿಸುವಲ್ಲಿ ಸಂದೇಹವಿಲ್ಲ" ಎಂದು ಹೇಳಿದ್ದರು.

ನರೇಂದ್ರ ಕಾಲೇಜಿನಲ್ಲಿ ಓದುತ್ತಿದ್ದಾಗ ಒಮ್ಮೆ ವಿಲಿಯಂ ಹೇಸ್ಟಿ ಯವರು ಕವಿ ವರ್ಡ್ಸ್‌ವರ್ತ್ ರಚಿಸಿದ "EXCURSION" ಎಂಬ ಕವನದಲ್ಲಿ ಬರುವ ಪ್ರಕೃತಿಯ ಸೌಂದರ್ಯದಲ್ಲಿ ಲೀನವಾದ ಭಾವಸಮಾಧಿಯ ಬಗ್ಗೆ ವಿವರಿಸುತ್ತಾ ಒಂದು ವಸ್ತುವಿನ ಮೇಲೆ ಪರಿಶುದ್ಧವಾದ ಮನಸ್ಸನ್ನು ಏಕಾಗ್ರಗೊಳಿಸಿದಾಗ ಭಾವಸಮಾಧಿಯ ಸ್ಥಿತಿಗೆ ತಲುಪಬಹುದು ಎಂದು ವಿವರಣೆಯನ್ನು ನೀಡುತ್ತಾ ನಾನು ಇಂತಹ ಭಾವಸಮಾಧಿಯ ಸ್ಥಿತಿಯಲ್ಲಿರುವ ಒಬ್ಬರನ್ನು ಕಂಡಿದ್ದೇನೆ. ಅವರೇ ದಕ್ಷಿಣೇಶ್ವರದಲ್ಲಿ ಇರುವ ಶ್ರೀರಾಮಕೃಷ್ಣರು ಎಂದು ಹೇಳಿದರು. ನರೇಂದ್ರನು ಪ್ರಥಮ ಬಾರಿ ಶ್ರೀರಾಮಕೃಷ್ಣರ ಹೆಸರನ್ನು ಕೇಳಿದ. ಆದರೆ ಅವರನ್ನು ನೋಡುವುದಕ್ಕೆ ಹೋಗುವ ಸಂದರ್ಭವಾಗಲಿ, ಕುತೂಹಲವಾಗಲಿ ಇನ್ನೂ ಒದಗಿ ಬಂದಿರಲಿಲ್ಲ.

ಇದೇ ವೇಳೆಯಲ್ಲಿ ಬಂಗಾಳ ದೇಶದಲ್ಲಿ ಸಮಾಜ ಸುಧಾರಣೆಯ ಹೆಸರಿನಲ್ಲಿ ಬ್ರಹ್ಮಸಮಾಜವು ರಾಜಾರಾಮ್ ಮೋಹನ್‌ರಾಯ್ ಎಂಬುವರ ನೇತೃತ್ವದಲ್ಲಿ ಸ್ಥಾಪಿತವಾಗಿತ್ತು. ಈ ಸಂಸ್ಥೆ ಉಪನಿಷತ್ತಿನಲ್ಲಿ ಬರುವ ನಿರಾಕಾರ ಪರಮಾತ್ಮ ತತ್ವವನ್ನು ಸ್ವಲ್ಪಮಟ್ಟಿಗೆ ಆಧಾರವಾಗಿರಿಸಿಕೊಂಡು ದೇವರಿಗೆ ಆಕಾರ ಕೊಡುವುದಾಗಲಿ, ದೇವರ ಅವತಾರವನ್ನಾಗಲಿ ನಂಬದೆ ಕೇವಲ ಭಜನೆಯ ಮೂಲಕ ನಿಮ್ಮ ಮನದ ದೇವರನ್ನು ಪ್ರಾರ್ಥಿಸಬಹುದು ಎಂಬುದಾಗಿ ಪ್ರಚಾರಕ್ಕೆ ನಿಂತು ಕೆಲವು ಯುವಕರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಯಿತು. ರಾಜಾರಾಮ್ ಮೋಹನ್‌ರಾಯ್ ನಂತರ ಮಹರ್ಷಿ ದೇವೇಂದ್ರನಾಥ ಠಾಕೂರರು ಇದಕ್ಕೆ ಅಧ್ಯಕ್ಷರಾದರು. ತದನಂತರ ಕೇಶವಚಂದ್ರಸೇನರೆಂಬ ಪಂಡಿತ ಅಧ್ಯಕ್ಷತೆಯನ್ನು ವಹಿಸಿಕೊಂಡು ಭಜನೆಯ ಮೂಲಕ ದೇವರನ್ನು ಪ್ರಾರ್ಥಿಸುತ್ತಿದರು. ತಾತ್ಕಾಲಿಕವಾಗಿ ನರೇಂದ್ರನಿಗೆ ಬ್ರಹ್ಮಸಮಾಜದ ನಂಟಿನಿಂದ ಸ್ವಲ್ಪ ಸಮಾಧಾನ ಸಿಕ್ಕಿತು. ಆದರೆ ಇಲ್ಲಿ ಮಾತಿನ ವಾಚಾಳಿಗಳಿದ್ದರೇ ಹೊರತು ಆಧ್ಯಾತ್ಮಿಕದ ಜ್ಞಾನಿಗಳ ಕೊರತೆ ಎದ್ದು ಕಾಣುತ್ತಿತ್ತು. ಇದರಿಂದಾಗಿ ನರೇಂದ್ರನಿಗೆ ಆಧ್ಯಾತ್ಮಿಕತೆಯ ಕೊರತೆ ಹಾಗೆಯೇ ಮುಂದುವರೆಯಿತು. ತನ್ನಲ್ಲಿದ್ದ ಆಧ್ಯಾತ್ಮಿಕ ದಾಹವನ್ನು ಶಾಂತಗೊಳಿಸಲು ಪೌರ್ವಾತ್ಯ, ಪಾಶ್ಚಾತ್ಯ ತತ್ವಶಾಸ್ತ್ರವನ್ನು ಓದುತ್ತಿದ್ದನಾದರೂ ತನ್ನಲ್ಲಿದ್ದ ಅನೇಕ ಪ್ರಶ್ನೆಗಳಿಗೆ ಉತ್ತರ ದೊರಕದಂತಾಯಿತು. ಆಗಿನ ಕಾಲದ ಹೆಸರಾಂತ ಪಂಡಿತರ ಜೊತೆ ಚರ್ಚೆಗೆ ನಿಂತರೂ ನರೇಂದ್ರನ ಮನಸ್ಸಿಗೆ ಸಮಾಧಾನವಾಗಲಿಲ್ಲ. ಮಹರ್ಷಿ ದೇವೇಂದ್ರನಾಥ ಠಾಕೂರರ ಬಳಿಗೆ ಹೋಗಿ "ಮಹಾಶಯರೇ, ನೀವು ದೇವರನ್ನು ಕಂಡಿರುವಿರಾ?" ಎಂದು ಪ್ರಶ್ನಿಸಿದ. ಇದಕ್ಕೆ ಮಹರ್ಷಿಗಳು ಪ್ರತ್ಯುತ್ತರವಾಗಿ "ಮಗೂ, ನಿನಗೆ ಯೋಗಿಯ ಕಣ್ಣುಗಳಿವೆ. ಪ್ರಯತ್ನ ಮಾಡಿದರೆ ದೇವರು ನಿನಗೆ ಸಿಕ್ಕಬಹುದು, ನನಗಿನ್ನೂ ದೇವರು ಸಿಕ್ಕಿಲ್ಲ" ಎಂದರು.

**ಗುರುದರ್ಶನ**

ನರೇಂದ್ರನಿಗೆ ಎಲ್ಲಿಯೂ ತೃಪ್ತಿಕರವಾದ ಉತ್ತರ ಸಿಕ್ಕಲಿಲ್ಲ. ಹೀಗೆ ಅಲೆಯುತ್ತಿರುವಾಗ, ದೇವರ ವಿಚಾರವಾಗಿ ತಿಳಿಯಬೇಕಾದರೆ ಅಲ್ಲಿ ಇಲ್ಲಿ ಹೋದರೆ ಪ್ರಯೋಜನವಿಲ್ಲ, ದಕ್ಷಿಣೇಶ್ವರದಲ್ಲಿ ಪರಮಹಂಸರು ಇದ್ದಾರೆ. ಅವರನ್ನು ಹೋಗಿ ನೋಡಿದರೆ ನಿನ್ನ ಮನಸ್ಸಿಗೆ ತೃಪ್ತಿಯಾಗಬಹುದು, ಎಂದು ಯಾರೋ ನರೇಂದ್ರನಿಗೆ ತಿಳಿಸಿದರು. ಎಲ್ಲರಲ್ಲಿಯೂ ಪರೀಕ್ಷಿಸಿದ್ದಾಯಿತು, ಆ ಬಡಪಾಯಿ ಏನು ಹೇಳಿಯಾನು ಎಂಬ ತಾತ್ಸಾರ ಉಂಟಾದರೂ ಒಮ್ಮೆ ಪ್ರಯತ್ನ ಪಟ್ಟು ನೋಡೋಣವೆಂದು ತೀರ್ಮಾನಿಸಿ ತನ್ನ ಸ್ನೇಹಿತರೊಂದಿಗೆ ದಕ್ಷಿಣೇಶ್ವರಕ್ಕೆ ಹೋದನು.

ಶ್ರೀ ರಾಮಕೃಷ್ಣರು ನರೇಂದ್ರನನ್ನು ನೋಡಿದೊಡನೆಯೇ ಅವನೊಡನೆ ಬಹಳ ಕಾಲದಿಂದಲೂ ಪರಿಚಯವಿದ್ದಂತೆ ನಡೆದುಕೊಂಡರು. ಅವನನ್ನು ಮಾತ್ರ ಒಳಗೆ ಕರೆದುಕೊಂಡು ಹೋಗಿ ಬಹಳ ಕಾತರತೆಯಿಂದ, "ನೀನು ಏತಕ್ಕೆ ಇಷ್ಟು ತಡವಾಗಿ ಬಂದೆ? ಪ್ರಾಪಂಚಿಕರೊಂದಿಗೆ ಮಾತನಾಡಿ ನನಗೆ ತುಂಬಾ ದಣಿವಾಗಿದೆ. ನೀನು ಸಪ್ತಋಷಿಗಳಲ್ಲಿ ಒಬ್ಬನಾದ ನರನು ! ಧರ್ಮವನ್ನು ಉದ್ಧರಿಸಲು ಈಗ ಬಂದಿರುವೆ" ಎಂದು ಹೇಳಿ ಅವರೇ ನರೇಂದ್ರನಿಗೆ ಸಿಹಿಯನ್ನು ತಿನ್ನಿಸಿದರು.

ನರೇಂದ್ರನಿಗೆ ಆಶ್ಚರ್ಯವಾಯಿತು. ನಾನು ವಿಶ್ವನಾಥದತ್ತರ ಮಗ ನರೇಂದ್ರ. ಇವರು 'ನರ', ಸಪ್ತರ್ಷಿ ಎಂದು ಏನೇನೋ ಹೇಳುತ್ತಿದ್ದಾರೆ. ಈ ಮನುಷ್ಯನು ಹುಚ್ಚನಾಗಿರಬೇಕು ! ಎಂದು ಯೋಚಿಸತೊಡಗಿದನು. ಆದರೂ ಎಲ್ಲರನ್ನೂ ಪ್ರಶ್ನಿಸಿದ ಹಾಗೆ ಶ್ರೀ ರಾಮಕೃಷ್ಣರಿಗೂ ಪ್ರಶ್ನಿಸಿದನು. "ಏನು ಮಹಾಶಯರೇ, ನೀವು ದೇವರನ್ನು ಕಂಡಿರುವಿರಾ?" ಶ್ರೀರಾಮಕೃಷ್ಣರು "ಹೌದು, ನಾನು ಅವನನ್ನು ನೋಡಿರುವೆನು ! ನಾನು ನಿನ್ನನ್ನು ನೋಡುತ್ತಿರುವುದಕ್ಕಿಂತ ಚೆನ್ನಾಗಿ ದೇವರನ್ನು ನೋಡುತ್ತಿದ್ದೇನೆ !" ಎಂದರು.

ನರೇಂದ್ರನಿಗೆ ಆಶ್ಚರ್ಯವಾಯಿತು, ಇದೇ ಮೊದಲಬಾರಿಗೆ ತನ್ನ ಪ್ರಶ್ನೆಗೆ ನೇರವಾದ ಉತ್ತರವನ್ನು ಪಡೆದನು. ಪುನಃ ಶ್ರೀ ರಾಮಕೃಷ್ಣರು

Digitised by Bharatavani, CIIL

ಮುಂದುವರೆಯುತ್ತಾ "ದೇವರನ್ನು ನೋಡಬಹುದು, ನಾನು ನಿನ್ನೊಂದಿಗೆ ಮಾತನಾಡುವಂತೆ ಅವನೊಂದಿಗೆ ಮಾತನಾಡುವೆ ! ಆದರೆ ದೇವರಿಗಾಗಿ ಯಾರು ಪರಿತಪಿಸುತ್ತಾರೋ ಯಾರು ಹೆಂಡತಿ, ಮನೆ, ಮಕ್ಕಳಿಗಾಗಿ ಕೊಡುವಷ್ಟು ಗಮನ ಮತ್ತು ಕಣ್ಣೀರನ್ನು ಸುರಿಸುತ್ತಾರೋ ಅವರಿಗೆ ಮಾತ್ರ ದೇವರ ದರ್ಶನವಾದೀತು" ಎಂದರು. ಈ ಮಾತನ್ನು ಕೇಳಿ ನರೇಂದ್ರನಿಗೆ ಇವರ ವಿಷಯದಲ್ಲಿ ಸ್ವಲ್ಪ ಗೌರವ ಉಂಟಾಯಿತು. ಇವರನ್ನು ಹುಚ್ಚರು ಎಂದು ಅನ್ನಲಾಗುವುದಿಲ್ಲ. ಇಂತಹ ಪ್ರೀತಿ, ತ್ಯಾಗ ಹುಚ್ಚರಲ್ಲಿ ಇರಲಾರವು. ಅಂತೂ ಮತ್ತೊಮ್ಮೆ ನೋಡೋಣ ಎಂದು ಮನೆಗೆ ಹಿಂತಿರುಗಿದನು.

ಸುಮಾರು ದಿನಗಳ ನಂತರ ನರೇಂದ್ರನು ಪುನಃ ದಕ್ಷಿಣೇಶ್ವರಕ್ಕೆ ಬಂದನು. ಶ್ರೀ ರಾಮಕೃಷ್ಣರು ಇವನ ಹತ್ತಿರ ಬಂದು ಏನನ್ನೋ ಹೇಳುತ್ತ ನರೇಂದ್ರನ ತಲೆಯನ್ನು ಮುಟ್ಟಿದರು. ತಕ್ಷಣವೇ ನರೇಂದ್ರನಿಗೆ ಮೈಯಲ್ಲಿ ಮಿಂಚು ಹರಿದಂತಾಯಿತು. ಶೂನ್ಯ ಭಾವ ಉಂಟಾಯಿತು! ಅವನ ವ್ಯಕ್ತಿತ್ವ ಯಾವುದೋ ನಿರಾಕಾರವಾದ ಅಸ್ತಿತ್ವದಲ್ಲಿ ಕರಗತೊಡಗಿತು. ನರೇಂದ್ರನಿಗೆ ದಿಕ್ಕು ತೋಚದಂತೆ ಆಯಿತು. ಕಿರುಚಿಕೊಳ್ಳಲು ಪ್ರಯತ್ನಿಸಿದನು. ಶ್ರೀ ರಾಮಕೃಷ್ಣರು ನಗುತ್ತ "ಸಾಕು ಇವತ್ತಿಗೆ ಇಷ್ಟು" ಎಂದು ಅವನನ್ನು ಮುಟ್ಟುತ್ತಲೇ ನರೇಂದ್ರನು ಸಾಮಾನ್ಯ ಸ್ಥಿತಿಗೆ ಬಂದನು. ನರೇಂದ್ರನು ಅನುಮಾನಿಸುತ್ತಲೇ ಮನೆಗೆ ಬಂದು "ಆ ಬ್ರಾಹ್ಮಣನಿಗೆ ಏನಾದರೂ ಮಾಯಾ ಮಂತ್ರ ಗೊತ್ತಿರಬಹುದೆ? ನಾನು ದೃಢ ಮನಸ್ಸಿನ ಸ್ವಭಾವದವನು. ನನ್ನ ಮೇಲೆ ಹೇಗೆ ಆ ಮಾಯಾಶಕ್ತಿಯು ಪ್ರಯೋಗಿಸಲ್ಪಟ್ಟಿತು?" ಎಂದುಕೊಂಡನು.

ನರೇಂದ್ರನು ಕ್ರಮೇಣ ಶ್ರೀರಾಮಕೃಷ್ಣರ ತಪಸ್ಸಿಗೆ ಆಕರ್ಷಿತನಾದನು. ಅವರು ಹೇಳುವುದನ್ನೆಲ್ಲಾ ಪರೀಕ್ಷಿಸಿದನು. ಯಾವುದನ್ನೂ ಒಂದೇ ಸಲಕ್ಕೆ ಒಪ್ಪಿಕೊಳ್ಳುತ್ತಿರಲಿಲ್ಲ. ಶ್ರೀ ರಾಮಕೃಷ್ಣರಿಗೆ ಶಿಷ್ಯನ ಇಂತಹ ವರ್ತನೆಯನ್ನು ನೋಡಿ ಕೋಪಕ್ಕಿಂತ ಪ್ರೀತಿ ಹೆಚ್ಚಾಯಿತು.

ಶ್ರೀ ರಾಮಕೃಷ್ಣರ ನೇತೃತ್ವದಲ್ಲಿ ನರೇಂದ್ರನ ಆಧ್ಯಾತ್ಮಿಕ ಸಾಧನೆ ಸಾಗಿತು. ಯಾವಾಗಲೂ ನಿರ್ವಿಕಲ್ಪ ಸಮಾಧಿಯಲ್ಲಿ ತೇಲಬೇಕು ಎಂಬ ಅಭಿಲಾಷೆ ಅವನಿಗಿತ್ತು. ಇದನ್ನು ಅರಿತುಕೊಂಡ ಶ್ರೀ ರಾಮಕೃಷ್ಣರು ಒಂದು ದಿನ ಹೇಳಿದರು "ಎಂತಹ ಅಲ್ಪ ಮನಸ್ಸಿನವನು ನೀನು. ಇದನ್ನು ಮೀರಿದ ಒಂದು ಅವಸ್ಥೆ ಇದೆ. ಅದೇ ಜಗತ್ತಿನಲ್ಲಿರುವ ಜೀವಾತ್ಮರು. ಅವರನ್ನು ಶಿವನೆಂದು ತಿಳಿದು ಅವರ ಸೇವೆ ಮಾಡುವುದು ನಿನ್ನ ಗುರಿಯಾಗಬೇಕು ಮತ್ತು ಅವರ ಉದ್ಧಾರಕ್ಕಾಗಿ ನೀನು ಬಂದಿರುವೆ ಎಂಬುದನ್ನು ಅರಿತುಕೊ" ಎಂದು ಮನವರಿಕೆ ಮಾಡಿಸಿದರು.

ಶ್ರೀ ರಾಮಕೃಷ್ಣರು ಮೆಲ್ಲಮೆಲ್ಲನೆ ನರೇಂದ್ರನಾಥನನ್ನು ತಾವು ಆಧ್ಯಾತ್ಮಿಕ ಜೀವನದಲ್ಲಿ ಯಾವ ಶಿಖರವನ್ನು ಮುಟ್ಟಿದ್ದರೋ ಅದೇ ಎತ್ತರಕ್ಕೆ ಕರೆದೊಯ್ದರು. ತಮ್ಮ ತಪಶ್ಶಕ್ತಿಯನ್ನೆಲ್ಲ ಅವನಿಗೆ ಧಾರೆಯೆರೆದರು. ಯಾವುದೋ ಒಂದು ಮಹತ್ಕಾರ್ಯವನ್ನು ಮಾಡಬೇಕಾಗಿದೆ ಎಂದು ನರೇಂದ್ರನನ್ನು ಎಚ್ಚರಿಸಿ ಶ್ರೀ ರಾಮಕೃಷ್ಣ ಪರಮಹಂಸರು 1886ರಲ್ಲಿ ಮಹಾಸಮಾಧಿ ಹೊಂದಿದರು.

ಯಾವ ಒಂದು ಮಹಾಕಾರ್ಯವನ್ನು ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರಿಗೆ ಬಿಟ್ಟು ಹೋದರೋ ಅದನ್ನು ಅವರು ಪೂರ್ಣವಾಗಿ ಸಾಧಿಸಿದರು. ತಮ್ಮ ಸ್ವಂತ ಮುಕ್ತಿಯನ್ನು ಕೂಡ ಕಡೆಗಣಿಸಿ ಹಗಲು ರಾತ್ರಿ ದುಡಿದರು. ಇಡೀ ದೇಶಕ್ಕೆ ಒಂದು ನವ ಸಂದೇಶವನ್ನು ಸಾರಿದರು.

**ಸಾಧನೆಗಳು**

ಆಗಸ್ಟ್ 16, 1886 ರಂದು ಶ್ರೀ ರಾಮಕೃಷ್ಣರ ಮಹಾಸಮಾಧಿಯ ಬಳಿಕ ನರೇಂದ್ರನಾಥರ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ಮತ್ತು ಅದ್ವೈತದಲ್ಲಿ ಅಚಲವಾಗಿ ನೆಲೆನಿಲ್ಲುವ ಗುರಿಯೊಂದಿಗೆ ಸಂನ್ಯಾಸದೀಕ್ಷೆ ಸ್ವೀಕರಿಸಿ ನರೇಂದ್ರನಾಥ ವಿವೇಕಾನಂದರಾದರು. ಬಾರಾನಗರ ಮಠದಲ್ಲಿ ಮೂರು ವರ್ಷಗಳ ಕಾಲ ತೀವ್ರಸಾಧನೆಯಲ್ಲಿ ಮುಳುಗಿದರು. ಇದರಿಂದಾಗಿ ಅವರ ಆಧ್ಯಾತ್ಮಿಕದಾಹ ಮತ್ತಷ್ಟು ತೀಕ್ಷ್ಣವಾಯಿತು. "ಹರಿಯುವ ನೀರು, ಅಲೆದಾಡುವ ಸಂನ್ಯಾಸಿಯು ಎಂದಿಗೂ ಕಲ್ಮಷವಾಗರು" ಎಂಬುದನ್ನು ಚೆನ್ನಾಗಿ ಮನಗಂಡ ಸ್ವಾಮೀಜಿಯವರು ಅಖಂಡ ಭಾರತವನ್ನು ಪರಿಭ್ರಮಣ ಮಾಡುವ ಉತ್ಕಟ ಆಕಾಂಕ್ಷೆಯನ್ನು ಹೊಂದಿ ಜುಲೈ 1890ರಲ್ಲಿ ಒಂದು ಕಮಂಡಲು, ದಂಡ, ಗೀತೆ ಹಾಗೂ ಜರ್ಮನಿಯ ಥಾಮಸ್ ಕೆಂಪಿಸ್‌ನ 'ಇಮಿಟೇಷನ್ ಆಫ್ ಕ್ರೈಸ್ಟ್'ನ ಪ್ರತಿಯೊಂದನ್ನು ಹಿಡಿದು ಪರಿವ್ರಾಜಕರಾಗಿ ಹೊರಟೇಬಿಟ್ಟರು. ಶ್ರೀ ರಾಮಕೃಷ್ಣರು ತಮಗೆ ವಹಿಸಿದ ಗುರುತರ ಜವಾಬ್ದಾರಿಯಾದ ರಾಷ್ಟ್ರೀಯ ಪುನರುತ್ಥಾನಕ್ಕಾಗಿ ಸ್ವಾಮಿ ವಿವೇಕಾನಂದರು ನಾಡಿನ ಉದ್ದಗಲ ಸಂಚರಿಸಿದರು.

ಸುಮಾರು ಆರು ವರ್ಷಗಳ ಪರಿವ್ರಾಜಕ ಅವಧಿಯಲ್ಲಿ ಸ್ವಾಮೀಜಿಯವರ ಜೀವನದಲ್ಲಿ ಮಹತ್ತರ ಸಾಧನೆಯಾಯಿತು. ಪಂಡಿತರು, ಪಾಮರರು ಮತ್ತು ಆತ್ಮಜ್ಞಾನಿಗಳನ್ನು ಭೇಟಿಯಾದರು. ಜನಸಾಮಾನ್ಯರ ಹೀನಸ್ಥಿತಿಯನ್ನು ಕಂಡು ಮಮ್ಮಲ ಮರುಗಿದರು. ಒಂದೆಡೆ ಬಡತನವಾದರೆ ಇನ್ನೊಂದೆಡೆ ಅಜ್ಞಾನ ತಾಂಡವವಾಡುತ್ತಿತ್ತು. ಬಡಜನರ ಸ್ಥಿತಿ ಚಿಂತಾಜನಕವಾಗಿತ್ತು. ಸಮಾನತೆಯನ್ನು ಬೋಧಿಸುವ ಪರಮಾದ್ಭುತ ಸನಾತನ ಧರ್ಮದ ತತ್ತ್ವಗಳು ಕೇವಲ ಪಂಡಿತರ ಚರ್ಚೆಯ ವಸ್ತುವಾಗಿದ್ದವೇ ಹೊರತು ಆಚರಣೆಯಲ್ಲಿ ಇರಲಿಲ್ಲ. ಆತ್ಮಜ್ಞಾನವನ್ನು ಸಾರುವ ಸಂಸ್ಕೃತಿಯ ಉತ್ತರಾಧಿಕಾರಿಗಳು ಹೀನಸ್ಥಿತಿಯಲ್ಲಿ ಇದ್ದರು. ತಮ್ಮ ಆತ್ಮವಿಶ್ವಾಸವನ್ನೇ ಕಳೆದುಕೊಂಡು ತಾವುಗಳು ಮನುಷ್ಯರೆಂಬುದನ್ನು ಮರೆತಿದ್ದರು. ಜನಸಾಮಾನ್ಯರ ಈ ಸ್ಥಿತಿಯನ್ನು ಕಂಡು ಸ್ವಾಮೀಜಿ ಕಣ್ಣೀರು ಸುರಿಸಿದರು. ಜನಸಾಮಾನ್ಯರ ಸ್ಥಿತಿಯನ್ನು ಸುಧಾರಿಸಲು ಸ್ವಾಮೀಜಿಯವರು ರಾಜ–ಮಹಾರಾಜರ ಸಹಾಯವನ್ನು ಕೋರಿದರು. ಈ ರಾಜ–ಮಹಾರಾಜರು ತಮ್ಮ ಲೋಕದಲ್ಲೇ ಮುಳುಗಿದ್ದರೇ ಹೊರತು ಅವರಿಂದ ಯಾವ ಸಹಾಯವೂ ದೊರೆಯಲಿಲ್ಲ. ಸಹಾಯ ಮಾಡುವ ಮನಸ್ಸಿದ್ದವರೂ ಕೂಡ ಆಂಗ್ಲ ದೊರೆಗಳಿಗೆ ಹೆದರಿ ಹಿಂಜರಿದರು. ಚಿಕ್ಕಾಸು ಇಲ್ಲದ ಸಂನ್ಯಾಸಿಯಾದ ತನಗೆ ಈ ಕಾರ್ಯವನ್ನು ಸಾಧಿಸುವುದಾದರೂ ಹೇಗೆ ಎಂಬ ಚಿಂತೆಯಲ್ಲಿದ್ದಾಗ, 1893 ಸೆಪ್ಟೆಂಬರ್‌ನಲ್ಲಿ ಷಿಕಾಗೋ ನಗರದಲ್ಲಿ ಆಯೋಜಿಸಲಾಗಿದ್ದ ವಿಶ್ವಧರ್ಮ ಸಮ್ಮೇಳನಕ್ಕೆ ಭಾರತವನ್ನು ಪ್ರತಿನಿಧಿಸಲು ನಿರ್ಧರಿಸಿ ಪಾಶ್ಚಾತ್ಯರು ಭಾರತಕ್ಕೆ ಆರ್ಥಿಕ ಸಹಾಯ ನೀಡುವರೆಂಬ ದೃಢ ನಂಬಿಕೆಯಿಂದ ಹಿಂದೂ ಧರ್ಮವನ್ನು ಪ್ರತಿನಿಧಿಸುವ ಕಾರ್ಯವನ್ನು ಕೈಗೊಂಡರು.

ಅಮೆರಿಕಾ ಮತ್ತು ಯೂರೋಪುಗಳ ಜನರಲ್ಲಿ ಭೌತಿಕತೆ ತುಂಬಿ ತುಳುಕುತ್ತಿದ್ದುದನ್ನು ಸ್ವಾಮೀಜಿ ಕಂಡುಕೊಂಡರು. ಅಷ್ಟೊಂದು ವೈಜ್ಞಾನಿಕತೆ ಮತ್ತು ತಂತ್ರಜ್ಞಾನದ ಪ್ರಗತಿಯ ಉತ್ತುಂಗದಲ್ಲಿದ್ದ ಪಾಶ್ಚಿಮಾತ್ಯರು ಮಾನಸಿಕ ಜಾಡ್ಯದಿಂದ ಬಳಲುತ್ತಿದ್ದುದನ್ನು ಅವರು ನೋಡಿದರು. ಇದಕ್ಕೆ ಭಾರತೀಯ ತತ್ತ್ವಜ್ಞಾನದ ಅರಿವೇ ಯೋಗ್ಯವೆಂದು ತಿಳಿದ ಸ್ವಾಮೀಜಿಯವರು ಅವರಿಗೆ ವೇದಾಂತವನ್ನು ಬೋಧಿಸಿದರು. "ಪ್ರತಿಯೊಂದು ಜೀವಿಯೂ ದಿವ್ಯಾತ್ಮ. ಈ ದಿವ್ಯತೆಯನ್ನು ಅಭಿವ್ಯಕ್ತಿಗೊಳಿಸುವುದೇ ಧರ್ಮ. ವ್ಯಾಗ

Digitised by Bharatavani, CIIL

ಸದೃಶ್ಯನಾದವನನ್ನು ಮಾನವನನ್ನಾಗಿ ಮಾಡುವ, ಮಾನವನನ್ನು ದೇವನನ್ನಾಗಿ ಮಾಡುವ ಭಾವನೆಯೇ ಧರ್ಮ. ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲ, ಆಚರಣೆಯಲ್ಲಿ. ಒಳ್ಳೆಯವನಾಗುವುದು ಮತ್ತು ಒಳ್ಳೆಯದನ್ನು ಮಾಡುವುದು ಇದೇ ಧರ್ಮದ ಸರ್ವಸ್ವ" ಎಂದು ಯುರೋಪಿಯನ್ನರಿಗೆ ಮನವರಿಕೆ ಮಾಡಿಕೊಟ್ಟರು. ವೇದಾಂತ ಕೇಸರಿಯಾಗಿದ್ದ ಸ್ವಾಮೀಜಿಯವರು ತಮ್ಮ ವಿಶಾಲ ಜ್ಞಾನರಾಶಿ, ಸ್ವಾನುಭವ ಮತ್ತು ಮೇಧಾಶಕ್ತಿಯಿಂದ ಆಧ್ಯಾತ್ಮಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವನ್ನು ಪಾಶ್ಚಾತ್ಯರಿಗೆ ಮನಗಾಣಿಸಿಕೊಟ್ಟರು. ಸಮ್ಮೇಳನದಲ್ಲಿ ಸ್ವಾಮೀಜಿಯವರ ವ್ಯಕ್ತಿತ್ವ ಬೀರಿದ ಪ್ರಭಾವ ಇತಿಹಾಸವೆ ಆಯಿತು.

ಷಿಕಾಗೋ ಸಮ್ಮೇಳನದ ಸಭಾಸದಸ್ಯರನ್ನು ಉದ್ದೇಶಿಸಿ ಸಂಬೋಧಿಸಿದ ಕ್ರಮವೇ ನಿಜವಾದ ಧರ್ಮದ ತಿರುಳಾಗಿ ವ್ಯಾಖ್ಯಾನಗೊಂಡಿತು. ವಿವೇಕಾನಂದರು "ಅಮೇರಿಕದ ನನ್ನ ಸಹೋದರ ಸಹೋದರಿಯರೆ" ಎಂದು ಸಂಬೋಧಿಸಿ, ಪಾಶ್ಚಿಮಾತ್ಯರ ಹೃದಯವನ್ನು ಗೆದ್ದು ಬಿಟ್ಟರು. ತಮ್ಮ ತಮ್ಮ ಧರ್ಮಗಳೇ ಶ್ರೇಷ್ಠವೆಂದು ತಿಳಿದು, ಅದನ್ನು ಪ್ರತಿಪಾದಿಸುವುದೇ ಮುಖ್ಯ ಉದ್ದೇಶ ಹೊಂದಿದ್ದ ಪ್ರತಿನಿಧಿಗಳ ನಡುವೆ, ನಿಜವಾದ ಧರ್ಮ ಮನುಷ್ಯರ ನಡುವಣ ಬಾಂಧವ್ಯಗಳನ್ನು ಗುರುತಿಸುವ ಸಾಧನ ಎಂಬುದನ್ನು ಪರೋಕ್ಷವಾಗಿ ಮನವರಿಕೆ ಮಾಡಿಕೊಟ್ಟ ನಂತರ ಸ್ವಾಮೀಜಿಯವರು ಹೇಳಿದ ಮತ್ತೊಂದು ಅನುಭವದ ಮಾತಿನಿಂದ "ನಾವು ಸರ್ವಮತ ಸಹಿಷ್ಣುತೆಯನ್ನು ಒಪ್ಪುತ್ತೇವೆ. ಸಕಲ ಧರ್ಮಗಳೂ ಸತ್ಯವೆಂದು ನಂಬುತ್ತೇವೆ. ಮತಗಳೆಲ್ಲವೂ ಒಬ್ಬನೇ ಆದ ಪರಮಾತ್ಮನನ್ನು ಸೇರುವ ಪಥಗಳು" ಎಂಬುದನ್ನು ಚೆನ್ನಾಗಿ ಮನವರಿಕೆ ಮಾಡಿಕೊಟ್ಟರು. ಇದರಿಂದಾಗಿ ಭಾರತದ ಸನಾತನ ಸತ್ಯವು ಪರಮಹಂಸರ ಮೂಲಕ ವ್ಯಾಖ್ಯಾನಗೊಂಡು ಒಂದು 'ಯುಗ ಸಂದೇಶ'ದ ಮಹತ್ವವನ್ನು ವಿಶ್ವಧರ್ಮ ಸಮ್ಮೇಳನದಲ್ಲಿ ಪಡೆದುಕೊಂಡಿತು. ಸ್ವಾಮೀಜಿಯವರು ಪರಮಹಂಸರು ಕಂಡಂತಹ ಮಹಾಸತ್ಯವನ್ನು ಅನನ್ಯವಾದ ರೀತಿಯಲ್ಲಿ ವಿಶ್ವಧರ್ಮ ಸಮ್ಮೇಳನದಲ್ಲಿ ಪುನರ್ಭವಗೊಳಿಸಿದರು ಮತ್ತು ವೇದಾಂತದ ಘನತೆ, ಸರ್ವಧರ್ಮಗಳ ಸಮಾನತೆಯನ್ನು ಎತ್ತಿಹಿಡಿದರು.

ಸ್ವಾಮಿ ವಿವೇಕಾನಂದರು ತಮ್ಮ ಮುಖ್ಯ ಸಂದೇಶವಾಗಿ, ಸ್ವಾರ್ಥವನ್ನು ತೊರೆದು ಜನಸೇವೆಗೆ ಮತ್ತು ದೇಶಸೇವೆಗೆ ತಮ್ಮನ್ನು ಮುಡುಪಾಗಿಸಲು ಯುವಕರಿಗೆ ಮತ್ತು ವಿದ್ಯಾವಂತರಿಗೆ ಕರೆ ನೀಡಿದರು. "ವಿದ್ಯೆ, ವಿದ್ಯೆ, ವಿದ್ಯೆಯೊಂದೇ ನಮ್ಮೆಲ್ಲರ ಸಮಸ್ಯೆಗಳಿಗೆ ಉತ್ತರ ನೀಡಲು ಸಾಧ್ಯ! ಬಡಜನರಿಗೆ ಮೊದಲು ಊಟ ನೀಡಿ ನಂತರ ಪಾಠ ಹೇಳಿ" ಎಂದು ಸಾರಿದರು. ವಿದ್ಯಾಭ್ಯಾಸದ ಕುರಿತಾಗಿ ಸ್ವಾಮೀಜಿ ನೀಡಿದ ವ್ಯಾಖ್ಯೆ ಕೂಡ ಬಹಳ ಮುಖ್ಯವಾದದ್ದು. ವಿದ್ಯಾರ್ಥಿಯು ಒಂದು ನಿರ್ಜೀವ ವಸ್ತುವಲ್ಲ. ಆತನಲ್ಲಿ ಅದ್ಭುತ ಪ್ರತಿಭೆಯಿದೆ. ಆ ಪ್ರತಿಭೆಯು ಅಭಿವ್ಯಕ್ತಗೊಳ್ಳಲು ಇರುವ ಅಡಚಣೆಯನ್ನು ದೂರಮಾಡಿ, ಯೋಗ್ಯ ವಾತಾವರಣವನ್ನು ನಿರ್ಮಿಸುವ ಕಾರ್ಯ ಶಿಕ್ಷಕನಾದವನು ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. "ಪ್ರತಿ ಜೀವಿಯೂ ದೈವಾಂಶ ಸಂಭೂತರು. ಬಾಹ್ಯ ಮತ್ತು ಆಂತರಿಕ ಪ್ರಕೃತಿಯನ್ನು ನಿಗ್ರಹಿಸುವುದರ ಮೂಲಕ ಪ್ರತಿಯೊಬ್ಬರೂ ತಮ್ಮ ದಿವ್ಯತೆಯನ್ನು ಕಾಣಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ತಮ್ಮ ಗುರುಗಳಾದ ರಾಮಕೃಷ್ಣ ಪರಮಹಂಸರು ನೀಡಿದ ಅಮೂಲ್ಯ ಸಂದೇಶವಾದ 'ಜೀವ ಶಿವ ಸೇವೆ'ಯೇ ವೇದಾಂತವನ್ನು ಕಾರ್ಯರೂಪಕ್ಕೆ ತರಲು ಉತ್ತಮ ಮಾರ್ಗ ಎಂದು ಸಾರಿ ಹೇಳಿದರು.

"ಮಾತೃ ದೇವೋಭವ, ಪಿತೃ ದೇವೋಭವ ಎಂಬ ಮಾತುಗಳನ್ನು ನಾವು ಕೇಳಿದ್ದೇವೆ, ತಾಯಿ-ತಂದೆಯರನ್ನು ದೇವರಂತೆ ನೋಡು ಎಂಬ ಹೃದಯಸ್ಪರ್ಶಿ ಮಾತುಗಳನ್ನು ಆಡಿದ್ದೇವೆ. ಆದರೆ ನಾನೆನ್ನುತ್ತೇನೆ ದರಿದ್ರ ದೇವೋಭವ, ಮೂರ್ಖ ದೇವೋಭವ, ಬಡವರು, ಅನಕ್ಷರಸ್ಥರು, ಅಜ್ಞರು ಸಂಕಟಗ್ರಸ್ಥರು ಇವರುಗಳು ನಿಮ್ಮ ದೇವರಾಗಲಿ, ಇವರನ್ನು ಸ್ವೀಕರಿಸುವುದೇ ಏಕಮಾತ್ರ ಧರ್ಮವೆಂದು ಅರಿತುಕೊಳ್ಳಿ", ಎಂದ ಸ್ವಾಮಿ ವಿವೇಕಾನಂದರು ಜಗತ್ತಿನ ಹಿತದ ಮೂಲಕ ಆತ್ಮೋನ್ನತಿಯನ್ನು ಸಾಧಿಸಬೇಕೆಂದು ಕರೆ ನೀಡಿದರು. ಈ ಮೂಲಕ ಸಮಾಜ ಸೇವೆಗೆ ಅವರು ಹೊಸ ಭಾಷ್ಯ ನೀಡಿದರಲ್ಲದೆ ಪ್ರಾಪಂಚಿಕತೆ ಮತ್ತು ಪಾರಮಾರ್ಥಿಕತೆಗಳನ್ನು ಸಮನ್ವಯಗೊಳಿಸಿದರು. ಸ್ವಾಮಿ ವಿವೇಕಾನಂದರು ತಮ್ಮ ಆಧ್ಯಾತ್ಮಿಕ ಗುರುಗಳಾದ ರಾಮಕೃಷ್ಣ ಪರಮಹಂಸರ ಜ್ಞಾಪಕಾರ್ಥವಾಗಿ 1897 ಮೇ 1 ರಂದು ರಾಮಕೃಷ್ಣ ಮಿಷನ್ ಎಂಬ ಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ರಾಮಕೃಷ್ಣ ಮಠ ಧರ್ಮ ಪ್ರಚಾರಕ್ಕೆ ಒತ್ತು ಕೊಟ್ಟರೆ ರಾಮಕೃಷ್ಣ ಮಿಷನ್ ಸಮಾಜ ಸೇವೆಗೆ, ಶಿಕ್ಷಣಕ್ಕೆ ಒತ್ತು ನೀಡಿತು. ಕಾಲಾನುಕ್ರಮದಲ್ಲಿ ಈ ಸಂಸ್ಥೆ ಬೆಳೆದು ಇಂದು ದೇಶ ವಿದೇಶಗಳಲ್ಲಿ ಅದರ ಅನೇಕ ಶಾಖೆಗಳು ಮತ್ತು ಚಟುವಟಿಕೆಗಳು ತಮ್ಮ ಕಾರ್ಯನಿರ್ವಹಿಸುತ್ತಿವೆ.

ಸ್ವಾಮೀಜಿಯವರು ಓರ್ವ ಆಧುನಿಕ ಋಷಿ ಹಾಗೂ ಮಂತ್ರ ದ್ರಷ್ಟಾರರು. 'ದರಿದ್ರ ದೇವೋಭವ', 'ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯ ಚ' ಎಂಬಂಥ ಅನೇಕ ಅರ್ಥಪೂರ್ಣ ಹೊಸ ಮಂತ್ರಗಳನ್ನು ಕೊಟ್ಟರು. ಈ ಎರಡು ಮಂತ್ರಗಳು ಆದರ್ಶ ಸಮಾಜದ ನವ ನಿರ್ಮಾಣಕ್ಕೆ ಜನಸಾಮಾನ್ಯರ, ಬಡವರ ಅಭ್ಯುದಯಕ್ಕೆ ಬೇಕಾದ ವಿಚಾರ, ಸ್ಫೂರ್ತಿ ಮತ್ತು ಮಾರ್ಗದರ್ಶನವನ್ನು ಕೊಡುತ್ತವೆ. ವ್ಯಕ್ತಿ, ಕುಟುಂಬ, ಸಮಾಜ, ದೇಶ, ವಿಶ್ವ ಹೀಗೆ ವ್ಯಕ್ತಿತ್ವ ವಿಕಸನಗೊಳ್ಳುತ್ತಾ ಹೋಗಬೇಕು. ಆದ್ದರಿಂದಲೆ ಸ್ವಾಮೀಜಿಯವರು "ವಿಕಸನವೇ ಜೀವನ, ಸಂಕುಚಿತತೆಯೇ ಮರಣ" ಎಂದು ಉದ್ಗರಿಸಿದರು.

ಮನುಷ್ಯನ ನಿಜವಾದ ಪರಿವರ್ತನೆ, ತನ್ಮೂಲಕ ಸಮಾಜದ ಹಾಗೂ ವಿಶ್ವದ ಪರಿವರ್ತನೆಯನ್ನು ಆಧ್ಯಾತ್ಮಿಕ ಜ್ಞಾನಪ್ರಸಾರದ ಮೂಲಕ, ಸೇವೆಯ ಮೂಲಕ, ಅನುಕಂಪ ಮತ್ತು ಪ್ರೀತಿಯ ಮೂಲಕ ಸಾಧಿಸುವುದನ್ನು ಸ್ವಾಮೀಜಿಯವರು ತಮ್ಮ ಬಾಳಿನ ಗುರಿಯಾಗಿಸಿಕೊಂಡಿದ್ದರು. ಮಾನವನ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಸರ್ವರಿಗೂ ಸಮಬಾಳು ದೊರಕಿಸುವ ಪ್ರಗತಿಶೀಲ ನವ ಸಮಾಜದ ಸೃಷ್ಟಿಗೆ ಶ್ರಮಿಸಿ ಧನ್ಯತೆಯನ್ನು ಪಡೆದ ಬದುಕು ಸ್ವಾಮಿ ವಿವೇಕಾನಂದರದು. ಜಗತ್ತಿನ ಇತಿಹಾಸಕ್ಕೆ ತಿರುವನ್ನು ನೀಡಿದ ದೇಶಭಕ್ತ ಸಂತ ಎಂದು ಕರೆಸಿಕೊಂಡ ಅವರ ಜೀವನ ಮತ್ತು ಸಂದೇಶಗಳು ಪ್ರಪಂಚದಾದ್ಯಂತ ಸಹಸ್ರಾರು ನರನಾರಿಯರಿಗೆ ಸ್ಫೂರ್ತಿಯನ್ನು ನೀಡುತ್ತಿವೆ. ಸ್ವಾಮೀಜಿಯವರ ಜನ್ಮದಿನವಾದ ಜನವರಿ 12ನ್ನು ನಮ್ಮ ದೇಶದಲ್ಲಿ ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಲಾಗುತ್ತಿದೆ. ನಮ್ಮ ದೇಶವಾಸಿಗಳಿಗೆ ಅದರಲ್ಲೂ ವಿಶೇಷವಾಗಿ ನವಯುವಕರಿಗೆ ಅವರೊಂದು ನಿರಂತರ ಸ್ಫೂರ್ತಿಯ ಸೆಲೆ ಮತ್ತು ಮಾರ್ಗದರ್ಶಕ ದಾರಿದೀಪವಾಗಿದ್ದಾರೆ.

### ಸ್ವಾಮಿ ವಿವೇಕಾನಂದರ ವಿಚಾರದಲ್ಲಿ ಶಿಕ್ಷಣ

ವ್ಯಕ್ತಿ ನಿರ್ಮಾಣವೇ (Man Making) ಎಲ್ಲಾ ಶಿಕ್ಷಣದ, ತರಬೇತಿಯ ಗುರಿಯಾಗಿರಬೇಕು. "ಶಿಕ್ಷಣ"ವೆಂಬ ಮಂತ್ರದಿಂದ ಪರಿಹಾರವಾಗದ ಯಾವ ಕ್ಷೇತ್ರ ಅಥವಾ ಸಮಸ್ಯೆಗಳೂ ಇಲ್ಲ ಎಂದು ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಅವರ ಪ್ರಕಾರ ಶಿಕ್ಷಣ ಎಂದರೆ ಕೇವಲ ವಿಷಯಗಳನ್ನು ಸಂಗ್ರಹಿಸುವುದಲ್ಲ. ಮನಸ್ಸನ್ನು ವ್ಯವಸ್ಥಿತ ರೀತಿಯಲ್ಲಿ ವಿಕಾಸಗೊಳಿಸುವುದು ನಿಜವಾದ ಶಿಕ್ಷಣ. ಮಾನವನಲ್ಲಿ ಈಗಾಗಲೇ

Digitised by Bharatavani, CIIL

ಅಡಗಿರುವ ಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ಶಿಕ್ಷಣ ಎಂದು ವಿವೇಕಾನಂದರ ಶಿಕ್ಷಣದ ಪರಿಭಾಷೆಯನ್ನು ನೀಡಿದ್ದಾರೆ. ವಿವೇಕಾನಂದರ ಶಿಕ್ಷಣ ವ್ಯವಸ್ಥೆಯಲ್ಲಿ ದೈಹಿಕ ಆರೋಗ್ಯಕ್ಕೆ ಸ್ಥಾನವಿದೆ. ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸಿರಲು ಸಾಧ್ಯವೆಂಬುದು ಅವರ ಮತ.

ಅಪಾರ ಪ್ರಮಾಣದಲ್ಲಿ ವಿಷಯಗಳನ್ನು ತಲೆಯಲ್ಲಿ ತುಂಬಿಕೊಳ್ಳುವುದು ಶಿಕ್ಷಣವಾಗುವುದಿಲ್ಲ. ವಿವೇಕಾನಂದರ ಪ್ರಕಾರ ವ್ಯಕ್ತಿತ್ವ ನಿರ್ಮಾಣ, ಚಾರಿತ್ರ್ಯ ನಿರ್ಮಾಣ, ಮನೋಬಲ, ಬುದ್ಧಿ ಸೂಕ್ಷ್ಮತೆ ಇವೆಲ್ಲವನ್ನೂ ವಿದ್ಯಾರ್ಥಿ ಸಾಧಿಸುವಂತೆ ಮಾಡಿ ತನ್ನ ಕಾಲ ಮೇಲೆ ನಿಂತುಕೊಳ್ಳುವ ಹಾಗೆ ಮಾಡುವ ಪ್ರಕ್ರಿಯೆಯೇ ಶಿಕ್ಷಣ.

ವಿವೇಕಾನಂದರು ಕಲೆಯ ಅರಿವಿಲ್ಲದೆ ಶಿಕ್ಷಣವು ಪೂರ್ಣವಾಗುವುದಿಲ್ಲ ಎಂದು ಹೇಳುತ್ತಾರೆ. ಧರ್ಮವೇ ಶಿಕ್ಷಣದ ಅಂತರಾಳ. ಇಲ್ಲಿ ಧರ್ಮವೆಂದರೆ ಬೇರೆ ಬೇರೆ ವಿಧದ ಧರ್ಮಗಳಲ್ಲ. ಚಾರಿತ್ರ್ಯ ನಿರ್ಮಾಣದಲ್ಲಿ ಸಹಕಾರಿಯಾಗುವಂಥ ನೈತಿಕ ಹಾಗೂ ಅಧ್ಯಾತ್ಮಿಕ ಗುಣಗಳ ಸಮೂಹ ಎಂಬುದು ಅವರ ಅಭಿಪ್ರಾಯ.

ವಿವೇಕಾನಂದರ ಶಿಕ್ಷಣ ವಿಧಾನ ಆಧುನಿಕ ಅನ್ವೇಷಣಾತ್ಮಕ ಶಿಕ್ಷಣ ವಿಧಾನವನ್ನು ಹೋಲುತ್ತದೆ. ದೈಹಿಕ ಶಿಕ್ಷಣ, ಕಲೆ, ಭಾಷೆ, ಧರ್ಮ, ವಿಜ್ಞಾನ ಹಾಗೂ ತಂತ್ರಜ್ಞಾನ ಇವೆಲ್ಲಕ್ಕೂ ಶಿಕ್ಷಣದಲ್ಲಿ ಸ್ಥಾನವಿರಬೇಕು ಎನ್ನುವುದು ಅವರ ಮತ. ಮಹಿಳೆಯರಿಗೆ ಶಿಕ್ಷಣ ಬಹಳ ಅಗತ್ಯವೆಂದು ಹೇಳಿದ್ದಾರೆ. ಶಿಕ್ಷಣದಿಂದ ಮಾತ್ರ ಹಿಂದುಳಿದವರನ್ನು ಮೇಲೆತ್ತಲು ಸಾಧ್ಯ ಎನ್ನುವುದು ಅವರ ನಿಲುವಾಗಿತ್ತು.

ಸಮಾಜವು ಸುಧಾರಣೆಯಾಗಬೇಕಾದರೆ ಬಡವ-ಬಲ್ಲಿದ, ಉಚ್ಚ-ನೀಚ ಇತ್ಯಾದಿ ಭೇದಗಳನ್ನು ಮೀರಿ ಶಿಕ್ಷಣ ಸರ್ವರನ್ನು ತಲುಪಿದಾಗ ಮಾತ್ರ ಸಾಧ್ಯ ಎಂದು ಅವರು ಘೋಷಿಸಿದ್ದಾರೆ. ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣದಿಂದ ಸಮಾಜದ ದೋಷಗಳು ನಿವಾರಣೆ ಸಾಧ್ಯ ಎಂದು ಅವರು ಹೇಳಿದ್ದಾರೆ.

ತೈತ್ತಿರೀಯ ಉಪನಿಷತ್ತಿನಲ್ಲಿ ಭೃಗುವಲ್ಲಿ ಎನ್ನುವುದೊಂದು ಅಧ್ಯಾಯ. ಅಲ್ಲಿ ಬರುವ ಒಂದು ಸ್ವಾರಸ್ಯಕರ ಪ್ರಸಂಗ ಈ ರೀತಿ ಇದೆ. ಭೃಗು ವಾರುಣಿಯು ತನ್ನ ತಂದೆಯಾದ ವರುಣನನ್ನು ಸಮೀಪಿಸಿ ಹೀಗೆ ಪ್ರಶ್ನಿಸುತ್ತಾನೆ. 'ಹೇ ಭಗವಂತನೇ, ಬ್ರಹ್ಮವನ್ನು ಉಪದೇಶಿಸು.' ವರುಣ ಅವನಿಗೆ ಬ್ರಹ್ಮದ ಬಗ್ಗೆ ಉಪದೇಶ ಮಾಡುತ್ತಾನೆ. ಭೃಗು ಹೋಗಿ ತಪಸ್ಸನ್ನು ಮಾಡುತ್ತಾನೆ. ತಪಸ್ಸು ಮಾಡಿ 'ಅನ್ನ'ವೇ ಬ್ರಹ್ಮ ಎಂದು ತಿಳಿದುಕೊಂಡು, ಮತ್ತೆ ತನ್ನ ತಂದೆಯ ಬಳಿ ಬಂದು 'ಹೇ ಭಗವಂತನೇ ಬ್ರಹ್ಮವನ್ನು ಉಪದೇಶಿಸು' ಎಂದು ಕೇಳಿಕೊಂಡನು. ಆಗ ವರುಣನು ಅವನಿಗೆ ಹೀಗೆ ಉಪದೇಶಿಸಿದನು, 'ತಪಸಾ ಬ್ರಹ್ಮ ವಿಜಿಜ್ಞಾಸತ್ವ, ತಪೋ ಬ್ರಹ್ಮೇತಿ'- ತಪಸ್ಸಿನಿಂದ ಬ್ರಹ್ಮವನ್ನು ತಿಳಿದುಕೋ, ತಪಸ್ಸೇ ಬ್ರಹ್ಮ! ಭೃಗುವು ತಪಸ್ಸನ್ನು ಮಾಡಿದನು. ಹೀಗೆ ತಪಸ್ಸನ್ನು ಮಾಡಿ, ಅವನು ಪ್ರಾಣ, ಮನಸ್ಸು, ವಿಜ್ಞಾನ ಅಥವಾ ಬುದ್ಧಿ ಆನಂದಗಳು ಬ್ರಹ್ಮ ಎಂದು ತಿಳಿದುಕೊಂಡನು. ಪ್ರತಿಯೊಂದು ಹಂತದಲ್ಲಿಯೂ ಅವನನ್ನು ಅವನ ಗುರು ತಪಸ್ಸು ಮಾಡೆಂದು ಪ್ರೋತ್ಸಾಹಿಸಿದನು. ಪ್ರಾಚೀನ ಭಾರತದ ಶಿಕ್ಷಣ ವಿಧಾನದ ಒಂದು ಪಕ್ಷಿನೋಟ ಈ ಉದಾಹರಣೆಯಲ್ಲಿ ನಮಗೆ ವ್ಯಕ್ತವಾಗುತ್ತದೆ. ಈ ವಿಧಾನದ ಆಧಾರದ ಮೇಲೆ ವಿವೇಕಾನಂದರ ಶೈಕ್ಷಣಿಕ ವಿಚಾರಗಳು ರೂಪುಗೊಂಡಿವೆ. ವಿದ್ಯಾರ್ಥಿಯಲ್ಲಿ ಈಗಾಗಲೆ ಅಂತರ್ನಿಹಿತವಾಗಿರುವ 'ದೈವತ್ವ' ಹೊರಹೊಮ್ಮುವಂತೆ ಮಾಡುವುದೆ ಶಿಕ್ಷಣ ಎಂದು ಅವರು ಶಿಕ್ಷಣವನ್ನು ವ್ಯಾಖ್ಯಾನಿಸಿದ್ದಾರೆ. ಅವರ ಪ್ರಕಾರ ನಿಜವಾದ ಶಿಕ್ಷಣ ಈ ಲಕ್ಷಣಗಳನ್ನೂ, ತತ್ವಗಳನ್ನೂ ಒಳಗೊಂಡಿರಬೇಕು.

1. ವಿದ್ಯಾರ್ಥಿ ತನಗೆ ತಾನೇ ಕಲಿಯುತ್ತಾನೆ. ಎಲ್ಲ ಜ್ಞಾನ-ವಿಜ್ಞಾನವೂ ಅವನಲ್ಲೇ ಇದೆ. ಭೃಗುವು ತನ್ನ ಸ್ವಂತ ಸಾಮರ್ಥ್ಯದಿಂದಲೇ ವಿದ್ಯೆಯನ್ನು ಅರಸುವಂತೆ ಅವನ ಗುರುವು ಪ್ರಚೋದನೆ ನೀಡುತ್ತಾನೆ. ಇದು ಬಾಹ್ಯ ಆಕರಗಳಿಂದ ಮಾಹಿತಿಗಳನ್ನು ಸಂಗ್ರಹಿಸುವುದಕ್ಕಿಂತ ಭಿನ್ನವಾದ ಕಲಿಕೆಯ ವಿಧಾನವಾಗಿದೆ. ಇದು ವಿದ್ಯಾರ್ಥಿಯಲ್ಲಿ ಅಂತರ್ಗತವಾಗಿರುವ ಜ್ಞಾನದ ಅನಾವರಣ ಕ್ರಿಯೆಯಾಗಿದೆಯೇ ಹೊರತು, ಹೊರಗಿನಿಂದ ಬೇರೆನನ್ನೋ ಪಡೆಯುವ ಕ್ರಿಯೆಯಾಗಿಲ್ಲ.
2. ಏಕಾಗ್ರತೆಯೇ ಶಿಕ್ಷಣದ ಮೂಲಸಾರ: ಜ್ಞಾನದ ಆವಿಷ್ಕಾರದ ಏಕಮಾತ್ರ ವಿಧಾನವೇ ಏಕಾಗ್ರತೆ. ಹೀಗೆ ಕಲಿಕೆಯಲ್ಲಿ ಏಕಾಗ್ರತೆಯು ಸಾರ್ವಭೌಮಿಕ ಹಾಗೂ ಸಾರ್ವಕಾಲಿಕವಾದ ಭೂಮಿಕೆಯನ್ನು ವಹಿಸುತ್ತದೆ. ಏಕಾಗ್ರತೆಯು ಜ್ಞಾನವನ್ನು ಕವಿದಿರುವ ಅಜ್ಞಾನದ ಪದರಗಳನ್ನು ಸರಿಸಿ, ವಿದ್ಯಾರ್ಥಿಯಲ್ಲಿಯೇ ಸುಪ್ತವಾಗಿರುವ ಕಲಿಯುವ ಅಪಾರ ಸಾಧ್ಯತೆ ಮತ್ತು ಸುಪ್ತ ಸಾಮರ್ಥ್ಯಗಳು ಪ್ರಕಟಗೊಳ್ಳುವಂತೆ ಮಾಡುತ್ತದೆ.
3. ಶಿಕ್ಷಣ ವಿದ್ಯಾರ್ಥಿಯನ್ನು ಪರಾವಲಂಬಿಯನ್ನಾಗಿ ಮಾಡಬಾರದು, ಸ್ವಾವಲಂಬಿಯನ್ನಾಗಿ ಮಾಡಬೇಕು. ಈ ವಿಧಾನದಲ್ಲಿ ಗುರುವು ವಿದ್ಯಾರ್ಥಿಯನ್ನು ತಾನೇ ತಾನಾಗಿ ವಿದ್ಯೆಯನ್ನು ಅರಸುವುದಕ್ಕೆ ಪ್ರೇರಣೆ ನೀಡುವಂತಹ ಪ್ರಚೋದಕನ, ಪ್ರೇರಣಾಕರ್ತನ ಪಾತ್ರವನ್ನು ಮಾತ್ರ ವಹಿಸುತ್ತಾನೆ. ಹೀಗಾಗಿ ವಿದ್ಯಾರ್ಥಿಯು ತನ್ನ ಕಾಲ ಮೇಲೆ ತಾನು ನಿಂತು, ಸ್ವಪ್ರಯತ್ನದಿಂದ ಅರಿವಿನ ರೋಚಕ ಮಾರ್ಗವನ್ನು ಕ್ರಮಿಸುವ ಅಗಾಧ ಸಾಹಸ ಕಾರ್ಯಕ್ಕೆ ಮುಂದಾಗುತ್ತಾನೆ.
4. ಶಿಕ್ಷಣದಲ್ಲಿ ವಿದ್ಯಾರ್ಥಿಯ ಪರಮ ಉದ್ದೇಶ ಭಗವತತ್ತ್ವವನ್ನು ಹುಡುಕುವುದು. ಅದನ್ನು ಅವನು ಹೊರಗಡೆ ಹುಡುಕದೆ, ಅದು ತನ್ನಲ್ಲೇ ತನ್ನ ವ್ಯಕ್ತಿತ್ವದಲ್ಲಿಯೇ ಇದೆ ಎನ್ನುವುದನ್ನು ಕಂಡುಕೊಳ್ಳಬೇಕು. ಅರಿವಿನ ಮಾರ್ಗವು ಕೊನೆಗೊಳ್ಳುವುದು ತನ್ನ ಅಂತರಂಗದ ಅಪಾರ ಹಾಗೂ ಅನಂತ ಶಕ್ತಿಯ ಅನ್ವೇಷಣೆಯಲ್ಲಿ. ವಿದ್ಯೆಯು ವ್ಯಕ್ತಿತ್ವದ ಒಳ ಆಯಾಮಗಳನ್ನು ವಿಕಸಿಸುತ್ತ, ಆ ಮೂಲಕ ಅದಕ್ಕೆ ಹಿನ್ನೆಲೆಯೂ ಆಧಾರವೂ ಆಗಿರುವ ಪರಿಪೂರ್ಣತೆಯ ಪೂರ್ಣ ಅಭಿವ್ಯಕ್ತಿಯಲ್ಲಿ ಪರ್ಯವಸಾನವಾಗುತ್ತದೆ. ಹೀಗೆ ಕಲಿಕೆಯು ಬಾಹ್ಯ ಪ್ರಕ್ರಿಯೆಯಾಗದೆ, ಆಂತರಂಗಿಕ ಅನ್ವೇಷಣೆಯೆನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ.
5. ಹೇಳಿಕೊಡಬೇಕಾದ ವಿದ್ಯೆ ಪರಾವಿದ್ಯೆ. 'ಸಾ ವಿದ್ಯಾಯಾ ವಿಮುಕ್ತಯೇ', ವಿದ್ಯೆಯು ಬಿಡುಗಡೆಯನ್ನು ತಂದುಕೊಡುತ್ತದೆ. ಅದೇ ನಿಜವಾದ ವಿದ್ಯೆಯೆನ್ನುವುದು ಭಾರತೀಯ ಪರಂಪರೆಯ ದೃಷ್ಟಿಕೋನ. ಇಲ್ಲಿ ಬಂಧನವೆನ್ನುವುದು ಅಜ್ಞಾನದ ಬಂಧನ. ಅರಿವು ಎನ್ನುವುದು ಅದರಿಂದ ಮುಕ್ತನಾಗುವುದು. ವಿವೇಕಾನಂದರು ಈ ಗುರಿಗೆ ಒತ್ತು ಕೊಡುತ್ತಾರೆ.
6. ವಿದ್ಯೆಯಿಂದ ವಿದ್ಯಾರ್ಥಿ ತನ್ನತನದ ಅರಿವನ್ನು ಮಾಡಿಕೊಳ್ಳುತ್ತಾನೆ. ತನ್ನ ಚಾರಿತ್ರ್ಯವನ್ನು ಬೆಳೆಸಿಕೊಳ್ಳುತ್ತಾನೆ. ಚಾರಿತ್ರ್ಯವರ್ಧನೆಯು ಶಿಕ್ಷಣದ ಅವಿಭಾಜ್ಯ ಅಂಗ. ವಿದ್ಯಾರ್ಥಿಯು ತನ್ನ ಬಗ್ಗೆ ಇರುವ ಅರಿವನ್ನು ಹೆಚ್ಚಿಸಿಕೊಳ್ಳುತ್ತಾ ಹೋದಾಗ, ಅವನಲ್ಲಿ ತನ್ನ ಚಾರಿತ್ರ್ಯವನ್ನು ಬೆಳೆಸಿಕೊಳ್ಳಬೇಕು ಎಂಬ ಆಕಾಂಕ್ಷೆಯೂ ಹುಟ್ಟುತ್ತದೆ. ಆಗ ಅವನು ಕೀಳು ಪ್ರವೃತ್ತಿಗಳಿಗೆ ಬಲಿಯಾಗುವುದಿಲ್ಲ. ಈ ಆರು ಅಂಶಗಳು

Digitised by Bharatavani, CIIL

ಸ್ವಾಮಿ ವಿವೇಕಾನಂದರ ಶಿಕ್ಷಣ ತತ್ತ್ವದ ಆಧಾರಸ್ತಂಭಗಳು ಎನ್ನಬಹುದು.

ಸ್ವಾಮಿ ವಿವೇಕಾನಂದರು ತಮ್ಮ 39 ವರ್ಷಗಳ ಅಲ್ಪ ಜೀವಿತಾವಧಿಯಲ್ಲಿಯೇ ಇಷ್ಟೆಲ್ಲ ಮಹತ್ ಸಾಧನೆಗಳನ್ನು ಮಾಡಿ 1902ನೇ ಜುಲೈ 4ರಂದು ಮಹಾಸಮಾಧಿಯನ್ನು ಪಡೆದು ಭಾರತೀಯ ಆಧ್ಯಾತ್ಮಿಕ ಇತಿಹಾಸದಲ್ಲಿ ಅಮರರಾದರು.

–ಎಸ್.ಶಿ.ಕು

## ಸ್ವಾಯತ್ತ ಕಾಲೇಜುಗಳು

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಭಾರತದ ಉನ್ನತ ಶಿಕ್ಷಣದ 10ನೇ ಯೋಜನಾ ದಾಖಲೆಯಲ್ಲಿ ಸ್ವಾಯತ್ತ ಕಾಲೇಜುಗಳಿಗೆ ಒತ್ತು ಕೊಡುತ್ತಾ ಹೆಚ್ಚು ಹೆಚ್ಚು ಕಾಲೇಜುಗಳನ್ನು ವಿಶ್ವವಿದ್ಯಾನಿಲಯಗಳಿಗೆ ಸಂಯೋಜಿಸುವುದನ್ನು ನಿಲ್ಲಿಸಿದಾಗ ಮಾತ್ರ ಪದವಿ ಶಿಕ್ಷಣದಲ್ಲಿ ಸುರಕ್ಷಿತ, ಉತ್ತಮ ಹಾಗೂ ಗುಣಾತ್ಮಕ ಸುಧಾರಣೆಯಾಗಲು ಸಾಧ್ಯ ಎಂದು ಹೇಳುತ್ತದೆ. ಶೈಕ್ಷಣಿಕ ಹಾಗೂ ಕಾರ್ಯಕಾರಿ ಸ್ವಾತಂತ್ರ್ಯ ಇರುವ ಕಾಲೇಜುಗಳಿಗೆ ಆರ್ಥಿಕ ನೆರವು ಸಿಕ್ಕಾಗ ಸ್ವಾಯತ್ತತೆ ಪರಿಕಲ್ಪನೆಯನ್ನು ಮತ್ತಷ್ಟು ಗಟ್ಟಿ ಮಾಡುತ್ತದೆ. ಈ ಯೋಜನೆಯ ಪ್ರಕಾರ 'ಸ್ವಾಯತ್ತತೆಯ ಸಂಸ್ಕೃತಿ'ಯನ್ನು ಹರಡಲು ಸ್ವಾಯತ್ತ ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿದ್ದು ಶೇಕಡ 10ರಷ್ಟು ಅರ್ಹ ಕಾಲೇಜುಗಳನ್ನು ಸ್ವಾಯತ್ತ ಕಾಲೇಜುಗಳನ್ನಾಗಿ ಮಾಡುವ ಗುರಿ ಇದೆ.

ಕಾಲೇಜುಗಳ ಸಂಖ್ಯೆ ಕಡಿಮೆ ಇದ್ದಾಗ ಅವುಗಳನ್ನು ವಿಶ್ವವಿದ್ಯಾನಿಲಯದೊಂದಿಗೆ ಸಂಯೋಜಿಸುವ ವ್ಯವಸ್ಥೆ ರೂಪಿಸಲಾಗಿತ್ತು. ಆಗ ವಿಶ್ವವಿದ್ಯಾನಿಲಯವು 'ಮೇಲ್ವಿಚಾರಕ ಅಂಗ'ವಾಗಿ ಕಾಲೇಜಿನ ಕಾರ್ಯ ವೈಖರಿಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಿ, ಕಾಲೇಜಿನ ಪರವಾಗಿ ಪದವಿಗಳನ್ನು ನೀಡಲಾಗುತ್ತಿತ್ತು. ಆದರೆ, ಕಾಲೇಜುಗಳ ಸಂಖ್ಯೆ ಹೆಚ್ಚಾದಂತೆ, ವಿಶ್ವವಿದ್ಯಾನಿಲಯಕ್ಕೆ ಈ ವ್ಯವಸ್ಥೆ ನಿರ್ವಹಿಸಲಸಾಧ್ಯವಾಗಿ, ಪ್ರತ್ಯೇಕ ಕಾಲೇಜುಗಳ ಅವಶ್ಯಕತೆಗೆ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ. ಕಾಲೇಜುಗಳಿಗೆ ಪಠ್ಯಕ್ರಮವನ್ನು ಆಧುನೀಕರಣ ಗೊಳಿಸಲಾಗಲಿ, ಸುಸಂಬದ್ಧಗೊಳಿಸಲಾಗಲಿ ಸ್ವಾತಂತ್ರ್ಯವಿಲ್ಲ. ವಿವಿಧ ಕಾಲೇಜುಗಳ ವಿಶೇಷ ಸಾಮರ್ಥ್ಯಗಳು, ಕುಂದುಕೊರತೆಗಳು, ಮುಂತಾದವುಗಳನ್ನು ಲೆಕ್ಕಿಸದೆ ಎಲ್ಲರಿಗೂ ಒಂದೇ ರೀತಿಯ ಕಾಯಿದೆ ವ್ಯವಸ್ಥೆ ಒದಗಿಸುತ್ತಿರುವ ವಿಶ್ವವಿದ್ಯಾನಿಲಯ ಪ್ರತ್ಯೇಕ ಕಾಲೇಜಿನ ಶೈಕ್ಷಣಿಕ ಬೆಳವಣಿಗೆಗೆ ಧಕ್ಕೆಯುಂಟುಮಾಡಿದೆ. ಇದಕ್ಕಾಗಿಯೇ ರಾಷ್ಟ್ರೀಯ ಶಿಕ್ಷಣ ಆಯೋಗ (1964–66), "ನಮ್ಮ ದೇಶದಲ್ಲೇ ಬೌದ್ಧಿಕ ವಾತಾವರಣ ಸೃಷ್ಟಿಸಲು (ಬೆಳೆಸಲು) ಶಿಕ್ಷಕರಿಗೆ ಶೈಕ್ಷಣಿಕ ಸ್ವಾತಂತ್ರ್ಯ ಆಚರಣೆಗೆ ತರುವುದು ಅತ್ಯಾವಶ್ಯಕ. ಇಂತಹ ಬೌದ್ಧಿಕ ವಾತಾವರಣದ ಸೃಷ್ಟಿಯಾಗದ ಹೊರತು ಉನ್ನತ ಶಿಕ್ಷಣದಲ್ಲಿ ಉತ್ಕೃಷ್ಟತೆ ಸಾಧಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಆಡಳಿತಮಂಡಳಿ– ಮೂವರ ಸಹಭಾಗಿತ್ವದಲ್ಲಿ ಪ್ರಮುಖ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು ಗುಣಾತ್ಮಕವಾದ ಉನ್ನತ ಶಿಕ್ಷಣಕ್ಕಾಗಿ ಅತ್ಯಾವಶ್ಯಕ. ಆ ಕಾರಣಕ್ಕಾಗಿಯೇ ಶಿಕ್ಷಣ ಆಯೋಗವು ಕಾಲೇಜುಗಳ ಸ್ವಾಯತ್ತತೆಗೆ ಶಿಫಾರಸ್ಸು ಮಾಡಿದೆ. ಕಾಲೇಜುಗಳ ಸ್ವಾಯತ್ತತೆ ಶೈಕ್ಷಣಿಕ ಉತ್ಕೃಷ್ಟತೆಗೆ ಒತ್ತಾಸೆಕೊಡುವ (ಉತ್ತೇಜಿಸುವ) ಸಾಧನ ಎಂದು ಅಭಿಪ್ರಾಯಪಟ್ಟಿದೆ.

### ಸ್ವಾಯತ್ತ ಕಾಲೇಜುಗಳ ಉದ್ದೇಶಗಳು

ರಾಷ್ಟ್ರೀಯ ಶಿಕ್ಷಣ ನೀತಿಯು (1986–92) ಸ್ವಾಯತ್ತ ಕಾಲೇಜುಗಳಿಗೆ ಈ ಕೆಳಕಂಡ ಉದ್ದೇಶಗಳನ್ನು ರೂಪಿಸಿತು.

ಎ) ಒಂದು ಸ್ವಾಯತ್ತ ಕಾಲೇಜಿಗೆ, ತನಗೆ ನೀಡಿರುವ ಶೈಕ್ಷಣಿಕ ಸ್ವಾತಂತ್ರ್ಯವನ್ನು ಆಧರಿಸಿ:

- ಅಧ್ಯಯನಕ್ಕಾಗಿ ತನ್ನದೇ ಆದ ಪದವಿಗಳನ್ನು ಹಾಗೂ ಪಠ್ಯವಸ್ತುವನ್ನು ನಿರ್ಧರಿಸಿ ವಿಧಿಸಬೇಕಾಗುತ್ತದೆ ಹಾಗೂ ಸ್ಥಳೀಯ ಅಗತ್ಯಗಳಿಗೆ ಹೊಂದುವಂತೆ ಕೋರ್ಸ್‌ಗಳನ್ನು ಪುನರಚಿಸಿ ಹಾಗೂ ಪುನರ್ ವಿನ್ಯಾಸಗೊಳಿಸಬೇಕಾಗುತ್ತದೆ.
- ರಾಜ್ಯ ಸರ್ಕಾರದ ಮೀಸಲಾತಿ ಕಾಯಿದೆಗೆ ಸಮಂಜಸವಾದ ದಾಖಲಾತಿ ನಿಯಮವನ್ನು ಹೊರಡಿಸಬೇಕಾಗುತ್ತದೆ.
- ವಿದ್ಯಾರ್ಥಿಗಳ ನಿರ್ವಹಣಾ ಸಾಮರ್ಥ್ಯ ಅಳೆಯಲು, ಪರೀಕ್ಷೆಗಳನ್ನು ನಡೆಸಲು ಹಾಗೂ ಫಲಿತಾಂಶ ಹೊರಡಿಸಲು ತನ್ನದೇ ವಿಧಾನಗಳನ್ನು ನಿಗಮನ ಮಾಡಬೇಕಾಗುತ್ತದೆ.
- ಶಿಕ್ಷಣದಲ್ಲಿ ಉನ್ನತ ಮಟ್ಟ ಹಾಗೂ ಹೆಚ್ಚಿನ ಸೃಜನಶೀಲತೆಯನ್ನು ಸಾಧಿಸಲು ಶೈಕ್ಷಣಿಕ ತಂತ್ರಜ್ಞಾನದ ಆಧುನಿಕ ಸಾಧನಗಳನ್ನು ಬಳಸಬೇಕಾಗುತ್ತದೆ.
- ಸಮುದಾಯ ಸೇವೆ, ವಿಸ್ತೃತ ಚಟುವಟಿಕೆಗಳು ಸಮಾಜದ ಹಿತಕ್ಕಾಗಿ 'ನಿಯೋಜಿತ ಕಾರ್ಯಗಳು' ನೆರೆಹೊರೆ ಕಾರ್ಯಕ್ರಮಗಳು ಮುಂತಾದ ಆರೋಗ್ಯಕರ ಅಭ್ಯಾಸಗಳನ್ನು ಉತ್ತೇಜಿಸಬೇಕಾಗುತ್ತದೆ.

ಬಿ) ಪೋಷಕ ವಿಶ್ವವಿದ್ಯಾನಿಲಯ, ರಾಜ್ಯ ಸರ್ಕಾರ ಹಾಗೂ ಇತರ ಶಿಕ್ಷಣ ಸಂಸ್ಥೆಗಳೊಟ್ಟಿಗೆ ಸ್ವಾಯತ್ತ ಕಾಲೇಜುಗಳ ಸಂಬಂಧ ಈ ಕೆಳಕಂಡಂತಿರಬೇಕಾಗುತ್ತದೆ:

ಪಠ್ಯಕ್ರಮ ರೂಪಿಸಲು, ಬೋಧನೆ, ಪರೀಕ್ಷೆ ಹಾಗೂ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ವಿಧಾನಗಳ ನಿರ್ಮಾಣಕ್ಕೆ ಸ್ವಾಯತ್ತ ಕಾಲೇಜುಗಳು ವಿಶ್ವವಿದ್ಯಾನಿಲಯದ ವಿಭಿನ್ನ ವಿಭಾಗಗಳ ಹಾಗೂ ಇತರ ಸಂಸ್ಥೆಗಳ ಪ್ರಾವೀಣ್ಯತೆಯನ್ನು ಬಳಸಿಕೊಳ್ಳಬಹುದು. ಪ್ರಸ್ತುತ ಕಾರ್ಯವಿಧಾನದಲ್ಲಿಯೇ, ಖಾಸಗಿ ಹಾಗೂ ಸರ್ಕಾರಿ ಕಾಲೇಜುಗಳಿಗೆ ಶಿಕ್ಷಕರ ನೇಮಕಾತಿ ಮಾಡಬಹುದು.

1) ಪೋಷಕ ವಿಶ್ವವಿದ್ಯಾನಿಲಯವು ತನ್ನ ಸ್ವಾಯತ್ತ ಕಾಲೇಜುಗಳ ಪಠ್ಯಕ್ರಮ, ಬೋಧನಾ, ಪರೀಕ್ಷಾ ಹಾಗೂ ಮೌಲ್ಯಮಾಪನಾ ವಿಧಾನಗಳನ್ನು ಒಪ್ಪಿಕೊಳ್ಳುತ್ತದೆ. ಅಲ್ಲದೆ ಅದರ ಸಹಾಯ ಹಸ್ತವನ್ನು ಈ ಕೆಳಕಂಡ ಅಂಶಗಳಿಗೆ ನೀಡಬೇಕಾಗುತ್ತದೆ.

- ಶೈಕ್ಷಣಿಕ ಕಾರ್ಯಕ್ರಮ ರೂಪಿಸಲು
- ಸಿಬ್ಬಂದಿ ಸುಧಾರಣೆ ಕಾರ್ಯಕ್ರಮ ರೂಪಿಸಲು
- ಕಾಲೇಜಿನ ವಿವಿಧ ವಿಭಾಗಗಳೊಡನೆ ಚರ್ಚಿಸಿ ಅಗತ್ಯವಿರುವ ಮಾರ್ಗದರ್ಶನ ನೀಡಲು
- ಪೋಷಕ ವಿಶ್ವವಿದ್ಯಾನಿಲಯದ ಪಾತ್ರ:
  - ಪೋಷಕ ವಿಶ್ವವಿದ್ಯಾನಿಲಯದ ಸಹಚರ್ಯದಲ್ಲಿ ಸ್ವಾಯತ್ತ ಕಾಲೇಜುಗಳನ್ನು ಹೆಚ್ಚಿಸುವುದು.

Digitised by Bharatavani, CIIL

- ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ನವೀನವಾದುದನ್ನು ಆಚರಣೆಗೆ ತರುವಂತೆ ಪ್ರೋತ್ಸಾಹಿಸುವ ಮೂಲಕ ಸ್ವಾಯತ್ತ ಕಾಲೇಜುಗಳಿಗೆ ಶೈಕ್ಷಣಿಕ ಸ್ವಾತಂತ್ರ್ಯ ನೀಡುವುದು.
- ಬೋಧನೆಗೆ, ವಿಷಯವಸ್ತುವಿಗೆ ಹಾಗೂ ಸಾಧನೆಯ ಮಟ್ಟ ಆಧರಿಸಿ ಲಭ್ಯವಿರುವ ಕನಿಷ್ಠ ಅವಧಿಗೆ ಸರಿಹೊಂದುವಂತಹ ಹೊಸ ವಿಷಯಗಳ ಅಧ್ಯಯನದ ಸೌಲಭ್ಯ ದೊರಕಿಸಿ ಕೊಡುವುದು.
- ತಮ್ಮದೇ ಆದ ತಾತ್ಕಾಲಿಕ/ಹಂಗಾಮಿ, ವಲಸೆ ಹಾಗೂ ಇತರ ಪ್ರಮಾಣ ಪತ್ರಗಳನ್ನು ನೀಡಲು ಅನುಮತಿ ಕೊಡುವುದು.
- ಸ್ವಾಯತ್ತತೆಯ ಸತ್ವವನ್ನು ಪೋಷಿಸಲು ಸಾಧ್ಯವಿರುವುದೆಲ್ಲವನ್ನೂ ಮಾಡುವುದು. ನೀಡಿದ ಪದವಿ / ಡಿಪ್ಲೋಮೊ / ಪ್ರಮಾಣ ಪತ್ರಗಳು ಕಾಲೇಜಿನ ಹೆಸರನ್ನು ಸೂಚಿಸುತ್ತವೆಂದು ಖಚಿತ ಪಡಿಸಿಕೊಳ್ಳುವುದು.
- ಸ್ವಾಯತ್ತ ಕಾಲೇಜಿನ ವಿವಿಧ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ವಿಶ್ವವಿದ್ಯಾನಿಲಯದಿಂದ ಸೂಚಿತ ವ್ಯಕ್ತಿಗಳನ್ನು ಪ್ರತಿನಿಧಿಯಾಗಿ ನಿಯಮಿಸಿ ಅವರಿಂದ ಕಾಲೇಜಿನ ಕಾರ್ಯವೈಖರಿಯ ಬಗ್ಗೆ ಪ್ರತಿಪುಷ್ಟಿ ಪಡೆಯುವುದು.
- ಸ್ವಾಯತ್ತ ಕಾಲೇಜುಗಳು ಸುಗಮವಾಗಿ ಕೆಲಸ ನಿರ್ವಹಿಸಲು ಅಗತ್ಯ ಸೌಲಭ್ಯ ನೀಡುವ ಸಲುವಾಗಿ ಪ್ರತ್ಯೇಕ ವಿಭಾಗವನ್ನು ಸೃಷ್ಟಿಸುವುದು.

2) ರಾಜ್ಯ ಸರ್ಕಾರವು ಸ್ವಾಯತ್ತ ಕಾಲೇಜುಗಳಿಗೆ ಈ ಕೆಳಕಂಡಂತೆ ನೆರವಾಗುತ್ತದೆ:

• ಅವಶ್ಯಕತೆ ಆಧಾರಿಸಿದ ವರ್ಗಾವಣೆಯನ್ನು ಹೊರತುಪಡಿಸಿ, ಅದರಲ್ಲೂ ಶಿಕ್ಷಣದಲ್ಲಿ ನಾವೀನ್ಯತೆ ಹಾಗೂ ಸುಧಾರಣೆಯಲ್ಲಿ ಮುಂಚೂಣಿಯಲ್ಲಿರುವ ಕಾಲೇಜುಗಳಲ್ಲಿ ಶಿಕ್ಷಕರ ವರ್ಗಾವಣೆಯನ್ನು ಸಾಧ್ಯವಿದ್ದಷ್ಟು ತಪ್ಪಿಸುತ್ತದೆ.

• ಪರಿಷ್ಕರಣ ಸಮಿತಿಯ ವರದಿ ಬಂದ 90 ದಿನಗಳ ಒಳಗೆ ಸ್ವಾಯತ್ತತೆಯನ್ನು ಕಾಲೇಜು ಮುಂದುವರೆಸಲು ಒಪ್ಪಿಗೆ ನೀಡುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಕಾಲೇಜು ಸ್ವಾಯತ್ತತೆಯನ್ನು ಮುಂದುವರಿಸುವಲ್ಲಿ ಯಾವ ಅಭ್ಯಂತರವೂ ರಾಜ್ಯ ಸರ್ಕಾರಕ್ಕಿಲ್ಲ ಎಂದು ಅರ್ಥೈಸಬಹುದು.

• ಸರ್ಕಾರದ ನಾಮನಿರ್ದೇಶಿತ ವ್ಯಕ್ತಿಗಳ ಸೇವೆ ಅವಶ್ಯಕತೆ ಇದ್ದಾಗ ಸೂಕ್ತ ಸಮಯದಲ್ಲಿ ಸರ್ಕಾರಿ ಕಾಲೇಜಿಗೆ ಹಾಗೂ ಇತರ ಸಂಸ್ಥೆಗಳಿಗೆ ಅವರನ್ನು ಪ್ರತಿನಿಧಿಗಳನ್ನಾಗಿ ನಿಯೋಜನೆ ಮಾಡುತ್ತದೆ.

**ಸಿ) ಸ್ವಾಯತ್ತತಾ ಮಾನ್ಯತೆ**

ಸ್ವಾಯತ್ತತೆಯ ಪಟ್ಟ ಅರಸುವ ಕಾಲೇಜುಗಳಲ್ಲಿ ಯೋಗ್ಯತಾ ಪತ್ರ, ಡಿಪ್ಲೋಮೋ ಪದವಿ, ಪಿ.ಜಿ. ಹಾಗೂ ಎಂ.ಫಿಲ್. ಕಾರ್ಯಕ್ರಮಗಳನ್ನು ನೀಡಲಾಗುತ್ತದೆ. ರಾಜ್ಯ ಸರ್ಕಾರ ಹಾಗೂ ಯು.ಜಿ.ಸಿ.ಗೆ ಖಾಯಂ ಅಂಗವಾಗಿರುವ ಕಾಲೇಜುಗಳಿಗೆ ಪೋಷಕ ವಿಶ್ವವಿದ್ಯಾನಿಲಯವು ಸ್ವಾಯತ್ತತೆಯ ಪದವಿ ನೀಡುತ್ತದೆ. ಸ್ವಾಯತ್ತತೆ ನೀಡುವ ಮುನ್ನ ಅರ್ಜಿ ಸಲ್ಲಿಸಿರುವ ಕಾಲೇಜಿನ ಆಡಳಿತ ಮಂಡಳಿ ರಚನೆ ಚಟುವಟಿಕೆಯಿಂದ ಕೂಡಿದ್ದು ಅಲ್ಲಿಯ ಶಿಕ್ಷಣ ತಜ್ಞರಿಗೆ ಸೃಜನಾತ್ಮಕ ಕೊಡುಗೆ ನೀಡಲು ಹೆಚ್ಚು ಅವಕಾಶ ನೀಡುತ್ತದೆಯೇ ಎಂಬುದನ್ನು ವಿಶ್ವವಿದ್ಯಾನಿಲಯವು ಖಚಿತಪಡಿಸಿಕೊಳ್ಳುತ್ತದೆ.

- ಸ್ವಾಯತ್ತತೆ ಪಡೆಯುವ ಕಾಲೇಜುಗಳ ಅರ್ಹತೆ:

ಯು.ಜಿ.ಸಿ. ಕಾಯಿದೆಯ ಸೆಕ್ಷನ್ 2 (ಎಫ್) ಮತ್ತು 12 (ಬಿ) ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳು, ಸ್ವಾಯತ್ತತೆ ಪಡೆದುಕೊಳ್ಳಲು ಬೇಕಾದ ನಿರ್ಧಾರಗಳ ಅರ್ಹತೆ ಇದೆ ಎಂದು ಗುರುತಿಸಲ್ಪಟ್ಟ ಸಂಸ್ಥೆಗಳಾಗಿರುತ್ತವೆ:

- ಶೈಕ್ಷಣಿಕವಾಗಿ ಗುರುತಿಸಿಕೊಂಡಿರುವಂತಹ ಹಾಗೂ ಹಿಂದಿನ ವಿಶ್ವವಿದ್ಯಾನಿಲಯ ಪರೀಕ್ಷೆಗಳಲ್ಲಿ ತೋರಿದ ಕಾರ್ಯನಿರ್ವಹಣೆ ಮತ್ತು ಅವುಗಳ (ಕಾಲೇಜುಗಳ) ಶೈಕ್ಷಣಿಕ /ಸಹ–ಪಠ್ಯ/ವಿಸ್ತೃತ ಚಟುವಟಿಕೆಗಳನ್ನು ಪರಿಗಣಿಸಲಾಗುವುದು.
- ದತ್ತ ಕಾಲೇಜಿನ ಸಿಬ್ಬಂದಿ ವರ್ಗದ ಶೈಕ್ಷಣಿಕ/ವಿಸ್ತೃತ ಸಾಧನೆಗಳು ಪರಿಗಣಿಸಲಾಗುವುದು.
- ಅವಶ್ಯಕತೆಗಳಿಗೆ ತಕ್ಕಂತೆ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಆಯ್ಕೆಯಲ್ಲಿ ಗುಣ ಹಾಗೂ ಅರ್ಹತೆಯನ್ನು ಪರಿಗಣಿಸಲಾಗುತ್ತದೆ.
- ಸಾಕಷ್ಟು ಸೌಲಭ್ಯಗಳ ಇರುವಿಕೆ. ಉದಾ: ಗ್ರಂಥಾಲಯ, ಸಲಕರಣೆಗಳು, ಶೈಕ್ಷಣಿಕ ಚಟುವಟಿಕೆಗಳಿಗೆ ಸ್ಥಳಾವಕಾಶ ಇತ್ಯಾದಿ ಪರಿಗಣಿಸಲಾಗುತ್ತದೆ.
- ಗುಣಾತ್ಮಕವಾದ ಸಂಸ್ಥಾ ನಿರ್ವಹಣೆ, ಆಡಳಿತ ಮಂಡಳಿ / ರಾಜ್ಯ ಸರ್ಕಾರ ನೀಡಿದ ಆರ್ಥಿಕ ಸಂಪನ್ಮೂಲವನ್ನು ಸಂಸ್ಥೆಯ ಬೆಳವಣಿಗೆಗೆ ಸದ್ವಿನಿಯೋಗಿಸುವುದನ್ನು ಪರಿಗಣಿಸಲಾಗುತ್ತದೆ.
- ನವ್ಯ ಸುಧಾರಣೆಗಳನ್ನು ಪ್ರೋತ್ಸಾಹಿಸುವಲ್ಲಿ ಸಿಬ್ಬಂದಿ ವರ್ಗದ ಭಾಗವಹಿಸುವಿಕೆ ಹಾಗೂ ಅಭಿಪ್ರೇರಣೆಯನ್ನು ಪರಿಗಣಿಸಲಾಗುವುದು.

**ಸ್ವಾಯತ್ತತೆಗೆ ಅರ್ಜಿ ಹಾಕುವ ಕಾರ್ಯ ವಿಧಾನ**

ಯು.ಜಿ.ಸಿ. ಯು, ಸ್ವಾಯತ್ತತೆ ಮಾನ್ಯತೆ ಪಡೆಯಲು ಬಯಸುವ ಅರ್ಹ ಕಾಲೇಜುಗಳಿಂದ ಅರ್ಜಿ ಸಲ್ಲಿಸಲು ಪ್ರಕಟಣೆ ಮುಖಾಂತರ ತಿಳಿಯಪಡಿಸುತ್ತದೆ. ಪ್ರತ್ಯೇಕ ವಿಶ್ವವಿದ್ಯಾನಿಲಯಗಳಲ್ಲಿ ಕೂಡ ತಮ್ಮ ಸಂಯೋಜನೆಯಲ್ಲಿರುವ ಕಾಲೇಜುಗಳಿಗೆ ಅರ್ಜಿ ಹಾಕಲು ಸರ್ಕ್ಯುಲರ್‌ಗಳನ್ನು ಕಳಿಸಬಹುದು.

ಯು.ಜಿ.ಸಿ.ಯಿಂದ ಮಾನ್ಯತೆ ಪಡೆಯಲು ಕಾರ್ಯ ವಿಧಾನ:

ಸ್ವಾಯತ್ತತೆ ಪದವಿಗೆ ಒಪ್ಪಿಗೆಯನ್ನು ಎರಡು ಹಂತಗಳಲ್ಲಿ ಪಡೆಯಬೇಕಾಗುತ್ತದೆ.

**1ನೇ ಹಂತ:** ಯು.ಜಿ.ಸಿ.ಯು ಒಂದು ಪರೀಕ್ಷಕ (Screening) ಸಮಿತಿಯನ್ನು ರಚಿಸುತ್ತದೆ. ಆ ಸಮಿತಿಯು ಈ ಕೆಳಕಂಡವರನ್ನು ಸದಸ್ಯರನ್ನಾಗಿ ಒಳಗೊಂಡಿರುತ್ತವೆ:

ಅ) 3 ರಿಂದ 5 ತಜ್ಞರು ಯು.ಜಿ.ಸಿ.ಯಿಂದ ಸೂಚಿಸಲ್ಪಟ್ಟಿರುತ್ತಾರೆ/ ನೇಮಿಸಲ್ಪಟ್ಟಿರುತ್ತಾರೆ. ಇವರಲ್ಲಿ ಒಬ್ಬರನ್ನು 'ಪರಿಶೀಲಕ'ನಾಗಿ ಸೂಚಿಸಲಾಗುತ್ತದೆ.

ಆ) ಉನ್ನತ ಶಿಕ್ಷಣದ ಕಾರ್ಯದರ್ಶಿ ಅಥವಾ ಅವರಿಂದ ಸೂಚಿಸಲ್ಪಟ್ಟವರು.

Digitised by Bharatavani, CIIL

ಇ) ರಾಜ್ಯ ಮಂಡಳಿಯ ಸಭಾಧ್ಯಕ್ಷ ಅಥವಾ ಅವರಿಂದ ಸೂಚಿಸಲ್ಪಟ್ಟವರು.

ಈ) ಉಪಕುಲಪತಿಗಳು ಅಥವಾ ಅವರಿಂದ ಸೂಚಿಸಲ್ಪಟ್ಟವರು.

ಉ) ಸ್ವಾಯತ್ತ ಕಾಲೇಜುಗಳ ಜಂಟಿ ಕಾರ್ಯದರ್ಶಿಗಳು ಇಲ್ಲಿ ಕಾರ್ಯದರ್ಶಿ ಸದಸ್ಯರಾಗಿರುತ್ತಾರೆ.

ಪರಿಶೀಲಕರು ಸಮಿತಿಯ ಸಭಾಧ್ಯಕ್ಷರ ಸ್ಥಾನದಲ್ಲಿರುತ್ತಾರೆ. ಅರ್ಜಿ ಹಾಕಿದ ಕಾಲೇಜುಗಳ ಅರ್ಜಿಗಳ ತೀವ್ರ ಪರಿಶೀಲನೆ ನಂತರ, ಅವಶ್ಯಕತೆ ಬಿದ್ದಲ್ಲಿ ಆ ಕಾಲೇಜುಗಳ ಅರ್ಜಿಗಳನ್ನು ಸಮ್ಮತಿಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. ರಾಜ್ಯ ಸರ್ಕಾರದಿಂದ 6 ವಾರಗಳ ಒಳಗೆ ಯಾವ ಪ್ರತಿಕ್ರಿಯೆಯೂ ಬರದಿದ್ದರೆ, ಅರ್ಜಿಗೆ ಯಾವ ತಕರಾರೂ ಇಲ್ಲವೆಂದು ಊಹಿಸಬಹುದು.

**2ನೇ ಹಂತ:** ಪರಿಶೀಲಿಸಿದ ಕಾಲೇಜುಗಳಿಗೆ ಯು.ಜಿ.ಸಿ.ಯಿಂದಲೇ ನೇಮಿತಗೊಂಡ ಮತ್ತೊಂದು ತಜ್ಞರ 'ಸಮಿತಿಯು' ಭೇಟಿ ನೀಡುತ್ತದೆ. ಈ ಸಮಿತಿಯ ತಾನು ದಾಖಲಿಸಿದ್ದನ್ನು ಹಾಗೂ ತನ್ನ ಶಿಫಾರಸ್ಸುಗಳನ್ನು ವರದಿಯ ರೂಪದಲ್ಲಿ ಯು.ಜಿ.ಸಿ.ಗೆ ಸಲ್ಲಿಸುತ್ತದೆ. ಈ ಶಿಫಾರಸ್ಸುಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳಿಗೆ ಸ್ವಾಯತ್ತತೆಯ ಮಾನ್ಯತೆಗಾಗಿ ಕಳಿಸುತ್ತದೆ. ವಿಶ್ವವಿದ್ಯಾನಿಲಯವು ಅನಂತರ ಸಂಬಂಧಪಟ್ಟ ಕಾಲೇಜುಗಳಿಗೆ ತಿಳಿಸುತ್ತದೆ. ಪ್ರಾರಂಭದಲ್ಲಿ ಆರು ವರ್ಷಗಳವರೆಗೆ ಸ್ವಾಯತ್ತತೆ ನೀಡಲಾಗುತ್ತದೆ.

ಹೀಗೆ ಕಾಲೇಜುಗಳ ಸ್ವಾಯತ್ತತೆಯನ್ನು ವಿವಿಧ ಆಯಾಮಗಳಿಗೆ ನೀಡಲಾಗುತ್ತದೆ. ಉದಾ: ಪಠ್ಯಕ್ರಮ ರಚನೆ, ದಾಖಲಾತಿ ನಿಯಮಗಳನ್ನು ರೂಪಿಸುವುದು, ಪರೀಕ್ಷೆಗಳನ್ನು ನಿರ್ವಹಿಸುವುದು, ತನ್ನ ಸಂಪನ್ಮೂಲಗಳನ್ನು ತಾನೇ ಗಳಿಸಿಕೊಳ್ಳುವ ಸ್ವಾತಂತ್ರ್ಯ ಇತ್ಯಾದಿ. ಆದ್ದರಿಂದಲೇ ಇಂತಹ ಸಂಸ್ಥೆಗಳು ಉತ್ಕೃಷ್ಟತೆಯ ಮಟ್ಟಕ್ಕೆ ಹೋಗಿ ವಿದ್ಯಾರ್ಥಿಗಳಿಗೆ ಗುಣಾತ್ಮಕವಾದ ಶಿಕ್ಷಣ ನೀಡಬೇಕಾಗುತ್ತದೆ.

ಸಾಂಪ್ರದಾಯಿಕವಾಗಿ ನಡೆಸುತ್ತಿರುವ ಕೋರ್ಸ್‌ಗಳ ಜೊತೆಗೆ ಸ್ವಾಯತ್ತ ಕಾಲೇಜುಗಳು ದೀರ್ಘಕಾಲಿಕ, ಮಧ್ಯಕಾಲಿಕ ಮತ್ತು ಲಘುಕಾಲಿಕ ನವೀಕರಿಸಿದ ಕೋರ್ಸ್‌ಗಳನ್ನು ಪರಿಚಯಿಸಬಹುದು.

ಸ್ವಾಯತ್ತ ಕಾಲೇಜುಗಳು, ಗುಣಾತ್ಮಕ ಶಿಕ್ಷಣ ನೀಡಲು ಬೇಕಾದ ಎಲ್ಲಾ ಪ್ರತ್ಯಯಗಳ ಸುಧಾರಣೆಗಳನ್ನು ತರಬಹುದು.

– ಬಿ.ಎಸ್.ಆ.

## ಸ್ಥಿತಪ್ರಜ್ಞತ್ವದ ಪರಿಕಲ್ಪನೆ

ಹಿಂದೂ ಧರ್ಮದ ಬೇರೆ ಬೇರೆ ಗ್ರಂಥಗಳಲ್ಲಿ ಸಮಾಯೋಜಿತ ವ್ಯಕ್ತಿತ್ವದ ಲಕ್ಷಣಗಳನ್ನು ವರ್ಣಿಸಿದ್ದಾರೆ. ಹಿಂದೂ ಧರ್ಮದಲ್ಲಿ ಭಗವದ್ಗೀತೆಗೆ ಒಂದು ಮುಖ್ಯ ಸ್ಥಾನವಿದೆ. ಭಗವದ್ಗೀತೆಯಲ್ಲಿ 'ಸಾಂಖ್ಯಯೋಗ' ಎಂಬ ಎರಡನೆ ಅಧ್ಯಾಯದಲ್ಲಿ ಅರ್ಜುನನ ಸ್ಥಿತಪ್ರಜ್ಞತ್ವ ಹೊಂದಿರುವ ವ್ಯಕ್ತಿತ್ವ ಲಕ್ಷಣಗಳು ಹೋಗಿರುತ್ತವೆ ಎಂಬ ಪ್ರಶ್ನೆಗೆ (ಶ್ಲೋಕ–54) ಕೃಷ್ಣ ಸ್ಥಿತಪ್ರಜ್ಞರ ಲಕ್ಷಣಗಳನ್ನು ವಿವರಿಸಿದ್ದಾನೆ. (ಶ್ಲೋಕ 55 ರಿಂದ 72) ಭಗವದ್ಗೀತೆಯಲ್ಲಿ ವರ್ಣಿಸಿದ ಸ್ಥಿತಪ್ರಜ್ಞ ವ್ಯಕ್ತಿತ್ವದ ಲಕ್ಷಣಗಳು ಇಂತಿವೆ.

ಮನಸ್ಸಿನಲ್ಲಿರುವ ಎಲ್ಲಾ ಕಾಮನೆಗಳು, ಆಸೆ–ಆಕಾಂಕ್ಷೆಗಳನ್ನು ತ್ಯಜಿಸಿ ಆತ್ಮನಿಂದಲೇ ಆತ್ಮನಲ್ಲಿ ಸಂತುಷ್ಟನಾಗುವ ಸ್ಥಿತಿಯೆ ಸ್ಥಿತಪ್ರಜ್ಞತ್ವ. ಸ್ಥಿತಪ್ರಜ್ಞನು ದುಃಖ ಉಂಟಾದಾಗ ಉದ್ವೇಗಗೊಳ್ಳದ ಮನಸ್ಸುಳ್ಳವನೂ, ಸುಖ ಉಂಟಾದಾಗ ಅದರಲ್ಲಿ ಅಭಿಲಾಷೆಯಿಲ್ಲದವನೂ ಮತ್ತು ಆಸಕ್ತಿ ಭಯ ಹಾಗೂ ಕ್ರೋಧಗಳಿಲ್ಲದವನು ಆಗಿರುತ್ತಾನೆ. ಎಲ್ಲದರಲ್ಲಿಯೂ ಅನಾಸಕ್ತನಾಗಿ ಶುಭ ಹಾಗೂ ಅಶುಭವಾದ ವಸ್ತು ವಿಶೇಷಗಳನ್ನು ಪಡೆದಾಗ ಸಂತೋಷ ಪಡದೆ, ದ್ವೇಷಿಸದೆ ಸ್ಥಿರ ಬುದ್ಧಿಯವನಾಗಿರುತ್ತಾನೆ. ಆಮೆಯು ತನ್ನ ಅಂಗಗಳನ್ನು ತನ್ನ ಚಿಪ್ಪಿನೊಳಗೆ ಎಳೆದುಕೊಂಡು ಮುದುರಿಕೊಳ್ಳುವಂತೆ ಇವನು ಎಲ್ಲಾ ಕಡೆಗಳಿಂದ ತನ್ನ ಇಂದ್ರಿಯಗಳನ್ನು ಬಾಹ್ಯ ವಿಷಯಗಳಿಂದ ಎಳೆದುಕೊಳ್ಳುತ್ತಾನೆ. ಅಂದರೆ ಇಂದ್ರಿಯ ಸುಖವನ್ನು ಬಯಸದೆ ಇರುವುದರಿಂದ, ಇಂದ್ರಿಯಗಳು ಆತನ ಹಿಡಿತದಲ್ಲಿ ಇರುವುದರಿಂದ, ಅವುಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು ಅವನಿಗೆ ಸಾಧ್ಯವಾಗುತ್ತದೆ. ಸ್ಥಿತಪ್ರಜ್ಞನು ಇಂದ್ರಿಯಗಳನ್ನೆಲ್ಲಾ ವಶಪಡಿಸಿಕೊಂಡು ಸಮಾಹಿತ ಚಿತ್ತನಾಗಿ ಅಂದರೆ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಸ್ಥಿರ ಬುದ್ಧಿಯವನಾಗಿರುತ್ತಾನೆ. ಸ್ಥಿತಪ್ರಜ್ಞನಲ್ಲಿ ಅನುರಾಗವೂ ಸಹ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡ ನಂತರ ನಿವೃತ್ತಿಯಾಗಿ ಹೋಗುತ್ತದೆ.

ವಿಷಯಗಳನ್ನು ಚಿಂತಿಸುತ್ತಿರುವ ವ್ಯಕ್ತಿಗೆ ಆ ವಿಷಯಗಳಲ್ಲಿ ಆಸಕ್ತಿಯು ಉಂಟಾಗುತ್ತಾದೆ. ಆಸಕ್ತಿಯಿಂದ ಆ ವಿಷಯಗಳಲ್ಲಿ ಆಸೆಯೂ ಸಹ ಉಂಟಾಗುತ್ತದೆ. ಆಸೆಗೆ ಅಡ್ಡಿಯುಂಟಾದಾಗ ಕೋಪವು ಹುಟ್ಟುತ್ತದೆ. ಕೋಪದಿಂದ ಅವಿವೇಕ ಅರ್ಥಾತ್ ಮೂಢಭಾವನೆ ಉಂಟಾಗುತ್ತದೆ. ಅವಿವೇಕದಿಂದ ಸ್ಮರಣ ಶಕ್ತಿ ಕುಂಠಿತವಾಗುತ್ತದೆ. ಸ್ಮರಣಶಕ್ತಿಯ ನಾಶದಿಂದ ಬುದ್ಧಿ ಅರ್ಥಾತ್ ವಿವೇಚನಶಕ್ತಿ ನಾಶವಾಗುತ್ತದೆ. ಬುದ್ಧಿಯ ನಾಶದಿಂದ ಇಂಥ ವ್ಯಕ್ತಿಯು ತನ್ನ ಶ್ರೇಯಸ್ಸಿನ ಸಾಧನೆಯಲ್ಲಿ ದಾರಿ ತಪ್ಪುತ್ತಾನೆ. ಆದರೆ ತನ್ನ ಅಂತಃಕರಣವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯು ರಾಗ ದ್ವೇಷಗಳಿಂದ ಮುಕ್ತನಾಗಿರುತ್ತಾನೆ. ಸ್ಥಿತಪ್ರಜ್ಞನು ತಾನು ನಿಯಂತ್ರಿಸಿಕೊಂಡಿರುವ ಇಂದ್ರಿಯಗಳ ಮೂಲಕ ವಿಷಯಗಳನ್ನು ಅನುಭವಿಸುತ್ತಾ ಅಂತಃಕರಣದಲ್ಲಿ ಪ್ರಸನ್ನತೆ ಅರ್ಥಾತ್ ಶಾಂತತೆಯನ್ನು ಪಡೆಯುತ್ತಾನೆ. ಅಂತಹ ಮಾನಸಿಕ ನಿರ್ಮಲತೆಯುಂಟಾದಾಗ ವ್ಯಕ್ತಿಯ ಸಮಸ್ತ ದುಃಖವೂ ನಾಶವಾಗುತ್ತವೆ. ಈ ರೀತಿಯ ಪ್ರಸನ್ನ ಚಿತ್ತವುಳ್ಳ ವ್ಯಕ್ತಿಯ ಬುದ್ಧಿಯು ಅತಿ ಶೀಘ್ರವಾಗಿ ಒಂದೆಡೆ ಸ್ಥಿರವಾಗುತ್ತದೆ. ಇಂಥ ವ್ಯಕ್ತಿಯೇ ಸ್ಥಿತ ಪ್ರಜ್ಞತ್ವ ಪಡೆದ ವ್ಯಕ್ತಿ.

ಮನಸ್ಸು ಮತ್ತು ಇಂದ್ರಿಯಗಳನ್ನು ಜಯಿಸದೆ ಇರುವ ಮತ್ತು ಸಾಧನೆಯನ್ನು ಮಾಡದೇ ಇರುವ ವ್ಯಕ್ತಿಯ ಅಂತಃಕರಣದಲ್ಲಿ ನಿಶ್ಚಿತ ಬುದ್ಧಿಯಿರುವುದಿಲ್ಲ. ಅಂತ ವ್ಯಕ್ತಿಯಲ್ಲಿ ಆಸ್ತಿಕ ಭಾವನೆಯೂ ಸಹ ಇರುವುದಿಲ್ಲ. ಆಸ್ತಿಕ ಭಾವನೆಯಿಲ್ಲದ ವ್ಯಕ್ತಿಗೆ ಶಾಂತಿಯೂ ಸಹ ಇರುವುದಿಲ್ಲ ಮತ್ತು ಶಾಂತಿಯಿಲ್ಲದ ವ್ಯಕ್ತಿಗೆ ಸುಖವು ದೊರೆಯುವುದಿಲ್ಲ.

ಎಲ್ಲಾ ಕಡೆಗಳಿಂದಲೂ ಪರಿಪೂರ್ಣವಾಗಿಯೂ ಮತ್ತು ಅಚಲವಾಗಿಯೂ ಇರುವ ಸಮುದ್ರಕ್ಕೆ ಅನೇಕ ನದಿಗಳ ನೀರು ಸೇರುವಂತೆ ಸ್ಥಿತಪ್ರಜ್ಞ ವ್ಯಕ್ತಿಯಲ್ಲಿ ಎಲ್ಲಾ ಭೋಗಗಳೂ ಯಾವರೀತಿಯ ವಿಕಾರಗಳನ್ನು ಉಂಟುಮಾಡದೆ ವಿಲೀನಗೊಳ್ಳುತ್ತವೆ. ಅಂಥ ವ್ಯಕ್ತಿಯು ಪರಮ ಶಾಂತಿಯನ್ನು ಪಡೆಯುತ್ತಾನೆ. ಸ್ಥಿತಪ್ರಜ್ಞ ವ್ಯಕ್ತಿಯು ಎಲ್ಲಾ ಆಶೆ–ಆಕಾಂಕ್ಷೆಗಳನ್ನು ತ್ಯಜಿಸಿ, ಮಮತಾರಹಿತ ಮತ್ತು ಅಹಂಕಾರರಹಿತ ಹಾಗೂ ಇಚ್ಛಾರಹಿತನಾಗಿ ವರ್ತಿಸುತ್ತಾನೆ. ಇದು ಬ್ರಹ್ಮಜ್ಞಾನಿಯಾದ ವ್ಯಕ್ತಿಯ ಸ್ಥಿತಿಯಾಗಿದೆ. ಈ ಸ್ಥಿತಿಯನ್ನು ಪಡೆದುಕೊಂಡವನು ಮೋಹವಶನಾಗುವುದಿಲ್ಲ ಮತ್ತು ಅಂತ್ಯಕಾಲದಲ್ಲಿಯೂ ಸಹ ಈ ನಿಷ್ಠೆಯಲ್ಲಿ ಸ್ಥಿರವಾಗಿದ್ದು ಬ್ರಹ್ಮಾನಂದವನ್ನು ಪಡೆದುಕೊಳ್ಳುತ್ತಾನೆ. ಇಂಥ ವ್ಯಕ್ತಿಯೇ ಸ್ಥಿತಪ್ರಜ್ಞ ಎಂದು ಭಗವದ್ಗೀತೆಯಲ್ಲಿ ವರ್ಣಿಸಲಾಗಿದೆ.

ಮನೋವಿಜ್ಞಾನಿಯಾದ ಅಬ್ರಾಹಂ ಮಾಸ್ಲೋವನು ನೀಡಿದ ಆತ್ಮ(ಸ್ವ) ವಾಸ್ತವೀಕರಣ ಪರಿಕಲ್ಪನೆಗೂ ಸ್ಥಿತಪ್ರಜ್ಞತ್ವ ಪರಿಕಲ್ಪನೆಗೂ ಸಾಕಷ್ಟು

Digitised by Bharatavani, CIIL

ವ್ಯತ್ಯಾಸಗಳಿವೆ. ಮಾನವತಾವಾದಿಯಾದ ಮಾಸ್ಲೋವನ ಪ್ರಕಾರ ವಾಸ್ತವೀಕರಣವು ಅಂತಸ್ಥ ಸಾಮರ್ಥ್ಯಗಳು ಮತ್ತು ಮೇಧಾಶಕ್ತಿಗಳ ನಿರಂತರ ವಾಸ್ತವೀಕರಣವಾಗಿದೆ. ಆದರೆ ಆತ್ಮ(ಸ್ವ) ವಾಸ್ತವೀಕರಣ ಸಾಧಿಸಿದ ಮಟ್ಟ ಭಗವದ್ಗೀತೆಯಲ್ಲಿ ತಿಳಿಸಿದ ಸ್ಥಿತ ಪ್ರಜ್ಞನಂತೆ ಮೇಲ್ಮಟ್ಟದ ಪ್ರಜ್ಞಾವಸ್ಥೆಯನ್ನು ತಲುಪದೆ ಇರಬಹುದು. ಆತ್ಮ ವಾಸ್ತವಿಕರಣ ಹೊಂದಿದ ವ್ಯಕ್ತಿಯು ಅನುವಂಶೀಯತೆ ನಿರ್ಧರಿಸುವ ಮಿತಿಯೊಳಗೆ, ಅವನ ಪರಿಸರದ ಮಿತಿಯೊಳಗೆ ತನ್ನ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಅಭಿವ್ಯಕ್ತಿಗೊಳಿಸುತ್ತಾನೆ. ಈ ಸಾಧನೆಯಿಂದಾಗಿ ತನ್ನ ಬದುಕು ಸಾರ್ಥಕವಾಯಿತು ಎನ್ನುವ ತೃಪ್ತಿಯನ್ನು ಪಡೆದುಕೊಳ್ಳುತ್ತಾನೆ. ಆದರೆ ಭಗವದ್ಗೀತೆಯ ಸ್ಥಿತಪ್ರಜ್ಞತ್ವ ಆತ್ಮ(ಸ್ವ) ವಾಸ್ತವೀಕರಣಕ್ಕೂ ಮೇಲಿನ ಮಟ್ಟದ್ದಾಗಿರುತ್ತದೆ. ಸ್ಥಿತಪ್ರಜ್ಞತ್ವ ಸಾಧಿಸಿದ ವ್ಯಕ್ತಿ ಪ್ರಜ್ಞೆಯ ಮೇಲ್ಮಟ್ಟಗಳನ್ನು ತಲುಪುತ್ತಾನೆ. ಅನೇಕ ಸಿದ್ಧಿಗಳು ಅವನ ಕರಗತವಾಗಬಹುದು. ಹೀಗೆ ತನ್ನ ಪ್ರಜ್ಞೆಯನ್ನು ವಿಸ್ತರಿಸುತ್ತಾ ಆಧ್ಯಾತ್ಮಿಕವಾಗಿ ಮುಂದುವರಿಯುತ್ತಾ ಅಖಂಡ ಪ್ರಜ್ಞೆಯಲ್ಲಿ (ಬ್ರಹ್ಮ) ತನ್ನ ಪ್ರಜ್ಞೆಯನ್ನು ವಿಲೀನಗೊಳಿಸಿ ಪರಮ ಶಾಂತಿಯನ್ನು ಪಡೆಯಲು ಸಮರ್ಥನಾಗುತ್ತಾನೆ.

(ನೋಡಿ ಭಗವದ್ಗೀತೆ ಅಧ್ಯಾಯ-2, ಸಾಂಖ್ಯಯೋಗ ಶ್ಲೋಕಗಳ 54 ರಿಂದ 72)

-ಶೈ.ಶಾ.

## ಸ್ತ್ರೀವಾದ ಮತ್ತು ಶಿಕ್ಷಣ

ಸ್ತ್ರೀವಾದ ಅಥವಾ ಫೆಮಿನಿಸಂ ಎಂಬುದು ಒಂದು ಸಾಮಾಜಿಕ ಹಾಗೂ ರಾಜಕೀಯ ಸಿದ್ಧಾಂತ. ಇದು ಪಾಶ್ಚಾತ್ಯ ನೆಲದಲ್ಲಿ ಮೂಡಿಬಂದದ್ದಾದರೂ ಜಗತ್ತಿನೆಲ್ಲೆಡೆಗೂ ಹಬ್ಬಿ ಪ್ರಚಲಿತದಲ್ಲಿರುವ ಸಿದ್ಧಾಂತವಾಗಿದೆ. ಇದು ಹೋರಾಟದ ಹಿನ್ನೆಲೆ ಹೊಂದಿರುವ ಸಿದ್ಧಾಂತ. ಮಹಿಳಾಸಮಸ್ಯೆಗಳು ಹಾಗೂ ಮಹಿಳೆಯರನ್ನು ಈ ಸಮಸ್ಯೆಗಳಿಂದ ವಿಮೋಚನೆಗೊಳಿಸುವುದೇ ಈ ಹೋರಾಟದ ಮೂಲ ಉದ್ದೇಶ. ಇತ್ತೀಚಿನವರೆವಿಗೂ ಸ್ತ್ರೀ ಪುರುಷರ ನಡುವೆ ಲಿಂಗಾಧಾರಿತ ತಾರತಮ್ಯವಿರುವ ವ್ಯವಸ್ಥೆ ಇತ್ತು. ಈ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರಲು ನಡೆಸುವ ಹಕ್ಕೊತ್ತಾಯ, ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಬದುಕಿನ ನೆಲೆಗಳಲ್ಲಿ ಸ್ತ್ರೀಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಸುವ ಹೋರಾಟ-ಇವುಗಳ ಹಿಂದಿರುವ ತಾತ್ವಿಕ ನೆಲೆಗಟ್ಟನ್ನು 'ಸ್ತ್ರೀವಾದ'ಎನ್ನಬಹುದು. ಮಹಿಳೆಯರು ತಮ್ಮ ಸ್ಥಾನಮಾನ ಹಾಗೂ ಹಕ್ಕುಗಳಿಗಾಗಿ ಯುರೋಪ್ ಖಂಡದ ಜರ್ಮನಿ, ನೆದರ್ ಲ್ಯಾಂಡ್ಸ್, ಫ್ರಾನ್ಸ್, ಇಟಲಿ ಮತ್ತು ಸ್ಕ್ಯಾಂಡಿನೇವಿಯಾ ದೇಶಗಳಲ್ಲಿ ಹೋರಾಟ ಮಾಡಿದರು. ಈ ಹೋರಾಟ ಇತರ ಅನೇಕ ದೇಶಗಳಲ್ಲಿ, ಮುಖ್ಯವಾಗಿ ಬ್ರಿಟನ್ ಮತ್ತು ಉತ್ತರ ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿಯೂ ನಡೆಯಿತು. ಈ ಎಲ್ಲ ಕಡೆಗಳಲ್ಲಿ ಆಯಾದೇಶದ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ನಡೆದ ಈ ಹೋರಾಟಕ್ಕೆ ಇನ್ನೂರು ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ. ವರ್ಷಗಳು ಕಳೆದಂತೆ ಈ ಹೋರಾಟಗಳು ಹೆಚ್ಚು ಶಕ್ತಿಯುತವಾಗುತ್ತಿವೆ. ಹೋರಾಟದ ತೀವ್ರತೆ ಹೆಚ್ಚಿದೆ. ಜೊತೆಗೆ ಸಮಸ್ಯೆಗಳು ಕೂಡಾ ಭಿನ್ನರೂಪವನ್ನು ಪಡೆಯುತ್ತಾ ಬಂದಿವೆ.

ಸ್ತ್ರೀವಾದಿ ಸಂಘಟನೆಗಳು ಅಭಿಪ್ರಾಯಪಡುವಂತೆ ಲಿಂಗಭೇದ ನೀತಿಯಿಂದ ಮಹಿಳೆಯರ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಲಿಂಗಭೇದ ಅಥವಾ ಲಿಂಗತಾರತಮ್ಯ ಎಂಬ ಪರಿಕಲ್ಪನೆಯನ್ನು ಹೀಗೆ ಅರ್ಥೈಸಬಹುದು. ಮಹಿಳೆ ಅಥವಾ ಪುರುಷರ ನಡುವೆ ಸಹಜವಾದ ಕೆಲವು ಜೈವಿಕ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳು ಯಾವುದೇ ರೀತಿಯಲ್ಲಿ ಪುರುಷನನ್ನು ಶ್ರೇಷ್ಠ ಎಂದೂ ಸ್ತ್ರೀಯನ್ನು ಕೀಳು ಎಂದೂ ಪ್ರಮಾಣೀಕರಿಸುವುದಿಲ್ಲ. ಇಬ್ಬರನ್ನೂ ಮಾನವ ನೆಲೆಯಲ್ಲಿ ಗುರುತಿಸುವುದರಿಂದ, ಪುರುಷ ಮತ್ತು ಸ್ತ್ರೀ ಇಬ್ಬರೂ ಸಮಾನರೇ. ಹಾಗಾಗಿ ಪುರುಷ ಅನುಭವಿಸುವ ಹಕ್ಕು ಹಾಗೂ ಅಧಿಕಾರಗಳು ಮಹಿಳೆಗೂ ಇವೆ. ಇದು ಆಕೆಯ ಜನ್ಮಸಿದ್ಧ ಹಕ್ಕು. ಹಾಗಾಗಿ ಇದು ಮಹಿಳೆಗೆ ದಕ್ಕಬೇಕು. ಪುರುಷಪ್ರಧಾನ ವ್ಯವಸ್ಥೆಯು ಈ ಸಮಾನತೆಗೆ ಅವಕಾಶವನ್ನು ಕಲ್ಪಿಸಿಲ್ಲ. ಈ ವ್ಯವಸ್ಥೆ ಪುರುಷಕೇಂದ್ರಿತವಾಗಿದ್ದು ಮಹಿಳೆಯರನ್ನು ಶೋಷಿಸುತ್ತದೆ. ಈ ರೀತಿಯಾಗಿ ಲಿಂಗಪ್ರಭೇದದ ನೆಲೆಯಲ್ಲಿ ಮಹಿಳೆಯರನ್ನು ಸಮಾನತೆಯ ನೆಲೆಯಿಂದ ದೂರೀಕರಿಸಿ ಕೆಳಮಟ್ಟದಲ್ಲಿಟ್ಟು ನಡೆಸುವ ಶೋಷಣೆಯೇ 'ಲಿಂಗ ತಾರತಮ್ಯ' ಅಥವಾ 'ಲಿಂಗಭೇದ'.

ಸ್ತ್ರೀವಾದಿ ಸಂಘಟನೆಗಳು ಸ್ತ್ರೀವಾದದ ನೆಲೆಯಲ್ಲಿ ಹಲವಾರು ಸಮಸ್ಯೆಗಳನ್ನು ಮಹಿಳಾ ಸಮಸ್ಯೆಗಳು ಎಂದು ಗುರುತಿಸಿವೆ. ಮೊದಲನೆಯದಾಗಿ, ಮಹಿಳೆಯರನ್ನು ಪುರುಷರ ಲೈಂಗಿಕ ಉಪಭೋಗಕ್ಕಾಗಿಯೇ ಇರುವ ವಸ್ತುಗಳು ಎಂದು ನೋಡುವ ದೃಷ್ಟಿ. ಈ ದೃಷ್ಟಿಯಿಂದಾಗಿ ಮಹಿಳೆ ಸಾಕಷ್ಟು ಶೋಷಣೆಗೆ ಒಳಗಾಗುತ್ತಾಳೆ. ಇದರಿಂದಾಗಿ ಕುಟುಂಬದ ಒಳಗೆ ಮತ್ತು ಹೊರಗೆ ಮಹಿಳೆಯ ಮೇಲಿನ ಅತ್ಯಾಚಾರ, ಹಿಂಸೆ, ದೌರ್ಜನ್ಯ ಇವುಗಳು ನಿರಂತರವಾಗಿ ನಡೆಯುತ್ತಲೇ ಇವೆ. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ವೇತನ, ಅಭಿವೃದ್ಧಿ ಮತ್ತು ಸವಲತ್ತುಗಳಲ್ಲಿ ಸಮಾನ ಅವಕಾಶಗಳು ಇಲ್ಲದಿರುವುದು ಎರಡನೆಯ ಸಮಸ್ಯೆ. ಇದಲ್ಲದೆ ಮಾನವ ಜಗತ್ತಿನ ಅಧಿಕಾರ ಮತ್ತು ಸವಲತ್ತುಗಳಿಂದ ಮಹಿಳೆ ವಂಚಿತಳಾಗಿರುವುದನ್ನೂ ಈ ಸಮಸ್ಯೆಯ ಜೊತೆಯಲ್ಲೇ ಗುರುತಿಸಿಕೊಳ್ಳಲಾಗಿದೆ. ಮದುವೆ ಹಾಗೂ ತಾಯ್ತನ ಇವುಗಳಿಗೆ ಸಂಬಂಧಿಸಿದ ಸ್ವಾತಂತ್ರ್ಯ ಮತ್ತು ಆಯ್ಕೆ ಹಕ್ಕು ಮಹಿಳೆಗೆ ಲಭ್ಯವಾಗಿಲ್ಲದಿರುವುದನ್ನು ಮೂರನೆಯ ಸಮಸ್ಯೆಯಾಗಿ ಗುರುತಿಸಿಕೊಳ್ಳಲಾಗಿದೆ. ಈ ಮೂರು ಅಂಶಗಳಿಗೆ ಸಂಬಂಧಿಸಿದ ಹಲವು ಸೂಕ್ಷ್ಮ ಅಂಶಗಳನ್ನು ಸ್ತ್ರೀವಾದಿ ನೆಲೆಯು ಮಹಿಳಾ ಸಮಸ್ಯೆಗಳೆಂದು ಗುರುತಿಸುತ್ತದೆ. ಈ ಸಮಸ್ಯೆಗಳನ್ನು ಹುಟ್ಟುಹಾಕಿದ ಹಾಗೂ ಇನ್ನಿತರ ಬೆಳವಣಿಗೆಗೆ ಸಾಧಕವಾದ ತಾತ್ವಿಕ ನೆಲೆಗಟ್ಟನ್ನು 'ಪುರುಷಕೇಂದ್ರಿತ ತಾತ್ವಿಕತೆ' ಎಂದು ಸ್ತ್ರೀವಾದ ಹೇಳುತ್ತದೆ.

ಸ್ತ್ರೀವಾದ ತಾತ್ವಿಕತೆಯ ಪ್ರಮುಖ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮೊದಲನೆಯದಾಗಿ, ಶ್ರೇಣೀಕೃತ ವ್ಯವಸ್ಥೆಯಲ್ಲಿ ಪುರುಷನ ಶ್ರೇಷ್ಠತೆ, ಪುರುಷನ ಪರಮಾಧಿಕಾರದ ಮೂಲಕ ಸೃಷ್ಟಿಯಾಗಿರುವ ಎಲ್ಲ ವಿಚಾರಧಾರೆಗಳು, ಜ್ಞಾನಪ್ರಕಾರಗಳು ಪುರುಷಕೇಂದ್ರಿತ ದೃಷ್ಟಿಕೋನದಿಂದಲೇ ರೂಪುಗೊಂಡಿವೆ. ಆದರೆ ಆಧುನಿಕ ಸಂಶೋಧನೆಗಳು ಮಾನವನ ಬಗ್ಗೆ ತಿಳಿಸುವ ವಾಸ್ತವಾಂಶಗಳು ಬೇರೆಯೇ ಆಗಿವೆ. ಈ ಸಂಶೋಧನೆಗಳು ಜೈವಿಕಭಿನ್ನತೆಯ ಹೊರತಾಗಿ ಬೇರಾವ ಭಿನ್ನತೆಯೂ ಸ್ತ್ರೀಪುರುಷರ ನಡುವೆ ಇಲ್ಲ ಎಂದು ಸಾರಿ ಹೇಳುತ್ತವೆ. ಆದರೆ ಪುರುಷ ಕೇಂದ್ರಿತ ಸಂಸ್ಕೃತಿಯು ಹುಟ್ಟುಹಾಕಿರುವ ಹಾಗೂ ಬೆಳೆಸಿರುವ ರೂಢಿಗತವಾದ ನಂಬಿಕೆಗಳು, ಮೌಲ್ಯಗಳು ಮತ್ತು ಆಚರಣೆಗಳು ಇಂದಿಗೂ ಮಹಿಳೆಯರ ಬದುಕು ಮತ್ತು ವ್ಯಕ್ತಿತ್ವ 'ಹೀಗೆಯೇ' ಇರಬೇಕೆಂದು ರೂಪಿಸುತ್ತಿರುತ್ತವೆ. ಸ್ತ್ರೀವಾದವು ವಾಸ್ತವಾಂಶಗಳ ಬೆಳಕಿನಲ್ಲಿ ಈ ಬಗೆಯ ಸ್ಥಾಪಿತ ಹಿತಾಸಕ್ತಿಗಳನ್ನು ವೈಜ್ಞಾನಿಕ ವಾಸ್ತವಾಂಶಗಳ ಬೆಳಕಿನಲ್ಲಿ ಒರೆಹಚ್ಚಿ ಅವುಗಳಲ್ಲಿನ ಮಿಥ್ಯಾಂಶಗಳನ್ನು ಪ್ರಶ್ನಿಸುತ್ತದೆ. ಎರಡನೆಯದಾಗಿ, ಜೀವಶಾಸ್ತ್ರೀಯ ಲೈಂಗಿಕ ವ್ಯತ್ಯಾಸಗಳಿಗೆ ಸಾಮಾಜಿಕವಾಗಿ ಎಂತಹ ಅರ್ಥವನ್ನು ಕೊಡಲಾಗುತ್ತದೆ ಎಂಬುದರ ಮೇಲೆ ಪಿತೃಪ್ರಧಾನತೆಯ

Digitised by Bharatavani, CIIL

ಅಧಿಕಾರವಿರುತ್ತದೆ. ಈ ವ್ಯವಸ್ಥೆಯಲ್ಲಿ ಮಹಿಳೆಯರ ಸ್ವಭಾವವನ್ನೂ ಅವರ ಸಾಮಾಜಿಕ ಪಾತ್ರಗಳನ್ನೂ ನಿರ್ಧರಿಸುವ ಸಂಗತಿಗಳು ಪುರುಷರನ್ನೇ ಮಾನದಂಡವಾಗಿಟ್ಟುಕೊಂಡಿರುತ್ತವೆ. ಭಾಷೆಯಲ್ಲಿ ಬರುವ ಶಬ್ದಗಳ ಬಳಕೆ ಇದಕ್ಕೆ ಉತ್ತಮ ಉದಾಹರಣೆ. ಒಂದು ಭಾಷೆಯಲ್ಲಿ ಶಬ್ದಗಳು ರೂಪುಗೊಂಡಿರುವ ರೀತಿಗೂ ಆ ಭಾಷೆಯನ್ನು ಸೃಷ್ಟಿಸಿದ ಜನಾಂಗದ ಸಾಂಸ್ಕೃತಿಕ ಚಿಂತನೆಯ ಸ್ವರೂಪಕ್ಕೂ ನಿಕಟವಾದ ಸಂಬಂಧವಿರುತ್ತದೆ. ಸ್ತ್ರೀವಾದವು ಮಹಿಳೆಯ ಗೈರುಹಾಜರಿಯನ್ನು ತಪ್ಪಿಸಿ ಆಕೆಯ ಸ್ವತಂತ್ರ ಅಸ್ತಿತ್ವ, ಅನನ್ಯತೆಗಳನ್ನು ಸ್ಥಾಪಿಸಬಲ್ಲಂಥ ಭಾಷಾ ರಚನೆಗಾಗಿ ಶ್ರಮಿಸುತ್ತದೆ. ಮೂರನೆಯದಾಗಿ, ಉದ್ಯೋಗ ಮಾರುಕಟ್ಟೆ ವ್ಯವಸ್ಥೆಯು ಪುರುಷ ಪ್ರಧಾನ ವ್ಯವಸ್ಥೆಯೇ ಆಗಿದೆ. ಇಂತಹ ವ್ಯವಸ್ಥೆಯೊಳಗೆ ಕಾಲಿಡುವ ಮಹಿಳೆಯರು ಒಂದೆಡೆ ತಮ್ಮ ಸ್ತ್ರೀತ್ವದ ಫಲವಾದ ಕೌಟುಂಬಿಕ ಜವಾಬ್ದಾರಿಗಳಿಗೂ ಮತ್ತೊಂದೆಡೆ ತಮ್ಮ ದುಡಿಮೆಯ ಜಗತ್ತಿನ 'ವಸ್ತುನಿಷ್ಠ'ವೆನಿಸಿಕೊಂಡ ನಿಷ್ಠುರವಾದ ನಿರೀಕ್ಷೆಗಳಿಗೂ ಬದ್ಧರಾಗಬೇಕಾಗುತ್ತದೆ. ಇಲ್ಲಿ ಮಹಿಳೆಯ ದಕ್ಷತೆಯ ಮಾಪನದಲ್ಲಿ ಸ್ತ್ರೀವಿಶಿಷ್ಟ ಸಂದರ್ಭಗಳ ಅರಿವು ಅವಶ್ಯಕ. ಹಾಗೆಯೇ ಪ್ರಗತಿ, ಸಾಧನೆ ಮುಂತಾದ ಆಧುನಿಕ ಪರಿಕಲ್ಪನೆಗಳು ಮಾನವೀಕರಣಕ್ಕೆ ಒಳಗಾಗಬೇಕಾಗುತ್ತವೆ. ಇದು ಸ್ತ್ರೀವಾದದ ಮತ್ತೊಂದು ನಿಲುವು. ನಾಲ್ಕನೆಯದಾಗಿ, ಪುರುಷ ನಿಯಂತ್ರಿತ 'ಹೊರಜಗತ್ತು' ಹಾಗೂ ಮಹಿಳೆಯರ 'ಒಳಜಗತ್ತು'ಗಳ ನಡುವೆ ಅಗಾಧವಾದ ಕಂದಕವಿದೆ. ಇದರ ಫಲವಾಗಿ ಸ್ತ್ರೀ ಪುರುಷರಿಬ್ಬರ ವ್ಯಕ್ತಿತ್ವದ ಬೆಳವಣಿಗೆಗಳು ಸಮಗ್ರವಾಗಿ ಆಗುವುದಿಲ್ಲ. ಹಾಗಾಗಿ ಸಮಾಜದ ಸಮಗ್ರವಿಕಾಸ ಮತ್ತು ಪ್ರಗತಿಗಳು ಕುಂಠಿತವಾಗುತ್ತವೆ ಎಂಬುದನ್ನು ಸ್ತ್ರೀವಾದವು ತೋರಿಸಿಕೊಡುತ್ತದೆ. ಐದನೆಯದಾಗಿ, ಮಹಿಳೆಯರು ಪುರುಷರಿಗಿಂತ ಭಿನ್ನವಾದ ಪಾತ್ರಗಳನ್ನು ನಿರ್ವಹಿಸಲು ಸೃಷ್ಟಿಯಾಗಿದ್ದಾರೆ ಎಂಬ ಗ್ರಹಿಕೆಯನ್ನು ಕುರಿತದ್ದು. ಈ ಗ್ರಹಿಕೆಯಿಂದಾಗಿ ಮಹಿಳೆಯರು ಕೆಲವು ನಿರ್ದಿಷ್ಟ ಗುಣಗಳನ್ನು ಹೊಂದಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಉದಾಹರಣೆಗೆ, ತಾಳ್ಮೆ, ಮಾರ್ದವತೆ, ತ್ಯಾಗ ಇತ್ಯಾದಿ. ಹೀಗೆಯೇ ಪುರುಷನಿಂದಲೂ ಕೆಲವು ನಿರ್ದಿಷ್ಟ ಗುಣಗಳನ್ನು ನಿರೀಕ್ಷಿಸಲಾಗುತ್ತದೆ. ಉದಾಹರಣೆಗೆ, ಗಡಸುತನ, ಪೌರುಷ, ಆಕ್ರಮಣಶೀಲತೆ ಇತ್ಯಾದಿ. ಈ ರೀತಿಯಲ್ಲಿ ಸಂಸ್ಕೃತಿಯ ವಿಭಿನ್ನ ಗುಣಗಳ ಪಟ್ಟಿಗಳಲ್ಲಿ ಸ್ತ್ರೀಪುರುಷರ ಸ್ವಭಾವಗಳನ್ನು ವರ್ಗೀಕರಿಸುವುದು ವಾಸ್ತವಸ್ಥಿತಿಗೆ ಅಥವಾ ನಿಜಸ್ಥಿತಿಗೆ ವಿರುದ್ಧವಾಗಿದೆ. ಹೀಗೆ ಮೇಲಿನಿಂದ ಹೇರಲ್ಪಟ್ಟ ಮೌಲ್ಯ ಪರಿಕಲ್ಪನೆಗಳನ್ನು ಮನುಷ್ಯರು ರೂಢಿಸಿಕೊಳ್ಳುತ್ತಾರೆ. ಇದರಿಂದಾಗಿ ಈ ನಿರೀಕ್ಷೆಗಳನ್ನು ತುಂಬಲಾಗದ ಅಥವಾ ಭರಿಸಲಾಗದ ಸ್ಥಿತಿ ಸ್ತ್ರೀಪುರುಷರಿಬ್ಬರಲ್ಲೂ ಮಾನಸಿಕ ಕ್ಷೋಭೆಗಳನ್ನು ಸಾಮಾಜಿಕ ಅಪಮಾನಗಳನ್ನು ಉಂಟುಮಾಡುತ್ತದೆ. ಆರನೆಯದಾಗಿ, ವ್ಯಕ್ತಿಗಳು ಶೋಷಣಾ ಸಂಬಂಧಗಳಲ್ಲಿ ಪಾಲುದಾರರಾಗಿರುವುದರಿಂದ ಅವೇ ಸಾಮಾಜಿಕ ಸಂಬಂಧಗಳಾಗಿ ಮುಂದುವರಿಯುತ್ತವೆ. ಈ ಶೋಷಣೆಗಳ ಸ್ವರೂಪವೇನು? ಒಬ್ಬರು ಮತ್ತೊಬ್ಬರನ್ನು ಹೀಗೇಕೆ ಶೋಷಿಸುತ್ತಾರೆ? ಇದರಲ್ಲಿ ವ್ಯಕ್ತಿತ್ವದ ಪಾತ್ರವೇನು? ಪ್ರಜ್ಞಾಪೂರ್ವಕವಾಗಿಯಾಗಲೀ ಅಪ್ರಜ್ಞಾಪೂರ್ವಕವಾಗಿಯಾಗಲೀ ಈ ಶೋಷಣಾತ್ಮಕ ವಿಚಾರಗಳು ಮತ್ತು ಭಾವನೆಗಳು ಈ ರೀತಿಯೇ ಕೆಲಸಮಾಡುವುದು ಹೇಗೆ? ವ್ಯಕ್ತಿ ಮತ್ತು ಸಮಾಜದ ನಡುವಿನ ಯಾವ ಸಂಬಂಧಗಳು ಹೇಗೆ ಈ ಶೋಷಣೆಯನ್ನು ಹುಟ್ಟುಹಾಕಿ, ಬೆಳೆಸಿ ಉಳಿಸಿಬಿಡುತ್ತವೆ? ಎಂಬ ಪ್ರಶ್ನೆಗಳಿಗೆ ಸ್ತ್ರೀವಾದ ಸೈದ್ಧಾಂತಿಕವಾಗಿ ಉತ್ತರಿಸಲು ಪ್ರಯತ್ನಿಸುತ್ತದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಸ್ತ್ರೀವಾದವನ್ನು ಗಮನಿಸಬೇಕಾಗುತ್ತದೆ. ಭಾರತೀಯ ಸ್ತ್ರೀವಾದವು ಪಾಶ್ಚಿಮಾತ್ಯ ಸ್ತ್ರೀವಾದಕ್ಕಿಂತ ಭಿನ್ನವಾದುದು. ರಾಷ್ಟ್ರೀಯತೆ ಹಾಗೂ ಭಾರತೀಯ ಸ್ತ್ರೀವಾದದ ನಡುವೆ ನಿಕಟ ಸಂಬಂಧವಿದೆ. ಬ್ರಿಟಿಷ್ ವಸಾಹತುಶಾಹಿ ಆಡಳಿತವು ಭಾರತೀಯರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹಾಗೂ ಒತ್ತಡವನ್ನು ಉಂಟುಮಾಡಿತು. ಈ ಸಂದರ್ಭದಲ್ಲಿ ಭಾರತೀಯರು ಎನ್ನುವ ಅನನ್ಯತೆಯ ವ್ಯಾಖ್ಯಾನ ಮಾಡುವಲ್ಲಿ ಭಾರತೀಯ ಸಂಸ್ಕೃತಿ ಮತ್ತು ಮಹಿಳೆ ಎಂಬ ಅನನ್ಯತೆ ಹಾಗೂ ಅದರ ವ್ಯಾಖ್ಯಾನದ ಅಗತ್ಯವೂ ಮೂಡಿಬಂದಿತು. ಭಾರತದಲ್ಲಿ ಬಹುರೂಪಿ ಸಂಸ್ಕೃತಿ ಇದ್ದು ಭಾರತೀಯ ಮಹಿಳೆಯರು ವಿಭಿನ್ನ ಸ್ತರಗಳಲ್ಲಿ ಹಾಗೂ ವಿಭಿನ್ನ ರೀತಿಗಳಲ್ಲಿ ಅನನ್ಯತೆಯನ್ನು ಹೊಂದಿದ್ದಾರೆ. ಭಾರತದಲ್ಲಿ ಯಾವೊಬ್ಬ ಮಹಿಳೆಯನ್ನೂ ಪ್ರತಿನಿಧಿಯೆಂಬ ನೆಲೆಯಲ್ಲಿ ಭಾರತೀಯ ಮಹಿಳೆ ಎಂದು ಗುರುತಿಸಲು ಸಾಧ್ಯವಿಲ್ಲ. ಹಾಗಾಗಿ ನಾವು ಏನನ್ನು ಅಥವಾ ಯಾರನ್ನು ಭಾರತೀಯ ಮಹಿಳೆ ಎಂದು ಗುರುತಿಸುತ್ತೇವೆಯೋ ಆಕೆ ವಸಾಹತುಕಾಲದಲ್ಲಿ ಭಾರತೀಯ ಸಂಸ್ಕೃತಿಯ, ಅದರಲ್ಲೂ ಮುಖ್ಯವಾಗಿ ಸಾಮಾಜಿಕ ಸುಧಾರಣಾ ಚಳುವಳಿಯ ಭಾಗವಾಗಿ ಮೂಡಿಬಂದಿದ್ದು, ಆಕೆಯನ್ನು ಸ್ತ್ರೀವಾದಿ ನೆಲೆಗಿಂತ ರಾಜಕೀಯ ವ್ಯಾಖ್ಯಾನದ ಅಡಿಯಲ್ಲಿ ಗುರುತಿಸಬೇಕಾಗುತ್ತದೆ. ಭಾರತೀಯ ಚರಿತ್ರೆ ಹಾಗೂ ಮೌಲ್ಯಗಳು ಭಾರತೀಯ ಮಹಿಳಾಸಮಸ್ಯೆಗಳನ್ನು ಪಶ್ಚಿಮದ ಸ್ತ್ರೀವಾದಿಗಳು ಗುರುತಿಸುವ ಸಮಸ್ಯೆಗಳಿಗಿಂತ ಭಿನ್ನವಾಗಿ ಗುರುತಿಸುವಂತೆ ಮಾಡುತ್ತವೆ. ಪುರುಷಪ್ರಧಾನವಾದ ಭಾರತೀಯ ಸಂಸ್ಕೃತಿಯ ಧಾರ್ಮಿಕವಲಯದಲ್ಲಿ ಮಹಿಳೆಯನ್ನು 'ಶಕ್ತಿರೂಪಿ' ಎಂದು ವರ್ಣಿಸಲಾಗಿದೆ. ಮಹಿಳೆಯರಿಗೆ ಸಾಂಪ್ರದಾಯಿಕವಾದ 'ಸಾಂಸ್ಕೃತಿಕ ತಾಣ'ವನ್ನು ಒದಗಿಸುವುದರ ಮೂಲಕ ಸಮಾಜದ ಎಲ್ಲ ವರ್ಗಗಳೂ ಇದನ್ನು ನಿರೂಪಿಸುತ್ತವೆ. ಮಾನವನ ಇರವನ್ನು ನಿರೂಪಿಸುವುದರಲ್ಲೇ ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳಿಗೆ ಬಹು ಮುಖ್ಯ ವ್ಯತ್ಯಾಸವಿದೆ. ಪಾಶ್ಚಾತ್ಯ ಭೂಮಿಕೆಯಲ್ಲಿ ಒಬ್ಬ ವ್ಯಕ್ತಿ "ತಾನು" ಎನ್ನುವುದನ್ನು ಸ್ಪರ್ಧಾತ್ಮಕ ವೈಯಕ್ತಿಕತೆ (Competitive individualism) ಎಂದು ತಿಳಿಯುತ್ತಾನೆ. ಈ ಪರಿಕಲ್ಪನೆಯಲ್ಲಿ ಮಾನವನು ಹುಟ್ಟುತ್ತಲೇ ಸ್ವತಂತ್ರನಾಗಿದ್ದು ಎಲ್ಲ ಕಡೆಯಿಂದಲೂ ಬಂಧನಕ್ಕೊಳಗಾಗುವನು ಎಂದು ವಿವರಿಸಲಾಗುತ್ತದೆ. ಮಾನವನ ಬಗೆಗಿನ ಭಾರತೀಯರ ಅರಿವು ಇದಕ್ಕಿಂತ ಭಿನ್ನವಾಗಿದೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ದೊಡ್ಡ ಸಮುದಾಯದ ಒಂದು ಭಾಗವೆಂದು ನೋಡಲಾಗುತ್ತದೆ. ವ್ಯಕ್ತಿಗಿಂತ ಸಮುದಾಯ ಇಲ್ಲಿ ಮುಖ್ಯವಾಗುತ್ತದೆ. ಸ್ವ – ನಿರಾಕರಣೆ (Self denial) ಮತ್ತು ಸಹಕಾರದ ಮೂಲಕ ಸಮಾಜದ ಒಳಿತನ್ನು ಸಾಧಿಸುವಲ್ಲಿ ವ್ಯಕ್ತಿಯ ಒಳಿತು ಮತ್ತು ಉಳಿವು ಅಡಗಿರುತ್ತದೆ.

ಭಾರತೀಯ ಅನುಭವ ಬಹುರೂಪಿಯಾದದ್ದು. ಪುರುಷ ಪ್ರಧಾನತೆ ಹಾಗೂ ಸ್ತ್ರೀವಾದದಲ್ಲಿಯೂ ವೈವಿಧ್ಯತೆಯ ಅಂಶ ಕಾಣುತ್ತದೆ. ಚಾರಿತ್ರಿಕ ಹಾಗೂ ಸಾಂಸ್ಕೃತಿಕ ವಾಸ್ತವಗಳಿಗೆ, ಅರಿವಿನ ಸ್ತರಗಳಿಗೆ ಹೊಂದಿಕೊಂಡು ಮಹಿಳೆಯ ಕಾರ್ಯ ಹಾಗೂ ಅನುಭವಗಳು ಕಾಲಾನುಕಾಲಕ್ಕೆ ಬದಲಾವಣೆಯನ್ನು ಕಂಡಿವೆ. ಕುಟುಂಬದಲ್ಲಿ, ಉದ್ಯೋಗ ಸ್ಥಳದಲ್ಲಿ, ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುವ ದಬ್ಬಾಳಿಕೆ ಮತ್ತು ಶೋಷಣೆಯ ಅರಿವು ಹಾಗೂ ಮಹಿಳೆ ಮತ್ತು ಪುರುಷರು ಒಟ್ಟಾಗಿ ಸೇರಿ ಪ್ರಜ್ಞಾಪೂರ್ವಕವಾಗಿ ಈ ಸನ್ನಿವೇಶವನ್ನು ಬದಲಾಯಿಸಲು ಮಾಡುವ ಪ್ರಯತ್ನವೇ ಭಾರತೀಯ ಸ್ತ್ರೀವಾದ ಎಂಬುದು ಭಾರತೀಯ ಸಂದರ್ಭದಲ್ಲಿ ಸ್ತ್ರೀವಾದದ ಪ್ರಚಲಿತ ವ್ಯಾಖ್ಯಾನ.

ಲಿಂಗತ್ವದ ಆಧಾರದಲ್ಲಿ ಭೇದ–ಹೆಣ್ಣು ಗಂಡು ಎಂಬ ವಿಂಗಡಣೆ – ಹಾಗೂ ಗಂಡು ಹೆಣ್ಣನ್ನು ದಮನಮಾಡುವುದನ್ನು ಭಾರತೀಯ

Digitised by Bharatavani, CIIL

ಸನ್ನಿವೇಶದಲ್ಲಿ ಮೊದಲು ವಿರೋಧಿಸಿದುದು ಗಂಡಸರು. ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಳನದ ಭಾಗವಾಗಿ ಸಾಮಾಜಿಕ ಸುಧಾರಣಾ ಚಳುವಳಿಗಳು ನಡೆದವು. ಈ ಚಳುವಳಿಯು ಭಾರತೀಯ ಸಮಾಜದ ಹಲವು ಪಿಡುಗುಗಳನ್ನು ಗುರುತಿಸಿತು. ಇವುಗಳ ನಿರ್ಮೂಲನೆಗಾಗಿ ಶ್ರಮಿಸಿತು. ಹೆಣ್ಣಿನ ಶೋಷಣೆಯು ಒಂದು ಪಿಡುಗಾಗಿ ಗುರುತಿಸಲ್ಪಟ್ಟಿತು. ಭಾರತೀಯ ಶ್ರೇಣೀಕೃತ ವ್ಯವಸ್ಥೆಗಳಲ್ಲಿ ಪುರುಷ ಪ್ರಧಾನತೆಯೆನ್ನುವುದು ಒಂದು ಶ್ರೇಣೀಕೃತ ವ್ಯವಸ್ಥೆಯಷ್ಟೇ. ಮಹಿಳಾ ಲೋಕದೊಳಗಿರುವ ಇತರೇ ಶ್ರೇಣೀಕೃತ ವ್ಯವಸ್ಥೆಗಳು ಇದಕ್ಕಿಂತಲೂ ಪ್ರತಿಕೂಲವಾಗಿದೆ. ಎಲ್ಲ ಮಹಿಳೆಯರು ಎಲ್ಲ ಕಾಲಘಟ್ಟದಲ್ಲಿಯೂ ಅಧಿಕಾರವಂಚಿತರೂ ಅಥವಾ ಶಕ್ತಿ ಹೀನರೂ ಆಗಿರಲಿಲ್ಲ ಎಂಬುದು ಗಮನಿಸಬೇಕಾದ ಅಂಶ.

ಮೇಲೆ ನೀಡಿದ ವಿವರಣೆಯ ಹಿನ್ನೆಲೆಯಲ್ಲಿ ಸ್ತ್ರೀವಾದಿ ಚರಿತ್ರೆಯನ್ನು ಸ್ಥೂಲವಾಗಿ ಗಮನಿಸಬಹುದು. 1915ರವರೆಗಿನ ಅವಧಿಯನ್ನು ಸ್ತ್ರೀವಾದದ ಮೊದಲ ಹಂತ ಎಂದು ಗುರುತಿಸಬಹುದು. ಬ್ರಿಟಿಷ್ ವಸಾಹತುಶಾಹಿ ಆಡಳಿತವು ಭಾರತಕ್ಕೆ ಆಧುನಿಕತೆಯ ಕಲ್ಪನೆಯನ್ನು ನೀಡಿತು. ಇದರೊಂದಿಗೆ ಪ್ರಜಾಪ್ರಭುತ್ವ, ಸಮಾನತೆ ಹಾಗೂ ವೈಯಕ್ತಿಕ ಹಕ್ಕು ಎಂಬ ಕಲ್ಪನೆಗಳನ್ನೂ ಕೊಟ್ಟಿತು. ಈ ಕಲ್ಪನೆಯ ಪರಿಚಯವು ರಾಷ್ಟ್ರೀಯವಾದದ ಹಿನ್ನೆಲೆಯಲ್ಲಿ ಸಮಾಜ ಸುಧಾರಣೆಗೆ ನಿರ್ದಿಷ್ಟವಾದ ದಾರಿಯನ್ನು ತೋರಿಸಿತು. ಸತಿ ಪದ್ಧತಿಯ ನಿರ್ಮೂಲನ, ವಿಧವಾ ವಿವಾಹ, ಬಾಲ್ಯವಿವಾಹ ಪದ್ಧತಿಯ ನಿರ್ಮೂಲನೆ, ಕಾನೂನು ರೀತ್ಯಾ ಆಸ್ತಿಹಕ್ಕಿಗೆ ವಯೋಮಿತಿ ಇವೇ ಮುಂತಾದ ಮಹಿಳಾಸಂಬಂಧಿ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಪುರುಷ ಸುಧಾರಣಾವಾದಿಗಳು ಹೋರಾಟ ನಡೆಸಿದರು. ಆದರೆ ಈ ಹೋರಾಟದಲ್ಲಿ ಒಂದು ಸೂಕ್ಷ್ಮ ಅಡಗಿತ್ತು. ಇಲ್ಲಿ ಮಹಿಳೆಯರನ್ನು ಸಮಸ್ಯೆಯ ಪ್ರತಿನಿಧಿಯಾಗಿ ನೋಡದೆ ಅವರನ್ನು ಕೆಳಜಾತಿಯವರೊಡನೆ ವರ್ಗೀಕರಿಸಿ ಸಮಾಜಸುಧಾರಣೆಯ ವಸ್ತು ಎಂಬುವಂತೆ ನೋಡಲಾಯಿತು. ಮಹಿಳೆಯರಿಗೆ ಹೊಸ ತಾಣವನ್ನು ನೀಡುವುದಕ್ಕೆ ಸೀಮಿತವಾಗಿದ್ದ ಈ ಹಂತದಲ್ಲಿ ಮಹಿಳೆಯರು ತಮ್ಮ ಹಳೆಯ ಪಾತ್ರಕ್ಕೆ ಹೊಸ ರೂಪ ಹಾಗೂ ಪರಿಧಿಯನ್ನು ಹೊಂದುವುದರೆಡೆಗೆ ಗಮನ ನೀಡಲಾಯಿತು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಈ ಹೋರಾಟದಲ್ಲಿ ಎಲ್ಲ ವರ್ಗದವರೂ ಸೇರಿರಲಿಲ್ಲ. ಹೋರಾಟದಲ್ಲಿ ಪಾಲ್ಗೊಂಡಿದ್ದ ಪುರುಷ ಕಾರ್ಯಕರ್ತರ ಹತ್ತಿರದ ಸಂಬಂಧಿ ಮಹಿಳೆಯರು, ಶಿಕ್ಷಿತ ನಾಗರಿಕರು, ಪಾಶ್ಚಾತ್ಯ ಶಿಕ್ಷಣ ಪಡೆದವರು ಹಾಗೂ ಮೇಲ್ವರ್ಗದ ಹಿಂದೂಗಳೂ ಸೇರಿದ್ದರು. 1915 ರಿಂದ 1947ರವರೆಗಿನ ಅವಧಿಯನ್ನು ಎರಡನೆಯ ಹಂತವೆನ್ನಬಹುದು. ಈ ಅವಧಿಯಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧದ ಹೋರಾಟವು ತೀವ್ರಗೊಂಡಿತು. ಮಹಿಳೆಯರು ಈ ಹಂತದಲ್ಲಿ ಸಾರ್ವಜನಿಕ ಜೀವನದಲ್ಲಿ ಹೆಚ್ಚಾಗಿ ಭಾಗಿಗಳಾಗಿರಲಿಲ್ಲ. ಆದಾಗ್ಯೂ, ಭಾರತೀಯ ಮಹಿಳೆಯರನ್ನು ವಿಕ್ಟೋರಿಯನ್ ಮಹಿಳೆಯರ ಮಾದರಿಯಲ್ಲಿ ರೂಪುಗೊಳಿಸುವ ಪ್ರಕ್ರಿಯೆ ಪ್ರಾರಂಭವಾಯಿತು. ಗಾಂಧೀಜಿಯವರು ಮಹಿಳೆಯ ಸಾರ್ವಜನಿಕ ಜೀವನ ಪ್ರವೇಶಕ್ಕೆ ಪ್ರೋತ್ಸಾಹ ನೀಡಿ ಪುರಸ್ಕರಿಸಿದರು. ಗಾಂಧೀಜಿಯವರ ಈ ನಡೆಯಿಂದಾಗಿ ಬ್ರಿಟಿಷರ ವಿರುದ್ಧದ ಅಸಹಕಾರಿ ಚಳುವಳಿಯಲ್ಲಿ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದರು. ಮಹಿಳೆಯರ ಈ ಭಾಗವಹಿಸುವಿಕೆ ಸಾರ್ವಜನಿಕವಲಯದಲ್ಲಿ ಅವರಿಗೆ ಒಂದು ತಾಣವನ್ನು ಒದಗಿಸಿತು. 'ಅಲ್ ಇಂಡಿಯಾ ವಿಮೆನ್ಸ್ ಕಾನ್ಫರೆನ್ಸ್' ಹಾಗೂ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್' ಎಂಬ ಮಹಿಳೆಯರನ್ನು ಮಾತ್ರ ಒಳಗೊಂಡ ಸಂಘಟನೆಗಳು ಪ್ರಾರಂಭಗೊಂಡವು. ಮಹಿಳೆಯರು ತಮಗೆ ಲಭ್ಯವಾಗಬೇಕಾದ ರಾಜಕೀಯ ಸಹಭಾಗಿತನ, ಮತದಾನದ ಹಕ್ಕು, ಸಮುದಾಯ ಪ್ರಶಸ್ತಿ ಹಾಗೂ ರಾಜಕೀಯ ನಾಯಕತ್ವಕ್ಕೆ ಈ ಮೂಲಕ ಹಕ್ಕೊತ್ತಾಯ ನಡೆಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದುದರಿಂದ ಮಹಿಳೆಯರಲ್ಲಿ ವಿಮರ್ಶಾತ್ಮಕ ಪ್ರಜ್ಞೆ ಬೆಳೆಯಿತು. ತನ್ಮೂಲಕ ಸ್ವತಂತ್ರಭಾರತದಲ್ಲಿ ತಮ್ಮ ಪಾತ್ರ, ಹಕ್ಕುಗಳ ಅರಿವಾಯಿತು. ಇದರ ಫಲವಾಗಿ ಭಾರತದಲ್ಲಿ ಮಹಿಳೆಯರು ಮತದಾನದ ಹಕ್ಕು ಮತ್ತು ಸಾರ್ವಜನಿಕ ಹಕ್ಕನ್ನು ಭಾರತ ಸಂವಿಧಾನದಲ್ಲಿ ಪಡೆದುಕೊಳ್ಳುವಂತಾಯಿತು. ಸರಕಾರವು ಮಹಿಳೆಯರ ಸಮಸ್ಯೆಗಳನ್ನು ಅನುಭೂತಿಯಿಂದ ಪರಿಶೀಲಿಸಿತು. ಪ್ರಾಥಮಿಕ ಹಕ್ಕುಗಳಿಗಾಗಿ ಭಾರತೀಯ ಮಹಿಳೆಯರು ಪಾಶ್ಚಾತ್ಯ ಮಹಿಳೆಯರಂತೆ ಹೋರಾಟ ನಡೆಸಬೇಕಾಗಿ ಬರಲಿಲ್ಲ. ಆದರೆ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಚಾರಿಕತೆ ಹಾಗೂ ಸೂಚನೆಗಳು ಮಹಿಳೆಯರು ಅತ್ಯುತ್ಸಾಹದಿಂದ ಹೊಸದಾಗಿ ಅನುಭವಿಸಹೊರಟಿರುವ ಮೂಲಭೂತ ಹಕ್ಕುಗಳು ಹಾಗೂ ಪ್ರಜಾಪ್ರಭುತ್ವದಲ್ಲಿನ ಭಾಗಿತ್ವವನ್ನು ಗೌರವಿಸಲಿಲ್ಲ.

ಸ್ತ್ರೀವಾದ ಮತ್ತು ಸಮಾನತೆಯ ವಿಚಾರವು ಇಲ್ಲಿ ಗಮನಾರ್ಹ. ಭಾರತದಲ್ಲಿ 'ಸಮಾನತೆ'ಯ ಪರಿಕಲ್ಪನೆ ಪರಿಚಯವಾಗಿದ್ದು 19ನೆಯ ಶತಮಾನದಲ್ಲಿ. ಭಾರತೀಯರು ಪಾಶ್ಚಿಮಾತ್ಯ ಶಿಕ್ಷಣವನ್ನು ಪಡೆಯಲು ಪ್ರಾರಂಭಿಸಿದಾಗ, ಭಾರತವು ಸ್ವಾತಂತ್ರ್ಯ ಪಡೆದ ನಂತರ ಸಂವಿಧಾನಾತ್ಮಕವಾಗಿ ಸಮಾನತೆಗೆ ಒತ್ತು ನೀಡಿತು. ಸರಕಾರವು ಸಮಾನತೆ, ಲಿಂಗತ್ವ ಹಾಗೂ ಧಾರ್ಮಿಕ ನೆಲೆಯ ಭೇದಭಾವಗಳನ್ನು ಹೋಗಲಾಡಿಸುವ ಕಾನೂನು ಮೂಲಕದ ಸಹಾಯವನ್ನು ಜಾರಿಗೆ ತಂದಿತು. ಏಳು ಪಂಚವಾರ್ಷಿಕ ಯೋಜನೆಗಳು ಮಹಿಳೆಯರಿಗೆ ಆರೋಗ್ಯ, ಶಿಕ್ಷಣ, ಉದ್ಯೋಗ ಹಾಗೂ ಅಭಿವೃದ್ಧಿಗೆ ಒತ್ತುಕೊಟ್ಟರೆ ಎಂಟನೆಯ ಪಂಚವಾರ್ಷಿಕ ಯೋಜನೆಯು ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪಾಲುದಾರರು ಎಂದು ಘೋಷಿಸಿತು. ಇಲ್ಲಿ ಮತ್ತೆ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಭಾರತೀಯ ಸ್ತ್ರೀವಾದಕ್ಕೂ ಪಾಶ್ಚಾತ್ಯ ಸ್ತ್ರೀವಾದಕ್ಕೂ ಇರುವ ವ್ಯತ್ಯಾಸ, ಭಾರತೀಯ ವಾತಾವರಣದಲ್ಲಿ ಮಾನವಹಕ್ಕುಗಳ ನೆಲೆಯಲ್ಲಿ ಭಾರತೀಯ ಮಹಿಳೆ ಹಾಗೂ ಸ್ತ್ರೀವಾದವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಭಿನ್ನತೆ ಮುಖ್ಯವಾಗಿ ಕಾಣುವುದು ಇಲ್ಲಿಯೇ. ಉದಾಹರಣೆಗೆ ಹಸಿವು, ಬಡತನ, ಅನಾರೋಗ್ಯ, ಶಿಶುಮರಣ, ಭೂಮಾಲೀಕರು ಮಹಿಳಾಕಾರ್ಮಿಕರ ದೈಹಿಕ ಶ್ರಮವನ್ನು ಉಪಯೋಗಿಸುವುದು, ಸಂಪ್ರದಾಯಗಳ ಅಮಾನವೀಯತೆ ಮತ್ತು ಹೊರೆ, ಕಟ್ಟುಕಟ್ಟಳೆಗಳ ಕೊನೆಯಿಲ್ಲದ ಬೇಡಿಕೆ ಅಥವಾ ಕಾರಣವಿಲ್ಲದೆ ಹೊಡೆತ ಇವೆಲ್ಲವುಗಳ ಬಗ್ಗೆ ಭಾರತೀಯರ ಹಾಗೂ ಪಾಶ್ಚಿಮಾತ್ಯರ ಗ್ರಹಿಕೆ ಭಿನ್ನವಾಗಿದೆ. ಕಾನೂನು ಕಟ್ಟಳೆಗಳ ನೆಲೆಯಲ್ಲಿ ಭಾರತೀಯ ಮಹಿಳೆಯರ ಸ್ಥಿತಿಗತಿ ಉತ್ತಮವಾಗಿದೆ ಎಂದು ಕಂಡುಬಂದರೂ ವಾಸ್ತವದಲ್ಲಿ ಹಾಗಿಲ್ಲ. ಮಹಿಳೆಯರಿಗೆ ನೀಡಿರುವ ಸವಲತ್ತುಗಳು ಪೂರ್ಣಪ್ರಮಾಣದಲ್ಲಿ ಅವರನ್ನು ತಲುಪಿಲ್ಲ. ನೂರಾರು ವರ್ಷಗಳಿಂದ ಪಾಲಿಸುತ್ತ ಬಂದಿರುವ ಕೆಲವು ಕಟ್ಟಳೆಗಳು, ಆಚರಿಸುತ್ತಿರುವ ಸಂಪ್ರದಾಯಗಳು ಭಾರತೀಯರ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡುಬಿಟ್ಟಿವೆ. ಧಾರ್ಮಿಕ ಕಾನೂನುಗಳು ಮತ್ತು ನಿರೀಕ್ಷೆಗಳು ಅಥವಾ ವೈಯಕ್ತಿಕ ಕಾನೂನುಗಳು (ಪ್ರತಿ ಧರ್ಮದಿಂದ ಮೂಡಿಬಂದವುಗಳು) ಭಾರತೀಯ ಸಂವಿಧಾನಾತ್ಮಕ ಕಾನೂನುಗಳಿಗೆ ಪೂರಕವಾಗಿಲ್ಲದ ಕಾರಣ ಮಹಿಳೆಯರಿಗೆ ಕಾನೂನುಬದ್ಧವಾಗಿ ದೊರಕಬೇಕಾದ ಹಕ್ಕುಗಳು ಹಾಗೂ ಅಧಿಕಾರ ಲಭ್ಯವಾಗುತ್ತಿಲ್ಲ. ಹೀಗಾದಾಗ್ಯೂ ಭಾರತ ಸರಕಾರ ಧಾರ್ಮಿಕ ಅಥವಾ ವೈಯಕ್ತಿಕ ಕಾನೂನುಗಳಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ.

Digitised by Bharatavani, CIIL

ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ಸರಕಾರ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೂ ಇನ್ನೂ ಗಣನೀಯ ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಉನ್ನತ ವಿದ್ಯಾಭ್ಯಾಸವನ್ನು ಹೊಂದಿಲ್ಲವೆಂದೇ ಹೇಳಬೇಕು. ಇದಕ್ಕೆ ಹಲವಾರು ಕಾರಣಗಳಿವೆ. ಭಾರತೀಯ ಸನ್ನಿವೇಶದಲ್ಲಿ ಹೆಣ್ಣುಮಕ್ಕಳು ಮನೆಯಲ್ಲಿ ತಾಯಂದಿರಿಗೆ ಗೃಹಕೃತ್ಯದಲ್ಲಿ ಸಹಾಯಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ. ಈ ಅನುಭವವೇ ಅವರಿಗೆ ಮುಂದೆ ಪತ್ನಿಯರಾಗಿ, ತಾಯಂದಿರಾಗಿ ಮನೆ ನಡೆಸಲು ಸಹಾಯಕವಾಗುತ್ತದೆ. ಗೃಹಕೃತ್ಯವೆನ್ನುವುದು ಹೆಣ್ಣುಮಕ್ಕಳ ಜೀವನದ ಪ್ರಥಮ ಆದ್ಯತೆ ಎಂದೇ ಹೆಣ್ಣು ಮಕ್ಕಳನ್ನು ಬೆಳೆಸಲಾಗುತ್ತದೆ. ಅಂತೆಯೇ ಅಶಿಕ್ಷಿತ ತಾಯಂದಿರಿಗೆ ಹೆಣ್ಣುಮಕ್ಕಳನ್ನು ಶಿಕ್ಷಿತರಾಗಿ ಮಾಡುವಲ್ಲಿ ತೊಡಕುಗಳಿವೆ. ಏಕೆಂದರೆ ಕೆಲವೊಮ್ಮೆ ಅವರು ಮಕ್ಕಳನ್ನು ಬಾಲ್ಯದಲ್ಲೇ ವಿವಾಹಮಾಡಿಕೊಡಬೇಕಾಗುತ್ತದೆ. ವಿದ್ಯಾಭ್ಯಾಸ ನೀಡುವ ಆಸೆ ಇದ್ದರೂ ಆರ್ಥಿಕವಾಗಿ ಅವರು ಪುರುಷರನ್ನೇ ಹೊಂದಿಕೊಂಡಿರುವುದರಿಂದ ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. 1986ರಲ್ಲಿ 'ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್' ನೀತಿಯಲ್ಲಿ ಇದು ಹೊರಬಂದಿತು. ಈ ನೀತಿಯಲ್ಲಿ ಮಹಿಳೆಯರು ಸಂಘಟಿತಗೊಳ್ಳುವಂತೆ ಮಾಡಲು 'ಮಹಿಳಾ ಸಮಾಖ್ಯ'ಗಳ ಹೆಸರಿನಲ್ಲಿ ಮಹಿಳೆಯರ ಗುಂಪುಗಳನ್ನು ಸ್ಥಾಪನೆ ಮಾಡಬೇಕೆಂದು ಶಿಫಾರಸು ಮಾಡಿತ್ತು. ಈ ಸಲಹೆ ಮೇರೆಗೆ ದೇಶದಾದ್ಯಂತ ಅನೇಕ ಮಹಿಳಾ ಸಮಾಖ್ಯಗಳನ್ನು ಆರಂಭಿಸಲಾಯಿತು. ಈ ಕಾರ್ಯಕ್ರಮವು ಮಹಿಳೆಯರನ್ನು ಸಬಲೀಕರಣಗೊಳಿಸುವುದರೆಡೆಗೆ ಗಮನಹರಿಸಿತು. ಇದರ ಮೂಲ ಉದ್ದೇಶವು ಮಹಿಳೆಯರಿಗೆ ಅವರ ಶಕ್ತಿಯ ಅರಿವು ಮೂಡಿಸುವುದು. ಆ ಮೂಲಕ ಮಹಿಳೆಯರು ಮಾಹಿತಿಗಳನ್ನು ಒತ್ತಾಯಪೂರ್ವಕವಾಗಿ ಪಡೆದುಕೊಳ್ಳುವುದು, ಪಡೆದ ಮಾಹಿತಿಗಳ ಸಹಾಯದಿಂದ ಸಬಲೀಕರಣ ಪ್ರಕ್ರಿಯೆ ನಡೆದು ಮಹಿಳೆಯರು ಸ್ವತಂತ್ರವಾಗಿ ಜೀವನ ನಡೆಸುವಂತಾಗಬೇಕು ಎಂದಿದ್ದಿತು. ಈ ಹಿನ್ನೆಲೆಯಲ್ಲಿ ಭಾರತದ ಕೆಲವು ಪ್ರದೇಶಗಳಲ್ಲಿ ಅಭಿವೃದ್ಧಿಯಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಶಾಲೆಗೆ ಸೇರಿಕೊಂಡಿದ್ದಾರೆ. ಗಂಡುಮಕ್ಕಳಿಗೆ ಸಮಸಮವಾಗಿ ಹೆಣ್ಣುಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದರ ಕಡೆಗೆ ಪ್ರಯತ್ನಗಳು ಗಂಭೀರವಾಗಿ ನಡೆಯುತ್ತಿವೆ.

ಮಹಿಳೆಯರಿಗೆ ಕಾನೂನಿನ ಅಡಿಯಲ್ಲಿ ಸಾಕಷ್ಟು ಸವಲತ್ತುಗಳಿವೆ, ನಿಜ. ಆದರೆ ಸ್ತ್ರೀವಾದಿ ನೆಲೆಯಲ್ಲಿ ನೋಡಿದರೆ ಮಹಿಳೆಯರ ಜೀವನದಲ್ಲಿ ಹೆಚ್ಚು ಬದಲಾವಣೆಗಳು ಆಗಿಲ್ಲವೆಂದೇ ಹೇಳಬೇಕು. ಈ ದಿಸೆಯಲ್ಲಿ ಸ್ತ್ರೀವಾದ ಹಾಗೂ ಶಿಕ್ಷಣದ ನಡುವಿನ ಸಂಬಂಧ ಬೆಳೆಯಬೇಕಾದ ಅಗತ್ಯವಿದೆ. ಸ್ತ್ರೀವಾದ ಹಾಗೂ ಶಿಕ್ಷಣ ಪ್ರಸ್ತುತ ಪರಿಸ್ಥಿತಿಯಲ್ಲಿ ಹೇಗಿದೆ ಎಂಬುದನ್ನು ಗಮನಿಸಬೇಕು. ಒಬ್ಬ ವ್ಯಕ್ತಿಯ ಸಮಗ್ರ ಬೆಳವಣಿಗೆಗೆ ಅವಶ್ಯಕವಾದ ವಿದ್ಯಾಭ್ಯಾಸವನ್ನು ಶಿಕ್ಷಣ ಎನ್ನಬಹುದು. ಶಿಕ್ಷಣ ಕ್ಷೇತ್ರವನ್ನು ಸಮಾಜದ ಇತರ ಕ್ಷೇತ್ರಗಳಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ನೋಡಲಾಗುವುದಿಲ್ಲ. ಶಿಕ್ಷಣಕ್ಷೇತ್ರವು ಸಮಾಜದ ಬದಲಾವಣೆಗಳಿಗೆ ಸ್ಪಂದಿಸುವ ಪ್ರಕ್ರಿಯೆಯಲ್ಲಿ ತಾನೇತಾನಾಗಿ ಸೂಕ್ತ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಬ್ರಿಟಿಷ್ ವಸಾಹತುಶಾಹಿ ಆಡಳಿತಕ್ಕೆ ಮೊದಲು ಭಾರತದಲ್ಲಿ ಆಗಿನ ಸಮಾಜದ ಸ್ಥಿತಿಗಳಿಗೆ ಅವಶ್ಯಕವಾಗಿದ್ದ ಶಿಕ್ಷಣ ಪದ್ಧತಿ ಇತ್ತು. ಮಹಿಳೆಯರು ಮನೆಯಲ್ಲಿಯೇ ಸಂಸ್ಕೃತ ಅಭ್ಯಾಸ, ಸಂಗೀತ, ನೃತ್ಯಕಲೆ ಮುಂತಾದವುಗಳನ್ನು ಅಭ್ಯಾಸ ಮಾಡುತ್ತಿದ್ದರು. ಈ ಶಿಕ್ಷಣವು ವರ್ಗ, ಜಾತಿ ಇತ್ಯಾದಿಗಳ ಮಿತಿಯನ್ನು ಹೊಂದಿತ್ತು. ಅಂದರೆ ಈ ರೀತಿಯ ಶಿಕ್ಷಣವು ಎಲ್ಲ ಮಹಿಳೆಯರಿಗೂ ಸಾಧ್ಯವಿರಲಿಲ್ಲ. ವಸಾಹತುಶಾಹಿ ಆಡಳಿತವು ಶಿಕ್ಷಣದಲ್ಲಿ ಹೊಸ ಅಂಶಗಳ ಮೂಲಕ ಬದಲಾವಣೆಗಳನ್ನು ತಂದಿತು. ವಸಾಹತುಶಾಹಿ ಶಿಕ್ಷಣವನ್ನು ನಿಯಂತ್ರಿಸಿದ ಮೆಕಾಲೆ ಬ್ರಿಟಿಷರ ಅನುಕೂಲ ಮತ್ತು ಅವಶ್ಯಕತೆಗಳಿಗನುಗುಣವಾದ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುವುದರ ಮೂಲಕ ಭಾರತೀಯರ ದ್ವೇಷಕ್ಕೆ ಕಾರಣನಾದರೂ ಅವನು ತರಬಯಸಿದ ಶಿಕ್ಷಣ ಪದ್ಧತಿಯೇ ಭಾರತದಲ್ಲಿ ನೆಲೆಯೂರಿತು. ಸ್ವಾತಂತ್ರ್ಯಾನಂತರವೂ ಭಾರತದಲ್ಲಿ ಅದೇ ಶಿಕ್ಷಣವನ್ನು ಮುಂದುವರೆಸಲಾಯಿತು. ಶಿಕ್ಷಣ ವ್ಯವಸ್ಥೆಯು ಮೆಕಾಲೆಯ ಮಾದರಿಯದಾದರೂ ಶಿಕ್ಷಣದೊಳಗಿನ ಪಠ್ಯಕ್ರಮವು ಭಾರತೀಯ ಸಮಾಜದ, ಸಂಸ್ಕೃತಿಯ ಬಗ್ಗೆ ತಿಳುವಳಿಕೆ ನೀಡುವ ವಿಷಯಗಳನ್ನು ಒಳಗೊಂಡಿತ್ತು. ಆದರೆ ಸ್ತ್ರೀವಾದಿ ನೆಲೆಯಲ್ಲಿ ಈ ಪಠ್ಯಕ್ರಮವನ್ನು ಪರಿಶೀಲಿಸಿದಲ್ಲಿ ಎಲ್ಲ ವಿಚಾರಗಳು ಪುರುಷಕೇಂದ್ರಿತ ಸಮಾಜವನ್ನು ಎತ್ತಿ ಹಿಡಿಯುವ ನೆಲೆಯಲ್ಲಿಯೇ ಇದ್ದವು. ಈ ಪಠ್ಯಕ್ರಮದ ಅಭ್ಯಾಸವೂ ಪುರುಷಕೇಂದ್ರಿತ ವ್ಯವಸ್ಥೆಯನ್ನು ಪುರಸ್ಕರಿಸುವ ರೀತಿಯಲ್ಲಿಯೇ ಇತ್ತು. ಭಾಷೆ, ವಸ್ತುವಿಷಯ, ಪಠ್ಯಕ್ರಮದ ಬೋಧನೆಯ ನೆಲೆಯಲ್ಲಿ ಪುರುಷರ ಪುರಸ್ಕಾರ ಹಾಗೂ ಮಹಿಳೆಗೆ ಇರುವ ಎರಡನೆಯ ಸ್ಥಾನವು ಸ್ಪಷ್ಟವಾಗಿತ್ತು. ಲಿಂಗತ್ವ ಆಧಾರಿತ ಪುರುಷ–ಮಹಿಳೆಯ ನಡುವಿನ ಭೇದಗಳು ಅತಿ ಸಹಜ ಎನ್ನುವಂತೆಯೇ ರೂಪಿತವಾಗಿದ್ದುವು.

ಮುಂದೆ ಆಧುನೀಕರಣ ಪ್ರಕ್ರಿಯೆಗೆ ಒಳಗಾದ ಭಾರತಕ್ಕೆ ಆಧುನಿಕ ಮೌಲ್ಯಗಳು ರೂಢಿಯಾದವು. ವಿಷಯಗಳನ್ನು ವ್ಯಾಖ್ಯಾನಕ್ಕೆ ಒಳಪಡಿಸಿ ಅರ್ಥನೀಡುವುದು, ವೈಜ್ಞಾನಿಕ ಮನೋಭಾವಕ್ಕೆ ಮನ್ನಣೆ ಇವೇ ಮುಂತಾದ ವಿಚಾರಗಳು, ಮೌಲ್ಯಗಳು ಬೆಳೆಸಿದವು. ಆಧುನಿಕ ಅಭಿವೃದ್ಧಿಯು ದುಡಿಮೆಗೆ ಪ್ರಾಶಸ್ತ್ಯ ನೀಡಿದುದರಿಂದ ದುಡಿಮೆಯ ವಲಯವು ಈ ದಿಸೆಯಲ್ಲಿ ಪ್ರಾಮುಖ್ಯವನ್ನು ಪಡೆಯಿತು. ಈ ವಲಯವು ಸಂಪೂರ್ಣವಾಗಿ ಪುರುಷರಿಗೆ ಮೀಸಲಿದ್ದು, ಪುರುಷಕೇಂದ್ರಿತವಾಯಿತು. ಇಲ್ಲಿ ಸ್ತ್ರೀಪುರುಷರ ನಡುವಿನ ವಿಭಜನೆ ಸ್ಪಷ್ಟವಾಗಿ ಕಾಣುತ್ತದೆ. ದೇಶದ ಅಭಿವೃದ್ಧಿ, ಸಾಮಾಜಿಕ ಜೀವನದ ಪಾಲುದಾರಿಕೆ ಹಾಗೂ ಉತ್ಪಾದನಾ ಕಾರ್ಯಗಳು ಪುರುಷರಿಗೆ ಸೀಮಿತವಾದ ವಲಯವಾಗಿದ್ದು ವಂಶಾಭಿವೃದ್ಧಿ, ಕುಟುಂಬದ ಲಾಲನೆ, ಪಾಲನೆ ಇವುಗಳು ಮಹಿಳೆಯ ಜವಾಬ್ದಾರಿ ವಲಯವಾಯಿತು. ಶಿಕ್ಷಣಕ್ಷೇತ್ರವೂ ತನ್ನ ನೀತಿ ಹಾಗೂ ಪಠ್ಯಕ್ರಮಗಳಲ್ಲಿ ಇದೇ ಮೌಲ್ಯವನ್ನು ಎತ್ತಿ ಹಿಡಿಯಿತು. ಈ ರೀತಿಯಲ್ಲಿ ಸ್ಪಷ್ಟ ವಿಭಜನೆಗೆ ಮನ್ನಣೆ ನೀಡಿತು. ಶಿಕ್ಷಣದ ಈ ಧೋರಣೆ ಮತ್ತು ಕ್ರಮಗಳು ಸ್ತ್ರೀವಾದಿ ನಿಲುವಿನ ವಿರೋಧ ದಿಕ್ಕಿನಲ್ಲಿ ನಡೆಯಿತು. ಆದರೆ ಇತ್ತೀಚಿನ ದಿನಗಳಲ್ಲಿ ಶಿಕ್ಷಣದಲ್ಲಿ ಕೆಲವಾದರೂ ಪರಿಣಾಮಕಾರಿಯಾದ ಬದಲಾವಣೆಗಳನ್ನು ಕಾಣುತ್ತಿದ್ದೇವೆ.

ವಸಾಹತುಶಾಹಿ ಆಡಳಿತವು ಭಾರತವನ್ನು ಆಧುನೀಕರಣದ ಪ್ರಕ್ರಿಯೆಗೆ ಒಳಪಡಿಸುವುದರ ಜೊತೆಜೊತೆಯಲ್ಲಿಯೇ ಜಾಗತಿಕ ಮಾರುಕಟ್ಟೆಗೂ ಪರಿಚಯಿಸಿತು. ಬಂಡವಾಳಶಾಹಿಯು ಸಮಾಜದಲ್ಲಿ ತರುವ ಬದಲಾವಣೆಗಳು, ಅತಂತ್ರತೆ ಇತ್ಯಾದಿಗಳು ಮನುಷ್ಯಜೀವನವನ್ನು ಸಾಕಷ್ಟು ಒತ್ತಡಕ್ಕೆ ದೂಡುವುದರ ಜೊತೆಗೆ ಮನುಷ್ಯನ ವ್ಯಕ್ತಿತ್ವವನ್ನು ಸಂಕೀರ್ಣಗೊಳಿಸುತ್ತದೆ. ಹಾಗಾಗಿ ಸಮಾಜದ ಮೌಲ್ಯಗಳು, ಜೀವನಕ್ರಮ, ಸಂಸ್ಕೃತಿ ಇವುಗಳೂ ಬದಲಾವಣೆಯನ್ನು ಹೊಂದುತ್ತವೆ. ಸ್ವಾಭಾವಿಕವಾಗಿಯೇ ಈ ಬದಲಾವಣೆಗಳು ಶಿಕ್ಷಣ ಕ್ಷೇತ್ರಕ್ಕೂ ವಿಸ್ತರಿಸುತ್ತವೆ. ಭಾರತದ ಸನ್ನಿವೇಶದಲ್ಲಿಯೂ ಇದು ನಿಜವಾಯಿತು.

ಬಂಡವಾಳಶಾಹಿ ಸಮಾಜದಲ್ಲಿ ಹೆಚ್ಚಿನ ದುಡಿಮೆಯಿದೆ. ಹೆಚ್ಚಿನ ಲಾಭ ಪಡೆಯುವ ಕಾತರವಿದೆ. ಕೆಲವು ನಿರ್ದಿಷ್ಟ ಕೆಲಸ ಹಾಗೂ ಕೌಶಲಗಳಿಗೆ ಮಹಿಳೆಯರನ್ನು ಉಪಯೋಗಿಸಿಕೊಳ್ಳಲು ಇಲ್ಲಿ

Digitised by Bharatavani, CIIL

ಅವಕಾಶಗಳಿವೆ. ಅಂತೆಯೇ ಈ ಸನ್ನಿವೇಶದಲ್ಲಿ ಮಹಿಳೆಯರು ಉದ್ಯಮವಲಯವನ್ನು ಪ್ರವೇಶಿಸುವಂತಾಯಿತು. ಪುರುಷರಿಗೆ ಮಾತ್ರ ಮೀಸಲಿದ್ದ ಈ ಕ್ಷೇತ್ರಕ್ಕೆ ಮಹಿಳೆಯರನ್ನು ಪಾಲುದಾರರನ್ನಾಗಿ ಮಾಡಲು ಎರಡು ಮುಖ್ಯ ಕಾರಣಗಳಿದ್ದವು. ಮೊದಲನೆಯದು, ಮಹಿಳೆಯರು ಮನೆಯೊಳಗಿದ್ದುಕೊಂಡೇ ಕೆಲಸವನ್ನು ಮಾಡುವುದು, ಎರಡನೆಯದು, ಕಡಿಮೆ ವೇತನಕ್ಕೆ ಅವರಿಂದ ಹೆಚ್ಚು ಕೆಲಸವನ್ನು ಮಾಡಿಸಲು ಸಾಧ್ಯವಿರುವುದು. ಒಳ್ಳೆಯ ಮಗಳು, ಒಳ್ಳೆಯ ಹೆಂಡತಿ, ಒಳ್ಳೆಯ ತಾಯಿ ಎಂದೆಲ್ಲಾ ಹೇಳಿಸಿಕೊಳ್ಳುತ್ತಾ ಬೆಳೆದ ಸಂಸ್ಕೃತಿಯ ಮಹಿಳೆಗೆ ಒಳ್ಳೆಯ ಕೆಲಸಗಾರ್ತಿ ಎಂಬ ಬಿರುದಿನೊಂದಿಗೆ ಅಲ್ಪ ಸಂಬಳದ ಚಕಾರವೆತ್ತುವ 'ದಾರ್ಷ್ಟ್ಯ' ಸ್ವಭಾವವಿಲ್ಲದಿರುವುದು ಉದ್ಯೋಗದಾತರಿಗೆ ಅನುಕೂಲವೇ ಆಗಿತ್ತು. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಉದ್ಯೋಗ ಅವಕಾಶಗಳು ಮೂಡಿದವು. ಉದ್ಯೋಗಕ್ಷೇತ್ರದಲ್ಲಿ ಮಹಿಳೆಯರ ಅವಶ್ಯಕತೆ ಇದ್ದುದರಿಂದ ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಯಿತು. ಬಂಡವಾಳಶಾಹಿಗೆ ಅನುಕೂಲಕರವಾಗಿ ಜಾಗತೀಕರಣವು ಮೂಡಿಬಂದಿತು. ಇದು ಮಾರುಕಟ್ಟೆಯ ವ್ಯಾಪ್ತಿಯನ್ನು ಹಿಗ್ಗಿಸಿತು. ಹೂಡಿಕೆ ಹಾಗೂ ಗಳಿಕೆಯೇ ಜಾಗತೀಕರಣದ ಮೂಲ ಉದ್ದೇಶವಾದರೂ ಅನಿವಾರ್ಯವೋ ಏನೋ ಎಂಬಂತೆ ಜನರ ಚಲನೆಯು ಜಗತ್ತಿನಾದ್ಯಂತ ಹರಡಿದುದರ ಫಲವಾಗಿ ಜ್ಞಾನವಾದರಿಯ ಕೊಡುಕೊಳ್ಳುವಿಕೆ ನಿರಂತರವಾಗಿ ನಡೆಯುತ್ತಲೇ ಇದೆ ಎನ್ನಬಹುದು. ಈ ಹಿನ್ನೆಲೆಯಲ್ಲಿ ಶಿಕ್ಷಣದಲ್ಲಿ ಸಾಕಷ್ಟು ಮಾರ್ಪಾಡುಗಳು ಆದವು. ಅಲ್ಲದೆ ಮಹಿಳೆಯರು ಶಿಕ್ಷಣರಂಗಕ್ಕೆ ಕಾಲಿರಿಸುವ ಈ ತಾಣವನ್ನು ಸ್ತ್ರೀವಾದವು ತನ್ನ ಲಾಭಕ್ಕೆ ಸ್ವಲ್ಪಮಟ್ಟಿಗೆ ಬಳಸಿಕೊಂಡಿದೆ ಎನ್ನಬಹುದು.

ಸ್ತ್ರೀವಾದಿ ನೆಲೆಯಲ್ಲಿ ಶಿಕ್ಷಣರಂಗದಲ್ಲಿ ಆದ ಬದಲಾವಣೆಗಳು ಪ್ರಮುಖವಾಗುತ್ತವೆ. ಶಾಲಾಶಿಕ್ಷಣ ಶಿಕ್ಷಣದ ಪ್ರಥಮ ಹಂತ. ಇಂದಿಗೂ ಭಾರತದಲ್ಲಿ ಹೆಣ್ಣುಮಕ್ಕಳಿಗಾಗಿಯೇ ಮೀಸಲಿಟ್ಟ ಶಾಲೆಗಳಿವೆ. ಹಾಗೆಯೇ ಗಂಡುಮಕ್ಕಳಿಗೆಂದೇ ಮೀಸಲಿಟ್ಟ ಶಾಲೆಗಳಿವೆ. ಈ ಬಗೆಯ ಮೀಸಲು ದೃಷ್ಟಿಯೇ ಲಿಂಗತ್ವಭೇದದ ಸೂಚಕವಾಗಿದೆ. ಇನ್ನು ಸಹಶಿಕ್ಷಣವಿರುವ ಶಾಲೆಗಳಲ್ಲಿ ಹೆಣ್ಣು–ಗಂಡು ಎಂಬ ಭೇದದಲ್ಲಿಯೇ ಅನೇಕ ಚಟುವಟಿಕೆಗಳು ನಡೆಯುತ್ತವೆ. ಹಾಗಾಗಿ ಸ್ತ್ರೀಪುರುಷ ಸಮಾನತೆಯ ಅಂಶಗಳು ಶಾಲಾಮಟ್ಟದಲ್ಲಿ ಪ್ರಬಂಧ, ಭಾಷಣಸ್ಪರ್ಧೆಗಳ ವಿಷಯವಾಗಿ, ಮಹಿಳಾದಿನಾಚರಣೆಯ ಆಚರಣೆಯ ಮಟ್ಟಕ್ಕೆ ಸೀಮಿತವಾಗಿದೆ. ಪದವಿಶಿಕ್ಷಣವು ಶಾಲಾ ಮಟ್ಟಕ್ಕಿಂತ ಸ್ತ್ರೀವಾದಿ ನೆಲೆಯಲ್ಲಿ ಸ್ವಲ್ಪ ಭಿನ್ನವಾಗಿದೆ. ಕೆಲವು ವಿಶ್ವವಿದ್ಯಾನಿಲಯಗಳು ಸ್ತ್ರೀಸಮಾನತೆಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಪದವಿ ತರಗತಿಗಳಲ್ಲಿ 'ಲಿಂಗತ್ವಸಮಾನತೆ'ಯ ವಿಷಯವನ್ನು ಕಡ್ಡಾಯ ವಿಷಯವಾಗಿ ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸಿವೆ. ಸಾಹಿತ್ಯವಿಷಯದ ವಿದ್ಯಾರ್ಥಿಗಳು ಸಾಹಿತ್ಯವನ್ನು ಸ್ತ್ರೀವಾದಿ ನೆಲೆಯಲ್ಲಿ ಅಭ್ಯಾಸಿಸುವುದು, ಸ್ತ್ರೀವಾದದ ಅರಿವಿಗೆ ಪುಷ್ಟಿ ನೀಡುತ್ತದೆ.

ಲಿಂಗತ್ವ ಸೂಕ್ಷ್ಮತೆ ಹಾಗೂ ಮಹಿಳಾ ಹಕ್ಕುಗಳ ಬಗ್ಗೆ ಕಾರ್ಯಾಗಾರಗಳನ್ನು ಕಾಲೇಜುಗಳಲ್ಲಿ ನಡೆಸಲಾಗುತ್ತದೆ. ಮಹಿಳೆಯರ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವ ಕೆಲವೊಂದು ಕಾರ್ಯಕ್ರಮಗಳು ಈ ಹಂತದಲ್ಲಿ ನಡೆಯುತ್ತವೆ. ಪದವಿ ಮಟ್ಟದ ಎಲ್ಲ ಪ್ರಯತ್ನಗಳೂ ಮಹಿಳೆಯರ ತಾರತಮ್ಯದ ಕುರಿತು ಅರಿವು ಮೂಡಿಸುವುದಕ್ಕೆ ಮಾತ್ರ ಸೀಮಿತವಾಗಿದೆ ಎಂಬ ಅಂಶ ಗಮನಾರ್ಹ.

ಸ್ತ್ರೀವಾದವೆನ್ನುವುದು ನಿಂತ ನೀರಾಗದೇ ಚಲನಶೀಲವಾಗಿದೆ. ಆದರೆ ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಸ್ತ್ರೀವಾದ ರಾಜಕೀಯ ಸಿದ್ಧಾಂತದ ದೃಷ್ಟಿಯಿಂದ ತನ್ನದೇ ಆದ ಮಿತಿಯನ್ನು ಹೊಂದಿದೆ. ಇದರ ಮಿತಿಗಳು ಜಾಗತಿಕ ರಾಜಕೀಯ ಸಿದ್ಧಾಂತಕ್ಕೆ ಸಂಬಂಧಪಟ್ಟುದಾಗಿದೆ. ಇತಿಮಿತಿಯ ಅರಿವಿದ್ದೇ ಅದು ಮಹಿಳೆಯರ ಸಮಾನತೆಯ ಹಕ್ಕೊತ್ತಾಯ ಹಾಗೂ ಹೋರಾಟವನ್ನು ನಡೆಸಬೇಕಾಗಿದೆ. ಇದು ಸ್ತ್ರೀವಾದದ ಅನಿವಾರ್ಯತೆ ಕೂಡ. ಬಹುಶಃ ಇಲ್ಲಿ ಶಿಕ್ಷಣ ಬಹುಮುಖ್ಯ ಪಾತ್ರವನ್ನು ವಹಿಸಬೇಕಾಗುತ್ತದೆ. ಸ್ತ್ರೀವಾದವು ಕೇವಲ ಮಾಹಿತಿಯಾಗಿ, ವಿಷಯ ಪ್ರಸರಣದ ವಸ್ತುವಾಗಿ ಮಾತ್ರ ಶಿಕ್ಷಣದಲ್ಲಿ ಮೂಡಿ ಬಂದು ಕೇವಲ ಜಡ ಅಥವಾ ತಟಸ್ಥ ಕ್ರಿಯೆಯಾಗಿದೆ. ಶಿಕ್ಷಣವು ವಿದ್ಯಾರ್ಥಿಗಳನ್ನು ಸ್ತ್ರೀವಾದದ ತಾತ್ವಿಕತೆಗೆ ಪ್ರೇರೇಪಿಸುವ ನಿಟ್ಟಿನಲ್ಲಿರಬೇಕಾದ ಅಗತ್ಯವಿದೆ. ಇಲ್ಲವಾದಲ್ಲಿ ಸ್ತ್ರೀವಾದವು ಶಿಕ್ಷಣದಲ್ಲಿ ಕೇವಲ ಮಾಹಿತಿಯಾಗಿ ಉಳಿದು, ಸಮಾಜದಲ್ಲಿ ಸಮಾನತೆಯ ನೆಲೆಯಲ್ಲಿ ಹೆಚ್ಚಿನ ಬದಲಾವಣೆಗಳನ್ನು ತರಲು ಕಷ್ಟಸಾಧ್ಯವಾಗುತ್ತದೆ.

–ಎನ್.ಕೆ.ರಾ.ಲ.

## ಸೆಬಾಟಿಕ್ ರಜೆ

ಶ್ಯಾಬಾಥ್ ಎಂಬ ಆಂಗ್ಲ ಪದವು ಲ್ಯಾಟಿನ್ ಭಾಷೆಯ ಮೂಲ ಶಬ್ದವಾದ 'Sabbasticus'ನಿಂದ ಉಗಮವಾಗಿದೆ. ಹೀಬ್ರೂ ಭಾಷೆಯ Sabbath ಎಂಬ ಪದವು ಇದರ ಉಗಮಕ್ಕೆ ಆಧಾರವಾಗಿರುತ್ತದೆ. ಇವುಗಳ ಒಟ್ಟಾರೆ ಅರ್ಥವೆಂದರೆ "ಕೆಲಸದಿಂದ ವಿಶ್ರಾಂತಿ". ಇದು ಸಾಮಾನ್ಯವಾಗಿ ಎರಡು ತಿಂಗಳಿನಿಂದ ಆರಂಭವಾಗಿ ಒಂದು ವರ್ಷದ ಅವಧಿ ಯದ್ದಾಗಿರುತ್ತದೆ. ವಿಶೇಷ ಸಂದರ್ಭಗಳಲ್ಲಿ ಕೈಗೊಂಡ ಕಾರ್ಯಚಟುವಟಿಕೆಗಳು ಸಂಪೂರ್ಣವಾಗದಿದ್ದರೆ ಮೇಲಾಧಿಕಾರಿಗಳು ಅವಕಾಶ ನೀಡಿದರೆ ಮಾತ್ರ ರಜೆಯ ಅವಧಿ ಸ್ವಲ್ಪ ಹೆಚ್ಚಾಗಬಹುದು. ಬೈಬಲ್‌ನಲ್ಲಿ ಉಲ್ಲೇಖಿಸಲ್ಪಟ್ಟ "ಹತ್ತು ದೈವಿಕ ಆಜ್ಞೆ" (Ten Commandments)ಗಳಲ್ಲಿ ಒಂದಾಗಿರುವ ಆಜ್ಞೆ ಏನೆಂದರೆ "ಏಳನೇ ದಿನವನ್ನು" ವಿಶ್ರಾಂತಿಯಾಗಿ ಆಚರಿಸುವುದು. ಆ ಸಂದರ್ಭದಲ್ಲಿ ಉಳಿದ ಕ್ಷೇತ್ರ ಕಾರ್ಯಬಾರಗಳಿಂದ ದೂರವಿರುವುದು.

ಕ್ರೈಸ್ತರ ನಂಬಿಕೆಯಿಂದ 'ಭಗವಂತನು ವಿಶ್ವದ ಸೃಷ್ಟಿಕಾರ್ಯವನ್ನು ಆರು ದಿನಗಳಲ್ಲಿ ಸಂಪೂರ್ಣಗೊಳಿಸಿ ಏಳನೇ ದಿನವಾದ ರವಿವಾರ ವನ್ನು ವಿಶ್ರಾಂತಿಗಾಗಿ ಉಪಯೋಗಿಸಿದನು. ಹೀಗಾಗಿ ವಾರಾಂತ್ಯವಾದ ರವಿವಾರವನ್ನು ವಿಶ್ರಾಂತಿ ದಿನವಾಗಿ ಪರಿಗಣಿಸಿ ಇಂದಿಗೂ ಪಾಲಿಸಿಕೊಂಡು ಬರಲಾಗುತ್ತಿದೆ. ಈ ನಿಯಮವನ್ನು ಯಹೂದಿ (ಹಿಬ್ರೂ.ಜ್ಯೂ)ಗಳೂ ಸಹ ಪಾಲಿಸಿಕೊಂಡು ಬಂದಿದ್ದಾರೆ.

ಆಧುನಿಕ ಕಾಲದಲ್ಲಿ, ಸೆಬಾಟಿಕ್ ರಜೆ ಎಂದರೆ ತಮ್ಮ ಮುಂದಿನ ಏಳಿಗೆಗಾಗಿ, ಗುರಿಯನ್ನು ಸಾಧಿಸಲಿಕ್ಕಾಗಿ, ತಮ್ಮ ದೈನಂದಿನ ಕಾರ್ಯಗಳಿಂದ ವಿನಾಯಿತಿಯನ್ನು ಪಡೆದು ಬಳಸಿಕೊಳ್ಳುವುದಾಗಿದೆ. ಈ ಸಂದರ್ಭವನ್ನು ಹೆಚ್ಚಿನ ಸಾಧನೆ ಅಥವಾ ಅಧ್ಯಯನಕ್ಕಾಗಿ ಮಾತ್ರ ಉಪಯೋಗಿಸಿ ಪ್ರಗತಿಯನ್ನು ತೋರಿಸಬೇಕಾಗುತ್ತದೆ.

ಕೆಲವೊಂದು ವಿಶ್ವವಿದ್ಯಾನಿಲಯಗಳು ಹಾಗೂ ಉನ್ನತಮಟ್ಟದ ಉದ್ಯಮಿಗಳು ತಮ್ಮ ಅಧೀನದಲ್ಲಿರುವ ಉದ್ಯೋಗಿಗಳನ್ನು ಸಂಶೋಧನೆ ಉನ್ನತ ಸಾಧನೆ, ದೇಶ ಪರ್ಯಟನೆ, ಉಪಕರಣಗಳ ಉನ್ನತೀಕರಣ, ವಿಶೇಷ ಅಧ್ಯಯನ ಮತ್ತು ಭೇಟಿ ಇತ್ಯಾದಿಗಳಿಗಾಗಿ ದೇಶವಿದೇಶಗಳಿಗೆ ಸೆಬಾಟಿಕ್ ರಜೆ ಮಂಜೂರು ಮಾಡಿ ನಿಯೋಜಿಸುತ್ತಾರೆ. ಈ ರಜೆಯನ್ನು ಪಡೆಯುವ ಉದ್ಯೋಗಿಗಳು ತಮ್ಮ ಮಾತೃಸಂಸ್ಥೆಯಲ್ಲಿ ಸತತವಾಗಿ 5 ರಿಂದ 7 ವರ್ಷಗಳ ಕಾಲ ಪೂರ್ಣಾವಧಿ ಸೇವೆ ಸಲ್ಲಿಸಿದವರಾಗಿರಬೇಕು. ರಜೆಯ ಅವಧಿಯಲ್ಲಿ ತಾವು ವಹಿಸಿಕೊಂಡಿರುವ ಕಾರ್ಯವನ್ನು ಸತತ ಪರಿಶ್ರಮದಿಂದ ಪೂರೈಸಬೇಕು. ಗುರಿಸಾಧನೆಯಾದ ಬಳಿಕ ಪ್ರಗತಿಯ

Digitised by Bharatavani, CIIL

ಮತ್ತು ಫಲಿತಾಂಶದ ವಿವರಗಳೊಂದಿಗೆ ತಮ್ಮ ಮೇಲಧಿಕಾರಿಗಳಿಗೆ ವರದಿಯನ್ನು ಒಪ್ಪಿಸಬೇಕು. ರಜೆಯ ಕಾಲವನ್ನು ಇತರ ಕಾರ್ಯಗಳಿಗೆ ಬಳಸಬಾರದು.

ರಜೆಯ ಅವಧಿಯಲ್ಲಿ ಪೂರ್ಣಪ್ರಮಾಣದ ಮೊತ್ತವನ್ನು ಪಡೆಯಲು ಈ ಮುಂದಿನ ಅಂಶಗಳನ್ನು ಪರಿಗಣಿಸಲಾಗುತ್ತದೆ.

- ರಜೆಯ ಅವಧಿಯಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳಲ್ಲಿ ಸಿಗುವ ಆದಾಯ
- ಆ ಪ್ರದೇಶದ ಜನ ಜೀವನದ ಸ್ಥಿತಿಗತಿಗಳು
- ಆರು ತಿಂಗಳ ಕಾಲ ಪೂರ್ಣ ಪ್ರಮಾಣದ ವೇತನ ಅಥವಾ ಅರ್ಧ ವೇತನದಲ್ಲಿ ಒಂದು ವರ್ಷ.
- ಸೇವಾವಧಿಯೊಳಗಿದ್ದವರಿಗೆ ಯೋಗ್ಯಕಾರಣಕ್ಕಾಗಿ ರಜೆ ವಿಸ್ತರಿಸಿ, ವೇತನವನ್ನು ನೀಡಲಾಗುತ್ತದೆ.
- ದಿನನಿತ್ಯದ ಕರ್ತವ್ಯದಿಂದ ಬಿಡುಗಡೆಹೊಂದಿ ಮೂಲ ಸ್ಥಾನದಲ್ಲಿದ್ದುಕೊಂಡೇ ಅಧ್ಯಯನ ನಡೆಸಬಹುದು ಅಥವಾ ಹೊರ ಸ್ಥಳಗಳಿಗೆ ಹೋಗಬಹುದು. ವೇತನಕ್ಕೆ ತೊಂದರೆಯಾಗುವುದಿಲ್ಲ.
- ಒಂದು ವೇಳೆ ವೇತನ 6 ತಿಂಗಳ ನಂತರ ಸಲ್ಲಿಸಲ್ಪಟ್ಟರೂ ಪ್ರಗತಿ ವರದಿ ಸಲ್ಲಿಸಿದ ನಂತರ ಮೇಲಾಧಿಕಾರಿಗಳು ವೇತನವನ್ನು ಬಿಡುಗಡೆ ಮಾಡುವರು.
- ವಿವರವಾಗಿ ಕೈಗೊಂಡ ಕಾರ್ಯದ ಪ್ರಗತಿಯು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

**ಸೆಬಾಟಿಕ್ ರಜೆಯ ನಿಯಮಗಳು**

ಈ ಮುಂದಿನ ಕೆಲವು ನಿಬಂಧನೆಗಳೊಂದಿಗೆ ಸೆಬಾಟಿಕ್ ರಜೆಯನ್ನು ಪಡೆಯಬಹುದು.

- ವಿಶ್ವವಿದ್ಯಾನಿಲಯಗಳಿಂದ ಅಥವಾ ಉದ್ಯೋಗ ಮಾಡುವ ಸಂಸ್ಥೆಯಿಂದ ನಿಗದಿತ ಅರ್ಜಿಫಾರಂಗಳನ್ನು ಭರ್ತಿಮಾಡಿ ಸಂಸ್ಥೆಯ ಮುಖ್ಯಸ್ಥರಿಗೆ ಪರಿಶೀಲನೆ ಹಾಗೂ ಮಂಜೂರಾತಿಗಾಗಿ ಒಪ್ಪಿಸಬೇಕು.
- ಸಂಸ್ಥೆಯ ಮುಖ್ಯಸ್ಥರು/ಮೇಲಾಧಿಕಾರಿಗಳು ಅಭ್ಯರ್ಥಿಗಳ ಗುಣಮಟ್ಟವನ್ನು ಮತ್ತು ನೀತಿನಿಬಂಧನೆಗಳನ್ನು ಪರಿಶೀಲಿಸುವರು.
- ರಜಾ ಅವಧಿಯು ನಾಲ್ಕುವಾರಗಳ ಮೇಲ್ಪಟ್ಟಲ್ಲಿ 'ಸೆನೆಟ್ ವ್ಯವಹಾರ ಸಮಿತಿಯ ಅವಗಾಹನೆಗಾಗಿ ಮುಂದಿಡಬೇಕು ಮತ್ತು ಅರ್ಜಿದಾರರ ವ್ಯವಹಾರಗಳ ಕುರಿತು ಮಾಹಿತಿ ಕೊಡಬೇಕು.
- ಅರ್ಜಿದಾರರ ಪ್ರಸ್ತುತ ಕರ್ತವ್ಯಗಳನ್ನು ಇನ್ನೊಬ್ಬರಿಗೆ ವಹಿಸುವ ವ್ಯವಸ್ಥೆ ಮಾಡುವುದು. ಮುಖ್ಯಸ್ಥರ ಜವಾಬ್ದಾರಿಯಾಗಿದೆ.
- ಈ ರಜೆಯ ಗರಿಷ್ಠ ಅವಧಿಯು 12 ತಿಂಗಳನ್ನು ಮೀರಬಾರದು.
- ಈ ರಜೆಯು ಉದ್ಯೋಗಿಗಳ ಸೇವಾವಧಿಯಲ್ಲಿ ನಿರಂತರ ಸೇವೆಯಾಗಿ ಪರಿಗಣಿಸಲ್ಪಡುತ್ತದೆ.
- ರಜೆ ಪಡೆದಂತಹವರು ತಮ್ಮ ಮೂಲ ಸ್ಥಾನದಿಂದ ಬೇರೆ ಸ್ಥಳಕ್ಕೆ ನಿಯೋಜಿಸಲ್ಪಟ್ಟರೆ ಅವರಿಗೆ ಪ್ರಯಾಣದ ವೆಚ್ಚ, ವಸತಿ ಹಾಗೂ ಇತರ ವೆಚ್ಚಗಳನ್ನು ಸಮರ್ಥ ದಾಖಲೆಗಳನ್ನು ಸಲ್ಲಿಸಿ ಪಡೆದುಕೊಳ್ಳಬಹುದು.
- ಈ ನಿಯಮಗಳನ್ನು ಮೀರಿದರೆ ಅವರ ಮೇಲೆ ಶಿಸ್ತು ಕ್ರಮವನ್ನು ಜಾರಿಮಾಡಬಹುದು.

– ವೈ.ಎನ್.ಶ್ರೀ

## ಸೆಮಿಸ್ಟರ್ ವ್ಯವಸ್ಥೆ

'ಸೆಮಿಸ್ಟರ್' ಎಂಬ ಪದವು ಒಂದು ಶೈಕ್ಷಣಿಕ ಪದವಾಗಿದೆ. ಇದು ಒಂದು ಶೈಕ್ಷಣಿಕ ವರ್ಷವನ್ನು ಸ್ವಾಭಾವಿಕವಾದ ಉಪ ಅವಧಿಗಳನ್ನಾಗಿ ವಿಭಜಿಸಿ, ಅದರ ಪಠ್ಯಕ್ರಮವನ್ನು ಈ ರೀತಿಯಾಗಿ ವಿಭಜಿಸಲ್ಪಟ್ಟ ಅವಧಿಗಳಲ್ಲಿ ಪೂರ್ಣಗೊಳಿಸುವ ಪ್ರಕ್ರಿಯೆಯನ್ನು ಸೂಚಿಸುವ ಪದವಾಗಿದೆ. ಇಂತಹ ಪಠ್ಯಕ್ರಮ ವಿನ್ಯಾಸವನ್ನು ಶಾಲಾ ಮಟ್ಟದಲ್ಲಿ, ಕಾಲೇಜು ಮಟ್ಟದಲ್ಲಿ ಹಾಗೂ ವಿಶ್ವವಿದ್ಯಾನಿಲಯ ಮಟ್ಟದಲ್ಲೂ ಕಾಣಬಹುದಾಗಿದೆ. ಆದರೂ ವಿದ್ಯಾರ್ಥಿಗಳ ಕಲಿಕೆಗಾಗಿ ವಿನ್ಯಾಸಗೊಳ್ಳುವ ಬೋಧನಾ–ಕಲಿಕಾ ಪ್ರಕ್ರಿಯೆ ಮತ್ತು ಮೌಲ್ಯಮಾಪನವು ಒಂದೊಂದು ಸಂಸ್ಥೆ ಅಥವಾ ಸಂಘಟನೆಯಲ್ಲಿ ಒಂದೊಂದು ರೀತಿಯಾಗಿದ್ದು ವೈವಿಧ್ಯತೆಯನ್ನು ತೋರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಉದಾಹರಣೆಯಾಗಿ, ಈ ಕೆಳಕಂಡ ವಿನ್ಯಾಸಗಳನ್ನು ಗಮನಿಸಬಹುದು.

1. ಸೆಮಿಸ್ಟರ್ ವ್ಯವಸ್ಥೆಯಲ್ಲಿ ಒಂದು ಸಂಪೂರ್ಣ ಶೈಕ್ಷಣಿಕ ವಾರ್ಷಿಕ ಅವಧಿಯನ್ನು ಎರಡು ಸಮಭಾಗಗಳಾಗಿ ವಿಭಜಿಸಿ, ಪಠ್ಯಕ್ರಮದ ವ್ಯವಹಾರವನ್ನು ಜಾರಿಗೊಳಿಸುವುದು ಮತ್ತು ಇದಕ್ಕೆ ತಕ್ಕಂತೆ ಮೌಲ್ಯಮಾಪನದ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಿಕೊಳ್ಳುವುದೇ ಆಗಿದೆ.
2. ಟ್ರೈಮಿಸ್ಟರ್ ವ್ಯವಸ್ಥೆ ವಾರ್ಷಿಕ ಶೈಕ್ಷಣಿಕ ವ್ಯವಸ್ಥೆಯ ಇನ್ನೊಂದು ಪರ್ಯಾಯ ವ್ಯವಸ್ಥೆಯೆಂದು ಹೇಳಬಹುದು. ಇಲ್ಲಿ ಒಂದು ಸಂಪೂರ್ಣ ಶೈಕ್ಷಣಿಕ ವಾರ್ಷಿಕ ಅವಧಿಯನ್ನು ಮೂರು ಸಮಭಾಗಗಳಾಗಿ ವಿಂಗಡಿಸಿಕೊಂಡು ಪಠ್ಯಕ್ರಮದ ಕಲಾಪಗಳನ್ನು ಸೂಕ್ತವಾಗಿ ಜರುಗಿಸಲಾಗುವುದು.
3. ಕ್ವಾರ್ಟರ್ ವ್ಯವಸ್ಥೆಯಲ್ಲಿ ಇಡೀ ಒಂದು ಶೈಕ್ಷಣಿಕ ವಾರ್ಷಿಕ ಅವಧಿಯನ್ನು ನಾಲ್ಕು ಸಮಭಾಗಗಳನ್ನಾಗಿ ವಿಭಾಗಿಸಿ, ಪಠ್ಯಕ್ರಮವನ್ನು ನಿರ್ವಹಿಸಲಾಗುವುದು.

ಮೇಲೆ ಹೇಳಿದ ಸ್ಥೂಲ ಲಕ್ಷಣಗಳನ್ನು ಆಧರಿಸಿ, ದೇಶ–ವಿದೇಶಗಳಲ್ಲಿ ವಿವಿಧ ರೀತಿಯ ಶೈಕ್ಷಣಿಕ ವಿನ್ಯಾಸಗಳನ್ನು ಅಳವಡಿಸಿಕೊಳ್ಳಲಾಗಿದೆ. ಉದಾಹರಣೆಗೆ, ಆಸ್ಟ್ರೇಲಿಯಾದ ವಿಶ್ವವಿದ್ಯಾನಿಲಯಗಳಲ್ಲಿ ಒಂದು ವರ್ಷಕ್ಕೆ ಎರಡು ಸೆಮಿಸ್ಟರ್‌ಗಳನ್ನು ಹಾಕಿಕೊಳ್ಳಲಾಗಿದೆ. ಜರ್ಮನಿ ವಿಶ್ವವಿದ್ಯಾನಿಲಯಗಳೂ ಎರಡು ಸೆಮಿಸ್ಟರ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ಒಂದು ವರ್ಷದಲ್ಲಿ ಏಪ್ರಿಲ್‌ನಿಂದ ಜುಲೈವರೆಗೆ ಮೊದಲ ಸೆಮಿಸ್ಟರ್ – ಬೇಸಿಗೆ ಸೆಮಿಸ್ಟರನ್ನೂ ಮತ್ತು ಅಕ್ಟೋಬರ್‌ನಿಂದ ಫೆಬ್ರವರಿವರೆಗೆ ಎರಡನೇ ಸೆಮಿಸ್ಟರ್ (ಚಳಿಗಾಲದ ಸೆಮಿಸ್ಟರ್) ಎಂದೂ ನಡೆಸಲಾಗುತ್ತದೆ. ಇವೆರೆಡರ ನಡುವೆ ಎರಡು ವಾರಗಳ ಕ್ರಿಸ್‌ಮಸ್ ರಜವೂ ಸೇರಿಕೊಂಡಿರುತ್ತದೆ. ಇಷ್ಟೇ ಅಲ್ಲದೆ, ಪ್ರತಿ ಸೆಮಿಸ್ಟರ್‌ಗಳನ್ನು ಬ್ಲಾಕ್‌ಗಳಾಗಿ ವಿಂಗಡಿಸಿ, ಅವುಗಳಲ್ಲಿ ಮತ್ತೆ ಉಪನ್ಯಾಸ ಸಹಿತ ಹಾಗೂ ಉಪನ್ಯಾಸ ರಹಿತ ಬ್ಲಾಕ್‌ಗಳನ್ನಾಗಿ ರಚಿಸಿಕೊಳ್ಳಲಾಗಿದೆ. ಇಲ್ಲಿ ಉಪನ್ಯಾಸಗಳು ಸಾಮಾನ್ಯವಾಗಿ ಸೆಮಿಸ್ಟರ್ ಪ್ರಾರಂಭದಿಂದ 2 ರಿಂದ 4 ವಾರಗಳು ನಡೆದು ಒಟ್ಟಾರೆ ಕಾಲಾವಧಿಯನ್ನು ಮೂರು ತಿಂಗಳವರೆಗೆ ವಿಸ್ತರಿಸಿಕೊಂಡಿದ್ದು, ಉಳಿದ ಅವಧಿಯು ಉಪನ್ಯಾಸರಹಿತವಾಗಿರುತ್ತದೆ. ಇಂತಹ ಉಪನ್ಯಾಸರಹಿತ ಅವಧಿಯನ್ನು ಪರೀಕ್ಷೆ, ಕಿರುಪರೀಕ್ಷೆ,

Digitised by Bharatavani, CIIL

ಇಂಟರ್ನ್‌ಶಿಪ್, ಪ್ರಯೋಗಾಲಯದ ಚಟುವಟಿಕೆಗಳು ನಿಯೋಜಿತ ಕಾರ್ಯಗಳು ಇತ್ಯಾದಿಗಳಿಗಾಗಿ ಮೀಸಲಿಡಲಾಗುವುದು.

ನಮ್ಮ ದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ವರ್ಷವು ಸಾಮಾನ್ಯವಾಗಿ ಜೂನ್ ತಿಂಗಳಿನಿಂದ ಏಪ್ರಿಲ್ ತಿಂಗಳವರೆಗೆ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಆಗಸ್ಟ್‌ನಿಂದ ಏಪ್ರಿಲ್‌ವರೆಗೆ ಇರುತ್ತದೆ. ಹಾಗೂ ಅರೆವಾರ್ಷಿಕ ಮತ್ತು ವಾರ್ಷಿಕ ವಿರಾಮದ ದಿನಗಳನ್ನೂ ಒಳಗೊಂಡಿದೆ. ಯುಜಿಸಿಯ ಶಿಫಾರಸ್ಸಿನಂತೆ, ನಮ್ಮ ದೇಶದ ಬಹುಪಾಲು ವಿಶ್ವವಿದ್ಯಾನಿಲಯಗಳಲ್ಲಿ ಸೆಮಿಸ್ಟರ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇಷ್ಟೇ ಅಲ್ಲದೆ, ಕೇರಳ, ಶ್ರೀಲಂಕಾ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಇತ್ತೀಚಿಗೆ ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆಯನ್ನು (Choice Based Credit System-CBCS) ಪರಿಚಯಿಸಲಾಗುತ್ತಿದೆ. ಯುಜಿಸಿಯು ಅಂತಿಮವಾಗಿ ಸೆಮಿಸ್ಟರ್ ವ್ಯವಸ್ಥೆಯನ್ನು ಮುಂಬರುವ 2 ವರ್ಷಗಳಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಕಡ್ಡಾಯವಾಗಿ ತರಲಿದೆ. ಇದರಿಂದಾಗಿ ರಾಷ್ಟ್ರಮಟ್ಟದಲ್ಲಿ ಶಿಕ್ಷಣವಿನ್ಯಾಸವು ಆಮೂಲಾಗ್ರವಾಗಿ ಪರಿಷ್ಕರಣೆಗೆ ಒಳಗಾಗಲಿದೆ. ಹೀಗಾಗುವುದರಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಮುಕ್ತ, ಪಾರದರ್ಶಕ ಮತ್ತು ಗುಣಾತ್ಮಕವಾದ ಬದಲಾವಣೆಯನ್ನು ಕಾಣಬಹುದಾಗಿದೆ. ವಿದ್ಯಾರ್ಥಿಗಳು ತಮ್ಮ ಪದವಿಗಳನ್ನು ಬೇರೆ ಬೇರೆ ಶಿಕ್ಷಣ ಸಂಸ್ಥೆ ಅಥವಾ ಸಂಘಟನೆಗಳ ಮೂಲಕ ಪೂರೈಸಿಕೊಳ್ಳಲು ಸಾಧ್ಯವಿದೆ. ಅಂದರೆ, ಒಂದು ಕಾಲೇಜಿನಲ್ಲಿ ಪದವಿಯ ಕೆಲವು ವಿಷಯಗಳನ್ನು ಅಭ್ಯಾಸಮಾಡುತ್ತಾ ಉಳಿದ ಕೆಲವು ವಿಷಯಗಳನ್ನು ಸಂಬಂಧಿಸಿದ ಪ್ರತ್ಯೇಕ ಮತ್ತು ವಿಶೇಷ ಸಂಪನ್ಮೂಲಗಳನ್ನು ಹೊಂದಿರುವ ಬೇರೆ ಬೇರೆ ಸಂಸ್ಥೆ, ಸಂಘಟನೆಯ ಆಶ್ರಯದಲ್ಲಿ ಅಭ್ಯಾಸ ಮಾಡುತ್ತಾ ತನ್ನ ಪದವಿಯನ್ನು ವಿದ್ಯಾರ್ಥಿಯು ಪಡೆದುಕೊಳ್ಳಲು ಮುಕ್ತವಾದ ಅವಕಾಶಗಳಿರುತ್ತವೆ. ಈ ನೂತನ ಶೈಲಿಯ ಶೈಕ್ಷಣಿಕ ವಿನ್ಯಾಸದಲ್ಲಿ, ನಿರಂತರವಾದ, ಸಮಗ್ರವಾದ ಮೌಲ್ಯಮಾಪನವು ಇನ್ನೊಂದು ಅತಿ ಮುಖ್ಯವಾದ ಅಂಶವಾಗಿದೆ.

ಯುಜಿಸಿಯಿಂದ ಆಯೋಜಿಸಲ್ಪಟ್ಟ ಒಂದು ಆಯೋಗವು ಇಂತಹ ಶೈಕ್ಷಣಿಕ ವಲಯದಲ್ಲಿ ಪರಿಷ್ಕರಣೆಯನ್ನು ತರುವುದಕ್ಕಾಗಿಯೇ ಸಿಬಿಸಿಎಸ್‌ನ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿದೆ. ಈ ಆಯೋಗವು ಪ್ರೊ. ಎ. ಜ್ಞಾನಂ ಎಂಬುವವರ ನೇತೃತ್ವದಲ್ಲಿ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದೆ. ಮುಂಬರುವ ಇನ್ನೆರಡು ವರ್ಷಗಳಲ್ಲಿ ಇಂತಹ ಬದಲಾವಣೆಯು ಸಮರೂಪವಾಗಿ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಕಂಡು ಬರಬೇಕೆಂಬ ಉದ್ದೇಶದಿಂದ ಎಲ್ಲಾ ವಿಶ್ವವಿದ್ಯಾನಿಲಯಗಳ ಉಪ-ಕುಲಪತಿಗಳಿಗೆ ಸಿಬಿಸಿಎಸ್‌ನ್ನು ಕುರಿತಂತೆ ಯುಜಿಸಿಯ ಅಧ್ಯಕ್ಷ ಪ್ರೊ. ಸಖದೇವ್ ತೋರಟ್ ಈಗಾಗಲೇ ಸುತ್ತೋಲೆಗಳನ್ನು ಕಳಿಸಿದ್ದಾರೆ. ಅಲ್ಲದೆ ಅದರಲ್ಲಿ 11ನೇ ಪಂಚವಾರ್ಷಿಕ ಯೋಜನೆಯ ಪ್ರಕಾರ, ಉನ್ನತ ಶಿಕ್ಷಣ ವಲಯದಲ್ಲಿ ಗುಣಮಟ್ಟವನ್ನು ಹೆಚ್ಚಿಸಬೇಕೆಂಬ ಬದ್ಧತೆಯಿಂದ ಮೇಲೆ ಹೇಳಿದ ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಂಡು ಪರಿಷ್ಕರಣೆಗೆ ಒಳಪಡುವ ವಿಶ್ವವಿದ್ಯಾನಿಲಯಗಳ ಕಾರ್ಯಕ್ಷಮತೆಯನ್ನು ಆಧರಿಸಿ ಅವುಗಳ ಧನಸಹಾಯವನ್ನು ಸ್ಪಷ್ಟಪಡಿಸಲಾಗುವುದೆಂದು ಘೋಷಿಸಲಾಗಿದೆ. ಇದನ್ನು ಗಮನಿಸಿದರೆ, ಪ್ರಸ್ತುತ ನಮ್ಮ ರಾಷ್ಟ್ರದಲ್ಲಿನ ಎಲ್ಲಾ ವಿಶ್ವವಿದ್ಯಾನಿಲಯಗಳೂ ಸೆಮಿಸ್ಟರ್ ವ್ಯವಸ್ಥೆಯನ್ನು ಚಾಲನೆಗೆ ತರುವುದರಲ್ಲಿ ಅನುಮಾನಕ್ಕೆ ಆಸ್ಪದವಿಲ್ಲ ಎಂಬ ಅಂಶವು ಗೋಚರವಾಗುತ್ತದೆ. ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆಯಲ್ಲಿ (CBCS) ಈ ಕೆಳಕಂಡ ಮುಖ್ಯ ಲಕ್ಷಣಗಳಿರುತ್ತವೆ.

1. ವಿದ್ಯಾರ್ಥಿಯು ತಾನು ಅಭ್ಯಾಸ ಮಾಡಲು ಇಚ್ಛಿಸಿರುವ ಒಂದು ವ್ಯಾಸಂಗದ ಯಾವುದೇ ವಿಷಯವನ್ನು ಯಾವುದೇ ಶೈಕ್ಷಣಿಕ ಸಂಸ್ಥೆಯ ಮೂಲಕ ಅಭ್ಯಾಸ ಮಾಡಬಹುದು. ಇದರಿಂದಾಗಿ ಆತನ ಶೈಕ್ಷಣಿಕ ವರ್ಷದಲ್ಲಿ ಯಾವುದೇ ವ್ಯತ್ಯಯ ಉಂಟಾಗದೆ ಸಹಜವಾಗಿ ಸಾಮಾನ್ಯ ಪರೀಕ್ಷೆಗಳನ್ನು ಎದುರಿಸಲು ಮತ್ತು ತೇರ್ಗಡೆ ಹೊಂದಲು ಸಾಧ್ಯವಿದೆ.
2. ವಿದ್ಯಾರ್ಥಿಯ ತೇರ್ಗಡೆಯನ್ನು ನಿರ್ಧರಿಸಲು ನಡೆಸಲಾಗುವ ಒಂದೇ ಒಂದು ವಾರ್ಷಿಕ ಪರೀಕ್ಷೆಗೆ ಬದಲಾಗಿ ಮೌಲ್ಯಮಾಪನವು ಸತತವಾಗಿ, ನಿರಂತರವಾಗಿ ಮತ್ತು ಸಮಗ್ರವಾಗಿ ನಡೆಸಲ್ಪಡುವುದು.
3. ಸೂಕ್ತ ಅವಧಿಗಳಿಗೊಮ್ಮೆ ಪಠ್ಯಕ್ರಮವು ಪರಿಷ್ಕರಣೆಗೆ ಒಳಪಡುವುದು.
4. ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಪಾರದರ್ಶಕವಾದ, ಮುಕ್ತವಾದ ದಾಖಲಾತಿ ಮತ್ತು ಕಲಿಕೆಯ ಅವಕಾಶಗಳಿರುವುವು.

ಪ್ರಚಲಿತದಲ್ಲಿರುವ ವಾರ್ಷಿಕ ಪರೀಕ್ಷಾ ವ್ಯವಸ್ಥೆಯು ಅನೇಕ ದೋಷಗಳಿಂದ ಕೂಡಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಡುಬರುವ ದೋಷಗಳಿಂದ ಸೆಮಿಸ್ಟರ್ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಿರುವುದು ಸ್ಪಷ್ಟವಾಗಿಯೇ ಕಂಡುಬರುವುದು. ಅಲ್ಲಿನ ವಿದ್ಯಾರ್ಥಿಗಳು ಕಲಿಕೆಗಾಗಿ ಆಯ್ದುಕೊಳ್ಳುವ ವಿಷಯ ಮತ್ತು ಕಲಿಯಲು ಅಪೇಕ್ಷಿಸುವ ಶಿಕ್ಷಣ ಸಂಸ್ಥೆಗಳ ಆಯ್ಕೆಗೂ ವೈವಿಧ್ಯಮಯವಾದ ಅವಕಾಶಗಳು ಲಭ್ಯವಿದೆ. ಇದಕ್ಕೆ ತಕ್ಕಂತೆ ಭಾರತವೂ, ತನ್ನ ಸಮಕಾಲೀನ ರಾಷ್ಟ್ರಗಳಂತೆ ತನ್ನ ಶಿಕ್ಷಣ ವ್ಯವಸ್ಥೆಯನ್ನು ಬದಲಾಯಿಸಿಕೊಂಡು ಸುಧಾರಣೆಯಾಗಲೇಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಆದ್ದರಿಂದಲೇ ಭಾರತದಲ್ಲಿನ ಎಲ್ಲಾ ವಿಶ್ವವಿದ್ಯಾನಿಲಯಗಳು ಕಡ್ಡಾಯವಾಗಿ ಸೆಮಿಸ್ಟರ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲೇಬೇಕೆಂದು ಯುಜಿಸಿಯ ಅಧ್ಯಕ್ಷರಾದ ಪ್ರೊ. ಸುಖದೇವ್ ತೋರಟ್‌ರವರು ತಮ್ಮ ಆದೇಶ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಅನೇಕರ ಅಭಿಪ್ರಾಯದಂತೆ, ಸೆಮಿಸ್ಟರ್ ಒಂದು ಉತ್ತಮವಾದ ಪರ್ಯಾಯ ಶಿಕ್ಷಣ ವ್ಯವಸ್ಥೆಯಾದರೂ ಇಂತಹ ಒಂದು ನೂತನ ವ್ಯವಸ್ಥೆ ತೃಪ್ತಿಕರವಾಗಿ ವಿಷಯಗಳು, ವಿಶೇಷವಾದ ಅಂಗ ಸಂಸ್ಥೆಗಳೂ, ಮತ್ತು ಅವುಗಳಿಗೆ ಬೇಕಾದ ಸಂಪನ್ಮೂಲಗಳು ಇವೆಲ್ಲವುಗಳ ಸರಿಯಾದ ಹೊಂದಾಣಿಕೆ ಮತ್ತು ಸಹಕಾರದ ಅಗತ್ಯವಿದೆ. ಶೀಘ್ರ ಕಲಿಕೆ ಮತ್ತು ವೈವಿಧ್ಯಮಯವಾದ ಕಲಿಕೆ ಎಂಬ ಎರಡು ಲಕ್ಷಣಗಳೇನೋ ಉತ್ತಮವೇ. ಆದರೆ ಇದರ ಸಾಧನೆಗೆ ಸಾಕಷ್ಟು ಸಂಖ್ಯೆಯ ಶಿಕ್ಷಣ ಸಂಸ್ಥೆಗಳ ಅಗತ್ಯತೆ ಕಂಡು ಬರುತ್ತದೆ. ಈ ರೀತಿಯ ಬೆಂಬಲವು ಸಿಗದ ಹೊರತು, ಸೆಮಿಸ್ಟರ್ ಪದ್ಧತಿಯ ಅನುಷ್ಠಾನವು ಫಲಪ್ರದವಾಗಲು ಸಾಧ್ಯವಿಲ್ಲ. ಇದಕ್ಕಾಗಿ ಆಮೂಲಾಗ್ರವಾದ ಯೋಜನೆಯನ್ನು ತಯಾರು ಮಾಡಿಕೊಂಡು ನಂತರ ಕಾರ್ಯರೂಪಕ್ಕಿಳಿಸುವುದು ತುರ್ತಾಗಿ ಆಗಬೇಕಿದೆ.

ಸೆಮಿಸ್ಟರ್ ವ್ಯವಸ್ಥೆಯ ಸಾಧಕ ಬಾಧಕಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದಾಗಿದೆ.

- ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಹೊರೆಯನ್ನು ಕಡಿಮೆ ಮಾಡುತ್ತಾ ಅವರಲ್ಲಿ ನಿಯತವಾಗಿ ಕಲಿಯುವ ಅಭ್ಯಾಸವನ್ನು ಬೆಳೆಸುವುದು. ಇಡೀ ವಾರ್ಷಿಕ ಅವಧಿಯು ಎರಡು ಭಾಗಗಳಾಗಿ ದೊರಕುವುದರಿಂದ ವಿದ್ಯಾರ್ಥಿಯ ಊರ್ಧ್ವಮುಖ ಬೆಳವಣಿಗೆಗೆ ಪೂರಕವಾಗುವುದು.
- ವಿದ್ಯಾರ್ಥಿಯು ಮುಂದಿನ ಸೆಮಿಸ್ಟರ್‌ನಲ್ಲಿ ಕಲಿಯುತ್ತಿರುವಾಗಲೂ ಹಿಂದಿನ ಸೆಮಿಸ್ಟರ್‌ನ ಯಾವುದಾದರೂ ವಿಷಯಗಳಲ್ಲಿ ತೇರ್ಗಡೆಯಾಗದೆ ಉಳಿದಿದ್ದರೆ, ಅದನ್ನು ಜೊತೆ ಜೊತೆಯಾಗಿಯೇ ಕಲಿತು ಪಾಸು ಮಾಡಿಕೊಳ್ಳಲು ಅವಕಾಶವಿದೆ. ಇದರಿಂದಾಗಿ

Digitised by Bharatavani, CIIL

ವಿದ್ಯಾರ್ಥಿಗಳು ತಮ್ಮದೇ ಆದ ಕಲಿಕಾ ಗತಿಯಲ್ಲಿ ಅಭ್ಯಾಸಮಾಡಲು ಅವಕಾಶ ನೀಡುವುದು.

- ವಾರ್ಷಿಕ ಶೈಕ್ಷಣಿಕ ವಿನ್ಯಾಸಕ್ಕೆ ಹೋಲಿಸಿದರೆ, ಇಲ್ಲಿ ವಿದ್ಯಾರ್ಥಿಗಳು ವರ್ಷಪೂರ್ತಿ ಕಲಿಕಾ ಪ್ರಕ್ರಿಯೆಯಲ್ಲಿ ಮುಳುಗಿರುತ್ತಾರೆ. ಇದು ವರ್ಷದ ಕೊನೆಯಲ್ಲಿನ, ಪರೀಕ್ಷೆಗಾಗಿ ಅವರು ಹಮ್ಮಿಕೊಳ್ಳುವ ಕಲಿಕಾ ತಯಾರಿಗಿಂತ ಒಂದು ಅತ್ಯುತ್ತಮವಾದ ಪರ್ಯಾಯ ಯೋಜನೆ.

- ತರಗತಿಯಲ್ಲಿ ಗೈರುಹಾಜರಿಯ ಸಮಸ್ಯೆಗೆ ಅಷ್ಟಾಗಿ ಅವಕಾಶವೇ ಇರುವುದಿಲ್ಲ.

- ವಿದ್ಯಾರ್ಥಿಗಳು ಜ್ಞಾನದ ಮೇಲೆ ಹಿಡಿತ ಸಾಧಿಸಲು ಅವಕಾಶ ನೀಡುವುದು.

ಆದರೆ ಸೆಮಿಸ್ಟರ್ ವ್ಯವಸ್ಥೆಯಲ್ಲಿ ದೋಷಗಳೇನೂ ಇಲ್ಲವೆಂದಿಲ್ಲ. ಸಮಯದ ಅಭಾವ, ಆಳವಾದ ಅಧ್ಯಯನಕ್ಕೆ ಅವಕಾಶಗಳ ಕೊರತೆ, ಬೇರೆ ಇನ್ನೇನೇ ಅಧ್ಯಯನಕ್ಕೂ ಆಸ್ಪದವಿಲ್ಲದಿರುವುದು ಮತ್ತು ವಿದ್ಯಾರ್ಥಿಗಳಿಗೆ ಕಲಿತ ವಿಚಾರಗಳನ್ನು ಮರೆಯಲು ಸಾಧ್ಯವಾಗಿಸುವಂತಹ ಸಂಭವನೀಯತೆ ಮುಂತಾದುವು ಸೆಮಿಸ್ಟರ್ ವ್ಯವಸ್ಥೆಯಲ್ಲಿನ ದೋಷಗಳೆಂದು ಹೇಳಬಹುದು. ಸೆಮಿಸ್ಟರ್ ವ್ಯವಸ್ಥೆಯಿಂದ ಶಿಕ್ಷಕರ ಮೇಲೆ ಒತ್ತಡ ಹೆಚ್ಚಾಗುವುದು. ಆದರೆ, ಯುಜಿಸಿಯ ದೃಷ್ಟಿಕೋನದಿಂದ ಹೇಳುವುದಾದರೆ, ರಾಷ್ಟ್ರಾದ್ಯಂತ 2011–12ರ ವೇಳೆಗೆ ಸೆಮಿಸ್ಟರ್ ವ್ಯವಸ್ಥೆಯು ಕಂಡುಬರುವ ಸಾಧ್ಯತೆ ಇದೆ. ಎಷ್ಟೇ ವಿರೋಧಗಳು ಕಂಡು ಬಂದರೂ ಡಿಸೆಂಬರ್ 18ನೇ ತಾರೀಖು 2009ರಂದು ನಡೆದ ರಾಜ್ಯಸಭೆಯ ಪ್ರಶ್ನೋತ್ತರ ಸಮಯದಲ್ಲಿ ಮಾನವ ಸಂಪನ್ಮೂಲ ಸಚಿವರಾದ ಕಪಿಲ್ ಸಿಬಲ್‌ರವರು ಈ ಕೆಳಕಂಡಂತೆ ಘೋಷಣೆಯನ್ನು ಮಾಡಿದ್ದಾರೆ.

"ಸೆಮಿಸ್ಟರ್ ವ್ಯವಸ್ಥೆಯನ್ನು ಅಳವಡಿಸುವ ವಿಚಾರವನ್ನು ಎಲ್ಲೆಡೆಗೂ ತಲುಪಿಸುವ ನಿರ್ಧಾರವನ್ನು ನಾವು ತೆಗೆದುಕೊಂಡಾಗಿದೆ. ಇದು ವಿದ್ಯಾರ್ಥಿ ಸಮುದಾಯಕ್ಕೆ ಹಿತಕರವೂ, ಒಳ್ಳೆಯದು ಆಗಿದೆ. ಶಿಕ್ಷಕರು ಈ ದಿಶೆಯಲ್ಲಿ ಸಹಕಾರ ನೀಡುತ್ತಾ ಸೆಮಿಸ್ಟರ್ ವ್ಯವಸ್ಥೆಯನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಾ ವಿದ್ಯಾರ್ಥಿಗಳ ಒಳಿತಿಗೆ ಕಾರಣಕರ್ತರಾಗಬೇಕು ಎಂಬುದೇ ನಮ್ಮ ಕಳಕಳಿಯಾಗಿದೆ." ಸೆಮಿಸ್ಟರ್ ಪದ್ಧತಿಯು ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಆರೋಗ್ಯಕರ ಅಂತರ್‌ಕ್ರಿಯೆಗೆ ನೆರವು ನೀಡುವುದು ಎಂದೂ ಕಪಿಲ್ ಸಿಬಲ್‌ರವರು ಅಭಿಪ್ರಾಯಪಡುತ್ತಾರೆ.

– ಸಿ.ಎನ್.ಸು.

## ಸೆಂಟಿಮೆಂಟ್ ಅಥವಾ ರಸಭಾವ

ಜನರು ವಸ್ತು, ವ್ಯಕ್ತಿ, ವಿಚಾರ ಸಂವೇಗಾತ್ಮಕ ಭಾವನೆಗಳನ್ನು ತಮ್ಮದೇ ಆದ ರೀತಿಯಲ್ಲಿ ಹೊಂದಿರುತ್ತಾರೆ. ಅಂದರೆ ಘಟನೆಗಳು, ವಿಚಾರಗಳು ಹಾಗೂ ಜನರ ಬಗ್ಗೆ ಅವರು ತೋರುವ ಪ್ರತಿಕ್ರಿಯೆಗಳು ಅವರ ಸಂವೇಗಗಳು ಮತ್ತು ಭಾವನೆಗಳೊಂದಿಗೆ ಸಂಬಂಧಿಸಿವೆ. ಈ ಸಂವೇಗಾತ್ಮಕ ಭಾವನೆಗಳಿಗೆ ಚಿತ್ತವೃತ್ತಿ ಅಥವಾ ರಸಭಾವ (Sentiments) ಎನ್ನುತ್ತಾರೆ. ಆಗಾಗ್ಗೆ ನಮ್ಮ ನಾಯಕರು "ನಾವು ಜನರ ಸೆಂಟಿಮೆಂಟ್ ಅಥವಾ ರಸಭಾವಗಳನ್ನು ಗೌರವಿಸಬೇಕು ಮತ್ತು ಅವರ ಚಿತ್ತವೃತ್ತಿಯನ್ನು ನೋಯಿಸುವಂತಹ ಯಾವುದೇ ಕೆಲಸವನ್ನು ಮಾಡಬಾರದು" ಎಂದು ಹೇಳುವುದನ್ನು ಕೇಳಿದ್ದೇವೆ. ಮನೋವಿಜ್ಞಾನದಲ್ಲಿ ಮೊಟ್ಟ ಮೊದಲು 'ರಸಭಾವ' ಪರಿಕಲ್ಪನೆಯನ್ನು ವಿವರವಾಗಿ ವಿಶ್ಲೇಷಿಸಿದವರು ವಿಲಿಯಂ ಮ್ಯಾಕ್‌ಡೂಗಲ್‌ರವರು. ಮ್ಯಾಕ್ ಡೂಗಲ್‌ರವರ ಪ್ರಕಾರ ವಿವಿಧ ಸಂಯೋಗಾತ್ಮಕ ಭಾವನೆಗಳು ಒಬ್ಬ ವ್ಯಕ್ತಿ, ಒಂದು ವಸ್ತು ಅಥವಾ ಒಂದು ವಿಚಾರದ ಮೇಲೆ ಕೇಂದ್ರೀಕೃತಗೊಂಡಾಗ ಚಿತ್ತವೃತ್ತಿ ರೂಪುಗೊಳ್ಳುತ್ತದೆ. ಸಾಮಾನ್ಯವಾಗಿ ನಾವುಗಳು ಪೋಷಕರು ಅಥವಾ ಮಕ್ಕಳು ಅಥವಾ ಗಂಡ/ಹೆಂಡತಿ ಅಥವಾ ತುಂಬಾ ಹತ್ತಿರದವರೂ ತಮಗೆ ನೀಡಿದ ಕೊಡುಗೆಗಳ ಬಗ್ಗೆ ಹೆಚ್ಚಿನ ರಸಭಾವ ಹೊಂದಿರುತ್ತೇವೆ. ಇಲ್ಲಿ ನಾವು ಹಲವಾರು ಭಾವನೆಗಳು ಮತ್ತು ಸಂವೇಗಗಳು ಒಂದು ವಸ್ತುವಿನ ಸುತ್ತ ಕೇಂದ್ರೀಕೃತವಾಗಿರುವುದನ್ನು ಕಾಣುತ್ತೇವೆ. ಇಲ್ಲಿ ಪ್ರೀತಿಯ ಸಂವೇಗ, ಹೆಮ್ಮೆಯ ಸಂವೇಗ, ಗೌರವದ ಭಾವನೆ, ಸಂಬಂಧ ಕಳೆದುಕೊಳ್ಳಬಹುದೆಂಬ ಭಯದ ಸಂವೇಗ ಮುಂತಾದುವುಗಳಿರುವುದನ್ನು ಕಾಣುತ್ತೇವೆ. ಚಿತ್ತವೃತ್ತಿಯ ಒಂದು ಸಾಂಪ್ರದಾಯಿಕ ಉದಾಹರಣೆಯೆಂದರೆ **ದೇಶಭಕ್ತಿ**. ನಾವು ಪ್ರತಿಯೊಬ್ಬರೂ ನಮ್ಮ ತಾಯಿನಾಡನ್ನು ಪ್ರೀತಿಸುತ್ತೇವೆ. ನಾವು ನಮ್ಮ ಪರಂಪರೆ ಹಾಗೂ ದೇಶದ ಬಗ್ಗೆ ಹೆಮ್ಮೆಪಡುತ್ತೇವೆ. ಅದೇ ಸಮಯದಲ್ಲಿ ನಾವು ದೇಶದ ಭದ್ರತೆ ಹಾಗೂ ಸ್ವಾತಂತ್ರ್ಯದ ಬಗ್ಗೆ ಯೋಚಿಸುತ್ತೇವೆ. ನಾವು ನಮ್ಮ ಬಗ್ಗೆ ಹೊಂದಿರುವ ವಿಚಾರಗಳು ನಮ್ಮ ತಾಯಿನಾಡಿನ ವಿಚಾರಗಳೊಂದಿಗೆ ಸಂಬಂಧಿಸಿದೆ. ಮ್ಯಾಕ್‌ಡೂಗಲ್‌ರವರ ಪ್ರಕಾರ ಅತ್ಯಂತ ಪ್ರಮುಖವಾದ ರಸಭಾವವೆಂದರೆ ಸ್ವಯಂ ರಸಭಾವ (Self Sentiments) ಅಥವಾ ಆತ್ಮ ಗೌರವದ ರಸಭಾವ. ಇದು ಹೆಮ್ಮೆ, ಪ್ರೀತಿ, ಭಯ, ಕೋಪ ಮುಂತಾದ ಸಂವೇಗಗಳ ಸಂಕೀರ್ಣತೆಯಿಂದ ಉಗಮವಾಗಿದೆ.

ರಸಭಾವ ಅಭಿಪ್ರೇರಣಾ ಗುಣಗಳನ್ನು ಗಳಿಸಿಕೊಳ್ಳುವುದನ್ನು ನಾವು ಮೆಚ್ಚಿಕೊಳ್ಳಬಹುದಾಗಿದೆ. ಅಭಿಪ್ರೇರಕಗಳಾಗಿ ವರ್ತಿಸುವ ರಸಭಾವಗಳ ಬಲವನ್ನು ಈ ಮುಂದಿನ ಅಂಶಗಳಲ್ಲಿ ಕಾಣಬಹುದು. ನಾಯಕನ ವರ್ತನೆಯಲ್ಲಿ, ನಮ್ಮ ಸೈನ್ಯದವರು ಎದುರಿಸುವ ಅಪಾಯಗಳು ಮತ್ತು ಬಲಿದಾನ, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಸ್ವಾತಂತ್ರ ಹೋರಾಟಗಾರರ ಛಲ ಮತ್ತು ದೇಶಕ್ಕಾಗಿ ಅವರ ಬಲಿದಾನ. ಕೆಲವೊಮ್ಮೆ ಜನರು ತಮ್ಮ ಆತ್ಮ ಗೌರವದ ರಸಭಾವಕ್ಕಾಗಿ ತಮ್ಮ ಜೀವನವನ್ನೇ ಕೊನೆಗಾಣಿಸಿಕೊಂಡಿರುತ್ತಾರೆ. ರಸಭಾವಗಳು ಮೌಲ್ಯಗಳಂತೆ ಕಂಡುಬರುತ್ತವೆ. ರಸಭಾವಗಳು ನಿರ್ದಿಷ್ಟ ಜನ ಅಥವಾ ವಿಚಾರಗಳ ಸುತ್ತ ಕೇಂದ್ರೀಕೃತವಾಗಿದ್ದರೆ, ಮೌಲ್ಯಗಳು ಅಭಿಪ್ರೇರಕಗಳಾಗಿ ಹೆಚ್ಚು ಸಾಮಾನ್ಯ ಹಾಗೂ ನಿಯಂತ್ರಣದ ಕಾರ್ಯನಿರ್ವಹಿಸುತ್ತವೆ.

ಕೆಟೆಲ್ ಮತ್ತು ಮರ್‍ರೆಯವರು ರಸಭಾವ (Sentiments) ಎಂಬ ಪದವನ್ನು ಮಾನವನ ವರ್ತನೆಯ ಸಂಕೀರ್ಣ ವಿನ್ಯಾಸಗಳನ್ನು ವಿವರಿಸಲು ಬಳಸಿಕೊಂಡಿದ್ದಾರೆ. ಕೆಟೆಲ್‌ರವರ ಪ್ರಕಾರ ಒಂದು ರಸಭಾವವು ವ್ಯಕ್ತಿ ಗಳಿಸಿಕೊಂಡ ಅಭಿಪ್ರೇರಣಾ ಸಿದ್ಧತೆಯಾಗಿದೆ, ಇದು ವರ್ತನೆಯನ್ನು ಆರಂಭಿಸುತ್ತದೆ ಮತ್ತು ಅದರ ಮೇಲೆ ಪ್ರಭಾವ ಬೀರುತ್ತದೆ. ರಸಭಾವ ರೂಢಿತವಾದವುಗಳು, ಸಂಕೀರ್ಣವಾದವು ಮತ್ತು ಬಹಳಕಾಲ ನೆಲೆಗೊಳ್ಳುವಂತವುಗಳಾಗಿವೆ. ಇವು ಕೆಲವೊಮ್ಮೆ ನಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಮೂಲ ಪ್ರೇರಕಗಳಾಗಿ ಕಾರ್ಯನಿರ್ವಹಿಸುತ್ತವೆ. ರಸಭಾವಗಳು ವೈಯಕ್ತಿಕ ಅಂಶಗಳು ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವಗಳಿಂದ ರೂಪುಗೊಳ್ಳುತ್ತವೆ. ಇದರಿಂದ ಕೆಲವು ಸಾಂಸ್ಕೃತಿಕ ಗುಂಪುಗಳು ತಮ್ಮ ಕೆಲವು ರಸಭಾವಗಳನ್ನು ಇತರೆ ಗುಂಪುಗಳಿಗಿಂತ ಹೆಚ್ಚು ಪ್ರಬಲವಾಗಿ ಪ್ರದರ್ಶಿಸಿರುತ್ತಾರೆ.

ಉದಾ: ಒಬ್ಬ ಜಪಾನಿ ಸೈನಿಕ ತನ್ನ ರಾಷ್ಟ್ರದ ಬಗ್ಗೆ ಪ್ರಬಲ ರಸಭಾವ ಪ್ರದರ್ಶಿಸುತ್ತಾನೆ. ಯುದ್ಧ ಭೂಮಿಯಲ್ಲಿ ತಾನು ವೈರಿಗಳಿಗೆ ಶರಣಾಗುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅದೇ ರೀತಿ ಆತ್ಮವಿಶ್ವಾಸ ಮತ್ತು ವೈಯಕ್ತಿಕತೆಯಂತಹ ರಸಭಾವ ಅಮೇರಿಕನ್ನರಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ

Digitised by Bharatavani, CIIL

ಸ್ವಾತಂತ್ರ್ಯ ಹೋರಾಟಗಾರರು ಹೊಂದಿದ್ದ ಪ್ರಬಲ ದೇಶಭಕ್ತಿ ರಸಭಾವವೆ ಅವರ ಗುರಿಸಾಧನೆಗೆ ಕಾರಣವಾಗಿತ್ತು.

ರಸಭಾವಗಳು (Sentiments) ರೂಢಿಸಿಕೊಂಡ ಚಲನಶೀಲ ಗುಣಗಳು. ಇವುಗಳನ್ನು ಹೊಂದಿರುವ ವ್ಯಕ್ತಿಗಳು ನಿರ್ದಿಷ್ಟ ವಸ್ತುಗಳು ಹಾಗೂ ವ್ಯಕ್ತಿಗಳ ಮೇಲೆ ಗಮನ ಕೇಂದ್ರೀಕರಿಸುವಂತೆ ಮಾಡುತ್ತವೆ, ನಿರ್ದಿಷ್ಟ ರೀತಿಯಲ್ಲಿ ಅವುಗಳ ಬಗ್ಗೆ ವರ್ತಿಸುವಂತೆ ಅಥವಾ ಪ್ರತಿಕ್ರಿಯಿಸುವಂತೆ ಮಾಡುತ್ತವೆ. ರಸಭಾವದಲ್ಲಿರುವ ಸಂವೇದನೆ ಎರಡು ಘಟಕಾಂಶಗಳನ್ನೊಳಗೊಂಡಿದೆ. ಮೂಲ ಸಂವೇಗಗಳು ಮತ್ತು ಚಿತ್ತವನ್ನು ಪೋಷಿಸುವ ಶಕ್ತಿ ಅಥವಾ ಆನುಷಂಗಿಕ ಸಂವೇಗಗಳು, ಉತ್ಪತ್ತಿಯಾದ ಅತವಾ ಆನುಷಂಗಿಕ ಸಂವೇಗಗಳನ್ನು ಶ್ಲಾಘನೆಯ ಭಾವನೆಯ ಮೂಲಕ ವ್ಯಕ್ತಪಡಿಸಬಹುದು. ಶ್ಲಾಘನೆಯ ಭಾವನೆಯಲ್ಲಿ ಆಶ್ಚರ್ಯ (ಕುತೂಹಲ)ದ ಮೂಲಭಾವನೆ ಮತ್ತು ಋಣಾತ್ಮಕ ಆತ್ಮಸಂವೇದನೆ ಕಂಡುಬರುತ್ತದೆ. ಅದೇ ರೀತಿ ಉತ್ಪತ್ತಿಯಾದ ಭಾವನೆ ಧರ್ಮದ ಬಗ್ಗೆ ಇರುವ ಪೂಜ್ಯ ಭಾವನೆ ಹಲವಾರು ಚಲನಶೀಲ ಗುಣಗಳನ್ನೊಳಗೊಂಡಿದೆ. ಇದು ಭಯ, ಕೃತಜ್ಞತೆ, ಋಣಾತ್ಮಕ ಆತ್ಮ ಸಂವೇದನೆ, ಕೋಮಲ ಭಾವನೆ ಮತ್ತು ಆಶ್ಚರ್ಯದ ಭಾವನೆಗಳನ್ನು ಒಳಗೊಂಡಿರುತ್ತದೆ. ಕೆಟೆಲ್‌ರವರ ಪ್ರಕಾರ ವ್ಯಕ್ತಿಯ ರಸಭಾವಗಳು ಮತ್ತು ಮನೋಧೋರಣೆಗಳ ಜ್ಞಾನ ಅವರ ವ್ಯಕ್ತಿತ್ವದ ಬಗ್ಗೆ ಹಲವಾರು ಅಂಶಗಳನ್ನು ತಿಳಿಸುತ್ತದೆ. ಇದರಿಂದ ವ್ಯಕ್ತಿಯ ವರ್ತನೆಯನ್ನು ಮುನ್ಸೂಚಿಸಲು ಸಾಧ್ಯವಾಗುತ್ತದೆ. ಪ್ರಬಲವಾದ ಮತ್ತು ಆಳವಾದ ರಸಭಾವವನ್ನು ಹೊಂದಿರುವ ವ್ಯಕ್ತಿ ಸ್ಥಿರವಾದ, ವಿಶ್ವಸನೀಯವಾದ ಮತ್ತು ಮುನ್ಸೂಚಿಸಬಹುದಾದ ವರ್ತನೆಯನ್ನು ಪ್ರದರ್ಶಿಸುತ್ತಾನೆ. ಅವನ ವರ್ತನೆಗಳು ಮತ್ತು ಕ್ರಿಯೆಗಳು ಅಹಂಕೇಂದ್ರಿತ ಪ್ರವೃತ್ತಿಯಿಂದ ಪ್ರಚೋದಿತವಾದವುಗಳಾಗಿರುವುದಿಲ್ಲ.

ನಮ್ಮ ರಸಭಾವಗಳಲ್ಲಿ ಹೆಚ್ಚು ಶಕ್ತಿಶಾಲಿಯಾದ ಸೆಂಟಿಮೆಂಟ್ ಎಂದರೆ ಆತ್ಮಗೌರವದ ಸೆಂಟಿಮೆಂಟ್. ಕೆಟೆಲ್‌ರವರ ಪ್ರಕಾರ ನಮ್ಮ ಎಲ್ಲಾ ರಸಭಾವಗಳನ್ನು ಅಂತಿಮವಾಗಿ ವ್ಯವಸ್ಥಿಗೊಳಿಸುವ ಕೇಂದ್ರವಾಗಿ ಆತ್ಮಗೌರವದ ರಸಭಾವ ವರ್ತಿಸುತ್ತದೆ. ಪ್ರಬಲವಾದ ಆತ್ಮಗೌರವದ ರಸಭಾವ ಒಬ್ಬ ವ್ಯಕ್ತಿಯ ವರ್ತನೆಗೆ ದೃಢತೆ, ಸ್ಥಿರತೆ ಮತ್ತು ವೈಯಕ್ತಿಕತೆಯನ್ನು ತಂದುಕೊಡುತ್ತದೆ. ಇಂತಹ ರಸಭಾವವನ್ನು ಹೊಂದಿರುವ ವ್ಯಕ್ತಿ ನೈತಿಕತೆಯ ಹಂಬಲವನ್ನು ಪ್ರದರ್ಶಿಸುತ್ತಾನೆ.

ಸೆಂಟಿಮೆಂಟುಗಳು (ರಸಭಾವ)ಗಳು ಗುಂಪಿನ ಸುದೃಢತೆ, ಆತ್ಮಗೌರವ, ಸುರಕ್ಷತೆಯ ಭಾವನೆ, ಅನ್ಯೋನ್ಯ ಸಂಬಂಧ ಮುಂತಾದ ಧನಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತವೆ. ಆದರೆ ಅವು ತೀರ ಪ್ರಬಲವಾಗಿ, ವಿವೇಚನಾರಹಿತವಾದರೆ ವ್ಯಕ್ತಿಯ ಅಸ್ತಿತ್ವಕ್ಕೆ ಮಾರಕವಾಗಿ ಪರಿಣಮಿಸಬಹುದು. ವಿವೇಚನಾ ರಹಿತ ಆತ್ಮಾಹುತಿಗೆ ಕಾರಣವಾಗಬಹುದು. ಬೇರೆ ಗುಂಪಿನ ಬಗ್ಗೆ ದ್ವೇಷ ಭಾವನೆ ಮೂಡಿಸಿ ಗುಂಪು ಘರ್ಷಣೆಗೆ ಪ್ರೇರಣೆ ನೀಡಬಹುದು. ಯುರೋಪಿನ ಇತಿಹಾಸದಲ್ಲಿ ಕ್ರಿಶ್ಚಿಯನ್ನರು, ಮುಸ್ಲಿಮರ ನಡುವೆ ನಡೆದ ಕ್ರೂಸೇಡ್/ ಜಿಹಾದ್ ಧರ್ಮಯುದ್ಧಗಳು, ಸದ್ಯದಲ್ಲಿ ಅಲ್ಲಲ್ಲಿ ಉಂಟಾಗುತ್ತಿರುವ ಆತಂಕವಾದಿ ಚಟುವಟಿಕೆಗಳು ಇದಕ್ಕೆ ಉದಾಹರಣೆಗಳಾಗಿವೆ.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳಲ್ಲಿ ಧನಾತ್ಮಕ ರಸಭಾವಗಳನ್ನು ಪೋಷಿಸುವ ಮೂಲಕ ದೇಶಭಕ್ತಿ, ಧಾರ್ಮಿಕ, ಭಾಷಿಕ ಮತ್ತು ಆತ್ಮಗೌರವದಂತಹ ರಸಭಾವಗಳನ್ನು ಬೆಳೆಸುವ ಪ್ರಯತ್ನ ಮಾಡಬೇಕಾಗಿದೆ. ಆದರೆ ಅವು ವಿವೇಚನಾ ಪೂರ್ಣವಾಗಿರಬೇಕು. ರಸಭಾವಗಳು ಮಕ್ಕಳಲ್ಲಿ ರೂಢಿಗತವಾಗುವಂತಹ ಗುಣಗಳಾಗಿರುವುದರಿಂದ ಪೋಷಕರು, ಶಿಕ್ಷಕರು ಹಾಗೂ ಸಮಾಜ ಬಾಲ್ಯದಿಂದಲೇ ಮಕ್ಕಳಲ್ಲಿ ಅಪೇಕ್ಷಿತ ರಸಭಾವಗಳು ರೂಪುಗೊಳ್ಳುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಸಮಾಜಕ್ಕೆ ಪೂರಕವಾದ ರಸಭಾವಗಳನ್ನು ಪ್ರದರ್ಶಿಸಿದಾಗ ಅವರನ್ನು ಪ್ರೋತ್ಸಾಹಿಸಬೇಕು.

ಸೆಂಟಿಮೆಂಟುಗಳು (ರಸಭಾವ) ಮುಖ್ಯವಾಗಿ ಧರ್ಮ, ಸಂಸ್ಕೃತಿ, ಭಾಷೆಗಳ ಬಗೆಗಿನ ಚಿತ್ತವೃತ್ತಿಗಳನ್ನು ಅಳತೆ ಮಾಡಲು ನಿರ್ಧಾರಣಾ ಮಾಪನಿಗಳನ್ನು (Rating Scale) ರೂಪಿಸಿದ್ದಾರೆ. ಇವುಗಳನ್ನು ಉಪಯೋಗಿಸಿ ವ್ಯಕ್ತಿಗಳ ಸೆಂಟಿಮೆಂಟುಗಳ ತೀವ್ರತೆಯನ್ನು ಅಳತೆಮಾಡಬಹುದು.

–ಎಚ್.ವಿ.ವಾ.

## ಸೇವಾದಳ

'ಭಾರತ್ ಸೇವಾದಳ' ಮಹಾತ್ಮಾ ಗಾಂಧೀಜಿಯವರ ಧ್ಯೇಯೋದ್ದೇಶಗಳನ್ನು ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರತವಾಗಿರುವ ಪ್ರಮುಖ ಹಾಗೂ ಹೆಮ್ಮೆಯ ಸಂಸ್ಥೆಯಾಗಿದೆ. ಭಾರತ ಸೇವಾದಳದ ಸಂಸ್ಥಾಪಕ ಕನ್ನಡಿಗ ನಾರಾಯಣ್ ಸುಬ್ಬರಾವ್ ಹರ್ಡೀಕರ್ (ಡಾ॥ ನಾ.ಸು. ಹರ್ಡೀಕರ್). ಇವರು ವೃತ್ತಿಯಲ್ಲಿ ವೈದ್ಯರು. ಸಂಘಟನೆ ಇವರ ಸ್ವಾಭಾವಿಕ ಗುಣ. ಇವರು 'ಪಂಜಾಬ್ ಕೇಸರಿ' ಎಂದು ಪ್ರಸಿದ್ಧರಾಗಿದ್ದ ಲಾಲಾ ಲಜಪತ್ ರಾಯ್‌ರವರ ಪ್ರಭಾವಕ್ಕೊಳಗಾಗಿದ್ದರು ಮತ್ತು ಅವರನ್ನು (ಲಜಪತ್ ರಾಯರು) ನನಗೆ ತಂದೆ ಸಮಾನ' ಎಂದು ಹೇಳಿದ್ದಾರೆ. ಹರ್ಡೀಕರ್‌ರವರು ಬ್ರಿಟಿಷರ ದಬ್ಬಾಳಿಕೆಯನ್ನು ಎದುರಿಸಲು ಗಾಂಧೀಜಿ ನಡೆಸುತ್ತಿದ್ದ ಸತ್ಯಾಗ್ರಹ ಚಳುವಳಿಯಲ್ಲಿ ಪಾಲ್ಗೊಂಡಿದ್ದರು.

ಹರ್ಡೀಕರ್

ಹರ್ಡೀಕರ್‌ರವರು ದೇಶದ ಹಲವೆಡೆ ಸಂಚರಿಸಿ ಸತ್ಯಾಗ್ರಹದಲ್ಲಿ ಸಂಘಟನೆಯು ಯಾವ ರೂಪದಲ್ಲಿರಬೇಕು ಎಂಬುದನ್ನು ರಾಷ್ಟ್ರದ ನಾಯಕರೊಂದಿಗೆ ಚರ್ಚಿಸಿದರು. 1923 ಡಿ. 28 ರಂದು ಆಂಧ್ರಪ್ರದೇಶದ ಕಾಕಿನಾಡದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ 'ಹಿಂದೂಸ್ಥಾನಿ ಸೇವಾದಳ' ಎಂಬ ಹೆಸರಿನಲ್ಲಿ ಸ್ವಯಂ ಸೇವಕರ ಸಂಘಟನೆ ಪ್ರಾರಂಭವಾಯಿತು. ನಂತರ ಇದು 'ಕಾಂಗ್ರೆಸ್ ಸೇವಾದಳ' ಎನಿಸಿತು.

ಹರ್ಡೀಕರ್‌ರವರಿಗೆ 'ಕಾಂಗ್ರೆಸ್ ಸೇವಾದಳ'ವನ್ನು ಒಂದು ರಾಜಕೀಯ ಸಂಸ್ಥೆಯಾಗಿ ಮುಂದುವರೆಸುವುದು ಇಷ್ಟವಾಗದೆ 1950 ಮಾರ್ಚ್ 16 ರಂದು 'ಭಾರತ ಸೇವಾದಳ' ಎಂಬ ಪಕ್ಷಾತೀತ, ಜಾತ್ಯತೀತ ಸೇವಾಸಂಸ್ಥೆಯಾಗಿ ಪರಿವರ್ತನೆ ಮಾಡಲಾಯಿತು.

ಬೆಂಗಳೂರಿನಲ್ಲಿ 1950 ಡಿಸೆಂಬರ್‌ನಲ್ಲಿ ಭಾರತ ಸೇವಾದಳದ ಪ್ರಥಮ ಸಮ್ಮೇಳನ ಜರುಗಿತು. ಜವಾಹರ್‌ಲಾಲ್ ನೆಹರೂರವರಿಗೆ ಹರ್ಡೀಕರ್‌ರವರು ಅತ್ಯಂತ ಆತ್ಮೀಯರಾಗಿದ್ದರು. ದೇಶಕ್ಕಾಗಿ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಹರ್ಡೀಕರ್‌ರವರಿಗೆ 1950ರಲ್ಲಿ ರಾಜ್ಯಸಭೆಯ ಸದಸ್ಯತ್ವ ನೀಡಲಾಯಿತು. ಅಂದಿನ ಸೇನಾ ದಂಡನಾಯಕರಾಗಿದ್ದ ಜನರಲ್ ಕಾರಿಯಪ್ಪನವರು ಭಾರತ ಸೇವಾದಳದ ಮೊದಲ ಬೃಹತ್ ಮೇಳದ ಪೆರೇಡ್‌ನಲ್ಲಿ ಗೌರವ ರಕ್ಷೆ ಸ್ವೀಕರಿಸಿ 'ಭಾರತ ಸೇವಾದಳ ನಮ್ಮ ಸೇನೆಯ ಶಿಸ್ತು ಹಾಗೂ ಕವಾಯತನ್ನು ಸಹ ಮೀರಿಸಿದೆ' ಎಂದು ಉದ್ಗರಿಸಿರುತ್ತಾರೆ.

Digitised by Bharatavani, CIIL

**ಉದ್ದೇಶಗಳು**

1. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ತತ್ವ ಮತ್ತು ಕಾರ್ಯಕ್ರಮಗಳ ತಳಹದಿಯ ಮೇಲೆ ಯುವಕರನ್ನು ಸಂಘಟಿಸಿ ರಾಷ್ಟ್ರೀಯ ಸೇವೆಗಾಗಿ ತರಬೇತಿಯನ್ನು ನೀಡುವುದು.
2. ಯುವಕರನ್ನು ಭಾರತದ ಆದರ್ಶ ನಾಗರಿಕರನ್ನಾಗಿ ಮಾಡಲು ಅವರಲ್ಲಿ ಸಂಯಮ, ಧೈರ್ಯ, ತ್ಯಾಗ, ಸರಳತೆ, ಸೇವೆ, ತಾಳ್ಮೆ, ಸಹಕಾರ ಮತ್ತು ಪೂರ್ಣ ಸೇವಾ ಮನೋಭಾವನೆಯನ್ನು ಮೂಡಿಸುವುದು.
3. ಸೇವಾದಳ ಶಿಕ್ಷಣದ ಮೂಲಕ ಜನರ ಆರೋಗ್ಯ ಮತ್ತು ಶಾರೀರಿಕ ದೃಢತೆಯನ್ನು ಬಲಗೊಳಿಸುವುದು.
4. ಜಾತೀಯ ಮತ್ತು ವರ್ಣೀಯ ಭಾವನೆಗಳನ್ನು ತ್ಯಜಿಸಿ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಸೇವೆ ಸಲ್ಲಿಸಿ ರಾಷ್ಟ್ರೀಯತೆಯನ್ನು ಹೆಚ್ಚಿಸುವುದು.
5. ಆಪತ್ಕಾಲದಲ್ಲಿ ಪರಿಹಾರಗಳನ್ನು ಕೈಗೊಳ್ಳುವುದು ಹಾಗೂ ಪ್ರಾಣ, ಮಾನ ಮತ್ತು ಸಾರ್ವಜನಿಕ ಆಸ್ತಿಗಳನ್ನು ರಕ್ಷಿಸುವ, ಶಾಂತಿ ಕಾಯ್ದುಕೊಳ್ಳುವ ಕೆಲಸವನ್ನು ನಿರ್ವಹಿಸುವುದು.
6. ಉದ್ದೇಶಗಳ ಕಾರ್ಯಾನ್ವಯಕ್ಕಾಗಿ ಅಗತ್ಯವಾದ (ಶೈಕ್ಷಣಿಕ, ಕೈಗಾರಿಕೆ, ಸಾಂಸ್ಕೃತಿಕ ಮತ್ತು ಕ್ರೀಡೆ) ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ಇಂತಹ ಉದ್ದೇಶಗಳುಳ್ಳ ಇತರೆ ಸಂಸ್ಥೆಗಳೊಂದಿಗೆ ಸಮನ್ವಯ ಹೊಂದುವುದು.

**ಭಾರತ ಸೇವಾದಳ ಸಲ್ಲಿಸಿರುವ ಮಹತ್ತರ ಸೇವೆಗಳು**

1. ಬ್ರಿಟಿಷರ ವಿರುದ್ಧ ಹೋರಾಡಲು ಗಾಂಧೀಜಿಯವರು ಕರೆಕೊಟ್ಟಾಗಲೆಲ್ಲಾ ಸಂಘದ ಸದಸ್ಯರು ಪಾಲ್ಗೊಂಡಿರುತ್ತಾರೆ.
2. ಜನರಲ್ಲಿ ಜಾಗೃತಿ ಮೂಡಿಸಲು 'ವಾಲೆಂಟಿಯರ್', "ಜೈ ಹಿಂದ್" ಪತ್ರಿಕೆಗಳನ್ನು ಸೇವಾದಳದ ವತಿಯಿಂದ ಹೊರಡಿಸಲಾಗಿತ್ತು.
3. 1950ರಲ್ಲಿ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲರ ಗಮನ ಸೆಳೆಯಿತು.
4. ಗ್ರಾಮೀಣ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಗ್ರಾಮೀಣ ಜನರಲ್ಲಿ ಸ್ವಾವಲಂಬನೆಯ ಅರಿವನ್ನು ಮೂಡಿಸಲಾಯಿತು. ರಸ್ತೆ ಕಾಮಗಾರಿ, ಕಂಪೋಸ್ಟ್ ಗೊಬ್ಬರಗಳ ಗುಂಡಿ ರಚನೆ, ನೈರ್ಮಲ್ಯ ಕಾಪಾಡುವಿಕೆ, ಶಿಕ್ಷಣ, ಆರೋಗ್ಯ ಮುಂತಾದ ಯೋಜನೆಗಳು ರೂಪಿತವಾಗಿ ಗ್ರಾಮಗಳ ಸ್ವರೂಪವೇ ಬದಲಾಯಿತು.
5. ಸೇವಾದಳದ ಶಿಬಿರಗಳಲ್ಲಿ ನಾಡಿನ ಖ್ಯಾತ ನೇತ್ರ ತಜ್ಞ ಡಾ॥ ಎಂ.ಸಿ. ಮೋದಿಯವರ ನೇತ್ರ ಚಿಕಿತ್ಸಾ ಕಾರ್ಯಕ್ರಮವಿರುತ್ತಿತ್ತು.
6. 2004 ಡಿ. 26ರಂದು ತಮಿಳುನಾಡು, ಪಾಂಡಿಚೇರಿ, ಅಂಡಮಾನ್ ಮತ್ತು ನಿಕೋಬಾರ್ ಪ್ರದೇಶದಲ್ಲಿ ಸುನಾಮಿ ಅಪ್ಪಳಿಸಿತು. ಆಗ ಭಾರತ ಸೇವಾದಳವು ಸಂತ್ರಸ್ತರ ಪುನರ್ವಸತಿ ಕಾರ್ಯವನ್ನು ಕೈಗೊಂಡಿತು.
7. ಶಿಕ್ಷಣ ಕ್ಷೇತ್ರಕ್ಕೆ ಸೇವಾದಳದ ಕಾರ್ಯ ಅಪಾರ. ರಾಷ್ಟ್ರೀಯ ಭಾವೈಕ್ಯತೆ, ಕೋಮು ಸೌಹಾರ್ದತೆ, ರಾಷ್ಟ್ರ ಪ್ರೇಮ, ಸೇವಾ ಮನೋಭಾವವನ್ನು ರಾಜ್ಯಾದ್ಯಂತ ವಿದ್ಯಾರ್ಥಿಗಳಲ್ಲಿ ಮೂಡಿಸುತ್ತಾ ಬಂದಿದೆ. 5ನೇ ತರಗತಿಯಿಂದ 10ನೇ ತರಗತಿಯ ಮಕ್ಕಳಿಗೆ ಯೋಗ ಶಿಕ್ಷಣ, ಮಹಿಳೆಯರಿಗೆ ಯೋಗ ಶಿಕ್ಷಣ ಮತ್ತು ನೈತಿಕ ಶಿಕ್ಷಣ, ಒಂದು ಲಕ್ಷ ಸಸಿನೆಡುವ ಕಾರ್ಯಕ್ರಮವನ್ನು ಆಗಾಗ್ಗೆ ಹಮ್ಮಿಕೊಳ್ಳಲಾಗುತ್ತದೆ.
8. ಅನೇಕ ಅರ್ಥಪೂರ್ಣ ಪ್ರಕಟಣೆಗಳನ್ನು ಹೊರತರಲಾಗಿದೆ, 'ಶಾರೀರಿಕ ಯೋಗ ಮತ್ತು ನೈತಿಕ ಶಿಕ್ಷಣ', 'ಭಾರತ ಸೇವಾದಳ ಕೈಪಿಡಿ ಗೀತೆಗಳು', 'ಶಿಕ್ಷಣಕ್ರಮ ಮತ್ತು ರಾಷ್ಟ್ರಧ್ವಜ' ಮುಂತಾದವುಗಳು.

ಈ ಸಂಸ್ಥೆಯ ಹೆಸರು ಭಾರತ ಸೇವಾದಳ ಎಂತಿದ್ದರೂ ಇದು ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಾಗಿದೆ. ಈ ಸಂಸ್ಥೆಗೆ ಆರ್ಥಿಕ ನೆರವನ್ನು ಶಿಕ್ಷಣ ಇಲಾಖೆ ಮತ್ತು ಸರ್ವ ಶಿಕ್ಷಣ ಅಭಿಯಾನದ ಮೂಲಕ ಒದಗಿಸಲಾಗುತ್ತಿದೆ. ಈ ಸಂಘದ ಕಾರ್ಯಚಟುವಟಿಕೆಗಳನ್ನು ಸರ್ಕಾರಿ/ಖಾಸಗಿ ಹಿರಿಯ ಪ್ರಾಥಮಿಕ-ಪ್ರೌಢಶಾಲೆ ಮತ್ತು ಕಿರಿಯ ಕಾಲೇಜುಗಳಲ್ಲಿ ನಡೆಸಬಹುದಾಗಿದೆ. ಶಾಲೆಗಳಲ್ಲಿ ಪ್ರತಿವರ್ಷ 'ಬಾಲಕ', 'ಕುಮಾರ' ಮತ್ತು 'ಪ್ರವೇಶಿಕ' ಪರೀಕ್ಷೆಗಳನ್ನು ನಡೆಸಲಾಗುತ್ತದೆ.

– ಜಿ.ರ.ಮ.

## ಸೂಕ್ಷ್ಮ (ಅಣು) ಬೋಧನೆ

ಡ್ವೈಟ್ಅಲೆನ್

ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು ಪ್ರತಿಯೊಂದು ರಾಷ್ಟ್ರದ ಕಾಳಜಿ. ಒಳ್ಳೆಯ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮದ ನೆರವಿನಿಂದ ಗುಣಮಟ್ಟದ ಅಧ್ಯಾಪಕರನ್ನು ಸಿದ್ಧಗೊಳಿಸುವುದರಿಂದ ಮಾತ್ರ ಈ ಗುರಿ ಸಾಧನೆಯಾಗುತ್ತದೆ. ವೃತ್ತಿಪರ ಅಧ್ಯಾಪಕರನ್ನು ಎರಡು ಮಟ್ಟಗಳಲ್ಲಿ ಸಿದ್ಧಗೊಳಿಸುತ್ತೇವೆ. ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಮಟ್ಟಗಳಲ್ಲಿ ಸಂಜ್ಞಾನಾತ್ಮಕ ಹಾಗೂ ಸಂವೇಗಾತ್ಮಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಧ್ಯಾಪಕರಲ್ಲಿ ಉತ್ತಮ ಬೋಧನೆ ಮತ್ತು ನಿರ್ವಹಣೆ ಕೌಶಲಗಳನ್ನು ಬೆಳೆಸುವುದು ಯಾವುದೇ ಪ್ರಶಿಕ್ಷಣ ಕಾರ್ಯಕ್ರಮದ ಅಂತಿಮ ಉದ್ದೇಶ. ಈ ಕೌಶಲಗಳನ್ನು ವ್ಯವಸ್ಥಿತವಾಗಿ ರೂಪಿಸಿ, ಸಂಘಟಿತಗೊಳಿಸಿದ ರೂಢಬೋಧನಾ ಕಾರ್ಯಕ್ರಮದ ಸಹಾಯದಿಂದ ವಿಕಾಸಗೊಳಿಸಬೇಕು. ಇದರಿಂದಾಗಿ ವಿದ್ಯಾರ್ಥಿ ಶಿಕ್ಷಕರು ಈ ಕೌಶಲಗಳಲ್ಲಿ ಪರಿಣತಿ ಪಡೆಯುವುದು ಸಾಧ್ಯವಾಗುತ್ತದೆ. ಆದರೆ ದುರದೃಷ್ಟವಶಾತ್ ಅಧ್ಯಾಪಕ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಬಹಳ ತರಾತುರಿಯಿಂದ ರೂಢಬೋಧನೆ ಕಾರ್ಯಕ್ರಮವನ್ನು ಸಂಘಟಿಸಲಾಗುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ಸರಿಯಾದ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳುವುದಿಲ್ಲ. ಸೂಕ್ಷ್ಮ (ಅಣು) ಬೋಧನೆ ಪರಿಕಲ್ಪನೆ 1960ರ ದಶಕದಲ್ಲಿ ಪ್ರಚಲಿತವಾಗುವುದಕ್ಕೆ ಮುಂಚೆ ರೂಢಬೋಧನೆ ಈ ರೀತಿಯಲ್ಲಿದ್ದರೂ ಈಗಲೂ ಈ ಕ್ಷೇತ್ರ ಉಪೇಕ್ಷೆಗೆ ಒಳಗಾಗಿರುವುದು ದುಃಖಕರ ಸಂಗತಿ.

**ಹಿನ್ನೆಲೆ:** ಅಧ್ಯಾಪಕ ಪ್ರಶಿಕ್ಷಣ ಕಾರ್ಯಕ್ರಮಗಳಲ್ಲಿ ರೂಢಬೋಧನೆ ಬಗ್ಗೆ ಭಾವಿ-ಅಧ್ಯಾಪಕರಿಗೆ ದಿಶಾ ನಿರ್ದೇಶನ ಮಾಡುವ ರೀತಿ ಬಹಳ ದುರ್ಬಲವಾಗಿದ್ದು, ಅದರಲ್ಲೂ ಸುಧಾರಣೆಯ ಅಗತ್ಯವಿದೆ ಎಂಬುದನ್ನು

Digitised by Bharatavani, CIIL

ಶಿಕ್ಷಣ ತಜ್ಞರು ಮನಗಂಡರು. ಅಧ್ಯಾಪನ (ಬೋಧನ) ಕಾರ್ಯವನ್ನು ವಿಶ್ಲೇಷಿಸಿದಾಗ ಅದು ಬಹಳ ಸಂಕೀರ್ಣವಾದ ಪ್ರಕ್ರಿಯೆಯಾಗಿದ್ದು, ಬೋಧನೆಯ ವಿಷಯವಸ್ತು ಮತ್ತು ಬೋಧನಾ ಕೌಶಲಗಳ ವಿಕಾಸ ಈ ಎರಡೂ ಅಂಶಗಳ ಮೇಲೆ ಪ್ರಭುತ್ವವಿರಬೇಕೆಂದು ತಿಳಿದುಬಂತು. ಬೋಧನಾ ಕ್ರಿಯೆ/ಕೌಶಲ ತನ್ನಂತೆ ತಾನೇ ವಿಕಾಸಗೊಳ್ಳುತ್ತದೆ ಎಂದು ತಿಳಿದುಕೊಳ್ಳುವುದು ತಪ್ಪೆನಿಸಿತು. ಬಹಳ ಕಾಲದವರೆಗೆ ಈ ಕ್ಷೇತ್ರವನ್ನು ಉತ್ತಮಗೊಳಿಸುವ ಪ್ರಯತ್ನಗಳು ನಡೆಯುತ್ತಿದ್ದವು. ಆದರೆ ಸಾಕಷ್ಟು ಯಶಸ್ಸು ದೊರೆಯಲಿಲ್ಲ. 60ರ ದಶಕದಲ್ಲಿ ಒಂದು ಮುಖ್ಯ ಅಧ್ಯಾಪಕ ದಿಶಾ ನಿರ್ದೇಶನ ಕಾರ್ಯಕ್ರಮವಾಗಿ ಸೂಕ್ಷ್ಮ (ಅಣು) ಬೋಧನೆ ಪರಿಕಲ್ಪನೆ ಬೆಳಕಿಗೆ ಬಂತು. ಈ ಕ್ಷೇತ್ರದಲ್ಲಿದ್ದ ಕೊರತೆಯನ್ನು ನಿವಾರಿಸಿತು. ಬಹಳ ಬೇಗ ಈ ಹೊಸ ಕ್ರಮವನ್ನು ವಿಶ್ವದಾದ್ಯಂತ ಅನೇಕ ಅಧ್ಯಾಪಕ ಪ್ರಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಂಡವು. ಸೂಕ್ಷ್ಮ ಬೋಧನೆ ಪರಿಕಲ್ಪನೆ ವಿಕಾಸಗೊಳ್ಳುವುದಕ್ಕೆ ಮೊದಲೇ ತರಗತಿ ಅನ್ಯೋನ್ಯ ಕ್ರಿಯೆಗೆ ಸಂಬಂಧಿತ ಅಧ್ಯಯನಗಳು ನಡೆಯುತ್ತಿದ್ದವು. ಈ ಅಧ್ಯಯನಗಳು ತರಗತಿಯಲ್ಲಿ ಅಧ್ಯಾಪಕ ವಿದ್ಯಾರ್ಥಿಗಳೊಂದಿಗೆ ಸ್ಥಾಪಿಸಿಕೊಳ್ಳುವ ಸಂಬಂಧದ ರೀತಿಗಳಿಗೆ ಸಂಬಂಧಿಸಿದ್ದವು. ಈ ಅಧ್ಯಯನಗಳ ಪೈಕಿ 1955–60ರ ನಡುವೆ ಅಮೆರಿಕಾದ ಮಿನ್ನೆಸೋಲ್ ವಿಶ್ವವಿದ್ಯಾನಿಲಯದಲ್ಲಿ ನೆಡ್.ಎ. ಫ್ಲ್ಯಾಂಡರ್ಸ್‌ನ ತಾವು ರೂಪಿಸಿದ ಫ್ಲ್ಯಾಂಡರ್ಸ್‌ನ ವರ್ಗ (ತರಗತಿ) ವಿಶ್ಲೇಷಣ ಮಾದರಿ ಆಧಾರದ ಮೇಲೆ ಕೈಗೊಂಡು ಅಧ್ಯಯನಗಳು ಪ್ರಮುಖವೆನಿಸಿದ್ದವು.

ಸೂಕ್ಷ್ಮ (ಅಣು) ಬೋಧನೆ (Micro teaching) ಒಂದು ಅಧ್ಯಾಪಕ ಪ್ರಶಿಕ್ಷಣ ತಂತ್ರ. ಇದು ನಿಯಮಿತ ತರಗತಿಯಲ್ಲಾಗುವ ಬೋಧನ–ಕಲಿಕೆ ಪ್ರಕ್ರಿಯೆಯ ಸಂಕೀರ್ಣತೆಯನ್ನು ಸರಳೀಕೃತಗೊಳಿಸಿ ವಿಷಯವಸ್ತು ಮತ್ತು ಬೋಧನಾ ವಿಧಾನಗಳನ್ನು ಉತ್ತಮಪಡಿಸುವ ಗುರಿಯನ್ನು ಹೊಂದಿರುವ ಒಂದು ಪ್ರಶಿಕ್ಷಣ ಕಾರ್ಯಕ್ರಮ. ವಿದ್ಯಾರ್ಥಿ ಅಧ್ಯಾಪಕರನ್ನು ಸಾಕಷ್ಟು ಸಿದ್ಧಗೊಳಿಸದೆ ತರಗತಿಯಲ್ಲಿ ಸ್ಥೂಲ ಬೋಧನೆಯನ್ನು (Micro teaching) ಕೈಗೊಳ್ಳಲು ತರಾತುರಿಯಲ್ಲಿ ತರಗತಿಗೆ ದಬ್ಬುತ್ತಿದ್ದ ಕ್ರಮಕ್ಕೆ ವಿರುದ್ಧವಾಗಿ 1960ರ ದಶಕದಲ್ಲಿ ಸೂಕ್ಷ್ಮ (ಅಣು) ಬೋಧನೆ ಅಸ್ತಿತ್ವಕ್ಕೆ ಬಂತು. ಸೂಕ್ಷ್ಮ ಬೋಧನೆಯ ಪರಿಕಲ್ಪನೆಯನ್ನು ಪರಿಭಾವಿಸಿದ ಕೀರ್ತಿ ಅಮೆರಿಕಾದ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯದ ಡಾ॥ ಡ್ವೈಟ್ ಅಲೆನ್‌ಗೆ ಸಲ್ಲುತ್ತದೆ. 1963ರಲ್ಲಿ ಅದನ್ನು ಪರಿಭಾವಿಸಿದಾಗಿನಿಂದ ಸುಮಾರು 5 ದಶಕಗಳಿಗೂ ಹೆಚ್ಚು ಕಾಲ ವಿದ್ಯಾರ್ಥಿ–ಅಧ್ಯಾಪಕರಿಗೆ ಮತ್ತು ತರಗತಿ ಅಧ್ಯಾಪಕರಿಗೆ ಹೊಸ ಹೊಸ ಬೋಧನ ಕೌಶಲಗಳನ್ನು ಕಲಿತುಕೊಳ್ಳಲು ಸೂಕ್ಷ್ಮಬೋಧನೆ ತಂತ್ರ ಸಹಾಯ ನೀಡುತ್ತಿದೆ. ಇದು ಸಾಮಾನ್ಯವಾಗಿ ಎಲ್ಲಾ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಶಾಲೆಗಳಲ್ಲಿ ಸ್ವೀಕೃತಗೊಂಡಿರುವ ಅಧ್ಯಾಪಕ–ಪ್ರಶಿಕ್ಷಣ ಕ್ರಮವಾಗಿದೆ. ಇದರ ಗುರಿ ನಿಯಮಿತ ಬೋಧನ–ಕಲಿಕೆ ಪ್ರಕ್ರಿಯೆಯ ಸಂಕೀರ್ಣತೆಯನ್ನು ಸರಳಗೊಳಿಸುವುದಾಗಿದೆ.

**ಸೂಕ್ಷ್ಮ (ಅಣು) ಬೋಧನೆ ಸ್ವರೂಪ:** ಬೋಧನೆ ಒಂದು ಸಂಕೀರ್ಣ ಚಟುವಟಿಕೆ. ಏಕೆಂದರೆ ಯಾವುದೇ ಬೋಧನೆ ಸನ್ನಿವೇಶದಲ್ಲಿ ಅಧ್ಯಾಪಕರು 45 ನಿಮಿಷಗಳಿಂದ 60 ನಿಮಿಷಗಳ ಅವಧಿಯಲ್ಲಿ ಒಂದು ಬೃಹತ್ ವಿದ್ಯಾರ್ಥಿ ಸಮೂಹಕ್ಕೆ ತಾವು ಕಲಿತ ಅನೇಕ ಬೋಧನ ಕೌಶಲಗಳನ್ನು ಉಪಯೋಗಿಸಿಕೊಂಡು ಅನೇಕ ಪರಿಕಲ್ಪನೆಗಳನ್ನು ಮಾಹಿತಿಗಳನ್ನು ಬೋಧಿಸಬೇಕಾಗುತ್ತದೆ. ಸೂಕ್ಷ್ಮ ಬೋಧನೆಯಲ್ಲಿ ತರಗತಿಯ ಗಾತ್ರ, ಬೋಧನೆಯ ಅವಧಿ ಮತ್ತು ಬೋಧಿಸಬೇಕಾದ ವಿಷಯ ವಸ್ತುಗಳ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳುವುದರ ಮೂಲಕ ಗರಿಷ್ಠ ಮಟ್ಟದ ಸನ್ನಿವೇಶವನ್ನು ಉಂಟು ಬೃಹತ್ ಬೋಧನೆಯ (Micro teaching)ಲ್ಲಿ ಸಂಕೀರ್ಣತೆಗಳನ್ನು ಕಡಿಮೆ ಮಾಡುವುದೇ ಸೂಕ್ಷ್ಮ ಬೋಧನೆ (Micro teaching) ಮುಖ್ಯ ಉದ್ದೇಶ.

ಸೂಕ್ಷ್ಮ ಬೋಧನೆಯ ಸ್ವರೂಪತೆಯನ್ನೂ ಹೀಗೆ ವಿವರಿಸಬಹುದು.

- ಒಂದೇ ಒಂದು ಪರಿಕಲ್ಪನೆಯನ್ನು ಬೋಧನೆಗೆ ಆಯ್ಕೆ ಮಾಡಿಕೊಂಡು ಬೋಧಿಸಬೇಕಾದ ವಿಷಯ ವಸ್ತುವಿನ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಲಾಗುತ್ತದೆ.
- ಬೋಧನೆ ಪ್ರಯತ್ನದ ಸಂಕೀರ್ಣತೆಯನ್ನು ವಿದ್ಯಾರ್ಥಿಗಳ ಸಣ್ಣ ಗುಂಪನ್ನು ಬೋಧನೆಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. (8–10 ವಿದ್ಯಾರ್ಥಿಗಳು) ಈ ವಿದ್ಯಾರ್ಥಿಗಳು ನಿಜವಾದ ವಿದ್ಯಾರ್ಥಿಗಳಾಗಬೇಕಾಗಿಲ್ಲ. ವಿದ್ಯಾರ್ಥಿ ಶಿಕ್ಷಕರ ಸಹಪಾಠಿಗಳೇ ಶಾಲಾ ಮಕ್ಕಳ ಪಾತ್ರ ನಟಿಸಬಹುದು.)
- ಬೋಧನೆಯ ಪ್ರಯತ್ನ ಕಡಿಮೆ ಅವಧಿಯಲ್ಲಿ (5 ರಿಂದ 10 ನಿಮಿಷಗಳು) ಪೂರ್ಣಗೊಳ್ಳುತ್ತದೆ.
- ಬೋಧನೆಯ ಸಂಕೀರ್ಣತೆಯನ್ನು ಕಡಿಮೆ ಮಾಡಲು ಬೋಧನಾ ಚಟುವಟಿಕೆಯನ್ನು ವಿವಿಧ ರೀತಿಯ ನಿರ್ದಿಷ್ಟ ಬೋಧನ ಕೌಶಲಗಳಾಗಿ ವಿಭಜಿಸಿಕೊಳ್ಳಲಾಗುತ್ತದೆ. ಈ ಕೌಶಲಗಳನ್ನು ವಿದ್ಯಾರ್ಥಿ–ಶಿಕ್ಷಕರು ಒಂದೊಂದನ್ನೇ ಮೇಲಿನ ಮೂರು ಅವಶ್ಯಕತೆಗಳನ್ನು ಪೂರ್ಣಗೊಳಿಸಿ ಕಲಿತುಕೊಳ್ಳುತ್ತಾರೆ.

ಸೂಕ್ಷ್ಮ ಬೋಧನೆಯನ್ನು ಅಣುಕು ಬೋಧನ ಪ್ರಯತ್ನ ಎಂದು ಪರಿಗಣಿಸಬಹುದು. ಇದೊಂದು ಸೂಕ್ಷ್ಮ ರೂಪಗೊಳಿಸಿದ ತರಗತಿ ಬೋಧನೆಯ ಪ್ರಯತ್ನ. ಇದರಲ್ಲಿ ಬೋಧನ ತರಗತಿ ಬೋಧನೆಯಲ್ಲಿನ ಎಲ್ಲಾ ಅಂಶಗಳನ್ನು ಸೂಕ್ಷ್ಮಗೊಳಿಸಲಾಗಿದೆ. ಈ ಪ್ರಯತ್ನವನ್ನು ನಿಯಂತ್ರಿತ ಪ್ರಾಯೋಗಿಕ ಚಿಕಿತ್ಸಕ ಸನ್ನಿವೇಶದಲ್ಲಿ ಕೈಗೊಳ್ಳಲಾಗುತ್ತದೆ.

ಸೂಕ್ಷ್ಮ ಬೋಧನೆಯ ಒಂದೆರಡು ಪರಿಭಾಷೆಗಳನ್ನು ಇಲ್ಲಿ ಪರಿಗಣಿಸಬಹುದು.

ಅಲೆನ್ ಮತ್ತು ಈವ್ (1968) "ಬೋಧನ ವರ್ತನೆಯ ನಿರ್ದಿಷ್ಟ ಅಂಶಗಳ ಮೇಲೆ ಗಮನ ಕೇಂದ್ರೀಕರಿಸಲು ಮತ್ತು ನಿಯಂತ್ರಿತ ಪರಿಸ್ಥಿತಿಗಳಡಿಯಲ್ಲಿ ರೂಢ ಬೋಧನೆಯನ್ನು ಕೈಗೊಳ್ಳಲು ಸಾಧ್ಯವಾಗಿಸುವ ಬೋಧನೆಯ ನಿಯಂತ್ರಿತ ಅಭ್ಯಾಸ ವ್ಯವಸ್ಥೆಯೇ ಸೂಕ್ಷ್ಮಬೋಧನೆ.

ಪಸ್ಸಿ ಮತ್ತು ಲಲಿತ ಎಂ.ಎಸ್. (1976) ಪ್ರಕಾರ "ಸೂಕ್ಷ್ಮಬೋಧನೆ ಒಂದು ಪ್ರಶಿಕ್ಷಣ ತಂತ್ರ. ಇದರಲ್ಲಿ ವಿದ್ಯಾರ್ಥಿ–ಅಧ್ಯಾಪಕರು ಆಯ್ಕೆ ಮಾಡಿಕೊಂಡು ಪರಿಕಲ್ಪನೆಯೊಂದನ್ನು ಸಣ್ಣ ವಿದ್ಯಾರ್ಥಿ ಸಮೂಹಕ್ಕೆ ಕಡಿಮೆ ಬೋಧನ ಅವಧಿಗೆ ಒಂದು ನಿರ್ದಿಷ್ಟ ಬೋಧನಾ ಕೌಶಲವನ್ನು ಉಪಯೋಗಿಸಿಕೊಂಡು ಬೋಧಿಸುತ್ತಾರೆ."

ಸೂಕ್ಷ್ಮ ಬೋಧನೆಯಲ್ಲಿ ವಿದ್ಯಾರ್ಥಿ–ಅಧ್ಯಾಪಕರು ಅಣುಕು ಬೋಧನಾ ಪರಿಸರದಲ್ಲಿ ರೂಢ ಬೋಧನೆಯನ್ನು ಅಭ್ಯಾಸ ಮಾಡುತ್ತಾರೆ. ಸಾಕಷ್ಟು ಅಭ್ಯಾಸದೊಂದಿಗೆ ನಿರ್ದಿಷ್ಟ ಬೋಧನಾ ಕೌಶಲಗಳಲ್ಲಿ ಪ್ರಾವೀಣ್ಯತೆ ಪಡೆದುಕೊಂಡು ಅವುಗಳನ್ನು ಪರಸ್ಪರ ಸಮಗ್ರಗೊಳಿಸುವಿಕೆಯನ್ನು ಕಲಿತ ನಂತರವೇ ವಾಸ್ತವಿಕ ತರಗತಿಯಲ್ಲಿ ವರ್ಗ ಬೋಧನೆ ಮಾಡಲು ಅನುಮತಿ ನೀಡಲಾಗುತ್ತದೆ. ಈ ಪದ್ಧತಿ ಪೈಲಟ್‌ಗಳಿಗೆ ಅಣುಕು ಸನ್ನಿವೇಶದಲ್ಲಿ ತರಬೇತಿ ಪಡೆದ ನಂತರವೇ ನಿಜವಾದ ಸನ್ನಿವೇಶದಲ್ಲಿ ವಿಮಾನ ಹಾರಾಟ ಮಾಡಲು ಅನುಮತಿ ನೀಡುವುದಕ್ಕೆ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮೊದಲು ಮೃತ ದೇಹಗಳ ಮೇಲೆ ಶಸ್ತ್ರಚಿಕಿತ್ಸೆ ನಡೆಸಿದ

Digitised by Bharatavani, CIIL

ನಂತರ ಜೀವಂತ ವ್ಯಕ್ತಿಗಳ ಮೇಲೆ ಶಸ್ತ್ರಚಿಕಿತ್ಸೆ ನಡೆಸಲು ಅನುಮತಿ ನೀಡುವ ಪದ್ಧತಿಯಂತಿದೆ.

ಸೂಕ್ಷ್ಮ ಬೋಧನೆಯಲ್ಲಿ ಕೆಲವು ಊಹೆಗಳನ್ನು ಮಾಡಿಕೊಳ್ಳಲಾಗಿದೆ. ಸೂಕ್ಷ್ಮಬೋಧನೆ ನಿಜವಾದ ಬೋಧನೆ ಅಲ್ಲ. ಆದರೆ ಇದರ ಗುರಿ ವಿದ್ಯಾರ್ಥಿಗಳಲ್ಲಿ ನಿರ್ದಿಷ್ಟ ಬೋಧನಾ ಕೌಶಲಗಳನ್ನು ಬೆಳೆಸುವುದೇ ಹೊರತು, ಅವರ ಬೋಧನಾ ಸಾಮರ್ಥ್ಯವನ್ನಲ್ಲ.

- ಸೂಕ್ಷ್ಮ ಬೋಧನೆಯ ಸಂಕೀರ್ಣವಲ್ಲದ ನಿಯಂತ್ರಿತ ಸನ್ನಿವೇಶದಲ್ಲಿ ಕೈಗೊಳ್ಳಲಾಗುತ್ತದೆ.
- ಸೂಕ್ಷ್ಮ ಬೋಧನೆ ನಿರ್ದಿಷ್ಟ ಬೋಧನಾ ಕೌಶಲಗಳ ಕಲಿಕೆಯನ್ನು ಖಚಿತಗೊಳಿಸುತ್ತದೆ.
- ಇದು ಒಂದು ವ್ಯಕ್ತಿ ಉಪಕ್ರಮವಾಗಿದೆ.
- ಇದು ಪ್ರಭಾವಯುತ ಪ್ರತಿಪುಷ್ಟಿ (ಹಿನ್ನುಣಿಕೆ)ಯನ್ನು ಅವಲಂಬಿಸಿದೆ.

**ಪ್ರತಿಪುಷ್ಟಿಯ ಮಹತ್ವ:** ಫ್ಲ್ಯಾಂಡರ್ಸ್‌ನ ಪ್ರಕಾರ ಶತಮಾನಗಳಿಂದ ಪ್ರತಿಪುಷ್ಟಿಯ ಅಭಾವ ಅಧ್ಯಾಪಕ ಪ್ರಶಿಕ್ಷಣಾರ್ಥಿಗಳಿಗೆ ತೊಂದರೆಯುಂಟು ಮಾಡುತ್ತಿದೆ. ಪ್ರತಿಪುಷ್ಟಿ ಸೂಕ್ಷ್ಮ ಬೋಧನೆಯ ಜೀವಾಳ. ಇದು ವಿದ್ಯಾರ್ಥಿ-ಅಧ್ಯಾಪಕರು ತಮ್ಮ ಬೋಧನಾ ಪ್ರಯತ್ನಗಳ ಬಗ್ಗೆ ಪಡೆಯುವ ಮಾಹಿತಿ.

ತರಗತಿ ಬೋಧನೆ (ಮ್ಯಾಕ್ರೋ ಟೀಚಿಂಗ್) ಸನ್ನಿವೇಶಗಳನ್ನು ಬಹಳ ಸಂಕೀರ್ಣವಾದವುಗಳಾದ್ದರಿಂದ ಈ ಸಂಕೀರ್ಣತೆಯಿಂದ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗಬಹುದು. ಅದೂ ಅಲ್ಲದೆ ತರಗತಿ ಬೋಧನಾ ಸನ್ನಿವೇಶದಲ್ಲಿ ವಿದ್ಯಾರ್ಥಿ-ಅಧ್ಯಾಪಕರಿಗೆ ಬೋಧನೆಯಲ್ಲಿ ಉಂಟಾಗಬಹುದಾದ ತಪ್ಪುಗಳನ್ನು ತತ್‌ಕ್ಷಣವೇ ಸರಿಪಡಿಸಿಕೊಳ್ಳಲು ಅವಕಾಶ ದೊರೆಯುವುದಿಲ್ಲ. ಈ ರೀತಿ ಪ್ರತಿಪುಷ್ಟಿ ಪಡೆಯಲು ಅವರು ತಮ್ಮ ಮುಂದಿನ ತರಗತಿವರೆಗೂ ಕಾಯಬೇಕಾಗುತ್ತದೆ. ಆದ್ದರಿಂದ ತರಗತಿಬೋಧನೆ ಅಭ್ಯಾಸದಲ್ಲಿ ಪ್ರತಿಪುಷ್ಟಿಯ ಅಭಾವ ಅತ್ಯಂತ ದುರ್ಬಲ ಅಂಶವಾಗುತ್ತದೆ.

ಆದ್ದರಿಂದಲೇ ಸೂಕ್ಷ್ಮಬೋಧನೆಯಲ್ಲಿ ಅಧ್ಯಾಪಕ-ಪ್ರಶಿಕ್ಷಣಾರ್ಥಿಗಳ ಬೋಧನಾ ದಕ್ಷತೆಯನ್ನು ಉತ್ತಮಗೊಳಿಸುವಲ್ಲಿ ಪ್ರಭಾವಯುತ ಪ್ರತಿಪುಷ್ಟಿ ನಿರ್ಣಾಯಕವಾದುದೆಂದು ಪರಿಗಣಿಸಲಾಗಿದೆ. ಆದ್ದರಿಂದಲೇ ಸಕಾಲಿಕ ಹಾಗೂ ಪ್ರಭಾವಯುತ ಪ್ರತಿಪುಷ್ಟಿ ಸೂಕ್ಷ್ಮಬೋಧನೆ ನಿಯಮಾವಳಿಯ ಆಧಾರವೆನಿಸಿದೆ. ಸೂಕ್ಷ್ಮಬೋಧನೆಯಲ್ಲಿ ತತ್‌ಕ್ಷಣದಲ್ಲಿ ಪ್ರತಿಪುಷ್ಟಿ ನೀಡಿ, ಪ್ರೋತ್ಸಾಹಿಸಲು ಅನುಕೂಲವಾಗುವಂತೆ ಬೋಧನಾ ಸನ್ನಿವೇಶದ ಸಂಕೀರ್ಣತೆಯನ್ನು ಕಡಿಮೆ ಮಾಡಿಕೊಂಡು ತತ್‌ಕ್ಷಣದಲ್ಲೇ ಪ್ರತಿಪುಷ್ಟಿಯ ನೀಡಿಕೆಯನ್ನು ಖಚಿತಗೊಳಿಸಲಾಗುತ್ತದೆ. ಇದರ ಜೊತೆಗೆ ಪ್ರತಿಪುಷ್ಟಿ ನೀಡಿಕೆಯಲ್ಲಿ ಸೂಚಿಸಲಾದ ತಿದ್ದುಪಡಿಯನ್ನು ಅದೇ ಬೋಧನಾ ಸನ್ನಿವೇಶದಲ್ಲಿ ಅದೇ ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಆಯ್ಕೆ ಮಾಡಿಕೊಂಡಿರುವ ಪರಿಕಲ್ಪನೆಯ ಮರು ಬೋಧನೆಯಲ್ಲಿ ಅಳವಡಿಸಿ ಕೊಳ್ಳುವ ಅವಕಾಶವೂ ದೊರೆಯುತ್ತದೆ.

ರಚನಾತ್ಮಕವಾಗಿ ಪ್ರತಿಪುಷ್ಟಿ ಒದಗಿಸಲು ಅನೇಕ ಮೂಲಗಳನ್ನು ಉಪಯೋಗಿಸಿಕೊಳ್ಳಬಹುದು. ಸಹಪಾಠಿಗಳು ಪ್ರಶಿಕ್ಷಣ ಅಧ್ಯಾಪಕರು, ವಿದ್ಯಾರ್ಥಿಗಳು, ಅಧ್ಯಾಪಕರು, ಶ್ರವ್ಯ-ದೃಶ್ಯ ಸಾಧನಗಳನ್ನು ಉಪಯೋಗಿಸಿಕೊಂಡು ಬೋಧಿಸುವ ಪ್ರಶಿಕ್ಷಣಾರ್ಥಿಗಳು ಪ್ರತಿಪುಷ್ಟಿ ಸಲಹೆಗಳ ಮೂಲಗಳಾಗಬಹುದು. ಪ್ರಶಿಕ್ಷಣಾರ್ಥಿಗಳ ಬೋಧನೆಯನ್ನು ಶ್ರವ್ಯ-ದೃಶ್ಯ ದಾಖಲೆ ಅತ್ಯಂತ ಉಪಯುಕ್ತವಾದ ಪ್ರತಿಪುಷ್ಟಿ ಮೂಲವಾಗುತ್ತದೆ. ಸೂಕ್ಷ್ಮಬೋಧನೆ ಅವಧಿಯನ್ನು ತಾಂತ್ರಿಕವಾಗಿ ದಾಖಲು ಮಾಡಿಕೊಂಡು ಅದನ್ನು ಪದೇ ಪದೇ ಪುನರುತ್ಪಾದಿಸಿ (ಪ್ಲೇಬ್ಯಾಕ್) ಬೋಧನಾ ಚಟುವಟಿಕೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ, ಚರ್ಚಿಸಿ ಪ್ರಭಾವಯುತವಾಗಿ ಪ್ರತಿಪುಷ್ಟಿ ನೀಡಬಹುದು.

ಸೂಕ್ಷ್ಮ ಬೋಧನೆಯ ತತ್ವಗಳನ್ನು ಹೀಗೆ ನಿರೂಪಿಸಬಹುದು.

ಬೋಧನೆಯ ಸಂಕೀರ್ಣ ವರ್ತನೆಯನ್ನು ಬೋಧನ ಕೌಶಲಗಳೆಂದು ನಿರ್ದಿಷ್ಟ ವರ್ತನೆಗಳಾಗಿ ವಿಶೇಷಿಸಬಹುದು. ಈ ಕೌಶಲಗಳನ್ನು ನಿಯಂತ್ರಿಸಿ ಅಭ್ಯಾಸಕ್ಕೆ ಒಳಪಡಿಸಿ ಮೌಲ್ಯಮಾಪನ ಮಾಡಬಹುದು.

ಸ್ಕಿನ್ನರನ ಕ್ರಿಯಾಜನ್ಯ ಅನುಬಂಧಿತ ಕಲಿಕೆಯ ಪರಿಕಲ್ಪನೆಗಳಾದ ಕ್ರಮಾಗತ ಕಲಿಕೆ, ತತ್‌ಕ್ಷಣದ ಪುನರ್ಬಲನ, ಮತ್ತು ಈ ವರ್ತನೆಯ ರೂಪಿಸುವಿಕೆ ಕ್ರಮಾಗತ ಸಮೀಪನ ಇದರ ಆಧಾರ ತತ್ವಗಳಾಗಿವೆ (ನೋಡಿ: ಕಲಿಕೆ ಸಿದ್ಧಾಂತಗಳು).

**ಬೋಧನಾ ಕೌಶಲಗಳು:** ಸೂಕ್ಷ್ಮ ಬೋಧನೆಯಲ್ಲಿ ಬೋಧನಾ ಪ್ರಕ್ರಿಯೆಯನ್ನು ಬೋಧನಾಕೌಶಲಗಳೆಂದು ನಿರ್ದಿಷ್ಟ ಕೌಶಲಗಳಾಗಿ ವಿಭಜಿಸಿಕೊಳ್ಳಲಾಗುತ್ತದೆ. ಒಂದು ಉತ್ತಮ ಪಾಠದ ಉದಾಹರಣೆಯಲ್ಲಿ ಬೇರೆ ಬೇರೆ ಮಟ್ಟದ ಆವೃತ್ತಿಗಳಲ್ಲಿ ಎಲ್ಲಾ ಬೋಧನಾ ಕೌಶಲಗಳು ಕಾಣಿಸಿಕೊಳ್ಳಬಹುದು. ಈ ಪ್ರತಿಯೊಂದು ಕೌಶಲವೂ ತನ್ನದೇ ಆದ ವರ್ತನೆಗಳನ್ನು ಹೊಂದಿದ್ದು ಸಾಕಷ್ಟು ಸಂಕೀರ್ಣತೆ ಹೊಂದಿರುತ್ತದೆ. ಈ ವರ್ತನೆಗಳಲ್ಲಿ ಕೆಲವು ಅಪೇಕ್ಷಣೀಯವಾದವುಗಳಾಗಿದ್ದರೆ ಮತ್ತೆ ಕೆಲವು ಅಪೇಕ್ಷಣೀಯುವಾದುವುಗಳಾಗಿಲ್ಲದೇ ಇರಬಹುದು. ಅಪೇಕ್ಷಣೀಯವಾದ ವರ್ತನೆಗಳು ಬೋಧನಾ ಕೌಶಲವನ್ನು ರೂಪಿಸುತ್ತವೆ. ಅಪೇಕ್ಷಣೀಯ ವರ್ತನೆಗಳನ್ನು ರೂಪಿಸಿಕೊಳ್ಳುವುದೇ ಬೋಧನಾ ಕೌಶಲದ ಮೇಲೆ ಪ್ರಭುತ್ವ ಪಡೆಯುವುದರ ಅರ್ಥ. ಒಂದು ನಿರ್ದಿಷ್ಟ ಬೋಧನಾ ಕೌಶಲವನ್ನು ಅಭ್ಯಾಸ ಮಾಡುವಾಗ ಅದಕ್ಕೇ ಸಂಬಂಧಿಸಿದಂತೆ ಅನಪೇಕ್ಷಣೀಯವಾದ ವರ್ತನೆಗಳು ಕೆಲವೊಮ್ಮೆ ವ್ಯಕ್ತಗೊಳ್ಳುತ್ತವೆ. ಪ್ರಶಿಕ್ಷಣಾರ್ಥಿ ಇಂಥ ವರ್ತನೆಗಳ ಮೇಲೆ ಗಮನವಿಟ್ಟು ಅವು ಉಂಟಾಗದಂತೆ ಎಚ್ಚರವಹಿಸಬೇಕು. ಎಲ್ಲಾ ನಿರ್ದಿಷ್ಟ ಬೋಧನಾ ಕೌಶಲಗಳ ಮೇಲೆ ಪ್ರಭುತ್ವ ಪಡೆದು ಅವುಗಳನ್ನು ಸೂಕ್ತರೀತಿಗಳಲ್ಲಿ ತರಗತಿ ಬೋಧನೆಯಲ್ಲಿ ಅಳವಡಿಸಿಕೊಂಡಾಗ ಮಾತ್ರ ಪ್ರಶಿಕ್ಷಣಾರ್ಥಿ ಬೋಧನಾ ಕೌಶಲದಲ್ಲಿ ಪರಿಣತಿ ಪಡೆದಿದ್ದಾನೆಂದು ಹೇಳಬಹುದು.

ಈ ಬೋಧನಾ ಕೌಶಲಗಳು ಬೋಧಿಸಬೇಕಾದ ವಿಷಯಗಳಿಂದ ಸ್ವತಂತ್ರವಾದವುಗಳಾಗಿವೆ ಎನ್ನುವುದು ಗಮನಿಸಬೇಕಾದ ಅಂಶ. ಆದರೂ ಒಂದು ನಿರ್ದಿಷ್ಟ ಬೋಧನಾ ಕೌಶಲ ಒಂದು ನಿರ್ದಿಷ್ಟ ವಿಷಯದಲ್ಲಿ ಹೆಚ್ಚಾಗಿ ಕಂಡುಬರಬಹುದು. ಮತ್ತೊಂದು ಕೌಶಲ ಮತ್ತೊಂದು ವಿಷಯ ಬೋಧನೆಯಲ್ಲಿ ಹೆಚ್ಚಾಗಿ ಬೇಕಾಗಬಹುದು. ಆದರೆ ಬೋಧನಾ ಕೌಶಲಗಳ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳು ವಿಷಯದಿಂದ ವಿಷಯಕ್ಕೆ ಬದಲಾಗುವುದಿಲ್ಲ.

ಬೋಧನಾ ಕೌಶಲಗಳನ್ನು ಅನೇಕ ರೀತಿಗಳಲ್ಲಿ ಗುರ್ತಿಸಲಾಗಿದೆ. ವಿವಿಧ ತರಗತಿ ಸನ್ನಿವೇಶಗಳಲ್ಲಿ ಅಧ್ಯಾಪಕರ ಬೋಧನೆಯಲ್ಲಿ ಅವಲೋಕಿಸಿ, ಅಧ್ಯಾಪಕರನ್ನು ಪರಿದರ್ಶಿಸಿ ಅವರೊಡನೆ ಚರ್ಚಿಸಿ ಶಾಲಾ ಪಠ್ಯಕ್ರಮಗಳನ್ನು ಹಾಗೂ ಅವುಗಳ ಉದ್ದೇಶಗಳನ್ನು ವಿಶ್ಲೇಷಿಸಿ ಒಂದು ಆದರ್ಶಪ್ರಾಯ ಒಳ್ಳೆಯ ಬೋಧನಾ ಮಾದರಿಯನ್ನು ಪರಿಭಾವಿಸಿ, ಬೋಧನಾ ಕೌಶಲಗಳನ್ನು ಗುರ್ತಿಸಿದ್ದಾರೆ.

ಬೋಧನಾ ವರ್ತನೆಯ ವಿವಿಧ ಅಂಶಗಳ/ದಕ್ಷತೆಗಳ ವರ್ಗೀಕರಣವನ್ನು ರೂಪಿಸಲು ಪ್ರಯತ್ನಿಸಲಾಗಿದೆ. ಬ್ರೌನ್ ಬೋಧನಾ

Digitised by Bharatavani, CIIL

ಕೌಶಲವನ್ನು "ವಿದ್ಯಾರ್ಥಿಗಳ ಕಲಿಕೆಯನ್ನು ಸುಗಮಗೊಳಿಸುವ ಉದ್ದೇಶದಿಂದ ಅಧ್ಯಾಪಕ ಕೈಗೊಳ್ಳುವ ಸಂಬಂಧಿತ ಕ್ರಿಯೆಗಳ ಅಥವಾ ವರ್ತನೆಗಳ ಕೂಟವನ್ನು ಬೋಧನಾ ಕೌಶಲ ಎನ್ನಬಹುದು."

ಬೋಧನಾ ಕೌಶಲಗಳನ್ನು ಅನೇಕ ರೀತಿಗಳಲ್ಲಿ ವರ್ಗೀಕರಿಸಲಾಗಿದೆ. ಇವುಗಳನ್ನು ಬೋಧನ-ಪೂರ್ವ ಬೋಧನ ಕಾಲೀನ, ಬೋಧನೋತ್ತರ ಕೌಶಲಗಳೆಂದು ವರ್ಗೀಕರಿಸಬಹುದು. ಮತ್ತೊಂದು ರೀತಿಯಲ್ಲಿ ಇವುಗಳನ್ನು ಯೋಜಿಸುವ ಪ್ರಸ್ತುತಪಡಿಸುವ ಮತ್ತು ನಿರ್ವಹಿಸುವ ಮೌಲ್ಯಮಾಪನ ಮಾಡುವ ಕೌಶಲಗಳೆಂದೂ ವರ್ಗೀಕರಿಸಬಹುದು. ಈ ಪ್ರತಿಯೊಂದು ವರ್ಗದಲ್ಲೂ ಅನೇಕ ನಿರ್ದಿಷ್ಟ ಕೌಶಲಗಳಿರುತ್ತವೆ.

ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯದ ಅಲೆನ್ ಮತ್ತು ಸಹೋದ್ಯೋಗಿಗಳು ಸಿದ್ಧಪಡಿಸಿರುವ ಬೋಧನಾ ಕೌಶಲಗಳ ಪಟ್ಟಿ ಹೀಗಿದೆ–

| | |
|---|---|
| ಸಿದ್ಧತೆ ಉಂಟು ಮಾಡುವುದು | ಪ್ರಚೋದನ (ಉದ್ದೀಪನ) ವೈವಿಧ್ಯ |
| ಉಪನ್ಯಾಸ ಮಾಡುವುದು | ವಿದ್ಯಾರ್ಥಿ ಸಹಭಾಗಿತ್ವ ಪುನರ್ಬಲನ |
| ಸಂವಹನ ಮತ್ತು ಪೂರ್ತಿಗೊಳಿಸುವಿಕೆ | ಅವಧಾನ ವರ್ತನೆ ಗುರ್ತಿಸುವಿಕೆ |
| ಪ್ರಶ್ನಿಸುವುದರಲ್ಲಿ ಪಟುತ್ವ | ಶೋಧಕ ಪ್ರಶ್ನೆಗಳು |
| ವಿಕೇಂದ್ರೀಕೃತ ಪ್ರಶ್ನೆಗಳನ್ನು ಕೇಳುವುದು | ಮೇಲ್ಮಟ್ಟದ ಪ್ರಶ್ನೆಗಳು |
| ಯೋಜಿತ ಪುನರಾವರ್ತನೆ | ಮುಕ್ತಾಯಗೊಳಿಸುವಿಕೆ |
| ಮೌನ ಮತ್ತು ಅಶಾಬ್ದಿಕ ಸೂಚಕಗಳು | ದೃಷ್ಟಾಂತಗಳು ಮತ್ತು ಉದಾಹರಣೆಗಳ ಉಪಯೋಗ. |

ಭಾರತದ ಬಿ.ಕೆ. ಪಾಸಿ ಮತ್ತು ಸಹೋದ್ಯೋಗಿಗಳು (1976) 19 ಬೋಧನಾ ಕೌಶಲಗಳನ್ನು ಗುರ್ತಿಸಿದ್ದಾರೆ.

| | |
|---|---|
| ಬೋಧನೋದ್ದೇಶಗಳನ್ನು ಬರೆಯುವುದು | ಪಾಠವನ್ನು ಆರಂಭಿಸುವುದು. |
| ವಿಷಯ ವಸ್ತುವಿನ ಆಯ್ಕೆ | ವಿಷಯ ವಸ್ತುವಿನ ಸಂಘಟನೆ |
| ಶ್ರವ್ಯ-ದೃಶ್ಯ ಉಪಕರಣಗಳ ಆಯ್ಕೆ | ಕಪ್ಪುಹಲಗೆ ಉಪಯೋಗ |
| ಅವಧಾನ ವರ್ತನೆ ಗುರ್ತಿಸುವಿಕೆ | ವಿದ್ಯಾರ್ಥಿ ಸಹಭಾಗಿತ್ವ ಹೆಚ್ಚಿಸುವುದು |
| ಮೌನ ಮತ್ತು ಅಶಾಬ್ದಿಕ ಸೂಚಕಗಳು | ಪ್ರಶ್ನಿಸುವುದರಲ್ಲಿ ಪಟುತ್ವ |
| ಶೋಧಕ ಪ್ರಶ್ನೆಗಳು | ವಿವರಿಸುವುದು |
| ಉದಾಹರಣೆಗಳ ಉಪಯೋಗ | ಪುನರ್ಬಲನಗೊಳಿಸುವಿಕೆ |
| ಪ್ರಚೋದನ (ಉದ್ದೀಪಕ) ವೈವಿಧ್ಯ | ಮುಕ್ತಾಯಗೊಳಿಸುವಿಕೆ |
| ಪರಿಹಾರಾತ್ಮಕ ಕ್ರಮಗಳು | ನಿಯೋಜಿತ ಕಾರ್ಯಗಳ ನೀಡಿಕೆ |
| ಮೌಲ್ಯಮಾಪನ | |

ಈ ಕೌಶಲಗಳೇ ಅಲ್ಲದೆ ಇನ್ನೂ ಕೆಲವು ಕೌಶಲಗಳನ್ನು ಕೆಲವು ತಜ್ಞರು ಗುರ್ತಿಸಿದ್ದಾರೆ. ಝಾಂಗೀರ 'ಪಾಠದ ವೇಗ', ಸಿಂಗ್ (1979) 'ಜೀವಂತಿಕೆ', ಮೆನನ್ (1983) ಪ್ರತಿಕ್ರಿಯಿಸುವಿಕೆ, ರೂಪಾರಾವ್ (2009) 'ವರ್ಣಿಸುವಿಕೆ'–ಈ ಕೌಶಲಗಳನ್ನು ಗುರ್ತಿಸಿದ್ದಾರೆ.

ಕೆಲವು ಮುಖ್ಯ ಬೋಧನಾ ಕೌಶಲಗಳನ್ನು ಸಂಕ್ಷಿಪ್ತವಾಗಿ ಈ ಮುಂದೆ ವಿವರಿಸಿದೆ–

- ಪಾಠವನ್ನು ಆರಂಭಿಸುವ ಕೌಶಲ–ಅಧ್ಯಾಪಕ ತರಗತಿ ಪ್ರವೇಶಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸುತ್ತಾನೆ. ಅಂದಿನ ಪಾಠದ ಕೇಂದ್ರ ವಿಷಯಕ್ಕೆ/ಪರಿಕಲ್ಪನೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು/ ಅನುಭವವನ್ನು ಪ್ರಶ್ನೆ ಕೇಳುವುದರ ಮೂಲಕ ನೆನಪಿಸಿಕೊಳ್ಳುವಂತೆ ಮಾಡುತ್ತಾನೆ. ಹೀಗೆ ಅಂದಿನ ಪಾಠವನ್ನು ಆರಂಭಿಸುತ್ತಾನೆ. ನಂತರ ಅಂದಿನ ಪಾಠದ ಉದ್ದೇಶವನ್ನು ನಿರೂಪಿಸುತ್ತಾನೆ. ಈ ಹಂತದಲ್ಲಿ ಅಧ್ಯಾಪಕ ವಿದ್ಯಾರ್ಥಿಗಳನ್ನು ಅಂದಿನ ಪಾಠಕ್ಕೆ ಮಾನಸಿಕವಾಗಿ, ಸಂವೇಗಾತ್ಮಕವಾಗಿ ಸಿದ್ಧಗೊಳಿಸುತ್ತಾನೆ.

- ನಿರರ್ಗಳವಾಗಿ ಪ್ರಶ್ನಿಸುವ ಕೌಶಲ–ಅಧ್ಯಾಪಕ ಅಂದಿನ ಪಾಠವನ್ನು ವಿಕಾಸಗೊಳಿಸಲು ಅರ್ಥಪೂರ್ಣವಾದ ಸೂಕ್ತವಾಗಿ ರೂಪಿಸಿದ, ಸ್ಪಷ್ಟವಾದ ಸಂಬಂಧವುಳ್ಳ, ಕ್ರಮಾಗತವಾದ ಮತ್ತು ವ್ಯಾಪಕವಾದ ಅನೇಕ ಪ್ರಶ್ನೆಗಳನ್ನು ಕೇಳುತ್ತಾನೆ.

- ಶೋಧಕ ಪ್ರಶ್ನೆಗಳನ್ನು ಕೇಳುವ ಕೌಶಲ–ವಿದ್ಯಾರ್ಥಿಗಳನ್ನು ಚಿಂತಿಸುವಂತೆ ಪ್ರೇರೇಪಿಸುವ ಪ್ರಶ್ನೆಗಳೇ ಶೋಧಕ ಪ್ರಶ್ನೆಗಳು. ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಪಡೆಯಲು ಇಂಥ ಪ್ರಶ್ನೆಗಳು ಬೇಕಾಗುತ್ತವೆ. ಇಂಥ ಪ್ರಶ್ನೆಗಳಿಂದ ವಿದ್ಯಾರ್ಥಿಗಳು ಪಾಠವನ್ನು ಅನುಸರಿಸಿ ಅರ್ಥಮಾಡಿ ಕೊಳ್ಳುತ್ತಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತವೆ.

- ವರ್ಣಿಸುವ ಕೌಶಲ– ವಿದ್ಯಾರ್ಥಿಗಳು ಬಂದ ವಸ್ತು, ಸನ್ನಿವೇಶ, ಘಟನೆಯಲ್ಲಿ ಕಲ್ಪಿಸಿಕೊಂಡು ತಮ್ಮ ಮನಃಪಟಲದ ಮೇಲೆ ಮೂಡಿಸಿಕೊಳ್ಳುವಂತೆ ಮಾಡಲು ಈ ಕೌಶಲ ಸಹಾಯಕವಾಗಿದೆ. ಇದಕ್ಕಾಗಿ ಅಧ್ಯಾಪಕ ಸೂಕ್ತ ಪದಗಳ ಮೂಲಕ ವರ್ಣಿಸಬೇಕಾಗುತ್ತದೆ. ಕ್ರಮಾಗತವಾದ ವರ್ಣನೆ ಈ ಕೌಶಲದ ಜೀವಾಳ.

Digitised by Bharatavani, CIIL

• ವಿವರಿಸುವ ಕೌಶಲ– ವಸ್ತು/ಕ್ರಿಯೆಗಳಿಗೆ ಸಂಬಂಧಿಸಿದಂತೆ 'ಹೇಗೆ' ಮತ್ತು 'ಏಕೆ' ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಅಧ್ಯಾಪಕ ವಿವರಿಸಬೇಕಾಗುತ್ತದೆ. ಪರಿಕಲ್ಪನೆಗಳ ಹಿಂದಿರುವ ತರ್ಕವನ್ನು ವಿವರಿಸಿ ವಿದ್ಯಾರ್ಥಿಗಳ ಗೊಂದಲವನ್ನು ನಿವಾರಿಸಲು ಈ ಕೌಶಲ ಬೇಕಾಗುತ್ತದೆ. ಸಂಬಂಧಿತ ಹೇಳಿಕೆಗಳು, ಪ್ರಶ್ನೆಗಳು ಮತ್ತು ಸೂಕ್ತಪದಗಳನ್ನು ಉಪಯೋಗಿಸಿ ವಿವರಿಸಬೇಕು.

• ಮೌನ ಮತ್ತು ಅಶಾಬ್ದಿಕ ಸೂಚಕಗಳು– ಈ ಕೌಶಲ ಅಧ್ಯಾಪಕರ ಆಂಗಿಕ ಭಾಷೆ (Body Language) ಮತ್ತು ಮುಖ ಚರ್ಯೆಗಳಿಗೆ ಸಂಬಂಧಿಸಿದ ಆಗಾಗ್ಗೆ ಮೌನವಾಗುವುದು, ಆಂಗಿಕ ವರ್ತನೆಗಳನ್ನು ವಿಷಯಾಂಶಗಳ ಪುಷ್ಟೀಕರಣಗೊಳಿಸಲು ಮಾಡುವ ಮುಖಭಾವಗಳನ್ನು ಉಪಯೋಗಿಸುವುದು ಈ ಕೌಶಲದ ಸ್ವರೂಪ. ಇವುಗಳು ಬೋಧನೆಯ ಪ್ರಭಾವಶೀಲತೆಯನ್ನು ಹೆಚ್ಚಿಸುತ್ತವೆ.

**ಸೂಕ್ಷ್ಮ (ಅಣು) ಬೋಧನಾ ಚಕ್ರ:** ಸೂಕ್ಷ್ಮ ಬೋಧನೆ ಕೌಶಲಗಳ ತರಬೇತಿ ನೀಡಲು ಅನುಸರಿಸಬೇಕಾದ ಕ್ರಮಾಗತ ಹಂತಗಳನ್ನು ಸೂಕ್ಷ್ಮಬೋಧನಾ ಚಕ್ರ (Micro teaching Cycle) ಎನ್ನುತ್ತೇವೆ. ಈ ಚಕ್ರದಲ್ಲಿ ಮೂರು ಘಟ್ಟಗಳಿವೆ, ಯೋಜಿಸುವ ಘಟ್ಟ, ಅಭ್ಯಾಸ ಘಟ್ಟ, ಪ್ರತಿಪುಷ್ಟಿ ಘಟ್ಟ. ಈ ಘಟ್ಟಗಳ ಮಾದರಿ ಹೀಗಿದೆ.

ವಿದ್ಯಾರ್ಥಿಗಳಿಗೆ ಮೊದಲು ಪೂರ್ವಭಾವಿ ಸಿದ್ಧತೆಯಾಗಿ ಸೂಕ್ಷ್ಮಬೋಧನೆ, ಬೋಧನಾ ಕೌಶಲಗಳು ಮತ್ತು ಬೋಧನಾ ಚಕ್ರದ ಸ್ವರೂಪವನ್ನು ಪರಿಚಯಿಸಲಾಗುತ್ತದೆ. ನಂತರ ಪ್ರತಿಯೊಬ್ಬ ವಿದ್ಯಾರ್ಥಿ ಒಂದು ನಿರ್ದಿಷ್ಟ ಕೌಶಲವನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಅನುಗುಣವಾದ ವಿಷಯವಸ್ತುವನ್ನು ಆಯ್ಕೆ ಮಾಡಿಕೊಂಡು ಒಂದು ಪಾಠಯೋಜನೆಯನ್ನು ತಯಾರಿಸಿಕೊಂಡು, ವಿದ್ಯಾರ್ಥಿಗಳ/ಸಹಪಾಠಿಗಳ ಒಂದು ಸಣ್ಣ ಗುಂಪಿಗೆ ಬೋಧಿಸುತ್ತಾನೆ.

ಪ್ರಶಿಕ್ಷಣ ಅಧ್ಯಾಪಕ ಆಯ್ಕೆ ಮಾಡಿಕೊಂಡ ಕೌಶಲಕ್ಕೆ ಸಂಬಂಧಿಸಿದಂತೆ ವೀಕ್ಷಿಸಿ, ವಿದ್ಯಾರ್ಥಿಗೆ ಪ್ರತಿಪುಷ್ಟಿ ನೀಡಿ, ಕೌಶಲದ ಇತಿ–ಮಿತಿಗಳನ್ನು ಸೂಚಿಸುತ್ತಾನೆ. ವಿದ್ಯಾರ್ಥಿ ಈ ಸಲಹೆಗಳನ್ನು ಅಳವಡಿಸಿಕೊಂಡು ಪಾಠಯೋಜನೆಯನ್ನು ಪುನರ್–ಯೋಜಿಸಿಕೊಂಡು ಪುನಃ ಬೋಧಿಸಬೇಕು. ನಂತರ ಅಧ್ಯಾಪಕ ಪುನಃ ಪ್ರತಿಪುಷ್ಟಿ (ಸಲಹೆ–ಸೂಚನೆ) ನೀಡುತ್ತಾನೆ. ಪುನಃ ಮಿತಿಗಳು ಕಂಡು ಬಂದಲ್ಲಿ ವಿದ್ಯಾರ್ಥಿ ಆ ಕೌಶಲದಲ್ಲಿ ಪರಿಣತಿ ಪಡೆಯುವರು ಈ ಬೋಧನಾ ಚಕ್ರ ಮುಂದುವರಿಯುತ್ತದೆ. ಇದೇ ಕ್ರಮದಲ್ಲಿ ಎಲ್ಲಾ ಬೋಧನಾ ಕೌಶಲಗಳನ್ನು ಕಲಿಸಲಾಗುತ್ತದೆ.

ಸೂಕ್ಷ್ಮ (ಅಣು) ಬೋಧನೆಯನ್ನು ಅಧ್ಯಾಪಕ ಶಿಕ್ಷಣದ ಪ್ರಭಾವಯುತ ಕ್ರಮವೆಂದು ಪರಿಗಣಿಸಲಾಗಿದೆ. ಈ ಕ್ರಮ ಕಳೆದ 50 ವರ್ಷಗಳಿಂದಲೂ ಬಳಕೆಯಲ್ಲಿದೆ. ಈ ತಂತ್ರಕ್ಕೆ ಪ್ರತಿಯಾದ ತಂತ್ರ ಯಾವುದೂ ಇನ್ನೂ ರೂಪಿತವಾಗಿಲ್ಲ. ಪ್ರಶಿಕ್ಷಣದಲ್ಲಿ ಸಂಪನ್ಮೂಲಗಳ ಮಿತಬಳಕೆಯೊಂದಿಗೆ ಸೂಕ್ಷ್ಮ ಬೋಧನೆಯ ಅನುಕೂಲಕರ ಅಂಶಗಳು ಸೇರಿದರೆ ಅದು ಅನೇಕ ಸಂದರ್ಭಗಳಲ್ಲಿ ಒಂದು ಒಳ್ಳೆಯ ಪ್ರಶಿಕ್ಷಣ ವಿಧಾನವೆಂದು ವಿಶ್ವದಾದ್ಯಂತ ಪರಿಗಣಿಸಲಾಗಿದೆ.

–ಇ.ರೂ.ರಾ

# ಹ

## ಹರ್ಬಾರ್ಟ್‌ನ ಪಂಚಸೋಪಾನಗಳು

ಹರ್ಬಾರ್ಟ್ ಒಬ್ಬ ಬಾಲ ಪ್ರತಿಭೆ. 11ನೇ ವಯಸ್ಸಿನಲ್ಲೇ ತರ್ಕಶಾಸ್ತ್ರ, 12ನೇ ವಯಸ್ಸಿನಲ್ಲಿ ಆಧ್ಯಾತ್ಮವಿದ್ಯೆ, 14ನೇ ವಯಸ್ಸಿನಲ್ಲಿ 'ಮಾನವನ ಸ್ವಾತಂತ್ರ್ಯ ಸಿದ್ಧಾಂತ' ಎಂಬ ಪ್ರೌಢಪ್ರಬಂಧ ರಚನೆ, 18ನೇ ವಯಸ್ಸಿನಲ್ಲಿ ಕಾನೂನುಶಾಸ್ತ್ರ ಅಭ್ಯಾಸ, ನಂತರದಲ್ಲಿ ತತ್ವಶಾಸ್ತ್ರವನ್ನು ಕರಗತ ಮಾಡಿಕೊಂಡಿದ್ದ ಹರ್ಬಾರ್ಟ್‌ರನ್ನು ತತ್ವಜ್ಞಾನಿ, ಶಿಕ್ಷಣತಜ್ಞ, ಆಧುನಿಕ ವೈಜ್ಞಾನಿಕ ಶಿಕ್ಷಣ ಶಾಸ್ತ್ರ ಜನಕನೆಂದು ಯುಕ್ತವಾಗಿ ಗುರ್ತಿಸಲಾಗಿದೆ.

ಜರ್ಮನ್ ದೇಶದ ಸ್ವಿಸ್ ಕುಟುಂಬಕ್ಕೆ ಸೇರಿದ 14, 10, 08 ವರ್ಷ ವಯಸ್ಸಿನ ಮೂರು ಮಕ್ಕಳಿಗೆ ಖಾಸಗಿ ಟ್ಯೂಟರ್ ಆಗಿದ್ದೇ ಈತನಿಗೆ ಶಿಕ್ಷಣ ಕ್ಷೇತ್ರಕ್ಕೆ ಬೋಧನೆಗೆ ಅಡಿಗಲ್ಲಾಯಿತು. 1799ರಲ್ಲಿ ಟ್ಯೂಟರ್‌ಗಿರಿಯನ್ನು ತೊರೆದು ತತ್ವಶಾಸ್ತ್ರದ ಅಧ್ಯಯನವನ್ನು ಮುಂದುವರಿಸಿದ. 1802–1809 ಮತ್ತು 1833 ರಿಂದ 1841ರ ವರೆಗೆ ಗೋಟನ್ ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಹಾಗೂ 1809–1833ರ ವರೆಗೆ ಕೋನಿಗ್ಸ್ ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಬೋಧನೆ, ಸಂಶೋಧನೆಗಳಲ್ಲಿ ತೊಡಗಿಸಿಕೊಂಡಿದ್ದ. ಈತನ ತತ್ವಶಾಸ್ತ್ರ, ಮನೋವಿಜ್ಞಾನ, ಶಿಕ್ಷಣ ಶಾಸ್ತ್ರಗಳು, ಜ್ಞಾನ ಮತ್ತು ಕಾರ್ಯಗಳು ಅಮೆರಿಕಾ ಮತ್ತು ಯೂರೋಪ್ ರಾಷ್ಟ್ರಗಳಲ್ಲಿ ಬೋಧನಾಭ್ಯಾಸ ಮತ್ತು ಸಿದ್ಧಾಂತಗಳನ್ನು ಅಪರಿಮಿತವಾಗಿ ಪ್ರಭಾವಿಸಿತು. 'ಮನಸ್ಸು ಅನೇಕ ಸ್ವತಂತ್ರ ಶಾಖೆಗಳಿಂದ ಕೂಡಿವೆ' ಎಂಬ ಮನಶಾಸ್ತ್ರದ ಜನಪ್ರಿಯ ಸಿದ್ಧಾಂತವನ್ನು ವಿರೋಧಿಸಿ, ವೈಜ್ಞಾನಿಕ ನೆಲಗಟ್ಟಿನಲ್ಲಿ ಬೋಧನೆ ಮತ್ತು ಕಲಿಕೆಗಳ ಒಂದು ವ್ಯವಸ್ಥಿತವಾದ 'ಅನುಬೋಧನಾ' ಸಿದ್ಧಾಂತವನ್ನು ರೂಪಿಸಿದ. ಇದರ ಪ್ರತಿಪಾದನೆಯೆಂದರೆ "ಗೋಚರಿಯ ವಿಷಯಗಳನ್ನು ಮನೋಗತ ವಿಷಯಗಳೊಂದಿಗೆ ಯೋಚಿಸಿ, ಅನುಭವಕ್ಕೆ ತಂದುಕೊಂಡು ಅರ್ಥಮಾಡಿಕೊಳ್ಳುವುದು". ಅಂದರೆ ಹೊಸ ಅಭಿಪ್ರಾಯ / ವಿಷಯಗಳನ್ನು ಯುಕ್ತ ರೀತಿಯಲ್ಲಿ ನಿರೂಪಿಸಿದರೆ, ಈಗಾಗಲೇ ಇರುವ ಅಭಿಪ್ರಾಯ / ವಿಷಯಗಳೊಂದಿಗೆ ಸೂಕ್ತವಾಗಿ ಬೆಸೆದುಕೊಂಡು ಸಹಚರ್ಯ ಅಭಿಪ್ರಾಯಗಳ ಒಂದು ವ್ಯವಸ್ಥಿತ ರೂಪವಾಗುತ್ತದೆ.

ಜೊಹಾನ್ ಫ್ರೆಡ್ರಿಚ್ ಹರ್ಬಾರ್ಟ್

ಹರ್ಬಾರ್ಟ್‌ನ ಅಭಿಪ್ರಾಯದಲ್ಲಿ ಉಪಾಧ್ಯಾಯನ ಅತ್ಯವಶ್ಯವಾದ ಕಾರ್ಯವೆಂದರೆ ವಿದ್ಯಾರ್ಥಿಯ ಅನುಭವ ಮತ್ತು ಸಂಸ್ಕೃತಿಗಳಿಗನುಗುಣವಾಗಿ ವಿದ್ಯಾರ್ಥಿಯಲ್ಲಿ ಈಗಾಗಲೇ ಇರುವ ಆಸಕ್ತಿಗಳನ್ನು ಗುರುತಿಸುವುದು. ಕೇವಲ ಜ್ಞಾನಾರ್ಜನೆಗಿಂತ ಕಲಿಕಾರ್ಥಿಯ ನೈತಿಕ ಶೀಲವನ್ನು ಬೆಳೆಸುವುದು ಮುಖ್ಯವಾಗಿರಬೇಕು.

ಹರ್ಬಾರ್ಟ್‌ನ ನಿಧನ (1841) ದ ನಂತರ ಅವನ ಆರಾಧಕರು 'ಅನುಬೋಧನಾ' ಸಿದ್ಧಾಂತವನ್ನು ಅನಮ್ಯ ನಿಯಮದಂತೆ ಭಾಷಾಂತರಿಸಿ ಹರ್ಬಾರ್ಟ್‌ಯೂನಿಸಂ ಎಂಬುದಾಗಿ

Digitised by Bharatavani, CIIL

ಪ್ರಚಾರಕ್ಕೆ ತಂದರು. ಇದು ವಿಶೇಷವಾಗಿ ಯುಎಸ್ (ಅಮೆರಿಕಾ)ನಲ್ಲಿ 19ನೇ ಶತಮಾನದಲ್ಲಿ ಬೋಧನಾ ಅಭ್ಯಾಸದ ಮೇಲೆ ಅತಿ ವಿಶೇಷ ಹಾಗೂ ಶಕ್ತಿಯುತ ಪರಿಣಾಮವನ್ನು ಬೀರಿತು. ವಿಶಾಲ ವ್ಯಾಪ್ತಿಯಲ್ಲಿ ಹರಡಿಕೊಂಡ ಈ ಕ್ರಮವು ಬೋಧನೆಯಲ್ಲಿ 5 ಸಾಂಪ್ರದಾಯಿಕ ಹಂತಗಳನ್ನು ಸೂಚಿಸಿದೆ. ಇದೇ ಹರ್ಬಾರ್ಟ್‌ನ ಪಂಚಸೋಪಾನವೆಂದು ಬೋಧನಾ ಜಗತ್ತಿನಲ್ಲಿ ಜನಪ್ರಿಯತೆ ಹಾಗೂ ಮಹತ್ವವನ್ನು ಪಡೆದಿದೆ. ಇದರ ಪ್ರಕಾರ ಯಾವುದೇ ಒಂದು ಆದರ್ಶ ಪಾಠದಲ್ಲಿ ಇರಬೇಕಾದ ಹಂತಗಳು:

1. ಕಲಿಕಾರ್ಥಿಯ ಮನಸ್ಸನ್ನು 'ಸಿದ್ಧಪಡಿಸು'ವಿಕೆ
2. ಅನಂತರ ಸ್ಪಷ್ಟವಾಗಿ ವಿಷಯವನ್ನು 'ನಿರೂಪಿಸು'ವಿಕೆ.
3. ಅನಂತರ ತುಲನೆ, ಸಾದೃಶ್ಯ ಮುಂತಾದವುಗಳಿಂದ ಹೊಸ ಅಭಿಪ್ರಾಯ / ತಥ್ಯಗಳನ್ನು ಈಗಾಗಲೇ ಪರಿಚಿತವಾದವುಗಳೊಂದಿಗೆ ಸಾಹಚರ್ಯಪಡಿಸಿ 'ಸಮನ್ವಯ'ಗೊಳಿಸುವಿಕೆ.
4. ಅನಂತರ ಅನುಭವ / ಫಲಿತಾಂಶಗಳನ್ನು 'ಸಾಮಾನ್ಯೀಕರಿಸುವಿಕೆ.
5. ಅಂತಿಮವಾಗಿ ಆರ್ಜಿಸಿದ ಜ್ಞಾನವನ್ನು ನಿತ್ಯ ಜೀವನದಲ್ಲಿ 'ಅನ್ವಯ'ಗೊಳಿಸುವಿಕೆ.

1. **ಪೂರ್ವ ಸಿದ್ಧತೆ:** ದತ್ತ ಪಾಠಕ್ಕೆ ನಾಂದಿಯಾಗುವ ಈ ಹಂತದಲ್ಲಿ ಸಂಬಂಧಿತ ಗತ ಅನುಭವಗಳನ್ನು ಶೋಧಿಸಿ, ಪರೀಕ್ಷಿಸಿ, ದೃಢ ಪೀಠಿಕೆಯನ್ನು ರೂಪಿಸಲಾಗುತ್ತದೆ. ಸೂಕ್ತ ಪೂರ್ವಾನುಭವಗಳ ಗೈರು ಹಾಜರಿಯಲ್ಲಿ, ತತ್ಸಮಾನವಾದ ಅನುಭವಗಳಿಂದ ಪೀಠಿಕೆ ರೂಪಿಸಬೇಕು. ಇದರ ಮುಖ್ಯ ಉದ್ದೇಶ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಸುಗಮವಾಗಿಸುವುದು, ಕಲಿಕೆಯಲ್ಲಿ ಆಸಕ್ತಿ, ವಿಶ್ವಾಸಗಳನ್ನು ಮೂಡಿಸುವುದು, ಕಲಿಕಾರ್ಥಿ 'ಹೊಂದಿರುವ ಜ್ಞಾನ' ಅಪೂರ್ವವೆಂದು ಸಾಧಿಸಿ ಇನ್ನೂ ಕಲಿಯಬೇಕಾದ ಅಗತ್ಯ, ಅನಿವಾರ್ಯತೆ, ಸಾಧ್ಯತೆಗಳಿವೆ ಎಂಬುದನ್ನು ತಿಳಿಯಪಡಿಸುವುದು, ಈ ಹಂತದ ಪ್ರಧಾನ ಕಾರ್ಯ ಭಾಗವಾಗಿರುತ್ತದೆ. ಕಲಿಕೆ ಉತ್ತಮ ಪರಿಸರದಲ್ಲಿ ಮಾತ್ರ ಸಾಧ್ಯವೆಂಬುದನ್ನು ಗೌರವಿಸಿ ಕಲಿಕಾರ್ಥಿಯನ್ನು ಭೌತಿಕ-ಬೌದ್ಧಿಕ-ಮಾನಸಿಕ-ಸಂವೇಗಾತ್ಮಕ-ಸಾಮಾಜಿಕವಾಗಿ ಸಿದ್ಧಪಡಿಸಬೇಕು. ಇದಕ್ಕಾಗಿ ಗಮನ ಸೆಳೆಯುವಿಕೆ, ಆಸಕ್ತಿ ಕೆರಳಿಸುವಿಕೆ, ಕುತೂಹಲ ಮೂಡಿಸುವಿಕೆ, ವಿಶ್ವಾಸ ತುಂಬುವಿಕೆ ಯಂತಹ ಚಟುವಟಿಕೆಗಳು ಬಹು ಮುಖ್ಯವಾಗಿರುತ್ತವೆ.

ಪೂರ್ವ ಸಿದ್ಧತೆಗೆ ಒಳಪಡಿಸಬೇಕಾದ ಅಂಶಗಳೆಂದರೆ:

1. ಕಾಲ-ಅವಧಿ: ಹಿತಮಿತವಾಗಿರಬೇಕು.
2. ಆಯ್ದ ಭಾಗ: ಕಲಿಕಾರ್ಥಿಯ ಬೌದ್ಧಿಕ ಮಟ್ಟಕ್ಕನುಗುಣವಾಗಿರಬೇಕು.
3. ನಿರ್ದಿಷ್ಟಕಗಳು: ಸಾಧನೀಯವಾಗಿರಬೇಕು. ವಿದ್ಯಾರ್ಥಿಗಳ ಪರವಾಗಿರಬೇಕು.
4. ಕಲಿಕಾ ಸಹಾಯಕಗಳು: ಕಲಿಕೆಗೆ ಪೂರಕವಾಗಿರಬೇಕು, ಆಸಕ್ತಿದಾಯಕವಾಗಿರಬೇಕು.
5. ಬೋಧನಾ ಸಾಮರ್ಥ್ಯ: ಯುಕ್ತವಾಗಿದ್ದು ಕಲಿಕೆಯನ್ನು/ ಕಲಿಕಾರ್ಥಿಯನ್ನು ಸ್ವತಂತ್ರ್ಯವಾಗಿಸಿರಬೇಕು. ಉತ್ತಮ ಪೀಠಿಕೆಯ ಯೋಚಿಸುವಿಕೆ, ಮಾಡುವಿಕೆ, ನೋಡುವಿಕೆ, ಕೇಳುವಿಕೆ, ಹೇಳುವಿಕೆ, ಮುಂತಾದ ಚಟುವಟಿಕೆಗಳಿಂದ ಉತ್ತಮ ಕಲಿಕೆಗೆ ಬುನಾದಿಯಾಗಬೇಕು. ವಿದ್ಯಾರ್ಥಿಗಳಲ್ಲಿ ಹೊಸ ಹಾಗೂ ಉತ್ತಮ ಮನಸ್ಥಿತಿಯನ್ನು ಮೂಡಿಸಿ ಹೊಸ ಅನುಭವಗಳಿಗೆ ಅಗತ್ಯವಾದ ಮೈ-ಮನಗಳನ್ನು ಸಿದ್ಧಪಡಿಸಬೇಕು. ಉತ್ತಮ ಪೂರ್ವಸಿದ್ಧತೆಯು ಉತ್ತಮ ನಿರೂಪಣೆಗೆ ದಾರಿಯಾಗುತ್ತದೆ.

2. **ನಿರೂಪಣೆ:** ಈ ಹಂತದ ಪ್ರಾರಂಭ ಸ್ಪಷ್ಟವಾದ 'ಗುರಿ ನಿರೂಪಣೆ' (ಆದರೆ, ಗುರಿಯನ್ನು ಕಲಿಕಾರ್ಥಿಯೇ ನಿರೂಪಿಸಬೇಕೆಂಬ ಅಭಿಪ್ರಾಯ ಸಲ್ಲದು. ಸಾಧ್ಯವಾದರೆ ಒಳ್ಳೆಯದಷ್ಟೆ). ಗುರಿ ನಿರೂಪಣೆಯ ಮುಖ್ಯ ಉದ್ದೇಶ ದತ್ತ ಪಾಠದ ಗತಿ, ಗಮ್ಯಸ್ಥಾನಗಳನ್ನು ತೀರ್ಮಾನಿಸಿ ವಿದ್ಯಾರ್ಥಿಗೂ ಸ್ಪಷ್ಟಪಡಿಸುವುದು. ಇದರಿಂದ ಕಲಿಕಾರ್ಥಿ ಉದ್ದೇಶ ಸಹಿತವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಾಧ್ಯ. ಈ ಹಂತದಲ್ಲಿ ಹೊಸಜ್ಞಾನದ ಮಾಹಿತಿ ಕೊಟ್ಟು ಹೊಸ ಪರಿಕಲ್ಪನೆಗಳನ್ನು ಮೂಡಿಸಲಾಗುವುದು. ಕಲಿಸಬೇಕಾದ ಅಂಶಗಳನ್ನು ಸೂಕ್ತ ವಿವರಣೆ, ಪ್ರಾತ್ಯಕ್ಷಿಕೆ, ಚಟುವಟಿಕೆ, ಪ್ರಶ್ನೋತ್ತರ, ಚರ್ಚೆ, ಮುಂತಾದವುಗಳಿಂದ ಮಂಡಿಸಲಾಗುವುದು. ಈ ಪ್ರಕ್ರಿಯೆಯಲ್ಲಿ ಬೋಧನೆಗಿಂತ ಕಲಿಕೆ, ಬೋಧಕನಿಗಿಂತ ಕಲಿಕಾರ್ಥಿ ಮುಖ್ಯ ಎಂಬ ತಾತ್ವಿಕ ಆಧಾರವನ್ನು ಗೌರವಿಸಿ ವಿದ್ಯಾರ್ಥಿಯ ಪೂರ್ವಜ್ಞಾನವನ್ನು ಯುಕ್ತವಾಗಿ ಬಳಸಿ ಸರಳವಾಗಿ, ನೇರವಾಗಿ ಅನುಭವಗಳನ್ನು ನೀಡಿ ಅಗತ್ಯ ತಥ್ಯಾಂಶಗಳನ್ನು ಸಾಧ್ಯವಿರುವಷ್ಟು ವಿದ್ಯಾರ್ಥಿಗಳಿಂದಲೇ ಹೊರಸೆಳೆದು, ನಂತರದ ಅಂಶಗಳನ್ನು ತಾರ್ಕಿಕವಾಗಿ, ಮನೋವೈಜ್ಞಾನಿಕವಾಗಿ ಮಂಡಿಸಬೇಕು. ನಿರೂಪಣೆಯಲ್ಲಿ ಏಕತಾನತೆಯನ್ನು ಪರಿಣಾಮಕಾರಿ ಉದ್ದೀಪನಗಳ ಬದಲಾವಣೆಯಿಂದ ತೊಡೆದು ಹಾಕಿ, ಕಲಿಕಾರ್ಥಿಯ ಅವಧಾನವನ್ನು ಸೆಳೆದು ಕಲಿಕೆಯನ್ನು ಸಫಲವಾಗಿಸಬೇಕು.

ಈ ಹಂತದಲ್ಲಿ ಕಲಿಕಾ ಸೂತ್ರಗಳೆಂದೇ ಗುರ್ತಿಸಲ್ಪಟ್ಟ ಮೂರ್ತ – ಅಮೂರ್ತ, ಜ್ಞಾನ – ಅಜ್ಞಾನ, ಸುಲಭ – ಕ್ಲಿಷ್ಟ, ಸರಳ – ಸಂಕೀರ್ಣ, ಆಚಾರ – ವಿಚಾರ, ತರ್ಕ – ಮನೋವೈಜ್ಞಾನಿಕ ಕ್ರಮಗಳನ್ನು ಪಾಲಿಸಿ ಕ್ರಮಿಸುವುದು ಉತ್ತಮ. ಇದು ಕಲಿಕಾರ್ಥಿಯ ಮನಃಪಟಲದಲ್ಲಿ ಅಗತ್ಯವಾಗಿ ಉಳಿಯುವಂತೆ ಮಾಡಬೇಕು.

ನಿರೂಪಣೆ ಆಕರ್ಷಣೀಯ ಹಾಗೂ ಅನುಕರಣೀಯವಾಗಿರಬೇಕು. ಮುಖ್ಯಾಂಶಗಳನ್ನು ಅಗತ್ಯವಾದ ವಿವರಣೆ, ವರ್ಣನೆಗಳಿಂದ ಮಂಡಿಸಬೇಕು. ವಿನಾಕಾರಣದ ವಿವರಣೆ ವರ್ಣನೆಗಳನ್ನು ನೀಡದೆ ವಸ್ತುನಿಷ್ಠವಾಗಿಸಲು ಪ್ರಯತ್ನಿಸಬೇಕು. ಹೊಸಪದ, ಪಾರಿಭಾಷಿಕ ಪದ, ಪರಿಕಲ್ಪನೆ, ಸೂತ್ರ, ನಿಯಮ ಮುಂತಾದವುಗಳನ್ನು ಬಹು ಎಚ್ಚರದಿಂದ ನಿರೂಪಿಸಿ ಕಲಿಕಾರ್ಥಿಯಲ್ಲಿ ವಿಷಯ ಪಾಂಡಿತ್ಯಕ್ಕೂ ನೆರವಾಗಬೇಕು.

3. **ಸಮನ್ವಯ:** ನಿರೂಪಣೆಯಿಂದ ಪಡೆದ ಮಾಹಿತಿಗಳನ್ನು ಉನ್ನತ ಹಂತಕ್ಕೆ ವರ್ಗಾಯಿಸುವುದೇ ಸಮನ್ವಯ. ಹೊಸಜ್ಞಾನವನ್ನು ವಿಶ್ಲೇಷಿಸಲು ನೆರವು ನೀಡಲಾಗುತ್ತದೆ. ಹಿಂದಿನ ಮತ್ತು ಇಂದಿನ ಅನುಭವಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ತುಲನೆ ಮಾಡಿ ಹೊಸ ವಿಷಯಗಳನ್ನು ಕಂಡುಕೊಳ್ಳಲು ಅಗತ್ಯವಾದ ಕೊಂಡಿಗಳನ್ನು ಸಮನ್ವಯದಿಂದ ರೂಪಿಸಲಾಗುತ್ತದೆ. ಕೆಲವೊಮ್ಮೆ ಸಮನ್ವಯವು ಪ್ರತ್ಯೇಕ ಹಂತವಾಗಿರದೆ ನಿರೂಪಣಾಹಂತದೊಂದಿಗೆ ವಿಲೀನವಾಗಿರಬಹುದು. ವಿಜ್ಞಾನ ಬೋಧನೆಯಲ್ಲಿ ಹೀಗೆ ವಿಲೀನವಾಗುವಿಕೆ ಸಹಜ, ಸಾಮಾನ್ಯ ಹಾಗೂ ಅರ್ಥಪೂರ್ಣ. ಸಮನ್ವಯದಿಂದ ಹೊಸ ವ್ಯಾಖ್ಯೆ, ವ್ಯಾಖ್ಯಾನ, ಸೂತ್ರ, ಸಿದ್ಧಾಂತ, ತತ್ವ, ನಿಯಮ ಮುಂತಾದವುಗಳನ್ನು ಮಂಡಿಸಲಾಗುತ್ತದೆ.

4. **ಸಾಮಾನ್ಯೀಕರಣ:** ಗುರ್ತಿಸಿಕೊಂಡ 'ಗುರಿಗಳು' ಸಾಧಿತವಾಗಿರುವ ಹಂತ, ಇಲ್ಲಿಯವರೆಗೆ ಅಭ್ಯಾಸ ಮಾಡಿದ ಅಂಶಗಳ

Digitised by Bharatavani, CIIL

ಕ್ರೋಡೀಕರಣವೇ ಸಾಮಾನ್ಯೀಕರಣ. ಕಲಿಕಾರ್ಥಿಯೇ ತನ್ನ ಅನುಭವಗಳಿಂದ ಸಾಮಾನ್ಯೀಕರಿಸಲು ಅಗತ್ಯವಾದ ನೆರವು ನೀಡಿ ಶಿಕ್ಷಕ ಕೇವಲ ಮಾರ್ಗದರ್ಶಕನಾಗಿ ಉಳಿಯುತ್ತಾನೆ. ನಿರೂಪಣೆಗಳಿಂದ ಲಭ್ಯವಾದ ಜ್ಞಾನವನ್ನು ತುಲನೆ ಮಾಡಿ, ಸಹಸಂಬಂಧಗಳ ಮೂಲಕ ಇನ್ನಷ್ಟು ದೃಢೀಕರಿಸಿಕೊಳ್ಳಲಾಗುತ್ತದೆ. ಅನ್ವೇಷಣೆ, ತೀರ್ಮಾನಗಳನ್ನು ಕೈಗೊಳ್ಳುವಿಕೆಯಂತಹ ಬೌದ್ಧಿಕ ಪ್ರಕ್ರಿಯೆಗಳು ಗುರುತರವಾಗಿದ್ದು ಸಾಧಿಸಿದ ಜ್ಞಾನ ಮನಸ್ಸಿನಲ್ಲಿ ಅಚ್ಚೊತ್ತಲ್ಪಡುತ್ತದೆ. ತಾತ್ವಿಕನೆಲೆ, ವೈಜ್ಞಾನಿಕ ಆಧಾರಗಳ ಮೇಲೆ ಸಾಮಾನ್ಯೀಕರಿಸಲ್ಪಡುವುದರಿಂದ ಹೆಚ್ಚು ವಿಶ್ವಸನೀಯವಾಗಿರುತ್ತದೆ. ಉತ್ಸಾಹ, ನಿಷ್ಠೆಗಳನ್ನು ಪ್ರೇರೇಪಿಸುವ ಈ ಹಂತ ಶಿಕ್ಷಕ–ವಿದ್ಯಾರ್ಥಿಗಳ ಸಂಬಂಧವನ್ನು ಉತ್ತಮವಾಗಿಸುತ್ತದೆ. ಸಾಮಾನ್ಯೀಕರಣದ ಮುಖ್ಯ ತತ್ವವೆಂದರೆ "ಜ್ಞಾನವನ್ನು ಅಪೂರ್ಣವಾಗಿ ನೀಡಿ, ಕಲಿಕಾರ್ಥಿಯು ಪೂರ್ಣಗೊಳಿಸಿಕೊಂಡು ಕಲಿಕೆಯನ್ನು ನಿರಂತರವಾಗಿಸಿ, ಸುಧಾರಿಸಿಕೊಳ್ಳಬೇಕು. ಆದ್ದರಿಂದ, ಸಾಮಾನ್ಯೀಕರಣ ಹಂತ ಜೀವಂತಿಕೆಯಿಂದಿರುತ್ತದೆ.

**5. ಅನ್ವಯ:** ಅರ್ಥಮಾಡಿಕೊಂಡ, ಸಾಧಿಸಿದ ಜ್ಞಾನ ಉಪಯುಕ್ತವಾಗಿರಲು ವಾಸ್ತವ ಜೀವನದಲ್ಲಿ ಬಳಸುತ್ತಿರಬೇಕು. ಸಂಪಾದಿಸಿದ ಜ್ಞಾನವನ್ನು ಸಂದರ್ಭೋಚಿತವಾಗಿ, ಅನಿರೀಕ್ಷಿತ ಸನ್ನಿವೇಶಗಳಲ್ಲಿ ಬಳಸಿಕೊಳ್ಳುವಿಕೆ, ಅಳವಡಿಸಿಕೊಳ್ಳುವಿಕೆಯೇ ಅನ್ವಯ. ಮುಕ್ತವಾದ ಅನ್ವಯಗಳಿಂದ ಸಾಧಿಸಿದ ಜ್ಞಾನ ವೃದ್ಧಿಸುತ್ತದೆ. ಸುಧಾರಣೆಗೆ ಒಳಪಡುತ್ತದೆ. ತತ್ಫಲವಾಗಿ ಸಂಶೋಧನೆಗೂ ಮಾರ್ಗವಾಗುತ್ತದೆ. ಅಂದರೆ ಬೋಧನೆಯಿಂದ ಪಡೆದ ಜ್ಞಾನಕ್ಕಿಂತಲೂ ಮಿಗಿಲಾಗಿದ್ದು, ಪರಿಮಾಣ ಹಾಗೂ ಗುಣಮಟ್ಟಗಳಲ್ಲಿ ಉತ್ತಮವಾಗಿರುತ್ತದೆ. ಹೊಸ ಜ್ಞಾನ ಸೃಜಿಸುತ್ತದೆ. ಅನ್ವಯದಲ್ಲಿ ಕಲ್ಪನೆ/ಊಹೆ, ನಿರ್ಧಾರ/ತೀರ್ಮಾನ ಅನುಭವಗಳ ಅನುಕುಲನ ಮುಂತಾದ ಉನ್ನತ ಬೌದ್ಧಿಕ ಘಟಕಾಂಶಗಳಿರುವುದರಿಂದ, ಅನ್ವಯದ ಫಲ ಸ್ಪಷ್ಟವಾಗಿ ಗೋಚರಿಸುವುದರಿಂದ ಕಲಿಕಾರ್ಥಿಯಲ್ಲಿ ಆತ್ಮವಿಶ್ವಾಸ, ಅನ್ವೇಷಣೆಯ ಹಂಬಲ, ವೃತ್ತಿಪರತೆ ಮುಂತಾದವುಗಳು ಬೆಳೆದು ಉತ್ತಮ ವ್ಯಕ್ತಿತ್ವಕ್ಕೆ ಕಾರಣವಾಗುತ್ತದೆ.

ನಮ್ಮ ಉಪಯೋಗಕ್ಕೆ ಸರಿಹೊಂದುವಂತೆ ಹರ್ಬಾರ್ಟನ ಪಂಚಸೋಪಾನಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಮುಖ್ಯ ಪರಿಕಲ್ಪನೆಗಳನ್ನು ಗುರ್ತಿಸಿ, ಬೋಧನಾ (ನಿರ್ದೇಶನ) ಉದ್ದೇಶಗಳನ್ನು ಸ್ಪಷ್ಟಪಡಿಸಿ, ಕಲಿಕಾ ಸಹಾಯಕಗಳನ್ನು ನಿರ್ಧರಿಸಿ, ಪೀಠಿಕೆ ಹಾಕಿ, ಗುರಿ ನಿರೂಪಿಸಿ, ಪಾಠವನ್ನು ವಿಕಾಸಗೊಳಿಸಿ ಪುನರಾವರ್ತನೆ ಮಾಡಿ, ಕಪ್ಪು ಹಲಗೆ ಸಾರಾಂಶ ನೀಡಿ, ಗೃಹಕಾರ್ಯ ಕೊಟ್ಟು ಮುಕ್ತಾಯಗೊಳಿಸುವ ಪರಿಪಾಠ ಈಗ ಚಾಲ್ತಿಯಲ್ಲಿದೆ.

–ಎಚ್.ಎಸ್.ಮ

## ಹೋಲೋಗ್ರಫಿ

ಹೋಲೋಗ್ರಫಿ ಎಂಬ ಶಬ್ದವು ಗ್ರೀಕ್ ಶಬ್ದಗಳಾದ "ಹೋಲೋ" ಮತ್ತು "ಗ್ರಫೆ" ಎಂಬ ಶಬ್ದಗಳಿಂದ ಹುಟ್ಟಿರುತ್ತದೆ. ಹೋಲೋಸ್ ಎಂದರೆ ಆಂಗ್ಲಭಾಷೆಯ "Whole" ಎಂದರೆ ಸಂಪೂರ್ಣ ಎಂದರ್ಥ ಬರುತ್ತದೆ ಹಾಗೂ 'ಗ್ರಫೆ' ಎಂಬ ಶಬ್ದವು ಬರವಣಿಗೆಗೆ, ಚಿತ್ರ ಬಿಡಿಸುವುದಕ್ಕೆ ಸಂಬಂಧಿಸಿರುತ್ತದೆ. ಹೋಲೋಗ್ರಫಿ ತಂತ್ರಜ್ಞಾನದಿಂದ ಯಾವುದೇ ವಸ್ತುವನ್ನು ಚಿತ್ರೀಕರಿಸಿ ಯಾವುದೇ ಸ್ಥಳದಲ್ಲಿಯಾದರೂ ಆ ಚಿತ್ರ ಗೋಚರಿಸುವಂತೆ ಮಾಡಬಹುದಾಗಿದೆ.

ಪುರಾಣ ಕಾಲದಲ್ಲಿ ದೇವಾನು–ದೇವತೆಗಳು ಕಣ್ಮುಂದೆ ಪ್ರತ್ಯಕ್ಷವಾದಂತೆ ಭಾಸವಾಗುವ ವಿಷಯವನ್ನು ತಿಳಿದಿದ್ದೇವೆ. ಹಾಗೆಯೇ ಆಂಗ್ಲಭಾಷೆಯ ಸ್ಟಾರ್‌ಟ್ರೆಕ್ (Startrek) ಎಂಬ ದೂರದರ್ಶನ ಧಾರಾವಾಹಿಯಲ್ಲಿ ಮಾನವರು ಅವರಿಷ್ಟ ಪಡುವ ಸ್ಥಳದಲ್ಲಿ ಗೋಚರವಾಗುವ ಸನ್ನಿವೇಶವನ್ನು ನೋಡಿದ್ದೇವೆ. ಅದರಂತೆಯೇ ಈ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಹೋಲೋಗ್ರಫಿ ತಂತ್ರಜ್ಞಾನದ ಮೂಲಕ ಪರಸ್ಥಳದ ವಸ್ತುಗಳನ್ನು ನೈಜವಾಗಿ ಕಣ್ಮುಂದೆ ಗೋಚರಿಸುವಂತೆ ಮಾಡಬಹುದಾಗಿದೆ.

ಈಗಾಗಲೇ ದೂರದರ್ಶನ, ಚಲನಚಿತ್ರ, LCD ಪ್ರೊಜೆಕ್ಟರ್ ಇತ್ಯಾದಿಗಳ ಮೂಲಕ ಎರಡು ಆಯಾಮದ (2D - ಉದ್ದ X ಅಗಲ) ಚಿತ್ರಗಳನ್ನು ನೋಡಬಹುದಾಗಿದೆ. ಹಾಗೆಯೇ ಹೋಲೋಗ್ರಫಿ ತಂತ್ರಜ್ಞಾನವುಳ್ಳ ಪರಿಕರಗಳಿಂದ ಚಿತ್ರೀಕರಿಸಿದಲ್ಲಿ ಹಾಗೂ ವೀಕ್ಷಿಸುವಲ್ಲಿ ಬಳಸಿಕೊಂಡಲ್ಲಿ ನೈಜತೆಗೆ ಅತ್ಯಂತ ಸಮೀಪವಾಗುವಂತೆ ಮೂರು ಆಯಾಮಗಳ (3D ಉದ್ದ X ಅಗಲ X ಆಳ) ಆಕೃತಿಗಳನ್ನು ಕಣ್ಮುಂದೆಯೇ ಪ್ರತ್ಯಕ್ಷವಾಗಿ ನೋಡಬಹುದಾಗಿದೆ.

ನಾವು ಶೈಕ್ಷಣಿಕ ತಂತ್ರಜ್ಞಾನದಲ್ಲಿ ಪ್ರಕ್ಷೇಪಕ, ದೂರದರ್ಶನ ಇವೇ ಮೊದಲಾದ ಪರಿಕರಗಳನ್ನು ಬಳಸಿಕೊಂಡು ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡುತ್ತಿದ್ದೇವೆ. ಅಂತೆಯೇ ಹೋಲೋಗ್ರಫಿ ತಂತ್ರಜ್ಞಾನವುಳ್ಳ ಪರಿಕರಗಳನ್ನು ಬಳಸಿದಲ್ಲಿ ನೈಜ ಅನುಭವವನ್ನು ತರಗತಿಯಲ್ಲೇ ಕುಳಿತು ಪಡೆಯಬಹುದಾಗಿದೆ. ಉದಾಹರಣೆ: ದೂರಸ್ಥಳದಲ್ಲಿರುವ ಸಂಪನ್ಮೂಲ ವ್ಯಕ್ತಿಯೊಬ್ಬರು ಮಾಡುವ ಬೋಧನೆಯನ್ನು ತರಗತಿಯಲ್ಲೇ ಕುಳಿತು 3–ಆಯಾಮಗಳ (ಉದ್ದ X ಅಗಲ X ಆಳ) ಚಿತ್ರಣವನ್ನು ವೀಕ್ಷಿಸಬಹುದಾಗಿದೆ. ಇದರಿಂದ ನಿಜವಾಗಿಯೂ ಶಿಕ್ಷಕರು ಕಣ್ಮುಂದೆಯೇ ನಿಂತು ಮಾತನಾಡುತ್ತಿರುವಂತೆಯೇ ಭಾಸವಾಗುತ್ತದೆ. ಇದೇ ರೀತಿಯಾಗಿ ಯಾವುದೇ ವಸ್ತುವನ್ನು ಕಣ್ಮುಂದೆ ಪ್ರತ್ಯಕ್ಷವಾಗುವಂತೆ ಮಾಡಬಹುದಾಗಿದೆ.

ಹೋಲೋಗ್ರಫಿ ತಂತ್ರಜ್ಞಾನವು ಮುಂದುವರೆದ ರಾಷ್ಟ್ರಗಳಲ್ಲಿ ಈಗಾಗಲೇ ಬಳಕೆಗೆ ಬಂದಿದ್ದು ನಮ್ಮ ದೇಶದಲ್ಲೂ ಆದಷ್ಟು ಬೇಗ ಸಂಪೂರ್ಣವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಬರುವ ಸಾಧ್ಯತೆಯಿರುತ್ತದೆ.

ಹೋಲೋಗ್ರಫಿ ತಂತ್ರಜ್ಞಾನದ ಇನ್ನಷ್ಟು ಉಪಯೋಗಗಳೆಂದರೆ ಸಮಯದ ಉಳಿತಾಯವಾಗುವುದು, ನಿಖರವಾದ ಮಾಹಿತಿ ದೃಗ್ಗೋಚರವಾಗುವುದು, ಪರಿಣಾಮಕಾರಿಯಾದ ಕಲಿಕೆಯುಂಟಾಗುವುದು, ಆರ್ಥಿಕ ಉಳಿತಾಯವಾಗುವುದು, ಇತ್ಯಾದಿ.

ತಾಂತ್ರಿಕವಾಗಿ ಹೇಳುವುದಾದರೆ, ಹೋಲೋಗ್ರಫಿ ಎಂಬ ತಂತ್ರಜ್ಞಾನವು ಒಂದು ವಸ್ತುವಿನಿಂದ ಹರಡಿದ ಬೆಳಕನ್ನು ರೆಕಾರ್ಡ್ ಮಾಡಿದನಂತರ ಅದನ್ನು ಪುನರಚಿಸಿದಾಗ ವಸ್ತುವು ರೆಕಾರ್ಡ್ ಮಾಡಿದಾಗ ಮೊದಲಿದ್ದ ಸ್ಥಳದಲ್ಲಿರುವಂತೆಯೇ ಗೋಚರವಾಗುವುದು. ವಸ್ತುವು ತನ್ನ ಸ್ಥಾನಪಲ್ಲಟ ಮಾಡಿದಂತೆಲ್ಲಾ ವಸ್ತುವಿನ ಚಿತ್ರಣವು ತನ್ನ ಸ್ಥಾನವನ್ನು ಬದಲಾಯಿಸುವುದು. ದಾಖಲಿಸಿದ ಚಿತ್ರವನ್ನು ಹೋಲೋಗ್ರಾಮ್ ಮೂರು ಆಯಾಮಗಳಲ್ಲಿ ಗೋಚರವಾಗುವಂತೆ ಮಾಡುತ್ತದೆ. ಹೋಲೋಗ್ರಫಿ ವಿಧಾನವನ್ನು ದೃಶ್ಯ ಮಾಹಿತಿಯನ್ನು ಸಂಗ್ರಹಿಸಲು ಬಳಸುವುದಲ್ಲದೆ, ಮಾಹಿತಿ ಪ್ರಕ್ರಿಯೆಯಲ್ಲೂ ಬಳಸಬಹುದಾಗಿದೆ. ಹೋಲೋಗ್ರಫಿ ಸಾಮಾನ್ಯವಾಗಿ 3D ಚಿತ್ರಗಳನ್ನು ಪ್ರದರ್ಶಿಸಲು ಬಳಕೆಯಾಗುತ್ತಿದೆಯಾದರೂ ಚಲನಚಿತ್ರದ ವಿಶೇಷ ಅಚ್ಚಿನಲ್ಲಿ (Arbitrory

Digitised by Bharatavani, CIIL

Scene) ಹೋಲೋಗ್ರಫಿಕ್ ಮೆಟ್ರಿಕ್ ಪ್ರದರ್ಶನ (Holographic Display)ದಲ್ಲಿ ಬಳಸಲಾಗುತ್ತಿಲ್ಲ.

ಹೋಲೋಗ್ರಫಿಯ ಉದ್ದೇಶವು ಸಂಪೂರ್ಣ ಅಲೆಕ್ಷೇತ್ರ (Wave Field)ವನ್ನು ಹೇಗೆ ಅದು ರೆಕಾರ್ಡಿಂಗ್ ಮಾಧ್ಯಮದಲ್ಲಿ ಅಂತಃಛೇದವಾಗುವುದೋ (Intercept) ಹಾಗೆ ದಾಖಲು ಮಾಡುವುದಾಗಿದೆ. ದಾಖಲು ಮಾಡುವ ಸಮತಲವು ಚಿತ್ರಣದ ಸಮತಲಕ್ಕೆ ಸಮನಾಗಿರಬೇಕಿಲ್ಲ.

ಆದುದರಿಂದ ಹೋಲೋಗ್ರಫಿಯು ಬೆಳಕಿನ ಪ್ರತಿಫಲನ ಹಾಗೂ ಚದುರಿದ ವಸ್ತುವನ್ನು ಸಿಗ್ನಲ್ ಬೀಮ್ (Signal Beem) ಹಾಗೂ ರೆಫರೆನ್ಸ್ ಬೀಮ್ ಅನ್ನು ಸೃಷ್ಟಿಸಿ ಅದನ್ನು ರೆಕಾರ್ಡ್ ಮಾಡಿ ಚಿತ್ರವನ್ನು ಪರದೆ ಮೇಲೆ ಹರಡುವ ಪ್ರಕ್ರಿಯೆಯಾಗಿದೆ.

– ಕೆ.ಬಿ.ಪ್ರ.

* * * * * * * * *

Digitised by Bharatavani, CIIL

# ಪ್ರಧಾನ ಸಂಪಾದಕರ ಕಿರು ಪರಿಚಯ

**ಡಾ. ಎನ್. ಲಕ್ಷ್ಮಿ,** ಎಂ.ಎಡ್., ಎಂ.ಫಿಲ್., ಪಿಎಚ್.ಡಿ.
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮಾನಸಗಂಗೋತ್ರಿ, ಮೈಸೂರು–06

ಡಾ. ಎನ್. ಲಕ್ಷ್ಮಿಯವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎಡ್., ಎಂ.ಫಿಲ್. ಮತ್ತು ಪಿ.ಎಚ್‌ಡಿ. ಪದವಿಗಳನ್ನು ಪಡೆದಿದ್ದಾರೆ. ಇವರು 1996 ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ **"ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಹಾಗೂ ಇತರೆ ಜನಾಂಗದವರ ತಾರುಣ್ಯಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳ ಶೈಕ್ಷಣಿಕ ಹಿಂದುಳಿಯುವಿಕೆ"** ಎಂಬ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಇವರು 1994 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ICC&CE ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕಿಯಾಗಿ ಸೇವೆ ಪ್ರಾರಂಭಿಸಿದರು. ಶ್ರೀಮತಿಯವರು 2001 ರಿಂದ 2003 ರವರೆಗೆ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕಿಯಾಗಿ ಸೇವೆಸಲ್ಲಿಸಿದರು. 2003 ರಿಂದ ಸಹಾಯಕ ಪ್ರಾಧ್ಯಾಪಕರಾಗಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಐದು ಮಂದಿ ವಿದ್ಯಾರ್ಥಿಗಳು ಪಿ.ಹೆಚ್‌ಡಿ. ಪದವಿಯನ್ನು ಪಡೆದಿದ್ದಾರೆ. ಹಾಗೆಯೇ ಹತ್ತು ಮಂದಿ ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಏಳು ಮಂದಿ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಕರಾಮುವಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಬಿ.ಎಡ್., ಬಿ.ಎಡ್. ವಿಶೇಷ ಶಿಕ್ಷಣ, ಎಂ.ಎಡ್., ಎಂ.ಫಿಲ್., ಪಿ.ಎಚ್‌ಡಿ., ಹಾಗೂ ಪಿಜಿಡಿಹೆಚ್‌ಇ ಕೋರ್ಸ್‌ಗಳನ್ನು ನಡೆಸಲಾಗುತ್ತದೆ.

ಶ್ರೀಮತಿಯವರು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. **"ಶೈಕ್ಷಣಿಕ ಆಡಳಿತ, ನಿರ್ವಹಣೆ ಹಾಗೂ ಶಾಲಾ ಸಂಘಟನೆ , "ಶೈಕ್ಷಣಿಕ ನಿರ್ವಹಣೆ ಮತ್ತು ನಾಯಕತ್ವ", "ಮಹಿಳಾ ಶಿಕ್ಷಣ", "ಭಾರತದಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸವಾಲುಗಳು", "ಶೈಕ್ಷಣಿಕ ಸಂಶೋಧನೆ", "ಪ್ರಚಲಿತ ಸಾಮಾಜಿಕ ಮತ್ತು ಶೈಕ್ಷಣಿಕ ಸವಾಲುಗಳು"** ಇವರ ಪ್ರಮುಖ ಪುಸ್ತಕಗಳಾಗಿವೆ.

ಡಾ. ಎನ್. ಲಕ್ಷ್ಮಿ ರವರು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ 2007–08ನೇ ಸಾಲಿನಲ್ಲಿ **"ಮೈಸೂರು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳ ತುಲನಾತ್ಮಕ ಅಧ್ಯಯನ"** ಎಂಬ ಪ್ರಾಯೋಜನೆಯನ್ನು ಹಾಗೂ 2009–10ನೇ ಸಾಲಿನಲ್ಲಿ ಡೆಕ್ ಅನುದಾನದಡಿಯಲ್ಲಿ **"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎಡ್., ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರವೇಶಾತಿ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳ ಒಂದು ಅಧ್ಯಯನ"** ಎಂಬ ಎರಡು ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ.

ಪ್ರಸ್ತುತ ಕೇಂದ್ರದ ಘನ ಸರ್ಕಾರ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಹಿನ್ನೆಲೆಯಲ್ಲಿ ರಾಜ್ಯದ ಘನ ಸರ್ಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವಿಶ್ವವಿದ್ಯನಿಲಯಕ್ಕೆ ಎರಡು ಕೋಟಿ ರೂಗಳ ಅನುದಾನವನ್ನು ಮಂಜೂರು ಮಾಡಿ, ನಮ್ಮ ವಿಶ್ವವಿದ್ಯಾನಿಲಯಕ್ಕೆ ಮೊದಲ ಕಂತಾಗಿ ರೂ. ಒಂದು ಕೋಟಿಯನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಯೋಜನೆಯ ವ್ಯಾಪ್ತಿಗೆ ನಮ್ಮ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎನ್. ಲಕ್ಷ್ಮಿ ರವರು ಪ್ರಧಾನ ಸಂಪಾದಕರಾಗಿ ಕೈಗೆತ್ತಿಕೊಂಡಿರುವ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಯೋಜನೆಯೂ ಸಹ ಒಂದು. ಈ ಯೋಜನೆಯನ್ನು ಪ್ರತಿ ಸಂಪುಟವನ್ನು 1000 ಪುಟಗಳಂತೆ 2 ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಪ್ರಥಮ ಸಂಪುಟ ಮುಕ್ತಾಯದ ಹಂತದಲ್ಲಿದ್ದು ಜುಲೈ 2012 ರಲ್ಲಿ ಬಿಡುಗಡೆಯಾಗಲಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆ ಅಡಿಯಲ್ಲಿ **"ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಸಿ.ಡಿ. ಮುಖಾಂತರ ಪಾಠ ಒದಗಿಸುವ ಯೋಜನೆ"**, 2011–12ನೇ ಸಾಲಿನಲ್ಲಿ ಡೆಕ್ ಅನುದಾನದ ಅಡಿಯಲ್ಲಿ **"ಚಾಮರಾಜನಗರ ಜಿಲ್ಲೆಯ ಹೆಣ್ಣು ಮಕ್ಕಳು ದೂರ ಶಿಕ್ಷಣದ ಉಪಯೋಗವನ್ನು ಪಡೆದುಕೊಂಡಿರುವುದರ ಬಗ್ಗೆ–ಒಂದು ಅಧ್ಯಯನ"** ಯೋಜನೆ ಹಾಗೂ 2011–12ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ "AN EVALUATIVE STUDY OF THE IMPLIMENTATION OF THE SSA MADARASAS GRANT SCHEME IN KARNATAKA STATE" ಪ್ರಾಯೋಜನೆಗಳಲ್ಲಿ ಕಾರ್ಯನಿರತರಾಗಿದ್ದಾರೆ.

ಶ್ರೀಮತಿಯವರು ಹಲವಾರು ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ರಾಷ್ಟ್ರೀಯ ಸಮ್ಮೇಳನಗಳಾದ National Seminar on 'ODL-Learner support Services' held on 20 & 21st October 2010 at Dr. B.R. Ambedkar open University, Hyderabad, National Seminar on 'Rejuvenating Intellectual Curiosity Among Teacher Educators' held on 28 & 29th January 2011 at Stella Matutina College of Education, Chennai, National Seminar on 'Current Issues in Teacher Education' held on 14th & 15th March at Department of Education, Faculty of Education and Psychology, The Maharaja Sayajirao University of Baroda, Vadodara Gujarat ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಹಾಗೆಯೇ ಹಲವು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿಯೂ ಸಹ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ಅಂತರರಾಷ್ಟ್ರೀಯ ಸಮ್ಮೇಳನಗಳಾದ International Conference On "Innovative Thoughts – Education, Management, Arts, Science, Linguistics" (Teaching & Learning) held on 12th, 13th & 14th August 2011 at Department of Indian Studies, Faculty of Arts and sciences, University of Malaya, Kualalumpur, Malaysia, International Seminar on "Global Commitments Towards Inclusive Development of Persons with Disabilities" held on 17th and 19th March 2012 at India Habitat Centre, New Delhi, International Seminar on "Innovations in Teaching, Research and Management in Higher Education" held on 21st and 22nd March 2012 at the Centre for Educational Research, Madurai Kamaraj University, Madurai, Tamil Nadu ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ.

ಹಾಗೂ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಇವರು ಹಲವಾರು ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ವಿಭಾಗದಲ್ಲಿ ಶೈಕ್ಷಣಿವಾಗಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದ ಇವರ ಹಲವು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಪ್ರಧಾನ ಸಂಪಾದಕರಾಗಿದ್ದಾರೆ.

Digitised by Bharatavani, CIIL

## ಸಲಹಾ ಸಮಿತಿ ಸದಸ್ಯರ ಕಿರು ಪರಿಚಯ

**ಪ್ರೊ. ಸಿ. ಶೇಷಾದ್ರಿ,** B.sc., M.A. (Phil), M.Ed., Ph.d.
"ಚೆನ್ನಗಿರಿ" ಮನೆ ನಂ. 1391,
ಅನಿಕೇತನ ರಸ್ತೆ,
ದಕ್ಷಿಣ 5ನೇ ಅಡ್ಡ ರಸ್ತೆ,
ಕುವೆಂಪುನಗರ, ಮೈಸೂರು–570 023

ಗಣಿತ ಶಾಸ್ತ್ರದ ಅಧ್ಯಾಪಕರಾಗಿ ತಮ್ಮವೃತ್ತಿಯನ್ನು ಆರಂಭಿಸಿದ ಪ್ರೊ|| ಸಿ. ಶೇಷಾದ್ರಿಯವರು, ನಂತರದಲ್ಲಿ ದೆಹಲಿಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ಪ್ರಶಿಕ್ಷಣ ಪರಿಷತ್ತನ್ನು (ಎನ್.ಸಿ.ಇ.ಆರ್.ಟಿ) ಸೇರಿ ದೀರ್ಘಕಾಲ ಪ್ರವಾಚಕರಾಗಿ ಪ್ರಾಧ್ಯಾಪಕರಾಗಿ ಹಾಗೂ ಮೈಸೂರು ಮತ್ತು ಭುವನೇಶ್ವರದಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್.ಐ.ಇ)ಗಳ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಇನ್.ಸಿ.ಇ.ಅರ್.ಟಿ.ಯ ಹಿರಿಯ ಪ್ರಾಧ್ಯಾಪಕರುಗಳಲ್ಲಿ ಒಬ್ಬರಾದ ಶ್ರೀಯುತರು ಆ ಸಂಸ್ಥೆಯ ಶಿಕ್ಷಣಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕೆಲವು ವಿಶ್ವವಿದ್ಯಾನಿಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಪ್ರೊ. ಶೇಷಾದ್ರಿಯವರು 50ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. 6 ಪುಸ್ತಕಗಳನ್ನು ಬರೆದಿದ್ದಾರೆ. ನಿವೃತ್ತಿಯ ನಂತರ ಥಾಯ್‌ಲ್ಯಾಂಡ್, ಇಥಿಯೋಪಿಯ ಮತ್ತು ಚೈನಾ ದೇಶಗಳಲ್ಲಿ ಶಿಕ್ಷಣದ ತಜ್ಞ ಸಲಹೆಗಾರರಾಗಿ ಇವರು ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

**ಡಾ. ಎಂ.ಎಸ್. ತಳವಾರ್,** ಎಂ.ಎ., ಎಂ.ಎಡ್., ಪಿಎಚ್.ಡಿ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಜ್ಞಾನಭಾರತಿ,
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ಎಂ.ಎಸ್. ತಳವಾರ್‌ರವರು ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕೆಲ ವರ್ಷಗಳ ಕಾಲ ಕಾರ್ಯನಿರ್ವಹಿಸಿ, ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಯುತರು 33 ವರ್ಷಗಳ ಬೋಧನಾನುಭವವನ್ನು ಹೊಂದಿದ್ದಾರೆ. ಇವರು ವಿಭಾಗದ ಮುಖ್ಯಸ್ಥರಾಗಿ ಡೀನ್‌ರಾಗಿ, ಶೈಕ್ಷಣಿಕ ಸಿಬ್ಬಂದಿ ಕಾಲೇಜಿನ ನಿರ್ದೇಶಕರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಶೈಕ್ಷಣಿಕ ಸಮಾಜಶಾಸ್ತ್ರ, ಶೈಕ್ಷಣಿಕ ಆಡಳಿತ, ಶಿಕ್ಷಕರ ಶಿಕ್ಷಣ ಇವರ ವಿಶೇಷ ಕ್ಷೇತ್ರಗಳಾಗಿವೆ.

ಶ್ರೀಯುತರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯಮಟ್ಟದ ಹಲವು ಕಾರ್ಯಗಾರಗಳು, ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದ್ದಾರೆ. ಇವರ ಹಲವಾರು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು 1997–98 ಸಾಲಿನಲ್ಲಿ ಯು.ಜಿ.ಸಿ. ಅನುದಾನದಡಿಯಲ್ಲಿ "Incorporating Environmental Component into B.Ed. and M.Ed. Course" ಪ್ರಾಯೋಜನೆಯನ್ನು, 2004ನೇ ಸಾಲಿನಲ್ಲಿ Karnataka State SC/ST Development Corporation Limited, Bangalore ಇವರ ಅನುದಾನದಲ್ಲಿ "An Evalution Study on Micro Credit Finance Scheme" ಪ್ರಾಯೋಜನೆಯನ್ನು ಹಾಗೂ 2004ನೇ ಸಾಲಿನಲ್ಲಿ "Elementary Education in Karnataka" ಈ ಮೂರು ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ 22 ಮಂದಿ ಎಂ.ಫಿಲ್ ಪದವಿಯನ್ನು ಹಾಗೂ 13 ಮಂದಿ ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಶ್ರೀಯುತರು 2009ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದ ವತಿಯಿಂದ (AIATE) "Best Teacher Educator" ಎಂಬ ಪುರಸ್ಕಾರವನ್ನು ಪಡೆದಿದ್ದಾರೆ. ಶ್ರೀಯುತರು 16ಕ್ಕೂ ಹೆಚ್ಚು ಪುಸ್ತಕಗಳನ್ನು ಶಿಕ್ಷಣಶಾಸ್ತ್ರದ ಬಗ್ಗೆ ರಚಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

**ಡಾ. ಟಿ. ಪದ್ಮಿನಿ,** ಬಿ.ಎಸ್ಸಿ., ಎಂ.ಎಡ್., ಪಿಎಚ್.ಡಿ.
75, ದಯಾಮಾರ್ಗ, ಸಿದ್ಧಾರ್ಥ ನಗರ,
ಮೈಸೂರು.

ಡಾ. ಟಿ. ಪದ್ಮಿನಿಯವರು 1980ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕಿಯಾಗಿ ತಮ್ಮ ಸೇವೆಯನ್ನು ಆರಂಭಿಸಿ ನಂತರ ಪ್ರವಾಚಕರಾಗಿ, ಪ್ರಾಧ್ಯಾಪಕಿಯಾಗಿ ಮತ್ತು ವಿಭಾಗ ಮುಖ್ಯಸ್ಥೆಯಾಗಿ ದೀರ್ಘಕಾಲ ಸೇವೆ ಸಲ್ಲಿಸಿ 2004ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದರು. ನಿವೃತ್ತಿಯ ನಂತರ ಯುಜಿಸಿ ಯಿಂದ ಎಮಿರೈಟರ್ ಫೆಲೋಶಿಪ್ ಪಡೆದು 2005 ರಿಂದ 2007ರವರೆಗೆ ಮಾನಸಗಂಗೋತ್ರಿಯಲ್ಲಿ ಸಂಶೋಧನೆ ಕೈಗೊಂಡರು. ಪಿಯಾಜೆ ಪ್ರತಿಪಾದಿತ ಸಂಜ್ಞಾನಾತ್ಮಕ ಸಿದ್ಧಾಂತ ಹಾಗೂ ತತ್‌ಸಂಬಂಧಿತ ಕ್ಷೇತ್ರದಲ್ಲಿ ವಿಶೇಷ ಪರಿಣತಿ ಹೊಂದಿರುವ ಪ್ರೊ. ಪದ್ಮಿನಿಯವರು ಅನೇಕ ಲೇಖನಗಳನ್ನು, ಒಂದು ಪುಸ್ತಕವನ್ನು ಬರೆದಿದ್ದಾರೆ. ನಿವೃತ್ತಿ ನಂತರ ಅಖಿಲ ಭಾರತ ಮಟ್ಟದ 'ಪ್ರಥಮ್' ಸಂಸ್ಥೆಯೊಂದಿಗೆ ತಮ್ಮನ್ನು ತೊಡಗಿಸಿಕೊಂಡು, ವಂಚಿತ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ರಮಗಳನ್ನು ನಿರ್ದೇಶಿಸುತ್ತಿರುವುದಲ್ಲದೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ನಡೆಸುತ್ತಿರುವ ಪೂರ್ವ ಪ್ರಾಥಮಿಕ ಶಿಕ್ಷಣದ ಡಿಪ್ಲೋಮಾ ಕಾರ್ಯಕ್ರಮದ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

**ಡಾ. ಎ. ಶಶಿಕಲ,** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

ಮೂರು ದಶಕಗಳಿಂದ ಮಂಗಳೂರಿನ ಸೇಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪನ ಮಾಡುತ್ತಿದ್ದಾರೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಸಂಪಾದಿಸಿದ್ದಾರೆ ಮತ್ತು ಪ್ರಕಟಿಸಿದ್ದಾರೆ. ಹಲವು ಸಂಸ್ಥೆಗಳ ಸಂಶೋಧನ ಯೋಜನೆಗಳನ್ನು ಕೈಗೊಂಡಿದ್ದಾರೆ. ಕರ್ನಾಟಕ ರಾಜ್ಯ ಡಿ.ಎಡ್. ಪಠ್ಯಕ್ರಮ ರಚನಾ ಸಮಿತಿ ಸದಸ್ಯರಲ್ಲಿ ಒಬ್ಬರಾಗಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

Digitised by Bharatavani, CIIL

# ಸಂಪಾದಕ ಮಂಡಳಿ ಸದಸ್ಯರ ಕಿರು ಪರಿಚಯ

**ಪ್ರೊ. ಬಿ.ಎನ್. ಮಂಜುನಾಥಯ್ಯ,** ಎಂ.ಎ.(ಮನೋವಿಜ್ಞಾನ), ಎಂ.ಎಡ್.
1009, E & F ಬ್ಲಾಕ್, ಉದಯರವಿ ರಸ್ತೆ.
ಕುವೆಂಪು ನಗರ, ಮೈಸೂರು.

ಮಂಗಳೂರಿನ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ 2 ವರ್ಷ ಸೇವೆ ಸಲ್ಲಿಸಿ ನಂತರ ಮೈಸೂರಿನ ಸೋಮಾನಿ ಬಿ.ಎಡ್. ಕಾಲೇಜಿನಲ್ಲಿ 4 ವರ್ಷ, ಮಾನಸಗಂಗೋತ್ರಿಯಲ್ಲಿ 26 ವರ್ಷಗಳ ಕಾಲ ಸೇವೆ ಸಲ್ಲಿಸಿ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದ್ದಾರೆ. ಆನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 8 ವರ್ಷ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ,** ಬಿ. ಎಸ್ಸಿ; ಎಂ.ಎಡ್; ಡಿ.ಬಿ.ಇ; ಡಿ.ಇ.ವಿ.ಜಿ.
ನಂ. 383, 14ನೇ ಮುಖ್ಯ ರಸ್ತೆ,
ಸರಸ್ವತಿ ಪುರಂ, ಮೈಸೂರು.

ಶ್ರೀಯುತರು ಶಿಕ್ಷಕರಾಗಿ, ಪ್ರಶಿಕ್ಷಕರಾಗಿ, ಶೈಕ್ಷಣಿಕ ಮೇಲ್ವಿಚಾರಕರಾಗಿ, ಸಮನ್ವಯಾಧಿಕಾರಿಯಾಗಿ, ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, SKMK ಶಿಕ್ಷಣ ಮಹಾವಿದ್ಯಾಲಯದ ಸಂಸ್ಥಾಪಕ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ. NCERT, DSERT ಹಾಗೂ ಭಾರತ ಸರ್ಕಾರದ EdCILನ ಅನೇಕ ಪ್ರಾಯೋಜನೆಗಳಲ್ಲಿ, ಕಾರ್ಯಾಗಾರಗಳಲ್ಲಿ ಮತ್ತು ಇತರ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. 20ಕ್ಕೂ ಹೆಚ್ಚು ಪಠ್ಯ ಪುಸ್ತಕಗಳನ್ನು ಬರೆದಿರುವುದಲ್ಲದೆ ಕೆಲವು ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಬರೆದಿದ್ದಾರೆ. ಶಿಕ್ಷಕ್ಕೆ ತಮ್ಮ ಸೇವೆಗಾಗಿ ಅನೇಕ ಪ್ರಶಸ್ತಿ/ಪುರಸ್ಕಾರಗಳನ್ನು ಪಡೆದಿದ್ದಾರೆ. ಶೈಕ್ಷಣಿಕ ಸಂಶೋಧನೆಗಾಗಿ NCERT ಯಿಂದ ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿಗಳಿಸಿದ್ದಾರೆ. ಆಕಾಶವಾಣಿಯ ಹಲವಾರು ಕಾರ್ಯಕ್ರಮಗಳಲ್ಲಿ ಇಂದಿಗೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

**ಡಾ. ಎಸ್. ಶ್ರೀಕಂಠಸ್ವಾಮಿ,** ಬಿ.ಎಸ್ಸಿ., ಎಂ.ಎ., ಎಂ.ಎಡ್., ಪಿಎಚ್.ಡಿ.
ನಂ. 108, 'ಶ್ರೀಮಂಜು'
4ನೇ ಅಡ್ಡರಸ್ತೆ, ಆರ್.ಕೆ.ಲೇಔಟ್,
ಪದ್ಮನಾಭನಗರ, ಬೆಂಗಳೂರು–560 070

ಡಾ. ಎಸ್. ಶ್ರೀಕಂಠಸ್ವಾಮಿಯವರು ಬೆಂಗಳೂರಿನ ಪ್ರತಿಷ್ಠಿತ ಕ್ರೈಸ್ಟ್ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದ ಹೆಚ್ಚುವರಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದು, ಸುಮಾರು 18 ಕ್ಕೂ ಹೆಚ್ಚು ವಿಷಯಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳು/ಅಧ್ಯಾಪಕರುಗಳು ಪಿ.ಎಚ್.ಡಿ. ಮಾಡಲು ಸಹಕಾರಿಯಾಗಿದ್ದಾರೆ. ಪ್ರಸ್ತುತ ಎಂ.ಫಿಲ್ ಮತ್ತು ಪಿ.ಎಚ್.ಡಿ. ಕೋರ್ಸ್‌ಗಳಿಗೆ ಸಂಶೋಧನಾ ವಿಧಾನಗಳನ್ನು ಬೋಧಿಸುತ್ತಿದ್ದಾರೆ. ಹಾಗೂ ಸಂಶೋಧಕರಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ.

ಸೆಯಂಟ್ ಪ್ಯಾಟ್ರಿಕ್ಸ್ ಪ್ರೌಢಶಾಲೆಯಲ್ಲಿ ಸುಮಾರು 10 ವರ್ಷಗಳ ಕಾಲ ಸೇವೆ ಸಲ್ಲಿಸಿ, ಆನಂತರ ಬೆಂಗಳೂರಿನ ಪ್ರಸಿದ್ಧ ರಾಷ್ಟ್ರೀಯ ವಿದ್ಯಾಲಯದ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಸುಮಾರು 25 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಭೌತಶಾಸ್ತ್ರ ಬೋಧನೆ ಹಾಗೂ ಶೈಕ್ಷಣಿಕ ಮನೋವಿಜ್ಞಾನವನ್ನು ಬಿ.ಎಡ್. ತರಗತಿಗಳಿಗೂ ಉನ್ನತ ಶಿಕ್ಷಣ ಮನೋವಿಜ್ಞಾನ, ಬಹುಮಾಧ್ಯಮ ತಂತ್ರಜ್ಞಾನ ಮತ್ತು ಮೌಲ್ಯಮಾಪನ ವಿಷಯಗಳನ್ನು ಎಂಇ.ಡಿ., ತರಗತಿಗಳಿಗೂ ಬೋಧಿಸಿದ್ದಾರೆ. ಆರ್.ವಿ.ಟೀಚರ್ಸ್ ಕಾಲೇಜಿನ ಡಿ.ಇ.ಎಸ್. ಮತ್ತು ಐ.ಎ.ಎಸ್.ಇ. ವಿಭಾಗದಲ್ಲಿ ಸಂಯೋಜನಾಧಿಕಾರಿಯಾಗಿ ನೂರಾರು ಸೇವಾ ನಿರತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಪ್ರೌಢಶಾಲೆಯಿಂದ ವಿಶ್ವವಿದ್ಯಾಲಯಗಳವರೆಗೆ ಬೋಧಿಸಿ 39 ಕ್ಕೂ ಹೆಚ್ಚು ವರ್ಷಗಳ ಅನುಭವವನ್ನು ಪಡೆದಿದ್ದಾರೆ.

ಡಿ.ಎಸ್.ಇ.ಆರ್.ಟಿ.ಯ ವಿಜ್ಞಾನ ಪಠ್ಯವಸ್ತು ಸಮಿತಿ ಹಾಗೂ ಪಠ್ಯ ಪುಸ್ತಕ ಸಮಿತಿಯಲ್ಲಿ ಪರಿಶೀಲಕರಾಗಿ ಕಾರ್ಯನಿರ್ವಹಿಸಿದ್ದಾರೆ. ರಾಜ್ಯ ಮಟ್ಟದ ಎನ್.ಟಿ.ಎಸ್.ಇ. ವಿಭಾಗದಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಭೌತಶಾಸ್ತ್ರದ ವಿಷಯ ಹಾಗೂ ಬೌದ್ಧಿಕ ಸಾಮರ್ಥ್ಯ ವಿಷಯದ ಬಗ್ಗೆ ಪಾಠ ಮಾಡಿದ್ದಾರೆ ಮತ್ತು ಸ್ಯಾಟಲೈಟ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಬಿ.ಇಡಿ. ಪಠ್ಯ ವಸ್ತುವಿನ ರಚನೆಯಲ್ಲಿ ಶೈಕ್ಷಣಿಕ ಮನೋವಿಜ್ಞಾನ ವಿಷಯದ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಸೇವಾ ನಿರತ ಶಿಕ್ಷಣ ಇವರಿಗೆ ಬಹಳ ಪ್ರಿಯವಾಗಿದ್ದು ರಾಜ್ಯ ಹಾಗೂ ಅಂತರರಾಜ್ಯ ಮಟ್ಟದಲ್ಲಿ 2060 ಕ್ಕೂ ಹೆಚ್ಚು ಉಪನ್ಯಾಸವನ್ನು ನೀಡಿರುವುದು ಇವರ ಹೆಗ್ಗಳಿಕೆ. ಇವುಗಳಲ್ಲಿ ಹಲವಾರು ಪ್ರತಿಷ್ಠಿತ ರಾಜ್ಯ ಹಾಗೂ ಕೇಂದ್ರ ಸಂಸ್ಥೆಗಳು ಸೇರಿವೆ.

"ವಿಮರ್ಶಾತ್ಮಕ ಆಲೋಚನಾ ಕೌಶಲ್ಯಗಳು" ಎಂಬ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿ.ಎಚ್‌ಡಿ., ಪದವಿ ಲಭಿಸಿದೆ. ಇವರ ಮಾರ್ಗದರ್ಶನದಲ್ಲಿ 5 ಉಪನ್ಯಾಸಕರು ಪಿ.ಎಚ್‌ಡಿ. ಪದವಿ ಪಡೆದರೆ, ಇಬ್ಬರು ಪಿ.ಎಚ್‌ಡಿ. ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ ಹಾಗೂ ಪ್ರಸ್ತುತ 6 ಉಪನ್ಯಾಸಕರು ಪಿ.ಎಚ್‌ಡಿ.ಯನ್ನು ಮಾಡುತ್ತಿದ್ದಾರೆ. ಇದಲ್ಲದೇ ಇವರ ಮಾರ್ಗದರ್ಶನದಲ್ಲಿ 10 ಜನರು ಎಂ.ಫಿಲ್ ಪದವಿಯನ್ನು ಗಳಿಸಿದ್ದಾರೆ. 120 ಕ್ಕೂ ಹೆಚ್ಚು ಎಂ.ಇಡಿ., ವಿದ್ಯಾರ್ಥಿಗಳ ಸಂಶೋಧನಾ ಪ್ರಬಂಧಕ್ಕೆ ಶ್ರೀಯುತರು ಮಾರ್ಗದರ್ಶನ ನೀಡಿದ್ದಾರೆ. ಇದರ ಜೊತೆಗೆ ಇಲ್ಲಿಯವರೆಗೆ ನಾಲ್ಕು ರಾಜ್ಯಮಟ್ಟದ ಸಂಶೋದನಾ ಪ್ರಾಜೆಕ್ಟ್‌ಗಳನ್ನು ಸಂಪೂರ್ಣಗೊಳಿಸಿದ್ದಾರೆ. ಇವುಗಳಲ್ಲಿ 'ಕರ್ನಾಟಕದಲ್ಲಿ ಶಾಲಾ ಶಿಕ್ಷಣ ಸ್ಥಿತಿ–ಗತಿ' ಎಂಬ ಎನ್.ಸಿ.ಇ.ಆರ್.ಟಿ.ಯ ಸಂಶೋಧನಾ ಪ್ರಾಜೆಕ್ಟ್‌ಗೆ ಮುಖ್ಯ ಸಂಶೋಧಕರಾಗಿ ಕೆಲಸ ನಿರ್ವಹಿಸಿದ್ದಾರೆ. ಇದರಲ್ಲಿ ಈಗ "ವಿಮರ್ಶಾತ್ಮಕ ಆಲೋಚನಾ ಕೌಶಲ್ಯ ಹಾಗೂ ಉನ್ನತ ಶಿಕ್ಷಣದ ಮುಖ್ಯಸ್ಥರ ಮುಖಂಡತ್ವ" ಕ್ಕೆ ಸಂಬಂಧಿಸಿದಂತೆ ಪ್ರಧಾನ ಸಂಶೋಧಕರಾಗಿ ಕಾರ್ಯನಿರ್ವಹಿಸಿದ್ದಾರೆ.

2008ನೇ ಇಸವಿಯಲ್ಲಿ ಕರ್ನಾಟಕ ರಾಜ್ಯವು 10ನೇ ತರಗತಿಯ ಪ್ರಶ್ನೆಪತ್ರಿಕೆಯ ಸ್ವರೂಪವನ್ನು ಪರಿಶೀಲಿಸಿ ಸಲಹೆ ನೀಡಲು ರಚಿಸಿದ್ದ ರಾಜ್ಯ ಮಟ್ಟದ ಸಮಿತಿ ಅಧ್ಯಕ್ಷರಾಗಿ ವರದಿಯನ್ನು ಮಂಡಿಸಿ ಆ ದಿಕ್ಕಿನಲ್ಲಿ ಬದಲಾವಣೆ ತರಲು ಕಾರಣಕರ್ತರಾಗಿದ್ದಾರೆ.

ಶ್ರೀಯುತರು ಎನ್.ಸಿ.ಟಿ.ಇ.ಯ ಸಂದರ್ಶಕ ಸಮಿತಿಯ ಸದಸ್ಯರಾಗಿ ಹಲವಾರು ರಾಜ್ಯಗಳ ಪ್ರಶಿಕ್ಷಣ ಸಂಸ್ಥೆಗಳಿಗೆ ಬೇಟಿ ನೀಡಿ ಸಂಸ್ಥೆಗಳ ಅನುಮೋದನಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ಆಲೋಚನಾ ಸಾಮರ್ಥ್ಯದ ನಿರ್ವಹಣೆ ಮತ್ತು ಬೆಳವಣಿಗೆ, "ಶಿಕ್ಷಕರಿಗೆ ವಿಟಮಿನ್ಸ್", ಅಂತರ್ ವೈಯಕ್ತಿಕ ಸಂಬಂಧಗಳನ್ನು ಅಭಿವೃದ್ಧಿಗೊಳಿಸಿಸುವುದು". "ವಿಷಯಾಧಾರಿತ ಬೋಧನಾ ಪದ್ಧತಿ – ವಿಜ್ಞಾನ", "ಸ್ಟ್ರೀಮ್ ಆಫ್ ತಾಟ್ಸ್" ಇವರು ಬರೆದಿರುವ ಪುಸ್ತಕಗಳು 1988ರಲ್ಲಿ ಇವರು ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ದೆಹಲಿಯ ಎನ್.ಸಿ.ಇ.ಆರ್.ಟಿ. ಯಿಂದ ಪ್ರಶಸ್ತಿ ದೊರಕಿದೆ. ಇದಲ್ಲದೇ ಶ್ರೀಯುತರು ಸಂಶೋಧನೆ ಮತ್ತು ಸೇವಾನಿರತ ಶಿಕ್ಷಣಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ಪರಿಗಣಿಸಿ ಸ್ವಯಂ ಸಂಘಗಳು ಇವರಿಗೆ "ದ್ರೋಣ ಪುರಸ್ಕಾರ" ಮತ್ತು ಜ್ಞಾನ ಸರಸ್ವತಿ" ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

Digitised by Bharatavani, CIIL

**ಪ್ರೊ. ಕೆ. ಆರ್. ನಾಗರತ್ನ,** ಎಂ.ಎ., ಎಂ.ಎಡ್.
ಪ್ರಾಧ್ಯಾಪಕರು
ಸೆಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ
ಜಯಲಕ್ಷ್ಮಿಪುರಂ, ಮೈಸೂರು.

ಪ್ರೊ. ಕೆ.ಆರ್. ನಾಗರತ್ನರವರು 1973 ರಿಂದ 1991ರವರೆಗೆ ಹಾಸನದ ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು 1991 ರಿಂದ ನಿವೃತ್ತರಾಗುವವರೆಗೆ ಮೈಸೂರಿನ ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಹಲವು ಪುನಶ್ಚೇತನ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಡಿ.ಎಡ್. ಪಠ್ಯಪುಸ್ತಕ (ಭಾಷಾ ಬೋಧನೆ) ರಚನೆಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದರು. ಹಾಸನದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ವಿಚಾರ ಸಂಕಿರಣದಲ್ಲಿ ಪ್ರಬಂಧ 'ಕನ್ನಡ ಕಾವ್ಯ' ಮಂಡಿಸಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

## ಯೋಜನಾ ಸಹಾಯಕರ ಕಿರು ಪರಿಚಯ

**ಶ್ರೀ ಎ.ಎಲ್. ಚಿದಾನಂದ,** ಎಂ.ಎಡ್.
ಸಂಶೋಧನಾ ವಿದ್ಯಾರ್ಥಿ
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮಾನಸಗಂಗೋತ್ರಿ, ಮೈಸೂರು – 06

ಶ್ರೀ ಎ. ಎಲ್. ಚಿದಾನಂದರವರು 2009ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಶಿಕ್ಷಣಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಶಿಕ್ಷಣಶಾಸ್ತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇವರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ. ಶ್ರೀಯುತರು 2009 ರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಪ್ರಾಯೋಜನೆಯಲ್ಲಿ ಯೋಜನಾ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಲೇಖಕರ ಕಿರು ಪರಿಚಯ

**ಡಾ. ಅಜಾತ ಸ್ವಾಮಿ ಎ.ಎಂ.**
ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು
ಜ್ಞಾನೇಶ್ವರಿ ಶಿಕ್ಷಣ ಮಹಾವಿದ್ಯಾಲಯ (ಸಾಗರ ರಸ್ತೆ),
ಭಟ್ಕಳ, ಕಾರವಾರ(ಜಿ)

ಇವರು 1995ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಶಿಕ್ಷಣ ಶಾಸ್ತ್ರದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ. ಎನ್.ಸಿ.ಟಿ.ಇ. ಯ ದಕ್ಷಿಣ ಪ್ರಾದೇಶಿಕ ಕಛೇರಿಯಲ್ಲಿ 3 ವರ್ಷಗಳ ಕಾಲ ಸಂಶೋಧನ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಅನುಭವ ಇವರಿಗಿದೆ. ಪ್ರಸ್ತುತ ಇವರು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿರುವ ಶ್ರೀ ಜ್ಞಾನೇಶ್ವರಿ ಶಿಕ್ಷಣ ಮಹಾವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನೆ ವಿಭಾಗದ ಮುಖ್ಯಸ್ಥರಾಗಿದ್ದಾರೆ.

**ಡಾ. ಅನಿತಾ ಸಿ.** ಎಂ.ಎಸ್ಸಿ; ಎಂ.ಎ; ಪಿಎಚ್.ಡಿ.
ಅಧ್ಯಾಪಕರು
ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ ವಿಭಾಗ, ಕರಾಮುವಿ,
ಮಾನಸಗಂಗೋತ್ರಿ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದಿಂದ ಆಹಾರ ಮತ್ತು ಪೌಷ್ಟಿಕತೆಯಲ್ಲಿ ಎಂ.ಎಸ್ಸಿ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿರುವ ಶ್ರೀಮತಿಯವರು ಸದ್ಯದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ ವಿಭಾಗದ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಮಟ್ಟದಲ್ಲಿ 17 ವರ್ಷಗಳ ಕಾಲ ಬೋಧಿಸಿದ ಅನುಭವ ಪಡೆದಿದ್ದಾರೆ. ಎರಡು ಸಂಶೋಧನ ಪ್ರಾಯೋಜನಗಳನ್ನು ಕೈಗೊಂಡಿರುವ ಡಾ. ಅನಿತಾರವರು ಇದುವರೆವಿಗೆ 19 ರಾಷ್ಟ್ರೀಯ/ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ. 10 ರೇಡಿಯೋ ಭಾಷಣಗಳನ್ನು ನೀಡಿದ್ದಾರೆ. ಯು.ಜಿ.ಸಿ. ಯಿಂದ ಶ್ರೇಷ್ಠ ಲೇಖನ ಪ್ರಶಸ್ತಿ ಪಡೆದಿದ್ದಾರೆ.

**ಡಾ. ಅನಿಲ್ ವಿ. ಬಮಗೊಂಡ** ಎಂ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ಉಪನ್ಯಾಸಕರು
ಬಿಎಲ್‌ಡಿಇ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ
ಎಸ್.ಎಸ್. ಕ್ಯಾಂಪಸ್, ಬಿಜಾಪುರ.

ಬಿಜಾಪುರದ ಬಿ.ಎಲ್.ಡಿ.ಎ. ಸಂಸ್ಥೆಯ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 11 ವರ್ಷಗಳಿಂದ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣಶಾಸ್ತ್ರ ಸಂಬಂಧಿಸಿದಂತೆ ಮೂರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

**ಡಾ. ಅರವಿಂದ ವಿ. ಕರಬಸನಗೌಡ್ರ** ಎಂ.ಎ.(ಇತಿಹಾಸ), ಎಂ.ಎ.(ಕನ್ನಡ), ಎಂ.ಎಡ್; ಪಿಎಚ್.ಡಿ.
C/o ಡಾ. ಜಿ. ಎಸ್. ಕುಲಕರ್ಣಿ
6ನೇ ಕ್ರಾಸ್, ವಾಟರ್ ಟ್ಯಾಂಕ್ ಹತ್ತಿರ,
ಕಲ್ಯಾಣ ನಗರ, ದಾರವಾಡ – 580 007

ಇವರು ಸನಾ ಶಿಕ್ಷಣ ಮಹಾವಿದ್ಯಾಲಯ ಉಪನ್ಯಾಸಕರಾಗಿದ್ದಾರೆ. ಬಿ.ಇಡಿ. ಮತ್ತು ಎಂ.ಫಿಲ್. ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ಸಂಶೋಧನಾ ಮಾರ್ಗದರ್ಶನದ ಅನುಭವ ಹೊಂದಿದ್ದು, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನ, ಗೋಷ್ಠಿ ಹಾಗೂ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿ ವಿಷಯ ಮಂಡನೆ ಮಾಡಿದ್ದಾರೆ. ಇವರ ಲೇಖನಗಳು ರಾಷ್ಟ್ರ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವೃತ್ತಿ ಸಂಘಟನೆಗಳಾದ ಎ.ಐ.ಎ.ಇ.ಆರ್; ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಘ, ಕೊಲ್ಕತ್ತ ಹಾಗೂ ಡಬ್ಲ್ಯು.ಸಿ.ಸಿ.ಐ.(ಯು.ಎಸ್.ಎ.)ಗಳ ಸದಸ್ಯರಾಗಿದ್ದಾರೆ.

**ಶ್ರೀಮತಿ ಅರುಣಾ ಕುಮಾರಿ ಟಿ.,** ಎಂ.ಎಸ್ಸಿ; ಎಂ.ಎಡ್; ಎಂ.ಫಿಲ್.
ಪ್ರಾಧ್ಯಾಪಕರು
ಎಸ್. ಆರ್. ಕೆ. ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು.

ಇವರು ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಣಶಾಸ್ತ್ರ ರೀಡರ್ ಆಗಿ ಸೇವೆ ಸಲ್ಲಿಸಿದ್ದು 26 ವರ್ಷಗಳ ಬೋಧನಾನುಭವವನ್ನು ಪಡೆದಿದ್ದಾರೆ.

Digitised by Bharatavani, CIIL

**ಡಾ. ಆಶಾ ಬಿ.ಎನ್.** ಬಿ.ಎಸ್ಸಿ; ಎಂ.ಎಡ್; ಪಿ.ಜಿ.ಡಿ.ಹೆಚ್.ಇ; ಪಿಎಚ್.ಡಿ.
ಪ್ರವಾಚಕರು
ಸೋಮನಿ ಶಿಕ್ಷಣ ಮಹಾವಿದ್ಯಾಲಯ
ಸರಸ್ವತಿ ಪುರಂ, ಮೈಸೂರು–09

ಇವರು ಪ್ರಸ್ತುತ ಮೈಸೂರಿನಲ್ಲಿರುವ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯು.ಜಿ.ಸಿ. ಯ 'ಪರಿಸರ ವಿಜ್ಞಾನ' ಪಠ್ಯಕ್ರಮ ಅನುಮೋದಿಸಿ ಪದವಿ ವಿದ್ಯಾರ್ಥಿಗಳಿಗೆ 'Environmental Science' ಪುಸ್ತಕವನ್ನು ಬರೆದಿದ್ದಾರೆ. 2003–04ರ ಸಾಲಿನಲ್ಲಿ ಎನ್.ಸಿ.ಇ.ಆರ್.ಟಿ. ಯ ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ಪಡೆದಿದ್ದಾರೆ. 2004–05 ರಲ್ಲಿ NEAPA ಹಾಗೂ ದೆಹಲಿ ವಿಶ್ವವಿದ್ಯಾನಿಲಯದ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ತಮ್ಮ ಕ್ರಿಯಾ ಸಂಶೋಧನೆಯೊಂದರ ವರದಿಯನ್ನು ಮಂಡಿಸಿದ್ದಾರೆ.

**ಶ್ರೀಮತಿ ಆಶಾಕೃಪ** ಬಿ.ಎಸ್ಸಿ; ಎಂ.ಎ.(ಸಮಾಜಶಾಸ್ತ್ರ), ಎಂ.ಎಡ್; ಎಂ.ಫಿಲ್; ಬಿ.ಸಿ.ಎಸ್.
ಉಪನ್ಯಾಸಕರು
ಸೆಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ,
ಜಯಲಕ್ಷ್ಮಿ ಪುರಂ, ಮೈಸೂರು.

ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ ಇವರು ಕಳೆದ 5 ವರ್ಷಗಳಿಂದ ಮೈಸೂರಿನ ಸಂತ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾರೆ. 2000ನೇ ವರ್ಷದಲ್ಲಿ ರಾಷ್ಟ್ರಮಟ್ಟದಲ್ಲಿ 'ಉತ್ತಮ ಶಿಕ್ಷಕಿ' ಪ್ರಶಸ್ತಿ ಗಳಿಸಿದ್ದಾರೆ. ಅನೇಕ ವಿಚಾರ ಸಂಕಿರಣಗಳಲ್ಲಿ / ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು ಆಕಾಶವಾಣಿಯಲ್ಲಿ ಮಕ್ಕಳ ಕಾರ್ಯಕ್ರಮಗಳನ್ನು ನಿರ್ದೇಶಿಸಿದ್ದಾರೆ.

**ಡಾ. ಅಶೋಕ್ ಪೈ ಕೆ.ಎ.,** M.B.B.S; D.M.P.(NIMHANS), Fellowship and Diploma (International Academy of Behavioural Medicine in Dellas, (USA).
ಮನೋವೈದ್ಯರು
ಮಾನಸ ನರ್ಸಿಗ್ ಹೋಂ, ಶಿವಮೊಗ್ಗ.

ಖ್ಯಾತ ಮನೋವೈದ್ಯರಾಗಿರುವ ಇವರು, ಮನೋವೈದ್ಯೆಯಾಗಿರುವ ಪತ್ನಿ ಡಾ. ರಜನಿ ಪೈ ರವರೊಂದಿಗೆ ಶಿವಮೊಗ್ಗ ನಗರದಲ್ಲಿ ಕಳೆದ ಮೂವತ್ತು ವರ್ಷಗಳಿಂದ 'ಮಾನಸ' ಎಂಬ ಮನೋಚಿಕಿತ್ಸಾಲಯವನ್ನು ನಡೆಸುತ್ತಿದ್ದಾರೆ. ಪುಸ್ತಕಗಳು, ಲೇಖನಗಳು, ರೇಡಿಯೋ/ದೂರದರ್ಶನ ಕಾರ್ಯಕ್ರಮಗಳು, ಉಪನ್ಯಾಸಗಳು, ಮನೋವೈಜ್ಞಾನಿಕ ಚಲನ ಚಿತ್ರಗಳ ಮೂಲಕ ಸಾಮಾನ್ಯ ಜನತೆಯಲ್ಲಿ ಮನೋರೋಗಗಳ ಬಗ್ಗೆ ಅರಿವು ಮೂಡಿಸುವುದರಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಮಾನಸ', 'ನಿಮ್ಮದು ಸಮಸ್ಯೆಯ ಮಗುವೇ?', 'ಉಷಾಕಿರಣ' ಮುಂತಾದ ಸತ್ಯ ಕಥೆಗಳನ್ನು 'ಮನೋಲೋಕ', 'ಮಕ್ಕಳ ಮನಸ್ಸು', 'ಚಿತ್ರ ಚೇತನ' ಮುಂತಾದ ಮನೋವೈಜ್ಞಾನಿಕ ಕೃತಿಗಳನ್ನು ರಚಿಸಿದ್ದಾರೆ. ಇವರ ನೇತೃತ್ವದಲ್ಲಿ ತಯಾರಾಗಿದ್ದ 'ಕಾಡಿನ ಬೆಂಕಿ', 'ಪ್ರಥಮ ಉಷಾಕಿರಣ', 'ಆಘಾತ', 'ಅಂತರಾಳ', 'ಮುಚ್ಚಿದ ಬಾಗಿಲು' ಎಂಬ ಮನೋವೈಜ್ಞಾನಿಕ ಚಲನ ಚಿತ್ರಗಳು ರಾಷ್ಟ್ರೀಯ/ರಾಜ್ಯ ಪ್ರಶಸ್ತಿ ಪಡೆದಿವೆ. 'ಇಂಡಿಯನ್ ಎಪಿಲೆಪ್ಟಿಕ್ ಸೊಸೈಟಿ', 'ಇಂಡಿಯನ್ ಸೈಕಿಯಾಟ್ರಿಕ್ ಸೊಸೈಟಿ' ಮುಂತಾದ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿ ಇವರನ್ನು ಗೌರವಿಸಿದೆ. 2009–10 ರಲ್ಲಿ ರಾಜ್ಯ ಬಾಲ ಮನೋವಿಕಾಸ ಅಕಾಡೆಮಿ, ಬಿ.ಸಿ. ರಾಯ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದವುಗಳನ್ನು ಪಡೆದಿದ್ದಾರೆ.

**ಡಾ. ಅಶೋಕ್ ಜಿ.ಎನ್.** ಎಂ.ಎ., ಎಂ.ಎಡ್., ಎಂ,ಫಿಲ್., ಪಿಎಚ್.ಡಿ., ಡಿಪ್ಲೋಮೋ ಪತ್ರಿಕೋದ್ಯಮ, ಎಲ್.ಎಲ್.ಬಿ.
ಉಪನ್ಯಾಸಕರು
ಬಿಇಎ ಶಿಕ್ಷಣ ಮಹಾವಿದ್ಯಾಲಯ
2ನೇ ಮೇನ್, 2ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ,

ಶ್ರೀಯುತರು ಕಳೆದ 20 ವರ್ಷಗಳಿಂದಲೂ ದಾವಣಗೆರೆ ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಎಡ್. ಹಾಗೂ ಎಂ.ಎಡ್. ತರಗತಿಗಳಿಗೆ ಬೋಧಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧ್ಯಯನ ಕೇಂದ್ರದಲ್ಲೂ ಬೋಧಿಸುತ್ತಿದ್ದಾರೆ. ಶಿಕ್ಷಣಶಾಸ್ತ್ರದ ಬಗ್ಗೆ 7 ಪುಸ್ತಕಗಳನ್ನು ಬರೆದಿದ್ದಾರೆ. ಅನೇಕ ವಿಚಾರ ಸಂಕಿರಣಗಳು/ಕಾರ್ಯಾಗಾರಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ.

**ಶ್ರೀಮತಿ ಆಶಾ ಪ್ರೇಮಲತಾ** ಎಂ.ಎ; ಎಂ.ಎಡ್; ಎಂ.ಫಿಲ್.
ಅಧ್ಯಾಪಕರು
ಎಸ್‌ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು

ಇವರು ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ತೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 26 ವರ್ಷಗಳಿಂದ ಶಿಕ್ಷಣಶಾಸ್ತ್ರ ರೀಡರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸಮನ್ವಯ ಸಮಿತಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಶ್ರೀಮತಿಯವರು ಹಲವಾರು ವರ್ಷಗಳು ಬಿ.ಓ.ಇ. ಮಂಡಳಿಯ ಸದಸ್ಯರಾಗಿ ಹಾಗೂ ಪ್ರಸ್ತುತ ಬಿ.ಓ.ಎಸ್. ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಡಾ. ಇಂದ್ರಾಣಿ ಬಿ.,** ಎಂ.ಎ.(ಇಂಗ್ಲೀಷ್), ಎಂ.ಎ.(ಕನ್ನಡ), ಎಂ.ಎ.(ಹಿಂದಿ), ಎಂ.ಎಡ್; ಪಿಜಿಡಿಹೆಚ್‌ಇ, ಪಿಎಚ್.ಡಿ.
ಪ್ರಾಧ್ಯಾಪಕರು,
ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ,
ಪ್ರಶಾಂತ ನಗರ, ಸ್ಟೇಡಿಯಂ ರಸ್ತೆ,
ಚಿತ್ರದುರ್ಗ.

ಹಿಂದಿ ಓದುಗಾರಿಕೆ ಬಗ್ಗೆ ಪಿಹೆಚ್.ಡಿ. ಪಡೆದಿರುವ ಶ್ರೀಮತಿಯವರು ಮುಖೋಪಾಧ್ಯಾಯಿನಿಯಾಗಿ ತಮ್ಮ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿದರು. ಮಂಗಳೂರಿನಲ್ಲಿ ಹಿಂದಿ ಬಿ.ಎಡ್. ಕಾಲೇಜಿನ ಪ್ರಾಂಶುಪಾಲರಾಗಿಯೂ, ಮೈಸೂರಿನ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ ಮತ್ತು ಸರ್ಕಾರಿ ಹಿಂದಿ ಬಿ.ಎಡ್. ಕಾಲೇಜು, ಚಿತ್ರದುರ್ಗಗಳಲ್ಲಿ ಅಧ್ಯಾಪಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಬ್ಲಾಕ್ ಶಿಕ್ಷಣಾಧಿಕಾರಿ(BEO)ಯಾಗಿಯೂ ಕೆಲಸ ಮಾಡಿದ್ದಾರೆ. ಹಿಂದಿ, ಕನ್ನಡ, ಶಿಕ್ಷಣಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

Digitised by Bharatavani, CIIL

**ಡಾ. ಇಂದುಮತಿ ರಾವ್**
ರಿಜಿನಲ್ ಅಡ್‌ವೈಸರ್
ಸಿ.ಬಿ.ಆರ್. ನೆಟ್‌ವರ್ಕ್ (ಸೌತ್ ಏಷಿಯಾ)
134, 1ನೇ ಬ್ಲಾಕ್, 6ನೇ ಮುಖ್ಯ ರಸ್ತೆ
ಬಿಎಸ್‌ಕೆ 3ನೇ ಹಂತ
ಬೆಂಗಳೂರು –560 085

ಇವರು ಸಿ.ಬಿ.ಆರ್. ನೆಟ್‌ವರ್ಕ್ (ದಕ್ಷಿಣ ಏಷ್ಯಾ) ಸ್ಥಾಪಕರು ಹಾಗೂ ಮಾರ್ಗದರ್ಶಕರು. ವಿಶೇಷ ಶಿಕ್ಷಣದಲ್ಲಿ ಹಾಗೂ ಸಮುದಾಯ ಆಧಾರಿತ ಪುನಶ್ಚೇತನದಲ್ಲಿ ತಜ್ಞತೆ ಹೊಂದಿರುವುದಲ್ಲದೆ ದಕ್ಷಿಣ ಏಷ್ಯಾದ ಎಂಟು ದೇಶಗಳ ಸಿ.ಬಿ.ಆರ್. ನೆಟ್‌ವರ್ಕ್‌ನ ಸೇವಾಜಾಲ ಹಮ್ಮಿಕೊಳ್ಳುವುದರಲ್ಲಿ ಪ್ರಮುಖ ನೇತೃತ್ವ ವಹಿಸಿದ್ದಾರೆ. ಹಾಗೂ ವಿಶ್ವಮಟ್ಟದ ವೇದಿಕೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆರ್.ಸಿ.ಐ – ಭಾರತೀಯ ಪುನರ್ವಸತಿ ಮಂಡಳಿ ದಕ್ಷಿಣ ವಿಭಾಗ ಇದರ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯ ಇವೆರಡರ ಸಹಯೋಗದಲ್ಲಿ ನಡೆಯುತ್ತಿರುವ ಹನ್ನೊಂದು ತರಬೇತಿ ಕಾರ್ಯಕ್ರಮಗಳ ನೇತೃತ್ವ ವಹಿಸಿದ್ದಾರೆ.

**ಡಾ. ಉಮಾದೇವಿ ಪಿ.**
ಪ್ರಾಧ್ಯಾಪಕರು
ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ,
ಮಂಡ್ಯ.

ಡಾ. ಪಿ. ಉಮಾದೇವಿಯವರು ಮಂಡ್ಯದ ಶಂಕರಗೌಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ, ಪುಸ್ತಕ ರಚನಾ ಸಮಿತಿಯ ಸದಸ್ಯೆಯಾಗಿ ಹಾಗೂ ಜಿಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. ರಾಜ್ಯ ಮಟ್ಟದ ಮಹಿಳಾ ಸಂಘಟನೆ 'ಸಮತಾ'ದ ಮೂಲಕ ಮಹಿಳಾ ಕಾನೂನುಗಳ ಸಮರ್ಥ ಜಾರಿಗೆ ಬದ್ಧತೆಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಾಹಿತ್ಯ ಮತ್ತು ಶೈಕ್ಷಣಿಕ ವಿಚಾರಗಳಿಗೆ ಸಂಬಂಧಿಸಿದ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

**ಶ್ರೀ ಉಮೇಶ ಕಾರಂತ**
ಉಪನ್ಯಾಸಕರು
ಸೆಂಟ್ ಆನ್ಸ್ ಡಿ.ಇಡಿ. ಶಿಕ್ಷಣ ಮಹಾವಿದ್ಯಾಲಯ
ಮಂಗಳೂರು.

ಮಂಗಳೂರಿನ ಸೈಂಟ್ ಆನ್ಸ್ ಡಿ.ಎಡ್. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. 'ಭಾವಯಾನ' ಕವನ ಸಂಗ್ರಹವನ್ನು, 'ವ್ಯಾಳಿ' ಅನುವಾದಿತ ಮಲಯಾಳಂ ಕಾದಂಬರಿ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಪತ್ರಿಕೆಗಳಿಗೆ ಬರೆಯುವ, ಆಕಾಶವಾಣಿ ಕಾರ್ಯಕ್ರಮಗಳನ್ನು ಕೊಡುವ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಡಂಗೋಡ್ಲು ಕಾವ್ಯ ಪ್ರತಿಭಾ ಪ್ರಶಸ್ತಿ, ದೆಹಲಿಯ ಎನ್.ಸಿ.ಇ.ಆರ್.ಟಿ. ಸಮಾಜ ಸೇವಕ ಪ್ರಶಸ್ತಿ ಇವು ಇವರು ಪಡೆದಿರುವ ಪುರಸ್ಕಾರಗಳು.

**ಡಾ. ಉಷಾ ಹೆಚ್.ಬಿ.** ಎಂ.ಎಸ್ಸಿ., ಎಂ.ಎಡ್., ಪಿಎಚ್.ಡಿ.
310, 13ನೇ ಮೇನ್, 2ನೇ ಹಂತ,
ಸಿದ್ಧಾರ್ಥ ನಗರ, ಮೈಸೂರು

ಡಾ. ಹೆಚ್.ಬಿ. ಉಷಾ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ(ಇಂದಿನ ಕರಾಮುವಿ) ಶಿಕ್ಷಣಶಾಸ್ತ್ರ ವಿಭಾಗದಲ್ಲಿ 1982ರಲ್ಲಿ ಮಾನಸ ಗಂಗೋತ್ರಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕಿಯಾಗಿ ಸೇರಿದರು. ಮೈಸೂರಿನಲ್ಲಿ ಅಂಚೆ ತೆರಪಿನ ಶಿಕ್ಷಣ ಸಂಸ್ಥೆಗೆ ಸೇರಿಕೊಂಡು ಅಲ್ಲಿಯ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ 2007ರ ವರೆವಿಗೂ ಸೇವೆ ಸಲ್ಲಿಸಿದರು. 2007 ರಿಂದ ಎರಡು ವರ್ಷಗಳವರೆಗೆ ಮೈಸೂರಿನ ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ಸದ್ಯದಲ್ಲಿ ಇವರು ಸುತ್ತೂರಿನಲ್ಲಿ ಶಿಕ್ಷಣಶಾಸ್ತ್ರ ಅಧ್ಯಯನದ ಸ್ನಾತಕೋತ್ತರ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಬಿ.ಎಡ್., ಎಂ.ಎಡ್. ಮತ್ತು ಬಿ.ಎ. ಕಾರ್ಯಕ್ರಮಗಳ ಶಿಕ್ಷಣಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಸ್ವಅಧ್ಯಯನ ಪಾಠಗಳನ್ನು ಬರೆದಿರುವ ಅನುಭವ ಹೊಂದಿರುವುದಲ್ಲದೆ, ಅನೇಕ ಸಮ್ಮೇಳನಗಳಲ್ಲಿ ಭಾಗವಹಿಸಿ ಸಂಶೋಧನಾ ಲೇಖನಗಳನ್ನು ಮಂಡಿಸಿದ್ದಾರೆ.

**ಡಾ. ಎರ್ರಿಸ್ವಾಮಿ ಎಂ.ಸಿ.** ಎಂ.ಎ., ಎಂ.ಎಡ್., ಪಿಎಚ್.ಡಿ., ಪಿ.ಜಿ.ಡಿ.ಹೆಚ್.ಇ.
ಪ್ರಾಧ್ಯಾಪಕರು
ಜೆ.ಎಸ್.ಎಸ್. ಸ್ನಾತಕೋತ್ತರ ಶಿಕ್ಷಣ ಕೇಂದ್ರ,
ಸುತ್ತೂರು, ನಂಜನಗೂಡು (ತಾ),
ಮೈಸೂರು (ಜಿ) – 573 129

ಶ್ರೀಯುತರು ಪ್ರಸ್ತುತ ಜೆ.ಎಸ್.ಎಸ್. ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಕೇಂದ್ರ ಸತ್ತೂರು, ಮೈಸೂರು ಇಲ್ಲಿ ಸಹಾಯಕ ಶಿಕ್ಷಣ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಸುಮಾರು 14 ವರ್ಷಗಳಿಂದ, ಶಿಕ್ಷಕರ ತರಬೇತಿ ಸಂಸ್ಥೆ, ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಶಿಕ್ಷಣ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು 'ವಿಷಯಾಧಾರಿತ ಇತಿಹಾಸ ಮತ್ತು ಪೌರನೀತಿ ಬೋಧನಾ ವಿಧಾನ' ಒಂದು ಗ್ರಂಥವನ್ನು ರಚಿಸಿದ್ದಾರೆ. ವಿಜಯ ಕರ್ನಾಟಕದ ದಿನಪತ್ರಿಕೆಯಲ್ಲಿ 'ಶಿಕ್ಷಣ' ಕ್ಕೆ ಸಂಬಂಧಿಸಿದಂತೆ ಇವರ ಕೆಲವು ಶೈಕ್ಷಣಿಕ ಲೇಖನಗಳು ಪ್ರಕಟಗೊಂಡಿವೆ. ಕುವೆಂಪು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ನಿರ್ದೇಶನಾಲಯ ಅಡಿಯಲ್ಲಿ ಬಿ.ಎ. ಹಾಗೂ ಎಂ.ಎ. ಶಿಕ್ಷಣ ಕೋರ್ಸ್‌ಗಳಿಗೆ ಪಾಠಗಳನ್ನು ಸಿದ್ಧಪಡಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರು ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಜ್ಯ, ರಾಷ್ಟ್ರ, ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಸಮ್ಮೇಳನ ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ಕೆಲವು ಪ್ರಬಂಧಗಳನ್ನು ಮಂಡಿಸಿದ್ದಾರೆ.

**ಡಾ. ಐಹೊಳ್ಳಿ ವಿ.ಡಿ.** ಎಂ.ಎ; ಎಂ.ಎಡ್; ಎಂ.ಫಿಲ್; ಪಿಎಚ್.ಡಿ; ಎಂಎಡಿಇ
ಪ್ರಾಧ್ಯಾಪಕರು
ಜೆ. ಎಸ್. ಎಸ್. ಶಿಕ್ಷಣ ಮಹಾವಿದ್ಯಾಲಯ
ಬಿಜಾಪುರ – 582 102

ಇವರು 1982 ರಿಂದ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ ಬಿಜಾಪುರದಲ್ಲಿ ಕೆಲಸ ಮಾಡಿದ ನಂತರ 2000 ದಿಂದ ಬಿಜಾಪುರದಲ್ಲಿ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಸುಮಾರು 20 ಶೈಕ್ಷಣಿಕ ಪ್ರಬಂಧಗಳನ್ನು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ 5 ಶೈಕ್ಷಣಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಚಿಂತಾಮಣಿ, ಹುಡುಕುದೀಪ, ಯಂತ್ರರ್ಷಿ ಮುಂತಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ.

Digitised by Bharatavani, CIIL

**ಡಾ. ಓಬಳೇಶ್ ಘಟ್ಟಿ ಆರ್.** ಎಂ.ಎ., ಎಂ.ಎಡ್., ಪಿಎಚ್.ಡಿ.,
ಡಿಪ್ಲೋಮೋ ಪತ್ರಿಕೋದ್ಯಮ
ಪ್ರಾಂಶುಪಾಲರು
ಕಲ್ಪತರು ಶಿಕ್ಷಣ ಮಹಾವಿದ್ಯಾಲಯ
ತಿಪಟೂರು, ತುಮಕೂರು (ಜಿ)

ಶ್ರೀಯುತರು 1986 ರಿಂದ ಬಿ.ಎಡ್. ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಉಪ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತದಲ್ಲಿ ತಿಪಟೂರಿನ ಕಲ್ಪತರು ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ. ಘಟ್ಟಿಯವರು ಶಿಕ್ಷಣಶಾಸ್ತ್ರದಲ್ಲಿ 42 ಪುಸ್ತಕಗಳನ್ನು ಬರೆದಿರುವುದಲ್ಲದೆ, ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ 16 ಕೃತಿಗಳನ್ನು ರಚಿಸಿದ್ದಾರೆ. ವಿಚಾರ ಸಂಕಿರಣಗಳಲ್ಲಿ/ಸಮ್ಮೇಳನಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ. ಹತ್ತಾರು ಸಂಘ ಸಂಸ್ಥೆಗಳ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಶ್ರೀ ಕಪನೇಗೌಡ ಸಿ.ಎಂ.**
ಉಪನ್ಯಾಸಕರು
ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ
ಅರಸೀಕೆರೆ, ಹಾಸನ(ಜಿ)

1977 ರಿಂದ ಅರಸೀಕೆರೆಯ ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬೋಧನಾ ವೃತ್ತಿ ಪ್ರಾರಂಭಿಸಿ ಈಗ ಅಲ್ಲಿಯೇ ಪ್ರಾಧ್ಯಾಪಕರಾಗಿದ್ದಾರೆ. ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ನಡೆದ ವಿಚಾರ ಸಂಕಿರಣ, ಕಾರ್ಯಾಗಾರ ಮತ್ತು ಪಠ್ಯಕ್ರಮ ರಚನೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಶೈಕ್ಷಣಿಕವಾಗಿ ಕೆಲವು ಬಿಡಿ ಲೇಖನಗಳನ್ನು ಬರೆದಿದ್ದಾರೆ.

**ಶ್ರೀ ಕಾಳೇಶ್ವರರಾವ್ ಎನ್.** ಬಿ.ಎಸ್ಸಿ; ಎಂ.ಎಡ್.
1344, ಶಿವಶ್ರೀ, ಮೊದಲನೇ ಮಹಡಿ,
26ನೇ ಮುಖ್ಯ ರಸ್ತೆ, 24ನೇ ಕ್ರಾಸ್,
ಬನಶಂಕರಿ 2ನೇ ಹಂತ,
ಬೆಂಗಳೂರು –560 070

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಡಯಟ್, ಪ್ರೌಢಶಾಲೆ, ಶಿಕ್ಷಣಾಧಿಕಾರಿಗಳ ಕಛೇರಿ ಪ್ರಶಿಕ್ಷಕ, ಶಿಕ್ಷಕ, ಮುಖ್ಯ ಶಿಕ್ಷಕ, ಉಪನ್ಯಾಸಕ, ತನಿಖಾಧಿಕಾರಿ ಹೀಗೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ವಿಜ್ಞಾನ, ಶಿಕ್ಷಣ, ಸಾಹಿತ್ಯ ಸಂಬಂಧಿ ಲೇಖನ, ಪ್ರಬಂಧ, ವಿಚಾರ ಮಂಡನೆ, ಪತ್ರಿಕೆ, ಆಕಾಶವಾಣಿಗಳಲ್ಲಿ ಕ್ರಿಯಾ ಸಂಶೋಧನೆಗೆ ಡಿಎಸ್ಇಆರ್‌ಟಿ, ಎನ್‌ಸಿಇಆರ್‌ಟಿ ಪ್ರಶಸ್ತಿಗಳು, ಏರ್ ಇಂಡಿಯಾದ ಬ್ರಾಡ್‌ಔಟ್‌ಲುಕ್ ಲರ್ನರ್ ಟೀಚರ್ (BOLT) ಪ್ರಶಸ್ತಿ ಪಡೆದಿದ್ದಾರೆ. ಇವರು ಡಿ.ಎಡ್ ಪಠ್ಯವಸ್ತು ಸಮಿತಿ ಹಾಗೂ ಪಠ್ಯ ಪುಸ್ತಕ ರಚನಾ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

**ಡಾ. ಕಿರಣ್ ಕುಮಾರ್ ಎಸ್. ಕೆ.**
ಪ್ರಾಧ್ಯಾಪಕರು
ಮನೋವಿಜ್ಞಾನ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು,

ಡಾ. ಎಸ್. ಕೆ. ಕಿರಣ್ ಕುಮಾರ್ ಮೈಸೂರು ವಿಶ್ವವಿದ್ಯಾನಿಲಯದ ಮನೋವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಎರಡು ಬಾರಿ ಪ್ರತಿಷ್ಠಿತ ಫುಲ್‌ಬ್ರೈಟ್ ಫೆಲೋಷಿಪ್ ಪಡೆದು ಅಮೇರಿಕಾದಲ್ಲಿ ಸಂಶೋಧನೆ ಮತ್ತು ಅಧ್ಯಾಪನ ಮಾಡಿದ್ದಾರೆ. ಯೋಗ, ಭಾರತೀಯ ಮನೋವಿಜ್ಞಾನ, ಧನಾತ್ಮಕ ಮನೋವಿಜ್ಞಾನ ಇವರ ಸಂಶೋಧನಾ ಕ್ಷೇತ್ರಗಳಾಗಿವೆ. ಇವರ ವೈಜ್ಞಾನಿಕ ಪ್ರಬಂಧಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಕವಾಗಿವೆ. ಚಿಕಿತ್ಸಾ ಮನೋವಿಜ್ಞಾನದಲ್ಲಿ ತರಬೇತಿ ಹೊಂದಿರುವ ಇವರು ಮನೋರೋಗ ಚಿಕಿತ್ಸಾ ತಜ್ಞರೂ ಹೌದು.

**ಶ್ರೀ ಕುಮಾರ್ ಎಸ್.ಎನ್.** ಎಂ.ಎಸ್ಸಿ.
ಆಯ್ಕೆ ಶ್ರೇಣಿ ಗ್ರಂಥಪಾಲಕರು
ಮಹಿಳಾ ಸರ್ಕಾರಿ ಕಾಲೇಜು,
ಮಂಡ್ಯ – 571 401

ಪ್ರಸ್ತುತ ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಆಯ್ಕೆ ಶ್ರೇಣಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು ಸುಮಾರು 11 ವರ್ಷಗಳಿಗೂ ಹೆಚ್ಚು ಕಾಲ ಗ್ರಂಥಪಾಲಕರಾಗಿ ವಿವಿಧ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎಲ್.ಐ.ಎಸ್ಸಿ. ಗೆ ಸಂಬಂಧಿಸಿದ ಹಲವಾರು ಸಿದ್ಧಪಾಠಗಳನ್ನು ರಚಿಸಿದ್ದಾರೆ. ಇವರಿಂದ ರಚಿತವಾದ ಹಲವಾರು ಲೇಖನಗಳು ರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಮಂಡನೆಯಾಗಿವೆ.

**ಡಾ. ಕೊಂಗವಾಡ ಎನ್.ಬಿ.**
ಸನ ಕಾಲೇಜ್ ಆಫ್ ಎಜುಕೇಷನ್
ಬೈಂದೇವರಕೊಪ್ಪ, ಹುಬ್ಬಳ್ಳಿ.

ಹುಬ್ಬಳ್ಳಿಯ ಸನಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ಇವರು ಮೂವತ್ತು ವರ್ಷಗಳ ಆಡಳಿತಾತ್ಮಕ ಹಾಗೂ ಬೋಧನಾನುಭವಗಳನ್ನು ಹೊಂದಿದ್ದಾರೆ. ಬಿ.ಎಡ್. ಹಾಗೂ ಎಂ.ಎಡ್. ವಿದ್ಯಾರ್ಥಿಗಳಿಗಾಗಿ ಒಟ್ಟು 75 ಗ್ರಂಥಗಳನ್ನು ರಚಿಸಿದ್ದಾರೆ.

**ಡಾ. ಕೃಷ್ಣಯ್ಯ**
ಪ್ರಾಧ್ಯಾಪಕರು
ರಾಷ್ಟ್ರೀಯ ವಿದ್ಯಾಲಯ ಅಧ್ಯಾಪಕರ ಕಾಲೇಜು (RVTC),
ಜಯನಗರ, ಬೆಂಗಳೂರು–11

ಇವರು ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರಾಗಿ ಬೆಂಗಳೂರು ಜಯನಗರದಲ್ಲಿರುವ ರಾಷ್ಟ್ರೀಯ ವಿದ್ಯಾಲಯ ಅಧ್ಯಾಪಕರ ಕಾಲೇಜಿನಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಶ್ರೀಯುತರು ಹಲವು ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಸಮ್ಮೇಳನಗಳಲ್ಲಿ ತಮ್ಮ ಸಂಶೋಧನಾ ಲೇಖನಗಳನ್ನು ಮಂಡಿಸಿದ್ದಾರೆ.

**ಶ್ರೀಮತಿ ಗಿರಿಜ ಕೆ. ಎಸ್.** ಎಂ.ಎ.
ಪ್ರಾಧ್ಯಾಪಕರು
ಶೇಷಾದ್ರಿ ಪುರಂ ಕಾಲೇಜು,
ಬೆಂಗಳೂರು – 560 020

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಟೆರೇಷಿಯನ್ ಕಾಲೇಜು ಹಾಗೂ ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜುಗಳಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿರುವ ಇವರು ಪ್ರಸ್ತುತ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ರಾಜ್ಯ ಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2009ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಇವರ "Women in Political Process" ಎಂಬ ಲೇಖನ ಮಂಡಿತವಾಗಿದೆ. ರಾಜ್ಯಶಾಸ್ತ್ರ ಅಧ್ಯಾಪಕರ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಕೆಲವು ಲೇಖನಗಳನ್ನು ಮಂಡಿಸಿದ್ದಾರೆ.

Digitised by Bharatavani, CIIL

**ಶ್ರೀಮತಿ ಗೀತಾ ಎನ್.** ಬಿ.ಎಸ್ಸಿ; ಎಂ.ಎ; ಎಂ.ಎಡ್.
ಅಧ್ಯಾಪಕರು
ಡಯಟ್, ವಸಂತ ಮಹಲ್, ನಜರ್‌ಬಾದ್,
ಮೈಸೂರು.

ಶ್ರೀಮತಿ ಗೀತಾ 2003ರಿಂದ ಮೈಸೂರಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ(ಡಯಟ್) ವಸಂತಮಹಲ್ ನಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. 1999ರಲ್ಲಿ ಕೆ.ಇ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪ್ರೊಬೇಷನರ್ ಅಧಿಕಾರಿಯಾಗಿ ಆಯ್ಕೆಯಾಗಿ ಪ್ರೌಢಶಾಲಾ ಮುಖ್ಯಶಿಕ್ಷಕಿಯಾಗಿ ಸೇವೆ ಪ್ರಾರಂಭಿಸಿರುತ್ತಾರೆ.

**ಡಾ. ಗೀತಾ ಎಸ್.** ಬಿ.ಎಸ್ಸಿ; ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಂಶುಪಾಲರು
ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ
ಹಾಸನ.

ಇವರು ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ ಇಲ್ಲಿ 1981 ರಿಂದ ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತುತ ಅದೇ ಸಂಸ್ಥೆಯ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಶೈಕ್ಷಣಿಕ ಹಾಗೂ ವೈಚಾರಿಕ ಲೇಖನಗಳ ಬರವಣಿಗೆಯಲ್ಲಿ ಆಸಕ್ತಿ ಹೊಂದಿದ್ದಾರೆ.

**ಡಾ. ಗುರುಮೂರ್ತಿ ಸಿ.** ಬಿ.ಎಸ್ಸಿ., ಎಂ.ಎಸ್ಸಿ. ಎಡ್., ಎಂ.ಎಡ್., ಪಿಎಚ್.ಡಿ.
ಪ್ರಾಂಶುಪಾಲರು
ರಾಮಕೃಷ್ಣ ನೈತಿಕ ಶಿಕ್ಷಣ ಮಹಾವಿದ್ಯಾಲಯ,
ಮೈಸೂರು.

ಡಾ. ಸಿ. ಗುರುಮೂರ್ತಿ ವಿಶ್ವವಿದ್ಯಾನಿಲಯದ ಅನೇಕ ಪದವಿಗಳನ್ನು ಪಡೆದಿರುವುದಲ್ಲದೆ ಸಂಸ್ಕೃತ ವ್ಯಾಕರಣ ಶಾಸ್ತ್ರದಲ್ಲಿ ವಿದ್ವತ್ ಪದವಿಗಳನ್ನು ಪಡೆದಿದ್ದಾರೆ. 7 ವರ್ಷಗಳ ಕಾಲ ಪ್ರೌಢಶಾಲೆ ಮತ್ತು ಕಾಲೇಜು ಮಟ್ಟದಲ್ಲಿ ಕಾರ್ಯ ನಿರ್ವಹಿಸಿದ ನಂತರ ಕಳೆದ 22 ವರ್ಷಗಳಿಂದ ಮೈಸೂರಿನ ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಾ ಈಗ ಆ ಸಂಸ್ಥೆಯ ಪ್ರಾಂಶುಪಾಲರಾಗಿದ್ದಾರೆ. ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ವಿಷಯ ತಜ್ಞರಾಗಿ ಹಾಗೂ ಸಂಪನ್ಮೂಲ ತಜ್ಞರಾಗಿ ಭಾಗವಹಿಸಿರುವ ಇವರು ಶಿಕ್ಷಣದ ಬಗ್ಗೆ ಅನೇಕ ಲೇಖನಗಳನ್ನು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

**ಶ್ರೀ ಗುರುಸ್ವಾಮಿ ಹಿರೇಮಠ** ಎಂ.ಎಸ್ಸಿ.(ಭೌತಶಾಸ್ತ್ರ), ಎಂ.ಎಸ್ಸಿ.(ಪರಿಸರ ವಿಜ್ಞಾನ), ಎಂ.ಎಡ್; ಎಂ.ಫಿಲ್.
ಶಿಕ್ಷಣಶಾಸ್ತ್ರ ಅಧ್ಯಾಪಕರು,
ಸರ್ಕಾರಿ ಪದವಿ ಪೂರ್ವ ಕಾಲೇಜು
ಹೊನ್ನುಟಗಿ (ಪೋ), ಬಿಜಾಪುರ (ಜಿ)

ಬಿಜಾಪುರ ಜಿಲ್ಲೆಯ ಹೊನ್ನುಟಗಿಯಲ್ಲಿನ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ. 'ವಿಷಯ ಸಂಪದೀಕರಣ ವಿಜ್ಞಾನ', 'ಭೌತಶಾಸ್ತ್ರ ಬೋಧನೆ', 'ರಸಾಯನ ಶಾಸ್ತ್ರ ಬೋಧನೆ', 'ಗಣಕಯಂತ್ರ ಬೋಧನೆ' ಮುಂತಾದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಉಪನ್ಯಾಸಕರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

**ಡಾ. ಗೋಪಾಲಕೃಷ್ಣ ಕೊಳ್ತಾಯ** ಬಿ.ಎಸ್ಸಿ; ಎಂ.ಎ; ಎಂ.ಎಡ್; ಪಿ.ಜಿ.ಡಿ.ಎಚ್.ಇ.
ಪ್ರಾಧ್ಯಾಪಕರು
ರಾಷ್ಟ್ರೀಯ ಶಿಕ್ಷಣ ಮಹಾವಿದ್ಯಾಲಯ,
ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ.

ಚಿಕ್ಕಬಳ್ಳಾಪುರದ ಪುರಸಭಾ ಕಾಲೇಜಿನಲ್ಲಿ ವೃತ್ತಿ ಪ್ರಾರಂಭಿಸಿದ ಇವರು 1981 ರಿಂದ ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಮಧ್ಯಾಂಕಣಗಳು, ಕಥೆಗಳು, ಕವನಗಳು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಅಲ್ಲಮನ ಆಟಗಳು' ಮತ್ತು 'ಶಂಕರ ರಮಣ ದರ್ಶನ' ಎನ್ನುವ ಪುಸ್ತಕಗಳು ಪ್ರಕಟವಾಗಿವೆ.

**ಡಾ. ಗೋಪಾಲರಾಜು ಆರ್.** ಎಂ.ಎ; ಪಿಎಚ್.ಡಿ.
ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ತಮ್ಮ ಪಿಹೆಚ್.ಡಿ. ಮಹಾ ಪ್ರಬಂಧಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಶಸ್ತಿ ಪಡೆದಿದ್ದಾರೆ. ಕಾನೂನು ಪದವಿ ವಿದ್ಯಾರ್ಥಿಗಳಿಗಾಗಿ 'ಸಾಮಾನ್ಯ ಸಮಾಜಶಾಸ್ತ್ರ' ಮತ್ತು 'ಆರೋಗ್ಯ ಪಠ್ಯ ಪುಸ್ತಕ', 'ವೈದ್ಯಕೀಯ ಸಮಾಜಶಾಸ್ತ್ರ' ಎಂಬ ಪುಸ್ತಕಗಳನ್ನು ಬರೆದಿದ್ದಾರೆ.

**ಪ್ರೊ. ಗೋವಿಂದರಾವ್ ಎ.ವಿ.** ಎಂ.ಎ; ಎಂ.ಎಡ್.
201, ಕಾಮಾಕ್ಷಿ ಆಸ್ಪತ್ರೆ ರಸ್ತೆ, 10ನೇ ಮುಖ್ಯ ರಸ್ತೆ,
2ನೇ ಅಡ್ಡ ರಸ್ತೆ, ಕುವೆಂಪು ನಗರ,
ಮೈಸೂರು – 23

ಪಾಲಿಟೆಕ್ನಿಕ್ ಶಿಕ್ಷಕನಾಗಿ, ಪ್ರೌಢಶಾಲಾ ಶಿಕ್ಷಕನಾಗಿ, ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕ–ಪ್ರವಾಚಕ–ಪ್ರಾಧ್ಯಾಪಕ–ಪ್ರಾಂಶುಪಾಲರಾಗಿ ಶಿಕ್ಷಣಶಾಸ್ತ್ರದ ಸ್ನಾತಕೋತ್ತರ ತರಗತಿಯ ಪ್ರಾಧ್ಯಾಪಕರಾಗಿ ಒಟ್ಟು 38 ವರ್ಷ ಸೇವೆ. ಕನ್ನಡದಲ್ಲಿ ಶಿಕ್ಷಣಶಾಸ್ತ್ರ ಸಂಬಂಧಿತ ಮತ್ತು ಜನಪ್ರಿಯ ವಿಜ್ಞಾನ ಸಂಬಂಧಿತ 10 ಪುಸ್ತಕಗಳ ಪ್ರಕಟಣೆ. ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದ ಕನ್ನಡ ವಿಶ್ವಕೋಶದ ವಿಜ್ಞಾನ ವಿಭಾಗದ ಗೌರವ ಸಂಪಾದಕ. ವಿವಿಧ ನಿಯತಕಾಲಿಕಗಳಲ್ಲಿ ವಿಜ್ಞಾನ, ಪರಾ ಮನೋವಿಜ್ಞಾನ ಸಂಬಂಧಿತ ಲೇಖನಗಳ ಪ್ರಕಟಣೆ.

**ಶ್ರೀ ಗೋಪಾಲಸ್ವಾಮಿ ಎಂ.** ಎಂ.ಎಸ್ಸಿ.
ಉಪ ಗ್ರಂಥಪಾಲಕರು
ಕರಾಮುವಿ, ಮಾನಸಗಂಗೋತ್ರಿ, ಮೈಸೂರು

ಕ.ರಾ.ಮು.ವಿ.ಯ ಮೈಸೂರಿನಲ್ಲಿ ಗ್ರಂಥಾಲಯದ ಉಪ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಯುತರು ಈ ಹಿಂದೆ 10 ವರ್ಷಗಳ ಕಾಲ ಬಾಳೆಹೊನ್ನೂರಿನಲ್ಲಿರುವ ಕೇಂದ್ರಿಯ ಕಾಫಿ ಸಂಶೋಧನಾ ಸಂಸ್ಥೆಯಲ್ಲಿ (ಸಿ.ಸಿ.ಆರ್.ಐ.) ಸಹಾಯಕ ಗ್ರಂಥಪಾಲಕರಾಗಿ ಹಾಗೂ ಮೂರು ವರ್ಷಗಳ ಕಾಲ ಮೈಸೂರಿನ ಫರೂಖಿಯಾ ಫಾರ್ಮಸಿ ಕಾಲೇಜ್‌ನಲ್ಲಿ ಗ್ರಂಥಪಾಲಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಹಲವು ರಾಷ್ಟ್ರೀಯ/ಅಂತರರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಮೌಲಿಕವಾದ ಪ್ರಬಂಧಗಳನ್ನು ಮಂಡಿಸಿದ್ದಾರೆ.

Digitised by Bharatavani, CIIL

**ಡಾ. ಗೌರಮ್ಮ ಐ. ಪಿ.**
2459, ಡಬಲ್ ರೋಡ್,
ವಿಜಯನಗರ 2ನೇ ಹಂತ, ಮೈಸೂರು.

ಬೆಂಗಳೂರಿನ ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಮಡಿಕೇರಿಯ ನವೋದಯ, ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಡೆಮಾನ್‌ಸ್ಟ್ರೇಷನ್ ಶಾಲೆಯಲ್ಲಿ ಸೇವೆ ಸಲ್ಲಿಸಿದ ನಂತರ ಈಗ ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣಶಾಸ್ತ್ರ ಸಹಾಯಕ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ವರ್ಷ ಕಾಲ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಇದುವರೆಗೆ 10 ಲೇಖನಗಳನ್ನು ಪ್ರಕಟಿಸಿರುವುದಲ್ಲದೆ, ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದ 18 ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

**ಶ್ರೀ ಚಿದಾನಂದ ಎನ್.ಕೆ.** ಎಂ.ಎ,. ಎಂ.ಎಡ್., ಪಿಜಿಡಿಎಂಸಿಜೆ, ಯುಜಿಸಿ–ನೆಟ್
ಅಧ್ಯಾಪಕರು,
ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ,
ಮಂಡ್ಯ.

ಪ್ರಸ್ತುತ PET ಶಿಕ್ಷಣ ಸ್ನಾತಕೋತ್ತರ ಕೇಂದ್ರ, ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ ಮಂಡ್ಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧನೆ ಕೈಗೊಂಡಿರುತ್ತಾರೆ.

**ಶ್ರೀ ಚೆಲುವರಾಜಸ್ವಾಮಿ ಕೆ.ಟಿ.** ಎಂ.ಎಡ್.
ಸಂಶೋಧನಾ ವಿದ್ಯಾರ್ಥಿ
ಶಿಕ್ಷಣಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ಇವರು 6 ವರ್ಷಗಳಿಂದ "ನಿರಂತರ ಫೌಂಡೇಶನ್" ನಲ್ಲಿ ಕಲಾವಿದರಾಗಿ, ಸಂಘಟಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕದಾದ್ಯಂತ ಹಲವು ನೃತ್ಯ ರೂಪಕಗಳು, ನಾಟಕಗಳು, ಮೂಕಾಭಿನಯಗಳಲ್ಲಿ ಭಾಗವಹಿಸಿದ್ದಾರೆ.

**ಡಾ. ಚಂದ್ರಶೇಖರ್ ಹೆಚ್.ಎಲ್.** ಎಂ.ಎ; ಪಿಎಚ್.ಡಿ.
ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಶ್ರೀಯುತರು ಮೈಸೂರು ಮಾನಸಗಂಗೋತ್ರಿಯ ತತ್ವಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಶ್ರೀ ಅನ್ನಮಾಚಾರ್ಯರನ್ನು ಕುರಿತ ಅವರ ಸಂಶೋಧನಾ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ನೀಡಿದೆ. ಇವರು ಸಂವಾದ ತರಂಗಿಣಿ, ಶಿಷಾಪತ್ರಿ, ಚಿಂತನಭಾರತಿ, ರಾಮಕೃಷ್ಣರಿಂದ ರಮಣರ ವರೆಗೆ, ವೇದಾಂತಿ ಶಿವರಾಮ ಶಾಸ್ತ್ರಿ ಎಂಬ ಹೊತ್ತಿಗೆಗಳನ್ನು ಬರೆದಿದ್ದಾರೆ. ಈಚೆಗೆ 'ದರ್ಶನ ಲೋಕ' ಎಂಬ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ತತ್ವಶಾಸ್ತ್ರವನ್ನು ಕುರಿತ ಲೇಖನಗಳ ಸಂಗ್ರಹವನ್ನು ಹೊರತಂದಿದ್ದಾರೆ.

**ಶ್ರೀ ಚಂದ್ರಶೇಖರ್ ಬಿ.ಎಂ.** ಎಂ.ಟೆಕ್
1009, "E" & "F" ಬ್ಲಾಕ್,
ಕುವೆಂಪುನಗರ, ಮೈಸೂರು.

ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಮೈಸೂರಿನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸುಮಾರು 14 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಆಧ್ಯಾತ್ಮ ಹಾಗೂ ವೈಜ್ಞಾನಿಕ ವಿಷಯಗಳಲ್ಲಿ ಆಳವಾದ ಆಸಕ್ತಿ ಹೊಂದಿರುವ ಇವರ ಅನೇಕ ಲೇಖನಗಳು ಕಸ್ತೂರಿ, 'ಮಂಜೂವಾಣಿ' ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಚಾರ ಪುಸ್ತಕ ಮಾಲೆಗೆ 'ವೈಜ್ಞಾನಿಕ ಆವಿಷ್ಕಾರಗಳ ಇತಿಹಾಸ' ಎಂಬ ಪುಸ್ತಕ ಬರೆದಿದ್ದಾರೆ.

**ಡಾ. ಚಂದ್ರಶೇಖರ್ ಸಿ.ಆರ್.** ಎಂ.ಬಿ.ಬಿ.ಎಸ್; ಎಂ.ಡಿ; ಡಿ.ಪಿ.ಎಂ.
ಮನೋವೈದ್ಯರು
'ರಾಗ' 38, 2ನೇ ಕ್ರಾಸ್, ಸಿಂಡಿಕೇಟ್ ಬ್ಯಾಂಕ್ ಕಾಲೋನಿ,
ಅರಕೆರೆ, ಬೆಂಗಳೂರು.

ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಮನೋವೈದ್ಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಇವರು ಮನೋರೋಗಿಗಳಿಗೆ ಸಲಹೆ ಚಿಕಿತ್ಸೆ ನೀಡುವುದರಲ್ಲಿ, ಬೋಧನೆ ಮಾಡುವುದರಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. 30 ವರ್ಷಗಳಿಗೂ ಅಧಿಕ ಅನುಭವ ಪಡೆದುಕೊಂಡು ಮನೋವಿಜ್ಞಾನ, ಮನೋರೋಗಗಳು ಮತ್ತು ಅವುಗಳ ಚಿಕಿತ್ಸೆಯ ಬಗ್ಗೆ 140ಕ್ಕೂ ಹೆಚ್ಚು ಪುಸ್ತಕಗಳನ್ನು, 1000ಕ್ಕೂ ಹೆಚ್ಚಿನ ಲೇಖನಗಳನ್ನು ಪ್ರಕಟಿಸಿರುವ ಖ್ಯಾತಿ ಇವರದು. ಇವರ ಕೆಲವು ಪುಸ್ತಕಗಳು ತೆಲುಗು, ಉರ್ದು ಮತ್ತು ಗುಜರಾತಿ ಭಾಷೆಗಳಿಗೆ ಅನುವಾದಗೊಂಡಿವೆ. 38ಕ್ಕೂ ಹೆಚ್ಚು ಪುರಸ್ಕಾರಗಳನ್ನು ಪಡೆದಿದ್ದಾರೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ 70 ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. ವಿಶ್ವದ ಅನೇಕ ದೇಶಗಳಿಗೆ ಭೇಟಿ ನೀಡಿರುವ ಇವರು ವಿಶ್ವ ಆರೋಗ್ಯ ಸಂಸ್ಥೆಯ ತಜ್ಞ ಸಲಹೆಗಾರರಾಗಿದ್ದಾರೆ. ಭಾರತ ಸರ್ಕಾರದ ರಾಷ್ಟ್ರೀಯ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದವುಗಳನ್ನು ಪಡೆದಿದ್ದಾರೆ.

**ಡಾ. ಚಂದ್ರಯ್ಯ ಬಿ.ನಂ.** ಬಿ.ಎ.(ಆನರ್ಸ್), ಎಂ.ಎ.(ಕನ್ನಡ), ಪಿಎಚ್.ಡಿ.
ಕನ್ನಡ ಪ್ರಾಧ್ಯಾಪಕರು(ನಿ)
ಸಾಹುಕಾರ್ ಚೆನ್ನಯ್ಯ ರಸ್ತೆ,
ಸರಸ್ವತಿ ಪುರಂ, ಮೈಸೂರು.

ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಹಿಂದಿಯಿಂದ ಕನ್ನಡಕ್ಕೆ ಮೂರು ಕಾದಂಬರಿ ಹಾಗೂ ನಾಲ್ಕು ನಾಟಕಗಳನ್ನು, ತಮಿಳಿನಿಂದ 'ನನ್ನೂಪ' ಎಂಬ ವ್ಯಾಕರಣ ಗ್ರಂಥವನ್ನು, ಪಾಳೀ ಭಾಷೆಯಿಂದ 3000 ಪುಟಗಳಲ್ಲಿ ಆರು ಸಂಪುಟಗಳಲ್ಲಿ ಬುದ್ಧನ ಜಾತಕ ಕಥೆಗಳು(ಸಮಗ್ರ) ಗ್ರಂಥಗಳನ್ನು ಮತ್ತು ಅಪಭ್ರಂಶ ಭಾಷೆಯಿಂದ ಎರಡು ಗ್ರಂಥಗಳನ್ನು ಹಾಗೂ ಕನ್ನಡದಿಂದ ಇಂಗ್ಲಿಷ್‌ಗೆ ಎರಡು ಗ್ರಂಥಗಳನ್ನು ಹಾಗೂ ಕನ್ನಡದಿಂದ ಹಿಂದಿಗೆ ಎರಡು ಗ್ರಂಥಗಳನ್ನು ಅನುವಾದಿಸಿ ಅಚ್ಚುಮಾಡಿಸಿರುವುದರ ಜೊತೆಗೆ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ 85ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಇವರ ಎರಡು ಗ್ರಂಥಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ.

Digitised by Bharatavani, CIIL

**ಡಾ. ಜಯಪ್ಪ ಹೆಚ್.ಎಸ್.** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು (ನಿ)
ಎಸ್.ಜೆ.ವಿ.ಪಿ. ಬಿ.ಇಡಿ. ಕಾಲೇಜು,
ಹೊನ್ನಾಳಿ. ಹಿರೇಕಲ್ ಮಠ್. ದಾವಣಗೆರೆ(ಜಿ)

ಶ್ರೀಯುತರು ಶಿಕ್ಷಣ ಮಹಾವಿದ್ಯಾಲಯ, ಸ್ನಾತಕೋತ್ತರ ಶಿಕ್ಷಣ ವಿಭಾಗಗಳಲ್ಲಿ ಸುಮಾರು 30 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ. ಈಗ ಎಸ್.ಜೆ.ವಿ.ಪಿ. ಶಿಕ್ಷಣ ಮಹಾವಿದ್ಯಾಲಯ, ಹೊನ್ನಾಳಿಯಲ್ಲಿ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ.ರಾ.ಮು.ವಿ. ಎಂ.ಎಡ್. ವಿಭಾಗಕ್ಕೆ ಸಿದ್ಧಪಾಠಗಳನ್ನು ಬರೆದಿದ್ದಾರೆ. ಶ್ರೀಯುತರು ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಕಾರ್ಯಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸಂಶೋಧಕ ಮಾರ್ಗದರ್ಶಿಗಳಾಗಿ ಭಾಗವಹಿಸಿರುತ್ತಾರೆ.

**ಡಾ. ಜಯಶ್ರೀ ಎಸ್.** ಎಂ.ಎ; ಎಂ.ಎಡ್; ಪಿಎಚ್.ಡಿ.
B – 24, H –28
BEML ಲೇಔಟ್,
ಶ್ರೀರಾಮಪುರ 2ನೇ ಹಂತ,
ಮೈಸೂರು.

ಇವರು ಕಳೆದ 30 ವರ್ಷಗಳಿಂದ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ 25 ವರ್ಷಗಳ ಕಾಲ ಬೋಧಿಸಿದ್ದಾರೆ. ಕಳೆದ 5 ವರ್ಷಗಳಿಂದ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀಮತಿ ಜಯಶ್ರೀ ಕೆ.** ಬಿ.ಎಸ್ಸಿ; ಎಂ.ಎ; ಎಂ.ಎಡ್.
ಉಪನ್ಯಾಸಕರು
ಶ್ರೀನಿವಾಸ ಶಿಕ್ಷಣ ಮಹಾವಿದ್ಯಾಲಯ,
ಪಾಂಡೇಶ್ವರ, ಮಂಗಳೂರು –575 001

ಇವರು ಪ್ರೌಢಶಾಲಾ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿ ಕಳೆದ ಆರು ವರ್ಷಗಳಿಂದ ಶ್ರೀನಿವಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಲೇಖನಗಳನ್ನು ಈಗಾಗಲೇ ಪ್ರಕಟಿಸಿರುತ್ತಾರೆ. ಸಿಕ್ಕಿಂ ಮನಿಪಾಲ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮನೋವಿಜ್ಞಾನ ವಿಷಯದ ಬೋಧನಾ ಸಾಮಗ್ರಿಯನ್ನು ತಯಾರಿಸಿರುತ್ತಾರೆ.

**ಡಾ. ಜಾನಕಿ ಎಂ.** ಎಂ.ಎಸ್ಸಿ., ಎಂ.ಎಡ್., ಪಿಎಚ್.ಡಿ.
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ,
ಮಾನಸಗಂಗೋತ್ರಿ, ಮೈಸೂರು – 06

ಶ್ರೀಮತಿಯವರು ಮೈಸೂರಿನ ಕಾಗಿನೆಲೆ ಬಿ.ಎಡ್. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆಸಲ್ಲಿಸಿ ಈಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಳೆದ 14 ವರ್ಷಗಳಿಂದ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಬರೆದಿದ್ದಾರೆ. ಇವರು ಹಲವಾರು ಸಮ್ಮೇಳನಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಬಂಧಗಳನ್ನು ಮಂಡಿಸಿದ್ದಾರೆ. ಜೊತೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಅನೇಕ ರೇಡಿಯೋ ಪಾಠಗಳನ್ನು ನೀಡಿದ್ದಾರೆ.

**ಶ್ರೀಮತಿ ಜಾಸ್ಮೀನ್ ಎಲ್ವೀಟಾ ಡಿ'ಸೋಜ** ಎಂ.ಎ; ಎಂ.ಎಡ್.
ಪ್ರಾಧ್ಯಾಪಕರು
ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳೂರು.

ಶ್ರೀಮತಿಯವರು ದಕ್ಷಿಣ ಕನ್ನಡ ಜಿಲ್ಲೆಯವರು. ಪ್ರಸ್ತುತ ಸಂತ ಆನ್ಸ್ ಶಿಕ್ಷಕ ತರಬೇತಿ ಕಾಲೇಜು, ಮಂಗಳೂರು ಇಲ್ಲಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

**ಡಾ. ತಳವಾರ್ ಎಂ.ಎಸ್.,** ಎಂ.ಎ., ಎಂ.ಎಡ್., ಪಿಎಚ್.ಡಿ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಜ್ಞಾನಭಾರತಿ,
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ಎಂ.ಎಸ್. ತಳವಾರ್‌ರವರು ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕೆಲ ವರ್ಷಗಳ ಕಾಲ ಕಾರ್ಯನಿರ್ವಹಿಸಿ, ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಯುತರು 33 ವರ್ಷಗಳ ಬೋಧನಾನುಭವವನ್ನು ಹೊಂದಿದ್ದಾರೆ. ಇವರು ವಿಭಾಗದ ಮುಖ್ಯಸ್ಥರಾಗಿ ಡೀನ್‌ರಾಗಿ, ಶೈಕ್ಷಣಿಕ ಸಿಬ್ಬಂದಿ ಕಾಲೇಜಿನ ನಿರ್ದೇಶಕರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಶೈಕ್ಷಣಿಕ ಸಮಾಜಶಾಸ್ತ್ರ, ಶೈಕ್ಷಣಿಕ ಆಡಳಿತ, ಶಿಕ್ಷಕರ ಶಿಕ್ಷಣ ಇವರ ವಿಶೇಷ ಕ್ಷೇತ್ರಗಳಾಗಿವೆ.

ಶ್ರೀಯುತರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯಮಟ್ಟದ ಹಲವು ಕಾರ್ಯಗಾರಗಳು, ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದ್ದಾರೆ. ಇವರ ಹಲವಾರು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು 1997–98 ಸಾಲಿನಲ್ಲಿ ಯು.ಜಿ.ಸಿ. ಅನುದಾನದಡಿಯಲ್ಲಿ "Incorporating Environmental Component into B.Ed. and M.Ed. Course" ಪ್ರಾಯೋಜನೆಯನ್ನು, 2004ನೇ ಸಾಲಿನಲ್ಲಿ Karnataka State SC/ST Development Corporation Limited, Bangalore ಇವರ ಅನುದಾನದಲ್ಲಿ "An Evalution Study on Micro Credit Finance Scheme" ಪ್ರಾಯೋಜನೆಯನ್ನು ಹಾಗೂ 2004ನೇ ಸಾಲಿನಲ್ಲಿ "Elementary Education in Karnataka" ಈ ಮೂರು ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ 22 ಮಂದಿ ಎಂ.ಫಿಲ್ ಪದವಿಯನ್ನು ಹಾಗೂ 13 ಮಂದಿ ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಶ್ರೀಯುತರು 2009ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದ ವತಿಯಿಂದ (AIATE) "Best Teacher Educator" ಎಂಬ ಪುರಸ್ಕಾರವನ್ನು ಪಡೆದಿದ್ದಾರೆ. ಶ್ರೀಯುತರು 16ಕ್ಕೂ ಹೆಚ್ಚು ಪುಸ್ತಕಗಳನ್ನು ಶಿಕ್ಷಣಶಾಸ್ತ್ರದ ಬಗ್ಗೆ ರಚಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

**ಡಾ. ತಿಪ್ಪೇಸ್ವಾಮಿ** ಎಂ.ಎ; ಪಿಎಚ್.ಡಿ.
ಹಿಂದಿ ಪ್ರಾಧ್ಯಾಪಕರು(ನಿ)
369, AB ಬ್ಲಾಕ್,
ಕುವೆಂಪುನಗರ, ಮೈಸೂರು – 23

ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಪ್ರಾಧ್ಯಾಪಕರಾಗಿ, ವಿಭಾಗಾಧ್ಯಕ್ಷರಾಗಿ ಮೂರು ದಶಕಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿ

Digitised by Bharatavani, CIIL

ನಿವೃತ್ತರಾಗಿದ್ದಾರೆ. ಹಿಂದಿ ಮತ್ತು ಕನ್ನಡದಲ್ಲಿ 55ಕ್ಕೂ ಹೆಚ್ಚು ಮೌಖಿಕ, ಅನುವಾದಿತ ಹಾಗೂ ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಭಾರತ ಸರ್ಕಾರದ ಹಿಂದಿಯೇತರ ಹಿಂದಿ ಲೇಖಕರ ರಾಷ್ಟ್ರೀಯ ಪುರಸ್ಕಾರ, ಉತ್ತರ ಪ್ರದೇಶ ಸರ್ಕಾರದ ಸೌಹಾರ್ದ ಸನ್ಮಾನ ಸೇರಿದಂತೆ ಅನೇಕ ಪುರಸ್ಕಾರಗಳನ್ನು ಪಡೆದಿದ್ದಾರೆ. ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗೂ ಇವರು ಭಾಜನರಾಗಿದ್ದಾರೆ.

**ಶ್ರೀ ದಕ್ಷಿಣ ಮೂರ್ತಿ ಕೆ.** ಎಂ.ಎ.
ಸೈನಿಕ್ ಶಾಲಾ ಕೊಡುಗು
ಕೂಡಿಗೆ ಗ್ರಾಮ ಮತ್ತು ಅಂಚೆ
ಸೋಮವಾರಪೇಟೆ (ತಾ),
ಕೊಡಗು(ಜಿ) – 571 232

ಸಮಾಜಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿರುವ ಶ್ರೀಯುತರು ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲ್ಲೋಕು ಕೂಡಿಗೆಯಲ್ಲಿರುವ ಸೈನಿಕ ಶಾಲೆಯಲ್ಲಿ ಸಹಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ 15 ವರ್ಷಗಳ ಬೋಧನಾನುಭವವನ್ನು ಪಡೆದಿದ್ದಾರೆ.

**ಶ್ರೀ ನರಸಿಂಹ** ಎಂ.ಎ., ಎಂ.ಎಡ್. ಎಂ.ಫಿಲ್.
ಅಧ್ಯಾಪಕರು
ಎಸ್ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು.

ಶ್ರೀಯುತರು ಶಕುಂತಲಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯ, ರಾಯಚೂರಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಾ 6 ವರ್ಷ ಅನುಭವ ಪಡೆದಿದ್ದಾರೆ.

**ಡಾ. ನರಸಿಂಹಮೂರ್ತಿ ಆರ್.** ಬಿ.ಎಸ್ಸಿ; ಎಂ.ಎ; ಎಂ.ಎಡ್; ಎಲ್.ಎಲ್.ಬಿ; ಪಿಎಚ್.ಡಿ.
ಪ್ರಾಂಶುಪಾಲರು,
ಜ್ಞಾನೇಶ್ವರಿ ಶಿಕ್ಷಣ ಮಹಾವಿದ್ಯಾಲಯ,
ಸಾಗರ ರಸ್ತೆ, ಭಟ್ಕಳ

ಇವರು ಸೆಪ್ಟಂಬರ್ 1980 ರಿಂದ ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ 31 ವರ್ಷ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿರುವರು. ಎನ್.ಸಿ.ಟಿ.ಇ. ಬೆಂಗಳೂರು ಇದರ ನಿರೀಕ್ಷಣ ತಂಡದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುವರು. ಶ್ರೀಯುತರು ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಸಮಿತಿಗಳಲ್ಲಿ ಸದಸ್ಯರು ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಸಾಮಾಜಿಕ ಮತ್ತು ಶೈಕ್ಷಣಿಕ ಸಂಘಟನೆಗಳಲ್ಲಿ ಅಧ್ಯಕ್ಷರು ಮತ್ತು ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

**ಪ್ರೊ. ನಾಗರತ್ನ ಕೆ.ಆರ್.** ಎಂ.ಎ., ಎಂ.ಎಡ್.
ಪ್ರಾಧ್ಯಾಪಕರು
ಸೆಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ
ಜಯಲಕ್ಷ್ಮಿ ಪುರಂ, ಮೈಸೂರು.

ಪ್ರೊ. ನಾಗರತ್ನರವರು 1973 ರಿಂದ 1991ರ ವರೆಗೆ ಹಾಸನದ ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು 1991 ರಿಂದ ನಿವೃತ್ತರಾಗುವವರೆಗೆ ಮೈಸೂರಿನ ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಹಲವು ಪುನಶ್ಚೇತನ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಡಿ.ಎಡ್. ಪಠ್ಯಪುಸ್ತಕ (ಭಾಷಾ ಬೋಧನೆ) ರಚನೆಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದರು. ಹಾಸನದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ವಿಚಾರ ಸಂಕಿರಣದಲ್ಲಿ ಪ್ರಬಂಧ 'ಕನ್ನಡ ಕಾವ್ಯ' ಮಂಡಿಸಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

**ಡಾ. ನಾಗೇಂದ್ರ ಕುಮಾರ್ ಆರ್.** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ,
ಮೈಸೂರು – 06

ಇವರು 17 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕ.ರಾ.ಮು.ವಿ.ಯ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಸಿದ್ಧಪಾಠಗಳನ್ನು ಬರೆದಿದ್ದಾರೆ.

**ಶ್ರೀ ನಾರಾಯಣ ಸ್ವಾಮೀಜಿ** ಎಂ.ಎಸ್ಸಿ; ಎಂ.ಎ.(ತತ್ವಶಾಸ್ತ್ರ), ಎಂ.ಎ.(ಸಂಸ್ಕೃತ), ಎಂ.ಎಡ್;
ಅಧ್ಯಾಪಕರು,
ಶ್ರೀ ಸಾಯಿ ಸರಸ್ವತಿ ವಿದ್ಯಾಸಂಸ್ಥೆ, ಬೋಗಾಧಿ,
ಮೈಸೂರು.

ಲೇಖಕರು ಕೇರಳದ ಕನ್ನಡಿಗರು. ಕಾಸರಗೋಡಿನವರು. ನಾಲ್ಕು ಸ್ನಾತಕೋತ್ತರ ಪದವೀಧರರು. ಶ್ರೀ ಸಾಯಿ ಸರಸ್ವತಿ ವಿದ್ಯಾಕೇಂದ್ರ, ಬೋಗಾದಿ. ಮೈಸೂರು ಇವರ ಕಾರ್ಯ ಕ್ಷೇತ್ರ. ದಕ್ಷಿಣ ಕನ್ನಡದ ಅಳಿಕೆಯ ಸೆಂಟ್ರಲ್ ಸ್ಕೂಲಿನ ಪ್ರಾಂಶುಪಾಲರಾಗಿ, ಮೈಸೂರು ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ, ಮಲ್ಲಾಡಿಹಳ್ಳಿಯಲ್ಲಿ ಅನಾಥಸೇವಾಶ್ರಮದ ಪೂಜ್ಯ 'ತಿರುಕ'ರ ಉತ್ತರಾಧಿಕಾರಿಯಾಗಿ, ಇಂಗ್ಲೆಂಡಿನಲ್ಲಿ "ಯೋಗ ಮತ್ತು ಡಯಾಬಿಟೀಸ್" ವಿಷಯದಲ್ಲಿ ಸಂಶೋಧಕರಾಗಿ ಸೇವೆ ಸಲ್ಲಿಸಿರುತ್ತಾರೆ.

**ಡಾ. ನೂರ್‌ಜಹಾನ್ ಗಣಿಹಾರ್** ಎಂ.ಎ; ಎಂ.ಎಡ್; ಪಿಎಚ್.ಡಿ; ಪಿ.ಜಿ.ಡಿಪ್ಲಮೋ, ಪಿಜಿಡಿಹೆಚ್ಇ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಇವರು ಪ್ರಸ್ತುತ ಧಾರವಾಡದ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿ, ವಿಭಾಗ ಮುಖ್ಯಸ್ಥೆಯಾಗಿ UGC ಪ್ರಾಯೋಜಿತ ಡಾ. ಜಾಕಿರ್ ಹುಸೇನ್ ಅಧ್ಯಯನ ಕೇಂದ್ರದ ನಿರ್ದೇಶಕಿಯಾಗಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಂ.ಎಡ್. ಅಧ್ಯಯನ ಕೇಂದ್ರದ ಸಂಯೋಜಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದುವರೆಗೆ 50 ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುವ ಇವರ ಮಾರ್ಗದರ್ಶನದಲ್ಲಿ 16 ಮಂದಿ ಪಿಹೆಚ್.ಡಿ ಪದವಿ ಪಡೆದಿದ್ದಾರೆ. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಅನೇಕ ಸಮ್ಮೇಳನಗಳಲ್ಲಿ/ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ. ಇವರು ರಚಿಸಿರುವ 6 ಪುಸ್ತಕಗಳಲ್ಲಿ ಒಂದನ್ನು ಅಮೇರಿಕಾದ ಯುನಿರ್ವಸಿಟಿ ಪ್ರೆಸ್ ಪ್ರಕಟಿಸಿದೆ. 'ಪ್ರಾಂಶುಪಾಲರ ನಿರ್ಣಯ ನಿರ್ಧಾರಣ ಮಾಪನಿ', 'ಅಧ್ಯಾಪಕ ಬದ್ಧತಾ ಅಂಶಾವಳಿ' ಎಂಬ ಎರಡು ಪರೀಕ್ಷಣಗಳನ್ನು ರೂಪಿಸಿದ್ದಾರೆ. ಎರಡು ಬಾರಿ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. UGC ಅನುದಾನದಿಂದ ಎರಡು ಸಮ್ಮೇಳನಗಳನ್ನು ಆಯೋಜಿಸಿದ್ದಾರೆ. ಶಿಕ್ಷಣ ನಿಕಾಯದ ಡೀನರಾಗಿಯೂ, ಕರ್ನಾಟಕ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

Digitised by Bharatavani, CIIL

**ಡಾ. ನಂಜರಾಜೇ ಅರಸ್ ಪಿ.ವಿ.** ಎಂ.ಎ; ಪಿಎಚ್.ಡಿ.
ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು (ನಿ)
ಮನೆ ನಂ. 16, 19ನೇ ಬ್ಲಾಕ್, ಎಸ್‌ಬಿಎಂ ಕಾಲೋನಿ,
ಶ್ರೀರಾಮ ಪುರ 2ನೇ ಹಂತ, ಮೈಸೂರು–23

ಮಹಾರಾಜ ಕಾಲೇಜಿನಲ್ಲಿ ಮತ್ತು ಸ್ನಾತಕೋತ್ತರ ಹಿಂದಿ ವಿಭಾಗದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ಚಲನ ಚಿತ್ರ ರಂಗದಲ್ಲಿಯೂ ಅನುಭವ ಪಡೆದಿರುವ ಇವರು "ಸಂಕಲ್ಪ" ಎಂಬ ಚಿತ್ರವನ್ನು ತಯಾರಿಸಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಗಳಿಸಿದ್ದಾರೆ. ಮೈಸೂರು ರಾಜ ಮನೆತನಕ್ಕೆ ಸಂಬಂಧಿಸಿದಂತೆ ಅನೇಕ ವಾರ್ತಾ ಚಿತ್ರಗಳನ್ನು ನಿರ್ಮಿಸಿದ್ದಾರೆ. ಮೈಸೂರು ರಾಜ ಕುಟುಂಬದ ಬಗ್ಗೆ ಅಧಿಕೃತ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ.

**ಶ್ರೀ ನಂದೀಶ್ ಎಂ.ಎನ್.** ಎಂ.ಎ; ಎಂ.ಫಿಲ್.
"ಹಂಚ್ಯ", ರಮ್ಮನ ಹಳ್ಳಿ ಅಂಚೆ,
ಮೈಸೂರು – 570 009

ಪ್ರಸ್ತುತ ಜೆ.ಎಸ್.ಎಸ್. ಪದವಿ ಕಾಲೇಜು, ಗುಂಡ್ಲುಪೇಟೆಯಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರಿನಲ್ಲಿ "ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ" ಎಂಬ ವಿಷಯದ ಮೇಲೆ ಪಿಹೆಚ್.ಡಿ ಸಂಶೋಧನೆಯಲ್ಲಿ ನಿರತರಾಗಿದ್ದಾರೆ.

ಇವರ "ಕೆಂಡದೊಳಗಣ ಬೇರು" ಕೃತಿಗೆ 2008ನೇ ಸಾಲಿನ "ಅತ್ತಿಮಬ್ಬೆ" ಪ್ರಶಸ್ತಿ ಲಭಿಸಿದೆ. 2009ನೇ ಸಾಲಿನಲ್ಲಿ "ದುಡಿ" ಕೃತಿ ಪ್ರಕಟಗೊಂಡಿದೆ.

**ಡಾ. ಪದ್ಮಪ್ರಸಾದ್ ಎಸ್.ಪಿ.**
ತೃಪ್ತಿ, 2ನೇ ಕ್ರಾಸ್, 9ನೇ ಮೇನ್,
ಗೋಕುಲ ಬಡಾವಣೆ, ತುಮಕೂರು – 04

ಇವರು ಪ್ರೌಢಶಾಲೆ ಹಾಗೂ ಬಿ.ಎಡ್. ಕಾಲೇಜುಗಳಲ್ಲಿ ಒಟ್ಟು 42 ವರ್ಷಗಳ ಕಾಲ ವಿವಿಧ ಹಂತಗಳಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಬಿ.ಎಡ್. ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಉಪಯುಕ್ತವಾದ ಹನ್ನೊಂದು ಕೃತಿಗಳನ್ನು ಬರೆದಿದ್ದಾರೆ. ಇದಲ್ಲದೆ ಇವರು ಕನ್ನಡದ ಒಳ್ಳೆಯ ನಾಟಕಕಾರ, ಕವಿ, ವಿಮರ್ಶಕ ಹಾಗೂ ಜಾನಪದ ವಿದ್ವಾಂಸರೂ ಹೌದು. ಇವರ ಒಟ್ಟು 63 ಕೃತಿಗಳು ಈವರೆಗೆ ಪ್ರಕಟವಾಗಿವೆ.

**ಡಾ. ಪದ್ಮಾವತಿ ಎಂ.**
ಪ್ರಾಧ್ಯಾಪಕರು
ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳೂರು.

ಇವರು ಮಂಗಳೂರಿನ ಸಂತ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಮಂಗಳೂರಿನ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ಡೀನರಾಗಿ ಎರಡು ವರ್ಷ ಸೇವೆಸಲ್ಲಿಸಿದ್ದಾರೆ. ಇವರು N.C.E.R.T New Delhi ಯ ಪ್ರಶಸ್ತಿ ಪಡೆದಿದ್ದಾರೆ. ನಾಲ್ಕು ಪುಸ್ತಕಗಳನ್ನು, 17 ಲೇಖನಗಳನ್ನು ರಚಿಸಿದ್ದಾರೆ. 16 ಸಂಶೋಧನ ಪ್ರಾಯೋಜನೆಗಳನ್ನು ಮುಗಿಸಿದ್ದಾರೆ.

**ಡಾ. ಪಟ್ಟಣಶೆಟ್ಟಿ ಎಂ.ಎಂ.**
ಪ್ರಾಧ್ಯಾಪಕರು
ಎಂ. ಎಂ. ಶಿಕ್ಷಣ ಮಹಾವಿದ್ಯಾಲಯ
ದಾವಣಗೆರೆ.

ದಾವಣಗೆರೆ ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಆಗಸ್ಟ್ 1976 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. "ಆರ್ಗನೈಜಿಂಗ್ ಟ್ಯೂಟೋರಿಯಲ್ಸ್ ಇನ್ ಕಾಲೇಜಸ್ ಅಂಡ್ ಯೂನಿವರ್ಸಿಟೀಸ್" ಮತ್ತು "ಪ್ರಿಪರೇಶನ್ ಫಾರ್ ಟೀಚಿಂಗ್ ಅಂಡ್ ಲ್ಯಾಬೋರೇಟರಿ ಸೆಟ್ಟಿಂಗ್ ಇನ್ ಕಾಲೇಜಸ್ ಅಂಡ್ ಯೂನಿವರ್ಸಿಟೀಸ್", "ಶಾಲಾ ಕಾಲೇಜುಗಳಲ್ಲಿ ಪರಿಣಾಮಕಾರಿ ಬೋಧನೆಗೆ ಅಣುಬೋಧನೆ" ಎಂಬ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

**ಡಾ. ಪಾರ್ಶ್ವನಾಥ್ ಹೆಚ್.ಎ.** ಎಂ.ಬಿ.ಬಿ.ಎಸ್; ಎಂ.ಡಿ.
ಪ್ಯಾಥಲಜಿ ಪ್ರಾಧ್ಯಾಪಕರು
ಎಸ್‌ಡಿಎಂ ಮೆಡಿಕಲ್ ಕಾಲೇಜು
ಧಾರವಾಡ –580 009

ಇವರು ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (SDM) ವೈದ್ಯಕೀಯ ಕಾಲೇಜಿನಲ್ಲಿ ರೋಗಶಾಸ್ತ್ರ (Pathology) ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಫೆಲೋಶಿಫ್ ಪಡೆದು ಡೆನ್‌ಮಾರ್ಕ್ ಮತ್ತು ಇಂಗ್ಲೆಂಡ್ ನಲ್ಲಿ ಅಧ್ಯಯನ ಮಾಡಿದ್ದಾರೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಂಶೋಧನ ಲೇಖನಗಳನ್ನು ಮಂಡಿಸಿದ್ದಾರೆ. ಬಳ್ಳಾರಿ, ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರಿನ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿಯೂ, ಕರ್ನಾಟಕ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣದ ಸಹ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

**ಡಾ. ಫ್ಲಾಸಿ ಡಿ'ಸೋಜ** ಬಿ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು.

ಮಂಗಳೂರಿನ ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಣಶಾಸ್ತ್ರ ಪ್ರವಾಚಕರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಮಟ್ಟಗಳಲ್ಲಿ 16 ವರ್ಷಗಳ ಕಾಲ ಬೋಧನೆ ಮಾಡಿದ ಅನುಭವವಿದೆ. ಕೆಲವು ಪ್ರಾಯೋಜನೆಗಳನ್ನು ಮುಗಿಸಿದ್ದಾರೆ. ಥಾಯಲೆಂಡಿನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಹಾಗೂ ಅನೇಕ ರಾಷ್ಟ್ರೀಯ/ರಾಜ್ಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ.

**ಶ್ರೀಮತಿ ಪುಷ್ಪಾ** ಎಂ.ಎಸ್ಸಿ; ಎಂ.ಎಡ್; ಪಿಜಿಡಿಹೆಚ್ಇ
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸೂರು – 06

ಮೈಸೂರಿನ ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿದ್ದಾರೆ. ರಾಷ್ಟ್ರೀಯ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ.

Digitised by Bharatavani, CIIL

**ಡಾ. ಪ್ರವೀಣ ಕೆ.ಬಿ.** ಎಂ.ಎ.(ಇಂಗ್ಲಿಷ್), ಎಂ.ಎ.(ಇತಿಹಾಸ), ಎಂ.ಎಡ್; ಪಿಎಚ್.ಡಿ
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು – 06

ಇವರು 1999 ರಲ್ಲಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿ ಡಿ.ಎಡ್. ಮಟ್ಟದಲ್ಲಿಯೂ, ಬಿ.ಎಡ್ ಮಟ್ಟದಲ್ಲಿಯೂ ಬೋಧನಾನುಭವವನ್ನು ಪಡೆದರು. 2007 ರಿಂದ ಮೈಸೂರಿನ ಮಾನಸಗಂಗೋತ್ರಿಯ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ವಿಭಾಗವನ್ನು ಸೇರಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿದೇಶಿ ವಿದ್ಯಾರ್ಥಿಗಳೂ ಸೇರಿದಂತೆ 10 ಸಂಶೋಧನಾ ವಿದ್ಯಾರ್ಥಿಗಳು ಇವರ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಕರ್ನಾಟಕ ರಾಜ್ಯದ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಪ್ರಾಯೋಜನೆಯನ್ನು ಮುಗಿಸಿದ್ದಾರೆ. ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ.

**ಡಾ. ಪ್ರೀತಿ ಭಂಡಾರಕರ** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಕಮಲಾ ಬಾಳಿಗ ವಿಶ್ವವಿದ್ಯಾನಿಲಯ
ಕುಮಟ, ಉ.ಕನ್ನಡ(ಜಿ)

ಶಿಕ್ಷಣ, ಮಹಿಳಾ ಸಬಲೀಕರಣ, ಜೀವನ ಮೌಲ್ಯಗಳು ಇತ್ಯಾದಿ ವಿಷಯಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಶಿಕ್ಷಣ ವಿಷಯ ಹಾಗೂ ಮೌಲ್ಯ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹಲವಾರು ಲೇಖನಗಳನ್ನು ಪ್ರಕಟಸಿದ್ದಾರೆ. ಸಂಸ್ಕೃತ ಬೋಧನಾ ಪದ್ಧತಿಯ ಮೇಲೆ ಸ್ವಯಂ ಕಲಿಕಾ ಪುಸ್ತಕಗಳನ್ನು ಬರೆದಿದ್ದಾರೆ. 20 ವರ್ಷಗಳಿಂದ ಕಮಲಾ ಬಾಳಿಗ ಶಿಕ್ಷಣ ಮಹಾವಿದ್ಯಾಲಯ, ಕುಮಟಾದಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಡಾ. ಬಸಪ್ಪ ಎ.** ಎಂ.ಎ., ಎಂ.ಎಡ್., ಪಿ.ಜಿ.ಡಿ.ಹೆಚ್.ಇ., ಪಿಎಚ್.ಡಿ.
ಪ್ರಾಚಾರ್ಯರು ಮತ್ತು ಸಮನ್ವಯಾಧಿಕಾರಿಗಳು
ಸ್ನಾತಕೋತ್ತರ ಶಿಕ್ಷಣ ಅಧ್ಯಯನ ಕೇಂದ್ರ
ಮಹಾರಾಜ ಮದಕರಿ ನಾಯಕ ಪ್ರಥಮ ದರ್ಜೆ ಕಾಲೇಜು,
ಚಿತ್ರದುರ್ಗ – 577 501

ಶ್ರೀಯುತರು ಚಿತ್ರದುರ್ಗದ ಶಿಕ್ಷಣ ಮಹಾವಿದ್ಯಾಲಯ ಒಂದರಲ್ಲಿ ಪ್ರಾಚಾರ್ಯರಾಗಿದ್ದಾರೆ. 21 ವರ್ಷ ಪದವಿ ಹಂತದ ಬೋಧನೆ, 4 ವರ್ಷ ಸೆಕೆಂಡರಿಯ ಹೈಯರ್ ಸೆಕೆಂಡರಿ ಮತ್ತು ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಒಟ್ಟು 25 ವರ್ಷ ಬೋಧನಾನುಭವ ಹೊಂದಿದ್ದಾರೆ. ಬಿ.ಇಡಿ. ಮತ್ತು ಡಿ.ಇಡಿ. ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯದ ಶಿಕ್ಷಣ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ., ಎಂ.ಫಿಲ್., ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಿಕ್ಷಣಶಾಸ್ತ್ರದ ಬಗ್ಗೆ 4 ಪುಸ್ತಕಗಳನ್ನು ಬರೆದಿದ್ದಾರೆ. ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

**ಪ್ರೊ. ಬಾಲಾಜಿ ಬಿ.ಎನ್.** ಎಂ.ಎ; ಎಂ.ಎಡ್; ಡಿ.ಡಿ.ಇ.
ನಂ.936, 8ನೇ ಮೇನ್,
ಗೋಕುಲಂ 3ನೇ ಹಂತ, ಮೈಸೂರು–2

ಇವರು 1979 ರಿಂದ 2005 ರವರೆಗೆ ಮೈಸೂರಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಸೇವೆ ಮಾಡಿ 2007 ಜನವರಿಯಲ್ಲಿ ಸಾಯಿಬಾಬಾ ವಿಶ್ವವಿದ್ಯಾಲಯ, ಪಟ್ಟಪರ್ತಿಯಲ್ಲಿ ನಿವೃತ್ತಿ ಹೊಂದಿದ ನಂತರ 2010 ರವರೆಗೆ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಕೆಲವು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. 2004 ರಲ್ಲಿ ಹಾಂಕ್‌ಕಾಂಗ್ ಮುಕ್ತ ವಿಶ್ವವಿದ್ಯಾಲಯದ ICDE Award ನ್ನು ಪಡೆದಿದ್ದಾರೆ.

**ಡಾ. ಬಿರಾದಾರ ಎಲ್.ಎಸ್.** ಎಂ.ಎ; ಎಂ.ಪಿ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ದೈಹಿಕ ಶಿಕ್ಷಣ ವಿಭಾಗ
ಎಲ್‌ವಿಡಿ ಮಹಾವಿದ್ಯಾಲಯ, ರಾಯಚೂರು.

ಕರ್ನಾಟಕ ವಿಶ್ವವಿದ್ಯಾನಿಲಯದಿಂದ ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ದೈಹಿಕ ಶಿಕ್ಷಣದಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ಶ್ರೀಯುತರು 1974ರಲ್ಲಿ ದೈಹಿಕ ಮತ್ತು ಸಾಂಸ್ಕೃತಿಕ ಬೋಧಕರಾಗಿ ಸೇವೆ ಆರಂಭಿಸಿದರು. ಪ್ರಸಕ್ತ ರಾಯಚೂರಿನ ತಾರಾನಾಥ ಶಿಕ್ಷಣ ಸಂಸ್ಥೆಯ ಎಲ್.ವಿ.ಡಿ. ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಶ್ರೀಮತಿ ಮಮತ ಎಂ.** ಎಂ.ಎ.(ಇಂಗ್ಲಿಷ್), ಎಂ.ಎಡ್.
ಉಪನ್ಯಾಸಕರು
ಡಯಟ್, ವಸಂತ ಮಹಲ್, ನಜರ್‌ಬಾದ್,
ಮೈಸೂರು.

ಶ್ರೀಮತಿ ಎಂ. ಮಮತ ಮೈಸೂರಿನಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಮತ್ತು ತರಬೇತಿ (DIET) ನಲ್ಲಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೇ ಸಂಸ್ಥೆಯಲ್ಲಿ ಪ್ರೋಗ್ರಾಂ ಅಧಿಕಾರಿಯಾಗಿ ಎರಡು ವರ್ಷಗಳ ಕಾಲ ಅನೇಕ ಕಾರ್ಯಕ್ರಮಗಳನ್ನು ನಿರ್ದೇಶಿಸಿದ್ದಾರೆ. ಕನ್ನಡ ಪತ್ರಿಕೆಗಳಲ್ಲಿ ಶಿಕ್ಷಣದ ಬಗ್ಗೆ ಕೆಲವು ಲೇಖನಗಳನ್ನು ಪ್ರಕಟಿಸಿರುವ ಇವರು ಟೆಲಿಕಾನ್ಫರೆನ್ಸ್‌ಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

**ಡಾ. ಮಳಗಿ ವಿ.ವಿ.**
ಪ್ರವಾಚಕರು
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ,
ಬಿಜಾಪುರ,

ಇವರು ಬಿಜಾಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಸ್ಕೂಲ್ ಆಫ್ ಎಜುಕೇಷನ್ನಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಿ.ಎಡ್ ಮತ್ತು ಎಂ.ಎಡ್ ಮಟ್ಟದಲ್ಲಿ 32 ವರ್ಷಗಳ ಬೋಧನಾನುಭವವನ್ನು ಹೊಂದಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಕರ್ನಾಟಕದಲ್ಲಿ ಬಿ.ಎಡ್ ಕಾಲೇಜುಗಳ ಗುಣಮಟ್ಟವನ್ನು ಪರೀಕ್ಷಿಸುವ ಸಮಿತಿಯ ಓರ್ವ ಸದಸ್ಯರಾಗಿಯೂ ಮಹಿಳಾ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ.

**ಪ್ರೊ. ಮಲ್ಲಿಕಾರ್ಜುನ ಶಾಸ್ತ್ರಿ ಹೆಚ್.ಎಸ್.** ಎಂ.ಎ; ಎಂ.ಎಡ್.
ಸೋಮಾನಿ ಶಿಕ್ಷಣ ಮಹಾವಿದ್ಯಾಲಯ,
ಸರಸ್ವತಿ ಪುರಂ, ಮೈಸೂರು.

ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್‌ನ ಓಂಕಾರಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿರುವ ಇವರು ಮೂವತ್ತು ವರ್ಷಗಳ ಬೋಧನಾನುಭವವನ್ನು ಹೊಂದಿದ್ದಾರೆ. ಶಿಕ್ಷಣಶಾಸ್ತ್ರದ ಬಗ್ಗೆ ಪುಸ್ತಕಗಳನ್ನು ರಚಿಸಿರುವುದಲ್ಲದೆ, ಅನೇಕ ಸಂಸ್ಥೆಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ.

Digitised by Bharatavani, CIIL

**ಡಾ. ಮಹೇಶ್ ಚಂದ್ರ ಗುರು ಬಿ. ಪಿ.** ಎಂ.ಎ.(ಪತ್ರಿಕೋದ್ಯಮ), ಪಿಎಚ್.ಡಿ.
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಸಂವಹನ ಮತ್ತು ಪತ್ರಿಕೋದ್ಯಮ ಸಂಯುಕ್ತ ಅಧ್ಯಯನ ಮಂಡಳಿ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸೂರು – 06

ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ವಿಭಾಗದಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪತ್ರಿಕೋದ್ಯಮ, ಗ್ರಾಮೀಣ ಸಂವಹನ ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ 30 ವರ್ಷಗಳ ಅನುಭವ ಪಡೆದಿದ್ದಾರೆ. 6 ಮಂದಿ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಸುಮಾರು 60 ಪ್ರಬಂಧಗಳನ್ನು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ. ಇವರ 50 ಕ್ಕೂ ಹೆಚ್ಚಿನ ಲೇಖನಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಪತ್ರಿಕೆಗಲ್ಲಿ ಪ್ರಕಟವಾಗಿವೆ. ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

**ಶ್ರೀ ಮಹೇಶ ದಳಪತಿ** ಎಂ.ಎ., ಎಂ.ಎಡ್., ಎಂ.ಫಿಲ್.
ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ
ಶಂಕರ ಮಠ ರಸ್ತೆ, ಹೊಸ ಮಠ,
ಅಗ್ರಹಾರ, ಮೈಸೂರು.

ಶ್ರೀಯುತರು ಮೈಸೂರಿನ ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ರಂಗಾಸಕ್ತರಾಗಿದ್ದು ಹಲವು ನಾಟಕಗಳಲ್ಲಿ ಅಭಿನಯಿಸಿದ್ದು, ಹಲವು ಶಾಲಾ – ಕಾಲೇಜುಗಳ ಶಿಬಿರ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಿಶೇಷ ಉಪನ್ಯಾಸಕರಾಗಿ, ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಡಾ. ಮನೋಹರಿ ಪಿ.** ಎಂ.ಎಡ್; ಪಿಎಚ್.ಡಿ.
ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ
ಉಜ್ರೆ (ದ.ಕ.)

ಇವರು ಪ್ರಸ್ತುತ ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ, ಉಜಿರೆ ಇಲ್ಲಿ ಪ್ರಾಂಶುಪಾಲೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಮತಿಯವರು ಹಲವಾರು ಕಾರ್ಯಾಗಾರಗಳಲ್ಲಿ, ಸಮ್ಮೇಳನಗಳಲ್ಲಿ ಭಾಗವಹಿಸಿರುತ್ತಾರೆ. ಸೃಜನಶೀಲತೆ ಬಗ್ಗೆ ಮಾಡಿದ ಸಂಶೋಧನೆಗೆ ಪಿಹೆಚ್.ಡಿ ಪಡೆದಿದ್ದಾರೆ.

**ಶ್ರೀ ಮುದ್ದುಮಲ್ಲೇಶ್ ಹೆಚ್.** ಎಂ.ಎ; ಎಂ.ಎಡ್; ಪಿ.ಜಿ.ಡಿ.ಹೆಚ್.ಇ.
ಪ್ರಾಧ್ಯಾಪಕರು
ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ
ಅರಸೀಕೆರೆ, ಹಾಸನ (ಜಿ)

1981 ರಿಂದ ಅರಸೀಕೆರೆಯ ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಮ್ಮೇಳನ, ಕಾರ್ಯಾಗಾರಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿಕ್ಷಕರ ಮತ್ತು ಪ್ರಶಿಕ್ಷಕರ ಸೇವಾನಿರತ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ್ದಾರೆ.

**ಡಾ. ಮೂರ್ತಿ ಎಂ.ಸಿ.**
ಪ್ರಾಂಶುಪಾಲರು
ಎಂಎಲ್ಎಂಎನ್ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ),
ಚೈತನ್ಯ ಭಾರತಿ, ಜ್ಯೋತಿ ನಗರ,
ಚಿಕ್ಕಮಗಳೂರು – 577 102

ಚಿಕ್ಕಮಗಳೂರಿನ ಎಂ.ಎಲ್.ಎಂ.ಎನ್ ಶಿಕ್ಷಣ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಮೂರು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತಾ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

**ಡಾ. ಮೃತ್ಯುಂಜಯ ಟಿ. ಬಿ.** ಎಂ.ಎಸ್ಸಿ; ಪಿಎಚ್.ಡಿ.
ಪ್ರಾಧ್ಯಾಪಕರು
ಪ್ರಾಣಿಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಪ್ರಾಣಿಶಾಸ್ತ್ರದಲ್ಲಿ ಪಿಹೆಚ್.ಡಿ. ಪಡೆದಿರುವ ಶ್ರೀಯುತರು ಹಲವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸಿದ್ದಾರೆ ಹಾಗೂ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. 2010ರಲ್ಲಿ ದೆಹಲಿಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯಿಂದ **'ವರ್ಷದ ವಿಜ್ಞಾನಿ'** ಪ್ರಶಸ್ತಿ ಪಡೆದಿದ್ದಾರೆ.

**ಪ್ರೊ. ಮೇರಿರೋಸ್** ಎಂ.ಎ; ಎಂ.ಎಡ್.
ಪ್ರಾಧ್ಯಾಪಕರು
ಸೆಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ,
ಜಯಲಕ್ಷ್ಮಿ ಪುರಂ, ಮೈಸೂರು.

ಸಂತ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯದಲ್ಲಿ 23 ವರ್ಷಗಳಿಂದ ಇತಿಹಾಸ ವಿಭಾಗದ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅನೇಕ ಕಾರ್ಯಗಾರಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

**ಶ್ರೀ ಮಂಜು ಎನ್. ಡಿ.** ಎಂ.ಎ; ಎಂ.ಎಡ್; ಪಿಜಿಡಿಹೆಚ್ಇ
ಸಂಶೋಧನಾ ವಿದ್ಯಾರ್ಥಿ
ಶಿಕ್ಷಣಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಇವರು ಕೆ. ಆರ್. ನಗರದಲ್ಲಿರುವ ಯಡತೊರೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ ಈಗ ಮಾನಸಗಂಗೋತ್ರಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ UGC ವಿದ್ಯಾರ್ಥಿ ವೇತನ ಪಡೆದು ಸಂಶೋಧಕರಾಗಿ ಪದವಿಗಾಗಿ ಕೆಲಸ ಮಾಡುತ್ತಿದ್ದಾರೆ. ಅನೇಕ ಸಂಶೋಧನಾತ್ಮಕ ಪ್ರಾಯೋಜನೆಗಳಲ್ಲಿ ಸಹಾಯಕ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ರಾಜ್ಯ/ ರಾಷ್ಟ್ರೀಯ/ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪಾಲ್ಗೊಂಡು ಲೇಖನಗಳನ್ನು ಮಂಡಿಸಿದ್ದಾರೆ.

Digitised by Bharatavani, CIIL

**ಡಾ. ಮಂಜುನಾಥ್.ಪಿ.** ಎಂ.ಎಸ್ಸಿ. ಪಿಎಚ್.ಡಿ.
ಅಧ್ಯಾಪಕರು
ಮನೋವಿಜ್ಞಾನ ವಿಭಾಗ, ಕರಾಮುವಿ,
ಮಾನಸಗಂಗೊತ್ರಿ, ಮೈಸೂರು.

ಡಾ. ಮಂಜುನಾಥ್ ಪಿ. ರವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮನೋವಿಜ್ಞಾನ ಅಧ್ಯಯನ ವಿಭಾಗದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆ ಮುಂಚೆ ಇವರು ವಿಶ್ವವಿದ್ಯಾನಿಲಯದ 2008ರಲ್ಲಿ ಅರ್ಹತಾ ವಿದ್ಯಾರ್ಥಿ ವೇತನ ಪಡೆದು ವಿಭಾಗದಲ್ಲಿ ಮನೋವಿಜ್ಞಾನದಲ್ಲಿ ಸಂಶೋಧಕರಾಗಿದ್ದರು. ಮನೋವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಹಾಗೂ ರಾಜ್ಯ ಮಟ್ಟದ ಪ್ರಮುಖ ದೈನಂದಿನ ದಿನ ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. **'ಮನೋವಿಜ್ಞಾನ ಪರಿಚಯ'**ವೆಂಬ ಪುಸ್ತಕವನ್ನು ರಚಿಸಿದ್ದಾರೆ.

**ಪ್ರೊ. ಮಂಜುನಾಥಯ್ಯ ಬಿ.ಎನ್.** ಎಂ.ಎ.(ಮನೋವಿಜ್ಞಾನ), ಎಂ.ಎಡ್.
1009, E & F ಬ್ಲಾಕ್, ಉದಯರವಿ ರಸ್ತೆ,
ಕುವೆಂಪು ನಗರ, ಮೈಸೂರು.

ಮಂಗಳೂರಿನ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ 2 ವರ್ಷ ಸೇವೆ ಸಲ್ಲಿಸಿ ನಂತರ ಮೈಸೂರಿನ ಸೋಮಾನಿ ಬಿ.ಎಡ್. ಕಾಲೇಜಿನಲ್ಲಿ 4 ವರ್ಷ, ಮಾನಸಗಂಗೋತ್ರಿಯಲ್ಲಿ 26 ವರ್ಷಗಳ ಕಾಲ ಸೇವೆ ಸಲ್ಲಿಸಿ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದ್ದಾರೆ. ಆನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 8 ವರ್ಷ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

**ಡಾ. ಮೋಹನ್ ಕುಮಾರ್** ಎಂ.ಎ; ಎಂ.ಎಡ್; ಪಿಎಚ್.ಡಿ; ಪಿ.ಜಿ.ಡಿ.ಹೆಚ್.ಇ.
ಪ್ರಾಂಶುಪಾಲರು,
ಎನ್‌ಡಿಆರ್‌ಕೆ ಶಿಕ್ಷಣ ಮಹಾವಿದ್ಯಾಲಯ,
ಹಾಸನ.

1993 ರಿಂದ ಫೆಬ್ರವರಿ 2005ರ ವರೆಗೂ ಸಕಲೇಶಪುರದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ 2005 ರಿಂದೀಚೆಗೆ ಎನ್.ಡಿ.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯ, ಹಾಸನದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೋಧನಾ ಪ್ರಕ್ರಿಯೆ ಮತ್ತು ಶಾಲಾ ನಿರ್ವಹಣೆ, ಬಿ.ಎಡ್. ವಿದ್ಯಾರ್ಥಿಗಳ ಕೈಪಿಡಿ ಎಂಬ ಪುಸ್ತಕಗಳನ್ನು ಬರೆದಿದ್ದಾರೆ.

**ಶ್ರೀ ಮೋಹನ್ ಕುಮಾರ್ ಹೆಚ್.ಎಸ್.** ಎಂ.ಎ., ಎಂ.ಫಿಲ್.
ಸಮಾಜಶಾಸ್ತ್ರ ಉಪನ್ಯಾಸಕರು,
ಶಾರದವಿಲಾಸ್ ಲಾ ಕಾಲೇಜು,
ಕೆ. ಎಂ. ಪುರಂ, ಮೈಸೂರು.

ಶ್ರೀ ಮೋಹನ್ ಕುಮಾರ್ ಪ್ರಸ್ತುತದಲ್ಲಿ ಮೈಸೂರಿನ ಶಾರದ ವಿಲಾಸ ಕಾಲೇಜಿನಲ್ಲಿ 2001 ರಿಂದ ಸಮಾಜಶಾಸ್ತ್ರ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಡಾ. ಯಾದವಾಡ ಎಸ್.ಬಿ.**
ಪ್ರಾಧ್ಯಾಪಕರು
ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ
ಬಾಗಲಕೋಟೆ.

ಬಾಗಲಕೋಟೆಯ ಬಿ.ವಿ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಮತ್ತು ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ 14 ವರ್ಷಗಳಿಂದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಡಿ.ಎಡ್., ಬಿ.ಎಡ್. ಹಾಗೂ ಎಂ.ಎಡ್. ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ 60 ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

**ಡಾ. ರಘು ಕೆ.** ಬಿ.ಎಸ್ಸಿ; ಎಂ.ಎಡ್, ಎಂ.ಎ; ಪಿಎಚ್.ಡಿ.
ಪ್ರಾಂಶುಪಾಲರು
ಆದಿ ಚುಂಚನಗಿರಿ ಶಿಕ್ಷಣ ಮಹಾವಿದ್ಯಾಲಯ,
ಚನ್ನರಾಯಪಟ್ಟಣ, ಹಾಸನ (ಜಿ)

ಸದ್ಯದಲ್ಲಿ ಹಾಸನ ಜಿಲ್ಲೆ ಚನ್ನರಾಯಪಟ್ಟಣದಲ್ಲಿರುವ ಶ್ರೀ ಆದಿಚುಂಚನಗಿರಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಇವರಿಗೆ, ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಕೆಲಸ ಮಾಡಿರುವ ಅನುಭವವಿದೆ. 'ಶೈಕ್ಷಣಿಕ ಸಮಾಜಶಾಸ್ತ್ರ', ಭಾರತೀಯ ಶಿಕ್ಷಣ ಇತಿಹಾಸ', 'ಶೈಕ್ಷಣಿಕ ಮನೋವಿಜ್ಞಾನ' ಮುಂತಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

**ಶ್ರೀಮತಿ ರಮಾಮಣಿ ಜಿ.** ಎಂ.ಎ; ಎಂ.ಎಡ್.
ಪ್ರಾಧ್ಯಾಪಕರು
ನ್ಯಾಷಿನಲ್ ಶಿಕ್ಷಣ ಮಹಾವಿದ್ಯಾಲಯ,
ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ.

36 ವರ್ಷಗಳ ಶಿಕ್ಷಕ ವೃತ್ತಿಯ ಅನುಭವ ಹೊಂದಿ ನಿವೃತ್ತರಾಗಿರುವ ಇವರು "ಉದಯವಾಣಿ" ಮತ್ತು ಶಿವಮೊಗ್ಗದ 'ನೌಕರ ಬಂಧು' ಪತ್ರಿಕೆಗಳಿಗೆ ನಿರಂತರವಾಗಿ ಆಂಗ್ಲಭಾಷಾ ವ್ಯಾಕರಣದ ಬಗ್ಗೆ ಮತ್ತು ಬೋಧನೆಯ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಹಂಪೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಲೇಖನಗಳನ್ನು ಆಂಗ್ಲಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯದ ಎಂ.ಎ. ಎಜುಕೇಶನ್ ಪದವಿಗೆ ಶೈಕ್ಷಣಿಕ ಮನೋವಿಜ್ಞಾನಕ್ಕೆ ಸಿದ್ಧಪಾಠಗಳನ್ನು ಬರೆದಿರುತ್ತಾರೆ.

**ಡಾ. ರಮೇಶ್ ಹೆಚ್. ನಾಯಕ್** ಎಂ.ಎಸ್ಸಿ; ಎಂ.ಎಡ್; ಪಿಜಿಡಿಹೆಚ್ಇ; ಪಿಎಚ್.ಡಿ.
ಉಪನ್ಯಾಸಕರು,
ವಿಶ್ವವಿದ್ಯಾನಿಲಯದ ಶಿಕ್ಷಣ ಮಹಾವಿದ್ಯಾಲಯ,
ರೊಡ್ಡ ರಸ್ತೆ, (ಕಾಲೇಜು ರಸ್ತೆ), ಧಾರವಾಡ.

ಶಿಕ್ಷಣಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರು 14 ವರ್ಷಗಳ ಬೋಧನಾನುಭವವನ್ನು ಹೊಂದಿದ್ದಾರೆ. ಯು.ಜಿ.ಸಿ. ಡಯಟ್, ಕರ್ನಾಟಕ ಸರ್ಕಾರದ ಸಾಮೂಹಿಕ ಶಿಕ್ಷಣ ವಿಭಾಗದಲ್ಲಿನ ಸರ್ವ ಶಿಕ್ಷಾ ಅಭಿಯಾನದ ಧನ ಸಹಾಯದಿಂದ ಅನೇಕ ಸಂಶೋಧನಾ ಪ್ರಾಯೋಜನೆಗಳನ್ನು ಕೈಗೊಂಡಿದ್ದಾರೆ.

Digitised by Bharatavani, CIIL

**ಶ್ರೀ ರತನ ಚವಾಣ** ಎಂ.ಎಸ್ಸಿ; ಎಂ.ಎಡ್; ಎಂ.ಫಿಲ್.
ಅಧ್ಯಾಪಕರು
ಎಸ್ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು

ಇವರು ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 15 ವರ್ಷಗಳಿಂದ ಶಿಕ್ಷಣಶಾಸ್ತ್ರ ಉಪನ್ಯಾಸಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

**ಡಾ. ರಾಜಲಕ್ಷ್ಮೀ ಎನ್.ಕೆ.** ಎಂ.ಎ.
2-78/18, ಶ್ರೀಧವಳ,
ಮಾರಿಕಾಂಬ ದೇವಸ್ಥಾನ ರಸ್ತೆ,
ಕುಲಶೇಖರ, ಮಂಗಳೂರು - 05

ಆಂಗ್ಲ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವೀದರರಾದ ಡಾ. ರಾಜಲಕ್ಷ್ಮೀಯವರು ಕಳೆದ ಹಲವು ವರ್ಷಗಳಿಂದ ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಆಂಗ್ಲ ಭಾಷಾ ಉಪನ್ಯಾಸಕಿಯಾಗಿದ್ದಾರೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ನೋಡುವ ನಿಲುವು ಹೊಂದಿದ್ದಾರೆ. ಭಾರತೀಯ ಮೂಲದ ಪ್ರಮುಖ ಇಂಗ್ಲೀಷ್ ಲೇಖಕ ಅಮಿತಾದ ಘೋಷ್ ಅವರ ಕಾದಂಬರಿಗಳ ಬಗ್ಗೆ ಬರೆದ ಇವರ ಪ್ರೌಢ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಹೊಸ ರೀತಿಯ ಆಲೋಚನೆಯನ್ನು ಸದಾ ಅನ್ವೇಷಿಸುವ ಇವರ ಹಲವಾರು ಬರಹಗಳು ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿ ಪ್ರಕಟವಾಗಿವೆ.

**ಶ್ರೀ ರಾಘವೇಂದ್ರ ಟಿ.ಕೆ.** ಎಂ.ಎಸ್ಸಿ., ಎಂ.ಎ., ಎಂ.ಎಡ್., ಡಿ.ಎಫ್.ಎನ್.
ಪ್ರಾಧ್ಯಾಪಕರು
ಡಯಟ್, ಚಿಕ್ಕಬಳ್ಳಾಪುರ

ಶ್ರೀಯುತರು ಚಿಕ್ಕಬಳ್ಳಾಪುರದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಉಪನ್ಯಾಸಕರಾಗಿದ್ದಾರೆ. 22 ವರ್ಷಗಳ ಬೋಧನ ಅನುಭವ ಪಡೆದಿದ್ದಾರೆ. ರಾಜ್ಯ ಮಟ್ಟದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ತರಬೇತಿಗಾಗಿ ಒಟ್ಟು 7 ಮಾಡ್ಯೂಲ್‌ಗಳನ್ನು ತಯಾರಿಸಿದ್ದಾರೆ. ರಾಜ್ಯ ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಹಲವಾರು ತರಬೇತಿ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ರಾಷ್ಟ್ರ ಮಟ್ಟದ 6 ಕಾರ್ಯಾಗಾರಗಳಲ್ಲಿ ಇಲಾಖೆಯ ಪ್ರತಿನಿಧಿಯಾಗಿ/ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಪ್ರೌಢಶಾಲಾ ಗಣಿತದಲ್ಲಿ ಪಠ್ಯಕ್ರಮ ಸಮಿತಿ ಸದಸ್ಯರಾಗಿ ಹಾಗೂ 8ನೇ ತರಗತಿ ಗಣಿತ ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

**ಡಾ. ರಾಘವೇಂದ್ರ ರಾವ್ ಹೆಚ್. ಎಸ್.** ಎಂ.ಎ; ಎಂ.ಎಡ್; ಪಿಎಚ್.ಡಿ.
ನಂ. 771, 9ನೇ ಮುಖ್ಯ ರಸ್ತೆ,
ಜೆ.ಪಿ.ನಗರ "ಡಿ" ಬ್ಲಾಕ್
ಮೈಸೂರು - 570 008

ಇವರು ಸರ್ಕಾರಿ ಕಿರಿಯ ಮತ್ತು ಹಿರಿಯ ಕಾಲೇಜುಗಳಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಸುಮಾರು ಮೂರೂವರೆ ದಶಕಗಳ ಕಾಲ ಕೆಲಸ ಮಾಡಿದ್ದಾರೆ. ಭಾರತ ಸರ್ಕಾರದ ಜವಾಹರ್ ನವೋದಯ ವಿದ್ಯಾಲಯದ ಪ್ರಾಚಾರ್ಯರಾಗಿ ಕೆಲಸಮಾಡಿದ್ದಾರೆ. ನಿವೃತ್ತಿಯ ನಂತರ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗಗಳಲ್ಲಿ ಮತ್ತು ಎಸ್.ಕೆ.ಎಮ್.ಕೆ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ.

**ಡಾ. ರಾಜಕುಮಾರ ಆರ್. ಮದನಕರ್** ಎಂ.ಎ; ಎಂ.ಎಡ್; ಎಂ.ಫಿಲ್; ಪಿಎಚ್.ಡಿ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

ಇವರು ಪ್ರಾಧ್ಯಾಪಕರಾಗಿ ಕಳೆದ 13 ವರ್ಷಗಳಿಂದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಹಲವಾರು ಶೈಕ್ಷಣಿಕ ಸಂಶೋಧನಾ ಲೇಖನಗಳು ಪ್ರಮುಖ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಎಂಎಡ್. ಮತ್ತು ಎಂ.ಫಿಲ್. ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಬಂಧಗಳನ್ನು ಮಂಡಿಸಿದ್ದಾರೆ.

**ಶ್ರೀ ರಾಜಶೇಖರ ವೈ.** ಎಂ.ಎ; ಎಂ.ಎಡ್.
ಪ್ರಾಧ್ಯಾಪಕರು
ಶಾರದಾದೇವಿ ಡಿ.ಇಡಿ. ಕಾಲೇಜು,
ದಾವಣಗೆರೆ.

ಇವರು ಪ್ರಸ್ತುತ ದಾವಣಗೆರೆಯಲ್ಲಿ ಶಾರದಾದೇವಿ ಡಿ.ಇಡಿ. ಕಾಲೇಜಿನಲ್ಲಿ ಪ್ರಶಿಕ್ಷಕರಾಗಿ ಮತ್ತು ಎಂ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಶ್ರೀ ರಾಜಶೇಖರಯ್ಯ ಕೆ.ಎನ್.** ಎಂ.ಎ; ಎಂ.ಎಡ್.
ಉಪನ್ಯಾಸಕರು
ಜ್ಯೂನಿಯರ್ ಕಾಲೇಜು, ಹೊಸದುರ್ಗ ರಸ್ತೆ,
ಹೊಸದುರ್ಗ (ತಾ)

1982 ರಿಂದ ಚಿತ್ರದುರ್ಗ ಜಿಲ್ಲೆ, ಮಲ್ಲಪ್ಪನಹಳ್ಳಿ, ಹೊಸದುರ್ಗ ರೋಡ್‌ನಲ್ಲಿರುವ ಪದವಿ ಪೂರ್ವ ಕಾಲೇಜಿನಲ್ಲಿ ಹಿರಿಯ ಶ್ರೇಣಿ ಶಿಕ್ಷಣಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ದ್ವಿತೀಯ ಪಿ.ಯು.ಸಿ. ತರಗತಿಗೆ "ಶಿಕ್ಷಣಶಾಸ್ತ್ರ ಶಿಕ್ಷಣದ ಪ್ರಕ್ರಿಯೆಗಳು ಮತ್ತು ಒಲವುಗಳು" ಪುಸ್ತಕವನ್ನು ಬರೆದಿದ್ದಾರೆ. ಅಲ್ಲದೆ ಬಿ.ಇಡಿ. ಮತ್ತು ಡಿ.ಇಡಿ. ವಿದ್ಯಾರ್ಥಿಗಳಿಗಾಗಿ ಹನ್ನೆರಡು ಕೃತಿಗಳನ್ನು ರಚಿಸಿದ್ದಾರೆ.

**ಡಾ. ರಾಜೇಂದ್ರ ಡಿ.ಕೆ.** ಎಂ.ಎ; ಪಿಎಚ್.ಡಿ.
ಗೌರವ ನಿರ್ದೇಶಕರು
ಪ್ರಸಾರಾಂಗ. ಕರಾಮುವಿ,
ಮಾನಸಗಂಗೋತ್ರಿ, ಮೈಸೂರು.

ಇವರು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿ 2002 ರಲ್ಲಿ ನಿವೃತ್ತಿ ಹೊಂದಿದರು. ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಗೌರವ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಷ್ಟ ಹಾಗೂ ಜಾನಪದ ಪ್ರಕಾರಗಳಲ್ಲಿ 45ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಜಾನಪದ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳಿಂದ ಗೌರವಿಸಲ್ಪಟ್ಟಿದ್ದಾರೆ.

Digitised by Bharatavani, CIIL

**ಡಾ. ರಾಮಚಂದ್ರ ತ. ಜಂತಲಿ** ಎಂ.ಎಸ್ಸಿ.(ರಸಾಯನ ಶಾಸ್ತ್ರ), ಎಂ.ಎ.(ಇತಿಹಾಸ), ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು,
ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ,
ವಿದ್ಯಾಗಿರಿ, ಧಾರವಾಡ.

1971ರಲ್ಲಿ ಅಧ್ಯಾಪಕ ವೃತ್ತಿಯನ್ನು ಆರಂಭಿಸಿ 1981ರ ವರೆಗೆ ಸಹಾಯಕ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಂತರ ಕರ್ನಾಟಕ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಶಿಕ್ಷಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ 2005 ರಲ್ಲಿ ನಿವೃತ್ತಿ ಹೊಂದಿದರು. ಶಿಕ್ಷಣಶಾಸ್ತ್ರದ ಬಗ್ಗೆ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

**ಶ್ರೀಮತಿ ರೂಪಾರಾವ್** ಬಿ.ಎಸ್ಸಿ; ಎಂ.ಎಡ್; ಪಿ.ಜಿ. ಡಿಪ್ಲಮೋ (ಇಂಗ್ಲಿಷ್), Cetrtificate in Learning Disability and Counselling.
ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು (ನಿ)
ರಾಮಕೃಷ್ಣ ನಗರ, ಮೈಸೂರು.

ಇವರು ಕುಮಟ (ಉ.ಕನ್ನಡ) ಕಮಲಾ ಬಾಳಿಗ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕೆಲವು ವರ್ಷಗಳ ಕಾಲ ಅಧ್ಯಾಪಕಿಯಾಗಿ, ರೀಡರ್ ಮತ್ತು ಪ್ರಾಧ್ಯಾಪಕಿಯಾಗಿ ಕೆಲಸ ಮಾಡಿ 2007 ರಲ್ಲಿ ನಿವೃತ್ತಿ ಹೊಂದಿದರು. ನಿವೃತ್ತಿಯ ನಂತರವೂ ಕಲಿಕಾ ನ್ಯೂನತೆಯಿರುವ ಮಕ್ಕಳ ಶಿಕ್ಷಣ, ಭೌತಶಾಸ್ತ್ರ ಬೋಧನೆಯಲ್ಲಿ ಬಹು ಮಾಧ್ಯಮ ವಿಧಾನಗಳು, ಮಹಿಳಾ ಸಬಲೀಕರಣ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಎರಡು ಸಲ(1995, 1998) ನವ ದೆಹಲಿಯ ಎನ್‌ಸಿಇಆರ್‌ಟಿ ಯ ಅತ್ಯುತ್ತಮ ನವೀನ ಆಚರಣೆಗಳ ಪ್ರಶಸ್ತಿ ಪಡೆದಿದ್ದಾರೆ. ಭೌತಶಾಸ್ತ್ರ ಬೋಧನೆಗೆ ಸುಲಭ ವೆಚ್ಚದ ಉಪಕರಣಗಳನ್ನು ರೂಪಿಸಿದ್ದಾರೆ. ಕ್ರಿಯಾ ಸಂಶೋಧನೆಯಲ್ಲಿ ಆಸಕ್ತಿ ತಳೆದಿರುವ ಇವರು ಹೊನಲುಲು (USA) ಯಲ್ಲಿ ತಮ್ಮ ಎರಡು ಸಂಶೋಧನ ಲೇಖನಗಳನ್ನು ಮಂಡಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರಿನ ವಾಕ್ ಶ್ರವಣ ಸಂಸ್ಥೆಗೆ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಮೈಸೂರಿನ ಸಮತಾ ವೇದಿಕೆಯ ಸಕ್ರಿಯ ಸದಸ್ಯರಾಗಿದ್ದಾರೆ.

**ಡಾ. ರೊಡ್ಡಣ್ಣವರ ಜಿ.ಜಿ.**
ಹಿರಿಯ ಉಪನ್ಯಾಸಕರು
ವಿಶ್ವವಿದ್ಯಾನಿಲಯದ ಶಿಕ್ಷಣ ಮಹಾವಿದ್ಯಾಲಯ,
ರೊಡ್ಡ ರಸ್ತೆ (ಕಾಲೇಜು ರಸ್ತೆ), ಧಾರವಾಡ.

ಇವರು ಶಿಕ್ಷಣ ಕ್ಷೇತ್ರದಲ್ಲಿ ಸುಮಾರು 27 ವರ್ಷಗಳಿಂದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಲೇಖನಗಳು ರಾಷ್ಟ್ರದ ಅನೇಕ ಪ್ರತಿಷ್ಠಿತ ಶೈಕ್ಷಣಿಕ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿರುವ ಶ್ರೀಯುತರು ಶಿಕ್ಷಣ ವಿಷಯಕ್ಕೆ ಸಂಬಂಧಿಸಿದಂತೆ ಹದಿನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

**ಡಾ. ಲಕ್ಷ್ಮಿ ಎನ್.** ಎಂ.ಎಡ್., ಎಂ.ಫಿಲ್., ಪಿಎಚ್.ಡಿ.
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮಾನಸಗಂಗೋತ್ರಿ, ಮೈಸೂರು–06

ಡಾ. ಎನ್. ಲಕ್ಷ್ಮಿಯವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎಡ್., ಎಂ.ಫಿಲ್. ಮತ್ತು ಪಿ.ಎಚ್‌ಡಿ. ಪದವಿಗಳನ್ನು ಪಡೆದಿದ್ದಾರೆ. ಇವರು 1996 ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ **"ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಹಾಗೂ ಇತರೆ ಜನಾಂಗದವರ ತಾರುಣ್ಯಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳ ಶೈಕ್ಷಣಿಕ ಹಿಂದುಳಿಯುವಿಕೆ"** ಎಂಬ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಇವರು 1994 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ICC&CE ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕಿಯಾಗಿ ಸೇವೆ ಪ್ರಾರಂಭಿಸಿದರು. ಶ್ರೀಮತಿಯವರು 2001 ರಿಂದ 2003 ರವರೆಗೆ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕಿಯಾಗಿ ಸೇವೆಸಲ್ಲಿಸಿದರು. 2003 ರಿಂದ ಸಹಾಯಕ ಪ್ರಾಧ್ಯಾಪಕರಾಗಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಐದು ಮಂದಿ ವಿದ್ಯಾರ್ಥಿಗಳು ಪಿ.ಹೆಚ್‌ಡಿ. ಪದವಿಯನ್ನು ಪಡೆದಿದ್ದಾರೆ. ಹಾಗೆಯೇ ಹತ್ತು ಮಂದಿ ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಏಳು ಮಂದಿ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಕರಾಮುವಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಬಿ.ಎಡ್., ಬಿ.ಎಡ್. ವಿಶೇಷ ಶಿಕ್ಷಣ, ಎಂ.ಎಡ್., ಎಂ.ಫಿಲ್., ಪಿ.ಎಚ್‌ಡಿ., ಹಾಗೂ ಪಿಜಿಡಿಹೆಚ್‌ಇ ಕೋರ್ಸ್‌ಗಳನ್ನು ನಡೆಸಲಾಗುತ್ತದೆ.

ಶ್ರೀಮತಿಯವರು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. **"ಶೈಕ್ಷಣಿಕ ಆಡಳಿತ, ನಿರ್ವಹಣೆ ಹಾಗೂ ಶಾಲಾ ಸಂಘಟನೆ , "ಶೈಕ್ಷಣಿಕ ನಿರ್ವಹಣೆ ಮತ್ತು ನಾಯಕತ್ವ", "ಮಹಿಳಾ ಶಿಕ್ಷಣ", "ಭಾರತದಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸವಾಲುಗಳು", "ಶೈಕ್ಷಣಿಕ ಸಂಶೋಧನೆ", "ಪ್ರಚಲಿತ ಸಾಮಾಜಿಕ ಮತ್ತು ಶೈಕ್ಷಣಿಕ ಸವಾಲುಗಳು"** ಇವರ ಪ್ರಮುಖ ಪುಸ್ತಕಗಳಾಗಿವೆ.

ಡಾ. ಎನ್. ಲಕ್ಷ್ಮಿ ರವರು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ 2007–08ನೇ ಸಾಲಿನಲ್ಲಿ **"ಮೈಸೂರು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳ ತುಲನಾತ್ಮಕ ಅಧ್ಯಯನ"** ಎಂಬ ಪ್ರಾಯೋಜನೆಯನ್ನು ಹಾಗೂ 2009–10ನೇ ಸಾಲಿನಲ್ಲಿ ಡೆಕ್ ಅನುದಾನದಡಿಯಲ್ಲಿ **"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎಡ್., ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರವೇಶಾತಿ, ಶೈಕ್ಷಣಿಕ ಹಾಗೂ ಆಡಳಿತ್ಮಾಕ ವಿಷಯಗಳ ಒಂದು ಅಧ್ಯಯನ"** ಎಂಬ ಎರಡು ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ.

ಪ್ರಸ್ತುತ ಕೇಂದ್ರದ ಘನ ಸರ್ಕಾರ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಹಿನ್ನೆಲೆಯಲ್ಲಿ ರಾಜ್ಯದ ಘನ ಸರ್ಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವಿಶ್ವವಿದ್ಯನಿಲಯಕ್ಕೆ ಎರಡು ಕೋಟಿ ರೂಗಳ ಅನುದಾನವನ್ನು ಮಂಜೂರು ಮಾಡಿ, ನಮ್ಮ ವಿಶ್ವವಿದ್ಯಾನಿಲಯಕ್ಕೆ ಮೊದಲ ಕಂತಾಗಿ ರೂ. ಒಂದು ಕೋಟಿಯನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಯೋಜನೆಯ ವ್ಯಾಪ್ತಿಗೆ ನಮ್ಮ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎನ್. ಲಕ್ಷ್ಮಿ ರವರು ಪ್ರಧಾನ ಸಂಪಾದಕರಾಗಿ ಕೈಗೆತ್ತಿಕೊಂಡಿರುವ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಯೋಜನೆಯೂ ಸಹ ಒಂದು. ಈ ಯೋಜನೆಯನ್ನು ಪ್ರತಿ ಸಂಪುಟವನ್ನು 1000 ಪುಟಗಳಂತೆ 2 ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಪ್ರಥಮ ಸಂಪುಟ ಮುಕ್ತಾಯದ ಹಂತದಲ್ಲಿದ್ದು ಜುಲೈ 2012 ರಲ್ಲಿ ಬಿಡುಗಡೆಯಾಗಲಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆ ಅಡಿಯಲ್ಲಿ **"ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಸಿ.ಡಿ. ಮುಖಾಂತರ ಪಾಠ ಒದಗಿಸುವ ಯೋಜನೆ"**, 2011–12ನೇ ಸಾಲಿನಲ್ಲಿ ಡೆಕ್ ಅನುದಾನದ ಅಡಿಯಲ್ಲಿ **"ಚಾಮರಾಜನಗರ ಜಿಲ್ಲೆಯ ಹೆಣ್ಣು ಮಕ್ಕಳು ದೂರ ಶಿಕ್ಷಣದ ಉಪಯೋಗವನ್ನು ಪಡೆದುಕೊಂಡಿರುವುದರ ಬಗ್ಗೆ– ಒಂದು ಅಧ್ಯಯನ"** ಯೋಜನೆ ಹಾಗೂ 2011–12ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ "AN EVALUATIVE STUDY OF THE IMPLIMENTATION OF THE SSA MADARASAS GRANT SCHEME IN KARNATAKA STATE" ಪ್ರಾಯೋಜನೆಗಳಲ್ಲಿ ಕಾರ್ಯನಿರತರಾಗಿದ್ದಾರೆ.

ಶ್ರೀಮತಿಯವರು ಹಲವಾರು ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ರಾಷ್ಟ್ರೀಯ ಸಮ್ಮೇಳನಗಳಾದ National Seminar on 'ODL-Learner support Services' held on 20 & 21st October 2010 at Dr. B.R. Ambedkar open University, Hyderabad, National Seminar on 'Rejuvenating Intellectual Curiosity Among Teacher Educators' held on 28 & 29th January 2011 at Stella Matutina College of Education, Chennai, National Seminar on 'Current Issues in Teacher Education' held on 14th & 15th March at Department of Education,

Digitised by Bharatavani, CIIL

Faculty of Education and Psychology, The Maharaja Sayajirao University of Baroda, Vadodara Gujarat ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಹಾಗೆಯೇ ಹಲವು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿಯೂ ಸಹ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ಅಂತರರಾಷ್ಟ್ರೀಯ ಸಮ್ಮೇಳನಗಳಾದ International Conference On "Innovative Thoughts – Education, Management, Arts, Science, Linguistics" (Teaching & Learning) held on 12th, 13th & 14th August 2011 at Department of Indian Studies, Faculty of Arts and sciences, University of Malaya, Kualalumpur, Malaysia, International Seminar on "Global Commitments Towards Inclusive Development of Persons with Disabilities" held on 17th and 19th March 2012 at India Habitat Centre, New Delhi, International Seminar on "Innovations in Teaching, Research and Management in Higher Education" held on 21st and 22nd March 2012 at the Centre for Educational Research, Madurai Kamaraj University, Madurai, Tamil Nadu ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ.

ಹಾಗೂ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಇವರು ಹಲವಾರು ಕಾರ್ಯಗಾರಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ವಿಭಾಗದಲ್ಲಿ ಶೈಕ್ಷಣಿವಾಗಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದ ಇವರ ಹಲವು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಪ್ರಧಾನ ಸಂಪಾದಕರಾಗಿದ್ದಾರೆ.

**ಡಾ. ಲೀಲಾವತಿ ಡಿ. ಎಸ್.** ಎಂ.ಎ; ಪಿಎಚ್.ಡಿ
ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಯ
ಮಾನಸಗಂಗೋತ್ರಿ, ಮೈಸೂರು.

ಮಾನಸಗಂಗೋತ್ರಿಯ ಅರ್ಥಶಾಸ್ತ್ರ ಮತ್ತು ಸಹಕಾರ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೋಧನೆ ಮತ್ತು ಸಂಶೋಧನೆಗಳಲ್ಲಿ ದೀರ್ಘ ಕಾಲದ ಅನುಭವ ಪಡೆದಿದ್ದಾರೆ. ಪ್ರಸಿದ್ಧ ಸಂಶೋಧನ ಪತ್ರಿಕೆಗಳಲ್ಲಿ ಶ್ರಮ ಪುನರ್ ರಚನೆ, ಎಕ್ಸಿಟ್ ನೀತಿ, ಶ್ರಮ ವಿಭಾಗದ ಸುಧಾರಣೆಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ 70 ಲೇಖನಗಳನ್ನು ಪ್ರಕಟಿಸಿದ್ದಾರೆ. ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಲೇಖನಗಳನ್ನು ಮಂಡಿಸಿರುವುದಲ್ಲದೆ, ಅನೇಕ ವಿಸ್ತರಣ ಉಪನ್ಯಾಸಗಳನ್ನು ನೀಡಿದ್ದಾರೆ. ಕೆಲವು ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಸಿದ್ಧಪಾಠಗಳನ್ನು ಬರೆದಿದ್ದಾರೆ. ಇಂಟರ್ ನ್ಯಾಷನಲ್ ಪಬ್ಲಿಷಿಂಗ್ ಹೌಸ್, ನವದೆಹಲಿ ಇವರಿಗೆ 2007 ರಲ್ಲಿ ಬೆಸ್ಟ್ ಸಿಟಿಜನ್ ಆಫ್ ಇಂಡಿಯಾ ಬಹುಮಾನ ನೀಡಿ ಗೌರವಿಸಿದೆ.

**ಡಾ. ಲೋಕೇಶಪ್ಪ ಜಿ. ಎಸ್.** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಂಶುಪಾಲರು
ಎಸ್.ಎಸ್.ಆರ್. ಕಾಲೇಜ್ ಆಫ್ ಎಜುಕೇಶನ್
ಸಿಲ್ವಾಸ – 396 230
ಯು. ಟಿ., ಡಿಎನ್‌ಹೆಚ್

ಹರಿಹರದ ಶ್ರೀಶೈಲ ಶಿಕ್ಷಣ ಕಾಲೇಜಿನಲ್ಲಿ ಉಪನ್ಯಾಸಕರಾಗಿ 1972ರಲ್ಲಿ ಕೆಲಸಕ್ಕೆ ಸೇರಿ ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಮೂವತ್ತೈದು ವರ್ಷ ಕೆಲಸ ಮಾಡಿ 2007ರಲ್ಲಿ ನಿವೃತ್ತಿ ಹೊಂದಿದ ಮೇಲೆ ಪ್ರಸ್ತುತ ಕೇಂದ್ರಾಡಳಿತ ಪ್ರದೇಶವಾದ ದಾದ್ರ ಮತ್ತು ನಗರ ಹವೇಲಿಯ 'ಸಿಲ್ವಾಸ' ನಗರದ ಪ್ರತಿಷ್ಠಿತ ಎಸ್.ಎಸ್.ಆರ್. ಶಿಕ್ಷಣ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಶ್ರೀ ಲೋಹಿತ್** ಎಂ.ಎ. (ಪತ್ರಿಕೋದ್ಯಮ), ಎಂ.ಫಿಲ್.
ಪ್ರಾಧ್ಯಾಪಕರು
ಪತ್ರಿಕೋದ್ಯಮ ವಿಭಾಗ,
ಮಹಾರಾಜ ಕಾಲೇಜು, ಮೈಸೂರು.

ಶ್ರೀಯುತರು ಕಳೆದ 4 ವರ್ಷಗಳಿಂದ ಮಹಾರಾಜ ಕಾಲೇಜಿನಲ್ಲಿ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಅನುರಣನ, ಸಂಚಲನ ಮತ್ತು 'ಪ್ರತಿಫಲನ' ಎಂಬ 3 ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಮಾರುಕಟ್ಟೆ ಸಂವಹನ ಎಂಬ ಕೃತಿಯನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಹಲವಾರು ವಿಚಾರ ಸಂಕಿರಣಗಳಲ್ಲಿ ಇವರು ಭಾಗವಹಿಸಿದ್ದಾರೆ. ಇವರ ಲೇಖನಗಳು ಮಾನವಿಕ ಕರ್ನಾಟಕ ಮತ್ತು ಪ್ರಬುದ್ಧ ಕರ್ನಾಟಕ ನಿಯತ ಕಾಲಿಕೆಗಳಲ್ಲಿ ಪ್ರಕಟಗೊಂಡಿದೆ. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಪದವಿಗಾಗಿ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ.

**ಶ್ರೀಮತಿ ವಸಂತಕುಮಾರಿ ಸಿ.** ಎಂ.ಎಸ್ಸಿ., ಎಂ.ಎಡ್., ಪಿ.ಜಿ.ಡಿ.ಹೆಚ್.ಇ.
ಪ್ರಾಧ್ಯಾಪಕರು
ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯ,
ಬನ್ನೂರು ರಸ್ತೆ, ಮೈಸೂರು.

ಶ್ರೀಮತಿ ವಸಂತಕುಮಾರಿ ಪ್ರಸ್ತುತದಲ್ಲಿ ಮೈಸೂರಿನ ವಿದ್ಯಾ ವಿಕಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 'ಸಂಸ್ಕೃತ ಸಂಘ'ವನ್ನು ಸಂಘಟಿಸಿದ್ದಾರೆ. ಅನೇಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವುದಲ್ಲದೆ, ಕೆಲವು ಲೇಖನಗಳನ್ನು ಬರೆದಿದ್ದಾರೆ.

**ಪ್ರೊ. ವಂಸತಮ್ಮ ಹೆಚ್.ಎಂ.** ಎಂ.ಎ; ಎಂ.ಫಿಲ್.
MIG-37, 'ವಸಂತ ಮಹಲ್',
ಹುಡ್ಕೋ, ಗಂಗೋತ್ರಿ ಲೇಔಟ್, ಮೈಸೂರು.

ಶ್ರೀಮತಿಯವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ, ಪ್ರವಾಚಕರಾಗಿ, ವಿಭಾಗ ಮುಖ್ಯಸ್ಥೆಯಾಗಿ ಮತ್ತು ಪ್ರಾಧ್ಯಾಪಕಿಯಾಗಿ 38 ವರ್ಷಗಳ ದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. 10 ವರ್ಷಗಳ ಕಾಲ ಕಾಲೇಜಿನ ಹಾಸ್ಟೆಲ್‌ಗಳ ಮುಖ್ಯ ವಾರ್ಡನ್‌ರಾಗಿ ಮತ್ತು 6 ವರ್ಷಗಳ ಕಾಲ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಸೌದಿ ಅರೇಬಿಯಾ, ಬ್ಯಾಂಕ್‌ಕಾಂಗ್, ಹಾಂಕಾಂಗ್, ಸಿಂಗಪುರ ಮುಂತಾದ ದೇಶಗಳಿಗೆ ಭೇಟಿನೀಡಿ ಉಪನ್ಯಾಸಗಳನ್ನು ನೀಡಿದ್ದಾರೆ. ಅನೇಕ ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ.

**ಡಾ. ವಾಮದೇವಪ್ಪ ಹೆಚ್.ವಿ.**
ಪ್ರಾಧ್ಯಾಪಕರು
ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ,
ಅನುಭವ ಮಂಟಪ, ದಾವಣಗೆರೆ.

ದಾವಣಗೆರೆ ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ 1987 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. 'ಶೈಕ್ಷಣಿಕ ಮನೋವಿಜ್ಞಾನ', 'ಅಂಡರ್ ಅಚೀವ್‌ಮೆಂಟ್ ಇನ್ ಬಯಾಲಜಿ', 'ಶಿಕ್ಷಣದಲ್ಲಿ ಮೌಲ್ಯಮಾಪನ ಮತ್ತು ಸಂಖ್ಯಾಶಾಸ್ತ್ರ', 'ಶೈಕ್ಷಣಿಕ ಮನೋವಿಜ್ಞಾನ' ಎಂಬ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.

Digitised by Bharatavani, CIIL

**ಡಾ. ವಿಜಯ ಕುಮಾರ್ ಎಸ್.**
ಪ್ರವಾಚಕರು
ಸೋಮಾನಿ ಶಿಕ್ಷಣ ಮಹಾವಿದ್ಯಾಲಯ,
ಸರಸ್ವತಿ ಪುರಂ, ಮೈಸೂರು.

ಇವರು ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್, ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವೃತ್ತಿಗೆ ಸಂಬಂಧಿಸಿದ ಕಾರ್ಯಾಗಾರಗಳಲ್ಲಿ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿರುವುದಲ್ಲದೆ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯ ನಿರ್ವಹಿಸಿರುತ್ತಾರೆ. ಬಿ.ಎಡ್. ವಿದ್ಯಾರ್ಥಿಗಳಿಗಾಗಿ ಇತಿಹಾಸ ಮತ್ತು ಪೌರನೀತಿಯ ವಿಷಯ ಬೋಧನೆ ಹಾಗೂ ಭೂಗೋಳ ಶಾಸ್ತ್ರ ವಿಷಯ ಬೋಧನೆ ಪುಸ್ತಕಗಳನ್ನು ಬರೆದಿದ್ದಾರೆ.

**ಡಾ. ವಿಜಯಕುಮಾರಿ ಜಿ.** ಬಿ.ಎಸ್ಸಿ; ಎಂ.ಎಡ್. ಪಿಎಚ್.ಡಿ; ಪಿಜಿಡಿಹೆಚ್ಇ
ಪ್ರಾಧ್ಯಾಪಕರು
ವಿಜಯ ಶಿಕ್ಷಣ ಮಹಾವಿದ್ಯಾಲಯ(ಸಿಟಿಇ),
30ನೇ ಅಡ್ಡ ರಸ್ತೆ, 11 ನೇ ಮುಖ್ಯ ರಸ್ತೆ,
4ನೇ 'ಟಿ'ಬ್ಲಾಕ್, ಜಯನಗರ,
ಬೆಂಗಳೂರು – 560 011

ಇವರು ಬೆಂಗಳೂರಿನ ವಿಜಯಾ ಟೀಚರ್ಸ್ ಕಾಲೇಜಿನಲ್ಲಿ (CTE) ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಕಾಲ ಬೆಂಗಳೂರು ಹೈಸ್ಕೂಲಿನಲ್ಲಿ ಬೋಧಿಸಿದ ಇವರು ಕಳೆದ 23 ವರ್ಷಗಳಿಂದ ವಿಜಯಾ ಟೀಚರ್ಸ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ಸರ್ಕಾರ ನೇಮಿಸಿದ್ದ ಶಾಲಾ ಗಣಿತ ಪಠ್ಯವಸ್ತು ಸಮಿತಿಯ ಸದಸ್ಯರಾಗಿ, ಸಮಿತಿಯ ಅಧ್ಯಕ್ಷೆಯಾಗಿ, ದೆಹಲಿಯ NCERT ಪರಿಷ್ಕೃತ ಪಠ್ಯಕ್ರಮ 2005ರ ಗಣಿತ ಪಠ್ಯವಸ್ತು ಸಮಿತಿಯ ಸದಸ್ಯೆಯಾಗಿ ಕೆಲಸ ಮಾಡುತ್ತಿದ್ದಾರೆ. ಅನೇಕ ಕಾರ್ಯಾಗಾರ/ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಗಣಿತದ ವಿಡಿಯೋ ಪಾಠಗಳಿಗೆ ಸ್ಕ್ರಿಪ್ಟ್ ಬರೆದಿರುವುದಲ್ಲದೆ, ಗಣಿತ ಬೋಧನೆ ಬಗ್ಗೆ ರೇಡಿಯೋ, ಟಿ.ವಿ. ಪಾಠಗಳನ್ನು ನೀಡಿದ್ದಾರೆ. School Net India ಗೆ ಗಣಿತ ಬೋಧನೆ ಬಗ್ಗೆ ತಜ್ಞ ಸಲಹೆಗಾರರಾಗಿ ತಂತ್ರಾಂಶ ಸಾಮಗ್ರಿಗಳನ್ನು ತಯಾರಿಸಿದ್ದಾರೆ.

**ಡಾ. ವಿಜಯ ಕುಮಾರಿ ಎಸ್.ಎನ್.** ಬಿ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಶ್ರೀಮತಿಯವರು ಶಿಕ್ಷಣ ಕ್ಷೇತ್ರದಲ್ಲಿ ಪ್ರಶಿಕ್ಷಕರಾಗಿ 25 ವರ್ಷಗಳ ಸೇವೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಎಡ್. ಹಾಗೂ ಶಿಕ್ಷಣಶಾಸ್ತ್ರದ ಸ್ನಾತಕೋತ್ತರ ಹಾಗೂ ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳಲ್ಲಿ ಸಂಶೋಧನಾ ಲೇಖನಗಳನ್ನು ಮಂಡಿಸಿದ್ದಾರೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಹಲವಾರು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ತಮ್ಮ ಸಂಶೋಧನ ಪ್ರಬಂಧಕ್ಕೆ ಜಮುನಾಬಾಯಿ ಗೋವಿಂದಜೀ ಮಾಧವಜೀ ಪುರಸ್ಕಾರ ಪಡೆದಿದ್ದಾರೆ.

**ಪ್ರೊ. ವಿಜಯಲಕ್ಷ್ಮಿ ದೇಸಾಯಿ** ಬಿ.ಎಸ್ಸಿ; ಎಂ.ಎ; ಎಂ.ಎಡ್; ಎಂ.ಫಿಲ್.
ಪ್ರಾಧ್ಯಾಪಕರು
ಎಂಎಲ್‌ಎಂಎನ್ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ),
ಚೈತನ್ಯ ಭಾರತಿ, ಜ್ಯೋತಿನಗರ,
ಚಿಕ್ಕಮಗಳೂರು – 577 102

ಕಳೆದ 20 ವರ್ಷಗಳಿಂದ ಚಿಕ್ಕಮಗಳೂರಿನ ಎಂ.ಎಲ್.ಎಂ.ಎನ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ. ಶೈಕ್ಷಣಿಕ ಪುಸ್ತಕಗಳನ್ನು ರಚಿಸಿದ್ದಾರೆ. 2006 ರಲ್ಲಿ ರಾಷ್ಟ್ರ ಮಟ್ಟದಲ್ಲಿ ಚಾಣಕ್ಯ ನ್ಯಾಷನಲ್ ಎಕ್ಸಲೆನ್ಸಿ ಅವಾರ್ಡ್ ದೊರೆತಿದೆ.

**ಶ್ರೀ ವಿರೂಪಾಕ್ಷಿ** ಎಂ.ಎ; ಎಂ.ಎಡ್; ಎಂ.ಫಿಲ್.
ಅಧ್ಯಾಪಕರು
ಎಸ್‌ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು

ಶ್ರೀಯುತರು ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಣಶಾಸ್ತ್ರ ಉಪನ್ಯಾಸಕರಾಗಿ ಸೇವೆಸಲ್ಲಿಸುತ್ತಿದ್ದು 6 ವರ್ಷಗಳ ಬೋಧನಾನುಭವವನ್ನು ಪಡೆದಿದ್ದಾರೆ.

**ಶ್ರೀ ವಿಶ್ವನಾಥ ಗುಪ್ತ ಸಿ.ಪಿ.**
664, "ಸೂರ್ಯ", 3ನೇ ತಿರುವು,
I ಬ್ಲಾಕ್, ರಾಮಕೃಷ್ಣ ನಗರ,
ಮೈಸೂರು – 570 022

ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ 22 ವರ್ಷಗಳ ಕಾರ್ಯಾನುಭವ ಪಡೆದಿದ್ದಾರೆ. "ಸಾಕ್ಷರತಾ ಆಂದೋಲನದಲ್ಲಿ ತರಬೇತಿ, ಒಂದು ಅಧ್ಯಯನ" ಕ್ಕೆ ರಾಷ್ಟ್ರೀಯ ಸಾಕ್ಷರತಾ ಮಿಷನ್ ಯುನೆಸ್ಕೋ ಪ್ರಶಸ್ತಿ, ಅನೇಕ ತರಬೇತಿ ಸಾಹಿತ್ಯ ಕೃತಿಗಳ ರಚನೆ, 'ಸಾಕ್ಷರ ದಾರಿಗೆ ಸಾವಿರಹೆಜ್ಜೆ' ಇವು ಇವರ ಕೆಲ ಸಾಧನೆಗಳು. ಕೆಲವು ವರ್ಷಗಳು ಮಾನಸ ಗಂಗೋತ್ರಿ ಲಲಿತ ಕಲೆಗಳ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ ಹಾಗೂ ಮೈಸೂರಿನ ರಾಜ್ಯ ಸಂಪನ್ಮೂಲ ಕೇಂದ್ರದಲ್ಲಿ ಅಸೋಸಿಯೇಟ್ ಪ್ರೋಗ್ರಾಂ ಕೋಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

**ಶ್ರೀಮತಿ ವಿಶಾಲಾಕ್ಷಿ ಕೆ. ಕೆ.** ಎಂ.ಎ; ಎಂ.ಎಡ್; ಎಂ.ಫಿಲ್.
ಅಧ್ಯಾಪಕರು
ಎಸ್‌ಕೆಎಂಕೆ ಶಿಕ್ಷಣ ಮಹಾವಿದ್ಯಾಲಯ,
ಕುವೆಂಪುನಗರ, ಮೈಸೂರು.

ಕೇಂದ್ರೀಯ ವಿದ್ಯಾಲಯದಲ್ಲಿ ಎರಡೂವರೆ ವರ್ಷ ಶಿಕ್ಷಕಿಯಾಗಿ ಕೆಲಸ ಮಾಡಿ ಪ್ರಸ್ತುತ ಮೈಸೂರಿನ ಶ್ರೀ ಕನಕ ಗುರು ಪೀಠ ಮಹಾಸಂಸ್ಥಾನ ಕಾಗಿನೆಲೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಪ್ರೊ. ವೆಂಕಟರಮಣ ಶೆಟ್ಟಿ ಸಿ. ಜಿ.** ಬಿ. ಎಸ್ಸಿ; ಎಂ.ಎಡ್; ಡಿ.ಬಿ.ಇ; ಡಿ.ಇ.ವಿ.ಜಿ.
ನಂ.383, 14ನೇ ಮುಖ್ಯ ರಸ್ತೆ,
ಸರಸ್ವತಿ ಪುರಂ, ಮೈಸೂರು.

ಶ್ರೀಯುತರು ಶಿಕ್ಷಕರಾಗಿ, ಪ್ರಶಿಕ್ಷಕರಾಗಿ, ಶೈಕ್ಷಣಿಕ ಮೇಲ್ವಿಚಾರಕರಾಗಿ, ಸಮನ್ವಯಾಧಿಕಾರಿಯಾಗಿ, ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, SKMK ಶಿಕ್ಷಣ ಮಹಾವಿದ್ಯಾಲಯದ ಸಂಸ್ಥಾಪಕ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ.

Digitised by Bharatavani, CIIL

NCERT, DSERT ಹಾಗೂ ಭಾರತ ಸರ್ಕಾರದ EdCIL ನ ಅನೇಕ ಪ್ರಾಯೋಜನೆಗಳಲ್ಲಿ, ಕಾರ್ಯಾಗಾರಗಳಲ್ಲಿ ಮತ್ತು ಇತರ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. 20ಕ್ಕೂ ಹೆಚ್ಚು ಪಠ್ಯ ಪುಸ್ತಕಗಳನ್ನು ಬರೆದಿರುವುದಲ್ಲದೆ ಕೆಲವು ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಬರೆದಿದ್ದಾರೆ. ಶಿಕ್ಷಣಕ್ಕೆ ತಮ್ಮ ಸೇವೆಗಾಗಿ ಅನೇಕ ಪ್ರಶಸ್ತಿ/ಪುರಸ್ಕಾರಗಳನ್ನು ಪಡೆದಿದ್ದಾರೆ. ಶೈಕ್ಷಣಿಕ ಸಂಶೋಧನೆಗಾಗಿ NCERT ಯಿಂದ ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿದ್ದಾರೆ. ಆಕಾಶವಾಣಿಯ ಹಲವಾರು ಕಾರ್ಯಕ್ರಮಗಳಲ್ಲಿ ಇಂದಿಗೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

**ಡಾ. ಶರಣಮ್ಮ ಆರ್.** ಎಂ.ಎ; ಎಂ.ಎಡ್., ಪಿಎಚ್.ಡಿ.
ಅಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ.
ಮಾನಸಗಂಗೋತ್ರಿ, ಮೈಸೂರು.

ಇವರು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ, ಅನೇಕ ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ. ದೂರ ಶಿಕ್ಷಣ ಕ್ಷೇತ್ರದಲ್ಲಿ ಅನುಭವವನ್ನು ಹೊಂದಿದ್ದು, ಸ್ವಯಂ ಬೋಧನಾ ಸಾಮಗ್ರಿಗಳ ರಚನೆ, ರೇಡಿಯೋ ಪಾಠಗಳ ರಚನೆ ಹಾಗೂ ರೇಡಿಯೋ ಪಾಠಗಳನ್ನು ನೀಡುತ್ತಿದ್ದಾರೆ.

**ಡಾ. ಶಹಾಪುರ ನಾಗಪ್ಪ ಪಂಚಲಿಂಗಪ್ಪ** ಎಂ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

ಧಾರವಾಡದಲ್ಲಿ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಇವರು, ಬಿ.ಎಡ್. ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಬೋಧನಾನುಭವವನ್ನು ಪಡೆದಿದ್ದಾರೆ. ಮೈಸೂರಿನ ಶಾರದ ವಿಲಾಸ ಟೀಚರ್ಸ್ ಕಾಲೇಜಿನಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಇದುವರೆಗೆ 10 ಮಂದಿಗೆ ಪಿಹೆಚ್.ಡಿ. ಪಡೆಯಲು ಮಾರ್ಗದರ್ಶನ ನೀಡಿದ್ದಾರೆ. ವಿಶ್ವವಿದ್ಯಾನಿಲಯ ಅನುದಾನ ಆಯೋಗ, NCERT, DIET ಗಳು, ಸಂಪೂರ್ಣ ಸಾಕ್ಷರತಾ ಆಂದೋಲನ, ಅಕ್ಷರ ಫೌಂಡೇಷನ್ ಮುಂತಾದ ಸಂಸ್ಥೆಗಳ ಧನ ಸಹಾಯದಿಂದ 12 ಸಂಶೋಧನಾ ಪ್ರಾಯೋಜನೆಗಳನ್ನು ಮುಗಿಸಿದ್ದಾರೆ. 2000 ದಲ್ಲಿ NCERT ಯಿಂದ ಅತ್ಯುತ್ತಮ ಸಂಶೋಧನ ಲೇಖನ ಪ್ರಶಸ್ತಿ ಪಡೆದಿದ್ದಾರೆ. ರಾಜ್ಯ/ರಾಷ್ಟ್ರ ಮಟ್ಟದ ಅನೇಕ ವಿಚಾರ ಸಂಕಿರಣ/ಸಮ್ಮೇಳನ/ಕಾರ್ಯಾಗಾರಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ. ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ 10 ಪುಸ್ತಕಗಳನ್ನು ಪ್ರಕಟಿಸಿರುವುದಲ್ಲದೆ, ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಂ.ಇಡಿ. ಕೋರ್ಸ್‌ಗೆ ಸಿದ್ಧಪಾಠಗಳನ್ನು ಬರೆದಿದ್ದಾರೆ. 'Scientific Aptitude Test', 'Concept Mapping Test' ಎಂಬ ಪರೀಕ್ಷಣಗಳನ್ನು ರೂಪಿಸಿದ್ದಾರೆ.

**ಡಾ. ಶರದ್ ಸುರೆ** ಎಂ.ಎಸ್ಸಿ., ಎಂ.ಎಡ್., ಪಿಎಚ್.ಡಿ.
247, 4ನೇ ಕ್ರಾಸ್,
ನವಿಲು ರೋಡ್, ಕುವೆಂಪುನಗರ,
ಮೈಸೂರು – 23

ಶರದ್ ಸುರೆ ಗಣಿತ ಹಾಗು ಶಿಕ್ಷಣಶಾಸ್ತ್ರದಲ್ಲಿ ಸ್ನಾತಕ ಪದವೀಧರ. ಗಣಿತ ಶಿಕ್ಷಣ, ಶಿಕ್ಷಕ ಶಿಕ್ಷಣ, ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಇವರ ಪರಿಣತಿಯ ಕ್ಷೇತ್ರಗಳು. ಶಿಕ್ಷಕ ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ವಿಷಯದಲ್ಲಿ ಮಂಡಿಸಿರುವ ತಮ್ಮ ಪ್ರೌಢಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ. ಗಣಿತ ಶಿಕ್ಷಣ, ಶೈಕ್ಷಣಿಕ ಮನೋವಿಜ್ಞಾನ ಹಾಗು ಶೈಕ್ಷಣಿಕ ಮೌಲ್ಯಮಾಪನ ವಿಷಯಗಳನ್ನು ಬೋಧಿಸಿರುವ ಇವರು ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂನ ಸ್ಕೂಲ್ ಆಫ್ ಎಜುಕೇಷನ್‌ನಲ್ಲಿ ಆರು ವರ್ಷಗಳ ಕಾಲ ಉಪನ್ಯಾಸಕರಾಗಿದ್ದರು. ಪ್ರಸ್ತುತ ಇವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಡಾ. ಶಶಿಕಲ ಎ.** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

ಮೂರು ದಶಕಗಳಿಂದ ಮಂಗಳೂರಿನ ಸೇಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪನ ಮಾಡುತ್ತಿದ್ದಾರೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಸಂಪಾದಿಸಿದ್ದಾರೆ ಮತ್ತು ಪ್ರಕಟಿಸಿದ್ದಾರೆ. ಹಲವು ಸಂಸ್ಥೆಗಳ ಸಂಶೋಧನ ಯೋಜನೆಗಳನ್ನು ಕೈಗೊಂಡಿದ್ದಾರೆ. ಕರ್ನಾಟಕ ರಾಜ್ಯ ಡಿ.ಎಡ್ ಪಠ್ಯಕ್ರಮ ರಚನಾ ಸಮಿತಿ ಸದಸ್ಯರಲ್ಲಿ ಒಬ್ಬರಾಗಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

**ಶ್ರೀ ಶಶಿಧರ್ ಎಸ್.ಎಲ್.** ಎಂ.ಎಸ್ಸಿ; ಎಂ.ಎಡ್.
ಮನೆ ನಂ. 409, ಆಂಜನೇಯ ದೇವಸ್ಥಾನ ಹಿಂಬಾಗ,
ಹೇರೋಹಳ್ಳಿ, ವಿಶ್ವನೀಡಂ ಅಂಚೆ,
ಬೆಂಗಳೂರು – 560 091

ಶ್ರೀಯುತರು ಬೆಂಗಳೂರಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ ಸಂಶೋಧನ ಕಾರ್ಯದಲ್ಲಿ ತೊಡಗಿದ್ದಾರೆ.

**ಶ್ರೀ ಶಿವಕುಮಾರ್ ಎಸ್.** ಎಂ.ಎ; ಎಂ.ಎಡ್; ಎಂ.ಫಿಲ್.
ಉಪನ್ಯಾಸಕರು
ರಾಮಕೃಷ್ಣ ಆಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣ ಸಂಸ್ಥೆ
ಯಾದವಗಿರಿ, ಮೈಸೂರು.

ಶ್ರೀಯುತರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣಶಾಸ್ತ್ರ ಪ್ರವಾಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸದ್ಯದಲ್ಲಿ ಶ್ರೀ ರಾಮಕೃಷ್ಣ ಮಠಕ್ಕೆ ಸೇರಿದ ಶೈಕ್ಷಣಿಕ ಸಂಸ್ಥೆಗಳ ಬಗ್ಗೆ ಪಿಹೆಚ್.ಡಿ. ಪದವಿಗಾಗಿ ಸಂಶೋಧನೆಯಲ್ಲಿ ನಿರತರಾಗಿದ್ದಾರೆ.

Digitised by Bharatavani, CIIL

**ಡಾ. ಶಿವಕುಮಾರ ಕಬ್ಬೂರ** ಬಿ.ಎಸ್ಸಿ; ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯ, ಹರಿಹರ.

ಹರಿಹರದಲ್ಲಿರುವ ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿಶಿಷ್ಟ ಮಕ್ಕಳ ಶಿಕ್ಷಣ, ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ, ಅಧ್ಯಾಪಕ ಶಿಕ್ಷಣ ಇವರ ಪರಿಣತಿಯ ಕ್ಷೇತ್ರಗಳಾಗಿವೆ. ದಾವಣಗೆರೆ ಬಿಇಎ ಕಾಲೇಜು ಮತ್ತು ಹರಿಹರದ ಎಸ್‌ಜೆವಿಪಿ ಸ್ವಾಯತ್ತ ಕಾಲೇಜಿನ ಸ್ನಾತಕೋತ್ತರ ವಿಭಾಗಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿರುವುದಲ್ಲದೆ, ಸಂಪನ್ಮೂಲ ವ್ಯಕ್ತಿಯಾಗಿಯೂ ಕೆಲಸ ಮಾಡಿದ್ದಾರೆ. ಎನ್‌ಸಿಟಿಇ ನಿರೀಕ್ಷಣ ತಂಡದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

**ಡಾ. ಶಿವಶಂಕರ ಹೆಚ್. ವಿ.** ಬಿ.ಎಸ್ಸಿ; ಎಂ.ಎಡ್; ಎಂ.ಎ. (ಸಮಾಜ ಶಾಸ್ತ್ರ), ಪಿಎಚ್.ಡಿ.
ಪ್ರಾಂಶುಪಾಲರು,
ನೂತನ್ ಶಿಕ್ಷಣ ಮಹಾವಿದ್ಯಾಲಯ,
ಎಲ್‌ಐಸಿ ಕಾಲೋನಿ, ದಾವಣಗೆರೆ.

ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯು ನಡೆಸುತ್ತಿರುವ ದಾವಣಗೆರೆಯಲ್ಲಿರುವ ಮಾಕನೂರು ಮಲ್ಲೇಶಪ್ಪ (M.M. College of Education) ಶಿಕ್ಷಣ ಮಹಾವಿದ್ಯಾಲಯದಲ್ಲಿ 28 ವರ್ಷಗಳ ಕಾಲ ಬೋಧನೆಯ ಅನುಭವವನ್ನು ಮತ್ತು ಪ್ರಾಂಶುಪಾಲರಾಗಿ 6 ವರ್ಷಗಳ ಆಡಳಿತ ಅನುಭವವನ್ನು ಪಡೆದು ನಿವೃತ್ತರಾಗಿದ್ದಾರೆ. ಸದ್ಯದಲ್ಲಿ ದಾವಣಗೆರೆಯ ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿದ್ದಾರೆ. ಹಲವಾರು ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿದ್ದರು. ಇವರ ಮಾರ್ಗದರ್ಶನದಲ್ಲಿ 8 ಮಂದಿ ಪಿಹೆಚ್.ಡಿ. ಪಡೆದಿದ್ದಾರೆ. 'ಶೈಕ್ಷಣಿಕ ಸಮಸ್ಯೆಗಳು', 'ಶಿಕ್ಷಣದಲ್ಲಿ ಮೌಲ್ಯಮಾಪನ' ಮುಂತಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

**ಪ್ರೊ. ಶಿವಲಿಂಗಪ್ಪ ಎಸ್.ಜಿ.**
ಪ್ರಾಂಶುಪಾಲರು
ಬಿಇಎ ಶಿಕ್ಷಣ ಮಹಾವಿದ್ಯಾಲಯ
ನಿಜಲಿಂಗಪ್ಪ ಬಡಾವಣೆ. 2ನೇ ಮೇನ್,
11ನೇ ಕ್ರಾಸ್, ದಾವಣಗೆರೆ – 577 004

ಇವರು ದಾವಣಗೆರೆಯ ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ (ಬಿ.ಇ.ಎ.)ದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸ್ನಾತಕೋತ್ತರ ಶಿಕ್ಷಣ ಕೇಂದ್ರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನ ಅಧ್ಯಯನ ಕೇಂದ್ರದ ಎಂ.ಎಡ್. ವಿಭಾಗದ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಡಾ. ಶೀಲಾ ಜಿ.** ಎಂ.ಎಸ್ಸಿ; ಎಂ.ಎಡ್; ಪಿಜಿಡಿಹೆಚ್‌ಇ; ಪಿಎಚ್.ಡಿ.
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಇವರು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ, ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ.

**ಪ್ರೊ. ಶ್ಯಾಮಲಾದೇವಿ ಕೆ.** ಎಂ.ಎ; ಎಂ.ಎಡ್; ಪಿ.ಜಿ.ಡಿ.ಹೆಚ್.ಇ.
ಪ್ರವಾಚಕರು
ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ,
ಕರಾಮುವಿ, ಮಾನಸಗಂಗೋತ್ರಿ, ಮೈಸೂರು.

ಪ್ರೌಢಶಾಲೆಯಲ್ಲಿ ವೃತ್ತಿ ಜೀವನ ಆರಂಭಿಸಿದ ಇವರು 1994ರಿಂದ ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೈಸೂರು ಆಕಾಶವಾಣಿಯ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

**ಡಾ. ಶೈಲಜಾ ಹೆಚ್.ಎಮ್.**
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ,, ಕರ್ನಾಟಕ ಕಾಲೇಜು,
ಕರ್ನಾಟಕ ವಿಶ್ವವಿದ್ಯಾನಿಲಯ,
ರೊಡ್ಡ ರಸ್ತೆ, ಧಾರವಾಡ.

ಡಾ. ಹೆಚ್. ಎಮ್. ಶೈಲಜಾ ಅವರು ಪ್ರಸ್ತುತ ಸ್ನಾತಕೋತ್ತರ ಶಿಕ್ಷಣ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿ ಪ್ರವಾಚಕರಾಗಿ ಕೆಲಸ ಮಾಡುತ್ತಿದ್ದು ವಿವಿಧ ವಿಷಯಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ದೇಶ ವಿದೇಶಗಳಲ್ಲಿ ಅನೇಕ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ವಿಷಯ ಮಂಡಿಸಿದ್ದಾರೆ. ಅವರ ಅನೇಕ ಸಂಶೋಧನಾ ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಗೊಂಡಿವೆ. ಒಂಬತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಮಾರ್ಗದರ್ಶನ ನೀಡಿದ್ದಾರೆ. ಪ್ರಸ್ತುತ ಅನೇಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

**ಡಾ. ಶೈಲಜಾ ಪಿ. ಶಾನ್‌ಭಾಗ್** ಎಂ.ಎ; ಎಂ.ಎಡ್; ಪಿಎಚ್.ಡಿ.
ಅಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ,
ಮಾನಸಗಂಗೋತ್ರಿ, ಮೈಸೂರು.

14 ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವ ಶ್ರೀಮತಿಯವರು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ.ರಾ.ಮು.ವಿ.ಯ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಬರೆದಿದ್ದಾರೆ.

**ಡಾ. ಶ್ಯಾಮಲ ಹೆಚ್.ಪಿ.** ಬಿ.ಎಸ್ಸಿ; ಎಂ.ಎಸ್ಸಿ; ಎಂ.ಎಡ್.
2897, ಪಂಪಾಪತಿ ರಸ್ತೆ, 1ನೇ ಕ್ರಾಸ್,
ಸರಸ್ವತಿ ಪುರಂ, ಮೈಸೂರು.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಡೆಮಾನ್‌ಸ್ಟ್ರೇಷನ್ ಶಾಲೆಯಲ್ಲಿ ಗಣಿತಶಾಸ್ತ್ರ ಅಧ್ಯಾಪಕಿಯಾಗಿ ನಂತರ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕಿಯಾಗಿದ್ದು ನಂತರ ನವೋದಯ ವಿದ್ಯಾ ಸಮಿತಿಯ ಸೇರಿಕೊಂಡು ಹಾಸನ ಮತ್ತು ಫರೀದಾಬಾದ್‌ಗಳಲ್ಲಿ ನವೋದಯ ಶಾಲೆಗಳಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ನವೋದಯ ವಿದ್ಯಾ ಸಮಿತಿಯ ಅಸಿಸ್ಟೆಂಟ್ ಮತ್ತು ಡೆಪ್ಯೂಟಿ ಕಮೀಷನರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

Digitised by Bharatavani, CIIL

**ಡಾ. ಶ್ರೀಧರ್ ವೈ. ಎನ್.** ಬಿ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಡಾ. ವೈ. ಎನ್. ಶ್ರೀಧರ್ 1974 ರಲ್ಲಿ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಅಧ್ಯಾತ್ಮಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ತಮ್ಮ ಸೇವೆಯನ್ನು ಆರಂಭಿಸಿ, ಕ್ರಮೇಣ ಆ ಸಂಸ್ಥೆಯ ಪ್ರಾಂಶುಪಾಲರಾಗಿ 10 ವರ್ಷಗಳಕಾಲ ಕಾರ್ಯನಿರ್ವಹಿಸಿದರು. 1999ರಲ್ಲಿ ಮೈಸೂರಿನ ಮಾನಸಗಂಗೋತ್ರಿಯ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ರೀಡರ್ ಆಗಿ ಸೇರಿ ಈಗ ಪ್ರಾಧ್ಯಾಪಕರಾಗಿದ್ದಾರೆ. ನೈತಿಕ ಶಿಕ್ಷಣ ಕ್ಷೇತ್ರದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಶಿಕ್ಷಣಶಾಸ್ತ್ರ ವಿಭಾಗದ ಅಧ್ಯಕ್ಷರಾಗಿ, ಸೆನೆಟ್ ಹಾಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇದುವರೆಗೆ 20ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿರುವ ಇವರ ಮಾರ್ಗದರ್ಶನದಲ್ಲಿ ಹಲವು ಮಂದಿ ಸಂಶೋಧನೆ ಮಾಡುತ್ತಿದ್ದಾರೆ.

**ಡಾ. ಶ್ರೀನಿವಾಸನ್ ಎ.** ಬಿ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೈಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ,
ಜಯಲಕ್ಷ್ಮಿ ಪುರಂ, ಮೈಸೂರು.

ಇವರು 30 ವರ್ಷಗಳ ಬೋಧನೆಯ ಅನುಭವ ಹೊಂದಿದ್ದು ಮೈಸೂರಿನ ಸೇಂಟ್ ಜೋಸೆಫ್ ಶಿಕ್ಷಣ ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. 'ಕಂಪ್ಯೂಟರ್ ಶಿಕ್ಷಣ' ಪುಸ್ತಕದ ಲೇಖಕರು. ಡಿ.ಎಡ್. ಪಠ್ಯ ಪುಸ್ತಕ ಹಾಗೂ ಡಿ.ಎಡ್. ಶಿಕ್ಷಕ ತರಬೇತಿ ಸಾಹಿತ್ಯ ಕೈಪಿಡಿ ಇವುಗಳ ರಚನಾ ಸಮಿತಿ ಸದಸ್ಯರು.

**ಡಾ. ಶ್ರೀಲತಾ ಆರ್. ಎನ್.** ಎಂ. ಮ್ಯೂಸಿಕ್, ಪಿಎಚ್.ಡಿ.
ಪ್ರಾಧ್ಯಾಪಕರು
ಲಲಿತ ಕಲೆಗಳ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು.

ಪ್ರೊ. ಆರ್. ಎನ್. ಶ್ರೀಲತಾ ಅವರು ರುದ್ರಪಟ್ಟಣ ಸಂಗೀತ ಪರಂಪರೆಗೆ ಸೇರಿ, ಸಂಗೀತ ಕ್ಷೇತ್ರದಲ್ಲಿರುವ ಏಕೈಕ ಮಹಿಳೆ. ಹಾಗೆಯೇ ಸಂಗೀತವನ್ನು ತಮ್ಮ ತಂದೆ ಮತ್ತು ಗುರು ವಿದ್ವಾನ್ ಆರ್.ಕೆ. ನಾರಾಯಣ ಸ್ವಾಮಿಯವರಲ್ಲಿ ಅಭ್ಯಾಸ ಮಾಡಿದರು. ನಂತರ ಅಣ್ಣ ವಿದ್ವಾನ್ ಆರ್. ಎನ್. ತ್ಯಾಗರಾಜನ್ ಅವರಲ್ಲಿಯೂ ಮುಂದುವರಿಸಿದರು. ಸುಮಾರು 45 ವರ್ಷಗಳಿಂದ ಸಂಗೀತ ಶಿಕ್ಷಣವನ್ನು ನೀಡುತ್ತಾ, ದೇಶ ವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸುತ್ತಾ ಬಂದಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನದ 'ಎ' ಗ್ರೇಡ್ ಕಲಾವಿದೆ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥರಾಗಿದ್ದಾರೆ.

**ಶ್ರೀ ಸತೀಶ್ ಹೆಚ್.ಎಲ್.** ಎಂ.ಎ; ಎಂ.ಎಡ್; ಪಿ.ಜಿ.ಡಿಪ್ಲೋಮ
ಅಧ್ಯಾಪಕರು
ಡಿ.ಎಂ.ಎಸ್. ಶಾಲೆ, ಪ್ರಾದೇಶಿಕ ಶಿಕ್ಷಣ ಸಂಸ್ಥೆ,
ಮೈಸೂರು.

ಇವರು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಗೆ ಸೇರಿದ ಡೆಮಾನ್‌ಸ್ಟ್ರೇಶನ್ ಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ 30 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. 1000ಕ್ಕೂ ಹೆಚ್ಚು ಶಿಕ್ಷಕ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ವಿಜ್ಞಾನ, ಶಿಕ್ಷಣ ಮತ್ತು ಇತರ ಸಾಮಾಜಿಕ ವಿಷಯಗಳನ್ನು ಕುರಿತು ಇವರು ಬರೆದಿರುವ ಸುಮಾರು 60 ಲೇಖನಗಳು ಪ್ರಕಟಿತವಾಗಿವೆ.

**ಡಾ. ಸವಿತಾ ಪಾಂಡೆ ಎಂ.** ಎಂ.ಎ; ಎಂ.ಎಡ್; ಪಿಜಿಡಿಹೆಚ್ಇ, ಪಿಎಚ್.ಡಿ.
ಪ್ರಾಂಶುಪಾಲರು
ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ,
ಮೈಸೂರು.

ಇವರು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ Junior Research Fellow ಆಗಿ ಕಾರ್ಯನಿರ್ವಹಿಸಿ ದೃಷ್ಟಿ ಸವಾಲುಳ್ಳ ಮಕ್ಕಳ ಶಿಕ್ಷಣದ ಬಗ್ಗೆ ಪಿಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. ಮೈಸೂರಿನ ಕಾಗಿನೆಲೆ ಬಿ.ಎಡ್. ಕಾಲೇಜಿನಲ್ಲಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕಿಯಾಗಿಯೂ, ಕಾಗಿನೆಲೆ ಬಿ.ಎಡ್. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿಯೂ ಜೆ.ಎಸ್.ಎಸ್. ಸ್ನಾತಕೋತ್ತರ ಎಂ.ಎಡ್. ವಿಭಾಗದಲ್ಲಿ ರೀಡರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಮೈಸೂರಿನ ಛಾಯಾದೇವಿ ಬಿ.ಎಡ್. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಿ.ಎಡ್. ಮತ್ತು ಎಂ.ಎಡ್. ಸಿದ್ಧಪಾಠಗಳನ್ನು ಬರೆದಿರುತ್ತಾರೆ. ರೇಡಿಯೋ ಪಾಠಗಳನ್ನು ಕೊಟ್ಟಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ/ಕಾರ್ಯಾಗಾರಗಳಲ್ಲಿ ಲೇಖನ ಮಂಡಿಸಿರುವುದಲ್ಲದೆ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

**ಸಿಸ್ಟರ್ ಮರಿಯಾ ಮಾರ್ಟಿಲ್ ಎ.ಸಿ.**
ಪ್ರಾಧ್ಯಾಪಕರು
ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳೂರು.

ಇವರು ಮಂಗಳೂರಿನ ಸೈಂಟ್ ಅನ್ನೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಿ.ಇಡಿ. ತರಗತಿಗಳಿಗೆ 10 ವರ್ಷಗಳು ಮತ್ತು ಎಂ.ಎಡ್. ತರಗತಿಗಳಿಗೆ 5 ವರ್ಷಗಳ ಬೋಧನಾನುಭವ ಇವರಿಗಿದೆ. ಮೌಲ್ಯ ಶಿಕ್ಷಣದಲ್ಲಿ ವಿಶೇಷ ಪರಿಣತಿ ಪಡೆದಿದ್ದಾರೆ.

**ಡಾ. ಸುನೀತಾ ಸಿ.ಎನ್.** ಎಂ.ಎ.(ಇಂಗ್ಲೀಷ್), ಎಂ.ಎಸ್ಸಿ.(ಮನಃಶಾಸ್ತ್ರ), ಪಿಎಚ್.ಡಿ.
ಪ್ರವಾಚಕರು
ಸೋಮಾನಿ ಶಿಕ್ಷಣ ಮಹಾವಿದ್ಯಾಲಯ,
ಸರಸ್ವತಿ ಪುರಂ. ಮೈಸೂರು

ಇವರು ಪ್ರಸ್ತುತ ಮೈಸೂರಿನಲ್ಲಿರುವ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪರಿಸರ ಶಿಕ್ಷಣ ವಿಷಯದಲ್ಲಿ ಪಿಹೆಚ್.ಡಿ ಪದವಿಯನ್ನು ಪಡೆದಿರುತ್ತಾರೆ. ಡಿ.ಎಡ್‌ನ 'ಆಧುನಿಕ ಶಿಕ್ಷಣದ ಒಲವುಗಳು' – ಎಂಬ ಪಠ್ಯಪುಸ್ತಕದ ಸಹ ಲೇಖಕರಾಗಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ಬಿ.ಎಡ್ ಪದವಿಗಾಗಿ ಶೈಕ್ಷಣಿಕ ತಂತ್ರಜ್ಞಾನ ಎಂಬ ಪುಸ್ತಕದ ಕರ್ತೃವೂ ಆಗಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿನ ಹಲವಾರು ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.

Digitised by Bharatavani, CIIL

**ಶ್ರೀಮತಿ ಸುಮಿತ್ರಮ್ಮ** ಎಂ.ಎಸ್ಸಿ; ಎಂ.ಎಡ್.
ಪ್ರವಾಚಕರು
ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ,
ಕೆ. ಎಂ. ಪುರಂ, ಮೈಸೂರು.

ಮೈಸೂರಿನ ಕಾಗಿನೆಲೆ ಬಿ.ಎಡ್. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆ ಪ್ರಾರಂಭಿಸಿದ ಇವರು ಪ್ರಸ್ತುತ ಮೈಸೂರಿನ ಶಾರದಾ ವಿಲಾಸ ಟೀಚರ್ಸ್ ಕಾಲೇಜಿನಲ್ಲಿ ಶಿಕ್ಷಣಶಾಸ್ತ್ರದ ಅಧ್ಯಾಪಕಿಯಾಗಿ ಕಳೆದ 6 ವರ್ಷಗಳಿಂದ ರಸಾಯನಶಾಸ್ತ್ರ ಬೋಧನಾ ವಿಧಾನಗಳನ್ನು, ಶೈಕ್ಷಣಿಕ ಮನೋವಿಜ್ಞಾನವನ್ನು ಬೋಧಿಸುತ್ತಿದ್ದಾರೆ.

**ಡಾ. ಸುರೇಶ್ ಎನ್.ಎಸ್.** ಎಂ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ಉಪನ್ಯಾಸಕರು
ಜೆ. ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ
ಸಕಲೇಶಪುರ, ಹಾಸನ(ಜಿ)

ಇವರು ಸಕಲೇಶಪುರದ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಕರಾಗಿಯೂ, ಪ್ರಾಂಶುಪಾಲರಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ. 2004 ರಿಂದ 2008 ರವರೆಗೆ ಇವರು ಬೆಂಗಳೂರಿನ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿಯೂ ಪ್ರಾಂಶುಪಾಲರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಈಗ ಸಕಲೇಶಪುರದ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.

**ಡಾ. ಸುರೇಶ್ ಎಸ್.** ಎಂ.ಎ., ಎಂ.ಎಡ್., ಎಂ.ಎ. (ಮನೋವಿಜ್ಞಾನ), ಪಿಎಚ್.ಡಿ., ಪಿಜಿಡಿಹೆಚ್ಇ
ಅಧ್ಯಾಪಕರು,
ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ,
ಕೆ. ಎಂ. ಪುರಂ, ಮೈಸೂರು.

ಡಾ. ಎಸ್. ಸುರೇಶ್ ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ 18 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣದ ವಿವಿಧ ಕ್ಷೇತ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

**ಡಾ. ಸುರೇಶ ಎಸ್. ಸಮ್ಮಸಗಿ** ಎಂ. ಎ; ಎಂ.ಎಡ್; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾನಿಲಯ ಶಿಕ್ಷಣ ಮಹಾವಿದ್ಯಾಲಯ,
ಧಾರವಾಡ – 01

ಇವರು ಕಾರವಾರ ಜಿಲ್ಲೆಯ ಕುಮಟಾ ತಾಲ್ಲೋಕಿನ ಬಾಡ-ಕಾಗಾಲದ ಜನತಾ ವಿಶ್ವವಿದ್ಯಾಲಯದಲ್ಲಿ 1995ರಿಂದ 1996 ರವರೆಗೆ ಸಹ ಶಿಕ್ಷಕರಾಗಿಯೂ 1996 ರಿಂದ 2003 ರವರೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಪಬ್ಲಿಕ್ ಸ್ಕೂಲಿನಲ್ಲಿ ಸಹ ಶಿಕ್ಷಕರಾಗಿಯೂ ಕೆಲಸ ಮಾಡಿದ್ದಾರೆ. ಈಗ ಕರ್ನಾಟಕ ವಿಶ್ವವಿದ್ಯಾನಿಲಯದ ಶಿಕ್ಷಣ ಮಹಾವಿದ್ಯಾಲಯದಲ್ಲಿ 2003ರಿಂದ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಡಾ. ಸುರೇಶ್ ಪಿ.ಎಸ್.** ಎಂ.ಎ. (ಭೂಗೋಳ), ಎಂ.ಎ.(ಇತಿಹಾಸ), ಎಂ.ಎಡ್; ಎಂ.ಫಿಲ್(ಶಿಕ್ಷಣ), ಪಿಎಚ್.ಡಿ.
ಪ್ರಾಧ್ಯಾಪಕರು,
ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ
ಕೆ. ಎಂ. ಪುರಂ, ಮೈಸೂರು.

ಡಾ. ಪಿ.ಎಸ್. ಸುರೇಶ್‌ರವರು ಪ್ರಾಧ್ಯಾಪಕರಾಗಿ ಮೈಸೂರಿನ ಶಾರದಾವಿಲಾಸ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಎರಡು ದಶಕಗಳಿಂದ ಬೋಧನೆ ಮಾಡುತ್ತಿದ್ದಾರೆ. ಸುರೇಶ್ ರವರು ಸಹ ಲೇಖಕರೊಂದಿಗೆ 'ಪ್ರೌಢಶಾಲಾ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು', 'ಭೂಗೋಳಶಾಸ್ತ್ರ ವಿಷಯ ಬೋಧನೆ', 'ರಾಷ್ಟ್ರೀಯ ಕಾಳಜಿ ಮತ್ತು ಶಿಕ್ಷಣ', ಶೈಕ್ಷಣಿಕ ಪ್ರಕ್ರಿಯೆ ಮತ್ತು ಶಾಲಾ ನಿರ್ವಹಣೆ', ಪುಸ್ತಕಗಳನ್ನು ರಚಿಸಿದ್ದಾರೆ.

**ಶ್ರೀಮತಿ ಸುನಂದಾ ಆರ್. ಮದನಕರ**
ಸಹ ಶಿಕ್ಷಕಿ
ಸರ್ಕಾರಿ ಪ್ರೌಢಶಾಲೆ
ಸಂಗೊಳಗಿ,
ಬೀಧರ್ (ತಾ) & (ಜಿ)

ಇವರು 14 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಕಥೆ, ಕವನ ಬರೆಯುವದು ಇವರ ಮುಖ್ಯ ಹವ್ಯಾಸಗಳು. ಪ್ರಸ್ತುತ ಇವರು ಸರಕಾರಿ ಪ್ರೌಢಶಾಲೆ, ಸಂಗೊಳಗಿ, ಬೀದರ ಇಲ್ಲಿ ಸಮಾಜ ವಿಜ್ಞಾನ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀಮತಿ ಸುರ್ಮ ಎಸ್.** ಎಂ.ಎಸ್ಸಿ. ಎಂ.ಫಿಲ್, ಪಿ.ಜಿ.ಡಿ.ಸಿ.ಪಿ.
ಅಧ್ಯಾಪಕರು
ಮನೋವಿಜ್ಞಾನ ವಿಭಾಗ, ಕರಾಮುವಿ
ಮಾನಸಗಂಗೋತ್ರಿ, ಮೈಸೂರು – 06

ಶ್ರೀಮತಿ. ಎಸ್ ಸುರ್ಮರವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮನೋವಿಜ್ಞಾನ ಅಧ್ಯಯನ ವಿಭಾಗದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು, ನೈದಾನಿಕ ಮನೋವಿಜ್ಞಾನ ವಿಭಾಗದಲ್ಲಿ ಸಂಶೋದನಾ ಸಹಾಯಕರಾಗಿ ಒಂದು ವರ್ಷಕಾಲ ಸೇವೆ ಸಲ್ಲಿಸಿರುತ್ತಾರೆ. ಮೈಸೂರಿನ ವಿವಿಧ ನರ್ಸಿಂಗ್ ಕಾಲೇಜುಗಳಲ್ಲಿ ಆರು ವರ್ಷಗಳ ಕಾಲ ಪದವಿ ಮತ್ತು ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಮನೋವಿಜ್ಞಾನ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಮನೋವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಪ್ರಮುಖ ದೈನಂದಿನ ದಿನ ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಆಕಾಶವಾಣಿ ಮತ್ತು ಜ್ಞಾನವಾಣಿ ವಾಹಿನಿಗಳಲ್ಲಿ ಮನೋವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿರುತ್ತಾರೆ. ವಿದ್ಯಾರ್ಥಿಗಳಿಗೆ ಆಪ್ತ ಸಲಹೆ (ಸಮಾಲೋಚನ) ಸೇವೆಯನ್ನು ನೀಡುತ್ತಿದ್ದಾರೆ.

**ಡಾ. ಸೀತಾರಾಮ್ ಎ.ಆರ್.** ಎಂ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ನಿವೃತ್ತ ಪ್ರಾಂಶುಪಾಲರು (RIMSE)
208, ದೀಪದರ್ಶಿನಿ, 2ನೇ ಮೇನ್,
CFTRI ಲೇಔಟ್, ಬೋಗಾಧಿ 2ನೇ ಹಂತ,
ಮೈಸೂರು –26

ಪ್ರಸ್ತುತ ಇವರು ತಮಿಳುನಾಡಿನ ಉಳಂದೂರ್ ಪೇಟೆಯಲ್ಲಿರುವ ಶ್ರೀ ಶಾರದಾ ಕಾಲೇಜ್ ಆಫ್ ಎಜುಕೇಷನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಮೊದಲು ಮೈಸೂರಿನ ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ

Digitised by Bharatavani, CIIL

ಮಹಾವಿದ್ಯಾಲಯದಲ್ಲಿ ದೀರ್ಘಕಾಲ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಮೈಸೂರಿನಲ್ಲಿ ಪರಮಹಂಸ ಯೋಗ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಿ ಅದರ ನಿರ್ದೇಶಕರಾಗಿ ಯೋಗ ಶಿಕ್ಷಣ/ಚಿಕಿತ್ಸಾ ಸೇವೆಗಳನ್ನು ಒದಗಿಸುತ್ತಿದ್ದಾರೆ. ಒತ್ತಡ ನಿರ್ವಹಣೆ, ಯೋಗ ಚಿಕಿತ್ಸೆ ಹಾಗೂ ಧ್ಯಾನ, ಜೀವನ ಕೌಶಲಗಳು, ವ್ಯಕ್ತಿತ್ವ ವಿಕಾಸ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ್ದಾರೆ. ಯೋಗ/ಯೋಗ ಚಿಕಿತ್ಸೆಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು/ವಿಸಿಡಿಗಳನ್ನು ಹೊರತಂದಿದ್ದಾರೆ. ಅನೇಕ ವಿಶ್ವವಿದ್ಯಾನಿಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ಕರ್ನಾಟಕ ಸರ್ಕಾರದ **'ಯೋಗಶ್ರೀ'** ಪ್ರಶಸ್ತಿ, **'ಯೋಗಾಚಾರ್ಯ'** ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಭಾಗವಹಿಸಿ ಯೋಗ ಶಿಕ್ಷಣಕ್ಕೆ ಸಂಬಂಧಿಸಿದಂತೆ ಲೇಖನಗಳನ್ನು ಮಂಡಿಸಿ, ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ರಾಷ್ಟ್ರ/ರಾಜ್ಯ ಮಟ್ಟದ ಅನೇಕ ಗಣ್ಯ ಮಾನ್ಯ ವ್ಯಕ್ತಿಗಳು ಇವರ ಯೋಗ ಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಿ ಫಲ ಪಡೆದಿದ್ದಾರೆ.

**ಪ್ರೊ. ಸೋಮಶೇಖರ ಎಸ್. ಹೂಗಾರ್** ಎಂ.ಎ; ಎಂ.ಎಡ್.
ಪ್ರಾಧ್ಯಾಪಕರು
ಜೆ. ಎಸ್. ಎಸ್. ಶಿಕ್ಷಣ ಮಹಾವಿದ್ಯಾಲಯ
ವಿಧ್ಯಾಗಿರಿ, ಧಾರವಾಡ.

ಧಾರವಾಡದ ಜೆ.ಎಸ್.ಎಸ್. ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ ಏಳು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುತ್ತಿದ್ದಾರೆ.

**ಪ್ರೊ. ಸೋಮಶೇಖರಯ್ಯ ಜಿ.ಎಂ.**
ಪ್ರಾಧ್ಯಾಪಕರು
ಮೌಲಾನಾ ಆಜಾದ್ ಶಿಕ್ಷಣ ಮಹಾವಿದ್ಯಾಲಯ
ಜೆಎಸ್ಎಸ್ ಬಡಾವಣೆ, ಸಿದ್ದಾರ್ಥ ನಗರ, ಮೈಸೂರು.

1967ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಪ್ರಾರಂಭಿಸಿ ವಿವಿಧ ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡಿ 1972 ರಲ್ಲಿ ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಯ್ಕೆಯಾಗಿ ಸಹಾಯಕ ಶಿಕ್ಷಣಾಧಿಕಾರಿಯಾಗಿ ಕೆಲಸ ಪ್ರಾರಂಭಿಸಿ ಮೈಸೂರು ವಿಭಾಗದ ಪ್ರಭಾರಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. 26 ವರ್ಷಗಳ ಕಾಲ ಸರ್ಕಾರಿ ಬಿ.ಇಡಿ. ಕಾಲೇಜುಗಳಲ್ಲೇ ಸೇವೆ ಸಲ್ಲಿಸಿದ್ದು 2003ರಲ್ಲಿ ನಿವೃತ್ತಿ ಹೊಂದಿದ್ದಾರೆ.

**ಪ್ರೊ. ಹನುಮಂತರಾವ್ ಡಿ.** ಎಂ.ಎ; ಎಂ.ಎಡ್.
ನಂ. 03, 7ನೇ ಅಡ್ಡ ರಸ್ತೆ,
ರಾಜೇಂದ್ರ ನಗರ, ಶಿವಮೊಗ್ಗ.

1957ರಿಂದ ಬಳ್ಳಾರಿಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಶಿಕ್ಷಕ. 1963 ರಿಂದ 1992ರ ವರೆಗೆ ಶಿವಮೊಗ್ಗದ ನ್ಯಾಷನಲ್ ಬಿ.ಎಡ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ನಿವೃತ್ತರಾಗಿದ್ದಾರೆ. ಅನೌಪಚಾರಿಕ ಶಿಕ್ಷಣದ (ಕನ್ನಡ ಮಾಧ್ಯಮ) ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯ. ಡಿ.ಎಸ್.ಇ.ಆರ್.ಟಿ. ತಯಾರಿಸಿದ ಪ್ರಾಥಮಿಕ ಹಂತದ ಪರಿಸರ ಅಧ್ಯಯನ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ.

**ಡಾ. ಹೇಮಮಾಲಿನಿ ಹೆಚ್.ಸಿ.** ಎಂ.ಎ., ಎಂ.ಎಡ್., ಪಿಎಚ್.ಡಿ., ಪಿಜಿಡಿಹೆಚ್ಇ, ಸಿಟಿಇ
ಸಹಾಯಕ ಪ್ರಾದೇಶಿಕ ನಿರ್ದೇಶಕರು,
ಇಗ್ನೋ ರಿಜಿನಲ್ ಸೆಂಟರ್, ಪಣಜಿ,
ಚೋಟನ್‌ಕರ್ ಹಾಸ್ಪಿಟಲ್ ಹಿಂಭಾಗ,
ಟಿ & ಟಿ ಸಿಬ್ಬಂಧಿ ಕ್ವಾಟ್ರಾಸ್ ಹತ್ತಿರ,
ಅಲ್ಟೋಪೋರ್‌ವರಿಯಮ್, ಗೋವಾ – 403 521

ಡಾ. ಹೇಮಮಾಲಿನಿಯವರು ಮೈಸೂರಿನ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ(ಹಿಂದಿ) ದಲ್ಲಿ $2^{1}/_{2}$ ವರ್ಷ ಕಾಲ ಸೇವೆಸಲ್ಲಿಸಿದ್ದರು. ನಂತರ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕಿಯಾಗಿ 4 ವರ್ಷ ಕಾಲ ಬೋಧನೆ ಮಾಡಿದರು. ನಂತರ ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ ಇಲ್ಲಿ $3^{1}/_{2}$ ವರ್ಷಕಾಲ ಉಪನ್ಯಾಸಕಿಯಾಗಿ ಸೇವೆಸಲ್ಲಿಸಿದರು. ವಿಶೇಷ ಶಿಕ್ಷಣ ಮತ್ತು ಇಂಗ್ಲಿಷ್ ಭಾಷಾ ಬೋಧನೆಯಲ್ಲಿ ಪರಿಣತಿ ಪಡೆದಿರುವ ಇವರು ಸದ್ಯದಲ್ಲಿ ಗೋವಾ ರಾಜ್ಯದ ಪಣಜಿಯಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರದ ಸಹಾಯಕ ಪ್ರಾದೇಶಿಕ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

* * * * * * * * *

Digitised by Bharatavani, CIIL

Digitised by Bharatavani, CIIL

ಕನ್ನಡ ಭಾಷಾಭಿವೃದ್ಧಿ ಯೋಜನೆ - 06

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ - 2

ಪ್ರಧಾನ ಸಂಪಾದಕರು
ಡಾ. ಎಸ್. ಲಕ್ಷ್ಮಿ

ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - 570 006

2014

Digitised by Bharatavani, CIIL

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ – 2

Digitised by Bharatavani, CIIL

**SHIKSHANASHASTHRA VISHAYA VISHVAKOSHA** : Second & Third Volumes of the series of Shikshanashasthra Vishaya Vishvakosha comprising on different aspects of Education.

Chief Editor
**Dr. N. Lakshmi**
Chairperson, Departm ent of Studies and Research in Education,
KSOU, Mukthagangothri, Mysore – 570 006

Editors
**Prof. B. N. Manjunathaiah**
**Prof. C. G. Venkataramana Shetty**
**Prof. S. Shreekantaswamy**
**Prof. K. R. Nagarathna**

Published by
**The Registrar**
KSOU, Mukthagangothri, Mysore – 570 006

© **Karnataka State Open University**

| | | |
|---|---|---|
| First Edition | : | 2014 |
| Pages | : XIII + 1538 = | 1551 |
| Price | : ₹ | **750** |
| Copies | : | 1000 |

Printed by
**Abhimaani Publications Ltd.**
“Aragini Bhavava”, 2/4, Dr. Rajkumar Road,
Rajajinagar, Bangalore – 560 010

ಪ್ರಧಾನ ಸಂಪಾದಕರು
**ಡಾ. ಎನ್. ಲಕ್ಷ್ಮಿ**
ಅಧ್ಯಕ್ಷರು
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು – 570 006

ಸಂಪಾದಕರು
**ಪ್ರೊ. ಬಿ. ಎನ್. ಮಂಜುನಾಥಯ್ಯ**
**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ**
**ಪ್ರೊ. ಎಸ್. ಶ್ರೀಕಂಠಸ್ವಾಮಿ**
**ಪ್ರೊ. ಕೆ. ಆರ್. ನಾಗರತ್ನ**

ಪ್ರಕಾಶಕರು
**ಕುಲಸಚಿವರು**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006

© **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**

| | | |
|---|---|---|
| ಮೊದಲ ಮುದ್ರಣ | : | 2014 |
| ಪುಟಗಳು | : XIII + 1538 = | 1551 |
| ಬೆಲೆ | : ₹ | **750** |
| ಪ್ರತಿಗಳು | : | 1000 |

ಅಕ್ಷರ ಸಂಯೋಜನೆ ಹಾಗೂ ಮುದ್ರಣ
**ಅಭಿಮಾನಿ ಪಬ್ಲಿಕೇಶನ್ಸ್ ಲಿಮಿಟೆಡ್**
“ಅರಗಿಣಿ ಭವನ”, ನಂ.2/4, ಡಾ. ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ, ಬೆಂಗಳೂರು–560 010 ದೂ. : 080–23123141

Digitised by Bharatavani, CIIL

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ – 2

ಪ್ರಧಾನ ಸಂಪಾದಕರು

**ಡಾ. ಎನ್. ಲಕ್ಷ್ಮಿ**

ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006

2014

Digitised by Bharatavani, CIIL

ಪ್ರಧಾನ ಸಂಪಾದಕರು
**ಡಾ. ಎನ್. ಲಕ್ಷ್ಮಿ**

ಸಲಹಾ ಸಮಿತಿ
**ಪ್ರೊ. ಸಿ. ಶೇಷಾದ್ರಿ**
**ಪ್ರೊ. ಎಂ. ಎಸ್. ತಳವಾರ್**
**ಪ್ರೊ. ಟಿ. ಪದ್ಮಿನಿ**
**ಡಾ. ಎ. ಶಶಿಕಲ**

ಸಂಪಾದಕ ಮಂಡಳಿ
**ಪ್ರೊ. ಬಿ. ಎನ್. ಮಂಜುನಾಥಯ್ಯ**
**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ**
**ಪ್ರೊ. ಎಸ್. ಶ್ರೀಕಂಠಸ್ವಾಮಿ**
**ಪ್ರೊ. ಕೆ. ಆರ್. ನಾಗರತ್ನ**

ಸಂಯೋಜಕರು
**ಪ್ರೊ. ಎಲ್. ರಾಜಶೇಖರಯ್ಯ**
ಕನ್ನಡ ಭಾಷಾಭಿವೃದ್ಧಿ ಯೋಜನೆಗಳು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಯೋಜನಾ ಸಹಾಯಕರು
**ಶ್ರೀ ಎ. ಎಲ್. ಚಿದಾನಂದ**

**ಆರ್ಥಿಕ ನೆರವು:**
**ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆಗೆ ಕರ್ನಾಟಕ ಸರ್ಕಾರ ನೀಡಿದ ಧನ ಸಹಾಯ**

Digitised by Bharatavani, CIIL

# ಕುಲಪತಿಗಳ ಹಾರೈಕೆಯ ನುಡಿ

"ಈ ಸಮಾಜಕ್ಕೆ ಶಿಕ್ಷಣವನ್ನು ನೀಡುವವರು ಯಾರು?" – ಎಂಬ ಕಾರ್ಲ್‌ಮಾರ್ಕ್ಸ್‌ನ ಪ್ರಶ್ನೆಯು ಇಂದಿಗೂ ಪ್ರಸ್ತುತವಾಗಿದೆ. ಶಿಕ್ಷಣವು ಜನರನ್ನು ಸಮಾಜಮುಖಿಗಳನ್ನಾಗಿ ಮಾಡುವ ಕ್ರಿಯಾಶೀಲವಾದ ವ್ಯವಸ್ಥೆಯಾಗಿದೆ. ವ್ಯಕ್ತಿಗಳಿಗೆ ಶಿಕ್ಷಣ ನೀಡದಿದ್ದರೆ ಅವರಲ್ಲಿ ಅಗತ್ಯ ಸಾಮರ್ಥ್ಯಗಳು ರೂಪುಗೊಳ್ಳುವುದು ಅಸಾಧ್ಯ. ಶಿಕ್ಷಣವೆಂಬುದು ಆಧುನಿಕ ಸಮಾಜಗಳ ದಮನಕಾರಿ ಅಸಮಾನತೆಗಳಿಗೆಲ್ಲ ಪರಿಹಾರ. ಆದ್ದರಿಂದ ಶಿಕ್ಷಣ ಕ್ಷೇತ್ರದ ಸುಧಾರಕರು ಸತತವಾಗಿ ಶಿಕ್ಷಣದ ವಸ್ತು ಮತ್ತು ವಿಧಾನಗಳ ಕುರಿತು ಪ್ರಯೋಗ, ಚರ್ಚೆ, ಸಂವಾದಗಳನ್ನು ನಡೆಸುತ್ತ ಬಂದಿದ್ದಾರೆ. ಕ್ರಿಯಾಶೀಲವಾದ ಕಾರ್ಯ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು **'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ಗಳ ರಚನಾತ್ಮಕವಾದ ಕಾರ್ಯ ಯೋಜನೆಯನ್ನು ಹಮ್ಮಿಕೊಂಡಿದೆ. ಯೋಜನೆಯ ಅನುಷ್ಠಾನದ ಹಿನ್ನೆಲೆಯಿಂದ ಮೊದಲನೆಯ ಸಂಪುಟವು ಅನಾವರಣಗೊಂಡಿದೆ. ಪ್ರಸ್ತುತ ಶೈಕ್ಷಣಿಕ ಅವಧಿಯಲ್ಲಿ **'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ದ ಎರಡು ಮತ್ತು ಮೂರನೆಯ ಸಂಪುಟಗಳು ಅನಾವರಣಗೊಳಿಸುತ್ತಿರುವುದು ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆಯ ವಿಚಾರವಾಗಿದೆ.

ಕೇಂದ್ರ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಘೋಷಿಸಿದ ಸಂದರ್ಭದಲ್ಲಿ ಭಾಷೆ – ಸಾಹಿತ್ಯ – ಸಂಸ್ಕೃತಿಯ ಸಂಶೋಧನೆಗಳ ಕುರಿತ ಸಂಶೋಧನೆಗಳಿಗೆ ಪೂರಕವಾಗುವಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ತಲಾ ಎರಡು ಕೋಟಿ ಹಣವನ್ನು ಬಿಡುಗಡೆಗೊಳಿಸಿದೆ. ಈ ಅನುದಾನದಿಂದ ತತ್ಸಂಬಂಧಿತ ಯೋಜನೆಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಿಂದಿನ ಕುಲಪತಿಗಳಾದ ಪ್ರೊ. ವಿವೇಕ ರೈ ಹಾಗೂ ಪ್ರೊ. ಕೆ.ಎಸ್. ರಂಗಪ್ಪ ಅವರ ಅಧಿಕಾರಾವಧಿಯಲ್ಲಿ ಕಾರ್ಯರೂಪವನ್ನು ಪಡೆದಿವೆ. ಇದರ ಪರಿಣಾಮವಾಗಿ 2012ರಲ್ಲಿ 'ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶ'ದ 1014 ಪುಟಗಳ 362 ಲೇಖನಗಳನ್ನು ಒಳಗೊಂಡ ಮೊದಲ ಸಂಪುಟವು ಪ್ರಕಟಗೊಂಡಿರುತ್ತದೆ.

**'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ದ ಎರಡು ಮತ್ತು ಮೂರನೇ ಸಂಪುಟಗಳು 1551 ಪುಟಗಳನ್ನು ಒಳಗೊಂಡಿವೆ. ಶಿಕ್ಷಣಶಾಸ್ತ್ರದ ವಿವಿಧ ವಿಷಯಗಳಿಗೆ ಸಂಬಂಧಿಸಿದ 279 ಲೇಖನಗಳನ್ನು ಒಳಗೊಂಡಿದೆ. ಈ ಸಂಪುಟಗಳಲ್ಲಿ ನವದೆಹಲಿಯ ಎನ್.ಸಿ.ಇ.ಆರ್.ಟಿ. ಪ್ರಕಟಿಸಿರುವ "Encyclopedia of Indian Education" ಎಂಬ ಗ್ರಂಥದ ಎರಡು ಸಂಪುಟಗಳಿಂದ ಆಯ್ದ ಸುಮಾರು 100 ಲೇಖನಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸುತ್ತಿರುವುದು ಒಂದು ವಿಶೇಷವಾಗಿದೆ. ಈ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ವಿಶ್ವಕೋಶದಲ್ಲಿ ಸೇರ್ಪಡೆಗೊಳಿಸಲು ಎನ್.ಸಿ.ಇ.ಆರ್.ಟಿ. ಯ ನಿರ್ದೇಶಕರಾಗಿದ್ದ ಪ್ರೊ. ರವೀಂದ್ರ ಅವರು ಯಾವುದೇ ಆರ್ಥಿಕ ಪ್ರತಿಫಲವನ್ನು ಅಪೇಕ್ಷಿಸದೆ ಅನುಮತಿ ನೀಡಿದ್ದಾರೆ. ಇವರಂಥ ವಿದ್ವಾಂಸರಿಂದ, ಶಿಕ್ಷಣ ತಜ್ಞರಿಂದ ಶಿಕ್ಷಣ ಕ್ಷೇತ್ರವು ಬೆಳೆಯಬೇಕಾಗಿದೆ.

ಈ ಸಂಪುಟಗಳಿಗೆ ಕರ್ನಾಟಕದ ಅನೇಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ, ವಿಶ್ವವಿದ್ಯಾನಿಲಯಗಳ ಶಿಕ್ಷಣಶಾಸ್ತ್ರ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನುಭವಿ ಶಿಕ್ಷಣ ತಜ್ಞರು ತಮ್ಮ ಲೇಖನಗಳನ್ನು ಬರೆದುಕೊಟ್ಟಿದ್ದಾರೆ.

ಈ ಸಂಪುಟವನ್ನು ಸೂಕ್ತ ರೀತಿಯಲ್ಲಿ ಸಿದ್ಧಪಡಿಸಿ ಹೊರತರುವುದರಲ್ಲಿ ಮುಖ್ಯ ಸಂಪಾದಕರಾದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎನ್. ಲಕ್ಷ್ಮಿ ಅವರ ಪಾತ್ರವು ಗಮನಾರ್ಹವಾಗಿದೆ.

ಸಲಹಾ ಸಮಿತಿ ಸದಸ್ಯರಾದ ಪ್ರೊ. ಸಿ. ಶೇಷಾದ್ರಿ, ಪ್ರಾದೇಶಿಕ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಮೈಸೂರು; ಡಾ. ಎಂ. ಎಸ್. ತಳವಾರ್, ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು ಬೆಂಗಳೂರು ವಿಶ್ವವಿದ್ಯಾನಿಲಯ; ಡಾ. ಟಿ. ಪದ್ಮಿನಿ, ನಿವೃತ್ತ ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾನಿಲಯ; ಡಾ. ಎ. ಶಶಿಕಲ, ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ವಿಶ್ವವಿದ್ಯಾನಿಲಯ ಇವರೆಲ್ಲರ ಅಧ್ಯಯನಶೀಲತೆಯ ಸಾಂಘಿಕ ಪರಿಶ್ರಮದಿಂದ ಈ ವಿಶ್ವಕೋಶ ಸಂಪುಟಗಳು ರೂಪುಗೊಂಡಿದೆ.

Digitised by Bharatavani, CIIL

ವಿಶ್ವಕೋಶಕ್ಕೆ ಲೇಖನಗಳನ್ನು, ಕೆಲವು ಲೇಖನಗಳ ಕನ್ನಡಾನುವಾದಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಸಂಪಾದನೆ ಮಾಡಿ ಅವುಗಳಿಗೆ ಅಂತಿಮ ರೂಪ ಕೊಡಲು ಸಂಪಾದಕ ಮಂಡಳಿ ಸದಸ್ಯರಾದ ಪ್ರೊ. ಬಿ.ಎನ್. ಮಂಜುನಾಥಯ್ಯ, ಪ್ರೊ. ಸಿ.ಜಿ. ವೆಂಕಟರಮಣಶೆಟ್ಟಿ, ಪ್ರೊ. ಕೆ. ಆರ್. ನಾಗರತ್ನ ಪ್ರೊ. ಎಸ್. ಶ್ರೀಕಂಠಸ್ವಾಮಿ ಈ ವಿಶ್ವಕೋಶದ ಯೋಜನಾ ಸಹಾಯಕರಾದ ಶ್ರೀ ಚಿದಾನಂದ ಎ. ಎಲ್., ಮತ್ತು ಈ ಸಂಪುಟಗಳನ್ನು ಮುದ್ರಿಸಿದ ಅಭಿಮಾನಿ ಪಬ್ಲಿಕೇಶನ್ಸ್ ಲಿಮಿಟೆಡ್, ಬೆಂಗಳೂರು, ಈ ಸರ್ವರಿಗೂ ವಿಶ್ವವಿದ್ಯಾನಿಲಯದ ಪರವಾಗಿ ಅಭಿನಂದನೆಗಳು.

ಕನ್ನಡದಲ್ಲಿ ಶಿಕ್ಷಣಶಾಸ್ತ್ರದ ಬಗ್ಗೆ ಯಾವುದೇ ವಿಶ್ವಕೋಶದ ಸ್ವರೂಪದ ಗ್ರಂಥ ಇದುವರೆಗೆ ಪ್ರಕಟವಾಗಿರಲಿಲ್ಲ. ಈ ಕೊರತೆಯನ್ನು ತುಂಬಲು **'ಶಿಕ್ಷಣಶಾಸ್ತ್ರದ ವಿಷಯ ವಿಶ್ವಕೋಶ'**ದ ಮೂರು ಬೃಹತ್ ಸಂಪುಟಗಳನ್ನು ಹೊರತಂದಿರುವುದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಒಂದು ಮಹತ್ವಪೂರ್ಣ ಸಾಧನೆಯೆಂದು ನಾನು ಪರಿಗಣಿಸಿದ್ದೇನೆ. ಈ ಕಾರ್ಯಕ್ಕೆ ಆರ್ಥಿಕ ನೆರವು ನೀಡಿದ ಕರ್ನಾಟಕ ಸರ್ಕಾರಕ್ಕೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ವಿಶ್ವವಿದ್ಯಾನಿಲಯದ ಪರವಾಗಿ ಹಾರ್ದಿಕ ವಂದನೆಗಳು.

ತಮ್ಮ ವಿಶ್ವಾಸದ

**ಪ್ರೊ. ಎಂ.ಜಿ. ಕೃಷ್ಣನ್**
**ಕುಲಪತಿ**

Digitised by Bharatavani, CIIL

# ಪ್ರಧಾನ ಸಂಪಾದಕರ ನುಡಿ

ಭಾರತದ ಘನ ಸರ್ಕಾರ 2009 ರಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ (ಪ್ರಾಚೀನ) ಭಾಷೆಯಾಗಿ ಸ್ಥಾನಮಾನ ನೀಡಿದ ನಂತರ ಆಗಿನ ಕರ್ನಾಟಕ ರಾಜ್ಯ ಸರ್ಕಾರ ರಾಜ್ಯದ ಪ್ರತಿ ವಿಶ್ವವಿದ್ಯಾನಿಲಯಕ್ಕೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಪ್ರಾಯೋಜನೆಗಳನ್ನು ಕೈಗೊಳ್ಳಲು ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿತು. ಅದರಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಈ ಅನುದಾನವನ್ನು ಪಡೆಯಿತು. ಆಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಪ್ರೊ. ಬಿ.ಎ. ವಿವೇಕ ರೈ ರವರು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಪೂರಕವಾದ ಪ್ರಾಯೋಜನೆಗಳನ್ನು ಸಲ್ಲಿಸುವಂತೆ ವಿಭಾಗಗಳಿಗೆ ಸೂಚನೆ ನೀಡಿದ್ದರು. ಅದರಂತೆ ನಮ್ಮ ವಿಭಾಗದಿಂದ 'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ' ಯೋಜನೆ – ಈ ಕೃತಿಯನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸುವುದು ಮತ್ತು 'ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಪಠ್ಯಗಳನ್ನು ಸಿ.ಡಿ. ಮುಖಾಂತರ ಒದಗಿಸುವ ಯೋಜನೆ' – ಈ ಎರಡು ಪ್ರಾಯೋಜನೆಗಳನ್ನು ಸಲ್ಲಿಸಲಾಯಿತು. ಇವುಗಳನ್ನು ವಿಶ್ವವಿದ್ಯಾನಿಲಯ ಒಪ್ಪಿಕೊಂಡಿತು. ಈಗಾಗಲೇ 'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ' ಸಂಪುಟ–1 ಹಾಗೂ ಎರಡನೇ ವರ್ಷದ 'ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಪಠ್ಯಗಳನ್ನು ಸಿ.ಡಿ. ಮುಖಾಂತರ ಒದಗಿಸುವ ಯೋಜನೆ'ಯ 48 ಸಿ.ಡಿ.ಗಳನ್ನು ಘನತೆವೆತ್ತ ರಾಜ್ಯಪಾಲರಾದ ಶ್ರೀ ಹಂಸರಾಜ್ ಭಾರದ್ವಾಜ್ ರವರು ಆಗಸ್ಟ್ 7, 2012 ರಲ್ಲಿ ಬಿಡುಗಡೆ ಮಾಡಿದ್ದಾರೆ. **'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ದ ಪ್ರಥಮ ಸಂಪುಟ 1014 ಪುಟಗಳನ್ನು ಹೊಂದಿದ್ದು 362 ಲೇಖನಗಳನ್ನು ಹೊಂದಿದೆ.

ಈಗ ಈ ವಿಶ್ವಕೋಶದ ಎರಡು ಸಂಪುಟಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಲೋಕಾರ್ಪಣೆ ಮಾಡಲು ಈ ಪ್ರಾಯೋಜನೆಯ ಪ್ರಧಾನ ಸಂಪಾದಕಿಯಾಗಿ ನನಗೆ ತುಂಬಾ ಸಂತೋಷವಾಗುತ್ತಿದೆ. ಕನ್ನಡ ಸಾಹಿತ್ಯ ಭಂಡಾರಕ್ಕೆ ಒಟ್ಟು ಮೂರು ಸಂಪುಟಗಳನ್ನು ಅರ್ಪಿಸುವ ಅವಕಾಶ ನನಗೆ ದೊರಕಿರುವುದು ನನ್ನ ಭಾಗ್ಯವೆಂದು ತಿಳಿದಿದ್ದೇನೆ. ಕನ್ನಡದಲ್ಲಿ ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಈ ಬಗೆಯ ಗ್ರಂಥ ಇರಲಿಲ್ಲ. ಈ ಮೂರು ಸಂಪುಟಗಳು ಈ ಕೊರತೆಯನ್ನು ನೀಗಿಸುತ್ತವೆ.

ಈ ಸಂಪುಟಗಳು ಸುಮಾರು 1551 ಪುಟಗಳನ್ನು ಹೊಂದಿದ್ದು ಇವುಗಳಲ್ಲಿ 279 ಲೇಖನಗಳಿವೆ. ಈ ಎಲ್ಲಾ ಲೇಖನಗಳು ಬಿ.ಎಡ್., ಎಂ.ಎಡ್., ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಎಲ್ಲಾ ಶಿಕ್ಷಣಾಸಕ್ತರಿಗೆ ಉಪಯುಕ್ತವಾದ ಆಕರ ಸಾಮಗ್ರಿಗಳಾಗುತ್ತವೆ ಎಂದು ನಾನು ತಿಳಿದಿದ್ದೇನೆ. ಈ ಸಂಪುಟಗಳು ನವದೆಹಲಿಯ ಎನ್.ಸಿ.ಇ.ಆರ್.ಟಿ. ಸಂಸ್ಥೆ ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ 'Encyclopedia of Indian Education' ಎಂಬ ಎರಡು ಸಂಪುಟಗಳಿಂದ ಪ್ರಸಿದ್ಧ ಶಿಕ್ಷಣ ತಜ್ಞರು ಬರೆದಿರುವ ಆಯ್ದ ಸುಮಾರು 100 ಲೇಖನಗಳ ಕನ್ನಡ ಅನುವಾದಿತ ಲೇಖನಗಳನ್ನು ಒಳಗೊಂಡಿವೆ. ಇದು ಈ ಸಂಪುಟಗಳ ಒಂದು ವಿಶಿಷ್ಟ ಅಂಶವಾಗಿದೆ.

ಪ್ರಸ್ತುತ ಕುಲಪತಿಗಳಾಗಿರುವ ಪ್ರೊ. ಎಂ.ಜಿ. ಕೃಷ್ಣನ್ ಅವರು ಈ ಪ್ರಾಯೋಜನೆ ಯಶಸ್ವಿಯಾಗಿ ಮುಕ್ತಾಯಗೊಳ್ಳಲು ತಮ್ಮ ಅಮೂಲ್ಯ ಸಲಹೆ, ಸಹಕಾರ, ಮಾರ್ಗದರ್ಶನ, ಧೈರ್ಯ ಹಾಗೂ ಉತ್ಸಾಹ ತುಂಬಿದ್ದಾರೆ. ಈ ಪ್ರಾಯೋಜನೆಗೆ ಆಡಳಿತಾತ್ಮಕವಾಗಿ ಹಾಗೂ ಆರ್ಥಿಕ ನೆರವು ನೀಡುವಲ್ಲಿ ಔದಾರ್ಯ ಹಾಗೂ ಪ್ರೋತ್ಸಾಹ ನೀಡಿದ್ದಾರೆ. ಈ ಪ್ರಾಯೋಜನೆಯ ಎಲ್ಲ ಹಂತಗಳಲ್ಲೂ ನನಗೆ ಸ್ಫೂರ್ತಿ ತುಂಬಿದ ಮಾನ್ಯ ಕುಲಪತಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಪ್ರಾಯೋಜನೆ ಯಶಸ್ವಿಯಾಗಿ ಸಾಗಲು ಪ್ರಾಯೋಜನೆಯ ಅವಧಿಯುದ್ದಕ್ಕೂ ಸಹಕಾರ ನೀಡಿದ, ಈ ಹಿಂದೆ ಕುಲಪತಿಗಳಾಗಿದ್ದ ಪ್ರೊ. ಬಿ. ಎ. ವಿವೇಕ ರೈ ಅವರಿಗೆ ಹಾಗೂ ಪ್ರೊ. ಕೆ. ಎಸ್. ರಂಗಪ್ಪ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಹಿಂದೆ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸಿದ ಶ್ರೀ ಕೆ. ಆರ್. ಜಯಪ್ರಕಾಶ್‌ರಾವ್ ಅವರಿಗೆ ಹಾಗೂ ಪ್ರೊ. ಬಿ. ಎಸ್. ವಿಶ್ವನಾಥ್ ಅವರಿಗೆ ಧನ್ಯವಾದಗಳು.

ಈ ವಿಶ್ವವಿದ್ಯಾನಿಲಯದ ಪ್ರಸ್ತುತ ಕುಲಸಚಿವರಾದ ಪ್ರೊ. ಪಿ.ಎಸ್. ನಾಯಕ್ ರವರು ಕೂಡ ಆಡಳಿತಾತ್ಮಕವಾಗಿ ಎಲ್ಲಾ ರೀತಿಯ ಸಹಕಾರ, ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಈ ಯೋಜನೆ ಪೂರ್ಣಗೊಳ್ಳಲು ಧನಾತ್ಮಕ ಸಹಕಾರ ನೀಡಿರುವ ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದಿನ ಶೈಕ್ಷಣಿಕ ಡೀನ್‌ರಾದ ಪ್ರೊ. ಎಸ್.ಎನ್. ವಿಕ್ರಂ ರಾಜೇ ಅರಸ್‌ರವರಿಗೂ, ಪ್ರಸ್ತುತ ಶೈಕ್ಷಣಿಕ ಡೀನ್‌ರಾದ ಪ್ರೊ. ಟಿ.ಡಿ. ದೇವೇಗೌಡರವರಿಗೂ, ಅಂದಿನ ಹಣಕಾಸು ಅಧಿಕಾರಿಗಳಾದ ಶ್ರೀಮತಿ. ಜಿ. ನಾಗಮಣಿ ಹಾಗೂ ಶ್ರೀಮತಿ. ಪ್ರೊ. ಜಹಾನಾರ ಬೇಗಂರವರಿಗೂ ಹಾಗೂ ಪ್ರಸ್ತುತ ಹಣಕಾಸು ಅಧಿಕಾರಿಯಾದ ಪ್ರೊ. ಎಲ್. ರಾಜಶೇಖರಯ್ಯ ಅವರಿಗೂ ನಾನು ಆಭಾರಿಯಾಗಿದ್ದೇನೆ.

Digitised by Bharatavani, CIIL

ಈ ಎರಡು ಸಂಪುಟಗಳು ಪ್ರಕಟವಾಗಲು ಅನುದಾನ ನೀಡಿ ಉದಾರವಾಗಿ ಧನ ಸಹಾಯ ಮಾಡಿದ ಕರ್ನಾಟಕ ಘನ ಸರ್ಕಾರಕ್ಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ನಾನು ಚಿರಋಣಿಯಾಗಿದ್ದೇನೆ.

ಈ ಲೇಖನಗಳ ಅನುವಾದವನ್ನು ಕೂಲಂಕಶವಾಗಿ ಪರಿಶೀಲಿಸಿ ಮೂಲ ಲೇಖನಗಳಿಗೆ ಯಾವುದೇ ಚ್ಯುತಿ ಉಂಟಾಗದಂತೆ ಅಂತಿಮ ರೂಪ ಕೊಡುವಲ್ಲಿ ನಮ್ಮ ಸಂಪಾದಕ ಮಂಡಳಿಯ ಸದಸ್ಯರುಗಳಾದ ಪ್ರೊ. ಬಿ.ಎನ್. ಮಂಜುನಾಥಯ್ಯ, ಪ್ರೊ. ಸಿ.ಜಿ. ವೆಂಕಟರಮಣ ಶೆಟ್ಟಿ, ಪ್ರೊ. ಕೆ.ಆರ್. ನಾಗರತ್ನ ಮತ್ತು ಪ್ರೊ. ಎಸ್. ಶ್ರೀಕಂಠಸ್ವಾಮಿ  ಇವರುಗಳ ಕಾಳಜಿ ಹಾಗೂ ಶ್ರಮ ಅಪಾರವಾದುದು. ಇದರ ಜೊತೆಗೆ ಮೂಲ ಲೇಖನಗಳನ್ನು ಸೂಕ್ತ ರೀತಿಯಲ್ಲಿ ಸಂಪಾದಿಸುವಲ್ಲಿ ಇವರುಗಳು ಶ್ರಮಿಸಿದ್ದಾರೆ. ಇದಕ್ಕಾಗಿ ಸಂಪಾದಕ ಮಂಡಳಿಯ ಎಲ್ಲ ಸದಸ್ಯರುಗಳಿಗೆ ಕೃತಜ್ಞತೆ ಸಲ್ಲಿಸುವುದು ನನ್ನ ಕರ್ತವ್ಯವಾಗಿದೆ. ಹಾಗೆಯೇ ಸಲಹಾ ಸಮಿತಿ ಸದಸ್ಯರಾದ ಡಾ. ಎಂ.ಎಸ್. ತಳವಾರ್, ಪ್ರೊ. ಸಿ. ಶೇಷಾದ್ರಿ, ಡಾ. ಪದ್ಮಿನಿ ಹಾಗೂ ಡಾ. ಎ. ಶಶಿಕಲ ಅವರುಗಳು ಕಾಲಕಾಲಕ್ಕೆ ನಮಗೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಪ್ರಾಯೋಜನೆಯ ಸಂಶೋಧಕ ಸಹಾಯಕರಾದ ಶ್ರೀ ಎ. ಎಲ್. ಚಿದಾನಂದ ರವರು ದಕ್ಷತೆಯಿಂದ ಕಾರ್ಯನಿರ್ವಹಿಸಿ ಎಲ್ಲ ಲೇಖನಗಳನ್ನು ವ್ಯವಸ್ಥಿತವಾಗಿ ದಾಖಲಿಸಿದ್ದಾರೆ ಹಾಗೂ ಲೇಖನಗಳ ಡಿ.ಟಿ.ಪಿ. ಕಾರ್ಯವನ್ನೂ ಮಾಡಿದ್ದಾರೆ. ಇವರಿಗೂ ನನ್ನ ಕೃತಜ್ಞತೆಗಳು.

ನಮ್ಮ ವಿಭಾಗದ ಅಧ್ಯಾಪಕರು ಈ ಯೋಜನೆಯ ಯಶಸ್ಸಿಗೆ ಸಲಹೆ–ಸಹಕಾರ–ಪ್ರೋತ್ಸಾಹವನ್ನು ನಿರಂತರವಾಗಿ ನೀಡುತ್ತಾ ಬಂದಿದ್ದಾರೆ. ಇವರೆಲ್ಲರಿಗೂ ನನ್ನ ಪ್ರೀತಿಯ ಧನ್ಯವಾದಗಳು. ಹಾಗೆಯೇ ನಮ್ಮ ವಿಶ್ವವಿದ್ಯಾನಿಲಯದ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗಳ ಸಂಯೋಜಕರಾದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕರಾದ ಪ್ರೊ. ಎಲ್. ರಾಜಶೇಖರ್ ಅವರಿಗೂ ವಿಶೇಷ ಕೃತಜ್ಞತೆಗಳು.

ಈ ಸಂಪುಟಗಳಿಗೆ ನಮ್ಮ ವಿಭಾಗದ ಅಧ್ಯಾಪಕರೂ ಸೇರಿದಂತೆ, ರಾಜ್ಯದ ವಿವಿಧ ಶಿಕ್ಷಣ ಮಹಾವಿದ್ಯಾಲಯಗಳ ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗಗಳ ಪ್ರಾಧ್ಯಾಪಕರು ಹಾಗೂ ಅಧ್ಯಾಪಕರು ಶ್ರಮವಹಿಸಿ ಉತ್ತಮ ಲೇಖನಗಳನ್ನು ಬರೆದುಕೊಟ್ಟು ಈ ಸಂಪುಟಗಳನ್ನು ಮೌಲ್ಯಯುತವಾದವುಗಳನ್ನಾಗಿ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಧನ್ಯವಾದಗಳು. ಆಯ್ಕೆ ಮಾಡಿದ ಇಂಗ್ಲಿಷ್ ಲೇಖನಗಳನ್ನು ಉತ್ತಮವಾಗಿ ಅನುವಾದ ಮಾಡಿಕೊಟ್ಟ ಎಲ್ಲ ಅನುವಾದಕರಿಗೂ ನನ್ನ ಧನ್ಯವಾದಗಳು.

ಇಂಥಹ ಬೃಹತ್ ಸಂಪುಟಗಳ ಸಿದ್ಧಪಡಿಸುವಾಗ ಕೆಲವು ಲೋಪದೋಷಗಳು ಉಳಿಯುವುದು ಅಸಹಜವೇನಲ್ಲ. ಕೆಲವು ಮುಖ್ಯ ವಿಷಯಗಳ ಲೇಖನಗಳನ್ನು ಸಂಪುಟದಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. ಶಿಕ್ಷಣಾಸಕ್ತರು ಈ ಲೋಪವನ್ನು ಮನ್ನಿಸಿ ಸಂಪುಟಗಳ ಮೌಲ್ಯಯುತ ಅಂಶಗಳಿಗೆ ಮನ್ನಣೆ ನೀಡಿ ಇವುಗಳನ್ನು ಪ್ರೀತಿ, ಆದರಗಳಿಂದ ಸ್ವೀಕರಿಸುವರೆಂದು ನಾನು ಭಾವಿಸುತ್ತೇನೆ.

ನಮ್ಮ ವಿಶ್ವವಿದ್ಯಾನಿಲಯದ ಎಲ್ಲ ಶಾಸನಬದ್ಧ ಅಧಿಕಾರಿ ವರ್ಗದವರಿಗೂ, ಅಧ್ಯಾಪಕ ವರ್ಗಕ್ಕೂ ಹಾಗೂ ಅಧ್ಯಾಪಕೇತರ ವರ್ಗದವರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಈ ಸಂಪುಟದ ಡಿ.ಟಿ.ಪಿ. ಕಾರ್ಯವನ್ನು ನಮ್ಮ ವಿಭಾಗದ ಅಧ್ಯಾಪಕೇತರ ಸಿಬ್ಬಂದಿಯವರಾದ ಶ್ರೀ ಚಂದ್ರಶೇಖರ್, ಶ್ರೀಮತಿ ಶಿವಮ್ಮ ಹಾಗೂ ಶ್ರೀಮತಿ ಅನುಸೂಯ ಮಾಡಿದ್ದಾರೆ. ಅವರಿಗೂ ನನ್ನ ಕೃತಜ್ಞತೆಗಳು.

ಬೆಂಗಳೂರಿನ ಮೇ॥ ಅಭಿಮಾನಿ ಪಬ್ಲಿಕೇಷನ್ಸ್ ಲಿಮಿಟೆಡ್., ರವರು ಈ ಸಂಪುಟಗಳನ್ನು ಬಹಳ ಅಂದವಾಗಿ ಸಕಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞಳಾಗಿದ್ದೇನೆ. ಇಂತಹ ಬೃಹತ್ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ನಮ್ರ ವಂದನೆಗಳು.

**ಡಾ. ಎನ್. ಲಕ್ಷ್ಮಿ**
ಪ್ರಧಾನ ಸಂಪಾದಕರು

Digitised by Bharatavani, CIIL

# ಸಂಪಾದಕ ಮಂಡಳಿಯ ನುಡಿ

ಕನ್ನಡ ಭಾಷೆಗೆ ಭಾರತ ಸರ್ಕಾರ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿದ ನಂತರ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಕರ್ನಾಟಕ ಘನ ಸರ್ಕಾರ ಮಂಜೂರು ಮಾಡಿದ ಎರಡು ಕೋಟಿ ರೂಪಾಯಿಗಳ ಅನುದಾನದಡಿಯಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಕನ್ನಡದಲ್ಲಿ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಎರಡು ಸಂಪುಟಗಳನ್ನು ಸಿದ್ಧಪಡಿಸಲು ಕೈಗೊಂಡಿದ್ದ ಪ್ರಾಯೋಜನೆಗೆ ಸಂಬಂಧಿಸಿದಂತೆ ವಿಷಯ ವಿಶ್ವಕೋಶದ ಈ ಎರಡನೇ ಸಂಪುಟವನ್ನು ಕನ್ನಡಿಗರಿಗೆ ಅರ್ಪಿಸುತ್ತಿರುವುದು ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೆ ಅತೀವ ಆನಂದ ನೀಡಿದೆ. ಈ ಪ್ರಾಯೋಜನೆಯ ಮೊದಲ ಸಂಪುಟ ಆಗಸ್ಟ್ 7, 2012 ರಲ್ಲಿ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಾಗಿದ್ದ ಶ್ರೀ ಹಂಸರಾಜ್ ಭಾರದ್ವಾಜ್ ಅವರಿಂದ ಈಗಾಗಲೇ ಬಿಡುಗಡೆಯಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

**'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'** ಕೃತಿಯ 1551 ಪುಟಗಳ ಈ ಎರಡು ಮತ್ತು ಮೂರನೇ ಸಂಪುಟಗಳು ಶಿಕ್ಷಣಶಾಸ್ತ್ರದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ 279 ವಿದ್ವತ್ಪೂರ್ಣ ಲೇಖನಗಳನ್ನು ಒಳಗೊಂಡಿವೆ. ಇವುಗಳಲ್ಲಿ ನವದೆಹಲಿಯ ಎನ್.ಸಿ.ಇ.ಆರ್.ಟಿ. ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ "Encyclopedia of Indian Education" ಎಂಬ ಗ್ರಂಥದಿಂದ ಭಾರತದ ಪ್ರಸಿದ್ಧ ಶಿಕ್ಷಣ ತಜ್ಞರು ಬರೆದಿರುವ 100 ಲೇಖನಗಳ ಕನ್ನಡ ಅನುವಾದಿತ ಲೇಖನಗಳಿರುವುದು ಈ ಸಂಪುಟಗಳ ವಿಶಿಷ್ಟ ಲಕ್ಷಣವಾಗಿದೆ ಎಂದು ನಾವು ಭಾವಿಸಿದ್ದೇವೆ. ಈ ಲೇಖನಗಳು 2004 ರಲ್ಲಿಯೇ ಪ್ರಕಟವಾಗಿದ್ದು, ಹಲವಾರು ಲೇಖನಗಳಲ್ಲಿರುವ ಅಂಕಿ ಅಂಶಗಳು ಅಂದಿನ ಕಾಲಕ್ಕೆ ಸಂಬಂಧಪಟ್ಟಿದ್ದರೂ, ಈ ಲೇಖನಗಳು ಶಿಕ್ಷಣಶಾಸ್ತ್ರದ ಅಭ್ಯಾಸಿಗಳಿಗೆ ಹೆಚ್ಚು ಉಪಯುಕ್ತವಾದವುಗಳಾಗುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರು. ಈ ಲೇಖನಗಳ ಕನ್ನಡಾನುವಾದಗಳನ್ನು ಈ ಸಂಪುಟದಲ್ಲಿ ಸೇರಿಸಲು ಅನುಮತಿ ನೀಡಿದ ಎನ್.ಸಿ.ಇ.ಆರ್.ಟಿ. ನಿರ್ದೇಶಕರಿಗೆ ಸಂಪಾದಕ ಮಂಡಳಿ ಧನ್ಯವಾದಗಳನ್ನು ಅರ್ಪಿಸುತ್ತದೆ.

**'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'** ಕೃತಿಯ ಮೂರು ಸಂಪುಟಗಳ ಸ್ವತಂತ್ರ ಲೇಖನಗಳು ಮತ್ತು ಆಯ್ಕೆ ಮಾಡಿದ ಇಂಗ್ಲಿಷ್ ಲೇಖನಗಳ ಕನ್ನಡಾನುವಾದಗಳನ್ನು ಸಂಪಾದನೆ ಮಾಡಿದ ಈ ಕಾರ್ಯ ನಮಗೆ ಸಮೃದ್ಧ ಶೈಕ್ಷಣಿಕ ಅನುಭವಗಳನ್ನು ನೀಡಿದೆ. ಲೇಖನಗಳನ್ನು ಸಂಪಾದನೆ ಮಾಡುತ್ತಲೇ ನಾವು ಎಷ್ಟೋ ಹೊಸ ವಿಷಯಗಳನ್ನು, ಪರಿಕಲ್ಪನೆಗಳನ್ನು ಕಲಿಯುವ ಅವಕಾಶ ನಮಗೆ ದೊರಕಿತು ಎಂದರೆ ಅತಿಶಯೋಕ್ತಿಯಾಗಲಾರದು. ಲೇಖನಗಳಲ್ಲಿ ಮಿಶ್ರ ಮಟ್ಟದ ಲೇಖನಗಳು ನಮಗೆ ದೊರೆತವು. ಕೆಲವು ಲೇಖನಗಳು ಶ್ರೇಷ್ಠ ಮಟ್ಟದವುಗಳಾಗಿದ್ದು ಅವುಗಳನ್ನು ಸಂಪಾದನೆ ಮಾಡುವುದು ನಮಗೆ ಸುಲಭವಾಯಿತು. ಇನ್ನು ಕೆಲವು ಲೇಖನಗಳನ್ನು ಲೇಖಕರು ಅವುಗಳ ವ್ಯಾಪ್ತಿಯನ್ನು ಸರಿಯಾಗಿ ತಿಳಿದುಕೊಳ್ಳದೆ ಬರೆದಿದ್ದುದರಿಂದ ಅವುಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ ನಾವು ಹೆಚ್ಚಿನ ಶ್ರಮವಹಿಸಬೇಕಾಯಿತು. ಅನುವಾದಿತ ಲೇಖನಗಳನ್ನು ಸರಿಪಡಿಸುವಾಗ ನಮಗೆ ಬೇರೊಂದು ರೀತಿಯ ಅನುಭವವಾಯಿತು. ಮೂಲ ಲೇಖನದ ಆಶಯಕ್ಕೆ ಚ್ಯುತಿ ಬರದಂತೆ ಅನುವಾದವನ್ನು ಸರಿಪಡಿಸಬೇಕಾಯಿತು. ಸೂಕ್ತ ಕನ್ನಡ ಪದಗಳನ್ನು ಬಳಸದೆ ವಾಕ್ಯದ ಕೆಲವು ಅಂಶಗಳನ್ನು ಬಿಟ್ಟಿರುವುದು, ಕೆಲವು ವೇಳೆ ಕೆಲವು ವಾಕ್ಯಗಳನ್ನೇ ಬಿಟ್ಟಿರುವುದು, ಇಂಥಹ ಸಮಸ್ಯೆಗಳು ಎದುರಾದವು. ನಮ್ಮ ಲೇಖಕರು ಮತ್ತು ಅನುವಾದಕರು ಉತ್ತಮ ಲೇಖನಗಳನ್ನು ನೀಡಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದ್ದಾರೆ. ಕೆಲವು ಕಡೆಗಳಲ್ಲಿ ಇಂಗ್ಲಿಷ್‌ನಲ್ಲಿರುವ ಕೆಲವು ತಾಂತ್ರಿಕ ಪದಗಳಿಗೆ ಸೂಕ್ತವಾದ, ಸರ್ವಸಮ್ಮತವಾದ ಕನ್ನಡದ ಪರ್ಯಾಯ ಪದ ದೊರಕದೆ ಇದ್ದಾಗ ಅನುವಾದಕರು ತುಂಬ ಸುಂದರವಾದ, ಸರಳವಾದ, ಒಪ್ಪಬಹುದಾದ ಕನ್ನಡ ಪದಗಳನ್ನು ರೂಪಿಸಿದ್ದಾರೆ. ಇದು ಈ ವಿಶ್ವಕೋಶವು ಕನ್ನಡ ಭಾಷೆಗೆ ನೀಡಿರುವ ಕೊಡುಗೆ ಎನ್ನಬಹುದು. ಇವರೆಲ್ಲರಿಗೂ ಸಂಪಾದಕ ಮಂಡಳಿ ಕೃತಜ್ಞತೆ ಅರ್ಪಿಸುತ್ತದೆ.

ಈ ಸಂಪುಟಗಳ ಗಾತ್ರ ಯೋಜಿಸಿದ್ದಕ್ಕಿಂತ ದೊಡ್ಡದಾದುದರಿಂದ ಇನ್ನೂ ಕೆಲವು ಲೇಖನಗಳನ್ನು ಈ ಸಂಪುಟದಲ್ಲಿ ಸೇರಿಸಲು, ಮೊದಲನೇ ಸಂಪುಟದಲ್ಲಿದ್ದಂತೆ ಚಿತ್ರಗಳನ್ನು/ಆಲೇಖಗಳನ್ನು ಕೊಡಲು ಸಾಧ್ಯವಾಗಲಿಲ್ಲ. ಇನ್ನು ಕೆಲವು ಮುಖ್ಯ ವಿಷಯ ಕ್ಷೇತ್ರಗಳಿಗೆ ಉದಾಹರಣೆಗೆ – ತೌಲನಿಕ ಶಿಕ್ಷಣಶಾಸ್ತ್ರ, ಬೋಧನೆಯ ಮಾದರಿಗಳು – ಸಂಬಂಧಿಸಿದ ಲೇಖನಗಳನ್ನು ಈ ಸಂಪುಟದಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. ಈ ಮಿತಿಗಳಿಗೆ ಸಂಪಾದಕ ಮಂಡಳಿ ವಿಷಾದ ವ್ಯಕ್ತಪಡಿಸುತ್ತದೆ. ಮೊದಲನೇ ಸಂಪುಟದಲ್ಲಿ ಲೇಖನಗಳ ಕೊನೆಯಲ್ಲಿ ಲೇಖಕರ ಹೆಸರಿನ ಸಂಕ್ಷಿಪ್ತ ರೂಪವನ್ನು ಕೊಟ್ಟು, ಅದರ ವಿಸ್ತೃತ ರೂಪವನ್ನು ಕೊಟ್ಟಿರಲಿಲ್ಲ. ಇದರಿಂದ ಯಾವ ಲೇಖನದ ಲೇಖಕರು ಯಾರು ಎಂದು ತಿಳಿದು ಕೊಳ್ಳುವುದು ಕಷ್ಟವಾಯಿತು. ಈ ಸಂಪುಟಗಳಲ್ಲಿ ಆ ನ್ಯೂನತೆಯನ್ನು ಸರಿಪಡಿಸಲಾಗಿದೆ.

ಈ ಸಂಪುಟದ ಸಂಪಾದನೆಯ ಕಾರ್ಯದುದ್ದಕ್ಕೂ ಮಾನ್ಯ ಕುಲಪತಿಗಳು ನಮಗೆ ಪ್ರೋತ್ಸಾಹ ನೀಡಿದ್ದಾರೆ. ಅವರಿಗೆ ಧನ್ಯವಾದಗಳು. ಈ ಪ್ರಾಯೋಜನೆಯ ಪ್ರಧಾನ ಸಂಪಾದಕಿ ಡಾ. ಎನ್. ಲಕ್ಷ್ಮಿ ರವರು ನಮಗೆ ಬೇಕಾದ ಎಲ್ಲ ಅನುಕೂಲಗಳನ್ನು ಒದಗಿಸಿ ಸಹಕರಿಸಿದ್ದಾರೆ. ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಪ್ರಾಯೋಜನೆಯ ಸಹಾಯಕರಾದ ಶ್ರೀ ಎ.ಎಲ್. ಚಿದಾನಂದ ರವರು ಲೇಖನಗಳನ್ನು ಜೋಪಾನಮಾಡುವ, ದಾಖಲಿಸುವ ಕಾರ್ಯವನ್ನು ಚೊಕ್ಕವಾಗಿ ಮಾಡಿದ್ದಾರೆ. ಅವರಿಗೂ ಸಹ ನಮ್ಮ ಕೃತಜ್ಞತೆಗಳು.

ವಿಭಾಗದ ಅಧ್ಯಾಪಕೇತರ ಸಿಬ್ಬಂದಿ ಶ್ರೀ ಚಂದ್ರಶೇಖರ್, ಶ್ರೀಮತಿ ಶಿವಮ್ಮ ಮತ್ತು ಶ್ರೀಮತಿ ಅನುಸೂಯ ಇವರುಗಳು ಲೇಖನಗಳ ಡಿ.ಟಿ.ಪಿ. ಕಾರ್ಯವನ್ನು ಮಾಡಿದ್ದಾರೆ. ಇವರಿಗೂ ನಮ್ಮ ಕೃತಜ್ಞತೆಗಳು.

ಮೊದಲನೇ ಸಂಪುಟದಂತೆ ಈ ಸಂಪುಟಗಳೂ ಶಿಕ್ಷಣಶಾಸ್ತ್ರದ ಬೋಧಕರಿಗೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಎಲ್ಲ ಶಿಕ್ಷಣಾಸಕ್ತರಿಗೂ ಉತ್ತಮ ಆಕರ ಗ್ರಂಥವಾಗುತ್ತದೆ ಹಾಗೂ ಎಲ್ಲರೂ ಈ ಸಂಪುಟಗಳನ್ನು ವಿಶ್ವಾಸದಿಂದ ಸ್ವೀಕರಿಸುತ್ತಾರೆ ಎಂದು ನಾವು ಭಾವಿಸುತ್ತೇವೆ.

**–ಸಂಪಾದಕ ಮಂಡಳಿ**

Digitised by Bharatavani, CIIL

# ಪರಿವಿಡಿ


1. ಅಂತರ್–ವಿಶ್ವವಿದ್ಯಾಲಯ ಕೇಂದ್ರಗಳು....1
2. ಅಂಬೇಡ್ಕರ್ ಮತ್ತು ವಂಚಿತ ವರ್ಗಗಳ ಶಿಕ್ಷಣ ....10
3. ಅಂಶ ವಿಶ್ಲೇಷಣೆ ....18
4. ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು. ....21
5. ಅಖಿಲ ಭಾರತ ಶಾಲಾ ಶಿಕ್ಷಣ ಸಮೀಕ್ಷೆಗಳು .... 23
6. ಅದ್ವೈತ ಮತ್ತು ಶಿಕ್ಷಣ .... 28
7. ಅಧ್ಯಾಪಕ ಶಿಕ್ಷಣದ ಮಾದರಿಗಳು....31
8. ಅಧ್ಯಾಪಕರ ಮೌಲ್ಯಮಾಪನ....34
9. ಅಧ್ಯಾಪಕ ಸಂಘಟನೆಗಳು....40
10. ಅಭಿಪ್ರೇರಣೆ.... 44
11. ಅಭಿವೃತ್ತಿಗಳ ಅಳತೆ....51
12. ಅಭಿವೃದ್ಧಿ ಅಧ್ಯಯನ ಸಂಸ್ಥೆಗಳು (ಐ.ಸಿ.ಎಸ್.ಎಸ್.ಆರ್. ಬೆಂಬಲಿತ).... 57
13. ಅಭಿವ್ಯಕ್ತಿ ಸ್ವಾತಂತ್ರ್ಯ....61
14. ಅಭಿಸಾಮರ್ಥ್ಯಗಳ ಅಳತೆ....62
15. ಅಸ್ತಿತ್ವವಾದ ಮತ್ತು ಶಿಕ್ಷಣ....74
16. ಅಳತೆಯ ಮಾಪನಗಳು....80
17. ಆದರ್ಶ ಆಧಾರಿತ ಮತ್ತು ನಿರ್ಣಯಾಂಕ ಆಧಾರಿತ ಪರೀಕ್ಷೆಗಳು....83
18. ಇಂಗ್ಲಿಷ್ ಬೋಧನಾ ವಿಧಾನ....85
19. ಉನ್ನತ ಶಿಕ್ಷಣದಲ್ಲಿ ಪರೋಕ್ಷ ಕಲಿಕೆ....89
20. ಎಸ್‌ಓಎಸ್ ಮಕ್ಕಳ ಗ್ರಾಮಗಳು....95
21. ಔದ್ಯೋಗಿಕ ಕೋರ್ಸ್‌ಗಳ ಪಠ್ಯಕ್ರಮ ವಿನ್ಯಾಸ....99
22. ಔದ್ಯೋಗಿಕ ಕೋರ್ಸ್‌ಗಳು....101
23. ಕಂಪ್ಯೂಟರ್ ಬಳಕೆ ಮತ್ತು ಶಿಕ್ಷಣದಲ್ಲಿ ಅವುಗಳ ಪಾತ್ರ.... 103
24. ಕನ್ನಡ ಭಾಷಾ ಬೋಧನೆ....106
25. ಕರ್ನಾಟಕ ರಾಜ್ಯದಲ್ಲಿ ಶೈಕ್ಷಣಿಕ ವ್ಯವಸ್ಥೆಯ ರೂಪುರೇಖೆ....113
26. ಕರ್ನಾಟಕದಲ್ಲಿ ಕೃಷಿ ಶಿಕ್ಷಣದ ಬೆಳವಣಿಗೆ.... 122
27. ಕರ್ನಾಟಕದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ ವ್ಯವಸ್ಥೆ.... 129
28. ಕರ್ನಾಟಕದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳು....133
29. ಕರ್ನಾಟಕದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ.... 134
30. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ – ಪ್ರಸ್ತುತ ಸ್ಥಿತಿ....136
31. ಕರ್ನಾಟಕದಲ್ಲಿ ಪ್ರೌಢ ಶಿಕ್ಷಣ – ಪ್ರಸ್ತುತ ಪರಿಸ್ಥಿತಿ....138
32. ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯ....140
33. ಕರ್ನಾಟಕದಲ್ಲಿ ಲಲಿತ (ಪ್ರದರ್ಶಕ) ಕಲೆಗಳ ಶಿಕ್ಷಣದ ಪ್ರಸ್ತುತ ಸ್ಥಿತಿ....147
34. ಕರ್ನಾಟಕದಲ್ಲಿ ಲಲಿತ (ಪ್ರದರ್ಶಕ) ಕಲೆಗಳ ಶಿಕ್ಷಣದ ಬೆಳವಣಿಗೆ....149


Digitised by Bharatavani, CIIL

35. ಕರ್ನಾಟಕದಲ್ಲಿ ವಿಶೇಷ ಶಿಕ್ಷಣ ಶಾಲೆಗಳು....150
36. ಕರ್ನಾಟಕದಲ್ಲಿ ಶಿಕ್ಷಣ ಪ್ರಚಾರದಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ....162
37. ಕರ್ನಾಟಕದಲ್ಲಿ ಶಿಕ್ಷಣ ಪ್ರಚಾರದಲ್ಲಿ ಮಠಗಳ ಪಾತ್ರ....163
38. ಕರ್ನಾಟಕದಲ್ಲಿ ಸರ್ವ ಶಿಕ್ಷಣ ಅಭಿಯಾನದ ಪಾತ್ರ....166
39. ಕಲಾ ಶಿಕ್ಷಣ.... 175
40. ಕಲಿಕಾ ಅಸಮರ್ಥತೆಯುಳ್ಳ ಮಕ್ಕಳ ಶಿಕ್ಷಣ....184
41. ಕಲಿಕಾ ಶೈಲಿಗಳು .... 187
42. ಕಲಿಕೆ – ಸ್ವರೂಪ, ಸಿದ್ಧಾಂತಗಳು.... 189
43. ಕಲಿಕೆಯ ಕಾರ್ಯ ವಿಧಾನಗಳು.... 211
44. ಕಲಿಕೆಯ ವರ್ಗಾವಣೆ.... 225
45. ಕಲಿಕೆಯ ವಿಧಗಳು.... 227
46. ಕಾನೂನು ಸಾಕ್ಷರತೆ....236
47. ಕಾರ್ಯ ವಿಶ್ಲೇಷಣೆ....244
48. ಕಾರ್ಯಕ್ರಮ ಮೌಲ್ಯಮಾಪನ....245
49. ಕಾರ್ಯಾನುಭವ (ಎಸ್.ಯು.ಪಿ.ಡಬ್ಲ್ಯು).... 264
50. ಕಾಲೇಜು ಶಿಕ್ಷಣ ನಿರ್ದೇಶನಾಲಯ.... 272
51. ಕುಚೇಷ್ಟೆ (ರ್‍ಯಾಗಿಂಗ್).... 275
52. ಕುವೆಂಪು ಶೈಕ್ಷಣಿಕ ವಿಚಾರಧಾರೆ....280
53. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೈಕ್ಷಣಿಕ ಹಣಕಾಸಿನ ಜವಾಬ್ದಾರಿಗಳು.... 286
54. ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ಸಿ.ಎ.ಬಿ.ಇ.)....289
55. ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶಿ ಭಾಷಾ ಸಂಸ್ಥೆ (ಸಿಐಇಎಫ್ಎಲ್) ಹೈದರಾಬಾದ್.... 303
56. ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ.... 309
57. ಕೇಂದ್ರೀಯ ವಿದ್ಯಾಲಯ ಶಾಲೆಗಳು.... 311
58. ಕೇಂದ್ರೀಯ ಹಿಂದಿ ಸಂಸ್ಥಾನ.... 314
59. ಕ್ರೀಡಾ ಕೌಶಲ್ಯಗಳ ಬೋಧನೆ.... 316
60. ಕ್ಲೋಸ್ಡ್ ಸರ್ಕಿಟ್ ಟಿ.ವಿ. (ಸಿ.ಸಿ.ಟಿ.ವಿ.).... 319
61. ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಮತ್ತು ಸಂಕುಲ ಸಂಪನ್ಮೂಲ ಕೇಂದ್ರಗಳು.... 320
62. ಗುಣಾತ್ಮಕ ಸಂಶೋಧನ ವಿಧಾನಗಳು.... 330
63. ಗೃಹ ವಿಜ್ಞಾನ ಶಿಕ್ಷಣ.... 335
64. ಗ್ರಾಮೀಣ ಸಂಸ್ಥೆಗಳು .... 346
65. ಗ್ರಾಹಕ ಶಿಕ್ಷಣ.... 353
66. ಚಲನ ಚಿತ್ರಗಳ ಮೂಲಕ ಶಿಕ್ಷಣ.... 358
67. ಚಾರ್ವಾಕರ ಶೈಕ್ಷಣಿಕ ನಿಲುವು.... 360
68. ಚುರುಕು ಶಾಲೆಗಳು.... 362
69. ಜಿದ್ದು ಕೃಷ್ಣಮೂರ್ತಿಯವರ ಶೈಕ್ಷಣಿಕ ವಿಚಾರಗಳು.... 376
70. ಜೀವನ ಪರ್ಯಂತ ಕಲಿಕೆ.... 380
71. ಜೈನ ಧರ್ಮದ ಶೈಕ್ಷಣಿಕ ಚಿಂತನೆಗಳು....385
72. ಜ್ಞಾನದ ಸಿಂಧುತ್ವ .... 392
73. ಜ್ಞಾನದ ಸಿದ್ಧಾಂತಗಳು.... 394
74. ಡಾ. ವಿನಾಯಕ ಕೃಷ್ಣ ಗೋಕಾಕರ ಶೈಕ್ಷಣಿಕ ಚಿಂತನೆಗಳು.... 400

Digitised by Bharatavani, CIIL

75. ಡ್ರಗ್ ಶಿಕ್ಷಣ................................................ 405
76. ತತ್ವಶಾಸ್ತ್ರದ ಸ್ವರೂಪ ಮತ್ತು ವ್ಯಾಪ್ತಿ................................................ 409
77. ತಪಸ್ಸು................................................ 410
78. ತರಗತಿ ಕೋಣೆ ನಿರ್ವಹಣೆ................................................ 416
79. ತರಗತಿಯ ನಿರ್ವಹಣೆ................................................ 425
80. ತರಗತಿಯ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆ................................................ 428
81. ತರಗತಿಯ ಸಂವಹನ................................................ 431
82. ತಾತ್ವಿಕ ವಿಶ್ಲೇಷಣೆ................................................ 432
83. ದೃಷ್ಟಿ ಸವಾಲುಗಳುಳ್ಳ ಮಕ್ಕಳ ಶಿಕ್ಷಣ................................................ 436
84. ಧ್ವನಿ ಸುರಳಿಗಳು................................................ 448
85. ನಾಯಕತ್ವ ತರಬೇತಿ ಕಾರ್ಯಕ್ರಮಗಳು................................................ 451
86. ನಾಯಕತ್ವ ಮತ್ತು ಶಾಲೆ................................................ 454
87. ನಾಯಕತ್ವದ ಮೌಲ್ಯಮಾಪನ................................................ 456
88. ನಿಯಂತ್ರಣ ಕೇಂದ್ರ ................................................ 458
89. ನೆರೆಹೊರೆ ಶಾಲಾ ವ್ಯವಸ್ಥೆ ................................................ 461
90. ನೈತಿಕ ವಿಕಾಸದ ಸಿದ್ಧಾಂತಗಳು................................................ 462
91. ಪಠ್ಯಕ್ರಮ ................................................ 466
92. ಪಠ್ಯಕ್ರಮ ವಿಕಾಸದ ಆಧಾರಗಳು................................................ 469
93. ಪಠ್ಯಕ್ರಮ ವಿನ್ಯಾಸ – ವಿವಿಧ ಹಂತಗಳಲ್ಲಿ................................................ 472
94. ಪಠ್ಯಕ್ರಮ ವ್ಯವಹಾರ ................................................ 473
95. ಪಠ್ಯಕ್ರಮದ ಐತಿಹಾಸಿಕ ವಿಕಾಸ................................................ 479
96. ಪಠ್ಯಕ್ರಮವನ್ನು ಪ್ರಭಾವಿಸುವ ನಿಯೋಗಗಳು................................................ 483
97. ಪರ್ಯಾಯ ಶಾಲಾ ಶಿಕ್ಷಣ................................................ 484
98. ಪೋಷಕ–ಬೋಧಕ ಸಂಘಗಳು................................................ 498
99. ಪೌಲೋ ಫ್ರೈಯರಿ................................................ 499
100. ಪ್ರಜಾಪ್ರಭುತ್ವ ಮತ್ತು ಶಿಕ್ಷಣ ................................................ 502
101. ಪ್ರತಿಭಾ ಪಲಾಯನ ................................................ 516
102. ಪ್ರಶ್ನೆಕೋಠಿ ................................................ 522
103. ಪ್ರಸಾಮಾನ್ಯ ಸಂಭಾವ್ಯ ವಕ್ರ................................................ 524
104. ಪ್ರಾಕಲ್ಪನೆಗಳು ................................................ 529
105. ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು ................................................ 531
106. ಪ್ರಾಯೋಗಿಕ ವಿಧಾನ ................................................ 541
107. ಬಹು ಮಾಧ್ಯಮ ಉಪಕ್ರಮ ................................................ 544
108. ಬಾಲಭವನಗಳು................................................ 546
109. ಬಾಲಾಪರಾಧಿಗಳ ನಿರ್ವಹಣೆ ................................................ 549
110. ಬೀದಿ ಮಕ್ಕಳ ಶಿಕ್ಷಣ ................................................ 555
111. ಬುದ್ಧಿ/ಬುದ್ಧಿಶಕ್ತಿ................................................ 564
112. ಬೋಧನಾ ಅಭಿಸಾಮರ್ಥ್ಯ ................................................ 569
113. ಬೋಧನಾ ಕೌಶಲಗಳು ................................................ 575
114. ಬೋಧನಾ ಶೈಲಿಗಳು ................................................ 589
115. ಬೋಧನಾ ಸಂಚಯಗಳು ................................................ 592


Digitised by Bharatavani, CIIL

116. ಬೌದ್ಧ ಶಿಕ್ಷಣ ಪದ್ಧತಿ ........ 594
117. ಬೌದ್ಧಿಕ ಸವಾಲುಳ್ಳ ಮಕ್ಕಳು ........ 597
118. ಬ್ರಿಟಿಷರ ಅವಧಿಯಲ್ಲಿ ದೇಶೀಯ ಶಿಕ್ಷಣ ವ್ಯವಸ್ಥೆ ........ 602
119. ಭಾರತದ ನ್ಯಾಷನಲ್ ಬುಕ್ ಟ್ರಸ್ಟ್ ........ 605
120. ಭಾರತದ ಪುನರ್ವಸತಿ ಪರಿಷತ್ತು ........ 609
121. ಭಾರತದ ವಿವಿಧ ಪ್ರಕಾರದ ವಿಶ್ವವಿದ್ಯಾನಿಲಯಗಳು ........ 611
122. ಭಾರತದ ಶಿಕ್ಷಣ ಪ್ರಚಾರದಲ್ಲಿ ಧಾರ್ಮಿಕ ಸಂಘ ಸಂಸ್ಥೆಗಳ ಪಾತ್ರ ........ 616
123. ಭಾರತದ ಸಂವಿಧಾನ ಮತ್ತು ಶಿಕ್ಷಣ ........ 623
124. ಭಾರತದಲ್ಲಿ ಕೃಷಿ ಮತ್ತು ಪಶು ಸಂಗೋಪನಾ ಶಿಕ್ಷಣದ ಬೆಳವಣಿಗೆ........ 628
125. ಭಾರತದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು........ 633
126. ಭಾರತದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಬೆಳವಣಿಗೆ........ 640
127. ಭಾರತದಲ್ಲಿ ದೂರ ಶಿಕ್ಷಣದ ಬೆಳವಣಿಗೆ........ 645
128. ಭಾರತದಲ್ಲಿ ಪಶು ಸಂಗೋಪನ ವಿಶ್ವವಿದ್ಯಾನಿಲಯಗಳು........ 649
129. ಭಾರತದಲ್ಲಿ ಪ್ರಾಥಮಿಕ ಶಿಕ್ಷಣ........ 654
130. ಭಾರತದಲ್ಲಿ ಬಾಲ ಕಾರ್ಮಿಕರು........ 676
131. ಭಾರತದಲ್ಲಿ ವಿದೇಶಿ ವಿದ್ಯಾರ್ಥಿಗಳು........ 677
132. ಭಾರತದಲ್ಲಿ ಶಿಕ್ಷಣದಲ್ಲಿನ ಅಪವ್ಯಯ........ 683
133. ಭಾರತದಲ್ಲಿ ಶೈಕ್ಷಣಿಕ ಸಂಶೋಧನೆ........ 686
134. ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಯ ಸ್ಥಿತಿಗತಿ........ 696
135. ಭಾರತದಲ್ಲಿ ಸಂಸ್ಕೃತ ಶಿಕ್ಷಣದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳು........ 697
136. ಭಾರತದಲ್ಲಿ ಸಂಸ್ಕೃತ ಶಿಕ್ಷಣದ ಬೆಳವಣಿಗೆ........ 706
137. ಭಾರತದಲ್ಲಿ ಸಮುದಾಯ ಶಿಕ್ಷಣ........ 712
138. ಭಾರತದಲ್ಲಿ ಸಾಕ್ಷರತಾ ಆಂದೋಲನ........ 717
139. ಭಾರತೀಯ ತಾಂತ್ರಿಕ ಸಂಸ್ಥೆ (ಐಐಟಿ)ಗಳು........ 720
140. ಭಾರತೀಯ ಮಹಿಳಾ ವಿಶ್ವವಿದ್ಯಾನಿಲಯಗಳು........ 723
141. ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ (ಐಎನ್ಎಸ್ಎ)........728
142. ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಸ್ಥೆ (ಐಎಸ್‌ಸಿಎ)........734
143. ಭಾರತೀಯ ವಿದ್ಯಾ ಭವನ........ 736
144. ಭಾರತೀಯ ವಿಶ್ವವಿದ್ಯಾಲಯಗಳ ಸಂಘ........739
145. ಭಾರತೀಯ ಶಿಕ್ಷಣ ಸೇವೆ (ಐಇಎಸ್)........742
146. ಭೌತಶಾಸ್ತ್ರ ಬೋಧನಾ ವಿಧಾನಗಳು........ 745
ಪ್ರಧಾನ ಸಂಪಾದಕರ ಪರಿಚಯ........ 752
ಸಲಹಾ ಸಮಿತಿ ಸದಸ್ಯರ ಪರಿಚಯ........753
ಸಂಪಾದಕ ಮಂಡಳಿ ಸದಸ್ಯರ ಪರಿಚಯ........ 754
ಯೋಜನಾ ಸಹಾಯಕರ ಪರಿಚಯ........ 756
ಲೇಖಕರ ಪರಿಚಯ........756
“ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ” ಸಂಪುಟ-2 ಕೃತಿಯ ಮೂಲ ಲೇಖನಗಳ ಅನುವಾದಕರ ಸೂಚಿ........770
“ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ” ಮೊದಲನೇ ಸಂಪುಟದ ಲೇಖನಗಳ ಸೂಚಿ........771

Digitised by Bharatavani, CIIL

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

# ಶಿಕ್ಷಣಶಾಸ್ತ್ರ

# ಅ

## ಅಂತರ್ – ವಿಶ್ವವಿದ್ಯಾಲಯ ಕೇಂದ್ರಗಳು

**ಮೂಲ ಪರಿಕಲ್ಪನೆ:** ವ್ಯಾಸಂಗದ ವಿಷಯವೊಂದು ಪ್ರಾಮುಖ್ಯತೆಯ ದೃಷ್ಟಿಯಿಂದ ಅಧ್ಯಯನಕ್ಕೆ ಯೋಗ್ಯವಾಗಿದ್ದರೂ, ಅನೇಕ ಕಾರಣಗಳಿಂದ ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ ಸೂಕ್ತ ರೀತಿಯಿಂದ ಅಳವಡಿಕೆಯಾಗದಿರುವುದನ್ನು ಗಮನಿಸಿದಾಗ, ಇದಕ್ಕೆ ಸಾಮಗ್ರಿಗಳ ಮತ್ತು ಮಾನವ ಸಂಪನ್ಮೂಲಗಳ ಕೊರತೆಯೂ ಕಾರಣವಾಗಿದ್ದು, ಇದರಿಂದಾಗಿಯೇ ಈ ವಿಷಯವನ್ನು ಅಳವಡಿಸಿಕೊಳ್ಳಲು ವಿಶ್ವವಿದ್ಯಾಲಯಕ್ಕೆ ಕಷ್ಟವಾಗಿರಬಹುದು. ಒಂದು ವೇಳೆ ಸಂಪನ್ಮೂಲಗಳನ್ನು ದೊರಕಿಸಿಕೊಟ್ಟರೂ, ಅದನ್ನು ಬಳಸುವವರ ಸಂಖ್ಯೆ ಸಾಕಷ್ಟಿಲ್ಲದಿದ್ದರೆ, ಅದರ ಉಪಯೋಗ ಉಚಿತ ರೀತಿಯಿಂದ ನಡೆಯದೇ ಹೋಗಬಹುದು. ಈ ರೀತಿಯ ಸಮಸ್ಯೆಗಳೊಂದಿಗೆ ವ್ಯವಹರಿಸುವ ಸಲುವಾಗಿ, ವ್ಯಾಸಂಗ ವಿಷಯಕ್ಕೆ ಅನುಮೋದನೆ ನೀಡುವ ದೇಶದ ಎಲ್ಲಾ ವಿಶ್ವವಿದ್ಯಾಲಯಗಳ ಆಸಕ್ತ ಅಧ್ಯಾಪಕವೃಂದ ಮತ್ತು ವಿದ್ಯಾರ್ಥಿಗಳಿಗೆ ಸಂಪನ್ಮೂಲಗಳನ್ನು ಒದಗಿಸತಕ್ಕಂತಹ ವಿಶಿಷ್ಟವಾದ ಕೇಂದ್ರೀಯ ಸೌಲಭ್ಯದ ಸೃಷ್ಟಿಯು ಇದಕ್ಕೆ ಪರಿಹಾರವಾಗಬಲ್ಲದು. ಈ ಕಾರಣಗಳಿಗಾಗಿಯೇ ಭಾರತೀಯ ಸಂದರ್ಭದಲ್ಲಿ ಅಂತರ್–ವಿಶ್ವವಿದ್ಯಾಲಯ ಕೇಂದ್ರದ (ಇಂಟರ್ ಯೂನಿವರ್‌ಸಿಟಿ ಸೆಂಟರ್–ಐಯುಸಿ) ವಿಚಾರ ಎಂಬತ್ತರ ದಶಕದಲ್ಲಿ ಗೋಚರವಾಗತೊಡಗಿತು.

ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯುಜಿಸಿ) ಭೌತಿಕ ವಿಜ್ಞಾನಗಳ ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ಅಧ್ಯಾಪನ, ಸಂಶೋಧನೆ, ಜೊತೆಗೆ ಅಭಿವೃದ್ಧಿ ಚಟುವಟಿಕೆಗಳಿಗೆ ಕೂಡಾ ಪ್ರೋತ್ಸಾಹ ನೀಡುವ ಸಲುವಾಗಿ ಅಂತರ್–ವಿಶ್ವವಿದ್ಯಾಲಯ ಕೇಂದ್ರ (ಐಯುಸಿ)ದ ಮಾದರಿಯನ್ನು ಅಳವಡಿಸಿಕೊಳ್ಳಲು ನಿರ್ಧರಿಸಿತು. ಹೀಗೆ ಸ್ಥಾಪನೆಗೊಂಡ ಮೊದಲ ಅಂತರ್ ವಿಶ್ವವಿದ್ಯಾಲಯ ಕೇಂದ್ರವೆಂದರೆ, 16 ಡಿಸೆಂಬರ್, 1988ರಲ್ಲಿ ನವದೆಹಲಿಯಲ್ಲಿ ಸ್ಥಾಪನೆಯಾದ ಅಣು ವಿಜ್ಞಾನ ಕೇಂದ್ರ (ನ್ಯೂಕ್ಲಿಯರ್ ಸೈನ್ಸ್ ಸೆಂಟರ್–ಎನ್‌ಎಸ್‌ಸಿ). ಕಳೆದ ಕೆಲವು ವರ್ಷಗಳಿಂದ ವೇಗವರ್ಧಕವನ್ನು ಆಧರಿಸಿದ ಅಣು ಭೌತಶಾಸ್ತ್ರ ಕ್ಷೇತ್ರದಲ್ಲಿ ಅಂತರ್ ವಿಶ್ವವಿದ್ಯಾಲಯ ಕೇಂದ್ರ (ಐಯುಸಿ) ವನ್ನು ಪ್ರಾರಂಭಿಸುವ ವಿಚಾರ ಚಾಲನೆಯಲ್ಲಿದ್ದು, ಅದು ಅಣುವಿಜ್ಞಾನ ಕೇಂದ್ರ (ಎನ್‌ಎಸ್‌ಸಿ) ದ ರೂಪದಲ್ಲಿ ಸಾಕಾರಗೊಂಡಿದೆ. ನೋಂದಾಯಿತ ಸ್ವಾಯತ್ತ ಸಂಘವಾಗಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದನ್ನು ಅನುಸರಿಸಿ ಕೆಲವೇ ಸಮಯದಲ್ಲಿ, ಅಂದರೆ 29 ಡಿಸೆಂಬರ್, 1988ರಂದು ಖಗೋಳ ವಿಜ್ಞಾನ ಮತ್ತು ಖಗೋಳ ಭೌತವಿಜ್ಞಾನಗಳಿಗಾಗಿ ಪುಣೆಯಲ್ಲಿ ಅಂತರ್–ವಿಶ್ವವಿದ್ಯಾಲಯ ಕೇಂದ್ರವನ್ನು (ಐಯುಸಿಎಎ) ಪ್ರಾರಂಭಿಸಲಾಯಿತು. ಮೂರನೇ ಅಂತರ್–ವಿಶ್ವವಿದ್ಯಾಲಯ ಕೇಂದ್ರವಾಗಿ ಡಿಎಇ ಸೌಲಭ್ಯಗಳಿಗೆ ಇಂದೋರಿನಲ್ಲಿ ಅಂತರ್–ವಿಶ್ವವಿದ್ಯಾಲಯ ಕೂಟವು (ಇಂಟರ್–ಯೂನಿವರ್ಸಿಟಿ ಕಾನ್ಸಾರ್ಟಿಯಮ್ ಫಾರ್ ಡಿಎಇ ಫೆಸಿಲಿಟಿಸ್–ಐಯುಸಿಡಿಎಎಫ್) 1990ರಲ್ಲಿ ತಲೆಯೆತ್ತಿತ್ತು.

ಭೌತ ವಿಜ್ಞಾನಗಳಲ್ಲಿ ಸೀಮಾರೇಖೆಯ ಹಂತದ ಆರ್ ಅಂಡ್ ಡಿಯನ್ನು ನಿರ್ವಹಿಸುತ್ತಿರುವ ಈ ಮೂರು ಕೇಂದ್ರಗಳೊಂದಿಗೆ, ವಿಭಿನ್ನ ಸ್ವರೂಪದ ಇತರ ಮೂರು ಅಂತರ್–ವಿಶ್ವವಿದ್ಯಾಲಯ

Digitised by Bharatavani, CIIL

ಕೇಂದ್ರಗಳನ್ನು ಯುಜಿಸಿ ಸ್ಥಾಪಿಸಿತು. ಈ ಕೇಂದ್ರಗಳು ಮೂಲಭೂತ ವಿಜ್ಞಾನಗಳ ಸಂಶೋಧನೆಗೆ ಸಂಬಂಧಿಸಿದ್ದಾಗಿರದೆ, ಹಲವು ರೂಪದ ಚಟುವಟಿಕೆಗಳನ್ನು ಅಳವಡಿಸಿಕೊಂಡಿದ್ದವು. ಇದರಲ್ಲಿ ಮೊದಲನೆಯದು 1993 ರಲ್ಲಿ ದೆಹಲಿಯಲ್ಲಿ ಸ್ಥಾಪನೆಯಾದ ಶಿಕ್ಷಣ ಸಂವಹನ ಕೇಂದ್ರವಾಗಿದೆ (ಸೆಂಟರ್ ಫಾರ್ ಎಜ್ಯುಕೇಶನಲ್ ಕಮ್ಯುನಿಕೇಶನ್ – ಸಿಇಸಿ) ಇದನ್ನು ಅನುಸರಿಸಿ ಬಂದಿರುವುದು 1994ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ರಾಷ್ಟ್ರೀಯ ಮೌಲ್ಯಮಾಪಕ ಮತ್ತು ಅರ್ಹತಾ ನಿರ್ಧಾರಕ ಮಂಡಲಿ (ಇನ್‌ಎಎಸಿ) ಮತ್ತು 1996ರಲ್ಲಿ ಅಹಮದಾಬಾದಿನಲ್ಲಿ ಸ್ಥಾಪನೆಯಾದ ಮಾಹಿತಿ ಮತ್ತು ಗ್ರಂಥಾಲಯ ಜಾಲ (ಇನ್‌ಫಾರ್ಮೇಶನ್ ಅಂಡ್ ಲೈಬ್ರೇರಿ ನೆಟ್‌ವರ್ಕ್ ಐಎನ್‌ಎಫ್‌ಎಲ್‌ಐಬಿಎನ್‌ಇಟಿ).

ಬಹಳ ಕಡಿಮೆ ಪ್ರಮಾಣದ ಸಂಪನ್ಮೂಲಗಳನ್ನು ಉತ್ತಮ ನಿರೀಕ್ಷೆಯೊಂದಿಗೆ ಹಂಚಿಕೊಂಡು ಉನ್ನತ ಶಿಕ್ಷಣಕ್ಕೆ ಹೊಸ ಅನುಸಂಧಾನವನ್ನು ನೀಡಿದ ದೃಷ್ಟಾಂತಗಳಾಗಿ ಈ ಆರು ಕೇಂದ್ರಗಳನ್ನು ನಾವೀಗ ವಿವರಿಸಲಿದ್ದೇವೆ. ಈ ಎಲ್ಲಾ ಕೇಂದ್ರಗಳು ಸ್ವಾಯತ್ತ ನೋಂದಾಯಿತ ಸಂಘಗಳಾಗಿವೆ. ಇವುಗಳ ನಿರ್ವಹಣೆಯು ತಜ್ಞರನ್ನೊಳಗೊಂಡ ಉನ್ನತ ಸಂಸ್ಥೆಗಳದ್ದಾಗಿದೆ. ಆದರೆ ಬಹುಪಾಲು ಧನಸಹಾಯ ಮಾತ್ರ ಯುಜಿಸಿಯದ್ದಾಗಿದೆ. ಕೆಲವು ಕೇಂದ್ರಗಳು ಪೂರ್ಣಪ್ರಮಾಣದಲ್ಲಿ ಸ್ವಾಯತ್ತವಾಗಿರದಿದ್ದರೂ, ಅವು ಅಂತರ್–ವಿಶ್ವವಿದ್ಯಾಲಯ ಕೇಂದ್ರಗಳ ಮನೋವೃತ್ತಿಯನ್ನು ಅನುಸರಿಸುತ್ತವೆ. ಉದಾಹರಣೆಗೆ ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯದ ಕ್ರಿಸ್ಟಲ್ ಗ್ರೋಥ್ ಸೆಂಟರ್ ಮತ್ತು ಶಿಮ್ಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನಸ್ಡ್ ಸ್ಟಡೀಸ್‌ನಲ್ಲಿ ಸ್ಥಾಪನೆಯಾಗಿರುವ ಸೆಂಟರ್ ಫಾರ್ ಹ್ಯುಮೆನೆಟಿಕ್ಸ್ ಅಂಡ್ ಸೋಶಿಯಲ್ ಸೈನ್ಸ್‌ಸ್.

## ಅಣುವಿಜ್ಞಾನ ಕೇಂದ್ರ (ಎನ್‌ಎಸ್‌ಸಿ)

**ಧ್ಯೇಯ:** ವಿಶ್ವವಿದ್ಯಾಲಯದ ವ್ಯವಸ್ಥೆಯೊಳಗೆ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕ ಸಂಶೋಧನೆಗಾಗಿ ವೇಗವರ್ಧನೆಯನ್ನು ಆಧರಿಸಿದ ಜಾಗತಿಕ ಮಟ್ಟದ ಪ್ರಾಯೋಗಿಕ ಸೌಲಭ್ಯಗಳನ್ನು ಒದಗಿಸುವುದು ಅಣುವಿಜ್ಞಾನ ಕೇಂದ್ರದ (ಎನ್‌ಎಸ್‌ಸಿ) ಧ್ಯೇಯವಾಗಿದೆ. ಅಂತರ್ ವಿಶ್ವವಿದ್ಯಾಲಯ ಸ್ವರೂಪವನ್ನು ಉಳಿಸಿಕೊಳ್ಳುವ ಸಲುವಾಗಿ ಕೇಂದ್ರವು ವಿಶ್ವವಿದ್ಯಾಲಯದ ಅಧ್ಯಾಪಕ ವೃಂದವನ್ನು ತೊಡಗಿಸಿಕೊಳ್ಳುವ ಯೋಜನಾ ಪದ್ಧತಿಯಲ್ಲಿ ಎಲ್ಲಾ ಸಂಶೋಧನಾ ಸೌಲಭ್ಯಗಳಲ್ಲಿ ವೇಗೋತ್ಕರ್ಷಕ್ಕೆ ಒಳಪಟ್ಟ ಸಂಕೇತಗಳನ್ನು ಬಳಸುವಂತಹ ವಿಧಾನವನ್ನು ಅಳವಡಿಸಿಕೊಂಡಿದೆ.

**ಸೌಕರ್ಯಗಳು:** ಬಹುತೇಕ ಎಲ್ಲಾ ಮೂಲಧಾತುಗಳ ಜಡ ವಿದ್ಯುದ್ವಾಹಿ ಕಣ ಸಂಕೇತಗಳನ್ನು ಒದಗಿಸುವುದಕ್ಕಾಗಿ ವೇಗವರ್ಧಕ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕೇಂದ್ರವು ಪ್ರಥಮ ಹಂತದಲ್ಲಿ 15 ಟ್ಯಾಂಡೆಮ್ ವಾನ್–ದ–ಗ್ರಾಫ್‌ನ್ನು ನಿಯೋಜಿಸಿದೆ. ಈಗ ಇದು 20 MeVಯಿಂದ 270 MeVವರೆಗಿನ ಸಾಮರ್ಥ್ಯದ ವ್ಯಾಪ್ತಿಯಲ್ಲಿ ಅಯಾನುಗಳ ಸಂಕೇತಗಳನ್ನು ಒದಗಿಸುತ್ತದೆ. ಇವುಗಳನ್ನು ಉಪಯೋಗಿಸುವ ಸಮುದಾಯದವರು ಸ್ಥಾಪಿಸಿದ ಪ್ರಾಯೋಗಿಕ ಸೌಲಭ್ಯಗಳನ್ನೊಳಗೊಂಡ ಪ್ರದೇಶಗಳಲ್ಲಿ ಈ ಕೆಳಗಿನವುಗಳು ಸೇರಿವೆ: ನ್ಯೂಕ್ಲಿಯರ್ ಸ್ಟ್ರಕ್ಚರ್ ರಿಯಾಕ್ಷನ್ ಡೈನಾಮಿಕ್ಸ್; ಸ್ವಿಫ್ಟ್ ಹೆವಿ ಐಆನ್ಸ್ ಆನ್ ಮೆಟೀರಿಯಲ್ಸ್ ಇಂಜಿನಿಯರಿಂಗ್ ಆಂಡ್ ಕ್ಯಾರೆಕ್ಟರೈಜೇಶನ್; ಅಟಾಮಿಕ್ ಫಿಸಿಕ್ಸ್ ಆಫ್ ಹೈ ಚಾರ್ಜ್‌ಡ್ ಐಆನ್ಸ್; ರೇಡಿಯೇಶನ್ ಬಯಾಲಾಜಿ ಆಂಡ್ ರೇಡಿಯೇಶನ್ ಕೆಮಿಸ್ಟ್ರಿ; ಮತ್ತು ಇದಕ್ಕೆ ಸಂಬಂಧಿಸಿದ ಕ್ಷೇತ್ರಗಳು.

ಹೆವಿ ಐಯಾನ್ ರಿಯಾಕ್ಷನ್ ಅನಲೈಜರ್ (ಹೆಚ್‌ಐಆರ್‌ಎ) ಎಂದು ಕರೆಯಲ್ಪಡುವ ರಿಕಾಯಲ್ ಮಾಸ್ ಸ್ಪೆಕ್ಟ್ರೋಮೀಟರ್‌ನ್ನು ವಿನ್ಯಾಸಗೊಳಿಸಿ, ನಿಯೋಜಿಸಲಾಗಿದೆ. ಜಗತ್ತಿನಲ್ಲಿಯೇ ಅತ್ಯಂತ ಅಪರೂಪವಾಗಿರುವವುಗಳಲ್ಲಿ ಇದು ಒಂದು. ಇನ್ನೊಂದು ಯೋಜನೆಯ ಮೂಲಕ ಸ್ಥಾಪಿತಗೊಂಡಿರುವ ಗಾಮಾ ಡಿಟೆಕ್ಟರ್ ಅರ್ರೇ (ಜಿಡಿಎ) ನೊಂದಿಗೆ ಈ ರಿಕಾಯಲ್ ಮಾಸ್ ಸ್ಪೆಕ್ಟ್ರೋಮೀಟರ್, ಅಣು ರಚನಾ ಭೌತಶಾಸ್ತ್ರದ ಗಮನ ಕೇಂದ್ರಿತ ಪ್ರದೇಶಗಳಲ್ಲಿ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕ ಸಂಶೋಧನೆಗೆ ಉತ್ಕೃಷ್ಟವಾದ ಸೌಲಭ್ಯಗಳನ್ನು ಒದಗಿಸುತ್ತದೆ.

ಇತ್ತೀಚಿಗೆ ಪ್ರಯೋಗಗಳಿಗಾಗಿ ಕೆಲವು ಬೆಳಕಿನ ರೇಡಿಯೋ ವಿಕಿರಣ ಅಯಾನ್ ಬೀಮ್‌ಗಳನ್ನು (ರೇಡಿಯೋ ಆಕ್ಟಿವ್ ಐಯಾನ್ ಬೀಮ್ಸ್–ಆರ್‌ಐಬಿ) ಪಡೆಯಲು ಸ್ಪೆಕ್ಟ್ರೋಮೀಟರ್, ಹೆಚ್‌ಐಆರ್‌ಗಳನ್ನು ಸುಧಾರಣೆಗೆ ಒಳಪಡಿಸಲಾಗಿದೆ. ಮೊದಲು ಪಡೆಯಲಾದ ಆರ್‌ಐಬಿ $^{7}$Be, ಇದು ಶೇಕಡಾ 99. ಶುದ್ಧತೆಯನ್ನು ಹೊಂದಿದ್ದು, 2 ಮಿಮೀ ಜಾಗದಲ್ಲಿ ಕೇಂದ್ರೀಕೃತಗೊಂಡಿದೆ. ಈ $^{7}$Be ದಂಡಿಗೆಯು ಕಡಿಮೆ–ಶಕ್ತಿ ಪ್ರಯೋಗಗಳಿಗೆ ಈಗ ಲಭ್ಯವಿರುವ ಉತ್ತಮ ಬೀಮ್ ಆಗಿದ್ದು, ಖಗೋಳ ಭೌತ ವಿಜ್ಞಾನ, ಅಣು ಭೌತಶಾಸ್ತ್ರ ಮತ್ತು ಭೌತಿಕ ವಿಜ್ಞಾನಗಳಲ್ಲಿನ ಆಸಕ್ತ ಪ್ರಯೋಗಗಳಲ್ಲಿ ಇದನ್ನು ಬಳಸಲಾಗುತ್ತದೆ.

**ಬಳಕೆ:**

ಈ ಸೌಲಭ್ಯಗಳನ್ನು ಸದ್ಯಕ್ಕೆ 57 ವಿಶ್ವವಿದ್ಯಾಲಯಗಳು, 27 ಮಹಾವಿದ್ಯಾಲಯಗಳು, ಎಲ್ಲಾ ಐಐಟಿಗಳು ಮತ್ತು ಇತರ ಅನೇಕ ರಾಷ್ಟ್ರೀಯ ಸಂಸ್ಥೆಗಳು ಬಳಸುತ್ತಿವೆ. ನಿರ್ವಹಣೆಯ ಕಾಲಾವಧಿಗಳನ್ನು ಹೊರತುಪಡಿಸಿ, ದಿನದ ಇಪ್ಪತ್ನಾಲ್ಕು ಗಂಟೆಗಳು ಮತ್ತು ವಾರದ ಏಳೂ ದಿನಗಳಲ್ಲಿ ವೇಗವರ್ಧಕವು ಕಾರ್ಯನಿರ್ವಹಿಸುತ್ತದೆ. ವೇಗವರ್ಧಕ ಬಳಕೆದಾರರ ಸಮಿತಿ(ಎಯುಸಿ) ಕೂಡಾ ಇದೆ. ಇದರ ಅಧ್ಯಕ್ಷರಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿದ್ದು, ಬೇರೆಬೇರೆ ವಿಷಯ ವಿಶ್ವವಿದ್ಯಾಲಯಗಳ ಅನೇಕ ಮಂದಿ ಇದರ ಸದಸ್ಯರಾಗಿದ್ದಾರೆ. ಬೀಮ್‌ನ ಸಮಯವನ್ನು ಅವರ ಸ್ವಂತದ ಸಿಬ್ಬಂದಿವರ್ಗ ನಡೆಸುವಂತಿಲ್ಲ ಎಂಬ ಅನುಸಂಧಾನವನ್ನು ಕೇಂದ್ರ ಅಳವಡಿಸಿಕೊಂಡಿದೆ.

Digitised by Bharatavani, CIIL

ಈ ಕೇಂದ್ರದ ಶೇಕಡಾ 60 ರಷ್ಟು ಬಳಕೆದಾರರು ಸಂಶೋಧನೆಯಲ್ಲಿ ಹೊಸದಾಗಿ ಉಗಮಗೊಳ್ಳುತ್ತಿರುವ ಕ್ಷಿಪ್ರ ಭಾರ ಅಯಾನ್‌ಗಳನ್ನು ಬಳಸುವ ಭೌತಿಕ ಪರಿಷ್ಕರಣ ಮತ್ತು ಪ್ರತ್ಯಕ್ಷ ಗುಣಾರೋಪಣೆಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಅನೇಕ ಆವಿಷ್ಕಾರಗಳಿಗೆ ದಾರಿ ಮಾಡಿ, ಭವಿಷ್ಯದ ಅಳವಡಿಕೆಗಳ ಸಾಧ್ಯತೆಗಳನ್ನು ಮೂಡಿಸಿದೆ. ಒಂದು ಬೀಮ್ ಲೈನ್ ಸಂಪೂರ್ಣವಾಗಿ ಭೌತಿಕ ವಿಜ್ಞಾನದ ಸಂಶೋಧನೆಗೆ ಮೀಸಲಾಗಿದೆ. ಇದರಲ್ಲಿ ಚೆದುರಿಕೊಳ್ಳುವ ಮೂರು ಖೋಲಿಗಳು ಮತ್ತು ದೊಡ್ಡ ಸಂಖ್ಯೆಯ ರೇವುಗಳು ಇವೆ (Ports) ಇವೆ. ಬಳಕೆದಾರರು ತಮ್ಮ ವಿಶಿಷ್ಟ ಪ್ರಾಯೋಗಿಕ ಅಗತ್ಯಗಳಿಗೆ ಅನುಗುಣವಾಗಿ ಇವುಗಳನ್ನು ರಚಿಸಿರುತ್ತಾರೆ. ಒಂದು ಯುಹೆಚ್‌ವಿ ಸ್ಕಾನಿಂಗ್ ಟನ್ನೆಲಿಂಗ್ ಮೈಕ್ರೋಸ್ಕೋಪನ್ನು ಭಾರತದಲ್ಲಿಯೇ ತಯಾರಿಸಲಾಗಿದ್ದು, ಹೊರಮೈ ಅಧ್ಯಯನಕ್ಕಾಗಿ ಇದನ್ನು ಈ ಬೀಮ್‌ನ ಶ್ರೇಣಿಯಲ್ಲಿ ಪ್ರತ್ಯಕ್ಷ ಸಾಧನವಾಗಿ ಸ್ಥಾಪಿಸಲಾಗಿದೆ. ಬಳಕೆದಾರರಿಗೆ ವಿದ್ಯುತ್ ವಾಹಿ ಕಣ–ತೊಡೆದ ಮಾದರಿಗಳ ಪ್ರತ್ಯಕ್ಷ ಸಾಧನ ಅಧ್ಯಯನಗಳನ್ನು ನಡೆಸಲು ಮತ್ತು ಕ್ರಿಯಾಶೀಲ ಮಾಪನಗಳನ್ನು ನಡೆಸಲು ಪ್ರೋತ್ಸಾಹ ನೀಡಲಾಗುತ್ತದೆ.

ಅಣು ಭೌತಶಾಸ್ತ್ರ ಕ್ಷೇತ್ರದ ಸಂಶೋಧನೆಯು ವಿದ್ಯುತ್ವಾಹಿ ಕಣ–ಘರ್ಷಣೆಯ ಅಧ್ಯಯನಗಳಲ್ಲಿ ಕೇಂದ್ರೀಕೃತಗೊಂಡಿದೆ. ನಿಸ್ತಂತುಪ್ರಸರಣ ಜೀವಶಾಸ್ತ್ರದ ಬಳಕೆದಾರರು ಡಿಎನ್‌ಎ ಎಳೆ ಬಿರುಕುಗಳು, ಎಪೊಪ್ಟೋಸಿಸ್‌ಗೆ ಸಂಬಂಧಿಸಿದ ಅಧ್ಯಯನಗಳು ಮತ್ತು ಹೆವಿ ವಿದ್ಯುತ್‌ವಾಹಿ ಆಧರಿಸಿದ ವಿಕಿರಣ ಚಿಕಿತ್ಸೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಧ್ಯಯನ ಮಾಡುತ್ತಾರೆ.

**ಉಪಶಾಖೆಗಳು:**

ವಿಶ್ವವಾತಾವರಣದಲ್ಲಿ ಏಕ ಘಟನೆಯ ತಿರುವು ಮುರುವಾದ ಪರಿಣಾಮಗಳ ಸಾಧನಗಳನ್ನು ಪರೀಕ್ಷಿಸುವುದಕ್ಕಾಗಿ ವೇಗವರ್ಧಕ ಸೌಲಭ್ಯಗಳು ಇಸ್ರೋವಿನ ಉಪಗ್ರಹ ಕಾರ್ಯಕ್ರಮಗಳಿಗೆ ನೆರವಾಗಿವೆ. Rf ಉಪಕರಣಗಳ ಉಪಯೋಗ, ದತ್ತಾಂಶ ಸಂಗ್ರಹಣಾ ವ್ಯವಸ್ಥೆ, ಬೀಮ್‌ನ ರವಾನೆ ಮತ್ತು ಕೇಂದ್ರೀಕರಣ ಉಪಕರಣ ಇತ್ಯಾದಿಗಳ ಅಭಿವೃದ್ಧಿಗಳು, ಕೈಗಾರಿಕೆಗೆ ಮತ್ತು ವಿಶ್ವವಿದ್ಯಾಲಯಗಳಲ್ಲಿನ ದೊಡ್ಡ ಸಂಖ್ಯೆಯ ಆಂತರಿಕ ಅಭಿವೃದ್ಧಿ ಯೋಜನೆಗೆ ತಂತ್ರಜ್ಞಾನವನ್ನು ವರ್ಗಾಯಿಸಿವೆ.

## ಖಗೋಳ ವಿಜ್ಞಾನ ಮತ್ತು ಖಗೋಳ ಭೌತ ವಿಜ್ಞಾನಕ್ಕಾಗಿ ಅಂತರ್‌ವಿಶ್ವವಿದ್ಯಾಲಯ ಕೇಂದ್ರ

## (ಐಯುಸಿಎಎ)

**ಸಂಕ್ಷಿಪ್ತ ಚರಿತ್ರೆ:** ಖಗೋಳ ವಿಜ್ಞಾನ ಮತ್ತು ಖಗೋಳ ಭೌತ ವಿಜ್ಞಾನಕ್ಕಾಗಿ ಅಂತರ್–ವಿಶ್ವವಿದ್ಯಾಲಯ ಕೇಂದ್ರವನ್ನು (ಐಯುಸಿಎಎ) ಡಿಸೆಂಬರ್ 29, 1988ರಂದು ಸ್ಥಾಪಿಸಲಾಯಿತು. ಇದು ಪುಣೆ ವಿಶ್ವವಿದ್ಯಾಲಯದ ಆವರಣದೊಳಗೆ ಇದೆ.

ವಿಶ್ವವಿದ್ಯಾಲಯ ಘಟಕದ ಖಗೋಳ ವಿಜ್ಞಾನ ಮತ್ತು ಖಗೋಳ ಭೌತ ವಿಜ್ಞಾನದಲ್ಲಿ ಅಧ್ಯಾಪನ, ಅಭಿವೃದ್ಧಿ ಮತ್ತು ಸಂಶೋಧನೆಯನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಐಯುಸಿಎಎಯನ್ನು ಸೃಷ್ಟಿಸಲಾಯಿತು. ಇದಕ್ಕಾಗಿ ಬಹು ಕವಲುಳ್ಳ ಅನುಸಂಧಾನವನ್ನು ಕೈಗೊಳ್ಳುವ ಅಗತ್ಯ ಐಯುಸಿಎಎಗೆ ಕಂಡಿದೆ. ಈ ಅನುಸಂಧನದಲ್ಲಿ ಇರಬೇಕಾದುದು: ವಿಶ್ವವಿದ್ಯಾಲಯದ ಶೈಕ್ಷಣಿಕ ಶಿಸ್ತಿಗೆ ಸಂಶೋಧನಾ ಸೌಲಭ್ಯಗಳನ್ನು ಒದಗಿಸುವುದು, ಶಾಲೆಗಳು, ಕಾರ್ಯಾಗಾರಗಳು ಮತ್ತು ಪುನಶ್ಚೇತನ ಬೋಧನಾ ವ್ಯವಸ್ಥೆಯಂತಹ ಶಿಕ್ಷಣಶಾಸ್ತ್ರದ ಚಟುವಟಿಕೆಗಳನ್ನು ವ್ಯವಸ್ಥಿತಗೊಳಿಸುವುದು, ಉಪಕರಣಗಳ ಉಪಯೋಗಕ್ಕೆ ವಿಶೇಷ ಪ್ರಯತ್ನವನ್ನು ನಡೆಸುವುದು, ಬಾಹ್ಯಾಕಾಶ ನಿರೀಕ್ಷಣಾಲಯದಲ್ಲಿ ಅತಿಥಿ–ಅವಲೋಕನಗಳನ್ನು ಬೆಂಬಲಿಸುವುದು ಮತ್ತು ಎಲ್ಲಾ ವರ್ಗಗಳಿಗೆ ಸೇರುವ ಸಾಮಾನ್ಯ ಜನರಿಗೆ, ವಿಶೇಷವಾಗಿ ಶಾಲಾ ಮಕ್ಕಳಿಗಾಗಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮಗಳು.

**ಸಿಬ್ಬಂದಿ:** ಐಯುಸಿಎಎಯ ಆವಣದೊಳಗೆ ಸಂಶೋಧನೆಗೆ, ಅಭಿವೃದ್ಧಿ ಮತ್ತು ಅಧ್ಯಾಪನ ಚಟುವಟಿಕೆಗಳಲ್ಲಿ ನಿರತವಾಗಿರುವ, ಶಿಕ್ಷಣ ಕ್ಷೇತ್ರದ ಮುಖ್ಯ ಸಿಬ್ಬಂದಿಗಳ ಸಣ್ಣ ಗುಂಪು ಇರುತ್ತದೆ. ಇಲ್ಲಿನ ಸಿಬ್ಬಂದಿಗಳು ಪುಣೆಯಲ್ಲಿರುವ ಕೇಂದ್ರದ ಮತ್ತು ದೇಶದ ಎಲ್ಲೆಡೆಗಳ ವಿಶ್ವವಿದ್ಯಾಲಯಗಳು ಮತ್ತು ಮಹಾವಿದ್ಯಾಲಯಗಳ ಆವರಣಗಳ ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸುತ್ತಾರೆ. ಜೊತೆಗೆ ಕೇಂದ್ರದ ಸೌಲಭ್ಯಗಳು ಮತ್ತು ವಿಶ್ವವಿದ್ಯಾಲಯಗಳ ಸಹಯೋಗಗಳು, ಅಂತಾರಾಷ್ಟ್ರೀಯ ಜೋಡಣೆಗಳಂತಹ ಇತರ ಕಾರ್ಯಕ್ರಮಗಳನ್ನು ಕೂಡಾ ಆಯೋಜಿಸುತ್ತಾರೆ. ಐಯುಸಿಎಎಯ ಶೈಕ್ಷಣಿಕ ಘಟಕವು ಪ್ರಮುಖ ಅಧ್ಯಾಪಕವರ್ಗದವರ ಮಾರ್ಗದರ್ಶನದಲ್ಲಿ ಕೆಲಸ ಮಾಡುವ ಅನೇಕ ಸಂಶೋಧನೋತ್ತರ ವಿದ್ವಾಂಸರು ಮತ್ತು ಸಂಶೋಧನಾ ವಿದ್ಯಾರ್ಥಿಗಳು, ದೇಶದ ವಿಶ್ವವಿದ್ಯಾಲಯಗಳಿಂದ ಭೇಟಿ ನೀಡಲು ಬರುವ ವಿಜ್ಞಾನಿಗಳು ಮತ್ತು ಹೊರದೇಶದ ಸಂಪನ್ಮೂಲ ವ್ಯಕ್ತಿಗಳ ಉಪಸ್ಥಿತಿಯಿಂದಾಗಿ ಉನ್ನತ ಸ್ಥಾನವನ್ನು ಹೊಂದಿದೆ.

ಕೇಂದ್ರದ ವೈಜ್ಞಾನಿಕ ಸೌಲಭ್ಯಗಳ ನಿರ್ವಹಣೆಯನ್ನು ವಿಜ್ಞಾನದ ಸಿಬ್ಬಂದಿಗಳು ನಡೆಸಿದರೆ, ಇತರ ಮೂಲಭೂತ ವ್ಯವಸ್ಥೆಗಳನ್ನು ಆಡಳಿತಾತ್ಮಕ ಮತ್ತು ಬೆಂಬಲಿತ ಸಿಬ್ಬಂದಿಗಳು ನೋಡಿಕೊಳ್ಳುತ್ತಾರೆ. ಸ್ವಾವಲಂಬನೆ ಮತ್ತು ಸ್ವಯಂಚಾಲನೆಯ ಪ್ರಜ್ಞೆಯನ್ನು ಹೊಂದಿರುವ ಐಯುಸಿಎ ಶಿಕ್ಷಣೇತರ ಬೆಂಬಲಿತ ಸಿಬ್ಬಂದಿಗಳನ್ನು ಬಳಸುವ ವಿಚಾರದಲ್ಲಿ ಯಾವಾಗಲೂ ಮಿತವ್ಯಯ ತೋರಿದೆ.

**ವೈಜ್ಞಾನಿಕ ಸೌಕರ್ಯಗಳು:**

ವರಾಹಮಿಹಿರ ಸೌಧದಲ್ಲಿರುವ ಗ್ರಂಥಾಲಯವು 20,000 ಗ್ರಂಥಗಳನ್ನು ಹೊಂದಿದ್ದು, ಸುಮಾರು 100 ವೈಜ್ಞಾನಿಕ ಪತ್ರಿಕೆಗಳಿಗೆ ಚಂದಾದಾರವಾಗಿದೆ. ಭಾರತದಲ್ಲಿ ಖಗೋಳಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರದ (A&A) ವಿಶೇಷತೆಯನ್ನು ಹೊಂದಿರುವ ಅತ್ಯಂತ ಪ್ರಗತಿಪರ ಮತ್ತು ಆಧುನಿಕ ಗ್ರಂಥಾಲಯಗಳಲ್ಲಿ ಇದು ಒಂದಾಗಿದೆ.

Digitised by Bharatavani, CIIL

ಇಡೀ ದೇಶದಲ್ಲಿ ಗಣಕೀಕೃತ ದತ್ತಸಂಚಯಕ್ಕಾಗಿ ಅಕಾರಾದಿ ಸೂಚಿಯನ್ನು ಕೈಬಿಟ್ಟ ಮೊತ್ತಮೊದಲ ಗ್ರಂಥಾಲಯ ಇದಾಗಿದೆ. ಸಿಡಿ ರೋಮ್ಸ್ ಮತ್ತು ಪತ್ರಿಕೆಗಳ ವಿದ್ಯುನ್ಮಾನ ಆವೃತ್ತಿಗಳ ಬೆಳವಣಿಗೆಯ ವಿಭಾಗ ಇಲ್ಲಿದೆ. ವಿಶ್ವವಿದ್ಯಾಲಯ ಘಟಕದಲ್ಲಿ ಖಗೋಳಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರದ ಪ್ರಮುಖ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತಿರುವ ಈ ಗ್ರಂಥಾಲಯವು ವಿಶ್ವವಿದ್ಯಾಲಯದ ಆವರಣದೊಳಗೆ ಮತ್ತು ಹೊರಗೆ ಕೂಡಾ ವ್ಯಾಪಕವಾಗಿ ಬಳಕೆಯಾಗುತ್ತಿದೆ. ದೇಶದ ಎಲ್ಲಾ ಬಳಕೆದಾರರಿಗೆ ಅಗತ್ಯವಾದ ಸಾಹಿತ್ಯದ ಉಲ್ಲೇಖಗಳು, ಪ್ರತಿಗಳು ಇತ್ಯಾದಿಗಳನ್ನು ಒದಗಿಸುವುದರಲ್ಲಿ ವಿಶ್ವವಿದ್ಯಾಲಯದ ಆವಣರದ ಒಳಗಿನ ಮತ್ತು ಹೊರಗಿನ ಕಾರ್ಯವ್ಯಾಪ್ತಿ ಹೊಂದಿದೆ.

ಖಗೋಳ ವಿಜ್ಞಾನದ ಉಪಕರಣೀಕರಣದಲ್ಲಿ ನಿಮ್ಮಷ್ಟಕ್ಕೆ ನೀವೇ ಮಾಡಿ ಎನ್ನುವ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಸಲುವಾಗಿ ವಿಶ್ವವಿದ್ಯಾಲಯಗಳ ವಿಭಾಗಗಳಲ್ಲಿ ಮತ್ತು ಮಹಾವಿದ್ಯಾಲಯಗಳಲ್ಲಿ ಉಪಕರಣಗಳ ಪ್ರಯೋಗಶಾಲೆಯನ್ನು ಸ್ಥಾಪಿಸಲಾಗಿದೆ. ಫೊಟೋಮೀಟ್‌ಗಳಂತಹ ಸರಳ ಯೋಜನೆಗಳೊಂದಿಗೆ ಸ್ವಯಂಚಾಲಿತ 14 ಅಂಗುಲದ ದೂರದರ್ಶಕ ಅಥವಾ ಸಂಶೋಧನಾ ಉಪಕರಣಗಳಾದ ಇಮೇಜಿಂಗ್ ಪೋಲಾರಿಮೀಟರ್‌ನಂತಹ ಹೆಚ್ಚು ದುಬಾರಿ ಉಪಕರಣಗಳನ್ನು ಐಯುಸಿಎಎಯ ಸಿಬ್ಬಂದಿವರ್ಗದವರು ವಿಶ್ವವಿದ್ಯಾಲಯದ ಘಟಕದ ಆಸಕ್ತ ಅಧ್ಯಾಪಕ ವೃಂದದ ಸದಸ್ಯರ ಸಹಯೋಗದೊಂದಿಗೆ ತಯಾರಿಸುತ್ತಾರೆ. ಈ ರೀತಿಯ ಯೋಜನೆಗಳನ್ನು ಕೈಗೊಳ್ಳುವುದಕ್ಕಾಗಿ ಪ್ರಯೋಗಶಾಲೆಯಲ್ಲಿ ಎರಡು ಪ್ರತ್ಯೇಕ ಭಾಗಗಳು ಇವೆ, ಅವುಗಳೆಂದರೆ ದೃಗ್ವಿಜ್ಞಾನ (ಆಪ್ಟಿಕ್ಸ್) ವಿಭಾಗ ಮತ್ತು ವಿದ್ಯುನ್ಮಾನ (ಇಲೆಕ್ಟ್ರಾನಿಕ್ಸ್) ವಿಭಾಗ.

ಗಣಕಕೇಂದ್ರ ಮತ್ತು ಅದರೊಂದಿಗೆ ಜೋಡಿಸಿಕೊಂಡಿರುವ ಖಗೋಳ ದತ್ತಾಂಶ ಕೇಂದ್ರಗಳು ಐಯುಸಿಎಎಯಲ್ಲಿನ ಖಗೋಳ ಕ್ಷೇತ್ರದ ಸಂಶೋಧನೆಗೆ ಅನಿವಾರ್ಯವೆಂದು ಸಾಬೀತುಪಡಿಸಿವೆ. ಗಣಕಕೇಂದ್ರದಲ್ಲಿ ಜಾಲಕ್ಕೆ ಒಳಪಟ್ಟಿರುವ ಸುಮಾರು 30 ಪುಟ್ಟ ಉನ್ನತ ಗಣಕ ಕಾರ್ಯನಿವೇಶನಗಳು ಮತ್ತು ಅತ್ಯುನ್ನತ ಕಾರ್ಯನಿರ್ವಹಣೆಯ ಗಣಕಯಂತ್ರಗಳ ಜಾಲವಿದೆ. ಇದನ್ನು ಜೋಡಣೆಯೊಂದರ ಮೂಲಕ ವಿಶ್ವವಿದ್ಯಾಲಯದ ಆವರಣದ ಎಲ್ಲಾ ಕಡೆಗಳಿಂದ ಸಹಭಾಗಿಯಾಗಿಸಬಹುದಾಗಿದೆ. ದತ್ತಾಂಶ ಕೇಂದ್ರವು ಜಗತ್ತಿನ ಪ್ರಮುಖ ಖಗೋಳಶಾಸ್ತ್ರದ ದತ್ತಸಂಚಯದೊಂದಿಗೆ ಪ್ರತ್ಯಕ್ಷಸಾಧನವಾಗಿ ಗಣಕ ಸಂಪರ್ಕವನ್ನು ಒದಗಿಸುತ್ತದೆ. ಜೊತೆಗೆ, ವಿದ್ಯುನ್ಮಾನ ಅಂಚೆಯ ಜಾಲವು ಅಂತಾರಾಷ್ಟ್ರೀಯ ವೈಜ್ಞಾನಿಕ ಸಮುದಾಯದೊಂದಿಗೆ ಅಂತರ್‌ಜಾಲದ ಮೂಲಕ ತಕ್ಷಣ ಸಂಪರ್ಕವನ್ನು ಒದಗಿಸಿಕೊಡುತ್ತದೆ.

ಪುಣೆಯಿಂದ 80 ಕಿ.ಮೀ. ದೂರದಲ್ಲಿರುವ ಗಿರವಳ್ಳಿಯಲ್ಲಿ ಸ್ಥಾಪನೆಗೊಳ್ಳುವುದಕ್ಕಾಗಿ ಹೊಸ ತಂತ್ರಜ್ಞಾನದ 2 ಮೀಟರ್ ಕಿಂಡಿಯುಳ್ಳ ದೃಷ್ಟಸಾಧಕ ದೂರದರ್ಶಕವು ಪೂರ್ಣತೆಯ ಹಂತದಲ್ಲಿದೆ. ಇದು ವಿಶ್ವವಿದ್ಯಾಲಯಗಳ ಬಳಕೆದಾರರಿಗೆ ಈವರೆಗಿನ ಅವಲೋಕನ ಸೌಕರ್ಯಗಳನ್ನು ಒದಗಿಸುತ್ತದೆ. ಇದರಲ್ಲಿ ಪ್ರಾರಂಭದ ಉಪಕರಣವಾಗಿ ಅಪ್ಟಿಕಲ್ ಇಮೇಜರ್ ಸ್ಪೆಕ್ಟ್ರೋಗ್ರಾಫ್ ಇರುತ್ತದೆ. ಮುಂದೆ ಇನ್ನು ಅಧಿಕ ಹೆಚ್ಚು ಉಪಕರಣಗಳು ತಯಾರಾಗುವ ನಿರೀಕ್ಷೆ ಇರುತ್ತದೆ.

**ಸಾಂಘಿಕ (ಸಹವಾಸಿ) ಕಾರ್ಯಕ್ರಮಗಳು :**

ಅಂತರ್–ವಿಶ್ವವಿದ್ಯಾಲಯ ಕೇಂದ್ರದಲ್ಲಿ ತಮ್ಮ ಸಂಶೋಧನಾ ಸಮಸ್ಯೆಗಳ ಕುರಿತು ಕೆಲಸ ಮಾಡುವುದಕ್ಕಾಗಿ ದೇಶದ ಎಲ್ಲಾ ವಿಶ್ವವಿದ್ಯಾಲಯಗಳ ಶಿಕ್ಷಣತಜ್ಞರಿಗೆ ಅವಕಾಶವಿರುತ್ತದೆ. ಈ ನಿಟ್ಟಿನಲ್ಲಿ ಅಂತರ್–ವಿಶ್ವವಿದ್ಯಾಲಯ ಕೇಂದ್ರವು, ಕೇಂದ್ರೀಕೃತ ಸೌಕರ್ಯಗಳನ್ನು ನೀಡುವುದು ಮತ್ತು ಅಗತ್ಯವಿದ್ದಾಗಲೆಲ್ಲಾ ಕೇಂದ್ರಕ್ಕೆ ಭೇಟಿ ನೀಡಲು ಭಾವೀ ಬಳಕೆದಾರರಿಗೆ ಸಾಧ್ಯವಾಗುವಂತೆ ನೋಡಿಕೊಳ್ಳುವುದು.

ಪುಣೆಯಲ್ಲಿನ ಸೌಕರ್ಯವನ್ನು ವಿಶ್ವವಿದ್ಯಾಲಯದ ಶಿಕ್ಷಣತಜ್ಞರು ಬಳಸಲು ಅನುಕೂಲವಾಗುವಂತೆ, ಐಯುಸಿಎಎಯಲ್ಲಿ ತನ್ನ ಸಾಂಘಿಕ ಕಾರ್ಯಕ್ರಮಗಳಿಗಾಗಿ ಗುರುತಿಸಲಾದ ಹಣಸಂಚಯ (ಫಂಡ್ಸ್) ಇರುತ್ತದೆ. ಈ ಕಾರ್ಯಕ್ರಮದ ಕೆಳಗೆ ಓರ್ವ ಜೊತೆಗಾರ (ಸಹಕಾರಿ) ಸದಸ್ಯರು ತನ್ನ ಸಂಶೋಧನಾ ಕಾರ್ಯವನ್ನು ನಡೆಸುವ ಸಲುವಾಗಿ ಪುಣೆಗೆ ಪ್ರಯಾಣ ಬೆಳೆಸಿ, ಒಂದು ಅವಧಿಗೆ ಹಲವು ವಾರಗಳ ಕಾಲ ಆವರಣದಲ್ಲಿ ನೆಲೆಸಲು ಅವಕಾಶವಿದೆ. ಈಗ ಸಹಕಾರಿ ಸದಸ್ಯರ ಸಂಖ್ಯೆ 80 ಇದ್ದು, ಇದು ಕ್ರಮೇಣ 100ರ ಸಂಖ್ಯೆಯನ್ನು ತಲುಪುವ ನಿರೀಕ್ಷೆ ಇದೆ. ಐಯುಸಿಎಎ ನೊಂದಿಗಿನ ಪರಸ್ಪರ ಪ್ರತಿಕ್ರಿಯೆಯಿಂದಾಗಿ ವಿಶ್ವವಿದ್ಯಾಲಯದ ಖಗೋಳಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರದ ತಜ್ಞರ ಪ್ರಕಟಣೆಗಳ ಸಂಖ್ಯೆ ಮತ್ತು ಗುಣಮಟ್ಟ ಗಮನಾರ್ಹ ರೀತಿಯಿಂದ ಪ್ರಗತಿಯನ್ನು ಸಾಧಿಸಿದೆ.

**ವಿಜ್ಞಾನ ಜನಪ್ರಿಯಗೊಳಿಸುವಿಕೆ :**

ಸಾಂಸ್ಥಿಕವಾಗಿ ಮತ್ತು ಅವರ ವೈಯಕ್ತಿಕ ಸಾಮರ್ಥ್ಯಗಳಲ್ಲಿ, ಐಯುಸಿಎಎಯ ಅಧ್ಯಾಪಕವೃಂದ ಮತ್ತು ವಿಜ್ಞಾನದ ಸಿಬ್ಬಂದಿವರ್ಗ ವ್ಯಾಪಕವಾಗಿ ಚಾಚಿಕೊಂಡಿರುವ ಸಾರ್ವಜನಿಕ ಕಾರ್ಯಕ್ರಮಗಳಿಗೆ ಕೊಡುಗೆಯನ್ನು ನೀಡುತ್ತಿದೆ. ಶಾಲಾ ಮಕ್ಕಳಿಗಾಗಿ (7ರಿಂದ 12 ವರ್ಗಗಳನ್ನಾಗಿ) ಉಪನ್ಯಾಸಗಳನ್ನು ನೀಡಲಾಗುತ್ತದೆ. ಮಾಧ್ಯಮಿಕ ಶಾಲಾ ಮಕ್ಕಳಿಗಾಗಿ ನಡೆಸುವ ಬೇಸಿಗೆ ಯೋಜನಾ ಕಾರ್ಯಕ್ರಮಗಳು ಅದ್ಭುತ ರೀತಿಯಲ್ಲಿ ಜನಪ್ರಿಯವಾಗಿವೆ. ದೂರದರ್ಶಕ ತಯಾರಿಕೆಯಂತಹ ಕಾರ್ಯಕ್ರಮಗಳ ಮೂಲಕ ಹವ್ಯಾಸಿ ಖಗೋಳಶಾಸ್ತ್ರಜ್ಞರೊಂದಿಗೆ ಕೂಡಾ ಪ್ರತಿಕ್ರಿಯಾತ್ಮಕ ಸಂಬಂಧವನ್ನು ಐಯುಸಿಎಎ ಬೆಳೆಸಿಕೊಂಡಿದೆ.

**ಅಣುಶಕ್ತಿ ಸೌಕರ್ಯಗಳ ವಿಭಾಗಕ್ಕೆ ಅಂತರ್‌ವಿಶ್ವವಿದ್ಯಾಲಯಗಳ ಒಕ್ಕೂಟ**

**(ಐಯುಸಿ–ಡಿಇಎಫ್)**

ಅಣುಶಕ್ತಿ ಸೌಕರ್ಯಗಳ ವಿಭಾಗಕ್ಕಾಗಿ ಅಂತರ್–ವಿಶ್ವವಿದ್ಯಾಲಯ ಒಕ್ಕೂಟವನ್ನು 1989ರಲ್ಲಿ ಸ್ಥಾಪಿಸಲಾಯಿತು.

Digitised by Bharatavani, CIIL

ಇದು ಸ್ವಾಯತ್ತ ಸಂಸ್ಥೆಯಾಗಿದ್ದು ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ಸಂಪೂರ್ಣ ಆರ್ಥಿಕ ನೆರವನ್ನು ಪಡೆದಿದೆ. ಇದರ ಸ್ಥಾಪನೆಗಿಂತ ಮೊದಲು ಭಾರತ ಸರ್ಕಾರದ ಅಣುಶಕ್ತಿ ವಿಭಾಗ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಪರಸ್ಪರ ಅರ್ಥೈಸುವಿಕೆಯ ನಿವೇದನಾ ಪತ್ರಕ್ಕೆ ಸಹಿ ಹಾಕಿದ್ದು, ಇದರ ಅನ್ವಯ ದೇಶದ ಎಲ್ಲಾ ಭಾಗಗಳ ವಿಶ್ವವಿದ್ಯಾಲಯಗಳ ವಿಜ್ಞಾನಿಗಳಿಗೆ ತಮ್ಮ ಸಂಶೋಧನಾ ಕಾರ್ಯಕ್ಕಾಗಿ ಅಣುಶಕ್ತಿ ವಿಭಾಗವು ತನ್ನ ಮುಖ್ಯ ಸೌಕರ್ಯಗಳನ್ನು ಪುಕ್ಕಟ್ಟೆಯಾಗಿ ನೀಡುವುದಕ್ಕೆ ಒಪ್ಪಿಗೆ ನೀಡಿದೆ. ಹೀಗೆ ಗುರುತಿಸಲ್ಪಟ್ಟ ಸಂಶೋಧನಾ ಸೌಕರ್ಯಗಳೆಂದರೆ ಮುಂಬೈನ ಧ್ರುವ ರಿಯಾಕ್ಟರ್, ಕೊಲ್ಕೊತ್ತಾದ ವೇರಿಯೇಬಲ್ ಎನರ್ಜಿ ಸೈಕ್ಲೊಟ್ರಾನ್ ಮತ್ತು ಇಂದೋರಿನ ಸಿಂಕ್ರೊಟ್ರಾನ್‌ನಿಂದ ಅನುಕ್ರಮವಾಗಿ ನ್ಯೂಟ್ರಾನ್, ಚಾರ್ಜ್‌ಡ್ ಪಾರ್ಟಿಕಲ್ಸ್ ಮತ್ತು ಫೋಟೋನ್ ಬೀಮ್ಸ್‌ಗಳನ್ನು ನೀಡುವುದಾಗಿದೆ. ಸರಿಯಾದ ಬೆಂಬಲ ಮತ್ತು ಚೌಕಟ್ಟನ್ನು ಒದಗಿಸಿ, ಯುವಮನಸ್ಸುಗಳಲ್ಲಿ ಹೊಸ ವಿಚಾರಗಳನ್ನು ಸೇರಿಸುವುದರ ಮೂಲಕ ಮತ್ತು ಈ ಸೌಕರ್ಯಗಳ ಬಳಕೆ ಆಧಾರವನ್ನು ವಿಸ್ತರಿಸಿಕೊಳ್ಳುವ ಮೂಲಕ ಅಣುಶಕ್ತಿ ವಿಭಾಗಗಳ ಪ್ರಮುಖ ಕೇಂದ್ರಗಳಲ್ಲಿನ ಜ್ಞಾನ ಉತ್ಪಾದನಾ ಕ್ಷೇತ್ರದಲ್ಲಿ ಉನ್ನತ ಮಟ್ಟದ ಚಲನೆಯನ್ನು ಉಂಟುಮಾಡಬಹುದು ಎಂಬುದನ್ನು ಕೇಂದ್ರವು ಸಾಬೀತು ಪಡಿಸಿದೆ. ಇಂದೋರಿನಿಂದ ಕಾರ್ಯನಿರ್ವಹಿಸುತ್ತಿರುವ ಈ ಕೇಂದ್ರದ ಶಾಖೆಗಳು ಕೊಲ್ಕತ್ತಾ ಮತ್ತು ಮುಂಬೈನಲ್ಲಿ ಇವೆ. ಈ ಶಾಖೆಗಳಲ್ಲಿ ಪ್ರಮುಖ ಡಿಎಇ ಸೌಕರ್ಯಗಳು ಇವೆ.

**ಇಂದೋರ್ ಕೇಂದ್ರ:** ಇಂದೋರಿನ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಟೆಕ್ನಾಲಜಿ (ಸಿಎಟಿ)ಯಲ್ಲಿ, ವಿಶ್ವವಿದ್ಯಾಲಯ ಮತ್ತು ಡಿಎಇಯ ವಿಜ್ಞಾನಿಗಳ ಸಹಕಾರದಿಂದ ಟೋರೈಡಲ್ ಗ್ರೇಟಿಂಗ್ ಮೊನೊಕ್ರೊಮೇಟರ್ ಆಧಾರಿತ ಬೀಮ್‌ಲೈನನ್ನು 450 MeV ಇಲೆಕ್ಟ್ರಾನ್ ಶೇಖರಣಾ ವರ್ತುಲ INDUS-1 ನಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದು ಸರಾಸರಿ 600 ಸ್ಥಿರ ನಿರ್ಧಾರಿತ ಶಕ್ತಿಯನ್ನುಳ್ಳ 10–200eV ಶಕ್ತಿ ಪರಿಮಿತಿಯಲ್ಲಿ ಮೊನೊಕ್ರೊಮೆಟೈಸ್‌ಡ್ ಫೋಟೋನ್‌ಗಳನ್ನು ಒದಗಿಸುತ್ತದೆ. ಇದನ್ನು ಫೋಟೋ–ಇಲೆಕ್ಟ್ರಾನ್ ಸ್ಪೆಕ್ಟ್ರೊಕಾಪಿ ಕಾರ್ಯಕ್ಕಾಗಿ ಪ್ರಾಯೋಗಿಕ ಕೇಂದ್ರದೊಂದಿಗೆ ಜೋಡಿಸಲಾಗಿದೆ. ಇಲ್ಲಿ ಆಂಗಲ್ ಇಂಟಗ್ರೇಟೆಡ್ ಹೆಮಿಸ್ಫೆರಿಕಲ್ ಎಲೆಕ್ಟ್ರಾನ್ ಅನಲೈಜ್ಯರ್‌ನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಪ್ರಾಯೋಗಿಕ ಕೇಂದ್ರವನ್ನೂ ಸೇರಿಸಿ, ಬೀಮ್‌ಲೈನ್ಸ್‌ಗಳನ್ನು ಸ್ಥಳೀಯವಾಗಿಯೇ ಬೆಳೆಸಲಾಗಿದೆ.

ಸಿಂಕ್ರೊಟ್ರಾನ್–ಸಂಬಂಧಿತ ಚಟುವಟಿಕೆಯೊಂದಿಗೆ, ವಿಶ್ವವಿದ್ಯಾಲಯದ ಗುಂಪುಗಳ ನಿರಂತರ ಬೇಡಿಕೆಗಳಿಗೆ ಪ್ರತಿಕ್ರಿಯಾತ್ಮಕವಾಗಿ ಕಡಿಮೆ ಉಷ್ಣತೆ ಮತ್ತು ಮೇಲ್ಮೈ ವಿಶಿಷ್ಟ ಸೌಕರ್ಯಗಳನ್ನು ಕೂಡಾ ಕೇಂದ್ರದಲ್ಲಿ ಸ್ಥಾಪಿಸಲಾಗಿದೆ. ಕಡಿಮೆ ಉಷ್ಣತೆಯಲ್ಲಿ (2 ಕೆಲ್ವಿನ್‌ನಷ್ಟು ಕಡಿಮೆ) ರವಾನೆ, ತಾಪ ಮತ್ತು ಕಾಂತೀಯ ಗುಣಲಕ್ಷಣಗಳನ್ನು ಮತ್ತು ಕೆಲವನ್ನು ಹೆಚ್ಚು ಕಾಂತೀಯ ಕ್ಷೇತ್ರಗಳಲ್ಲಿ (10ಟಿ ವರಗೆ) ಅಳೆಯುವುದಕ್ಕಾಗಿ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇಲ್ಲಿನ ಬಹುಪಾಲು ವಿಶಿಷ್ಟ ಸೌಕರ್ಯಗಳು ಸ್ಥಳೀಯ ಬೆಳವಣಿಗೆ ಮತ್ತು ವಿಶ್ವವಿದ್ಯಾಲಯಗಳಲ್ಲಿ ಪುಕ್ಕಟೆಯಾಗಿ ಲಭ್ಯವಿರುವ ಸೌಕರ್ಯಗಳಿಂದ ಒದಗಿರುವ ತಂತ್ರಜ್ಞಾನದ ಪ್ರತಿಫಲಗಳಾಗಿವೆ. ಕೇಂದ್ರವು ಎಕ್ಸ್–ರೇ, ವೆಲೆನ್ಸ್ ಬ್ಯಾಂಡ್ ಸ್ಪೆಕ್ಟ್ರೊಸ್ಕೊಪಿ, ಅಣುಶಕ್ತಿ ಮೈಕ್ರೊಸ್ಕೊಪಿ, ಮೊಸ್ಸಬೌರ್ ಸ್ಪೆಕ್ಟ್ರೊಸ್ಕೊಪಿ ಇತ್ಯಾದಿಗಳಿಗೆ ಅನೇಕ ಉಪಕರಣ ಸೌಕರ್ಯಗಳನ್ನು ಒದಗಿಸುತ್ತದೆ.

**ಮುಂಬೈ ಕೇಂದ್ರ:**

ಈ ಐಯುಸಿ ಕೇಂದ್ರವು ಅಸ್ತಿತ್ವಕ್ಕೆ ಬರುವ ಮೊದಲೇ ಧ್ರುವ ರಿಯಾಕ್ಟರ್‌ನಲ್ಲಿ ಅನೇಕ ಡಿಫಾಕ್ಟೊಮೀಟರ್‌ಗಳು ಮತ್ತು ಸ್ಪೆಕ್ಟ್ರೊಮೀಟರ್‌ಗಳು ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿದ್ದವು. ಆದುದರಿಂದ ವಿಶೇಷವಾಗಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳಿಗೆ ತರಬೇತಿ ನೀಡಿ, ಅವುಗಳ ಬಳಕೆಗೆ ಅವರನ್ನು ಸಜ್ಜುಗೊಳಿಸುವ ದಿಕ್ಕಿನಲ್ಲಿ ಮುಂಬೈ ಕೇಂದ್ರ ತನ್ನ ಬೆಳವಣಿಗೆಯನ್ನು ಗುರುತಿಸಿಕೊಂಡಿದೆ. ಪ್ರತಿವರ್ಷ ನ್ಯುಟ್ರಾನ್ ಸ್ಕಾಟರಿಂಗ್‌ನ ಕೆಲವು ಕ್ಷೇತ್ರಗಳಲ್ಲಿ ಶಿಕ್ಷಣವನ್ನು ನೀಡುತ್ತಾ ಬಂದಿರುವ ಕೇಂದ್ರವು, ನ್ಯೂಟ್ರಾನ್ ಸ್ಕಾಟರಿಂಗ್‌ನ ಪ್ರಬಲ ಪ್ರಭಾವವನ್ನು ಹೊಂದಿರುವ ಕಾಂತತ್ವ, ಸಾಫ್ಟ್ ಮ್ಯಾಟರ್ ಇತ್ಯಾದಿಗಳ ಕ್ಷೇತ್ರಗಳಲ್ಲಿ ಶಿಕ್ಷಣ ಶಾಲೆ ಕಾರ್ಯಾಗಾರಗಳನ್ನು ನಡೆಸುತ್ತಿದೆ. ಮುಂಬೈ ಕೇಂದ್ರದಲ್ಲಿ ಈಗ ಸುಮಾರು 40 ಸಹಭಾಗಿತ್ವದ ಪ್ರಾಯೋಗಿಕ ಯೋಜನಾ ಪ್ರಸ್ತಾಪಗಳು ಇವೆ. ಐಯುಸಿ ಭಾಗವಹಿಸುವಿಕೆಗಿಂತ ಮೊದಲು ಧ್ರುವ ಎಂದೂ ಪ್ರಯತ್ನಿಸದೇ ಇರುವಂತಹ ಕೆಲವು ಕ್ಷೇತ್ರಗಳಲ್ಲಿ ಕೇಂದ್ರವು ಫಲಿತಾಂಶವನ್ನು ಹೊರತಂದಿದೆ.

**ಕೊಲ್ಕತ್ತಾ ಕೇಂದ್ರ:** ಕೊಲ್ಕತ್ತಾ ಕೇಂದ್ರವು ವೇರಿಯೇಬಲ್ ಎನರ್ಜಿ ಸೈಕ್ಲೊಟ್ರಾನ್‌ನಲ್ಲಿ ಪ್ರಯೋಗಗಳಿಗೆ ಅವಕಾಶ ನೀಡುವುದಕ್ಕೆ ಮತ್ತು ವಿಶ್ವವಿದ್ಯಾಲಯಗಳ ವಿಜ್ಞಾನಿಗಳ ಬಳಕೆಗೆ ಪೂರಕ ಸೌಕರ್ಯಗಳನ್ನು ಒದಗಿಸುವುದಕ್ಕೆ ಬದ್ಧವಾಗಿದೆ. ಈ ಕಾರ್ಯಕ್ರಮದ ಆಶ್ರಯದಲ್ಲಿ ಅನೇಕ ಯೋಜನೆಗಳು ಅನುಷ್ಠಾನಗೊಂಡಿವೆ, ಇದರೊಂದಿಗೆ, ಸುಮಾರು ಹನ್ನೆರಡು ಯೋಜನೆಗಳು ಭುವನೇಶ್ವರದ ಇನ್ಸ್‌ಟಿಟ್ಯೂಟ್ ಆಫ್ ಫಿಸಿಕ್ಸ್‌ನಲ್ಲಿ 3MeV ಟೆಂಡೆಮ್ ಎಕ್ಸಲೇಟರ್‌ನ್ನು ಬಳಸಿ ಅನುಷ್ಠಾನಗೊಳ್ಳಲಿವೆ. 3MeV ಎಕ್ಸಲೇಟರ್ ಮತ್ತು VEC ಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವ ಸಲುವಾಗಿ ಸಕಲ ಸೌಲಭ್ಯಗಳನ್ನುಳ್ಳ ಗುರಿ ಸಿದ್ಧತಾ ಪ್ರಯೋಗಶಾಲೆಯನ್ನು ಸ್ಥಾಪಿಸಲಾಗಿದ್ದು, ಇದರಲ್ಲಿ ಪ್ರಯೋಗಗಳಿಗಾಗಿ ಅನೇಕ ಸಂಖ್ಯೆಯ ಗುರಿಗಳನ್ನು ತಯಾರಿಸಲಾಗಿದ್ದು, ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದೆ.

ಇನ್–ಬೀಮ್, ಆನ್–ಸೈಟ್ ಪ್ರಯೋಗಗಳನ್ನು ಮಧ್ಯಮ ಅರೆ–ಜೀವನವನ್ನು ಹೊಂದಿರುವಂತಹ ರೇಡಿಯೋ ವಿಕಿರಣ ಕಣಕೇಂದ್ರಗಳೊಂದಿಗೆ ನಡೆಸುವ ಸಲುವಾಗಿ ಅನೇಕ

Digitised by Bharatavani, CIIL

ವಿಶ್ವವಿದ್ಯಾಲಯಗಳ ಸಹಕಾರದೊಂದಿಗೆ ಮೊಸ್ಸಬೌರ್, ಸಮಯಾಧಾರಿತ ಪರ್ಟ್ಬರ್ಬ್ಡ್ ಆಂಗ್ಯುಲರ್ ಕೊರಿಲೇಶನ್ (ಟಿಡಿಪಿಎಸಿ) ಮತ್ತು ಪೊಸಿಟ್ರಾನ್ ಅನ್ನಿಹಿಲೇಶನ್ ಪ್ರಯೋಗಶಾಲೆಗಳನ್ನು ಸ್ಥಾಪಿಸಲಾಗಿದೆ.

ಕೇಂದ್ರವು ಕ್ಲೋವರ್ ಡಿಟೆಕ್ಟರ್‌ಗಳು ಮತ್ತು ಹೆಚ್‌ಪಿಜಿಇ ಡಿಟೆಕ್ಟರ್‌ಗಳನ್ನೊಳಗೊಂಡ ಉತ್ತಮ ಗುಣಮಟ್ಟದ ಡಿಟೆಕ್ಟರ್ ಪ್ರಯೋಗಶಾಲೆಯನ್ನು ಕೂಡಾ ನಿರ್ವಹಿಸುತ್ತಿದೆ. ಈ ಡಿಟೆಕ್ಟರ್‌ಗಳನ್ನು ವಿಇಸಿ ಯ ಪ್ರಯೋಗಗಳಲ್ಲಿ ಬಳಸಲಾಗಿದೆ. ತೀರಾ ಇತ್ತೀಚೆಗೆ ಎರಡು ಕ್ಲೋವರ್ ಡಿಟೆಕ್ಟರ್‌ಗಳನ್ನು TIFR ಮತ್ತು ಇತರ ಗುಂಪುಗಳ ಸಹಕಾರದೊಂದಿಗೆ ದೊಡ್ಡ ಪ್ರಯೋಗದ ಭಾಗವಾಗಿಸಲು 14 MeV ಟಂಡೆಮ್ ಎಕ್ಸ್‌ಲೇಟರ್‌ನೊಂದಿಗೆ ಉಪಯೋಗಿಸುವುದಕ್ಕಾಗಿ ಮುಂಬೈಗೆ ರವಾನೆ ಮಾಡಲಾಗಿದೆ.

ಕಳೆದ 14 ವರ್ಷಗಳಲ್ಲಿ ಸಹಭಾಗಿತ್ವದ ಪ್ರಯೋಗಗಳಲ್ಲಿ ನೂರಾರು ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕರನ್ನು ಒಳಗೊಳ್ಳುವ ಮೂಲಕ ಬಳಕೆದಾರರ ಮೂಲಕವು ಸಾಕಷ್ಟು ಪ್ರಮಾಣದಲ್ಲಿ ವಿಸ್ತರಿಸಿಕೊಂಡಿದೆ. ವಿಶ್ವವಿದ್ಯಾಲಯಗಳ ಬಳಕೆದಾರರ ಬೇಡಿಕೆಯ ಫಲವಾಗಿ ಕಟ್ರಾಕರ್ಮ್‌ನ ಇಂದಿರಾಗಾಂಧಿ ಸೆಂಟರ್ ಫಾರ್ ಅಟೋಮ್ಯಾಟಿಕ್ ರಿಸರ್ಚ್‌ನಲ್ಲಿ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಅಕ್ಸಲೇಟರ್, ಮತ್ತು ಭುವನೇಶ್ವರದ ಇನ್ಸ್‌ಟಿಟ್ಯೂಟ್ ಆಫ್ ಫಿಸಿಕ್ಸ್‌ನಲ್ಲಿನ 3MeV ಪೆಲ್ಲಟ್ರಾನ್‌ಗಳನ್ನು ಐಯುಸಿ–ಡಿಎಇಎಫ್‌ನ ಚೌಕಟ್ಟಿನೊಳಗೆ ತರಲಾಗಿದೆ. ಸಧ್ಯ, ಸುಮಾರು 80 ಸಹಭಾಗಿತ್ವದ ಸಂಶೋಧನಾ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ಮೇಲೆ ಉಲ್ಲೇಖಿಸಿದ ಸೌಕರ್ಯಗಳನ್ನೊಳಗೊಂಡ ಅನೇಕ ಸಂಸ್ಥೆಗಳು ಪಾಲುಗೊಂಡಿವೆ.

**ಶೈಕ್ಷಣಿಕ ಸಂವಹನಕ್ಕಾಗಿ ಒಕ್ಕೂಟ** (ಸಿಇಸಿ)

ಭಾರತದ ಉನ್ನತ ಶಿಕ್ಷಣದಲ್ಲಿನ ವಿದ್ಯುನ್ಮಾನ ಮಾಧ್ಯಮದ ಕೇಂದ್ರ ಏಜೆನ್ಸಿಯು ಶೈಕ್ಷಣಿಕ ಸಂವಹನ ಒಕ್ಕೂಟ ಸಿಇಸಿಯಾಗಿದೆ. ಈ ಒಕ್ಕೂಟವನ್ನು 26 ಮೇ, 1993ರಲ್ಲಿ ಸಂಘಗಳ ನೊಂದಾವಣಿ ಅಧಿನಿಯಮ, 1860ರ ಅನ್ವಯ ಸಂಘವಾಗಿ ನೋಂದಣಿ ಮಾಡಲಾಯಿತು. ಸಿಇಸಿಯು ತನ್ನ ಸ್ವಂತ ನಿವೇಶನವನ್ನು ಹೊಂದುವವರೆಗೆ ದೆಹಲಿಯ ಎನ್‌ಎಸ್‌ಸಿಯ ಆವರಣದ ಒಳಗಿನಿಂದಲೇ ಕಾರ್ಯನಿರ್ವಹಿಸುತ್ತಿತ್ತು. ಒಕ್ಕೂಟದ ಉದ್ದೇಶಗಳು ಹೀಗಿವೆ: ವಿವಿಧ ಮಾಧ್ಯಮ ಕೇಂದ್ರಗಳಲ್ಲಿ ಅಧ್ಯಯನಗಳ ಪ್ರಗತಿ ಮತ್ತು ಶೈಕ್ಷಣಿಕ ಟಿವಿ ಕಾರ್ಯಕ್ರಮಗಳ ಉತ್ಪಾದನೆಯನ್ನು ಸುಸಂಘಟಿತಗೊಳಿಸುವುದು ಮತ್ತು ಅದರ ಮೇಲುಸ್ತುವಾರಿ ನೋಡಿಕೊಳ್ಳುವುದು.

**ಹಿನ್ನೆಲೆ:** ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ ದೂರದರ್ಶನವನ್ನು ಬಳಸುವ ಸಂಪ್ರದಾಯವು ಇನ್ಸಾಟ್ 2ಬಿಯ ಉಡಾವಣೆಯಿಂದ ಪ್ರಾರಂಭವಾಯಿತು. ಈ ಕಾರ್ಯವನ್ನು ಯುಜಿಸಿಗೆ ಒಪ್ಪಿಸಲಾಗಿತ್ತು. ಮಹಾವಿದ್ಯಾಲಯಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಇರುವಂತಹ ಸಾಂಪ್ರದಾಯಿಕ ಅಧ್ಯಾಪನ ವ್ಯವಸ್ಥೆಯ ಮಿತಿಗಳನ್ನು ಮೀರುವ ಅವಕಾಶವಾಗಿ ಯುಜಿಸಿ ಈ ಸಂದರ್ಭವನ್ನು ಪರಿಗಣಿಸಿತು. ದೂರದರ್ಶನದಲ್ಲಿ ಒಂದು ಗಂಟೆಯ ಪ್ರಸಾರಕ್ಕಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಉತ್ಪಾದಿಸುವ ಸಲುವಾಗಿ ಯುಜಿಸಿ–ಇನ್ಸಾಟ್ ಸೆಲ್‌ನ್ನು (ಕೇಂದ್ರವನ್ನು) ಸ್ಥಾಪಿಸಲಾಯಿತು. ಕೆಲವೇ ಸಮಯದಲ್ಲಿ ಕಂಟ್ರೀವೈಡ್ ಕ್ಲಾಸ್‌ರೂಮ್ ಹೆಸರಿನ ಕಾರ್ಯಕ್ರಮಗಳ ಮಾಲಿಕೆಯು ರಾಷ್ಟ್ರೀಯ ಪ್ರಸಾರದಲ್ಲಿ 'ಯುಜಿಸಿ ಕಾರ್ಯಕ್ರಮ'ಗಳಾಗಿ ಅತ್ಯಂತ ಹೆಚ್ಚು ಜನಪ್ರಿಯತೆಯನ್ನು ಪಡೆಯಿತು. 1984ರಲ್ಲಿ ಯುಜಿಸಿ–ಇನ್ಸಾಟ್ ಸೆಲ್ ಸ್ಥಾಪನೆಗೊಂಡದ್ದು ಶೈಕ್ಷಣಿಕ ಸಂವಹನದ ಅಂತರ್ ವಿಶ್ವವಿದ್ಯಾಲಯ ಕೇಂದ್ರ (ಐಯುಸಿಇಸಿ)ವಾಗಿ ಬೆಳೆದು, ಈಗ ಅದನ್ನು ಸಿಇಸಿ ಎಂದು ಕರೆಯಲಾಗುತ್ತದೆ.

**ಕಾರ್ಯಗಳು:** ಸಿಇಸಿಯ ಮುಖ್ಯ ಕಾರ್ಯಗಳೆಂದರೆ : ಶೈಕ್ಷಣಿಕ ಕಾರ್ಯಕ್ರಮಗಳು (ವಿಶೇಷವಾಗಿ ದೃಶ್ಯ ಮತ್ತು ಇದಕ್ಕೆ ಸಂಬಂಧಪಟ್ಟ ಸಹಾಯಕ ಸಾಮಗ್ರಿಗಳ ಉತ್ಪಾದನೆ ಹಾಗೂ ಪ್ರಸಾರವಾಗುವ ಮತ್ತು ಪ್ರಸಾರವಾಗದ ವಿಧಾನಗಳ ಮೂಲಕ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಸೂಕ್ತ ಸೌಕರ್ಯಗಳನ್ನು ಒದಗಿಸುವುದು; ಅನೇಕ ವಿಶ್ವವಿದ್ಯಾಲಯಗಳಲ್ಲಿ ಯುಜಿಸಿ ಸ್ಥಾಪಿಸಿರುವ ಮಾಧ್ಯಮ ಕೇಂದ್ರಗಳ ಚಟುವಟಿಕೆಗಳೊಂದಿಗೆ ಆಪ್ತ ಸಹಭಾವ, ಸುಗಮತ್ವ ಮತ್ತು ಸಂಪೂರ್ಣ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ನೀಡುವುದು; ಕಾರ್ಯಕ್ರಮದ ಪರಿಣಾಮವನ್ನು ನಿರೀಕ್ಷಿಸುವುದಕ್ಕೆ ಸಂಬಂಧಿಸಿದ ಸಂಶೋಧನೆ; ಶೈಕ್ಷಣಿಕ ಕಾರ್ಯಕ್ರಮಗಳ ಕೇಂದ್ರ ಗ್ರಂಥಾಲಯ ಮತ್ತು ದತ್ತಸಂಚಯವನ್ನು ಸೃಷ್ಟಿ ಮಾಡುವುದು; ಶೈಕ್ಷಣಿಕ ಸಂವಹನದ ಕ್ಷೇತ್ರದಲ್ಲಿ ತರಬೇತಿ ಮತ್ತು ಆದ್ಯಂತ ಮಾನವ ಸಂಪನ್ಮೂಲದ ಅಭಿವೃದ್ಧಿ; ಮತ್ತು ಸ್ವದೇಶ ಮತ್ತು ವಿದೇಶಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳ/ಸಾಮಗ್ರಿಗಳ ಹುರುಪಿನ ಮಾರಾಟಗಾರಿಕೆ.

ಈ ಉದ್ಯೋಗಗಳ ಸಾಧನೆಗಾಗಿ ಯುಜಿಸಿ, ಮಾಧ್ಯಮದ ವ್ಯಕ್ತಿಗಳು ಮತ್ತು ದೇಶದಾದ್ಯಂತ ಹರಡಿಕೊಂಡಿರುವ ಮಾಧ್ಯಮ ಕೇಂದ್ರಗಳೆಂದು ಕರೆಯಿಸಿಕೊಳ್ಳುವುದರೊಂದಿಗೆ ಸಿಇಸಿ ಕಾರ್ಯ ನಡೆಸುತ್ತಿದೆ.

**ಮಾಧ್ಯಮ ಕೇಂದ್ರಗಳು:** ಭಾರತದ ಬೇರೆ ಬೇರೆ ಭಾಗಗಳಲ್ಲಿ ವಿಶ್ವವಿದ್ಯಾಲಯಗಳ ಅಧ್ಯಾಪನಾ ಸಂಸ್ಥೆಗಳ ಆವರಣದೊಳಗೆ ಮಾಧ್ಯಮ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಇರುವ ಒಟ್ಟು 17 ಮಾಧ್ಯಮ ಕೇಂದ್ರಗಳಲ್ಲಿ 7 ಶೈಕ್ಷಣಿಕ ಮಾಧ್ಯಮ ಸಂಶೋಧನಾ ಕೇಂದ್ರಗಳು (ಇಎಮ್‌ಆರ್‌ಸಿಗಳು) ಮತ್ತು 10 ಶ್ರವ್ಯ–ದೃಶ್ಯ ಸಂಶೋಧನಾ ಕೇಂದ್ರಗಳು (ಎವಿಆರ್‌ಸಿಗಳು). ಈ ಕೇಂದ್ರಗಳಲ್ಲಿ ಅನುಕ್ರಮವಾಗಿ ಗರಿಷ್ಠವಾಗಿ 38 ಮತ್ತು 25 ಸಿಬ್ಬಂದಿಗಳಿದ್ದಾರೆ. ಎರಡೂ ವಿಧದ ಮಾಧ್ಯಮ ಕೇಂದ್ರಗಳಿಗೆ ಶೈಕ್ಷಣಿಕ ಕಾರ್ಯಕ್ರಮಗಳ ಗರಿಷ್ಠವಾಗಿ ಮತ್ತು ಶೈಕ್ಷಣಿಕ ಮಾಧ್ಯಮದಲ್ಲಿ ಸಂಶೋಧನೆಯನ್ನು ನಡೆಸುವ ಕಾರ್ಯವನ್ನು ಒಪ್ಪಿಸಲಾಗಿದೆ. ಎವಿಆರ್‌ಸಿಗಳು

Digitised by Bharatavani, CIIL

ಸಣ್ಣಗಾತ್ರದ ರಚನೆಗಳಾಗಿದ್ದು, ಯುಜಿಸಿ ಮತ್ತು ಸಿಇಸಿಗಳ ಅರ್ಹತಾ ನಿರ್ಧಾರವನ್ನು ಅನುಸರಿಸಿ ಇಎಮ್ಆರ್‌ಸಿಗಳಾಗಿ ಬೆಳೆಯುವ ಸಾಧ್ಯತೆ ಇದೆ. 30 ಮೇ, 2000 ವರೆಗೆ ಮಾಧ್ಯಮ ಕೇಂದ್ರಗಳು ವಾರ್ಷಿಕ ಸರಾಸರಿ 500ಕ್ಕಿಂತ ಸ್ವಲ್ಪ ಹೆಚ್ಚಿನ ದರದಲ್ಲಿ6,647 ಕಾರ್ಯಕ್ರಮಗಳನ್ನು ಉತ್ಪಾದಿಸಿವೆ.

**ಮಾಧ್ಯಮ ಸುರುಳಿ ಗ್ರಂಥಾಲಯ:** ಸಿಇಸಿ ಮಾಧ್ಯಮ ಸುರುಳಿ ಗ್ರಂಥಾಲಯವೆಂದರೆ ಇಎಮ್ಆರ್‌ಸಿಗಳು ಮತ್ತು ಎವಿಆರ್‌ಸಿಗಳಿಂದ ಪಠ್ಯಕ್ರಮಗಳ ವಿಭಿನ್ನ ವಿಷಯಗಳನ್ನು ಆಧರಿಸಿ ಉತ್ಪಾದಿಸಲಾದ ಕಾರ್ಯಕ್ರಮಗಳ ಶೈಕ್ಷಣಿಕ ಜ್ಞಾನ ಪುಷ್ಟೀಕರಣದ ಮತ್ತು ಅವುಗಳನ್ನು ಕಾಪಿಡುವ ಗ್ರಂಥಾಲಯವಾಗಿದೆ. ಗ್ರಂಥಾಲಯದಲ್ಲಿ 157 ವಿಷಯಗಳ ಸುಮಾರು 10,000 ಶೈಕ್ಷಣಿಕ ದೃಶ್ಯ ಸುರುಳಿಗಳು ಇವೆ. ಇದರಲ್ಲಿ 680ಕ್ಕೂ ಮಿಕ್ಕಿದ ಕಾರ್ಯಕ್ರಮಗಳು ಮಾಧ್ಯಮ ಕೇಂದ್ರಗಳಿಂದ ಪುಷ್ಟೀಕರಣವನ್ನು ಆಧರಿಸಿದ ಕಾರ್ಯಕ್ರಮಗಳು. 3000 ಕಾರ್ಯಕ್ರಮಗಳು ಎಮ್‌ಸಿವಿಎಲ್/ವಿಶ್ವವಿದ್ಯಾಲಯ ದೃಶ್ಯ ಉಪನ್ಯಾಸ ಬೋಧನಾ ಶ್ರೇಣಿಯದ್ದಾಗಿವೆ. ಗ್ರಂಥಾಲಯದಲ್ಲಿ ಇತರ ದೇಶಗಳ ದೊಡ್ಡ ಸಂಖ್ಯೆಯ ಶೈಕ್ಷಣಿಕ ಕಾರ್ಯಕ್ರಮಗಳ ಪತ್ರಾಗಾರ ಮತ್ತು ಮಾಧ್ಯಮ ಕೇಂದ್ರಗಳಿಂದ ಸ್ವೀಕರಿಸಲಾದ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಒಳಗೊಂಡಿರುವ ಗ್ರಾಹ್ಯ ಗಣಕೀಕೃತ ದತ್ತಸಂಚಯ ಕೂಡ ಇದೆ. ಹೀಗೆ ಈ ಗ್ರಂಥಾಲಯವು ಅತಿ ಸಂಕ್ಷಿಪ್ತಗೊಳಿಸವಿಕೆ ಪ್ರಸಾರದ ರವಾನೆ ಮತ್ತು ದ್ವಿಪ್ರತೀಕರಣ ಮಾರಾಟ ಮತ್ತು ವಿಷಯಪಟ್ಟಿಯ ಪ್ರಕಟಣೆ ಇತ್ಯಾದಿ ಚಟುವಟಿಕೆಗಳ ಕೇಂದ್ರವಾಗಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

**ಪ್ರಸಾರಣೆ:** ಸಿಡಬ್ಲುಸಿಆರ್ ಪ್ರಸಾರಣೆಯು 15 ಆಗಸ್ಟ್, 1984ರಲ್ಲಿ ಪ್ರಾರಂಭವಾಯಿತು. ಅಲ್ಲಿಂದಲೇ ಇದು ಇನ್ಸಾಟ್ ಉಪಗ್ರಹದಿಂದ ತನ್ನ ಪ್ರಸಾರವನ್ನು ಮುಂದುವರಿಸುತ್ತಿದ್ದು, ದೂರದರ್ಶನದ ಎಲ್ಲಾ ಭೂಪ್ರಸಾರಕಗಳ ಮೂಲಕ ಬಿತ್ತರಗೊಳ್ಳುತ್ತಿದೆ. ಜೊತೆಗೆ ಸಿಇಸಿಯು ಮಾನವ ಸಂಪನ್ಮೂಲ ಇಲಾಖೆಯು 26 ಜನವರಿ, 2000ರಲ್ಲಿ ಪ್ರಾರಂಭಿಸಿದ ಜ್ಞಾನ ದರ್ಶನ ಎಂಬ ಮೊದಲ ಭಾರತೀಯ ಉಪಗ್ರಹ ಶಿಕ್ಷಣ ವಾಹಿನಿಯ ಪ್ರಮುಖ ಪಾಲುಗಾರರಲ್ಲಿ ಒಂದು. ಸಧ್ಯ ಈ ವಾಹಿನಿಯು ಪ್ರತಿದಿನ 19 ಗಂಟೆಗಳ ಪ್ರಸಾರ ಕಾಲವನ್ನು ಹೊಂದಿದ್ದು, ಇದರಲ್ಲಿ ಪ್ರತಿದಿನ ಸಿಇಸಿಯಿಂದ ಬರುವಂತಹ ಎರಡೂವರೆ ಗಂಟೆಗಳ ಶೈಕ್ಷಣಿಕ ಕಾರ್ಯಕ್ರಮಗಳು ಇವೆ.

**ಪ್ರಯೋಗಗಳು:** ದೂರದರ್ಶನದ ರಾಷ್ಟ್ರ ಜಾಲದಲ್ಲಿ 1991–1994ರ ಅವಧಿಯಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳಾಗಿ ದ್ವಿ–ಮಾರ್ಗದ ಧ್ವನಿ ಮತ್ತು ಏಕ–ಮಾರ್ಗದ ದೃಶ್ಯ ಬಳಕೆಯಲ್ಲಿ ಎರಡು ಪ್ರಯೋಗಗಳನ್ನು ನಡೆಸಲಾಯಿತು. ಇದು 'ನೇರ' ಪ್ರಸಾರ ರೀತಿಯಿಂದ ಪ್ರೇಕ್ಷಕರು ಮತ್ತು ವಿಷಯತಜ್ಞರ ನಡುವೆ ಪರಸ್ಪರ ಮೌಲ್ಯಯುತ ಪ್ರತಿಕ್ರಿಯೆಯನ್ನು ಸ್ಥಾಪಿಸಿತು. ಈ ಪ್ರಯೋಗಗಳು ಇನ್ಸಾಟ್ ಉಪಗ್ರಹದ ವಿಸ್ತರಿತ ಸಿ–ಬ್ಯಾಂಡ್ ಟ್ರಾನ್ಸ್‌ಪಾಂಡರ್‌ಗಳನ್ನು ಬಳಸಿಕೊಳ್ಳುವ ತರಬೇತಿ ಮತ್ತು ಅಭಿವೃದ್ಧಿ ವಾಹಿನಿಗಳ ಪ್ರಗತಿಗೆ ಹರಿಕಾರಗಳಾದವು.

**ಯೋಜನೆಗಳು:** ಸಿಇಸಿಯ ಅಧೀನದಲ್ಲಿ ಎರಡು ಯೋಜನೆಗಳು ಇವೆ. ಇವುಗಳೆಂದರೆ ಪರಿಸರ ಯೋಜನೆ ಮತ್ತು ಶೈಕ್ಷಣಿಕ ಅಂತಾರಾಷ್ಟ್ರೀಯ ಯೋಜನೆ.

ಪರಿಸರದ ರಕ್ಷಣೆಯ ಕುರಿತಾದ ವಿಶಾಲ ವ್ಯಾಪ್ತಿಯ ಅಂತಾರಾಷ್ಟ್ರೀಯ ಉಪಕ್ರಮಗಳಲ್ಲಿ ಶಿಕ್ಷಣ ಮತ್ತು ಸಂವಹನಗಳು ಪ್ರಧಾನ ಕ್ಷೇತ್ರಗಳಾಗಿ ಗುರುತಿಸಲ್ಪಟ್ಟಿವೆ. ಟೆಲಿವಿಷನ್ನಿನ ಅಂತಸ್ಸತ್ವ ಮತ್ತು ಸಾರ್ವಜನಿಕ ಸೇವಾ ಪ್ರಸಾರದಲ್ಲಿ ಅದರ ಸ್ವಂತ ಪಾತ್ರದ ಕುರಿತು ಸಂಪೂರ್ಣವಾದ ಅರಿವಿನೊಂದಿಗೆ, ಸಿಇಸಿಯು ಪರಿಸರ ರಕ್ಷಣೆ, ಪೋಷಣಾ ಸಾಮರ್ಥ್ಯ ಮತ್ತು ಪ್ರಕೃತಿ ಸಂರಕ್ಷಣೆಯ ಕ್ಷೇತ್ರಗಳಲ್ಲಿ ವಿಸ್ತರಿಸಿಕೊಳ್ಳುತ್ತಲಿದೆ.

'ಶೈಕ್ಷಣಿಕ ಅಂತಾರಾಷ್ಟ್ರೀಯ'ವು (ಇಐ) ಎಮ್‌ಹೆಚ್ಆರ್‌ಡಿ ಪ್ರಾರಂಭಿಸಿದ ಯೋಜನೆಯಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ ವಾಣಿಜ್ಯ ನೆಲೆಗಟ್ಟಿನಲ್ಲಿ ಭಾರತೀಯ ಶಿಕ್ಷಣ ಸಾಮಗ್ರಿಯನ್ನು ಪ್ರೋತ್ಸಾಹಿಸುವುದು ಮತ್ತು ಜಗತ್ತಿನಾದ್ಯಂತ ಪ್ರಚಾರ ಮಾಡುವುದಾಗಿದೆ. ಸಿಇಸಿ ಅಲ್ಲದೆ ಇತರ ಮೂರು ಸಂಸ್ಥೆಗಳು, ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತವಿಶ್ವವಿದ್ಯಾಲಯ (IGNOU), ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT) ಮತ್ತು ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆ (NIOS), ಯೋಜನೆಯ ಸದಸ್ಯರಾಗಿದ್ದು MOU ವಿನ ಒಪ್ಪಂದಕ್ಕೆ ಸಹಿ ಹಾಕಿದ ಸಂಸ್ಥೆಗಳಾಗಿವೆ.

### ರಾಷ್ಟ್ರೀಯ ಮೌಲ್ಯಮಾಪಕ ಮತ್ತು ಯೋಗ್ಯತಾ ನಿರ್ಧಾರಕ ಮಂಡಳಿ (ಎನ್ಎಎಸಿ)

**ಹಿನ್ನೆಲೆ:** ಭಾರತದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿಯ ವಿಭಿನ್ನ ಹಂತಗಳಲ್ಲಿ ರೂಪಿಸಲಾದ ಬಹುಪಾಲು ಎಲ್ಲಾ ಸಮಿತಿಗಳ ಕೇಂದ್ರಬಿಂದು ಶಿಕ್ಷಣದಲ್ಲಿ ಗುಣಮಟ್ಟದ ಸುಧಾರಣೆಯಾಗಿದೆ. ಉನ್ನತ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ರಾಷ್ಟ್ರೀಯ ಶಿಕ್ಷಣನೀತಿಯು (ಎನ್‌ಪಿಇ, 1986) ರಾಷ್ಟ್ರೀಯ ಯೋಗ್ಯತಾ ನಿರ್ಧಾರಕ ಸಂಸ್ಥೆಯ ಸ್ಥಾಪನೆಗೆ ಶಿಫಾರಸ್ಸನ್ನು ಮಾಡಿತು. ಮಾರ್ಚ್, 1992ರಲ್ಲಿ ಎನ್‌ಪಿಇ ಕಲ್ಪಿಸಿಕೊಂಡಿರುವ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಯುಜಿಸಿಯು ರಾಷ್ಟ್ರೀಯ ಮೌಲ್ಯಮಾಪಕ ಮತ್ತು ಯೋಗ್ಯತಾ ನಿರ್ಧಾರಕ ಮಂಡಳಿಯನ್ನು ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸುವ ನಿರ್ಧಾರವನ್ನು ಕೈಗೊಂಡಿತು. ಈ ನಿಟ್ಟಿನಲ್ಲಿ ಮುಂದುವರಿದು ನಡೆದ ಕಾರ್ಯಗಳ ಫಲವಾಗಿ 'ರಾಷ್ಟ್ರೀಯ ಮೌಲ್ಯಮಾಪಕ ಮತ್ತು ಯೋಗ್ಯತಾ ನಿರ್ಧಾರಕ ಮಂಡಳಿ'ಯ (National Assessment and Accreditation Council-NAAC) ಹೆಸರಿನಲ್ಲಿ ನೋಂದಾಯಿತ ಸಂಸ್ಥೆಯ ಸ್ಥಾಪನೆಯಾಗಿದೆ.

**ಎನ್ಎಎಸಿಯ ಧ್ಯೇಯಗಳು:**

ಸಂಸ್ಥೆಯ ನಿವೇದನಾ ಪತ್ರದಲ್ಲಿ ನಿರೂಪಿಸಿದಂತೆ ಭಾರತದಲ್ಲಿರುವ

Digitised by Bharatavani, CIIL

ಉನ್ನತ ಅಧ್ಯಯನ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ಮಹಾವಿದ್ಯಾಲಯಗಳು ಅಥವಾ ಅವುಗಳ ಒಂದು ಅಥವಾ ಹೆಚ್ಚು ಘಟಕಗಳ ಮೌಲ್ಯವನ್ನು ನಿರ್ಧರಿಸುವುದು ಮತ್ತು ಯೋಗ್ಯತಾ ಪತ್ರಗಳನ್ನು ಒದಗಿಸುವುದು ಎನ್ಎಎಸಿಯ ಧ್ಯೇಯವಾಗಿದೆ. ಉನ್ನತ ಅಧ್ಯಯನ ಸಂಸ್ಥೆಗಳು ಶೈಕ್ಷಣಿಕ ಚಟುವಟಿಕೆಯ ಎಲ್ಲಾ ವಲಯಗಳಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಮತ್ತು ಶಿಕ್ಷಾತ್ಮಕ ಕಾರ್ಯದ ಭಯವಿಲ್ಲದೆ ಹೊಣೆಗಾರಿಕೆಯನ್ನು ನಿಭಾಯಿಸಲು ಅವರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಎನ್ಎಎಸಿಯು ವೇಗವರ್ಧಕ ಏಜೆನ್ಸಿಯಾಗಿ ತನ್ನ ಪಾತ್ರವನ್ನು ನಿರ್ವಹಿಸುವುದು. ಎನ್ಎಎಸಿಯ ತತ್ವವು ಉತ್ತಮಗೊಳಿಸುವಿಕೆ ಮತ್ತು ಅವಕಾಶ ಕಲ್ಪಿಸುವಿಕೆ ಆಗಿರುವುದಲ್ಲದೆ, ದಂಡವಿಧಿಸುವ ಅಥವಾ ತೀರ್ಪು ನೀಡುವುದು ಆಗಿರುವುದಿಲ್ಲ.

**ಕಾರ್ಯವಿಧಾನ ಮತ್ತು ಫಲಿತಾಂಶ:**

ಅಂತಾರಾಷ್ಟ್ರೀಯ ಪ್ರವೃತ್ತಿಗೆ ಅನುಗುಣವಾಗಿ, ಎನ್ಎಎಸಿಯು ಸ್ವ-ಅಧ್ಯಯನಗಳನ್ನು ಉನ್ನತ ಮೌಲ್ಯಮಾಪನದೊಂದಿಗೆ ಒಟ್ಟುಗೂಡಿಸುವ ಕ್ರಮಾನುಸರಣೆಯನ್ನು ನಡೆಸುತ್ತದೆ. ತನ್ನ ಮೌಲ್ಯನಿರ್ಧಾರಕ ಕಾರ್ಯವಿಧಾನಗಳಿಗೆ ನೆಲೆಗಟ್ಟಿನ ರೂಪದಲ್ಲಿ ಈ ಮುಂದೆ ಸೂಚಿಸಿರುವ ಮಾನದಂಡಗಳನ್ನು ಅದು ಗುರುತಿಸಿದೆ: ವ್ಯಾಸಂಗಕ್ರಮ ರೂಪಗಳು; ಅಧ್ಯಾಪನ-ಅಧ್ಯಯನ ಮತ್ತು ಮೌಲ್ಯಮಾಪನ; ಸಂಶೋಧನೆ, ಸಮಾಲೋಚನೆ ಮತ್ತು ವಿಸ್ತರಣೆ; ಮೂಲಭೂತ ವ್ಯವಸ್ಥೆ ಮತ್ತು ಅಧ್ಯಯನ ಸಂಪನ್ಮೂಲಗಳು; ವಿದ್ಯಾರ್ಥಿ ಬೆಂಬಲ ಮತ್ತು ಪ್ರಗತಿ; ಸಂಘಟನೆ ಮತ್ತು ನಿರ್ವಹಣೆ; ಮತ್ತು ಆರೋಗ್ಯ ಕ್ರಮಗಳು.

ಮೇಲೆ ಉಲ್ಲೇಖಿಸಿರುವ ಮಾನದಂಡಗಳನ್ನು ಆಧರಿಸಿದ ಯೋಗ್ಯತಾ ಫಲಿತಾಂಶವು ಐದು-ಅಂಶಗಳ ಮಾಪಕದ 'ಮಟ್ಟ'ವಾಗಿದ್ದು, ಇದು 5 ವರ್ಷಗಳ ಅವಧಿಗೆ ಊರ್ಜಿತವಾಗಿರುತ್ತದೆ. ಮೌಲ್ಯಮಾಪನವು ಆಯಾ ಸಂಸ್ಥೆಗೆ ಸಂಬಂಧಿಸಿದಂತೆ ಸ್ವಪ್ರೇರಿತವಾಗಿರುತ್ತದೆ.

**ವ್ಯವಸ್ಥೆಯಿಂದ ಪ್ರತಿಕ್ರಿಯೆ:**

ರಾಷ್ಟ್ರೀಯ ವ್ಯಾಪಕ ಗುಣಮಟ್ಟ ಆಶ್ವಾಸನಾ ಏಜೆನ್ಸಿಗಳ ಕುರಿತಾದ ವ್ಯವಸ್ಥೆಯ ಪ್ರತಿಕ್ರಿಯೆಯು ಜಗತ್ತಿನಾದ್ಯಂತ ಮಿಶ್ರರೂಪದ್ದಾಗಿದೆ. ಭಾರತದಲ್ಲಿ ಇದನ್ನು ಎರಡು ಹಂತಗಳಲ್ಲಿ ಕಾಣಬಹುದು. ಮೊದಲಹಂತ: ಸುಮಾರು ಮೂರು ವರ್ಷಗಳಲ್ಲಿ ಮುಗಿಯುವ ಬಹುಸಂಖ್ಯಾತರ ಸ್ವೀಕೃತಿಯು ಕೇಂದ್ರಬಿಂದುವಾಗಿರುತ್ತದೆ. ಎರಡನೆಯ ಹಂತ: ಒಪ್ಪಿತವಾದ ಅಧ್ಯಯನ ಕ್ರಮದ ಕಾರ್ಯಸಮರ್ಥತೆ ಮತ್ತು ಇದರ ಸುಲಲಿತ ನಿರ್ವಹಣೆ ಪ್ರಮುಖ ಕಾರ್ಯಸೂಚಿಯಾಗಿರುತ್ತದೆ.

ಮೊದಲ ಹಂತದಲ್ಲಿ ಮೌಲ್ಯಮಾಪನ ಮತ್ತು ಯೋಗ್ಯತಾ ನಿರ್ಧಾರಗಳ ಬಗ್ಗೆ (ಸ್ವಯಂ ಪ್ರೇರಣೆ ಪಡೆಯುವ) ಸಂಸ್ಥೆಗಳು ಹಿಂಜರಿಕೆ ಅಥವಾ ತಟಸ್ಥ ಭಾವನೆಯನ್ನು ಹೊಂದಿದ್ದವು. ಯಾವುದೇ ವಿಧದ ಪ್ರಯತ್ನವನ್ನು ಪ್ರಾರಂಭಿಸುವಾಗ ನಾವು ಎದುರಿಸುವಂತಹ ಸಾಮಾನ್ಯ ಜಡತ್ವ ಮತ್ತು ಇತರರಿಂದ ಮೌಲ್ಯಮಾಪನಗೊಳ್ಳುವ ಹೆದರಿಕೆಯೊಂದಿಗೆ, ಬಾಹ್ಯ ಏಜೆನ್ಸಿಯೊಂದರಿಂದ ಮೌಲ್ಯಮಾಪನಗೊಳ್ಳುವ ಮತ್ತು ಯೋಗ್ಯತಾ ನಿರ್ಧಾರವನ್ನು ಹೊಂದುವ ಇಡೀ ಪರಿಕಲ್ಪನೆಯ ಪ್ರಸ್ತುತತೆ ಮತ್ತು ಭಾರತೀಯ ಸನ್ನಿವೇಶದಲ್ಲಿ ಅದರ ಅನ್ವಯೀಕರಣದ ಕುರಿತು ಕೆಲವರ ಮನಸ್ಸಿನಲ್ಲಿ ಸಂದೇಹವಿತ್ತು. ಈ ಶಂಕೆಗಳನ್ನು ದೂರಮಾಡುವುದಕ್ಕಾಗಿ, ಎನ್ಎಎಸಿಯು ವಿದ್ಯಾಸಂಸ್ಥೆಯವರೊಂದಿಗೆ ಪರಸ್ಪರ ಮಾತುಕತೆಗಳ ಕಾರ್ಯಕ್ರಮಗಳ ಸರಣಿಗಳನ್ನು ವಿಶ್ವವಿದ್ಯಾಲಯಗಳು ಮತ್ತು ಮಹಾವಿದ್ಯಾಲಯಗಳಲ್ಲಿ ದೊಡ್ಡ ಸಂಖ್ಯೆಯ ವಿಚಾರಸಂಕಿಣಗಳನ್ನು ಸಂಘಟಿಸಲಾಯಿತು. ಅನೇಕ ಕಾರ್ಯಾಗಾರಗಳ ಮೂಲಕ ಕಾರ್ಯಗತಿಯ ವಿಧಾನವನ್ನು ಸರಳೀಕೃತಗೊಳಿಸಲಾಯಿತು. ಭಾರತೀಯ ಹೆಚ್ಇ ವ್ಯವಸ್ಥೆಯ ಬೇರೆಬೇರೆ ಭಾಗಗಳಿಗೆ ಒದಗಿಸುವುದಕ್ಕಾಗಿ ವಿವರಣಾತ್ಮಕ ಗ್ರಂಥಗಳನ್ನು (ಮ್ಯಾನ್ಯುಅಲ್) ಮತ್ತು ಮಾರ್ಗದರ್ಶಕ ಸೂತ್ರಗಳನ್ನು ಪ್ರಕಟಿಸಲಾಯಿತು. ಭಾರತದ ಇತರ ಯೋಗ್ಯತಾ ದೃಢೀಕರಣ ಮಂಡಳಿಗಳೊಂದಿಗೆ ಕೂಡಾ ಎನ್ಎಎಸಿಯು ಕ್ರಿಯಾತ್ಮಕ ಪ್ರತಿಕ್ರಿಯೆಯನ್ನು ನಡೆಸಿತು. ಭಾರತದ ಪ್ರಧಾನ ರಾಷ್ಟ್ರೀಯ ವೃತ್ತಿಪರ ಸಂಸ್ಥೆಗಳೊಂದಿಗೆ ಸಹೋದ್ಯಮಿ ಮೌಲ್ಯಮಾಪನದ ಮಾತುಗಳನ್ನು ನಡೆಸಿ, ಅಂತರಾಷ್ಟ್ರೀಯ ಜೋಡಣೆಗಳನ್ನು ಸ್ಥಾಪಿಸಲಾಯಿತು. ಎನ್ಎಎಸಿಯು ಉನ್ನತ ಶಿಕ್ಷಣದಲ್ಲಿ ಇಂಟರ್ನ್ಯಾಶನಲ್ ನೆಟ್ವರ್ಕ್ ಆಫ್ ಕ್ವಾಲಿಟಿ ಅಶ್ಯುರೆನ್ಸ್ ಏಜೆನ್ಸಿ ಸ್ಥಾಪಕ ಸದಸ್ಯತ್ವವನ್ನು ಹೊಂದಿದೆ. ಈ ಜಾಲದಲ್ಲಿ 60 ರಾಷ್ಟ್ರಗಳಲ್ಲಿ ಹರಡಿಕೊಂಡಿರುವ ಸುಮಾರು 150 ಗುಣಮಟ್ಟ ದೃಢೀಕರಣ ಏಜೆನ್ಸಿಗಳು ಇವೆ. ಈ ಎಲ್ಲಾ ತಂತ್ರಗಳು ವ್ಯವಸ್ಥೆಗೆ ತನ್ನ ಯೋಗ್ಯತೆಗಳನ್ನು ತಿಳಿಯಪಡಿಸುವ ಪ್ರಯತ್ನದ ಹಂತವನ್ನು ದಾಟಿಸಲು ಸಹಾಯಕವಾಯಿತು. ಮತ್ತು ಕಾರ್ಯಗತಿಯ ಮತ್ತೊಂದು ಹಂತವಾದ ಕಾರ್ಯನಿರ್ವಹಣೆಗೆ ಪ್ರವೇಶವನ್ನು ಒದಗಿಸಿತು.

ಎರಡನೆಯ ಹಂತದ ಅವಧಿಯಲ್ಲಿ 15 ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ, ಸುಮಾರು 150 ಉನ್ನತ ಶಿಕ್ಷಣ ಸಂಸ್ಥೆಗಳು ಮೌಲ್ಯಮಾಪನ(ಎ) ಮತ್ತು ಯೋಗ್ಯತಾ ನಿರ್ಧಾರದ (ಎ) ಕಾರ್ಯಗತಿಗೆ ಒಳಪಟ್ಟಿವೆ. 129 ಸಂಸ್ಥೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದೆ. 150 ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯಗತಿಯನ್ನು ಮುಗಿಸಿದ ಬಳಿಕ ಎನ್ಎಎಸಿಯು ಜೂನ್ 2000ದಲ್ಲಿ ಮಧ್ಯಂತರ ಪುನರ್ವಿಮರ್ಶೆಯನ್ನು ಮಾಡಿತು. ಕಾರ್ಯಗತಿಯ ಕುರಿತು ಒಟ್ಟಾರೆ ಮೆಚ್ಚುಗೆ ವ್ಯಕ್ತಗೊಂಡಿರುವುದು ಈ ಪುನರ್ವಿಮರ್ಶೆಯಿಂದ ತಿಳಿದುಬಂತು. ವಿಭಾಗಗಳಂತಹ ಸಂಸ್ಥೆಗಳ ಉಪ-ಘಟಕಗಳ ಪ್ರತಿಕ್ರಿಯೆಯನ್ನು ಕೂಡಾ ಗುಣಾತ್ಮಕ ಮತ್ತು ಆಶಾದಾಯಕವೆಂದು ವರ್ಣಿಸಬಹುದು. ಎಲ್ಲಾ ವರ್ಗಗಳ ಸಂಸ್ಥೆಗಳು, ವರ್ಗೀಕರಣದ ತಳಭಾಗದಿಂದ ಹಿಡಿದು ಮೇಲ್ತುದಿ ಸ್ಥಾನದಲ್ಲಿರುವಂತಹವುಗಳು, ಎ ಆಂಡ್ ಎ ಯು ತಮ್ಮ ಬೋಧಕಾತ್ಮಕ, ನಿರ್ವಹಣಾತ್ಮಕ, ಆಡಳಿತಾತ್ಮಕ

Digitised by Bharatavani, CIIL

ಮತ್ತು ಕಾರ್ಯವಿಧಾನಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಗಮನಾರ್ಹ ಬದಲಾವಣೆಯನ್ನು ತಂದಿದೆ ಎಂಬುದಾಗಿ ಏಕಪ್ರಕಾರವಾಗಿ ಹೇಳಿವೆ. ಈ ರೀತಿಯ ಸಂಸ್ಥೆಗಳು ತಮ್ಮ ಸಮಾನಸ್ಕಂದ ತಂಡಗಳ ಶಿಫಾರಸ್ಸುಗಳನ್ನು ಅಳವಡಿಸಿಕೊಂಡ ವಿಧಾನದಲ್ಲಿಯೇ ಈ ಮೆಚ್ಚುಗೆಯನ್ನು ಕಾಣಬಹುದಾಗಿದೆ.

'ನಿರಾಕರಣೆ, ಉಪೇಕ್ಷೆ ಮತ್ತು ಹಿಂಜರಿಕೆಗಳಿಂದ 'ಗುಣಮಟ್ಟ ಹೆಚ್ಚಿಸುವ ತಂತ್ರಗಳ ಸ್ವೀಕರಣ, ಅಳವಡಿಕೆ ಮತ್ತು ಅನುಷ್ಠಾನ'ಗಳ ಕಡೆಗಿನ ವಾಲುವಿಕೆಯು ಸಾಂಸ್ಥಿಕ ಪ್ರತಿಕ್ರಿಯೆಗಳು ಎನ್‌ಎಎಸಿಯ ಜವಾಬ್ದಾರಿಗಳನ್ನು ಹೆಚ್ಚು ಸವಾಲಾಗಿಸಿದೆ. ಈಗ ಎನ್‌ಎಎಸಿ ಎದುರಿಸಬೇಕಾದ ವಿಚಾರಗಳು ವಿಭಿನ್ನ ರೀತಿಯವು ಮತ್ತು ಹೆಚ್ಚು ಪಂಥಹ್ವಾನ ಸ್ವರೂಪದ್ದಾಗಿವೆ: ವಿಶೇಷಜ್ಞ ಮಂಡಳಿಗಳೊಂದಿಗೆ ಸಹಭಾಗಿತ್ವ ಅಥವಾ ಜಂಟಿ ಮೌಲ್ಯೀಕರಣ, ಅಂತರ್–ತಂಡದ ಭಿನ್ನತೆಯನ್ನು ಕನಿಷ್ಠ ಮಟ್ಟಕ್ಕೆ ತರುವುದು. ಯೋಗ್ಯತಾ ನಿರ್ಧಾರದ ಫಲಿತಾಂಶದ ಕುರಿತು ಸಾರ್ವಜನಿಕ ವರದಿಯ ಸ್ವರೂಪ ಮತ್ತು ರಚನೆ, ಯೋಗ್ಯತಾ ನಿರ್ಧಾರದ ಹಂತಕ್ಕಾಗಿ ಉತ್ತೇಜಕ ಮತ್ತು ಅನುತ್ತೇಜಕ, ದೊಡ್ಡ ಪ್ರಮಾಣದ ಮೌಲ್ಯೀಕರಣದ ನಿರ್ವಹಣೆ, ಅನುಸರಣೆ ಮತ್ತು ದಾಖಲೀಕರಣ, ಕಾರ್ಯನಿರ್ವಹಣೆಯನ್ನು ಆಧರಿಸಿ ಹಣ ಒದಗಿಸುವಿಕೆ ಇತ್ಯಾದಿ. ಭವಿಷ್ಯದಲ್ಲಿ ಚಿಕ್ಕ ಮತ್ತು ದೊಡ್ಡ ಹಂತಗಳೆರಡರಲ್ಲಿಯೂ ಈ ಅಂಶಗಳನ್ನು ಜಾರಿಗೊಳಿಸುವ ಸಲುವಾಗಿ ಎನ್‌ಎಎಸಿ ತಂತ್ರಗಳನ್ನು ರೂಪಿಸಿದೆ.

### ಮಾಹಿತಿ ಮತ್ತು ಗ್ರಂಥಾಲಯ ಜಾಲ (ಇನ್‌ಫಾರ್ಮೇಶನ್ ಆಂಡ್ ಲೈಬ್ರೆರಿ ನೆಟ್‌ವರ್ಕ್, INFLIBNET)

ಮಾಹಿತಿ ಮತ್ತು ಗ್ರಂಥಾಲಯ ಜಾಲವು ಯುಜಿಸಿಯ ಪ್ರಮುಖ ಕಾರ್ಯಕ್ರಮವಾಗಿದ್ದು ಇದನ್ನು 1991ರಲ್ಲಿ ಪ್ರಾರಂಭಿಸಲಾಗಿದೆ. ಇದರ ಮುಖ್ಯ ಕಾರ್ಯಾಲಯವು ಅಹಮದಾಬಾದಿನಲ್ಲಿರುವ ಗುಜರಾತ್ ವಿಶ್ವವಿದ್ಯಾಲಯದ ಆವರಣದಲ್ಲಿ ಇದೆ. ದೇಶದಲ್ಲಿರುವ ಗ್ರಂಥಾಲಯಗಳು, ಮಾಹಿತಿ ಕೇಂದ್ರಗಳು, ಶಿಕ್ಷಣತಜ್ಞರು ಮತ್ತು ಸಂಶೋಧಕರನ್ನು ಜೋಡಿಸುವ ಜಾಲದ ಕಲ್ಪನೆಯು ಯುಜಿಸಿಯದ್ದಾಗಿದೆ. ಮೇ, 1996ರಲ್ಲಿ ಪೂರ್ಣಪ್ರಮಾಣದ ಅಂತರ್–ವಿಶ್ವವಿದ್ಯಾಲಯ ಕೇಂದ್ರವಾಗಿ ಐಎನ್‌ಎಫ್‌ಎಲ್‌ಐಬಿಎನ್‌ಇಟಿಯು ನೋಂದಾಯಿತ ಸಂಸ್ಥೆಯಾಗಿದೆ.

**ಮಾಹಿತಿ ಮತ್ತು ಗ್ರಂಥಾಲಯ ಜಾಲ ಸ್ಥಾಪನೆಯ ಅಗತ್ಯ:** ಭಾರತವು ಬಹಳ ದೊಡ್ಡ ದೇಶವಾಗಿದ್ದು ಇಲ್ಲಿ 250ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು, 10,000 ಮಹಾವಿದ್ಯಾಲಯಗಳು ಮತ್ತು ಸಾರ್ವಜನಿಕ ಧನಸಹಾಯದಿಂದ ನಡೆಯುವ 500 ಆರ್ ಆಂಡ್ ಡಿ ಸಂಸ್ಥೆಗಳು ಇವೆ. ಸಾಮಾನ್ಯವಾಗಿ ಈ ಸಂಸ್ಥೆಗಳ ಗ್ರಂಥಾಲಯಗಳು ಸಾಕಷ್ಟು ಪ್ರಮಾಣದಲ್ಲಿ ಸಜ್ಜುಗೊಂಡಿರುವುದಿಲ್ಲ ಮತ್ತು ಸ್ವಯಂಪೂರ್ಣ ರೀತಿಯದ್ದಾಗಿ ಇರುವುದಿಲ್ಲ. ತಾವು ಸಂಗ್ರಹಿಸಿ ಇಟ್ಟುಕೊಳ್ಳಬೇಕೆಂಬ ಅಪೇಕ್ಷೆ ಗ್ರಂಥಾಲಯಗಳಿಗೆ ತಡೆಯಾಗಿ ಸಂಭವಿಸಿರುವುದು ಹೆಚ್ಚುತ್ತಿರುವ ಮುದ್ರಣ ವೆಚ್ಚ ಮತ್ತು ವಿದೇಶಿ ಕರೆನ್ಸಿಯ ಎದುರು ಅಸ್ಥಿರ ಸ್ಥಿತಿಯಲ್ಲಿರುವ ಭಾರತದ ರೂಪಾಯಿಯ ಪರಿವರ್ತನಾ ದರ. ಎಲ್ಲಕ್ಕಿಂತ ಹೆಚ್ಚಾಗಿ ಶೇಕಡಾ 50 ಮತ್ತು ಅದಕ್ಕಿಂತ ಅಧಿಕ ಪ್ರಮಾಣದಲ್ಲಿ ದ್ವಿಪ್ರತೀಕರಣವಿದೆ. ಈಗ ಇರುವಂತಹ ಸಂಪನ್ಮೂಲಗಳ ಸತ್ ಪ್ರತೀಕ್ಷೆಯಲ್ಲಿ ತಮ್ಮ ಎಲ್ಲಾ ಗ್ರಂಥಾಲಯಗಳನ್ನು ಆಧುನೀಕರಣ ಮತ್ತು ಆಂತರಿಕವಾಗಿ ಸಂಬಂಧಿಸಿಕೊಳ್ಳುವ ಸಲುವಾಗಿ ಸ್ಟೇಟ್ ಆಫ್ ದಿ ಆರ್ಟ್ ತಂತ್ರಜ್ಞಾನವನ್ನು ಬಳಸಿದ ವಿಧಾನವನ್ನು ರೂಪಿಸುವುದು ಸೂಕ್ತವೆಂದು ಚಿಂತಿಸಲಾಗಿದೆ.

**ಮಾಹಿತಿ ಮತ್ತು ಗ್ರಂಥಾಲಯ ಜಾಲದ ಧ್ಯೇಯಗಳು:**

ಮಾಹಿತಿ ಮತ್ತು ಗ್ರಂಥಾಲಯ ಜಾಲವನ್ನು ಈ ಕೆಳಗಿನ ವಿಶಾಲವಾದ ಧ್ಯೇಯಗಳೊಂದಿಗೆ ಸ್ಥಾಪಿಸಲಾಗಿದೆ :

- ಪಾಂಡಿತ್ಯ ಕಲಿಕೆ, ಸಂಶೋಧನೆ ಮತ್ತು ಶೈಕ್ಷಣಿಕ ಅನುಸರಣೆಗಳನ್ನು ಬೆಂಬಲಿಸುವುದಕ್ಕಾಗಿ ಮಾಹಿತಿ ಲಭ್ಯತೆ ಮತ್ತು ವರ್ಗಾವಣೆಯ ಸಾಮರ್ಥ್ಯಗಳನ್ನು ಸುಧಾರಿಸುವ ಸಲುವಾಗಿ ಪ್ರಮುಖ ರಾಷ್ಟ್ರೀಯ ಪ್ರಯತ್ನವನ್ನು ಪ್ರಾರಂಭಿಸುವುದು.

- ಈಗಾಗಲೇ ಅಸ್ತಿತ್ವದಲ್ಲಿರುವ ಮತ್ತು ಹೊಸದಾಗಿ ಕಾಣಿಸಿಕೊಳ್ಳಲಿರುವ ಮಾಹಿತಿ ತಂತ್ರಜ್ಞಾನವನ್ನು ಬಳಸಿ ಶಿಕ್ಷಣತಜ್ಞರ ನಡುವೆ ಪರಸ್ಪರ ಪ್ರತಿಕ್ರಿಯೆಯನ್ನು ಸುಧಾರಿಸುವ ಸಲುವಾಗಿ ಮಾಹಿತಿ ವರ್ಗಾವಣೆ ಸೇವೆಗಳನ್ನು ಒದಗಿಸುವುದು.

- ದೇಶದ ಗ್ರಂಥಾಲಯಗಳು ಮತ್ತು ಮಾಹಿತಿ ಕೇಂದ್ರಗಳ ಆಧುನೀಕರಣ.

- ದೇಶದಲ್ಲಿರುವ ಅನೇಕ ಸಂಸ್ಥೆಗಳ ದತ್ತಾಂಶ ಗ್ರಂಥಾಲಯಗಳು ಮತ್ತು ಸಂಶೋಧನಾ ಸಮುದಾಯವನ್ನು ಪರಸ್ಪರ ಸಂಪರ್ಕ ಕಲ್ಪಿಸಿಕೊಳ್ಳುವುದಕಾಗಿ ಸಹಕಾರಿ ದತ್ತ–ಸಂವಹನ ಜಾಲದ ಸ್ಥಾಪನೆ. ಇದರಿಂದ ಭಾಗಿಯಾಗಿರುವ ಗ್ರಂಥಾಲಯಗಳು ಮತ್ತು ಮಾಹಿತಿ ಕೇಂದ್ರಗಳ ಸಂಪನ್ಮೂಲಗಳ, ಸೌಕರ್ಯಗಳ ಮತ್ತು ಸೇವೆಗಳ ಸಂಚಯ, ಹಂಚಿಕೊಳ್ಳುವಿಕೆ ಮತ್ತು ಅತ್ಯಂತ ಹೆಚ್ಚಿನ ಬಳಕೆ ಸಾಧ್ಯವಾಗುವುದು.

**ಪ್ರಮುಖ ಚಟುವಟಿಕೆಗಳು:** ಮೇಲೆ ಉಲ್ಲೇಖಿಸಿರುವ ಧ್ಯೇಯ ಸಾಧನೆಗಾಗಿ ಮಾಹಿತಿ ಮತ್ತು ಗ್ರಂಥಾಲಯ ಜಾಲವು ಈ ಕೆಳಗಿನ ಪ್ರಮುಖ ಚಟುವಟಿಕೆಗಳನ್ನು ಪ್ರಾರಂಭಿಸಿದೆ:

ಸಂಪನ್ಮೂಲ ಹಂಚಿಕೊಳ್ಳುವಿಕೆಯಲ್ಲಿ ಗ್ರಂಥಾಲಯ ಸ್ವಯಂಚಾಲನೆಯು ಮೊದಲ ಹೆಜ್ಜೆಯಾಗಿದೆ. ಸ್ವಯಂಚಾಲನೆಗೆ ಅನುಕೂಲವಾಗುವಂತಹ ಮೂಲಭೂತ ವ್ಯವಸ್ಥೆಯನ್ನು ಸೃಷ್ಟಿಸುವುದಕ್ಕಾಗಿ ಹಂತಗಳಲ್ಲಿ ಪುನರಾವರ್ತಿತ ಮತ್ತು ಪುನರಾವರ್ತಿತವಲ್ಲದ ರೀತಿಯಲ್ಲಿ ನೀಡುವ ಧನಸಹಾಯದ ರೂಪದಲ್ಲಿ ಮಾಹಿತಿ ಮತ್ತು ಗ್ರಂಥಾಲಯ ಜಾಲವು ಗ್ರಂಥಾಲಯಗಳಿಗೆ ನೆರವನ್ನು ಒದಗಿಸುತ್ತಿದೆ. ಇದುವರೆಗೆ 123 ವಿಶ್ವವಿದ್ಯಾಲಯಗಳಿಗೆ

Digitised by Bharatavani, CIIL

ಈ ರೀತಿಯ ಧನಸಹಾಯವನ್ನು ಒದಗಿಸಲಾಗಿದೆ. ಈ ಎಲ್ಲಾ ಗ್ರಂಥಾಲಯಗಳು ಯಂತ್ರಾಂಶ, ತಂತ್ರಾಂಶಗಳನ್ನು ಪಡೆದಿದ್ದು, ಸ್ವಯಂಚಾಲನೆಯ ವಿವಿಧ ಹಂತಗಳಲ್ಲಿ ಇವೆ.

ಗ್ರಂಥಾಲಯಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ನಿರ್ವಹಿಸುವುದಕ್ಕಾಗಿ ತಜ್ಞರ ಅಗತ್ಯವಿರುವುದನ್ನು ಗಮನಿಸಿ ಮಾಹಿತಿ ಮತ್ತು ಗ್ರಂಥಾಲಯ ಜಾಲವು ಗಣಕಯಂತ್ರ ಬಳಕೆಯ ಕುರಿತು ಅನೇಕ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದೆ. ಈ ತರಬೇತಿಯು ಬದಲಾವಣೆ ಹೊಂದುತ್ತಿರುವ ಗ್ರಂಥಾಲಯದ ಪರಿಸರ, ತಂತ್ರಾಂಶ, ಅಂತರ್ಜಾಲ, ಗ್ರಂಥಸೂಚಿ ಮಟ್ಟ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಒಟ್ಟು ಮಾಹಿತಿ ಮತ್ತು ಗ್ರಂಥಾಲಯ ಜಾಲದಲ್ಲಿ ವಿವಿಧ ಮಟ್ಟಗಳ 500ಕ್ಕೂ ಹೆಚ್ಚಿನ ಜನರಿಗೆ ಮತ್ತು ವಿಶ್ವವಿದ್ಯಾಲಯದ ಆವರಣದಲ್ಲಿ ಇಷ್ಟೇ ಸಂಖ್ಯೆಯ ಜನರಿಗೆ ತರಬೇತಿಯನ್ನು ನೀಡಲಾಗಿದೆ.

ಸಂಪನ್ಮೂಲ ಹಂಚಿಕೊಳ್ಳುವಿಕೆ ದತ್ತಸಂಚಯ ಸೇವೆಗಳು ಮೂಲ ಆಕರವಾಗಿ ದಿನದಿಂದ ದಿನಕ್ಕೆ ಪ್ರಗತಿಯನ್ನು ಸಾಧಿಸುತ್ತಿವೆ. ಅಂತರ್ಜಾಲದಲ್ಲಿ ಮಾಹಿತಿ ಮತ್ತು ಗ್ರಂಥಾಲಯ ಜಾಲದ ವೆಬ್‌ಸೈಟ್ htttt://www.inflibnet.ac.in. ಮೂಲಕ ಇದು ಉಪಲಬ್ಧವಿದೆ. ಸಧ್ಯ ಮಾಹಿತಿ ಮತ್ತು ಗ್ರಂಥಾಲಯ ಜಾಲದಲ್ಲಿ ಸೃಷ್ಟಿಸಲಾದ ಎಂಟು ಯೂನಿಯನ್ ದತ್ತಾಂಶ ಸಂಚಯಗಳು ಇವೆ. ಇವುಗಳಲ್ಲಿ ಆರು ಗ್ರಂಥಸೂಚಿ ದತ್ತಾಂಶ ಸಂಚಯಗಳು. ಅಂದರೆ ಗ್ರಂಥಗಳು, ಚಾಲ್ತಿಯಲ್ಲಿರುವ ಧಾರಾವಾಹಿಗಳು, ಒಡೆತನಗಳು, ಡಿಡಿಸಿಗಳ ಹಾಲಿ ಧಾರಾವಾಹಿಗಳು, ಅನುಷಂಗಿಕ ಧಾರಾವಾಹಿಗಳು ಮತ್ತು ಸಂಶೋಧನಾ ಪ್ರಬಂಧಗಳು. ಇವು ಭಾಗಿಯಾಗಿರುವ ಗ್ರಂಥಾಲಯಗಳಲ್ಲಿ ಇರುವವುಗಳನ್ನು ಪ್ರತಿನಿಧಿಸುತ್ತವೆ. ಈ ದತ್ತಾಂಶ ಸಂಚಯಗಳ ಮೂಲಕ ಬೇರೆಬೇರೆ ಗ್ರಂಥಾಲಯಗಳಲ್ಲಿರುವ ತಮ್ಮ ಆಸಕ್ತಿಯ ವಸ್ತುಗಳನ್ನು ಜನರು ಹುಡುಕಿಕೊಳ್ಳಬಹುದಾಗಿದೆ. ಇದಲ್ಲದೆ ತಜ್ಞರು ಮತ್ತು ಸಂಶೋಧನಾ ಯೋಜನೆಗಳ ಕುರಿತು ಕೂಡಾ ತುಂಬಾ ಉಪಯುಕ್ತವಾದ ಗ್ರಂಥಸೂಚಿಯಲ್ಲದೆ ಎರಡು ದತ್ತಾಂಶ ಸಂಚಯಗಳನ್ನು ಮಾಹಿತಿ ಮತ್ತು ಗ್ರಂಥಾಲಯ ಜಾಲವು ಸೃಷ್ಟಿಸಿದೆ.

**ಮಾಹಿತಿ ಸೇವೆಗಳು:** ಶಿಕ್ಷಣ ಕ್ಷೇತ್ರದವರ ಮತ್ತು ಸಂಶೋಧಕರ ಅಗತ್ಯಗಳಿಗಾಗಿ Inflibnet ಅನೇಕ ಮಾಹಿತಿ ಸೇವೆಗಳನ್ನು ಒದಗಿಸುತ್ತಿದೆ. Inflbnet ನ ಪೋರ್ಟಲ್ (http://www.inflibnet.in) ಶೈಕ್ಷಣಿಕ ಮಾಹಿತಿ ಜಗತ್ತಿನ ಕಿಟಕಿಯಾಗಿದೆ. Inflibnet ನಲ್ಲಿ ಸರ್ವರ್ ಒಂದರ ಮೇಲೆ ಏರಿಸಲಾದ ಈ ಪೋರ್ಟಲ್ ಮೂಲಕ ಪಡೆದುಕೊಳ್ಳಬಹುದಾದುದು: ಸಂಘಟನೆಯ ದತ್ತಾಂಶ ಸಂಚಯಗಳು, ತಜ್ಞರ ನೋಂದಣಿ ಮತ್ತು ಸಂಶೋಧನಾ ಯೋಜನೆಗಳ ದತ್ತಾಂಶ ಸಂಚಯಗಳು, ಯುಜಿಸಿಯ ಅಗಾಧ ಸಂಖ್ಯೆಯ ಕಾರ್ಯಯೋಜನೆಗಳ ಮರುಕಳಿಕೆ, 28 ವಿಶ್ವವಿದ್ಯಾಲಯಗಳ ಮಾಹಿತಿ ಪುಟಗಳು, ತಜ್ಞರೊಂದಿಗೆ ಚರ್ಚೆ, SOUL ಚರ್ಚೆಯಲ್ಲಿ ಭಾಗವಹಿಸುವಿಕೆ ಇತ್ಯಾದಿ.



**ಉಪಸಂಹಾರ:**

Inflibnet ನ ಪ್ರಗತಿಯೆಂದರೆ ದೇಶದ ಮಾಹಿತಿ ಮೂಲಭೂತ ರಚನೆಯ ಬೆಳವಣಿಗೆಯಾಗಿದೆ. ಭಾರತದಲ್ಲಿ ಉಗಮಗೊಳ್ಳುತ್ತಿರುವ ಮಾಹಿತಿ ಸಮಾಜದಲ್ಲಿ Inflibnet ಎನ್ನುವುದು ಬರಿ ಒಂದು ವ್ಯವಸ್ಥೆ ಅಥವಾ ಒಂದು ಪ್ರಚಾರಕವಾಗಿರದೆ, ಅದು ಅಭಿವೃದ್ಧಿಯ ಕಡೆಗೆ ಸಾಗುತ್ತಿರುವ ಒಂದು ಕ್ರಿಯಾಶೀಲ ಚಳವಳಿಯಾಗಿದೆ.

**ಭವಿಷ್ಯದತ್ತ ನೋಟ:** ಐಯುಸಿ ವ್ಯವಸ್ಥೆಯು ಎರಡೂ ಕ್ರಮಗಳಲ್ಲಿ ಯಶಸ್ಸು ಸಾಧಿಸಿರುವುದರಲ್ಲಿ ಸಂದೇಹವೇ ಇಲ್ಲ. ಸೀಮಿತ ಸಂಪನ್ಮೂಲಗಳ ಬಳಕೆಯಲ್ಲಿ 'ಹಂಚಿಕೊಳ್ಳುವಿಕೆ' ಮತ್ತು 'ಸಹಕಾರ' ಪ್ರಧಾನ ಪದಗಳಾಗಿವೆ. ವಿಶ್ವವಿದ್ಯಾಲಯ ವ್ಯವಸ್ಥೆಗೆ ಪ್ರಸ್ತುತವೆನಿಸುವಂತಹ ಇತರ ವ್ಯಾಸಂಗ ವಿಷಯಗಳಿಗೆ ಮತ್ತು ಇತರ ಕಾರ್ಯನಿರ್ವಹಣಾ ಪ್ರದೇಶಗಳಿಗೆ ಐಯುಸಿ–ಪ್ರಯೋಗವನ್ನು ವಿಸ್ತರಿಸಿಕೊಳ್ಳುವ ಸಂದರ್ಭವಂತೂ ಇದ್ದೇ ಇರುತ್ತದೆ. ಈಗ ಇರುವ ಐಯುಸಿಗಳಿಗೆ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳುವ ಯೋಜನೆಗಳು ಇರುವಂತೆ, ಭವಿಷ್ಯದಲ್ಲಿ ಇತರ ಪ್ರದೇಶಗಳಲ್ಲಿ ಕೂಡಾ ಇನ್ನೂ ಹೆಚ್ಚಿನ ಐಯುಸಿಗಳು ತಲೆಎತ್ತಬಹುದು.

**ಮೂಲ: ಜಯಂತ್ ನಾರ್ಲೀಕರ್**

**ಅನು: ಡಾ. ಗೀತಾಶೆಣೈ**

## ಅಂಬೇಡ್ಕರ್ ಮತ್ತು ವಂಚಿತ ವರ್ಗಗಳ ಶಿಕ್ಷಣ

ಭಾರತೀಯ ಸಮಾಜದಲ್ಲಿ ಮಾನವ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿಯೂ ವಂಚಿತ ವರ್ಗಗಳು ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಉದ್ದೇಶಪೂರ್ವಕ ಎಂದು ಸಾಮಾಜಿಕ ನ್ಯಾಯಪರ ಚಿಂತಕರು ಮತ್ತು ಹೋರಾಟಗಾರರು ಸಹಜವಾಗಿ ಪ್ರತಿಪಾದಿಸುತ್ತಾರೆ. ಶೋಷಿತ ವರ್ಗಗಳ ದೃಷ್ಟಿಕೋನ ಮಾನವತಾ ವಾದದ ಅವಿಭಾಜ್ಯ ಅಂಗವಾಗಿದೆ. ಹುಟ್ಟಿನಿಂದಲೇ ಯಾರೂ ಶ್ರೇಷ್ಠರಲ್ಲ ಅಥವಾ ಕನಿಷ್ಠರಲ್ಲ ಎಂಬುದನ್ನು ಮಾನವತಾವಾದ ಸ್ಪಷ್ಟವಾಗಿ ಸಮರ್ಥಿಸುತ್ತದೆ. ಶ್ರೇಣೀಕೃತ ವ್ಯವಸ್ಥೆಯನ್ನು ಮಾನವತಾವಾದ ಹಾಗೂ ಸಮಾಜವಾದಗಳು ತಿರಸ್ಕರಿಸುತ್ತವೆ. ಸಮಾಜದ ಬಲಾಢ್ಯರು–ದುರ್ಬಲರ ನಡುವೆ ಇರುವ ಅಸಮಾನತೆ ಪ್ರಕೃತಿ ಸಹಜವಲ್ಲ ಎಂದು ಮಾನವತಾವಾದ ತಿಳಿಸುತ್ತದೆ. ಅಸಮಾನತೆಯ ನೆಲೆಗಟ್ಟಿನ ಮೇಲೆ ರೂಪುಗೊಂಡ ಸಾಮಾಜಿಕ ವ್ಯವಸ್ಥೆ ಮಹಿಳೆಯರನ್ನು ಮತ್ತು ದುರ್ಬಲ ವರ್ಗಗಳನ್ನು ಇತಿಹಾಸದುದ್ದಕ್ಕೂ ಕಡೆಗಣಿಸಿದೆ. ವಂಚಿತ ವರ್ಗಗಳ ಪರ ಹಕ್ಕೊತ್ತಾಯಗಳನ್ನು ಮೇಲ್ವದರಿನ ನೆಲೆಯಲ್ಲಿ ಕಲ್ಪಿಸಿ ಸಂಘಟಿತ ಹೋರಾಟ ನಡೆಸಿದರೆ ಸಾಲದು. ಸಾಮಾಜಿಕ–ಆರ್ಥಿಕ ಪಾತಳಿಯಲ್ಲಿ ಸಿಲುಕಿಕೊಂಡಿರುವ ಭಾರತೀಯ ವಂಚಿತ ವರ್ಗಗಳ ಬದುಕು ಮಾನವತಾವಾದ, ವೈಚಾರಿಕತೆ ಮತ್ತು ಸಮತಾವಾದ ನೆಲೆಗಳಿಂದ ಶಕ್ತಿಯನ್ನು ಪಡೆದುಕೊಳ್ಳಬೇಕಾಗಿದೆ. ವಂಚಿತ ವರ್ಗಗಳ ಶಿಕ್ಷಣದಲ್ಲಿ ಅಂಬೇಡ್ಕರ್ ವಹಿಸಿದ ನಿರ್ಣಾಯಕ ಪಾತ್ರವನ್ನು ಕುರಿತ ಅಧ್ಯಯನ ಮತ್ತು ಪ್ರಕಟಣೆಗಳು ಆಧುನಿಕ

Digitised by Bharatavani, CIIL

ಸಮಾಜದಲ್ಲಿ ಪ್ರಸ್ತುತವಾಗಿವೆ.

ಅಂಬೇಡ್ಕರ್‌ರವರು ಭಾರತದ ಮಹಾನ್ ವಿಚಾರವಾದಿ. ಮಾನವೀಯತೆಯ ಹರಿಕಾರ ಮತ್ತು ಶ್ರೇಷ್ಠ ಮುತ್ಸದ್ದಿ. ಅವರ ಬದುಕು, ಹೋರಾಟ ಮತ್ತು ವಿಚಾರಗಳು ಇಂದಿಗೂ ಭಾರತದ ಕೋಟ್ಯನುಕೋಟಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತಿತರ ವಂಚಿತ ಜನವರ್ಗಗಳಿಗೆ ದಾರಿದೀಪ. ಅಂಬೇಡ್ಕರ್‌ರವರು ಪುರೋಹಿತಶಾಹಿ, ಬಂಡವಾಳಶಾಹಿ, ವಸಾಹತುಶಾಹಿ ಮತ್ತಿತರ ಜನವಿರೋಧಿ ಶಕ್ತಿಗಳು ಮತ್ತು ಪ್ರವೃತ್ತಿಗಳ ವಿರುದ್ಧ ಬದುಕಿನುದ್ದಕ್ಕೂ ಹೋರಾಡಿ 'ಸಾಮಾಜಿಕ ನ್ಯಾಯದ ಜ್ಯೋತಿ' ಎಂದು ಜಗದ್ವಿಖ್ಯಾತರಾದರು. ಈ ಕಾರಣದಿಂದಲೇ ಪ್ರಖ್ಯಾತ ಇತಿಹಾಸಕಾರ ನಿಕೋಲಸ್ ಬ್ರಿವರ್ಲಿರವರು ಅಂಬೇಡ್ಕರ್ ಅವರನ್ನು ಜಾನ್ ಮಿಲ್ಟನ್, ಕಾರ್ಲ್‌ಮಾರ್ಕ್ಸ್, ಅಬ್ರಹಾಂ ಲಿಂಕನ್, ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾರಂತಹ 'ವಿಶ್ವರತ್ನ' ಎಂಬುದಾಗಿ ಗುರುತಿಸಿದ್ದಾರೆ. ಇತ್ತೀಚೆಗೆ ವಿಶ್ವದ ಹೆಸರಾಂತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ 100 ಮಂದಿ ವಿಶ್ವದ ಶ್ರೇಷ್ಠ ನಿರ್ಮಾತೃಗಳಲ್ಲಿ ಬುದ್ಧನಿಗೆ ಮೊದಲನೇ ಸ್ಥಾನ ಮತ್ತು ಅಂಬೇಡ್ಕರ್‌ರವರಿಗೆ ನಾಲ್ಕನೇ ಸ್ಥಾನ ನೀಡಿರುವುದು ಸಮಸ್ತ ಭಾರತೀಯರು ಹೆಮ್ಮೆ ಪಡುವಂತಹ ವಿಚಾರವಾಗಿದೆ.

ಅಂಬೇಡ್ಕರ್ ಬಹುಮುಖ ಪ್ರತಿಭೆಯ ಗಣಿಯಾಗಿದ್ದರು ಮತ್ತು ಭಾರತದ ವಂಚಿತ ಜನವರ್ಗಗಳ ಶ್ರೇಯಸ್ಸಿಗಾಗಿ ಅಪ್ರತಿಮ ಹೋರಾಟವನ್ನೇ ನಡೆಸಿ ಭಾರತೀಯ ಚರಿತ್ರೆಯಲ್ಲಿ ಅಜರಾಮರರಾಗಿದ್ದಾರೆ. ಶ್ರೇಷ್ಠ ಸಮಾಜ ಸುಧಾರಕ, ರಾಜನೀತಿ ಪಂಡಿತ, ಅರ್ಥಶಾಸ್ತ್ರಜ್ಞ, ಶಿಕ್ಷಣ ತಜ್ಞ, ಮಾನವ ಹಕ್ಕುಗಳ ಹೋರಾಟಗಾರ, ಸಂವಿಧಾನ ಶಿಲ್ಪಿ, ಪತ್ರಿಕೋದ್ಯಮಿ, ಧಾರ್ಮಿಕ ನಾಯಕ, ಮಹಿಳಾ ಸಬಲೀಕರಣದ ರೂವಾರಿ, ಬಹುಜನ ಬಂಧು ಹೀಗೆ ನಾನಾ ಮುಖಗಳುಳ್ಳ ಅಪೂರ್ವ ಸಂಘಟಕ ಅಂಬೇಡ್ಕರ್ ಬಹುಮುಖ ಪ್ರತಿಭೆಯುಳ್ಳ ಮಹಾನ್ ದಾರ್ಶನಿಕರಾಗಿ ಭಾರತೀಯ ಸಂವಿಧಾನವನ್ನು ರಚಿಸಿ; ವಂಚಿತ ಜನವರ್ಗಗಳ ಸಬಲೀಕರಣಕ್ಕೆ ಅರ್ಥಪೂರ್ಣ; ಸಂವಿಧಾನಾತ್ಮಕ ಹಾಗೂ ಪ್ರಾಯೋಗಿಕ ಭೂಮಿಕೆಯನ್ನು ಸಿದ್ಧಪಡಿಸಿದರು.

ಆಧುನಿಕ ಭಾರತದಲ್ಲಿ ವಂಚಿತ ಜನವರ್ಗಗಳ ಸ್ಥಾನಮಾನ: ಆಧುನಿಕ ಭಾರತೀಯ ಸಮಾಜದಲ್ಲಿ ಶೇ85ಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ವಂಚಿತ ಜನವರ್ಗಗಳ ಜಾತಿ ಕೇಂದ್ರಿತ ಸಾಮಾಜಿಕ ವ್ಯವಸ್ಥೆಯಿಂದಾಗಿ ಅವಕಾಶವಂಚಿತರಾಗಿ ರಾಷ್ಟ್ರೀಯ ಮುಖ್ಯವಾಹಿನಿಯಿಂದ ಬಹುದೂರವೇ ಉಳಿದಿದ್ದಾರೆ. ಭರತ ಖಂಡದಲ್ಲಿ ವಂಚಿತ ಜನವರ್ಗಗಳು ತಮ್ಮದಲ್ಲದ ತಪ್ಪಿಗಾಗಿ ಹುಟ್ಟಿನಿಂದ ಸಾಯುವ ತನಕ ಕಟ್ಟಕಡೆಯವರಾಗಿ ದಟ್ಟದಾರಿದ್ರ್ಯಕ್ಕೆ ಒಳಗಾಗಿ ಬದುಕುವಂತಹ ಸ್ಥಿತಿ ನಿರ್ಮಾಣವಾಗಿದೆ. ಮೇಲ್ವರ್ಗದ ಬಲಾಢ್ಯರ ನಿರಂತರ ಅಹಂ ಪ್ರವೃತ್ತಿ, ದಬ್ಬಾಳಿಕೆ ಮತ್ತು ಶೋಷಣಾ ಪ್ರವೃತ್ತಿಗಳಿಂದಾಗಿ ವಂಚಿತ ಜನವರ್ಗಗಳು ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ತುಳಿತಕ್ಕೆ ಒಳಗಾಗಿದ್ದಾರೆ. ಪರಂಪರೆಯ ಪಾತಾಳ ಕೆಸರಿನಲ್ಲಿ ಮುಳುಗಿ ಹೋಗಿದ್ದ ವಂಚಿತ ಜನವರ್ಗಗಳು 2500 ವರ್ಷಗಳ ಹಿಂದೆ ಜರುಗಿದ ಬುದ್ಧನ ಕ್ರಾಂತಿಯ ನಂತರ ಬೌದ್ಧಿಕ ಚಲನಶೀಲತೆಯ ಲಾಭವನ್ನು ಪಡೆದು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿ 'ಪ್ರಬುದ್ಧ ಭಾರತ' ನಿರ್ಮಾಣಕ್ಕೆ ಕಾರಣರಾದರು. ಇಡೀ ಜಗತ್ತಿನಲ್ಲಿ ಮೊಟ್ಟಮೊದಲ ಬಾರಿಗೆ ಮನುಷ್ಯರನ್ನು ಮನುಷ್ಯರನ್ನಾಗಿ ಗುರುತಿಸುವ ಹೊಸ ಮಾನವೀಯ ಪರಂಪರೆಯೊಂದು ಉದಯಿಸಲು ಬುದ್ಧನ ಅಹಿಂಸಾತ್ಮಕ ಮತ್ತು ಪ್ರಜಾಸತ್ತಾತ್ಮಕ ಕ್ರಾಂತಿ ಕಾರಣವಾಯಿತು. ಎಲ್ಲಾ ಬಗೆಯ ಶೋಷಣಾ ಪ್ರವೃತ್ತಿಗಳನ್ನು ವಿರೋಧಿಸುವ, ನಿಸರ್ಗದತ್ತ ಸಮಾನತೆಯನ್ನು ಪ್ರತಿಪಾದಿಸುವ, ನಿರಭಿಮಾನವನ್ನು ಸ್ವಾಭಿಮಾನವನ್ನಾಗಿ ಪರಿವರ್ತಿಸುವ, ಸುಪ್ತ ಶಕ್ತಿಗಳನ್ನು ಎಚ್ಚರಿಸುವ ಮತ್ತು ವಂಚಿತ ಜನವರ್ಗಗಳನ್ನು ಪ್ರಗತಿಯತ್ತ ಕೊಂಡೊಯ್ಯುವ ಮಾನವೀಯ ಪ್ರಯತ್ನಗಳು ಜಗತ್ತಿನ ಎಲ್ಲೆಡೆ ಆರಂಭವಾಗಲು ಬುದ್ಧನ ಕ್ರಾಂತಿ ಪ್ರೇರಣೆ ನೀಡಿತು.

ಸಾವಿರಾರು ವರ್ಷಗಳ ಸಂಕೋಲೆಗಳನ್ನು ಕತ್ತರಿಸಿ ಮೇಲ್ವರ್ಗದ ಜನರಿಗೆ ಸಮಾನರಾಗಿ ಬದುಕುವ ಧೀಶಕ್ತಿ, ಮನೋಶಕ್ತಿ, ಕಾರ್ಯಶಕ್ತಿ ಮತ್ತು ಸಾಧನಾ ಶಕ್ತಿಗಳು ವಂಚಿತ ಜನವರ್ಗಗಳಲ್ಲಿ ಸುಪ್ತವಾಗಿವೆ ಎಂಬುದನ್ನು ಬುದ್ಧನ ವೈಚಾರಿಕ ಚಿಂತನೆ ಮತ್ತು ಪ್ರಗತಿಶೀಲ ಹೋರಾಟಗಳು ಸಾಬೀತುಪಡಿಸಿದವು, ಬುದ್ಧನ ನಂತರ 12ನೇ ಶತಮಾನದಲ್ಲಿ ಬಸವೇಶ್ವರರು ಕರ್ನಾಟಕವನ್ನು ತಮ್ಮ ಕರ್ಮಭೂಮಿಯನ್ನಾಗಿ ಸ್ವೀಕರಿಸಿ ಅನುಭವಮಂಟಪ ಎಂಬ ಮೊಟ್ಟಮೊದಲ ಪ್ರಜಾಸತ್ತಾತ್ಮಕ ವೇದಿಕೆಯನ್ನು ಕಟ್ಟಿ ಸಾಮಾಜಿಕ ನ್ಯಾಯಪರ ಹೋರಾಟ ನಡೆಸಿದರು. ಮಹಿಳೆಯರು ಮತ್ತು ದುರ್ಬಲ ವರ್ಗಗಳನ್ನು ಪ್ರಧಾನವಾಗಿ ಸಂಘಟಿಸಿ 'ವೈಚಾರಿಕ ಸಂಪತ್ತು' ಎಂದೇ ಬಣ್ಣಿಸಲ್ಪಟ್ಟಿರುವ ವಚನ ಸಾಹಿತ್ಯವನ್ನು ಸೃಷ್ಟಿ ಮಾಡಿ ಜಾತಿ ವಿನಾಶದ ಮೂಲಕ 'ಸುಖೀ ರಾಜ್ಯ' ನಿರ್ಮಿಸಿ ಮತ್ತೊರ್ವ ಧೀಮಂತ ಸಮಾಜ ಸುಧಾರಕರೆಂದೇ ಇತಿಹಾಸದಲ್ಲಿ ದಾಖಲಾಗಿದ್ದಾರೆ.

ಮಹಾರಾಷ್ಟ್ರದಲ್ಲಿ ಜ್ಯೋತಿ ಬಾ ಫುಲೆರವರು ಮಹಿಳೆಯರಿಗಾಗಿ ದೇಶದಲ್ಲಿ ಮೊಟ್ಟಮೊದಲ ಶಾಲೆಯನ್ನು ಆರಂಭಿಸಿ ತಮ್ಮ ಪತ್ನಿ ಸಾವಿತ್ರಿ ಫುಲೆಯವರನ್ನು ಆಧುನಿಕ ಭಾರತದ ಮೊಟ್ಟಮೊದಲ ಮಹಿಳಾ ಶಿಕ್ಷಕಿಯಾಗಿ ರೂಪಿಸಿ ವಂಚಿತ ವರ್ಗಗಳ ಶೈಕ್ಷಣಿಕ ಸಬಲೀಕರಣಕ್ಕೆ ನಾಂದಿ ಹಾಡಿದರು. ಅಂತೆಯೇ, ತಮಿಳುನಾಡಿನಲ್ಲಿ ರಾಮಸ್ವಾಮಿ ಪೆರಿಯಾರ್‌ರವರು ಶೂದ್ರಾತಿ ಶೂದ್ರರನ್ನು ಸಂಘಟಿಸಿ ಅವರ ಶೈಕ್ಷಣಿಕ ಸಬಲೀಕರಣ ಮತ್ತು ರಾಜಕೀಯ ಸಬಲೀಕರಣಗಳಿಗೆ ನಾಂದಿ ಹಾಡಿದರು. ಕೇರಳದಲ್ಲಿ ನಾರಾಯಣ ಗುರು ವಂಚಿತ ಜನವರ್ಗಗಳ ಬದುಕಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನುಂಟುಮಾಡಿದರು. ಮೈಸೂರು ಪ್ರಾಂತ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮಹಿಳೆಯರು ಮತ್ತು ದುರ್ಬಲ ವರ್ಗಗಳ ಸರ್ವತೋಮುಖ ಪ್ರಗತಿಗೆ ಪೂರಕವಾದ ಕಾನೂನುಗಳು ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸಿ

Digitised by Bharatavani, CIIL

'ಸಾಮಾಜಿಕ ನ್ಯಾಯಪರ ದೊರೆ' ಎಂದೇ ಜನಜನಿತರಾಗಿದ್ದಾರೆ. ಅಂಬೇಡ್ಕರ್‌ರವರು 20ನೇ ಶತಮಾನದಲ್ಲಿ ಮಹಾರಾಷ್ಟ್ರದ ಅಸ್ಪೃಶ್ಯ ಕುಟುಂಬದಲ್ಲಿ ಜನಿಸಿ ದೇಶದ ವಂಚಿತ ಜನವರ್ಗಗಳಾದ ದಲಿತರು, ಹಿಂದುಳಿದವರು, ಧಾರ್ಮಿಕ ಅಲ್ಪಸಂಖ್ಯಾತರು, ಆದಿವಾಸಿಗಳು ಮತ್ತು ಮಹಿಳೆಯರ ಸಬಲೀಕರಣಕ್ಕೆ ಪೂರಕವಾದ ಶ್ರೇಷ್ಠ ವಿಧಿ-ವಿಧಾನಗಳನ್ನು ಒಳಗೊಂಡ ಸಂವಿಧಾನವನ್ನು ರಚಿಸಿದ್ದಾರೆ. ಈ ಎಲ್ಲಾ ಮಹಾಪುರುಷರು ಭಾರತೀಯ ಸಮಾಜದ ವಂಚಿತ ಜನವರ್ಗಗಳ ಶಿಕ್ಷಣ, ಸಂಘಟನೆ, ಹೋರಾಟ, ವಿಮೋಚನೆ ಮತ್ತು ಸಬಲೀಕರಣಗಳಿಗೆ ನಿರ್ಣಾಯಕ ಕೊಡುಗೆ ನೀಡಿದ್ದಾರೆ.

ಪ್ರಜಾಪ್ರಭುತ್ವ ಒಂದು ಹೊಸ ಜೀವನ ವಿಧಾನವಾಗಿ ಜಗತ್ತಿನ ಎಲ್ಲೆಡೆ ರೂಪುಗೊಂಡಿತು. ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಮತ್ತು ಸಾಮೂಹಿಕ ಕಲ್ಯಾಣ ಮೌಲ್ಯಗಳನ್ನು ವಿವಿಧ ರಾಷ್ಟ್ರಗಳು ಸಂವಿಧಾನಾತ್ಮಕವಾಗಿ ಜಾರಿಗೊಳಿಸಿ ಹೊಸ ಮಾನವೀಯ ಆಡಳಿತ ಮತ್ತು ಅಭಿವೃದ್ಧಿ ಪರಂಪರೆಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಅವಕಾಶ ವಂಚಿತ ದಲಿತರು, ಆದಿವಾಸಿಗಳು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಭಾರತೀಯ ಸಮಾಜದಲ್ಲಿ 'ವಂಚಿತ ಜನವರ್ಗಗಳು' ಎಂದೇ ಗುರುತಿಸಲ್ಪಟ್ಟಿದ್ದಾರೆ.

ವಂಚಿತ ಜನವರ್ಗಗಳ ಶೋಷಣೆಯನ್ನು ಅಂಬೇಡ್ಕರ್ (1927) ಹೀಗೆ ವಿಶ್ಲೇಷಿಸಿದ್ದಾರೆ : "ಭಾರತೀಯ ಇತಿಹಾಸದಲ್ಲಿ ಮೂಲನಿವಾಸಿಗಳು ಹೊರಗಿನಿಂದ ಬಂದ ಅಕ್ರಮಣಕಾರಿ ಆರ್ಯನ್ನರ ಬುದ್ಧಿ ಬಲ, ತೋಳ್ಬಲ, ನಯವಂಚಕತನ ಮತ್ತಿತರ ಶೋಷಣಾ ಪ್ರವೃತ್ತಿಗಳಿಂದಾಗಿ ರಾಷ್ಟ್ರೀಯ ಮುಖ್ಯವಾಹಿನಿಯಿಂದ ದೂರ ಉಳಿದಿದ್ದಾರೆ. ಬುದ್ಧನು ತನ್ನ ಮಾನವೀಯ ಮೌಲ್ಯಗಳು ಮತ್ತು ವೈಚಾರಿಕ ಆಂದೋಲನದ ಮೂಲಕ ಮಹಿಳೆಯರು ಮತ್ತು ದುರ್ಬಲ ವರ್ಗಗಳ ಬದುಕುವ ಮೂಲಭೂತ ಹಕ್ಕನ್ನು ಪ್ರಬಲವಾಗಿ ಪ್ರತಿಪಾದಿಸಿ ಅವರ ಸಬಲೀಕರಣಕ್ಕೆ ನಾಂದಿ ಹಾಡಿದ ಬಗೆಯನ್ನು 'ಕ್ರಾಂತಿ' ಎಂದು ಕರೆಯಬಹುದು. ಹಾಗೆಯೇ ಮೌರ್ಯರ ಕೊನೆಯ ದೊರೆ ಬೃಹದ್ರತನನ್ನು ಅಮಾನವೀಯವಾಗಿ ಕೊಂದು ಹಿಂದೂ ಮೂಲಭೂತವಾದಿಗಳ ಪ್ರಭುತ್ವವನ್ನು ಭಾರತೀಯ ಸಮಾಜದಲ್ಲಿ ಪ್ರತಿಷ್ಠಾಪಿಸಿ ಮಹಿಳೆಯರು ಮತ್ತು ದುರ್ಬಲವರ್ಗಗಳ ಶೋಷಣೆಗೆ ಕಾರಣೀಭೂತನಾದ ಪುಷ್ಯಮಿತ್ರ ಶುಂಗನ ಕೃತ್ಯವನ್ನು 'ಪ್ರತಿಕ್ರಾಂತಿ' ಎಂದು ದಾಖಲಿಸಬಹುದು. ನನಗೆ ಸಮಸ್ತ ಭಾರತೀಯ ವಂಚಿತ ವರ್ಗಗಳ ಶಿಕ್ಷಣ ಮತ್ತು ಸಬಲೀಕರಣದಲ್ಲಿ ಅನನ್ಯ ನಂಬಿಕೆಯಿದ್ದು ಇವರಿಗೆ ಸಂವಿಧಾನಾತ್ಮಕವಾಗಿ ಉಪಯುಕ್ತ ವಿಧಿ-ವಿಧಾನಗಳನ್ನು ದೊರಕಿಸಿಕೊಟ್ಟು ನನ್ನ ಸಾಮಾಜಿಕ ಬದ್ಧತೆಯನ್ನು ಮೆರೆದಿದ್ದೇನೆ. ಮುಂದೆ ಧರ್ಮಾತೀತವಾಗಿ, ಜಾತ್ಯತೀತವಾಗಿ, ಲಿಂಗಾತೀತವಾಗಿ ಮತ್ತು ಪ್ರದೇಶಾತೀತವಾಗಿ ಭಾರತದ ಮಹಿಳೆಯರು ಮತ್ತು ಶೋಷಿತ ಜನವರ್ಗಗಳು ಒಗ್ಗೂಡಿ ಭಾರತವನ್ನು ಆಳಬೇಕೆಂಬುದೇ ನನ್ನ ಜೀವನದ ಮಹಾನ್ ಧ್ಯೇಯವಾಗಿದೆ. ಈ ನಿಟ್ಟಿನಲ್ಲಿ ಸಾಮಾಜಿಕ-ಆರ್ಥಿಕ ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಅವಕಾಶಗಳ ಮೂಲಕ ಭಾರತದ ಶೋಷಿತ ವರ್ಗಗಳು ಉದ್ಧಾರವಾಗಿ ಭಾರತವನ್ನು ಮತ್ತೊಮ್ಮೆ 'ಬೌದ್ಧಭಾರತ' ವನ್ನಾಗಿ ರೂಪಿಸಬೇಕು."

ವಂಚಿತ ವರ್ಗಗಳ ಅಧ್ಯಯನ ಪ್ರಾಮುಖ್ಯತೆ – ಮಾನವತಾವಾದ 21ನೇ ಶತಮಾನದಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ. ಸ್ಥಾಪಿತ ಸಂಸ್ಕೃತಿಗೆ ಪ್ರತಿಯಾಗಿ ಪರ್ಯಾಯ ಸಂಸ್ಕೃತಿಯನ್ನು ರೂಪಿಸುವ ನಿಟ್ಟಿನಲ್ಲಿ ಮಾನವತಾವಾದ ವಿಶೇಷ ಪ್ರಸ್ತುತತೆಯನ್ನು ಹೊಂದಿದೆ. ಜಗತ್ತಿನ ಎಲ್ಲೆಡೆ ಪ್ರಾದೇಶಿಕ, ತಾತ್ವಿಕ ಹಾಗೂ ಪ್ರಾಯೋಗಿಕ ಭಿನ್ನತೆಯ ಕಾರಣದಿಂದಾಗಿ ಮಾನವತಾವಾದದ ಅನೇಕ ಪ್ರಭೇದಗಳು ರೂಪುಗೊಂಡಿವೆ. ಮಾನವತಾವಾದ ಮಾನವ ಬದುಕಿನೊಂದಿಗೆ ನೇರ ಸಂಬಂಧ ಹೊಂದಿರುವ ಶಕ್ತಿಯುತ ಪರಿಕಲ್ಪನೆ ಎಂದು ಜಗತ್ತಿನ ದಾರ್ಶನಿಕರು ಮತ್ತು ಮುತ್ಸದ್ದಿಗಳು ಅಭಿಪ್ರಾಯಪಟ್ಟಿದ್ದಾರೆ. ಜಾಗತಿಕ ಮಟ್ಟದಲ್ಲಿ ಬುದ್ಧ, ಮಹಾವೀರ, ಬಸವ, ಪೈಗಂಬರ್, ಯೇಸುಕ್ರಿಸ್ತ, ಕಾರ್ಲಮಾರ್ಕ್ಸ್, ಮಾವೊ, ಗಾಂಧಿ, ಮಾರ್ಟಿನ್ ಲೂಥರ್ ಕಿಂಗ್, ಅಬ್ರಹಾಂ ಲಿಂಕನ್, ಅಂಬೇಡ್ಕರ್ ಮೊದಲಾದವರು ಮಾನವೀಯತೆಗಾಗಿ ಬದುಕಿನುದ್ದಕ್ಕೂ ಐತಿಹಾಸಿಕ ಹೋರಾಟ ನಡೆಸಿ ಶೋಷಿತ ಹಾಗೂ ಅವಕಾಶ ವಂಚಿತ ಜನವರ್ಗಗಳ ಬದುಕಿಗೆ ಹೊಸ ಭಾಷ್ಯ ಬರೆದಿದ್ದಾರೆ. ವಂಚಿತ ಜನವರ್ಗಗಳ ಶಿಕ್ಷಣ, ಸಂಘಟನೆ ಮತ್ತು ಅಭಿವೃದ್ಧಿಗೆ ಪೂರಕವಾದ ಮೌಲಿಕ ಗ್ರಂಥಗಳನ್ನು ಜಗತ್ತಿನ ಎಲ್ಲೆಡೆ ಚಿಂತಕರು ರಚಿಸಿದ್ದಾರೆ.

ವಂಚಿತ ವರ್ಗಗಳ ಸಬಲೀಕರಣ ಮತ್ತು ಮಾನವತಾವಾದ ಪರಸ್ಪರ ಪೂರಕವಾದ ಪ್ರಕ್ರಿಯೆಗಳಾಗಿವೆ. ವಂಚಿತ ವರ್ಗಗಳ ಅರ್ಥಪೂರ್ಣ ಸಬಲೀಕರಣಕ್ಕಾಗಿ ಮಾನವತಾವಾದ ವಿಮರ್ಶೆ ಪ್ರಾಯೋಗಿಕವಾಗಿ ಅನಿವಾರ್ಯ ಎಂಬುದನ್ನು ಒಪ್ಪಿಕೊಳ್ಳಲೇಬೇಕಾದ ವಾತಾವರಣ ಇಂದು ಮೂಡಿದೆ. ಜಗತ್ತಿನ ವಿಶ್ವವಿದ್ಯಾನಿಲಯಗಳಲ್ಲಿ ಮಾನವತಾವಾದ ಅಧ್ಯಯನಕ್ಕೆ ಹೆಚ್ಚು ಅವಕಾಶಗಳು ಲಭಿಸಿವೆ. ಮಾನವತಾವಾದ ಒಂದು ಪ್ರಬಲವಾದ ಹಾಗೂ ಉಪಯುಕ್ತವಾದ ಜ್ಞಾನ ಶಾಖೆಯಾಗಿ ಜಗತ್ತಿನ ಎಲ್ಲೆಡೆ ಬೆಳೆಯುತ್ತಿದೆ. ಮಾನವತಾವಾದಿ ಚರ್ಚೆಗಳು, ವಿಮರ್ಶೆಗಳು ಮತ್ತು ಅಧ್ಯಯನಗಳನ್ನು ಒಳಗೊಂಡ ಪಠ್ಯಗಳ ರಚನೆ ಅಧುನಿಕ ಸಮಾಜದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿದೆ. ಲಿಂಗ, ಧರ್ಮ, ವರ್ಗ, ವರ್ಣ ಮತ್ತು ಜಾತಿ ಆಧರಿತ ಸಂಬಂಧಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಮೂಲಕ ಸಂಶೋಧಕರು ಪ್ರಚಲಿತ ವ್ಯವಸ್ಥೆಯನ್ನು ಸುಧಾರಿಸಿ ವಂಚಿತ ಜನವರ್ಗಗಳ ಸಬಲೀಕರಣಕ್ಕೆ ಪೂರಕವಾದ ವಿಚಾರಧಾರೆಗಳನ್ನು ಮಂಡಿಸಿದ್ದಾರೆ. ಇಂತಹ ವೈಜ್ಞಾನಿಕ ಹಾಗೂ ವೈಚಾರಿಕ ಜ್ಞಾನದಾಸೋಹ ಮತ್ತು ಸಂಘಟಿತ ಹೋರಾಟಗಳಿಂದಲೇ ವಂಚಿತ ಜನವರ್ಗಗಳ ಸಬಲೀಕರಣ ಭಾರತ ಮತ್ತಿತರ ದೇಶಗಳಲ್ಲಿ ಸಾಧ್ಯವಿದೆ. ವಂಚಿತ ವರ್ಗಗಳ ಅಧ್ಯಯನವೊಂದರಿಂದಲೇ ಮನುಕುಲದ ಸಮಗ್ರ ಸಬಲೀಕರಣ ಸಾಧ್ಯವಾಗಲಾರದು. ಅರ್ಥಪೂರ್ಣ ಮಾನವತಾವಾದಿ ವಿಮರ್ಶೆ, ಅಧ್ಯಯನ ಮತ್ತು ಹೋರಾಟಗಳಿಂದ ವಂಚಿತ ವರ್ಗಗಳ ಸಬಲೀಕರಣ ಸಾಧ್ಯವಾಗುತ್ತದೆ. ವಂಚಿತ ವರ್ಗಗಳ ಅಧ್ಯಯನಕ್ಕೆ

Digitised by Bharatavani, CIIL

ಪೂರಕವಾದ ಕಾರಣಗಳು ಮತ್ತು ಸಂದರ್ಭಗಳನ್ನು ಅಭಿವೃದ್ಧಿ ತಜ್ಞರು ಹೀಗೆ ಗುರುತಿಸಿದ್ದಾರೆ:

1. ಸೈದ್ಧಾಂತಿಕ ತತ್ವಗಳ ಪ್ರಭಾವದಿಂದ ಹುಟ್ಟುವ ಮೂಲಭೂತ ವ್ಯತ್ಯಾಸಗಳು. 2. ವಂಚಿತ ವರ್ಗಗಳ ಸಬಲೀಕರಣಕ್ಕೆ ಪೂರಕವಾದ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಅವಕಾಶಗಳು. 3. ವರ್ಗ, ಧರ್ಮ, ಜಾತಿ, ಪಂಗಡ, ಪ್ರಾದೇಶಿಕ, ನೈಸರ್ಗಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಮೂಲದ ವ್ಯತ್ಯಾಸಗಳು. 4. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳಿಂದ ಹುಟ್ಟುವ ವ್ಯತ್ಯಾಸಗಳು. 5. ವಂಚಿತ ವರ್ಗಗಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು ಮತ್ತು ದಮನಕಾರಿ ಪ್ರವೃತ್ತಿಗಳು. 6. ವಂಚಿತ ವರ್ಗಗಳ ಸಮಸ್ಯೆಗಳು, ಹಕ್ಕುಗಳು ಮತ್ತು ಸಬಲೀಕರಣಕ್ಕೆ ಸಂಬಂಧಿಸಿದ ಜನಪರ ಹೋರಾಟಗಳು.

ಭಾರತದಲ್ಲಿ ವಂಚಿತ ವರ್ಗಗಳ ಸಬಲೀಕರಣಕ್ಕಾಗಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಹಲವಾರು ಚಿಂತಕರು, ಸಂಘಟಕರು ಮತ್ತು ಚಳುವಳಿಗಾರರು ವಿವಿಧ ಸಿದ್ಧಾಂತಗಳು ಮತ್ತು ವೇದಿಕೆಗಳಡಿಯಲ್ಲಿ ಹೋರಾಟ ನಡೆಸಿದ್ದಾರೆ. ಭಾರತೀಯ ವಂಚಿತ ವರ್ಗಗಳ ಸಬಲೀಕರಣಕ್ಕೆ ವ್ಯವಸ್ಥಿತವಾದ ಅಧ್ಯಯನಗಳು, ಕಾರ್ಯಕ್ರಮಗಳು ಮತ್ತು ಕಾರ್ಯತಂತ್ರಗಳು ಇಂದು ಅತ್ಯವಶ್ಯಕ.

ಸಾಮಾಜಿಕ ಅಭಿವೃದ್ಧಿಗಾಗಿ ವಿಶ್ವಸಮಾವೇಶ (1995) ವಂಚಿತ ವರ್ಗಗಳ ಬದುಕಿನ ವಿವಿಧ ಸಮಸ್ಯೆಗಳು, ಸವಾಲುಗಳು ಮತ್ತು ಸಬಲೀಕರಣ ಸಾಧ್ಯತೆಗಳನ್ನು ಕುರಿತು ಗಂಭೀರವಾಗಿ ಚರ್ಚಿಸಿತು. ಜಗತ್ತಿನ ಬಲಾಢ್ಯರಾಷ್ಟ್ರಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಆರ್ಥಿಕ ಉದಾರೀಕರಣದ ಹೆಸರಿನಲ್ಲಿ ವಂಚಿತ ಜನವರ್ಗಗಳನ್ನು ಅಮಾನವೀಯವಾಗಿ ಶೋಷಣೆಗೆ ಗುರಿಪಡಿಸಿದ ಬಗೆಯನ್ನು ಈ ಸಮಾವೇಶ ತಲಸ್ಪರ್ಶಿಯಾಗಿ ವಿಮರ್ಶಿಸಿತು. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ವಂಚಿತ ವರ್ಗಗಳ ಸಬಲೀಕರಣಕ್ಕೆ ಪೂರಕವಾದ ಸಂವಿಧಾನಾತ್ಮಕ ತಿದ್ದುಪಡಿಗಳು ಮತ್ತು ವಿಶೇಷ ಕಲ್ಯಾಣ ಯೋಜನೆಗಳು ಅವಶ್ಯಕವೆಂದು ವಿಶ್ವಸಮಾವೇಶ ಪ್ರಬಲವಾಗಿ ಪ್ರತಿಪಾದಿಸಿದೆ. ಇದರ ನಂತರ ಅನೇಕ ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳು ಮತ್ತು ಹೋರಾಟಗಳು ವಂಚಿತ ಜನವರ್ಗಗಳ ಬದುಕುವ ಮೂಲಭೂತ ಹಕ್ಕನ್ನು ಪ್ರಬಲವಾಗಿ ಪ್ರತಿಪಾದಿಸಿವೆ. ಇಂದು ಸಾಮಾಜಿಕ ನ್ಯಾಯವಿತರಣೆ ಮತ್ತು ವಂಚಿತ ವರ್ಗಗಳ ಸಬಲೀಕರಣ ವಿಶ್ವಮಟ್ಟದಲ್ಲಿ ಗಂಭೀರ ಚಿಂತನೆ ಮತ್ತು ಸಂಶೋಧನೆಗಳಿಗೆ ಒಳಪಟ್ಟಿವೆ.

ವಂಚಿತ ವರ್ಗಗಳ ಸಬಲೀಕರಣದ ವಿವಿಧ ಆಯಾಮಗಳು – ಬಾಟ್ಲಿವಾಲಾ (1994) ಅವರು ಸಬಲೀಕರಣವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ: "ಬದುಕಿನ ವಿವಿಧ ಸಂದರ್ಭಗಳ ಮೇಲೆ ಅವಕಾಶ ವಂಚಿತರು ಮತ್ತು ಅಧಿಕಾರ ಇಲ್ಲದವರು ಹೊಂದುವ ಶ್ರೇಷ್ಠ ನಿಯಂತ್ರಣವನ್ನು ಜನರ ಸಬಲೀಕರಣವೆಂದು ವ್ಯಾಖ್ಯಾನಿಸಬಹುದಾಗಿದೆ. ಸಬಲೀಕರಣವು ಸಂಪನ್ಮೂಲಗಳು ಮತ್ತು ಸಿದ್ಧಾಂತಗಳ ಮೇಲೆ ನಿಯಂತ್ರಣವನ್ನು ಮೂಲಭೂತವಾಗಿ ಒಳಗೊಂಡಿದೆ. ಜನರಲ್ಲಿ ಹೆಚ್ಚಿನ ಆತ್ಮವಿಶ್ವಾಸ ಮತ್ತು ಸಾಮರ್ಥ್ಯ ವೃದ್ಧಿಗಳು ಉಂಟಾದಾಗಲೇ ಸಬಲೀಕರಣಕ್ಕೆ ನಿಜವಾದ ಅರ್ಥ ಲಭಿಸುತ್ತದೆ."

ವಂಚಿತ ವರ್ಗಗಳು ಸಬಲೀಕರಣಗೊಳ್ಳಬೇಕಾದರೆ ಅವರಿಗೆ ಬಹುಮುಖ್ಯವಾಗಿ ಶೈಕ್ಷಣಿಕ ನೆರವು, ಸಾಮಾಜಿಕ ಸಮಾನತೆ, ರಾಜಕೀಯ ಅಧಿಕಾರ ಮತ್ತು ಆರ್ಥಿಕ ಸಂಪನ್ಮೂಲಗಳು ಅತ್ಯವಶ್ಯಕ. ವಂಚಿತ ವರ್ಗಗಳು ತಮ್ಮ ಸಂವಿಧಾನಾತ್ಮಕ ಹಕ್ಕುಬಾಧ್ಯತೆಗಳನ್ನು ಅರಿತು ಸಬಲೀಕರಣಕ್ಕಾಗಿ ಹೋರಾಟ ನಡೆಸಿದಾಗ ಮಾತ್ರ ಸಬಲೀಕರಣದ ಸಾಧ್ಯತೆ ನಿಚ್ಚಳವಾಗುತ್ತದೆ. ಬಹುಮುಖ್ಯವಾಗಿ ಸಾಮಾಜಿಕ–ಆರ್ಥಿಕ ಸಂಬಂಧಿ ಪಾತ್ರಗಳು ಬದಲಾಗಿ ಬದುಕಿನ ಎಲ್ಲ ಕ್ಷೇತ್ರಗಳಲ್ಲಿಯೂ ವಂಚಿತ ವರ್ಗಗಳಿಗೆ ಸಮಾನ ಅವಕಾಶ ಲಭಿಸಬೇಕು. ವಂಚಿತ ವರ್ಗಗಳ ಸಬಲೀಕರಣ ಮೂಲಭೂತವಾಗಿ ವರ್ಗಾತೀತವಾಗಿ ಮತ್ತು ಜಾತ್ಯತೀತವಾಗಿ ಅವಕಾಶ ವಂಚಿತ ಹಾಗೂ ದಮನಕ್ಕೆ ಒಳಗಾದ ಜನವರ್ಗಗಳ ಸಾಮಾಜಿಕ ಪರಿವರ್ತನೆ, ಆರ್ಥಿಕ ಸುಧಾರಣೆ, ರಾಜಕೀಯ ಪಾಲ್ಗೊಳ್ಳುವಿಕೆ ಮತ್ತು ಸಾಂಸ್ಕೃತಿಕ ಉತ್ತಮೀಕರಣಗಳನ್ನು ಒಳಗೊಂಡಿದೆ. ವಂಚಿತ ವರ್ಗಗಳಿಗೆ ಸಮಾಜದ ಎಲ್ಲೆಡೆ ಸಬಲೀಕರಣಕ್ಕೆ ಪೂರಕವಾದ ಸ್ವಾತಂತ್ರ್ಯ, ಸಮಾನತೆ, ಅವಕಾಶ, ಅಧಿಕಾರ ಮತ್ತು ಸಂಪನ್ಮೂಲಗಳು ಲಭಿಸಿದಾಗ ಮಾತ್ರ ಸಬಲೀಕರಣ ಪ್ರಕ್ರಿಯೆ ಉತ್ತಮಗೊಳ್ಳುತ್ತವೆಯೆಂದು ಮಲ್ಹೋತ್ರ ಮತ್ತಿತರರು (2002) ಅಭಿಪ್ರಾಯಪಟ್ಟಿದ್ದಾರೆ.

ಹಿರಿಯ ಸಾಹಿತಿ ದೇ. ಜವರೇಗೌಡ (1954) ಪೆರಿಯಾರ್‌ರವರ ವಂಚಿತ ವರ್ಗಗಳ ಸಬಲೀಕರಣದ ನಾಲ್ಕು ಪ್ರಮುಖ ಅಂಶಗಳನ್ನು ಹೀಗೆ ಉಲ್ಲೇಖಿಸಿದ್ದಾರೆ. ಅವುಗಳೆಂದರೆ ಜಾಲ ಸಹಾಯ, ಜಾಗೃತಿ, ಸ್ವಾಭಿಮಾನ ಮತ್ತು ಆತ್ಮವಿಶ್ವಾಸ. ವಂಚಿತ ವರ್ಗಗಳು ಈ ನಾಲ್ಕು ಮೂಲಭೂತ ಅಂಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಬಲೀಕರಣದೆಡೆಗೆ ದಿಟ್ಟ ಹೆಜ್ಜೆಯನ್ನು ಇಟ್ಟಾಗ ಮಾತ್ರ ಅವರ ಸಬಲೀಕರಣ ಸಾಧ್ಯವಾಗುತ್ತದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್ (2001) ವಂಚಿತ ವರ್ಗಗಳ ಸಬಲೀಕರಣದಲ್ಲಿ ಸಾಮಾಜಿಕ ಕ್ರೋಢೀಕರಣ ಮತ್ತು ಸಾಮೂಹಿಕ ಪರಿಶ್ರಮಗಳು ಅತ್ಯಂತ ಮೂಲಭೂತವೆಂದು ಗುರುತಿಸಿದೆ.

ಇಂದು ಜಗತ್ತಿನ ಎಲ್ಲೆಡೆ ವಂಚಿತ ವರ್ಗಗಳ ಸಬಲೀಕರಣವನ್ನು ಕುರಿತಂತೆ ವ್ಯಾಪಕವಾದ ಚರ್ಚೆ, ಸಂವಾದ, ಸಮ್ಮೇಳನ, ಸಂಶೋಧನೆ ಮೊದಲಾದವುಗಳು ಜರುಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ವಿಶ್ವ ಮಟ್ಟದಲ್ಲಿ ಕಳೆದ ನಾಲ್ಕು ದಶಕಗಳಲ್ಲಿ (1970–2010) ಅನೇಕ ಅಂತರರಾಷ್ಟ್ರೀಯ ಪ್ರಯತ್ನಗಳು ವಿಶ್ವ ಸಂಸ್ಥೆಯ ನೇತೃತ್ವದಲ್ಲಿ ವಂಚಿತ ವರ್ಗಗಳ ಸಬಲೀಕರಣದ ನಿಟ್ಟಿನಲ್ಲಿ ಜರುಗಿದವು. ವಿಶ್ವ ಸಂಸ್ಥೆಯು ಅಸ್ತಿತ್ವಕ್ಕೆ ಬಂದ 50 ವರ್ಷಗಳಲ್ಲಿ ಆದ ಅಂತರರಾಷ್ಟ್ರೀಯ ಒಪ್ಪಂದವು ಸಾಮಾಜಿಕ–ಆರ್ಥಿಕ ಸಮಾನತೆಯನ್ನು ಒಂದು ಮೂಲಭೂತ ಮಾನವ

Digitised by Bharatavani, CIIL

ಹಕ್ಕೆಂದು ಘೋಷಿಸಿತು.

ಜಯಪ್ರಕಾಶ್ ನಾರಾಯಣ್ (1975) ವಂಚಿತ ವರ್ಗಗಳ ಸಬಲೀಕರಣಕ್ಕೆ ಭಾರತೀಯ ಸಂದರ್ಭದಲ್ಲಿ ಮಾನವೀಯ ನೆಲೆಗಟ್ಟಿನಲ್ಲಿ ಹೊಸದೊಂದು ಅರ್ಥಪೂರ್ಣ ಅಯಾಮವನ್ನು ನೀಡಿದ್ದಾರೆ. "ವಂಚಿತ ವರ್ಗಗಳು ತಮ್ಮ ಬದುಕಿನ ಮೇಲೆ ಪರಿಪೂರ್ಣ ನಿಯಂತ್ರಣ ಮತ್ತು ಸಾರ್ವಭೌಮತ್ವಗಳನ್ನು ಸಾಧಿಸುವಂತಹ ಹೊಸ ಸಾಧ್ಯತೆಯನ್ನು ನಿಜವಾದ ಅರ್ಥದಲ್ಲಿ ವಂಚಿತ ವರ್ಗಗಳ ಸಬಲೀಕರಣವೆನ್ನಬಹುದು. ವಂಚಿತ ವರ್ಗಗಳ ಬದುಕಿನ ಸುಧಾರಣೆಗಾಗಿ ಅವಶ್ಯಕವಾದ ಕಾರ್ಯತಂತ್ರಗಳು ಮತ್ತು ರೂಪುರೇಷೆಗಳನ್ನು ಸ್ವತಹ ಆಯ್ಕೆ ಮಾಡಿಕೊಳ್ಳುವ ಮತ್ತು ಸದುಪಯೋಗಪಡಿಸಿಕೊಳ್ಳುವ ಸ್ವಾತಂತ್ರ್ಯ ವಂಚಿತ ವರ್ಗಗಳಿಗೆ ದೊರಕುವುದು ಅವರ ಸಬಲೀಕರಣ ದೃಷ್ಟಿಯಿಂದ ಅತ್ಯವಶ್ಯಕ."

ಸಾಮಾಜಿಕ ನ್ಯಾಯಪರ ಚಿಂತಕರು ಮತ್ತು ಹೋರಾಟಗಾರರು 21ನೇ ಶತಮಾನವನ್ನು ಮಹಿಳೆಯರು ಮತ್ತು ದುರ್ಬಲವರ್ಗಗಳ ಸಬಲೀಕರಣದ ಶತಮಾನವೆಂದು ಗುರುತಿಸಿದ್ದಾರೆ. ವಂಚಿತ ವರ್ಗಗಳ ಸಬಲೀಕರಣ ಬಹುಮುಖೀ ಆಂದೋಲನವಾಗಿದ್ದು ವಿವಿಧ ಆಯಾಮಗಳನ್ನು ಒಳಗೊಂಡಿದೆ. ಅವುಗಳೆಂದರೆ ಭೌತಿಕ ಸಬಲೀಕರಣ (ಆರೋಗ್ಯ, ಪೌಷ್ಠಿಕತೆ, ಅಹಾರ, ಬೆಳವಣಿಗೆ, ಜೀವಿತಾವಧಿ ಇತ್ಯಾದಿ), ಮಾನಸಿಕ ಸಬಲೀಕರಣ (ಸಾಕ್ಷರತೆ, ಆತ್ಮವಿಶ್ವಾಸ, ವೃತ್ತಿಪರ ಕೌಶಲತೆ, ಉದ್ಯಮಶೀಲತೆ, ತರಬೇತಿ ಇತ್ಯಾದಿ), ಸಾಮಾಜಿಕ ಸಬಲೀಕರಣ (ಆಸ್ತಿಯಲ್ಲಿ ಮಾಲೀಕತ್ವದ ಹಕ್ಕು, ಕುಟುಂಬದಲ್ಲಿ ಅಂತಸ್ತು, ವಿವಾಹ ಅಂತಸ್ತು, ಕುಟುಂಬ ಯೋಜನೆ, ಕುಟುಂಬ ಕಲ್ಯಾಣ, ಸಮಾನತೆ, ಸ್ವಾತಂತ್ರ್ಯ ಇತ್ಯಾದಿ) ಆರ್ಥಿಕ ಸಬಲೀಕರಣ (ಆಸ್ತಿಹಕ್ಕು, ಉದ್ಯೋಗಾವಕಾಶ, ಸಂಪನ್ಮೂಲಗಳ ನಿಯಂತ್ರಣ, ಆದಾಯ ಮೂಲಗಳಲ್ಲಿ ಲಭ್ಯತೆ, ಜೀವನ ಮಟ್ಟದಲ್ಲಿ ಸುಧಾರಣೆ ಇತ್ಯಾದಿ), ಶಾಸನಾತ್ಮಕ ಸಬಲೀಕರಣ (ಮೂಲಭೂತ ಹಕ್ಕುಗಳು, ಸಂವಿಧಾನಾತ್ಮಕ ರಕ್ಷಣೆಗಳು, ಜಾತಿ ತಾರತಮ್ಯದ ವಿರುದ್ಧ ರಕ್ಷಣೆ, ಸಮಾಜ ಕಲ್ಯಾಣಕ್ಕೆ ಕಾನೂನಿನ ಅವಕಾಶಗಳು ಇತ್ಯಾದಿ), ರಾಜಕೀಯ ಸಬಲೀಕರಣ (ಸಂಸತ್ತು, ಶಾಸನ ಸಭೆ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮೀಸಲಾತಿ, ಅಧಿಕಾರ, ಅವಕಾಶ ಇತ್ಯಾದಿ); ಮತ್ತು ಧಾರ್ಮಿಕ ಸಬಲೀಕರಣ (ಧಾರ್ಮಿಕ ಕಟ್ಟುಪಾಡುಗಳು ಮತ್ತು ಕಂದಾಚಾರಗಳಿಂದ ವಿಮೋಚನೆ, ಧಾರ್ಮಿಕ ಸ್ವಾತಂತ್ರ್ಯ) ಇತ್ಯಾದಿ. ಸರ್ಕಾರ ಮತ್ತು ಸಮಾಜ ಒಟ್ಟುಗೂಡಿ ವಂಚಿತ ವರ್ಗಗಳ ಬಹುಮುಖ ಸಬಲೀಕರಣಕ್ಕೆ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದು ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಅತ್ಯವಶ್ಯಕ.

ಅಂಬೇಡ್ಕರ್‌ರವರ ಶೈಕ್ಷಣಿಕ ಸಾಧನೆ – ಅಂಬೇಡ್ಕರ್ ಅವರ ಶಿಕ್ಷಣ ವಾಸ್ತವವಾಗಿ ದುರ್ಗಮವಾದ ರಸ್ತೆಯೇ ಆಗಿತ್ತು. ಅವರ ತಂದೆ ರಾಮ್‌ಜೀ ಕಿತ್ತು ತಿನ್ನುವ ಬಡತನದ ಮಧ್ಯೆಯೂ ಮಗನ ಶಾಲಾ ಶಿಕ್ಷಣದ ವ್ಯವಸ್ಥೆಯನ್ನು ಸಮರ್ಪಕವಾಗಿಯೇ ನೋಡಿಕೊಂಡರು. ಬಡತನ, ಅಸ್ಪೃಶ್ಯತೆ, ತಾರತಮ್ಯ ಹೀಗೆ ಅನೇಕ ಸಮಸ್ಯೆಗಳು ಅವರನ್ನು ಬಹಳವಾಗಿ ಕಾಡಿದವು. ಆದರೆ ಇವುಗಳಿಂದ ಧೃತಿಗೆಡದೆ ಛಲಬಿಡದ ತ್ರಿವಿಕ್ರಮನಂತೆ ಅಂಬೇಡ್ಕರ್ ತೊಂದರೆಗಳ ಸರಮಾಲೆಗಳನ್ನು ಸಾಧನೆ ಮೆಟ್ಟಿಲುಗಳನ್ನಾಗಿಸಿ ಶೈಕ್ಷಣಿಕ ಪ್ರಗತಿಯ ಉತ್ತುಂಗ ಶಿಖರವನ್ನೇರಿದರು. ತಂದೆಯ ನೆರವಿನಿಂದ ಕಾಲೇಜು ಶಿಕ್ಷಣವನ್ನು ನಿರಾತಂಕವಾಗಿ ಅಂಬೇಡ್ಕರ್ ಪೂರೈಸಿದರು. ಕೊಲ್ಲಾಪುರದ ಶಾಹು ಮಹಾರಾಜರು ಮತ್ತು ಬರೋಡಾದ ಗಾಯಕ್‌ವಾಡ್ ಮಹಾರಾಜರು ಆ ಕಾಲದ ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದರು. ಇವರ ಪ್ರೀತಿ ಪೂರ್ವಕ ಉತ್ತೇಜನದಿಂದ ಅಂಬೇಡ್ಕರ್ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ತೆರಳಿ ಎಂ.ಎ. ಪದವಿ ಗಳಿಸಿದರು. ಅಲ್ಲಿಯೇ "ಭಾರತೀಯ ಹಣಕಾಸು" ವ್ಯವಸ್ಥೆ ಕುರಿತಂತೆ ಮಹಾ ಪ್ರಬಂಧ ರಚಿಸಿ ಪಿಎಚ್.ಡಿ. ಪದವಿ ಗಳಿಸಿದರು.

ಅಂಬೇಡ್ಕರ್ ಉನ್ನತ ಪದವಿ ಅಥವಾ ಪುರಸ್ಕಾರಗಳನ್ನು ಗಳಿಸುವ ಸಲುವಾಗಿ ಹೆಚ್ಚಿನ ಅಧ್ಯಯನ ಕೈಗೊಳ್ಳಲಿಲ್ಲ. ಸಾವಿರಾರು ವರ್ಷಗಳ ಶೋಷಣೆಯಿಂದ ಭಾರತದ ಬಹುಜನರನ್ನು ವಿಮೋಚನೆಗೊಳಿಸುವ ಸದಾಶಯದಿಂದಾಗಿ ಅವರು ಆ ಕಾಲದ ಶ್ರೇಷ್ಠ ಪದವಿಗಳನ್ನು ಗಳಿಸಿದ ಮೊಟ್ಟ ಮೊದಲ ಭಾರತೀಯರಾದರು. ಅರ್ಥಶಾಸ್ತ್ರದಲ್ಲಿ ಉನ್ನತ ಅಧ್ಯಯನ ನಡೆಸುವ ಹಂಬಲದಿಂದ 1916 ಜೂನ್ ತಿಂಗಳಲ್ಲಿ ಅಂಬೇಡ್ಕರ್ ಲಂಡನ್ ನಗರಕ್ಕೆ ಬಂದರು. ಅತ್ಯಂತ ಪ್ರತಿಭಾವಂತರೆಂದು ಗುರುತಿಸಲ್ಪಟ್ಟ ಅಂಬೇಡ್ಕರ್, ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಗಾಗಿ ಲಂಡನ್ ವಿಶ್ವವಿದ್ಯಾಲಯದಲ್ಲೂ ಬ್ಯಾರಿಸ್ಟರ್ ಆಫ್ ಲಾ ಪದವಿಗಾಗಿ ಗ್ರೇಟ್ ಬ್ರಿಟನ್‌ನಲ್ಲಿ ಹಣಕಾಸು ಸಂಸ್ಥೆಯಲ್ಲೂ ಪ್ರವೇಶ ಪಡೆದರು. ಆದರೆ 1917ರಂದು ಬರೋಡಾ ಸಂಸ್ಥಾನದಿಂದ ಪಡೆದಿದ್ದ ವಿದ್ಯಾರ್ಥಿ ವೇತನದ ಅವಧಿ ಮುಗಿದು ಹೋಗಿದ್ದರಿಂದ ಅವರು ಭಾರತಕ್ಕೆ ಹಿಂದಿರುಗಬೇಕಾಯಿತು.

ಅಂಬೇಡ್ಕರ್ ಬರೋಡಾ ಸಂಸ್ಥಾನದಲ್ಲಿ ಮಿಲಿಟರಿ ಕಾರ್ಯದರ್ಶಿ, ಮುಂಬೈ ನಗರದ ಸಿಡೆನ್ ಹ್ಯಾಂ ವಾಣಿಜ್ಯ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕ, ಮೂಕನಾಯಕ ಪತ್ರಿಕೆಯ ಸಂಪಾದಕ, ಬಹಿಷ್ಕೃತ ಹಿತಕಾರಿಣಿ ಸಭಾದ ಸಂಘಟಕ ಹೀಗೆ ಹಲವಾರು ಪ್ರಮುಖ ಹುದ್ದೆಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಿ ಭಾರತದ ಶ್ರೇಣೀಕೃತ, ಧಾರ್ಮಿಕ, ಸಾಮಾಜಿಕ, ಅರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳ ವಿರುದ್ಧ ಜನಾಂದೋಲನ ರೂಪಿಸಿದರು. ವಿದೇಶದಲ್ಲಿ ಉನ್ನತ ಶಿಕ್ಷಣ ಮುಗಿಸಿ ಭಾರತೀಯ ಬದುಕಿನಲ್ಲಿ ಮಹತ್ತರ ಸುಧಾರಣೆ ಮಾಡಬೇಕೆಂಬ ಹಂಬಲದಿಂದ 1920ರಲ್ಲಿ ಇಂಗ್ಲೆಂಡಿಗೆ ತೆರಳಿದರು. ಗ್ರೇಟ್ ಬ್ರಿಟನ್‌ನಲ್ಲಿ ಕಾನೂನು ಮತ್ತು ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರದ ವಿಸ್ತೃತ ವ್ಯಾಸಂಗದಲ್ಲಿ ಅಂಬೇಡ್ಕರ್ ತೊಡಗಿದರು.

ಎರಡು ವರ್ಷಗಳ ಅಖಂಡ ಪರಿಶ್ರಮದಿಂದ "ಬ್ರಿಟಿಷ್ ಇಂಡಿಯಾದಲ್ಲಿ ಕೇಂದ್ರ ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣ" ಎಂಬ ಪ್ರಬಂಧಕ್ಕೆ ಲಂಡನ್ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಪದವಿ, "ರೂಪಾಯಿ ಸಮಸ್ಯೆ" ಎಂಬ ಬೃಹತ್ ಪ್ರಬಂಧಕ್ಕೆ ಡಿ.ಎಸ್‌ಸಿ

Digitised by Bharatavani, CIIL

ಎಂಬ ಅತ್ಯುನ್ನತ ಪದವಿ ಮತ್ತು ಕಾನೂನು ಶಾಸ್ತ್ರ ಅಧ್ಯಯನಕ್ಕೆ ಎಲ್‌ಎಲ್.ಡಿ. ಮತ್ತು ಬಾರ್ ಅಟ್ ಲಾ ಪದವಿಗಳನ್ನು ಗಳಿಸಿದರು. ಅಂದಿನ ರಾಜಕೀಯ ಕ್ಷೇತ್ರದಲ್ಲಿ ಇವರಷ್ಟು ಉನ್ನತ ಮಟ್ಟದ ಶಿಕ್ಷಣ ತಪಸ್ವಿ ಮತ್ತು ಅಪೂರ್ವ ಸಾಧಕರು ಬೇರೆ ಯಾರೂ ಇರಲಿಲ್ಲ ಈ ಕಾರಣದಿಂದಲೇ ಮುಂದೆ ಅಂಬೇಡ್ಕರ್ ಭಾರತದ ಸಂವಿಧಾನ ಶಿಲ್ಪಿಯಾಗಿ ಬೆಳೆದು ಬಹು ಜನರ ಸಬಲೀಕರಣದ ರೂವಾರಿಯಾದರು.

ಅಂಬೇಡ್ಕರ್‌ರವರು ಅಕ್ಷರ ಸಂಸ್ಕೃತಿಯ ಮೇಲೆ ಸಾಧಿಸಿದ ಪ್ರಭುತ್ವವನ್ನು ಕುರಿತು ಚಂದ್ರಶೇಖರ (2009) ಹೀಗೆ ಪ್ರಶಂಸಿದ್ದಾರೆ: "ಬಾಬಾ ಸಾಹೇಬರಿಗೆ ಭಾರತದ ದಲಿತರ ಸಮಸ್ಯೆಯನ್ನು ರಾಷ್ಟ್ರೀಯ ಅಂತರರಾಷ್ಟ್ರೀಯಗೊಳಿಸುವಲ್ಲಿ ನೆರವಾದ ಸಂಗತಿಯೆಂದರೆ ಅವರು ಅಕ್ಷರ ಸಂಸ್ಕೃತಿಯ ಮೇಲೆ ಸಾಧಿಸಿಕೊಂಡ ಪ್ರಭುತ್ವವಾಗಿತ್ತು. ಇಂದು ಬಹಳ ಮುಖ್ಯವಾದ ಸಂಗತಿಯೆಂದರೆ ಅಕ್ಷರ ಸಂಪತ್ತಿನ ಕೊರತೆ. ದಲಿತರ ಶೋಷಣೆಗೆ ಕಾರಣವಾಗಿದ್ದ ಮೌಖಿಕ ಸಂಪ್ರದಾಯವನ್ನು ಅಂಬೇಡ್ಕರ್ ಅವರು ಪ್ರಜ್ಞಾಪೂರ್ವಕವಾಗಿ ಬಿಟ್ಟುಕೊಟ್ಟರು. ಪುರೋಹಿತಶಾಹಿಯ ವಶದಲ್ಲಿದ್ದ ಅಕ್ಷರ ಸಂಸ್ಕೃತಿಯನ್ನು ಅವರು ಅತ್ಯಂತ ಪರಿಶ್ರಮದಿಂದ ಹಾಗೂ ಪ್ರಜ್ಞಾಪೂರ್ವಕವಾಗಿ ತಮ್ಮ ವಶಪಡಿಸಿಕೊಳ್ಳಲು ಪ್ರಯತ್ನಿಸಿದರು ಮತ್ತು ಅದರಲ್ಲಿ ಸಂಪೂರ್ಣವಾಗಿ ಯಶಸ್ವಿಯಾದರು."

ವಂಚಿತ ವರ್ಗಗಳ ಸಬಲೀಕರಣಕ್ಕೆ ಅಂಬೇಡ್ಕರ್ ಕೊಡುಗೆ – ಅಂಬೇಡ್ಕರ್ ಅವರು 1924ರಲ್ಲಿ ಮುಂಬೈ ನಗರದಲ್ಲಿ "ಬಹಿಷ್ಕೃತ ಹಿತಕಾರಿಣಿ ಸಭೆ" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಜಾತಿ ಪದ್ಧತಿಯನ್ನು ಇಲ್ಲವಾಗಿಸಿ ಸಮಾನತೆಯ ಆಧಾರದ ಮೇಲೆ ಹಿಂದೂ ಸಮಾಜವನ್ನು ಸುಧಾರಿಸಿ ಬಲಿಷ್ಠ ಭಾರತ ದೇಶವನ್ನು ಕಟ್ಟಿ ಬೆಳೆಸುವುದು ಅವರ ಉದ್ದೇಶವಾಗಿತ್ತು. ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತತೆಗಳ ಆಧಾರದ ಮೇಲೆ ಭಾರತದ ಸಮಗ್ರ ಪ್ರಗತಿಯನ್ನು ಸಾಧಿಸುವ ಕನಸನ್ನು ಅವರು ಕಂಡಿದ್ದರು. "ಭಾರತಕ್ಕೆ ಬೇಕಾಗಿರುವುದು ಜನರ ಗುಣವೇ ಹೊರತು ಜಾತಿಯಲ್ಲ" ಎಂದು ಅಂಬೇಡ್ಕರ್ ಸ್ಪಷ್ಟಪಡಿಸಿದರು. "ಮೂಕನಾಯಕ" ಪತ್ರಿಕೆ ಕಟ್ಟ ಕಡೆಯ ದಟ್ಟ ದಾರಿದ್ರ್ಯಕ್ಕೆ ಸಿಲುಕಿ ತತ್ತರಿಸುತ್ತಿದ್ದ ಅಸ್ಪೃಶ್ಯ ಜನವರ್ಗಗಳಲ್ಲಿ ಮೊಟ್ಟ ಮೊದಲ ಬಾರಿಗೆ ಜಾಗೃತಿ ಮೂಡಿಸಿತು. ಅವರು ಬಹಿಷ್ಕೃತ ಭಾರತ "ಸಮತಾ ಮತ್ತು ಜನತಾ" ಎಂಬ ಇತರ ಪತ್ರಿಕೆಗಳಲ್ಲಿ ಕ್ರಾಂತಿಕಾರಕ ಬರಹಗಳನ್ನು ಪ್ರಕಟಿಸಿ ಬಹುಜನ ಭಾರತೀಯರ ಸಬಲೀಕರಣಕ್ಕೆ ಪೂರಕವಾದ ಬೌದ್ಧಿಕ ನೆರವು ನೀಡಿದರು.

ರಾಜ್ಯಾಧಿಕಾರ ಸವರ್ಣೀಯರ ಜನ್ಮಸಿದ್ಧ ಹಕ್ಕಾಗಿದ್ದಷ್ಟೇ ಅಸ್ಪೃಶ್ಯರು ಮತ್ತಿತರ ವಂಚಿತ ಜನವರ್ಗಗಳ ಜನ್ಮಸಿದ್ಧ ಹಕ್ಕೂ ಆಗಿದೆ. ಕೆಳಗಿನವರನ್ನು ಮೇಲಕ್ಕೆತ್ತದೆ ದೇಶದ ಸ್ವಾಯತ್ತಾಧಿಕಾರ ಸಿದ್ಧಿಸಲಾರದು ಎಂದು ಅಂಬೇಡ್ಕರ್ ಬಲವಾಗಿ ಪ್ರತಿಪಾದಿಸಿದರು. ಅಸ್ಪೃಶ್ಯತೆ ಎಂಬ ಶಾಪವನ್ನು ತೊಡೆದು ಹಾಕಲೇಬೇಕು ಮತ್ತು ತನ್ನ ಜನರನ್ನು ಜೀವಂತವಾಗಿ ಸುಡುವ ಇಂತಹ ಪಿಡುಗಿನಿಂದ ವಿಮೋಚನೆಗೊಳಿಸಲೇಬೇಕೆಂಬ ಅಚಲ ನಿರ್ಧಾರ ಅವರದ್ದಾಗಿತ್ತು.

ಅಸ್ಪೃಶ್ಯತೆ, ಜಾತೀಯತೆ, ಅಜ್ಞಾನ ಮತ್ತು ಶೋಷಣೆ ಪ್ರಜಾಪ್ರಭುತ್ವದ ಪ್ರಬಲ ಶತ್ರುಗಳು ಎಂದು ಅಂಬೇಡ್ಕರ್ ಸಾರಿದರು. ಶಿಕ್ಷಣವನ್ನು ಹೋರಾಟದ ಪ್ರಬಲ ಅಸ್ತ್ರವನ್ನಾಗಿ ಬಳಸಬೇಕೆಂದು ಅವರು ಶೋಷಿತ ಜನಗಳಿಗೆ ಕರೆಯಿತ್ತರು. ಇನ್ನೊಂದು ಸಂಚಿಕೆಯಲ್ಲಿ "ರಾಜ್ಯಾಧಿಕಾರಕ್ಕಾಗಿ ಸವರ್ಣೀಯರು ಬ್ರಿಟಿಷರಿಗೆ ಎದುರಾಗಿ ನಿಲ್ಲುವುದು ನ್ಯಾಯವಾದರೆ, ನ್ಯಾಯಯುತ ಅಧಿಕಾರವರ್ಗಗಳಿಂದ ಸವರ್ಣೀಯರಿಗೆ ಎದುರಾಗಿ ನಿಲ್ಲುವುದು ನ್ಯಾಯ" ಎಂದೂ ಅಂಬೇಡ್ಕರ್ ಹೇಳಿದರು.

ಅಂಬೇಡ್ಕರ್ ಹುಟ್ಟಿನಿಂದ ದಲಿತರಾಗಿದ್ದರೂ ಅವರು ಕೇವಲ ದಲಿತರ ನಾಯಕರಷ್ಟೇ ಅಲ್ಲ. ಅಂಬೇಡ್ಕರ್ ಸಮಸ್ತ ಭಾರತೀಯರು ಮತ್ತು ವಂಚಿತ ವರ್ಗಗಳ ಸಬಲೀಕರಣಕ್ಕಾಗಿ ಜೀವನಪರ್ಯಂತ ಹೋರಾಡಿ ಮತ್ತು ಸಂವಿಧಾನಾತ್ಮಕ ರಕ್ಷಣೆಗಳನ್ನು ಮತ್ತು ಅವಕಾಶಗಳನ್ನು ಕಲ್ಪಿಸಿದರು. ಭಾರತದಲ್ಲಿ ರೈತರನ್ನು ಸಂಘಟಿಸಿ ಭೂಮಿಯ ರಾಷ್ಟ್ರೀಕರಣ ಅಥವಾ ಪುನರ್ ಹಂಚಿಕೆಯಾಗಬೇಕೆಂದು ಬಲವಾಗಿ ವಾದಿಸಿದರು. ಅವರೇ ನಿಜಕ್ಕೂ ಭೂಸುಧಾರಣಾ ಮಸೂದೆಯ ಕಾರ್ಯಕರ್ತರು. ಭಾರತದಲ್ಲಿ ಕಾರ್ಮಿಕರ ಪಕ್ಷವನ್ನು ಕಟ್ಟಿ, ಕಾರ್ಮಿಕರು ದೇಶದ ಪ್ರಭುಗಳಾಗಬೇಕೆಂದು ಅಂಬೇಡ್ಕರ್ ಕನಸು ಕಂಡರು. ನಮ್ಮ ಸಂವಿಧಾನದಲ್ಲಿ ಹಲವಾರು ಕಾರ್ಮಿಕ ಕಾನೂನುಗಳು ಮತ್ತು ರಕ್ಷಣಾತ್ಮಕ ವಿಧಿ ವಿಧಾನಗಳನ್ನು ಅವರು ಅಳವಡಿಸಿದ್ದಾರೆ. ಹಿಂದುಳಿದ ಜನವರ್ಗಗಳಿಗೂ ಮೀಸಲಾತಿ ಸೌಲಭ್ಯ ದೊರಕಲು ಅಂಬೇಡ್ಕರ್ ಮೂಲಭೂತವಾಗಿ ಕಾರಣಕರ್ತರು. ಮಂಡಲ್ ಸಮಿತಿ ನೀಡಿರುವ ಹಲವಾರು ಶಿಫಾರಸ್ಸುಗಳಿಗೆ ಅಂಬೇಡ್ಕರ್ ದೃಷ್ಟಿಕೋನವೇ ಮೂಲಾಧಾರ. ಆದಿವಾಸಿಗಳಿಗೆ ಸಂವಿಧಾನದಲ್ಲಿ ಹಲವಾರು ಅಭಿವೃದ್ಧಿ ಅವಕಾಶಗಳನ್ನು ಕಲ್ಪಿಸಿಕೊಟ್ಟ ಗಿರಿಜನ ಕಲ್ಯಾಣದ ಪ್ರಬಲ ರೂವಾರಿಯಾಗಿ ಮೂಡಿಬಂದವರು ಅಂಬೇಡ್ಕರ್. ಧಾರ್ಮಿಕ ಅಲ್ಪಸಂಖ್ಯಾತರು ಮೂಲತಃ ಭಾರತೀಯರು ಮತ್ತು ಅವರನ್ನು ಸ್ವತಂತ್ರ ಭಾರತ ಸರ್ಕಾರ ಯಾವುದೇ ಕಾರಣಕ್ಕೂ ಕಡೆಗಣಿಸಬಾರದೆಂದು ಅಂಬೇಡ್ಕರ್ ಪ್ರತಿಪಾದಿಸಿದರು. ಅಲ್ಪಸಂಖ್ಯಾತರ ರಕ್ಷಣೆ ಮತ್ತು ಕಲ್ಯಾಣಕ್ಕಾಗಿ ಅವರು ಬಹಳಷ್ಟು ಅವಕಾಶಗಳನ್ನು ಸಂವಿಧಾನದಲ್ಲಿ ಕಲ್ಪಿಸಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರು ಈ ದೇಶ ಕಂಡ ಬಹುಜನರ ಮಹಾನ್ ನಾಯಕ ಮತ್ತು ವಂಚಿತ ವರ್ಗಗಳ ಅಭಿವೃದ್ಧಿಯ ರೂವಾರಿ.

"ಶೈಕ್ಷಣಿಕ ಮತ್ತು ಆರ್ಥಿಕ ಪ್ರಯೋಜನಗಳ ಮೂಲಕವಾಗಿ ಅಸ್ಪೃಶ್ಯರ, ತುಳಿತಕ್ಕೊಳಗಾದವರ ಮತ್ತು ಒಟ್ಟಾರೆ ಭಾರತೀಯರ ಜೀವನ ಮಟ್ಟವನ್ನು ಸುಧಾರಿಸಬಹುದಷ್ಟೇ ಅಲ್ಲ, ವ್ಯಕ್ತಿಗಳನ್ನು ಗೌರವಾನ್ವಿತಗೊಳಿಸಬಹುದು ಹಾಗೂ ಈ ಜನಾಂಗಗಳ ಆತ್ಮಗೌರವಗಳನ್ನು ಉತ್ತೇಜಿತಗೊಳಿಸಬಹುದು" ಎಂದು ಅಂಬೇಡ್ಕರ್ ತಮ್ಮ ಭಾಷಣಗಳು ಮತ್ತು ಬರಹಗಳಲ್ಲಿ ವ್ಯಕ್ತಪಡಿಸಿದರು.

ಭಾರತೀಯ ಸಮಾಜದ ವಂಚಿತ ವರ್ಗಗಳು ಅಂತಿಮವಾಗಿ

Digitised by Bharatavani, CIIL

ಹಿಂದೂ ಧರ್ಮವನ್ನು ತ್ಯಜಿಸದ ಹೊರತು ಭಾರತದಲ್ಲಿ ಜಾತಿವಿನಾಶ, ಸಾಮಾಜಿಕ ನ್ಯಾಯವಿತರಣೆ ಮತ್ತು ಶೋಷಿತರ ಸಮಗ್ರ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದನ್ನು ಮನಗಂಡು ಅಂಬೇಡ್ಕರ್ ಅವರು 1956ರಲ್ಲಿ ಬೌದ್ಧ ಧರ್ಮವನ್ನು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಅಪ್ಪಿಕೊಂಡರು.

ವಂಚಿತ ವರ್ಗಗಳಿಗೆ ಮಾನ್ಯತೆ ಸಿಕ್ಕಾಗ ಸಮಾನತೆ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಗಳು ಸಾಕಾರಗೊಳ್ಳುವುದೆಂದು ನಂಬಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಮಹಿಳೆಯರು ಮತ್ತು ದುರ್ಬಲವರ್ಗಗಳ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳಿಂದ ಪಡೆಯಬಹುದೇ ಹೊರತು ಆಳುವ ವರ್ಗ ನೀಡುವ ಭಿಕ್ಷೆಯಿಂದಲ್ಲ ಎಂದು ಧೃಡವಾಗಿ ನಂಬಿದ್ದರು.

ಭಾರತೀಯ ಸಂವಿಧಾನದ 46ನೇ ವಿಧಿ ರಾಜ್ಯದ ದುರ್ಬಲ ವರ್ಗಗಳ, ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಸರ್ಕಾರ ವಿಶೇಷ ಜಾಗರೂಕತೆಯಿಂದ ವೃದ್ಧಿಗೊಳಿಸತಕ್ಕದ್ದು ಮತ್ತು ಅವರನ್ನು ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳಿಂದ ಸಂರಕ್ಷಿಸಬೇಕೆಂದು ಸ್ಪಷ್ಟವಾಗಿ ತಿಳಿಸುತ್ತದೆ. ಭಾರತೀಯ ಸಂವಿಧಾನದ 47ನೇ ವಿಧಿ ಮಹಿಳೆಯರನ್ನೂ ಒಳಗೊಂಡಂತೆ ಸಮಸ್ತ ಭಾರತೀಯರ ಆರೋಗ್ಯ, ಪೌಷ್ಟಿಕತೆ ಮತ್ತು ಜೀವನಮಟ್ಟವನ್ನು ಹೆಚ್ಚಿಸುವುದು ಸರ್ಕಾರದ ಜವಾಬ್ದಾರಿಯೆಂದು ಸ್ಪಷ್ಟವಾಗಿ ತಿಳಿಸುತ್ತದೆ.

ವಂಚಿತ ವರ್ಗಗಳ ಶಿಕ್ಷಣದ ಬಗ್ಗೆ ಅಂಬೇಡ್ಕರ್ ಧೋರಣೆ: ಅಂಬೇಡ್ಕರ್‌ರವರು ಶಿಕ್ಷಣವೇ ವಂಚಿತ ವರ್ಗಗಳ ಸಬಲೀಕರಣದ ಪ್ರಮುಖ ಸಾಧನವೆಂದು ಮನಗಂಡಿದ್ದರು. ಸರ್ವ ಜನಾಂಗಗಳಿಗೂ ಉಚಿತವಾದ ಹಾಗೂ ಗುಣಮಟ್ಟವುಳ್ಳ ಸಾರ್ವತ್ರಿಕ ಶಿಕ್ಷಣ ಲಭಿಸಬೇಕೆಂಬುದು ಅಂಬೇಡ್ಕರ್‌ರವರ ಧೋರಣೆಯಾಗಿತ್ತು. ಭಾರತದಲ್ಲಿ ಶಿಕ್ಷಣದ ರಾಷ್ಟ್ರೀಕರಣ, ಕಡ್ಡಾಯ ಶಿಕ್ಷಣ ಮತ್ತು ಉಚಿತ ಶಿಕ್ಷಣಗಳ ಮೂಲಕ ಶೈಕ್ಷಣಿಕ ನ್ಯಾಯ ಒದಗಿಸಬೇಕೆಂದು ಅಂಬೇಡ್ಕರ್ ಕರೆಯಿತ್ತರು. ಸುಶಿಕ್ಷಿತ, ಪ್ರಜ್ಞಾವಂತ ಮತ್ತು ಜವಾಬ್ದಾರಿಯುತ ಪ್ರಜೆಗಳಿಂದ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವೆಂದು ಅವರು ತಮ್ಮ ಬರಹಗಳು ಮತ್ತು ಭಾಷಣಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಶಿಕ್ಷಣದ ಉತ್ತಮೀಕರಣದಿಂದಲೇ ಭಾರತೀಯ ಸಮಾಜದ ಆರೋಗ್ಯಕರ ಅಭಿವೃದ್ಧಿ ಸಾಧ್ಯವೆಂಬುದು ಅಂಬೇಡ್ಕರ್ ಅವರ ನಿಲುವಾಗಿತ್ತು.

ಅಂಬೇಡ್ಕರ್ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿದ್ದರು. ಅವರು ಭಾರತದ ಮೂಲನಿವಾಸಿಗಳು ಮತ್ತು ವಂಚಿತ ಜನವರ್ಗಗಳು ಅನಾದಿಕಾಲದಿಂದಲೂ ಭಾರತದ ಅಭಿವೃದ್ಧಿಗೆ ಬೆವರು ಸುರಿಸಿರುವ ಜನರಾಗಿದ್ದಾರೆ. ಆದರೆ ವರ್ಣಾಶ್ರಮ ಹಾಗೂ ಗುರುಕುಲ ಪದ್ಧತಿಗಳಿಂದಾಗಿ ಭಾರತದ ಮಹಿಳೆಯರು ಮತ್ತು ವಂಚಿತ ಜನವರ್ಗಗಳು ಎಲ್ಲಿಯೂ ಸಲ್ಲದವರಾಗಿದ್ದಾರೆ. ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ಕಾಣಿಕೆಯನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಲ್ಲಿಸುತ್ತಿರುವ ವಂಚಿತ ಜನವರ್ಗಗಳನ್ನು ಅರ್ಥಪೂರ್ಣ ಶಿಕ್ಷಣದ ಮೂಲಕ ರಾಷ್ಟ್ರೀಯ ಮುಖ್ಯವಾಹಿನಿಗೆ ತರುವಂತಹ ಜವಾಬ್ದಾರಿಯನ್ನು ಸ್ವಾತಂತ್ರ್ಯಾನಂತರ ರಾಷ್ಟ್ರನಾಯಕರು ಹೊರಲಿಲ್ಲವೆಂದು ಅಂಬೇಡ್ಕರ್ ಟೀಕಿಸಿದರು.

ಅಂಬೇಡ್ಕರ್ (1927) ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ಕುರಿತು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಪ್ರಾಥಮಿಕ ಶಾಲೆಗೆ ಬರುವ ಪ್ರತಿಯೊಂದು ಮಗುವೂ ಸಾಕ್ಷರತೆಯನ್ನು ಸಾಧಿಸಿದ ನಂತರವೇ ಶಾಲೆಯನ್ನು ಬಿಡುವುದು ಸೂಕ್ತ. ಪ್ರತಿಯೊಂದು ಮಗುವೂ ತನ್ನ ಮೂಲಭೂತ ಹಕ್ಕುಗಳು ಮತ್ತ ಕರ್ತವ್ಯಗಳ ಬಗ್ಗೆ ಸೂಕ್ತ ಅರಿವನ್ನು ಹೊಂದುವ ನಿಟ್ಟಿನಲ್ಲಿ ಅರ್ಥಪೂರ್ಣ ಪ್ರಾಥಮಿಕ ಶಿಕ್ಷಣವನ್ನು ದೇಶದ ಎಲ್ಲೆಡೆ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪ್ರತಿಯೊಂದು ಮಗುವಿಗೂ ಉಚಿತವಾದ ಪ್ರಾಥಮಿಕ ಶಿಕ್ಷಣವನ್ನು ನೀಡುವುದರ ಜೊತೆಗೆ ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವ ಬೇಜವಾಬ್ದಾರಿಯುತ ಪೋಷಕರನ್ನು ಕಾನೂನಿನ ರೀತ್ಯ ಶಿಕ್ಷೆಗೆ ಗುರಿಪಡಿಸಬೇಕು. ಪ್ರಾಥಮಿಕ ಶಿಕ್ಷಣ ಕೇವಲ ಅಕ್ಷರಗಳನ್ನು ಬರೆಯುವುದನ್ನಷ್ಟೇ ಮಕ್ಕಳಿಗೆ ಕಲಿಸದೇ ಅವರಿಗೆ ಸಂಸ್ಕೃತಿ, ಇತಿಹಾಸ, ನಾಗರಿಕ ಪ್ರಜ್ಞೆ, ಪರಿಸರ ಪ್ರೀತಿ, ಆರೋಗ್ಯ, ನೈರ್ಮಲ್ಯ, ಪೌಷ್ಟಿಕತೆ, ಮಾನವೀಯ ಮೌಲ್ಯಗಳು ಮೊದಲಾದವುಗಳನ್ನು ಕಲಿಸಿದಾಗ ಮಾತ್ರ ದೇಶದಲ್ಲಿ ಪ್ರಜ್ಞಾವಂತ ನಾಗರಿಕರನ್ನು ರೂಪಿಸಲು ಸಾಧ್ಯವಾಗುತ್ತದೆ."

ಅಂಬೇಡ್ಕರ್‌ರವರು (1956) ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಕುರಿತು ಹೀಗೆ ನುಡಿದಿದ್ದಾರೆ: "ಭಾರತೀಯ ಯುವಜನತೆಗೆ ಜೀವನಾಧಾರಿತ, ಮೌಲ್ಯಾಧಾರಿತ ಮತ್ತು ಉದ್ಯೋಗಾಧಾರಿತ ಶಿಕ್ಷಣ ಮತ್ತು ತರಬೇತಿ ಸೌಲಭ್ಯಗಳನ್ನು ನೀಡಬೇಕು. ಅಸಂಖ್ಯಾತ ನಿರುದ್ಯೋಗಿಗಳು ಮತ್ತು ಅಸಹಾಯಕ ಯುವಜನತೆಯನ್ನು ಸೃಷ್ಟಿಸುವಂತಹ ಶಿಕ್ಷಣ ನಮ್ಮ ದೇಶಕ್ಕೆ ಬೇಕಿಲ್ಲ. ಭಾರತದ ಬಹುಸಂಖ್ಯಾತ ಯುವಜನರು ಉದ್ಯೋಗಾಧಾರಿತ ಶಿಕ್ಷಣವನ್ನು ಪಡೆದು ತಮ್ಮ ಕಾಲಮೇಲೆ ನಿಂತುಕೊಂಡು ತಮ್ಮ ಬದುಕನ್ನು ಸ್ವತಃ ರೂಪಿಸಿಕೊಳ್ಳುವ ಶಕ್ತಿಯನ್ನು ಗಳಿಸುವಂತಹ ಸೌಲಭ್ಯವನ್ನು ನಾಗರಿಕ ಸಮಾಜ ಮತ್ತು ಆಳುವ ಸರ್ಕಾರಗಳು ಕಲ್ಪಿಸಿಕೊಡಬೇಕು. ಆರ್ಥಿಕವಾಗಿ ಸ್ವಾವಲಂಬನೆ ಗಳಿಸುವಂತಹ ಉದ್ಯೋಗಾಧಾರಿತ, ಕೌಶಲ್ಯಾಭಿವೃದ್ಧಿ ಕೇಂದ್ರಿತ ಮತ್ತು ನಾಯಕತ್ವ ಅಭಿವೃದ್ಧಿ ಕೇಂದ್ರಿತ ವೃತ್ತಿಪರ ಶಿಕ್ಷಣವನ್ನು ನೀಡುವುದರಿಂದ ಭಾರತದಲ್ಲಿ ನಿರುದ್ಯೋಗ ಮತ್ತು ಆರ್ಥಿಕ ಶೋಷಣೆಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ."

ಅಂಬೇಡ್ಕರ್‌ರವರು (1947) ಉನ್ನತ ಶಿಕ್ಷಣವನ್ನು ಕುರಿತು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಭಾರತದ ಎಲ್ಲ ಯುವಕ–ಯುವತಿಯರಿಗೆ ಬೇಕಿರುವುದು ಅರ್ಥಪೂರ್ಣ ಪ್ರಾಥಮಿಕ ಶಿಕ್ಷಣ ಮತ್ತು ಉದ್ಯೋಗಾಧಾರಿತ ವೃತ್ತಿಪರ ತರಬೇತಿ ಹೊರತಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡಿ ಅವರನ್ನು ಬೀದಿಯಲ್ಲಿ ಅಸಹಾಯಕರನ್ನಾಗಿ ನಿಲ್ಲಿಸುವಂತಹ ಉನ್ನತ ಶಿಕ್ಷಣವಲ್ಲ. ವಾಸ್ತವವಾಗಿ ಉನ್ನತ ಶಿಕ್ಷಣ ಎಲ್ಲ ಪ್ರಜೆಗಳಿಗೂ ಬೇಕಿಲ್ಲ.

Digitised by Bharatavani, CIIL

ಸಾಮಾಜಿಕ ನ್ಯಾಯ, ವೈಯುಕ್ತಿಕ ಅರ್ಹತೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಅವಶ್ಯಕತೆಗಳಿಗೆ ಅನುಗುಣವಾಗಿ ಉನ್ನತ ಶಿಕ್ಷಣವನ್ನು ಆಯ್ದ ಕೆಲವೇ ಮಂದಿ ಯುವಕ-ಯುವತಿಯರಿಗೆ ನೀಡಿ ಅವರನ್ನು ದೇಶದ ಅಮೂಲ್ಯ ಮಾನವ ಸಂಪನ್ಮೂಲಗಳನ್ನಾಗಿ ರೂಪಿಸುವುದು ಶೈಕ್ಷಣಿಕ ಆಡಳಿತಗಾರರು ಮತ್ತು ತಜ್ಞರ ಹೊಣೆಗಾರಿಕೆಯಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರಿಗೆ ಪಠ್ಯಕ್ರಮವನ್ನು ರೂಪಿಸುವ ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಪರೀಕ್ಷಿಸುವ ಸ್ವಾಯತ್ತತೆಯನ್ನು ನೀಡಬೇಕು. ಯುವಜನತೆಯಲ್ಲಿ ಜೀವನ ಮೌಲ್ಯಗಳು, ಮಾನವೀಯತೆ, ವೈಚಾರಿಕತೆ, ಸಾಮಾಜಿಕ ಹೊಣೆಗಾರಿಕೆ, ರಾಷ್ಟ್ರೀಯ ಪ್ರಜ್ಞೆ, ನಾಯಕತ್ವ ಗುಣ ಮೊದಲಾದುವುಗಳನ್ನು ಬೆಳೆಸುವಂತಹ ಉನ್ನತ ಶಿಕ್ಷಣ ಭಾರತದಲ್ಲಿ ಅತ್ಯವಶ್ಯಕ. ಅರ್ಹ ಮಹಿಳೆಯರು ಮತ್ತು ವಂಚಿತ ಜನವರ್ಗಗಳ ಪ್ರತಿನಿಧಿಗಳಿಗೆ ಸರಕಾರ ವಿಶೇಷ ಸವಲತ್ತುಗಳನ್ನು ಒದಗಿಸಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯವಿತರಣೆಗೆ ಮುಂದಾಗಬೇಕು. ಆಗ ಮಾತ್ರ ಭಾರತ ಮತ್ತೊಮ್ಮೆ ವಿಶ್ವದ ಬಲಾಢ್ಯ ಜ್ಞಾನಶಕ್ತಿಕೇಂದ್ರವಾಗಿ ಬೆಳೆಯುವ ಸಾಧ್ಯತೆ ಉಂಟು."

ಅಂಬೇಡ್ಕರ್‌ರವರು (1920) ಮೂಕನಾಯಕ ಪತ್ರಿಕೆಯಲ್ಲಿ ಶಿಕ್ಷಣದ ಮಹತ್ವ ಮತ್ತು ವಂಚಿತ ಜನವರ್ಗಗಳ ಸಬಲೀಕರಣವನ್ನು ಕುರಿತು ಹೀಗೆ ಬರೆದಿದ್ದಾರೆ: "ಪ್ರತಿಯೊಬ್ಬ ಪ್ರಜೆಗೂ ತನ್ನ ಬದುಕನ್ನು ಅರ್ಥಪೂರ್ಣವಾಗಿ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಔಪಚಾರಿಕ ಶಿಕ್ಷಣ ಮತ್ತು ತರಬೇತಿಗಳನ್ನು ನೀಡುವುದು ಸರ್ಕಾರದ ಪ್ರಮುಖ ಜವಾಬ್ದಾರಿಯಾಗಿದೆ. ಪ್ರತಿಯೊಬ್ಬ ಪ್ರಜೆಗೂ ಆರಂಭದಲ್ಲಿ ಉತ್ತಮ ಪ್ರಾಥಮಿಕ ಶಿಕ್ಷಣ ದೊರಕಿದಾಗ ಆತ ತದನಂತರ ಕ್ರಮಬದ್ಧ ಅಧ್ಯಯನಶೀಲತೆಯ ಆಧಾರದ ಮೇಲೆ ತನ್ನ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಬಲ್ಲ. ಮಾನವ ಬದುಕಿನ ಮೂಲಭೂತ ಧ್ಯೇಯವೆಂದರೆ ಮನುಕುಲಕ್ಕೆ ಉತ್ತಮವಾದ ಜ್ಞಾನಗಳಿಕೆ, ವ್ಯಕ್ತಿತ್ವ ವಿಕಾಸ ಮತ್ತು ನಾಯಕತ್ವ ಅಭಿವೃದ್ಧಿಗಳಿಗೆ ಪೂರಕವಾದ ಶಿಕ್ಷಣ ಮತ್ತು ತರಬೇತಿಗಳನ್ನು ನೀಡುವುದೇ ಆಗಿದೆ. ಶಿಕ್ಷಣದ ಜೊತೆಗೆ ಜೀವನದ ಮೌಲ್ಯಗಳನ್ನು ಉತ್ತಮವಾಗಿ ಮೈಗೂಡಿಸಿಕೊಳ್ಳುವಂತಹ ಶೈಕ್ಷಣಿಕ ಪರಿಸರವನ್ನು ನಿರ್ಮಿಸಬೇಕು. ಎರಡನೆಯದಾಗಿ ಪ್ರತಿಯೊಬ್ಬ ಪ್ರಜೆಯೂ ತನ್ನ ಬದುಕಿನ ಉತ್ತಮೀಕರಣಕ್ಕಾಗಿ ಅವಶ್ಯಕವಾದ ಸಂಪನ್ಮೂಲಗಳನ್ನು ಗುರುತಿಸುವ ಮತ್ತು ಗಳಿಸುವ ಶಕ್ತಿಯನ್ನು ಒದಗಿಸುವಂತಹ ಜೀವನಾಧಾರಿತ ಶಿಕ್ಷಣ ನಾಗರಿಕ ಸಮಾಜದಲ್ಲಿ ಲಭಿಸಬೇಕು. ಪ್ರಸ್ತುತ ಶಿಕ್ಷಣ ವ್ಯವಸ್ಥೆ ಶಿಕ್ಷಣದ ಮಾನವೀಕರಣಕ್ಕಿಂತ ಶಿಕ್ಷಣದ ವ್ಯಾಪಾರೀಕರಣಕ್ಕೆ ಹೆಚ್ಚಿನ ಒತ್ತು ನೀಡಿರುವುದು ದೇಶದ ನೈತಿಕ ಅಧಃಪತನಕ್ಕೆ ಮೂಲಕಾರಣವಾಗಿದೆ. ಭಾರತದ ಅವಕಾಶ ವಂಚಿತ ಜನವರ್ಗಗಳು ತಮ್ಮ ಬದುಕಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟುಮಾಡಲು ಹಾಗೂ ದೇಶದ ಸಮಗ್ರ ಅಭಿವೃದ್ಧಿಗೆ ಸೂಕ್ತ ರೀತಿಯಲ್ಲಿ ಕೊಡುಗೆಗಳನ್ನು ನೀಡುವ ಸಾಮರ್ಥ್ಯ ಗಳಿಸಲು ಶಿಕ್ಷಣದ ಮಾನವೀಕರಣ ಮತ್ತು ಸಾರ್ವತ್ರೀಕರಣ ಅತ್ಯವಶ್ಯಕವೆಂಬುದನ್ನು ಎಲ್ಲರೂ ಮನಗಾಣಬೇಕು."

ಶಹಾರೆ (2004) ಅಂಬೇಡ್ಕರ್‌ರವರ ಶೈಕ್ಷಣಿಕ ಕಾಳಜಿಯನ್ನು ಹೀಗೆ ದಾಖಲಿಸಿದ್ದಾರೆ: "ಅಧುನಿಕ ಸಮಾಜದಲ್ಲಿ ಸೂಕ್ತ ಬದಲಾವಣೆಗಳನ್ನು ಉಂಟುಮಾಡಲು ಮತ್ತು ಅರ್ಥಪೂರ್ಣ ಜನಾಂದೋಲನಗಳನ್ನು ಸಂಘಟಿಸಲು ಶಿಕ್ಷಣ ಅತ್ಯಮೂಲ್ಯವಾದ ಸಾಧನವಾಗಿದೆ. ದಲಿತರು ಮತ್ತಿತರ ವಂಚಿತ ಜನವರ್ಗಗಳನ್ನು ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳು ಮೊದಲಾದ ಎಲ್ಲ ಸಂಕೀರ್ಣತೆಗಳಿಂದ ಪಾರುಮಾಡಿ ಅವರನ್ನು ಅನ್ಯಾಯ, ಶೋಷಣೆ ಮತ್ತು ದಮನಕಾರಿ ಪ್ರವೃತ್ತಿಗಳ ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟಗಳತ್ತ ಮುನ್ನಡೆಸಲು ಶಿಕ್ಷಣ ಅತ್ಯಂತ ಅವಶ್ಯಕವಾದ ಸಂಪನ್ಮೂಲವಾಗಿದೆ. ಭಾರತದ ವಂಚಿತ ಜನವರ್ಗಗಳು ತಮ್ಮ ಪಾರಂಪರಿಕ ವೃತ್ತಿಗಳನ್ನು ಕೈಬಿಟ್ಟು ಜಾತ್ಯತೀತ ವೃತ್ತಿಗಳನ್ನು ಸ್ವೀಕರಿಸಿ ಬದುಕಿನಲ್ಲಿ ಸುಧಾರಣೆ ಹೊಂದಬೇಕಾದರೆ ರಚನಾತ್ಮಕ ಮೂಲಭೂತ ಶಿಕ್ಷಣ, ವೃತ್ತಿಪರ ಶಿಕ್ಷಣ ಮತ್ತು ಉನ್ನತ ಶಿಕ್ಷಣಗಳು ಅವಶ್ಯಕ. ಜಾತಿ ಆಧಾರಿತ ಶ್ರಮವಿಭಜನೆ ಸಂರಚನೆಯನ್ನು ಬುಡಮೇಲುಗೊಳಿಸಿ ಸಮಾನತೆ, ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಭ್ರಾತೃತ್ವಗಳನ್ನು ಆಧರಿಸಿದ ಹೊಸ ವ್ಯವಸ್ಥೆಯೊಂದನ್ನು ರೂಪಿಸುವ ನಿಟ್ಟಿನಲ್ಲಿ ಆಧುನಿಕ ಶಿಕ್ಷಣ ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಅವಶ್ಯಕವೆಂಬುದನ್ನು ಅಂಬೇಡ್ಕರ್ ಮನಗಂಡರು".

ಅಂಬೇಡ್ಕರ್ (1927) ವಂಚಿತ ವರ್ಗಗಳ ಶಿಕ್ಷಣದ ಮಹತ್ವವನ್ನು ಹೀಗೆ ಸಮರ್ಥಿಸಿದ್ದಾರೆ: "ಭಾರತೀಯ ಸಮಾಜದ ಶೋಷಿತ ಜನವರ್ಗಗಳು ನಾಗರಿಕತೆಯ ವ್ಯಾವಹಾರಿಕ ಲಾಭಗಳನ್ನು ಬಿಟ್ಟುಕೊಟ್ಟರೂ ಬದುಕಿನಲ್ಲಿ ಶ್ರೇಷ್ಠ ಪ್ರಗತಿ ಸಾಧನೆಗೆ ಪೂರಕವಾದ ಶೈಕ್ಷಣಿಕ ಹಕ್ಕು ಮತ್ತು ಸದವಕಾಶಗಳನ್ನು ಬಿಟ್ಟುಕೊಡಬಾರದು. ಶೈಕ್ಷಣಿಕ ಪ್ರಗತಿಯಿಲ್ಲದೆ ವಂಚಿತ ವರ್ಗಗಳ ಅಸ್ತಿತ್ವ ಭಾರತದಲ್ಲಿ ಉಳಿಯುವುದಿಲ್ಲ. ಬದುಕಿನ ಎಲ್ಲ ಕ್ಷೇತ್ರಗಳಲ್ಲಿಯೂ ವಂಚಿತ ವರ್ಗಗಳು ಸಮಾನ ಹಕ್ಕುಬಾಧ್ಯತೆಗಳನ್ನು ಪಡೆಯುವ ನಿಟ್ಟಿನಲ್ಲಿ ನಿರ್ಣಾಯಕ ಹೋರಾಟ ನಡೆಸುವ ಶಕ್ತಿಮೂಲ ಶಿಕ್ಷಣವೇ ಹೊರತು ಬೇರೇನೂ ಅಲ್ಲ."

ಅಂಬೇಡ್ಕರ್ ವಂಚಿತ ಜನವರ್ಗಗಳ ಬದುಕಿನ ಸಮಗ್ರ ಅಭಿವೃದ್ಧಿಗೆ ಶಿಕ್ಷಣವೇ ಮೂಲ ಪ್ರೇರಣೆ ಎಂಬುದನ್ನು ಶ್ರೇಷ್ಠ ಉದಾಹರಣೆಗಳ ಮೂಲಕ ಸಮರ್ಥಿಸಿದ್ದಾರೆ. ಅವರು ಸಂವಿಧಾನಾತ್ಮಕವಾಗಿ ಒದಗಿಸಿರುವ ಮೂಲಭೂತ ಹಕ್ಕುಗಳು ಮತ್ತು ಅವಕಾಶಗಳು ಸಮಸ್ತ ವಂಚಿತ ವರ್ಗಗಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಿದೆ.

ಅಂಬೇಡ್ಕರ್‌ರವರು ವಂಚಿತ ವರ್ಗಗಳ ಶಿಕ್ಷಣಕ್ಕಾಗಿ 'ಪೀಪಲ್ಸ್ ಎಜುಕೇಷನ್ ಸೊಸೈಟಿ' ಎಂಬ ಸಂಸ್ಥೆಯನ್ನು ಬೊಂಬಾಯಿಯಲ್ಲಿ ಜುಲೈ 8, 1945ರಲ್ಲಿ ಪ್ರಾರಂಭಿಸಿದರು. ಸಮಾಜದ ಶಿಕ್ಷಣ ವಂಚಿತ ವರ್ಗಗಳಾದ ಮಹಿಳೆಯರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮೊದಲಾದವರ ಶೈಕ್ಷಣಿಕ ಸಬಲೀಕರಣಕ್ಕೆ ಅರ್ಥಪೂರ್ಣ ಭೂಮಿಕೆಯನ್ನು ಸಿದ್ಧಪಡಿಸುವ ಸಲುವಾಗಿ ಅಂಬೇಡ್ಕರ್ ಸಿದ್ಧಾರ್ಥ ಕಾಲೇಜ್ ಎಂಬ ಸಂಸ್ಥೆಯನ್ನು

Digitised by Bharatavani, CIIL

ಸ್ಥಾಪಿಸಿದರು. ಶಿಕ್ಷಣದ ಮೂರು ಮುಖ್ಯ ಶಾಖೆಗಳಾದ – ಪ್ರಾಥಮಿಕ ಶಿಕ್ಷಣ, ಔದ್ಯೋಗಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣಗಳನ್ನು ವಂಚಿತ ವರ್ಗಗಳಿಗೆ ಒದಗಿಸುವ ಮೂಲಕ ಅವರ ಪ್ರಗತಿಗೆ ಅಂಬೇಡ್ಕರ್ ಗಣನೀಯವಾಗಿ ಸಹಕರಿಸಿದರು. ಪ್ರತಿಭಾವಂತ, ಅನುಭವಿ ಮತ್ತು ಪರಿಣತ ಶಿಕ್ಷಕ ವೃಂದವನ್ನು ತಾವೇ ಸ್ವತಃ ಆಸಕ್ತಿವಹಿಸಿ ಸಂಸ್ಥೆಯಲ್ಲಿ ದುಡಿಯಲು ಆಯ್ಕೆ ಮಾಡಿಕೊಂಡರು. ವಿದ್ಯಾರ್ಥಿಗಳ ಕಲಿಕೆ ಮತ್ತು ಶಿಕ್ಷಕರ ಸೇವಾ ವೈಖರಿಗಳನ್ನು ಅಂಬೇಡ್ಕರ್ ಪರಾಮರ್ಶಿಸಿ ಸೂಕ್ತ ಸುಧಾರಣಾ ಕಾರ್ಯತಂತ್ರಗಳನ್ನು ಕಾಲ ಕಾಲಕ್ಕೆ ಒದಗಿಸುತ್ತಿದ್ದರು. ಇಡೀ ದೇಶದಲ್ಲಿ ಮೊಟ್ಟಮೊದಲಬಾರಿಗೆ ವಂಚಿತ ಜನವರ್ಗಗಳಿಗೆ ಮೌಲ್ಯಾಧಾರಿತ ಶಿಕ್ಷಣ ಮತ್ತು ಪ್ರಗತಿ ಕೇಂದ್ರಿತ ಶಿಕ್ಷಣಗಳನ್ನು ನೀಡುವ ನಿಟ್ಟಿನಲ್ಲಿ ಅಂಬೇಡ್ಕರ್ ನಿರ್ದೇಶನದ ಈ ಸಂಸ್ಥೆ ಯಶಸ್ಸನ್ನು ಸಾಧಿಸಿತು. ಈ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ದೇಶದ ವಿವಿಧ ಭಾಗಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವುದು ಉಲ್ಲೇಖನಾರ್ಹ ಸಂಗತಿಯಾಗಿದೆ.

ಉಪಸಂಹಾರ: ವಂಚಿತ ಜನವರ್ಗಗಳ ಶಿಕ್ಷಣ ಮತ್ತು ಸಬಲೀಕರಣ ಕೇಂದ್ರಿತ ಅಂಬೇಡ್ಕರ್ ಚಿಂತನೆ ಮತ್ತು ಹೋರಾಟಗಳು ಅಧುನಿಕ ಸಮಾಜದಲ್ಲಿ ವಿಶೇಷ ಮಹತ್ವ ಹೊಂದಿವೆ. ಪ್ರಗತಿಶೀಲ ಬಂಡಾಯ ಮನೋಧರ್ಮವನ್ನು ಆಧರಿಸಿದ ಪ್ರಜಾಸತ್ತಾತ್ಮಕ, ಸಾಮಾಜಿಕ ನ್ಯಾಯಪರ ಹೋರಾಟಗಳು ರಾಜಕೀಯ ಭ್ರಷ್ಟಾಚಾರ, ಸಾಮಾಜಿಕ ಅಸಮಾನತೆ, ಆರ್ಥಿಕ ಶೋಷಣೆ, ಭೂಮಾಲೀಕರ ದಬ್ಬಾಳಿಕೆ, ಮೂಲಭೂತವಾದಿಗಳ ಅಟ್ಟಹಾಸ, ಪೋಲೀಸರ ದೌರ್ಜನ್ಯ, ದಲಿತರ ಕಗ್ಗೊಲೆ, ಮಹಿಳೆಯರ ಮೇಲಿನ ಅತ್ಯಾಚಾರ, ಯುವಕರ ನಿರುದ್ಯೋಗ, ಪ್ರಜಾಪ್ರಭುತ್ವದಲ್ಲಿ ವಿನಾಶ – ಈ ಎಲ್ಲಾ ಭಯಾನಕ ಸತ್ಯಗಳ ಕಡೆಗೆ ಗಮನಹರಿಸುವುದು ಅತ್ಯವಶ್ಯಕ.

**–ಡಾ. ಮಹೇಶ್ ಚಂದ್ರಗುರು ಬಿ.ಪಿ.**
**ಮತ್ತು ಎಂ. ಗೋಪಾಲಸ್ವಾಮಿ**

## ಅಂಶ ವಿಶ್ಲೇಷಣೆ

ಸಾಧನೆ ಅಥವಾ ಮಾನಸಿಕ ಪರೀಕ್ಷಾಂಶಗಳಲ್ಲಿ ಎರಡು ರೀತಿಯ ಪರೀಕ್ಷೆಗಳನ್ನು ಗುರುತಿಸಬಹುದು. 1. ವೇಗದ ಪರೀಕ್ಷಣ (Speed Test) ಮತ್ತು ಶಕ್ತಿ ಪರೀಕ್ಷಣ (Power Test). ವೇಗದ ಪರೀಕ್ಷೆಗಳ ಉದ್ದೇಶ ವರ್ತನೆ/ಕಾರ್ಯದ ವೇಗವನ್ನು ಪರೀಕ್ಷಿಸುವುದಾಗಿರುತ್ತದೆ. ಆದ್ದರಿಂದ ಕಾರ್ಯಕ್ಷಮತೆಯ ವೇಗಕ್ಕೆ ಮಹತ್ವ ನೀಡಲಾಗುತ್ತದೆ. ಇಂತಹ ಪರೀಕ್ಷೆಗಳ ಪರೀಕ್ಷಾಂಶಗಳ ಕಠಿಣತೆಯ ಮಟ್ಟ ಸರಾಸರಿ ಮಟ್ಟದಲ್ಲಿರುತ್ತದೆ. ಸಾಮಾನ್ಯವಾಗಿ ಪರೀಕ್ಷೆ ತೆಗೆದುಕೊಳ್ಳುವವರೆಲ್ಲರೂ ಉತ್ತರಿಸಲು ಸಾಧ್ಯವಾಗುತ್ತದೆ. ಆದರೆ ಈ ಪರೀಕ್ಷೆಗಳಲ್ಲಿ ಕಾರ್ಯಾಚರಣೆಯ ವೇಗಕ್ಕೆ ಮಹತ್ವವಿರುತ್ತದೆ. ಆದ್ದರಿಂದ ಈ ಪರೀಕ್ಷೆಗಳಿಗೆ ಕಾಲ ಮಿತಿ ಇರುತ್ತದೆ. ಗರಿಷ್ಠ ಮಟ್ಟದಲ್ಲಿ ಕಾರ್ಯಾಚರಣೆ ಮಾಡುವ ವ್ಯಕ್ತಿಗಳಿಗೆ, ಕೊಟ್ಟಿರುವ ಎಲ್ಲಾ ಪರೀಕ್ಷಾಂಶಗಳಿಗೆ ಉತ್ತರಿಸಲು ಸಾಧ್ಯವಾಗುತ್ತದೆ. ವೇಗ ಪರೀಕ್ಷೆಯನ್ನು ರೂಪಿಸುವಾಗ ಕಾಲಮಿತಿಯನ್ನು ಅತ್ಯಂತ ವೇಗದ ಸಾಮರ್ಥ್ಯವುಳ್ಳ ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಿಗದಿಪಡಿಸಲಾಗಿರುತ್ತದೆ. ವ್ಯಕ್ತಿಗಳ ಪರೀಕ್ಷೆಯನ್ನು ತೆಗೆದುಕೊಂಡಾಗ ನಿರ್ಧರಿತ ಕಾಲಮಿತಿಯಲ್ಲಿ ಎಷ್ಟು ಪರೀಕ್ಷಾಂಶಗಳಿಗೆ ಉತ್ತರಿಸುವರೋ ಆ ಸಂಖ್ಯೆ ಅವರ ಅಂಕವೆಂದು ಪರಿಗಣಿಸಲಾಗುತ್ತದೆ. ಕರಣೀಕ (ಕ್ಲರ್ಕ್) ಪರೀಕ್ಷೆಗಳು ವೇಗ ಪರೀಕ್ಷೆಗಳಿಗೆ ಉದಾಹರಣೆಗಳಾಗಿವೆ.

ಇದಕ್ಕೆ ವಿರುದ್ಧವಾಗಿ ಸಾಮರ್ಥ್ಯ ಪರೀಕ್ಷಣಗಳು ಸಾಮರ್ಥ್ಯದ ಗರಿಷ್ಠ ಮಿತಿಯನ್ನು ಪರೀಕ್ಷಿಸುವ ಉದ್ದೇಶವನ್ನು ಹೊಂದಿವೆ. ಆದ್ದರಿಂದ ಈ ಪರೀಕ್ಷಣಗಳಲ್ಲಿ ವೇಗದ ಕಾರ್ಯಾಚರಣೆಗೆ ಮಹತ್ವವಿರುವುದಿಲ್ಲ. ಸಾಮಾನ್ಯವಾಗಿ ಇಂಥ ಪರೀಕ್ಷಣಗಳಿಗೆ ಕಾಲಮಿತಿ ಇರುವುದಿಲ್ಲ. ವ್ಯಕ್ತಿ ತನಗೆ ಎಷ್ಟು ಪರೀಕ್ಷಾಂಶಗಳಿಗೆ ಉತ್ತರಿಸಲು ಸಾಧ್ಯವಾಗುತ್ತದೆಯೋ ಅಷ್ಟಕ್ಕೆ ಉತ್ತರಿಸಬಹುದು. ಈ ಪರೀಕ್ಷಾಂಶಗಳ ಉತ್ತರಗಳನ್ನು ಮೌಲ್ಯಮಾಪನಮಾಡಿ ಎಷ್ಟು ಪರೀಕ್ಷಾಂಶಗಳ ಉತ್ತರಗಳು ಸರಿಯಾಗಿವೆ, ಎಷ್ಟು ತಪ್ಪಾಗಿವೆ ಎಂದು ನಿರ್ಧರಿಸಲಾಗುತ್ತದೆ. ಸರಿ ಉತ್ತರಗಳಸಂಖ್ಯೆ ಗಳಿಸಿದಅಂಕವಾಗುತ್ತದೆ. ಕೆಲವು ಪರೀಕ್ಷಣಗಳಲ್ಲಿ ಪರ್ಯಾಯ ಉತ್ತರಗಳ 3 ಅಥವಾ 5 ಸಾಧ್ಯತೆಗಳಿದ್ದು ಪರ್ಯಾಯಗಳಿಗೆ ಬೇರೆ ಬೇರೆ ಅಂಕ ನಿರ್ಧಾರಿತವಾಗಿರುತ್ತದೆ. ಸರಿ ಉತ್ತರಗಳನ್ನು ಮೌಲ್ಯಮಾಪನ ಮಾಡುವಾಗ ಅಂಕ ನಿರ್ಧಾರ ಮಾಡುವ ಗುರ್ತಿಸಿದ ಪರ್ಯಾಯ ಉತ್ತರದ ಅಂಕವನ್ನು ತೆಗೆದುಕೊಳ್ಳಬೇಕು. ಸರಿ ಉತ್ತರಗಳ ಸಂಖ್ಯೆ ಫಲಾಂಕವಾಗುತ್ತದೆ. ಕೆಲವು ಪರೀಕ್ಷಣಗಳಲ್ಲಿ ಸರಿ, ತಪ್ಪು ಉತ್ತರಗಳ ವ್ಯತ್ಯಾಸವನ್ನು ಫಲಾಂಕವಾಗಿ ತೆಗೆದು ಕೊಳ್ಳಲಾಗುತ್ತದೆ. (ಉದಾ DAT ಪರೀಕ್ಷಣ). ಕೆಲವು ಸಾಮರ್ಥ್ಯ ಪರೀಕ್ಷಣೆಗಳು ವೇಗಕ್ಕೂ ಗಮನ ನೀಡಿ ಕಾಲ ಮಿತಿಯನ್ನು ನಿಗದಿಪಡಿಸುತ್ತವೆ. ಉದಾಹರಣೆಗೆ DAT ಯ ಉಪ ಪರೀಕ್ಷೆಗಳು.

ಸಾಮರ್ಥ್ಯ ಪರೀಕ್ಷೆಗಳ ಪರೀಕ್ಷಾಂಶಗಳು ಬೇರೆ ಬೇರೆ ಕಠಿಣತೆಯ ಮಟ್ಟವನ್ನು ಹೊಂದಿರಬೇಕಾಗುತ್ತದೆ. ಈ ಕಠಿಣತೆಯ ಮಟ್ಟ ಸ್ವಲ್ಪಮಟ್ಟದ ಕಠಿಣತೆಯಿಂದ (ಇವುಗಳನ್ನು ಎಲ್ಲರೂ ಸರಿಯಾಗಿ ಉತ್ತರಿಸಬಹುದು) ಸರಾಸರಿ ಮಟ್ಟದ ಮೂಲಕ (ಇವುಗಳನ್ನು ಸರಾಸರಿ ಮಟ್ಟದ ಸಾಮರ್ಥ್ಯ ಉಳ್ಳವರು ಉತ್ತರಿಸಬಹುದು) ಹೆಚ್ಚು ಕಠಿಣತೆಯ ಮಟ್ಟದವರೆಗೂ (ಇವುಗಳನ್ನು ಸಮೂಹದ ಸ್ವಲ್ಪ ಜನ ಮಾತ್ರ ಉತ್ತರಿಸಬಹುದು) ಇರಬೇಕು. ಆದ್ದರಿಂದಲೇ ಪರೀಕ್ಷಣವನ್ನು ರೂಪಿಸುವಾಗ ಪ್ರತಿ ಪರೀಕ್ಷಾಂಶದ ಕಠಿಣತೆಯ ಸೂಚ್ಯಂಕವನ್ನು (Difficulty Index) ಕಂಡು ಹಿಡಿಯಬೇಕು. ಒಂದು ಒಳ್ಳೆಯ ಪರೀಕ್ಷಣ ಶೇ. 25 ರಷ್ಟು ಸುಲಭವಾದ ಶೇ. 50ರಷ್ಟು ಸರಾಸರಿ ಕಠಿಣತೆ ಇರುವ ಮತ್ತು ಶೇ.25 ಹೆಚ್ಚು ಕಠಿಣತೆಯಿರುವ ಪರೀಕ್ಷಾಂಶಗಳನ್ನು ಹೊಂದಿರಬೇಕಾಗುತ್ತದೆ.

ಸಾಮರ್ಥ್ಯ ಪರೀಕ್ಷೆಗಳು ಹೊಂದಿರಬೇಕಾದ ಮತ್ತೊಂದು ಲಕ್ಷಣವೆಂದರೆ ವಿಭೇದಾತ್ಮಕ ಸೂಚ್ಯಂಕ (Discrimination Index). ಅಂದರೆ ಪರೀಕ್ಷಣದ ಪ್ರತಿಯೊಂದು ಪರೀಕ್ಷಾಂಶವು ಒಂದು ಸಮೂಹದಲ್ಲಿ ಶೇ. 25ಕ್ಕೂ ಕಡಿಮೆ ಅಂಕ ಪಡೆಯುವವರು ಮತ್ತು ಶೇ.75ಕ್ಕೂ ಹೆಚ್ಚು ಅಂಕ ಪಡೆಯುವವರನ್ನು ವಿಭೇದೀಕರಣ

Digitised by Bharatavani, CIIL

ಮಾಡುವಂತಿರಬೇಕು. ಇದರ ಪರೀಕ್ಷಣದ ಪ್ರತಿಯೊಂದು ಪರೀಕ್ಷಾಂಶ ಹೆಚ್ಚು ಹಾಗೂ ಕಡಿಮೆ ಸಾಮರ್ಥ್ಯ ಹೊಂದಿರುವವರ ನಡುವೆ ವ್ಯತ್ಯಾಸೀಕರಿಸುತ್ತದೆ ಎಂದರ್ಥವಾಗುತ್ತದೆ. ಆದ್ದರಿಂದ ಸಾಮರ್ಥ್ಯ ಪರೀಕ್ಷಣದ ಪರೀಕ್ಷಾಂಶಗಳಿಗೆ/ಸಾಧನಾ ಪರೀಕ್ಷೆಗಳಿಗೆ ವಿಭೇದೀಕರಣ ಸೂಚ್ಯಂಕವನ್ನು ಕಂಡುಹಿಡಿಯಬೇಕು.

ಪರೀಕ್ಷಣದ/ಸಾಧನಾ ಪರೀಕ್ಷೆಯ ಪರೀಕ್ಷಾಂಶಗಳಲ್ಲಿ ಕಠಿಣತೆಯ ಸೂಚ್ಯಂಕ ಮತ್ತು ವಿಬೇದೀಕರಣ ಸೂಚ್ಯಂಕವನ್ನು ಕಂಡುಹಿಡಿಯುವ ಪ್ರಕ್ರಿಯೆಗೆ ಅಂಶ ವಿಶ್ಲೇಷಣೆ (Item Analysis) ಎಂದು ಹೆಸರು.

**ಕಠಿಣತೆಯ ಸೂಚ್ಯಂಕ:**

ಒಂದು ಸಮೂಹದಲ್ಲಿ ಒಂದು ಪರೀಕ್ಷಾಂಶಕ್ಕೆ ಸರಿ ಉತ್ತರ ಕೊಡುವವರು ಶೇಕಡಾವಾರು ಈ ಪರೀಕ್ಷಾಂಶದ ಕಠಿಣತೆಯ ಮಟ್ಟವನ್ನು ಸೂಚಿಸುತ್ತಾರೆ. ಕಠಿಣತೆಯ ಮಟ್ಟವನ್ನು ಕಂಡು ಹಿಡಿಯಲು ಈ ಮುಂದಿನ ಸೂತ್ರವನ್ನು ಉಪಯೋಗಿಸಬೇಕು.

ಕಠಿಣತೆಯ ಸೂಚ್ಯಂಕ $(DI) = \frac{R}{T} \times 100$

ಈ ಸೂತ್ರದಲ್ಲಿ (R) = ಪರೀಕ್ಷಾಂಶಕ್ಕೆ ಸರಿ ಉತ್ತರ ಬರೆದವರ ಸಂಖ್ಯೆ

(T) = ಪರೀಕ್ಷಾಂಶಕ್ಕೆ ಉತ್ತರ ನೀಡಲು ಪ್ರಯತ್ನಿಸಿದವರ ಒಟ್ಟು ಸಂಖ್ಯೆ

ಕಠಿಣತೆ ಸೂಚ್ಯಂಕವನ್ನು ಕಂಡು ಹಿಡಿಯಲು ಇನ್ನೊಂದು ಸುಲಭವಾದ ಆದರೆ ಪ್ರಭಾವಕಾರಿಯಾದ ವಿಧಾನವಿದೆ. ಇದಕ್ಕಾಗಿ ಕೆಳಗಿನ ಸೂತ್ರವನ್ನು ಉಪಯೋಗಿಸಬೇಕು.

ಕಠಿಣತೆಯ ಸೂಚ್ಯಂಕ $(DI) = \frac{R_U + R_L}{U+L} \times 100$

ಈ ಸೂತ್ರದಲ್ಲಿ $R_U$ = ಮೇಲಿನ ಗುಂಪಿನಲ್ಲಿ ಪರೀಕ್ಷಾಂಶಕ್ಕೆ ಸರಿ ಉತ್ತರ ಕೊಟ್ಟಿರುವವರ ಸಂಖ್ಯೆ.

$R_L$ = ಕೆಳಗಿನ ಗುಂಪಿನಲ್ಲಿ ಪರೀಕ್ಷಾಂಶಕ್ಕೆ ಸರಿ ಉತ್ತರ ಕೊಟ್ಟಿರುವವರ ಸಂಖ್ಯೆ.

U+L = ಮೇಲಿನ ಮತ್ತು ಕೆಳಗಿನ ಗುಂಪುಗಳಲ್ಲಿರುವವರ ಒಟ್ಟು ಸಂಖ್ಯೆ

ಉದಾಹರಣೆಗೆ ಒಂದು ಗುಂಪಿನಲ್ಲಿರುವ 30 ವಿದ್ಯಾರ್ಥಿಗಳು ಒಂದು ಸಾಧನಾ ಪರೀಕ್ಷೆಗೆ ಉತ್ತರ ಬರೆದಿದ್ದಾರೆಂದು ಇಟ್ಟುಕೊಳ್ಳೋಣ. ಈ ಪರೀಕ್ಷೆಯ ಒಂದು ನಿರ್ದಿಷ್ಟ ಪರೀಕ್ಷಾಂಶದ ಕಠಿಣತೆಯ ಸೂಚ್ಯಂಕವನ್ನು ಕಂಡು ಹಿಡಿಯಲು ಮುಂದಿನ ಹಂತಗಳನ್ನು ಅನುಸರಿಸಬೇಕು.

1. ಎಲ್ಲಾ 30 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಪ್ರತಿ ವಿದ್ಯಾರ್ಥಿಯ ಒಟ್ಟು ಅಂಕವನ್ನು ಕಂಡು ಹಿಡಿಯಿರಿ.

2.ಉತ್ತರ ಪತ್ರಿಕೆಗಳನ್ನು ವಿದ್ಯಾರ್ಥಿಗಳು ಪಡೆದಿರುವ ಅಂಕಗಳ ಆಧಾರದ ಮೇಲೆ, ಗರಿಷ್ಠ ಅಂಕದಿಂದ ಕನಿಷ್ಠ ಅಂಕದವರೆಗೆ ಕ್ರಮವಾಗಿ ಜೋಡಿಸಿ.

3.ಹೆಚ್ಚು ಅಂಕಗಳನ್ನು ಪಡೆದವರ ಗುಂಪಿನಿಂದ 1/3 ಭಾಗದಷ್ಟು ಅಂದರೆ 10 ಪತ್ರಿಕೆಗಳನ್ನು ಆರಿಸಿಕೊಳ್ಳಿ. ಇದು ಹೆಚ್ಚು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳ ಗುಂಪು. ಇದೇ ರೀತಿ ಕಡಿಮೆ ಅಂಕ ಪಡೆದ ಗುಂಪಿನಿಂದ 1/3 ರಷ್ಟು ಅಂದರೆ 10 ಉತ್ತರ ಪತ್ರಿಕೆಗಳನ್ನು ತೆಗೆದುಕೊಳ್ಳಿ. ಈ ಎರಡು ಗುಂಪುಗಳ ನಡುವಣ ಉತ್ತರ ಪತ್ರಿಕೆಗಳನ್ನು ಉಪಯೋಗಿಸಬೇಕಾಗಿಲ್ಲ.

4.ಪ್ರತಿಯೊಂದು ಪರೀಕ್ಷಾಂಶಕ್ಕೂ ಮೇಲಿನ ಗುಂಪಿನಲ್ಲಿ, ಆ ಪರೀಕ್ಷಾಂಶಕ್ಕೆ ಸರಿ ಉತ್ತರ ಬರೆದವರನ್ನು ಎಣಿಸಿ. ಇದೇ ರೀತಿ ಕೆಳಗಿನ ಗುಂಪಿನಲ್ಲಿ ಪ್ರತಿಯೊಂದು ಪರೀಕ್ಷಾಂಶಕ್ಕೂ ಸರಿ ಉತ್ತರ ಬರೆದವರನ್ನು ಎಣಿಕೆ ಮಾಡಿ. ನಂತರ ಮೇಲಿನ ಸೂತ್ರವನ್ನು ಉಪಯೋಗಿಸಿ ಪ್ರತಿಯೊಂದು ಪರೀಕ್ಷಾಂಶಕ್ಕೂ ಕಠಿಣತೆಯ ಸೂಚ್ಯಂಕವನ್ನು ಕಂಡು ಹಿಡಿಯಿರಿ.

ಉದಾಹರಣೆಗೆ ಮೂರು ಪರೀಕ್ಷಾಂಶಗಳನ್ನು ತೆಗೆದುಕೊಳ್ಳೋಣ.

ಪರೀಕ್ಷಾಂಶ ಮೇಲಿನ ಗುಂಪಿನಲ್ಲಿ ಸರಿ ಉತ್ತರಗಳ ಸಂಖ್ಯೆ ಕೆಳಗಿನ ಗುಂಪಿನಲ್ಲಿ ಸರಿ ಉತ್ತರಗಳ ಸಂಖ್ಯೆ ಮೇಲಿನ ಗುಂಪು ಮತ್ತು ಕೆಳಗಿನ ಗುಂಪಿನ ವಿದ್ಯಾರ್ಥಿಗಳ ಸಂಖ್ಯೆ

| ಪರೀಕ್ಷಾಂಶ | ಮೇಲಿನ ಗುಂಪಿನಲ್ಲಿ ಸರಿ ಉತ್ತರಗಳ ಸಂಖ್ಯೆ | ಕೆಳಗಿನ ಗುಂಪಿನಲ್ಲಿ ಸರಿ ಉತ್ತರಗಳ ಸಂಖ್ಯೆ | ಮೇಲಿನ ಗುಂಪು ಮತ್ತು ಕೆಳಗಿನ ಗುಂಪಿನ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| A | 8 | 2 | 10 + 10 |
| B | 5 | 2 | 10 + 10 |
| C | 3 | 0 | 10 + 10 |

ಪರೀಕ್ಷಾಂಶ A $\frac{8+2}{10+10} \times 100 = \frac{10}{20} \times 100 = 50\%$

ಪರೀಕ್ಷಾಂಶ B $\frac{5+2}{10+10} \times 100 = \frac{7}{20} \times 100 = 35\%$

ಪರೀಕ್ಷಾಂಶ C $\frac{3+0}{10+10} \times 100 = \frac{3}{20} \times 100 = 15\%$

ಮೇಲಿನ ಲೆಕ್ಕಾಚಾರದಿಂದ ಪರೀಕ್ಷಾಂಶ A ಯ ಕಠಿಣತೆಯ ಸೂಚ್ಯಂಕ (ಮಟ್ಟ) ಶೇ. 50, ಪರೀಕ್ಷಾಂಶ B ಯ ಕಠಿಣತೆಯ ಮಟ್ಟ ಶೇ.35, ಮತ್ತು ಪರೀಕ್ಷಾಂಶ C ಯ ಕಠಿಣತೆಯ ಮಟ್ಟ

Digitised by Bharatavani, CIIL

ಶೇ. 15 ಎಂದು ತಿಳಿದು ಬರುತ್ತದೆ. ಕಠಿಣತೆಯ ಸೂಚ್ಯಂಕದ ಪ್ರತಿಶತ ಕಡಿಮೆ ಆದಾಗ ಪರೀಕ್ಷಾಂಶದ ಕಠಿಣತೆಯ ಮಟ್ಟ ಹೆಚ್ಚಾಗಿದೆ ಎಂದರ್ಥವಾಗುತ್ತದೆ. ಅಂದರೆ ಕೆಳಗಿನ ಗುಂಪಿನಲ್ಲಿ ಹೆಚ್ಚಿನವರಿಗೆ ಅಂಥ ಪರೀಕ್ಷಾಂಶವನ್ನು ಉತ್ತರಿಸಲು ಸಾಧ್ಯವಾಗುವುದಿಲ್ಲ. ಕಠಿಣತೆಯ ಸೂಚ್ಯಂಕದ ಪ್ರತಿಶತ ಹೆಚ್ಚಾದಷ್ಟು ಪರೀಕ್ಷಾಂಶ ಸುಲಭವಾಗಿದೆ ಎಂದರ್ಥವಾಗುತ್ತದೆ. ಅಂದರೆ ಕೆಳಗಿನ ಗುಂಪಿನಲ್ಲಿ ಹೆಚ್ಚಿನವರು ಅಂಥ ಪರೀಕ್ಷಾಂಶಕ್ಕೆ ಸರಿ ಉತ್ತರ ನೀಡಲು ಸಾಧ್ಯವಾಗುತ್ತದೆ.

ಒಂದು ಒಳ್ಳೆಯ ಪರೀಕ್ಷಣ ಅಥವಾ ಸಾಧನಾ ಪರೀಕ್ಷೆಯ ಅಂಶಗಳು ಬೇರೆ ಬೇರೆ ಮಟ್ಟದ ಕಠಿಣತೆಯನ್ನು (ಸುಲಭತೆಯಿಂದ ಹೆಚ್ಚು ಕಠಿಣತೆಯಿರುವ ಪರೀಕ್ಷಾಂಶಗಳು) ಹೊಂದಿರಬೇಕಲ್ಲದೆ, ಕಡಿಮೆ ಹಾಗೂ ಹೆಚ್ಚು ಸಾಮರ್ಥ್ಯವಿರುವವರನ್ನು ವಿಭೇದೀಕರಿಸಲು ವಿಭೇದಾತ್ಮಕ ಸೂಚ್ಯಂಕಗಳನ್ನು ಹೊಂದಿರಬೇಕು. ಒಂದು ಒಳ್ಳೆಯ ಪರೀಕ್ಷಣ ಕೆಲವು ಸುಲಭವಾದ (ತೀರ ಸುಲಭವಾದದ್ದಲ್ಲ) ಪರೀಕ್ಷಾಂಶಗಳನ್ನು, ಕೆಲವು ತುಂಬಾ ಕಠಿಣವಾದ ಪರೀಕ್ಷಾಂಶಗಳನ್ನು ಮತ್ತು ಸರಾಸರಿಯಾದ ಕೆಲವು ಪರೀಕ್ಷಾಂಶಗಳನ್ನು ಮತ್ತು ಸರಾಸರಿಮಟ್ಟದ ಕೆಲವು ಪರೀಕ್ಷಾಂಶಗಳನ್ನು ಸಮತೋಲಿತ ಸಂಖ್ಯೆಯಲ್ಲಿ ಹೊಂದಿರಬೇಕು. ಹಾಗಿದ್ದಲ್ಲಿ ಅಂಥ ಪರೀಕ್ಷಣ ಗರಿಷ್ಠ ಮಿತಿಯ ಸಾಮರ್ಥ್ಯವಿರುವವರನ್ನು ಗುರುತಿಸಲು ಮತ್ತು ವಿವಿಧ ಸಾಮರ್ಥ್ಯಮಟ್ಟದ ವ್ಯಕ್ತಿಗಳನ್ನು ವಿಭೇದೀಕರಿಸಲು ಸಾಧ್ಯವಾಗುತ್ತದೆ.

**ವಿಭೇದಾತ್ಮಕ ಸೂಚ್ಯಂಕ (Discrimination Index – Dis.I):**

ಸಾಮರ್ಥ್ಯದಲ್ಲಿ ಭಿನ್ನತೆ ಸಹಜ. ಯಾವುದೇ ಪರೀಕ್ಷೆಯಲ್ಲಿ ಮಕ್ಕಳು ಭಿನ್ನ ರೀತಿಯಲ್ಲಿ ಅಂಕ ಗಳಿಸುವುದು ಸಾಮಾನ್ಯ. ಹೆಚ್ಚು ಅಂಕಗಳಿಸುವ ಸಾಮರ್ಥ್ಯ ಹೊಂದಿದ ಮಕ್ಕಳು ಹಾಗೂ ಕಡಿಮೆ ಅಂಕ ಗಳಿಸುವ ಮಕ್ಕಳೂ ಇರುತ್ತಾರೆ. ಮಧ್ಯಮ ಅಥವಾ ಸಾಮಾನ್ಯ ಮಟ್ಟದಲ್ಲಿ ಅಂಕ ಗಳಿಸುವ ಮಕ್ಕಳನ್ನೂ ಕಾಣುತ್ತೇವೆ. ಪರೀಕ್ಷೆಯ ಪರೀಕ್ಷಾಂಶಗಳು ಮಕ್ಕಳ ವಿಚಾರಶಕ್ತಿಯನ್ನು ಕೆರಳಿಸುವಂತಿದ್ದಾಗ ಮಾತ್ರ ಮಕ್ಕಳ ವಿವಿಧ ಸಾಮರ್ಥ್ಯಗಳನ್ನು ಹೊರಕ್ಕೆ ತರಲು ಸಾಧ್ಯವಾಗುತ್ತದೆ. ಪ್ರಶ್ನೆಗಳನ್ನು ಉತ್ತರಿಸುವಲ್ಲಿ ಅಂಕಗಳನ್ನಾಧರಿಸಿ ಮೇಲ್ಮಟ್ಟದ ವಿದ್ಯಾರ್ಥಿ ಹಾಗೂ ಕೆಳಮಟ್ಟದ ವಿದ್ಯಾರ್ಥಿಗಳ ನಡುವಿನ ಭಿನ್ನತೆ ತಿಳಿಸುವುದೇ ಆ ಪರೀಕ್ಷಾಂಶದ ವಿಭೇದಾತ್ಮಕ ಸೂಚಿ.

- ಹೆಚ್ಚು ಅಂಕ ಗಳಿಸಿದ ಮಕ್ಕಳನ್ನು ಕಡಿಮೆ ಅಂಕ ಗಳಿಸಿದ ಮಕ್ಕಳಿಂದ ಬೇರ್ಪಡಿಸಿ ತೋರಿಸುವ ಸಾಮರ್ಥ್ಯ ಹೊಂದಿದ್ದರೆ ಅಂತಹ ಪರೀಕ್ಷಾಂಶವು ಅತ್ಯಂತ ಹೆಚ್ಚಿನ ವಿಭೇದಾತ್ಮಕ ಸಾಮರ್ಥ್ಯ ಹೊಂದಿದೆ.

- ಸಾಧನಾ ಪರೀಕ್ಷೆಗಳನ್ನು ತಯಾರಿಸುವಾಗ ಪರೀಕ್ಷಾಂಶಗಳ ವಿಭೇದಾತ್ಮಕ ಸೂಚಿಯನ್ನು ಕಂಡು ಹಿಡಿಯಲೇಬೇಕು. ಇದರಿಂದ ಒಂದು ಪರೀಕ್ಷಾಂಶ ಉತ್ತಮ ಹಾಗೂ ಅಶಕ್ತ (ಕಳಪೆ) ಮಟ್ಟದ ವಿದ್ಯಾರ್ಥಿಗಳನ್ನು ಹೇಗೆ ವಿಭೇದೀಕರಿಸಬಲ್ಲದು ಎಂಬುದನ್ನು ವಿಶ್ಲೇಷಿಸಿ ತಿಳಿಯುವುದು ಸಾಧ್ಯವಾಗುತ್ತದೆ. ಒಂದು ವೇಳೆ ಅತಿ ಹೆಚ್ಚು ಅಂಕ ಗಳಿಸುವ ಮತ್ತು ಅತಿ ಕಡಿಮೆ ಅಂಕ ಗಳಿಸುವ ಗುಂಪಿನ ಎಲ್ಲರೂ ಒಂದು ಪರೀಕ್ಷಾ ಅಂಶಕ್ಕೆ ಸರಿ ಅಥವಾ ತಪ್ಪು ಉತ್ತರ ನೀಡಿದರೆ ಆ ಅಂಶಕ್ಕೆ ವಿಭೇದಕ ಸಾಮರ್ಥ್ಯವಿಲ್ಲದೆ ಆ ಅಂಶಕ್ಕೆ ಸಿಂಧುತ್ವ ಇಲ್ಲ ಎಂದು ಅರ್ಥವಾಗುವುದು.

ಪರೀಕ್ಷೆಯ ಒಟ್ಟು ಪ್ರಾಪ್ತಾಂಕಗಳ ಹಾಗೂ ಪ್ರತಿ ಪರೀಕ್ಷಾಂಶಗಳ ನಡುವಿನ ಸಹ ಸಂಬಂಧವನ್ನು ಅಳತೆ ಮಾಡುವುದನ್ನು ವಿಭೇದಾತ್ಮಕ ಸೂಚಿ ಎಂದು ಕರೆಯಲಾಗುತ್ತದೆ. ಇದನ್ನು ಕಂಡು ಹಿಡಿಯುವ ಸೂತ್ರ ಹೀಗಿದೆ.

ವಿಭೇದಾತ್ಮಕ ಸೂಚಿ (Dis.I) = $\frac{R_U - R_L}{U / L}$

ಸೂಚ್ಯಾಂಕದ ಮಟ್ಟ = $\frac{\text{ಮೇಲ್ಮಟ್ಟದಲ್ಲಿ ಸರಿ ಉತ್ತರ ನೀಡಿರುವವರ ಸಂಖ್ಯೆ – ಕೆಳಮಟ್ಟದಲ್ಲಿ ಸರಿ ಉತ್ತರ ನೀಡಿದವರ ಸಂಖ್ಯೆ}}{\text{ಮೇಲಿನ ಅಥವಾ ಕೆಳಗಿನ ಗುಂಪಿನ ವಿದ್ಯಾರ್ಥಿಗಳ ಸಂಖ್ಯೆ}}$

ಉದಾ: ಈ ಕೆಳಗಿನ ಉದಾಹರಣೆಗೆ ಸಂಬಂಧಿಸಿದಂತೆ ವಿಭೇದಾತ್ಮಕ ಸೂಚ್ಯಾಂಕಮಟ್ಟವನ್ನು ಕಂಡುಹಿಡಿಯುವ ವಿಧಾನವನ್ನು ತಿಳಿಯೋಣ.

| ಪರೀಕ್ಷಾಂಶ | ಮೇಲ್ಮಟ್ಟದಲ್ಲಿ ಸರಿ ಉತ್ತರ ನೀಡಿದ ವಿದ್ಯಾರ್ಥಿಗಳ ಸಂಖ್ಯೆ | ಕೆಳಮಟ್ಟದಲ್ಲಿ ಸರಿ ಉತ್ತರ ನೀಡಿದ ವಿದ್ಯಾರ್ಥಿಗಳ ಸಂಖ್ಯೆ | ಮೇಲ್ಮಟ್ಟದ ಮತ್ತು ಕೆಳಮಟ್ಟದ ಗುಂಪುಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| A | 12 | 3 | 20+20 |
| B | 15 | 2 | 20+20 |
| C | 20 | 0 | 20+20 |
| D | 3 | 3 | 20+20 |

1ನೇ ಅಂಶದ ವಿಭೇದಾತ್ಮಕ ಸೂಚ್ಯಾಂಕ ಮಟ್ಟ = $\frac{12 - 3}{½(20)}$=0.45

2ನೇ ಅಂಶದ ವಿಭೇದಾತ್ಮಕ ಸೂಚ್ಯಾಂಕ ಮಟ್ಟ = $\frac{15 - 2}{½(20)}$=0.65

3ನೇ ಅಂಶದ ವಿಭೇದಾತ್ಮಕ ಸೂಚ್ಯಾಂಕ ಮಟ್ಟ = $\frac{20 - 0}{½(20)}$=1.00

4ನೇ ಅಂಶದ ವಿಭೇದಾತ್ಮಕ ಸೂಚ್ಯಾಂಕ ಮಟ್ಟ = $\frac{3 - 3}{½(20)}$=0.00

ಮೇಲಿನ ಉದಾಹರಣೆಗಳನ್ನು ಅವಲೋಕಿಸಿದಾಗ 3 ನೇ ಅಂಶವು ಉತ್ತಮ (Dis.I=1). 1ನೇ ಅಂಶವು ಮಧ್ಯಮ (Dis.I = 0.45). ಎರಡನೇ ಅಂಶವು ಕನಿಷ್ಠ (Dis.I = 0.65). 4 ನೇ

Digitised by Bharatavani, CIIL

**ಅಂಶ ವಿಶ್ಲೇಷಣೆ**

ಅಂಶದ ವಿಭೇದಾತ್ಮಕ ಸೂಚ್ಯಂಕವು (Dis.I = 0) ಎಂದು ಗೊತ್ತಾಗುತ್ತದೆ. ವಿಭೇದಾತ್ಮಕ ಸೂಚ್ಯಂಕ ಕಡಿಮೆ ಇರುವ 2ನೇ ಮತ್ತು 4ನೇ ಅಂಶಗಳನ್ನು ತಿರಸ್ಕರಿಸಬೇಕು.

ಎಬೆಲ್‌ರವರು ವಿಭೇದಾತ್ಮಕ ಸೂಚ್ಯಾಂಕಗಳ ಮೌಲ್ಯವನ್ನು ಈ ರೀತಿಯಾಗಿ ಅರ್ಥೈಸಿದ್ದಾರೆ.

| ವಿಭೇದಾತ್ಮಕ ಸೂಚಿ | ಪರೀಕ್ಷಾಂಶ ಮೌಲ್ಯಮಾಪನ |
|---|---|
| 1. 0.40 ರಿಂದ ಹೆಚ್ಚು | ಅತೀ ಉತ್ತಮ ಪರೀಕ್ಷಾಂಶಗಳು. ಅವುಗಳನ್ನು ಇಟ್ಟುಕೊಳ್ಳಲೇಬೇಕು. |
| 2. 0.30 ರಿಂದ 0.39 | ಸಾಮಾನ್ಯವಾಗಿ ಉತ್ತಮ ಹಾಗೂ ಸ್ವಲ್ಪ ಹೊಂದಾಣಿಕೆ/ಆವಿಷ್ಕಾರ ಮಾಡಿ ಒಪ್ಪಿಕೊಳ್ಳಬಹುದಾದವು. |
| 3. 0.20 ರಿಂದ 0.29 | ಅತೀ ಸಾಮಾನ್ಯ ಅಂಶಗಳು. ಇವುಗಳನ್ನು ಅತ್ಯಂತ ಕೂಲಂಕಶವಾಗಿ ಪರಿಷ್ಕರಿಸಿ ಮಾರ್ಪಡಿಸಿ ತೆಗೆದುಕೊಳ್ಳಬೇಕು. |
| 4. 0.19 ಕ್ಕಿಂತ ಕಡಿಮೆ | ಬಹಳ ಸುಮಾರಾದ ಅಂಶ. ಇವುಗಳನ್ನು ತೆಗೆದು ಹಾಕಬೇಕು. |

**–ಡಾ. ಕೊಂಗವಾಡ ಎನ್. ಬಿ.**
**–ಪ್ರೊ. ಮಂಜುನಾಥಯ್ಯ ಬಿ.ಎನ್.**

## ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯು (All India Institute of Speech and Hearing-AIISH) ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ವಾಯತ್ತ ಸಂಸ್ಥೆಯಾಗಿದೆ. 9 ಆಗಸ್ಟ್ 1965ರಂದು ಪ್ರಾರಂಭವಾದ ಈ ಸಂಸ್ಥೆಯು ಕಳೆದ ನಾಲ್ಕುವರೆ ದಶಕಗಳಿಂದ ವಾಕ್, ಶ್ರವಣ ನ್ಯೂನತೆಗಳುಳ್ಳ ಜನರಿಗೆ ಸೇವೆ ಸಲ್ಲಿಸುತ್ತಾ ಬಂದಿದೆ. ಚಿಕಿತ್ಸೆ, ಸಂಶೋಧನೆ, ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಮನಾರ್ಹವಾದ ಸೇವೆ ಸಲ್ಲಿಸುವುದು ಸಂಸ್ಥೆಯ ಮೂಲ ಉದ್ದೇಶವಾಗಿದೆ. ಸಮಾಜದಲ್ಲಿ ವಿಶೇಷ ಸಮಸ್ಯೆಗಳುಳ್ಳ ಶ್ರವಣದೋಷವುಳ್ಳವರ, ಬುದ್ಧಿಮಾಂದ್ಯರ, ಮೆದುಳಿನ ನಿಸ್ವಸ್ಥತೆ, ವಾಕ್‌ದೋಷ, ಭಾಷಾದೋಷವುಳ್ಳವರನ್ನು ಗುರುತಿಸುವಿಕೆ, ತಡೆಗಟ್ಟುವಿಕೆ ಹಾಗೂ ನಿರ್ವಹಣೆಯ ಬಗ್ಗೆ ಅರಿವು ಮೂಡಿಸುವ ಹಲವಾರು ಕಾರ್ಯಕ್ರಮಗಳನ್ನು ಈ ಸಂಸ್ಥೆ ಹಮ್ಮಿಕೊಂಡಿರುವುದಲ್ಲದೇ ಈ ವಿಶೇಷ ವರ್ಗದವರ ಸಬಲೀಕರಣ ಹಾಗೂ ಪುನರ್ವಸತಿಗಾಗಿ ಶ್ರಮಿಸುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊಂದಿಕೊಂಡಂತೆ ಮೈಸೂರು ರೈಲ್ವೆ ನಿಲ್ದಾಣ ಮತ್ತು ಕೇಂದ್ರ ಬಸ್‌ನಿಲ್ದಾಣದಿಂದ ಸುಮಾರು 5 ಕಿ.ಮೀ ಪಶ್ಚಿಮಕ್ಕೆ ಇರುವ ಈ ಸಂಸ್ಥೆಯು 32 ಎಕರೆಯಷ್ಟು ವಿಶಾಲವಾದ ಜಾಗವನ್ನು ಹೊಂದಿದೆ. ಆಧುನಿಕ ಸಲಕರಣೆ, ಇ–ಗ್ರಂಥಾಲಯ, ಸ್ಮಾರ್ಟ್ ತರಗತಿಗಳು ಹಾಗೂ ಎಲ್ಲಾ ಮೂಲ ಸೌಕರ್ಯಗಳನ್ನು ಹೊಂದಿರುವ ಈ ಸಂಸ್ಥೆಯು ಏಷ್ಯಾಖಂಡದಲ್ಲೇ ಹೆಸರುವಾಸಿಯಾಗಿದೆ. ಶ್ರವಣದೋಷ ಕ್ಷೇತ್ರದಲ್ಲಿ ವಿಶ್ವ ಆರೋಗ್ಯ ಸಂಘಟನೆಯಿಂದ ಪ್ರಮುಖವಾದ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಇದು ಪಡೆದಿದೆ. ಸಂಸ್ಥೆಯು "ಭಾರತೀಯ ಪುನರ್ವಸತಿ ಪರಿಷದ್" (RCI)ನ ಮಾನ್ಯತೆ ಪಡೆದಿದೆ. ತನ್ನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನೂ ಪಡೆದಿದೆ.

ಈವರೆಗೂ 1113 ವಿದ್ಯಾರ್ಥಿಗಳು ಈ ಸಂಸ್ಥೆಯಿಂದ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. 40ಕ್ಕಿಂತ ಹೆಚ್ಚು ಸಂಶೋಧನ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ.

ಈ ಸಂಸ್ಥೆ ಹೊಂದಿರುವ ಶೈಕ್ಷಣಿಕ ಕಾರ್ಯಕ್ರಮಗಳು ಹೀಗಿವೆ.

**1) ಪದವಿ ಕಾರ್ಯಕ್ರಮಗಳು:**

a) ಬಿ.ಎಸ್ಸಿ (ವಾಕ್ ಮತ್ತು ಶ್ರವಣ) (ನಾಲ್ಕು ವರ್ಷ, 6 ಸೆಮಿಸ್ಟರ್‌ಗಳು)

b) ಬಿಎಸ್‌ಎಡ್ (BSEd) (ಶ್ರವಣ ನ್ಯೂನತೆ) (1ವರ್ಷ, 2ಸೆಮಿಸ್ಟರ್‌ಗಳು)

**2) ಡಿಪ್ಲೋಮ ಕಾರ್ಯಕ್ರಮಗಳು ಮತ್ತು ಪಿ.ಜಿ ಡಿಪ್ಲೋಮ ಕೋರ್ಸುಗಳು:**

ಬಿ.ಎಸ್ಸಿ (ವಾಕ್ ಮತ್ತು ಶ್ರವಣ) ಪದವಿಯ ನಂತರ ಕೆಳಗಿನ 1ವರ್ಷದ ಡಿಪ್ಲೋಮಗಳನ್ನು ಮಾಡಬಹುದು.

a) ಪಿ.ಜಿ ಡಿಪ್ಲೋಮ ಇನ್ ಮಾತು ಭಾಷಾ ಚಿಕಿತ್ಸಾ ಲಿಂಗ್ವಿಸ್ಟಿಕ್ಸ್

b) ಪಿ.ಜಿ ಡಿಪ್ಲೋಮ ಇನ್ ಫೊರೆನ್ಸಿಕ್ (SP & Science) ಮಾತು ಮತ್ತು ವಿಜ್ಞಾನ ತಂತ್ರಜ್ಞಾನ

c) ಶ್ರವಣಯಂತ್ರ ಹಾಗೂ ಕಿವಿಅಚ್ಚು ತಂತ್ರಜ್ಞಾನ

**3) ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು:**

a) ಎಂ.ಎಸ್ಸಿ (ಶ್ರವಣ ತರಬೇತಿ) (2ವರ್ಷ, 4ಸೆಮಿಸ್ಟರ್‌ಗಳು)

b) ಎಂ.ಎಸ್ಸಿ (ಮಾತು–ಭಾಷಾ ಪೆಥೊಲಜಿ) (2ವರ್ಷ, 4ಸೆಮಿಸ್ಟರ್‌ಗಳು)

c) ಎಂ.ಎಸ್‌ಎಡ್ (MSEd.) (1ವರ್ಷ, 2ಸೆಮಿಸ್ಟರ್‌ಗಳು)

4) ಪಿಎಚ್.ಡಿ ಪದವಿ/ ಪೋಸ್ಟ್ ಡಾಕ್ಟೋರಲ್ ಫೆಲೊಷಿಪ್.

5) ಸರ್ಟಿಫಿಕೇಟ್ ಕೋರ್ಸ್‌ಗಳು, ಡಿ.ಟಿ.ವೈಹೆಚ್‌ಎ, ಡಿ.ಹೆಚ್.ಎಲ್.ಎಸ್ ಕೋರ್ಸುಗಳಿವೆ. ಪೋಷಕರಿಗಾಗಿ ಅಂಚೆ ಮತ್ತು ತೆರಪಿನ ಶಿಕ್ಷಣವನ್ನು ಸಹ ನೀಡಲಾಗುತ್ತದೆ. ಹೊರ ರಾಜ್ಯಗಳಿಂದ ಹಾಗೂ ದೂರದ ಊರುಗಳಿಂದ ಬಂದ ಎಲ್ಲಾ ವಿದ್ಯಾರ್ಥಿಗಳಿಗೆ ವ್ಯವಸ್ಥಿತವಾದ ಹಾಸ್ಟೆಲ್ ಇದೆ ಹಾಗೂ ದೇಶದ ಇತರ ವಾಕ್ ಮತ್ತು ಶ್ರವಣ ಸಂಸ್ಥೆಗಳಲ್ಲಿ ಕೆಲಸ

Digitised by Bharatavani, CIIL

ನಿರ್ವಹಿಸುವ ಅವಕಾಶವನ್ನು ನೀಡಲಾಗುತ್ತದೆ.

ಓರ್ವ ನಿರ್ದೇಶಕರು ಈ ಸಂಸ್ಥೆಯ ಆಡಳಿತವನ್ನು ನಿರ್ವಹಿಸುತ್ತಾರೆ. ಸಂಸ್ಥೆಯು ಹನ್ನೊಂದು ವಿಭಾಗಗಳನ್ನು ಹೊಂದಿದೆ.

**ಚಿಕಿತ್ಸಾ ಸೇವಾ ವಿಭಾಗಗಳು (Clinical Service Department):** ಈ ವಿಭಾಗವು ಸಂವಹನ ತೊಂದರೆ ಇರುವ ಎಲ್ಲಾ ವರ್ಗದ ಜನರಿಗೆ ತರಬೇತಿಯನ್ನು ನೀಡುತ್ತದೆ. ಚಿಕಿತ್ಸಾ ಸೇವಾ ವಿಭಾಗದಲ್ಲಿ ಮಕ್ಕಳ ವೈದ್ಯರು, ದೃಷ್ಟಿವೈದ್ಯರು, ಕಿವಿ, ಮೂಗು ಮತ್ತು ಗಂಟಲು ವೈದ್ಯರು, ಭಾಷಾತಜ್ಞರು, ಶ್ರವಣತಜ್ಞರು, ಮನೋವೈದ್ಯರು, ಸೂಕ್ಷ್ಮಚಲನಾ ತಜ್ಞರ ತಂಡ ಒಂದೇ ಸೂರಿನಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಸಂವಹನ ತೊಂದರೆ ಇರುವವರಿಗೆ ಸೂಕ್ತ ತರಬೇತಿ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಲಾಗುತ್ತದೆ. ಅಲ್ಲದೆ ಪದವಿ ಹಾಗೂ ಸ್ನಾತಕ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಯನ್ನು ಸಹ ನೀಡಲಾಗುತ್ತದೆ.

**ಶ್ರವಣಶಾಸ್ತ್ರ ವಿಭಾಗ (Adiology Department)/ಮತ್ತು ಕಿವಿಅಚ್ಚು ವಿಭಾಗ (Ear Mould Department):**

ಈ ವಿಭಾಗದಲ್ಲಿ ಶ್ರವಣ ದೋಷವನ್ನು ಪತ್ತೆ ಹಚ್ಚುವುದು, ಶ್ರವಣಯಂತ್ರಗಳ ಜೋಡಣೆ, ಕಿವಿಅಚ್ಚುಗಳ ತಯಾರಿಕೆ, ಶ್ರವಣಯಂತ್ರಗಳ ಡಿಜಿಟಲ್ ಪ್ರೋಗ್ರಾಂ, ಶ್ರವಣಯಂತ್ರಗಳ ದುರಸ್ತಿ ಕೆಲಸವನ್ನು ನಿರ್ವಹಿಸಲಾಗುತ್ತದೆ.

**ಕಿವಿ, ಮೂಗು ಮತ್ತು ಗಂಟಲು ವಿಭಾಗ (ENT Department):**

ನುರಿತ ವೈದ್ಯರ ತಂಡವನ್ನು ಹೊಂದಿರುವ ಈ ವಿಭಾಗದಲ್ಲಿ ಕಿವಿ, ಮೂಗು ಮತ್ತು ಗಂಟಲು ರೋಗಗಳ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಯನ್ನು ಮಾಡುವ ವ್ಯವಸ್ಥೆ ಇದೆ.

**ಮನೋವಿಜ್ಞಾನ ವಿಭಾಗ (Psychology Department):**

ಸಂಸ್ಥೆಗೆ ಬರುವ ಸಂವಹನ ತೊಂದರೆ, ಬುದ್ಧಿಮಾಂದ್ಯತೆ, ಮಾತು ಮತ್ತು ಭಾಷಾ ತೊಂದರೆ ಇರುವ ವ್ಯಕ್ತಿಗಳಿಗೆ ಸೂಕ್ತ ಪರೀಕ್ಷೆಗಳನ್ನು ನಡೆಸಿ, ಅವರ ಬುದ್ಧಿಮಟ್ಟವನ್ನು ಪರೀಕ್ಷಿಸಿ, ಅವರಿಗೆ ಬೇಕಾದ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಲಾಗುತ್ತದೆ.

**ವಿಶೇಷ ಶಿಕ್ಷಣ ವಿಭಾಗ (Special Education Department):**

ವಿಶೇಷ ಮಕ್ಕಳನ್ನು ಮುಖ್ಯವಾಹಿನಿಗೆ ತಂದು ಈ ಮಕ್ಕಳು ಸಮನ್ವಯ ಶಿಕ್ಷಣವನ್ನು ಪಡೆಯಬೇಕೆಂಬ ಮೂಲೋದ್ದೇಶದಿಂದ 2002 ನವೆಂಬರ್‌ನಲ್ಲಿ ಪ್ರಾರಂಭವಾದ ವಿಶೇಷ ಶಿಕ್ಷಣ ವಿಭಾಗದಲ್ಲಿ ಶಾಲಾಪೂರ್ವ ತರಬೇತಿ ಕೇಂದ್ರದಲ್ಲಿ 250ಕ್ಕೂ ಹೆಚ್ಚು ಮಕ್ಕಳಿಗೆ ಹಲವು ಹಂತಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ. 20ಕ್ಕೂ ಹೆಚ್ಚು ವಿಶೇಷ ಶಿಕ್ಷಕ/ಶಿಕ್ಷಕಿಯರಿರುವ ವಿಶೇಷ ಮಕ್ಕಳಿಗೆ ಸಂವಹನ, ಭಾಷಾಕೌಶಲ, ಸಂಜ್ಞಾತ್ಮಕ ಕೌಶಲ, ಶೈಕ್ಷಣಿಕ ತರಬೇತಿ, ಪಠ್ಯೇತರ ಚಟುವಟಿಕೆಗಳಲ್ಲಿ ತರಬೇತಿಯನ್ನು ನೀಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಒತ್ತು ನೀಡಲಾಗುತ್ತದೆ. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಸಾಮಾನ್ಯ ಶಾಲೆಯ ಶಿಕ್ಷಕ/ಶಿಕ್ಷಕಿಯರಿಗೆ ವಿಶೇಷ ಮಕ್ಕಳ ಶಿಕ್ಷಣದ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ.

**ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್ ವಿಭಾಗ (Electronic and Electrical Department):**

ಈ ವಿಭಾಗವು ನುರಿತ ಇಂಜಿನಿಯರ್‌ಗಳ ಸಹಾಯದಿಂದ ಸಂಸ್ಥೆಯ ಎಲ್ಲಾ ಆಧುನಿಕ ಉಪಕರಣಗಳ ನಿರ್ವಹಣೆ, ವೆಬ್‌ಸೈಟ್, ಪ್ರೋಗ್ರಾಂ, ಇ–ಗ್ರಂಥಾಲಯ, ಗಣಕೀಕೃತ ಯಂತ್ರಗಳ ನಿರ್ವಹಣೆ, ಇನ್ನೂ ಹತ್ತು ಹಲವಾರು ಕೆಲಸಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ.

**ಮಾತು ಮತ್ತು ಭಾಷಾ ವಿಭಾಗ (Speech and Language Department):**

ಈ ವಿಭಾಗ ಮಾತು, ಭಾಷಾ, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಶೋಧನೆ, ತರಬೇತಿ, ಎಲ್ಲಾ ರೀತಿಯ ಮಾತು ಮತ್ತು ಭಾಷಾ ತೊಂದರೆಗೆ ಪರಿಹಾರ, ಇತ್ಯಾದಿ ಕಾರ್ಯಗಳನ್ನು ನಿರ್ವಹಿಸುತ್ತದೆ. ಇದಲ್ಲದೆ ಇತರ ವಿಭಾಗಗಳಾದ ಆಡಳಿತ ವಿಭಾಗ, ಸಲಕರಣಾ ವಿಭಾಗ, ಮುಂತಾದವು ಸಂಸ್ಥೆಗೆ ಸಂಬಂಧಪಟ್ಟ ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತವೆ.

ಈ ವಿಭಾಗಗಳಲ್ಲಿ ಅದಕ್ಕೆ ಸಂಬಂಧಪಟ್ಟ ಹಲವಾರು ಘಟಕಗಳು ಸಹ ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ವಿಭಾಗಗಳಲ್ಲೂ ಸಂಶೋಧನೆಗಳು, ಕಾರ್ಯಾಗಾರಗಳು, ಬೀದಿನಾಟಕಗಳು, ಶಿಬಿರಗಳು, ಸ್ಕ್ರೀನಿಂಗ್ ಪ್ರೋಗ್ರಾಂಗಳು, ಸೆಮಿನಾರ್‌ಗಳನ್ನು, ಅತಿಥಿ ಉಪನ್ಯಾಸಗಳನ್ನು ಆಗಾಗ್ಗೆ ಸಂಘಟಿಸಲಾಗುತ್ತದೆ.

ಪ್ರತಿವರ್ಷ ಪ್ರತಿಭಾವಂತ ಪದವಿ, ಸ್ನಾತಕೋತ್ತರ ಹಾಗೂ ಸಂಶೋಧನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಲಾಗುತ್ತದೆ.

ಹೊರ ಊರುಗಳಿಂದ ಸಂಸ್ಥೆಗೆ ಬರುವ ಬಡ ಜನರಿಗೆ ಉಳಿದುಕೊಳ್ಳಲು ವಸತಿ ವ್ಯವಸ್ಥೆಯನ್ನು ಧರ್ಮಶಾಲೆಯಲ್ಲಿ ಕಲ್ಪಿಸಲಾಗುವುದು. ಧರ್ಮಶಾಲೆಗೆ ಹೊಂದಿಕೊಂಡಂತೆ ಇರುವ ಜಿಮ್‌ಖಾನದ ರಂಗಮಂದಿರದಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಜಿಮ್‌ಖಾನದಲ್ಲಿ ವಿದ್ಯಾರ್ಥಿಗಳಿಗೆ ಒಳಾಂಗಣ ಆಟಗಳ ಜಿಮ್‌ನ ವ್ಯವಸ್ಥೆ ಇದೆ.

ಎಲ್ಲಾ ಸವಲತ್ತುಗಳನ್ನು ಹೊಂದಿರುವ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯು 'ಸೆಂಟರ್ ಆಫ್ ಎಕ್ಸಲೆನ್ಸ್' ಎಂಬ ಸ್ಥಾನವನ್ನು ಭಾರತ ಸರ್ಕಾರದಿಂದ ಪಡೆಯುವತ್ತ ದಾಪುಗಾಲಿಡುತ್ತಿದೆ.

ಸಂಸ್ಥೆಯ ಮಾಹಿತಿ ಪಡೆಯಲು ವೆಬ್‌ಸೈಟ್ WWW.AIISH Mysore.in ಅನ್ನು ನೋಡಬಹುದು.

–ಶೋಭಾ

Digitised by Bharatavani, CIIL

## ಅಖಿಲ ಭಾರತ ಶಾಲಾ ಶಿಕ್ಷಣ ಸಮೀಕ್ಷೆಗಳು

ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಮಾರ್ಪಾಟುಗಳ ಅಂಕಿಅಂಶಗಳನ್ನು ಒದಗಿಸುವ ಸಲುವಾಗಿ ಕಾಲಾನುಕ್ರಮದಲ್ಲಿ ಅಖಿಲ ಭಾರತ ಶಿಕ್ಷಣ (ಎಐಇ) ಸಮೀಕ್ಷೆಗಳನ್ನು ನಡೆಸಲಾಗುತ್ತಿದೆ. ಸಾಮಾನ್ಯವಾಗಿ ರಾಜ್ಯ ಮತ್ತು ಕೇಂದ್ರ ಸರಕಾರಗಳು ಸಂಕಲಿಸಿದ ವಾರ್ಷಿಕ ಶಿಕ್ಷಣ ಸಂಖ್ಯಾಸಂಗ್ರಹಣ ಕಾರ್ಯದಲ್ಲಿ ಸಂಗ್ರಹಿಸಲಾದ ಮಾಹಿತಿಯ ಅನೇಕ ಮಾರ್ಪಾಟುಗಳ ಕುರಿತು ಈ ಸಮೀಕ್ಷೆ ಇರುತ್ತದೆ. ಕೇಂದ್ರ ಶಿಕ್ಷಣ ಮಂತ್ರಾಲಯವು 1957ರಲ್ಲಿ ಪ್ರಥಮ ಅಖಿಲ ಭಾರತ ಸಮೀಕ್ಷೆಯನ್ನು ನಡೆಸಿತು. ಅನಂತರದ ಎಲ್ಲಾ ಸಮೀಕ್ಷೆಗಳನ್ನು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ ನಡೆಸಿದೆ.

**ಚಾರಿತ್ರಿಕ ಹಿನ್ನೆಲೆ:** ಭಾರತದ ಬ್ರಿಟಿಷ್ ಆಡಳಿತಗಾರರು ಪ್ರಾಥಮಿಕ ಶಾಲೆಗಳನ್ನು ಗುರುತಿಸುವ ಮಾಹಿತಿ ಒದಗಿಸುವ ಸಲುವಾಗಿ ಪ್ರಥಮ ಬಾರಿ 1911ರಲ್ಲಿ ದೇಶದಾದ್ಯಂತ ಶಿಕ್ಷಣ ಸಮೀಕ್ಷೆಯನ್ನು ನಡೆಸುವಂತೆ ಸೂಚಿಸಿದರು. ಆದರೆ ಬ್ರಿಟಿಷ್ ಆಡಳಿತದಲ್ಲಿ ಈ ರೀತಿಯ ಯಾವುದೇ ಸಮೀಕ್ಷೆ ನಿಜವಾಗಿ ನಡೆದಿರುವುದರ ಕುರಿತು ನಿದರ್ಶನಗಳಿಲ್ಲ. ಸ್ವಾತಂತ್ರ್ಯ ದೊರೆತ ನಂತರವೇ 1950ರಲ್ಲಿ ಸಂವಿಧಾನವು ತನ್ನ ನಿರ್ದೇಶನಾತ್ಮಕ ತತ್ವಗಳಲ್ಲಿ "14 ವರ್ಷ ವಯಸ್ಸಿನವರೆಗಿನ ಎಲ್ಲಾ ಮಕ್ಕಳಿಗೆ ಮುಕ್ತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲಾಗುವುದು" ಎಂದು ಘೋಷಿಸಿದ ನಂತರ ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ರೂಪಿಸುವ ಸಲುವಾಗಿ ಸಮಗ್ರ ಶಿಕ್ಷಣ ಸಮೀಕ್ಷೆಯ ಅಗತ್ಯವಿದೆ ಎಂಬ ಭಾವನೆ ಮೂಡಿತು. 1956ರಲ್ಲಿ ಆಗ ಯೋಜನಾ ಆಯೋಗದ ಶಿಕ್ಷಣ ತಜ್ಞಸಮಿತಿಯ ಸದಸ್ಯರಾಗಿದ್ದ ದಿವಂಗತ ಶ್ರೀ ಜೆ.ಪಿ. ನಾಯ್ಕ್ ಅವರು ಜನಸಂಖ್ಯೆ ಮತ್ತು ಶಾಲೆ ಮತ್ತು ಮನೆಯ ನಡುವಿನ ಅಂತರದ ಮಾನದಂಡವನ್ನು ಆಧರಿಸಿ ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಸೌಕರ್ಯಗಳನ್ನು ಯೋಜಿಸುವ ಅಖಿಲ ಭಾರತ ಶಿಕ್ಷಣ ಸಮೀಕ್ಷೆಯನ್ನು ನಡೆಸುವ ಪ್ರಸ್ತಾಪವನ್ನು ಸರಕಾರಕ್ಕೆ ಒಪ್ಪಿಸಿದರು. ಇದರ ಫಲವಾಗಿ, ವಿಭಿನ್ನ ಅಂತರದ ವ್ಯಾಪ್ತಿಯೊಳಗೆ ಪ್ರಾಥಮಿಕ, ಮಧ್ಯಮ ಮತ್ತು ಮಾಧ್ಯಮಿಕ ಶಾಲೆಗಳ ಸೇವೆಯನ್ನು ಪಡೆಯುತ್ತಿರುವ ಬೇರೆಬೇರೆ ಜನಸಂಖ್ಯಾ ಹಂತಗಳಲ್ಲಿನ ವಾಸಸ್ಥಾನಗಳ ಗಣತಿಯನ್ನು ನಡೆಸಲು 1957ರಲ್ಲಿ ಅಥವಾ ಅಖಿಲ ಭಾರತ ಶಿಕ್ಷಣ ಸಮೀಕ್ಷೆಯನ್ನು (ಎಮ್‌ಒಇ, 1960) ನಡೆಸಲಾಯಿತು. ಹೀಗೆ ಅಖಿಲ ಭಾರತ ಶಿಕ್ಷಣ ಸಮೀಕ್ಷೆಗಳಿಗೆ ಶ್ರೀ ಜೆ.ಪಿ. ನಾಯ್ಕ್ ಅವರು ಪ್ರಾರಂಭಿಕರಾಗಿದ್ದಾರೆ. ನಂತರದ ವರ್ಷಗಳಲ್ಲಿ ಈ ಸಮೀಕ್ಷೆಗಳು ಶಾಲೆಗಳ ಸೇವೆಯನ್ನು ಪಡೆಯುತ್ತಿರಲಿ ಅಥವಾ ಇಲ್ಲದಿರಲಿ ವಾಸಸ್ಥಾನಗಳ ಮಾಹಿತಿಯನ್ನು ಒದಗಿಸುವ ಪ್ರಮುಖ ಉದ್ದೇಶವನ್ನು ಹೊಂದಿದವು.

**ವ್ಯಾಪ್ತಿ:** ಅಖಿಲ ಭಾರತ ಶಿಕ್ಷಣ ಸಮೀಕ್ಷೆಗಳು ವಾಸಸ್ಥಾನಗಳ ಗಣತಿಗೆ ಸೀಮಿತವಾಗಿ ಉಳಿದಿಲ್ಲ. ಇದರ ವ್ಯಾಪ್ತಿಯು ಹೆಚ್ಚು ಸಮಗ್ರವಾಗಿದೆ. ಪೂರ್ಣ ಪ್ರಮಾಣದ ಜನಗಣತಿಯನ್ನು ಆಧರಿಸಿದ ಎಲ್ಲಾ ವಿಧದ ಶಾಲೆಗಳನ್ನು ಗಣತಿ ತನ್ನ ವ್ಯಾಪ್ತಿಗೆ ಒಳಪಡಿಸಿದೆ. ಇದರಲ್ಲಿ ಶಾಲಾ ದಾಖಲಾತಿ, ಶಿಕ್ಷಕರು ಮತ್ತು ಶಾಲೆಗಳಲ್ಲಿರುವ ಮೂಲಭೂತ ಸೌಕರ್ಯಗಳು ಮತ್ತು ಇತರ ಸೌಕರ್ಯಗಳ ಕುರಿತು ವಿವರವಾದ ಮಾಹಿತಿ ಇದೆ. ಈ ಮಾಹಿತಿಯು ಬೇರೆ ಯಾವುದೇ ಆಕರಗಳಲ್ಲಿ ಲಭ್ಯವಿರುತ್ತಿರಲಿಲ್ಲ. ಈ ರೀತಿಯ ಸಮೀಕ್ಷೆಗಳನ್ನು ನಡೆಸುವುದರಿಂದ ಆಗಿಂದಾಗ್ಗೆ ಶೈಕ್ಷಣಿಕ ಪ್ರಗತಿಯನ್ನು ಯೋಜಿಸುವುದಕ್ಕೆ ಮತ್ತು ಪರಿವೀಕ್ಷಿಸುವುದಕ್ಕೆ, ಜೊತೆಗೆ ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ದೊರೆಯುವಂತೆ ಮಾಡುವ ಅಗತ್ಯವಿದೆ ಎಂಬ ಭಾವನೆ ಮೂಡಿತು. ಈ ಹಿಂದೆ ತಿಳಿಸಿದಂತೆ, ಮಾನವ ಸಂಪನ್ಮೂಲ ವಿಭಾಗ ಸಂಕಲಿಸಿರುವ ವಾರ್ಷಿಕ ಶೈಕ್ಷಣಿಕ ಅಂಕಿಅಂಶಗಳು ಯೋಜನಾ ಉದ್ದೇಶಗಳಿಗೆ ಅಗತ್ಯವಿರುವ ಅನೇಕ ಅಂಶ(ಘಟಕ)ಗಳ ಕುರಿತು ಮಾಹಿತಿಯನ್ನು ಒದಗಿಸುವುದಿಲ್ಲ. ಕಳೆದ ಹಲವು ವರ್ಷಗಳಿಂದ ಹೆಚ್ಚು ಹೆಚ್ಚು ಘಟಕಗಳ ಕುರಿತು ಅಂಕಿಅಂಶಗಳ ಬೇಡಿಕೆಯನ್ನು ಪೂರೈಸುವ ಸಲುವಾಗಿ ಎಐಇ ಸಮೀಕ್ಷೆಗಳು ಸಾಕಷ್ಟು ವಿಸ್ತರಿಸಿವೆ. ಇತ್ತೀಚಿನ ಆರನೆಯ ಎಐಇ ಸಮೀಕ್ಷೆಯಲ್ಲಿ (1993) (ಎನ್‌ಸಿಇಆರ್‌ಟಿ, 1999) ಅಂಕಿಅಂಶಗಳ ಪರಿಷ್ಕರಣಕ್ಕಾಗಿ ಗಣಕಯಂತ್ರವನ್ನು ವ್ಯಾಪಕ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ. ಆಯ್ದ ಘಟಕಗಳ ಅಂಕಿಗಳನ್ನು ಸಂಗ್ರಹಿಸುವ ಸಲುವಾಗಿ ಮಾದರಿ ತಂತ್ರವನ್ನು ಪ್ರಥಮಬಾರಿ ಅಳವಡಿಸಿಕೊಳ್ಳಲಾಗಿದೆ. ಹಿಂದೆ ಕೈಗೊಳ್ಳಲಾದ ಸಮೀಕ್ಷೆಗಳಲ್ಲಿ ಶಾಲೆಗಳು ಮತ್ತು ಗ್ರಾಮಗಳು/ನಗರ ಪ್ರದೇಶಗಳು ಇವುಗಳಿಂದ ಸಂಗ್ರಹಿಸಲಾದ ಅಂಕಿಅಂಶಗಳನ್ನು ಬಳಸಿ ಕ್ಷೇತ್ರ ಮಟ್ಟದ ಕೋಷ್ಟಕಗಳಾಗಿ, ನಂತರ ಮುಂದುವರಿದು ಜಿಲ್ಲಾ ಮಟ್ಟದ ಕೋಷ್ಟಕಗಳು, ರಾಜ್ಯ ಕೋಷ್ಟಕಗಳು ಮತ್ತು ಅಂತಿಮವಾಗಿ ರಾಷ್ಟ್ರ ಮಟ್ಟದ ವರದಿಯಾಗಿ ರೂಪಿಸಲು ಈ ದತ್ತಾಂಶಗಳ ಪರಿಷ್ಕರಣವನ್ನು ಕೈಯಿಂದಲೇ ಮಾಡಬೇಕಿತ್ತು. ಆದರೆ ಆರನೆಯ ಎಐಇ ಸಮೀಕ್ಷೆಯಲ್ಲಿ ಎಲ್ಲಾ ದತ್ತಾಂಶಗಳ ಪರಿಷ್ಕರಣವನ್ನು ಗಣಕೀಕರಣಗೊಳಿಸಲಾಯಿತು. ಮತ್ತು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಭಿನ್ನ ಕೋಷ್ಟಕಗಳನ್ನು ಸಾಂಸ್ಥಿಕ ಮತ್ತು ಗ್ರಾಮೀಣ ಮಟ್ಟದ ದತ್ತಾಂಶದಿಂದ ನೇರವಾಗಿ ಸಿದ್ಧಪಡಿಸಲಾಯಿತು.

ಇದುವರೆಗೆ 1957, 1965, 1973, 1986 ಮತ್ತು 1993ರಲ್ಲಿ ನಡೆಸಿದಂತಹ ಎಲ್ಲಾ ಆರು ಎಐಇ ಸಮೀಕ್ಷೆಗಳಲ್ಲಿ, ಮೊದಲನೆಯದನ್ನು ಹೊರತುಪಡಿಸಿ, ಉಳಿದ ಎಲ್ಲಾ ಸಮೀಕ್ಷೆಗಳನ್ನು ಎನ್‌ಸಿಇಆರ್‌ಟಿ ವತಿಯಿಂದ ನಡೆಸಲಾಗಿದೆ. ಈ ಸಮೀಕ್ಷೆಗಳಿಗೆ ಕೇಂದ್ರ ಶಿಕ್ಷಣ ಮಂತ್ರಾಲಯ, ನಂತರ ಮಾನವ ಸಂಪನ್ಮೂಲ ವಿಭಾಗ ಹಣ ಒದಗಿಸಿದೆ. ಈ ಎಲ್ಲಾ ಸಮೀಕ್ಷೆಗಳನ್ನು ರಾಜ್ಯದ ಶಿಕ್ಷಣ ವಿಭಾಗಗಳ ಕ್ರಿಯಾಶೀಲ ಸಹಯೋಗದೊಂದಿಗೆ ನಡೆಸಲಾಗಿದೆ. ಈ ಸಮೀಕ್ಷೆಗಳ ಸಾಂದರ್ಭಿಕ ದಿನಾಂಕಗಳು ಈ ಕೆಳಗಿನಂತಿವೆ. :

ಮೊದಲನೆಯ ಎಐಇ ಸಮೀಕ್ಷೆ : 31 ಮಾರ್ಚ್ 1957

ಎರಡನೆಯ ಎಐಇ ಸಮೀಕ್ಷೆ : 31 ಡಿಸೆಂಬರ್ 1965

ಮೂರನೆಯ ಎಐಇ ಸಮೀಕ್ಷೆ : 31 ಡಿಸೆಂಬರ್ 1973

Digitised by Bharatavani, CIIL

ನಾಲ್ಕನೆಯ ಎಐಇ ಸಮೀಕ್ಷೆ : 30 ಸೆಪ್ಟೆಂಬರ್ 1978
ಐದನೆಯ ಎಐಇ ಸಮೀಕ್ಷೆ : 30 ಸೆಪ್ಟೆಂಬರ್ 1986
ಆರನೆಯ ಎಐಇ ಸಮೀಕ್ಷೆ : 30 ಸೆಪ್ಟೆಂಬರ್ 1993

**ಸಾಂಸ್ಥಿಕ ವ್ಯವಸ್ಥೆ:** ಮೊದಲ ಸಮೀಕ್ಷೆಯ ನಂತರ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಆಡಳಿತಾತ್ಮಕ ಬೆಂಬಲದೊಂದಿಗೆ ಸಮೀಕ್ಷೆಯ ಇಡೀ ಯೋಜನೆ ಮತ್ತು ಅನುಷ್ಠಾನವನ್ನು ಎನ್‌ಸಿಇಆರ್‌ಟಿ ಕೈಗೊಂಡಿದೆ. ಸಮೀಕ್ಷೆಯ ಎಲ್ಲಾ ಖರ್ಚುವೆಚ್ಚಗಳನ್ನು ಮಾನವ ಸಂಪನ್ಮೂಲ ವಿಭಾಗದ ಮಂತ್ರಾಲಯ ಭರಿಸುತ್ತದೆ. ದತ್ತಾಂಶ ಪರಿಷ್ಕರಣವನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲಾದ ಆರನೆಯ ಎಐಇ ಸಮೀಕ್ಷೆಯಲ್ಲಿ ರಾಷ್ಟ್ರೀಯ ಮಾಹಿತಿಗಳ ಕೇಂದ್ರ (ಎನ್‌ಐಸಿ) ಮುಖ್ಯ ಸಹಯೋಗಿಯಾಯಿತು. ಕೇಂದ್ರ ಶಿಕ್ಷಣ ಕಾರ್ಯದರ್ಶಿಯು ಮುಖ್ಯಸ್ಥರಾಗಿರುವ ಸಂಚಾಲನ ಸಮಿತಿಯು ಈ ಸಮೀಕ್ಷೆಗಳಿಗೆ ಕಾರ್ಯನೀತಿ ನಿರ್ಣಯವನ್ನು ತೆಗೆದುಕೊಳ್ಳುವುದು ಮತ್ತು ಸಮೀಕ್ಷೆಯ ಪ್ರಗತಿಯ ಪರಿವೀಕ್ಷಣೆಯನ್ನು ನಡೆಸುವುದು. ಸಲಹಾ ಸಮಿತಿಯು ತಾಂತ್ರಿಕ ವಿಚಾರಗಳ ಕುರಿತು ಎಲ್ಲಾ ಸಲಹೆಗಳನ್ನು ನೀಡುವುದು. ಈ ಸಲಹಾ ಸಮಿತಿಯ ನೇತೃತ್ವ ಎನ್‌ಸಿಇಆರ್‌ಟಿ ನಿರ್ದೇಶಕರದು. ಇದರಲ್ಲಿ ಕೇಂದ್ರ ಸಂಖ್ಯಾಶಾಸ್ತ್ರದ ಸಂಸ್ಥೆ, ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ ಮತ್ತು ಭಾರತದ ರಿಜಿಸ್ಟ್ರಾರ್ ಜನರಲ್ ಅವರನ್ನೊಳಗೊಂಡ ಪರಿಣತರು ಮತ್ತು ಪ್ರತಿನಿಧಿಗಳು ಇರುತ್ತಾರೆ. ಸಮೀಕ್ಷಾ ಪಟ್ಟಿ ತಯಾರಿಕೆ, ಕೋಷ್ಟಕ ರಚನೆ, ಅಂಕಿಅಂಶಗಳ ಪರಿಶೀಲನೆಗೆ ಬೋಧನಾ ಕೈಪಿಡಿಗಳು ಮತ್ತು ಮಾರ್ಗದರ್ಶಕ ಸೂತ್ರಗಳು ಇವುಗಳ ಜವಾಬ್ದಾರಿಯನ್ನು ಶೈಕ್ಷಣಿಕ ಸಮೀಕ್ಷಾ ವಿಭಾಗ ಮತ್ತು ಎನ್‌ಸಿಇಆರ್‌ಟಿಯ ದತ್ತಾಂಶ ಪರಿಷ್ಕರಣ ವಿಭಾಗ (ಮೊದಲು ಸಮೀಕ್ಷೆ ಮತ್ತು ದತ್ತಾಂಶ ಪರಿಷ್ಕರಣ ಘಟಕವೆಂದು ಇದ್ದದ್ದು) ನಿರ್ವಹಿಸುತ್ತದೆ. ಆರನೆಯ ಎಐಇ ಸಮೀಕ್ಷೆಯಲ್ಲಿ ಆಯ್ದ ಶಾಲೆಗಳಿಗಾಗಿ ಮಾದರಿ ವಿನ್ಯಾಸವನ್ನು ಇದು ತಯಾರಿಸಿತು. ಈ ಸಮೀಕ್ಷೆಯಲ್ಲಿಯೇ ಅನೇಕ ವಸ್ತುಗಳ ಅಂಕಿಅಂಶಗಳನ್ನು ಮಾದರಿ ಆಧಾರದಲ್ಲಿ ಸಂಗ್ರಹಿಸಲಾಗಿತ್ತು. ಅಂಕಿಅಂಶಗಳ ಸಂಗ್ರಹ ಮತ್ತು ಪರಾಮರ್ಶೆಗಾಗಿ ವಿಭಾಗವು ರಾಜ್ಯ ಮಟ್ಟದ ಉದ್ಯೋಗಿಗಳಿಗೆ ತರಬೇತಿಯನ್ನು ನೀಡಲು ಬೆಂಬಲ ಒದಗಿಸುವುದು. ಅಂತಿಮವಾಗಿ ಇದು ಎಲ್ಲಾ ರಾಷ್ಟ್ರೀಯ ಮಟ್ಟದ ಕೋಷ್ಟಕಗಳನ್ನು ಮತ್ತು ಸಮೀಕ್ಷಾ ವರದಿಗಳನ್ನು ತಯಾರಿಸುವುದು. ಹಿಂದಿನ ಸಮೀಕ್ಷೆಗಳಲ್ಲಿ ಅಂಕಿಅಂಶಗಳನ್ನು ಕೋಷ್ಟಕ ರೂಪದಲ್ಲಿ ಅಳವಡಿಸಿಕೊಳ್ಳಲು ರಾಜ್ಯ ಸಮೀಕ್ಷಾ ಉದ್ಯೋಗಿಗಳಿಗೆ ತರಬೇತಿಯನ್ನು ಕೂಡಾ ನೀಡಲಾಗುತ್ತಿತ್ತು. ಏಕೆಂದರೆ, ಐದನೆಯ ಎಐಇ ಸಮೀಕ್ಷೆಯವರೆಗೆ ಎಲ್ಲಾ ಕೋಷ್ಟಕ ರಚನಾ ಕಾರ್ಯಗಳನ್ನು ಕೈಯಿಂದಲೇ ನಡೆಸಲಾಗುತ್ತಿತ್ತು.

**ಕಾರ್ಯವಿಧಾನ:** ಸಮೀಕ್ಷೆ ಪ್ರಾರಂಭಗೊಳ್ಳುವ ಮೊದಲು, ಪ್ರತಿಯೊಂದು ರಾಜ್ಯದಲ್ಲಿ ಸಮೀಕ್ಷಾ ಅವಧಿಗೆ ಓರ್ವ ರಾಜ್ಯ ಸಮೀಕ್ಷಾ ಅಧಿಕಾರಿಯನ್ನು (ಎಸ್‌ಎಸ್‌ಒ) ನೇಮಕಗೊಳಿಸಲಾಗುತ್ತದೆ. ಈ ಅಧಿಕಾರಿಗೆ ನೆರವಾಗಲು ಉಪ ರಾಜ್ಯಸಮೀಕ್ಷಾ ಅಧಿಕಾರಿಗಳು (ಎಎಸ್‌ಒ) ಇರುತ್ತಾರೆ. ಪ್ರತಿಯೊಂದು ರಾಜ್ಯದಲ್ಲಿ ಪ್ರತಿ ಹತ್ತು ಜಿಲ್ಲೆಗಳಿಗೆ ಒಬ್ಬ ಉಪರಾಜ್ಯ ಸಮೀಕ್ಷಾ ಅಧಿಕಾರಿಗೆ ಅವಕಾಶವಿರುತ್ತದೆ. ರಾಜ್ಯಮಟ್ಟದಲ್ಲಿ ರಾಜ್ಯ ಸಮೀಕ್ಷಾ ಅಧಿಕಾರಿಯನ್ನು ಸಮೀಕ್ಷೆಯ ಕೆಲಸಕ್ಕಾಗಿ ನೇಮಿಸಿಕೊಳ್ಳಲಾಗುತ್ತದೆ. ಇವರಿಗೆ ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ ಉಪ ಅಧಿಕಾರಿ ಇರುತ್ತಾರೆ. ಈ ಎಲ್ಲಾ ಅಧಿಕಾರಿಗಳನ್ನು ರಾಜ್ಯ ಸರಕಾರಗಳು ಶಿಕ್ಷಣ ವಿಭಾಗದ ಅಧಿಕಾರಿಗಳಲ್ಲಿ ಆಯ್ಕೆಮಾಡಿಕೊಳ್ಳುತ್ತವೆ. ಸಮೀಕ್ಷೆಗೆ ಸಂಬಂಧಿಸಿದ ಇವರ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಎನ್‌ಸಿಇಆರ್‌ಟಿ ವ್ಯಾಖ್ಯಾನಿಸುತ್ತದೆ. ಐದನೆಯ ಸಮೀಕ್ಷೆಯವರೆಗೆ ಇವರು ಪೂರ್ಣಾವಧಿಯ ಅಧಿಕಾರಿಗಳಾಗಿಯೇ ಇರುತ್ತಿದ್ದರು. ಮತ್ತು ಇವರ ವೇತನವನ್ನು ಸಮೀಕ್ಷಾ ಬಜೆಟ್‌ನಿಂದಲೇ ಪಾವತಿಸಲಾಗುತ್ತಿತ್ತು. ಆರನೆಯ ಸಮೀಕ್ಷೆಯಲ್ಲಿ ಈ ಅಧಿಕಾರಿಗಳು ಸಮೀಕ್ಷಾ ಕಾರ್ಯದಲ್ಲಿನ ಅರೆಕಾಲಿಕ ಅಧಿಕಾರಿಗಳಾಗಿದ್ದು, ಉಳಿದಂತೆ ಎಂದಿನ ತಮ್ಮ ಇತರ ಕರ್ತವ್ಯದಲ್ಲಿ ಅವರು ಮುಂದುವರಿದಿದ್ದಾರೆ. ಸಮೀಕ್ಷಾ ಕಾರ್ಯಕ್ಕಾಗಿ ಅವರಿಗೆ ಗೌರವಧನವನ್ನು ನೀಡಲಾಗಿದೆ. ವಿಭಾಗೀಯ ಮಟ್ಟದಲ್ಲಿ ಅರ್ಜಿಗಳ ವಿತರಣೆ, ತುಂಬಿಸಲಾದ ಅರ್ಜಿಗಳ ಸಂಗ್ರಹ ಕಾರ್ಯ ಮತ್ತು ಶಾಲಾ ಮುಖ್ಯ ಶಿಕ್ಷಕರು ಒದಗಿಸಿದ ಅಂಕಿಅಂಶಗಳ ಪರಿಶೀಲನಾ ಕಾರ್ಯದ ಜವಾಬ್ದಾರಿಯನ್ನು ವಿಭಾಗೀಯ ಶಿಕ್ಷಣ ಅಧಿಕಾರಿಗಳು ಅಥವಾ ಅವರ ಸಮಾನ ದರ್ಜೆಯ ಅಧಿಕಾರಿಗಳಿಗೆ ವಹಿಸಿಕೊಡಲಾಗಿದೆ. ಅವರ ಈ ಕಾರ್ಯಗಳಿಗೆ ಹಿಂದಿನ ಸಮೀಕ್ಷೆಗಳಲ್ಲಿ ಹಣ ನೀಡಲಾಗದಿದ್ದರೂ, ಆರನೆಯ ಸಮೀಕ್ಷೆಯಲ್ಲಿ ಮಾತ್ರ 500 ರೂಪಾಯಿಯ ಗೌರವಧನವನ್ನು ನೀಡಲಾಗಿದೆ.

ಶಾಲೆಯ ಮಾಹಿತಿ ಮತ್ತು ಗ್ರಾಮದ ಮಾಹಿತಿ ಅರ್ಜಿಗಳನ್ನು ತುಂಬಿಸುವ ಕಾರ್ಯವನ್ನು ಶಾಲೆಗಳ ಮುಖ್ಯ ಶಿಕ್ಷಕರು ನಿರ್ವಹಿಸುತ್ತಾರೆ. ಗ್ರಾಮ ಮಾಹಿತಿಗೆ ಪಟವಾರಿಗಳು ಅಥವಾ ಇವರಿಗೆ ಸಮಾನರಾದ ಗ್ರಾಮಮಟ್ಟದ ಅಧಿಕಾರಿಗಳು ಇವರಿಗೆ ನೆರವಾಗುತ್ತಾರೆ. ವಿವಿಧ ಅಂಶಗಳ ಕುರಿತು ಅರ್ಜಿಯಲ್ಲಿ ತುಂಬಿಸಲಾಗಿರುವ ಅಂಕಿಅಂಶಗಳು ಪೂರ್ಣ ಹಾಗೂ ಏಕರೂಪದಲ್ಲಿ ಇರುವಂತೆ ಮತ್ತು ಸಾಮಾನ್ಯ ರೀತಿಯ ತಪ್ಪುಗಳು ಮತ್ತು ಲೋಪಗಳು ಕಾಣಿಸಿಕೊಳ್ಳದಂತೆ ಜಾಗ್ರತೆ ವಹಿಸಲು ಎಲ್ಲಾ ಅರ್ಜಿಗಳನ್ನು ಎನ್‌ಸಿಇಆರ್‌ಟಿ ಒದಗಿಸಿದ ಮಾರ್ಗಸೂಚಿಗಳಿಗೆ ಅನುಗುಣವಾಗಿ ವಿಭಾಗೀಯ ಮಟ್ಟದಲ್ಲಿ ಪರಿಶೀಲಿಸಲಾಗುತ್ತದೆ. ನಂತರ ಶೇಕಡಾ 5 ಅರ್ಜಿಗಳನ್ನು ಜಿಲ್ಲಾ ಸಮೀಕ್ಷಾ ಅಧಿಕಾರಿಗಳು ಪರಿಶೀಲಿಸುತ್ತಾರೆ, ಶೇಕಡಾ 1 ರಷ್ಟು ಅರ್ಜಿಗಳನ್ನು ರಾಜ್ಯ ಸಮೀಕ್ಷಾ ಅಧಿಕಾರಿ ಮತ್ತು ಶೇಕಡಾ 5 ಅರ್ಜಿಗಳನ್ನು ರಾಷ್ಟ್ರಮಟ್ಟದಲ್ಲಿ ನಿಯೋಗಿಸಲ್ಪಟ್ಟ ಪರಿಶೋಧಕರು ಪರಿಶೀಲಿಸುತ್ತಾರೆ.

ಪ್ರಾರಂಭದ ಸಮೀಕ್ಷೆಗಳಲ್ಲಿ ದತ್ತಾಂಶ ಕೋಷ್ಟಕದ ಅಳವಡಿಕೆಯನ್ನು ನಾಲ್ಕು ಹಂತಗಳಲ್ಲಿ–ವಿಭಾಗ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನಡೆಸಲಾಗುತ್ತಿತ್ತು. ಆರನೆಯ ಸಮೀಕ್ಷೆಯ ಅಂಕಿಅಂಶಗಳ ನಮೂನೆಯನ್ನು ಎನ್‌ಐಸಿಯು ರಾಜ್ಯದ ಪ್ರಧಾನ

Digitised by Bharatavani, CIIL

ಕಾರ್ಯಸ್ಥಳಗಳಲ್ಲಿರುವ ಅನೇಕ ಕೇಂದ್ರಗಳಲ್ಲಿ ಸಂಘಟಿಸಿತು. ಎಲ್ಲಾ ರಾಜ್ಯಮಟ್ಟದ ಕೋಷ್ಟಕಗಳನ್ನು ರಾಜ್ಯಗಳಲ್ಲಿ ತಯಾರಿಸಿದರೆ, ರಾಷ್ಟ್ರೀಯ ಕೋಷ್ಟಕಗಳನ್ನು ಎನ್‌ಐಸಿ ಕೇಂದ್ರ ಕಾರ್ಯಸ್ಥಾನವಾದ ದೆಹಲಿಯ ಕೇಂದ್ರೀಯ ನೆಲೆಯಲ್ಲಿ ತಯಾರಿಸಲಾಯಿತು. ಪ್ರಾರಂಭದ ಸಮೀಕ್ಷೆಗಳಲ್ಲಿ ಮತ್ತು ಆರನೆಯ ಸಮೀಕ್ಷೆಯಲ್ಲಿ ಅಂಕಿಅಂಶಗಳನ್ನು ಗಣಕೀಕೃತಗೊಳಿಸಿದ ನಂತರವೂ ಅಂಕಿಅಂಶಗಳ ಆಂತರಿಕ ಸುಸಂಗತೆಗಾಗಿ ಸಪ್ರಮಾಣೀಕೃತ ಪರಿಶೀಲನೆಗಳನ್ನು ಬೆಳೆಸಿ ಇದಕ್ಕೆ ಅನ್ವಯಿಸಿಕೊಳ್ಳಲಾಯಿತು.

ಉದ್ದೇಶಗಳು ಮತ್ತು ಪ್ರಮುಖ ಲಕ್ಷಣಗಳು: ಸಮೀಕ್ಷೆಗಳು ಮತ್ತು ಉದ್ದೇಶಗಳು ಮತ್ತು ಪ್ರಮುಖ ಲಕ್ಷಣಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

**ಪ್ರಥಮ ಅಖಿಲ ಭಾರತ ಶಿಕ್ಷಣ ಸಮೀಕ್ಷೆ (1957):**

ಈ ಸಮೀಕ್ಷೆಯ ಮುಖ್ಯ ಉದ್ದೇಶಗಳೆಂದರೆ (ಎಂಒಇ, 1960) ಪ್ರತಿಯೊಂದು ನಿಶ್ಚಿತ ವಸತಿಸ್ಥಾನ ಮತ್ತು ಪ್ರತಿಯೊಂದು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳನ್ನು ಗುರುತಿಸುವುದು ಮತ್ತು ಎಣಿಸುವುದು; ಶಾಲೆಗಳಿರುವ ಸ್ಥಳದ ನಕ್ಷೆ ಬಿಡಿಸುವುದು; ಈಗ ಇರುವ ಶಾಲೆಗಳು ಸೇವೆ ಸಲ್ಲಿಸುತ್ತಿರುವ ಪ್ರದೇಶಗಳನ್ನು ಗುರುತಿಸುವುದು; ಹೊಸ ಶಾಲೆಗಳಿಗೆ ಸೂಕ್ತ ಸ್ಥಳಗಳನ್ನು ಮತ್ತು ಅವು ಸೇವೆ ಸಲ್ಲಿಸತಕ್ಕಂತಹ ಪ್ರದೇಶಗಳನ್ನು ನಿರ್ಧರಿಸುವುದು, ಜೊತೆಗೆ ವಾಸಸ್ಥಾನಗಳ ವರ್ಗೀಕರಣ ಮತ್ತು ಗುಂಪುಗೊಳಿಸುವಿಕೆ ಮತ್ತು ಸಮೀಕ್ಷೆಯ ಫಲಿತಾಂಶಗಳನ್ನು ತೋರಿಸುವ ಜಿಲ್ಲಾವಾರು ಸಂಖ್ಯಾಶಾಸ್ತ್ರದ ಕೋಷ್ಟಕಗಳನ್ನು ತಯಾರಿಸುವುದು.

ಸಮೀಕ್ಷೆಯಲ್ಲಿ ವಾಸಸ್ಥಾನದ ನಿರ್ವಚನ ಹೀಗಿದೆ : ಜನರು ನಿಬಿಡವಾಗಿ ಮತ್ತು ಅಕ್ಕಪಕ್ಕದಲ್ಲಿ ವಾಸಮಾಡುವ ಸ್ಥಳೀಯ ಹೆಸರನ್ನುಳ್ಳ ನಿಶ್ಚಿತ ಗುಂಪಿನ ಮನೆಗಳನ್ನು ಹೊಂದಿರುವುದಕ್ಕೆ ವಾಸಸ್ಥಾನವೆಂದು ಕರೆಯಲಾಗುತ್ತದೆ. ಶಾಲಾ ಸೌಕರ್ಯವನ್ನು ಒದಗಿಸುವ ಸಲುವಾಗಿ ಇದನ್ನು ಘಟಕ ರೂಪದಲ್ಲಿ ಬಳಸಲಾಗುತ್ತದೆ. ಹೊಸ ಶಾಲೆಗಳನ್ನು ಸ್ಥಾಪಿಸಲು ಸೂಚಿಸಲಾದ ನಿರ್ಣಾಯಕ ಅಂಶಗಳೆಂದರೆ : ಪ್ರಾಥಮಿಕ ಶಾಲೆಗಳಿಗೆ – 500 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ವಾಸಸ್ಥಾನಗಳು; ಅರ್ಧ ಮೈಲಿಯ ಅಂತರದಲ್ಲಿ ಯಾವುದೇ ಪ್ರಾಥಮಿಕ ಶಾಲೆ ಇಲ್ಲದಿದ್ದರೆ (ಈಗ ಇರುವ ಅಥವಾ ಪ್ರಸ್ತಾಪಿಸಲಾದ) 300 ರಿಂದ 499 ಜನಸಂಖ್ಯೆ ಇರುವ ವಾಸಸ್ಥಾನಗಳಿಗೆ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಅರ್ಹತೆ ಇರುತ್ತದೆ; 300 ಕ್ಕಿಂತಲೂ ಕಡಿಮೆ ಜನಸಂಖ್ಯೆ ಇದ್ದರೆ ಒಂದು ಮೈಲಿ ಅಂತರದಲ್ಲಿರುವ ಶಾಲೆಗಳೊಂದಿಗೆ ಅಥವಾ ಪ್ರಸ್ತಾಪಿಸಲಾದ ಶಾಲೆಗಳೊಂದಿಗೆ ಸೇರಿಸಬೇಕು; ಈ ರೀತಿ ಒಟ್ಟು ಸೇರಿಸಿದ್ದರ ಕಾರಣವಾಗಿ ಹುಟ್ಟಿಕೊಳ್ಳುವ ವಾಸಸ್ಥಾನಗಳ ಗುಂಪುಗಳ ಒಟ್ಟು ಜನಸಂಖ್ಯೆಯು 1500ಕ್ಕಿಂತ ಹೆಚ್ಚಾದಾಗ ಅದು ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸುವ ಅರ್ಹತೆಯನ್ನು ಪಡೆಯಬೇಕು; ಪ್ರೌಢ ಶಾಲೆಗಳಿಗೆ 5000 ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ವಾಸಸ್ಥಾನಗಳು ಪ್ರೌಢ ಶಾಲೆಗಳಿಗೆ ಅರ್ಹವಾಗುತ್ತವೆ. ಇಲ್ಲಿ ನಿರ್ಣಾಯಕ ಅಂತರವು 5 ಮೈಲಿಗಳಾಗಿರುತ್ತದೆ. ಈ ಸಮೀಕ್ಷೆಯ ವರದಿಯನ್ನು ಶಿಕ್ಷಣ ಮಂತ್ರಾಲಯವು 1960ರಲ್ಲಿ ಪ್ರಕಟಿಸಿದೆ.

**ದ್ವಿತೀಯ ಅಖಿಲ ಭಾರತೀಯ ಶಿಕ್ಷಣ ಸಮೀಕ್ಷೆ (1965):**

ದ್ವಿತೀಯ ಅಖಿಲ ಭಾರತೀಯ ಶಿಕ್ಷಣ ಸಮೀಕ್ಷೆಯು (ಎನ್‌ಸಿಇಆರ್‌ಟಿ, 1967) ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೈಕ್ಷಣಿಕ ಸೌಕರ್ಯಗಳನ್ನು ಯೋಜಿಸುವ ಸಲುವಾಗಿ ಅಂಕಿಅಂಶಗಳನ್ನು ಒದಗಿಸುವುದಾಗಿ ನಿರೀಕ್ಷಿಸಲಾಗಿತ್ತು. ಎನ್‌ಸಿಇಆರ್‌ಟಿ ನಡೆಸಿದ ಈ ಸಮೀಕ್ಷೆಯಲ್ಲಿ ಪ್ರಥಮ ಸಮೀಕ್ಷೆಗೆ ಬಳಸಿದ ಕಾರ್ಯವಿಧಾನವನ್ನೇ ಬಳಸಲಾಗಿತ್ತು. ಹಾಗಿದ್ದರೂ, ಕೆಲವು ಅಧ್ಯಯನಗಳನ್ನು ಹಂತದ ರೂಪದಲ್ಲಿ ಕೈಗೊಳ್ಳಲಾಗಿತ್ತು. ಉದಾಹರಣೆಗೆ ಶಿಕ್ಷಣದ ಅನೇಕ ಸಮಸ್ಯೆಗಳ ಕುರಿತು ಆಳವಾದ ಅಧ್ಯಯನಗಳು; ವಿಶೇಷವಾಗಿ ಔದ್ಯೋಗಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿ, ಶಿಕ್ಷಣವನ್ನು ಆರ್ಥಿಕ ಬೆಳವಣಿಗೆಯೊಂದಿಗೆ ಸಂಬಂಧ ಏರ್ಪಡಿಸುವ ದೃಷ್ಟಿಕೋನದಿಂದ ಮಾನವ ಸಂಪನ್ಮೂಲ ವಿಭಾಗದ ಕುರಿತಾದ ಅಧ್ಯಯನಗಳು.

ಜನಸಂಖ್ಯಾ ಗಾತ್ರದ ನಿಬಂಧನೆ (ವಾಸಸ್ಥಾನದ ಜನಸಂಖ್ಯೆಯು 25 ಅಥವಾ ಅದಕ್ಕಿಂತ ಹೆಚ್ಚು ಇರಬೇಕು) ಯನ್ನು ಸೇರಿಸುವ ಮೂಲಕ ಮೊದಲ ಸಮೀಕ್ಷೆಯಲ್ಲಿ ಈಗಾಗಲೇ ಬಳಸಲಾದ ವಾಸಸ್ಥಾನದ ನಿರ್ವಚನವನ್ನು ತಿದ್ದಿಕೊಳ್ಳಲಾಯಿತು. 25ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ವಾಸಸ್ಥಾನಗಳನ್ನು ಆ ಗ್ರಾಮದಲ್ಲಿ ಹತ್ತಿರದಲ್ಲೇ ಇರುವ ಬೇರೆ ವಾಸಸ್ಥಾನದೊಂದಿಗೆ ಸೇರಿಸಲಾಯಿತು. ಆದರೆ ಆ ಗ್ರಾಮದಲ್ಲಿ ಅದೊಂದೇ ವಾಸಸ್ಥಾನವಿರುವ ಸಂದರ್ಭದಲ್ಲಿ ಮಾತ್ರ ಹಾಗೆ ಮಾಡುವುದು ಸಾಧ್ಯವಾಗಿರಲಿಲ್ಲ. ಗ್ರಾಮೀಣ ಮತ್ತು ನಗರ ವಾಸಸ್ಥಾನಗಳ ಗಣತಿಯನ್ನು ಪ್ರತ್ಯೇಕವಾಗಿ ನಡೆಸಲಾಯಿತು.

ಎನ್‌ಸಿಇಆರ್‌ಟಿ ಈ ಸಮೀಕ್ಷೆಯ ವರದಿಯನ್ನು 1967ರಲ್ಲಿ ಒಂದೇ ಸಂಪುಟದಲ್ಲಿ ಹೊರತಂದಿತು. ಎರಡು ಮತ್ತು ಮೂರನೆಯ ಹಂತಗಳಿಗೆ ಪ್ರಸ್ತಾಪಿಸಲಾದ ಕೆಲವು ಅಧ್ಯಯನಗಳನ್ನು ಎನ್‌ಸಿಇಆರ್‌ಟಿ ಮಾದರಿ ಆಧಾರದಲ್ಲಿ 1966–68ರಲ್ಲಿ ನಡೆಸಿತು. ಇದರಲ್ಲಿ ಕೃಷಿ ಮತ್ತು ತಾಂತ್ರಿಕ ಪಠ್ಯಕ್ರಮಗಳನ್ನು ನಡೆಸುವ ಹಿರಿಯ/ಹಿರಿಯ ಮಾಧ್ಯಮಿಕ/ವಿವಿಧೋದ್ದೇಶ ಶಾಲೆಗಳ ಸಮೀಕ್ಷೆ; ಕಿರಿಯ ತಾಂತ್ರಿಕ ಶಾಲೆಗಳ ಸಮೀಕ್ಷೆ; ಮಹಾವಿದ್ಯಾಲಯಗಳು ಮತ್ತು ಶಾರೀರಿಕ ಶಿಕ್ಷಣ ಸಂಸ್ಥೆಗಳ ಸಮೀಕ್ಷೆ; ದೈಹಿಕ ಅಂಗವಿಕಲರ ಸಂಸ್ಥೆಗಳ ಸಮೀಕ್ಷೆ; ಪೋಷಕರು ಶಿಕ್ಷಕರ ಸಂಘಗಳ ಸಮೀಕ್ಷೆ; ಶಾಲಾ ಪೂರ್ವ ಮತ್ತು ಪ್ರಾಥಮಿಕ ಶಿಕ್ಷಣ ನೀಡುವ ಮಾನ್ಯತೆ ಪಡೆಯದ ಸಂಸ್ಥೆಗಳ ಸಮೀಕ್ಷೆ ಇದ್ದವು. ಇವರ ವರದಿಗಳನ್ನು ನಕಲು(ಪಡಿಯಚ್ಚು/Mimeographed) ರೂಪದಲ್ಲಿ ಮಾತ್ರ ಮಾಡಲಾಗಿತ್ತು.

Digitised by Bharatavani, CIIL

**ತೃತೀಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆ (1973):**

31 ಡಿಸೆಂಬರ್ ತಾರೀಖಿನ ಉಲ್ಲೇಖವಿರುವ ಸಮೀಕ್ಷೆ (ಎನ್‌ಸಿಇಆರ್‌ಟಿ, 1979) ಯು ಇದುವರೆಗೆ ನಡೆದಿರುವ ಎಲ್ಲಾ ಸಮೀಕ್ಷೆಗಳಿಗಿಂತ ಹೆಚ್ಚು ಸಮಗ್ರವಾಗಿದೆ. ಇದರಲ್ಲಿ ಶಿಕ್ಷಣದ ಎಲ್ಲಾ ಹಂತಗಳನ್ನು, ಪ್ರಾಥಮಿಕ ಪೂರ್ವದಿಂದ ಹಿಡಿದು ವಿಶ್ವವಿದ್ಯಾಲಯ ಶಿಕ್ಷಣದವರೆಗೆ, ಮತ್ತು ಎಲ್ಲಾ ವಿಧದ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಉದಾಹರಣೆಗೆ ಅನೌಪಚಾರಿಕ ಶಿಕ್ಷಣ, ಮಾನ್ಯತೆ ಇಲ್ಲದ ಸಂಸ್ಥೆಗಳು, ತಾಂತ್ರಿಕ ಶಿಕ್ಷಣ, ಜೊತೆಗೆ ಶೈಕ್ಷಣಿಕ ಆಡಳಿತ ಮತ್ತು ತನಿಖೆಯನ್ನು ಕೂಡಾ ಇದು ಒಳಗೊಂಡಿತ್ತು. ಶಾಲಾ ಶಿಕ್ಷಣದ ಸಮೀಕ್ಷೆಯ ಜವಾಬ್ದಾರಿ ಎನ್‌ಸಿಇಆರ್‌ಟಿಯದ್ದಾಗಿದ್ದರೆ (ಹಿಂದಿನ ಸಮೀಕ್ಷೆಯಲ್ಲಿ ಇದ್ದ ಹಾಗೆ), ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ವಹಿಸಲಾಗಿದ್ದ ಜವಾಬ್ದಾರಿ ಉನ್ನತ ಶಿಕ್ಷಣದ ಸಮೀಕ್ಷೆ; ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣದ ಆಡಳಿತ ಮತ್ತು ತನಿಖೆಯ ಜವಾಬ್ದಾರಿ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಶನಲ್ ಪ್ಲಾನಿಂಗ್ ಅಂಡ್ ಆಡ್ಮಿನಿಸ್ಟ್ರೇಶನ್‌ನದು. ಶಾಲಾ ಶಿಕ್ಷಣದ ಸಮೀಕ್ಷೆಯ ಉದ್ದೇಶಗಳು ಯಾವುದಾಗಿತ್ತೆಂದರೆ (1) ಹಿಂದಿನ ಸಮೀಕ್ಷೆಗಳಲ್ಲಿ ನೀಡಲಾದ ವಾಸಸ್ಥಾನಗಳ ಹಂಚುವಿಕೆ ಮತ್ತು ಗಾತ್ರ ಮತ್ತು ಈಗ ಇರುವ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ವಿಸ್ತೀರ್ಣದ ಕುರಿತಾಗಿ ಹಿಂದಿನ ಸಮೀಕ್ಷೆಗಳಲ್ಲಿ ನೀಡಲಾದ ಅಂಕಿಅಂಶಗಳನ್ನು ಆಧುನೀಕರಿಸುವುದು, ನವೀಕರಿಸುವುದು (2) ಈಗಾಗಲೇ ಇರುವ ಸೌಕರ್ಯಗಳಲ್ಲಿ ಕೆಲವು ಬದಲಾಯಿಸಬಹುದಾದುದರ ಕುರಿತು ಉದಾಹರಣೆಗೆ ಗ್ರಂಥಾಲಯ, ಶ್ರವ್ಯ–ದೃಶ್ಯ ಉಪಕರಣಗಳು, ಪ್ರಯೋಗಶಾಲೆಗಳು, ವಿದ್ಯಾರ್ಥಿಗಳ ವಯಸ್ಸಿನ ಹಂಚುವಿಕೆ, ಶಿಕ್ಷಕರ ವೃತ್ತಿತ್ಯಜಿಸುವಿಕೆ (attrition) ದರಗಳು ಮತ್ತು ಶಿಕ್ಷಣದ ಇತರ ಗುಣಾತ್ಮಕ ವಿಚಾರಗಳು ಇತ್ಯಾದಿಗಳ ವ್ಯಾಪಕ ಅಧ್ಯಯನವನ್ನು ಕೈಗೊಳ್ಳುವುದು. 'ವಾಸಸ್ಥಾನ'ದ ನಿರ್ವಚನವು ಹಿಂದಿನ ಅಖಿಲ ಭಾರತ ಶಿಕ್ಷಣ ಸಮೀಕ್ಷೆಯಲ್ಲಿ ಇದ್ದ ಹಾಗೆ ಇರುವುದು, ಆದರೆ ಪರ್ವತಪ್ರದೇಶ ಮತ್ತು ಜನಸಂಖ್ಯೆ ಕಡಿಮೆ ಇರುವ ಪ್ರದೇಶಗಳಲ್ಲಿ ಹತ್ತು ಅಥವಾ ಅದಕ್ಕಿಂತ ಹೆಚ್ಚು ಜನರು ಇರುವ ಮನೆಗಳ ಗುಂಪುಗಳನ್ನು ಕೂಡಾ ವಾಸಸ್ಥಾನಗಳಾಗಿ ಗಣತಿ ನಡೆಸಲಾಯಿತು.

ದತ್ತಾಂಶಗಳ ಕೋಷ್ಟಕವನ್ನು ಕೈಯಿಂದ ತಯಾರಿಸುವುದರೊಂದಿಗೆ, ದತ್ತಾಂಶಗಳ ವಿಂಗಡನೆಗೆ ಗಣಕಯಂತ್ರವನ್ನು ಉಪಯೋಗಿಸುವ ಪ್ರಯತ್ನವನ್ನು ಕೂಡಾ ನಡೆಸಲಾಗಿತ್ತು. ಆದರೆ ದತ್ತಾಂಶಗಳನ್ನು ಗಣಕೀಕರಣಗೊಳಿಸುವಾಗ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಬಹುಪಾಲು ವರದಿಗಳು ಕೈಯಿಂದ ಕೋಷ್ಟಕಗಳಿಗೆ ಅಳವಡಿಸಿದ ದತ್ತಾಂಶಗಳನ್ನು ಒಳಗೊಂಡಿದ್ದವು. 1977 ಮತ್ತು 1981ರ ನಡುವೆ ಸಮೀಕ್ಷೆಗಳ ವರದಿಗಳನ್ನು ಅನೇಕ ವಸ್ತುವಿಷಯಕ ಸಂಪುಟಗಳಾಗಿ ಪ್ರಕಟಿಸಲಾಯಿತು. ಅವುಗಳೆಂದರೆ: ಶಾಲಾ ಶಿಕ್ಷಣದ ಕೆಲವು ಅಂಕಿಅಂಶಗಳು (ಎನ್‌ಸಿಇಆರ್‌ಟಿ, 1977) ಶಿಕ್ಷಣ ಸೌಕರ್ಯಗಳು ಮತ್ತು ದಾಖಲಾತಿ (ಎನ್‌ಸಿಇಆರ್‌ಟಿ, 1979); ಶಾಲಾ ಕಟ್ಟಡಗಳು (ಎನ್‌ಸಿಇಆರ್‌ಟಿ, 1979); ಹಿಂದುಳಿದ ಜಾತಿಯವರಿಗೆ ವಸತಿಗೃಹ ಸೌಕರ್ಯಗಳು (ಎನ್‌ಸಿಇಆರ್‌ಟಿ, 1981); ಪ್ರಾಥಮಿಕ ಪೂರ್ವ ಶಾಲೆಗಳು (ಎನ್‌ಸಿಇಆರ್‌ಟಿ, 1982); ಭಾರತೀಯ ಶಾಲೆಗಳಲ್ಲಿ ಭಾಷೆಗಳು ಮತ್ತು ಶಿಕ್ಷಣ ಮಾಧ್ಯಮ (ಎನ್‌ಸಿಇಆರ್‌ಟಿ, 1981); ಶಾಲೆಗಳಲ್ಲಿ ಗ್ರಂಥಾಲಯ, ಪ್ರಯೋಗಶಾಲೆ ಮತ್ತು ವಿಜ್ಞಾನ ಉಪಕರಣಗಳು (ಎನ್‌ಸಿಇಆರ್‌ಟಿ, 1981); ಸಂಸ್ಕೃತ ಪಾಠಶಾಲೆ/ಶಾಲೆಗಳು ಮತ್ತು ಮದರಸಗಳು (ಎನ್‌ಸಿಇಆರ್‌ಟಿ, 1980); ದೈಹಿಕ ಶಿಕ್ಷಣ ಸಂಸ್ಥೆಗಳು (ಎನ್‌ಸಿಇಆರ್‌ಟಿ, 1981), ಶಾಲೆಗಳ ಕೆಲವು ವಿಶೇಷ ಲಕ್ಷಣಗಳು (ಎನ್‌ಸಿಇಆರ್‌ಟಿ, 1982); ಶಾಲೆಗಳಿಂದ ಹೊರಗೆ ಶಿಕ್ಷಣ (ಎನ್‌ಸಿಇಆರ್‌ಟಿ, 1979).

**ನಾಲ್ಕನೆಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆ (1978):** ಕೆಲವು ಮಂತ್ರಾಲಯವು ವಾರ್ಷಿಕ ಅಂಕಿಅಂಶಗಳನ್ನು ಸಂಕಲಿಸುವ ದಿನಾಂಕದೊಂದಿಗೆ ಸೇರಿಕೊಳ್ಳಬೇಕೆನ್ನುವ ಉದ್ದೇಶದಿಂದ ಉಲ್ಲೇಖಿತ ದಿನಾಂಕವನ್ನು, ಅಂದರೆ 30, ಸೆಪ್ಟೆಂಬರ್, 1978ನ್ನು ನಿರ್ಧರಿಸಲಾಯಿತು. ಒಂದೇ ವರ್ಷಕ್ಕೆ ಎರಡೆರಡು ದಾಖಲಾತಿ ಮತ್ತು ಇತರ ಅಂಕಿಅಂಶಗಳ ಎರಡೆರಡು ಕಟ್ಟುಗಳನ್ನು ತಪ್ಪಿಸಿಕೊಳ್ಳುವ ಸಲುವಾಗಿ ಹೀಗೆ ಮಾಡಲಾಯಿತು. ಇದು ಮೂರನೆಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆಯ ರೀತಿಯದ್ದಾಗಿರದೆ, ಪುಟ್ಟ ಸಮೀಕ್ಷೆಯಾಗಿದ್ದು, ಶಾಲಾ ಶಿಕ್ಷಣವನ್ನು ಮಾತ್ರ ಒಳಗೊಂಡಿತ್ತು. ಮೂಲತಃ ಇದರ ಉದ್ದೇಶಗಳು ಹಿಂದಿನ ಸಮೀಕ್ಷೆಗಳ ರೀತಿಯದೇ ಆಗಿದ್ದವು ಮತ್ತು ಆರನೆಯ ಪಂಚವಾರ್ಷಿಕ ಯೋಜನೆಯ ನವೀಕರಿಸುವಿಕೆ ಅಂಕಿಅಂಶಗಳನ್ನು ಒದಗಿಸುವ ಸಲುವಾಗಿ ಇದರ ಸಮಯವನ್ನು ಆಯ್ಕೆ ಮಾಡಲಾಗಿತ್ತು. ಈ ಸಮೀಕ್ಷೆಯ ವಿಶೇಷ ಅಂಶವೇನಾಗಿತ್ತೆಂದರೆ, ಶಾಲಾ ದಾಖಲಾತಿಯ ಪರಿವೀಕ್ಷಣೆಗಾಗಿ ತ್ರೈಮಾಸಿಕ ಕಾರ್ಯಕ್ರಮವೊಂದನ್ನು ಪ್ರಾರಂಭಿಸಲು ದಾರಿ ಸಿದ್ಧಪಡಿಸುವುದು ಮತ್ತು ವಿಭಾಗೀಯ ಮಟ್ಟದಲ್ಲಿ ದಾಖಲಾತಿ ಮತ್ತು ಕ್ರೋಢೀಕರಿಸಲಾದ ಹಾಜರಾತಿಯ ಅಂಕಿಅಂಶವನ್ನು ರಾಜ್ಯಮಟ್ಟದ ತ್ರೈಮಾಸಿಕ ವರದಿಗಳ ತಯಾರಿಕೆಗೆ ಮತ್ತು ಸಂಯೋಜನೆಗೆ ಪ್ರತಿ ಮೂರುತಿಂಗಳಿಗೊಮ್ಮೆ ದೆಹಲಿಯಲ್ಲಿರುವ ನ್ಯಾಶನಲ್ ಇನ್‌ಫಾರ್ಮಿಟಿಕ್ಸ್ ಸೆಂಟರ್‌ಗೆ ಕಳುಹಿಸಿಕೊಡುವುದು. ಆದರೆ, ರಾಷ್ಟ್ರಮಟ್ಟದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಅಂಕಿಅಂಶಗಳ ಸಂಗ್ರಹ ಮತ್ತು ಸಂಕಲನ ನಡೆಸುವುದರಲ್ಲಿ ಕೆಲವು ಪ್ರಾಯೋಗಿಕ ತೊಂದರೆಗಳಿದ್ದುದರಿಂದ ತ್ರೈಮಾಸಿಕ ಹಾಜರಾತಿ ಪರಿವೀಕ್ಷಣೆಯನ್ನು ಭಾಗಶಃ ಕೈಬಿಡಲಾಯಿತು. ಈ ಸಮೀಕ್ಷೆಯ ವರದಿಯನ್ನು 1982ರಲ್ಲಿ ಒಂದೇ ಸಂಪುಟದಲ್ಲಿ ಪ್ರಕಟಿಸಲಾಯಿತು.

**ಐದನೆಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆ (1986):** ಈ ಸಮೀಕ್ಷೆಗೆ ಉಲ್ಲೇಖಿಸಲಾದ ದಿನಾಂಕ (ಎನ್‌ಸಿಇಆರ್‌ಟಿ, 1992) 30 ಸೆಪ್ಟೆಂಬರ್. ಇದರಲ್ಲಿ ಒಟ್ಟು ಉದ್ದೇಶವು ಆಗ ರೂಪಿಸಲಾಗಿದ್ದ ರಾಷ್ಟ್ರೀಯ ಶಿಕ್ಷಣ ನೀತಿಗೆ ಅಂಕಿಅಂಶಗಳನ್ನು ಒದಗಿಸುವುದಾಗಿತ್ತು. ಇದರ ನಿರ್ದಿಷ್ಟ ಉದ್ದೇಶಗಳು ಏನಾಗಿತ್ತೆಂದರೆ; ಬೇರೆ ಬೇರೆ ಶಾಲಾ ಹಂತಗಳಲ್ಲಿ ಶಾಲೆಗೆ ಹೋಗುವ ಜನರಿಗೆ ನೀಡಲಾಗುವ

Digitised by Bharatavani, CIIL

ಶೈಕ್ಷಣಿಕ ಸವಲತ್ತುಗಳ ಸದ್ಯದ ಸ್ಥಿತಿ, ಶಾಲೆಗೆ ತಲುಪಲು ಮಗು ಕ್ರಮಿಸಬೇಕಾದ ದೂರ, ಸಾಮಾನ್ಯ ದಾಖಲಾತಿ, ಮತ್ತು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಮತ್ತು ಹುಡುಗಿಯರ ದಾಖಲಾತಿ ಇವುಗಳನ್ನು ಪಡೆದುಕೊಳ್ಳುವುದು; ಶಾಲಾ ಕಟ್ಟಡಗಳ, ಆಟದ ಬಯಲು, ಶಾಲೆಯಲ್ಲಿ ಕುಡಿಯುವ ನೀರು, ಪೀಠೋಪಕರಣಗಳು ಮತ್ತು ಇತರ ಉಪಕರಣಗಳು, ವೈದ್ಯಕೀಯ ಪರೀಕ್ಷೆಯ ಸೌಕರ್ಯಗಳು, ಪ್ರೋತ್ಸಾಹಧನ ಮತ್ತು ಫಲಾನುಭವಿಗಳ ಸಂಖ್ಯೆಯನ್ನು ಪಡೆದುಕೊಳ್ಳುವುದು; ಕಪ್ಪುಹಲಗೆ ಮತ್ತು ಸೀಮೆಸುಣ್ಣ, ಗ್ರಂಥಾಲಯಗಳು, ಪ್ರಯೋಗ ಶಾಲೆಗಳು, ಪಠ್ಯಪುಸ್ತಕ ಬ್ಯಾಂಕ್‌ಗಳು, ಇತ್ಯಾದಿ ಪ್ರವೇಶಗಳ ಸ್ಥಿತಿಯನ್ನು ಪಡೆಯುವುದು; ವಿಜ್ಞಾನ ಮತ್ತು ಗಣಿತಶಾಸ್ತ್ರದ ಅಧ್ಯಾಪನಕ್ಕೆ ವಿಶೇಷ ಉಲ್ಲೇಖವನ್ನು ನೀಡುವುದರೊಳಗೆ ಉದ್ಯೋಗ ನಿರ್ವಹಿಸುತ್ತಿರುವ ಅಧ್ಯಾಪಕರ ಶೈಕ್ಷಣಿಕ ಮತ್ತು ವೃತ್ತಿಪರ ಶೈಕ್ಷಣಿಕ ಅರ್ಹತೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅಧ್ಯಾಪನ ವೃತ್ತಿಯಲ್ಲಿನ ವೃತ್ತಿ ತ್ಯಜಿಸುವ ದರಗಳನ್ನು ನಿರ್ಧರಿಸುವುದು; ಮತ್ತು ವಸತಿಸ್ಥಾನಗಳ ಬ್ಲಾಕ್ ನಕ್ಷೆ ತಯಾರಿಸುವುದು, ಈಗ ಇರುವ ಶೈಕ್ಷಣಿಕ ಸವಲತ್ತುಗಳು, ಮತ್ತು ನಂತರದ ವರ್ಷಗಳಲ್ಲಿ ಯೋಜಿತ ರೀತಿಯಿಂದ ಪ್ರಸ್ತಾಪಿಸಲಾದ ಸವಲತ್ತುಗಳ ಅವಕಾಶಗಳನ್ನು ಪಡೆದುಕೊಳ್ಳುವುದು ಇದರ ಉದ್ದೇಶಗಳಾಗಿವೆ.

ಕೆಲವು ಪ್ರಮುಖ ಅಂಕಿಅಂಶಗಳನ್ನೊಳಗೊಂಡ ಐದನೆಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆ–ಆಯ್ದ ಅಂಕಿಅಂಶಗಳು ಎಂಬ ಶೀರ್ಷಿಕೆಯಲ್ಲಿ ಸಂಕ್ಷಿಪ್ತ ವರದಿಯೊಂದನ್ನು (ಎನ್‌ಸಿಇಆರ್‌ಟಿ, 1986) ಫೆಬ್ರವರಿ, 1986ರಲ್ಲಿ ಪ್ರಕಟಿಸಲಾಯಿತು. ಸಮೀಕ್ಷೆಯ ಮುಖ್ಯ ವರದಿಯನ್ನು 1992ರಲ್ಲಿ ಎರಡು ಸಂಪುಟದಲ್ಲಿ ಪ್ರಕಟಿಸಲಾಯಿತು.

**ಆರನೆಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆ (1993):** 30, ಸೆಪ್ಟೆಂಬರ್, 1993ಕ್ಕೆ ನಿರ್ಧರಿತವಾಗಿರುವ ಈ ಸಮೀಕ್ಷೆ (ಎನ್‌ಸಿಇಆರ್‌ಟಿ, 1999)ಯ ಉದ್ದೇಶಗಳು ಬಹುತೇಕವಾಗಿ ಐದನೇ ಅಖಿಲಭಾರತ ಶಿಕ್ಷಣ ಸಮೀಕ್ಷೆಯ ಉದ್ದೇಶಗಳ ರೀತಿಯದೇ ಆಗಿವೆ. ಇದರ ಮುಖ್ಯ ಉದ್ದೇಶ ದತ್ತಸಂಚಯವನ್ನು ಸೃಷ್ಟಿಸುವುದು ಮತ್ತು ನಿರ್ವಹಣಾ ಸಮಿತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು. ಇತರ ಉದ್ದೇಶಗಳು: ಗ್ರಾಮೀಣ ವಾಸಸ್ಥಾನಗಳಿಗೆ ಸಂಬಂಧಿಸಿದಂತೆ ಮತ್ತು ಶಾಲೆಯಿಂದ ಈ ವಾಸಸ್ಥಾನಗಳಿಗಿರುವ ಅಂತರಕ್ಕೆ ಸಂಬಂಧಿಸಿದಂತೆ ವಿವಿಧ ಶಾಲಾ ಹಂತಗಳಲ್ಲಿನ ಶೈಕ್ಷಣಿಕ ಸೌಕರ್ಯಗಳ ಸದ್ಯದ ಸ್ಥಿತಿ; ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ವಿವಿಧ ಶಾಲಾ ಹಂತಗಳಲ್ಲಿನ ಶೈಕ್ಷಣಿಕ ಸೌಕರ್ಯಗಳ ಸದ್ಯದ ಸ್ಥಿತಿ; ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಗಳಿಗೆ ವಿಶೇಷ ಆದ್ಯತೆ ನೀಡುವ ಮೂಲಕ ಸಾಮಾನ್ಯ ವರ್ಗದ ಮಕ್ಕಳ ದಾಖಲಾತಿ ಮತ್ತು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳಂತಹ ವಿಶೇಷ ವರ್ಗಗಳ ಮತ್ತು ವಿಶೇಷವಾಗಿ ಹುಡುಗಿಯರ ದಾಖಲಾತಿ; ಶಾಲೆಗಳಲ್ಲಿ ಲಭ್ಯವಿರುವ ಭೌತಿಕ ಸೌಕರ್ಯಗಳು, ಅಂದರೆ ಶಾಲಾ ಕಟ್ಟಡ, ಆಟದ ಬಯಲು, ಪೀಠೋಪಕರಣಗಳು ಇತ್ಯಾದಿ; ಶಾಲೆಗಳಲ್ಲಿ ಕುಡಿಯುವ ನೀರು, ಮೂತ್ರಾಲಯಗಳು, ವೈದ್ಯಕೀಯ ಪರೀಕ್ಷೆ ಇತ್ಯಾದಿ ಮೂಲಭೂತ ಸೌಕರ್ಯಗಳ ಲಭ್ಯತೆ; ಪ್ರೋತ್ಸಾಹ ಧನದ ಕಾರ್ಯಯೋಜನೆಗಳ ಲಭ್ಯತೆ ಮತ್ತು ಫಲಾನುಭವಿಗಳ ಸಂಖ್ಯೆ; ಶೈಕ್ಷಣಿಕ ಪ್ರವೇಶಗಳ ಸ್ಥಿತಿ, ಕಪ್ಪು ಹಲಗೆ ಮತ್ತು ಸೀಮೆಸುಣ್ಣ, ಗ್ರಂಥಾಲಯ, ಪ್ರಯೋಗಾಲಯ, ಪಠ್ಯಪುಸ್ತಕ ಬ್ಯಾಂಕ್, ಇತ್ಯಾದಿಗಳ ಲಭ್ಯತೆ; ವಿಜ್ಞಾನ ಮತ್ತು ಗಣಿತಶಾಸ್ತ್ರದ ಅಧ್ಯಾಪನಕ್ಕೆ ವಿಶೇಷ ಉಲ್ಲೇಖವನ್ನು ನೀಡುವುದರೊಂದಿಗೆ ಉದ್ಯೋಗ ನಿರ್ವಹಿಸುತ್ತಿರುವ ಅಧ್ಯಾಪಕರ ಶೈಕ್ಷಣಿಕ ಮತ್ತು ವೃತ್ತಿಪರ ಶೈಕ್ಷಣಿಕ ಅರ್ಹತೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅಧ್ಯಾಪನ ವೃತ್ತಿಯಲ್ಲಿನ ವೃತ್ತಿ ತ್ಯಜಿಸುವ ದರಗಳನ್ನು ನಿರ್ಧರಿಸುವುದು; ಮತ್ತು ಇತರ ಶೈಕ್ಷಣಿಕ ಸವಲತ್ತುಗಳಾದ ಅನೌಪಚಾರಿಕ ಶಿಕ್ಷಣ, ಅಂಗವಿಕಲ ಮಕ್ಕಳ ಮತ್ತು ಪ್ರಾಥಮಿಕ ಪೂರ್ವ ಶಿಕ್ಷಣ ಮತ್ತು ಶಾಲೆಗಳ ವರಮಾನ ಮತ್ತು ಖರ್ಚುವೆಚ್ಚಗಳು.

ಈ ಸಮೀಕ್ಷೆಯಲ್ಲಿ ಕೆಲವು ಪ್ರಮುಖ (core items) ವಸ್ತುಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಪೂರ್ಣವಾಗಿ ಗಣತಿ ಆಧಾರದಲ್ಲಿ ಸಂಗ್ರಹಿಸಲಾಯಿತು. ಇನ್ನು ಬೇರೆ ಅಂಕಿಅಂಶಗಳನ್ನು ಮಾದರಿ ಆಧಾರದಲ್ಲಿ (Sample basis) ಸಂಗ್ರಹಿಸಲಾಯಿತು. ಮೇಲಿನ ಮಾಹಿತಿ ಸಂಗ್ರಹಕ್ಕಾಗಿ ಏಳು ಅನುಬಂಧಗಳನ್ನು ಬಳಸಿಕೊಳ್ಳಲಾಗಿತ್ತು. ಕೆಲವು ಮೂಲ ಅಂಕಿಅಂಶಗಳನ್ನು ತಕ್ಷಣ ಸಂಗ್ರಹಿಸಿ, ಬಳಕೆದಾರರಿಗೆ ಇದು ಕೆಲವೇ ಸಮಯದಲ್ಲಿ ಲಭ್ಯವಾಗುವಂತೆ ಹೊಸ ಕಾರ್ಯಕ್ರಮವೊಂದನ್ನು (ಶಿಕ್ಷಣ ಅಂಕಿಅಂಶಗಳು, ಒಂದು ಹೊಳಹು) ಬಳಸಲಾಯಿತು. ವಿಭಾಗೀಯ ಹಂತದಲ್ಲಿಯೇ ಈ ಕಾರ್ಯಕ್ರಮದ ಅಂಕಿಅಂಶಗಳನ್ನು ಬಳಸಿ ಕೈಯಿಂದಲೇ ಕೋಷ್ಟಕವನ್ನು ರಚಿಸಲಾಯಿತು. ನಂತರ ಅದನ್ನು ರಾಷ್ಟ್ರ ಮತ್ತು ರಾಜ್ಯಮಟ್ಟದ ಕೋಷ್ಟಕಗಳನ್ನು ಗಣಕಯಂತ್ರದಲ್ಲಿ ತಯಾರಿಸಲು ಬಳಸಲಾಯಿತು.

ಮಾದರಿಯ ಆಧಾರದಲ್ಲಿ ಅಂಕಿಅಂಶಗಳನ್ನು ಸಂಗ್ರಹಿಸುವು ದಕ್ಕಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗಾಗಿ ವಿಭಿನ್ನ ಮಾದರಿ ತಂತ್ರಗಳನ್ನು ಅಳವಡಿಸಿಕೊಳ್ಳಲಾಯಿತು. ಗ್ರಾಮೀಣ ಪ್ರದೇಶಗಳಿಗಾಗಿ, ಪ್ರತಿಯೊಂದು ರಾಜ್ಯ ಮತ್ತು ಕೇಂದ್ರ ಪ್ರದೇಶಗಳನ್ನು ಆಡಳಿತಾತ್ಮಕ ಪ್ರದೇಶಗಳಾಗಿ (ಸಮೀಪಸ್ಥ ಜಿಲ್ಲೆಗಳ ಗುಂಪುಗಳು) ಸ್ತರೀಕೃತಗೊಳಿಸಲಾಯಿತು. ಪ್ರಸ್ತಾವಿಕ ಹಂಚಿಕೆಯೊಂದಿಗೆ ಪ್ರತಿಯೊಂದು ಪ್ರದೇಶದಿಂದ ವಿಭಾಗಗಳನ್ನು ಆಯ್ದುಕೊಳ್ಳಲಾಯಿತು. ನಗರಪ್ರದೇಶಗಳಿಗಾಗಿ, 1991ರ ಜನಗಣತಿಯನ್ನು ಆಧರಿಸಿ ಜನಸಂಖ್ಯಾ ಗಾತ್ರಕ್ಕನುಗುಣವಾಗಿ ನಗರಗಳು/ಪಟ್ಟಣಗಳನ್ನು ಆರು ವಿಭಾಗಗಳಾಗಿ ವರ್ಗೀಕರಿಸಲಾಯಿತು. ನಂತರ ಪಟ್ಟಣಗಳ (ದೊಡ್ಡ ನಗರಗಳ ವಿಚಾರದಲ್ಲಿ ವಲಯಗಳನ್ನು) ಯಾದೃಚ್ಛಿಕ ಮಾದರಿಗಳನ್ನು ತೆಗೆದುಕೊಳ್ಳಲಾಯಿತು. ಶಾಲೆಗಳ ಮಾದರಿಗಳನ್ನು ಆಯ್ಕೆಮಾಡಿಕೊಳ್ಳುವುದಕ್ಕಾಗಿ ಶೇಕಡಾ 10ರಿಂದ 25ರಷ್ಟು ಗ್ರಾಮೀಣ ಪ್ರದೇಶಗಳಲ್ಲಿ ವಿಭಾಗಗಳನ್ನು ಮತ್ತು ನಗರ ಪ್ರದೇಶಗಳಲ್ಲಿ ಉಪ–

Digitised by Bharatavani, CIIL

ವಿಭಾಗಗಳನ್ನು ಮಾದರಿಯಾಗಿಸಿಕೊಳ್ಳಲಾಯಿತು. ಮತ್ತು ಮಾದರಿಯಾಗಿ ಆಯ್ಕೆಮಾಡಿರುವ ಎಲ್ಲಾ ವಿಭಾಗಗಳ, ಉಪವಿಭಾಗಗಳ ಶಾಲೆಗಳಿಂದ ಅಂಕಿಅಂಶಗಳನ್ನು ಸಂಗ್ರಹಿಸಲಾಯಿತು.

ಅಂಕಿಅಂಶಗಳ ಸಂಗ್ರಹ, ಅಂಕಿಅಂಶಗಳ ನಕಲುಗೊಳಿಸುವಿಕೆ, ಸೂಕ್ಷ್ಮ ಪರಿಶೀಲನೆ, ದತ್ತಾಂಶಗಳಿಂದ ಕೋಷ್ಟಕ ರಚನೆ ಮತ್ತು ಮಾದರಿ ಆಧಾರದಲ್ಲಿ ಸಂಗ್ರಹಿಸಲಾದ ಅಂಕಿಅಂಶಗಳ ಆಧಾರದಲ್ಲಿ ಅನೇಕ ಮಾನದಂಡಗಳ ತೀರ್ಮಾನ. ಸಮೀಕ್ಷೆಗಾಗಿ ಸಂಗ್ರಹಿಸಲಾದ ಅಂಕಿಅಂಶಗಳನ್ನು ಪ್ರತಿ ವಿಭಾಗ/ನಗರಕ್ಕಾಗಿ 58 ಕೋಷ್ಟಕಗಳ ಗುಂಪಿನಲ್ಲಿ, ಪ್ರತಿಯೊಂದು ಜಿಲ್ಲೆಗೆ 136 ಕೋಷ್ಟಕಗಳಲ್ಲಿ; ಮತ್ತು ಎನ್‌ಐಸಿಯ ರಾಜ್ಯ ಘಟಕಗಳಿಂದ ಪ್ರತಿಯೊಂದು ರಾಜ್ಯಕ್ಕಾಗಿ ರಾಜ್ಯಮಟ್ಟದ 412 ಕೋಷ್ಟಕಗಳಲ್ಲಿ ಪಟ್ಟಿಮಾಡಲಾಯಿತು. ಇದೇ ಮೊದಲ ಬಾರಿ ಎಲ್ಲಾ ಶಾಲಾ ಮತ್ತು ಗ್ರಾಮಮಟ್ಟದ ಅಂಕಿಅಂಶಗಳನ್ನು ಪುನಃಪ್ರಾಪ್ತಿಗೊಳಿಸಬಹುದಾದ ಕಾಂತೀಯ ಮಾಧ್ಯಮದಲ್ಲಿ ಶೇಖರಿಸಿ ಇಡಲಾಯಿತು. ಬಳಕೆದಾರರ ಅನುಕೂಲತೆಗಾಗಿ ಕೆಲವು ಮುಖ್ಯ ಅಂಕಿಅಂಶಗಳ ಮಾಹಿತಿಗಳು ಸಿಡಿ–ರೋಮ್ ಮತ್ತು ಅಂತರ್ಜಾಲದಲ್ಲಿ ಕೂಡಾ ಲಭ್ಯ ಇವೆ.

30, ಸೆಪ್ಟೆಂಬರ್ 2002ರಲ್ಲಿ ಏಳನೆಯ ಸಮೀಕ್ಷೆ ಪ್ರಾರಂಭಗೊಳ್ಳುವ ನಿರೀಕ್ಷೆ ಇದೆ. ಈ ಸಮೀಕ್ಷೆಯ ಪೂರ್ವಸಿದ್ಧತೆ ಮತ್ತು ಸಂಯೋಜನೆಯ ಕಾರ್ಯವನ್ನು ಮತ್ತೊಮ್ಮೆ ಶಿಕ್ಷಣ ಸಮೀಕ್ಷೆಗಳ ವಿಭಾಗ ಮತ್ತು ಎನ್‌ಸಿಇಆರ್‌ಟಿ ಯ ದತ್ತಾಂಶ ಪರಿಷ್ಕರಣ ವಿಭಾಗಕ್ಕೆ ಒಪ್ಪಿಸಲಾಗಿದೆ.

ಶಿಕ್ಷಣಮಟ್ಟದ ಕುರಿತಾದ, ಅದರಲ್ಲಿಯೂ ನಿರ್ದಿಷ್ಟವಾಗಿ, ನಿರ್ದಿಷ್ಟ ಕಾಲಾವಧಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಶಾಲೆಯ ಮಾಹಿತಿಯನ್ನು ಸಮೀಕ್ಷೆಗಳು ಒದಗಿಸಿವೆ.

**ಮೂಲ: ಎ.ಬಿ.ಎಲ್. ಶ್ರೀವಾತ್ಸವ**

**ಅನು: ಡಾ. ಗೀತಾಶೆಣೈ**

## ಅದ್ವೈತ ಮತ್ತು ಶಿಕ್ಷಣ

ಆದಿ ಶಂಕರಾಚಾರ್ಯರು ತಮ್ಮ ಅನುಭವದಿಂದಲೂ ತೀಕ್ಷ್ಣಮತಿಯಿಂದಲೂ ಪ್ರತಿಪಾದಿಸಿರುವ ಅದ್ವೈತ ದರ್ಶನವು ಅತ್ಯಂತ ವೈಜ್ಞಾನಿಕವೂ ಎಲ್ಲಾ ಕಾಲದೇಶಗಳಿಗೂ ಸಮನ್ವಯಗೊಳ್ಳುವ ಉನ್ನತೋನ್ನತ ತತ್ವ ದರ್ಶನವಾಗಿದೆ. ಉಪನಿಷತ್ತುಗಳಲ್ಲಿ ಪ್ರಸ್ತಾಪಿಸಲಾಗಿರುವ ತತ್ವವು ಅದ್ವೈತವೇ ಆಗಿದೆ.

ಜಾಗೃತ್ (ಎಚ್ಚರದ ಅವಸ್ಥೆ), ಸ್ವಪ್ನ ಹಾಗೂ ಸುಷುಪ್ತಿ (ಗಾಢ ನಿದ್ರೆ) ಎಂಬ ಮೂರು ಅವಸ್ಥೆಗಳನ್ನು ಪ್ರತಿಯೊಬ್ಬರೂ ಅನುಭವಿಸುತ್ತಿದ್ದೇವೆ. ಇವನ್ನು ಅವಸ್ಥಾತ್ರಯಗಳು ಎಂದು ಕರೆಯುವರು. ಈ ಅವಸ್ಥಾ ತ್ರಯಗಳ ವಿವೇಚನೆ ಮಾಡದೆ ಪರಮಸತ್ಯದ ತಿಳುವಳಿಕೆ ಸಾಧ್ಯವಿಲ್ಲ. ಒಂದು ಅವಸ್ಥೆ ಮತ್ತೊಂದು ಅವಸ್ಥೆಯನ್ನು ಬಾಧಿಸುವುದು ಅಂದರೆ, ಎಚ್ಚರದಲ್ಲಿ ಸ್ವಪ್ನದ ಅನುಭವ ಸಾಧ್ಯವಿಲ್ಲ ಅಥವಾ ಸ್ವಪ್ನದಲ್ಲಿ ಗಾಢನಿದ್ರೆಯು ಸಾಧ್ಯವಿಲ್ಲ. ಹಾಗೆಯೇ, ಗಾಢನಿದ್ರೆಯಲ್ಲಿ ನಾವು ಜಾಗ್ರತರಾಗಿರಲು ಅಥವಾ ಸ್ವಪ್ನವನ್ನು ಕಾಣಲು ಸಾಧ್ಯವಿಲ್ಲ. ಪರಮಸತ್ಯದ ವಿವೇಚನೆಯನ್ನು ಕೇವಲ ಜಾಗ್ರತ ಅವಸ್ಥೆಯನ್ನು ಗಣನೆಗೆ ತೆಗೆದುಕೊಂಡುಮಾಡಲು ಸಾಧ್ಯವಿಲ್ಲ. ಈ ಮೂರು ಅವಸ್ಥೆಗಳನ್ನು ವಿಶ್ಲೇಷಿಸಬೇಕು. ಈ ಮೂರೂ ಅವಸ್ಥೆಗಳಲ್ಲಿ ಬಾಧಿತವಾಗದೆ ಉಳಿಯುವುದು ನಮ್ಮ ಅಂತರ್ಯದಲ್ಲಿರುವ, ಸ್ವಯಂ ಪ್ರಕಾಶವಾದ, ಸ್ವಯಂ ಅರಿವೇ ಆದ ಆತ್ಮತತ್ವ. ಇದು ಸಾಕ್ಷೀಭೂತವಾಗಿ ಮೂರು ಅವಸ್ಥೆಗಳಲ್ಲಿ ಇರುವುದರಿಂದಲೇ ನಾವು ಎಚ್ಚರಗೊಂಡ ಮೇಲೆ ಗಾಢನಿದ್ರೆ ಮಾಡಿದೆ ಎಂದು ಹೇಳಲು ಸಾಧ್ಯ. ಗಾಢನಿದ್ರೆಯಲ್ಲಿ ಆತ್ಮವು ಸದ್ರೂಪದಲ್ಲಿಯೇ ಸೇರಿ ಹೋಗಿರುವುರಿಂದ ಆತ್ಮನ ಅರಿವು ನಮಗೆ ಉಂಟಾಗುವುದಿಲ್ಲ. ಅಲ್ಲಿ ಪ್ರಪಂಚವು ಅರಿವಿಗೆ ಬರುವುದಿಲ್ಲ. ಇದರಿಂದ ಆತ್ಮ ಅಥವಾ ಬ್ರಹ್ಮ ನಿಷ್ಪ್ರಪಂಚವೆಂದು ಸಿದ್ಧವಾಗುವುದು.

**ಅದ್ವೈತ ಸಿದ್ಧಾಂತ:**

ಮೂರು ವಿಧದ ಸತ್ಯಗಳನ್ನು ಅದ್ವೈತ ಪ್ರತಿಪಾದಿಸುತ್ತದೆ. ಅವು ಯಾವುವೆಂದರೆ

1) ಪ್ರಾತಿಭಾಸಿಕ ಸತ್ಯ 2) ವ್ಯಾವಹಾರಿಕ ಸತ್ಯ 3) ಪಾರಮಾರ್ಥಿಕ ಸತ್ಯ. ತಾತ್ಕಾಲಿಕವಾಗಿ ನಮಗೆ ಸತ್ಯವೆಂಬಂತೆ ಕಂಡುಬಂದು ನಂತರ ಅದು ಸತ್ಯವಲ್ಲವೆಂದು ಅನುಭವಕ್ಕೆ ತಂದುಕೊಡುವಂಥದ್ದನ್ನು ಪ್ರಾತಿಭಾಸಿಕ ಸತ್ಯವೆಂದು ಹೇಳುವರು. ಮಂದ ಬೆಳಕಿನಲ್ಲಿ ಹಗ್ಗವೊಂದು ಹಾವಿನಂತೆ ಕಾಣುವುದು, ಬೆಳ್ಳಗಿನ ಚಿಪ್ಪು ಬೆಳ್ಳಿಯ ಚೂರಿನಂತೆ ಕಾಣುವುದು, ಬೆಳಕನ್ನು ತಂದು ನೋಡಿದಾಗ ಅದು ಹಾವಲ್ಲ ಹಗ್ಗ, ಬೆಳ್ಳಿಯಲ್ಲ ಚಿಪ್ಪು ಎಂಬ ಅನುಭವಕ್ಕೆ ಬರುವುದು. ಇದು ಪ್ರಾತಿಭಾಸಿಕ ಸತ್ಯ.

ಈ ಜಗತ್ತಿನ ನಿತ್ಯದ ವ್ಯವಹಾರದಲ್ಲಿ ನಾವು ಕಾಣುವ ವಸ್ತು ಹಾಗೂ ಅನುಭವಗಳು ವ್ಯಾವಹಾರಿಕ ಸತ್ಯವಾಗುತ್ತದೆ. ಹಾವೊಂದು ಕಚ್ಚಿದರೆ ವಿಷವೇರುವುದು. ತಕ್ಷಣ ಚಿಕಿತ್ಸೆಯಾಗದಿದ್ದಲ್ಲಿ ಅಪಾಯವೂ ಖಂಡಿತ. ಇದು ವ್ಯಾವಹಾರಿಕ ಸತ್ಯ.

ಎಲ್ಲಾ ಕಾಲದಲ್ಲಿಯೂ, ಎಲ್ಲೆಡೆಯಲ್ಲಿಯೂ, ಅವಸ್ಥಾತ್ರಯಗಳಲ್ಲೂ ಬಾಧಿಸಲ್ಪಡದೆ ಇರುವ ತತ್ವವೇ ಪಾರಮಾರ್ಥಿಕ ಸತ್ಯ. ಇದನ್ನೇ ಆತ್ಮ ಅಥವಾ ಬ್ರಹ್ಮನೆಂದು ಕರೆಯುವರು. ಈ ಬ್ರಹ್ಮನ ಅಥವಾ ಆತ್ಮನ ಅನುಭವವನ್ನು ಬಾಧಿಸುವ ಯಾವ ಅನುಭವವೂ ಇಲ್ಲದಿರುವರಿಂದ ಅದೇ ಪರಮಸತ್ಯವಾಗಿದೆ. ಎಲ್ಲಾ ಕಾಲದಲ್ಲಿಯೂ ಅನುಭವಕ್ಕೆ ಬರುವ ತತ್ವವು ಮಾತ್ರ ಪರಮಸತ್ಯವಾಗಿರಲು ಸಾಧ್ಯ.

ಯಾವುದು ಪರಮತತ್ವ ಯಾವುದು ವ್ಯವಹಾರ ಎಂದು ಅರಿಯಬೇಕಾದರೆ "ಅಧ್ಯಾಸ"ವೆಂಬ ಪರಿಕಲ್ಪನೆ ಅಗತ್ಯ. ಒಂದು ಪದಾರ್ಥವನ್ನು ಮತ್ತೊಂದು ಪದಾರ್ಥವೆಂದು ತಪ್ಪಾಗಿ ತಿಳಿಯುವುದು ಅಧ್ಯಾಸ. ನಮ್ಮ ನಿಜಸ್ವರೂಪವು ಆತ್ಮವೇ ಆಗಿದ್ದರೂ

Digitised by Bharatavani, CIIL

" ನಾನು ದೇಹ" ಎಂಬ ಕಲ್ಪನೆಯನ್ನು ಹೊಂದುವುದು ಅಧ್ಯಾಸ. ದೇಹವೇ ಆತ್ಮವೆಂಬ ತಪ್ಪು ತಿಳುವಳಿಕೆಗೆ ಅಧ್ಯಾಸವೇ ಕಾರಣ.

ದೃಶ್ಯಪ್ರಪಂಚದ ಹಿಂದಿರುವ ಮೂಲ ಸತ್ಯವನ್ನು ಅದ್ವೈತವು ಬ್ರಹ್ಮವೆಂದು( ಪುರಾಣದ ಚತುರ್ಮುಖ ಬ್ರಹ್ಮನಲ್ಲ) ಕರೆದಿದೆ. ಬ್ರಹ್ಮವು ಸತ್, ಚಿತ್ ಮತ್ತು ಆನಂದ ಸ್ವರೂಪವೇ ಆಗಿದೆ. ಅಲ್ಲದೆ ಅದು ನಿರ್ಗುಣ, ನಿರಾಕಾರ, ನಿಷ್ಪ್ರಪಂಚ, ನಿತ್ಯ, ಶಾಶ್ವತ, ಅಖಂಡವೂ ಆಗಿದೆ. ಇದು ಸರ್ವವ್ಯಾಪಿ,ಸರ್ವಜ್ಞ,ಸರ್ವಸಾಕ್ಷಿ. ಅದ್ವೈತ ದರ್ಶನದ ಪ್ರಕಾರ ಈ ಬ್ರಹ್ಮವೇ ಪಾರಮಾರ್ಥಿಕ ಸತ್ಯವಾಗಿದ್ದು, ಇದಲ್ಲದೆ ಬೇರಾವ ಸತ್ಯವೂ ಇಲ್ಲ.

ಬಾಹ್ಯಪ್ರಪಂಚದಲ್ಲಿ ಮೂಲಸತ್ಯವು ಬ್ರಹ್ಮವಾದರೆ ಆಂತರಿಕ ಪ್ರಪಂಚದಲ್ಲಿ ಆತ್ಮವೇ ಮೂಲ ಸತ್ಯವಾಗಿದೆ. ಈ ಆತ್ಮವು ಸ್ವಯಂ ಬ್ರಹ್ಮವೇ ಆಗಿದೆ. ಇದೇ ಅದ್ವೈತ ಮೂಲ ತತ್ವ. ಇದನ್ನು ತಿಳಿಯುವುದೇ ನಿಜವಾದ ಶಿಕ್ಷಣ. ಕೇವಲ ಬೌದ್ಧಿಕವಾಗಿ ತಿಳಿದರೆ ಸಾಲದು. ಅದರ ಪೂರ್ಣ ಅನುಭವವಾಗಬೇಕು. ಬ್ರಹ್ಮಾತ್ಮೈಕ್ಯ ಬೋಧವೇ ನಿಜವಾದ ಶಿಕ್ಷಣ ಎಂದು ಅದ್ವೈತವು ಸಾರುವುದು. ಇದನ್ನೇ ಮುಕ್ತಿಯೆಂದು ಅದ್ವೈತವು ಹೇಳುತ್ತದೆ. ಉಪನಿಷತ್ತುಗಳು ಅಹಂಬ್ರಹ್ಮಾಸ್ಮಿ(ನಾನೇ ಬ್ರಹ್ಮನಾಗಿದ್ದೇನೆ), ಪ್ರಜ್ಞಾನಂ ಬ್ರಹ್ಮ (ಬ್ರಹ್ಮವೇ ವಿಶೇಷ ಜ್ಞಾನವಾಗಿದೆ), ಅಯಮಾತ್ಮಾಬ್ರಹ್ಮ (ಬ್ರಹ್ಮವೇ ಆತ್ಮ ನಿನ್ನದಾಗಿದೆ), ತತ್ವಮಸಿ (ತತ್ವವೇ ಅದಾಗಿದೆ) ಮುಂತಾದ ಮಹಾವಾಕ್ಯಗಳಿಂದ ಈ ಸತ್ಯವನ್ನು ಉಪದೇಶಿಸುತ್ತವೆ. ಈ ಸ್ಥಿತಿಗೆ ತಲುಪಿದವರನ್ನು ಜೀವನ್ಮುಕ್ತರು ಎಂದು ಹೇಳುವರು. ಅಂಥವರು ಹಿಂದೆ ಇದ್ದರು, ಈಗಲೂ ಇದ್ದಾರೆ, ಮುಂದೆಯೂ ಇರುವರು. ಜೀವನ್ಮುಕ್ತನು ವಿವರಿಸಲಾಗದ ಅಗಾಧ ಆತ್ಮಾನಂದದಲ್ಲಿ ಮುಳುಗಿರುತ್ತಾನೆ. ಅವನ ಆನಂದಕ್ಕೆ ಹೊರಗಣ ಮತ್ತಾವ ವಸ್ತುವಿನ ಅವಶ್ಯಕತೆಯಿಲ್ಲ. ತನ್ನೊಳಗೇ ಆನಂದವನ್ನು ಕಂಡವನು ಇಂದ್ರಿಯಸುಖಗಳಿಗೆ ಬಲಿ ಬೀಳುವುದಿಲ್ಲ.

ಬ್ರಹ್ಮವೇ ಆತ್ಮವೆಂದ ಮೇಲೆ ಅದರ ಅನುಭವ ನಮಗೇಕೆ ಆಗುತ್ತಿಲ್ಲ ಎಂಬ ಪ್ರಶ್ನೆ ಏಳುವುದು. ಇದಕ್ಕೆ ಕಾರಣ "ಮಾಯೆ' ಎಂದು ಅದ್ವೈತವು ಹೇಳುತ್ತದೆ. ಅಖಂಡವೂ, ಏಕಮೇವಾದ್ವಿತೀಯವೂ ಆದ ಬ್ರಹ್ಮನ ಬದಲಾಗಿ ನಮಗೆ ವಿಶ್ವದಲ್ಲಿ ವಿವಿಧತೆಯೇ ಕಾಣುತ್ತಿದೆ. ಈ ನಾನಾತ್ವವು ಕೇವಲ ನಾಮರೂಪಗಳಿಂದ ಆಗಿದೆಯೆಂದು ಇಲ್ಲಿ ತಿಳಿಯಬೇಕು. ಮಣ್ಣಿನಿಂದ ವಿವಿಧ ಆಕಾರದ ಗಡಿಗೆ ಮಡಕೆಗಳನ್ನು ಮಾಡುತ್ತೇವೆ. ಅವುಗಳನ್ನು ವಿವಿಧ ನಾಮಗಳಿಂದ ಗುರುತಿಸುತ್ತೇವೆ. ಆದರೆ ನಿಜಕ್ಕೂ ಆ ಗಡಿಗೆ ಮಡಕೆಗಳೆಲ್ಲಾ ಮೂಲತಃ ಮಣ್ಣು ಮಾತ್ರವಾಗಿದ್ದು ನಾಮರೂಪಗಳನ್ನು ನಾವು ನಂತರ ಅವುಗಳಿಗೆ ಕೊಡುತ್ತೇವೆ. ಮಣ್ಣಿನ ಮೇಲೆ ನಾಮರೂಪಗಳನ್ನು ಅಧ್ಯಾರೋಪ ಮಾಡಿದ್ದರಿಂದ "ಮಡಕೆ" ಎಂಬ ನಾಮವು ಹಾಗೂ ಮಡಕೆಯ 'ಆಕಾರ'ವು ಅಸ್ತಿತ್ವಕ್ಕೆ ಬಂದಂತೆ ತೋರುವುದು. ವಿವಿಧ ರೀತಿಯ ಬಂಗಾರದ ಒಡವೆಗಳನ್ನು ಅಕ್ಕಸಾಲಿಗೆ ಮಾರಿದಾಗ ನಮಗೆ ಸಿಗುವ ಬೆಲೆ ಒಡವೆಗಳಲ್ಲಿರುವ ಚಿನ್ನಕ್ಕೆ ಮಾತ್ರ. ಅವುಗಳ ಆಕಾರಗಳಿಗೆ ಯಾವ ಬೆಲೆಯೂ ಇಲ್ಲ. ನಿಷ್ಪ್ರಪಂಚ ಬ್ರಹ್ಮವನ್ನು ನಾನಾತ್ವವುಳ್ಳ ವಿಶ್ವವನ್ನಾಗಿಸಿ ತೋರಿಸುವುದೇ ಮಾಯೆ. ಮಾಯೆಗೆ ಆಧಾರ ಬ್ರಹ್ಮವೇ ಆಗಿದೆ. ಮಾಯೆ ತನ್ನ ಆವರಣ ಶಕ್ತಿಯಿಂದ ಬ್ರಹ್ಮನ ನಿಜಸ್ವರೂಪವನ್ನು ನಮ್ಮಿಂದ ಮರೆಮಾಡಿ ತನ್ನ ವಿಕ್ಷೇಪ ಶಕ್ತಿಯಿಂದ ಬ್ರಹ್ಮನಲ್ಲಿ ನಾನಾತ್ವದ ಪ್ರಪಂಚವನ್ನು ಸೃಷ್ಟಿಸಿ ತೋರಿಸುತ್ತದೆ. ಪ್ರಪಂಚಕ್ಕೆ ಮಾಯೆಯು ಉಪಾದಾನ ಕಾರಣವಾಗಿದೆ. ಹಗ್ಗದಲ್ಲಿ ಕಾಣುವ ಹಾವಿನಿಂದ ಹಗ್ಗದ ಮೂಲರೂಪಕ್ಕೆ, ಚಿಪ್ಪಿನಲ್ಲಿ ಕಾಣುವ ಬೆಳ್ಳಿಯಿಂದ ಚಿಪ್ಪಿನ ಮೂಲರೂಪಕ್ಕೆ ಯಾವ ಬದಲಾವಣೆಯೂ ಆಗುವುದಿಲ್ಲ. ಹಾಗೆಯೇ ಮಾಯೆಯು ಬ್ರಹ್ಮವನ್ನು ಆಶ್ರಯಿಸಿ ಅದನ್ನೇ ವಿಷಯವಾಗಿ ಮಾಡಿಕೊಂಡರೂ ಬ್ರಹ್ಮನ ನಿಜ ಸ್ವರೂಪಕ್ಕೆ ಯಾವ ಚ್ಯುತಿಯೂ ಉಂಟಾಗುವುದಿಲ್ಲ.

ಬ್ರಹ್ಮನೆಂದು ಹೇಳುವಾಗ " ಮಾಯೆ" ಎಂಬ ಶಬ್ದವನ್ನು ಬಳಸಿದಂತೆ " ಆತ್ಮ"ವನ್ನು ಕುರಿತು ಹೇಳುವಾಗ "ಅವಿದ್ಯೆ" ಎಂಬ ಶಬ್ದ ಬಳಸಲಾಗುತ್ತದೆ. ಬ್ರಹ್ಮಕ್ಕೆ ಉಪಾಧಿ ಮಾಯೆ, ಆತ್ಮಕ್ಕೆ ಉಪಾಧಿ ಅವಿದ್ಯೆ. ಜೀವನಿಗೆ ಹಿಂದೆ ಹೇಳಿರುವ "ಅಧ್ಯಾಸ"ವನ್ನುಂಟು ಮಾಡುವುದು ಅವಿದ್ಯೆ.

ಪಾರಮಾರ್ಥಿಕ ದೃಷ್ಟಿಯಿಂದ ಜೀವರೂ ಇಲ್ಲ, ಜಗತ್ತೂ ಇಲ್ಲ' ಈಶ್ವರನೂ ಇಲ್ಲ' ಬಂಧಮೋಕ್ಷಗಳೂ ಇಲ್ಲ. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಎಲ್ಲವೂ ಇವೆ. ನಿರ್ಗುಣ ಬ್ರಹ್ಮವೇ ಮಾಯೆಯ ಉಪಾಧಿಯಿಂದ ಈಶ್ವರನಾಗಿ ತೋರುತ್ತದೆ. ಆದರೆ ಬ್ರಹ್ಮ ಮತ್ತು ಈಶ್ವರನು ಬೇರೆ ಬೇರೆಯಲ್ಲ. ಪುರುಷನು ನಾಟಕದಲ್ಲಿ ಸ್ತ್ರೀಯ ಪಾತ್ರವನ್ನು ಸ್ತ್ರೀಯಂತೆ ನಟಿಸುವಾಗ ಹಾಕಿಕೊಂಡರೂ ಅವನು ನಿಜವಾಗಿಯೂ ಪುರುಷನೇ ಆಗಿರುತ್ತಾನೆ .ಆದ್ದರಿಂದ ಈಶ್ವರನನ್ನು ಅಂಗೀಕರಿಸುವುದರಿಂದ ಎಲ್ಲದಕ್ಕೂ ಬ್ರಹ್ಮವೇ ಕಾರಣವೆಂಬ ವಾದಕ್ಕೆ ಧಕ್ಕೆಯುಂಟಾಗುವುದಿಲ್ಲ. ಕನಸಿನಿಂದ ಎಚ್ಚೆತ್ತ ನಂತರ ಕನಸಿಗೆ ನಿಜವಾದ ಅಸ್ತಿತ್ವವಿಲ್ಲವೆಂದು ತಿಳಿಯುವಂತೆ ಬ್ರಹ್ಮಾನುಭವವಾದ ನಂತರ ಬ್ರಹ್ಮನ ಹೊರತಾಗಿ ಪ್ರಪಂಚಕ್ಕೆ ನಿಜವಾದ ಅಸ್ತಿತ್ವವಿಲ್ಲವೆಂದು ತಿಳಿಯುತ್ತದೆ.

ಜೀವಾತ್ಮನು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳಿಂದಾದ ಅಂತಃಕರಣದ ಮೂಲಕ ಲೌಕಿಕದಲ್ಲಿ ವ್ಯವಹರಿಸುತ್ತಾನೆ. ಅಂತಃಕರಣ ಮತ್ತು ಆತ್ಮ– ಈ ಎರಡೂ ಸೇರಿ ಜೀವನೆಂದೆನಿಸಿಕೊಳ್ಳುತ್ತವೆ. ನಮ್ಮಲ್ಲಿರುವ "ಅಹಂ" (ನಾನು) ಭಾವದಿಂದ ಶೋಕಮೋಹಗಳಿಗೆ ಒಳಗಾಗುತ್ತದೆ." ಜೀವೋಬ್ರಹ್ಮೈವ ನಾಪರಃ" – ಜೀವನು ಬ್ರಹ್ಮನಲ್ಲದೆ ಬೇರೆಯಲ್ಲ ಎಂಬ ಅನುಭವವೇ ಮುಕ್ತಿ. ಮರಣಾನಂತರ ಮುಕ್ತಿಯೆಂದು ಅದ್ವೈತವು ಹೇಳುವುದಿಲ್ಲ. ಇಲ್ಲೇ ಬದುಕಿರುವಾಗಲೇ ಮುಕ್ತಿ ಸಾಧ್ಯ. ಪ್ರತಿಯೊಬ್ಬರು ಮೂಲತಃ ಬ್ರಹ್ಮನೇ ಆಗಿರುವುದರಿಂದ ಈ ಜೀವನ್ಮುಕ್ತಿ ಎಲ್ಲರಿಗೂ ಸಾಧ್ಯ. ಜೀವನ್ಮುಕ್ತನಿಗೆ ಹಿಂದೆ ಹೇಳಿದ ಅವಿದ್ಯೆಯು ನಿವೃತ್ತಿಯಾಗಿರುವುದರಿಂದ ಆತನಿಗೆ ಶೋಕಮೋಹಗಳಿಲ್ಲ. ಜೀವನ್ಮುಕ್ತನ ದೇಹ ಬಿದ್ದು ಹೋದ ನಂತರ ಆತನಿಗೆ ಪುನರ್ಜನ್ಮವಿಲ್ಲ.

Digitised by Bharatavani, CIIL

ಈ ಜೀವನ್ಮುಕ್ತಿಯನ್ನು ಪಡೆಯಬಯಸುವವನು ಸಾಧನ ಚತುಷ್ಟಯಗಳನ್ನು ಅಂದರೆ ನಿತ್ಯಾನಿತ್ಯ ವಸ್ತು ವಿವೇಕ, ಅಂದರೆ ಯಾವುದು ಶಾಶ್ವತ ಯಾವುದು ಶಾಶ್ವತವಲ್ಲವೆಂಬ ವಿವೇಕ, ಫಲಭೋಗಗಳಲ್ಲಿ ವೈರಾಗ್ಯ, ಶಮದಮಾದಿ ಷಟ್‌ಸಂಪತ್ತು (ಶಮ–ಆತ್ಮ ಮನೋಸಂಯಮ; ದಮ–ಇಂದ್ರಿಯ ನಿಗ್ರಹ, ಉಪರತಿ–ಬಾಹ್ಯ ವಸ್ತುಗಳ ಬಗ್ಗೆ ಚಿಂತಿಸದಿರುವುದು, ತಿತಿಕ್ಷೆ–ಎಲ್ಲಾ ಬಗೆಯ ಕಷ್ಟ ಸಹಿಷ್ಣುತೆ, ಶ್ರದ್ಧೆ–ಧರ್ಮಗ್ರಂಥ ಗುರುಗಳಲ್ಲಿ ಶ್ರದ್ಧೆ ಮತ್ತು ಸಮಾಧಾನ–ಯಾವಾಗಲೂ ಆತ್ಮನಲ್ಲಿ ತಲ್ಲೀನನಾಗಿರುವುದು, ಮುಮುಕ್ಷುತ್ವ ಅಂದರೆ ಮೋಕ್ಷ ಪಡೆಯಬೇಕೆಂಬ ಇಚ್ಛೆ) ಹೊಂದಿರಬೇಕು. ಚಿತ್ತಶುದ್ಧಿಗಾಗಿ ಕಾಯಾವಾಚಾಮನಸಾ ನಿಸ್ವಾರ್ಥ ಕರ್ಮವನ್ನು ಆಚರಿಸಬೇಕು. ಬ್ರಹ್ಮಾನುಭವವನ್ನು ಪಡೆದ ಗುರುಗಳ ಮಾರ್ಗದರ್ಶನದಲ್ಲಿ ನಡೆದು ಈ ಅನುಭವವನ್ನು ಪಡೆಯಬೇಕು.

ಅದ್ವೈತದರ್ಶನವು ಅತ್ಯಂತ ವೈಜ್ಞಾನಿಕವಾದ ದರ್ಶನವಾಗಿದ್ದು ಎಲ್ಲಾ ಕಾಲದೇಶಗಳಿಗೂ ಅನ್ವಯವಾಗುವಂಥದ್ದು. ಈ ಅದ್ವೈತವನ್ನೇ ಎಲ್ಲಾ ಉಪನಿಷತ್ತುಗಳು ಘಂಟಾಘೋಷವಾಗಿ ಸಾರುತ್ತವೆ.

**ಅದ್ವೈತ ದರ್ಶನ ಮತ್ತು ಶಿಕ್ಷಣ:**

ಅದ್ವೈತದರ್ಶನದ ಪ್ರಕಾರ ಶಿಕ್ಷಣದ ಗುರಿ ಆತ್ಮ ಮತ್ತು ಬ್ರಹ್ಮನ ಏಕತೆಯನ್ನು ಅನುಭವಕ್ಕೆ ತಂದುಕೊಳ್ಳುವುದು. ವ್ಯಕ್ತಿಯು ಈ ಅನುಭವವನ್ನು ಹೊಂದಲು ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಅಧ್ಯಾತ್ಮಿಕ ನೆಲೆಗಳಲ್ಲಿ ಪಡೆಯಬೇಕಾದ ತರಬೇತಿಯೇ ಶಿಕ್ಷಣದ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಯು ಅನುಭವಕ್ಕೆ ತಂದುಕೊಳ್ಳಬೇಕಾದ ಆತ್ಮತತ್ವವು ಅವನಲ್ಲೇ ಅಡಗಿರುವುದರಿಂದ ಈ ವಿಷಯವನ್ನು ಮನದಟ್ಟು ಮಾಡುವ ಸರ್ವ ಪ್ರಯತ್ನಗಳು ನಡೆಯಬೇಕು.

**ಪಠ್ಯಕ್ರಮ:**

ಅದ್ವೈತದ ಪ್ರಕಾರ ಪರಮಸತ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

ಪ್ರಾತಭಾಸಿಕ ಸತ್ಯ 2) ವ್ಯಾವಹಾರಿಕ ಸತ್ಯ 3) ಪಾರಮಾರ್ಥಿಕ ಸತ್ಯ.

ಪಾರಮಾರ್ಥಿಕ ಸತ್ಯವು ನಮ್ಮಲ್ಲಿ ಉದಯಿಸಿದಾಗ ವ್ಯಾವಹಾರಿಕ ಸತ್ಯವೂ ಸಹ ಅಂತಿಮ ಸತ್ಯವಲ್ಲ ಎಂದು ನಮ್ಮ ಅನುಭವಕ್ಕೆ ಬರುವುದು. ಈ ಮೂರು ಸತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯದಲ್ಲಿ ಭೂಗೋಳ ಶಾಸ್ತ್ರ, ಚರಿತ್ರೆ, ಸಮಾಜಶಾಸ್ತ್ರ, ಅರ್ಥಶಾಸ್ತ್ರ,ವಿಜ್ಞಾನ, ವೃತ್ತಿಪರ ಶಿಕ್ಷಣ, ತಾಂತ್ರಿಕ ಶಿಕ್ಷಣ ಮುಂತಾದುವುಗಳನ್ನು ಸೇರಿಸಬೇಕು. ಇದರ ಜೊತೆಗೆ ಅಧ್ಯಾತ್ಮ ಜ್ಞಾನದ ವಿಷಯದಲ್ಲಿ ಆಸಕ್ತಿಯನ್ನು ತೋರದ ಮಕ್ಕಳಿಗೆ ಸಾಹಿತ್ಯ, ಮನಃಶ್ಶಾಸ್ತ್ರ, ಭೌತಶಾಸ್ತ್ರ, ಜೀವಶಾಸ್ತ್ರ ಮತ್ತು ತತ್ವಶಾಸ್ತ್ರಗಳನ್ನು ಪಠ್ಯದಲ್ಲಿ ಸೇರಿಸಬೇಕು. ಅದ್ವೈತ ವೇದಾಂತದಲ್ಲಿ ಆಸಕ್ತಿಯನ್ನು ತೋರಿಸುವ ಮಕ್ಕಳಿಗೆ ಅದ್ವೈತ ವೇದಾಂತವನ್ನು ಕಲಿಯಲು ಎಲ್ಲಾ ಅವಕಾಶಗಳನ್ನು ಒದಗಿಸಿಕೊಡಬೇಕು.

**ಶಿಕ್ಷಣದ ಗುರಿ:**

ಬ್ರಹ್ಮನ ಸಾಕ್ಷಾತ್ಕಾರ ಶಿಕ್ಷಣದ ಅಂತಿಮ ಗುರಿಯೆಂದರೆ ವಿದ್ಯಾರ್ಥಿ ಏಕಮೇವ ಸತ್ಯವಾದ ಸಚ್ಚಿದಾನಂದ ಸ್ವರೂಪಿಯಾದ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಜೀವವು ಬ್ರಹ್ಮನಲ್ಲದೆ ಬೇರೆಯಲ್ಲವೆಂದು ಅದ್ವೈತವು ಪ್ರತಿಪಾದಿಸುವುದರಿಂದ ಶಿಕ್ಷಣವು ವಿದ್ಯಾರ್ಥಿಯಲ್ಲಿ ತನ್ನಲ್ಲೇ ಬ್ರಹ್ಮವು ಹುದುಗಿದೆ ಎಂಬ ನಿಶ್ಚಯವನ್ನು ಬಲಪಡಿಸುವ ಯತ್ನದತ್ತ ನಿರ್ದೇಶಿತವಾಗಿರಬೇಕು.

**ಶಿಕ್ಷಣ ವಿಧಾನ:**

ಆತ್ಮವು ಸ್ವಯಂಪ್ರಕಾಶವುಳ್ಳದ್ದು. ಜ್ಞಾನವೇ ಅದರ ಸ್ವರೂಪ. ಅದ್ವೈತ ವೇದಾಂತದ ಪ್ರಕಾರ ಜೀವಾತ್ಮವು ಅಜ್ಞಾನದಿಂದ ಬಾಧಿತವಾಗಿದೆ. ಸ್ವಯಂಪ್ರಕಾಶವೇ ಆದ ಆತ್ಮದ ಜ್ಞಾನವು ಅದನ್ನು ಈ ಅಜ್ಞಾನದಿಂದ ಮುಕ್ತಿಗೊಳಿಸುತ್ತದೆಯಲ್ಲದೆ ಆತ್ಮವೇ ಬ್ರಹ್ಮನೆಂಬ ಜ್ಞಾನವನ್ನು ಇದು ಸಾಧ್ಯವಾಗಿಸುತ್ತದೆ.( ಜೀವೋ ಬ್ರಹ್ಮೈವ ನಾಪರಃ – ಜೀವನು ಬ್ರಹ್ಮನಲ್ಲದೆ ಬೇರೆಯಲ್ಲ).

ಮೂರು ತೆರನ ವಿದ್ಯಾರ್ಥಿಗಳನ್ನು ನಾವು ಗುರುತಿಸಬಹುದು.

1) ಉತ್ತಮ 2) ಮಧ್ಯಮ 3) ಮಂದ

ಉತ್ತಮಾಧಿಕಾರಿಗಳಿಗೆ ವೇದಾಂತದ ಅಧ್ಯಯನವನ್ನು ಹೇಳಲಾಗಿದೆ. ಮಧ್ಯಮಾಧಿಕಾರಿಗಳಿಗೆ ಭಕ್ತಿಯ ಪಥವನ್ನು ಹೇಳಿದೆ. ಮಂದಾಧಿಕಾರಿಗಳಿಗೆ ನಿಸ್ವಾರ್ಥ ಕರ್ಮವನ್ನು ಹೇಳಲಾಗಿದೆ. ಈ ಮೂರು ವಿಧದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಮೂರು ವಿಧದ ಶಿಕ್ಷಣ ವಿಧಾನವನ್ನು ಉಪದೇಶಿಸಲಾಗಿದೆ.

1) ಜ್ಞಾನಕೇಂದ್ರಿತ ವಿಧಾನ

2) ಭಕ್ತಿಕೇಂದ್ರಿತ ವಿಧಾನ

3) ಕರ್ಮಕೇಂದ್ರಿತ ವಿಧಾನ

**ಶಿಕ್ಷಕನ ಪಾತ್ರ:**

ಶಿಕ್ಷಕನು ತನ್ನ ನಡತೆ, ಚಾರಿತ್ರ್ಯಗಳಲ್ಲಿ ಅತ್ಯಂತ ಶುದ್ಧನಾಗಿರಬೇಕು. ಕಾಯಾ ವಾಚಾ ಮನಸಾ ಅವನು ಶುದ್ಧನಾಗಿರಬೇಕು. ಬ್ರಹ್ಮನಿಷ್ಠನಾಗಿರಬೇಕು. ಅಂದರೆ ಆತ್ಮಬ್ರಹ್ಮದ ಏಕತೆಯನ್ನು ಅನುಭವಕ್ಕೆ ತಂದುಕೊಂಡಿರಬೇಕು. ಸಕಲ ವೇದಶಾಸ್ತ್ರಗಳಲ್ಲಿ ಪಾರಂಗತನಾಗಿರಬೇಕು. ಆಸೆಗಳಿಂದ ಮುಕ್ತನಾಗಿರಬೇಕು. ದಯಾವಂತನಾಗಿರಬೇಕು.

**ವಿದ್ಯಾರ್ಥಿಯ ಸ್ಥಾನ:**

ಅದ್ವೈತ ವೇದಾಂತದ ಪ್ರಕಾರ ವಿದ್ಯಾರ್ಥಿಯು ತನ್ನ ನಿಜಸ್ವರೂಪದಲ್ಲಿ ಬ್ರಹ್ಮವೇ ಆಗಿದ್ದಾನೆ.

**ಶಿಸ್ತು:**

ಬ್ರಹ್ಮಜ್ಞಾನದ ವಿಷಯದಲ್ಲಿ ನಾಲ್ಕು ಸಾಧನಗಳನ್ನು ಹೇಳಲಾಗಿದೆ.

Digitised by Bharatavani, CIIL

ಇದನ್ನು ಸಾಧನ ಚತುಷ್ಟಯ ಎನ್ನುವರು. ನಿತ್ಯಾನಿತ್ಯ ವಸ್ತುವಿವೇಕ, ಇಹಲೋಕ ಮತ್ತು ಪರಲೋಕಗಳಲ್ಲಿನ ಫಲಭೋಗಗಳಲ್ಲಿ ವೈರಾಗ್ಯ, ಶಮದಮಾದಿ ಷಟ್‌ಸಂಪತ್ತು (ಶಮ, ದಮ, ಉಪರತಿ,ತಿತಿಕ್ಷೆ, ಶ್ರದ್ಧೆ,ಸಮಾಧಾನ), ಮುಮುಕ್ಷತ್ವ( ಮುಕ್ತಿಯನ್ನು ಪಡೆಯಬೇಕೆಂಬ ಇಚ್ಛೆ). ಈ ನಾಲ್ಕು ಸಾಧನಗಳನ್ನು ಅದ್ವೈತವು ಬ್ರಹ್ಮಾತ್ಮೈಕ್ಯ ಬೋಧಕ್ಕೆ ಅವಶ್ಯವೆಂದು ಹೇಳಿದೆ.

**–ಚಂದ್ರಶೇಖರ್ ಬಿ. ಎಂ.**

## ಅಧ್ಯಾಪಕ ಶಿಕ್ಷಣದ ಮಾದರಿಗಳು

1960ರ ದಶಕದ ಪೂರ್ವಾರ್ಧದ ಅವಧಿಯಲ್ಲಿ ಅಧ್ಯಾಪಕ ಶಿಕ್ಷಣದ ಹಲವಾರು ಬೋಧನಾ ಮಾದರಿಗಳು ಅಭಿವೃದ್ಧಿಗೊಂಡು ಬೆಳಕಿಗೆ ಬಂದವು. ಇದರಲ್ಲಿ ಅಮೇರಿಕಾದ ಶಿಕ್ಷಣ ಸಂಘವು ಅತ್ಯಂತ ಸಕ್ರಿಯವಾಗಿದ್ದು ಹಲವಾರು ಬೋಧನಾ ಮಾದರಿಗಳನ್ನು ಸಿದ್ಧಪಡಿಸಿತು. ಈ ಮಾದರಿಗಳನ್ನು ಅಭಿವೃದ್ಧಿಪಡಿಸಿದ ಅತ್ಯಂತ ಪ್ರಮುಖ ಉದ್ದೇಶವೆಂದರೆ ಪರಿಣಾಮಕಾರಿ ಶಿಕ್ಷಕರನ್ನು ತಯಾರು ಮಾಡುವುದೇ ಆಗಿತ್ತು ಹಾಗೂ ಅವರಲ್ಲಿ ಪರಿಣಾಮಕಾರಿ ಶಿಕ್ಷಕರಲ್ಲಿ ಬೋಧನಾ ಕೌಶಲಗಳನ್ನು ಬೆಳೆಸುವಂತಹ ಪ್ರಮುಖ ಉದ್ದೇಶವೂ ಸೇರಿತ್ತು.

ಪ್ರಸ್ತುತ ಶೈಕ್ಷಣಿಕ ಪರಿಸ್ಥಿತಿಯು ಪ್ರಶಿಕ್ಷಣಾರ್ಥಿಗಳನ್ನು ಪರಿಣಾಮಕಾರಿ ಶಿಕ್ಷಕರನ್ನಾಗಿ ಮಾಡಲು ಹೆಚ್ಚಿನ ಒಲವು ತೋರುತ್ತಿದೆ. ಹಾಗಾಗಿ ಈ ಪ್ರಕ್ರಿಯೆಯಲ್ಲಿ ಕೆಲವೊಂದು ಅಧ್ಯಾಪಕ ಶಿಕ್ಷಣ ಕಾರ್ಯಕ್ರಮಗಳು ಜಾರಿಗೆ ಬಂದಿವೆ. ಈ ಕಾರ್ಯಕ್ರಮಗಳು ವಿದ್ಯಾರ್ಥಿ ಶಿಕ್ಷಕರು ಅಥವಾ ಸೇವಾನಿರತ ಶಿಕ್ಷಕರ ಕಲಿಕೆಯನ್ನು ಕೇಂದ್ರೀಕರಿಸಿ ಬೋಧನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿವೆ. ಈ ಪ್ರಕ್ರಿಯೆಯು ದೀರ್ಘಕಾಲೀನ ಪ್ರಕ್ರಿಯೆಯಾಗಿದೆ. ಹೀಗೆ ರೂಪಿತವಾದ ಅಧ್ಯಾಪಕ ಶಿಕ್ಷಣದ ಮಾದರಿಗಳ ಬಗ್ಗೆ ಶೈಕ್ಷಣಿಕ ಚಿಂತಕರು ಮತ್ತು ಅಭ್ಯಾಸ ನಡೆಸುವವರು ತಮ್ಮದೇ ಆದಂತಹ ವಿಭಿನ್ನ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ ಸಂಶೋಧಕರು ಸಾಮಾನ್ಯವಾಗಿ ಅಧ್ಯಾಪಕ ಶಿಕ್ಷಣದ ಮೂರು ಪ್ರಮುಖ ಮಾದರಿಗಳನ್ನು ತಿಳಿಸಿದ್ದು ಈ ಮೂರು ಮಾದರಿಗಳು ಪ್ರಪಂಚದಾದ್ಯಂತ ವಿಮರ್ಶಿಸಲ್ಪಟ್ಟು ಒಪ್ಪಿರುವಂತಹ ಅಧ್ಯಾಪಕ ಶಿಕ್ಷಣದ ಮಾದರಿಗಳಾಗಿವೆ. ಇತ್ತೀಚಿನ ಅಧ್ಯಾಪಕ ಶಿಕ್ಷಣದ ಮಾದರಿಗಳನ್ನು ಪರಿಚಯಿಸಿದ ಕೀರ್ತಿ ಮೈಕಲ್ ಜೆ. ವಲ್ಲಾಸೀ ರವರಿಗೆ ಸಲ್ಲುತ್ತದೆ. ಇವರು ಈ ಮಾದರಿಗಳನ್ನು 1991ರಲ್ಲಿ ಪಾರದರ್ಶಕವಾಗಿ ಅತ್ಯಂತ ಸೂಕ್ತವಾಗಿ ವಿಮರ್ಶಿಸಿದ್ದಾರೆ.

**ಅಧ್ಯಾಪಕ ಶಿಕ್ಷಣದ ಈ ಪ್ರಮುಖ ಮೂರು ಮಾದರಿಗಳು ಯಾವುವೆಂದರೆ–**

1. ಅನ್ವಯಿಕ ವಿಜ್ಞಾನ ಮಾದರಿ (The Applied Science Model)
2. ಕ್ರಾಫ್ಟ್ ಮಾದರಿ (The Craft Model)
3. ವಿವೇಚನಾ ಮಾದರಿ (The Reflective Model)

**1. ಅನ್ವಯಿಕ ವಿಜ್ಞಾನ ಮಾದರಿ:**

ಅನ್ವಯಿಕ ವಿಜ್ಞಾನ ಮಾದರಿಯು ಅಧ್ಯಾಪಕ ಶಿಕ್ಷಣದ ಸಾಂಪ್ರದಾಯಿಕ ಮಾದರಿಯಾಗಿದ್ದು ಇದು ಪ್ರಸ್ತುತ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮಕ್ಕೆ ಸೂಕ್ತವಾದ ಮಾದರಿಯಾಗಿದೆ. ಈ ಮಾದರಿಯನ್ನು ಸ್ವಲ್ಪ ಬದಲಾವಣೆಗಳೊಂದಿಗೆ ಡೊನಾಲ್ಡ್ ಎ ಸೋಹೆನ್ ರವರು ತಾರ್ಕಿಕ ತಂತ್ರಜ್ಞಾನದ ಆಧಾರದ ಮೇಲೆ ಮೈಕೆಲ್ ಜೆ. ವಲ್ಲಾಸಿರವರು ಜಾರಿಗೆ ತಂದಿದ್ದಾರೆ. ಈ ಮಾದರಿಯು ಮೂಲ ವಿಜ್ಞಾನದ ಆಧಾರದ ಮೇಲೆ ರೂಪುಗೊಂಡಿದ್ದು ನಿರ್ದಿಷ್ಟವಾಗಿ 19ನೇ ಮತ್ತು 20ನೇ ಶತಮಾನದಲ್ಲಿ ಬಂದಿತು.

**ಅನ್ವಯಿಕ ವಿಜ್ಞಾನ ಮಾದರಿಯನ್ನು ಕೆಳಗಿನ ನಕ್ಷೆ ವಿವರಿಸುತ್ತದೆ:**




ಅಧ್ಯಾಪಕ ಶಿಕ್ಷಣದಲ್ಲಿ ಈ ಮೇಲಿನ ಚಿತ್ರದಲ್ಲಿರುವಂತೆ ಅನ್ವಯಿಕ ವಿಜ್ಞಾನ ಮಾದರಿಯ ಮೂಲಕ ತರಬೇತಿ ನಡೆಯುತ್ತದೆ. ಈ ಮಾದರಿಯು ಈ ಕೆಳಕಂಡಂತೆ ಕೆಲವೊಂದು ಆಧಾರಗಳ ಮೇಲೆ ಸಿದ್ಧಗೊಂಡಿದೆ–

- ಬೋಧನೆಯು ಒಂದು ವಿಜ್ಞಾನವಾಗಿದ್ದು ಇದು ವಸ್ತುನಿಷ್ಠವಾಗಿ ಮತ್ತು ತಾರ್ಕಿಕವಾಗಿ ಪರೀಕ್ಷಿಸಲ್ಪಡುತ್ತದೆ.
- ಈ ಮಾದರಿಯಲ್ಲಿ ತರಬೇತಿ ಪಡೆಯುವ ಶಿಕ್ಷಕರು ಸಂಶೋಧನಾ ಆಧಾರಿತ ಸಿದ್ಧಾಂತಗಳನ್ನು ಬೋಧಿಸುವ ಪ್ರಶಿಕ್ಷಕರುಗಳಿಂದ ಕಲಿಯುತ್ತಾರೆ.
- ನಿರ್ದಿಷ್ಟ ಕ್ಷೇತ್ರದಲ್ಲಿ ಅನುಭವವಿರುವವರ ಮೂಲಕ ಈ ಸಿದ್ಧಾಂತಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲಾಗುತ್ತದೆ.
- ಈ ಸಿದ್ಧಾಂತಗಳನ್ನು ಸೂಕ್ತ ಕಲಿಕಾ ಸನ್ನಿವೇಶದಲ್ಲಿ ಅನ್ವಯಿಸುವ ಪರಿಣತಿಯನ್ನು ಪ್ರಶಿಕ್ಷಣಾರ್ಥಿಗಳು ಪಡೆದುಕೊಂಡಾಗ ಮಾತ್ರ ಅವರನ್ನು ದಕ್ಷ ಶಿಕ್ಷಕರೆನ್ನಲಾಗುತ್ತದೆ.

**ಗುಣಗಳು:**

ಅನ್ವಯಿಕ ವಿಜ್ಞಾನ ಅಧ್ಯಾಪಕ ಶಿಕ್ಷಣದ ಮಾದರಿಯು ಹೊಂದಿರುವ ಗುಣಗಳೆಂದರೆ,



Digitised by Bharatavani, CIIL

- ಇದು ಅಧ್ಯಾಪಕ ಶಿಕ್ಷಣದಲ್ಲಿ ಅತ್ಯಂತ ಪರಿಣಾಮಕಾರಿ ಮಾದರಿಯಾಗಿದ್ದು ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ಜ್ಞಾನವನ್ನು ಬೆಳೆಸಲು ಸಹಕಾರಿಯಾಗಿದೆ.
- ಇದು ಸೈದ್ಧಾಂತಿಕ ಆಧಾರಿತವಾಗಿದ್ದು ಕಲಿಕಾರ್ಥಿಗಳಿಗೆ ಜ್ಞಾನವನ್ನು ಪಡೆದುಕೊಳ್ಳಲು ಮತ್ತು ಉತ್ತಮ ಅವಕಾಶಗಳನ್ನು ಪಡೆದು ಸಾಧನೆ ಮಾಡಲು ಸಹಾಯಕವಾಗಿದೆ.

**ಅವಗುಣಗಳು:**

ಪ್ರಪಂಚದಾದ್ಯಂತ ಹೆಚ್ಚಿನ ಬಳಕೆಯಲ್ಲಿರುವ ಅನ್ವಯಿಕ ವಿಜ್ಞಾನ ಅಧ್ಯಾಪಕ ಶಿಕ್ಷಣ ಮಾದರಿಯು ಕೆಲವೊಂದು ಹಿನ್ನೆಲೆಯಲ್ಲಿ ಅವಗುಣಗಳಿಂದ ಮುಕ್ತವಾಗಿಲ್ಲ. ಅವುಗಳೆಂದರೆ,

- ಪ್ರಾಯೋಗಿಕವಾಗಿ ಉಂಟಾದ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳಬಾರದು. ಏಕೆಂದರೆ ಸಂಶೋಧನೆ ಮತ್ತು ವೃತ್ತಿ ತರಬೇತಿಯ ನಡುವೆ ಬೇಧವನ್ನುಂಟು ಮಾಡುತ್ತದೆ.
- ತರಗತಿಯಲ್ಲಿ ವಿದ್ಯಾರ್ಥಿಗಳು ವೈಜ್ಞಾನಿಕ ಸಿದ್ಧಾಂತಗಳನ್ನು ಕಲಿಯುವಾಗ ಉಂಟಾಗುವ ಸಮಸ್ಯೆಗಳನ್ನು ಕೇಳುತ್ತಾರೆ.
- ಈ ಮಾದರಿಯು ಹಲವಾರು ಪ್ರಮುಖ ಆಂಗ್ಲಭಾಷಾ ಬೋಧನೆಯ ಸವಾಲುಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆ.
- ಈ ಮಾದರಿಯ ಮೇಲೆ ಸಂಶೋಧನೆ ನಡೆಸಿರುವ ಹಲವಾರು ಸಂಶೋಧಕರು ವೃತ್ತಿ ಬೆಳವಣಿಗೆಗೆ ಯವುದೇ ರೀತಿಯಲ್ಲಿ ಸಹಾಯಕವಾಗಿಲ್ಲ. ಇದೊಂದು ಸೈದ್ಧಾಂತಿಕ ಅಧ್ಯಯನವಾಗಿದೆ ಎಂದಿದ್ದಾರೆ.
- ಈ ಮಾದರಿಯಲ್ಲಿ ಕಲಿಕಾರ್ಥಿಯು ನಿಷ್ಕ್ರಿಯ ಕೇಳುಗ ಮಾತ್ರವಾಗಿದ್ದು ಪ್ರಶ್ನಿಸಲು ಅವಕಾಶವಿರುವುದಿಲ್ಲ ಬದಲಾಗಿ ಪರಿಣತರು ಹೇಳುವ ಸೂಚನೆಗಳನ್ನು ಮಾತ್ರ ಪಾಲಿಸಬೇಕಾಗುತ್ತದೆ.
- ತರಗತಿಯಲ್ಲಿ ವಿದ್ಯಾರ್ಥಿ-ಶಿಕ್ಷಕ, ಶಿಕ್ಷಕ-ವಿದ್ಯಾರ್ಥಿಗಳ ಸ್ವ-ಬೆಳವಣಿಗೆಗೆ ಅವಕಾಶವಿಲ್ಲ.
- ಅನ್ವಯಿಕ ವಿಜ್ಞಾನ ಮಾದರಿಯು ಬಾಹ್ಯ ಜ್ಞಾನವನ್ನು ಮಾತ್ರ ಅವಲಂಬಿಸಿರುವುದರಿಂದ ಇದು ಹೆಚ್ಚಾಗಿ ಈಗಾಗಲೇ ಇರುವಂತಹ ನೀತಿ ನಿಯಮಗಳನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ.
- ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಯಾವುದೇ ಅವಕಾಶಗಳಿರುವುದಿಲ್ಲ. ಅಷ್ಟೇ ಅಲ್ಲದೆ ಇರುವಂತಹ ಕ್ರಿಯಾಶೀಲತೆಯನ್ನು ಹೆಚ್ಚಿಸಲು/ವ್ಯಕ್ತಪಡಿಸಲು ಸಾಧ್ಯವಿಲ್ಲ.

ಹೀಗೆ ಹಲವಾರು ದೋಷಗಳನ್ನು ಹೊಂದಿರುವ ಅನ್ವಯಿಕ ವಿಜ್ಞಾನ ಅಧ್ಯಾಪಕ ಶಿಕ್ಷಣ ಮಾದರಿಯು ಪ್ರಸ್ತುತದ ನೈಜ ತರಗತಿಯ ಸನ್ನಿವೇಶಗಳಿಗೆ ಸೂಕ್ತ ವೈಜ್ಞಾನಿಕ ಪರಿಹಾರಗಳನ್ನು ನೀಡುವಲ್ಲಿ ವಿಫಲವಾಗಿದೆ.

**2. ಕ್ರಾಫ್ಟ್ ಮಾಡೆಲ್:**

ಕ್ರಾಫ್ಟ್ ಮಾದರಿಯು ವೃತ್ತಿ ಶಿಕ್ಷಣದಲ್ಲಿ ಅತ್ಯಂತ ಪುರಾತನ ಕಾಲದಿಂದಲೂ ಇದ್ದು ಇತ್ತೀಚಿನ ದಿನಗಳಲ್ಲೂ ಅಧ್ಯಾಪಕ ಶಿಕ್ಷಣದಲ್ಲಿ ಇದನ್ನು ಬಳಸಿಕೊಳ್ಳಲಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಇಂಗ್ಲಿಷ್ ಭಾಷಾ ಬೋಧಕರಿಗೆ ತರಬೇತಿ ನೀಡುವಲ್ಲಿ ಈ ಮಾದರಿಯನ್ನು ಪ್ರಮುಖವಾಗಿ ಬಳಸಲಾಗುತ್ತದೆ ಹಾಗೂ ಇದು ಭಾಷಾ ಕಲಿಕೆಯನ್ನು ಕುರಿತಾಗಿದ್ದು ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಪ್ರಾಯೋಗಿಕ ತರಗತಿಯ ಸಂದರ್ಭದಲ್ಲಿ ಉಪಯೋಗಕ್ಕೆ ಬರುತ್ತದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ಸಹಕಾರ ಮತ್ತು ಸಮನ್ವಯತೆಯನ್ನು ಅವಲಂಬಿಸಿರುವುದಲ್ಲದೆ ಯಾವುದೇ ಒಂದು ಕೋರ್ಸ್ ಅನ್ನು ನಡೆಸಲು ಬಳಸಬಹುದಾದರೂ ಅದನ್ನು ಇಡೀ ಅಧ್ಯಾಪಕ ಶಿಕ್ಷಣಕ್ಕೆ ಅಳವಡಿಸಲು ಸಾಧ್ಯವಾಗುವುದಿಲ್ಲ. ಬದಲಾಗಿ ಇದನ್ನು ಇಂಗ್ಲಿಷ್ ಭಾಷಾ ಶಿಕ್ಷಕರ ತರಬೇತಿ ಬೋಧನೆಯ ಕೌಶಲವನ್ನು ಹೆಚ್ಚಿಸಲು ಉತ್ತಮವಾಗಿ ಬಳಸಬಹುದಾಗಿದೆ.

ಈ ಮಾದರಿಯನ್ನು ಈ ಕೆಳಗಿನ ಧಾರಾ ಚಿತ್ರದ ಮೂಲಕ ನಿರೂಪಿಸಬಹುದಾಗಿದೆ.




ಈ ಮಾದರಿಯ ಪ್ರಮುಖ ಅಂಶಗಳನ್ನು ಈ ಮುಂದಿನಂತೆ ಗುರುತಿಸಬಹುದಾಗಿದೆ.

- ಈ ಮಾದರಿಯು ಅತ್ಯಂತ ಸರಳ ಮಾದರಿಯಾಗಿದ್ದು ಇದರಲ್ಲಿ ವಿದ್ಯಾರ್ಥಿ-ಶಿಕ್ಷಕರು ಮತ್ತು ವಿಷಯ ತಜ್ಞರು ನಿಕಟ ಸಂಪರ್ಕ ಹೊಂದಬಹುದಾಗಿದೆ.
- ಅಭ್ಯಾಸ ನಿರತರು ವಿಷಯ ತಜ್ಞರಾದ ಅನುಭವಿ ಶಿಕ್ಷಕರನ್ನು ಅನುಕರಣೆ ಮಾಡುವ ಮೂಲಕ ಎಲ್ಲಾ ಕೌಶಲಗಳನ್ನು ಮತ್ತು ತಂತ್ರಗಳನ್ನು ಕಲಿತುಕೊಳ್ಳುತ್ತಾರೆ.
- ಅಭ್ಯಾಸ ಬೋಧನೆ ಮತ್ತು ವೀಕ್ಷಣೆಯ ಫಲಿತಾಂಶವಾಗಿ ಕೌಶಲಗಳನ್ನು ಕಲಿಯಬಹುದಾಗಿದೆ.

**ಕ್ರಾಫ್ಟ್ ಮಾದರಿಯ ಗುಣಗಳು:**

- ದ್ವಿತೀಯ ಭಾಷೆಯನ್ನು ಬೋಧಿಸುವ ಶಿಕ್ಷಕರನ್ನು ತಯಾರಿಸುವವರಿಗೆ ಪ್ರಾಯೋಗಿಕ ಜ್ಞಾನವನ್ನು ನೀಡುತ್ತದೆ. ಇದರೊಂದಿಗೆ ತರಗತಿಯಲ್ಲಿರುವ ಕಲಿಕಾರ್ಥಿಗಳೂ ಕೆಲವೊಂದು

Digitised by Bharatavani, CIIL

ಪ್ರಾಥಮಿಕ ಜವಾಬ್ದಾರಿಗಳನ್ನು ಹೊಂದಿರಬೇಕಾಗುತ್ತದೆ.

- ಇದು ಅತ್ಯಂತ ಸುಲಭವಾಗಿ ಕಲಿಯುವ ಅಧ್ಯಾಪಕ ಶಿಕ್ಷಣದ ಮಾದರಿಗಳಲ್ಲಿ ಒಂದಾಗಿದ್ದು ಸಂಶೋಧಕರು ಇದನ್ನು ಪ್ರಮಾಣೀಕರಿಸಿದ್ದಾರೆ. ಇಲ್ಲಿ ವಿದ್ಯಾರ್ಥಿಗಳು ತಮ್ಮ ಶಿಕ್ಷಕರನ್ನು ಬಹುಬೇಗ ಅನುಕರಿಸುತ್ತಾರೆ.

**ಅವಗುಣಗಳು:**

ಅವಶ್ಯಕ ವಿಷಯ ಕಲಿಯುವ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮದ ಈ ಮಾದರಿಯು ಹಲವಾರು ಅವಗುಣಗಳನ್ನು ಹೊಂದಿದೆ. ಅವುಗಳೆಂದರೆ,

- ಈ ಮಾದರಿಯು ತರಬೇತಿ ನೀಡುವ ಪರಿಣತರಿಂದ ರಚಿಸಿದ ಒಂದು ಕಾರ್ಯತಂತ್ರವಾಗಿದ್ದು ಇಲ್ಲಿ ವಿದ್ಯಾರ್ಥಿ ಶಿಕ್ಷಕರು ನಿಷ್ಕ್ರಿಯಗೊಳ್ಳುವಂತೆ ಮಾಡುತ್ತದೆ.
- ಈ ಮಾದರಿಯು ಅವಶ್ಯಕವಾಗಿ ಪಾಲಿಸುವಂತಹದ್ದಾಗಿದ್ದು ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿಲ್ಲ. ಬದಲಾಗಿ ಇದು ಅನುಕರಣೆಯನ್ನು ಮಾತ್ರ ಅವಲಂಬಿಸಿದೆ.
- ಇದು ಸೈದ್ಧಾಂತಿಕ ಜ್ಞಾನಕ್ಕೆ ಅನುಗುಣವಾಗಿಲ್ಲ.
- ಈ ಮಾದರಿಯು ಇದುವರೆವಿಗೂ ಕ್ರಿಯಾಶೀಲತೆಗಾಗಲೀ ಅಥವಾ ಹೊಸ ಸಿದ್ಧಾಂತವನ್ನು ಅನ್ವಯಿಸಲು ಅವಕಾಶ ಮಾಡಿಕೊಟ್ಟಿಲ್ಲ.

**3. ವಿವೇಚನಾ ಮಾದರಿ:**

ಅಧ್ಯಾಪಕ ಶಿಕ್ಷಣದಲ್ಲಿ ಕಲಿಕಾ ಶಿಕ್ಷಕರು ಹೆಚ್ಚಾಗಿ ಈ ಮಾದರಿಯನ್ನು ಅನುಸರಿಸುತ್ತಿದ್ದು ಇದು ಹೆಚ್ಚಿನ ಅಭ್ಯಾಸಕ್ಕೆ ಮಹತ್ವ ನೀಡುತ್ತದೆ ಎಂದು ಸಂಶೋಧನೆಯಿಂದ ತಿಳಿದುಬಂದಿದ್ದು ಪ್ರಪಂಚದಾದ್ಯಂತ ಜಾರಿಗೆ ಬಂದಿದೆ. ಆದರೆ ಇದು ಬೋಧನೆಯ ಒಂದು ಹೊಸ ಆವಿಷ್ಕಾರವಾಗಿರದೆ ಶೈಕ್ಷಣಿಕ ಸಿದ್ಧಾಂತ ಮತ್ತು ಅಭ್ಯಾಸನಿರತರ ಸಂಖ್ಯೆಗನುಗುಣವಾಗಿ ಕಾರ್ಯನಿರ್ವಹಿಸುವ ಮಾದರಿಯಾಗಿದೆ. ವಿವೇಚನಾತ್ಮಕ ಚಿಂತನೆಯು ಹೆಚ್ಚಾಗಿ ಅಧ್ಯಾಪಕರ ಶಿಕ್ಷಣದ ಸಾಹಿತ್ಯದಿಂದ ಬಂದಿದ್ದು ಇದು ಜಾನ್‌ಡ್ಯೂಯಿ ರವರ ಅನ್ವೇಷಣಾ ಆಧಾರಿತ ಪರಿಕಲ್ಪನೆಗಳ ಮೇಲೆ ನಿಂತಿದೆ. ಈ ಮಾದರಿಯನ್ನು ಮೊಟ್ಟ ಮೊದಲಿಗೆ 1880ರ ದಶಕದಲ್ಲಿ ಡ್ಯೂಯಿ ರವರು ಆರಂಭಿಸಿದರು. ಕ್ರಮೇಣ ಈ ಮಾದರಿಯನ್ನು ಅಮೇರಿಕಾದಲ್ಲಿನ ಸಮಾಜಶಾಸ್ತ್ರಜ್ಞ ಡೊನಾಲ್ಡ್ ಎ – ಸ್ಕೊಹಾನ್ ನಂತರ 1881ರಲ್ಲಿ ಮೈಕೆಲ್ ಜೆ. ವೆಲ್ಲಾಸೀ ಹೆಚ್ಚಾಗಿ ವಿಮರ್ಶಾತ್ಮಕವಾಗಿ ವರ್ಣಿಸಿದರು.

ವಿವೇಚನಾತ್ಮಕ ಮಾದರಿಯು ಶಿಕ್ಷಕರ ವೃತ್ತಿ ಬೆಳವಣಿಗೆಯ ಸಾಮರ್ಥ್ಯವು ಅವರ ಅಭ್ಯಾಸದ ಮೂಲಕ ಪ್ರತಿಬಿಂಬಿಸುತ್ತದೆಂಬ ಕಲ್ಪನೆಯನ್ನು ಹೊಂದಿದೆ. ಇಲ್ಲಿ ಬೋಧನಾ ಅನುಭವವು ಅವರು ಭವಿಷ್ಯದ ಯೋಜನೆ ಮತ್ತು ಕ್ರಿಯೆಯನ್ನು ಕೈಗೊಳ್ಳಲು ಮತ್ತು ಅವರು ಮೌಲ್ಯಮಾಪನ ಮಾಡಿಕೊಂಡು ಪುನಃ ಸ್ಮರಿಸಲು ಅವಕಾಶವನ್ನು ಕಲ್ಪಿಸಿಕೊಡುತ್ತದೆ.

ವಲ್ಲಾಸೀ ರವರ ಪ್ರಕಾರ ಅಧ್ಯಾಪಕ ಶಿಕ್ಷಣದ ಕೋರ್ಸ್ ರಚನಾತ್ಮಕವಾಗಿದ್ದು ಅದು ಎರಡು ರೀತಿಯ ಜ್ಞಾನವನ್ನು ಒಳಗೊಂಡಿರುತ್ತದೆ.

1. **ಸ್ವೀಕರಿಸುವ ಜ್ಞಾನ:** ಇದು ವಿದ್ಯಾರ್ಥಿ ಶಿಕ್ಷಕರಾಗಿದ್ದಂತಹ ಸಂದರ್ಭದಲ್ಲಿ ಮಾದರಿ ಪಾಠಗಳ ಮೂಲಕ ಕಲಿಯುವ ಜ್ಞಾನ. ಎಲಾ ಸಿದ್ಧಾಂತಗಳು, ಪರಿಕಲ್ಪನೆಗಳು ಮತ್ತು ಕೌಶಲ್ಯಗಳು ಇದರಲ್ಲಿ ಸೇರಿರುತ್ತವೆ.
2. **ಅನುಭವದ ಜ್ಞಾನ:** ಇದು ಬೋಧನಾಭ್ಯಾಸದ ಸಮಯದಲ್ಲಿ ಪಡೆದುಕೊಂಡಂತಹ ಮತ್ತು ಬೆಳೆಸಿಕೊಂಡಂತಹ ಪರಿಪೂರ್ಣ ಜ್ಞಾನ.

ವಲ್ಲಾಸೀ ರವರ ವಿವೇಚನಾ ಮಾದರಿಯು ಸೇವಾಪೂರ್ವ ಮತ್ತು ಸೇವಾನಿರತ ಅಧ್ಯಾಪಕ ಶಿಕ್ಷಣಕ್ಕೆ ಅನ್ವಯಿಸುತ್ತದೆ. ಇದನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

1. **ಪೂರ್ವ ತರಬೇತಿ:** ವೃತ್ತಿ ಶಿಕ್ಷಣವನ್ನು ಪಡೆಯಲು ನಿರ್ಧರಿಸಿದಂತಹ ಯಾವುದೇ ವ್ಯಕ್ತಿಯು ಬೋಧನೆಯ ಬಗ್ಗೆ ಪೂರ್ವ ಜ್ಞಾನವಿಲ್ಲದೇ ಬರುವುದಿಲ್ಲ. ಅವನಿಗೆ ಈಗಾಗಲೇ ಕೆಲವೊಂದು ಪೂರ್ವ ಜ್ಞಾನವು ಬೋಧನೆಯ ಬಗ್ಗೆ ಇರುತ್ತದೆ.
2. **ವೃತ್ತಿ ಬೆಳವಣಿಗೆ:** ಇದು ಸಿದ್ಧಾಂತ ಮತ್ತು ಅಭ್ಯಾಸದ ಮೂಲಕ ವೃತ್ತಿ ಶಿಕ್ಷಣ ಅಥವಾ ವೃತ್ತಿ ಬೆಳವಣಿಗೆಯನ್ನು ಮಾಡಿಕೊಳ್ಳುವ ಹಂತವಾಗಿರುತ್ತದೆ.
3. **ವೃತ್ತಿ ದಕ್ಷತೆ:** ಈ ಮಾದರಿಯ ಪ್ರಮುಖ ಗುರಿಯು ವೃತ್ತಿ ದಕ್ಷತೆ/ಸಾಮರ್ಥ್ಯವನ್ನು ಹೆಚ್ಚಿಸುವುದೇ ಆಗಿದೆ.

ವೆಲ್ಲಾಸ್ ರವರ ವಿವೇಚನಾ ಮಾದರಿಯು ಒಂದು ವೃತ್ತಾಕಾರದ ಪ್ರಕ್ರಿಯೆಯಾಗಿದ್ದು ಇಲ್ಲಿ ಕಲಿಕಾರ್ಥಿಗಳು ತಮ್ಮ ಕಲಿಕಾನುಭವದ ಮೂಲಕ ತರಬೇತಿಯುದ್ದಕ್ಕೂ ಕಾರ್ಯನಿರತರಾಗಿರುತ್ತಾರೆ. ಈ ಮಾದರಿಯ ಪ್ರಮುಖ ಉದ್ದೇಶ ಸಿದ್ಧಾಂತ ಮತ್ತು ಪ್ರಕ್ರಿಯೆಯನ್ನು ಸೂಕ್ತವಾದ ಕ್ರಮದಿಂದ ನಿರಂತರ ಬೆಳೆಸುವುದು ಮತ್ತು ವೃದ್ಧಿಸುವುದಾಗಿದೆ. ಇಲ್ಲಿ ವಿದ್ಯಾರ್ಥಿ ಶಿಕ್ಷಕರು ಈಗಾಗಲೇ ತರಬೇತಿ ಪಡೆಯುವ ಸಂದರ್ಭದಲ್ಲಿ ಕೆಲವೊಂದು ಜ್ಞಾನವನ್ನು ಹೊಂದಿದ್ದು ಅದನ್ನು ಅವರು ತರಗತಿ ಬೋಧನೆಯಲ್ಲಿ ಎದುರಿಸುವ ಸನ್ನಿವೇಶಗಳಿಂದ ನೈಜವಾದ ರೂಪುರೇಷೆಯನ್ನು ಅನ್ವೇಷಿಸಿಕೊಳ್ಳುತ್ತಾರೆ ಮತ್ತು ಅದರ ಬಗ್ಗೆ ಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಯಾವಾಗ ನೈಜ ತರಗತಿಯಲ್ಲಿ ಈ ಸನ್ನಿವೇಶವನ್ನು ಎದುರಿಸುತ್ತಿರುತ್ತಾರೋ ಆಗ ಅವರು ತಮ್ಮ ಅಭ್ಯಾಸ ತರಬೇತಿಯಲ್ಲಿ ಅನುಭವಿ ಶಿಕ್ಷಕರು ತರಗತಿಯನ್ನು ಹಾಗೂ ತಮ್ಮನ್ನು ತಾವು ಹೇಗೆ ನಿಭಾಯಿಸಿಕೊಂಡರೆಂಬುದನ್ನು ಪುನಃ ಸ್ಮರಿಸಿಕೊಂಡು ತಾವು ನೈಜ ತರಗತಿಯಲ್ಲಿ ಎದುರಾಗುವ ಸನ್ನಿವೇಶಗಳಲ್ಲಿ ಹೇಗೆ ಅದನ್ನು ಅನ್ವಯಿಸಬೇಕೆಂಬುದರ ಬಗ್ಗೆ ನಿರ್ಧಾರ ತೆಗೆದುಕೊಂಡು ಆ ಸಂದರ್ಭದಲ್ಲಿ ಬೋಧನಾ ತಂತ್ರಗಳನ್ನು ಮೌಲ್ಯೀಕರಿಸಿ ತಮ್ಮ ವೃತ್ತಿಯಲ್ಲಿ ಅದನ್ನು ಅಳವಡಿಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ

Digitised by Bharatavani, CIIL

ವಿವೇಚನಾ ಅಧ್ಯಾಪಕ ಶಿಕ್ಷಣದ ಮಾದರಿಯು ವೃತ್ತಿಯಲ್ಲಿ ಹೇಗೆ ವಿವಿಧ ತೊಡಕುಗಳನ್ನು ನಿಯಂತ್ರಿಸಬೇಕು ಎಂಬುದನ್ನು ಮೌಲ್ಯೀಕರಿಸಿ ತಮ್ಮ ಪೂರ್ವ ಅನುಭವದ ಪುನಃಸ್ಮರಣೆಯ ಮೂಲಕ ತಿಳಿದುಕೊಳ್ಳಲು ಅವಕಾಶವಿರುತ್ತದೆ.

ವೆಲ್ಲಾಸ್ ರವರ ವಿವೇಚನಾ ಅಧ್ಯಾಪಕ ಶಿಕ್ಷಣದ ಮಾದರಿಯನ್ನು ಈ ಕೆಳಕಂಡ ಚಿತ್ರದ ಸಹಾಯದಿಂದ ವಿವರಿಸಬಹುದು.




ಈ ಮಾದರಿಯು ವೃತ್ತಿ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವಂತಹ ಒಂದು ಪ್ರಮುಖ ಮಾರ್ಗವಾಗಿದ್ದು ಈ ಪ್ರಕ್ರಿಯೆಯಲ್ಲಿ ಅಭ್ಯಾಸವು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಇದರ ಪ್ರತಿಫಲವು ವೃತ್ತಿಯಲ್ಲಿ ಗೋಚರಿಸುತ್ತದೆ. ಆದ್ದರಿಂದ ಇದೊಂದು ಅತ್ಯಂತ ಸಮಂಜಸ ಮಾದರಿಯಾಗಿದ್ದು ಎಲ್ಲರೂ ಅನುಸರಿಸಬಹುದಾದ ಅಧ್ಯಾಪಕ ಶಿಕ್ಷಣದ ಅತ್ಯುತ್ತಮ ಮಾದರಿಯಾಗಿದೆ.

**ಗುಣಗಳು:** ವಿವೇಚನಾ ಅಧ್ಯಾಪಕ ಶಿಕ್ಷಣದ ಮಾದರಿಯಲ್ಲಿ ವಿವೇಚನಾಶೀಲ ಬೋಧನೆಯು ಶಿಕ್ಷಕರನ್ನು ರೂಪಿಸುವಲ್ಲಿ ಇರುವ ಒಂದು ಪ್ರಮುಖ ಮಾದರಿಯಾಗಿದ್ದು ಅದು ಹಲವು ಗುಣಗಳನ್ನು ಹೊಂದಿದೆ.

- ಇದು ಶಿಕ್ಷಕರು ತಾವು ಅಭ್ಯಾಸ ಕ್ರಿಯೆಯಲ್ಲಿ ತೊಡಗಲು ಮತ್ತು ಅದರ ಪ್ರತಿಫಲವನ್ನು ನೈಜ ತರಗತಿಯಲ್ಲಿ ಅನ್ವಯಿಸಲು ಜಾಗೃತರಾಗುವಂತೆ ಮಾಡಲು ಸಹಾಯಕವಾಗುತ್ತದೆ.
- ಈ ಮಾದರಿಯಲ್ಲಿ ಪ್ರತಿಯೊಬ್ಬ ಶಿಕ್ಷಕನೂ ತನ್ನ ತರಗತಿಯ ಬೋಧನಾ ಪ್ರಕ್ರಿಯೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸ್ವತಃ ಬೋಧನಾ ಮತ್ತು ಕಲಿಕಾ ಸಿದ್ಧಾಂತಗಳನ್ನು ಬಳಸಿಕೊಂಡು ನಿರ್ದಿಷ್ಟ ಬೋಧನಾ ವಿಧಾನವನ್ನು ಅನ್ವೇಷಿಸಿಕೊಳ್ಳಲು ಸಹಾಯಕವಾಗಿದೆ.
- ಈ ಮಾದರಿಯು ಪ್ರಕ್ರಿಯೆ ಆಧಾರಿತವಾಗಿದ್ದು ಶಿಕ್ಷಕರು ತಮ್ಮ ಕ್ರಿಯಾಶೀಲತೆಯನ್ನು ಬಳಸಿಕೊಳ್ಳಲು ಅವಕಾಶವನ್ನು ನೀಡುತ್ತದೆ.
- ಶಿಕ್ಷಕರು ತಮ್ಮ ತರಗತಿಯಲ್ಲಿ ಉಂಟಾಗುವ ಸಮಸ್ಯೆಗಳಿಗೆ ಸ್ವಯಂ ಪರಿಹಾರ ಕಂಡುಕೊಳ್ಳಲು ಅವಕಾಶ ಒದಗಿಸುತ್ತದೆ.
- ಇತರ ಮಾದರಿಗಳಂತೆ ವಿದ್ಯಾರ್ಥಿ ಶಿಕ್ಷಕರನ್ನು ನಿಷ್ಕ್ರಿಯರನ್ನಾಗಿ ಸದೆ ಈ ಮಾದರಿ ಕ್ರಿಯಾಶೀಲರಾಗಿರುವಂತೆ ಮಾಡುತ್ತದೆ ಮತ್ತು ಪ್ರಶಿಕ್ಷಕರು ಅವರೊಂದಿಗೆ ಸಹಭಾಗಿಗಳಾಗಿ ಭಾಗವಹಿಸಲು ಅವಕಾಶ ನೀಡುತ್ತದೆ.

ಒಟ್ಟಿನಲ್ಲಿ ಅತ್ಯಂತ ಹೆಚ್ಚು ಪ್ರಚಲಿತವಿರುವ ನೂತನ ಅಧ್ಯಾಪಕ ಶಿಕ್ಷಣದ ಮಾದರಿಯು ಇದಾಗಿದ್ದು ಶಿಕ್ಷಕರ ಬೆಳವಣಿಗೆಯ ಎಲ್ಲ ಅಗತ್ಯಗಳನ್ನು ಪೂರೈಸುವ ಏಕೈಕ ಮಾದರಿಯಾಗಿದೆ.

**ಅವಗುಣಗಳು:**

ಈ ಮಾದರಿಯ ಕೆಲವು ಮಿತಿಗಳು ಹೀಗಿವೆ.

• ಈ ಮಾದರಿಯು ಕಲಾತ್ಮಕವಾಗಿ ರಚಿತವಾಗಿದ್ದು ಚಿಂತನೆಗೆ ಮಹತ್ವ ನೀಡುತ್ತದೆಯೇ ಹೊರತು ಇದರಲ್ಲಿ ಚರ್ಚೆಗೆ ಹೆಚ್ಚಿನ ಅವಕಾಶವಿಲ್ಲ.

• ಇದು ನೂತನವಾಗಿ/ಪ್ರಾರಂಭದಲ್ಲಿ ಅಭ್ಯಾಸ ಮಾಡುವವರಿಗೆ ಹೆಚ್ಚಿನ ಒತ್ತಡ ಉಂಟುಮಾಡುತ್ತದೆ.

ಮೇಲಿನಂತೆ ವಿವರಿಸಲ್ಪಟ್ಟ ಅಧ್ಯಾಪಕ ಪ್ರಶಿಕ್ಷಣ ಮಾದರಿಗಳು ಅಧ್ಯಾಪಕ ಶಿಕ್ಷಣದ ಬೆಳವಣಿಗೆಗೆ ಮತ್ತು ದಕ್ಷ ಬೋಧಕರನ್ನು ಸಿದ್ಧಪಡಿಸಲು ಇರುವಂತಹ ಪ್ರಮುಖ ಮಾದರಿಗಳಾಗಿದ್ದು ಅಧ್ಯಾಪಕರು ವೃತ್ತಿ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗಿರುವ ಮಾದರಿಗಳಾಗಿವೆ.

– ಡಾ. ಶೀಲಾ ಜಿ.

## ಅಧ್ಯಾಪಕರ ಮೌಲ್ಯಮಾಪನ

ಛೇಂಬರ್ಸ್ ನಿಘಂಟಿನ ಪ್ರಕಾರ ಮೌಲ್ಯಮಾಪನ (ಅಪ್ರೈಸಲ್) ಎಂದರೆ ಮೌಲ್ಯನಿರ್ಣಯಿಸುವಿಕೆ (ವಾಲ್ಯುಯೇಷನ್); ಗುಣನಿರ್ಣಯ ಮಾಡುವುದು, ಇಂಗ್ಲಿಷ್‌ನಲ್ಲಿ ಅಪ್ರೈಸಲ್, ಅಸೆಸ್‌ಮೆಂಟ್ ಮತ್ತು ಎವಾಲ್ಯುಯೇಷನ್ ಈ ಪದಗಳನ್ನು ಸಮವಾಚಕವಾಗಿ ಕಾಲಿನ್ಸ್ ಥೆಸಾರಸ್‌ನಲ್ಲಿ ಬಳಸಲಾಗಿದೆ. ಮೌಲ್ಯಮಾಪನ ಸಾಮರ್ಥ್ಯ ಮತ್ತು ಪರಿಣಾಮಕಾರಿತ್ವಕ್ಕೆ ಸಂಬಂಧಿಸಿರುವುದರಿಂದ ಯಾವುದೇ ಸಂಸ್ಥೆಯಲ್ಲಿ ನಡೆಯುವ ಮೌಲ್ಯಮಾಪನ ತಾವು ಯಾರು ತಾವು ಏನಾಗಬಲ್ಲೆವು ಎಂಬ ವ್ಯಕ್ತಿಗಳ ಅಭಿಪ್ರಾಯದ ಕೆಲವು ಮುಖ್ಯ ಅಂಶಗಳನ್ನು ಒಳಗೊಂಡಿರುತ್ತದೆ. ಕೆಲವೊಮ್ಮೆ ಇದು ಸಂಸ್ಥೆಯ ಹಾಗೂ ವ್ಯಕ್ತಿಗಳ ಪರಸ್ಪರ ವಿರೋಧವಾಗಿರುವ ಗುರುಗಳ ಬಗ್ಗೆ ವ್ಯವಹರಿಸುವ ಬಿಂದುವಿನಂತಿರುವುದು. ಮುಖ್ಯ ಕಾನೂನು ತೊಡಕುಗಳನ್ನುಂಟುಮಾಡಿ ಈ ಪ್ರಕ್ರಿಯೆ ನ್ಯಾಯಾಲಯಕ್ಕೆ ದಾರಿಮಾಡಿಕೊಡಬಲ್ಲದು. ಎಲ್ಲಕ್ಕಿಂತ ಮಿಗಿಲಾಗಿ ಆ ಶಂಕಿತರು, ಆತಂಕವುಳ್ಳವರು, ಪ್ರತಿವಾದಿಗಳು ಸ್ವಲ್ಪಮಟ್ಟಿಗೆ, ಮುಖ್ಯ ವಿಷಯಗಳ ಬಗ್ಗೆ ಮಾತನಾಡಲು ಅಪರ್ಯಾಪ್ತ ಸಿದ್ಧತೆಯುಳ್ಳವರು ಮತ್ತು ತಪ್ಪು ಕಲ್ಪನೆಗಳು ಪೂರ್ವಗ್ರಹಿಗಳು, ಆಸೆಗಳು ಮತ್ತು ಮೌಲ್ಯಗಳಿಂದ ತುಂಬಿದವರೂ ಆದ ಇಬ್ಬರು ಮನುಷ್ಯರ ನಡುವಿನ ಅನ್ಯೋನ್ಯಕ್ರಿಯೆಯೇ ಈ ಮೌಲ್ಯಮಾಪನವೆಂದು ಹೇಳಬಹುದು. (ಮೊಹರ್‌ಮನ್ ಮತ್ತು ಇತರರು 1989). ಮೌಲ್ಯಮಾಪನವು ಒಂದು ಪ್ರಕ್ರಿಯೆಯಾಗಿದ್ದು ವ್ಯಕ್ತಿ ಅಥವಾ ಸಂಸ್ಥೆಯನ್ನು ಕುರಿತ ಗುಣಾತ್ಮಕ ನಿರ್ಣಯದ ಮೇಲೆ ಒತ್ತನ್ನು ನೀಡುತ್ತದೆ.

Digitised by Bharatavani, CIIL

ಅಧ್ಯಾಪಕರ ಮೌಲ್ಯಮಾಪನವು ಅನೇಕ ಉದ್ದೇಶಗಳನ್ನು ಹೊಂದಿದೆ. ಮೌಲ್ಯಮಾಪನದ ಆದ್ಯಂತ ಗುರಿಯೆಂದರೆ ಬೋಧನೆಯ ಮೂಲ್ಯ, ಬೆಲೆ, ಗುಣದೋಷಗಳನ್ನು ನಿರ್ಧರಿಸುವುದು (ಸ್ಕ್ರಿವನ್, 1973ಎ). ವಿದ್ಯಾರ್ಥಿಗಳ ಹಿತರಕ್ಷಣೆ, ಅಧ್ಯಾಪಕರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆಂಬ ಪುನರಾಶ್ವಸನೆ, ನಿರೂಪಿಸಲು ಅಧ್ಯಾಪಕ ಮೌಲ್ಯಮಾಪನದಲ್ಲಿ ಆಸಕ್ತರಾಗಿರುವ ಆಡಳಿತಾಧಿಕಾರಿಗಳಿಗೆ ಅಶ್ವಾಸನೆ ಮತ್ತು ಸಹಾಯನೀಡುವುದು, ಅಧ್ಯಾಪಕ ಶಿಕ್ಷಣ ನೀಡುವವರಿಗೆ (Teacher Educators) ಮಾಹಿತಿ ಒದಗಿಸುವುದು, ಹಾಗೂ ಆಚರಣೆಗಳನ್ನು ಮತ್ತಷ್ಟು ಮಾರ್ಪಡಿಸಿ ರೂಪಿಸಿವುದು ಅಧ್ಯಾಪಕ ಮೌಲ್ಯಮಾಪನದ ಹೆಚ್ಚು ವಿಶಿಷ್ಟ ಉದ್ದೇಶಗಳಾಗಿವೆ. ಅಧ್ಯಾಪಕರ ಸಾಧನೆ, ಪ್ರಭಾವ ಮತ್ತು ವೃತ್ತಿಪರ ಚಟುವಟಿಕೆಗಳನ್ನು ದಾಖಲಿಸಿ ಅಂಗೀಕರಿಸುವುದು ಅಧ್ಯಾಪಕ ಮೌಲ್ಯಮಾಪನದ ಮತ್ತೊಂದು ಪ್ರಮುಖ ಉದ್ದೇಶ. ವೃತ್ತಿಯಲ್ಲಿ ಸುಧಾರಣೆ ಅಧ್ಯಾಪಕ ಮೌಲ್ಯಮಾಪನದ ದೀರ್ಘಕಾಲೀನ ಉದ್ದೇಶ. ಅಧ್ಯಾಪಕ ಮೌಲ್ಯಮಾಪನ ಪ್ರತ್ಯೇಕ ಅಧ್ಯಾಪಕರ ಪರಿಧಿಯನ್ನು ಮೀರಿ ಶಿಕ್ಷಕರ (Educator) ಹಾಗೂ ಆಡಳಿತಗಾರರ ದೊಡ್ಡ ಗುಂಪನ್ನು ಗುರಿಯಾಗಿಟ್ಟುಕೊಂಡಿದೆ. ಕಾರಣ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗೆ ಸಹಾಯಕವಾಗುವ ಅಧ್ಯಾಪಕ ಮೌಲ್ಯಮಾಪನದ ದತ್ತಾಂಶಗಳನ್ನು ಇದು ಒದಗಿಸುತ್ತದೆ.

ಅಧ್ಯಾಪಕರ ಹಾಗೂ ಬೋಧನೆಯ ಮೌಲ್ಯಮಾಪನ ತೀವ್ರವಾದ ವಿವಾದಕ್ಕೊಳಗಾಗಿರುವ ವಿಷಯವಾಗುತ್ತಲೇ ಬಂದಿದೆ. ಆದಾಗ್ಯೂ, ಮೌಲ್ಯಮಾಪನದ ಮೇಲಿನ ನವೀಕೃತ ಒತ್ತು ಮತ್ತು ಅದನ್ನು ಅಧ್ಯಾಪಕರ ಉತ್ತರದಾಯಿತ್ವದೊಡನೆ ಜೋಡಿಸುವ ಪ್ರಯತ್ನ ಮೂರು ಪ್ರವೃತ್ತಿಗಳಿಗೆ ಆಗಿರುವ ಪ್ರತಿಕ್ರಿಯೆಯಾಗಿದೆ. ಅಪರ್ಯಾಪ್ತ ವಿದ್ಯಾರ್ಥಿ ಸಾಧನೆ, ಮೂಲಭೂತ ಸುಧಾರಣೆಯ ಪ್ರಯತ್ನ ಮತ್ತು ಬೋಧನೆ–ಕಲಿಕೆಯ ಹೊಸ ಪ್ರವೃತ್ತಿಗಳು, ಎಲ್ಲಾ ಸ್ತರದ ವಿದ್ಯಾರ್ಥಿಗಳ ಸಾಧನಾ ಮಟ್ಟವನ್ನು ಕುರಿತು ಎಲ್ಲೆಡೆಯೂ ಇರುವ ಅತೃಪ್ತಿ ಇವೆಲ್ಲವನ್ನೂ ಭಾಗಶಃ ಸಮಾಧಾನಕರವಲ್ಲದ ಅಧ್ಯಾಪಕರ ಕಾರ್ಯದಕ್ಷತೆಗೆ ಸಂಬಂಧಿಸಲಾಗಿದೆ. ಅಧ್ಯಾಪಕರ ಅಪರ್ಯಾಪ್ತ ಕಾರ್ಯದಕ್ಷತೆಯ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಾ ಅಧ್ಯಾಪಕರನ್ನು ಕುರಿತ ರಾಷ್ಟ್ರೀಯ ಆಯೋಗ (1983–95) (National Commission on Teachers) "ಅದನ್ನು ಒಂದು ಜಾಡ್ಯವೆಂಬ ಪದವನ್ನು ಉಪಯೋಗಿಸುವುದೇ ಆದರೆ ಅದು ಅನಿಯಂತ್ರಿತವಾಗಿದ್ದು ಎಷ್ಟು ವ್ಯಾಪಕವಾಗಿ ಹರಡಿದೆಯೆಂದರೆ ಅದರ ಹಾನಿಕಾರಕ ಪರಿಣಾಮಗಳಿಂದ ತಪ್ಪಿಸಿಕೊಳ್ಳದ ರಾಷ್ಟ್ರದ ಯಾವುದೇ ಶೈಕ್ಷಣಿಕ ಸೇವೆಯೂ ಇಲ್ಲವೆಂದು ಹೇಳಬಹುದು" ಎಂಬ ತಥ್ಯವನ್ನು ಒಪ್ಪಿಕೊಂಡಿದೆ. (ಪ್ಯಾರಾ 9.05, ಪಿ68). ಇಂದಿನ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ, "ಒಂದು ಕಾಲಾವಧಿಯಲ್ಲಿ ಸಂಬಂಧಿತ ಅಧ್ಯಾಪಕನ ಕಾರ್ಯವು ಸ್ಥಾಯಿಯಾಗಿ ಅತೃಪ್ತಿಕರವಾಗಿದ್ದರೂ ಹಲವು ಸಂದರ್ಭಗಳಲ್ಲಿ ಆತನ ಕಾರ್ಯ ಹಾಗೂ ವ್ಯವಹಾರಗಳು ತೃಪ್ತಿಕರವಾಗಿಲ್ಲವೆಂದು ಮೌಲ್ಯಮಾಪನೆ ಮಾಡದೆ ವ್ಯವಹಾರದ ಸಮಗ್ರ ಮೌಲ್ಯಮಾಪನ ಪ್ರಕ್ರಿಯೆಗೆ ಅರ್ಥವಿಲ್ಲದಂತೆ ಮಾಡಲಾಗಿದೆ" ಎಂದು ಆಯೋಗ ಹೇಳಿದೆ.

ವಿದ್ಯಾರ್ಥಿಯ ಸಾಧನೆಯನ್ನು ಉತ್ತಮಗೊಳಿಸಲು ಅಧ್ಯಾಪಕರ ಕಾರ್ಯದಕ್ಷತೆ ಮತ್ತು ಗುಣಮಟ್ಟ ನಿರ್ಣಾಯಕವಾದ ಪೂರ್ವಾಪೇಕ್ಷಿತ ಅಂಶವಾಗಿವೆಯೆಂದು ವಿಮರ್ಶಕರು ವಾದಿಸುತ್ತಾರೆ. ಅಧ್ಯಾಪಕರನ್ನು ತಮ್ಮ ಕೆಳಮಟ್ಟದ ಕಾರ್ಯಸಾಮರ್ಥ್ಯಕ್ಕೆ ಉತ್ತರದಾಯಿಗಳನ್ನಾಗಿ ಮಾಡದಿರುವ ವ್ಯವಸ್ಥೆಯ ಅಸಾಮರ್ಥ್ಯವು ಅತೃಪ್ತಿಕರ ಶಿಕ್ಷಣ ಮಟ್ಟಕ್ಕೆ ಕಾರಣವೆಂದು ಪರಿಗಣಿಸಲಾಗುತ್ತದೆ. ಎರಡನೆಯದಾಗಿ, ವಿಕೇಂದ್ರೀಕರಣ ಮತ್ತು ಅಧ್ಯಾಪಕರ ಹೆಚ್ಚಿನ ಸಹಭಾಗಿತ್ವಗಳ ಮೇಲೆ ಒತ್ತು ನೀಡುವ ಮೂಲಭೂತ ಸುಧಾರಣೆಗಳು ಅಧ್ಯಾಪಕರ ಈ ಮೌಲ್ಯಮಾಪನಗಳನ್ನು ಪ್ರಭಾವೀ ನಿರ್ಧಾರಕ ಅಂಶಗಳೆಂದು ಪರಿಗಣಿಸುತ್ತವೆಯಲ್ಲದೆ ಅವರ ಸಾಮರ್ಥ್ಯವನ್ನು ವೃದ್ಧಿಸಲು ಅಧ್ಯಾಪಕರ ವೃತ್ತಿಪರ ವಿಕಾಸದ ಅಗತ್ಯಗಳನ್ನು ಗುರುತಿಸಲು ಅವುಗಳನ್ನು ಉಪಾಯವಾಗಿ ಬಳಸುತ್ತವೆ. ಅಧ್ಯಾಪಕರು ತಮ್ಮ ಅಭ್ಯಾಸಗಳನ್ನು ಅವಲೋಕಿಸಲು, ವಿಶ್ಲೇಷಿಸಿ ಮೌಲ್ಯಮಾಪನ ಮಾಡಲು ಹಾಗೂ ಅಗತ್ಯವಿದ್ದಂತೆ ಬದಲಾವಣೆಗಳನ್ನು ಕಾರ್ಯರೂಪಕ್ಕೆ ತರಲು ಅವರಿಗೆ ಸಹಾಯ ನೀಡುವ ಉಪಕರಣದಂತೆ ಮೌಲ್ಯಮಾಪನವನ್ನು ಪರಿಗಣಿಸಲಾಗುತ್ತದೆ. ಮೂರನೆಯದಾಗಿ, ಮತ್ತೊಬ್ಬರ ದೃಷ್ಟಿಕೋನಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವವರನ್ನಾಗಿ ಕಾಣದೆ ಕಲಿಕಾರ್ಥಿಯನ್ನು ತನ್ನ ಜ್ಞಾನವನ್ನು ತಾನೇ ನಿರ್ಮಿಸಿಕೊಳ್ಳುವವನಂತೆ ಭಾವಿಸುವ ಬೋಧನೆ–ಕಲಿಕೆಯ ಪರಿಕಲ್ಪನೆಯಲ್ಲಿ ಆಗುತ್ತಿರುವ ಮಾರ್ಪಾಡಿನ ಪ್ರತಿಕ್ರಿಯೆಯ ರೂಪದಲ್ಲಿ ಅಧ್ಯಾಪಕ ಮೌಲ್ಯಮಾಪನ ಹೆಚ್ಚು ಒತ್ತನ್ನು ಪಡೆಯುತ್ತಿದೆ. ಇದಕ್ಕೆ ಸದ್ಯದಲ್ಲಿ ಪ್ರಚಲಿತವಿರುವ ಅಧ್ಯಾಪಕ ಮೌಲ್ಯಮಾಪನ ಮಾದರಿಗಳಿಗಿಂತ ವಿಭಿನ್ನವಾದ ಬೋಧನೆ–ಕಲಿಕೆಯ ಪ್ರಕ್ರಿಯೆಯ ಆಳವಾದ ವೈಯಕ್ತಿಕ ಜ್ಞಾನ ಮತ್ತು ಆ ಪ್ರಕ್ರಿಯೆಯ ಸಕ್ರಿಯ ಪ್ರೋತ್ಸಾಹಕರು ತಾವೇ ಆಗಿರುವೆವು ಎಂಬ ಪುನರ್ನಿಮಿತ ಪಾತ್ರದ ಬೋಧನೆ ಇವುಗಳನ್ನು ಪಡೆಯಲು ಸಹಕಾರಿಯಾಗುವ ಅಧ್ಯಾಪಕ ಮೌಲ್ಯಮಾಪನ ಮಾದರಿಗಳ ಅವಶ್ಯಕತೆಯಿದೆ.

**ರೂಪಣಾತ್ಮಕ ಹಾಗೂ ಸಂಕಲಿತ ಮೌಲ್ಯಮಾಪನ:**

ಅಧ್ಯಾಪಕ ಮೌಲ್ಯಮಾಪನ ಸ್ವತಃ ಅಧ್ಯಾಪಕರಿಗೇ ಎರಡು ವಿಧದಲ್ಲಿ ಉಪಯುಕ್ತವಾಗಿದೆ. (ಸ್ಕ್ರಿವೆನ್, 1967, 1981). ಪ್ರಥಮತಃ, ಮೌಲ್ಯಮಾಪನದ ಮಾಹಿತಿಗಳನ್ನು ಕಾರ್ಯದಕ್ಷತೆಯನ್ನು ಸುಧಾರಿಸಲು, ಸದ್ಯದ ಕಾರ್ಯಶೈಲಿಯನ್ನು ಮಾರ್ಪಡಿಸಲು ಮತ್ತು ಹೊಸ ಕಾರ್ಯನೀತಿಗಳನ್ನು ವಿಕಾಸಗೊಳಿಸಲು ಹಿನ್ನುಣಿಕೆಯಾಗಿ ಉಪಯೋಗಿಸಬಹುದು. ಇದನ್ನು ರಚನಾತ್ಮಕ ಮೌಲ್ಯಮಾಪನ ಎಂದು ಕರೆಯುವರು ಮತ್ತು ಇದರ ಖಚಿತ ಉದ್ದೇಶ ಕಾರ್ಯದಕ್ಷತೆಯನ್ನು ಸುಧಾರಿಸುವುದು. ವಿದ್ಯಾರ್ಥಿಗಳು, ಸಹಯೋಗಿಗಳು ಅಥವಾ ಮೇಲ್ವಿಚಾರಕರಿಂದ ಸಂಗ್ರಹಿಸಿದ ಪ್ರಮುಖ ಹಿನ್ನುಣಿಕೆಗಳನ್ನು ಹೊಂದಿರುವ ಮಾಹಿತಿಯನ್ನು ಅಧ್ಯಾಪಕರಿಗೆ ಒದಗಿಸಲಾಗುತ್ತದೆ. ಮತ್ತು ಇದರ ಉದ್ದೇಶ ಸಕಾರಾತ್ಮಕ

Digitised by Bharatavani, CIIL

ಬದಲಾವಣೆಗಳನ್ನು ತರುವುದಾಗಿರುತ್ತದೆ. ವ್ಯಕ್ತಿತ್ವ ವಿಕಾಸದ ಅವಶ್ಯಕತೆಯನ್ನು ಆಧರಿಸಿದ ಕಾರ್ಯಕ್ರಮಗಳ ವಿಕಸನಕ್ಕೆ ಇದು ಆಧಾರಭೂತವಾಗಿದೆ. ಸಂಕಲಿತ ಮೌಲ್ಯಮಾಪನ ಆಡಳಿತಾತ್ಮಕ ನಿರ್ಣಯ, ಪ್ರೋತ್ಸಾಹನ, ಯೋಗ್ಯತೆಯನ್ನು ಆಧರಿಸಿದ ವೇತನ ಬಡ್ತಿ ಮತ್ತು ಇತರ ಬಿರುದು ಸನ್ಮಾನಗಳಿಗಾಗಿ ಅಗತ್ಯವಿರುವ ಆಧಾರವನ್ನು ಒದಗಿಸುವುದನ್ನು ಗುರಿಯಾಗಿಟ್ಟುಕೊಂಡಿದೆ. ಒಟ್ಟಾರೆ, ಬ್ರಿಟಿಷ್ ಮತ್ತು ಅಮೆರಿಕನ್ ವ್ಯವಸ್ಥೆಗಳು ಕ್ರಮವಾಗಿ ರಚನಾತ್ಮಕ ಮತ್ತು ಸಂಕಲಿತ ಮೌಲ್ಯಮಾಪನಗಳ ಮಾದರಿಗಳನ್ನು ಅನುಸರಿಸುತ್ತವೆ. ಬ್ರಿಟನ್ನಿನ ಶಿಕ್ಷಣ ವ್ಯವಸ್ಥೆ ಅಧ್ಯಾಪಕರ ವೃತ್ತಿಪರ ಅಭಿವೃದ್ಧಿಯಲ್ಲಿ ಸಹಕಾರಿಯಾಗುವ ಉಪಕರಣದ ಮೌಲ್ಯಮಾಪನ ಎಂಬ ದೃಷ್ಟಿಕೋನದಿಂದ ರಚನಾತ್ಮಕ ಮೌಲ್ಯಮಾಪನವನ್ನು ಅನುಸರಿಸುತ್ತದೆ. ಮತ್ತೊಂದೆಡೆ ಅಮೆರಿಕಾದ ಶಿಕ್ಷಣ ವ್ಯವಸ್ಥೆ ಸಂಕಲಿತ ಮೌಲ್ಯಮಾಪನವನ್ನು ಅನುಸರಿಸುತ್ತಾ ವಿಶೇಷವಾಗಿ ವೃತ್ತಿಯಿಂದ ಸಾಮರ್ಥ್ಯರಹಿತ ಅಧ್ಯಾಪಕರನ್ನು ತೆಗೆದುಹಾಕಲು, ನಿರ್ಣಯಗಳನ್ನು ಕೈಗೊಳ್ಳಲು ಮೌಲ್ಯಮಾಪನವನ್ನು ಬಳಸಿಕೊಳ್ಳುತ್ತದೆ. ಫಲಸ್ವರೂಪವಾಗಿ, ಇಂಥ ಮೌಲ್ಯಮಾಪನಗಳ ಮುಖಾಂತರ ಕೈಗೊಂಡ ಯೋಗ್ಯತಾ ನಿರ್ಧಾರದ ಆಧಾರದ ಮೇಲೆ ಅಧ್ಯಾಪಕರ ಕರಾರನ್ನು ನವೀಕರಿಸಲಾಗುತ್ತದೆ ಇಲ್ಲವೇ ಸಮಾಪ್ತಿಗೊಳಿಸಲಾಗುತ್ತದೆ. ಸಂಕಲಿತ ಮೌಲ್ಯಮಾಪನ ಮಾದರಿಗಳು ಅವುಗಳ ಪರಿಣಾಮಗಳಿಂದಾಗಿ ಸಾಮಾನ್ಯತಃ ವ್ಯಾಪ್ತಿಯಲ್ಲಿ ಸೀಮಿತವಾಗಿದ್ದು ಅದನ್ನು ರೂಢಿಗ ತರಬೇಕಾದರೆ ಹೆಚ್ಚು ನಿಷ್ಠುರ ಹಾಗೂ ವ್ಯವಸ್ಥಿತವಾಗಿ ಪ್ರಯೋಗಿಸಬೇಕಾದ ಅಗತ್ಯವಿದೆ.

**ಮೌಲ್ಯಮಾಪನ ವಿಧಾನಗಳು:**

ಶಾಲೆಗಳಲ್ಲಿ ಈ ಕೆಳಗಿನ ಮೌಲ್ಯಮಾಪನಾ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

1. **ವಿವರಣಾತ್ಮಕ ಮೌಲ್ಯಮಾಪನ:** ಇದು ಅಧಿಕಾಂಶ ಉಪಯೋಗಿಸುವ ಅಧ್ಯಾಪಕ ಮೌಲ್ಯಮಾಪನ. ಈ ವಿಧಾನದಲ್ಲಿ ಮೌಲ್ಯಮಾಪನ ಮಾಡುವವರು ಒಂದು ಗೊತ್ತಾದ ಕಾಲಾವಧಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಾಪಕನ ಕಾರ್ಯದ ಬಗ್ಗೆ ವರ್ಣಾನಾತ್ಮಕ ವಿವರವನ್ನು ಬರೆಯುತ್ತಾನೆ. ಈ ವಿಧದ ಮೌಲ್ಯಮಾಪನದಲ್ಲಿ ಸಾಮಾನ್ಯವಾಗಿ ಮಾನದಂಡಗಳನ್ನು ಹೇಳಲಾಗುವುದಿಲ್ಲ. ಅಥವಾ ಅವು ಸ್ಪಷ್ಟವಾಗಿರುವುದಿಲ್ಲ ಹಾಗೂ ಮೌಲ್ಯಮಾಪನ ಮಾಡಿಸಿಕೊಳ್ಳುವವರಿಗೆ ತಿಳಿಸದಂತೆ ಅಥವಾ ಅವರೊಡನೆ ಪರಾಮರ್ಶನ ಮಾಡದೆಯೆ ಇದು ನಡೆಯುತ್ತದೆ. ಈ ಪ್ರಕ್ರಿಯೆಯನ್ನು ಅನೇಕವೇಳೆ ಪರೀಕ್ಷಾರ್ಥವಾಗಿರುವ ಅಧ್ಯಾಪಕರನ್ನು ಕುರಿತು ವರದಿಯನ್ನು ಬರೆಯಲು ಉಪಯೋಗಿಸಲಾಗುತ್ತದೆ. ಈ ವಿಧಾನದಲ್ಲಿ ಮೌಲ್ಯಮಾಪನವನ್ನು ಸಂಪೂರ್ಣವಾಗಿ ಅಧ್ಯಾಪಕನ ಬಗೆಗಿರುವ ಮೌಲ್ಯಮಾಪನ ಕರ್ತನ ವೈಯಕ್ತಿಕ ದೃಷ್ಟಿಕೋನದ ಮೇಲೆ ಆಧರಿಸಿದ್ದು ಯಾವುದೇ ಸಮರ್ಪಕ ಮಾರ್ಗದರ್ಶಿಗಳಿಲ್ಲದೆ ನಡೆಸಲಾಗುತ್ತದೆ. ಆದ್ದರಿಂದ, ಅನೇಕ ವೇಳೆ ಅಂಥ ವರದಿಗಳಲ್ಲಿ ವ್ಯಕ್ತಪಡಿಸಲಾಗುವ ಅಭಿಪ್ರಾಯಗಳು ಪೂರ್ವಗ್ರಹದಿಂದ ಕೂಡಿರುವುದಾಗಿರುತ್ತದೆ. ಈ ಅಂಶ ಈ ವಿಧಾನದ ಪ್ರಮುಖ ಕೊರತೆಯಾಗಿದೆ.

2. **ಸ್ವಯಂ–ಮೌಲ್ಯಮಾಪನ:**

ಈ ವಿಧಾನದಲ್ಲಿ ಒಂದು ಗೊತ್ತಾದ ಅವಧಿಯಲ್ಲಿ ತಮ್ಮ ಉತ್ತರದಾಯಿತ್ವವುಳ್ಳ ಮುಖ್ಯ ಕ್ಷೇತ್ರಗಳ ಪುನರಾವಲೋಕನ ಮತ್ತು ಗುರಿಸಾಧನೆಯ ಮಟ್ಟ, ಕೌಶಲಗಳ ಉತ್ತಮಪಡಿಸುವಿಕೆ, ಜ್ಞಾನವೃದ್ಧಿ ಮತ್ತು ತಮ್ಮ ಪ್ರಯತ್ನಗಳ ಫಲ – ಕೌಶಲಗಳನ್ನು ಮೌಲ್ಯಮಾಪನ ಮಾಡಿಕೊಳ್ಳುವಂತೆ ಅಧ್ಯಾಪಕರಿಗೆ ಹೇಳಲಾಗುತ್ತದೆ. ಆದರೆ ಈ ವಿಧಾನದ ಮುಖ್ಯ ಕೊರತೆಯೆಂದರೆ ಸ್ವಯಂ–ವಿಶ್ಲೇಷಣೆ ಮತ್ತು ಅತಿಯಾದ ಸ್ವಯಂ–ಶ್ಲಾಘನೆ ಇವೆರಡರ ಸಮತೋಲನವನ್ನು ಕಾಪಾಡಿಕೊಳ್ಳುವುದು. ಅಧ್ಯಾಪಕರಿಗೆ ತಮ್ಮೊಡನೆ ಸತ್ಯವಾಗಿ, ನ್ಯಾಯವಾಗಿ ವ್ಯವಹರಿಸುವುದು ಸುಲಭದ ಕೆಲಸವಲ್ಲ. ದುರ್ಬಲ ಅಧ್ಯಾಪಕರು ತಮ್ಮ ಕಾರ್ಯ ಮತ್ತು ಕೌಶಲಗಳಿಗೆ ಹೆಚ್ಚು ಬೆಲೆಕಟ್ಟುವ ಅಪಾಯ ಮತ್ತು ಸಾಧ್ಯತೆ ಹಾಗೂ ಉತ್ತಮ ಅಧ್ಯಾಪಕರು ತಮ್ಮನ್ನು ತಾವು ಕಡಿಮೆ ಶ್ರೇಣಿಯವರೆಂದು ಕಡಿಮೆ ಬೆಲೆಯನ್ನು ಕಟ್ಟುವ ಸಾಧ್ಯತೆಗಳು ಈ ವಿಧಾನದಲ್ಲಿ ಹೆಚ್ಚಾಗಿದೆ. (ಮೊಂಟಗೊಮರಿ ಮತ್ತು ಹ್ಯಾಡ್‌ಫೀಲ್ಡ್ 1989).

3. **ನಿರ್ಣಾಯಕ ಘಟನೆಗಳ ವಿಧಾನ (Critical Incidents Methos):**

ಈ ವಿಧಾನದಲ್ಲಿ ವ್ಯಕ್ತಿಯ ನಿರ್ದಿಷ್ಟ ಆಯಾಮಗಳನ್ನು ವಿಷದವಾಗಿ ಮೌಲ್ಯಮಾಪಕನು ದಾಖಲಿಸಬೇಕಾಗುತ್ತದೆ; ತರಬೇತಿಯಲ್ಲಿರುವ ಶಿಕ್ಷಕನನ್ನು ಪಾಠ ಮಾಡುತ್ತಿರುವಾಗ ಮೇಲ್ವಿಚಾರಕನು ಗಮನಿಸುವ ಕೆಲಸದಂತೆ. ಇದು ಟೀಕೆ ಅಥವಾ ಕೊರತೆಗಳ ಪಟ್ಟಿಯನ್ನೊಳಗುತ್ತದೆಯಲ್ಲದೆ ಗಮನಿಸಬೇಕಾದ ಅಧ್ಯಾಪಕರನ್ನು ಗುರುತಿಸುತ್ತದೆ. ಆದ್ದರಿಂದ ಈ ಕಾರ್ಯ ಮೌಲ್ಯಮಾಪನಾ ವಿಧಾನವು ಅಧ್ಯಾಪಕರಿಂದ ತೀವ್ರವಾಗಿ ವಿರೋಧಿಸಲ್ಪಟ್ಟಿದೆ. ಆದರೂ ಮೌಲ್ಯಮಾಪನವಾಗಬೇಕಾದ ನಿರ್ದಿಷ್ಟ ಆಯಾಮಗಳನ್ನು ಮುಂಚಿತವಾಗಿಯೇ ವಿಷದೀಕರಿಸಿ ಒಪ್ಪಿಗೆಯಾದ ನಂತರ ಸಮಾನಸ್ಕಂಧರ ಮೌಲ್ಯಮಾಪನೆಯಲ್ಲಿ ಯಶಸ್ವಿಯಾಗಿ ಇದನ್ನು ಬಳಸಬಹುದಾಗಿದೆ. ಮೌಲ್ಯಮಾಪನ ಮಾಡಿಸಿಕೊಳ್ಳುವವರ ಕಾರ್ಯದಕ್ಷತೆಯ ಯೋಗ್ಯತೆಯನ್ನು ನಿರ್ಣಯಿಸಲು ಇದನ್ನು ಸಾಧನವಾಗಿ ಬಳಸದೆ ಮೌಲ್ಯಮಾಪಕಕರ್ತೃ ಹಾಗೂ ಮೌಲ್ಯಮಾಪನ ಮಾಡಿಸಿಕೊಳ್ಳುವವರ ಭವಿಷ್ಯದ ವಿಚಾರ ವಿನಿಮಯದ ಆಧಾರವಾಗಿ ಇದನ್ನು ಬಳಸಿಕೊಳ್ಳುವುದೇ ಈ ವಿಧಾನದ ತತ್ವವಾಗಿದೆ. ಕುಶಲತೆಯಿಂದ ಬಳಸಿಕೊಂಡಲ್ಲಿ ಇದು ಫಲದಾಯಕ ಸಂಪರ್ಕದ ಸಂಭವವನ್ನು ಹೆಚ್ಚಿಸಬಲ್ಲದು. ಆದ್ದರಿಂದ, ಈ ವಿಧಾನವನ್ನು ಇತರ ಮೌಲ್ಯಮಾಪನಾ ವಿಧಾನಗಳ ಜೊತೆಗೆ ಸರಿಯಾಗಿ ಸಮಗ್ರಗೊಳಿಸಬೇಕಾಗಿದೆ.

**ವಿಶಿಷ್ಟ ಲಕ್ಷಣ ನಿರ್ಧಾರಣ ಮಾಪನಿಗಳು:**

ಈ ಮಾಪನಿಗಳಲ್ಲಿ ವೈಯಕ್ತಿಕ ಅಥವಾ ವೃತ್ತಿಪರ ಗುಣಲಕ್ಷಣಗಳ

Digitised by Bharatavani, CIIL

ಪಟ್ಟಿಯಿದ್ದು ಮೌಲ್ಯಮಾಪನ ಮಾಡಿಸಿಕೊಳ್ಳುವವರು ಒಂದು ನಿರ್ದಿಷ್ಟ ಲಕ್ಷಣವನ್ನು ಎಷ್ಟರ ಮಟ್ಟಿಗೆ ಹೊಂದಿರುವರು ಎಂಬುದನ್ನು ಈ ಮಾಪನಿಗಳಲ್ಲಿ ಮೌಲ್ಯಮಾಪನಕರ್ತೃ ಸೂಚಿಸಬೇಕಾಗುತ್ತದೆ. ವ್ಯಕ್ತಿಯ ಗುಣಾತ್ಮಕತೆಯನ್ನು ಈ ರೀತಿ ಶ್ರೇಣೀಕರಿಸುವುದು ಕೆಲವೊಮ್ಮೆ ಹೆಚ್ಚು ಸ್ವನಿಷ್ಠವಾಗಬಹುದಲ್ಲದೆ ಕೇವಲ ಬೇಜವಾಬ್ದಾರಿಯುತ ಕಾಗದ–ಪೆನ್ನಿನ ಕ್ರಿಯೆಯಾಗಿ ಉಳಿದುಬಿಡುವ ಸಂಭವವಿದೆ. ಇದು ಈ ವಿಧಾನದ ಸಮಸ್ಯೆ. ಆದ್ದರಿಂದ, ಅಧ್ಯಾಪಕ ಕಾರ್ಯದ ವಿಶ್ವಾಸಾರ್ಹ ಮೌಲ್ಯಮಾಪನವನ್ನು ಕೊಡಲು ಈ ವಿಧಾನ ಅಸಮರ್ಥವಾಗಿದೆ.

**ಅಧ್ಯಾಪಕ ಮೌಲ್ಯಮಾಪನ: ಪ್ರಚಲಿತ ಪದ್ಧತಿಗಳು ಮತ್ತು ಪ್ರಮುಖ ಪ್ರಯತ್ನಗಳು:**

ಭಾರತದಲ್ಲಿ ಇತರ ಎಲ್ಲಾ ಸರ್ಕಾರೀ ನೌಕರರಿಗೆ ಅನ್ವಯಿಸುವಂಥ ಅಧಿಕಾರಿಶಾಹಿ ರೀತಿಯಲ್ಲಿ ಸದ್ಯದ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯು ಕೆಲಸಮಾಡುತ್ತಿದೆ. ಸಂಬಂಧಿತ ಅಧ್ಯಾಪಕರು ಒದಗಿಸಿದ ಕಾರ್ಯವರದಿಯ ಆಧಾರದ ಮೇಲೆ ಸಂಸ್ಥೆಯ ಮುಖ್ಯಸ್ಥರು ಅಧ್ಯಾಪಕರ ಕಾರ್ಯ ಮತ್ತು ವರ್ತನೆಯನ್ನು ಕುರಿತ ವಾರ್ಷಿಕ ಗೋಪ್ಯ ವರದಿ (Annual Confidential Report ACR) ಯನ್ನು ಸಿದ್ಧಪಡಿಸಬೇಕೆಂದು ಸದ್ಯದ ವ್ಯವಸ್ಥೆ ಹೇಳುತ್ತದೆ. ಈ ಪ್ರಕ್ರಿಯೆ ಶಿಕ್ಷಣದ ಬಹುತೇಕ ಸ್ತರಗಳಲ್ಲಿ ಪ್ರಚಲಿತದಲ್ಲಿರುವ ವ್ಯವಸ್ಥೆಯಂತೆಯೇ ಇದೆ. ಸಂಸ್ಥೆಯ ಮುಖ್ಯಸ್ಥರು ಸಿದ್ಧಪಡಿಸಿದ ಈ ವರದಿಯನ್ನು ಮುಂದಿನ ಮೇಲಧಿಕಾರಿ ಪುನರಾವಲೋಕಿಸುತ್ತಾನಲ್ಲದೆ ಆ ವರದಿಯನ್ನು ಒಪ್ಪುವುದು ಬಿಡುವುದು ಅಥವಾ ಭಾಗಶಃ ಒಪ್ಪುವುದು ಆತನ ಅಧಿಕಾರದ ಪರಿಧಿಯಲ್ಲಿದೆ. ಪ್ರತಿಕೂಲ ಟೀಕೆಗಳನ್ನು ಸಂಸ್ಥೆಯ ಪ್ರಾಂಶುಪಾಲರು ಮಾಡಿದ್ದು ಮೇಲಣ ಅಧಿಕಾರಿ ವರದಿಯನ್ನು ಒಪ್ಪಿದ ಪಕ್ಷದಲ್ಲಿ ಈ ವಿಷಯವನ್ನು ಸಂಬಂಧಿತ ಅಧ್ಯಾಪಕರಿಗೆ ತಿಳಿಸಲಾಗುತ್ತದೆ. ಅಧ್ಯಾಪಕರಿಗೆ ಪ್ರತಿಕೂಲ ಟೀಕೆಗಳನ್ನು ಮಾಡುವುದಕ್ಕೆ ಕಾರಣಗಳೇನು ಎಂದು ನಿರ್ದೇಶಿತ ಅಧಿಕಾರಿಗಳ ಬಳಿ ವಿವರಣೆಯನ್ನು ಪಡೆಯಲು, ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಸಾಧಾರಣತಃ ಅಧ್ಯಾಪಕರ ಒಟ್ಟಾರೆ ಕಾರ್ಯವನ್ನು ಕನಿಷ್ಠ, ತೃಪ್ತಿಕರ, ಉತ್ತಮ, ಹೆಚ್ಚು ಉತ್ತಮ, ಅತ್ಯುತ್ತಮ ಎಂಬೀ ಐದು ಶ್ರೇಣಿ ಮಾಪನಿಯನ್ನು ಆಧರಿಸಿ ಮೌಲ್ಯಮಾಪನ ಕೈಗೊಳ್ಳಲಾಗುತ್ತದೆ. ವಾರ್ಷಿಕಗೋಪನೀಯ ವರದಿ (ACR) ಒಂದು ಗೋಪ್ಯ ವರದಿಯಾದ್ದರಿಂದ ಅಧ್ಯಾಪಕರಿಗೆ ತಮ್ಮ ಕಾರ್ಯನಿರ್ವಹಣೆಯ ಬಗ್ಗೆ ಹಿನ್ನುಣಿಕೆ ಎಂದೂ ಲಭಿಸುವುದಿಲ್ಲ. ಸಾಂಪ್ರದಾಯಿಕವಾಗಿ ಅಧ್ಯಾಪಕ ಮೌಲ್ಯಮಾಪನ ಕ್ರಮಗಳನ್ನು ಮುಖ್ಯವಾದುವೆಂದು ಪರಿಗಣಿಸಲಾಗಿರುವ ಕೆಲವು ಅಧ್ಯಾಪಕ ಗುಣಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಅಧ್ಯಾಪಕರ ವೈಯಕ್ತಿಕ ಗುಣಗಳಾದ ನಿಯಮನಿಷ್ಠೆ, ಸಮಯನಿಷ್ಠೆ, ನಿಷ್ಪಕ್ಷಪಾತತೆ ಮತ್ತು ಋಜುತ್ವ/ಪ್ರಾಮಾಣಿಕತೆ ಶಿಸ್ತು, ಸಹಕಾರ ಮನೋಭಾವ, ಸಹೋದ್ಯೋಗಿಗಳ ಮತ್ತು ಅಧಿಕಾರಿಗಳೊಂದಿಗಿನ ವೈಯಕ್ತಿಕ ಸಂಬಂಧ, ವಿದ್ಯಾರ್ಥಿಗಳು ಮತ್ತು ಅವರ ಪೋಷಕರೊಂದಿಗಿರುವ ಸೌಹಾರ್ದತೆ ಮುಂತಾದ ಅಧ್ಯಾಪಕರ ಕೆಲವು ವೈಯಕ್ತಿಕ ಗುಣಗಳನ್ನು ಮೇಲೆ ಸದ್ಯದಲ್ಲಿನ ಮೌಲ್ಯಮಾಪನ ರೂಢಿಗಳು ಕೇಂದ್ರವಾಗಿರಿಸಿಕೊಂಡಿವೆ. ಇದಲ್ಲದೆ, ವಿದ್ಯಾರ್ಥಿಯ ಪರೀಕ್ಷಾ ಫಲಿತಾಂಶಗಳು, ಅಧ್ಯಾಪಕರ ವರ್ತನೆ, ಸಂಸ್ಥೆಯಲ್ಲಿ ಅವರ ಕೊಡುಗೆ, ಸಹಪಠ್ಯ ಚಟುವಟಿಕೆಗಳು, ಕ್ರೀಡೆ ಮತ್ತು ಆಟಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿನ ಭಾಗವಹಿಸುವಿಕೆ, ಪ್ರಕಾಶನಗಳು ಮತ್ತು ಸಂಶೋಧನಾ ಕಾರ್ಯ ಇತ್ಯಾದಿಗಳ ಬಗ್ಗೆಯೂ ಮಾಹಿತಿಯನ್ನು ಪಡೆಯಲಾಗುತ್ತದೆ. ಆದರೂ ACR ಗಳೊಡನೆ ಯಾಂತ್ರಿಕ ವ್ಯವಹಾರ ಅಧ್ಯಾಪಕರ ಕಾರ್ಯದ ಮೌಲ್ಯಮಾಪನಕ್ಕೆ ಆಧಾರವಾಗಿರುವ ನಿರ್ಣಯಾತ್ಮಕ ಅಂಶಗಳಲ್ಲಿನ ಅನಿಶ್ಚಿತತೆ ಮತ್ತು ಶ್ರೇಣಿಬದ್ಧಗೊಳಿಸುವಲ್ಲಿ ವೈಯಕ್ತಿಕತೆ ಇತ್ಯಾದಿಗಳು ಪ್ರಚಲಿತದಲ್ಲಿರುವ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯ ವಿಶ್ವಸನೀಯತೆಯ ಬಗ್ಗೆ ಅನೇಕ ಪ್ರಶ್ನೆಗಳನ್ನುಂಟುಮಾಡಿವೆ. ಹೆಚ್ಚು ವಿಶ್ವಸನೀಯ ಅಧ್ಯಾಪಕ ಮೌಲ್ಯಮಾಪನ ಕ್ರಮದ ಅಗತ್ಯ ಮತ್ತು ಅಧ್ಯಾಪಕರ ಕಾರ್ಯವನ್ನು ಅವರ ಉತ್ತರದಾಯಿತ್ವದೊಡನೆ ಜೋಡಿಸುವುದು – ಇವೆರಡರ ಅಗತ್ಯ ಶಿಕ್ಷಣದ ಎಲ್ಲಾ ಸ್ತರಗಳಲ್ಲೂ ಕಂಡುಬಂದಿದೆ. "ಮುಕ್ತ, ಸಹಭಾಗಿ ಮತ್ತು ದತ್ತಾಂಶ ಆಧಾರಿತ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯನ್ನು ಸೃಷ್ಟಿಸಲಾಗುವುದು ಮತ್ತು ಉನ್ನತ ಸ್ತರಗಳಿಗೆ ಬಡ್ತಿಯ ಯಥೋಚಿತ ಅವಕಾಶಗಳನ್ನು ಕಲ್ಪಿಸಲಾಗುವುದು. ಉತ್ತಮ ಕಾರ್ಯಕ್ಕೆ ಪ್ರೋತ್ಸಾಹ ಮತ್ತು ಕಳಪೆ ಕಾರ್ಯಕ್ಕೆ ಪ್ರತಿಬಂಧಕಗಳೊಂದಿಗೆ ಉತ್ತರದಾಯಿತ್ವದ ನಿಯಮಗಳನ್ನು ರೂಪಿಸಲಾಗುವುದು" ಎಂದು ರಾಷ್ಟ್ರೀಯ ಶಿಕ್ಷಣ ನೀತಿ (1986) ಸಲಹೆ ಮಾಡಿದೆ. (ಪ್ಯಾರಾ 9.2, ಪ.25).

ಸಹಜವಾಗಿಯೇ, ಅಧ್ಯಾಪಕ ಕಾರ್ಯದಕ್ಷತೆಯನ್ನು ಉತ್ತರದಾಯಿತ್ವದೊಡನೆ ಸಂಬಂಧಿಸುವ ಹೆಚ್ಚು ವಿಶ್ವಸನೀಯ ಮತ್ತು ಮುಕ್ತ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯ ಅವಶ್ಯಕತೆಯನ್ನು 1986ರ ರಾಷ್ಟ್ರೀಯ ಶಿಕ್ಷಣ ನೀತಿ (National Policy of Education, 1986) ಸಮರ್ಥಿಸಿತು. ವಿಶ್ವವಿದ್ಯಾನಿಲಯಗಳ ಹಾಗೂ ಕಾಲೇಜು ಅಧ್ಯಾಪಕರ ವೇತನ ಪರಿಷ್ಕರಣೆಯ ಸಲುವಾಗಿ ಬಹುತೇಕ ಶಿಕ್ಷಣ ಸ್ತರಗಳಲ್ಲಿ ಕಾಲಕಾಲಕ್ಕೆ ನಿಯೋಜಿತಗೊಂಡ ಸಮಿತಿಗಳು ವೇತನವನ್ನು ಅಧ್ಯಾಪಕರ ಗುಣಮಟ್ಟ ಮತ್ತು ಕಾರ್ಯದಕ್ಷತೆಗೆ ಸಂಬಂಧಿಸಿವೆ. ಇದುವರೆಗಿನ ಎಲ್ಲಾ ಪಂಚವಾರ್ಷಿಕ ಯೋಜನೆಗಳು, ವಿಶ್ವವಿದ್ಯಾಲಯ ಶಿಕ್ಷಣ ಆಯೋಗ (1948–49) ರಾಷ್ಟ್ರೀಯ ಶಿಕ್ಷಣ ಆಯೋಗ (1964–66) ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗ (UGC) ದಿಂದ ಡಾ॥ ಪಿ.ಬಿ. ಗಜೇಂದ್ರಗಡಕರ್ ಅವರ ನೇತೃತ್ವದಲ್ಲಿ ವಿಶ್ವವಿದ್ಯಾಲಯಗಳ ಆಡಳಿತವನ್ನು ಕುರಿತಂತೆ ನೇಮಿಸಲಾದ ವಿಶ್ವವಿದ್ಯಾಲಯ ಆಡಳಿತ ಸಮಿತಿ ಹಾಗೂ ಡಾ॥ ಪಿ.ಟಿ. ಚಾಂಡಿಯವರ ನೇತೃತ್ವದಲ್ಲಿ ಕಾಲೇಜುಗಳ ಆಡಳಿತಕ್ಕೆ ಸಂಬಂಧಿಸಿದ ಸಮಿತಿ–ಇವೆಲ್ಲವೂ ವೇತನ ಪರಿಷ್ಕರಣಕ್ಕೆ ಅಧ್ಯಾಪಕರ ಮೌಲ್ಯಮಾಪನ ನಿರ್ಣಯಕ ಅಂಶಗಳಲ್ಲಿ ಪ್ರಮುಖವಾದ ಒಂದು ಅಂಶವಾಗಿದೆಯೆಂದು ಸಲಹೆ ಮಾಡಿವೆ. ಸೇನ್ ಸಮಿತಿ (1973) ಸದ್ಯದಲ್ಲಿ ಇತರ ಸರ್ಕಾರಿ ಸೇವೆಗಳಲ್ಲಿ ಕಂಡುಬರುವಂತೆ ಅಧ್ಯಾಪಕರ ಮೌಲ್ಯಮಾಪನಕ್ಕೆ

Digitised by Bharatavani, CIIL

ವಾರ್ಷಿಕ ಗೋಪ್ಯ ವರದಿ (ACR) ಯನ್ನು ಸಮರ್ಥಿಸಲಿಲ್ಲ. ಅವಧಿಯ ಪ್ರಾರಂಭದಲ್ಲಿ ಅಧ್ಯಾಪಕರು ಸ್ವತಃ ಪ್ರಸ್ತಾಪಿಸಿದ ಶೈಕ್ಷಣಿಕ ಕಾರ್ಯಕ್ರಮಗಳ ಹಾಗೂ ಆ ಅವಧಿಯ ಅಂತ್ಯದಲ್ಲಿ ಅವರು ಪೂರೈಸಿದ ಕೆಲಸಗಳ ಮೌಲ್ಯಮಾಪನದ ಮೂಲಕ ಅಧ್ಯಾಪಕರ ವಾರ್ಷಿಕ ಮೌಲ್ಯಮಾಪನವಾಗಬೇಕೆಂದು ಈ ಸಮಿತಿಯು ಶಿಫಾರಸ್ಸು ಮಾಡಿತು. ಅಧ್ಯಾಪಕರ ಮೌಲ್ಯಮಾಪನಕ್ಕಾಗಿ ಯು.ಜಿ.ಸಿ. ಸೂಕ್ತ ವಿಧಾನಗಳನ್ನು ವಿಕಾಸಗೊಳಿಸಬಹುದೆಂದು ಈ ಸಮಿತಿಯ ವರದಿ ಸಲಹೆ ನೀಡಿತು. ಎನ್.ಸಿ.ಟಿ–ಐ (ರಾಷ್ಟ್ರೀಯ ಅಧ್ಯಾಪಕ ಆಯೋಗ–1) ತನ್ನ ನಿಲುವನ್ನು ಹೀಗೆ ಸ್ಪಷ್ಟಗೊಳಿಸಿದೆ– ಭದ್ರತೆ ಮತ್ತು ಕಾರ್ಯದಕ್ಷತೆ ಇವೆರಡರ ನಡುವಿನ ಪಾರಸ್ಪರಿಕತೆ ಹಾಗೂ ಅನ್ಯೋನತೆಯನ್ನು ಪುನರ್‌ಸ್ಥಾಪಿಸಿದ ಹೊರತು ಅಧ್ಯಾಪಕರ ಕಾರ್ಯದ ದಕ್ಷತೆಯನ್ನಾಗಲೀ ಅಥವಾ ಇನ್ನಾವುದೇ ಸಾರ್ವಜನಿಕ ಅಧಿಕಾರಿವರ್ಗದ ಕಾರ್ಯದಕ್ಷತೆಯನ್ನಾಗಲಿ ಸುಧಾರಿಸುವ ಬೇರೆ ಮಾರ್ಗವಿಲ್ಲ. (ಪ್ಯಾರಾ 9.15, ಪು. 70)

ರಾಷ್ಟ್ರೀಯ ಅಧ್ಯಾಪಕ ಆಯೋಗ (National Commission on Teacher-II) ಈ ಕೆಳಗಿನ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯ ಸಾರಭೂತ ಅಂಗಗಳ ಮೇಲೆ ಒತ್ತನ್ನು ನೀಡಿತು– ವಿಭಾಗದ ಮುಖ್ಯಸ್ಥರಿಂದ ಅಧ್ಯಾಪಕರ ಕೆಲಸಕ್ಕೆ ಸಂಬಂಧಿಸಿದ ದತ್ತಾಂಶಗಳ ಅನುಕರಣೆ (Maintainance) ಅಧ್ಯಾಪಕರಿಂದ ಸ್ವಯಂ–ಮೌಲ್ಯಮಾಪನ, ಸಹೋದ್ಯೋಗಿಗಳಿಂದ ಮೌಲ್ಯಮಾಪನ (Peer assessment) ಮತ್ತು ವಿದ್ಯಾರ್ಥಿ ಮೌಲ್ಯಮಾಪನ ಅಧ್ಯಾಪಕ ಮೌಲ್ಯಮಾಪನ ಮೆಹರೋತ್ರ ಸಮಿತಿಯ (1986) ಬಹುಮುಖ್ಯ ಶಿಫಾರಸ್ಸಾಗಿತ್ತು. ವಿದ್ಯಾರ್ಥಿಗಳಿಂದ ಮೌಲ್ಯಮಾಪನ ಸ್ವತಃ ಆಯಾ ಅಧ್ಯಾಪಕರಿಂದಲೇ ಸ್ವಯಂ–ಮೌಲ್ಯಮಾಪನ, ಸಂಸ್ಥೆಯ ಕಿರಿಯರಿಂದ ಮತ್ತು ಕ್ಷೇತ್ರದಲ್ಲಿನ ಸಮಾನಸ್ಕಂದರಿಂದ ಮೌಲ್ಯಮಾಪನ ಇತ್ಯಾದಿಗಳನ್ನು ಅಧ್ಯಾಪಕ ಮೌಲ್ಯಮಾಪನದ ಪ್ರಮುಖ ವಿಧಾನಗಳೆಂಬ ಸಲಹೆ ನೀಡಿತು. ಆದಾಗ್ಯೂ, ಹಲವು ವಿಶ್ವವಿದ್ಯಾನಿಲಯಗಳು ಕಾರ್ಯ ಮೌಲ್ಯಮಾಪನದ ಬಗೆಗಿನ ಶಿಫಾರಸ್ಸುಗಳನ್ನು ಭಾಗಶಃ ಮಾತ್ರ ಕಾರ್ಯರೂಪಕ್ಕೆ ತಂದವು. ಗುಣಮಟ್ಟ ಮತ್ತು ಗುಣಮಟ್ಟದ ಅನುಸರಣೆ ಹಾಗೂ ಅಧ್ಯಾಪಕರ ಕಾರ್ಯಭಾರಗಳ ಬಗ್ಗೆಯೂ ರಾಷ್ಟ್ರೀಯ ಅಧ್ಯಾಪಕರ ಆಯೋಗ–II (NCT-II 1983–85) ತನ್ನ ವರದಿಯಲ್ಲಿ ಕಾಳಜಿ ವ್ಯಕ್ತಪಡಿಸಿದೆ. ಅಧ್ಯಾಪಕರು ಮತ್ತು ಸಂಸ್ಥೆಗಳ ಜೊತೆಗೆ ಆಡಳಿತ ಅಂಗಗಳ ಜವಾಬ್ದಾರಿಯ ಬಗ್ಗೆಯೂ ಒತ್ತನ್ನು ನೀಡಿದೆ.

1980ರ ದಶಕದ ಆದಿಭಾಗದಲ್ಲಿ ಯು.ಜಿ.ಸಿ. ಕಾರ್ಯ ಮೌಲ್ಯಮಾಪನ ವ್ಯವಸ್ಥೆಯೊಂದನ್ನು ವಿಕಾಸಗೊಳಿಸುವ ಸಲುವಾಗಿ ವಿಷಯದ ಬಗ್ಗೆ ಚಿಂತನೆ ನಡೆಸಲು ಮತ್ತು ಸೂಕ್ತ ಸಲಹೆಗಳನ್ನು ನೀಡಲು ಕಾರ್ಯಸಮೂಹ (Task Force) ಒಂದನ್ನು ನೇಮಕ ಮಾಡಿತು. ಮುಕ್ತವಾದ, ದತ್ತಾಂಶ ಆಧಾರಿತ ಮತ್ತು ಸಹಭಾಗಿತ್ವವುಳ್ಳ ಅಧ್ಯಾಪಕ ಮೌಲ್ಯಮಾಪನದ ಮಹತ್ವ ಮತ್ತು ಅವಶ್ಯಕತೆಯನ್ನು ಈ ಕಾರ್ಯಸಮೂಹ ತನ್ನ ವರದಿಯಲ್ಲಿ (1988) ಒತ್ತಿ ಹೇಳಿತ್ತಲ್ಲದೆ ಅಧ್ಯಾಪಕರ ಸಲುವಾಗಿ ಕಾರ್ಯ ಮೌಲ್ಯಮಾಪನ ಮತ್ತು ಅದು ಸಲಹೆ ಮಾಡಿದ ಅಧ್ಯಾಪಕ ಉತ್ತರದಾಯಿತ್ವ ವ್ಯವಸ್ಥೆ (Performance Appraisal and Teacher Accountability System PATA) ಪ್ರಕಾರ ತಮ್ಮ ಗುರಿಗಳನ್ನು ನಿಶ್ಚಿತಗೊಳಿಸಲು ಮತ್ತು ಆ ಗುರಿಗಳನ್ನು ತಲುಪಲು ಅಗತ್ಯ ಉಪಾಯಗಳನ್ನು ಕಂಡುಕೊಳ್ಳಲು ಗರಿಷ್ಠ ಮಟ್ಟದ ಸ್ವಾತಂತ್ರ್ಯವನ್ನು ಸಂಸ್ಥೆಗೆ ಮತ್ತು ಅಧ್ಯಾಪಕರಿಗೆ ನೀಡಲಾಗುತ್ತದೆ. ನಂತರ ಅವುಗಳನ್ನು ಹತ್ತಿರದಲ್ಲಿ ಸಮಗ್ರವಾಗಿ ಗಮನಿಸಲಾಗುತ್ತದೆ. ಇದು (PATA) ವ್ಯವಸ್ಥೆಯ ಕ್ರಮ ಈ ವ್ಯವಸ್ಥೆಯು ಪ್ರತ್ಯೇಕ ಅಧ್ಯಾಪಕ ಮತ್ತು ಆಡಳಿತಾಧಿಕಾರಿಯನ್ನು ಮೌಲ್ಯಮಾಪನದ ಪ್ರಕ್ರಿಯೆಯ ಎರಡು ಸಹಭಾಗಿಗಳಾಗಿ ಗುರುತಿಸಿತು. ಫಲ ಸ್ವರೂಪವಾಗಿ, ಈ ಇಬ್ಬರು ಸಹಭಾಗಿಗಳಿಗೆ ಕಾರ್ಯ ಮತ್ತು ಯೋಗ್ಯತೆಗಳನ್ನು ದಾಖಲಿಸಲು ಎರಡು ಪ್ರತ್ಯೇಕ ನಮೂನೆಗಳನ್ನು ಸಿದ್ಧಪಡಿಸಿ ನೀಡಲಾಯಿತು. ಆದಾಗ್ಯೂ, ಈ ವ್ಯವಸ್ಥೆಯು ಮೌಲ್ಯಮಾಪನದ ಪ್ರಯತ್ನದ ಬಗ್ಗೆ ಶಿಕ್ಷಕರಿಗಿರುವ ತಪ್ಪು ಕಲ್ಪನೆ ಮತ್ತು ಭಯಗಳನ್ನು ನಿವಾರಿಸುವಲ್ಲಿ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅಲ್ಲದೆ, ಅಧ್ಯಾಪಕ ಮೌಲ್ಯಮಾಪನವು ಯುಕ್ತಿಯುಕ್ತವೂ, ನ್ಯಾಯಸಮ್ಮತವೂ ಆದ ಶಿಕ್ಷಣ ವ್ಯವಸ್ಥೆಯ ಹಾಗೂ ವೃತ್ತಿಸಂಸ್ಕೃತಿಯ ಅವಿಭಾಜ್ಯ ಅಂಗವಷ್ಟೇ ಆಗಿಲ್ಲದೆ ಅವರ ವೃತ್ತಿವಿಕಾಸಕ್ಕೆ ಸಹಾಯಕಾರಿಯಾಗಿದೆಯೆಂಬ ಅಂಶವನ್ನು ವಾದಿಸಿ ಮನಗಾಣಿಸುವ ಪ್ರಯತ್ನಗಳನ್ನು ಕೈಗೊಳ್ಳಲಿಲ್ಲ ಆದ್ದರಿಂದ, ಮೂರನೆಯ ಸ್ತರದಲ್ಲಿ ಅಂದರೆ ಮಾಧ್ಯಮಿಕ ಶಿಕ್ಷಣದ ನಂತರ ಬರುವ ಶಿಕ್ಷಣದ ಸ್ತರದಲ್ಲಿ ಈ ವರದಿ ಮಹತ್ವಪೂರ್ಣವಾದ ಯಾವುದೇ ಪರಿಣಾಮವನ್ನುಂಟುಮಾಡುವಲ್ಲಿ ವಿಫಲವಾಯಿತು.

1980ರ ದಶಕದ ನಂತರದ ಭಾಗದಲ್ಲಿ ವಿಶ್ವ ಬ್ಯಾಂಕ್‌ನ ನೆರವಿನಿಂದ ಭಾರತೀಯ ಚಾರಿತ್ರಿಕ ಶಿಕ್ಷಣ ಸೊಸೈಟಿ (Indina Society for Technical Education ISTE) ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಕಾರ್ಯ ಮೌಲ್ಯಮಾಪನ ವಿಧಾನವೊಂದನ್ನು ವಿಕಾಸಗೊಳಿಸಲು ಪ್ರಯತ್ನಿಸಿತು. ಅಧ್ಯಾಪಕರ ತಪ್ಪುಕಲ್ಪನೆಗಳನ್ನು ಕಡಿಮೆಗೊಳಿಸುವ ಮೌಲ್ಯಮಾಪನ ಹಾಗೂ ಈ ವ್ಯವಸ್ಥೆಯು ತಮ್ಮನ್ನು ನಿಯಂತ್ರಿಸುವ ಆಯುಧವಾಗಬಹುದೆಂಬ ಅವರ ಭಯವನ್ನು ಹೋಗಲಾಡಿಸುವ ಉದ್ದೇಶಗಳನ್ನಿಟ್ಟುಕೊಂಡು ಶಿಕ್ಷಣ ಮೌಲ್ಯಮಾಪನದ ಪರಿಕಲ್ಪನೆಯ ಬಗ್ಗೆ ಸಮ್ಮೇಳನ ಮತ್ತು ವಿಚಾರ ಸಂಕಿರಣಗಳಲ್ಲಿ ತೀವ್ರವಾಗಿ ಚರ್ಚಿಸಲಾಯಿತು. ಶಿಕ್ಷಕರ ಮೌಲ್ಯಮಾಪನದ ಮೂಲಭೂತ ಪರಿಕಲ್ಪನೆ, ಅದರ ರೂಪಣಾತ್ಮಕ ಮತ್ತು ಸಂಕಲಿತ ಉದ್ದೇಶಗಳು, ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ವಿಭಿನ್ನ ಸಹಭಾಗಿಗಳ ಪಾತ್ರ ಮತ್ತು ಕ್ರಮಾನುಸಾರ ಪ್ರಕ್ರಿಯೆ ವಿಧಾನಗಳನ್ನು ವಿವರಿಸುವ ಟಿ.ಎಸ್.ಟಿ.ಇ. ಕಾರ್ಯ ಮೌಲ್ಯಮಾಪನ ಮತ್ತು ವಿಕಸನ ಪದ್ಧತಿ (Performance Appraisal and Development System (PADS) ಎಂಬ ಕೈಪಿಡಿಯೊಂದನ್ನು ಪ್ರಕಟಿಸಿತು. ಕೆಲವು ಸಂಸ್ಥೆಗಳು ಸದ್ಯದಲ್ಲಿ ಈ ವಿಧಾನವನ್ನು ಕಾರ್ಯರೂಪಕ್ಕೆ ತರುತ್ತಲಿದ್ದು ಅಧ್ಯಾಪಕ ಸಿಬ್ಬಂದಿಯ ಸಂಪೂರ್ಣ ಸಹಕಾರದೊಂದಿಗೆ ಪ್ರಯೋಗಿಸಿ ನೋಡುತ್ತಿವೆ.

Digitised by Bharatavani, CIIL

ರಸ್ತೋಗಿ ಸಮಿತಿ (1997) ಅಧ್ಯಾಪಕರ ವೇತನ ಪರಿಷ್ಕರಣಕ್ಕೆ ಸಲಹೆ ನೀಡಿದ ಸಂದರ್ಭದಲ್ಲಿ ಅಧ್ಯಾಪಕ ಮೌಲ್ಯಮಾಪನ ಮತ್ತು ಉತ್ತರದಾಯಿತ್ವಗಳ ಅವಶ್ಯಕತೆಯ ಬಗ್ಗೆ ಒತ್ತನ್ನು ನೀಡಿತು. ಆದಾಗ್ಯೂ, ಅಧ್ಯಾಪಕರ ಹಾಗೂ ಅವರ ಬೋಧನೆಯ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವದ ಬಗ್ಗೆ ರಸ್ತೋಗಿ ಸಮಿತಿ ನೀಡಿದ ಸಲಹೆಯ ವಿರುದ್ಧ ಅಧ್ಯಾಪಕರು ಹಾಗೂ ಅಧ್ಯಾಪಕ ಸಂಘಗಳಿಂದ ತೀವ್ರ ಟೀಕೆ ವ್ಯಕ್ತವಾಗಿದೆ.

ಅಧ್ಯಾಪಕರ ವಿಷಯಜ್ಞಾನ ಮತ್ತು ಸೂಕ್ತ ಶೋಧನಾ ವಿಧಾನ, ಬೋಧನಾ ಕೌಶಲಗಳು ಮತ್ತು ಸಾಮರ್ಥ್ಯಗಳು, ಪ್ರೇರಣೆ (Motivation) ಪ್ರಾಮಾಣಿಕತೆ ಹಾಗೂ ಇತರ ವ್ಯಕ್ತಿಗತ ಲಕ್ಷಣಗಳು ಮೇಲಧಿಕಾರಿ, ಅಧೀನದಲ್ಲಿರುವವರು, ಸಹೋದ್ಯೋಗಿಗಳು, ವಿದ್ಯಾರ್ಥಿಗಳು ಮತ್ತು ಪೋಷಕರು ಮುಂತಾದವರೊಡಗಿನ ಪರಸ್ಪರ ಸಂಬಂಧ, ತನ್ನ ಸ್ವಂತ ವೃತ್ತಿಪರ ಅಭಿವೃದ್ಧಿಗಾಗಿ ಕೈಗೊಂಡ ಪ್ರಯತ್ನಗಳು ಹಾಗೂ ಆಡಳಿತಾತ್ಮಕ ಕಾರ್ಯಗಳಿಗೆ ನೀಡಿದ ಕೊಡುಗೆ ಇವೇ ಮುಂತಾದ ಅಂಶಗಳನ್ನು ಆಧರಿಸಿದ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯ ಚೌಕಟ್ಟೊಂದನ್ನು ಆರೋರಾ ಮತ್ತು ಪಾಂಡೆಯವರು (1998) ವಿಕಾಸಗೊಳಿಸಿದ್ದಾರೆ. ಇದು ಬಹಳ ಇತೀಚಿನ ಪ್ರಯತ್ನವಾಗಿದೆ. ಸಹಭಾಗಿತ್ವ ದತ್ತಾಂಶ ಆಧಾರಿತ ಮತ್ತು ಮುಕ್ತ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಯನ್ನು ಕುರಿತು ರಾಷ್ಟ್ರೀಯ ಕಾರ್ಯನೀತಿ (1986) ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಈ ಚೌಕಟ್ಟು ಪ್ರಯತ್ನಿಸಿದೆ. ಈ ಚೌಕಟ್ಟು ಸಮಸ್ತ ಪ್ರಕ್ರಿಯೆಯಲ್ಲಿ ಅಧ್ಯಾಪಕರಿಗೆ ಸಮಾನ ಸಹಭಾಗಿತ್ವದ ಅವಕಾಶ ನೀಡುತ್ತಾ ದೋಷನಿವಾರಕ ಹಿನ್ನುಣಿಕೆಯನ್ನು ಒದಗಿಸುವ ಮತ್ತು ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿ ಹಾಗೂ ಕಾರ್ಯಾತ್ಮಕವನ್ನಾಗಿಸುವ ಗುರಿಯನ್ನು ಹೊಂದಿದೆ. ಇದು ಸಾಕಷ್ಟು ಸಮಗ್ರರೂಪದ್ದಾಗಿದ್ದು ಅವಧಿಯ ಪ್ರಾರಂಭದಲ್ಲೇ ಈ ಪ್ರಕ್ರಿಯೆ ಆರಂಭವಾಗಿ ಶೈಕ್ಷಣಿಕ ಅವಧಿಯ ಉದ್ದಕ್ಕೂ ಮೌಲ್ಯಮಾಪನ ಪ್ರಕ್ರಿಯೆ ಮುಂದುವರೆಯುತ್ತದೆ. ಆದ್ದರಿಂದ, ಶೈಕ್ಷಣಿಕ ಅವಧಿಯ ಪ್ರಾರಂಭದಲ್ಲಿನ ಸಭೆ, ಶೈಕ್ಷಣಿಕ ಅವಧಿಯ ಪರ್ಯಂತ ಪ್ರಾಂಶುಪಾಲರಿಂದ ದತ್ತಾಂಶಗಳ ಸಂಗ್ರಹಣೆ, ಮಧ್ಯಂತರ ಪುನರಾವಲೋಕನ ಇವುಗಳನ್ನು ಒಳಗೊಂಡ, ಅನೇಕ ಹಂತವುಳ್ಳ ಮೌಲ್ಯಮಾಪನ ಪ್ರಕ್ರಿಯೆಯನ್ನು ಈ ಚೌಕಟ್ಟಿನಲ್ಲಿ ಸಲಹೆ ಮಾಡಲಾಗಿದೆ.

ನಿಶ್ಚಿತ ಅವಧಿಯ ಕಡೆಯಲ್ಲಿ ಅಧ್ಯಾಪಕರ ಮೌಲ್ಯಮಾಪನಕ್ಕೆ ಮಾನದಂಡವಾಗುವ ಸಂಸ್ಥೆಯ ಗುರಿಗಳನ್ನು ಮತ್ತು ಅಧ್ಯಾಪಕರ ಪಾತ್ರ ಮತ್ತು ತತ್ಸಂಬಂಧಿತ ನಿರೀಕ್ಷಣೆಗಳನ್ನು ನಿಶ್ಚಿತಗೊಳಿಸುವುದು. ಪ್ರಾಂಶುಪಾಲರು ಮತ್ತು ಅಧ್ಯಾಪಕರ ನಡುವಿನ ಪ್ರಾರಂಭಿಕ ಸಭೆಯ ಉದ್ದೇಶ. ಪ್ರಾಂಶುಪಾಲರು ಪ್ರತ್ಯೇಕ ಅಧ್ಯಾಪಕರಿಗೆ ಸಂಬಂಧಿಸಿದ 'ಮೌಲ್ಯಮಾಪನ' ಡೈರಿಯಲ್ಲಿ ದತ್ತಾಂಶಗಳ ಅನುರಕ್ಷಣೆಯನ್ನು ಕೈಗೊಳ್ಳಬೇಕೆಂದು ಈ ಚೌಕಟ್ಟು ಸಲಹೆ ನೀಡಿದೆ. ಶೈಕ್ಷಣಿಕ ಅವಧಿಯ ಮಧ್ಯದಲ್ಲಿ 'ಮಧ್ಯಂತರ ಪುನರಾವಲೋಕನ ಸಭೆ'ಯೊಂದನ್ನು ಅಧ್ಯಾಪಕರ ಪ್ರಗತಿ, ಸಮಸ್ಯೆ ಹಾಗೂ ಕಷ್ಟಗಳು, ಅಧ್ಯಾಪಕರಿಗೆ ಒದಗಿಸಲಾದ ಸೌಲಭ್ಯಗಳ ಪುನರ್‌ಪರಿಶೀಲನೆ, ಅಗತ್ಯವಿದ್ದಲ್ಲಿ ಗುರಿಗಳ ಬದಲಾವಣೆ ಮುಂತಾದುವುಗಳನ್ನು, ಕೈಗೊಳ್ಳುವ ಸಲುವಾಗಿ ನಡೆಸಬಹುದು. ಚೌಕಟ್ಟು ಸಲಹೆ ನೀಡಿರುವ 'ಅಂತ್ಯದ ಮೌಲ್ಯಮಾಪನ' ಸಂಬಂಧಿತ ಅಧ್ಯಾಪಕರ ಸ್ವಯಂ–ಮೌಲ್ಯಮಾಪನ, ಪುನರಾವಲೋಕನ ಅಧಿಕಾರಿ (ಪ್ರಾಂಶುಪಾಲರು) ಯಿಂದ ಮೌಲ್ಯಮಾಪನ ವರದಿ ಮತ್ತು ಸಂದರ್ಶನ ಬೋರ್ಡ್‌ನಿಂದ ಮೌಲ್ಯಮಾಪನಾರ್ಥ ಸಂದರ್ಶನ ಇವುಗಳನ್ನು ಒಳಗೊಳ್ಳುತ್ತದೆ.

ಚೌಕಟ್ಟಿನಲ್ಲಿ ಸಲಹೆ ನೀಡಲಾದ 'ಮೌಲ್ಯಮಾಪನಾರ್ಥ ಸಂದರ್ಶನ' ಪ್ರಚಲಿತ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆಗೆ ಹೊಸ ಜೋಡಣೆಯಾಗಿದ್ದು ಇದು ಸಮಗ್ರ ಮೌಲ್ಯಮಾಪನ ಪ್ರಕ್ರಿಯೆಯನ್ನು ಮುಕ್ತವಾಗಿಸುವುದಷ್ಟೇ ಅಲ್ಲದೆ ಹೆಚ್ಚು ಪಾರದರ್ಶಕ ಮತ್ತು ಸಹಭಾಗಿತ್ವವುಳ್ಳದ್ದನ್ನಾಗಿಸುತ್ತದೆ. ಅಧ್ಯಾಪಕರ ಸಾಧನೆ ಮತ್ತು ಕೊರತೆಗಳನ್ನು ತೋರಿಸಿಕೊಡುವಲ್ಲಿ, ಅವರ ವೃತ್ತಿಕ್ಷೇತ್ರದ ಅಗತ್ಯಗಳನ್ನು ಗುರುತಿಸುವಲ್ಲಿ ಮತ್ತು ಮುಂದಿನ ಶೈಕ್ಷಣಿಕ ಅವಧಿಯಲ್ಲಿ ವೃತ್ತಿಪಥವನ್ನು ನಿಶ್ಚಯಿಸುವಲ್ಲಿ ಇದು ನೆರವಾಗುತ್ತದೆ.

ಅಧ್ಯಾಪಕರ ಸ್ವಯಂ ಮೌಲ್ಯಮಾಪನ ನಮೂನೆ ದತ್ತಾಂಶಗಳ ಅನುಕರಣೆಗೆ ಬೇಕಾದ ಮೌಲ್ಯಮಾಪನ ಡೈರಿ, ಮೌಲ್ಯಮಾಪನಾರ್ಥ ಸಂದರ್ಶನಕ್ಕಾಗಿ ಮಾರ್ಗದರ್ಶಿ ಸೂಚಿ ಮತ್ತು ಪ್ರಾಂಶುಪಾಲರಿಂದ ಆಗುವ ಮೌಲ್ಯಮಾಪನ– ಇವೆಲ್ಲವನ್ನೂ ಚೌಕಟ್ಟು ವಿಕಸನಗೊಳಿಸಿದೆ. ಇವುಗಳನ್ನು ಸಂಸ್ಥೆಗಳು ತಮ್ಮ ನಿರ್ದಿಷ್ಟ ಅಗತ್ಯಗಳಿಗೆ ತಕ್ಕಂತೆ ಮಾರ್ಪಡಿಸಿಕೊಳ್ಳಬಹುದು ಅಥವಾ ಹಾಗೆಯೇ ಉಪಯೋಗಿಸಬಹುದು.

ಹಿನ್ನುಣಿಕೆ ಏನನ್ನೂ ಒದಗಿಸದೆ ಕೇವಲ ಅಧ್ಯಾಪಕರ ಹಿಂದಿನ ಕಾರ್ಯಗಳ ಮೌಲ್ಯಮಾಪನ ಮಾಡುವ ಪ್ರಚಲಿತ ಮೌಲ್ಯಮಾಪನ ವ್ಯವಸ್ಥೆ ಬಹುತೇಕ ಹಿಂದೆ ನೋಡುವ ಅಭ್ಯಾಸವಾಗಿದ್ದು ಅವರಿಗೆ ವೃತ್ತಿಕ್ಷೇತ್ರದಲ್ಲಿ ಮುಂದುವರೆಯಲು ಹೆಚ್ಚಿನದೇನನ್ನೂ ಮಾಡುವುದಿಲ್ಲ. ಆದ್ದರಿಂದ, ಮೌಲ್ಯಮಾಪನ ಮತ್ತು ಉತ್ತರದಾಯಿತ್ವಗಳ ವ್ಯವಸ್ಥೆಯನ್ನು ಕಾರ್ಯಾನ್ವಿತಗೊಳಿಸುವ ಯಾವುದೇ ಪ್ರಯತ್ನ ಅಧ್ಯಾಪಕ ವರ್ಗ ಹಾಗೂ ಅಧ್ಯಾಪಕ ಸಂಘಗಳಿಂದ ತೀವ್ರ ವಿರೋಧವನ್ನು ಎದುರಿಸಬೇಕಾಗುತ್ತದೆ. ಇಂಥ ಪ್ರಯತ್ನಗಳು ತರಗತಿಯ ಒಳಗೆ ಅವರು ಕೈಗೊಳ್ಳುವ ಚಟುವಟಿಕೆಗೆ ಸಂಬಂಧಿಸಿದಂತೆ ವೃತ್ತಿಪರವಾದ ಮೌಲ್ಯವನ್ನು ಘೋಷಿಸುವುದು ಅವರ ಹೆಚ್ಚಿನ ಅತಿಕ್ರಮಣ ಎಂದು ಭಾವಿಸುತ್ತಾರೆ. ಇಂಥ ಪ್ರಯತ್ನಗಳು ಅವರ ಕೊರತೆಗಳನ್ನು ಬಹಿರಂಗಪಡಿಸುವುದರಿಂದ ಅವರ ಸ್ಥಾನ ಅಸುರಕ್ಷಿತವಾಗುವುದೆಂದು ಹಾಗೂ ಪದೋನ್ನತಿಯ ಸಂಭವನೀಯತೆಯ ಬಗೆಗಿನ ಪೂರ್ವಗ್ರಹಗಳನ್ನುಂಟು ಮಾಡುವುದೆಂದು ಅವರು ಭಾವಿಸುತ್ತಾರೆ. ಅದ್ದರಿಂದ, ಅಧ್ಯಾಪಕರ ವೃತ್ತಿಪರ ಅಭಿವೃದ್ಧಿಯನ್ನುಗುರಿಯಾಗಿಟ್ಟುಕೊಂಡಿರುವ ಪಾರದರ್ಶಕ, ಮುಕ್ತ, ದತ್ತಾಂಶ ಆಧಾರಿತ ಹಾಗೂ ಸಹಭಾಗಿತ್ವವುಳ್ಳ ಅಧ್ಯಾಪಕ ಮೌಲ್ಯಮಾಪನ ವ್ಯವಸ್ಥೆ ಅವರ ಭಯಗಳನ್ನು ನಿವಾರಿಸುವ ಮತ್ತು

Digitised by Bharatavani, CIIL

ಅವರನ್ನು ಉತ್ತರದಾಯಿಗಳನ್ನಾಗಿ ಮಾಡುವ ವ್ಯವಹಾರ್ಯವಾದ ವ್ಯವಸ್ಥೆಯಾಗಿದೆ.

**ಮೂಲ: ಸರೋಜ್ ಪಾಂಡೆ**
**ಅನು: ಚಂದ್ರಶೇಖರ್ ಬಿ.ಎಂ.**

## ಅಧ್ಯಾಪಕ ಸಂಘಟನೆಗಳು

ಐತಿಹಾಸಿಕ ದೃಷ್ಟಿಕೋನ: ಸಾಂಪ್ರದಾಯಿಕವಾಗಿ ಭಾರತದಲ್ಲಿ ಸಮಾಜದಿಂದ ಅಧ್ಯಾಪಕನು ಉನ್ನತ ಸ್ಥಾನಮಾನ ಹಾಗೂ ಗೌರವಗಳನ್ನು ಪಡೆದಿದ್ದಾನೆ. ಆತನ ವೈಯಕ್ತಿಕತೆಗೆ ಗೌರವವನ್ನೂ, ರಕ್ಷಣೆಯನ್ನೂ ನೀಡಲಾಗಿ ಸಾಂಘಿಕತೆಯ ಅಗತ್ಯ ಕಂಡುಬರಲಿಲ್ಲ. ಇಪ್ಪತ್ತನೆಯ ಶತಮಾನದ ಪ್ರಾರಂಭದೊಂದಿಗೆ ಆಂಗ್ಲರ ಶಿಕ್ಷಣನೀತಿಗಳಿಂದಾಗಿ ವೃತ್ತಿಯ ಪಾತ್ರ, ವ್ಯಕ್ತಿತ್ವ ಮತ್ತು ಗೌರವದ ಕ್ಷೀಣತೆ, ಆರ್ಥಿಕ ಹಾಗೂ ಸಾಮಾಜಿಕ ಅಸುರಕ್ಷತೆಯ ಭಾವ– ಇವೆಲ್ಲವೂ ಕ್ರಮೇಣ ಕಾಣಿಸಿಕೊಂಡವು. ಇವೆಲ್ಲ ಕಾರಣಗಳು ಸಾಂಘಿಕ ರೂಪದಲ್ಲಿ ಶಿಕ್ಷಕರು ವ್ಯಕ್ತಿಗಳಾಗಿ ಶಕ್ತಿ ಪಡೆಯಲು ಒಟ್ಟುಗೂಡುವಂತೆ ಅವರನ್ನು ಪ್ರೇರೇಪಿಸಿದವು. ಸಾಮಾನ್ಯವಾಗಿ, ಶಿಕ್ಷಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇತರ ದೇಶವಾಸಿಗಳೊಡನೆ ಜೊತೆಗೂಡಿ ತಮ್ಮ ಸಮಸ್ಯೆಗಳನ್ನು ದೇಶದ ಸಮಸ್ಯೆಗಳೊಡನೆ ವಿಲೀನಗೊಳಿಸಿದರು. ಆದರೂ ಸಹ, ವಿವಿಧ ಸ್ತರಗಳ ಶಿಕ್ಷಕರು ಕೆಲವು ಸಂಘಗಳನ್ನು ಸ್ಥಾಪಿಸಲು ಆರಂಭಿಸಿದಂತೆ 1925ರಷ್ಟು ಹಿಂದೆಯೇ ಅಖಿಲಬಾರತ ಶೈಕ್ಷಣಿಕ ಸಂಘಗಳ ಒಕ್ಕೂಟ ಅಸ್ತಿತ್ವಕ್ಕೆ ಬಂದಿತು.

ಮದ್ರಾಸಿನಲ್ಲಿ (ಈಗಿನ ಚೆನ್ನೈ) 1890ರಲ್ಲಿ ಮಹಿಳಾ ಶಿಕ್ಷಕರ ಸಂಘ ಎಂಬ ಮಹಿಳಾ ಶಿಕ್ಷಕರಿಂದ ಸಂಘಟಿತವಾದ ಪ್ರಥಮ ಶಿಕ್ಷಕ ಸಂಘ ಸ್ಥಾಪನೆಗೊಂಡಿತು ಎಂಬುದು ಆಸಕ್ತಿಕರ ಅಂಶವಾಗಿದೆ. ಇದು 1895ರಲ್ಲಿ ಪುರುಷರನ್ನು ಒಳಗೊಂಡು 'ಮದ್ರಾಸ್ ಟೀಚರ್‌ಗಿಲ್ಡ್' ಎಂದು ಪರಿವರ್ತನೆಗೊಂಡಿತು. ಸ್ವಾತಂತ್ರ್ಯ ಪೂರ್ವದಲ್ಲಿ ಕೆಲವು ಶಿಕ್ಷಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಉದಾಹರಣೆಗೆ, ದಕ್ಷಿಣ ಭಾರತ ಶಿಕ್ಷಕರ ಸಂಘ (1909) ಮತ್ತು ಉತ್ತರಪ್ರದೇಶ ಸೆಕೆಂಡರಿ ಶಿಕ್ಷಕರ ಸಂಘ ಮತ್ತು ಉತ್ತರ ಪ್ರದೇಶ ಅಧ್ಯಾಪಕ ಮಂಡಲ್, ಅಖಿಲ ಬಂಗಾಳಿ ಶಿಕ್ಷಕ ಸಂಘ(1921), ಹಾಗೆಯೇ ಬಿಹಾರ್, ಒರಿಸ್ಸಾ(ಈಗಿನ ಒಡಿಶಾ), ಸೆಂಟ್ರಲ್ ಪ್ರಾವಿನ್ಸ್ ಮತ್ತು ಎಜುಕೇಷನ್ ಬೋರ್ಡ್, ಬಾಂಬೆ ಪ್ರೆಸಿಡೆನ್ಸಿಗಳಲ್ಲಿನ ಸೆಕೆಂಡರಿ ಶಿಕ್ಷಕ ಸಂಘ(1924), ಬಿಹಾರದಲ್ಲಿಯೂ ಪ್ರಾಂತೀಯ ಭಾಷಾ ಶಿಕ್ಷಕರ ಸಂಘ ರಚಿತವಾದವು(1924). ಮೈಸೂರಿನಲ್ಲಿ ಮೈಸೂರು ಸೆಕೆಂಡರಿ ಶಿಕ್ಷಕರ ಸಂಘ 1927ರಲ್ಲಿ ಕಾಣಿಸಿಕೊಂಡಿತು. ಸ್ವಾತಂತ್ರ್ಯಕ್ಕೆ ಮುಂಚೆ ರಾಜ್ಯಮಟ್ಟದಲ್ಲಿ ಇನ್ನೂ ಕೆಲವು ಸಂಘಗಳು ನಲ್ವತ್ತರ ದಶಕದಲ್ಲಿ ರಚಿತವಾದವು. ಸ್ವಾತಂತ್ರ್ಯದ ನಂತರ ಈ ಸಂಘಗಳ ಬೆಳವಣಿಗೆ ಮತ್ತೂ ಬಲವರ್ಧನೆ ಕಂಡುಬಂದಿತಲ್ಲದೆ ಪ್ರಜಾಪ್ರಭುತ್ವದ ಬೇರುಗಳು ಬಿಟ್ಟಂತೆ ಸಾಮಾನ್ಯ ಭಾರತೀಯನು ಹೆಚ್ಚು ಆತ್ಮ ವಿಶ್ವಾಸಿಯೂ, ಧೀರನು ಮತ್ತು ಭಯರಹಿತನೂ, ವೈಯಕ್ತಿಕ ಹಾಗೂ ಸಾಂಘಿಕ ಹಕ್ಕುಗಳ ಬಗ್ಗೆ ಅರಿವುಳ್ಳವನೂ ಆದನು. ಸಂಘಗಳು ಬೆಳೆಯುತ್ತಾ ಹೋದಂತೆ, ಸಾಮಾನ್ಯ ಹಾಗೂ ವಿಶೇಷ ಹಿತಾಸಕ್ತಿಗಳನ್ನು ಹೊಂದಿದ್ದ ಶಿಕ್ಷಕರು ಒಟ್ಟು ಸೇರಿ ಅಧಿಕಾಧಿಕ ಸಂಖ್ಯೆಯಲ್ಲಿ ಸಂಘಗಳನ್ನು ರಚಿಸಿಕೊಂಡರು. 1990ರ ವೇಳೆಗೆ, ರಾಜ್ಯಮಟ್ಟದ 102 ಮಾನ್ಯತೆ ಪಡೆದ ಸಂಘಗಳು, ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಶಿಕ್ಷಕರ 41 ಸಂಘಗಳು, ಪ್ರೈಮರಿ ಮತ್ತು ಸೆಕೆಂಡರಿ ಎರಡೂ ಸೇರಿದಂತೆ 31 ಸಂಘಗಳು, ಮುಖ್ಯೋಪಾಧ್ಯಾಯರ 7 ಹಾಗೂ ವಿಜ್ಞಾನ, ಶಾರೀರಿಕ ಶಿಕ್ಷಣ ಮತ್ತು ಕರಕುಶಲ ಶಿಕ್ಷಕರ 8 ಸಂಘಗಳು ಅಸ್ತಿತ್ವದಲ್ಲಿದ್ದವು.

**ಸಂಘಗಳ ವಿಧಗಳು:** ವಿವಿಧ ರೀತಿಯ ಸಂಘಗಳು ಅಸ್ತಿತ್ವದಲ್ಲಿವೆ. ವಿಭಿನ್ನ ಗುರಿಗಳು ಹಾಗೂ ಕಾರ್ಯಗಳನ್ನು ಹೊಂದಿರುವ ವಿವಿಧ ಕ್ಷೇತ್ರದಲ್ಲಿನ ಶಿಕ್ಷಣದ ಎಲ್ಲಾ ಸ್ತರದ ಅಧ್ಯಾಪಕರ ಸಂಘಗಳು ಇವೆ. ಒಂದೇ ತೆರನಾದ ಶಿಕ್ಷಕರು ತಮ್ಮ ತಾತ್ವಿಕ ಧೋರಣೆಗಳ ವ್ಯತ್ಯಾಸದಿಂದಾಗಿ ಬೇರೆ ಬೇರೆ ಸಂಘಗಳನ್ನು ರಚಿಸಿಕೊಳ್ಳುವಂತಾಗುತ್ತದೆ. ರಾಜಕೀಯ ಪಕ್ಷಗಳಿಗೆ ಬಹಿರಂಗವಾಗಿ ಸೇರಿದ ಇಲ್ಲವೆ ಅವುಗಳ ಹಿಡಿತಕ್ಕೆ ಸಿಕ್ಕಿರುವ ಸಂಘಗಳಿದ್ದು ಇವು ಆ ಪಕ್ಷಗಳ ಅಂಗಗಳಂತಿದ್ದರೆ ಮತ್ತೆ ಕೆಲವು ಅವೆಲ್ಲದರಿಂದಲೂ ದೂರವಿದ್ದು ಬಿಡುತ್ತವೆ. ತಾತ್ವಿಕ, ರಾಜಕೀಯ ಹಾಗೂ ಸಾಮಾಜಿಕ ಧೋರಣೆಗಳ ವಿವಿಧ ಛಾಯೆಗಳನ್ನು ಹೊಂದಿರುವಂಥ ಹಲವಾರು ಸಂಘಗಳಿವೆ. ಅಧಿಕಾರದ ಚುಕ್ಕಾಣಿ ಹಿಡಿದಿರುವ ಆಡಳಿತದ ಪ್ರತಿನಿಧಿಯಂತೆ ಕೆಲವು ಸಂಘಗಳು ವರ್ತಿಸುತ್ತಿದ್ದರೂ ತೋರಿಕೆಗೆ ತಾವು ಶಿಕ್ಷಕರ ಹಿತೈಷಿಗಳು ಎಂದು ಬಿಂಬಿಸಿಕೊಳ್ಳುವ ಪ್ರಯತ್ನ ನಡೆಸುತ್ತವೆ. ಅವುಗಳ ಅದೃಷ್ಟ ಹಾಗೂ ಸ್ಥಾನಮಾನ ಸರ್ಕಾರಗಳು ಬದಲಾದಂತೆ ಬದಲಾಗುತ್ತಾ ಹೋಗುತ್ತವೆ. ಕೆಲವು ಸಂಘಗಳು ಹೆಚ್ಚು ವಿಶ್ವಸನೀಯವೂ ಜನಪ್ರಿಯವೂ ಆಗಿವೆ.

ಅಖಿಲಭಾರತ ಶೈಕ್ಷಣಿಕ ಸಂಘಗಳ ಒಕ್ಕೂಟ (All India Federation of Educational Associations, AIFEA), ಅಖಿಲಭಾರತ ಶಿಕ್ಷಕರ ಸಂಘಗಳ ಒಕ್ಕೂಟ ಮುಂತಾದ ಸಂಘಗಳ ಎಲ್ಲಾ ಸ್ತರಗಳ ಮತ್ತು ಹಂತಗಳ ಒಕ್ಕೂಟಗಳಿಂದ ಕೆಲವು ಸಂಘಗಳು ಅಸ್ತಿತ್ವದಲ್ಲಿವೆ. ಇವಲ್ಲದೆ, ಉನ್ನತ ಶಿಕ್ಷಣ ಸ್ತರದಲ್ಲಿ ಅಖಿಲ ಭಾರತ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶಿಕ್ಷಕರ ಸಂಘಗಳ ಒಕ್ಕೂಟ (All India Federation of University and College Teachers, AIFUCT), ಸೆಕೆಂಡರಿ ಶಿಕ್ಷಣ ಸ್ತರದಲ್ಲಿ ಅಖಿಲ ಭಾರತ ಸೆಕೆಂಡರಿ ಶಿಕ್ಷಕರ ಒಕ್ಕೂಟ (All India Secondary Teachers' Federation, AISTF), ಪ್ರೈಮರಿ ಮಟ್ಟದಲ್ಲಿ ಅಖಿಲಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ, (All India Primary Teachers' Federation, AIPTF), ಮತ್ತು ಶೈಕ್ಷಣಿಕ ಸಂಸ್ಥೆಗಳ ವ್ಯವಸ್ಥಾಪನೆಗಳ ಒಕ್ಕೂಟ ಮುಂತಾದ ಹಂತದ ನಿರ್ದಿಷ್ಟ ಒಕ್ಕೂಟಗಳಿವೆ.

ಈ ಒಕ್ಕೂಟಗಳ ಘಟಕಗಳು, ಶಾಖೆಗಳು ಹಾಗೂ ಸನ್ನದುಗಳು (Charters) ರಾಜ್ಯ ಹಾಗೂ ಸಂಸ್ಥೆಗಳ ಸ್ತರದಲ್ಲಿ

Digitised by Bharatavani, CIIL

ವಿವಿಧ ಕ್ಷೇತ್ರಗಳನ್ನು ತಮ್ಮ ವ್ಯಾಪ್ತಿಯಲ್ಲಿ ತರುತ್ತವೆ. ಇವುಗಳಲ್ಲಿ ಕೆಲವು ನಿರ್ದಿಷ್ಟ ತಾತ್ವಿಕ ಒಲವು, ರಾಜಕೀಯ ದೃಷ್ಟಿಕೋನ ಅಥವಾ ಆಡಳಿತಾತ್ಮಕ ಘಟಕಗಳನ್ನು ಹೊಂದಿರುವುವು.

ಉನ್ನತ ಶಿಕ್ಷಣ ಸ್ತರದಲ್ಲಿ ದೇಶದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ಸಾಮಾನ್ಯವಾಗಿ ಆಯಾ ವಿಶ್ವದ್ಯಾನಿಲಯಗಳ ಹೆಸರಿನ ಶಿಕ್ಷಕ ಸಂಘಗಳಿವೆ. ಉದಾಹರಣೆಗೆ, ದೆಹಲಿ ವಿಶ್ವವಿದ್ಯಾಲಯ ಶಿಕ್ಷಕರ ಸಂಘ(DUTA), ಅದೇ ರೀತಿ ಕಲ್ಕತ್ತಾ ವಿಶ್ವವಿದ್ಯಾಲಯ ಶಿಕ್ಷಕರ ಸಂಘ (CUTA) ಮತ್ತು ಕೇರಳ ವಿಶ್ವವಿದ್ಯಾಲಯ ಶಿಕ್ಷಕರ ಸಂಘ (KUTA) ಇತ್ಯಾದಿ. ವಿಶ್ವವಿದ್ಯಾಲಯದ ಪರಿಧಿಯೊಳಗೆ ವಿಶ್ವವಿದ್ಯಾಲಯದಿಂದ ನಿರ್ದೇಶಿತ ಕಾಲೇಜುಗಳು ತಮ್ಮದೇ ಆದ ಸಂಘಗಳನ್ನು ಹೊಂದಿವೆ. ದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ, ಒಂದು ನಿರ್ದಿಷ್ಟ ರಾಜಕೀಯ ಪಕ್ಷದ ಕಡೆಗೆ ಒಲವನ್ನು ಹೊಂದಿರುವ ಶಿಕ್ಷಕರು ತಮ್ಮದೇ ಆದ ವಿಭಿನ್ನ ಸಂಘವನ್ನು ರಚಿಸಿಕೊಳ್ಳುತ್ತಾರೆ. ಉದಾಹರಣೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ಗೆ, ದೆಹಲಿ ವಿಶ್ವವಿದ್ಯಾನಿಲಯ ಒಂದೇ ಸಮನಾದ ಚಿಂತನೆಯನ್ನುಳ್ಳ ಚಿಕ್ಕಪುಟ್ಟ ಗುಂಪುಗಳ ಸದಸ್ಯರು ಒಟ್ಟಿಗೆ ಸೇರಿ ಸಂಘವನ್ನುರಚಿಸುತ್ತಾರೆ. ಉದಾಹರಣೆಗೆ, ಕ್ರಿಯಾಶೀಲತೆಗಾಗಿ ಶಿಕ್ಷಣ, ದೆಹಲಿ ವಿಶ್ವವಿದ್ಯಾಲಯ. ವಿಶ್ವವಿದ್ಯಾಲಯ ಪ್ರಾಧ್ಯಾಪಕರ ಸಂಘದಂತಹ ಕೆಲವು ಹುದ್ದೆ/ಸ್ಥಾನಗಳಿಗೆ ಸಂಬಂಧಿಸಿದ ಸಂಘಗಳೂ ರಚಿತವಾಗಿರುವುದುಂಟು. ವಿವಿಧ ಆಡಳಿತಾತ್ಮಕ ವರ್ಗಕ್ಕೆ ಸೇರಿದ ವಿಶ್ವವಿದ್ಯಾಲಯಗಳ ಶಿಕ್ಷಕರು ಸಹ ಸಂಘಗಳನ್ನು ರಚಿಸುವುದುಂಟು. ಉದಾಹರಣೆಗೆ, ಕೇಂದ್ರೀಯ ವಿಶ್ವವಿದ್ಯಾಲಯ ಶಿಕ್ಷಕರ ಸಂಘಗಳು, ವಿಶ್ವವಿದ್ಯಾನಿಲಯಗಳಲ್ಲಿ ವೃತ್ತಿನಿರತರಾಗಿರುವ ಶಿಕ್ಷಕರು ತಮ್ಮ ಸಹೋದ್ಯೋಗಿಗಳಾದ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳಲ್ಲಿನ ಶಿಕ್ಷಕರನ್ನು ಹೊರತುಪಡಿಸಿ ಸಂಘಗಳನ್ನು ನಿರ್ಮಿಸಿಕೊಂಡಿದ್ದಾರೆ. ಉದಾ: ಅಖಿಲಭಾರತ ವಿಶ್ವವಿದ್ಯಾಲಯ ಶಿಕ್ಷಕರ ಸಂಘ (All India Federation of University Teachers Association, AIFUTA), ಇವೆಲ್ಲವೂ ಸೇರಿ ರಾಜ್ಯಮಟ್ಟದ ಸಂಘಗಳಾಗುತ್ತವೆ ಮತ್ತು ಅಂತಿಮವಾಗಿ ಅಖಿಲಭಾರತ ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಕರ ಸಂಘಗಳ ಒಕ್ಕೂಟವಾಗಿ ಕೊನೆಗೊಳ್ಳುತ್ತವೆ.

ಸೆಕೆಂಡರಿ ಮಟ್ಟದಲ್ಲಿ, ಶಾಲಾಸ್ತರದ, ಜಿಲ್ಲಾಸ್ತರದ, ರಾಜ್ಯಸ್ತರದ ಕಡೆಗೆ ಅಖಿಲಭಾರತ ಮಟ್ಟದ ಸಂಘಗಳಿವೆ. ಪುನಃ, ಪ್ರತಿಯೊಂದು ಘಟ್ಟದಲ್ಲಿಯೂ ಒಂದಕ್ಕಿಂತ ಹೆಚ್ಚು ಸಂಘಗಳಿದ್ದು ಅವುಗಳಲ್ಲಿ ಪ್ರತಿಯೊಂದೂ ವಿಭಿನ್ನ ರಾಜಕೀಯ ಪಕ್ಷದ ಅಂಗ/ಶಾಖೆಯಂತೆ ಆಗಬಹುದೇನೊ. ಅವೆಲ್ಲವೂ ಬಹುತೇಕ ಒಂದೇ ರೀತಿಯ ಕಾರ್ಯಕ್ರಮ(ಅಜೆಂಡಾ) ಹೊಂದಿದ್ದು, ಒಂದೇ ರೀತಿಯ ವಿವಾದಾಂಶಗಳನ್ನು ಕೈಗೆತ್ತಿಕೊಳ್ಳುತ್ತಾ ತಾವು ಶಿಕ್ಷಕರ ಹಿತರಕ್ಷಕರು ಎಂದು ಘೋಷಿಸಿಕೊಳ್ಳುತ್ತವೆ. ಅಖಿಲ ಭಾರತ ಸೆಕೆಂಡರಿ ಶಿಕ್ಷಕರ ಒಕ್ಕೂಟ ಶೃಂಗ ಸಂಸ್ಥೆಯಾಗಿದೆ. ಕೆಲವು ಸಂಸ್ಥೆಗಳು ಒಂದೇ ರೀತಿಯ ಆಡಳಿತಾಧಿಕಾರದ ಆಧಾರದ ಮೇಲೆ ರಚಿತವಾಗಿವೆ ಉದಾಹರಣೆಗೆ, ಕೇಂದ್ರೀಯ ವಿದ್ಯಾಲಯ ಸಂಘಟನೆ ಶಿಕ್ಷಕರ ಸಂಘ, ನವೋದಯ ವಿದ್ಯಾಲಯ ಸಮಿತಿ ಶಿಕ್ಷಕರ ಸಂಘ, ಖಾಸಗಿ ಶಾಲಾ ಶಿಕ್ಷಕರ ಸಂಘ, ಸಾರ್ವಜನಿಕ ಶಾಲಾ ಶಿಕ್ಷಕರ ಸಂಘ, ಸರ್ಕಾರಿ ಶಾಲಾ ಶಿಕ್ಷಕರ ಸಂಘ, ಅಥವಾ ಡಿ.ಎ.ವಿ ಶಾಲಾ ಶಿಕ್ಷಕರ ಸಂಘ, ಇವುಗಳಲ್ಲಿ ಪ್ರತಿಯೊಂದರ ರಾಜ್ಯಮಟ್ಟದ, ಶಾಲಾ ಮಟ್ಟದ ಶಾಖೆಗಳು ಇವೆ. ಆದಾಗ್ಯೂ ವರ್ಗವು ವಿಸ್ತಾರವಾದಷ್ಟು ಸಂಘಗಳು ಹೆಚ್ಚು ಶಕ್ತಿಯುತವಾಗುವುವು.

ಮೂಲತಃ ಶೈಕ್ಷಣಿಕ ಗುರಿಗಳನ್ನು, ಕಾರ್ಯಕ್ರಮಗಳನ್ನು ಹೊಂದಿರುವ, ವಿಷಯಕ್ಕೆ ಸಂಬಂಧಿಸಿದ ಶಿಕ್ಷಕ ಸಂಘಗಳಿವೆ. ಭಾರತೀಯ ವಿಜ್ಞಾನ ಕಾಂಗ್ರೆಸ್ ಮತ್ತು ಭಾರತೀಯ ಸಾಮಾಜಿಕ ವಿಜ್ಞಾನ ಕಾಂಗ್ರೆಸ್ – ಇವೆರಡೂ ಆಯಾ ಕ್ಷೇತ್ರಗಳಲ್ಲಿ ವಿಶೇಷಜ್ಞತೆಯನ್ನು ಹೊಂದಿರತಕ್ಕ ಪ್ರಸಿದ್ಧ ಸಂಘಗಳಾಗಿದ್ದು ಕ್ರಮಶಃ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನಗಳ ವಿವಿಧ ಅಧ್ಯಯನ ಕ್ಷೇತ್ರಗಳನ್ನು ತಮ್ಮ ವ್ಯಾಪ್ತಿಗೆ ತರುತ್ತವೆ. ಅವುಗಳ ವಾರ್ಷಿಕ ಸಮ್ಮೇಳನಕ್ಕೆ ಅಧಿಕ ಸಂಖ್ಯೆಯಲ್ಲಿ ಶಿಕ್ಷಕರು ಹಾಜರಾಗುತ್ತಾರೆ. ಇದೇ ರೀತಿ, ಭಾರತೀಯ ಇತಿಹಾಸ ಕಾಂಗ್ರೆಸ್, ಭಾರತೀಯ ಅರ್ಥಶಾಸ್ತ್ರ ಕಾಂಗ್ರೆಸ್, ಭಾರತೀಯ ಮನೋವಿಜ್ಞಾನ ಸಂಘ, ಅಖಿಲಭಾರತ ವಿಜ್ಞಾನ ಶಿಕ್ಷಕರ ಸಂಘ, ಅಖಿಲಭಾರತ ಉರ್ದು ಶಿಕ್ಷಕರ ಸಂಘ, ಇವೇ ಮುಂತಾದ ವಿಷಯವನ್ನು ಆಧರಿಸಿ ಸಂಘಗಳಿವೆ. ಇವುಗಳಲ್ಲಿ ಕೆಲವು ಶಾಲೆಗೆ ಸಂಬಂಧಿಸಿದ್ದರೆ ಮತ್ತೆ ಕೆಲವು ವಿಶ್ವವಿದ್ಯಾಲಯದ ಶಿಕ್ಷಕರಿಗೆ ಸಂಬಂಧಿಸಿವೆ ಹಾಗೂ ಎರಡಕ್ಕೂ ಸಂಬಂಧಿಸಿವೆ.

ಭಾರತೀಯ ಅಧ್ಯಾಪಕ ಶಿಕ್ಷಕರ ಸಂಘ, ಅಧ್ಯಾಪಕ ಶಿಕ್ಷಣ ಸಮಿತಿ, ಭಾರತೀಯ ಬೋಧನೆಗಾಗಿ ಶಿಕ್ಷಣ ಸಮಿತಿ, ಅಖಿಲ ಭಾರತ ಶೈಕ್ಷಣಿಕ ಸಂಶೋಧನಾ ಸಂಘ, ಭಾರತೀಯ ಶೈಕ್ಷಣಿಕ ತಂತ್ರಜ್ಞಾನ ಸಂಘ, ಮುಂತಾದ ಶಿಕ್ಷಣದ ವಿವಿಧ ವಲಯಕ್ಕೆ ಸಂಬಂಧಿಸಿದ ಸಂಘಗಳಿವೆ. ಇವೆಲ್ಲವೂ ವ್ಯಾಪಕವಾಗಿ ಅಧ್ಯಾಪಕ ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿವೆ. ತಾಂತ್ರಿಕ ಸಂಸ್ಥೆಗಳಲ್ಲಿ ತಂತ್ರಜ್ಞಾನ, ವೈದ್ಯಕೀಯ, ಮ್ಯಾನೇಜ್‌ಮೆಂಟ್ ಇತ್ಯಾದಿ ಕ್ಷೇತ್ರಗಳಲ್ಲಿ ಇದೇ ರೀತಿಯ ಶಿಕ್ಷಕ ಸಂಘಗಳಿವೆ.

ಭಾರತೀಯ ಶಾಲಾಪೂರ್ವ ಶಿಕ್ಷಣ ಸಂಘ ಮತ್ತು ಭಾರತೀಯ ಲೆಕ್ಕ ಸಂಶೋಧನಾ ಶಿಕ್ಷಣ ಸಂಘ, ಭಾರತೀಯ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನ ಸಂಘ, ಭಾರತೀಯ ಶೈಕ್ಷಣಿಕ ಯೋಜನಾ ಸಂಘ, ಭಾರತೀಯ ತೌಲನಿಕ ಶಿಕ್ಷಣ ಸಂಘ ಮುಂತಾದ ಕೆಲವು ವಿಶೇಷತೆಯುಳ್ಳ ವಲಯಗಳ ಸಂಘಗಳು ಶಿಕ್ಷಕರನ್ನು ಹಾಗೂ ಸಂಬಂಧಪಟ್ಟ ಕ್ಷೇತ್ರದ ಅಧ್ಯಾಪಕ ಶಿಕ್ಷಕರನ್ನು ಮತ್ತು ಇತರ ಅಧಿಕಾರಿಗಳನ್ನು ಒಳಗೊಳ್ಳುತ್ತವೆ.

ಹಲವು ಭಾರತೀಯ ಸಂಘಗಳು ಇತರ ರಾಷ್ಟ್ರಗಳ ಕೆಲವು ಸಂಘಗಳೊಂದಿಗೆ ಸಂಬಂಧವನ್ನು ಹೊಂದಿದ್ದು ಅಂತಾರಾಷ್ಟ್ರೀಯ ಸಂಘಗಳು ಮತ್ತು ವಿಶ್ವ ಒಕ್ಕೂಟಗಳಿಂದ ಘೋಷಿತಗೊಂಡಿವೆ. ಉದಾಹರಣೆಗೆ, ಬೋಧಕ ವೃತ್ತಿಯ ಸಂಘಗಳ ಒಕ್ಕೂಟ(Confederation of the Organisation of

Digitised by Bharatavani, CIIL

Teaching Profession-WCOTP). ಬ್ರುಸೆಲ್ಸ್‌ನಲ್ಲಿರುವ ಇದು ಈಗ ಎಜುಕೇಷನಲ್ ಇಂಟರ್‌ನ್ಯಾಷನಲ್ ಎಂದು ಕರೆಯಲ್ಪಡುತ್ತದೆ. ಸಾರ್ಕ್ ಶಿಕ್ಷಕರ ಸಂಘ, ಲಂಡನ್ನಿನ ಅಧ್ಯಾಪಕರ ಸಂಘ, ನ್ಯೂ ಎಜುಕೇಷನ್ ಅಸೋಸಿಯೇಷನ್ ಆಫ್ ಅಮೇರಿಕಾ (ಅಮೆರಿಕಾ ನವಶಿಕ್ಷಣ ಸಂಘ) ಕೆನಡಾ ಶಿಕ್ಷಕರ ಒಕ್ಕೂಟ, ನೇಪಾಳ ರಾಷ್ಟ್ರೀಯ ಶಿಕ್ಷಕರ ಒಕ್ಕೂಟ, ಆಸ್ಟ್ರೇಲಿಯಾ ಶಿಕ್ಷಣ ಸಂಘ, ಹಾಂಗ್‌ಕಾಂಗ್ ವೃತ್ತಿಪರ ಶಿಕ್ಷಕರ ಸಂಘ, ಬೋಧನೆಗಾಗಿ ಅಂತಾರಾಷ್ಟ್ರೀಯ ಶಿಕ್ಷಣ ಸಮಿತಿ ಇವಲ್ಲದೆ ಯುನೆಸ್ಕೊ (UNESCO) ಅಂತಾರಾಷ್ಟ್ರೀಯ ಶಿಕ್ಷಣ ಬ್ಯೂರೋ ಇತ್ಯಾದಿ ಸಂಘಗಳ ಉದಾಹರಣೆಯೂ ಇದೆ.

**ಕಾರ್ಯವ್ಯಾಪ್ತಿ:** ಸಂಸ್ಥೆಯ ಕಾರ್ಯವ್ಯಾಪ್ತಿ ಸಂರಚನೆಯು ಸದಸ್ಯತ್ವಕ್ಕೆ ಅನುಮತಿಸುವ ಭೌಗೋಳಿಕ ಕ್ಷೇತ್ರಕ್ಕೆ ಅನುಸಾರವಾಗಿ ಸಂಘಗಳು ಸ್ಥಳೀಯ, ರಾಜ್ಯ, ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮಟ್ಟದ್ದಾಗಿರಬಹುದು.

**ಮಾನ್ಯತೆ:** ಭಾರತದಲ್ಲಿ, ಬಹಳಷ್ಟು ಶಿಕ್ಷಕ ಸಂಘಗಳು ರಿಜಿಸ್ಟ್ರಾರ್ ಆಫ್ ಸೊಸೈಟಿಯಲ್ಲಿ ದಾಖಲಾಗುತ್ತವೆ. ಇದರಿಂದ ಸಂಘಗಳಿಗೆ ಶಾಸನಬದ್ಧ ಸಿಂಧುತ್ವ ಮತ್ತು ವಿಶ್ವಾಸಾರ್ಹತೆ ದೊರಕುವುದಲ್ಲದೆ ಸಂಘದ ಸದಸ್ಯರಿಗೆ ಈ ಸಂಘವು ಸುಲಭವಾಗಿ ನಂಬುವ ಹಾಗೂ ನಿಷ್ಕಳಂಕ ವೃತ್ತಿಪರರನ್ನು ಸುಲಿಯುವ (ಹಣ ಇತ್ಯಾದಿ) ನಕಲಿ ಅಥವಾ ಮೋಸದ ಸಂಘವಲ್ಲ ಎಂಬುದರ ಬಗ್ಗೆ ಆಶ್ವಾಸನೆ ದೊರಕುತ್ತದೆ, ಇದಲ್ಲದೆ, ಉದ್ಯೋಗಸ್ಥರನ್ನು ಪ್ರತಿನಿಧಿಸುವೆವು ಎಂದೂ ಹಾಗೂ ಅವರ ಹಕ್ಕುಗಳಿಗಾಗಿ ಅವರ ಪರವಾಗಿ ವಿವಾದಾಂಶಗಳನ್ನು ಕೈಗೆತ್ತಿಕೊಳ್ಳುವೆವೆಂದೂ ಕೇಳುವ ಸಂಘಗಳು ಉದ್ಯೋಗಸ್ಥರಿಂದ ಮಾನ್ಯತೆ ಬಯಸುತ್ತವೆ. ಶಾಲಾ ಶಿಕ್ಷಣ, ಅಧ್ಯಾಪಕ ಶಿಕ್ಷಣ, ವೇತನಗಳು ಹಾಗೂ ಸೇವೆ ಮತ್ತು ಕೆಲಸದ ಪರಿಸರಗಳು ಮುಂತಾದ ವಿಷಯಗಳನ್ನು ಕುರಿತು ಪರಾಮರ್ಶನ ನೀಡುವ ಹಕ್ಕಿಗಾಗಿ ಅರ್ಹತೆ ಪಡೆಯುವಂತೆ ಶಿಕ್ಷಕರ ಔದ್ಯೋಗಿಕ ಸಂಘಗಳನ್ನು ಮಾನ್ಯ ಮಾಡಬೇಕೆಂದು 1966ರ ಶಿಕ್ಷಣ ಆಯೋಗ ಸಲಹೆ ಮಾಡಿತು.

ಸಾಮಾನ್ಯವಾಗಿ, ಭಾರತದಲ್ಲಿ ಅಧಿಕಾರಿಗಳು ಶಿಕ್ಷಕ ಸಂಘಗಳ ರಚನೆಗೆ ಅಡಚಣೆಯನ್ನು ಉಂಟುಮಾಡದೆ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಸರಕಾರಿ ಮತ್ತು ಖಾಸಗಿ ಶಾಲೆಗಳ ಶಿಕ್ಷಕರು ತಮ್ಮ ಸಂಘ ನಿರ್ಮಾಣಕ್ಕೆ ಸ್ವತಂತ್ರರಾಗಿದ್ದು ಆ ಸಂಘಗಳಿಗೆ ರಾಜ್ಯದಿಂದ ಸಿಗಬೇಕಾದ ಮಾನ್ಯತೆ ದೊರೆಯುತ್ತದೆ. ವಿವಿಧ ಶಿಕ್ಷಣ ಆಯೋಗಗಳು ಅವುಗಳನ್ನು ಶಿಕ್ಷಕರ ವೃತ್ತಿಪರ ವಿಕಾಸದ ಒಂದು ನಿಯೋಗವೆಂಬಂತೆ ಸ್ವಾಗತಿಸಿವೆ. 1986ರ ಒಂದು ರಾಷ್ಟ್ರೀಯ ಶಿಕ್ಷಣ ನೀತಿಯ ಕಾರ್ಯಕ್ರಮ ಹೀಗೆ ಪರಿಗಣಿಸಿದೆ.

"ಶಿಕ್ಷಕರ ಗೌರವ ಅವರ ವೃತ್ತಿಪರವಾದ ಚಟುವಟಿಕೆಗಳು, ಸಮಗ್ರತೆಗಳನ್ನು ಕಾಪಾಡುವಲ್ಲಿ ಮತ್ತು ವೃತ್ತಿಯಲ್ಲಿನ ದುರ್ವರ್ತನೆಯ ನಿಯಂತ್ರಣದಲ್ಲಿ ಶಿಕ್ಷಕ ಸಂಘಗಳ ಸಹಭಾಗಿತ್ವ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಒಂದು ಪ್ರಮುಖ ಕ್ರಮವಾಗಿದೆ. ಅಲ್ಲದೆ, ಪ್ರಬಲ, ಏಕೀಕೃತ ಮತ್ತು ಜವಾಬ್ದಾರಿಯುತ ಶಿಕ್ಷಕ ಸಂಘಗಳು ಅಧ್ಯಾಪಕರ ಘನತೆ ಮತ್ತು ಹಕ್ಕುಗಳ ದೃಷ್ಟಿಯಿಂದ ಮಾತ್ರವಲ್ಲದೆ ವೃತ್ತಿಪರವಾದ ಶಿಕ್ಷಕರ ಸದ್ವರ್ತನೆಯನ್ನು ನಿಶ್ಚಿತಪಡಿಸಿಕೊಳ್ಳಲೂ ಅವಶ್ಯಕವಾಗಿವೆ ಎಂದೂ ಹೇಳಿದೆ. ಅಂಥ ಸಂಘಗಳ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು ಉಚಿತ".

1966ರ ಭಾರತೀಯ ಶಿಕ್ಷಣ ಆಯೋಗ ವೃತ್ತಿಪರವಾದ ವಿಕಾಸದಲ್ಲಿ ಅಧ್ಯಾಪಕ ಸಂಘಗಳ ಸ್ಪಷ್ಟ ಪಾತ್ರವನ್ನು ಮನಗಂಡಿತು. ಆಯೋಗವು ಶಿಕ್ಷಕ ಸಂಘಗಳ ಈ ಕೆಳಗಿನ ಪಾತ್ರ ಮತ್ತು ಕಾರ್ಯಗಳನ್ನು ನಿಶ್ಚಿತಗೊಳಿಸಿತು.

ವೃತ್ತಿಯಲ್ಲಿ ಪ್ರಾಮಾಣಿಕತೆಯನ್ನು ಎತ್ತಿಹಿಡಿಯುವುದು. ಅಧ್ಯಾಪಕರ ಘನತೆಯನ್ನು ಹೆಚ್ಚಿಸುವುದು ಮತ್ತು ವೃತ್ತಿಯಲ್ಲಿ ದುರ್ವರ್ತನೆಯನ್ನು ನಿಯಂತ್ರಿಸುವುದು. ಈ ಕಾರ್ಯಗಳಲ್ಲಿ ಶಿಕ್ಷಕ ಸಂಘಗಳು ಮಹತ್ವಪೂರ್ಣ ಪಾತ್ರವನ್ನು ವಹಿಸಬೇಕು.

ರಾಷ್ಟ್ರಮಟ್ಟದ ಸಂಘಗಳು ವೃತ್ತಿಯಲ್ಲಿನ ನೈತಿಕತೆಯನ್ನು ಕುರಿತ ನೀತಿಸಂಹಿತೆಯನ್ನು ಶಿಕ್ಷಕರಿಗಾಗಿ ಸಿದ್ಧಪಡಿಸಿ ಶಿಕ್ಷಕರು ಅದರಂತೆ ನಡೆಯುವ ಹಾಗೆ ಮಾಡಬಹುದಾಗಿದೆ. ಅಲ್ಲದೆ, ಈ ಕೆಳಗಿನ ಕಾರ್ಯಗಳನ್ನು ಅವರಿಗೆ ಸೂಚಿಸಬಹುದಾಗಿದೆ.

- ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ತಮ್ಮ ಸದಸ್ಯರಿಗೆ ಅವರ ನ್ಯಾಯಸಮ್ಮತವಾದ ಸಾಮಾಜಿಕ ಆರ್ಥಿಕ ಮತ್ತು ಔದ್ಯೋಗಿಕ ಸ್ಥಾನಮಾನಗಳನ್ನು ದೊರಕಿಸಿಕೊಡುವುದು.
- ಅವರ ವೃತ್ತಿಪರ ಹಿತಾಸಕ್ತಿಗಳನ್ನು ರಕ್ಷಿಸುವುದು ಮತ್ತು ವೃತ್ತಿ ಹಾಗೂ ಸೇವೆಯ ತೃಪ್ತಿಕರ ಪರಿಸ್ಥಿತಿಗಳನ್ನು ದೊರಕಿಸಿಕೊಡುವುದು.
- ಪುನಶ್ಚೇತನ ಕಾರ್ಯಕ್ರಮಗಳು, ವಿಚಾರಗೋಷ್ಠಿಗಳು, ಪ್ರಕಟಣೆಗಳು, ಗ್ರಂಥಾಲಯ ಸೇವೆ ಮತ್ತು ಸಂಶೋಧನೆ ಇತ್ಯಾದಿಗಳ ಮೂಲಕ ಶಿಕ್ಷಕರ ವೃತ್ತಿಪರ ವಿಕಾಸವನ್ನು ಉಂಟುಮಾಡುವುದು.
- ನಿರಂತರ ಬದಲಾಗುತ್ತಿರುವ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಸವಾಲಿಗೆ ಸ್ಪಂದಿಸುತ್ತಾ ಶಿಕ್ಷಣದ ಸುಧಾರಣೆಗೆ ಕಾರ್ಯೋನ್ಮುಖವಾಗುವುದು.
- ಬೋಧನ ವಿಷಯಗಳ ಶಿಕ್ಷಕರ ಸಂಘಗಳನ್ನು ಸ್ಥಾಪಿಸುವುದರ ಮೂಲಕ ವಿಷಯಗಳ ಬೋಧನೆಯನ್ನು ಸುಧಾರಿಸುವುದು ಮತ್ತು
- ಶಿಕ್ಷಕರಿಗೆ ವೃತ್ತಿಪರವಾದ ನೀತಿಸಂಹಿತೆಯನ್ನು ಜಾರಿಗೆ ತರುವುದು ಮತ್ತು ಸದಸ್ಯರು ಅದನ್ನು ಅನುಸರಿಸುವಂತೆ ನೋಡಿಕೊಳ್ಳುವುದು.

ಎಲ್ಲಾ ಅಧ್ಯಾಪಕ ಸಂಘಗಳು ಬಹುತೇಕ ಒಂದೇ ತೆರನಾದ ಗುರಿಗಳನ್ನು ಹೊಂದಿದ್ದು, ಅಖಿಲಭಾರತ ಶೈಕ್ಷಣಿಕ ಸಂಘಗಳ

Digitised by Bharatavani, CIIL

ಒಕ್ಕೂಟದ (ಭಾರತದಲ್ಲಿ ಬಹುಪಾಲು ಎಲ್ಲಾ ಶಿಕ್ಷಕ ಸಂಘಗಳು ಈ ಒಕ್ಕೂಟದ ಘಟಕಗಳಾಗಿವೆ) ಈ ಕೆಳಗಿನ ಉದ್ಘೋಷಿತ ಗುರಿಗಳಂತೆಯೇ ಇವೆ.

i) ದೇಶಕ್ಕಾಗಿ ಶಿಕ್ಷಣದ ಪ್ರಭಾವಕಾರಿ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಪ್ರೋತ್ಸಾಹಿಸುವುದು.

ii) ಶಿಕ್ಷಕರು, ಪೋಷಕರು ಮತ್ತು ಶಿಕ್ಷಣತಜ್ಞರ ನಡುವೆ ಮಾಹಿತಿ ಮತ್ತು ವಿಚಾರಗಳ ವಿನಿಮಯಕ್ಕೆ ಅವಕಾಶವನ್ನೀಯುವುದು.

iii) ಭಾರತದಲ್ಲಿ ಬೋಧನ ವೃತ್ತಿಯ ಸ್ಥಾನಮಾನಗಳನ್ನು ರಕ್ಷಿಸಿ ಸುಧಾರಿಸುವುದು ಹಾಗೂ ಶಿಕ್ಷಕರಲ್ಲಿ ರಾಷ್ಟ್ರೀಯ ಜವಾಬ್ದಾರಿ ಮತ್ತು ಔದ್ಯೋಗಿಕ ದಕ್ಷತೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ರಾಷ್ಟ್ರೀಯ ಜೀವನದಲ್ಲಿ ಅದರ ನ್ಯಾಯಸಮ್ಮತವಾದ ಸ್ಥಾನವನ್ನು ದೃಢಪಡಿಸುವುದು.

iv) ಪೂರ್ವಪ್ರಾಥಮಿಕ ಸ್ತರದಿಂದ ವಿಶ್ವವಿದ್ಯಾಲಯದವರೆಗಿನ ಎಲ್ಲಾ ಸ್ತರಗಳಲ್ಲಿಯೂ ಅಧ್ಯಾಪಕ ವೃತ್ತಿಯ ಸದಸ್ಯರನ್ನು ಒಟ್ಟುಗೂಡಿಸುವುದು ಮತ್ತು

v) ಅಂತಾರಾಷ್ಟ್ರೀಯ ಅಧ್ಯಾಪಕ ಮತ್ತು ಶೈಕ್ಷಣಿಕ ವಿಚಾರಗೋಷ್ಠಿಗಳಲ್ಲಿನ ಸಕ್ರಿಯ ಸಹಭಾಗಿತ್ವದ ಮೂಲಕ ಸದ್‌ಭಾವನೆಯನ್ನು ಬೆಳೆಸುವುದು.

**ಚಟುವಟಿಕೆಗಳು:** ಬಹಳಷ್ಟು ಸಂಘಗಳು ತಮ್ಮ ವಿಕಾಸದ ಹಂತ, ತಾವು ಹೊಂದಿರುವ ಗೌರವ ಘನತೆಗಳು, ಸಂಪನ್ಮೂಲಗಳು ಹಾಗೂ ನೇತೃತ್ವದ ವಿಧ– ಇವುಗಳಿಗೆ ಅನುಸಾರವಾಗಿ ಕೆಲವು ನಿರ್ದಿಷ್ಟ ಚಟುವಟಿಕೆಗಳನ್ನು ಕೈಗೊಳ್ಳುತ್ತವೆ. ಉದಾಹರಣೆಗೆ, ವಾರ್ಷಿಕ ಸಮ್ಮೇಳನ ಅಥವಾ ಸಭೆ ಇಂತಹ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ಇದು ಸರ್ವೇ ಸಾಮಾನ್ಯವಾದ ಚಟುವಟಿಕೆ, ಸಾಮಾನ್ಯವಾಗಿ ವಾರ್ಷಿಕ ಸಭೆಯಲ್ಲಿ ಯಾವುದಾದರೊಂದು ವಿಷಯದ ಬಗ್ಗೆ ಉಪನ್ಯಾಸಗಳು, ಚರ್ಚೆಗಳು, ಪ್ರಬಂಧಗಳ ವಾಚನ, ಆಹ್ವಾನಿತರಿಂದ ಮುಖ್ಯ ವಿಷಯವನ್ನು ಕುರಿತ ಭಾಷಣಗಳು, ಅಧ್ಯಕ್ಷರ ಭಾಷಣ ಹಾಗೂ ನಿರ್ಣಯಗಳು ನಡೆಯುತ್ತವೆ. ಮುಖ್ಯವ್ಯಕ್ತಿಗಳೆನ್ನಬಹುದಾದ ರಾಜಕೀಯ ವ್ಯಕ್ತಿಗಳು ಅಥವಾ ಅನುದಾನ ಇಲ್ಲವೇ ಮತ್ತಾವ ಬಗೆಯಲ್ಲಿಯಾದರೂ ಬೆಂಬಲ ನೀಡುವವರನ್ನು ಆಹ್ವಾನಿಸಲಾಗುವ ಔಪಚಾರಿಕ ಉದ್ಘಾಟನಾ ಸಮಾರಂಭಗಳು ಹಾಗೂ ಸಮಾರೋಪ ಸಮಾರಂಭಗಳು ಜರುಗುತ್ತವೆ. ಇದರಿಂದ ಸಾರ್ವಜನಿಕರೊಡನೆ ಸಂಬಂಧವೇರ್ಪಟ್ಟು ಸಂಪರ್ಕ ಕಾರ್ಯದಂತಾಗುತ್ತದೆಯಲ್ಲದೆ ಸಮಾಚಾರದ ಮೌಲ್ಯ ಕಾರ್ಯಕ್ರಮಕ್ಕೆ ಲಭಿಸುತ್ತದೆ. ಅಲ್ಲದೆ ಸದಸ್ಯರು ಮಿತ್ರತ್ವವನ್ನು ನವೀಕರಿಸುವುದು, ಶೈಕ್ಷಣಿಕ ಆಸಕ್ತಿಗಳ ಹಾಗೂ ಚಟುವಟಿಕೆಗಳ ವಿಚಾರ ವಿನಿಮಯ, ಸಹೋದ್ಯೋಗಿಗಳ ಬಗ್ಗೆ ಸಮಾಚಾರ, ಪ್ರಕಟಣೆಗಳ ಬಗ್ಗೆ ತಿಳುವಳಿಕೆ, ಮಾರಾಟಕ್ಕೆ ಪ್ರೋತ್ಸಾಹಧನ, ಅರ್ಹ ಪರೀಕ್ಷಕರ ಹಾಗೂ ನೇಮಕಾತಿಗಾಗಿ ಪ್ರತಿಭಾಶಾಲಿಗಳನ್ನು ಗುರುತು ಹಚ್ಚುವುದು ಇತ್ಯಾದಿಗಳು ಈ ಕಾರ್ಯಕ್ರಮದಲ್ಲಿ ಸಾಧ್ಯವಾಗುವುದರಿಂದ ಸಾಮಾಜಿಕವಾದ ಉದ್ದೇಶವೂ ಪೂರೈಸುತ್ತದೆ. ಈ ಸಂಘಗಳು ಸಾಮಾನ್ಯವಾಗಿ ತಮ್ಮ ಸದಸ್ಯರ ವೇತನ, ಸೇವೆ ಮತ್ತು ಕಾರ್ಯ ಪರಿಸ್ಥಿತಿಗಳಿಗೆ ಸಂಬಂಧಿಸಿದ ದೂರು ಅಥವಾ ಬೇಡಿಕೆಗಳನ್ನು ಮೇಲಧಿಕಾರಿಗಳ ಮುಂದೆ ಇಡುವುವು. ತಮ್ಮ ಸದಸ್ಯರ ಪರವಾಗಿ ಮಾತುಕತೆಗಳನ್ನು ನಡೆಸುವುವು ಹಾಗೂ ಪ್ರತಿಭಟನೆ, ಚಳುವಳಿ, ಧರಣಿ ಇತ್ಯಾದಿಗಳನ್ನು ಆಯೋಜಿಸುವುವು. ಆಡಳಿತ ಅಥವಾ ಶಾಸಕಾಂಗಗಳಲ್ಲಿ ಅಧಿಕೃತ ಪ್ರತಿನಿಧಿತ್ವವನ್ನು ವಹಿಸುವುವು.

ಇವಲ್ಲದೆ ಹಲವು ಸಂಘಗಳು ತಮ್ಮ ವಾರ್ಷಿಕ ಸಮ್ಮೇಳನದ ನಡಾವಳಿಗಳನ್ನು ಪ್ರಕಟಿಸುವುವು. ಇನ್ನು ಕೆಲವು ಪತ್ರಿಕೆಗಳು(ಜರ್ನಲ್) ನಿಯತಕಾಲಿಕ ಸೂಚನಾಪತ್ರಗಳು; ಆಗಿಂದಾಗ್ಗೆ ಲೇಖನ ಸಂಗ್ರಹ ಗ್ರಂಥಗಳು, ವಾರ್ಷಿಕ ಪುಸ್ತಕ; ವಿಶೇಷ ಟಾಸ್ಕ್‌ಫೋರ್ಸ್‌ಗಳ ವರದಿಗಳು; ಕೆಲವು ಸಮಕಾಲೀನ ವಿವಾದಾಂಶಗಳನ್ನು ಕುರಿತಂತೆ ಸ್ಥಿತಿಗತಿಗಳ ಘೋಷಣೆ/ಅಭಿಪ್ರಾಯಗಳು; ವೃತ್ತಿಪರವಾದ ಸುಧಾರಣೆಗೆ ಕಾರ್ಯಕ್ರಮಗಳು ಇತ್ಯಾದಿಗಳನ್ನೂ ಪ್ರಕಟಿಸುವುವು. ಕೆಲವು ಸಂಘಗಳು ಯೋಜನೆಗಳನ್ನು, ಪರಿಶೋಧನೆಗಳನ್ನು ಅಥವಾ ಸರ್ವೇಕ್ಷಣೆಗಳನ್ನು ಕೈಗೊಳ್ಳುವುವು. ಇವೆಲ್ಲವೂ ಮಾಹಿತಿ ಪ್ರಸಾರ ಮತ್ತು ವಿನಿಮಯಕ್ಕೆ ಸಹಾಯ ಮಾಡುವುವು. ಸಂಘಗಳು ಇತರ ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳೊಡನೆ ನಿಯಮಿತವಾದ ಔಪಚಾರಿಕ ಸಂಬಂಧವನ್ನು ಇಟ್ಟುಕೊಳ್ಳುವುವು. ಇವುಗಳು ನೀತಿಸಂಹಿತೆ, ವೃತ್ತಿಯಲ್ಲಿ ವರ್ತನೆಯ ಮಾನದಂಡಗಳನ್ನು ನಿಶ್ಚಯಿಸಿ ಪರಿಪಾಲಿಸುವುವು. ಕೆಲವು ಸಂಘಗಳು ಕೆಲ ರಾಷ್ಟ್ರೀಯ ಸಾಮಾಜಿಕ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸುವವಲ್ಲದೆ ಮಾನವ ಹಕ್ಕುಗಳು, ಅಣುವಿರೋಧಿ ವಿಶ್ವ, ಸಾಕ್ಷರತೆ, ಏಡ್ಸ್, ಪರಿಸರ ಮಾಲಿನ್ಯ ನಿಯಂತ್ರಣ, ಪರಿಸರ ಸ್ನೇಹಿ ಚಟುವಟಿಕೆಗಳು, ವಯಸ್ಕರ ಶಿಕ್ಷಣ, ರಾಷ್ಟ್ರೀಯ ಏಕತೆ, ಸಮಾನತೆ ಮತ್ತು ನಿಷ್ಪಕ್ಷಪಾತ, ಸಾಂಸ್ಕೃತಿಕ ಸಮೃದ್ಧಿ, ಲಿಂಗ ಸಮಾನತೆ, ಸಮಾಜದ ಹಿಂದುಳಿದ ಮತ್ತು ವಂಚಿತ ವರ್ಗದ ಸಬಲೀಕರಣ ಇತ್ಯಾದಿ ಆಂದೋಲನಗಳಲ್ಲಿ ಪಾಲ್ಗೊಳ್ಳುವುವು.

**ಸದಸ್ಯತ್ವ:** ಪ್ರತಿಯೊಂದು ಸಂಘದ ಸಂವಿಧಾನವು ಸದಸ್ಯತ್ವಕ್ಕಾಗಿ ಸ್ತರ, ವಿಷಯ, ಲಿಂಗ, ವಿಚಾರಧಾರೆ, ಧರ್ಮ, ರಾಜ್ಯ, ಅರ್ಹತೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅರ್ಹತಾ ಮಾನದಂಡಗಳನ್ನು ನಿಶ್ಚಿತಗೊಳಿಸುತ್ತದೆ. ಸದಸ್ಯತ್ವ ಆಜೀವ ಇಲ್ಲವೆ ವಾರ್ಷಿಕ ಮತ್ತು ವೈಯಕ್ತಿಕ ಇಲ್ಲವೆ ಸಾಂಸ್ಥಿಕ ರೂಪದ್ದಾಗಿರಬಹುದು. ಕೆಲವು ಸಂಘಗಳು ಶ್ರೇಷ್ಠ ಅಧ್ಯಾಪಕರನ್ನು ಮತ್ತು ಶಿಕ್ಷಣ ತಜ್ಞರನ್ನು ಗೌರವ ಸದಸ್ಯರನ್ನಾಗಿಸಿ ಗೌರವಿಸುವ ಅವಕಾಶವನ್ನು ಹೊಂದಿರುವುವು. ಸಂಘಕ್ಕೆ ಸಂಬಂಧಿಸಿದ ಕ್ಷೇತ್ರದಲ್ಲಿ ಸಕ್ರಿಯವಾಗಿ ಕಾರ್ಯದಲ್ಲಿ ತೊಡಗಿಕೊಂಡಂಥವರಿಗೆ ಪೂರ್ಣ ಸದಸ್ಯತ್ವ ಇಲ್ಲವೇ ಸಹ ಸದಸ್ಯತ್ವದ ಅವಕಾಶಗಳೂ ಇರುವುವು.

**ಹಣಕಾಸು:** ಶಿಕ್ಷಕ ಸಂಘಗಳು ತಮ್ಮ ಖರ್ಚಿಗಾಗಿ ಸಾಮಾನ್ಯವಾಗಿ ಎರಡು ವಿಧದ ಸದಸ್ಯತ್ವ ಶುಲ್ಕವನ್ನು ಅವಲಂಬಿಸಿವೆ – ಆಜೀವ ಅಥವಾ ವಾರ್ಷಿಕ. ಕೆಲವು ಸಂಘಗಳು ಅವುಗಳ ಪತ್ರಿಕೆ ಅಥವಾ

Digitised by Bharatavani, CIIL

ಪ್ರಕಟಣೆಗಳ ಚಂದಾದಿಂದ ಆದಾಯವನ್ನು ಹೊಂದಿರುವುವು. ಇವು ಧನಸಹಾಯ ನೀಡುವ ಏಜೆನ್ಸಿ ಅಥವಾ ಸರ್ಕಾರದಿಂದ ವಿಶೇಷ ಅನುದಾನ ಕೋರುವುವು, ತಮ್ಮ ವಿಚಾರಗೋಷ್ಠಿಯ ಸ್ಮರಣ ಸಂಚಿಕೆಗೆ ವಿಜ್ಞಾಪನೆಗಳನ್ನು ಸಂಗ್ರಹಿಸುವುವು, ವಾರ್ಷಿಕ ಸಮ್ಮೇಳನದ ಖರ್ಚಿಗಾಗಿ ಚಂದಾ ಎತ್ತುವುವು ಅಥವಾ ತಮ್ಮ ಪತ್ರಿಕೆಗಳ (ಜರ್ನಲ್‌ಗಳ) ಪ್ರಕಟಣೆಗಾಗಿ ಸ್ಥಳೀಯ ದಾನಿಗಳಿಂದ ಚಂದಾ ಸಂಗ್ರಹಿಸುವುವು. ಇವಲ್ಲದೆ ಸಮ್ಮೇಳನಕ್ಕೆ ಹಾಜರಾಗುವವರಿಂದ ಸಮ್ಮೇಳನದ ಶುಲ್ಕವನ್ನು ಸಂಗ್ರಹಿಸುವುವು.

ಹಲವು ಸಂಘಗಳ ಹಣಕಾಸಿನ ಪರಿಸ್ಥಿತಿ ದುರ್ಬಲವಾಗಿದೆ. ಸರ್ಕಾರ ಅಥವಾ ನೌಕರಿ ಕೊಡುವವರ ಮೇಲೆ ಅವಲಂಬಿಸಿರುವುದರಿಂದ ಸಂಗ್ರಾಮದಲ್ಲಿ ಅವು ದುರ್ಬಲವಾಗುವುವು. ಆದ್ದರಿಂದ, ಔದ್ಯೋಗಿಕ ಏಕತೆಯನ್ನೇ ಮುಖ್ಯ ಕಾರ್ಯವಾಗಿ ಹೊಂದಿರುವ ಸಂಘಗಳು ಜಾಗರೂಕತೆಯಿಂದ ಅನುದಾನ ಸ್ವೀಕರಿಸಿ ತಮ್ಮ ನಿಲುವನ್ನು ಅಪಾಯದಲ್ಲಿ ಸಿಲುಕಿಸುವುದರಿಂದ ತಪ್ಪಿಸುತ್ತವೆ.ಬದಲಾಗಿ ತಮ್ಮ ಸದಸ್ಯರ ಸಂಪನ್ಮೂಲಗಳ ಮೇಲೆ ಪ್ರಮುಖವಾಗಿ ಅವಲಂಬಿತವಾಗಿವೆ.

**ಉಪಸಂಹಾರ:** ಬಹಳಷ್ಟು ಶಿಕ್ಷಕ ಸಂಘಗಳು ಸಮುಚಿತ ವೇತನ ಶ್ರೇಣಿಗಾಗಿ ಹಾಗೂ ವರ್ಗಾವಣೆ ನೀತಿಗಳು, ಖಾಸಗಿ ಸಂಸ್ಥೆಗಳಲ್ಲಿ ಪೀಡನೆ ಮತ್ತು ವೇತನ ನೀಡದಿರುವುದು ಅಥವಾ ಅಲ್ಪ ವೇತನಗಳ ವಿರುದ್ಧ ಮತ್ತು ನಿವೃತ್ತಿ ನಂತರದ ಲಾಭಗಳು, ಹಾಗೂ ಇನ್ನಿತರ ಶಿಕ್ಷಕರ ಕಲ್ಯಾಣಕ್ಕಾಗಿ ಆಂದೋಳನ ಮಾಡುತ್ತಿವೆ.

1983ರ ರಾಷ್ಟ್ರೀಯ ಶಿಕ್ಷಕರ ಆಯೋಗ ಸಂಘಗಳ ಕೊಡುಗೆಯ ಪ್ರಕಾಶಮಾನ ಮುಖದ ಬಗ್ಗೆ ಹೀಗೆ ಹೇಳುತ್ತದೆ–

"ಅಧ್ಯಾಪಕ ಸಂಘಟನೆಗಳು ವಿಶೇಷವಾಗಿ ಸ್ವಾತಂತ್ರ್ಯಾ ನಂತರ, ಅಧ್ಯಾಪಕರ ವೇತನ ಮತ್ತು ಸೇವಾ ಪರಿಸ್ಥಿತಿಗಳ ಸುಧಾರಣೆಯ ಸಲುವಾಗಿ ಹೋರಾಡುತ್ತಿವೆ. ಈ ನಿಟ್ಟಿನಲ್ಲಿ ಸಾಕಷ್ಟು ಸಫಲತೆಯನ್ನು ಗಳಿಸಿವೆಯೆಂದು ಪ್ರಶ್ನಾತೀತವಾಗಿ ಹೇಳಬಹುದು. ಸರ್ಕಾರಿ ಶಾಲೆಗಳ ಮತ್ತು ಅನುದಾನಿತ ಸಂಸ್ಥೆಗಳ ಶಿಕ್ಷಕರ ನಡುವೆ ಸ್ಥಾನಮಾನ ಮತ್ತು ಸೇವಾ ಪರಿಸ್ಥಿತಿಗಳಲ್ಲಿ ಸಮಾನತೆ ಇರಬೇಕೆಂಬ ತತ್ವವನ್ನು ಸಂಪೂರ್ಣವಾಗಿ ಮಾನ್ಯ ಮಾಡಲಾಗಿದ್ದು ದೇಶದ ಬಹಳಷ್ಟು ಕಡೆಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಗಿದೆ. ಖಾಸಗಿ ವ್ಯವಸ್ಥಾಪನೆಗಳು ನಡೆಸುವ ಶಾಲೆಗಳಲ್ಲಿನ ತೃಪ್ತಿಕರವಲ್ಲದ ಪರಿಸ್ಥಿತಿಗಳತ್ತ ಗಮನ ಸೆಳೆಯುವಲ್ಲಿಯೂ ಈ ಸಂಘಗಳು ಒಂದು ಹಂತದವರೆಗೆ ಪ್ರಭಾವಶಾಲಿಯಾಗಿವೆ.

ನಿರ್ಧಾರ ತೆಗೆದುಕೊಳ್ಳುವಿಕೆ ಹಾಗೂ ಆಡಳಿತಾತ್ಮಕ ಹಾಗೂ ಶಾಸನೀಯ ಅಂಗಗಳ ವಿವಿಧ ಸ್ತರಗಳಲ್ಲಿ ಪ್ರತಿನಿಧಿತ್ವವನ್ನು ಗಳಿಸುವಲ್ಲಿಯೂ ಸಹ ಸಂಘಗಳು ಸಫಲವಾಗಿವೆ ಎಂಬ ಅಂಶದತ್ತ ಗಮನ ಸೆಳೆಯಬಹುದಾಗಿದೆ.

ಇಂದು ಶಿಕ್ಷಕರ ಸಂಘಗಳು ತಮ್ಮ ಕಾರ್ಯ ವೈಖರಿಯಲ್ಲಿ ಮತ್ತು ತಮ್ಮ ಗುರಿಗಳನ್ನು ಸಾಧಿಸುವಲ್ಲಿ ಪರಿಕಲ್ಪನೆಯನ್ನು ಪಡೆದಿವೆ. ಹಿಂದಿನ ಸಾಮಾನ್ಯ ವಿಧಾನಗಳಾದ ಚಳುವಳಿ, ಉಗ್ರ ವಿರೋಧ, ಆಂದೋಳನ ಮತ್ತು ಧರಣಿಗಳು–ಇವುಗಳ ಬದಲಾಗಿ ಸಂಘಗಳು ಪ್ರಭಾವೀ ಮಾತುಕತೆ ಮತ್ತು ಚರ್ಚೆಗಳ ಮೂಲಕ ಸಮಸ್ಯೆಗಳನ್ನು ಕುಶಲತೆಯಿಂದ ಪರಿಹರಿಸುವುದನ್ನು ಕಲಿತುಕೊಂಡಿವೆ. ಆದಾಗ್ಯೂ ಒತ್ತಡ ಬೀರುವ ಕಾರ್ಯನೀತಿಗಳನ್ನು ಆಗಾಗ್ಗೆ ಬಳಸಲಾಗುತ್ತದೆ. ಕಾರಣ ಅಂಥ ತಂತ್ರಗಳಿಂದಾಗಿ ಅಧಿಕಾರಿಗಳು ಇವುಗಳತ್ತ ಗಮನ ಕೊಡುವಂತಾಗುತ್ತದೆ ಎಂದು ಭಾವಿಸಲಾಗಿದೆ.

ಮೇಲೆ ಉಲ್ಲೇಖಿಸಿದ ಕೆಲವು ಸಂಘಗಳು ಈಗ ಅಸ್ತಿತ್ವದಲ್ಲಿಲ್ಲ. ಭಾರತದಲ್ಲಿ ಶಿಕ್ಷಕರ ಸಂಘಗಳು ಹೆಚ್ಚು ಕಾಲ ಅಸ್ತಿತ್ವದಲ್ಲಿ ಇರುವುದಿಲ್ಲ ಎಂಬ ಅಂಶ ಚಿಂತಾಜನಕವಾಗಿದೆ. ಕೆಲವೇ ಮಂದಿಯ ಉತ್ಸಾಹ, ಪ್ರಾರಂಭಿಕ ಪ್ರಯತ್ನ ಮತ್ತು ಸಮರ್ಪಣೆಗಳ ಕಾರಣದಿಂದ ಸಂಘಗಳು ಉತ್ಸಾಹದೊಂದಿಗೆ ಪ್ರಾರಂಭವಾಗುತ್ತವೆ. ಎಲ್ಲರಿಗೂ ಒಪ್ಪಿಗೆಯಾಗುವ ನೇತಾರರ ಕೊರತೆ ಅಥವಾ ಅಂಥವರು ಹಿಂತೆಗೆಯುವುದು, ವೈಯಕ್ತಿಕ ಆಕಾಂಕ್ಷೆಗಳು, ಒಳಜಗಳ, ಅಧಿಕಾರ ಕಿತ್ತುಕೊಳ್ಳುವುದು, ವೃತ್ತಿಮಾತ್ಸರ್ಯಗಳು ವೈಯಕ್ತಿಕ ಇಷ್ಟಾನಿಷ್ಟಗಳು, ಚುನಾವಣೆಗಳಲ್ಲಿ ಕಪಟತೆ, ನಾಯಕತ್ವದಲ್ಲಿ ದುರ್ಬಲತೆ, ಅಹಂನ ಸಮಸ್ಯೆಗಳು, ಸಂಕುಚಿತ ಪ್ರಾದೇಶಿಕ ನಿಷ್ಠೆ– ಇವುಗಳು ಸಂಘಗಳ ಹೆಸರಿಗೆ ಧಕ್ಕೆ ತರುವ ಕೆಲವು ಕಾರಣಗಳು, ಶೈಕ್ಷಣಿಕ ಅಥವಾ ವಿಚಾರಧಾರೆಗೆ ಸಂಬಂಧಿಸಿದ ವ್ಯತ್ಯಾಸಗಳು ಅವುಗಳಿಗೆ ತೊಂದರೆಯನ್ನು ಉಂಟುಮಾಡುವುದು ಬಹುವಿರಳ, ಅಲ್ಲದೆ ದುರದೃಷ್ಟವಶಾತ್ ಶೈಕ್ಷಣಿಕ ಅಥವಾ ವೃತ್ತಿಪರವಾದ ಚಟುವಟಿಕೆಗಳಿಗೆ ಸಂಬಂಧಿಸಿದ ಸಂಘಗಳು ಬೇಗನೇ ಮರೆಯಾಗುತ್ತವೆ. ಶಿಕ್ಷಕ ಸಂಘಗಳ ಕಾರ್ಯ ವೈಖರಿಗೆ ಪುನರ್ಬಲನ ನೀಡುವತ್ತ ಹೆಚ್ಚು ಪ್ರಯತ್ನ ಕೈಗೊಳ್ಳುವ ಸಮಯ ಈಗ ಎದುರಾಗಿದೆ. ಪ್ರತಿಯೊಬ್ಬ ಸದಸ್ಯನೂ ವಿಶೇಷವಾಗಿ ಶಿಕ್ಷಣಕ್ಕಾಗಿ ತಮ್ಮ ಕರ್ತವ್ಯವಿದೆ ಎಂದೂ ಮತ್ತು ರಾಷ್ಟ್ರದ ಸಲುವಾಗಿ ಸಮಗ್ರರೂಪದಲ್ಲಿ ಸಂಬಂಧಿತ ಕ್ಷೇತ್ರದಲ್ಲಿ ಶ್ರೇಷ್ಠತೆಗಾಗಿ ಪ್ರಯತ್ನಿಸಬೇಕು ಎಂಬುದನ್ನು ಅರಿತುಕೊಳ್ಳಬೇಕಾಗಿದೆ.

**ಮೂಲ: ಆರ್.ಎನ್. ಮೆಹರೋತ್ರ**
**ಅನು: ಚಂದ್ರಶೇಖರ್ ಬಿ.ಎಂ.**

## ಅಭಿಪ್ರೇರಣೆ

ಅಭಿಪ್ರೇರಣೆ ಎಂಬ ಪದವನ್ನು ಇಂಗ್ಲಿಷ್ ಭಾಷೆಯ Motivation ಎಂಬ ಪದಕ್ಕೆ ಸಮಾನವಾಗಿ ಬಳಸುತ್ತಿದ್ದೇವೆ. Motivation ಎಂಬ ಪದ ಲ್ಯಾಟಿನ್ ಮೂಲದ 'ಮೂವರ್ಸ್' ಎಂಬ ಪದದಿಂದ ಬಂದಿದೆ. ಇದರ ಅರ್ಥ 'ಚಲಿಸುವಂತೆ ಮಾಡು' ಅಥವಾ 'ಕಾರ್ಯೋನ್ಮುಖವಾಗುವಂತೆ ಮಾಡು' ಎಂದಾಗುತ್ತದೆ. ಅಭಿಪ್ರೇರಣೆಯೆಂದರೆ ವ್ಯಕ್ತಿಯನ್ನು ಕಾರ್ಯೋನ್ಮುಖನನ್ನಾಗಿ ಅಥವಾ ಕ್ರಿಯಾಶೀಲನನ್ನಾಗಿ ಮಾಡುವಂತಹ ಪ್ರಕ್ರಿಯೆಯಾಗಿದೆ. ಅಭಿಪ್ರೇರಣೆ ಎನ್ನುವುದು ವ್ಯಕ್ತಿಯನ್ನು ಪ್ರತಿಕ್ರಿಯಿಸುವಂತೆ ಅಥವಾ ಕ್ರಿಯೆಯಲ್ಲಿ ತೊಡಗುವಂತೆ ಅಥವಾ ಅಪೇಕ್ಷಿತವರ್ತನೆ ತೋರುವಂತೆ ಉತ್ತೇಜಿಸುವ ಆಂತರಿಕ ಶಕ್ತಿಯಾಗಿದೆ.

Digitised by Bharatavani, CIIL

ಅಗತ್ಯತೆಗಳ ಪೂರೈಕೆಗಾಗಿ ವ್ಯಕ್ತಿ ಯಾವುದಾದರೂ ಒಂದು ನಿರ್ದಿಷ್ಟ ಗುರಿಯನ್ನು ಆಯ್ದುಕೊಂಡು ಅದನ್ನು ಸಾಧಿಸಬೇಕಾಗುತ್ತದೆ. ನಿರ್ದಿಷ್ಟ ಸನ್ನಿವೇಶದಲ್ಲಿ ನಿರ್ದಿಷ್ಟ ಗುರಿಯನ್ನು ಆಯ್ದುಕೊಂಡು ಅದನ್ನು ಸಾಧಿಸಲು ನಿರ್ದಿಷ್ಟ ಕಾರ್ಯ ವಿಧಾನ ಅನುಸರಿಸುವಂತೆ ಮಾಡುವ ಆಂತರಿಕ ಸ್ಥಿತಿಯೇ ಅಭಿಪ್ರೇರಣೆ. ನಿರ್ದಿಷ್ಟ ಗುರಿಯತ್ತ ನಿರ್ದಿಷ್ಟ ಹಾದಿಯಲ್ಲಿ ವ್ಯಕ್ತಿ ಸಾಗುವಂತೆ ಮಾಡುವ ಚಾಲನ ಶಕ್ತಿಯೇ ಅಭಿಪ್ರೇರಣೆ.

**ವ್ಯಾಖ್ಯೆಗಳು :**

"ಅಭಿಪ್ರೇರಣೆಯೆಂದರೆ ನಿರ್ದಿಷ್ಟ ಗುರಿಯೆಡೆಗೆ ಕಾರ್ಯೋನ್ಮುಖ ನಾಗುವಂತೆ ಮಾಡುವ ಪ್ರಕ್ರಿಯೆಯಾಗಿದೆ. ಆದರೆ ಈ ಮೊದಲು ಆ ಗುರಿಯ ಕಡೆಗೆ ಅತ್ಯಲ್ಪ ಅಥವಾ ಯಾವುದೇ ಆಕರ್ಷಣೆಯಿಲ್ಲದಿರಬಹುದು".

**–ಹೆಚ್. ಡಬ್ಲು. ಬರ್ನಾರ್ಡ್**

"ಅಭಿಪ್ರೇರಣೆಯೆನ್ನುವುದು ನಿರಂತರ, ಚಲನಶೀಲ ಹಾಗೂ ಸಂಕೀರ್ಣ ಪ್ರಕ್ರಿಯೆಯಾಗಿದೆ ಮತ್ತು ಇದು ಪ್ರತಿಯೊಂದು ಜೀವಿಯಲ್ಲಿಯೂ ಕಂಡುಬರುವ ಒಂದು ಸಾಮಾನ್ಯ ಲಕ್ಷಣವಾಗಿದೆ".

**–ಮ್ಯಾಸ್ಲೊ**

"ಅಭಿಪ್ರೇರಣೆಯು ವರ್ತನೆಯನ್ನು ಹುರಿದುಂಬಿಸುವ, ಪೋಷಿಸುವ ಮತ್ತು ನಿರ್ದೇಶಿಸುವ ಸಂಕೀರ್ಣ ಆಂತರಿಕ ಪ್ರಕ್ರಿಯೆಗಳ ಸಂಯೋಜನೆಯಾಗಿದೆ"

**–ಮೋರ್ಸ್ ಮತ್ತು ಮ್ಯಾಕ್ಸ್**

"ಅಭಿಪ್ರೇರಣೆಯೆಂದರೆ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪರಿಣಾಮ ಉಂಟುಮಾಡಲು ವ್ಯಕ್ತಿಯನ್ನು ಕ್ರಿಯಾಶೀಲನಾಗುವಂತೆ ಪ್ರಚೋದಿಸುವುದಾಗಿದೆ".

**– ಆಟ್‌ಕಿನ್ಸನ್**

**ಕಲಿಕೆ ಮತ್ತು ವ್ಯಕ್ತಿತ್ವದಲ್ಲಿ ಅಭಿಪ್ರೇರಣೆಯ ಮಹತ್ವ:**

ಕಲಿಯಲು ವಿದ್ಯಾರ್ಥಿಗಳು ಅಭಿಪ್ರೇರಿತವಾಗಬೇಕೆಂದರೆ ಅವರ ಕಲಿಕೆ ನೈಜ ಜೀವನದ ಸನ್ನಿವೇಶಗಳಿಂದ ಪ್ರಾರಂಭವಾಗಬೇಕು. ವಿದ್ಯಾರ್ಥಿಗಳು ತಮ್ಮನ್ನು ತಾವು ಅಭಿವ್ಯಕ್ತಿಗೊಳಿಸಿಕೊಳ್ಳಲು, ಪರಿಸರವನ್ನು ಅನ್ವೇಷಿಸಲು ಮತ್ತು ತಮ್ಮ ಕುತೂಹಲವನ್ನು ತಣಿಸಿಕೊಳ್ಳಲು ಆಂತರಿಕವಾದ ಪ್ರೇರಣೆ ಹೊಂದಿರುತ್ತಾರೆ. ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯ ಗುರಿ ಮತ್ತು ಉದ್ದೇಶಗಳನ್ನು ಸ್ಪಷ್ಟಗೊಳಿಸಬೇಕು. ವಸ್ತುರೂಪದ ಮತ್ತು ಶಾಬ್ದಿಕ ಪುಷ್ಠೀಕರಣಗಳನ್ನು ನ್ಯಾಯೋಚಿತವಾಗಿ ಬಳಸಿಕೊಳ್ಳುವುದರ ಮೂಲಕ ಅವರನ್ನು ಪ್ರೇರೇಪಿಸಬೇಕು. ಕಲಿಕೆಯ ಅನುಭವಗಳು ವಿದ್ಯಾರ್ಥಿಗಳ ಆಸಕ್ತಿಗಳಿಗೆ ಸಂಬಂಧಿಸಿದ್ದಾಗ ಅವುಗಳು ಹೆಚ್ಚು ಅರ್ಥಪೂರ್ಣವೆನಿಸುತ್ತವೆ. ಕಲಿಕೆಯ ಅನುಭವಗಳು ವ್ಯಕ್ತಿಯ ಜೀವನಕ್ಕೆ ಸಂಬಂಧಿಸಿದ್ದಾಗ, ಅವು ಕೇವಲ ಅವನ ಉದ್ದೇಶಗಳನ್ನು ಪೂರೈಸುವುದಲ್ಲದೆ, ಭವಿಷ್ಯದಲ್ಲಿ ಉತ್ತಮ ಹೊಂದಾಣಿಕೆಗೆ ನೆರವಾಗುತ್ತವೆ. ಪ್ರೇರೇಪಣೆ ವ್ಯಕ್ತಿಯನ್ನು ಅನ್ವೇಷಣೆ ಮತ್ತು ಸಮಸ್ಯಾ ಪರಿಹಾರ ವಿಧಾನದಲ್ಲಿ ಕಲಿಯುವಂತೆ ಮಾಡುತ್ತದೆ ಮತ್ತು ತೃಪ್ತಿಕರ ಸಾಮಾಜಿಕ ಸಂಬಂಧಗಳನ್ನು ರೂಪಿಸಿಕೊಳ್ಳಲು ನೆರವಾಗುತ್ತವೆ. ಕಲಿಕೆಯ ಅನುಭವಗಳು ಪ್ರಸ್ತುತತೆ ಮತ್ತು ವ್ಯಾವಹಾರಿಕ ಮೌಲ್ಯವನ್ನು ಹೊಂದಿದ್ದಾಗ, ವಿದ್ಯಾರ್ಥಿಗಳ ಕಲಿಕೆಯನ್ನು ಪ್ರೋತ್ಸಾಹಿಸಲಾಗುತ್ತವೆ. ಯಶಸ್ಸು ಅವರನ್ನು ವಾಸ್ತವಿಕ ಗುರಿಗಳ ಕಡೆಗೆ ಸಾಗುವಂತೆ ಮಾಡುತ್ತದೆ.

ಪ್ರೇರಣೆಯು ಮಾನವನ ವಿವಿಧ ಚಟುವಟಿಕೆಗಳಿಗೆ ಪ್ರಚೋದಕವಾಗಿರುವುದನ್ನು ಕಾಣುತ್ತೇವೆ. ಪ್ರೇರಣೆಯು ಒಂದು ರೀತಿಯಲ್ಲಿ ವೇಗವರ್ಧಕದಂತೆ ವರ್ತಿಸುತ್ತದೆ. ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳನ್ನು ಪ್ರೇರೇಪಿಸದಿದ್ದಲ್ಲಿ ಅವರು ಯಾವುದೇ ರೀತಿಯ ಕಲಿಕೆಯ ಚಟುವಟಿಕೆಯಲ್ಲೂ ತೊಡಗುವುದಿಲ್ಲವೆಂಬುದನ್ನು ಶಿಕ್ಷಕನು ಮನಗಾಣಬೇಕು. ತರಗತಿಯಲ್ಲಿ ಕಲಿಕೆ ಅಭಿಪ್ರೇರಣೆಯ ಮೇಲೆ ಅವಲಂಬಿತವಾಗಿರುವುದಲ್ಲದೇ ಕಲಿಕೆಯ ಪರಿಣಾಮವೂ ಕೂಡ ಕಲಿಯುವವನ ಅಭಿಪ್ರೇರಣೆಯ ಪ್ರಮಾಣದ ಅನುಪಾತದ ಮೇಲೆ ಅವಲಂಬಿತವಾಗಿರುತ್ತದೆ.

ವ್ಯಕ್ತಿತ್ವದ ವಿಕಾಸದಲ್ಲಿ ಅಭಿಪ್ರೇರಣೆ ಪ್ರಮುಖಪಾತ್ರ ನಿರ್ವಹಿಸುತ್ತದೆ. ಮಾನವತಾವಾದಿ ಮ್ಯಾಸ್ಲೋರವರ ಪ್ರಕಾರ ಕೆಳ ಶ್ರೇಣಿಯ ಅಗತ್ಯತೆಗಳು ತೃಪ್ತಗೊಂಡಾಗ ಅವು ವ್ಯಕ್ತಿಯನ್ನು ಉನ್ನತ ಶ್ರೇಣಿಗಳ ಅಗತ್ಯತೆಗಳ ಪೂರೈಕೆಯೆಡೆಗೆ ಸಾಗುವಂತೆ ಪ್ರೇರೇಪಿಸುತ್ತವೆ. ವ್ಯಕ್ತಿಯಲ್ಲಿ ಸಾಧನಾ ಪ್ರೇರಣೆ ಪ್ರಬಲವಾಗಿದ್ದಾಗ ಅವನು ಅಂತಿಮವಾಗಿ ಆತ್ಮ ವಾಸ್ತವೀಕರಣದೆಡೆಗೆ ಸಾಗುತ್ತಾನೆ. ಅಭಿಪ್ರೇರಿತನಾಗದ ವ್ಯಕ್ತಿ ಯಾವುದೇ ಉನ್ನತಗುರಿಗಳನ್ನು ಸಾಧಿಸಲಾರ. ಕಲಿಕೆ ಮತ್ತು ವ್ಯಕ್ತಿತ್ವ ವಿಕಾಸದಲ್ಲಿ ಅಭಿಪ್ರೇರಣೆ ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತದೆ.

**ಅಭಿಪ್ರೇರಣೆಯ ವಿಧಗಳು:** ವ್ಯಕ್ತಿಯಲ್ಲಿ ಸಾಮಾನ್ಯವಾಗಿ ಎರಡು ರೀತಿಯ ಅಭಿಪ್ರೇರಣೆಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ಆಂತರಿಕ ಅಭಿಪ್ರೇರಣೆ ಮತ್ತು ಬಾಹ್ಯ ಅಭಿಪ್ರೇರಣೆ.

**ಆಂತರಿಕ ಅಭಿಪ್ರೇರಣೆ:** ಇಲ್ಲಿ ಪ್ರೇರಣೆಯು ವ್ಯಕ್ತಿಯ ಒಳಗಿನಿಂದಲೇ ಹೊಮ್ಮುತ್ತದೆ. ವ್ಯಕ್ತಿಯು ಆತ್ಮಸಂತೋಷಕ್ಕಾಗಿ ಒಂದು ಚಟುವಟಿಕೆಯಲ್ಲಿ ತೊಡಗಿರುತ್ತಾನೆ. ಚಟುವಟಿಕೆಯಲ್ಲಿ ತೊಡಗಿರುವುದರ ಮೂಲಕವೇ ಆತನು ಸಂತೋಷವನ್ನು, ತೃಪ್ತಿಯನ್ನು, ಆನಂದವನ್ನು ಪಡೆಯುತ್ತಾನೆ.

**ಉದಾ:** ಹಾಡುವುದು ವ್ಯಕ್ತಿಗೆ ಆನಂದವನ್ನು ನೀಡುತ್ತದೆ, ಶಿಕ್ಷಕನಿಗೆ ಬೋಧನೆ ತೃಪ್ತಿಯನ್ನು ನೀಡುತ್ತದೆ.

ಈ ರೀತಿಯ ಅಭಿಪ್ರೇರಣೆಗಳು ಜೀವಿಯ ಬಯಕೆ ಮತ್ತು ಸಹಜವಾದ ಪ್ರವೃತ್ತಿಗಳಿಗೆ ನೇರವಾಗಿ ಸಂಬಂಧಿಸಿವೆ. ಕಲಿಕೆಯಲ್ಲಿ ಆಂತರಿಕ ಅಭಿಪ್ರೇರಣೆ ಹೆಚ್ಚಿನ ಮೌಲ್ಯವನ್ನು ಹೊಂದಿದೆ. ಆಂತರಿಕ

Digitised by Bharatavani, CIIL

ಪ್ರೇರಣೆಯಿದ್ದಾಗ ಮಾತ್ರ ನಿರಂತರವಾದ ಆಸಕ್ತಿಯನ್ನು ಹೊಂದಲು ಮತ್ತು ಕಲಿಕೆಯಲ್ಲಿ ಗಮನವನ್ನು ಕೇಂದ್ರೀಕರಿಸಲು ಸಾಧ್ಯ. ಆಂತರಿಕ ಅಭಿಪ್ರೇರಣೆಯಿದ್ದಾಗ ಕಲಿಕೆ ಪುಷ್ಟೀಕರಣ ಅಥವಾ ಪುನರ್ಬಲನವನ್ನು ತಾನೇ ಒದಗಿಸುತ್ತದೆ. ಅರ್ಥಪೂರ್ಣ ಕಲಿಕೆ ಮುಂದಿನ ಕಲಿಕೆಯ ಅಪೇಕ್ಷೆಯನ್ನು ಹುರಿದುಂಬಿಸುತ್ತದೆ. ಕಲಿಯುವವನು ಗುರಿಗಳನ್ನು ತನ್ನಷ್ಟಕ್ಕೆ ತಾನೇ ಅಣಿಮಾಡಿಕೊಳ್ಳುತ್ತಾನೆ. ಈ ಗುರಿಗಳು ಮುಂದಿನ ಕಲಿಕೆಗೆ ಪ್ರೇರಕಗಳಾಗಿ ವರ್ತಿಸುತ್ತವೆ.

**ಬಾಹ್ಯ ಅಭಿಪ್ರೇರಣೆ:** ಇಲ್ಲಿ ಪ್ರೇರಣೆಯು ಜೀವಿಗೆ ಹೊರಗಡೆಯಿಂದ ಬರುತ್ತದೆ. ತಾನು ತೊಡಗಿರುವ ಚಟುವಟಿಕೆಗಳು ಲಾಭದಾಯಕವಾಗಿರುವುದರಿಂದ ವ್ಯಕ್ತಿಯು ಆ ಚಟುವಟಿಕೆಗಳಲ್ಲಿ ತೊಡಗಿರುತ್ತಾನೆ. ದೊರಕುವ ಲಾಭವು ಪುರಸ್ಕಾರವಿರಬಹುದು, ವೃತ್ತಿಯೇ ಇರಬಹುದು ಅಥವಾ ಹೊಗಳಿಕೆಯೇ ಇರಬಹುದು.

**ಉದಾ:** ಶಿಕ್ಷಕನು ಬೋಧನೆಯಲ್ಲಿ ತೊಡಗಿರುವುದು ಅವನಿಗೆ ಜೀವನೋಪಾಯವನ್ನು ಒದಗಿಸುತ್ತದೆ.

ಈ ಎರಡೂ ರೀತಿಯ ಪ್ರೇರಣೆಗಳಲ್ಲಿ ಆಂತರಿಕ ಅಭಿಪ್ರೇರಣೆ ಕಲಿಯುವವನನ್ನು ಪ್ರಚೋದಿಸಿ, ಉತ್ಸಾಹಭರಿತನನ್ನಾಗಿ ಮಾಡುವುದರ ಮೂಲಕ ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಉತ್ತಮ ಫಲಿತಾಂಶವನ್ನು ತರಬಲ್ಲದು, ಬಾಹ್ಯ ಪ್ರೇರಣೆಗೊಳಗಾದ ವ್ಯಕ್ತಿ ಕಲಿಯುವುದು ಕಲಿಯುವುದಕ್ಕೋಸ್ಕರವಲ್ಲ, ಅವನಿಗೆ ಕಲಿಯುವುದು ಗುರಿಯಲ್ಲ, ಇನ್ನಾವುದೋ ಗುರಿಮುಟ್ಟಲು ಇದೊಂದು ಸಾಧನ. ಇವನು ಕಲಿಯುವುದು ಇತರರಿಂದ ಹೊಗಳಿಸಿಕೊಳ್ಳುವುದಕ್ಕಿರಬಹುದು, ಪ್ರದರ್ಶನಕ್ಕಿರಬಹುದು, ಪದವಿ ಪಡೆಯಲು ಅಥವಾ ಬಹುಮಾನ ಗಳಿಸಲು ಅಥವಾ ದಂಡನೆಗೆ ಹೆದರಿ ಪಾಠ ಕಲಿಯಬಹುದು. ತರಗತಿಯ ಕಲಿಕೆಗೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ನಾವು ಕೆಲವೊಮ್ಮೆ ಬಾಹ್ಯ ಪ್ರೇರಕಗಳನ್ನು ಬಳಸಬೇಕಾಗುತ್ತದೆ.

**ಪ್ರಾಥಮಿಕ ಮತ್ತು ಅನುಷಂಗಿಕ ಪ್ರೇರಣೆಗಳು:**

**ಪ್ರಾಥಮಿಕ ಪ್ರೇರಣೆಗಳು:** ವ್ಯಕ್ತಿಯಲ್ಲಿ ವರ್ತನೆಯನ್ನು ಆಂತರಿಕವಾಗಿ ಉತ್ತೇಜಿಸುವ ಪ್ರೇರಣೆಗಳೇ ಪ್ರಾಥಮಿಕ ಪ್ರೇರಣೆಗಳು. ಅವುಗಳಲ್ಲಿ ಪ್ರಮುಖವಾಗಿ ಈ ಕೆಳಗಿನ ಅಂಶಗಳಿಗೆ ಕಾರಣವಾಗುವಂತಹವುಗಳಾಗಿವೆ. ಬಾಯಾರಿಕೆ, ಹಸಿವು, ಆಯಾಸ, ಲೈಂಗಿಕ ಅಗತ್ಯತೆ ಮತ್ತು ನೋವಿನಿಂದ ಮುಕ್ತವಾಗುವಿಕೆ. ಈ ಪ್ರಾಥಮಿಕ ಪ್ರೇರಕಗಳನ್ನೆ ಸಾಮಾನ್ಯವಾಗಿ ಮನೋವಿಜ್ಞಾನಿಗಳು ತಮ್ಮ ಪ್ರಾಣಿಗಳ ಪ್ರಯೋಗಾಲಯಗಳಲ್ಲಿ ಆಂತರಿಕ ಪ್ರೇರಣೆಯಾಗಿ ಬಳಸಿಕೊಂಡಿದ್ದಾರೆ.

**ಅನುಷಂಗಿಕ ಪ್ರೇರಣೆಗಳು:** ಈ ಪ್ರೇರಣೆಗಳನ್ನು ಅನುಷಂಗಿಕ ಪ್ರೇರಣೆಗಳೆಂದು ಕರೆಯಲು ಪ್ರಮುಖ ಕಾರಣವೇನೆಂದರೆ ಇವು ಮೂಲತಃ ಕಲಿಕಾ ವರ್ತನೆಗಳಾಗಿವೆ. ಇಲ್ಲಿ ಕಂಡುಬರುವ ಸಂಕೀರ್ಣ ಪ್ರೇರಣೆಗಳೆಂದರೆ: ಆತ್ಮಾಭಿಮಾನ ರಕ್ಷಿಸಿಕೊಳ್ಳುವ ಪ್ರೇರಣೆ, ಘನತೆ ಹೆಚ್ಚಿಸಿಕೊಳ್ಳುವ ಪ್ರೇರಣೆ, ಸಂಘಜೀವಿಯಾಗಿರುವ ಪ್ರೇರಣೆ, ಪ್ರಬಲ ಆಕಾಂಕ್ಷೆ, ಸಾಧಿಸುವ ಬಯಕೆ, ಇತ್ಯಾದಿ. ಮಾನವರ ಮೇಲಿನ ಅಭಿಪ್ರೇರಣೆಯ ಪ್ರಯೋಗಗಳಲ್ಲಿ ಅನುಷಂಗಿಕ ಪ್ರೇರಣೆಗಳನ್ನು ಬಳಸಲಾಗುತ್ತದೆ.

**ಶಾರೀರಿಕ ಪ್ರೇರಣೆಗಳು ಮತ್ತು ಮನೋ–ಸಾಮಾಜಿಕ ಪ್ರೇರಣೆಗಳು:**

ಮಾನವನ ವರ್ತನೆಗೆ ಶಕ್ತಿಯನ್ನು ತುಂಬುವಂತಹ ಪ್ರೇರಣೆಗಳನ್ನು ಶಾರೀರಿಕ ಹಾಗೂ ಮನೋ–ಸಾಮಾಜಿಕ ಪ್ರೇರಣೆಗಳೆಂದು ವಿಂಗಡಿಸಿದ್ದಾರೆ.

**ಶಾರೀರಿಕ ಪ್ರೇರಣೆಗಳು:** ಮಾನವನ ಜೀವದ ಉಳಿವಿಗಾಗಿ ಮತ್ತು ಅಸ್ತಿತ್ವಕ್ಕಾಗಿ ಅಗತ್ಯವಾದ ಪ್ರೇರಣೆಗಳನ್ನು ಶಾರೀರಿಕ ಪ್ರೇರಣೆಗಳೆನ್ನುವರು, ಅವುಗಳಲ್ಲಿ ಹಸಿವು, ಲೈಂಗಿಕತೆ, ಆಯಾಸ, ದೇಹದಿಂದ ತ್ಯಾಜ್ಯವಸ್ತುಗಳನ್ನು ಹೊರಹಾಕುವಿಕೆ, ಬಾಯಾರಿಕೆ, ನೋವಿನಿಂದ ಮುಕ್ತಿ ಮತ್ತು ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳುವ ಬಯಕೆ ಇತ್ಯಾದಿ. ಈ ಎಲ್ಲಾ ಪ್ರೇರಣೆಗಳು ಪ್ರಾಣಿಯ ಜೀವನದಲ್ಲಿಯೂ ಸಹ ಕಂಡುಬರುತ್ತವೆ. ಆದರೆ ಮಾನವನಲ್ಲಿ ಇವುಗಳ ಅಭಿವ್ಯಕ್ತಿ ಅವನು ಕಲಿತಂತಹ ಸಾಮಾಜಿಕ ಸಂಪ್ರದಾಯಗಳನ್ನು ಅವಲಂಬಿಸಿರುತ್ತವೆ. ಒಂದೇ ವಿನ್ಯಾಸದ ವರ್ತನೆ ಕೆಲವೊಮ್ಮೆ ವಿಭಿನ್ನ ಪ್ರೇರಣೆಗಳಿಂದ ಉತ್ತೇಜಿತಗೊಳ್ಳಬಹುದು. ನಮ್ಮ ಶಾರೀರಿಕ ಪ್ರೇರಣೆಗಳನ್ನು ತೃಪ್ತಗೊಳಿಸುವ ವಿಧಾನ ಆಗಾಗ್ಗೆ ನಮ್ಮ ಮಾನಸಿಕ ಪ್ರೇರಣೆಗಳ ಮೇಲೆ ಅವಲಂಭಿಸಿರುತ್ತದೆ.

**ಮನೋ–ಸಾಮಾಜಿಕ ಪ್ರೇರಣೆಗಳು:** ಮನೋ–ಸಾಮಾಜಿಕ ಪ್ರೇರಣೆಗಳು ವ್ಯಕ್ತಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದ ಮೇಲೆ ಅವಲಂಬಿಸಿರುತ್ತವೆ. ಇವು ಸಾಮಾಜಿಕ ಕಲಿಕೆಯಿಂದ ಗಳಿಸಲ್ಪಡುತ್ತವೆ. ಮನೋ–ಸಾಮಾಜಿಕ ಪ್ರೇರಣೆಗಳ ಕೊರತೆ ವ್ಯಕ್ತಿಯ ಉಳಿವು ಹಾಗೂ ಕಲ್ಯಾಣದ ಮೇಲೆ ಪ್ರಭಾವಬೀರುತ್ತವೆ. ಪ್ರಮುಖ ಮನೋ–ಸಾಮಾಜಿಕ ಪ್ರೇರಣೆಗಳೆಂದರೆ – ಸ್ವಾತಂತ್ರ್ಯದ ಪ್ರೇರಣೆ, ರಕ್ಷಣೆಯ ಅಗತ್ಯತೆ, ಪ್ರೀತಿ ಮತ್ತು ವಿಶ್ವಾಸ, ಸಾಧನಾ ಪ್ರೇರಣೆ, ಸಾಮಾಜಿಕ ಮನ್ನಣೆಯ ಪ್ರೇರಣೆ, ಸ್ವಯಂ ಅಭಿವ್ಯಕ್ತಿಯ ಹಾಗೂ ಆತ್ಮ ವಾಸ್ತವೀಕರಣದ ಪ್ರೇರಣೆ ಇತ್ಯಾದಿ.

**ಪ್ರಚೋದಕಗಳು/ಚಾಲಕ ಶಕ್ತಿ (Drives):**

ವ್ಯಕ್ತಿಯ ಅಗತ್ಯತೆ ಅವನ ಪ್ರಚೋದನೆಗೆ ಕಾರಣವಾಗುತ್ತದೆ. ಆದ್ದರಿಂದ ಪ್ರಚೋದನೆಯನ್ನು ಉತ್ತೇಜಿತಗೊಂಡ ಜಾಗೃತಿ ಅಥವಾ ಸ್ಥಿತಿ ಅಥವಾ ಹೆಚ್ಚಾದ ಉದ್ವಿಗ್ನಗೊಂಡ ಸ್ಥಿತಿ ವ್ಯಕ್ತಿಯನ್ನು ಕಾರ್ಯ ಪ್ರವೃತ್ತಗೊಳಿಸಿ ಅವನ ಸಾಮಾನ್ಯ ಚಟುವಟಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ ಎಂದು ವ್ಯಾಖ್ಯಾನಿಸಬಹುದಾಗಿದೆ. ವ್ಯಕ್ತಿಯಲ್ಲಿರುವ ಅಗತ್ಯತೆ ಅವನನ್ನು ಪ್ರಚೋದಿಸಿ ಗುರಿಯೆಡೆಗೆ ಸಾಗುವಂತೆ ಮಾಡುತ್ತದೆ. ಪ್ರಚೋದನೆಯಬಲ ಅವನ ಅಗತ್ಯತೆಗೆ ಸಂಬಂಧಿಸಿದ ಉದ್ದೀಪನದ ಬಲವನ್ನು ಆಧರಿಸಿರುತ್ತದೆ.

Digitised by Bharatavani, CIIL

ಪ್ರಚೋದಕಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ. ಮೊದಲನೆಯ ವಿಧದಲ್ಲಿ ಜೈವಿಕ ಅಥವಾ ಪ್ರಾಥಮಿಕ ಪ್ರಚೋದಕಗಳಾದ ಹಸಿವು, ಬಾಯಾರಿಕೆ, ನೋವಿನಿಂದ ಮುಕ್ತಿ ಮತ್ತು ಲೈಂಗಿಕ ಪ್ರಚೋದನೆಗಳನ್ನು ಕಾಣುತ್ತೇವೆ. ಎರಡನೆಯ ವಿಧದಲ್ಲಿ ಸಾಮಾಜಿಕ–ಮಾನಸಿಕ ಅಥವಾ ಅನುಷಂಗಿಕ ಪ್ರಚೋದಕಗಳಾದ ಭಯ, ಆತಂಕ, ಸ್ವೀಕೃತಿಯ ಬಯಕೆ, ಸಾಧನೆಗೆ ಹೋರಾಟ, ಆಕ್ರಮಣ ಪ್ರವೃತ್ತಿ ಮತ್ತು ಪರಾವಲಂಬನೆಗಳನ್ನು ಕಾಣುತ್ತೇವೆ. ಈ ಸಾಮಾಜಿಕ–ಮಾನಸಿಕ ಅಗತ್ಯತೆಗಳು ಸಾಮಾಜಿಕ ಕಲಿಕೆಯಿಂದ ಗಳಿಸಿಕೊಳ್ಳುತ್ತಾನೆ ಅಂದರೆ ವ್ಯಕ್ತಿಯು ಸಾಮಾಜಿಕ ಸಾಂಸ್ಕೃತಿಕ ಪರಿಸರದೊಂದಿಗಿನ ಅಂತರ್‌ಕ್ರಿಯೆಯಿಂದ ರೂಢಿಸಿಕೊಳ್ಳುತ್ತಾನೆ. ಈ ಪ್ರಚೋದನೆಗಳು ವ್ಯಕ್ತಿಯನ್ನು ಸಾಮಾಜಿಕ–ಮಾನಸಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಉತ್ತೇಜಿಸುತ್ತವೆ. ವ್ಯಕ್ತಿ ಕಾಪಾಡಿಕೊಳ್ಳಬೇಕಾದ ಅಥವಾ ಮುಂದುವರಿಸಿಕೊಂಡು ಹೋಗಬೇಕಾದ ವರ್ತನೆಗಳಿಗೆ ಪುನರ್ಬಲನ ನೀಡುತ್ತವೆ.

**ಪ್ರೋತ್ಸಾಹಕ/ಉತ್ತೇಜಕ (Incentives):**

ಪ್ರಚೋದಕಗಳು ಸಾಮಾನ್ಯವಾಗಿ ಪ್ರೋತ್ಸಾಹಕಗಳು ಅಥವಾ ಉತ್ತೇಜಕಗಳಿಂದ ಪ್ರಭಾವಿತವಾಗುತ್ತವೆ. ಹೊಗಳಿಕೆ, ಪ್ರಶಂಸೆ, ಪುರಸ್ಕಾರ, ಲಾಭಾಂಶ, ಒಬ್ಬನ ಅಗತ್ಯತೆಯಪೂರೈಕೆ ಅಥವಾ ಅಪೇಕ್ಷಿತ ಉದ್ದೇಶಗಳ ಸಾಧನೆ ಇವುಗಳು ಪ್ರೋತ್ಸಾಹಕಗಳ ಉದಾಹರಣೆಗಳಾಗಿವೆ.

ಪ್ರೋತ್ಸಾಹಕ ಒಂದು ಪುನರ್ಬಲನದ ನಿಯೋಗವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಪ್ರಚೋದನೆಗೆ ಹೆಚ್ಚಿನ ಬಲ ನೀಡುತ್ತದೆ. ಒಂದು ಚಾಕಲೇಟ್, ಒಂದು ಐಸ್‌ಕ್ರೀಮ್ ಅಥವಾ ಒಂದು ಗೊಂಬೆ ಮಗುವಿಗೆ ಪ್ರೋತ್ಸಾಹಕವಾಗಿ ವರ್ತಿಸುವ ಮೂಲಕ ಅಪೇಕ್ಷಿತ ಗುರಿಯನ್ನು ತಲುಪಲು ಪ್ರೇರೇಪಿಸುತ್ತದೆ. ಅದೇರೀತಿ ಒಬ್ಬ ವ್ಯಕ್ತಿಗೆ ಇಷ್ಟವಾಗುವ ಆಹಾರ ಅವನನ್ನು ಉತ್ತೇಜಿಸುತ್ತದೆ ಅಥವಾ ಅವನಿಗೆ ಇಷ್ಟವಾಗುವ ಸಿನಿಮಾಕ್ಕೆ ಹೋಗಿ ನೋಡುವಂತೆ ಅವನನ್ನು ಉತ್ತೇಜಿಸುತ್ತದೆ. ಪ್ರಾಥಮಿಕ ಅಥವಾ ಅನುಷಂಗಿಕ ಪ್ರಚೋದಕಗಳು ಪ್ರೋತ್ಸಾಹಕ/ಉತ್ತೇಜಕಗಳಿಂದ ಪ್ರಭಾವಿತವಾಗುತ್ತದೆ ಮತ್ತು ನಿರ್ದೇಶಿತಗೊಳ್ಳುತ್ತವೆ. ಯಾವುದೇ ಒಂದು ಉತ್ತೇಜಕದಿಂದ ಬಹಳಕಾಲ ವಂಚಿತನಾದ ವ್ಯಕ್ತಿ ಅದರ ಕಡೆಗೆ ಹೆಚ್ಚು ಬಲಯುತವಾಗಿ ವರ್ತಿಸುವಂತೆ ಉತ್ತೇಜಿತಗೊಳ್ಳುತ್ತಾನೆ.

1. ಪ್ರೇರಣೆ ಎನ್ನುವುದು ಮೂಲ ಅಗತ್ಯತೆಗಳಿಂದ ಉತ್ತೇಜಿತವಾದ ಭಾವನೆ ಅಥವಾ ಮನಸ್ಸಿನ ಆಂತರಿಕ ಸ್ಥಿತಿ. ಇದು ವ್ಯಕ್ತಿಯಲ್ಲಿ ಪ್ರತಿಕ್ರಿಯಿಸುವಂತಹ ಭಾವನೆ ಮೂಡಿಸುತ್ತದೆ ಅಥವಾ ಪ್ರತಿಕ್ರಿಯಿಸುವಂತೆ ಒತ್ತಾಯಿಸುತ್ತದೆ.

2. ಪ್ರೇರಣೆ ಎನ್ನುವುದು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಪ್ರತಿಕ್ರಿಯಿಸುವಂತೆ ಮಾಡಿಕೊಳ್ಳುವ ಸಿದ್ಧತೆಯಾಗಿದೆ ಮತ್ತು ಇದು ಒಂದು ಗುರಿ ನಿರ್ದೇಶಿತ ಚಟುವಟಿಕೆಯಾಗಿದೆ ಮತ್ತು ಗುರಿ ಸಾಧನೆಯಾಗುವವರೆಗೆ ಉತ್ತೇಜಿತ ಸ್ಥಿತಿ ಕಂಡುಬರುತ್ತದೆ.

3. ಗುರಿಯಲ್ಲಾಗುವ ಬದಲಾವಣೆ ಪ್ರೇರಣೆಯ ಸ್ವರೂಪ ಮತ್ತು ಬಲದಲ್ಲಿಯೂ ಬದಲಾವಣೆ ತರುತ್ತದೆ. ಒಂದು ನಿರ್ದಿಷ್ಟ ಪ್ರೇರಕದಿಂದ ಉತ್ತೇಜಿತವಾದ ಉದ್ವೇಗ ಗುರಿ ಸಾಧನೆಯೊಂದಿಗೆ ಕಡಿಮೆಯಾಗುತ್ತದೆ.

4. ಪ್ರೇರಣೆ ಎನ್ನುವುದು ಒಂದು ಕಲಿತಂತಹ ಅನುಕ್ರಿಯೆ ಮತ್ತು ಆಂತರಿಕ ಪೂರ್ವಸಿದ್ಧ ಸ್ಥಿತಿಯಾಗಿದೆ.

ಪ್ರೇರಣೆಯನ್ನು ಒಂದು ನಿರ್ದಿಷ್ಟ ಗುರಿ ಅಥವಾ ಮೂಲ ಅಗತ್ಯತೆಯ ಪೂರೈಕೆಗಾಗಿ ಕ್ರಿಯಾತ್ಮಕವಾಗಿ ಪ್ರತಿಕ್ರಿಯಿಸುವಂತೆ ವ್ಯಕ್ತಿಯನ್ನು ಉತ್ತೇಜಿಸುವ ಒಂದು ಆಂತರಿಕ ಬಲ ಅಥವಾ ಸ್ಥಿತಿ ಎಂದು ಪರಿಗಣಿಸಬಹುದಾಗಿದೆ. ಮಾನವನ ಮೂಲ ಅಗತ್ಯತೆಗಳನ್ನು ಆಧರಿಸಿ ಹಲವಾರು ರೀತಿಯ ಪ್ರೇರಕಗಳನ್ನು ಕಾಣುತ್ತೇವೆ. ಹಸಿವಿನ ಪ್ರೇರಣೆ, ಬಾಯಾರಿಕೆಯ ಪ್ರೇರಣೆ, ಲೈಂಗಿಕ ಪ್ರೇರಣೆ, ಅಕ್ರಮಣ ಪ್ರವೃತ್ತಿಯ ಪ್ರೇರಣೆ, ಬಾಂಧವ್ಯದ ಪ್ರೇರಣೆ ಮತ್ತು ಸಾಧನಾಪ್ರೇರಣೆಯಂತಹ ಹಲವಾರು ಪ್ರೇರಣೆಗಳನ್ನು ಕಾಣುತ್ತೇವೆ.

**ಅಭಿಪ್ರೇರಣೆಯ ಸಿದ್ಧಾಂತಗಳು:**

ಮಾನವನ ವರ್ತನೆ ಹೇಗೆ ಅಭಿಪ್ರೇರಿತವಾಗುತ್ತದೆ ಎಂಬುದು ಸರಳವಿಷಯವಲ್ಲ. ಮನೋವಿಜ್ಞಾನಿಗಳು ಅಭಿಪ್ರೇರಣೆ ಪ್ರಕ್ರಿಯೆಯನ್ನು ಹಲವಾರು ವಿಧಾನಗಳ ಮೂಲಕ ವಿವರಿಸಲು ಪ್ರಯತ್ನಿಸಿದ್ದಾರೆ. ಅವುಗಳಲ್ಲಿ ಕೆಲವು ಪ್ರಮುಖವಾದವುಗಳೆಂದರೆ –

**ಮ್ಯಾಕ್‌ಡ್ಯೂಗಲ್‌ರವರ ಹುಟ್ಟುಗುಣದ ಸಿದ್ಧಾಂತ:**

ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಒಂದು ನಿರ್ದಿಷ್ಟ ವಿಧಾನದಲ್ಲಿ ಏಕೆ ಮತ್ತು ಹೇಗೆ ವರ್ತಿಸುತ್ತೇವೆ ಎಂಬುದನ್ನು ಹುಟ್ಟು ಗುಣದ ಸಿದ್ಧಾಂತದಲ್ಲಿ ವಿವರಿಸಲಾಗಿದೆ. ವರ್ತನೆಯನ್ನು ಒಂದು ಹುಟ್ಟುಗುಣದ ಪ್ರವೃತ್ತಿ (Instinct) ಪರಿಕಲ್ಪನೆಯಾಗಿ ಮೊದಲು ಪರಿಚಯಿಸಿದ ಮನೋವಿಜ್ಞಾನಿ ವಿಲಿಯಂ ಜೇಮ್ಸ್‌ರವರು. ಆದರೆ ಅದನ್ನು ಒಂದು ಪೂರ್ಣ ಪ್ರಮಾಣದ ಸಿದ್ಧಾಂತದ ರೂಪದಲ್ಲಿ ಅಭಿವೃದ್ಧಿ ಪಡಿಸಿದವರು ಮ್ಯಾಕ್‌ಡ್ಯೂಗಲ್‌ರವರು. ಈ ಸಿದ್ಧಾಂತದ ಪ್ರಕಾರ, ನಮ್ಮ ಹುಟ್ಟುಗುಣಗಳೇ ನಮ್ಮ ವರ್ತನೆಯನ್ನು ಉತ್ತೇಜಿಸುವ ಅಂಶಗಳು. ಈ ಹುಟ್ಟುಗುಣಗಳು ನಮ್ಮ ಆಂತರಿಕ ಬಲಗಳು ಅಥವಾ ಅನುವಂಶಿಕ ಮಾನಸಿಕ ಸ್ಥಿತಿಗಳು ಅಥವಾ ಒಂದು ಉದ್ದೇಶಿತ ಕಾರ್ಯದೆಡೆಗೆ ಸಾಗುವಂತೆ ಮಾಡುವ ಸಂಕೀರ್ಣ ವರ್ತನಾ ವಿನ್ಯಾಸಗಳು ಮತ್ತು ಅವುಗಳು ಕಲಿಯುವಂತವುಗಳಲ್ಲ.

ಮ್ಯಾಕ್‌ಡ್ಯೂಗಲ್‌ರವರು ಮಾನವನ ಎಲ್ಲಾ ವರ್ತನೆಗಳನ್ನು ಅವನ ಹುಟ್ಟುಗುಣಗಳನ್ನಾಧರಿಸಿ ವಿವರಿಸಬಹುದಾಗಿದೆ ಎನ್ನುತ್ತಾರೆ. ಇವರು 14 ಹುಟ್ಟುಗುಣಗಳ ಒಂದು ಪಟ್ಟಿಯನ್ನು ನೀಡಿ, ಪ್ರತಿಯೊಂದು ಹುಟ್ಟುಗುಣವು ಒಂದು ನಿರ್ದಿಷ್ಟ ಸಂವೇಗಾತ್ಮಕ

Digitised by Bharatavani, CIIL

ಸ್ಥಿತಿಯೊಂದಿಗೆ ಸಂಬಂಧಿಸಿದೆ ಎಂದು ಪ್ರತಿಪಾದಿಸುತ್ತಾರೆ. ಉದಾ: ತಪ್ಪಿಸಿಕೊಳ್ಳಬೇಕೆನ್ನುವ ಹುಟ್ಟುಗುಣ ಭಯದ ಸಂವೇಗದೊಂದಿಗೆ ಸಂಬಂಧಿಸಿದೆ, ಹೋರಾಡುವ ಹುಟ್ಟುಗುಣ ಕೋಪದೊಂದಿಗೆ ಸಂಬಂಧಿಸಿದೆ, ಹಿಂದೆ ಸರಿವ ಪ್ರವೃತ್ತಿ ಜುಗುಪ್ಸೆಯ ಸಂವೇಗದೊಂದಿಗೆ ಸಂಬಂಧಿಸಿದೆ, ಇತ್ಯಾದಿ. ಇವರ ಪ್ರಕಾರ ಎಲ್ಲಾ ವರ್ತನಾ ಪ್ರಕ್ರಿಯೆಗಳು ಮೂಲತಃ ಹುಟ್ಟುಗುಣಗಳೇ ಮತ್ತು ಈ ವರ್ತನೆ ಈ ಕೆಳಕಂಡ ಮೂರು ಪರಿಣಾಮ ಗಳನ್ನುಂಟುಮಾಡುತ್ತದೆ.

1) ಜ್ಞಾನಾತ್ಮಕ (ತಿಳಿಯುವಿಕೆ) 2) ಸಂವೇಗಾತ್ಮಕ ಸ್ಥಿತಿಗಳನ್ನು ಅನುಭವಿಸುವುದು ಮತ್ತು 3) ಚಲನಾತ್ಮಕ (ವರ್ತಿಸುವಿಕೆ)

ಉದಾಹರಣೆಗೆ, ಒಂದು ಮಗು ತನ್ನ ಕಡೆ ಬರುತ್ತಿರುವ ಗೂಳಿಯನ್ನು ನೋಡಿದಾಗ ಅವನಲ್ಲಿ ಈ ಮೂರು ರೀತಿಯ ಪರಿಣಾಮಗಳನ್ನು ಕಾಣುತ್ತೇವೆ. ಮಗು ಮೊದಲು ಗೂಳಿಯನ್ನು ನೋಡುತ್ತದೆ. ನಂತರ ಭಯವನ್ನು ಅನುಭವಿಸುತ್ತದೆ ಆಮೇಲೆ ಆ ಸನ್ನಿವೇಶದಿಂದ ಓಡಿ ಹೋಗಲು ಪ್ರಯತ್ನಿಸುತ್ತದೆ. ನಾವು ಏನು ಮಾಡುತ್ತೇವೆ ಮತ್ತು ಹೇಗೆ ಮಾಡುತ್ತೇವೆ ಎನ್ನುವುದನ್ನು ಹುಟ್ಟುಗುಣಗಳ ಪ್ರೇರಣೆಯ ಆಧಾರದ ಮೇಲೆ ನಿರ್ಧಾರ ಮಾಡುತ್ತೇವೆ ಎಂದು ಮ್ಯಾಕ್‌ಡ್ಯೂಗಲ್ ಹೇಳುತ್ತಾರೆ. ನಮ್ಮ ಸಂವೇಗಾತ್ಮಕ ಅನುಭವಗಳೊಂದಿಗೆ ಸಂಬಂಧಿಸಿರುವ ಹುಟ್ಟುಗುಣಗಳೇ ನಮ್ಮ ವರ್ತನೆಯನ್ನು ನಿರ್ಧರಿಸುವ ಅಂಶಗಳು ಎಂದು ಪ್ರತಿಪಾದಿಸುತ್ತಾರೆ.

**ಫ್ರಾಯ್ಡ್‌ರವರ ಮನೋವಿಶ್ಲೇಷಣಾ ಸಿದ್ಧಾಂತ:**

ಫ್ರಾಯ್ಡ್‌ರವರ ಮನೋವಿಶ್ಲೇಷಣಾ ಸಿದ್ಧಾಂತ ಅವನ ಹುಟ್ಟು ಗುಣಗಳು, ಮತ್ತು ಮನಸ್ಸಿನ ಸುಪ್ತ ಚೇತನ ಪರಿಕಲ್ಪನೆಗಳ ಸ್ಥಿತಿಯ ಮೇಲೆ ಕೇಂದ್ರೀಕೃತವಾಗಿದೆ. ಮಾನವನಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳಿಗೆ ಮೂಲಕಾರಣಗಳೇ ಅವನ ಹುಟ್ಟುಗುಣಗಳು ಎಂದು ಫ್ರಾಯ್ಡ್ ಪ್ರತಿಪಾದಿಸುತ್ತಾರೆ. ಎರಡು ಮೂಲ ಹುಟ್ಟು ಗುಣಗಳನ್ನು ಇವರು ಗುರುತಿಸಿದ್ದಾರೆ. ಇವುಗಳೇ ಜೀವಿಸುವ ಸಹಜ ಪ್ರವೃತ್ತಿ ಮತ್ತು ಮರಣ ಸಹಜ ಪ್ರವೃತ್ತಿ. ಇವು ವ್ಯಕ್ತಿಯನ್ನು ಅಭಿಪ್ರೇರಿಸುವ ಮೂಲ ಪ್ರೇರಣೆಗಳಾಗಿವೆ. ಜೀವಿಸುವ ಸಹಜ ಪ್ರವೃತ್ತಿಗಳೆಂದರೆ ಸ್ವಯಂ ರಕ್ಷಣೆಯ ಪ್ರಚೋದನೆ, ವ್ಯಕ್ತಿಯ ಜೀವನದ ಹಿಂದಿನ ಸನ್ನಿವೇಶಗಳ ಮೇಲೆ ಪ್ರಾಬಲ್ಯ, ಜೀವಿಸುವ ಸಹಜ ಪ್ರವೃತ್ತಿ ಕೊನೆಗೊಂಡ ತಕ್ಷಣ ಮರಣ ಸಹಜ ಪ್ರವೃತ್ತಿ ವರ್ತಿಸಲು ಪ್ರಾರಂಭಿಸುತ್ತದೆ. ಉದಾ : ಪ್ರೀತಿಯನ್ನು ಪಡೆಯಲು ವಿಫಲನಾದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆ ಆಲೋಚಿಸುತ್ತಾನೆ. ಆದರೂ, ಜೀವಿಸುವ ಸಹಜ ಪ್ರವೃತ್ತಿ ವ್ಯಕ್ತಿಯನ್ನು ಲೈಂಗಿಕ ತೃಪ್ತಿ ಪಡೆಯುವಂತೆ ಉತ್ತೇಜಿಸುತ್ತದೆ. ಲೈಂಗಿಕ ತೃಪ್ತಿ – ಅತ್ಯಂತ ಸಂತೋಷ, ತೃಪ್ತಿ ಮತ್ತು ಜೀವನದ ಅರ್ಥ ಹೊಂದುವ ಮಾರ್ಗವಾಗಿದೆ ಎನ್ನುತ್ತಾರೆ, ಫ್ರಾಯ್ಡ್‌ರವರ ಪ್ರಕಾರ ಹುಟ್ಟಿದಂದಿನಿಂದಲೇ ಮಾನವ ಲೈಂಗಿಕ ತೃಪ್ತಿ ಅನುಭವಿಸುತ್ತಾನೆ ಮತ್ತು ಲೈಂಗಿಕ ಪ್ರೇರಣೆ ಮಾನವನ ವರ್ತನೆಯನ್ನು ಕ್ರಿಯಾತ್ಮಕಗೊಳಿಸುವ ಪ್ರಮುಖ ಪ್ರೇರಣೆಯಾಗಿದೆ.

ಜೀವಿಸುವ ಹಾಗೂ ಮರಣ ಸಹಜ ಪ್ರವೃತ್ತಿ ಮತ್ತು ಲೈಂಗಿಕ ಪ್ರೇರಣೆಗಳೊಂದಿಗೆ ವ್ಯಕ್ತಿಯ ವರ್ತನೆಯನ್ನು ಉತ್ತೇಜಿಸುವ ಪ್ರಮುಖ ನಿರ್ಧಾರಕ ಅಂಶವೆಂದರೆ ಮನಸ್ಸಿನ ಸುಪ್ತಚೇತನ ಸ್ಥಿತಿ. ಫ್ರಾಯ್ಡ್‌ರವರ ಪ್ರಕಾರ ಮನಸ್ಸಿನ ಅವಸ್ಥೆಗಳಲ್ಲಿ ಸುಪ್ತಚೇತನ ಸ್ಥಿತಿ 9/10 ಭಾಗದಷ್ಟು ಕಂಡುಬರುತ್ತದೆ. ಮನಸ್ಸಿನ ಸುಪ್ತಚೇತನ ಸ್ಥಿತಿಯಲ್ಲಿ ವ್ಯಕ್ತಿಯ ಈಡೇರದ ಬಯಕೆಗಳು, ಆಸೆಗಳು, ಆಕಾಂಕ್ಷೆಗಳು, ವಿಚಾರಗಳು ಮತ್ತು ಭಾವನೆಗಳು ಕಂಡುಬರುತ್ತವೆ. ಇವುಗಳು ನಾವು ನೋಡದಿರುವ ಬಲವಾದ ಆಂತರಿಕ ಬಲಗಳು ಮತ್ತು ನಮ್ಮ ಆಲೋಚನೆಗಳು, ಭಾವನೆಗಳು ಮತ್ತು ಕ್ರಿಯೆಗಳಿಗೆ ಪ್ರಮುಖ ಕಾರಣಗಳಾಗಿವೆ. ಫ್ರಾಯ್ಡ್‌ರವರ ಅಭಿಪ್ರಾಯದಲ್ಲಿ ಮಾನವ ಅಜಾಗೃತ ಮನಸ್ಸಿನ ಕೈಯಲ್ಲಿ ಕೈಗೊಂಬೆಯಾಗಿದ್ದಾನೆ ಮತ್ತು ಅದು ಸೂಚಿಸಿದ ರೀತಿಯಲ್ಲಿ ಅವನು ವರ್ತಿಸುತ್ತಾನೆ. ವರ್ತನೆಯ ಏಕೆ ಮತ್ತು ಹೇಗೆ ಎಂಬ ಅಂಶಗಳು ಲೈಂಗಿಕ ತೃಪ್ತಿ ಅಥವಾ ಸಂತೋಷ ಪಡೆಯುವಿಕೆ ಪ್ರಮುಖವಾಗಿ ಅವನ ಮನಸ್ಸಿನ ಅಜಾಗೃತ ಸ್ಥಿತಿಯಿಂದ ನಿರ್ಧಾರಿತವಾಗುತ್ತವೆ.

**ಸಂಜ್ಞಾನಾತ್ಮಕ ಅಸಂತುಲನೆಯ ಸಿದ್ಧಾಂತ:**

ಈ ಸಿದ್ಧಾಂತವನ್ನು ಪ್ರತಿಪಾದಿಸಿದ ಮನೋವಿಜ್ಞಾನಿ ಲಿಯಾನ್ ಫೆಸ್ಟಿಂಜರ್‌ರವರು. ಸಂಜ್ಞಾನಾತ್ಮಕ ಅಸಂತುಲನೆ (Cognitive Dissonance) ನಾವು ಏನನ್ನು ನಂಬಿದ್ದೇವೆ (ಸಂಜ್ಞಾನ) ಮತ್ತು ನಾವು ಏನು ಮಾಡುತ್ತೇವೆ (ಚಲನಾತ್ಮಕ) ಎಂಬುದರ ನಡುವಿನ ವ್ಯತ್ಯಾಸವನ್ನು ಪ್ರತಿನಿಧಿಸುತ್ತದೆ. ಇದು ನಮ್ಮ ಮಾನಸಿಕ ಅಸಮತೋಲನ ಸ್ಥಿತಿಗೆ ಕಾರಣವಾಗುತ್ತದೆ. ಈ ಸ್ಥಿತಿ ಪ್ರೇರಣಾತ್ಮಕವಾಗಿ ಕೆಲಸ ಮಾಡುತ್ತದೆ. ಇದಕ್ಕೆ ಪರಿಹಾರವಾಗಿ, ನಾವು ನಮ್ಮ ನಂಬಿಕೆಗಳು ಅಥವಾ ವರ್ತನೆಯನ್ನು ಬದಲಾಯಿಸಿಕೊಳ್ಳುವ ಮೂಲಕ ಅಸಮತೋಲನವನ್ನು ಸರಿಪಡಿಸಿಕೊಳ್ಳಲು ಪ್ರೇರಿತರಾಗುತ್ತೇವೆ. ಉದಾ : ನಿರಂತರವಾಗಿ ಸಿಗರೇಟ್ ಸೇದುವವರಲ್ಲಿ ತಂಬಾಕುಸೇವನೆ ಕ್ಯಾನ್ಸರ್ ಮತ್ತು ಹೃದಯ ಸಂಬಂಧಿ ಕಾಯಿಲೆಗಳೊಂದಿಗೆ ಸಂಬಂಧ ಹೊಂದಿರುವುದು ಅಸಂತುಲನೆಯನ್ನು ಉಂಟುಮಾಡುತ್ತದೆ. ಸಿಗರೇಟ್ ಸೇವನೆ ಆರೋಗ್ಯಕ್ಕೆ ಹಾನಿಕರ ಎಂದು ಅವರಿಗೆ ಎಚ್ಚರಿಸಿದರೂ, ಅವರು ಸಿಗರೇಟ್ ಸೇದುವ ಬಯಕೆಯನ್ನು ತಡೆಯಲಾರರು, ಇಂತಹ ಸನ್ನಿವೇಶದಲ್ಲಿ ಅವರ ನಂಬಿಕೆ (ಜ್ಞಾನ) ಮತ್ತು ವರ್ತನೆಗಳ ನಡುವೆ ಅಸಮತೋಲನೆ ಅಥವಾ ಅಸಂತುಲನೆ ಕಂಡುಬರುತ್ತದೆ, ಇದಕ್ಕೆ ಪರಿಹಾರವೆಂದರೆ ಗುರಿ ನಿರ್ದೇಶಿತ ವರ್ತನೆ ಹೊಂದಿರುವುದು ಅಂದರೆ ಅತಿಯಾದ ಧೂಮಪಾನ ನಿಲ್ಲಿಸಿ ಅಸಂತುಲನೆಯನ್ನು ಕಡಿಮೆಮಾಡಿಕೊಳ್ಳುವುದು ಅಥವಾ ಸಿಗರೇಟ್ ಸೇವನೆ ಆರೋಗ್ಯಕ್ಕೆ ಹಾನಿಕರ ಎಂಬ ಮಾಹಿತಿಯನ್ನು ನಂಬದಿರುವುದು.

**ಶಿಕ್ಷಣದಲ್ಲಿ ಅಭಿಪ್ರೇರಣೆಯ ತಂತ್ರಗಳು:**

ವಿದ್ಯಾರ್ಥಿಗಳ ಕಲಿಕೆಗಾಗಿ ಶಿಕ್ಷಕರಿಂದ ನಿರಂತರ ಅಭಿಪ್ರೇರಣೆಯ ಅಗತ್ಯತೆಯಿರುತ್ತದೆ. ಆಗ ಮಾತ್ರ ವಿದ್ಯಾರ್ಥಿಗಳು

Digitised by Bharatavani, CIIL

ತಮ್ಮ ಸಾಮರ್ಥ್ಯಗಳನ್ನು ತಮ್ಮ ಹಾಗೂ ಸಮಾಜದ ಕಲ್ಯಾಣಕ್ಕಾಗಿ ಬಳಸಿಕೊಳ್ಳಬಲ್ಲರು. ಮನೋವಿಜ್ಞಾನಿಗಳು ವಿದ್ಯಾರ್ಥಿಗಳನ್ನು ಕಲಿಕೆಗಾಗಿ ಅಭಿಪ್ರೇರಿಸಲು ಶಿಕ್ಷಕರು ಬಳಸಬಹುದಾದಂತಹ ಹಲವಾರು ಸಾಮಾನ್ಯ ತಂತ್ರಗಳನ್ನು ರೂಪಿಸಿರುತ್ತಾರೆ. ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಗಳನ್ನು ಗಮನದಲ್ಲಿರಿಸಿಕೊಂಡು ಹಲವಾರು ಅಭಿಪ್ರೇರಣಾ ತಂತ್ರಗಳನ್ನು ಶಿಕ್ಷಕ ಬಳಸಬಹುದಾಗಿದೆ. ಬೋಧನಾ–ಕಲಿಕಾ ಸನ್ನಿವೇಶದಲ್ಲಿ ಬಳಸಲು ಸೂಕ್ತವಾಗಿರುವ ಕೆಲವು ತಂತ್ರಗಳನ್ನು ಈ ಕೆಳಗೆ ವಿವರಿಸಲಾಗಿದೆ.

- **ಪುರಸ್ಕಾರ ಮತ್ತು ದಂಡನೆ (ಬಹುಮಾನ ಮತ್ತು ಶಿಕ್ಷೆ):**

ಪುರಸ್ಕಾರವು ಪರಿಣಾಮಕಾರಿ ಕಲಿಕೆಗೆ ಬಹುಮುಖ್ಯವಾದ ಬಾಹ್ಯ ಪ್ರೇರಣೆ. ಯಾವುದೇ ವರ್ತನೆಯನ್ನು ಪುರಸ್ಕರಿಸಿದಾಗ ಅದರಿಂದ ವ್ಯಕ್ತಿಯ ಮೇಲೆ ಹಿತಕರವಾದ ಪರಿಣಾಮವಾಗಿ, ಕಲಿತದ್ದು ಸವಿನೆನಪಾಗಿ ಉಳಿಯುತ್ತದೆ. ಬಹುಮಾನಗಳು ಕಲಿಕೆಯಲ್ಲಿ ಉತ್ಸಾಹ ಮತ್ತು ಆಸಕ್ತಿ ಬೆಳೆಸುತ್ತವೆ. ಕಲಿಯುವ ವ್ಯಕ್ತಿಗೆ ಅವನ ಸಾಮರ್ಥ್ಯಗಳ ಭರವಸೆ ಹೆಚ್ಚಿ, ಆತ್ಮವಿಶ್ವಾಸ ಬೆಳೆಯಲು ಸಹಾಯಮಾಡುತ್ತದೆ. ಶಿಕ್ಷಕ ಬಳಸುವ ಪುರಸ್ಕಾರಗಳು ವಸ್ತುವಿನ ರೂಪದಲ್ಲಿರಬಹುದು, ಸಾಂಕೇತಿಕವಾಗಿರಬಹುದು (ಉದಾ: ಶ್ರೇಣಿಗಳು, ಅಂಕಗಳು, ಪ್ರಶಸ್ತಿಪತ್ರಗಳು ಇತ್ಯಾದಿ) ಅಥವಾ ಮಾನಸಿಕ ಪುರಸ್ಕಾರವಾಗಿರಬಹುದು.

ಬಹುಮಾನವನ್ನು ಹೆಚ್ಚಾಗಿ ಬಳಸುವುದರಿಂದ ಆಗುವ ಅನಾನುಕೂಲಗಳೆಂದರೆ ಬಹುಮಾನ ಪಡೆಯುವುದೇ ಗುರಿಯಾದಾಗ ಮೋಸ ಮಾಡಿಯಾದರೂ ಅದನ್ನು ಪಡೆಯುವ ಅನೈತಿಕ ಅಭ್ಯಾಸ ಬೆಳೆಸಿಕೊಳ್ಳಬಹುದು. ಬಹುಮಾನ ಕೇವಲ ಒಬ್ಬರಿಗೋ ಇಬ್ಬರಿಗೋ ದೊರೆಯುತ್ತದೆ, ನಮಗಲ್ಲ ಎಂಬ ಭಾವನೆ ಕೆಲವರಲ್ಲಿ ಬೆಳೆದು ಕಲಿಯುವ ಯತ್ನ ಮಾಡದೇ ಇರಬಹುದು ಮತ್ತು ಸೃಜನಶೀಲತೆ ಕಡಿಮೆಯಾಗಬಹುದು. ಆದ್ದರಿಂದ ಶಿಕ್ಷಕರು ಪುರಸ್ಕಾರಗಳನ್ನು ಬಳಸುವಾಗ ಜಾಗರೂಕತೆಯಿಂದ ಬಳಸಬೇಕು ಮತ್ತು ಅವು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವಂತಿರಬೇಕು.

**ದಂಡನೆ :** ತಪ್ಪು ಮಾಡುವುದನ್ನು ತಾತ್ಕಾಲಿಕವಾಗಿ ತಡೆಯುವ ಶಕ್ತಿ ದಂಡನೆಗೆ ಇದೆ. ಉತ್ತಮ ಅಭ್ಯಾಸಗಳ ಹಾಗೂ ಶಿಸ್ತಿನ ಬೆಳವಣಿಗೆಗೆ ಶಿಕ್ಷೆ ಒಂದು ಪ್ರಭಾವಶಾಲಿ ಪ್ರೇರಕ. ದಂಡಿಸಿದ್ದು ತನ್ನನ್ನು ಅಲ್ಲ, ತನ್ನ ತಪ್ಪು ಕಲಿಕೆಗಾಗಿ ಎಂಬ ಅರಿವು ವಿದ್ಯಾರ್ಥಿಯಲ್ಲಿ ಮೂಡಿದರೆ ಮಾತ್ರ ದಂಡನೆ ಪರಿಣಾಮಕಾರಿ ಪ್ರೇರಕವಾಗುತ್ತದೆ. ಆದರೆ ಅತಿಯಾದ ಶಿಕ್ಷೆ ವ್ಯಕ್ತಿಯಲ್ಲಿ ಭಯ ಉತ್ಪಾದಿಸುತ್ತದೆ. ಅವನಲ್ಲಿ ಅತೃಪ್ತಿ ಮೂಡುತ್ತದೆ. ಶಿಕ್ಷೆ ಅತಿಯಾದಲ್ಲಿ ಪ್ರತಿಕೂಲ ಮಾನಸಿಕ ಸ್ಥಿತಿ ಉಂಟಾಗುತ್ತದೆ.

- **ಹೊಗಳಿಕೆ ಮತ್ತು ತೆಗಳಿಕೆ :**

ಮಕ್ಕಳು ಹೊಗಳಿಕೆಯನ್ನು ಪುರಸ್ಕಾರ ಎಂತಲೂ ಮತ್ತು ತೆಗಳಿಕೆಯನ್ನು ದಂಡನೆ ಎಂತಲೂ ಭಾವಿಸುತ್ತಾರೆ. ಮನೆಯಲ್ಲಿ ತಂದೆ ತಾಯಿಯರ ಪ್ರೀತಿ ಮತ್ತು ಮೆಚ್ಚುಗೆ ಗಳಿಸಲು ಬಯಸುವ ಮಗು, ಶಾಲೆಯಲ್ಲಿ ಶಿಕ್ಷಕರಿಂದ ಹೊಗಳಿಕೆ ಪಡೆಯಲು ಬಯಸುತ್ತಾನೆ. ಪರಿಣಾಮಕಾರಿ ಕಲಿಕೆಗೆ ಹಿರಿಯರ ಹಾಗೂ ಶಿಕ್ಷಕರ ಮೆಚ್ಚುಗೆ ಉತ್ತಮ ಬಾಹ್ಯ ಪ್ರೇರಕವಾಗಬಲ್ಲದು. ಈ ಉತ್ತೇಜಕಗಳು ಯಾವಾಗ ಹೆಚ್ಚು ಪರಿಣಾಮಕಾರಿಯಾಗಿರುತ್ತವೆಂದರೆ ಕಲಿಯುವ ವ್ಯಕ್ತಿ ಯಾರಲ್ಲಿ ಗೌರವ ಇಟ್ಟಿರುತ್ತಾನೊ ಅಂತಹ ವ್ಯಕ್ತಿಯಿಂದ ಇವುಗಳು ಬಂದಾಗ, ಸರಿಯಾಗಿ ಬಳಸಿದರೆ ಇವೆರಡೂ ಸಹ ಉತ್ತೇಜಕಗಳಾಗಿ ಕಾರ್ಯನಿರ್ವಹಿಸುತ್ತವೆ.

ಹರ್ಲಾಕ್‌ರವರೂ ವಿದ್ಯಾರ್ಥಿಗಳ ಮೇಲೆ ಹೊಗಳಿಕೆ ಮತ್ತು ತೆಗಳಿಕೆಯ ಪರಿಣಾಮವನ್ನು ಅಧ್ಯಯನ ಮಾಡಿರುತ್ತಾರೆ. ಇವರ ಪ್ರಕಾರ ಮಕ್ಕಳನ್ನು ಅಭಿಪ್ರೇರಿಸಲು ತೆಗಳಿಕೆಗಿಂತ ಹೊಗಳಿಕೆ ಹೆಚ್ಚು ಪರಿಣಾಮಕಾರಿ ಎಂದು ತೋರಿಸಿದ್ದಾರೆ. ಹೊಗಳಿಕೆ ಮತ್ತು ತೆಗಳಿಕೆಗಳು ವಿದ್ಯಾರ್ಥಿಗಳ ಮೇಲೆ ವಿವಿಧ ರೀತಿಯ ಪರಿಣಾಮ ಬೀರುತ್ತವೆ. ಕೆಲವು ಮಕ್ಕಳಿಗೆ ಅವರ ಚಿಕ್ಕ ಸಾಧನೆಗೂ ಹೊಗಳಬಹುದು ಕಾರಣ ಅವರಲ್ಲಿ ಮಿತವಾದ ಸಾಮರ್ಥ್ಯವಿರುತ್ತದೆ. ಆದರೆ ಇತರೆ ಕೆಲವು ಮಕ್ಕಳಿಗೆ ಅತ್ಯುತ್ತಮ ಸಾಧನೆ ತೋರಿದಾಗ ಮಾತ್ರ ಹೊಗಳಿಕೆ ಬಳಸಬಹುದು. ಹೊಗಳಿಕೆಯನ್ನು ಹಲವಾರು ರೀತಿಯಲ್ಲಿ ಬಳಸಬಹುದು. ಉದಾ : ತಲೆ ಅಲ್ಲಾಡಿಸುವುದು, ಮುಗುಳ್ನಗೆ, ಬೆನ್ನು ತಟ್ಟುವುದು, ಶಾಬ್ದಿಕ ಹೊಗಳಿಕೆ ಇತ್ಯಾದಿ ತೆಗಳಿಕೆಯನ್ನು ಕೆಲವೊಮ್ಮೆ ಮಾತ್ರ ಬಳಸಬಹುದು. ಕಾರಣ ಇದು ಮಕ್ಕಳ ವ್ಯಕ್ತಿತ್ವದ ಅಪಸಮಾಯೋಜನೆಗೆ ಕಾರಣವಾಗಬಹುದು. ಹೊಗಳಿಕೆ ಮತ್ತು ತೆಗಳಿಕೆಯ ಪರಿಣಾಮಕಾರಿ ಬಳಕೆ ಮಕ್ಕಳ ವ್ಯಕ್ತಿತ್ವ ಮತ್ತು ಅವರ ಹಿಂದಿನ ಕಲಿಕೆಯ ಅನುಭವಗಳ ಮೇಲೆ ಅವಲಂಬಿಸಿರುತ್ತದೆ.

- **ಸೋಲು ಮತ್ತು ಗೆಲುವು:**

ಗೆಲುವು ತನ್ನಷ್ಟಕ್ಕೆ ತಾನೇ ಕಾರ್ಯಕ್ಕೆ ಪ್ರೇರಣೆಯನ್ನೊದಗಿಸಿ ಅದಕ್ಕೆ ಬೇಕಾಗುವ ಶಕ್ತಿಯನ್ನು ಪೂರೈಕೆ ಮಾಡುತ್ತದೆ. ಗೆಲುವು ತೃಪ್ತಿ ತಂದುಕೊಡುತ್ತದೆ. ಗೆಲುವು ವ್ಯಕ್ತಿಯಲ್ಲಿ ಸ್ಥೈರ್ಯ ಹಾಗೂ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಇವುಗಳನ್ನು ಸೂಕ್ತವಾದ ರೀತಿಯಲ್ಲಿ ಬಳಸಿಕೊಂಡರೆ ಇವೆರಡೂ ಶಾಲಾ ಕಲಿಕೆಗೆ ಉತ್ತಮ ಪ್ರೇರಣೆಗಳಾಗಬಹುದು. ಸೋಲು ಗೆಲುವಿಗೆ ಹಾದಿ ಮಾಡಿಕೊಡುತ್ತದೆ. ತರಗತಿಯಲ್ಲಿ ಅಧ್ಯಾಪಕ ಎಲ್ಲರಿಗೂ ಸೋಲು ಗೆಲುವುಗಳ ಅನುಭವ ನೀಡಬೇಕು. ಸೋಲು ತಾತ್ಕಾಲಿಕ, ಸೋಲು ಗೆಲುವಿನ ಸೋಪಾನ, ಕೊನೆಯಲ್ಲಿ ಗೆದ್ದೇ ಗೆಲ್ಲುತ್ತೇವೆ ಎನ್ನುವ ಮನೋಭಾವ ಮಕ್ಕಳಲ್ಲಿ ಬೆಳೆಯಬೇಕು.

ಆದರೆ ನಿರಂತರ ಸೋಲು ಮಕ್ಕಳಲ್ಲಿ ವರ್ತನಾ ಸಮಸ್ಯೆಗಳಿಗೆ ಎಡೆ ಮಾಡಿಕೊಡುತ್ತದೆ. ಇಂತಹ ಮಕ್ಕಳು ಮಾನಸಿಕ ಉದ್ವೇಗ, ತಳಮಳ, ನಿದ್ರಾ ಹೀನತೆ, ಉಗ್ಗುವಿಕೆ, ಅವಿಧೇಯತೆ, ಕ್ರೌರ್ಯ, ಹಗಲು ಗನಸು, ಸಾಮಾಜಿಕ ಸಂಪರ್ಕದಿಂದ ದೂರವಿರುವುದು, ಜಗಳಗಂಟಿತನ ಮುಂತಾದ ವರ್ತನೆಗಳನ್ನು ಪ್ರದರ್ಶಿಸುತ್ತಾರೆ. ಆದ್ದರಿಂದ ಶಿಕ್ಷಕ ತನ್ನ ತರಗತಿಯ ಮಕ್ಕಳಲ್ಲಿ ನಿರಂತರ

Digitised by Bharatavani, CIIL

ಸೋಲುಂಟಾಗದಂತೆ ಎಚ್ಚರ ವಹಿಸಬೇಕು. ಅವರ ಚಿಕ್ಕ ಸಾಧನೆಗಳನ್ನೂ ಪ್ರೋತ್ಸಾಹಿಸುತ್ತ ಗೆಲುವಿನ ಅನುಭವಗಳನ್ನು ಒದಗಿಸಿಕೊಡಬೇಕು.

**• ಫಲಿತಾಂಶದ ಅರಿವು (ಪ್ರಗತಿಯ ಅರಿವು)**

ಫಲಿತಾಂಶಗಳು ಕಾರ್ಯನಿರ್ವಹಣೆ ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ತಿಳಿಸುವುದರ ಜೊತೆಗೆ, ಸಂದರ್ಭೋಚಿತವಾಗಿ ಮಾಡುವ ಕಾರ್ಯವನ್ನು ಪ್ರೋತ್ಸಾಹಿಸುತ್ತವೆ. ಪರಿಣಾಮ ಆಶಾದಾಯಕವಾಗಿದ್ದು ವ್ಯಕ್ತಿಗೆ ತೃಪ್ತಿಕರವಾಗಿದ್ದರೆ ಅವನು ಮಾಡುತ್ತಿರುವ ಕಾರ್ಯದಲ್ಲಿ ಮುನ್ನಡೆಯುತ್ತಾನೆ, ಹಾಗಿಲ್ಲದೇ ಅತೃಪ್ತಿದಾಯಕವಾಗಿದ್ದರೆ ಅವನು ಆ ಕಾರ್ಯವನ್ನು ನಿಲ್ಲಿಸಬಹುದು ಅಥವಾ ಅವನ ಕಾರ್ಯವಿಧಾನವನ್ನು ಬದಲಾಯಿಸಿಕೊಳ್ಳಬಹುದು. ಈ ದೃಷ್ಟಿಯಲ್ಲಿ ಫಲಿತಾಂಶದ ಅರಿವು ಪುಷ್ಟೀಕರಣದ ರೂಪದಲ್ಲಿ ಕಾರ್ಯನಿರ್ವಹಿಸುತ್ತದೆ.

**• ಸ್ಪರ್ಧೆ ಮತ್ತು ಸಹಕಾರ:**

ಸ್ಪರ್ಧೆ ಒಂದು ಪ್ರಬಲವಾದ ಪ್ರೇರಕ. ಸ್ಪರ್ಧೆ ಕಲಿಯುವವನಲ್ಲಿ ಉತ್ಸಾಹವನ್ನು ಕೆರಳಿಸಿ ಸ್ವಯಂ ವಿಕಾಸಕ್ಕೂ ಮತ್ತು ಸ್ವಾಭಿಮಾನದ ಬೆಳವಣಿಗೆಗೆ ಸಹಾಯಕವಾಗುತ್ತದೆ. ಸ್ಪರ್ಧೆಯ ಅನುಕೂಲಗಳೆಂದರೆ – ಅದು ಜೀವನಕ್ಕೆ ಅರ್ಥ ಮತ್ತು ಉತ್ಸಾಹವನ್ನು ಒದಗಿಸುತ್ತದೆ. ಅದು ಅಹಂ ವಿಸ್ತರಣೆ ಮತ್ತು ನೈತಿಕತೆಯನ್ನು ಬೆಳೆಸುತ್ತದೆ ಮತ್ತು ಅದು ವ್ಯಕ್ತಿಯನ್ನು ಸ್ವಯಂ ಸುಧಾರಣೆಯ ದಿಕ್ಕಿನಲ್ಲಿ ಕೊಂಡೊಯ್ಯುತ್ತದೆ. ಆದರೂ ತರಗತಿಯ ಎಲ್ಲಾ ಮಕ್ಕಳು ಸಮಾನರಾಗಿ ಸಮರ್ಥರಲ್ಲ ಮತ್ತು ಸ್ಪರ್ಧಿಗಳಲ್ಲ, ಸಾಮರ್ಥ್ಯಕ್ಕೆ ಮೀರಿದ ಸ್ಪರ್ಧೆ, ಅತಿ ತೀವ್ರವಾದ ಸ್ಪರ್ಧೆ ವ್ಯಕ್ತಿಯ ಮೇಲೆ ಅಹಿತಕರ ಪರಿಣಾಮ ಉಂಟುಮಾಡುತ್ತದೆ.

ಸ್ಪರ್ಧೆಯಲ್ಲಿ ಮೂರು ರೀತಿಯ ಸ್ಪರ್ಧೆಗಳನ್ನು ಕಾಣಬಹುದಾಗಿದೆ. ಒಂದು ಗುಂಪಿನ ಮಕ್ಕಳು ತಮ್ಮ ತಮ್ಮೊಳಗೆ ಸಹಕರಿಸಿ ಇನ್ನೊಂದು ಗುಂಪಿನೊಡನೆ ಸ್ಪರ್ಧಿಸುವುದು ಸಾಮೂಹಿಕ ಸ್ಪರ್ಧೆಯಾಗುತ್ತದೆ. ಒಬ್ಬ ವಿದ್ಯಾರ್ಥಿ ಇನ್ನೊಬ್ಬ ವಿದ್ಯಾರ್ಥಿಯನ್ನು ಮಾದರಿಯಾಗಿ ಗುರುತಿಸಿಕೊಂಡು ಅವನೊಡನೆ ಸ್ಪರ್ಧಿಸಲು ಪ್ರಯತ್ನಿಸಬಹುದು. ಇದು ಅಂತರ್ ವ್ಯಕ್ತಿ ಸ್ಪರ್ಧೆಯಾಗುತ್ತದೆ. ಇದೇ ರೀತಿ ಈಗಾಗಲೇ ಉನ್ನತ ಹಂತದಲ್ಲಿರುವ ವಿದ್ಯಾರ್ಥಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ತನ್ನಲ್ಲೆ ಸ್ಪರ್ಧೆಗಿಳಿಯಬಹುದು. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಸ್ಪರ್ಧೆಯಿಂದ ಪರಸ್ಪರ ವೈರತ್ವ ಉಂಟಾಗುವುದನ್ನು ತಡೆಗಟ್ಟಿ ಆರೋಗ್ಯಕರ ಸ್ಪರ್ಧೆಯನ್ನು ಬೆಳೆಸಲು ಪ್ರಯತ್ನಿಸಬೇಕು.

**ಸಹಕಾರ:** ಸಹಕಾರ ಸಮೂಹದ ಒಳಗೆ ಮತ್ತು ಸಮೂಹಗಳ ಮಧ್ಯೆ ಉತ್ತಮ ಸಂಬಂಧ ರೂಪಿಸಲು ಇರುವ ಒಂದು ಮೂಲ, ಸಹಕಾರ ಮನೋಭಾವ ಮಕ್ಕಳಲ್ಲಿ ತಾವೆಲ್ಲ ಒಂದು ಎಂಬ ಭಾವನೆ ಮತ್ತು ಒಗ್ಗಟ್ಟಿನ ಭಾವನೆಯನ್ನು ಮೂಡಿಸುತ್ತದೆ. ಸ್ನೇಹ ಸ್ಪರ್ಧೆ ಆರೋಗ್ಯಕರ ಸಹಕಾರದತ್ತ ಕೊಂಡೊಯ್ಯುತ್ತದೆ. ಸಹಕಾರ ಮತ್ತು ಸ್ನೇಹ ಸ್ಪರ್ಧೆ ಸಮುದಾಯ ಸ್ಫೂರ್ತಿ ಮತ್ತು ಉನ್ನತ ನೀತಿಯನ್ನು ಬೆಳೆಸುತ್ತದೆ. ಅದು ಸ್ವಯಂ ಶಿಸ್ತನ್ನು ಕೂಡಾ ಬೆಳೆಸುತ್ತದೆ. ಸಹಕಾರ ಕಲಿಕೆಗೆ ಅಗತ್ಯವಾದ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ. ಆದ್ದರಿಂದ ಶಿಕ್ಷಕರು ಸಹಕಾರ ಆಧಾರಿತ ಸ್ಪರ್ಧಾ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಲು ಪ್ರಯತ್ನಿಸಬೇಕು.

**• ಆಕಾಂಕ್ಷೆಯ ಮಟ್ಟ:**

ಈ ಪರಿಕಲ್ಪನೆಯನ್ನು ಮೊಟ್ಟಮೊದಲು ಪರಿಚಯಿಸಿದವನು 'ಹಾಪ್' ಎಂಬ ಜರ್ಮನ್ ಮನೋ ವಿಜ್ಞಾನಿ. ಇವನ ಪ್ರಕಾರ ಎಲ್ಲ ವ್ಯಕ್ತಿಗಳು ಜೀವನದಲ್ಲಿ ಹಲವಾರು ಗುರಿಗಳನ್ನು ಹೊಂದಿರುತ್ತಾರೆ. ವ್ಯಕ್ತಿಯು ತಾನು ಗುರಿಯನ್ನು ತಲುಪಲು ಇಚ್ಛಿಸುವ ಕಾರ್ಯದ ಮಟ್ಟ ಅಥವಾ ಆತ್ಮದ ವಿಶ್ವಾಸದ ಮಟ್ಟವನ್ನು ಆಕಾಂಕ್ಷೆಯ ಮಟ್ಟ ಎನ್ನುವರು. ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ಆಕಾಂಕ್ಷೆಯ ಮಟ್ಟ ಹೊಂದಿರುತ್ತಾನೆ. ಆಕಾಂಕ್ಷೆಯ ಮಟ್ಟ ವ್ಯಕ್ತಿಯ ಗುರಿ ಆಯ್ಕೆಯ ಮೇಲೆ, ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರುತ್ತದೆ. ಸೋಲು ಗೆಲುವಿನ ಅನುಭವ ಪರೋಕ್ಷವಾಗಿ ಆಕಾಂಕ್ಷೆಯ ಮಟ್ಟವನ್ನು ಆಧರಿಸಿರುತ್ತದೆ. ನಿರಂತರ ಗೆಲುವು ಅಥವಾ ನಿರಂತರ ಸೋಲು ಆಕಾಂಕ್ಷೆಯ ಮಟ್ಟವನ್ನು ಅನುಕ್ರಮವಾಗಿ ಹೆಚ್ಚು ಮತ್ತು ಕಡಿಮೆಯಾಗುವಂತೆ ಮಾಡಬಲ್ಲದು. ಉತ್ತಮ ಆತ್ಮದ ಪ್ರತ್ಯಯ ಪ್ರಾಮಾಣಿಕವಾದ ಆಕಾಂಕ್ಷೆಯ ಮಟ್ಟ ಹೊಂದಿರಲು ಸಹಾಯ ಮಾಡುತ್ತದೆ. ಕಲಿಕೆಯ ಗುರಿಗಳನ್ನು ಸಾಧಿಸಲು ಅಗತ್ಯವಾದ ಆಕಾಂಕ್ಷೆಯ ಮಟ್ಟವನ್ನು ವಿದ್ಯಾರ್ಥಿ ಹೊಂದಿರಬೇಕಾದ್ದೂ ಅತ್ಯಗತ್ಯ. ಆಕಾಂಕ್ಷೆಯ ಮಟ್ಟ ಒಂದು ಪ್ರಬಲ ಆಂತರಿಕ ಪ್ರೇರಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ.

**• ಅಹಂ–ಭಾಗಿತ್ವ:**

ಅಹಂ ಪರಿಕಲ್ಪನೆಯ ಮೇಲೆ ತೀವ್ರ ಪ್ರಭಾವ ಬೀರಬಲ್ಲ ಚಟುವಟಿಕೆಗಳಲ್ಲಿ, ಸ್ವಾಭಿಮಾನದ ರಕ್ಷಣೆಗೆ ಅಗತ್ಯವಾದ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ಸ್ವಪ್ರೇರಣೆಯಿಂದ ಕಾರ್ಯೋನ್ಮುಖನಾಗುತ್ತಾನೆ. ಇದನ್ನು ಅಹಂ ಭಾಗಿತ್ವ ಎನ್ನುವರು. ಅಹಂ–ಭಾಗಿತ್ವ (Self-involvement) ಪ್ರತ್ಯಕ್ಷಾನುಭವ ಗ್ರಹಿಕೆ ಮತ್ತು ಕಲಿಕೆಯ ಮೇಲೆ ಪ್ರಭಾವ ಬೀರುವುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಇದು ಕಲಿಕೆಗೆ ಬೇಕಾದ ಸೂಕ್ತ ಆಸಕ್ತಿಯನ್ನು, ಕುತೂಹಲವನ್ನು ಬೆಳೆಸುತ್ತದೆ. ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದರಿಂದ ಕಾರ್ಯೋತ್ಸಾಹವನ್ನು, ಕ್ರಮಬದ್ಧವಾದ ಚಟುವಟಿಕೆಯ ತೃಪ್ತಿಯನ್ನು ತಂದುಕೊಡುತ್ತದೆ. ಅಹಂ ಭಾಗಿತ್ವ ಏರ್ಪಡಿಸಲು ಅಗತ್ಯವಾದ ಬಾಹ್ಯ ಪ್ರೇರಕಗಳನ್ನು ಶಿಕ್ಷಕರು ಉಪಯೋಗಿಸಬೇಕು.

**• ಗುರಿಯನ್ನು ರೂಪಿಸುವುದು:**

ಅಭಿಪ್ರೇರಣೆ ಒಂದು ಗುರಿ ನಿರ್ದೇಶಿತ ವರ್ತನೆ. ಶಿಕ್ಷಕ ಕಲಿಯುವವನಿಗೆ ಅಣಿಗೊಳಿಸುವಂತಹ ಗುರಿ ಅಥವಾ ಕಲಿಯುವವನು ತನ್ನಷ್ಟಕ್ಕೆ ತಾನೇ ಗುರಿಯನ್ನು ಅಣಿ ಮಾಡಿಕೊಳ್ಳುವುದು ಕಲಿಕೆಯ

Digitised by Bharatavani, CIIL

ಚಟುವಟಿಕೆಯನ್ನು ನಿರ್ದೇಶಿಸುವಲ್ಲಿ ಮತ್ತು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಮೇಲೆ ಚರ್ಚಿಸಿದ ಎಲ್ಲಾ ವಿಧಾನಗಳ ಜೊತೆಗೆ ಶಿಕ್ಷಕನ ಪಾತ್ರ ಅತೀ ಪ್ರಮುಖವಾದುದು. ಅವನ ಬೋಧನಾ ವಿಧಾನ, ಅವನು ಮಕ್ಕಳಿಗೆ ತೋರುವ ಪ್ರೀತಿ, ವಿಶ್ವಾಸ ಮತ್ತು ಅವನು ತರಗತಿಯಲ್ಲಿ ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಬಳಸುವ ತಂತ್ರಗಳು ವಿದ್ಯಾರ್ಥಿಗಳನ್ನು ಕಲಿಕೆಗೆ ಪ್ರೇರೇಪಿಸುವಲ್ಲಿ ಹೆಚ್ಚಿನ ಪ್ರಭಾವ ಬೀರುತ್ತವೆ.

–ಡಾ. ವಾಮದೇವಪ್ಪ ಹೆಚ್. ವಿ.

## ಅಭಿವೃತ್ತಿಗಳ ಅಳತೆ

ಅಭಿವೃತ್ತಿ ಅಥವಾ ಮನೋಭಾವದ ಪರ್ಯಾಯವಾದ ಪದ Attitude ಮತ್ತು Aptitude (ಅಭಿಸಾಮರ್ಥ್ಯ) ಪದ. ಎರಡೂ ತಮ್ಮ ಮೂಲದ ದೃಷ್ಟಿಯಿಂದ ಒಂದೇ ರೀತಿಯ ಪದಗಳಾಗಿವೆ. ಏಕೆಂದರೆ ಈ ಎರಡೂ ಪದಗಳು ಲ್ಯಾಟಿನ್ ಭಾಷೆಯ ಪದ Aptitude ಎನ್ನುವ ಪದದಿಂದ ಜನ್ಮತಾಳಿವೆ. ಹಳೆಯ ಫ್ರೆಂಚ್ ಭಾಷೆಯಲ್ಲಿ ಅದು Attitude ಆಯಿತು. ಇಟಾಲಿಯನ್ ಭಾಷೆಯಲ್ಲಿ ಅದು Attitudine ಆಯಿತು. ಈ ಎರಡು ಪದಗಳ ಅರ್ಥ 'ಪ್ರವೃತ್ತಿ' (disposition) ಅಥವಾ ನಿಲುವು (posture) ಎಂದಾಗುತ್ತದೆ. ಈ ಮೂಲ ಪದ Aptitude ಫ್ರೆಂಚ್ ಭಾಷೆಯ Attitude ಪದದ ಮೂಲಕ ಸುಮಾರು 15ನೇ ಶತಮಾನದಲ್ಲಿ ಇಂಗ್ಲಿಷ್ ಭಾಷೆಗೆ ಬಂದು Attitude ಪದವಾಯಿತು. ಈ ಪದವನ್ನು ಮೊದಲಿಗೆ ಕಲಾ ವಿಮರ್ಶೆಯಲ್ಲಿ ಪಾರಿಭಾಷಿಕ ಅರ್ಥದಲ್ಲಿ ಉಪಯೋಗಿಸಲಾಗುತ್ತಿತ್ತು ಮತ್ತು ಅದರ ಅರ್ಥ ವರ್ಣಚಿತ್ರವೊಂದರಲ್ಲಿ ಆಕೃತಿಗಳ/ಪಾತ್ರಗಳ ನಿಲುವು ಎಂದಾಗುತ್ತಿತ್ತು. ಕನ್ನಡದಲ್ಲಿ ಅಭಿವೃತ್ತಿ, ಮನೋಧೋರಣೆ, ಮನೋಭಾವ–ಈ ಪದಗಳನ್ನು Attitude ಪದಕ್ಕೆ ಪರ್ಯಾಯವಾಚಿ ಪದಗಳಾಗಿ ಉಪಯೋಗಿಸಲಾಗುತ್ತಿದೆ.

ಮನೋವಿಜ್ಞಾನದಲ್ಲಿ ಅಭಿವೃತ್ತಿ (ಮನೋಭಾವ) ಒಂದು ಮುಖ್ಯವಾದ ಪರಿಕಲ್ಪನೆ. "ಈ ಪದವನ್ನು ಸಾಮಾನ್ಯವಾಗಿ ವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಯಾವುದಾದರೂ ಒಂದು ವಸ್ತು ಅದರ ಬದಲಾವಣೆಯ ಬಗ್ಗೆ ವ್ಯಕ್ತಿಗಳ ಪ್ರತಿಕ್ರಿಯೆಯನ್ನು ಪೂರ್ವಾನುಮಾನ ಮಾಡಲು ಮತ್ತು ವರ್ತನೆಯನ್ನು ಹೇಗೆ ಬದಲಾಯಿಸಬಹುದು ಎಂದು ತಿಳಿದುಕೊಳ್ಳಲು ಉಪಯೋಗಿಸಲಾಗುತ್ತದೆ" (ಫಿಶ್‌ಬಿಯನ್ ಮತ್ತು ಅಜಾನ್–1975). ಅಭಿವೃತ್ತಿ ಒಂದು ವಸ್ತು ಅಥವಾ ಪರಿಸ್ಥಿತಿಯ ಬಗೆಗೆ ಕಲಿತ ಒಂದು ದೃಷ್ಟಿಕೋನವಾಗಿದ್ದು ಅಥವಾ ಪ್ರವೃತ್ತಿಯಾಗಿದ್ದು, ಅಂಥ ವಸ್ತು ಅಥವಾ ಪರಿಸ್ಥಿತಿಯ ಬಗ್ಗೆ ಅಪೇಕ್ಷಿತ ಅಥವಾ ಅನಪೇಕ್ಷಿತ ದಿಶೆಯಲ್ಲಿ ಪ್ರತಿಕ್ರಿಯಿಸುವ ಪ್ರವೃತ್ತಿಯನ್ನು ಉಂಟುಮಾಡುತ್ತದೆ.

ಅಭಿವೃತ್ತಿ ಸಂವೇಗಾತ್ಮಕ, ವರ್ತನಾತ್ಮಕ ಮತ್ತು ಸಂಜ್ಞಾನಾತ್ಮಕ



ಅಂಶಗಳನ್ನು ಒಳಗೊಂಡಿದ್ದು ವ್ಯಕ್ತಿಯ ಮೇಲೆ ಉಂಟಾಗಿರಬಹುದಾದ ಅನುಭವಗಳನ್ನು ಸೂಚಿಸುತ್ತದೆ. ಸಂವೇಗಾತ್ಮಕ ಅಂಶ ಅಭಿವೃತ್ತಿ ವಸ್ತುವಿನ ಬಗ್ಗೆ ವ್ಯಕ್ತಿಯ ಆದ್ಯತೆಯ ಭಾವನೆಯನ್ನು ವ್ಯಕ್ತಪಡಿಸುವ ಶಾರೀರಿಕ (Phisiological) ಪ್ರತಿಕ್ರಿಯೆಯಾಗಿರುತ್ತದೆ. ವರ್ತನಾತ್ಮಕ ಅಂಶ ವಸ್ತು ಅಥವಾ ವಿಚಾರದ ಬಗ್ಗೆ ವ್ಯಕ್ತಿಯ ವರ್ತನಾತ್ಮಕ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಸಂಜ್ಞಾನಾತ್ಮಕ ಅಂಶ ವಸ್ತು ಅಥವಾ ವಿಚಾರದ ಬಗ್ಗೆ ವ್ಯಕ್ತಿಯ ಸಂಜ್ಞಾನದ (ಅರಿವು) ಅಂಶವನ್ನು ಸೂಚಿಸುತ್ತದೆ. ಇದು ವಸ್ತು/ವಿಚಾರದ ಬಗ್ಗೆ ವ್ಯಕ್ತಿಯ ಪ್ರತ್ಯಕ್ಷಾನುಭವ ಮತ್ತು ನಂಬಿಕೆ, ಧೋರಣೆಗಳನ್ನು ಒಳಗೊಳ್ಳುತ್ತದೆ. ಈ ಪ್ರತಿಯೊಂದು ಅಂಶವೂ ದಿಶೆ, ತೀವ್ರತೆ, ಬೇಕು–ಬೇಡಗಳ ಭಾವನೆಗಳಲ್ಲಿ ವ್ಯತ್ಯಾಸಗೊಳ್ಳುತ್ತವೆ. ಇವು ವ್ಯಕ್ತಿ ವಸ್ತು/ವಿಚಾರದ ಬಗ್ಗೆ ಯಾವ ಅನುಭವಗಳನ್ನು ಪಡೆದಿದ್ದಾನೆ, ಅವುಗಳನ್ನು ಮನಸ್ಸಿನಲ್ಲಿ ಹೇಗೆ ಸಂಗ್ರಹಿಸಿಕೊಂಡಿದ್ದಾನೆ ಮತ್ತು ಅವು ಮನೋಭಾವ ರೂಪಣೆಯಲ್ಲಿ ವ್ಯಕ್ತಿಯ ಮೇಲೆ ಹೇಗೆ ಪ್ರಭಾವ ಬೀರಿವೆ ಎನ್ನುವುದನ್ನು ನಿರ್ಧರಿಸುತ್ತವೆ.

ಮನೋಭಾವಗಳು ವ್ಯಕ್ತಿಯ ಸಮಾಯೋಜನೆ, ವರ್ತನೆ, ಮತ್ತು ಜ್ಞಾನಾರ್ಜನೆಯ ಮೇಲೆ ಪ್ರಭಾವ ಬೀರುತ್ತವೆ. ಇವು ಒಂದು ರೀತಿಯಲ್ಲಿ ಅಹಂ ರಕ್ಷಣಾ ತಂತ್ರವಾಗಿ ಆತಂಕವನ್ನು ಕಡಿಮೆ ಮಾಡಬಹುದು. ಮನೋಭಾವಗಳ ಬದಲಾವಣೆ ಆತಂಕವನ್ನು ಕಡಿಮೆ ಮಾಡಲು ಸಾಧ್ಯವಿದೆ. ಮನೋಭಾವಗಳಿಗೆ ಸಾಮಾಜಿಕವಾದ ಪಾತ್ರವೂ ಇದೆ. ಸಮಾಜ ಅಪೇಕ್ಷಿತ ಮನೋಭಾವಗಳು ಸಮಾಜಕ್ಕೆ ಹೊಂದಿಕೊಂಡು ಹೋಗಲು ಸಹಾಯಕವಾಗುತ್ತವೆ. ಧನಾತ್ಮಕ ಮನೋಭಾವಗಳು ಋಣಾತ್ಮಕ ಮನೋಭಾವಗಳಿಗಿಂತ ಹೆಚ್ಚಾಗಿ ವಸ್ತು/ವಿಚಾರದ ಬಗ್ಗೆ ಜ್ಞಾನ ಪಡೆದುಕೊಳ್ಳಲು ಪ್ರೇರೇಪಿಸುತ್ತವೆ. ಹಾಗೆಯೇ ಋಣಾತ್ಮಕ ಮನೋಭಾವಗಳು (ಬೇರೆ ಧರ್ಮ, ಭಾಷೆ, ಪ್ರದೇಶದ ಬಗ್ಗೆ) ಸಾಮಾಜಿಕ ಸಂಘರ್ಷಗಳಿಗೆ ಹಿಂಸಾಚಾರ ವರ್ತನೆಗೆ ಪ್ರೇರೇಪಿಸುವ ಸಾಧ್ಯತೆಗಳೂ ಇವೆ.

ಮನೋಭಾವಗಳ ಮೇಲೆ ಸಾಂಸ್ಕೃತಿಕ ಅಂಶಗಳು ಸಮಾಜದ/ವ್ಯಕ್ತಿಯ ನಂಬಿಕೆಗಳು, ಮೌಲ್ಯಗಳು, ವ್ಯಕ್ತಿ ಪಡೆಯುವ ಮಾಹಿತಿಗಳು, ಮಾಧ್ಯಮಗಳು, ಪೋಷಕರು/ತಂದೆ–ತಾಯಿ, ಸ್ನೇಹಿತರು ಮತ್ತು ಶಿಕ್ಷಕರ ಮನೋಭಾವಗಳು ಮತ್ತು ಪರಿಸರದ ಸನ್ನಿವೇಶಗಳು ಪ್ರಭಾವ ಬೀರುತ್ತವೆ.

**ಅಭಿವೃತ್ತಿಗಳ ಅಳತೆ–** ವ್ಯಕ್ತಿಗಳ ಅಭಿವೃತ್ತಿ (ಮನೋಭಾವ)ಗಳನ್ನು ಅಳತೆ ಮಾಡಿ ಅವುಗಳ ದಿಶೆ ತೀವ್ರತೆಯನ್ನು ತಿಳಿದುಕೊಳ್ಳುವುದು ಸಂಶೋಧನೆಯ ದೃಷ್ಟಿಯಿಂದ, ವಸ್ತು, ಸ್ಥಳ, ವಿಚಾರಗಳ ಬಗ್ಗೆ ವ್ಯಕ್ತಿಯ ಮನೋವೈಜ್ಞಾನಿಕ ನಿಲುವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಮತ್ತು ವ್ಯಕ್ತಿಗಳ ವರ್ತನೆಯ ಸ್ವರೂಪವನ್ನು ಪೂರ್ವಾನುಮಾನ ಮಾಡಿ, ಅನಪೇಕ್ಷಿತ ಮನೋಭಾವಗಳನ್ನು ಅಪೇಕ್ಷಿತ ದಿಶೆಯಲ್ಲಿ ಬದಲಿಸುವ ದೃಷ್ಟಿಯಿಂದ ಮಹತ್ವಪೂರ್ಣವೆನ್ನಿಸುತ್ತದೆ. ಮನೋಭಾವಗಳನ್ನು ಅಳತೆ ಮಾಡಲು ಮನೋವಿಜ್ಞಾನಿಗಳು ಅನೇಕ ವಿಧಾನಗಳನ್ನು/ತಂತ್ರಗಳನ್ನು ರೂಪಿಸಿದ್ದಾರೆ–ಅವುಗಳನ್ನು

Digitised by Bharatavani, CIIL

ಮುಂದೆ ವಿವರಿಸಲಾಗಿದೆ. ಮನೋಭಾವಗಳನ್ನು ಅಳತೆ ಮಾಡುವ ಸಾಧನಗಳನ್ನು ಸಾಮಾನ್ಯವಾಗಿ ಅಭಿವೃತ್ತಿ (ಮನೋಭಾವ) ಮಾಪನಿಗಳು (Attitude Scale) ಎಂದು ಹೇಳುತ್ತಾರೆ. ಒಂದು ನಿರ್ದಿಷ್ಟ ಆಯಾಮದ (dimension) ಮೇಲೆ ಮನೋಭಾವದ ದಿಶೆ ಮತ್ತು ತೀವ್ರತೆಯನ್ನು ಪರಿಮಾಣಾತ್ಮಕವಾಗಿ ನಿರ್ಧರಿಸಲು ಈ ಮಾಪನಗಳು ಸಹಾಯ ಮಾಡುತ್ತವೆ.

**ಬೊಗಾರ್ಡಸನ ಸಮಾಜ ದೂರಮಾಪನಿ:**

ಅಮೇರಿಕಾದ ಪ್ರಸಿದ್ಧ ಸಮಾಜ ವಿಜ್ಞಾನಿಯಾದ ಎಮೊರಿ.ಎಸ್ ಬೊಗಾರ್ಡಸ್ (1882–1973) ಈ ಸರಳ ತಂತ್ರವನ್ನು ರೂಪಿಸಿದ್ದಾನೆ. ಸಮಾಜದಲ್ಲಿ ವ್ಯಕ್ತಿಗಳು ಬೇರೆಯವರನ್ನು ಸಾಮಾಜಿಕವಾಗಿ/ ಮನೋವೈಜ್ಞಾನಿಕವಾಗಿ ಎಷ್ಟು ದೂರದಲ್ಲಿ ಇಡುತ್ತಾರೆ ಎನ್ನುವುದೇ ಈ ತಂತ್ರದ ಪರಿಕಲ್ಪನಾತ್ಮಕ ಆಧಾರವಾಗಿದೆ. ಇದನ್ನೇ ಬೊಗಾರ್ಡಸ್ 'ಸಮಾಜದೂರ' (Social Distance) ಎಂದು ಕರೆದಿದ್ದಾನೆ. ಈ ದೂರದ ಪ್ರಮಾಣ ವ್ಯಕ್ತಿಗಳ ನಡುವಣ ಪಾರಸ್ಪರಿಕ ನಿಕಟತೆ ಅಥವಾ ದೂರವನ್ನು ತನ್ಮೂಲಕ ವ್ಯಕ್ತಿಗಳ ಮನೋಭಾವವನ್ನು ಸೂಚಿಸುತ್ತದೆ ಎಂದು ಬೊಗಾರ್ಡಸ್ ಅಭಿಪ್ರಾಯ ಪಡುತ್ತಾನೆ. ಬೊಗಾರ್ಡಸ್ ಸಮಾಜ ದೂರ ಮಾಪನವನ್ನು (Social Distance Scale) 1925ರಲ್ಲಿ ರೂಪಿಸಿದನು.

ಸಮಾಜದೂರ ಮಾಪನ ಗುರ್ತಿಸಬಹುದಾದ ವಿವಿಧ ಕುಲೀನ (Ethnic)ಅಥವಾ ರಾಷ್ಟ್ರೀಯ ಗುಂಪುಗಳಿಗೆ ಸಂಬಂಧಿಸಿದಂತೆ ಉಪಯೋಗಿಸಬಹುದಾದ ಸಾಮಾಜಿಕ ಸಂಪರ್ಕಕ್ಕೆ ಸಂಬಂಧಿಸಿದ 7 ಸಾಮಾಜಿಕ ಸಂದರ್ಭಗಳ ವರ್ಣನೆಯನ್ನು ಒಳಗೊಳ್ಳುತ್ತದೆ. ಈ ಸಂಬಂಧಗಳು ವ್ಯಕ್ತಿಗಳ ನಡುವಣ ಅತ್ಯಂತ ನಿಕಟತೆಯ ಸಂಬಂಧದಿಂದ ಅತ್ಯಂತ ದೂರವೆನಿಸಬಹುದಾದ ಸಂಬಂಧದವರೆಗೆ ವ್ಯತ್ಯಾಸಗೊಳ್ಳುತ್ತದೆ. ಈ ಸಂದರ್ಭಗಳು ವ್ಯಕ್ತಿಗಳ ನಡುವಣ ಪಾರಸ್ಪರಿಕೆಯ ಪ್ರಮಾಣವನ್ನು ಸೂಚಿಸುತ್ತದೆ. ಈ ಮಾಪನಿಯ 7 ಸಂದರ್ಭಗಳ ವರ್ಣನೆ ಅವುಗಳ ಮಾಪನಿ ಅಂಕಗಳೊಂದಿಗೆ (Scale Volume) ಈ ಕೆಳಕಂಡಂತಿದೆ–

- ವಿವಾಹ ಸಂಬಂಧದೊಂದಿಗೆ ನಿಕಟ ರಕ್ತಸಂಬಂಧಿಯಾಗಿ (1.00)
- ನನ್ನ 'ಕ್ಲಬ್'ನಲ್ಲಿ ವೈಯಕ್ತಿಕ ಸ್ನೇಹಿತನಾಗಿ (2.00)
- ನನ್ನ ಬೀದಿಯಲ್ಲಿ ನೆರೆಹೊರೆಯವನಾಗಿ (3.00)
- ನನ್ನ ವೃತ್ತಿಯಲ್ಲಿ ನೌಕರನಾಗಿ (4.00)
- ನನ್ನ ದೇಶದ ಪೌರನಾಗಿ (5.00)
- ನನ್ನ ದೇಶಕ್ಕೆ ಕೇವಲ ಸಂದರ್ಶಕನಾಗಿ(6.00)
- ನನ್ನ ದೇಶದಿಂದಲೇ ಕಳುಹಿಸಬೇಕಾದವನಾಗಿ(7.00)

ಒಂದು ನಿರ್ದಿಷ್ಟ ಸಾಮಾಜಿಕ ಸಮೂಹದ ಬಗ್ಗೆ ಒಬ್ಬ ವ್ಯಕ್ತಿಯ ಮನೋಭಾವವನ್ನು ಅಳತೆ ಮಾಡಬೇಕಾದಾಗ ಆ ವ್ಯಕ್ತಿಯ ಮಾಪನಿಯ ವರ್ಗೀಕರಣದ 7 ವರ್ಗಗಳ ಪೈಕಿ ಯಾವ ವರ್ಗಕ್ಕೆ ಆ ಸಾಮಾಜಿಕ ವರ್ಗದ ಸದಸ್ಯರಿಗೆ ಅವಕಾಶ ನೀಡಲು ಇಚ್ಛಿಸುತ್ತಾನೆಂಬುದನ್ನು ಗುರ್ತಿಸಲು ಹೇಳಬೇಕು. ಆ ವ್ಯಕ್ತಿ ಆ ಸಾಮಾಜಿಕ ಸಮೂಹವನ್ನು ಎಷ್ಟು ಸಾಮಾಜಿಕ ದೂರದಲ್ಲಿಡಲು ಬಯಸುತ್ತಾನೆಂಬುದನ್ನು ಸೂಚಿಸುತ್ತದೆ. ಆ ವರ್ಗದ ಅಂಕ ವ್ಯಕ್ತಿಗೂ, ನಿರ್ದಿಷ್ಟ ಸಾಮಾಜಿಕ ಸಮೂಹಕ್ಕೂ ಇರುವ ಸಮಾಜ ದೂರವನ್ನು ಪ್ರತಿನಿಧಿಸುತ್ತದೆ. ತನ್ಮೂಲಕ ಆ ಸಾಮಾಜಿಕ ಸಮೂಹದ ಬಗ್ಗೆ ವ್ಯಕ್ತಿಯ ಮನೋಭಾವವನ್ನು ತೋರಿಸುತ್ತದೆ. ಅಂಕ 1.00 ಅತಿ ನಿಕಟತೆಯ ಸಾಮಾಜಿಕ ಸಂಬಂಧವನ್ನು (ಸಾಮಾಜಿಕ ದೂರವನ್ನು) ಮತ್ತು ಅಂಕ 7 ದೂರದ ಸಂಬಂಧವನ್ನು (ಸಾಮಾಜಿಕ) ದೂರವನ್ನು) ತೋರಿಸುತ್ತದೆ.

ಈ ಮಾಪನಿಯು ಸಂಕಲಿತ ಸ್ವರೂಪದ್ದಾಗಿದೆ. ಅಂದರೆ ವ್ಯಕ್ತಿ ಮಾಪನಿಯ ಯಾವ ವರ್ಗವನ್ನು ಗುರ್ತಿಸುತ್ತಾನೆಯೋ ಅದಕ್ಕಿಂತ ಮೇಲಿನ ಎಲ್ಲಾ ವರ್ಗಗಳ ನಿಕಟತೆಯನ್ನು ಒಪ್ಪಿಕೊಂಡಿದ್ದಾನೆಂದು ಅರ್ಥವಾಗುತ್ತದೆ.

ಮಾಪನಿಯನ್ನು ವ್ಯಕ್ತಿ ತಾನೇ ಸುಲಭವಾಗಿ ಉಪಯೋಗಿಸಿ ತನ್ನ ಮನೋಭಾವವನ್ನು ತಿಳಿದುಕೊಳ್ಳಬಹುದಾದುದು ಈ ಮಾಪನಿಯ ಅನುಕೂಲವಾಗಿದೆ. ಈ ಮಾಪನಿಯಲ್ಲಿ ಕೆಲವು ಮಿತಿಗಳೂ ಇವೆ. ಕೆಲವು ವೇಳೆ ವ್ಯಕ್ತಿಗಳು ಸಮಾಜ (ಬೇರೆಯವರು) ಒಪ್ಪಿಕೊಳ್ಳುವ ರೀತಿಯಲ್ಲಿ ತನ್ನ ವಾಸ್ತವಿಕ ಮನೋಭಾವವನ್ನು ಮರೆಮಾಚಿ ಉತ್ತರಿಸಬಹುದು. ಇದನ್ನು ಸಾಮಾಜಿಕ ಅಪೇಕ್ಷಣೀಯತೆ (Social Desirability) ಎಂದು ಕರೆದಿದ್ದಾನೆ. ಆ ರೀತಿ ಉತ್ತರಿಸಿದಾಗ ವ್ಯಕ್ತಿಯ ಪ್ರತಿಕ್ರಿಯೆ ಅವನ/ಅವಳ ನಿಜವಾದ ಮನೋಭಾವವನ್ನು ಪ್ರತಿನಿಧಿಸುವುದಿಲ್ಲ.

ಸಾಮಾಜಿಕ ಮನೋಭಾವಗಳನ್ನು ಅಳತೆ ಮಾಡಲು ಇದು ಅತಿ ಸರಳವಾದ ಕ್ರಮವಾಗಿದೆ. ಏಕೆಂದರೆ ನಿಕಟವಾದ ಕೌಟುಂಬಿಕ ಅಥವಾ ಸ್ನೇಹಸಂಬಂಧಗಳಿಗೆ ಸಂಬಂಧಿಸಿದ ಮನೋಭಾವಗಳು ಪೌರರು ಅಥವಾ ದೇಶಕ್ಕೆ ಬರುವ ಸಂದರ್ಶಕರೊಂದಿಗಿನ ದೂರದ ಸಾಮಾಜಿಕ ಸಂಪರ್ಕಗಳಿಗೆ ಸಂಬಂಧಿಸಿದ ಮನೋಭಾವಗಳಿಗಿಂತ ಗುಣಾತ್ಮಕವಾಗಿ ಭಿನ್ನವಾಗಿರಬಹುದು. ಆದ್ದರಿಂದ ಸಮಾಜ ದೂರ ಮಾಪನಿ ಸಂಕೀರ್ಣ ರೂಪದ ಸಂಪರ್ಕಗಳಿಗೆ ಸಂಬಂಧಿಸಿದ ಮನೋಭಾವಗಳ ಅಳತೆಗೆ ಸೂಕ್ತವೆನಿಸುವುದಿಲ್ಲ.

**ಥರ್ಸ್ಟನ್ನನ ಸಮಾನ ಅಂತರಗಳ ಮಾಪನಿ:**

ಮನೋಮಿತಿ ತಜ್ಞ(Psychometrician)ಲೂಯಿ ಅಯೋನ್ ಥರ್ಸ್ಟನ್ (1887–1955) ಅಮೇರಿಕಾದ ಸೈಕೋಮಿಟ್ರಿಕ್ ಸಮಾಜದ ಸ್ಥಾಪಕನೂ (1936) ಮತ್ತು ಅದರ ಪ್ರಥಮ ಅಧ್ಯಕ್ಷನೂ ಆಗಿದ್ದನು. ಥರ್ಸ್ಟನ್ ಮಾನಸಿಕ ಅಳತೆಗೆ ತುಲನಾತ್ಮಕ ನಿರ್ಣಯದ ನಿಯಮ ಎಂಬ ಹೊಸ ಉಪಕ್ರಮವನ್ನು ಅನ್ವಯಿಸಿದನು. ತುಲನಾತ್ಮಕ

Digitised by Bharatavani, CIIL

ನಿರ್ಣಯದ ನಿಯಮ ಜೋಡಿಗಳಲ್ಲಿ ತುಲನೆ ಮಾಡುವ ಯಾವುದೇ ಪ್ರಕ್ರಿಯೆಯನ್ನು ಅಳತೆ ಮಾಡಲು ಉಪಯೋಗಿಸಬಹುದಾದ ಉಪಕ್ರಮವೆಂದು ಹೇಳಬಹುದು, ಉದಾಹರಣೆಗೆ 'ಮರಣ ದಂಡನೆ' ಬಗ್ಗೆ ತೀವ್ರ ರೂಪದ ಮನೋಭಾವದ ಪ್ರತಿಕ್ರಿಯೆಗಳನ್ನು ಪರಸ್ಪರ ಹೋಲಿಸುವುದು. ಈ ರೀತಿ ಅಳತೆ ವಾಸ್ತವಿಕರಣದ ಭೌತಿಕ ಲಕ್ಷಣಗಳ ಅಳತೆಯನ್ನು ವ್ಯಕ್ತಪಡಿಸುವ ಬದಲು ನಾವು ವಸ್ತುಗಳ ಪ್ರತ್ಯಕ್ಷಾನುಭವವನ್ನು ಹೇಗೆ ಮಾಡುತ್ತೇವೆಂಬುದನ್ನು ತಿಳಿಸುತ್ತದೆ.

ಥರ್ಸ್ಟನ್‌ನಿಂದ 1928ರಲ್ಲಿ ರೂಪಿತವಾದ ಅಭಿವೃತ್ತಿ ಮಾಪನಿ ಮನೋಭಾವಗಳ ಅಳತೆಯ ಪ್ರಥಮ ಔಪಚಾರಿಕ ತಂತ್ರವಾಗಿದ್ದಿತು. ಈ ಮಾಪನಿಯನ್ನು ಸಮಾನ ಅಂತರ ಮಾಪನಿ (Equal Appearing Interval Scale) ಎಂದು ಕರೆಯಲಾಗಿದೆ. ಯಾವುದೇ ಮಾನಸಿಕ ಪರಿಕಲ್ಪನೆ ಬಗ್ಗೆ ಇರುವ ಮನೋಭಾವವನ್ನು ಅಳತೆ ಮಾಡಲು ಈ ಮಾಪನಿ ರೂಪಿತವಾಗಿದೆ. ಈ ಉದ್ದೇಶಕ್ಕಾಗಿ ಅಳತೆ ಮಾಡಬೇಕಾದ ಪರಿಕಲ್ಪನೆಯ ಬಗ್ಗೆ ಅನೇಕ ಸೂಕ್ತ ಹೇಳಿಕೆಗಳನ್ನು ಸಂಗ್ರಹಿಸಲಾಗುತ್ತದೆ. ಈ ಹೇಳಿಕೆಗಳನ್ನು ಕೆಲವು ನಿರ್ಣಾಯಕರಿಗೆ ಕೊಟ್ಟು 11 ಬಿಂದುಗಳಿರುವ ಮಾಪನಿಗೆ ಸಂಬಂಧಿಸಿದಂತೆ ವರ್ಗೀಕರಿಸಲು ಹೇಳಲಾಗುತ್ತದೆ. ಮಾಪನಿಯ 11 ಬಿಂದುಗಳು ತೀವ್ರ ಧನಾತ್ಮಕತೆಯಿಂದ, ತೀವ್ರ ಋಣಾತ್ಮಕತೆಯವರೆಗೆ ವ್ಯತ್ಯಾಸ ಹೊಂದಿದ್ದು ಇವುಗಳ ನಡುವೆ ಧನಾತ್ಮಕತೆ-ಋಣಾತ್ಮಕತೆಯ ವಿವಿಧ ಮಟ್ಟಗಳನ್ನು ಪ್ರತಿನಿಧಿಸುತ್ತವೆ. ನಿರ್ಣಾಯಕರು ಪ್ರತಿಯೊಂದು ಹೇಳಿಕೆಯನ್ನು ಓದಿ ಆ ಹೇಳಿಕೆ ವ್ಯಕ್ತಪಡಿಸುವ ಧನಾತ್ಮಕ ಅಥವಾ ಋಣಾತ್ಮಕ ಮನೋಭಾವದ ಪ್ರಮಾಣವನ್ನು ವಸ್ತುನಿಷ್ಠವಾಗಿ ನಿರ್ಧರಿಸಿ ಅದು ಮಾಪನಿಯ ಯಾವ ಬಿಂದುವಿನ ಮಟ್ಟದಲ್ಲಿ ಬರಬಹುದೆಂದು ತೀರ್ಮಾನಿಸಿ ಆ ಬಿಂದುವಿನಲ್ಲಿಡಬೇಕು. ಹೀಗೆ ಎಲ್ಲಾ ಹೇಳಿಕೆಗಳನ್ನು ವರ್ಗೀಕರಿಸಬೇಕು, ಮಾಪನಿ ಅಂಕ 11 ತೀವ್ರ ಧನಾತ್ಮಕ ಮನೋಭಾವವನ್ನು ಪ್ರತಿನಿಧಿಸುತ್ತದೆ ನಂತರ ನಿರ್ಣಾಯಕರ ವರ್ಗೀಕರಣದ ಆಧಾರದ ಮೇಲೆ ಪ್ರತಿಯೊಂದು ಹೇಳಿಕೆಗೆ ನಿರ್ಣಾಯಕರು ಕೊಟ್ಟಿರುವ ಮೌಲ್ಯಗಳ ಸರಾಸರಿ ಅಥವಾ ಮಧ್ಯಕ (Median) ಮೌಲ್ಯವನ್ನು ಆ ಹೇಳಿಕೆಯ ಮಾಪನಿ ಅಂಕವಾಗಿ (Scale Value) ಪರಿಗಣಿಸಲಾಗುತ್ತದೆ ನಂತರ ಎಲ್ಲಾ ಹೇಳಿಕೆಗಳನ್ನು (ಋಣಾತ್ಮಕತೆಯಿಂದ ಧನಾತ್ಮಕತೆಯವರೆಗಿನ ಹೇಳಿಕೆಗಳನ್ನು) ಅವುಗಳ ಅಂಕ ಮೌಲ್ಯದ ಆಧಾರದ ಮೇಲೆ ಶ್ರೇಣಿಬದ್ಧಗೊಳಿಸಲಾಗುತ್ತದೆ. ಈ ಎಲ್ಲಾ ಹೇಳಿಕೆಗಳ ಪೈಕಿ 20 ರಿಂದ 30 ಹೇಳಿಕೆಗಳನ್ನು ಅವುಗಳ ಅಂಕ ಮೌಲ್ಯಗಳ ನಡುವಣ ಅಂತರ ಹೆಚ್ಚು ಕಡಿಮೆ ಸಮಾನವಾಗಿರುವಂತೆ ಆಯ್ಕೆ ಮಾಡಿಕೊಂಡು ಅಭಿವೃತ್ತಿ ಮಾಪನಿಯ ಅಂತಿಮ ಪ್ರತಿಯನ್ನು ಸಿದ್ಧಪಡಿಸಲಾಗುತ್ತದೆ. ಮಾಪನಿಯನ್ನು ವ್ಯಕ್ತಿಗೆ ಕೊಟ್ಟಾಗ ಯಾವ ಯಾವ ಹೇಳಿಕೆಗಳನ್ನು ಒಪ್ಪುತ್ತೇನೆ ಎಂಬುದನ್ನು ಗುರ್ತಿಸಿ ವ್ಯಕ್ತಿಗೆ ಹೇಳಬೇಕು. ವ್ಯಕ್ತಿ ಗುರ್ತು ಮಾಡಿದ ಹೇಳಿಕೆಗಳಿಗೆ ಈಗಾಗಲೇ ನಿರ್ಧಾರ ಮಾಡಿರುವ ಅಂಕವನ್ನು ಕೊಟ್ಟು ಗುರ್ತು ಮಾಡಿದ ಎಲ್ಲಾ ಹೇಳಿಕೆಗಳ ಅಂಕಗಳ ಸರಾಸರಿಯ ಆಧಾರದ ಮೇಲೆ ಮನೋಭಾವದ ತೀವ್ರತೆ ಮತ್ತು ದಿಶೆಯನ್ನು ನಿರ್ಧರಿಸಲಾಗುತ್ತದೆ. ಮಾಪನಿಯನ್ನು ಉಪಯೋಗಕ್ಕೆ ಪ್ರಕಟಿಸುವ ಮೊದಲು ಅದರ ವಿಶ್ವಸನೀಯತೆ ಮತ್ತು ಸಿಂಧುತ್ವವನ್ನು ನಿರ್ಣಯಿಸಬೇಕು, ಮನೋಭಾವದ ತೀವ್ರತೆಯ ಮಟ್ಟಗಳ ಅಂಕ ಮಿತಿಗಳನ್ನು ಸೂಚಿಸಬೇಕು.

ಈ ಕೆಳಗೆ ಉದಾಹರಣಾರ್ಥವಾಗಿ ಥರ್ಸ್ಟನ್ನನ ವಿಧಾನದಲ್ಲಿ ರೂಪಿಸಿರುವ ಯುದ್ಧದ ಬಗ್ಗೆ ಮನೋಭಾವ ಮಾಪನಿಯ ಕೆಲವು ಹೇಳಿಕೆಗಳನ್ನು ಕೊಟ್ಟಿದೆ.

- ರಾಷ್ಟ್ರೀಯ ಗೌರವವಲ್ಲದೆ ಒಂದು ರಾಷ್ಟ್ರ ರಾಷ್ಟ್ರವೆನ್ನಿಸುವುದಿಲ್ಲ ಮತ್ತು ಅದನ್ನು ಉಳಿಸಿಕೊಳ್ಳಲು ಯುದ್ಧ ಒಂದು ಸಾಧನ.
- ಯುದ್ಧಘೋಷಣೆಯಾದಾಗ ನಾವು ಸೈನ್ಯಕ್ಕೆ ಸೇರಿಕೊಳ್ಳಬೇಕು.
- ದೇಶದ ಎಲ್ಲಾ ಅನರ್ಥಗಳಿಗೂ ಯುದ್ಧವೇ ಕಾರಣ
- ಯುದ್ಧವನ್ನು ನಿಲ್ಲಿಸಿದರೆ ಮಾತ್ರ ಶಾಂತಿ ಸ್ಥಾಪನೆ ಸಾಧ್ಯ
- ದುರ್ಬಲ ರಾಷ್ಟ್ರಗಳನ್ನು ರಕ್ಷಿಸುವುದಕ್ಕೆ ಮಾಡಿದ ಯುದ್ಧ ಮಾತ್ರ ಸಮರ್ಥನೀಯವಾಗುತ್ತದೆ
- ರಾಷ್ಟ್ರದ ಪ್ರಗತಿಗೆ ಶಾಂತಿ ಮತ್ತು ಯುದ್ಧ ಎರಡೂ ಅಗತ್ಯ

ಈ ವಿಧಾನದಲ್ಲಿ ಕೆಲವು ಅನುಕೂಲ ಅಂಶಗಳಿವೆ. ಇದು ಒಂದು ಅಂತರ ಮಾಪನಿ (Interval Scale). ಈ ರೀತಿಯ ಮಾಪನಿಯನ್ನು ಮನೋವಿಜ್ಞಾನ ಮತ್ತು ಶಿಕ್ಷಣ ಶಾಸ್ತ್ರದಲ್ಲಿ ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ. ಈ ವಿಧಾನದಲ್ಲಿ ಹೇಳಿಕೆಗಳ ಅಂಕಗಳ ಮೌಲ್ಯವನ್ನು ವ್ಯವಸ್ಥಿತ ಕ್ರಮದಲ್ಲಿ ನಿರ್ಧರಿಸಲಾಗುತ್ತದೆ. ಆದರೆ ಈ ಮಾಪನಿಯನ್ನು ಸಿದ್ಧಪಡಿಸಲು ಹೆಚ್ಚು ಸಮಯ ಬೇಕಾಗುತ್ತದೆ. ಇದರ ರಚನಾ ಕ್ರಮ ಸ್ವಲ್ಪ ಕ್ಲಿಷ್ಟವೆನಿಸುತ್ತದೆ.

**ಲಿಕರ್ಟನ ಸಂಕಲಿತ ನಿರ್ಧಾರಣ ಮಾಪನಿ:**

ಅಮೇರಿಕಾದ ಮನೋವಿಜ್ಞಾನಿ ರೆನ್ಸಿಸ್ ಲಿಕರ್ಟ್ (1903–1981) ಪ್ರಸಿದ್ಧ ಸಂಘಟನಾತ್ಮಕ ಮನೋವಿಜ್ಞಾನಿಯಾಗಿದ್ದಾನೆ. ನಿರ್ವಹಣಾ ಶೈಲಿಗಳ ಬಗ್ಗೆ ಮಾಡಿದ ಸಂಶೋಧನೆಗಳಿಗೆ, ಮನೋಭಾವಗಳ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ಲಿಕರ್ಟ್ ಪ್ರಸಿದ್ಧನಾಗಿದ್ದಾನೆ.

ಲಿಕರ್ಟ್‌ನ ಮನೋಭಾವ ಮಾಪನಿಯನ್ನು ಸಂಕಲಿತ ನಿರ್ಧಾರಣ ಮಾಪನಿ (Summuated Rating Scale) ಎನ್ನುತ್ತಾರೆ. ಈ ವಿಧಾನವನ್ನು ಲಿಕರ್ಟ್ 1932ರಲ್ಲಿ ವಿಕಾಸಗೊಳಿಸಿದನು. ಈ ವಿಧಾನದಲ್ಲಿ ಪ್ರತಿಯೊಂದು ಹೇಳಿಕೆಗೂ ವ್ಯಕ್ತಿಯ ಒಪ್ಪಿಗೆಯ ಮಟ್ಟಕ್ಕೆ ಅಂಕ ನೀಡಿ ನಂತರ ಎಲ್ಲಾ ಹೇಳಿಕೆಗಳಿಗೂ ವ್ಯಕ್ತಿ ಪಡೆದ ಅಂಕಗಳನ್ನು ಸಂಕಲಿತಗೊಳಿಸಿ ಮನೋಭಾವದ ಮಟ್ಟ ಮತ್ತು ದಿಶೆಯನ್ನು ನಿರ್ಧರಿಸಲಾಗುತ್ತದೆ. ಮೊದಲಿಗೆ ಮನೋಭಾವದ ವಸ್ತುವಿನ (Attitudinal Object) ಅಂದರೆ ವಿಚಾರ, ವಸ್ತು ಇತ್ಯಾದಿ ಬಗ್ಗೆ ಧನಾತ್ಮಕ, ತಟಸ್ಥ, ಋಣಾತ್ಮಕ ಹೇಳಿಕೆಗಳನ್ನು ಬರೆಯಲಾಗುತ್ತದೆ. ಈ ಹೇಳಿಕೆಗಳನ್ನು ತಜ್ಞರಿಗೆ ಕೊಟ್ಟು ಅವರಿಂದ ಪರಿಷ್ಕರಿಸಲಾಗುತ್ತದೆ. ಸೂಕ್ತವಾದ ಹೇಳಿಕೆಗಳನ್ನು ಉಳಿಸಿಕೊಳ್ಳಲು ಮಾಪನಿಯನ್ನು ಒಂದು ಸಣ್ಣ ಗುಂಪಿಗೆ ಕೊಟ್ಟು ಅಂಕ ನಿರ್ಧಾರ

Digitised by Bharatavani, CIIL

ಮಾಡಿದ ಪ್ರತಿಯೊಂದು ಹೇಳಿಕೆಗೂ ಇಡೀ ಮಾಪನಿ ನಡುವೆ ಇರುವ ಸಹಸಂಬಂಧ ಗುಣಾಂಕವನ್ನು ಕಂಡು ಹಿಡಿದು +0.30ಕ್ಕೂ ಹೆಚ್ಚು ಸಹಸಂಬಂಧ ಗುಣಾಂಕ ಇರುವ ಹೇಳಿಕೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅಸ್ಪಷ್ಟ ಹೇಳಿಕೆಗಳನ್ನು ತೆಗೆದು ಹಾಕಿ ಮಾಪನಿಯ ಅಂತಿಮ ರೂಪವನ್ನು ಸಿದ್ಧಪಡಿಸಲಾಗುತ್ತದೆ. ಈ ಹೇಳಿಕೆಗಳಿಗೆ ವ್ಯಕ್ತಿ ಖಂಡಿತವಾಗಿಯೂ ಒಪ್ಪುತ್ತೇನೆ, ಒಪ್ಪುತ್ತದೆ, ತಟಸ್ಥ, ಒಪ್ಪುವುದಿಲ್ಲ, ಖಂಡಿತವಾಗಿಯೂ ಒಪ್ಪುವುದಿಲ್ಲ. ಈ 5 ಉತ್ತರಗಳ ಸಾಧ್ಯತೆಗಳಲ್ಲಿ ತನಗೆ ಸೂಕ್ತವಾದುದನ್ನು ಗುರ್ತಿಸಬೇಕು. ಹೀಗೆ ಎಲ್ಲಾ ಹೇಳಿಕೆಗಳಿಗೂ ಗುರ್ತಿಸಿದ ನಂತರ ಉತ್ತರಗಳಿಗೆ ಅಂಕನಿರ್ಧಾರ ಮಾಡಿ ಎಲ್ಲಾ ಹೇಳಿಕೆಗಳ ಅಂಕಗಳನ್ನು ಒಟ್ಟು ಸೇರಿಸಿ ವ್ಯಕ್ತಿಯ ಮನೋಭಾವದ ದಿಶೆಯನ್ನು ಮತ್ತು ತೀವ್ರತೆಯ ಮಟ್ಟವನ್ನು ನಿರ್ಧರಿಸಲಾಗುತ್ತದೆ. ಅಂಕ ನಿರ್ಧಾರ ಮಾಡಲು ಎರಡು ಕ್ರಮಗಳನ್ನು ಅನುಸರಿಸಬಹುದು (1) ಧನಾತ್ಮಕ ಹೇಳಿಕೆಗಳ ಉತ್ತರಗಳ ಸಾಧ್ಯತೆಗಳಿಗೆ ಕ್ರಮವಾಗಿ +5, +4, +3, +2, +1 ಅಂಕಗಳನ್ನು ಋಣಾತ್ಮಕ ಹೇಳಿಕೆಗಳಿಗೆ ಇದಕ್ಕೆ ವಿರುದ್ಧವಾಗಿ –5, –4, –3, –2, –1 ಅಂಕಗಳನ್ನು ಕೊಡಬೇಕು. ವ್ಯಕ್ತಿ ಎಲ್ಲಾ ಹೇಳಿಕೆಗಳಿಗೂ ಗುರ್ತು ಮಾಡಿರುವ ಉತ್ತರಗಳಿಗೆ ಈ ಕ್ರಮದಲ್ಲಿ ಅಂಕಗಳನ್ನು ಕೊಟ್ಟು ಆ ಎಲ್ಲಾ ಅಂಕಗಳ ಮೊತ್ತವನ್ನು ಬೀಜಗಣಿತೀಯವಾಗಿ ತೆಗೆದುಕೊಳ್ಳಬೇಕು. ಆ ಒಟ್ಟು ಅಂಕ ಚಿಹ್ನೆಯೊಂದಿಗೆ ಮನೋಭಾವದ ದಿಶೆಯನ್ನು, ತೀವ್ರತೆಯನ್ನು ಸೂಚಿಸುತ್ತದೆ. ಈ ಕ್ರಮದಲ್ಲಿ ಚಿಹ್ನೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದ ಸಮಸ್ಯೆಯಿದೆ. (2) ಈ ಕ್ರಮದಲ್ಲಿ ಧನಾತ್ಮಕ ಹೇಳಿಕೆಗಳಿಗೆ +5, +4, +3, +2, +1 ಅಂಕಗಳನ್ನು ಋಣಾತ್ಮಕ ಹೇಳಿಕೆಗಳಿಗೆ ಇದಕ್ಕೆ ವಿರುದ್ಧವಾಗಿ ಅಂದರೆ –1, –2, –3, –4, –5 ಅಂಕಗಳನ್ನು ಕೊಡಬೇಕು. ಎಲ್ಲಾ ಹೇಳಿಕೆಗಳ ಅಂಕಗಳನ್ನು ಕೂಡಿಬರುವ ಒಟ್ಟು ಅಂಕದ ಆಧಾರದ ಮೇಲೆ ವ್ಯಕ್ತಿಯ ಮನೋಭಾವದ ದಿಶೆ ಮತ್ತು ತೀವ್ರತೆಯನ್ನು ನಿರ್ಧರಿಸಬೇಕು. ಸಿದ್ಧಗೊಳಿಸಿದ ಮಾಪನಿಯನ್ನು ಆಯ್ದ ಸಮೂಹಕ್ಕೆ ಕೊಟ್ಟು, ಅಂಕ ನಿರ್ಧಾರ ಮಾಡಿ, ಎಲ್ಲಾ ಅಂಕಗಳ ವಿತರಣೆಗೆ ಸರಾಸರಿ ಮತ್ತು ಮಾನಕ ವಿಚಲನವನ್ನು (S.D) ಕಂಡು ಹಿಡಿದು SD ಆಧಾರದ ಮೇಲೆ ಅಂಕ ವಿತರಣೆಯನ್ನು 5 ಭಾಗಗಳಾಗಿ ವಿಭಜಿಸಿ ಪ್ರತಿಯೊಂದು ಭಾಗದ ಅಂಕ ವ್ಯಾಪ್ತಿಯ ಕನಿಷ್ಠ ಮತ್ತು ಗರಿಷ್ಠ ಮಿತಿಯನ್ನು ತಿಳಿಸಬೇಕು. ಇದು ಮಾಪನಿಯನ್ನು ಉಪಯೋಗಿಸಿದಾಗ ಮನೋಭಾವದ ದಿಶೆ ಮತ್ತು ಮಟ್ಟವನ್ನು ನಿರ್ಧರಿಸಲು ಸಹಾಯಕವಾಗುತ್ತದೆ. ಮನೋಭಾವದ ಈ 5 ಮಟ್ಟಗಳಿಗೆ ಶಾಬ್ದಿಕ ವಿವರಣೆಯನ್ನು ಕೊಡಬೇಕು. ಸಿದ್ಧಪಡಿಸಿದ ಮಾಪನಿಗೆ ವಿಶ್ವಸನೀಯತೆ ಮತ್ತು ಸಿಂಧುತ್ವವನ್ನು ಕಂಡುಹಿಡಿಯಬೇಕು.

ಲಿಕರ್ಟ್‌ನ ಮಾಪನಿ ಶ್ರೇಣಿ ಮಾಪನಿಯ ಮಾಪನಿಯಾಗಿದೆ (Ordinal Scale). ಅಂದರೆ ಮಾಪನಿ ವ್ಯಕ್ತಿಯ ಮನೋಭಾವದ ಮಟ್ಟವನ್ನು ತೋರಿಸುವುದರಿಂದ ಒಂದು ಗುಂಪಿನ ಎಲ್ಲಾ ವ್ಯಕ್ತಿಗಳನ್ನು ಅವರ ಮನೋಭಾವದ ಮಟ್ಟದ ಆಧಾರದ ಮೇಲೆ ಶ್ರೇಣೀಬದ್ಧಗೊಳಿಸಲು ಸಾಧ್ಯವಾಗುತ್ತದೆ. ಹಾಗೆಯೇ ಗುಂಪಿನಲ್ಲಿ ಮನೋಭಾವದ ತೀವ್ರತೆಯ ಐದು ಮಟ್ಟಗಳಡಿಯಲ್ಲಿ ಎಷ್ಟು ಮಂದಿ ಇದ್ದಾರೆ ಎಂಬುದನ್ನು ತಿಳಿಯಬಹುದು.

ಲಿಕರ್ಟನ ಮಾಪನಿ 20 ರಿಂದ 30 ಹೇಳಿಕೆಗಳನ್ನು ಹೊಂದಿರುವುದು ಉತ್ತಮ. ಯಾವುದೇ ವ್ಯಕ್ತಿಗೆ ಈ ಮಾಪನಿಯನ್ನು ಕೊಟ್ಟಾಗ ಪ್ರತಿಯೊಂದು ಹೇಳಿಕೆಗೂ ಕಡ್ಡಾಯವಾಗಿ ಉತ್ತರಿಸಬೇಕೆಂಬ ಸೂಚನೆಯನ್ನು ಕೊಡಬೇಕು.

ಲಿಕರ್ಟನ ಮಾದರಿಯ ಮಾಪನಿಯ ಉದಾಹರಣೆಗಾಗಿ ಕಂಪ್ಯೂಟರ್ ಉಪಯೋಗದ ಬಗ್ಗೆ ಇರುವ ಮನೋಭಾವದ ಮಾಪನಿಯ ಕೆಲವು ಹೇಳಿಕೆಗಳನ್ನು ಈ ಮುಂದೆ ಕೊಟ್ಟಿದೆ. (ಮುಂದಿನ ಪುಟ ನೋಡಿ.)

ಲಿಕರ್ಟನ ವಿಧಾನದಿಂದ ಅಭಿವೃತ್ತಿ ಮಾಪನಿಯನ್ನು ಸಿದ್ಧಪಡಿಸುವುದು ಸುಲಭ ಕ್ರಮವಾಗಿದೆ. ಪ್ರತಿಯೊಂದು ಹೇಳಿಕೆಗೂ ಸಮಾನ ಮಹತ್ವವಿರುತ್ತದೆ. ಥರ್ಸ್ಟನ್ನನ ವಿಧಾನದಲ್ಲಿ ಮಾಡಿದಂತೆ ಮೊದಲೇ ಹೇಳಿಕೆಗಳ ಮೌಲ್ಯ ನಿರ್ಧಾರ ಮಾಡದೇ, ಲಿಕರ್ಟನ ವಿಧಾನದಲ್ಲಿ ಹೇಳಿಕೆಗಳಿಗೆ ವ್ಯಕ್ತಿಯ ಉತ್ತರಗಳ ಮೌಲ್ಯನಿರ್ಧಾರ ಮಾಡಲಾಗುತ್ತದೆ ಲಿಕರ್ಟ ರೀತಿಯ ಮನೋಭಾವ ಮಾಪನಿಗೆ ಸಿಂಧುತ್ವವನ್ನು ಸ್ಥಾಪಿಸುವುದು ಸ್ವಲ್ಪ ಕಷ್ಟಕರವಾದ ಕಾರ್ಯ. ಅಳತೆ ಮಾಡಬೇಕಾದ ಪ್ರತಿಯೊಂದು ಮನೋಭಾವಕ್ಕೂ ಪ್ರತ್ಯೇಕವಾಗಿಯೇ ಮಾಪನಿಯನ್ನು ಸಿದ್ಧಪಡಿಸಬೇಕಾಗುತ್ತದೆ. ಒಂದು ವಿಧದ ಗುಂಪಿಗೆ ಸಿದ್ಧಪಡಿಸಿದ ಅಭಿವೃತ್ತಿ ಮಾಪನಿಯನ್ನು ಮತ್ತೊಂದು ವಿಧದ ಗುಂಪಿಗೆ ಉಪಯೋಗಿಸಲು ಸಾಧ್ಯವಿಲ್ಲ.

**ಗಟ್‌ಮನ್ನನ ಏಕ ಆಯಾಮ ಮಾಪನಿ:**

1916ರಲ್ಲಿ ಇಸ್ರೇಲ್‌ನಲ್ಲಿ ಜನಿಸಿದ ಲೂಯಿಗಟ್‌ಮನ್ ಇಸ್ರೇಲ್ ಇನ್‌ಸ್ಟಿಟ್ಯೂಟ್ ಆಫ್ ಅಪ್ಲೈಡ್ ಸೋಷಿಯಲ್ ರಿಸರ್ಚ್ ಸಂಸ್ಥೆಯ ಸ್ಥಾಪಕ ಮತ್ತು ವೈಜ್ಞಾನಿಕ ನಿರ್ದೇಶಕನಾಗಿದ್ದನು. ನಂತರ ಈ ಸಂಸ್ಥೆಗೆ ಗಟ್‌ಮನ್ ಇನ್‌ಸ್ಟಿಟ್ಯೂಟ್ ಎಂದು ಮರು ನಾಮಕರಣ ಮಾಡಲಾಯಿತು. ನಂತರದಲ್ಲಿ ಗಟ್‌ಮನ್ ಜೆರೂಸೆಲಂ ಹಿಬ್ರೂ ವಿಶ್ವವಿದ್ಯಾನಿಲಯದಲ್ಲಿ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಮೌಲ್ಯಮಾಪನದ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದನು.

ಗಟ್‌ಮನ್ ಅಭಿವೃತ್ತಿಗಳ ಅಳತೆಗೆ ಹೊಸದೊಂದು ವಿಧಾನವನ್ನು ರೂಪಿಸಿದ್ದಾನೆ. ಈ ವಿಧಾನಕ್ಕೆ ಏಕ ಆಯಾಮ ವಿಧಾನ (Unidimensional Method) ಎಂದು ಹೆಸರು. ಈ ವಿಧಾನವನ್ನು ಸ್ಕೇಲೋಗ್ರಾಂ ವಿಶ್ಲೇಷಣಾ ವಿಧಾನ, ಸಂಕಲಿತ ಮಾಪನ ವಿಧಾನ (Cumulative Scale Method) ಎಂದೂ ಹೇಳಲಾಗುತ್ತದೆ. ಗಟ್‌ಮನ್ ಈ ವಿಧಾನವನ್ನು 1941ರಲ್ಲಿ ವಿವರಿಸಿದನು. ಗಟ್‌ಮನ್ ದತ್ತ ಮನೋಭಾವದ ಗಹನತೆ (Depth)ಯ ವ್ಯಾಪ್ತಿಯನ್ನು ಅಳತೆ ಮಾಡಲು ನಿರ್ಧರಿಸಿದನು. ಇದಕ್ಕಾಗಿ ಅವನು ಮನೋಭಾವವನ್ನು ವ್ಯಕ್ತಪಡಿಸುವ ಹೇಳಿಕೆಗಳನ್ನು ಅವುಗಳ ಗಹನತೆಯ ಆಧಾರದ ಮೇಲೆ ಕ್ರಮಾಗತವಾಗಿ ಜೋಡಿಸಿದನು. ಹೇಳಿಕೆಗಳನ್ನು ಅವುಗಳ ಗಹನತೆ ಆಧಾರದ ಮೇಲೆ ಒಂದು

Digitised by Bharatavani, CIIL

| ಕ್ರ.ಸಂ. | ಹೇಳಿಕೆಗಳು | ಖಂಡಿತವಾಗಿ ಒಪ್ಪುತ್ತೇನೆ | ಒಪ್ಪುತ್ತೇನೆ | ಅನಿಶ್ಚಿತ | ಒಪ್ಪುವುದಿಲ್ಲ | ಖಂಡಿತವಾಗಿಯೂ ಒಪ್ಪುವುದಿಲ್ಲ |
|---|---|---|---|---|---|---|
| 1 | ಕಂಪ್ಯೂಟರ್ ಉಪಯೋಗ ನನಗೆ ತೃಪ್ತಿ ನೀಡಿದೆ | | | | | |
| 2 | ಕಂಪ್ಯೂಟರ್ ಉಪಯೋಗಿಸುವುದು ಸುಲಭ | | | | | |
| 3 | ಕಂಪ್ಯೂಟರ್ ಉಪಯೋಗಿಸುವುದು ವಿನೋದವೆನಿಸುತ್ತದೆ | | | | | |
| 4 | ಕಂಪ್ಯೂಟರ್ ಉಪಯೋಗದಿಂದ ಕೆಲವು ಸಮಸ್ಯೆಗಳು ಉಂಟಾಗಬಹುದು | | | | | |
| 5 | ಕಂಪ್ಯೂಟರ್ ಉಪಯೋಗದ ಒಳಿತು, ಕೆಡಕಿನ ಬಗ್ಗೆ ಈಗಲೇ ಏನನ್ನು ಹೇಳಲು ಸಾಧ್ಯವಿಲ್ಲ | | | | | |
| 6 | ಕಂಪ್ಯೂಟರ್ ಉಪಯೋಗದಿಂದ ಅನೇಕರು ಕೆಲಸ ಕಳೆದುಕೊಳ್ಳುತ್ತಾರೆ | | | | | |

ಆಯಾಮದುದ್ದಕ್ಕೂ ಇರುವ ಹೇಳಿಕೆಗಳಲ್ಲಿ ವ್ಯಕ್ತಿ ಆಯಾಮದಲ್ಲಿ ಒಂದು ಹೇಳಿಕೆಯನ್ನು ಒಪ್ಪಿಕೊಂಡರೆ ಆ ಹೇಳಿಕೆಗಳಿಂದ ಕೆಳಗೆ ಇರುವ ಇತರ ಎಲ್ಲಾ ಹೇಳಿಕೆಗಳನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಹೇಳಿಕೆಗಳನ್ನು ಕ್ರಮಾಗತವಾಗಿ ಜೋಡಿಸಬಹುದು ಎಂಬ ಊಹೆಯ (ಪೂರ್ವಕಲ್ಪನೆ) ಆಧಾರದ ಮೇಲೆ ಈ ವಿಧಾನ ರೂಪಿತವಾಗಿದೆ. ಪರಿಪೂರ್ಣವಾದ ಗಟ್‌ಮನ್ ಮಾಪನಿಯೊಂದನ್ನು ಊಹಿಸಿಕೊಂಡರೆ ಅಂಥ ಮಾಪನಿಯಲ್ಲಿ ಅವುಗಳ ಗಹನತೆ/ಕಠಿಣತೆ ಆಧಾರದ ಮೇಲೆ ಕ್ರಮಾಗತಗೊಳಿಸಬಹುದಾದಂಥ ಅಥವಾ ಶ್ರೇಣೀಬದ್ಧಗೊಳಿಸಬಹುದಾದ ಏಕ ಆಯಾಮದ (Unidimentional) ಹೇಳಿಕೆಗಳನ್ನು ಹೊಂದಿರಬೇಕಾಗುತ್ತದೆ. ಈ ಹೇಳಿಕೆಗಳು ತೀವ್ರ ಧನಾತ್ಮಕತೆಯಿಂದ ಅಥವಾ ಅತಿಕಠಿಣತೆಯಿಂದ, ತೀವ್ರ ಋಣಾತ್ಮಕತೆ ಅಥವಾ ಅತಿ ಸುಲಭತೆವರೆಗೆ ಇರಬೇಕಾಗುತ್ತದೆ.

ಉದಾಹರಣೆಗೆ 10 ಹೇಳಿಕೆಗಳಿರುವ ಗಟ್‌ಮನ್ ಮಾದರಿ ಮಾಪನಿಯಲ್ಲಿ ಒಬ್ಬ ವ್ಯಕ್ತಿ 7 ಅಂಕಗಳನ್ನು ಪಡೆದರೆ ಆ ವ್ಯಕ್ತಿ ಹೇಳಿಕೆ 1 ರಿಂದ ಹೇಳಿಕೆ 7ರವರೆಗೂ ಎಲ್ಲಾ ಹೇಳಿಕೆಗಳನ್ನು ಒಪ್ಪಿಕೊಂಡಿದ್ದಾನೆ ಹಾಗೂ ಹೇಳಿಕೆಗಳು 8, 9, 10ನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಅರ್ಥವಾಗುತ್ತದೆ.

ಗಟ್‌ಮನ್‌ನ ಮಾಪನಿಯ ಒಂದು ಮುಖ್ಯ ಲಕ್ಷಣವೆಂದರೆ ವ್ಯಕ್ತಿ ಪಡೆಯುವ ಒಟ್ಟು ಅಂಕದ ಆಧಾರದ ಮೇಲೆ ಹೇಳಿಕೆಗಳ ಸಮೂಹದ ಎಲ್ಲಾ ಹೇಳಿಕೆಗಳ ಬಗ್ಗೆ ವ್ಯಕ್ತಿಯ ಪ್ರತಿಕ್ರಿಯೆಗಳನ್ನು ಪೂರ್ವಾನುಮಾನ ಮಾಡಲು ಸಾಧ್ಯವಾಗುವುದು. ಇದರಿಂದ ಮಾಪನಿ ನಿರ್ಣಾಯಕ ಗುಣವನ್ನು ಹೊಂದಿದೆ ಎಂದು ಹೇಳಬಹುದು. ವ್ಯಕ್ತಿ ಪಡೆಯುವ ಒಟ್ಟು ಅಂಕ ಅನೇಕ ಹೇಳಿಕೆಗಳಿಗೆ ವ್ಯಕ್ತಿಯ ಪ್ರತಿಕ್ರಿಯೆಗಳನ್ನು ಪ್ರತಿನಿಧಿಸುತ್ತದೆ.

ಉದಾಹರಣೆಗೆ ಈ ವಿಧದ ಮಾಪನಿಯ ಕೆಲವು ಹೇಳಿಕೆಗಳನ್ನು ಈ ಕೆಳಗೆ ಕೊಡಲಾಗಿದೆ.

1. ನಾನು ಐಸ್‌ಕ್ರೀಂ ಹತ್ತಿರ ಇರಲು ಇಷ್ಟ ಪಡುತ್ತೇನೆ.
2. ನಾನು ಐಸ್‌ಕ್ರೀಂನ ವಾಸನೆ ಪಡೆಯಲು ಇಷ್ಟ ಪಡುತ್ತೇನೆ.

Digitised by Bharatavani, CIIL

3. ನಾನು ಐಸ್‌ಕ್ರೀಂ ತಿನ್ನಲು ಇಷ್ಟಪಡುತ್ತೇನೆ.

4. ನಾನು ಐಸ್‌ಕ್ರೀಂ ತಿನ್ನುವುದನ್ನು ಪ್ರೀತಿಸುತ್ತೇನೆ.

ಈ ಉದಾಹರಣೆಗಳಲ್ಲಿ ಒಂದು ಹೇಳಿಕೆಯನ್ನು ಒಪ್ಪಿಕೊಳ್ಳುವ ವ್ಯಕ್ತಿ ಉಳಿದ ಎಲ್ಲಾ ಹೇಳಿಕೆಗಳನ್ನು ಒಪ್ಪಿಕೊಳ್ಳುತ್ತಾನೆ ಎಂದು ಊಹಿಸಲಾಗುತ್ತದೆ.

ಗಟ್‌ಮನ್ ಮಾಪನಿಯ ಮಾದರಿಯನ್ನು ಮನೋಭಾವಗಳ ಮಾಪನಕ್ಕಲ್ಲದೇ ಇತರ ಪರೀಕ್ಷೆಗಳಿಗೂ ಅನ್ವಯಿಸಿಕೊಳ್ಳಬಹುದು. ಉದಾಹರಣೆಗೆ ಗಣಿತ ಸಾಧನ ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಅವುಗಳ ಕಠಿಣತೆಯ ಆಧಾರದ ಮೇಲೆ ಶ್ರೇಣಿ ಉದ್ಧಗೊಳಿಸಬಹುದು. ವಿದ್ಯಾರ್ಥಿಗೆ ಪ್ರಶ್ನೆಪತ್ರಿಕೆಯ ಮಧ್ಯದಿಂದ ಆರಂಭಿಸುವಂತೆ ಸೂಚನೆ ನೀಡಿದಾಗ ಅವನು/ಅವಳು ಸರಿಯಾಗಿ ಉತ್ತರ ನೀಡಿದ ಮಧ್ಯದ ಹೇಳಿಕೆ ಆಧಾರದ ಮೇಲೆ ಅದಕ್ಕಿಂಥ ಕಠಿಣತೆಯಲ್ಲಿ ಕೆಳಗೆ ಇರುವ ಪ್ರಶ್ನೆಗಳಿಗೆ ಸರಿ ಉತ್ತರ ನೀಡಬಲ್ಲ ಎಂದು ಪೂರ್ಣನುಮಾನ ಮಾಡಲು ಸಾಧ್ಯವಿದೆ.

ಸಂಶೋಧಕರು ಒಳ್ಳೆಯ ವಿಭೇಧೀಕರಣ ಸಾಮರ್ಥ್ಯ ಹೊಂದಿದ ಚಿಕ್ಕ ಪ್ರಶ್ನಾವಳಿ/ಅಂಶಾವಳಿ/ಮಾಪನಿ ತಯಾರಿಸಬೇಕೆಂದಿದ್ದರೆ ಗಟ್‌ಮನ್ನನ ವಿಧಾನವನ್ನು ಸಾಮಾನ್ಯವಾಗಿ ಅನುಸರಿಸುತ್ತಾರೆ. ಸಾಮಾಜಿಕ ದೂರ, ಸಂಘಟನಾತ್ಮಕ ಶ್ರೇಣಿ ವ್ಯವಸ್ಥೆ ಮತ್ತು ರಾಜಕೀಯ ಶಾಸ್ತ್ರ, ಮಾನವ ಶಾಸ್ತ್ರ, ಸಾರ್ವಜನಿಕ ಅಭಿಪ್ರಾಯ, ಮನೋವಿಜ್ಞಾನ ಮುಂತಾದವುಗಳ ವಿಕಾಸ ಮುಂತಾದ ಶ್ರೇಣಿಬದ್ಧಗೊಳಿಸಬಹುದಾದ ಮತ್ತು ಸಂಕೀರ್ಣತೆಯಿಂದ ಕೂಡಿದ ಸಂರಚನೆಗಳ ಮಾಪನಕ್ಕೆ ಗಟ್‌ಮನ್ನನ ಮಾದರಿ ಸೂಕ್ತವಾದುದಾಗಿದೆ.

**ಅನುಕೂಲ ಮತ್ತು ಅನಾನುಕೂಲಗಳು:** ಈ ಮಾಪನಿಯಲ್ಲಿನ ಒಟ್ಟು ಅಂಕಗಳಿಂದ ಅನೇಕ ಹೇಳಿಕೆಗಳ ಬಗೆಗಿನ ಪ್ರತಿಕ್ರಿಯೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಈ ವಿಧದ ಮಾಪನಿಯ ರಚನೆ ಹೆಚ್ಚು ಸಮಯ ಮತ್ತು ಪ್ರಯತ್ನ ತೆಗೆದುಕೊಳ್ಳುತ್ತದೆ.

**ಆಸ್‌ಗುಡ್ಡನ ಅರ್ಥಾತ್ಮಕ ವಿಭೇಧೀಕೃತ ಮಾಪನಿ:**

ಚಾರ್ಲ್ಸ್ ಈಗಲ್‌ಟನ್ ಆಸ್‌ಗುಡ್ 1916ರಲ್ಲಿ ಜನಿಸಿದ ಅಮೇರಿಕ ದೇಶದ ಪ್ರಸಿದ್ಧ ಮನೋವಿಜ್ಞಾನಿ. ಪದಗಳು ಅಭಿವ್ಯಕ್ತಗೊಳಿಸುವ ವಿವಿಧ ಅರ್ಥ ವ್ಯತ್ಯಾಸಗಳನ್ನು ಅಳತೆ ಮಾಡಿ ಮನೋಭಾವವನ್ನು ಅಳತೆ ಮಾಡುವ ವಿನೂತನ ವಿಧಾನವನ್ನು ವಿಕಾಸಗೊಳಿಸಿದ ಕೀರ್ತಿ ಆಸ್‌ಗುಡ್‌ನ ಅರ್ಥಾತ್ಮಕ ವಿಭೇಧೀಕೃತ ಮಾಪನಿ (Osgood Sementic Differential Scale) ಎಂದು ಕರೆಯುತ್ತಾರೆ.

ಈ ವಿಧದ ಮಾಪನಿಯಲ್ಲಿ ವ್ಯಕ್ತಿಗಳು ಒಪ್ಪುವ ಅಥವಾ ಒಪ್ಪಿಕೊಳ್ಳದ ಪದಗಳ ಅರ್ಥದ ಆಧಾರದ ಮೇಲೆ ಅವರ ಮನೋಭಾವವನ್ನು ಊಹಿಸಬಹುದು ಎಂದು ಪ್ರಕಲ್ಪಿಸಿಕೊಳ್ಳಲಾಗುತ್ತದೆ. ಏಕೆಂದರೆ ನಾವು ಇಷ್ಟಪಡುವ, ಮಾತನಾಡುವ ಪದಗಳ ಮೂಲಕ ನಮಗೆ ಅರಿವಿಲ್ಲದಂತೆ ನಮ್ಮ ಮನೋಭಾವ ವ್ಯಕ್ತವಾಗುತ್ತದೆ. ಈ ವಿಧಾನದಲ್ಲಿ ವ್ಯಕ್ತಿ ಅಳತೆ ಮಾಡಬೇಕಾದ ಮನೋಭಾವದ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಸಾದ್ವಿದ್ರುವೀಯ (Bipolar) ಪದಗಳನ್ನು ಗುಣವಾಚಕಗಳನ್ನು ವಿರುದ್ಧ ಅರ್ಥವಿರುವ ಆಯಾಮ ಒಂದರ ಮೇಲೆ ತನಗೆ ಸರಿಯೆನಿಸುವ ಬಿಂದುವನ್ನು ಗುರ್ತಿಸಬೇಕಾಗುತ್ತದೆ. ವ್ಯಕ್ತಿಗಳು ಈ ಪದಗಳ (ಗುಣವಾಚಕಗಳ) ಬಗ್ಗೆ ಯಾವ ಭಾವನೆಯನ್ನು ಹೊಂದಿದ್ದಾರೆ ಎಂಬುದನ್ನು ಸೂಚಿಸಲು ಕೇಳಲಾಗುತ್ತದೆ ಇದನ್ನು ವ್ಯಕ್ತಿ 7 ಬಿಂದುಗಳಿರುವ ಮಾಪನಿಯಲ್ಲಿ ಗುರ್ತಿಸಬೇಕಾಗುತ್ತದೆ. ವಿಷಯಕ್ಕೆ ಸಂಬಂಧಿಸಿದ ಅನೇಕ ಗುಣವಾಚಕಗಳನ್ನು ವ್ಯಕ್ತಿ ನಿರ್ಧಾರ ಮಾಡಬೇಕಾಗುತ್ತದೆ. ಉದಾಹರಣೆಗೆ "ಒಳ್ಳೆಯದು" ಎನ್ನುವ ಪದ 7 ಅಂಕಗಳನ್ನು ಪಡೆದರೆ ಅದಕ್ಕೆ ತದ್ವಿರುದ್ಧವಾದ ಪದ "ಕೆಟ್ಟದು" ಎನ್ನುವ ಪದ 1 ಅಂಕವನ್ನು ಪಡೆಯುತ್ತದೆ. ಮಾಪನಿಯ ಹಾಳೆಯ ಮೇಲ್ಭಾಗದಲ್ಲಿ ಅಳತೆ ಮಾಡಬೇಕಾದ ಮನೋಭಾವದ ವಿಷಯವನ್ನು(Topic) ಬರೆಯಲಾಗುತ್ತದೆ. ಅದರ ಕೆಳಗೆ 7 ಬಿಂದುಗಳ ಮಾಪನಿಯನ್ನು ಕೊಡಲಾಗುತ್ತದೆ. ಈ ಮಾಪನಿಯ ಉದಾಹರಣೆಯನ್ನು ಕೆಳಗೆ ಕೊಡಲಾಗಿದೆ.

ಅರ್ಥಾತ್ಮಕ ವಿಭೇಧೀಕೃತ ತಂತ್ರ ಮನೋಭಾವಗಳ ಮೂರು ಆಯಾಮಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಆಯಾಮಗಳೆಂದರೆ– ಮೌಲ್ಯಮಾಪನ, ಸತ್ವ (ಶಕ್ತಿ) ಮತ್ತು ಚಟುವಟಿಕೆ (ಕ್ರಿಯಾಶೀಲತೆ) ಉದಾಹರಣೆಗೆ–

- **ಮೌಲ್ಯಮಾಪನ:** ವ್ಯಕ್ತಿ ಮನೋಭಾವದ ವಿಷಯದ ಬಗ್ಗೆ ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ಯೋಚಿಸುತ್ತಾನೆ, ಎಂಬುದಕ್ಕೆ ಸಂಬಂಧಿಸಿದೆ (ಒಳ್ಳೆಯದು–ಕೆಟ್ಟದ್ದು).

| ಪರೀಕ್ಷೆಗಳು | | | | | | | | |
|---|---|---|---|---|---|---|---|---|
| ಅನಾವಶ್ಯಕ | | | | | | | | ಅವಶ್ಯಕ |
| ಮುಖ್ಯವಲ್ಲ | | | | | | | | ಮುಖ್ಯವಾದುದು |
| ಕೆಟ್ಟದ್ದು | | | | | | | | ಒಳ್ಳೆಯದು |
| ಸುಲಭವಾದವು | | | | | | | | ಕಷ್ಟವಾದವು |
| ಅಂಕಗಳು | 1 | 2 | 3 | 4 | 5 | 6 | 7 | |

Digitised by Bharatavani, CIIL

- **ಸತ್ವ:** ಮನೋಭಾವದ ವಿಷಯ ವ್ಯಕ್ತಿಗೆ ಎಷ್ಟು ಸತ್ವಯುತವಾಗಿದೆ ಎಂಬುದಕ್ಕೆ ಸಂಬಂಧಿಸಿದೆ (ಪ್ರಬಲ–ದುರ್ಬಲ).

- **ಚಟುವಟಿಕೆ:** ವ್ಯಕ್ತಿಗೆ ಮನೋಭಾವದ ವಿಷಯ ಸಕ್ರಿಯವಾದುದಾಗಿದೆಯೇ ಅಥವಾ ನಿಷ್ಕ್ರಿಯ(ಶಾಂತ) ವಾದುದಾಗಿದೆಯೆ ಎಂಬುದಕ್ಕೆ ಸಂಬಂಧಿಸಿದೆ (ಗತಿಶೀಲಾತ್ಮಕ, ಪ್ರಶಾಂತ).

ಈ ಮಾಹಿತಿಯನ್ನು ಉಪಯೋಗಿಸಿಕೊಂಡು ಮನೋಭಾವದ ವಿಷಯದ ಬಗ್ಗೆ ವ್ಯಕ್ತಿಗೆ ಇರುವ ಭಾವನೆ ಅವನ/ಅವಳ ವರ್ತನೆಗೆ ಹೊಂದಿಕೊಂಡಂತೆ ಇದೆಯೆ ಎಂಬುದನ್ನು ತಿಳಿದುಕೊಳ್ಳಬಹುದು. ಉದಾಹರಣೆಗೆ ಒಬ್ಬ ವ್ಯಕ್ತಿ ಚಾಕೋಲೇಟಿನ ರುಚಿಯನ್ನು ಇಷ್ಟಪಡಬಹುದು (ಮೌಲ್ಯಮಾಪನ) ಆದರೆ ಅದನ್ನು ಆಗಾಗ್ಗೆ ತಿನ್ನದೇ ಇರಬಹುದು (ಚಟುವಟಿಕೆ), ಮೌಲ್ಯಮಾಪನದ ಆಯಾಮವನ್ನು ಸಾಮಾಜಿಕ ಮನೋವಿಜ್ಞಾನಿಗಳು ವ್ಯಕ್ತಿಯ ಮನೋಭಾವವನ್ನು ಅಳತೆ ಮಾಡಲು ಹೆಚ್ಚಾಗಿ ಉಪಯೋಗಿಸುತ್ತಾರೆ. ಏಕೆಂದರೆ ಈ ಆಯಾಮ ಮನೋಭಾವದ ಸಂವೇಗಾತ್ಮಕ ಮುಖವನ್ನು ಪ್ರತಿನಿಧಿಸುತ್ತದೆ.

ಮನೋಭಾವಗಳನ್ನು ಅಳತೆ ಮಾಡಲು ಅರ್ಥಾತ್ಮಕ ವಿಭೇದೀಕೃತ ಮಾಪನಿಯನ್ನು ವ್ಯಾಪಕವಾಗಿ ಉಪಯೋಗಿಸಲಾಗುತ್ತದೆ. ಈ ಮಾಪನಿಯ ಬಹು ಉಪಯೋಗಿಕತೆ ಇದಕ್ಕೆ ಒಂದು ಕಾರಣವಾಗಿದೆ. ದ್ವಿಧ್ರುವೀಯ ಗುಣವಾಚಕ ಪದಗಳನ್ನು ಅನೇಕ ಮನೋಭಾವ ವಿಷಯಗಳಿಗೆ ಉಪಯೋಗಿಸಬಹುದು. ಆದ್ದರಿಂದಲೇ ಈ ಮಾಪನಿಗೆ ಮನೋಭಾವ ಸಂಶೋಧಕನ 'ಎವರ್ ರೆಡಿ ಬ್ಯಾಟರಿ' ಎನ್ನುವ ಅಡ್ಡ ಹೆಸರು ಬಂದಿದೆ.

ಅನುಕೂಲಗಳು– ಇದನ್ನು ಪರೀಕ್ಷೆಗೆ ಕೊಡುವುದು ಸುಲಭ. ಭಾವನೆಯ ಸ್ವಲ್ಪ ವ್ಯತ್ಯಾಸಗಳನ್ನು ಇದು ತೋರಿಸುತ್ತದೆ. ವ್ಯಕ್ತಿಗಳ ಮನೋಭಾವಗಳನ್ನು ಪರಸ್ಪರ ತುಲನೆ ಮಾಡಲು ಈ ಮಾಪನಿ ಸಹಾಯಕವಾಗಿದೆ.

**ಮೂಲ: ಡಾ. ವೆಂಕಟೇಶಮೂರ್ತಿ ಸಿ.ಜಿ. & ನಂದಿನಿ ಪಿ.**
**ಅನು: ಪ್ರೊ. ಮಂಜುನಾಥಯ್ಯ ಬಿ.ಎನ್.**

## ಅಭಿವೃದ್ಧಿ ಅಧ್ಯಯನ ಸಂಸ್ಥೆಗಳು (ಐ.ಸಿ.ಎಸ್.ಎಸ್.ಆರ್. ಬೆಂಬಲಿತ)

ಭಾರತೀಯ ಸಾಮಾಜಿಕ ವಿಜ್ಞಾನಗಳ ಸಂಶೋಧನಾ ಪರಿಷತ್, ವಿಶ್ವವಿದ್ಯಾನಿಲಯದ ಹೊರಗಿನ ಬಹಳಷ್ಟು ಸಂಸ್ಥೆಗಳಿಗೆ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಧನಸಹಾಯವನ್ನು ಒದಗಿಸುತ್ತದೆ. ಪ್ರತಿಯೊಂದು ಮುಖ್ಯ ರಾಜ್ಯದಲ್ಲೂ ಇಂಥ ಒಂದು ಸಂಸ್ಥೆ ಇದೆ. ಇಂತಹ ಸಂಸ್ಥೆಗಳ ಆವರ್ತನದ ಅರ್ಧದಷ್ಟು ಖರ್ಚನ್ನು ಐ.ಸಿ.ಎಸ್.ಎಸ್.ಆರ್ ತುಂಬಿಕೊಡುತ್ತದೆ. ಹಾಗೆಯೇ ಇನ್ನುಳಿದ ಅರ್ಧದಷ್ಟು ಖರ್ಚನ್ನು ಸಂಸ್ಥೆಯಿರುವ ರಾಜ್ಯ ಸರ್ಕಾರ ಅಥವಾ ಇತರೇ ನಿಯೋಗಗಳು ಭರಿಸುತ್ತವೆ. ರಾಷ್ಟ್ರದಲ್ಲಿ 2001ರವರೆವಿಗೆ ಇಂತಹ 27 ಸಂಸ್ಥೆಗಳಿದ್ದವು.

ದೇಶಕ್ಕೆ ಸಂಬಂಧಿಸಿದಂತೆ ನಿಹಿತಾರ್ಥಗಳುಳ್ಳ ಅಥವಾ ದೇಶದ ಯೋಜಿತ ಬೆಳವಣಿಗೆಯಿಂದ ಉದ್ಭವವಾಗುವ ಸಾಮಾಜಿಕ ಸಮಸ್ಯೆಗಳನ್ನು ಕುರಿತ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು ಈ ಸಂಸ್ಥೆಗಳ ಸ್ಥಾಪನೆಯ ಪ್ರಮುಖ ಗುರಿಯಾಗಿದೆ. ರಾಷ್ಟ್ರದ ಯೋಜಿತ ಅಭಿವೃದ್ಧಿಗೆ ನಿಹಿತಾರ್ಥಗಳುಳ್ಳ ಸಾಮಾಜಿಕ ಸಮಸ್ಯೆಗಳ ಬಗ್ಗೆ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು ಈ ಸಂಸ್ಥೆಗಳ ಸ್ಥಾಪನೆಯ ಮುಖ್ಯ ಉದ್ದೇಶ. ಯು.ಜಿ.ಸಿ ಬೆಂಬಲಿತ ವಿಶ್ವವಿದ್ಯಾನಿಲಯದ ಸಾಮಾಜಿಕ ವಿಜ್ಞಾನಗಳ ವಿಭಾಗಗಳು ಆಯಾ ಕ್ಷೇತ್ರಗಳ ಜ್ಞಾನದ ಬೆಳವಣಿಗೆಗೆ ಮತ್ತು ಅದರ ಪ್ರಚಾರಕ್ಕಾಗಿ ಮೂಲಭೂತ ಸಂಶೋಧನೆ ಮತ್ತು ಬೋಧನೆ ನಡೆಸುತ್ತವೆ. ಆದರೆ ಅಭಿವೃದ್ಧಿ ಅಧ್ಯಯನ ಸಂಸ್ಥೆಗಳು ಸಾಮಾಜಿಕ–ಆರ್ಥಿಕ ಸಮೀಕ್ಷೆ ನಡೆಸುವುದು, ಅಭಿವೃದ್ಧಿ ನೀತಿಗಳನ್ನು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವುದು, ಕಾರ್ಯಕ್ರಮಗಳನ್ನು ಮತ್ತು ಪ್ರಾಯೋಜನೆಗಳನ್ನು ಕೈಗೊಳ್ಳುವುದು, ಸಮಕಾಲೀನ ಸಾಮಾಜಿಕ ವಸ್ತುಸ್ಥಿತಿಯನ್ನು ಪತ್ತೆ ಹಚ್ಚುವುದು ಮತ್ತು ಸಮಾಜದ ವಿವಿಧ ವರ್ಗಗಳ ಜನರಿಗೆ ಮತ್ತು ದೇಶದ ವಿವಿಧ ಪ್ರದೇಶಗಳಿಗೆ ಅಭಿವೃದ್ಧಿಯ ಯೋಜನೆಗಳ ಪರಿಣಾಮಕಾರಿತ್ವದ ವಿಶ್ಲೇಷಣೆ ನಡೆಸುವುದು ಇತ್ಯಾದಿ ಕಾರ್ಯಗಳನ್ನು ಒಳಗೊಂಡ ಅಂತರ್–ಶಿಸ್ತೀಯ(Inter disciplinary), ಅನ್ವಯಿಕ (applied) ಸಂಶೋಧನೆಗಳನ್ನು ನಡೆಸುತ್ತವೆ.

ಅಭಿವೃದ್ಧಿ ಅಧ್ಯಯನ ಸಂಸ್ಥೆಗಳು ತಮ್ಮ ಭ್ರಾತೃ ಸಂಸ್ಥೆಗಳ ಸಹಯೋಗದೊಡನೆ ಕಾರ್ಯನಿರ್ವಹಿಸುತ್ತವೆ. ಇವು ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳ ಸಹಯೋಗದೊಡನೆ ಉತ್ತಮ ಪರಿಣತರನ್ನು ಹೊಂದಿದ್ದ ತಮ್ಮ ರಾಜ್ಯದ ಪ್ರದೇಶದೊಳಗೆ ಹಾಗೂ ಅದರಿಂದಾಚೆಗೂ ವಿಚಾರ ಸಂಕಿರಣ, ಕಾರ್ಯಾಗಾರ ಜಂಟಿ ಸಂಶೋಧನಾ ಚಟುವಟಿಕೆಗಳು, ತರಬೇತಿ ಮತ್ತು ಸಲಹಾ ಸೇವೆಗಳು ಇತ್ಯಾದಿ ಚಟುವಟಿಕೆಗಳನ್ನು ನಡೆಸುತ್ತವೆ. ಹಲವಾರು ಸಂಸ್ಥೆಗಳು ರಾಜ್ಯಸರ್ಕಾರಗಳೊಂದಿಗೆ ನಿಕಟ ಸಹಯೋಗ ಹೊಂದಿ, ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ, ಅವುಗಳನ್ನು ಅನುಷ್ಠಾನಗೊಳಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಕಾರ್ಯವನ್ನು ಮಾಡುತ್ತವೆ. ಇಂತಹ ಕಾರ್ಯದಿಂದಾಗಿ ಅಭಿವೃದ್ಧಿ ಯೋಜನೆಗಳ ಕುರಿತ ಸಂಶೋಧನೆ, ನೀತಿ–ನಿರೂಪಣೆ ಮಾಡುವಿಕೆ ಮತ್ತು ಕಾರ್ಯಕ್ರಮ ಅನುಷ್ಠಾನ ಇವುಗಳ ನಡುವಿನ ನಿಕಟ ಸಂಬಂಧವನ್ನು ಸದೃಢಗೊಳಿಸಲು ಸಾಧ್ಯವಾಗುತ್ತದೆ. ಪ್ರತಿಯೊಂದು ಸಂಸ್ಥೆಯು ತನ್ನದೇ ಆದ ಕಾರ್ಯಕ್ರಮಗಳನ್ನು, ಸಂಶೋಧನೆಗಳನ್ನು ಕುರಿತು ತೀರ್ಮಾನಿಸುತ್ತದೆ. ಇಂತಹ ಸಂಶೋಧನೆಗಳೆಂದರೆ ಕೃಷಿ, ಗ್ರಾಮೀಣ ಅಭಿವೃದ್ಧಿ, ಕೈಗಾರಿಕಾ/ಔದ್ಯಮಿಕ ಸಂರಚನೆ ಮತ್ತು ಬೆಳವಣಿಗೆ, ಬಡತನ ಮತ್ತು ಆದಾಯ

Digitised by Bharatavani, CIIL

ವಿತರಣೆ, ಉದ್ಯೋಗ ಮತ್ತು ಕೂಲಿ/ಸಂಬಳ, ಶಿಕ್ಷಣ, ಆರೋಗ್ಯ ಮತ್ತು ಪೌಷ್ಠಿಕತೆ, ಮಹಿಳೆಯರು, ಮಕ್ಕಳು, ಶಕ್ತಿತಂತ್ರಜ್ಞಾನ ಮತ್ತು ಜೀವ–ಪರಿಸರ(Ecology) ಮತ್ತು ಪರಿಸರ ಇತ್ಯಾದಿ. ಇಂತಹ ಸಂಶೋಧನೆಗಳು, ಅಂಶಗಳು, ಪರಿಣಾಮಕತೆ ಮತ್ತು ವಿತರಣಾ ನ್ಯಾಯದ ಹಿನ್ನೆಲೆಯಲ್ಲಿ ಪರೀಕ್ಷಿಸುವುದು ಮುಂತಾದ ವಿಸ್ತೃತ ಕ್ಷೇತ್ರಗಳಿಗೆ ಸಂಬಂಧಿಸಿರುತ್ತವೆ. ವೈಜ್ಞಾನಿಕ ಜ್ಞಾನರಾಶಿಯನ್ನು ಭಾರತದ ಆರ್ಥಿಕತೆಗೆ, ಭಾರತೀಯ ಸಮಾಜ ಹಾಗೂ ರಾಷ್ಟ್ರೀಯ ಮತ್ತು ಪ್ರಾಂತೀಯ ಮಟ್ಟಗಳಿಗೆ ಸಂಬಂಧಿಸಿದಂತೆ ಒದಗಿಸುತ್ತವೆ. ಇಂತಹ ಅಧ್ಯಯನಗಳಿಂದ ಹೊರಬಂದ ಸಂಶೋಧನಾ ಫಲಿತಾಂಶಗಳನ್ನು ಪತ್ರಿಕೆಗಳಲ್ಲಿ, ವರದಿಗಳಲ್ಲಿ ಕೈಪಿಡಿ ಮತ್ತು ಪುಸ್ತಕಗಳ ಮುಖಾಂತರ ತನ್ನ ರಾಜ್ಯದಲ್ಲಿ ಹಾಗೂ ಹೊರಗೂ ಪ್ರಚುರಪಡಿಸಲಾಗುತ್ತದೆ. ಹಾಗೆಯೇ ವಿಚಾರ ಸಂಕಿರಣಗಳು ಮತ್ತು ಸಮ್ಮೇಳನಗಳ ಮುಖಾಂತರ ಸಾಮಾಜಿಕ, ಆರ್ಥಿಕ ವಿಷಯಗಳ ಕುರಿತ ಜ್ಞಾನವನ್ನು ಪ್ರಸಾರ ಮಾಡಲಾಗುತ್ತದೆ.

ಈ ಮುಂದೆ ಭಾರತದಲ್ಲಿರುವ 27 ಅಭಿವೃದ್ಧಿ ಅಧ್ಯಯನ ಸಂಸ್ಥೆಗಳ ಸಂಶೋಧನಾ ಚಟುವಟಿಕೆಗಳನ್ನು ಕೊಡಲಾಗಿದೆ. ಸಂಕ್ಷಿಪ್ತಗೊಳಿಸುವುದಕ್ಕಾಗಿ ಎಲ್ಲಾ ಸಂಸ್ಥೆಗಳು ಸಾಮಾನ್ಯವಾಗಿ ನಡೆಸುವ ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಸಮ್ಮೇಳನಗಳು ಮತ್ತು ಪ್ರಕಟಣೆಗಳ ವಿವರಗಳನ್ನು ಕೈಬಿಡಲಾಗಿದೆ. ಸಂಸ್ಥೆಗಳ ಸಂಶೋಧನಾ ಚಟುವಟಿಕೆಗಳ ವಿವರ ಕೊಡಲಾಗಿದೆ.

**ಎ.ಎನ್ ಸಮಾಜ ಅಧ್ಯಯನಗಳ ಸಂಸ್ಥೆ(ANSISS) – ಪಾಟ್ನ, ಬಿಹಾರ**

ಈ ಸಂಸ್ಥೆಯು ಬಿಹಾರ ರಾಜ್ಯದ ಹಾಗೂ ಇದರ ಪೂರ್ವಭಾಗದ ಸಮಸ್ಯೆಗಳನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳುತ್ತದೆ. ಬಿಹಾರ ರಾಜ್ಯದಲ್ಲಿ ಜನರ ಪಾಲ್ಗೊಳ್ಳುವಿಕೆ, ಸಮುದಾಯದ ಆಸಕ್ತಿ, ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ, ಬಡತನ ನಿವಾರಣೆ, ಗ್ರಾಮೀಣ ಅಭಿವೃದ್ಧಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು, ಈ ಅಂಶಗಳಿಗೆ ಒತ್ತು ನೀಡುವುದು ಇದರ ವಿಕಾಸದ ಉಪಕ್ರಮವಾಗಿದೆ. ಈ ಸಂಸ್ಥೆಯ ಸಂಶೋಧನೆಯು ಮುಖ್ಯವಾಗಿ ಆರ್ಥಿಕ ನೀತಿಗಳು, ಬುಡಕಟ್ಟು ಜನರ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಪ್ರಮುಖವಾಗಿ ಪ್ರತಿಫಲಿಸುತ್ತದೆ. ಈ ಸಂಸ್ಥೆಯಲ್ಲಿ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರವಿದ್ದು, ಇದು ಬಾಲಕಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತರಬೇತಿ, ಸಂಶೋಧನೆ ದಾಖಲೀಕರಣ ಸೇವೆಗಳನ್ನು ಒದಗಿಸುತ್ತದೆ.

**ಅಭಿವೃದ್ಧಿ ಅಧ್ಯಯನ ಕೇಂದ್ರ – ತ್ರಿವೇಂಡ್ರಮ್, ಕೇರಳ**

ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸಾರ್ವಜನಿಕ ನೀತಿ, ಜನಸಂಖ್ಯಾ ಬೆಳವಣಿಗೆ ಮತ್ತು ಸುಸ್ಥಿತಿಪೂರ್ಣ ಅಭಿವೃದ್ಧಿ, ದಲಿತರು ಮತ್ತು ಆದಿವಾಸಿಗಳಿಗೆ ಸಂಬಂಧಿಸಿದಂತೆ ಹೊಸ ಆರ್ಥಿಕ ನೀತಿಯ ಪರಿಣಾಮಗಳು, ಗ್ರಾಮೀಣ ನೀರು ಸರಬರಾಜಿನ ಆರ್ಥಿಕತೆ, ಮಹಿಳೆ ಮತ್ತು ಆರ್ಥಿಕ ಅಭಿವೃದ್ಧಿ, ಕೃಷಿಕ್ಷೇತ್ರದ ಬದಲಾವಣೆಗಳು ಮತ್ತು ಜನಸಂಖ್ಯಾಚಲನೆ, ನೆಲದ ಬಳಕೆ, ಅರಣ್ಯನಾಶ, ಕೃಷಿ ಸುಧಾರಣೆಗಳು ಮತ್ತು ಭೂ ಪುನರ್‌ವಿತರಣೆ–ಇವುಗಳು ಈ ಸಂಸ್ಥೆಯ ಪ್ರಮುಖ ಸಂಶೋಧನಾ ವಿಷಯಗಳಾಗಿವೆ.

**ಆರ್ಥಿಕ ಮತ್ತು ಸಮಾಜ ಅಧ್ಯಯನಗಳ ಕೇಂದ್ರ (CESS)**

ಈ ಸಂಸ್ಥೆಯ ಸಂಶೋಧನಾ ಚಟುವಟಿಕೆಗಳು ಆಂಧ್ರಪ್ರದೇಶ ರಾಜ್ಯದ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಸಂಬಂಧಿಸಿದಂತಿದೆ. ಜಿಲ್ಲಾ ಬಡತನ ನಿವಾರಣಾ ಕಾರ್ಯಕ್ರಮ, ಆರೋಗ್ಯದ ಆರ್ಥಿಕತೆ, ರಾಜ್ಯದ ಹಣಕಾಸು, ನಗರ ನೀರು ಸರಬರಾಜು, ಘನತ್ಯಾಜ್ಯ ನಿವಾರಣೆ, ಪೌಷ್ಠಿಕತೆ, ಅಭಿವೃದ್ಧಿ ಕಾರ್ಯಕ್ರಮದಲ್ಲಿ ಜನರ ಪಾಲ್ಗೊಳ್ಳುವಿಕೆ, ಪರಿಶಿಷ್ಟ ಜನರ ಕಲ್ಯಾಣ ಕಾರ್ಯಕ್ರಮಗಳ ಮೌಲ್ಯಮಾಪನ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿವೆ. ಕೆಲವು ಪ್ರಗತಿಯಲ್ಲಿವೆ.

**ಬಹುಶಿಸ್ತೀಯ ಅಭಿವೃದ್ಧಿ ಸಂಶೋಧನಾ ಕೇಂದ್ರ (CMDDR)**

ಕರ್ನಾಟಕ ರಾಜ್ಯದ ಧಾರವಾಡದಲ್ಲಿರುವ ಈ ಕೇಂದ್ರವು ಆರೋಗ್ಯ ಕ್ಷೇತ್ರಕ್ಕೆ ಹಾಗೂ ಆರೋಗ್ಯ ಸೂಚಕಗಳಿಗೆ, ಶೈಕ್ಷಣಿಕ ಬೆಳವಣಿಗೆಗೆ ಸಮುದಾಯದ ಕೊಡುಗೆಗಳು, ಪಾಲ್ಗೊಳ್ಳುವಿಕೆಯಿಂದ ಕೂಡಿದ ಅಭಿವೃದ್ಧಿ, ಉದಾರೀಕರಣದ ನೀತಿಗಳು, ಕುಲಸಂಬಂಧಿ ಅಂಶಗಳು ಮತ್ತು ಉದ್ಯೋಗಾವಕಾಶಗಳು, ಪ್ರಾಚೀನ ಭಾರತದ ಸಾಹಿತ್ಯದಲ್ಲಿರುವ ಸಾಮಾಜಿಕ–ಆರ್ಥಿಕ ಚಿಂತನೆಗಳು, ಕರ್ನಾಟಕದ ಅಭಿವೃದ್ಧಿಪಥ ಇವುಗಳಿಗೆ ಸಂಬಂಧಿಸಿದ ಅಧ್ಯಯನಗಳನ್ನು ನಡೆಸುತ್ತಿದೆ. ಹಾಗೆಯೇ ರೋಗ–ರುಜಿನಗಳಿಂದ ಉಂಟಾಗುವ ಆರ್ಥಿಕ, ಹಣಕಾಸಿನ ತೊಂದರೆಗಳನ್ನು ಅಂದಾಜು ಮಾಡುವ ಕಂಪ್ಯೂಟರ್ ಪ್ಯಾಕೇಜ್‌ನ್ನು ಸಿದ್ಧಪಡಿಸಿದೆ.

**ನೀತಿ–ನಿರೂಪಣ ಸಂಶೋಧನಾ ಕೇಂದ್ರ (CPR), ನವದೆಹಲಿ**

ನಿರ್ದಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸರ್ಕಾರ ರೂಪಿಸಿರುವ ರಾಷ್ಟ್ರೀಯ ನೀತಿಗಳನ್ನು ಕುರಿತು ಅಧ್ಯಯನ ನಡೆಸುವ ಗುರಿ ಹೊಂದಿದೆ. ಭದ್ರತೆ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಸ್ವಯಂ ಸೇವಾವಲಯ, ಆರ್ಥಿಕ ಉದಾರೀಕರಣ, ಸಮ್ಮಿಶ್ರ ಸಿದ್ಧಾಂತ, ಸಾಮಾಜಿಕ ಅಶಾಂತಿ, ಸಂಯುಕ್ತವಾದ ಜಾಗತೀಕರಣ, ನಗರೀಕರಣ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳನ್ನು ಕೈಗೊಳ್ಳುವ ಗುರಿಯನ್ನು ಈ ಸಂಸ್ಥೆ ಹೊಂದಿದೆ. ಹಿಂದುಳಿದಿರುವಿಕೆಯ ರಾಜಕೀಯ, ಜನಸಂಖ್ಯಾ ಸ್ಥಿರತೆ, ಭಾರತದ ಆರ್ಥಿಕ ಸುಧಾರಣೆಗಳು, ಸಮ್ಮಿಶ್ರ ರಾಜಕೀಯ, ವಿಶ್ವದ ಪರಿಸ್ಥಿತಿಗೆ ಸಂಬಂಧಿಸಿದಂತೆ ಭಾರತದ ಆರ್ಥಿಕತೆ, ಜಾಗತಿಕ ಅಣುಅಸ್ತ್ರ ನಿಯಂತ್ರಣ, ಪೂರ್ಣಗೊಂಡಿರುವ ಅಥವಾ ಜರುಗುತ್ತಿರುವ ಸಂಶೋಧನಾ ಪ್ರಾಯೋಜನೆಗಳು ಹೀಗಿವೆ: ಶಾಲಾ ಆರೋಗ್ಯ ತಪಾಸಣಾ ಕಾರ್ಯಕ್ರಮದ ಮೌಲ್ಯಮಾಪನ, ಸಣ್ಣ ಕುಟುಂಬ ಮಾದರಿಗಳು, ಕುಟುಂಬ ಕಲ್ಯಾಣ ಸೇವೆಗಳು, ಶಿಕ್ಷಣ, ಜನಸಂಖ್ಯೆ ಮತ್ತು ಅಭಿವೃದ್ಧಿ; ಚಂಡೀಗಢದಲ್ಲಿನ ಪರಿಶಿಷ್ಟ ಜಾತಿಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಸಾಮಾಜಿಕ–ಆರ್ಥಿಕ

Digitised by Bharatavani, CIIL

ಸರ್ವೇಕ್ಷಣೆ. ಈ ಕೇಂದ್ರವು ಜನಪ್ರತಿನಿಧಿಗಳಿಗೆ, ಎನ್.ಜಿ.ಓ.ಗಳಿಗೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಸಹ ನಡೆಸುತ್ತದೆ.

**ಗುಜರಾತ್ ಅಭಿವೃದ್ಧಿ ಸಂಶೋಧನಾ ಸಂಸ್ಥೆ (GIDR) ಅಹಮದಾಬಾದ್**

ಕೃಷಿಯೇತರ ಉದ್ಯೋಗಗಳು, ಉದಾರೀಕರಣ, ಜಾಗತೀಕರಣ ಮತ್ತು ಹೈಟೆಕ್ ಕೈಗಾರಿಕೀಕರಣ. ಸ್ವಾಧ್ಯಾಯ ಚಟುವಟಿಕೆಗಳು ಮತ್ತು ಗುಜರಾತಿನ ಸಾಮಾಜಿಕ ಆರ್ಥಿಕ ಬದಲಾವಣೆಗಳು ಈ ಸಂಸ್ಥೆಯ ಸಂಶೋಧನಾ ಕ್ಷೇತ್ರಗಳಾಗಿವೆ. ಕಿರು ಮತ್ತು ಮಧ್ಯಮ ನೀರಾವರಿ ಯೋಜನೆಗಳು, ವಿಶಾಲ ಆರ್ಥಿಕ ಅಭಿವೃದ್ಧಿಯಲ್ಲಿ ನಿಧಿಯ ಸಂಚಲನೆ, ಸರ್ದಾರ್ ಸರೋವರ ನಿರಾಶ್ರಿತರ ಪುನರ್‌ವಸತಿ ಮತ್ತು ಪುನರ್‌ವಾಸ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ. ನಗರ ಅಭಿವೃದ್ಧಿಯಲ್ಲಿ ರಾಜ್ಯದ ಪಾತ್ರ, ಕರಾವಳಿ ಸೌರಾಷ್ಟ್ರದಲ್ಲಿ ಕೈಗಾರಿಕೆಯಿಂದ ಆಗುವ ಪರಿಸರ ಪರಿಣಾಮಗಳು ರಾಷ್ಟ್ರೀಯ ಆರ್ಥಿಕತೆಯಲ್ಲಿ ಅನೌಪಚಾರಿಕ ವಲಯದ ಪಾತ್ರ ಇತ್ಯಾದಿ ಈ ಕೇಂದ್ರದ ಅಧ್ಯಯನ ವಿಷಯಗಳಾಗಿವೆ.

**ಸಮಾಜ ವಿಜ್ಞಾನಗಳ ಅಧ್ಯಯನ ಕೇಂದ್ರ (CSSS) ಪಶ್ಚಿಮ ಬಂಗಾಳ**

ಈ ಕೇಂದ್ರವು ಮುಖ್ಯವಾಗಿ ಆಧುನಿಕ ಬಂಗಾಳದ ಕುಟುಂಬಗಳ ಹುಟ್ಟು ಬೆಳವಣಿಗೆ ಕುರಿತು ಅಧ್ಯಯನ ನಡೆಸುತ್ತ ಕೃಷಿಕ್ಷೇತ್ರದ ಬದಲಾವಣೆಗಳು, ಪಶ್ಚಿಮಬಂಗಾಳದ ಕೈಗಾರಿಕಾ ಅಭಿವೃದ್ಧಿ, ಏಷ್ಯಾ, ಲ್ಯಾಟಿನ್ ಅಮೇರಿಕಾದಲ್ಲಿನ ಸಂರಚನಾ ಹೊಂದಾಣಿಕೆ ಮತ್ತು ಜಾಗತೀಕರಣ, ವಿಕಾಸಾಧೀನ ಮತ್ತು ವಿಕಾಸಶೀಲತೆಯ ರಾಜಕೀಯ ಆರ್ಥಿಕತೆ, ಕೈಗಾರಿಕಾ ಸಂಘಟನೆ ಮತ್ತು ಅನೌಪಚಾರಿಕ ವಲಯ, ಲಿಂಗಾಧಾರಿತ ವಿಚಾರಗಳು, ಬ್ರಹ್ಮಪುತ್ರಕಣಿವೆಯ ಐತಿಹಾಸಿಕ ಭೌಗೋಳಿಕಾಂಶಗಳು, ವ್ಯಾಪಕ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಉತ್ತರ ದಕ್ಷಿಣದ ವಿಚಾರಗಳು, ಭಾರತದಲ್ಲಿ ಮಕ್ಕಳು, ಬಡರಾಷ್ಟ್ರಗಳಲ್ಲಿನ ವ್ಯಾಪಾರ ಮತ್ತು ಕೂಲಿ/ಸಂಬಳಗಳ ನಡುವಣ ಅಂತರಗಳು – ಈ ಕ್ಷೇತ್ರಗಳ ಬಗ್ಗೆ ಸಂಸ್ಥೆಯು ಸಂಶೋಧನೆ ಅಧ್ಯಯನ ನಡೆಸುತ್ತಿದೆ.

**ಅಭಿವೃದ್ಧಿಗೊಳ್ಳುತ್ತಿರುವ ಸಮಾಜಗಳ ಅಧ್ಯಯನ ಕೇಂದ್ರ (CSDS) ದೆಹಲಿ**

ಈ ಕೇಂದ್ರದ ಸಂಶೋಧನೆಯು ಮುಖ್ಯವಾಗಿ ಮುಂದಿನ ಅಂಶಗಳಿಗೆ ಸಂಬಂಧಿಸಿದಂತಿದೆ: ಮತದಾರರ ವರ್ತನೆಗಳು, ಪ್ರಜಾಸತ್ತಾತ್ಮಕ ರಾಜಕೀಯ ಮತ್ತು ಅದರ ಭವಿಷ್ಯ, ಸಂಸ್ಕೃತಿ ರಾಜಕೀಯ, ಜ್ಞಾನದ ರಾಜಕೀಯ, ಪರ್ಯಾಯಗಳ ಮತ್ತು ಅಪೇಕ್ಷಣೀಯ ಭವಿಷ್ಯದ ರಾಜಕೀಯ, ಹಿಂಸೆ, ಕುಲಸಂಬಂಧ ಅಂಶಗಳು ಮತ್ತು ವಿವಿಧತೆ. ಚೀನಾದಲ್ಲಿ ವಿಜ್ಞಾನ ಮತ್ತು ತಾಂತ್ರಿಕತೆ, ದಕ್ಷಿಣ ಏಷ್ಯಾದಲ್ಲಿನ ಅಶಾಂತಿ, ಭಾರತದಲ್ಲಿ ಮಾನವಹಕ್ಕುಗಳು, ಭಾರತದಲ್ಲಿ ವಿದ್ಯುನ್ಮಾನ(ಎಲೆಕ್ಟ್ರಾನಿಕ್) ಸಂಸ್ಕೃತಿ ಮತ್ತು ನಗರ ಜೀವನ.

ಈ ಕೇಂದ್ರವು 'ಆಲ್ಟರ್‌ನೇಟಿವ್ಸ್' ಮತ್ತು 'ಜೈನಾರಿಪೋರ್ಟ್' ಎಂಬ ಎರಡು ತ್ರೈಮಾಸಿಕ ಪತ್ರಿಕೆಗಳನ್ನು ಹೊರತರುತ್ತದೆ.

**ಸಾಮಾಜಿಕ ಅಭಿವೃದ್ಧಿ ಪರಿಷತ್ (CSD), ಹೈದರಾಬಾದ್**

ಈ ಕೇಂದ್ರ ನಡೆಸುವ ಅಧ್ಯಯನದಲ್ಲಿ ಪ್ರಮುಖವಾದುದೇನೆಂದರೆ, ಗಾಂಧಿಬ್ಲಾಕ್ ಡವಲಪ್‌ಮೆಂಟ್ ಯೋಜನೆ, ಅಂಚಿನಲ್ಲಿರುವ ಗುಂಪುಗಳು, ಪೌಷ್ಠಿಕತೆ ಮತ್ತು ಆರೋಗ್ಯ, ಭೂಮಿಯನ್ನು ಅನ್ಯಾಕ್ರಾಂತ ಮಾಡುವುದು, ಸಣ್ಣ ನೀರಾವರಿ ಮತ್ತು ಕೃಷಿ ಅಭಿವೃದ್ಧಿ

**ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ (CWDS), ದೆಹಲಿ**

ಈ ಸಂಸ್ಥೆಯು ಮಹಿಳಾ ಮತ್ತು ಮಕ್ಕಳ ಸಮಸ್ಯೆಗಳನ್ನು ಕುರಿತಾದ ಅಧ್ಯಯನ ನಡೆಸಲು ತನ್ನ ಗಮನ ಕೇಂದ್ರೀಕರಿಸಿದೆ. ಇತ್ತೀಚಿನ ಸಂಶೋಧನಾ ಒಲವುಗಳೆಂದರೆ – ಮಹಿಳೆ ಮತ್ತು ಭೂಮಿ ಹಕ್ಕು, ರಾಷ್ಟ್ರೀಯ ಮಹಿಳಾ ಕೋಶದ ಮಹಿಳೆಯರ ಮೇಲಿನ ಪರಿಣಾಮ, ಪಂಚಾಯತ್ ರಾಜ್ ಮತ್ತು ಮಹಿಳೆ, ಭಾರತದಲ್ಲಿ ಮಹಿಳಾವಾದ, ಮಹಿಳೆ ಮತ್ತು ನೀರು ನಿರ್ವಹಣೆ, ಸಾಂಪ್ರದಾಯಿಕ ಕಾನೂನು ಮತ್ತು ಆಚರಣೆಗಳು, ಕುಟುಂಬ ಮತ್ತು ಮಹಿಳೆಯರ ಮೇಲೆ ಸಮುದಾಯದ ಹಿಂಸೆ.

**ಗಾಂಧಿ ಅಧ್ಯಯನ ಸಂಸ್ಥೆ (GIS) ವಾರಣಾಸಿ, ಉತ್ತರಪ್ರದೇಶ**

ಈ ಕೇಂದ್ರವು ಅಧ್ಯಯನ ನಡೆಸುವ ಕ್ಷೇತ್ರಗಳೆಂದರೆ – ಗಾಂಧೀ ಮತ್ತು ವಿಜ್ಞಾನ, ಗಾಂಧಿ ಮತ್ತು ಜಾತಿಪ್ರಶ್ನೆ, ಭೂಸುಧಾರಣೆ ಮತ್ತು ಪಂಚಾಯತ್‌ರಾಜ್, ಅಹಿಂಸೆ – ಆರ್ಥಿಕತೆಯ ಒಂದು ಪರ್ಯಾಯ ಪರಿಕಲ್ಪನೆ, ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಆರ್ಥಿಕ ಬೆಳವಣಿಗೆ, ಸುಸ್ಥಿರ ಬೆಳವಣಿಗೆ ಮತ್ತು ಪ್ರಜಾಪ್ರಭುತ್ವ, ಪಂಚಾಯತ್ ಮತ್ತು ಮಹಿಳೆ, ಗುಣಮಟ್ಟದ ಜೀವನದ ಮೇಲೆ ಪ್ರಭಾವ ಬೀರುವ ಸಾಮಾಜಿಕ ಆರ್ಥಿಕ ಅಂಶಗಳು.

**ಗಿರಿ ಅಭಿವೃದ್ಧಿ ಅಧ್ಯಯನ ಸಂಸ್ಥೆ (GIDS) ಲಕ್ನೋ, ಉ.ಪ್ರದೇಶ**

ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳು, ಸಾಮಾನ್ಯ ಸಂಪನ್ಮೂಲಗಳು, ಭೂಸುಧಾರಣೆ, ಮುಸ್ಲಿಮರಿಗಾಗಿ ಸ್ಥಳೀಯ ಯೋಜನೆಗಳು, ಪ್ರಾದೇಶಿಕ ದ್ವಿತ್ವ-ಸಮಗ್ರ ಗ್ರಾಮೀಣ ಅಭಿವೃದ್ಧಿ ಪ್ರವಾಸಗಳು ಮತ್ತು ಸುಸ್ಥಿರ ಬೆಳವಣಿಗೆ

**ಜಿ.ಬಿ. ಪಂತ್ ಸಾಮಾಜಿಕ ವಿಜ್ಞಾನ ಸಂಸ್ಥೆ, (GBPSSI) ಅಲಹಾಬಾದ್, ಉ.ಪ್ರದೇಶ**

ಪ್ರಾಯೋಜಿತ ಅಭಿವೃದ್ಧಿ ಕಾರ್ಯಕ್ರಮಗಳ ಮೌಲ್ಯಮಾಪನ ಈ ಸಂಸ್ಥೆಯ ಪ್ರಮುಖ ಗಮನ ಕೇಂದ್ರವಾಗಿದೆ.

Digitised by Bharatavani, CIIL

ಗಂಗಾನದಿ ಸಂಸ್ಕೃತಿ, ಜನಾಂಗೀಯ ವೈದ್ಯ, ಭೂಪಟ ನಿರ್ಮಾಣ ಇತ್ಯಾದಿ ಇತರ ಯೋಜನೆಗಳನ್ನು ಸಂಸ್ಥೆಯು ಕೈಗೊಳ್ಳುತ್ತದೆ.

**ಸಮಾಜ ಅಧ್ಯಯನಗಳ ಕೇಂದ್ರ (CSS) ಸೂರತ್, ಗುಜರಾತ್**

ಈ ಕೇಂದ್ರವು ವ್ಯಕ್ತಿತ್ವ, ವಿಚಾರಧಾರೆ ಮತ್ತು ಪ್ರಜ್ಞೆ, ಸಾಮಾಜಿಕ ಚಳವಳಿಗಳು ಮತ್ತು ಹೋರಾಟಗಳು, ನಗರ ಮತ್ತು ಗ್ರಾಮೀಣ ವರ್ಗವಾದ, ಸಾಮಾಜಿಕ ನ್ಯಾಯ ಮತ್ತು ಆಡಳಿತದ ಪ್ರರೂಪಗಳು, ಅಭಿವೃದ್ಧಿ ಮತ್ತು ಸ್ಥಾನಪಲ್ಲಟ ಸಂವಾದ ಮತ್ತು ವಾಸ್ತವಿಕತೆ ಮತ್ತು ಮಾನವ ಹಕ್ಕುಗಳು, ಪಂಚಾಯತ್‌ರಾಜ್ ಮತ್ತು ಜನರ ಪಾಲ್ಗೊಳ್ಳುವಿಕೆ, ಮಹಿಳೆಯರಿಗೆ ಸಂಬಂಧಿಸಿದಂತಹ ಸಾಮಾಜಿಕ ನ್ಯಾಯದ ವಿವಾದಾಂಶಗಳು, ಗುಜರಾತಿನ ಬುಡಕಟ್ಟು ಮತ್ತು ಪರಿಶಿಷ್ಟ ವರ್ಗಗಳು, ನೈಸರ್ಗಿಕ ಪ್ರಕೋಪಗಳು ಇವುಗಳತ್ತ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ.

**ಭಾರತೀಯ ಶಿಕ್ಷಣ ಸಂಸ್ಥೆ – ಪುಣೆ (IIE) ಮಹಾರಾಷ್ಟ್ರ**

ಈ ಸಂಸ್ಥೆಯು ಶಿಕ್ಷಣದ ವಿಚಾರಗಳು ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಶೇಷ ಪರಿಣತಿಯನ್ನು ಪಡೆದಿದೆ. ಈ ಸಂಸ್ಥೆಯು ಮಾಧ್ಯಮ ಸಂವಹನ ಮಹಿಳೆಯ ಮೇಲೆ ಬೀರಿರುವ ಪ್ರಭಾವ, ಕಲಿಕಾ ಮಟ್ಟಗಳು, ಮಾಹಿತಿಜಾಲ, ಸಾಂಸ್ಥಿಕ ಸಾಮರ್ಥ್ಯವರ್ಧನೆ(ಬಲವರ್ಧನೆ), ಶಾಲಾ ಶಿಕ್ಷಣಕ್ಕಾಗಿ ಕುಟುಂಬ ಮಾಡುವ ಖರ್ಚು, ಬಡವರನ್ನು ಶಿಕ್ಷಿತರನ್ನಾಗಿ ಮಾಡುವುದು, ತಾಂತ್ರಿಕ ಸಂಸ್ಥೆಗಳ ಪಾತ್ರ ಮತ್ತು ತರಬೇತಿ ಸಾಮಗ್ರಿಗಳ ಅಭಿವೃದ್ಧಿ ಇತ್ಯಾದಿಗಳನ್ನು ಕುರಿತಾದ ಹಲವಾರು ಅಧ್ಯಯನಗಳನ್ನು ಕೈಗೊಂಡಿದೆ.

**ಸಾಮಾಜಿಕ–ಆರ್ಥಿಕ ಬದಲಾವಣೆ ಸಂಸ್ಥೆ (ISEC) ಬೆಂಗಳೂರು**

ಈ ಸಂಸ್ಥೆಯು ಲಿಂಗಸಂಬಂಧಿ ಅಧ್ಯಯನ, ದಲಿತ ಅಧ್ಯಯನ ಹಾಗೂ ಸಾಂಸ್ಥಿಕ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಮೂರು ಅಂತರ್‌ಶಾಸ್ತ್ರೀಯ ಕೇಂದ್ರಗಳನ್ನು ಹೊಂದಿದೆ. ಗೃಹ ನಿರ್ಮಾಣ ನೀತಿಗಳು, ಬಳಕೆ ಮರದ ಆರ್ಥಿಕತೆ, ಆರೋಗ್ಯ ರಕ್ಷಣೆ, ಜೀವನದ ಚಕ್ರದಲ್ಲಿ ಮಹಿಳೆಯರ ಸಾಗುವಿಕೆ, ಕರ್ನಾಟಕದಲ್ಲಿ ಕೈಗಾರಿಕಾ ಸಾಮರ್ಥ್ಯ, ಗ್ರಾಮೀಣ ಜೀವನೋಪಾಯ ವ್ಯವಸ್ಥೆ ಮತ್ತು ಸುಸ್ಥಿರ ಸಂಪನ್ಮೂಲ ನಿರ್ವಹಣೆ, ಮಾತೃತ್ವ ಮತ್ತು ಮಕ್ಕಳ ಆರೋಗ್ಯ ಸೇವೆಗಳು, ಕೆರೆ ನೀರಾವರಿ ಇಳಿಕೆಗೆ ಕಾರಣಗಳು, ಜಲಾನಯನ ಭೂಮಿ ಕುರಿತ ಯೋಜನೆಗಳ ಪರಿಣಾಮಕಾರಿತ್ವ ವಿಶ್ಲೇಷಣೆ, ನಗರ ತ್ಯಾಜ್ಯ ನಿರ್ವಹಣೆ, ದಲಿತರು ಮತ್ತು ಅವರ ಬಡತನದ ಗ್ರಹಿಕೆ, ಮಹಿಳೆಯರ ಸಮಸ್ಯೆಗಳು ಮತ್ತು ತೃತೀಯ ವಿಶ್ವ ಹಾಗೂ ಮಧ್ಯ ಯೂರೋಪಿನ ಬಡಜನರು, ಪರಿಶಿಷ್ಟ ವರ್ಗ, ಜಾತಿಗಳ ಸಮಸ್ಯೆಗಳು ಇತ್ಯಾದಿಗಳನ್ನು ಕುರಿತಂತೆ ಐ.ಎಸ್.ಇ.ಸಿ ಸಂಸ್ಥೆಯು ಅಧ್ಯಯನ ಕೈಗೊಳ್ಳುತ್ತದೆ.

**ಕೈಗಾರಿಕಾ ಅಭಿವೃದ್ಧಿ ಅಧ್ಯಯನ ಸಂಸ್ಥೆ (ISID) ನವದೆಹಲಿ**

ಈ ಸಂಸ್ಥೆಯ ಅಧ್ಯಯನ ಕ್ಷೇತ್ರಗಳು ಇಂತಿವೆ: ಭಾರತದಲ್ಲಿ ಕೈಗಾರಿಕಾ ಬೆಳವಣಿಗೆ ಮತ್ತು ಬಾಹ್ಯ ಸಂಬಂಧಗಳು, ಆರ್ಥಿಕ ನೀತಿಗಳು ಮತ್ತು ಭಾರತದ ವಿಕಾಸ, ಭಾರತದಲ್ಲಿ ಜಾಹಿರಾತು ಮತ್ತು ಅನುಭೋಗ ಮಾದರಿಗಳು, ಕಿರು ವಲಯಕ್ಕೆ ಸಂಬಂಧಿಸಿದ ನೀತಿಗಳು, ಭಾರತ ಮತ್ತು ಫಿಲಿಫೈನ್ಸ್‌ಗಳಲ್ಲಿ ಅನಧಿಕೃತ ಹಿಡುವಳಿದಾರರ ಜಾಗತಿಕ ಹಂತಗಳು, ಕೃಷಿ ಮತ್ತು ಕೃಷಿ ಕೈಗಾರಿಕೆ ನಡುವಣ ವ್ಯವಹಾರ ಮತ್ತು ಭಾರತದ ಖಾಸಗಿ ಸಹಯೋಗಿ ವಲಯದ ಬೆಳವಣಿಗೆ. ಈ ಸಂಸ್ಥೆಯು ಭಾರತದಲ್ಲಿನ ಸಾಮಾಜಿಕ ವಿಜ್ಞಾನ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳು, ಟಿಪ್ಪಣಿಗಳು ಮತ್ತು ಇತರ ಪರಾಮರ್ಶ ಸಾಮಗ್ರಿಗಳ ಆನ್‌ಲೈನ್ ಸೂಚಿಯೊಂದನ್ನು ಸಿದ್ಧಪಡಿಸಿದೆ.

**ಅಭಿವೃದ್ಧಿ ಅಧ್ಯಯನ ಸಂಸ್ಥೆ (IDS) ಜಯಪುರ, ರಾಜಾಸ್ತಾನ**

ಈ ಸಂಸ್ಥೆ ನಡೆಸುವ ಸಂಶೋಧನಾ ಕಾರ್ಯಗಳು ಪ್ರಮುಖವಾಗಿ ರಾಜಾಸ್ಥಾನ ರಾಜ್ಯದ ಸಮಸ್ಯೆಗಳಿಗೆ ಸಂಬಂಧಿಸಿರುತ್ತವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಸ್ವಾಭಾವಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಪರಿಸರ, ಆರ್ಥಿಕ ನೀತಿಗಳು ಮತ್ತು ಕಾರ್ಯತಂತ್ರಗಳು, ಸಾಮಾಜಿಕ ನೀತಿಗಳು, ಆಡಳಿತ ಮತ್ತು ನಾಗರೀಕ ಸಮಾಜ, ನೀರಾವರಿ ನಿರ್ವಹಣೆ, ಮಹಿಳೆ ಮತ್ತು ಅಭಿವೃದ್ಧಿ, ಸರ್ಕಾರೇತರ ಸಂಸ್ಥೆಗಳ ಸಬಲೀಕರಣ, ರಾಜಾಸ್ಥಾನದಲ್ಲಿ ಜಲಮಾಲಿನ್ಯ, ಗ್ರಾಮೀಣ ಅಸಮತೆ, ಫಲವತ್ತತೆ, ವಲಸೆ ಮತ್ತು ಕೃಷಿ ಸುಸ್ಥಿತಿಪಾಲನೆ, ರಾಜಾಸ್ಥಾನದ ಆರ್ಥಿಕತೆ ಮತ್ತು ಸಮಾಜ.

**ಆರ್ಥಿಕ ವಿಕಾಸ ಸಂಸ್ಥೆ (IEG) ದೆಹಲಿ**

ಸೇವಾವಧಿ ಕಾನೂನುಗಳಲ್ಲಿ ಲಿಂಗ ಸಮಾನತೆ, ಶಾಲಾ ಆರೋಗ್ಯ ತಪಾಸಣಾ ಕಾರ್ಯಕ್ರಮ; ವೃದ್ಧಾಪ್ಯ ಮತ್ತು ತತ್ಸಂಬಂಧಿತ ಸಮಸ್ಯೆಗಳು; ಜೈವ ವೈವಿಧ್ಯತೆಯ ಆರ್ಥಿಕ ಮೌಲ್ಯಮಾಪನ; ಭಾರತದ ಬೃಹತ್ ಆರ್ಥಿಕ ಮಾಪನ ಮಾದರಿ; ನೈಸರ್ಗಿಕ ಸಂಪನ್ಮೂಲಗಳ ಲೆಕ್ಕವಿಡುವುದು; ಸ್ವಾಸ್ಥ್ಯ ಸುಭದ್ರತೆ; ಮೂಲಭೂತ ಸೌಕರ್ಯಗಳು ಮತ್ತು ತಯಾರಿಕೆಯ ಉತ್ಪಾದಕತೆ; ಗಂಗಾ ಕ್ರಿಯಾಯೋಜನೆಯ ಖರ್ಚು–ಪ್ರಾಯೋಜನೆಗಳ ವಿಶ್ಲೇಷಣೆ ಮತ್ತು ಭಾರತದಲ್ಲಿ ವಾಣಿಜ್ಯ ಬೆಳೆಗಳ ಸರಬರಾಜು ಕಾರ್ಯಗಳು– ಮಹಾರಾಷ್ಟ್ರದಲ್ಲಿ ಕಬ್ಬುಬೆಳೆ ಮತ್ತು ಪಂಜಾಬಿನಲ್ಲಿ ಅಕ್ಕಿಯ ಉದಾಹರಣೆ

**ಸಾರ್ವಜನಿಕ ಉದ್ಯಮ ಸಂಸ್ಥೆ (IPE) ಹೈದರಾಬಾದ್, ಆಂಧ್ರಪ್ರದೇಶ**

ಆಂಧ್ರಪ್ರದೇಶ ಸಾರ್ವಜನಿಕ ಉದ್ಯಮದ ಆರ್ಥಿಕ ನಿಷ್ಪಾದನೆ; ಜೈವತಾಂತ್ರಿಕತೆ, ಸಾರ್ವಜನಿಕ ನೀತಿ ನಿರ್ವಹಣೆ, ಸಾರ್ವಜನಿಕ ಉದ್ಯಮಗಳ ನಿರ್ದೇಶಕರ ಬೋರ್ಡ್‌ನ ಬದಲಾಗುತ್ತಿರುವ ಪಾತ್ರ; ಸಾರ್ವಜನಿಕ ಉದ್ಯಮಗಳಿಗೆ ಅವಶ್ಯವಿರುವ ವಿಕ್ರಯ ಮಾಹಿತಿ ವ್ಯವಸ್ಥೆ; ಮತ್ತು ಸಣ್ಣ ಕೃಷಿಕರಿಗೆ ಸಂಬಂಧಿಸಿದಂತೆ ಭಾರತದಲ್ಲಿ ಸಸ್ಯ ಜೈವ ತಂತ್ರಜ್ಞಾನದ ಸ್ಥಿತಿಗತಿಗಳು – ಇವುಗಳ ಬಗ್ಗೆ ಈ ಸಂಸ್ಥೆಯು ಅಧ್ಯಯನಗಳನ್ನು ಕೈಗೊಳ್ಳುವುದರಲ್ಲಿ ನಿರತವಾಗಿದೆ.

Digitised by Bharatavani, CIIL

**ಒಮಿಯೊ ಕುಮಾರ್‌ದಾಸ್ ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ ಸಂಸ್ಥೆ (IKDISCS) ಗೌಹಾಟಿ, ಅಸ್ಸಾಂ**

ಅಸ್ಸಾಂ ಮತ್ತು ಇತರ ನೆರೆ ರಾಜ್ಯಗಳ ಸಮಸ್ಯೆಗಳನ್ನು ಕುರಿತಾದ ಸಂಶೋಧನೆಗಳನ್ನು ಪ್ರೋತ್ಸಾಹಿಸಲು ಸ್ಥಾಪನೆಗೊಂಡ ಈ ಸಂಸ್ಥೆಯು ಈಶಾನ್ಯ ಭಾರತದ ಆರ್ಥಿಕ ಇತಿಹಾಸ; ಈಶಾನ್ಯ ಪ್ರದೇಶಗಳಿಗಾಗಿ ಹೊಸ ಪ್ರಯತ್ನಗಳು; ಮಹಿಳೆಯರಿಗಾಗಿ ನಿಹಿತಾರ್ಥಗಳು; ಪ್ರದೇಶದಲ್ಲಿ ಸಹಕಾರಿ ಅಭಿವೃದ್ಧಿ; ಜನಪ್ರಿಯ ಸಹಭಾಗಿತ್ವವನ್ನು ಕುರಿತಾದ ಸಾಪೇಕ್ಷಗಳು; ಈಶಾನ್ಯ ಭಾರತದ ಗುಡ್ಡಗಾಡು ಜನಾಂಗದ ಭೂಸಂಬಂಧಗಳು ಮತ್ತು ಕೃಷಿ ಆಚರಣೆಗಳು; ಮತ್ತು ಅಸ್ಸಾಂನಲ್ಲಿ ಸಂಪನ್ಮೂಲ ನಿರ್ವಹಣೆ ಇವೇ ಮುಂತಾದ ವಿವಾದಾಂಶಗಳನ್ನು ಕುರಿತು ಸಂಶೋಧನೆ ಮತ್ತು ಪ್ರಶಿಕ್ಷಣ ಕಾರ್ಯದಲ್ಲಿ ನಿರತವಾಗಿದೆ.

**ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆ (MIDS) ಚೆನ್ನೈ, ತಮಿಳುನಾಡು**

ಸಂಸ್ಥೆಯು ಈ ಮುಂದಿನ ಕ್ಷೇತ್ರಗಳಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಂಡಿದೆ: ತಮಿಳುನಾಡಿನ ನೀರಾವರಿಯ ವೆಚ್ಚ ಮತ್ತು ಉತ್ಪಾದಕತೆ; ತಮಿಳುನಾಡು ಮತ್ತು ರಾಜಾಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣ; ಹಣಕಾಸು ಹಸಿವುರಹಿತ ಪ್ರವೇಶ ಕಾರ್ಯಕ್ರಮಕ್ಕಾಗಿ ಆಯೋಜನೆ; ತಮಿಳುನಾಡಿನ ನಗರ ಪರಿಸರ; ನೀರಾವರಿಯ ನೆರವು; ಮಹಿಳೆ ಮತ್ತು ಉದ್ಯೋಗ; ಜಲಸಂಪನ್ಮೂಲದ ಲೆಕ್ಕವಿಡುವುದು; ತಮಿಳುನಾಡಿನಲ್ಲಿ ತಾಯಂದಿರ ಆರೋಗ್ಯ; ಮತ್ತು ಸ್ಥಳೀಯ ನೀರು ಸರಬರಾಜಿನ ಸಾಧ್ಯತೆಗಳು.

**ನಾಭಾಕೃಷ್ಣ ಚೌಧರಿ ಅಭಿವೃದ್ಧಿ ಅಧ್ಯಯನ ಕೇಂದ್ರ (NCCDS) ಭುವನೇಶ್ವರ್, ಒಡಿಶಾ**

ಬಾಲಕಾರ್ಮಿಕರ, ವೃದ್ಧರ, ಮಹಿಳೆಯರ ಮತ್ತು ಜೀತಕೂಲಿಯವರ ಸಮಸ್ಯೆಗಳು; ಅದಿರು ಆರ್ಥಿಕತೆ, ಹಸಿವಿನಿಂದ ಮುಕ್ತ; ಬೀದಿ ಮಕ್ಕಳು; ಕೃಷಿ ಕೈಗಾರಿಕೆ ಮತ್ತು ಗ್ರಾಮೀಣ ಅಭಿವೃದ್ಧಿ; ಗ್ರಾಮ–ನಗರ ವಲಸೆಯ ಚಾಲಕಶಕ್ತಿ; ರೈತಕೃಷಿ ಮತ್ತು ಪಾಲುಗೇಣಿಗೆ ಈ ವಿಷಯಗಳು ಈ ಸಂಸ್ಥೆಯು ಕೈಗೊಂಡ ಅಧ್ಯಯನಗಳ ವ್ಯಾಪ್ತಿಯಲ್ಲಿವೆ.

**ಸರದಾರ್ ಪಟೇಲ್ ಆರ್ಥಿಕ ಮತ್ತು ಸಾಮಾಜಿಕ ಸಂಶೋಧನಾ ಸಂಸ್ಥೆ (SPIESR) ಅಹಮದಾಬಾದ್, ಗುಜರಾತ್**

ಸಂಸ್ಥೆಯು ನೀಡಿರುವ ಸಂಶೋಧನಾ ಕೊಡುಗೆಗಳು ಒಳಗೊಳ್ಳುವ ವಿಷಯಗಳೆಂದರೆ – ಗುಜರಾತ್ ಅಭಿವೃದ್ಧಿ ಯೋಜನೆ; ವಿದ್ಯುಚ್ಛಕ್ತಿ ವಲಯಕ್ಕೆ ಸಂಬಂಧಿಸಿದಂತೆ ವಿಶೇಷ ಗಮನವುಳ್ಳ ನೀತಿ ಬದಲಾವಣೆಯ ಕಲ್ಯಾಣಕಾರಿ ಪರಿಣಾಮಗಳು; ಗುಜರಾತಿನಲ್ಲಿ ಪುರಸಭೆಯ ಖರ್ಚನ್ನು ನಿರ್ಣಯಿಸುವ ಅಂಶಗಳು; ಶಿಕ್ಷಣ ಮತ್ತು ಮಹಿಳಾ ಸಬಲೀಕರಣ; ಗಿರಿಜನರ ಪ್ರದೇಶಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟ; ಗುಜರಾತಿನಲ್ಲಿ ಶಿಕ್ಷಣಕ್ಕೆ ಧನಸಹಾಯ; ಗುಜರಾತಿನಲ್ಲಿ ನೇರ ಎನ್.ಆರ್.ಐ ಬಂಡವಾಳದ ಮೂಲಕ ಕೈಗಾರಿಕಾ ಅಭಿವೃದ್ಧಿಯ ಪರಿಪ್ರೇಕ್ಷ್ಯ; ಅಭಿವೃದ್ಧಿಯ ಸ್ಥಳ ಸಂಬಂಧಿ ಸಂರಚನೆ; ಮತ್ತು ಗುಜರಾತಿನ ಅಭಿವೃದ್ಧಿಯಲ್ಲಿ ಆರ್ಥಿಕ ಸಂಸ್ಥೆಗಳ ಪಾತ್ರ.

**ಮಧ್ಯಪ್ರದೇಶ ಸಾಮಾಜಿಕ ವಿಜ್ಞಾನ ಸಂಶೋಧನಾ ಸಂಸ್ಥೆ (MPISSR) ಉಜ್ಜಯಿನಿ, ಮಧ್ಯಪ್ರದೇಶ**

ಈ ಸಂಸ್ಥೆಯು ಮಧ್ಯಪ್ರದೇಶದ ಹಾಗೂ ನೆರೆಹೊರೆಯ ಪ್ರದೇಶಗಳ ಅಭಿವೃದ್ಧಿ ಸಮಸ್ಯೆಗಳನ್ನು ಕುರಿತಾದ ಅಂತರ್‌ಶಾಸ್ತ್ರೀಯ ಸಂಶೋಧನೆಯನ್ನು ಕೈಗೊಳ್ಳುತ್ತದೆ. ಹಿಂದಿನ ಸಂಶೋಧನೆಗಳು ಉಳಿಸಿಬೆಳೆಸಬಲ್ಲ ಅಭಿವೃದ್ಧಿ, ಪಂಚಾಯಿತಿರಾಜ್ ಸಂಸ್ಥೆಗಳು, ಪ್ರಜಾಸತಾತ್ಮಕ ವಿಕೇಂದ್ರಿಕರಣ, ಗಿರಿಜನರ ನೇತೃತ್ವ ಮತ್ತು ಬಡತನ ನಿರ್ಮೂಲನ ಇತ್ಯಾದಿಗಳ ಮೇಲೆ ಗಮನವನ್ನು ಕೇಂದ್ರೀಕರಿಸಿವೆ.

**ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ರಾಷ್ಟ್ರೀಯ ಸಾಮಾಜಿಕ ವಿಜ್ಞಾನ ಸಂಸ್ಥೆ, ಮ್ಹಾವೊ, ಮಧ್ಯಪ್ರದೇಶ**

ಈ ಸಂಸ್ಥೆಯ ಮುಖ್ಯ ಸಂಶೋಧನಾ ಚಟುವಟಿಕೆಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತ ಇತರ ಹಿಂದುಳಿದ ವರ್ಗಗಳನ್ನು ಕುರಿತದ್ದಾಗಿದೆ. ಸಂಸ್ಥೆಯು ಕೈಗೊಳ್ಳುವ ಸಂಶೋಧನಾ ವಿಷಯಗಳೆಂದರೆ ಸಾಮಾಜಿಕ ಅರಣ್ಯಶಾಸ್ತ್ರ, ಇತರ ಹಿಂದುಳಿದ ವರ್ಗಗಳ (OBC)ನ್ನು ಗುರುತಿಸುವುದು, ಪರಿಶಿಷ್ಟ ಜಾತಿಗಳ ಮೇಲಿನ ದೌರ್ಜನ್ಯ, ಸ್ತ್ರೀಶಿಶು ಹತ್ಯೆ, ಅಸ್ಪೃಶ್ಯತೆ, ಪರಿಶಿಷ್ಟ ಜಾತಿಗಳ ಏಕೀಕರಣದ ಮಟ್ಟ ಮತ್ತು ಬಡತನ ನಿರ್ಮೂಲನದಲ್ಲಿ IRDPಯ ಪಾತ್ರ.

**ಮೂಲ: ಆರ್.ಪಿ. ಮಿಶ್ರಾ**
**ಅನುವಾದ: ಡಾ. ಷಣ್ಮುಖ**

## ಅಭಿವ್ಯಕ್ತಿ ಸ್ವಾತಂತ್ರ್ಯ

ಮಾನವನು ಬುದ್ಧಿವಂತ ಹಾಗೂ ಸಂಘಜೀವಿ. ಅವನು ಎಂದಿಗೂ ಒಬ್ಬಂಟಿಯಾಗಿರಲಾರ. ಸಮಾಜದಲ್ಲಿನ ಇತರ ಜೀವಿಗಳಿಗಿಂತ ವಿಭಿನ್ನ ರೀತಿಯಲ್ಲಿ ಜೀವನ ಸಾಗಿಸುತ್ತಾ ಬಂದಿದ್ದಾನೆ. ಸಮಾಜದಲ್ಲಿ ಸಂತೋಷವಾಗಿ ಜೀವನ ಸಾಗಿಸಲು ಹಾಗೂ ವ್ಯವಹರಿಸಲು ಇತರರೊಂದಿಗೆ ಮಾತನಾಡಬೇಕಾಗುತ್ತದೆ. ಅಂತೆಯೇ ತನ್ನ ಅನಿಸಿಕೆ ಅಥವಾ ಭಾವನೆಗಳನ್ನು ಹೆಚ್ಚು ಕಾಲ ಇತರರೊಂದಿಗೆ ಹಂಚಿಕೊಳ್ಳದೆ ಇರಲು ಆಗುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಸಹಜ ಹಾಗೂ ಅನಿವಾರ್ಯ. ಅಭಿವ್ಯಕ್ತಿ ಸ್ವಾತಂತ್ರ್ಯವು ಯಾರನ್ನೂ ಹೇಳಿ ಕೇಳಿ ಬರುವಂತಹದ್ದಲ್ಲ. ಸ್ವಯಂಪ್ರೇರಣೆಯಿಂದ ತನ್ನಷ್ಟಕ್ಕೆ ತಾನೇ ತನ್ನ ಸುತ್ತಣ ಸಾಮಾಜಿಕ ಸಂದರ್ಭದೊಂದಿಗೆ ಸಂವಾದವನ್ನು ಏರ್ಪಡಿಸುವ ಸಲುವಾಗಿ ಸಂಭವಿಸುವ ಪ್ರಕ್ರಿಯೆ. ಸಂವಹನ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವ

Digitised by Bharatavani, CIIL

ಸ್ವಾತಂತ್ರ್ಯವಿದೆ. ಇದನ್ನೇ ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವರು. ಸಾಹಿತ್ಯ ಅನ್ನುವುದೇ ಒಂದು ರೀತಿಯಲ್ಲಿ ಕವಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಒಂದು ಅವಿಷ್ಕಾರ. ಈ ಅಭಿವ್ಯಕ್ತಿ ಸ್ವಾತಂತ್ರ್ಯವೇ ಸಾಹಿತಿಯ ಬರಹಕ್ಕೊಂದು ವ್ಯಕ್ತಿ ವಿಶಿಷ್ಟತೆಯನ್ನು, ನವನವೀನತೆಯನ್ನು ತಂದುಕೊಡುವ ಸತ್ವವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ರೀತಿಯಲ್ಲಿ ವಿಚಾರಗಳನ್ನು ವ್ಯಕ್ತ ಪಡಿಸಬಹುದು. ಕಲಾವಿದನೊಬ್ಬ ತನ್ನ ಚಿತ್ರಕಲೆಯ ಮೂಲಕ ತನ್ನ ಭಾವನೆಗಳನ್ನು ವ್ಯಕ್ತಪಡಿಸಬಹುದು. ಕವಿಯೊಬ್ಬ ತನ್ನ ಲೇಖನದಲ್ಲಿ ತನ್ನ ಭಾವನೆಯನ್ನು ವ್ಯಕ್ತಪಡಿಸಬಹುದು. ಹಾಗೆಯೇ ಭಾಷಣಕಾರನು ತನ್ನ ವಾಕ್ ಚಾತುರ್ಯದಿಂದ ಜನ ಸಮೂಹವನ್ನು ತನ್ನ ವಿಚಾರದೆಡೆಗೆ ಸೆಳೆಯಬಹುದು.

"ಮಾತು ಬೆಳ್ಳಿ, ಮೌನ ಬಂಗಾರ" ಎಂಬ ಗಾದೆಯ ಅರ್ಥ, ಮಾತು ಮಿತವಾಗಿರಬೇಕು ಹಾಗೂ ಹಿತವಾಗಿರಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯವಿದೆಯೆಂದು ಬಾಯಿಗೆ ಬಂದಂತೆ ಹರಟೆಹೊಡೆದರೆ ವ್ಯಕ್ತಿಯು ತನ್ನ ವ್ಯಕ್ತಿತ್ವಕ್ಕೆ ತಾನೆ ಧಕ್ಕೆ ಉಂಟುಮಾಡಿಕೊಂಡಂತೆ. ಆದ್ದರಿಂದ ಅವಶ್ಯಕತೆಗೆ ಅನುಗುಣವಾಗಿ ಮಾನವನು ಸಂವಹನ ನಡೆಸಿದರೆ ಸಮಾಜದಲ್ಲಿ ಗೌರವವನ್ನು ಪಡೆಯುತ್ತಾನೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಭಾವನೆಗಳನ್ನು ವ್ಯಕ್ತ ಪಡಿಸುವ ಸ್ವಾತಂತ್ರ್ಯವಿದೆ. ಭಾರತ ಸಂವಿಧಾನದ 19ನೇ (ಎ) ವಿಧಿಯ ಪ್ರಕಾರ ಪ್ರತಿಯೊಬ್ಬ ಪ್ರಜೆಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಎಷ್ಟೋ ಬಾರಿ ನಮಗೆ ಅನಿಸಿದ್ದನ್ನು ನೇರವಾಗಿ ಹೇಳಲು ಆಗದಿರಬಹುದು. ಏಕೆಂದರೆ ನಾವು ಮಾತನಾಡುವ ವಿಷಯ ಇತರರ ಧಾರ್ಮಿಕ ನಂಬಿಕೆಗೆ, ಸಾಮಾಜಿಕತೆಗೆ ಅಥವಾ ನೈತಿಕತೆಗೆ ಧಕ್ಕೆ ಉಂಟು ಮಾಡಬಹುದು. ಇಂತಹ ಸಮಯಗಳಲ್ಲಿ ನಮ್ಮ "ಅಭಿವ್ಯಕ್ತಿ ಸ್ವಾತಂತ್ರ್ಯ" ಪ್ರಶ್ನಿತವಾಗುತ್ತದೆ ಹಾಗೂ ಇಂತಹ ಸಂದರ್ಭಗಳಲ್ಲಿ ನಮಗೆ ಕಸಿವಿಸಿಯುಂಟಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೇನು ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳುತ್ತೇವೆ. ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವಾಗ ನಮ್ಮ ಭಾವನೆಗಳನ್ನು ಇತರರೊಂದಿಗೆ ವ್ಯಕ್ತಪಡಿಸುವಾಗ ಇತರರ ನೈತಿಕತೆಗೆ ಸ್ವಾಭಿಮಾನಕ್ಕೆ ಧಕ್ಕೆಯುಂಟು ಮಾಡದಂತೆ ಎಚ್ಚರಿಕೆಯಿಂದ ಸಂವಹನ ನಡೆಸುವುದಾಗಿದೆ. ಸಂವಹನ ಕ್ರಿಯೆಯಲ್ಲಿ ಮಾತು ಇತರರ ನಡುವಿನ ಅಂತರ್ ಪ್ರಕ್ರಿಯೆಯಲ್ಲಿ ಹಿತವಾಗಿರಬೇಕು. ಇದನ್ನೇ ಬಸವಣ್ಣನವರ ಮಾತಿನಲ್ಲಿ ಹೇಳುವುದಾದರೆ–

**ನುಡಿದರೆ ಮುತ್ತಿನ ಹಾರದಂತಿರಬೇಕು**

**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**

**ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು**

**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು**

**ನುಡಿಯೊಳಗಾಗಿ ನಡೆಯದಿದ್ದರೆ**

**ಕೂಡಲಸಂಗಮದೇವನೆಂತೊಲಿವನಯ್ಯ**

ಆಧ್ಯಾತ್ಮನಿಷ್ಠ ಹಾಗೂ ಸೌಂದರ್ಯನಿಷ್ಠ ರಚನೆಗಳ ಮೂಲಕ ಸಮಕಾಲೀನತೆಯನ್ನು ಮೀರಿನಿಲ್ಲುವ ಬರಹಗಾರರಿಗೆ "ಅಭಿವ್ಯಕ್ತಿ ಸ್ವಾತಂತ್ರ್ಯ"ದ ನಿರ್ಬಂಧಗಳು ಅಷ್ಟಾಗಿ ಒದಗಲಾರವು. ಆದರೆ ಪರಂಪರಾನುಗತವಾದ ಚಾರಿತ್ರಿಕ ಸ್ವರೂಪದ ಸಿದ್ಧವಸ್ತುಗಳನ್ನು ಹಾಗೂ ಅಂತಹ ಸಂಗತಿಗಳನ್ನು ಕವಿಯೊಬ್ಬ ತನ್ನ ಸಮಕಾಲೀನತೆಯಲ್ಲಿ, ತನಗೆ ಸರಿಕಂಡಂತೆ ಬದಲಾಯಿಸಿ ನಿರ್ವಹಿಸಿದಾಗ, ಅವನು ಕೃತಿಯಲ್ಲಿ ಮಾಡಿಕೊಂಡಂತಹ ಬದಲಾವಣೆಗಳು, ಅವನ ಕಾಲದ ಜನರ ಬಹುಕಾಲದ ನಂಬಿಕೆಗೆ ಧಕ್ಕೆ ತರುವಂತೆಯೋ, ಅವರು ಪೂಜ್ಯರೆಂದು ಭಾವಿಸಿದ ವ್ಯಕ್ತಿಗಳಿಗೆ ಅಪಚಾರ ಮಾಡಿದಂತೆ ಭಾಸವಾದಾಗ, ಉಂಟಾಗುವ ಅಲ್ಲೋಲ ಕಲ್ಲೋಲಗಳು ಕವಿಯ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಕಷ್ಟವನ್ನು ಒಡ್ಡುತ್ತವೆ. ಅಂದರೆ, ಅವನು ಸಂಪೂರ್ಣವಾಗಿ ಮೂಲವಸ್ತುವಿನ ಚರಿತ್ರೆಗೆ ಬದ್ಧವಾಗಿರಬೇಕೇ? ಅದನ್ನು ತನ್ನ ಕಾಲಕ್ಕೆ ಅಗತ್ಯವಾದ ರೀತಿಯಲ್ಲಿ ಬದಲಾಯಿಸುವ ಸ್ವಾತಂತ್ರ್ಯ ಅವನಿಗಿಲ್ಲವೆ? ಎನ್ನುವ ಪ್ರಶ್ನೆಗಳು ಮೂಡುವುದು ಸಹಜ.

ಇಂದಿನ ಜಗತ್ತಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪರಿಣಾಮಕಾರಿಯಾಗಿ ಬಳಸಲು ಇರುವ ಪ್ರಮುಖ ಸಾಧನವೆಂದರೆ ಪತ್ರಿಕೋದ್ಯಮ. ಇಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಉತ್ತಮ ಅವಕಾಶವಿದೆ. ಓದುಗನಿಗೆ ಮಾಹಿತಿಯನ್ನು ಪರಿಣಾಮಕಾರಿಯಾಗಿ ತಲುಪಿಸುವ, ಯಾವುದೇ ಮಾಹಿತಿಯ ಬಗ್ಗೆ ಸರಿಯಾದ ಜಾಗೃತಿ ಮೂಡಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಹಾಗೆಂದರೆ ಇಂತಹ ಮಾಧ್ಯಮದಲ್ಲಿ ಕೆಲಸ ನಿರ್ವಹಿಸುವಾಗ ಸಾಕಷ್ಟು ಎಚ್ಚರಿಕೆಯಿಂದ ಸರಿಯಾದ ಮಾಹಿತಿಯನ್ನಷ್ಟೇ ಜನ ಸಾಮಾನ್ಯರಿಗೆ ತಲುಪಿಸಬೇಕು.

ಒಟ್ಟಾರೆ ಹೇಳುವುದಾದರೆ ನಮ್ಮ ಮಾತು ನಮ್ಮ ವ್ಯಕ್ತಿತ್ವಕ್ಕೆ ಶೋಭೆ ತರುವಂತಿರಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸರಿಯಾಗಿ ಅರಿತುಕೊಂಡು ಸಮಾಜದ ಯಾವುದೇ ವ್ಯಕ್ತಿಯ ನೈತಿಕತೆಗೆ ಕುತ್ತು ತರದಂತೆ ಎಲ್ಲರ ಭಾವನೆಗಳನ್ನು ಅರಿತು ಎಲ್ಲರೊಡನೆ ಸೌಜನ್ಯದಿಂದ ಬೆರೆತು ಎಲ್ಲರ ಒಳಿತಿಗಾಗಿ ಜೀವನ ನಡೆಸುವುದು ಅರ್ಥಪೂರ್ಣ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಸ್ವಾರ್ಥವನ್ನು ಮರೆತು ಮುಕ್ತ ಮನಸ್ಸಿನಿಂದ ಇತರರೊಂದಿಗೆ ಸೌಜನ್ಯದಿಂದ ಸಂವಹನ ನಡೆಸಿದಾಗ ಎಲ್ಲೆಲ್ಲೂ ಸೌಹಾರ್ದತೆ ಮತ್ತು ಸಮಾನತೆಯನ್ನು ಕಾಣಬಹುದು.

**–ಶ್ರೀನಿವಾಸ್ ಕೆ.ಎಸ್.**

## ಅಭಿಸಾಮರ್ಥ್ಯಗಳ ಅಳತೆ

ಅಭಿಸಾಮರ್ಥ್ಯದ (Attitude) ಪರಿಕಲ್ಪನೆಯನ್ನು ನಿಖರವಾಗಿ ವ್ಯಾಖ್ಯಾನಿಸುವುದು ಸ್ವಲ್ಪ ಕಷ್ಟ. ಏಕೆಂದರೆ ಅಭಿಸಾಮರ್ಥ್ಯಕ್ಕೂ, ಸಾಮರ್ಥ್ಯಕ್ಕೂ (Ability), ಸಾಮಾನ್ಯ ಬುದ್ಧಿಶಕ್ತಿಗೂ ಸಂಬಂಧವಿದೆ. ಸ್ಪಿಯರ್‌ಮನ್ ಬುದ್ಧಿಶಕ್ತಿಯ ಸ್ವರೂಪದ ತನ್ನ ಸಿದ್ಧಾಂತದಲ್ಲಿ ಸಾಮಾನ್ಯಕಾರಕ ('g' factor) ಮತ್ತು ವಿಶೇಷಕಾರಕ ('s' factor) ಎಂಬ ಎರಡು ಕಾರಕಗಳನ್ನು ಗುರ್ತಿಸಿದ. ಸಾಮಾನ್ಯಕಾರಕ

Digitised by Bharatavani, CIIL

ಎಲ್ಲ ಬೌದ್ಧಿಕ ಚಟುವಟಿಕೆಗಳಿಗೆ ಸಾಮಾನ್ಯವಾದ ಅಂಶವೆಂದೂ, ವಿಶೇಷಕಾರಕಗಳು ಅನೇಕವಾಗಿದ್ದು ನಿರ್ದಿಷ್ಟ ಬೌದ್ಧಿಕ ಸಾಮರ್ಥ್ಯಗಳನ್ನು ಸೂಚಿಸುತ್ತವೆ ಎಂದು ಅವನ ಅಭಿಪ್ರಾಯವಾಗಿತ್ತು. ಈ ವಿಶೇಷಕಾರಕಗಳನ್ನೇ ನಂತರದಲ್ಲಿ ಅಭಿಸಾಮರ್ಥ್ಯಗಳು ಎಂದು ಗುರ್ತಿಸಲಾಯಿತು. ಯಾಂತ್ರಿಕ ಚಟುವಟಿಕೆಗಳಾದ ಕಲಾಸೃಷ್ಟಿ, ಸಂಗೀತ, ಲೆಕ್ಕಾಚಾರ ಮುಂತಾದ ನಿರ್ದಿಷ್ಟ ಬೌದ್ಧಿಕ ಚಟುವಟಿಕೆಗಳಲ್ಲಿ ಕೆಲವು ವ್ಯಕ್ತಿಗಳು ಬೇರೆಯವರಿಗಿಂತ ಹೆಚ್ಚಿನ ದಕ್ಷತೆ ತೋರಿಸುವುದು ಕಂಡುಬರುತ್ತದೆ. ಅಂದರೆ ಅಂಥ ವ್ಯಕ್ತಿಗಳು ಆಯಾ ಚಟುವಟಿಕೆಗಳ ಅಭಿಸಾಮರ್ಥ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುತ್ತಾರೆ ಎಂದು ಅರ್ಥೈಸಲಾಗುತ್ತದೆ.

ಅಭಿಸಾಮರ್ಥ್ಯಗಳು ಅನುವಂಶೀಯವಾಗಿ ಕೆಲವು ವ್ಯಕ್ತಿಗಳಿಗೆ ಬರುತ್ತವೆಯೆ ಇಲ್ಲವೆ ಎನ್ನುವುದರ ಬಗ್ಗೆ ಎರಡು ನಿಲುವುಗಳಿವೆ. ಅಭಿಸಾಮರ್ಥ್ಯಗಳಿಂದ ಅನುವಂಶೀಯತೆಯ ಪಾತ್ರವನ್ನು ಸಂಪೂರ್ಣವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಕೆಲವು ದಶಕಗಳ ಹಿಂದೆ ಅಭಿಸಾಮರ್ಥ್ಯಗಳು ಕೆಲವೇ ವ್ಯಕ್ತಿಗಳಲ್ಲಿ ಅನುವಂಶೀಯವಾಗಿ ಬರುತ್ತವೆ ಎಂದು ನಂಬಲಾಗಿತ್ತು. ಆದರೆ ಆ ನಿಲುವು ಈಗ ಬದಲಾಗಿದೆ. ಕೆಲವು ವ್ಯಕ್ತಿಗಳಲ್ಲಿ ಅಭಿಸಾಮರ್ಥ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದರೂ ಇತರ ವ್ಯಕ್ತಿಗಳಲ್ಲಿ ಅವು ಇರುವುದೇ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲಾ ವ್ಯಕ್ತಿಗಳಲ್ಲೂ ಎಲ್ಲಾ ಅಭಿಸಾಮರ್ಥ್ಯಗಳು ಸ್ವಲ್ಪ ಪ್ರಮಾಣದಲ್ಲಾದರೂ ಇರುತ್ತವೆ. ಅವುಗಳನ್ನು ಗುರ್ತಿಸುತ್ತ ತರಬೇತಿಯಿಂದ ಅವುಗಳನ್ನು ಬೆಳೆಸುವುದು ಮುಖ್ಯ ಎನ್ನುವುದು ಇತ್ತೀಚಿನ ನಿಲುವಾಗಿದೆ.

**ಅಭಿಸಾಮರ್ಥ್ಯಗಳ ಕೆಲವು ಪರಿಭಾಷೆಗಳು ಈ ಕೆಳಗಿನಂತಿವೆ–**

ಫ್ರೀಮನ್ನನ ಪ್ರಕಾರ, "ತರಬೇತಿಯೊಂದಿಗೆ ಕೆಲವು ನಿರ್ದಿಷ್ಟ ಜ್ಞಾನಾಂಶಗಳನ್ನು, ಕೌಶಲವನ್ನು, ಅಥವಾ ಭಾಷೆಯನ್ನು ಮಾತನಾಡುವ ಸಾಮರ್ಥ್ಯ, ಸಂಗೀತಗಾರನಾಗುವುದು, ಯಾಂತ್ರಿಕ ಕಾರ್ಯವನ್ನು ಮಾಡುವುದು ಮುಂತಾದ ಸಂಘಟಿತ ಅನುಕ್ರಿಯೆಗಳನ್ನು ಆರ್ಜಿಸುವ ಸಾಮರ್ಥ್ಯದ ಸೂಚಕಗಳಾದ ಲಕ್ಷಣಗಳ ಜೋಡಣೆಯನ್ನು ಅಭಿಸಾಮರ್ಥ್ಯ ಎಂದು ಹೇಳಲಾಗುತ್ತದೆ.

ಬಿಂಗ್‌ಹ್ಯಾಂನ ಪರಿಭಾಷೆ ಹೀಗಿದೆ– "ಒಂದು ನಿರ್ದಿಷ್ಟ ವಿಧದ ಪರಿಸ್ಥಿತಿಯಲ್ಲಿ– ಉದ್ಯೋಗ, ಶಾಲೆ ಇತ್ಯಾದಿ, ತರಬೇತಿಯೊಂದಿಗೆ ವ್ಯಕ್ತಿಯ ಕಾರ್ಯ ಸಫಲತೆಯ ಸಂಭಾವ್ಯತೆಯ ಪ್ರಮಾಣವೇ ಅಭಿಸಾಮರ್ಥ್ಯ".

ಟ್ರ್ಯಾಕ್ಸರ್, "ಒಬ್ಬ ವ್ಯಕ್ತಿ ಸೂಕ್ತ ತರಬೇತಿಯೊಂದಿಗೆ ಕೆಲವು ಜ್ಞಾನಾಂಶಗಳು ಅಥವಾ ನಿರ್ದಿಷ್ಟ ಕೌಶಲ್ಯಗಳನ್ನು ಪಡೆದುಕೊಳ್ಳಬಹುದಾದ ಸಂಭಾವ್ಯತೆಯನ್ನು ಸೂಚಿಸುವ ಸ್ಥಿತಿ ಅಥವಾ ಲಕ್ಷಣ ಅಥವಾ ಲಕ್ಷಣಗಳ ಸಮೂಹವೇ ಅಭಿಸಾಮರ್ಥ್ಯ" ಎಂದು ಪರಿಭಾಷಿಸಿದ್ದಾನೆ.

ಮನ್. ಎನ್.ಎಲ್.ನ ಪ್ರಕಾರ– "ಸಂಗೀತ, ಗಣಿತ ಅಥವಾ ಯಂತ್ರಶಾಸ್ತ್ರ ಮುಂತಾದ ನಿರ್ದಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಹಜವಾಗಿ ಕಲಿತುಕೊಳ್ಳುವ ಮತ್ತು ಅವುಗಳಲ್ಲಿ ಹೆಚ್ಚಿನ ಮಟ್ಟದ ಕುಶಲತೆಯನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ಅಭಿಸಾಮರ್ಥ್ಯ ಎಂದು ಹೇಳಲಾಗುತ್ತದೆ"

ಮೇಲಿನ ಪರಿಭಾಷೆಗಳಿಂದ ಅಭಿಸಾಮರ್ಥ್ಯ ನಿರ್ದಿಷ್ಟ ಕ್ಷೇತ್ರದಲ್ಲಿ ಪರಿಣತಿಯನ್ನು ಸಹಜವಾಗಿ ಪಡೆದುಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಸೂಕ್ತ ತರಬೇತಿಯನ್ನು ಕೊಟ್ಟಲ್ಲಿ ವ್ಯಕ್ತಿ ನಿರ್ದಿಷ್ಟ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಬಲ್ಲನೆಂಬುದನ್ನು ಅಭಿಸಾಮರ್ಥ್ಯ ಸೂಚಿಸುತ್ತದೆ.

**ಅಭಿಸಾಮರ್ಥ್ಯ ಮತ್ತು ಬುದ್ಧಿಶಕ್ತಿ**

ಅಭಿಸಾಮರ್ಥ್ಯಕ್ಕೂ ಬುದ್ಧಿಶಕ್ತಿಗೂ ವ್ಯತ್ಯಾಸವಿದೆ. ಬುದ್ಧಿಶಕ್ತಿ ವ್ಯಕ್ತಿಯ ಸಾಮಾನ್ಯ ಬೌದ್ಧಿಕ ಕ್ರಿಯೆಯ ಸಾಮರ್ಥ್ಯವನ್ನು ಸೂಚಿಸಿದರೆ, ಅಭಿಸಾಮರ್ಥ್ಯ ನಿರ್ದಿಷ್ಟ ಬೌದ್ಧಿಕ ಕ್ರಿಯೆಯಲ್ಲಿ ವ್ಯಕ್ತಿಯ ವಿಶಿಷ್ಟ ಸಾಮರ್ಥ್ಯವನ್ನು ಸೂಚಿಸುತ್ತದೆ. ಸಾಮಾನ್ಯ ಬುದ್ಧಿಶಕ್ತಿ ಎಲ್ಲಾ ವ್ಯಕ್ತಿಗಳಲ್ಲೂ ಬೇರೆ ಬೇರೆ ಪ್ರಮಾಣದಲ್ಲಿ ಇರುತ್ತದೆ. ಆದರೆ ಅಭಿಸಾಮರ್ಥ್ಯಗಳು ಕೆಲವೇ ವ್ಯಕ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ. ಪ್ರತಿಯೊಂದು ಅಭಿಸಾಮರ್ಥ್ಯದ ಬೆಳವಣಿಗೆಗೆ ಸ್ವಲ್ಪ ಮಟ್ಟಿನ ಸಾಮಾನ್ಯ ಬುದ್ಧಿಶಕ್ತಿ ವ್ಯಕ್ತಿಯಲ್ಲಿ ಇರಬೇಕಾಗುತ್ತದೆ, ಇಲ್ಲದಿದ್ದಲ್ಲಿ ವ್ಯಕ್ತಿ ತರಬೇತಿಯಿಂದ ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ. ವ್ಯಕ್ತಿ ಅಭಿಸಾಮರ್ಥ್ಯದೊಂದಿಗೆ ಹೆಚ್ಚಿನ ಮಟ್ಟದ ಸಾಮಾನ್ಯ ಬುದ್ಧಿಶಕ್ತಿಯನ್ನು ಹೊಂದಿದ್ದರೆ ಆ ನಿರ್ದಿಷ್ಟ ಅಭಿಸಾಮರ್ಥ್ಯ ಕ್ಷೇತ್ರದಲ್ಲಿ ಹೆಚ್ಚಿನ ಮಟ್ಟದ ಪರಿಣತಿಯನ್ನು ಪಡೆಯಲು ಅನುಕೂಲವಾಗುತ್ತದೆ.

**ಅಭಿಸಾಮರ್ಥ್ಯ ಮತ್ತು ಸಾಧನೆ**

ಈ ಎರಡೂ ಪರಿಕಲ್ಪನೆಗಳು ಹೆಚ್ಚು ಕಡಿಮೆ ಒಂದೇ ಅರ್ಥವನ್ನು ಹೊಂದಿದ್ದರೂ ಸ್ವಲ್ಪಮಟ್ಟಿಗೆ ಭಿನ್ನವಾಗಿವೆ. ಇವೆರಡೂ ವ್ಯಕ್ತಿಯ ಸಾಧನೆಗೆ ಸಂಬಂಧಿಸಿದ್ದರೂ, ಅಭಿಸಾಮರ್ಥ್ಯ ವ್ಯಕ್ತಿಯ ಭವಿಷ್ಯದಲ್ಲಿನ ಸಾಧನೆಯ ಸಂಭಾವ್ಯತೆಯನ್ನು ಸೂಚಿಸಿದರೆ, ಸಾಧನೆಯು ವ್ಯಕ್ತಿಯ ಇಂದಿನ ಸಾಧನೆಯ ಮಟ್ಟವನ್ನು ತೋರಿಸುತ್ತದೆ. ಅಭಿಸಾಮರ್ಥ್ಯದ ಅಳತೆ ವ್ಯಕ್ತಿ ನಿರ್ದಿಷ್ಟ ಕ್ಷೇತ್ರದಲ್ಲಿ ಸಫಲತೆ ಪಡೆಯುತ್ತಾನೆಯೆ ಇಲ್ಲವೆ ಎಂಬುದನ್ನು ಪೂರ್ವಾನುಮಾನ ಮಾಡಲು ಸಹಾಯ ಮಾಡುತ್ತದೆ. ಆ ಕ್ಷೇತ್ರದಲ್ಲಿ ಸೂಕ್ತ ತರಬೇತಿ ನೀಡಿದರೆ ವ್ಯಕ್ತಿ ಅದರಿಂದ ಪ್ರಯೋಜನ ಪಡೆಯುತ್ತಾನೆ ಎಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಆದರೆ ಸಾಧನೆ ಒಂದು ನಿರ್ದಿಷ್ಟ ಕಾರ್ಯದಲ್ಲಿ ಅಥವಾ ಶೈಕ್ಷಣಿಕ ಕಾರ್ಯಕ್ರಮದಲ್ಲಿ ವ್ಯಕ್ತಿ ಪಡೆದ ತರಬೇತಿ ಅಥವಾ ಬೋಧನೆಯಿಂದಾಗಿ ಎಷ್ಟರ ಮಟ್ಟಿನ ಪ್ರಯೋಜನ ಪಡೆದಿದ್ದಾನೆ ಅಥವಾ ಕಲಿತಿದ್ದಾನೆ ಎಂಬುದನ್ನು ತೋರಿಸುತ್ತದೆ. ಅಭಿಸಾಮರ್ಥ್ಯ ವ್ಯಕ್ತಿಯ ಭವಿಷ್ಯದ ಸಾಧನೆಯನ್ನು ಸೂಚಿಸಿದರೆ, ಸಾಧನೆ ವ್ಯಕ್ತಿಯ ಪ್ರಸ್ತುತದಲ್ಲಿನ ಸಾಧನೆಯನ್ನು ತೋರಿಸುತ್ತದೆ.

**ಅಭಿಸಾಮರ್ಥ್ಯ ಮತ್ತು ಕೌಶಲ**

ಅಭಿಸಾಮರ್ಥ್ಯಕ್ಕೂ ಕೌಶಲಕ್ಕೂ ವ್ಯತ್ಯಾಸವಿದೆ. ಅಭಿಸಾಮರ್ಥ್ಯ

Digitised by Bharatavani, CIIL

ಒಂದು ನಿರ್ದಿಷ್ಟ ಚಟುವಟಿಕೆಯನ್ನು ಮಾಡಲು ವ್ಯಕ್ತಿ ಸದ್ಯದಲ್ಲಿ ಹೊಂದಿರುವ ಅಂತಃಸ್ಸತ್ವವನ್ನು ಸೂಚಿಸಿದರೆ, ಕೌಶಲ ಒಂದು ದತ್ತ ಕಾರ್ಯವನ್ನು ಸುಲಭವಾಗಿ ಮತ್ತು ನಿಖರವಾಗಿ ಮಾಡುವ ಸಾಮರ್ಥ್ಯವನ್ನು ತೋರಿಸುತ್ತದೆ. ಅಭಿಸಾಮರ್ಥ್ಯಕ್ಕೂ ದಕ್ಷತೆಗೂ (Profociency) ವ್ಯತ್ಯಾಸವಿದೆ. ಯಾವುದೇ ಅಭಿಸಾಮರ್ಥ್ಯ ಸೂಕ್ತ ಪರಿಸ್ಥಿತಿಗಳಲ್ಲಿ ಒಂದು ನಿರ್ದಿಷ್ಟ ವಿಧದ ಚಟುವಟಿಕೆಯಲ್ಲಿ ದಕ್ಷತೆಯನ್ನು ಪಡೆದುಕೊಳ್ಳುವುದನ್ನು ಸೂಚಿಸುವ ಅಭಿಸಾಮರ್ಥ್ಯ. ಪರೀಕ್ಷಣದಲ್ಲಿ ವ್ಯಕ್ತಿಯ ಕಾರ್ಯಕ್ಷಮತೆಯಿಂದ ವ್ಯಕ್ತವಾಗುವ ಸದ್ಯದಲ್ಲಿರಬಹುದಾದ ಅಂತಃಸ್ಸತ್ವವನ್ನು ಸೂಚಿಸುತ್ತದೆ. ದಕ್ಷತೆ ಒಂದು ನಿರ್ದಿಷ್ಟ ಗತ್ಯಾತ್ಮಕ ಹಾಗೂ ಕೈಚಳಕದ ಚಟುವಟಿಕೆಗಳಲ್ಲಿ ವ್ಯಕ್ತಿಯ ಕಾರ್ಯಕ್ಷಮತೆಯ ಮಟ್ಟವನ್ನು ತೋರಿಸುತ್ತದೆ. ದಕ್ಷತೆ ಭಾಷಾಕಲಿಕೆ, ವಾಣಿಜ್ಯ ಲೆಕ್ಕಾಚಾರ ಮಾಡುವಿಕೆ, ಇತಿಹಾಸ ಕಲಿಕೆ, ಅರ್ಥಶಾಸ್ತ್ರ ಹಾಗೂ ಗಣಿತಶಾಸ್ತ್ರ ಕಲಿಕೆಗಳ ಕ್ಷೇತ್ರಗಳಲ್ಲೂ ಇರಬಹುದು.

ಅಭಿಸಾಮರ್ಥ್ಯ ಪರೀಕ್ಷೆಗಳಲ್ಲಿ ಅನೇಕ ರೀತಿಯ ಪರೀಕ್ಷೆಗಳು ಸೇರುತ್ತವೆ. ಇವುಗಳನ್ನು ಅವುಗಳ ಉದ್ದೇಶ ಮತ್ತು ಸ್ವರೂಪಕ್ಕೆ ಅನುಸಾರವಾಗಿ ಈ ಕೆಳಗಿನ ವರ್ಗಗಳಾಗಿ ವಿಂಗಡಿಸಬಹುದು.

1. **ಸಂವೇದನೆ– ಗತ್ಯಾತ್ಮಕ ಪರೀಕ್ಷೆಗಳು (Sensory- Motor Tests)–** ಇವು ದೃಷ್ಟಿ, ಶ್ರವಣ ಸಾಮರ್ಥ್ಯ ಮತ್ತು ಗತ್ಯಾತ್ಮಕ ಚಟುವಟಿಕೆಗಳನ್ನು ಮಾಡುವ ಸಾಮರ್ಥ್ಯವನ್ನು ಅಳತೆ ಮಾಡುತ್ತವೆ.

2. **ನಿರ್ದಿಷ್ಟ ಅಭಿಸಾಮರ್ಥ್ಯಗಳ ಪರೀಕ್ಷೆಗಳು (Tests of Specific Aptitudes)-**ಮನೋವಿಜ್ಞಾನಿಗಳು ವ್ಯಾಪಕ ಸಂಶೋಧನೆಗಳ ಆಧಾರದ ಮೇಲೆ ಕೆಲವು ನಿರ್ದಿಷ್ಟ ಅಭಿಸಾಮರ್ಥ್ಯಗಳನ್ನು ಗುರ್ತಿಸಿ, ಅವುಗಳ ಸ್ವರೂಪವನ್ನು ವಿವರಿಸಿ ಅವುಗಳನ್ನು ಅಳತೆ ಮಾಡಲು ಅನೇಕ ಪರೀಕ್ಷೆಗಳನ್ನು ರೂಪಿಸಿದ್ದಾರೆ. ಈ ಗುಂಪಿನಡಿಯಲ್ಲಿ ಯಾಂತ್ರಿಕ ಅಭಿಸಾಮರ್ಥ್ಯ, ಸಂಗೀತ ಅಭಿಸಾಮರ್ಥ್ಯ, ಕಲಾ ಅಭಿಸಾಮರ್ಥ್ಯ, ಕರಣೀಕ (ಕ್ಲರ್ಕ್) ಅಭಿಸಾಮರ್ಥ್ಯ ಸೇರುತ್ತವೆ.

3. **ವೃತ್ತಿ ಅಭಿಸಾಮರ್ಥ್ಯ ಪರೀಕ್ಷೆಗಳು (Professional Aptitude Tests)–** ವೈದ್ಯಕೀಯ, ಕಾನೂನು ಬೋಧನೆ, ವಿಜ್ಞಾನ ಹಾಗೂ ಇಂಜಿನಿಯರಿಂಗ್ ವೃತ್ತಿ ಅಭಿಸಾಮರ್ಥ್ಯಗಳಿಗೆ ವ್ಯಕ್ತಿಗಳನ್ನು ಆಯ್ಕೆ ಮಾಡಲು ವೃತ್ತಿ ಅಭಿಸಾಮರ್ಥ್ಯ ಪರೀಕ್ಷೆಗಳು ರೂಪಿತವಾಗಿವೆ. ಈ ವ್ಯಕ್ತಿಗಳ ಸಾಮರ್ಥ್ಯ ಯಾಂತ್ರಿಕತೆ, ಸಂಗೀತ, ಕಲಾ ಅಭಿಸಾಮರ್ಥ್ಯಗಳಂತೆ ನಿರ್ದಿಷ್ಟ ಅಭಿಸಾಮರ್ಥ್ಯಗಳಲ್ಲ. ಆದರೂ ಆಯಾ ವೃತ್ತಿಯ ಸ್ವರೂಪವನ್ನು ವಿಶ್ಲೇಷಿಸಿ, ಆಯಾ ವೃತ್ತಿಯಲ್ಲಿ ಸಫಲರಾಗಲು ಬೇಕಾಗುವ ಸಾಮರ್ಥ್ಯಗಳನ್ನು ಇತರ ಕಾರಣಾಂಶಗಳನ್ನು ಪ್ರಾಯೋಗಿಕವಾಗಿ ಗುರ್ತಿಸಿ ಅವುಗಳಿಗೆ ಪ್ರತ್ಯೇಕ ಪರೀಕ್ಷೆಗಳನ್ನು ರೂಪಿಸಿ ಅವೆಲ್ಲವನ್ನು ಒಟ್ಟು ಸೇರಿಸಿ ವೃತ್ತಿ ಅಭಿಸಾಮರ್ಥ್ಯವೆಂದು ಪರಿಗಣಿಸಲಾಗಿದೆ.

4. **ಬಹುಕಾರಕಾಂಶ ಅಭಿಸಾಮರ್ಥ್ಯ ಪರೀಕ್ಷಾ ಸಮೂಹಗಳು (Multi-factor Aptitude Test Batteries)–** ಈ ವಿಧದ ಪರೀಕ್ಷೆಗಳಲ್ಲಿ ಅನೇಕ ಪರೀಕ್ಷೆಗಳನ್ನು ಸೇರಿಸಿ ಅದನ್ನು ಒಂದು ಪರೀಕ್ಷಾ ಸಮೂಹವಾಗಿ (Test Battery) ಪರಿಗಣಿಸಲಾಗುತ್ತದೆ. ಇವುಗಳು ಕೆಲವು ಅಭಿಸಾಮರ್ಥ್ಯ ಉಪ–ಪರೀಕ್ಷೆಗಳನ್ನು ಹೊಂದಿದ್ದು, ಆ ಸಾಮರ್ಥ್ಯಗಳನ್ನು ಏಕಕಾಲದಲ್ಲಿ ಅಳತೆ ಮಾಡುತ್ತವೆ. ಈ ಪರೀಕ್ಷಾ ಸಮೂಹಗಳು ಒಂದೇ ಅಂಕವನ್ನು ನೀಡುವುದಿಲ್ಲ. ಬದಲಾಗಿ ಪ್ರತಿಯೊಂದು ಉಪ–ಪರೀಕ್ಷೆಯಲ್ಲಿ ವ್ಯಕ್ತಿ ಪಡೆದ ಅಂಕಗಳನ್ನು ಕೊಡುತ್ತವೆ. ಇವುಗಳ ಆಧಾರದ ಮೇಲೆ ವ್ಯಕ್ತಿಯ ಅಂಕಗಳ ಪರಿಶ್ಚೇಧಿಕೆಯನ್ನು (Score Profile) ಸಿದ್ಧಪಡಿಸಬಹುದು. ಈ ಪರಿಶ್ಚೇಧಿಕೆ ಆ ಪರಿಕ್ಷಾ ಸಮೂಹದ ಉಪ–ಪರೀಕ್ಷೆಗಳಲ್ಲಿ ವ್ಯಕ್ತಿಯ ತಾರತಮ್ಯಾತ್ಮಕ (relative)ಸ್ಥಾನವನ್ನು ತೋರಿಸುತ್ತದೆ.

ಬುದ್ಧಿಶಕ್ತಿ ಸ್ವರೂಪದ ಬಗೆಗಿನ ಇತ್ತೀಚಿನ ಸಿದ್ಧಾಂತಗಳು ಮುಖ್ಯವಾಗಿ ಸ್ಟರ್ನ್‌ಬರ್ಗ್‌ನ ತ್ರಿಮುಖ ಸಿದ್ಧಾಂತ (Triarchic Theory) ಮತ್ತು ಗಾರ್ಡನರನ ಬಹು–ಬುದ್ಧಿಶಕ್ತಿ ಸಿದ್ಧಾಂತ (Theory of Multiple Intelligence) ಬೆಳಕಿಗೆ ಬಂದ ನಂತರ ಅಭಿಸಾಮರ್ಥ್ಯಗಳ ಬಗ್ಗೆ ಪ್ರತ್ಯೇಕವಾಗಿ ಚರ್ಚಿಸುವುದು/ವಿವರಿಸುವುದು ಕಡಿಮೆಯಾಗಿದೆ. ಅಭಿಸಾಮರ್ಥ್ಯಗಳನ್ನು ಬುದ್ಧಿಶಕ್ತಿಯ ಬಹುವಿಧಗಳ ಭಾಗವೆಂದು ಪರಿಗಣಿಸಲು ಆರಂಭಿಸಿದ್ದಾರೆ.

## ಅಭಿಸಾಮರ್ಥ್ಯಗಳ ಅಳತೆ

ಅಭಿಸಾಮರ್ಥ್ಯಗಳ ಅಳತೆಯ ಕ್ಷೇತ್ರದಲ್ಲಿ ಬಹಳಷ್ಟು ಕಾರ್ಯ ನಡೆದಿದೆ. ಪ್ರತಿಯೊಂದು ಅಭಿಸಾಮರ್ಥ್ಯವನ್ನೂ, ವೃತ್ತಿ ಸಾಮರ್ಥ್ಯವನ್ನು ಅಳತೆ ಮಾಡಲು ಅನೇಕ ಅಭಿಸಾಮರ್ಥ್ಯ ಪರೀಕ್ಷೆಗಳು ರೂಪಿತವಾಗಿವೆ. ಕೆಲವು ಪರೀಕ್ಷೆಗಳು ತಮ್ಮ ಪೂರ್ವಾನುಮಾನ (Predictive) ಸಾಮರ್ಥ್ಯಕ್ಕೆ ಪ್ರಸಿದ್ಧಿ ಪಡೆದಿವೆ. ಈ ಪರೀಕ್ಷೆಗಳನ್ನು ಪರೀಕ್ಷಾ ರೂಪಣೆಯ ನಿಯಮಗಳನ್ನು ಕಠಿಣವಾಗಿ ಅನುಸರಿಸಿ ರೂಪಿಸಲಾಗಿದೆ. ಹಾಗೆಯೇ ಅನೇಕ ಬಹುಕಾರಣಾಂಶ ಪರೀಕ್ಷಾ ಸಮೂಹಗಳೂ ರೂಪಿತವಾಗಿ, ಉಪಯೋಗಿಸಲ್ಪಡುತ್ತಿವೆ. ಮೇಲೆ ತಿಳಿಸಿದ ಪ್ರತಿಯೊಂದು ವಿಧದ ಅಭಿಸಾಮರ್ಥ್ಯ ಪರೀಕ್ಷೆಗಳ ಗುಂಪಿನ ಕೆಲವು ಪ್ರಾತಿನಿಧಿಕ ಪರೀಕ್ಷೆಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವರ್ಣಿಸಲಾಗಿದೆ.

ಅಭಿಕ್ಷಮತೆ ಪರೀಕ್ಷೆಯನ್ನು ರೂಪಿಸಲು ಮೊದಲು ಅಳತೆ ಮಾಡಬೇಕಾದ ಅಭಿಕ್ಷಮತೆಯನ್ನು ವಿಶ್ಲೇಷಿಸಿ ಅದರ ಸಾಮರ್ಥ್ಯ ಘಟಕಾಂಶಗಳನ್ನು ಗುರ್ತಿಸಲಾಗುತ್ತದೆ. ಈ ರೀತಿಯ ವಿಶ್ಲೇಷಣೆಯಲ್ಲಿ ಆ ಅಭಿಕ್ಷಮತೆಯ ಕ್ಷೇತ್ರದಲ್ಲಿ ಪರಿಣತಿ ಪಡೆದು ಪ್ರಸಿದ್ಧರಾಗಿರುವ ವ್ಯಕ್ತಿಗಳ ವರ್ತನೆಯನ್ನೂ ಅವರ ವ್ಯಕ್ತಿತ್ವ ಲಕ್ಷಣಗಳನ್ನು ಆಧಾರವಾಗಿ ಇಟ್ಟುಕೊಳ್ಳಲಾಗುತ್ತದೆ. ನಂತರ ಈ ಘಟಕಾಂಶಗಳನ್ನು ಅಳತೆ ಮಾಡಲು ಪರೀಕ್ಷಾಂಶಗಳನ್ನು ಸಿದ್ಧಪಡಿಸಲಾಗುತ್ತದೆ. ಈ

Digitised by Bharatavani, CIIL

ಪರೀಕ್ಷಾಂಶಗಳು ಶಾಬ್ದಿಕ ಹೇಳಿಕೆಗಳಾಗಿರಬಹುದು. ಚಿತ್ರ ಅಥವಾ ವಿನ್ಯಾಸಗಳ ರೂಪದಲ್ಲಿರಬಹುದು ಮತ್ತು ಕೆಲವು ಸಂದರ್ಭಗಳಲ್ಲಿ ಕಾರ್ಯಾತ್ಮಕ (Performance) ರೂಪದವರಾಗಿರಬಹುದು. ಈ ಪರೀಕ್ಷಾಂಶಗಳನ್ನು ಪರಿಷ್ಕರಿಸಿ ಪರೀಕ್ಷಣವನ್ನು ಸಿದ್ಧಪಡಿಸಲಾಗುತ್ತದೆ. ಈ ಪರೀಕ್ಷಣವನ್ನು ಅಳತೆ ಮಾಡಬೇಕಾಗಿರುವ ಅಭಿಸಾಮರ್ಥ್ಯ ಪ್ರಸಿದ್ಧಿ ಹೊಂದಿರುವ ವ್ಯಕ್ತಿಗಳ ಗುಂಪಿಗೂ ಮತ್ತು ಆ ಅಭಿಸಾಮರ್ಥ್ಯವಿಲ್ಲದ ವ್ಯಕ್ತಿಗಳ ಗುಂಪಿಗೂ ಕೊಟ್ಟು ಅಂಕನಿರ್ಧಾರ ಮಾಡಿ ಆ ಅಂಕಗಳನ್ನು ವಿಶ್ಲೇಷಿಸಲಾಗುತ್ತದೆ. ಪ್ರತಿಯೊಂದು ಪರೀಕ್ಷಾಂಶವನ್ನು ಅದು ಅಭಿಸಾಮರ್ಥ್ಯವಿರುವ ಗುಂಪನ್ನು ಅಭಿಸಾಮರ್ಥ್ಯವಿಲ್ಲದಿರುವ ಗುಂಪನ್ನು ತೃಪ್ತಿಕರ ಮಟ್ಟದಲ್ಲಿ ವಿಭೇಧೀಕರಿಸುತ್ತದೆಯೆ ಎಂದು ಪರೀಕ್ಷಿಸಲಾಗುತ್ತದೆ. ವಿಭೇಧೀಕರಿಸುವ ಪರೀಕ್ಷಾಂಶಗಳನ್ನು ಉಳಿಸಿಕೊಂಡು ವಿಭೇಧೀಕರಿಸಲಾಗದ ಪರೀಕ್ಷಾಂಶಗಳನ್ನು ಬಿಟ್ಟು ಅಂತಿಮವಾಗಿ ಪರೀಕ್ಷಣವನ್ನು ಸಿದ್ಧಗೊಳಿಸಲಾಗುತ್ತದೆ. ಆ ಪರೀಕ್ಷಣಕ್ಕೆ ವಿಶ್ವಸನೀಯತೆ (Reliability), ಸಿಂಧುತ್ವವನ್ನೂ (Validity) ಕಂಡುಹಿಡಿದು ಆದರ್ಶಾಂಕಗಳ ತಾಲಿಕೆಗಳನ್ನು (Table of Norms) ಸಿದ್ಧಪಡಿಸಲಾಗುತ್ತದೆ.

**ಸಂವೇದನೆ ಮತ್ತು ಗತ್ಯಾತ್ಮಕ ಪರೀಕ್ಷೆಗಳು– ದೃಷ್ಟಿಪರೀಕ್ಷೆಗಳು**

ಈ ಪರೀಕ್ಷೆಗಳು ದೃಷ್ಟಿ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಸಮೀಪ ದೃಷ್ಟಿ ತೀಕ್ಷ್ಣತೆ (Near Visual Acuity), ದೂರದ ದೃಷ್ಟಿತೀಕ್ಷ್ಣತೆ (far visual acuity), ಗಹನ ಪ್ರತ್ಯಕ್ಷಾನುಭವ (Depth Perception), ವರ್ಣಾಂಧತೆ (Colour Blindness) ಮತ್ತು ಮಾಂಸ ಪಂಥೀಯ ಸಮತೋಲನ ಮುಂತಾದ ಅಂಶಗಳನ್ನು ಅಳತೆ ಮಾಡುತ್ತವೆ. ಸಾಮಾನ್ಯವಾಗಿ ಈ ಪರೀಕ್ಷೆಗಳು ಉಪಕರಣಗಳನ್ನು ಉಪಯೋಗಿಸುತ್ತವೆ. ಈ ಉಪಕರಣಗಳಲ್ಲಿ ಪ್ರೋಟೋ ಮೀಟರ್, ಆರ್ಥೋರೇಟರ್, ಟೆಲಿಬೈನಾಕ್ಯೂಲರ್ ಪ್ರಸಿದ್ಧವಾಗಿವೆ. ಇಂಗ್ಲಿಷ್ ಅಕ್ಷರಗಳ ಮತ್ತು ಮಧ್ಯೆ ಬೇರೆ ಬೇರೆ ಪ್ರಮಾಣದ ಅಂತರವಿರುವ ವಿವಿಧ ಅಳತೆಗಳ ವೃತ್ತಗಳಿರುವ ಸ್ನೆಲೆನ್ ಪಟಗಳು ದೃಷ್ಟಿತೀಕ್ಷ್ಣತೆಯನ್ನು ಅಳತೆ ಮಾಡಲು ಪ್ರಪಂಚದಾದ್ಯಂತ ಉಪಯೋಗಿಸಲ್ಪಡುತ್ತಿವೆ. ಇತ್ತೀಚೆಗೆ ಕಣ್ಣಿನ ಈ ಸಾಮರ್ಥ್ಯಗಳನ್ನು ಇನ್ನೂ ಖಚಿತವಾಗಿ ಅಳತೆ ಮಾಡಲು ಕಂಪ್ಯೂಟರ್ ಕಾರ್ಯಕ್ರಮಗಳನ್ನೂ, ಸ್ಕ್ಯಾನಿಂಗ್ ತಂತ್ರಗಳನ್ನು ಉಪಯೋಗಿಸಲಾಗುತ್ತಿದೆ.

ವರ್ಣಾಂಧತೆ (Colour Blindness) ಜನಸಾಮಾನ್ಯರಲ್ಲಿ ಕಂಡುಬರುವ ಕಣ್ಣಿನ ಕಾರ್ಯ ಸಾಮರ್ಥ್ಯದ ಮತ್ತೊಂದು ದೋಷ. ಈ ದೋಷವಿರುವ ವ್ಯಕ್ತಿಗಳಿಗೆ ಪ್ರಾಥಮಿಕ ಬಣ್ಣಗಳಾದ ಹಸಿರು–ಕೆಂಪು ಮತ್ತು ಹಳದಿ–ನೀಲಿಗಳನ್ನು ಗುರ್ತಿಸಲು ಸಾಧ್ಯವಾಗುವುದಿಲ್ಲ. ಕೆಲವು ವೃತ್ತಿಗಳಲ್ಲಿ– ಉದಾಹರಣೆಗೆ ರಾಸಾಯನಿಕಗಳ ಪರೀಕ್ಷಕ, ಚಹಾ ಪರೀಕ್ಷಕ– ಈ ದೋಷ ತೊಂದರೆಯನ್ನುಂಟು ಮಾಡುತ್ತದೆ. ಇದು ಅಕ್ಷಿಪಟಲದ (Ratina) ಮಟ್ಟದಲ್ಲಿರುವ ದೋಷವಾದುದರಿಂದ ನಿವಾರಣೆ ಮಾಡಲು ಸಾಧ್ಯವಾಗುವುದಿಲ್ಲ. ಜಪಾನ್ ದೇಶದ ಇಶಿಹರಾ ಎಂಬುವನು ರೂಪಿಸಿದ ವರ್ಣ ಪಟಗಳಿರುವ (Multi coloured plates) ಇಶಿಹರ ವರ್ಣಾಂಧತೆ ಪರೀಕ್ಷೆಯನ್ನು ಈ ದೋಷವನ್ನು ಪತ್ತೆ ಹಚ್ಚಲು ಉಪಯೋಗಿಸಲಾಗುತ್ತದೆ. ಇನ್ನೂ ಕೆಲವು ಪರೀಕ್ಷೆಗಳನ್ನು ವರ್ಣಾಂಧತೆ ಪರೀಕ್ಷಿಸಲು ತಯಾರಿಸಲಾಗಿದೆ.

**ಶ್ರವಣ ಪರೀಕ್ಷೆಗಳು:**

ಶ್ರವಣ ಶಕ್ತಿಯನ್ನು ಪರೀಕ್ಷಿಸಲು ಅನೇಕ ಅನೌಪಚಾರಿಕ ಮತ್ತು ಔಪಚಾರಿಕ ಪರೀಕ್ಷೆಗಳಿವೆ. ಔಪಚಾರಿಕ ಪರೀಕ್ಷೆಗಳ ಅಳತೆಗಳಲ್ಲಿ ಹೆಚ್ಚಿನ ನಿಖರತೆ ಇರುತ್ತದೆ. ಆಂಡ್ರೂ ಪಿಸುಮಾತಿನ ಪರೀಕ್ಷೆ ಅನೌಪಚಾರಿಕ ಪರೀಕ್ಷೆಯ ಉದಾಹರಣೆಯಾಗಿದೆ. ಹೆಚ್ಚಿನ ನಿಖರವಾದ ಅಳತೆಗೆ ಆಡಿಯೋ ಮೀಟರ್‌ನ್ನು ಬಳಸಲಾಗುತ್ತದೆ. ಇವುಗಳು ಅನೇಕ ಮಾದರಿಗಳಲ್ಲಿ ದೊರೆಯುತ್ತವೆ. ಆಡಿಯೋ ಮೀಟರನ್ನು ಉಪಯೋಗಿಸುವಾದ ಅಳತೆಗೆ ಒಳಪಡುವ ವ್ಯಕ್ತಿ ಹೊರಗಿನ ಧ್ವನಿಗಳು ಕೇಳಿಸದಂತೆ ಇಯರ್‌ಫೋನ್ ಇಟ್ಟುಕೊಳ್ಳಬೇಕು. ನಂತರ ವಿದ್ಯುನ್ಮಾನ ರೀತಿಯಲ್ಲಿ (Electronically) ಉತ್ಪಾದಿಸಿದ ವಿವಿಧ ಡೆಸಿಬೆಲ್‌ಗಳಲ್ಲಿ (ಧ್ವನಿಯ ತೀವ್ರತೆಯ ಒಂದು ಮಾನಕ) ಶುದ್ಧ ಧ್ವನಿಗಳನ್ನು ವ್ಯಕ್ತಿಯ ಕಿವಿಗಳಿಗೆ ರವಾನಿಸಲಾಗುತ್ತದೆ. ಕೆಲವು ವೇಳೆ ಧ್ವನಿಗಳ ಬದಲು ರೆಕಾರ್ಡ್ ಮಾಡಿರುವ ಅಂಕೆಗಳನ್ನು, ಪದಗಳನ್ನು, ವಾಕ್ಯಗಳನ್ನು ಉಪಯೋಗಿಸುವುದುಂಟು. ವ್ಯಕ್ತಿ ಈ ಶ್ರವಣ ಪ್ರಚೋದನೆಗಳು ಕೇಳಿಸುತ್ತಿವೆಯೆ ಇಲ್ಲವೆ ಎಂಬುದನ್ನು ವರದಿ ಮಾಡಬೇಕು. ಈ ಪ್ರತಿಕ್ರಿಯೆಗಳ ಆಧಾರದ ಮೇಲೆ ವ್ಯಕ್ತಿಯ ಶ್ರವಣ ಸಾಮರ್ಥ್ಯದ ಮಟ್ಟವನ್ನು ನಿರ್ಧರಿಸಲಾಗುತ್ತದೆ. ಅನೇಕ ವ್ಯಕ್ತಿಗಳನ್ನು ಸಾಮೂಹಿಕವಾಗಿ ಪರೀಕ್ಷಿಸಲು ಸಮೂಹ ಶ್ರವಣ ಪರೀಕ್ಷೆಯನ್ನು ರೂಪಿಸಿದ್ದಾರೆ.

ದೃಷ್ಟಿ ಮತ್ತು ಶ್ರವಣ ಪರೀಕ್ಷೆಗಳು ಯಾವುದೇ ನಿರ್ದಿಷ್ಟ ಅಭಿಸಾಮರ್ಥ್ಯಗಳನ್ನು ಪರೀಕ್ಷಿಸುವುದಿಲ್ಲವೆಂಬುದು ಸ್ಪಷ್ಟವಾದರೂ, ಈ ಸಂವೇದನೆಗಳ ಸಾಮರ್ಥ್ಯ ಇತರ ಅಭಿಸಾಮರ್ಥ್ಯಗಳ ಅಭಿವ್ಯಕ್ತಿಯಲ್ಲಿ ಮುಖ್ಯ ಪಾತ್ರ ವಹಿಸುವುದರಿಂದ ಅಭಿಸಾಮರ್ಥ್ಯಗಳ ಅಳತೆಗೆ ಸಂಬಂಧಿಸಿದಂತೆ ಮಹತ್ವ ಪಡೆದಿವೆ.

**ಗತ್ಯಾತ್ಮಕ ಮತ್ತು ಹಸ್ತಚಾಲನ ಪರೀಕ್ಷೆಗಳು:**

ಗತ್ಯಾತ್ಮಕ (Motor) ಚಲನೆಗಳು ಮತ್ತು ಕೈಚಳಕ (ಬೆರಳುಗಳು, ಇಡೀ ಹಸ್ತ) ಚಟುವಟಿಕೆಗಳು (Manual movements) ಅನೇಕ ಕಾರ್ಯಗಳಲ್ಲಿ ಬೇಕಾಗುವ ವರ್ತನೆಗಳಾಗಿವೆ. ಇವುಗಳು ಸಂಕೀರ್ಣತೆ ಮತ್ತು ದೇಹದ ಆಯಾಮಗಳನ್ನು ಹೊಂದಿವೆ. ಇವುಗಳನ್ನು ಪರೀಕ್ಷಿಸಲು ಅನೇಕ ಪರೀಕ್ಷೆಗಳನ್ನು ರಚಿಸಲಾಗಿದೆ.

ಕೈಹಿಡಿತದ (Hand grip) ಶಕ್ತಿಯ ಪರೀಕ್ಷೆ ಅತ್ಯಂತ ಹಳೆಯ ಪರೀಕ್ಷೆಯಾಗಿದೆ. ಈ ಉಪಕರಣದಲ್ಲಿ ಒಂದು ದರ್ಶನ ಫಲಕ (Dial), ಒಂದು ಸೂಚಕ (Pointer), ಒಂದು ಒಳಗಿನ ಮತ್ತೊಂದು ಹೊರಗಿನ ಹಿಡಿ ಇರುತ್ತದೆ. ವ್ಯಕ್ತಿ ಕೈಬೆರಳುಗಳಿಂದ ಹಿಡಿಗಳನ್ನು ಹಿಡಿದು ಬಲವಾಗಿ ಒತ್ತಿದಾಗ ಸೂಚಕ ಚಲಿಸಿ ಹಿಡಿತದ ಶಕ್ತಿಯನ್ನು ಕೆ.ಜಿ.ಗಳಲ್ಲಿ ತೋರಿಸುತ್ತದೆ.

Digitised by Bharatavani, CIIL

ವ್ಯಕ್ತಿ ಒಂದು ಪ್ರಚೋದನೆಗೆ ಎಷ್ಟು ಶೀಘ್ರವಾಗಿ ಪ್ರತಿಕ್ರಿಯಿಸುತ್ತಾನೆಂಬುದನ್ನು ಅಳತೆ ಮಾಡಲು ಪ್ರತಿಕ್ರಿಯೆ ಕಾಲವನ್ನು ಅಳತೆ ಮಾಡುವ ಉಪಕರಣವನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ ವ್ಯಕ್ತಿ ತನ್ನೆದುರಿನ ಹಲಗೆ ಮೇಲೆ ಕೆಂಪು ದೀಪ ಬಂದ ತಕ್ಷಣ ತನ್ನೆದುರು ಇರುವ ಕೀಲಿಯನ್ನು ಒತ್ತಬೇಕು. ಇದಕ್ಕೆ ಬೇಕಾಗುವ ಸಮಯ ದಾಖಲಾಗುತ್ತದೆ. ಇದು ವ್ಯಕ್ತಿಯ ಪ್ರತಿಕ್ರಿಯಾ ವೇಗವನ್ನು ಸೂಚಿಸುತ್ತದೆ.

ಕೈಚಳಕದ (Manual Dexterity) ಚಟುವಟಿಕೆಗಳಲ್ಲಿ ದಕ್ಷತೆಯನ್ನು ಸಾಧಿಸಲು ಹಸ್ತ ಮತ್ತು ತೋಳುಗಳ ಸ್ಥೂಲ ಚಲನೆಗಳ ವೇಗ, ಹಸ್ತಗಳ ಉಪಯೋಗದ ಲಯ ಮತ್ತು ಸಂಯೋಜನೆ, ಬೆರಳುಗಳ ನಿಯಂತ್ರಣ ಮತ್ತು ಸಂಯೋಜನೆ ಬೇಕಾಗುತ್ತವೆ. ಇವುಗಳನ್ನು ಪರೀಕ್ಷಿಸಲು ಅನೇಕ ಪರೀಕ್ಷಣಗಳಿವೆ. ಕೆಲವು ಉದಾಹರಣೆಗಳು ಹೀಗಿವೆ–

1. ಓಕನ್ನಾರನ ಬೆರಳು ಚಲಕ ಪರೀಕ್ಷೆ– ಬೆರಳುಗಳಿಂದ ಮೊಳೆಗಳನ್ನು ಹಲಗೆಯಲ್ಲಿರುವ ನೂರು ರಂಧ್ರಗಳಲ್ಲಿ ಒಂದು ರಂಧ್ರಕ್ಕೆ ಮೂರರಂತೆ ಇಡುವುದು. ತೆಗೆದುಕೊಳ್ಳುವ ಕಾಲ ಸಾಮರ್ಥ್ಯಗಳ ಸೂಚಕವಾಗುತ್ತದೆ.

2. ಓಕನ್ನಾರನ ಇಕ್ಕಳ ಚಲಕ ಪರೀಕ್ಷೆ– ಇದು ಮೇಲಿನಂತೆಯೆ ಇದೆ. ಆದರೆ ಇದರಲ್ಲಿ ಒಂದೊಂದೇ ಮೊಳೆಯನ್ನು ಇಕ್ಕಳ (ಟ್ವೀಜರ್)ದಿಂದ ಹಿಡಿದು ರಂಧ್ರಗಳಲ್ಲಿಡಬೇಕು.

3. ಮಿನ್ನೆ ಸೋಟ ರೇಟ್ ಆಫ್ ಮ್ಯಾನಿಪುಲೇಷನ್ ಪರೀಕ್ಷೆ– ಇದರಲ್ಲಿ ರಂಧ್ರಗಳಿರುವ ಎರಡು ಹಲಗೆಗಳಿವೆ. ನೀಲಿ ಮತ್ತು ಕೆಂಪು ಬಣ್ಣ ಇರುವ ದಪ್ಪ ಪ್ಲಾಸ್ಟಿಕ್ ಬಿಲ್ಲೆಗಳನ್ನು ಹಲಗೆಯಲ್ಲಿ ಕೊರೆದಿರುವ ರಂಧ್ರಗಳಲ್ಲಿ ನಿರ್ದಿಷ್ಟ ಸೂಚನೆಗೆ ಅನುಸಾರವಾಗಿ ಬೇರೆ ಬೇರೆ ಇಡಬೇಕಾಗುತ್ತದೆ. ತೆಗೆದುಕೊಳ್ಳುವ ಸಮಯ ವೇಗಸೂಚಕವಾಗುತ್ತದೆ.

4. ಕ್ರಾಫರ್ಡ್ ಸಣ್ಣ ಭಾಗಗಳ ಕೈಚಳಕ ಪರೀಕ್ಷೆಯಲ್ಲಿ ಸಣ್ಣ ಪಿನ್ನುಗಳನ್ನು ಥ್ರೆಡ್ ಇರುವ ಮತ್ತು ಇಲ್ಲದ ರಂಧ್ರಗಳಲ್ಲಿ ಫಾರ್‌ಸೆಪ್ಸ್ ಉಪಯೋಗಿಸಿ ಇಡಬೇಕಾಗುತ್ತದೆ.

5. ಸ್ಟ್ರಾಂಬರ್ಗ್ ಕೈಚಳಕ ಪರೀಕ್ಷೆ– ಇದು ಮಿನ್ನೆಸೋಟ ಕೈಚಳಕದ ಪರೀಕ್ಷೆಯಂತೆಯೆ ಇದೆ. ಬೇರೆ ಬೇರೆ ಬಣ್ಣದ ಮರದ ತುಂಡುಗಳನ್ನು (ಪೆನ್ಸ್) 6 ಸಾಲುಗಳು ಮತ್ತು 9 ಕಾಲಂಗಳಲ್ಲಿರುವ ರಂಧ್ರಗಳಲ್ಲಿ ಇಡಬೇಕಾಗುತ್ತದೆ.

6. ಬೆನೆಟ್ ಹ್ಯಾಂಡ್–ಟೂಲ್ ಡೆಕ್ಸರಿಟಿ ಪರೀಕ್ಷೆ ರೆಂಚ್ ಮತ್ತು ಸ್ಕ್ರೂಡ್ರೈವರ್‌ಗಳನ್ನು ಉಪಯೋಗಿಸಲು ಬೇಕಾದ ಕೈಚಳಕವನ್ನು ಪರೀಕ್ಷಿಸುತ್ತದೆ. ಹಲಗೆಯಲ್ಲಿ ಜೋಡಿಸುವ 12 ನಟ್–ಬೋಲ್ಟ್‌ಗಳನ್ನು ರೆಂಚ್ ಮತ್ತು ಸ್ಕ್ರೂಡ್ರೈವರ್‌ಗಳನ್ನು ಸೂಕ್ತವಾಗಿ ಉಪಯೋಗಿಸಿ ಬಿಚ್ಚಿ ಎದುರಿನ ಹಲಗೆಯ ರಂಧ್ರಗಳಲ್ಲಿ ಅದೇ ಕ್ರಮದಲ್ಲಿ ಜೋಡಿಸುವುದೇ ಈ ಪರೀಕ್ಷೆಯಲ್ಲಿನ ಕಾರ್ಯವಾಗಿದೆ.

2. ನಿರ್ದಿಷ್ಟ ಅಭಿಸಾಮರ್ಥ್ಯಗಳ ಪರೀಕ್ಷೆಗಳು– ಈ ಗುಂಪಿನಲ್ಲಿ ಯಾಂತ್ರಿಕ ಅಭಿಸಾಮರ್ಥ್ಯ, ಸಂಗೀತ ಅಭಿಸಾಮರ್ಥ್ಯ, ಕರಣೀಕ (ಕ್ಲರ್ಕ್) ಅಭಿಸಾಮರ್ಥ್ಯ ಮತ್ತು ಕಲಾಸಾಮರ್ಥ್ಯದ ಪರೀಕ್ಷೆಗಳು ಸೇರುತ್ತವೆ. ಈ ರೀತಿಯ ಕೆಲವು ಪ್ರಸಿದ್ಧ ಪರೀಕ್ಷೆಗಳು ಈ ಕೆಳಕಂಡಂತಿವೆ.

ಯಾಂತ್ರಿಕ ಅಭಿಸಾಮರ್ಥ್ಯ– ಯಾಂತ್ರಿಕ ಅಭಿಸಾಮರ್ಥ್ಯ (Mechanical Aptitude) ಒಂದೇ ಸಾಮರ್ಥ್ಯವಲ್ಲ. ಇದು ಈ ಹಿಂದೆ ವಿವರಿಸಿದ ಸಂವೇದನಾ ಮತ್ತು ಗತ್ಯಾತ್ಮಕ ಸಾಮರ್ಥ್ಯಗಳನ್ನು ಒಳಗೊಳ್ಳುವುದರ ಜೊತೆಗೆ ಅವಕಾಶೀಯ ಸಂಬಂಧಗಳ (Special Relations)ಪ್ರತ್ಯಕ್ಷಾನುಭವ, ಯಾಂತ್ರಿಕ ವಿಷಯಗಳ ಬಗ್ಗೆ ಮಾಹಿತಿ ಪಡೆಯುವ ಸಾಮರ್ಥ್ಯ ಮತ್ತು ಯಾಂತ್ರಿಕ ಸಂಬಂಧಗಳನ್ನು ಗ್ರಹಿಸುವ ಸಾಮರ್ಥ್ಯಗಳನ್ನು ಒಳಗೊಳ್ಳುತ್ತದೆ.

1. ಮಿನ್ನೆಸೋಟ ಅವಕಾಶೀಯ ಸಂಬಂಧ ಪರೀಕ್ಷೆ– 1930ರಲ್ಲಿ ರೂಪಿತವಾದ ಈ ಪರೀಕ್ಷೆ ಪ್ರತಿಯೊಂದರಲ್ಲಿ ಬೇರೆ ಬೇರೆ ರೀತಿಯ ಆಕಾರದ ರಂಧ್ರಗಳಿರುವ ನಾಲ್ಕು ಬೋರ್ಡ್ (ಹಲಗೆ)ಗಳನ್ನು ಹೊಂದಿದೆ. ಈ ರಂಧ್ರಗಳಿಗೆ ಸರಿಹೊಂದುವ 58 ಪೆಗ್‌ಗಳಿವೆ. ಅವುಗಳನ್ನು ವ್ಯಕ್ತಿ ಆದಷ್ಟು ವೇಗದಿಂದ ಅವುಗಳಿಗೆ ಸೂಕ್ತವಾದ ರಂಧ್ರಗಳಲ್ಲಿ ಇಡಬೇಕಾಗುತ್ತದೆ.

2. ಟ್ರೈಫಾರಂ ಪೆಗ್ ಬೋರ್ಡ್ ಪರೀಕ್ಷೆ ಮಿನ್ನೆಸೋಟ ಪರೀಕ್ಷೆಯಂತೆಯೇ ಇದೆ.

3. ಮಿನ್ನೆಸೋಟ ಪೇಪರ್ ಫಾರಂ ಬೋರ್ಡ್ ಪರೀಕ್ಷೆ (ಪರಿಷ್ಕೃತ–1948) ಇದರ ಹೆಸರೇ ಸೂಚಿಸುವಂತೆ ಈ ಪರೀಕ್ಷೆ ಮೇಲಿನ ಪರೀಕ್ಷೆಗಳಲ್ಲಿ ವಿವರಿಸಿದ ವಾಸ್ತವಿಕವಾಗಿ ಬಿಡಿಸಬೇಕಾದ ಸಮಸ್ಯೆಗಳನ್ನು ಮುದ್ರಿತ ರೂಪದಲ್ಲಿ ಪ್ರಸ್ತುತಗೊಳಿಸುತ್ತದೆ. ಪ್ರತಿಯೊಂದು ಸಮಸ್ಯೆಯಲ್ಲೂ ಎರಡು ಅಥವಾ ಹೆಚ್ಚಿನ ಜ್ಯಾಮಿತಿ (ರೇಖಾಗಣಿತ) ಆಕೃತಿಗಳನ್ನು ತೋರಿಸಲಾಗಿದೆ. ಇವುಗಳನ್ನು ಸರಿಯಾಗಿ ಜೋಡಿಸಿದರೆ ಯಾವ ರೀತಿಯ ಆಕೃತಿಯಾಗುತ್ತದೆ ಎಂಬುದನ್ನು ವ್ಯಕ್ತಿ ಸಮಸ್ಯೆಯ ಕೆಳಗೆ ಕೊಟ್ಟಿರುವ 5 ಉತ್ತರ ಸಾಧ್ಯತೆಗಳಲ್ಲಿ ಸರಿಯಾದುದನ್ನು ಗುರ್ತಿಸಬೇಕು. ಈ ಪರೀಕ್ಷೆ ವ್ಯಕ್ತಿಯ ಕಲ್ಪಿಸಿಕೊಳ್ಳುವ ಮತ್ತು ರೇಖಾಕೃತಿಗಳನ್ನು ಮಾನಸಿಕಮಟ್ಟದಲ್ಲಿ ಜೋಡಿಸಿ ನೋಡುವ ಸಾಮರ್ಥ್ಯಗಳನ್ನು ಪರೀಕ್ಷಿಸುತ್ತದೆ.

4. ಬೆನೆಟ್ ಮೆಕ್ಯಾನಿಕಲ್ ಕಾಂಪ್ರಹೆನ್ಶನ್ ಪರೀಕ್ಷೆ– ಈ ಪರೀಕ್ಷೆ ಸಹ ಯಾಂತ್ರಿಕ ಸಮಸ್ಯೆಗಳನ್ನು ಚಿತ್ರಗಳ ಮೂಲಕ ಪ್ರಸ್ತುತಗೊಳಿಸುತ್ತದೆ. ಪ್ರತಿಯೊಂದು ಸಮಸ್ಯೆಯಲ್ಲೂ ಒಂದು ಚಿತ್ರದ ಜೊತೆಗೆ ಆ ಸಮಸ್ಯೆಯನ್ನು ನಿರೂಪಿಸುವ ಹೇಳಿಕೆ ಇರುತ್ತದೆ. ಅದರ ಕೆಳಗೆ ಎರಡು ಅಥವಾ ಮೂರು ಉತ್ತರಗಳ ಸಾಧ್ಯತೆಗಳನ್ನು ಚಿತ್ರರೂಪದಲ್ಲಿಯೇ ಕೊಡಲಾಗಿರುತ್ತದೆ. ವ್ಯಕ್ತಿ

Digitised by Bharatavani, CIIL

ಸರಿಯಾದ ಉತ್ತರವನ್ನು ಆಯ್ಕೆ ಮಾಡಬೇಕು. ಮೂರು ಕಠಿಣತೆ ಮಟ್ಟಗಳಲ್ಲಿರುವ ಈ ಪರೀಕ್ಷೆ ಸರಳ ಸನ್ನಿವೇಶಗಳಲ್ಲಿ ಭೌತಿಕ ಮತ್ತು ಯಾಂತ್ರಿಕ ತತ್ವಗಳು/ನಿಯಮಗಳು ಹೇಗೆ ಕೆಲಸ ಮಾಡುತ್ತವೆ ಎನ್ನುವುದನ್ನು ಗ್ರಹಿಸುವ ಸಾಮರ್ಥ್ಯವನ್ನು ಅಳತೆ ಮಾಡುತ್ತದೆ.

5. ಮೆಲ್ಲೆನ್‌ಬರ್ಚ್ ಮೆಕ್ಯಾನಿಕಲ್ ಮೋಟಿವೇಶನ್ ಟೆಸ್ಟ್, SRA ಮೆಕ್ಯಾನಿಕಲ್ ಆಪ್ಟಿಟ್ಯೂಡ್ ಪರೀಕ್ಷೆ, ಎಂಪ್ರಾಯಿ ಆಪ್ಟಿಟ್ಯೂಡ್ ಸರ್ವೇ ಈ ಗುಂಪಿನ ಇತರ ಕೆಲವು ಪರೀಕ್ಷೆಗಳಾಗಿವೆ.

**ಕರಣೀಕ (ಕ್ಲರಿಕಲ್) ಅಭಿಸಾಮರ್ಥ್ಯ:**

ಯಾಂತ್ರಿಕ ಅಭಿಸಾಮರ್ಥ್ಯದಂತೆಯೇ ಕರಣೀಕ ಅಭಿಸಾಮರ್ಥ್ಯ (Clerical Aptitude) ಒಂದೇ ಸಾಮರ್ಥ್ಯವಲ್ಲ. ಇದು ಕೆಲವು ಪ್ರತ್ಯೇಕ ಸಾಮರ್ಥ್ಯಗಳನ್ನು ಹೊಂದಿದೆ. ಕರಣೀಕ ಪರೀಕ್ಷೆಗಳಿಗೂ ಸಾಮಾನ್ಯ ಬುದ್ಧಿಶಕ್ತಿ ಪರೀಕ್ಷಣಗಳಿಗೂ ಸಾಕಷ್ಟು ಹೆಚ್ಚಿನ ಪ್ರಮಾಣದ ಸಹಸಂಬಂಧವಿದೆಯಾದರೂ ಅವು ಸಾಮಾನ್ಯ ಬುದ್ಧಿಶಕ್ತಿ ಪರೀಕ್ಷಣಗಳಿಂದ ಭಿನ್ನವಾದವುಗಳಾಗಿವೆ. ಕರಣೀಕ (ಗುಮಾಸ್ತ–ಕ್ಲರ್ಕ್) ಉದ್ಯೋಗಗಳಲ್ಲಿ ಮಹತ್ವಪೂರ್ಣವೆನ್ನಿಸುವ ಸಾಮಗ್ರಿಗಳನ್ನು ಇವು ಹೊಂದಿರುತ್ತವೆ. ಬಹುಕಾರಕಾಂಶಗಳ ಅಭಿಸಾಮರ್ಥ್ಯ ಪರೀಕ್ಷಾ ಸಮೂಹಗಳಲ್ಲಿ (Multifactor Aptitude Test Btteries) ಉದಾಹರಣೆಗೆ ಆಂಖಿ, ಉಂಖಿಃ ಕರಣೀಕ ಅಭಿಸಾಮರ್ಥ್ಯವನ್ನು ಸೇರಿಸಲಾಗಿದೆ ಎನ್ನುವುದು ಗಮನಾರ್ಹ ಅಂಶ. ನಿಖರತೆ ಮತ್ತು ವೇಗ ಕರಣೀಕ ಸಾಮರ್ಥ್ಯದ ಮೌಲ್ಯಮಾಪನದಲ್ಲಿ ಮುಖ್ಯವೆನಿಸುತ್ತವೆ. ಈ ಪರೀಕ್ಷೆಗಳಲ್ಲಿ ಸೇರುವ ಉಪ–ಪರೀಕ್ಷೆಗಳು ಇಂತಿವೆ– ಕೈಬರಹ, ವೇಗ ಮತ್ತು ಗುಣಮಟ್ಟ; ಪರೀಕ್ಷಿಸುವುದು (ತಾಳೆ ನೋಡುವುದು ಅಥವಾ ಚೆಕ್ ಮಾಡುವುದು)– ವೇಗ ಮತ್ತು ನಿಖರತೆ; ಸರಳ ಅಂಕಗಣಿತ; ಗತ್ಯಾತ್ಮಕ ವೇಗ ಮತ್ತು ನಿಖರತೆ; ಸರಳ ವಾಣಿಜ್ಯ (commercial) ಪದಗಳ ಜ್ಞಾನ; ಚದುರಿಸಿದ ಚಿತ್ರಗಳು; ವರ್ಗೀಕರಣ–ವೇಗ ಮತ್ತು ನಿಖರತೆ; ಅಕರಾದಿಯಾಗಿ ಫೈಲ್ ಮಾಡುವುದು; ಹೆಸರು ಮತ್ತು ಸಂಖ್ಯೆಗಳನ್ನು ಹೊಂದಿಸುವುದು; ಕಾಗುಣಿತ (Spelling); ಓದಿ ಗ್ರಹಿಸುವುದು; ಪದಗಳ ಅರ್ಥ; ಭಾಷಾ ಪ್ರಯೋಗ– ವ್ಯಾಕರಣ; ಹೆಸರುಗಳನ್ನು, ಸಂಖ್ಯೆಗಳನ್ನು ಹೋಲಿಸುವುದು; ಕಾಪಿ ಮಾಡುವುದು–ನಿಖರತೆ. ಬೇರೆ ಬೇರೆ ಕರಣೀಕ ಪರೀಕ್ಷೆಗಳು. ಈ ಉಪಪರೀಕ್ಷೆಗಳನ್ನು ಬೇರೆ ಬೇರೆ ಜೋಡಣೆಯಲ್ಲಿ ಹೊಂದಿರುತ್ತವೆ.

ಕರಣೀಕ ಅಭಿಸಾಮರ್ಥ್ಯದ ಕೆಲವು ಹೆಸರಾಂತ ಪರೀಕ್ಷೆಗಳನ್ನು ಕೆಳಗೆ ಕೊಟ್ಟಿದೆ.

1. ಡೆಟ್ರಾಯಿಟ್ ಕ್ಲರಿಕಲ್ ಆಪ್ಟಿಟ್ಯೂಡ್ ಎಕ್ಸಾಮಿನೇಷನ್– ಇದು ಎಂಟು ಉಪಪರೀಕ್ಷೆಗಳನ್ನು ಹೊಂದಿದೆ.

2. ಮಿನ್ನೆಸೋಟ ಕ್ಲರಿಕಲ್ ಆಪ್ಟಿಟ್ಯೂಡ್ ಟೆಸ್ಟ್– ಇದು ಎರಡು ಉಪಪರೀಕ್ಷೆಗಳನ್ನು– ಸಂಖ್ಯೆ ತಾಳೆ ನೋಡುವುದು ಮತ್ತು ಹೆಸರು ತಾಳೆ ನೋಡುವುದು– ಹೊಂದಿದೆ. ಇದು ಅತಿ ಕಡಿಮೆ ವ್ಯಾಪಕತೆಯುಳ್ಳ ಪರೀಕ್ಷೆಯಾಗಿದೆ.

3. ಪರ್ಡ್ಯೂ ಕ್ಲರಿಕಲ್ ಟೆಸ್ಟ್– ಇದು ಆರು ಉಪಪರೀಕ್ಷೆಗಳನ್ನು ಹೊಂದಿದೆ.

4. ಜನರಲ್ ಕ್ಲರಿಕಲ್ ಟೆಸ್ಟ್– ಇದು ಒಂಬತ್ತು ಉಪಪರೀಕ್ಷೆಗಳನ್ನು ಹೊಂದಿದ್ದು ಹೆಚ್ಚು ವ್ಯಾಪಕತೆ ಇರುವ ಪರೀಕ್ಷೆ ಎಂದು ಹೆಸರು ಪಡೆದಿದೆ.

**ಲಲಿತ ಕಲೆಗಳ ಪರೀಕ್ಷೆಗಳು:**

ಲಲಿತಕಲೆಗಳ (Fine Aṛt) ಪರೀಕ್ಷಣಗಳ ಗುಂಪಿನಲ್ಲಿ ಸಂಗೀತ ಪರೀಕ್ಷೆಗಳು ಮತ್ತು ರೇಖಾಚಿತ್ರ ಕಲೆಯ(Graphic Arts) ಪರೀಕ್ಷೆಗಳು ಸೇರುತ್ತವೆ. ಈ ಪರೀಕ್ಷಣಗಳಲ್ಲಿ ಸಾಮಾನ್ಯವಾಗಿ ಎರಡು ರೀತಿಗಳಲ್ಲಿ ವ್ಯಕ್ತಿಗಳ ಅಭಿಸಾಮರ್ಥ್ಯಗಳನ್ನು ಪರೀಕ್ಷಿಸಲಾಗುತ್ತದೆ. (1) ವ್ಯಕ್ತಿ ಕಾರ್ಯಾತ್ಮಕವಾಗಿ ತೋರಿಸುವ ವರ್ತನೆಯನ್ನು (Performance) ಅಥವಾ ಸೃಷ್ಟಿಸುವ ಕಾರ್ಯವನ್ನು ಮೌಲ್ಯಮಾಪನ ಮಾಡುವುದು. (2) ಸಂಗೀತ, ಚಿತ್ರಗಳು, ರೇಖಾಚಿತ್ರಗಳು ಮತ್ತು ವಿನ್ಯಾಸಗಳ ಸೌಂದರ್ಯವನ್ನು ವ್ಯಕ್ತಿ ಹೇಗೆ ಪ್ರಶಂಸಿಸುತ್ತಾನೆ ಅಥವಾ ನಿರ್ಣಯಿಸುತ್ತಾನೆ ಎಂಬುದನ್ನು ಮೌಲ್ಯಮಾಪನ ಮಾಡುವುದು. ಈ ಪರೀಕ್ಷೆಗಳನ್ನು ಸಾಮಾನ್ಯವಾಗಿ ವ್ಯಕ್ತಿಗತವಾಗಿ ಕೊಡಬೇಕಾಗುತ್ತದೆ. ಒಂದೆರಡು ಪರೀಕ್ಷೆಗಳನ್ನು ಸಮೂಹಕ್ಕೆ ಕೊಡುವಂತೆಯೂ ರೂಪಿಸಲಾಗಿದೆ. ಈ ಪರೀಕ್ಷೆಗಳ ಮೌಲ್ಯಮಾಪನದಲ್ಲಿ ವಸ್ತುನಿಷ್ಠತೆಯನ್ನು ಸಾಧಿಸುವ ಪ್ರಯತ್ನ ನಡೆದಿದ್ದರೂ ವ್ಯಕ್ತಿನಿಷ್ಠತೆಯನ್ನು ಸಂಪೂರ್ಣವಾಗಿ ತೆಗೆದು ಹಾಕಲು ಸಾಧ್ಯವಾಗಿಲ್ಲ. ವ್ಯಕ್ತಿಯ ಕಾರ್ಯವನ್ನು/ಸೃಷ್ಟಿಯನ್ನು ಆಯಾ ಕ್ಷೇತ್ರಗಳ ಹೆಸರಾಂತ ಕಲಾವಿದರ (ಸಂಗೀತಗಾರರು, ಚಿತ್ರಕಾರರು, ವಿನ್ಯಾಸಗಳು ಇತ್ಯಾದಿ) ಕಾರ್ಯಕ್ಕೆ/ಸೃಷ್ಟಿಗೆ ತುಲನೆ ಮಾಡುವುದರ ಮೂಲಕ ಅಂಕನಿರ್ಧಾರದಲ್ಲಿ ವಸ್ತುನಿಷ್ಠತೆಯನ್ನು ತರಲು ಪ್ರಯತ್ನಿಸಲಾಗಿದೆ.

**ಸಂಗೀತ ಅಭಿಸಾಮರ್ಥ್ಯ ಪರೀಕ್ಷಣಗಳು:**

ಸಂಗೀತ ಕ್ಷೇತ್ರದಲ್ಲಿ ರೂಪಿಸಿರುವ ಅಭಿಸಾಮರ್ಥ್ಯ ಪರೀಕ್ಷಣಗಳ ಸಂಖ್ಯೆ ಹೆಚ್ಚಾಗಿಲ್ಲ. ಈ ದಿಶೆಯಲ್ಲಿ ಮನೋವಿಜ್ಞಾನಿಗಳು ಹೆಚ್ಚು ಗಮನ ಹರಿಸಿದಂತೆ ಕಂಡು ಬರುವುದಿಲ್ಲ. ಈ ಮಾತು ಚಿತ್ರಕಲಾ ಪರೀಕ್ಷಣಗಳಿಗೂ ಅನ್ವಯಿಸುತ್ತದೆ. ಫ್ರೀಮನ್ನರ ಪ್ರಕಾರ ಈ ಅಭಿಸಾಮರ್ಥ್ಯಗಳ ಸ್ವರೂಪದ ಸಂಕೀರ್ಣತೆ ಮತ್ತು ಮೌಲ್ಯಮಾಪನದಲ್ಲಿ ಹೆಚ್ಚಾಗಿ ವ್ಯಕ್ತಿ ನಿಷ್ಠತೆಯ ಪ್ರಭಾವವಿದ್ದು ಅದನ್ನು ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಾಗದಿರುವುದು ಈ ಪರಿಸ್ಥಿತಿಗೆ ಕಾರಣಗಳಾಗಿರಬಹುದು.

**ಸೀಶೋರ್ ಮೆಶರ್ಸ್ ಆಫ್ ಮ್ಯೂಸಿಕಲ್ ಟ್ಯಾಲೆಂಟ್:**

ಸೀಶೋರ್ ಎಂಬುವನು 1939ರಲ್ಲಿ ಸಿದ್ಧಪಡಿಸಿ, 1956ರಲ್ಲಿ ಸಂಶೋಧಿಸಿದ ಈ ಪರೀಕ್ಷಣ ಮೊಟ್ಟ ಮೊದಲಿನ ಸಂಗೀತ ಅಭಿಸಾಮರ್ಥ್ಯ ಪರೀಕ್ಷೆಯಾಗಿದೆ. ಈ ಪರೀಕ್ಷೆಯನ್ನು

Digitised by Bharatavani, CIIL

4ನೇ ಗ್ರೇಡ್‌ನಿಂದ ಕಾಲೇಜು ಮಟ್ಟದ ವಿದ್ಯಾರ್ಥಿಗಳಿಗೆ ಉಪಯೋಗಿಸಬಹುದು. ಈ ಪರೀಕ್ಷೆ ಗ್ರಾಮಾಫೋನ್ ರೆಕಾರ್ಡ್‌ನ ಸಹಾಯದಿಂದ ಕೊಡಬಹುದಾದ ಈ ಕೆಳಗಿನ 6 ಉಪಪರೀಕ್ಷೆಗಳನ್ನು ಹೊಂದಿದೆ–

(1) ಸ್ವರತಾರತ್ವ (Pitch) ವಿಭೇಧೀಕರಣ–ಎರಡು ಧ್ವನಿ(tone) ಗಳಲ್ಲಿ ಯಾವುದು ಮೇಲ್ಮಟ್ಟದ್ದು ಎಂದು ಗುರ್ತಿಸಬೇಕು.

(2) ಧ್ವನಿಯ ತೀವ್ರತೆ ಅಥವಾ ಗಟ್ಟಿತನದ ವಿಬೇಧೀಕರಣ– ವಿಭಿನ್ನ ತೀವ್ರತೆಯ ಧ್ವನಿ ಜೋಡಿಗಳಲ್ಲಿ ಯಾವುದು ಹೆಚ್ಚು ತೀವ್ರ ಎಂದು ಹೇಳಬೇಕು.

(3) ಸಮಯ ವಿಭೇಧೀಕರಣ ಎರಡು ಸಲ ಮಾಡಿದ ಧ್ವನಿಯ ಸಮಯಗಳಲ್ಲಿ ಯಾವುದು ದೀರ್ಘವಾದುದು ಎಂದು ಹೇಳುವುದು.

(4) ನಾದ ಗುಣದ (Timbre) ವಿಭೇಧೀಕರಣ– ಎರಡು ಧ್ವನಿಗಳು ನಾದಗುಣದಲ್ಲಿ ಒಂದೇ ರೀತಿಯವೋ ಅಥವಾ ಭಿನ್ನವಾದವುಗಳೋ ಎಂದು ಹೇಳುವುದು.

(5) ಲಯದ ತೀರ್ಮಾನ– ಜೋಡಿ ಲಯಗಳಲ್ಲಿ ಅವು ಒಂದೇ ರೀತಿಯವೋ ಭಿನ್ನವಾದವುಗಳೋ ಎಂದು ತೀರ್ಮಾನಿಸುವುದು.

(6) ಧ್ವನಿ ಸ್ಮರಣೆ– ಎರಡು ಧ್ವನಿಗಳನ್ನು ಕೇಳಿಸಲಾಗುವುದು. ಅವುಗಳ ನಡುವಣ ವ್ಯತ್ಯಾಸವನ್ನು ಸ್ಮರಣೆಯಲ್ಲಿಟ್ಟುಕೊಂಡು ಹೇಳುವುದು.

ಈ ಪರೀಕ್ಷೆಯಲ್ಲಿ ಈ ಆರು ಉಪಪರೀಕ್ಷೆಗಳ ಒಟ್ಟು ಅಂಕಗಳನ್ನು ತೆಗೆದುಕೊಳ್ಳದೆ, ಅವುಗಳ ಪರಿಶ್ಲೇಧಿಕೆಯನ್ನು (Profile) ರೂಪಿಸಿ ವ್ಯಕ್ತಿಯ ಸಂಗೀತ ಅಭಿಸಾಮರ್ಥ್ಯವನ್ನು ನಿರ್ಧರಿಸಲಾಗುತ್ತದೆ.

ವಿಂಗ್ ಸ್ಟ್ಯಾಂಡರ್ಡೈಜ್ಡ್ ಟೆಸ್ಟ್ ಆಫ್ ಮ್ಯೂಸಿಕಲ್ ಇಂಟೆಲಿಜೆನ್ಸ್, ಇದು ಸಂಗೀತ ಅಭಿಸಾಮರ್ಥ್ಯದ ಮತ್ತೊಂದು ಪರೀಕ್ಷೆ. ಇದು 8 ವರ್ಷದಿಂದ ಮೇಲ್ಪಟ್ಟವರಿಗೆ ಸೂಕ್ತವಾಗಿದೆ. ಇದು ಸಂಗೀತಕ್ಕೆ ಸಂಬಂಧಿಸಿದ 7 ಅಂಶಗಳನ್ನು ಪರೀಕ್ಷಿಸುತ್ತದೆ.

ಡ್ರೇಕ್ ಮ್ಯೂಸಿಕಲ್ ಆಪ್ಟಿಟ್ಯೂಡ್ ಟೆಸ್ಟ್. ಸಂಗೀತ ಸ್ಮರಣೆ ಮತ್ತು ಲಯವನ್ನು ಪರೀಕ್ಷಿಸುತ್ತದೆ.

ರೇಖಾಚಿತ್ರ ಕಲಾ ಪರೀಕ್ಷೆಗಳು– ರೇಖಾಚಿತ್ರ ಕಲೆಗಳ (Graphic Arts) ಪರೀಕ್ಷೆಗಳನ್ನು ರೂಪಿಸುವುದರಲ್ಲಿ ಮತ್ತು ಸಂಗೀತ ಪರೀಕ್ಷಣಗಳನ್ನು ರೂಪಿಸುವುದರಲ್ಲಿ ಕೆಲವು ಸಮಸ್ಯೆಗಳಿವೆ. ಆದರೂ ಈ ಕ್ಷೇತ್ರಗಳಲ್ಲಿ ಕೆಲವು ಪ್ರಸಿದ್ಧ ಪರೀಕ್ಷೆಗಳನ್ನು ರೂಪಿಸಲಾಗಿದೆ.

ಗ್ರೇವ್ಸ್ (Graves) ಡಿಸೈನ್ ಜಡ್ಜ್‌ಮೆಂಟ್ ಟೆಸ್ಟ್– ಈ ಪರೀಕ್ಷೆ ಕಲಾ ವಿನ್ಯಾಸಗಳ 'ಐಕ್ಯತೆ, ಪ್ರಧಾನತೆ, ವೈವಿಧ್ಯತೆ, ಸಮತೋಲನ, ನಿರಂತರತೆ, ಸಮಪಾರ್ಶ್ವತೆ (Symmetry), ಅನುಪಾತ ಮತ್ತು ಲಯ'– ಈ ಲಕ್ಷಣಗಳನ್ನು ತೀರ್ಮಾನಿಸುವ ಸಾಮರ್ಥ್ಯವನ್ನು ಅಳತೆ ಮಾಡುತ್ತದೆ. ಈ ಪರೀಕ್ಷೆಯಲ್ಲಿ ವಿವಿಧ ವಿನ್ಯಾಸಗಳ ಜೋಡಿಗಳ ಅಥವಾ ತ್ರಿವಳಿ ಚಿತ್ರಗಳಿವೆ. ಇವುಗಳಲ್ಲಿ ಒಂದು ವಿನ್ಯಾಸ ಮೇಲೆ ಹೇಳಿದ ಎಂಟು ಲಕ್ಷಣಗಳ ಆಧಾರದ ಮೇಲೆ ರಚಿತವಾಗಿರುತ್ತದೆ. ಉಳಿದ ಒಂದು/ಎರಡು ವಿನ್ಯಾಸಗಳಲ್ಲಿ ಈ ಲಕ್ಷಣಗಳಲ್ಲಿ ಕೆಲವು ಇರುವುದಿಲ್ಲ. ವ್ಯಕ್ತಿ ವಿನ್ಯಾಸಗಳಲ್ಲಿ ಯಾವ ವಿನ್ಯಾಸ ಹೆಚ್ಚು ಕಲಾತ್ಮಕವಾಗಿದೆ ಎಂದು ತೀರ್ಮಾನಿಸಿ ಆಯ್ಕೆ ಮಾಡಬೇಕು.

ಮಯರ್ಸ್(Meier) ಆರ್ಟ್ ಜಡ್ಜ್‌ಮೆಂಟ್ ಟೆಸ್ಟ್ ಸೌಂದರ್ಯಾತ್ಮಕ ತೀರ್ಮಾನವನ್ನು (Esthetic judgement) ಪರೀಕ್ಷಿಸುತ್ತದೆ. ಇದರಲ್ಲಿ ಕಪ್ಪು–ಬಿಳುಪು ವರ್ಣದ 100 ಜೊತೆ ಚಿತ್ರಗಳಿವೆ. ಇವುಗಳಲ್ಲಿ ಒಂದು ಚಿತ್ರಕಲಾ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದ ಕಲಾವಿದರು ಸೃಷ್ಟಿಸಿದ ಚಿತ್ರವಾಗಿರುತ್ತದೆ. ಮತ್ತೊಂದನ್ನು ಮೂಲಚಿತ್ರದಿಂದ ಒಂದು ಮುಖ್ಯ ಅಂಶದಲ್ಲಿ ವ್ಯತ್ಯಾಸಗೊಳಿಸಿ ಅದನ್ನು ಮೂಲಚಿತ್ರಕ್ಕಿಂತ ಕಳಪೆಯಾಗುವಂತೆ ಬದಲಾಯಿಸಿ ಚಿತ್ರಿಸಲಾಗಿದೆ. ವ್ಯಕ್ತಿಗೆ ಈ ಜೋಡಿ ಚಿತ್ರಗಳಲ್ಲಿ ಯಾವ ಅಂಶವನ್ನು ಬದಲಾಯಿಸಲಾಗಿದೆ ಎಂಬುದನ್ನು ಹೇಳಲಾಗುತ್ತದೆ, ಆದರೆ ಅದನ್ನು ಯಾವ ಚಿತ್ರದಲ್ಲಿ ಮಾಡಲಾಗಿದೆ ಎನ್ನುವುದನ್ನು ಹೇಳುವುದಿಲ್ಲ. ವ್ಯಕ್ತಿ ಈ ಜೋಡಿ ಚಿತ್ರಗಳಲ್ಲಿ ತನ್ನ ಇಷ್ಟದ ಚಿತ್ರದ ಆಯ್ಕೆಯನ್ನು ಸೂಚಿಸಬೇಕು. ವ್ಯಕ್ತಿಯ ಸರಿಯಾದ ಆಯ್ಕೆಗಳ (ಮೂಲ ಚಿತ್ರವನ್ನು ಗುರ್ತಿಸುವುದು) ಸಂಖ್ಯೆಯ ಆಧಾರದ ಮೇಲೆ ವ್ಯಕ್ತಿಯ ಕಲಾ ತೀರ್ಮಾನ ಸಾಮರ್ಥ್ಯವನ್ನು ನಿರ್ಣಯಿಸಲಾಗುತ್ತದೆ.

ನಾಬರ್ (Knaaber) ಆರ್ಟ್ ಎಬಿಲಿಟಿ ಟೆಸ್ಟ್– ಈ ಪರೀಕ್ಷೆಯಲ್ಲಿ ವ್ಯಕ್ತಿ ಬರೆಯುವ ಚಿತ್ರಗಳನ್ನು ಮೌಲ್ಯಮಾಪನ ಮಾಡಿ ಅಂಕನಿರ್ಧಾರ ಮಾಡಲಾಗುತ್ತದೆ. ಈ ಪರೀಕ್ಷೆಯನ್ನು 7 ರಿಂದ 16ನೇ ಗ್ರೇಡ್‌ನವರಿಗಾಗಿ ರೂಪಿಸಲಾಗಿದೆ. ಈ ಪರೀಕ್ಷೆ ಸ್ಮರಣೆಯಿಂದ ವಿನ್ಯಾಸ ಬರೆಯುವುದು, ಸ್ಥಳದ ಮಿತಿಯೊಳಗೆ ಸ್ಮರಣೆಯಿಂದ ಚಿತ್ರ ಬರೆಯುವುದು, ಜನಪ್ರಿಯ ವ್ಯಕ್ತಿತ್ವಗಳನ್ನು ಚಿತ್ರಿಸುವುದು, ಕೊಟ್ಟ ಅಂಶಗಳಿಂದ ಚಿತ್ರ ಬರೆಯುವುದು, ಚಿತ್ರಗಳಲ್ಲಿ/ವಿನ್ಯಾಸಗಳಲ್ಲಿ ತಪ್ಪುಗಳನ್ನು ಗುರ್ತಿಸುವುದು ಮುಂತಾದ ಕಾರ್ಯಗಳನ್ನು ಒಳಗೊಂಡಿದೆ. ವ್ಯಕ್ತಿ ಬರೆದ ಚಿತ್ರಗಳನ್ನು ಸೂಚನೆಗಳಿಗೆ ಅನುಸಾರವಾಗಿ ಅಂಕನಿರ್ಧಾರ ಮಾಡಲಾಗುತ್ತದೆ.

ಹಾರ್ನ್ (Horn) ಆರ್ಟ್ ಆಪ್ಟಿಟ್ಯೂಡ್ ಇನ್‌ವೆಂಟರಿ– ಈ ಪರೀಕ್ಷೆಯನ್ನು ಕಲಾ ಶಾಲೆಗಳಿಗೆ ಸೇರಬಯಸುವ ವಿದ್ಯಾರ್ಥಿಗಳನ್ನು ಪರೀಕ್ಷಿಸಲು ರೂಪಿಸಲಾಗಿದೆ. ಈ ಪರೀಕ್ಷೆ ಮುಖ್ಯವಾಗಿ ವ್ಯಕ್ತಿಗಳ ಚಿತ್ರ ಕಲೆಯಲ್ಲಿನ ಸೃಜನಶೀಲತೆಯನ್ನು ಪರೀಕ್ಷಿಸುತ್ತದೆ. ಇದರಲ್ಲಿ ಎರಡು ಭಾಗಗಳಿವೆ. ಪರೀಕ್ಷೆಯ ಭಾಗ ಒಂದರಲ್ಲಿ ವ್ಯಕ್ತಿ 20 ಪರಿಚಿತ ವಸ್ತುಗಳ (ವೃತ್ತ, ಮನೆ, ಪುಸ್ತಕ ಇತ್ಯಾದಿ) ಚಿತ್ರವನ್ನು ಕೊಟ್ಟ ಕಾಲಮಿತಿಯಲ್ಲಿ ಬರೆಯಬೇಕಾಗುತ್ತದೆ. ಇದಲ್ಲದೆ ಕೊಟ್ಟ ವೃತ್ತಗಳು, ತ್ರಿಕೋನಗಳು ಮುಂತಾದವುಗಳನ್ನು ಉಪಯೋಗಿಸಿ ವಿನ್ಯಾಸಗಳನ್ನು ಬರೆಯಬೇಕು. ಭಾಗ ಎರಡರಲ್ಲಿ ಮೇಲ್ಮಟ್ಟದ ಸಂಕೀರ್ಣ

Digitised by Bharatavani, CIIL

ಸೃಜನಶೀಲತೆಗೆ ಅವಕಾಶ ಕಲ್ಪಿಸಲಾಗಿದೆ. ಈ ಭಾಗಕ್ಕೆ 'ಬಿಂಬಕಲ್ಪನೆ' (Imagery) ಎಂದು ಹೆಸರು. ವ್ಯಕ್ತಿಗೆ 12 ಆಯತಾಕಾರದ ಕಾರ್ಡುಗಳನ್ನು ಕೊಡಲಾಗುತ್ತದೆ. ಪ್ರತಿಯೊಂದು ಕಾರ್ಡಿನಲ್ಲೂ ಬೇರೆ ಬೇರೆ ರೀತಿಯಲ್ಲಿ ಕೆಲವು ಗೆರೆಗಳನ್ನು ಬರೆದಿರುತ್ತದೆ. ಈ ಗೆರೆಗಳು ವ್ಯಕ್ತಿ ಬರೆಯುವ ಚಿತ್ರದ ಆಧಾರವಾಗುತ್ತವೆ. ವ್ಯಕ್ತಿಗೆ ಈ ಗೆರೆಗಳನ್ನು ಒಳಗೊಳ್ಳುವಂತೆ ತನ್ನ ಕಲ್ಪನೆಯಿಂದ ಯಾವುದಾದರೂ ಚಿತ್ರವನ್ನು ಕೊಟ್ಟ ಕಾಲಮಿತಿಯೊಳಗೆ ಬರೆಯಲು ಸೂಚಿಸಲಾಗುತ್ತದೆ. ಈ ಚಿತ್ರಗಳನ್ನು ಸೃಜನಾತ್ಮಕ ಕಲ್ಪನೆ ಮತ್ತು ತಾಂತ್ರಿಕ ಲಕ್ಷಣಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿ ಅಂಕ ನಿರ್ಧಾರ ಮಾಡಲಾಗುತ್ತದೆ ಅಂಕ ನಿರ್ಧಾರದಲ್ಲಿ ವ್ಯಕ್ತಿನಿಷ್ಠತೆಯನ್ನು ಕಡಿಮೆ ಮಾಡಲು ಅತ್ಯುತ್ತಮ, ಸರಾಸರಿ ಮತ್ತು ಕಳಪೆ ಎನ್ನಬಹುದಾದ ಚಿತ್ರಗಳ ಉದಾಹರಣೆಗಳನ್ನು ಒದಗಿಸಲಾಗಿದೆ.

ಮಯರ್ಸ್ ಅನೇಕ ವರ್ಷಗಳ ಅಧ್ಯಯನ ಮತ್ತು ಪ್ರಯೋಗಗಳ ಆಧಾರದ ಮೇಲೆ ತನ್ನ ಕಲಾ ತೀರ್ಮಾನ ಪರೀಕ್ಷೆ ಕಾರಕಾಂಶಗಳನ್ನು ಮೌಲ್ಯಮಾಪನ ಮಾಡುತ್ತದೆ ಎಂಬ ತೀರ್ಮಾನಕ್ಕೆ ಬಂದಿದ್ದಾನೆ. ಆ ಕಾರಕಾಂಶಗಳು ಹೀಗಿವೆ–

(i) ಹಸ್ತಕೌಶಲ– ಗೆರೆಗಳನ್ನು ಎಳೆಯುವುದರಲ್ಲಿ ಕೌಶಲ್ಯ.

(ii) ಶಕ್ತಿ ಮತ್ತು ಪಟ್ಟು ಹಿಡಿಯುವಿಕೆ– ಉತ್ಸಾಹ ಮತ್ತು ಕೆಲಸವನ್ನು ಸತತವಾಗಿ ಮುಂದುವರಿಸುವಿಕೆ.

(iii) ಸೌಂದರ್ಯಾತ್ಮಕ ಬುದ್ಧಿಶಕ್ತಿ– ಸಾಮಾನ್ಯ ಬುದ್ಧಿಶಕ್ತಿಯನ್ನು ಕಲೆಗೆ ಸಂಬಂಧಿಸಿದಂತೆ ಉಪಯೋಗಿಸುವುದು.

(iv) ಪ್ರತ್ಯಕ್ಷಾನುಭವ ಸುಗಮತೆ– ಕಲೆಗೆ ಪ್ರಸ್ತುತದಲ್ಲಿ ಮತ್ತು ಭವಿಷ್ಯದಲ್ಲಿ ಮಹತ್ವಪೂರ್ಣ ಅಂತಃಸತ್ವವಿರುವ ಪ್ರತ್ಯಕ್ಷಾನುಭವಗಳಿಗೆ ಶೀಘ್ರವಾಗಿ ಪ್ರತಿಕ್ರಿಯಿಸುವ ಮತ್ತು ಅವುಗಳನ್ನು ತನ್ನದಾಗಿಸಿಕೊಳ್ಳುವ ಸಾಮರ್ಥ್ಯ.

(v) ಸೃಜನಾತ್ಮಕ ಕಲ್ಪನಾಶೀಲತೆ– ಸಂವೇದನ ಬಿಂಬಗಳನ್ನು ಸ್ಪಷ್ಟವಾಗಿ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅವುಗಳಿಂದ ಸೌಂದರ್ಯಾತ್ಮಕ ರಚನೆಗಳನ್ನು ಸೃಷ್ಟಿಸುವುದು.

(vi) ಸೌಂದರ್ಯಾತ್ಮಕ ನಿರ್ಣಯ– ಒಂದು ಬಿಂಬ ಸಂಘಟನೆಯಲ್ಲಿ ಅಂಶಗಳ ನಡುವಣ ಸಂಬಂಧದ ಸೌಂದರ್ಯಾತ್ಮಕ ಗುಣವನ್ನು ಗುರ್ತಿಸುವುದು.

**ವೃತ್ತಿ ಅಭಿಸಾಮರ್ಥ್ಯ ಪರೀಕ್ಷೆಗಳು:** ಈ ವರ್ಗದಲ್ಲಿ ಬರುವ ಪರೀಕ್ಷೆಗಳಲ್ಲಿ ವೈದ್ಯಕೀಯ, ನ್ಯಾಯಶಾಸ್ತ್ರ, ಶಿಕ್ಷಕ ಮತ್ತು ವಿಜ್ಞಾನ ಮತ್ತು ಇಂಜಿನಿಯರಿಂಗ್ ಅಭಿಸಾಮರ್ಥ್ಯ ಪರೀಕ್ಷೆಗಳು ಸೇರುತ್ತವೆ. ಇವುಗಳನ್ನು ಆಯಾ ವೃತ್ತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಉಪಯೋಗಿಸಲಾಗುತ್ತದೆ. ಈ ಅಭಿಸಾಮರ್ಥ್ಯಗಳು ನಿರ್ದಿಷ್ಟ ಅಭಿಸಾಮರ್ಥ್ಯಗಳಲ್ಲ. ಅನೇಕ ಉಪಸಾಮರ್ಥ್ಯಗಳ ಸಮೂಹವನ್ನು ಇವು ಅಳತೆ ಮಾಡುತ್ತವೆ. ಮನೋವಿಜ್ಞಾನಿಗಳು ಈ ವೃತ್ತಿಗಳ ಸ್ವರೂಪವನ್ನು, ಕಾರ್ಯವನ್ನು ವಿಶ್ಲೇಷಣೆ ಮಾಡಿ ಆಯಾ ವೃತ್ತಿಯಲ್ಲಿನ ಸಫಲತೆಗೆ ಮುಖ್ಯವೆನಿಸುವ ಸಾಮರ್ಥ್ಯಗಳನ್ನು ಗುರ್ತಿಸಿ, ಅವುಗಳನ್ನು ವ್ಯಾಖ್ಯಾನ ಮಾಡಿ ಅವುಗಳನ್ನು ಅಳತೆ ಮಾಡಲು ಸೂಕ್ತ ಉಪಪರೀಕ್ಷೆಗಳನ್ನು ರೂಪಿಸಿದ್ದಾರೆ. ಈ ಉಪ–ಸಾಮರ್ಥ್ಯಗಳ ಒಂದು ಸಮೂಹವನ್ನೇ ಆಯಾವೃತ್ತಿಯ ಅಭಿಸಾಮರ್ಥ್ಯ ಪರೀಕ್ಷೆ ಎಂದು ಅರ್ಥೈಸಿದ್ದಾರೆ.

**(A) ವೈದ್ಯಕೀಯ ಅಭಿಸಾಮರ್ಥ್ಯ:** F.A. ಮಾಸ್ ಎಂಬುವನು ರೂಪಿಸಿದ ಆಪ್ಟಿಟ್ಯೂಡ್ ಟೆಸ್ಟ್ ಫಾರ್ ಮೆಡಿಕಲ್ ಸ್ಟೂಡೆಂಟ್ಸ್ ಪರೀಕ್ಷೆ ಬಹಳ ಹಿಂದೆಯೇ ಪ್ರಪ್ರಥಮವಾಗಿ ರೂಪಿಸಿದ್ದು ಅನೇಕ ಸಲ ಪರಿಷ್ಕೃತಗೊಂಡಿದೆ. ಇದರಲ್ಲಿರುವ ಉಪ–ಪರೀಕ್ಷೆಗಳು ಹೀಗಿವೆ– ಚಾಕ್ಷುಷ ಸ್ಮರಣೆ (Visual memory), ವಿಷಯ ವಸ್ತುವಿನ(subject content) ಸ್ಮರಣೆ, ವೈಜ್ಞಾನಿಕ ಶಬ್ದಸಂಪತ್ತು, ಮುದ್ರಿತ ವಿಷಯವನ್ನು ಅರ್ಥ ಮಾಡಿಕೊಳ್ಳುವಿಕೆ, ವೈಜ್ಞಾನಿಕ ಪರಿಭಾಷೆಗಳು (ವ್ಯಾಖ್ಯೆಗಳು) ಮತ್ತು ತರ್ಕಬದ್ಧ ಯೋಚನೆ (logical reasoning), ಈ ಕಾರಕಾಂಶಗಳನ್ನು ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿನ ಪರಿಣಿತರ ನಿರ್ಣಯದ ಆಧಾರದ ಮೇಲೆ ಪರೀಕ್ಷಣದಲ್ಲಿ ಸೇರಿಸಲಾಗಿದೆ. ಹೀಗಾಗಿ ಈ ಪರೀಕ್ಷಣ ವಿಷಯವಸ್ತು ಸಿಂಧುತ್ವವನ್ನು (content validity) ಹೊಂದಿದೆ ಎಂದು ಹೇಳಲಾಗಿದೆ.

**ಮೆಡಿಕಲ್ ಕಾಲೇಜ್ ಅಡ್ಮಿಷನ್ ಟೆಸ್ಟ್:** ಈ ಪರೀಕ್ಷೆಯ ಲೇಖಕರು ಹೇಳುವಂತೆ ಈ ಪರೀಕ್ಷೆಯ ಉದ್ದೇಶ ವೈದ್ಯಕೀಯ ಪ್ರವೇಶಕ್ಕೆ ಬರುವ ವಿದ್ಯಾರ್ಥಿಯ ಸಾಮಾನ್ಯ ಸಾಮರ್ಥ್ಯದ ಮತ್ತು ಒಂದು ವಿಶಿಷ್ಟ ಅಧ್ಯಯನ ಕ್ಷೇತ್ರದಲ್ಲಿ ವಿದ್ಯಾರ್ಥಿಯ ಸಾಧನೆಯ ಬಗ್ಗೆ ವಿಶ್ವಾಸಾರ್ಹ ಅಳತೆಯನ್ನು ಒದಗಿಸುವುದಾಗಿದೆ. ಈ ಪರೀಕ್ಷಣ ಈ ಮುಂದೆ ಹೇಳುವ ನಾಲ್ಕು ಭಾಗಗಳನ್ನು (ಉಪ–ಪರೀಕ್ಷೆಗಳನ್ನು) ಒಳಗೊಂಡಿದೆ.

(i) **ಶಾಬ್ದಿಕ ಸಾಮರ್ಥ್ಯ (Verbal Ability)–** ಇದು ಶಬ್ದ ಸಂಪತ್ತಿನ ಪರೀಕ್ಷೆಯಾಗಿದೆ.

(ii) **ಪರಿಮಾಣಾತ್ಮಕ ಸಾಮರ್ಥ್ಯ(Quantitative Ability)–** ಪರಿಮಾಣಾತ್ಮಕ ಪರಿಕಲ್ಪನೆಗಳನ್ನು ಮತ್ತು ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು.

(iii) **ಆಧುನಿಕ ಸಮಾಜವನ್ನು ಅರ್ಥಮಾಡಿಕೊಳ್ಳುವುದು–** ಸಾಮಾನ್ಯ ಮಾಹಿತಿ– Understanding Modern Society-General Information- ಇತಿಹಾಸ, ಅರ್ಥಶಾಸ್ತ್ರ, ಸರ್ಕಾರ, ಸಮಾಜಶಾಸ್ತ್ರ ಮುಂತಾದ ವಿಷಯಗಳಲ್ಲಿ ಸಾಮಾನ್ಯ ಮಾಹಿತಿಯ ಜ್ಞಾನ.

(iv) **ವಿಜ್ಞಾನ (Science)–** ಕಾಲೇಜು ಮಟ್ಟದ ಜೀವಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರ ವಿಷಯಗಳಿಂದ ಆಯ್ದ ಪರಿಕಲ್ಪನೆಗಳ, ನಿಯಮಗಳ ಮತ್ತು ಸಮಸ್ಯೆಗಳ ಜ್ಞಾನ.

**(B) ನ್ಯಾಯಶಾಸ್ತ್ರ ಅಭಿಸಾಮರ್ಥ್ಯ–** ಈ ಕ್ಷೇತ್ರದಲ್ಲಿಯೂ ಕೆಲವು ಪರೀಕ್ಷೆಗಳನ್ನು ನ್ಯಾಯಶಾಸ್ತ್ರದ ಸಫಲತೆಗೆ ಬೇಕಾದ ಸಾಮರ್ಥ್ಯಗಳನ್ನು ಗುರ್ತಿಸಿ ಅವುಗಳ ಆಧಾರದ ಮೇಲೆ

Digitised by Bharatavani, CIIL

ರೂಪಿಸಲಾಗಿದೆ. ನ್ಯಾಯಶಾಸ್ತ್ರದಲ್ಲಿ ಈ ಸಾಮರ್ಥ್ಯಗಳು ಮಹತ್ವಪೂರ್ಣವೆನ್ನಿಸುತ್ತವೆ. ಸಾಪೇಕ್ಷವಾಗಿ ಕಠಿಣವಾಗಿರುವ ಸಾಮಗ್ರಿಯನ್ನು ಶೀಘ್ರವಾಗಿ ಓದಿ ಗ್ರಹಿಸುವುದು, ನಿಖರವಾಗಿ ಸ್ಮರಿಸಿಕೊಳ್ಳುವುದು, ಸಾದೃಶ್ಯದಿಂದ ತರ್ಕಿಸುವುದು (reasoning by anology), ತಥ್ಯಾಂಶಗಳ (facts) ರಾಶಿಯಲ್ಲಿ ಸಂಬಂಧಪಟ್ಟ ಮತ್ತು ಸಂಬಂಧಪಡದವುಗಳನ್ನು ಪ್ರತ್ಯೇಕಿಸುವುದು, ನಿರ್ಗಮನ ಮತ್ತು ಅನುಗಮನ (Inductive and Deductive) ರೀತಿಗಳಲ್ಲಿ ತರ್ಕಿಸುವುದು ಮತ್ತು ಶಬ್ದಗಳನ್ನು ಆರ್ಜಿಸುವುದು ಮತ್ತು ಉಪಯೋಗಿಸುವುದು.

**ಲಾ ಸ್ಕೂಲ್ ಅಡ್ಮಿಶನ್ ಟೆಸ್ಟ್–** ಅಮೇರಿಕಾದ ಎಜುಕೇಷನಲ್ ಟೆಸ್ಟಿಂಗ್ ಸರ್ವೀಸ್ ಈ ಪರೀಕ್ಷಣವನ್ನು 1948ರಲ್ಲಿ ರೂಪಿಸಿತು. ಇದು ವಕೀಲಿ ವೃತ್ತಿಯಲ್ಲಿನ ಸಫಲತೆಗೆ ಬೇಕಾದ ಸಾಮರ್ಥ್ಯಗಳನ್ನು ಅಳತೆ ಮಾಡುತ್ತದೆ. ಇದರಲ್ಲಿರುವ 7 ಉಪ–ಪರೀಕ್ಷೆಗಳು ಹೀಗಿವೆ.

i) ನಿಯಮಗಳು ಮತ್ತು ಮೊಕದ್ದಮೆಗಳು (cases)- ಕೊಟ್ಟಿರುವ ನಿಯಮಗಳಲ್ಲಿ ದತ್ತ ಮೊಕದ್ದಮೆಗೆ ಸಂಬಂಧಿಸಿದ ನಿಯಮಗಳನ್ನು ಗುರ್ತಿಸುವುದು

ii) ದತ್ತಾಂಶಗಳನ್ನು ವ್ಯಾಖ್ಯಾನಿಸುವುದು– ತಾಲಿಕೆಗಳು, ಚಾರ್ಟ್‌ಗಳು ಮತ್ತು ನಕ್ಷೆಗಳನ್ನು ವ್ಯಾಖ್ಯಾನಿಸುವುದು, ಪರಿಮಾಣಾತ್ಮಕವಾಗಿ ತರ್ಕಿಸುವುದು.

iii) ಓದಿದ್ದನ್ನು ಗ್ರಹಿಸುವುದು– ವಾಕ್ಯವೃಂದಗಳನ್ನು ಓದಿ ಅವುಗಳ ವಿಷಯ ವಸ್ತುವಿನ ಬಗ್ಗೆ ನೇರವಾದ, ನಿಹಿತಾರ್ಥದ ಪ್ರಶ್ನೆಗಳಿಗೆ ಉತ್ತರಿಸುವುದು.

iv) ಓದಿದ್ದನ್ನು ಗ್ರಹಿಸಿ, ಸ್ಮರಣೆಯಿಂದ ಹೇಳುವುದು – ಓದಿದ್ದರ ಬಗ್ಗೆ ಕೇಳುವ ಪ್ರಶ್ನೆಗಳಿಗೆ ಸ್ಮರಣೆಯಿಂದ ಉತ್ತರಿಸುವುದು.

v) ಬರವಣಿಗೆ ಸಾಮರ್ಥ್ಯ– ಭಾಷೆಯಲ್ಲಿನ ತಪ್ಪುಗಳನ್ನು ಗುರ್ತಿಸುವುದು ಮತ್ತು ಅವುಗಳನ್ನು ಸರಿಪಡಿಸುವುದು

vi) ವಿಚಾರಗಳ ಸಂಘಟನೆ– ಕೊಟ್ಟಿರುವ ಹೇಳಿಕೆಗಳನ್ನು ಕೇಂದ್ರವಿಚಾರ, ಮುಖ್ಯ ಪೋಷಕ ವಿಚಾರ, ಸಂಬಂಧವಿಲ್ಲದ ವಿಚಾರ, ಉದಾಹರಣೆಯಾಗಿ ತಥ್ಯಾಂಶ ಎಂದು ವರ್ಗೀಕರಿಸುವುದು.

vii) ಆಕೃತಿ ವರ್ಗೀಕರಣ– ಅಶಾಬ್ದಿಕ, ತಾರ್ಕಿಕ ಪರೀಕ್ಷೆ– ಆಕೃತಿಗಳನ್ನು ತಾರ್ಕಿಕ ಆಧಾರದ ಮೇಲೆ ವರ್ಗೀಕರಿಸುವುದು

**ಬೋಧನ ಅಭಿಸಾಮರ್ಥ್ಯ–** ಅಧ್ಯಾಪಕರ ಆಯ್ಕೆಗೆ ಅಭಿಸಾಮರ್ಥ್ಯ ಪರೀಕ್ಷೆಯನ್ನು ರೂಪಿಸುವುದು ಬಹಳ ಕಷ್ಟವಾದ ಕಾರ್ಯವೆಂದು ಮನೋವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ವೈದ್ಯಕೀಯ ಮತ್ತು ನ್ಯಾಯ ವೃತ್ತಿಯಂತೆ ಅಧ್ಯಾಪಕರ ಕಾರ್ಯವನ್ನು ಸ್ಪಷ್ಟವಾಗಿ ನಿರೂಪಿಸುವುದು ಕಷ್ಟಸಾಧ್ಯವಾದ ಕಾರ್ಯವಾಗಿದೆ. ಏಕೆಂದರೆ ಬೋಧನ ಕಾರ್ಯ ವಿಷಯಗಳ ಸ್ವರೂಪಕ್ಕೆ ಅನುಗುಣವಾಗಿ ಬದಲಾಗುತ್ತದೆ ಮತ್ತು ಬೋಧನೆ ಅನೇಕ ವಿಷಯಗಳನ್ನು ಬೇರೆ ಬೇರೆ ಮಟ್ಟದ ವಿದ್ಯಾರ್ಥಿಗಳಿಗೆ ಬೋಧಿಸುವ ಕಾರ್ಯವನ್ನು ಒಳಗೊಳ್ಳುತ್ತದೆ. ಅದೂ ಅಲ್ಲದೆ ಬೋಧನ ಕಾರ್ಯದಲ್ಲಿ ಅಧ್ಯಾಪಕರ ಸಾಮಾನ್ಯ ಬುದ್ಧಿಶಕ್ತಿ ಮಟ್ಟ, ವಿಷಯದ ಬಗ್ಗೆ ಹೊಂದಿರುವ ಪಾಂಡಿತ್ಯ ಮತ್ತು ಅವರ ವ್ಯಕ್ತಿತ್ವ ಲಕ್ಷಣಗಳೂ ಬಹಳಷ್ಟು ಪ್ರಭಾವ ಬೀರುತ್ತವೆ. ಆದರೂ ಅಧ್ಯಾಪನ ಕ್ಷೇತ್ರದಲ್ಲಿ ಅಧ್ಯಾಪಕ ವೃತ್ತಿಗೆ ಆಯ್ಕೆ ಮಾಡಲು ಕೆಲವು ಅಭಿಸಾಮರ್ಥ್ಯ ಪರೀಕ್ಷಣಗಳನ್ನು ರೂಪಿಸಲಾಗಿದೆ. ವೈದ್ಯಕೀಯ ವೃತ್ತಿಯಂತೆಯೇ ಅಧ್ಯಾಪಕ ವೃತ್ತಿಯ ಅಭಿಸಾಮರ್ಥ್ಯ ಅನೇಕ ಸಂಬಂಧಿತ ಸಾಮರ್ಥ್ಯಗಳ ಸಮೂಹವಾಗಿದೆ.

**ನ್ಯಾಷನಲ್ ಟೀಚರ್ಸ್ ಎಕ್ಸಾಮಿನೇಷನ್–** ಇದು ಪ್ರಧಾನವಾಗಿ ವಿಷಯಗಳ ವಸ್ತುವನ್ನು (ಅವುಗಳಲ್ಲಿನ ಸಮಸ್ಯೆಗಳು ಮತ್ತು ಅನ್ವಯಿಕತೆಗಳು ಸೇರಿದಂತೆ) ಒಳಗೊಂಡಿದೆ. ಇದು ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳ ಶಿಕ್ಷಕರ ಆಯ್ಕೆಗೆ ಸೂಕ್ತವಾದುದಾಗಿದೆ. ಇದರಲ್ಲಿ ಎರಡು ಮುಖ್ಯ ಭಾಗಗಳಿವೆ (1) ಸಾಮಾನ್ಯ ಪರೀಕ್ಷೆ– ಈ ಭಾಗ ವೃತ್ತಿ ಸಂಬಂಧಿತ ಮಾಹಿತಿ, ಸಾಮಾಜಿಕ ಅಧ್ಯಯನ, ಸಾಹಿತ್ಯ, ಲಲಿತ ಕಲೆಗಳು, ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿಗಳು, ಇಂಗ್ಲಿಷ್ ಅಭಿವ್ಯಕ್ತಿ ಮತ್ತು ಅಶಾಬ್ದಿಕ ತರ್ಕ– ಇವುಗಳನ್ನು ಒಳಗೊಂಡಿದೆ (2) ಇದು ಐಚ್ಛಿಕ ಭಾಗವಾಗಿದ್ದು, ಇದರಲ್ಲಿ ಹನ್ನೊಂದು ವಿಷಯ ಕ್ಷೇತ್ರಗಳಲ್ಲಿ (ಜೀವಶಾಸ್ತ್ರ, ಸಂಗೀತ, ಇಂಗ್ಲಿಷ್, ಗಣಿತ ಇತ್ಯಾದಿ) ಬೋಧನೆಗೆ ಸಂಬಂಧಿಸಿದಂತೆ ಹನ್ನೊಂದು ಪ್ರತ್ಯೇಕ ಪರೀಕ್ಷೆಗಳಿವೆ. ವ್ಯಕ್ತಿ ಇವುಗಳಲ್ಲಿ ಒಂದು ಅಥವಾ ಎರಡು ಪರೀಕ್ಷೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಟೀಚರ್ ಎಜುಕೇಷನ್ ಎಕ್ಸಾಮಿನೇಷನ್ ಪ್ರೋಗ್ರಾಂ– ಇದು ಬಹುತೇಕ ಮೇಲೆ ವಿವರಿಸಿದ ಪರೀಕ್ಷಣದಂತೆಯೇ ಇದೆ.

**ಗ್ರಾಜುಯೇಟ್ ರೆಕಾರ್ಡ್ ಎಕ್ಸಾಮಿನೇಷನ್ಸ್ ಅಡ್ವಾನ್ಸ್‌ಡ್ ಟೆಸ್ಟ್– ಎಜುಕೇಷನ್–** ಇದು ಬೋಧನ ಅಭಿಸಾಮರ್ಥ್ಯದ ಪರೀಕ್ಷೆಯಾಗಿದೆಯಾದರೂ ಇದನ್ನು ಬೇರೊಂದು ಉದ್ದೇಶಕ್ಕಾಗಿ ಉಪಯೋಗಿಸಲಾಗುತ್ತದೆ. ಶಿಕ್ಷಣಶಾಸ್ತ್ರದಲ್ಲಿ ಪದವಿ ಕಾರ್ಯಕ್ರಮವನ್ನು ಅಧ್ಯಯನ ಮಾಡಲು ಇಚ್ಛಿಸುವ ಕಾಲೇಜು ಪದವೀಧರರ ಅರ್ಹತೆಗಳನ್ನು ಮೌಲ್ಯಮಾಪನ ಮಾಡಲು ಇದನ್ನು ಉಪಯೋಗಿಸಲಾಗುತ್ತದೆ. ಇದಕ್ಕಾಗಿ ಇದು ಶೈಕ್ಷಣಿಕ ತತ್ವಶಾಸ್ತ್ರ ಮತ್ತು ಮನೋವಿಜ್ಞಾನ, ಪಠ್ಯಕ್ರಮ, ಬೋಧನ ವಿಧಾನಗಳು ಇತ್ಯಾದಿ ಬೋಧನೆಗೆ ಸಂಬಂಧಿಸಿದ ವಿಷಯಕ್ಷೇತ್ರಗಳಿಗೆ ಸಂಬಂಧಿಸಿದ 200 ಪ್ರಶ್ನೆಗಳನ್ನು ಒಳಗೊಂಡಿದೆ.

**ವಿಜ್ಞಾನ ಮತ್ತು ಇಂಜಿನಿಯರಿಂಗ್ ಅಭಿಸಾಮರ್ಥ್ಯಗಳು–** ವಿಜ್ಞಾನ ಅಭಿಸಾಮರ್ಥ್ಯ ಸಂಗೀತ, ಕಲಾ ಸಾಮರ್ಥ್ಯಗಳಂತೆ ಇದು ಒಂದು ವಿಶಿಷ್ಟ ಸಾಮರ್ಥ್ಯವಲ್ಲ. ಸಾಮಾನ್ಯ ಬುದ್ಧಿಶಕ್ತಿ ಸಾಮರ್ಥ್ಯವನ್ನೇ ವೈಜ್ಞಾನಿಕ ಸಾಮಗ್ರಿಗಳಿಗೆ ಮತ್ತು ಸಮಸ್ಯೆಗಳಿಗೆ ಅನ್ವಯಿಸುವುದನ್ನೇ ವೈಜ್ಞಾನಿಕ ಅಭಿಸಾಮರ್ಥ್ಯ ಎಂದು ಹೇಳುವುದು ವಾಡಿಕೆಯಾಗಿದೆ. ಒಂದು ವೈಜ್ಞಾನಿಕ ಅಭಿಸಾಮರ್ಥ್ಯ ಪರೀಕ್ಷಣ ವೈಜ್ಞಾನಿಕ ಮತ್ತು

Digitised by Bharatavani, CIIL

ಎಂಜಿನಿಯರಿಂಗ್ ಉದ್ಯೋಗಗಳಲ್ಲಿ ಸಫಲತೆಯ ಸಂಭಾವ್ಯತೆಯನ್ನು ಅಂದಾಜಿಸುವ ಉದ್ದೇಶವನ್ನು ಹೊಂದಿರುತ್ತದೆ.

**ಸ್ಟ್ಯಾನ್‌ಫರ್ಡ್ ಸೈಂಟಿಫಿಕ್ ಆಪ್ಟಿಟ್ಯೂಡ್ ಟೆಸ್ಟ್–** 1930ರಲ್ಲಿ ರೂಪಿಸಿದ ಈ ಪರೀಕ್ಷಣ ಹೈಸ್ಕೂಲ್ ಸೀನಿಯರ್‌ಗಳಿಗೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಸೂಕ್ತವಾದುದಾಗಿದೆ. ಈ ಪರೀಕ್ಷಣದ ಉಪ–ಪರೀಕ್ಷೆಗಳು ಪ್ರಾಯೋಗಿಕ ಒಲವು, ಪರಿಭಾಷೆಗಳ ಸ್ಪಷ್ಟತೆ, ಹಿಡಿದಿಟ್ಟ ತೀರ್ಮಾನ ಅದಕ್ಕೆ ವಿರುದ್ಧವಾಗಿ ತತ್‌ಕ್ಷಣದ ತೀರ್ಮಾನ, ತರ್ಕಸುವಿಕೆ, ಅಸಂಗತೆಗಳು, ಮಿಥ್ಯಾಕಲ್ಪನೆಗಳು, ಅನುಗಮನ–ನಿಗಮನ, ಸಾಮಾನ್ಯೀಕರಣ, ಎಚ್ಚರಿಕೆ ಮತ್ತು ಅಮೂಲಾಗ್ರತೆ, ಪ್ರಾಯೋಗಿಕ ದತ್ತ ಸಾಮಗ್ರಿಗಳ ಆಯ್ಕೆಯಲ್ಲಿ ಮೌಲ್ಯಗಳ ವಿಬೇಧಿಕರಣ, ವ್ಯಾಖ್ಯಾನಿಸುವುದರಲ್ಲಿ, ವೀಕ್ಷಿಸುವುದರಲ್ಲಿ ನಿಖರತೆ–ಈ ಕಾರಕಾಂಶಗಳನ್ನು ಮೌಲ್ಯಮಾಪನ ಮಾಡುತ್ತದೆ. ಆದರೆ ಈಗ ಇದರ ಸ್ಥಾನದಲ್ಲಿ ಸ್ಕೊಲ್ಯಾಸ್ಟಿಕ್ ಆಪ್ಟಿಟ್ಯೂಡ್ ಟೆಸ್ಟ್‌ನಂಥ ಪರೀಕ್ಷೆಗಳು ರೂಪಿತವಾಗಿರುವುದರಿಂದ ಇದಕ್ಕೆ ಐತಿಹಾಸಿಕ ಮಹತ್ವ ಮಾತ್ರ ಇದೆ.

**ಇಂಜಿನಿಯರಿಂಗ್ ಎಂಡ್ ಫಿಸಿಕಲ್ ಸೈನ್ಸ್ ಆಪ್ಟಿಟ್ಯೂಡ್ ಟೆಸ್ಟ್–** ಮೂಲ್ ಮತ್ತು ಅವನ ಅನುಯಾಯಿಗಳಿಂದ ರೂಪಿಸಲ್ಪಟ್ಟ ಈ ಪರೀಕ್ಷೆ 6 ಉಪಪರೀಕ್ಷೆಗಳನ್ನು ಹೊಂದಿದೆ. ಅವು ಹೀಗಿವೆ– ಗಣಿತ (ಬೀಜಗಣಿತ), ಬೀಜಗಣಿತೋಕ್ತಿಗಳ ರೂಪದಲ್ಲಿ ವೈಜ್ಞಾನಿಕ ಸಂಬಂಧಗಳನ್ನು ನಿರೂಪಿಸುವುದು, ಭೌತವಿಜ್ಞಾನದ ಬಗ್ಗೆ ಮಾಹಿತಿಗಳು, ಅಂಕಗಣಿತೀಯ ತರ್ಕ, ವೈಜ್ಞಾನಿಕ ಶಬ್ದಸಂಪತ್ತು ಮತ್ತು ಚಿತ್ರರೂಪದಲ್ಲಿರುವ ಯಾಂತ್ರಿಕ ಸಂಬಂಧಗಳನ್ನು ಮತ್ತು ಸಮಸ್ಯೆಗಳನ್ನು ಗ್ರಹಿಸುವುದು.

**ಪ್ರೀ–ಇಂಜಿನಿಯರಿಂಗ್ ಎಬಿಲಿಟಿ ಟೆಸ್ಟ್–** ಅಮೇರಿಕಾದ ಶೈಕ್ಷಣಿಕ ಪರೀಕ್ಷಾ ಸೇವೆಯು(Educational Testing Service-ETS) ಸಿದ್ಧಪಡಿಸಿರುವ ಈ ಪರೀಕ್ಷೆ ವೈಜ್ಞಾನಿಕ ಸಾಮಗ್ರಿಗಳನ್ನು ಅರ್ಥಮಾಡಿಕೊಳ್ಳುವುದು (ಗ್ರಹಿಸುವುದು) ಮತ್ತು ಸಾಮಾನ್ಯ ಗಣಿತ ಶಾಸ್ತ್ರೀಯ ಸಾಮರ್ಥ್ಯ ಎಂಬ ಎರಡು ಭಾಗಗಳನ್ನು ಹೊಂದಿದೆ. ಮೊದಲನೆ ಭಾಗ ಓದುವುದು ಮತ್ತು ವಿಜ್ಞಾನದ ಪ್ರಶ್ನೆಗಳಿಗೆ ಉತ್ತರಿಸುವುದು, ತಾಲಿಕೆಗಳು, ನಕ್ಷೆಗಳನ್ನು ವ್ಯಾಖ್ಯಾನಿಸುವುದನ್ನು ಒಳಗೊಂಡಿದೆ. ಎರಡನೇ ಭಾಗದಲ್ಲಿ ಅಂಕಗಣಿತ, ಬೀಜಗಣಿತ ಮತ್ತು ರೇಖಾಗಣಿತಕ್ಕೆ (ವಿಶ್ಲೇಷಣಾತ್ಮಕ ರೇಖಾಗಣಿತವೂ ಸೇರಿದಂತೆ) ಸಂಬಂಧಿಸಿದ ಪರೀಕ್ಷಾಂಶಗಳಿವೆ.

**ಮಿನ್ನೆಸೋಟ ಇಂಜಿನಿಯರಿಂಗ್ ಅನಾಲಜೀಸ್ ಟೆಸ್ಟ್–** ಈ ಪರೀಕ್ಷಣವನ್ನು ಗ್ರಾಜುಯೇಟ್ ಶಾಲೆಗಳಿಗೆ ಪ್ರವೇಶ ಪಡೆಯಬಯಸುವ ಮತ್ತು ಉದ್ಯೋಗಕ್ಕೆ ಸೇರಲು ಇಚ್ಛಿಸುವ ವಿದ್ಯಾರ್ಥಿಗಳಿಗಾಗಿ ರೂಪಿಸಲಾಗಿದೆ. ಇದರ ಹೆಸರೇ ಸೂಚಿಸುವಂತೆ ಈ ಪರೀಕ್ಷೆಯ ಪರೀಕ್ಷಣಗಳು ಸಾದೃಶ್ಯಗಳ (Anologie) ರೂಪದಲ್ಲಿವೆ. ಪರೀಕ್ಷಾಂಶಗಳ ರಚನೆಯಲ್ಲಿ ಗಣಿತಶಾಸ್ತ್ರೀಯ ಮತ್ತು ವೈಜ್ಞಾನಿಕ ಸಾಮಗ್ರಿಗಳಿಗೆ ಮಹತ್ವ ಕೊಡುವುದಕ್ಕಾಗಿ ಅವುಗಳನ್ನು ಇಂಜಿನಿಯರಿಂಗ್‌ನ ಎರಡು ವರ್ಷಗಳ ಅಧ್ಯಯನ ವಿಷಯಗಳ ವಿಷಯ ವಸ್ತುವಿನಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

**4 ಬಹು–ಕಾರಕಾಂಶ ಅಭಿಸಾಮರ್ಥ್ಯ ಪರೀಕ್ಷಣ ಸಮೂಹಗಳು–** ಏಕ ಕಾಲದಲ್ಲಿ ವ್ಯಕ್ತಿಗಳ ಅನೇಕ ಸಾಮರ್ಥ್ಯಗಳನ್ನು ಪ್ರತ್ಯೇಕವಾಗಿಯೇ ಅಳತೆ ಮಾಡುವಂಥ ಪರೀಕ್ಷಾ ಸಮೂಹವನ್ನು ಅಥವಾ ಮಾಲಿಕೆಯನ್ನು ಬಹುಕಾರಕಾಂಶ ಸಾಮರ್ಥ್ಯ ಪರೀಕ್ಷಾ ಸಮೂಹ ಅಥವಾ ಮಾಲಿಕೆ(Multifactor Test Batteries) ಎಂದು ಹೇಳುತ್ತಾರೆ. ಈ ರೀತಿಯ ಪರೀಕ್ಷಾ ಸಮೂಹಗಳು ಅನೇಕ (ಸಾಮಾನ್ಯವಾಗಿ 4 ರಿಂದ 8) ಪ್ರತ್ಯೇಕ ಪರೀಕ್ಷೆಗಳನ್ನು ಹೊಂದಿದ್ದು ಪ್ರತಿಯೊಂದೂ ತನ್ನದೇ ಆದ ರೀತಿಯಲ್ಲಿ ಪೂರ್ಣವಾದ ಪರೀಕ್ಷೆಯಾಗಿರುತ್ತದೆ. ಈ ಎಲ್ಲಾ ಪರೀಕ್ಷೆಗಳನ್ನು ಒಂದೇ ಪ್ರತಿದರ್ಶದ (sample) ಆಧಾರದ ಮೇಲೆ ಮಾನಕೀಕರಣಗೊಳಿಸಿರಬಹುದು (Standardization) ಅಥವಾ ಪ್ರತ್ಯೇಕ ಪ್ರತಿದರ್ಶಗಳನ್ನು ತೆಗೆದುಕೊಂಡು ಮಾನಕೀಕರಣಗೊಳಿಸಿರಬಹುದು. ಈ ಪರೀಕ್ಷಾ ಮೂಲಗಳು ಕೆಲವು ಬುದ್ಧಿಶಕ್ತಿ ಪರೀಕ್ಷಣಗಳಂತೆ ಬುದ್ಧಿಶಕ್ತಿ ಗುಣಾಂಕದಂತೆ (Intelligence Quotient-IQ) ಒಂದು ಸಮಗ್ರ ಅಂಕವನ್ನು ಕೊಡುವುದಿಲ್ಲ. ಪ್ರತಿಯೊಂದು ಉಪಪರೀಕ್ಷೆಗೂ ಪ್ರತ್ಯೇಕವಾದ ಅಂಕನಿರ್ಧಾರ ಕ್ರಮವಿರುತ್ತದೆ. ವ್ಯಕ್ತಿಗಳನ್ನು ಪರಸ್ಪರ ಹೋಲಿಸಲು, ವ್ಯಕ್ತಿಯ ಸಾಮರ್ಥ್ಯ ಮಟ್ಟವನ್ನು ನಿರ್ಧರಿಸಲು ಪ್ರತ್ಯೇಕ ಆದರ್ಶಾಂಕಗಳ (norms) ತಾಲಿಕೆಗಳಿರುತ್ತವೆ. ಸಾಮಾನ್ಯವಾಗಿ ಈ ಪರೀಕ್ಷಣ ಮಾಲಿಕೆಗಳ ಅಂಕಗಳನ್ನು ಆಲೇಖೀಯವಾಗಿ ಪರಿಶ್ಛೇಧಿಕೆ (profile) ರೂಪದಲ್ಲಿ ಪ್ರತಿನಿಧೀಕರಣ ಮಾಡಿ ವ್ಯಾಖ್ಯಾನಿಸಲಾಗುತ್ತದೆ.

ಬಹು–ಕಾರಕ ಸಾಮರ್ಥ್ಯ ಪರೀಕ್ಷಾ ಮಾಲೆಗಳ ಬಗ್ಗೆ ಆಸಕ್ತಿ ಬೆಳೆದು ಬಂದುದಕ್ಕೆ ಫ್ರೀಮನ್ ಎರಡು ಕಾರಣಗಳನ್ನು ಕೊಡುತ್ತಾನೆ. ಮೊದಲನೆಯದಾಗಿ ದ್ವಿತೀಯ ವಿಶ್ವಯುದ್ಧದ ನಂತರ ಕೆಲವು ವ್ಯಕ್ತಿಗಳು (ಸೈನಿಕರು) ಬುದ್ಧಿಶಕ್ತಿ ಪರೀಕ್ಷಣಗಳ ಉಪ–ಪರೀಕ್ಷೆಗಳಲ್ಲಿ ಬೇರೆ ಬೇರೆ ಮಟ್ಟಗಳಲ್ಲಿ ಯಶಸ್ವಿಯಾಗಿರುವುದನ್ನು ಮನೋವಿಜ್ಞಾನಿಗಳು ಗಮನಿಸಿದರು. ಇದರಿಂದಾಗಿ ವ್ಯಕ್ತಿ–ವ್ಯಕ್ತಿಗಳ ನಡುವೆ ಸಾಮರ್ಥ್ಯಗಳಲ್ಲಿ ವ್ಯತ್ಯಾಸವಿರುವಂತೆ ಒಬ್ಬನೇ ವ್ಯಕ್ತಿಯಲ್ಲಿರುವ ವಿವಿಧ ಸಾಮರ್ಥ್ಯಗಳ ಪ್ರಮಾಣದಲ್ಲೂ ವ್ಯತ್ಯಾಸವಿರುತ್ತದೆ ಎಂದು ಗೊತ್ತಾಯಿತು. ಈ ರೀತಿಯ ವ್ಯತ್ಯಾಸಕ್ಕೆ ವ್ಯಕ್ತಂತರ ವ್ಯತ್ಯಾಸ (Intra individual) ಎಂದು ಹೆಸರು. ಹೀಗಾಗಿ ವ್ಯಕ್ತಿಯ ಸಾಮರ್ಥ್ಯಗಳಲ್ಲಿರುವ ವ್ಯತ್ಯಾಸಗಳನ್ನು ಏಕಕಾಲದಲ್ಲಿ ಅಳತೆ ಮಾಡುವುದರಿಂದ ಉಪಯೋಗವಿದೆ ಎಂಬ ಅಂಶ ಗಮನಕ್ಕೆ ಬಂತು. ಎರಡನೆಯದಾಗಿ ಶೈಕ್ಷಣಿಕ ಮತ್ತು ಔದ್ಯೋಗಿಕ ಸಮಾಲೋಚಕರು, ಸಿಬ್ಬಂದಿ ಮನೋವಿಜ್ಞಾನಿಗಳು (Personnel psychologists) ಈ ರೀತಿಯ ಪರೀಕ್ಷಾ ಮಾಲಿಕೆಗಳು ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗಾಸಕ್ತರಿಗೆ ಸಮಾಲೋಚನ ಸಲಹೆ ನೀಡಲು ಉಪಯುಕ್ತವೆಂದು ತಿಳಿದು ಅವುಗಳ ಬಗ್ಗೆ ಆಸಕ್ತಿ ತೋರಿಸಿದರು. ಈ ಪರೀಕ್ಷಾ ಮಾಲಿಕೆಗಳು ಅವುಗಳದ್ದೇ

Digitised by Bharatavani, CIIL

ಆದ ಆದರ್ಶಾಂಕಗಳನ್ನು ಹೊಂದಿದ್ದು, ಏಕಕಾಲದಲ್ಲಿ ಬೇರೆ ಬೇರೆ ಉದ್ಯೋಗಗಳಿಗೆ ಬೇಕಾದ ಸಾಮರ್ಥ್ಯಗಳನ್ನು ಅಳತೆ ಮಾಡಿ ಆ ಫಲಿತಾಂಶಗಳ ಆಧಾರದ ಮೇಲೆ ಶೈಕ್ಷಣಿಕ ಮತ್ತು ಔದ್ಯೋಗಿಕ ಆಯ್ಕೆ ನೀಡುವುದು ಸುಲಭವಾಗುವುದು ಈ ಪರೀಕ್ಷಾ ಮಾಲಿಕೆಗಳ ಅನುಕೂಲಕರ ಅಂಶಗಳಾಗಿವೆ. ಬುದ್ಧಿಶಕ್ತಿ, ಅಭಿರುಚಿ ಮತ್ತು ವ್ಯಕ್ತಿತ್ವಮಾಪನ ಕ್ಷೇತ್ರಗಳಲ್ಲಿ ಇದ್ದಂತೆಯೇ ಅಭಿವ್ಯಕ್ತಿ ಮಾಪನ ಕ್ಷೇತ್ರದಲ್ಲೂ ಕೆಲವು ಪ್ರಸಿದ್ಧ ಬಹು-ಕಾರಕಾಂಶ ಅಭಿಸಾಮರ್ಥ್ಯ ಪರೀಕ್ಷಾ ಸಮೂಹಗಳು ಅಥವಾ ಮಾಲಿಕೆಗಳು (Multifactor Aptitude Test) ಇವೆ. ಅವುಗಳನ್ನು ಈ ಕೆಳಗೆ ವರ್ಣಿಸಲಾಗಿದೆ.

**ವ್ಯತ್ಯಸ್ತ ಅಭಿಸಾಮರ್ಥ್ಯ ಪರೀಕ್ಷಾ ಸಮೂಹ ಅಥವಾ ಮಾಲಿಕೆ–** ಅಭಿಸಾಮರ್ಥ್ಯ ಪರೀಕ್ಷಾ ಸಮೂಹಗಳಲ್ಲಿ (ಮಾಲಿಕೆಗಳಲ್ಲಿ) ಅತ್ಯಂತ ಪ್ರಸಿದ್ಧವಾದ, ಅತ್ಯಂತ ಮಹತ್ವಾಕಾಂಕ್ಷೆಯ ಮಾಲಿಕೆ ಎಂದರೆ ವ್ಯತ್ಯಸ್ತ ಅಭಿಸಾಮರ್ಥ್ಯ ಪರೀಕ್ಷಾ ಸಮೂಹ ಅಥವಾ ಮಾಲಿಕೆ (Differential Aptitude Test Battery-DAT) ಆಗಿದೆ. ಏಳು ಬೇರೆ ಬೇರೆ ಅಭಿಸಾಮರ್ಥ್ಯ ಪರೀಕ್ಷೆಗಳನ್ನು ಹೊಂದಿರುವ ಈ ಪರೀಕ್ಷಾ ಮಾಲಿಕೆಯನ್ನು ಬೆನೆಟ್, ಸೀಷೋರ್ ಮತ್ತು ವೆಸಮನ್ 1951ರಲ್ಲಿ ರೂಪಿಸಿ, ತಮ್ಮ ಕಾರ್ಯಕ್ಕೆ ಒಂದು ಪ್ರಶಸ್ತಿಯನ್ನೂ ಪಡೆದರು. ಈ ಮಾಲಿಕೆಯನ್ನು 8 ರಿಂದ 12ನೇ ಗ್ರೇಡ್‌ವರೆಗಿನ 47000 ಬಾಲಕ, ಬಾಲಕಿಯರ ಪ್ರತಿದರ್ಶನ ಆಧಾರದ ಮೇಲೆ ಅತ್ಯಂತ ನಿಖರವಾದ ಕ್ರಮದಿಂದ ಮಾನಕೀಕರಣಗೊಳಿಸಲಾಗಿದೆ. ಪ್ರತಿಯೊಂದು ಅಭಿಸಾಮರ್ಥ್ಯ ಪರೀಕ್ಷೆಗೂ, ಪ್ರತಿಯೊಂದು ಗ್ರೇಡಿಗೂ, ಬಾಲಕ-ಬಾಲಕಿಯರಿಗೂ ಪ್ರತ್ಯೇಕವಾದ ಆದರ್ಶಾಂಕಗಳ (norms) ತಾಲಿಕೆಗಳನ್ನು ಸಿದ್ಧಪಡಿಸಲಾಗಿದೆ. ಬಾಲಕ, ಬಾಲಕಿಯರಿಗೆ ಪ್ರತ್ಯೇಕವಾದ ಪರೀಕ್ಷಾ ಮಾಲಿಕೆಗಳಿವೆ. ಈ ಮಾಲಿಕೆಯಲ್ಲಿ ಒಟ್ಟು ಅಂಕಗಳನ್ನು ಪರಿಗಣಿಸುವುದಿಲ್ಲ. ಪ್ರತಿಯೊಂದು ಪರೀಕ್ಷೆಯ ಅಂಕಗಳನ್ನು ಶತಾಂಕಗಳಾಗಿ (percentiles) ಪರಿವರ್ತಿಸಿ ಅವುಗಳ ಪರಿಶ್ಛೇಧಿಕೆಯನ್ನು (profile) ರೂಪಿಸಲಾಗುತ್ತದೆ. ಈ ಪರಿಶ್ಛೇಧಿಕೆಯ ಆಧಾರದ ಮೇಲೆ ವ್ಯಕ್ತಿಗಳಿಗೆ ಮಾರ್ಗದರ್ಶನ ನೀಡಲಾಗುತ್ತದೆ.

DAT ಪರೀಕ್ಷಾ ಮಾಲಿಕೆ ಹೆಚ್ಚಿನ ಮಟ್ಟದ ಸಿಂಧುತ್ವ ಮತ್ತು ವಿಶ್ವಸನೀಯತೆಯ ಗಣಿತಾಂಕಗಳನ್ನು ಪಡೆದಿದ್ದು ಮಾರ್ಗದರ್ಶನ ಮತ್ತು ಸಮಾಲೋಚನ ಕಾರ್ಯನಿರತರು ಈ ಮಾಲಿಕೆಯನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. DAT ಪರೀಕ್ಷಾ ಮಾಲಿಕೆಯನ್ನು ಭಾರತೀಯ ಪರಿಸ್ಥಿತಿಗೆ ಹೊಂದುವಂತೆ ಪುನಃ ಮಾನಕೀಕರಣಗೊಳಿಸಲಾಗಿದೆ. DAT ಮಾಲಿಕೆಯ ಪರೀಕ್ಷೆಗಳು 'ಕರಣೀಕ ಸಾಮರ್ಥ್ಯ-ವೇಗ ಮತ್ತು ನಿಖರತೆ'ಯ ಪರೀಕ್ಷೆಯನ್ನು ಹೊರತುಪಡಿಸಿ, ಕಾರ್ಯಕ್ಷಮತೆಯ ಶಕ್ತಿಯನ್ನು ಮಾತ್ರ ಪರೀಕ್ಷಿಸುತ್ತವೆ. ಈ ಮಾಲಿಕೆಯ ಪರೀಕ್ಷೆಗಳನ್ನು 2½ ಘಂಟೆಗಳ ಎರಡು ಸತ್ರಗಳಲ್ಲಿ (sessions) ಕೊಡಬಹುದು.

DAT ಪರೀಕ್ಷಾ ಮಾಲಿಕೆಯ ಪರೀಕ್ಷೆಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ಕೊಡಲಾಗಿದೆ.

1. **ಶಾಬ್ದಿಕ ತರ್ಕ (Verbal Reasoning)–** ಈ ಪರೀಕ್ಷೆ ಶಾಬ್ದಿಕ ಸಾದೃಶ್ಯಗಳ (anologies) ರೂಪದಲ್ಲಿದ್ದು, ಶಾಬ್ದಿಕ ಪರಿಕಲ್ಪನೆಗಳನ್ನು (ಪದಗಳ ಅರ್ಥ) ಮತ್ತು ಸಂಬಂಧಗಳ ಜ್ಞಾನವನ್ನು ಪರೀಕ್ಷಿಸುತ್ತದೆ. ಇದರಲ್ಲಿ ಎರಡು ದತ್ತಪದಗಳ ಸಂಬಂಧದ ಆಧಾರದ ಮೇಲೆ, ಇನ್ನೆರಡು ಪದಜೋಡಿಗಳಲ್ಲಿ ಬಿಟ್ಟಿರುವ ಪದವನ್ನು ಕೊಟ್ಟಿರುವ 5 ಉತ್ತರಗಳಲ್ಲಿ ಗುರ್ತಿಸಬೇಕು. ಈ ಪರೀಕ್ಷೆಯಲ್ಲಿ 50 ಪರೀಕ್ಷಾಂಶಗಳಿವೆ ಮತ್ತು ಕಾಲಮಿತಿ 30 ನಿಮಿಷಗಳು.

2. **ಸಾಂಖಿಕ ಸಾಮರ್ಥ್ಯ (Numerical Ability)–** ಈ ಪರೀಕ್ಷೆ ಸಂಖ್ಯೆಗಳ ನಡುವಣ ಸಂಬಂಧಗಳನ್ನು ಮತ್ತು ಸಂಖ್ಯಾ ಪರಿಕಲ್ಪನೆಗಳ ಜ್ಞಾನವನ್ನು ಪರೀಕ್ಷಿಸುತ್ತದೆ. ಪರೀಕ್ಷಾಂಶಗಳು ಸಮಸ್ಯಾ ಪರಿಹಾರದ ರೂಪದಲ್ಲಿರದೆ ಲೆಕ್ಕಾಚಾರದ ರೂಪದಲ್ಲಿವೆ. ಕೆಲವು ಪರೀಕ್ಷಾಂಶಗಳು ಗಣಿತದ ನಾಲ್ಕು ಮೂಲಭೂತ ಪ್ರಕ್ರಿಯೆಗಳನ್ನು ಮಾತ್ರ ಪರೀಕ್ಷಿಸಿದರೆ, ಉಳಿದವು ಪರಿಮಾಣಾತ್ಮಕ ಪರಿಕಲ್ಪನೆಗಳನ್ನು ಮತ್ತು ಸಂಬಂಧಗಳನ್ನು ಪರೀಕ್ಷಿಸುತ್ತವೆ. ಐದು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಗುರ್ತಿಸಬೇಕು. ಈ ಪರೀಕ್ಷೆಯಲ್ಲಿ 25 ಪರೀಕ್ಷಾಂಶಗಳಿವೆ ಮತ್ತು ಕಾಲಮಿತಿ 30 ನಿಮಿಷಗಳು.

3. **ಅಮೂರ್ತ ತರ್ಕ (Abstract Reasoning)–** ಈ ಪರೀಕ್ಷೆ ಅಶಾಬ್ದಿಕ, ಅಮೂರ್ತ ಸಾಮಗ್ರಿಯೊಂದಿಗೆ ತರ್ಕಿಸುವ ಸಾಮರ್ಥ್ಯವನ್ನು ಪರೀಕ್ಷಿಸುತ್ತದೆ. ಪ್ರತಿಯೊಂದು ಪರೀಕ್ಷಾಂಶವೂ ಸಮಸ್ಯಾ ಆಕೃತಿಗಳೆಂಬ ನಾಲ್ಕು ಆಕೃತಿಗಳನ್ನು ಮತ್ತು ಐದು ಉತ್ತರಗಳ ಆಕೃತಿಗಳನ್ನು ಹೊಂದಿರುತ್ತದೆ. ಸಮಸ್ಯಾ ಆಕೃತಿಗಳಲ್ಲಿ ಯಾವುದೇ ಒಂದು ರೀತಿಯ ತಾರ್ಕಿಕ ಬದಲಾವಣೆ ಆಕೃತಿ ಶ್ರೇಣಿಯಲ್ಲಿ ಆಗಿರುತ್ತದೆ. ಪರೀಕ್ಷೆ ತೆಗೆದುಕೊಳ್ಳುವ ವ್ಯಕ್ತಿ ಈ ತಾರ್ಕಿಕ ಬದಲಾವಣೆಯನ್ನು ಗುರ್ತಿಸಿ 5ನೇ ಆಕೃತಿ ಹೇಗಿರಬೇಕೆಂಬುದನ್ನು ಕಂಡುಹಿಡಿದು ಕೊಟ್ಟಿರುವ ಉತ್ತರ ಆಕೃತಿಗಳಲ್ಲಿ ಸರಿಯಾದ ಆಕೃತಿಯನ್ನು ಗುರ್ತಿಸಬೇಕು. ಈ ಪರೀಕ್ಷೆಯಲ್ಲಿ 50 ಪರೀಕ್ಷಾಂಶಗಳಿವೆ ಮತ್ತು ಇದರ ಕಾಲಮಿತಿ 25 ನಿಮಿಷಗಳು.

4. **ಅವಕಾಶೀಯ ಸಂಬಂಧಗಳು (Spatial Relations)–** ಈ ಪರೀಕ್ಷೆ ದ್ವಿ ಆಯಾಮ ರೇಖಾಗಣಿತೀಯ ಆಕೃತಿಗಳ ಆಧಾರದ ಮೇಲೆ ಅವಕಾಶೀಯ ಸಂಬಂಧಗಳನ್ನು ಮಾನಸಿಕವಾಗಿ ಚಿತ್ರಿಸಿಕೊಳ್ಳುವ (visualize) ಸಾಮರ್ಥ್ಯವನ್ನು ಪರೀಕ್ಷಿಸುತ್ತದೆ. ಪ್ರತಿಯೊಂದು ಪರೀಕ್ಷಾಂಶದಲ್ಲಿ ಒಂದು ಸಮಸ್ಯೆಯ ಆಕೃತಿ ಇದ್ದು ಅದರ ಮುಂದೆ ಐದು ಉತ್ತರಗಳ ಆಕೃತಿಗಳಿರುತ್ತವೆ. ಸಮಸ್ಯಾ ಆಕೃತಿ ಒಂದು ದತ್ತ ತ್ರಿ-ಆಯಾಮದ ಆಕೃತಿಯನ್ನು ಬಿಡಿಸಿ ತೋರಿಸಿದರೆ ಹೇಗೆ ಕಾಣಿಸುತ್ತದೆ ಎಂಬುದನ್ನು ಚಿತ್ರಿಸುತ್ತದೆ. ಈ ಆಕೃತಿಯ ಬೇರೆ ಬೇರೆ ಮಗ್ಗಲುಗಳನ್ನು ಬೇರೆ ಬೇರೆ ರೀತಿಯಲ್ಲಿ ನೆರಳಿನ ರೀತಿಯಲ್ಲಿ (shading) ತೋರಿಸಲಾಗಿರುತ್ತದೆ. ಈ ಆಕೃತಿಯನ್ನು ಸರಿಯಾಗಿ ತ್ರಿ-ಆಯಾಮ ಆಕೃತಿಯಾಗಿ ಮಡಿಚಿದರೆ ಹೇಗೆ ಕಾಣಿಸುತ್ತದೆ ಎಂಬುದಕ್ಕೆ ಐದು ಉತ್ತರ ಆಕೃತಿಗಳನ್ನು ಕೊಡಲಾಗಿದೆ. ವ್ಯಕ್ತಿ ತನ್ನ ಮನಸ್ಸಿನಲ್ಲಿ ಆ ಆಕೃತಿಯನ್ನು

Digitised by Bharatavani, CIIL

ಕಲ್ಪಿಸಿಕೊಂಡು ಸರಿಯಾದ ಉತ್ತರವನ್ನು ಗುರ್ತಿಸಬೇಕು. ಈ ಪರೀಕ್ಷೆಯಲ್ಲಿ 40 ಪರೀಕ್ಷಾಂಶಗಳಿವೆ. ಕಾಲಮಿತಿ 30 ನಿಮಿಷಗಳು.

**5. ಯಾಂತ್ರಿಕ ತರ್ಕ (Mechanical Reasoning)–** ಈ ಪರೀಕ್ಷೆಯಲ್ಲಿ ಯಾಂತ್ರಿಕ ತತ್ವ/ನಿಯಮಗಳ ಗ್ರಹಿಕೆಯನ್ನು ಯಾಂತ್ರಿಕ ಮತ್ತು ವೈಜ್ಞಾನಿಕ ತತ್ವ/ನಿಯಮಗಳನ್ನು ಒಳಗೊಂಡ ಸನ್ನಿವೇಶಗಳನ್ನು ಚಿತ್ರರೂಪದಲ್ಲಿ ಪ್ರಸ್ತುತಗೊಳಿಸಿ ಪರೀಕ್ಷಿಸಲಾಗುತ್ತದೆ. ಪ್ರತಿಯೊಂದು ಪರೀಕ್ಷಾಂಶವೂ ಒಂದು ಅಥವಾ ಹೆಚ್ಚು ಚಿತ್ರಗಳನ್ನು ಹೊಂದಿದ್ದು ಅವುಗಳ ಬಗ್ಗೆ ಒಂದು ಸರಳ ಪ್ರಶ್ನೆಯನ್ನು ಹೊಂದಿರುತ್ತದೆ. ವ್ಯಕ್ತಿ ಕೊಟ್ಟಿರುವ ಚಿತ್ರಗಳ ಆಧಾರದ ಮೇಲೆ ಪ್ರಶ್ನೆಗೆ ಸರಿಯಾದ ಉತ್ತರವಾಗಿರುವ ಚಿತ್ರವನ್ನು ಗುರ್ತಿಸಬೇಕು. ಈ ಪರೀಕ್ಷೆ 68 ಪರೀಕ್ಷಾಂಶಗಳನ್ನು ಹೊಂದಿದ್ದು 30 ನಿಮಿಷಗಳ ಕಾಲಮಿತಿಯುಳ್ಳದ್ದಾಗಿದೆ.

**6. ಕರಣೀಕ ಸಾಮರ್ಥ್ಯ: ವೇಗ ಮತ್ತು ನಿಖರತೆ(Clerical: Speed and Accuracy)–** ಈ ಪರೀಕ್ಷೆ ಕರಣೀಕ ಅಥವಾ ಗುಮಾಸ್ತರ (clerks) ಕೆಲಸಕ್ಕೆ ಬೇಕಾಗುವ ಕಾರ್ಯದ ವೇಗ ಮತ್ತು ನಿಖರತೆಯನ್ನು ಪರೀಕ್ಷಿಸುತ್ತದೆ. ಇದರ ಪರೀಕ್ಷಾಂಶಗಳು ಅಕ್ಷರಗಳ ಮತ್ತು ಅಂಕೆಗಳ ಜೋಡಣೆಗಳನ್ನು ಹೊಂದಿವೆ. ಈ ಪರೀಕ್ಷೆಯ ಕಾರ್ಯಕ್ಕೆ ಅಕ್ಷರಗಳ/ಹೆಸರುಗಳ ಮತ್ತು ಅಂಕೆಗಳ ಜೋಡಣೆಗಳನ್ನು ಹೊಂದಿಸುವ, ಅವುಗಳನ್ನು ತಪ್ಪಿಲ್ಲದೆ ವೇಗವಾಗಿ ಗುರ್ತಿಸುವ ಸಾಮರ್ಥ್ಯ ಬೇಕಾಗುತ್ತದೆ. ಪ್ರತಿಯೊಂದು ಪರೀಕ್ಷಾಂಶವೂ 5 ಪರೀಕ್ಷೆಯ ಅಂಶಗಳನ್ನು, 5 ಉತ್ತರಗಳ ಸಾಧ್ಯತೆಗಳನ್ನು ಹೊಂದಿರುತ್ತದೆ. ವ್ಯಕ್ತಿ ಸೂಚನೆಗೆ ಅನುಸಾರವಾಗಿ ಸರಿಯಾದ ಉತ್ತರವನ್ನು ತಪ್ಪಿಲ್ಲದೆ ಆದಷ್ಟು ಬೇಗ ಗುರ್ತಿಸಬೇಕು. ಈ ಪರೀಕ್ಷೆಯಲ್ಲಿ 20+20=40 ಪರೀಕ್ಷಾಂಶಗಳಿವೆ. ಇದರಲ್ಲಿ ಎರಡು ಭಾಗಗಳಿವೆ I ಮತ್ತು II. ಒಂದೊಂದು ಭಾಗದಲ್ಲಿ 20 ಪರೀಕ್ಷಾಂಶಗಳಿವೆ. ಭಾಗ II ಕ್ಕೆ ಮಾತ್ರ ಅಂಕ ನಿರ್ಧಾರ ಮಾಡಲಾಗುತ್ತದೆ,

**7. (ಎ) ಭಾಷೆಯ ಉಪಯೋಗ: ಕಾಗುಣಿತ (Language Usage: Spelling)–** ಈ ಪರೀಕ್ಷೆ ಮತ್ತು ಇದರ ಎರಡನೇ ಭಾಗದ ಪರೀಕ್ಷೆ ವ್ಯಕ್ತಿಯ ಇಂಗ್ಲಿಷ್ ಭಾಷೆಯ ಜ್ಞಾನ ಮತ್ತು ಬಳಕೆಯನ್ನು ಪರೀಕ್ಷಿಸುತ್ತವೆ. ಮೊದಲನೆ ಭಾಗವಾದ 'ಕಾಗುಣಿತ' ಪರೀಕ್ಷೆಯಲ್ಲಿ ಪ್ರತಿಯೊಂದು ಪರೀಕ್ಷಾಂಶ 5 ಇಂಗ್ಲಿಷ್ ಪದಗಳನ್ನು ಹೊಂದಿರುತ್ತದೆ. ವ್ಯಕ್ತಿ ಇವುಗಳಲ್ಲಿ ಸರಿಯಾಗಿ ಬರೆದಿರುವ ಪದವನ್ನು ಗುರ್ತಿಸಬೇಕು. ಇದರಲ್ಲಿನ ಪರೀಕ್ಷಾಂಶಗಳ ಸಂಖ್ಯೆ ಮತ್ತು ಕಾಲಮಿತಿ 10 ನಿಮಿಷಗಳು.

**7 (ಬಿ) ಭಾಷೆಯ ಉಪಯೋಗ: ಭಾಗ II: ವಾಕ್ಯಗಳು (Language Usage: Sentences)–** ಇದು ವ್ಯಕ್ತಿಯ ಇಂಗ್ಲಿಷ್ ವ್ಯಾಕರಣ ನಿಯಮಗಳ ಜ್ಞಾನ, ವಿರಾಮ ಚಿಹ್ನೆಗಳ ಜ್ಞಾನ ಮತ್ತು ಪದಗಳ ಉಪಯೋಗವನ್ನು ಪರೀಕ್ಷಿಸುತ್ತದೆ. ವ್ಯಕ್ತಿ ಪ್ರತಿ ವಾಕ್ಯದಲ್ಲಿಯೂ ಇರುವ ತಪ್ಪುಗಳನ್ನು ಗುರ್ತಿಸಬೇಕು. ಪ್ರತಿ ತಪ್ಪನ್ನು ಗುರ್ತಿಸಿದರೆ ಪ್ರತ್ಯೇಕ ಅಂಕ ನೀಡಲಾಗುತ್ತದೆ. ಪರೀಕ್ಷೆ 7(ಎ) ಮತ್ತು 7(ಬಿ)ಗಳಲ್ಲಿ ವ್ಯಕ್ತಿ ಪಡೆಯುವ ಪ್ರತ್ಯೇಕ ಅಂಕಗಳು (ಶತಾಂಕ ಶ್ರೇಣಿಗಳು) ವ್ಯಕ್ತಿಯ ಭಾಷಾ ಸಾಮರ್ಥ್ಯವನ್ನು ಸೂಚಿಸುತ್ತವೆ. ಕಾಲಮಿತಿ 25 ನಿಮಿಷಗಳು

**ಫ್ಲನಗನ್ ಅಭಿಸಾಮರ್ಥ್ಯ ವರ್ಗೀಕರಣ ಪರೀಕ್ಷೆಗಳು (Flanagan Aptitude Classification Tests-FACT)–** ಅನೇಕ ಅಭಿಸಾಮರ್ಥ್ಯಗಳ ಪರೀಕ್ಷೆಗಳನ್ನು ಒಳಗೊಂಡ ಈ ವಿಸ್ತೃತ ಪರೀಕ್ಷಾ ಮಾಲಿಕೆಯನ್ನು ಫ್ಲನಗನ್ ರೂಪಿಸಿದ್ದಾನೆ. ಈ ಮಾಲಿಕೆಯನ್ನು ಮುಖ್ಯವಾಗಿ ಔದ್ಯೋಗಿಕ ಸಮಾಲೋಚನೆ ನೀಡುವುದರಲ್ಲಿ ಮತ್ತು ಉದ್ಯೋಗಿಗಳ ಆಯ್ಕೆಯಲ್ಲಿ ಉಪಯೋಗಿಸಲಾಗುತ್ತದೆ. ಈ ಮಾಲಿಕೆ 9 ರಿಂದ 12ನೇ ಗ್ರೇಡಿನ ಮಕ್ಕಳಿಗೆ ಆದರ್ಶಾಂಕಗಳನ್ನು ಒದಗಿಸುತ್ತದೆ. ಫ್ಲನಗನ್ ಈ ಪರೀಕ್ಷೆ ರೂಪಿಸುವ ಮುನ್ನ ಸಾಪೇಕ್ಷವಾಗಿ ಸ್ವತಂತ್ರವಾಗಿರುವ 21 'ನಿರ್ಣಾಯಕ ಕಾರ್ಯ ಮೂಲಾಂಶಗಳನ್ನು' (Critical Job elements) ಗುರ್ತಿಸಿ ಇವುಗಳ ಬೇರೆ ಬೇರೆ ಜೋಡಣೆಗಳಲ್ಲಿ ವಿವಿಧ ರೀತಿಯ ಉದ್ಯೋಗಗಳಲ್ಲಿ ಸಫಲತೆಗೆ ಕೊಡುಗೆ ನೀಡುತ್ತವೆ ಎಂದು ತೋರಿಸಿದ್ದಾನೆ. ಪ್ರತಿಯೊಂದು ಮೂಲಾಂಶದ ಸ್ವರೂಪವನ್ನು ವ್ಯಾಖ್ಯಾನಿಸಲಾಗಿದೆ. ಪ್ರಾಯೋಗಿಕ ಆಧಾರದ ಮೇಲೆ ವಿವಿಧ ಉದ್ಯೋಗಗಳು ಒಳಗೊಳ್ಳುವ ಕಾರ್ಯ–ಮೂಲಾಂಶಗಳನ್ನು ಗುರ್ತಿಸಲಾಗಿದೆ. ತಪ್ಪುಗಳನ್ನು ಗುರ್ತಿಸುವುದು (Inspection), ಸಂಕೇತೀಕರಿಸುವುದು (Coding), ಸ್ಮರಣೆ(Memory), ನವೀನತೆ (Ingenuity), ತೀರ್ಮಾನ ಮತ್ತು ಗ್ರಹಿಕೆ (Judgement and Comprehension), ಗಣಿತ(Arithmetic), ಅಭಿವ್ಯಕ್ತಿ (Expression)–ಇವು 21 ಮೂಲಾಂಶಗಳ ಕೆಲವು ಉದಾಹರಣೆಗಳಾಗಿವೆ. ಈ 21 ಪರೀಕ್ಷೆಗಳಲ್ಲಿ ಎರಡು ಪರೀಕ್ಷೆಗಳು (ಕೊರೆಯುವುದು ಮತ್ತು ಶಬ್ದ ಮಾಡುವುದು–) ಕಾರ್ಯಾತ್ಮಕ ಪರೀಕ್ಷೆಗಳಾಗಿದ್ದು, ಉಳಿದ 19 ಪರೀಕ್ಷೆಗಳು ಕಾಗದ ಮತ್ತು ಪೆನ್ಸಿಲ್ ಪರೀಕ್ಷೆಗಳಾಗಿವೆ. ಪ್ರತಿಯೊಂದು ಪರೀಕ್ಷೆಗೂ ಪ್ರತ್ಯೇಕವಾಗಿ ಅಂಕ ನಿರ್ಧಾರ ಮಾಡಿದರೂ ಸಹ ಮಾರ್ಗದರ್ಶಕ ಅಥವಾ ಸಮಾಲೋಚಕ ಈ ಅಂಕಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಣೆ ಮಾಡಿ ವ್ಯಕ್ತಿಗೆ ಯಾವ ಉದ್ಯೋಗ ಸೂಕ್ತವಾಗುತ್ತದೆ ಎಂಬುದನ್ನು ನಿರ್ಧರಿಸಿ ಸಲಹೆ ನೀಡಬಹುದು.

**ಸಾಮಾನ್ಯ ಅಭಿಸಾಮರ್ಥ್ಯ ಪರೀಕ್ಷಾ ಸಮೂಹ ಅಥವಾ ಮಾಲಿಕೆ (General Aptitude Test Battery -GATB)–** ಈ ಪರೀಕ್ಷಾ ಮಾಲಿಕೆಯನ್ನು ಅಮೇರಿಕಾದ ಉದ್ಯೋಗ ಸೇವೆ (US. Employment Service) ಅಲ್ಲಿನ ರಾಜ್ಯಗಳ ಉದ್ಯೋಗ ಸೇವೆಯಲ್ಲಿರುವ ಸಮಾಲೋಚಕರ ಉಪಯೋಗಕ್ಕಾಗಿ 1947ರಲ್ಲಿ ರೂಪಿಸಿ ಪ್ರಕಟಿಸಿತು. ಇದು ಬುದ್ಧಿಶಕ್ತಿ (I), ಶಾಬ್ದಿಕ ಅಭಿಸಾಮರ್ಥ್ಯ (V), ಸಾಂಖಿಕ ಅಭಿಸಾಮರ್ಥ್ಯ (N), ಅವಕಾಶೀಯ ಪ್ರತ್ಯಕ್ಷಾನುಭವ(S), ಆಕೃತಿ ಪ್ರತ್ಯಕ್ಷಾನುಭವ(P), ಕರಣೀಕ ಪ್ರತ್ಯಕ್ಷಾನುಭವ(C), ಗತ್ಯಾತ್ಮಕ ಸಂಯೋಜನೆ (K), ಬೆರಳುಗಳ ಚಳಕ(F) ಮತ್ತು ಗತ್ಯಾತ್ಮಕ ಚಳಕ (M)– ಈ 9 ಸಾಮರ್ಥ್ಯಗಳನ್ನು ಅಳತೆ ಮಾಡುತ್ತದೆ. ಇದರಲ್ಲಿ

Digitised by Bharatavani, CIIL

ಒಟ್ಟು 12 ಪರೀಕ್ಷೆಗಳಿವೆ. ವ್ಯಕ್ತಿ ಪಡೆಯುವ ಅಂಕಗಳನ್ನು 9 ರೀತಿಯ ಉದ್ಯೋಗಗಳಲ್ಲಿ ಸಫಲತೆಗೆ ಬೇಕಾಗುವ ಕನಿಷ್ಠ ಅಂಕಮಿತಿಗಳಿಗೆ ಹೋಲಿಸಿ ಸಲಹೆ ನೀಡಲಾಗುತ್ತದೆ.

ಮೇಲೆ ವಿವರಿಸಿದ ಪರೀಕ್ಷಾ ಮಾಲಿಕೆಗಳಲ್ಲದೆ ಇನ್ನೂ ಕೆಲವು ಅಭಿಸಾಮರ್ಥ್ಯ ಪರೀಕ್ಷಾ ಮಾಲಿಕೆಗಳು ಇವೆ. ಇವುಗಳಲ್ಲಿ ಗಿಲ್‌ಫರ್ಡ್–ಜಿಮ್ಮರ್‌ಮನ್ ಅಭಿಸಾಮರ್ಥ್ಯ ಸಮೀಕ್ಷೆ, ಹಾಲ್ಜಿಂಗರ್–ಕ್ರೌಡರರ ಯೂನಿ–ಫ್ಯಾಕ್ಟರ್ ಪರೀಕ್ಷೆಗಳು ಮತ್ತು ಸೀಗಲ್ ಮತ್ತು ರಸ್ಕಿನ್ ರೂಪಿಸಿರುವ ಮಲ್ಟಿಪಲ್ ಆಪ್ಟಿಟ್ಯೂಡ್ ಟೆಸ್ಟ್– ಇವುಗಳನ್ನು ಹೆಸರಿಸಬಹುದು. ಇತ್ತೀಚಿನ ದಶಕಗಳಲ್ಲಿ ಇನ್ನೂ ಅನೇಕ ಪರೀಕ್ಷಾ ಮಾಲಿಕೆಗಳು ಪ್ರಕಟಗೊಂಡಿರುವ ಸಾಧ್ಯತೆ ಇದೆ.

ಭಾರತದಲ್ಲಿಯೂ ಅಭಿಸಾಮರ್ಥ್ಯಗಳ ಮಾಪನ ಕ್ಷೇತ್ರದಲ್ಲಿ ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಸಾಮಾನ್ಯವಾಗಿ ಪಿಎಚ್.ಡಿ(Ph.D) ಪದವಿಗೆ ಕೈಗೊಳ್ಳುವ ಸಂಶೋಧನೆಗಳ ಅಂಗವಾಗಿ ಕೆಲವು ಅಭಿಸಾಮರ್ಥ್ಯ ಪರೀಕ್ಷೆಗಳು ಪ್ರಕಾಶಿತಗೊಂಡಿವೆ. ಮಾಲಿನ್ ಎಂಬುವರು ವ್ಯತ್ಯಸ್ತ ಅಭಿಸಾಮರ್ಥ್ಯ ಪರೀಕ್ಷಾ ಸಮೂಹವನ್ನು (Differential Aptitude Test Battery) ಭಾರತೀಯ ಪರಿಸ್ಥಿತಿಗೆ ಹೊಂದುವಂತೆ ಪರಿಶೋಧಿಸಿ ಸಿದ್ಧಪಡಿಸಿದ್ದಾರೆ. ಕೆಲವು ವೃತ್ತಿ ಅಭಿಸಾಮರ್ಥ್ಯ ಪರೀಕ್ಷೆಗಳೂ ಹೊರಬಂದಿವೆ. ಉದಾಹರಣೆಗೆ ಪಸ್ಸಿ ಮತ್ತು ಲಲಿತಮ್ಮ ರೂಪಿಸಿರುವ ಅಧ್ಯಾಪಕ ಅಭಿಸಾಮರ್ಥ್ಯಗಳ ಪರೀಕ್ಷೆ. ಇವು ಒಂದೆರಡು ಉದಾಹರಣೆಗಳು ಮಾತ್ರ.

ಈ ಲೇಖನದಲ್ಲಿ ಹೆಸರಿಸಿರುವ ಅಭಿಸಾಮರ್ಥ್ಯ ಪರೀಕ್ಷೆಗಳು ಕಾಲಘಟ್ಟದ ದೃಷ್ಟಿಯಿಂದ ಸ್ವಲ್ಪ ಹಿಂದಿನ ಪರೀಕ್ಷಣಗಳಾಗಿವೆ. ಎಲ್ಲಾ ಮನೋವೈಜ್ಞಾನಿಕ ಪರೀಕ್ಷಣಗಳನ್ನು ಸಮಾಜ ಬದಲಾದಂತೆ, ಜ್ಞಾನ ಪ್ರಪಂಚ ಬದಲಾದಂತೆ ಪರಿಶೋಧಿಸಬೇಕಾಗುತ್ತದೆ. ಆದ್ದರಿಂದ ಇಲ್ಲಿ ಹೇಳಿರುವ ಅಭಿಸಾಮರ್ಥ್ಯ ಪರೀಕ್ಷಣಗಳ ಇತ್ತೀಚಿನ ಸ್ಪಷ್ಟ ಆವೃತ್ತಿಗಳು ಪ್ರಕಾಶಿತಗೊಂಡಿರುವ ಸಾಧ್ಯತೆ ಇದೆ. ಆದರೂ ಅಭಿಸಾಮರ್ಥ್ಯ ಪರೀಕ್ಷಣಗಳ ಸ್ವರೂಪವನ್ನು ಅವುಗಳ ವೈವಿಧ್ಯತೆ ಹಾಗೂ ವೈಶಾಲ್ಯತೆಯನ್ನು ಈ ಲೇಖನ ಪರಿಚಯಿಸುತ್ತದೆ.

–ಮಂಜುನಾಥಯ್ಯ ಬಿ.ಎನ್.

## ಅಸ್ತಿತ್ವವಾದ ಮತ್ತು ಶಿಕ್ಷಣ

**ಪರಿಚಯಾತ್ಮಕ ಟಿಪ್ಪಣಿ** : ಅಸ್ತಿತ್ವವಾದದ ಸೂಕ್ಷ್ಮ ಅಧ್ಯಯನ ಕೈಗೊಂಡಾಗ ಇದನ್ನು ಕುರಿತು ಬರೆಯುವುದು ಸುಲಭವೂ ಅಲ್ಲ ಸರಳವೂ ಅಲ್ಲವೆಂದು ತಿಳಿಯುವುದಲ್ಲದೆ ಆ ಪ್ರಯತ್ನ ಕಷ್ಟಕರವೂ ಸಂಕೀರ್ಣವೂ ಆದುದೆಂದು ತಿಳಿಯುತ್ತದೆ. ಇದಕ್ಕೆ ಕಾರಣ ಅಸ್ತಿತ್ವವಾದವನ್ನು ಅರ್ಥಮಾಡಿಕೊಳ್ಳಲು ಅಥವಾ ವಿವರಿಸಿ ಹೇಳಲು ವಿಶೇಷ ಸಾಮರ್ಥ್ಯ ಬೇಕೆಂದಲ್ಲ. ಇದಕ್ಕೆ ಕಾರಣ ಈ ವಾದವನ್ನು ಅಂತರ್ನಿಹಿತ ವಿರೋಧಾಭಾಸಗಳು ಹಾಗೂ ಅಸ್ಪಷ್ಟತೆಗಳು. ಈ ವಾದವನ್ನು ಪೂರ್ಣ ಸುಸಂಗತ ಬೋಧಗಮ್ಯ ರೀತಿಯಲ್ಲಿ ಬರೆಯುವುದು ಕಷ್ಟ. ಈ ವಾದದಲ್ಲಿ ಕಂಡುಬರುವ ಸಂಶಯ ಹಾಗೂ ತೊಡಕುಗಳನ್ನು ಪರಿಹರಿಸದೆ ಬಿಟ್ಟರೆ "ವಿರೋಧಾತ್ಮಕತೆ ಹಾಗೂ ಅಸಂಗತಿ ಈ ವಾದದ ಜಾಯಮಾನ" ಎಂದು ಓದುಗರು ಹೇಳುವರು. ಅಂಥ ವಿರೋಧಾಭಾಸಗಳ ಕೆಲವು ಉದಾಹರಣೆಗಳು ಹೀಗಿವೆ – ಹೈಡೆಗರ್‌ನ ಒಂದು ಮಾತು ಹೀಗಿದೆ: "ಜೀವನವನ್ನು ಅರ್ಥ ಮಾಡಿಕೊಳ್ಳಲು ಸಾವನ್ನು ವಿಶ್ಲೇಶಿಸು"; ಜಸ್ಪರ್ ಹೀಗೆ ಹೇಳುವನು "ಪ್ರಪಂಚವನ್ನು ತ್ಯಜಿಸು ಆಗ ಪುನಃ ಪ್ರಪಂಚಕ್ಕೆ ಮರಳುವೆ"; ಸಾರ್ತ್ರೆಯ ಒಂದು ಉಕ್ತಿ: "ದೇವರನ್ನು ಅಲ್ಲಗಳೆದಲ್ಲಿ ನೀನೊಬ್ಬ ಸ್ವತಂತ್ರ ಮಾನವ"; ಕಿರ್ಕೆಗರ್ಡ್ ಹೀಗೆ ಹೇಳುವನು: "ದೇವರನ್ನು ಒಪ್ಪಿದಲ್ಲಿ ನೀನೊಬ್ಬ ಸ್ವತಂತ್ರ ಮಾನವ", ಇತ್ಯಾದಿ.

"ನಿನ್ನ ತಾತ್ವಿಕತೆ ಜಟಿಲ ಹಾಗೂ ಅನೇಕಾರ್ಥವುಳ್ಳದ್ದು" ಎಂದು ಒಮ್ಮೆ ಸಾರ್ತ್ರೆಯ ಗಮನವನ್ನು ವಿಮರ್ಶಕನು ಸೆಳೆದಾಗ "ಮಾನವ ನನಗೆ ನಿಜಕ್ಕೂ ವಿರೋಧಾತ್ಮಕತೆಯಿಂದ ಕೂಡಿದವನಂತೆ ಕಾಣುವನು" ಎಂದು ಸಾರ್ತ್ರೆ ಉತ್ತರಿಸಿದ. ಅಸ್ತಿತ್ವವಾದಿಗಳ ಚಿಂತನಧಾರೆ ಮಾತ್ರವಲ್ಲ ಅವರ ಭಾಷೆಯೂ ಅಸ್ಪಷ್ಟ. ಅಸ್ತಿತ್ವವಾದಿಯ ಭಾಷಾವೈವಿಧ್ಯಕ್ಕೊಂದು ಉದಾಹರಣೆ ಹೀಗಿದೆ: "ಭಯಾನಕ ಪರಿಸ್ಥಿತಿಯಲ್ಲಿ ಶೂನ್ಯ ಪ್ರಕಟಗೊಳ್ಳುವುದು. ಆದರೆ ಏನೋ ಇದೆ ಎಂಬ ಅರ್ಥದಲ್ಲಿ ಅಲ್ಲ. ಅದು ಒಂದು ವಸ್ತು ಎಂದು ಹೇಳಲೂ ಆಗದು. ಭಯಾನಕ ಸ್ಥಿತಿ ಎನ್ನುವುದು ಶೂನ್ಯದಿಂದುಂಟಾಗುವ ಭೀತಿ ಅಲ್ಲ. ಭಯದ ಸ್ಥಿತಿಯಲ್ಲಿ ಭಯದ ಮೂಲಕ ಏನೂ ಪ್ರಕಟವಾಗುವುದಿಲ್ಲ. ಆದರೆ ಪೂರ್ಣವಾದುದರಿಂದ ಭಿನ್ನವಾಗಿ ಸಂಬಂಧವಿಲ್ಲದಂತೆ ಶೂನ್ಯವು ಪ್ರಕಟವಾಗುವುದೆಂದಲ್ಲ. ಮತ್ತು ಆ ವಿಚಿತ್ರ ಭಾವನೆಯನ್ನು ಅನುಭವಿಸಿದಾಗ ಒಟ್ಟಿನಲ್ಲಿ ಆಗುವ ಅನುಭವಕ್ಕಿಂತ ಭಿನ್ನವಾದುದಾಗಿಯೂ ಇರುವುದಿಲ್ಲ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಯದ ಸ್ಥಿತಿಯಲ್ಲಿ ಒಟ್ಟು ಅನುಭವದಲ್ಲಿ ಒಂದಾಗಿ ಶೂನ್ಯ ಕೆಲಸ ಮಾಡುತ್ತದೆ."

ಮತ್ತೊಂದು ತೊಡಕಿನ ಮೂಲವೆಂದರೆ ಅಸ್ತಿತ್ವವಾದಿಗಳ ವ್ಯಕ್ತಿಗತ ಜೀವನ ಹಾಗೂ ನಂಬಿಕೆಗಳು. ಉದಾಹರಣೆಗೆ, ಕಿರ್ಕೆಗರ್ಡ್ ಮಾರ್ಸೆಲ್, ಜಾಸ್ಪರ್ ಇವರುಗಳು ಆಸ್ತಿಕವಾದಿಗಳಾಗಿದ್ದರೆ, ಹೈಡೆಗ್ಗರ್, ಸಾರ್ತ್ರೆ ನಾಸ್ತಿಕವಾದಿಗಳು. ಜಾಸ್ಪರ್ ಪ್ರೊಟೆಸ್ಟೆಂಟ್ ಆಗಿದ್ದರೆ ಮಾರ್ಸೆಲ್ ದಿಟ್ಟ ರೋಮನ್ ಕ್ಯಾಥೊಲಿಕ್. ಇನ್ನು ಬರ್ಡೆಯೆವ್, ಬ್ಲೂಬರ್, ಟಲಿಚ್, ನೇಬರ್ – ಈ ಅಸ್ತಿತ್ವವಾದಿಗಳ ಬಗೆಗೆ ಏನೂ ಹೇಳದಿದ್ದರೆ ಒಳ್ಳೆಯದು.

**ಐತಿಹಾಸಿಕ ಹಿನ್ನೆಲೆ:** ಇಡೀ ಭಾರತೀಯ ತತ್ವಶಾಸ್ತ್ರವು ವೇದೋಪನಿಷತ್ತುಗಳ ವ್ಯಾಖ್ಯಾನ, ಟಿಪ್ಪಣಿ ಮತ್ತು ಸಮರ್ಥನೆ ಅಥವಾ ಅವುಗಳ ನಿರಾಕರಣೆ ಎನ್ನಬಹುದು. ಇದೇ ರೀತಿ ಪಾಶ್ಚಾತ್ಯ ತತ್ವಶಾಸ್ತ್ರ ಸಾಕ್ರೆಟಿಸ್‌ನ ಸಮರ್ಥನೆ ಅಥವ ನಿರಾಕರಣೆ ಎನಿಸುತ್ತದೆ. ಸಂಪೂರ್ಣ ಪಾಶ್ಚಾತ್ಯ ತತ್ವಶಾಸ್ತ್ರವು ಸಾಕ್ರೆಟಿಸ್ ಹೇಳಿರುವುದಕ್ಕೆ ಅನುಬಂಧದಂತಿದೆ ಎಂದು ಯಾರಾದರೂ ಅಭಿಪ್ರಾಯಪಟ್ಟಲ್ಲಿ ಅದು ಸರಿಯೆನ್ನಬಹುದು. "ನನ್ನ ಸ್ವಭಾವದಲ್ಲಿರುವ ತರ್ಕವನ್ನು

Digitised by Bharatavani, CIIL

ಅನುಸರಿಸಿ ನಡೆಯುವವನು ನಾನು. ವಿಚಾರ ಮಾಡಿ ನೋಡಿದಾಗ ತರ್ಕವೇ ಅತ್ಯುತ್ತಮವೆಂದು ನನಗೆ ತೋರುವುದು." – ಸಾಕ್ರೆಟಿಸ್‌ನ ಈ ಹೇಳಿಕೆಯಿಂದ ಅವನನ್ನು ಮೊದಲ ಅಸ್ತಿತ್ವವಾದಿ ಎಂದು ಹೇಳಿದರೆ ತಪ್ಪಾಗಲಾರದು. ಈ ನಮ್ಮ ಹೇಳಿಕೆ ಸಾಕ್ರೆಟಿಸ್‌ನ ಮಾರ್ಗವನ್ನು ಅಸ್ತಿತ್ವವಾದಿ ಎಂದು ಆಲೋಚಿಸಿದಾಗ ಸರಿಯಾಗುವುದು. ಕಾರಣ, ಅಸ್ತಿತ್ವವಾದ ಸಾಕ್ರೆಟಿಸ್ ಹೇಳಿರುವುದನ್ನು ವಿರೋಧಿಸುವುದು. ಪ್ಲೇಟೋವಿನಿಂದ ಸ್ಪಿನೋಸ, ಲೆಬ್ನಿಟ್ಸ್, ಡೆಕಾರ್ಟವರೆಗೆ ಪ್ರಮುಖ ಪಾಶ್ಚಾತ್ಯ ವಿಚಾರವಂತರು ಚಿಂತನೆ ಅಥವಾ ವಿಚಾರಗಳು (Ideas) ಗಳು ಶಾಶ್ವತವೆಂದೂ ಇತರ ತತ್ವಜ್ಞರು ಅವುಗಳನ್ನು ಸ್ವಲ್ಪ ಮಾರ್ಪಾಡು ಮಾಡುತ್ತಾ ಬಂದಿರುವರು. ಏನೇ ಆಗಲಿ, ಇರುವಿಕೆಗೆ (existence) ಮುಂಚೆ ಸಾರವಿರುವುದು (essence) ಎಂಬುದು ಅವರ ಆಧಾರ ಚೌಕಟ್ಟು. ಇಲ್ಲಿ ಸಾರವೆಂದರೆ ವಿಚಾರಗಳು, ಆದರ್ಶಗಳು, ಚಿಂತನೆಗಳು ಇತ್ಯಾದಿ ಮತ್ತು ಇರುವಿಕೆ ಎಂದರೆ ನಮ್ಮ ಜೀವನ. ಈ ರೀತಿ ಯೋಚಿಸಿದವರಲ್ಲಿ ಕೊನೆಯವನಾದ ಹೆಗೆಲ್ ಪ್ರಪಂಚವನ್ನು ತರ್ಕಬದ್ಧವಾಗಿ (rationally) ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಬಹುದೂರದವರೆಗೆ ಕೊಂಡೊಯ್ದವರಲ್ಲಿ ಕೊನೆಯವನೂ ಆದ.

ಆದರೆ, 19ನೇ ಶತಮಾನದ ಮಧ್ಯಭಾಗದಲ್ಲಿ ಸೊರೆನ್ ಕಿರ್ಕೆಗಾರ್ಡ್ (1813–1855) ಎಂಬ ಡ್ಯಾನಿಷ್ ತತ್ವಜ್ಞಾನಿ ಪ್ಲೇಟೋವಿನ ದೃಷ್ಟಿಕೋನವನ್ನೂ ನಿರಾಕರಿಸಿದ್ದಲ್ಲದೆ ಅದನ್ನು ತಿರುಗುಮುರುಗು ಮಾಡಿದನು. ಅಸ್ತತ್ವವಾದದ ಪ್ರವರ್ತಕನೆಂದೆಣಿಸಬಹುದಾದ ಈತ ಹೆಗೆಲನ ವಿಚಾರಗಳನ್ನು ಖಂಡಿಸಿ ಸಾರಕ್ಕೆ ಮುನ್ನ ಇರುವಿಕೆ (existence preceeds essence) ಎಂದು ಹೇಳಿದನು. ಕಿರ್ಕೆಗಾರ್ಡ್ ಯಾವುದೇ ಒಂದು ತಾತ್ವಿಕ ವಿಚಾರಧಾರೆಯ ವಿರುದ್ಧ ಮಾತ್ರವಲ್ಲ, ಇಡೀ ಪಾಶ್ಚಾತ್ಯ ತತ್ವಶಾಸ್ತ್ರದ ವಿರುದ್ಧ ಪ್ರತಿಭಟಿಸಿದನು. ಇತರ ಅಸ್ತಿತ್ವವಾದಿಗಳಿಂದ ಬೆಂಬಲಿಸಲ್ಪಟ್ಟ ಸಂಪೂರ್ಣ ತಾತ್ವಿಕ ಚಿಂತನೆಯ ವಿರುದ್ಧದ ಪ್ರತಿಭಟನೆ ಇದಾಗಿತ್ತು. ಅಸ್ತಿತ್ವವಾದ ವ್ಯಕ್ತಿಗತವಾದುದು. ಅಸ್ತಿತ್ವವಾದಿಗಳು ತಾತ್ವಿಕತೆಯ ಯಾವುದೇ ರೀತಿಯ ವೈಚಾರಿಕತೆ, ಸಾರ್ವತ್ರೀಕರಣ ಮತ್ತು ಸಾಮಾನ್ಯೀಕರಣಗಳನ್ನು ವಿರೋಧಿಸುತ್ತಾರೆ. ತಾತ್ವಿಕತೆಯಲ್ಲಿ ಅತಿಯಾದ ವ್ಯಕ್ತಿಪರತೆಯನ್ನು ಸಮರ್ಥಿಸಿದ್ದಾರೆ. "ಅಮೂರ್ತ ಕಲ್ಪನೆಗಳ ಬಂದಿಯಂತಿರುವ ಪ್ರತಿಯೊಂದು ತಾತ್ವಿಕ ಚಿಂತನೆಯ ಪ್ರತಿನಿಧಿತ್ವ ವಹಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ವಕೀಲನ ಪಾತ್ರ ವಹಿಸಿದ್ದೇನೆ" ಎಂದು ಮಾರ್ಸೆಲ್ ಹೇಳಿಕೊಂಡಿದ್ದಾನೆ.

**ಕಿರ್ಕೆಗಾರ್ಡನ "ಐದರ್/ಆರ್" (either/or):**

ಕಿರ್ಕೆಗಾರ್ಡ್‌ನ ಜೀವನ ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್‌ನಲ್ಲಿ ಬರುವ 'ಟು ಬಿ ಆರ್ ನಾಟ್ ಟು ಬಿ' ಎಂಬಂತೆ ಯಾವಾಗಲೂ ಐದರ್/ ಆರ್ (ಇದು ಅಥವಾ ಅದು) ಎಂಬಂತೆ ಇತ್ತು. ಸುಮಾರು ಒಂದು ಶತಮಾನದ ನಂತರ ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಭಾಷಾಂತರಗೊಂಡ ನಂತರ ಆತನ ವಿಚಾರಗಳು ಪುನರುಜ್ಜೀವನ ಗೊಂಡವು. ಆದರೆ ಅವನ ಸಮಕಾಲೀನರಿಗೆ ಅವನ ಜೀವನ ಹಾಗೂ ಕಾರ್ಯಗಳು ಯಾವ ಮಹತ್ವವನ್ನೂ ಹೊಂದಿರಲಿಲ್ಲ.

ಪಾಶ್ಚಾತ್ಯ ಪ್ರಪಂಚಕ್ಕೆ ಇಪ್ಪತ್ತನೇ ಶತಮಾನದ ಮೊದಲ ಭಾಗ ಎರಡು ಮಹಾ ಸಮರಗಳ ದೆಸೆಯಿಂದಾಗಿ ಭೌತಿಕ, ದೈಹಿಕ, ಮಾನಸಿಕ ಸಂಕಷ್ಟಗಳಿಂದ, ಬಲಿದಾನಗಳಿಂದ ಕೂಡಿದ ಯುಗವಾಗಿತ್ತು. ಹಾರ್ಪರ್ ಹೀಗೆ ಬರೆಯುವನು: "ದುಃಖ, ಸಾವು, ಅಪರಾಧಿ ಪ್ರಜ್ಞೆ, ಸಂಕಷ್ಟಗಳು – ಇವುಗಳು ಸುಖ, ಸಫಲತೆ, ಸರಳತೆ – ಇವುಗಳಿಗಿಂತ ಮಿಗಿಲಾಗಿ ಪರಿಸ್ಥಿತಿಯ ಒಟ್ಟು ಮೌಲ್ಯ ನಿರ್ಧಾರಿಸುವಂತೆ ಮಾಡುವುವು. ಏಕೆಂದರೆ, ಸಂಕಷ್ಟದ ಪರಿಸ್ಥಿತಿಯಲ್ಲೇ ಪರಿಣಾಮಕಾರಿ ಆಯ್ಕೆಗಳನ್ನು ಮಾಡಬೇಕಾಗುವುದು." ಅಂತೆಯೇ, ಸಾಮಾಜಿಕ ಸಂಕಷ್ಟದ ಸ್ಥಳಗಳಾಗಿದ್ದ ಜರ್ಮನಿ, ಫ್ರಾನ್ಸ್, ಇಟಲಿ ಈ ದೇಶಗಳಲ್ಲಿ ತತ್ವಜ್ಞಾನಿಗಳ ಗುಂಪುಗಳು ಹುಟ್ಟಿಕೊಂಡವು. ಜರ್ಮನಿಯ ಕಾರ್ಲ್ ಜಾಸ್ಪರ್ಸ್ ಮತ್ತ ಮಾರ್ಟಿನ್ ಹೈಡೆಗ್ಗರ್ ಕ್ರಮವಾಗಿ ಹೈಡೆಲ್‌ಬರ್ಗ್ ಮತ್ತು ಫ್ರೀಬರ್ಗ್‌ಗಳಲ್ಲಿ ಪ್ರಾಧ್ಯಾಪಕರಾಗಿದ್ದವರು. ಫ್ರಾನ್ಸ್ ಸಹ ತತ್ವಜ್ಞಾನಿ ಹಾಗೂ ನಾಟಕಕಾರನಾದ ಗೇಬ್ರಿಯೆಲ್ ಮಾರ್ಸೆಲ್ ಮತ್ತು ಪ್ರಸಿದ್ಧ ಸಾಹಿತಿ ಮತ್ತು ತತ್ವಜ್ಞಾನಿ (ಸೊರ್ಬೋನ್‌ನಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕ) ಜೀನ್ ಪಾಲ್ ಸಾರ್ತ್ರೆ ಅಸ್ತಿತ್ವವಾದಿಗಳಾದ ಇವರಿಬ್ಬರನ್ನು ತತ್ವಜ್ಞಾನ ಲೋಕಕ್ಕೆ ಕೊಡುಗೆಯಾಗಿ ನೀಡಿದೆ. ಅಸ್ತಿತ್ವವಾದದೊಡನೆ ಸಂಬಂಧಿತರಾಗಿ ಶಿಲ್ಲಿಂಗ್, ನೀಚ್ಸೆ, ಪ್ಯಾಸ್ಕಲ್, ಹಸ್ರೆಲ್‌ನಂಥ ಮಹನೀಯರು ಅಸ್ತಿತ್ವವಾದದ ವಿಚಾರಧಾರೆಯನ್ನು ಪ್ರಭಾವಿತಗೊಳಿಸಿದ್ದಾರಾದರೂ ಇವರುಗಳನ್ನು ಕಟ್ಟಾ ಅಸ್ತಿತ್ವವಾದಿಗಳೆಂದು ಕರೆಯಲಾಗದು. ಹೀಗೆ ಅಸ್ತಿತ್ವವಾದವು ಎರಡು ಶತಮಾನಗಳ ಅಲ್ಪಕಾಲದ ಇತಿಹಾಸವನ್ನು ಹೊಂದಿದೆ.

**ಅಸ್ತಿತ್ವವಾದದ ತಾತ್ವಿಕತೆ:** ಹೈಡೆಗ್ಗರ್ ಅಸ್ತಿತ್ವವಾದಿಯೆಂದು ಕರೆದುಕೊಳ್ಳಲು ಇಚ್ಛಿಸುತ್ತಿರಲಿಲ್ಲ. ವಾಸ್ತವವಾಗಿ ಅಸ್ತಿತ್ವವಾದ ತತ್ವಜ್ಞಾನದಲ್ಲಿ ಒಂದು ವ್ಯವಸ್ಥೆಯನ್ನು ನಿರ್ಮಿಸಿ ತತ್ಪರಿಣಾಮವಾಗಿ ಅದರಲ್ಲಿ ಉಂಟಾದ ಯಾಂತ್ರಿಕತೆ, ಅಮೂರ್ತ ಕಲ್ಪನೆ, ತರ್ಕ ಬದ್ಧತೆ (rationalization)ಗಳನ್ನು ವಿರೋಧಿಸುತ್ತಾನೆ.

ಆದ್ದರಿಂದ ಅಸ್ತಿತ್ವವಾದವನ್ನು ತಾತ್ವಿಕತೆ, ಜ್ಞಾನಮೀಮಾಂಸೆ, ಮೌಲ್ಯಮೀಮಾಂಸೆ (axiology) ತರ್ಕಗಳ ಹಿನ್ನೆಲೆಯಲ್ಲಿ ಚರ್ಚಿಸುವ ಬದಲಿಗೆ ಅಸ್ತಿತ್ವವಾದದ ಪರಿಲ್ಪನೆಗಳನ್ನೇ ಚರ್ಚಿಸಿ ಅವುಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ನಂತರ ನೋಡಬಹುದು.

ಮೊದಲಿಗೆ ಅಸ್ತಿತ್ವವಾದಿಗಳ ತಾತ್ವಿಕ ಪರಿಕಲ್ಪನೆಗಳನ್ನು ಚರ್ಚಿಸುವುದು ಸೂಕ್ತವಾಗುವುದು. ನಮ್ಮ ಆಂತರಿಕ ಜೀವನದ, ಅನುಭವಗಳ ವ್ಯಾಖ್ಯಾನವೇ ತತ್ವಜ್ಞಾನ. ಹಾಗೆಯೇ, ಮಾನವನ ಅನುಭವಗಳು ಎಷ್ಟರಮಟ್ಟಿಗೆ ವಿಶಿಷ್ಟವಾಗಿರಿವುದೆಂದರೆ ಅವುಗಳನ್ನು ಕುರಿತ ಯಾವುದೇ ಸಾಮಾನ್ಯೀಕರಣಕ್ಕೆ ಅವಕಾಶವಾಗಲಿ ಸಾಧ್ಯತೆಯಾಗಲಿ ಇಲ್ಲ. ತಾತ್ವಿಕತೆ ಎಂದರೆ ಸತ್ಯಾನ್ವೇಷಣೆಯಲ್ಲ ಬದಲಿಗೆ ಸತ್ಯದ ಪರೀಕ್ಷೆ. ಅವರ ಪ್ರಕಾರ ಸತ್ಯವನ್ನು ತಿಳಿದರೆ ಸಾಲದು ಸತ್ಯದಲ್ಲಿ ಇರಬೇಕು. ಏಕೆಂದರೆ ಜೀವನವು ಅನುಭವಿಸಬೇಕಾದ ಸತ್ಯವೇ ಹೊರತು ಪರಿಹಾರವನ್ನು ಹುಡುಕಬೇಕಾದ ಸಮಸ್ಯೆಯಲ್ಲ. ತಾತ್ವಿಕತೆ ನಮ್ಮ ಅನುಭವಗಳ ಮನನದಿಂದ ಬೆಳೆಯಬೇಕೇ

Digitised by Bharatavani, CIIL

ವಿನಃ ಸತ್ಯದ ಬಗೆಗಿನ ಅಚ್ಚರಿ ಅಥವಾ ಪ್ರೇಮ ಇಲ್ಲವೆ ಮಾನವ ಜೀವನದಲ್ಲಿ ಅತ್ಯಾಸಕ್ತಿಯ ಪರಿಣಾಮವಾಗಬಾರದು. ಅಲೆನ್ ಹೇಳುವಂತೆ "ಇದು ರೂಢಿಯಲ್ಲಿರುವಂತೆ ಪ್ರೇಕ್ಷಕನ ದೃಷ್ಟಿಯ ನೆಲೆಗಟ್ಟಿನಿಂದಲ್ಲದೆ ಪಾತ್ರಧಾರಿಯ ದೃಷ್ಟಿಯ ನೆಲೆಗಟ್ಟಿನಿಂದ ತಾತ್ವಿಕ ರೂಪವನ್ನು ಕೊಡುವುದು." ಈ ತಾತ್ವಿಕ ಪರಿಕಲ್ಪನೆಯನ್ನು ಆಧರಿಸಿ ಸಾಂಪ್ರದಾಯಿಕ ಭಾರತೀಯ ತತ್ವಶಾಸ್ತ್ರ ಅಸ್ತಿತ್ವವಾದ ಗುಣಲಕ್ಷಣಗಳನ್ನು ಹೊಂದಿದೆಯೆಂದು ನಿಶ್ಚಯವಾಗಿ ವಾದಿಸಬಹುದು. ಪ್ರೊ ಹಿರಿಯಣ್ಣ ಹೇಳುವಂತೆ, ಭಾರತೀಯ ತತ್ವಶಾಸ್ತ್ರ ಜೀವನದಲ್ಲಿ ಎದುರಾದ ವ್ಯಾವಹಾರಿಕ ಸಮಸ್ಯೆಗಳನ್ನು ಕುರಿತು ಋಷಿಗಳು ಮಾಡಿದ ಚಿಂತನೆಗಳ ಫಲವಾಗಿದೆ. ಡಾ॥ ರಾಧಾಕೃಷ್ಣನ್ನರು ಸಹ "ಭಾರತದ ಪ್ರತಿಯೊಂದು ಪ್ರಮುಖ ತತ್ವಶಾಸ್ತ್ರ ಪದ್ಧತಿಗಳು ಜೀವನದ ವ್ಯಾವಹಾರಿಕ ಮತ್ತು ದುರಂತ ಸಮಸ್ಯೆಗಳಿಂದಲೇ ಪ್ರಾರಂಭಗೊಂಡು ಪ್ರಪಂಚದಲ್ಲಿ ದುಃಖದಿಂದ ಬಳಲುತ್ತಿರುವ ಮಾನವನ ಸಮಸ್ಯೆಗಳನ್ನು ಪರಿಹರಿಸಲೋಸುಗ ಸತ್ಯಾನ್ವೇಷಣೆಯಲ್ಲಿ ತೊಡಗುತ್ತವೆ. ಅಸ್ತಿತ್ವವಾದವನ್ನು ವಿಷಮ ಪರಿಸ್ಥಿತಿಯ ತತ್ವಶಾಸ್ತ್ರವೆಂದು ಹೇಳುವುದುಂಟು. ಒಬ್ಬ ವ್ಯಕ್ತಿಯ ಅಥವಾ ಗುಂಪಿನ ವಿಷಮ ಪರಿಸ್ಥಿತಿ ತಾತ್ವಿಕತೆಗೆ ಒಂದು ಅವಕಾಶ/ಸಂದರ್ಭ. ಈ ಅರ್ಥದಲ್ಲಿ ಇಡೀ ಭಗವದ್ಗೀತೆಯನ್ನು ಅಸ್ತಿತ್ವವಾದಿ ಪ್ರಕರಣಗ್ರಂಥವೆನ್ನಬಹುದು. ಕಾರಣವಿಷ್ಟೆ. ಗೀತೆಯು ಬೋಧನೆಗಳನ್ನು ಸಾಮಾನ್ಯ ಆಧ್ಯಾತ್ಮಿಕ ತತ್ವಗಳ ಇಲ್ಲವೆ ನೈತಿಕ ಸಿದ್ಧಾಂತಗಳ ಬೆಳಕಿನಲ್ಲಿ ಪರಿಗಣಿಸದೆ ವ್ಯಾವಹಾರಿಕ ವಿಷಮ ಸ್ಥಿತಿಯ ಹಿನ್ನೆಲೆಯಲ್ಲಿ ಮನುಷ್ಯನ ಬಾಳಿಗೆ ನೈತಿಕತೆ ಮತ್ತು ಆಧ್ಯಾತ್ಮಿಕತೆಗಳನ್ನು ಅನ್ವಯವೆಂದು ಪರಿಗಣಿಸಬೇಕು" ಎಂದು ಹೇಳಿರುವರು. ತಾತ್ವಿಕ ರೂಪವನ್ನು ನೀಡಬೇಕಾಗಿಬಂದ ಅರ್ಜುನನ ಪರಿಸ್ಥಿತಿ ಕಿರ್ಕಗಾರ್ಡ್‌ನ ಐದರ್/ಆರ್ (ಇದು ಅಥವಾ ಅದು), ಯುದ್ಧ ಮಾಡುವುದೋ ಬೇಡವೋ ಎಂಬಂತೆ ಇತ್ತು.

ಭಾರತದ ಮಹಾಕಾವ್ಯಗಳಲ್ಲಿ ಮತ್ತು ಉಪನಿಷತ್ತುಗಳಲ್ಲಿ ಇಂಥ ಹಲವಾರು ಅಸ್ತಿತ್ವವಾದಿ ಆಯ್ಕೆಗಳನ್ನು ಸೂಚಿಸುವ ಸಂದರ್ಭಗಳನ್ನು ಗುರುತಿಸಬಹುದು. ರಾಮಾಯಣದಲ್ಲಿ ಸೀತೆಯನ್ನು ಅರಣ್ಯಕ್ಕೆ ಕಳಿಸಬೇಕು ಎಂಬ ರಾಮನ ನಿರ್ಧಾರ, ಕಠೋಪನಿಷತ್ತಿನಲ್ಲಿ ಜೀವನದ ಸುಖಭೋಗಗಳನ್ನು ತಿರಸ್ಕರಿಸಬೇಕು ಎಂಬ ನಚಿಕೇತನ ನಿಶ್ಚಯ, ಸಿದ್ಧಾರ್ಥನ ಬುದ್ಧನಾಗಬೇಕೆಂಬ ನಿಶ್ಚಯ – ಹೀಗೆ ಇವೆಲ್ಲಾ ಸಂದರ್ಭಗಳಿಗೆ ತಾತ್ವಿಕ ರೂಪವನ್ನು ನೀಡಬಲ್ಲೆವು. ಅಂತೆಯೆ ತಾತ್ವಿಕ ಅನ್ವೇಷಣೆಯ ಕಾರಣವು ಕೇವಲ ಬೌದ್ಧಿಕ ಕುತೂಹಲಮಾತ್ರವಾಗಿರದೆ ವ್ಯಕ್ತಿಯ ಜೀವನದ ಒಂದು ಸಂದಿಗ್ಧ ಪರಿಸ್ಥಿತಿಯಾಗಿರುವುದು. ಈ ಪರಿಸ್ಥಿತಿಯು ಅವನನ್ನು ನಂತರದ ಇರುವಿಕೆಗೆ ಸಂಬಂಧಿಸಿದಂತೆ ಆಯ್ಕೆಯನ್ನು ಮಾಡುವಂತೆ ಒತ್ತಾಯಿಸುತ್ತದೆ. ವಾಸ್ತವವಾಗಿ "ಎಕ್ಸಿಸ್ಟೆನ್ಸ್" (existence) ಎಂಬ ಪದ ಜರ್ಮನ್ ಭಾಷೆಯ ex-sistet ಎರಡು ಪದಗಳಿಂದ ಆಗಿದ್ದು ಇದರ ಅರ್ಥ ಯಾವುದು ಇದೆಯೋ (that which stands out), ಯಾವುದು ಹೊರಹೊಮ್ಮುವುದೋ (that which emerges) ಎಂಬುದಾಗಿದೆ. ಅಸ್ತಿತ್ವವಾದ ಜೀವನದ ಸಮಸ್ಯೆಗಳಿಂದ ಹೊರಹೊಮ್ಮುವ ತತ್ವಜ್ಞಾನ ಎಂಬುದನ್ನು ಮೇಲಿನ ಅರ್ಥಗಳು ಸಂಕೇತಿಸುತ್ತವೆ. ಮಾರ್ಸೆಲ್ಲನು ತತ್ವಶಾಸ್ತ್ರವನ್ನು ವಿಷಮ ಪರಿಸ್ಥಿತಿಯಲ್ಲಿನ ಸಲಹೆಗಾರ (counsellor) ಎಂದು ಸಂಕ್ಷಿಪ್ತದಲ್ಲಿ ಹೇಳಿ ಮುಗಿಸಿದ್ದಾನೆ.

**ಅಸ್ತಿತ್ವವಾದದ ಮೂಲ ಪರಿಕಲ್ಪನೆಗಳು:** ಅಸ್ತಿತ್ವವಾದದ ಮೂಲ, ಅಡಿಗಲ್ಲಿನಂತಿರುವ ಪರಿಕಲ್ಪನೆಗಳಲ್ಲಿ "ಇರುವಿಕೆ ಸಾರಕ್ಕೆ ಪೂರ್ವಭಾವಿಯಾದುದು" ಎಂಬುದು ಒಂದಾಗಿದೆ. ಸುತ್ತಲ ಪ್ರಪಂಚ ಸಾರಭೂತವಾದ ವಿಚಾರಗಳ ಪ್ರಪಂಚ ಮತ್ತು ಜೀವನದ ಉದ್ದೇಶ್ಯ ಈ ಸಾರವನ್ನು ಕಂಡುಹಿಡಿಯುವುದು ಎಂದು ಪ್ಲೇಟೋ ಹೇಳಿದ. ಸಾರವು ಆಗಲೇ ಇದೆ. ಅವು ಅಸ್ತಿತ್ವಕ್ಕೆ ಪೂರ್ವಭಾವಿಯಾದುದು. ಅಸ್ತಿತ್ವವು ಸಹ ಸಾರದ ಮೂರ್ತಸ್ವರೂಪವೇ. ಸಾರವೆಂದರೆ ಚೈತನ್ಯ (ಆತ್ಮ) ಇದು ವಿಶ್ವಚೈತನ್ಯದ ಅಂಶವಾಗಿದೆ. ಇದು ಪ್ಲೇಟೋವಿನ ಸಿದ್ಧಾಂತ. ಇನ್ನಿತರ ಅಧಿಕಾಂಶ ಪಾಶ್ಚಾತ್ಯ ತಾತ್ವಿಕರು ಈ ವಾದವನ್ನೇ ಮುಂದುವರಿಸಿದರು.

ಇರುವಿಕೆಯ ಸಾರದಿಂದಲೇ ಅಂದರೆ ಚಿಂತನೆಯಿಂದಲೇ ಅದಕ್ಕೆ ಸತ್ಯತೆ ಇದೆಯೆಂದು ಡೆಸ್ಕಾರ್ಟೆ ದೃಢವಾಗಿ ಹೇಳಿದ. "ನಾನು ಚಿಂತಿಸುವೆನು ಆದ್ದರಿಂದಲೇ ನಾನು ಇದ್ದೇನೆ" ಎಂದು ಆತ ಹೇಳಿದ. ಬರ್ಗ್‌ಸನ್ ಇನ್ನೂ ದೂರ ಹೋಗಿ "ನಾನು ಚಿಂತಿಸುವುದಿಲ್ಲ. ಈ ಸಾರ ನನ್ನಲ್ಲಿ ಚಿಂತಿಸುವುದು" ಎಂದು ಹೇಳಿ ಮಾನವನ ಅಸ್ತಿತ್ವವನ್ನು ಕುರಿತು ಅತೀತವೂ, ನಿರ್ಣಯಾತ್ಮಕವೂ (deterministic) ಆದ ಟಿಪ್ಪಣಿ ನೀಡಿದ. ಇದೇ ರೀತಿ ಪ್ರಕೃತಿವಾದಿ (naturalist) ತಾತ್ವಿಕರು ಈ ತೆರನ ಅತೀತವಾದಿ ನಿರ್ಣಯವನ್ನು ತಿರಸ್ಕರಿಸಿ ಪ್ರಕೃತಿವಾದಿ ನಿರ್ಣಯಾತ್ಮಕತೆಯನ್ನು ಪ್ರತಿಪಾದಿಸಿದರು. ಪ್ರಕೃತಿಯಲ್ಲಿರುವ ಸಾರ ಇರುವಿಕೆಗೆ ಪೂರ್ವಭಾವಿಯಾದುದೆಂದು ಅವರ ವಾದ. ಮತ್ತೊಂದು ಕಡೆ ಪರಿಣಾಮವಾದಿಗಳು (pragmatist) ಸಾಮಾಜಿಕ ನಿರ್ಣಯಾತ್ಮಕತೆಯ ಬಗ್ಗೆ ಮಾತನಾಡಿದರು. ಮೊದಲೇ ಹೇಳಿದಂತೆ ಅಸ್ತಿತ್ವವಾದ ಮನುಷ್ಯನ ಮುಕ್ತ ಸ್ವಭಾವವನ್ನು ಕುರಿತ ಯಾವುದೇ ರೀತಿಯ ನಿರ್ಣಯಾತ್ಮಕತೆ ಮತ್ತು ದೃಢ ಹೇಳಿಕೆಗಳ ವಿರೋಧವುಳ್ಳದ್ದಾಗಿದೆ. ಸಾರಕ್ಕೆ ಮುನ್ನವೇ ಅಸ್ತಿತ್ವವಿದೆ ಎಂದು ಘೋಷಿಸುವುದರ ಜೊತೆಗೆ ಮಾನವನು ತನ್ನ ಸಾರವನ್ನು ಸೃಷ್ಟಿಸಲು ಮೂಲತಃ ಸ್ವತಂತ್ರನಿದ್ದಾನೆ ಎಂದು ಅಸ್ತಿತ್ವವಾದಿಗಳು ಹೇಳುವರಾದರೂ ಇದೇ ಮನುಷ್ಯನಿಗೆ ದುಃಖದಾಯಕವಾಗಿದೆ ಎಂದು ಆಲೋಚಿಸುತ್ತಾರೆ. ಮನುಷ್ಯ ಕೇವಲ ಸ್ವತಂತ್ರಮಾತ್ರನಲ್ಲ. ವಿಡಂಬನೆಯೋ ಎಂಬಂತೆ ಸ್ವತಂತ್ರನಾಗಿರುವುದನ್ನೇ ಖಂಡಿಸಲಾಗಿದೆ. ಜೀನ್ ಪಾಲ್ ಸಾರ್ತ್ರೆಯ "ಇರುವಿಕೆ ಮತ್ತು ಶೂನ್ಯತೆ" (Being and Nothingness) ಈ ವಾದದ ಸೂತ್ರೀಕರಣ. ಬ್ಲಾಕ್‌ಹಾಮಾ ಹೀಗೆ ಬರೆಯುವನು "ಸಾರ್ತ್ರೆ ದೃಷ್ಟಿಯಲ್ಲಿ ಮಾನವನ ಸೃಷ್ಟಿಕರ್ತನೇ ಇಲ್ಲ. ಮಾನವ ತನ್ನನ್ನು ತಾನು ಕಂಡುಕೊಂಡ. ಅವನ ಅಸ್ತಿತ್ವ ಮೊದಲು. ನಂತರ ತನ್ನನ್ನು ತಾನು ವ್ಯಾಖ್ಯಾನಿಸಿಕೊಂಡ." ಆದ್ದರಿಂದ ಅವನಿಗೆ ನೀಡಲ್ಪಟ್ಟಿರುವುದನ್ನು ಕಂಡುಕೊಳ್ಳಲು ಕಾಯುತ್ತಿರುವ ದುಃಖಿತ

Digitised by Bharatavani, CIIL

ಅಸಹಾಯಕ ಜೀವಿಯಲ್ಲ ಮಾನವ. ಬದಲಿಗೆ ಮಾನವನನ್ನು ಮುಕ್ತ, ಜವಾಬ್ದಾರಿಯುತ, ಆಶಿಸುತ್ತಿರುವ ಹಾಗೂ ಪರಿವರ್ತನೆಗೆ (becoming) ಪ್ರಯತ್ನಿಸುತ್ತಿರುವ ಜೀವಿ ಎಂದು ಪರಿಗಣಿಸಲಾಗಿದೆ. ಸಾರ್ತ್ರೆ ಸ್ವತಃ ಈ ಪರಿಕಲ್ಪನೆಯನ್ನು ಹೀಗೆ ವಿಶದಪಡಿಸುವನು: ಇಲ್ಲಿ ಹೇಳುವ "ಸಾರಕ್ಕೆ ಮುನ್ನ ಅಸ್ತಿತ್ವ" ಎಂಬುದರ ಅರ್ಥವೇನು? ಮೊದಲಿಗೆ ಮಾನವನು "ಇದ್ದಾನೆ" ಹೊರಟು ದೃಶ್ಯದಲ್ಲಿ ಕಾಣಿಸಿಕೊಳ್ಳುವನು. ತದನಂತರವೇ ತನ್ನನ್ನು ತಾನು ವ್ಯಾಖ್ಯಾನಿಸಿಕೊಳ್ಳುತ್ತಾನೆ ಎಂದು ಇದರ ಅರ್ಥ. ಅಸ್ತಿತ್ವವಾದಿಯು ಮಾನವನನ್ನು ವ್ಯಾಖ್ಯಾನಿಸಲಾಗದವನೆಂದು ಹೇಳಿದಲ್ಲಿ ಅದಕ್ಕೆ ಕಾರಣ ಮಾನವ ಮೊದಲಿಗೆ ಶೂನ್ಯದಂತೆ. ನಂತರವೇ ಸತ್ವವುಳ್ಳವನಾಗುವನು ಮತ್ತು ತಾನು ಏನೆಂದುಕೊಂಡಿರುವನೋ ಅದಾಗುವನು. "ಮನುಷ್ಯನು ತನ್ನ ಬಗ್ಗೆ ಹೊಂದಿರುವ ಪರಿಕಲ್ಪನೆಯೇನೋ ಅದೇ ಆಗಿರುವನಲ್ಲದೆ ತಾನೇನಾಗಬೇಕು ಎಂದು ತನ್ನ ಅಸ್ತಿತ್ವದ ನಂತರ ಇಚ್ಛಿಸುವನೋ ಅದೇ ಆಗುವನು. ಮಾನವನು ತನ್ನನ್ನು ರೂಪಿಸಿಕೊಳ್ಳುವಂತೆ ಮಾತ್ರ ಆಗುವನೇ ವಿನಃ ಮತ್ತೇನೂ ಅಲ್ಲ. ಇದೇ ಅಸ್ತಿತ್ವವಾದದ ಪ್ರಥಮ ತತ್ವ". ಆದರ್ಶವಾದಿಗಳು ಅತೀತ ಮೌಲ್ಯಗಳಲ್ಲಿ ವಿಶ್ವಾಸವನ್ನಿರಿಸಿದರೆ, ಪ್ರಕೃತಿವಾದಿಗಳು ಪ್ರಕೃತಿಯಲ್ಲಿ ಮೌಲ್ಯಗಳು ಹುದುಗಿವೆಯೆಂದು ನಂಬುವರು; ಪರಿಣಾಮವಾದಿಗಳು ಸಾಮಾಜಿಕ ಮೂಲವಾದ ಮೌಲ್ಯಗಳಲ್ಲಿ ವಿಶ್ವಾಸವಿರಿಸುವವರಾದರೆ ಅಸ್ತಿತ್ವವಾದಿಗಳು ವ್ಯಕ್ತಿಯೇ ಮೌಲ್ಯಗಳನ್ನು ಸೃಷ್ಟಿಸುವನೆಂದು ಘೋಷಿಸುವರು. ಸತ್ಯವೆನ್ನುವುದು ಪರಿವರ್ತನೆಯ ಸ್ಥಿತಿ. ಇರುವಿಕೆ ಜೀವನದ ಪ್ರತಿ ಕ್ಷಣದಲ್ಲೂ ಅಧಿಕಗೊಳ್ಳುವುದು ಮತ್ತು ಸಾರವು ಈ ನಿರಂತರ ಪರಿವರ್ತನೆಯ ಪರಿಣಾಮ.

ಅಸ್ತಿತ್ವವಾದದ ಮತ್ತೊಂದು ಮಹತ್ವಪೂರ್ಣ ಪರಿಕಲ್ಪನೆ ಎಂದರೆ ಮಾನವ ಜೀವಿತದ ಸೋಪಾಧಿಕತೆ/ಅನುಷಂಗಿಕತೆ/(contingency), ಮಾನವ ಜೀವಿತದ ಕೊಡಲ್ಪಟ್ಟಿರುವಿಕೆ (givenness) ಅಥವಾ ಎಸೆಯಲ್ಪಟ್ಟಿರುವಿಕೆ (thrownness). ಅಸ್ತಿತ್ವವಾದಿಗಳು ವ್ಯಕ್ತಿಯ ಇರುವಿಕೆ ಎಂದರೆ ಅವನ ಜನನದಿಂದ ಮರಣದವರೆಗಿನ ಅವಧಿ. ಆತನ ಜನ್ಮಕ್ಕೆ ಮುಂಚೆ ಏನೂ ಇರಲಿಲ್ಲ ಹಾಗೂ ಸಾವಿನ ಆಚೆ ಏನೂ ಇಲ್ಲ. ಇವೆರಡರ ಮಧ್ಯದ ಅವಧಿಯಲ್ಲಿ ಸಮಾಜಜೀವನಕ್ಕೆ ನಮ್ಮನ್ನು ಎಸೆಯಲಾಗಿದೆ ಮತ್ತು ಸಮಾಜಜೀವನದ ಲಕ್ಷಣಗಳೇ ನಮ್ಮ ಜೀವನದ ಪರಿಸ್ಥಿತಿಗಳು (contingent circumstances). ಈ ಸೋಪಾಧಿಕತೆ ಸಾಮಾನ್ಯವಾಗಿ ಭಯ, ಏಕಾಂತ, ಅಚ್ಚರಿ, ಅನಿಶ್ಚಿತತೆ, ಕಡೆಯದಾಗಿ ಸಾವಿನಿಂದ ಕೊನೆಗೊಳ್ಳುವಂಥ ಲಕ್ಷಣಗಳನ್ನು ಹೊಂದಿದೆ. ಬುದ್ಧನೂ ಈ ಮಾನವಜೀವಿತದ ಸೋಪಾಧಿಕತೆಯನ್ನು ತನ್ನ ಅರಮನೆಯಿಂದ ಹೊರಬಂದೊಡನೆ ಗುರುತಿಸಿದನಲ್ಲದೆ ಮಾನವನ ದುಃಖ ತಾತ್ವಿಕವಾಗಿ ಚಿಂತಿಸಲು ಒಂದು ಸಂದರ್ಭವಾಗಿ ಪರಿಣಮಿಸಿತು. ಜೀನ್ ವಾಲ್ ಹೀಗೆ ಹೇಳುವನು: "ಸಾವಿನಿಂದ ಪರಿಮಿತಿಗೊಳ್ಳುವ ಸಂಕಟದಿಂದ ಅನುಭವಿಸಲ್ಪಡುವ ಪ್ರಪಂಚದಲ್ಲಿ ಮಾನವನಿದ್ದಾನೆ. ಮೂಲತಃ ತಾನು ಆತಂಕದಿಂದೊಡಗೂಡಿದ್ದೇನೆಂಬ ಅರಿವು ಹೊಂದಿದ್ದಾನೆ. ತನ್ನ ನಶ್ವರತೆಯ ಸೀಮೆಯ ಒಳಗೆ ತನ್ನ ಏಕಾಂತದ ಹೊರೆ ಹೊತ್ತಿದ್ದಾನೆ. ಅತೀತವಾದ ಇರುವಿಕೆ ಮತ್ತು ಮರಣದಾಚೆಗಿನ ಉದ್ದೇಶಗಳನ್ನು ಚರ್ಚಿಸುವ ತತ್ವಶಾಸ್ತ್ರ ವ್ಯಾಪ್ತಿ ಅಥವಾ ಸಾವಿನಾಚೆಯ ಧ್ಯೇಯಗಳನ್ನು ಕುರಿತು ಚರ್ಚಿಸುವ ಮೌಲ್ಯ ಮೀಮಾಂಸೆ (axiology) – ಇವೆಲ್ಲವೂ ಸಂಕಟದಲ್ಲಿರುವ ಜೀವನನ್ನು ಸಮಾಧಾನ ಪಡಿಸಲಿಕ್ಕೆ ವಿನ್ಯಾಸಗೊಳಿಸಲ್ಪಟ್ಟ ಮನಸ್ಸಿನ ಕಲ್ಪನೆಗಳೇ ಹೊರತು ಅಸ್ತಿತ್ವದ ಸತ್ಯಕ್ಕಾಗಿ ಅಲ್ಲ."

ಬರ್ಡೆಯೇವ್ ಗುರ್ವಿಚ್, ಜೀನ್ ವಾಲ್ ಹಾಗೂ ಇನ್ನಿತರರೊಡನೆ ಅಲೆಗ್ಸಾಂಡರ್ ಕೋರೇ ನಡೆಸಿದ ಅನೌಪಚಾರಿಕ ಚರ್ಚೆಯಲ್ಲಿ ಮಾನವ ಜೀವಿತದ ಸೋಪಾಧಿಕತೆಯನ್ನು ಬಹಳ ಸರಳವಾಗಿ ವಿವರಿಸುವನು "ನಾವು ಅಲ್ಲಿರುವೆವು; ನಾನು ಅಲ್ಲಿರುವೆನು; ಅದು ಏಕೆ ಅಥವಾ ಹೇಗೆ ಎಂದು ನನಗೆ ಗೊತ್ತಿಲ್ಲ; ಸತ್ಯವಾಗಿಯೂ, ನಿಶ್ಚಯವಾಗಿಯೂ ಒಂದು ದಿನ ಮರಣಿಸುವೆ ಇದೊಂದೇ ನನಗೆ ತಿಳಿದಿರುವುದು. ಅದೇ ನನ್ನೆಲ್ಲಾ ಸಾಧ್ಯತೆಗಳನ್ನು, ಭವಿಷ್ಯವನ್ನು ಪರಿಮಿತಿಗೊಳಿಸುವುದು. ನನ್ನ ಭವಿಷ್ಯ ಪರಿಮಿತವಾದುದು. ಎಲ್ಲೆಯುಳ್ಳದ್ದು ಮತ್ತು ಅದನ್ನು ನಾನು ತಿಳಿದಿರುವೆ – ಇದು ಪ್ರಪಂಚದಲ್ಲಿ ನನ್ನ ಸ್ಥಿತಿ. ನನ್ನ ಅಸ್ತಿತ್ವ ಅನಿಶ್ಚಿತ ಹಾಗೂ ಅಲ್ಪ ಕಾಲೀನ ಮತ್ತು ಅದನ್ನು ನಾನು ತಿಳಿದುಕೊಳ್ಳಬಲ್ಲೆ. ಇದೊಂದೇ ನನ್ನ ಬಳಿ ಇರುವುದು ಮತ್ತು ಯಾವುದೇ ಕ್ಷಣದಲ್ಲಾದರೂ ಅದನ್ನು ಕಳೆದುಕೊಳ್ಳಬಲ್ಲೆ; ಆದ್ದರಿಂದಲೇ ಜೀವನಕ್ಕೆ ಆತಂಕ, ಭಯ ಹಾಗೂ ಸಂಕಟಗಳ ಒಳ ಪದರವಿದೆ". ಆದ್ದರಿಂದ ತಾತ್ವಿಕ ರೂಪ ಕೊಡಲ್ಪಡುವ ಮೂಲಗಳು, ಪ್ರಕ್ರಿಯೆಗಳು ಮತ್ತು ಸಾರವು ನಾವಿರುವ ಪರಿಸ್ಥಿತಿಯೇ ಆಗಿರಬೇಕು. ಮರಣದಿಂದ ಪರಿಮಿತಿಗೊಂಡಿರುವ ನಮ್ಮ ಜೀವನದ ಪರಿಸ್ಥಿತಿಯ ಬಗ್ಗೆ ನಾವೆಲ್ಲರೂ ತಿಳಿದಿದ್ದೇವೆ. ಹಾಗೂ ಅಸ್ತಿತ್ವವಾದಿಗಳು ಪ್ರಪಂಚದಲ್ಲಿ ಒಂದಾನೊಂದು ದಿನ ತಾನು ಸಾಯುವೆನೆಂದು ತಿಳಿದಿರುವ ಏಕೈಕ ಜೀವಿ ಮಾನವನೆಂದು ಸರಿಯಾಗಿಯೇ ಹೇಳಿದ್ದಾರೆ. ಆದ್ದರಿಂದ ಮಾನವನ ಅಸ್ತಿತ್ವ ಭಯ ಆತಂಕಗಳಿಂದ ತುಂಬಿದೆ. ಅವನು ಈ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲಾರನು. ಅವನು ಭಯಾತಂಕಗಳನ್ನು, ಪರಿತಾಪಗಳನ್ನು ದೃಢವಾಗಿ, ಧೈರ್ಯವಾಗಿ ಎದುರಿಸಲು ಸಿದ್ಧವಾಗಬೇಕು. ಅವನು ಮರಣವನ್ನು ಪ್ರೀತಿಸಲು ಕಲಿಯಬೇಕು. (ಮಹಾತ್ಮ ಗಾಂಧೀಜಿ, ಕೆನೆಡಿ, ಲಿಂಕನ್, ಸಾಕ್ರೆಟಿಸ್ ಹಾಗೂ ಇನ್ನಿತರ ಮಹನೀಯರುಗಳಿಗೆ ಉದ್ದೇಶರಹಿತ ಜೀವನಕ್ಕಿಂತ ಅರ್ಥಪೂರ್ಣ ಉದ್ದೇಶಕ್ಕಾಗಿ ಸಾಯುವುದೇ ಮೇಲಾಗಿತ್ತು). ಹಿಂದೂ ತತ್ವಶಾಸ್ತ್ರದಲ್ಲಿ ದುಃಖ, ಭಯ, ಪರಿತಾಪಗಳಂಥ ಅಸ್ತಿತ್ವವಾದಿ ಪರಿಕಲ್ಪನೆಗಳು ಇವೆಯಾದರೂ ಹಿಂದೂ ತತ್ವಶಾಸ್ತ್ರ ಈ ಜೀವನದ ಸೋಪಾಧಿಕ ಸ್ಥಿತಿಗಳನ್ನು ಅತಿಕ್ರಮಿಸಿ ಹೋಗಲು ಸಲಹೆ ನೀಡುತ್ತದೆ. ಗೀತೆಯಲ್ಲಿ ಬರುವ ಸ್ಥಿತಪ್ರಜ್ಞನ ಪರಿಕಲ್ಪನೆ ಇದಕ್ಕೆ ಒಂದು ಉದಾಹರಣೆ.

ಮಾನವನನ್ನು ಕುರಿತು ಅಸ್ತಿತ್ವವಾದಿಗಳು ಮತ್ತೊಂದು ಮುಖ್ಯ ಪರಿಕಲ್ಪನೆಯನ್ನು ಹೊಂದಿದ್ದಾರೆ. ಸ್ವತಂತ್ರ ಇಚ್ಛೆ ಮತ್ತು ನಿರ್ಣಯಾತ್ಮಕತೆ – ಇವೆರಡರ ನಡುವಿನ ಬಹುಕಾಲದ

Digitised by Bharatavani, CIIL

ಚರ್ಚೆಯಲ್ಲಿ ಅಸ್ತಿತ್ವವಾದಿಗಳು ಮಾನವನನ್ನು ಆತ್ಯಂತಿಕವಾಗಿ ಸ್ವತಂತ್ರನು, ಜವಾಬ್ದಾರಿಯುತ ಜೀವಿಯೂ ಆಗಿದ್ದನೆಂದು ಹೇಳಲು ಇಷ್ಟಪಡುತ್ತಾರೆ. ಸಾರ್ತ್ರೆ ಪ್ರಕಾರ ಸ್ವಾತಂತ್ರ್ಯ ಅಸ್ತಿತ್ವಕ್ಕೆ ಸಮನಾದುದೇ. ಅಂತೆಯೇ, ಮಾನವನು ಸೃಷ್ಟಿಸ್ವಾತಂತ್ರ್ಯವನ್ನು ವ್ಯಾಪಕವಾಗಿ ಸಿದ್ಧಪಡಿಸಲು ಹಾಗೂ ಅರ್ಥಮಾಡಿಕೊಳ್ಳಲು ಮಾರ್ಗಗಳ ಹುಡುಕಾಟ ಎಂದೂ ಅಸ್ತಿತ್ವವಾದವನ್ನು ವಿವರಿಸಲಾಗಿದೆ. ಮಾರ್ಜೋರಿ ಗ್ರೀನಿ ಹೀಗೆ ಹೇಳುವರು "ಕ್ರಾಂತಿಕಾರಿ ತಾತ್ವಿಕತೆಯು ಅಂತಿಮವಾಗಿ ಸ್ವಾತಂತ್ರದ ತಾತ್ವಿಕತೆಯೇ ಆಗಿರುವುದು – ಇದು ಕೇವಲ ಸ್ವಾತಂತ್ರವನ್ನು ಅರಸುವವರ ತತ್ವ ಶಾಸ್ತ್ರಮಾತ್ರವಾಗದೆ ಸ್ವಾತಂತ್ರಕ್ರಿಯೆಯ ತತ್ವಶಾಸ್ತ್ರವೇ ಆಗಿದೆ". ಅಸ್ತಿತ್ವವಾದಿಗಳ ಪ್ರಕಾರ ಮನುಷ್ಯ ಕೇವಲ ಸ್ವತಂತ್ರ ಮಾತ್ರನಲ್ಲ, ಅವನು ಸ್ವತಂತ್ರನಾಗಿರಬೇಕೆಂದೇ ದಂಡಿಸಲ್ಪಡುತ್ತಿದ್ದಾನೆ. ಆದರೆ ಅವನು ಸ್ವತಂತ್ರನಾಗಿಲ್ಲ, ಸ್ವತಂತ್ರನಾಗಲು ಸಾಧ್ಯವಿಲ್ಲ.

ಇದೇ ಮಾನವನ ದುರಂತ. ಅನಂತ ಸ್ವಾತಂತ್ರಕ್ಕಾಗಿ ಅವನು ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗಿದೆ ಮತ್ತು ಈ ರೀತಿಯ ಹೆಚ್ಚಿನ ಜವಾಬ್ದಾರಿಯೇ ಅವನ ಭಯ, ಆತಂಕ, ಪರಿತಾಪಗಳಿಗೆ ಕಾರಣವಾಗಿದೆ. ಮಾನವನ ಸತ್ವದ ವಿಲಕ್ಷಣ ಗುಣವೆಂದರೆ ಅದು ಕ್ಷಮೆಗೆ ಹೊರತಾಗಿದೆ. ಮಾನವ ಯಾವಾಗಲೂ ಧರ್ಮಸಂಕಟದ ಸ್ಥಿತಿಯಲ್ಲಿರುವನು. ದಿಟ್ಟ, ಪ್ರಾಮಾಣಿಕ, ಜವಾಬ್ದಾರಿಯುತ ಹಾಗೂ ಅಧಿಕಾರಯುತ ಅಸ್ತಿತ್ವ ಪರಿಸ್ಥಿತಿಯನ್ನು ಎದುರಿಸಲು ಸಹಾಯ ಮಾಡುವುದು.

**ಅಸ್ತಿತ್ವವಾದದ ಶೈಕ್ಷಣಿಕ ನಿಹಿತಾರ್ಥಗಳು**: ಒಬ್ಬ ಅಸ್ತಿತ್ವವಾದಿಯಿಂದ ಶಿಕ್ಷಣವನ್ನು ಕುರಿತ ಒಳ್ಳೆಯ ಗ್ರಂಥ (Treatise) ಇನ್ನೂ ಬರಬೇಕಾಗಿರುವುದರಿಂದ ಅಸ್ತಿತ್ವವಾದಿ ಶಿಕ್ಷಣದ ಬಗ್ಗೆ ಸಾಕಷ್ಟು ನಿಖರವಾಗಿ, ಆತ್ಮವಿಶ್ವಾಸದಿಂದ ಚರ್ಚಿಸುವುದು ಬಹಳ ಕಷ್ಟ. "ಶಿಕ್ಷಣದ ಬಗ್ಗೆ ಅಸ್ತಿತ್ವವಾದ ಯಾವ ವಿಶೇಷ ಆಸಕ್ತಿಯನ್ನು ತೋರಿಲ್ಲ". ಆದ್ದರಿಂದ, ಅಸ್ತಿತ್ವವಾದದ ಶೈಕ್ಷಣಿಕ ಅರ್ಥವನ್ನು ಅಸ್ತಿತ್ವವಾದಿಗಳ ತತ್ವಚಿಂತನೆಯಿಂದ ಅನುಮಾನಿಸಬೇಕಾಗುತ್ತದೆಯೇ (Deduction) ಹೊರತು ಅಸ್ತಿತ್ವವಾದಿಗಳೇ ಈ ಅರ್ಥವನ್ನು ನೀಡಿಲ್ಲ. ನೆಲ್ಲರ್ (Kneller) ಹೀಗೆ ಅಭಿಪ್ರಾಯಪಡುವನು: "ಕಿರ್ಕೆಗಾರ್ಡ್ ಮತ್ತು ಮಾರ್ಸೆಲ್ ಮುಂತಾದವರು ತಮ್ಮ ಶಾಲಾ ಶಿಕ್ಷಣದ ಬಗ್ಗೆ ಅಕಸ್ಮಾತ್ತಾಗಿ ಮಾಡಿರುವ ಉಲ್ಲೇಖನಗಳನ್ನು ಬಿಟ್ಟರೆ ಅಸ್ತಿತ್ವವಾದಿಗಳು ತಮ್ಮ ತತ್ವಚಿಂತನೆಯನ್ನು ಶಾಲಾ ಶಿಕ್ಷಣಕ್ಕೆ ಅನ್ವಯಿಸಲು ಪ್ರಯತ್ನಿಸಿಲ್ಲ. ಅವರ ತಾತ್ವಿಕ ಚಿಂತನೆಯಿಂದ ಅಲ್ಪಸ್ವಲ್ಪ ಸಹಾಯವನ್ನು ಪಡೆದು ತರ್ಕಪೂರ್ವಕವಾಗಿ ಮಾತ್ರ ನಾವು ಊಹಿಸಬಲ್ಲೆವು". ಆದರೆ ಇತರ ಮೂಲಗಳಿಂದ ಸಹಾಯವನ್ನು ಪಡೆದು ಅಸ್ತಿತ್ವವಾದಿ ಶೈಕ್ಷಣಿಕ ನಿಹಿತಾರ್ಥಗಳನ್ನು ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಶಿಕ್ಷಣದ ಅರ್ಥ**: ವಿಶಾಲ ಅರ್ಥದಲ್ಲಿ ಶಿಕ್ಷಣವೆಂದರೆ ಯಾವುದು ಒಬ್ಬ ವ್ಯಕ್ತಿಯಲ್ಲಿರುವ ಉತ್ತಮವಾದುದನ್ನು ಕಂಡುಕೊಳ್ಳಲು ಸಹಕರಿಸುವುದೋ ಅದು. ಹಾಗೆ ಮಾಡುವಾಗ ಶಿಕ್ಷಣ ಅವನ ಇರುವಿಕೆಯ ತಥ್ಯವನ್ನು/ವಾಸ್ತವಿಕತೆಯನ್ನು ಕಂಡುಕೊಳ್ಳಲು ಅಂದರೆ ಆ ವಾಸ್ತವಿಕತೆಯ ವಿವಿಧತೆ ಅಂದರೆ ಭಯ, ಆತಂಕ, ಪರಿತಾಪ ಮುಂತಾದವುಗಳನ್ನು ದಿಟ್ಟವಾಗಿ, ಧೈರ್ಯವಾಗಿ ಎದುರಿಸಲು ಮತ್ತು ಕಡೆಯದಾಗಿ ಸಾವನ್ನು ಆನಂದದಿಂದ ಸಂಧಿಸಲು ಸಾಧ್ಯವಾಗುವಂತೆ ಅವನನ್ನು ಅಣಿಗೊಳಿಸಬೇಕು. ಶಾಲಾ ಜೀವನವು ರೂಸೊ, ಪ್ರೋಬೆಲ್ (ಕಿಂಡರ್‌ಗಾರ್ಟನ್), ಪೆಸ್ಟಲೋಜಿ ಮತ್ತು ಮಾಂಟೆಸೊರಿ (ಹೌಸ್ ಆಫ್ ಹ್ಯಾಪಿನೆಸ್) ಹೇಳುವಂತೆ ಸುಖಸಂತೋಷದ ಮೂಲವಾಗಿಯೊ ಅಥವಾ ಡ್ಯೂಯಿ ಹೇಳುವಂತೆ ಸಾಮಾಜಿಕ ಹೊಂದಾಣಿಕೆಯ ತರಬೇತಿಯ ಸ್ಥಳವಾಗಿಯೊ ಆಗಿರಬೇಕಾಗಿಲ್ಲ. ಬದಲಾಗಿ ಅದು ಭಯ ಆತಂಕಗಳಿಂದ ಕೂಡಿರಬೇಕು. ರೂಸೋ ಮುಂತಾದವರು ಹೇಳುವುದು ಅಸ್ತಿತ್ವವಾದಿಗಳ ಪ್ರಕಾರ ವಾಸ್ತವವಲ್ಲ. "ಸುಖಕ್ಕಾಗಿ ಶಿಕ್ಷಣ ಅಪಾಯಕರ, ಕಾರಣ ನೋವಿಲ್ಲದೆ ಸುಖವಿಲ್ಲ, ಕಷ್ಟವಿಲ್ಲದೆ ಆನಂದವಿಲ್ಲ". ಆದ್ದರಿಂದ, ಪ್ರೌಢ ಜೀವನದ ಭಯ, ಆತಂಕ, ಪರಿತಾಪ, ಕಷ್ಟ, ಜವಾಬ್ದಾರಿಗಳನ್ನು ಮಕ್ಕಳಿಗೆ ಪರಿಚಯಿಸುವ ಶಿಕ್ಷಣವನ್ನು ಅಸ್ತಿತ್ವವಾದಿಗಳು ಆಹ್ವಾನಿಸುವರು.

ಇದುವರೆಗೆ ಶೈಕ್ಷಣಿಕ ಲೋಕ ಪೂರ್ಣಜೀವನ, ಜೀವನ ಸುಖ ಮತ್ತು ಸ್ವಾತಂತ್ರ – ಇವುಗಳಿಗಾಗಿ ಶಿಕ್ಷಣ ಎಂಬ ಪರಿಕಲ್ಪನೆಗಳೊಡನೆ ಪರಿಚಿತವಾಗಿದೆ. ಆದರೆ ಅಸ್ತಿತ್ವವಾದಿಗಳು ಮರಣಕ್ಕಾಗಿ ಶಿಕ್ಷಣ ಎಂಬ ಹೊಸ ರೀತಿಯ ಶಿಕ್ಷಣದ ಬಗ್ಗೆ ಮಾತನಾಡುವರು. ಎರಡು ವಿಶ್ವ ಸಮರಗಳ ಕಾಲದಲ್ಲಿ ಹಾಗೂ ನಡುವೆ ಶಿಕ್ಷಣದ ಈ ಪರಿಕಲ್ಪನೆ ಅಮೆರಿಕಾ, ಜರ್ಮನಿ, ಫ್ರಾನ್ಸ್ ಹಾಗೂ ಇನ್ನಿತರ ಯುರೋಪಿನ ದೇಶಗಳ ಶಿಕ್ಷಣಕ್ಷೇತ್ರದಲ್ಲಿ ಹೆಚ್ಚು ಪ್ರಚಲಿತವಾಗಿತ್ತು. ಆಗ ಈ ದೇಶಗಳಲ್ಲಿ ದೇಶಕ್ಕಾಗಿ ಸಾಯುವುದೇ ಒಂದು ಮಹತ್ತರ ತ್ಯಾಗವಾಗಿತ್ತು. ವಿದ್ಯಾರ್ಥಿಗಳು ಮೌಲ್ಯಗಳ ಬದಲಾಗದ ಶ್ರೇಣಿಯನ್ನು ಇಟ್ಟುಕೊಂಡು ಅವುಗಳಿಗೆ ಬದ್ಧರಾಗಿ ತಮ್ಮ ಅಸ್ತಿತ್ವವನ್ನು ಅಧಿಕೃತಗೊಳಿಸಬೇಕಲ್ಲದೆ ಅದರಂತೆ ನಡೆದು ಆ ಮೌಲ್ಯಗಳಿಲ್ಲದೆ ಬದುಕುವುದಕ್ಕಿಂತ ಅವುಗಳಿಗಾಗಿ ಮಡಿಯಲು ಸಿದ್ಧರಾಗಬೇಕು. ಬ್ರುಬ್ಯಾಚರ್ "ಮರಣಕ್ಕಾಗಿ ಶಿಕ್ಷಣ" ಎಂಬುದನ್ನು ಹೀಗೆ ವಿವರಿಸುವನು: "ಮರಣಕ್ಕಾಗಿ ಶಿಕ್ಷಣ. ಇದರ ಬಗ್ಗೆ ನಮ್ಮ ಶಾಲೆಗಳಲ್ಲಿ ಅತ್ಯಲ್ಪ ಗಮನವನ್ನೀಯಲಾಗಿದೆ, ಕಾರಣ, ಸಾವನ್ನು ಒಂದು ದೊಡ್ಡ ದುರದೃಷ್ಟವೆಂದು ಪರಿಗಣಿಸಲಾಗಿರುವುದು. ಮರಣ ಶಿಕ್ಷಣದ ಈ ಅಪನಿಂದೆ ಸರಿಯಲ್ಲ. ಏಕೆಂದರೆ, ಇತಿಹಾಸವು ಮಾನವಕುಲದ ಹಿತಕ್ಕಾಗಿ ಬಲಿದಾನದ ಉದಾಹರಣೆಗಳಿಂದ ತುಂಬಿದೆ". ಆದರೆ, ಬಹಳಷ್ಟು ಶಿಕ್ಷಕನ ಹಾಗೂ ಅವನು ತನ್ನ ಪಾತ್ರದ ಬಗ್ಗೆ ಹೊಂದಿರುವ ಅರಿವಿನ ಮೇಲೆ ನಿರ್ಧಾರಿತವಾಗುತ್ತದೆ. ಏಕೆಂದರೆ ಶಿಕ್ಷಕನು ಜೀವನ್ಮರಣದ ಮೌಲ್ಯಗಳನ್ನು ಜೊತೆಜೊತೆಯಲ್ಲೇ ಬೆಳೆಸಿಕೊಳ್ಳಬೇಕಾಗಿದೆ. ಮಗುವಿನಲ್ಲಿ ತಾನು ಮರಣವನ್ನು ಗೆದ್ದಿದ್ದೇನೆ ಎಂಬ ಭಾವವನ್ನು ಮೂಡಿಸಬೇಕಾಗಿದೆ. ಯಾವುದಾದರೊಂದು ಮಹೋನ್ನತ ಉದ್ದೇಶಕ್ಕೆ ಹೋಲಿಸಿದಾಗ ಜೀವನವು ಅಷ್ಟೇನೂ ಬೆಲೆಯುಳ್ಳದ್ದಲ್ಲ ಎಂದು ಮಗುವಿಗೆ ಹೇಳಿದಾಗ ಈ ಭಾವವು ಸಾಧ್ಯ.

Digitised by Bharatavani, CIIL

**ಶಿಕ್ಷಣದ ಗುರಿಗಳು:** ಮನೋವೈಜ್ಞಾನಿಕ ದೃಷ್ಟಿಯಿಂದ ಸರಿ ಎನಿಸುವಹಾಗೆ ಅಸ್ತಿತ್ವವಾದವು ಪ್ರತಿಯೊಬ್ಬ ವ್ಯಕ್ತಿಯು ವೈಶಿಷ್ಟ್ಯವುಳ್ಳವನು (Unique) ಎಂದು ನಂಬುವುದು. ಶಿಕ್ಷಣವು ಅವನಲ್ಲಿ ಈ ವೈಶಿಷ್ಟ್ಯತೆಯನ್ನು ವಿಕಾಸಗೊಳಿಸಬೇಕು. ಬೇರೆ ಮಾತುಗಳಲ್ಲಿ ಹೇಳುವುದಾದರೆ ವ್ಯಕ್ತಿಗಳ ವೈಶಿಷ್ಟ್ಯತೆಗೆ ತಕ್ಕಂತೆ ಶಿಕ್ಷಣವು ಇರಬೇಕು. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವಿಶಿಷ್ಟ ಗುಣಗಳನ್ನು ವಿಕಾಸಗೊಳಿಸಲು, ತನ್ನ ಸಾಮರ್ಥ್ಯಗಳ್ನು ಸದುಪಯೋಗಪಡಿಸಿಕೊಳ್ಳಲು ಮತ್ತು ತನ್ನ ವ್ಯಕ್ತಿತ್ವವನ್ನು ಸಂವರ್ಧಿಸಲು ಶಿಕ್ಷಣವು ಸಹಾಯ ಮಾಡಬೇಕು. ಒಪ್ಪಿಕೊಳ್ಳದಿರುವುದು (ಹೊಂದಿಕೊಳ್ಳದಿರುವುದು) (Nonconformity) ಶಿಕ್ಷಣದ ವಾಂಛಿತ ಗುರಿಯಾಗಿದೆ. ಅಸ್ತಿತ್ವವಾದಿಗಳ ಮತ್ತೊಂದು ನಂಬಿಕೆಯೆಂದರೆ ಮನುಷ್ಯ ಸ್ವಭಾವತಃ ಸ್ವತಂತ್ರನು. ತತ್ಪರಿಣಾಮವಾಗಿ ಶಿಕ್ಷಣವು ಅವನ ಸ್ವಾತಂತ್ರದ ಅನಂತ ಸಾಧ್ಯತೆಗಳ ಬಗ್ಗೆ ಹಾಗೂ ಅವನು ಜೀವನದಲ್ಲಿ ಹೊರಬೇಕಾದ ಜವಾಬ್ದಾರಿಗಳ ಬಗ್ಗೆ ಜಾಗೃತನನ್ನಾಗಿ ಮಾಡಬೇಕು. ಶಿಕ್ಷಣವು ಅವನ ಸ್ವಾತಂತ್ರಕ್ಕೆ ಅನುಸಾರವಾದ ಮೌಲ್ಯಗಳ ಶ್ರೇಣಿಯನ್ನು ಸಹ ಅವನಲ್ಲಿ ಬೆಳೆಸಬೇಕು. ವಿದ್ಯಾರ್ಥಿಯು ಆ ಮೌಲ್ಯಗಳಿಗೆ ಕಟಿಬದ್ಧನಾಗಿದ್ದು ಅದರಂತೆ ನಡೆಯಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ ಅಧಿಕೃತ ಸ್ವಾತಂತ್ರ್ಯ ಮತ್ತು ವ್ಯಕ್ತಿಗತ ವೈಶಿಷ್ಟ್ಯತೆಯ ಖಂಡಿತವಾದ ಸ್ಥಿರೀಕರಣವೇ ಅಸ್ತಿತ್ವವಾದ ಇಂದಿನ ಶಿಕ್ಷಣಕ್ಕೆ ನೀಡುವ ಸಂದೇಶ.

**ಅಸ್ತಿತ್ವವಾದಿ ಪಠ್ಯಕ್ರಮ:** ಅಸ್ತಿತ್ವವಾದಿಗಳು ಒಂದು ಪಠ್ಯಕ್ರಮವನ್ನು ನಿರ್ದೇಶಿಸಿ ಹೇಳುವುದನ್ನು ಒಪ್ಪುವುದಿಲ್ಲ. ವಿದ್ಯಾರ್ಥಿಯು ತನ್ನ ಅಗತ್ಯ, ಸಾಮರ್ಥ್ಯ ಮತ್ತು ಜೀವನದಲ್ಲಿ ತನ್ನ ಸ್ಥಾನಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ಆಯ್ಕೆ ಮಾಡಿಕೊಳ್ಳಬೇಕು. ವಿಶ್ವದ ಬಗ್ಗೆ ಮೂಲ ಜ್ಞಾನವನ್ನು ಸ್ವಲ್ಪ ಮಟ್ಟಿಗೆ ಪ್ರಸಾರ ಮಾಡಬೇಕೆಂದು ಸಾಮಾನ್ಯತಃ ಒಪ್ಪಿದರೂ ವ್ಯಕ್ತಿಯು ಎದುರಿಸಬೇಕಾದ ತನ್ನ ಸುತ್ತಲಿನ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಇನ್ನಿತರ ವರ್ಗ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪಠ್ಯಕ್ರಮ ರಚನೆಯಾಗಬೇಕು ಎಂದು ಅಭಿಪ್ರಾಯಪಡುತ್ತಾರೆ. ಪಠ್ಯವನ್ನು ಕೇವಲ ಪರೀಕ್ಷೆಗಾಗಿ ಓದಬಾರದೆಂದೂ ವಿದ್ಯಾರ್ಥಿಯು ಅದನ್ನು ತನ್ನದಾಗಿಸಿಕೊಳ್ಳಬೇಕೆಂದೂ ಅಸ್ತಿತ್ವವಾದಿಗಳು ಒತ್ತಿ ಹೇಳುತ್ತಾರೆ. ಇದು ಕೇವಲ ಒಂದು ವಿಷಯವನ್ನು ಅಧ್ಯಯನ ಮಾಡುವುದಲ್ಲ. ಬದಲಾಗಿ ಆ ವಿಷಯವನ್ನು ಓದಿ ಅರ್ಥಮಾಡಿಕೊಳ್ಳಬೇಕಾದ ಮೌಲ್ಯಗಳನ್ನು ಜೀವಿಸಿ ಅದರಂತೆ ನಡೆದು ಅನುಭವಿಸುವುದಾಗಿದೆ.

ಅಸ್ತಿತ್ವವಾದಿಗಳು ಮಾನವೀಯ ಅಧ್ಯಯನಗಳಿಗೆ ವೈಜ್ಞಾನಿಕ ವಿಷಯಗಳಿಗಿಂತ ಹೆಚ್ಚು ಮಹತ್ವ ನೀಡುತ್ತಾರೆ. ಮಾನವೀಯ ವಿಷಯಗಳ ಮೂಲಕವೇ ಮಾನವನ ಕಷ್ಟಗಳು, ಸಂತಾಪಗಳು, ಸಾವು – ಇವೆಲ್ಲವೂ ಅರಿವಿಗೆ ಬರುತ್ತವೆ ಎನ್ನುವುದೇ ಇದಕ್ಕೆ ಕಾರಣ. ಮಾನವೀಯ ವಿಷಯಗಳು ವಿಜ್ಞಾನಕ್ಕಿಂತ ಹೆಚ್ಚಾಗಿ ತನ್ನಲ್ಲಿ ತಾನು ಇರಲು ಮಾನವನಿಗೆ ಸಹಕರಿಸುತ್ತದೆ. ಮಾನವೀಯ ವಿಷಯಗಳು ವ್ಯಕ್ತಿಗತ ಜ್ಞಾನವನ್ನು ಸೂಚಿಸಿದರೆ, ವಿಜ್ಞಾನ ವಸ್ತುನಿಷ್ಠ ಜ್ಞಾನವನ್ನು ನೀಡುವುದು. ವೈಶ್ವಿಕ (Universal) ಜ್ಞಾನಕ್ಕೆ ಮುನ್ನ ಸ್ವಯಂ ಜ್ಞಾನವು ಬರುವುದು.

**ಬೋಧನಾ ಮಾರ್ಗಗಳು:** ಸಾಕ್ರಟಿಸ್‌ನ ವ್ಯಕ್ತಿಗತ ರೀತಿಯ ಬೋಧನಾ ಪದ್ಧತಿಯನ್ನು ಅಸ್ತಿತ್ವವಾದಿಗಳು ಇಷ್ಟಪಡುವರು. ಸಾಕ್ರಟಿಸ್‌ನ ಮಾರ್ಗ ಅಂತರತಮವೂ, ನಾನು – ನೀನು ಎಂಬ ನೆಲೆಗಟ್ಟಿನಲ್ಲಿ ನಿಂತಿರುವಂಥದ್ದು. ಇಲ್ಲಿ ಎರಡು ಜೀವಿಗಳ ನಡುವಿನ ಪರಸ್ಪರ ಅನ್ಯೋನ್ಯ ಕ್ರಿಯೆಯಿಂದ ಜ್ಞಾನ ಹಾಗೂ ವಿವೇಕಗಳನ್ನು ಗಳಿಸಲಾಗುವುದು. ಬೋಧನಾ ಕ್ರಮಗಳು ವ್ಯಕ್ತಿಗತವಾಗಿ ಹೆಚ್ಚು ಗಮನವನ್ನು ಕೊಡುವಂತಿರಬೇಕು. ಆದ್ದರಿಂದಲೇ ಕೆಲವು ವೇಳೆ ಅಸ್ತಿತ್ವವಾದಿಗಳು ಶಾಲಾ ಶಿಕ್ಷಣಕ್ಕಿಂತ ಒಳ್ಳೆಯ ಗೃಹಶಿಕ್ಷಣವನ್ನೇ ಇಷ್ಟಪಡುತ್ತಾರೆ. "ಅಸ್ತಿತ್ವವಾದಕ್ಕೆ ಶಾಲೆಯ ವೇಳಾಪಟ್ಟಿಯಲ್ಲಿ ಮುಖ್ಯ ವ್ಯಕ್ತಿಗತ ನೆಲೆಯಲ್ಲಿರುವ ಸಂಬಂಧ ಮುಖ್ಯ." ಗೆಲ್ಲರ್ ಹೇಳುವಂತೆ "ಸಾಕ್ರಟಿಸ್‌ನ ಮಾರ್ಗ ಅನುಗಮನ (Induction) ವನ್ನು ಹೊಂದಿದೆ ಎಂದಾಗಲಿ ಅಥವಾ ಲಭ್ಯವಿರುವ ಆಧಾರಗಳ ಸಂಗ್ರಹಣೆ ಹಾಗೂ ವಿಶ್ಲೇಷಣೆಯನ್ನು ಒಳಗೊಂಡಿದೆ ಎಂದಾಗಲಿ ಅಥವಾ ಒಂದು ನಿರ್ದಿಷ್ಟ ದೃಷ್ಟಾಂತದಿಂದ ಸಾಮಾನ್ಯ ಮೌಲ್ಯಗಳನ್ನು ತಲುಪುವ ವ್ಯಾಖ್ಯಾನವನ್ನೊಳಗೊಂಡ ಪೂರಕ ಪ್ರಕ್ರಿಯೆಯಿಂದಾಗಲಿ ಅಸ್ತಿತ್ವವಾದಿಗಳು ಸಾಕ್ರಟಿಸ್‌ನ ಪದ್ಧತಿಯನ್ನು ಒಪ್ಪುವುದಿಲ್ಲ. ಬದಲಿಗೆ ಅದು ಆಂತರಿಕ ಜೀವನವನ್ನು ಪರೀಕ್ಷಿಸುವ ಒಂದು ವಿಧಾನ– ಹೃದಯ ಬಡಿತವನ್ನು ಕಂಡುಹಿಡಿಯುವ ಸ್ತೆಥಾಸ್ಕೋಪ್‌ನ ಹಾಗೆ– ಎಂಬ ಪ್ರಮುಖ ಕಾರಣಕ್ಕೆ ಸಾಕ್ರೆಟಿಸ್‌ನ ವಿಧಾನವನ್ನು ಒಪ್ಪುತ್ತಾರೆ." ಆದರೆ ಇಲ್ಲಿ ಯಾವುದೇ ಒಂದು ವಿಷಯವನ್ನು, ನಂಬಿಕೆಯನ್ನು ಹೇರುವ ಪ್ರಯತ್ನವಿರಬಾರದು. ಶಿಕ್ಷಕ ಎಂದಿಗೂ ಆತನ ನಂಬಿಕೆ, ವಿಚಾರ, ಆದರ್ಶ ಹಾಗೂ ಮೌಲ್ಯಗಳನ್ನು ಮಕ್ಕಳ ಮೇಲೆ ವಿಧಿಸಲು ಪ್ರಯತ್ನಿಸಬಾರದು. ಒತ್ತಾಯಪೂರ್ವಕ ಶಿಕ್ಷಣವಿಲ್ಲದಿದ್ದಲ್ಲಿ ಧಾರ್ಮಿಕ ಶಿಕ್ಷಣವನ್ನೂ ನೀಡಬಹುದು. ಬೋಧನಾರೀತಿಗಳು ಮಕ್ಕಳಲ್ಲಿ ಸೃಜನಾತ್ಮಕ ಸಾಮರ್ಥ್ಯಗಳನ್ನು ಬೆಳೆಸುವಂತಿರಬೇಕು. ಸೃಜನಾತ್ಮಕತೆಗಾಗಿ ಶಿಕ್ಷಣ ಎನ್ನುವುದು ಅಸ್ತಿತ್ವವಾದಿಗಳಿಗೆ ಅತ್ಯಂತ ಮುಖ್ಯ.

**ಶಿಕ್ಷಕನ ಪಾತ್ರ:** ಅಸ್ತಿತ್ವವಾದಿಗಳ ಶೈಕ್ಷಣಿಕ ಪದ್ಧತಿಯಲ್ಲಿ ಶಿಕ್ಷಕನ ಪಾತ್ರ ಬಹಳ ಸೂಕ್ಷ್ಮ. ಜೀವನದ ಪ್ರತಿಯೊಂದು ಕ್ಷಣದಲ್ಲೂ ತನ್ನ ಅಸ್ತಿತ್ವವನ್ನು ಅಧಿಕೃತಗೊಳಿಸುವವನು, ಮೌಲ್ಯಗಳ ಶ್ರೇಣಿಯನ್ನು ಬೆಳೆಸಿಕೊಂಡು ಅದಕ್ಕೆ ಬದ್ಧನಾಗಿರುವವನು ಶಿಕ್ಷಕನಾಗಬೇಕು. ತನ್ನನ್ನು ತಾನು ವಿಧಿಸಿಕೊಳ್ಳದೆ ಅವನು ಮಕ್ಕಳನ್ನು ಜೀವನದ ಕಷ್ಟಗಳ ಬಗ್ಗೆ ಚಿಂತಿಸುವಂತೆ ಮಾಡಬೇಕು. "ಅಸ್ತಿತ್ವವಾದಿ ಮಕ್ಕಳಿಗೇನಾದರೂ ಮಾಡುವುದೇನಾದರೂ ಇದ್ದಲ್ಲಿ ಅದು ಇರುವಿಕೆಯ ಉದ್ದೇಶ ಮತ್ತು ಅರ್ಥದ ಅರಿವು ಹಾಗೂ ವಿಶ್ಲೇಷಣೆಯನ್ನು ಅವರಿಗೆ ತಲುಪಿಸುವುದು. ಇದರಿಂದ ಮಾನವ ಕೇವಲ ತನ್ನ ಪೂರ್ವಜ ವಾನರನ ಮೃಗೀಯ ಅಭ್ಯಾಸಗಳನ್ನು ನಿರಂತರವಾಗಿ ಮುಂದುವರೆಸುವ ಪ್ರವೃತ್ತಿಯ ಜೀವಿಗಿಂತ ಶ್ರೇಷ್ಠನಾಗುತ್ತಾನೆ." ಇದು ಸಾಧ್ಯವಾಗಬೇಕಾದರೆ, ಶಿಕ್ಷಕ ತನ್ನ ಮಕ್ಕಳನ್ನು ಸ್ವತಂತ್ರ ವ್ಯಕ್ತಿಗಳಂತೆ ಕಾಣಬೇಕಲ್ಲದೆ ಅವರ ವಿದ್ರೋಹಿ (Rebellious) ಸ್ವಭಾವವನ್ನು

Digitised by Bharatavani, CIIL

ಕಂಡು ಕನಿಕರ ತೋರಬೇಕು. ಏಕೆಂದರೆ ಅಸ್ತಿತ್ವವಾದಿಗಳ ಪ್ರಕಾರ ವಿದ್ರೋಹಿ ಅನುವರ್ತಿ (ಹೊಂದಿಕೊಳ್ಳುವವ) (Conformist)ಗಿಂತ ಅಧಿಕ ನೈತಿಕವಾಗಿರುವನು. ಕಾರಣ, ಅವನು ತನ್ನ ಇರುವಿಕೆಯನ್ನು ಅಧಿಕೃತಗೊಳಿಸುತ್ತಿರುವನು. ಅಸ್ತಿತ್ವವಾದಿಗಳ ಪ್ರಕಾರ ಸಮಸ್ಯಾ ಮಕ್ಕಳೇ ಇಲ್ಲ. ಶಿಕ್ಷಕರು ಮಕ್ಕಳ ಸಂವೇದನಾತ್ಮಕ ಜೀವನವನ್ನು ಪ್ರವೇಶಿಸಬೇಕು.

**ಅಸ್ತಿತ್ವವಾದದ ವಿಮರ್ಶಾತ್ಮಕ ಮೌಲ್ಯಮಾಪನ:** ಹಲವು ತತ್ವಶಾಸ್ತ್ರಗಳು ಅಸ್ತಿತ್ವವಾದವನ್ನು ಪ್ರಬಲವಾಗಿ, ಕಟುವಾಗಿ ಟೀಕಿಸಿವೆ. ಇದನ್ನು "ಪ್ರೇತಗಳ ಪ್ರಪಂಚವನ್ನು ಪ್ರವೇಶಿಸುವಂಥದ್ದು", "ಅತಿ ಉತ್ತೇಜಿತ, ವಿಷಕಾರಿ, ವಿಕೃತ; ತೊಡೆಸಂದಿನ ಊತವಿದ್ದಂತೆ" ಎಂದೆಲ್ಲಾ ಟೀಕಿಸಲಾಗಿದೆ. ಅಸ್ತಿತ್ವವಾದದ ಉಗ್ರ ಟೀಕಾಕಾರನಾದ ರಗ್ಗೀರೋ ಹೀಗೆ ಬರೆಯುವನು: "ವಿಚಾರದ ಇತಿಹಾಸದಲ್ಲೇ ಹಿಂದೆಂದೂ ಇಷ್ಟರಮಟ್ಟಿನ ಉಗ್ರ ಶೂನ್ಯವಾದವನ್ನು, ಇಷ್ಟು ಆವೇಗರಹಿತವಾಗಿ, ನಿಸ್ಸಂಗವಾಗಿ ವ್ಯಕ್ತಪಡಿಸಿಲ್ಲವೆಂದು ನನಗನಿಸುತ್ತದೆ. ಇದು ಎರಡು ಶೂನ್ಯಗಳ ನಡುವೆ ಜೀವನ ಮತ್ತು ಪ್ರಪಂಚವನ್ನು ನಮಗೆ, ಈ ಅಸ್ತಿತ್ವವಾದಿ ತತ್ವಸಾಸ್ತ್ರದ ಪ್ರಕಾರ, ಕೊಡಲಾಗುವುದು. ಆದರೆ ಅದು ಪ್ರಪಂಚವೂ ಅಲ್ಲ ಜೀವನವೂ ಅಲ್ಲ. ಕೇವಲ ಆಂಕವನ್ನೊಳಗೊಂಡ ಮರೀಚಿಕೆ. ಈ ಮರೀಚಿಕಾ ಘಟನೆಯಲ್ಲಿ ಮರೀಚಿಕೆಯನ್ನು ಮರೀಚಿಕೆಯೆಂದು ಕಂಡುಕೊಳ್ಳುವುದೇ ಅಸ್ತಿತ್ವವಾದಿಗಳು ಹೇಳುವ ಶ್ರೇಷ್ಠಪದವಾದ ಮುಕ್ತಿಯಾಗಿದೆ." ಆದರೆ ರಗ್ಗೀರೊ ರೋಮ್ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕನಾದ್ದರಿಂದ ಅಸ್ತಿತ್ವವಾದದ ಬಗೆಗಿನ ಆತನ ದೃಷ್ಟಿಕೋನ ಸಹಜವೇ.

ಮಾನವೀಯ ತತ್ವಶಾಸ್ತ್ರಕ್ಕೆ ಅಸ್ತಿತ್ವವಾದವು ವಿರುದ್ಧವಾಗಿದೆ ಎಂಬ ಟೀಕೆಗಳ ಬಗ್ಗೆ ಅರಿವಿದ್ದ ಸಾರ್ತ್ರೆ ಅಸ್ತಿತ್ವವಾದ ಮಾನವೀಯ ಅಂಶಗಳನ್ನು ಸಿದ್ಧಪಡಿಸಲು ಪುಸ್ತಕವೊಂದನ್ನು ರಚಿಸಿ ಅದರಲ್ಲಿ ಅದನ್ನು ಸಮರ್ಥಿಸಿದ್ದಾನೆ.

**ಮೂಲ: ಡಾ. ಸೀತಾರಾಮು ಎ.ಎಸ್.**
**ಅನು: ಚಂದ್ರಶೇಖರ್ ಬಿ.ಎಂ.**

## ಅಳತೆಯ ಮಾಪನಗಳು

ಮಾನವನು ಜನನದಿಂದ ಮರಣದವರೆಗೆ ಅಳತೆ (ಮಾಪನ) ಮತ್ತು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿರುತ್ತಾನೆ. ದಿನ ನಿತ್ಯ ಜೀವನದಲ್ಲಿ ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ, ಮತ್ತು ವೈಜ್ಞಾನಿಕ ಚಟುವಟಿಕೆಗಳಲ್ಲಿ ಅಳತೆ ಮತ್ತು ಮೌಲ್ಯಮಾಪನಗಳು ಅನಿವಾರ್ಯ ಪ್ರಕ್ರಿಯೆಗಳಾಗಿವೆ. ಈ ಪ್ರಕ್ರಿಯೆಗಳು ಜೀವನದ ಎಲ್ಲ ರಂಗಗಳಲ್ಲಿಯೂ ವ್ಯಾಪಿಸಿಕೊಂಡು ಇಂದು ಅನಿವಾರ್ಯವಾಗಿ ಪರಿಣಮಿಸಿವೆ. ಅದರಲ್ಲೂ ಇಂದು ಶಿಕ್ಷಣರಂಗದಲ್ಲಿ ಮಾಪನ ಮತ್ತು ಮೌಲ್ಯಮಾಪನಗಳಿಗೆ ಬಹಳ ಮಹತ್ವವಿದೆ.

**ಮಾಪನದ ಪರಿಕಲ್ಪನೆ:** ಮಾಪನವೆಂದರೆ ಅಳತೆ. ಮನುಷ್ಯನು ದೈನಂದಿನ ಜೀವನದಲ್ಲಿ ಅನೇಕ ವಸ್ತುಗಳನ್ನು ಅಳೆಯುವನು. ಸಾಮಾನ್ಯವಾಗಿ ವಸ್ತುಗಳ ಲಕ್ಷಣಗಳ ಪರಿಮಾಣವನ್ನು ಕಂಡುಹಿಡಿಯುವುದೇ ಅಳತೆಯಾಗಿದೆ. ಯಾವುದೇ ಒಂದು ವಸ್ತುವು ಎಷ್ಟು ದೊಡ್ಡದು, ಚಿಕ್ಕದು, ಎಂದು ಮುಂತಾಗಿ ಹೇಳುವಾಗ ಅಳತೆಯನ್ನು ಮೂಲವಾಗಿ ಆಧರಿಸುತ್ತೇವೆ. ಮಾಪನ ಒಬ್ಬ ವ್ಯಕ್ತಿಯ ವರ್ತಮಾನದ ಅಂಶಗಳನ್ನು ಮಾತ್ರ ತಿಳಿಸುವುದೇ ವಿನಃ ಹಿಂದಿನ ಮತ್ತು ಮುಂದಿನ ಬೆಳವಣಿಗೆಯನ್ನು ಆಧರಿಸುವುದಿಲ್ಲ. ಅಳತೆಯು ನಿರ್ಧಾರದ ಪೂರ್ವ ಗುರಿಗಳನ್ನು ಆಧಾರವಾಗಿಟ್ಟುಕೊಂಡಿರುವುದಿಲ್ಲ.

ಅಳತೆಯು ಒಂದು ನಿರ್ದಿಷ್ಟ ಘಟಕ (Unit)ದಲ್ಲಿ ಲಕ್ಷಣ (Property)ವನ್ನು ತಿಳಿಸುವುದು. ಇರುವುದನ್ನು ಮಾತ್ರ ಅದು ತಿಳಿಸುತ್ತದೆ. ಅಳತೆ ಮಾಡಲು ಸಾಧ್ಯವಿರುವುದನ್ನು ಮಾತ್ರ ಅಳತೆ ಮಾಡುತ್ತೇವೆ. ಅಳತೆ ಅಥವಾ ಮಾಪನ ಕೆಲವು ನಿಯಮಗಳಿಗೆ ಒಳಪಟ್ಟಂತೆ ಆಗುತ್ತದೆ. ಜೇಮ್ಸ್ ಎಂ. ಬ್ರಾಡ್‌ಫೀಲ್ಡ್ "ಒಂದು ಸಣ್ಣ ಅಂಶದ ಗುಣಗಳನ್ನು ಸ್ಥಿತಿಗತಿಗಳನ್ನು ನಮೂದಿಸುವ ಒಂದು ಚಿಕ್ಕ ಚಿಹ್ನೆಯನ್ನು ಅಳತೆ ಎನ್ನುವರು". ಕಂಡುಬರುವ ಗುಣಗಳು ಒಂದಲ್ಲ ಒಂದು ರೀತಿಯಲ್ಲಿ ಅಳೆಯಲು ಸಾಧ್ಯವಾಗುತ್ತದೆ. ಎನ್.ಎಸ್. ವೀರಪ್ಪನವರು ತಮ್ಮ ಶಿಕ್ಷಣಶಾಸ್ತ್ರದ ನಿಘಂಟಿನಲ್ಲಿ "ಒಂದು ವಸ್ತುವಿನ ಪರಿಮಾಣವನ್ನು ಅದಕ್ಕೊಪ್ಪುವ ಅಳತೆಯ ಸಾಧನದೊಡನೆ ಹೋಲಿಸಿ ಆ ಅಳತೆಗೋಲಿನಲ್ಲಿ ಆ ವಸ್ತುವಿನ ಪರಿಮಾಣಕ್ಕೊಪ್ಪುವ ಸಂಖ್ಯಾತ್ಮಕತೆಯ ಬೆಲೆಯನ್ನು ನಿಷ್ಕರ್ಷಿಸುವ ಕಾರ್ಯವನ್ನು ಅಳತೆ (ಮಾಪನ) ಎನ್ನುವರು" ಎಂದು ವಿಶದಪಡಿಸಿದ್ದಾರೆ.

ಶಿಕ್ಷಣಶಾಸ್ತ್ರ ಹಾಗೂ ಮನಃಶಾಸ್ತ್ರಗಳಲ್ಲಿಯೂ ಮಾಪನ ಕಾರ್ಯ ಅವಶ್ಯಕವಾಗಿದೆ. ಶಿಕ್ಷಣಕ್ಷೇತ್ರದಲ್ಲಿ ವ್ಯಕ್ತಿಯು ಬಾಹ್ಯವರ್ತನೆಗಳನ್ನು, ಅರ್ಥೈಸುವಂತಹ ಮಾನಸಿಕ ಪ್ರಕ್ರಿಯೆಗಳನ್ನು ಮಾಪನ ಮಾಡಬೇಕಾಗಿರುವುದರಿಂದ ಶೈಕ್ಷಣಿಕ ಮಾಪನ ಸಂಕೀರ್ಣವೆನಿಸುತ್ತದೆ. ಕಲಿಕೆಯ ಸಾಧನಮಟ್ಟ, ಬುದ್ಧಿಶಕ್ತಿ ಇತ್ಯಾದಿ ಸಂಜ್ಞಾನಾತ್ಮಕ ಲಕ್ಷಣಗಳನ್ನು ಹಾಗೂ ಮನೋವೃತ್ತಿಗಳು, ಆಸಕ್ತಿಗಳು ಇತ್ಯಾದಿ ಸಂವೇಗಾತ್ಮಕ ಲಕ್ಷಣಗಳನ್ನು ಪರಿಮಾಣಾತ್ಮಕವಾಗಿ ಅಳೆಯಬಹುದಾದರೂ ಅಂಥ ಮಾಪನದಲ್ಲಿ ಭೌತಿಕ ಅಳತೆಗಳಾದ ಎತ್ತರ, ಉದ್ದ, ತೂಕ ಮೊದಲಾದವುಗಳಷ್ಟು ನಿಖರತೆ ಕಂಡುಬರುವುದಿಲ್ಲ. ಆದರೆ ವ್ಯಕ್ತಿಯ ಲಕ್ಷಣಗಳಿಗೆ ಸಂಬಂಧಿಸಿದಂತೆ ಸಾಧ್ಯವಾದಷ್ಟು ನಿಖರತೆಯುಳ್ಳ ಮಾಪನ ಪಡೆಯಬೇಕಾದರೆ ಮಾಪನಕ್ಕೊಳಗಾದ ಗುಂಪಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ಶ್ರೇಣೀಕರಿಸಿ (1ನೇಯ ಸ್ಥಾನ, 2ನೇಯ ಸ್ಥಾನ.................ಇತ್ಯಾದಿ) ಆ ಶ್ರೇಣಿಗಳಿಂದ ತಾರತಮ್ಯದ ಎಣಿಕೆ ಮಾಡಬಹುದಷ್ಟೇ. ಕೆಲವು ಮಾನಸಿಕ ಲಕ್ಷಣಗಳನ್ನು ವ್ಯಕ್ತಿಗಳು ಪ್ರಕಟಪಡಿಸುವ ವರ್ತನೆಗಳ ಮೂಲಕ ಪರೋಕ್ಷವಾಗಿ ಅಳೆಯಬಹುದು.

ಅಳತೆಯಲ್ಲಿ ನಿಖರತೆ ಹಾಗೂ ನಿಷ್ಪಷ್ಟತೆಯನ್ನು ಸಾಧಿಸಲು ವಿವಿಧ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಇವುಗಳು ಅಳತೆಯ ನಿಖರತೆ ಮತ್ತು ನಿಷ್ಪಷ್ಟತೆಯಲ್ಲಿ ವ್ಯತ್ಯಾಸ ಹೊಂದಿವೆ. ಈ ಕ್ರಮಗಳಿಗೆ ಅಳತೆಯ ಮಾಪನಗಳು (Scales of Measurement) ಎಂದು

Digitised by Bharatavani, CIIL

ಹೆಸರು.

ಸ್ಟೀವನ್ಸ್‌ರವರು ಅಳತೆಯ ಮಾಪನಗಳನ್ನು ಕೆಳಗೆ ಕಾಣಿಸಿರುವ ರೀತಿಯಲ್ಲೂ ವರ್ಗೀಕರಿಸಿದ್ದಾರೆ;

ಅ. ನಿರ್ದೇಶಕ ಮಾಪನಿ (Nominal Scale)

ಆ. ಶ್ರೇಣಿಮಾಪನಿ (Ordinal Scale)

ಇ. ಅಂತರಮಾಪನಿ (Interval Scale)

ಈ. ಅನುಪಾತ ಮಾಪನಿ (Ratio Scale)

ಪ್ರತಿಯೊಂದು ಅಳತೆಯ ಮಾಪನಿಯು ತನ್ನದೇ ಆದ ಲಕ್ಷಣಗಳನ್ನು, ನಿಯಮಗಳನ್ನು ಹಾಗೂ ನಿಬಂಧನೆಗಳನ್ನು ಹೊಂದಿದ್ದು, ಈ ಮಾಪನಿಗಳಲ್ಲಿ ಪ್ರತಿಯೊಂದು ಮಾಪನಿ ಅದರ ಕೆಳಗಿನ ಮಾಪನಿಯ ಲಕ್ಷಣಗಳನ್ನೆಲ್ಲಾ ಒಳಗೊಂಡಿರುತ್ತದೆ.

**ನಾಮ ನಿರ್ದೇಶಕ ಮಾಪನಿ:**

ನಾಮ ನಿರ್ದೇಶಕ ಮಾಪನಿ (Nominal Scale) ಅಳತೆಯ ಕನಿಷ್ಠ ಮಟ್ಟದ ಹಾಗೂ ಪ್ರಾಥಮಿಕ ಮಟ್ಟದ ಅಳತೆಯ ಮಾಪನಿಯಾಗಿದೆ. ಈ ಮಾಪನಿಯಲ್ಲಿ ಯಾವುದೇ ಒಂದು ನಿರ್ದಿಷ್ಟ ಗುಂಪಿಗೆ ಅಥವಾ ವರ್ಗಕ್ಕೆ ಸೇರಬಹುದಾದ ಅಂಶಗಳನ್ನೆಲ್ಲಾ ಸಂಖ್ಯಾನುಕ್ರಮದಲ್ಲಿ ಗುರುತಿಸಲಾಗುತ್ತದೆ. ಅಂದರೆ ಕೆಲವು ವಿಶಿಷ್ಟ ಲಕ್ಷಣಗಳಿಗನುಗುಣವಾಗಿ ವಸ್ತುಗಳನ್ನಾಗಲೀ, ಸಂಗತಿಗಳನ್ನಾಗಲೀ, ವ್ಯಕ್ತಿಗಳನ್ನಾಗಲೀ ವಿವಿಧ ಗುಂಪುಗಳಲ್ಲಿ ವರ್ಗೀಕರಿಸಿ, ಒಂದೊಂದು ವರ್ಗದಲ್ಲಿ ಸೇರುವ ಘಟಕಗಳನ್ನು (Units) ಲೆಕ್ಕ ಮಾಡಿ ಅವುಗಳನ್ನು ಆ ವರ್ಗಕ್ಕೆ ನಿಗದಿಪಡಿಸುವ ಸಂಕೇತಗಳಿಂದ ನಿರ್ದೇಶಿಸಿದಾಗ (ವರ್ಗ 1, ವರ್ಗ 2............ಇತ್ಯಾದಿ) ಒಂದು ನಿರ್ದಿಷ್ಟ ವರ್ಗಕ್ಕೆ ಸೇರುವ ಎಲ್ಲಾ ಅಂಶಗಳನ್ನು ಆ ವರ್ಗದ ಸಂಕೇತ ಇಲ್ಲವೇ, ಸಂಖ್ಯೆಯಿಂದಲೇ ಗುರುತಿಸಲಾಗುತ್ತದೆ.

ನಾಮ ನಿರ್ದೇಶಕ ಮಾಪನಿಯಿಂದ ಪಡೆದ ದತ್ತಾಂಶಗಳು ಎಣಿಕೆ ಮಾಡಿದ ಆವೃತ್ತಿ ದತ್ತಾಂಶಗಳಾಗಿವೆ. ಪ್ರತಿ ಒಬ್ಬ ವ್ಯಕ್ತಿಯು ಯಾವುದಾದರೂ ಒಂದು ಸಮೂಹದ ಸದಸ್ಯನಾಗಿರಬಹುದು ಹಾಗೂ ಇತರ ಎಲ್ಲಾ ಸದಸ್ಯರೂ ವ್ಯಾಖ್ಯಾನಿಸಿದ ಅದೇ ಗುಣಲಕ್ಷಣಗಳನ್ನು ಹೊಂದಿರುತ್ತಾರೆ. ಉದಾ: ಲಿಂಗ, ಆರ್ಥಿಕಸ್ಥಿತಿ, ಸಾಮಾಜಿಕಮಟ್ಟ, ಉದ್ಯೋಗ, ಜಾತಿ, ಮುಂತಾದವುಗಳು. ಈ ಮಾಪನಿಯಿಂದ ಪಡೆದ ದತ್ತಾಂಶಗಳಿಗೆ ಗಣಿತದ ಮೂಲಭೂತ ಕ್ರಿಯೆಗಳಾದ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರಗಳನ್ನು ಮಾತ್ರ ಅನ್ವಯಿಸಬಹುದು.

ಈ ಮಾಪನಿಯಿಂದ ಒಂದು ವರ್ಗದಲ್ಲಿರುವ ವಸ್ತುಗಳ, ವ್ಯಕ್ತಿಗಳ ನಡುವಣ ವ್ಯತ್ಯಾಸವನ್ನು ಗುರುತಿಸಲಾಗದು. ಹಾಗೆಯೇ ಒಂದು ಸಮೂಹದಲ್ಲಿ ಬರುವಂತಹವುಗಳನ್ನು ಮತ್ತೊಂದರಲ್ಲಿ ಸೇರಿಸಲಿಕ್ಕೆ ಆಗುವುದಿಲ್ಲ. ಯಾವುದೇ ಎರಡು ವರ್ಗಗಳಿಗೆ ಒಂದೇ ಸಂಖ್ಯೆ ಅಥವಾ ಸಂಕೇತಗಳನ್ನು ನೀಡಲಾಗುವುದಿಲ್ಲ. ಒಂದೊಂದು ವರ್ಗದಲ್ಲಿಯೂ ಇರುವ ಅಂಶಗಳ ಸಂಖ್ಯೆಯನ್ನು ಎಣಿಸಿ, ಆ ವರ್ಗದ ಆವೃತ್ತಿಯನ್ನು ಪಡೆಯಬಹುದು, ಆವೃತ್ತಿಯ ಗಾತ್ರದ ಮೇಲೆ ವರ್ಗಗಳನ್ನು ಹೋಲಿಸಿ ನೋಡಬಹುದು. ನಾಮ ನಿರ್ದೇಶಕ ಮಾಪನಿಯ ಮೂಲಕ ಪಡೆದ ಆವೃತ್ತಿಗಳಿಗೆ ಬಹುಲಕ (Mode) ಹಾಗೂ ಪರಸ್ಪಾವಲಂಬನ ಗುಣಾಂಕವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ.

**ಶ್ರೇಣಿ ಮಾಪನಿ:**

ಶ್ರೇಣಿ ಮಾಪನಿಯಲ್ಲಿ (Ordinal Scale) ನಿರ್ದೇಶಕ ಮಾಪನಿಯಲ್ಲಿರುವಂತೆ ಒಂದು ವರ್ಗದಲ್ಲಿರುವ ವಸ್ತುಗಳನ್ನು/ ವ್ಯಕ್ತಿಗಳನ್ನು ವರ್ಗೀಕರಿಸಿ ಎಣಿಕೆ ಮಾಡುವುದರ ಜೊತೆಗೆ ಅವುಗಳನ್ನು/ಅವರನ್ನು ಹೊಂದಿರುವ ಲಕ್ಷಣದ ಪರಿಮಾಣದ ಆಧಾರದ ಮೇಲೆ ಶ್ರೇಣಿಬದ್ಧಗೊಳಿಸಬಹುದು. ಈ ಮಾಪನಿಯ ಸಹಾಯದಿಂದ ಒಂದು ಗುಂಪು ಮತ್ತೊಂದರಿಂದ ಅಳತೆ ಮಾಡಿದ ಲಕ್ಷಣಗಳಲ್ಲಿ ಪರಿಮಾಣಾತ್ಮಕವಾಗಿ ಭಿನ್ನವಾಗಿವೆ ಎಂದು ಗುರುತಿಸಲಾಗುತ್ತದೆ. ಉದಾ: ಒಂದು ತರಗತಿಯ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಸಾಧನಾಮಟ್ಟವನ್ನು ಆಧರಿಸಿ ಉತ್ತಮ, ಮಧ್ಯಮ ಹಾಗೂ ನಿಮ್ನ ವರ್ಗಗಳಲ್ಲಿ ವರ್ಗೀಕರಿಸಿದಾಗ ಆ ವರ್ಗಗಳನ್ನು ಆರೋಹಣ ಅಥವಾ ಅವರೋಹಣ ಕ್ರಮದಲ್ಲಿ ಶ್ರೇಣಿಬದ್ಧಗೊಳಿಸಲು ಸಾಧ್ಯವಾಗುತ್ತದೆ. ಒಂದೊಂದು ವರ್ಗದಲ್ಲಿಯೂ ಮಾಪನ ಮಾಡಿದ ನಿರ್ದಿಷ್ಟ ಲಕ್ಷಣಕ್ಕನುಗುಣವಾಗಿ ವ್ಯಕ್ತಿಗಳನ್ನಾಗಲೀ, ವಸ್ತುಗಳನ್ನಾಗಲೀ, ಗರಿಷ್ಠತಮ ಶ್ರೇಣಿಯಿಂದ ಕನಿಷ್ಠತಮ ಶ್ರೇಣಿಯವರೆಗೆ ಅನುಕ್ರಮವಾಗಿ ಸೂಚಿಸಲಾಗುತ್ತದೆ. ಅಂದರೆ ಶ್ರೇಣಿಬದ್ಧಗೊಳಿಸಲಾಗುತ್ತದೆ. ಉದಾ: ಗಣಿತ ವಿಷಯದಲ್ಲಿ ಸಾಧನಾಮಟ್ಟವನ್ನಾಧರಿಸಿ ಒಂದು ತರಗತಿಯ ವಿದ್ಯಾರ್ಥಿಗಳನ್ನು 1, 2, 3 ಇತ್ಯಾದಿ ಶ್ರೇಣಿಗಳಲ್ಲಿ ಅನುಕ್ರಮವಾಗಿ ಪಟ್ಟಿ ಮಾಡಲಾಗುತ್ತದೆ. ಇಲ್ಲಿ ಪರಿಮಾಣದ ಭಿನ್ನತೆಯ ಜೊತೆಗೆ ಸ್ಥಾನ ತಾರತಮ್ಯದ ಪರಿಗಣನೆಯೂ ಬರುತ್ತದೆ.

ಈ ಮಾಪನಿಗಳು ಕೇವಲ ಶ್ರೇಣಿ ಅನುಕ್ರಮವನ್ನು ತಿಳಿಸುತ್ತವೆ. ಒಂದು ಶ್ರೇಣಿಗೂ ಮತ್ತೊಂದು ಶ್ರೇಣಿಗೂ ಇರುವ ಪರಿಮಾಣದ ಅಂತರವನ್ನು ಈ ಮಾಪನ ಸೂಚಿಸುವುದಿಲ್ಲ. ಇದೇ ಮಾಪನಿಯಲ್ಲಿ ಒಂದು ಶ್ರೇಣಿಯ ಬಿಂದುವಿಗೂ ಮತ್ತೊಂದು ಶ್ರೇಣಿಯ ಬಿಂದುವಿಗೂ ಸಮನಾದ ಅಂತರವಿರುವುದಿಲ್ಲ. ಆದ್ದರಿಂದ ಈ ಮಾಪನಿಯ ದತ್ತಾಂಶಗಳನ್ನು ಪರಸ್ಪರ ಹೋಲಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಪ್ರಥಮ ಶ್ರೇಣಿಯ ವಿದ್ಯಾರ್ಥಿಯು ಅಂತಿಮ ಶ್ರೇಣಿಯ ವಿದ್ಯಾರ್ಥಿಗಿಂತ ಎಷ್ಟರಮಟ್ಟಿಗೆ ಉತ್ತಮವಾಗಿದ್ದಾನೆ ಎಂದು ತಿಳಿಯಲಾಗುವುದಿಲ್ಲ. ಪ್ರಥಮ, ದ್ವಿತೀಯ ಮತ್ತು ತೃತೀಯ ಶ್ರೇಣಿಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ನಡುವಣ ಸಾಧನೆಯ ಪ್ರಮಾಣ ಒಂದೇ ಮಟ್ಟದಲ್ಲಿದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ.

ಈ ಮಾಪನಿಯ ಅಳತೆಯಿಂದ ಒಂದು ಸಮೂಹದ ಒಟ್ಟಾರೆ ಸಾಮರ್ಥ್ಯ ಅಥವಾ ಗುಣಲಕ್ಷಣಗಳ ಮಟ್ಟವನ್ನು

Digitised by Bharatavani, CIIL

ತಿಳಿದುಕೊಳ್ಳುವುದಕ್ಕಾಗಲೀ, ಒಂದು ಸಮೂಹದ ಸಾಮರ್ಥ್ಯವನ್ನು ಇನ್ನೊಂದು ಸಮೂಹದೊಡನೆ ನೋಡುವುದಕ್ಕಾಗಲೀ ಸಾಧ್ಯವಾಗುವುದಿಲ್ಲ. ಒಂದು ಗುಣಲಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ಎರಡು ಅಥವಾ ಯಾವ ಸಮೂಹ ಉತ್ತಮ ಎಂದು ಇಲ್ಲಿ ಪಡೆದ ಶ್ರೇಣಿಬದ್ಧ ಅಂಕಗಳಿಂದ ಹೇಳಲಾಗುವುದಿಲ್ಲ. ಏಕೆಂದರೆ, ಒಂದು ಸಮೂಹದಲ್ಲಿ ಯಾವುದೇ ನಿರ್ದಿಷ್ಟ ಶ್ರೇಣಿಯಲ್ಲಿರುವ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳು, ಮತ್ತೊಂದು ಸಮೂಹದಲ್ಲಿ ಅದೇ ಶ್ರೇಣಿಗಳನ್ನು ಪಡೆದಿರುವ ವಿದ್ಯಾರ್ಥಿಗಳ ಅಂಕಗಳಿಗೆ ಸಮನಾಗಿರಬೇಕಾಗಿಲ್ಲ. ಆದ್ದರಿಂದ ಸಮೂಹಗಳ ನಡುವಣ ತಾರತಮ್ಯವನ್ನು ನಿಖರವಾಗಿ ಗುರುತಿಸಲಾಗುವುದಿಲ್ಲ. ಈ ಮಾಪನಿಯ ದತ್ತಾಂಶಗಳಿಗೆ ಆವೃತ್ತಿ ಬಹುಲಕ ಶ್ರೇಣಿ ವ್ಯತ್ಯಯ ಸಹಸಂಬಂಧ, ಗುಣಾಂಕ (Rank Difference Corelation), ಅರ್ಧಾಂಕ (Median) ಮತ್ತು ಶತಾಂಕಗಳನ್ನು (Percentiles) ಲೆಕ್ಕಾಚಾರ ಮಾಡಬಹುದು.

**ಅಂತರಮಾಪನಿ:**

ಅಂತರಮಾಪನಿಯಲ್ಲಿ ದತ್ತಾಂಶವನ್ನು ಶ್ರೇಣಿಬದ್ಧಗೊಳಿಸುವುದಲ್ಲದೆ ಮಾಪನಿಯ ಎರಡು ಬಿಂದುಗಳ ನಡುವೆ ಇರುವ ಅಂತರವನ್ನು ನಿಖರವಾಗಿ ಸೂಚಿಸಲಾಗುತ್ತದೆ. ಶ್ರೇಣಿಮಾಪನಿಗಿಂತ ಇದು ಮೇಲಿನ ಮಟ್ಟದ ಮಾಪನಿಯಾಗಿದೆ. ಮಾಪನಿಯ ಉದ್ದಕ್ಕೂ ಕ್ರಮಾಗತ ಬಿಂದುಗಳ ನಡುವಿರುವ ಅಂತರವು ಒಂದೇ ಆಗಿರುತ್ತದೆ. ಕ್ರಮಾಗತ ಈ ಬಿಂದುಗಳು ಸಮಾನಾಂತರದಲ್ಲಿರುವುದರಿಂದ ಈ ಮಾಪನಿಯನ್ನು ಸಮಾನ ಘಟಕ ಮಾಪನಿ (Equal Unit Scale) ಅಥವಾ ಸಮಾನಾಂತರ ಮಾಪನಿ (Equal Interval Scale) ಎಂದು ಕರೆಯಲಾಗುತ್ತದೆ.

ಉಷ್ಣಮಾಪಕದಲ್ಲಿ $50^o$ ಮತ್ತು $51^o$ ಗಳಿಗಿರುವಷ್ಟೇ ಅಂತರ $30^o$ ಮತ್ತು $31^o$ ಗಳಿಗೂ ಇರುತ್ತದೆ. ಅಳತೆಯ ಪಟ್ಟಿಯಲ್ಲಿ 2.6 ಸೆಂ.ಮೀ ಮತ್ತು 2.9 ಸೆಂ.ಮೀ.ಗಿರುವ ಅಂತರ 4.5 ಸೆಂ.ಮೀ ಮತ್ತು 4.8ಸೆಂ.ಮೀ.ಗಳಿಗಿರುವ ಅಂತರದಷ್ಟೇ ಆಗಿರುತ್ತದೆ. ಹಾಗೆಯೇ 15 ಮತ್ತು 20ಕ್ಕಿರುವ ಅಂತರವೇ 75 ಮತ್ತು 80ರ ನಡುವೆಯೂ ಇರುತ್ತದೆ. ಇದೇ ರೀತಿಯಲ್ಲಿ ಮನೋವೈಜ್ಞಾನಿಕ ಹಾಗೂ ಶೈಕ್ಷಣಿಕ ಪರೀಕ್ಷಣಗಳಿಂದ ಪಡೆಯುವ ಅಂಕಗಳನ್ನು ನಿರೂಪಿಸಲು ಪ್ರಯತ್ನಿಸಲಾಗಿದೆ. ಥರ್ಸ್ಟನ್ ಮನೋಭಾವಗಳನ್ನು ಅಳತೆ ಮಾಡಲು ಸಮಾನ ಅಂತರಗಳುಳ್ಳ ಘಟಕಗಳ ಮಾಪನಿಯನ್ನು ರಚಿಸಿದ್ದಾನೆ. ಯಾವುದೇ ಒಂದು ಪರೀಕ್ಷಣದಲ್ಲಾಗಲೀ ಅಂಕ 45 ಮತ್ತು 50ಕ್ಕಿರುವ ಅಂತರ 20 ಮತ್ತು 25ಕ್ಕಿರುವ ಅಂತರಕ್ಕೆ ಸಮನಾಗಿರುತ್ತದೆಯೆಂದೂ ಪರಿಭಾವಿಸಿಕೊಳ್ಳಲಾಗಿದೆ. ಆದರೆ ಇದು ಸಂಪೂರ್ಣವಾಗಿ ನಿಜವಲ್ಲ. 50 ರಿಂದ 80 ಮತ್ತು 110 ರಿಂದ 130 ಅಂತರಗಳ ನಡುವಣ ಬುದ್ಧಿಶಕ್ತಿ ಪ್ರಮಾಣ ಒಂದೇ ಎಂದು ಹೇಳಲು ಸಾಧ್ಯವಿಲ್ಲ. ನಿಖರವಾಗಿ ಹೇಳುವುದಾದರೆ ಇದು ಪ್ರಶ್ನೆಗಳ ಕ್ಲಿಷ್ಟತೆಯ ಮಟ್ಟ ಒಂದೇ ಆಗಿದ್ದು ಮಾಪನದ ದೋಷಗಳು ಇಲ್ಲದಿರುವ ಸಂದರ್ಭಗಳಲ್ಲಿ ಮಾತ್ರ ಕೆಲವು ಸಂದರ್ಭಗಳಲ್ಲಿ ನಿಜವೆನಿಸುತ್ತದೆ. ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಸಮಾನಾಂತರ ಬಿಂದುಗಳಲ್ಲಿ ವರ್ಗೀಕರಿಸಿಕೊಂಡು ಒಂದೊಂದು ವರ್ಗದ ವ್ಯಾಪ್ತಿಯಲ್ಲಿ ಬರಬಹುದಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಗುರುತಿಸಲಾಗುತ್ತದೆ. ಶೈಕ್ಷಣಿಕ ಮಾಪನಗಳು ಅದರಲ್ಲೂ ಸಂಜ್ಞಾನಾತ್ಮಕ ಲಕ್ಷಣಗಳ ಮಾಪನಗಳು ಬಹುತೇಕವಾಗಿ ಈ ಮಾಪನಿಯಲ್ಲಿರುತ್ತವೆ.

ಈ ಮಾಪನಿಯಲ್ಲಿ ನೈಜವಾದ ಶೂನ್ಯ ಬಿಂದು ಇರುವುದಿಲ್ಲ. ಇಲ್ಲಿ ಶೂನ್ಯವೂ ಕೇವಲ ಸಂದಿಗ್ಧವಾಗಿರುತ್ತದೆ. ಮಾಪನಿಯಲ್ಲಿ ಯಾವುದೇ ಒಂದು ಕಡೆ, ಶೂನ್ಯವನ್ನು ಗುರುತಿಸಲಾಗಿರುತ್ತದೆ. ಆದರೆ ಆ ಶೂನ್ಯದ ಬಿಂದುವಿನಲ್ಲಿ ಮಾಪನಿ ಮಾಡಿದ ಲಕ್ಷಣ ಶೂನ್ಯವಾಗುತ್ತದೆ ಎಂದು ಹೇಳಲಾಗುವುದಿಲ್ಲ. ಉದಾಹರಣೆಗೆ, ಬುದ್ಧಿಪರೀಕ್ಷೆ ಅಥವಾ ಸಾಧನಾ ಪರೀಕ್ಷೆಯಲ್ಲಿ '0' ಅಂಕ ಗಳಿಸಿದರೆ, ಅವನಿಗೆ ಬುದ್ಧಶಕ್ತಿಯು ಇಲ್ಲವೇ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ.

ಆದರೂ ಸಹ, ಸಮರ್ಪಕವಾಗಿ ವಿನ್ಯಾಸಗೊಳಿಸಿದ ಮತ್ತು ಪ್ರಮಾಣೀಕೃತ ಮನೋವೈಜ್ಞಾನಿಕ ಪರೀಕ್ಷೆಗಳು ಈ ಮಾಪನಿಯನ್ನು ಬಳಸುತ್ತಿವೆ. ಈ ಮಾಪನಿಯ ದತ್ತಾಂಶಗಳಿಗೆ ಸರಾಸರಿ, ಮಾನಕ ವಿಚಲನೆ, ಸಹಸಂಬಂಧ ಗುಣಾಂಕ ಹಾಗೂ ಇವುಗಳನ್ನು ಅವಲಂಬಿಸಿದ ಇತರ ಸಾಂಖ್ಯಿಕಗಳನ್ನು(Statistics) ಲೆಕ್ಕಾಚಾರ ಮಾಡಲು ಸಾಧ್ಯವಾಗುತ್ತದೆ.

**ಅನುಪಾತ ಮಾಪನಿ:**

ಅನುಪಾತ ಮಾಪನಿ (Ratio Scale) ನಿರ್ದೇಶಕ, ಶ್ರೇಣಿ ಹಾಗೂ ಅಂತರಮಾಪನಿಗಳಲ್ಲಿರುವ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಅತ್ಯಂತ ನಿಖರವಾದ, ನಿಷ್ಪಷ್ಟವಾದ, ಅತ್ಯಂತ ಮೇಲ್ಮಟ್ಟದ ಅಳತೆಯ ಮಾಪನಿಯಾಗಿದೆ. ಈ ಮಾಪನಿಯಲ್ಲಿ ನೈಜವಾದ ಶೂನ್ಯ ಬಿಂದುವಿದೆ. ಇದರಿಂದ ಸಮಾನಾಂತರ ಘಟಕಗಳನ್ನು ನಿರೂಪಿಸುವುದಕ್ಕೆ, ಅನುಕ್ರಮ ಶ್ರೇಣಿ ನಿರ್ಧರಿಸುವುದಕ್ಕೆ ಹಾಗೂ ಅಂಕಗಳನ್ನು ಎಣಿಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅನುಪಾತಮಾಪನಿಯು ಸಂಖ್ಯೆಗಳ ಎಲ್ಲಾ ಗುಣಗಳನ್ನು ಹೊಂದಿರುವುದರಿಂದ, ಈ ಮಾಪನಿಯ ಅಂಕಗಳನ್ನು ಗಣಿತದ ಎಲ್ಲಾ ಕ್ರಿಯೆಗಳಿಗೆ ಒಳಪಡಿಸಬಹುದು. ಸಂಖ್ಯಾಶಾಸ್ತ್ರದ ಎಲ್ಲಾ ತಂತ್ರಗಳೂ ಈ ಮಾಪನಿಯ ದತ್ತಾಂಶಗಳಿಗೆ ಅನ್ವಯಿಸುತ್ತವೆ. ಯಾವುದೇ ಎರಡು ನಿರ್ದಿಷ್ಟ ಅಳತೆಗಳಿಗೂ ಮತ್ತೆರಡು ನಿರ್ದಿಷ್ಟ ಅಳತೆಗಳಿಗೂ ಇರುವ ಪರಿಮಾಣದ ಅಂತರವನ್ನು ಅನುಪಾತೀಯವಾಗಿ ವ್ಯಕ್ತಪಡಿಸಬಹುದು. ಉದಾ: 8 ಮತ್ತು 10 ರ ನಡುವಣ ವ್ಯತ್ಯಾಸ, 2 ಮತ್ತು 4 ರ ನಡುವಣ ವ್ಯತ್ಯಾಸದ ಎರಡರಷ್ಟಿದೆ. 8ಕೆಜಿ 16ಕೆಜಿಯ ಅರ್ಧದಷ್ಟು ಎಂದು ನಿಖರವಾಗಿ ಹೇಳಬಹುದು. ಅನುಪಾತ ಮಾಪನಿಯಲ್ಲಿ ಸಾಮಾನ್ಯವಾಗಿ ನಿಜವಾದ ಶೂನ್ಯ ಬಿಂದುವಿರುತ್ತದೆ. ಆದರೆ ಇದಕ್ಕೆ ಅಪವಾದಗಳು ಇರಬಹುದು. ಈ ಮಾಪನಿಯಲ್ಲಿ ಕ್ರಮಾಗತ ಬಿಂದುಗಳ ನಡುವಿನ ಅಂತರ ಸಮನಾಗಿರುತ್ತದೆ ಮತ್ತು ನೈಜ ಶೂನ್ಯದಿಂದಾಗಿ, ಬಿಂದುಗಳ

Digitised by Bharatavani, CIIL

ನಡುವೆ ನಿರ್ದಿಷ್ಟ ಅನುಪಾತವಿರುತ್ತದೆ. ಇದರಿಂದಾಗಿ, ಮಾಪನಿಯ ಯಾವುದೇ ಸ್ಥಾನದಲ್ಲಿರುವ ಅಂಕಗಳನ್ನು ಅರ್ಥಪೂರ್ಣವಾಗಿ ಮತ್ತು ಅನುಪಾತೀಯವಾಗಿ ಹೋಲಿಸಬಹುದು. ಭೌತವಿಜ್ಞಾನ, ರಸಾಯನಶಾಸ್ತ್ರ ಮತ್ತು ಖಗೋಳವಿಜ್ಞಾನದಲ್ಲಿ ಅನುಪಾತ ಮಾಪನಿಗಳು ಹೆಚ್ಚಾಗಿ ಉಪಯೋಗಿಸಲ್ಪಡುತ್ತವೆ.

–ಡಾ. ಜಾನಕಿ. ಎಂ.

# ಆ

## ಆದರ್ಶ ಆಧಾರಿತ ಮತ್ತು ನಿರ್ಣಯಾಂಕ ಆಧಾರಿತ ಪರೀಕ್ಷೆಗಳು

**ಪ್ರಸ್ತಾವನೆ:** ಮೌಲ್ಯಮಾಪನವು ಬೋಧನೆ ಮತ್ತು ಕಲಿಕೆಯ ಒಂದು ಅವಿಭಾಜ್ಯ ಅಂಗವಾಗಿದೆ. ವಿದ್ಯಾರ್ಥಿಗಳ ಸಾಮರ್ಥ್ಯ/ಸಾಧನೆಯ ಮಟ್ಟ ಒಂದು ಪ್ರಗತಿಗೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿ ಒದಗಿಸುತ್ತದೇ ಅಲ್ಲದೇ ಬೋಧನೆ ಮತ್ತು ಕಲಿಕೆಯನ್ನು ನಿರಂತರವಾಗಿ ಸುಧಾರಿಸುವ ಗುರಿಯನ್ನು ಮೌಲ್ಯಮಾಪನ ಹೊಂದಿದೆ. ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಫಲಿತಾಂಶಗಳ ಅರ್ಥೈಸುವಿಕೆ ಮತ್ತು ಮೌಲ್ಯ ನಿರ್ಧರಿಸುವ ಕಾರ್ಯವನ್ನು ಮೌಲ್ಯಮಾಪನ ಪ್ರಕ್ರಿಯೆ ಒಳಗೊಂಡಿದೆ. ವಿದ್ಯಾರ್ಥಿಯ ಕಲಿಕೆ/ಸಾಧನೆ/ಸಾಮರ್ಥ್ಯಗಳನ್ನು ಪರೀಕ್ಷಿಸುವುದು ಮತ್ತು ಅರ್ಥೈಸುವುದಕ್ಕೆ ಸಂಬಂಧಿಸಿದಂತೆ ಎರಡು ಪರ್ಯಾಯ ಹಾಗೂ ಪೂರಕ ಮೌಲ್ಯಮಾಪನ ಕ್ರಮ/ಮಾರ್ಗಗಳನ್ನು ಅನುಸರಿಸಲಾಗುವುದು. ಅವುಗಳೆಂದರೆ ಆದರ್ಶ ಆಧಾರಿತ ಮತ್ತು ನಿರ್ಣಯಾಂಕ ಆಧಾರಿತ ಮೌಲ್ಯಮಾಪನ. Norm Referenced and Criterion Referenced Evaluation ಇವುಗಳಿಗೆ ಸಂಬಂಧಿಸಿದಂತೆ ಬಳಸಲ್ಪಡುವ ಸಾಧನಗಳನ್ನು ಅನುಕ್ರಮವಾಗಿ ಮಾನಕ ಆಧಾರಿತ ಪರೀಕ್ಷೆ ಮತ್ತು ನಿರ್ಣಯಾಂಕ ಆಧಾರಿತ ಪರೀಕ್ಷೆಗಳೆಂದೂ (Norm Referenced and Criterion Referenced Tests) ಕರೆಯಲಾಗುವುದು. ಈ ಎರಡೂ ಪರೀಕ್ಷೆಗಳು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಿದರೂ, ಅವುಗಳ ನಡುವೆ ಭಿನ್ನತೆಗಳನ್ನು ಗುರುತಿಸಬಹುದಾಗಿದೆ. ಅವುಗಳ ವಿಭಿನ್ನ ಉದ್ದೇಶ, ಬಳಸಲ್ಪಡುವ ಪ್ರಶ್ನೆಗಳ ರಚನೆ, ಸ್ವಭಾವ, ಉಪಯೋಗ, ಫಲಿತಾಂಶಗಳ ಅರ್ಥೈಸುವಿಕೆ ಇತ್ಯಾದಿ ವಿಷಯಗಳ ಬಗ್ಗೆ ಶಿಕ್ಷಕ ಸ್ಪಷ್ಟ ಪರಿಕಲ್ಪನೆ ಹೊಂದಿರಬೇಕಾದದ್ದು ಅಗತ್ಯ

**ಆದರ್ಶ ಆಧಾರಿತ ಪರೀಕ್ಷೆ:** 40 ವಿದ್ಯಾರ್ಥಿಗಳನ್ನು ಹೊಂದಿರುವ ತರಗತಿಯಲ್ಲಿ ಒಬ್ಬ ವಿದ್ಯಾರ್ಥಿ ಶಾಲಾ ವಿಷಯವೊಂದರಲ್ಲಿ ಶೇ. 74 ಅಂಕಗಳನ್ನು ಪಡೆದು 8ನೇ ಸ್ಥಾನವನ್ನು ಗಳಿಸಿದ್ದಾನೆ ಎಂದು ಭಾವಿಸೋಣ. ಇದು ವಿದ್ಯಾರ್ಥಿ ಸಾಧನೆಯ ಫಲಿತಾಂಶವನ್ನು ಅರ್ಥೈಸುವ ಒಂದು ವಿಧಾನವಾಗಿದೆ. ಇದು ಆದರ್ಶ ಆಧಾರಿತ ಪರೀಕ್ಷೆಯ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ. ಅಂದರೆ, ತರಗತಿಯ ಇತರರೊಂದಿಗೆ ಹೋಲಿಸಿ, ವಿದ್ಯಾರ್ಥಿಯೊಬ್ಬನ ಸಾಧನೆಯನ್ನು ಅರ್ಥೈಸುವ ಗುರಿಯನ್ನು ಆದರ್ಶ ಆಧಾರಿತ ಪರೀಕ್ಷೆ ಹೊಂದಿದೆ. ಇಲ್ಲಿ ವಿದ್ಯಾರ್ಥಿಯೊಬ್ಬನ ಸಾಧನೆಯನ್ನು ಆತನು ಪ್ರತಿನಿಧಿಸುವ ಗುಂಪಿನ ಸಾಧನೆಗೆ ಹೋಲಿಸಿ, ಅರ್ಥೈಸಿ, ಮೌಲ್ಯ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಈ ಅರ್ಥದಲ್ಲಿ ಹೆಚ್ಚು ಕಡಿಮೆ ತರಗತಿಯಲ್ಲಿ ಬಳಸಲ್ಪಡುವ ಎಲ್ಲ ರೀತಿಯ ಶಿಕ್ಷಕ ನಿರ್ಮಿತ ಸಾಧನೆ ಪರೀಕ್ಷೆ (Teacher made Achievement Tests), ಘಟಕ ಪರೀಕ್ಷೆ, ಕಿರು ಪರೀಕ್ಷೆ, ಅರ್ಧವಾರ್ಷಿಕ ಪರೀಕ್ಷೆ, ವಾರ್ಷಿಕ ಪರೀಕ್ಷೆ, ಪಬ್ಲಿಕ್ ಪರೀಕ್ಷೆಗಳಲ್ಲದೆ, ಮಾನಕೀಕೃತ ಪರೀಕ್ಷೆಗಳು (Standardised Tests), ಆದರ್ಶ ಆಧಾರಿತ ಪರೀಕ್ಷೆಗಳಿಗೆ ಉದಾಹರಣೆಗಳಾಗಿವೆ. ವಿದ್ಯಾರ್ಥಿಯ ಶಾಲಾವಿಷಯಕ್ಕೆ ಸಂಬಂಧಿಸಿದಂತೆ ಯಾವ ವಿಶಿಷ್ಟ

Digitised by Bharatavani, CIIL

ಜ್ಞಾನ ಮತ್ತು ಕೌಶಲಗಳನ್ನು ಪ್ರದರ್ಶಿಸಬಲ್ಲ ಎಂಬ ಮಾಹಿತಿ ಒದಗಿಸುವುದು/ಅರ್ಥೈಸುವುದು ಆದರ್ಶ ಆಧಾರಿತ ಪರೀಕ್ಷೆಗಳ ಉದ್ದೇಶವಲ್ಲ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವಿದ್ಯಾರ್ಥಿಯೊಬ್ಬ ಯಾವ ವಿಶಿಷ್ಟ ಪ್ರಾವೀಣ್ಯ ಗಳಿಸಿದ್ದಾನೆ ಅಥವಾ ಇಲ್ಲ ಎಂಬುದನ್ನು ತಿಳಿಸುವುದು ಇವುಗಳ ವ್ಯಾಪ್ತಿಗೆ ಬರುವುದಿಲ್ಲ. ವಿದ್ಯಾರ್ಥಿಗಳ ಸಾಧನೆ, ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಭಿನ್ನತೆ ಪ್ರಕಟವಾಗುವ ಸಾಧ್ಯತೆಯನ್ನು ಹೆಚ್ಚಿಸುವುದೂ ಆದರ್ಶ ಆಧಾರಿತ ಪರೀಕ್ಷೆಗಳ ಮತ್ತೊಂದು ಗುರಿಯಾಗಿರುತ್ತದೆ. ಈ ಗುರಿಗೆ ಅನುಗುಣವಾಗಿ ಪರೀಕ್ಷೆ(ಪ್ರಶ್ನೆಪತ್ರಿಕೆ)ಯ ರಚನೆ ಮತ್ತು ಪ್ರಶ್ನೆಗಳ ಆಯ್ಕೆ ಕೈಗೊಳ್ಳಬೇಕಾಗುತ್ತದೆ. ಹೆಚ್ಚು ಭಿನ್ನತೆ ಮೌಲ್ಯ ಒಳಗೊಂಡಿರುವ ಪ್ರಶ್ನೆಗಳನ್ನು ರೂಪಿಸಬೇಕಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳು ಸರಿಯಾಗಿ ಉತ್ತರಿಸುವಂತಹ ಹಾಗೂ ಸಮರ್ಪಕವಾಗಿ ಉತ್ತರಿಸಲು ಸಾಧ್ಯವಾಗದು ಅಥವಾ ಪ್ರಶ್ನೆಗಳನ್ನು ಆದರ್ಶ ಆಧಾರಿತ ಪರೀಕ್ಷಾ ಪ್ರಶ್ನೆಪತ್ರಿಕೆ ಒಳಗೊಂಡಿರುವುದಿಲ್ಲ. ಅಂದರೆ ತೀರಾ ಸುಲಭವಾದ ಹಾಗೂ ಅತಿ ಕ್ಲಿಷ್ಟತೆ ಹೊಂದಿರುವ ಪ್ರಶ್ನೆಗಳನ್ನು ಸೇರಿಸುವುದರಿಂದ ಯಾವ ಲಾಭವೂ ಆಗುವುದಿಲ್ಲ, ಉದ್ದೇಶ ಸಫಲವಾಗುವುದಿಲ್ಲ. ಏಕೆಂದರೆ, ಇಂತಹ ಪ್ರಶ್ನೆಗಳನ್ನು ವಿದ್ಯಾರ್ಥಿ ಸಾಮರ್ಥ್ಯದಲ್ಲಿನ ಸಾಧನೆಯಲ್ಲಿನ ಭಿನ್ನತೆಯನ್ನು ಪ್ರಕಟಗೊಳಿಸಲು ಸಹಾಯಮಾಡುವ ಸಾಧ್ಯತೆ ಕಡಿಮೆ. ಆದ್ದರಿಂದಲೇ ಶೇ. 50ರ ಕ್ಲಿಷ್ಟತೆಯ ಮಟ್ಟ ಹೊಂದಿರುವ ಹೆಚ್ಚಿನ ಪ್ರಶ್ನೆಗಳನ್ನು ಆದರ್ಶ ಆಧಾರಿತ ಪರೀಕ್ಷೆಗಳಲ್ಲಿ ಸೇರಿಸಲಾಗುತ್ತದೆ.

ಈ ಪರೀಕ್ಷೆಗಳನ್ನು ಅವುಗಳ ಉದ್ದೇಶ, ಪ್ರಶ್ನೆಗಳ ಸ್ವಭಾವ ಶೈಕ್ಷಣಿಕ ಅಗತ್ಯ ಇವುಗಳಿಗನುಗುಣವಾಗಿ ಬಳಸಿಕೊಳ್ಳಲಾಗುತ್ತದೆ. ವಿದ್ಯಾರ್ಥಿ ಸಾಧನೆಯಲ್ಲಿ ಭಿನ್ನತೆ ಪ್ರಕಟಗೊಳಿಸಿ, ಅದನ್ನು ಆಧರಿಸಿ ವಿದ್ಯಾರ್ಥಿಗಳ ಆಯ್ಕೆ, ತೇರ್ಗಡೆ, ಶ್ರೇಣಿ ಹಂಚುವಿಕೆ ಅಗತ್ಯವಿದ್ದರೆ ಈ ಪರೀಕ್ಷೆಗಳ ಬಳಕೆ ಸೂಕ್ತ. ಶಿಕ್ಷಣದಲ್ಲಿ ಯಾವ ಹಂತದಲ್ಲಿ ಅಥವಾ ಯಾವ ಕೋರ್ಸ್‌ಗಳಲ್ಲಿ ಇದನ್ನು ಬಳಸಿಕೊಳ್ಳಲು ಸಾಧ್ಯ ಅಥವಾ ಸಾಧ್ಯವಿಲ್ಲ ಎಂಬ ಪ್ರಶ್ನೆಯಿಂದ ನಿರ್ದಿಷ್ಟ ಹಂತದ ಶಿಕ್ಷಣದ ಅಗತ್ಯತೆ ಹಾಗೂ ಅರ್ಥೈಸುವಿಕೆಯ ಕ್ರಮವನ್ನು ಆಧರಿಸಿ, ಈ ರೀತಿಯ ಪರೀಕ್ಷೆಗಳನ್ನು ಬಳಸಿಕೊಳ್ಳಬಹುದಾಗಿದೆ.

**ನಿರ್ಣಯಾಂಕ ಆಧಾರಿತ ಪರೀಕ್ಷೆ:**

ನಿರ್ಣಯಾಕ ಆಧಾರಿತ ಪರೀಕ್ಷೆ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ ಹಾಗೂ ಅನೇಕ ರೀತಿಯಲ್ಲಿ ಆದರ್ಶ ಆಧಾರಿತ ಪರೀಕ್ಷೆಗಿಂತ ಭಿನ್ನವಾಗಿದೆ. ಈ ರೀತಿಯ ಪರೀಕ್ಷೆಯಲ್ಲಿ ವಿದ್ಯಾರ್ಥಿಯೊಬ್ಬನ ಸಾಧನೆ/ಸಾಮರ್ಥ್ಯವನ್ನು ತನ್ನ ಸಹಪಾಠಿಗಳೊಡನೆ(ಅಥವಾ ತಾನು ಪ್ರತಿನಿಧಿಸುವ ಗುಂಪಿನೊಡನೆ) ಹೋಲಿಸದೇ ನೇರವಾಗಿ ಸ್ವತಂತ್ರ ರೀತಿಯಲ್ಲಿ ಅರ್ಥೈಸಲಾಗುತ್ತದೆ. ಉದಾಹರಣೆಗೆ ಶಾಲಾ ವಿಷಯದ ಘಟಕವೊಂದರಲ್ಲಿ ಕಲಿಯಲು 8 ಪರಿಕಲ್ಪನೆ (ಕಲಿಯುವ ಅಂಶ)ಗಳು ಇದೆ ಎಂದು ಭಾವಿಸೋಣ. ಇವುಗಳಲ್ಲಿ ವಿದ್ಯಾರ್ಥಿಯೊಬ್ಬ ಎಷ್ಟು ಕಲಿಯುವ ಅಂಶಗಳನ್ನು ಗ್ರಹಿಸಿದ್ದಾನೆ ಎಂಬುದನ್ನು ಕಂಡುಹಿಡಿಯಲು ಬಳಸಲಾಗುವ ಸಾಧನ/ಮಾಪನ, ಪರೀಕ್ಷೆಯನ್ನು(ಪ್ರಶ್ನೆಪತ್ರಿಕೆ) ನಿರ್ಣಯಾಂಕ ಆಧಾರಿತ ಪರೀಕ್ಷೆ ಎಂದು ಕರೆಯಲಾಗುವುದು. ಒಬ್ಬ ವಿದ್ಯಾರ್ಥಿ 8 ಪರಿಕಲ್ಪನೆಗಳಲ್ಲಿ 6ನ್ನು ಅರ್ಥಮಾಡಿಕೊಂಡಿದ್ದಾನೆ ಎಂದು ಭಾವಿಸೋಣ. ಈ ಅಂಶವು ನಿರ್ಣಯಾಂಕ ಆಧಾರಿತ ಪರೀಕ್ಷೆಯು ಒದಗಿಸುವ ಮಾಹಿತಿಯಾಗಿದೆ. ತರಗತಿಯಲ್ಲಿ ಬೇರೆಯವರಿಗೆ ಹೋಲಿಸಿದಾಗ ಆ ವಿದ್ಯಾರ್ಥಿಯ ಸ್ಥಾನವೇನು ಎನ್ನುವ ಮಾಹಿತಿಯನ್ನು ಒದಗಿಸುವುದು ಈ ಪರೀಕ್ಷೆಯ ಉದ್ದೇಶವಲ್ಲ. ಭಾಷಾ ವಿಷಯ/ಗದ್ಯಪಾಠವೊಂದರಲ್ಲಿ 10 ಹೊಸಪದಗಳ ಬಳಕೆಯಾಗಿದೆ ಎಂದು ಭಾವಿಸೋಣ. ಅವುಗಳಲ್ಲಿ ಎಷ್ಟು ಪದಗಳನ್ನು ಬಳಸಿಕೊಂಡು ವಿದ್ಯಾರ್ಥಿಯೊಬ್ಬ ಸಮರ್ಪಕವಾಗಿ ಸ್ವಂತವಾಕ್ಯ ರಚಿಸಲು ಸಮರ್ಥನಾಗಿದ್ದಾನೆ ಎಂದು ತಿಳಿಯಲು ನಿರ್ಣಯಾಂಕ ಆಧಾರಿತ ಪರೀಕ್ಷೆ ಬಳಸಲ್ಪಡುತ್ತದೆ. ವಿದ್ಯಾರ್ಥಿ ಸಾಧನೆಗೆ ಸಂಬಂಧಿಸಿದಂತೆ ಭಿನ್ನತೆಯನ್ನು ಪ್ರಕಟಿಸುವ ಉದ್ದೇಶವನ್ನು ಈ ಪರೀಕ್ಷೆಗಳು ಹೊಂದಿರುವುದಿಲ್ಲ. ವಿದ್ಯಾರ್ಥಿಯ ವಿಷಯ ಪ್ರಾವೀಣ್ಯದ ಮಟ್ಟವನ್ನು ನಿರ್ಧರಿಸುವ ಉದ್ದೇಶವನ್ನು ಇದು ಹೊಂದಿರುತ್ತದೆ. ನಿರ್ದಿಷ್ಟವಾಗಿ/ಸ್ಪಷ್ಟವಾಗಿ ಗುರುತಿಸಲ್ಪಟ್ಟ ಕಲಿಕೆಯ ವಿಷಯ/ ವಸ್ತುವಿಗೆ (Content) ಸಂಬಂಧಿಸಿದಂತೆ ವಿದ್ಯಾರ್ಥಿಯ ಜ್ಞಾನ ಮತ್ತು ಕೌಶಲಗಳ ಮಟ್ಟವನ್ನು ಕಂಡುಹಿಡಿಯಲು ಬಳಸಲ್ಪಡುವ ಪರೀಕ್ಷೆ ಇದಾಗಿದೆ. ಇಲ್ಲಿ ವಿದ್ಯಾರ್ಥಿ ಸಾಧನೆಯ ಮಟ್ಟವನ್ನು ಗುರುತಿಸಲ್ಪಟ್ಟ ಕಲಿಕೆಯ ವಿಷಯಕ್ಕೆ ಹೋಲಿಸಿ ಫಲಿತಾಂಶವನ್ನು ಅರ್ಥೈಸಲಾಗುವುದು. ಪೂರ್ವನಿರ್ಧಾರಿತ ಅಂಶಗಳಿಗೆ ಹೋಲಿಸಿದಂತೆ ವಿದ್ಯಾರ್ಥಿ ಎಷ್ಟು ಕಲಿತಿದ್ದಾನೆ ಎಂಬ ಮಾಹಿತಿಯನ್ನು ಶಿಕ್ಷಕರಿಗೆ ಮತ್ತು ಪೋಷಕರಿಗೆ ಈ ಆಧಾರಿತ ಪರೀಕ್ಷೆ ಒದಗಿಸುತ್ತದೆ.

ಈ ಹಿನ್ನೆಲೆಯಲ್ಲಿ ನಿರ್ಣಯಾಂಕ ಆಧಾರಿತ ಪರೀಕ್ಷೆಯ ರಚನೆ ಮತ್ತು ಪ್ರಶ್ನೆಗಳ ಆಯ್ಕೆ ಮಾಡಲಾಗುತ್ತದೆ. ಎಲ್ಲಾ ಪೂರ್ವನಿರ್ಧಾರಿತ ಕಲಿಕಾ ಅಂಶಗಳನ್ನು ಆಧರಿಸಿ ಪ್ರಶ್ನೆಗಳ ಆಯ್ಕೆ ನಡೆಯುತ್ತದೆ. ಪ್ರಶ್ನೆಗಳು ತೀರಾ ಸುಲಭವಾಗಬಾರದು ಹಾಗೂ ತೀರಾ ಕ್ಲಿಷ್ಟತೆಯನ್ನು ಹೊಂದಿರಬಾರದು ಎಂಬ ಅಂಶವನ್ನು ಆಧರಿಸಿ ಪ್ರಶ್ನೆಗಳ ಆಯ್ಕೆ ನಡೆಯುವುದಿಲ್ಲ. ಕಲಿಯಬೇಕಾದ ಕಾರ್ಯ ಸುಲಭವಾಗಿದ್ದರೆ, ಸುಲಭವಾಗಿರುವ ಪ್ರಶ್ನೆಗಳು ಆಯ್ಕೆಯಾಗುತ್ತವೆ. ಕಲಿಯಬೇಕಾದ ಕಾರ್ಯ ಕಠಿಣವಾಗಿದ್ದರೆ, ಕ್ಲಿಷ್ಟ ಪ್ರಶ್ನೆಗಳ ಸೇರ್ಪಡೆಯಾಗುತ್ತದೆ. ವಿದ್ಯಾರ್ಥಿಗಳ ಸಾಧನೆಯಲ್ಲಿ ಭಿನ್ನತೆ ಅಥವಾ ಅಂಕಗಳ ವ್ಯಾಪ್ತಿ ಹೆಚ್ಚಾಗಿರಬೇಕು ಎಂಬ ಅಂಶ ಆಧರಿಸಿ ಪ್ರಶ್ನೆಗಳ ಆಯ್ಕೆ ನಡೆಯುವುದಿಲ್ಲ. ನಿರ್ಣಯಾಂಕ ಆಧಾರಿತ ಪರೀಕ್ಷೆಗಳು ಹೆಚ್ಚಿನ ಮಟ್ಟದ ಪಠ್ಯವಸ್ತು ವಿಶ್ವಾಸನೀಯತೆ(Content Validity)ಯನ್ನು ಹೊಂದಿರಬೇಕಾಗುತ್ತದೆ.

ಎಲ್ಲೆಲ್ಲಿ ಪೂರ್ವನಿರ್ಧಾರಿತ ಕಲಿಕೆಯ ಕಾರ್ಯ(ಅಂಶ)ಗಳಿಗೆ ಹೋಲಿಸಿ ವಿದ್ಯಾರ್ಥಿಯ ಫಲಿತಾಂಶವನ್ನು ಅರ್ಥೈಸಬೇಕಾಗುತ್ತದೋ ಅಂತಹ ಸಂದರ್ಭದಲ್ಲಿ ನಿರ್ಣಯಾಂಕ ಆಧಾರಿತ ಪರೀಕ್ಷೆಗಳ ಬಳಕೆ ಅತ್ಯಂತ ಸೂಕ್ತ. ಯಾವ ಹಂತದಲ್ಲಿ/ಸಂದರ್ಭದಲ್ಲಿ ಪ್ರಾವೀಣ್ಯ ಕಲಿಕೆಯ ಮಾಪನಕಾರ್ಯ ಅಗತ್ಯವೆನಿಸುತ್ತದೋ ಅಲ್ಲಿ ನಿರ್ಣಾಯಕ ಪರೀಕ್ಷೆಗಳ ಬಳಕೆಯುಕ್ತ. ಪ್ರಾಥಮಿಕ ಶಿಕ್ಷಣ

Digitised by Bharatavani, CIIL

ಹಂತದಲ್ಲಿ ಆಗಿಂದಾಗ್ಗೆ ವಿದ್ಯಾರ್ಥಿ ಸಾಧನೆಯ ಪ್ರಗತಿ/ಪರಿಶೀಲನೆ ನಡೆಸಲು ಇದು ಯೋಗ್ಯವಾದ ಮಾಪನವಾಗಿದೆ. ರೂಪಣಾ ಮೌಲ್ಯಮಾಪನ ಮತ್ತು ನೈದಾನಿಕ (ಕಲಿಕೆ ದೋಷ ಪತ್ತೆಹಚ್ಚುವ) ಮಾಪನ ಕಾರ್ಯದಲ್ಲಿ ನಿರ್ಣಾಯಕ ಆಧಾರಿತ ಪರೀಕ್ಷೆಗಳ ಬಳಕೆಯಾಗುವ ಸಾಧ್ಯತೆ ಹೆಚ್ಚು. ಉನ್ನತ ಮಟ್ಟದ ಆಲೋಚನಾ ಸಾಮರ್ಥ್ಯ, ಬರವಣಿಗೆ (ಲಿಖಿತ ಅಭಿವ್ಯಕ್ತಿ) ಕೌಶಲ, ಸಮಸ್ಯಾ ಪರಿಹಾರ ಕೌಶಲ, ಸಮರ್ಥಿಸುವ ಕೌಶಲ ಇತ್ಯಾದಿಗಳನ್ನು ಮಾಪನ ಮಾಡಲು ಈ ರೀತಿಯ ಪರೀಕ್ಷೆಗಳನ್ನು ಬಳಸಿಕೊಳ್ಳಲಾಗುತ್ತದೆ.

ಆದರ್ಶ ಆಧಾರಿತ ಮತ್ತು ನಿರ್ಣಯಾಂಕ ಆಧಾರಿತ ಪರೀಕ್ಷೆಗಳು ವಿಶಿಷ್ಟ ರೀತಿಯಲ್ಲಿ ಮೌಲ್ಯಮಾಪನ ಕಾರ್ಯಕ್ಕೆ ನೆರವಾಗುವ ಸಾಧನಗಳಾಗಿವೆ. ಮೌಲ್ಯಮಾಪನ ಕಾರ್ಯದಲ್ಲಿ ಪ್ರತಿಯೊಂದಕ್ಕೂ ವಿಶೇಷ ಸ್ಥಾನವಿದೆ. ಬೋಧನೆ ಕಲಿಕೆ ಸುಧಾರಿಸುವ ದೃಷ್ಟಿಯಿಂದ ಈ ಎರಡೂ ಪರೀಕ್ಷೆಗಳ ಬಳಕೆ ಅಗತ್ಯ. ಇವುಗಳು ಪರಸ್ಪರ ಪೂರಕ ಸಾಧನಗಳಾಗಿವೆ. ಉದ್ದೇಶಗಳು, ಪ್ರಶ್ನೆಗಳ ರಚನೆ/ಸ್ವಭಾವ, ಬಳಕೆ, ಇತಿಮಿತಿಗಳು–ಇವುಗಳಿಗೆ ಸಂಬಂಧಿಸಿದಂತೆ ಆದರ್ಶ ಆಧಾರಿತ ಮತ್ತು ನಿರ್ಣಾಯಕ ಆಧಾರಿತ ಪರೀಕ್ಷೆಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಇಲ್ಲಿ ಪರಿಗಣಿಸಬೇಕಾದ ಪ್ರಶ್ನೆ ಈ ಎರಡೂ ಕ್ರಮಗಳಲ್ಲಿ ಯಾವ ಒಂದನ್ನು ಆಯ್ಕೆ ಮಾಡಬೇಕು ಅಥವಾ ಯಾವುದಕ್ಕಿಂತ ಯಾವುದು ಉತ್ತಮ/ಯೋಗ್ಯವಾದದ್ದು ಎಂಬುದಲ್ಲ. ಆದರೆ ಯಾವಾಗ, ಯಾವ ರೀತಿಯ ಪರೀಕ್ಷೆಯನ್ನು ಬಳಸಿಕೊಳ್ಳಬೇಕೆಂಬುದೇ ಆಗಿದೆ. ಅಂದರೆ ಈ ಪರೀಕ್ಷೆಗಳ ಬಳಕೆ ಶೈಕ್ಷಣಿಕ ಅಗತ್ಯವನ್ನು ಆಧರಿಸುತ್ತದೆ. ಪ್ರತಿನಿಧಿಸುವ ಗುಂಪಿಗೆ ಹೋಲಿಸಿ ವಿದ್ಯಾರ್ಥಿಯೊಬ್ಬನ ಸಾಧನೆಯ ಮಟ್ಟವನ್ನು ಅರ್ಥೈಸುವ ಅಗತ್ಯವಿದ್ದಲ್ಲಿ ಆ ಕಾರ್ಯಕ್ಕೆ ಆದರ್ಶ ಆಧಾರಿತ ಪರೀಕ್ಷೆಯ ಬಳಕೆ ಹೆಚ್ಚು ಸೂಕ್ತ. ಆದರೆ ಗುಂಪಿಗೆ ಹೋಲಿಸದೇ ವಿದ್ಯಾರ್ಥಿಯ ಕಲಿಕೆಯ ಕಾರ್ಯವನ್ನು ನೇರವಾಗಿ, ಸ್ವತಂತ್ರ ರೀತಿಯಲ್ಲಿ ಅರ್ಥೈಸುವಗತ್ಯವಿದ್ದಲ್ಲಿ ನಿರ್ಣಾಯಕ ಆಧಾರಿತ ಪರೀಕ್ಷೆಯ ಬಳಕೆ ಉಚಿತ. ಸಾಮಾನ್ಯವಾಗಿ ಪ್ರಾಥಮಿಕ ಹಂತದಲ್ಲಿ ನಿರ್ಣಾಯಕ ಆಧಾರಿತ ಮಾದರಿ ಪರೀಕ್ಷೆಗಳ ಬಳಕೆಯ ಅಗತ್ಯ ಹೆಚ್ಚಾಗಿರುತ್ತದೆ. ಸಂಕಲಿತ ಮೌಲ್ಯಮಾಪನ ಮಾಡಲು ಆದರ್ಶ ಆಧಾರಿತ ಪರೀಕ್ಷೆಗಳು ಹೆಚ್ಚು ಸಮರ್ಪಕ. ರೂಪಣಾ ಮತ್ತು ನೈದಾನಿಕ ಕಲಿಕಾ(ದೋಷ ಪತ್ತೆಹಚ್ಚುವ ಉದ್ದೇಶ ಹೊಂದಿರುವ) ಮೌಲ್ಯಮಾಪನ ನಡೆಸಲು ನಿರ್ಣಾಯಕ ಆಧಾರಿತ ಪರೀಕ್ಷೆಗಳು ಹೆಚ್ಚು ಸಹಕಾರಿ. ಕೆಲವು ವೇಳೆ ಉನ್ನತ ವ್ಯಾಸಂಗ/ತರಬೇತಿಗಾಗಿ ಮಾಡುವ ಆಯ್ಕೆ ಪ್ರಕ್ರಿಯೆಯಲ್ಲಿ ಈ ಎರಡೂ ರೀತಿಯ ಪರೀಕ್ಷಾ ಸಾಧನಗಳ ಬಳಕೆ ಅಗತ್ಯವೆನಿಸಲೂಬಹುದು.

–ಡಾ. ಶ್ರೀನಿವಾಸನ್ ಎ.

## ಇ

## ಇಂಗ್ಲಿಷ್ ಬೋಧನಾ ವಿಧಾನ

ಭಾರತವು ಒಂದು ವೈವಿಧ್ಯಮಯ ದೇಶ. ಇಲ್ಲಿನ ಜನರ ಉಡುಪು, ಆಹಾರ, ಜೀವನಶೈಲಿ, ಮಾತನಾಡುವ ಭಾಷೆ, ದೇಶದ ವಿವಿಧೆಡೆ ಇರುವ ಹವಾಮಾನ ಪರಿಸ್ಥಿತಿ ಮುಂತಾದವುಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ತಮ್ಮ ಭಾಷೆಯಾದ ಇಂಗ್ಲಿಷನ್ನು ಭಾರತದಲ್ಲಿ ಬಳಕೆಗೆ ತಂದರು. ಆ ಭಾಷೆಯ ನೆರವಿನಿಂದ ನಮ್ಮ ಸುತ್ತಮುತ್ತಲ ದೇಶಗಳಾದ ಬರ್ಮಾ, ಸಿಲೋನ್ ಮುಂತಾದ ದೇಶಗಳನ್ನೆಲ್ಲ ಒಗ್ಗೂಡಿಸುವುದಕ್ಕೆ ಸಾಧ್ಯವಾಯಿತು. ಭಾರತಕ್ಕೆ ಪ್ರಪಂಚದ ಬೇರೆ ಬೇರೆ ಭಾಗಗಳ ಪರಿಚಯವನ್ನು ಸುಲಭವಾಗಿ ಗಳಿಸಲು ಸಹಾಯವಾಯಿತು. ಹಾಗೇ ಭಾರತ ಸ್ವಾತಂತ್ರ್ಯಗಳಿಸಲೂ ನೆರವಾಯಿತು.

ಮನುಷ್ಯನ ನಿರ್ಮಾಣಗಳಲ್ಲಿ ಭಾಷೆಯ ನಿರ್ಮಾಣ ಬಹಳ ಅಮೂಲ್ಯವಾದುದು. ಕೇವಲ ಮಾನವ ಮಾತ್ರ ಮಾತನಾಡುವ ಶಕ್ತಿಯನ್ನು ಹೊಂದಿದ್ದಾನೆ. ಅದರ ಸಹಾಯದಿಂದ ಸಂವಹನವನ್ನು ಸುಲಭವಾಗಿ ಮಾಡಬಲ್ಲನು. ಅವನು ಮಾತನಾಡಲು ತನ್ನ ದೇಹದ ಅನೇಕ ವಾಕ್–ಶ್ರವಣ ಅಂಗಗಳನ್ನು ಎಂದರೆ ಬಾಯಿ, ತುಟಿಗಳು, ಹಲ್ಲುಗಳು, ನಾಲಿಗೆ, ಧ್ವನಿ ಪೆಟ್ಟಿಗೆ, ಕಿವಿ, ಶ್ವಾಸಕೋಶಗಳು ಮುಂತಾದವುಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾನೆ.

ಯಾವುದೇ ಭಾಷೆಯಾಗಲಿ ಅದು ಜನರಿಗೆ ಅನೇಕ ರೀತಿಯಲ್ಲಿ ಉಪಯುಕ್ತವಾದದ್ದು. ಅದರಲ್ಲೂ ಇಂಗ್ಲಿಷ್ ಭಾಷೆಯು ಮನುಷ್ಯನ ಆಲೋಚನಾ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ, ಜ್ಞಾನದ ಕ್ಷೇತ್ರವನ್ನು ವಿಸ್ತರಿಸುತ್ತದೆ. ಅದರಿಂದ ಸಾಮಾಜಿಕ, ವೈಜ್ಞಾನಿಕ, ರಾಜಕೀಯ, ಧಾರ್ಮಿಕ ಮುಂತಾದ ಕ್ಷೇತ್ರಗಳ ಪರಿಚಯ ಬೆಳೆಯುತ್ತದೆ. ವೃತ್ತಿ ಬದುಕಿಗೆ ಸಹಾಯವಾಗುತ್ತದೆ. ಮೊದಲಿನಿಂದಲೂ ಇಂಗ್ಲಿಷ್ ಭಾಷೆಗೆ ಹೆಚ್ಚು ಗಮನ ಕೊಟ್ಟು ಅದನ್ನು ಬಾಲ್ಯದಿಂದಲೂ ಅಭ್ಯಾಸವನ್ನು ಮಾಡುವ ವ್ಯಕ್ತಿಯ ಜೀವನ ಶೈಲಿಯನ್ನು ಅದು ಉತ್ತಮಪಡಿಸಬಲ್ಲದು.

ಈ ದೃಷ್ಟಿಯಿಂದ ಶಾಲೆಗಳಲ್ಲಿ ಮಕ್ಕಳಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸುವುದು ಅಗತ್ಯವಾಗಿದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಡುತ್ತಾರೆ. ಅದರಲ್ಲೂ ಈಗಿನ ಕಾಲದಲ್ಲಿ ಅಭಿವೃದ್ಧಿ ಆಗುತ್ತಿರುವ ವಿಜ್ಞಾನ ಮತ್ತು ತಂತ್ರ ಜ್ಞಾನಗಳನ್ನು ಅರ್ಥಮಾಡಿಕೊಳ್ಳಲು, ಅವುಗಳ ಉಪಯೋಗದಿಂದ ಅನೇಕ ಆಧುನಿಕ ಉಪಕರಣಗಳನ್ನು ಉಪಯೋಗಿಸಲು, ಕಾಲದ ಜೊತೆಯಲ್ಲಿ ಮುಂದೆ ಸಾಗಲು ಇಂಗ್ಲಿಷ್ ಭಾಷೆ ಅಗತ್ಯವಾದದ್ದು ಎಂಬುದು ಎಲ್ಲರಿಗೂ ಅರ್ಥವಾಗಿದೆ ಎಂದೇ ಹೇಳಬೇಕು. ಆದ್ದರಿಂದಲೇ ಇಂಗ್ಲಿಷನ್ನು ಪ್ರಾಥಮಿಕ ತರಗತಿಗಳಿಂದಲೇ ಮಕ್ಕಳಿಗೆ ಕಲಿಸಬೇಕು ಎಂಬುದಕ್ಕೆ ಹೆಚ್ಚಿನ ಮಹತ್ವ ದೊರೆತಿದೆ.

ಹೀಗೆ ಇಂಗ್ಲಿಷನ್ನು ಮಕ್ಕಳಿಗೆ ಕಲಿಸುವುದರಿಂದ ಅವರಲ್ಲಿ ಸಣ್ಣ ವಯಸ್ಸಿನಿಂದಲೇ ಸ್ವ–ಅಭಿವ್ಯಕ್ತಿಸುವ ಶಕ್ತಿ, ತಾವು ಹೇಳಲು

Digitised by Bharatavani, CIIL

ಇಚ್ಛಿಸುವುದನ್ನು ಸರಿಯಾಗಿ ಹೇಳುವ, ತಮ್ಮ ಅನಿಸಿಕೆಗಳನ್ನು ಬರೆದಿಡುವ ಮತ್ತು ಸಾಕಷ್ಟು ವಿಷಯಗಳನ್ನು ಸಂಗ್ರಹಿಸುವ ಶಕ್ತಿ, ರಚನಾತ್ಮಕ ಶಕ್ತಿ ಮುಂತಾದವುಗಳನ್ನು ಬೆಳೆಸಬಹುದು.

ಸಾಮಾನ್ಯವಾಗಿ ಶಾಲೆಗಳಲ್ಲಿ ಇಂಗ್ಲಿಷನ್ನು ಕಲಿಸಲು ಹಲವು ಹಂತಗಳಿರುತ್ತವೆ. ಮೊದಲು ಆ ಭಾಷೆಯನ್ನು ಕೇಳಿಸಿಕೊಂಡು ಸಾಕಷ್ಟು ಅರ್ಥಮಾಡಿಕೊಳ್ಳಲು ಬೇಕಾದ ವಾತಾವರಣವನ್ನು ಶಾಲೆಯಲ್ಲಿ ಕಲ್ಪಿಸಲಾಗುತ್ತದೆ. ಅದಕ್ಕಾಗಿ ಪ್ರಾಥಮಿಕ ತರಗತಿಗಳ ಪಠ್ಯದಲ್ಲಿ ಶಿಕ್ಷಕರು ಓದುವುದನ್ನು ಮಕ್ಕಳು ಗಮನವಿಟ್ಟು ಕೇಳುವುದಕ್ಕೆ, ನಂತರ ಆದಷ್ಟು ಅರ್ಥ ಮಾಡಿಕೊಳ್ಳಲು ಮತ್ತು ಹಲವು ಪದಗಳನ್ನು ಪದೇ ಪದೇ ಉಚ್ಚರಿಸುವ ಮೂಲಕ ಅವುಗಳ ಪರಿಚಯವನ್ನು ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಹೀಗೆ ಭಾಷೆಯ ಕಲಿಕೆಯಲ್ಲಿ ಮೊದಲ ಹಂತ, ಅದನ್ನು ಕೇಳಿಸಿಕೊಂಡು ಅರ್ಥ ಮಾಡಿಕೊಳ್ಳುವುದು. ಎರಡನೇ ಹಂತದಲ್ಲಿ ಓದುವುದನ್ನು ಅಭ್ಯಾಸ ಮಾಡಿಸಲಾಗುತ್ತದೆ. ಗಟ್ಟಿಯಾಗಿ ಸರಿಯಾದ ಉಚ್ಚಾರಣೆ ಮಾಡುವುದರ ಮೂಲಕ ಓದುವುದನ್ನು ಪ್ರಾರಂಭದಲ್ಲಿ ಕಲಿಸುವುದು ಮುಖ್ಯವಾದುದು. ನಂತರ ನಿಶ್ಶಬ್ದವಾಗಿ ಮನಸ್ಸಿನಲ್ಲೇ ಓದಿ ಮನನ ಮಾಡಿಕೊಳ್ಳುವುದನ್ನು ಕಲಿಸಲಾಗುತ್ತದೆ. ಮೂರನೇ ಹಂತದಲ್ಲಿ ಸಣ್ಣ ಸಣ್ಣ ವಾಕ್ಯಗಳನ್ನು ಹೇಳುವುದನ್ನು ಅಭ್ಯಾಸ ಮಾಡಿಸಲಾಗುವುದು. ಇದರಿಂದ ಇಂಗ್ಲಿಷ್ ಭಾಷೆಯಲ್ಲಿ ಸ್ವಲ್ಪ ಸ್ವಲ್ಪವಾಗಿ ಮಾತನಾಡುವುದನ್ನು ಮಕ್ಕಳು ಕಲಿಯುತ್ತಾರೆ. ಕೊನೆಯ ಹಂತ ಎಂದರೆ ಇಂಗ್ಲಿಷ್ ಪದಗಳನ್ನು, ಸಣ್ಣ ಸಣ್ಣ ವಾಕ್ಯಗಳನ್ನು ಬರೆಯುವುದನ್ನು ಕಲಿಸುವುದು. ಹೀಗೆ ಯಾವುದೇ ಭಾಷೆಯಾಗಲಿ ಕೇಳಿಸಿಕೊಂಡು ಅರ್ಥ ಮಾಡಿಕೊಳ್ಳುವುದು, ಓದುವುದು, ಮಾತನಾಡುವುದು ಮತ್ತು ಬರೆಯುವುದು ಎಂಬ ನಾಲ್ಕು ಕೌಶಲಗಳನ್ನು ಹಂತ ಹಂತವಾಗಿ ಕಲಿಯಬೇಕಾಗುತ್ತದೆ.

ಇಂಗ್ಲಿಷ್ ಭಾಷೆಯ ಉಪಾಂಗಗಳು ಯಾವುವೆಂದರೆ: ಅರ್ಥವೇದ್ಯ (ಸೆನ್ಸ್), ಪ್ಯಾರ, ವಾಕ್ಯಗಳು, ವಾಕ್ಯಾಂಗ (ಕ್ಲಾಸ್), ವಾಕ್ಯಭಾಗ (ಫ್ರೇಜ್), ಪದಗಳು (ವರ್ಡ್ಸ್), ಚಿಹ್ನೆಗಳು (ಸಿಂಬಲ್ಸ್), ಶಬ್ದಗಳು. ಇವುಗಳಲ್ಲದೆ ಸಂರಚನೆಗಳು, ಕಾಗುಣಿತ, ಕೈಬರಹ, ಶಬ್ದಭಂಡಾರ, ವ್ಯಾಕರಣ ಇತ್ಯಾದಿ.

ನಾಡಭಾಷೆ, ರಿಜಿಸ್ಟರ್ ಮುಂತಾದವುಗಳು ಭಾಷೆಯಲ್ಲಿ ತಮ್ಮದೇ ಆದ ಪ್ರಾಮುಖ್ಯತೆಯನ್ನು ವಹಿಸುತ್ತವೆ. ನಾಡಭಾಷೆಯು ಕನ್ನಡವೇ ಆಗಲಿ, ಇಂಗ್ಲಿಷ್ ಆಗಲಿ ಒಂದೊಂದು ಪ್ರದೇಶದಲ್ಲಿ ಆ ಭಾಷೆಯನ್ನು ಮಾತನಾಡುವ ರೀತಿಯಲ್ಲಿ ವ್ಯತ್ಯಾಸಗಳಿರುತ್ತವೆ. ಇಂಗ್ಲಿಷ್ ಮಾತನಾಡುವ ರೀತಿಯು ಇಂಗ್ಲೆಂಡ್, ಅಮೇರಿಕ, ಸ್ಕಾಟ್‌ಲೆಂಡ್, ಯಾರ್ಕ್‌ಶೈರ್‌ಗಳಲ್ಲಿ ಭಿನ್ನತೆಯಿಂದ ಕೂಡಿರುತ್ತದೆ. ಹೀಗಾಗಿ ಅದು ನಾಡಭಾಷೆ ಎನಿಸಿಕೊಳ್ಳುತ್ತದೆ.

ರಿಜಿಸ್ಟರ್ ಎಂದರೆ ಒಂದೇ ವ್ಯವಸ್ಥೆಯಲ್ಲಿ ಕೆಲಸ ಮಾಡುವವರು ಸಾಮಾನ್ಯವಾಗಿ ಉಪಯೋಗಿಸುವ ಪದಗಳು. ಉದಾ: ಶಾಲೆಗಳಲ್ಲಿ – ತರಗತಿ, ಶಿಕ್ಷಕರು, ವಿದ್ಯಾರ್ಥಿಗಳು, ಪಾಠ, ವೇಳಾಪಟ್ಟಿ, ಹಾಜರಾತಿ ಮುಂತಾದ ಪದಗಳ ಬಳಕೆ ಸಾಮಾನ್ಯ. ಅವುಗಳನ್ನು ರಿಜಿಸ್ಟರ್ ಎನ್ನುತ್ತಾರೆ. ಹಾಗೇ ಆಸ್ಪತ್ರೆಗಳಲ್ಲಿ – ಡಾಕ್ಟರ್, ಔಷಧಿ, ಆಪರೇಶನ್, ನರ್ಸ್ ಮುಂತಾದವು ಅಲ್ಲಿನ ರಿಜಿಸ್ಟರ್.

ಎಲ್ಲಾ ಭಾಷೆಗಳಂತೆ ಇಂಗ್ಲಿಷ್ ಭಾಷೆಯಲ್ಲೂ ಪಾಠ, ಪದ್ಯ, ವ್ಯಾಕರಣ, ಪ್ರಬಂಧ ರಚನೆ, ವ್ಯವಹಾರದ ಇಂಗ್ಲಿಷ್ ಮುಂತಾದ ಪ್ರಕಾರಗಳು ಇವೆ. ಇವುಗಳನ್ನು ಶಾಲೆಗಳಲ್ಲಿ ಮಕ್ಕಳಿಗೆ ಕಲಿಸಲು ಅವುಗಳದೇ ಆದ ವಿಧಾನಗಳಿವೆ.

ಇಂಗ್ಲಿಷ್ ಪಾಠವನ್ನು ಬೋಧಿಸುವವರು ಅದನ್ನು ಬೋಧಿಸುವ ಮುಖ್ಯ ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳಬೇಕು. ಮೊದಲನೆಯದಾಗಿ, ಮಕ್ಕಳಿಗೆ ಇಂಗ್ಲಿಷನ್ನು ಸ್ಪಷ್ಟವಾಗಿ, ನಿರರ್ಗಳವಾಗಿ, ಸರಿಯಾದ ಏರಿಳಿತಗಳೊಂದಿಗೆ ಓದುವ ಅಭ್ಯಾಸವನ್ನು ಮಾಡಿಸುವುದು. ಎರಡನೆಯದಾಗಿ, ಮಕ್ಕಳ ಪದ ಸಂಪತ್ತನ್ನು ಅಭಿವೃದ್ಧಿ ಪಡಿಸುವುದು. ಮೂರನೆಯದಾಗಿ, ಮಕ್ಕಳು ತಾವು ಓದಿದ ಭಾಗದ ಅರ್ಥವನ್ನು ಗ್ರಹಿಸುವುದು. ನಾಲ್ಕನೆಯದಾಗಿ, ಮಕ್ಕಳು ಓದುವುದನ್ನು ಇಷ್ಟಪಡುವಂತೆ ಮಾಡುವುದು ಮತ್ತು ಅವರ ಊಹಾಶಕ್ತಿ/ಚಿಂತನಾಶಕ್ತಿಯನ್ನು ಅಭಿವೃದ್ಧಿ ಗೊಳಿಸುವುದು, ಮನಸ್ಸಿನಲ್ಲೇ ಓದಿಕೊಂಡು ಅರ್ಥವನ್ನು ಗ್ರಹಿಸುವುದು. ಕೊನೆಯದಾಗಿ, ಓದಿದ್ದನ್ನು ಬಾಯಿಯಲ್ಲಿ ಹೇಳುವುದು ಮತ್ತು ಬರೆಯುವುದು ಇಂಗ್ಲಿಷ್ ಬೋಧನೆಯ ಮುಖ್ಯ ಉದ್ದೇಶಗಳು.

ಇಂಗ್ಲಿಷ್ ಶಿಕ್ಷಕರು ತಾವು ಬೋಧಿಸಬೇಕಾದ ಇಂಗ್ಲಿಷ್ ಪಾಠಕ್ಕೆ ಒಂದು ಪಾಠಯೋಜನೆಯನ್ನು ತಯಾರಿಸಿ ಕೊಳ್ಳಬೇಕು. ಈ ಪಾಠಯೋಜನೆಯು ಮೇಲೆ ಹೇಳಿದ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ಶಿಕ್ಷಕರಿಗೆ ಸಹಾಯಕವಾಗುವಂತಿರಬೇಕು. ಪಾಠವು ಅರ್ಥವಾಗುವಂತೆ ಮಾಡಲು ಅಗತ್ಯವಾದ ಮತ್ತು ಸರಳವಾದ ಬೋಧನಾ ಉಪಕರಣಗಳನ್ನು ತಯಾರಿಸಿಕೊಳ್ಳಬೇಕು.

ಪಾಠಕ್ಕೆ ಪೀಠಿಕಾ ರೂಪದಲ್ಲಿ ಮಕ್ಕಳ ಪೂರ್ವ ಜ್ಞಾನವನ್ನು ಪರೀಕ್ಷಿಸಿ, ಎಂದರೆ ಅವರಿಗೆ ಭಾಷಾಜ್ಞಾನ ಎಷ್ಟಿದೆ? ಈಗಾಗಲೇ ಅವರಿಗೆ ತಿಳಿದಿರುವ ವಿಷಯವೆಷ್ಟು? ಎಂಬುವುಗಳನ್ನು ಪರೀಕ್ಷಿಸಿ, ಅದರ ಆಧಾರದ ಮೇಲೆ ತಾವು ಬೋಧಿಸಬೇಕಾದ ಪಾಠವನ್ನು ಮಾಡಬೇಕು. ಪಾಠ ಪ್ರಾರಂಭಿಸುವ ಮೊದಲು ಯಾವ ಪಾಠವನ್ನು ಮಾಡುತ್ತಿದ್ದೇನೆ ಎಂಬುದನ್ನು ವಿದ್ಯಾರ್ಥಿಗಳಿಗೆ ಶಿಕ್ಷಕರು ಸ್ಪಷ್ಟಪಡಿಸಬೇಕು. ಇದಕ್ಕೆ ಗುರಿ ನಿರೂಪಣೆ ಎನ್ನುತ್ತಾರೆ. ಇದರಿಂದ ಮಕ್ಕಳಿಗೆ ತಾವು ಏನನ್ನು ಕಲಿಯುತ್ತಿದ್ದೇವೆ ಎನ್ನುವುದು ಮನದಟ್ಟಾಗುತ್ತದೆ.

ಶಿಕ್ಷಕರು ಯಾವ ಪಾಠ ಅಥವಾ ಪದ್ಯ ಅಥವಾ ನಾಟಕ ಮುಂತಾದುವನ್ನು ಮಾಡುತ್ತಾರೆ ಎಂಬುದರ ಮೇಲೆ ಅವುಗಳನ್ನು ಬೋಧಿಸುವ ಗುರಿ ಮತ್ತು ಉದ್ದೇಶಗಳು ಬೇರೆಯಾಗಿರುತ್ತವೆ. ಭಾಷಾ ಬೋಧನೆಯ ಗುರಿಯನ್ನು ಸಾಮಾನ್ಯ ಗುರಿ ಮತ್ತು ಉದ್ದೇಶ ಎಂದರೆ, ಅದರಲ್ಲಿ ಪಾಠ ಇತ್ಯಾದಿಗಳನ್ನು ಮಾಡುವುದರ ಗುರಿ ಮತ್ತು ಉದ್ದೇಶಗಳು ನಿರ್ದಿಷ್ಟ ಗುರಿ ಮತ್ತು ಉದ್ದೇಶಗಳೆನಿಸಿಕೊಳ್ಳುತ್ತವೆ. ಉದಾ: ಬೋಧಿಸುವ ಪಾಠವು ಒಂದು ಸಣ್ಣ ಕಥೆಯಾದರೆ – ಆ ಕಥೆಯ ವಿಷಯದ ಬಗ್ಗೆ ಜ್ಞಾನವನ್ನು ಉಂಟುಮಾಡುವುದು, ಮಕ್ಕಳಿಗೆ ಕಥೆಯ ನೀತಿಯನ್ನು ತಿಳಿಯಪಡಿಸುವುದು, ಅವರ ಊಹಾಶಕ್ತಿಯನ್ನು ಅಭಿವೃದ್ಧಿ ಪಡಿಸುವುದು, ಬರಹಗಾರನ ಬರಹದ

Digitised by Bharatavani, CIIL

ರೀತಿಯನ್ನು ತಿಳಿಸಿ ಅರ್ಥ ಮಾಡಿಕೊಳ್ಳುವಂತೆ ಮಾಡುವುದು ಅದರ ಬೋಧನೆಯ ಗುರಿ ಮತ್ತು ಉದ್ದೇಶಗಳಾಗಿರುತ್ತವೆ.

**ಪಾಠಯೋಜನೆಯನ್ನು ತಯಾರಿಸುವುದು:** ಶಿಕ್ಷಕನು ತಾನು ಬೋಧಿಸಬೇಕಾದ ಪಾಠದ ಯೋಜನೆಯೊಂದನ್ನು ತಯಾರಿಸಿಕೊಳ್ಳ ಬೇಕಾಗುತ್ತದೆ. ಹಾಗೆ ಯೋಜನೆಯನ್ನು ತಯಾರಿಸುವಾಗ ಅವನು ಗಮನ ಕೊಡಬೇಕಾದ ಮುಖ್ಯ ಅಂಶಗಳು ಹೀಗಿವೆ:

- **ಕಲಿಕಾಉಪಕರಣಗಳು:** ಮಕ್ಕಳಿಗೆ ಬೋಧಿಸಲಾಗುವ ಪಾಠವು ಸರಿಯಾಗಿ ಮತ್ತು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಹಾಗೂ ಶಿಕ್ಷಕರಿಗೆ ಸುಲಭವಾಗಿ ಬೋಧಿಸಲು ಕಲಿಕೋಪಕರಣಗಳು ಸಹಾಯ ಮಾಡುತ್ತವೆ. ಶಿಕ್ಷಕರು ಯಾವ ಪಾಠಕ್ಕೆ ಯಾವ ಕಲಿಕೋಪಕರಣ ಸೂಕ್ತವಾದುದೆಂಬುದನ್ನು ಯೋಚಿಸಿ ತೀರ್ಮಾನಿಸಬೇಕು. ಅವುಗಳಿಗಾಗಿ ಉಪಯೋಗಿಸುವ ಅಕ್ಷರಗಳು, ಪದಗಳು, ಚಿತ್ರಗಳು ಸರಿಯಾಗಿ ಸ್ಪಷ್ಟವಾಗಿ ತರಗತಿಯ ಎಲ್ಲ ಮಕ್ಕಳಿಗೂ ಕಾಣುವಂತಿರಬೇಕು.

- **ಮಕ್ಕಳ ಪೂರ್ವ ಜ್ಞಾನದ ಪರೀಕ್ಷೆ:** ಭಾಷಾ ಬೋಧನೆಯಲ್ಲಿ ಎಲ್ಲ ವಿಷಯಗಳ ಬೋಧನೆಯಂತೆ ಶಿಕ್ಷಕರು ಮಕ್ಕಳು ಈಗಾಗಲೇ ಏನನ್ನು ಕಲಿತಿದ್ದಾರೆ ಎಂಬುದನ್ನು ಕಂಡುಹಿಡಿದು ಅದರ ಆಧಾರದಮೇಲೆ ಮುಂದಿನ ಪಾಠವನ್ನು ಬೋಧಿಸಬೇಕು. ಇದಕ್ಕಾಗಿ ಶಿಕ್ಷಕರು ತಮ್ಮ ಪಾಠಯೋಜನೆಯ ಪೀಠಿಕಾ ವಿಭಾಗದಲ್ಲಿ ಹಲವು ಪ್ರಶ್ನೆಗಳನ್ನು ತಯಾರಿಸಿಕೊಳ್ಳಬೇಕಾಗುತ್ತದೆ. ಅದೇ ಪೀಠಿಕೆಯು ತಾವು ಮಾಡಬೇಕಾದ ಪಾಠದ ತಳಪಾಯವನ್ನು ಹಾಕಲೂ ಉಪಯೋಗವಾಗುವಂತೆ ಅವರು ರಚಿಸಿಕೊಳ್ಳಬೇಕಾಗುತ್ತದೆ. ಹೀಗೆ ಮಕ್ಕಳ ಪೂರ್ವ ತಿಳುವಳಿಕೆಯು ಹೊಸ ತಿಳುವಳಿಕೆಗೆ ಸಹಾಯಕವಾಗುತ್ತದೆ.

- **ಗುರಿ ನಿರೂಪಣೆ:** ಶಿಕ್ಷಕರು ತಮ್ಮ ಭಾಷಾಬೋಧನೆಯ ಪಾಠದ ಗುರಿಯನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ನಿರೂಪಿಸಬೇಕಾಗುತ್ತದೆ. ಇದು ವಿದ್ಯಾರ್ಥಿಗಳನ್ನು ಪಾಠಕ್ಕೆ ಮಾನಸಿಕವಾಗಿ ಸಿದ್ಧಪಡಿಸಲು ಅಗತ್ಯವಾದದ್ದು. ಈ ನಿರೂಪಣೆಯು ಆದಷ್ಟು ಸಣ್ಣದಾಗಿ ಮತ್ತು ಸರಳವಾಗಿ ಹಾಗೂ ಸ್ಪಷ್ಟವಾಗಿ ಇರಬೇಕು.

- **ಪಾಠದ ಬೆಳವಣಿಗೆ:** ಇದು ಮುಖ್ಯವಾದ ಕೆಲಸ. ಇದನ್ನು ಶಿಕ್ಷಕನು ಮಕ್ಕಳ ಸಹಾಯದಿಂದ ಮಾಡಬೇಕಾಗುತ್ತದೆ. ಭಾಷೆಯ ವಿವಿಧ ರೀತಿಯ ಪ್ರಯೋಗಗಳು, ಹೊಸ ಪದಗಳು ಮುಂತಾದವುಗಳನ್ನು ಮಕ್ಕಳ ಮನಸ್ಸಿಗೆ ಹಿಡಿಸುವಂತೆ, ಅರ್ಥವಾಗುವಂತೆ ಮಾಡಲು ಪ್ರಯತ್ನಿಸಬೇಕಾಗುತ್ತದೆ. ಇದಕ್ಕಾಗಿ ಶಿಕ್ಷಕನು ಹಲವು ಹಂತಗಳಲ್ಲಿ ಪಾಠ ಬೋಧನೆಯನ್ನು ಕೈಗೊಳ್ಳಬೇಕಾಗುತ್ತದೆ. ಅವುಗಳೆಂದರೆ:

1) **ಶಿಕ್ಷಕರ ಮಾದರಿ ಪಾಠ ಓದುವಿಕೆ:** ಪಾಠವನ್ನು ಸ್ಪಷ್ಟವಾಗಿ, ಸರಿಯಾದ ಉಚ್ಚಾರಣೆಯಿಂದ, ಧ್ವನಿಯ ಏರಿಳಿತಗಳಿಂದ ಶಿಕ್ಷಕರು ಮಕ್ಕಳಿಗೆ ಓದಿ ತೋರಿಸಬೇಕು. ನಂತರ ಮಕ್ಕಳು ಓದುವಂತೆ ಮಾಡಿ ಅವರನ್ನು ತಿದ್ದಬೇಕು.

2) **ಉಚ್ಚಾರಣೆಯನ್ನು ತಿದ್ದುವುದು:** ಮಕ್ಕಳ ಓದುವಿಕೆಯಲ್ಲಿ ಕಂಡುಬರುವ ನ್ಯೂನತೆಗಳನ್ನು ತಿದ್ದುವುದು ಶಿಕ್ಷಕರ ಕರ್ತವ್ಯ. ಅವರ ಉಚ್ಚಾರಣೆಗಳನ್ನು ತಿದ್ದಲು ಅವರಿಂದ ಪದೇ ಪದೇ ಅದೇ ಪದಗಳನ್ನು ಉಚ್ಚರಿಸುವಂತೆ ಮಾಡಿ ಅವರಿಗೆ ಸರಿಯಾದ ಉಚ್ಚಾರಣೆಯನ್ನು ಕಲಿಸಬೇಕು.

3) **ಬಿಡಿಸಿ ಹೇಳುವುದು ಮತ್ತು ವಿವರಿಸುವುದು:** ಪಾಠವನ್ನು ಓದಿದ ನಂತರ ಹಲವು ಕ್ಲಿಷ್ಟವಾದ ಪದಗಳ ಅರ್ಥವನ್ನು ಹೇಳಿಕೊಡಬೇಕಾಗುತ್ತದೆ. ಅದಕ್ಕಾಗಿ ಹಲವು ರೀತಿಯ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅವುಗಳೆಂದರೆ–

(ಎ) ವಾಕ್ಯಗಳಲ್ಲಿ ಪದಗಳನ್ನು ಉಪಯೋಗಿಸಿ ಅವುಗಳ ಅರ್ಥವನ್ನು ತಿಳಿಸುವುದು

(ಬಿ) ಪದಗಳ ಮೂಲಪದವನ್ನು ತಿಳಿಸಿ ಅವುಗಳು ಹೇಗೆ ಉದ್ಭವವಾದವು ಎಂಬುದನ್ನು ವಿವರಿಸುವುದು

(ಸಿ) ಚಿತ್ರಗಳ ಸಹಾಯದಿಂದ ಅಥವಾ ನಟನೆ ಮೂಲಕ ಪದಗಳ ಅರ್ಥವನ್ನು ತಿಳಿಸಿ ಮನದಟ್ಟು ಮಾಡುವುದು

(ಡಿ) ಪದಗಳ ಅರ್ಥವನ್ನು ಮಾತೃಭಾಷೆಯಲ್ಲಿ ವಿವರಿಸುವುದು

(ಇ) ಪದಗಳಿಗೆ ಇತರ ಸಮಾನ ಪದಗಳ ಮೂಲಕ ಹಾಗೂ ಅವುಗಳ ವಿರುದ್ಧ ಪದಗಳ ಮೂಲಕ ಅರ್ಥ ವಾಗುವಂತೆ ಮಾಡುವುದು

(ಎಫ್) ಪದಗಳ ಅರ್ಥವನ್ನು ಶಿಕ್ಷಕರು ಹಿಂದಿನ ಕೆಲವು ಉದಾಹರಣೆಗಳ ಮೂಲಕ ಅಥವಾ ಪ್ರಸ್ತುತ ಸಮಾಜದಲ್ಲಿನ ಸಂಸ್ಕೃತಿಯ ಉದಾಹರಣೆಗಳನ್ನು ಕೊಡುವುದರ ಮೂಲಕ ತಿಳಿಸಬಹುದು

(ಜಿ) ಶಿಕ್ಷಕರು ಇತರ ವಿದ್ಯಾರ್ಥಿಗಳ ಸಹಾಯದಿಂದ ಪ್ರಾತ್ಯಕ್ಷಿಕೆಗಳನ್ನು ಸೃಷ್ಟಿಸಿ ಹಲವು ಪದಗಳ ಅರ್ಥವನ್ನು ತಿಳಿಸಬಹುದು

(ಎಚ್) ಹಾವಭಾವಗಳ ಮೂಲಕ ಶಿಕ್ಷಕರು ಹಲವು ಪದಗಳ ಅರ್ಥವನ್ನು ಮನದಟ್ಟು ಮಾಡಬಹುದು

- **ಮಕ್ಕಳು ಮನಸ್ಸಿನಲ್ಲೇ ಓದುವಂತೆ ಅಭ್ಯಾಸ ಮಾಡಿಸುವುದು:** ಭಾಷೆಯನ್ನು ಸಂಪೂರ್ಣವಾಗಿ ಮನದಟ್ಟು ಮಾಡಿ ಕೊಳ್ಳಲು ಪಾಠವನ್ನು ಮನಸ್ಸಿನಲ್ಲೇ ಓದಿಕೊಳ್ಳುವುದು ಅತ್ಯಂತ ಪರಿಣಾಮಕಾರಿ. ಭಾಷೆಯ ಅನೇಕ ಅಂಶಗಳು ಮತ್ತು ಕೌಶಲಗಳು ಎಂದರೆ – ಪದಸಂಪತ್ತು, ಕಾಗುಣಿತ, ಉಚ್ಚಾರಣೆ, ಅರ್ಥೈಸಿಕೊಳ್ಳುವುದು, ವಾಕ್ಯದ ಸಂರಚನೆ ಮುಂತಾದವು ಗಳನ್ನು ಕರಗತ ಮಾಡಿಕೊಳ್ಳಲು ಮಕ್ಕಳಿಗೆ ಮನಸ್ಸಿನಲ್ಲೇ ಓದಿಕೊಳ್ಳುವುದು ಸಹಾಯ ಮಾಡುತ್ತದೆ. ಮಕ್ಕಳಿಗೆ ಇದರಿಂದ ವಾಕ್ಯಗಳು ನೆನಪಿನಲ್ಲುಳಿದು ಅವುಗಳನ್ನು ಪುನಃ ಉಪಯೋಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಇಂಗ್ಲಿಷ್ ಭಾಷಾ ಬೋಧನೆಯಲ್ಲಿ ಓದಿದ ಭಾಗದಲ್ಲಿನ ಪದಗಳ ಅರ್ಥವನ್ನು ತಿಳಿಸಿದ ನಂತರ ಮನಸ್ಸಿನಲ್ಲಿ ಓದಿಕೊಳ್ಳುವುದು ಅತ್ಯಂತ ಉಪಯುಕ್ತವಾದದ್ದು.

Digitised by Bharatavani, CIIL

- **ಗ್ರಹಣ ಶಕ್ತಿಯನ್ನು ಪರೀಕ್ಷಿಸಲು ಪ್ರಶ್ನೆಗಳು:** ಮಕ್ಕಳು ನಿಶ್ಯಬ್ದವಾಗಿ ಓದಿ ಮುಗಿಸಿದ ನಂತರ ಶಿಕ್ಷಕರು ಮಕ್ಕಳ ಗ್ರಹಣ ಶಕ್ತಿಯನ್ನು ಪರೀಕ್ಷಿಸಲು, ಅವರು ಎಷ್ಟು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು, ಹಲವು ಪ್ರಶ್ನೆಗಳನ್ನು ಹಾಕಿ ಉತ್ತರವನ್ನು ಪಡೆಯುತ್ತಾರೆ. ಆ ಪ್ರಶ್ನೆಗಳನ್ನು ಕೇಳುವ ಉದ್ದೇಶಗಳೆಂದರೆ:

ಅ) ಪದಗಳ, ಪದಗುಚ್ಛಗಳ, ನುಡಿಗಟ್ಟುಗಳ (Idioms) ಅರ್ಥವನ್ನು ಅವರಿಂದ ಹೇಳಿಸಿ ತರಗತಿಗೆ ಅರ್ಥ ಮಾಡಿವುಸುವುದು

ಆ) ಓದಿದ ಪಾಠವನ್ನು ಎಷ್ಟರ ಮಟ್ಟಿಗೆ ಮಕ್ಕಳು ಅರ್ಥಮಾಡಿಕೊಂಡಿದ್ದಾರೆ ಎಂದು ತಿಳಿದುಕೊಳ್ಳುವುದು

ಇ) ಮಕ್ಕಳು ಅರ್ಥಮಾಡಿಕೊಂಡದ್ದನ್ನು ಹೇಳುವುದರ ಮೂಲಕ ಅವರಿಗೆ ಹೇಗೆ ಹೇಳಬೇಕೆಂಬುದನ್ನು ಕಲಿಸಲು

ಈ) ಆ ಪಾಠದ ಮೂಲಕ ಭಾಷೆಯ ಕಲಿಕೆಗೆ ಮುಖ್ಯವಾದ ಕೌಶಲಗಳನ್ನು ಕಲಿಸಲು

ಉ) ಆ ಪಾಠದಲ್ಲಿ ಬರುವ ವಿಷಯವನ್ನೂ ಪಾತ್ರಗಳನ್ನೂ ಅರ್ಥಮಾಡಿಸಲು

- **ಪುನರ್ ಪ್ರಶ್ನೆಗಳು ಮತ್ತು ಕಪ್ಪು ಹಲಗೆ ಸಾರಾಂಶ:** ಕೊನೆಯಲ್ಲಿ ಶಿಕ್ಷಕರು ಮೊದಲು ಕೇಳಿದ ಪ್ರಶ್ನೆಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಪುನಃ ಕೇಳಿ ಮಕ್ಕಳಿಂದ ಉತ್ತರವನ್ನು ಪಡೆಯುತ್ತಾರೆ. ಅವುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವುದರ ಮೂಲಕ ಪೂರ್ತಿ ಪಾಠದ ಸಾರಾಂಶವನ್ನು ಅಲ್ಲಿ ತರುತ್ತಾರೆ. ಅದನ್ನು ಮಕ್ಕಳಿಂದ ಓದಿಸುವುದರಿಂದ ಅವರಿಗೆ ಮತ್ತೊಮ್ಮೆ ಸಾರಾಂಶವನ್ನು ಮನದಟ್ಟು ಮಾಡುತ್ತಾರೆ ಮತ್ತು ಓದುವ ಕೌಶಲವನ್ನು ಬೆಳೆಸುತ್ತಾರೆ.

- **ಕಪ್ಪು ಹಲಗೆ ಕೆಲಸ:** ತರಗತಿಗಳಲ್ಲಿ ಪಾಠ ಮಾಡುವಾಗ ಅಗತ್ಯಕ್ಕೆ ತಕ್ಕಂತೆ ಕಪ್ಪು ಹಲಗೆಯ ಮೇಲೆ ಅನೇಕ ಪದಗಳನ್ನು, ವಾಕ್ಯಗಳನ್ನು, ಚಿತ್ರಗಳನ್ನು ಬರೆಯುವುದು ನಿರಂತರವಾಗಿ ನಡೆಯುತ್ತಿರುತ್ತದೆ. ಕೊನೆಯಲ್ಲಿ ಮೇಲೆ ಹೇಳಿದಂತೆ ಕಪ್ಪು ಹಲಗೆಯ ಮೇಲೆ ಸಾರಾಂಶವನ್ನು ಬರೆಯುವುದು ಮುಖ್ಯವಾದುದು. ಅದು ಪಾಠದ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.

- **ಮನೆ ಕೆಲಸ:** ಪಾಠದ ಕೊನೆಯಲ್ಲಿ ಮಕ್ಕಳಿಗೆ ಮಾಡಿದ ಪಾಠಕ್ಕೆ ಸಂಬಂಧಪಟ್ಟ ಎರಡು ಅಥವಾ ಮೂರು ಪ್ರಶ್ನೆಗಳನ್ನು ಕೊಟ್ಟು ಉತ್ತರ ಬರೆದುಕೊಂಡು ಬರುವಂತೆ ಸೂಚಿಸಲಾಗುತ್ತದೆ. ಇದರಿಂದ ಶಾಲೆಯಲ್ಲಿ ಮಾಡಿದ ಪಾಠವನ್ನು ಮಕ್ಕಳು ಮನೆಯಲ್ಲಿ ಮತ್ತೊಮ್ಮೆ ಓದಿ ಉತ್ತರ ಬರೆಯಬೇಕಾಗುತ್ತದೆ. ಇದರಿಂದ ಅವರಿಗೆ ಪಾಠ ಚೆನ್ನಾಗಿ ಮನದಟ್ಟಾಗುತ್ತದೆ.

**ವ್ಯಾಕರಣ ಬೋಧನೆ:** ಇಂಗ್ಲಿಷ್ ಭಾಷಾ ಬೋಧನೆಯಲ್ಲಿ ವ್ಯಾಕರಣವನ್ನು ಬೋಧಿಸುವುದು ಒಂದು ಚರ್ಚಾಸ್ಪದ ವಿಷಯವಾಗಿದೆ. ಹಿಂದಿಗಿಂತ ಇಂದು ವ್ಯಾಕರಣದ ಬೋಧನೆಯ ಬಗೆಗಿನ ಆಲೋಚನೆಯು ಬೇರೆಯೇ ಆಗಿದೆ. ಇಂದು ಔಪಚಾರಿಕ ರೀತಿಯಲ್ಲಿ ವ್ಯಾಕರಣವನ್ನು ಬೋಧಿಸುವುದಕ್ಕೆ ವಿರೋಧವಿದೆ. ಅದನ್ನು ಪಾಠ ಮಾಡುವಾಗ ಸಂದರ್ಭಕ್ಕೆ ಅನುಗುಣವಾಗಿ ಹೇಳಿಕೊಡಬೇಕೇ ವಿನಃ ಅದನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಬೋಧಿಸುವುದರಿಂದ ಏನೂ ಪ್ರಯೋಜನವಿಲ್ಲ, ಅದು ಕೇವಲ ಸಮಯವನ್ನು ವ್ಯರ್ಥವಾಗಿ ಕಳೆದಂತಾಗುತ್ತದೆ ಎಂದು ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ದಿನನಿತ್ಯ ಶಾಲೆಗಳಲ್ಲಿ ಇಂಗ್ಲಿಷ್ ಪಾಠ ಮಾಡುವವರ ಅಭಿಪ್ರಾಯವೂ ಇದೇ ಆಗಿದೆ.

**ಪದ್ಯ ಬೋಧನೆ:** ಪಠ್ಯದಲ್ಲಿ ಬರುವ ಪದ್ಯಗಳನ್ನು ಸ್ಪಷ್ಟವಾಗಿ ಅರ್ಥಬದ್ಧ ನಿಲುಗಡೆಯೊಂದಿಗೆ ಲಯಬದ್ಧವಾಗಿ ಶಿಕ್ಷಕರು ಓದಬೇಕು. ವಿದ್ಯಾರ್ಥಿಗಳು ಅನುಸರಿಸಬೇಕು, ಪದ್ಯದಲ್ಲಿ ಕವಿಯ ಸಂದೇಶ ಗುರುತಿಸಬೇಕು ಕವನದಲ್ಲಿ ಬಳಕೆಯಾಗಿರುವ ಶಬ್ದಚಿತ್ರ, ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ಗುರುತಿಸುವಂತೆ ಪ್ರಶ್ನಿಸಬೇಕು, ಸಾಧ್ಯವಿದ್ದಲ್ಲಿ ಕನ್ನಡದಲ್ಲಿ ಸಮಾನ ಭಾವನದ ವಸ್ತು ಕುರಿತ ಪದ್ಯಗಳನ್ನು ತಿಳಿಸಿ ಹೋಲಿಸಲು ಕೇಳಬಹುದು, ಮಕ್ಕಳೇ ಪದ್ಯದ ತಾತ್ಪರ್ಯ ಬರೆಯುವಂತೆ ಮಾರ್ಗದರ್ಶನ ಮಾಡಬೇಕು.

ಇಂಗ್ಲಿಷ್ ಭಾಷಾ ಬೋಧನೆಯಲ್ಲಿ ಅತಿ ಮುಖ್ಯವಾದದ್ದು ಆ ಭಾಷೆಯ ಮುಖ್ಯವಾದ ಕೌಶಲಗಳನ್ನು ಕಲಿಸುವುದು. ಆ ಕೌಶಲಗಳೆಂದರೆ, ಆಲಿಸುವುದು (ಕೇಳಿಸಿಕೊಳ್ಳುವುದು, ಗ್ರಹಿಸುವುದು), ಮಾತನಾಡುವುದು, ಓದುವುದು ಮತ್ತು ಬರೆಯುವುದು.

ಇಂಗ್ಲಿಷ್ ಮಾತುಗಳನ್ನು ಅಥವಾ ಓದಿದ ಇಂಗ್ಲಿಷ್ ಪಾಠಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದನ್ನು ಮಕ್ಕಳು ಮೊದಲು ಕಲಿಯಬೇಕು. ಮಾತುಗಳನ್ನು ಅರ್ಥಮಾಡಿಕೊಳ್ಳಲು ಶಬ್ದಗಳ ಏರಿಳಿತಗಳನ್ನೂ, ಉಚ್ಚಾರಣೆಗಳನ್ನೂ ಅರ್ಥಮಾಡಿಕೊಂಡು ಕಲಿಯುವುದು, ವಾಕ್ಯಗಳಲ್ಲಿನ ಚಿಹ್ನೆಗಳ ಅರ್ಥವನ್ನು ಗ್ರಹಿಸುವುದು, ಇಂಗ್ಲಿಷ್ ಭಾಷೆಯ ಶಬ್ದಗಳಿಗೂ, ಮಾತೃಭಾಷೆಯ ಶಬ್ದಗಳಿಗೂ ಇರುವ ವ್ಯತ್ಯಾಸವನ್ನು ಗ್ರಹಿಸುವುದು ಮುಖ್ಯವಾದುದು. ಇವುಗಳನ್ನು ಮಕ್ಕಳಿಗೆ ಕಲಿಸಲು ಶಿಕ್ಷಕರು ಹಲವು ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಉದಾ: ಪಾಠಗಳನ್ನು ಸ್ಪಷ್ಟವಾಗಿ, ನಿಧಾನವಾಗಿ ಓದಿ ತಿಳಿಸುವುದು, ರೇಡಿಯೋ, ಟಿ.ವಿ ಮುಂತಾದವುಗಳಲ್ಲಿ ಇಂಗ್ಲಿಷ್ ಮಾತುಗಳನ್ನು ಕೇಳಿಸಿಕೊಂಡು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು, ಶಾಲೆಗಳಲ್ಲಿ ಇಂಗ್ಲಿಷ್ ನಾಟಕ, ಚರ್ಚಾ ಸ್ಪರ್ಧೆ ಮುಂತಾದವುಗಳ ಮೂಲಕ ಇಂಗ್ಲಿಷನ್ನು ಆಲಿಸಿ ಅರ್ಥಮಾಡಿಕೊಳ್ಳುವುದನ್ನು ಕಲಿಸಬಹುದು.

ಎರಡನೆಯ ಕೌಶಲ ಮಾತನಾಡುವುದು. ಇದಕ್ಕೆ ಶಿಕ್ಷಕರು ಮಾತನಾಡಲು ಅಗತ್ಯವಾದ ಉಸಿರು, ತುಟಿಯ ಚಲನೆ, ಹಲ್ಲು ಮತ್ತು ನಾಲಿಗೆ ಅದಕ್ಕೆ ಹೇಗೆ ಸಹಾಯಕ ಎಂಬ ಅನೇಕ ವಿಷಯಗಳನ್ನು ತಿಳಿದುಕೊಂಡು, ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಮಾಡಿ, ಅವರನ್ನು ತಿದ್ದಿ ಸರಿಪಡಿಸಬೇಕಾಗುತ್ತದೆ.

Digitised by Bharatavani, CIIL

ಮೂರನೆಯದು ಓದುವ ಕೌಶಲ. ಇದು ಪ್ರತಿಯೊಬ್ಬರ ಜೀವನದಲ್ಲೂ ಅತ್ಯಂತ ಮುಖ್ಯವಾದುದು. ಲಾರ್ಡ್ ಬೇಕನ್‌ರವರು ಹೇಳುವಂತೆ ಓದುವುದರಿಂದ ವ್ಯಕ್ತಿಯು ಪರಿಪೂರ್ಣತೆಯನ್ನು ಪಡೆಯುತ್ತಾನೆ. ಅದು ಅವನು ಸ್ವತಃ ಓದಿಕೊಂಡು ಜ್ಞಾನವನ್ನು ಸಂಪಾದಿಸಲು ಸಹಾಯಕ. ಅರ್ಥೈಸಿಕೊಳ್ಳಲು ಓದುವುದು, ನಿರರ್ಗಳವಾಗಿ ಓದುವುದು, ಓದಿದ್ದನ್ನು ಅದರ ಅರ್ಥಕ್ಕನುಗುಣವಾಗಿ ವಿಂಗಡಿಸಿ ಸಾರವನ್ನು ಗ್ರಹಿಸುವುದು, ಓದಿನ ಕೌಶಲ. ಇದಕ್ಕಾಗಿ ಮಕ್ಕಳಿಗೆ ಮನಸ್ಸಿನಲ್ಲೇ ಓದಿ ಅರ್ಥೈಸಿಕೊಳ್ಳುವ ಅಭ್ಯಾಸವಾಗಬೇಕು. ಈ ಅಭ್ಯಾಸವನ್ನು ಮಕ್ಕಳಿಗೆ ಮಾಡಿಸಲು ಶಿಕ್ಷಕರು ಹಲವು ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಅವುಗಳಲ್ಲಿ ಅಕ್ಷರಮಾಲೆ ವಿಧಾನ, ಪದ ವಿಧಾನ, ನುಡಿಗಟ್ಟು ವಿಧಾನ, ವಾಕ್ಯ ವಿಧಾನ, ಕಥೆ ವಿಧಾನ ಮುಂತಾದವುಗಳು. ಮೊದಲು ಶಿಕ್ಷಕರು ತಾವೇ ಓದಿ ಆ ಮಾದರಿಯನ್ನು ವಿದ್ಯಾರ್ಥಿಗಳು ಅನುಕರಿಸುವಂತೆ ಮಾಡಬೇಕು.

ನಾಲ್ಕನೆಯದು ಬರೆಯುವ ಕೌಶಲ. ಮನುಷ್ಯನು ತನ್ನ ಅನಿಸಿಕೆಗಳನ್ನು ಶಾಶ್ವತವಾಗಿರುವಂತೆ ಮಾಡಲು ಬರೆಯುವ ಕಲೆಯನ್ನು ರೂಢಿಸಿಕೊಂಡನು. ಮೊದಲು ಚಿತ್ರ ಲಿಪಿ ರೂಢಿಯಲ್ಲಿತ್ತು. ಆದರೆ ಅದನ್ನು ಅರ್ಥ ಮಾಡಿಕೊಳ್ಳುವುದೂ ಕಷ್ಟ, ಕಲಿಯುವುದೂ ಕಷ್ಟ ಎಂಬ ಕಾರಣದಿಂದ ಆ ಲಿಪಿಯನ್ನು ಕೈಬಿಡಲಾಯಿತು. ಮನುಷ್ಯನ ಬುದ್ಧಿ ಸಾಮರ್ಥ್ಯಗಳು ಬೆಳೆದಂತೆ ಅವನು ವಿವಿಧ ಶಬ್ದಗಳ ಚಿಹ್ನೆಗಳನ್ನು ಸೃಷ್ಟಿಸಿದ. ಅವುಗಳೇ ಅಕ್ಷರಗಳು.

ಬರೆಯುವ ಕೌಶಲವು ಕಡೆಯದಾದರೂ ಅದೊಂದು ಅತಿ ಮುಖ್ಯವಾದ ಕೌಶಲ. ಬರೆಯುವುದು ಎಂದರೆ ಕೈಬರಹವು ಸುಂದರವಾಗಿರಬೇಕು ಎಂಬುದು ಎಲ್ಲರ ಬಯಕೆ. ಹಾಗೆ ಸುಂದರವಾದ ಬರಹ ಎನಿಸಿಕೊಳ್ಳಲು ಅದಕ್ಕೆ ಇರಬೇಕಾದ ಮುಖ್ಯವಾದ ಗುಣಗಳೆಂದರೆ:

- ಅದು ಓದುವಂತಿರಬೇಕು, ಎಂದರೆ ಅಕ್ಷರಗಳು ಸ್ಫುಟವಾಗಿರಬೇಕು.
- ಬರೆಯುವ ವೇಗ ಸರಿಯಾಗಿರಬೇಕು.
- ಉತ್ತಮ ಕೈಬರಹ ಎಂದರೆ ಅದನ್ನು ವೇಗವಾಗಿ ಬರೆದಿದ್ದರೂ ಸ್ಫುಟವಾಗಿ, ಓದಲು ಅನುಕೂಲಕರವಾಗಿರಬೇಕು.
- ಅದು ನೋಡಲು ಆಕರ್ಷಕವಾಗಿರಬೇಕು. ಅಕ್ಷರಗಳ ಗಾತ್ರ ಒಂದೇ ಸಮನಾಗಿದ್ದು, ಸ್ಫುಟವಾಗಿದ್ದರೆ ಮತ್ತು ಪಂಕ್ತಿಗಳು ನೇರವಾಗಿ ಸಮಾನಾಂತರವಾಗಿದ್ದರೆ ನೋಡಲು ಆಕರ್ಷಕವಾಗಿರುತ್ತದೆ.

ಮಕ್ಕಳಿಗೆ ಅಕ್ಷರ ಬರೆಯುವುದನ್ನು ಕಲಿಸಲು ಅವರಿಗೆ ತರಬೇತಿಯ ಅವಶ್ಯಕತೆ ಇರುತ್ತದೆ. ಅವರ ಕೈ ಬೆರಳುಗಳ ಚಲನೆ ಹೇಗಿರಬೇಕೆಂಬುದನ್ನು ಕಲಿಸಬೇಕು. ಎಫ್.ಜೆ.ಫ್ರೆಂಚ್ ಎನ್ನುವವರು ತಮ್ಮ 'ಟೀಚಿಂಗ್ ಆಫ್ ಇಂಗ್ಲಿಷ್ ಅಬ್ರಾಡ್' ಎನ್ನುವ ಪುಸ್ತಕದಲ್ಲಿ ಕೈ ಬೆರಳುಗಳ ಚಲನೆಗೆ ಹೇಗೆ ತರಬೇತನ್ನು ಕೊಡಬೇಕು ಎಂಬುದನ್ನು ವಿವರಿಸಿದ್ದಾರೆ. ಮೊದಲು ಗೆರೆಗಳನ್ನು ಎಳೆಸುವುದು, ನಂತರ ವಕ್ರ ರೇಖೆಗಳನ್ನು ಬರೆಸುವುದು, ನಂತರ ವೃತ್ತಗಳನ್ನು ರಚಿಸುವುದು, ಹೀಗೆ ಅಕ್ಷರಗಳನ್ನು ಬರೆಯಲು ಬೇಕಾದ ಕೌಶಲಗಳನ್ನು ಕಲಿಸಬಹುದು.

–ಡಾ. ರಾಘವೇಂದ್ರರಾವ್ ಎಚ್.ಎಸ್.

# ಉ

## ಉನ್ನತ ಶಿಕ್ಷಣದಲ್ಲಿ ಪರೋಕ್ಷ ಕಲಿಕೆ

ಭಾರತವೂ ಸೇರಿದಂತೆ ಪರೋಕ್ಷ ಕಲಿಕೆ (Virtual Learning) ವಿಶ್ವದ ಎಲ್ಲೆಡೆಯೂ ಒಂದಲ್ಲ ಒಂದು ರೂಪದಲ್ಲಿ ಕೆಲವು ಕಾಲದಿಂದ ಅಸ್ತಿತ್ವದಲ್ಲಿರುತ್ತಾ ಬಂದಿದೆ. ಈಗ ಪರೋಕ್ಷ ಶಿಕ್ಷಣ ಎಲ್ಲೆಡೆಯೂ ಪ್ರಚಾರಕ್ಕೆ ಬರುತ್ತಿದೆ. ಅಂತರ್ಜಾಲದಲ್ಲಿ ನೋಡಿದಾಗ ಆನ್‌ಲೈನ್ ತರಗತಿಗಳು ನಿಯಮಿತ ಕಾಲೇಜು ಅಥವಾ ವಿಶ್ವವಿದ್ಯಾಲಯಗಳ ಕಾರ್ಯಕ್ರಮಗಳಿಗಿಂತ ಅಗ್ಗವಾಗಿರುವುದು ಕಂಡುಬರುವುದು.

ಶಿಕ್ಷಣ ಪರೋಕ್ಷವಾಗುವಷ್ಟು ಮಟ್ಟಿಗೆ ಅಂತರ್ಜಾಲ ಮತ್ತು ಇನ್ನಿತರ ವಿಶ್ವಮಾಹಿತಿ ಮೂಲಭೂತ ಸೌಕರ್ಯಗಳನ್ನು ಉನ್ನತ ಶಿಕ್ಷಣಕ್ಕೆ ಸವಾಲನ್ನು ಒಡ್ಡುವುವು. ಅಂಥ ನವೀನ ಆಚರಣೆಯ ನಿಜವಾದ ವೆಚ್ಚ ಮತ್ತು ಮೌಲ್ಯ ಹಾಗೂ ಅದು ಎಷ್ಟರ ಮಟ್ಟಿಗೆ ಶಿಕ್ಷಣದ ಪಾಲುದಾರರಿಗೆ (ಉದಾ: ವಿದ್ಯಾರ್ಥಿಗಳ ಪೋಷಕರು) ಸರಿಹೊಂದುವುದು ಎನ್ನುವುದರ ಬಗ್ಗೆ ವಿಶ್ವದಾದ್ಯಂತ ಚರ್ಚಿಸಲಾಗುತ್ತಿದೆ.

ಕಳೆದ 12 ವರ್ಷಗಳಿಂದ ಆನ್‌ಲೈನ್ ವಿಶ್ವವಿದ್ಯಾನಿಲಯಗಳು ಸಾಕಷ್ಟು ಆಸಕ್ತಿಯನ್ನು ಮೂಡಿಸುತ್ತಿವೆ ಹಾಗೂ ಪ್ರಾಮುಖ್ಯವನ್ನು ಪಡೆಯುತ್ತಿವೆ. ವಿದ್ಯಾರ್ಥಿಗಳು ಪರಸ್ಪರ ಸಂಪರ್ಕಿಸುವ, ಅಧ್ಯಯನ ಕೈಗೊಳ್ಳುವ ಮತ್ತು ಪರಸ್ಪರ ಒಟ್ಟಾಗಿ ವಿಭಿನ್ನ ಸ್ಥಳಗಳ ಅಧ್ಯಾಪಕರೊಡಗೂಡಿ ಕೆಲಸ ಮಾಡುವ "ಪರೋಕ್ಷ ಆವರಣ" (Virtual campus)ದ ಸಾಧ್ಯತೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸವಾಲುಗಳನ್ನು ಹಾಗೂ ಅವಕಾಶಗಳನ್ನು ಒದಗಿಸುತ್ತದೆ.

ಪರೋಕ್ಷ ಆವರಣವನ್ನು ಸಾಕಾರಗೊಳಿಸಿ ಅದು ಕಾರ್ಯೋನ್ಮುಖವಾಗಬೇಕಾದರೆ ಕನಿಷ್ಠ–ಮಟ್ಟದ ಆಡಳಿತಾತ್ಮಕ ಬೆಂಬಲ, ಕಾರ್ಯನೀತಿಗಳ ಯೋಜನೆ, ತಾಂತ್ರಿಕ ಪರಿಹಾರಗಳು, ಶಿಕ್ಷಕ ಮತ್ತು ವಿದ್ಯಾರ್ಥಿ ಪ್ರೇರಣೆ, ಶೈಕ್ಷಣಿಕ ದರ್ಶನ (Vision) ಮತ್ತು ಆನ್‌ಲೈನ್ ಅಂತರ್ವಸ್ತುಗಳು (Content) ಅವಶ್ಯಕವಾಗುತ್ತವೆ. ಇದಕ್ಕೂ ಮಿಗಿಲಾಗಿ ವಿಶ್ವವಿದ್ಯಾನಿಲಯಗಳಿಗೆ ಹಾಗೂ ರಾಷ್ಟ್ರಗಳಿಗೆ ತಮ್ಮ ಇ–ಕಲಿಕಾ ಕಾರ್ಯನೀತಿಗಳನ್ನು ವಿಶ್ವವಿದ್ಯಾನಿಲಯಗಳಲ್ಲಿ ಅನುಷ್ಠಾಪಿಸಲು ಹಲವಾರು ಮಾರ್ಗಗಳಿವೆ.

Digitised by Bharatavani, CIIL

ಶಿಕ್ಷಣವನ್ನು ಒದಗಿಸಲು ನವ ಆಸಕ್ತರಿಗೆ ಮತ್ತು ಕಲಿಕೆಯ ವಿವಿಧ ರೂಪಗಳಿಗೆ ಸಾರ್ವಜನಿಕ ಶಿಕ್ಷಣವನ್ನು ಕೊಂಡೊಯ್ಯಬೇಕಾದರೆ ಗುಣಾತ್ಮಕತೆ ಮತ್ತು ಶೈಕ್ಷಣಿಕ ಪ್ರಾಮಾಣಿಕತೆ– ಇವೆರಡೂ ಮೂಲಭೂತ ಸವಾಲುಗಳಾಗಿ ಪರಿಣಮಿಸುತ್ತವೆ. ಪರೋಕ್ಷ ಶಿಕ್ಷಣ ಪರಿಣಾಮಕಾರಿತ್ವ ಮತ್ತು ವಿದ್ಯಾರ್ಥಿ ಫಲಿತಾಂಶಗಳನ್ನು ಕೇಂದ್ರಬಿಂದುವಾಗಿಟ್ಟುಕೊಳ್ಳುವ ಹೊಸ ಉಪಕ್ರಮವನ್ನು ಬಳಸಲು ನಮಗೆ ಅವಕಾಶವನ್ನೀಯುತ್ತದೆ.

ಅಧ್ಯಾಪಕ ಮತ್ತು ವಿದ್ಯಾರ್ಥಿ ಕಾಲ ಅಥವಾ ದೇಶಗಳಿಂದ ಅಥವಾ ಇವೆರಡರಿಂದ ಬೇರ್ಪಟ್ಟಿದ್ದು ಅಧ್ಯಾಪಕರು ಕಾರ್ಯನಿರ್ವಹಣಾ ಅನ್ವಯಿಕತೆಗಳು, ಬಹುಮಾಧ್ಯಮ ಸಂಪನ್ಮೂಲಗಳು, ಅಂತರ್ಜಾಲ, ಮತ್ತು ದೂರಸಮಾಲೋಚನೆ (ವೀಡಿಯೋ ಕಾನ್‌ಫರೆನ್ಸಿಂಗ್) ಮುಂತಾದ ವಿಧಾನಗಳ ಬಳಕೆಯ ಮುಖಾಂತರ ಕಾರ್ಯಕ್ರಮದ ಅಂತರ್ವಸ್ತುವನ್ನು ಒದಗಿಸುವಂತಹ ಕಲಿಕಾ ಪರಿಸರದಲ್ಲಿ ಬೋಧಿಸುವುದಕ್ಕೆ ಪರೋಕ್ಷ ಕಲಿಕೆ ಎನ್ನುವರು. ಇವೇ ತಂತ್ರಜ್ಞಾನಗಳ ಮೂಲಕ ವಿದ್ಯಾರ್ಥಿಗಳು ಅಂತರ್ವಸ್ತುವನ್ನು ಪಡೆಯುತ್ತಾರೆ ಮತ್ತು ಅಧ್ಯಾಪಕರನ್ನು ಸಂಪರ್ಕಿಸುತ್ತಾರೆ.

ಪರೋಕ್ಷ ಶಿಕ್ಷಣವೆಂಬುದು ಅಂತರ್ಜಾಲವನ್ನು ಉಪಯೋಗಿಸಿ ನೀಡಲಾಗುವ ಆನ್‌ಲೈನ್ ಶಿಕ್ಷಣವನ್ನು ಪರಿಭಾಷಿಸುವ ಒಂದು ಪದ. ಸೈಬರ್‌ಶಾಲೆಗಳೆಂದು ಕರೆಯಲಾಗುವ K-12 ಶಾಲಾ ಶಿಕ್ಷಣವನ್ನು ಕುರಿತಂತೆ ಹಾಗೂ ಪರೋಕ್ಷ ವಿಶ್ವವಿದ್ಯಾನಿಲಯಗಳನ್ನು ಸಂಸ್ಥಾಪಿಸಲಾಗಿರುವ ಉನ್ನತ ಶಿಕ್ಷಣವನ್ನು ಕುರಿತಂತೆ ಈ ಪದವನ್ನು ಬಳಸಲಾಗುತ್ತದೆ. ಸಮಕಾಲಿಕ ಅಥವಾ ಭಿನ್ನ ಕಾಲಿಕ ಸ್ವರೂಪದ ಎಲ್ಲಾ ಕಾರ್ಯಕ್ರಮಗಳು ಅಥವಾ ಕಡೇಪಕ್ಷ ಕಾರ್ಯಕ್ರಮದ ಬಹಳಷ್ಟು ಭಾಗಗಳು ಪರೋಕ್ಷ ಕಾರ್ಯಕ್ರಮಗಳಾಗಿರುವಂಥ ಅಧ್ಯಯನ ಕಾರ್ಯಕ್ರಮವನ್ನು ಪರೋಕ್ಷ ಕಾರ್ಯಕ್ರಮವೆಂದು ಕರೆಯುವರು.

ಆನ್‌ಲೈನ್ ಕಾರ್ಯಕ್ರಮಕ್ಕೆ ಪರ್ಯಾಯವಾಚಿಯಾದ ಪರೋಕ್ಷ ಕಾರ್ಯಕ್ರಮವು ಅಂತರ್ಜಾಲದ ಮುಖಾಂತರ ನಡೆಸಲಾಗುವ ಕಾರ್ಯಕ್ರಮ. ಇಂಥ ಕಾರ್ಯಕ್ರಮವನ್ನು ತರಗತಿಯಲ್ಲಿ ಮುಖಾಮುಖಿಯಾಗಿ ನಡೆಸದೆ ತರಗತಿಯ ಬೋಧನೆಯೊಂದಿಗೆ ಹೊಂದಿಸಿಕೊಳ್ಳಬಹುದಾದ ಬದಲಿ ವಿಧಾನದ ಮುಖಾಂತರ ನಡೆಸಲಾಗುವ ಪರೋಕ್ಷ ಕಲಿಕೆಯ ವಾಸ್ತವಿಕತೆಯನ್ನು ಸೂಚಿಸಲು ಪರೋಕ್ಷ (Virtual) ಎಂಬ ಪದವನ್ನು ಬಳಸಲಾಗಿದೆ. ಅಂದರೆ, ವಿದ್ಯಾರ್ಥಿಗಳು ಕಲಿಯಲು ನಿಜವಾದ ತರಗತಿಗೆ ಹೋಗಬೇಕಾಗಿಲ್ಲ.

ಸಮಕಾಲಿಕ ಮತ್ತು ಭಿನ್ನಕಾಲಿಕ ವಿಧಾನಗಳೆರಡೂ ಸ್ವಯಂಪ್ರೇರಣೆ, ಶಿಸ್ತು ಮತ್ತು ಪ್ರಭಾವಿ ಲಿಖಿತ ಸಂಪರ್ಕದ ಸಾಮರ್ಥ್ಯಗಳನ್ನು ಬಹುವಾಗಿ ಅವಲಂಬಿಸಿವೆ.

ದೂರಶಿಕ್ಷಣಕ್ಕೆ ದೀರ್ಘ ಹಾಗೂ ವೈವಿಧ್ಯಮಯ ಇತಿಹಾಸವಿದೆ ಯಾದರೂ ಸಮುದಾಯ–ಕೇಂದ್ರಿತ ಅನ್ಯೋನ್ಯ ಕ್ರಿಯೆಯೊಂದಿಗಿನ ಸಮಕಾಲೀಕ (Realtime) ಸಂಪರ್ಕವನ್ನು ಸಾಧಿಸಲು ಈಗ ಉಪಯೋಗಿಸಲಾಗುತ್ತಿರುವ ತಂತ್ರಜ್ಞಾನ ಹಾಗೂ ಬೆಳವಣಿಗೆಗಳ ಹೆಚ್ಚಿದ ಸ್ವೀಕೃತಿ ಮತ್ತು ವಿಶಾಲ ಸಂಸ್ಕೃತಿಯಲ್ಲಿ ಅವುಗಳ ಬಳಕೆ ಪರೋಕ್ಷ ಶಾಲೆಗಳನ್ನು ಮಹತ್ವಪೂರ್ಣ ನವೀನ ಆಚರಣೆಗಳಿಗೆ ಮತ್ತು ಜವಾಬ್ದಾರಿಗಳಿಗೆ ತೆರೆದಿರಿಸಿವೆ. ಇದು ಕುಟುಂಬಗಳ ಮತ್ತು ವಿದ್ಯಾರ್ಥಿಗಳ ಶಾಲೆಯ ಆಯ್ಕೆಗೆ ಮೌಲ್ಯವನ್ನು ನೀಡುವ ಶೈಕ್ಷಣಿಕ ವಾತಾವರಣವಾಗಿದೆ.

**ಪರೋಕ್ಷ ಶಿಕ್ಷಣಕ್ಕಾಗಿ ಬೋಧನಾ ಮಾರ್ಗಗಳು:**

ಹಲವು ಪರೋಕ್ಷ ಅಧ್ಯಯನ ಕಾರ್ಯಕ್ರಮಗಳು ಪವರ್‌ಪಾಯಿಂಟ್(Power point) ತಂತ್ರಗಳನ್ನು ಬಳಸುವ ಪ್ರಮುಖವಾಗಿ ಪಠ್ಯಾಧಾರಿತ ಕಾರ್ಯಕ್ರಮಗಳಾಗಿವೆ. ಶೈಕ್ಷಣಿಕ ಅನುಭವವನ್ನು ವ್ಯಕ್ತಿಗತವನ್ನಾಗಿಸುವ ಯಾವುದೇ ಪ್ರಯತ್ನ ಮುಖ್ಯವಾದುದು. ಏಕೆಂದರೆ ವಿದ್ಯಾರ್ಥಿಗಳು ವೈಯಕ್ತಿಕ ಗಮನಕ್ಕೆ ಮತ್ತು ಹಿಂಮಾಹಿತಿಗೆ ಸ್ಪಂದಿಸುತ್ತಾರೆ. ಇಂದು ಈ ಕೆಳಗಿನವುಗಳು ಒಳಗೊಂಡಂತೆ ವಿಶಾಲವಾದ ಬೋಧನಾ ಮಾರ್ಗಗಳು ಲಭ್ಯವಿವೆ:

**ಪರೋಕ್ಷ ತರಗತಿ:** ಸಮಕಾಲೀನ ವಾಚಿಕ ಅನ್ಯೋನ್ಯ ಕ್ರಿಯೆ, ಬಿಳಿ ಹಲಗೆ ಹಂಚಿಕೊಳ್ಳುವುದು ಮತ್ತು ಸವಿರಾಮ ಪತ್ರಗಳು (Breakout sessions) ಇತ್ಯಾದಿಗಳಿಂದ ವಿದ್ಯಾರ್ಥಿಯ ಕಲಿಕಾ ಅನುಭವವನ್ನು ಸಾಧ್ಯವಾಗಿಸುವ ನೇರ ಅಧ್ಯಾಪಕ ಬೋಧನೆ ಮತ್ತು ತತ್‌ಕ್ಷಣದ ಹಿಂಮಾಹಿತಿ. ಇದು ವಿದ್ಯಾರ್ಥಿಗಳಿಗೆ ಅಧ್ಯಾಪಕರೊಡನೆ ಮತ್ತು ಸಹಪಾಠಿಗಳೊಡನೆ ಮೌಖಿಕವಾಗಿ ಮತ್ತು ಲಿಖಿತರೂಪದಲ್ಲಿ ಸಂಪರ್ಕಿಸಲು ಅವಕಾಶವನ್ನು ಒದಗಿಸುತ್ತದೆ.

**ಪರೋಕ್ಷ ಆಪರೇಟಿಂಗ್ ಕೊಠಡಿ:** ಇದು ವಾಸ್ತವಿಕ ಆಪರೇಟಿಂಗ್ ಕೊಠಡಿಯೊಳಗೆ ಕಾಲಿರಿಸುವ ಮುನ್ನ ಅವರಿಗೆ ಮೂಲಭೂತ ಪರಿಚಯ ವಿಧಾನವನ್ನು ಕಲಿಯಲು ಅವಕಾಶ ಮಾಡಿಕೊಡುತ್ತದೆ.

**ಹೈಪರ್‌ಟೆಕ್ಸ್ಟ್ ಕಾರ್ಯಕ್ರಮಗಳು:** ಇವುಗಳಲ್ಲಿ ಸಾಂಪ್ರದಾಯಿಕ ದೂರಶಿಕ್ಷಣ ಕಾರ್ಯಕ್ರಮದಲ್ಲಿರುವಂತೆಯೇ ರಚನಾತ್ಮಕ ಕಾರ್ಯಕ್ರಮ ಸಾಮಗ್ರಿಯನ್ನು ಬಳಸಲಾಗುತ್ತದೆ. ಆದಾಗ್ಯೂ, ಎಲ್ಲಾ ಸಾಮಗ್ರಿಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಒದಗಿಸುವುದರಿಂದ ಬ್ರೌಸರ್ ಮುಖಾಂತರ ಅದನ್ನು ನೋಡಬಹುದಾಗಿದೆ. ಹೈಪರ್‌ಲಿಂಕ್‌ಗಳು ಪಠ್ಯ, ಬಹುಮಾಧ್ಯಮ ಭಾಗಗಳು ಮತ್ತು ಅಭ್ಯಾಸಗಳು– ಇವುಗಳ ನಡುವೆ ಸಂಪರ್ಕ ಕಲ್ಪಿಸುತ್ತವೆ.

ಅಧ್ಯಾಪಕ ಸಂಭಾಷಿಸುವ ಮುಖಾಮುಖಿ ತರಗತಿಯ ಕಾರ್ಯಕ್ರಮದಂತೆ ವೀಡಿಯೋ ಆಧಾರಿತ ಕಾರ್ಯಕ್ರಮಗಳನ್ನು ಮತ್ತು ಪವರ್ ಪಾಯಿಂಟ್ ಸ್ಲೈಡ್‌ಗಳನ್ನು ಅಥವಾ ಆನ್‌ಲೈನ್ ಉದಾಹರಣೆಗಳನ್ನು ವಿವರಣೆಗಾಗಿ ಬಳಸಲಾಗುತ್ತದೆ. ವೀಡಿಯೋ–ಸ್ಟ್ರೀಮಿಂಗ್ ತಂತ್ರಜ್ಞಾನವನ್ನು ಉಪಯೋಗಿಸಲಾಗುತ್ತದೆ. ವಿದ್ಯಾರ್ಥಿಗಳು 'ಫ್ರೀವೇರ್' ಅಥವಾ 'ಪ್ಲಗ್ ಇನ್' ಮುಖಾಂತರ ವೀಡಿಯೋಗಳನ್ನು ನೋಡುತ್ತಾರೆ.

Digitised by Bharatavani, CIIL

**ಆಡಿಯೋ ಆಧಾರಿತ ಕಾರ್ಯಕ್ರಮಗಳು:** ಇದರಂತೆಯೇ ಇದ್ದು ಚಲಿಸುವ ಚಿತ್ರಗಳ ಬದಲು ಅಧ್ಯಾಪಕನ ಮಾತನ್ನು ಮಾತ್ರ ಒದಗಿಸಲಾಗುತ್ತದೆ. ಕಾರ್ಯಕ್ರಮದ ಪುಟಗಳಲ್ಲಿ (Course pages) ಉಪನ್ಯಾಸದ ಪಠ್ಯವೂ ಸಹ ಗೋಚರಿಸುವಂತೆ ಮಾಡಿರಲಾಗುತ್ತದೆ.

**ಸಜೀವಕರಣ (Animated) ಕಾರ್ಯಕ್ರಮಗಳು:** ಪಠ್ಯ-ಆಧಾರಿತ ಅಥವಾ ಆಡಿಯೋ-ಆಧಾರಿತ ಕಾರ್ಯಕ್ರಮ ಸಾಮಗ್ರಿಗಳನ್ನು ಚಲಚಿತ್ರಗಳಂತೆ ಸಜೀವಗೊಳಿಸಿ ಸಮೃದ್ಧಗೊಳಿಸುವ ಕಾರ್ಯಕ್ರಮಗಳು ಸಾಮಾನ್ಯವಾಗಿ ಅಂತರ್ವಸ್ತು ಮತ್ತು ಅದರ ತೋರ್ಕೆಯನ್ನು ಹೆಚ್ಚು ಆಸಕ್ತಿಕರವನ್ನಾಗಿಸಲು ಇದು ಒಂದು ಒಳ್ಳೆಯ ವಿಧಾನ. ಸಜೀವಕರಣವನ್ನು (ಆನಿಮೇಷನ್) ಮ್ಯಾಕ್ರೊ ಮೀಡಿಯಾ ಫ್ಲಾಷ್ ಅಥವಾ ಅಂತಹುದೆ ತಂತ್ರಜ್ಞಾನವನ್ನು ಬಳಸಿ ಸೃಷ್ಟಿಸಲಾಗುತ್ತದೆ.

**ವೆಬ್ ಬೆಂಬಲಿತ (Web-supported) ಕಾರ್ಯಕ್ರಮಗಳು:** ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಧರಿಸಿವೆ. ವಿದ್ಯಾರ್ಥಿಗಳು ಅಧ್ಯಾಯಗಳನ್ನು ಸ್ವತಃ ಓದಿ ಮನನ ಮಾಡಬಹುದು. ಅಧ್ಯಾಯವಾರು ಪುನರಾವಲೋಕನ ಪ್ರಶ್ನೆಗಳು, ಚರ್ಚೆಯ ಶೀರ್ಷಿಕೆಗಳು, ಅಭ್ಯಾಸಗಳು ಉದಾಹರಣಾ ಅಧ್ಯಯನಗಳು ಇತ್ಯಾದಿಗಳನ್ನು ಆ ವೆಬ್‌ತಾಣದಲ್ಲಿ ಕೊಡಲಾಗುವುದು ಹಾಗೂ ಅಧ್ಯಾಪಕರೊಡನೆ ಚರ್ಚಿಸಲಾಗುವುದು.

**ಸಮಾನಸ್ಕಂಧ ಕಾರ್ಯಕ್ರಮಗಳು–** ಇವು "ಬೇಡಿಕೆ" (on-demand)ಯನ್ನು ಆಧರಿಸಿ ನೀಡಲಾಗುವ ಹಾಗೂ ಸಿದ್ಧಪಡಿಸಿದ ಪಠ್ಯಕ್ರಮರಹಿತ ಕಾರ್ಯಕ್ರಮಗಳು, ಆನ್‌ಲೈನ್ ಶಿಕ್ಷಣ ಕ್ಷೇತ್ರವು 2007ನೆಯ ವರ್ಷದಲ್ಲಿ ಹೊಸ ಆನ್‌ಲೈನ್ ಶಿಕ್ಷಣ ವೇದಿಕೆಯ ಮೂಲಕ ಉದ್ಭವವಾಯಿತು.

**ಸಾಮಾಜಿಕ ಜಾಲಬಂಧ:** ಪರೋಕ್ಷ ತರಗತಿಗಳು ಅಧಿಕ ಸಾಮಾಜಿಕ ಅನ್ಯೋನ್ಯ ಕ್ರಿಯೆಯನ್ನು, ವಿದ್ಯಾರ್ಥಿಕೇಂದ್ರಿತ ಬೋಧನೆಯನ್ನು ಮತ್ತು ಸಮಸ್ಯೆ ಪರಿಹರಿಸಬಲ್ಲ ಪಠ್ಯಕ್ರಮವನ್ನು ಪ್ರೋತ್ಸಾಹಿಸುತ್ತವೆ. ವಿದ್ಯಾರ್ಥಿಗಳು ಬೇರೆ ಬೇರೆ ಪಠ್ಯಕ್ರಮಗಳಿಗೆ ಸಂಬಂಧಿಸಿದ ಚಟುವಟಿಕೆಯತ್ತ ವಾಲುವ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಪರಿಹರಿಸಬಲ್ಲರು. ಅಧ್ಯಾಪಕರು ಮಾರ್ಗದರ್ಶಿಗಳ, ಸಂಪನ್ಮೂಲ ವ್ಯಕ್ತಿಗಳ ಪಾತ್ರ ವಹಿಸುವವರಾದರೂ ಸಹಯೋಗದಿಂದ ವಿಚಾರಗಳನ್ನು ಚರ್ಚಿಸುವುದು, ಪುನರಾವಲೋಕಿಸುವುದು ಮತ್ತು ಪರಿಹಾರಗಳನ್ನು ಸೂಚಿಸುವುದು ವಿದ್ಯಾರ್ಥಿಗಳಿಗೆ ಬಿಟ್ಟಿದ್ದು.

ಪರೋಕ್ಷ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಏಕಮುಖ ವಿಧಾನದಲ್ಲಿ (ಉದಾ: ವಿಡಿಯೋ ಒಂದನ್ನು ಅಧ್ಯಯನ ಮಾಡಿ, ಇಲ್ಲವೇ ಪಠ್ಯಪುಸ್ತಕದ ಅಧ್ಯಾಯವೊಂದನ್ನು ಓದಿ) ಜ್ಞಾನ ಸಂಪಾದಿಸುವರು. ಇದನ್ನು ಭಿನ್ನಕಾಲಿಕ (Asynchronous) ಬೋಧನೆ ಎಂದು ಕರೆಯುವರು. ತದನಂತರ ನಡೆಸಲಾಗುವ ಸಮಸ್ಯೆಗಳ ಚರ್ಚೆ, ಅವುಗಳ ಪರಿಹಾರ, ಉದಾಹರಣಾ ಅಧ್ಯಯನಗಳು ಇತ್ಯಾದಿ ವಿದ್ಯಾರ್ಥಿಗಳಿಗೆ ಈ ಹಿಂದೆ ಕಲಿತದ್ದನ್ನು ಉತ್ತಮ ರೀತಿಯಲ್ಲಿ ಅರ್ಥಮಾಡಿಕೊಳ್ಳುವಲ್ಲಿ ಸಹಾಯ ಮಾಡುತ್ತವೆ. ಈ ಕಲಿಕೆ ವಿದ್ಯಾರ್ಥಿಯ ಗತಿಯಲ್ಲಿ ನಡೆಯುತ್ತದೆ ಹಾಗೂ ಪ್ರತ್ಯಕ್ಷ ಅಧ್ಯಾಪಕನಿಂದ ಕಲಿಸಲಾಗುವುದಿಲ್ಲ. ಭಿನ್ನಕಾಲಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳನ್ನು ಆಧಾರವಾಗಿಟ್ಟುಕೊಂಡರೂ ಹಲವು ವೇಳೆ ಅಧ್ಯಾಪಕರು ಮಾರ್ಗದರ್ಶಕನ ಪಾತ್ರ ವಹಿಸಲು ಅವಶ್ಯಕವಾಗುವರು. ಆದ್ದರಿಂದ, ಕಾರ್ಯಕ್ರಮದ ಪರ್ಯಂತ ಬೇಕಾಗಬಹುದಾದ ಯಾವುದೇ ಸಹಾಯ ನೀಡಲು ಅಧ್ಯಾಪಕ ಸುಗಮಕರ್ತರು (Teacher facilitator) ಲಭ್ಯವಿರುವರು. ಚರ್ಚಾವೇದಿಕೆ ಹಾಗೂ ಇ-ಮೇಲ್ ಮುಖಾಂತರ ಅಧ್ಯಾಪಕ ಸುಗಮಕರ್ತರೊಡನೆ ಸಂಪರ್ಕ ಕಲ್ಪಿಸಬಹುದಾಗಿದೆ. ಇಂತಹ ಸಂಪರ್ಕ ಕೆಲವು ವೇಳೆ ನಿರ್ದಿಷ್ಟ ಶೀರ್ಷಿಕೆಯನ್ನು ಚೆನ್ನಾಗಿ ವಿವರಿಸಲು ಅಥವಾ ಶ್ರೇಣಿಗಳ ತಿದ್ದುಪಡಿ ಮಾಡಲು ಅವಶ್ಯಕವಾಗುವುವು. ಪರೋಕ್ಷ ತರಗತಿಗಳಲ್ಲಿ ಅಥವಾ ಸಮಕಾಲಿಕ ಕಾರ್ಯಕ್ರಮಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳು ಅಂತರ್ವಸ್ತುವನ್ನು ವಾಸ್ತವಿಕ ಬೋಧನೆಯ ಮೂಲಕವೇ ಪಡೆಯುವರು. ಪರೋಕ್ಷ ತರಗತಿಯ ಅಧ್ಯಾಪಕನು ಕಂಪ್ಯೂಟರ್ ತೆರೆಯನ್ನು ಹಲಗೆಯಂತೆ ಉಪಯೋಗಿಸಿ ವೀಡಿಯೋ ಪವರ್‌ಪಾಯಿಂಟ್ ಧ್ವನಿಯ ಹಾಗೂ ಅಧ್ಯಾಪಕರ ಆಡಿಯೋದೊಂದಿಗೆ ಬೋಧಿಸುತ್ತಾನೆ. ಪರೋಕ್ಷ ತರಗತಿಯಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ತರಗತಿಗೆ "ಲಾಗ್‌ಆನ್" ಆಗಿರುವಾಗ (ಸಂಪರ್ಕದಲ್ಲಿರುವಾಗ) ಸಾಂಪ್ರದಾಯಿಕ ತರಗತಿಗಳಲ್ಲಿರುವಂತೆಯೇ ತತ್‌ಕ್ಷಣದ ಅಧ್ಯಾಪಕರಿಂದ ಹಿಂಮಾಹಿತಿ (Feedback) ಮತ್ತು ಭರಿತಗಳಿಗೆ (Input) ಅವಕಾಶವಿರುತ್ತವೆ. ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳೊಡನೆ ನೋಟ್ಸ್, ಪಠ್ಯ ಮತ್ತು ಸಂವೇಗಗಳ(Emoticons)ಮೂಲಕ ಅನ್ಯೋನ್ಯ ಕ್ರಿಯೆ ನಡೆಸಬಹುದು. ಇದರ ಜೊತೆಗೆ ಪರೋಕ್ಷ ಶಿಕ್ಷಕರು ಬಳಸುವ ಹಲವು ವಿಚಾರಗೋಷ್ಠಿ ವೇದಿಕೆಗಳು ತರಗತಿಯ ಸಮಯದಲ್ಲಿ ವಿದ್ಯಾರ್ಥಿಗಳು ಸಣ್ಣ ಗುಂಪಿನಲ್ಲಿ ಕೆಲಸ ಮಾಡಲು ಅವಕಾಶ ನೀಡುತ್ತವೆ. ಪುನಃ ಇಲ್ಲಿಯೂ ಸಹ ಸಾಂಪ್ರದಾಯಿಕ ತರಗತಿಯ ಅನುಭವ ಸಾಧ್ಯವಾಗುವುದನ್ನು ಕಾಣಬಹುದು. ಚರ್ಚಾಗುಂಪುಗಳು, ಚರ್ಚಾಕೊಠಡಿಗಳು, ವಾಯ್ಸ್‌ಮೇಲ್ (ಧ್ವನಿ ಸಂಪರ್ಕ) ಇ-ಮೇಲ್ ಇತ್ಯಾದಿ ಇಲೆಕ್ಟ್ರಾನಿಕ್ ಮಾಧ್ಯಮಗಳನ್ನು ಸಮಕಾಲಿಕ ಹಾಗೂ ಭಿನ್ನಕಾಲಿಕ ಕಾರ್ಯಕ್ರಮಗಳೆರಡರಲ್ಲೂ ಸಂಪರ್ಕಕ್ಕಾಗಿ ಬಳಸುವುದುಂಟು.

ಸಾಧಾರಣವಾಗಿ, ಮನೆಯಲ್ಲಿ ಮಾಡಬೇಕಾದ ನಿಯೋಜಿತ ಕಾರ್ಯವನ್ನು ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಒಪ್ಪಿಸಲಾಗುತ್ತದೆ ಉದಾ: ಇ-ಮೇಲ್ ಜೊತೆಗಿನ ಜೋಡಣೆಯ ರೂಪದಲ್ಲಿ, ಸಹಾಯವು ಬೇಕಾದಾಗ ವಾಸ್ತವಿಕ ವಿಶ್ವವಿದ್ಯಾನಿಲಯದಲ್ಲಿ ಇರುವಂತೆಯೇ ಉಪನ್ಯಾಸಕರು, ಬೋಧಕರು ಅಥವಾ ಸಹಪಾಠಿಗಳು ಅಥವಾ ಸಹಾಯ ವೇದಿಕೆಗಳು ಲಭ್ಯವಿರುತ್ತವೆ. ಎಲ್ಲಾ ಸಂಪರ್ಕವು ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕವೇ ಜರುಗುವುದು ಎಂಬುದೊಂದೇ ಇಲ್ಲಿರುವ ವ್ಯತ್ಯಾಸ.

Digitised by Bharatavani, CIIL

ತರಗತಿಯಲ್ಲಿ ತಂತ್ರಜ್ಞಾನವನ್ನು ಹೆಚ್ಚಾಗಿ ಬಳಸುವಂತೆ ಪರೋಕ್ಷ ಅಧ್ಯಾಪಕರಿಗೆ ಪ್ರೋತ್ಸಾಹಿಸಲಾಗುತ್ತದೆ. ಅವರ ವಿಚಾರಗಳನ್ನು ಮತ್ತು ಪಾಠಯೋಜನೆಗಳನ್ನು ಇತರ ಅಧ್ಯಾಪಕರೊಂದಿಗೆ "ವಿಕಿಸ್, ಬ್ಲಾಗ್, 'ಫೇಸ್‌ಬುಕ್' ಇತ್ಯಾದಿಗಳ ಮುಖಾಂತರ ಪರಸ್ಪರ ವಿನಿಮಯ ಮಾಡಿಕೊಳ್ಳುವಂತೆಯೂ ಅವರನ್ನು ಪ್ರೇರೇಪಿಸಲಾಗುತ್ತದೆ.

ಪರೋಕ್ಷ ತರಗತಿಯಲ್ಲಿ ಸಂಪರ್ಕವು ಸಹಯೋಗದ ಕಲಿಕಾ ಅನುಭವವಾಗಿದೆ. ವಿದ್ಯಾರ್ಥಿಗಳನ್ನು ತಮ್ಮ ಸಹಪಾಠಿಗಳೊಂದಿಗೆ 'ವೆಬ್‌ಕಾನ್‌ಫರೆನ್ಸಿಂಗ್' ತಂತ್ರಜ್ಞಾನದ ಮೂಲಕ ಅನ್ಯೋನ್ಯ ಕ್ರಿಯೆ ನಡೆಸುವಂತೆ ಪ್ರೋತ್ಸಾಹಿಸಲಾಗುತ್ತದೆ. ಪರೋಕ್ಷ ಶಿಕ್ಷಣಕ್ಕೆ ಸಣ್ಣ ಗುಂಪು ಮತ್ತು ಇಡಿ-ಗುಂಪುಗಳ ಸಹಯೋಗವು ಸೂಕ್ತವಾದ ವೇದಿಕೆ ಸಂಪರ್ಕವು ಆ ಕ್ಷಣದಲ್ಲಿ ಸಾಧ್ಯವಾಗುವುದು ಅಂದರೆ ತರಗತಿಯ ಸಮಯದಲ್ಲೇ ಸಾಧ್ಯವಾಗುವುದು. ಸಣ್ಣ ಗುಂಪಿನ ಸಭೆಗೆ 'ಬ್ರೇಕ್‌ಔಟ್' ಕೊಠಡಿ (Break-out Room) ಎಂದು ಕರೆಯುವರು. ಈ ವೇದಿಕೆಯಲ್ಲಿ ಆ ಕ್ಷಣದ, ವಿದ್ಯಾರ್ಥಿಗಳ ನಡುವಣ ಸಾಮಾಜಿಕ ಅನ್ಯೋನ್ಯ ಕ್ರಿಯೆ ಸಾಧ್ಯವಾಗುವುದು. ಪರೋಕ್ಷ ತರಗತಿಯ ಬೋಧಕನಿಂದ ವಿನ್ಯಾಸಗೊಳಿಸಿದ ಕಲಿಕಾ ಗುರಿಯನ್ನು ತಲುಪಲು ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ಕೆಲಸ ಮಾಡುತ್ತಾರೆ. ವೈಯಕ್ತಿಕ ಮೈಕ್ರೋಫೋನ್‌ಗಳು, ಬಿಳಿಹಲಗೆ ಉಪಕರಣಗಳು(ಗುಂಪು-ಹಲಗೆಯಾದಲ್ಲಿ ಬರೆಯಲೂ ಸಹ ಅವಕಾಶವಿದೆ) ಮತ್ತು ಟಿಪ್ಪಣಿಗಳು ವಾಸ್ತವಿಕ "ಬ್ರೇಕ್‌ಔಟ್" ಕೊಠಡಿಗಳಲ್ಲಿ ವಿದ್ಯಾರ್ಥಿಗಳು ಪರಸ್ಪರ ಸಂಪರ್ಕಕ್ಕಾಗಿ ಸೂಚಿಸಲಾದ ಮಾರ್ಗಗಳಾಗಿವೆ. ಪರೋಕ್ಷ ತರಗತಿಯ ಹೊರಗೆ ಬ್ಲಾಗ್, ವಿಕೀಸ್ ಮತ್ತು/ಅಥವಾ ಬಹುಮಾಧ್ಯಮ ಉಪಕರಣಗಳ ಮುಖಾಂತರ ಸಹಯೋಗದ ಸಂಪರ್ಕ ಮಾಡಬಹುದಾಗಿದೆ.

**ಪರೋಕ್ಷ ಆವರಣ:**

ಪ್ರಾಧ್ಯಾಪಕ ಕೇಂದ್ರಿತ ಕಲಿಕಾ ವ್ಯವಸ್ಥೆಯಿಂದ ವಿದ್ಯಾರ್ಥಿ ಕೇಂದ್ರಿತ ಕಲಿಕಾ ವ್ಯವಸ್ಥೆ ಪರಿಕಲ್ಪನಾತ್ಮಕ ಚೌಕಟ್ಟಿನ ಕಡೆಗೆ (Paramalio) ಬದಲಾವಣೆಯಾದದ್ದು ಬೋಧಕ ವೃತ್ತಿಯ ಮೇಲೆ ನಿರ್ದಿಷ್ಟ ಪರಿಣಾಮಗಳನ್ನು ಬೀರಿದೆ. ವಿದ್ಯಾರ್ಥಿಗಳಿಗೆ ಮಾದರಿ ಕಲಿಕಾ ಪರಿಸರವನ್ನು ಆದರ್ಶದಿಂದ ಭಿನ್ನವಾದುದನ್ನು ಎದುರಿಸಲು ಹೊಸ ತಂತ್ರಜ್ಞಾನಗಳನ್ನು ಬಳಸುವುದರ ಮೂಲಕ ಸೃಷ್ಟಿಸಲು ಪುನರ್‌ಬದ್ಧತೆ (Recommitment) ಅಂತಹ ಒಂದು ಪರಿಣಾಮವಾಗಿದೆ. ಬೋಧಕ ಸಿಬ್ಬಂದಿ ತಮ್ಮ ಪಾತ್ರವನ್ನು ಸಾಂಪ್ರದಾಯಿಕ ಪಾತ್ರದಿಂದ ಹೊಸ ಪಾತ್ರಗಳಿಗೆ ಬದಲಾಯಿಸಿಕೊಳ್ಳಬೇಕಲ್ಲದೆ ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕು ಎಂಬುದು ಈ ಬದಲಾವಣೆಯ ಎರಡನೆ ಮುಖ್ಯ ನಿಹಿತಾರ್ಥವಾಗಿದೆ. ಅಧ್ಯಾಪಕ ಪಾತ್ರದಿಂದ ಸುಗಮಕರ್ತನ ಪಾತ್ರಕ್ಕೆ ಏಕಾಏಕಿ ಬದಲಾವಣೆಯಾಗುವುದು ಸಾಧ್ಯವಲ್ಲ ಮತ್ತು ಇಂತಹ ಬದಲಾವಣೆಯ ಜೊತೆಗೆ ವೃತ್ತಿಪರ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಂಶೋಧನಾ ಫಲಿತಾಂಶಗಳನ್ನು ಅಳವಡಿಸಿಕೊಳ್ಳುವ ಸಾಂಸ್ಥಿಕ ಮತ್ತು ವೃತ್ತಿಪರ ಬದ್ಧತೆಯೂ ಇರಬೇಕು.

ಅತ್ಯಾಧುನಿಕ ತಂತ್ರಜ್ಞಾನಗಳನ್ನು (ಕೆಲಸಮಯದಲ್ಲಿ ಹಳತಾಗುವ) ಉಪಯೋಗಿಸಿ ಕೇವಲ ತಾಂತ್ರಿಕ ಪ್ರಶಿಕ್ಷಣ ಕೊಡುವುದಕ್ಕಿಂತ ಹೆಚ್ಚಾಗಿ ವೃತ್ತಿಪರ ವಿಕಾಸ ಚಟುವಟಿಕೆಗಳು ಉತ್ಪಾದಕ ಅನ್ಯೋನ್ಯ ಕ್ರಿಯೆಯ ಮಟ್ಟವನ್ನು ಮತ್ತು ವ್ಯಕ್ತಿಗೆ ಹಾಗೂ ಸಮೂಹಕ್ಕೆ ಪ್ರಸಂಗೋಚಿತವಾದ ಬೌದ್ಧಿಕ ಚಟುವಟಿಕೆಗಳನ್ನು ಅಂತಿಮವಾಗಿ ನಿರ್ಧರಿಸುವಂತಹ ಮಹತ್ವಪೂರ್ಣ ತರಗತಿಯ ಚಟುವಟಿಕೆಗಳತ್ತ ಗಮನವನ್ನು ಕೇಂದ್ರೀಕರಿಸಬೇಕು.(ಬಾರ್ ಮತ್ತು ಟಾಗ್ 1995)

**ತರಗತಿಯ ಕಲಿಕೆ ಯಾವ ರೀತಿಯಲ್ಲಿ ಭಿನ್ನವಾಗಿರುವುದು?**

ಸಾಂಪ್ರದಾಯಿಕ ಹಾಗೂ ಪರೋಕ್ಷ ಕಲಿಕಾ ವಿಧಾನಗಳ ನಡುವೆ ಅನ್ಯೋನ್ಯ ಕ್ರಿಯೆಯ ವಿಧ ಮತ್ತು ವ್ಯಾಪ್ತಿಗೆ ಸಂಬಂಧಿಸಿದಂತೆ ಇರುವ ವ್ಯತ್ಯಾಸ ಬಹುಶಃ ಬಹುಮುಖ್ಯವಾದುದು. ಸಾಂಪ್ರದಾಯಿಕ ತರಗತಿಯಲ್ಲಿ ವಿದ್ಯಾರ್ಥಿ-ಬೋಧಕ ಮತ್ತು ವಿದ್ಯಾರ್ಥಿ-ವಿದ್ಯಾರ್ಥಿ ಪಾತ್ರಕ್ಕೆ ಸಾಧ್ಯತೆ ಅಧಿಕವಾಗಿಯೇ ಇದೆ. ಆದರೆ ಬೋಧಕರು ಬದಲಾವಣೆ ತರಬಲ್ಲ ಈ ಸಾಧ್ಯತೆಯನ್ನು ತೀರ ಅವಲಕ್ಷಿಸಿದ್ದಾರೆ ಮತ್ತು ಉಪನ್ಯಾಸವನ್ನೇ ಬೋಧನೆಯ ವಿಧಾನವನ್ನಾಗಿ ಮುಂದುವರೆಸುತ್ತಿದ್ದಾರೆ. ಮತ್ತೊಂದು ಕಡೆ ಪರೋಕ್ಷ ತರಗತಿಯಲ್ಲಿ ತಂತ್ರಜ್ಞಾನ ಸಹಯೋಗದ ಕಲಿಕೆ ವಿಜಾತೀಯ ಸಮೂಹ, ಸಮಸ್ಯಾ-ಪರಿಹಾರ ಮತ್ತು ಉಪನ್ಯಾಸದ ನಮೂನೆಯನ್ನು ಸುಲಭವಾಗಿಸಬಲ್ಲ ಉನ್ನತ ಶ್ರೇಣಿಯ ಕೌಶಲಗಳು/ ಶೈಕ್ಷಣಿಕ ಪ್ರಕ್ರಿಯೆಗಳು- ಇವೆಲ್ಲವನ್ನು ಸಮರ್ಥಿಸುತ್ತದೆ.

**ಶಿಕ್ಷಣದಲ್ಲಿ ಪರೋಕ್ಷ ಕಲಿಕೆಯ ಪ್ರಾರಂಭಿಕ ಪ್ರಯತ್ನಗಳು:**

ಜೀವನ ಪರ್ಯಂತದ ಕಲಿಕೆ ಯೋಜನೆಗಾಗಿ ಮಾಹಿತಿ-ಸಂವಹನ ತಂತ್ರಜ್ಞಾನದ (Information Communication Technology -ICT) ಬಳಕೆಯನ್ನು ಅನ್ವೇಷಿಸುತ್ತಿದೆ. ಉನ್ನತ ಶಿಕ್ಷಣ (HEXTLEARN) ಎಂಬ ಯೋಜನೆಯನ್ನು 2007ನೇ ಇಸವಿಯಲ್ಲಿ ಜೀವನ ಪರ್ಯಂತ ಕಲಿಕಾ ಕಾರ್ಯಕ್ರಮದ ಅಡಿಯಲ್ಲಿ ಯೂರೋಪಿಯನ್ ಕಮೀಷನ್ ಆಯ್ಕೆ ಮಾಡಿ ನವೆಂಬರ್, 1, 2007 ರಿಂದ ಅಕ್ಟೋಬರ್, 31, 2010ರವರೆಗೆ ಧನಸಹಾಯ ನೀಡಿತು.

ಮೊದಲನೆಯ ಪೀಳಿಗೆಯ ಇ-ಕಲಿಕೆಯ ಉಪಕ್ರಮಗಳು ಮತ್ತು ಪ್ರಯೋಗಗಳ ಗುಣಾತ್ಮಕತೆಯ ಬಗ್ಗೆ ಹಲವು ಸಂಶಯಗಳಿದ್ದರೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ICT) ಉಪಯೋಗವು ಹರಡುತ್ತಲೇ ಇದೆ. ಸಾಮಾನ್ಯವಾಗಿ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳು ತಮ್ಮ ಇ-ಕಲಿಕೆಯ ಸೇವೆಗಳ ಗುಣಮಟ್ಟದ ಬಗ್ಗೆ ಗಮನವೀಯುವುದು ಅತಿ ವಿರಳ. ಇದಕ್ಕೆ ಸಂಬಂಧಿಸಿದಂತೆ ಕಾರ್ಯನೀತಿಯ ದಸ್ತಾವೇಜುಗಳಲ್ಲಿ ಐ.ಸಿ.ಟಿ. ತಂತ್ರಜ್ಞಾನವನ್ನು ಬೋಧನೆ ಮತ್ತು ಕಲಿಕೆಯಲ್ಲಿ ಉನ್ನತ ಸ್ತರದಲ್ಲಿ ಸಮಗ್ರಗೊಳಿಸಬೇಕೆಂಬ ಅಂಶವನ್ನು ಮುಖ್ಯವಾಗಿ ಸೂಚಿಸಿದ್ದರೂ ಯೂರೋಪಿನ ವಿಶ್ವವಿದ್ಯಾನಿಲಯಗಳು ಸಾಂಪ್ರದಾಯಿಕ ಹಾಗೂ ಇ-ಕಲಿಕೆಯ ಸೇವೆಯಲ್ಲಿ ಗುಣಾತ್ಮಕತೆಯಿಂದ ಪ್ರೇರಿತವಾಗಿಲ್ಲವೆಂಬುದು ಅವುಗಳ ದೈನಂದಿನ ಚಟುವಟಿಕೆಗಳಿಂದ

Digitised by Bharatavani, CIIL

ಕಂಡುಬಂದಿತು. ಹೆಕ್ಸ್ಟಲರ್ನ್(HEXTLEARN) ಯೋಜನೆಯು ಐ.ಸಿ.ಟಿ ತಂತ್ರಜ್ಞಾನದ ವಿವಿಧ ಗುರಿಗಳು ಮತ್ತು ಅದರ ಬಳಕೆಯ ವಿಧಾನಗಳಿಗೆ (ಆವರಣದ ವಿದ್ಯಾರ್ಥಿಗಳಿಗೆ ಬೆಂಬಲ, ದೂರಶಿಕ್ಷಣ, ನಿರಂತರ ಶಿಕ್ಷಣ, ಉದ್ಯಮಗಳು ಮತ್ತು ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳಿಗೆ ಸಹಕಾರ ಶಿಕ್ಷಕರ ಪ್ರಶಿಕ್ಷಣ) ಸಂಬಂಧಿಸಿದ ತಮ್ಮ ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲು ಬಯಸುವ ಉನ್ನತ ಶಿಕ್ಷಣ ಸಂಸ್ಥೆಗಳ ಅಂತರರಾಷ್ಟ್ರೀಯ ಸಮುದಾಯವನ್ನು ರಚಿಸಲು ಇಚ್ಛಿಸುತ್ತದೆ.

ಆದ್ದರಿಂದ, ಹೆಕ್ಸ್ಟಲರ್ನ್ (HEXTLEARN) ಜಾಲಬಂಧವು ಐ.ಸಿ.ಟಿ ತಂತ್ರಜ್ಞಾನವನ್ನು ಅನುಕೂಲಕರ ರೀತಿಯಲ್ಲಿ ಸಮಗ್ರಗೊಳಿಸುವತ್ತ ಉನ್ನತ ಶಿಕ್ಷಣ ಸಮುದಾಯದ ಗಮನವನ್ನು ಹೆಚ್ಚು ಸೆಳೆಯಲು ಕೆಳಗಿನವುಗಳ ಮೂಲಕ ಸಾಧಿಸುವ ಗುರಿಯನ್ನು ಹೊಂದಿದೆ

- ಅರಿವು ಮೂಡಿಸುವಿಕೆ ಗುಣಾತ್ಮಕತೆಯ ಭರವಸೆಯ ಅಂಶಗಳಿಗೆ ಬದ್ಧತೆ ಮತ್ತು ಜಾಲಬಂಧದ ನಿರ್ಮಾಣ ಹಾಗೂ ಉನ್ನತ ಶಿಕ್ಷಣದಲ್ಲಿ ಬೋಧನೆ, ಕಲಿಕೆ ಮತ್ತು ನವೀನ ಆಚರಣೆಗಳಲ್ಲಿ ಐ.ಸಿ.ಟಿ.ಯು ಅನುಕೂಲಕರ ಸಮಗ್ರತೆ.
- ಪರಸ್ಪರ ಸಾಮರಸ್ಯ ಮತ್ತು ಗುಣಮಟ್ಟದ ಆಶ್ವಾಸನೆಯ ದಿಶೆಯಲ್ಲಿನ ಸಾಮಾನ್ಯ ಉದ್ದೇಶಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಐಸಿಟಿ ತಂತ್ರಜ್ಞಾನದೊಂದಿಗಿನ ಬೋಧನೆ ಮತ್ತು ಪ್ರಶಿಕ್ಷಣಗಳಲ್ಲಿ ಕಾರ್ಯಪ್ರವೃತ್ತವಾಗಿರುವ ಸಮೂಹದ ನಡುವೆ ಸಾಮಾನ್ಯ ನಾವೀನ್ಯಯುತ ಕಾರ್ಯನೀತಿಗಳಿಗೆ ಪ್ರೋತ್ಸಾಹ ಮತ್ತು ವಿವಿಧ ಜೀವನ ಪರ್ಯಂತದ ಕಲಿಕಾ ಉಪವ್ಯವಸ್ಥೆಗಳಿಗೆ ಗಮನವೀಯುವುದು.
- ಯುರೋಪಿಯನ್ ವಿಶ್ವವಿದ್ಯಾನಿಲಯಗಳ ಸ್ತರದಲ್ಲಿ ಸಮುದಾಯಗಳ ಸ್ಥಾಪನೆಗೆ ಸಹಾಯ ನೀಡಲು ಅನುಸರಿಸಬಹುದಾದ ಪರಿಹಾರಗಳ ಪ್ರಚಾರ ಮಾಡಿ ಜೀವನ ಪರ್ಯಂತದ ಕಲಿಕೆಯ ಕಾರ್ಯನೀತಿಯ ಹಿನ್ನೆಲೆಯಲ್ಲಿ ನಿರ್ಧಾರ ಕೈಗೊಳ್ಳುವವರ ಸಮುದಾಯವನ್ನು ನಿರ್ಮಿಸುವುದು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಐ.ಸಿ.ಟಿ.ಯ ಬಳಕೆಯ ಗುಣಮಟ್ಟದ ಅಭಿವೃದ್ಧಿಗೆ ಸಹಕರಿಸಬಲ್ಲ ತಜ್ಞರ ಸಮುದಾಯದಿಂದ ಉನ್ನತ ಶಿಕ್ಷಣದ ಯುರೋಪಿನ ಸಂಸ್ಥೆಗಳ ಆಧುನೀಕರಣಕ್ಕೆ ಸಮರ್ಥನೆ ದೊರಕುವುದು.

ಹೆಕ್ಸ್ಟಲರ್ನ್ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಐ.ಸಿ.ಟಿ. ಜ್ಞಾನದ ಮೂಲಕ ಜೀವನ ಪರ್ಯಂತದ ಕಲಿಕಾ ಕಾರ್ಯನೀತಿಗಳನ್ನು ಮುಂದಿಡುವಲ್ಲಿ ಕೊಡುಗೆಯನ್ನು ನೀಡುವ ಗುರಿ ಹೊಂದಿದೆ.

ಹೆಚ್ಚಿನ ಅರಿವು, ಗುಣಮಟ್ಟದ ಭರವಸೆ ಮತ್ತು ಜಾಲಬಂಧ ನಿರ್ಮಾಣಗಳಿಗೆ ಬದ್ಧತೆ ಮತ್ತು ಉನ್ನತ ಶಿಕ್ಷಣದಲ್ಲಿ ಬೋಧನೆ, ಕಲಿಕೆ ಮತ್ತು ನವೀನ ಆಚರಣೆಗಳಲ್ಲಿ ಐಸಿಟಿ ಜ್ಞಾನದ ಅನುಕೂಲಕರ ಸಮಗ್ರತೆ– ಇವುಗಳು ಅಲ್ಪಕಾಲೀನ ಪರಿಣಾಮಗಳು ಎಂದು ಕಂಡು ಬಂದಿದ್ದರೆ ಯುರೋಪಿನ ಶೈಕ್ಷಣಿಕ ವ್ಯವಸ್ಥೆಯ ಸುಧಾರಣೆಗೆ ಜಾಲಬಂಧದ (Net Working) ಕೊಡುಗೆ ದೀರ್ಘಕಾಲೀನ ಪರಿಣಾಮವೆಂದು ಕಂಡುಬಂದಿದೆ.

ಈ ಕೆಳಕಂಡ ಸಂಸ್ಥೆಗಳು HEXTLEARN ಯೋಜನೆಯ ಪ್ರಯೋಜನ ಪಡೆದುಕೊಂಡಿದೆ.

- ಸಿಂಟರ್ (SCIENTER) – ಇಟಲಿ
- ಬುಡಾಪೆಸ್ಟ್ ಯುನಿವರ್ಸಿಟಿ ಆಫ್ ಟೆಕ್ನಾಲಜಿ ಆಂಡ್ ಎಕಾನಮಿಕ್ಸ್ (http://www.edu-inno.bme.hu/)
- ಅಕಾಡೆಮಿಕ್ ಕೋಆಪರೇಷನ್ ಅಸೋಸಿಯೇಷನ್ (ACA) (http://www.aca-secretariat.be -Belgium)
- ಯುರೋಪೇಸ್ : vzw - ಬೆಲ್ಜಿಯಂ
- ಯುರೋಪಿಯನ್ ಫೌಂಡೇಷನ್ ಫಾರ್ ಕ್ವಾಲಿಟಿ in ಇ–ಲರ್ನಿಂಗ್ (EFQUEL)–ಬೆಲ್ಜಿಯಂ
- ಯುರೋಪಿಯನ್ ಸ್ಟುಡೆಂಟ್ ಯುನಿಯನ್(ESU) (http://www.esib.org) –ಬೆಲ್ಜಿಯಂ
- ಯುರೋಪಿಯನ್ ಡಿಸ್ಟೆಂಟ್ ಆಂಡ್ ಇ–ಲರ್ನಿಂಗ್ ನೆಟ್‌ವರ್ಕ್(EDEN) – ಯು.ಕೆ
- ಇನ್ಸಿಟಿಟ್ಯೂಟ್ ಫಾರ್ ಇನ್ನೊವೇಷನ್ ಆಂಡ್ ಲರ್ನಿಂಗ್ (FIM- New Learning)( http://www.fim.uni-erlangen.de/de)–ಜರ್ಮನಿ
- ಯುನಿವರ್ಸಿಡಾಡ್ ಡಿ ಗ್ರನಡ (http://www.ugr.es/ugr/index.php)–ಸ್ಪೈಯಿನ್
- ಯುನಿವರ್ಸಿಟಿ "ಪಾಲಿಟೆಕ್ನಿಕಾ" ಆಫ್ ಬುಕಾರೆಸ್ಟ್ (http://www.upp.ro/)–ರೊಮೆನಿಯಾ
- ಸಿಂಟರ್ (SCIENTER) ಎಸ್ಪಾನ–ಸ್ಪೈಯಿನ್

**ಯುನೆಸ್ಕೊ ಪರೋಕ್ಷ ವಿಶ್ವವಿದ್ಯಾನಿಲಯ:**

ಯುನೆಸ್ಕೊ ಪರೋಕ್ಷ ವಿಶ್ವವಿದ್ಯಾನಿಲಯ (UWECO Virtual University) ಹೀಗೆ ಹೇಳುತ್ತದೆ, "ಐಸಿಟಿ ಜ್ಞಾನವನ್ನು ವಿಶ್ವವಿದ್ಯಾನಿಲಯವು ಬಳಸುವುದರಿಂದ ವಿದ್ಯಾರ್ಥಿಗಳಿಗೆ ಅಧಿಕ ನಮ್ಯತೆಯನ್ನು ಒದಗಿಸಿ ಅದೇ ಸಮಯದಲ್ಲಿ ಸಾಮಾನ್ಯ ಪರಿಸ್ಥಿತಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ತಲುಪಲು ಸಾಧ್ಯ. ಆದಾಗ್ಯೂ, ಸಂಸ್ಥೆಗಳು ಹೊಸ ವಿಧಾನದ ಬೋಧನೆ ಮತ್ತು ಕಲಿಕೆಗಾಗಿ ಸೂಕ್ತ ನೀತಿಗಳನ್ನು ವಿಕಸಿಸಿ ಪ್ರಯೋಗಿಸಬೇಕಲ್ಲದೆ ಸರಿಯಾದ ಯೋಜನೆ ಮತ್ತು ಪ್ರಭಾವಿ ನಿರ್ವಹಣೆಯನ್ನು ಕೈಗೊಳ್ಳಬೇಕಾದ ಅವಶ್ಯಕತೆಯಿದೆ".

ಈ ವಿಷಯಕ್ಕೆ ಸಂಬಂಧಿಸಿದಂತೆ ಇ–ಲರ್ನಿಂಗ್ ಯುರೋಪಾ. ಇನ್ಫೊ (E-learningeuropa.info)ನ ಸಂಪಾದಕ ಮಂಡಳಿಯು ಕೆಲವು ಪ್ರಬಂಧಗಳನ್ನು ಸಂಗ್ರಹಿಸಿ ಪ್ರಕಟಿಸಿದೆ.

Digitised by Bharatavani, CIIL

**ಪರೋಕ್ಷ ಕಲಿಕೆಯ ಜಾಲಬಂಧ:**

ತಂತ್ರಜ್ಞಾನದ ಬೆಳವಣಿಗೆಯಿಂದ ಆಗುತ್ತಿರುವ ಉನ್ನತ ಶಿಕ್ಷಣದ ಮೇಲಿನ ವೈವಿಧ್ಯಮಯ ಪ್ರಭಾವವನ್ನು ಮತ್ತು ಶಿಕ್ಷಣದ ವಿಧಾನ ಹಾಗೂ ಅದರ ಪೂರೈಕೆಯ ಇದರ ನಿಹಿತಾರ್ಥಗಳನ್ನು ನಾವು ಅನ್ವೇಷಿಸಬೇಕಾದ ಅಗತ್ಯವಿದೆ. ಶಿಕ್ಷಣವನ್ನು ಸಾಂಪ್ರದಾಯಿಕ ರೀತಿಯಲ್ಲಿ ನೀಡಿರುವ ಸ್ಥಳಗಳ ಮೇಲೆ ಹಾಗೂ ಸಂಸ್ಥೆಗಳ ಮೇಲೆ ಆಗಿರುವ ಪ್ರಭಾವಗಳನ್ನು ನಾವು ಪರೀಕ್ಷಿಸಬಹುದಾಗಿದೆ. ಇದೇ ರೀತಿಯ ವೆಬ್‌ತಾಣವೊಂದನ್ನು ವರ್ಚುಯಲ್ ಲರ್ನಿಂಗ್ ನೆಟ್‌ವರ್ಕ್ ಹೋಮ್‌ಪೇಜ್ (VLNH.com) ನಲ್ಲಿ ಕಾಣಬಹುದು.

ಶಿಕ್ಷಣ ಕ್ಷೇತ್ರದ ಪರಿಧಿಯೊಳಗೆ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ (ICT) ಉದಯವನ್ನು ಭರವಸೆಯನ್ನು ಹೊತ್ತುತಂದ ಅಭಿವೃದ್ಧಿಯೆಂದು ಪರಿಗಣಿಸಲಾಗಿದೆ. ಆದರೆ ಆನ್-ಲೈನ್ ಶಿಕ್ಷಣದ ಪರೋಕ್ಷ ವಿಶ್ವವು ಅಪಾರವಾದದ್ದನ್ನು ನೀಡಲು ಶಕ್ತವಾಗಿರುವಾಗ ಉನ್ನತ ಶಿಕ್ಷಣಕ್ಕೆ ಎಂತಹ ಭವಿಷ್ಯವಿದೆ? ವಯಸ್ಕ ಉನ್ನತ ಶಿಕ್ಷಣದ ಪರೋಕ್ಷತೆಯ ಸಾರಭೂತ ಗುಣಲಕ್ಷಣಗಳನ್ನು ಮತ್ತು ವಯಸ್ಕ ಕಲಿಕಾರ್ಥಿಯ ಶಿಕ್ಷಣವನ್ನು ಪ್ರಭಾವಿಸಬಲ್ಲ ಅದರ ಭವಿಷ್ಯದ ಸಾಧ್ಯತೆಗಳನ್ನು ವಿಮರ್ಶಾತ್ಮಕವಾಗಿ ಕಾಣುತ್ತಾ ಉನ್ನತ ಶಿಕ್ಷಣದಲ್ಲಿ ಪರೋಕ್ಷತೆಯನ್ನು ಪರೀಕ್ಷಿಸುವುದು ಈ ಪ್ರಾಯೋಜನೆಯ ಗುರಿಯಾಗಿದೆ.

**ಪರೋಕ್ಷ ಕಲಿಕಾ ಜಾಲಬಂಧ ಹೋಂಪೇಜ್:**

ಪರೋಕ್ಷ ಕಲಿಕಾ ಜಾಲಬಂಧ ಎಂದರೇನು? ವೀಡಿಯೋ ಕಾನ್‌ಫರೆನ್ಸಿಂಗ್ ಸೌಲಭ್ಯಗಳನ್ನು ಉಪಯೋಗಿಸಿ ಅವುಗಳು ನೀಡುವ ಕಾರ್ಯಕ್ರಮಗಳನ್ನು ಕುರಿತ ಮಾಹಿತಿಯ ವಿನಿಮಯವನ್ನು ಸುಗಮಗೊಳಿಸಲು ಇರುವ ವೆಬ್-ಆಧಾರಿತ ಸೇವೆಯೇ ಪರೋಕ್ಷ ಕಲಿಕಾ ಜಾಲಬಂಧ (Virtual Learning Network, VLN). ಇಂದು ಈ ಸೇವೆಯು ತೃತೀಯ ದರ್ಜೆಯ ಸಂಸ್ಥೆಗಳನ್ನು ಒಳಗೊಳ್ಳುತ್ತದೆಯಲ್ಲದೆ ಪ್ರಾರಂಭಿಕ ಬಾಲ್ಯ ಕೇಂದ್ರಗಳು, ಖಾಸಗಿ ಪ್ರಶಿಕ್ಷಣ ಸ್ಥಾಪನೆಗಳು, ಉದ್ಯಮಗಳು ಮತ್ತು ಇತರ ಸರ್ಕಾರಿ ಏಜೆನ್ಸಿಗಳನ್ನು ಒಳಗೊಳ್ಳಲು ಸಮರ್ಥವಾಗಿರಬೇಕಾಗಿದೆ.

ಪರೋಕ್ಷ ಕಲಿಕಾ ಜಾಲಬಂಧವು ಕೇವಲ ತಾಂತ್ರಿಕ ಸೇವೆಯನ್ನು ಕುರಿತದ್ದಾಗಿಲ್ಲ. ಪೂರ್ಣರೂಪದಲ್ಲಿ ಕಾರ್ಯೋನ್ಮುಖವಾಗಿರುವ ದಳ್ವಾಳಿಸೇವೆ, ಶಿಶುಶಿಕ್ಷಣಕ್ಕೆ ಅವಕಾಶ ಮತ್ತು ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ಮತ್ತು ಬೆಂಬಲ ಮತ್ತು ಸೇವೆಗಳ ಒದಗಿಸುವಿಕೆಗೆ ಸುಸಂಘಟಿತ ಮತ್ತು ಅನುಕೂಲಕರ ಉಪಕ್ರಮದ ಅಭಿವೃದ್ಧಿಗೆ ಕೊಡುಗೆಯನ್ನು ನೀಡುವುದು- ಇವೆಲ್ಲದರ ಮೂಲಕ ಸಾಧಿತವಾಗುವುದರ ದರ್ಶನದ ಸಮಾಜೀಕರಣ ಇಲ್ಲಿ ಅವಶ್ಯವಾಗಿದೆ.

**ಪರೋಕ್ಷ ಕಲಿಕೆಯ ಅನುಕೂಲತೆಗಳು:**

- ಸಾಂಪ್ರದಾಯಿಕ ತರಗತಿಯ ಮಾದರಿಗೆ ಹೋಲಿಸಿದಾಗ ಹಲವರಿಗೆ ಪರೋಕ್ಷ ಕಲಿಕೆ ಉತ್ತಮ ಆಯ್ಕೆಯಾಗಿ ಪರಿಣಮಿಸುತ್ತದೆ. ಸ್ವಯಂ-ಶಿಸ್ತು, ಕಲಿಕೆಯ ಗತಿ ಮತ್ತು ಶೈಲಿ ಹಾಗೂ ವ್ಯಕ್ತಿಯ ಪ್ರೇರಣೆಗಳನ್ನು ಅವಲಂಬಿಸಿ ಆನ್‌ಲೈನ್ ಶಿಕ್ಷಣವನ್ನು ಆಯ್ಕೆ ಮಾಡಿದವರಿಗೆ ಅದು ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಿತವಾದ ಶೈಕ್ಷಣಿಕ ಸಂಸ್ಥೆಯಲ್ಲಿ ತರಗತಿಯ ಕೊಠಡಿಯಲ್ಲಿ ಹಾಜರಾಗುವುದಕ್ಕಿಂತ ಅಧಿಕ ಪರಿಣಾಮಕಾರಿ ಕಲಿಕೆಯ ಅನುಭವವನ್ನು ಸುಲಭವಾಗಿ ಒದಗಿಸಬಲ್ಲದು.
- ಎಲ್ಲಿಂದಲಾದರೂ, ಮನೆಯ ಸೌಲಭ್ಯಗಳನ್ನು ಹೊಂದುತ್ತಲೇ ಪ್ರಯಾಣದ ಹಲವಾರು ಘಂಟೆಗಳನ್ನು ಉಳಿಸಿ ಕಲಿಯಲು ಸಾಧ್ಯವಿದೆ.
- ಪ್ರತಿ ಹಗಲು ಮುಂಜಾನೆಯ ವೇಳೆಯಲ್ಲಿ ತರಗತಿಗೆ ಹಾಜರಾಗಲು ಬೇಸರದ ಹಾಗೂ ಹಲವು ವೇಳೆ ಒತ್ತಡದ ನೂಕುನುಗ್ಗಾಟವನ್ನು ಸಹಿಸುವುದಕ್ಕೆ ಬದಲಾಗಿ ಮನೆಯಲ್ಲಿಯೇ ಸುಖಕರ ಪರೋಕ್ಷ ಪರಿಸರದಲ್ಲಿ ಕಲಿಯಬಹುದಾಗಿದೆ.
- ವಿದ್ಯಾರ್ಥಿಗಳು ಬೇಕೆಂದಾಗ ಕಲಿಯಲು ಅವಕಾಶವೀಯುವ ಪರೋಕ್ಷ ಕಲಿಕೆ ಅತ್ಯಂತ ನಮ್ಯವಾದುದು. ಪೂರ್ಣಕಾಲಿಕ ವೃತ್ತಿಯುಳ್ಳವರಿಗೆ ಅಥವಾ ಮಕ್ಕಳೊಂದಿಗರಿಗೆ ಮತ್ತು ಮತ್ತಾವುದೇ ಕಾರಣದಿಂದ ತರಗತಿಗೆ ಹಾಜರಾಗಲು ಸಾಧ್ಯವಿಲ್ಲದ ವಿದ್ಯಾರ್ಥಿಗಳಿಗೆ ಇದು ಅತ್ಯಂತ ಸಹಾಯಕಾರಿಯಾಗಿದೆ.
- ವಿದ್ಯಾರ್ಥಿಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡುವುದರಿಂದ ವಿದ್ಯಾರ್ಥಿಯು ತನಗೆ ಸೂಕ್ತವಾದ ಬಹುವಿಧ ಕಲಿಕಾ ಶೈಲಿಗಳನ್ನು ಮತ್ತು ಮಾಧ್ಯಮಗಳನ್ನು- ಇಮೇಲ್, ಚರ್ಚಾಕೊಠಡಿಗಳು (Chatrooms), ವೀಡಿಯೋ ವಿಚಾರಗೋಷ್ಠಿಗಳು ಇತ್ಯಾದಿ- ತನ್ನದಾಗಿಸಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುವನು ಎಂಬುದು ಆನ್-ಲೈನ್ ಕಲಿಕೆಯ ಬೋಧನ ಶಾಸ್ತ್ರೀಯ ಮೌಲ್ಯವೆಂದು ಹೇಳಬಹುದು.

**ಪರೋಕ್ಷ ಕಲಿಕೆ ಬಗ್ಗೆ ಭಾರತದ ನಿಲುವು:**

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಕೇಂದ್ರೀಯ ಮಂತ್ರಿಗಳ ಪ್ರಕಾರ ಮುಂಬರುವ ವರ್ಷಗಳಲ್ಲಿ ವಿಶ್ವವಿದ್ಯಾನಿಲಯಗಳೆಂಬ ಭೌತಿಕ ಅಡಚಣೆಗಳನ್ನು ಮೀರಿ ವಿಶ್ವದ ಯಾವುದೇ ಸಂಸ್ಥೆಯಲ್ಲಿ ಪರೋಕ್ಷ ಮಾಧ್ಯಮದ ಮೂಲಕ ವಿದ್ಯಾರ್ಥಿಗಳು ಕಾರ್ಯಕ್ರಮಗಳನ್ನು ಅಧ್ಯಯನ ಮಾಡಲು ದಾರಿ ಮಾಡಬಹುದಾಗಿದೆ. ದೇಶದಲ್ಲಿ ಶೀಘ್ರದಲ್ಲೇ ಪರೋಕ್ಷ ವಿಶ್ವವಿದ್ಯಾನಿಲಯಗಳು ತಲೆಯೆತ್ತಿ ವಿದ್ಯಾರ್ಥಿಗಳಿಗೆ ಅಪಾರ ಅವಕಾಶಗಳನ್ನು ತೆರೆದಿಡುವ ಸಾಧ್ಯತೆಗಳಿವೆ ಎಂದೂ ಸಚಿವರು ಅಭಿಪ್ರಾಯಪಟ್ಟಿದ್ದಾರೆ.

Digitised by Bharatavani, CIIL

ಇತ್ತೀಚೆಗೆ ಅಮೇರಿಕಾದ ವಾಷಿಂಗ್ಟನ್‌ನಲ್ಲಿ ನಡೆದ ಇಂಡೊ–ಅಮೆರಿಕನ್ ಶೈಕ್ಷಣಿಕ ಶೃಂಗಸಭೆಯಲ್ಲಿ ಸಚಿವ ಕಪಿಲ್ ಸಿಬಲ್ ಮಾತನಾಡುತ್ತಾ "21ನೆಯ ಶತಮಾನದ ತರಗತಿಗಳು ಭಿನ್ನವಾಗಿರುವುವು ಮತ್ತು ಬೋಧನ ವಿಜ್ಞಾನದ ಅಂತರ್ವಸ್ತುವೂ ಸಂಪೂರ್ಣ ಬದಲಾಗಿರುವುದು. ಸಂಸ್ಕೃತಿಗಳ ನಡುವಣ ಮಾರ್ಪಡಿಸಿದ ಕಲಿಕೆಯ ಉನ್ನತ ಶಿಕ್ಷಣದ ಪ್ರಮುಖ ಲಕ್ಷಣವಾಗುವುದು. ನಾವು ಕಲಿಕೆಯ ಅವಕಾಶ (Learning Space) ಎಂಬಂತೆ ವಿಶ್ವವಿದ್ಯಾನಿಲಯಗಳನ್ನು ತೆರೆಯಬೇಕಾಗಿದೆ. ಸಹಯೋಗದ ಜ್ಞಾನೋತ್ಪಾದನೆಯನ್ನು ನಮ್ಮದಾಗಿಸಿಕೊಳ್ಳಬೇಕಾಗಿದೆ ಮತ್ತು ಸಂಸ್ಥೆಗಳ ನಡುವಣ ಭಿತ್ತಿಗಳನ್ನು ಕೆಡವಬೇಕಾಗಿದೆ" ಎಂದೂ ಅವರು ಹೇಳಿದರು.

ಮಾನ್ಯಮಂತ್ರಿಗಳ ದರ್ಶನವನ್ನು ಅಂಗೀಕರಿಸುತ್ತಾ ಐ.ಐ.ಟಿ–ಮದ್ರಾಸ್‌ನ ಮಾಜಿ ಉಪ ನಿರ್ದೇಶಕರಾದ ಪ್ರೊ|| ವಿ.ಜಿ. ಇಡಿಚಾಂಡಿ–"ಪರೋಕ್ಷ ತರಗತಿಗಳತ್ತ ನಾವು ಸಾಗಲು ಪ್ರಾರಂಭಿಸಿದಂತೆ ಪರೋಕ್ಷ ವಿಧಾನವು ಪರಿಣಾಮವೆಂಬಂತೆ ತಾನಾಗಿಯೆ ಜರುಗುತ್ತದೆ." ದೂರಶಿಕ್ಷಣ ವಿಧಾನದಲ್ಲಿ ಅಧ್ಯಯನ ಕೈಗೊಳ್ಳಲು ಇಚ್ಛಿಸುವ ಹಲವರಿಗೆ ಸಹಾಯವಾಗುವುದರಿಂದ ಭೌತಿಕ ನಿರ್ಬಂಧನೆಗಳನ್ನು ತೆಗೆದುಹಾಕುವುದು ತಪ್ಪೇನೂ ಆಗುವುದಿಲ್ಲ. ಜಗತ್ತಿನಾದ್ಯಂತ ಅಧಿಕಾಧಿಕ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸುವುದಕ್ಕೆ ಇದು ನಮಗೆ ಸಹಾಯ ನೀಡುತ್ತದೆ. "ಯಾರಿಗಾದರೂ, ಎಲ್ಲಿಯಾದರೂ, ಯಾವ ಕಾಲದಲ್ಲಾದರೂ" ಎಂಬ ಪರಿಕಲ್ಪನೆಯನ್ನು ಸಾಧಿಸಲು ಪರೋಕ್ಷ ವಿಶ್ವವಿದ್ಯಾನಿಲಯವು ನಮಗೆ ಸಹಕಾರಿಯಾಗುತ್ತದೆ. ಶೀಘ್ರದಲ್ಲೇ ಇದು ಆಗಲೇಬೇಕಾಗಿದೆ" ಎಂದು ಹೇಳಿದ್ದಾರೆ.

ನಮ್ಮ ದೇಶದಲ್ಲಿ ಪರೋಕ್ಷ ವಿಶ್ವವಿದ್ಯಾನಿಲಯಗಳನ್ನು ತೆರೆಯಲು ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಸ್ತುತದಲ್ಲಿ ತಮಿಳು ಪರೋಕ್ಷ ವಿಶ್ವವಿದ್ಯಾನಿಲಯ, IGNOU ವಿಶ್ವವಿದ್ಯಾನಿಲಯ ಪರೋಕ್ಷ ಆವರಣ (IGNOU University, Virtual Compus), ನಳಂದ ಪರೋಕ್ಷ ವಿಶ್ವವಿದ್ಯಾನಿಲಯ, ಬಿರ್ಲಾ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಆಫ್ ಸೈನ್ಸ್, BITs ಪರೋಕ್ಷ ವಿಶ್ವವಿದ್ಯಾನಿಲಯ, ಐಐಟಿಗಳು ಮತ್ತು ಇನ್ನಿತರ ಹಲವು ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಗೆ ಪರೋಕ್ಷ ವಿಶ್ವವಿದ್ಯಾನಿಲಯ ಸೌಲಭ್ಯಗಳನ್ನು ಒದಗಿಸಿಕೊಡಲು ಮುಂದೆ ಬರುತ್ತಿವೆ.

**ಮೂಲ: ಡಾ. ಪ್ರಹ್ಲಾದ್ ಎಸ್.ಎನ್.**

**ಅನು: ಚಂದ್ರಶೇಖರ್ ಬಿ.ಎಂ.**

# ಎ

## ಎಸ್‌ಓಎಸ್ ಮಕ್ಕಳ ಗ್ರಾಮಗಳು

**ಪೀಠಿಕೆ:** ಎರಡನೆಯ ಮಹಾಯುದ್ಧದ ಬಳಿಕ ಮಕ್ಕಳು ಬಹುಸಂಖ್ಯೆಯಲ್ಲಿ ಅನಾಥರಾಗಿ ಮತ್ತು ವಸತಿರಹಿತರಾಗಿ ಕಷ್ಟ ಅನುಭವಿಸುವುದನ್ನು ನೋಡಿ ಅವರಿಗೆ ನೆರವಾಗುವ ದಾರಿಯೊಂದನ್ನು ಹುಡುಕಿಕೊಳ್ಳುವ ಅಗತ್ಯವನ್ನು ಮನಗಂಡವರು ಎಸ್‌ಓಎಸ್ ಚಳವಳಿಯ ಸಂಸ್ಥಾಪಕರಾಗಿರುವ ಆಸ್ಟ್ರಿಯಾದ ಡಾ. ಹರ್ಮನ್ ಮೇನರ್. ಮಕ್ಕಳಿಗೆ ಮನೆಯಿಲ್ಲದಿದ್ದರೆ ಅವರಿಗೆ ನೀಡುವ ನೆರವು ಪರಿಣಾಮಕಾರಿಯಾಗಿ ಎಂದೂ ಇರುವುದಿಲ್ಲವೆಂಬ ಪ್ರಬಲ ನಂಬಿಕೆಯಿಂದ ಅವರು 1949ರಲ್ಲಿ ಪ್ರಪ್ರಥಮ ಎಸ್‌ಓಎಸ್ ಮಕ್ಕಳ ಗ್ರಾಮವನ್ನು ಆಸ್ಟ್ರಿಯಾದ ಇಮ್ಸ್ಟ್‌ನಲ್ಲಿ ಸ್ಥಾಪಿಸಿದರು. ಇಲ್ಲಿ ಮಕ್ಕಳ ಪಾಲನೆಯ ಪರಿಕಲ್ಪನೆಯು ಈ ಕೆಳಗಿನ ನಾಲ್ಕು ಮೂಲ ನಿಯಮಗಳನ್ನು ಆಧರಿಸಿತ್ತು:

(ಅ) ತಾಯಿ: ಪ್ರತಿಯೊಬ್ಬ ಮಗುವಿಗೆ ಒಬ್ಬ ತಾಯಿಯನ್ನು ನೀಡಲಾಗುವುದು. ಹೀಗೆ ಎಲ್ಲಾ ಸಮಯದಲ್ಲಿ ಅವರನ್ನು ಗಮನಿಸುವವರು ಇರುವಂತಾಗುತ್ತದೆ.

(ಆ) ಸೋದರರು ಮತ್ತು ಸೋದರಿಯರು: ವಿವಿಧ ವಯಸ್ಸಿನ ಹುಡುಗರು ಮತ್ತು ಹುಡುಗಿಯರು ಸೋದರರು ಮತು ಸಹೋದರಿಯರ ಹಾಗೆ ಒಟ್ಟಿಗೆ ಬೆಳೆಯುವರು. ಒಡಹುಟ್ಟಿದವರನ್ನು ಪ್ರತ್ಯೇಕಿಸಲಾಗುವುದಿಲ್ಲ. ಅವರು ಒಂದೇ ಎಸ್‌ಓಎಸ್ ಮಕ್ಕಳ ಗ್ರಾಮ ಕುಟುಂಬದಲ್ಲಿ ಬದುಕುವರು.

(ಇ) ಮನೆ: ಪ್ರತಿಯೊಂದು ಎಸ್‌ಓಎಸ್ ಮಕ್ಕಳ ಗ್ರಾಮ ಕುಟುಂಬವು ತನ್ನ ಸ್ವಂತ ಮನೆಯನ್ನು ಹೊಂದಿರುತ್ತದೆ. ಸ್ವಂತ ಮನೆಯ ಚಿರಪರಿಚಿತ ವಾತಾವರಣವು ಕುಟುಂಬದೊಳಗೆ ಸಂಬಂಧ ಏರ್ಪಡಲು ಪ್ರೋತ್ಸಾಹ ನೀಡುತ್ತದೆ.

(ಈ) ಗ್ರಾಮ ಮನೆಯು ಗ್ರಾಮ ಸಮುದಾಯದ ಆಂತರಿಕ (Integral) ಭಾಗವಾಗಿರುತ್ತದೆ. ಮಕ್ಕಳಿಗೆ ಇದು ಸಾಂಸ್ಕೃತಿಕ ಬೇರುಗಳನ್ನು ಮತ್ತು ನಾವು ಇದಕ್ಕೆ ಸೇರಿದವರು ಎಂಬ ಭಾವನೆಯನ್ನು ನೀಡುತ್ತದೆ. ಸುತ್ತಮುತ್ತಲಿನ ಸ್ಥಳೀಯ ಸಮುದಾಯಗಳೊಂದಿಗೆ ಭೇಟಿಯಾಗಲು ಗ್ರಾಮವು ಸೇತುವೆಯಾಗಿರುತ್ತದೆ.

ಡಾ. ಹರ್ಮನ್ ಅವರಿಂದ ವ್ಯಾಖ್ಯಾನಿಸಲ್ಪಟ್ಟ ಈ ಎಸ್‌ಓಎಸ್ ಮಕ್ಕಳ ಗ್ರಾಮ ಯೋಜನೆಯ ಬಹಳ ಬೇಗ ಮಕ್ಕಳ ಪಾಲನಾ ಪರಿಕಲ್ಪನೆಯಾಗಿ ಸಾಬೀತುಗೊಂಡು ಪ್ರತಿಯೊಂದು ಖಂಡಕ್ಕೆ ವಿಸ್ತರಿಸಿತು. ಇಂದು ಜಗತ್ತಿನ 131 ದೇಶಗಳಿಗೆ ಮತ್ತು ಪ್ರಾಂತಗಳಿಗೆ ಎಸ್‌ಓಎಸ್ ಚಳವಳಿ ಹಬ್ಬಿಕೊಂಡಿದೆ. 371 ಎಸ್‌ಓಎಸ್ ಮಕ್ಕಳ ಗ್ರಾಮಗಳು ಮತ್ತು ಇದಕ್ಕೆ ಸಂಬಂಧಿಸಿದ ಸೌಕರ್ಯಗಳಾದ ಯುವ ಮನೆಗಳು, ಕಿಂಡರ್‌ಗಾರ್ಡನ್‌ಗಳು, ಹರ್ಮನ್ ಮೇಜರ್

Digitised by Bharatavani, CIIL

ಶಾಲೆಗಳು, ವೃತ್ತಿಪರ ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳು, ವೈದ್ಯಕೀಯ ಕೇಂದ್ರಗಳು ಮತ್ತು ಎಸ್‌ಒಎಸ್ ತುರ್ತು ಪರಿಹಾರ ಕಾರ್ಯಕ್ರಮಗಳು 1160ಕ್ಕಿಂತ ಹೆಚ್ಚಿದ್ದು, ಜಗತ್ತಿನ ಎಲ್ಲಾ ಭಾಗಗಳ 4,00,000ಕ್ಕೂ ಹೆಚ್ಚು ಮಕ್ಕಳ ಬಡಜನರ ಪಾಲನೆಯನ್ನು ನಿರ್ವಹಿಸುತ್ತಿವೆ. ಭಾರತದಲ್ಲಿ ಯುವಜನರಿಗಾಗಿ ಅತ್ಯಂತ ಹೆಚ್ಚು ಸಂಖ್ಯೆಯ ಎಸ್‌ಒಎಸ್ ಮಕ್ಕಳ ಗ್ರಾಮಗಳು ಮತ್ತು ಸೇವೆಗಳು ಇವೆ.

**ಸಾಂಸ್ಥಿಕ ರಚನೆ:** ಎಸ್‌ಒಎಸ್ ಅಂತಾರಾಷ್ಟ್ರೀಯ ಕಿಂಡರ್‌ಡೊರ್ಫ್ ಮಾತೃಸಂಸ್ಥೆಯಾಗಿದ್ದು, ಎಲ್ಲಾ ಎಸ್‌ಒಎಸ್ ಮಕ್ಕಳ ಗ್ರಾಮ ಸಂಸ್ಥೆಗಳು ಇದರೊಂದಿಗೆ ಸಂಯೋಜಿಸಲ್ಪಟ್ಟಿವೆ. ಇದು ಸಾರ್ವತ್ರಿಕ ಸಭೆ, ಕಾರ್ಯಾಂಗ ಸಂಸ್ಥೆಗಳು, ಸಾರ್ವತ್ರಿಕ ಸಚಿವಾಲಯ ಮತ್ತು ಹರ್ಮನ್ ಮೇನರ್ ಅಕಾಡೆಮಿ ಮೂಲಕ ಕಾರ್ಯನಿರ್ವಹಿಸುತ್ತದೆ. ಸಾರ್ವತ್ರಿಕ ಸಚಿವಾಲಯವು ಇನ್ಸ್‌ಬ್ರಕ್ (ಆಸ್ಟ್ರಿಯಾ) ದಲ್ಲಿದೆ. 131 ದೇಶಗಳು ಮತ್ತು ಪ್ರಾಂತಗಳ ಎಲ್ಲಾ ಎಸ್‌ಒಎಸ್ ಮಕ್ಕಳ ಗ್ರಾಮಗಳ ಕೆಲಸದ ಸುಸಂಘಟನೆ ಮತ್ತು ಬೆಂಬಲಕ್ಕೆ ಇದು ಜವಾಬ್ದಾರಿಯಾಗಿರುತ್ತದೆ.

**ಗುರಿಗಳು ಮತ್ತು ಧ್ಯೇಯಗಳು:** ಎಸ್‌ಒಎಸ್ ಮಕ್ಕಳ ಗ್ರಾಮವು ಸ್ವಯಂಸೇವಾ ಸಂಸ್ಥೆಯಾಗಿದೆ. ಇದು ಲಾಭರಹಿತ, ಸರಕಾರೇತರ ಮತ್ತು ರಾಜಕೀಯವಲ್ಲದ ಸಂಸ್ಥೆ. ಜನಾಂಗ, ರಾಷ್ಟ್ರೀಯತೆ ಅಥವಾ ಮತವನ್ನು ಇದು ಪರಿಗಣಿಸುವುದಿಲ್ಲ. ಅನಾಥ ಮತ್ತು ನಿರಾಶ್ರಿತ ಮಕ್ಕಳಿಗೆ ಖಾಯಂ ಮನೆ, ಶಿಕ್ಷಣ ಮತ್ತು ಸ್ವತಂತ್ರ ಹಾಗೂ ಸುರಕ್ಷಿತ ಬದುಕಿಗೆ ಭದ್ರ ಬುನಾದಿಯನ್ನು ಒದಗಿಸುವ ಮೂಲಕ ನೆರವು ಒದಗಿಸುವ ಉದ್ದೇಶಕ್ಕೆ ಇದು ಬದ್ಧವಾಗಿದೆ.

**ಅಭಿವೃದ್ಧಿ ತತ್ವ:** ಮನೆಯ ಹಾಗಿನ ವಾತಾವರಣ ಎಸ್‌ಒಎಸ್‌ನ ಅತ್ಯಂತ ವಿಶಿಷ್ಟ ಲಕ್ಷಣವಾಗಿದೆ. ಇಲ್ಲಿ ತಿರಸ್ಕೃತ ಮತ್ತು ನಿರಾಶ್ರಿತ ಭಾವಗಳ ಸ್ಥಾನದಲ್ಲಿ ಪ್ರೀತಿ ಮತ್ತು ಘನತೆ ಇದೆ, ಭಯ ಮತ್ತು ಹತಾಶೆಯನ್ನು ಸಾಂತ್ವನ ಮತ್ತು ಭರವಸೆಗಳು ಕಿತ್ತೊಗೆಯುತ್ತವೆ. ಎಸ್‌ಒಎಸ್ ಗ್ರಾಮದ ಮನೆಗೆ ಬಂದ ಪ್ರತಿಯೊಬ್ಬ ಮಗು ತಾಯಿ, ಸೋದರರು ಮತ್ತು ಸೋದರಿಯರಿರುವ ಕುಟುಂಬವನ್ನು ಪ್ರವೇಶಿಸುತ್ತದೆ. ಎಸ್‌ಒಎಸ್ ಕುಟುಂಬದಲ್ಲಿ 8–9 ಮಕ್ಕಳು ಇರುತ್ತಾರೆ; ಹುಡುಗರು ಮತ್ತು ಹುಡುಗಿಯರು ತಮ್ಮ ಎಸ್‌ಒಎಸ್ ಕುಟುಂಬದಲ್ಲಿ ಸಹಜ ಕುಟುಂಬದಲ್ಲಿ ಇರುವಂತೆ ನೆಲೆಸುತ್ತಾರೆ. ಪ್ರತಿಯೊಂದು ಗ್ರಾಮದಲ್ಲಿ ಸುಮಾರು 15ರಿಂದ 20 ಕುಟೀರಗಳು ಇರುತ್ತವೆ. ಪ್ರತಿಯೊಂದು ಕುಟೀರದಲ್ಲಿ ಮಕ್ಕಳಿಗಾಗಿ 3 ಕೋಣೆಗಳು, ತಾಯಿಗಾಗಿ ಒಂದು ಕೋಣೆ, ದೊಡ್ಡದೊಂದು ಪಡಸಾಲೆ, ಅಡುಗೆ ಮನೆ ಮತ್ತು ತೋಟವಿರುತ್ತದೆ. ತಾಯಿ ಅವರಿಗಾಗಿ ಅಡುಗೆ ಮಾಡುತ್ತಾಳೆ, ಅವರನ್ನು ನೋಡಿಕೊಳ್ಳುತ್ತಾಳೆ – ತಾಯ್ತನದ ಮೂಲಪ್ರವೃತ್ತಿ ಪ್ರಬಲವಾಗಿಯೇ ಇರುವ ಅವಳು ಬೇರೆ ಯಾವುದೇ ತಾಯಿಯ ಹಾಗೆ ಇರುತ್ತಾಳೆ. ಗ್ರಾಮಾಧಿಕಾರ ನೋಡಿಕೊಳ್ಳುವ ವ್ಯಕ್ತಿ ನಿರ್ದೇಶಕನಾಗಿರುತ್ತಾನೆ. ಈತ ತಂದೆ ಸ್ವರೂಪಿ ವ್ಯಕ್ತಿತ್ವದವನು. ಇವರೊಂದಿಗೆ ಸಹ–ದುಡಿಮೆದಾರರು ಇರುತ್ತಾರೆ. ಇವರು ಆಡಳಿತ ನಡೆಸುತ್ತಾರೆ. ತಾಯಂದಿರಿಗೆ ಮಾರ್ಗದರ್ಶನ ನೀಡುತ್ತಾರೆ ಮತ್ತು ದೈನಂದಿನ ಕೆಲಸಕಾರ್ಯಗಳಲ್ಲಿ ಮಕ್ಕಳಿಗೆ ನೆರವಾಗುತ್ತಾರೆ. ತಿರಸ್ಕೃತರಾದ ಪರಿತ್ಯಕ್ತರಾದ ಸಾವಿರಾರು ಮಕ್ಕಳು ಎಸ್‌ಒಎಸ್ ಮಕ್ಕಳ ಗ್ರಾಮಗಳಲ್ಲಿ ಪ್ರೀತಿಯನ್ನು ಪಡೆದಿದ್ದಾರೆ.

**ಶಿಕ್ಷಣ:** ಎಸ್‌ಒಎಸ್ ಮಕ್ಕಳ ಗ್ರಾಮಗಳು ದೈಹಿಕ ಬೆಳವಣಿಗೆಯೊಂದಿಗೆ, ಎಲ್ಲಾ ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಾಸದ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತವೆ. ಇದರಿಂದ ಅವರು ಆತ್ಮವಿಶ್ವಾಸದಿಂದ ಒಳ್ಳೆಯ ಭವಿಷ್ಯದ ಸವಾಲುಗಳನ್ನು ಎದುರಿಸುವುದು ಮಾತ್ರವಲ್ಲ, ದೇಶದ ಸ್ವಾವಲಂಬಿ ಪ್ರಜೆಗಳಾಗಿ ರೂಪುಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಮಗು ಅವನ ಅಥವಾ ಅವಳ ಅಗತ್ಯ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ಶಿಕ್ಷಣ ಮತ್ತು ತರಬೇತಿಯನ್ನು ಎಸ್‌ಒಎಸ್ ಮಕ್ಕಳ ಗ್ರಾಮಗಳು ನಡೆಸುವ ಈ ಕೆಳಗೆ ವಿವರಿಸಿದ ಸಂಸ್ಥೆಗಳಿಂದ ಪಡೆಯುತ್ತದೆ:

**ಹರ್ಮನ್ ಮೇನರ್ ಶಾಲೆಗಳು:** ಎಸ್‌ಒಎಸ್ ಮಕ್ಕಳ ಗ್ರಾಮದ ಸುತ್ತಮುತ್ತ ಶಾಲಾ ಸೌಕರ್ಯ ಇಲ್ಲದಿದ್ದಾಗ ಹರ್ಮನ್ ಮೇನರ್ ಶಾಲೆಗಳನ್ನು ನಿರ್ಮಿಸಲಾಗುತ್ತದೆ. ಶಾಲೆಗಳು ಉತ್ತಮ ರೀತಿಯಲ್ಲಿ ನಿರ್ಮಾಣವಾಗಿದ್ದು, ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗರಿಷ್ಠ 30–40 ಇರುತ್ತದೆ. ಈ ಶಾಲೆಗಳು ಸಂಬಂಧಪಟ್ಟ ರಾಷ್ಟ್ರೀಯ ಮಾಪನ ಮಟ್ಟಕ್ಕನುಗುಣವಾಗಿ ಸಂಪೂರ್ಣ ರೀತಿಯಿಂದ ಪರಿಣತಿಯನ್ನು ಹೊಂದಿರುವವರಾಗಿರುತ್ತಾರೆ. ಈ ಶಾಲೆಗಳಿಗೆ ಸ್ಥಳೀಯ ಸಮುದಾಯಗಳ ಮಕ್ಕಳು ಮತ್ತು ಯುವಜನರಿಗೆ ಕೂಡಾ ಮುಕ್ತ ಪ್ರವೇಶವಿದೆ. ಸಮಾಜದ ಪ್ರಧಾನ ವಾಹಿನಿಯೊಂದಿಗೆ ಸಂಗಮವಾಗಿ ಬೆರೆಯಲು ಮಕ್ಕಳನ್ನು ಸಿದ್ಧಗೊಳಿಸುವ ಸಲುವಾಗಿ ಈ ಶಾಲೆಗಳು ಪ್ರಯೋಗಶಾಲೆಗಳಂತೆ ಕೆಲಸ ಮಾಡುತ್ತವೆ. ಎಸ್‌ಒಎಸ್ ಮಕ್ಕಳಿಗೆ ಅಂತರ್–ಶಾಲಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಮತ್ತು ತಮ್ಮ ತರಗತಿಗಳಲ್ಲಿ ಕಲಿಯುತ್ತಿರುವ ಸ್ನೇಹಿತರ ಹೆತ್ತವರು, ಸೋದರರು ಮತ್ತು ಸೋದರಿಯರೊಂದಿಗೆ ಉತ್ತಮ ಸಂಬಂಧಗಳನ್ನು ಬೆಳೆಸಲು ಪ್ರೋತ್ಸಾಹ ನೀಡಲಾಗುತ್ತದೆ.

**ವೃತ್ತಿಪರ ತರಬೇತಿ ಕೇಂದ್ರಗಳು :** ಸ್ಥಳೀಯ ಕಾರ್ಮಿಕ ಮಾರುಕಟ್ಟೆಯ ವಾಸ್ತವ ಸ್ಥಿತಿಗೆ ಉಚಿತವೆನಿಸುವ ರೀತಿಯಲ್ಲಿ ಅನೇಕ ವ್ಯಾಪಕಗಳ ಸೂಕ್ತ ತರಬೇತಿಯನ್ನು ಯುವ ಜನರಿಗೆ ಒದಗಿಸುವ ಸಲುವಾಗಿ ವೃತ್ತಿಪರ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಸೌಕರ್ಯಗಳು ಎಸ್‌ಒಎಸ್‌ನ ಯುವಜನರಿಗೆ ಮತ್ತು ಸ್ಥಳೀಯ ಸಮುದಾಯಗಳ ಯುವಜನರ ಅಗತ್ಯಗಳನ್ನು ಕೂಡಾ ಪೂರೈಸುತ್ತವೆ. ಬಹುತೇಕ ತರಬೇತಿ ಕೋರ್ಸುಗಳು ಪೂರ್ಣಪ್ರಮಾಣದ ಶಿಷ್ಯವೃತ್ತಿಯಾಗಿ ಅಥವಾ ರಾಷ್ಟ್ರೀಯ ವಿದ್ಯಾರ್ಹತೆಗೆ ಸಮಾನ ರೀತಿಯದ್ದಾಗಿ ಮಾನ್ಯತೆ ಪಡೆದಿವೆ. ಇಲ್ಲಿ ಅನೇಕ ವಿಧದ ತರಬೇತಿ ಲಭ್ಯ. ಇವುಗಳಲ್ಲಿ ಸಾಂಪ್ರದಾಯಿಕ ಕಸಬುಗಳಾದ ಕೊಳಾಯಿ ಕೆಲಸ, ಬಡಗಿ ಕೆಲಸ, ಮುದ್ರಣ ಮತ್ತು ಲೋಹದ ಕೆಲಸ, ಜೊತೆಗೆ ಗೃಹ ಅರ್ಥಶಾಸ್ತ್ರ ಮತ್ತು ಕೃಷಿ ಕೆಲಸವನ್ನು ಕಲಿಸಲಾಗುತ್ತದೆ. ಕೆಲವು ಕೇಂದ್ರಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಪ್ರಸಾರ ಮಾಧ್ಯಮದಂತಹ ಕ್ಷೇತ್ರಗಳ ಮೂಲ ತರಬೇತಿಯನ್ನು ಕೂಡಾ ಒದಗಿಸಲಾಗುತ್ತದೆ. ಕೋರ್ಸ್‌ಗಳ ಕಾಲಾವಧಿ ಮತ್ತು ವಿಷಯವು ವಿವಿಧ ಕೆಲಸಗಳಿಗೆ ಅನ್ವಯಿಸುವ ಅಗತ್ಯಗಳು ಮತ್ತು ನಿಬಂಧನೆಗಳನ್ನು ಆಧರಿಸಿರುತ್ತವೆ.

Digitised by Bharatavani, CIIL

**ಎಸ್‌ಒಎಸ್ ಯುವ ಸೌಕರ್ಯಗಳು:** ಈ ಸೌಕರ್ಯಗಳು ಹದಿಹರೆಯದವರ ಮತ್ತು ಯುವಜನರ ಅಗತ್ಯಗಳಿಗಾಗಿ ಅಳವಡಿಸಿಕೊಳ್ಳಲಾದ ಎಸ್‌ಒಎಸ್ ಮಕ್ಕಳ ಗ್ರಾಮದ ಮಾದರಿಯ ಮುಂದುವರಿಕೆಯಾಗಿದೆ. ಎಸ್‌ಒಎಸ್ ಮಕ್ಕಳ ಗ್ರಾಮದ ಮೂಲಭೂತ ವ್ಯವಸ್ಥೆಯ ರಕ್ಷಣೆಯೊಂದಿಗೆ ಎಸ್‌ಒಎಸ್‌ನ ಯುವಜನರಿಗೆ ಸ್ವಾವಲಂಬನೆಯ ಮೊದಲ ಹೆಜ್ಜೆಯನ್ನಿಡುವಂತೆ ಸಾಧ್ಯವಾಗಿರುತ್ತವೆ. ಸ್ಥಳೀಯ ಸಂಸ್ಕೃತಿಯ ನೇಮ/ನಿಯಮ ಮತ್ತು ಯುವಜನರ ಪ್ರಾಯ ಮತ್ತು ಅವರ ಪರಿಪಕ್ವತೆಯ ಮಟ್ಟವನ್ನು ಆಧರಿಸಿ, ಎಸ್‌ಒಎಸ್ ಯುವ ಸೌಕರ್ಯಗಳು ಯುವ ನಿಲಯ ಯುವ ಗ್ರಾಮಗಳು ಅಥವಾ ಉನ್ನತ ಶಿಕ್ಷಣವನ್ನು ಪಡೆಯುತ್ತಿರುವಾಗ ಸಾಮಾನ್ಯವಾಗಿ ಯುವ ಸೌಕರ್ಯ ಕಾಂಕ್ಷಿಗಳಾಗಿರುತ್ತಾರೆ. ಈ ಸೌಕರ್ಯಗಳಲ್ಲಿ ಪರಿಣಿತ ಯುವ ಕೆಲಸಗಾರರ ಬೆಂಬಲದೊಂದಿಗೆ, ಎಸ್‌ಒಎಸ್ ಯುವಜನರು ತಮ್ಮ ಭವಿಷ್ಯಕ್ಕಾಗಿ ವಸ್ತುನಿಷ್ಠ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಜವಾಬ್ದಾರಿಗಳನ್ನು ಹೊರಲು ಕಲಿಯುತ್ತಾರೆ. ತಮ್ಮ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಸಮಷ್ಟಿ ಭಾವನೆಯನ್ನು ಬೆಳೆಸಿಕೊಳ್ಳಲು ಮತ್ತು ಸಂಬಂಧಿಕರು ಮತ್ತು ಸ್ನೇಹಿತರೊಂದಿಗೆ, ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮತ್ತು ಸಂಭಾವ್ಯ ಸಾಧ್ಯ ಉದ್ಯೋಗದಾತರೊಂದಿಗೆ ಸಂಪರ್ಕಗಳನ್ನು ಬೆಳೆಸಲು ಅವರನ್ನು ಪ್ರೋತ್ಸಾಹಿಸಲಾಗುತ್ತದೆ. ಮಕ್ಕಳು ಸ್ವತಂತ್ರವಾಗಿ ತಮ್ಮ ಕಾಲಮೇಲೆ ನಿಲ್ಲುವ ಸಾಮರ್ಥವನ್ನು ಪಡೆಯುವವರೆ ಗ್ರಾಮದಲ್ಲಿ ಇರುತ್ತಾರೆ.

**ಭಾರತದಲ್ಲಿ ಎಸ್‌ಒಎಸ್ ಚಳವಳಿ:**

ದಿವಂಗತ ಪಂಡಿತ ಜವಾಹರಲಾಲ್ ನೆಹರೂ ಅವರ ಆಹ್ವಾನದ ಮೇರೆಗೆ 1963ರಲ್ಲಿ ಡಾ. ಹರ್ಮನ್ ಮೆನರ್ ಭಾರತಕ್ಕೆ ಭೇಟಿ ನೀಡಿದರು. ಇವರ ಕಾರ್ಯಕ್ರಮದ ವಿಚಾರವಾಗಿ ನೆಹರೂರವರು ಅತ್ಯಂತ ಪ್ರಭಾವಿತರಾಗಿದ್ದು, ಭಾರತದಲ್ಲಿ 'ಎಸ್‌ಒಎಸ್ ಚಿಲ್ಡ್ರನ್ ವಿಲ್ಲೇಜಸ್ ಆಫ್ ಇಂಡಿಯಾ' ನೋಂದಣಿಯಾಗಿ, 1964ರಲ್ಲಿ ಅಸ್ತಿತ್ವಕ್ಕೆ ಬಂತು. ಇದರ ಸ್ಥಾಪಕ ಸದಸ್ಯರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರಂತಹ ಖ್ಯಾತ ವ್ಯಕ್ತಿತ್ವದವರಿದ್ದರು. ಮೊದಲ ಎಸ್‌ಒಎಸ್ ಮಕ್ಕಳ ಗ್ರಾಮವನ್ನು 1964ರಲ್ಲಿ ಗ್ರೀನ್‌ಫೀಲ್ಡ್ (ಫರಿದಾಬಾದ್) ನಲ್ಲಿ ಸ್ಥಾಪಿಸಲಾಯಿತು. ಈ ಚಳವಳಿಯ ಯಶಸ್ಸು ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಲು ಸಂಸ್ಥೆಗೆ ಪ್ರೋತ್ಸಾಹ ನೀಡಿತಲ್ಲದೆ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಸಂಖ್ಯೆಯ ಗ್ರಾಮಗಳು / ಯೋಜನೆಗಳು ಸೇರಿಕೊಂಡವು.

38 ವರ್ಷಗಳ ಹಿಂದೆ ಕೆಲವೇ ಮಕ್ಕಳೊಂದಿಗೆ ಪ್ರಾರಂಭವಾದ ಎಸ್‌ಒಎಸ್ ಚಳವಳಿಯಲ್ಲಿ ಈಗ 1,50,000 ಕ್ಕಿಂತಲೂ ಅಧಿಕ ಸಂಖ್ಯೆಯ ಮಕ್ಕಳನ್ನು ನೋಡಿಕೊಳ್ಳುವ 33 ಗ್ರಾಮಗಳು ಮತ್ತು 125 ಸದೃಶ ಯೋಜನೆಗಳು ಇವೆ. ಈ ಯೋಜನೆಗಳಲ್ಲಿ ಹರ್ಮನ್ ಮೇನರ್ ಶಾಲೆಗಳು, ಕಿಂಡರ್‌ಗಾರ್ಡನ್‌ಗಳು, ಯುವ–ಸೌಕರ್ಯಗಳು, ಸಾಮಾಜಿಕ ಕೇಂದ್ರಗಳು, ವೃತ್ತಿಪರ ತರಬೇತಿ ಕೇಂದ್ರಗಳು, ವೈದ್ಯಕೀಯ ಕೇಂದ್ರಗಳು, ಕುಟುಂಬ ಸಹಾಯಕರ ಕಾರ್ಯಕ್ರಮಗಳು ಮತ್ತು ಎಸ್‌ಒಎಸ್ ತುರ್ತು ಪರಿಹಾರ ಕಾರ್ಯಕ್ರಮಗಳು ಇವೆ. 2,00,000 ಕ್ಕೂ ಹೆಚು ಜನರು ಈ ಕಾರ್ಯಕ್ರಮಗಳಿಂದ ಲಾಭ ಪಡೆಯುತ್ತಿದ್ದಾರೆ.

ಫರಿದಾಬಾದ್, ವಾರಣಾಸಿ ಮತ್ತು ಭೀಮತಲ್‌ನಲ್ಲಿರುವ ಹರ್ಮನ್ ಮೆನರ್ ಶಾಲೆಗಳು ಸೀನಿಯರ್ ಸೆಕೆಂಡರಿ ಹಂತದವರೆಗೆ ಸಿಬಿಎಸ್‌ಇ ಅಧೀನದಲ್ಲಿವೆ. ಫರಿದಾಬಾದ್‌ನಲ್ಲಿ ಸ್ಥಾಪಿಸಲಾದ ಎಸ್‌ಒಎಸ್ ನರ್ಸಿಂಗ್ ಶಾಲೆಯು ತನ್ನ ಎಮ್‌ಪಿಡಬ್ಲ್ಯೂ(ಎಫ್) ಕೋರ್ಸ್‌ಗಾಗಿ ಭಾರತೀಯ ನರ್ಸಿಂಗ್ ಕೌನ್ಸಿಲ್ ಮತ್ತು ರಾಜ್ಯ ನರ್ಸಿಂಗ್ ಕೌನ್ಸಿಲ್‌ನೊಂದಿಗೆ ಹೊಂದಿದೆ. ಫರಿದಾಬಾದಿನಲ್ಲಿ ಸ್ಥಾಪಿಸಲಾದ ಎಸ್‌ಒಎಸ್ ಹೆಲ್ಮತ್ ಕುಟಿನ್ ವೃತ್ತಿಪರ ಕೈಗಾರಿಕಾ ತರಬೇತಿ ಕೇಂದ್ರವು ತನ್ನ 'ಓ ಹಂತ'ದ ಗಣಕಯಂತ್ರ ಕೋರ್ಸ್‌ಗಾಗಿ ಇಲೆಕ್ಟ್ರಾನಿಕ್ಸ್ ಎಕ್ರೆಡಿಟೇಶನ್ ಆಫ್ ಕಂಪ್ಯೂಟರ್ ಕೋರ್ಸ್ ವಿಭಾಗದೊಂದಿಗೆ (ಡಿಒಇಎಸಿಸಿ) ಸಂಯೋಜಿತವಾಗಿದೆ. ಪ್ರತಿಯೊಂದು ರಾಜ್ಯದಲ್ಲಿ ಕನಿಷ್ಠ ಒಂದು ಎಸ್‌ಒಎಸ್ ಮಕ್ಕಳ ಗ್ರಾಮವನ್ನಾದರೂ ಸ್ಥಾಪಿಸಬೇಕೆನ್ನುವುದು ಎಸ್‌ಒಎಮ್ ಮಕ್ಕಳ ಗ್ರಾಮದ ಕಾರ್ಯನೀತಿಯಾಗಿದೆ. ಅನೇಕ ನವೀನ ಗ್ರಾಮ/ ಯೋಜನೆಗಳನ್ನು ಸ್ಥಾಪಿಸಲಾಗುತ್ತಿದ್ದು ಇವುಗಳಲ್ಲಿ ಭೋಪಾಲದ ಮಾನಸಿಕ ಅಸ್ವಸ್ಥ ಮಕ್ಕಳ ಸಂಸ್ಥೆಯೂ ಸೇರುತ್ತದೆ.

**ಮಕ್ಕಳಿಗೆ ನೆರವು ತುರ್ತು ಪರಿಸ್ಥಿತಿಗಳಲ್ಲಿ ಪ್ರತಿಕ್ರಿಯೆ:**

ಭಾರತದ ಎಸ್‌ಒಎಸ್ ಮಕ್ಕಳ ಗ್ರಾಮಗಳು ಮಕ್ಕಳ ತುರ್ತು ಅಗತ್ಯಗಳಿಗೆ ನೆರವುನೀಡಲೂ ಮುಂದೆ ಬಂದಿವೆ.

1983ರಲ್ಲಿ ಆಸ್ಸಾಮ್ ರಾಜ್ಯದಲ್ಲಿ ದೊಡ್ಡ ಪ್ರಮಾಣದ ವಿಕೋಪ ಕಾಣಿಸಿಕೊಂಡು ಅನೇಕ ಮಕ್ಕಳು ಅನಾಥರಾದರು. ತಕ್ಷಣ ಕಾರ್ಯಪ್ರವೃತ್ತವಾದ ಎಸ್‌ಒಎಸ್ ಈ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಭಾಕಟ್‌ಪುರ ಮತ್ತು ಹೊಜಾಯ್‌ಗಳಲ್ಲಿ ಎರಡು ಮಕ್ಕಳ ಗ್ರಾಮಗಳನ್ನು ಸ್ಥಾಪಿಸಿತು. ಈಶಾನ್ಯ ಭಾಗದ ಮತ್ತಷ್ಟು ಮಕ್ಕಳಿಗಾಗಿ ಗೌಹಾಟಿಯಲ್ಲಿ ಮತ್ತೊಂದು ಮಕ್ಕಳ ಗ್ರಾಮವನ್ನು ಸ್ಥಾಪಿಸಿ, ಇದರೊಂದಿಗೆ ಅನೇಕ ಯುವ ಸೌಕರ್ಯಗಳನ್ನು ಸೇರಿಸಿಕೊಳ್ಳಲಾಯಿತು.

1984ರಲ್ಲಿ ಕಾರ್ಬೈಡ್ ಕಾರ್ಖಾನೆಯಿಂದ ವಿಷಾನಿಲ ಸೋರಿಕೆಯಿಂದಾಗಿ ಭೋಪಾಲದಲ್ಲಿ ಅತ್ಯಂತ ದೊಡ್ಡ ದುರಂತ ಸಂಭವಿಸಿತು. ದಿನಬೆಳಗಾಗುವುದರೊಳಗೆ ಸಾವಿರಾರು ಜನರು ಮೃತಪಟ್ಟರು, ನೂರಾರು ಮಕ್ಕಳು ಅನಾಥರಾದರು, ಮೃತಪಟ್ಟರು. ನೆರವಿಗೆ ಧಾವಿಸಿದ ಎಸ್‌ಒಎಸ್, ಈ ಕಾರಣಕ್ಕಾಗಿಯೇ ಹೊಸದಾಗಿ ಭೋಪಾಲದಲ್ಲಿ ಸ್ಥಾಪಿಸಲಾದ ಹೊಸ ಗ್ರಾಮಕ್ಕೆ ತೊಂದರೆಯಲ್ಲಿದ್ದ ಮಕ್ಕಳನ್ನು ಕರೆತಂದಿತು. ಈಗ ಭೋಪಾಲದಲ್ಲಿ ಮಾನಸಿಕ ಅಸ್ವಸ್ಥ ಮಕ್ಕಳಿಗಾಗಿ ಸಂಸ್ಥೆಯೊಂದು ನಿರ್ಮಾಣ ಹಂತದಲ್ಲಿದೆ.

1991ರ ಅಕ್ಟೋಬರ್ ತಿಂಗಳಲ್ಲಿ ಉತ್ತರ ಭಾರತದ ಉತ್ತರಕಾಶಿಯಲ್ಲಿ ಭೂಕಂಪ ದುರಂತ ಸಂಭವಿಸಿ ಸಾವಿರಾರು ಜನರನ್ನು ಆಹುತಿ ತೆಗೆದುಕೊಂಡಿತು. ಅನೇಕ ಮಕ್ಕಳು ಅನಾಥರಾದರು ಮತ್ತು ಮನೆ ಕಳೆದುಕೊಂಡರು. ತಕ್ಷಣ

Digitised by Bharatavani, CIIL

ಕಾರ್ಯಗತವಾದ ಎಸ್‌ಓಎಸ್, ತೊಂದರೆಯಲ್ಲಿರುವ ಮಕ್ಕಳನ್ನು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದ ಭೀಮತಲದ ಗ್ರಾಮಕ್ಕೆ ಕರೆತಂದಿತು.

1991ರ ಸೆಪ್ಟೆಂಬರ್ ತಿಂಗಳಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಮತ್ತೊಂದು ಭೂಕಂಪ ದುರಂತ ಸಂಭವಿಸಿತು. ದೊಡ್ಡ ಪ್ರಯಾಣದ ಜೀವಹಾನಿ ಮತ್ತು ಸೊತ್ತು ಹಾನಿಯಾಯಿತು. ಎಸ್‌ಓಎಸ್ ತುರ್ತು ಕಾರ್ಯ ನಡೆಸಿ ತೊಂದರೆಯಲ್ಲಿರುವ ಅನೇಕ ಮಕ್ಕಳನ್ನು ಎಸ್‌ಓಎಸ್ ಗ್ರಾಮಕ್ಕೆ ಕರೆತಂದಿತು. ಈ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಲಾತೂರಿನಲ್ಲಿ ಹೊಸ ಗ್ರಾಮವೊಂದನ್ನು ಸ್ಥಾಪಿಸಲಾಯಿತು. ಇದು ಈಗ ಬಹಳ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಪಂಜಾಬ್ ಮತ್ತು ಜಮ್ಮೂ ಕಾಶ್ಮೀರ ರಾಜ್ಯಗಳಲ್ಲಿನ ಭಯೋತ್ಪಾದಕರ ಚಟುವಟಿಕೆಗಳಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಜನರು ಸಾವನ್ನಪ್ಪಿದರು, ಅನೇಕ ಮಂದಿ ದೇಶದ ಬೇರೆ ಭಾಗಗಳಿಗೆ ವಲಸೆ ಹೋದರು. ಇದರಿಂದ ದುರಾದೃಷ್ಟಕಾರಿ ಮಕ್ಕಳು ಅನಾಥರಾದರು. ಮಕ್ಕಳ ಕರೆಗೆ ಓಗೊಟ್ಟ ಎಸ್‌ಓಎಸ್, ತೊಂದರೆಗೀಡಾದ ಈ ಮಕ್ಕಳ ಖಾಯಂ ಕಾಳಜಿ ವಹಿಸಿಕೊಳ್ಳಲು ಜಮ್ಮೂ ಮತ್ತು ರಾಜಪುರ (ಪಂಜಾಬ್)ಗಳಲ್ಲಿ ಎರಡು ಎಸ್‌ಓಎಸ್ ಮಕ್ಕಳ ಗ್ರಾಮಗಳನ್ನು ಸ್ಥಾಪಿಸಿತು. ತುರ್ತು ಪರಿಹಾರ ಕಾರ್ಯಕ್ರಮದ ಭಾಗವಾಗಿ ಜಮ್ಮು ಮತ್ತು ಕಾಶ್ಮೀರದಿಂದ ವಲಸೆ ಬಂದಿರುವ ದೊಡ್ಡ ಸಂಖ್ಯೆಯ ಯುವಜನರು ಮತ್ತು ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಲು ಅನೇಕ ಕಸಬುಗಳ ತರಬೇತಿಯನ್ನು ಅವರಿಗೆ ನೀಡಲಾಯಿತು. ಇದರಿಂದ ತಮ್ಮ ಕುಟುಂಬಗಳ ಪುನರ್ವಸತೀಕರಣ ಕಾರ್ಯಕ್ಕೆ ಅವರು ನೆರವಾಗುವಂತಾಯಿತು. ಭಾರತ ಸರಕಾರದ ಡಿಓಎಸಿಸಿಯಿಂದ ಮಾನ್ಯತೆ ಪಡೆದ 'ಓ ಹಂತ'ದ ಕಂಪ್ಯೂಟರ್ ಅಪ್ಲಿಕೇಶನ್ ಕೋರ್ಸ್ ತರಬೇತಿಯನ್ನು 200ಕ್ಕೂ ಹೆಚ್ಚು ಯುವಜನರಿಗೆ ಮತ್ತು ಮಹಿಳೆಯರಿಗೆ ನೀಡಲಾಯಿತು.

1996ರ ನವೆಂಬರ್ ತಿಂಗಳಲ್ಲಿ ತೀವ್ರ ಚಂಡಮಾರುತ ಆಂಧ್ರಪ್ರದೇಶ ರಾಜ್ಯಕ್ಕೆ ಅಪ್ಪಳಿಸಿ ಅನೇಕ ಮಕ್ಕಳು ಮನೆಕಳೆದುಕೊಂಡರು. ತೊಂದರೆಗೆ ಈಡಾದ ಈ ಎಲ್ಲಾ ಮಕ್ಕಳಿಗೆ ಸಹಾಯ ನೀಡಲು ಎಸ್‌ಓಎಸ್ ಮುಂದೆ ಬಂದಿತು. ವಿಶಾಖಪಟ್ಟಣದಲ್ಲಿ ಹೊಸ ಗ್ರಾಮವೊಂದನ್ನು ಪ್ರಾರಂಭಿಸುವ ಕೆಲಸ ಭರದಿಂದ ಸಾಗಿತು. ಎಸ್‌ಓಎಸ್‌ನ ಪ್ರಯತ್ನಗಳಿಗೆ ಆಂಧ್ರ ಸರಕಾರದಿಂದ ಪ್ರಶಂಸೆ ದೊರಕಿತು. 1999ರಲ್ಲಿ ಮತ್ತೊಮ್ಮೆ ಆಂಧ್ರಪ್ರದೇಶದಲ್ಲಿ ತುರ್ತು ಸಂದರ್ಭ ಕಾಣಿಸಿಕೊಂಡು, ಸರಕಾರ ಹೈದ್ರಾಬಾದಿನಲ್ಲಿ 230ಕ್ಕೂ ಹೆಚ್ಚು ಮಕ್ಕಳನ್ನು (2 ವರ್ಷಕ್ಕಿಂತ ಕಡಿಮೆ ವಯಸ್ಸಿನ ಶಿಶುಗಳೇ ಹೆಚ್ಚಿದ್ದರು) ನೀತಿಬಾಹಿರ ಜನರಿಂದ ರಕ್ಷಿಸಿತು. ಅದು ಬಹಳ ಗಂಭೀರ ಸನ್ನಿವೇಶವಾಗಿದ್ದು ರಾಜ್ಯ ಸರಕಾರ ಭಾರತದ ಎಸ್‌ಓಎಸ್ ಮಕ್ಕಳ ಗ್ರಾಮಗಳ ಅಧ್ಯಕ್ಷರನ್ನು ಸಂಪರ್ಕಿಸಿ ಅವರ ನೆರವನ್ನು ಕೇಳಿತು. ಅವರು ತ್ವರಿತಗತಿಯಿಂದ ಈ ಶಿಶುಗಳಿಗೆ ಹೈದ್ರಾಬಾದಿನಲ್ಲಿ ಅಗತ್ಯವಿರುವ ಸೇವಾ ವ್ಯವಸ್ಥೆಯನ್ನು ಮಾಡಿದರು. ಈ ರೀತಿ ಸಂಸ್ಥೆಯ ಕ್ಷಿಪ್ರ ಮತ್ತು ಸಮಯೋಚಿತ ಕಾರ್ಯಾಚರಣೆ ಈ ಮಕ್ಕಳ ಬದುಕನ್ನು ಉಳಿಸಿತು.

1999ರ ಅಕ್ಟೋಬರ್ 29ರಂದು ವಿಧ್ವಂಸಕಾರಿ ಚಂಡಮಾರುತ ಒರಿಸ್ಸಾ ರಾಜ್ಯದ ಮೇಲೆ ಅಪ್ಪಳಿಸಿತು. ಇದರಿಂದ ಅಪಾರ ಸೊತ್ತು ನಷ್ಟ ಜೀವಹಾನಿಗಳು ಉಂಟಾದವು. 15,000ಕ್ಕಿಂತ ಹೆಚ್ಚು ಜನರು ಸಾವನ್ನಪ್ಪಿದರು. ಇವರು ಬಿಟ್ಟುಹೋಗಿರುವ ಮಕ್ಕಳು ಅನಾಥರಾಗಿ ಮನೆಯಿಲ್ಲದವರಾಗಿ ಉಳಿದರು. ಭಾರತದ ಎಸ್‌ಓಎಸ್ ಮಕ್ಕಳ ಗ್ರಾಮದವರು ಪರಿಹಾರ ಕ್ಯಾಂಪ್‌ಗಳನ್ನು ನಡೆಸಲು ತಕ್ಷಣ ಕಾರ್ಯಪ್ರವೃತ್ತರಾದರು. ಅನೇಕ ಮಕ್ಕಳನ್ನು ಭುವನೇಶ್ವರದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದ ಎಸ್‌ಓಎಸ್ ಮಕ್ಕಳ ಗ್ರಾಮಕ್ಕೆ ಕರೆತಂದು ಸೇರಿಸಲಾಯಿತು. ಇವರ ಪರಿಹಾರ ಕಾರ್ಯ ಸರಕಾರ ಮತ್ತು ಜನರ ಅಪಾರ ಪ್ರಶಂಸೆಗೆ ಪಾತ್ರವಾಗಿತ್ತು. ಅನಾಥರಾದ, ಮನೆ ಕಳೆದುಕೊಂಡ ಮಕ್ಕಳ ಸಂಖ್ಯೆ ಬಹಳವಿದ್ದುದರಿಂದ ಹೊಸ ಎಸ್‌ಓಎಸ್ ಮಕ್ಕಳ ಗ್ರಾಮವನ್ನು ಈ ರಾಜ್ಯದಲ್ಲಿ ಸ್ಥಾಪಿಸುವ ಅಗತ್ಯ ಕಂಡುಬಂತು. ಇದಕ್ಕೆ ಆದ್ಯತೆಯಲ್ಲಿ ಕಾರ್ಯ ನಡೆಸಲಾಯಿತು. ಚಂಡಮಾರುತದ ಪರಿಣಾಮವನ್ನು ಅನುಭವಿಸಿದ ಬಡಮಕ್ಕಳ ಕಾಳಜಿಯನ್ನು ವಹಿಸಿಕೊಳ್ಳುವ ಹೊಸ ಗ್ರಾಮವೊಂದು ರಾಜ್ಯ ಸರಕಾರದ ನೆರವಿನೊಂದಿಗೆ ಅಸ್ತಿತ್ವಕ್ಕೆ ಬರಲಿದೆ.

2001, ಜನವರಿ 26ರಂದು ಗುಜರಾತಿನಲ್ಲಿ ಪ್ರಬಲ ಭೂಕಂಪ ಸಂಭವಿಸಿತು. ಸಾವಿರಾರು ಜನರು ಸಾವನ್ನಪ್ಪಿದರು ಮತ್ತು ಲಕ್ಷಗಟ್ಟಳೆ ಜನರು ಮನೆ ಕಳೆದುಕೊಂಡರು. ಪ್ರಾಣ ಹಾನಿ ಮತ್ತು ಸೊತ್ತು ನಷ್ಟದ ಪ್ರಮಾಣ ಅತ್ಯಂತ ಘೋರವಾಗಿತ್ತು. ತರಾತುರಿಯಲ್ಲಿ ಕಾರ್ಯವನ್ನು ನಡೆಸಿ ತುರ್ತು ಪರಿಹಾರ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಹೆಚ್ಚು ತೊಂದರೆಗೀಡಾದ ಪ್ರದೇಶಗಳಿಗೆ ಅನುಭವಿ ಸಹ-ಕಾರ್ಮಿಕರ ತಂಡವನ್ನು ಕಳುಹಿಸಿಕೊಡಲಾಯಿತು. ಅವರು ಬೆಚ್ಚಗಿನ ಉಡುಪು, ಆಹಾರ ಮತ್ತು ತಾತ್ಕಾಲಿಕ ಆಸರೆಯನ್ನು ಒದಗಿಸಿದರು. ಅತ್ಯಂತ ಹೆಚ್ಚು ನಷ್ಟ ಉಂಟಾಗಿದ್ದ ಕಚ್ ಪ್ರಾಂತದಲ್ಲಿ ಮಕ್ಕಳ ಕಾಳಜಿ ವಹಿಸುವ ಮತ್ತು ಪರಿಹಾರ ಒದಗಿಸುವ 25 ಕೇಂದ್ರಗಳನ್ನು ಸ್ಥಾಪಿಸಲಾಯಿತು. ಪ್ರತಿದಿನ 1750ಕ್ಕಿಂತ ಹೆಚ್ಚು ಮಕ್ಕಳು ಇದರ ನೆರವನ್ನು ಪಡೆದರು. ಎಸ್‌ಓಎಸ್ ಮಕ್ಕಳ ಗ್ರಾಮವನ್ನು ಸ್ಥಾಪಿಸುವ ಯೋಜನೆ ಕೂಡಾ ಆದ್ಯತೆಯ ಮೇರೆಯಲ್ಲಿ ಕಾರ್ಯಾಗತವಾಗಲಿದೆ.

**ಸಂಸ್ಥೆ ಮಾನ್ಯತೆ ಮತ್ತು ಪ್ರಶಸ್ತಿಗಳು:**

ಭಾರತ ಸರಕಾರ, ಭಾರತದ ಎಸ್‌ಓಎಸ್ ಮಕ್ಕಳ ಗ್ರಾಮಗಳ ಕಾರ್ಯವನ್ನು ಪ್ರಶಂಸಿಸಿದೆ. ಮತ್ತು ಇದರ ಕಾರ್ಯವಿಧಾನವನ್ನು ಅನುಸರಿಸುವಂತೆ ದೇಶದ ಇತರ ಮಕ್ಕಳ-ಕಾಳಜಿ ಸಂಸ್ಥೆಗಳಿಗೆ ಶಿಫಾರಸು ಮಾಡಿದೆ. ಅನೇಕ ರಾಜ್ಯ ಸರಕಾರಗಳು ಎಸ್‌ಓಎಸ್ ಮಕ್ಕಳ ಗ್ರಾಮಗಳ ಸ್ಥಾಪನೆಗೆ ತಮ್ಮ ರಾಜ್ಯಗಳಲ್ಲಿ ಜಮೀನನ್ನು ನೀಡಿದೆ.

ದೆಹಲಿಯ ರಾಜ್ಯ ಸರಕಾರವು ಭಾರತದ ಎಸ್‌ಓಎಸ್ ಮಕ್ಕಳ ಗ್ರಾಮಗಳ ಕಾರ್ಯವನ್ನು ಪ್ರಶಂಸಿಸಿದೆ. ಮತ್ತು ಇದರ ಕಾರ್ಯವಿಧಾನವನ್ನು ಅನುಸರಿಸುವಂತೆ ದೇಶದ ಇತರ ಮಕ್ಕಳ-ಕಾಳಜಿ ಸಂಸ್ಥೆಗಳಿಗೆ ಶಿಫಾರಸು ಮಾಡಿದೆ. ಅನೇಕ ರಾಜ್ಯ ಸರಕಾರಗಳು ಎಸ್‌ಓಎಸ್ ಮಕ್ಕಳ ಗ್ರಾಮಗಳ ಸ್ಥಾಪನೆಗೆ ತಮ್ಮ

Digitised by Bharatavani, CIIL

ರಾಜ್ಯಗಳಲ್ಲಿ ಜಮೀನನ್ನು ನೀಡಿವೆ.

ದೆಹಲಿಯ ರಾಜ್ಯ ಸರಕಾರವು ಭಾರತದ ಎಸ್‌ಓಎಸ್ ಮಕ್ಕಳ ಗ್ರಾಮಗಳಿಗೆ 19 ಜೂನ್, 1997ರಲ್ಲಿ ಬೆಸ್ಟ್ ವರ್ಕ್ ಡನ್ ಚೈಲ್ಡ್ ವೆಲ್‌ಫೇರ್ ಬೈ ಆನ್ ಇನ್‌ಸ್ಟಿಟ್ಯೂಟ್' (ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಸಂಸ್ಥೆಯೊಂದು ನಡೆಸಿದ ಉತ್ತಮ ಕಾರ್ಯ) ಎಂದು ರಾಜ್ಯ ಪ್ರಶಸ್ತಿಯನ್ನು ನೀಡಿದೆ.

**ಹಣಕಾಸು ನಿರ್ವಹಣೆ:** ಭಾರತ ಎಸ್‌ಓಎಸ್ ಮಕ್ಕಳ ಗ್ರಾಮಕ್ಕೆ Sponsors ಸ್ನೇಹಿತರಿಂದ ಮತ್ತು ಹಿತೈಷಿಗಳಿಂದ ದೇಣಿಗೆ ರೂಪದಲ್ಲಿ ಹಣವನ್ನು ಸ್ವೀಕರಿಸಲಾಗುತ್ತದೆ. ಭಾರತ ಸರಕಾರವು ಈ ಸಂಸ್ಥೆಗೆ ನೀಡಲಾಗುವ ಎಲ್ಲಾ ದೇಣಿಗೆಗಳನ್ನು ನೂರು ಪ್ರತಿಶತ ಆದಾಯ ತೆರಿಗೆಯಿಂದ ಮುಕ್ತಗೊಳಿಸಿದೆ.

**ಸಾಧನೆಗಳು:** ಎಸ್‌ಓಎಸ್ ಅನೇಕ ಯುವ ಗ್ರಾಮಗಳು/ಮನೆಗಳನ್ನು ಸ್ಥಾಪಿಸಿದೆ. ಇಲ್ಲಿ 14 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ನೆಲೆಸಿ ತಮ್ಮ ಶಿಕ್ಷಣವನ್ನು ಕೈಗೊಳ್ಳಬಹುದು, ಭವಿಷ್ಯದಲ್ಲಿ ತಮ್ಮ ನೆಲೆಯನ್ನು ಕಂಡುಕೊಳ್ಳಲು ವೃತ್ತಿ ತರಬೇತಿಯನ್ನು ಪಡೆಯಬಹುದು. ಇಲ್ಲಿದ್ದ ಅನೇಕ ಮಂದಿ ತಮ್ಮ ಬದುಕಿನಲ್ಲಿ ಉತ್ತಮ ರೀತಿಯಲ್ಲಿ ನೆಲೆಕಂಡಿದ್ದಾರೆ. 600ಕ್ಕೂ ಹೆಚ್ಚು ಯುವಕರು ಮತ್ತು ಯುವತಿಯರು ಮದುವೆಯಾಗಿ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ.

ದೇಶದಾದ್ಯಂತ ಅನೇಕರು ಎಸ್‌ಓಎಸ್ ಮಕ್ಕಳ ಗ್ರಾಮಗಳ ಮೂಲಕ ಬಹಳ ಉತ್ತಮ ಸಾಧನೆಯನ್ನು ದಾಖಲಿಸಿದ್ದಾರೆ. ಅವರು ವೈದ್ಯಕೀಯ, ಶಿಕ್ಷಣ, ನರ್ಸಿಂಗ್, ಬಿಸಿನೆಸ್ ಅಡ್‌ಮಿನಿಸ್ಟ್ರೇಶನ್, ಸಮಾಜ ಕಾರ್ಯ, ಸೆಕ್ರೆಟರೇಯಲ್ ಪ್ರಾಕ್ಟಿಸ್ ಇತ್ಯಾದಿ ಕ್ಷೇತ್ರಗಳಲ್ಲಿ ಅಧ್ಯಯನ ಮುಗಿಸಿ ಈ ಪ್ರದೇಶಗಳ ಜನರ ಸೇವೆಯಲ್ಲಿ ನಿರತರಾಗಿದ್ದಾರೆ. ಇವರಲ್ಲಿ ಹೆಚ್ಚು ಜನರು ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಸ್ವಯಂಉದ್ಯೋಗಿಗಳಾಗಿದ್ದರೆ, ಇನ್ನು ಕೆಲವರು ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ನಮ್ಮ ಅಸ್ಸಾಮ್ ಎಸ್‌ಓಎಸ್ ಗ್ರಾಮದ ಹದಿನಾಲ್ಕು ಮಂದಿ ಕಾರ್ಗಿಲ್ ಗಡಿಯಲ್ಲಿ ಹೋರಾಡಿದ್ದಾರೆ. ನಮ್ಮ ಅನೇಕ ಯುವಕರು ಭೂಸೇನೆಯಲ್ಲಿ ಮತ್ತು ಸೇವಾ ನರ್ಸಿಂಗ್ ಸೇವೆಯಲ್ಲಿದ್ದಾರೆ. ನಮ್ಮ ಯುವಜನರು ನಮಗೆ ಹೆಮ್ಮೆ ಉಂಟುಮಾಡಿದ್ದಾರೆ. ಭಾರತದಲ್ಲಿ ಬಡ ಮಕ್ಕಳ ಸಮಸ್ಯೆ ಅಗಾಧವಾಗಿದೆ. ದೇಶದಲ್ಲಿ ಎಸ್‌ಓಎಸ್ ಮಕ್ಕಳ ಗ್ರಾಮಗಳನ್ನು ಸ್ಥಾಪಿಸಲು ಅನೇಕ ಕಡೆಗಳಿಂದ ಒತ್ತಾಯ ಬಂದಿವೆ.

**ಮೂಲ: ಜೆ. ಎಲ್. ಕೌಲ್**
**ಅನು: ಡಾ. ಗೀತಾಶೆಣೈ**

# ಔ

## ಔದ್ಯೋಗಿಕ ಕೋರ್ಸ್‌ಗಳ ಪಠ್ಯಕ್ರಮ ವಿನ್ಯಾಸ

ಕೈಗಾರಿಕಾ ಕ್ರಾಂತಿಯ ನಂತರ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಕಂಡು ಬಂದವು. ಆಂಗ್ಲರ ಆಗಮನ ಶಿಕ್ಷಣ ಕ್ಷೇತ್ರದ ಅಮೂಲಾಗ್ರ ಬದಲಾವಣೆಗೆ ಕಾರಣವಾಯಿತು. ಇದರ ಪರಿಣಾಮವಾಗಿ ಶಿಕ್ಷಣ ಕ್ಷೇತ್ರ ವಿಸ್ತಾರಗೊಂಡಿತು. ಸ್ವಾತಂತ್ರ್ಯ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ವೈವಿಧ್ಯಮಯ ಶಿಕ್ಷಣ ನೀಡಲಾರಂಭಿಸಿದವು. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಪದವೀಧರ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಾ ಸಾಗಿತು. ಇದಕ್ಕೆ ಕಾರಣ ವಿದ್ಯಾರ್ಥಿಗಳು ಪಡೆಯುತ್ತಿರುವ ಶಿಕ್ಷಣವಾಗಿದೆ. ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿಪರತೆಯ ಮಾಹಿತಿ ಇಲ್ಲದಿರುವಿಕೆ ಹಾಗೂ ಪಡೆಯುವ ಶಿಕ್ಷಣವೇ ಒಂದು, ಕೈಗೊಳ್ಳುವ ಉದ್ಯೋಗವೇ ಮತ್ತೊಂದು ಆಗುತ್ತಿರುವುದರಿಂದ ಶಿಕ್ಷಣ ನೈಜ ಜೀವನದಿಂದ ದೂರ ಸರಿಯುತ್ತಿರುವುದನ್ನು ಗಮನಿಸಿ ಮೊದಲಿಯಾರ್ ಆಯೋಗ (1953), ಕೊಠಾರಿ ಆಯೋಗ (1964) ಮತ್ತು ಈಶ್ವರಭಾಯಿ ಪಟೇಲ್ ಸಮಿತಿ ಔದ್ಯೋಗಿಕ ಶಿಕ್ಷಣವನ್ನು ಅಳವಡಿಸುವ ಶಿಫಾರಸ್ಸು ಮಾಡಿದವು.

ಔದ್ಯೋಗಿಕ ಶಿಕ್ಷಣ ಎಂದರೆ ವಿದ್ಯಾರ್ಥಿಯೊಬ್ಬನು ಪಡೆಯುವ ಶಿಕ್ಷಣದ ಜೊತೆಗೆ ಯಾವುದಾದರು ವೃತ್ತಿಯಲ್ಲಿ ಕೌಶಲ್ಯದೊಂದಿಗೆ ತರಬೇತಿ ಪಡೆದು ಆ ವೃತ್ತಿಯನ್ನು ಸ್ವತಂತ್ರವಾಗಿ ನಿರ್ವಹಿಸುವ ಸಾಮರ್ಥ್ಯ, ದಕ್ಷತೆ, ನೈಪುಣ್ಯ, ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸೂಕ್ತವಾದ ಶಿಕ್ಷಣ.

**ಔದ್ಯೋಗಿಕ ಶಿಕ್ಷಣದ ಪಠ್ಯಕ್ರಮದ ಧ್ಯೇಯೋದ್ದೇಶಗಳು:**

- ರಾಷ್ಟ್ರೀಯ ಗುರಿಯಾದ ಗ್ರಾಮಗಳ ಅಭಿವೃದ್ಧಿ ಹಾಗೂ ಗ್ರಾಮಗಳಲ್ಲಿನ ಬಡತನ, ನಿರುದ್ಯೋಗವನ್ನು ನಿವಾರಣೆ ಮಾಡುವುದು.
- ಶಿಕ್ಷಣವನ್ನು ಉತ್ಪಾದನೆ, ರಾಷ್ಟ್ರಾಭಿವೃದ್ಧಿ ಹಾಗೂ ಬಡತನ, ನಿರುದ್ಯೋಗ ನಿವಾರಣೆಗೆ ಸಾಧನವನ್ನಾಗಿ ಮಾಡುವುದು.
- ಉತ್ಪಾದನೆ, ಆರ್ಥಿಕಾಭಿವೃದ್ಧಿ ಹಾಗೂ ವ್ಯಕ್ತಿಯ ಭವಿಷ್ಯದೊಡನೆ ಶಿಕ್ಷಣದ ಸಂಬಂಧ ಕಲ್ಪಿಸುವುದು.
- ವಿದ್ಯಾರ್ಥಿಗಳಲ್ಲಿ ಆಧುನಿಕ ತಂತ್ರಜ್ಞಾನದ ಮಟ್ಟವನ್ನು ಹೆಚ್ಚಿಸುವುದು.
- ವಂಶಪಾರಂಪರ್ಯವಾಗಿ ಬಂದಿರುವ ಕಸುಬು ಮತ್ತು ಉಪಕಸುಬು, ಉದ್ಯೋಗಗಳನ್ನು ಪುನಶ್ಚೇತನಗೊಳಿಸಿ

Digitised by Bharatavani, CIIL

ಅವುಗಳಿಗೆ ವೈಜ್ಞಾನಿಕ ಹಾಗೂ ತಾಂತ್ರಿಕ ನೆರವು ನೀಡುವುದು.

- ಸಾಮಾನ್ಯ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಹಂತಗಳಲ್ಲಿ ಕಂಡು ಬರುತ್ತಿರುವ ವಿದ್ಯಾರ್ಥಿಗಳ ಅನವಶ್ಯಕ ಒತ್ತಡವನ್ನು ಕಡಿಮೆ ಮಾಡುವುದು.
- ವಿದ್ಯಾರ್ಥಿಗಳು ಸೃಜನಶೀಲತೆ, ಕೌಶಲ್ಯಗಳನ್ನು ಬೆಳೆಸಿಕೊಂಡು, ತಮ್ಮ ಬಿಡುವಿನ ವೇಳೆಯನ್ನು ಕಲಿಕೆ–ಗಳಿಕೆಯ ಚಟುವಟಿಕೆಗಳಲ್ಲಿ ತೊಡಗುವಂತೆ ಉತ್ತೇಜಿಸುವುದು.
- ಜೀವನಕ್ಕೂ, ಶಿಕ್ಷಣಕ್ಕೂ ಇರುವ ಅಂತರವನ್ನು ಕಡಿಮೆ ಮಾಡುವುದು.
- ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳುವುದು.
- ಉದ್ದಿಮೆ, ಕೈಗಾರಿಕೆ, ಶಿಕ್ಷಣ ಇವುಗಳ ನಡುವೆ ಪರಸ್ಪರ ಸಂಪರ್ಕ ಕಲ್ಪಿಸುವುದು.
- ರಾಷ್ಟ್ರೀಯ ಅಗತ್ಯತೆಗಳಿಗೆ ಪೂರಕವಾದ ತಂತ್ರಜ್ಞಾನದಲ್ಲಿ ತರಬೇತಿ ನೀಡುವುದು.

**ಔದ್ಯೋಗಿಕ ಶಿಕ್ಷಣ ಪಠ್ಯಕ್ರಮದ ಹಂತಗಳು:**

- ಔದ್ಯೋಗಿಕ ತರಬೇತಿ ಸಂಸ್ಥೆ (Industrial Training Institutes)ಗಳಲ್ಲಿರುವ ವಿವಿಧ ಶಿಕ್ಷಣ ಕೊರ್ಸ್‌ಗಳ ಮೂಲಕ ಅಗತ್ಯ ಸಾಮರ್ಥ್ಯವಿರುವ ಕೌಶಲ್ಯಗಳನ್ನು ಬೆಳೆಸಲು ಸೂಕ್ತ ತರಬೇತಿ ನೀಡಲಾಗುತ್ತಿದೆ.
- ಪಾಲಿಟೆಕ್ನಿಕ್ ಹಂತದಲ್ಲಿ ವಿವಿಧ ಡಿಪ್ಲೋಮಾ ಕೋರ್ಸ್‌ಗಳ ಮೂಲಕ ಅಗತ್ಯ ತಂತ್ರಜ್ಞಾನ, ಕೌಶಲ್ಯ, ಸಾಮರ್ಥ್ಯವನ್ನು ಬೆಳೆಸುವುದರೊಂದಿಗೆ ದೇಶದ ಅಭಿವೃದ್ಧಿಗೆ ಪೂರಕವಾದ ಜ್ಞಾನವನ್ನು ಬೆಳೆಸಲು ತರಬೇತಿ ನೀಡಲಾಗುತ್ತಿದೆ.
- ಕಲೆ, ವಾಸ್ತುಶಿಲ್ಪ ಹಾಗೂ ಇತರೆ ವೃತ್ತಿ ಕ್ಷೇತ್ರಗಳಲ್ಲಿ ವೃತ್ತಿಶಿಕ್ಷಣ ನೀಡಲಾಗುತ್ತಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (1986)ಗೆ ಅನುಗುಣವಾಗಿ ಕೇಂದ್ರ ಸರಕಾರ ಔದ್ಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ನೀಡುತ್ತದೆ. ಇದರ ಆಧಾರದ ಮೇಲೆ ಎಲ್ಲಾ ರಾಜ್ಯ ಸರ್ಕಾರಗಳು ತಮ್ಮ ರಾಜ್ಯಗಳಲ್ಲಿ ಪ್ರೌಢಶಾಲಾ ಹಂತದಲ್ಲಿ, ಪದವಿ ಹಂತದಲ್ಲಿ ಅನೇಕ ವೃತ್ತಿ ಶಿಕ್ಷಣ ಕೋರ್ಸಗಳನ್ನು ಆರಂಭಿಸಿವೆ. ಹಾಗೆಯೇ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗವು ಸಹ ವಿಶ್ವವಿದ್ಯಾಲಯ ಮಟ್ಟದಲ್ಲಿ ಅನೇಕ ಹೊಸ ಔದ್ಯೋಗಿಕ ಶಿಕ್ಷಣ ಕೋರ್ಸ್‌ಗಳನ್ನು ಆರಂಭಿಸಲು ಪ್ರಯತ್ನ ಕೈಗೊಂಡಿದೆ.

**ಔದ್ಯೋಗಿಕ ಶಿಕ್ಷಣದ ಅವಕಾಶಗಳು:**

ಕೃಷಿ ಕ್ಷೇತ್ರ, ವಾಣಿಜ್ಯ ಕ್ಷೇತ್ರ, ಗೃಹ ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ತಾಂತ್ರಿಕ, ಸಹಕಾರ, ಮಾರುಕಟ್ಟೆ, ಜವಳಿ ಇತ್ಯಾದಿ.

ಕೊಠಾರಿ ಆಯೋಗವು ಇಡಿ ಶಿಕ್ಷಣವನ್ನು 10+2+3 ಎಂದು ವಿಂಗಡಿಸಿ ಸಾಮಾನ್ಯ ಶಿಕ್ಷಣ, ವೃತ್ತಿ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಹೀಗೆ ಮೂರು ರೀತಿಯಲ್ಲಿ ವಿಂಗಡಿಸಿತು. 1962ರಲ್ಲಿ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ಕೊಠಾರಿ ಆಯೋಗದ ಶಿಫಾರಸ್ಸಿನ ಮೇರೆಗೆ ಪ್ರೌಢಶಾಲಾ ಹಂತದಿಂದಲೇ ಔದ್ಯೋಗಿಕ ಶಿಕ್ಷಣವನ್ನು ಜಾರಿಗೆ ತರಲು ಅನುಮತಿಸಿತು.

1976ರಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ತರಬೇತಿ ಮಂಡಳಿ (N.C.E.R.T) ಪ್ರಕಟಿಸಿರುವ "Education and its Vocationalization" ಎಂಬ ಗ್ರಂಥವು ಔದ್ಯೋಗಿಕ ಶಿಕ್ಷಣದ ವಿವಿಧ ಕೋರ್ಸ್‌ಗಳನ್ನು ತಿಳಿಸಿದೆ. ಶಿಕ್ಷಣ ಮತ್ತು ಉದ್ಯೋಗದ ನಡುವಿರುವ ಸಂಬಂಧ ಹಾಗೂ ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ವೃತ್ತಿಪರ ಶಿಕ್ಷಣದ ಅಗತ್ಯತೆಯನ್ನು ತಿಳಿಸುತ್ತದೆ.

ಕರ್ನಾಟಕದಲ್ಲಿ 1977–78 ರಲ್ಲಿ +2 ಹಂತದಲ್ಲಿ ಔದ್ಯೋಗಿಕ ಶಿಕ್ಷಣ ಡಿಪ್ಲೋಮೋ ಕೋರ್ಸ್ ಜಾರಿಗೆ ತರಲಾಯಿತು. ಈ ಕುರಿತು ಮೇಲ್ವಿಚಾರಣೆ ಮಾಡಲು ಸರ್ಕಾರ ರಾಜ್ಯ ಔದ್ಯೋಗಿಕ ಶಿಕ್ಷಣ ನಿರ್ದೇಶನಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಔದ್ಯೋಗಿಕ ಶಿಕ್ಷಣದ ಕಡೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ SSLC ಮತ್ತು PUC ತರಗತಿಗಳಲ್ಲಿ ತೇರ್ಗಡೆಯಾದವರನ್ನು ಔದ್ಯೋಗಿಕ ಶಿಕ್ಷಣದ ಕೋರ್ಸ್‌ಗೆ ಪ್ರವೇಶ ನೀಡುತ್ತಿದೆ. ಈ ಹಂತದಲ್ಲಿ ಕಲಿಕೆಯ 25% ಸಮಯವನ್ನು ಭಾಷಾ ಬೋಧನೆಗೂ 45% ಸಮಯವನ್ನು ಔದ್ಯೋಗಿಕ ಶಿಕ್ಷಣ ವಿಷಯಗಳ ಬೋಧನೆಗೂ ಸೀಮಿತವಾಗಿರುತ್ತದೆ. ಉಳಿದ 30% ಸಮಯವನ್ನು ಪ್ರಾಯೋಗಿಕ ಅನುಭವಕ್ಕೆ ಗೊತ್ತು ಪಡಿಸಲಾಗಿದೆ. +2 ಹಂತದ ಔದ್ಯೋಗಿಕ ಶಿಕ್ಷಣವನ್ನು ಪಡೆದು, ಪದವಿ ತರಗತಿಯ ವಿಜ್ಞಾನ, ಕಲಾ, ವಾಣಿಜ್ಯ, ವಿಭಾಗದಲ್ಲಿ ಪಡೆದು ತನ್ನ ಶಿಕ್ಷಣವನ್ನು ಮುಂದುವರಿಸಬಹುದು.

**ಔದ್ಯೋಗಿಕ ಶಿಕ್ಷಣ ಪಠ್ಯಕ್ರಮಕ್ಕೆ ಕೊಠಾರಿ ಆಯೋಗದ ಶಿಫಾರಸ್ಸುಗಳು:**

- ಸಮಾಜದ ಅವಶ್ಯಕತೆ ಮತ್ತು ಅಗತ್ಯತೆಗನುಗುಣವಾದಂತಹ ಹಾಗೂ ವಿದ್ಯಾರ್ಥಿಗಳ ಆಸೆ–ಆಕಾಂಕ್ಷೆಗಳನ್ನು ಈಡೇರಿಸುವಂತಹ ಮೂಲಭೂತ ವಿಷಯಗಳು ವೃತ್ತಿ ಶಿಕ್ಷಣ ಕೋರ್ಸಿನ ಪಠ್ಯಕ್ರಮದಲ್ಲಿ ಒಳಗೊಂಡಿರಬೇಕು.
- ವಿವಿಧ ರೀತಿಯ ಔದ್ಯೋಗಿಕ ಶಿಕ್ಷಣ ಕೋರ್ಸ್‌ಗಳಿಗೆ ಸೂಕ್ತವಾದ ಅಭ್ಯರ್ಥಿಗಳ ಆಯ್ಕೆಗಾಗಿ ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
- ರಾಜ್ಯ ಸರ್ಕಾರಗಳು ಔದ್ಯೋಗಿಕ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಂಡು ಬರುವ ಸಲುವಾಗಿ ವೃತ್ತಿ ಶಿಕ್ಷಣ ಮಂಡಳಿಯನ್ನು ತೆರೆದು ಅರ್ಹ ಸಿಬ್ಬಂದಿಗಳನ್ನು ನೇಮಿಸಿ ಗುಣಮಟ್ಟದ ಕಾರ್ಯ ನಿರ್ವಹಿಸಬೇಕು.

Digitised by Bharatavani, CIIL

- ಪ್ರಾರಂಭಿಸಿದ ವಿವಿಧ ರೀತಿಯ ಔದ್ಯೋಗಿಕ ಶಿಕ್ಷಣ ಕೋರ್ಸ್‌ಗಳಿಗೆ ಅಗತ್ಯ ಸೌಲಭ್ಯಗಳನ್ನೊದಗಿಸಲು ಸಾಕಷ್ಟು ಆರ್ಥಿಕ ನೆರವನ್ನು ಒದಗಿಸಬೇಕು.
- ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಕ್ಕೆ ಹೆಚ್ಚು ಉಪಯುಕ್ತವಾಗುವಂತಹ ಪಠ್ಯವಿಷಯಗಳನ್ನು ಕಾಲ-ಕಾಲಕ್ಕೆ ನೂತನವಾಗಿ ಆವಿಷ್ಕರಿಸಿ ಪಠ್ಯಕ್ರಮದಲ್ಲಿ ಅಳವಡಿಸಬೇಕು.
- ಇಂದಿನ ಕೈಗಾರಿಕೆಗಳ ಅವಶ್ಯಕತೆಗನುಸಾರವಾಗಿ ಸದ್ಯದಲ್ಲಿನ ತರಬೇತಿ ಕೋರ್ಸ್‌ಗಳನ್ನು ಪರಿಷ್ಕರಿಸಿ ಅಗತ್ಯವಾದ ನವೀನ ಕೋರ್ಸ್‌ಗಳನ್ನು ಹೊಸದಾಗಿ ಸೇರಿಸಬೇಕು.
- ಪಾಲಿಟೆಕ್ನಿಕ್‌ಗಳಲ್ಲಿ ಕಲಿಸುವ ಕೋರ್ಸ್‌ಗಳ ಸಂಖ್ಯೆಗಳನ್ನು ಅಗತ್ಯತೆಯನ್ನರಿತು ಹೆಚ್ಚಿಸಬೇಕು.
- ಡಿಪ್ಲೊಮೋ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಲ್ಲಿ ಹೆಣ್ಣುಮಕ್ಕಳಿಗೆ ಗೃಹವಿಜ್ಞಾನ, ನರ್ಸಿಂಗ್, ಟೈಲರಿಂಗ್ ಮುಂತಾದ ವಿಷಯಗಳನ್ನು ಸೇರಿಸುವುದು.
- ವೃತ್ತಿ ಶಿಕ್ಷಣ ವಿಸ್ತರಣೆಯು ಮಾನವ ಶಕ್ತಿಯ ಅವಶ್ಯಕತೆಗನು ಸಾರವಾಗಿರಬೇಕು.

**ಔದ್ಯೋಗಿಕ ಶಿಕ್ಷಣ ಪಠ್ಯಕ್ರಮ ಒಳಗೊಂಡಿರುವ ಅಂಶಗಳು:**

- ಪ್ರತಿ ಉದ್ಯೋಗಕ್ಕೂ ಬೇಕಾದ ಅದಕ್ಕೆ ಅಗತ್ಯವಾದ ಜ್ಞಾನ, ಕೌಶಲ್ಯಗಳಲ್ಲಿ ತರಬೇತಿ ನೀಡಬೇಕು.
- ವಿಶೇಷ ಶಕ್ತಿಗಳು ಎಂದರೆ ಕರಕುಶಲ ಕೌಶಲ್ಯ, ವಾಕ್ ಚತುರತೆ, ನಾಯಕತ್ವ, ಬುದ್ಧಿಶಕ್ತಿ, ಸ್ಮರಣೆ ಯೋಚನೆ, ವಿವೇಚನಾ ಶಕ್ತಿ, ಕಲ್ಪನಾ ಶಕ್ತಿ, ಸೃಜನಶೀಲತೆಗಳನ್ನು ಉತ್ಕೃಷ್ಟಗೊಳಿಸಬೇಕು.
- ವಿದ್ಯಾರ್ಥಿಯು ಯಾವುದೇ ಉದ್ಯೋಗವನ್ನು ಆರಿಸಿಕೊಳ್ಳುವ ಮುನ್ನ ಆ ಉದ್ಯೋಗದಲ್ಲಿ ತೊಡಗುವ ಆಸಕ್ತಿ, ಅಭಿರುಚಿ, ಆಸೆ, ಆತ್ಮವಿಶ್ವಾಸದಿಂದ ಕೂಡಿರುವುದನ್ನು ತಿಳಿದುಕೊಳ್ಳಬೇಕು.
- ಕೋರ್ಸಿನ ನಂತರ ಪಡೆಯುವ ಉದ್ಯೋಗದಿಂದ ದೊರಕುವ ಸ್ಥಾನಮಾನಗಳು, ಆರ್ಥಿಕ ಲಾಭ ಮೊದಲಾದವುಗಳ ಬಗ್ಗೆ ಸೂಕ್ತ ಅರಿವು ಮೂಡಿಸಬೇಕು.

ವಿದ್ಯಾರ್ಥಿಯು ಔದ್ಯೋಗಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಉದ್ಯೋಗಾವಕಾಶವನ್ನು ಪಡೆಯಲು ಆ ಶಿಕ್ಷಣ ಸಹಕಾರಿಯಾಗಬೇಕು, ಈ ನಿಟ್ಟಿನಲ್ಲಿ ಔದ್ಯೋಗಿಕ ಶಿಕ್ಷಣ ಸಹಾಯಕವಾಗಿದೆ. ಹಾಗಾಗಿ ಔದ್ಯೋಗಿಕ ಶಿಕ್ಷಣ ಪಠ್ಯಕ್ರಮದ ವಿನ್ಯಾಸವು ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ.

–ಕಾಂತರಾಜು ಎಂ. ಎಸ್.

## ಔದ್ಯೋಗಿಕ ಕೋರ್ಸ್‌ಗಳು

ಔದ್ಯೋಗಿಕ ಶಿಕ್ಷಣ ಎಂದರೆ ಉದ್ಯೋಗವನ್ನು ಅಥವಾ ವೃತ್ತಿಯನ್ನು ಒದಗಿಸುವುದಕ್ಕೆ ಸಹಾಯಕವಾದ ಶಿಕ್ಷಣ. ಇದನ್ನು ಔದ್ಯೋಗಿಕ ಶಿಕ್ಷಣ ಮತ್ತು ತರಬೇತಿ ಎಂದೂ ಕರೆಯಲಾಗುತ್ತದೆ (Vocational Education and Training or VET). ಈ ಶಿಕ್ಷಣವು ಒಂದು ಗೊತ್ತಾದ ಉದ್ಯೋಗಕ್ಕೆ ಅಥವಾ ವೃತ್ತಿಗೆ ವಿವಿಧ ಹಂತಗಳಲ್ಲಿ ಜನರನ್ನು ತಯಾರು ಮಾಡುತ್ತದೆ. ಉದಾಹರಣೆಗೆ: ವ್ಯಾಪಾರ ಮಾಡುವುದು, ಕೌಶಲದಿಂದ ಕೂಡಿದ ಕೆಲಸ ಮಾಡುವುದು, ತಾಂತ್ರಿಕ ಜ್ಞಾನ ಅಗತ್ಯ ಇರುವ ಕೆಲಸವನ್ನು ಮಾಡುವುದು, ಅಥವಾ ಇಂಜಿನಿಯರಿಂಗ್ ಉದ್ಯೋಗ, ಲೆಕ್ಕ ಇಡುವ ಉದ್ಯೋಗ, ನರ್ಸ್ ಕೆಲಸ, ಔಷಧಿ ಅಂಗಡಿ ನಡೆಸುವ ಕೆಲಸ, ಕಾನೂನಿಗೆ ಸಂಬಂಧಪಟ್ಟ ಕೆಲಸ, ಇತ್ಯಾದಿ, ಈ ರೀತಿಯ ಕೆಲಸಗಳಿಗೆ ಬೇಕಾದ ಶಿಕ್ಷಣ ಮತ್ತು ತರಬೇತನ್ನು ವೃತ್ತಿಪರ ಕೋರ್ಸ್‌ಗಳು ನೀಡುತ್ತವೆ.

ಹಸ್ತ ಕೌಶಲ ಅಥವ ಕ್ರಾಫ್ಟ್ ಉದ್ಯೋಗವು ಸಾಮಾನ್ಯವಾಗಿ ಕೈಕೆಲಸವಾಗಿರುತ್ತದೆ. ಎಂದರೆ ಅದು ಕಾರ್ಯರೂಪದ್ದಾಗಿರುತ್ತದೆ ಮತ್ತು ಸಾಂಪ್ರದಾಯಿಕವಾದ ಶಿಕ್ಷಣವಾಗಿರುವುದಿಲ್ಲ, ಕೇವಲ ಒಂದು ಉದ್ಯೋಗಕ್ಕೆ ಮಾತ್ರ ಅದು ಸಂಬಂಧಪಟ್ಟಿರುತ್ತದೆ. ಇದನ್ನು ತಾಂತ್ರಿಕ ಶಿಕ್ಷಣ ಎಂದೂ ಕರೆಯಲಾಗುತ್ತದೆ. ಇಲ್ಲಿ ತರಬೇತನ್ನು ಪಡೆಯುವವರು ಹಲವು ನಿರ್ದಿಷ್ಟ ತಾಂತ್ರಿಕತೆಯ ಬಗ್ಗೆ ಮಾತ್ರ ವಿಶೇಷವಾದ ಕೌಶಲವನ್ನು ಗಳಿಸುತ್ತಾರೆ.

ಔದ್ಯೋಗಿಕ ಶಿಕ್ಷಣವನ್ನು ಕಾರ್ಯವಿಧಾನ ಜ್ಞಾನದ ಬೋಧನೆ ಎಂದು ಹೇಳಬಹುದು. ಇದು ವೈಜ್ಞಾನಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಶಿಕ್ಷಣದಿಂದ ಹೇಗೆ ಭಿನ್ನವಾದುದು ಎಂಬುದನ್ನು ತಿಳಿಯಬಹುದು. ಅದು ಹೆಚ್ಚಾಗಿ ಸಿದ್ಧಾಂತಗಳಿಗೆ ಮತ್ತು ಮೇಲ್ಪಟ್ಟು ಪರಿಕಲ್ಪನಾ ಜ್ಞಾನಕ್ಕೆ ಹೆಚ್ಚಿನ ಗಮನವನ್ನು ಕೊಡುವುದಿಲ್ಲ. ಅದು ಪ್ರಾಥಮಿಕ ಹಂತದ ಗುಣಲಕ್ಷಣವನ್ನು ಹೊಂದಿದೆ. ಔದ್ಯೋಗಿಕ ಶಿಕ್ಷಣವು ದ್ವಿತೀಯ ಮತ್ತು ಅದಕ್ಕೂ ಮೇಲ್ಪಟ್ಟ ಹಂತದ ಗುಣಲಕ್ಷಣವನ್ನು ಹೊಂದಿದೆ. ಅದೂ ಅಲ್ಲದೆ ಔದ್ಯೋಗಿಕ ಶಿಕ್ಷಣವು ಹೆಚ್ಚಾಗಿ ಉದ್ಯೋಗಾರ್ಥಿಯ ತರಬೇತಿ ವ್ಯವಸ್ಥೆಯನ್ನು ಪ್ರಮುಖವಾಗಿ ಕಾಣುತ್ತದೆ. ಪೂರ್ವಕಲಿಕೆ ಔದ್ಯೋಗಿಕ ಶಿಕ್ಷಣವನ್ನು ಪಡೆಯುವವರಿಗೆ ಯಾವ ಮಟ್ಟದ್ದು ಎಂಬುದು ಮುಖ್ಯವಾದ ವಿಷಯವಾಗಿರುತ್ತದೆ. ಅಲ್ಲದೆ ಪ್ರಾಥಮಿಕ ಹಂತದಲ್ಲಿ (ಉದಾ: ಶಾಲೆ ಅಥವ ಕಾಲೇಜು ಮಟ್ಟದಲ್ಲಿ) ಅವರು ಶೈಕ್ಷಣಿಕವಾಗಿ ಪಡೆದ ಅಂಕಗಳೂ ಗಣನೆಗೆ ಬರುತ್ತವೆ.

ಔದ್ಯೋಗಿಕ ಶಿಕ್ಷಣವು ಮೊದಲಿನಿಂದಲೂ ಕಾರ್ಯವಿಧಾನದ ಕಲಿಕೆಯಾಗಿದೆ. ಈ ಕಾರ್ಯವಿಧಾನ ಶಿಕ್ಷಣವನ್ನು ವಿವಿಧ ಹಂತಗಳಿಗೆ ವಿವಿಧ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿರುತ್ತದೆ. ಅದು ಕೈಕೆಲಸದ ತರಬೇತಿಯಿಂದ ಪ್ರಾರಂಭವಾಗಿ ಹೆಚ್ಚು ಜ್ಞಾನದ ಅವಶ್ಯಕತೆಯಿರುವ ಕೆಲಸದವರೆಗೂ ವಿಸ್ತಾರಗೊಳ್ಳುತ್ತಾ ಹೋಗಬಹುದು.

ಈಗ ಶ್ರಮದ ಮಾರುಕಟ್ಟೆ ಹೆಚ್ಚು ಹೆಚ್ಚು ವಿಶಿಷ್ಟತೆಯನ್ನು ಹೊಂದಿರುವ ಶ್ರಮದ ಬೇಡಿಕೆಯನ್ನು ಹೊಂದಿದೆ. ಈಗ ಆರ್ಥಿಕ

Digitised by Bharatavani, CIIL

ವ್ಯವಸ್ಥೆಗಳೂ ಹೆಚ್ಚು ಉತ್ತಮ ಮಟ್ಟದ ಕೌಶಲದ ಬೇಡಿಕೆಯನ್ನು ಮುಂದಿಡುತ್ತವೆ. ಸರ್ಕಾರ ಮತ್ತು ಖಾಸಗಿ ಉತ್ಪಾದಕರು ಔದ್ಯೋಗಿಕ ಶಿಕ್ಷಣದ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚಾಗಿ ಬಂಡವಾಳ ಹೂಡುವುದರಲ್ಲಿ ನಿರತವಾಗಿವೆ. ಅದಕ್ಕಾಗಿ ಸರ್ಕಾರವು ಹಣಕಾಸಿನ ನೆರವನ್ನು ನೀಡುವುದೂ ಹೆಚ್ಚಾಗಿ, ಅದೊಂದು ಸಾರ್ವಜನಿಕ ವ್ಯವಸ್ಥೆಯಾಗಿದೆ. ಆದ್ದರಿಂದ ಅಲ್ಲಿ ನೀಡಲಾಗುವ ತರಬೇತಿಗೆ ಸರ್ಕಾರದ ಮತ್ತು ಖಾಸಗಿಯವರ ಸಹಾಯಧನದ ವ್ಯವಸ್ಥೆಯೂ ಇರುತ್ತದೆ. ಪ್ರೌಢಶಾಲಾ ಶಿಕ್ಷಣದ ನಂತರದ ಮಟ್ಟದಲ್ಲಿ ಔದ್ಯೋಗಿಕ ಶಿಕ್ಷಣವನ್ನು ತಾಂತ್ರಿಕ ವಿದ್ಯಾಸಂಸ್ಥೆಗಳಲ್ಲಿ, ಪದವಿ–ಪೂರ್ವ ಶಿಕ್ಷಣದ ಹಂತದಲ್ಲಿ ಅಥವಾ ಯಾವುದೇ ಸ್ಥಳೀಯ ವಿದ್ಯಾಸಂಸ್ಥೆಯಲ್ಲಿ ವೃತ್ತಿಪರ ಶಿಕ್ಷಣವನ್ನು ವ್ಯವಸ್ಥೆಗೊಳಿಸಬಹುದು.

21ನೇ ಶತಮಾನದಲ್ಲಿ ಔದ್ಯೋಗಿಕ ಶಿಕ್ಷಣವು ವೈವಿಧ್ಯತೆಯಿಂದ ಕೂಡಿದೆ. ಅಂಗಡಿಯ ಚಿಲ್ಲರೆ ವ್ಯಾಪಾರ, ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ, ಸಂಸ್ಕಾರ ಕ್ರಿಯೆ ಸೇವೆಗಳು, ಸೌಂದರ್ಯ ವರ್ಧಕ ಸೇವೆ, ಸಾಂಪ್ರದಾಯಿಕ ಹಸ್ತ ಕೌಶಲ, ಮತ್ತು ಗುಡಿ ಕೈಗಾರಿಕೆ (ಸಣ್ಣ ಕೈಗಾರಿಕೆ), ಮುಂತಾದವುಗಳು ಔದ್ಯೋಗಿಕ ಶಿಕ್ಷಣದ ಪರಿಧಿಗೆ ಬಂದಿವೆ.

ಕರ್ನಾಟಕ ರಾಜ್ಯವು ಔದ್ಯೋಗಿಕ ಶಿಕ್ಷಣವನ್ನು ಪದವಿ–ಪೂರ್ವ ಹಂತದಲ್ಲಿ ಜಾರಿಗೆ ತಂದಿರುವ ರಾಜ್ಯಗಳಲ್ಲಿ ಮೊದಲನೆಯದು. ಈ ಕೆಲಸವನ್ನು ಕರ್ನಾಟಕ ಸರ್ಕಾರ 1977 ರಲ್ಲಿ ಔದ್ಯೋಗಿಕ ಶಿಕ್ಷಣದ ಒಂದು ನಿರ್ದೇಶನಾಲಯವನ್ನು ಸ್ಥಾಪಿಸುವುದರ ಮೂಲಕ ಪದವಿ ಪೂರ್ವ ಶಿಕ್ಷಣದ ಎರಡು ವರ್ಷ ಅವಧಿಯ ಔದ್ಯೋಗಿಕ ಶಿಕ್ಷಣವನ್ನು ಪ್ರಾರಂಭಿಸಿತು. ಈ ಹಂತದಲ್ಲಿ ಜಾರಿಗೆ ತಂದಿರುವ ಹಲವು ಮುಖ್ಯವಾದ ಉದ್ಯೋಗಗಳು ಹೀಗಿವೆ:

1. ವ್ಯವಸಾಯ.
2. ವಾಣಿಜ್ಯ ಮತ್ತು ವ್ಯಾಪಾರ.
3. ತಾಂತ್ರಿಕ ಕೋರ್ಸ್‌ಗಳು.
4. ಔದ್ಯೋಗಿಕ ಸಂಬಂಧಿ ಕೋರ್ಸ್‌ಗಳು.
5. ಗೃಹ ವಿಜ್ಞಾನ.

ಎಂಟನೇ ಪಂಚವಾರ್ಷಿಕ ಯೋಜನೆಯ ಕೊನೆಯವರೆಗೂ ಔದ್ಯೋಗಿಕ ಶಿಕ್ಷಣ ಸಂಸ್ಥೆಗಳಿಗೆ ಕೋರ್ಸಿನ ವೆಚ್ಚವನ್ನು ಭರಿಸಲು, ಬೇಕಾದ ಸಲಕರಣೆಗಳನ್ನು ಕೊಳ್ಳಲು, ಕಟ್ಟಡ ಕಟ್ಟಲು, ಭಾರತ ಸರ್ಕಾರವು ಶೇ.100 ರಷ್ಟು ಧನ ಸಹಾಯ ಮಾಡುತ್ತಿತ್ತು. ಆದರೆ ಈಗ ಔದ್ಯೋಗಿಕ ಶಿಕ್ಷಣ ಇಲಾಖೆಯು {Department of Vocational Education (DVE)} ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವಾಲಯದ ಅಧೀನದಲ್ಲಿದೆ. ಪ್ರಸ್ತುತ ಔದ್ಯೋಗಿಕ ಶಿಕ್ಷಣವನ್ನು 29 ವಿಧವಾದ ಔದ್ಯೋಗಿಕ ಉದ್ಯೋಗಗಳಿಗೆ ನೀಡಲಾಗುತ್ತಿದೆ. ಇದಕ್ಕಾಗಿ ಔದ್ಯೋಗಿಕ ಶಿಕ್ಷಣ ಕೋರ್ಸನ್ನು ಸುಮಾರು 500 ಕ್ಕೂ ಹೆಚ್ಚಿನ ಈ ಕೆಳಗೆ ನಮೂದಿಸಿರುವ ವಿಧಗಳ ಸಂಸ್ಥೆಗಳಲ್ಲಿ ನೀಡಲಾಗುತ್ತಿದೆ:

1. ಪದವಿ–ಪೂರ್ವ ಕಾಲೇಜುಗಳು.
2. ಪ್ರಥಮ ದರ್ಜೆ ಕಾಲೇಜುಗಳು.
3. ಪಾಲಿಟೆಕ್ನಿಕ್‌ಗಳು.

**ಹಿನ್ನೆಲೆ:** ವೃತ್ತಿ ಶಿಕ್ಷಣದ ಉಗಮವನ್ನು ವೇದಗಳ ಕಾಲದಿಂದಲೂ ನೋಡಬಹುದು. ಪ್ರಾರಂಭದಲ್ಲಿ ಉದ್ಯೋಗ ಕೌಶಲವನ್ನು ತಂದೆಯು ತನ್ನ ಮಕ್ಕಳಿಗೆ ಕಲಿಸುತ್ತಿದ್ದನು. ಆ ನಂತರ ಮಧ್ಯಕಾಲದಲ್ಲಿ ಉದ್ಯೋಗ ಶಿಕ್ಷಣವನ್ನು ನೀಡುವುದಕ್ಕೋಸ್ಕರ ಸಂಸ್ಥೆಗಳನ್ನು ಸ್ಥಾಪಿಸಲು ಪ್ರಾರಂಭಿಸಲಾಯಿತು. ಶಿಕ್ಷಣದ ಸುಧಾರಣೆಗಾಗಿ ಸರ್ಕಾರವು ಹಲವು ಆಯೋಗಗಳನ್ನು ರಚಿಸಿದಾಗ, ಆ ಆಯೋಗಗಳು ತಮ್ಮ ವರದಿಯಲ್ಲಿ ಔದ್ಯೋಗಿಕ ಶಿಕ್ಷಣಕ್ಕೆ ಪ್ರಾಮುಖ್ಯವನ್ನು ಕೊಡಬೇಕೆಂದು ಸರ್ಕಾರಕ್ಕೆ ಸಲಹೆಮಾಡಿದವು. ಪ್ರಾಥಮಿಕ ಅಥವಾ ಪ್ರೌಢ ಶಾಲಾ ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಗಳು ಯಾವುದಾದರೂ ಕೌಶಲವನ್ನು ಗಳಿಸಿದ್ದರೆ ಅವರು ಯಾವುದಾದರೂ ಕೆಲಸವನ್ನು ಕೈಗೊಂಡು ತಮ್ಮ ಕುಟುಂಬದ ನೆರವಿಗೆ ಬರಲು ಸಾಧ್ಯ. ಅವರು ತಮ್ಮ ಜೀವನವನ್ನು ಆತ್ಮಸ್ಥೈರ್ಯದಿಂದ ಎದುರಿಸಲು ಸಾಧ್ಯವಾಗುತ್ತದೆ. ಎಂದು ಆಯೋಗಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿ ಔದ್ಯೋಗಿಕ ಶಿಕ್ಷಣದ ಬೆಳವಣಿಗೆಯ ಪ್ರಾಮುಖ್ಯವನ್ನು ತಿಳಿಸಿವೆ.

1986 ರ ರಾಷ್ಟ್ರೀಯ ಶಿಕ್ಷಣ ನೀತಿಯೂ ಶಿಕ್ಷಣವು ವಿವಿಧ ಹಂತಗಳಲ್ಲಿ ಮಾನವ ಸಂಪನ್ಮೂಲವನ್ನು ಆರ್ಥಿಕ ವ್ಯವಸ್ಥೆಗಾಗಿ ಸಿದ್ಧಪಡಿಸುವುದು ಅಗತ್ಯವೆಂದೂ, ಶಾಲೆಗೂ ಮತ್ತು ಕೆಲಸದ ಕ್ಷೇತ್ರಕ್ಕೂ ನಡುವೆ ಔದ್ಯೋಗಿಕ ಶಿಕ್ಷಣವು ಸೇತುವೆಯಾಗಬೇಕೆಂದು ಪ್ರತಿಪಾದಿಸಿದೆ. ಕೊಠಾರಿ ಶಿಕ್ಷಣ ಆಯೋಗವು ಶಿಕ್ಷಣವನ್ನು ಔದ್ಯೋಗೀಕರಣಗೊಳಿಸಬೇಕೆಂದು ಹೇಳಿದೆ.

ಅಂಗ ವೈಕಲ್ಯತೆಯನ್ನು ಹೊಂದಿರುವವರಿಗೆ 1996 ರ ಕಾನೂನಿನ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವರ ಜವಾಬ್ದಾರಿಯನ್ನು ತೆಗೆದುಕೊಂಡು ಅವರಿಗೆ ಹಲವು ಅನುಕೂಲಗಳನ್ನು ಕಲ್ಪಿಸಿಕೊಡಬೇಕಾಗಿದೆ. ಅವರೂ ಇತರ ಪ್ರಜೆಗಳಂತೆ ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸಿ ಸಮಾನ ಅವಕಾಶಗಳನ್ನು ಪಡೆಯಬೇಕಾಗಿದೆ. ಈ ದಿಶೆಯಲ್ಲಿ ಔದ್ಯೋಗಿಕ ಶಿಕ್ಷಣವು ಅಂಗ ವೈಕಲ್ಯತೆಯ ವ್ಯಕ್ತಿಗಳಿಗೆ ವರದಾನವಾಗಿ ಪರಿಣಮಿಸಬೇಕು.

**ವೃತ್ತಿ ಶಿಕ್ಷಣದ ಮುಖ್ಯವಾದ ಉದ್ದೇಶಗಳೆಂದರೆ:**

1. ವ್ಯಕ್ತಿಯು ಕೆಲಸವನ್ನು ಗಳಿಸಲು ಸಾಧ್ಯವಾಗುವಂತೆ ಅವನನ್ನು ಸಜ್ಜುಗೊಳಿಸುವುದು.

2. ಯಾವುದಾದರೂ ಉದ್ಯೋಗವನ್ನು ಕೈಗೊಳ್ಳಲು ಕೌಶಲವನ್ನು ಗಳಿಸಿದ ಮಾನವ ಸಂಪನ್ಮೂಲದ ಪ್ರಮಾಣಕ್ಕೂ ಅದರ ಅಗತ್ಯತೆ ಇರುವ ಪ್ರಮಾಣಕ್ಕೂ ವ್ಯತ್ಯಾಸ ಉಂಟಾಗದಂತೆ ನೋಡಿಕೊಳ್ಳುವುದು.

3. ಔದ್ಯೋಗಿಕ ಶಿಕ್ಷಣದ ನಂತರವೂ ಇಚ್ಛೆಪಟ್ಟವರು ಉನ್ನತ

Digitised by Bharatavani, CIIL

ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಔದ್ಯೋಗಿಕ ಶಿಕ್ಷಣವನ್ನು ರೂಪಿಸುವುದು.

4. ಗ್ರಾಮಾಂತರ ಯುವಜನರಿಗೆ ಸ್ವಂತವಾಗಿ ಉದ್ಯೋಗ ಮಾಡಲು ಪ್ರೋತ್ಸಾಹವನ್ನು ಕೊಡುವುದು.

–ಡಾ. ರಾಘವೇಂದ್ರರಾವ್ ಹೆಚ್.ಎಸ್.

# ಕ

## ಕಂಪ್ಯೂಟರ್‌ಗಳ ಬಳಕೆ ಮತ್ತು ಶಿಕ್ಷಣದಲ್ಲಿ ಅವುಗಳ ಪಾತ್ರ

ಇಂದಿನ ಯುಗವನ್ನು ಕಂಪ್ಯೂಟರ್‌ಯುಗ ಎಂದು ಕರೆದರೆ ತಪ್ಪಾಗಲಾರದು. ಏಕೆಂದರೆ ಈ ಆಧುನಿಕ ಜಗತ್ತಿನಲ್ಲಿ ಕಂಪ್ಯೂಟರ್‌ಗಳನ್ನು ಬಳಸದ ಕ್ಷೇತ್ರಗಳಿಲ್ಲ. ಶಿಕ್ಷಣದಲ್ಲಿಯೂ ಕೂಡ ಕಂಪ್ಯೂಟರ್‌ಗಳನ್ನು ಬೋಧನೆಗೆ ಬಳಸಲಾಗುತ್ತಿದೆ. ಪ್ರಯಾಣದ ಟಿಕೆಟ್‌ಗಳನ್ನು ಕೊಡುವುದರಿಂದ ಹಿಡಿದು ತರಗತಿಯಲ್ಲಿ ಬೋಧನೆ ಮಾಡುವವರೆಗಿನ ಶಿಕ್ಷಣಕ್ಷೇತ್ರ, ತಾಂತ್ರಿಕ ಕ್ಷೇತ್ರ, ವೈಜ್ಞಾನಿಕ ಕ್ಷೇತ್ರ, ಔದ್ಯೋಗಿಕ ಕ್ಷೇತ್ರ, ವೈದ್ಯಕೀಯ ಕ್ಷೇತ್ರ, ಸಂಶೋಧನಾ ಕ್ಷೇತ್ರ, ಸಾರಿಗೆ ಕ್ಷೇತ್ರ, ಮನೋರಂಜನಾ ಕ್ಷೇತ್ರ, ಕೃಷಿ ಕ್ಷೇತ್ರ, ಬಾಹ್ಯಾಕಾಶ ಕ್ಷೇತ್ರ ಮುಂತಾದ ಕ್ಷೇತ್ರಗಳಲ್ಲಿ ಇದು ಮಹತ್ವ ಪೂರ್ಣವಾದ ಸಾಧನವಾಗಿದೆ. ಈ ಮೇಲಿನ ಕ್ಷೇತ್ರಗಳಲ್ಲದೆ ವಾಣಿಜ್ಯ, ಬ್ಯಾಂಕ್, ತೆರಿಗೆ ಇಲಾಖೆ, ಸಮೂಹ ಸಂವಹನ, ಜೀವವಿಮಾ ನಿಗಮ, ಸೇನಾಪಡೆ, ವಾಣಿಜ್ಯ ಮಳಿಗೆಗಳು, ಹೋಟೆಲ್‌ಗಳು, ಮಾರುಕಟ್ಟೆ, ಕ್ರೀಡಾಂಗಣಗಳಲ್ಲಿ ಕಂಪ್ಯೂಟರ್ ತನ್ನ ಬಹುಮುಖ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತಿದೆ.

ವೈಜ್ಞಾನಿಕ ಹಾಗೂ ತಾಂತ್ರಿಕತೆ ಪ್ರಗತಿಯಾದಂತೆ ಕಂಪ್ಯೂಟರ್‌ಗಳ ಕ್ರಿಯಾ ರೂಪವೂ ಸಹ ವಿಕಾಸ ಹೊಂದುತ್ತಿದೆ. ಅಲ್ಲದೆ ಅವುಗಳ ಗುಣಲಕ್ಷಣಗಳು, ಸಾಮರ್ಥ್ಯಗಳು ಹಾಗೂ ಅವುಗಳ ಗಾತ್ರದಲ್ಲಿಯೂ ಕೂಡ ವಿಕಾಸವನ್ನು ಕಾಣುತ್ತಿದ್ದೇವೆ. ಜಪಾನ್ ದೇಶವು ತಯಾರಿಸಿದ ಐದನೆಯ ತಲೆಮಾರಿನ ಕಂಪ್ಯೂಟರ್ ಕೃತಕ ಬುದ್ಧಿಮತ್ತೆಯನ್ನು ಹೊಂದಿದೆ. ಅದು ಮಾನವನಂತೆ ಯೋಚಿಸಿ ಕಾರ್ಯಕೈಗೊಳ್ಳುವ ಕಾರ್ಯಕ್ಷಮತೆಯನ್ನು ಹೊಂದಿದೆ. ಸ್ವತಂತ್ರವಾಗಿ ವಿವೇಚಿಸುವ ಸಾಮರ್ಥ್ಯವನ್ನೂ ಹೊಂದಿದೆ.

ಕಂಪ್ಯೂಟರ್‌ಗಳನ್ನು ಪತ್ರ ಲೇಖನ, ಲೆಕ್ಕಾಚಾರ ಮಾಡುವಿಕೆ, ವಿದ್ಯಾರ್ಥಿಗಳ ವಿವರಗಳ ದಾಖಲಿಕೆ, ಪ್ರಶ್ನೆ ಪತ್ರಿಕೆಗಳನ್ನು ತಯಾರಿಸುವುದು, ಪರೀಕ್ಷಾ ಫಲಿತಾಂಶಗಳ ವಿಶ್ಲೇಷಣೆ ಮತ್ತು



ಆಕರ್ಷಕ ಚಿತ್ರಗಳನ್ನು ರಚಿಸುವುದು ಮುಂತಾದ ಹಲವಾರು ಬಗೆಯ ಕೆಲಸಗಳಿಗಾಗಿ ಬಳಕೆ ಮಾಡಬಹುದು. ಮಾಹಿತಿ ತಂತ್ರಜ್ಞಾನದ ಈ ಬಹುಪಯೋಗಿ ಆವಿಷ್ಕಾರವು ಮಾನವನ ಜೀವನದಲ್ಲಿ ಇಂದು ಹಲವಾರು ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟುಮಾಡಿದೆ. ಕಂಪ್ಯೂಟರ್ ಮಾನವ ಸಮಾಜದ ಕೆಲವೊಂದು ಚಟುವಟಿಕೆಗಳನ್ನು ಬದಲಿಸಿದೆ ಹಾಗೂ ನಾವು ಕೆಲಸ ಮಾಡುವ ವಿಧಾನವನ್ನೇ ಬಹಳಷ್ಟು ಸುಧಾರಣೆ ಮಾಡಿದೆ. ಈ ಎಲ್ಲಾ ಕಾರ್ಯಗಳ ಉಪಯೋಗಗಳನ್ನು ಪಡೆದುಕೊಳ್ಳಲು ಪ್ರತಿಯೊಬ್ಬ ವ್ಯಕ್ತಿಯು ಕಂಪ್ಯೂಟರ್ ಶಿಕ್ಷಣ ಪಡೆಯುವ ಅವಶ್ಯಕತೆ ಇದೆ.

### ಕಂಪ್ಯೂಟರ್ ಅರ್ಥ:

ದತ್ತಾಂಶಗಳನ್ನು ಸ್ವೀಕರಿಸಿ ಅವುಗಳನ್ನು ರೂಪಿಸಿದ ಕ್ರಮ ವಿಧಿ (ಪ್ರೋಗ್ರಾಮ್)ಯ ಪ್ರಕಾರ ಸಂಸ್ಕರಣೆ ಮಾಡಿ ಫಲಿತಾಂಶಗಳನ್ನು ಉತ್ಪಾದಿಸುವ ಸಾಧನವಾಗಿದೆ. ಇದು ಸಾಮಾನ್ಯವಾಗಿ ಆದಾನ (ಇನ್‌ಪುಟ್), ಪ್ರದಾನ (ಔಟ್‌ಪುಟ್), ಸಂಗ್ರಹಣೆ, ಲೆಕ್ಕ, ತರ್ಕ ಮತ್ತು ನಿಯಂತ್ರಣ ಘಟಕಗಳನ್ನು ಹೊಂದಿರುತ್ತದೆ.

### ನಮ್ಮ ಜಗತ್ತಿನಲ್ಲಿ ಕಂಪ್ಯೂಟರ್‌ಗಳ ಬಳಕೆ:

ಕಳೆದ ಕೆಲವು ದಶಕಗಳಲ್ಲಿ ಕಂಪ್ಯೂಟರ್‌ಗಳು ನಮ್ಮ ಬದುಕಿನಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತಂದಿವೆ. ಬಹುಪಾಲು ಎಲ್ಲಾ ವೃತ್ತಿಗಳಲ್ಲಿಯೂ ಕಂಪ್ಯೂಟರ್‌ಗಳು ಬಳಕೆಯಾಗುತ್ತಿವೆ. ಉದಾಹರಣೆಗೆ ಇವುಗಳನ್ನು ಜಾಹೀರಾತು, ವ್ಯಾಪಾರ, ವ್ಯವಹಾರ, ಬ್ಯಾಂಕಿಂಗ್, ಶಿಕ್ಷಣ, ಮನೋರಂಜನೆ, ಸರ್ಕಾರ, ಆಸ್ಪತ್ರೆಗಳು, ಕೈಗಾರಿಕೆಗಳು ಮತ್ತಿತರ ಕ್ಷೇತ್ರಗಳಲ್ಲಿ ಬಳಕೆ ಮಾಡಲಾಗುತ್ತಿದೆ.

### 1. ಶಿಕ್ಷಣ:

ಶಿಕ್ಷಕರು ಕಂಪ್ಯೂಟರ್‌ನ್ನು ಕಲಿಸುವ ಸಾಧನವನ್ನಾಗಿಯೂ ಹಾಗೂ ವಿದ್ಯಾರ್ಥಿಗಳು ಕಲಿಯುವ ಸಾಧನವನ್ನಾಗಿಯೂ ಉಪಯೋಗಿಸುತ್ತಾರೆ. ಕಂಪ್ಯೂಟರ್ ಆಧಾರಿತ ತರಬೇತಿ (ಸಿಬಿಟಿ) ಮತ್ತು ಶಿಕ್ಷಣದಲ್ಲಿ ಆಯನಿಮೇಶನ್ ಮತ್ತು ಗ್ರಾಫಿಕ್ಸ್ ತಂತ್ರಗಳು ಮತ್ತು ಧ್ವನಿ ವಿವರಣೆಗಳ ಬಳಕೆಯಿಂದಾಗಿ ಕ್ಲಿಷ್ಟಕರವಾದ ಪರಿಕಲ್ಪನೆಗಳು ಮತ್ತು ವಿಷಯಗಳನ್ನು ಸುಲಭವಾಗಿ ಕಲಿತುಕೊಳ್ಳಲು ಸಾಧ್ಯವಾಗುತ್ತದೆ. ದೂರ ಶಿಕ್ಷಣ ಅಥವಾ ಇ–ಕಲಿಕೆಗಳು ಈಗ ಜನಪ್ರಿಯವಾಗುತ್ತಿವೆ. ನಾವು ಶಾಲೆ ಅಥವಾ ಕಾಲೇಜಿಗೆ ಹೋಗದೆಯೇ ಮನೆಯಲ್ಲೇ ಕುಳಿತು ಕಲಿಯಬಹುದಾಗಿದೆ. ಅಂತರ್ಜಾಲ (ಇಂಟರ್‌ನೆಟ್) ಮೂಲಕ ಪರೀಕ್ಷೆಗೆ ಹಾಜರಾಗಿ ಫಲಿತಾಂಶಗಳನ್ನು ಕೂಡಲೇ ಆನ್‌ಲೈನ್ ವ್ಯವಸ್ಥೆಯಲ್ಲಿ ಪಡೆಯಬಹುದಾಗಿದೆ.

### 2. ವ್ಯಾಪಾರ – ವ್ಯವಹಾರ:

ವ್ಯಾಪಾರ – ವ್ಯವಹಾರಗಳಲ್ಲಿ ಕಂಪ್ಯೂಟರ್ ಪ್ರಮುಖ ಪಾತ್ರ ವಹಿಸುತ್ತದೆ. ಹಿಂದೆ ವ್ಯಾಪಾರಿಗಳು ಮಾಹಿತಿ ಮತ್ತು ವ್ಯಾವಹಾರಿಕ ದಾಖಲೆಗಳನ್ನು ಕಾಗದದ ಕಡತಗಳಲ್ಲಿ ಇಡುತ್ತಿದ್ದರು. ಅಲ್ಲಿ

Digitised by Bharatavani, CIIL

ಮಾಹಿತಿಗಳನ್ನು ಹುಡುಕುವುದು ಮತ್ತು ನಿರ್ವಹಿಸುವುದು ಬಹಳ ಕಷ್ಟವಾಗುತ್ತಿತ್ತು. ಈಗ ಕಂಪ್ಯೂಟರ್‌ಗಳ ಬಳಕೆಯಿಂದ ಅಗಾಧ ಗಾತ್ರದ ದಾಖಲೆಗಳನ್ನು ಸುಲಭವಾಗಿ ನಿರ್ವಹಿಸಬಹುದಾಗಿದೆ. ಅಲ್ಲದೆ ಯಾವಾಗಲಾದರೂ ಕಡತಗಳನ್ನು ಸುಲಭವಾಗಿ ಹುಡುಕಿ ತೆಗೆಯಬಹುದಲ್ಲದೇ ಯಾವುದೇ ನಿರ್ದಿಷ್ಟ ಮಾಹಿತಿಯನ್ನಾದರೂ ಬೇಗನೆ ಪಡೆಯಬಹುದಾಗಿದೆ.

ಬೆಲೆ ಪಟ್ಟಿಗಳು, ಸರಕು ಪಟ್ಟಿಗಳು, ಪಾವತಿ ರಶೀದಿಗಳು ಮುಂತಾದುವನ್ನು ಕಂಪ್ಯೂಟರ್‌ಗಳ ನೆರವಿನಿಂದ ಸಿದ್ಧಪಡಿಸಬಹುದಲ್ಲದೇ, ವ್ಯವಹಾರದ ಹಣಕಾಸು ಮತ್ತು ಲೆಕ್ಕ ಪತ್ರಗಳ ಸಂಪೂರ್ಣ ಮಾಹಿತಿಯ ದಾಖಲೆಗಳನ್ನು ಅವುಗಳ ಮೂಲಕ ನಿರ್ವಹಿಸಲಾಗುತ್ತದೆ. ಆನ್‌ಲೈನ್ ವ್ಯಾಪಾರ ಮತ್ತು ಆನ್‌ಲೈನ್ ವ್ಯವಹಾರಗಳು ಇಂದಿನ ವಾಣಿಜ್ಯ ಮಾದರಿಗಳಾಗಿವೆ. ಇದನ್ನು ವಿಧ್ಯುನ್ಮಾನ ವಾಣಿಜ್ಯ (ಇ–ಕಾಮರ್ಸ್) ಎಂದು ಕರೆಯಲಾಗುತ್ತದೆ.

### 3. ಆರೋಗ್ಯ ರಕ್ಷಣಾ ಕೇಂದ್ರಗಳು ಮತ್ತು ಆಸ್ಪತ್ರೆಗಳು:

ರೋಗಿಗಳ ರೋಗ ತಪಾಸಣೆಗಾಗಿ ಆರೋಗ್ಯ ಕೇಂದ್ರಗಳಲ್ಲಿ ಕಂಪ್ಯೂಟರ್‌ಗಳನ್ನು ಬಳಸಲಾಗುತ್ತದೆ. ಆರೋಗ್ಯ ಮತ್ತು ರೋಗ ತಪಾಸಣೆಯ ಮಾಹಿತಿಗಳನ್ನು ಮುಂದಿನ ಉಲ್ಲೇಖಕ್ಕಾಗಿ ಕಂಪ್ಯೂಟರ್‌ಗಳಲ್ಲಿ ಸಂಗ್ರಹಿಸಿ ಇಡಲಾಗುತ್ತದೆ. ಸ್ಕ್ಯಾನಿಂಗ್, ಅಲ್ಟ್ರಾಸ್ಕ್ಯಾನಿಂಗ್, ಎಲೆಕ್ಟ್ರೋಕಾರ್ಡಿಯೋಗ್ರಾಂ (ಇಸಿಜಿ) ಮುಂತಾದ ಸಂಕೀರ್ಣ ಉಪಕರಣಗಳು ಕಂಪ್ಯೂಟರ್‌ಗಳಿಂದ ನಿಯತ್ರಿಸಲ್ಪಡುತ್ತವೆ. ಸ್ವಾಸ್ಥ್ಯ ಉದ್ಯಮದಲ್ಲಿ ವೈದ್ಯಕೀಯ ಲಿಪ್ಯಂತರ ತಂತ್ರಜ್ಞಾನ (ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್)ವು ಇತ್ತೀಚೆಗೆ ಆವಿಷ್ಕಾರವಾದ ಕ್ಷೇತ್ರವಾಗಿದೆ.

ಅಂತರ್‌ಜಾಲಗಳ ನೆರವಿನಿಂದ ವೈದ್ಯರು ದೂರದ ತಾಣದಿಂದಲೇ ರೋಗಿಯ ಖಾಯಿಲೆಯನ್ನು ಪರಿಶೀಲಿಸಿ ಔಷಧೋಪಚಾರ ಸೂಚಿಸಲು ಕಂಪ್ಯೂಟರ್ ಬಳಸುತ್ತಾರೆ.

### 4. ಮನೋರಂಜನೆ:

ಇತೀಚಿನ ವರ್ಷಗಲ್ಲಿ ಆನಿಮೇಷನ್ ಮತ್ತು ಕಂಪ್ಯೂಟರ್ ಗ್ರಾಫಿಕ್ಸ್ ತಂತ್ರಗಳು ಜನಪ್ರಿಯವಾಗಿದೆ. ಇಂದಿನ ದಿನಗಳಲ್ಲಿ ಪ್ರಪಂಚದಾದ್ಯಂತ ಮಕ್ಕಳು ಕಂಪ್ಯೂಟರೀಕೃತ ಸಾಧನಗಳಿಂದ ವಿಡಿಯೋಕ್ರೀಡೆ (ವಿಡಿಯೋ ಗೇಮ್ಸ್)ಗಳನ್ನು ಆಡುತ್ತಿದ್ದಾರೆ. ಚಲನಚಿತ್ರೋದ್ಯಮವು ಕಂಪ್ಯೂಟರ್ ತಂತ್ರಜ್ಞಾನಗಳಿಂದ ಬಹಳಷ್ಟು ಪ್ರಭಾವಿತವಾಗಿದೆ. ಆನಿಮೇಷನ್ ಗ್ರಾಫಿಕ್ಸ್ ವಿಶೇಷ ಪರಿಣಾಮಗಳು, ಧ್ವನಿ ತಂತ್ರ ಪರಿಣಾಮಗಳು ಮುಂತಾದವುಗಳನ್ನು ಅಧಿಕ ವೇಗದ ಕಂಪ್ಯೂಟರ್‌ಗಳ ಸಹಾಯದಿಂದ ಚಲನಚಿತ್ರಗಳಿಗಾಗಿ ರೂಪಿಸಲಾಗುತ್ತದೆ. ಸೆಲ್ಯುಲಾಯ್ಡ್ ಫಿಲಂರೋಲ್‌ಗಳಿಂದ ಚಲನಚಿತ್ರ ತಯಾರಿಸುವ ಬದಲಿಗೆ ಡಿಜಿಟಲ್ ನಮೂನೆಯಲ್ಲಿ ಚಲನ ಚಿತ್ರ ತಯಾರಿಕೆಯ ಹಾಲಿವುಡ್ ನಿರ್ಮಾಣಗಳಲ್ಲಿ ಬಹಳವಾಗಿ ಬಳಕೆಯಲ್ಲಿದೆ. ಇತ್ತೀಚೆಗೆ ನಮ್ಮ ದೇಶದಲ್ಲಿಯೂ ಈ ಕ್ರಮ ಬಳಕೆಯಾಗುತ್ತಿದೆ.

### 5. ಪತ್ರಿಕೋದ್ಯಮ ಮತ್ತು ಪ್ರಕಾಶನ:

ಹಿಂದೆ ಮುದ್ರಣ ಮತ್ತು ಪ್ರಕಾಶನಗಳನ್ನು ಬೃಹತ್ ಗಾತ್ರದ ಮುದ್ರಣ ಯಂತ್ರಗಳನ್ನು ಬಳಸಿ ಮಾಡಲಾಗುತ್ತಿತ್ತು. ಇಂದು ಗಣಕಯಂತ್ರಗಳಿಂದ ಮುದ್ರಣ ಮತ್ತು ಪ್ರಕಾಶನ ಉದ್ಯಮವು ಮುಂದುವರಿದಿದೆ. ಕಂಪ್ಯೂಟರ್ ಮತ್ತು ತಂತ್ರಾಂಶ (ಸಾಫ್ಟ್‌ವೇರ್) ಬಳಕೆಯಿಂದಾಗಿ ಅತಿ ಕಡಿಮೆ ಸಮಯದಲ್ಲಿ ವಿಶಾಲ ವ್ಯಾಪ್ತಿಯ ವೈವಿಧ್ಯಮಯ ವಿನ್ಯಾಸಗಳನ್ನು ರೂಪಿಸಲು ಸಾಧ್ಯವಿದೆ. ಅಲ್ಲದೆ ಅದೇ ಕೃತಿಯನ್ನು ಮಾರ್ಪಾಡುಗಳೊಂದಿಗೆ ಹಲವಾರು ಉದ್ದೇಶಗಳಿಗಾಗಿ ಬಳಸಲು ಸಾಧ್ಯವಿದೆ. ಇಂದು ಪುಸ್ತಕಗಳು, ದಿನಪತ್ರಿಕೆಗಳು ಮುಂತಾದವುಗಳನ್ನು ಕಂಪ್ಯೂಟರ್‌ಗಳ ಸಹಾಯದಿಂದ ವಿನ್ಯಾಸಗೊಳಿಸಿ ಪ್ರಕಟಿಸಲಾಗುತ್ತಿದೆ. ವಿದ್ಯುನ್ಮಾನ ಪ್ರಕಾಶನ (ಇ–ಪಬ್ಲಿಷಿಂಗ್), ವಿದ್ಯುನ್ಮಾನ ಸಂಚಿಕೆಗಳು (ಇ–ಮ್ಯಾಗಸಿನ್), ವಿದ್ಯುನ್ಮಾನ ಪುಸ್ತಕಗಳು (ಇ–ಬುಕ್ಸ್) ಇಂದು ಲಭ್ಯವಿದ್ದು ಜನಪ್ರಿಯವಾಗುತ್ತಿವೆ.

### 6. ಸಂವಹನ:

ಇಂದಿಗೂ ನಾವು ಅಂಚೆ ಕಛೇರಿಗಳ ಮೂಲಕ ಪತ್ರಗಳನ್ನು ಕಳುಹಿಸಿ ವ್ಯವಹರಿಸುತ್ತಿದ್ದೇವೆ. ಅವು ತಮ್ಮ ವಿಳಾಸದ ಸ್ಥಳಗಳಿಗೆ ತಲುಪಲು ದಿನಗಳು ತಗಲುತ್ತವೆ. ಅಂತರ್ಜಾಲದ ಮೂಲಕ ಪತ್ರ ಅಥವಾ ಅಂಚೆಯನ್ನು ಕಳುಹಿಸುವುದನ್ನು ವಿದ್ಯುನ್ಮಾನ ಅಂಚೆ ಅಥವಾ ಇ–ಮೇಲ್ ಎನ್ನುತ್ತಾರೆ. ಕೆಲವೇ ಸೆಕೆಂಡುಗಳಲ್ಲಿ ಅದು ವಿಳಾಸದಾರನಿಗೆ ತಲುಪಿ ಆತನು ಅದನ್ನು ಓದಲು ಸಾಧ್ಯವಾಗುತ್ತದೆ. ಇಂದು ಇ–ಮೇಲ್ ಸರ್ವೇ ಸಾಮಾನ್ಯವಾಗಿದೆ. ದೂರ ಸಂವಹನ (ಟೆಲಿ ಕಮ್ಯೂನಿಕೇಶನ್) ಮತ್ತು ಮೊಬೈಲ್ ಮೂಲಕ ಸಂವಹನವು ಕಂಪ್ಯೂಟರ್ ತಂತ್ರಜ್ಞಾನವನ್ನು ಅವಲಂಬಿಸಿದೆ.

### 7. ಬ್ಯಾಂಕುಗಳು:

ಬ್ಯಾಂಕಿನ ಗ್ರಾಹಕರ ಖಾತೆಗಳನ್ನು ಕಂಪ್ಯೂಟರ್‌ಗಳ ಮೂಲಕ ನಿರ್ವಹಿಸಲಾಗುತ್ತದೆ. ಒಂದು ರೀತಿಯ "ಸ್ಮಾರ್ಟ್ ಕಾರ್ಡ್" ಬಳಸಿ, ನೀವು ಯಾವುದೇ ವೇಳೆಯಲ್ಲಿ ಯಾವುದೇ ಸ್ಥಳದಲ್ಲಿದ್ದರೂ ATM ಗಳ ಮೂಲಕ ಹಣ ಹಿಂದೆಗೆಯಬಹುದು. ಬ್ಯಾಂಕಿನ ವಿವಿಧ ಶಾಖೆಗಳಲ್ಲಿನ ಕಂಪ್ಯೂಟರ್‌ಗಳಿಗೆ ಪರಸ್ಪರ ಸಂಪರ್ಕವಿರುತ್ತದೆ. ಅವು ನಿಮ್ಮ ಖಾತೆಯ ಸ್ಥಿತಿಗತಿಗಳನ್ನು ತೋರಿಸುತ್ತವೆ. ಇಂದು ಗ್ರಾಹಕರು ತಮ್ಮ ಕೈಯಲ್ಲಿ ನಗದು ಹಣವಿಲ್ಲದೆಯೂ ಅಂಗಡಿಗಳಲ್ಲಿ ವಸ್ತುಗಳನ್ನು ಖರೀದಿಸಲು ಅನುವಾಗುವಂತೆ ಅವರುಗಳಿಗೆ ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ನೀಡಲಾಗುತ್ತಿದೆ.

### 8. ರೈಲ್ವೆ ಮತ್ತು ವಿಮಾನ ಟಿಕೆಟ್ ಕಾದಿರಿಸುವಿಕೆ:

ರೈಲ್ವೆ ಮತ್ತು ವಿಮಾನಯಾನದ ಟಿಕೆಟ್‌ಗಳ ಕಾದಿರಿಸುವಿಕೆ ಇಂದು ಕಂಪ್ಯೂಟರ್‌ಗಳಿಂದಾಗಿ ಸುಲಭವಾಗಿದೆ. ಕೆಲವೊಂದು ಗುಂಡಿಗಳನ್ನು ಒತ್ತಿ ಎಲ್ಲಿಂದ ಎಲ್ಲಿಗಾದರೂ ಟಿಕೆಟ್‌ಗಳನ್ನು

Digitised by Bharatavani, CIIL

ಕಾದಿರಿಸಲು ಸಾಧ್ಯವಿದೆ. ಸಾಂಪ್ರದಾಯಿಕ ಕಾದಿರಿಸುವಿಕೆಯ ವ್ಯವಸ್ಥೆಯಲ್ಲಿ ಕಂಡುಬರುವ ಸಾಮಾನ್ಯ ಸಮಸ್ಯೆಯಾದ ಟಿಕೆಟ್‌ನ ನಕಲು ಮಾಡುವಿಕೆ ಮತ್ತು ಪುನರಾವರ್ತನೆಯನ್ನು ಕಂಪ್ಯೂಟರೀಕೃತ ಕಾದಿರಿಸುವಿಕೆಯಿಂದ ನಿವಾರಿಸಬಹುದು. ಈ ಕಾದಿರಿಸುವಿಕೆಯ ವ್ಯವಸ್ಥೆಯು ಸಂಪೂರ್ಣ ಅಂತರ್ ಜಾಲ (ನೆಟ್‌ವರ್ಕ್)ದಲ್ಲಿ ನಿರ್ವಹಿಸಲ್ಪಡುವುದರಿಂದ ಯಾವುದೇ ಸ್ಥಳದಿಂದ ಯಾವುದೇ ದಿನದ ಟಿಕೆಟ್‌ಗಳ ಲಭ್ಯತೆಯನ್ನು ಕೆಲವೇ ಕ್ಷಣಗಳಲ್ಲಿ ತಿಳಿಯಲು ಅವಕಾಶವಿದೆ.

**ಶಿಕ್ಷಣದಲ್ಲಿ ಕಂಪ್ಯೂಟರ್‌ಗಳ ಅನ್ವಯಿಕಗಳು:**

- ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ – "ಜ್ಞಾನವೇ ಶಕ್ತಿ" ಹಾಗೂ ಕಂಪ್ಯೂಟರ್‌ಗಳು ಈ "ಜ್ಞಾನ – ಭಂಡಾರ"ವನ್ನು ಹಿಡಿದಿಡುವ ಗುರುತರ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡಿವೆ. ಆದ್ದರಿಂದ ಅತ್ಯಮೂಲ್ಯ ಹಾಗೂ ಉಪಯುಕ್ತ ಮಾಹಿತಿ ಪ್ರಸರಣವನ್ನು ಮಾಡುವುದರ ಮೂಲಕ ಜ್ಞಾನದ ಹಂಚಿಕೆ ಈ ಕಂಪ್ಯೂಟರ್‌ಗಳಿಂದ ನಡೆಯುತ್ತಿದೆ ಎಂದರೆ ತಪ್ಪಾಗಲಾರದು.

- ವಿಜ್ಞಾನ, ತಂತ್ರಜ್ಞಾನ, ಇಂಜಿನೀಯರಿಂಗ್ ಹಾಗೂ ಶೈಕ್ಷಣಿಕ ರಂಗದ ಅಂಗ ಭಾಗಗಳು – ಕಂಪ್ಯೂಟರ್ ಬಳಕೆ, ಕಂಪ್ಯೂಟರ್‌ಗಳ ನಿರ್ದೇಶನ ಹಾಗೂ ಕಂಪ್ಯೂಟರ್‌ಗಳಿಂದ ಪಡೆಯಬಹುದಾದ ಕಂಪ್ಯೂಟರ್ ನಿರ್ವಹಿತ ಸೂಚನಾ ಸಮನ್ವಯ (CAD/CAM, KBCS, CAI, CAL, CAT, CBT, CMI)ಗಳ ಅಳವಡಿಕೆಯಿಂದಾಗಿ ಏರು ಮುಖದ ಪ್ರಗತಿಯನ್ನು ಕಾಣತೊಡಗಿವೆ. ಅದರಲ್ಲೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಗಳ ಎರಡು ಸಾಂದರ್ಭಿಕ ಕೊಡುಗೆಗಳಾದ ಇಂಟರ್‌ನೆಟ್ (Internet) ಹಾಗೂ ಮಲ್ಟಿಮಿಡಿಯಾ (Multimedia) ಸೌಲಭ್ಯಗಳು – ಮಾಹಿತಿಯ ಮಹಾ ಹೆದ್ದಾರಿಯಲ್ಲಿ (Information Super Highway) ಹಾರುತ್ತಿರುವ "ಅಭಿವೃದ್ಧಿ ಪಥ" ಸೂಚಕ ಹಕ್ಕಿಯೊಂದರ ಎರಡು ಬಲಿಷ್ಠ ರೆಕ್ಕೆಗಳಂತಿವೆ.

- ಈಗಾಗಲೇ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ (Developed Countries like USA, France, England, Germany, Russia) ಹಾಗೂ ಅಭಿವೃದ್ಧಿ ಪಥದಲ್ಲಿ ದಾಪುಗಾಲು ಹಾಕುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ (Developing Countries like China, India, Malesiya, Thailand), ಕಂಪ್ಯೂಟರ್ ಆಧಾರಿತ ಕಲಿಕೆ (Computer Aided Learning), ಕಂಪ್ಯೂಟರ್ ಆಧಾರಿತ ಬೋಧನೆ (Computer Assisted Instructions), ಕಂಪ್ಯೂಟರ್ ನಿರ್ವಹಿತ ಬೋಧನೆ (Computer Managed Instructions) ಹಾಗೂ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳು ಹಾಗೂ ತಪಾಸಣೆಗಳನ್ನು ಕ್ರಮಬದ್ಧವಾಗಿ, ಅಧ್ಯಯನಕ್ಕೆ ಅನುಕೂಲಕರವಾದ ಮೂಲಭೂತ ಸೌಕರ್ಯಗಳ ರೂಪದಲ್ಲಿ ಕಲಿಕೆ ಮತ್ತು ಬೋಧನಾ ಕ್ರಮದ ಎಲ್ಲಾ ಹಂತಗಳಲ್ಲಿ ಅಳವಡಿಸಲಾಗಿದೆ.

- ಶೈಕ್ಷಣಿಕ ರಂಗದಲ್ಲಿ ಕಂಪ್ಯೂಟರ್ ಕಲಿಕೆ ಹಾಗೂ ಕಂಪ್ಯೂಟರ್ ಆಧಾರಿತ ಬೋಧನಾ ಕ್ರಮಗಳ ಅನ್ವಯಿಕತೆಗಳು ದಿನೇ ದಿನೇ ಹೆಚ್ಚಾಗಿ ಕಲಿಕಾ ಮತ್ತು ಬೋಧನಾ ಕ್ರಮಗಳಲ್ಲಿ ಇದುವರೆಗೂ ಬಳಕೆಯಲ್ಲಿದ್ದ ಕಪ್ಪು ಹಲಗೆಯ ಮೇಲೆ ಸೀಮೆಸುಣ್ಣ ಬಳಪದಿಂದ ಬರೆದು ವಿವರಿಸುವ ವಿಧಾನ (Chalk and Talk) ನಿಧಾನವಾಗಿ ಮಾಯವಾಗುತ್ತಿದೆ. ಈ ಸ್ಥಾನದಲ್ಲಿ Power Point Application ತಂತ್ರಾಂಶ ಬಳಸಿ ಸಿದ್ಧಪಡಿಸಲಾದ ಸ್ಲೈಡುಗಳನ್ನು ಬಳಸಲಾಗುತ್ತಿದೆ ಹಾಗೂ ವಿವಿಧ ಅನುಕರಣಾ ತಂತ್ರಗಳ (Animation) ಸಹಾಯದಿಂದ ವರ್ಣಚಿತ್ರಗಳು ಹಾಗೂ ಆಕರ್ಷಕ ಮುದ್ರಿತ ಅಕ್ಷರ ಶೈಲಿಗಳಿಂದಾಗಿ ವಿದ್ಯಾರ್ಥಿಗಳಲ್ಲಿ ಕಲಿಕೆಯ ಏಕಾಗ್ರತೆಯನ್ನು ಚುರುಕುಗೊಳಿಸಿ, ಕ್ಲಿಷ್ಟ ವಿಷಯಗಳ ಅಧ್ಯಯನ ಹಾಗೂ ಗ್ರಹಿಕೆಯಲ್ಲಿ ಕುತೂಹಲ ಸೃಷ್ಟಿಸಿ ಜ್ಞಾನಾರ್ಜನೆಯ ದಾರಿ ಸುಗಮಗೊಂಡಿದೆ. ಈ Power Point Presentation Slides ಮೂಲಕ ಬೋಧನೆ, ಕಡಿಮೆ ಸಮಯದಲ್ಲಿ ಹೆಚ್ಚಿನ ವಿಷಯಾಂಶಗಳನ್ನು ಮಂಡಿಸಲು ಹಾಗೂ ಕ್ಲಿಷ್ಟಕರವಾದ ವಿಷಯಗಳನ್ನು ಪ್ರಾತ್ಯಕ್ಷಿಕೆಗಳೊಂದಿಗೆ/ದೃಶ್ಯಾವಳಿಗಳೊಂದಿಗೆ ಮಾಡುವ ಬೋಧನೆ ಸುಲಭವಾಗಿ ಗ್ರಹಿಸಿಸಲು ಸಹಾಯ ಮಾಡುತ್ತವೆ.

- ಮುಂದೊಂದು ದಿನ ಕಂಪ್ಯೂಟರ್‌ಗಳಿಗೆ ಹಾಸು ಹೊಕ್ಕಾಗಿರುವ – ಮಲ್ಟಿಮಿಡಿಯಾ ಹಾಗೂ ಇಂಟರ್‌ನೆಟ್ ಸಂಪರ್ಕ ಸೌಲಭ್ಯಗಳು – ಹಾಲಿ ಬೋಧನೆಯಲ್ಲಿ ತೊಡಗಿರುವ ಶಿಕ್ಷಕರ ಅಸ್ತಿತ್ವವನ್ನೆ ಪ್ರಶ್ನಿಸುವಂತಿವೆ. ಈಗಾಗಲೇ ಉಪಗ್ರಹ ಆಧಾರಿತ Audio – Visual ಬೋಧನಾ ಅಧಿವೇಶನಗಳನ್ನು (Teaching Sessions) ಏಕಕಾಲಕ್ಕೆ ಶಿಕ್ಷಕರೊಬ್ಬರಿಂದ ರಾಜ್ಯದ ಆಯ್ಕೆಗೊಂಡ ಶಾಲಾ ಕಾಲೇಜುಗಳಲ್ಲಿ, ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ನಡೆಸಿಕೊಡಲಾಗುತ್ತಿದೆ. ಈ ಪ್ರಕ್ರಿಯೆ ಮುಂದುವರಿದು ಕಂಪ್ಯೂಟರ್ ನಿರ್ವಹಿತ ಬೋಧನೆ ಪೂರ್ಣ ಪ್ರಮಾಣದಲ್ಲಿ ಆರಂಭಗೊಂಡಾಗ ಬೋಧನೆ ನಡೆಯುತ್ತಿರುವ ಸಮಯದಲ್ಲಿ ಶಿಕ್ಷಕರ (ಅವಶ್ಯಕತೆ) ಹಾಜರಿ ಅನಿವಾರ್ಯ ಎನಿಸುವುದಿಲ್ಲ. ಪೂರ್ವಭಾವಿಯಾಗಿ ರೆಕಾರ್ಡ್ ಮಾಡಿದ ಬೋಧನಾ ಸಿ.ಡಿ. ಗಳನ್ನು ಮಲ್ಟಿಮಿಡಿಯಾ ಸೌಲಭ್ಯವಿರುವ ಕಂಪ್ಯೂಟರ್‌ಗೆ ಅಳವಡಿಸಿ, Teaching – Learning Sessions ನಡೆಸಿಕೊಡಬಹುದಾಗಿದೆ. ಹಲವಾರು ಮುಂದುವರಿದ ನಿರಂತರ (ಶಿಕ್ಷಣ) ಕಲಿಕಾ ಕೇಂದ್ರಗಳಲ್ಲಿ ಈ ತೆರನಾದ ಬೋಧನಾ ಪ್ರಕ್ರಿಯೆ ನಮ್ಮ ದೇಶದಲ್ಲಿ ಆರಂಭವಾಗಿ ಹಲವು ವರ್ಷಗಳೇ ಕಳೆದಿವೆ.

Digitised by Bharatavani, CIIL

**ಕಲಿಕಾ ಸಾಧನವಾಗಿ ಕಂಪ್ಯೂಟರ್:**

ಇಂದಿನ ಆಧುನಿಕ ಮಾಹಿತಿ ಯುಗದಲ್ಲಿ (Information Age) – ಮಾಹಿತಿ ಸಂಪರ್ಕ/ಸಂವಹನ ಹಾಗೂ ಮನೋರಂಜನೆಗಳು ಏಕೀಕೃತಗೊಂಡು ಅವುಗಳಲ್ಲಿಯ ವಿಭಿನ್ನತೆ ಅರಿಯುವುದು ಕಷ್ಟಸಾಧ್ಯವಾಗಿದೆ. ಮಾಹಿತಿ ಮೌಲ್ಯೀಕರಣ ಶೃಂಖಲೆ (Information Value Chain) ಸಹಾಯದಿಂದ ಶಿಕ್ಷಕರು ಸಹಿತ ತಟಸ್ಥರಾಗುವ ಕಾಲ ಒದಗಿಬರುತ್ತಿದೆ. ಆದ್ದರಿಂದ ಶಿಕ್ಷಕರು, ವಿಜ್ಞಾನಿಗಳು, ತಂತ್ರಜ್ಞರು ಕ್ರಿಯಾಶೀಲರಾಗಿರುವುದು ಅನಿವಾರ್ಯವಾಗಿದೆ.

ಇಂದು ಶಿಕ್ಷಕರು ಬೋಧನೆಯ ಹೆಸರಿನಲ್ಲಿ ಜ್ಞಾನಾರ್ಜನೆಯ ಸೌಲಭ್ಯಗಳನ್ನು ಒದಗಿಸುವ ಮತ್ತು ಅವುಗಳ ಮಹತ್ವ ತಿಳಿಯಪಡಿಸುವ ಮಧ್ಯವರ್ತಿಗಳಂತೆ ಚಾಣಾಕ್ಷ ಕಾರ್ಯನಿರ್ವಾಹಕರಾಗಿ ಕೆಲಸ ಮಾಡುವ ಅನಿವಾರ್ಯತೆ ಎದುರಾಗಿದೆ. ಬರಿ ಪಾಠಗಳನ್ನು ಮಾಡಿ ಮನೆಗೆ ತೆರಳುವುದಲ್ಲ. ಏಕೆಂದರೆ ವಿದ್ಯಾರ್ಥಿಗಳು ಇಂದಿನ ದಿನಮಾನಗಳಲ್ಲಿ ನಮ್ಮ ಶೈಕ್ಷಣಿಕ ಸಂಸ್ಥೆಗಳಿಗೆ ಮೌಲ್ಯ ವರ್ಧಿತ ಗ್ರಾಹಕರಾಗಿದ್ದಾರೆ. ಆದ್ದರಿಂದ ಶಿಕ್ಷಣ ಹಾಗೂ ಬೋಧನಾ ಕಾರ್ಯಗಳು ಇಂದು ಕೇವಲ ಸೇವೆಯ ರೂಪಕ್ಕೆ ಸೀಮಿತವಾಗಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗ್ಯಾಟ್ (GATT) ಒಪ್ಪಂದಗಳಿಂದಾಗಿ ಶಿಕ್ಷಣ ನೀಡುವ ಕ್ರಮ ಹಾಗೂ ಒದಗಿಸಲಿರುವ ಶೈಕ್ಷಣಿಕ ಸೌಲಭ್ಯ ಮತ್ತು ಸೇವೆಗಳು ವ್ಯಾಪಾರೀಕರಣಗೊಳುತ್ತಿವೆ.

**ಕಲಿಕಾ ಕ್ರಮದಲ್ಲಿ ಕಂಪ್ಯೂಟರ್‌ನ್ನು ಅವಶ್ಯಕ ಸಾಧನವಾಗಿ ಉಪಯೋಗಿಸುವುದರ ಪ್ರಯೋಜನಗಳು:**

ಕಲಿಕಾ ಕ್ರಮದಲ್ಲಿ ಕಂಪ್ಯೂಟರ್‌ನ್ನು ಅವಶ್ಯಕ ಸಾಧನವಾಗಿ ಉಪಯೋಗಿಸಿದಾಗ ಅದರ ಪ್ರಯೋಜನಗಳು ಇಂತಿವೆ.

1. ಪರಸ್ಪರ ಅಭಿಪ್ರಾಯ ಹಂಚಿಕೊಳ್ಳುವುದು ಮತ್ತು ವಿಷಯ ಮಂಡನೆ ಸುಲಭವಾಗುತ್ತದೆ.
2. ಪ್ರಶ್ನೋತ್ತರ ಅಧಿವೇಶನ ಮತ್ತು ವಿಷಯ ಬೋಧನೆಯ ಪುನರಾವರ್ತನೆ ಸಾಧ್ಯವಾಗುತ್ತದೆ.
3. ವಿವಿಧ ವಿಷಯ ಮಾಲಿಕೆಗಳ ಕ್ರೋಢೀಕರಣ ಮತ್ತು ಸಾರಾಂಶ ಬಳಕೆಗೆ ಅವಕಾಶವಿರುತ್ತದೆ.
4. ಭಾಷಾ ಅಧ್ಯಯನ ಹಾಗೂ ವ್ಯಾಕರಣ ಪ್ರಯೋಗದ ಬಳಕೆಯನ್ನು ಉದಾಹರಣೆ ಸಹಿತ (ಉಚ್ಚಾರಗಳೊಂದಿಗೆ) ತೋರಿಸಬಹುದು.
5. ಗಣಿತದ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸುವುದು ಮತ್ತು ಸುದೀರ್ಘ ಲೆಕ್ಕಾಚಾರಗಳನ್ನು ಮಾಡುವುದು.
6. ಇಂಟರ್‌ನೆಟ್ ಸಂಪರ್ಕದಿಂದ ವಿವಿಧ ವಿದ್ಯಾಮಾನಗಳ ಬಗ್ಗೆ ಮಾಹಿತಿಯನ್ನು ಪಡೆಯಬಹುದು.

**ಕಲಿಕಾ ಸಂಪನ್ಮೂಲದ ಕ್ರೋಢೀಕರಣಕ್ಕೆ ಮತ್ತು ಕಲಿಕಾ ಮಾಹಿತಿ ಪ್ರಸಾರಕ್ಕೆ ಕಂಪ್ಯೂಟರ್‌ನ ಬಳಕೆ:**

1. ಬೋಧನಾ ವಿಷಯದ ದತ್ತಾಂಶ ಹಾಗೂ ಚಿತ್ರ ಸಂಗ್ರಹಣೆ: ವಿವಿಧ ಅಂಕೆ ಸಂಖ್ಯೆಗಳು (ಉದಾ: ಜಾನುವಾರು, ಜನಸಂಖ್ಯೆ, ಪೌಷ್ಠಿಕಾಂಶಗಳು) ಮತ್ತು ಸಂಬಂಧಿತ ರೇಖಾಚಿತ್ರಗಳ ಸಂಗ್ರಹಿತ ಪ್ರತಿ ಜೋಡಣೆ ಮತ್ತು ದರ್ಶಕ ಪರದೆಯೇ ಮೇಲೆ ಬೋಧನಾ ಸಮಯದಲ್ಲಿ ಬಿಂಬಿಸುವುದು.
2. ಅಂತರ್ಜಾಲದಲ್ಲಿ ಕಲಿಕಾರ್ಥಿ ವಿದ್ಯುನ್ಮಾನ ಅಂಚೆ ಮೂಲಕ ಪ್ರಶ್ನೆಗಳಿಗೆ ಉತ್ತರ ಬರೆದು ತಿಳಿಸುವುದು (via –e-mail) ಸಾಧ್ಯವಾಗುತ್ತದೆ.
3. ಬೋಧನಾ ವಿಷಯದ ಬಗ್ಗೆ ಲಭ್ಯವಿರುವ ಪುಸ್ತಕಗಳ ಬಗ್ಗೆ ಅಂತರ್ಜಾಲದಲ್ಲಿ ವಿವರ ಸಂಗ್ರಹಿಸಿ, ವಿದ್ಯಾರ್ಥಿಗಳಿಗೆ ನೀಡುವುದು, ಸಂಬಂಧಿತ ವೆಬ್‌ಸೈಟ್ ಹೆಸರುಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು ಸಾಧ್ಯವಾಗಿದೆ.
4. ಅತ್ಯುತ್ತಮ ಪುಸ್ತಕಗಳ ಬಗ್ಗೆ ಪಾಠ ಮಾಡಲು ನೇರವಾಗಿ ಹೆಸರಾಂತ ಲೇಖಕರು ಹಾಗೂ ಪ್ರಕಾಶಕರಿಂದ ಸಂಪರ್ಕಿಸಿ ಮಾಹಿತಿಗಳನ್ನು Download ಮಾಡಿಕೊಳ್ಳಬಹುದು.

– ಬಸವಂತರಾಯ ಎ. ಪಾಟೀಲ

## ಕನ್ನಡ ಭಾಷಾ ಬೋಧನೆ

ಭಾಷೆಯನ್ನು ಚೆನ್ನಾಗಿ ಬಳಸುತ್ತಿರುವ ಹಿರಿಯ ಲೇಖಕರೆಲ್ಲ ಹೇಳುವುದೇನೆಂದರೆ ಮಕ್ಕಳಿಗೆ ಮನೆ ಮತ್ತು ಶಾಲೆಯಲ್ಲಿ ದೊರೆತ 'ನುಡಿ ಸಂಸ್ಕಾರವೇ' ಅವರ 'ಮೂಲಬಲ' ಎಂದು. ಭಾಷೆಗಳನ್ನು ಪರಿಸರದ ಪ್ರಭಾವದಿಂದಲೇ ಹೆಚ್ಚು ಪ್ರಯತ್ನವಿಲ್ಲದೆ ಸಹಜವಾಗಿ ಹೀರಿಕೊಳ್ಳುವ ಆಂತರಿಕ ಚೈತನ್ಯವುಳ್ಳವ ಮಾನವನೆಂಬುದು– ನೋಮ್‌ಚಾಮ್‌ಸ್ಕಿ ಎಂಬ ಭಾಷಾಭಿಜ್ಞನ ಮತವಾಗಿದೆ. ನಿಜ... ಭಾಷೆಗಳ ಅರಿವು ಎಲ್ಲರಿಗೂ ತಾನಾಗಿಯೇ ಒಲಿದಿರುವ ಅದ್ಭುತ ವರ. ಇದು ನಿತ್ಯಜೀವನದ ಸಂವಹನ ಮಾಧ್ಯಮವಾಗಿದೆ ಮತ್ತು ಶಾಲಾ ಜೀವನದಲ್ಲೂ ಎಲ್ಲ ಕಲಿಕೆಗೆ ಆಧಾರವಾಗಿದೆ.

ವೈಜ್ಞಾನಿಕವಾಗಿ ಪರಿಗಣಿಸುವುದಾದರೆ ಮನುಷ್ಯ ತನ್ನ ಧ್ವನ್ಯಂಗಗಳ ಅಂದರೆ ಶರೀರದಲ್ಲಿರುವ ಶ್ವಾಸಕೋಶ, ಗಂಟಲು, ಧ್ವನಿಪೆಟ್ಟಿಗೆ, ಬಾಯಿ, ನಾಲಿಗೆ, ತುಟಿ, ಹಲ್ಲು, ಮೂಗು – ಇವುಗಳ ಸಹಾಯದಿಂದ ಉಚ್ಚರಿಸುವ ಧ್ವನಿಸಂಕೇತಗಳ ಯಾದೃಚ್ಛಿಕ ರಚನಾತ್ಮಕತೆಯೇ ಭಾಷೆ. ಒಂದು ಪ್ರದೇಶದಲ್ಲಿರುವ ಶಿಕ್ಷಿತ–ಅಶಿಕ್ಷಿತ ಎಂದು ಭೇದ ಮಾಡದೇ ಎಲ್ಲರಿಗೂ ತಿಳಿಯುವ ಏಕಸ್ವರೂಪದ ಭಾಷೆಯನ್ನು 'ಶಿಷ್ಟಭಾಷೆ' ಎನ್ನುತ್ತಾರೆ. ಅಂದರೆ ಬರಹದ ಭಾಷಾ ಸ್ವರೂಪವನ್ನು ಸಾಮಾನ್ಯವಾಗಿ 'ಶಿಷ್ಟಭಾಷೆ' ಎಂದು ಹೇಳುವುದುಂಟು. ಇದು ಆಡಳಿತ, ವಾಣಿಜ್ಯ, ಪ್ರಸಾರ ಮಾಧ್ಯಮ,

Digitised by Bharatavani, CIIL

ಶಿಕ್ಷಣ ಇತ್ಯಾದಿ ಔಪಚಾರಿಕ ನೆಲೆಗಳಲ್ಲಿ ಬಳಸಬಹುದಾದ ಭಾಷೆಯ ರೂಪ. ಜನಸಾಮಾನ್ಯರ ಅಥವಾ ಗ್ರಾಮೀಣ ನಿವಾಸಿಗಳ ಸಂವಹನ ಭಾಷೆಯ ರೂಪವೇ ಗ್ರಾಮ್ಯಭಾಷೆ. ಪ್ರಾದೇಶಿಕತೆ, ಸಾಮಾಜಿಕತೆ ಮತ್ತು ಸಾಂಸ್ಕೃತಿಕತೆಗಳನ್ನು ಬಿಂಬಿಸುವ ಸಾಮರ್ಥ್ಯ ಗ್ರಾಮ್ಯಭಾಷೆಗಿರುತ್ತದೆ. ಭಾಷಾ ಬೋಧನೆಯಲ್ಲಿ ಸಾಹಿತ್ಯ ಬೋಧನೆಯೂ ಇರುವುದರಿಂದ ಸಾಹಿತ್ಯದ ಸಹಜತೆಗಾಗಿ ಬಳಕೆಯಾಗುವ ಗ್ರಾಮ್ಯ ಭಾಷೆಯ ಸ್ವರೂಪವನ್ನು ಶಿಕ್ಷಕರೂ-ವಿದ್ಯಾರ್ಥಿಗಳೂ ತಿಳಿಯಬೇಕಾಗುತ್ತದೆ.

ಕನ್ನಡ ಭಾಷಾ ಬೋಧನೆಗೆ ಕನ್ನಡ ಭಾಷಾ ಸ್ವರೂಪದ ಜ್ಞಾನವೂ ಅಗತ್ಯ. ಕನ್ನಡವು ದ್ರಾವಿಡ ಭಾಷಾ ಕುಟುಂಬಕ್ಕೆ ಅದರಲ್ಲೂ ದಕ್ಷಿಣ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಎರಡನೇ ಪ್ರಧಾನ ಸಾಹಿತ್ಯಿಕ-ಸಾಂಸ್ಕೃತಿಕ ಭಾಷೆ. ಇದು ಪ್ರಾಚೀನ ಭಾಷೆಯೂ ಆಗಿದೆ(ಕ್ರಿ.ಶ. 450). ಪ್ರಾದೇಶಿಕತೆ, ಸಾಮಾಜಿಕ-ಸಾಂಸ್ಕೃತಿಕತೆ, ಔದ್ಯೋಗಿಕತೆ, ಕಾಲ, ಅನ್ಯಭಾಷಾ ಪ್ರಭಾವ, ಆಧುನಿಕತೆ ಈ ಅಂಶಗಳಿಂದ ಕನ್ನಡವು ಭಾಷಾ ಪ್ರಭೇದಗಳನ್ನು ಹೊಂದಿದೆ. ಅವು-

- ಪ್ರಾದೇಶಿಕ ಉಪಭಾಷೆಗಳು: ಮೈಸೂರು ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ, ರಾಯಚೂರು ಕನ್ನಡ, ಬೆಳಗಾವಿ ಕನ್ನಡ, ಬಳ್ಳಾರಿ ಕನ್ನಡ, ವಿಜಾಪುರ ಕನ್ನಡ.
- ಸಾಮಾಜಿಕ-ಸಾಂಸ್ಕೃತಿಕ ಉಪಭಾಷೆಗಳು: ಸೋಲಿಗ ಕನ್ನಡ, ಹವ್ಯಕ ಕನ್ನಡ, ಕೊಡವ ಕನ್ನಡ, ಕೋಟ ಕನ್ನಡ, ಕೊರಗ ಕನ್ನಡ, ಹಾಲಕ್ಕಿ ಕನ್ನಡ, ಮುಸ್ಲಿಂ ಕನ್ನಡ, ಇತ್ಯಾದಿ.
- ಔದ್ಯೋಗಿಕ ಉಪಭಾಷೆಗಳು: ಬೆಸ್ತ ಕನ್ನಡ, ವೈದ್ಯ ಕನ್ನಡ, ವಕೀಲರ ಕನ್ನಡ, ಕುಂಬಾರರ ಕನ್ನಡ, ಕಮ್ಮಾರರ ಕನ್ನಡ, ಚಿನಿವಾರರ ಕನ್ನಡ.
- ಚಾರಿತ್ರಿಕ ಉಪಭಾಷೆಗಳು: ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ.
- ಅನ್ಯ ಭಾಷಿಕ ಪ್ರಭಾವಿತ ಕನ್ನಡದ ಉಪಭಾಷೆಗಳು: ಮರಾಠಿ ಕನ್ನಡ, ಸಂಕೇತಿ ಕನ್ನಡ, ತೆಲುಗು ಕನ್ನಡ, ತಮಿಳು ಕನ್ನಡ, ಮಲಯಾಳಂ ಕನ್ನಡ.

ಈ ಪ್ರಭೇದಗಳು ಸಹಜತೆಗಾಗಿ ಅನಿವಾರ್ಯವಾದಾಗ ಸಾಹಿತ್ಯದಲ್ಲಿ ಬಳಕೆಯಾಗಬಹುದು. ಪ್ರತಿಯೊಂದು ಭಾಷೆಯೂ ತನ್ನದೇ ವೈಶಿಷ್ಟ್ಯವನ್ನು ಪಡೆದಿರುವುದು ಆ ಭಾಷೆಯ ಹೆಗ್ಗಳಿಕೆ. ಒಂದು ಭಾಷೆಯಿಂದ ಮತ್ತೊಂದು ಭಾಷೆ ವಿಕಸನ ಹೊಂದಿ ತನ್ನದೇ ಅಸ್ತಿತ್ವವನ್ನು ಸಂಸ್ಥಾಪಿಸಿಕೊಳ್ಳುವಲ್ಲಿ ಸುದೀರ್ಘ ಸಾಹಿತ್ಯಿಕ ಪರಂಪರೆಯನ್ನು ಪಡೆದಿರುತ್ತದೆ. ಇದು ಆ ಭಾಷೆಯ ವಿಕಸನದ ಚೈತನ್ಯವನ್ನು ಸಹಜತೆಯನ್ನು ಸ್ಪಷ್ಟಪಡಿಸುವುದು. ಅಲ್ಲದೇ ಇದು ಬೆಳೆಯುವ ಭಾಷೆಯ ಸ್ವಾಭಾವಿಕ ಕ್ರಿಯಾತ್ಮಕ ಲಕ್ಷಣ. ಕನ್ನಡ ಅಂತಹ ಜಾಯಮಾನವನ್ನು ಹೊಂದಿದೆ.

ಕನ್ನಡ ಭಾಷೆಯ ಬೋಧನೆಗೆ ಅಗತ್ಯವಾದ ವೈಶಿಷ್ಟ್ಯಗಳ ಸಂಕ್ಷಿಪ್ತ ವಿವರವನ್ನು ಹೀಗೆ ಪಟ್ಟಿ ಮಾಡಬಹುದು.

- ಕನ್ನಡದಲ್ಲಿ ಋ, ಋೂ , ಶ್, ಷ್, ಇಲ್ಲ.
- ಕನ್ನಡದಲ್ಲಿ ಲ್, ಳ್, ಬೇರೆ ಬೇರೆಯಾಗಿವೆ.
- ಕನ್ನಡದಲ್ಲಿ ಎ, ಐ, ಒ, ಓ. ಗಳಿಗೆ ವ್ಯತ್ಯಾಸವಿದೆ.
- ಕನ್ನಡದಲ್ಲಿ ವಿಸರ್ಗ ಇಲ್ಲ.
- ಕನ್ನಡದಲ್ಲಿ ಬಳಸುವ ಬಿಂದು (ಅನುಸ್ವಾರ) ಅನುನಾಸಿಕಗಳ ಪ್ರತಿನಿಧಿ.
- ಕನ್ನಡದಲ್ಲಿ ವಿಜಾತಿ ದ್ವಿತ್ವಾಕ್ಷರಗಳು ಪದದ ಆದಿ ಮತ್ತು ಮಧ್ಯ ಕ್ವಚಿತ್ತಾಗಿ ಕಂಡು ಬರುವುವು.
- ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳಿಲ್ಲ.
- ಕನ್ನಡದಲ್ಲಿ ದ್ವಿವಚನ ವರ್ಗವಿಲ್ಲ.
- ಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳು ವಿಭಕ್ತ್ಯರ್ಥಗಳನ್ನು ಕೊಡುವ ಪ್ರತ್ಯಯಗಳಾಗಿವೆ.
- ಕನ್ನಡದಲ್ಲಿ ಪರಪ್ರತ್ಯಯಗಳು ಮಾತ್ರ ಇವೆ.
- ಕನ್ನಡದಲ್ಲಿ ಪದಗಳ ಸ್ಥಾನವೇ ವಿಶೇಷಣ-ವಿಶೇಷ್ಯಗಳ ಆಧಾರದಿಂದ ನಿರ್ಧರಿತವಾಗುವವು.
- ಕನ್ನಡದಲ್ಲಿ ತರತಮ ಭಾವ ಇಲ್ಲ.
- ಕನ್ನಡದಲ್ಲಿ ಕರ್ಮಣಿ ಪ್ರಯೋಗವಿಲ್ಲ.
- ಕನ್ನಡದಲ್ಲಿ ನಿಷೇಧ ರಚನೆ ಇದೆ. (ನಿಷೇದ ಸೂಚಕವು ಪದದ ನಂತರ ಬರುತ್ತದೆ)
- ಕನ್ನಡದಲ್ಲಿ ವಿಶೇಷಣಗಳು ವಿಶೇಷ್ಯದ ಲಿಂಗವಚನಗಳನ್ನು ಅನುಸರಿಸುವುದಿಲ್ಲ.
- ಕನ್ನಡದಲ್ಲಿ ವಿಶೇಷಣಕ್ಕೂ ನಾಮಪದಕ್ಕೂ ಪ್ರತ್ಯೇಕ ಪ್ರತ್ಯಯಗಳಿವೆ.
- ಕನ್ನಡದಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾಪದ – ಈ ಅನುಕ್ರಮಣಿಕೆಯಲ್ಲಿ ವಾಕ್ಯರಚನೆ ಇರುತ್ತದೆ.
- ಕನ್ನಡ ತನ್ನದೇ ವಿಶಿಷ್ಟ ಸಂಧಿನಿಯಮಗಳನ್ನು ಹೊಂದಿದೆ.

Digitised by Bharatavani, CIIL

- ಕನ್ನಡದಲ್ಲಿ ಜ, ಞ, ಗಳು ಸ್ವತಂತ್ರ ಅಕ್ಷರಗಳಾಗಿ ಪ್ರಯೋಗವಾಗುವ ಪದಗಳು ಕಡಿಮೆ (ಆಜ್ಞೆ, ಜ್ಞಾನ, ಸಂಜ್ಞೆ ಮುಂತಾದ ಸಂಸ್ಕೃತ ಪದಗಳ ಬಳಕೆ ಕನ್ನಡದಲ್ಲಿದೆ).

- ಕನ್ನಡದಲ್ಲಿ ಫ, ಝ, ಠ, ಗಳ ಆವರ್ತನೆ ಕಡಿಮೆ ಎನ್ನಬಹುದು.

- ಕ್ಷ, ತ್ರ, ಜ್ಞ, ವ್ಯಂಜನಗಳು ಕನ್ನಡ ವರ್ಣಮಾಲೆಯಲ್ಲಿ ಸೇರಿಲ್ಲ. ಕಾರಣ ಅವು ಸ್ವತಂತ್ರ ಏಕಾಕ್ಷರಗಳಲ್ಲ).

ಭಾಷೆಯ ಕಲಿಕೆಯೆಂದರೆ– 'ಭಾಷೆಯ ಬಳಕೆ'. ಇದು ಒಂದು ಆಯಾಮವಾದರೆ, ಭಾಷೆಯ ರಚನೆಯ ಆಂತರ್ಯವನ್ನರಿಯುವುದು ಇನ್ನೊಂದು ಆಯಾಮ. ಒಟ್ಟಿನಲ್ಲಿ ಭಾಷೆಯನ್ನು ಸಮರ್ಥವಾಗಿ ಬಳಸುವುದು ಮತ್ತು ಭಾಷೆಯನ್ನು ವೈವಿಧ್ಯಮಯವಾಗಿ ಬಳಸುವುದು ಮುಖ್ಯ.

ಭಾಷಾ ಕಲಿಕೆಯಲ್ಲಿ ಭಾಷೆಯಲ್ಲಿರುವ ಧ್ವನಿಗಳನ್ನೂ ಅವುಗಳ ಸರಿಯಾದ ಉಚ್ಚಾರಣೆಯನ್ನು ಕಲಿಯುವುದು ಅತ್ಯಗತ್ಯ. ಸ್ಪಷ್ಟ ಅರ್ಥಗ್ರಹಣಕ್ಕೆ ಸರಿಯಾದ ಮತ್ತು ಸ್ಪಷ್ಟವಾದ ಉಚ್ಚಾರ ಅನಿವಾರ್ಯ. ಭಾಷಾ ಬೋಧನೆ ಸಂಪ್ರದಾಯಬದ್ಧವಾಗಿ ಅಕ್ಷರಗಳಿಂದ ಪ್ರಾರಂಭವಾದರೂ ಅಥವಾ ಪ್ರಚಲಿತ ಪದ/ವಾಕ್ಯ ಪದ್ಧತಿಯಿಂದ ಪ್ರಾರಂಭವಾದರೂ ಇಲ್ಲವೇ ಸಂಭಾಷಣಾ ಪದ್ಧತಿಯಿಂದ ಪ್ರಾರಂಭವಾದರೂ ಉಚ್ಚಾರ ಬಹುಮುಖ್ಯ ಪಾತ್ರ ವಹಿಸುತ್ತದೆ.

ಕನ್ನಡದ ಕೆಲವು ಉಚ್ಚಾರಣೆಯ ಸಮಸ್ಯೆಗಳನ್ನು ಇಲ್ಲಿ ಗಮನಿಸುವುದು ಲೇಸು.

- ಅ, ಆ, ಗಳ ಉಚ್ಚಾರಣೆ: ಉತ್ತರ ಕರ್ನಾಟಕ ಭಾಗದವರ ಮತ್ತು ದಕ್ಷಿಣ ಕರ್ನಾಟಕ ಭಾಗದವರ ಉಚ್ಚಾರದಲ್ಲಿ ವ್ಯತ್ಯಾಸ ಕಾಣುತ್ತದೆ. ದಕ್ಷಿಣದವರು ಬಾಯಿ ತೆರೆದು ಪೂರ್ಣವಾಗಿ ಉಚ್ಚರಿಸಿದರೆ ಉತ್ತರದವರು ಅ, ಆ, ಗಳನ್ನು ಅ, ಆ ಎಂದು ಹ್ರಸ್ವವಾಗಿ ಉಚ್ಚರಿಸುತ್ತಾರೆ. ಇದಕ್ಕೆ ಕಾರಣ ಇಂಡೋ ಆರ್ಯನ್ ಭಾಷೆಗಳ (ಉರ್ದು, ಮರಾಠಿ, ಕೊಂಕಣಿ) ಪ್ರಭಾವ.

- 'ಫ' ಧ್ವನಿಯ ಉಚ್ಚಾರಣೆಯಲ್ಲಿಯೂ ತೊಡಕು ಕಂಡುಬರುತ್ತದೆ. ಇದು ಓಷ್ಠ ಮಹಾಪ್ರಾಣಧ್ವನಿ, ಇಂಗ್ಲಿಷಿನ Fan, Coffee ಪದಗಳಲ್ಲಿನ ಉಚ್ಚಾರ ಫ್ಯಾನ್, ಕಾಫಿ ಎಂದಾದರೆ ದೋಷವಾಗುವುದು. ಅದಕ್ಕೆ ಫ್ಯಾನ್, ಕಾಫ಼ಿ, ಎಂದು ಇಂಗ್ಲಿಷಿನ ಧ್ವನಿಯನ್ನು ಬಳಸಬೇಕಾಗುತ್ತದೆ. ಹಾಗೆಯೇ Zoo ಎನ್ನುವುದಕ್ಕೆ ಝೂ ಎನ್ನುವುದುಂಟು ಮತ್ತು ಬರೆಯುವುದುಂಟು.

- ಮಹಾಪ್ರಾಣಾಕ್ಷರಗಳುಳ್ಳ ಪದಗಳನ್ನು ಉಚ್ಚರಿಸುವಾಗ ತಪ್ಪು ಮಾಡುವುದುಂಟು. ಇವು ಬರಹದಲ್ಲಿದ್ದರೂ ಆಡು ನುಡಿಯಲ್ಲಿ ಲುಪ್ತವಾಗುವುದನ್ನು ಕಾಣುತ್ತೇವೆ. (ಕಥೆ, ಗಂಟೆ, ಚತ್ರಿ...) ಆದರೆ ಎಲ್ಲಿ ಮಹಾಪ್ರಾಣಗಳ ಧ್ವನಿಗಳ ಬಳಕೆಯಾಗದೆ ಇದ್ದರೆ ಪದಗಳ ಅರ್ಥಕ್ಕೆ ವ್ಯತ್ಯಯ ಉಂಟಾಗುತ್ತದೋ ಅಲ್ಲಿ ಅನಿವಾರ್ಯವಾಗಿ ಮಹಾಪ್ರಾಣ ಬಳಕೆಯಾಗಬೇಕು. ಉದಾಹರಣೆಗೆ ನಾತ–ನಾಥ, ಬಾವಿ–ಭಾವಿ, ಶಾಕ–ಶಾಖ, ಕೃತಜ್ಞ–ಕೃತಘ್ನ, ದನ–ಧನ ಇತ್ಯಾದಿ. ವಿದ್ಯಾರ್ಥಿ, ಸಂಬಂಧ, ವಿದ್ಯಾಭ್ಯಾಸ, ಬಂಧನ, ಸಂಬೋಧನೆ, ಇವುಗಳ ಉಚ್ಚಾರಣೆಯಲ್ಲೂ–ಬರವಣಿಗೆಯಲ್ಲೂ ಗೊಂದಲ ಉಂಟಾಗುತ್ತದೆ. ಆಡು ನುಡಿಯ ದೋಷ, ಅರೆಬರೆ ಜ್ಞಾನ, ಇಂತಹ ದೋಷವನ್ನು ಹೆಚ್ಚಿಸುತ್ತಾ ಹೋಗುತ್ತವೆ. ಅದಕ್ಕೆ ಶಿಕ್ಷಕರು ಶಿಷ್ಟ ಕನ್ನಡದಲ್ಲಿ ಬಳಕೆಯಲ್ಲಿರುವ ಸರಿಯಾದ ರೂಪವನ್ನು ಕಲಿಸಲು ಯತ್ನಿಸಬೇಕು.

- ಕನ್ನಡದಲ್ಲಿ ಮೂರು ತರಹದ ಸ (ಸ.ಶ.ಷ) ಎಂದು ವಿದ್ಯಾರ್ಥಿಗಳು ಸಂದೇಹ ಎತ್ತುವುದುಂಟು. ಒಂದರ ಬದಲು ಮತ್ತೊಂದು ಬಳಸುವುದೂ ಉಂಟು. ಇವು ಮೂರು ಊಷ್ಮ ಧ್ವನಿಗಳೇ ಆದರೂ ಸ–ದಂತ್ಯ, ಶ–ತಾಲವ್ಯ, ಷ–ಮೂರ್ಧನ್ಯ. ಇದನ್ನು ಸರದ–ಸ, ಶಂಕರ–ಶ, ಷಣ್ಮುಖ–ಷ ಎಂದು ಗುರುತಿಸುವುದುಂಟು. ಇವುಗಳ ಉಚ್ಚಾರದ ಗೊಂದಲಕ್ಕೆ ಕಾರಣ, ಅವುಗಳ ನಡುವೆ ಅತ್ಯಲ್ಪ ಧ್ವನಿ ವ್ಯತ್ಯಾಸವಿರುವುದು. ಆಡುನುಡಿಯಲ್ಲಿ ಸ ಮತ್ತು ಶ ಬಳಕೆಯಲ್ಲಿವೆ– ಉಚ್ಚಾರದಲ್ಲಿ ಶ, ಷ, ಗಳ ನಡುವೆ ವ್ಯತ್ಯಾಸವಾಗುವುದಕ್ಕಿಂತ ಬರಹದಲ್ಲಿ ವ್ಯತ್ಯಾಸವಾಗಿ ದೋಷಗಳಾಗುತ್ತವೆ. ಆದ್ದರಿಂದ ಸರಿಯಾದ ಬಳಕೆಗೆ ಗಮನಕೊಡಬೇಕು. ವ್ಯತ್ಯಾಸ ಮನದಟ್ಟು ಮಾಡಲು ಪದಯುಗ್ಮ ಉದಹರಿಸುವುದು ಒಳಿತು. ಸರ–ಶರ–ಷರಾ, ಸಮ–ಶಮ ಇತ್ಯಾದಿ. ಸ, ಶ, ಷ ಸಂಯುಕ್ತಾಕ್ಷರಗಳಾಗಿ ಬಳಕೆಯಾಗುವಾಗ ಇಸ್ಟ, ಕಸ್ಟ, ಎಸ್ಟು, ಎನ್ನುತ್ತಾರೆ. ಆದರೆ 'ಸ್ಟ' ಕನ್ನಡ ಶಬ್ದಗಳಲ್ಲಿ ಬರುವುದಿಲ್ಲ. ಇಂಗ್ಲಿಷಿನ ಪೇಸ್ಟ್, ಗೆಸ್ಟ್, ಜಸ್ಟ ಗಳನ್ನು ಎರವಲು ಪಡೆದು ಬಳಸುವಾಗ ಬರುತ್ತದೆ. 'ಷ್ಟ' ಹೆಚ್ಚು ಬಳಕೆಯಾಗುತ್ತವೆ. 'ಶ್ಟ' ಬಳಕೆ ಇಲ್ಲವೇ ಇಲ್ಲ. ಹಾಗೆಯೇ 'ಷ್ಠ' ಮಾತ್ರ ಬರುತ್ತದೆ. ಸ್ಮ, ಶ್ಚ, ಸ್ರ–ಶ್ರ, ಸ್ವ, ಶ್ಲ, ಸ್ಕ, ಎಂದು ಬರುತ್ತದೆ ಎಂದು ನಿಯಮಗಳನ್ನು ಮಾಡಿಕೊಂಡರೆ ಗೊಂದಲಗಳು ಕಡಿಮೆಯಾಗುತ್ತವೆ. ವಿದ್ಯಾರ್ಥಿಗಳಿಗೆ ನಿಖರತೆ ಸಿಗುತ್ತದೆ.

ಆಡುಗನ್ನಡದಲ್ಲಿ 'ಹ'ಕಾರ ಬಳಸದೆ ತಪ್ಪು ಮಾಡುವುದುಂಟು. ಅನೌಪಚಾರಿಕ ಸನ್ನಿವೇಶದಲ್ಲಿ ಮಾಡುವಂತೆ ಶಿಷ್ಟ ಕನ್ನಡದ ಬಳಕೆಯಲ್ಲಿ 'ಅ'ಕ್ಕೆ ಬದಲು 'ಹ' ಬಂದರೆ ದೋಷವಾಗುತ್ತದೆ. ಆ ಧ್ವನಿಗಳ ವ್ಯತ್ಯಾಸವನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು– ಇದಕ್ಕಾಗಿ ಉದಾಹರಣೆಗಳ ಮೂಲಕ– ಅಲ್ಲಿ–ಹಲ್ಲಿ, ಆರು–ಹಾರು, ಇರಿ–ಹಿರಿ, ಈರು–ಹೀರು, ಉಲಿ–ಹುಲಿ, ಊಡು–ಹೂಡು, ಎಸರು–ಹೆಸರು, ಏಳು–ಹೇಳು, ಒಡೆ–ಹೊಡೆ, ಅಂಚು–ಹಂಚು, ಈ ರೀತಿ ಪದಗಳ ಉಚ್ಚಾರದಿಂದ ಅರ್ಥ ವ್ಯತ್ಯಾಸವಾಗುವ ಬಗ್ಗೆ ತಿಳಿಸಬಹುದು.

ಬರವಣಿಗೆ ಮನಸ್ಸಿನಲ್ಲಿ ಆಲೋಚಿಸುವುದು, ಆಲೋಚನೆಗೆ

Digitised by Bharatavani, CIIL

ಸರಿಯಾದ ಭಾಷೆಯ ರೂಪ ಕೊಡುವುದು ನಂತರ ಅದನ್ನು ಒರೆಹಚ್ಚಿ ಇಳಿಸುವುದು ಇವೆಲ್ಲವನ್ನು ಒಳಗೊಂಡ ಸಂಯೋಜಿತ ಕ್ರಿಯೆ, ಕೈಬರಹ ಮಾದರಿಯನ್ನು ಕಲಿಸುವಾಗ ಶಿಕ್ಷಕರು ವಿದ್ಯಾರ್ಥಿಗಳಿಗೆ ಕೆಲವು ಸ್ಪಷ್ಟತೆಗಳನ್ನು ಒದಗಿಸುವ ಅಗತ್ಯ ಬೀಳುತ್ತದೆ. ಅವುಗಳ ವಿವರವನ್ನು ಹೀಗೆ ನೀಡಬಹುದು:

- 'ಕ' ಅಕ್ಷರ ಬರೆಯುವಾಗ ಒಂದು ದೊಡ್ಡ ಸೊನ್ನೆ, ಅದರ ಮೇಲೆ ಒಂದು ಚಿಕ್ಕ ಸೊನ್ನೆ ಬಳಸಿ ಬರೆಯುವುದುಂಟು. ಕೆಲವರು ಒಂದೇ ಸೊನ್ನೆ ಬಳಸಿ ಅದರ ಮೇಲೆ ಅಡ್ಡಗೆರೆ ಎಳೆದು ನಂತರ ಮಧ್ಯ ಒಂದು ನೇರ ಗೆರೆ ಬರೆದು ತಲೆಕಟ್ಟು ನೀಡುವುದುಂಟು. ಇದು ಕಲಿಕೆಯ ಸೌಲಭ್ಯ ಮತ್ತು ವೇಗಕ್ಕೆ ಸಹಾಯಕ. ಆದರೆ ಎಲ್ಲಿಂದ ಆರಂಭಿಸಿ ಹೇಗೆ ಮುಗಿಸಬೇಕೆಂದು ತೋರಿಸಿಕೊಡಬೇಕು.

- 'ತ' ಅಕ್ಷರ ಬರೆಯುವಾಗ ಸಂಖ್ಯೆ ಮೂರನ್ನು ಮೇಲಿಂದ ಕೆಳಕ್ಕೆ ಬರೆದು ತಲೆಕಟ್ಟು ನಂತರ ಕೊಡುವ ರೀತಿಯಲ್ಲಿ ಬರೆಯುತ್ತಾರೆ. ಇದರಿಂದ ಬರೆಯುವ ವೇಗಕ್ಕೆ ಅಡ್ಡಿಯಾಗುವುದು. ಆದ್ದರಿಂದ ಕೆಳಗಿನಿಂದ ಆರಂಭಿಸಿ ಮೇಲೆ ಹಾಗೆಯೇ ತಲೆಕಟ್ಟು ಬರೆಯುವುದೇ ಸಕ್ರಮ.

- 'ಹಿ' ಬರೆಯುವಾಗ 'ಇ' ಕಾರದ ಗುಣಿತವನ್ನು ಎಡಪಕ್ಕದ ಸೊನ್ನೆಯ ಮೇಲೆ ಬರೆಯುವ ಬದಲು ಎರಡು ಸೊನ್ನೆಗಳ ಮಧ್ಯಭಾಗಕ್ಕೆ ಸೇರಿಸುವುದು ಕೂಡದು.

- ಮೀ ಬರೆಯುವಾಗ ಬಹುಶಃ ಕಾಲ ಉಳಿತಾಯ ದೃಷ್ಟಿಯಿಂದ 'ಮಿ ' ರೂಪ ಬಳಸುವ ರೂಢಿಯಿದೆ. ಆದರೆ ಈ, ಏ, ಓ, ಗಳ ಉಪಚಿಹ್ನೆಗೆ ದೀರ್ಘ ಸೇರಿಸಿ ಬರೆಯುವ ಏಕರೂಪತೆ ಮತ್ತು ಕಲಿಸುವ ದೃಷ್ಟಿಯಿಂದ ಮೀ ಹೆಚ್ಚು ಸೂಕ್ತ.

- 'ಅರ್ಕಾವತ್ತು' ಎಲ್ಲಿ ಬರೆಯಬೇಕೆಂಬುದು ಸಮಸ್ಯೆ. ಉದಾ: (ನಿರ್ದೇಶಕ,ಸರ್ಯೋದಯ–ನಿರ್ದೇಶಕ,ಸೂರ್ಯೋದಯ). ಪ್ರಾರಂಭದಲ್ಲಿ 'ರ' ಅಕ್ಷರ ಈಗಿನ ಅರ್ಕಾವತ್ತಿನಂತಿದ್ದು ಅದೇ ಮೂಲಾಕ್ಷರವಾಗಿದ್ದಿತು. ರ ಸೇರಿದ ಸಂಯುಕ್ತಾಕ್ಷರಗಳನ್ನು ಮೊದಲು 'ರ' ಬರೆದು ಅದರ ಕೆಳಗೆ ವ್ಯಂಜನ ಗುಚ್ಛದ ಮತ್ತೊಂದು ಭಾಗವನ್ನು ಬರೆಯುವ ಪದ್ಧತಿ ಇತ್ತು. ಕ್ರಮೇಣ ಅರ್ಕಾವತ್ತು ಅಕಾರದಲ್ಲಿ ರ ಆಗಿ ಪೂರ್ಣವಾದ ಮೇಲೆ ರ ಅಕ್ಷರದ ಕೆಳಗೆ ಅಕ್ಷರ ಬರೆಯುವುದು ಕಷ್ಟವಾಗಿ ಸಾಲಿನ ಅಳತೆಯನ್ನು ತಗ್ಗಿಸುವ ಪ್ರಯತ್ನವಾಗಿ ರ ಅಕ್ಷರಕ್ಕೆ ಉಪಚಿಹ್ನೆಯನ್ನು ರೂಪಿಸಲಾಯಿತು. ಈ ಉಪಚಿಹ್ನೆಯೇ ಅರ್ಕಾವತ್ತು ಎಂದು ಭಾಷಾತಜ್ಞರು ಹೇಳುತ್ತಾರೆ. ಅರ್ಕಾವತ್ತು ರೂಪುಗೊಂಡ ಮೇಲೆ ಅದನ್ನು ಎಲ್ಲಿ ಬರೆಯಬೇಕು ಎಂಬ ಪ್ರಶ್ನೆ ಬಂದಾಗ ಅಕ್ಷರದ ಹಿಂದೆ ಬರೆಯದೆ ಅಕ್ಷರದ ಮುಂದೆ ಬರೆಯುವುದು ಜಾರಿಗೆ ಬಂದಿತು. ಆದರೂ, ಅರ್ಕಾವತ್ತನ್ನು ಸಂಯುಕ್ತಾಕ್ಷರದಲ್ಲಿ 'ರ' ಕಾರ ಮೊದಲು ಹೇಳಿ ಅನಂತರ ಮೂಲಾಕ್ಷರ ಹೇಳಲಾಗುವುದು. ಆದ್ದರಿಂದ ಉಚ್ಚಾರ ಕ್ರಮಾನುಸಾರ ರಕಾರದ ಚಿಹ್ನೆ (ೠ) ಅಕ್ಷರದ ಹತ್ತಿರವಿರಬೇಕೆಂದು (ಸೂರ್ಯೋದಯ) ಓದಲು ಸುಲಭ ಎಂದು ಒಂದು ವಾದ. ಅಕ್ಷರದ ಮುಂದೆ (ಎಂದರೆ ವ್ಯಂಜನಕ್ಕೆ ಸೇರಿದ ಗುಣಿತ ಚಿಹ್ನೆಗಳು ಸೇರಿದ ಮೇಲೆ ಸೂರ್ಯೋದಯ) ಅರ್ಕಾವತ್ತು ಬರಬೇಕು ಎಂಬುದು ಮತ್ತೊಂದು ವಾದ. ಒಟ್ಟಿನಲ್ಲಿ ಎರಡೂ ರೂಪಗಳು ಒಪ್ಪಿತವಾದುವೆಂದು ಈಗ ಹೇಳಲಾಗಿದೆ. ಮೂರನೆ ವಾದದ ಪ್ರಕಾರ ಸಮಸ್ಯೆಯೇ ಬೇಡವೆಂದು ಸೂರ್ಯೋದಯ ಕಾರ್ಯ ಎಂದು ಬಳಕೆಯಲ್ಲಿವೆ.

ಹೀಗೆ ಭಾಷಾ ಬೋಧಕರು ಆಯಾ ಭಾಷೆಯ ರಚನೆಯ ವಿವರದ ಜೊತೆಗೆ ವ್ಯಾಕರಣ, ಶಬ್ದ ವ್ಯುತ್ಪತ್ತಿಗಳನ್ನು ತಿಳಿದಿದ್ದರೆ ಶಿಕ್ಷಕರು ಭಾಷಾ ಬೋಧನೆಯ ಮೂಲಕ ವಿದ್ಯಾರ್ಥಿಗಳನ್ನು ಸಮರ್ಥ ಭಾಷಿಗರನ್ನಾಗಿ ಮಾಡಬಹುದು.

**ಕನ್ನಡ ಭಾಷಾ ಶಿಕ್ಷಣ:** ಪ್ರಥಮ ಭಾಷೆ/ಮಾತೃಭಾಷೆಯನ್ನು ವಿದ್ಯಾರ್ಥಿಗಳು ಶಾಲೆಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತಗಳಲ್ಲಿ ಅಧ್ಯಯನ ಮಾಡುತ್ತಾರೆ. 1 ರಿಂದ 4ನೇ ತರಗತಿ ಮುಗಿಸುವ ವೇಳೆಗೆ ಲಕ್ಷ್ಯವಿಟ್ಟು ಕೇಳಿ ಅರ್ಥಮಾಡಿಕೊಂಡು ಸ್ಪಷ್ಟ ಉಚ್ಚಾರದಿಂದ, ಸ್ವಂತ ಮಾತುಗಳಲ್ಲಿ ಅಭಿವ್ಯಕ್ತಿಸಬಲ್ಲರು. ವರ್ಣಮಾಲೆಯ ವಿವರ, ದಿನನಿತ್ಯ ಬಳಸುವ ಪದಗಳ ಪರಿಚಯ, ಸರಳ ವಾಕ್ಯರಚನೆ ಮಾಡಬಲ್ಲರು. ಸರಳ ಕಥೆಗಳನ್ನು ಓದಿ ಗ್ರಹಿಸಬಲ್ಲರು. ತಪ್ಪಿಲ್ಲದೆ ಬರೆಯಬಲ್ಲರು.

ಮಾಧ್ಯಮಿಕ ಹಂತದಲ್ಲಿ ಪಡೆದ ಭಾಷಾ ಶಿಕ್ಷಣದಿಂದ ವಿದ್ಯಾರ್ಥಿಗಳು ಭಾಷೆಯ ಕೌಶಲಗಳಲ್ಲಿ ಹೆಚ್ಚಿನ ಸಾಮರ್ಥ್ಯ ತೋರಬೇಕು. ವ್ಯವಹಾರಿಕ ಭಾಷಾ ಬಳಕೆ, ಉತ್ತಮ ಶಬ್ದ ಸಂಪತ್ತು, ಶೀಘ್ರ ಮತ್ತು ಗ್ರಹಣಯುಕ್ತ ಓದುಗಾರಿಕೆ, ಕ್ರಿಯಾಶೀಲ ವ್ಯಾಕರಣ ಜ್ಞಾನ, ಸರಳ ಶುದ್ಧ ಲಿಖಿತ ಅಭಿವ್ಯಕ್ತಿ, ಪಠ್ಯೇತರ ಸರಳ ಪುಸ್ತಕ ಓದಿ ಆನಂದಿಸುವುದು, ಭಾಷೆಯ ಸೌಂದರ್ಯ ತಿಳಿಯುವುದು, ಸೃಜನಶೀಲತೆ ತೋರುವ ಮಟ್ಟ ತಲುಪಬೇಕು.

ಅಂದರೆ ಪ್ರೌಢಶಾಲೆಗೆ ಬರುವ ವೇಳೆಗೆ ವಿದ್ಯಾರ್ಥಿ ಕನ್ನಡವನ್ನು ಗ್ರಹಿಸುವಲ್ಲಿ ಮತ್ತು ಬಳಸುವಲ್ಲಿ ಸಾಕಷ್ಟು ಹಿಡಿತ ಸಂಪಾದಿಸಿರಬೇಕು. ಅಲ್ಲದೆ ಸಾಹಿತ್ಯದ ಒಲವು–ಸೃಜನಶೀಲತೆಯನ್ನೂ ರೂಢಿಸಿಕೊಳ್ಳುವುದು ಭಾಷಾಶಿಕ್ಷಣದ ಆಶಯ ಎಂಬುದು ಅನೇಕರ ಅಭಿಪ್ರಾಯ. ಆದರೆ ವಾಸ್ತವದಲ್ಲಿ ಈ ನಿರೀಕ್ಷೆ ಸಫಲವಾಗುತ್ತಿಲ್ಲ. ಆದ್ದರಿಂದ ಪ್ರೌಢಶಾಲಾ ಹಂತದಲ್ಲಿ ಭಾಷಾ ಹಾಗೂ ಸಾಹಿತ್ಯ ಬೋಧನೆ ಎರಡೂ ಮುಖ್ಯವಾಗುತ್ತಿವೆ. ಸ್ಥೂಲವಾಗಿ ಹೇಳುವುದಾದರೆ ಕನ್ನಡಭಾಷಾ ಪ್ರೌಢಿಮೆಯನ್ನು ಬೆಳೆಸುವುದು ಪ್ರೌಢಶಾಲೆಗಳಲ್ಲಿ ಕನ್ನಡ ಭಾಷಾ ಬೋಧನೆಯ ಉದ್ದೇಶವಾಗಿದೆ. ಅಂದರೆ ಉತ್ತಮ ಮತ್ತು ಸ್ವಂತ ಶೈಲಿಯಲ್ಲಿ ಮಾತನಾಡುವುದು, ಬರೆಯುವುದು ಎಂದರ್ಥ. ಔಪಚಾರಿಕ ನೆಲೆಗಟ್ಟಿನಲ್ಲಿ (ತರಗತಿಯ ವಿಧಾಯಕ ಪಠ್ಯಪುಸ್ತಕಗಳ

Digitised by Bharatavani, CIIL

ವಿವಿಧ ಸಾಹಿತ್ಯ ಪ್ರಕಾರದ ಪಾಠಗಳಲ್ಲಿ) ಸಾಹಿತ್ಯದ ಭಾಷೆಯನ್ನು ಕಲಿತು, ವಿಶಿಷ್ಟ ಸಂದರ್ಭದಲ್ಲಿ ಆಡುನುಡಿಯ ಬಳಕೆಯ ಸೂಕ್ಷ್ಮಗಳನ್ನು ಅರಿತು ಔಚಿತ್ಯ ಪೂರ್ಣವಾಗಿ ಬಳಸುವುದು, ವಿವಿಧ ಶಾಸ್ತ್ರಗಳಿಗೆ ಸಂಬಂಧಿಸಿದ ವಿಶಿಷ್ಟ ಭಾಷಾ ರೂಢಿಗಳನ್ನು ಅರಿತು ವ್ಯವಹರಿಸುವುದು ಭಾಷಾ ಕಲಿಕೆಯ ಅಂಗವಾಗಿದೆ.

ಪ್ರೌಢಶಾಲಾ ಹಂತದಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯುವ ವಿದ್ಯಾರ್ಥಿ ಭಾಷಾಕೌಶಲಗಳ ಪ್ರೌಢಮಟ್ಟವನ್ನು ಗಳಿಸಬೇಕು. ಇದನ್ನು ಈ ಕೆಳಗಿನಂತೆ ವಿವರಿಸಬಹುದು.

- **ಆಲಿಸುವಿಕೆ:** ಕಥೆ ಕೇಳಿ ಸಂಗ್ರಹವಾಗಿ ಪುನರಾವರ್ತಿಸುವುದು, ಭಾಷಣ ಕೇಳಿ ಟಿಪ್ಪಣಿ ಮಾಡುವುದು, ರೇಡಿಯೋ ಕಾರ್ಯಕ್ರಮ ಕೇಳುವುದು, ಪದ್ಯ/ಗಮಕ ವಾಚನ ಆಲಿಸಿ ಆನಂದಿಸುವುದು, ವಾಚಿಸಿದ ನಾಟಕವನ್ನು ಆಲಿಸುವುದು, ಉದ್ಘೋಷಣೆ ಕೇಳುವುದು, ಸಂದರ್ಶನದಲ್ಲಿ ಅಭ್ಯರ್ಥಿಯಾಗಿ ಪಾಲ್ಗೊಳ್ಳುವುದು, ಇತ್ಯಾದಿ.

- **ಮಾತುಗಾರಿಕೆ:** ಸಂಭಾಷಣೆ ನಡೆಸುವುದು, ದೂರವಾಣಿ ಸಂಭಾಷಣೆ ಮಾಡುವುದು, ನಿವೇದಿಸುವುದು, ಉದ್ಘೋಷಿಸುವುದು, ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸುವುದು, ಸಂದರ್ಶನದಲ್ಲಿ ಭಾಗವಹಿಸುವುದು, ವಾರ್ತಾ ನಿರೂಪಣೆ ಮಾಡುವುದು, ಅಧ್ಯಯನ ಮಾಡಿದ್ದರ ಸಾರಾಂಶವನ್ನು ನೀಡುವುದು, ನಾಟಕಾಭಿನಯ, ವೀಕ್ಷಕ ವಿವರಣೆ ನೀಡುವುದು, ರಸಪ್ರಶ್ನೆ ನಡೆಸಿಕೊಡುವುದು, ಧ್ವನಿಮುದ್ರಣದಲ್ಲಿ ಪಾಲ್ಗೊಳ್ಳುವುದು, ಜಾಹಿರಾತುಗಳನ್ನು ಪ್ರಸ್ತುತಿ ಮಾಡುವುದು, ಕಾರ್ಯಕ್ರಮ ನಿರೂಪಿಸುವುದು, ಇತ್ಯಾದಿ.

- **ಓದುಗಾರಿಕೆ:** ಸ್ಥೂಲ, ಸೂಕ್ಷ್ಮ ಮತ್ತು ವಿಮರ್ಶಾತ್ಮಕ ಓದುಗಾರಿಕೆ ಸಾಮರ್ಥ್ಯ, ಧ್ವನಿಪೂರ್ಣ ಓದು, ವಿವಿಧ ಛಂದಸ್ಸಿನ ಪದ್ಯಗಳ ಭಾವಪೂರ್ಣವಾಚನ, ವಾರ್ತಾವಾಚನ, ವರದಿ/ಘಟನೆಗಳ ವಾಚನ ಇತ್ಯಾದಿ.

- **ಬರವಣಿಗೆ:** ಪಠ್ಯದ ಪ್ರಶ್ನೆಗಳಿಗೆ ಸ್ವಂತ ಶೈಲಿಯಲ್ಲಿ ಉತ್ತರ ಬರೆಯುವುದು, ವಿಷಯ ಗ್ರಹಣದ ಟಿಪ್ಪಣಿ, ಕೇಳಿದ/ನೋಡಿದ ಘಟನೆಗಳನ್ನು ಬರಹದಲ್ಲಿ ಪ್ರಸ್ತುತಪಡಿಸುವುದು, ವಿಮರ್ಶೆ ಬರೆಯುವುದು, ಲೇಖನ, ನಾಟಕ, ಚಲನಚಿತ್ರ, ವಿವಿಧ ಬಗೆಯ ಪ್ರಬಂಧ ರಚನೆ, ನಾಟಕ– ಸಣ್ಣಕತೆ ಚುಟುಕ/ಹನಿಗವನ ರಚನೆ, ಜಾಹಿರಾತು ರಚನೆ, ಚಿತ್ರಶೀರ್ಷಿಕೆ, ಭಾಷಾಂತರಿಸುವುದು, ಜಾಹಿರಾತುಗಳ ಸೃಜನಶೀಲ ಬರಹ ಕೈಗೊಳ್ಳುವಂತಿರಬೇಕು.

ಸಂಗ್ರಹವಾಗಿ ಹೇಳುವುದಾದರೆ ಈ ಮೇಲಿನ ಎಲ್ಲಾ ಕೌಶಲಗಳ ಜೊತೆಗೆ ಭಾಷಾಜ್ಞಾನದ (ವಿಪುಲ ಪದ ಸಂಪತ್ತು) ಫಲವಾಗಿ– ಮಾತೃ ಭಾಷೆಯನ್ನು ಪ್ರೌಢಹಂತದಲ್ಲಿ ಕಲಿಯುವುದರ ಪರಿಣಾಮವಾಗಿ ವಿದ್ಯಾರ್ಥಿಗಳು ಮುಖ್ಯವಾಗಿ ನಿತ್ಯಬಳಕೆಯ ಭಾಷೆಗೂ ಸಾಹಿತ್ಯಿಕ ಭಾಷೆಗೂ ಇರುವ ಪ್ರಮುಖ ಅಂಶಗಳನ್ನು ಗುರುತಿಸಿಕೊಂಡು ಮೊದಲನೆಯದಾಗಿ ಪಠ್ಯದಲ್ಲಿರುವ ಪಾಠಗಳನ್ನು ಓದುವಾಗ ವಿವಿಧ ಲೇಖಕ/ಕವಿಗಳ ಸಾಹಿತ್ಯಿಕ ಭಾಷೆಯ ಸ್ವರೂಪವನ್ನು ಗುರುತಿಸಿಕೊಂಡು ತಮ್ಮದೇ ವಿಶಿಷ್ಟ ಶೈಲಿಯನ್ನು ಹೊಂದಬೇಕು.

ಎರಡನೆಯದಾಗಿ ಪರಿಣಾಮಕಾರಿ ಅಧ್ಯಯನ ಕೌಶಲವನ್ನು ಬೆಳೆಸಿಕೊಳ್ಳಬೇಕು. ಓದಿದ ವಿಷಯವನ್ನು ಸರಿಯಾಗಿ ತರ್ಕಬದ್ಧವಾಗಿ ಗ್ರಹಿಸುವುದು. ವಿಮರ್ಶಾತ್ಮಕವಾಗಿ ಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳುವುದು ಸಾಧ್ಯವಾದಾಗ ವಿದ್ಯಾರ್ಥಿಗಳು ಅಧ್ಯಯನ ಸಾಮರ್ಥ್ಯ ಪಡೆದಂತಾಗುತ್ತದೆ ಅಲ್ಲದೆ ಆತ್ಮಸಂತೋಷಕ್ಕೆ ಪಠ್ಯೇತರ ಪುಸ್ತಕ/ಲೇಖನಗಳನ್ನು ಓದುವಂತಾಗಬೇಕು.

**ಅ) ಗದ್ಯಬೋಧನೆ:** ಮಾತೃಭಾಷೆ/ಪ್ರಥಮ ಭಾಷೆಯಾಗಿ ಕನ್ನಡವನ್ನು ಬೋಧಿಸುವವರು ಮೇಲೆ ಗುರುತಿಸಲ್ಪಟ್ಟ ಸಾಮರ್ಥ್ಯಗಳನ್ನು ಹೊಂದಲು ಪಾಠಗಳನ್ನು ಅನುಕೂಲವಾಗುವಂತೆ ಗದ್ಯ ಮತ್ತು ಪದ್ಯ ಪ್ರಕಾರಗಳಲ್ಲಿರುವ ಪಾಠಗಳನ್ನು ಬೋಧಿಸಬೇಕು. ಗದ್ಯ ಬೋಧನೆ ಎಂದರೆ ಕೇವಲ ಪಾಠಾಂತ್ಯದಲ್ಲಿರುವ ಅಭ್ಯಾಸಗಳಿಗೆ ಉತ್ತರ ಹೇಳುವುದಕ್ಕೆ ಸೀಮಿತವಾಗಬಾರದು. (ಆ ಗದ್ಯ ಭಾಗದ ಮಾದರಿ ವಾಚನ, ವಿದ್ಯಾರ್ಥಿಗಳಿಂದ ವಾಚನ, ಹೊಸ ಪದಗಳಿಗೆ ಅರ್ಥ ತಿಳಿಸುವಿಕೆ, ವಾಚನೋತ್ತರ ಪ್ರಶ್ನೆಗಳ ಮೂಲಕ ಅರ್ಥಗ್ರಹಣದ ಪರೀಕ್ಷೆ, ವಿದ್ಯಾರ್ಥಿ ಸ್ವಂತವಾಗಿ ಆಲೋಚಿಸಿ ಉತ್ತರಿಸುವಂತಹ ಪ್ರಶ್ನೆ ಕೇಳಿ ಉತ್ತರ ಪಡೆಯುವುದು, ಸಾರಾಂಶಿಸುವುದು. ಈ ಕ್ರಮ ಅನುಸರಿಸಿದರೂ, ಆ ಚಟುವಟಿಕೆಗಳು ಭಾಷಾ ಸಾಮರ್ಥ್ಯ ಸುಧಾರಿಸುವತ್ತ ಮತ್ತು ಬೆಳೆಸುವತ್ತ ಕೇಂದ್ರೀಕೃತವಾಗಬೇಕು.

ಪಠ್ಯಪುಸ್ತಕದ ವಿವಿಧ ಬಗೆಯ ಗದ್ಯಪಾಠಗಳಲ್ಲಿ ಸಂಭಾಷಣೆ, ವರ್ಣನೆಗಳು, ಕಥೆ, ಆತ್ಮಕಥನ, ಪ್ರಬಂಧ, ಪತ್ರ ಸಾಹಿತ್ಯ, ನಾಟಕ– ಮುಂತಾದವುಗಳಲ್ಲಿ ಹೊಂದಿರುವ ಶೈಲಿಯ ವೈಶಿಷ್ಟ್ಯಗಳನ್ನು ಪರಿಚಯಿಸಬೇಕು. ವಿವಿಧ ಬಗೆಯ ವಾಕ್ಯರಚನ ವಿಧಾನಗಳನ್ನು ನಿರ್ದಿಷ್ಟವಾಗಿ ತೋರಿಸಬೇಕು. ವಾಕ್ಯದಲ್ಲಿ ಬಳಸಿರುವ ಪದಗಳ ಅರ್ಥವನ್ನು ತಿಳಿಸಬೇಕು. ಅಲ್ಲದೆ ಪ್ರಾದೇಶಿಕ ಭಾಷಾ ಲಕ್ಷಣಗಳನ್ನು ಪರಿಚಯಿಸಬೇಕು. ಗದ್ಯ ಪಾಠಗಳ ಮೂಲಕ ಭಾಷೆಯ ವಿವಿಧ ಬೆಳವಣಿಗೆಯ ಹಂತಗಳನ್ನು ಆಯಾ ಹಂತದ ವೈಲಕ್ಷಣಗಳನ್ನು ಪರಿಚಯಿಸಬೇಕು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳನ್ನು ದಾಟಿ ಬಂದಿರುವ ವಿದ್ಯಾರ್ಥಿಗಳು ಗ್ರಾಂಥಿಕ ಕನ್ನಡ ಮತ್ತು ಸಾಹಿತ್ಯಿಕ ಕನ್ನಡದ ವೈಶಿಷ್ಟ್ಯಗಳನ್ನರಿಯಬೇಕು. ಪಾಠದ ವಾಕ್ಯಗಳಲ್ಲಿ ವಿಶೇಷಣಗಳ ಬಳಕೆ, ಅಲಂಕಾರಗಳ ಬಳಕೆ, ಹೇಗೆ ಬಂದಿದೆ ಎಂಬುದು ಮನವರಿಕೆಯಾಗಬೇಕು. ಆಗ ಶೈಲಿಯ ಅರಿವು ಉಂಟಾಗಬೇಕು. ವಿದ್ಯಾರ್ಥಿಗಳು ಪಠ್ಯದಲ್ಲಿ ಭಾಷಾ ಬಳಕೆಯ ವೈಶಿಷ್ಟ್ಯಗಳನ್ನು ತಿಳಿದರೆ ಸಾಲದು. ಅವುಗಳನ್ನು ಸಹಜವಾಗಿ ಬಳಸಲು ಶಿಕ್ಷಕರು ತಿಳಿಸಿಕೊಡಬೇಕು.

ಭಾಷಾ ಶಿಕ್ಷಣದಲ್ಲಿ ಭಾಷಿಕ ಉದ್ದೇಶ ಮತ್ತು ಸಾಹಿತ್ಯಿಕ ಉದ್ದೇಶಗಳು ಪಠ್ಯದ ವಿಷಯಜ್ಞಾನ ಮತ್ತು ಮೌಲ್ಯ ಪ್ರಜ್ಞೆಯಿಂದ ಒಡಗೂಡಿದ್ದರೂ

Digitised by Bharatavani, CIIL

ಎಲ್ಲ ಪಾಠಗಳಲ್ಲಿ ಎಲ್ಲವೂ ಪ್ರಧಾನವಾಗಿಲ್ಲದಿರಬಹುದು. ನಾಟಕ ಅಥವಾ ಸಂಭಾಷಣಾ ರೂಪದ ಪಾಠಗಳಲ್ಲಿ ಶಿಕ್ಷಕರು ಸಂಭಾಷಣೆಯ ಕ್ರಮ, ಮಾತಿನ ಧಾಟಿ, ವಿಷಯ ಪ್ರಸ್ತುತೀಕರಣ, ಪ್ರಶ್ನೋತ್ತರ ಕ್ರಮ ಹೇಗಿರಬೇಕೆಂಬುದನ್ನು ಮಕ್ಕಳಿಗೆ ಅರಿವು ಮಾಡಿಸಬೇಕು. ಕಿಸಾಗೌತಮಿ, ಮಹಾರಾತ್ರಿ, ಪ್ರೇಮಭಿಕ್ಷು, ಪಾಠಗಳನ್ನು ಇದಕ್ಕೆ ಉದಾಹರಣೆ ನೀಡಬಹುದು. ಸಂದರ್ಶನ ಕೈಗೊಳ್ಳುವಂತಹ ಚಟುವಟಿಕೆಯನ್ನು ಗೃಹಕಾರ್ಯವಾಗಿಯೂ ನೀಡಬಹುದು. 'ಕೊಡೆಯ ವಿಚಾರ' 'ಮೂಗಿನ ತುದಿ', 'ನಂಟರು' ಮುಂತಾದ ಪ್ರಬಂಧಗಳಲ್ಲಿ ಲಲಿತ ಶೈಲಿ ಮತ್ತು ಚಿಂತನ ಚಾತುರ್ಯವನ್ನು ಮೂಡಿಸಲು, ಸೂಕ್ಷ್ಮ ಅವಲೋಕನ ತಿಳಿಹಾಸ್ಯ, ಒಂದು ವಿಷಯವನ್ನು ಭಿನ್ನದೃಷ್ಟಿಕೋನದಿಂದ ನೋಡುವ ಬಗೆಯನ್ನು ಪರಿಚಯಿಸಬಹುದು. ರಚನಾ ಕಾರ್ಯಕ್ಕೂ ಪ್ರೇರೇಪಿಸಬಹುದು. ಸಾಮಾಜಿಕ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಪೌರಾಣಿಕ ಸಾಹಿತ್ಯ, ಜಾನಪದ ಸಾಹಿತ್ಯದ ವಿಷಯಗಳಿಗೆ ಸಂಬಂಧಿಸಿದ ಪಾಠಗಳಲ್ಲಿ ಭಾಷೆಯ ವೈವಿಧ್ಯ, ವಿಶಿಷ್ಟ ನುಡಿಗಟ್ಟುಗಳು, ಪಾರಿಭಾಷಿಕ ಪದಗಳು ಆಯಾ ಪಾಠಗಳ ಸಾಹಿತ್ಯ ಸ್ವರೂಪಕ್ಕೆ ಅನ್ವಯವಾಗುವ ರೀತಿ ವಿದ್ಯಾರ್ಥಿಗಳು ತಿಳಿಯುವಂತಾಗಬೇಕು.

ಹಳಗನ್ನಡ ಮತ್ತು ನಡುಗನ್ನಡ ಪಾಠಗಳಲ್ಲಿ ದೀರ್ಘ ವಾಕ್ಯಗಳ ಬಳಕೆ, ಮಾತುಗಳ ನಿರಂತರ ಓಟ, ಪೂರ್ಣ ವಿರಾಮಗಳ ಅಲ್ಪ ಬಳಕೆ, ವಿಭಕ್ತಿಗಳ ಭಿನ್ನರೂಪಗಳನ್ನು ವಿದ್ಯಾರ್ಥಿಗಳು ತಿಳಿಯುವಂತಾಗಬೇಕು. ಕಾಲದಿಂದ ಕಾಲಕ್ಕೆ ಭಾಷೆ ಹೇಗೆ ಬದಲಾಗಿದೆ ಎಂಬುದನ್ನು ವಿದ್ಯಾರ್ಥಿಗಳು ಅರಿತಾಗ ಭಾಷಾ ಶಿಕ್ಷಣದ ಸಾಫಲ್ಯ ಕಾಣುತ್ತದೆ.

ಭಾಷಾ ಪಠ್ಯಪುಸ್ತಕಗಳಲ್ಲಿ ವಿಜ್ಞಾನ ವಿಷಯ ವಸ್ತು ಇರುವ ಪಾಠಗಳನ್ನು ಭಾಷೆಯ ಬೋಧನೆಗೆ ಪ್ರಧಾನವಾಗಿ ಬಳಸಬೇಕು. ಬೇರೆ ಭಾಷೆಯಲ್ಲಿರುವ ಪದಗಳಲ್ಲಿರುವ ಅರ್ಥಕಲ್ಪನೆಯನ್ನು ಗ್ರಹಿಸಿ ಅಲ್ಲಿನ ಸೂಕ್ತವಾದ ಅರ್ಥಕ್ಕೆ ಚ್ಯುತಿಯಾಗದಂತೆ ದೇಶಿ ಪದಗಳನ್ನು ವಿದ್ಯಾರ್ಥಿಗಳು ಗ್ರಹಿಸಿ ಬಳಸುವಂತಾಗಬೇಕು. ಉದಾಹರಣೆಗೆ ಅಂತರ್ಜಾಲ, ಆಕಾಶಯಾನ, ವ್ಯೋಮಯಾತ್ರೆ, ಗಗನಸಖಿ, ಜಾಲತಾಣ ಇತ್ಯಾದಿ. ಇನ್ನು ಕೆಲವು ಪದಗಳನ್ನು ಬದಲಿಸದ ಹಾಗೇ ಬಳಸುವುದುಂಟು. ಉದಾ: ಕಂಪ್ಯೂಟರ್, ಫೇಸ್‌ಬುಕ್, ವಿಡಿಯೋ, ಬ್ಲಾಗ್ ಇತ್ಯಾದಿ.

ಗದ್ಯಪಾಠಗಳಲ್ಲಿ ಬಳಕೆಯಾಗಿರುವ ಭಾಷೆಯನ್ನು ಬೋಧಿಸುವುದರೊಂದಿಗೆ ವಿವಿಧ ಸಾಹಿತ್ಯ ಪ್ರಕಾರಗಳ ಪಾಠಗಳನ್ನು ಬೋಧಿಸುವಾಗ ಆಯಾ ಪ್ರಕಾರಗಳಲ್ಲಿ ಬಳಕೆಯಾಗಿರುವ ಗದ್ಯಸ್ವರೂಪವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು.

**ಆ) ಪದ್ಯಬೋಧನೆ:** ಭಾಷಾ ಬೋಧನೆಯಲ್ಲಿ ಗದ್ಯ ಮತ್ತು ಪದ್ಯ ಬೋಧನೆಗಳು ವಿಭಿನ್ನ ರೀತಿಯಲ್ಲಿ ಸಾಗುತ್ತವೆ. ಪದ್ಯ ವಿಶೇಷವಾಗಿ ಭಾವ ಹಾಗೂ ರಸಪ್ರಧಾನವಾದುದು. ಅಲಂಕಾರ ಮತ್ತು ಛಂದಸ್ಸುಗಳಿಂದ ಕೂಡಿದುದು. ಹೀಗಾಗಿ ಪದ್ಯಬೋಧನೆ ಪದ್ಯದ ಅಂತಃ ಸೌಂದರ್ಯವನ್ನು ಗ್ರಹಿಸಲು ಸಹಾಯಕವಾಗುವಂತೆ ಇರಬೇಕು.

ಪ್ರಾಥಮಿಕ ಹಂತದಲ್ಲಿ ಕವಿತೆಗಳು ಹೆಚ್ಚಿನ ಮಟ್ಟಿಗೆ ಲಯಬದ್ಧವಾಗಿದ್ದು, ಛಂದೋಬದ್ಧವಾಗಿದ್ದು ಮೂರ್ತರೂಪದ ವಸ್ತುವನ್ನು ಅಲಂಕಾರಗಳನ್ನು ಒಳಗೊಂಡಿರುತ್ತವೆ. ಮಕ್ಕಳು ಹಾಡಿ, ಆನಂದಿಸಿ, ವಿಷಯವನ್ನು ಗ್ರಹಿಸಿ ಭಾವಾರ್ಥವನ್ನು ಗುರುತಿಸಿ, ಪದ್ಯದ ಧಾಟಿಯನ್ನು ಮೆಚ್ಚುವಂತಾಗಬೇಕು.

'ತಿಳಿಮುಗಿಲ ತೊಟ್ಟಿಲಲಿ ಮಲಗಿದ್ದ ಚಂದಿರನ' ಪದ್ಯದಲ್ಲಿ 'ತಿಳಿಮುಗಿಲು' ಹಾಗೂ 'ತೊಟ್ಟಿಲು' ಎಂಬಲ್ಲಿರುವ ಸಂಬಂಧವನ್ನು ಮಕ್ಕಳು ಕಲ್ಪಿಸಿಕೊಂಡರೆ ಪದ್ಯ ಬೋಧನೆ ಸಾರ್ಥಕವಾಗುವುದು.

ಪ್ರೌಢಶಾಲಾ ಹಂತದಲ್ಲಿ ಸ್ವಲ್ಪ ಮಟ್ಟಿಗೆ ಹಳೆಗನ್ನಡ ಮತ್ತು ನಡುಗನ್ನಡದ, ಹೊಸಗನ್ನಡದ ಪದ್ಯಗಳನ್ನು ಅಧ್ಯಯನ ಮಾಡಬೇಕು. ಈ ಮಟ್ಟದ ಪದ್ಯಗಳು ಮೂರ್ತವಲ್ಲದೆ, ಅಮೂರ್ತ ವಿಷಯಗಳನ್ನೊಳಗೊಂಡಿರುತ್ತವೆ. ಛಂದೋಬದ್ಧವಾದುದೂ ಮತ್ತು ಮುಕ್ತ ಛಂದಸ್ಸಿನ (ಹೊಸಗನ್ನಡ ಪದ್ಯಗಳಲ್ಲಿ) ಪದ್ಯಗಳಿರಬಹುದು. ಈ ಪದ್ಯಭಾಗಗಳನ್ನು ಓದಿ, ವಾಚಿಸಿ, ಅವುಗಳ ಸೊಬಗನ್ನು ಅನುಭವಿಸುವುದು ಆದ್ಯ ಗುರಿ.

ಪ್ರೌಢಶಾಲಾ ಹಂತದಲ್ಲಿ ಪದ್ಯದ ವಸ್ತು ಗ್ರಹಿಕೆಯೊಂದಿಗೆ ಕವಿ ಕಲ್ಪನೆ, ಭಾಷೆ, ಅಭಿವ್ಯಕ್ತಿ, ಛಂದಸ್ಸು ಮತ್ತು ಅಲಂಕಾರ ಇವು ಪದ್ಯ ವಾಚಿಸುವಾಗಲೇ ಸ್ಫುರಿಸುವಂತಾಗಬೇಕು. ಪದ್ಯದ ವಾಚನ ಪದ್ಯ ಬೋಧನೆಗಿಂತ ಅತ್ಯಂತ ಮುಖ್ಯ ಮತ್ತು ಪರಿಣಾಮಕಾರಿ. ನಂತರವೇ ವಿವರವಾದ ಅಧ್ಯಯನಕ್ಕೆ ತೊಡಗಬೇಕು. ಕವಿತೆಯ ಮೇಲ್ಪದರ ಮತ್ತು ಒಳಪದರಗಳ ಸೂಕ್ಷ್ಮ ಅಭ್ಯಾಸ ಅಂದರೆ ಹೊರಅರ್ಥ ಮತ್ತು ಒಳಅರ್ಥ ಅಂದರೆ ಭಾವಗ್ರಹಣ ರಸಾಸ್ವಾದನೆಗೆ ಬಹಳ ಮುಖ್ಯವಾಗಿ ಗಮನ ಸಲ್ಲಬೇಕು. ಕವನದ ಭಾವಕ್ಕೆ ತಕ್ಕಂತೆ ವಾಚನದ ಧಾಟಿಯಿರಬೇಕು. ಕವಿತೆಯ ಬೋಧನೆಯಲ್ಲಿ (i) ಮೊದಲ ಹಂತದಲ್ಲಿ ಪದ್ಯದ ಹಾಡುವಿಕೆ/ವಾಚನ (ಸಾಮೂಹಿಕವಾಗಿಯೂ ಮೆಲುದನಿಯಲ್ಲಿ ಹಾಡಿದರೆ ಉತ್ತಮ ಪರಿಣಾಮವಿರುವುದು) ಮುಖ್ಯ. ಶಿಕ್ಷಕರು ಹಾಡುವ/ವಾಚಿಸುವ ಕ್ರಮದ ಪ್ರಾತ್ಯಕ್ಷಿಕೆ ನೀಡಿ, ಪುನರಾವರ್ತನೆ ಮಾಡಿಸಬೇಕು. ವಾಚಿಸುವಾಗಲೇ ಕವನದ ವಸ್ತು ಗ್ರಹಿಕೆ ಮತ್ತು ಕವಿಯ ಭಾವ ಸ್ಪಷ್ಟವಾಗಬೇಕು (ii) ಕವಿತೆಯ ರಚನೆಯ ವೈಶಿಷ್ಟ್ಯಗಳು ಅಂದರೆ ಭಾಷೆ, (ನೀಲಿಯ ನಗೆ, ನೀರ್ದೊದಲು, ಹೊಮ್ಮಳಲು ರಾಗದ ಚಿಲುಮೆ, ದೇವರು ರುಜು ಮಾಡಿದನು, ಪಕ್ಷಿಕಾಶಿ–ಕುವೆಂಪು, ಕುರುಡು ಕಾಂಚಾಣ–ಅಂಬಿಕಾತನಯದತ್ತ) ಅಲಂಕಾರ, ಛಂದಸ್ಸು, ವಿಶಿಷ್ಟಪದ ಪ್ರಯೋಗಗಳ ಬಗ್ಗೆ ವಿವರಣೆ ನೀಡಬೇಕು. (iii) ಅಧ್ಯಯನ ಮಾಡಿದ ಕವಿತೆಯ ವಸ್ತುವನ್ನೇ ಕುರಿತಂತೆ ಬೇರೆ ಬೇರೆ ಕವಿತೆಗಳಲ್ಲಿ ಬೇರೆ ಬೇರೆ ಕವಿಗಳು ಹೇಗೆ ಕಂಡಿದ್ದಾರೆ, ರಚಿಸಿದ್ದಾರೆಂಬುದನ್ನು ಹೋಲಿಸಿ ಅಧ್ಯಯನ ಮಾಡಬಹುದು. (iv) ಅಧ್ಯಯನ ಮಾಡಿದ ಕವನದ ಭಾವಾನುವಾದವನ್ನು ರಚಿಸಬೇಕು. ವಿದ್ಯಾರ್ಥಿಗಳೇ

Digitised by Bharatavani, CIIL

ಸ್ವತಂತ್ರವಾಗಿ ಮಾಡುವುದು ಉತ್ತಮ.

ನಮ್ಮ ಪಠ್ಯಪುಸ್ತಕಗಳಲ್ಲಿ ಭಾವಗೀತೆ, ದೇಶಭಕ್ತಿಗೀತೆ, ಜಾನಪದಗೀತೆ, ಕಥನಗೀತೆ, ವಚನ, ತ್ರಿಪದಿ, ಕೀರ್ತನೆ, ಷಟ್ಪದಿ, ಕಂದ, ಸಾಂಗತ್ಯ, ಇತ್ಯಾದಿ ರೂಪದ ಪದ್ಯಗಳಿರುತ್ತವೆ. ಈಚೆಗೆ ಚುಟುಕ ಪದ್ಯಗಳೂ ಪಠ್ಯದಲ್ಲಿವೆ. ಒಟ್ಟಿನಲ್ಲಿ ಪದ್ಯದಲ್ಲಿ ಕವಿ ಸೃಷ್ಟಿಸುವ ಭಾವ ಸೌಂದರ್ಯ, ಭಾಷಾ ಸೌಂದರ್ಯಕ್ಕೆ ಕಾರಣವಾದ ಕವಿಯ ಸೃಜನಾತ್ಮಕತೆಯ ಅರಿವು ವಿದ್ಯಾರ್ಥಿಗಳಿಗೆ ದೊರಕಬೇಕು.

(ಇ) **ವ್ಯಾಕರಣ ಬೋಧನೆ:** ಭಾಷಾ ಶುದ್ಧಿಗಾಗಿ ವ್ಯಾಕರಣ ಜ್ಞಾನ ಅನಿವಾರ್ಯ. ವ್ಯಾಕರಣವು ಭಾಷೆ ಬಳಕೆಯ ತಪ್ಪು ಒಪ್ಪುಗಳನ್ನು ತಿಳಿಸಿಕೊಡುತ್ತದೆ. ವ್ಯಾಕರಣವೆಂಬುದು ಭಾಷೆಯಲ್ಲಿ ಸಹಜವಾಗಿ ಏರ್ಪಟ್ಟಿರುವ ವೈಜ್ಞಾನಿಕ ಶಿಸ್ತು, ವ್ಯಾಕರಣ ಭಾಷೆಗೆ ಕ್ರಮಬದ್ಧತೆಯನ್ನು ತಂದುಕೊಡುತ್ತದೆ. ವರ್ಣ, ಪದ, ವಾಕ್ಯಾದಿಗಳಿಗೆ ಸಂಬಂಧಿಸಿದಂತೆ ವ್ಯವಹಾರವಾಗುವ ಅನೇಕ ನಿಯಮಾವಳಿಗಳಲ್ಲಿ ವೈಜ್ಞಾನಿಕ ಶಿಸ್ತು ಕೆಲಸ ಮಾಡುತ್ತದೆಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಲು ಮತ್ತು ಭಾಷೆಯಲ್ಲಿ ಉಚ್ಚಾರದೋಷಗಳಾಗಲಿ, ಅಪಪ್ರಯೋಗಗಳಾಗಲಿ ಉಂಟಾಗದಂತೆ ತಡೆಗಟ್ಟಲು ವ್ಯಾಕರಣ ಬೋಧನೆ ಸಹಕಾರಿ. ವಿದ್ಯಾರ್ಥಿಗಳು ಇದರಿಂದ ಶುದ್ಧ ಭಾಷಾ ಪ್ರಯೋಗದತ್ತ ಸಹಜವಾಗಿ ಒಲಿಯುತ್ತಾರೆ.

ಸಾಮಾನ್ಯವಾಗಿ ನಾವು ನಮ್ಮ ಭಾವನೆಗಳನ್ನು, ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು, ಸುಖದು:ಖಗಳನ್ನು, ಆಚಾರ ವಿಚಾರಗಳನ್ನು ವಾಕ್ಯರೂಪದಲ್ಲಿ ವ್ಯಕ್ತಪಡಿಸುತ್ತೇವೆ. ಆದ್ದರಿಂದ ವಾಕ್ಯವು ಭಾವನೆಯ ಒಂದು ಅಂಶ; ವ್ಯಾಕರಣ 'ಭಾವಪ್ರಕಾಶಕ್ಕೆ' ಸಹಾಯಕ. ವಾಕ್ಯದಲ್ಲಿರುವ ಪದಗಳಿಂದ ಆಗುವ ಬದಲಾವಣೆಯನ್ನು ಹಾಗೂ ವ್ಯವಸ್ಥೆಗೊಳಿಸುವ ರೀತಿಯನ್ನು ವ್ಯಾಕರಣ ತಿಳಿಸಿಕೊಡುತ್ತದೆ. ಶುದ್ಧವಾಗಿ, ಅರ್ಥಪೂರ್ಣವಾಗಿ ಮಾತನಾಡುವ ಮತ್ತು ಬರೆಯುವ ನಿಯಮಗಳನ್ನು ವ್ಯಾಕರಣ ಶಾಸ್ತ್ರ ತಿಳಿಸಿಕೊಡುತ್ತದೆ.

ವ್ಯಾಕರಣದ ಯಾವುದೇ ನಿಯಮವಿರಲಿ ಉದಾಹರಣೆಗಳ ಸಹಿತ ಮನದಟ್ಟು ಮಾಡುವುದು ಮುಖ್ಯ. ಉದಾಹರಣೆಗಳನ್ನು ವಿಶ್ಲೇಷಿಸುವಾಗ ಅದರ ಹಿನ್ನೆಲೆಯಲ್ಲಿರುವ ಸೂತ್ರ/ನಿಯಮವನ್ನು ಮಕ್ಕಳೇ ಗುರುತಿಸುವಂತೆ ಮಾಡಬೇಕು. ನಿಯಮಗಳನ್ನು ಸುಮ್ಮನೆ ಕಂಠಪಾಠ ಮಾಡಿದ ಮಾತ್ರಕ್ಕೆ ಭಾಷೆಯ ಕಲಿಕೆ ಸಮರ್ಪಕವಾಗುವುದಿಲ್ಲ. ನಿದರ್ಶನಗಳ ಮೂಲಕ ಸೂತ್ರ ನಿರೂಪಣೆಯನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರು ಪ್ರೇರಣೆ ನೀಡಬೇಕು. ಇದನ್ನು ಅನುಗಮನ ವಿಧಾನ (Induction Method)ಎನ್ನುವರು. ನಂತರ ಸೂಕ್ತ ಉದಾಹರಣೆಗಳನ್ನು ನೀಡಿ ಪರೀಕ್ಷಿಸುವಂತೆ ಮಾಡಬೇಕು. ಆಗ ನಿಗಮನ ವಿಧಾನವನ್ನು (Deducative Method) ಅನುಸರಿಸಿದಂತಾಗುವುದು. ಚಟುವಟಿಕೆಗಳನ್ನು ಹೆಚ್ಚಾಗಿ ಬಳಸಿಕೊಳ್ಳುವುದೂ ಉತ್ತಮ. ಚಟುವಟಿಕೆಗಳನ್ನು ಆಟಗಳ ರೂಪದಲ್ಲಿ ಮಾಡಿಸಿ, ವ್ಯಾಕರಣ ಪ್ರಕ್ರಿಯೆ ಪರಿಚಯವಾದ ಮೇಲೆ ಸಂಬಂಧಪಟ್ಟ ನಿಯಮವನ್ನು ವಿವರಣೆ ಸಹಿತ ತಿಳಿಸಬಹುದು. ಇದರಿಂದ ವ್ಯಾಕರಣನಿಯಮಗಳನ್ನು ಕಂಠಪಾಠ ಮಾಡುವ ಪ್ರವೃತ್ತಿಯನ್ನು ತಪ್ಪಿಸಬಹುದು. ನಿಯಮ ಗ್ರಹಿಸಿದ ನಂತರ ವಿದ್ಯಾರ್ಥಿಗಳು ತಮ್ಮ ಸ್ವಂತ ಭಾಷಾಜ್ಞಾನದಿಂದ ಅಥವಾ ಪಾಠದಿಂದ ಉದಾಹರಣೆಗಳನ್ನು ಹೇಳುವಂತೆ ಪ್ರೇರೇಪಿಸಬಹುದು.

(ಈ) **ಪದಸಂಪತ್ತನ್ನು ಹೆಚ್ಚಿಸುವುದಕ್ಕಾಗಿ ಪದಯೋಜನೆ:** ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ ಉತ್ತಮವಾಗಲು ವಿಪುಲವಾದ ಪದಸಂಪತ್ತು ಸಹಾಯಕ. ಇದರಿಂದ ಅವರ ಅಭಿವ್ಯಕ್ತಿ ಆಕರ್ಷಕವೂ, ಅಚ್ಚುಕಟ್ಟಾದುದೂ ವೈವಿಧ್ಯಮಯವೂ ಆಗುತ್ತದೆ. ಸಾಮಾನ್ಯವಾಗಿ ತರಗತಿಗಳಲ್ಲಿ ಗದ್ಯಪದ್ಯ ಬೋಧನೆಯೊಂದಿಗೆ ಸಂದರ್ಭೋಚಿತವಾಗಿ ಅಥವಾ ಪಾಠಾಂತ್ಯದಲ್ಲಿ ಪದ ಪರಿಚಯಿಸುವ ಸಂದರ್ಭದಲ್ಲಿಯೇ ಪದದ ಸಮಾನಾರ್ಥಕ ಪದ, ವಿರುದ್ಧಾರ್ಥಕ ಪದ, ಪದದ ನಾನಾರ್ಥ ಮತ್ತು ಪದದ ಸಾಂದರ್ಭಿಕ ಅರ್ಥ, ವಿಶೇಷಾರ್ಥಗಳನ್ನು ತಿಳಿಸುತ್ತಿರುವುದು ರೂಢಿಯಲ್ಲಿದೆ. (1) ಪದಗುಚ್ಛ ನುಡಿಗಟ್ಟುಗಳನ್ನು ಸೂಕ್ತ ಸಂದರ್ಭ/ಸನ್ನಿವೇಶಗಳಲ್ಲಿ (ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನೆರೆಹೊರೆಯಲ್ಲಿ ಕಂಡ) ಬಳಸಿ ವಾಕ್ಯ ಮಾಡಿ ಪರಿಚಯಿಸುವುದು ಉತ್ತಮ. ಭಾಷಾ ಶಾಸ್ತ್ರದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರು ಪರಿಚಯಿಸಬೇಕಾದ ಪದದ ಉಚ್ಚಾರಣೆ, ಕಾಗುಣಿತ, ವ್ಯಾಕರಣ ವೈಶಿಷ್ಟ್ಯ (ನಾಮಪದರೂಪ, ವಿಶೇಷಣ ರೂಪ, ಕ್ರಿಯಾರೂಪ, ಸಾಧಿತ ಪದರೂಪ, ಭಾವರೂಪ, ಲಿಂಗ ಇತ್ಯಾದಿ) ಪದ ರಚನೆಯ ಸ್ವರೂಪ (ಪದ+ಪದ, ಹೊಸಗನ್ನಡ, ಪ್ರಕೃತಿ+ಪ್ರತ್ಯಯ→ಬಳೆಗಾರ, (2) ಪದದ ನಾಮರೂಪ, ಭಾವನಾಮ→ಸೋದರ–ಸಾಹೋದರ್ಯ ವಿಶೇಷಣ–ಭಾವನಾಮರೂಪ→ಮಲಿನ–ಮಾಲಿನ್ಯ. (ಉಪಸರ್ಗ +ಪ್ರಕೃತಿ→ಪ್ರತ್ಯುಪಕಾರ) ಪದನಿಷ್ಪತ್ತಿ, ಇವುಗಳ ಸಮೇತ ಪದದ ಅರ್ಥ(ಸಮಾನಾರ್ಥ, ವಿರುದ್ಧಾರ್ಥ, ನಾನಾರ್ಥ) ತಿಳಿಸಿ ಪದವನ್ನು ಸೂಕ್ತ ವಾಕ್ಯದಲ್ಲಿ ಪ್ರಯೋಗಿಸಲು ಮಾರ್ಗದರ್ಶನ ನೀಡಬೇಕು. ಇವುಗಳಲ್ಲದೆ ಇನ್ನೂ ಹೆಚ್ಚಿನ ಚಟುವಟಿಕೆಗಳನ್ನು ಬಳಸಬಹುದು. ಉದಾಹರಣೆಗೆ: ಕನ್ನಡ ಪಠ್ಯಪುಸ್ತಕವಲ್ಲದೆ ಇತರ ವಿಷಯ ಪಠ್ಯಪುಸ್ತಕಗಳಲ್ಲಿ ಬರುವ ಅಪರಿಚಿತ ಪದಗಳಿಗೆ ನಿಘಂಟನ್ನು ಬಳಸುವ ಕೌಶಲವನ್ನು ಬೆಳೆಸಬೇಕು.

ದಿನಪತ್ರಿಕೆ, ವಾರಪತ್ರಿಕೆಗಳ ಪುರವಣಿಗಳಲ್ಲಿ ಬರುವ ಪದಬಂಧಗಳನ್ನು ಬಿಡಿಸುವ ಅಭ್ಯಾಸ ಬೆಳೆಸಬೇಕು. ಒಂದೇ ವಿಚಾರವನ್ನು ಭಿನ್ನ ಪತ್ರಿಕೆಗಳು ಆಕರ್ಷಕವಾಗಿ, ಪರಿಣಾಮಕಾರಿಯಾಗಿ ಒಕ್ಕಣೆ ಮಾಡುವಾಗ ಪದಪ್ರಯೋಗದ ವೈಶಿಷ್ಟ್ಯ ಅರಿಯುವಂತೆ ಮಾಡಬಹುದು. ನುಡಿಗಟ್ಟುಗಳನ್ನು ಒಂದು ಗುಂಪಿನವರು ಹೇಳಿ ಇನ್ನೊಂದು ಗುಂಪಿನವರು ಪ್ರಯೋಗಿಸುವ ಆಟದಂತೆ ಚಟುವಟಿಕೆ ಕೈಗೊಳ್ಳಬಹುದು. ಒಗಟುಗಳನ್ನು ಬಿಡಿಸುವುದು, ರಚಿಸುವುದು, ಮತ್ತೊಂದು ತೆರನಾದ ಪದಸಂಪತ್ತಿನ ಚಟುವಟಿಕೆಯಾಗಬಹುದು. ಮೂರ್ತ ಅಪರಿಚಿತ ಪದಗಳಿಗೆ ಅರ್ಥ–ವಿರುದ್ಧಾರ್ಥಗಳ ಮೂಲಕ ಅರ್ಥ ತಿಳಿಸಬಹುದು. ಅಮೂರ್ತ ಪದಗಳಿಗೆ ಪರಿಚಿತ ಸನ್ನಿವೇಶಗಳನ್ನು ಬಳಸುವುದು ಉತ್ತಮ. ಹಳೆಗನ್ನಡ, ನಡುಗನ್ನಡ

Digitised by Bharatavani, CIIL

ಪಾಠಗಳಲ್ಲಿ ಪದ ವಿಗ್ರಹಿಸಿ ಓದುವ ಕ್ರಮ–ಉಚ್ಚರಿಸುವ ರೀತಿ ತಿಳಿಸಿ ಅವುಗಳ ಹೊಸಗನ್ನಡ ರೂಪಗಳನ್ನು ತಿಳಿಸಬೇಕು. ಪ್ರಾಚೀನ ಪದಗಳು ಪಾಠಗಳಲ್ಲಿ ಇದ್ದಾಗ ಮೂರು ರೀತಿಯ ಪರಿಸ್ಥಿತಿಗಳು ಎದುರಾಗುತ್ತವೆ. ('ಮಲ್ಲಿಕಾರ್ಜುನ', ;ನಿರಂತರ', ಪುಟ 136) (1) ಪ್ರಾಚೀನ ಪದ ಇಂದು ಬೇರೊಂದು ರೂಪ ತಾಳಿ ಬಳಕೆಯಲ್ಲಿರುವುದು. (2) ಪ್ರಾಚೀನ ಪದ ಬಳಕೆಯಲ್ಲಿ ಸಂಪೂರ್ಣವಾಗಿಲ್ಲದೆ ಅದಕ್ಕೆ ಸಮಾನಾರ್ಥಕವಾಗಿ ಬೇರೊಂದು ಪದ ಬಳಕೆಯಲ್ಲಿರುವುದು. (3) ಪ್ರಾಚೀನ ಪದ ಇಂದು ಸಂಪೂರ್ಣವಾಗಿ ವ್ಯವಹಾರದಲ್ಲಿ ಬಳಕೆಯಲ್ಲಿಲ್ಲದೆ ಇರುವುದು. ಶಿಕ್ಷಕರು ಇವನ್ನೆಲ್ಲ ಬೋಧನೆಗೆ ಮುನ್ನ ತಿಳಿದು ಪಟ್ಟಿ ಮಾಡಿಕೊಳ್ಳುವುದು ಲೇಸು.

ಭಾಷಾ ಕೌಶಲಗಳ ಕಲಿಕೆ, ಗದ್ಯ–ಪದ್ಯಗಳ ಅಧ್ಯಯನ, ಪದಸಂಪತ್ತಿನ ಸಂಗ್ರಹ, ವ್ಯಾಕರಣದ ಅರಿವಿನ ಜೊತೆಗೆ ವಿದ್ಯಾರ್ಥಿಗಳು ತಮ್ಮ ಸುತ್ತಲಿರುವ ಭೌತಿಕ, ಬೌದ್ಧಿಕ ಮತ್ತು ಸಾಮಾಜಿಕ ಪರಿಸರವನ್ನು ಗಮನಿಸುವುದರಿಂದ ಪ್ರಬಂಧ ರಚನೆಗೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಸುವುದು ಅಪೇಕ್ಷಿತ. ವಸ್ತು ವಿಷಯವನ್ನು ತರಗತಿಯಲ್ಲಿ ಚರ್ಚಿಸಿದ ನಂತರ ವಿದ್ಯಾರ್ಥಿಗಳನ್ನು ತಮ್ಮದೇ ಶೈಲಿಯಲ್ಲಿ ಪ್ರಬಂಧ ಬರೆಯಲು ಪ್ರೇರೇಪಿಸಬೇಕು.

ಅಂತಿಮವಾಗಿ ಮಾತ್ರ ಭಾಷಾ ಬೋಧನೆಯ ಸಂದರ್ಭದಲ್ಲಿ ಸೃಜನಶೀಲ ಅಭಿವ್ಯಕ್ತಿಗೆ ಪ್ರೇರಣೆ ಮತ್ತು ಪೋಷಣೆಯನ್ನು ಒದಗಿಸಬೇಕಾದುದು ಅಗತ್ಯ. ಸೃಜನಶೀಲತೆ ಎಂಬುದು ಮಾನವ ಪ್ರತಿಭೆಯ ವಿನೂತನ ಕ್ರಿಯಾತ್ಮಕತೆಯ ಅಭಿವ್ಯಕ್ತಿ. ಅದು ತನಗೆ ತಾನೇ ಸಹಜವಾಗಿ ಒಡಮೂಡುವ ಅಂಶವೆಂಬುದು ನಿಜವಾದರೂ ಆ ಅಂತಃಶಕ್ತಿಗೆ ಪ್ರೇರಣೆ ಮಾತ್ರ ಭಾಷಾ ಬೋಧನೆಯೊಂದಿಗೆ ದೊರಕಲು ವಿವಿಧ ಚಟುವಟಿಕೆಗಳನ್ನು ಶಿಕ್ಷಕರು ರೂಪಿಸಿ ಬಳಸಿಕೊಳ್ಳಬಹುದು–ಉದಾಹರಣೆಗೆ ಅರ್ಥಾಲಂಕಾರಗಳನ್ನು ಬಳಸಿ ಯಾವುದಾದರೂ ಸ್ಥಳ, ವ್ಯಕ್ತಿ, ವಸ್ತು, ಚಿಕ್ಕಘಟನೆ ಕುರಿತು ವರ್ಣಿಸಲು ಕೇಳಬಹುದು– ಕಥೆಯನ್ನು ಪೂರ್ಣಗೊಳಿಸುವುದು, ಪಠ್ಯದ ಪಾಠವನ್ನು ರೂಪಾಂತರಿಸುವುದು, ಅನುವಾದ ಮಾಡುವುದು (ಹಿಂದಿ, ಇಂಗ್ಲಿಷ್ ಪಠ್ಯಪುಸ್ತಕಗಳ ಗದ್ಯ, ಪದ್ಯ ಭಾಗಗಳಾಗಬಹುದು)– ಪ್ರಕೃತಿಯ ವರ್ಣಚಿತ್ರ ನೀಡಿ ಬಣ್ಣಿಸಲು ಕೇಳಬಹುದು. ವ್ಯಂಗ್ಯ ಚಿತ್ರಕ್ಕೆ ಸಂಭಾಷಣೆ ರಚಿಸಲು ತಿಳಿಸಬಹುದು. ಸೃಜನಶೀಲತೆ ಒಂದು ಸಹಜ ಪ್ರಕ್ರಿಯೆ. ಇದು ಮಾತ್ರ ಭಾಷಾ ಕಲಿಕೆಯಲ್ಲಿ ಪ್ರಮುಖ ಸ್ಥಾನ ಪಡೆಯಬೇಕೆಂಬುದೇ ಎಲ್ಲ ಭಾಷಾ ಶಿಕ್ಷಕರ ಆಶಯ. ತಮ್ಮ ಬೋಧನೆ ಒಂದು ಕಲೆಯಾದರೆ ಭಾಷಾಬೋಧನೆ ವಿಶೇಷ ಕಲೆ. ಪ್ರತಿ ಶಿಕ್ಷಕರು ಅನುಭವದೊಂದಿಗೆ ವೈವಿಧ್ಯ ಮತ್ತು ಸಾಧ್ಯತೆಗಳ ಅಡಿಪಾಯದ ಮೇಲೆ ಬೋಧನೆ ಕೈಗೊಂಡು ಕನ್ನಡನಾಡಿನ ಪ್ರತಿ ವಿದ್ಯಾರ್ಥಿ ಶುದ್ಧಕನ್ನಡ ಕಲಿತು ಅದನ್ನು ಬಳಸಿ, ಬೆಳೆಸುವಂತಾಗಬೇಕು.

–ಪ್ರೊ. ನಾಗರತ್ನ ಕೆ.ಆರ್.

## ಕರ್ನಾಟಕ ರಾಜ್ಯದಲ್ಲಿ ಶೈಕ್ಷಣಿಕ ವ್ಯವಸ್ಥೆಯ ರೂಪುರೇಖೆ

ಕರ್ನಾಟಕ ರಾಜ್ಯ ಸುವ್ಯವಸ್ಥಿತವಾದ ಶೈಕ್ಷಣಿಕ ವ್ಯವಸ್ಥೆಯನ್ನು ಹೊಂದಿದೆ. ಇದು ಬ್ರಿಟಿಷ್ ಆಡಳಿತ ವ್ಯವಸ್ಥೆಯ ಅವಧಿಯಲ್ಲಿ ಆರಂಭವಾಗಿ ಅಂದಿನ ಮೈಸೂರು ಅರಸರ ಬೆಂಬಲ ಮತ್ತು ಪ್ರೋತ್ಸಾಹದಿಂದ ಪುಷ್ಟಿಗೊಂಡು ಮುಂದುವರಿದುಕೊಂಡು ಬಂದಿದೆ. ಸ್ವಾತಂತ್ರ್ಯಕ್ಕೂ ಮೊದಲೇ ಆಗಿನ ಮೈಸೂರು ರಾಜ್ಯ ಶಿಕ್ಷಣದಲ್ಲಿ ಮುಂದುವರಿದ ರಾಜ್ಯವೆಂದು ಹೆಸರು ಪಡೆದಿತ್ತು. ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರಂಥ ದಿವಾನರು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದರು. ಮೈಸೂರು ರಾಜ್ಯ ಬಹಳ ಹಿಂದೆಯೇ ವಯಸ್ಕರ ಶಿಕ್ಷಣವನ್ನು ಇಡೀ ದೇಶದಲ್ಲಿಯೇ ಪ್ರಪ್ರಥಮವಾಗಿ ಆರಂಭಿಸಿತು. ಬ್ರಿಟಿಷರ ಕಾಲದಲ್ಲಿಯೇ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಜ ಮತ್ತು ಯುವರಾಜ ಕಾಲೇಜುಗಳು ಬಹಳ ಬೇಗ ಪ್ರಸಿದ್ಧಿಗೆ ಬಂದವು. ಸ್ವಾತಂತ್ರ್ಯದ ನಂತರವೂ ಮೈಸೂರು ಸಂಸ್ಥಾನ ಶಿಕ್ಷಣಕ್ಕೆ ಪ್ರಸಿದ್ಧಿ ಪಡೆಯಿತು.

ಕರ್ನಾಟಕ ರಾಜ್ಯದ ಇಂದಿನ ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ದಿಷ್ಟ ಭಾಗಗಳಾಗಿ ವಿಂಗಡಿಸಬಹುದು. (1) ಸಾರ್ವಜನಿಕ ಶಿಕ್ಷಣ ವ್ಯವಸ್ಥೆ– ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಹಂತಗಳನ್ನು ಇದು ಒಳಗೊಳ್ಳುತ್ತದೆ. ಕೆಲವು ಔದ್ಯೋಗಿಕ ಕೋರ್ಸ್‌ಗಳು ಇದರ ಅಧೀನದಲ್ಲಿ ಬರುತ್ತವೆ. (2) ಪ್ರಿ–ಯುನಿವರ್ಸಿಟಿ ಶಿಕ್ಷಣ ಪದವಿ ಪೂರ್ವ ಶಿಕ್ಷಣ ಮಂಡಳಿಗೆ ಒಳಪಡುತ್ತದೆ. (3)ಉನ್ನತ ಶಿಕ್ಷಣ ವ್ಯವಸ್ಥೆಯಡಿಯಲ್ಲಿ ಕಾಲೇಜು ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಶಿಕ್ಷಣ ಸೇರುತ್ತವೆ. (4) ವೃತ್ತಿ ಶಿಕ್ಷಣದಲ್ಲಿ ಇಂಜಿನಿಯರಿಂಗ್, ಔದ್ಯೋಗಿಕ ಕೋರ್ಸ್‌ಗಳು, ವೈದ್ಯಕೀಯ ಶಿಕ್ಷಣ, ಕೃಷಿ ಶಿಕ್ಷಣ, ಪಶು ಸಂಗೋಪನ, ಮೀನುಗಾರಿಕೆ ಶಿಕ್ಷಣ ಸೇರುತ್ತವೆ. ಇವು ಆಯಾ ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರಿ ಸಂಸ್ಥೆಗಳ ಆಡಳಿತಕ್ಕೆ ಸೇರುತ್ತವೆ. ಇವುಗಳಲ್ಲಿ ಮೊದಲ ಮೂರು ಭಾಗಗಳ ಆಡಳಿತಾತ್ಮಕ ಸಂರಚನೆಯನ್ನು ಈ ಮುಂದೆ ವಿವರಿಸಲಾಗಿದೆ.

ನಾಲ್ಕನೇ ವ್ಯವಸ್ಥೆಯಲ್ಲಿ ಸೇರುವ ಶಿಕ್ಷಣ ವ್ಯವಸ್ಥೆಗಳ ಬಗ್ಗೆ ಪ್ರತ್ಯೇಕ ಲೇಖನಗಳನ್ನು ಈ ವಿಶ್ವಕೋಶದ ಒಂದನೇ ಸಂಪುಟದಲ್ಲಿ ಮತ್ತು ಈ ಸಂಪುಟದಲ್ಲಿನ ಮತ್ತೊಂದು ಲೇಖನದಲ್ಲಿ ನೋಡಬಹುದು.

### ಶಾಲಾ ಶಿಕ್ಷಣ ವ್ಯವಸ್ಥೆ:

ಶಾಲಾ ಶಿಕ್ಷಣ ವ್ಯವಸ್ಥೆ ನೇರವಾಗಿ ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರ ಅಧೀನದಲ್ಲಿ ಬರುತ್ತದೆ. ಇವರ ಕೆಳಗೆ ಸರ್ಕಾರದ ಓರ್ವ ಮುಖ್ಯ ಕಾರ್ಯದರ್ಶಿ ಶಾಲಾ ಶಿಕ್ಷಣದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾರೆ. ಶಾಲಾ

Digitised by Bharatavani, CIIL

ಶಿಕ್ಷಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ನೋಡಿಕೊಳ್ಳುತ್ತದೆ. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರ ತನ್ನ ಅಧೀನದಲ್ಲಿ ಸೇರಿಸಿಕೊಂಡಿಲ್ಲ. ಈ ಹಂತದ ಸಂಸ್ಥೆಗಳನ್ನು ಪೂರ್ಣತಃ ಖಾಸಗಿ ಸಂಸ್ಥೆಗಳು ನಡೆಸುತ್ತಿವೆ. ಮಹಿಳಾ ಮತ್ತು ಮಕ್ಕಳ ಯೋಗಕ್ಷೇಮ ಇಲಾಖೆ ಪೂರ್ವ–ಪ್ರಾಥಮಿಕ ಶಿಕ್ಷಣಕ್ಕೆ ಸರ್ಕಾರದ ವತಿಯಿಂದ ಬಾಲವಾಡಿಗಳನ್ನು ಸಂಘಟಿಸಿ ಅವುಗಳ ಆಡಳಿತವನ್ನು ನೋಡಿಕೊಳ್ಳುತ್ತದೆ. ಮುಖ್ಯ ಕಾರ್ಯದರ್ಶಿ ಅಡಿಯಲ್ಲಿ ನಾಲ್ಕು ಮಂದಿ ಐ.ಎ.ಎಸ್. ಅರ್ಹತೆಯ ಅಧಿಕಾರಿಗಳಿದ್ದಾರೆ. ಅವರೆಂದರೆ ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು, ರಾಜ್ಯ ಪ್ರಾಯೋಜನಾ ನಿರ್ದೇಶಕ, ಸರ್ವ ಶಿಕ್ಷಣ ಅಭಿಯಾನ, ಅತಿರಿಕ್ತ ಸಾರ್ವಜನಿಕ ಶಿಕ್ಷಣ ಆಯುಕ್ತರು, ಧಾರವಾಡ ಮತ್ತು ಅತಿರಿಕ್ತ ಸಾರ್ವಜನಿಕ ಶಿಕ್ಷಣ ಆಯುಕ್ತರು, ಗುಲಬರ್ಗಾ. ಇವರುಗಳ ಕೆಳಗೆ ರಾಜ್ಯಮಟ್ಟದಲ್ಲಿ ಈ ಕೆಳಗೆ ಹೆಸರಿಸಿರುವ ಅಧಿಕಾರಿಗಳಿರುತ್ತಾರೆ.

- ಜಂಟಿ ನಿರ್ದೇಶಕರು, ಆಡಳಿತ (JD)
- ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, (ಪ್ರಾಥಮಿಕ ಶಿಕ್ಷಣ) (DPI)
- ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಾಧ್ಯಮಿಕ ಶಿಕ್ಷಣ (DPI)
- ನಿರ್ದೇಶಕರು, ಅಲ್ಪ ಸಂಖ್ಯಾತರ ಶಿಕ್ಷಣ ಮತ್ತು ಉರ್ದು ಶಿಕ್ಷಣ
- ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ (SSA)
- ನಿರ್ದೇಶಕರು, ರಾಜ್ಯ ಶೈಕ್ಷಣಿಕ ಮತ್ತು ಸಂಶೋಧನ ನಿರ್ದೇಶನಾಲಯ, (DSERT), ಬೆಂಗಳೂರು.
- ನಿರ್ದೇಶಕರು, ಪರೀಕ್ಷೆಗಳು
- ನಿರ್ದೇಶಕರು, ಇತರ ಶಿಕ್ಷಣ ವ್ಯವಸ್ಥೆಗಳು (ಸಂಗೀತ, ನೃತ್ಯ, ಚಿತ್ರಕಲೆ ಕೋರ್ಸ್‌ಗಳು)
- ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, ಧಾರವಾಡ
- ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, ಗುಲ್ಬರ್ಗ
- ನಿರ್ವಹಣಾ ನಿರ್ದೇಶಕರು, ಪಠ್ಯಪುಸ್ತಕಗಳು
- ಪ್ರಾಯೋಜನಾ ಅಧಿಕಾರಿ, (SPD), ಬೆಂಗಳೂರು
- ಅತಿರಿಕ್ತ ಸಾರ್ವಜನಿಕ ಶಿಕ್ಷಣ ಆಯುಕ್ತರು, (Ad. CPI), ಧಾರವಾಡ
- ಅತಿರಿಕ್ತ ಸಾರ್ವಜನಿಕ ಶಿಕ್ಷಣ ಆಯುಕ್ತರು, (Ad. CPI), ಗುಲ್ಬರ್ಗ

ಮೇಲೆ ಪಟ್ಟಿಮಾಡಿದ ಅಧಿಕಾರಿಗಳ ಕೆಳಗೆ ರಾಜ್ಯಮಟ್ಟದಲ್ಲಿ ಈ ಕೆಳಗಿನ ಅಧಿಕಾರಿಗಳಿದ್ದಾರೆ.

- ಕಾರ್ಯದರ್ಶಿ, ಮಾಧ್ಯಮಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
- ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, (JDP1-I), ನೇಮಕಾತಿ ಮತ್ತು ವಿಶೇಷ ಅಧಿಕಾರಿ
- ಜಂಟಿ ನಿರ್ದೇಶಕರು, ಶಾಲಾ ಶಿಕ್ಷಣ (JDP1-2),
- ಜಂಟಿ ಸಹಾಯಕ ಸಾರ್ವಜನಿಕ ಶಿಕ್ಷಣ ಆಯುಕ್ತರು, ಧಾರವಾಡ ಕಛೇರಿ
- ಜಂಟಿ ಸಹಾಯಕ ಸಾರ್ವಜನಿಕ ಶಿಕ್ಷಣ ಆಯುಕ್ತರು, ಗುಲ್ಬರ್ಗ ಕಛೇರಿ (CTE),
- ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರು, (6 ಮಂದಿ)
- ಜಂಟಿ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ – JD (SSA)
- ಜಂಟಿ ನಿರ್ದೇಶಕರು, ಶೈಕ್ಷಣಿಕ (JD (A) 1),
- ಜಂಟಿ ನಿರ್ದೇಶಕರು, ಗುಣಾತ್ಮಕತೆ (JD-Q-1),
- ಜಂಟಿ ನಿರ್ದೇಶಕರು, ಗುಣಾತ್ಮಕತೆ (JD-Q-2),

ಇಲ್ಲಿಂದ ಮುಂದಕ್ಕೆ ಜಿಲ್ಲಾ ಮಟ್ಟದ ಆಡಳಿತ ವ್ಯವಸ್ಥೆ ಆರಂಭವಾಗುತ್ತದೆ. ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿಯೂ ಈ ಕೆಳಕಂಡ ಅಧಿಕಾರಿಗಳು ಇರುತ್ತಾರೆ. ಪ್ರತಿ ಜಿಲ್ಲೆಯಲ್ಲಿ ಇಬ್ಬರು ಸಮಾನ ಸ್ಥಾನಮಾನವುಳ್ಳ ಆದರೆ ಅಧಿಕಾರ ವ್ಯಾಪ್ತಿಯಲ್ಲಿ ವ್ಯತ್ಯಾಸವಿರುವ ಇಬ್ಬರು ಅಧಿಕಾರಿಗಳಿರುತ್ತಾರೆ.

1. ಸಾರ್ವಜನಿಕ ಶಿಕ್ಷಣದ ಉಪನಿರ್ದೇಶಕರು ಆಡಳಿತ (DDPI-Adm),
2. ಸಾರ್ವಜನಿಕ ಶಿಕ್ಷಣದ ಉಪನಿರ್ದೇಶಕರು, ಅಭಿವೃದ್ಧಿ (DDPI-Devp),

ಇವರು ಜಿಲ್ಲೆಯಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (DIET) ಪ್ರಾಂಶುಪಾಲರು ಅಗಿರುತ್ತಾರೆ. ಈ ಇಬ್ಬರು ಅಧಿಕಾರಿಗಳ ಅಧೀನದಲ್ಲಿ ಪ್ರತಿ ಜಿಲ್ಲೆಯಲ್ಲಿ ಬ್ಲಾಕ್ ಶಿಕ್ಷಣಾಧಿಕಾರಿ (Block Education Officer-BEO) ಇರುತ್ತಾರೆ. ಪ್ರತಿ ಜಿಲ್ಲೆಯ BEO ಅಧೀನದಲ್ಲಿ ಈ ಕೆಳಕಂಡವರು ಇರುತ್ತಾರೆ.

1. ಮುಖ್ಯೋಪಾಧ್ಯಾಯರು (ಹೈಸ್ಕೂಲ್ ಸ್ತರದ) ಹಾಗೂ

Digitised by Bharatavani, CIIL

ನಿಮಿತ್ತ ಸಂಕುಲ (ಕ್ಲಸ್ಟರ್) ಸಹಾಯಕ ಶಿಕ್ಷಣಾಧಿಕಾರಿ (CAEO)

2. ಸರ್ಕಾರಿ ಹೈಸ್ಕೂಲ್‌ಗಳ ಮುಖ್ಯೋಪಾಧ್ಯಾಯರುಗಳು
3. ಬ್ಲಾಕ್ ಸಂಪನ್ಮೂಲ ಕೇಂದ್ರ (BRC), ಇದರ ಅಧೀನದಲ್ಲಿ
4. ಸಂಕುಲ (ಕ್ಲಸ್ಟರ್) ಸಂಪನ್ಮೂಲ ಕೇಂದ್ರ (CRC), ಇದರ ಅಧೀನದಲ್ಲಿ
5. ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳ (HPC 2 LPS), ಮುಖ್ಯೋಪಾಧ್ಯಾಯರುಗಳು.

ಪುಟ 119ರಲ್ಲಿ ಇರುವ ನಕ್ಷೆ ಸಾರ್ವಜನಿಕ ಶಿಕ್ಷಣ (ಶಾಲಾ ಶಿಕ್ಷಣ ವ್ಯವಸ್ಥೆಯ ಆಡಳಿತಾತ್ಮಕ ಸಂರಚನೆ ಯನ್ನು ತೋರಿಸುತ್ತದೆ.

**ಪ್ರಿ–ಯೂನಿವರ್ಸಿಟಿ ವ್ಯವಸ್ಥೆ:** ಕಾಲೇಜು ಪ್ರವೇಶಕ್ಕೆ ಮುನ್ನ ಕಾಲೇಜು ಪ್ರವೇಶಾರ್ಹತೆಗೆ ಪ್ರಿ–ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. 1948ರ ರಾಧಾಕೃಷ್ಣನ್ ಅಯೋಗ ಮಾಡಿದ ಶಿಫಾರಸ್ಸಿನಂತೆ ಈ ಹಂತವನ್ನು ಆರಂಭಿಸಲಾಯಿತು. ಮೊದಲಿಗೆ ಇದು ಒಂದು ವರ್ಷದ ಕೋರ್ಸ್ ಆಗಿತ್ತು. ಅನೇಕ ಮಾಧ್ಯಮಿಕ ಶಾಲೆ (ಸೆಕೆಂಡರಿ)ಗಳಲ್ಲಿ ಮತ್ತೊಂದು ವರ್ಷವನ್ನು ಸೇರಿಸಿ ಅದನ್ನು ಉನ್ನತ ಮಾಧ್ಯಮಿಕ ತರಗತಿ (Higher Secondary Class) ಎಂದು ಕರೆದು ಅದನ್ನು ಪ್ರಿಯೂನಿವರ್ಸಿಟಿಗೆ ಸಮವೆಂದು ಪರಿಗಣಿಸಲಾಯಿತು. ಕೆಲವು ಪ್ರತ್ಯೇಕ ಪ್ರಿ–ಯೂನಿವರ್ಸಿಟಿ ಕಾಲೇಜುಗಳು ಅಸ್ತಿತ್ವಕ್ಕೆ ಬಂದವು. ಈ ಹಂತದ ಆಡಳಿತವನ್ನು ನೋಡಿಕೊಳ್ಳಲು ಮತ್ತು ಪರೀಕ್ಷೆಯನ್ನು ನಡೆಸಲು ಪ್ರತ್ಯೇಕವಾಗಿ ಪ್ರಿ–ಯೂನಿವರ್ಸಿಟಿ ಮಂಡಳಿಯನ್ನು ಸ್ಥಾಪಿಸಲಾಯಿತು. ನಂತರದ ವರ್ಷಗಳಲ್ಲಿ ಪ್ರಿ–ಯೂನಿವರ್ಸಿಟಿ ಹಂತವನ್ನು ಎರಡು ವರ್ಷಗಳಾಗಿ ಪರಿವರ್ತಿಸಿ ಪ್ರತ್ಯೇಕ ಪ್ರಿ–ಯೂನಿವರ್ಸಿಟಿ ಕಾಲೇಜುಗಳು ಆರಂಭವಾದವು. ಹೈಸ್ಕೂಲ್‌ಗಳಲ್ಲಿ ಇದ್ದ ಒಂದು ವರ್ಷದ ಉನ್ನತ ಮಾಧ್ಯಮಿಕ ತರಗತಿಯನ್ನು ಪ್ರತ್ಯೇಕಿಸಿ ಪ್ರಿಯೂನಿವರ್ಸಿಟಿ ಕಾಲೇಜುಗಳಿಗೆ ಸೇರಿಸಲಾಯಿತು. ಈ ಪ್ರಿ–ಯೂನಿವರ್ಸಿಟಿ ಶಿಕ್ಷಣದ ಎರಡು ವರ್ಷಗಳ ಹಂತದ ಆಡಳಿತವನ್ನು ಪ್ರಿ–ಯೂನಿವರ್ಸಿಟಿ ಮಂಡಳಿ, ಬೆಂಗಳೂರು ನೋಡಿಕೊಳ್ಳುತ್ತದೆ.

**ಕರ್ನಾಟಕದ ಸಾರ್ವಜನಿಕ ಶಿಕ್ಷಣ (ಶಾಲಾ ಶಿಕ್ಷಣ) ವ್ಯವಸ್ಥೆಯ ಆಡಳಿತಾತ್ಮಕ ಸಂರಚನೆ.**




Digitised by Bharatavani, CIIL

**ಕಾಲೇಜು ಶಿಕ್ಷಣ ವ್ಯವಸ್ಥೆ:** ಕಾಲೇಜು ಶಿಕ್ಷಣ ವ್ಯವಸ್ಥೆಯಲ್ಲಿ BA, B.Com, B.Sc. ಮುಂತಾದ ಸ್ನಾತಕ (Degree), ಕೋರ್ಸ್‌ಗಳು ಸೇರುತ್ತವೆ. ಅತ್ಯಂತ ಉನ್ನತ ಮಟ್ಟದಲ್ಲಿ ಕಾಲೇಜು ಶಿಕ್ಷಣ ವ್ಯವಸ್ಥೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರ ಅಧೀನದಲ್ಲಿ ಬರುತ್ತದೆ. ಅವರ ಪರವಾಗಿ ಸರ್ಕಾರದ ಓರ್ವ ಮುಖ್ಯ ಕಾರ್ಯದರ್ಶಿ ಕಾಲೇಜು ಶಿಕ್ಷಣದ ಮತ್ತು ವಿಶ್ವವಿದ್ಯಾನಿಲಯಗಳ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಇವರ ಕೈಕೆಳಗೆ ಕಾಲೇಜುಗಳ ಆಡಳಿತಾತ್ಮಕ ವಿಷಯಗಳನ್ನು ನೋಡಿಕೊಳ್ಳಲು ಸರ್ಕಾರ ಕಾಲೇಜು ಶಿಕ್ಷಣ ನಿರ್ದೇಶನಾಲಯವನ್ನು (Directorate of College Education, Bangalore), ಕಾಯ್ದೆ ಬದ್ಧವಾಗಿ ಸ್ಥಾಪಿಸಿದೆ. ಇದರ ಒಂದೆರಡು ವಿಭಾಗ ಕಾರ್ಯಾಲಯಗಳೂ ಇವೆ. ಈ ನಿರ್ದೇಶನಾಲಯವು ಉಪನ್ಯಾಸಕ ನೇಮಕಾತಿ, ವೇತನ ನೀಡಿಕೆ, ಸೇವಾ ಸಂಬಂಧಿ ವಿಷಯಗಳ (ಬಡ್ತಿ, ರಜೆ, ನಿವೃತ್ತಿ, ವರ್ಗಾವಣೆ) ಇತ್ಯಾದಿ, ಆಡಳಿತವನ್ನು ಮಾತ್ರ ನೋಡಿಕೊಳ್ಳುತ್ತದೆ. ಕೋರ್ಸ್‌ಗಳ ಆರಂಭ, ಅವುಗಳ ಮಾನ್ಯತೆ, ಪಠ್ಯಕ್ರಮ ಮತ್ತು ಅದರ ನವೀಕರಣ, ಉಪನ್ಯಾಸಕರ ವೃತ್ತಿ ಬೆಳವಣಿಗೆ ಕಾರ್ಯಕ್ರಮಗಳು, ಮೌಲ್ಯಮಾಪನ (ಪರೀಕ್ಷೆ), ಪರೀಕ್ಷಾ ಫಲಿತಾಂಶಗಳ ಪ್ರಕಟಣೆ, ಪದವಿ ನೀಡಿಕೆ, ಸಂಶೋಧನೆ ಮುಂತಾದ ಶೈಕ್ಷಣಿಕ ವಿಷಯಗಳು ಕಾಲೇಜುಗಳಿಗೆ (Affiliation) ಮಾನ್ಯತೆ ನೀಡುವ ವಿಶ್ವವಿದ್ಯಾನಿಲಯಗಳ ಅಧಿಕಾರದಲ್ಲಿ ಬರುತ್ತವೆ. ಕಾಲೇಜುಗಳು ಆಯಾ ವಿಶ್ವವಿದ್ಯಾನಿಲಯ ನಿಗಡಿಪಡಿಸುವ ಪಠ್ಯಕ್ರಮವನ್ನು ಬೋಧಿಸಬೇಕು ಮತ್ತು ಪರೀಕ್ಷೆಗಳನ್ನು ನಡೆಸಬೇಕು. ಆಯಾ ಕಾಲೇಜಿನ ಪ್ರಾಂಶುಪಾಲರು ಕಾಲೇಜಿನ ದಿನನಿತ್ಯದ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಸರ್ಕಾರಿ ಕಾಲೇಜುಗಳಿಗೆ ಉಪನ್ಯಾಸಕರ ನೇಮಕಾತಿಯನ್ನು ಅಗತ್ಯಬಿದ್ದಾಗ ಕರ್ನಾಟಕ ಲೋಕಸೇವಾ ಆಯೋಗ (Karnataka Public Service Commission) ಮಾಡಿಕೊಳ್ಳುತ್ತದೆ. ಖಾಸಗಿ ಕಾಲೇಜುಗಳಿಗೆ ಉಪನ್ಯಾಸಕರ ನೇಮಕಾತಿಯನ್ನು ಪ್ರಾಂಶುಪಾಲರೇ ಯು.ಜಿ.ಸಿ. ನಿಯಮಗಳಿಗೆ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳಿಗೆ ಒಳಪಟ್ಟು ಮಾಡಿಕೊಳ್ಳಬಹುದು. ಆದರೆ ಈ ನೇಮಕಾತಿಗಳಿಗೆ ಕಾಲೇಜು ಶಿಕ್ಷಣ ನಿರ್ದೇಶನಾಲಯ ಒಪ್ಪಿಗೆ ನೀಡಬೇಕಾಗುತ್ತದೆ.

**ವಿಶ್ವವಿದ್ಯಾನಿಲಯ ಶಿಕ್ಷಣ ವ್ಯವಸ್ಥೆ:** ಕರ್ನಾಟಕ ರಾಜ್ಯದ ಸಾಮಾನ್ಯ ವಿಶ್ವವಿದ್ಯಾನಿಲಯಗಳ (ತಾಂತ್ರಿಕ, ವೈದ್ಯಕೀಯ, ಕೃಷಿ, ಸಂಗೀತ, ಜಾನಪದ, ಮೀನುಗಾರಿಕೆ, ಪಶು ಸಂಗೋಪನೆ ವಿಶ್ವವಿದ್ಯಾನಿಲಯಗಳನ್ನು ಹೊರತುಪಡಿಸಿ) ವಿವಿಧ ವಿಭಾಗಗಳು, ಸಂಶೋಧನೆ, ಕಾಲೇಜು ಸಿಬ್ಬಂದಿ ಕಾಲೇಜುಗಳು (Academic Staff College), ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ಶಿಕ್ಷಣ ಕೇಂದ್ರಗಳು, ವಿಶ್ವವಿದ್ಯಾನಿಲಯಗಳು, ದೂರ ಶಿಕ್ಷಣಕ್ಕಾಗಿ ಇರುವ ದೂರ ಶಿಕ್ಷಣ ನಿರ್ದೇಶನಾಲಯಗಳು, ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಹೊಂದಿರುವ ಕಾಲೇಜುಗಳು/ಸಂಸ್ಥೆಗಳು ವಿಶ್ವವಿದ್ಯಾನಿಲಯ ಶಿಕ್ಷಣ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಬರುತ್ತವೆ.

ವಿಶ್ವವಿದ್ಯಾನಿಲಯ ಶಿಕ್ಷಣದ ಆಡಳಿತ ಸಂರಚನೆಯ ಅತ್ಯುನ್ನತ ಮಟ್ಟದಲ್ಲಿ ಕರ್ನಾಟಕ ರಾಜ್ಯದ ಗವರ್ನರ್ ಇದ್ದಾರೆ. ಇವರು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ (ಸಾಮಾನ್ಯ, ವಿಶೇಷ ಮತ್ತು ಮುಕ್ತ ವಿಶ್ವವಿದ್ಯಾನಿಲಯ) ಕಾಯ್ದೆಬದ್ಧ ಕುಲಾಧಿಪತಿಗಳಾಗಿದ್ದಾರೆ (Chancellor). ಇವರಿಗೆ ಕುಲಪತಿಗಳನ್ನು (Vice Chancellor) ನೇಮಕ ಮಾಡುವ, ಉಪನ್ಯಾಸಕರ ನೇಮಕಾತಿಗಳಿಗೆ ಮಾನ್ಯತೆ ನೀಡುವ, ಹೊಸ ಪಠ್ಯಕ್ರಮಕ್ಕೆ/ಕೋರ್ಸ್‌ಗಳಿಗೆ ಮಾನ್ಯತೆ ನೀಡುವ, ಕುಲಪತಿ/ಉಪನ್ಯಾಸಕರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ, ವಿಶ್ವವಿದ್ಯಾನಿಲಯಗಳು ತೆಗೆದುಕೊಳ್ಳುವ ಮುಖ್ಯ ನೀತಿ ಸಂಬಂಧಿ ನಿರ್ಣಯಗಳನ್ನು ಮಾನ್ಯ ಮಾಡುವ ಮತ್ತು ವಿಶ್ವವಿದ್ಯಾನಿಲಯಗಳ ಘಟಿಕೋತ್ಸವದಲ್ಲಿ ಭಾಗವಹಿಸಿ ಪದವಿಪ್ರದಾನ ಮಾಡುವ ಅಧಿಕಾರವನ್ನು ಹೊಂದಿದ್ದಾರೆ. ಕುಲಾಧಿಪತಿಗಳ (ಗವರ್ನರ್) ಕೆಳಗೆ ಸರ್ಕಾರದ ಉನ್ನತ ಶಿಕ್ಷಣ ಸಚಿವರಿದ್ದಾರೆ. ಇವರು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ನೀತಿಗಳನ್ನು ರೂಪಿಸಿ ಕಾಯ್ದೆಬದ್ಧಗೊಳಿಸುವ ಜವಾಬ್ದಾರಿ ಹೊಂದಿದ್ದಾರೆ. ಸರ್ಕಾರದ ಓರ್ವ ಕಾರ್ಯದರ್ಶಿ ಇವರಿಗೆ ಸಹಾಯ ಮಾಡುತ್ತಾರೆ. ಉನ್ನತ ಶಿಕ್ಷಣ ಸಚಿವರನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಸಮ ಕುಲಾಧಿಪತಿಗಳಾಗಿ (Pro-Chancellor) ಪರಿಗಣಿಸಲಾಗಿದೆ. ಇವರು ವಿಶ್ವವಿದ್ಯಾನಿಲಯಗಳ ವಾರ್ಷಿಕ ಘಟಿಕೋತ್ಸವದಲ್ಲಿ ಪಾಲುಗೊಳ್ಳುತ್ತಾರೆ.

ಪ್ರತಿಯೊಂದು ವಿಶ್ವವಿದ್ಯಾನಿಲಯದ ಆಡಳಿತವನ್ನು (ನಿರ್ವಹಣಾತ್ಮಕ ಮತ್ತು ಶೈಕ್ಷಣಿಕ) ಗವರ್ನರ್‌ರಿಂದ ನೇಮಕಗೊಂಡ ಕುಲಪತಿ (Vice-Chancellor) ನೋಡಿಕೊಳ್ಳುತ್ತಾರೆ. ಗವರ್ನರ್ ನೇಮಿಸುವ ಒಂದು ತಜ್ಞ ಸಮಿತಿ ಕುಲಪತಿ ಸ್ಥಾನಕ್ಕೆ ಅರ್ಜಿ ಸಲ್ಲಿಸುವ ಅನುಭವಿ ಅಧ್ಯಾಪಕರ ಅರ್ಹತೆಗಳನ್ನು ಪರಿಶೀಲಿಸಿ ಮೂವರು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಗವರ್ನರ್‌ಗೆ ಸಲ್ಲಿಸುತ್ತದೆ. ಗವರ್ನರ್ ಈ ಹೆಸರುಗಳನ್ನು ಪರಿಶೀಲಿಸಿ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರೊಂದಿಗೆ ಸಮಾಲೋಚಿಸಿ ಒಂದು ಹೆಸರನ್ನು ಕುಲಪತಿಗಳಾಗಲು ಸೂಚಿಸುತ್ತಾರೆ. ಸದ್ಯದ ನಿಯಮದ ಪ್ರಕಾರ ಕುಲಪತಿಗಳು ನಾಲ್ಕು ವರ್ಷಗಳ ಅಧಿಕಾರ ಅವಧಿಯನ್ನು ಒಂದು ಬಾರಿಗೆ ಮಾತ್ರ ಹೊಂದಿರುತ್ತಾರೆ. ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಯ ಅಧಿಕಾರಾವಧಿ ಸದ್ಯದಲ್ಲಿ ಮೂರು ವರ್ಷಗಳಾಗಿದ್ದು ಮತ್ತೊಂದು ವರ್ಷಕ್ಕೆ ಮುಂದುವರಿಸಬಹುದಾಗಿದೆ. ಪ್ರಾಧ್ಯಾಪಕರು 60 ವರ್ಷಕ್ಕೆ ನಿವೃತ್ತಿ ಆದ ನಂತರವೂ 65 ವರ್ಷದವರೆಗೆ ಕುಲಪತಿ ಸ್ಥಾನಕ್ಕೆ ಅರ್ಜಿ ಸಲ್ಲಿಸಬಹುದು.

ಪ್ರತಿಯೊಂದು ವಿಶ್ವವಿದ್ಯಾನಿಲಯವು ರಾಜ್ಯದ ಶಾಸನ ಸಭೆ ಒಪ್ಪಿಗೆ ನೀಡಿ ಜಾರಿಗೊಳಿಸುವ ಆಯಾ ವಿಶ್ವವಿದ್ಯಾನಿಲಯ ಕಾಯ್ದೆಗೆ ಒಳಪಟ್ಟಿರುತ್ತದೆ. ಈ ಕಾಯ್ದೆಗೆ ಅಗತ್ಯಬಿದ್ದಾಗ ತಿದ್ದುಪಡಿ ತರಬಹುದು.

ಕುಲಪತಿಗಳು ಕಾಯ್ದೆ ಪ್ರಕಾರ ವಿಶ್ವವಿದ್ಯಾನಿಲಯದ ಎಲ್ಲಾ ಆಡಳಿತಕ್ಕೂ ಜವಾಬ್ದಾರರಾಗಿದ್ದಾರೆ. ಇವರಿಗೆ ಆಡಳಿತದಲ್ಲಿ ಸಹಾಯ ಮಾಡಲು ಅವರಷ್ಟೇ ಸ್ಥಾನಮಾನ ಹೊಂದಿರುವ ಮೂವರು ಅಧಿಕಾರಿಗಳಿದ್ದಾರೆ. ಆದರೆ ಇವರು ಕುಲಪತಿಗಳಿಗೆ

Digitised by Bharatavani, CIIL

ಜವಾಬ್ದಾರರಾಗಬೇಕಾಗುತ್ತದೆ. ಈ ಅಧಿಕಾರಿಗಳೇ ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ) ಮತ್ತು ದ್ರವ್ಯಾಧಿಕಾರಿಗಳು. ಕುಲಸಚಿವರು ಸಾಮಾನ್ಯ ಆಡಳಿತವನ್ನು, ಕುಲಸಚಿವ (ಪರೀಕ್ಷಾಂಗ) ಪರೀಕ್ಷೆಗಳಿಗೆ ಸಂಬಂಧಿಸಿದ ಆಡಳಿತವನ್ನು ಮತ್ತು ದ್ರವ್ಯಾಧಿಕಾರಿಗಳು ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳುತ್ತಾರೆ. ಕೆಲವು ವೇಳೆ ಈ ಸ್ಥಾನಗಳಿಗೆ ಸರ್ಕಾರವೇ ಕೆ.ಎ.ಎಸ್/ಐ.ಎ.ಎಸ್ ಅಧಿಕಾರಿಗಳನ್ನು ನಿಯೋಜಿಸಬಹುದು ಅಥವಾ ಕುಲಪತಿಗಳು ಗವರ್ನರ್ ಒಪ್ಪಿಗೆ ಪಡೆದು ಅದೇ ವಿಶ್ವವಿದ್ಯಾನಿಲಯದ ಅಥವಾ ಪಕ್ಕದ ವಿಶ್ವವಿದ್ಯಾನಿಲಯದ ಅನುಭವಿ ಪ್ರಾಧ್ಯಾಪಕ ಅಥವಾ ಸಹ-ಪ್ರಾಧ್ಯಾಪಕರನ್ನು (ರೀಡರ್) ಈ ಸ್ಥಾನಗಳಿಗೆ ನೇಮಕ ಮಾಡಬಹುದು. ಕುಲಪತಿಗಳಿಗೆ, ವಿಶ್ವವಿದ್ಯಾನಿಲಯದ ನೀತಿ-ನಿಯಾಮಾವಳಿಗಳಿಗೆ ಸಂಬಂಧಿಸಿದಂತೆ ನೆರವು ನೀಡಲು ಒಂದು ಸಿಂಡಿಕೇಟ್ (ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಣಾ ಮಂಡಳಿ-Board of Management) ಇರುತ್ತದೆ. ಇವುಗಳ ಸದಸ್ಯರನ್ನು ಸರ್ಕಾರ ಮತ್ತು ಕುಲಪತಿಗಳು ನಾಮಕರಣ ಮಾಡುತ್ತಾರೆ. ಕೆಲವು ಸದಸ್ಯರ ಚುನಾವಣೆಯೂ ಆಗುತ್ತದೆ. ಶೈಕ್ಷಣಿಕ ವಿಚಾರಗಳನ್ನು ಚರ್ಚಿಸಲು ಒಂದು ಶೈಕ್ಷಣಿಕ ಪರಿಷತ್ (Board of Council) ಮತ್ತು ಒಂದು ಅಧ್ಯಯನದ ಮಂಡಳಿ (Board of Studies) ಇರುತ್ತದೆ.

ವಿಶ್ವವಿದ್ಯಾನಿಲಯಗಳ ವಿವಿಧ ವಿಭಾಗಗಳ ಆಡಳಿತವನ್ನು ವಿಭಾಗ ಮುಖ್ಯಸ್ಥರು (Head of the Department) ನೋಡಿಕೊಳ್ಳುತ್ತಾರೆ. ಸದ್ಯದ ನಿಯಮದ ಪ್ರಕಾರ ವಿಭಾಗ ಮುಖ್ಯಸ್ಥರ ಅಧಿಕಾರ ಪ್ರಾಧ್ಯಾಪಕರಲ್ಲಿ ಹಿರಿತನದ ಆಧಾರದ ಮೇಲೆ ಎರಡು ವರ್ಷಗಳಿಗೊಮ್ಮೆ ಬದಲಾಗುತ್ತದೆ. ವಿಭಾಗದ ಪ್ರವೇಶಾತಿ, ಬೋಧನೆ, ಪರೀಕ್ಷೆಗಳನ್ನು ನಡೆಸುವುದು, ಸಂಶೋಧನೆ ಕಾರ್ಯವನ್ನು ನೋಡಿಕೊಳ್ಳುವುದು ವಿಭಾಗ ಮುಖ್ಯಸ್ಥರ ಜವಾಬ್ದಾರಿಯಾಗಿದೆ.

ಈ ಕೆಳಗಿನ ನಕ್ಷೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಶಿಕ್ಷಣ ವ್ಯವಸ್ಥೆಗಳ ಆಡಳಿತಾತ್ಮಕ ಸಂರಚನೆಯನ್ನು ತೋರಿಸುತ್ತದೆ.

**ನಕ್ಷೆ: ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಶಿಕ್ಷಣ ವ್ಯವಸ್ಥೆಗಳ ಆಡಳಿತಾತ್ಮಕ ಸಂರಚನೆ.**




Digitised by Bharatavani, CIIL

ಈ ಮುಂದೆ ಶೈಕ್ಷಣಿಕ ವ್ಯವಸ್ಥೆಯ ವಿವಿಧ ಹಂತಗಳ ಸ್ವರೂಪವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಪೂರ್ವ ಪ್ರಾಥಮಿಕ ಶಾಲೆ:**

ಇದರ ಹೆಸರೇ ತಿಳಿಸುವಂತೆ ಇದು ಪ್ರಾಥಮಿಕ ಶಾಲಾ ಶಿಕ್ಷಣದ ಹಿಂದಿನ ಹಂತ. ಇದು ಮಗುವಿನ ಕುಟುಂಬ ಹಾಗೂ ಪ್ರಾಥಮಿಕ ಶಾಲೆಗಳ ಮಧ್ಯದ ಅವಧಿಯ ಕೊಂಡಿಯಂತೆ ಕಾರ್ಯನಿರ್ವಹಿಸುತ್ತದೆ.

ಪೂರ್ವ ಪ್ರಾಥಮಿಕ ಶಾಲೆಯಲ್ಲಿ 2000ನೇ ಇಸವಿಗೆ ಮುಂಚೆ ಎರಡು ವಿಧಗಳಿದ್ದವು. ಮೊದಲನೆಯದು ಅಂಗನವಾಡಿ. ಎರಡನೆಯದು ಶಿಶುವಿಹಾರ. 2000 ಇಸವಿಯ ನಂತರ ಶಿಶುವಿಹಾರದ ಕಲ್ಪನೆಯನ್ನು ಸರ್ಕಾರ ಕೈಬಿಟ್ಟು ಪ್ರಸ್ತುತ ಸನ್ನಿವೇಶದಲ್ಲಿ ಅಂಗನವಾಡಿ ಶಾಲೆಗಳನ್ನು ಮಾತ್ರ ನಡೆಸುತ್ತಿದೆ. ಅಂಗನವಾಡಿ ಶಾಲೆಗೆ ದಾಖಲಾಗುವ ಮಗುವಿನ ವಯಸ್ಸು 3 ವರ್ಷ 10 ತಿಂಗಳಿನಿಂದ 5 ವರ್ಷ 9 ತಿಂಗಳು. ಶಿಶು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಂಗನವಾಡಿಯ ಉಸ್ತುವಾರಿಯನ್ನು ವಹಿಸುತ್ತದೆ.

1980ರಲ್ಲಿ ಸುಮಾರು 3,118 ಪೂರ್ವ ಪ್ರಾಥಮಿಕ ಶಾಲೆಗಳಿದ್ದು ಅದರಲ್ಲಿ 1,90,737 ಮಕ್ಕಳಿದ್ದರು. ಪ್ರಸ್ತುತ ಸನ್ನಿವೇಶದಲ್ಲಿ ಪ್ರತಿ ಹಳ್ಳಿಯಲ್ಲೂ (ಅಂದರೆ ಜನಸಂಖ್ಯೆ 200 ಇರುವ) ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ. ಪೂರ್ವ-ಪ್ರಾಥಮಿಕ ಶಿಕ್ಷಣದ ಬಹುತೇಕ ಸಂಸ್ಥೆಗಳನ್ನು ಖಾಸಗಿ ಸಂಸ್ಥೆಗಳು ನಡೆಸುತ್ತಿವೆ.

ಪೂರ್ವ ಪ್ರಾಥಮಿಕ ಶಿಕ್ಷಣ ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

- ಮಗು ಶಾಲೆಗೆ ಬರುವ ಅಭ್ಯಾಸ ಮಾಡಿಸುವುದು.
- ಮಗುವಿನಲ್ಲಿ ಸ್ಪಷ್ಟ ಉಚ್ಚಾರಣೆ ಮೂಡಿಸುವುದು.
- ಮಗುವಿನಲ್ಲಿ ಮಾತೃಭಾಷೆಯ ಜ್ಞಾನ ಹೆಚ್ಚಿಸುವುದು.
- ಮಗುವಿಗೆ ಪೌಷ್ಟಿಕ ಆಹಾರ ಒದಗಿಸುವುದು.
- ಮಗುವಿನ ದೈಹಿಕ ಬೆಳವಣಿಗೆಗೆ ಪೂರಕವಾದ ಚಟುವಟಿಕೆ, ಆಟಗಳತ್ತ ಗಮನಹರಿಸುವುದು.
- ಮಗುವು ತಂದೆ, ತಾಯಿ, ಪೋಷಕರನ್ನು ಅಗಲಿ ಶಾಲೆಗೆ ಬರುವ ಹವ್ಯಾಸ ಬೆಳೆಸುವುದು.

**ಪ್ರಾಥಮಿಕ ಶಾಲಾ ಶೈಕ್ಷಣಿಕ ವ್ಯವಸ್ಥೆ:**

ಪ್ರಾಥಮಿಕ ಶಾಲಾ ಶಿಕ್ಷಣವನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಮೊದಲನೆಯದು 1 ರಿಂದ 5ನೇ ತರಗತಿವರೆಗಿನ ಕಿರಿಯ ಪ್ರಾಥಮಿಕ ಶಾಲೆ, ಎರಡನೆಯದು 6ರಿಂದ 8ನೇ ತರಗತಿವರೆಗಿನ ಹಿರಿಯ ಪ್ರಾಥಮಿಕ ಶಾಲೆ. 2003ಕ್ಕೆ ಹಿಂದಿನವರೆಗೂ ಪ್ರಾಥಮಿಕ ಶಿಕ್ಷಣದ ಅವಧಿ 7 ವರ್ಷಗಳಾಗಿದ್ದು 1ರಿಂದ 4ನೇ ತರಗತಿಗಳುಳ್ಳ ಕಿರಿಯ ಪ್ರಾಥಮಿಕ ಶಾಲೆ ಮತ್ತು 5ರಿಂದ 7ನೇ ತರಗತಿಗಳುಳ್ಳ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒಳಗೊಂಡಿತ್ತು. ಡಾ. ರಾಜರಾಮಣ್ಣ ವರದಿ ಅನ್ವಯ 6ರಿಂದ 14 ವರ್ಷದ ಒಳಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವ ಸಲುವಾಗಿ 2003ನೇ ಇಸವಿಯಿಂದ 8ನೇ ತರಗತಿಯನ್ನು ಪ್ರಾಥಮಿಕ ಶಾಲೆಗೆ ಸೇರಿಸಿಕೊಳ್ಳಲಾಗಿದೆ.

ಸಂವಿಧಾನದ ವಿಧಿ 45ರ ಪ್ರಕಾರ 6ರಿಂದ 14 ವರ್ಷದ ಒಳಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವ ಸಲುವಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಈ ನಿಟ್ಟಿನಲ್ಲಿ ಕನಿಷ್ಠ 200 ಜನಸಂಖ್ಯೆ ಇರುವ ಪ್ರದೇಶಕ್ಕೆ ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಮಂಜೂರು ಮಾಡಿದೆ. ಪ್ರತಿ ಮಗುವಿನ ಕುಟುಂಬಕ್ಕೆ ಕಿರಿಯ ಪ್ರಾಥಮಿಕ ಶಾಲೆ 1 ಕಿ.ಮೀ. ದೂರ ಹಾಗೂ ಹಿರಿಯ ಪ್ರಾಥಮಿಕ ಶಾಲೆ 2 ಕಿ.ಮೀ. ದೂರದ ವ್ಯಾಪ್ತಿಯಲ್ಲಿ ಬರುವಂತೆ ನೋಡಿಕೊಳ್ಳಲಾಗಿದೆ.

**ಪ್ರಾಥಮಿಕ ಶಾಲಾ ಶಿಕ್ಷಣದ ಮುಖ್ಯ ಉದ್ದೇಶಗಳು:**

- 6ರಿಂದ 14 ವರ್ಷದ ಒಳಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವುದು.
- ಮಗುವಿಗೆ ಓದು, ಬರಹ ಕಲಿಸುವುದು.
- ಮಕ್ಕಳನ್ನು ಭವಿಷ್ಯದ ಸತ್ಪ್ರಜೆಗಳನ್ನಾಗಿ ರೂಪಿಸುವುದು.
- ಉತ್ತಮ ಹಾಗೂ ಸ್ವಾಸ್ಥ್ಯ ಸಮಾಜದ ನಿರ್ಮಾಣ ಮಾಡುವುದು.
- ಮಗುವಿಗೆ ಜೀವನದ ಮೂಲಭೂತ ಕೌಶಲ್ಯಗಳನ್ನು ಪರಿಚಯಿಸುವುದು.

**ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ:**

ಮಗು ಒಂದನೇ ತರಗತಿ ಸೇರಲು ಕನಿಷ್ಠ 5 ವರ್ಷ 10 ತಿಂಗಳು ತುಂಬಿರಬೇಕು. ಒಂದು ವೇಳೆ ಮಗು ಶಾಲೆ ಬಿಟ್ಟು ನಂತರ ಶಾಲೆಗೆ ಸೇರ ಬಯಸಿದರೆ ಮಗುವಿನ ವಯಸ್ಸು ಹಾಗೂ ಬುದ್ಧಿಮಟ್ಟಕ್ಕೆ ಅನುಗುಣವಾಗಿ ಬೇರೆ ವರ್ಗಕ್ಕೆ ದಾಖಲು ಮಾಡಿಕೊಳ್ಳುವ ಅಧಿಕಾರವನ್ನು ಆ ಶಾಲೆಯ ಮುಖ್ಯೋಪಾಧ್ಯಾಯರಿಗೆ ವಹಿಸಿಕೊಟ್ಟಿದೆ. ಊರಿನಲ್ಲಿ 6 ರಿಂದ 14 ವರ್ಷದ ವಯೋಮಿತಿಯೊಳಗಿನ ಮಗುವು ಶಾಲೆಗೆ ಸೇರದಿದ್ದರೆ ಅಥವಾ ಶಾಲೆ ಸೇರಿ ಬಿಟ್ಟಿದ್ದರೆ ಆ ಮಗುವನ್ನು ಮುಖ್ಯವಾಹಿನಿಗೆ ತರಲು ಹಲವಾರು ವಿಶಿಷ್ಟ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

**ಶಿಕ್ಷಕರ ಅನುಪಾತ:**

ಸರಾಸರಿ ಪ್ರತಿ 35 ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ಸರ್ಕಾರ ಶಿಕ್ಷಕರನ್ನು ನಿಯೋಜಿಸುತ್ತಿದೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ

Digitised by Bharatavani, CIIL

ಬೆಳೆಯುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ರೀತಿಯಲ್ಲಿ ಶಿಕ್ಷಕರುಗಳನ್ನು ನೇಮಿಸಿಕೊಳ್ಳುತ್ತಿದೆ.

**ಶಿಕ್ಷಕರ ನೇಮಕಾತಿ ವಿಧಾನ:**

ಪ್ರಾಥಮಿಕ ಶಾಲೆಗೆ ನೇಮಕಗೊಳ್ಳುವ ಶಿಕ್ಷಕರು ಕನಿಷ್ಠ ಪಿ.ಯು.ಸಿ. ಮತ್ತು ಎರಡು ವರ್ಷದ ಶಿಕ್ಷಣದ ಡಿಪ್ಲೋಮಾ ಪದವಿ ಅಥವಾ ತತ್ಸಮಾನ ಪದವಿ ಹೊಂದಿರಬೇಕು. ಶಿಕ್ಷಣದಲ್ಲಿ ಗುಣಾತ್ಮಕತೆ ತರುವ ನಿಟ್ಟಿನಲ್ಲಿ 2002 ನೇ ಸಾಲಿನಿಂದ ಪಾರದರ್ಶಕವಾಗಿ ಸಿ.ಇ.ಟಿ. ಪರೀಕ್ಷೆಯ ಮೂಲಕ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದೆ. ಪ್ರಾಥಮಿಕ ಶಾಲೆಗಳಲ್ಲಿ 8 ನೇ ತರಗತಿ ಇದ್ದರೆ ಅಂತಹ ಕಡೆ ಗಣಿತ ಮತ್ತು ವಿಜ್ಞಾನ ವಿಷಯಗಳ ಬೋಧನೆಗೆ ಒಬ್ಬ ಬಿ.ಎಸ್ಸಿ., ಬಿ.ಇಡಿ. ಪದವಿ ಹೊಂದಿರುವ ಭೌತ ವಿಜ್ಞಾನ ಶಿಕ್ಷಕರನ್ನು ನೇಮಿಸಲಾಗಿದೆ.

**ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ನೀಡುತ್ತಿರುವ ಸೌಲಭ್ಯಗಳು:**

ಸರ್ಕಾರಿ ಶಾಲೆಯಲ್ಲಿ ದಾಖಲಾತಿ ಬಯಸುವ ಯಾವ ಮಗುವಿಗೂ (6–14 ವರ್ಷ) ದಾಖಲಾತಿಯನ್ನು ನಿರಾಕರಿಸುವಂತಿಲ್ಲ. ಪ್ರತಿ ಮಗುವಿಗೂ ಶುಲ್ಕ ರಹಿತ ಶಿಕ್ಷಣ ನೀಡಲಾಗುತ್ತಿದೆ. ಅಲ್ಲದೆ ಪ್ರತಿ ದಿನ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿಯಲ್ಲಿ ಉಚಿತ ಪೌಷ್ಠಿಕ ಆಹಾರ ನೀಡುತ್ತಿದೆ. ಅಲ್ಲದೆ ಉಚಿತ ಪಠ್ಯಪುಸ್ತಕ, ಶಾಲಾ ಸಮವಸ್ತ್ರ ನೀಡಿ ಶಿಕ್ಷಣ ಸಾರ್ವತ್ರೀಕರಣಕ್ಕೆ ಕರ್ನಾಟಕ ಸರ್ಕಾರ ಶ್ರಮಿಸುತ್ತಿದೆ.

ಮಕ್ಕಳನ್ನು ಶಾಲೆಯ ಕಡೆ ಆಕರ್ಷಿಸುವ ಸಲುವಾಗಿ ಶಾಲೆಯಲ್ಲಿ ನಲಿ ಕಲಿ ಕಾರ್ಯವಿಧಾನ, ರೇಡಿಯೋ ಕಾರ್ಯಕ್ರಮ, ಶಾಲಾ ಅಂದಚೆಂದದ ಕಡೆ ವಿಶಿಷ್ಟ ಗಮನ ನೀಡಲಾಗಿದೆ.

**ಮಾಧ್ಯಮಿಕ ಶಿಕ್ಷಣ:**

ಮಗುವಿನ ವೈಯಕ್ತಿಕ, ಸಾಮಾಜಿಕ, ಭೌತಿಕ, ಶೈಕ್ಷಣಿಕ ಹಿನ್ನೆಲೆಯಲ್ಲಿ ಮಾಧ್ಯಮಿಕ ಶಿಕ್ಷಣದ ಪರಿಕಲ್ಪನೆ ಒಂದು ಮೈಲಿಗಲ್ಲು. ಮಾಧ್ಯಮಿಕ ಶಿಕ್ಷಣಕ್ಕೆ ಕಾಲಿಡುವ ವಿದ್ಯಾರ್ಥಿಗಳು ಪ್ರೌಢಾವಸ್ಥೆಯಲ್ಲಿರುವ ಕಾರಣ ಮಾಧ್ಯಮಿಕ ಶಿಕ್ಷಣ ಪ್ರಾಥಮಿಕ ಶಿಕ್ಷಣಕ್ಕಿಂತ ವಿಭಿನ್ನವಾಗಿದೆ.

ಪ್ರಪ್ರಥಮ ಮಾಧ್ಯಮಿಕ ಶಿಕ್ಷಣ ಕರ್ನಾಟಕದಲ್ಲಿ ಅಂದಿನ ಮೈಸೂರು ಸಂಸ್ಥಾನದ ಬೆಂಗಳೂರಿನಲ್ಲಿ 1858ರಲ್ಲಿ ಪ್ರಾರಂಭವಾಯಿತು.

**ಮಾಧ್ಯಮಿಕ ಶಿಕ್ಷಣದ ಉದ್ದೇಶಗಳು:**

- ವಿದ್ಯಾರ್ಥಿಯಲ್ಲಿ ಔದ್ಯೋಗಿಕ ಸಾಮರ್ಥ್ಯವನ್ನು ಉಂಟುಮಾಡುವುದು.
- ವಿದ್ಯಾರ್ಥಿಯಲ್ಲಿ ವ್ಯಕ್ತಿತ್ವ ವಿಕಸನ ಉಂಟುಮಾಡುವುದು.
- ವಿದ್ಯಾರ್ಥಿಯಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವುದು
- ವಿದ್ಯಾರ್ಥಿಯಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವುದು
- ವಿದ್ಯಾರ್ಥಿಯಲ್ಲಿ ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವುದು
- ವಿದ್ಯಾರ್ಥಿಯಲ್ಲಿ ಸೃಜನಶೀಲತೆ ಬೆಳೆಸುವುದು
- ವಿದ್ಯಾರ್ಥಿಯನ್ನು ಭವಿಷ್ಯದಲ್ಲಿ ಆರ್ಥಿಕವಾಗಿ ಸದೃಢರನ್ನಾಗಿಸುವುದು

ಒಟ್ಟಾರೆ ವಿದ್ಯಾರ್ಥಿಯನ್ನು ಸರ್ವತೋಮುಖ ಅಭಿವೃದ್ಧಿಯತ್ತ ಕೊಂಡೊಯ್ಯುವುದು ಮಾಧ್ಯಮಿಕ ಶಿಕ್ಷಣದ ಉದ್ದೇಶ.

**ಮಾಧ್ಯಮಿಕ ಶಿಕ್ಷಣದ ಅವಧಿ:**

ಮಾಧ್ಯಮಿಕ (ಹೈಸ್ಕೂಲು) ಶಿಕ್ಷಣದ ಅವಧಿ 2003ರ ವರೆಗೆ 3 ವರ್ಷಗಳಾಗಿದ್ದು 8,9, ಮತ್ತು 10ನೇ ತರಗತಿಗಳನ್ನು ಒಳಗೊಂಡಿತ್ತು. ಆದರೆ ಪುನರ್‌ವ್ಯವಸ್ಥೆಯಿಂದಾಗಿ 8ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಹಂತಕ್ಕೆ ಸೇರಿಸುತ್ತಿರುವುದರಿಂದ ಮಾಧ್ಯಮಿಕ ಶಿಕ್ಷಣದ ಅವಧಿ 2 ವರ್ಷಗಳದ್ದಾಗಿದೆ.

ಮಾಧ್ಯಮಿಕ ಶಿಕ್ಷಣದ ಪಠ್ಯಕ್ರಮ ಒಳಗೊಂಡಿರುವ ವಿಷಯಗಳು ಹೀಗಿವೆ. ಮಾತೃಭಾಷೆಯನ್ನು ಪ್ರಥಮ ಭಾಷೆ. ಇಂಗ್ಲಿಷ್ ದ್ವಿತೀಯ ಭಾಷೆ, ಹಿಂದಿ ತೃತೀಯ ಭಾಷೆ. ತಿರುಳು (ಕೋರ್) ವಿಷಯಗಳಾದ ಗಣಿತ, ವಿಜ್ಞಾನ, ಸಮಾಜ ವಿಜ್ಞಾನಗಳೇ ಅಲ್ಲದೆ ದೈಹಿಕ ಶಿಕ್ಷಣ, ತೋಟಗಾರಿಕೆ, ಹೊಲಿಗೆ, ಸಂಗೀತ, ಚಿತ್ರಕಲೆ, ಮರದ ಕೆಲಸ ಇವುಗಳೂ ಇರುತ್ತವೆ.

**ಶಿಕ್ಷಕರ ಅನುಪಾತ:**

ಸರಾಸರಿ ಪ್ರತಿ 50 ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ಸರ್ಕಾರ ಶಿಕ್ಷಕರನ್ನು ನಿಯೋಜಿಸುತ್ತಿದೆ. ಪ್ರಾಥಮಿಕ ಶಾಲೆಯ 5 ಕಿ.ಮೀ. ವ್ಯಾಪ್ತಿಯಲ್ಲಿ ಒಂದು ಪ್ರೌಢಶಾಲೆಯನ್ನು ಸರ್ಕಾರ ಮಂಜೂರುಮಾಡುತ್ತಿದೆ. ನಗರಗಳಲ್ಲಿ ಮತ್ತು ಹೆಚ್ಚು ಜನವಸತಿಯಿರುವ ಕಡೆ ಪ್ರತಿ ವರ್ಷ ಅವಶ್ಯಕತೆಗನುಗುಣವಾಗಿ ಪ್ರೌಢಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದೆ.

**ಪದವಿ ಪೂರ್ವ ಶಿಕ್ಷಣ (ಪ್ರಿ-ಯೂನಿವರ್ಸಿಟಿ ಶಿಕ್ಷಣ):**

ಇದು ಮಾಧ್ಯಮಿಕ ಶಿಕ್ಷಣದ ನಂತರ ಬರುವ ಹಂತ. ಇದನ್ನು ಉನ್ನತ ಮಾಧ್ಯಮಿಕ ಹಂತ ಎಂದೂ (Higher Secondary Stage) ಹೇಳುತ್ತಾರೆ.

ಕರ್ನಾಟಕ ರಾಜ್ಯದಲ್ಲಿ 1964–65ನೇ ಸಾಲಿನಲ್ಲಿ ಸುಮಾರು 50 ಮಾಧ್ಯಮಿಕ ಶಾಲೆಗಳನ್ನು ಪ್ರಾಯೋಗಿಕವಾಗಿ ಪದವಿಪೂರ್ವ ಹಂತಕ್ಕೆ ಉನ್ನತೀಕರಿಸಲಾಯಿತು. ಹಾಗಾಗಿ ಪದವಿಪೂರ್ವ ಶಿಕ್ಷಣವನ್ನು ಉನ್ನತೀಕರಿಸಿದ ಮಾಧ್ಯಮಿಕ ಶಿಕ್ಷಣವೆಂದು ಕರೆಯಲಾಯಿತು. ಈ ಸಂಸ್ಥೆಗಳನ್ನು ಪಿ.ಯು.ಸಿ. ಕಾಲೇಜು ಎನ್ನಬಹುದು. ಪದವಿಪೂರ್ವ ಕಾಲೇಜುಗಳಲ್ಲಿ ಎರಡು ವಿಧಗಳಿವೆ. ಒಂದು ಸಂಯುಕ್ತ ಪದವಿ ಪೂರ್ವ ಕಾಲೇಜು, ಮತ್ತೊಂದು ಸ್ವತಂತ್ರ ಪದವಿ ಪೂರ್ವ ಕಾಲೇಜು. ಮಾಧ್ಯಮಿಕ ಶಾಲೆಗೇ ಸೇರಿದಂತೆ ಪದವಿಪೂರ್ವ ಕಾಲೇಜು ಇದ್ದರೆ ಅದನ್ನು ಸಂಯುಕ್ತ ಪದವಿ ಪೂರ್ವ ಕಾಲೇಜು

Digitised by Bharatavani, CIIL

ಎನ್ನಲಾಗಿದೆ. ಹಾಗಿಲ್ಲದಾಗ ಪ್ರತ್ಯೇಕ ಪಿ.ಯು.ಸಿ. ಕಾಲೇಜು ಇರುತ್ತದೆ.

**ಪದವಿಪೂರ್ವ ಶಿಕ್ಷಣದ ಉದ್ದೇಶಗಳು:**

- ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸಹಭಾಗಿತ್ವ ಗುಣ ಬೆಳೆಸುವುದು.
- ಸಂಬಂಧಿಸಿದ ವಿಷಯದಲ್ಲಿ ಪ್ರಭುತ್ವವನ್ನು ಸಾಧಿಸುವುದು
- ವಿದ್ಯಾರ್ಥಿಗಳಲ್ಲಿ ಉದಾತ್ತ ಮೌಲ್ಯ ಬೆಳೆಸುವುದು
- ಜೀವಿಸಲು ಬೇಕಾದ ಕೌಶಲ್ಯವನ್ನು ತಿಳಿಸುವುದು
- ಉನ್ನತ ಶಿಕ್ಷಣಕ್ಕೆ ಅಡಿಪಾಯ ಹಾಕುವುದು
- ಸೃಜನಶೀಲತೆ ಹಾಗೂ ಉತ್ತಮ ಹವ್ಯಾಸ ರೂಢಿಸುವುದು
- ಪ್ರಯೋಗಶೀಲತೆ ಮನೋಭಾವ ಮೂಡಿಸುವುದು.

ಪದವಿಪೂರ್ವ ಶಿಕ್ಷಣದ ಎರಡು ವರ್ಷಗಳ ಶಿಕ್ಷಣದಲ್ಲಿ ಮೊದಲನೇ ಪಿ.ಯು.ಸಿ. ಪರೀಕ್ಷೆ ಜಿಲ್ಲಾ ಮಟ್ಟದಲ್ಲಿರುತ್ತದೆ. ದ್ವಿತೀಯ ಪಿ.ಯು.ಸಿ.ವರ್ಷದ ಪರೀಕ್ಷೆ ರಾಜ್ಯಮಟ್ಟದ ಪಬ್ಲಿಕ್ ಪರೀಕ್ಷೆಯಾಗಿದೆ.

ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣದಲ್ಲಿ ಪ್ರತಿ ವಿದ್ಯಾರ್ಥಿಯು ಅನುಮೋದನೆಗೊಂಡಿರುವ ಎರಡು ಭಾಷೆಗಳನ್ನು ಹಾಗೂ ಕಲೆ/ವಾಣಿಜ್ಯ/ವಿಜ್ಞಾನ ವಿಭಾಗಗಳ ಪೈಕಿ ಒಂದು ಭಾಗದಲ್ಲಿ ನಾಲ್ಕು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

**ಔದ್ಯೋಗಿಕ ಶಿಕ್ಷಣ:**

ಉದ್ಯೋಗಕ್ಕೆ ಸಿದ್ಧಪಡಿಸುವ ಶಿಕ್ಷಣವನ್ನು ಔದ್ಯೋಗಿಕ (Vocational) ಶಿಕ್ಷಣ ಎನ್ನುತ್ತೇವೆ. ಹಾಗಾಗಿ ಇದನ್ನು ಕೆಲವರು ತಾಂತ್ರಿಕ ಶಿಕ್ಷಣವೆಂದು ಕರೆದಿದ್ದಾರೆ. ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣ ನಿರ್ದೇಶನಾಲಯ ಇದರ ನೇತೃತ್ವ ವಹಿಸಿದೆ.

**ಔದ್ಯೋಗಿಕ ಶಿಕ್ಷಣದ ಉದ್ದೇಶಗಳು:**

- ರಾಷ್ಟ್ರೀಯ ಗುರಿಯನ್ನು ಪೂರೈಸುವುದು
- ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದು
- ವಿದ್ಯಾರ್ಥಿಗಳನ್ನು ಉತ್ಪಾದಕತೆಯಲ್ಲಿ ತೊಡಗಿಸುವುದು
- ವಿದ್ಯಾರ್ಥಿಗಳನ್ನು ಆರ್ಥಿಕವಾಗಿ ಸದೃಢರನ್ನಾಗಿಸುವುದು
- ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಕೌಶಲ್ಯ ಮೂಡಿಸುವುದು
- ವಿದ್ಯಾರ್ಥಿಗಳನ್ನು ಸ್ವ-ಅಭಿವೃದ್ಧಿ, ಸ್ವ-ಮೌಲ್ಯಮಾಪನಕ್ಕೆ ಅಣಿಗೊಳಿಸುವುದು

**ವಿದ್ಯಾರ್ಹತೆ:** ಔದ್ಯೋಗಿಕ ಶಿಕ್ಷಣಕ್ಕೆ ಸೇರ ಬಯಸುವವರು ಎಸ್.ಎಲ್.ಸಿ. ತೇರ್ಗಡೆ ಹೊಂದಿರಬೇಕು. ಔದ್ಯೋಗಿಕ ಶಿಕ್ಷಣವನ್ನು ಕೈಗಾರಿಕೆ ತರಬೇತಿ ಸಂಸ್ಥೆಗಳಲ್ಲಿ (Industrial Training Institutes – ITI) ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ನೀಡಲಾಗುವುದು. ಐ.ಟಿ.ಐ.ಗೆ ಸೇರಲು ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರಬೇಕು. ಈ ಸಂಸ್ಥೆಗಳು ತರಬೇತಿ ಪ್ರಧಾನವಾಗಿರುವ 18 ತಿಂಗಳುಗಳ ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮವನ್ನು ನಡೆಸುತ್ತವೆ. ವಿದ್ಯಾರ್ಥಿಯು ಫಿಟ್ಟರ್, ಟರ್ನರ್ ಮುಂತಾದ ಅನೇಕ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ತರಬೇತಿ ಪಡೆಯಬೇಕು.

**ಪಠ್ಯಕ್ರಮ:** ಇದರಲ್ಲಿ ಒಟ್ಟು 22 ವಿಷಯಗಳಿದ್ದು ವಿದ್ಯಾರ್ಥಿಯು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಅದರ ಜೊತೆಗೆ ಕೆಳಕಂಡ ಪಠ್ಯವಿಷಯಗಳನ್ನು ಅಭ್ಯಾಸ ಮಾಡಬಹುದಾಗಿದೆ.

**ಭಾಗ–ಎ**

1. ಭಾಷಾ ವಿಷಯಗಳು
2. ಸಾಮಾನ್ಯ ಬುನಾದಿ ಕ್ರಮ

ಎ) ಸಾಮಾನ್ಯ ಅಧ್ಯಯನ ಬಿ) ಗ್ರಾಮೀಣಾಭಿವೃದ್ಧಿ ಸಿ) ಪ್ರಾಕೃತಿಕ ಶಿಕ್ಷಣ ಡಿ) ಮಾಹಿತಿ ಮತ್ತು ಸಮೂಹ ತಂತ್ರಜ್ಞಾನ

3. ಆರೋಗ್ಯ ಮತ್ತು ಭೌತಿಕ ಶಿಕ್ಷಣ

**ಭಾಗ–ಬಿ**

ವೃತ್ತಿ ಪರ ವಿಷಯಗಳು ಮತ್ತು ಪ್ರಾಯೋಗಿಕ ತರಗತಿಗಳು

ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಇಂಜಿನಿಯರಿಂಗ್‌ನ ವಿವಿಧ ಶಾಖೆಗಳಾದ ಸಿವಿಲ್, ಮೆಕ್ಯಾನಿಕಲ್, ಕಂಪ್ಯೂಟರ್ ಸೈನ್ಸ್, ಆರ್ಕಿಟೆಕ್ಚರ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್, ಇನ್‌ಫರ್‌ಮೇಷನ್ ಸೈನ್ಸ್, ಮುಂತಾದವುಗಳಲ್ಲಿ ಮತ್ತು ಕ್ಲರ್ಕ್ ಹುದ್ದೆಗೆ ಉಪಯುಕ್ತವಾಗುವ ಸೆಕ್ರೆಟೇರಿಯಲ್ ಪ್ರಾಕ್ಟೀಸ್‌ನಲ್ಲಿ ಮೂರು ವರ್ಷದ ಡಿಪ್ಲೋಮಾಗೆ ಶಿಕ್ಷಣವನ್ನು ನೀಡಲಾಗುತ್ತದೆ. ಇದಕ್ಕೂ ಎಸ್.ಎಸ್.ಎಲ್.ಸಿ. ತೇರ್ಗಡೆ ಪ್ರವೇಶಾರ್ಹತೆಯಾಗಿದೆ.

ಇಂಜಿನಿಯರಿಂಗ್ ವಿಷಯಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಸರ್ಕಾರ ಅವರಿಗಾಗಿಯೇ ನಡೆಸುವ ಪ್ರವೇಶ ಪರೀಕ್ಷೆ (ಸಿ.ಇ.ಟಿ) ತೆಗೆದುಕೊಂಡು ಎರಡನೇ ವರ್ಷದ ಇಂಜಿನಿಯರಿಂಗ್ ಪದವಿ ಕೋರ್ಸ್‌ಗೆ ಸೇರಬಹುದು. ಈ ಅವಕಾಶ ಹಿಂದೆ ಇರಲಿಲ್ಲ. ಆದರೆ ಕಳೆದ ಕೆಲವು ವರ್ಷಗಳಿಂದ ಈ ಅವಕಾಶ ಕಲ್ಪಿಸಲಾಗಿದೆ.

ಡಿಪ್ಲೋಮಾ ಕೋರ್ಸ್‌ಗಳ ಪಠ್ಯಕ್ರಮಗಳು ಅಯಾ ಇಂಜಿನಿಯರಿಂಗ್ ಶಾಖೆಗೆ ಸಂಬಂಧಿಸಿದ ಸೈದ್ಧಾಂತಿಕ ವಿಷಯಗಳು, ಪ್ರಾಯೋಜನಾ ಕಾರ್ಯ (ಪ್ರಾಜೆಕ್ಟ್), ಪ್ರಾಯೋಗಿಕ ಕಾರ್ಯ, ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಸಂದರ್ಶನ, ಕ್ಷೇತ್ರ ಕಾರ್ಯ ಸೇರಿರುತ್ತದೆ. ಸೈದ್ಧಾಂತಿಕ ವಿಷಯಗಳಿಗೆ ಹೆಚ್ಚಿನ ಒತ್ತು ಕೊಡದೆ ಪ್ರಾಯೋಗಿಕ ಅನುಭವಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತದೆ.

Digitised by Bharatavani, CIIL

**ಪದವಿ ಶಿಕ್ಷಣ (ಕಾಲೇಜು ಶಿಕ್ಷಣ):**

ಪದವಿ ಪೂರ್ವ ಶಿಕ್ಷಣದ ನಂತರ ಅಧ್ಯಯನ ಮಾಡುವ ಮೂರು ವರ್ಷಗಳ ಶಿಕ್ಷಣದ ಹಂತವನ್ನು ಪದವಿ ಶಿಕ್ಷಣ ಎನ್ನುತ್ತೇವೆ. ಪದವಿ ಶಿಕ್ಷಣವನ್ನು ನಿಯಮಿತವಾಗಿ ಸರ್ಕಾರಿ/ಖಾಸಗಿ ಕಾಲೇಜುಗಳಲ್ಲಿ ಅಥವಾ ದೂರಶಿಕ್ಷಣದ ಮೂಲಕ ಮುಕ್ತ ವಿಶ್ವವಿದ್ಯಾನಿಲಯದಿಂದ ಅಥವಾ ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣ ಸಂಸ್ಥೆಯಿಂದ ಪಡೆಯಬಹುದು. ಕಾಲೇಜುಗಳು ಒಂದು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಡುತ್ತವೆ. ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಪಠ್ಯಕ್ರಮವನ್ನು ಆ ವ್ಯಾಪ್ತಿಯ ಎಲ್ಲಾ ಕಾಲೇಜುಗಳು ಅನುಸರಿಸುತ್ತವೆ.

**ಪದವಿ ಶಿಕ್ಷಣದ ಉದ್ದೇಶಗಳು:**

- ವಿದ್ಯಾರ್ಥಿಗೆ ಆಯ್ಕೆ ಮಾಡಿಕೊಂಡ ವಿಷಯಗಳಲ್ಲಿ ಆಳವಾದ ಜ್ಞಾನ ಒದಗಿಸುವುದು.
- ಲೌಕಿಕ ಮತ್ತು ತಾರ್ಕಿಕ ಚಿಂತನೆಯನ್ನು ಬೆಳೆಸುವುದು.
- ಸಮಾಜಕ್ಕೆ ಉತ್ತಮ ನಾಗರೀಕರನ್ನು ರೂಪಿಸುವುದು.
- ವಿದ್ಯಾರ್ಥಿಗೆ ಔದ್ಯೋಗಿಕ ಕ್ಷೇತ್ರದಲ್ಲಿ ನೆಲೆಯೂರಲು ಸಹಕರಿಸುವುದು.
- ಭಾಷಾ ಜ್ಞಾನ, ರಾಷ್ಟ್ರಾಭಿಮಾನ ಮೂಡಿಸುವುದು.
- ವಿಶಾಲ ಮನೋಭಾವ ಬೆಳೆಸುವುದು.

**ಪದವಿ ಶಿಕ್ಷಣದಲ್ಲಿ ಪಠ್ಯಕ್ರಮ:**

ಪದವಿ ಶಿಕ್ಷಣದಲ್ಲಿ ಕಲೆ, ವಿಜ್ಞಾನ, ವಾಣಿಜ್ಯ, ಕಂಪ್ಯೂಟರ್, ಸಂಗೀತ, ಚಿತ್ರಕಲೆ, ಪತ್ರಿಕೋದ್ಯಮ ಮುಂತಾದ ಹಲವಾರು ಪದವಿಗಳಿಗೆ ಅವಕಾಶವಿದೆ. ವಿದ್ಯಾರ್ಥಿಯು ಎರಡು ಭಾಷಾ ವಿಷಯಗಳೊಂದಿಗೆ ಮೂರು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ. ಪ್ರತಿ ವರ್ಷದ ಅಂತ್ಯದಲ್ಲಿ ವಿಶ್ವವಿದ್ಯಾನಿಲಯ ನಡೆಸುವ ಪಬ್ಲಿಕ್ ಪರೀಕ್ಷೆ ಇರುತ್ತದೆ.

**ಬೋಧಕ ಸಿಬ್ಬಂದಿಯ ನೇಮಕ:**

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬೋಧಿಸುವ ಬೋಧಕ ಸಿಬ್ಬಂದಿಯನ್ನು ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಕರ್ನಾಟಕ ಸರ್ಕಾರ ಕೆ.ಪಿ.ಎಸ್.ಸಿ. ಮೂಲಕ ನೇಮಿಸುತ್ತದೆ. ಖಾಸಗಿ ಕಾಲೇಜುಗಳು ಯು.ಜಿ.ಸಿ. ಮತ್ತು ಕಾಲೇಜು ಶಿಕ್ಷಣ ನಿರ್ದೇಶನಾಲಯದ ನಿಯಮಗಳಿಗೆ ಒಳಪಟ್ಟು ಉಪನ್ಯಾಸಕರನ್ನು ತಾವೇ ನೇಮಕ ಮಾಡಿಕೊಳ್ಳಬಹುದು. ಉಪನ್ಯಾಸಕರಾಗಲು ಆಯಾ ವಿಷಯದಲ್ಲಿ ಮಾಸ್ಟರ್ಸ್ ಪದವಿಯಲ್ಲಿ ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕಲ್ಲದೆ, ಯು.ಜಿ.ಸಿ. ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (National Eligibility Test - NET) ತೇರ್ಗಡೆ ಹೊಂದಿರಬೇಕು. ಆಯಾ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದಿರುವವರಿಗೆ ಆಯ್ಕೆಯಲ್ಲಿ ಆದ್ಯತೆ ಇರುತ್ತದೆ. ಆಯ್ಕೆ ಆದ ನಂತರ 8 ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಸಿಬ್ಬಂದಿ ಕಾಲೇಜಿನಲ್ಲಿ ಒಂದು ತಿಂಗಳ ಅವಧಿಯ ದಿಶಾ ನಿರ್ದೇಶನ ಕೋರ್ಸ್‌ಅನ್ನೂ ಪೂರೈಸಬೇಕು. ನಂತರ ಅದೇ ಸಂಸ್ಥೆ ನಡೆಸುವ ಒಂದು ತಿಂಗಳ ಅವಧಿಯ ಪುನಶ್ಚೇತನ ಕೋರ್ಸ್‌ಅನ್ನೂ ಪೂರೈಸಬೇಕು. ಈ ಷರತ್ತು ವೃತ್ತಿಯಲ್ಲಿ ಅಸೋಸಿಯೇಟ್ ಪ್ರಾಧ್ಯಾಪಕ (ಹಿಂದಿನ ರೀಡರ್) ಮತ್ತು ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾಗಲು/ಬಡ್ತಿ ಪಡೆಯಲು ಒಂದು ನಿಬಂಧನೆಯಾಗಿರುತ್ತದೆ. ಈ ಕ್ರಮ ಉಪನ್ಯಾಸಕರ ವೃತ್ತಿ ಬೆಳವಣಿಗೆಗೆ ಸಹಕಾರಿಯಾಗಿದೆ.

**ಸ್ನಾತಕೋತ್ತರ (ವಿಶ್ವವಿದ್ಯಾನಿಲಯ) ಶಿಕ್ಷಣ:**

ಮೂರು ವರ್ಷದ ಪದವಿ ಶಿಕ್ಷಣದ ನಂತರ ಉನ್ನತ ವ್ಯಾಸಂಗದ ಹಂತವನ್ನು ಸ್ನಾತಕೋತ್ತರ ಶಿಕ್ಷಣ ಎನ್ನುತ್ತೇವೆ. ನೇರವಾಗಿ ವಿಶ್ವವಿದ್ಯಾನಿಲಯಗಳು ಇವುಗಳ ಉಸ್ತುವಾರಿ ವಹಿಸುತ್ತವೆ. ಸ್ನಾತಕೋತ್ತರ ಶಿಕ್ಷಣವನ್ನು ನಿಯಮಿತವಾಗಿ ವಿಶ್ವವಿದ್ಯಾಲಯದಲ್ಲಿ ಪಡೆಯಬಹುದು ಅಥವಾ ದೂರಶಿಕ್ಷಣದ ಮೂಲಕವೂ ಪಡೆಯಬಹುದು. ಇದಲ್ಲದೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸುಸಜ್ಜಿತ ಕಾಲೇಜುಗಳಿಗೆ ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸುವ ಅವಕಾಶವನ್ನು ವಿಶ್ವವಿದ್ಯಾನಿಲಯ ನೀಡುತ್ತದೆ. ಪರಿಗಣಿತ ವಿಶ್ವವಿದ್ಯಾನಿಲಯದ (Deemed University) ಮನ್ನಣೆ ಪಡೆದ ಸಂಸ್ಥೆಗಳಲ್ಲಿಯೂ ಸ್ನಾತಕೋತ್ತರ ಶಿಕ್ಷಣ ಪಡೆಯಬಹುದು. ಸ್ನಾತಕೋತ್ತರ ಶಿಕ್ಷಣ ಎರಡು ವರ್ಷಗಳ ಅವಧಿಯದಾಗಿದ್ದು, ಕೆಲವು ಕೋರ್ಸ್‌ಗಳು ಸೆಮಿಸ್ಟರ್ ಕ್ರಮವನ್ನು ಅನುಸರಿಸುತ್ತವೆ.

**ಸ್ನಾತಕೋತ್ತರ ಶಿಕ್ಷಣದ ಉದ್ದೇಶಗಳು:**

- ವಿದ್ಯಾರ್ಥಿಗೆ ಪ್ರತ್ಯೇಕ ವಿಷಯದಲ್ಲಿ ಹೆಚ್ಚಿನ ಜ್ಞಾನ ಒದಗಿಸುವುದು.
- ವಿದ್ಯಾರ್ಥಿಯನ್ನು ಉಪನ್ಯಾಸಕ ವೃತ್ತಿಗೆ ಅಣಿಗೊಳಿಸುವುದು
- ವಿದ್ಯಾರ್ಥಿಯಲ್ಲಿ ಸಂಶೋಧನಾ ಪ್ರವೃತ್ತಿ ಬೆಳೆಸುವುದು.
- ವಿದ್ಯಾರ್ಥಿಯನ್ನು ಔದ್ಯೋಗಿಕ ಕ್ಷೇತ್ರಕ್ಕೆ ಪರಿಚಯಿಸುವುದು.
- ವಿದ್ಯಾರ್ಥಿಯಲ್ಲಿ ಆಲೋಚನಾ ಶಕ್ತಿಯನ್ನು ಇಮ್ಮಡಿಗೊಳಿಸುವುದು.
- ವಿದ್ಯಾರ್ಥಿಗಳಿಗೆ ಸಂಶೋಧನ ಲೇಖನ ಬರೆಯುವ ಮತ್ತು ಮಂಡಿಸುವ ಕೌಶಲ್ಯ ಬೆಳೆಸುವುದು.
- ವಿದ್ಯಾರ್ಥಿಗಳನ್ನು ಇನ್ನೂ ಉನ್ನತವಾದ ವಿದ್ಯಾಭ್ಯಾಸಕ್ಕೆ ಅಣಿಗೊಳಿಸುವುದು.
- ವಿದ್ಯಾರ್ಥಿಯಲ್ಲಿ ತಾರ್ಕಿಕ ಶಕ್ತಿ, ತಾತ್ವಿಕ ಜ್ಞಾನ ಬೆಳೆಸುವುದು.

Digitised by Bharatavani, CIIL

**ಬೋಧಕ ಸಿಬ್ಬಂದಿಯ ನೇಮಕ:**

ಸ್ನಾತಕೋತ್ತರ ಪದವಿಯಲ್ಲಿ ಬೋಧಿಸುವ ಬೋಧಕ ಸಿಬ್ಬಂದಿಯನ್ನು ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಕುಲಪತಿಗಳು ಅಧಿಸೂಚನೆ ಹೊರಡಿಸಿ ನಿಯಮಾವಳಿಗಳ ಮೂಲಕ ಸರ್ಕಾರದ ಅನುಮೋದನೆಯೊಂದಿಗೆ ನೇಮಕ ಮಾಡುತ್ತಾರೆ. ಕಾಲೇಜು ಮಟ್ಟದ ಆಯ್ಕೆಗೆ ಬೇಕಾದ ಅರ್ಹತೆಗಳೂ ಇದಕ್ಕೂ ಅನ್ವಯಿಸುತ್ತವೆ.

ಸ್ನಾತಕೋತ್ತರ ಶಿಕ್ಷಣದಲ್ಲಿ ಪ್ರತಿಯೊಂದು ವಿಷಯದ ವಿಭಾಗಗಳಿಗೂ ಪ್ರತ್ಯೇಕ ಮುಖ್ಯಸ್ಥರಿದ್ದು ಅವರು ವಿಶ್ವವಿದ್ಯಾನಿಲಯಗಳ ಕುಲಪತಿಗಳ ನಿಯಂತ್ರಣದಲ್ಲಿರುತ್ತಾರೆ.

ಕುಲಪತಿಗಳ ಆಯ್ಕೆಯನ್ನು ಮಾನ್ಯ ರಾಜ್ಯಪಾಲರು ಸರ್ಕಾರದ ಮಟ್ಟದಲ್ಲಿ ನೇಮಕ ಮಾಡುತ್ತಾರೆ. ವಿಶ್ವವಿದ್ಯಾನಿಲಯಗಳ ನಿಯಂತ್ರಣದ ಪರಮಾಧಿಕಾರ ರಾಜ್ಯಪಾಲರಿಗೆ ಇರುತ್ತದೆ.

**ಇಂಜಿನಿಯರಿಂಗ್ ಶಿಕ್ಷಣ:**

ವಿದ್ಯಾರ್ಥಿಯು ಎರಡು ವರ್ಷಗಳ ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿದ ಬಳಿಕ ಇಂಜಿನಿಯರಿಂಗ್ ಪದವಿಗೆ ಸೇರಬಹುದಾಗಿದೆ. ಕರ್ನಾಟಕದಲ್ಲಿ ಪ್ರಪ್ರಥಮ ಇಂಜಿನಿಯರಿಂಗ್ ಕಾಲೇಜು ಬೆಂಗಳೂರಿನಲ್ಲಿ 1917ರಲ್ಲಿ ಸ್ಥಾಪನೆಯಾಯಿತು. ಇಂಜಿನಿಯರಿಂಗ್ ಪದವಿ ಶಿಕ್ಷಣ ನಾಲ್ಕು ವರ್ಷಗಳ 8 ಸೆಮಿಸ್ಟರ್ ಅವಧಿಯದ್ದಾಗಿರುತ್ತದೆ. ಈ ವಿಷಯದ ಬಗ್ಗೆ ವಿವರಗಳಿಗೆ ಮೊದಲನೇ ಸಂಪುಟದ ಲೇಖನ ನೋಡಿ. ಈ ಕೋರ್ಸ್‌ಗೆ ಸರ್ಕಾರ ನಡೆಸುವ ಪ್ರತ್ಯೇಕ ಪರೀಕ್ಷೆ ಮೂಲಕ ಆಯ್ಕೆ ನಡೆಯುತ್ತದೆ.

**ವೈದ್ಯಕೀಯ ಶಿಕ್ಷಣ:**

ಪದವಿ ಪೂರ್ವ ಶಿಕ್ಷಣದಲ್ಲಿ ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರಗಳನ್ನು ಅಧ್ಯಯನ ಮಾಡಿದವರು ವೈದ್ಯ ಶಿಕ್ಷಣ ಸ್ನಾತಕೋತ್ತರ ಪದವಿ ಪಡೆಯಲು ಅರ್ಹರಾಗಿರುತ್ತಾರೆ. ಕರ್ನಾಟಕ ಸರ್ಕಾರ ನಡೆಸುವ ಪ್ರವೇಶ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳ ಆಯ್ಕೆ ನಡೆಯುತ್ತದೆ. (ಈ ವಿಷಯದ ಬಗ್ಗೆ ವಿವರಗಳಿಗೆ ಮೊದಲನೇ ಸಂಪುಟದ "ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣ ವ್ಯವಸ್ಥೆ" ಲೇಖನ ನೋಡಿ.)

**ಕೃಷಿ ಶಿಕ್ಷಣ:**

ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯಗಳು ಕೃಷಿ ಶಿಕ್ಷಣವನ್ನು ನೀಡುತ್ತವೆ. ಈ ಕ್ಷೇತ್ರದಲ್ಲಿ (B.Sc. (Agri), M.Sc (Agri), Ph.d.,) ಮತ್ತು ವಿವಿಧ ಡಿಪ್ಲೋಮಾಗಳನ್ನು ಪಡೆಯಲು ಅವಕಾಶವಿದೆ. ಪ್ರವೇಶ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. (ಈ ವಿಷಯದ ಬಗ್ಗೆ ಹೆಚ್ಚಿನ ವಿವರಗಳಿಗೆ ಮೊದಲನೇ ಸಂಪುಟದ "ಕರ್ನಾಟಕದಲ್ಲಿ ಕೃಷಿ ಶಿಕ್ಷಣ ವ್ಯವಸ್ಥೆ" ಲೇಖನ ನೋಡಿ.)

**ಪಶು ಸಂಗೋಪನಾ ಶಿಕ್ಷಣ:**

ರಾಜ್ಯದಲ್ಲಿರುವ ಪಶು ಸಂಗೋಪನಾ ವಿಶ್ವವಿದ್ಯಾನಿಲಯಗಳು ಪಶು ಸಂಗೋಪನ, ಹೈನುಗಾರಿಕೆ, ಮೀನುಗಾರಿಕೆ ಬಗ್ಗೆ ಶಿಕ್ಷಣ ನೀಡುತ್ತವೆ. ಪದವಿ, ಸ್ನಾತಕೋತ್ತರ ಪದವಿ, ಸಂಶೋಧನಾ ಪದವಿ ಹಾಗೂ ಡಿಪ್ಲೋಮಾಗಳನ್ನು ಪಡೆಯಲು ಅವಕಾಶವಿದೆ. (ಈ ವಿಷಯದ ಬಗ್ಗೆ ಹೆಚ್ಚಿನ ವಿವರಗಳಿಗೆ ಈ ಸಂಪುಟದ "ಕರ್ನಾಟಕದಲ್ಲಿ ಪಶು ಸಂಗೋಪನಾ ಶಿಕ್ಷಣ ವ್ಯವಸ್ಥೆ" ಲೇಖನ ನೋಡಿ.)

**ಲಲಿತ ಕಲೆಗಳ ಶಿಕ್ಷಣ:**

ಸಂಗೀತ, ನೃತ್ಯ, ಚಿತ್ರ (ಶಿಲ್ಪಕಲೆ), ಸಂಗೀತ ವಾದ್ಯಗಳನ್ನು ನುಡಿಸುವುದು, ರಂಗಕಲೆ ಮುಂತಾದ ಲಲಿತ ಕಲೆಗಳಿಗೆ ಸರ್ಟಿಫಿಕೇಟ್, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಮತ್ತು ಸಂಶೋಧನಾ ಪದವಿ ಮಟ್ಟದಲ್ಲಿ ಶಿಕ್ಷಣ ಕೋರ್ಸು ಪ್ರತ್ಯೇಕ ಶಿಕ್ಷಣ ವ್ಯವಸ್ಥೆಯೇ ಇದೆ. ಶಿಕ್ಷಣ ಇಲಾಖೆ ಸರ್ಟಿಫಿಕೇಟ್ ಕೋರ್ಸ್ ಡಿಪ್ಲೋಮಾಗಳನ್ನು ನೀಡುತ್ತದೆ. ಇದುವರೆವಿಗೆ ಲಲಿತ ಕಲೆ ಕಾಲೇಜುಗಳು ಈ ಶಿಕ್ಷಣ ನೀಡುತ್ತಿದ್ದವು. ಈಗ ಪ್ರತ್ಯೇಕ ಸಂಗೀತ ವಿಶ್ವವಿದ್ಯಾನಿಲಯ ಮತ್ತು ಜನಪದ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿವೆ. ಲಲಿತ ಕಲೆಗಳ ಕಾಲೇಜುಗಳು ಇವುಗಳ ವ್ಯಾಪ್ತಿಯಲ್ಲಿ ಬರುತ್ತವೆ. ಮೈಸೂರಿನ ಚಾಮರಾಜ ಅಕಾಡೆಮಿ ಆಫ್ ವಿಶುಯಲ್ ಆರ್ಟ್ಸ್ (ಸಿ.ಎ.ವಿ.ಎ.) ಚಿತ್ರಕಲೆ ಶಿಲ್ಪಕಲೆಯಲ್ಲಿ ಪದವಿಗಳನ್ನು ನೀಡುತ್ತದೆ. ಕೆಲವು ಖಾಸಗಿ ಸಂಸ್ಥೆಗಳು ವಿಶ್ವವಿದ್ಯಾನಿಲಯಗಳ ಸಹಯೋಗದ ಮೂಲಕ ಲಲಿತಕಲೆಗಳಲ್ಲಿ ಪದವಿ ಕೋರ್ಸ್‌ಗಳನ್ನು ನಡೆಸುತ್ತಿವೆ. (ಈ ವಿಷಯದ ವಿವರಗಳಿಗೆ ಮೊದಲನೇ ಸಂಪುಟದ "ಕರ್ನಾಟಕದಲ್ಲಿ ಲಲಿತ ಕಲೆಗಳ ಶಿಕ್ಷಣ" ಲೇಖನ ನೋಡಿ)

–ಪ್ರೊ. ಮಂಜುನಾಥಯ್ಯ ಬಿ.ಎನ್.
–ಶಶಿಧರ ಎಸ್.ಎಲ್.

## ಕರ್ನಾಟಕದಲ್ಲಿ ಕೃಷಿ ಶಿಕ್ಷಣದ ಬೆಳವಣಿಗೆ

ಭಾರತ ಹಿಂದಿನಿಂದ ಇಂದಿನವರೆಗೂ ಕೃಷಿ ಆಧಾರಿತ ರಾಷ್ಟ್ರವಾಗಿದೆ. ಇಂದು ಸುಮಾರು ಶೇಕಡ 60 ರಿಂದ 65ರಷ್ಟು ಜನರು ಕೃಷಿಯನ್ನೇ ನಂಬಿ ಜೀವನ ಸಾಗಿಸುತ್ತಿದ್ದಾರೆ. ಹಿಂದೆ 200–300 ವರ್ಷಗಳ ಐರೋಪ್ಯರ ಆಳ್ವಿಕೆಯ ಪರಿಣಾಮವಾಗಿ ಕೈಗಾರಿಕಾ ಕ್ರಾಂತಿಯ ಗಾಳಿ ಬೀಸಿತು. ಇದರಿಂದ ಭಾರತದ ಕೃಷಿ ವಿಧಾನ ಹಲವಾರು ಬದಲಾವಣೆಗಳಿಗೆ ಕಾರಣವಾಯಿತು. ಅಲ್ಲದೆ ಕೈಗಾರಿಕೆಗೆ ಹೆಚ್ಚು ಒತ್ತು ದೊರೆಯಿತು. ಬ್ರಿಟಿಷ್ ಭಾರತದಲ್ಲಿ ಕೃಷಿಯ ಬಗ್ಗೆ ಯಾವುದೇ ಗಾಢವಾದ ಅಧ್ಯಯನ ನಡೆಯಲಿಲ್ಲ. ಭಾರತದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ಮಸಾಲೆ ಹಾಗೂ ಸಾಂಬಾರು ಪದಾರ್ಥಗಳನ್ನು ಆಮದು ಮಾಡಿಕೊಳ್ಳಲು ಮಾತ್ರ

Digitised by Bharatavani, CIIL

ಅವರು ಆಸಕ್ತಿ ತೋರಿದರು. ಆದರೆ ಕೃಷಿಯನ್ನು ಹಾಗೂ ಕೃಷಿ ಶಿಕ್ಷಣವನ್ನು ಅಭಿವೃದ್ಧಿ ಮಾಡಲಿಲ್ಲ. ವಿದೇಶಿ ಶಕ್ತಿಗಳು ಏನಾದರೂ ಕೃಷಿಗೆ ಕೊಂಚ ಪ್ರಾಮುಖ್ಯತೆ ನೀಡಿದ್ದರೆ ಕೃಷಿ ವಲಯದಲ್ಲಿ ಮತ್ತಷ್ಟು ಸಾಧನೆ ಮಾಡಬಹುದಾಗಿತ್ತು.

ಭಾರತವು ಸ್ವಾತಂತ್ರ್ಯ ಪಡೆದ ನಂತರ ಜವಹರ್ ಲಾಲ್ ನೆಹರು ಅವರ ನೇತೃತ್ವದ ಸರ್ಕಾರವು ಕೃಷಿಯ ಬೆಳವಣಿಗೆಗೆ ಹೆಚ್ಚು ಒತ್ತು ಕೊಡಬೇಕೆಂದು ನಿರ್ಧರಿಸಿತು. ತಂತ್ರಜ್ಞಾನದ ಮೂಲಕ ಕೃಷಿ ಅಭಿವೃದ್ಧಿ ಸಾಧ್ಯ ಎಂದು ನೆಹರೂರವರು ಬಲವಾಗಿ ನಂಬಿದ್ದರು. 1948–49 ರಲ್ಲಿ ರೂಪಿಸಿದ ರಾಧಾಕೃಷ್ಣನ್ ಶಿಕ್ಷಣ ಆಯೋಗ ಗ್ರಾಮೀಣಾಭಿವೃದ್ಧಿ ಭಾರತದ ಏಳಿಗೆಗೆ ಅನಿವಾರ್ಯ ಎಂದು ಕಂಡುಕೊಂಡಿತು. ಶಿಕ್ಷಣವು ಉತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿರಬೇಕು ಮತ್ತು ಮುಖ್ಯವಾಗಿ ಕೃಷಿ ಬೆಳವಣಿಗೆಗೆ ಗ್ರಾಮೀಣ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಅತ್ಯಗತ್ಯ ಎಂದು ರಾಧಾಕೃಷ್ಣನ್‌ರವರು ಬಲವಾಗಿ ಸಮರ್ಥಿಸಿದರು.

ಅಮೇರಿಕಾದ ಕೃಷಿ ಪದ್ಧತಿಯ ಬಗ್ಗೆ ಅಧ್ಯಯನ ಮಾಡಲು ಕಳುಹಿಸಿದ ಎರಡು ಪ್ರತ್ಯೇಕ ತಂಡಗಳು ಭಾರತದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಬೇಕೆಂದು ಶಿಫಾರಸ್ಸು ಮಾಡಿದವು. ಹಾಗೆಯೇ ಭಾರತದ ಮೊದಲನೆಯ ಕೃಷಿ ವಿಶ್ವವಿದ್ಯಾನಿಲಯವು 1960ರಲ್ಲಿ ಉತ್ತರ ಪ್ರದೇಶದ ಪಂತ್ ನಗರದಲ್ಲಿ ಸ್ಥಾಪನೆಯಾಯಿತು. 1964ರಲ್ಲಿ ನೇಮಕಗೊಂಡ ಕೊಠಾರಿ ಶಿಕ್ಷಣ ಆಯೋಗವು ಭಾರತದ ಪ್ರತಿಯೊಂದು ರಾಜ್ಯದಲ್ಲಿ ಕನಿಷ್ಠ ಒಂದೊಂದು ಕೃಷಿ ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಬೇಕೆಂದು ಶಿಫಾರಸ್ಸು ಮಾಡಿತು. ಎರಡು ವರ್ಷಗಳಲ್ಲಿ ಎಂಟು ಕೃಷಿ ವಿಶ್ವವಿದ್ಯಾನಿಲಯಗಳು ಭಾರತದಲ್ಲಿ ಸ್ಥಾಪನೆಯಾದುದು ಕೃಷಿ ಕ್ಷೇತ್ರದಲ್ಲಿ ಒಂದು ಕ್ರಾಂತಿಯೇ ಆದಂತಾಯಿತು. ಇಂದು ನಮ್ಮ ದೇಶದಲ್ಲಿ ಕೃಷಿ ಅಧ್ಯಯನ ಮತ್ತು ಸಂಶೋಧನೆಗೋಸ್ಕರ ಸುಮಾರು 40 ಕೃಷಿ ವಿಶ್ವವಿದ್ಯಾನಿಲಯಗಳು ಇವೆ. ನೆಹರೂರವರ ನಂತರ ಬಂದ ಎಲ್ಲ ಸರ್ಕಾರಗಳು ಕೃಷಿಗೆ ಅತ್ಯುತ್ತಮ ಪ್ರೋತ್ಸಾಹ ನೀಡುತ್ತಾ ಬಂದಿವೆ.

ಬೇರೆ ರಾಜ್ಯಗಳಂತೆ ಕರ್ನಾಟಕವು ಮೊದಲಿನಿಂದಲೂ ಕೃಷಿ ವಿಜ್ಞಾನಕ್ಕೆ ಪ್ರಾಮುಖ್ಯತೆ ನೀಡುತ್ತಾ ಬಂದಿದೆ. ಕರ್ನಾಟಕದ ಭೂ ಪ್ರಕೃತಿಯು ಕೃಷಿಗೆ ಅತಿ ಹೆಚ್ಚು ಅನುಕೂಲಕರವಾದುದು ಎಂಬ ಮಾತಿನಲ್ಲಿ ಸಂಶಯವಿಲ್ಲ. ನಮ್ಮಲ್ಲಿರುವ ಬೇರೆ ಬೇರೆ ನೀರಾವರಿ ಯೋಜನೆಗಳೆಲ್ಲವೂ ಕೃಷಿಯ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಅನುಷ್ಠಾನಗೊಂಡವು. ಸ್ವಾತಂತ್ರ್ಯ ಪೂರ್ವ ಕರ್ನಾಟಕದಲ್ಲಿಯೂ ಕೃಷಿಗೆ ಬಹಳಷ್ಟು ಪ್ರಾಧಾನ್ಯ ದೊರಕಿರುವುದು ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ. 1899ರಲ್ಲಿ ಮೈಸೂರಿನ ಮಹಾರಾಣಿ ಕೆಂಪನಂಜಮ್ಮಣಿಯವರು ಹೆಬ್ಬಾಳದಲ್ಲಿ ಪ್ರಯೋಗಾತ್ಮಕ ಕೃಷಿ ಕೇಂದ್ರ ಸ್ಥಾಪಿಸಲು 30 ಎಕರೆ ಭೂ ಪ್ರದೇಶ ನೀಡಿರುವುದಲ್ಲದೇ ಡಾ. ಶೀಮಾನ್ ಎಂಬ ಜರ್ಮನ್ ವಿಜ್ಞಾನಿಯನ್ನು ಬೇರೆ ಬೇರೆ ಬೆಳೆಗಳಿಗೆ ಸೂಕ್ತವಾಗುವ ಮಣ್ಣಿನ ಗುಣ ಧರ್ಮಗಳ ಕುರಿತು ಸಂಶೋಧನೆ ನಡೆಸಲು ನೇಮಿಸಿದರು. ತರುವಾಯ 1806ರಲ್ಲಿ ಡಾ. ಲೆಸ್ಲಿ ಕಾಲ್‌ಮನ್, ಕೀಟಶಾಸ್ತ್ರಜ್ಞ ಹಾಗೂ ಶಿಲೀಂಧ್ರಶಾಸ್ತ್ರಜ್ಞ, ಡಾ. ಶೀಮಾನ್ ಮಾಡಿದ ಕೆಲಸವನ್ನು 25 ವರ್ಷ ಮುಂದುವರೆಸಿದರು. ಬಳಿಕ ಹೆಬ್ಬಾಳದ ಕೃಷಿ ಕೇಂದ್ರಕ್ಕೆ 202 ಎಕರೆ ಭೂ ಪ್ರದೇಶ ಮತ್ತು ಅತಿ ಹೆಚ್ಚು ಮಳೆ ಬೀಳುವ 30 ಎಕರೆ ಭೂ ಪ್ರದೇಶ ದೊರಕಿತು.

ಅಂದಿನ ಮೈಸೂರಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯರವರು 1913ರಲ್ಲಿ ಕೃಷಿ ವಸತಿ ಶಾಲೆಯನ್ನು ಹೆಬ್ಬಾಳದಲ್ಲಿ ಸ್ಥಾಪಿಸುವಲ್ಲಿ ಮಹತ್ವದ ಪಾತ್ರವಹಿಸಿದರು. ಅಲ್ಲದೇ ಡಾ. ಲೆಸ್ಲಿಕಾಲ್‌ಮನ್ ರವರನ್ನು ಈ ಶಾಲೆಯ ಮುಖ್ಯಸ್ಥರನ್ನಾಗಿ ನೇಮಿಸಿದರು. ವಿದ್ಯಾರ್ಥಿಗಳಿಗೆ ಕೃಷಿ ಕ್ಷೇತ್ರದಲ್ಲಿ ಉನ್ನತ ತರಬೇತಿ/ಶಿಕ್ಷಣ ನೀಡುವ ಜೊತೆಗೆ ಕೃಷಿ ವಿಶ್ವವಿದ್ಯಾಲಯ ಅಥವಾ ಪರೀಕ್ಷಾ ಮಂಡಳಿಯ ಮೂಲಕ ಪ್ರವೀಣತಾ ಪತ್ರ ನೀಡಲು ಅನುವು ಮಾಡಿ ಕೊಟ್ಟರು. 1946ರಲ್ಲಿ ಕೃಷಿ ಮಂತ್ರಿಯಾಗಿದ್ದ ಶ್ರೀ ಎಂ. ಎ. ಶ್ರೀನಿವಾಸನ್ ಹೆಬ್ಬಾಳದಲ್ಲಿ ಕೃಷಿ ವಿಜ್ಞಾನದಲ್ಲಿ ಪದವಿ ನೀಡಲು ಒಂದು ಕೃಷಿ ವಿದ್ಯಾಲಯವನ್ನು ಮೈಸೂರಿನ ವಿಶ್ವವಿದ್ಯಾನಿಲಯದಡಿಯಲ್ಲಿ ಸ್ಥಾಪಿಸಲು ಮೊದಲ ಹೆಜ್ಜೆ ಇಟ್ಟರು. ಮೊದಲನೆ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರು 1965ರಲ್ಲಿ ಈ ಕೃಷಿ ವಿದ್ಯಾಲಯಕ್ಕೆ ಒಂದು ಹೊಸ ಕಟ್ಟಡವನ್ನು ಕಟ್ಟಿಸಲು ಅನುಮತಿಯನ್ನು ನೀಡಿದರು. 1961ರಲ್ಲಿ ಕೃಷಿ ವಿಶ್ವವಿದ್ಯಾಲಯ ಸಮಿತಿಯ ಅಧ್ಯಕ್ಷರಾದ ಡಾ. ರಾಲ್ಫ್ ಕಮಿಂಗ್ಸ್ ಹೆಬ್ಬಾಳಕ್ಕೆ ಭೇಟಿ ನೀಡಿ ಇಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪಿಸಬಹುದೆಂದು ವರದಿ ನೀಡಿದರು. ಇದರಂತೆ 1963ರಲ್ಲಿ ಅಂದಿನ ಮುಖ್ಯಮಂತ್ರಿಯಾದ ಶ್ರೀ ಎಸ್. ನಿಜಲಿಂಗಪ್ಪ ಅವರು ಅಮೇರಿಕಾದ ಲ್ಯಾಂಡ್–ಗ್ರಾಂಟ್ ಕಾಲೇಜು ಮಾದರಿಯಲ್ಲಿ ಹೆಬ್ಬಾಳದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸಲು ಆದೇಶ ಹೊರಡಿಸಿದರು. ಮಾತ್ರವಲ್ಲದೇ ಕೃಷಿ ವಿಶ್ವವಿದ್ಯಾನಿಲಯ ಮಸೂದೆ (ಆಕ್ಟ್ ನಂಬರ್ 22) ಅಂಗೀಕರಿಸಿದರು. ಈ ಮಸೂದೆಗೆ ಭಾರತದ ರಾಷ್ಟ್ರಪತಿಯವರು 1963 ಮೇ 25ರಂದು ಒಪ್ಪಿಗೆ ನೀಡಿದರು ಮತ್ತು ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಎಂಬ ನೂತನ ವಿಶ್ವವಿದ್ಯಾನಿಲಯ ಸ್ಥಾಪಿಸಲು ಮುಖ್ಯಮಂತ್ರಿಯವರು 1300 ಎಕರೆ ಭೂ ಪ್ರದೇಶವನ್ನು ನೀಡಿದರು (ಕರ್ನಾಟಕ ಸರ್ಕಾರವು ಹಸ್ತಾಂತರಿಸಿತು). ಈ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಡಾ. ಕೆ. ಸಿ. ನಾಯಕ್ ಇವರನ್ನು 1964, ಜೂನ್ 12ರಂದು ನೇಮಿಸಿದರು. ಅಂದಿನ ಉಪ ರಾಷ್ಟ್ರಪತಿಯವರಾದ ಡಾ. ಝಾಕೀರ್ ಹುಸೇನ್‌ರವರು ಈ ವಿಶ್ವವಿದ್ಯಾನಿಲಯದ ಉದ್ಘಾಟನೆಯನ್ನು ನೆರವೇರಿಸಿದರು. ಈ ಕಾರ್ಯಕ್ರಮವು ಅಂದಿನ ಅಮೇರಿಕಾದ ರಾಯಭಾರಿಯಾದ ಮಿ. ಚೆಸ್ಟರ್ ಬೌಲ್ಸ್ ಹಾಗೂ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ ಉಪಸ್ಥಿತಿಯಲ್ಲಿ ನಡೆಯಿತು. ಪ್ರಧಾನಿ ಇಂದಿರಾಗಾಂಧಿಯವರು ಜಿ.ಕೆ.ವಿ.ಕೆ (ಗಾಂಧಿ ಕೃಷಿ ವಿಜ್ಞಾನ ಕೇಂದ್ರ) ಕಾಲೇಜು ಆವರಣವನ್ನು 1969ರಲ್ಲಿ ಉದ್ಘಾಟಿಸಿದರು.

ನಮ್ಮ ರಾಜ್ಯದಲ್ಲಿ ಅತ್ಯಗತ್ಯವಾದ ಪಶು ವೈದ್ಯಕೀಯ

Digitised by Bharatavani, CIIL

ಶಿಕ್ಷಣವನ್ನು ಪೂರೈಸಲು ಹಾಗೂ ಪಶು ವೈದ್ಯಕೀಯ ಪದವೀಧರರ ಕೊರತೆಯನ್ನು ನಿವಾರಿಸಲು ಕೇಂದ್ರ ಸರ್ಕಾರದ ಸಹಾಯದಿಂದ ರಾಜ್ಯ ಸರ್ಕಾರವು ಹೆಬ್ಬಾಳದಲ್ಲಿ 1958ರಲ್ಲಿ ಪಶು ಸಂಗೋಪನೆ, ತಾಂತ್ರಿಕತೆ ಕುರಿತು ಶಿಕ್ಷಣ ಒದಗಿಸಲು ಸಂಬಂಧಪಟ್ಟ ಶಿಕ್ಷಣವನ್ನು ಪ್ರಸ್ತುತ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿಸಲಾಯಿತು. 1965ರಲ್ಲಿ ಅಕ್ಟೋಬರ್ 1ರಂದು, ಹೆಬ್ಬಾಳದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪಶು ವೈದ್ಯಕೀಯ ವಿಜ್ಞಾನ ಕಾಲೇಜನ್ನು ಮತ್ತು ಧಾರವಾಡದಲ್ಲಿ ಮತ್ತೊಂದು ಕೃಷಿ ವಿಜ್ಞಾನ ಕಾಲೇಜು, 35 ಸಂಶೋಧನಾ ಕೇಂದ್ರಗಳು ಹಾಗೂ ಐ.ಸಿ.ಎ.ಆರ್. ಯೋಜನೆಗಳನ್ನು (ಅಂತರರಾಷ್ಟ್ರೀಯ ಕೃಷಿ ಸಂಶೋಧನಾ ಸಮಿತಿ) ಕೃಷಿ, ತೋಟಗಾರಿಕೆ, ಪಶು ಸಂಗೋಪನಾ ಹಾಗೂ ಮೀನುಗಾರಿಕೆ ವಿಭಾಗಗಳಿಂದ ಬೇರ್ಪಡಿಸಿ ನೂತನವಾಗಿ ಸ್ಥಾಪಿಸಲಾದ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾಯಿತು. ಬಳಿಕ ಮಂಗಳೂರಿನಲ್ಲಿ ಸಮುದ್ರದ ಉತ್ಪಾದನೆಯ ಸಂಸ್ಕರಣ ತರಬೇತಿ ಕೇಂದ್ರ, ಎಂ.ಪಿ.ಪಿ.ಟಿ.ಸಿ (ಮೇರಿನ್ ಪ್ರೊಡಕ್ಟ್ ಪ್ರೋಸೆಸ್ಸಿಂಗ್ ಟ್ರೈನಿಂಗ್ ಸೆಂಟರ್) ಹಾಗೂ ಧಾರವಾಡದ ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರ ಈ ಎರಡೂ ಕಾಲೇಜುಗಳನ್ನು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿಸಲಾಯಿತು.

ತರುವಾಯ ಈ ವಿಶ್ವವಿದ್ಯಾನಿಲಯವು 1969ರಲ್ಲಿ ಮೀನುಗಾರಿಕಾ ವಿಜ್ಞಾನದಲ್ಲಿ ಪದವಿ ನೀಡಲು ಮಂಗಳೂರಿನಲ್ಲಿ ಮೀನುಗಾರಿಕಾ ವಿದ್ಯಾಲಯ ಮತ್ತು ಕೃಷಿ ಇಂಜಿನಿಯರಿಂಗ್‌ನಲ್ಲಿ 3 ವರ್ಷ ಡಿಪ್ಲೋಮಾ ಶಿಕ್ಷಣ ನೀಡಲು ರಾಯಚೂರಿನಲ್ಲಿ ಒಂದು ಕೃಷಿ ಇಂಜಿನಿಯರಿಂಗ್ ಸಂಸ್ಥೆಯನ್ನು ಸ್ಥಾಪಿಸಿತು. 1970ರಲ್ಲಿ ಗ್ರಾಮೀಣ ವಿದ್ಯಾರ್ಥಿ/ನಿಯರಿಗಾಗಿ ಗೃಹ ವಿಜ್ಞಾನದ ಬಗ್ಗೆ ಶಿಕ್ಷಣ ನೀಡಲು ಗೃಹ ವಿಜ್ಞಾನ ಕಾಲೇಜು ಧಾರವಾಡದಲ್ಲಿ ಆರಂಭಗೊಂಡಿತು. ಅಲ್ಲದೆ ಹೆಬ್ಬಾಳದಲ್ಲಿ ಮೂಲ ವಿಜ್ಞಾನ ಮತ್ತು ಮಾನವಿಕಶಾಸ್ತ್ರ ವಿಷಯದಲ್ಲಿ ಶಿಕ್ಷಣ ನೀಡಲು ಪದವಿ ಹಾಗೂ ಸ್ನಾತಕೋತ್ತರ ವಿಭಾಗವು ಆರಂಭಗೊಂಡಿತು. ತರುವಾಯ ಬೆಂಗಳೂರಿನಲ್ಲಿ ಹೈನುವಿಜ್ಞಾನ ಕಾಲೇಜು ಮತ್ತು ಬೀದರ್‌ನಲ್ಲಿ ಪಶು ವೈದ್ಯಕೀಯ ವಿಜ್ಞಾನ ಕಾಲೇಜು ಕ್ರಮವಾಗಿ 1980 ಮತ್ತು 1984ರಲ್ಲಿ ಸ್ಥಾಪನೆಗೊಂಡವು.

ಪಶು ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗೆ ಹೆಚ್ಚು ಸ್ವಾಯತ್ತತೆ ನೀಡುವ ಉದ್ದೇಶದಿಂದ ಪಶು ಮತ್ತು ಪ್ರಾಣಿ ವಿಜ್ಞಾನ ವಿಭಾಗವನ್ನು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಮತ್ತು ಧಾರವಾಡ ಇದರಿಂದ ಬೇರ್ಪಡಿಸಿ ಒಂದು ವಿಶ್ವವಿದ್ಯಾನಿಲಯವನ್ನು 2005ರಲ್ಲಿ ತಂದಿತು. ಈ ವಿಶ್ವವಿದ್ಯಾನಿಲಯಕ್ಕೆ ಕರ್ನಾಟಕ ಪಶು ವೈದ್ಯಕೀಯ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯ ಎಂಬ ಹೆಸರನ್ನು ನೀಡಿ ಇದರ ಕೇಂದ್ರ ಕಛೇರಿಯನ್ನು ಬೀದರ್‌ನಲ್ಲಿ ಸ್ಥಾಪಿಸಲಾಯಿತು. ಇದು 'ಕರ್ನಾಟಕ ಪಶು ವೈದ್ಯಕೀಯ ಪ್ರಾಣಿ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯ ಕಾಯ್ದೆ (2004) ಇದರಡಿಯಲ್ಲಿ, ವಿಧಾನಸಭೆಯಲ್ಲಿ ಫೆಬ್ರವರಿ 10, 2004ರಂದು ಅಂಗೀಕರಿಸಲ್ಪಟ್ಟು ಜಾರಿಗೆ ಬಂತು.

ಭಾರತದಲ್ಲಿ ಒಂದು ಕಡೆ ಕೃಷಿಗೆ ಪೂರಕವಾದ ವಿಷಯಗಳಲ್ಲಿ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗುತ್ತಿದ್ದರೆ, ಮತ್ತೊಂದೆಡೆ ಅವುಗಳ ಕಾರ್ಯಕ್ಷಮತೆಯನ್ನು ಅಭಿವೃದ್ಧಿಗೊಳಿಸಲು ಹಲವಾರು ಸಮಿತಿಗಳನ್ನು ರಚಿಸಿ, ಅವುಗಳ ಶಿಫಾರಸ್ಸುಗಳಂತೆ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಇವುಗಳಲ್ಲಿ ಪ್ರಮುಖವಾದವುಗಳೆಂದರೆ,

1. ರಾಧಕೃಷ್ಣನ್ ಸಮಿತಿಯು (1966) ಕೃಷಿ ಶಿಕ್ಷಣದ ಅಂತಿಮ ಘಟ್ಟದ ವಿದ್ಯಾರ್ಥಿಗಳು ಬೀಜ ಬಿತ್ತುವುದು, ಸುಗ್ಗಿ–ಕೊಯ್ಲು, ವಿವಿಧ ಬೆಳೆಗಳನ್ನು ಬೆಳೆಸುವ ಕ್ರಮ ಹೀಗೆ ಅನೇಕ ಚಟುವಟಿಕೆಗಳಲ್ಲಿ ಗರಿಷ್ಠ ಮಟ್ಟದಲ್ಲಿ ತೊಡಗಿಕೊಳ್ಳಲು ಅವಕಾಶ ನೀಡಬೇಕು ಎಂದು ಶಿಫಾರಸ್ಸು ಮಾಡಿತು.

2. ರಾಷ್ಟ್ರೀಯ ಕೃಷಿ ಸಮಿತಿಯು (1976) ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳು ಉದ್ಯೋಗ ಅವಕಾಶವನ್ನು ಹೆಚ್ಚಿಸುವುದು, ಪ್ರಾಯೋಗಿಕ ನೆಲೆಯಲ್ಲಿ ಸೇವಾಪೂರ್ವ ತರಬೇತಿಯನ್ನು ನೀಡುವುದು, ಸ್ವ–ಉದ್ಯೋಗ ನಡೆಸಲು ಸೂಕ್ತ ತರಬೇತಿ ಮತ್ತು ಪ್ರೇರೇಪಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು, ಇವುಗಳ ಹಿನ್ನೆಲೆಯಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಚಟುವಟಿಕೆಗಳನ್ನು ಅವಲೋಕಿಸಬೇಕು ಎಂದು ಶಿಫಾರಸ್ಸು ಮಾಡಿತು.

3. 1978ರಲ್ಲಿ ಡಾ. ರಾಂಧವ ರವರ ಅಧ್ಯಕ್ಷತೆಯಲ್ಲಿ ನಡೆದ ಕೃಷಿ ವಿಶ್ವವಿದ್ಯಾನಿಲಯಗಳ ಪರಿಶೀಲನಾ ಸಮಿತಿಯು ಕೃಷಿ ಪದವೀಧರರ ಕೌಶಲ್ಯ ಹಾಗೂ ಸಾಮರ್ಥ್ಯಗಳನ್ನು ಹೆಚ್ಚಿಸಲು ಮತ್ತು ಗೃಹವಿಜ್ಞಾನ ಕಾರ್ಯಕ್ರಮ ನಡೆಸಲು ಸೂಕ್ತ ಗ್ರಾಮೀಣ ತರಬೇತಿಯನ್ನು ನೀಡಿ ಸ್ವ–ಉದ್ಯೋಗ ನಡೆಸುವಂತಾಗಬೇಕು ಎಂದು ಹೇಳಿತು. ಈ ಸಮಿತಿಯು ಕೃಷಿ ಶಿಕ್ಷಣ ಪಠ್ಯಕ್ರಮದ ನ್ಯೂನತೆಗಳನ್ನು ಗುರುತಿಸಿ ಕೆಲವು ಶಿಫಾರಸ್ಸುಗಳನ್ನು ಮಾಡಿತು. ಕೃಷಿ ಶಿಕ್ಷಣ ಪದವೀಧರರು ನಿರಂತರವಾಗಿ 15 ದಿನಗಳ ಕಾಲ ಹಳ್ಳಿಯಲ್ಲಿ ತರಬೇತಿ ಪಡೆಯಬೇಕು. ಅಲ್ಲದೇ ವಿದ್ಯಾರ್ಥಿಗಳು ಒಂದು ಗ್ರಾಮೀಣ ಕುಟುಂಬದ ಜೊತೆಗಿದ್ದು ಅಲ್ಲಿಯ ಸಾಮಾಜಿಕ, ಆರ್ಥಿಕ ಸ್ಥಿತಿಗತಿ, ತಂತ್ರಜ್ಞಾನದ ಅಳವಡಿಕೆ ಮತ್ತು ಅಂತಹ ಅಳವಡಿಕೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಗುರುತಿಸುವ ಯೋಜನೆ ಹಾಕಿಕೊಳ್ಳಬೇಕು, ಜೊತೆಗೆ ಸ್ವ–ಉದ್ಯೋಗ ಮತ್ತು ವೃತ್ತಿಪರ ಕೃಷಿ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯ ನೀಡಬೇಕು ಎಂದು ಈ ಸಮಿತಿ ಸಲಹೆ ನೀಡಿತು.

4. 1985ರ ಸಮಿತಿಯು ಈ ಕೆಳಗಿನ ವರದಿಯನ್ನು ನೀಡಿತು. ವೃತ್ತಿಯಲ್ಲಿ ಕೃಷಿಕನಾಗಿ ಜೀವನ ನಡೆಸಲು ಪ್ರಾಯೋಗಿಕ ಅನುಭವದ ಕೊರತೆ ಮತ್ತು ಹೊಲಗಳಲ್ಲಿ ಎದುರಾಗುವ ಸಮಸ್ಯೆಗಳ ಅರಿವು ಹಾಗೂ ನಿರ್ವಹಣೆಯ ತಂತ್ರದ ಕೊರತೆ ಕೃಷಿ ಪದವೀಧರರಲ್ಲಿ ಕಾಣುತ್ತಿದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯು 6 ತಿಂಗಳ ಕಾಲ ಒಂದು ಹಳ್ಳಿಯ ಒಂದು

Digitised by Bharatavani, CIIL

ಕುಟುಂಬದ ಜೊತೆಗಿದ್ದು ಹೊಲ ಚಟುವಟಿಕೆಗಳಲ್ಲಿ ಭಾಗವಹಿಸಿ ವರದಿ ಸಲ್ಲಿಸಬೇಕು ಎಂದು ಈ ಸಮಿತಿ ಶಿಫಾರಸ್ಸು ಮಾಡಿತು.

5. ಹಿಂದಿನ ದಿನಗಳಲ್ಲಿ ಕೃಷಿ ವಿದ್ಯಾರ್ಥಿಗಳು ಹಳ್ಳಿ ಪ್ರದೇಶದಿಂದ ಬರುವವರಾಗಿದ್ದು, ಅವರಿಗೆ ಹಳ್ಳಿ ಜೀವನ ಹಾಗೂ ಸಮಸ್ಯೆಗಳ ಬಗ್ಗೆ ಅರಿವಿರುತ್ತಿತ್ತು. ಆದರೆ ಈಗ ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಬೆಳೆಗಳ ವೈವಿಧ್ಯತೆ ಹಾಗೂ ಭಿನ್ನ ಸಮಸ್ಯೆಗಳ ಜ್ಞಾನದ ಕೊರತೆ ಇರುವುದರಿಂದ ಆರ್.ಡಬ್ಲ್ಯು.ಇ.ಪಿ. (ರೂರಲ್ ವರ್ಕ್ ಎಕ್ಸ್‌ಪೀರಿಯನ್ಸ್ ಪ್ರೊಗ್ರಾಮ್) ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದು 1992ರ ರಾಮನ್ ಸಮಿತಿ ಶಿಫಾರಸ್ಸು ಮಾಡಿತು.

6. ಕೃಷಿ ಶಿಕ್ಷಣದಲ್ಲಿ ತನ್ನ ಜೀವನೋಪಾಯಕ್ಕಾಗಿ ಕೃಷಿ ಮತ್ತು ಕೃಷಿ ವ್ಯಾಪಾರ ಮಾಡುವ ಮನೋಭಾವ ಬೆಳೆಸಲು ಕಡಿಮೆ ಜ್ಞಾನಗಳಿಸಿದ ವಿದ್ಯಾರ್ಥಿಗಳನ್ನು ಸೂಕ್ತ ತರಬೇತಿಯ ಮೂಲಕ ಅವರಲ್ಲಿ ಆತ್ಮವಿಶ್ವಾಸ, ಕೌಶಲ್ಯಗಳನ್ನು ಬೆಳೆಸಿ ಸ್ವ-ಉದ್ಯೋಗ ಮಾಡುವ ಸಂಪನ್ಮೂಲರನ್ನಾಗಿಸಬೇಕು ಎಂದು ವಿಶ್ವಬ್ಯಾಂಕ್ 1995ರಲ್ಲಿ ಹೇಳಿತು.

7. ಡಾ. ಕೀರ್ತಿಸಿಂಗ್‌ರವರ ನೇತೃತ್ವದಲ್ಲಿ ನೇಮಕವಾದ 1995ರ ಸಮಿತಿಯ ವರದಿಯು ಆರ್.ಡಬ್ಲ್ಯು.ಇ.ಪಿ. ಯೋಜನೆಯನ್ನು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಅನುಷ್ಠಾನ ಮಾಡಬೇಕೆಂದು ತಿಳಿಸಿತು. ವಿದ್ಯಾರ್ಥಿಗಳು ಗ್ರಾಮೀಣ ಜೀವನವನ್ನು ಅರ್ಥೈಸಿಕೊಂಡು ಆತ್ಮವಿಶ್ವಾಸದ ಮೂಲಕ ಈಗಿನ ಗ್ರಾಮೀಣ ಪರಿಸ್ಥಿತಿ ಮತ್ತು ಅವರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಅರಿಯಬೇಕು ಎಂದು ಶಿಫಾರಸ್ಸು ಮಾಡಿತು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 1964ರಲ್ಲಿ ಸ್ಥಾಪನೆಗೊಂಡಿತು. ಕೃಷಿ ಕ್ಷೇತ್ರದಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳನ್ನು ನಡೆಸುವುದು ಇದರ ಪ್ರಮುಖ ಕಾರ್ಯಕ್ಷೇತ್ರಗಳಾಗಿರುತ್ತವೆ. ಪ್ರಸ್ತುತ ಕರ್ನಾಟಕದಲ್ಲಿ ಮೂರು ಕೃಷಿ ವಿಶ್ವವಿದ್ಯಾನಿಲಯಗಳು ಬೆಂಗಳೂರು, ಧಾರವಾಡ ಹಾಗೂ ರಾಯಚೂರಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರತಿಯೊಂದು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಲವಾರು ಕೃಷಿ ಕಾಲೇಜುಗಳು, ಸಂಶೋಧನಾ ಕೇಂದ್ರಗಳು ವಿಸ್ತರಣಾ ಶಿಕ್ಷಣ ಘಟಕಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿ ಐದು ಕೃಷಿ ಮಹಾವಿದ್ಯಾಲಯಗಳು (ಬೆಂಗಳೂರು, ಮಂಡ್ಯ, ಶಿವಮೊಗ್ಗ, ಹಾಸನ ಮತ್ತು ಚಿಂತಾಮಣಿ), ಹಾಸನದಲ್ಲಿ ಆಹಾರ ವಿಜ್ಞಾನ ಮಹಾವಿದ್ಯಾಲಯ ಹಾಗೂ ಪೊನ್ನಂಪೇಟೆಯಲ್ಲಿ ಅರಣ್ಯ ಮಹಾವಿದ್ಯಾಲಯ ಕಾರ್ಯನಿರ್ವಹಿಸುತ್ತಿದೆ.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿ ಎರಡು ಕೃಷಿ ಮಹಾವಿದ್ಯಾಲಯಗಳು (ಧಾರವಾಡ ಮತ್ತು ಬಿಜಾಪುರ), ಶಿರಸಿಯಲ್ಲಿ ಅರಣ್ಯ ಮಹಾವಿದ್ಯಾಲಯ ಹಾಗೂ ಧಾರವಾಡದಲ್ಲಿ ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ರಾಯಚೂರು ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿ ಎರಡು ಕೃಷಿ ಮಹಾವಿದ್ಯಾಲಯಗಳು (ಭೀಮರಾಯನ ಗುಡಿ ಮತ್ತು ರಾಯಚೂರು) ಹಾಗೂ ರಾಯಚೂರಿನಲ್ಲಿ ಕೃಷಿ ತಾಂತ್ರಿಕ ಮಹಾವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಹೈನುಗಾರಿಕೆ ಹಾಗೂ ಪಶುಸಂಗೋಪನೆ ಕೃಷಿಯ ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ ಇದರ ಅಭಿವೃದ್ಧಿಗಾಗಿ ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಬೀದರ್‌ನಲ್ಲಿ ಸ್ಥಾಪಿಸಲಾಗಿದೆ. ಇದರ ವ್ಯಾಪ್ತಿಯಲ್ಲಿ ಗದಗ, ಹಾಸನ, ಚಿಕ್ಕೋಡಿ, ಶಿವಮೊಗ್ಗ, ಬೆಂಗಳೂರು ಮತ್ತು ಬೀದರ್ ನಗರಗಳಲ್ಲಿ ಶಿಕ್ಷಣ ಕಾಲೇಜುಗಳು ಪ್ರಾರಂಭಗೊಂಡಿವೆ.

ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿ ಬಿ.ಎಸ್ಸಿ (ಕೃಷಿ), ಬಿ.ಎಸ್ಸಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ), ಬಿ.ಎಸ್ಸಿ (ಆಹಾರ ವಿಜ್ಞಾನ), ಬಿ.ಟೆಕ್ (ಕೃಷಿ ಇಂಜಿನಿಯರಿಂಗ್), ಬಿ.ಎಸ್ಸಿ (ಕೃಷಿ ಜೈವಿಕ ತಂತ್ರಜ್ಞಾನ), ಬಿ.ಎಸ್ಸಿ (ಅರಣ್ಯಶಾಸ್ತ್ರ) ಮತ್ತು ಬಿ.ಎಸ್ಸಿ (ರೇಷ್ಮೆಗಾರಿಕೆ) ಕೋರ್ಸ್‌ಗಳನ್ನು ನೀಡಲಾಗುತ್ತಿದೆ. ಅದೇ ರೀತಿ ಬಿ.ಎಸ್ಸಿ (ತೋಟಗಾರಿಕೆ) ಕೋರ್ಸ್‌ನ್ನು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯದಡಿಯಲ್ಲಿ ನೀಡಲಾಗುತ್ತಿದೆ. ಬಿ.ಎಸ್ಸಿ (ಪಶುಸಂಗೋಪನೆ), ಬಿ.ಎಸ್ಸಿ (ಮೀನುಗಾರಿಕೆ), ಬಿ.ಎಸ್ಸಿ (ಡೈರಿ ತಂತ್ರಜ್ಞಾನ) ವಿಷಯಗಳಲ್ಲಿ ಪದವಿ ಕೋರ್ಸ್‌ಗಳನ್ನು ಬೀದರ್‌ನಲ್ಲಿನ ಕರ್ನಾಟಕ ಪಶುಸಂಗೋಪನೆ, ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯದಲ್ಲಿ ನೀಡಲಾಗುತ್ತಿದೆ.

ಸಂಶೋಧನೆಯು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅವಿಭಾಜ್ಯ ಅಂಗವಾಗಿದ್ದು, ರೈತ ಸಮೂಹದ ಕ್ಷೇತ್ರ ಮಟ್ಟದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸೂಚಿಸುವ ಹಾಗೂ ರಾಜ್ಯದಲ್ಲಿ ಕೃಷಿ ಉತ್ಪನ್ನಗಳ ಉತ್ಪಾದನೆ ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ. ಒಂದೆಡೆ ರಾಜ್ಯದ ರೈತ ಸಮೂಹ ಅಭಿವೃದ್ಧಿಗೆ ಅವಶ್ಯವಾಗಿರುವ ಕೃಷಿ ತಾಂತ್ರಿಕತೆಗಳನ್ನು ಒದಗಿಸಲು, ಮತ್ತೊಂದೆಡೆ ಭಾರತದಲ್ಲಿ ಶೇಕಡಾ 4 ರಷ್ಟು ಕೃಷಿಯಲ್ಲಿ ಪ್ರಗತಿ ಸಾಧಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸಂಶೋಧನಾ ಚಟುವಟಿಕೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದಿದೆ. ರಾಜ್ಯದ ರೈತರಿಗೆ ಅಗತ್ಯವಿರುವ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ವಿಜ್ಞಾನಿಗಳ/ತಜ್ಞರುಗಳ ಮಾರ್ಗದರ್ಶನದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಹಾಗೂ ರೈತರ ತಾಕುಗಳಲ್ಲಿ ಬೀಜೋತ್ಪಾದನೆ ಮಾಡಿ ರೈತರಿಗೆ ಒದಗಿಸುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದಕ್ಷಿಣ ಕರ್ನಾಟಕದ 17 ಜಿಲ್ಲೆಗಳ ರೈತರ ಅವಶ್ಯಕತೆಗಳಿಗೆ ಅನುಗುಣವಾಗಿ 6 ವಲಯ ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಹಾಗೂ 15 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ಸಂಶೋಧನೆ ನಡೆಸಲಾಗುತ್ತದೆ.

ರಾಷ್ಟ್ರ ಮತ್ತು ರಾಜ್ಯ ಮಟ್ಟದ ವಿವಿಧ ಸಂಸ್ಥೆಗಳು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ಕೃಷಿ ಹಾಗೂ ತೋಟಗಾರಿಕೆ

Digitised by Bharatavani, CIIL

ಇಲಾಖೆ ಮತ್ತು ಇನ್ನಿತರ ಅಭಿವೃದ್ಧಿ ಇಲಾಖೆಗಳ ಆರ್ಥಿಕ ನೆರವಿನಿಂದ ಸುಮಾರು 300ಕ್ಕೂ ಹೆಚ್ಚು ವಿಷಯಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಭತ್ತ, ರಾಗಿ, ಜೋಳ, ಸೂರ್ಯಕಾಂತಿ, ಗೇರು, ಟೊಮೆಟೊ ಹಾಗೂ ಇನ್ನಿತರ ಬೆಳೆಗಳಲ್ಲಿ ನಿರಂತರ ಸಂಶೋಧನೆಯಿಂದ ಹಲವಾರು ಹೊಸ ಹಾಗೂ ಸುಧಾರಿತ ತಳಿಗಳು ಬಿಡುಗಡೆಯಾಗಿವೆ. ಜೊತೆಗೆ ಖುಷ್ಕಿ ಬೇಸಾಯ, ಸಣ್ಣ ನೀರಾವರಿ ಪದ್ಧತಿಗಳು, ಜಲಾನಯನ ಅಭಿವೃದ್ಧಿ ಹಾಗೂ ಕೃಷಿ ಬೆಳೆಗಳ ರೋಗಗಳ ನಿರ್ವಹಣೆ, ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಸುಧಾರಿತ ಕ್ರಮಗಳು ರಾಜ್ಯದ ರೈತರ ಮೆಚ್ಚುಗೆಗೆ ಪಾತ್ರವಾಗಿವೆ. ಉತ್ತಮ ಇಳುವರಿ ಕೊಡುವುದರ ಜೊತೆಗೆ ರೋಗ ನಿರೋಧಕ ಶಕ್ತಿ ಹೊಂದಿರುವ ಹಾಗೂ ಕೀಟದ ಭಾದೆಯಿಂದ ರಕ್ಷಿಸಿಕೊಳ್ಳುವ ತಳಿಗಳನ್ನು ಬಿಡುಗಡೆ ಮಾಡುವಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರಗಳು ಶ್ರಮಿಸುತ್ತಿವೆ. ಕೃಷಿ ಯಾಂತ್ರೀಕರಣ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಯ ಚಾಣಕ್ಷ್ಯತೆಗಳ ವಿಷಯದಲ್ಲಿಯೂ ಸಹ ಸಂಶೋಧನೆಗಳು ನಡೆಯುತ್ತಿವೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ನಾಲ್ಕನೇ ವರ್ಷದ ಪದವಿ ಶಿಕ್ಷಣ ವಿದ್ಯಾರ್ಥಿಗಳು ಸಹ ಗ್ರಾಮೀಣ ಪ್ರದೇಶದಲ್ಲಿ ವಾಸ್ತವ್ಯ ಹೂಡಿ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ಪಾಲ್ಗೊಂಡು ರೈತರ ಗ್ರಾಮೀಣ ಜೀವನದ ಅನುಭವ ಪಡೆಯುತ್ತಾರೆ. ಈ ಸಂದರ್ಭದಲ್ಲಿ ರೈತರಿಗೆ ಹೊಸ ಹಾಗೂ ಸುಧಾರಿತ ತಾಂತ್ರಿಕತೆಗಳನ್ನು ಪರಿಚಯಿಸುವ ಪ್ರಯತ್ನವೂ ನಡೆಯುವುದು.

ರಾಜ್ಯದಲ್ಲಿ ಕೃಷಿ ಶಿಕ್ಷಣ ಪಡೆದ ಪದವೀಧರರು ಉನ್ನತ ಶಿಕ್ಷಣ ಪಡೆಯುವ ಅವಧಿಯಲ್ಲಿ ಸಂಶೋಧನೆಯಲ್ಲಿ ಪಾಲ್ಗೊಂಡು ಹೊಸ ಹಾಗೂ ಸುಧಾರಿತ ತಾಂತ್ರಿಕತೆಗಳ ಕುರಿತು ಹೆಚ್ಚಿನ ಅಧ್ಯಯನ ನಡೆಸಿ ನುರಿತ ತಜ್ಞರುಗಳಾಗಿ ಹೊರಬರುತ್ತಾರೆ. ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣ ಶಿಕ್ಷಣ ಘಟಕಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ನುರಿತ ತಜ್ಞರುಗಳು ಸೇವೆ ಸಲ್ಲಿಸುತ್ತಿದ್ದು ಕೃಷಿ ಸಂಶೋಧನೆಯಿಂದ ಹೊರಬಂದಂತಹ ತಾಂತ್ರಿಕತೆಗಳನ್ನು ರೈತರಿಗೆ ವರ್ಗಾವಣೆ ಮಾಡುತ್ತಿವೆ. ಜೊತೆಗೆ ಕರ್ನಾಟಕ ಸರ್ಕಾರದ ಅಭಿವೃದ್ಧಿ ಇಲಾಖೆಗಳಾದ ತೋಟಗಾರಿಕೆ, ಪಶುಸಂಗೋಪನೆ ಹಾಗೂ ಜಲಾನಯನ ಇಲಾಖೆಗಳು ಕೃಷಿ ವಿಶ್ವವಿದ್ಯಾನಿಲಯದ ವಲಯ ಸಂಶೋಧನಾ ಕೇಂದ್ರಗಳಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಆಯೋಜಿಸುವ ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರದಲ್ಲಿ ಪಾಲ್ಗೊಂಡು ರೈತರ ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ತಜ್ಞರಿಗೆ ತಿಳಿಸುವುದರ ಜೊತೆಗೆ ಆಯಾ ಕೃಷಿ ವಲಯಕ್ಕೆ ಸೂಕ್ತವಾದ ಹೊಸ ಹಾಗೂ ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುತ್ತಾರೆ. ಈ ರೀತಿ ಪಡೆದಂತಹ ಕೃಷಿ ಮಾಹಿತಿಯನ್ನು ಜಿಲ್ಲಾದ್ಯಂತ ದೊಡ್ಡ ಪ್ರಮಾಣದಲ್ಲಿ ವಿಸ್ತರಣ ಕಾರ್ಯಕ್ರಮಗಳ ಮೂಲಕ ರೈತರಿಗೆ ವರ್ಗಾವಣೆ ಮಾಡುತ್ತಾರೆ. ರಾಜ್ಯದ ಅಭಿವೃದ್ಧಿ ಇಲಾಖೆಗಳಲ್ಲಿ ತಜ್ಞರುಗಳ/ಅಧಿಕಾರಿಗಳ ಕೊರತೆಯಿಂದಾಗಿ ಕೆಲವೆಡೆ ವಿಸ್ತರಣ ಚಟುವಟಿಕೆಗಳು ಬಹಳ ನಿಧಾನಗತಿಯಲ್ಲಿ ನಡೆಯುತ್ತಿವೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ ಕೃಷಿ ಶಿಕ್ಷಣಕ್ಕೆ ಪ್ರೇರಣೆ ನೀಡಿದರೆ, ವಿದ್ಯಾರ್ಥಿಗಳು ಕೃಷಿ, ತೋಟಗಾರಿಕೆ ಮತ್ತು ಪಶು ಸಂಗೋಪನೆ ವಿಶ್ವವಿದ್ಯಾನಿಲಯಗಳ ಮೂಲಕ ನುರಿತ ತಜ್ಞರುಗಳಾಗಿ ಹೊರಬಂದು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶು ಸಂಗೋಪನಾ ಇಲಾಖೆ ಹಾಗೂ ಇನ್ನಿತರ ಇಲಾಖೆಗಳಲ್ಲಿ ಸೇವೆ ಸಲ್ಲಿಸಲು ಅನುಕೂಲವಾಗುತ್ತದೆ.

ಕೃಷಿ ವಿಶ್ವವಿದ್ಯಾನಿಲಯದ ಮೂರನೇ ವಿಭಾಗವಾದ ವಿಸ್ತರಣ ನಿರ್ದೇಶನಾಲಯದ ಪ್ರಮುಖ ಉದ್ದೇಶವು ತಂತ್ರಜ್ಞಾನ ವರ್ಗಾವಣೆಯಾಗಿರುತ್ತದೆ. ಈ ದಿಸೆಯಲ್ಲಿ ವಿಶ್ವವಿದ್ಯಾನಿಲಯ ಗ್ರಾಮಗಳಲ್ಲಿ ಕ್ಷೇತ್ರ ವಿಸ್ತರಣಾ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ಕೃಷಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಾಹಿತಿ ಪೂರೈಕೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇದು ಸಂಶೋಧನಾ ಕೇಂದ್ರಗಳಲ್ಲಿ ಅಭಿವೃದ್ಧಿ ಪಡಿಸಲಾಗುವ ಎಲ್ಲಾ ಕೃಷಿ ತಂತ್ರಜ್ಞಾನಗಳನ್ನು ರೈತ ಸಮುದಾಯದ ಸಮಗ್ರ ಬೆಳವಣಿಗೆಗಾಗಿ ಅವರ ಕೃಷಿ ಕ್ಷೇತ್ರಕ್ಕೆ ಕೊಂಡೊಯ್ಯುವ ಸಂವಾಹಕ ಮಾಧ್ಯಮವಾಗಿರುತ್ತದೆ. ಇದು ರೈತರ ಸಮಸ್ಯೆ ಹಾಗೂ ತಂತ್ರಜ್ಞಾನಗಳ ನಡುವಣ ಅಂತರಗಳನ್ನು ಸೇರಿಸುವ ಸೇತುವೆಯಂತಿದೆ. ಪರಿಣಾಮಕಾರಿಯಾಗಿ ಕಾರ್ಯಪ್ರಗತಿ ಮತ್ತು ಅತ್ಯುತ್ತಮ ಸಾಧನೆಗಳ ಆಧಾರದ ಮೇಲೆ ವಿಶ್ವವಿದ್ಯಾನಿಲಯವು ಕ್ಷೇತ್ರ ಮಟ್ಟದಲ್ಲಿ ನಾಲ್ಕು ವಿಸ್ತರಣಾ ಶಿಕ್ಷಣ ಘಟಕಗಳನ್ನು ಸ್ಥಾಪಿಸಿದೆ. ರೈತರಿಗೆ ಮತ್ತು ಕ್ಷೇತ್ರ ಕಾರ್ಯಕರ್ತರಿಗಾಗಿ ವೃತ್ತಿ ಶಿಕ್ಷಣ ನೀಡುವುದಕ್ಕಾಗಿ ಹೆಬ್ಬಾಳ ಆವರಣದಲ್ಲಿ ರೈತ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಹಾಗೆಯೇ ಹೆಬ್ಬಾಳದಲ್ಲಿ ಸ್ಥಾಪಿಸಲಾದ ಬೇಕರಿ ತರಬೇತಿ ಸಂಸ್ಥೆಯು ಬೇಕರಿ ಮತ್ತು ಸಿಹಿ ತಿನಿಸುಗಳ ತಯಾರಿಕೆಯಲ್ಲಿ ತರಬೇತಿ ನೀಡುತ್ತದೆ.

ಕ್ಷೇತ್ರ ಮಾಹಿತಿ ಘಟಕ, ಸಿಬ್ಬಂದಿ ತರಬೇತಿ ಘಟಕ, ಅಗ್ರಿ ಕ್ಲಿನಿಕ್ ಮತ್ತು ಅಗ್ರಿ ಬಿಸಿನೆಸ್‌ಸೆಲ್ ಮುಂತಾದ ಇತರ ಘಟಕಗಳು ರೈತ ಸಮುದಾಯ, ನಿರುದ್ಯೋಗಿ ಯುವಜನತೆ ಮತ್ತು ಕ್ಷೇತ್ರ ಕಾರ್ಯಕರ್ತರಿಗೆ ಕ್ಷೇತ್ರ ಮಾಹಿತಿ ಮತ್ತು ತರಬೇತಿಗಳನ್ನು ನೀಡುತ್ತದೆ. ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರವು ಕೃಷಿ ಪರಿಕರಗಳ ಪೂರೈಕೆಯ ಜೊತೆಗೆ ಕ್ಷೇತ್ರ ಸಲಹಾ ಸೇವೆ ನೀಡುವ ಏಕಗವಾಕ್ಷಿ ವಿತರಣ ಸೇವೆಯಾಗಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇವು ಸ್ಥಾನಿಕ ವಿಶಿಷ್ಟ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ತರಬೇತಿ ನೀಡುತ್ತವೆ.

ಹಾಗೆಯೇ, ಸಂವಹನ ಕೇಂದ್ರ ಮತ್ತು ಕನ್ನಡ ಅಧ್ಯಯನ ವಿಭಾಗಗಳನ್ನು ನಿರ್ದೇಶನಾಲಯಕ್ಕೆ ವರ್ಗಾಯಿಸಲಾಯಿತು. ಇತ್ತೀಚೆಗೆ ರಾಜ್ಯ ಕೃಷಿ ನಿರ್ವಹಣೆ ಮತ್ತು ವಿಸ್ತರಣಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು ಇದು ಕೃಷಿ ತಂತ್ರಜ್ಞಾನ ನಿರ್ವಹಣ ನಿಯೋಗದ ಪೂರಕವಾಗಿರುತ್ತದೆ.

Digitised by Bharatavani, CIIL

ವಿಸ್ತರಣಾ ನಿರ್ದೇಶಕರು ಎಲ್ಲಾ ವಿಸ್ತರಣಾ ಕಾರ್ಯ ಚಟುವಟಿಕೆಗಳಿಗೆ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ. ವಿಸ್ತರಣಾ ಶಿಕ್ಷಣ ಪರಿಷತ್ ಮತ್ತು ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯ ವಿಸ್ತರಣೆ ಹಾಗೂ ಪ್ರಚಾರ ಸಮಿತಿಗಳು ಈ ನಿರ್ದೇಶನಾಲಯದ ಎಲ್ಲ ಕಾರ್ಯನೀತಿ ಕುರಿತ ವಿಚಾರಗಳಿಗೆ ಸಲಹಾ ನಿಕಾಯಗಳಾಗಿರುತ್ತವೆ. ವಿಸ್ತರಣಾ ಶಿಕ್ಷಣ ಪರಿಷತ್ ಒಂದು ಶಾಸನಬದ್ಧ ಅಂಗವಾಗಿರುತ್ತದೆ. ಇದು ವರ್ಷಕ್ಕೊಂದು ಬಾರಿ ಸಭೆ ಸೇರಿ ವಿಸ್ತರಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಪ್ರಸ್ತಾವನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಪರಿಗಣನೆಗೆ ತೆಗೆದುಕೊಂಡು ವಿಶ್ವವಿದ್ಯಾನಿಲಯದ ವಿಸ್ತರಣಾ ವ್ಯವಸ್ಥೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಅವಶ್ಯವಿರುವ ನಿರ್ಣಯಗಳನ್ನು ಕೈಗೊಳ್ಳುತ್ತದೆ. ವಿಸ್ತರಣಾ ಶಿಕ್ಷಣ ಪರಿಷತ್‌ನಲ್ಲಿ ಕುಲಪತಿಗಳು –ಕಾರ್ಯಾಧ್ಯಕ್ಷರಾಗಿ, ಡೀನ್–ಸಹಕಾರ್ಯಾಧ್ಯಕ್ಷರಾಗಿ, ಸದಸ್ಯರುಗಳಾಗಿ – ವಿಶ್ವವಿದ್ಯಾನಿಲಯದ ವಿಭಾಗಗಳ ಮುಖ್ಯಸ್ಥರು, ವಿಸ್ತರಣಾ ನಿರ್ದೇಶಕರು, ಸಂಶೋಧನಾ ನಿರ್ದೇಶಕರು, ವಿಸ್ತರಣಾ ಕ್ಷೇತ್ರದಲ್ಲಿಯ ಇಬ್ಬರು ತಜ್ಞರು, ಇಬ್ಬರು ಪ್ರಗತಿಪರ ರೈತರು ಮತ್ತು ಮೂರು ಮಂದಿ ಸರಕಾರೇತರ ಸಂಸ್ಥೆಗಳವರು, ಆಹ್ವಾನಿತ ಸದಸ್ಯರುಗಳಾಗಿಯೂ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರು ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರು ಸಮಿತಿಯ ಸಮಾವೇಶಕರಾಗಿ ಸಮಿತಿಯಲ್ಲಿರುವರು.

ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕ್ಷೇತ್ರ ಮಾಹಿತಿ ಘಟಕದಲ್ಲಿ ಕ್ಷೇತ್ರ ಮಾಹಿತಿಗಳನ್ನು ಕುರಿತಾದ ವಿವಿಧ ಕ್ಷೇತ್ರ ಅಭಿವೃದ್ಧಿ ಚಟುವಟಿಕೆಗಳು ಹಾಗೂ ಅವುಗಳ ಸಂವಹನೆಗೆ ಸಂಬಂಧಪಟ್ಟ ಕಾರ್ಯಗಳನ್ನು ಕೈಗೊಂಡು ಅವು ರೈತರ ಮತ್ತು ಕ್ಷೇತ್ರ ಕಾರ್ಯಕರ್ತರಿಗೆ ತಲುಪಿಸುವ ಕಾರ್ಯ ನಿರ್ವಹಿಸುತ್ತದೆ. ಸುಧಾರಿತ ಸಾಗುವಳಿ ಪದ್ಧತಿಗಳ ಕುರಿತು ಪುಸ್ತಕಗಳನ್ನು/ಕಿರುಹೊತ್ತಿಗೆಗಳನ್ನು ಪ್ರಕಟಿಸುವುದು. ವಿಶಿಷ್ಟ ತಂತ್ರಜ್ಞಾನ ಕುರಿತಾದ ಫೋಲ್ಡರ್ಸ್ ಹಾಗೂ ಕರಪತ್ರಗಳನ್ನು ಪ್ರಕಟಿಸುವುದು, ವಿವಿಧ ಮಾಧ್ಯಮಗಳಲ್ಲಿ ಪ್ರಚಾರ ಕಾರ್ಯಗಳನ್ನು ನಡೆಸುವುದು, ವಸ್ತು ಪ್ರದರ್ಶನವನ್ನು ಏರ್ಪಡಿಸುವುದು ಹಾಗೂ ಸಂಬಂಧಪಟ್ಟ ದೃಶ್ಯ–ಶ್ರವಣ ಸಾಧನಗಳನ್ನು ಸಿದ್ಧಪಡಿಸಿ ಹೊರತರುವುದು ಇವು ಕ್ಷೇತ್ರ ಮಾಹಿತಿ ಘಟಕದ ಉದ್ದೇಶಗಳು.

ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರವನ್ನು 1999ರಲ್ಲಿ ರಾಷ್ಟ್ರೀಯ ಕೃಷಿ ತಂತ್ರಜ್ಞಾನ ಪ್ರಾಯೋಜನೆಯಡಿಯಲ್ಲಿ ಪ್ರಾರಂಭಿಸಲಾಯಿತು. ಈ ಕೇಂದ್ರವು ಬೀಜ, ಸಸ್ಯ ಮುಂತಾದ ಕೃಷಿ ಪರಿಕರಗಳನ್ನು ರೈತರಿಗೆ ಪೂರೈಸುವುದರ ಜೊತೆಗೆ ಕೃಷಿ ತಂತ್ರಜ್ಞಾನ ಮಾಹಿತಿ ಹಾಗೂ ಕೃಷಿ ಸಲಹಾ ಸೇವೆಗಳನ್ನು ಏಕಗವಾಕ್ಷಿ ವ್ಯವಸ್ಥೆಗಳ ಮೂಲಕ ನೀಡುತ್ತದೆ. ಕೃಷಿ ವಿಜ್ಞಾನಿಗಳು ಮತ್ತು ಕೃಷಿ ತಂತ್ರಜ್ಞಾನಿಗಳನ್ನು ಬಳಸಿಕೊಳ್ಳುವ ರೈತರ ನಡುವೆ ಒಂದು ಔಪಚಾರಿಕ ನಿರ್ವಹಣಾ ವ್ಯವಸ್ಥೆಯನ್ನು ಒದಗಿಸುವುದು ಕೇಂದ್ರದ ಉದ್ದೇಶವಾಗಿರುತ್ತದೆ. ಈ ಕೇಂದ್ರದಲ್ಲಿರುವ ವಿಶ್ವವಿದ್ಯಾನಿಲಯದ ಕೃಷಿ ಸಲಹಾ ವಿಭಾಗದ ವಿವಿಧ ಕೃಷಿ ವಿಷಯಗಳ ತಜ್ಞರು ಈ ಕೇಂದ್ರಕ್ಕೆ ಭೇಟಿ ನೀಡುವ ರೈತರು ಹಾಗೂ ಮತ್ತಿತರರಿಗೆ ಕೃಷಿ ತಂತ್ರಜ್ಞಾನದ ಮಾಹಿತಿ ತಿಳುವಳಿಕೆ ನೀಡಲು ನೆರವಾಗುತ್ತಾರೆ. ಹೀಗೆ ಈ ಕೇಂದ್ರವು ಕೃಷಿ ಮಾಹಿತಿಗಳ ಸಂಗ್ರಹಣೆಗೆ ನೆರವಾಗಿ ಕಾರ್ಯನಿರ್ವಹಿಸುತ್ತದೆ. ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ ಸಲಹಾ ಮಾಹಿತಿಯು ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಒಂದು ಸಲಹಾ ವಿಷಯವಾಗಿರುತ್ತದೆ. ಕೃಷಿ ಉತ್ಪನ್ನಗಳನ್ನು ಮತ್ತು ಲಭ್ಯ ಸಸ್ಯ ಪರಿಕರಗಳನ್ನು ಏಕಗವಾಕ್ಷಿ ವಿತರಣ ವ್ಯವಸ್ಥೆಯಲ್ಲಿ ಪೂರೈಸುವುದು, ವಿತರಣ ನಷ್ಟಗಳನ್ನು ಕಡಿಮೆಗೊಳಿಸಲು ರೈತರಿಗೆ ಸಾಂಸ್ಥಿಕ ಸಂಪನ್ಮೂಲಗಳು ನೇರವಾಗಿ ಲಭಿಸುವಂತೆ ಮಾಡುವುದು ಹಾಗೂ ಬಳಕೆದಾರರಿಂದ ಸಂಸ್ಥೆಗೆ ಅನಿಸಿಕೆ ಅಭಿಪ್ರಾಯಗಳನ್ನು ಪಡೆಯುವುದು ಕೇಂದ್ರದ ಚಟುವಟಿಕೆಗಳಲ್ಲಿ ಸೇರಿವೆ.

ದೇಶದಲ್ಲಿ ವೇಗಗತಿಯಲ್ಲಿ ಬೆಳೆಯುತ್ತಿರುವ ಸಂವಹನ ಸಂಪರ್ಕ ಜಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು, ಕೇಂದ್ರ ಸರಕಾರವು 2004 ಜನವರಿ, 21ರಂದು ಕರಮುಕ್ತ ದೂರವಾಣಿ ಸಂಖ್ಯೆ 1551ರ ಮೂಲಕ ಕಿಸಾನ್ ಕರೆ ಕೇಂದ್ರಗಳನ್ನು ದೇಶಕ್ಕೆ ಸಮರ್ಪಿಸಿತು. ಇದರಿಂದ ರೈತರು ಸುಲಭವಾಗಿ ತಕ್ಷಣವೇ ಬೇಕಾದ ಬೆಳೆ, ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ಕೃಷಿ ಉತ್ಪನ್ನಗಳ ದರಗಳು, ಪಶುವೈದ್ಯಾ ಸೇವಾ ಮಾಹಿತಿ ಇತ್ಯಾದಿ ಸಂಬಂಧಪಟ್ಟ ಸಮಸ್ಯೆಗಳಿಗೆ ಬೇಕಾದ ಪರಿಹಾರೋಪಾಯ ಮಾಹಿತಿಗಳನ್ನು ಪಡೆಯಲು ಸಹಾಯವಾಗುತ್ತದೆ.

ಕರ್ನಾಟಕ ರಾಜ್ಯದೊಳಗಿನ ಮತ್ತು ಹೊರಗಿನ ವಿವಿಧ ಸಂಘ ಸಂಸ್ಥೆಗಳ ಸಿಬ್ಬಂದಿಯವರಲ್ಲಿ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ 1974ರಲ್ಲಿ ಸಿಬ್ಬಂದಿ ತರಬೇತಿ ಘಟಕವನ್ನು ಪ್ರಾರಂಭಿಸಲಾಯಿತು. ಇದು ಸಾಂಸ್ಥಿಕ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ಹಾಗೆಯೇ ಖಾಸಗಿ ಸರಕಾರಿ ಮತ್ತು ಅರೆಕಾಲಿಕ–ಸರಕಾರಿ ಸಂಸ್ಥೆಗಳ ವಿವಿಧ ಅಧಿಕಾರಿಗಳಿಗೆ ಕ್ಷೇತ್ರಾಭಿಮುಖ ತರಬೇತಿ ಕಾರ್ಯಕ್ರಮಗಳನ್ನು ಸಹ ಏರ್ಪಡಿಸುತ್ತದೆ.

ಸಾಂಸ್ಥಿಕ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲೆಂದು 1964ರಲ್ಲಿ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. 1982ರಲ್ಲಿ ಈ ಸಂಸ್ಥೆಯನ್ನು ಮಹಿಳಾ ಮತ್ತು ರೈತ ಯುವಕ ತರಬೇತಿ ವಿಸ್ತರಣಾ ಪ್ರಾಯೋಜನೆ (ಡಬ್ಲ್ಯುವೈ.ಟಿ.ಇ.ಪಿ.) ಯ ವ್ಯಾಪ್ತಿಗೆ ತರಲಾಯಿತು. ಇದಕ್ಕೆ ಡ್ಯಾನಿಡಾದಿಂದ ಆರ್ಥಿಕ ನೆರವು ದೊರೆತಿದ್ದು ಇದರ ಕಾರ್ಯ ವ್ಯಾಪ್ತಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಸೀಮಿತವಾಗಿತ್ತು. 2005ರ ಮಾರ್ಚ್ ವೇಳೆಗೆ ಕಾರ್ಯಕ್ರಮಗಳು ಪರಿಪೂರ್ಣಗೊಂಡಿದ್ದು, ಈಗ ತರಬೇತಿ ಕಾರ್ಯಕ್ರಮಗಳನ್ನು ಸಾಮಾನ್ಯ ವಿಸ್ತರಣಾ ಸೇವೆಗಳಡಿಯಲ್ಲಿ ನಡೆಸಲಾಗುತ್ತಿದೆ. ಆದಾಗ್ಯೂ ಡಬ್ಲ್ಯುವೈ.ಟಿ.ಇ.ಪಿ. ಯನ್ನು ಪುನರಾರಂಭಿಸಲಾಗಿದ್ದು, ಇದರಲ್ಲಿ ಕರ್ನಾಟಕ ಸರಕಾರವು ನೀಡುವ ಅನುದಾನದಲ್ಲಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಮಾತ್ರ ಏರ್ಪಡಿಸಲಾಗುತ್ತದೆ. ರೈತರು/ಸ್ವ–ಸಹಾಯ ಗುಂಪಿನ ಸದಸ್ಯರು ಮತ್ತು ವಿವಿಧ

Digitised by Bharatavani, CIIL

ಅಭಿವೃದ್ಧಿ ಇಲಾಖೆಗಳ ಕಾರ್ಯಕರ್ತರುಗಳಿಗೆಲ್ಲ ತರಬೇತಿಗಳನ್ನು ಪ್ರಾಯೋಜಕರು ಕೋರಿದಂತೆಲ್ಲಾ ಆಗಾಗ್ಗೆ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಕೃಷಿ ತಂತ್ರಜ್ಞಾನ ನಿರ್ವಹಣಾ ಏಜೆನ್ಸಿಯು ರಾಜ್ಯ ಕೃಷಿ ನಿರ್ವಹಣೆ ಮತ್ತು ವಿಸ್ತರಣಾ ತರಬೇತಿ ಸಂಸ್ಥೆಯಾಗಿದ್ದು ವಿವಿಧ ಪಾಲುದಾರರ (ಸ್ಟೇಕ್ ಹೋಲ್ಡರ್) ಆತ್ಮ ಸಾಮರ್ಥ್ಯದಿಂದ ಕಾರ್ಯ ನಡೆಸುವಂತಹದ್ದಾಗಿದೆ. ಇದೊಂದು ನೋಂದಣಿಯಾದ ಸಂಸ್ಥೆಯಾಗಿದ್ದು ಕಾರ್ಯತಂತ್ರ ಸಂಶೋಧನೆ ಮತ್ತು ವಿಸ್ತರಣಾ ಯೋಜನೆ (ಎಸ್.ಆರ್.ಇ.ಪಿ.) ಮೂಲಕ ಜಿಲ್ಲಾ ಮಟ್ಟದಲ್ಲಿ ತಂತ್ರಜ್ಞಾನ ಪ್ರಸರಣೆ ಮಾಡುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಇದು ನೇರವಾಗಿ ಕೇಂದ್ರ ಸರಕಾರ/ರಾಜ್ಯ ಸರಕಾರ, ಸದಸ್ಯತ್ವ ಶುಲ್ಕ, ಫಲಾನುಭವಿಗಳ ಕೊಡುಗೆ ಇತ್ಯಾದಿಗಳಿಂದ ನಿಧಿ ಸಂಗ್ರಹಣೆ ಮಾಡಬಲ್ಲದ್ದಾಗಿರುತ್ತದೆ. ಈ ಸಂಸ್ಥೆಯು ಜಿಲ್ಲೆಯ ಕೃಷಿ ಅಭಿವೃದ್ಧಿ ಪರವಾಗಿರುವ ಇದೇ ಬಗೆಯ ಇತರ ಸಂಸ್ಥೆಗಳು, ಸಂಶೋಧನೆ ಮತ್ತು ವಿಸ್ತರಣಾ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು ಮತ್ತು ಇತರ ಏಜೆನ್ಸಿಗಳೊಂದಿಗೆ ಸಂಪರ್ಕ ಹೊಂದಿರುತ್ತದೆ. ರೈತ ಸಮುದಾಯವನ್ನು ವಿಶೇಷವಾಗಿ ಸಂಪನ್ಮೂಲರಹಿತ ಬಡ ರೈತರು ಹಾಗೂ ಸೌಲಭ್ಯ ವಂಚಿತರಾದ ರೈತರ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತು ಗಮನಹರಿಸುವಂತಹ ಭಾಗವಹಿಸುವಿಕೆಯ ವಿಧಾನವನ್ನು ಶಾಸ್ತ್ರದ ಆಧಾರದ ಮೇರೆಗೆ ಕಾರ್ಯತಂತ್ರ ಸಂಶೋಧನೆ ಮತ್ತು ವಿಸ್ತರಣಾ ಯೋಜನೆಯನ್ನು ನಿರೂಪಿಸಲಾಗಿದೆ.

ರೈತ ತರಬೇತಿ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಸಂಸ್ಥೆಯನ್ನೇ ಮತ್ತಷ್ಟು ಬಲಪಡಿಸಿ ರಾಜ್ಯದ ದಕ್ಷಿಣ ಪ್ರದೇಶಗಳಿಗಾಗಿಯೇ ಇರುವ ಒಂದು ಪ್ರಾದೇಶಿಕ ಕೇಂದ್ರವನ್ನಾಗಿ ರಾಜ್ಯ ಕೃಷಿ ನಿರ್ವಹಣೆ ಮತ್ತು ವಿಸ್ತರಣಾ ತರಬೇತಿ ಸಂಸ್ಥೆ ಎಂಬುದಾಗಿ ಪರಿವರ್ತಿಸಿ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಏಜೆನ್ಸಿ (ಎ.ಟಿ.ಎಂ.ಎ) ಸಂಸ್ಥೆಯ ಕಾರ್ಯಕ್ರಮದ ಚಟುವಟಿಕೆಗಳಿಗೆ ಪರಿಪೂರಕವಾಗಿರುವಂತೆ ರೂಪಿಸಲಾಗಿದೆ.

ಸಂವಹನ ಕೇಂದ್ರವು ಮೇ1, 1972ರಂದು ಸ್ಥಾಪಿತವಾಗಿದ್ದು, ಈ ಕೇಂದ್ರವು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ, ಸಂಶೋಧನೆ, ಬೋಧನೆ ಮತ್ತು ವಿಸ್ತರಣೆ ವಿಭಾಗಗಳಿಗೆ ಸಂಬಂಧಿಸಿದ ಪ್ರಕಟಣೆಗಳು, ಶ್ರವಣ–ದೃಶ್ಯ ಸಲಕರಣೆಗಳು, ಗ್ರಾಫಿಕ್ಸ್, ಫೋಟೋಗ್ರಾಫಿಕ್ಸ್ ಹಾಗೂ ಮುದ್ರಣಾ ಕಾರ್ಯಗಳಿಗೂ ಸಹ ಬೇಡಿಕೆ ಮೇರೆಗೆ ಸಂವಹನ ಕೇಂದ್ರವು ನೆರವಾಗುತ್ತದೆ. ಸಂವಹನ ಪರಿಷತ್ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸಲಹಾ ಪರಿಷತ್ ಆಗಿ ಕಾರ್ಯನಿರ್ವಹಿಸುತ್ತದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ವಿಭಾಗವು 1969–70ರಲ್ಲಿ ಶಿಕ್ಷಣ ಆಯೋಗದ (1963–64) ರಾಷ್ಟ್ರೀಯ ಶಿಕ್ಷಣ ಧೋರಣೆಯ ಶಿಫಾರಸ್ಸುಗಳ ಮೇರೆಗೆ ರಾಷ್ಟ್ರ ಭಾಷೆಯೊಂದಿಗೆ ಪ್ರಾದೇಶಿಕ ಭಾಷೆಗಳನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಹಾಗೂ ಕೃಷಿ ವಿಜ್ಞಾನ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಣೆ ಮಾಡುವ ಉದ್ದೇಶದಿಂದ ಪ್ರಾರಂಭವಾಗಿದ್ದು ಆಯೋಗವು ಪ್ರತಿ ವರ್ಷ ಕನ್ನಡ ಪಠ್ಯ/ಪೂರಕ ಪುಸ್ತಕಗಳ ಪ್ರಕಟಣೆಗಳಿಗೆ ಅನುದಾನ ನೀಡುತ್ತಿದೆ.

ಅಗ್ರಿಕ್ಲಿನಿಕ್ ಮತ್ತು ಅಗ್ರಿಬಿಸಿನೆಸ್ ಕೇಂದ್ರಗಳ (ಎಸಿ ಮತ್ತು ಎಬಿಸಿ) ತರಬೇತಿ ಘಟಕವು ವಿಸ್ತರಣಾ ನಿರ್ದೇಶನಾಲಯದಲ್ಲಿ 2002ರಲ್ಲಿ ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆವಲಪ್‌ಮೆಂಟ್ (ಎನ್.ಬಿ.ಎ.ಆರ್.ಡಿ.) ನವರ ಧನ ಸಹಾಯದಿಂದ, ನಿರುದ್ಯೋಗಿ ಕೃಷಿ ಪದವೀಧರರಿಗೆ ಅವರು ತಮ್ಮದೇ ಆದ ಅಗ್ರಿ ಕ್ಲಿನಿಕ್ ಮತ್ತು ಅಗ್ರಿ ಬಿಸಿನೆಸ್ ಕೇಂದ್ರಗಳನ್ನು ಪ್ರಾರಂಭಿಸಿಕೊಳ್ಳಲು ಉಪಯುಕ್ತವಾದ ತರಬೇತಿ ನೀಡುವ ಉದ್ದೇಶದಿಂದ ಪ್ರಾರಂಭವಾಯಿತು. ಈ ಕಾರ್ಯಕ್ರಮವನ್ನು ರೂಪಿಸಿದವರು ನವದೆಹಲಿಯ ಸ್ಮಾಲ್ ಫಾರ್ಮರ್ಸ್ ಅಗ್ರಿ–ಬಿಸಿನೆಸ್ ಕಾನ್ಸಾರ್ಷಿಯಮ್ (ಎಸ್.ಎಫ್.ಎಸಿ.) ಸಂಸ್ಥೆಯವರು.

ಸುಶಿಕ್ಷಿತ ರೈತರಿಗೆ ಉತ್ಪಾದನಾ ತಂತ್ರಜ್ಞಾನದ ಬಗ್ಗೆ ಶಿಕ್ಷಣ ನೀಡುವ ಉದ್ದೇಶದಿಂದ ಹಾಗೂ ಅಂತಹ ರೈತರು ತಮಗೆ ದೊರಕಿದ ಜ್ಞಾನವನ್ನು ಲಾಭದಾಯಕ ರೀತಿಯಲ್ಲಿ ಬಳಸಿಕೊಳ್ಳಲು ಉತ್ತೇಜನ ನೀಡಲು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಮುಂದಾಳತ್ವ ವಹಿಸಿಕೊಂಡು 1974ರಲ್ಲಿ ಅಂಚೆ ಶಿಕ್ಷಣವನ್ನು ಪ್ರಾರಂಭಿಸಿತು. ಕೃಷಿ ವಿಶ್ವವಿದ್ಯಾನಿಲಯದ ವಿಷಯ ತಜ್ಞರೊಂದಿಗೆ ಸಮಾಲೋಚನೆ ಮಾಡಿದ ಮೇರೆಗೆ ವಿಸ್ತರಣಾ ನಿರ್ದೇಶನಾಲಯವು ಸೂಕ್ತವಾದ ಪಠ್ಯಕ್ರಮಕ್ಕೆ ಅನುಗುಣವಾಗಿ ಅಂಚೆ ಶಿಕ್ಷಣ ಕೋರ್ಸ್‌ನ್ನು ವಿನ್ಯಾಸಗೊಳಿಸುತ್ತದೆ.

1967ರಲ್ಲಿ ಪ್ರಾರಂಭಿಸಿದ ಪೈಲೆಟ್ ವಿಸ್ತರಣಾ ಪ್ರಾಯೋಜನೆಯನ್ನು 1970ರಲ್ಲಿ ಕಾರ್ಯರೂಪಕ್ಕೆ ತಂದು ವಿಸ್ತರಣ ಶಿಕ್ಷಣ ಘಟಕಗಳನ್ನು ಪ್ರಾರಂಭಿಸಲಾಯಿತು. ಈ ಘಟಕಗಳು ಕ್ಷೇತ್ರ ವಿಸ್ತರಣಾ ಕಾರ್ಯಕ್ರಮಗಳನ್ನು ನಡೆಸುವ ಪ್ರಮುಖ ಕೇಂದ್ರಗಳಾಗಿವೆ. ಪ್ರತಿಯೊಂದು ಘಟಕದಲ್ಲಿಯೂ ವಿಷಯ ತಜ್ಞರ ತಂಡವೊಂದು ಕಾರ್ಯನಿರತವಾಗಿದ್ದು ಕೆಳಹಂತದ ಕ್ಷೇತ್ರ ಕಾರ್ಯಕರ್ತರಿಗೆ ನೆರವು ನೀಡುವ ಮತ್ತು ಸಂಯೋಜಿಸುವ ಕಾರ್ಯದಲ್ಲಿ ಭಾಗಿಯಾಗುತ್ತದೆ. ಈ ಘಟಕಗಳು ಹೊಸತಾಗಿ ಅಭಿವೃದ್ಧಿಪಡಿಸಿದ ಕ್ಷೇತ್ರ ತಂತ್ರಜ್ಞಾನಗಳನ್ನು ಸಮಗ್ರ ರೀತಿಯಲ್ಲಿ ಕಾರ್ಯಾಚರಣೆಗೆ ತರಲು ರೈತರಿಗೆ ಪ್ರೇರಣೆ ನೀಡುತ್ತವೆ. ಇದರ ಅಂತಿಮ ಗುರಿ ರೈತರು ತಮ್ಮ ತಮ್ಮ ಸೀಮಿತ ಪ್ರದೇಶಗಳಲ್ಲಿ ಪಡೆಯುವ ಆರ್ಥಿಕ ಲಾಭಗಳನ್ನು ಹೆಚ್ಚಿಸುವುದೇ ಆಗಿದೆ.

ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐ.ಸಿ.ಎ.ಆರ್.) ನವದೆಹಲಿ ಇವರು ದೇಶದ ಎಲ್ಲಾ ಜಿಲ್ಲೆಗಳಲ್ಲಿ ಕೃಷಿ ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಿದ್ದಾರೆ. ಈ ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಇತ್ಯಾದಿ ವಿಷಯಗಳಲ್ಲಿನ

Digitised by Bharatavani, CIIL

ಹಲವಾರು ವಿಷಯಗಳ ಬಗ್ಗೆ ರೈತರು, ರೈತ ಮಹಿಳೆಯರು ಮತ್ತು ನಿರುದ್ಯೋಗಿ ಯುವ ರೈತರಿಗೆ ಉತ್ತೇಜನ ನೀಡಿ ಅವರು ತಮ್ಮದೇ ಆದ ಕೃಷಿ ಆಧಾರಿತ ಉದ್ಯಮಗಳನ್ನು ತಮ್ಮ ಕ್ಷೇತ್ರದಲ್ಲಿ ಪ್ರಾರಂಭಿಸಲು ಅನುಕೂಲವಾಗುವಂತೆ ತರಬೇತಿ ನೀಡುವ ಸಿಬ್ಬಂದಿಯನ್ನು ಹೊಂದಿರುತ್ತವೆ. ಈ ಕೃಷಿ ವಿಜ್ಞಾನ ಕೇಂದ್ರಗಳು ಹಲವಾರು ಕೃಷಿ ಮತ್ತಿತರ ತಂತ್ರಜ್ಞಾನಗಳ ಬಗ್ಗೆ ಕ್ಷೇತ್ರ ಪರೀಕ್ಷೆಗಳನ್ನು ನಡೆಸುತ್ತವೆ ಹಾಗೂ ಎಣ್ಣೆ ಬೀಜಗಳು, ಏಕದಳ ಮತ್ತು ದ್ವಿದಳ ಧಾನ್ಯಗಳು ಮತ್ತು ಬೇಳೆಕಾಳುಗಳ ಬಗ್ಗೆ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಸಹ ನಡೆಸುತ್ತವೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 11 ಕೃಷಿ ವಿಜ್ಞಾನ ಕೇಂದ್ರಗಳು ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರತವಾಗಿವೆ. ಕೃಷಿ ವಿಜ್ಞಾನ ಕೇಂದ್ರಗಳ ಚಟುವಟಿಕೆಗಳನ್ನು ಯೋಜಿಸಲು ಹಾಗೂ ಪರಿಶೀಲಿಸಲು ವೈಜ್ಞಾನಿಕ ಸಲಹಾ ಸಮಿತಿಯು ಸಲಹಾ ಮಂಡಳಿಯಾಗಿ ಕಾರ್ಯನಿರ್ವಹಿಸುತ್ತದೆ. ಈ ಸಮಿತಿಯ ಅಧ್ಯಕ್ಷರಾಗಿ ಕುಲಪತಿಗಳು ನೇತೃತ್ವವಹಿಸಿದ್ದು ವಿಸ್ತರಣಾ ನಿರ್ದೇಶಕರು, ವಲಯ ಸಮನ್ವಯಕಾರರು ಮತ್ತು ಜಿಲ್ಲಾ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಇಬ್ಬರು ರೈತ ಮಹಿಳೆಯರು ಸದಸ್ಯರಾಗಿರುತ್ತಾರೆ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

2006ರಲ್ಲಿ ವಿಸ್ತರಣಾ ಶಿಕ್ಷಣ ಘಟಕಕ್ಕೆ ಬೆಂಗಳೂರು ಆವರಣದಲ್ಲಿ ವಿಶ್ವವಿದ್ಯಾನಿಲಯ ಸಮಾಲೋಚನಾ ಕೇಂದ್ರ ಎಂದು ಪುನರ್ ನಾಮಕರಣ ಮಾಡಲಾಯಿತು. ಇದರಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳಲ್ಲಿ ತಜ್ಞರು ಮತ್ತು ಅನುಭವಶಾಲಿಗಳಾದ ವಿಷಯ ಪರಿಣತ ವಿಶೇಷ ತಜ್ಞರ ಬಹುಶಿಸ್ತಿನ ತಂಡವೊಂದು ಕಾರ್ಯನಿರತವಾಗಿರುತ್ತದೆ. ಈ ಕೇಂದ್ರವು ವಾಣಿಜ್ಯ ಬೆಳೆ ಬೆಳೆಯುವ ಹಾಗೂ ಹೈಟೆಕ್ ಉದ್ಯಮಗಳನ್ನು ಕೈಗೊಳ್ಳುವ ಉತ್ತಮ ಹಣಕಾಸಿನ ರೈತರಿಗೆ ಶುಲ್ಕ ನಿಗದಿತ ಸಮಾಲೋಚನಾ ಕೇಂದ್ರವಾಗಿರುತ್ತದೆ. ಹಾಗೆಯೇ ಸಣ್ಣ ರೈತರಿಗೆ ಈ ಕೇಂದ್ರ ಉಚಿತವಾಗಿ ಸಮಾಲೋಚನಾ ಸೇವೆಯನ್ನು ಒದಗಿಸುತ್ತದೆ.

ವಿಸ್ತರಣಾ ನಿರ್ದೇಶನಾಲಯವು ಪ್ರತಿ ವರ್ಷ ವಿಶ್ವವಿದ್ಯಾನಿಲಯದ ಕೇಂದ್ರ ಆವರಣದಲ್ಲಿ ಕೃಷಿಮೇಳವನ್ನು ವ್ಯವಸ್ಥೆಗೊಳಿಸುತ್ತಿದ್ದು ಸುಮಾರು ಒಂದು ಲಕ್ಷದಷ್ಟು ರೈತರು ಇದರಲ್ಲಿ ಭಾಗವಹಿಸುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಯಲ್ಲಿ ಬರುವ ಹದಿನೈದು ಜಿಲ್ಲೆಗಳಲ್ಲಿ ಅತ್ಯುತ್ತಮ ರೈತ ಮತ್ತು ರೈತಮಹಿಳೆ ಪ್ರಶಸ್ತಿ ನೀಡುವುದನ್ನು ಪ್ರಾರಂಭಿಸಲಾಗಿದೆ. 1945ರಲ್ಲಿ ವಿಶ್ವ ಆಹಾರ ಸಂಸ್ಥೆ ಸ್ಥಾಪನೆಯಾದ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 16 ರಂದು ವಿಶ್ವ ಆಹಾರ ದಿನವನ್ನಾಗಿ ವಿಸ್ತರಣಾ ಶಿಕ್ಷಣ ಘಟಕಗಳಲ್ಲಿ, ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಆಚರಿಸಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ರೈತ ಮಹಿಳೆಯರ ಕೊಡುಗೆಯನ್ನು ಗುರುತಿಸುವುದಕ್ಕಾಗಿ ಪ್ರತಿ ವರ್ಷ ಡಿಸೆಂಬರ್ 4ರಂದು ಕೃಷಿಯಲ್ಲಿ ಮಹಿಳಾ ದಿನಾಚರಣೆಯನ್ನು ವಿಸ್ತರಣಾ ಶಿಕ್ಷಣ ಘಟಕಗಳು, ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಆಚರಿಸಲಾಗುತ್ತಿದೆ. ವಿಸ್ತರಣಾ ನಿರ್ದೇಶನಾಲಯವು ಪ್ರತಿ ವರ್ಷವೂ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುವ ಕೃಷಿ ಪ್ರದರ್ಶನಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ. ಕಾರ್ಯಾಗಾರಗಳು/ವಿಚಾರ ಸಂಕೀರ್ಣಗಳು/ಬೇಸಿಗೆ ಶಾಲೆಗಳನ್ನು ನಡೆಸಲಾಗುತ್ತದೆ. ವಿಸ್ತರಣಾ ನಿರ್ದೇಶನಾಲಯದ ಕೃಷಿ ವಿಜ್ಞಾನ ಕೇಂದ್ರಗಳು ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಗಳಲ್ಲಿ ಡಿಪ್ಲೋಮಾ ನೀಡುತ್ತವೆ. ಈ ಕೋರ್ಸ್ ಅವಧಿ 48 ಭಾನುವಾರಗಳಾಗಿರುತ್ತದೆ. ಪ್ರತಿ ತಂಡದಲ್ಲಿ ಕನಿಷ್ಠ 30 ಮಾರಾಟಗಾರರನ್ನು ನೋಂದಣಿ ಮಾಡಿಕೊಳ್ಳಲಾಗುತ್ತದೆ. ಕೋರ್ಸ್ ಅವಧಿಯಲ್ಲಿ ಉಪನ್ಯಾಸ, ಪ್ರಯೋಗ ತರಬೇತಿಗಳು ಮತ್ತು ಕ್ಷೇತ್ರ ಭೇಟಿಗಳನ್ನು ನಡೆಸಲಾಗುತ್ತದೆ. ಕಾರ್ಯಕ್ರಮ ಅಧ್ಯಯನ ಕೇಂದ್ರವನ್ನು 2006 ರಿಂದ ವಿಸ್ತರಣಾ ನಿರ್ದೇಶನಾಲಯದಡಿಯಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ. ಇದಕ್ಕಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹಾಗೂ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯಗಳ ನಡುವೆ ಒಪ್ಪಂದ ಪತ್ರಕ್ಕೆ ಸಹಿ ಹಾಕಲಾಗಿದೆ. ಈ ಕೇಂದ್ರವು ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳನ್ನು ಕುರಿತ ಕೋರ್ಸುಗಳ ಬಗ್ಗೆ ಸಮಾಲೋಚನೆ ಕೇಂದ್ರವಾಗಿ ಕಾರ್ಯಕೈಗೊಳ್ಳಲಿದೆ.

ಈ ರೀತಿ ಕರ್ನಾಟಕ ರಾಜ್ಯದಲ್ಲಿ ಕೃಷಿ ಶಿಕ್ಷಣದ ಮೂರು ಅಂಗಗಳಾದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ವಿಭಾಗಗಳು ತಮ್ಮ ತಮ್ಮ ಕಾರ್ಯ ಚಟುವಟಿಕೆಗಳಿಂದ ರೈತರ ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ಪರಿಹರಿಸುವುದರ ಜೊತೆಗೆ ರೈತರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.

– ವಿಜಯಲಕ್ಷ್ಮಿ ನಾಯಕ್

## ಕರ್ನಾಟಕದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ ವ್ಯವಸ್ಥೆ

ಕನ್ನಡ ಪತ್ರಿಕೋದ್ಯಮ ಶಿಕ್ಷಣದ ಆರಂಭ: ಯೂರೋಪಿನಲ್ಲಿ ಜರುಗಿದ ವೈಚಾರಿಕ ಕ್ರಾಂತಿ ಭಾರತದ ಸಾಂಸ್ಕೃತಿಕ ಹಾಗೂ ಸಾಹಿತ್ಯ ಕ್ಷೇತ್ರಗಳ ಮೇಲೆ ವಿಶಿಷ್ಟ ಪ್ರಭಾವ ಬೀರಿತ್ತು. ಬ್ರಿಟಿಷರ ಸಂಪರ್ಕದ ಪರಿಣಾಮವಾಗಿ ಭಾರತಕ್ಕೆ ಪತ್ರಿಕೋದ್ಯಮ ಒದಗಿಬಂದಿತು. ಪಾಶ್ಚಾತ್ಯ ಸಂಪರ್ಕ, ಹೊಸ ಜನಶಿಕ್ಷಣ, ಕ್ರೈಸ್ತ ಮಿಷನರಿಗಳ ಮುದ್ರಣ ಮತ್ತು ಪತ್ರಿಕೋದ್ಯಮ, ಸಂಪರ್ಕ ಸೌಲಭ್ಯ ವಿಸ್ತರಣೆ ಮೊದಲಾದ ಕಾರಣಗಳಿಂದಾಗಿ ಅನೇಕ ಸಾಮಾಜಿಕ ಮತ್ತು ಸಾಹಿತ್ಯಕ ಬದಲಾವಣೆಗಳು ಕನ್ನಡನಾಡು ಮೊದಲಾದೆಡೆ ಉಂಟಾದವು. 1820 ರಿಂದ 1920 ರವರೆಗಿನ ಅರುಣೋದಯ ಕಾಲದಲ್ಲಿ ಶಿಕ್ಷಣಭಾಸ್ಕರ ಕರ್ನಾಟಕದಲ್ಲಿ ಅದೇ ಕಾಲಘಟ್ಟದಲ್ಲಿ ಕಾಣಿಸಿಕೊಂಡನೆಂದು ಹೆಸರಾಂತ ಇತಿಹಾಸಕಾರ ಶ್ರೀನಿವಾಸ ಹಾವನೂರು (1974) ದಾಖಲಿಸಿದ್ದಾರೆ.

Digitised by Bharatavani, CIIL

ಕನ್ನಡ ಪತ್ರಿಕೋದ್ಯಮಕ್ಕೆ 168 ವರ್ಷಗಳ ಇತಿಹಾಸವಿದೆಯಾದರೂ, ಉಳಿದ ಭಾಷೆಗಳಿಗೆ ಹೋಲಿಸಿದರೆ ಕನ್ನಡ ಪತ್ರಿಕೋದ್ಯಮವು ಸಾಕಷ್ಟು ವಿಳಂಬವಾಗಿಯೇ ಪ್ರಾರಂಭವಾಯಿತೆಂದು ಹೇಳಬಹುದು. ಕನ್ನಡದ ಮೊಟ್ಟಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' 01-07-1843 ರಲ್ಲಿ ಕರಾವಳಿ ಪ್ರದೇಶವಾದ ಮಂಗಳೂರಿನಲ್ಲಿ ಬಾಸೆಲ್ ಮಿಷನ್ ಸಂಸ್ಥೆಯ ರೆವರೆಂಡ್ ಹರ್ಮನ್ ಫ್ರೆಡರಿಕ್ ಮೊಗ್ಲಿಂಗ್‌ರವರಿಂದ ಪ್ರಾರಂಭವಾಯಿತು. ಧರ್ಮ ಪ್ರಚಾರವನ್ನೇ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದ ಕ್ರೈಸ್ತ ಮಿಷನರಿಗಳಿಂದ ಪ್ರಾರಂಭಿಸಲ್ಪಟ್ಟ ಕನ್ನಡ ಪತ್ರಿಕೋದ್ಯಮ ತದನಂತರ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿತು. ಕನ್ನಡ ಪತ್ರಿಕೋದ್ಯಮದ ಆರಂಭಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಹಲವಾರು ಪ್ರಜ್ಞಾವಂತ ನಾಗರಿಕರು ಮತ್ತು ನಿವೃತ್ತ ಸರ್ಕಾರಿ ಅಧಿಕಾರಿಗಳು ಕನ್ನಡ ಪತ್ರಿಕೆಗಳನ್ನು ಹೊರತಂದು ಅಂದಿನ ಸರ್ಕಾರದ ಕಾರ್ಯವೈಖರಿಗಳನ್ನು ವಿಶ್ಲೇಷಿಸಿದರು. ಧರ್ಮ, ಸಾಹಿತ್ಯ, ಶಿಕ್ಷಣ, ಪರಿಸರ, ಪ್ರಗತಿ ಮೊದಲಾದ ವಿಷಯಗಳಿಗೆ ಅಂದಿನ ಕನ್ನಡ ಪತ್ರಿಕೆಗಳು ಹೆಚ್ಚಿನ ಪ್ರಾಮುಖ್ಯತೆ ನೀಡಿದವು.

ಹೆಸರಾಂತ ಸಂಶೋಧಕ ಶ್ರೀನಿವಾಸ ಹಾವನೂರ (1986) ಮುಖ್ಯವಾಗಿ ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಮತ್ತು ಸಾಹಿತ್ಯಕ ಎಂಬ 4 ಬಗೆಯ ಉದ್ದೇಶಗಳುಳ್ಳ ಪತ್ರಿಕೆಗಳು ಮತ್ತು ನಿಯತಕಾಲಿಕಗಳನ್ನು 19ನೇ ಶತಮಾನದ ಕಾಲಘಟ್ಟದಲ್ಲಿ ಗುರುತಿಸುತ್ತಾರೆ. ಹಿರಿಯ ಪತ್ರಿಕೋದ್ಯಮ ಪ್ರಾಧ್ಯಾಪಕ ಕೆ.ವಿ.ನಾಗರಾಜ (1987) 19ನೇ ಶತಮಾನದಲ್ಲಿ ಒಟ್ಟು 91 ಕನ್ನಡ ಪತ್ರಿಕೆಗಳು (3 ದಿನಪತ್ರಿಕೆಗಳನ್ನು ಒಳಗೊಂಡಂತೆ) ಪ್ರಕಟಗೊಂಡವೆಂದು ತಿಳಿಸುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಅವಧಿಯಲ್ಲಿ ಕನ್ನಡ ಪತ್ರಿಕೋದ್ಯಮ ಸ್ವತಂತ್ರವಾಗಿ ಬೆಳೆಯಲು ಅನುಕೂಲಕರ ಪರಿಸರ ನಿರ್ಮಿಸಿದರು. ಕನ್ನಡ ಪತ್ರಿಕೋದ್ಯಮದ ಭೀಷ್ಮರೆಂದೇ ಗೌರವಿಸಲ್ಪಟ್ಟಿರುವ ವೃದ್ಧ ಪಿತಾಮಹ ಎಂ.ವೆಂಕಟಕೃಷ್ಣಯ್ಯನವರು ಪತ್ರಿಕೋದ್ಯಮ ಶಿಕ್ಷಣದಲ್ಲಿ ಹೆಚ್ಚಿನ ವಿಶ್ವಾಸ ಹೊಂದಿ ತಮ್ಮ 'ವೃತ್ತಾಂತ ಚಿಂತಾಮಣಿ' (1885) ಪತ್ರಿಕಾಲಯದಲ್ಲಿ ಅನೇಕ ಪತ್ರಕರ್ತರಿಗೆ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ನೀಡಿ ಕನ್ನಡ ಪತ್ರಿಕೋದ್ಯಮ ಶಿಕ್ಷಣದ ಹರಿಕಾರರೆಂದು ನಾಡಿನ ಇತಿಹಾಸದಲ್ಲಿ ದಾಖಲಾಗಿದ್ದಾರೆ.

ನಾಡಿನ ಹಿರಿಯ ಸಾಹಿತಿ ಮತ್ತು ಪತ್ರಕರ್ತ ಡಿ.ವಿ.ಗುಂಡಪ್ಪ (1968) ಬಹಳ ಹಿಂದೆಯೇ ಪತ್ರಿಕೋದ್ಯಮ ಶಿಕ್ಷಣದ ಮಹತ್ವವನ್ನು ಅರಿತವರಾಗಿದ್ದರು. ಸಾಹಿತ್ಯ ಮತ್ತು ಪತ್ರಿಕೋದ್ಯಮಗಳ ನಡುವಿನ ಪರಸ್ಪರ ಪೂರಕ ಸಂಬಂಧವನ್ನು ಅವರು ಹೀಗೆ ಗುರುತಿಸಿದ್ದಾರೆ: "ಸಾಹಿತ್ಯ ಅಂತರಂಗದ ಮಾಧ್ಯಮ, ಪತ್ರಿಕೆ ಒಂದು ಬಹಿರಂಗ ಮಾಧ್ಯಮ. ಸಮುದಾಯ ಶೋಭೆ ಸಾಹಿತ್ಯದಿಂದ ಮಾತ್ರ ಸಾಧ್ಯವಾಗಲಾಗುವುದಿಲ್ಲ. ಅದಕ್ಕೆ ಪತ್ರಿಕೋದ್ಯಮದ ನೆರವು ಬೇಕು. ಮನುಷ್ಯನ ಅಂತರಂಗದ ಶೋಭೆಯನ್ನು ಕಾಪಾಡುವ ಜವಾಬ್ದಾರಿಯನ್ನು ಸಾಹಿತ್ಯ ಮತ್ತು ಪತ್ರಿಕೆಗಳು ಹೊರಬೇಕಾಗುತ್ತದೆ. ಪತ್ರಿಕೋದ್ಯಮ ಕ್ಷೇತ್ರ ವೃತ್ತಿಪರವಾಗಿ ಶ್ರೀಮಂತಗೊಳ್ಳಬೇಕಾದರೆ ಅರ್ಥಪೂರ್ಣ ಶಿಕ್ಷಣ ಮತ್ತು ತರಬೇತಿಗಳನ್ನು ಆಧರಿಸಿದ ಪತ್ರಿಕಾ ಬರಹಗಳು ಓದುಗರನ್ನು ಯಥೇಚ್ಛವಾಗಿ ತಲುಪಬೇಕು."

ಎಂ.ವೆಂಕಟಕೃಷ್ಣಯ್ಯ 1921 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಆರಂಭಿಸಲು ಎರಡು ಸಾವಿರ ರೂಪಾಯಿಗಳನ್ನು ದಾನವಾಗಿ ನೀಡಿದ್ದರು. ಆದರೆ ಸುಮಾರು 30 ವರ್ಷಗಳ ನಂತರ (1951) ಮೈಸೂರಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಪತ್ರಿಕೋದ್ಯಮ ಪದವಿ ಮಟ್ಟದ ಶಿಕ್ಷಣ ಸೇವೆಯನ್ನು ಹೆಸರಾಂತ ಪತ್ರಿಕೋದ್ಯಮ ಶಿಕ್ಷಣ ತಜ್ಞ ದಿ.ನಾಡಿಗ ಕೃಷ್ಣಮೂರ್ತಿಯವರ ಸಾರಥ್ಯದಲ್ಲಿ ಪ್ರಾರಂಭಿಸಲಾಯಿತು. ಇಂದಿಗೂ ಸ್ನಾತಕಪೂರ್ವ ಪದವಿ ಮಟ್ಟದಲ್ಲಿ ಅತಿ ಹೆಚ್ಚು ಅಂಕಗಳಿಸಿದ ಪತ್ರಿಕೋದ್ಯಮ ವಿದ್ಯಾರ್ಥಿಗೆ ಅವರ ಹೆಸರಿನಲ್ಲಿ ದತ್ತಿ ಬಹುಮಾನ ನೀಡಲಾಗುತ್ತಿರುವುದು ಶ್ಲಾಘನೀಯವಾಗಿದೆ. ಅಂದು ಸಾಧ್ವಿ ಪತ್ರಿಕೆಯ ಸಂಪಾದಕರಾಗಿದ್ದ ಅಗರಂ ರಂಗಯ್ಯ ಮದ್ರಾಸಿನಲ್ಲಿ ಪತ್ರಿಕೋದ್ಯಮ ಶಿಕ್ಷಣದಲ್ಲಿ ಪದವಿಗಳಿಸಿದ ಮೊಟ್ಟಮೊದಲ ಕನ್ನಡಿಗರೆಂಬ ಹೆಗ್ಗಳಿಕೆ ಹೊಂದಿದ್ದರು. ಅವರು ಪತ್ರಿಕೋದ್ಯಮ ಶಿಕ್ಷಣದ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಯುವಪೀಳಿಗೆಗೆ ತಮ್ಮ ಪತ್ರಿಕಾಲಯದಲ್ಲೇ ವೃತ್ತಿಪರ ತರಬೇತಿ ನೀಡಿದರು.

**ಕರ್ನಾಟಕದಲ್ಲಿ ಪತ್ರಿಕೋದ್ಯಮ ಶಿಕ್ಷಣದ ಬೆಳವಣಿಗೆ:** ಸ್ವಾತಂತ್ರ್ಯಾನಂತರ ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಗೆ ಪೂರಕವಾದ ಪರಿಸರ ನಿರ್ಮಾಣವಾಯಿತು. ಅಂದು ಬಹಳಷ್ಟು ಜನ ಪತ್ರಿಕೋದ್ಯಮಿಗಳು ಯಾವುದೇ ಔಪಚಾರಿಕ ವೃತ್ತಿಪರ ಶಿಕ್ಷಣ ಮತ್ತು ತರಬೇತಿಗಳ ಹಿನ್ನೆಲೆ ಇಲ್ಲದೆ ಪತ್ರಿಕಾಲೋಕವನ್ನು ಪ್ರವೇಶಿಸಿದರು. ಅವರಿಗೆ ಪತ್ರಿಕೋದ್ಯಮ ಶಿಕ್ಷಣದ ಬಗ್ಗೆ ಹೆಚ್ಚಿನ ಅರಿವು ಮತ್ತು ವಿಶ್ವಾಸಗಳಿರಲಿಲ್ಲ. ಭಾರತದ ಮೊಟ್ಟಮೊದಲ ಪತ್ರಿಕಾ ಆಯೋಗ ಪತ್ರಿಕೋದ್ಯಮದ ಶಿಕ್ಷಣದ ಮಹತ್ವವನ್ನು ಕುರಿತು ಸರ್ಕಾರ ಮತ್ತು ಸಾರ್ವಜನಿಕರ ಗಮನಸೆಳೆಯುವ ವರದಿಯನ್ನು ಮಂಡಿಸಿತು. ಇಡೀ ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಹೆಚ್ಚಿನ ಮನ್ನಣೆ ಲಭಿಸಿತು. ಕರ್ನಾಟಕದಲ್ಲಿಯೂ ವ್ಯವಸ್ಥಿತವಾದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷ ಆಸಕ್ತಿ ವಹಿಸಿದವು.

ಪತ್ರಿಕೋದ್ಯಮ ಶಿಕ್ಷಣದ ಅವಶ್ಯಕತೆಯನ್ನು ಹಿರಿಯ ಪ್ರಾಧ್ಯಾಪಕ ನಾಡಿಗ ಕೃಷ್ಣಮೂರ್ತಿ (1981) ಹೀಗೆ ಸಮರ್ಥಿಸಿದ್ದಾರೆ: "ಪತ್ರಕರ್ತ ಹುಟ್ಟಿನಿಂದ, ಶಿಕ್ಷಣದಿಂದ ಅಲ್ಲ. ಇದು ನಿನ್ನೆ ಮೊನ್ನೆಯವರೆಗೂ ಭಾರತದಲ್ಲಿ ಪ್ರಚಾರದಲ್ಲಿದ್ದ ಸನ್ಮತಿಯ ಸೂಕ್ತಿ. ಪ್ರಪಂಚದ ಇತರ ದೇಶಗಳಲ್ಲಿ, ಮುಖ್ಯವಾಗಿ ಇಂಗ್ಲೆಂಡಿನಲ್ಲೂ, ಇದೇ ತರಹ ಅಭಿಪ್ರಾಯವಿತ್ತು. ಬ್ರಿಟನ್ನಿನ ಸಂಪ್ರದಾಯ ಹೊತ್ತ ನಮ್ಮ ಹಳೆಯ ತಲೆಮಾರಿನ ಅತಿರಥ ಸಂಪಾದಕರಲ್ಲಿ ಅನೇಕರು ಇದನ್ನು ಪ್ರಬಲವಾಗಿ ನಂಬಿಕೊಂಡಿದ್ದರು. ಬಹುಶಃ ದೇವರೇ ಅವರನ್ನು ಪತ್ರಕರ್ತರನ್ನಾಗಿ ಸೃಷ್ಟಿಸಿದನೆಂದು ಭ್ರಮಿಸಿದ್ದಿರಬೇಕು. ಆದರೆ

Digitised by Bharatavani, CIIL

ಇಂದು ಕಾಲಚಕ್ರ ಉರುಳಿದೆ. ಶಿಕ್ಷಣದಿಂದ ಪತ್ರಕರ್ತರನ್ನಾಗಿ ತಯಾರುಮಾಡಬಹುದು ಎನ್ನುವುದನ್ನು ಅಮೇರಿಕಾ ಮತ್ತು ಇತರ ರಾಷ್ಟ್ರಗಳು ಮನಗಂಡಿವೆ. ಬ್ರಿಟನ್ನೂ ಈಗ ಆ ಹೆಜ್ಜೆಯನ್ನಿಡುತ್ತಿದೆ. ನಾವೂ ಅದನ್ನು ಕಂಡುಕೊಂಡಿದ್ದೇವೆ. ವಿಖ್ಯಾತ ಪತ್ರಕರ್ತ ಬೆಂಜಮಿನ್ ಗೈ ಹಾರ್ನಿಮನ್ ಹೇಳಿದಂತೆ ಅತಿ ಸಾಮಾನ್ಯ ಬುದ್ಧಿಮತ್ತೆಯ ವ್ಯಕ್ತಿಯನ್ನು ತರಬೇತಿಯಿಂದ ಪಕ್ಕಾ ಪತ್ರಕರ್ತನನ್ನಾಗಿ ಮಾಡಬಹುದು. ಪತ್ರಿಕಾಲಯದೊಳಗಿನ ತಪ್ಪು ಒಪ್ಪಿನ ಪ್ರಯತ್ನದ ಕಾಲವ್ಯಯ ಪರಿಶ್ರಮಕ್ಕೆ ವಿದಾಯ ಹೇಳಲು ಸಮಯ ನಮ್ಮ ಮುಂದಿದೆ. ಪತ್ರಿಕೋದ್ಯಮ ಶಿಕ್ಷಣ ಇಂದು ಜಗತ್ತಿನಲ್ಲೆಲ್ಲಾ ಅಂಗೀಕಾರಾರ್ಹವಾಗಿರುವ ತರಬೇತಿ."

ಕರ್ನಾಟಕ ರಾಜ್ಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಪ್ರಾರಂಭಿಸಿದ ಖ್ಯಾತಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲುತ್ತದೆ. 1951 ರಲ್ಲಿ ಮೈಸೂರಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಪತ್ರಿಕೋದ್ಯಮ ವಿಷಯದಲ್ಲಿ ಪದವಿ ಮಟ್ಟದ ಔಪಚಾರಿಕ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಅಂದು ಹೆಸರಾಂತ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಎಂ.ವಿ.ಕೃಷ್ಣರಾಯರು ಪತ್ರಿಕೋದ್ಯಮ ಶಿಕ್ಷಣದ ಬೆಳವಣಿಗೆಗೆ ವಿಶೇಷವಾಗಿ ಸಹಕರಿಸಿದರು. ಪತ್ರಿಕೋದ್ಯಮವು ಒಂದು ವೃತ್ತಿಯಾಗಿರುವುದರಿಂದ ಪತ್ರಕರ್ತರಿಗೆ ವೃತ್ತಿಪರ ತರಬೇತಿಯ ಅವಶ್ಯಕತೆ ಬಹಳಷ್ಟಿದೆಯೆಂದು ಶೈಕ್ಷಣಿಕ ಆಡಳಿತಗಾರರಿಗೆ ಮನವರಿಕೆಯಾಯಿತು. ಅಂದು ಪತ್ರಿಕೆಗಳೇ ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ಸಮಾಚಾರ, ಶಿಕ್ಷಣ, ಮನರಂಜನೆ, ಜಾಹೀರಾತು ಪ್ರಚಾರ, ಯೋಜಿತ ಪ್ರಚಾರ, ಮಾರ್ಗದರ್ಶನ, ಸಲಹಾ ಸೇವೆ ಮೊದಲಾದವುಗಳನ್ನು ಒದಗಿಸುತ್ತಿದ್ದ ಕಾರಣದಿಂದ 'ಪತ್ರಿಕೋದ್ಯಮ ವೃತ್ತಿ' ಪ್ರಧಾನವಾಗಿ ಗುರುತಿಸಲ್ಪಟ್ಟಿತು. ತದನಂತರ ಚಲನಚಿತ್ರ, ಬಾನುಲಿ, ದೂರದರ್ಶನ, ಜಾಹೀರಾತು, ಸಾರ್ವಜನಿಕ ಸಂಪರ್ಕ, ಮಾಧ್ಯಮ ನಿರ್ವಹಣೆ, ಮಾಧ್ಯಮ ಸಂಶೋಧನೆ, ಮಾಧ್ಯಮ ಕಾನೂನುಗಳು, ಮಾಧ್ಯಮ ವಿಮರ್ಶೆ ಮೊದಲಾದ ಅನೇಕ ವಿಷಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಲಭಿಸಿತು. ವ್ಯಾವಹಾರಿಕ ದೃಷ್ಟಿಯಿಂದ 'ಪತ್ರಿಕೋದ್ಯಮ' ಕಾರ್ಯಕ್ಷೇತ್ರ ಗಮನಾರ್ಹವಾಗಿ ವಿಸ್ತರಣಗೊಂಡು 'ಸಮೂಹ ಸಂಪರ್ಕ' ಎಂಬ ಹೊಸ ಶೀರ್ಷಿಕೆ ಲಭಿಸಿತು. ಅಂದಿನಿಂದ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಎಂಬ ವಿಶಿಷ್ಟವಾದ ಮಾಧ್ಯಮ ಸೇವೆ ಮತ್ತು ಶಿಕ್ಷಣ ಸೌಲಭ್ಯಗಳು ನಾಡಿನಲ್ಲಿ ಜಾರಿಗೊಳಿಸಲ್ಪಟ್ಟವು.

1971ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯಲ್ಲಿ ಹಿರಿಯ ಪ್ರಾಧ್ಯಾಪಕ ನಾಡಿಗ ಕೃಷ್ಣಮೂರ್ತಿಯವರ ಸಾರಥ್ಯದಲ್ಲಿ ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗವನ್ನು ಆರಂಭಿಸಿತು. 1974 ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತೋರ್ವ ಹಿರಿಯ ಪ್ರಾಧ್ಯಾಪಕ ಕೆ.ಇ. ಈಪನ್‌ರವರ ನೇತೃತ್ವದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ ತರಬೇತಿಯನ್ನು ಸ್ನಾತಕೋತ್ತರ ಹಂತದಲ್ಲಿ 'ಸಂಪರ್ಕ ಶಾಸ್ತ್ರ ವಿಭಾಗ'ದ ವತಿಯಿಂದ ಪ್ರಾರಂಭಿಸಿತು. 1984 ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಹೆಸರಾಂತ ಅರ್ಥಶಾಸ್ತ್ರಜ್ಞ ಡಿ.ಎಂ.ನಂಜುಂಡಪ್ಪನವರ ದೂರದೃಷ್ಟಿಯ ಫಲವಾಗಿ ಸ್ನಾತಕೋತ್ತರ ಮಟ್ಟದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ತರಬೇತಿಯನ್ನು ಪ್ರಾಧ್ಯಾಪಕ ಎ.ಎಸ್. ಬಾಲಸುಬ್ರಹ್ಮಣ್ಯರವರ ನೇತೃತ್ವದಲ್ಲಿ ಪ್ರಾರಂಭಿಸಿತು. 1988 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಹೆಸರಾಂತ ಸಸ್ಯಶಾಸ್ತ್ರಜ್ಞ ಶಫೀವುಲ್ಲಾರವರ ಮಾರ್ಗದರ್ಶನದಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ ಶಿಕ್ಷಣವನ್ನು ಪ್ರಾಧ್ಯಾಪಕ ಜಿ.ಪಿ.ಶಿವರಾಂರವರ ನೇತೃತ್ವದಲ್ಲಿ ಪ್ರಾರಂಭಿಸಿತು.

ಭಾರತೀಯ ಪತ್ರಿಕೋದ್ಯಮ ಶಿಕ್ಷಣದ ಹರಿಕಾರರಲ್ಲಿ ಪ್ರಮುಖರಾದ ದಿ.ನಾಡಿಗ ಕೃಷ್ಣಮೂರ್ತಿಯವರು ಪತ್ರಿಕೋದ್ಯಮ ಶಿಕ್ಷಣವನ್ನು ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ನಿರಂಜನ ವಾನಳ್ಳಿ (2003) ಹೀಗೆ ಉಲ್ಲೇಖಿಸಿದ್ದಾರೆ: "ಭಾರತದ ವಿಶ್ವವಿದ್ಯಾನಿಲಯಗಳಲ್ಲಿರುವ ಪತ್ರಿಕೋದ್ಯಮ ಇಲಾಖೆಗಳು ಸಂಖ್ಯಾದೃಷ್ಟಿಯಿಂದ ಸಾಕಷ್ಟಿಲ್ಲವೆನ್ನಬಹುದು. ಕೆಲಸ ಮಾಡುತ್ತಿರುವ ಇಲಾಖೆಗಳು ಉಪಕರಣಗಳ ದೃಷ್ಟಿಯಿಂದ ಬಹಳ ಅಸಮರ್ಪಕವಾಗಿವೆ. ಅವುಗಳಿಗೆ ದೊರಕಬೇಕಾದಂತಹ ಪ್ರೋತ್ಸಾಹ ದೊರೆಯುತ್ತಿಲ್ಲ. ಭಾರತದಲ್ಲಿ ಅಕ್ಷರಸ್ಥರಲ್ಲಿ ಓದುವ ಹವ್ಯಾಸ ತೀವ್ರವಾಗಿ ಬೆಳೆಯುತ್ತಿರುವುದರಿಂದ ಅದರ ಜೊತೆಯಾಗಿ ನಿಲ್ಲುವುದರ ಸಲುವಾಗಿ ದೇಶದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಕ್ರಮಬದ್ಧವಾದ ಪತ್ರಿಕೋದ್ಯಮ ಶಿಕ್ಷಣವನ್ನು ಆರಂಭಿಸಲೇಬೇಕಾಗುತ್ತದೆ."

1984 ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಇಡೀ ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಏಕರೂಪದ ಪಠ್ಯಕ್ರಮ, ತರಬೇತಿ ಸೌಲಭ್ಯಗಳು ಮತ್ತು ಸಂಶೋಧನಾ ಕಾರ್ಯ ಚಟುವಟಿಕೆಗಳು ಬೇಕೆಂದು ಸಲಹೆ ನೀಡಿತು. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಪಠ್ಯಕ್ರಮದಲ್ಲಿ ಏಕರೂಪತೆಯನ್ನು ಕಾಯ್ದುಕೊಂಡು ಬಂದಿವೆ. ಬಹಳಷ್ಟು ವಿಮರ್ಶಕರು ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಪತ್ರಿಕೋದ್ಯಮವನ್ನು ಬೋಧಿಸುವ ಶಿಕ್ಷಕರ ಕೊರತೆ ಇದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅಮೇರಿಕಾ, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ನೀಡುತ್ತಿರುವ ಪಠ್ಯಪುಸ್ತಕಗಳನ್ನು ಆಧರಿಸಿ ಕರ್ನಾಟಕದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಒದಗಿಸುವುದು ಅನಿವಾರ್ಯವಾಯಿತು. ಕನ್ನಡ ಭಾಷೆಯಲ್ಲಿ ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ ಸೇವಾ ಸೌಲಭ್ಯಗಳನ್ನು 1980ರ ದಶಕದಲ್ಲಿ ಒದಗಿಸಲಾಯಿತು. ಅಂಚೆಯ ಮೂಲಕವೂ ಪತ್ರಿಕೋದ್ಯಮ ಶಿಕ್ಷಣವನ್ನು ನೀಡುವ ಸಲುವಾಗಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಹಂತಗಳಲ್ಲಿ ಅವಶ್ಯಕ ಸೇವಾ ಸೌಲಭ್ಯಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಆರಂಭಿಸಿತು.

80ರ ದಶಕದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲಿ ಅವಶ್ಯಕ ಬೋಧನಾ ಸಾಮಗ್ರಿಗಳು ಲಭಿಸಲಿಲ್ಲ. ಈ ಅವಧಿಯಲ್ಲಿ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಪದವಿ ಮಟ್ಟದಲ್ಲಿ

Digitised by Bharatavani, CIIL

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ ಸೇವೆಯನ್ನು ನಾಡಿನಾದ್ಯಂತ ಯುವ ಪೀಳಿಗೆಗೆ ಒದಗಿಸಿದವು. ಬೆಂಗಳೂರು ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಪತ್ರಿಕಾ ಅಕಾಡಮಿ ಹಲವಾರು ವಿಷಯಗಳಲ್ಲಿ ಯುವ ಸಮುದಾಯಕ್ಕೆ ವೃತ್ತಿಪರ ತರಬೇತಿ ನೀಡಿದವು.

**ಪ್ರಸ್ತುತ ಪತ್ರಿಕೋದ್ಯಮ ಮತ್ತು ಸಂವಹನ ಶಿಕ್ಷಣ:** 21ನೆ ಶತಮಾನದ ಆರಂಭದಲ್ಲಿ ಕರ್ನಾಟಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಬಿಜಾಪುರ ಮಹಿಳಾ ವಿಶ್ವವಿದ್ಯಾನಿಲಯ, ಕರ್ನಾಟಕ ರಾಜ್ಯ ಮತ್ತು ಮುಕ್ತ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡದ ಕೃಷಿ ವಿಶ್ವವಿದ್ಯಾನಿಲಯಗಳು, ಬೆಂಗಳೂರಿನ ಭಾರತೀಯ ವಿದ್ಯಾಭವನ, ಬೆಂಗಳೂರಿನ ಏಷಿಯನ್ ಕಾಲೇಜ್ ಆಫ್ ಜರ್ನಲಿಸಂ, ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್, ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಮತ್ತು ನ್ಯೂ ಮೀಡಿಯಾ, ಶ್ರೀ ಶ್ರೀ ರವಿಶಂಕರ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಮೊದಲಾದವುಗಳು ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ 'ಸಂವಹನ ಶಿಕ್ಷಣ' ಸೇವೆಯನ್ನು ಒದಗಿಸುತ್ತಿವೆ. ಇವುಗಳಲ್ಲದೆ ಸುಮಾರು 30ಕ್ಕೂ ಹೆಚ್ಚು ಖಾಸಗಿ ಕಾಲೇಜುಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಶಿಕ್ಷಣ ಸೇವೆಗಳನ್ನು ಒದಗಿಸುತ್ತಿವೆ.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಕ್ಷೇತ್ರಗಳಲ್ಲಿ ಉಂಟಾಗಿರುವ ಕ್ರಾಂತಿಕಾರಕ ಬದಲಾವಣೆಗಳಿಂದ ಇತ್ತೀಚಿನ ವರ್ಷಗಳಲ್ಲಿ ದೂರಸಂಪರ್ಕ ಸಂವಹನ, ಉಪಗ್ರಹ ಸಂವಹನ ಮತ್ತು ಗಣಕ ಯಂತ್ರ ಸಂವಹನಗಳ ನೆರವಿನಿಂದ ಶಿಕ್ಷಣ ಮತ್ತು ತರಬೇತಿ ಸೇವೆಗಳನ್ನು ಗಮನಾರ್ಹವಾಗಿ ಆಧುನೀಕರಣಗೊಳಿಸಲಾಗಿದೆ. ಕರ್ನಾಟಕದ ಪ್ರತಿಷ್ಠಿತ ಖಾಸಗಿ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಪರಿಣತ ಬೋಧನಾ ಸಿಬ್ಬಂದಿ ನೇಮಕಾತಿ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಕೊಠಡಿಗಳ ಆಧುನೀಕರಣ, ತಜ್ಞ ತಾಂತ್ರಿಕ ಸಿಬ್ಬಂದಿ ನೇಮಕಾತಿ ಮೊದಲಾದ ಸೇವಾ ಸೌಲಭ್ಯಗಳನ್ನು ಯುವ ಪೀಳಿಗೆಯ ಪತ್ರಕರ್ತರು ಮತ್ತು ಸಂವಹನಕಾರರಿಗೆ ಒದಗಿಸುತ್ತಿವೆ. ಸಾಮಾನ್ಯವಾಗಿ ಪಠ್ಯಕ್ರಮದಲ್ಲಿ ವರದಿಗಾರಿಕೆ, ಪ್ರತಿಸಂಪಾದನೆ, ಪುಟವಿನ್ಯಾಸ, ಮುದ್ರಣ ವಿನ್ಯಾಸ, ಪತ್ರಿಕಾ ಇತಿಹಾಸ, ಛಾಯಾಚಿತ್ರ ಪತ್ರಿಕೋದ್ಯಮ, ನುಡಿಚಿತ್ರ ಪತ್ರಿಕೋದ್ಯಮ, ಅಭಿವೃದ್ಧಿ ಪತ್ರಿಕೋದ್ಯಮ, ಜಾಹೀರಾತು, ಸಾರ್ವಜನಿಕ ಸಂಪರ್ಕ, ಮಾಧ್ಯಮ ಕಾನೂನುಗಳು, ಮಾಧ್ಯಮ ನಿರ್ವಹಣೆ, ಮಾಧ್ಯಮ ಸಂಶೋಧನೆ, ವಿದ್ಯುನ್ಮಾನ ಕಾರ್ಯಕ್ರಮ ತಯಾರಿಕೆ, ವೆಬ್ ಪತ್ರಿಕೋದ್ಯಮ, ಮಾಧ್ಯಮ ಬರವಣಿಗೆ, ಜಾನಪದ ಮಾಧ್ಯಮ, ಅಂತರ-ಸಂಸ್ಕೃತಿ ಸಂವಹನ, ಅಂತರಾಷ್ಟ್ರೀಯ ಸಂವಹನ ಮೊದಲಾದವುಗಳನ್ನು ಈಗ ಅಳವಡಿಸಲಾಗಿದೆ. ಮುದ್ರಣ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ, ಜಾಹೀರಾತು ಉದ್ದಿಮೆ, ಸಾರ್ವಜನಿಕ ಸಂಪರ್ಕ ವೃತ್ತಿ, ಬಾನುಲಿ, ದೂರದರ್ಶನ, ಸಿನಿಮಾ, ನೂತನ ಸಂವಹನ ತಂತ್ರಜ್ಞಾನ, ಮಾಧ್ಯಮ ನಿರ್ವಹಣೆ ಮೊದಲಾದ ಕ್ಷೇತ್ರಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣವನ್ನು ಕರ್ನಾಟಕದಲ್ಲಿ ಆಧುನೀಕರಣ ಗೊಳಿಸಲಾಗಿದೆ.

ಕರ್ನಾಟಕದಲ್ಲಿ ಪತ್ರಿಕೆಗಳು, ಬಾನುಲಿ ಸೇವೆ, ದೂರದರ್ಶನ ಸೇವೆ, ನೂತನ ಸಂವಹನ ತಂತ್ರಜ್ಞಾನಗಳ ಸೇವೆ, ಜಾಹೀರಾತು ಸೇವೆ, ಸಾರ್ವಜನಿಕ ಸಂಪರ್ಕಸೇವೆ, ಮಾಧ್ಯಮ ನಿರ್ವಹಣೆ ಸೇವೆ, ಮಾಧ್ಯಮ ಸಂಶೋಧನೆ ಸೇವೆ, ಮಾಧ್ಯಮ ವಿಮರ್ಶೆ ಸೇವೆ ಮೊದಲಾದವುಗಳು ಕ್ರಾಂತಿಕಾರಕ ರೀತಿಯಲ್ಲಿ ಹೆಚ್ಚುತ್ತಿವೆ. ಪರಿಣತ ಮಾಧ್ಯಮ ವೃತ್ತಿಪರರಿಗೆ ವಿಶೇಷವಾದ ಬೇಡಿಕೆಯಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಾಧ್ಯಮ ಸಂಸ್ಥೆಗಳು ಯುವಪೀಳಿಗೆಯ ಪತ್ರಕರ್ತರು ಮತ್ತು ಸಂವಹನಕಾರರಿಗೆ ಹೆಚ್ಚಿನ ಉದ್ಯೋಗಾವಕಾಶ, ಬಡ್ತಿ, ವೇತನ ಮತ್ತಿತರ ಸೇವಾ ಸೌಲಭ್ಯಗಳನ್ನು ನೀಡುವ ಸಾಮರ್ಥ್ಯ ಹೊಂದಿವೆ. ಸಮರ್ಥ ಹಾಗೂ ಸೃಜನಶೀಲ ಮಾಧ್ಯಮ ವೃತ್ತಿಪರರಿಗೆ ಉದ್ಯೋಗದ ಕೊರತೆಯಿಲ್ಲ. ಇಂದು ದೇಶಾದ್ಯಂತ ಏಕರೂಪ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲಾಗಿದೆ. ಯಾವುದಾದರೂ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ವಿಶೇಷ ಪರಿಣತಿಯನ್ನು ಗಳಿಸುವ ಅವಶ್ಯಕತೆ ಇಂದಿನ ಯುವಪೀಳಿಗೆಗೆ ಹೆಚ್ಚಾಗಿದೆ.

ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಪ್ರತಿಭಾವಂತ ಸಂವಹನಕಾರರಿಗೆ ಹೆಚ್ಚಿನ ಮಾನ್ಯತೆಯಿದೆ. ಕರ್ನಾಟಕದ ಪ್ರತಿಷ್ಠಿತ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಮಾಧ್ಯಮ ಕ್ಷೇತ್ರದ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ, ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಸೇವೆಗಳನ್ನು ಗಣನೀಯವಾಗಿ ಆಧುನೀಕರಣಗೊಳಿಸುತ್ತಿವೆ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಪರಿಣತ ಶಿಕ್ಷಕರನ್ನು ನೇಮಿಸಿಕೊಳ್ಳಲು ಅವಶ್ಯಕ ಸೌಲಭ್ಯಗಳನ್ನು ಒದಗಿಸುತ್ತಿದೆ. ವಿವಿಧ ವಿಭಾಗಗಳಲ್ಲಿ ಬಾನುಲಿ ಮತ್ತು ದೂರದರ್ಶನ ಪ್ರಯೋಗಶಾಲೆ, ಸುಸಜ್ಜಿತ ತರಗತಿ, ಗಣಕಯಂತ್ರ ಪ್ರಯೋಗಶಾಲೆ, ಛಾಯಾಚಿತ್ರ ಪತ್ರಿಕೋದ್ಯಮ ವ್ಯವಸ್ಥೆ, ಗ್ರಂಥಾಲಯ ಮೊದಲಾದ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಧನಸಹಾಯ ಆಯೋಗ ಆರ್ಥಿಕ ನೆರವು ನೀಡುತ್ತದೆ. ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಸ್ವಸಹಾಯ ವ್ಯವಸ್ಥೆಯ ಮೂಲಕ ವಿವಿಧ ರಾಜ್ಯಗಳ ಮತ್ತು ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಮತ್ತು ತರಬೇತಿ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಿದೆ.

**ಕರ್ನಾಟಕದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಶಿಕ್ಷಣ ಸವಾಲುಗಳು:** ಕರ್ನಾಟಕದಲ್ಲಿಯೂ ವೈವಿಧ್ಯ ಮಯವಾದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ತರಬೇತಿ ಸೇವಾ ಸೌಲಭ್ಯಗಳು ಲಭಿಸುತ್ತಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ – ಡಿಪ್ಲೊಮಾ ಇನ್ ಜರ್ನಲಿಸಂ ಅಂಡ್ ಮಾಸ್ ಕಮ್ಯುನಿಕೇಷನ್, ಡಿಪ್ಲೊಮಾ ಇನ್ ಪ್ರಿಂಟಿಂಗ್ ಟೆಕ್ನಾಲಜಿ, ಡಿಪ್ಲೊಮಾ ಇನ್

Digitised by Bharatavani, CIIL

ವೀಡಿಯೋ ಪ್ರೊಡಕ್ಷನ್, ಡಿಪ್ಲೊಮಾ ಇನ್ ಫಿಲಂ ಅಪ್ರಿಸಿಯೇಷನ್, ಡಿಪ್ಲೊಮಾ ಇನ್ ಅಡ್ವರ್ಟೈಸಿಂಗ್ ಅಂಡ್ ಪಬ್ಲಿಕ್ ರಿಲೇಷನ್ಸ್, ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಜರ್ನಲಿಸಂ ಅಂಡ್ ಮಾಸ್ ಕಮ್ಯುನಿಕೇಷನ್, ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಅಡ್ವರ್ಟೈಸಿಂಗ್ ಅಂಡ್ ಪಬ್ಲಿಕ್ ರಿಲೇಷನ್ಸ್, ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ವೀಡಿಯೋ ಪ್ರೊಡಕ್ಷನ್, ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಡೆವಲಪ್‌ಮೆಂಟ್ ಕಮ್ಯುನಿಕೇಷನ್, ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಕಾರ್ಪೊರೇಟ್ ಕಮ್ಯುನಿಕೇಷನ್, ಮಾಸ್ಟರ್ ಆಫ್ ಆರ್ಟ್ಸ್ ಇನ್ ಮಾಸ್ ಕಮ್ಯುನಿಕೇಷನ್ ಅಂಡ್ ಜರ್ನಲಿಸಂ, ಮಾಸ್ಟರ್ ಆಫ್ ಸೈನ್ಸ್ ಇನ್ ಕಮ್ಯುನಿಕೇಷನ್, ಮಾಸ್ಟರ್ ಆಫ್ ಅಡ್ವರ್ಟೈಸಿಂಗ್ ಅಂಡ್ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್, ಮಾಸ್ಟರ್ ಆಫ್ ಫಿಲಾಸಫಿ ಇನ್ ಜರ್ನಲಿಸಂ ಅಂಡ್ ಮಾಸ್ ಕಮ್ಯುನಿಕೇಷನ್ ಮತ್ತು ಡಾಕ್ಟರೇಟ್ ಆಫ್ ಫಿಲಾಸಫಿ ಇನ್ ಜರ್ನಲಿಸಂ ಅಂಡ್ ಮಾಸ್ ಕಮ್ಯುನಿಕೇಷನ್ ಇತ್ಯಾದಿ.

ಕರ್ನಾಟಕದಲ್ಲೂ ಬಹಳಷ್ಟು ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಆಂಗ್ಲಭಾಷೆಯಲ್ಲಿ ಮಾಧ್ಯಮ ಶಿಕ್ಷಣವನ್ನು ನೀಡಲಾಗುತ್ತಿದೆ. ಸೆಮಿಸ್ಟರ್ ಮತ್ತು ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್ ಪದ್ಧತಿಗಳನ್ನು ಕರ್ನಾಟಕದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಂಡಿವೆ. ಬಹುತೇಕ ವಿದ್ಯಾರ್ಥಿಗಳು ಆಂಗ್ಲಭಾಷೆಯಲ್ಲಿ ಅವಶ್ಯಕ ಪ್ರೌಢಿಮೆ ಮತ್ತು ಸಂವಹನ ಕೌಶಲ್ಯಾಭಿವೃದ್ಧಿಯಲ್ಲಿ ಹಿಂದುಳಿದಿರುವುದು ಶೋಚನೀಯ ಸಂಗತಿಯಾಗಿದೆ. ಕನ್ನಡ ಭಾಷೆಯಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಅವಶ್ಯಕ ಬೋಧನಾ ಸಾಮಗ್ರಿಗಳು ಲಭಿಸುತ್ತಿಲ್ಲ. ಬೇರೆ ದೇಶಗಳಲ್ಲಿ ನೀಡುತ್ತಿರುವ ಪಠ್ಯವಿಷಯಗಳು ಮತ್ತು ಕ್ರಮಗಳನ್ನು ಕುರುಡಾಗಿ ಅಳವಡಿಸಿಕೊಳ್ಳುತ್ತಿರುವ ಪ್ರವೃತ್ತಿಗೆ ಕನ್ನಡ ನಾಡಿನಲ್ಲಿ ಇಂದಿಗೂ ಕೂಡ ಇತಿಶ್ರೀ ಹಾಡದಿರುವುದು ಬೌದ್ಧಿಕ ವಿಪರ್ಯಾಸವಾಗಿದೆ. ಬೋಧಕರು ಮತ್ತು ವಿದ್ಯಾರ್ಥಿಗಳಿಗೆ ಅವಶ್ಯಕ ಪ್ರಮಾಣದಲ್ಲಿ ಭಾಷಾಂತರ ತರಬೇತಿ ಸೌಲಭ್ಯಗಳು ಲಭಿಸುತ್ತಿಲ್ಲ. ಆಂಗ್ಲಭಾಷೆ ಮತ್ತು ಕನ್ನಡ ಭಾಷೆಗಳಲ್ಲಿ ಸಮಾನ ಪ್ರೌಢಿಮೆಯನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಇಂದು ಲಭಿಸುತ್ತಿರುವ ತರಬೇತಿ ಮತ್ತು ಸಹಕಾರ ಪ್ರಶ್ನಾರ್ಹವಾಗಿದೆ.

ಕನ್ನಡ ನಾಡಿನ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಮಾಧ್ಯಮ ಪಠ್ಯ ವಿಷಯಗಳನ್ನು ಸಮಕಾಲೀನ ಮಾಧ್ಯಮ ಸಂಸ್ಥೆಗಳ ಅಗತ್ಯಗಳಿಗನುಸಾರವಾಗಿ ನವೀಕರಣಗೊಳಿಸದಿರುವುದು ವಿಶಾದಕರ ಸಂಗತಿ ಯಾಗಿದೆಯೆಂದು ಮಾಧ್ಯಮ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮಾಧ್ಯಮ ಸಂಸ್ಥೆಗಳು ಮತ್ತು ತರಬೇತಿ ಸಂಸ್ಥೆಗಳ ನಡುವೆ ಅರ್ಥಪೂರ್ಣ ಸಂಯೋಜನೆ ಕೊರತೆಯಿಂದಾಗಿ ಮಾಧ್ಯಮದ ಅಗತ್ಯಗಳನ್ನು ಪೂರೈಸಬಲ್ಲ ಪ್ರತಿಭಾವಂತ ಯುವಕ–ಯುವತಿಯರನ್ನು ತಯಾರಿಸುವುದು ಪ್ರಾಯೋಗಿಕವಾಗಿ ಕಷ್ಟಸಾಧ್ಯವಾಗಿದೆ. ಖಾಸಗಿ ಮಾಧ್ಯಮ ಸಂಸ್ಥೆಗಳು ಸಾಮಾಜಿಕ ಹೊಣೆಗಾರಿಕೆ ಮತ್ತು ಸಾಮಾಜಿಕ ನ್ಯಾಯ ಸಿದ್ಧಾಂತಗಳಿಗೆ ಹೆಚ್ಚಿನ ಮಹತ್ವ ನೀಡಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಕಲಿಯುತ್ತಿರುವ ಸಂದರ್ಭದಲ್ಲೇ ಮಾಧ್ಯಮ ಸಂಸ್ಥೆಗಳಲ್ಲಿಯೂ ದಿನನಿತ್ಯ ತರಬೇತಿ ಪಡೆಯುವ ಸೌಲಭ್ಯಗಳಿಂದ ವಿದ್ಯಾರ್ಥಿ ಸಮುದಾಯ ವಂಚಿತವಾಗಿದೆ. ಅನೇಕ ಗ್ರಾಮೀಣ ಹಾಗೂ ಹಿಂದುಳಿದ ಸಮುದಾಯಗಳಿಂದ ಬರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉದ್ಯೋಗಾವಕಾಶಗಳಿಂದ ವಂಚಿತರಾಗಿದ್ದಾರೆ.

ಸರ್ಕಾರ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ವಿಶ್ವವಿದ್ಯಾನಿಲಯಗಳು ಮತ್ತು ಮಾಧ್ಯಮ ಸಂಸ್ಥೆಗಳ ನಡುವೆ ಅರ್ಥಪೂರ್ಣ ಸಂಯೋಜನೆಯ ಕೊರತೆಯಿಂದಾಗಿ ಮಾಧ್ಯಮ ಶಿಕ್ಷಣ ಕರ್ನಾಟಕ ರಾಜ್ಯದಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಿಲ್ಲ.

ಕರ್ನಾಟಕದ ಮಾಧ್ಯಮ ಶಿಕ್ಷಣದ ಪ್ರಗತಿ ಏಕಮುಖವಾದುದಲ್ಲ. ಅನೇಕ ಸಂಸ್ಥೆಗಳು ಒಗ್ಗೂಡಿ ಸಾಮರಸ್ಯದಿಂದ ಕೆಲಸ ನಿರ್ವಹಿಸಿದಾಗ ಮಾತ್ರ ಮಾಧ್ಯಮ ಶಿಕ್ಷಣದ ಪ್ರಗತಿಯ ಕನಸು ನನಸಾಗುತ್ತದೆ. ಬಹು ಮುಖ್ಯವಾಗಿ ಪ್ರಾಯೋಗಿಕ ತರಬೇತಿಯನ್ನು ಛಾಯಾಚಿತ್ರ ಪತ್ರಿಕೋದ್ಯಮ, ಮುದ್ರಣ ತಂತ್ರಜ್ಞಾನ, ವೀಡಿಯೋ ತಂತ್ರಜ್ಞಾನ, ಪ್ರತಿಸಂಪಾದನೆ, ಪುಟವಿನ್ಯಾಸ, ಮಾಧ್ಯಮ ಬರವಣಿಗೆ, ಮಾಧ್ಯಮ ನಿರ್ವಹಣೆ, ಸಾರ್ವಜನಿಕ ಸಂಪರ್ಕ, ಜಾಹೀರಾತು ನಿರ್ವಹಣೆ, ಮಾಧ್ಯಮ ವಿಮರ್ಶೆ ಮೊದಲಾದ ಕ್ಷೇತ್ರದಲ್ಲಿ ವಿಷಯ ಪರಿಣತರು ಮತ್ತು ಹಿರಿಯ ಮಾಧ್ಯಮ ವೃತ್ತಿಪರರಿಂದ ಏರ್ಪಡಿಸುವುದು ಅತ್ಯವಶ್ಯಕ. ಮಾಧ್ಯಮ ನಿರ್ವಹಣೆ ಕ್ಷೇತ್ರದಲ್ಲಿ ಇಂದು ಕ್ರಾಂತಿಕಾರಕ ಬದಲಾವಣೆಗಳಾಗುತ್ತಿವೆ. ಮಾಧ್ಯಮ ಕ್ಷೇತ್ರ ಬಯಸುವಂತಹ ಮಾಧ್ಯಮ ತರಬೇತಿ ಮತ್ತು ಮಾಧ್ಯಮ ವೃತ್ತಿಪರರನ್ನು ರೂಪಿಸುವುದು ಸಮಕಾಲೀನ ಜವಾಬ್ದಾರಿಯಾಗಿದೆ.

– ಡಾ. ಮಹೇಶಚಂದ್ರಗುರು ಬಿ.ಪಿ. ಮತ್ತು
– ಲೋಹಿತ್ ಜಿ.

## ಕರ್ನಾಟಕದಲ್ಲಿನ ಪಾಲಿಟೆಕ್ನಿಕ್ ಕಾಲೇಜುಗಳು

**ಪಾಲಿಟೆಕ್ನಿಕ್ ಅರ್ಥ:** ಪಾಲಿಟೆಕ್ನಿಕ್ ಎಂಬ ಪದವು ಮೂಲತಃ ಗ್ರೀಕ್ ಪದವಾಗಿದ್ದು 'Poly' ಮತ್ತು 'Techno' ಎಂಬ ಎರಡು ಪದಗಳ ಸಂಯೋಗದಿಂದ ನಿಷ್ಪನ್ನಗೊಂಡಿದೆ. (Poly) (ಪಾಲಿ) ಎಂದರೆ ಬಹಳ ಎಂದರ್ಥ ಹಾಗೆಯೇ 'ಟೆಕ್ನಿಕೋಸ್' (Technicos) ಎಂದರೆ ಕಲೆ ಎಂದರ್ಥ. ಪಾಲಿಟೆಕ್ನಿಕ್ ಎಂದರೆ ವಿವಿಧ ಔದ್ಯೋಗಿಕ ವೃತ್ತಿಪರ ಕೋರ್ಸ್‌ಗಳನ್ನು ಮುಖ್ಯವಾಗಿ ತಾಂತ್ರಿಕ ಮತ್ತು ವಿಜ್ಞಾನ ವಿಷಯಗಳಲ್ಲಿ ಒದಗಿಸುವ ಸಂಸ್ಥೆಗಳು ಎಂದರ್ಥವಾಗುತ್ತದೆ.

ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಒಂದೇ ಛಾವಣಿಯಲ್ಲಿ ಹಲವಾರು ವೃತ್ತಿಪರ ಕೋರ್ಸುಗಳ ತರಬೇತಿಯನ್ನು ನೀಡಲಾಗುತ್ತದೆ. ಈ ವೃತ್ತಿಪರ ಕೋರ್ಸುಗಳು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸ್ವತಃ ಉದ್ಯೋಗವನ್ನು ಪ್ರಾರಂಭಿಸಲು ಅಥವಾ ಸಂಬಂಧಿತ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಲು ತರಬೇತುಗೊಳಿಸುತ್ತವೆ.

Digitised by Bharatavani, CIIL

**ವ್ಯಾಖ್ಯೆಗಳು:** ಕೈಗಾರಿಕೆ, ಕಲಾ ಮತ್ತು ಅನ್ವಯಿಕ ವಿಜ್ಞಾನಗಳಲ್ಲಿ ಹಲವು ರೀತಿಯ ಸೈದ್ಧಾಂತಿಕ ಮತ್ತು ತಾಂತ್ರಿಕ ಜ್ಞಾನವನ್ನು ನೀಡುವ ಸಂಸ್ಥೆಗಳನ್ನು ಪಾಲಿಟೆಕ್ನಿಕ್ ಕಾಲೇಜುಗಳು ನಡೆಸುತ್ತವೆ.

**ಪಾಲಿಟೆಕ್ನಿಕ್ ಕಾಲೇಜುಗಳ ವಿಧಗಳು:** ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಶಿಕ್ಷಣ ಪಾಲಿಟೆಕ್ನಿಕ್ ಕಾಲೇಜುಗಳನ್ನು ಸರ್ಕಾರಿ ಪಾಲಿಟೆಕ್ನಿಕ್, ಖಾಸಗಿ ಪಾಲಿಟೆಕ್ನಿಕ್ ಮತ್ತು ಮಹಿಳಾ ಪಾಲಿಟೆಕ್ನಿಕ್ ಎಂದು ಮೂರು ವಿಧಗಳಾಗಿ ವಿಂಗಡಿಸಬಹುದು.

**ಬೋಧನಾ ವಿಷಯಗಳು:** ಸಮೂಹ ಸಂವಹನ, ಫ್ಯಾಷನ್ ಡಿಸೈನಿಂಗ್, ಆಟೋಮೊಬೈಲ್ ಇಂಜಿನಿಯರಿಂಗ್, ಕೆಮಿಕಲ್ ಇಂಜಿನಿಯರಿಂಗ್, ಇಂಟಿರೀಯರ್ ಡೆಕೋರೇಷನ್ (ಒಳಾಂಗಣ ವಿನ್ಯಾಸ), ಕಂಪ್ಯೂಟರ್ ಇಂಜಿನಿಯರಿಂಗ್.. ಇತ್ಯಾದಿ.

**ಮಹಿಳಾ ಪಾಲಿಟೆಕ್ನಿಕ್‌ಗಳು:** ಮಹಿಳಾ ತಾಂತ್ರಿಕ ಶಿಕ್ಷಣವು ಮಹಿಳಾ ವೃತ್ತಿಪರ ಕೋರ್ಸುಗಳಿಗೆ ಹೆಚ್ಚು ಒತ್ತನ್ನು ಕೊಟ್ಟಿದೆ. ಈ ಕೋರ್ಸುಗಳು ಮಹಿಳೆಯರನ್ನು ಸ್ವಂತ ಉದ್ಯೋಗ ಪ್ರಾರಂಭಿಸಲು ಹಾಗೂ ಆರ್ಥಿಕವಾಗಿ ಸ್ವತಂತ್ರರನ್ನಾಗಿ ಹಾಗೂ ಸಬಲರನ್ನಾಗಿ ಮಾಡಲು ಶ್ರಮಿಸುತ್ತಿವೆ. ಮಹಿಳಾ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳೆಯರಿಗೆ ಸೂಕ್ತವಾದ ಪಾಕಶಾಸ್ತ್ರ, ಹೊಲಿಗೆ, ಗೃಹಾಲಂಕಾರ, ಪ್ರಸಾದನ ಅಲಂಕಾರ ಮುಂತಾದ ವಿಷಯಗಳ ಬೋಧನೆಗೆ ಮಹತ್ವ ನೀಡಲಾಗುತ್ತದೆ.

ಮಹಿಳಾ ಪಾಲಿಟೆಕ್ನಿಕ್ ಕಾಲೇಜುಗಳು ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಹಲವು ವಿವಿಧ ಕೋರ್ಸುಗಳನ್ನು ವಿಶೇಷವಾಗಿ ಇತ್ತೀಚೆಗೆ ಬೆಳೆಯುತ್ತಿರುವ ಕೈಗಾರಿಕೆಗಳ ಅಗತ್ಯಕ್ಕೆ ತಕ್ಕ ಹಾಗೆ ವಿನ್ಯಾಸಗೊಳಿಸಿವೆ. ಬೆಳೆಯುತ್ತಿರುವ ಬೇಡಿಕೆಗಳಿಗೆ ತಕ್ಕಂತೆ ಎಲ್ಲ ಕ್ಷೇತ್ರಗಳಲ್ಲಿ ನುರಿತ/ಅನುಭವಿಗಳನ್ನು ಪ್ರಮುಖವಾಗಿ ಕಾರ್ಯವೈಖರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ನೀಡುವುದು ಈ ಕಾಲೇಜುಗಳ ಮುಖ್ಯ ಉದ್ಯೋಗವಾಗಿದೆ.

**ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಮುಖ್ಯತೆ**

1. ವಿಜ್ಞಾನಿಗಳಿಗೆ ಮತ್ತು ಇಂಜಿನಿಯರುಗಳಿಗೆ ತರಬೇತಿ ನೀಡಲು ಸಹಾಯವಾಗಿದೆ.
2. ಸಂಶೋಧನೆಯನ್ನು ಇಂಜಿನಿಯರಿಂಗ್ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಪೂರ್ವ ಪದವೀಧರರಿಗೆ ಬೋಧನೆಯನ್ನು ಕೇಂದ್ರೀಕರಿಸಲು ಪೂರಕವಾಗಿವೆ.
3. ರಾಷ್ಟ್ರೀಯ ಬೆಳವಣಿಗೆಗೆ ಉಪಾಯಗಳು, ಆದರ್ಶಗಳನ್ನು ಬೆಳೆಸಲು/ಉತ್ತೇಜಿಸಲು ನೆರವಾಗುವುದು.
4. ಉನ್ನತ ತಾಂತ್ರಿಕ ಶಿಕ್ಷಣವು ರಾಷ್ಟ್ರಮಟ್ಟದಲ್ಲಿ ಮಹತ್ವವಾದ ಸೇವೆಯನ್ನು ಬೋಧನಾ ಕೌಶಲತೆಯನ್ನು ನೀಡುವುದು.
5. ಯುವಕರಿಗೆ ಮತ್ತು ಮಹಿಳೆಯರಿಗೆ ತರಬೇತಿ ನೀಡಲು ಹಾಗೂ ಹೊಸ ನವೀನ ವಿಧಾನಗಳು, ತಂತ್ರಗಳು, ಉಪಾಯಗಳು ಹಾಗೂ ಮಾಹಿತಿಗಳನ್ನು ನೀಡುವುದು.

–ವಸಂತಕುಮಾರಿ ಸಿ.

## ಕರ್ನಾಟಕದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ

ಮಗು ಪ್ರಾಥಮಿಕ ಶಾಲೆಗೆ ದಾಖಲಾಗುವ ಮೊದಲು 3ರಿಂದ 6ವರ್ಷದವರೆಗೆ ಪಡೆಯಬಹುದಾದ ಶಿಕ್ಷಣವನ್ನು ಪೂರ್ವಪ್ರಾಥಮಿಕ ಅಥವಾ ಪೂರ್ವಬಾಲ್ಯ ಶಿಕ್ಷಣ ಎಂದು ಕರೆಯುತ್ತಾರೆ. ಶಿಕ್ಷಣವು ಮಗುವಿನ ಹುಟ್ಟಿನಿಂದ ಪ್ರಾರಂಭವಾಗಿ ಜೀವನದ ಹಂತದಲ್ಲಿ ಮುಂದುವರೆದು ಸಾಯುವುದರೊಂದಿಗೆ ಕೊನೆಗೊಳ್ಳುತ್ತದೆ ಎಂದು ಬಣ್ಣಿಸಿದ್ದಾರೆ. ಮಗುವಿಗೆ ನಿಜವಾದ ಅಧಿಕೃತ ಶಿಕ್ಷಣ ದೊರೆಯುವುದು, ಅದಕ್ಕೆ 5 ವರ್ಷ ಹತ್ತು ತಿಂಗಳಾದ ನಂತರ. ಹೀಗೆ ಮಗುವಿನ ವಯಸ್ಸಿನ 3ರಿಂದ 6ವರ್ಷದವರೆಗೆ ನಡೆಯುವ ಶಿಕ್ಷಣವನ್ನು "ಪೂರ್ವಪ್ರಾಥಮಿಕ ಶಿಕ್ಷಣ" ಎಂದು ಕರೆಯುತ್ತಾರೆ. ಪೂರ್ವಪ್ರಾಥಮಿಕ ಶಿಕ್ಷಣದಲ್ಲಿ ಇಂತಹುದೇ ಕಲಿಸಬೇಕು ಹಾಗೂ ಕಲಿಯಬೇಕು ಎಂಬ ನಿಯಮ ಇಲ್ಲ. ಮಕ್ಕಳ ಆಸಕ್ತಿಗೆ ಅನುಗುಣವಾಗಿ ಪೂರ್ವಪ್ರಾಥಮಿಕ ಶಿಕ್ಷಣವನ್ನು ನೀಡಲಾಗುವುದು.

ಕರ್ನಾಟಕದಲ್ಲಿ ಮೈಸೂರು ಅರಸರ ಕಾಲದಿಂದಲೂ ಈ ಶಿಕ್ಷಣ ಪದ್ಧತಿ ಜಾರಿಯಲ್ಲಿದೆ. ಮೈಸೂರು ಅರಸರ ಪ್ರೋತ್ಸಾಹದಿಂದ ಬೆಂಗಳೂರಿನ ಕೆಲವೊಂದು ಪ್ರಾಥಮಿಕ ಶಾಲೆಗಳಲ್ಲಿ ಕಿಂಡರ್‌ಗಾರ್ಡನ್ ಪದ್ಧತಿಯ ಶಿಕ್ಷಣವನ್ನು ಕೊಡಲಾರಂಭವಾಯಿತು. 1911–12ರಲ್ಲಿ ಧನಸಹಾಯ ಪಡೆಯುತ್ತಿದ್ದ ಕಿಂಡರ್‌ಗಾರ್ಟನ್ ಶಾಲೆಯೊಂದು ಚಿತ್ರದುರ್ಗದಲ್ಲಿ ಅಸ್ತಿತ್ವಕ್ಕೆ ಬಂದಿತು. ಅಲ್ಲಿನ ಜಿಲ್ಲಾಧಿಕಾರಿಗಳು ಅದರ ಅಧ್ಯಕ್ಷರಾಗಿದ್ದರು. ಓರ್ವ ಬಾಲಕಿಯೂ ಸೇರಿದಂತೆ ಹತ್ತು ಮಕ್ಕಳು ಅಲ್ಲಿ ಪ್ರವೇಶ ಪಡೆದಿದ್ದರು. ಆ ಶಾಲೆಯಲ್ಲಿ ಅಧ್ಯಾಪಕರ ತರಬೇತಿಗೂ ಸೌಲಭ್ಯವಿದ್ದುದರಿಂದ ಇಬ್ಬರು ಉಪಾಧ್ಯಾಯರು ಆ ಅವಕಾಶವನ್ನು ಬಳಸಿಕೊಂಡಿದ್ದರಂತೆ.

ಕೆಲವು ವರ್ಷಗಳ ನಂತರ 1915ರಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿಯೂ, ದಾವಣಗೆರೆಯಲ್ಲಿಯೂ ಒಂದೊಂದು ಶಿಶುಶಾಲೆಗಳು ತಲೆಯೆತ್ತಿದವು. ಆದರೆ ಅವು ಬಹುಕಾಲ ಉಳಿಯಲಿಲ್ಲ.

1930ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿಯೂ, ಮನಃಶಾಸ್ತ್ರ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದ ಡಾ॥ ಎಂ.ವಿ ಗೋಪಾಲಸ್ವಾಮಿಯವರು ಮೈಸೂರಿನಲ್ಲಿ "ಪ್ರಾಯೋಗಿಕ ಶಾಲೆ" ಯನ್ನು ಆರಂಭಿಸಿ ಅದಕ್ಕೆ 'ಶಿಶುವಿಹಾರ' ಎಂದು ಹೆಸರಿಟ್ಟರು. ಅಲ್ಲಿ ಮನೋವಿಜ್ಞಾನದ ಆಧಾರದ ಮೇಲೆ ಮಕ್ಕಳನ್ನು ನೋಡಿಕೊಳ್ಳಲಾಗುತ್ತಿತ್ತು. 1939ರಲ್ಲಿ ಕೃಷ್ಣಮೂರ್ತಿ ಎಂಬುವವರು ಶಿಶುವಿಹಾರವನ್ನು ಮೈಸೂರು ನಗರದಲ್ಲಿ ಸ್ಥಾಪಿಸಿದರು.

1936ರಲ್ಲಿ ನರ್ಸರಿ ಶಾಲೆಗಳ ಸಮಸ್ಯೆಗಳ ಬಗ್ಗೆ ವರದಿಯೊಂದನ್ನು ಸಲ್ಲಿಸಲೆಂದು ಶಿಕ್ಷಣ ಇಲಾಖೆಯು ಸಮಿತಿಯೊಂದನ್ನು ನೇಮಿಸಿತು. ಅದರ ಫಲಶ್ರುತಿ ಹೇಳಿಕೊಳ್ಳುವಂತಿರಲಿಲ್ಲ.

1944ರಲ್ಲಿ ರಚಿಸಿದ ಸಾರ್ಜೆಂಟ್ ಸಮಿತಿಯು ಶಿಶುವಿಹಾರಗಳನ್ನು ದೇಶದಾದ್ಯಂತ ಸ್ಥಾಪಿಸಬೇಕು ಎಂದು ಶಿಫಾರಸ್ಸು ಮಾಡಿತು.

Digitised by Bharatavani, CIIL

1946–47ರಲ್ಲಿ ತರಬೇತಿ ತರಗತಿಯೊಂದನ್ನು ಮೈಸೂರಿನ ಮಹಿಳಾ ತರಬೇತಿ ಕಾಲೇಜಿಗೆ ಲಗತ್ತಿಸಲಾಯಿತು. ತಿಂಗಳಿಗೆ 20 ರೂಪಾಯಿಗಳಂತೆ ವಿದ್ಯಾರ್ಥಿವೇತನ ನಿಗದಿಪಡಿಸಲಾಯಿತು. ಆದರೆ ಕಾರಣಾಂತರಗಳಿಂದ 1958–59ರಲ್ಲಿ ಅದನ್ನು ಮುಚ್ಚಲಾಯಿತು.

1948–49ರಲ್ಲಿ ಪರಿಷ್ಕರಣೆ ಮಾಡಲ್ಪಟ್ಟ ಅನುದಾನ (ಸಹಾಯಧನ) ಸಂಹಿತೆಯ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ನರ್ಸರಿ ಶಾಲೆಗಳ ಅಧಿಕೃತ ವೆಚ್ಚದಲ್ಲಿ ಶೇಕಡಾ 70ರಷ್ಟನ್ನು ಸರ್ಕಾರವೇ ವಹಿಸಿಕೊಂಡಿತು. ಪಟ್ಟಣ ಪ್ರದೇಶದಲ್ಲಿದ್ದ ಶಾಲೆಗಳಿಗೆ ಮಾತ್ರ ಶೇಕಡಾ 50ರಷ್ಟು ಮೊತ್ತವನ್ನು ಸರ್ಕಾರ ನೀಡಿತು. 1946–47ರಲ್ಲಿ 29 ನರ್ಸರಿ ಶಾಲೆಗಳು ಸರ್ಕಾರದಿಂದ ನೆರವು ಪಡೆಯುತ್ತಿದ್ದವು. ಅವುಗಳಲ್ಲಿದ್ದ ಮಕ್ಕಳ ಸಂಖ್ಯೆ 1620.

ಹಳೆಯ ಮೈಸೂರು ರಾಜ್ಯದ ಪೂರ್ವಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಮುಖ್ಯವಾಗಿ ಮಾತಾಪಿತೃಗಳು, ಸ್ಥಳೀಯ ಸರ್ಕಾರಗಳು ಮತ್ತು ಖಾಸಗಿ ಸಂಸ್ಥೆಗಳು ಹೊತ್ತಿದ್ದವು. ಅವುಗಳಿಗೆ ಪ್ರೋತ್ಸಾಹ ಕೊಡುವುದು ಮಾತ್ರ ಸರ್ಕಾರದ ಸಾಮಾನ್ಯ ನೀತಿಯಾಗಿದ್ದಿತು. ಆದರೆ 1947–48ರಲ್ಲಿ ಸರ್ಕಾರ ಎರಡು ನರ್ಸರಿ ಶಾಲೆಗಳನ್ನು ತೆರೆಯಿತು. 1971–72ರ ವೇಳೆಗೆ 22 ಸರ್ಕಾರಿ ಶಾಲೆಗಳು ಸೇರಿದಂತೆ 907 ನರ್ಸರಿ ಶಾಲೆಗಳು ಅಸ್ತಿತ್ವದಲ್ಲಿದ್ದವು. ಅವುಗಳ ಪೈಕಿ 733 ಶಾಲೆಗಳು ಖಾಸಗಿ ಸಂಸ್ಥೆಗಳಾಗಿದ್ದವು.

ಕಾಲಕ್ರಮೇಣ ಸಮಾಜ ಕಲ್ಯಾಣ ಸಲಹಾ ಮಂಡಲಿ (Social Welfare Board) ಹಾಗೂ ಸಮಾಜ ಕಲ್ಯಾಣ ಇಲಾಖೆಯು ನರ್ಸರಿ ಹಾಗೂ ಮಹಿಳಾ ಕ್ಷೇಮಾಭ್ಯುದಯ ಕೇಂದ್ರಗಳನ್ನು ಸ್ಥಾಪಿಸಿದವು.

ಬಾಲವಾಡಿಗಳು 3ರಿಂದ 6ವರ್ಷಗಳ ನಡುವಣ ವಯಸ್ಸಿನ ಹಸುಳೆಗಳ ಅಗತ್ಯಗಳನ್ನು ಪೂರೈಸಲು ಮುಂದೆ ಬಂದವು. ಸಮಾಜ ಕಲ್ಯಾಣ ಇಲಾಖೆ ಸ್ಥಾಪಿಸಿದ ಕೇಂದ್ರಗಳು ಹರಿಜನ–ಗಿರಿಜನರಂತಹ ಹಿಂದುಳಿದ ಪಂಗಡಗಳ ಒಳಿತಿಗಾಗಿ ಮೀಸಲಾಗಿದ್ದವು. ಇತ್ತೀಚೆಗೆ ಕೆಲವು ಮಹಿಳಾ ಮಂಡಳಿಗಳು ಪೂರ್ವಪ್ರಾಥಮಿಕ ಕ್ಷೇತ್ರವನ್ನು ಪ್ರವೇಶಿಸಿ ರಾಜ್ಯಮಂಡಲಿಯಿಂದ ವೆಚ್ಚದ ಮುಕ್ಕಾಲು ಭಾಗವನ್ನು ಸಹಾಯಧನವಾಗಿ ಪಡೆಯುತ್ತಿವೆ.

1971–72ರಲ್ಲಿ 63,877 ಮಕ್ಕಳೂ, 2064 ಅಧ್ಯಾಪಕರೂ ನರ್ಸರಿ ಶಾಲೆಗಳಲ್ಲಿದ್ದರು. ಇದೇ ವರ್ಷ ಕರ್ನಾಟಕದಲ್ಲಿ 796 ಬಾಲವಾಡಿಗಳೂ, ಅವುಗಳಲ್ಲಿ 35,460 ಮಕ್ಕಳೂ ಇದ್ದರು.

ನರ್ಸರಿ ಶಾಲೆಗಳ ಉಪಾಧ್ಯಾಯರಾಗಿ ತರಬೇತಿ ಸೌಲಭ್ಯಗಳನ್ನು ಮತ್ತೆ 1971–72ರ ವೇಳೆಗೆ ಪ್ರಾರಂಭಿಸಿ ಪೂರ್ವಪ್ರಾಥಮಿಕ ಶಿಕ್ಷಣಕ್ಕಾಗಿ ಹನ್ನೆರಡು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿತ್ತು.

ಇಂದು ಕರ್ನಾಟಕದಲ್ಲಿ ಅನೇಕ ರೀತಿಯ ನರ್ಸರಿ ಶಾಲೆಗಳನ್ನು ಕಾಣುತ್ತೇವೆ. ಅವುಗಳೆಂದರೆ

1. ಕಾನ್ವೆಂಟ್ ಅಥವಾ ಮಿಶನರಿಗಳು ನಡೆಸುವ ನರ್ಸರಿ ಶಾಲೆಗಳು
2. ಶ್ರೀಮಂತರ ಮಕ್ಕಳಿಗಾಗೇ ನಡೆಸುವ ನರ್ಸರಿ ಶಾಲೆಗಳು
3. ಮಾಂಟೆಸರಿ ಅಂತರರಾಷ್ಟ್ರೀಯ ಸಂಘಗಳು ನಡೆಸುವ ಮಾಂಟೆಸರಿ.

**ಪೂರ್ವಪ್ರಾಥಮಿಕ ಶಾಲೆಗಳು:** ಈ ಶಾಲೆಗಳು 30 ಮಕ್ಕಳಿಗೆ ಬೋಧಿಸಲು ಬೇಕಾಗುವ ಎಲ್ಲಾ ಉಪಕರಣಗಳನ್ನು ಹೊಂದಿರುತ್ತವೆ. ಈ ಶಾಲೆಗಳಲ್ಲಿ ಉಪಾಧ್ಯಾಯರು AMI ಸಂಸ್ಥೆಗಳಿಂದ ತರಬೇತಿಯನ್ನು ಹೊಂದಿದವರಾಗಿರುತ್ತಾರೆ.

**ಮಾಂಟೆಸರಿ ಶಾಲೆಗಳು:** ಈ ಶಾಲೆಗಳು ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ಭಾರತದಾದ್ಯಂತ ಹೆಚ್ಚು ಸಂಖ್ಯೆಯಲ್ಲಿ ಈ ರೀತಿಯ ಶಾಲೆಗಳನ್ನು ನೋಡುತ್ತೇವೆ. ಈ ಶಾಲೆಗಳು ಮಾಂಟೆಸರಿ ವಿಧಾನವನ್ನು ನಿಖರವಾಗಿ ಅನುಸರಿಸುವುದಿಲ್ಲ. ಇವರು ತಮಗೆ ಅನುಕೂಲವಾಗುವಂತೆ ತಮ್ಮ ಅಗತ್ಯಕ್ಕೆ ಬೇಕಾಗುವ ಹಾಗೇ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾರೆ. ಅವರ ವ್ಯವಸ್ಥೆಯು ಇತರೆ ಶಾಲೆಗಳಾದ ಕಿಂಡರ್‌ಗಾರ್ಟನ್ ಶಾಲೆ, ನರ್ಸರಿ ಅಥವಾ ಪ್ರಿ ಬೇಸಿಕ್ ವಿಧಾನಗಳನ್ನು ಪ್ರತಿಬಿಂಬಿಸುತ್ತದೆ. ಭಾರತೀಯ ವಾತಾವರಣಕ್ಕೆ ಹೊಂದಿಕೊಂಡಂತೆ ಇವರ ಶಾಲಾ ವ್ಯವಸ್ಥೆಯು ಸಮರ್ಥ ಉಪಾಧ್ಯಾಯರ ಬೋಧನೆಯಿಂದ ಯಶಸ್ವಿಯಾಗಿರುವುದು ಕಂಡುಬರುತ್ತದೆ.

**ಪ್ರಿ ಬೇಸಿಕ್ ಸ್ಕೂಲ್ಸ್ (Pre Basic Schools):** ಈ ಶಾಲೆಗಳು ದುಬಾರಿಯಲ್ಲ. ಮಗುವಿನ ಸರ್ವತೋಮುಖ ಬೆಳವಣಿಗೆ ಮತ್ತು ಸಾಮಾಜೀಕರಣ ಈ ಶಾಲೆಗಳ ಮುಖ್ಯ ಗುರಿಯಾಗಿರುತ್ತದೆ. ಆದರೆ ಈ ಶಾಲೆಗಳಲ್ಲಿ ಈ ಗುರಿ ಸಾಧನೆಗೆ ಬೇಕಾಗುವ ಸಾಮಗ್ರಿಗಳಾಗಲಿ, ಬೋಧನೋಪಕರಣಗಳಾಗಲಿ ಇರುವುದಿಲ್ಲ ಹಾಗೂ ತರಬೇತಿ ಹೊಂದದ, ಸರಿಯಾದ ಮಾಸಿಕ ವೇತನ ಇಲ್ಲದ, ಅತೃಪ್ತ ಉಪಾಧ್ಯಾಯರೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಈ ಶಾಲೆಗಳನ್ನು ಇತರ ಶಾಲೆಗಳ ಗುಣಾತ್ಮಕ ಮಟ್ಟಕ್ಕೆ ಹೋಲಿಸಲು ಸಾಧ್ಯವಿಲ್ಲ.

**ಖಾಸಗಿ – ಪ್ರಾಯೋಜಿತ, ಏಕ ಉಪಾಧ್ಯಾಯ, ಏಕ ಕೊಠಡಿ, ಪೂರ್ವಪ್ರಾಥಮಿಕ ಶಾಲೆಗಳು (Privately sponsored, Single Teacher, Single Room Pre-schools):** ಇಂತಹ ಶಾಲೆಗಳಲ್ಲಿ ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಒಬ್ಬ ಮಹಿಳೆ ತನ್ನ ಮನೆಯ ಒಂದು ಕೊಠಡಿಯಲ್ಲಿ ಕೆಲವು ಮಕ್ಕಳಿಗೆ ಬೋಧಿಸುವ ಶಾಲೆಗಳಾಗಿವೆ.

**ನೂತನ್ ಬಾಲಶಿಕ್ಷಾ ಸಂಘ ಶಾಲೆಗಳು (The Nuthan Bal-Shiksha sanga schools):** ಈ ಶಾಲೆಗಳು ಪ್ರಯೋಗಾತ್ಮಕ ಶಾಲೆಗಳಾಗಿವೆ. ಈ ಶಾಲೆಗಳು ಎರಡು ಗುರಿಗಳನ್ನು ಹೊಂದಿರುತ್ತವೆ. ಮೊದಲನೆಯದಾಗಿ ಮಾಂಟೆಸರಿ ವಿಧಾನವನ್ನು ಭಾರತೀಯ ವ್ಯವಸ್ಥೆಗೆ ಅಳವಡಿಸಬಹುದು. ಎರಡನೆಯದಾಗಿ ಪ್ರಿ ಬೇಸಿಕ್ ಶಾಲೆಗಳು ಅನುಸರಿಸುವ ಕೆಲವು ಒಳ್ಳೆಯ ಅಂಶಗಳನ್ನು ತಮ್ಮ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ಅನುಕೂಲಕ್ಕೆ ತಕ್ಕಂತೆ ಅನುಸರಿಸುವುದು.

Digitised by Bharatavani, CIIL

**ಬಡಮಕ್ಕಳಿಗಾಗಿ ಪ್ರಿ ಪ್ರೈಮರಿ ಶಾಲೆಗಳು (Pre-primary schools for the poor):** ಇಂತಹ ಶಾಲೆಗಳನ್ನು ರಾಜ್ಯಸರ್ಕಾರ ಮತ್ತು ಕೆಲವು ಖಾಸಗಿ ಸಂಸ್ಥೆಗಳು ಬಡಮಕ್ಕಳಿಗಾಗಿ ಮತ್ತು S.C (Scheduled Castes) ಮಕ್ಕಳಿಗಾಗಿ ನಡೆಸುವರು.

**ಆಧುನಿಕ ನರ್ಸರಿ ಶಾಲೆಗಳು (The Modern Nursery Schools):** ಆಧುನಿಕ ಶಾಲೆಗಳನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ. "ಪ್ರಾಥಮಿಕವಾಗಿ ಈ ಶಾಲೆಗಳು ಪೂರ್ವಪ್ರಾಥಮಿಕ ಶಿಕ್ಷಣ ಶಾಲಾ ಶಿಕ್ಷಣದ ವ್ಯವಸ್ಥೆ ಮತ್ತು ಕಾರ್ಯಕ್ರಮಗಳಿಗೆ ಹೊಂದಿಕೊಳ್ಳುವಂತಹ ಶಿಕ್ಷಣವನ್ನು ಕೊಡಲಾಗುವ ಶಿಕ್ಷಣ ಸಂಸ್ಥೆ". ಈ ಶಾಲೆಗಳಲ್ಲಿ 2 ಅಥವಾ 2½ವರ್ಷದಿಂದ 5ವರ್ಷದ ಮಕ್ಕಳಿಗೆ, ಹೊರಾಂಗಣ ಮತ್ತು ಒಳಾಂಗಣ ಸ್ಥಳದಲ್ಲಿ ಎರಡು ಗಂಟೆಗೆ ಕಮ್ಮಿಯಾಗದಂತೆ ನಡೆಸಲಾಗುವುದು. ಈ ಶಾಲೆಗಳಲ್ಲಿ ಶಿಕ್ಷಣದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳಿಗಾಗಿ ಮಾರ್ಗದರ್ಶನ ಮತ್ತು ಮೇಲ್ವಿಚಾರದರ್ಶಿತ ಕಾರ್ಯಕ್ರಮಗಳನ್ನು ವಿಶೇಷವಾಗಿ ತರಬೇತಿ ಹೊಂದಿದ ಉಪಾಧ್ಯಾಯರು ನಡೆಸುವರು. ಈ ಉಪಾಧ್ಯಾಯರು ಶಿಕ್ಷಣದ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಅರ್ಥವತ್ತಾದ ಯೋಜಿತ ಚಟುವಟಿಕೆಗಳ ಮೂಲಕ ಉತ್ತಮವಾಗಿ ವಿನ್ಯಾಸಗೊಳಿಸಿದ ಸಾಮಗ್ರಿಗಳ ಮೂಲಕ ಬೋಧಿಸುವರು.

ಕರ್ನಾಟಕದಲ್ಲಿ ಹೀಗೆ ಹಲವಾರು ಪೂರ್ವಪ್ರಾಥಮಿಕ ಶಾಲೆಗಳು ದಿನ ದಿನಕ್ಕೆ ಹೆಚ್ಚುತ್ತಿವೆ. ರಾಜ್ಯ ಸರ್ಕಾರದ ಅಂಗನವಾಡಿ ಶಾಲೆಗಳು ಹಳ್ಳಿ ಹಳ್ಳಿಗಳಲ್ಲೂ ಇವೆ. ಆದ್ದರಿಂದ ಅಂಗನವಾಡಿ ಕಾರ್ಯಕರ್ತರ ಕ್ಷೇಮಾಭಿವೃದ್ಧಿಯ ಕಡೆ ಸರ್ಕಾರ ಗಮನಹರಿಸಬೇಕಾಗಿದೆ. ಪೂರ್ವ ಪ್ರಾಥಮಿಕ ಶಿಕ್ಷಣ ಸಂಪೂರ್ಣವಾಗಿ ಮಕ್ಕಳ ಪ್ರಪಂಚ. ಮಕ್ಕಳು ಈ ಪ್ರಪಂಚದಲ್ಲಿ ಸಂತೋಷವಾಗಿರಬೇಕಾದರೆ, ಅದಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಸರ್ಕಾರ ಮತ್ತು ನಡೆಸುವ ಸಂಘ ಸಂಸ್ಥೆಗಳದ್ದಾಗಿರುತ್ತದೆ. ಮಕ್ಕಳು ಶಿಕ್ಷಣ ಕ್ಷೇತ್ರಕ್ಕೆ ಇಡುವ ಮೊದಲ ಹೆಜ್ಜೆ ಇದಾಗಿರುವುದರಿಂದ ಇಲ್ಲಿ ಸುಭದ್ರವಾದ ತಳಪಾಯ ಹಾಕಬೇಕಾಗಿದೆ.

–ಪ್ರೊ. ಮೇರಿ ರೋಸ್.

## ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ – ಪ್ರಸ್ತುತ ಸ್ಥಿತಿ

ಶಿಕ್ಷಣವು ಮಾನವನ ಬದುಕಿನ ಅವಶ್ಯಕತೆಗಳನ್ನು, ಆಶೋತ್ತರಗಳನ್ನು ಪೂರೈಸಿಕೊಳ್ಳಲು ಸಹಕಾರ ನೀಡುತ್ತದೆ. ಜನರ ಸಾಮಾಜಿಕ, ಆರ್ಥಿಕ, ಭಾವನಾತ್ಮಕ ಮತ್ತು ಸಾಂಸ್ಕೃತಿಕ ವರ್ಗಾವಣೆಯು ಶಿಕ್ಷಣದ ಸಹಾಯದಿಂದ, ಸಹಯೋಜನೆಯಿಂದ ಸಾಧ್ಯವಾಗುವುದರಿಂದ ಇದನ್ನು ಮಹತ್ವಪೂರ್ಣವಾದ, ಪ್ರಭಾವಶಾಲಿಯಾದ ಸಾಧನವೆಂದು ಗುರುತಿಸಲಾಗುತ್ತದೆ.

ಸ್ವಾತಂತ್ರ್ಯಾನಂತರ ಸರ್ಕಾರದ ಶಿಕ್ಷಣನೀತಿಯು ಪ್ರಾಥಮಿಕ ಹಂತದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಿತ್ತು. ಸುಭದ್ರವಾದ ರಾಷ್ಟ್ರನಿರ್ಮಾಣಕ್ಕಾಗಿ ಪ್ರಾಥಮಿಕ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ 1986ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು 1992ರ ಕಾರ್ಯಯೋಜನೆಯ ಪ್ರಕಾರ 14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಜೊತೆಗೆ ಗುಣಾತ್ಮಕ ಬದಲಾವಣೆಗಳನ್ನು ತರಲು ಶಿಕ್ಷಣದಲ್ಲಿ ತೃಪ್ತಿದಾಯಕ ಅನುಕೂಲತೆಗಳನ್ನು ಒದಗಿಸುವುದಾಗಿ ಸಂಕಲ್ಪ ಮಾಡಿತ್ತು.

ಪ್ರಾಥಮಿಕ ಶಿಕ್ಷಣದ ಗುರಿಗಳನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಲಾಗಿದೆ. ಅವೆಂದರೆ, ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಯ ಮಟ್ಟವನ್ನು ವೃದ್ಧಿಸುವುದು, ಮಗುವಿನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸರಿಯಾದ ಅಡಿಪಾಯ ಹಾಕುವುದು, ಮಕ್ಕಳ ಸಾವು, ಅನಾರೋಗ್ಯ, ಅಪೌಷ್ಟಿಕತೆ ಮತ್ತು ಶಾಲೆಯನ್ನು ಬಿಡುವುದನ್ನು ಕಡಿಮೆಗೊಳಿಸುವುದು, ಮಕ್ಕಳ ಅಭಿವೃದ್ಧಿ ಕಾರ್ಯವನ್ನು ಉತ್ತಮಗೊಳಿಸಲು ವಿವಿಧ ಇಲಾಖೆಗಳ ನಡುವೆ ಯೋಜನೆಯ ಕಾರ್ಯನೀತಿಯನ್ನು ಅನುಸರಿಸುವಲ್ಲಿ ಪರಿಣಾಮಕಾರಿಯಾದ ಸಮನ್ವಯವನ್ನು ಸಾಧಿಸುವುದು, ತಾಯಂದಿರಿಗೆ ಆರೋಗ್ಯ ಮತ್ತು ಪೌಷ್ಟಿಕತೆಯ ಬಗ್ಗೆ ಶಿಕ್ಷಣವನ್ನು ನೀಡುವುದು. ಪ್ರಾಥಮಿಕ ಶಿಕ್ಷಣದ ಐದು ವರ್ಷಗಳ ಅವಧಿಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಏಕರೀತಿಯ ಶಿಕ್ಷಣದ ವ್ಯವಸ್ಥೆ ಇದ್ದು ಸಾಮಾನ್ಯ ಶಿಕ್ಷಣವನ್ನು ನೀಡಲಾಗುತ್ತಿದೆ. ಇದರ ಮುಖ್ಯ ಉದ್ದೇಶವೇನೆಂದರೆ ಈ ಹಂತದಲ್ಲಿ ಜೀವನಕ್ಕೆ ಹತ್ತಿರವಾದಂತಹ ಜ್ಞಾನವನ್ನು ಒದಗಿಸುವುದಾಗಿದೆ. ಈ ಹಂತದಲ್ಲಿ ವಿಜ್ಞಾನ, ಗಣಿತ, ಭಾಷೆಗಳು, ಸಮಾಜ ವಿಜ್ಞಾನ, ನೈತಿಕ/ಮೌಲ್ಯ ಶಿಕ್ಷಣ, ಆರೋಗ್ಯ ಮತ್ತು ದೈಹಿಕ ಶಿಕ್ಷಣ ಹಾಗೂ ಕಂಪ್ಯೂಟರ್ ಶಿಕ್ಷಣಗಳನ್ನು ಬೋಧಿಸಲಾಗುತ್ತದೆ.

ನಮ್ಮ ಸಂವಿಧಾನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕುರಿತು 45ನೇ ಪರಿಚ್ಛೇದದಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ "ಸರ್ಕಾರವು ರಾಷ್ಟ್ರದಲ್ಲಿನ 14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಸಂವಿಧಾನ ಜಾರಿಗೆ ಬಂದ ಹತ್ತು ವರ್ಷದೊಳಗಾಗಿ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಮತ್ತು ಕಡ್ಡಾಯವಾಗಿ ನೀಡಲು ಪ್ರಯತ್ನಿಸಬೇಕು". ಸಂವಿಧಾನದ ನಲವತ್ತೈದನೇ ಪರಿಚ್ಛೇದದಲ್ಲಿ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರಕ್ಕೆ ವಹಿಸಲಾಗಿದೆ. ಇದರಂತೆ ಸರ್ಕಾರ ಎಂದರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಮಂಡಳಿಗಳು ಪ್ರಾಥಮಿಕ ಶಿಕ್ಷಣದ ಜವಾಬ್ದಾರಿ ಹೊಂದಿರುವುದರೊಂದಿಗೆ ಖಾಸಗಿ ಸಂಸ್ಥೆಗಳೂ ಇದಕ್ಕೆ ಕೈ ಜೋಡಿಸುತ್ತಿವೆ.

ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಅನೇಕ ಉತ್ತೇಜಿತ ಯೋಜನೆಗಳು ಸರ್ಕಾರದಿಂದ ರೂಪುಗೊಂಡಿವೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯು ಇಂದಿನ ಪ್ರಾಥಮಿಕ ಶಿಕ್ಷಣದಲ್ಲಿ ಅತ್ಯಂತ ರಭಸದಿಂದ ಕಾರ್ಯಾಚರಣೆಯನ್ನು ನಿರ್ವಹಿಸುತ್ತಿದೆ. 1993 ಏಪ್ರಿಲ್‌ನಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಮಾರ್ಗದರ್ಶಿ ತತ್ವಗಳು ರೂಪಿತವಾದವು. ಈ ಯೋಜನೆಯು ವಿಕಾಸವಾಗುತ್ತಾ ಹೋದ ಹಾಗೆ ನವನವೀನ ಆಯಾಮಗಳು ಕುಡಿಯೊಡೆದಿವೆ. 1993 ಡಿಸೆಂಬರ್‌ನಲ್ಲಿ ಕೇಂದ್ರ ಸಚಿವ ಸಂಪುಟವು ಜಿಲ್ಲಾ ಪ್ರಾಥಮಿಕ

Digitised by Bharatavani, CIIL

ಶಿಕ್ಷಣ ಯೋಜನೆಗೆ ತಾತ್ವಿಕ ಒಪ್ಪಿಗೆ ನೀಡಿದೆ.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯು ಯೋಜನೆ, ಆಡಳಿತ, ಮೌಲ್ಯಮಾಪನ, ನಿರ್ಣಯಗಳನ್ನು ಕೈಗೊಳ್ಳುವಿಕೆಗಳನ್ನು ನೋಡಿಕೊಳ್ಳುತ್ತದೆ. NCERT ಮತ್ತು NDEPA ಗಳಂತಹ ರಾಷ್ಟ್ರೀಯ ಸಂಸ್ಥೆಗಳು ತಮ್ಮ ಶೈಕ್ಷಣಿಕ ಮತ್ತು ನಿರ್ವಹಣಾ ಸಂಗತಿಗಳ ಹಲವಾರು ಅಂಶಗಳನ್ನು ಕ್ಷೇತ್ರೀಯ ಪರೀಕ್ಷಣಕ್ಕೆ ಒಳಪಡಿಸಲು DPEP ಯು ಉಪಯುಕ್ತವಾಗಿದೆ. 1986ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಅದರ ಪ್ರಕಾರ ರೂಪಿಸಲ್ಪಟ್ಟ ಕ್ರಿಯಾಯೋಜನೆಯ ಫಲವಾಗಿ ಪ್ರಾಥಮಿಕ ಶಿಕ್ಷಣದ ಗುಣಾತ್ಮಕ ಹಾಗೂ ಪ್ರಮಾಣಾತ್ಮಕ ಸುಧಾರಣೆಗಾಗಿ 'ಕಪ್ಪು ಹಲಗೆ ಕಾರ್ಯಾಚರಣೆ'ಯು ಜನ್ಮತಾಳಿತು. ಇಲ್ಲಿ 'ಕಾರ್ಯಾಚರಣೆ' ಎಂಬ ಪದವು ಯೋಜನೆಯ 'ಶೀಘ್ರತೆ' ಅಥವಾ ಅತಿ ತುರ್ತು ಎನ್ನುವ ಅರ್ಥವನ್ನು ಬಿಂಬಿಸುತ್ತದೆ. ಈಗಾಗಲೇ ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಗಳಿಗೆ ತುರ್ತಾಗಿ ನೀಡಬೇಕಾದ ಅಗತ್ಯ ಸೌಲಭ್ಯಗಳನ್ನು ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಗಳಿಗೆ ಜರೂರಾಗಿ ನೀಡಬೇಕಾದ ಅಗತ್ಯ ಸೌಲಭ್ಯಗಳ ಮಟ್ಟವನ್ನು ಸಾದರಪಡಿಸುವಲ್ಲಿ ಈ ಯೋಜನೆಯ ಮಹತ್ವದ ಪಾತ್ರ ನಿರ್ವಹಿಸಿದೆ. "ವಿದ್ಯಾವಿಕಾಸ ಯೋಜನೆ"ಯ ಪ್ರಕಾರ 5 ರಿಂದ 7ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ಒಂದು ಜೊತೆ ಉಚಿತ ಸಮವಸ್ತ್ರವನ್ನು ನೀಡಲಾಗುತ್ತದೆ. ಹಾಗೂ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಒಂದರಿಂದ ನಾಲ್ಕನೇ ತರಗತಿಯ ಎಲ್ಲ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರವನ್ನು ಉಚಿತವಾಗಿ ನೀಡಲಾಗುವುದು. "ಶಾಲಾ ಚೀಲ ಸೌಲಭ್ಯ"ದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಹೆಣ್ಣುಮಕ್ಕಳಿಗೆ ಒಂದು ಜೊತೆ ಸಮವಸ್ತ್ರವನ್ನು ಉಚಿತವಾಗಿ ನೀಡುವುದು. "ಪುಸ್ತಕಾಲಯ" ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಗಳಲ್ಲಿ 1 ರಿಂದ 4ನೇ ತರಗತಿಯಲ್ಲಿ ಓದುತ್ತಿರುವ ಎಲ್ಲ ಶಾಲಾ ಮಕ್ಕಳಿಗೆ ಒಂದು ಜೊತೆ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತದೆ. ತರಗತಿ 5 ರಿಂದ 7 ರವರೆಗಿನ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಮಕ್ಕಳಿಗೆ ಅಭ್ಯಾಸ ಪುಸ್ತಕವನ್ನು ನೀಡುವುದು. DPEP ಜಿಲ್ಲೆಗಳಲ್ಲಿ ಪಠ್ಯಪುಸ್ತಕದೊಂದಿಗೆ ಅಭ್ಯಾಸ ಪುಸ್ತಕವನ್ನು ಉಚಿತವಾಗಿ ನೀಡುವುದು. "ಮಧ್ಯಾಹ್ನದ ಉಪಹಾರ ಯೋಜನೆ"ಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 1 ರಿಂದ 4ನೇ ತರಗತಿಯ ಮಕ್ಕಳಿಗೆ ತಿಂಗಳಿಗೆ 1 ಕೆ.ಜಿ. ಆಹಾರ ಧಾನ್ಯವನ್ನು ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ನೆರವಿನೊಂದಿಗೆ 160 ತಾಲ್ಲೂಕುಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಯೋಜನೆ, "ಗ್ರಾಮಾಂತರ ಪ್ರದೇಶದ ಬಾಲಕಿಯರಿಗೆ ಹಾಜರಾತಿ ಶಿಷ್ಯವೇತನ" ಕಾರ್ಯಕ್ರಮದಲ್ಲಿ 5 ರಿಂದ 7ನೇ ತರಗತಿಗಳಲ್ಲಿ ಓದುತ್ತಿರುವ ಬಾಲಕಿಯರಿಗೆ ಮಾಸಿಕವಾಗಿ 25 ರೂಪಾಯಿಗಳ ದರದಲ್ಲಿ 10 ತಿಂಗಳು ಶಿಷ್ಯವೇತನವನ್ನು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನೀಡಲಾಗುತ್ತದೆ. ಶಿಷ್ಯವೇತನ ಬಯಸುವ ವಿದ್ಯಾರ್ಥಿಗಳು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು.

- ಗ್ರಾಮಾಂತರ ಪ್ರದೇಶಗಳಲ್ಲಿ ಓದುತ್ತಿರಬೇಕು.
- ಪೋಷಕರ ವಾರ್ಷಿಕ ವರಮಾನ 10,000 ರೂ.ಗಳನ್ನು ಮೀರಬಾರದು.
- ಶೇಕಡಾ 40ರಷ್ಟು ಹಾಜರಾತಿ ಇರಬೇಕು.

"ಶಾಲಾ ದತ್ತು ಯೋಜನೆ"ಯಡಿಯಲ್ಲಿ ಸುಮಾರು 49000 ಪ್ರಾಥಮಿಕ ಶಾಲೆಗಳು, 9000 ಪ್ರೌಢಶಾಲೆಗಳು ಇದ್ದು ಇವುಗಳಲ್ಲಿ ಅಗತ್ಯವಾದ ಕಲಿಕಾ ಸಾಮಗ್ರಿ, ಕಟ್ಟಡ, ಆಟದ ಮೈದಾನ, ಪೀಠೋಪಕರಣಗಳು ಮುಂತಾದವುಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲವಾದ ಕಾರಣ ಸಮುದಾಯವನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ.

ಸಂಘ ಸಂಸ್ಥೆಗಳು, ದಾನಿಗಳಿಂದ ಹಣ, ವಸ್ತುರೂಪದಲ್ಲಿ ಸಂಗ್ರಹಿಸಿ ಶಾಲೆಗಳನ್ನು ಆಕರ್ಷಣೀಯವಾಗಿ ಮಾಡುವ ಈ ಕಾರ್ಯಕ್ರಮದಲ್ಲಿ ಪ್ರತಿಷ್ಠಿತ ಕಂಪನಿಗಳು, ಸ್ವಯಂ ಸೇವಾ ಸಂಘಗಳು, ದಾನಿಗಳು ಉತ್ಸಾಹದಿಂದ ಭಾಗವಹಿಸಿ ಸರ್ಕಾರಿ ಶಾಲೆಗಳಿಗೆ ಹೊಸ ರೂಪ ಕೊಡುತ್ತಿದ್ದಾರೆ.

"ಬಾ ಬಾಲೆ ಮರಳಿ ಶಾಲೆಗೆ" ಕಾರ್ಯಕ್ರಮದಲ್ಲಿ ಶಾಲೆಯಲ್ಲಿ ಓದದೇ ಇರುವ ಹಾಗೂ ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟ ಮಕ್ಕಳನ್ನು ಶಾಲೆಗೆ ಮತ್ತೆ ಸೇರಿಸುವ ಉದ್ದೇಶವನ್ನು ಹೊಂದಿದೆ. ಈ ಕಾರ್ಯಕ್ರಮವು ಸ್ಪಷ್ಟವಾದ ಗುರಿಗಳನ್ನು ರೂಪಿಸಿಕೊಂಡಿದೆ–

- 6–14 ವಯಸ್ಸಿನ ಎಲ್ಲ ಮಕ್ಕಳನ್ನೂ ಶಾಲೆಗೆ ದಾಖಲು ಮಾಡುವುದು ಮತ್ತು ಶಾಲೆಗೆ ಬರುವಂತೆ ಮಾಡುವುದು.
- ಬಹಳ ದಿನಗಳಿಂದ ಗೈರುಹಾಜರಾದ ಮಕ್ಕಳನ್ನು ಮತ್ತೆ ಶಾಲೆಗೆ ತರುವುದು.
- ಶಾಲಾ ಪರಿಸರ ಮತ್ತು ಕಲಿಕಾ ವಾತಾವರಣಕ್ಕೆ ಹೊಸದಾಗಿ ಸೇರಿದ ಮಗುವಿಗಾಗಿ ಶಾಲೆಗೆ ಹೊಂದಿಕೊಳ್ಳಲು ಸಾಧ್ಯವಾಗಬಹುದಾದ ಸೇತುಬಂಧ ಕಾರ್ಯಕ್ರಮ ಮತ್ತು 'ಪರಿಹಾರ ಬೋಧನೆ' ಕೈಗೊಳ್ಳುವುದು.

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಹೊಸ ತಂತ್ರಗಳಿಗೆ ಪ್ರಸ್ತುತ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯ ಪದ್ಧತಿ ಸರಿಹೊಂದುವುದಿಲ್ಲವಾದ ಕಾರಣ ಹೊಸ ಮೌಲ್ಯಮಾಪನ ಮತ್ತು ಮೇಲ್ವಿಚಾರಣಾ ಪದ್ಧತಿಯ ಮುಖ್ಯ ಲಕ್ಷಣಗಳು ಇಂತಿವೆ.

ಮೌಲ್ಯಮಾಪನದ ಒಂದು ವಿಮರ್ಶಾತ್ಮಕ ಅಂಶ ಕಲಿಯುವವರ ಪ್ರಗತಿ. ಆದ್ದರಿಂದ ಕಲಿಯುವವರ ಮೌಲ್ಯಮಾಪನ ಮಾಡಲು ಒಂದು ವೈಜ್ಞಾನಿಕ ಪದ್ಧತಿಯನ್ನು ರಚಿಸಲು ಹೆಚ್ಚಿನ ಗಮನ

Digitised by Bharatavani, CIIL

ಕೊಡುವುದು. ಇದು ಶೈಕ್ಷಣಿಕ ಗುಣಮಟ್ಟದ ಸುಧಾರಣೆ ಹಾಗೂ ಪ್ರಾಥಮಿಕ ಶಿಕ್ಷಣದ ಸಮಗ್ರ ಗುಣಮಟ್ಟವನ್ನು ಅಳೆಯಲು ಸಹಾಯ ಮಾಡುವುದು.

- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಯೋಜನೆ, ಅನುಷ್ಠಾನ ಮತ್ತು ಮೌಲ್ಯಮಾಪನದಲ್ಲಿ ಅನೌಪಚಾರಿಕ ಶಿಕ್ಷಣದ ನಿರ್ದೇಶಕರನ್ನು ತೊಡಗಿಸಿಕೊಡಲಾಗುವುದು.

- ಮೌಲ್ಯಮಾಪನವನ್ನು ಅನೌಪಚಾರಿಕ ಶಿಕ್ಷಣದ ಅವಿಭಾಜ್ಯ ಅಂಗವೆಂದು ಪರಿಗಣಿಸಲಾಗುವುದು.

- ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಪ್ರಗತಿಯನ್ನು ಪರಿಶೀಲಿಸಲು ರಾಜ್ಯ ಶಿಕ್ಷಣ ಸಲಹಾ ಮಂಡಳಿಗಳು ಹಾಗೂ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಪ್ರತ್ಯೇಕ ಸಮಿತಿಗಳನ್ನು ಸ್ಥಾಪಿಸುವುದು; ಈ ಉದ್ದೇಶಗಳಿಗಾಗಿ NIEPA, NCERT ಮತ್ತು ಉಳಿದ ಯೋಗ್ಯ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಶೈಕ್ಷಣಿಕ ಸಂಸ್ಥೆಗಳು ಹಾಗೂ ಸಾಮಾಜಿಕ ವಿಜ್ಞಾನ ಸಂಶೋಧನೆಯೂ ಕೂಡ ಸಹಾಯ ಮಾಡುವುವು. 2005–06ನೇ ಸಾಲಿನಲ್ಲಿ ಕರ್ನಾಟಕ ಶಾಲಾ ಗುಣಮಟ್ಟ ಮಾಪನ ಸಂಸ್ಥೆಯು (KSQAO) ರಾಜ್ಯದಲ್ಲಿ ಸ್ಥಾಪನೆಯಾಗುವ ಮೂಲಕ ಶಾಲಾ ಸನ್ನಿವೇಶವನ್ನು ವಿಸ್ತಾರವಾದ ಮೌಲ್ಯಾಂಕಕ್ಕೆ ಒಳಪಡಿಸಿದೆ. ಸರ್ವಶಿಕ್ಷಣ ಅಭಿಯಾನ 2010ರ ಪ್ರಕಾರ ಗುಣಮಟ್ಟದ ಆಯಾಮಗಳು ಹೀಗಿವೆ; ಮೂಲಭೂತ ವ್ಯವಸ್ಥೆ ಸೌಲಭ್ಯಗಳು; ಶಾಲೆಯ ನಿರ್ವಹಣೆ ಮತ್ತು ಸಮುದಾಯ ಬೆಂಬಲ; ಶಾಲೆ ಮತ್ತು ತರಗತಿಯ ಪರಿಸರ; ಪಠ್ಯಕ್ರಮ, ಬೋಧನೆ ಮತ್ತು ಕಲಿಕೆಯ ವಸ್ತುಗಳು; ಶಿಕ್ಷಕ ತಯಾರಿ; ಅವಕಾಶ, ಸಮಯ (ಬೋಧನೆ–ಕಲಿಕೆ ಸಮಯ); ತರಗತಿಯ ಪದ್ಧತಿಗಳು, ಪ್ರಕ್ರಿಯೆ; ಮೌಲ್ಯಮಾಪನ, ಮೇಲ್ವಿಚಾರಣೆ, ಪರಿವೀಕ್ಷಣೆ; ಸಮುದಾಯದ ಭಾಗವಹಿಸುವಿಕೆ ಹಾಗೂ ಒತ್ತಾಸೆ.

ಈ ಮೇಲಿನ ಆಯಾಮಗಳಲ್ಲಿ ಪ್ರಸಕ್ತ ಶಾಲಾ ಶಿಕ್ಷಣವನ್ನು ಸುಧಾರಿಸಲು ಸರ್ವಶಿಕ್ಷಣ ಅಭಿಯಾನವು(2011) ಗುರುತಿಸಿರುವಂತೆ ಗುಣಮಟ್ಟದ ಮೂಲಗಳು ಹೀಗಿವೆ; ಶಿಕ್ಷಣದ ಸೂಕ್ತಗುರಿ, ಪಠ್ಯಕ್ರಮ, ತರಗತಿ ಕಲಿಕೆ, ವಿಷಯ ಸಮತೋಲನ ಮತ್ತು ವಯಸ್ಸಿಗೆ ಸೂಕ್ತ ಪಠ್ಯಕ್ರಮ, ಕಲಿಕೆಯ ವಸ್ತುಗಳು, ಶಿಕ್ಷಣದ ನೀತಿ ಮತ್ತು ಭಾಷಾ ನೀತಿ.

ವಾಸ್ತವವಾಗಿ ಗುಣಮಟ್ಟ ಸಾಧಿಸುವಿಕೆ ನಿಧಾನಗತಿಯ ಪ್ರಕ್ರಿಯೆ. ಶಿಕ್ಷಣದ ಉದಾರ ಗುಣಗಳೆಲ್ಲವೂ ಸಾಕಾರಗೊಳ್ಳಬೇಕಾದ ಮೂಲತಾಣ ಅಂತಿಮವಾಗಿ ಬಹುತೇಕ ಶಾಲಾ ಸನ್ನಿವೇಶ ಮತ್ತು ವಿದ್ಯಾರ್ಥಿಯ ಕಲಿಕೆಯನ್ನು ಆವರಿಸಿರುವ ಸಮುದಾಯ. ಆದ್ದರಿಂದ ಶಾಲೆ ಮತ್ತು ಸಮುದಾಯ ಎಷ್ಟರಮಟ್ಟಿಗೆ ಕೈಜೋಡಿಸುವುದೋ ಅಷ್ಟರಮಟ್ಟಿಗೆ ಸಾರ್ಥಕವಾಗುತ್ತದೆ.

ಕರ್ನಾಟಕ ರಾಜ್ಯ ಸರ್ಕಾರವು 2007–2008ರ ಶೈಕ್ಷಣಿಕ ವರ್ಷದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಗೆ ಇಂಗ್ಲಿಷನ್ನು ಒಂದು ಭಾಷೆಯನ್ನಾಗಿ ಕಲಿಯುವಂತೆ ಆದೇಶಿಸಿತು. ಇದರ ಉದ್ದೇಶಗಳೆಂದರೆ: ಇಂಗ್ಲಿಷ್ ಒಂದು ಜಾಗತಿಕ ಸಂಪರ್ಕ ಭಾಷೆ ಎಂಬುದಕ್ಕೆ ಮನ್ನಣೆ ಕೊಡಲೇಬೇಕಾಗಿರುವುದು. ಮತ್ತೊಂದು ಉದ್ದೇಶ ಮಕ್ಕಳನ್ನು ಸಂವಹನಾತ್ಮಕವಾಗಿ ಮತ್ತು ಶೈಕ್ಷಣಿಕವಾಗಿ ಸಜ್ಜುಗೊಳಿಸುವುದು. ಪೋಷಕರಲ್ಲೂ ತಮ್ಮ ಮಕ್ಕಳಿಗೆ ಒಳ್ಳೆಯ ಉದ್ಯೋಗ ಶೈಕ್ಷಣಿಕ ಹಿನ್ನೆಲೆ ಮತ್ತು ಆರ್ಥಿಕ ಬೆಂಬಲ, ಸಮಾಜದಲ್ಲಿ ಒಳ್ಳೆಯ ಮನ್ನಣೆ ಸಿಗುವುದೆಂಬ ಆಸೆ ಮೂಡಿಸುವ ಅಪೇಕ್ಷೆ ಇದರಲ್ಲಿತ್ತು. ಒಂದನೆ ತರಗತಿಯ ಜೊತೆಗೆ 2, 3, 4ನೇ ತರಗತಿಗಳಿಗೆ ಇಂಗ್ಲಿಷನ್ನು ಪ್ರಾರಂಭಿಸಲಾಯಿತು.

ನಿತ್ಯದ ಪರಿಸರದಲ್ಲಿ ಅಗತ್ಯಕ್ಕೆ ಅನುಸಾರವಾಗಿ ಭಾಷಾ ಸಂವಹನದ ನಾಲ್ಕು ಕೌಶಲಗಳನ್ನು ನಾಲ್ಕು ವರ್ಷಗಳ ಕಲಿಕಾ ಅವಧಿಯಲ್ಲಿ ಬೆಳೆಸುವುದಕ್ಕೆ ಒತ್ತು ಕೊಡಲಾಗಿದೆ. ಈ ಅವಧಿಯಲ್ಲಿ 250 ರಿಂದ 1000 ಪದಗಳನ್ನು ಸರಾಗವಾಗಿ ಬಳಸಿ ವಾಕ್ಯರಚಿಸಿ ಔಪಚಾರಿಕವಾಗಿ ಉಪಯೋಗಿಸುವಂತೆ ಗಮನ ಕೊಡಲಾಗಿದೆ. ಕತೆ, ಚಟುವಟಿಕೆ, ಸಂಭಾಷಣೆ ಅಭ್ಯಾಸ, ಪ್ರಾಸಬದ್ಧ ಹಾಡು, ಭಾಷಾ ಆಟಗಳು – ಇವು ಪಠ್ಯದ ಭಾಗವಾಗಿವೆ. ಅನೇಕ ಶಾಲೆಗಳಲ್ಲಿ ಇಂಗ್ಲಿಷ್ ಕಲಿಕಾ ಕಾರ್ಯಕ್ರಮ ಪರಿಚಯ ಸಂಪೂರ್ಣ ಯಶಸ್ವಿಯಾಗಿಲ್ಲ. ಶಿಕ್ಷಕರ ಇನ್ನು ಹೆಚ್ಚಿನ ಆಸಕ್ತಿ, ಸಮರ್ಪಣ ಮನೋಭಾವ ಹಾಗೂ ಮುಖ್ಯ ಶಿಕ್ಷಕರ ಜವಾಬ್ದಾರಿ ನಿರ್ವಹಣೆ ಇನ್ನೂ ತೀವ್ರವಾಗಬೇಕಿದೆ– ವಿದ್ಯಾರ್ಥಿಗಳ ಕಲಿಕೆ ಮತ್ತು ಕಲಿಕೆಯ ಮೌಲ್ಯಮಾಪನ ಕಲಿ–ನಲಿ ಮಾದರಿಯಲ್ಲೇ ಸಾಗಬೇಕಾಗಿದೆ.

ಹಲವು ಸರ್ಕಾರಿ ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿರುವುದರಿಂದ ಹನ್ನೆರಡು ಸಾವಿರ ಶಾಲೆಗಳನ್ನು ಮುಚ್ಚಬೇಕೆಂಬ ಪ್ರೊ. ಗೋವಿಂದ ವರದಿಯು ಸರ್ಕಾರಕ್ಕೆ ಸಲ್ಲಿಕೆಯಾದರೂ ಕ್ರಮ ಕೈಗೊಳ್ಳುವುದಿಲ್ಲವೆಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ. ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಹಕ್ಕು (RTE) ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಆ ಮೂಲಕ ಹಿಂದುಳಿದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಮೀಸಲಾತಿ ನೀಡಿ ಆಂಧ್ರಪ್ರದೇಶ, ಕೇರಳ ರಾಜ್ಯಗಳ ಮಾದರಿಯಲ್ಲಿ ಸಮಿತಿ ಮತ್ತು ನಿಯಮ ರೂಪಿಸುವ ಸಲಹೆಗಳು ಗಂಭೀರವಾಗಿ ಪರಿಗಣಿಸಲ್ಪಡುತ್ತಿದೆ.

–ಡಾ. ಲೀಲಾ ಕೆ.ಎನ್.

## ಕರ್ನಾಟಕದಲ್ಲಿ ಪ್ರೌಢ ಶಿಕ್ಷಣ– ಪ್ರಸ್ತುತ ಪರಿಸ್ಥಿತಿ

1986ರ ರಾಷ್ಟ್ರೀಯ ಶಿಕ್ಷಣನೀತಿಯು ಪ್ರೌಢಶಿಕ್ಷಣದ ಸೌಲಭ್ಯದಿಂದ ವಂಚಿತವಾಗಿರುವ ಪ್ರದೇಶಗಳಲ್ಲಿ ಪ್ರೌಢಶಿಕ್ಷಣವನ್ನು ವಿಸ್ತರಿಸುವ ಉದ್ದೇಶವನ್ನು ಹೊಂದಿದೆ. 1987–88 ರಿಂದ 1990–91ರ ಅವಧಿಯಲ್ಲಿ ಪ್ರೌಢ ಮತ್ತು ಉನ್ನತ ಪ್ರೌಢಶಾಲೆಗಳ ಸಂಖ್ಯೆ ಮತ್ತು ದಾಖಲಾತಿಯಲ್ಲಿ ಗಣನೀಯವಾದ ಹೆಚ್ಚಳ

Digitised by Bharatavani, CIIL

ಉಂಟಾಗಿದೆ. ದಾಖಲಾತಿಯಲ್ಲಿನ ಲಿಂಗಭೇದವೂ ಗಣನೀಯವಾಗಿ ಕಡಿಮೆಯಾಗಿದೆ. 1990–91ರಲ್ಲಿ ಪ್ರೌಢಶಾಲೆಗಳಲ್ಲಿನ ಬಾಲಕಿಯರ ದಾಖಲಾತಿ ಶೇಕಡಾ 33.4ರಷ್ಟಿದ್ದರೆ, ಉನ್ನತ ಪ್ರೌಢಶಾಲೆಗಳಲ್ಲಿ ಶೇಕಡ 32ರಷ್ಟಿದೆ.

10+2+3ರ ಸಾಮಾನ್ಯ ಶಿಕ್ಷಣ ಮಾದರಿಯಲ್ಲಿ ಸಾಕಷ್ಟು ಏಕತೆಯನ್ನು ತರಲಾಗಿದೆಯಾದರೂ +2ರ ಹಂತದ ಸ್ಥಾನೀಕರಣದಲ್ಲಿ ಗಣನೀಯವಾದ ವ್ಯತ್ಯಾಸಗಳು ಕಂಡುಬರುತ್ತಿವೆ. ಕೆಲ ರಾಜ್ಯಗಳಲ್ಲಂತೂ +2 ಹಂತವು ಶಾಲಾ ಪದ್ಧತಿಯ ಭಾಗವೇ ಅಲ್ಲವೆನ್ನುವಂತಿವೆ.

ಪ್ರೌಢಶಿಕ್ಷಣ ಹಂತವು ಎರಡು ವಿಶಿಷ್ಟ ಘಟಕಗಳಲ್ಲಿ ವಿಭಜಿಸಲ್ಪಟ್ಟಿದೆ. ಪ್ರೌಢಶಿಕ್ಷಣವು ಸಾಮಾನ್ಯ ಶಿಕ್ಷಣದ ಹಂತವಾಗಿದೆ ಹಾಗೂ ಉನ್ನತ ಪ್ರೌಢ ಹಂತವು ವ್ಯತ್ಯಾಸ ಮತ್ತು ವಿಭಿನ್ನತೆಗಳಿಂದ ಗುರುತಿಸಲ್ಪಟ್ಟಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ತಿಳಿಸಿರುವಂತೆ, ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಪಠ್ಯಕ್ರಮ ಚೌಕಟ್ಟಿಗೆ ಅನುಗುಣವಾಗಿದೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತ್ತು ಬಹುತೇಕ ರಾಜ್ಯಗಳಲ್ಲಿ ಪ್ರೌಢಶಿಕ್ಷಣದ ಪಠ್ಯಕ್ರಮದ ಪುನರ್ವಿಮರ್ಶೆ ಕಾರ್ಯವನ್ನು ಕೈಗೆತ್ತಿಕೊಂಡು ಶಿಕ್ಷಣದ ಎಲ್ಲ ಹಂತಗಳಿಗಾಗಿ ಮಾರ್ಗಸೂಚಿ, ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರಚಿಸಲಾಗಿದೆ. ಆದರೂ, ಉನ್ನತ ಪ್ರೌಢಶಿಕ್ಷಣ ಹಂತದ ಪಠ್ಯಕ್ರಮ ಚೌಕಟ್ಟಿನ ರಚನಾಕಾರ್ಯವು ಪ್ರಾರಂಭವಾಗುವುದು ವಿಳಂಬವಾಗಿದೆ.

ಸೂಕ್ತವಾದ, ವಿಶಾಲವಾದ ಆಟದ ಬಯಲು, ಹೊಸ ತರಗತಿಗಳು ಮತ್ತು ಪ್ರಯೋಗಾಲಯ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ನಿರ್ದಿಷ್ಟ ಪಡಿಸಿದ ಉನ್ನತ ಪ್ರೌಢಶಿಕ್ಷಣ ಹಂತದಲ್ಲಿ ವಿಭಿನ್ನ ಕೋರ್ಸುಗಳ ಜಾರಿ, ಪಠ್ಯವಸ್ತುವಿನಲ್ಲಿ ಸುಧಾರಣೆ, ಪಠ್ಯಪುಸ್ತಕ ಸಾಮಗ್ರಿ, ಬೋಧನಾ ವಿಧಾನಗಳು, ಪರೀಕ್ಷೆ/ಮೌಲ್ಯಮಾಪನ ವಿಧಾನಗಳು. ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಕ ತರಬೇತಿ ಕಾರ್ಯಕ್ರಮಗಳ ಮೇಲೆ ಕ್ರಮಬದ್ಧವಾದ ಅಧ್ಯಯನಗಳು ನಡೆದಿಲ್ಲ. ಇದರಿಂದಾಗಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಲಿಲ್ಲ ಎನ್ನುವ ಭಾವನೆಯು ಸಾಮಾನ್ಯ ಜನರಲ್ಲಿ ಮೂಡಿದೆ.

**ಗುರಿಗಳು:**

- ರಾಷ್ಟ್ರೀಯ ಭಾವೈಕ್ಯತೆ, ಜಾತ್ಯತೀತತೆ, ಸಾಮಾಜಿಕ ನ್ಯಾಯ, ಅಂತರರಾಷ್ಟ್ರೀಯ ತಿಳಿವಳಿಕೆಗೆ ಪ್ರೋತ್ಸಾಹ ನೀಡುವುದು.
- ವ್ಯಕ್ತಿತ್ವದಲ್ಲಿ ಶಾರೀರಿಕ, ಬೌದ್ಧಿಕ ಹಾಗೂ ಸೌಂದರ್ಯಗ್ರಹಣ ಶಕ್ತಿಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು.
- ವೈಜ್ಞಾನಿಕ ಮನೋಭಾವ, ಪ್ರಜಾತಂತ್ರದ ತಿಳುವಳಿಕೆ.
- ಮಕ್ಕಳ ವಿಕಾಸಕ್ಕೆ ವ್ಯವಸ್ಥಿತ ಪರಿಸರವನ್ನು ಒದಗಿಸುವುದು.
- ಮಕ್ಕಳಲ್ಲಿ ಪರಿಸರದ ಸಾಮಾನ್ಯ ಪ್ರಜ್ಞೆಯನ್ನು ಹೆಚ್ಚಿಸುವುದು.
- ಆರೋಗ್ಯಕರ ಹವ್ಯಾಸಗಳ ನಿರ್ಮಾಣ.
- ಮಕ್ಕಳ ಸ್ವಂತಿಕೆ ಬೆಳೆಸುವುದು ಮತ್ತು ಸ್ವಾಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು.
- ವೈಚಾರಿಕ ಚಿಂತನೆ ಮತ್ತು ಶ್ರಮ ಗೌರವ ಭಾವನೆ ಬೆಳೆಸುವುದು.
- ಪ್ರೌಢ ಮತ್ತು ಉನ್ನತ ಶಿಕ್ಷಣಕ್ಕೆ ಭದ್ರ ಬುನಾದಿ ಒದಗಿಸುವುದು.
- ತ್ರಿಭಾಷಾ ಸೂತ್ರವನ್ನು ಅನುಸರಿಸಿ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳಲ್ಲಿ ದಕ್ಷತೆಯನ್ನು ಸಾಧಿಸಲು ಅನುವು ಮಾಡಿಕೊಡುವುದು.

ಪಠ್ಯಕ್ರಮವು ವಿಜ್ಞಾನ, ಕನ್ನಡ, ಇಂಗ್ಲಿಷ್, ಹಿಂದಿ, ಸಮಾಜಶಾಸ್ತ್ರ, ಗಣಿತ, ಜೀವಶಾಸ್ತ್ರ ಹಾಗೂ ಕಂಪ್ಯೂಟರ್ ಶಿಕ್ಷಣವನ್ನು ಒಳಗೊಂಡಿವೆ. ಇದಲ್ಲದೆ ನೀತಿಶಾಸ್ತ್ರ, ಸಾಂಸ್ಕೃತಿಕ ಚಟುವಟಿಕೆಗಳು, ಐತಿಹಾಸಿಕ ಸ್ಥಳಗಳಿಗೆ ಭೇಟಿ, ಶಾಲಾ ಆವರಣದ ಸ್ವಚ್ಛತೆ, ಸಸಿಗಳನ್ನು ನೆಡುವುದು, ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಬೋಧನಾ ಮಾಧ್ಯಮವು ಮಾತೃಭಾಷೆ, ಪ್ರಾದೇಶಿಕ ಭಾಷೆ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಇರುತ್ತದೆ. ಇದಲ್ಲದೇ ರಾಷ್ಟ್ರೀಯ ಪ್ರತಿಭಾನ್ವೇಷಣೆಗೆ ಪರೀಕ್ಷೆಗಳನ್ನು (National Talent Search Exam) (ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸುವುದರ ಸಲುವಾಗಿ) ರಾಷ್ಟ್ರೀಯ ಮಟ್ಟದಲ್ಲಿ ನಡೆಸಲಾಗುತ್ತದೆ.

ಶಾಲಾಮಕ್ಕಳಲ್ಲಿ ಗಣಿತದ ಬಗ್ಗೆ ಒಲವನ್ನು ಮೂಡಿಸಲು ಮತ್ತು ಅದರ ಬಗ್ಗೆ ಹೆಚ್ಚಿನ ಒಲವನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಲು ಪ್ರತಿ ವರ್ಷವೂ ಅಂತರರಾಷ್ಟ್ರೀಯ ಮ್ಯಾಥಮ್ಯಾಟಿಕಲ್ ಒಲಂಪಿಯಾಡ್(International Mathamatical Olympiad - IMO) ಸ್ಪರ್ಧೆಯನ್ನು ನಡೆಸಲಾಗುತ್ತದೆ. ಇದಲ್ಲದೆ 'ಪ್ರತಿಭಾ ಕಾರಂಜಿ' ಹಾಗೂ 'ಸಮುದಾಯದತ್ತ ಶಾಲೆ' ಕಾರ್ಯಕ್ರಮಗಳ ಮೂಲಕ ಮಕ್ಕಳನ್ನು ಸಮುದಾಯ ಮುಖಿಯಾಗಿ ಮಾಡಲು ಪ್ರಯತ್ನಿಸುತ್ತದೆ.

ಪ್ರೌಢಶಿಕ್ಷಣವು ಔಪಚಾರಿಕ ಶಿಕ್ಷಣದ ದ್ವಿಮುಖ ಹಂತವಾಗಿದೆ. ಪ್ರಾಥಮಿಕ ಮತ್ತು ವಿಶ್ವವಿದ್ಯಾಲಯ ಶಿಕ್ಷಣದ ನಡುವಣ ಹಂತವೇ ಪ್ರೌಢಶಿಕ್ಷಣ. ಇದು 12 ಅಥವಾ 14ನೇ ವಯಸ್ಸಿನಿಂದ ಆರಂಭವಾಗಿ 18 ಅಥವಾ 19ನೇ ವಯಸ್ಸಿಗೆ ಮುಕ್ತಾಯವಾಗುತ್ತದೆ. UNESCO ಸಮೀಕ್ಷೆಯ ಪ್ರಕಾರ ವಿಶ್ವದಲ್ಲಿ ಪ್ರೌಢಶಿಕ್ಷಣವು ಸರಾಸರಿ 14 ರಿಂದ 19ನೇ ವಯಸ್ಸಿನವರೆಗೂ ನೀಡುವುದಾಗಿದೆ.

1973ರಲ್ಲಿ 10+2+3 ಶಿಕ್ಷಣಕ್ರಮದ ಪರಾಮರ್ಶೆಗಾಗಿ ಸ್ಥಾಪಿಸಲ್ಪಟ್ಟ ಸಮಿತಿಯು ಈ ಕೆಳಗಿನಂತೆ ಶಿಕ್ಷಣಕ್ರಮವನ್ನು ಶಿಫಾರಸ್ಸು ಮಾಡಿದೆ.

- ಪ್ರಾಥಮಿಕ ಶಿಕ್ಷಣ– 1ನೇ ತರಗತಿಯಿಂದ 8ನೇ ತರಗತಿಯವರೆಗೆ
- ಪ್ರೌಢಶಿಕ್ಷಣ ಅಥವಾ ಮಾಧ್ಯಮಿಕ ಶಿಕ್ಷಣ – 9ನೇ ಮತ್ತು

Digitised by Bharatavani, CIIL

10ನೇ ತರಗತಿಗಳು

- ಹಿರಿಯ ಮಾಧ್ಯಮಿಕ ಹಂತ – 11 ಮತ್ತು 12ನೇ ತರಗತಿಗಳು

ಕರ್ನಾಟಕದಲ್ಲಿ ಸದ್ಯ ಎಂಟರಿಂದ ಹತ್ತನೆಯ ತರಗತಿಗಳನ್ನು ಪ್ರೌಢಶಿಕ್ಷಣವೆಂದು ಪರಿಗಣಿಸಲಾಗಿದೆ. ಪ್ರೌಢಶಿಕ್ಷಣವು ರಾಜ್ಯಸರ್ಕಾರದ ನೇರ ಆಡಳಿತ ಮತ್ತು ಸಂಪೂರ್ಣ ನಿಯಂತ್ರಣಕ್ಕೆ ಒಳಪಟ್ಟಿದೆ. ರಾಜ್ಯಗಳು ಕೇಂದ್ರ ಯೋಜನೆಯ ಮಾರ್ಗದರ್ಶಿ ಸೂತ್ರಗಳ ಪ್ರಕಾರ ತಮ್ಮ ಸ್ಥಳೀಯ ಅವಶ್ಯಕತೆ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ತಮ್ಮ ಶೈಕ್ಷಣಿಕ ಯೋಜನೆಯನ್ನು ತಯಾರಿಸುತ್ತವೆ. ರಾಜ್ಯಗಳು ಪ್ರೌಢಶಿಕ್ಷಣದ ಆಡಳಿತಕ್ಕಾಗಿ ಪ್ರೌಢಶಿಕ್ಷಣ ಮಂಡಳಿ (Board of Secondary Education)ಗಳನ್ನು ರಚಿಸಿಕೊಂಡಿರುತ್ತವೆ. ಇಂದು ದೇಶದ ಎಲ್ಲ ರಾಜ್ಯಗಳಲ್ಲಿಯೂ ಇಂಥ ಮಂಡಳಿಗಳಿವೆ. ಇವು ಸಲಹಾತ್ಮಕ ಸ್ವರೂಪವನ್ನು ಹೊಂದಿವೆ. ಶಾಲಾ ಕಟ್ಟಡಗಳು, ಶಿಕ್ಷಕರು, ಮುಖ್ಯೋಪಾಧ್ಯಾಯರು, ಶಿಕ್ಷಣತಜ್ಞರು ಹಾಗೂ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳು ಈ ಮಂಡಳಿಯಲ್ಲಿ ಸದಸ್ಯರಾಗಿರುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪ್ರೌಢಶಿಕ್ಷಣ ಮಂಡಳಿಯು ಆ ಕ್ಷೇತ್ರದ ಯೋಜನೆ, ಅನುಷ್ಠಾನ ಮತ್ತು ಪರೀಕ್ಷೆಗಳಿಗೆ ಹೊಣೆಯಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯು ಇದಕ್ಕೆ ನಿರ್ದೇಶನ ನೀಡಿ ಬದಲಾವಣೆಯನ್ನು ಮತ್ತು ಸುಧಾರಣೆಗಾಗಿ ಸಲಹೆ, ಸೂಚನೆಗಳನ್ನು ಪಡೆಯುತ್ತದೆ. ಪಠ್ಯಕ್ರಮ ಸಮಿತಿಯ ಮೂಲಕ ಪಠ್ಯಕ್ರಮವನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಕಳುಹಿಸುವುದು ಹಾಗೂ ಪ್ರೌಢಶಿಕ್ಷಣದ ಅಂತಿಮ ಘಟ್ಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಿ ಪ್ರಮಾಣಪತ್ರ ನೀಡುವುದು ಪ್ರೌಢಶಿಕ್ಷಣ ಮಂಡಳಿಯ ಎರಡು ಮುಖ್ಯ ಕಾರ್ಯಗಳು.

**ಪ್ರೌಢಶಿಕ್ಷಣದ ಹಣಕಾಸಿನ ಮೂಲಗಳು:** ಸರ್ಕಾರದಿಂದ ಅನುದಾನ, ಜಿಲ್ಲಾ ಮತ್ತು ಮುನಿಸಿಪಲ್ ಬೋರ್ಡ್‌ಗಳ ಅನುದಾನ, ಖಾಸಗಿ ದತ್ತಿ–ದಾನಗಳು ಮತ್ತು ಶುಲ್ಕ ಈ ಮೊದಲಾದವುಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಪ್ರೌಢಶಿಕ್ಷಣ ಮಂಡಳಿಯು ಶಿಕ್ಷಣಕ್ಷೇತ್ರಕ್ಕೆ ಸಹಾಯ ಮಾಡುತ್ತದೆ. ಸರ್ಕಾರಿ ಶಾಲೆಗಳ ವೆಚ್ಚವನ್ನು ಸರ್ಕಾರವು ಪೂರ್ಣಪ್ರಮಾಣದಲ್ಲಿ ಭರಿಸುತ್ತದೆ. ಸ್ಥಳೀಯ ಮಂಡಳಿಗಳು ಅವು ನಡೆಸುವ ಶಾಲೆಗಳಿಗೆ ತಮ್ಮ ನಿಧಿ, ಸರ್ಕಾರದ ಕೊಡುಗೆ ಮುಂತಾದವುಗಳಿಂದ ಹಣವನ್ನು ಸಂಗ್ರಹಿಸುತ್ತವೆ.

ಭಾರತ ಸರ್ಕಾರದ ಅನುಮತಿಯೊಂದಿಗೆ 1962ರಿಂದ ಕೇಂದ್ರೀಯ ವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. 1963ರಲ್ಲಿ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಅಧಿಕಾರಿಗಳು ಮತ್ತು ರಕ್ಷಣಾ ವಿಭಾಗದಿಂದ ನಡೆಸಲಾಗುತ್ತಿದ್ದ 20 ರೆಜಿಮೆಂಟ್ ಶಾಲೆಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅವುಗಳನ್ನು ಕೇಂದ್ರೀಯ ವಿದ್ಯಾಲಯಗಳನ್ನಾಗಿ ಪರಿವರ್ತಿಸಲಾಯಿತು. ಇಲ್ಲಿ ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗೆ ಪ್ರವೇಶಾವಕಾಶದಲ್ಲಿ ಪ್ರಥಮ ಆದ್ಯತೆಯನ್ನು ನೀಡಲಾಗುತ್ತದೆ. ಸೈನಿಕ ಪಡೆಯ ಹಾಗೂ ವರ್ಗಾವಣೆ ಹೊಂದುವ ನೌಕರರ ಮಕ್ಕಳಿಗೂ ಕೂಡ ಪ್ರವೇಶಾವಕಾಶವನ್ನು ನೀಡಲಾಗುತ್ತದೆ.

ಭಾರತದ ಘನ ಸರ್ಕಾರವು 1985–86ರಲ್ಲಿ ದೇಶದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು ನವೋದಯ ವಿದ್ಯಾಲಯವನ್ನು ತೆರೆಯಿತು. ಇದು ವಸತಿ ಸೌಲಭ್ಯವುಳ್ಳ ಹಾಗೂ ಇತರೆ ಅನುಕೂಲತೆಗಳನ್ನು ಒದಗಿಸುವ ಶಾಲೆಯಾಗಿದ್ದು ಗ್ರಾಮಾಂತರ ಪ್ರದೇಶದಿಂದ ಬಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ದು ಅವರಿಗೆ ಗುಣಾತ್ಮಕ ಶಿಕ್ಷಣವನ್ನು ಕೊಡುವ ಉದ್ದೇಶವನ್ನು ಹೊಂದಿದೆ.

ಶಿಕ್ಷಣ ಇಲಾಖೆಯೊಂದಿಗೆ ನಿಕಟ ಸಂಪರ್ಕ ಸಾಧಿಸಲು ಪ್ರೌಢಶಾಲೆಯ ಮುಖ್ಯ ಶಿಕ್ಷಕರಿಗೆ ರಾಜ್ಯದಲ್ಲೇ ಮೊದಲ ಬಾರಿಗೆ ಮೊಬೈಲ್ ಸಿಮ್ ಕಾರ್ಡ್ ನೀಡಲಾಗುತ್ತಿದೆ. ಪ್ರೌಢ ಹಂತದ ಶಿಕ್ಷಣದ ಸುಧಾರಣೆಯಲ್ಲಿ ಮುಖ್ಯ ಶಿಕ್ಷಕರು ಮಹತ್ವದ ಪಾತ್ರ ನಿರ್ವಹಿಸಬೇಕಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕಾಗುತ್ತದೆ. ಸರ್ವ ಶಿಕ್ಷಣ ಅಭಿಯಾನ ಮತ್ತು ಮಾಧ್ಯಮಿಕ ಶಿಕ್ಷಣ ಅಭಿಯಾನದಿಂದ ಹಲವು ಕಾರ್ಯಕ್ರಮ ಜಾರಿಯಾಗುತ್ತಿದ್ದು, ಇದರ ವಿವರ ಪಡೆಯಲು ಮೊಬೈಲ್ ಬಳಸುವಂತೆ ಸೂಚಿಸಲಾಗಿದೆ. ಈ ಶಿಕ್ಷಕರು ಮೊಬೈಲ್ ಕರೆ ಮಾಡಲು ತಿಂಗಳಿಗೆ 150 ರೂಪಾಯಿ ಪಡೆಯುವರು. ಅದನ್ನು ಅವರು ಶಾಲೆಯಲ್ಲಿ ಜಾರಿಯಲ್ಲಿರುವ ಮಾಧ್ಯಮಿಕ ಶಿಕ್ಷಣ ಅಭಿಯಾನದ ಕಾರ್ಯಕ್ರಮದ ಅನುದಾನದಿಂದ ತೆಗೆದುಕೊಳ್ಳಬೇಕು. ಸಿಮ್ ವಿತರಣೆ ಕಾರ್ಯ ಆರಂಭವಾಗಿದ್ದು ಒಟ್ಟಾರೆ ಸರ್ಕಾರಿ ಪ್ರೌಢಶಾಲೆಯ 4,450 ಮುಖ್ಯ ಶಿಕ್ಷಕರಿಗೆ ಲಭ್ಯವಾಗುವ ಯೋಜನೆಯಿದೆ. ಎಸ್.ಎಂ.ಎಸ್. ಬಿ.ಇ.ಓ, ಡಿ.ಡಿ.ಪಿ.ಐ ಹಾಗೂ ಇಲಾಖೆಯ ಉನ್ನತ ಅಧಿಕಾರಿಗಳು ಮುಖ್ಯ ಶಿಕ್ಷಕರಿಗೆ ಕರೆ ಮಾಡಬಹುದು. ಸಭೆ, ಶಾಲಾ ಭೇಟಿ ವೇಳೆ, ಶಾಲಾ ಅನುದಾನ ಸೌಕರ್ಯ ಸಂಬಂಧ ಮಾತುಕತೆ, ಮೊಬೈಲ್ ಮೂಲಕ ಮಾಡಬಹುದು. ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ವಿವಿಧ ಕ್ರೀಡೆಗಳಲ್ಲಿ ಪ್ರತಿಭೆಯುಳ್ಳ ಮಕ್ಕಳನ್ನು ಶಾಲಾ ಹಂತದಲ್ಲೇ ಗುರುತಿಸಿ ಅವರಿಗೆ ತರಬೇತಿ ನೀಡಿ ತಾಲ್ಲೂಕು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ 1:3 ಪ್ರಮಾಣದಲ್ಲಿ ಆಯ್ಕೆ ಮಾಡಿ ದೂರಗಾಮಿ ದೃಷ್ಟಿಯಿಂದ ಅಂದರೆ ಭಾವಿ ಒಲಂಪಿಕ್ಸ್‌ನಲ್ಲಿ ಭಾಗವಹಿಸಬಲ್ಲ ಕ್ರೀಡಾಪಟುಗಳನ್ನು ಸಿದ್ಧಗೊಳಿಸುವ 'ಬಾಲೋದ್ಯಾನ್' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

–ಡಾ. ಲೀಲಾ ಕೆ.ಎನ್.

## ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯ

ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ ಅಥವಾ ಪುಟಾಣಿ ಮಕ್ಕಳ ಬರಹಗಳಿಗೆ ವಿಶೇಷ ಮಾನ್ಯತೆ ಇದೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರಚಿಸಲು ಅನೇಕ ಲೇಖಕರು ದುಡಿದಿದ್ದಾರೆ ಮತ್ತು

Digitised by Bharatavani, CIIL

ಅವರದೇ ಆದ ಕವನ, ಕಥೆ, ಲಲಿತಕಲೆ, ಪ್ರಬಂಧ ಮುಂತಾದವು ಗಮನ ಸೆಳೆಯುತ್ತದೆ. ಉದಾ: ಜೆ.ಪಿ ರಾಜರತ್ನಂ, 'ರತ್ನನ ಪದಗಳು', 'ಹಾಡು ಓ ಹುಡುಗ', ಮುಂತಾದ ಬರಹಗಳು ಹಾಗೆ ತಿ.ನಂ.ಶ್ರೀ ಅವರು ಮಕ್ಕಳಿಗಾಗಿಯೆ ಬರೆದ 'ಕನ್ನಡ ಮಧ್ಯಮ ವ್ಯಾಕರಣ', ಪಂಜೆ ಮಂಗೇಶರಾಯ ಅವರ ನಾಯಿ ಮರಿ ನಾಯಿ ಮರಿ ತಿಂಡಿಬೇಕೆ, ತಿಂಡಿಬೇಕು ತೀರ್ಥಬೇಕು....... ಬಿ.ಎಂ. ಶ್ರೀಕಂಠಯ್ಯನವರ 'ಕನ್ನಡ ಬಾವುಟ', ಕುವೆಂಪುರವರ ಮತ್ತು ದ.ರಾ.ಬೇಂದ್ರೆ ಅವರ ಅನೇಕ ಕವನಗಳು ಮಕ್ಕಳ ಸಾಹಿತ್ಯವನ್ನು ಅರಳಿಸುವಲ್ಲಿ ಪ್ರಭಾವಬೀರಿವೆ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮಕ್ಕಳ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಅಷ್ಟೊಂದು ಪ್ರಗತಿ ಕಾಲದ ಈ ಸಾಹಿತ್ಯ ಸ್ವಾತಂತ್ರದ ನಂತರ ಈ ಬೆಳೆ ಹುಲುಸಾಗಿ ಬೆಳೆದು ಅದರಲ್ಲೂ ವಿಶೇಷವಾಗಿ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಬಿಜಾಪುರ ಜಿಲ್ಲೆಯ ಕಾಣಿಕೆ ಅಪಾರವಾದುದು. ಅದರಲ್ಲಿ ಮಕ್ಕಳ ಸಾಹಿತ್ಯದ ಜನಕರೆಂದೇ ಪ್ರಸಿದ್ದಿ ಪಡೆದ 'ಶಿಶುಮಂಗೇಶರು' ಇದಕ್ಕೊಂದು ಭದ್ರಬುನಾದಿ ಹಾಕಿದರು.

ಕರ್ನಾಟಕದ ಸಮಗ್ರ ಮಕ್ಕಳ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ ಸರ್ವಶ್ರೇಷ್ಠವಾದುದು. ಇದಕ್ಕೆ ಕಾರಣೀಭೂತರಾದವರು ಶಿಶು ಸಂಗಮೇಶ್ವರರು, ಮುಲ್ಲಾ ಕುಂಬಾರ, ಬಿ.ಎಸ್. ಸನದಿ, ಎಂ.ಎಸ್. ಸನದಿ, ಶರಣಪ್ಪ ಪಿಂಚಾಣಿ, ಶಂಗೂ ಬಿರಾದಾರ, ಈಶ್ವರಚಂದ್ರ ಚಿಂತಾಮಣಿ, ಪಾ.ಗು. ಸಿದ್ದಾಪುರ, ಶರಣಪ್ಪ ಕಚ್ಯಾಣಿ, ಡಾ. ಸಂಗಮೇಶ ರಾಜುಗೊಂಡ ಮುಂತಾದವರು.

ಇತ್ತೀಚೆಗೆ ಮಕ್ಕಳ ಸಾಹಿತ್ಯ ಮರುಚಿಂತನ ಬಗ್ಗೆ ರಾಜ್ಯಮಟ್ಟದ ಚಿಂತನಾ ಸಮಾವೇಶ, ಮೇ16, 2013ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ'ವು ಆಯೋಜಿಸಿದೆ. ಪ್ರಸ್ತುತ ಸನ್ನಿವೇಶದಲ್ಲಿ ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ವಿಜ್ಞಾನ ತಂತ್ರಜ್ಞಾನದಲ್ಲಿ ಹಲವು ಬದಲಾವಣೆಗಳಾಗಿವೆ. ಗ್ರಾಮೀಣ ಸಾಂಸ್ಕೃತಿಕ ಬದುಕು ನಿರಂತರವಾಗಿ ಸ್ಥಿತ್ಯಂತರವಾಗುತ್ತ ಬಂದಿದೆ. ಸ್ವಾವಲಂಬನೆಯ ಸಾಧನವಾಗಬೇಕಿದ್ದ ಶಿಕ್ಷಣ ನಿರುದ್ಯೋಗಿಗಳನ್ನು ಸೃಷ್ಟಿಸುತ್ತದೆ ಎಂಬ ವಾದ ಕೇಳಿ ಬರುತ್ತಿದೆ. ಗೊತ್ತಿಲ್ಲದಂತೆಯೇ ಮಕ್ಕಳ ಬೆಳವಣಿಗೆಯಲ್ಲಿ ಅಂತರ ಗೋಚರಿಸುತ್ತಿದೆ. ಸೃಜನಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು ಬೆಳೆಯಬೇಕಾದ ಮಕ್ಕಳು ಸಾಹಿತ್ಯ ಜ್ಞಾನದ ಅಭಾವದಿಂದ ಮಗುವಿನ ಸೃಜನಶೀಲ ಮನಸ್ಸು ಮುದುಡುತ್ತಿದೆ.

ಸಮಕಾಲೀನ ಸಂದರ್ಭದಲ್ಲಿ ಜಾಗತಿಕ ಮಟ್ಟದಲ್ಲಿ ರಾಷ್ಟ್ರಮಟ್ಟದಲ್ಲಿ ಹಾಗೂ ಕನ್ನಡದಲ್ಲಿ ಸೃಷ್ಟಿಯಾಗಿರುವ ಮಕ್ಕಳ ಸಾಹಿತ್ಯದ ಸ್ವರೂಪವೇನು? ಮಕ್ಕಳ ಸಾಹಿತ್ಯ ಎದುರಿಸುತ್ತಿರುವ ಬಿಕ್ಕಟ್ಟುಗಳಾವುವು? ಸಮಕಾಲೀನ ಸಂದರ್ಭವನ್ನು ಅರಗಿಸಿ ಕೊಂಡು ಸೃಜನಶೀಲವಾಗಿರಲು ಯಾವ ಬಗೆಯ ಮಕ್ಕಳ ಸಾಹಿತ್ಯದ ಅಗತ್ಯವಿದೆ? ಎಂಬುದರ ಬಗ್ಗೆ ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಕಿರಿಯರಿಗೆ ಎಂದೇ 'ಕಿರಿಯರ ರಾಮಾಯಣ' ಎಂಬ ಪುಸ್ತಕವನ್ನು ಬರೆದಿದ್ದಾರೆ. 'ಕಿರಿಯರ ಮಹಾಭಾರತ' ಮತ್ತು 'ಕಿರಿಯರ ಭಾಗವತ' ಕೃತಿಗಳು ಹೊರಬಂದಿದೆ. ಕೃತಿಗಳಲ್ಲಿ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಮತ್ತು ಭಾಗವತದ ವಿಷಯ ವಸ್ತುವನ್ನು ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಬರೆದಿದ್ದಾರೆ.

ಒಳ್ಳೆಯ ಗುಣಗಳು, ಆದರ್ಶಗಳು ಬೆಳೆಯಬೇಕೆಂದು ಹಾಗೂ ಅವರಲ್ಲಿ ಒಳ್ಳೆಯ ಗುಣಗಳನ್ನು ಬೆಳೆಸುವ ಉದ್ದೇಶದಿಂದ ಸಾಹಿತ್ಯವು ತನ್ನದೇ ಆದ ಪ್ರಯತ್ನವನ್ನು ಮಾಡಿದೆ. ಶಕುನಿಯ ಕೆಡಕು, ದುರ್ಯೋಧನನ ಛಲ, ಧರ್ಮರಾಯನ ಕ್ಷಮಾಗುಣ, ವಿದುರನ ವಿವೇಕ, ಹರಿಶ್ಚಂದ್ರನ ಸತ್ಯಶೀಲತೆ, ಸೀತೆಯ ಪಾತಿವ್ರತ್ಯ, ಹನುಮಂತನ ಸ್ವಾಮಿಭಕ್ತಿ, ಅಭಿಮನ್ಯುವಿನ ಸಾಹಸ, ಆಕ್ರೂರನ ದೈವಭಕ್ತಿ, ದ್ರೌಪದಿಯ ಪಾತಿವ್ರತ್ಯ ಇಂತಹ ಗುಣಗಳು ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ.

ಕರ್ನಾಟಕದಲ್ಲಿ ಸಾಹಿತ್ಯದ ಮೂಲಕ ಮಕ್ಕಳಿಗೆ ಅನೌಪಚಾರಿಕ ರೀತಿಯಲ್ಲಿ ಕವಿಗಳು, ಲೇಖಕರು, ವಿಮರ್ಶಕರು, ನಾಡಿನ ಹಿರಿಯ ಸಾಹಿತಿಗಳು, ಪತ್ರಕರ್ತರು, ಬರಹಗಾರರು, 'ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು', ಮಾಧ್ಯಮದವರು, ದಿನ ಪತ್ರಿಕೆಗಳು, ನಿಯತಕಾಲಿಕೆಗಳು, ಕನ್ನಡ ಅಧ್ಯಯನ ವಿಭಾಗಗಳು–ಸಾಹಿತ್ಯ ಲಲಿತಕಲೆ ವಿಶ್ವವಿದ್ಯಾಲಯಗಳು, ಪ್ರಸಾರಾಂಗಗಳು–ಕನ್ನಡ ಸಾಹಿತ್ಯ ಪರಿಷತ್ತು, ಮಾನವಿಕ ವಿಜ್ಞಾನ ಸರ್ಕಾರಿ ಹಾಗೂ ಖಾಸಗಿ ಮುದ್ರಣ ಪ್ರಕಾಶಕರುಗಳು–ವಿದ್ವಾಂಸರು, ಶಿಕ್ಷಕರು, ಪ್ರತಿಯೊಬ್ಬರು ಈ ಸಾಹಿತ್ಯವನ್ನು ಬೆಳೆಸುವ ದೃಷ್ಟಿಯಿಂದ ಮಕ್ಕಳಿಗಾಗಿ ಕಾರ್ಯಕ್ರಮಗಳು, ಪುಸ್ತಕಗಳು, ಕತೆ ಪುಸ್ತಕಗಳು, ಪತ್ರಿಕೆಗಳಲ್ಲಿ ಪ್ರತ್ಯೇಕ ಪುರವಣಿಗಳು, ಮಕ್ಕಳಿಗಾಗಿ ಮಾಧ್ಯಮದವರಿಂದ ಕನ್ನಡದಲ್ಲೂ ಮಕ್ಕಳಿಗಾಗಿ ಪುಸ್ತಕಗಳನ್ನು ಪ್ರಕಟಿಸಿದೆ.

ಹೀಗೆ ಕರ್ನಾಟಕದಲ್ಲಿ 1985ರ ನಂತರವೂ ಕೂಡ ಅನೇಕ ರೀತಿಯ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪುಸ್ತಕಗಳು ಹೊರಬಂದಿವೆ. ಕರ್ನಾಟಕದಲ್ಲಿ ಸಾಹಿತ್ಯದ ಬೆಳವಣಿಗೆಯನ್ನು ನೋಡಿದಾಗ ಗೀತೆ, ಕಥೆ–ಸಾಹಿತ್ಯದ ವರ್ಣನೆ, ವಿವಿಧ ವಯಸ್ಸಿನ ವಯೋಮಾನದವರೆಗೆ ಬಿಂಬಿಸುವ ಸಾಹಿತ್ಯವನ್ನು ನೋಡುತ್ತೇವೆ. ಪ್ರಾಣಿಗಳಿಂದ ಹಿಡಿದು ಪುರಾತನ ಕಾಲದ ಪುರಾಣ, ಮಹಾಕಾವ್ಯಗಳವರೆಗಿನ ಕಥೆಗಳನ್ನು ಕನ್ನಡ ಸಾಹಿತ್ಯದಲ್ಲಿ ಕಾಣುತ್ತೇವೆ. ಅನೇಕ ಕಥೆಗಳನ್ನು ಕಾವ್ಯಗಳನ್ನು ಮಕ್ಕಳ ವಯೋಮಾನದವರಿಗೆ ಸುಲಭವಾಗಿ ಅರ್ಥವಾಗಬಲ್ಲ ರೀತಿಯಲ್ಲಿ 'ರಾಮಾಯಣ–ಮಹಾಭಾರತ'ದಂತಹ ಮಹಾಕಾವ್ಯಗಳನ್ನು ಬರೆದ ಅನೇಕ ಗ್ರಂಥಗಳನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯವನ್ನು ಬೆಳೆಸುವ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ, ಬೇರೆ ಬೇರೆ ಸಂಘ–ಸಂಸ್ಥೆಗಳ ಮೂಲಕ ಮಕ್ಕಳಿಗೆ ಕಮ್ಮಟಗಳನ್ನು–ಪ್ರತಿಭಾ ಕಾರಂಜಿಗಳನ್ನು ಏರ್ಪಡಿಸಲಾಗುತ್ತದೆ. ಭಾರತೀಯ ರಾಷ್ಟ್ರೋತ್ಥಾನ ಪರಿಷತ್ತನಿಂದ,

Digitised by Bharatavani, CIIL

ರಾಮಕೃಷ್ಣಮಿಷನ್ ಸಂಸ್ಥೆಯಿಂದ, ನವಕರ್ನಾಟಕ ಪ್ರಕಾಶಕರಿಂದ, ಸಪ್ನ ಪುಸ್ತಕ ಮಳಿಗೆ ಮಾರಾಟ ಪ್ರಕಾಶಕರಿಂದ, ಬೇರೆ ಬೇರೆ ನಾಡಿನ ಹೆಸರಾಂತ ತರಬೇತಿ ಸಂಸ್ಥೆಯಿಂದ ಅನೇಕ ವಿವಿಧ ಕಥೆ, ಕಾದಂಬರಿ, ಕವನ, ವಿಶೇಷವಾಗಿ ಮಕ್ಕಳಿಗೆ ಸಂಬಂಧಿಸಿದಂತೆ ಹೊರಬಂದಿರುವ ಪ್ರಕಾಶಕರ–ಸಂಘ–ಸಂಸ್ಥೆಗಳ ಪುಸ್ತಕಗಳನ್ನು ಕಾಣಬಹುದಾಗಿದೆ. ಜೀವನಕ್ಕೆ ಸಂಬಂಧಿಸಿದ ಸಾಹಿತ್ಯ ಪಂಚತಂತ್ರದ ಕಥೆಗಳು, ವೆಂಕಟಸುಬ್ಬಯ್ಯ ಅವರು ಬರೆದಿರುವ ಕಥೆಗಳು 'ಈ ಸೋಪಾನ' ಕಥೆಗಳು, ಹಾಗೆಯೇ ಮಕ್ಕಳಿಗಾಗಿ 'ಚಂದಮಾಮ', ಅನುಪಮಾ ನಿರಂಜನರ 'ದಿನಕ್ಕೊಂದು ಕಥೆ', ಭಾನುವಾರದ ಪ್ರಜಾವಾಣಿ ದಿನಪತ್ರಿಕೆಯಲ್ಲಿ 'ಮಕ್ಕಳ ಮನೋರಂಜನೆ', ವಾಸುದೇವಾಚಾರ್ಯರ 'ಆರ್ಯಕೀರ್ತಿ' ಪುಸ್ತಕಮಾಲೆ, ಜಿ.ಪಿ. ರಾಜರತ್ನಂ ಮಕ್ಕಳಿಗಾಗಿ ಬರೆದ ಕೃತಿಗಳು, ಶಿ.ಶು ಸಂಗಮೇಶ ಅವರು ಬರೆದಿರುವ ಕೃತಿಗಳು, 'ಪುಟಾಣಿ', 'ಬಾಲಮೈತ್ರಿ', 'ಇಂದ್ರಜಾಲ ಕಾಮಿಕ್ಸ್', 'ಫ್ಯಾಂಟಸಿ ಕಥೆಗಳು', ನಾಟಕ, ಗೀತೆಗಳು, ಕಥೆಗಳು. ಇತ್ತೀಚೆಗೆ ಸ್ವಾಮಿ ವಿವೇಕಾನಂದರ 150ನೇ ಹುಟ್ಟು ಹಬ್ಬದ ಸಂಭ್ರಮದಲ್ಲಿ ಸರ್ಕಾರ ನೀಡಿರುವ ಮಕ್ಕಳಿಗಾಗಿ ಹಾಗೂ ಯುವಕರಿಗಾಗಿ ಮುದ್ರಿಸಿ ಶಾಲಾ–ಕಾಲೇಜುಗಳಿಗೆ ಸರಬರಾಜು ಮಾಡಿರುವ ವಿವೇಕವಾಣಿ ತತ್ವಗಳು ಹೀಗೆ ಮಕ್ಕಳ ಸಾಹಿತ್ಯಕ್ಕೆ ದೇಶ–ನಾಡು–ನೀಡಿದ ಕೊಡುಗೆ ಅಪಾರವಾಗಿದೆ. ಜೊತೆಗೆ ರಾಜ್ಯಮಟ್ಟದ–ಜಿಲ್ಲಾಮಟ್ಟದ ನಗರ–ಕೇಂದ್ರ ಗ್ರಂಥಾಲಯಗಳಲ್ಲಿ ಮಕ್ಕಳಿಗಾಗಿ ಕಾಮಿಕ್ಸ್–ಕಥೆ–ಪುಸ್ತಕಗಳು, ಮಕ್ಕಳ ವಿಭಾಗಗಳು, ಸಂಬಂಧಿಸಿದ ಕಥಾ ರೂಪದ ಸಿ.ಡಿ.ಗಳು, ನೀತಿ ಬೋಧನೆ ಮಾಡುವ ಸಾಹಿತ್ಯದ ಕಣಜಗಳನ್ನು ಕಾಣಬಹುದಾಗಿದೆ.

**ಐದು ವರ್ಷದ ಮಕ್ಕಳ ಸಾಹಿತ್ಯ (1981–85)**

**1981:** ಕಥೆ, ಕವನ, ನಾಟಕ, ಜೀವನ ಚರಿತ್ರೆ ಮುಂತಾದ ವಿವಿಧ ಪ್ರಕಾರಗಳಲ್ಲಿ ಮಕ್ಕಳಿಗಾಗಿ ಪುಸ್ತಕಗಳು ಪ್ರಕಟವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತು ನೂರಾರು ಪುಸ್ತಕಗಳನ್ನು ಪ್ರಕಟಿಸಿದೆ. ಸಾಹಿತ್ಯ ಲಲಿತಕಲೆ, ಮಾನವಿಕ, ವಿಜ್ಞಾನ ವಿಷಯಗಳನ್ನು ಕುರಿತು ಪುಸ್ತಕಗಳು ಪ್ರಕಟವಾಗಿವೆ.

ಮಾಸ್ಕೋದ ಪ್ರಗತಿ ಪ್ರಕಾಶನ ಕನ್ನಡದಲ್ಲೂ ಮಕ್ಕಳಿಗಾಗಿ ಪುಸ್ತಕಗಳನ್ನು ಪ್ರಕಟಿಸಿರುವುದು ಸಂತೋಷದ ಸಂಗತಿ. ಗೋಪಾಲಕೃಷ್ಣರಾವ್‌ರವರು ಅನುವಾದಿಸಿರುವ 'ಮೂರು ಕರಡಿಗಳು', 'ಕೊಂಬಿನ ಕುರಿ', 'ತ್ಯೂಪ ಹಕ್ಕಿಗಳನ್ನು ಏಕೆ ಹಿಡಿಯುವುದಿಲ್ಲ?' ಈ ಪುಸ್ತಕಗಳು ಈ ವರ್ಷ ಪ್ರಕಟವಾಗಿವೆ. ಮಕ್ಕಳಲ್ಲಿ ಸಾಹಸ ಮನೋಭಾವವನ್ನು ಬೆಳೆಸಲು ಇಂಥ ಪುಸ್ತಕಗಳು ನೆರವಾಗುತ್ತದೆ ಪುಟ ಪುಟದಲ್ಲೂ ಬಣ್ಣ ಬಣ್ಣದ ಚಿತ್ರಗಳು ಮತ್ತು ಮುದ್ದಾದ ಮುದ್ರಣ ಈ ಪುಸ್ತಕಗಳ ವೈಶಿಷ್ಟ್ಯ. ಈ ವರ್ಷ ಪ್ರಕಟವಾಗಿರುವ ಬಾಲಸಾಹಿತ್ಯ ರಾಶಿಯಲ್ಲಿ ಎದ್ದು ಕಾಣುವ ಪುಸ್ತಕಗಳಿವು.

ಮನೋಹರ ಅವರು ಸಂಪಾದಿಸಿರುವ 'ಕಥೆಗಳೋ ಕಥೆಗಳು', 'ಕೊಪ್ಪರಿಗೆ ತುಂಬ ಕಥೆಗಳು', ಮತ್ತು 'ತೆನಾಲಿ ರಾಮಕೃಷ್ಣನ ಕಥೆಗಳು' ಮಕ್ಕಳಿಗೆ ಮನೋರಂಜನೆಯನ್ನು ಒದಗಿಸಬಲ್ಲ ಕಥಾಸಂಕಲನಗಳು. ಗೀತಾ ಕುಲಕರ್ಣಿ ಅವರ 'ತುಳು ಜಾನಪದ ಕಥೆಗಳು' ಪುಸ್ತಕದಲ್ಲಿ ಮೂರು ಕಥೆಗಳಿವೆ. ಇವೆಲ್ಲವೂ ತುಳು ಜಾನಪದ ವಸ್ತುವನ್ನು ಆಧರಿಸಿಕೊಂಡು ರಚನೆಗೊಂಡಿವೆ. ಸಾಹಸ, ಚಮತ್ಕಾರ ಮತ್ತು ಪ್ರೇಮ ಇಲ್ಲಿನ ಕಥೆಗಳ ವಸ್ತುವಾಗಿವೆ.

ಮಕ್ಕಳಿಗೆ ಒಳ್ಳೆಯ ಸಾಹಿತ್ಯವನ್ನು ಕೊಟ್ಟ ಹಿರಿಯ ಲೇಖಕರಲ್ಲಿ ಎಂ.ಎಸ್. ಪುಟ್ಟಣ್ಣನವರ ಹೆಸರ ಚಿರಸ್ಮರಣೀಯ. ಅವರ 'ನೀತಿ ಚಿಂತಾಮಣಿ'ಯ ಕಥೆಗಳು ಇಂದಿಗೂ ಜನಪ್ರಿಯವಾಗಿವೆ. ಇಲ್ಲಿಯವರೆಗೂ ಪ್ರಕಟವಾಗದೆ ಉಳಿದಿದ್ದ ಪುಟ್ಟಣ್ಣನವರ ಇಪ್ಪತ್ತೆರಡು ಪುಟ್ಟ ಕಥೆಗಳನ್ನು ಇದೀಗ 'ನೀತಿ ಚಿಂತಾಮಣಿ'ಯ ಮುಂದುವರಿದ ಭಾಗವಾಗಿ 'ಪುಟ್ಟಣ್ಣ ಹೇಳಿದ ಕಥೆಗಳು' ಎಂಬ ಹೆಸರಿನಲ್ಲಿ ಮೂರು ಭಾಗಗಳಲ್ಲಿ ಪ್ರಕಟಿಸಲಾಗಿದೆ. 'ಹಕ್ಕಿಯ ಬುದ್ಧಿ', 'ಹಸು ಮತ್ತು ಹೆಗ್ಗಣ', 'ನ್ಯಾಯಾಧಿಪತಿಯ ಯುಕ್ತಿ', ಕರುಣೆ, ಪ್ರೇಮ, ಉಪಕಾರ ಬುದ್ಧಿ ಮುಂತಾದ ಸದ್ಗುಣಗಳನ್ನು ತಿಳಿಸುವ ಈ ಕಥೆಗಳು ಸರಳವಾಗಿದ್ದು, ಮಕ್ಕಳ ನಡೆ–ನುಡಿಯನ್ನು ರೂಪಿಸಲು ನೆರವಾಗುತ್ತವೆ.

ಮಕ್ಕಳಿಗಾಗಿ ಕವನಗಳ ಪ್ರಕಟಣೆ ಬಹಳ ಕಡಿಮೆ. ಈ ವರ್ಷ ಪ. ಸೀತಾರಾಮಭಟ್ಟರ 'ಗುಲಾಬಿ ಗೊಂಚಲು' ಮತ್ತು ಗಂಗಾಧರ ನಂದಿ ಸಂಪಾದಿಸಿರುವ 'ಬಾಲರ ಜೀವನ' ಎಂಬ ಎರಡು ಕವನ ಸಂಕಲನಗಳು ಪ್ರಕಟವಾಗಿವೆ. ಸೀತಾರಾಮಭಟ್ಟರ 'ಗುಲಾಬಿ ಗೊಂಚಲು'ನಲ್ಲಿರುವ ಪುಟ್ಟ ಪದ್ಯಗಳು ಆಕರ್ಷಕವಾಗಿದ್ದು, ಮಕ್ಕಳ ಮನಸ್ಸನ್ನು ಮುಟ್ಟುವಂತಿವೆ. 'ಬಾಲರ ಜೀವನ'ದಲ್ಲಿ ವಿವಿಧ ವಿಷಯಗಳನ್ನು ಕುರಿತು ಇಪ್ಪತ್ತೈದು ಪದ್ಯಗಳಿವೆ. ಇವೆಲ್ಲ ಸರಳ ರಚನೆಗಳು.

ಮಕ್ಕಳಿಗಾಗಿ ಪ್ರಕಟವಾಗಿರುವ ನಾಟಕಗಳಲ್ಲಿ ಕೆ.ವಿ. ಸುಬ್ಬಣ್ಣ ಅವರ 'ಬೆಟ್ಟಕ್ಕೆ ಚಳಿಯಾದರೆ' ಮತ್ತು ಬಿ. ಚಂದ್ರಶೇಖರ್ ಅವರ 'ಚಿರಂಜೀವಿ' ನಾಟಕಗಳನ್ನು ಹೆಸರಿಸಬಹುದು. ಹಾಡುಗಳು ಮತ್ತು ಹಾಸ್ಯ ಲಹರಿಯಿಂದ ಕೂಡಿರುವ 'ಬೆಟ್ಟಕ್ಕೆ ಚಳಿಯಾದರೆ' ನಾಟಕದಲ್ಲಿ ಲಯಬದ್ಧ ಸಂಭಾಷಣೆ ಇದೆ. ರಂಗ ಪ್ರಯೋಜನಕ್ಕೆ ಹೆಚ್ಚಿನ ಸ್ವಾತಂತ್ರ್ಯವೂ ಇದೆ. ಮಕ್ಕಳನ್ನು ಅಪಹರಿಸಿಕೊಂಡು ಹೋಗುವ ಕಳ್ಳರು, ಅವರನ್ನು ಎದುರಿಸಲು ಹೋಗುವ ಮಕ್ಕಳು, ಅವರು ಪಡುವ ಪಾಡು ಈ ಮುಂತಾದ ಘಟನೆಗಳಿಂದ ಕೂಡಿರುವ 'ಚಿರಂಜೀವಿ' ನಾಟಕದಲ್ಲಿ ಪ್ರಾಣಿಗಳ ಪಾತ್ರವೂ ಬರುತ್ತದೆ.

ಎಸ್. ಚನ್ನಪ್ಪನವರ 'ಕುವೆಂಪು ಕಥೆ' ಮರುಮುದ್ರಣವಾಗಿದೆ. ಕವಿಯ ಕೃತಿಗಳಿಂದಲೆ ಕವಿಯ ಜೀವನ–ಸಾಧನೆಯನ್ನು ಮಕ್ಕಳಿಗೆ ತಿಳಿಸಿಕೊಡುವ ರೀತಿಗೆ ಈ ಪುಸ್ತಕ ಮಾದರಿಯಾಗಿದೆ ಎನ್ನಲಾಗಿದೆ. ಒಬ್ಬ ವ್ಯಕ್ತಿಯ ಜೀವನಕ್ಕೆ ಸಂಬಂಧಿಸಿದ ಘಟನೆಗಳನ್ನು ಪುಟ್ಟ ಪುಟ್ಟ ಕಥೆಗಳ ರೂಪದಲ್ಲಿ ಹೇಳುವುದರ ಮೂಲಕ ಆ ವ್ಯಕ್ತಿಯ ಜೀವನ–ಸಾಧನೆಯನ್ನು ಚಿತ್ರಿಸಬಹುದು. ಇಂಥ ಒಂದು ಪ್ರಯತ್ನವನ್ನು ಎಸ್.ಚನ್ನಪ್ಪನವರು ತಮ್ಮ 'ನೆಹರೂಜಿ ಕಥೆಗಳು' ಪುಸ್ತಕದಲ್ಲಿ ಮಾಡಿದ್ದಾರೆ.

Digitised by Bharatavani, CIIL

ವಿಜ್ಞಾನ ವಿಷಯಗಳನ್ನು ಕುರಿತು ಅನೇಕ ಪುಸ್ತಕಗಳು ಪ್ರಕಟವಾಗಿವೆ. ಸಮಾಜ ಪುಸ್ತಕಾಲಯದ 'ಮಕ್ಕಳ ಜ್ಞಾನ–ವಿಜ್ಞಾನ' ಮಾಲೆಯಲ್ಲಿ 'ಔಷಧಿಗಳು', 'ಸುಗಂಧ ವಸ್ತುಗಳು', 'ಸ್ಫೋಟಕಗಳು' ಮತ್ತು 'ಸಾಬೂನು ಡಿಟರ್ಜೆಂಟುಗಳು' ಎಂಬ ನಾಲ್ಕು ಪುಸ್ತಕಗಳು ಪ್ರಕಟವಾಗಿವೆ. ಆಯಾ ವಸ್ತುಗಳ ತಯಾರಿಕೆ ಮತ್ತು ಅವುಗಳ ಉಪಯೋಗವನ್ನು ಎಂ.ಆರ್. ಶಾನಭಾಗ ಅವರು ಸರಳವಾಗಿ ಹೇಳಿದ್ದಾರೆ. ಮಕ್ಕಳಿಗೆ ವೈಜ್ಞಾನಿಕ ವಿಚಾರಗಳನ್ನು ತಿಳಿಸಿಕೊಡಲು ಇಂಥ ಪುಸ್ತಕಗಳು ನೆರವಾಗುತ್ತವೆ.

ದಿನನಿತ್ಯದ ನಾನಾ ಅನುಭವಗಳನ್ನು ಮತ್ತು ಪ್ರಚಾರದಲ್ಲಿರುವ ನಂಬಿಕೆಗಳನ್ನು ಕುರಿತು ಮಾಡಿದ ಚಿಂತನೆಯ ಸಂಶೋಧನೆಗೆ ದಾರಿ ಮಾಡಿಕೊಟ್ಟ ರೀತಿಯನ್ನು ಎಂ. ಶಿವರಾಂ ಅವರು 'ಯೋಚಿಸಿದರೆ' ಎಂಬ ಪುಸ್ತಕದಲ್ಲಿ ಸ್ವಾರಸ್ಯವಾಗಿ ಹೇಳಿದ್ದಾರೆ. ಇದೊಂದು ಕುತೂಹಲಕಾರಿ ಪುಸ್ತಕ.

ಸಸ್ಯಜೀವಿ ಮತ್ತು ಪ್ರಾಣಿಜೀವಿಗಳಿಗಿರುವ ಸಾಮ್ಯ ಮತ್ತು ವ್ಯತ್ಯಾಸವನ್ನು ಬಿ.ಜಿ.ಎಲ್. ಸ್ವಾಮಿ ಅವರು 'ಸಸ್ಯಜೀವಿ–ಪ್ರಾಣಿಜೀವಿ' ಪುಸ್ತಕದಲ್ಲಿ ಗುರುತಿಸಿದ್ದಾರೆ. ಇದೊಂದು ಸ್ವಾರಸ್ಯಕರವಾದ ಪುಸ್ತಕ.

**1982:** 'ಮಕ್ಕಳ ಸಾಹಿತ್ಯ' ವಿಭಾಗದಲ್ಲಿ ಜೀವನ ಚರಿತ್ರೆ, ಕಥೆ, ಕವನ, ನಾಟಕ, ವೈಜ್ಞಾನಿಕ ವಿಷಯ ಈ ಮುಂತಾದ ಪ್ರಕಾರಗಳಲ್ಲಿ ಈ ಪುಸ್ತಕಗಳು ಪ್ರಕಟವಾಗಿವೆ.

ಬೆಳೆಯುವ ಕಿರಿಯ ಚೇತನಗಳಿಗೆ ಪ್ರಸಿದ್ಧ ವ್ಯಕ್ತಿಗಳ ಜೀವನ ಸಾಧನೆಗಳನ್ನು ತಿಳಿಸಿಕೊಡುವುದು ಅಗತ್ಯ. ಈ ದಿಸೆಯಲ್ಲಿ ಸಮಾಜ ಪುಸ್ತಕಾಲಯ, ಐಬಿಎಚ್ ಪ್ರಕಾಶನ, ಅರ್ಕಾವತಿ ಪ್ರಕಾಶನ ಮುಂತಾದ ಪ್ರಕಾಶನ ಸಂಸ್ಥೆಗಳು ಉಪಯುಕ್ತ ಜೀವನ ಚರಿತ್ರೆಗಳನ್ನು ಪ್ರಕಟಿಸಿವೆ. ಐಬಿಎಚ್ ಪ್ರಕಾಶನದ 'ಪರಂಪರೆ' ಮಾಲೆಯಲ್ಲಿ ಪ್ರಕಟವಾಗಿರುವ 'ಕೆಂಗಲ್ ಹನುಮಂತಯ್ಯ'(ಡಿ.ಲಿಂಗಯ್ಯ), 'ಬೆಂಗಳೂರು ನಾಗರತ್ನಮ್ಮ'(ಬಿವಿಕೆ.ಶಾಸ್ತ್ರಿ), 'ಸಾವಿರದ ವರಕವಿ ಬೇಂದ್ರೆ', (ಎನ್ಕೆ)– ಈ ಜೀವನ ಚರಿತ್ರೆಗಳು ಉಲ್ಲೇಖನೀಯ. ಅರ್ಕಾವತಿ ಪ್ರಕಾಶನದಿಂದ ಪ್ರಕಟವಾಗಿರುವ 'ಮಕ್ಕಳ ಸಾಹಿತ್ಯ ಶಿಲ್ಪಿಗಳು'(ಎಸ್.ಚನ್ನಪ್ಪ) ಒಂದು ಉಲ್ಲೇಖನೀಯ ಕೃತಿ. ಕನ್ನಡ ಮಕ್ಕಳ ಪ್ರಕಾರದ ಬೆಳವಣಿಗೆಗಾಗಿ ದುಡಿದ ಚ.ವಾಸುದೇವಯ್ಯ ಸುಬೋಧ ರಾಮ್‌ರಾಮ್, ಹೊಯ್ಸಳ, ಎಂ.ಎಸ್.ಪುಟ್ಟಣ್ಣ, ಕಲ್ಯಾಣಮ್ಮ, ಕುವೆಂಪು ಮತ್ತು ಜಿ.ಪಿ. ರಾಜರತ್ನಂ ಈ ಏಳು ಜನ ಹಿರಿಯ ಲೇಖಕರ ಸಂಕ್ಷಿಪ್ತ ಜೀವನ ಪರಿಚಯದ ಜತೆಗೆ, ಮಕ್ಕಳಿಗಾಗಿ ಈ ಲೇಖಕರು ಬರೆದ ಬರಹಗಳ ಪರಿಚಯವನ್ನು ಈ ಪುಸ್ತಕವನ್ನು ಮಾಡಿಕೊಡಲಾಗಿದೆ.

ಪದ್ಯ ಸಂಗ್ರಹಗಳಲ್ಲಿ 'ನವಿಲು ಗರಿ' ಮತ್ತು 'ಬಣ್ಣದ ಬುಗುರಿ' ಎಂಬ ಎರಡು ಪುಸ್ತಕಗಳನ್ನು ಹೆಸರಿಸಬಹುದು. ಈ ಎರಡೂ ಪುಸ್ತಕಗಳು ಸಚಿತ್ರವಾಗಿ ಪ್ರಕಟವಾಗಿವೆ. ಟಿ. ಎಸ್. ನಾಗರಾಜಶೆಟ್ಟರ 'ನವಿಲು ಗರಿ'ಯಲ್ಲಿ ಮಕ್ಕಳಿಗೆ ಎಟುಕುವಂಥ ವಿಷಯಗಳನ್ನು ಕುರಿತ ಮೂವತ್ತೆರಡು ಪದ್ಯಗಳಿವೆ. ಪ್ರಾಸಕ್ಕೆ ಹೆಚ್ಚು ಒತ್ತುಕೊಟ್ಟಿರುವ ಈ ಪುಸ್ತಕದ ಪದ್ಯಗಳು ಮಕ್ಕಳಿಗೆ ಪ್ರಿಯವಾಗಬಲ್ಲವು. 'ಒಂದು ಕಥೆ', 'ಜಾಣ ತಮ್ಮ' ಈ ಕಥನ ಕವನಗಳೂ ಸ್ವಾರಸ್ಯವಾಗಿವೆ. ಮಹಾಂತಪ್ರಿಯರ 'ಬಣ್ಣದ ಬುಗುರಿ'ಯಲ್ಲಿ ಹತ್ತು ಪದ್ಯಗಳಿವೆ. 'ರೈಲು', 'ಸಕ್ಕರೆ ಗುಬ್ಬಿ' ಈ ಪದ್ಯಗಳು ಆಕರ್ಷಕವಾಗಿದ್ದು ಮಕ್ಕಳಿಗೆ ಪ್ರಿಯವಾಗಬಲ್ಲವು.

ಕಥಾ ಸಂಕಲನಗಳಲ್ಲಿ ವರದರಾಜ ಹುಯಿಲಗೋಳರ 'ವಸುಭಾಗನ ಪಂಚತಂತ್ರದ ಕಥೆಗಳು', ದು.ನಿಂ. ಬೆಳಗಲಿ ಅವರ 'ಮತ್ತಷ್ಟು ಈಸೋಪನ ಕಥೆಗಳು' ಮತ್ತು 'ಮುಂದುವರಿದ ಈಸೋಪನ ಕಥೆಗಳು', ಡಿ.ಕೆ. ಬಾಲಸುಬ್ರಮಣ್ಯಂ ಅವರ 'ಅಜ್ಜಿ ಹೇಳಿದ ಕಥೆಗಳು' ಈ ಸಂಕಲನಗಳನ್ನು ಹೆಸರಿಸಬಹುದು. ಮಕ್ಕಳ ನಡೆನುಡಿಗಳನ್ನು ರೂಪಿಸಲು ನೆರವಾಗುವಂಥ ಅನೇಕ ಕಥೆಗಳು ಈ ಸಂಕಲನಗಳಲ್ಲಿವೆ.

ಮಕ್ಕಳಿಗಾಗಿ ಅನೇಕ ಕಿರುಕಾದಂಬರಿಗಳು ಪ್ರಕಟವಾಗಿವೆ. ಅವುಗಳಲ್ಲಿ ಬಿ.ಎಲ್. ವೇಣುರವರ 'ಗುಹೆ ಸೇರಿದವರು' ಮತ್ತು ಬಿ.ಎಸ್. ಚಂದ್ರಶೇಖರ ಅವರ 'ಗೋ ಗ್ರಹಣ'. ಸಾಹಸವೇ ಈ ಎರಡೂ ಕಾದಂಬರಿಗಳ ಮುಖ್ಯವಸ್ತು. ಮಕ್ಕಳಲ್ಲಿ ಆಸಕ್ತಿಯನ್ನೂ ಉತ್ಸಾಹವನ್ನೂ ಈ ಕಾದಂಬರಿಗಳು ಮೂಡಿಸುವಂತಿದೆ.

ನಾಟಕಗಳಲ್ಲಿ ಪಳಕಳ ಸೀತಾರಾಮಭಟ್ಟರ 'ನಚಿಕೇತ' ಮತ್ತು ಬಿ.ವಿ. ಕಾರಂತ–ಪಿ.ಎಸ್. ರಾಮಪ್ಪನವರ 'ನೀಲಿ ಕುದುರೆ' ಎಂಬ ಎರಡು ನಾಟಕಗಳನ್ನು ಹೆಸರಿಸಬಹುದು. 'ನಚಿಕೇತ' ಒಂದು ಪೌರಾಣಿಕ ನಾಟಕ. ಪೋರ್ಚುಗೀಸ್‌ನಲ್ಲಿ ಮಾಯಾಕ್ಲಾರಾ ಎಂಬಾಕೆ ಬರೆದ ನಾಟಕವೊಂದನ್ನು ಆಧರಿಸಿಕೊಂಡು ಬರೆದದ್ದು 'ನೀಲಿ ಕುದುರೆ'. ಸಿಪಾಯಿಯವರು. ಪೇಟೆಯವರು, ದಾದಿಗಳು, ಆಟದ ಸಾಮಾನು ಮಾರುವವರು, ಸರ್ಕಸ್ ನೋಡುವ ಹುಡುಗರು–ಮುಂತಾದ ಪಾತ್ರಗಳು ಬರುವ 'ನೀಲಿ ಕುದುರೆ' ಕುತೂಹಲಕಾರಿಯಾಗಿದ್ದು, ಮಕ್ಕಳನ್ನು ಆಕರ್ಷಿಸುವಂತಿದೆ.

ರಾಯಚೂರಿನ ಶ್ರೀರಾಮ ಸೇವಾ ಟ್ರಸ್ಟಿನಿಂದ 'ಬಾಲಭಾರತ' ಮಾಲೆಯ ಮೂರು ಮತ್ತು ನಾಲ್ಕನೆಯ ಸಂಪುಟಗಳು ಪ್ರಕಟವಾಗಿವೆ. ಮಹಾಭಾರತದ ಕಥೆಯನ್ನು ಮಕ್ಕಳಿಗೆ ಸರಳವಾಗಿ ತಿಳಿಸಿಕೊಡಲು ನಾರಾಯಣರಾವ್ ತಾಳೀಕೋಟೆ ಅವರು ಈ ಸಂಪುಟಗಳಲ್ಲಿ ಪ್ರಯತ್ನಿಸಿದ್ದಾರೆ. ಇದೊಂದು ಸ್ವಾಗತಾರ್ಹ ಪ್ರಯತ್ನ.

ವಿಜ್ಞಾನದ ವಿಷಯಗಳನ್ನು ಎಳೆಯರಿಗೆ ತಿಳಿಸಿಕೊಡುವ ಪ್ರಯತ್ನಗಳು ನಡೆದಿದೆ. ಮಕ್ಕಳಿಗಾಗಿ 'ಬಾಲ ವಿಜ್ಞಾನ' ಎಂಬ ಉಪಯುಕ್ತ ವಿಜ್ಞಾನ ಪತ್ರಿಕೆಗಳನ್ನು ಪ್ರಕಟಿಸುತ್ತಿರುವ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವಿಜ್ಞಾನಕ್ಕೆ ಸಂಬಂಧಿಸಿದ ಬಗೆ ಬಗೆಯ ಪುಸ್ತಕಗಳನ್ನು ಪ್ರಕಟಿಸಿದೆ. ಆ ಪುಸ್ತಕಗಳಲ್ಲಿ 'ಹಕ್ಕುಗಳನ್ನು ಗುರುತಿಸು' (ಎಚ್.ಆರ್.ಕೃಷ್ಣಮೂರ್ತಿ) ಮತ್ತು 'ಆರವತ್ತು ಪ್ರಶ್ನೆಗಳು' (ಜೆ.ಆರ್.ಲಕ್ಷ್ಮಣರಾವ್) ಎಂಬ ಎರಡು ಪುಸ್ತಕಗಳು ವಿಶೇಷ ಉಲ್ಲೇಖನಕ್ಕೆ ಅರ್ಹವಾಗಿವೆ. ಆರು ಪತ್ರಗಳಲ್ಲಿ,

Digitised by Bharatavani, CIIL

ಸೂಕ್ಷ್ಮಚಿತ್ರಗಳೊಂದಿಗೆ 'ಪಕ್ಷಿ ವೀಕ್ಷಣೆ'ಯ ರೀತಿಯನ್ನು 'ಹಕ್ಕಿಗಳನ್ನು ಗುರುತಿಸು' ಪುಸ್ತಕದಲ್ಲಿ ಸೊಗಸಾಗಿ ಮಾಡಿಕೊಡಲಾಗಿದೆ. ನಾನಾ ಬಗೆಯ ಹಕ್ಕಿಗಳನ್ನು ಗುರುತಿಸುವ ಕ್ರಮವನ್ನು ತಿಳಿಸಿಕೊಟ್ಟಿರುವ ರೀತಿ ಮೆಚ್ಚತಕ್ಕದ್ದು. ನೆಗಡಿ ಏಕೆ ಬರುತ್ತದೆ? ಕಾಮನಬಿಲ್ಲು ಏಕೆ ವೃತ್ತಾಕಾರದಲ್ಲಿರುತ್ತದೆ? ಮುಂತಾದ ಪ್ರಶ್ನೆಗಳಿಗೆ ಉತ್ತರ ಇರುವ 'ಅರವತ್ತು ಪ್ರಶ್ನೆಗಳು' ಪುಸ್ತಕ ಮಕ್ಕಳಲ್ಲಿ ಸಾಮಾನ್ಯ ಜ್ಞಾನವನ್ನು ಬೆಳೆಸಲು ಬಹಳ ಸಹಕಾರಿಯಾಗಿದೆ.

ಮಕ್ಕಳ ಕೈಗೆ ಬಗೆ ಬಗೆಯ ಪುಸ್ತಕಗಳನ್ನು ಕೊಡಲು ಲೇಖಕರು, ಪ್ರಕಾಶಕರು ಪ್ರಯತ್ನಿಸಿದ್ದಾರೆ. ಆದರೂ ಮಕ್ಕಳ ಸಾಮಾನ್ಯ ಜ್ಞಾನವನ್ನು ಬೆಳೆಸುವಂತಹ ಅವರ ಕಲ್ಪನೆಗಳನ್ನು ಅರಳಿಸುವಂಥ, ಸಾಹಸ ಪ್ರವೃತ್ತಿಯನ್ನು ಬೆಳೆಸುವಂಥ ಪುಸ್ತಕಗಳ ಅಗತ್ಯ ಇದ್ದೇ ಇದೆ.

**1983:** 'ಮಕ್ಕಳ ಸಾಹಿತ್ಯ' ವಿಭಾಗದಲ್ಲಿ ಕಥೆ, ಕವನ, ಜೀವನಚರಿತ್ರೆ ಈ ಪ್ರಕಾರಗಳಲ್ಲಿ ಈ ವರ್ಷ ಸುಮಾರು ಒಂದು ನೂರು ಪುಸ್ತಕಗಳು (ಮರು ಮುದ್ರಣಗಳೂ ಸೇರಿದಂತೆ) ಪ್ರಕಟವಾಗಿವೆ. ಮಕ್ಕಳಿಗಾಗಿ ದೊಡ್ಡ ಪ್ರಮಾಣದಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಐಬಿಎಚ್ ಪ್ರಕಾಶನ, ಸಮಾಜ ಪುಸ್ತಕಾಲಯ ಮುಂತಾದ ಪ್ರಕಾಶನ ಸಂಸ್ಥೆಗಳು ಈ ವರ್ಷವೂ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿವೆ. ಹುಬ್ಬಳ್ಳಿಯ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದವರು ಮಕ್ಕಳಿಗಾಗಿ ಪುಟ್ಟ ಪುಸ್ತಕಗಳ ಒಂದು ಮಾಲೆಯನ್ನು ಆರಂಭಿಸಿರುವುದು ಈ ವರ್ಷದ ಒಂದು ವಿಶೇಷ. 'ಆಯ್ದಕ್ಕಿ ಮಾರಯ್ಯ', 'ಸಕಲೇಶ ಮಾದರಸ', 'ನಿಜಗುಣ ಶಿವಯೋಗಿ' ಮುಂತಾದ ಕವಿಗಳನ್ನು, ವಚನಕಾರರನ್ನು ಕುರಿತು ಪುಸ್ತಕಗಳು ಈ ವರ್ಷ ಪ್ರಕಟವಾಗಿವೆ. ಅಂಗೈ ಅಗಲದ ಈ ಕಿರು ಪುಸ್ತಿಕೆಗಳು ಅಂದವಾಗಿ ಮುದ್ರಣಗೊಂಡಿವೆ. ಆದರೆ ನಿರೂಪಣೆ ಇನ್ನಷ್ಟು ಸರಳವಾಗಿ ಮತ್ತು ಆಕರ್ಷಕವಾಗಿ ಇರಬೇಕಾಗಿತ್ತು. ಐಬಿಎಚ್ ಪ್ರಕಾಶನದ 'ಪರಂಪರೆ ಮಾಲೆ'ಯಲ್ಲಿ ಪ್ರಕಟವಾಗಿರುವ ಪುಸ್ತಕಗಳಲ್ಲಿ 'ಡಿ.ದೇವರಾಜ ಅರಸು' (ಆರ್.ಎಸ್.ರಾಮಪ್ರಸಾದ್) ಮತ್ತು 'ಕುಣಿಗಲು ರಾಮಾಶಾಸ್ತ್ರಿ' (ಆರ್.ಎಸ್.ರಾಮ್‌ರಾವ್) ಎಂಬ ಎರಡು ಜೀವನ ಚರಿತ್ರೆಗಳು ವಿಶೇಷ ಉಲ್ಲೇಖನಕ್ಕೆ ಅರ್ಹವಾಗಿವೆ. ಸುಮಾರು ಒಂದು ದಶಕದಷ್ಟು ದೀರ್ಘಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ ದೇವರಾಜ ಅರಸರದು ವರ್ಣಮಯ ವ್ಯಕ್ತಿತ್ವ. ಸಮಾಜದಲ್ಲಿ ತುಳಿತಕ್ಕೆ ಒಳಗಾದವರ ಏಳ್ಗೆಗಾಗಿ ಶ್ರಮಿಸಿದ ಅರಸುರವರು ಉದಾರ ಮನಸ್ಸಿನವರು. ಅವರ ಬದುಕಿನ ನಾನಾ ಮುಖಗಳನ್ನು ಎಸ್. ಎಸ್.ರಾಮಪ್ರಸಾದರವರು ಈ ಪುಸ್ತಿಕೆಯಲ್ಲಿ ಪರಿಚಯಿಸಿದ್ದಾರೆ. ಬರವಣಿಗೆ ಅಕ್ಮೀಯವಾಗಿದೆ: ಆಕರ್ಷಕವಾಗಿದೆ. ತಮ್ಮ ಪಾಂಡಿತ್ಯ ಮತ್ತು ಪರಿಶುದ್ಧ ಜೀವನದಿಂದ ಅಂದಿನ ಮೈಸೂರು ಸಂಸ್ಥಾನದಲ್ಲಿ ಹೆಸರಾಗಿದ್ದ ಕುಣಿಗಲ್ ರಾಮಶಾಸ್ತ್ರಿಗಳು ಸ್ವತಂತ್ರ ಮನೋಭಾವದ ವ್ಯಕ್ತಿಯಾಗಿದ್ದರು. ಅವರ ಸರಳ ಬದುಕಿನ ವಿವರಗಳನ್ನು ಆರ್. ಎಸ್. ರಾಮರಾಯರು 'ಕುಣಿಗಲ್ ರಾಮಾಶಾಸ್ತ್ರಿಗಳು' ಪುಸ್ತಕದಲ್ಲಿ ಚೊಕ್ಕವಾಗಿ ಸಂಗ್ರಹಿಸಿದ್ದಾರೆ. ಇದೊಂದು ಆದರ್ಶ ಜೀವನ ಚಿತ್ರಣ.

ಕರ್ನಾಟಕ ಸರ್ಕಾರದ 'ವಿಶ್ವ ಕನ್ನಡ ಸಮ್ಮೇಳನ'ದ ಪುಸ್ತಕಮಾಲೆಯಲ್ಲಿ ಪ್ರಕಟವಾಗಿರುವ 'ಮಕ್ಕಳ ಸಾಹಿತ್ಯ' ಒಂದು ಒಳ್ಳೆಯ ಸಂಕಲನ (ಸಂಪಾದಕರು: ಎಂ.ವಿ. ಸೀತಾರಾಮಯ್ಯ) ಹೊಯ್ಸಳ, ರಾಜರತ್ನಂ ಮುಂತಾದ ಹಿರಿಯ ಬರಹಗಾರರ ಕಥೆ, ಕವನಗಳಿರುವ ಈ ಸಂಕಲನ ಸಚಿತ್ರವಾಗಿ ಪ್ರಕಟವಾಗಿದೆ. ಮಕ್ಕಳ ನಡೆ-ನುಡಿಗಳನ್ನು ರೂಪಿಸಲು ಇಂಥ ಸಂಕಲನಗಳು ನೆರವಾಗುತ್ತವೆ.

ಪ್ರಿಂಟರ್ಸ್ ಪ್ರಕಾಶನದಿಂದ ಪ್ರಕಟವಾಗಿರುವ 'ಕೋತಿಯ ಆಸೆ' ಮತ್ತು 'ಮಾತಿನ ಮಲ್ಲ' ವಿವಿಧ ಲೇಖಕರು ಬರೆದಿರುವ ಸಣ್ಣ ಕಥೆಗಳ ಸಂಕಲನಗಳು. ಮಕ್ಕಳ ಮನಸ್ಸನ್ನು ಸೆರೆಹಿಡಿಯುವಂಥ ಕಥೆಗಳಿರುವ ಈ ಸಂಕಲನಗಳು ಸಚಿತ್ರವಾಗಿ ಪ್ರಕಟವಾಗಿವೆ. ಮಕ್ಕಳಿಗೆ ಇಂಥ ಪುಸ್ತಕಗಳು ಪ್ರಿಯವಾಗಬಲ್ಲವು. ಪುಲಕೇಶಿ ಪ್ರಕಾಶನದಿಂದ ಪ್ರಕಟವಾಗಿರುವ ಕೆ.ಆರ್.ಎಸ್. ಪ್ರಸನ್ನ ಅವರ 'ಸ್ವಾಮಿನಿಷ್ಠೆ'ಯಲ್ಲಿ ಐದು ಸಣ್ಣ ಕಥೆಗಳಿವೆ. ನೀತಿ, ಜಾಣ್ಮೆಗಳನ್ನು ತಿಳಿಸಿಕೊಡುವ ಇಲ್ಲಿನ ಕಥೆಗಳು ಮಕ್ಕಳಿಗೆ ಬೋಧಪ್ರದವಾಗಬಲ್ಲವು. ಇವರ ಇನ್ನೊಂದು ಪುಸ್ತಕ 'ಕಾಡಿನಲ್ಲಿ ಕ್ರಿಕೆಟ್' ಪ್ರಾಣಿಗಳ ಜೀವನಕ್ಕೆ ಸಂಬಂಧಿಸಿದ ಕಥೆಗಳ ಸಂಕಲನ. ಪಳಕಳ ಸೀತಾರಾಮಭಟ್ಟರ 'ಚಿಕಣಿ ಚೋಮ ಮತ್ತು ಬೆಳ್ಳೂರಿನ ದೊರೆ'ಯಲ್ಲಿ ಮಕ್ಕಳನ್ನು ರಂಜಿಸುವ ಎರಡು ಕಥೆಗಳಿವೆ. ಬಣ್ಣದ ಚಿತ್ರಗಳೊಂದಿಗೆ ಪ್ರಕಟವಾಗಿವೆ.

ಮಕ್ಕಳಿಗಾಗಿ ಅನೇಕ ಕವನ ಸಂಕಲನಗಳು ಪ್ರಕಟವಾಗಿವೆ. ಅವುಗಳಲ್ಲಿ ನಾಗನೂರು ಶಿಕ್ಷಕರ 'ನಮ್ಮ ತಾಯಿ ಭಾರತಿ'ಯಲ್ಲಿ ಮೂವತ್ತು ಕಥೆಗಳಿವೆ. ದೇಶಪ್ರೇಮ, ಕರುಣೆ, ಪ್ರೀತಿ, ಇಲ್ಲಿನ ಕವನಗಳ ವಸ್ತು. ಗಂಗಾಧರ ನಂದಿ ಅವರ 'ಒಡನಾಡಿ'ಯಲ್ಲಿ ಇಪ್ಪತ್ತೆಂಟು ಕವನಗಳಿವೆ. ದೇಶಪ್ರೇಮ ಇಲ್ಲಿನ ಬಹುಪಾಲು ಕವನಗಳ ವಸ್ತು. ಈ ಪುಸ್ತಕದ ಕೆಲವು ಕವನಗಳು ಮಕ್ಕಳನ್ನು ಆಕರ್ಷಿಸಬಲ್ಲವು. ಕೆ. ಭಟ್‌ರ 'ಚಿಲಿಪಿಲಿ'ಯಲ್ಲಿ ಇಪ್ಪತ್ತನಾಲ್ಕು ಪದ್ಯಗಳಿವೆ. ವಿವಿಧ ಪ್ರಾಣಿಗಳನ್ನು ಕುರಿತ ಇಲ್ಲಿನ ಪದ್ಯಗಳು ದಪ್ಪ ಅಕ್ಷರದಲ್ಲಿ ಅಚ್ಚಾಗಿದೆ. ಮಕ್ಕಳು ಇಲ್ಲಿನ ಪದ್ಯಗಳನ್ನು ಸುಲಭವಾಗಿ ಹಾಡಿಕೊಳ್ಳಬಹುದು.

'ಮೊಮ್ಮಗನಿಗೆ ಬರೆದ ಪತ್ರ'ದಲ್ಲಿ ಯೇತಡ್ಕ ಅವರು ದೂರದ ದೇಶದಲ್ಲಿರುವ ತಮ್ಮ ಮೊಮ್ಮಗನಿಗೆ ಈ ದೇಶದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಪತ್ರ ರೂಪದಲ್ಲಿರುವ ಈ ಪುಸ್ತಕದ ಬರವಣಿಗೆ ಅಕ್ಮೀಯವಾಗಿದೆ.

ಕರ್ನಾಟಕದ ಪ್ರಸಿದ್ಧ ಅರಣ್ಯಧಾಮದಲ್ಲಿ ಒಂದಾಗಿರುವ ನಾಗರಹೊಳೆಯ ಪರಿಚಯವನ್ನು ಎ.ಸಿ.ಲಕ್ಷ್ಮಣ ಅವರು 'ನಾಗರಹೊಳೆ' ಪುಸ್ತಕದಲ್ಲಿ (ಐಬಿಎಚ್ ಪ್ರಕಾಶನ) ಮಾಡಿಕೊಟ್ಟಿದ್ದಾರೆ. ಬರವಣಿಗೆ ಸರಳವಾಗಿದ್ದು ವಿವರಗಳಿಂದ ಕೂಡಿದೆ. ನಾಗರಹೊಳೆಯ ಬಗ್ಗೆ ಪೂರ್ಣ ಮಾಹಿತಿ ಈ ಪುಸ್ತಕದಿಂದ ದೊರೆಯುತ್ತದೆ.

ಕರ್ನಾಟಕದ ರಾಜ್ಯ ವಿಜ್ಞಾನ ಪರಿಷತ್ತು ಮಕ್ಕಳ ಆಲೋಚನೆ

Digitised by Bharatavani, CIIL

ಶಕ್ತಿ ಬೆಳೆಯುವಂಥ ವಿವಿಧ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಸಿ.ಆರ್. ಚಂದ್ರಶೇಖರರ 'ದೇವರು–ದೆವ್ವ: ಮೈಮೇಲೆ ಬರುವುದೆ?' ಎಚ್. ಆರ್. ಕೃಷ್ಣಮೂರ್ತಿ ಅವರ 'ಪರಿಸರ' ಮತ್ತು 'ಪರಿಸರ ಮಲಿನತೆ' ಎಂಬ ಮೂರು ಪುಸ್ತಕಗಳನ್ನು ಪ್ರಕಟಿಸಿದೆ. ಇವೆಲ್ಲ ಉಪಯುಕ್ತ ಪುಸ್ತಕಗಳಾಗಿವೆ.

ಮಕ್ಕಳಿಗಾಗಿ ಪ್ರಕಟವಾಗಿರುವ ಕೆಲವು ಒಳ್ಳೆಯ ಪುಸ್ತಕಗಳು ಸಂತೋಷದ ಸಂಗತಿ. ಅಂಥ ಪುಸ್ತಕಗಳಲ್ಲಿ 'ದಿನಕ್ಕೊಂದು ಕಥೆ–ಶ್ರಾವಣ ಸಂಪುಟ'. (ಅನುಪಮಾ ನಿರಂಜನ): 'ಷೇಕ್ಸ್‌ಪಿಯರ್‌ನ ಕಥೆಗಳು' (ಎಸ್. ರಮಾನಂದ): 'ನೆಹರೂಜಿ ಕಥೆಗಳು' (ಎಸ್. ಚನ್ನಪ್ಪ): 'ಓಡಿಸ್ಸಿ' (ಎಚ್. ಜೆ. ಲಕ್ಕಪ್ಪಗೌಡ): 'ಸಗರ ಚಕ್ರವರ್ತಿ' (ಶಿವರಾಮು) ಮತ್ತು 'ಮೂರ್ಖ ಕುಳ್ಳ' (ಕುಂದಾನಿ ಸತ್ಯನ್) ಮುಂತಾದವು.

**1984:** ಕಥೆ, ಕವನ, ಜೀವನಚರಿತ್ರೆ ಈ ಮುಂತಾದ ಪ್ರಕಾರಗಳಲ್ಲಿ ಈ ಪುಸ್ತಕಗಳು ಪ್ರಕಟವಾಗಿವೆ. ಹುಬ್ಬಳ್ಳಿಯ ಮೂರು ಸಾವಿರ ಮಠದ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರದ ವೀರಶೈವ ಭಾರತಿ ಪುಸ್ತಕದ ಸಂಪದ ಮಾಲೆಯಲ್ಲಿ ಜೀವನ ಚರಿತ್ರೆಗಳು ಪ್ರಕಟವಾಗಿವೆ. ಅಂಗೈ ಅಗಲದ ಆಕಾರದಲ್ಲಿ ಮುದ್ದಾಗಿ ಮುದ್ರಣವಾಗಿರುವ ಈ ಪುಸ್ತಕಗಳು ಉಪಯುಕ್ತವಾಗಿವೆ. 'ಭಾರತೀಯ ವಿಜ್ಞಾನಿಗಳು' (ಎಂ. ಆರ್. ಶಾನಭಾಗ): 'ನೆಹರೂಜಿ ಕಥೆಗಳು' (ಎಸ್. ಚನ್ನಪ್ಪ): 'ತ. ರಾ.ಸು' (ನಾ. ಪ್ರಭಾಕರ್)–ಇವು ಜೀವನ ಚರಿತ್ರೆಗಳ ಸಾಲಿನಲ್ಲಿ ಎದ್ದು ಕಾಣುವ ಕೃತಿಗಳು. ಇವುಗಳಲ್ಲಿ ಮೊದಲ ಎರಡು ಪುಸ್ತಕಗಳು ಪುನರ್‌ಮುದ್ರಣಗಳು. ಇನ್ನೊಂದು ಪ್ರಸಿದ್ಧ ವಿಜ್ಞಾನಿಗಳ ಜೀವನ –ಸಾಧನೆಗಳ ಸಂಕ್ಷಿಪ್ತ ಪರಿಚಯ ಇರುವ 'ಭಾರತೀಯ ವಿಜ್ಞಾನಿಗಳು' ಪುಸ್ತಕ ಎಳೆಯರಿಗೆ ರುಚಿಸುತ್ತದೆ. ಭಾರತದ ಪ್ರಥಮ ಪ್ರಧಾನಮಂತ್ರಿಗಳಾಗಿದ್ದ ಜವಾಹರಲಾಲ್ ನೆಹರೂ ಅವರ ಧೀಮಂತ ವ್ಯಕ್ತಿತ್ವದ ವಿವಿಧ ಮುಖಗಳ ಪರಿಚಯವನ್ನು 'ನೆಹರೂಜಿ ಕಥೆಗಳು' ಪುಸ್ತಕದಲ್ಲಿ ಮಾಡಿಕೊಡಲಾಗಿದೆ. ಪುಸ್ತಕ ಸಚಿತ್ರವಾಗಿ ಪ್ರಕಟವಾಗಿದೆ. ಪ್ರಸಿದ್ಧ ಕಾದಂಬರಿಕಾರರಾಗಿದ್ದ ತ.ರಾ.ಸು ಅವರ ಜೀವನದ ಪರಿಚಯವನ್ನು ನಾ. ಪ್ರಭಾಕರ್ ಅವರು 'ತ.ರಾ.ಸು' ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಮಾಡಿಕೊಟ್ಟಿದ್ದಾರೆ.

ಕಥಾ ವಿಭಾಗದ ಪುಸ್ತಕಗಳಲ್ಲಿ ಮಾಸ್ಕೋದ ರಾದುಗ ಪ್ರಕಾಶನದಿಂದ ಪ್ರಕಟವಾಗಿರುವ 'ಮಾನವನ ಮುಗಿಲ ವಿಹಾರ' ಮತ್ತು 'ಗೀಷ್ಮ ಹಾಗೂ ಖಗೋಳಯಾತ್ರಿ' ಪುಸ್ತಕಗಳು ಗಮನ ಸೆಳೆಯುತ್ತವೆ. (ಅನುವಾದಕರು: ಕೆ.ಎಲ್.ಗೋಪಾಲಕೃಷ್ಣ) ಬಣ್ಣ ಬಣ್ಣದ ಚಿತ್ರಗಳಿಂದ ಕೂಡಿ ಸೊಗಸಾಗಿ ಮುದ್ರಣವಾಗಿರುವ ಈ ಪುಸ್ತಕಗಳು ಮಕ್ಕಳಿಗೆ ಪ್ರಿಯವಾಗುತ್ತವೆ.

ಮೈಸೂರು ಕಾವ್ಯಾಲಯ ಪ್ರಕಾಶನದಿಂದ 'ಹೊಯಿಸಳ'ರ ಎರಡು ಪುಸ್ತಕಗಳು 'ಹೂವಿನ ಹಾಸಿಗೆ' ಮತ್ತು 'ರಾಜನ ಬುದ್ಧಿವಂತಿಕೆ' ಈ ವರ್ಷ ಮರು ಮುದ್ರಣಗೊಂಡಿದೆ. ಪುಟ್ಟ ಪುಟ್ಟ ಕಥೆಗಳಿರುವ ಈ ಪುಸ್ತಕಗಳು ಸಚಿತ್ರವಾಗಿವೆ. ಧಾರವಾಡದ ಸಮಾಜ ಪುಸ್ತಕಾಲಯದಿಂದ 'ಮನೋಹರ'ರವರ 'ಅಪ್ಪ ನನಗೊಂದು ಕಥೆ ಹೇಳು', 'ಮಾಲೆಯ ಪುಸ್ತಕಗಳು' ಈ ವರ್ಷ ಮತ್ತೆ ಮುದ್ರಣಗೊಂಡಿದೆ. ಪ್ರಾಣಿ ಪ್ರಪಂಚದ ರೀತಿ–ನೀತಿಗಳು ಇಲ್ಲಿನ ಕಥೆಗಳ ಮುಖ್ಯವಸ್ತು. ಬೆಂಗಳೂರು ಪುಲಕೇಶಿ ಪ್ರಕಾಶನದಿಂದ ಪ್ರಕಟವಾಗಿರುವ ಕೆ.ಆರ್.ಎಸ್. ಪ್ರಸನ್ನರ 'ಕವಿಶ್ರೇಷ್ಠ' ಪುಸ್ತಕದಲ್ಲಿ ಹದಿನೇಳು ಕಥೆಗಳಿವೆ. ನೀತಿ, ಯುಕ್ತಿ, ಜಾಣ್ಮೆ ಇಲ್ಲಿನ ಕಥೆಗಳ ಮುಖ್ಯ ವಸ್ತು. ಈ ಲೇಖಕರ 'ತಾಯಿಯ ಪ್ರೇಮ' ಮತ್ತು 'ಸ್ವಾಮಿನಿಷ್ಠೆ' ಪುಸ್ತಕಗಳು ಈ ವರ್ಷ ಮರುಮುದ್ರಣಗೊಂಡಿವೆ. ಬೆಂಗಳೂರು ಐಬಿಎಚ್ ಪ್ರಕಾಶನದಿಂದ ಪ್ರಕಟವಾಗಿರುವ ರಾಜಶೇಖರ ಭೂಸನೂರ ಮಠರ 'ನಾಳಿನ ಮಕ್ಕಳ ಕಥೆಗಳು' ವೈಜ್ಞಾನಿಕ ಕಥೆಗಳ ಸಂಗ್ರಹ. ಸಾಹಸ ಮತ್ತು ಅದ್ಭುತಗಳಿಂದ ಕೂಡಿರುವ ಈ ಪುಸ್ತಕದ ಕಥೆಗಳು ಮಕ್ಕಳಿಗೆ ಮುದಕೊಡಬಲ್ಲವು.

ಕಾವ್ಯ ವಿಭಾಗದಲ್ಲಿ ಮಾಸ್ಕೋದ ರಾದುಗ ಪ್ರಕಾಶನದಿಂದ ಪ್ರಕಟವಾಗಿರುವ 'ಮೃಗಾಲಯದ ಮಕ್ಕಳು' ಒಂದು ಸುಂದರ ಕಲ್ಪನೆ. ಆನೆ, ಕರಡಿ, ಸಿಂಹ, ಜಿರಾಫೆ ಮುಂತಾದ ಪ್ರಾಣಿಗಳನ್ನು ಕುರಿತು ಪುಟ್ಟ ಪುಟ್ಟ ಪದ್ಯಗಳಿರುವ ಈ ಪುಸ್ತಕ ಸಚಿತ್ರವಾಗಿ ಪ್ರಕಟವಾಗಿದೆ. ಮಕ್ಕಳಿಗೆ ಈ ಪುಸ್ತಕ ಪ್ರಿಯವಾಗಬಲ್ಲದು.

'ಪುಟಾಣಿ ಪುಟ್ಟ' (ಶ್ರೀನಿವಾಸ ಶೆಟ್ಟಿ); 'ಬೆಳ್ಳಿಯ ನಾವೆ' (ಓಂಕಾರಯ್ಯ) ಮತ್ತು 'ಶುರುವಾಯ್ತು ನನ್ನ ಶಾಲೆ' (ಎಂ.ಡಿ. ಗೋಗೇರಿ) ಇವು ಮಕ್ಕಳಿಗಾಗಿ ಪ್ರಕಟವಾಗಿರುವ ಇತರ ಕವನ ಸಂಕಲನಗಳು. ದೇಶಭಕ್ತಿ, ನುಡಿಪ್ರೇಮ ಮುಂತಾದ ವಿಷಯಗಳನ್ನು ಕುರಿತ ಪದ್ಯಗಳು ಈ ಸಂಕಲನಗಳಲ್ಲಿವೆ. ಈ ಪದ್ಯಗಳನ್ನು ಮಕ್ಕಳು ಸುಲಭವಾಗಿ ಓದಿ ಗ್ರಹಿಸಬಲ್ಲರು.

ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯ ಯುಗಪುರುಷ ಪ್ರಕಟನಾಲಯದಿಂದ ಪಳಕಳ ಸೀತಾರಾಮಭಟ್ಟರ 'ಮಕ್ಕಳ ಮಿತ್ರ' ಮತ್ತು 'ಎಳೆಯ ಗೆಳೆಯ' ಎಂಬ ಎರಡು ಪುಸ್ತಕಗಳು ಪ್ರಕಟವಾಗಿವೆ. ಪತ್ರಲೇಖನ ಈ ಎರಡೂ ಪುಸ್ತಕಗಳ ವಸ್ತು.

ವಿವಿಧ ಬಗೆಯ ವಿಮಾನಗಳು ಮತ್ತು ಅವುಗಳ ಬಳಕೆಯನ್ನು ಕುರಿತು ಕೆ. ಶ್ರೀನಿವಾಸರು 'ವಿಮಾನ' ಪುಸ್ತಕದಲ್ಲಿ ವಿವರಿಸಿದ್ದಾರೆ. ವಿಮಾನದ ಬಗ್ಗೆ ಒಂದು ಸ್ಪಷ್ಟ ಚಿತ್ರ ಈ ಪುಸ್ತಕದಿಂದ ಲಭಿಸುತ್ತದೆ.

ಮಕ್ಕಳಿಗೆ ಕನ್ನಡ ನಾಡಿನ ಪರಿಚಯವನ್ನು ಮಾಡಿಕೊಡಲು ನಾಗಚಂದ್ರ ಅವರು 'ಚೆಲುವ ಕನ್ನಡನಾಡು' ಪುಸ್ತಕದಲ್ಲಿ ಪ್ರಯತ್ನಿಸಿದ್ದಾರೆ. ಒಂದು ನಾಡಿನ–ದೇಶದ–ಪರಿಚಯ ಅಂದರೆ ಆ ನಾಡಿನ–ದೇಶದ ಇತಿಹಾಸ, ಭೌಗೋಳಿಕ ವಿವರ, ಕಲೆ, ಸಾಹಿತ್ಯ, ಸಂಸ್ಕೃತಿ ಜಾನಪದ–ಇವುಗಳ ಒಟ್ಟು ಪರಿಚಯ ಎಂದು ಅರ್ಥ. ಆದರೆ ಪುಸ್ತಕದಲ್ಲಿ ಭೌಗೋಳಿಕ ವಿವರಗಳೇ ಹೆಚ್ಚಾಗಿದ್ದು, ಪರಿಚಯ ಅಪೂರ್ಣವಾಗಿದೆ.

ಕಾವ್ಯಾಲಯ ಪ್ರಕಾಶನ 'ಹರ್ಷಕೋಶ' ಎಂಬ ಒಂದು ಹೊಸ ಮಾಲೆಯನ್ನು ಈ ವರ್ಷ ಆರಂಭಿಸಿದೆ. 'ಮನುಷ್ಯ ಜಾತಿಗಳು'; 'ಬಾಣ ಬಿರುಸುಗಳು'; ಮತ್ತು 'ಮಹಿಷ ಮಂಡಲದ ಇತಿಹಾಸ'

Digitised by Bharatavani, CIIL

ಎಂಬ ನಾಲ್ಕು ಪುಸ್ತಕಗಳು ಈ ಮಾಲೆಯಿಂದ ಈಗ ಪ್ರಕಟವಾಗಿವೆ. 'ಯಾತ್ರಿ' ಅವರು ಬರೆದಿರುವ ಈ ನಾಲ್ಕು ಪುಸ್ತಕಗಳೂ ಸಚಿತ್ರವಾಗಿ ಪ್ರಕಟವಾಗಿವೆ.

**1985:** 'ಮಕ್ಕಳ ಸಾಹಿತ್ಯ' ವಿಭಾಗದಲ್ಲಿ ಕಥೆ, ಕವನ, ನಾಟಕ, ಜೀವನಚರಿತ್ರೆ ಮುಂತಾದ ಪ್ರಕಾರಗಳಲ್ಲಿ ಪುಸ್ತಕಗಳು ಪ್ರಕಟವಾಗಿವೆ. ಮಕ್ಕಳಿಗಾಗಿ ದೊಡ್ಡ ಮಟ್ಟದಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಐಬಿಎಚ್. ಪ್ರಕಾಶನ ತನ್ನ 'ಅಮರ ಚಿತ್ರಕಥೆ' ಪುಸ್ತಕಮಾಲೆಯಲ್ಲಿ 'ಮಹಾಭಾರತ'ವನ್ನು ಭಾಗ ಭಾಗವಾಗಿ ಸಚಿತ್ರವಾಗಿ ಪ್ರಕಟಿಸಿರುವುದು ಪ್ರಶಂಸನೀಯವಾದದ್ದು. ಈ ಪ್ರಕಾಶನ ಸಂಸ್ಥೆ ತನ್ನ 'ಪರಂಪರೆ' ಮಾಲೆಯಲ್ಲಿ ಪ್ರಸಿದ್ಧ ವ್ಯಕ್ತಿಗಳನ್ನು ಕುರಿತು ಜೀವನ ಚರಿತ್ರೆಗಳನ್ನು ತಾಲ್ಲೂಕು, ಜಿಲ್ಲೆಗಳನ್ನು ಕುರಿತ ಪರಿಚಯ ಪುಸ್ತಕಗಳನ್ನು ಈ ವರ್ಷ ಪ್ರಕಟಿಸಿದೆ. ಧಾರವಾಡದ ಸಮಾಜ ಪುಸ್ತಕಾಲಯ ತನ್ನ ಸ್ವರ್ಣ ಮಹೋತ್ಸವದ ನೆನಪಿಗಾಗಿ ಅನೇಕ ಮಕ್ಕಳ ಪುಸ್ತಕಗಳನ್ನು ಪುನರ್ ಮುದ್ರಿಸಿವೆ. ಇಂಥ ಪುಸ್ತಕಗಳಲ್ಲಿ 'ಬಂಗಾರ ಹೆಜ್ಜೆ' (ಮನೋಹರ); 'ತಿರುವು-ಮುರುವು' (ಮೇವುಂಡಿ ಮಲ್ಲಾರಿ); 'ಜಾಕ್ ಮತ್ತು ಜಿಲ್' (ಮನೋಹರ) ಮುಖ್ಯವಾದವು. ನೀತಿ ನಿಯಮಗಳನ್ನು ಹೇಳುವ ಮತ್ತು ಕುತೂಹಲ ಕೆರಳಿಸುವ ಸಣ್ಣ ಸಣ್ಣ ಕಥೆಗಳು ಈ ಸಂಕಲನಗಳಲ್ಲಿದ್ದು ಮಕ್ಕಳಿಗೆ ಪ್ರಿಯವಾಗಬಲ್ಲವು.

ಕನ್ನಡ ಮಕ್ಕಳ ಸಾಹಿತ್ಯಕ್ಕೆ ತಮ್ಮ ಕೃತಿಗಳಿಂದ ಶ್ರೀಮಂತಿಕೆಯನ್ನು ತಂದುಕೊಟ್ಟಿದ್ದ ದಿವಂಗತ ಜಿ.ಪಿ.ರಾಜರತ್ನಂ ಅವರ ಅನೇಕ ಮಕ್ಕಳ ಪುಸ್ತಕಗಳು 'ಮಕ್ಕಳ ಗಾಂಧಿ', 'ಸ್ನೇಹದ ಕಥೆಗಳು' ಇತ್ಯಾದಿ. ಈ ವರ್ಷ ಮರುಮುದ್ರಣಗೊಂಡಿರುವುದು ಸಂತೋಷದ ಸಂಗತಿ. ಇಂಥ ಪುಸ್ತಕಗಳಿಂದ ಮಕ್ಕಳಿಗೆ ಆಗುವ ಲಾಭ ದೊಡ್ಡಮಟ್ಟದ್ದು.

ರಾಜಶೇಖರ ಭೂಸನೂರಮಠ ಅವರ 'ನೇತ್ರ ಬಂಧ' ಒಂದು ವೈಜ್ಞಾನಿಕ ಕಾದಂಬರಿಯಾಗಿದ್ದು ಸಚಿತ್ರವಾಗಿ ಪ್ರಕಟವಾಗಿದೆ ಸಾಹಸ, ಕುತೂಹಲಗಳಿಂದ ಕೂಡಿರುವ ಈ ಪುಸ್ತಕ ಮಕ್ಕಳನ್ನು ರಂಜಿಸಬಲ್ಲದು. ಶಾಂತಿ ನಾಯಕರ 'ಕಾಗಕ್ಕ-ಗುಬ್ಬಕ್ಕ' ಸಣ್ಣ ಕಥೆಗಳ ಸಂಕಲನ. ಪ್ರಾಣಿ ಜೀವನದ ವಿವಿಧ ಮುಖಗಳ ಇಲ್ಲಿನ ಅನೇಕ ಕಥೆಗಳ ಮುಖ್ಯವಸ್ತು.

ಮಕ್ಕಳಿಗಾಗಿ ಬಗೆ ಬಗೆಯ ಪದ್ಯ ಸಂಕಲನಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಿವೆ. ಕೆ. ಚಿದಾನಂದರ 'ಪುಟಾಣಿ ವಿಜ್ಞಾನ ಪದ್ಯಗಳು' ಒಂದು ಒಳ್ಳೆಯ ಸಂಕಲನ. ವಿಜ್ಞಾನದ ವಿವಿಧ ವಸ್ತುಗಳನ್ನು ಆಧರಿಸಿ ಬರೆದಿರುವ ಈ ಪದ್ಯಗಳು ಸಚಿತ್ರವಾಗಿ ಸುಂದರವಾಗಿ ಪ್ರಕಟವಾಗಿವೆ. ಮಕ್ಕಳಿಗೆ ಇಲ್ಲಿನ ಪದ್ಯಗಳು ಮನರಂಜನೆಯ ಜತೆಗೆ ಜ್ಞಾನಾರ್ಜನೆಗೂ ನೆರವಾಗುತ್ತವೆ. ಅಣ್ಣಾರಾಯ ಸಾಲಿಮನಿ ಅವರ 'ಪುಟ್ಟನ ಪದ್ಯಗಳು' ಇನ್ನೊಂದು ಉತ್ತಮ ಸಂಕಲನ. ವಿವಿಧ ವಿಷಯಗಳನ್ನು ಕುರಿತ ಪದ್ಯಗಳು ಸಚಿತ್ರವಾಗಿ ಪ್ರಕಟವಾಗಿವೆ. ಮಕ್ಕಳು ಇಲ್ಲಿನ ಪದ್ಯಗಳನ್ನು ಸುಲಭವಾಗಿ ಓದಿಕೊಳ್ಳಬಹುದು. ಹಾಡಿಕೊಳ್ಳಲೂಬಹುದು. ಶಾಂತಾದೇವಿ ನೀಲಗಾರನ 'ರಂಗೋಲಿ' ಹೆಸರಿಸಬೇಕಾದ ಇನ್ನೊಂದು ಪದ್ಯಗಳ ಸಂಕಲನ. ಸಚಿತ್ರವಾಗಿ ಸುಂದರವಾಗಿ ಮುದ್ರಣಗೊಂಡಿರುವ ಈ ಸಂಕಲನದ ಪದ್ಯಗಳು ಸರಳವಾಗಿದ್ದು, ಮಕ್ಕಳಿಗೆ ರುಚಿಸಬಲ್ಲವು. ಮಲ್ಲಾರಿಯವರ 'ಚಂದ್ರಪ್ಪ' ಲಿಂಗಾನಂದ ಶರ್ಮರ 'ಮಕ್ಕಳ ಹಾಡುಗಳು', ಪೂರ್ಣಾಜಿ ಖಲಾಟೆಯವರ 'ಮಕ್ಕಳ ರೈಲು', ಶ್ರೀನಿವಾಸ ಶೆಟ್ಟರ 'ಬಣ್ಣದ ಗೊಂಬೆ' ಇವು ಈ ವರ್ಷ ಪ್ರಕಟವಾಗಿರುವ ಇತರ ಪದ್ಯ ಸಂಕಲನಗಳು.

ರಾಷ್ಟ್ರಕವಿ ಕುವೆಂಪು ಅವರ ಪ್ರಸಿದ್ಧ ಮಕ್ಕಳ ನಾಟಕ 'ನನ್ನ ಗೋಪಾಲ' ಎಂಬ ಕೃತಿ ಮುದ್ರಣಗೊಂಡಿದೆ. ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳಿರುವಂತೆ 'ಈ ನಾಟಕ ಭಗವದ್ಗೀತೆ ಮತ್ತು ಭಾಗವತ ಎರಡರ ಸಾರಸರ್ವಸ್ವವನ್ನೂ ತನ್ನಲ್ಲಿ ಒಳಗೊಂಡಿರುವ ಒಂದು ಪುಟ್ಟ ಅನರ್ಘ್ಯರತ್ನ'.

ಎಚ್.ಪಿ. ವೆಂಕಟಸುಬ್ಬಯ್ಯನವರ 'ಧರ್ಮ ಜ್ಯೋತಿಗಳು' ಜೀವನ ಚರಿತ್ರೆ ವಿಭಾಗದಲ್ಲಿ ಹೆಸರಿಸಬೇಕಾದ ಪುಸ್ತಕ. ಬುದ್ಧ, ಬಸವ, ಏಸು, ಪೈಗಂಬರ್ ಮುಂತಾದ ಧರ್ಮದೀಪಕರ ಸಚಿತ್ರ ಜೀವನ ಪರಿಚಯ ಇರುವ ಈ ಪುಸ್ತಕ ಮಕ್ಕಳಿಗೆ ಉಪಯುಕ್ತವಾಗಿದೆ. ಎಸ್. ಚನ್ನಪ್ಪನವರ 'ಬುದ್ಧನ ಬುದ್ಧಿವಾದ' ಬುದ್ಧನ ಜೀವನ ಬೋಧನೆಯನ್ನು ಮಕ್ಕಳಿಗೆ ಸಂಕ್ಷೇಪವಾಗಿ ಪರಿಚಯಿಸುತ್ತದೆ.

ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯ ಬೆಳವಣಿಗೆಗೆ ಸಂಬಂಧಿಸಿದಂತೆ ಪತ್ರಿಕೆಗಳು, ಮಾಸ ಪತ್ರಿಕೆಗಳು, ಚಿಕ್ಕ ಚಿಕ್ಕ ಕತೆ ಪುಸ್ತಕಗಳು, ಮಾಧ್ಯಮಗಳು, ಪ್ರಕಾಶಕರು, ಲೇಖಕರು, ಕವಿಗಳು, ಸಾಹಿತಿಗಳು ಮುಂತಾದ ನಾಡಿನ ಎಲ್ಲಾ ಸಾಹಿತ್ಯ ಪ್ರೇಮಿಗಳು 'ಮಕ್ಕಳ ಸಾಹಿತ್ಯಕ್ಕೆ' ಸಂಬಂಧಿಸಿದಂತೆ ತಮ್ಮದೇ ಆದ ಕೊಡುಗೆಯನ್ನು ನೀಡಿವೆ.

ವಿಲ್ಲೋ ಪಿಚ್ಚರ್ ಲೈಬ್ರರಿ ಅವರು – ಅನೇಕ ಪುಸ್ತಕಗಳನ್ನು ಮಕ್ಕಳಿಗೆ ಸಂಬಂಧಿಸಿದಂತೆ ಪ್ರಕಟಿಸಿದ್ದಾರೆ. ಅದರಲ್ಲಿ ವಿಶೇಷವಾಗಿ "ಜಾತಕ ಕಥೆಗಳು", "ಹಿತೋಪದೇಶ", "ನೋಡು ಮತ್ತು ಕಲಿ", "ಕಂದನ ಕಾವ್ಯಮಾಲೆ", "ಮಕ್ಕಳ ವಿಶ್ವಕೋಶ" ವ್ಯಾಕರಣಕ್ಕೆ ಸಂಬಂಧಿಸಿದಂತೆ ಹಾಗೂ ಇತಿಹಾಸ ಎಲ್ಲಾ ಮಹಾಪುರುಷರ, ಮಹಾನ್ ವ್ಯಕ್ತಿಗಳ, "ವಿಜ್ಞಾನ ಲೋಕಕ್ಕೆ"– "ಪ್ರಾಣಿ ಲೋಕಕ್ಕೆ" ಸಂಬಂಧಿಸಿದಂತೆ ಪುಸ್ತಕಗಳು ಪ್ರಕಟವಾಗಿವೆ.

ನವ ಕರ್ನಾಟಕ ಪ್ರಕಾಶನದಿಂದ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಕಿರಿಯರ ಸಚಿತ್ರಕೋಶ'– (ಗುಜ್ಜಾರ ಬಿ.ಜಿ), ಚಂದಿರ ಶಾಲೆ (ಮಾಳಕುಂಟೆ ರಮೇಶ), ಚಂದಮಾಮ ಮನೆಗೆ (ನವಗಿರಿ ನಂದ), ಚುಕ್ಕಿ ಚಂದ್ರಮ (ಮಂಜುನಾಥ ಎಸ್.), 'ಆಡಿ ಕಲಿಯೋಣ ಕನ್ನಡ' (ಬೇಂದ್ರೆ ಮಂಜುನಾಥ), ಇಗೋ ಕನ್ನಡ (ಪ್ರೊ. ವೆಂಕಟಸುಬ್ಬಯ್ಯ), ಕಂದ ಅಕ್ಷರ ಕಲಿ (ತಿರುಮಲಮ್ಮ), ಕಥೆ ಹೇಳುವ ಸಮಯ (ಬೇಂದ್ರೆ ಮಂಜುನಾಥ), ನಿಮ್ಮ ಮಗು (ಗಿರಿಜಮ್ಮ ಎಚ್.), ಪುಟಾಣಿ ಪದ್ಯಗಳು (ನಾರಾಯಣ್ ಭಟ್), ಪುಟ್ಟನ ಪ್ರಶ್ನೆ (ಸಿದ್ದಾಪುರ ಪ.ಗು), ಬಾಲಕರಿಗಾಗಿ ಸ್ಕೌಟಿಂಗ್ (ಲಾರ್ಡ್‌ಬೇಡನ್ ಪೊವೆಲ್), ಮಕ್ಕಳಿಗೆ ಮೌಲ್ಯಶಿಕ್ಷಣ (ಅರವಿಂದ

Digitised by Bharatavani, CIIL

ಚೊಕ್ಕಾಡಿ), ಮಗುವಿರಲಿ ಮನೆಯಲ್ಲಿ–ನಗುವಿರಲಿ ಮನದಲ್ಲಿ (ಶ್ವೇತಾ ನರಗುಂದ), ಮೂರು ಮಕ್ಕಳ ನಾಟಕಗಳು– (ಮಾಲತಿ. ಎಸ್), ವಿನೋದ ಕಥೆಗಳು (ರಾಮಚಂದ್ರಶಾಸ್ತ್ರಿ), ಮಾಡಿ ಕಲಿ (ಅರವಿಂದ ಗುಪ್ತ), ಕಿಂದರಿ ಜೋಗಿ (ಕುವೆಂಪು), ಮಕ್ಕಳ ಸಾಹಿತ್ಯ (ಶಿ.ಶು ಸಂಗಮೇಶ), ತಟ್ಟು ಚಪ್ಪಾಳೆ ಪುಟ್ಟ ಮಗು (ಬೇಳುವಾರ ಮಹಮ್ಮದ್), ಮಕ್ಕಳ ಸಾಹಿತ್ಯ (ಹರ್ಡೇಕರ್ ಮಂಜಪ್ಪ), ಪುಟ್ಟನ ಪರಿಸರ (ಎಂ.ಡಿ. ಗೋಗೇರಿ), ಸಾಹಿತ್ಯ ಸಾಮಿಪ್ಯ (ಎಸ್. ಚನ್ನಬಸಪ್ಪ), ಪಂಚ ತಂತ್ರಕಥೆಗಳು, ರಾಮಾಯಣ, ಮಹಾಭಾರತ, ಚಂದಮಾಮ ಹಾಗೂ ಮಾಸಿಕ ಪತ್ರಿಕೆಗಳಲ್ಲಿನ ಉದಾ: ಸುಧಾದಲ್ಲಿ ನೀವು ಕೇಳಿದಿರಿ, 'ನಗೆಹೊನಲು', 'ಎಳೆಯರ ಅಂಗಳ' (ಕಂದನ ಪ್ರಶ್ನೆ, ಪುಟ್ಟ ಮಾಡಿದ ಅಡುಗೆ, ಒಗಟುಗಳು), 'ಪ್ಯಾಂಟಮ್', ಶ್ರೀಮತಿ ಪ್ರಾಣ್, ವಿಚಾರಲಹರಿ – ಹೀಗೆ ಮಕ್ಕಳಿಗೆ ಸಂಬಂಧಿಸಿದಂತೆ ಪ್ರಕಟವಾಗುತ್ತಿವೆ. ಹಾಗೆಯೇ ದಿನಪತ್ರಿಕೆಗಳಲ್ಲಿ ಉದಾ: ಹಕ್ಕಿಯ ಲೋಕ (ಎಸ್. ವಾಸುದೇವ), ಇಗೋ ಕನ್ನಡ–(ಪ್ರೊ. ವೆಂಕಸುಬ್ಬಯ್ಯ), ರಾಮನ್ (ಪ್ರಾಣ್), ಪುಟ್ಟಿ (ಪ್ರಾಣ್), ಲಹರಿ ಮುಂತಾದ ಮಕ್ಕಳ ಸಾಹಿತ್ಯಕ್ಕೆ ಸೇರಿದ ಅಂಕಣಗಳನ್ನು ಕಾಣುತ್ತೇವೆ. ಮಕ್ಕಳ ಸಾಹಿತಿಯೆಂದೇ ಪ್ರಸಿದ್ಧವಾಗಿರುವ ಎಸ್. ಆರ್. ಮನವಳ್ಳಿ ಅವರು ಕೆಲವು ಪುಸ್ತಕಗಳನ್ನು ರಚಿಸಿದ್ದಾರೆ.

Vision Interactive Systems, ಬೆಂಗಳೂರು ಅವರು ಮಕ್ಕಳಿಗಾಗಿ C.Dಗಳನ್ನು ಸಿದ್ಧಪಡಿಸಿದ್ದಾರೆ. 'ನರ್ಸರಿ ರೈಮ್ಸ್', 'ವೆಜಿಟೆಬಲ್ ರೈಮ್ಸ್', 'ಪೂರ್ವ ಪ್ರಾಥಮಿಕ ಅವಶ್ಯಕತೆಗಳು' ಹೀಗೆ ಕನ್ನಡ ಹಾಗೂ ಆಂಗ್ಲಭಾಷೆಯಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಸಿ.ಡಿ.ಗಳು ಬಿಡುಗಡೆಯಾಗಿವೆ.

ವಿವಿಧ ರೀತಿಯ ಪ್ರಕಾಶಕರು, ಪ್ರಾಣಿ, ವಿಜ್ಞಾನ, ಹಕ್ಕಿಗಳು, ನೀತಿ ಕಥೆಗಳು, ವೈಜ್ಞಾನಿಕ ಚಿಂತನೆ, ಗೀತೆ, ಕವನಗಳ ಮೂಲಕ ಮಗುವಿನ ಶಿಕ್ಷಣದಲ್ಲಿ ಸಾಹಿತ್ಯದ ಮೂಲಕ ನಾಡಿಗೆ ಮಕ್ಕಳನ್ನು 'ಜ್ಞಾನದ ಅಸ್ತ್ರ' ಮಾಡುವ ಪ್ರಯತ್ನ ಕರ್ನಾಟಕದ ಸಾಹಿತ್ಯದ ಅನೇಕ ಜನರ ಪರಿಶ್ರಮದ ಫಲವಾಗಿದೆ.

ಕನ್ನಡ ರಂಗಮಂದಿರಗಳು, ಅನೇಕ ಮಾರ್ಗಗಳಲ್ಲಿ ಚಿಕ್ಕ ಮಕ್ಕಳ ಸಾಹಿತ್ಯ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡಿವೆ ಮತ್ತು ರಾಮಕೃಷ್ಣ ಮಿಶನ್ ಮಕ್ಕಳಿಗೆ ವಿಶೇಷ ಕಥೆ, ಕವನ, ಪ್ರಬಂಧ, ಕ್ವಿಜ್, ಭಾವಗೀತೆ ಮುಂತಾದ ವಿಶೇಷ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಮನರಂಜನೆ ಮೂಲಕ ಸಾಹಿತ್ಯದ ಒಲವು ಮೂಡಿಸುವ ನಿಟ್ಟಿನಲ್ಲಿ ಸಾಗಿದೆ. ಹಾಗೆ ಮಕ್ಕಳಿಗಾಗಿ ಚಿತ್ರದುರ್ಗದ "ಮುರುಘರಾಜೇಂದ್ರ ಮಠ", "ತುಮಕೂರಿನ ಶಿವಗಂಗಾಮಠ", "ಹೊನ್ನಾವರದ ಪ್ರತಿಭೋದಯ", ಬೆಳ್ತಂಗಡಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜ್ಯೂಕೇಷನ್ ಸಂಸ್ಥೆ ಈ ಎಲ್ಲ ಸಂಸ್ಥೆಗಳು ಮಕ್ಕಳ ಸಾಹಿತ್ಯ ಅಭಿವೃದ್ಧಿಗೆ ಪೂರಕವಾಗಿದೆ.

–ಡಾ. ಎರ್ರಿಸ್ವಾಮಿ ಎಂ. ಸಿ



## ಕರ್ನಾಟಕದಲ್ಲಿ ಲಲಿತ (ಪ್ರದರ್ಶಕ) ಕಲೆಗಳ ಶಿಕ್ಷಣದ ಪ್ರಸ್ತುತ ಸ್ಥಿತಿ

ಪ್ರಸ್ತುತ ಕರ್ನಾಟಕದಲ್ಲಿ ಲಲಿತ ಪ್ರದರ್ಶಕ ಕಲೆಗಳಾದ ಸಂಗೀತ, ನೃತ್ಯ, ನಾಟಕ, ಚಿತ್ರ, ವಾಸ್ತುಶಿಲ್ಪ ಇವುಗಳ ಶಿಕ್ಷಣದ ಕ್ರಮವು ಉತ್ತಮಮಟ್ಟದಲ್ಲಿ ನಡೆದಿದೆ ಮತ್ತು ನಡೆಯುತ್ತಿದೆ. ಈಗಿನ ಯುವ ಪೀಳಿಗೆಯಲ್ಲಿ ಅದ್ಭುತ ಪ್ರತಿಭೆಗಳು ಇವೆ. ಕಲೆಯ ಪ್ರದರ್ಶನದಲ್ಲಿ ಕ್ಲಿಷ್ಟವಾದಂತಹ ಸೂಕ್ಷ್ಮವನ್ನು ಸುಲಭವಾಗಿ ಮಾಡಿ ಪ್ರದರ್ಶಿಸುತ್ತಾರೆ. ಸಂಪ್ರದಾಯ, ಬಹಳ ಕಷ್ಟ ಎಂದು ಬದ್ಧವಾಗಿರುವ ಹಿರಿಯ ವಿದ್ವಾಂಸರು ಆಶ್ಚರ್ಯಪಡುವಂತಹ ಕಾರ್ಯವೆಸಗುತ್ತಾರೆ.

ಪ್ರದರ್ಶಕ ಕಲೆಗಳ ಶಿಕ್ಷಣವು ಸಂಗೀತ, ಅಂದರೆ ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ, ಭರತನಾಟ್ಯ, ವಾದ್ಯಸಂಗೀತ, ಸುಗಮಸಂಗೀತ, ನಾಟಕ ಮುಂತಾದ ಕಲಾ ಪ್ರಕಾರಗಳು ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ, ಸರ್ಕಾರಿ ಶಾಲಾ ಕಾಲೇಜುಗಳಲ್ಲಿ, ಖಾಸಗಿ ಸಂಸ್ಥೆಗಳಲ್ಲಿ, ವೈಯಕ್ತಿಕವಾಗಿ ನೀಡಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಪೂರ್ಣ ಪ್ರಮಾಣದಲ್ಲಿಯೂ, ಸರ್ಕಾರಿ ಶಾಲಾಕಾಲೇಜುಗಳಲ್ಲಿ ಕಲೆಯು ಒಂದು ಐಚ್ಛಿಕ ವಿಷಯವಾಗಿಯೂ, ಖಾಸಗಿಯಾಗಿ 2–3 ಗಂಟೆಗಳ ಅವಧಿಯ ಶಿಕ್ಷಣವು ಲಭ್ಯವಾಗುತ್ತಿದೆ. ಪ್ರಸ್ತುತ ಕಾಲೇಜುಗಳಿಗೆ ಒಂದು ಪೂರ್ಣ ಅವಧಿಯಲ್ಲಿ ಕಲಾ ವ್ಯಾಸಂಗ ಮಾಡುವವರ ಸಂಖ್ಯೆ ಸ್ವಲ್ಪ ಕಡಿಮೆಯಾದರೂ, ತಾಂತ್ರಿಕ, ವೈದ್ಯ ಪದವಿಗಳಲ್ಲಿ ಓದುತ್ತಾ ಸಂಜೆ ವೇಳೆ ಕಲಾ ವ್ಯಾಸಂಗದಲ್ಲಿ ತೊಡಗಿರುವವರೆ ಹೆಚ್ಚು. ವೃತ್ತಿಯಾಗಿ ಕಲೆಯನ್ನು ಉಳಿಸಿಕೊಳ್ಳುವವರು ಸ್ನಾತಕೋತ್ತರ ಪದವಿಗಳನ್ನು ಮುಗಿಸಿಕೊಂಡು ಮುಂದೆ ಪಿಎಚ್.ಡಿ. ಪದವಿಗೂ ಸಂಶೋಧನೆ ನಡೆಸುತ್ತಾರೆ.

ಕಾಲೇಜುಗಳಲ್ಲೂ, ಸಂಸ್ಥೆಗಳಲ್ಲೂ, ಕಲಾಶಾಲೆಗಳಲ್ಲೂ ಸಾಮೂಹಿಕ ಶಿಕ್ಷಣವೇ ಹೆಚ್ಚಾಗಿದೆ. ಒಬ್ಬೊಬ್ಬರಿಗೆ ಬೋಧಿಸುವ ಪರಿಪಾಠ ವಿರಳವಾಗಿದೆ, ಸಾಮೂಹಿಕವಾಗಿ ಕಲಿತರೂ ಗ್ರಹಣಶಕ್ತಿ ಚೆನ್ನಾಗಿರುವವರು ಉತ್ತಮ ರೀತಿಯಲ್ಲಿಯೆ ಕಲಿಯುತ್ತಾರೆ. ಇದು ಎಲ್ಲ ವಿಷಯಕ್ಕೂ ಅನ್ವಯಿಸುತ್ತದೆ ಕಾಲೇಜು, ಸಂಸ್ಥೆಗಳಲ್ಲಿ ಕಲೆಯನ್ನು ಆರಂಭದಿಂದ ಹಂತಹಂತವಾಗಿ ಕಲಿಸಲಾಗುತ್ತದೆ. ಅಲ್ಲದೆ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಮೂರು–ನಾಲ್ಕು ಜನರಿರುತ್ತಾರೆ. ಹಾಗೆಯೆ ಪಠ್ಯವಸ್ತುವು ಆಯಾ ತರಗತಿಯ ಮಟ್ಟಕ್ಕೆ ಅನುಗುಣವಾಗಿ ತಯಾರಾಗಿರುತ್ತದೆ. ಅದನ್ನು ಹಂಚಿಕೊಂಡು ಅಧ್ಯಾಪಕರು ಬೋಧಿಸಿದಾಗ ವಿದ್ಯಾರ್ಥಿಗಳಿಗೆ ಎರಡು–ಮೂರು ಶೈಲಿಯ ಅನುಭವವಾಗುತ್ತದೆ. ಹಾಗೂ ಅದಕ್ಕೆ ಹೊಂದಿಕೊಂಡು, ಅವರು ಹೇಳಿಕೊಟ್ಟಿದ್ದನ್ನು ಕಲಿತು ತಮ್ಮದೇ ಶೈಲಿಯಲ್ಲಿ ಪ್ರಸ್ತುತಪಡಿಸುತ್ತಾರೆ. ಸಾಮೂಹಿಕ ಶಿಕ್ಷಣದಲ್ಲಿ ಕಲಿಸುವುದು–ಕಲಿಯುವುದು ಪರಸ್ಪರ ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ಗುರುಗಳಿಂದ ಕಲಿಯುವುದು ಮಾತ್ರವಲ್ಲದೆ, ಸಹಪಾಠಿಗಳು ಒಬ್ಬರಿಂದೊಬ್ಬರು ಕಲಿಯುವುದಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಅನ್ಯೋನ್ಯತೆಯು ಬೆಳೆಯುವುದೇ ಅಲ್ಲದೆ ದಿಟ್ಟತನವಿಲ್ಲದಿರುವವರಿಗೂ ಉತ್ತೇಜನ ದೊರಕಿ ಅವರು ಉತ್ಸಾಹ ತೋರಿಸುವಂತಾಗುತ್ತದೆ.

Digitised by Bharatavani, CIIL

**ಕರ್ನಾಟಕದಲ್ಲಿ ಕಲೆಯ ಶಿಕ್ಷಣದ ಪ್ರಸ್ತುತತೆ ಹೀಗಿದೆ**

**I 1. ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲಾ ಕಾಲೇಜು:**

ಇಲ್ಲಿ ಕರ್ನಾಟಕ ಸಂಗೀತ, ಡಿಪ್ಲೊಮಾ, ಪದವಿ (ಬಿ.ಪಿ.ಎ.) ಎಂ. ಮ್ಯೂಸಿಕ್, ಪಿಎಚ್.ಡಿ.ಗೂ ಅವಕಾಶವಿದೆ. ಡಿಪ್ಲೊಮಾ ಎರಡು ವರ್ಷದ ಕಾರ್ಯಕ್ರಮ. ಇದರಲ್ಲಿ ಆರಂಭದಿಂದ ಕಲೆಯನ್ನು ಕಲಿಸಲಾಗುತ್ತದೆ. ಪದವಿಯಲ್ಲೂ ವರ್ಣ ಕೃತಿಗಳು, ಮನೋಧರ್ಮ ಸಂಗೀತದ ಪಾಠವಾಗುತ್ತದೆ. ಎಂ. ಮ್ಯೂಸಿಕ್‌ನಲ್ಲಿ ವಿದ್ವತ್ಪೂರ್ಣರಾಗಗಳು, ರಾಗತಾನ ಪಲ್ಲವಿಗಳು ಪಠ್ಯವಸ್ತುವಿನಲ್ಲಿರುತ್ತವೆ. ನೃತ್ಯ, ನಾಟಕ, ಗಮಕವಾಚನಗಳೂ ಬೋಧಿಸಲ್ಪಡುತ್ತವೆ.

2. ಸರ್ಕಾರದ ಮಹಾರಾಣಿ ಕಲಾ ಕಾಲೇಜಿನಲ್ಲಿ ಬಿ.ಎ. ಪದವಿಯಲ್ಲಿ ಸಂಗೀತವು ಒಂದು ಐಚ್ಛಿಕ ವಿಷಯವಾಗಿದೆ.

3. ಚಾಮರಾಜೇಂದ್ರ ಆಡಿಯೋ ವಿಷುಯಲ್ ಅಕಾಡೆಮಿ (CAVA), ಮೈಸೂರು ಮೈಸೂರು ಇಲ್ಲಿ ಚಿತ್ರಕಲೆ, ಶಿಲ್ಪಕಲೆ, ಛಾಯಾಚಿತ್ರ ಮುಂತಾದ ಕೋರ್ಸ್‌ಗಳಿವೆ. ಇಲ್ಲಿ ಬಿ.ಎಫ್.ಎ. ಮತ್ತು ಎಂ.ಎಫ್.ಎ. ಪದವಿ ತರಗತಿಗಳು ನಡೆಯುತ್ತವೆ.

4. ರಂಗಾಯಣ ನಾಟಕಕಲೆಗೆ ಮೀಸಲಾದ ಸರ್ಕಾರ ನಡೆಸುತ್ತಿರುವ ಸಂಸ್ಥೆ.

ಇವುಗಳಲ್ಲದೆ ಖಾಸಗಿಯಾಗಿ ಅಯ್ಯನಾರ್ ಕಲಾಶಾಲೆ, ಗಾನಭಾರತಿ, ಬ್ರಹ್ಮವಿದ್ಯಾ ಮೊದಲಾದ ಅನೇಕ ಸಂಸ್ಥೆಗಳೂ, ವೈಯಕ್ತಿಕ ಕಲಾಶಾಲೆಗಳಿವೆ. ನೃತ್ಯಕ್ಕೆ ವಸುಂಧರಾ ಪರ್‌ಫಾರ್ಮಿಂಗ್ ಆರ್ಟ್ಸ್, ನೃತ್ಯಾಲಯ, ನೂಪುರ, ನೃತ್ಯಾಂಜಲಿ, ರಾಸವೃಂದ ಹೀಗೆ ಅನೇಕ ಸಂಸ್ಥೆಗಳು ಇವೆ. ಹಾಗೆಯೆ ಚಿತ್ರಕಲೆಗೂ ಕಲಾಶಾಲೆಗಳವೆ. ಇವೇ ಅಲ್ಲದೆ ಮ್ಯಾಂಡೊಲಿನ್, ಗಿಟಾರ್, ಬ್ಯಾಲೆ ಇವುಗಳನ್ನು ಕಲಿಸುವ ಶಾಲೆಗಳೂ ಇವೆ, ಗುರುಗಳೂ ಇದ್ದಾರೆ.

5. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಅನುದಾನಿತ ಅಲ್ಲಮಪ್ರಭು ಲಲಿತಕಲಾ ಅಕಾಡೆಮಿ.

**II. 1. ಬೆಂಗಳೂರು ವಿಶ್ವವಿದ್ಯಾಲಯದ ಪರ್‌ಫಾರ್ಮಿಂಗ್ ಆರ್ಟ್ಸ್ ವಿಭಾಗ**

ಇಲ್ಲಿ ಸಂಗೀತ, ನೃತ್ಯ, ನಾಟಕಗಳ ಸ್ನಾತಕೋತ್ತರ ಪದವಿ ತರಗತಿಗಳು (ಎರಡು ವರ್ಷ) ನಡೆಯುತ್ತಿವೆ. ಇಲ್ಲಿ ಕರ್ನಾಟಕ ಸಂಗೀತವೇ ಪ್ರಧಾನ.

2. ಮಹಾರಾಣಿ ಕಲಾ ಕಾಲೇಜಿನಲ್ಲಿ ಬಿ.ಎ. ಪದವಿಯಲ್ಲಿ ಸಂಗೀತವು ಒಂದು ಐಚ್ಛಿಕ ವಿಷಯವಾಗಿವೆ.

3. ಆಚಾರ್ಯ ಪಾಠಶಾಲೆಯಲ್ಲಿಯೂ ಬಿ.ಎ. ಪದವಿಯಲ್ಲಿ ಸಂಗೀತವು ಒಂದು ಐಚ್ಛಿಕ ವಿಷಯವಾಗಿದೆ.

4. ಕೇಶವ ನೃತ್ಯ ಮತ್ತು ಸಂಗೀತ ಕಾಲೇಜು ಇಲ್ಲಿ ನೃತ್ಯ ಸಂಗೀತ ಬಿ.ಎ. ಮಟ್ಟದಲ್ಲಿದೆ.

ನೃತ್ಯಕ್ಕೆ ಸಂಬಂಧಿಸಿದಂತೆ ಪ್ರಸಿದ್ಧ ನೃತ್ಯ ಪಟುಗಳ ಕಲಾಶಾಲೆಗಳು ಬಹಳಷ್ಟು ಇವೆ. ಸಂಗೀತಕ್ಕೆ ಅಯ್ಯನಾರ್ ಕಲಾಶಾಲೆ, ವಿಜಯ ಕಾಲೇಜ್ ಆಫ್ ಮ್ಯೂಸಿಕ್ಸ್ ಪರ್‌ಕಸಿವ್ ಆರ್ಟ್ಸ್ ಸೆಂಟರ್, ಕಾಲೇಜ್ ಆಫ್ ಪರ್‌ಕಸಿವ್, ಸುನಾದ ಕಲ್ಚರಲ್ ಸೆಂಟರ್, ಹೀಗೆ ಅನೇಕ ಖಾಸಗಿ ಸಂಸ್ಥೆಗಳಿವೆ.

ಚಿತ್ರಕಲಾ ಪರಿಷತ್ ಚಿತ್ರಕಲೆಗೂ, ಗಮಕ ಕಲಾಪರಿಷತ್ ಗಮಕವಾಚನಕ್ಕಾಗಿ ಇವೆ. ಶಿಲ್ಪಕಲೆಗೆ ಸಂಬಂಧಿಸಿದ ಶಾಲೆಗಳೂ ಇವೆ.

ಹಂಸಲೇಖಾ ಕಾಲೇಜ್‌ನಲ್ಲಿ ಸಂಗೀತ, ನೃತ್ಯ, ನಾಟಕ, ದೇಸೀಕಲೆ ಎಲ್ಲವನ್ನು ಕಲಿಸಲಾಗುತ್ತದೆ.

**III. ಧಾರವಾಡದಲ್ಲಿ–** ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗ ಎಂ.ಎ. ಪದವಿಗಾಗಿ ಇದೆ. ಸರ್ಕಾರಿ ಕಾಲೇಜುಗಳಲ್ಲಿ ಬಿ.ಎ. ಪದವಿಯಲ್ಲಿ ಸಂಗೀತವಿದೆ. ಹುಬ್ಬಳ್ಳಿಯಲ್ಲಿ ಗಂಗೂಬಾಯಿ ಹಾನಗಲ್ ಅವರ ಸಂಗೀತ ಶಾಲೆ ಇದೆ. ಗದಗದಲ್ಲಿ ಪುಟ್ಟರಾಜ ಗವಾಯಿಗಳ ಪುಣ್ಯಾಶ್ರಮ ಹೀಗೆ ಹಲವು ಸಂಸ್ಥೆಗಳು ಹಿಂದೂಸ್ತಾನಿ ಸಂಗೀತವನ್ನು ಕಲಿಸುತ್ತಿವೆ.

ಮಂಗಳೂರಿನಲ್ಲಿಯೂ ಸಂಗೀತ ಹೇಳಿಕೊಡುವ ಖಾಸಗಿ ಸಂಸ್ಥೆಗಳು ಬಹಳಷ್ಟಿವೆ. ಇಲ್ಲಿ ಜಾಸ್ತಿಯಾಗಿ ಕರ್ನಾಟಕ ಸಂಗೀತವನ್ನೇ ಕಲಿಸಲಾಗುತ್ತದೆ.

ಎಲ್ಲ ಸಂಸ್ಥೆಗಳಲ್ಲೂ ಉತ್ತಮ ಮಟ್ಟದ ಪಾಠ ಪ್ರವಚನಗಳು ನಡೆಯುತ್ತಿವೆ ಎಂದು ಹೇಳಬಹುದು. ಸಂಸ್ಥೆಗಳಲ್ಲದೆ ನೋಂದಣಿ ಮಾಡಿಸದ ಎಷ್ಟೋ ಮಂದಿ ಮನೆಯಲ್ಲಿ ಪಾಠಮಾಡುತ್ತಿದ್ದಾರೆ.

ದೂರದರ್ಶನದ ರಿಯಾಲಿಟಿ ಶೋಗಳು ಆರಂಭವಾದ ಮೇಲೆ ಸಂಗೀತ, ನೃತ್ಯ, ನಾಟಕ ಕಲೆಗಳನ್ನು ಕಲಿಯುವವರ ಸಂಖ್ಯೆ ಹೆಚ್ಚಾಯಿತು. ಎಲ್ಲರಿಗೂ ಟಿ.ವಿ.ಯಲ್ಲಿ ಕಾಣಿಸಿಕೊಳ್ಳಬೇಕೆಂಬ ಬಯಕೆಯಾದುದರಿಂದ ಕಲಿಯುವಿಕೆಯಲ್ಲಿ ಆತುರ ಹೆಚ್ಚಾಯಿತು.

ಹಿಂದೆ ಗುರುಕುಲ ಪದ್ಧತಿಯಲ್ಲಿ ಹತ್ತಾರು ವರ್ಷಗಳು ಕಲಿತರೂ ಗುರುಗಳ ಅನುಮತಿ ಇಲ್ಲದೆ ಎಲ್ಲಿಯೂ ಹಾಡುವಂತಿರಲಿಲ್ಲ ಮತ್ತು ಬೇರೆ ವಿದ್ವಾಂಸರ ಸಂಗೀತ ಕೇಳುವಂತಿರಲಿಲ್ಲ. ಆದರೆ ಈಗ ವಿದ್ಯಾರ್ಥಿಯ ಕಲಿಯುವ ಸಾಮರ್ಥ್ಯ, ಗ್ರಹಣಶಕ್ತಿ, ಸೃಜನಶೀಲತೆ, ಆಸಕ್ತಿ ಎಲ್ಲವೂ ಉತ್ಕೃಷ್ಟವಾಗಿರುವುದರಿಂದ ಗುರುಗಳಿಗೆ ತಿಳಿಸದೆಯೆ ಬೇರೆ ವಿದ್ವಾಂಸರ ಸಂಗೀತ ಕೇಳಿ, ತಮ್ಮ ಹಾಡಿಕೆಗೆ ಅಳವಡಿಸಿಕೊಂಡು ಬಿಡುತ್ತಾರೆ. ವೃತ್ತಿಪರ ಅಸೂಯೆ, ಈರ್ಷ್ಯೆಗೆ ದಾರಿಯಿಲ್ಲ. ಗುರುಗಳ ಹೆಸರು ಉಳಿಯಬೇಕು. ಆ ಒಂದು ಮನೋಭಾವದಲ್ಲಿ ಬೋಧಿಸಲಾಗುತ್ತವೆ.

Digitised by Bharatavani, CIIL

ಶಾಲೆಗಳಲ್ಲಿ ಒಳ್ಳೊಳ್ಳೆಯ ಅಧ್ಯಾಪಕರು ಶಿಕ್ಷಕರಾಗಿದ್ದರೂ, ಮೂಲಭೂತವಾದ ಸಂಪನ್ಮೂಲಗಳೇ ಇರುವುದಿಲ್ಲ. ಸಂಗೀತಕ್ಕೆ ತಂಬೂರಿ, ನೃತ್ಯಕ್ಕೆ ತಟ್ಟುಮಣೆ, ಕೋಲು, ಗೆಜ್ಜೆ ಇವೇ ಇಲ್ಲದಿದ್ದರೆ ಪಾಠ ಹೇಗೆ ನಡೆಯಬೇಕು? ಅಷ್ಟೇ ಅಲ್ಲದೆ ಹೆಚ್ಚಿನ ಅಧಿಕಾರಿಗಳಿಗೆ ಶಾಸ್ತ್ರೀಯ ಕಲೆಗಳ ಪರಿಜ್ಞಾನವಿರುವುದಿಲ್ಲ. ಆದುದರಿಂದ ಶಾಲೆಗಳಲ್ಲಿ ಭಕ್ತಗೀತೆಗಳು, ಕನ್ನಡಗೀತೆ, ದೇಶಭಕ್ತಿಗೀತೆ ಮುಂತಾದುವನ್ನು ಹೇಳಿಕೊಡಲಾಗುತ್ತದೆ.

ಪ್ರಸ್ತುತ ಕಾಲೇಜುಗಳಲ್ಲಿ (ಎಲ್ಲಾ ಕೇಂದ್ರಗಳಲ್ಲೂ) ಶಾಸ್ತ್ರವನ್ನೂ ಬೋಧಿಸಲಾಗುತ್ತದೆ ಮತ್ತು ಪ್ರಯೋಗ (Practical) ವನ್ನು ಬೋಧಿಸಲಾಗುತ್ತವೆ. ಗುರುಕುಲದಲ್ಲಿ ಸಾಮಾನ್ಯವಾಗಿ ಪ್ರಯೋಗ ಬೋಧನೆಗೇ ಒತ್ತು ಜಾಸ್ತಿ ಇತ್ತು. ಈಗ ಸರಿಸಮವಾದ ಪ್ರಾಮುಖ್ಯತೆ ಇದೆ. ಕಾಲೇಜುಗಳಲ್ಲಿ ಕಲಿತವರು ಒಳ್ಳೆಯ ಬೋಧಕರಾಗಿದ್ದಾರೆ, ಹಾಗೆಯೆ ವೇದಿಕೆ ಕಲಾವಿದರಾಗಿದ್ದಾರೆ. ಇವರಿಗೆ ನಿಗದಿತ ಸಮಯದಲ್ಲಿ ನಿಗದಿತವಾದ ಪಠ್ಯವಸ್ತುಗಳು ಪಾಠವಾಗಿರುತ್ತವೆ. ಎಲ್ಲ ರೀತಿಯ ಪರೀಕ್ಷೆಗಳನ್ನು ದಾಟಿರುತ್ತಾರೆ. ಉತ್ತಮ ಅಂಕಗಳನ್ನು ಗಳಿಸಿರುತ್ತಾರೆ. ವಿಶ್ವವಿದ್ಯಾಲಯಗಳಲ್ಲಿ ಮೌಲ್ಯಮಾಪನದ ಸಮಯದಲ್ಲಿ ಯಾವ ಅಚಾತುರ್ಯವೂ ನಡೆಯುವುದಿಲ್ಲವೆನ್ನಬಹುದು.

ಲಲಿತಕಲೆ (ಪ್ರದರ್ಶಕ ಕಲೆ)ಗಳ ಶಿಕ್ಷಣದ ಪ್ರಸ್ತುತತೆಯಲ್ಲಿ ಸಿ.ಡಿ.ಗಳ ಪಾತ್ರವು ಇದೆ. ಈಗ ಮಾರುಕಟ್ಟೆಗಳಲ್ಲಿ ಕಲೆಗಳನ್ನು ಬೋಧಿಸುತ್ತಿರುವ ಡಿ.ವಿ.ಡಿಗಳು ಲಭ್ಯ. ಇವುಗಳಿಂದಲೂ ಕಲಿಯಬಹುದು. ಗುರುಮುಖೇನ ಕಲಿಯುವುದಕ್ಕೂ ಡಿ.ವಿ.ಡಿ ಮೂಲಕ ಕಲಿಯುವುದಕ್ಕೂ ವ್ಯತ್ಯಾಸವಿದೆ.

ಕೆಲವರು ದೂರದೂರಿಗೆ ಹೋಗುವ ಸಂದರ್ಭ ಒದಗಿದರೆ ಇಂಟರ್‌ನೆಟ್ ಮೂಲಕ ಕಲಿಯುತ್ತಿರುವ ಪರಿಪಾಠವೂ ಇದೆ.

ಅನೇಕ ಸಂಘ ಸಂಸ್ಥೆಗಳು ಸಂಗೀತ ಕಛೇರಿಗಳು, ನೃತ್ಯ ಮತ್ತು ನಾಟಕ ಪ್ರದರ್ಶನಗಳನ್ನು ಯುವಪೀಳಿಗೆಯವರಿಂದ ಏರ್ಪಡಿಸುತ್ತಿವೆ. ಇದರಿಂದಲೂ ಶಿಕ್ಷಣದ ಬೆಳವಣಿಗೆ ಚೆನ್ನಾಗಿ ಆಗುತ್ತಿದೆ.

**ಕಾಲೇಜುಗಳಲ್ಲಿ ಪ್ರವೇಶಾತಿಯ ಅರ್ಹತೆಗಳು ಈ ಕೆಳಕಂಡಂತಿವೆ:**

1. **ಪದವಿಗೆ ಪ್ರವೇಶಾರ್ಹತೆ:** ಪಿಯುಸಿಯಲ್ಲಿ ಸಂಗೀತ ಐಚ್ಛಿಕ ವಿಷಯವಾಗಿ ತೆಗೆದುಕೊಂಡಿರಬೇಕು ಅಥವಾ ಪಿಯುಸಿ ತೇರ್ಗಡೆಯಾಗಿ ಅದರ ಜೊತೆಗೆ ಪ್ರೌಢ ಶಿಕ್ಷಣ ಮಂಡಳಿಯ ಜೂನಿಯರ್ ಸಂಗೀತ ಪರೀಕ್ಷೆ ತೇರ್ಗಡೆಯಾಗಿರಬೇಕು.

2. **ಸ್ನಾತಕೋತ್ತರ ಪದವಿಗೆ ಪ್ರವೇಶಾರ್ಹತೆ:** ಪದವಿಯಲ್ಲಿ ಸಂಗೀತ, ನೃತ್ಯ, ನಾಟಕ ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಶೇಕಡ 50 ಅಂಕಗಳನ್ನು ಪಡೆದಿರಬೇಕು. ಅಥವಾ ಪ್ರೌಢ ಶಿಕ್ಷಣ ಮಂಡಳಿಯ ಸೀನಿಯರ್ (ಸಂಗೀತ) ಪರೀಕ್ಷೆಯಲ್ಲಿ ತೇರ್ಗಡೆಹೊಂದಿ 50% ಅಂಕ ಪಡೆದಿರಬೇಕು ಮತ್ತು ಯಾವುದಾದರೂ ಪದವಿ ಹೊಂದಿರಬೇಕು.

–ಡಾ. ಶ್ರೀಲತಾ ಆರ್.ಎನ್

## ಕರ್ನಾಟಕದಲ್ಲಿ ಲಲಿತ (ಪ್ರದರ್ಶನ ಕಲೆ) ಕಲೆಗಳ ಶಿಕ್ಷಣದ ಬೆಳವಣಿಗೆ

ಕರ್ನಾಟಕದಲ್ಲಿ ಲಲಿತಕಲೆ (ಪ್ರದರ್ಶನಕಲೆ)ಗಳು ಒಂದು ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡಿವೆ. ಕರ್ನಾಟಕ ಅದರಲ್ಲೂ ಮೈಸೂರು ಕಲೆಗಳ ತೌರೂರು ಎಂದೇ ಪ್ರಸಿದ್ಧಿ. ಸುಮಾರು ಹತ್ತೊಂಬತ್ತನೇ ಶತಮಾನದಿಂದಲೂ ಸಂಗೀತಾದಿ ಕಲೆಗಳ ಶಿಕ್ಷಣದ ಬೆಳವಣಿಗೆ ಗಮನಾರ್ಹವಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಿಂದಲೂ ಮೈಸೂರಿನಲ್ಲಿ ಲಲಿತಕಲೆಗಳ ಬೆಳವಣಿಗೆ ನಡೆದುಕೊಂಡೇ ಬಂದಿದೆ. ಒಡೆಯರ್‌ರವರು ತಮ್ಮ ಆಸ್ಥಾನದಲ್ಲಿದ್ದ ಕೆಲವು ಕಲಾವಿದರಿಗೆ ಹಿರಿಯ ಶ್ರೇಷ್ಠ ವಿದ್ವಾಂಸರಿಂದ ಶಿಕ್ಷಣ ಕೊಡಿಸಿರುವುದೂ ನಡೆದಿದೆ. ಉದಾ: ಮೈಸೂರು ವಾಸುದೇವಾಚಾರ್ಯರನ್ನು ತಿರುವೈಯಾರಿನಲ್ಲಿದ್ದ ಪಟ್ಟಣಂ ಸುಬ್ರಹ್ಮಣ್ಯ ಐಯ್ಯರ್‌ರವರಲ್ಲಿ ಸಂಗೀತ ಶಿಕ್ಷಣಕ್ಕೆ ಕಳುಹಿಸಿದ್ದರು. ಮುಮ್ಮಡಿಯವರು ಸ್ವತಃ ಕಲಾವಿದರು ಹಾಗೂ ವಾಗ್ಗೇಯಕಾರರು. ಸಂಗೀತಕ್ಕಷ್ಟೇ ಅಲ್ಲದೆ ಎಲ್ಲ ಕಲೆಗಳಿಗೂ ಪ್ರೋತ್ಸಾಹವಿತ್ತು. ಕಲೆಗಳ ಸರ್ವಾಂಗೀಣ ಬೆಳವಣಿಗೆಗೆ ಅನುವು ಮಾಡಿಕೊಟ್ಟಿದ್ದಾರೆ. ಹಾಗೆಯೆ ಅರಮನೆಯ ಹೆಣ್ಣುಮಕ್ಕಳಿಗೆ ಸಂಗೀತ ಕಲಿಯಲು ಶಿಕ್ಷಕರನ್ನು ನೇಮಿಸಿದ್ದರು.

ಇವರ ನಂತರ ರಾಜ್ಯವಾಳಿದ ಚಾಮರಾಜ ಒಡೆಯರ್‌ರವರೂ ಕಲಾ ಪೋಷಕರು. ಆನಂತರ ಬಂದಂತಹ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕಲೆಯ ಎಲ್ಲ ರೀತಿಯ ಅಭಿವೃದ್ಧಿಗೂ ಕಾರಣಕರ್ತರು. ಇವರಿಗೆ 'ಅಭಿನವ ಭೋಜ' ಎಂಬ ಹೆಸರೇ ಇದೆ. ಇವರ ಕಾಲದಲ್ಲಿ ಅರಮನೆ ಹೆಣ್ಣು ಮಕ್ಕಳಿಗೆ, ಬ್ಯಾಂಡ್ ಕಲಾವಿದರಿಗೆ ಹಾಗೂ ಶಾಲೆಗಳಲ್ಲೂ ಸಂಗೀತ ಶಿಕ್ಷಣವನ್ನು ಕಡ್ಡಾಯಗೊಳಿಸಿದರು. ಕಲೆಗಳಿಗೂ ಸಾಂಸ್ಥಿಕ ಶಿಕ್ಷಣ ಹಾಗೂ ಸಾಮೂಹಿಕ ಶಿಕ್ಷಣ ಆರಂಭವಾಯಿತೆನ್ನಬಹುದು. ಇವರ ಕಾಲದಲ್ಲಿಯೆ ಮಹಾರಾಣಿಯವರ ಶಾಲೆಯಲ್ಲಿ ಸಂಗೀತ ವಿಷಯವಿದ್ದು, ಅಲ್ಲಿ ಶಿಕ್ಷಕರಾಗಿದ್ದವರು ವೀಣಾವೆಂಕಟಗಿರಿಯಪ್ಪನವರು.

ಆ ವೇಳೆಗೆ ಅರಮನೆಯಲ್ಲಿ ಬ್ಯಾಂಡ್ ವಾದ್ಯ ಮೇಳವಿದ್ದಿತು. ಈ ವಾದ್ಯಮೇಳವು ಎರಡು ಗುಂಪಿನಲ್ಲಿತ್ತು. ಒಂದು ಪಾಶ್ಚಾತ್ಯ ಸಂಗೀತದ ಇಂಗ್ಲಿಷ್ ಬ್ಯಾಂಡ್, ಮತ್ತೊಂದು ಕರ್ನಾಟಕ ಸಂಗೀತದ ಬ್ಯಾಂಡ್ ಇತ್ತು. ಇದರ ನಿರ್ದೇಶಕರು ವೀಣಾವೆಂಕಟಗಿರಿಯಪ್ಪನವರು. ಬ್ಯಾಂಡ್ ಕಲಾವಿದರಿಗೆ ಕೃತಿಗಳನ್ನು ಅಭ್ಯಾಸ ಮಾಡಿಸುವುದು, ಹೊಸ ಹೊಸ ಕೃತಿಗಳನ್ನು ಹೇಳಿಕೊಡುವುದು ಅವರ ಕೆಲಸವಾಗಿತ್ತು. ಬ್ಯಾಂಡ್‌ನವರು ಅರಮನೆಯ ಸಮಾರಂಭಗಳಲ್ಲಿ ಉತ್ಸವಗಳಲ್ಲಿ ನುಡಿಸುತ್ತಿದ್ದರು. ಮಹಾರಾಜರ ಮಕ್ಕಳಿಗೂ ವೀಣಾವಾದನ ಪಾಠ, ಗಾಯನ ಪಾಠ ನಡೆಯುತ್ತಿತ್ತು. ನಾಲ್ವಡಿಯವರ ಆಸ್ಥಾನದಲ್ಲಿ ಶ್ರೇಷ್ಠ ಸಂಗೀತ ವಿದ್ವಾಂಸರು, ಸಂಸ್ಕೃತ ವಿದ್ವಾಂಸರು, ಹಿಂದೂಸ್ತಾನಿ ಸಂಗೀತ ವಿದ್ವಾಂಸರು ಇದ್ದರು. ನೃತ್ಯಕಲಾವಿದರು, ಚಿತ್ರಕಲಾವಿದರು, ಶಿಲ್ಪಿಗಳು ಇನ್ನೂ ಮುಂತಾದ ವಿದ್ವಾಂಸರಿದ್ದರು. ಜಗನ್ಮೋಹನ ಕಲಾ ಗ್ಯಾಲರಿ ನೋಡಿದರೆ ಇವರ ಅಭಿರುಚಿಯ

Digitised by Bharatavani, CIIL

ಬಗ್ಗೆ, ಕಲೆಯ ಸ್ಥಾನಮಾನದ ಬಗೆಗೆ ತಿಳಿಯಬಹುದು. ಕಲೆಯ ಬೆಳವಣಿಗೆ ಎಲ್ಲ ರೀತಿಯಲ್ಲೂ ಉನ್ನತಮಟ್ಟದಲ್ಲಿತ್ತು. ಕಲೆಗೆ, ಕಲಾವಿದರಿಗೆ ಆ ಕಾಲದಲ್ಲಿ ಮಾನ್ಯತೆ, ಗೌರವ ಅಪಾರವಾಗಿತ್ತು. ಇವರ ನಂತರ ಬಂದ ಶ್ರೀ ಜಯಚಾಮರಾಜ ಒಡೆಯರ್‌ರವರೂ ಕಲಾಪೋಷಕರು. ಸ್ವತಃ ಸಂಗೀತ ಕಲಾವಿದರು, ವಾಗ್ಗೇಯಕಾರರು, ಸುಮಾರು ಇಪ್ಪತ್ತನೆಯ ಶತಮಾನದ ವೇಳೆಗೆ ಕಲೆಯ ಬೆಳವಣಿಗೆ ಉಚ್ಛ್ರಾಯ ಸ್ಥಿತಿಗೆ ತಲುಪಿತ್ತು.

ಕಲೆಯನ್ನು ಬೆಳೆಸಲು, ಪೋಷಿಸಲು ಅನೇಕ ಸಂಘ, ಸಂಸ್ಥೆಗಳು ಹುಟ್ಟಿಕೊಂಡವು. ಸಂಗೀತ, ನೃತ್ಯ, ನಾಟಕಾದಿಗಳ ಪ್ರದರ್ಶನಕ್ಕೆ ಅವಕಾಶಗಳು ಏರ್ಪಟ್ಟವು. ಚಿತ್ರ, ಶಿಲ್ಪ ಕಲಾ ಪ್ರದರ್ಶನಗಳು ಏರ್ಪಟ್ಟವು. ಹೀಗೆ ಕಲೆಯು ಬೆಳೆಯುತ್ತಾ ಹಲವು ಮಾರ್ಪಾಡುಗಳನ್ನು, ಹೊಸ ಹೊಸ ಆವಿಷ್ಕಾರಗಳನ್ನು ಹೊಂದಿದವು. ವಿಶ್ವವಿದ್ಯಾನಿಲಯದಲ್ಲಿ ಸಂಗೀತಾದಿ ಕಲಾ ವಿಭಾಗಗಳು, ಖಾಸಗಿ ಕಲಾಶಾಲೆಗಳು ಲಲಿತಕಲೆಗಳ ಬೆಳವಣಿಗೆಗೆ ಸಹಕಾರಿಯಾಗಿವೆ. ಜಾತಿ, ಮತ, ಲಿಂಗಭೇಧವಿಲ್ಲದೆ ಎಲ್ಲರೂ ಒಟ್ಟಾಗಿ ಕಲಿಯುವ ಅವಕಾಶವೇರ್ಪಟ್ಟಿತು. ಚೆನ್ನಾಗಿ ಕಲಿತವರು ವೇದಿಕೆಯಲ್ಲಿ ಹಾಡುವುದು, ತಮ್ಮ ಸ್ಥಳಗಳಲ್ಲಿ ಬೇರೆಯವರಿಗೆ ಕಲಿಸುವುದು ಪ್ರಾರಂಭವಾಯಿತು.

ಸರ್ಕಾರದವತಿಯಿಂದ ಮಹಾರಾಣಿ ಕಲಾಕಾಲೇಜು, ಬೆಂಗಳೂರು, ಮೈಸೂರು ಇಲ್ಲಿ ಸಂಗೀತ ಐಚ್ಛಿಕ ವಿಷಯವಾಯಿತು. ಚಿತ್ರಕಲಾ ಪರಿಷತ್, ಬೆಂಗಳೂರು, ಮೈಸೂರಿನಲ್ಲಿ ಜಯಚಾಮರಾಜೇಂದ್ರ ದೃಶ್ಯಕಲಾ ವಿಭಾಗವು ಆರಂಭವಾಯಿತು. ಅಲ್ಲದೆ ಕರ್ನಾಟಕದ ಪ್ರತಿ ತಾಲ್ಲೂಕಿನಲ್ಲಿ, ಜಿಲ್ಲೆಗಳಲ್ಲಿ ಕಲಾಶಾಲೆಗಳು ಆರಂಭವಾದುವು. ಖಾಸಗಿಯಾಗಿ ಮನೆಗಳಲ್ಲಿ ಕಲೆಗಳನ್ನು ಹೇಳಿಕೊಡುವ ಪರಿಪಾಠವು ಆರಂಭವಾಯಿತು. ಕಾಲಕ್ರಮೇಣ ಸರ್ಕಾರದಿಂದ ಪರೀಕ್ಷೆಗಳು ನಡೆಯಲು ಆರಂಭವಾದುವು. ಆಗಲೇ ಪರೀಕ್ಷೆಗೆ ಅನುಕೂಲವಾಗಲು ಪಠ್ಯವಸ್ತುವು ತಯಾರಾಯಿತು. ಶಾಸ್ತ್ರಗಳನ್ನು ತಿಳಿಸಿ ಕೊಡುವುದು ಮೊದಲಾಯಿತು. ಪಠ್ಯವಸ್ತುವನ್ನು ಹೇಳಿಕೊಡಬೇಕಾಗಿತ್ತು. ಪ್ರತಿಯೊಂದು ಕಲೆಯಲ್ಲೂ ಪರೀಕ್ಷೆಗಳು ನಡೆಯುತ್ತಿದ್ದುವು. ಪ್ರೌಢ ಶಿಕ್ಷಣ ಮಂಡಲಿಯಿಂದ ಸಂಗೀತ, ನೃತ್ಯ ಪರೀಕ್ಷೆಗಳಾಗುವಂತೆ, ಚಿತ್ರಕಲಾ ಪರಿಷತ್‌ನಿಂದ ಇತರ ಕಲೆಗಳ ಪರೀಕ್ಷೆಗಳು, ಗಮಕಕಲಾ ಪರಿಷತ್‌ನಿಂದ ಗಮಕವಾಚನ ಪರೀಕ್ಷೆಯು ನಡೆಯತೊಡಗಿದವು.

ಅಷ್ಟೇ ಅಲ್ಲದೆ ಕಲೆಗಳ ಬಗೆಗೆ ವಿಚಾರ ಸಂಕಿರಣ, ಭಾಷಣ ಪ್ರಾತ್ಯಕ್ಷಿಕೆಗಳು ನಡೆಯತೊಡಗಿದವು. ಇದರಿಂದ ಎಲ್ಲರಿಗೂ ಉಪಯೋಗ ಪಡೆಯುವಂತಾಯಿತು. ಕಲೆಯ ಗಂಧವಿಲ್ಲದವರು ಹಸುವಿನ ಬಾಲಕ್ಕೆ ಸಮ ಎಂದು ಒಂದು ಶ್ಲೋಕವಿದೆ.

ಪ್ರಸ್ತುತ ಪ್ರತಿಯೊಬ್ಬರೂ ಒಂದಿಲ್ಲೊಂದು ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಕೆಲವರು ಎರಡು, ಮೂರು ಕಲೆಗಳಲ್ಲಿ ಪರಿಣಿತರಾಗಿರುತ್ತಾರೆ.

ಕಲೆಯ ಬೆಳವಣಿಗೆಯಲ್ಲಿ ಆಕಾಶವಾಣಿ ಮತ್ತು ದೂರದರ್ಶನಗಳ ಪಾತ್ರವು ಹಿರಿದಾಗಿದೆ. ಮಕ್ಕಳಿಂದ ಹಿರಿಯರವರೆಗೆ ಎಲ್ಲರೂ ಕಾರ್ಯಕ್ರಮ ನೀಡಬಹುದಾಗಿದೆ. ಇದರಿಂದ ಉತ್ತೇಜನ ದೊರಕಿ ಎಲ್ಲರಿಗೂ ಕಲಿತು ಹಾಡಬೇಕೆಂಬ ಅಭಿಲಾಷೆ ಉಂಟಾಗುತ್ತದೆ, ಸಂಘಸಂಸ್ಥೆಗಳು ಮಕ್ಕಳು ಮತ್ತು ಯುವ ಪೀಳಿಗೆಗೆ ಸ್ಪರ್ಧೆಗಳನ್ನು ಏರ್ಪಡಿಸುತ್ತಿವೆ. ಸ್ಪರ್ಧಾ ಮನೋಭಾವ ಬೆಳೆದು ಇನ್ನೂ ಚೆನ್ನಾಗಿ ಕಲಿಯಬೇಕೆಂಬ ಮನಸ್ಸು ಬಂದು ತಮ್ಮ ಕಲೆಯನ್ನು ವೃದ್ಧಿಸಿಕೊಳ್ಳುತ್ತಾರೆ. ಈ ರೀತಿ ಕಲೆಯ ಬೆಳವಣಿಗೆ ಆರೋಗ್ಯಕರವಾದದ್ದು.

ಕಲೆಯ ಬೆಳವಣಿಗೆಯ ಮಾರ್ಗದಲ್ಲಿ ಬೆಂಗಳೂರಿನ ಕನ್ನಡ ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖಾ ಅವರು ಒಂದು ಕಾಲೇಜನ್ನು ಸ್ಥಾಪಿಸಿದ್ದಾರೆ. ಅಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿವೆ. ಅವರ ಪಠ್ಯವಸ್ತುವಿನಲ್ಲಿ ಕರ್ನಾಟಕ, ಹಿಂದೂಸ್ತಾನಿ ಸಂಗೀತ, ಜಾನಪದ ದೇಸೀ ಕಲೆ, ಪಾಶ್ಚಾತ್ಯ ಸಂಗೀತ, ನೃತ್ಯ, ನಟನೆ ಎಲ್ಲವೂ ಸಮಗ್ರವಾಗಿ ಪರಿಚಯಿಸಲ್ಪಡುತ್ತದೆ. ಇದರಂತೆಯೆ ಆದರ್ಶ ಫಿಲಂ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯದ ಫಿಲಂ ಸ್ಟಡೀಸ್ ಕೋರ್ಸ್‌ಗಳೂ ಇವೆ.

ಮೈಸೂರು, ಬೆಂಗಳೂರು, ಕರ್ನಾಟಕ ಧಾರವಾಡ ವಿಶ್ವವಿದ್ಯಾನಿಲಯಗಳಲ್ಲಿ ಪ್ರದರ್ಶಕ ಕಲೆಗಳ ವಿಭಾಗಗಳೇ ಇದ್ದು ಕಲೆಯ ಬೆಳವಣಿಗೆಗೆ ಉತ್ತಮ ಕಾರ್ಯ ನಡೆಯುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿ ಕಲಿತವರು ಬಹಳಷ್ಟು ಮಂದಿ ವೈಯಕ್ತಿಕವಾಗಿ ಪಾಠ ಹೇಳುತ್ತಿದ್ದಾರೆ, ಹೀಗೆ ಕಲೆ ಬೆಳೆಯುತ್ತಿದೆ. ನಿಂತಿಲ್ಲ. ಅಲ್ಲದೆ ಕಲೆ ಎನ್ನುವುದೂ ಯಾವತ್ತಿಗೂ ಬೇಕು. ಅದಿಲ್ಲದೆ ಜೀವನ ನಶ್ವರ. ಕಲೆ ಅನ್ನುವುದು ಇಲ್ಲದೇ ಇದಿದ್ದರೆ ಮನುಷ್ಯನ ಜೀವನ ಬರಡು ಬರಡಾಗುತ್ತಿತ್ತು.

–ಡಾ. ಶ್ರೀಲತಾ ಆರ್.ಎನ್.

## ಕರ್ನಾಟಕದಲ್ಲಿ ವಿಶೇಷ ಶಿಕ್ಷಣ ಶಾಲೆಗಳು

ಸೃಜನಶೀಲರು, ಪ್ರತಿಭಾನ್ವಿತರು, ಮಂದಗತಿಯಲ್ಲಿ ಕಲಿಯುವವರು ಮತ್ತು ಅಪೂರ್ಣ ಸಾಧಕರನ್ನು ಬೌದ್ಧಿಕ ವಿಶಿಷ್ಟ ಮಕ್ಕಳೆನ್ನುವರು. ಸೃಜನಶೀಲತೆ ಎಂಬುದು ಹೊಸತನ್ನು ನಿರ್ಮಿಸುವ ಅಥವಾ ಹಳೆಯದನ್ನು ಹೊಸ ರೀತಿಯಲ್ಲಿಡುವ ಮಾನವ ಗುಣ. ಸೃಜನಶೀಲ ಚಟುವಟಿಕೆಗಳು ವೈಜ್ಞಾನಿಕ ಪ್ರಗತಿಯನ್ನು ನಿರ್ಧರಿಸುತ್ತವೆ. ಯಾವ ರಾಷ್ಟ್ರಗಳು ತಮ್ಮ ವ್ಯಕ್ತಿಗಳಲ್ಲಿ ಸೃಜನಶೀಲತೆಯನ್ನು ಗುರ್ತಿಸಿ, ಬೆಳೆಸಿ, ಪ್ರೋತ್ಸಾಹಿಸುತ್ತವೆಯೋ ಅಂತಹ ರಾಷ್ಟ್ರಗಳು ಅನುಕೂಲಕರ ಸ್ಥಾನದಲ್ಲಿವೆ. ಈ ಹಿನ್ನೆಲೆಯಲ್ಲಿ ಪ್ರತಿಯೊರ್ವ ಶಿಕ್ಷಕನು ಸೃಜನಶೀಲ ಮಕ್ಕಳ ಜ್ಞಾನ, ಅವರ ಲಕ್ಷಣಗಳು ಮತ್ತು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವ ಕ್ರಮಗಳನ್ನು ತಿಳಿದಿರಬೇಕು. ಇದರ ಜೊತೆಗೆ, ಪ್ರತಿಭಾವಂತ ಮಕ್ಕಳು, ಮಂದಗತಿಯಲ್ಲಿ ಕಲಿಯುವವರು ಮತ್ತು ಅಪೂರ್ಣ ಸಾಧಕರ ಗುಣಲಕ್ಷಣಗಳು ಮತ್ತು ಶೈಕ್ಷಣಿಕ ಕ್ರಮಗಳ ಬಗ್ಗೆ ಈ ವಿಭಾಗದಲ್ಲಿ ಚರ್ಚಿಸಲಾಗಿದೆ. ಈ ಜ್ಞಾನ ತರಗತಿಯ ಶಿಕ್ಷಕರಿಗೆ ಅಂತಹ ಮಕ್ಕಳನ್ನು ಗುರುತಿಸಲು ಮತ್ತು ಅವರಿಗೆ ಶಿಕ್ಷಣ ನೀಡಲು

Digitised by Bharatavani, CIIL

ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ.

**ಮಾನಸಿಕ ಮತ್ತು ದೈಹಿಕ ಸವಾಲುಗಳುಳ್ಳ ಮಕ್ಕಳು – ಪರಿಕಲ್ಪನೆ:** ವಿಶೇಷ ಶೈಕ್ಷಣಿಕ ಅಗತ್ಯಗಳುಳ್ಳ ಮಕ್ಕಳು ಮಾನಸಿಕ ಮತ್ತು ದೈಹಿಕ ಸವಾಲುಗಳನ್ನು ಎದುರಿಸುತ್ತಿರುವವರು. ಇವರು ಮಾನಸಿಕ ಮತ್ತು ದೈಹಿಕ ಗುಣಲಕ್ಷಣಗಳಲ್ಲಿ ಸಾಧಾರಣ ಮಕ್ಕಳಿಂದ ಭಿನ್ನವಾಗಿದ್ದು ಇವರಿಗಾಗಿ ಶಾಲಾ ಕಾರ್ಯಕ್ರಮಗಳಲ್ಲಿ ಮಾರ್ಪಾಡುಗಳ ಅಗತ್ಯವಿರುವುದು ಅಥವಾ ಅವರಲ್ಲಿರುವ ಸಾಮರ್ಥ್ಯಗಳ ಗರಿಷ್ಠ ವಿಕಾಸಕ್ಕಾಗಿ ಶೈಕ್ಷಣಿಕ ಕಾರ್ಯಕ್ರಮಗಳೇ ಬೇಕಾಗುವುದು.

**ಗುರುತಿಸುವಿಕೆ:** ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಬುದ್ಧಿಶಕ್ತಿ ಪರೀಕ್ಷೆಗಳು, ವ್ಯಕ್ತಿ ಅಧ್ಯಯನ, ಸಂಚಿತ ದಾಖಲೆಗಳ ಸಹಾಯದಿಂದ ಹಾಗೂ ಅವರ ಹೊಂದಾಣಿಕೆಯ ವರ್ತನೆಗಳನ್ನು ಅಳತೆ ಮಾಡುವುದರ ಮೂಲಕ ಪತ್ತೆ ಮಾಡಬಹುದು. ಶಿಕ್ಷಕರು ಮತ್ತು ಪೋಷಕರು ಇಂತಹ ಮಕ್ಕಳನ್ನು ಈ ಕೆಳಗಿನ ವರ್ತನೆಗಳ ಸ್ವರೂಪವನ್ನು ವೀಕ್ಷಿಸುವುದರ ಮೂಲಕ ಗುರುತಿಸಬಹುದು:

ನಿಧಾನವಾಗಿ ಕಲಿಯುವುದು, ಸಮಸ್ಯಾ ಪರಿಹಾರ ಕೌಶಲಗಳಲ್ಲಿ ತುಂಬಾ ಹಿಂದುಳಿದಿರುವುದು, ಪರಿಸರದ ಬೇಡಿಕೆಗಳಿಗೆ ನಿಧಾನವಾಗಿ ಪ್ರತಿಕ್ರಿಯೆ ತೋರುವುದು. ಸ್ಮರಣ ಶಕ್ತಿ ಕಡಿಮೆ ಇದ್ದು ವಿಷಯಗಳನ್ನು ದೀರ್ಘಕಾಲ ನೆನಪಿನಲ್ಲಿಡಲು ಅಸಮರ್ಥತೆ, ಕಲ್ಪನಾ ಶಕ್ತಿ ಮತ್ತು ಸೃಜನಾತ್ಮಕ ಚಿಂತನೆಯಲ್ಲಿ ಹಿಂದುಳಿದಿರುವುದು (ಸಾಧಾರಣ ಮಟ್ಟಕ್ಕಿಂತ ಕೆಳಗಿರುವುದು). ಭಾಷಾ ಕಲಿಕೆಯ ವಿಕಾಸ ನಿಧಾನವಾಗಿದ್ದು, ಶಬ್ದ ಭಂಡಾರ ಮತ್ತು ವೈವಿಧ್ಯತೆಯಲ್ಲಿ ತುಂಬಾ ಸೀಮಿತವಾಗಿರುವುದು. ಅವಧಾನ ಸಾಮರ್ಥ್ಯ ಕಡಿಮೆ ಇರುವುದು. ಅವಧಾನ ಕೇಂದ್ರೀಕರಿಸಲಾಗದಿರುವುದು, ಬಹು ಬೇಗ ಅವಧಾನ ಭಂಗವಾಗಿರುವುದು. ಮಿತವಾದ ಆಟ ಮತ್ತು ಸಾಮಾಜಿಕ ಆಸಕ್ತಿಗಳು ಕಡಿಮೆಯಾಗಿರುವುದು. ಸ್ವ ಸಹಾಯ ಕೌಶಲಗಳಲ್ಲಿ ಸಮನ್ವಯದ ಕೊರತೆ. ಪರಿಕಲ್ಪನೆಗಳು, ಅದರಲ್ಲಿಯೂ ಅಮೂರ್ತ ಪರಿಕಲ್ಪನೆಗಳ ವಿಕಾಸ ಕಠಿಣವಾಗಿರುವುದು.

**ವ್ಯಕ್ತಿತ್ವದ ಮೇಲೆ ಮನೋವೈಜ್ಞಾನಿಕ ಪರಿಣಾಮ:** ಮಕ್ಕಳೆಂದರೆ ಬೌದ್ಧಿಕ ಕಾರ್ಯ ನಿರ್ವಹಣೆಯಲ್ಲಿ ಅವರು ಸಾಧಾರಣ ಮಟ್ಟಕ್ಕಿಂತ ತುಂಬಾ ಕೆಳಗಿರುತ್ತಾರೆ. ಇದು ಮಕ್ಕಳ ವಿಕಾಸದ ಅವಧಿಯಲ್ಲಿ ಕಂಡು ಬರುತ್ತದೆ ಮತ್ತು ಅವರ ಹೊಂದಾಣಿಕಾ ವರ್ತನೆ ಅಸಮರ್ಪಕವಾಗಿತ್ತದೆ. ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಹಿಂದೆ ಮಾನಸಿಕ ನ್ಯೂನತೆಯುಳ್ಳವರೆಂದು ಕರೆಯುತ್ತಿದ್ದರು. ಮಾನಸಿಕ ನ್ಯೂನತೆಗೆ ಬುದ್ಧಿಶಕ್ತಿ ಕಡಿಮೆ ಇರುವುದೇ ಸೂಚಕವಾಗಿದೆ. ಶಿಕ್ಷಣದ ಉದ್ದೇಶಕ್ಕಾಗಿ ಇಂತಹ ಮಕ್ಕಳನ್ನು ಅವರ ಬುದ್ಧಿಶಕ್ತಿಯ ಮಟ್ಟಕ್ಕನುಗುಣವಾಗಿ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ.

**ಮಾನಸಿಕ ಸವಾಲುಗಳುಳ್ಳ ಮಕ್ಕಳು**

| ಕ್ರಮ ಸಂಖ್ಯೆ | ಬುದ್ಧಿಶಕ್ತಿ ಸೂಚ್ಯಾಂಕ ವ್ಯಾಪ್ತಿ | ಶೈಕ್ಷಣಿಕ ವರ್ಗೀಕರಣ |
|---|---|---|
| 1 | 25 ಕ್ಕಿಂತ ಕಡಿಮೆ | ಆಶ್ರಿತ ಮಾನಸಿಕ ನ್ಯೂನತೆಯುಳ್ಳವರು |
| 2 | 26 – 50 | ತರಬೇತಿ ಪಡೆಯಬಲ್ಲ ಮಾನಸಿಕ ನ್ಯೂನತೆಯುಳ್ಳವರು |
| 3 | 51 – 75 | ಶಿಕ್ಷಣಾರ್ಹ ಮಾನಸಿಕ ನ್ಯೂನತೆಯುಳ್ಳವರು |

ಮಾನಸಿಕ ಸವಾಲುಗಳನ್ನು ಎದುರಿಸುವ ಮಕ್ಕಳಲ್ಲಿ ಸ್ವಬಿಂಬ ಪರಿಕಲ್ಪನೆ ಸಾಕಷ್ಟಿರುವುದಿಲ್ಲ. ಇವರು ಆವೇಗದಿಂದ ವರ್ತಿಸುವರು. ವಸ್ತುಗಳನ್ನು/ವಿಷಯಗಳನ್ನು ಒಟ್ಟಾರೆ ವ್ಯಾಪಕವಾಗಿ ನೋಡುವರು. ಇವರಿಗೆ ಫಲಪ್ರದ ಅನುಭವಗಳನ್ನು ಒದಗಿಸುವ ಧನಾತ್ಮಕ ಕಲಿವಿನ ಪರಿಸರ ಸಹಾಯಕವಾಗುವುದು. ಸಾಧಾರಣ ಮಟ್ಟದ ಮಕ್ಕಳಿಗಿಂತ ಹೆಚ್ಚು ಮೂರ್ತ ಅನುಭವಗಳನ್ನು ಮತ್ತು ಹೆಚ್ಚಿನ ಪುನರಾವರ್ತನೆಯ ಅವಶ್ಯಕತೆಯುಳ್ಳ ನಿಧಾನವಾಗಿ ಕಲಿಯುವ ಮಕ್ಕಳಿಗಾಗಿ ಬೋಧನೆಯನ್ನು ಹೊಂದಿಸಿ ಮಾರ್ಪಡಿಸಿಕೊಳ್ಳುವುದರಿಂದ ಇವರಲ್ಲಿರುವ ಕೀಳರಿಮೆಯ ಭಾವನೆಯನ್ನು ಬಹುಮಟ್ಟಿಗೆ ತಡೆಗಟ್ಟಬಹುದು. ವಿಫಲತೆ ಮತ್ತು ಟೀಕೆಗಳೊಂದಿಗೆ ವ್ಯವಹರಿಸುವುದನ್ನು ಕಲಿಯುವದಲ್ಲದೆ ಇವರು ಅವುಗಳನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕು.

**ಶೈಕ್ಷಣಿಕ ಅವಕಾಶಗಳು:** ಮಾನಸಿಕ ಸವಾಲುಗಳುಳ್ಳ ಮಕ್ಕಳ ಶಿಕ್ಷಣದ ಉದ್ದೇಶಗಳು ಸ್ವ ಅರಿವು ಮಾನವೀಯ ಸಂಬಂಧಗಳು, ಆರ್ಥಿಕ ಕ್ಷಮತೆ ಮತ್ತು ಪೌರ ಜವಾಬ್ದಾರಿ – ಇವುಗಳನ್ನು ಬೆಳೆಸುವುದೇ ಆಗಿದೆ. ಶಾಲಾ ಪೂರ್ವ ಹಂತದಲ್ಲಿ (3 ರಿಂದ 6 ವರ್ಷಗಳು) ಮಾನಸಿಕ ಸವಾಲುಗಳನ್ನು ಮಕ್ಕಳಿಗೆ ಸಂವಹನ ಕೌಶಲಗಳು, ಸ್ವಸಹಾಯ ಕೌಶಲಗಳು ಮತ್ತು ಸಾಮಾಜೀಕರಣ ಕೌಶಲಗಳಲ್ಲಿ ತರಬೇತಿ ನೀಡಬೇಕು ಮತ್ತು ಪೂರ್ವ ಪ್ರಾಥಮಿಕ ಕೇಂದ್ರಗಳು, ಅಂಗನವಾಡಿಗಳು ಅಥವಾ ಸಮಗ್ರ ಶಿಶು ಅಭಿವೃದ್ಧಿ ಕೇಂದ್ರಗಳಲ್ಲಿ ಪ್ರತ್ಯಕ್ಷಾನುಭವಗಳನ್ನು ಒದಗಿಸಬೇಕು. ಆದ್ದರಿಂದ ಒಂಬತ್ತು ವರ್ಷ ವಯಸ್ಸಿನ ಅವಧಿಯಲ್ಲಿ ಇವರನ್ನು ಶಾಲಾ ವ್ಯವಸ್ಥೆಯಲ್ಲಿ ಸಮನ್ವಯಗೊಳಿಸಬೇಕು. ಇಲ್ಲಿ ಇಂತಹ ಮಕ್ಕಳ ಮೂಲ ಕೌಶಲಗಳನ್ನು ಬೆಳೆಸಲು ಹಾಗೂ ಸಂಪನ್ಮೂಲ ಕೊಠಡಿ ಬೋಧನೆಗೂ ಅವಕಾಶವಿರಬೇಕು. ಒಂಬತ್ತರಿಂದ ಹನ್ನೆರಡು ವರ್ಷಗಳಲ್ಲಿ, ಈ ಮಕ್ಕಳನ್ನು ನಿಯಮಿತ ತರಗತಿಗಳಲ್ಲಿ ಸೇರಿಸಬೇಕು. ಈ ತರಗತಿಗಳಲ್ಲಿ ಓದು, ಬರಹ ಮತು ಮೌಖಿಕ ಅಭಿವ್ಯಕ್ತಿ, ಗಣಿತ, ಗತಿ ಮತ್ತು ಪ್ರತ್ಯಕ್ಷಾನುಭವಗಳ ವಿಕಾಸದಲ್ಲಿ ಔಪಚಾರಿಕ ಶೈಕ್ಷಣಿಕ ತರಬೇತಿ ಒದಗಿಸಬೇಕು.

**ಶಿಕ್ಷಕರ ಪಾತ್ರ:** ನ್ಯೂನತೆಯುಳ್ಳ ಮತ್ತು ಸಾಧಾರಣ ಮಕ್ಕಳ ನಡುವೆ ಸೂಕ್ತ ಅಂತರ್‌ಕ್ರಿಯೆಗಳು, ಅನುಭವಗಳನ್ನು ರೂಪಿಸಿ, ಅವಕಾಶ

Digitised by Bharatavani, CIIL

ನೀಡುವುದು. ಯೋಜಿತ ಬೋಧನೆಯನ್ನು ರೂಪಿಸುವುದು. ಸಮವಯಸ್ಕ ಗುಂಪುಗಳ ನಡುವೆ ಮನೋಭಾವ ಬದಲಾವಣೆಗಳನ್ನು ಅಳತೆಮಾಡಿ, ಅವರಲ್ಲಿ ಸೂಕ್ತ ಮನೋಭಾವನೆಗಳನ್ನು ಬೆಳೆಸುವುದು. ಮಾನಸಿಕ ಸವಾಲುಗಳುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದು. ಈ ಕಾರ್ಯವು ಸವಾಲಿನದಾಗಿದ್ದು ಅದನ್ನು ಹೇಗೆ ಎದುರಿಸಬೇಕೆಂಬುದನ್ನು ಶಿಕ್ಷಕನು ತಿಳಿದಿರಬೇಕು. ಕೌಶಲ ತರಬೇತಿ, ಅವಧಾನ ತರಬೇತಿ, ಪುನರಭ್ಯಾಸ ತರಬೇತಿ, ಕಲಿಯಲು ಕಲಿಯುವಿಕೆ ಮತ್ತು ಉಪಕರಣ ಬಳಕೆ, ಸಂಪದೀಕರಣ ಮುಂತಾದವುಗಳನ್ನು ಕ್ರಮಬದ್ಧಗೊಳಿಸುವುದಕ್ಕಾಗಿ ಅಭಿವೃದ್ಧಿ ಕೌಶಲ ತರಬೇತಿ ಮಾರ್ಗವನ್ನು ಬಳಸಬೇಕು. ಸಾಮಾಜಿಕ ಹೊಂದಾಣಿಕೆಯ ಕೌಶಲಗಳನ್ನು ಸಹ ಬೆಳೆಸಬೇಕು. ಜ್ಞಾನಾತ್ಮಕ ತಂತ್ರ ವಿಧಾನವನ್ನು ಅಳವಡಿಸಬೇಕು. ಸ್ವಯಂ ಬೋಧನೆ ಹಾಗೂ ಸಮಸ್ಯಾ ಪರಿಹಾರ ವಿಧಾನಗಳು ಸೂಕ್ತ ತಂತ್ರಗಳಾಗಿವೆ.

**ದೃಷ್ಟಿ ಸವಾಲುಗಳುಳ್ಳ ಮಕ್ಕಳು:** ವ್ಯಕ್ತಿ ತನ್ನ ಸುತ್ತಲಿನ ಪ್ರಪಂಚದ ಅನುಭವ ಮತ್ತು ಅರಿವನ್ನು ಜ್ಞಾನೇಂದ್ರಿಯಗಳ ಮೂಲಕವೇ ಪಡೆಯುತ್ತಾನೆ. ಇತರ ಎಲ್ಲಾ ಇಂದ್ರಿಯಗಳ ಮೂಲಕ ಒಟ್ಟಾಗಿ ಸಿಗುವ ಅನುಭವಗಳಿಗಿಂತ ಹೆಚ್ಚಿನ ಅನುಭವಗಳು ದೃಶ್ಯೇಂದ್ರಿಯದ ಮೂಲಕವೇ ಮೆದುಳನ್ನು ತಲುಪುತ್ತದೆ. ಹೀಗೆ ದೃಷ್ಟಿ ಸಂಬಂಧಿತ ಕಠಿಣತೆಗಳು ವ್ಯಕ್ತಿಯ ಜೀವನದ ದೈಹಿಕ, ಮಾನಸಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವೃತ್ತಿಪರ ಅಂಶಗಳೆಲ್ಲದರ ಮೇಲೆ ಪ್ರಭಾವ ಬೀರುತ್ತವೆ.

ದೃಷ್ಟಿ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳಲ್ಲಿ ಭಾಗಶಃ ದೃಷ್ಟಿ ಸಾಮರ್ಥ್ಯವಿದ್ದು, ದೃಷ್ಟಿಕಾರ್ಯ ಸಾಮರ್ಥ್ಯ ಕೆಳ ಮಟ್ಟದ್ದಾಗಿರುವವರಲ್ಲದೆ, ಅತ್ಯಂತ ಕ್ಷೀಣ ದೃಷ್ಟಿ ಸಾಮರ್ಥ್ಯವುಳ್ಳವರು, ಪೂರ್ಣ ದೃಷ್ಟಿ ದೋಷವಿದ್ದು ಅಂಧರಾಗಿರುವವರೂ ಸೇರಿರುತ್ತಾರೆ. ಎಲ್ಲ ವಿಧದ ವೈದ್ಯಕೀಯ ಮತ್ತು ದೃಷ್ಟಿ ಉಪಕರಣಗಳ ಸಹಾಯ ಪಡೆದ ನಂತರ 20/70 ರಿಂದ 20/200ರವರೆಗಿನ ದೃಷ್ಟಿ ತೀಕ್ಷ್ಣತೆ ಹೊಂದಿರುವ ಮಕ್ಕಳನ್ನು ಭಾಗಶಃ ಅಥವಾ ಅಪೂರ್ಣ ದೃಷ್ಟಿಯುಳ್ಳವರೆಂದು ಪರಿಗಣಿಸಲಾಗಿದೆ. 20/200 ಕ್ಕಿಂತ ಕಡಿಮೆ ದೃಷ್ಟಿ ತೀಕ್ಷ್ಣತೆಯುಳ್ಳವರು ಅಂಧರೆನಿಸುವರು.

**ಗುರುತಿಸುವಿಕೆ:** ಶಿಕ್ಷಕರು ದೃಷ್ಟಿ ಸಾಮರ್ಥ್ಯ ಕಡಿಮೆ ಇರುವ ಮಕ್ಕಳನ್ನು ಈ ಕೆಳಕಂಡ ಲಕ್ಷಣಗಳ ಸಹಾಯದಿಂದ ಗುರುತಿಸಬಹುದು:

ಕಣ್ಣಂಚುಗಳು ಕೆಂಪಾಗಿದ್ದು, ನೀರು ತುಂಬಿದ ಕೆಂಪು ಕಣ್ಣುಗಳು. ಗಟ್ಟಿಯಾದ, ಊದಿದ ಕಣ್ಣೆವೆಗಳು. ಪದೇ ಪದೇ ಕಣ್ಣುಗಳನ್ನು ಉಜ್ಜುತ್ತಿರುವುದು. ಅತಿಯಾಗಿ ರೆಪ್ಪೆ ಮಿಟುಕಿಸುವುದು. ಕಣ್ಣೀರಿನ ನಾಳಗಳು ಪ್ರತಿಬಂಧಿತವಾಗಿರುವುದು. ಆಗಾಗ್ಗೆ ತಲೆನೋವೆಂದು ಅಥವಾ ಕಣ್ಣುಗಳ ಸೋಂಕು ತಗುಲಿದೆಯೆಂದು ಹೇಳುವುದು. ವಸ್ತುಗಳನ್ನು, ಪುಸ್ತಕಗಳನ್ನು ಕಣ್ಣುಗಳಿಗೆ ಅತಿ ಸಮೀಪದಲ್ಲಿ ಹಿಡಿಯುವುದು. ದೃಷ್ಟಿಯನ್ನು ಉತ್ತಮವಾಗಿ ಕೇಂದ್ರೀಕರಿಸುವುದಕ್ಕಾಗಿ ತಲೆಯನ್ನು ಬಾಗಿಸುವುದು ಅಥವಾ ಓರೆಗಣ್ಣಿನಿಂದ ನೋಡುವುದು. ಇತರರ ಮುಖದಲ್ಲಿ ಕಾಣುವ ಅಭಿವ್ಯಕ್ತಿಗಳಿಗೆ ಸರಿಯಾಗಿ ಪ್ರತಿಕ್ರಿಯೆ ತೋರದಿರುವುದು. ಕಣ್ಣು–ಕೈಗಳ ನಡುವೆ ಸಮನ್ವಯ ಇಲ್ಲದಿರುವುದು. ಕಪ್ಪು ಹಲಗೆಯ ಮೇಲಿನ ಬರಹವನ್ನು ನೋಡಿ ಬರೆಯುವಾಗ ಇತರ ಮಕ್ಕಳ ಸಹಾಯ ಕೇಳುವುದು, ಇತರ ಇಂದ್ರಿಯಗಳ ಮೇಲೆ ಹೆಚ್ಚಾಗಿ ಅವಲಂಬಿಸಿರುವುದು, ನೋಡುವುದಕ್ಕಿಂತ ಕೇಳಲು, ಮುಟ್ಟಿನೋಡಲು ಇಚ್ಛಿಸುವುದು. ಕಣ್ಣುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದು – ಉದಾಹರಣೆಗೆ ಮೆಳ್ಳಗಣ್ಣು. ಬಣ್ಣಗಳ ವ್ಯತ್ಯಾಸ ತಿಳಿಯಲು ಅಸಮರ್ಥತೆ. ಮಿತವಾದ ಪರಿಧಿಯ ದೃಷ್ಟಿ. ಇವೆಲ್ಲ ಲಕ್ಷಣಗಳಿಂದಲ್ಲದೆ ಸ್ನೆಲೆನ್ ಚಿತ್ರಪಟದ ಸಹಾಯದಿಂದಲೂ ಗುರ್ತಿಸಬಹುದು.

**ದೃಷ್ಟಿ ಸವಾಲುಗಳುಳ್ಳ ಮಕ್ಕಳ ಸಮನ್ವಯ ಶಿಕ್ಷಣ:** ದೃಷ್ಟಿ ಸವಾಲುಗಳುಳ್ಳ ಮಕ್ಕಳಿಗೆ ಸಾಮಾನ್ಯ ತರಗತಿಯಲ್ಲಿ ಶಿಕ್ಷಣ ನೀಡಬಹುದು. ಇವರಿಗೆ ಪಠ್ಯಕ್ರಮವೂ ಒಂದೇ ಆಗಿರಬೇಕು. ಆದರೆ ಇಂತಹ ಮಗು ಪ್ರಧಾನವಾಗಿ ಸ್ಪರ್ಶ ಹಾಗೂ ಶ್ರವಣ ಅನುಭವಗಳ ಮೂಲಕ ವಿಷಯ ಗ್ರಹಿಸುತ್ತದೆ. ಆದ್ದರಿಂದಲೇ ಇವರಿಗೆ ವಿಶೇಷ ಪಠ್ಯಕ್ರಮ ಅಗತ್ಯವಿರುವುದಿಲ್ಲ. ಆದರೆ ಇವರಿಗೆ ಕಲಿಸಲು ಬಹು ಇಂದ್ರಿಯ ಅನುಭವಗಳ ತಂತ್ರವನ್ನು ಅಳವಡಿಸುವುದಲ್ಲದೆ ಹೆಚ್ಚುವರಿ ಪಠ್ಯಕ್ರಮಕ್ಕೂ ಒಳಪಡಿಸಬೇಕು. ದೃಷ್ಟಿ ದೋಷ ಉಳ್ಳವರಿಗೆ ಹೆಚ್ಚುವರಿ ಪಠ್ಯಕ್ರಮವೆಂದರೆ ನಿಗದಿತ ಪಠ್ಯಕ್ರಮಕ್ಕಿಂತ ಹೆಚ್ಚಿನದೆಂದಲ್ಲ. ಬದಲಿಗೆ ಅದು ಪೂರಕ ಪಠ್ಯಕ್ರಮವಷ್ಟೇ. ಅಪೇಕ್ಷಿತ ಕೌಶಲಗಳ ಅಭಿವೃದ್ಧಿ ಉತ್ತಮ ಕಲಿಕೆಯನ್ನು ಯಾವಾಗಲೂ ಪ್ರಚೋದಿಸುತ್ತದೆ.

**ಹೆಚ್ಚುವರಿ ಪಠ್ಯಕ್ರಮ ಕ್ಷೇತ್ರಗಳು:** (1) ಬ್ರೈಲ್ ಲಿಪಿ, (2) ಎರಿಸಲ್ಪಟ್ಟ ಸಂಖ್ಯೆಗಳುಳ್ಳ ಕೈಗಡಿಯಾರಗಳು, ಗಣಕ ಯಂತ್ರಗಳು, ಕಡಿಮೆ ದೃಷ್ಟಿಗೆ ಸಹಾಯಕ ಉಪಕರಣಗಳು, ದೃಷ್ಟಿಯನ್ನು ವೃದ್ಧಿಗೊಳಿಸುವ ಮಸೂರಗಳು ಇಂತಹ ಎಲೆಕ್ಟ್ರಾನಿಕ್ ಸಾಧನಗಳು – ಮುಂತಾದ ಉಪಕರಣಗಳ ಬಳಕೆ, (3) ಪರಿಚಯಾತ್ಮಕ ಮತ್ತು ಸಂಚಲನ ಕೌಶಲಗಳು, (4) ಸಾಮಾಜಿಕ ಕೌಶಲಗಳು, (5) ದೈನಂದಿನ ಜೀವನದ ಕೌಶಲಗಳು, (6) ಇಂದ್ರಿಯ ತರಬೇತಿ.

ಇವರಿಗಾಗಿ ಸಹಪಠ್ಯ ಚಟುವಟಿಕೆಗಳಲ್ಲಿ ಬೌದ್ಧಿಕ ಚಟುವಟಿಕೆಗಳು (ಸಂಗೀತ, ಚರ್ಚೆ, ಬರಹ ಇತ್ಯಾದಿ) ಜೊತೆಗೆ ದೈಹಿಕ ಮತ್ತು ಬೌದ್ಧಿಕ ಚಟುವಟಿಕೆಗಳಾದ ದೈಹಿಕ ಅಭ್ಯಾಸಗಳು, ನೃತ್ಯಗಳನ್ನು ನಿಧಾನವಾಗಿ ಕಲಿಸುವುದು.

**ಶಿಕ್ಷಕರ ಪಾತ್ರ:** ತರಗತಿ ಶಿಕ್ಷಕರು ಮೂರ್ತ ಅನುಭವಗಳನ್ನು ಒದಗಿಸಿ, ಮಾಡಿಕಲಿಯಲು ಸಹಾಯ ಮಾಡಬೇಕು. ಘಟಕ ಪದ್ಧತಿಯಿಂದ ಬೋಧಿಸಬೇಕು. ಓದುವುದು, ಬರೆಯುವುದು, ಗಣಿತ, ಕಲೆ ಮತ್ತು ದೈಹಿಕ ಚಟುವಟಿಕೆಗಳನ್ನು ಸಮನ್ವಯ ಗೊಳಿಸುವುದರಿಂದ ಪೂರ್ಣರೀತಿ ಅನುಭವ ಪಡೆಯಲು ಅತ್ಯುತ್ತಮವಾದ ಅವಕಾಶ ಲಭಿಸುತ್ತದೆ. ಭಾಗಶಃ ದೃಷ್ಟಿ ಸಾಮರ್ಥ್ಯವುಳ್ಳ ಮಕ್ಕಳಿಗೆ ವೃದ್ಧಿಗೊಳಿಸುವ ಮಸೂರಗಳನ್ನು ಒದಗಿಸುವುದು, ಹೊಂದಾಣಿಕೆ ಮಾಡಬಲ್ಲ ಮೇಜುಗಳನ್ನು ಒದಗಿಸುವುದರ ಮೂಲಕ ಉತ್ತಮ ಭಂಗಿಯನ್ನು, ಗರಿಷ್ಠ ಮಟ್ಟದ ದೃಷ್ಟಿದಕ್ಷತೆಯನ್ನು ಪಡೆಯ ಬಹುದು.

Digitised by Bharatavani, CIIL

**ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳು:** ಶ್ರವಣ ಸಾಮರ್ಥ್ಯ ಪೂರ್ಣವಾಗಿ ಇಲ್ಲದಿರುವುದು, ಕಿವುಡುತನ, ಆದರೆ ಶ್ರವಣೇಂದ್ರಿಯ ದೋಷಯುಕ್ತವಾಗಿದ್ದು ಶ್ರವಣ ಸಾಧನ (hearing aid)ಗಳ ಸಹಾಯದಿಂದ ಅಥವಾ ಶ್ರವಣ ಸಾಧನ ಇಲ್ಲದೆ ಹೇಗೋ ನಿರ್ವಹಿಸಿಕೊಂಡು ಹೋಗುವವರು ಶ್ರವಣ ಮಾಂದ್ಯತೆಯುಳ್ಳವರೆನಿಸುವರು.

ಸಾಮಾನ್ಯವಾಗಿ 70 ಡೆಸಿಬಲ್‌ಗಳಷ್ಟು ಶ್ರವಣ ಸಾಮರ್ಥ್ಯದ ಕೊರತೆಯಿದ್ದು, ಶ್ರವಣಸಾಧನದ ಸಹಾಯದಿಂದಾಗಲಿ, ಇಲ್ಲದೇ ಆಗಲಿ ಕಿವಿಗಳ ಮೂಲಕ ಮಾತ್ರವೇ ಇತರರ ಮಾತುಗಳನ್ನು ಗ್ರಹಿಸಲು ಸಾಧ್ಯವಿಲ್ಲದ ವ್ಯಕ್ತಿಯನ್ನು 'ಕಿವುಡ'ನೆಂದು ಹೇಳುತ್ತೇವೆ. ಶ್ರವಣಸಾಧನದ ಸಹಾಯದಿಂದಾಗಲಿ, ಇಲ್ಲದೇ ಆಗಲಿ ಇತರರ ಮಾತು ಗಳನ್ನು ಗ್ರಹಿಸುವುದು ಕಠಿಣವಾಗಿದ್ದು ಶ್ರವಣ ಸಾಮರ್ಥ್ಯದ ಕೊರತೆ 35 ರಿಂದ 69 ಡೆಸಿಬಲ್‌ಗಳಷ್ಟು ಇರುವ ವ್ಯಕ್ತಿ ಶ್ರವಣದೋಷ ಇರುವ ವ್ಯಕ್ತಿ ಎನಿಸುತ್ತಾನೆ. ಶ್ರವಣದೋಷ ಜನ್ಮದಿಂದ ಬಂದಿರಬಹುದು ಅಥವಾ ಜೀವನದ ಯಾವುದೇ ವಯಸ್ಸು ಅಥವಾ ಹಂತದಲ್ಲಿ ಉಂಟಾಗಿರಬಹುದು.

**ಗುರ್ತಿಸುವಿಕೆ:** ಈ ಕೆಳಕಂಡ ವರ್ತನಾತ್ಮಕ ಸುಳಿವುಗಳ ಸಹಾಯದಿಂದ ಶಿಕ್ಷಕರು ಶ್ರವಣದೋಷದ ಸವಾಲುಗಳನ್ನು ಎದುರಿಸುತ್ತಿರುವ ಮಕ್ಕಳನ್ನು ಗುರ್ತಿಸಬಹುದು. ಇಂತಹ ಮಗು ಈ ಕೆಳಗಿನವುಗಳಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ವರ್ತನೆಗಳನ್ನು ಪ್ರದರ್ಶಿಸುತ್ತದೆ:

ತರಗತಿಯಲ್ಲಿ ಅವಧಾನ ಇಲ್ಲದಂತೆ ತೋರುವುದು. ಪ್ರಶ್ನೆಗಳು ಅರ್ಥವಾಗುವುದಿಲ್ಲವಾದ್ದರಿಂದ ಸೂಕ್ತವಲ್ಲದ ಅಥವಾ ಅಸಂಬದ್ಧ ಉತ್ತರಗಳನ್ನು ನೀಡಬಹುದು. ಸೂಚನೆಗಳನ್ನು, ಪ್ರಶ್ನೆಗಳನ್ನು ಪುನರುಚಚರಿಸುವಂತೆ ಆಗಾಗ್ಗೆ ಕೇಳುವುದು. ತರಗತಿಯಲ್ಲಿ ನಡೆಯುವ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ. ತನಗೆ ಯಾರಾದರೂ ಏನನ್ನಾದರೂ ಹೇಳಿದಾಗ ವ್ಯಗ್ರನಾಗುವಂತೆ ತೋರುವುದು ಅಥವಾ ಆಲಿಸುವುದಕ್ಕಾಗಿ ಮುಂದೆ ಬಾಗುವುದು. ಮಾತನಾಡುತ್ತಿರುವವರ ಮುಖವನ್ನು ಅಥವಾ ತುಟಿಗಳ ಚಲನೆಯನ್ನು ಸಾಮಾನ್ಯಕ್ಕಿಂತ ಹೆಚ್ಚು ತೀಕ್ಷ್ಣವಾಗಿ ಅವಲೋಕಿಸುವುದು. ಉಕ್ತಲೇಖನ ನೀಡಿದಾಗ ಇತರರ ಪುಸ್ತಕ ನೋಡಿ ಬರೆಯಲು ಪ್ರಯತ್ನಿಸುವುದು ಅಥವಾ ಸುಮ್ಮನೆ ಕುಳಿತಿರುವುದು. ಮಾತನಾಡುವವರ ಅಥವಾ ಶಬ್ದದ ದಿಕ್ಕನ್ನು ಗುರ್ತಿಸುವುದು ಕಠಿಣವಾಗಿರುವುದು. ಮಾತನಾಡುವವರ ಕಡೆಗೆ ಆಗಾಗ ತಿರುಗುವುದು, ಕಿವಿಯ ಹಿಂದೆ ಕೈಯಿಟ್ಟು ಕಿವಿಚಾಚಿ ಆಲಿಸುವುದು. ಕಿವಿ ನೋವು, ಕಿವಿ ಸೋರುವುದು, ಕಿವಿಯಲ್ಲಿ ಗುಯ್‌ಗುಡುವ ಶಬ್ದ ಮುಂತಾಗಿ ದೂರುತ್ತಿರುವುದು. ದೇಹದ ಸಮತೋಲನ ಕಾಪಾಡಿಕೊಳ್ಳುವುದು, ಅದರಲ್ಲಿಯೂ ಕತ್ತಲೆಯಲ್ಲಿ ಕಾಪಾಡಿಕೊಳ್ಳುವುದು ಕಠಿಣವಾಗುವುದು. ಸಾಮಾಜಿಕವಾಗಿ ಉತ್ತಮ ಹೊಂದಾಣಿಕೆ ಇಲ್ಲದಿರುವುದು. ಅತಿ ಜೋರಾಗಿ ಅಥವಾ ಅತಿ ಮೆಲ್ಲಗೆ ಮಾತನಾಡುವ ಅಭ್ಯಾಸ.

**ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ:** ಶಬ್ದ ಹೆಚ್ಚಿಸುವುದರಿಂದ ಶ್ರವಣ ದೋಷವುಳ್ಳವರು ತಮ್ಮಲ್ಲಿರುವ ಕಳೆದುಳಿದ ಶ್ರವಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಾಧ್ಯವಾಗುವುದು. ಶ್ರವಣ ಸಾಧನದ ಸಹಾಯದಿಂದ ಶಬ್ದವನ್ನು ಹೆಚ್ಚಿಸಬಹುದು (ಶ್ರವಣ ಸಾಧನವು ಶಬ್ದವನ್ನು ಗ್ರಹಿಸಿ ಅದರ ಶಕ್ತಿಯನ್ನು ವೃದ್ಧಿ ಗೊಳಿಸಿ, ಹೀಗೆ ಹೆಚ್ಚಿಸಲ್ಪಟ್ಟ ಶಬ್ದವನ್ನು ಸಾಧನ ಬಳಸುವವರ ಕಿವಿಗೆ ಹಾಗೂ ಮೆದುಳಿಗೆ ತಲುಪಿಸುತ್ತದೆ). ಶ್ರವಣ ಸಾಧನವನ್ನು ಚಿಕ್ಕ ವಯಸ್ಸಿನಲ್ಲೇ ಹಾಕಿಸಬೇಕು. ಇದರಿಂದ ಶ್ರವಣ ಸಾಮರ್ಥ್ಯವನ್ನು ಸಂವಹನ ಮತ್ತು ಅರಿವಿಗಾಗಿ ಬಳಸಿಕೊಳ್ಳಬಹುದು. ಸಾಧನದಿಂದ ಗರಿಷ್ಠ ಲಾಭ ಪಡೆಯುವುದಕ್ಕಾಗಿ ಮಗು ಅದನ್ನು ದಿನಪೂರ್ತಿ ಧರಿಸಿಬೇಕು.

ಇಂತಹ ಮಕ್ಕಳಿಗೆ ಶ್ರವಣ ತರಬೇತಿಗಾಗಿ ವೈಯಕ್ತಿಕ ಹಾಗೂ ಸಾಮೂಹಿಕ ಮಾದರಿಯ ಸಾಧನಗಳೆರಡನ್ನೂ ಒದಗಿಸಬೇಕು. ಸಾಮೂಹಿಕ ಶ್ರವಣ ತರಬೇತಿ ಘಟಕವು ಹೆಡ್‌ಫೋನ್‌ಗಳನ್ನು (Head Phones) ಮತ್ತು ಧ್ವನಿವರ್ಧಕ ಸಾಧನವನ್ನು ಬಳಸಿ ಮಕ್ಕಳು ಸ್ಪಷ್ಟವೂ ಪ್ರಬಲವೂ ಆಗಿರುವ ಶಬ್ದ ಕೇಳುವಂತೆ ಮಾಡಬೇಕು. ವೈಯಕ್ತಿಕವಾಗಿ ಮಕ್ಕಳು ಧರಿಸಬಹುದಾದ ಶ್ರವಣ ಸಾಧನ ಬಳಸಬೇಕು.

**ಶ್ರವಣ ಕಲಿಕೆ:** ಇಂತಹ ತರಬೇತಿ ಮಗುವಿಗೆ ವಿವಿಧ ವಾಕ್ ಶಬ್ದಗಳನ್ನು ಗ್ರಹಿಸಲು ಸಹಾಯ ಮಾಡುತ್ತದೆ. ಒಂದು ಧ್ವನಿಗೂ ಮತ್ತೊಂದಕ್ಕೂ ಇರುವ ವ್ಯತ್ಯಾಸ ತಿಳಿಯುವ ಸಾಮರ್ಥ್ಯ ಗಳಿಸಬಹುದು. ಮಕ್ಕಳಿಗೆ ಶಬ್ದಗಳನ್ನು ಕಂಡು ಹಿಡಿಯುವುದು, ಭೇದ ಗುರ್ತಿಸುವುದು ಮತ್ತು ಶಬ್ದ ಗುರ್ತಿಸುವುದರಲ್ಲಿ ತರಬೇತಿ ನೀಡಲಾಗುವುದು.

**ವಾಕ್ ವಾಚನ (Speech Reading):** ಮಾತನ್ನು ಓದುವುದೆಂದರೆ ಮಾತನಾಡುವವರ ಮುಖ, ತುಟಿಗಳು ಮತ್ತು ನಾಲಗೆಯ ಚಲನೆಯನ್ನು ವೀಕ್ಷಿಸುವುದರ ಮೂಲಕ ವಾಕ್ ಸಂದೇಶವನ್ನು ಗ್ರಹಿಸುವುದು ಎಂದರ್ಥ. ಶಿಕ್ಷಕರು ಶ್ರವಣ ದೋಷವುಳ್ಳ ಮಕ್ಕಳ ಮುಂದೆ ನಿಂತು, ತುಟಿಗಳನ್ನು ಅಥವಾ ಮುಖವನ್ನು ಮರೆಮಾಡದೆ, ಸ್ಪಷ್ಟವಾಗಿ ಮಾತನಾಡಬೇಕು. ಇದರಿಂದ ಮಕ್ಕಳು ಕೇಳುವುದರ ಬದಲಾಗಿ ಮುಖ, ಹಣೆಗಳ ಮೇಲಿನ ಸಂಕೇತಗಳು, ಸಂಜ್ಞೆಗಳು ಮತ್ತು ಮಡಿಕೆಗಳು ಹಾಗೂ ಭಾವಾಭಿವ್ಯಕ್ತಗಳನ್ನು ವೀಕ್ಷಿಸಿ ಕಲಿಯಬಹುದು. ತುಟಿಗಳು, ಮುಖಭಾವಗಳು ಕಾಣುವಂತಿರಲು ಶಿಕ್ಷಕರು ತಮ್ಮ ಕೈಗಳನ್ನು ಮುಖದಿಂದ ದೂರವಿಡಬೇಕು.

**ತರಗತಿ ವ್ಯವಸ್ಥೆ:** ಆಲಿಸುವುದನ್ನು ಉತ್ತಮಪಡಿಸಲು ತರಗತಿಯಲ್ಲಿ ಶ್ರವಣ ದೋಷವುಳ್ಳ ಮಕ್ಕಳನ್ನು ಶಿಕ್ಷಕರ ಸಮೀಪದಲ್ಲಿ ಕೂರಿಸಬೇಕು. ಶಿಕ್ಷಕರು ಮತನಾಡುವಾಗ ಸಾಕಷ್ಟು ಏರುಧ್ವನಿ ಬಳಸಬೇಕು. ವೇಗವಾಗಿ ಮಾತನಾಡ ಬಾರದು. ಪಠ್ಯಪುಸ್ತಕಗಳಿಂದ ಓದುವಾಗ ಇಂತಹ ಮಕ್ಕಳು ಆಲಿಸುವುದಕ್ಕೆ ಪೂರಕವಾಗಿ ತುಟಿಗಳನ್ನು ಓದಲು ಸಾಧ್ಯ ವಾಗುವಂತೆ ಶಿಕ್ಷಕರು ತಮ್ಮ ತುಟಿ ಚಲನೆ ಕಾಣುವಂತೆ ಪುಸ್ತಕ ಹಿಡಿಯಬೇಕು. ಶಿಕ್ಷಕರು ಮಾತನಾಡುವಾಗ ಓಡಾಡ ಬಾರದು. ಸ್ನೇಹಿತರೂ, ಸಮವಯಸ್ಕರೂ ಈ ಮಕ್ಕಳೊಡನೆ ಅಂತರ್‌ಕ್ರಿಯೆ ನಡೆಸಿ, ಪರಸ್ಪರ ಕಲಿಯಲು ಸಹಾಯ ಮಾಡುವಂತೆ

Digitised by Bharatavani, CIIL

ಉತ್ತೇಜಿಸಬೇಕು. ಸಾಮಾನ್ಯ ಬೋಧನೆಯ ಪದ್ಧತಿಗೆ/ಅನುಭವಗಳಿಗೆ ಪೂರಕವಾಗುವಂತೆ ವೈಯಕ್ತಿಕ ವಾಗಿಯಾಗಲಿ, ಗುಂಪಿನಲ್ಲಾಗಲಿ ಹೆಚ್ಚಿನ ದೃಶ್ಯ ಉಪಕರಣಗಳನ್ನು ಬಳಸಬೇಕು.

**ಶಿಕ್ಷಕರ ಪಾತ್ರ: ಶ್ರವಣ ದೋಷವುಳ್ಳ ಮಕ್ಕಳ ಶಿಕ್ಷಕರು ಕೆಳಕಂಡ ಅಂಶಗಳನ್ನು ಗಮನದಲ್ಲಿಡಬೇಕು:**

ಸಾಧ್ಯವಾದಷ್ಟು ಮಟ್ಟಿಗೆ ಮಾತನಾಡುವವರು ಮತ್ತು ಶ್ರವಣ ದೋಷವಿರುವ ವಿದ್ಯಾರ್ಥಿಯ ನಡುವೆ ದೂರವನ್ನು (ಅಂತರವನ್ನು) ಕಡಿಮೆ ಮಾಡಬೇಕು. ನಿಧಾನವಾಗಿ ಮಾತನಾಡಿ, ಸ್ಪಷ್ಟ ಉಚ್ಚಾರಣೆಯಿಂದ ಒತ್ತಿ ಹೇಳಬೇಕು. ಹಿನ್ನೆಲೆ ಯಲ್ಲಿರಬಹುದಾದ ಶಬ್ದವನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ಸಾಧ್ಯವಾದಷ್ಟು ಮಟ್ಟಿಗೆ ಮುಖಾಮುಖಿ ಸಂಪರ್ಕ ಬಳಸಬಹುದು. ಹೆಚ್ಚಿನ ಸಂಪರ್ಕ ಒದಗಿಸುವುದಕ್ಕಾಗಿ ಸಂಭಾಷಣೆಯಲ್ಲಿ ಅಥವಾ ಬೋಧನೆ ನೀಡುವಾಗ ಪೂರ್ಣ ವಾಕ್ಯಗಳನ್ನು ಬಳಸಬಹುದು. ತರಗತಿಯಲ್ಲಿ ವಸ್ತುಗಳನ್ನು ಸೂಚಿಸುವಾಗ ಅಥವಾ ಬೋಧನಾ ಸನ್ನಿವೇಶ ಗಳಲ್ಲಿ ದೃಶ್ಯಸೂಚನೆ/ಸಂಕೇತಗಳನ್ನು ಬಳಸಬಹುದು. ಮೌಖಿಕ ಪ್ರದರ್ಶನ/ವಿವರಣೆ ಸಮಯದಲ್ಲಿ ಸಹಪಾಠಿಗಳು ಮುಖ್ಯಾಂಶಗಳನ್ನು ಬರೆದುಕೊಳ್ಳುವಂತೆ ಹೇಳಿ, ಪಾಠದ ನಂತರ ಈ ಮಕ್ಕಳು ನೋಡಿ ಬರೆದುಕೊಳ್ಳುವಂತೆ ತಿಳಿಸುವುದು. ಶ್ರವಣ ಸಾಧನವು ಸುಸ್ಥಿತಿಯಲ್ಲಿದ್ದು, ಕೆಲಸ ಮಾಡುತ್ತಿದೆಯೇ ಎಂದು ಖಾತ್ರಿ ಮಾಡಿಕೊಳ್ಳುವುದು. ಸ್ವತಂತ್ರ ಚಟುವಟಿಕೆಗಳನ್ನು ಉತ್ತೇಜಿಸುವುದು ಮತ್ತು ಸಾಮಾಜಿಕ ಕೌಶಲಗಳನ್ನು ಕಲಿಸುವುದು.

**ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳು:** ಮೂಳೆಗಳ ಮತ್ತು ಕೀಲುಗಳ ಪ್ರಮಾಣ ಮತ್ತು ರಚನೆಗಳಲ್ಲಿ ದೋಷಗಳಿದ್ದು ಸ್ನಾಯುಶಕ್ತಿ ಹೊಂದಾಣಿಕೆ ಅಥವಾ ನಿಯಂತ್ರಣದಲ್ಲಿ ಸಾಧಾರಣ ಮಕ್ಕಳಿಂದ ಭಿನ್ನವಾಗಿರುವ ಮಕ್ಕಳನ್ನು ಮೂಳೆ ದೋಷಗಳಿರುವವರು ಎನ್ನುತ್ತೇವೆ. ಕೆಲವು ದೈಹಿಕ ನ್ಯೂನತೆಗಳಿರುವ ಮಕ್ಕಳಲ್ಲಿ ಮೂಳೆದೋಷದ ಸವಾಲುಗಳಿರುವುದು ಹೀಗೆ ಮೂಳೆ ಸಂಬಂಧಿತ ನ್ಯೂನತೆಗಳಾಗಿರುತ್ತವೆ. ಈ ನ್ಯೂನತೆಗಳು ಕೈಕಾಲುಗಳ ಚಲನೆಯ ಮೇಲೆ ಪರಿಣಾಮ ಬೀರುತ್ತವೆ. ಇಂತಹ ಮಕ್ಕಳು ಓಡಾಡುವಲ್ಲಿ ಕಠಿಣತೆ ಎದುರಿಸುವರೆ ವಿನಃ ಕಲಿಕೆಯಲ್ಲಿ ಸಾಧಾರಣ ಸಾಮರ್ಥ್ಯ ಹೊಂದಿರುವರು. ಆದರೂ, ಕಲಿಕೆಗೆ ಅಡ್ಡಿಯುಂಟುಮಾಡಬಲ್ಲ ಕೆಲವು ನಿರ್ದಿಷ್ಟ ಸಮಸ್ಯೆಗಳನ್ನು ಎದುರಿಸಬಹುದು. ಉದಾ: ಕೈಬೆರಳುಗಳ ಸ್ನಾಯುಗಳಲ್ಲಿ ಬಿಗಿತ ಇರುವ ಮಗು ಬರೆಯುವುದರಲ್ಲಿ ಸಮಸ್ಯೆ ಎದುರಿಸಬಹುದು. ಕೆಲವು ಮಕ್ಕಳು ಭಂಗಿಯ (ನಿಲುವಿನ) ಸಮಸ್ಯೆಯನ್ನು ಎದುರಿಸುತ್ತಿದ್ದು, ಇದರಿಂದ ಆಯಾಸಗೊಂಡು, ಕೆಲವು ಕಲಿಕೆಯ ಚಟುವಟಿಕೆಗಳಲ್ಲಿ ಅವರ ಕಾರ್ಯಕ್ಷಮತೆ ಸೀಮಿತವಾಗಬಹುದು. ಸ್ನೇಹಿತರು ಇವರನ್ನು ಒಪ್ಪಿಕೊಳ್ಳದಿರುವುದರಿಂದ ಅಥವಾ ಪರಿಹಾಸ್ಯದಿಂದಾಗಿ ಈ ಮಕ್ಕಳು ಹೊಂದಾಣಿಕೆ ಸಮಸ್ಯೆಗಳನ್ನು ಎದುರಿಸುವರು.

**ಗುರ್ತಿಸುವಿಕೆ:** ಈ ಕೆಳಗಿನ ವರ್ತನಾತ್ಮಕ ಲಕ್ಷಣಗಳ ಸಹಾಯದಿಂದ ಮೂಳೆ ದೋಷ ಸಂಬಂಧಿತ ಸವಾಲುಗಳುಳ್ಳ ಮಕ್ಕಳನ್ನು ಗುರ್ತಿಸಬಹುದು:

ಇದ್ದಕ್ಕಿದ್ದಂತೆ ಸ್ನಾಯುಗಳನ್ನು ಹಿಗ್ಗಿಸಿದಾಗ ಅನೈಚ್ಛಿಕವಾಗಿ ಕುಗ್ಗುವುದು ಅಥವಾ ಮುದುರಿಕೊಳ್ಳುವುದು, ಕೈ ಬೆರಳುಗಳು ಅಥವಾ ಕಾಲ್ಬೆರಳುಗಳ ಮೇಲೆ ಐಚ್ಛಿಕ ನಿಯಂತ್ರಣ ಇಲ್ಲದಿರುವುದು, ಶರೀರ ಎರಡು ಅಥವಾ ಮೂರು ಭಾಗಗಳ ಚಲನೆಯನ್ನು ಹೊಂದಾಣಿಕೆ ಮಾಡುವ ಸಾಮರ್ಥ್ಯ ಇಲ್ಲದಿರುವುದು, ಉದಾ: ಆಟ ಆಡುವಾಗ ಕೈಗಳು ಮತ್ತು ಕಾಲುಗಳನ್ನು ಏಕಕಾಲದಲ್ಲಿ ಚಲಿಸುವುದು ಕಠಿಣವಾಗಿರುವುದು. ಒಂದು ಅಥವಾ ಎರಡೂ ಪಾದಗಳ ಕೀಲುಗಳ ಬಳಿ ಕೆಳಮುಖವಾಗಿ ಅಥವಾ ಹೊರಕ್ಕೆ ಬಾಗಿರುವುದು. ಬೆನ್ನೆಲುಬು ಒಂದು ಪಾರ್ಶ್ವಕ್ಕೆ ಬಾಗಿರುವುದು. ದೇಹದಲ್ಲಿ ಸಮತೆಯಿಲ್ಲದಿರುವುದು. ಹುಟ್ಟಿನಿಂದಲೇ ಕೈಕಾಲುಗಳು ಊನವಾಗಿರುವುದು (ಕೈ ಕಾಲುಗಳು, ಕೈ ಬೆರಳುಗಳು ಅಥವಾ ಕಾಲ್ಬೆರಳುಗಳು ಇಲ್ಲದೇ ಇರುವುದು ಅಥವಾ ಇತರೇ ಸಹಜಾತ ವಿಕಾರಗಳು). ನಡಿಗೆಯಲ್ಲಿ ಹೊಯ್ದಾಟದ ಚಲನೆ. ನಿಲ್ಲುವ ಮತ್ತು ಕುಳಿತುಕೊಳ್ಳುವ ವಿನ್ಯಾಸದಲ್ಲಿ ಭಿನ್ನತೆ. ಎಸೆಯುವುದು ಮತ್ತು ಹಿಡಿಯುವುದರಲ್ಲಿ ಭಿನ್ನತೆಗಳು. ಉದಾ: ಎಸೆಯುವಾಗ, ಹಿಡಿಯುವಾಗ ಸಮತೋಲನ ಇಲ್ಲದಿರುವುದು, ವಸ್ತುವನ್ನು ಹಿಡಿಯುವಾಗ ವಿವಿಧ ವೇಗಗಳಿಗೆ, ಎತ್ತರಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿರುವುದು, ಬೆರಳು, ಕಾಲುಗಳು, ಕೈಗಳು ಮತ್ತು ಕತ್ತಿನಲ್ಲಿನ ವಿರೂಪ.

**ವ್ಯಕ್ತಿತ್ವದ ಮೇಲೆ ಮನೋವೈಜ್ಞಾನಿಕ ಪರಿಣಾಮ:** ಮೂಳೆ ದೋಷಗಳುಳ್ಳ ಮಕ್ಕಳು ನಿಷ್ಕ್ರಿಯರಾಗಿದ್ದು, ಅವಧಾನ ಸಾಮರ್ಥ್ಯ ಸೀಮಿತವಾಗಿದ್ದು, ಅನ್ವೇಷಣಾ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಪ್ರೇರಣೆಯೂ ಕಡಿಮೆ ಇರುತ್ತದೆ. ಹೆಚ್ಚಾಗಿ ವಯಸ್ಕರನ್ನೇ ಅವಲಂಬಿಸಿದ್ದು ಸಮವಯಸ್ಕರೊಡನೆ ಅಂತರ್‌ಕ್ರಿಯೆ ಕಡಿಮೆಯಾಗಿರುವುದು. ಅವರಲ್ಲಿ ದೇಹದ ಬಗ್ಗೆ ಕಲ್ಪನೆ ಕೆಳಮಟ್ಟದ್ದಾಗಿದ್ದು, ಹೆಚ್ಚಾದ ಆತಂಕ ಮತ್ತು ಆಶಾಭಂಗ ಕಂಡುಬರುತ್ತದೆ. ಶಾಂತರಾಗಿಯೂ, ಅನುಸರಣಶೀಲರಾಗಿಯೂ, ಮೃದು ಮನಸ್ಸಿನವರೂ, ಸ್ವಲ್ಪ ಮಟ್ಟಿಗೆ ಉದ್ವೇಗಕ್ಕೊಳಗಾದವರೂ ಆಗಿರುತ್ತಾರೆ.

ಮೂಳೆ ದೋಷಗಳುಳ್ಳ ಮಕ್ಕಳ ಶಾಲಾ ಶಿಕ್ಷಣದ ವ್ಯವಸ್ಥೆಯಲ್ಲಿ ವಿಶೇಷ ಸನ್ನಿವೇಶವನ್ನು ಒದಗಿಸುವ ಅಗತ್ಯವಿರುವುದಿಲ್ಲ. ಇತರ ಮಕ್ಕಳೊಂದಿಗೆ ಸಾಮಾನ್ಯ ಶಾಲೆಯಲ್ಲಿ ಅವರಿಗೆ ಉತ್ತಮ ಶಿಕ್ಷಣ ನೀಡಬಹುದು.

ಈ ಮಕ್ಕಳಿಗೆ ಸ್ವಾವಲಂಬನೆ, ಮುನ್ನುಗ್ಗುವ ಮತ್ತು ಆಯ್ಕೆ ಮಾಡುವ ಸಾಮರ್ಥ್ಯಗಳನ್ನು ಕಲಿಸಬೇಕು. ಚಲನೆ ಹಾಗೂ ಸಹಾಯಗಳಿಂದಾಗಿ ಪೂರ್ವಯೋಜನೆ ಮಾಡಿಕೊಳ್ಳಲು ಅವರು ಕಲಿಯಬೇಕು. ಕೈ ಕಾಲುಗಳ ಚಲನೆಗೆ ಸಹಾಯಕವಾಗುವ ಸಾಧನಗಳನ್ನು ಒದಗಿಸಬೇಕು. ತಮ್ಮ ದೇಹದ ವಿವಿಧ ಭಾಗಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಕಲಿಸಬೇಕು. ಕಾರ್ಯಾತ್ಮಕ ಸ್ವಯಂ ಪರಿಕಲ್ಪನೆ ಬೆಳೆಸಿಕೊಳ್ಳುವಂತೆ ಶಿಕ್ಷಕರು ನೋಡಿಕೊಳ್ಳಬೇಕು. ಈ ಮಕ್ಕಳು ತಮ್ಮ ಸಹಪಾಠಿಗಳಾಗಿರುವ ಸಾಮಾನ್ಯ

Digitised by Bharatavani, CIIL

ಮಕ್ಕಳೊಂದಿಗೆ ಬೆರೆತು ಆಟವಾಡಬೇಕು. ಶಾಲೆಯು ಈ ಮಕ್ಕಳಲ್ಲಿ ಕಲೆ, ಸಂಗೀತ, ನಾಟಕ ಮುಂತಾದವುಗಳಿಗೆ ಸಂಬಂಧಿಸಿದಂತೆ ಸೃಜನಶೀಲತೆಯನ್ನು ವಿಕಾಸಗೊಳಿಸಬೇಕು. ಸಾಮಾಜಿಕ ಅನುಭವಗಳನ್ನು ಒದಗಿಸಿ ವೈಯಕ್ತಿಕ ವಿಕಾಸಕ್ಕೆ ಅವಕಾಶ ನೀಡಿ ಉತ್ತೇಜಿಸಬೇಕು. ಚಲನಾದೋಷವುಳ್ಳ ಮಕ್ಕಳಿಗೆ ವಿಶೇಷ ತರಗತಿ ಕೊಠಡಿಗಳು ಶಾಲಾ ಕಟ್ಟಡದ ತಳಮನೆಯಲ್ಲಿದ್ದು ಅಲ್ಲಿ ವಿಶೇಷ ಉಪಕರಣಗಳು ಲಭ್ಯವಿರಬೇಕು. ಉದಾ: ನಿಲುವು ಮೇಜುಗಳು, ಸಮಾನಾಂತರ ಸರಳುಗಳು, ವಿಶ್ರಾಂತಿಗಾಗಿ ವಿರಾಮ ಕುರ್ಚಿಗಳು ಇತ್ಯಾದಿ. ಶಿಕ್ಷಕರು ಪರಸ್ಪರ ಗೌರವ, ಸಹಾಯ ಮತ್ತು ಸಹಕಾರಗಳ ಆಧಾರದ ಮೇಲೆ ಸಮವಯಸ್ಕರಲ್ಲಿ ಅಂತರ್‌ಕ್ರಿಯೆಯನ್ನು ಉತ್ತೇಜಿಸಬೇಕು. ತರಗತಿಯಲ್ಲಿ ನ್ಯೂನತೆಗನುಗುಣವಾಗಿ ಆಸನ ವ್ಯವಸ್ಥೆಯಲ್ಲಿ ಸೂಕ್ತ ಹೊಂದಾಣಿಕೆಯನ್ನು ಮಾಡಬೇಕು. ಉದಾ: ಇಂತಹ ಮಕ್ಕಳು ತರಗತಿಯ ಮುಂದಿನ ಬಲಭಾಗದಲ್ಲಿ ಕುಳಿತುಕೊಳ್ಳುವಂತಿದ್ದರೆ ಇತರ ಮಕ್ಕಳ ಓಡಾಟ, ಚಲನೆಯಿಂದ ಇವರಿಗೆ ತೊಂದರೆಯಾಗುವುದಿಲ್ಲ. ಗಾಲಿ ಕುರ್ಚಿಯನ್ನು ಬಳಸಲು ಮಗು ಇದ್ದಲ್ಲಿ ಶಾಲೆ ಮತ್ತು ತರಗತಿಗೆ ಬರಲು ಹೆಚ್ಚು ನುಣುಪಿಲ್ಲದ ಇಳಿಜಾರು ದಾರಿಯನ್ನು ನಿರ್ಮಿಸಬೇಕು. ಶಾಲೆಯಲ್ಲಿ ಸಂವೇಗಾತ್ಮಕ ಮತ್ತು ಸಾಮಾಜಿಕ ವಿಕಾಸದ ಚಟುವಟಿಕೆಗಳನ್ನು ರೂಪಿಸಬಹುದು. ಅರ್ಥಪೂರ್ಣವಾದ, ಉದ್ದೇಶ ಪೂರ್ವಕವಾದ ಮತ್ತು ಆಸಕ್ತಿಯುತ ಸಾಮಗ್ರಿಗಳನ್ನು ಬಳಸುವುದರಿಂದ ಈ ಮಕ್ಕಳ ಬೌದ್ಧಿಕ ವಿಕಾಸದ ವೇಗವನ್ನು ಹೆಚ್ಚಿಸಬಹುದು.

**ಶಿಕ್ಷಕರ ಪಾತ್ರ:** ಮನೋವೈಜ್ಞಾನಿಕ ದುಷ್ಪರಿಣಾಮಗಳನ್ನು ತಡೆಗಟ್ಟಲು ಶಿಕ್ಷಕರು ಇಂತಹ ಮಕ್ಕಳನ್ನು ತಮ್ಮಲ್ಲಿರುವ ನ್ಯೂನತೆಯನ್ನು ಒಪ್ಪಿಕೊಳ್ಳಲು ಸಹಾಯ ಮಾಡಬೇಕು. ಶಿಕ್ಷಕರು ಸ್ನೇಹಭಾವ, ಮಮತೆ, ಆಸಕ್ತಿ, ತಾಳ್ಮೆ, ದಯೆ ಮತ್ತು ಪ್ರಾಮಾಣಿಕ ಆಲೋಚನೆಗಳಿಂದ ಕೂಡಿರಬೇಕು. ಶಿಕ್ಷಕರು ಮಾಡುವ ಪ್ರತಿ ಪ್ರಯತ್ನವೂ ಮಗು ಅತ್ಯುನ್ನತ ಮಟ್ಟದಲ್ಲಿ ತನ್ನನ್ನು ತಾನು ಒಪ್ಪಿಕೊಳ್ಳುವಿಕೆ, ಆತ್ಮವಿಶ್ವಾಸ ಮತ್ತು ತನ್ನ ಇತಿಮಿತಿಗಳಿಗೆ ಹೊಂದಾಣಿಕೆ ಮಾಡಿ ಕೊಳ್ಳುವುದನ್ನು ಕಲಿಯಲು ಸಹಾಯ ಮಾಡುವಂತಿರಬೇಕು. ಈ ಮಕ್ಕಳ ಕೌಟುಂಬಿಕ ಹಿನ್ನೆಲೆಯೂ ಶಿಕ್ಷಕರಿಗೆ ತಿಳಿದಿರಬೇಕು. ಹೊಂದಾಣಿಕೆ ಸಮಸ್ಯೆಗಳನ್ನು ಎದುರಿಸಲು ಶಿಕ್ಷಕರೇ ಸಹಾಯ ಮಾಡಬೇಕು.

**ಕಲಿಕೆಯ ಸವಾಲುಗಳುಳ್ಳ ಮಕ್ಕಳು:** ಕಲಿಕೆಯಲ್ಲಿ ಸೀಮಿತ ಸಾಮರ್ಥ್ಯವುಳ್ಳ ಮಕ್ಕಳನ್ನು ಕಲಿಕೆಯ ಸವಾಲುಗಳುಳ್ಳ ಮಕ್ಕಳೆನ್ನುತ್ತೇವೆ. ಒಬ್ಬ ವ್ಯಕ್ತಿ ವಿವಿಧ ಮಟ್ಟದ ಬೌದ್ಧಿಕ ಕ್ರಿಯೆಗಳನ್ನು ಒಳಗೊಂಡ ವಿವಿಧ ಕಾರ್ಯಗಳನ್ನು ಕಲಿಯುವುದರಲ್ಲಿ ನ್ಯೂನತೆ ಹೊಂದಿದ್ದು ಅಥವಾ ಸೀಮಿತ ಸಾಮರ್ಥ್ಯ ಹೊಂದಿದ್ದರೆ ಅಂತಹವನನ್ನು ಸಾಮಾನ್ಯ ಬುದ್ಧಿ ಮಾಂದ್ಯತೆ ಹೊಂದಿರುವವನೆಂದು ಪರಿಗಣಿಸಬಹುದು. ಇದಕ್ಕೆ ಬದಲಾಗಿ ಕಲಿಕೆಯ ಕೊರತೆಯು ಯಾವುದಾದ ರೊಂದು ಕ್ಷೇತ್ರಕೆ ಮಾತ್ರ ಸೀಮಿತವಾಗಿದ್ದರೆಮ ಅದರಲ್ಲಿಯೂ ವಿಶೇಷವಾಗಿ ಭಾಷೆ ಮತ್ತು ಸಂಖ್ಯಾಕಲಿಕೆಗೆ ಸಂಬಂಧಿಸಿದ್ದರೆ ಇಂತಹ ಮಗುವನ್ನು ಕಲಿಕೆಯ ಸಮಸ್ಯೆಗಳುಳ್ಳ ಮಗುವೆಂದು ಹೇಳಬಹುದು. ನಿರ್ದಿಷ್ಟ ಕಲಿಕೆಯ ಸಮಸ್ಯೆಗಳು ಸಾಮಾನ್ಯವಾಗಿ ಓದು, ಬರಹ ಮತ್ತು ಗಣಿತ ಕಲಿಕೆಯ ಸಮಸ್ಯಗಳೆಂದು ಸೂಚಿಸಲ್ಪಡುತ್ತದೆ.

**ಕಲಿಕೆಯ ಸಮಸ್ಯೆಗಳುಳ್ಳ .ಮಗುವೆಂದು ಪರಿಗಣಿಸಬೇಕಾದರೆ ಆ ಮಗು:** ಇತರರ ಮಾತನ್ನು ಗ್ರಹಿಸುವಲ್ಲಿ, ಮಾತಾಡುವಲ್ಲಿ, ಓದುವಲ್ಲಿ, ಬರೆಯುವಲ್ಲಿ, ಕಾಗುಣಿತ ಬಳಕೆ ಮತ್ತು ಗಣಿತಗಳಲ್ಲಿ ಬೆಳವಣಿಗೆಯ ಅವಧಿಯಲ್ಲಿ ಸಾಕಷ್ಟು ಕಠಿಣತೆಯನ್ನು ಎದುರಿಸುವನು. ದೃಷ್ಟಿಯ, ಶ್ರವಣದ, ಚಲನೆಗೆ ಸಂಬಂಧಿಸಿದ ಅಥವಾ ಸಂವೇಗಾತ್ಮಕ ಮತ್ತು ಬೌದ್ಧಿಕ ಸಮಸ್ಯೆಗಳಿಂದ ಮುಕ್ತವಾಗಿರುವನು. ಕಲಿಯಲು ಸಾಕಷ್ಟು ಅನುಕೂಲತೆಗಳು, ಆಸಕ್ತಿ ಮತ್ತು ಅಭಿಪ್ರೇರಣೆಗಳನ್ನು ಹೊಂದಿರುತ್ತಾನೆ.

**ಗುರ್ತಿಸುವಿಕೆ:** ಸಾಮಾನ್ಯವಾಗಿ ಮಕ್ಕಳು ಶಾಲೆ ಪ್ರವೇಶಿಸಿದ ನಂತರವೇ ಅವರನ್ನು ಕಲಿಕೆಯ ಸಮಸ್ಯೆಗಳು ಇರುವವರೆಂದು ಗುರ್ತಿಸಲಾಗುವುದು. ತರಗತಿ ಶಿಕ್ಷಕರು ಮಕ್ಕಳ ವರ್ತನಾತ್ಮಕ ಲಕ್ಷಣಗಳನ್ನು ವೀಕ್ಷಿಸುವುದರ ಮೂಲಕ ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳನ್ನು ಗುರ್ತಿಸಬಹುದು. ಶಾಲಾ/ಪಠ್ಯ ವಿಷಯಗಳನ್ನು ಕಲಿಯುವುದರಲ್ಲಿ ಕಠಿಣತೆ, ಕೆಲವು ವೇಳೆ ವಿದ್ಯಾರ್ಥಿಯು ಒಂದು ವಿಷಯದಲ್ಲಿ ಮಾತ್ರ ಹಿಂದುಳಿದಿರಬಹುದು ಅಥವಾ ಹೆಚ್ಚು ವಿಷಯಗಳಲ್ಲಿ ಹಿಂದುಳಿದಿರಬಹುದು. ಗಡಿಯಾರ ನೋಡಿ ಗಂಟೆ ಹೇಳುವುದು, ದಿನಗಳು, ತಿಂಗಳುಗಳು ಮತ್ತು ಋತುಗಳ ಅನುಕ್ರಮವನ್ನು ನೆನಪಿಡಲು ಕಷ್ಟವಾಗಿರುವುದು. ಬರವಣಿಗೆಯಲ್ಲಿ ನಿರ್ದಿಷ್ಟ ದೋಷಗಳು – ಸದಾ ಕಾಲವೂ ಬರೆಯುವಾಗ ಕೆಲವು ಅಕ್ಷರಗಳನ್ನು ಹಿಂದು–ಮುಂದಾಗಿ ಬರೆಯುವುದು. ಅಕ್ಷರಗಳ ಲೋಪ, ಅಕ್ಷರಗಳನ್ನು ಒತ್ತಾಗಿ ಅಥವಾ ದೂರ ದೂರ ಬರೆಯುವುದು. ಸಮವಯಸ್ಕರಿಗೆ ಹೋಲಿಸಿದರೆ ಚಿತ್ರ ಬಿಡಿಸುವುದರಲ್ಲಿ ಹಿಂದುಳಿದಿರುವುದು. ಓದುವ ವೇಗ ಕಡಿಮೆಯಾಗುವುದು, ಓದುವಾಗ ಅಕ್ಷರಗಳ ಲೋಪ ಅಥವಾ ಅಕ್ಷರಗಳ ಜೋಡಣೆ ಹಿಂದು ಮುಂದು ಮಾಡುವುದು. ಬಹುಮಟ್ಟಿನ ಸಮವಯಸ್ಕರು ಅನುಸರಿಸುವಂತಹ ಲಿಖಿತ ನಿರ್ದೇಶನಗಳನ್ನು ಇವರು ಅನುಸರಿಸಲಾರರು. ಅಂಕಗಣಿತದಲ್ಲಿ ತೊಂದರೆ. ಉದಾ: 6 ಮತ್ತು 8 ರ ನಡುವೆ ಗೊಂದಲ. ಸಹಪಾಠಿಗಳಿಗೆ ಹೋಲಿಸಿದರೆ ವ್ಯವಕಲನ ಸಮಸ್ಯೆಯ ನಡುವೆಯೇ ಕೂಡಲು ಪ್ರಾರಂಭಿಸಬಹುದು. ಸುಲಭವಾಗಿ ಚಿತ್ತ ಚಂಚಲಗೊಳ್ಳುವುದು. ಸಹಪಾಠಿಗಳಿಗೆ ಹೋಲಿಸಿದರೆ ಅತಿ ಚುರುಕಾಗಿರುವುದು. ಸ್ವಲ್ಪಕಾಲವೂ ಸಹ ತರಗತಿಯಲ್ಲಿ ಸುಮ್ಮನೆ ಕುಳಿತಿರಲಾರರು. ಆವೇಗಕ್ಕೊಳಗಾಗುವುದು, ಇದ್ದಕ್ಕಿದ್ದಂತೆ ಚಟುವಟಿಕೆಯಲ್ಲಿ ತೊಡಗುವುದು, ತಾನು ಪ್ರಾರಂಭಿಸಿದ ಕೆಲಸದ ಪರಿಣಾಮಗಳನ್ನು ಯೋಚಿಸುವುದಕ್ಕೂ ಕಾಯದಿರುವುದು. ಅಂಕಗಣಿತದ ಚಿಹ್ನೆಗಳ ನಡುವೆ ಗೊಂದಲ (+ - x.... > <). ಸಾಮಾಜಿಕವಾಗಿ ಅಪರಿಪಕ್ವರು.ಅಜಾಗರೂಕತೆ, ಬೇಜವಾಬ್ದಾರಿ, ಪ್ರಾರಂಭಿಸಿದ ಕೆಲಸವನ್ನು ಪೂರ್ಣಗೊಳಿಸದಿರುವುದು. ಮಂಕು ಕವಿದಂತೆ ಇರುವುದು.

**ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣ:** ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳಿಗಾಗಿ ಶೈಕ್ಷಣಿಕ ಅವಕಾಶಗಳು/ಕಾರ್ಯಕ್ರಮಗಳು ಮಕ್ಕಳಲ್ಲಿರುವ ಕಲಿಕೆಯ ಸಮಸ್ಯೆಯ ವಿಧಗಳು ಮತ್ತು ನ್ಯೂನತೆ

Digitised by Bharatavani, CIIL

ಇರುವ ನಿರ್ದಿಷ್ಟ ಕ್ಷೇತ್ರದಲ್ಲಿ ಆ ಮಗು ಪ್ರದರ್ಶಿಸುವ ವರ್ತನೆಯ ಲಕ್ಷಣಗಳನ್ನು ಅವಲಂಬಿಸಿರುತ್ತದೆ.

ಪ್ರತ್ಯಕ್ಷಾನುಭವ–ಸ್ಮರಣೆ–ಧಾರಣೆ ಮತ್ತು ಸಂಬಂಧ ಕಲೆ – ಇವು ಮಗು ಕೊರತೆ ಹೊಂದಿರಬಹುದಾದ ಮಾತುಗಾರಿಕೆ, ಓದುವುದು, ಬರೆಯುವುದು ಮತ್ತು ಅಂಕಗಣಿತ ಕೌಶಲಗಳ ಮೇಲೆ ಪ್ರಭುತ್ವ ಸಾಧಿಸಲು ಅತ್ಯವಶ್ಯಕ. ಇದನ್ನು ಬಹು ಇಂದ್ರಿಯ ಪ್ರಚೋದನೆಗಳನ್ನು ಒಳಗೊಂಡ ವ್ಯವಸ್ಥಿತ ಚಟುವಟಿಕೆಗಳ ಸರಣಿಯ ಮೂಲಕ ಸಾಧಿಸಬಹುದು. ಪ್ರಾರಂಭದಲ್ಲಿ ಒಂದೊಂದೇ ಸಾಮರ್ಥ್ಯವನ್ನು ಬೆಳೆಸಲು ಅಭ್ಯಾಸಗಳನ್ನು ನೀಡಿ ನಂತರದ ಹಂತದಲ್ಲಿ ಎಲ್ಲ ಸಾಮರ್ಥ್ಯಗಳ ಸಮನ್ವಯದ ಯತ್ನ ನಡೆಸಲಾಗುವುದು. ಈ ಕ್ರಮವನ್ನು ಕೊರತೆ ಆಧಾರಿತ ಕ್ರಮವೆನ್ನಬಹುದು.

- ಬಲಯುತ ಮಾರ್ಗಗಳ ಮೂಲಕ ಶೈಕ್ಷಣಿಕ ಕೌಶಲಗಳನ್ನು ಬೆಳೆಸುವುದು. ಇವು ಕಲಿಕೆಯ ದೋಷಗಳುಳ್ಳ ಮಕ್ಕಳ ಬೋಧನೆಗೆ ಸಂಬಂಧಿಸಿದ ನಿರ್ದಿಷ್ಟ ತತ್ವಗಳು, ಬೆಳೆಸಬೇಕಾದ ಕೌಶಲಗಳ ಸ್ವರೂಪ, ಆ ಕೌಶಲದ ಕ್ಷೇತ್ರದಲ್ಲಿ ಮಗುವಿನ ಅನುಭವಕ್ಕೆ ಬಂದ ಕಠಿಣತೆಗಳ ಆಧಾರದ ಮೇಲೆ ರೂಪುಗೊಳ್ಳಬೇಕು.
- ಭಾಷಾ ಅನುಭವ ಮಾರ್ಗ ಅತ್ಯಂತ ಉಪಯುಕ್ತ. ಏಕೆಂದರೆ ಅದು ಕಥೆಗಳು, ವೈಯಕ್ತಿಕ ಅನುಭವಗಳು, ಮಗುವಿನ ಮೌಖಿಕ ಭಾಷೆಯನ್ನು ಬಳಸುತ್ತದೆ. ನಿರ್ದಿಷ್ಟ ಕೌಶಲ ಅಭಿವೃದ್ಧಿಯನ್ನು ಅಳವಡಿಸಿಕೊಂಡು ಭಾಷಾ ಕೌಶಲ, ದೃಶ್ಯ ಮತ್ತು ಗತಿ ಸಾಮರ್ಥ್ಯಗಳನ್ನು ಬಳಸುತ್ತದೆ. ಕಾರ್ಯಕ್ರಮನ್ವಯ ಬೋಧನೆ (Programme Instruction) ಮತ್ತೊಂದು ಉಪಯುಕ್ತ ತಂತ್ರವಾಗಿದೆ. ಓದುವಿಕೆ ಕಲಿಸಲು ಬಹು ಇಂದ್ರಿಯ ಅನುಭವ ಮಾರ್ಗ ಮತ್ತು ಚಿತ್ರಗಳನ್ನು ಬಳಸಬಹುದು.
- ಕರಕೌಶಲ ಅಭ್ಯಾಸಗಳನ್ನು ಬಳಸಿ ಮಕ್ಕಳ ಸ್ನಾಯುಬಲ ಹೆಚ್ಚಿಸಬಹುದು. ಇದು ಅವರ ಬರವಣಿಗೆಯನ್ನು ಸುಧಾರಿಸುವಲ್ಲಿ ಸಹಾಯ ಮಾಡುತ್ತದೆ.
- ಅಂಕಗಣಿತದ ಕಲಿಕೆಯ ದೋಷ ನಿವಾರಣೆಗೆ ನಿರ್ದಿಷ್ಟ ಪರಿಹಾರ ಬೋಧನೆ ಸಹಾಯಕವಾಗಿದೆ.

**ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗಾಗಿ ಈ ಕೆಳಗಿನ ಸಾಮಾನ್ಯ ಬೋಧನಾ ತಂತ್ರಗಳನ್ನು ಬಳಸಬಹುದು:**

ಸಂಕ್ಷಿಪ್ತ ಚಿಕ್ಕದಾದ ಸೂಚನೆಗಳನ್ನು, ದಪ್ಪ ಮುದ್ರಣಗಳನ್ನು ಬಳಸಬಹುದು. ಸೂಚನೆಗಳನ್ನು ಅಥವಾ ಹಂತಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಮುಖ್ಯ ಪದಗಳ ಕೆಳಗೆ ಗೆರೆ ಎಳೆಯಬಹುದು. ಸ್ಪಷ್ಟವಾಗಿ, ಜೋರಾಗಿ ಮಾತನಾಡುವುದು. ಸದಾ ಒಂದೇ ರೀತಿಯ ಭಾಷೆ ಮತ್ತು ಬಣ್ಣದ ಸಂಕೇತಗಳನ್ನು ಬಳಸುವುದು. ಪಾಠದ ಸಮಗ್ರ ನೋಟವನ್ನು ಬಳಸುವುದು, ಪ್ರಶ್ನೆಗಳನ್ನು ಕೇಳುವುದು, ವಸ್ತು ವಿಷಯವನ್ನು ಓದಲು, ಗಟ್ಟಿಯಾಗಿ ಹೇಳಲು, ಪುನರಾವಲೋಕನ ಮಾಡುವಂತೆ ಮಾಡುವುದು. ಬೋಧನೆಯಲ್ಲಿ ವಿವಿಧ ದೃಕ್–ಶ್ರವಣ ಸಾಧನಗಳನ್ನು ಬಳಸುವುದು.

ವರ್ತನಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ಈ ಕೆಳಗಿನ ಮಾರ್ಗೋಪಾಯಗಳನ್ನು ಬಳಸಬಹುದು:

ಅವಧಾನದ ಮಟ್ಟವನ್ನು ಹೆಚ್ಚಿಸಿ ಭಂಗಕಾರಕಗಳನ್ನು ನಿವಾರಿಸುವುದು. ಮಗು ತನ್ನ ಜವಾಬ್ದಾರಿಯನ್ನು ಒಪ್ಪಿಕೊಂಡು ಅದನ್ನು ಫಲಪ್ರದವಾಗಿ ನಿರ್ವಹಿಸುವಂತೆ ಪ್ರೇರೇಪಿಸುವುದು. ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳನ್ನು ಕೂಟದಲ್ಲಿ, ಪ್ರವಾಸಗಳಲ್ಲಿ ಮತ್ತು ಶಾಲಾ ಸಮಾರಂಭಗಳಲ್ಲಿ ತೊಡಗಿಸುವುದು. ಶಾಲೆಯ ವಿವಿಧ ಸಹ–ಪಠ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು. ಸಹಕಾರ, ಚಾತುರ್ಯ, ಜವಾಬ್ದಾರಿಯನ್ನು ಒಪ್ಪಿಕೊಳ್ಳುವಿಕೆ ನಿಯೋಜಿತ ಕಾರ್ಯವನ್ನು ಮಾಡಿ ಮುಗಿಸುವುದು, ಹೊಸ ಸನ್ನಿವೇಶಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದು, ಸಾಮಾಜಿಕ ಒಪ್ಪಿಗೆ ಪಡೆಯುವುದು ಇತ್ಯಾದಿ ಸಾಮಾಜಿಕ ಕೌಶಲಗಳನ್ನು ವಿಕಾಸಗೊಳಿಸುವುದು.

**ಶಿಕ್ಷಕರ ಪಾತ್ರ:** ಸಮನ್ವಯ ತರಗತಿಯಲ್ಲಿ ಶಿಕ್ಷಕರು ವೈಯಕ್ತಿಕ ಭಿನ್ನತೆಯನ್ನು ಒಪ್ಪಿ ಅವರನ್ನು ಗೌರವಿಸಲು ತರಗತಿಯನ್ನು ವೈಯಕ್ತೀಕರಿಸಬಹುದು. ಸ್ವತಂತ್ರ ಮತ್ತು ಸಣ್ಣ ಗುಂಪು ಚಟುವಟಿಟಕೆಯನ್ನು ಉತ್ತೇಜಿಸಬೇಕು. ವಿದ್ಯಾರ್ಥಿಗಳಲ್ಲಿ ಅರ್ಪಣಾಭಾವ, ನಿಯಂತ್ರಣ ಮತ್ತು ಜವಾಬ್ದಾರಿಗಳನ್ನು ಹೆಚ್ಚಿಸಬೇಕು. ಪ್ರತಿ ಮಗುವಿನ ಪ್ರಗತಿಯನ್ನು ತಿಳಿಯಲು ನಿರಂತರ ವಿದ್ಯಾರ್ಥಿ ಮೌಲ್ಯಮಾಪನ ನಡೆಯಬೇಕು. ಪೋಷಕರೊಡನೆ ನಿಕಟ ಸಂಪರ್ಕ ಇಟ್ಟುಕೊಳ್ಳಬೇಕು. ವಿದ್ಯಾರ್ಥಿಯ ಅಗತ್ಯಕ್ಕನುಸಾರವಾಗಿ ಕಾರ್ಯಕ್ರಮ ರೂಪಿಸಬೇಕು. ಕಾರ್ಯವಿಶ್ಲೇಷಣೆ ಮಾಡಿ ವಿದ್ಯಾರ್ಥಿ ಹಂತಹಂತವಾಗಿ ಕಲಿಯುವಂತೆ ಮುನ್ನಡೆಸಬೇಕು. ಮಾನಸಿಕ ಹಾಗೂ ದೈಹಿಕ ಸವಾಲುಗಳನ್ನು ಎದುರಿಸುತ್ತಿರುವ ಮಕ್ಕಳಿಗೆ ವಿಶೇಷ ಶಾಲೆಗಳಲ್ಲಿಯೂ ಕಲಿಸಬಹುದು. ಸಮನ್ವಯ ತರಗತಿಗಳಲ್ಲಿಯೂ ಕಲಿಸಬಹುದು. ಸಮನ್ವಯ ಶಿಕ್ಷಣವು ಮಕ್ಕಳ ನಿರ್ದಿಷ್ಟ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುತ್ತದೆ. ಹೊಂದಾಣಿಕೆಯ ಸಮಸ್ಯೆಗಳನ್ನು ನೀಗಿಸಲು ಸಹಾಯ ಮಾಡುತ್ತದೆ ಮತ್ತು ಇಂತಹ ಮಕ್ಕಳಲ್ಲಿ ಅಗತ್ಯ ಕೌಶಲಗಳನ್ನು ಬೆಳೆಸುತ್ತದೆ. ಸಮಸ್ಯೆಗಳುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣ ಒದಗಿಸುವುದಕ್ಕಾಗಿ ಇತ್ತೀಚೆಗೆ ವಿವಿಧ ನವೀನ ವಿಧಾನಗಳನ್ನು ಬಳಸಲಾಗುತ್ತಿದೆ. ಅವು ಯಾವುವೆಂದರೆ – ಸಹಪಾಠಿಗಳನ್ನು ಶಿಕ್ಷಕರಂತೆ ಬಳಸಿ ಸಣ್ಣ ಗುಂಪುಗಳಲ್ಲಿ ಬೋಧಿಸುವುದು, ಪ್ರಭುತ್ವ ಕಲಿಕೆಯನ್ನು ಅಳವಡಿಸುವುದು, ಕಾರ್ಯವಿಶ್ಲೇಷಣಾ ತಂತ್ರಗಳು, ಸಂಪನ್ಮೂಲ ಕೊಠಡಿಗಳನ್ನು ಬಳಸುವುದು, ಸಂಪನ್ಮೂಲ ಶಿಕ್ಷಕರ ಸಾಮರ್ಥ್ಯಗಳು, ಕಾರ್ಯಕ್ರಮಾನ್ವಯ ಸಾಮಗ್ರಿಗಳು, ಸೂಕ್ಷ್ಮ ಗಣಕಯಂತ್ರಗಳ ಬಳಕೆ ಮತ್ತು ಸಾಮಾನ್ಯ ತರಗತಿ ಶಿಕ್ಷಕರನ್ನು ಪುನಶ್ಚೇತನಗೊಳಿಸಿ ತಮ್ಮ ಸಾಮಾನ್ಯ ತರಗತಿಗಳಲ್ಲಿ ದೈಹಿಕ ಮತ್ತು ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಸಮನ್ವಯಗೊಳಿಸಲು ಅಗತ್ಯವಾದ ಪ್ರಾಯೋಗಿಕ ಕೌಶಲಗಳನ್ನು ಕಲಿಸಲಾಗುತ್ತಿದೆ.

Digitised by Bharatavani, CIIL

## ಕರ್ನಾಟಕದಲ್ಲಿ ವಿಶೇಷ ಶಿಕ್ಷಣ ಶಾಲೆಗಳು

| Sl. No. | State Aided Institutions Run by NGOs | Nos |
|---|---|---|
| 1 | Visually Impaired Schools | 07 |
| 2 | Hearing Impaired Schools | 07 |
| 3 | Schools for Mentally Retarded | 09 |
| 4 | Schools for Orthopedically Handicapped | 02 |
| 5 | Treatment and Counselling Center | 01 |
| 6 | Vocational Training Centres | 04 |

## ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿರುವ ವಿಶೇಷ ಶಿಕ್ಷಣ ಶಾಲೆಗಳ ವಿವರ:

| Sl. No. | Central Aided Institutions Run by NGOs | Nos |
|---|---|---|
| 1 | Residential Special School for Visually Impaired | 08 |
| 2 | Residential School for Hearing Impaired | 25 |
| 3 | Schools for Mentally Retarded | 25 |
| 4 | Schools for Orthopedically Handicapped | 11 |
| 5 | Vocational Training Centres and ITIs | 13 |

Digitised by Bharatavani, CIIL

| List of Institutions Receiving Grants from the Govt, of India for running Special Schools, VTC etc. for persons with disabilities | | | | |
|---|---|---|---|---|
| 1 | BAGALKOT | Shri Yalagureshwar Vidya Vardhaka Sangha | Aminagad, Laxminagar, Tq. Hunagadm Dist. Bagalkot-5887112 Karnataka | Residential School for MR |
| 2 | BAGALKOT | Sri Muragendra Shivacharya Mahaswami Vidya Samsthe | Near Govt. Hospital, N S 13 Road, Ilkal, Hungund Tq., Bagalkot Dist, Karnataka | Special School for HH, VTC for OH (TRDC) |
| 3 | BANGALORE | Shree Ramana Maharshi Academy for the Blind | 3rd Crossm 3rd Phase, (Near Ragi Gudda), JP Nagar, Bangalore-560078, Karnataka | DSE (Primary VI) Teachers Training for Blind, VTC for OH (TRDC), School cum VTC for VH (SRMAB) |
| 4 | BANGALORE | National Association for the Blind (Bangalore) | Karnataka Branch, Rehabilitation Complex, CA Site No.4, Jeevan Bima Nagar, Bangalore-560075, Karnataka | Placement Service, Rehabilitation and Basic Training Centre |
| 5 | BANGALORE | The Association for Mentally Handicapped | Near Kidwai Cancer Hospital, Off Hosur Road, Bangalore-560029, Karnataka | Multicategory Workshop for MR |
| 6 | BANGALORE | Krishna Trust | No.2, 2nd Floor, Sarpabhushana Mutt Bldg, KG Circle, Tank Bund Road, Bangalore-560009, Karnataka | Special School for MR Children |
| 7 | BANGALORE | Shri Shatashrunga Vidya Samsthe | Near Check Post, Magadi Main Road, Kamakshipalya, Bangalore-560079, Karnataka | Residential School for Deaf & VTC for Disabled |
| 8 | BANGALORE | Sarvodaya Service Society | Near Ever Green School, Vijayapura-562135, Devanahalli Tq, Bangalore Rural District, Karnataka | Residential School for MR |
| 9 | BANGALORE | Dr.S.R.Chandrasekhar Institute of Speech & Hearing | Hennur Road, Bangalore-560084, Karnataka | Maintenance of Institute |
| 10 | BANGALORE | Hindu Seva Pratisthana Trust | Indiramma Hospital, 56, 11th Main, Malleswaram, Bangalore-560003, Karnataka | School for Children with Special Needs |
| 11 | BANGALORE | Shri Ambigar Chowdaiah Education Society | Konankunte Cross, Vanasthalipuram Main Road, Vanasthalipura Village, H.N>37, Uttarahalli Hobli, Bangalore-560061, Karnataka | Residential School for MR Persons |
| 12 | BANGALORE | The Association of People with Disability | Hennur Road, St. Thomas Town Post, Bangalore-560084 Karnataka | Integrated School for Disabled |
| 13 | BANGALORE | Divyajyothi Vidya Kendra | Vishwa Bldg, Chikkanna Layout, Sondekoppa Road, Nelamangala Town-562123, Bangalore Rural District | VTC for Disabled |
| 14 | BANGALORE | Karnataka & Goa sub area Army Wives Welfare Assn, (Army Welfare Society) | Asha School. c/o. HQ K&K Sub Area, Cubbon Road, Bangalore-560001 | Asha School, Bangalore |
| 15 | BANGALORE | Karnataka Parents' Association for Mentally Retarded Citizens | AMH Compound, Off Hosur Road, Near Kidwai Cancer Hospital, Bangalore-560029 | DSE (MR) Manpower Development Programme |
| 16 | BANGALORE | Spastic Society of Karnataka | 31, 5th Cross, Off 5th Main, Indiranagar 1st Stage, Bangalore-560038 | Spastics Children and VTC |

Digitised by Bharatavani, CIIL

| | | | | |
|---|---|---|---|---|
| 17 | BANGALORE | Mobility India | 1st & 1st A Cross, JP Nagar 2nd Phase, Bangalore-560078 | Distribution of Aids & Appliances |
| 18 | BELGAUM | Belgaum Integrated Rural Development Society | Naganur, Tq. Gokak, Belgaum Dist, Karnataka | Special School for Deaf |
| 19 | BELGAUM | Indian Red Cross Society, Belgaum | OPD Block, District Civil Hospital, Belgaum-5900001<br>Next to OPD Block, Civil Hospital Campus, Belgaum | Distribution of Aids & Appliances<br>Dist. Disabled Rehabilitation Centre (DDRC) |
| 20 | BELGAUM | Shri Renuka (Yallamma) Vidya Vardhaka Sangh | Saundatti-591126, Dist. Belgaum, Karnataka | Residential School for MR Children |
| 21 | BELGAUM | Shri Doodana Vikas Shikshana Samasthe | Hidkal Dam, Tq. Hukkeri, District Belgaum, Karnataka | Residential School for MR |
| 22 | BELGAUM | Ajay Welfare Association for Rehabilitation of the Disabled | Jyoti Nagar, Kangrali, KH Belgaum-590010, Karnataka | Institute of HH Children |
| 23 | BELLARY | Yediyuru Sri SIddalingeswara Vidyapeetha | Khanamdagu, Kudligi Taluk, Bellary District, Karnataka | Residential School for OH |
| 24 | BELLARY | Vishwa Bharathi Kalanikethan & Education Society | Ennoble House, Raghavachari Road, Bellary-583101, Karnataka | Dist. Disabled Rehabilitation Centre |
| 25 | BELLARY | Adarsh Educational Society | Post Box No.48, Sangankal, Bellary-583103, Karnataka | Residential School for the Blind |
| 26 | BIDAR | Sri Laxmi Vidya Vardhaka Sangha | Mudbi-585437, Tq. Basavakalyan, District Bidar, Karnataka | Residential School for Deaf children |
| 27 | BIDAR | Shri Manik Prabhu Shikshan Samithi | Maniknagar, Tq.Humnabad, District Bidar, Karnataka-585353 | Residential School for VH Children |
| 28 | BIDAR | Sangram Education Society | EWS 90, HUDCO Colony, Bidar-585401, Karnataka | School for the Blind,<br>VTC for Disabled |
| 29 | BIDAR | Chyawan Ayurvedic Education Society | Santhpur, Tq.Aurad, District Bidar, Karnataka | Jagjivan Ram Residential School for MR |
| 30 | BIDAR | Nittur Education Society | Nittur (B), Tq. Bhalki, District Bidar-585401, Karnataka | PH Training cum Production Centre |
| 31 | BIJAPUR | Parmanand Jana Seva Sikshan Samiti | Golgeri, Tq. Sindgi, District Bijapur, Karnataka | School for Deaf & Dumb |
| 32 | BIJAPUR | Sharna Jyoti Vidya Samsthe | Plot No.57, Basava Nilaya, Near Siddeswara Swami Ashram, Bijapur | Residential School for MR |
| 33 | CHIKMAGALUR | Karnataka Federation for the Blind | Kampanaahalli, Chikmagalur-577101, Karnataka | Residential School for the Blind |
| 34 | CHITRADURGA | Shri Jagajyoti Bashaveswara Vidya Samsthe | Kalidas Nagar, Harihar-577601, Karnataka | Residential School for PH |
| 35 | CHITRADURGA | Bapuji Angavikalara Seva Samsthe | NH13, Chitradurga-577501, Karnataka | Residential School for PH (Holalkere) |
| 36 | CHITRADURGA | Sri Utsavamba Educational Association | Post M K Hatti, Chitradurga-577502, Karnataka | Residential School for PH |

Digitised by Bharatavani, CIIL

| | | | | |
|---|---|---|---|---|
| 37 | CHITRADURGA | The Association of the Deaf & Dumb | Nayakanahatti Road, Rajivnagar, Challakere Tq., Chitradurga District | Special School for HH |
| 38 | DAKSHIN KANNADA | Chesire Homes India (Mangalore) | Mangalore Unit, Towers Lane, Mangalore-575002, Karnataka | Residential School for the Handicapped & VTC for Disabled |
| 39 | DAVANGERE | Sri Vinayak Education Society | Behind Shivali Theatre, B Block, Devraj Urs Layout, Davangere-577006 | Distribution of Aids & Appliances, School for HH |
| 40 | DAVANGERE | Angavikalara Ashakiran Trust | Shamanur Road, Near Laxmi Flour Mill, Davangere-577004, Karnataka | Education cum VTC for MR |
| 41 | DHARWAD | Sri Aroodha Educational Society for Disabled | No.28, 2nd Cross, Srinivasa Nagar, Siddharoodha Math, Old Hubli, Dharwar Dt. | Residential School for the Blind |
| 42 | DHARWAD | Priyadarshini Janaseva Sagar | Gurunath Nagar, Old Hubli-24, Dharwar Dt. | Residential School for HH |
| 43 | DHARWAD | Sri Kalameshwara Grameen Vidya Samsthe | Sangameshwar Nagar, Byadgi-581106, Dharwar District, Karnataka | Residential School for the PH |
| 44 | DHARWAD | Honnamma Education Society's Residential School for Deaf Children | Near Head Post, Station Road, Dharwad-580001, Karnataka | Residential School for Deaf |
| 45 | DHARWAD | Vishwadharma Mahila Mattu Makkala Shikshan Sevashram Samiti | Veerpur Oni., Hakkal Hubli, District Dharwad, Karnataka | School for PH |
| 46 | GADAG | Sri B D Tatti (Annavaru) Memorial Charitable Trust | Laxmeshwar-582006, Gadag, Karnataka | Deaf & Dumb Residential School |
| 47 | GADAG | Dr. Puttaraja Gavaigalavara Blind Education Society | Gadag-582101, Karnataka | Rasidential School for VH |
| 48 | GADAG | Bapuji Vidya Samsthe | Gajendragad-582114, Dist. Gadag, Karnataka | Residential School for MR |
| 49 | GADAG | Manju Education Society | Balaji Road, Betageri, Gadag, Karnataka | Residential School for MR |
| 50 | GULBARGA | Blind & Handicapped Childrens Residential Welfare Association | H No.C-69< Deshpande Wada, Hanuman Temple, Afzalpur Tq., Dist. Gulbarga | Residential School for Blind Children |
| 51 | GULBARGA | Mahadevi Tai Mahila Vidya Vardhak Sangh | Aland Colony, Aland Road, Gulbarga, Karnataka | Residential School for MR |
| 52 | HASSAN | Rotary Trust | Rotary Community Hall, Sakleshpur-573134, Hassan District, Karnataka | Deaf & Dumb School |
| 53 | HAVERI | Seva Trust for the Blind | 1st Main Road, Maruthi Nagar, Ranebennur-581115, District Haveri, Karnataka | Residential School for Deaf |
| 54 | HAVERI | Shri Vishaparihareshwara Vidya Samsthe | Balambeed, Hirekerur-581111, Haveri, Karnataka | Residential Integrated High School |
| 55 | HAVERI | Divya Jyoti Education Society | Shiggon Tq. Haveri District, Karnataka | Residential School for MR |
| 56 | HAVERI | Sri Channa Basaveshwara Grameem Vidya Samsthe | Shiggon Tq. Haveri District, Karnataka | Residential School for HH |
| 57 | KOLAR | Shri Ramana Maharshi Trust for the Disabled Persons | 6th Cross, Robertsonpet, Kolar Gold Fields, Kolar, Karnataka | Rehabilitation of LCP |
| 58 | KOLAR | Jai Bharat Deaf Children's Residential School & Rural Development Trust | Srinivaspur-563135, Kolar District, Karnataka | Residential School for HH |

Digitised by Bharatavani, CIIL

| | | | | |
|---|---|---|---|---|
| 59 | KOLAR | Ahsakiran Educational & Rehabilitation Society | Health Colony, Post Office Road, Sidlaghatta-562105, Kolar Dist., Karnataka | Residential School for Blind Children |
| 60 | KOLAR | The Nandadeepa Education & Rehabilitation Society for Disabled | Near Vasavi Kalyana Mantapa, Malur-563130, Kolar, Karnataka | Special School for MR |
| 61 | KOPPAL | Association for the Rehabilitation of the Disabled | PB No.24, Vivekanand Colony, Gangavathi-583227, District Koppal, Karnataka | Residential School for MR |
| 62 | KOPPAL | Lion's Charitable Trust | Lions Branch Compound, Gangavathi-583227, District Koppal, Karnataka | School for MR Children |
| 63 | MANDYA | Sri Adichunchanagiri Shikshana Trust | Archakarhalli, Ramanagaram Taluk-571511, Bangalore Dist., Karnataka | JSB Swamy Free Residential School for VH |
| 64 | MANDYA | Montford Educational and Charitable Trust of the Brother of Saint Gabriel | Montford Sagar, Belagola PO, District Mandya, Karnataka-571606 | Montford School for Disabled (HH) |
| 65 | MANGALORE | Dr. M V Shetty Memorial Trust | NH 17, Barebail New Road, Mangalore-575004 | District Disabled Rehabilitation Centre |
| 66 | MANGALORE | Apoltolic Carmel Education | Bendore, Mangalore-575002, Karnataka | DSE (MR) Course |
| 67 | MYSORE | District Rehabilitation Centre-Mysore | Pulikeshi Road, Tilak Nagar, Mysore-570021 | Distribution of Aids & Appliances |
| 68 | MYSORE | All India Institute of Speech & Hearing | Manasagangotri, Mysore-570006 | Distribution of Aids & Appliances |
| 69 | MYSORE | Sai Ranga Vidya Samsthe | 764/A, 'B' Layout, Bannimantap, Mysore-570015, Karnataka | Residential School for Deaf |
| 70 | MYSORE | Smt. Putteeramma Viswastha Ashram | No.308, Vidyaranyapuram, Visveshwara Nagar, Myosre-570088, Karnataka | Special School for Deaf Girls |
| 71 | MYSORE | Rangarao Memorial School for the Disabled | No.1/C< KRS Road, Metagalli, Mysore-570016, Karnataka | Residental School for VH |
| 72 | MYSORE | Daughter of our Lady of Mercy Deaf & Dumb School | Old HD Kote Road, NH Palya Post, Mysore-570008, Karnataka | Deaf & Dumb School |
| 73 | TUMKUR | Indian Red Cross Society | District Hospital Premises, BH Road, Tumkur-572101, Karnataka | District Disabled Rehabilitation Centre |
| 74 | TUMKUR | Akhila Karnataka Veerashaiva Mahasabha | Kalakiran, Burujanahatty Road, Tumkur, Karnataka | Residential School for the Disabled |
| 75 | TUMKUR | M G Education Society | $10^{th}$ Cross, Mahalakshmi Nagar, Batawadi, Tumkur District, Karnantaka | Spandana Res. School for MR |
| 76 | UDUPI | Manasa Rehabilitation & Training Centre for MR Children | Shanthipura, Post Padubelle-576120, Udupi, Karnataka | Res. Rehab. cum Trianing Centre for MR Children |
| 77 | UDUPI | Vag Jyoti Deaf & Dumb Disabled Welfare Society | D No.511 A/VI, 'Vijayashree', NH 17, Kundapura-576001, Dist. Udupi, Karnataka | Residential School for HH |
| 78 | UDUPI | Asha Nilaya | Lombard Memorial Hospital, Udupi-576101 | Residential School & VTC for Disabled |
| 79 | UTTAR KANNADA | Bapuji Grameena Vikas Samithi | Siddar, Karwar, Karnataka | Residential School for the Deaf |
| 80 | UTTAR KANNADA | Uttar Kannada District Disabled Welfare Association | Kursa Compound, Banavasi Road, Sirsi-581401, Uttar Kannada, Karnataka | School for HH |

–ಡಾ. ಸವಿತಾ ಬಡಿಗೇರ

Digitised by Bharatavani, CIIL

## ಕರ್ನಾಟಕದಲ್ಲಿ ಶಿಕ್ಷಣ ಪ್ರಚಾರದಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ

ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಕೊಡುಗೆಯನ್ನು ನೀಡಿ, ಸಮಾಜದ ಅಭಿವೃದ್ಧಿಗೆ ಪೂರ್ಣ ಪ್ರಮಾಣದಲ್ಲಿ ನೆರವು ನೀಡುತ್ತಿರುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಸ್ವಾತಂತ್ರ ಪೂರ್ವದಲ್ಲೂ, ಸ್ವಾತಂತ್ರ್ಯಾನಂತರವೂ ದೇಶದ ಶಿಕ್ಷಣ ಪ್ರಸಾರದಲ್ಲಿ ತಮ್ಮದೇ ಆದಂತಹ ಕೊಡುಗೆ ನೀಡಿ ಜನಸಾಮಾನ್ಯರ ಮನ್ನಣೆಗೆ ಹಾಗೂ ಗೌರವಕ್ಕೆ ಇವು ಪಾತ್ರವಾಗಿವೆ. ಆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮುಖ್ಯವಾಗಿ ಧಾರ್ಮಿಕ ಸಂಸ್ಥೆಗಳು, ಸಹಕಾರ ಸಂಘಗಳು, ರಿಜಿಸ್ಟರ್ಡ್ ಸಂಘಗಳು, ಟ್ರಸ್ಟ್‌ಗಳು, ವೈಯಕ್ತಿಕ ಉಪಕ್ರಮಗಳು ಸೇರಿಕೊಳ್ಳುತ್ತವೆ. ಇವುಗಳ ಮೂಲ ಉದ್ದೇಶ ಸಮಾಜದ ಎಲ್ಲ ಜನಾಂಗದ ಮಕ್ಕಳಿಗೆ ಸರ್ಕಾರದ ಕಾನೂನಿನನ್ವಯ ಶಿಕ್ಷಣ ಸೌಲಭ್ಯ ಒದಗಿಸುವುದು.

ಈ ಸಂಸ್ಥೆಗಳು ತಮ್ಮದೇ ಆದಂತಹ ಶಾಲಾ–ಕಾಲೇಜುಗಳಿಗೆ ವಿಶಾಲವಾದ ಆಟದ ಮೈದಾನ, ಆಕರ್ಷಕ ಕಟ್ಟಡಗಳು, ಶೈಕ್ಷಣಿಕ ಅರ್ಹತೆಯುಳ್ಳ ಅಧ್ಯಾಪಕರು, ಪಾಠೋಪಕರಣಗಳು, ಪೀಠೋಪಕರಣಗಳು ಮುಂತಾದ ಸೌಲಭ್ಯಗಳನ್ನು ಹೊಂದಿರುತ್ತವೆ. ಸರ್ಕಾರದಿಂದ ಮಾನ್ಯತೆ ಹಾಗೂ ಅನುದಾನ ಪಡೆದು ಉತ್ತಮ ಶಿಕ್ಷಣ ಸೌಲಭ್ಯಗಳನ್ನು ನೀಡುತ್ತಿವೆ. ಕೆಲವು ರಾಜ್ಯಗಳಲ್ಲಿ ಸರ್ಕಾರಿ ಶಾಲಾ–ಕಾಲೇಜುಗಳಿಗಿಂತ ಇವುಗಳ ಸಂಖ್ಯೆಯೇ ಅಧಿಕವಾಗಿರುವುದನ್ನು ಅಂಕಿ ಸಂಖ್ಯೆಗಳಿಂದ ತಿಳಿಯಬಹುದು. ಒರಿಸ್ಸಾ ಶೇ. 65%, ಕೇರಳ ಶೇ. 61%, ಬಿಹಾರ ಶೇ. 74%. ಅದೇ ರೀತಿ ಕರ್ನಾಟಕ ರಾಜ್ಯದಲ್ಲೂ ಇವುಗಳ ಸಂಖ್ಯೆ ಸಾಕಷ್ಟು ಇದೆ. ಈ ಸಂಸ್ಥೆಗಳು ಶಿಕ್ಷಣ ಇಲಾಖೆಯಿಂದ ಅಥವಾ ವಿಶ್ವವಿದ್ಯಾನಿಲಯಗಳಿಂದ ಮನ್ನಣೆಯನ್ನು ಪಡೆಯುತ್ತವೆ. ಉತ್ತಮ ಹಾಗೂ ಆರೋಗ್ಯಕರ ಶಿಕ್ಷಣವನ್ನು ನೀಡಿ ಹೆಚ್ಚಿನ ವಿದ್ಯಾರ್ಥಿಗಳನ್ನು ಸಂಸ್ಥೆಗೆ ಆಕರ್ಷಿಸುತ್ತವೆ. ಈ ಸಂಸ್ಥೆಗಳಲ್ಲಿ ಕೆಲವನ್ನು ಉದಾಹರಣೆಗಾಗಿ ಕೆಳಗೆ ಕೊಡಲಾಗಿದೆ:

**ಧಾರ್ಮಿಕ ಸಂಸ್ಥೆಗಳು:** ಧರ್ಮವನ್ನು ಮಾನವರಲ್ಲಿ ಜಾಗೃತಿಗೊಳಿಸುವ ಸಂಸ್ಥೆಗಳೇ ಧಾರ್ಮಿಕ ಸಂಸ್ಥೆಗಳು. ಧರ್ಮ ಎನ್ನುವ ಪದವು ಸಮಾಜದ ಎಲ್ಲ ಅಂತಸ್ತಿನ ಮತ್ತು ಎಲ್ಲ ವಯಸ್ಸಿನ ಜನಗಳು ಉಪಯೋಗಿಸುವ ಸಾಮಾನ್ಯ ಪದ. ಈಗ ಧರ್ಮ ಎನ್ನುವ ಪದವನ್ನು 'ಮತ' ಎಂಬ ಅರ್ಥದಲ್ಲಿ ಉಪಯೊಗಿಸಲಾಗುತ್ತಿದೆ. ಧರ್ಮ ಎನ್ನುವ ಪದವು ಋಜುಮಾರ್ಗ, ನ್ಯಾಯಬದ್ಧ ಮಾರ್ಗ, ಸಂಪ್ರದಾಯ, ಸಾಮಾಜಿಕ ನಿಯಮಗಳಿಗೆ ವಿಧೇಯತೆಯನ್ನು ತೋರಿಸುವುದು, ಕರ್ತವ್ಯ ಶ್ರದ್ಧೆ ಮುಂತಾದವುಗಳನ್ನು ಸೂಚಿಸುವುದು. ಇಂತಹ ಆಚರಣೆಗಳನ್ನು ವ್ಯಕ್ತಿ ಮಾಡಲು ಅವನನ್ನು ಸಜ್ಜುಗೊಳಿಸುವುದೇ ಧಾರ್ಮಿಕ ಸಂಸ್ಥೆಗಳ ಗುರಿ. ಒಂದು ಸಮಾಜವು ಉಳಿಯಬೇಕಾದರೆ ಆ ಸಮಾಜದ ವ್ಯಕ್ತಿಗಳು ಸಂಪ್ರದಾಯವನ್ನು, ಸಜ್ಜನರ ನಡವಳಿಕೆಗಳನ್ನು ಮನಸಾಕ್ಷಿಗೆ ಅನುಗುಣವಾಗಿ ವರ್ತನೆಯನ್ನು ಆಚರಿಸಬೇಕು. ಇದೇ ಧರ್ಮದ ಲಕ್ಷಣ. ಇಂತಹ ನಡವಳಿಕೆ ಇಲ್ಲದಿದ್ದರೆ ಆ ಸಮಾಜ ಉಳಿಯುವುದು ಅಸಾಧ್ಯ ವ್ಯಕ್ತಿಯನ್ನು ಸಾಮಾಜೀಕರಣಗೊಳಿಸುವಲ್ಲಿ ಧಾರ್ಮಿಕ ಸಂಸ್ಥೆಗಳು ಮುಖ್ಯ ಪಾತ್ರ ವಹಿಸುತ್ತವೆ. ಆರ್ನಾಲ್ಡ್ ಡಬ್ಲ್ಯೂ ಗ್ರೀನರ್‌ರವರು ಧಾರ್ಮಿಕ ಸಂಸ್ಥೆಗಳು ವ್ಯಕ್ತಿಯನ್ನು ಸಮಾಜಕ್ಕೆ ಸಜ್ಜುಗೊಳಿಸುವ ಬಗೆಯನ್ನು ಹೀಗೆ ಹೇಳಿದ್ದಾರೆ:

ಧರ್ಮವು (1) ವ್ಯಕ್ತಿಯ ನೋವನ್ನು ನಿವಾರಿಸುತ್ತದೆ, (2) ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ, (3) ಸಾಮಾಜಿಕ ಬಂಧನ ಉಂಟುಮಾಡುತ್ತದೆ, (4) ಸಂಸ್ಕೃತಿಯು ಧಾರ್ಮಿಕ ನೆಲೆಗಟ್ಟಿನಲ್ಲಿ ಸಾಮಾಜೀಕರಣದ ವಿಧಿ ವಿಧಾನಗಳನ್ನು ನಿಗದಿಗೊಳಿಸುವುದು ಮಾತ್ರವಲ್ಲದೆ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವದ ಪ್ರಭಾವವನ್ನು ಬೀರುವುದು.

ನಮ್ಮ ದೇಶವು ವಿವಿಧ ಧರ್ಮದ ಜನರನ್ನೊಳಗೊಂಡಿದೆ. ಇಲ್ಲಿ ಸ್ಥಾಪಿತಗೊಂಡಿರುವ ಮಠ, ಮಸೀದಿ, ಚರ್ಚ್, ಆಶ್ರಮ, ವಿಹಾರ ಮೊದಲಾದ ಧಾರ್ಮಿಕ ಸಂಸ್ಥೆಗಳು ಹಿಂದಿನ ಕಾಲದಿಂದಲೂ ಶಿಕ್ಷಣ ಹಾಗೂ ಸಾಮಾಜಿಕ ಕಾರ್ಯವನ್ನು ನಿರ್ವಹಿಸುತ್ತಾ ಬಂದಿವೆ. ಬ್ರಿಟಿಷರು ಭಾರತಕ್ಕೆ ಬರುವ ಪೂರ್ವದಲ್ಲಿ ಭಾರತದಲ್ಲಿ ಶಿಕ್ಷಣವು ಧಾರ್ಮಿಕ ಸಂಸ್ಥೆಗಳಲ್ಲಿ ಮಾತ್ರ ನಡೆಯುತ್ತಿತ್ತು. ಇಲ್ಲಿ ಧಾರ್ಮಿಕ ಭಾವನೆಗಳೊಂದಿಗೆ ಜ್ಞಾನಾರ್ಜನೆ, ವೃತ್ತಿ ಶಿಕ್ಷಣ ಮುಂತಾದವುಗಳು ನಡೆಯುತ್ತಿದ್ದವು. ಇವುಗಳು ಸಂಸ್ಕೃತಿಯ ಪ್ರತೀಕಗಳಾಗಿದ್ದವು. ಬ್ರಿಟಿಷರು ಬಂದಮೇಲೆ ಭಾರತೀಯ ಧಾರ್ಮಿಕ ಶಿಕ್ಷಣ ಹಿಂದೆ ಸರಿದು ಧರ್ಮಾತೀತ ಕ್ರಮಾಗತ ಶಾಲಾ–ಕಾಲೇಜುಗಳ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದಿತು.

ಧರ್ಮ ಎಂದರೆ ಜನರನ್ನು ಎತ್ತಿಹಿಡಿಯುವುದು. ನೈತಿಕವಾಗಿ ಕೆಳಗೆ ಬೀಳದಂತೆ ಮನುಷ್ಯನನ್ನು ಮೇಲೆ ಎತ್ತಿ ಉಚ್ಚ ನೀತಿ ಮತ್ತು ಸಂಸ್ಕೃತಿಯುಳ್ಳವನನ್ನಾಗಿ ಮಾಡುತ್ತದೆ. ಧರ್ಮದಿಂದಲೇ ಜಯ, ಧರ್ಮದಿಂದಲೇ ಸುಖ ಎಂದು ನಮ್ಮ ಶಾಸ್ತ್ರಗಳು ಸಾರುತ್ತವೆ. ಧರ್ಮ ಎಂದರೆ ಮನುಷ್ಯನನ್ನು ಮನುಷ್ಯನೊಂದಿಗೆ ಬಂಧಿಸುವುದು (To bind man to man). ಈ ಜಗತ್ತನ್ನೆಲ್ಲಾ ಸೃಷ್ಟಿಸಿ ನಿಯಂತ್ರಣ ಮಾಡುವ ಮತ್ತು ಕೊನೆಗೆ ಸಂಹಾರ ಮಾಡುವ ಭಗವಂತನೊಬ್ಬ ಇದ್ದಾನೆ. ಅವನನ್ನು ಪ್ರೀತಿಸುವುದು, ಅವನಿಗೆ ವಿಧೇಯನಾಗಿರುವುದು ನಮ್ಮ ಕರ್ತವ್ಯ ಎಂದು ಕೆಲಸ ಮಾಡುವುದೇ ಧರ್ಮ. ಅಂದರೆ ಧಾರ್ಮಿಕ ಶಕ್ತಿಯನ್ನು ಒಪ್ಪಿ ಅದರಲ್ಲಿ ದೃಢ ವಿಶ್ವಾಸವಿಟ್ಟು ಆಧ್ಯಾತ್ಮಿಕ ಏಳಿಗೆಗಾಗಿ ಕೆಲಸ ಮಾಡುವುದೇ ಧರ್ಮ.

**ಧಾರ್ಮಿಕ ಸಂಸ್ಥೆಗಳ ಪಾತ್ರ ಮೂರು ವಿಧಗಳಲ್ಲಿ ನಡೆಯುತ್ತದೆ–**

(1) ಆಯಾ ಧರ್ಮದ ಜನರ ಸಂಸ್ಕೃತಿಯನ್ನು ರಕ್ಷಿಸುವುದು,

(2) ಧರ್ಮ ಒಂದು ಪುರುಷಾರ್ಥ, ಅದು ಮನುಷ್ಯನ ಉತ್ಕಟ ಇಚ್ಛೆ. ಇದರಿಂದ ಆತನ ಬಾಹ್ಯ ವರ್ತನೆಯೂ ಸುಧಾರಿಸುತ್ತದೆ

(3) ವಿವಿಧ ಜನರನ್ನು ತನ್ನಲ್ಲಿ ಸೇರಿಸಿಕೊಂಡು ಅವರನ್ನು ಧರ್ಮದ ಮೂಲಕ ಬಂಧಿಸುತ್ತದೆ.

**ಧರ್ಮದ ಕಾರ್ಯಗಳು:** ಧಾರ್ಮಿಕ ಸಂಸ್ಥೆಗಳಿಂದಾಗುವ ಕಾರ್ಯಗಳೆಂದರೆ

Digitised by Bharatavani, CIIL

(1) ಉದಾತ್ತ ಜೀವನ ನಡೆಸಲು ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುತ್ತದೆ. (2) ತೊಂದರೆಗಳನ್ನು, ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸಲು ಮತ್ತು ಆಪತ್ಕಾಲದಲ್ಲಿ ಮನಃಶಾಂತಿ, ಸಮಾಧಾನ ನೀಡುವಲ್ಲಿ ನೆರವಾಗುತ್ತದೆ. ಗಾಂಧೀಜಿಯವರು ಹೇಳಿದಂತೆ ಧರ್ಮವು ಅತಿ ಗಂಭೀರವಾದ ಮತ್ತು ಕಷ್ಟಕಾಲದಲ್ಲಿ ಕೂಡ ಮನುಷ್ಯನು ಸತ್ಯಕ್ಕೆ ಅಂಟಿ ಕೊಳ್ಳುವಂತೆ ಮಾಡುತ್ತದೆ. (3) ಜನರಲ್ಲಿ ನಾವೆಲ್ಲಾ ಒಂದು ಎಂಬ ಐಕ್ಯ ಭಾವನೆ ಮೂಡಿಸುತ್ತದೆ. (4) ನಿತ್ಯ ಜೀವನದ ಬಗ್ಗೆ ಮಾರ್ಗದರ್ಶನ ನೀಡುತ್ತದೆ, (5) ಪ್ರಾರ್ಥನೆಯನ್ನು, ಅದನ್ನು ಸಲ್ಲಿಸುವ ವಿಧಾನವನ್ನು ತಿಳಿಸಿಕೊಡುತ್ತದೆ, (6) ಪರಂಪರೆಗಳನ್ನು ಕಾಯ್ದುಕೊಳ್ಳಲು ಸಂಸ್ಕೃತಿಯ ಪ್ರತೀಕಗಳಾದ ಹಬ್ಬ-ಹರಿದಿನಗಳನ್ನು ಆಚರಿಸಲು ನೆರವಾಗುತ್ತದೆ, (7) ಎಲ್ಲಕ್ಕೂ ಮುಖ್ಯವಾಗಿ ಪರಲೋಕದಲ್ಲಿ ಶಾಶ್ವತ ಸುಖರೂಪವಾದ ಮೋಕ್ಷವನ್ನು ಒದಗಿಸುತ್ತದೆ.

**ಶಿಕ್ಷಣ ಪ್ರಸಾರದಲ್ಲಿ ಧಾರ್ಮಿಕ ಸಂಸ್ಥೆಗಳು:** ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಧಾರ್ಮಿಕ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಇವು ಧರ್ಮ ಪ್ರಸಾರ ಮಾಡುತ್ತವೆ. ಜನರಲ್ಲಿ ಸತ್ಯ, ನೀತಿ, ಧರ್ಮ, ಪ್ರಾಮಾಣಿಕತೆ, ನಂಬಿಕೆ ಹಾಗೂ ಆಧ್ಯಾತ್ಮಿಕತೆ ಬೆಳೆಯುವಂತೆ ಪ್ರೋತ್ಸಾಹಿಸುತ್ತವೆ. ಜನತೆ ಸನ್ಮಾರ್ಗದಲ್ಲಿ ನಡೆಯಲು ದಾರಿ ತೋರಿಸುತ್ತವೆ. ಅವರು ತಪ್ಪು ದಾರಿಗೆ ಹೋಗದಂತೆ ತಡೆಗಟ್ಟುತ್ತವೆ. ಇದರ ಜೊತೆಗೆ ದೇಶದ ಸಂಸ್ಕೃತಿ, ಸಂಪ್ರದಾಯ ಹಾಗೂ ಸಾಮಾಜಿಕ ಮೌಲ್ಯಗಳನ್ನು ರಕ್ಷಿಸುತ್ತವೆ. ಧಾರ್ಮಿಕ ಸಂಸ್ಥೆಗಳ ಮತ್ತೊಂದು ಮಹತ್ವದ ಸಾಮಾಜಿಕ ಸುಧಾರಣೆಯ ಕಾರ್ಯವೆಂದರೆ ಜನತೆಯಲ್ಲಿ ತುಂಬಿರುವ ಮೌಢ್ಯತೆ, ದಾರಿದ್ರ್ಯ, ಬಡತನ, ಅನಕ್ಷರತೆ ಹೋಗಲಾಡಿಸುವುದು. ಶಾಲಾ-ಕಾಲೇಜುಗಳನ್ನು ಸ್ಥಾಪಿಸಿ ಸಾರ್ವತ್ರಿಕವಾಗಿ ಶಿಕ್ಷಣ ನೀಡುವುದು.

ಈ ಕಾರ್ಯ ನಮ್ಮ ದೇಶದಲ್ಲಿ ಗುರುಕುಲ ಪದ್ಧತಿಯಿಂದಲೂ ಮುಂದುವರಿಯುತ್ತಿದೆ. ಕಾಲ ಬದಲಾದಂತೆ ಸಮಾಜ ಪರಿವರ್ತನೆಗೊಂಡಂತೆ ಧಾರ್ಮಿಕ ಸಂಸ್ಥೆಗಳ ಸಾಮಾಜಿಕ ಕಾರ್ಯಗಳಲ್ಲೂ ವ್ಯತ್ಯಾಸ ಕಂಡು ಬರುತ್ತಿದೆ. "ಅನ್ನದಾನಕ್ಕಿಂತಲೂ ವಿದ್ಯಾದಾನವೇ ಶ್ರೇಷ್ಠ" ಎಂಬುದನ್ನು ಅರಿತು ಭಾವಿ ಜನಾಂಗಕ್ಕೆ ಶಿಕ್ಷಣ ನೀಡಲು ಇವು ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಿವೆ.

ಕ್ರೈಸ್ತ ಮಿಷನರಿಗಳು – ಸ್ವಾತಂತ್ರ್ಯಪೂರ್ವದಲ್ಲಿಯೇ ಪ್ರಮುಖ ನಗರ ಪ್ರದೇಶಗಳಲ್ಲಿ ಚರ್ಚುಗಳನ್ನು ಕಟ್ಟಿಸಿ ಅದಕ್ಕೆ ಹೊಂದಿಕೊಂಡಂತೆ ಶಾಲೆ ಹಾಗೂ ಕಾಲೇಜುಗಳನ್ನು ಸ್ಥಾಪಿಸಿ, ಸಮಾಜದ ಎಲ್ಲಾ ವರ್ಗಗಳ ಮಕ್ಕಳಿಗೆ ಉದಾತ್ತ ಮನೋಭಾವದಿಂದ ಶಿಕ್ಷಣ ನೀಡುತ್ತಿವೆ. ಸರ್ಕಾರದಿಂದ ಮಾನ್ಯತೆಯನ್ನಷ್ಟೇ ಪಡೆಯುತ್ತಿವೆ. ತಮ್ಮದೇ ಆದಂತಹ ಸ್ವಂತ ಕಟ್ಟಡ, ಆಟದ ಮೈದಾನ, ಪಾಠೋಪಕರಣ, ಪೀಠೋಪಕರಣ ಹಾಗೂ ತರಬೇತಿಯುಳ್ಳ ಅಧ್ಯಾಪಕರನ್ನು ಹೊಂದಿ, ಕಡಿಮೆ ಖರ್ಚಿನಲ್ಲಿ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿವೆ, ಧರ್ಮವನ್ನೂ ಪ್ರಸಾರ ಮಾಡುತ್ತಿವೆ.

ಇಸ್ಲಾಂ ಸಂಸ್ಥೆಗಳು (ವಕ್ಫ ಮಂಡಳಿ) – ದೇಶದಾದ್ಯಂತ ತಮ್ಮ ಧರ್ಮ ಪ್ರಸಾರ ಮಾಡಲು ಮಸೀದಿಗಳನ್ನು ಸ್ಥಾಪಿಸುತ್ತಿವೆ. ಅದಕ್ಕೆ ಹೊಂದಿಕೊಂಡಂತೆ ಉರ್ದು ಶಾಲೆಗಳನ್ನು ಪ್ರಾರಂಭಿಸಿ ತಮ್ಮ ಜನಾಂಗದ ಮಕ್ಕಳಿಗೆ ಉರ್ದು ಭಾಷೆಯ ಮೂಲಕ ಶಿಕ್ಷಣ ನೀಡುತ್ತಿವೆ. ಪ್ರಮುಖ ನಗರ ಪ್ರದೇಶಗಳಲ್ಲಿ ಕಾಲೇಜುಗಳನ್ನು ಹಾಗೂ ತಾಂತ್ರಿಕ ಕಾಲೇಜುಗಳನ್ನು ಸ್ಥಾಪಿಸಿ ಸರ್ಕಾರದ ನೀತಿ ನಿಯಮಗಳಿಗೆ ತಕ್ಕಂತೆ ಶಿಕ್ಷಣವನ್ನು ಆಯಾ ಪ್ರದೇಶದ ಮಕ್ಕಳಿಗೆ ನೀಡುತ್ತಿವೆ.

ಕರ್ನಾಟಕದಲ್ಲಿ ಲಿಂಗಾಯತ ಮಠಗಳು – ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಸೇವೆ ಅಮೋಘವಾದದ್ದು. ಹಳ್ಳಿಗಾಡಿನ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿವೆ, ಮಠಗಳಲ್ಲಿ ಉಚಿತ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಸಾಮೂಹಿಕವಾಗಿ ಮಾಡುವುದರ ಜೊತೆಗೆ ಶಾಲಾ-ಕಾಲೇಜುಗಳಲ್ಲಿ ಶಿಕ್ಷಣ ಸೌಲಭ್ಯ ಒದಗಿಸುತ್ತಿವೆ. 'ಅನ್ನದಾನ ಹಾಗೂ ವಿದ್ಯಾದಾನ' ಗಳೆರಡನ್ನೂ ನೀಡುವುದರ ಮೂಲಕ ಸಮಾಜದ ಪರಿವರ್ತನೆಗೆ ನೆರವಾಗುತ್ತಿವೆ.

ಹೀಗೆ ಧಾರ್ಮಿಕ ಸಂಸ್ಥೆಗಳು ಶಿಕ್ಷಣದ ಮೂಲಕ ಸಮಾಜವನ್ನು ಪರಿವರ್ತನೆಗೊಳಿಸಲು ನಿರಂತರವಾಗಿ ಶ್ರಮಿಸುತ್ತಿವೆ. ಇವುಗಳಲ್ಲಿ ಕೆಲವು ಸಂಸ್ಥೆಗಳು ಸರ್ಕಾರದಿಂದ ಕಾನೂನುಬದ್ಧವಾಗಿ ಸಂವಿಧಾನದ ನಿರ್ದೇಶನಕ್ಕೆ ಅನುಗುಣವಾಗಿ ಅನುದಾನವನ್ನು ಪಡೆದು ಶಾಲಾ-ಕಾಲೇಜುಗಳನ್ನು ನಡೆಸುತ್ತಿವೆ. ಇನ್ನೂ ಕೆಲವು ಸಂಸ್ಥೆಗಳು ಸರ್ಕಾರದಿಂದ ಯಾವುದೇ ರೀತಿಯ ಅನುದಾನ ಪಡೆಯುವುದಿಲ್ಲ, ಮಾನ್ಯತೆಯನ್ನಷ್ಟೇ ಪಡೆಯುತ್ತವೆ. ಸಾರ್ವಜನಿಕರಿಂದ ಹಾಗೂ ಪೋಷಕರಿಂದ ಹಣವನ್ನು ಸಂಗ್ರಹಿಸಿ ಸಮಾಜದಲ್ಲಿನ ಬಡಮಕ್ಕಳಿಗೆ ಜಾತಿ-ಮತ-ಧರ್ಮಗಳ ಭಿನ್ನತೆಯನ್ನೆಣಿಸದೆ ಶಿಕ್ಷಣ ಸೌಲಭ್ಯ ಒದಗಿಸುತ್ತವೆ.

–ಪ್ರೊ. ಆಶಾ ಪ್ರೇಮಲತಾ

## ಕರ್ನಾಟಕದಲ್ಲಿ ಶಿಕ್ಷಣ ಪ್ರಚಾರದಲ್ಲಿ ಮಠಗಳ ಪಾತ್ರ

ಭಾರತದಲ್ಲಿ 11ನೆಯ ಶತಮಾನದ ಅಂತ್ಯದಲ್ಲಿ ರಾಜಕೀಯ ಪರಿಸ್ಥಿತಿ ಸಮಾಧಾನಕರವಾಗಿರಲಿಲ್ಲ. ಸಾಮಾಜಿಕ ಜೀವನದಲ್ಲಿ ಜಾತಿ ವ್ಯವಸ್ಥೆ ಆಳವಾಗಿ ಬೇರೂರಿತ್ತು. ಆಗ ಕರ್ನಾಟಕದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಅಧಿಕ ಪ್ರಮಾಣದಲ್ಲಿದ್ದು, ಜನರು ಅಂಧಕಾರದಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಇಂಥ ವಿಷಯ ಪರಿಸ್ಥಿತಿಯಲ್ಲಿ ಧರ್ಮ ಜಾಗೃತಿ, ಸಾಮಾಜಿಕ ಕಳಕಳಿ ಮತ್ತು ಶೈಕ್ಷಣಿಕ ಮೌಲ್ಯಗಳನ್ನು ಪುನಃ ಬೆಳೆಸಲು ಒಬ್ಬ ಮಹಾನ್ ಪುರುಷನ ಅಗತ್ಯತೆಯಿತ್ತು. ಆ ಸ್ಥಾನವನ್ನು ತುಂಬಿದವರೇ ಕ್ರಾಂತಿಪುರುಷ, ಯುಗಪ್ರವರ್ತಕ ಭಕ್ತಿಭಂಡಾರಿ ಬಸವಣ್ಣ. ಅವರೊಂದಿಗೆ ಅಲ್ಲಮ ಪ್ರಭುದೇವರು, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ ಮೊದಲಾದವರು ಅನುಭವ ಮಂಟಪದಲ್ಲಿ ಸೇರಿಕೊಂಡು ಸಾಮಾಜಿಕ ಕ್ರಾಂತಿಯನ್ನೇ

Digitised by Bharatavani, CIIL

ಮಾಡಿದರು.

ಕರ್ನಾಟಕದಲ್ಲಿ ಸ್ಥಾಪಿತಗೊಂಡ ಜೈನ ವೀರಶೈವ ಮಠಗಳು ತಮ್ಮದೇ ಆದ ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸುತ್ತಾ ಬಂದಿವೆ.

**ಮಠಗಳ ಶೈಕ್ಷಣಿಕ ಉದ್ದೇಶಗಳು:** ಮಠಗಳ ಶೈಕ್ಷಣಿಕ ಉದ್ದೇಶಗಳನ್ನು ಹೀಗೆ ನಿರೂಪಿಸಬಹುದು.

1. ಭಾರತೀಯ ಭವ್ಯ ಪರಂಪರೆಯನ್ನು ಮುಂದುವರಿಸುವುದು,
2. ಸಾಮಾಜಿಕ ಪ್ರಜ್ಞೆ ಮತ್ತು ಅಧ್ಯಾತ್ಮಿಕ ಸಂಪಾದನೆ ಹಾಗೂ ಪ್ರಸಾರಕ್ಕೆ ಪ್ರಯತ್ನಿಸುವುದು,
3. ಸಾಮಾಜಿಕ ಸ್ವಾಸ್ಥ್ಯವನ್ನು ಮತ್ತು ಐಕ್ಯತೆಯನ್ನು ಕಾಪಾಡುವುದು,
4. ಸಮಾಜದ ತುಳಿತಕ್ಕೆ ತುತ್ತಾದ ದಲಿತರನ್ನು ಮೇಲಕ್ಕೆತ್ತಿ ಅವರಿಗೆ ತ್ರಿವಿಧ ಸೌಲಭ್ಯಗಳಾದ ಊಟ, ವಸತಿ ಮತ್ತು ಶಿಕ್ಷಣ ನೀಡುವುದು,
5. ಶೈಕ್ಷಣಿಕ ಸಮಾನವಕಾಶಗಳನ್ನು ಒದಗಿಸುವುದು,
6. ಸಾಮಾಜಿಕ ಸದ್ಗುಣಗಳಾದ ಮಾನವೀಯತೆ, ಪ್ರೀತಿ ಅಂತಃಕರಣ, ಸಹನೆ, ತಾಳ್ಮೆ, ಸ್ನೇಹಪರತೆ, ದಯೆ, ಸಹಕಾರ ಮನೋಭಾವಗಳನ್ನು ಬೆಳೆಸುವುದು,
7. ಕಾಯಕ ಸಿದ್ಧಾಂತವನ್ನು ಪ್ರಚಾರ ಮಾಡಿ ಅದಕ್ಕೆ ಅನುಗುಣವಾಗಿ ವೃತ್ತಿ ಶಿಕ್ಷಣ ನೀಡುವುದು,
8. ಕಾಯಕವೇ ಕೈಲಾಸ ಎನ್ನುವ ಉಕ್ತಿಯನ್ನು ಪರಿಪಾಲಿಸುವುದು. ಕಾಯಕದಲ್ಲಿಯೂ ದೇವರನ್ನು ಕಾಣುವ ಮನೋಭೂಮಿಕೆಯನ್ನು ಬೆಳೆಸುವುದು,
9. 'ದೇವನೊಬ್ಬ ನಾಮ ಹಲವು' ಎನ್ನುವ ವಿಚಾರವನ್ನು ಪ್ರಚಾರ ಮಾಡುವುದು,
10. ವ್ಯಕ್ತಿತ್ವ ವಿಕಾಸ ಮಾಡುವುದು,
11. ಶೀಲ ಸಂವರ್ಧನೆ ಮಾಡುವುದು,
12. ಆಂತರಿಕ ಮತ್ತು ಸಾಮಾಜಿಕ ಶಿಸ್ತನ್ನು ಬೆಳೆಸುವುದು,
13. ಮೋಕ್ಷ ಸಂಪಾದನೆಗಾಗಿ ಶಿಕ್ಷಣ ನೀಡುವುದು,
14. ಪರಿಪೂರ್ಣ ಮಾನವನಿಗಾಗಿ ಶಿಕ್ಷಣ ನೀಡುವುದು,
15. ಸಾಮಾನ್ಯರು ಸಹ ಸಂಸಾರ ಅಥವಾ ಸಮಾಜದಲ್ಲಿದ್ದು ಕೊಂಡೇ ಪರಮಾತ್ಮನನ್ನು ಆರಾಧಿಸಿ ಮುಕ್ತಿ ಪಡೆಯುವ ಸುಲಭ ಮಾರ್ಗವನ್ನು ಬೋಧಿಸುವುದು,
16. ಬ್ರಹ್ಮಚರ್ಯ, ಆತ್ಮಸಂಯಮ, ಆಚಾರ ಮುಂತಾದವುಗಳನ್ನು ಪಾಲಿಸಿ, ಗುರು-ಲಿಂಗ-ಜಂಗಮರ ಮಹತ್ವವನ್ನು ಅರುಹುವುದು.

**ಕರ್ನಾಟಕದಲ್ಲಿ ಶಿಕ್ಷಣ ಪ್ರಚಾರದಲ್ಲಿ ಮಠಗಳ ಪಾತ್ರ:**

ಕಲ್ಯಾಣದ ಅನುಭವ ಮಂಟಪದಲ್ಲಿ ಬಸವಣ್ಣ ಅಲ್ಲಮ ಸಿದ್ಧರಾಮ, ಅಕ್ಕಮಹಾದೇವಿ, ಚೆನ್ನಬಸವಣ್ಣ ಮೊದಲಾದ ಶಿವಶರಣ ಶರಣೆಯರು ತಮ್ಮ ಆಧ್ಯಾತ್ಮಿಕ ಅನುಭವದ ಪರಾಕಾಷ್ಠೆಯನ್ನು ಮುಟ್ಟಿ ಜ್ಞಾನದ ಹೊನಲನ್ನು ಸುತ್ತಮುತ್ತಲೂ ಹರಡುತ್ತಿದ್ದರು. ಕಲ್ಯಾಣ ಕ್ರಾಂತಿಯ ಫಲವಾಗಿ ಎಲ್ಲ ಶಿವಶರಣರು ಅಲ್ಲಿಂದ ಬೇರೆ ಬೇರೆ ಕಡೆಗೆ ಹೊರಟು ಹೋದರು. ಅವರು ಹೋಗಿ ನೆಲೆಯೂರಿದ ಕ್ಷೇತ್ರಗಳು ಅನೇಕ ಮಠಗಳು, ಸಂಸ್ಥೆಗಳಾಗಿ ಮಾರ್ಪಾಟು ಹೊಂದಿದವು. ಹೀಗೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಮುಂತಾದವುಗಳಲ್ಲಿ ವೀರಶೈವ ಮಠಗಳು ಉದಯವಾದವು.

ವೀರಶೈವ ಮಠಗಳಲ್ಲಿ ಸಾಮಾನ್ಯವಾಗಿ ಪ್ರಾಂಗಣಗಳು ಇದ್ದು ಭಕ್ತರಿಗೆ, ಶರಣರಿಗೆ ತಂಗಲು ಉತ್ತಮ ವ್ಯವಸ್ಥೆ, ಪ್ರಸಾದ ವ್ಯವಸ್ಥೆ, ಧ್ಯಾನ ಮಂದಿರ, ಮುಕ್ತಿ ಪ್ರಾರ್ಥನಾ ಮಂದಿರ, ಪೂಜಾ ಸ್ಥಳಗಳು ಇರುತ್ತವೆ. ಈ ಎಲ್ಲ ಮಠಗಳ ಪ್ರಮುಖವಾದ ವೈಶಿಷ್ಟ್ಯವೆಂದರೆ ಶಿಕ್ಷಣದ ಪ್ರಸಾರ.

ಮಠಗಳು ಭಾರತದಲ್ಲಿ 6ನೇ ಶತಮಾನದಿಂದಲೂ ಇದ್ದರೂ 10ನೆಯ ಶತಮಾನದಿಂದ 13ನೇ ಶತಮಾನಗಳ ಮಧ್ಯ ಕಾಲದಲ್ಲಿ ಅತ್ಯಂತ ಪ್ರಚಲಿತ ರೂಪದಲ್ಲಿದ್ದವು. ಶೈವ ಮಠಗಳಲ್ಲಿ ಎರಡು ಪ್ರಕಾರದ ಮಠಗಳಿದ್ದವು. 'ಲಕುಲೇಶ ಪಶುಪಥ ಮತ್ತು ಕಾಲಮುಖ' ಎಂಬುವುಗಳು ಕರ್ನಾಟಕದಲ್ಲಿದ್ದವು. ಇವುಗಳು ಬಿಜಾಪುರ, ಧಾರವಾಡ, ಶಿವಮೊಗ್ಗ ಮುಂತಾದ ಜಿಲ್ಲೆಗಳಲ್ಲಿದ್ದವು.

13ನೇ ಶತಮಾನದಲ್ಲಿ ಕರ್ನಾಟಕದಲ್ಲಾದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿ ವಿದ್ಯಾಭ್ಯಾಸದ ಮೇಲೂ ತನ್ನ ಪರಿಣಾಮವನ್ನು ಬೀರಿತು. ಚತುರ್ವರ್ಣವನ್ನು ಹುಟ್ಟಿನ ಆಧಾರದ ಮೇಲೆಯೇ ನಿರ್ಧರಿಸುವ ಕ್ರಮವನ್ನು ಖಂಡಿಸಿ, ಯೋಗ್ಯತೆಯಿಂದ ಜನರನ್ನು ಅಳೆಯಲು ಬಯಸಿದ ಬಸವಾದಿ ಶರಣರ ಕಾರ್ಯಕ್ಷೇತ್ರ, ಧರ್ಮವನ್ನು ಮನೆ-ಮನೆಗೆ ಕೊಂಡೊಯ್ದಂತೆ, ವಿದ್ಯಾಭ್ಯಾಸದ ಅನುಕೂಲವನ್ನು ಎಲ್ಲರಿಗೂ ಕಲ್ಪಿಸಿಕೊಟ್ಟಿತು. ವಿದ್ಯಾಭ್ಯಾಸವನ್ನು ಸಾರ್ವತ್ರೀಕರಣಗೊಳಿಸುವ ಶರಣರ ಪ್ರಯತ್ನವನ್ನು ಆ ಧರ್ಮದ ಅನುಯಾಯಿಗಳು ಮುಂದುವರಿಸಿಕೊಂಡು ಬಂದರು. ಇತ್ತೀಚಿನವರೆಗೂ ಹಳ್ಳಿಗಳಲ್ಲಿ ವೀರಶೈವ ಮಠಗಳು ನಡೆಸುತ್ತಿದ್ದ ಶಾಲೆಗಳು 'ಅಯ್ಯನವರ ಶಾಲೆಗಳು' ಎಂದು ಪ್ರಸಿದ್ಧವಾಗಿ ವಿದ್ಯಾ ಪ್ರಸಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು.

ವಿಜಯನಗರ ಕಾಲದಲ್ಲಿ ವಿದ್ಯಾಭ್ಯಾಸ ಬಹಳ ಪ್ರಮುಖವಾದ ಸ್ಥಾನವನ್ನು ಪಡೆದಿತ್ತು, ವೀರಶೈವರ ಮಠಗಳೂ ಪ್ರಮುಖ ವಿದ್ಯಾಕೇಂದ್ರಗಳಾಗಿ ಮುಂದುವರಿಯುತ್ತಿದ್ದವು. ಈ ವೇಳೆಗೆ ವಿದ್ಯಾಭ್ಯಾಸದಲ್ಲಿ ಮತ್ತು ಪಠ್ಯ ವಿಷಯಗಳಲ್ಲಿಯೂ ಬೆಳವಣಿಗೆಯಾಗಿತ್ತು. ಶಾಸ್ತ್ರಗಳು ವಿಪುಲವಾಗಿ ಬೆಳೆದಿದ್ದವು. ಅವುಗಳ ವ್ಯಾಸಂಗಕ್ಕೆ ಅನುಕೂಲವಾಗುವಂತಹ ವ್ಯಾಪಕತೆಯನ್ನು ಅಳವಡಿಸಿಕೊಳ್ಳುವ ವಿದ್ಯಾಭ್ಯಾಸ ಕ್ರಮ ಏರ್ಪಟ್ಟಿತ್ತೆನ್ನಬಹುದು.

Digitised by Bharatavani, CIIL

ಮಠಗಳಲ್ಲಿ ಅನೇಕ ಪ್ರಕಾರಗಳಿದ್ದವು. ಅವು ಇಂತಿವೆ:

**1. ಸಾಲಿ ಮಠಗಳು:** ಹೆಸರೇ ಸೂಚಿಸುವಂತೆ ಇಂಥ ಮಠಗಳು ವೃತ್ತಿ ಶಿಕ್ಷಣ ನೀಡುವ ಕೇಂದ್ರಗಳಾಗಿದ್ದವು. ಇಂಥ ಮಠಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲ ಕಸುಬಿನ ಶಿಕ್ಷಣವನ್ನು ಕೊಡುತ್ತಿದ್ದರು. ಮುಖ್ಯವಾಗಿ ಕೃಷಿ ಮತ್ತು ಕೃಷಿ ಆಧಾರಿತ ಕಸಬುಗಳನ್ನು ಬೋಧಿಸಲಾಗುತ್ತಿತ್ತು. ವಿಶಾಲವಾದ ಪ್ರದೇಶಗಳಲ್ಲಿ ಇದ್ದ ಈ ಮಠಗಳಲ್ಲಿ ಉತ್ತಮ ಶಿಕ್ಷಕರು ಮತ್ತು ಸಲಕರಣೆಗಳು ಇರುತ್ತಿದ್ದವು. ಈ ಮಠಗಳಿಗೆ ದಾನಿಗಳು ತಮ್ಮ ಉದಾರವಾದ ಕಾಣಿಕೆಗಳನ್ನು ನೀಡುತ್ತಿದ್ದರು. ಮಠದ ಮಹಾಸ್ವಾಮಿಗಳು ಎಲ್ಲ ರೀತಿಯ ಜವಾಬ್ದಾರಿ ಹೊತ್ತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು.

**2. ಓದಿಸುವ ಮಠಗಳು:** ಈ ಮಠಗಳಲ್ಲಿ ಓದುಗಾರಿಕೆ ಮತ್ತು ಬರಹಗಾರಿಕೆಗಳು ನಿರಂತರವಾಗಿ ನಡೆಯುತ್ತಿದ್ದವು. ಇಲ್ಲಿ ಕಸುಬುಗಳನ್ನು ಕಲಿಸುತ್ತಿರಲಿಲ್ಲ. ಈ ಮಠಗಳಲ್ಲಿ ಆಧ್ಯಾತ್ಮಿಕ ವಿಷಯಗಳು. ಸಾಮಾನ್ಯ ವಿಷಯಗಳನ್ನು ಬೋಧಿಸುತ್ತಿದ್ದರು. ಇಂಥ ಮಠಗಳಲ್ಲಿ ಸಾಮಾನ್ಯ ಜನರ ಮಕ್ಕಳಿಗೆ ಮುಕ್ತ ಪ್ರವೇಶವಿತ್ತು. ಸಂಸ್ಕೃತ, ಹಳಗನ್ನಡ ಮೊದಲಾದ ಭಾಷೆಗಳನ್ನು ತತ್ವಜ್ಞಾನ, ಮಹಾಪುರುಷರ ಜೀವನ ಮತ್ತು ಅವರ ಸಾಧನೆಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿಸಲಾಗುತ್ತಿತ್ತು. 19ನೇ ಶತಮಾನದಿಂದೀಚೆಗೆ ಇವುಗಳಿಗೆ ಉದಾಸಿ ಮಠಗಳೆಂದು ಕರೆಯುತ್ತಿದ್ದರು. ಇಂದು ಅನೇಕ ಹಿರೇಮಠಗಳು ವಿವಿಧ ಗ್ರಾಮಗಳಲ್ಲಿ ಈ ಕೆಲಸವನ್ನು ಮಾಡುತ್ತಲಿವೆ. ಜನರಲ್ಲಿರುವ ಅಜ್ಞಾನವನ್ನು ಹೋಗಲಾಡಿಸಲು ಪ್ರಯತ್ನಿಸುತ್ತಿವೆ.

**3. ವಿರಕ್ತ ಮಠಗಳು:** ಈ ಮಠಗಳಲ್ಲಿ ಆಧ್ಯಾತ್ಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದ್ದಿತು. ವಿದ್ಯಾರ್ಥಿಗಳು ಆಳವಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಅಭ್ಯಾಸವನ್ನು ಮಾಡುತ್ತಿದ್ದರು. ಇಲ್ಲಿ ಅಭ್ಯಸಿಸಿದವರು ಸಾಹಿತಿಗಳು, ಪಂಡಿತರು ಮತ್ತು ಮೇಧಾವಿಗಳು ಆಗಿದ್ದಾರೆ. ಇಲ್ಲಿ ಕಾಯಕ ಸಿದ್ಧಾಂತವನ್ನು ತಿಳಿದುಕೊಳ್ಳುತ್ತಿದ್ದರು. ಅಲ್ಲದೆ ವಚನ ಸಾಹಿತ್ಯವನ್ನು ಆಸಕ್ತಿಯಿಂದ ಅಭ್ಯಸಿಸುತ್ತಿದ್ದರು. ಈ ಮಠಗಳು ಮಾನವ ಸೇವಾ ಮನೋಭಾವವನ್ನು ಹೊಂದಿದ್ದವು.

**ಕರ್ನಾಟಕದಲ್ಲಿ ಪ್ರಚಲಿತ ಪ್ರಸಿದ್ಧಮಠಗಳು:**

**1. ಮೈಸೂರಿನ ಸುತ್ತೂರು ಮಠ:** ಶಿಕ್ಷಣ ಪ್ರಸಾರಕ್ಕೆ ಆದ್ಯತೆಯನ್ನು ನೀಡಿರುವ ಈ ಬೃಹನ್ ಮಠವು ಮೈಸೂರಿನಲ್ಲಿ ಸ್ಥಾಪಿತವಾಗಿದೆ. ಸುತ್ತೂರು ಮಠದ ಶ್ರೀಗಳವರು ಸ್ವತಃ ಪ್ರಕಾಂಡ ಪಂಡಿತರಿದ್ದು ವಿದ್ಯಾರ್ಜನೆಗಾಗಿ ಬರುವ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹ ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಶ್ರೀಮಠದ ಆಶ್ರಯದಲ್ಲಿ ನಡೆಯುತ್ತಿರುವ ಹಾಗೂ ಭಾರತದಲ್ಲಿಯೇ ಪ್ರಸಿದ್ಧವಾಗಿರುವ ಜೆ.ಎಸ್. ಎಸ್. ತಾಂತ್ರಿಕ ಮಹಾವಿದ್ಯಾಲಯವು ಅತ್ಯಾಧುನಿಕ ತಂತ್ರಜ್ಞಾನ, ಕಂಪ್ಯೂಟರುಗಳನ್ನು ಹೊಂದಿದೆ. ಅದರಂತೆ ಸುತ್ತೂರು ಮಠವು ವೈದ್ಯಕೀಯ ಮಹಾವಿದ್ಯಾಲಯವನ್ನು ಹೊಂದಿದೆ. ಈ ಕಾಲೇಜಿನ ಆಸ್ಪತ್ರೆಯಲ್ಲಿ ಆಧುನಿಕ ಸಲಕರಣೆಗಳಿದ್ದು ಬಡರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಶ್ರೀಮಠವು ಉತ್ತಮವಾದ ವಸತಿ ಗೃಹಗಳನ್ನು ಸ್ಥಾಪಿಸಿದ್ದು, ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಉಚಿತವಾಗಿ ಅನ್ನದಾಸೋಹ ನಡೆಸುತ್ತಿದೆ. ವಿದ್ಯಾರ್ಥಿಗಳಿಗೆ ಪುರಸ್ಕಾರಗಳನ್ನು ನೀಡುತ್ತಿದೆ. ಶ್ರೀಮಠದ ಆಶ್ರಯದಲ್ಲಿ ಅನೇಕ ಕಲಾ, ವಾಣಿಜ್ಯ, ವಿಜ್ಞಾನ ಶಿಕ್ಷಣ ಮಹಾವಿದ್ಯಾಲಯಗಳು, ಶಾಲೆಗಳು ಮತ್ತು ಆಧ್ಯಾತ್ಮಿಕ ಕೇಂದ್ರಗಳು ನಡೆಯುತ್ತಿವೆ. ಜನಜಾಗೃತಿಗಾಗಿ ಶ್ರೀಮಠವು ಅನೇಕ ನಿಯತಕಾಲಿಕೆಗಳನ್ನು ಹೊರಡಿಸುತ್ತಿರುವುದು ಸ್ತುತ್ಯಾರ್ಹವಾದ ಕಾರ್ಯವಾಗಿದೆ. ಹೊರ ರಾಜ್ಯಗಳಲ್ಲಿಯೂ ಈ ಮಠದ ಶೈಕ್ಷಣಿಕ ಸಂಸ್ಥೆಗಳಿವೆ.

**2. ಶ್ರೀ ತರಳುಬಾಳು ಮಠ:** ಈ ಬೃಹನ್ ಮಠವು ಚಿತ್ರದುರ್ಗ ಜಿಲ್ಲೆಯ ತರಳುಬಾಳುವಿನಲ್ಲಿ ಸ್ಥಾಪಿತವಾಗಿದೆ. ಈ ಮಠದ ಶ್ರೀಗಳವರು ಅದರ ಸರ್ವತೋಮುಖ ಅಭಿವೃದ್ಧಿಯನ್ನು ಮಾಡಿದ್ದಾರೆ. ಈ ಮಠದ ಜಗದ್ಗುರುಗಳು ಪ್ರಗತಿಪರ ವಿಚಾರವಾದಿಗಳಾಗಿದ್ದಾರೆ. ಈ ಮಠದ ಆಶ್ರಯದಲ್ಲಿ ತಾಂತ್ರಿಕ, ವೈದ್ಯಕೀಯ, ಔಷಧಶಾಸ್ತ್ರ, ಕಲಾ, ವಾಣಿಜ್ಯ ಮತ್ತು ವಿಜ್ಞಾನ ಶಿಕ್ಷಣ ಮಹಾವಿದ್ಯಾಲಯಗಳು, ಶಾಲೆಗಳು ಕರ್ನಾಟಕದ ತುಂಬೆಲ್ಲಾ ತಲೆಯೆತ್ತಿ ನಿಂತಿವೆ. ಈ ಮಠವು ಕೇವಲ ಕರ್ನಾಟಕಕ್ಕಷ್ಟೇ ವಿದ್ಯಾಕೇಂದ್ರಗಳನ್ನು ಸ್ಥಾಪಿಸದೆ ಹೊರ ರಾಜ್ಯಗಳಲ್ಲೂ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದೆ.

**3. ಹುಬ್ಬಳ್ಳಿಯ ಮೂರುಸಾವಿರ ಮಠ ಮತ್ತು ಸಿದ್ಧಾರೂಢ ಮಠ:** ಮೂರು ಸಾವಿರ ಮಠವೂ ಒಂದು ಬೃಹತ್ ಮಠವಾಗಿದ್ದು, ಅನೇಕ ಶಾಖೆಗಳನ್ನು ಹೊಂದಿದೆ. ಜಗದ್ಗುರುಗಳ ಕೃಪಾಶೀರ್ವಾದದಿಂದ ಮಹಿಳಾ ಕಾಲೇಜು ಮತ್ತು ತಾಂತ್ರಿಕ ವಿದ್ಯಾಲಯಗಳು, ಶಾಲೆಗಳು, ಆಧ್ಯಾತ್ಮಿಕ ಕೇಂದ್ರಗಳು ಕೆಲಸ ಮಾಡುತ್ತಿವೆ. ಜಗದ್ಗುರುಗಳು ಭವ್ಯವಾದ ಗ್ರಂಥಾಲಯ ಮತ್ತು ವಸತಿ ನಿಲಯಗಳನ್ನು ಸ್ಥಾಪಿಸಿ ಹುಬ್ಬಳ್ಳಿಯ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪ್ರಯತ್ನಿಸುತ್ತಿದ್ದಾರೆ.

ಹುಬ್ಬಳ್ಳಿಯ ಮತ್ತೊಂದು ಪವಿತ್ರವಾದ ಮಠವೆಂದರೆ ಸಿದ್ಧಾರೂಢರಮಠ. ಇದು ಅಸಹಾಯಕ ಮಕ್ಕಳಿಗೆ ಸಹಾಯವನ್ನು ಮಾಡುತ್ತದೆ. ಮಠದ ಆಶ್ರಯದಲ್ಲಿ ಅಂಧರ ಶಾಲೆ, ಪ್ರಾಥಮಿಕ ಮತ್ತು ಪ್ರೌಢಶಾಲೆ ಇದೆ. ಪೂಜ್ಯಶ್ರೀ ಸಿದ್ಧಾರೂಢರು ಅವತಾರೀ ಪುರುಷರೆನ್ನಿಸಿಕೊಂಡವರು. ತಮ್ಮ ಅನುಪಮ ಆಧ್ಯಾತ್ಮಿಕ ಸಾಧನೆಯಿಂದ ಶಿವ ಸಾಯುಜ್ಯವನ್ನು ಪಡೆದವರು. ಅಪಾರ ಜನಸ್ತೋಮಕ್ಕೆ ಆದರ್ಶ ಪ್ರಾಯರಾಗಿ ಪವಾಡ ಪುರುಷರೆನ್ನಿಸಿಕೊಂಡವರು. ಕಾಯಕತತ್ವದಿಂದ ಮತ್ತು ವಿವಿಧ ಲೀಲೆಗಳಿಂದ ಅಪಾರ ಭಕ್ತ ಗಣವನ್ನು ಹೊಂದಿರುವರು.

**4. ಗದುಗಿನ ಶ್ರೀ ತೋಂಟದಾರ್ಯ ಮಠ:** ಶ್ರೀ ತೋಂಟದಾರ್ಯ ಮಠವು ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆಯನ್ನು ಸಲ್ಲಿಸುತ್ತಿದೆ. ಶಾಲಾ – ಕಾಲೇಜುಗಳನ್ನು ಸ್ಥಾಪಿಸಿ ಊಟ ಮತ್ತು ವಸತಿ

Digitised by Bharatavani, CIIL

ಸೌಕರ್ಯವನ್ನು ದಯಪಾಲಿಸಿದೆ. ಸ್ವತಃ ಸ್ವಾಮೀಜಿಯವರು ಅಪಾರ ಪಾಂಡಿತ್ಯವನ್ನು ಹೊಂದಿದ್ದು ವೈಚಾರಿಕತೆಯನ್ನು ಮೈಗೂಡಿಸಿಕೊಂಡವರಾಗಿದ್ದಾರೆ. ನಾಡಿನಾದ್ಯಂತ ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಅನುಭವಾಮೃತವನ್ನು ಜನರಿಗೆ ಉಣಬಡಿಸುತ್ತಿದ್ದಾರೆ. ಕೆಲವು ವಿದ್ಯಾಸಂಸ್ಥೆಗಳು ನಡೆಯುತ್ತಿವೆ. ಶಾಲೆಗಳು, ವಾಣಿಜ್ಯ, ಕಲಾ, ವಿಜ್ಞಾನ, ತಾಂತ್ರಿಕ, ವೈದ್ಯಕೀಯ ಕಾಲೇಜುಗಳನ್ನು ನಡೆಸಲಾಗುತ್ತಿದೆ. ಧಾರ್ಮಿಕ ಕಾರ್ಯಗಳಲ್ಲಿ, ಸದ್ಭಾವನೆ ಬೆಳೆಸುವುದರಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

**5. ತುಮಕೂರಿನ ಸಿದ್ಧಗಂಗಾಮಠ:** ಈ ಮಠವು ಶಿಕ್ಷಣ ಪ್ರಸಾರಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿದೆ. ಅನೇಕ ಶಾಲಾ– ಕಾಲೇಜುಗಳನ್ನು ಸ್ಥಾಪಿಸಿದೆ. ಬೃಹನ್ ಮಠವು ಜ್ಞಾನದಾಸೋಹದ ಜೊತೆ–ಗೆ ಅವ್ಯಾಹತವಾಗಿ ಅನ್ನ ದಾಸೋಹವನ್ನು ನಡೆಸುತ್ತಾ ಬಂದಿದೆ. ದೇಶದ ನಾನಾ ಮೂಲೆಗಳಿಂದ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಇಲ್ಲಿಗೆ ಧಾವಿಸಿ ಬರುತ್ತಾರೆ. ಈ ಮಠವೂ ಅನೇಕ ಶಾಲಾ, ಕಾಲೇಜುಗಳನ್ನು ನಡೆಸುತ್ತಿದೆ.

**6. ಗುಲಬುರ್ಗಾದ ಶ್ರೀ ಶರಣ ಬಸವೇಶ್ವರಮಠ:** ಇದು ಕರ್ನಾಟಕದ ಪ್ರಾಚೀನ ಮಠಗಳಲ್ಲೊಂದು. ಈ ಮಠವು ಶಿಕ್ಷಣ ಪ್ರಸಾರವನ್ನು ಉತ್ತರ ಕರ್ನಾಟಕದಲ್ಲಿ ಮಾಡುತ್ತಿದೆ. ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದೆ. ಶ್ರೀ ಶರಣಬಸವಪ್ಪ ಅಪ್ಪಗಳವರು ತ್ರಿವಿಧ ದಾಸೋಹ ಹಾಗೂ ನಿರಂತರವಾದ ಆಧ್ಯಾತ್ಮಿಕ ವಿಚಾರಗಳಿಂದ ಸಕಲ ಮಾನವ ಕುಲಕ್ಕೆ ಆದರ್ಶ ಪ್ರಾಯವಾಗಿದ್ದಾರೆ. ಜನರಲ್ಲಿಯ ಅಂಧಕಾರ, ಮೂಢನಂಬಿಕೆ, ಅನಕ್ಷರತೆಯನ್ನು ಹೋಗಲಾಡಿಸಲು ಅವಿರತವಾಗಿ ಪ್ರಯತ್ನಿಸುತ್ತಿದ್ದಾರೆ. ಈ ಬೃಹನ್‌ಮಠವು ತನ್ನದೇ ಆದ ದಾಸೋಹ ಕಾರ್ಯದಲ್ಲಿ ನಿರತವಾಗಿರುತ್ತದೆ.

**7. ಇಳಕಲ್‌ನ ಶ್ರೀ ಮಹಾಂತಸ್ವಾಮಿಗಳ ಮಠ:** ಈ ಮಠವು ಸಹ ಎಲ್ಲ ಮಠಗಳಂತೆ ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿದೆ. ಈ ಮಠದ ಆಶ್ರಯದಲ್ಲಿ ಅನೇಕ ಮಹಾವಿದ್ಯಾಲಯಗಳು ಶಿಕ್ಷಣ ತರಬೇತಿ ಸಂಸ್ಥೆಗಳು ನಡೆಯುತ್ತವೆ. ತಾಂತ್ರಿಕ ವಿದ್ಯಾಲಯವು ಸಹ ಕಾರ್ಯನಿರ್ವಹಿಸುತ್ತಿದೆ. ಮಠವು ಸಂಪದ್ಭರಿತವಾಗಿದೆ. ಮಠದಲ್ಲಿ ನಿತ್ಯವೂ ತ್ರಿವಿಧ ದಾಸೋಹವು ನಡೆಯುತ್ತಿದೆ. ಶ್ರೀಗಳವರು ಜನರಿಗೆ ತಮ್ಮ ದುಶ್ಚಟಗಳನ್ನು ತೊ–ರೆದು ಸಜ್ಜನರಾಗುವಂತೆ ಪ್ರೇರೇಪಿಸುತ್ತಿದ್ದಾರೆ.

**8. ಹರಪನಹಳ್ಳಿಯ ತೆಗ್ಗಿನಮಠ:** ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ತೆಗ್ಗಿನಮಠವು ಶಿಕ್ಷಣ ಪ್ರಸಾರ ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕಾರ್ಯವನ್ನು ಮಾಡುತ್ತಿದೆ. ಮಠದ ಆಶ್ರಯದಲ್ಲಿ ಶಿಕ್ಷಣ ಮಹಾವಿದ್ಯಾಲಯಗಳು, ಔಷಧ ಶಾಸ್ತ್ರದ ಕಾಲೇಜುಗಳು, ಶಾಲೆಗಳು, ತಾಂತ್ರಿಕ ಕಾಲೇಜುಗಳು, ಕೀರ್ತನೆ ಮತ್ತು ಸಂಸ್ಕೃತ ಪಾಠಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.

**9. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ:** ಇದು ಪೌರಾಣಿಕ ಹಿನ್ನಲೆಯನ್ನು ಹೊಂದಿದ್ದರೂ 1924ರಲ್ಲಿ ಶ್ರೀ ಮಠವು ಒಕ್ಕಲಿಗರ ಕೈಗೆ ಬಂದ ಮೇಲೆ, ಜನಾಂಗದ ಭಕ್ತರೆಲ್ಲರೂ ಸೇರಿ 1928ರಲ್ಲಿ ಸ್ಥಾಪಿತವಾಯಿತು. ಈ ಮಠದಲ್ಲಿ ಮಾಧ್ಯಮಿಕ ಶಾಲೆ ಮತ್ತು ಉಚಿತ ವಿದ್ಯಾರ್ಥಿನಿಲಯಗಳು 1965ರ ದಶಕದಲ್ಲೇ ಆರಂಭವಾದವು. ಸಂಸ್ಕೃತ ವೇದ – ಆಗಮ ಮಹಾಪಾಠ ಶಾಲೆಯನ್ನು ತೆರೆದು ಎಲ್ಲ ಜನಾಂಗದವರಿಗೆ ಅಧ್ಯಯನ ಅವಕಾಶ ಕಲ್ಪಿಸಲಾಗಿದೆ. ಈ ಸಂಸ್ಥಾನದ ಆಶ್ರಯದಲ್ಲಿ ಮುನ್ನೂರಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. (ಕರ್ನಾಟಕ, ತಮಿಳುನಾಡು ಸೇರಿದಂತೆ) ಶಿಶುವಿಹಾರದಿಂದಿಡಿದು, ಪದವಿ ತರಗತಿಗಳು, ತಾಂತ್ರಿಕ ಮತ್ತು ವೈದ್ಯಕೀಯ ಮಹಾವಿದ್ಯಾಲಯಗಳು ನಡೆಯುತ್ತಿವೆ. ಆದಿಚುಂಚನಗಿರಿ ಬಯೋಟೆಕ್ನಾಲಜಿ ಕ್ಯಾನ್ಸರ್ ಮತ್ತು ಸಂಶೋಧನಾ ಕೇಂದ್ರ (1998)ರಲ್ಲಿ ಸ್ಥಾಪಿತವಾಗಿದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೂ ಅವಕಾಶ ಲಭಿಸುವಂತೆ ಮಾಡಲು ಕೃಷಿ, ರೇಷ್ಮೆ, ತೋಟಗಾರಿಕೆ, ಎಲೆಕ್ಟ್ರಿಕಲ್ ವೈರಿಂಗ್ ಮುಂತಾದ ವೃತ್ತಿಪರ ಶಿಕ್ಷಣಕ್ಕೆ ಅವಕಾಶ ಈ ಮಠದ ಕೃಪೆಯಿಂದ ದೊರಕಿದೆ. ದೇಶದ ನಾನಾ ಭಾಗಗಳಲ್ಲಿ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿ ಸುಮಾರು 50,000ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಿರುವ ಕೀರ್ತಿ ಈ ಮಠಕ್ಕಿದೆ.

ಅಲ್ಲದೆ ಜಾನಪದ ಮೇಳ, ಸಂಸ್ಕೃತ ಸಮ್ಮೇಳನ, ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನ, ಪ್ರಕೃತಿ ಚಿಕಿತ್ಸೆ ಶಿಬಿರಗಳನ್ನು ನಡೆಸಲಾಗಿದೆ. ಪ್ರಾಯೋಗಿಕ ಶಿಕ್ಷಣವನ್ನು ನೀಡಲು ಎಳೆಯರಿಗೆ ಬೇಸಿಗೆ ಶಿಬಿರಗಳನ್ನು ಒಂದು ತಿಂಗಳ ಕಾಲ ಏರ್ಪಡಿಸಿದೆ.

– ಡಾ. ನರಸಿಂಹಮೂರ್ತಿ ಆರ್.

## ಕರ್ನಾಟಕದಲ್ಲಿ ಸರ್ವಶಿಕ್ಷಣ ಅಭಿಯಾನದ ಪಾತ್ರ

**ಹಿನ್ನೆಲೆ:** ಭಾರತೀಯ ಸಂವಿಧಾನದಲ್ಲಿ 14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದನ್ನು ರಾಷ್ಟ್ರೀಯ ಉದ್ದೇಶವಾಗಿ ಪರಿಗಣಿಸಿ ಅದನ್ನು ಸಂವಿಧಾನದ ನಿರ್ದೇಶನಾತ್ಮಕ ತತ್ವಗಳಡಿಯಲ್ಲಿ ವಿಧಿ 45ರಲ್ಲಿ ಸೇರಿಸಲಾಗಿದೆ. ನಮ್ಮ ಸಂವಿಧಾನದಲ್ಲಿ ಶಿಕ್ಷಣದ ವಿಷಯವನ್ನು ರಾಜ್ಯ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಆದರೆ ಶಿಕ್ಷಣದ ಜವಾಬ್ದಾರಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡಕ್ಕೂ ವಹಿಸುವ ದೃಷ್ಟಿಯಿಂದ 1975ರಲ್ಲಿ ಮಾಡಿದ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಯಿತು.

ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ತಲುಪಲು ಅನೇಕ ಕ್ರಮಗಳನ್ನು

Digitised by Bharatavani, CIIL

ಕೈಗೊಳ್ಳಲಾಯಿತು. ಆದರೂ ಈ ಸಾರ್ವತ್ರೀಕರಣ ಕ್ರಿಯೆ ಮಂದಗತಿಯಲ್ಲಿ ಸಾಗತೊಡಗಿತು. ಇದನ್ನು ಗುರ್ತಿಸಿ ಭಾರತ ಸರ್ಕಾರ 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಂಗೀಕರಿಸಿತು. ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಮತ್ತು ಮಾನವ ಸಂಪನ್ಮೂಲಗಳನ್ನು (ಶಿಕ್ಷಕರು) ಒದಗಿಸಲು ಹಾಗೂ ಶಿಕ್ಷಕರ ಸಾಮರ್ಥ್ಯ ವರ್ಧನೆ ಮಾಡಲು ಭಾರತ ಸರ್ಕಾರ ಆಪರೇಷನ್ ಕಪ್ಪುಹಲಗೆ (Operation Black Board) ಮತ್ತು ಜಿಲ್ಲಾ ಪ್ರಾಥಮಿಕ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (District Institute of Education and Training) ಎಂಬ ಎರಡು ರಾಷ್ಟ್ರಮಟ್ಟದ ಕಾರ್ಯಕ್ರಮಗಳನ್ನು ಆರಂಭಿಸಿತು. 1991ರ ಭಾರತದ ಉದಾರೀಕರಣ ನೀತಿಯ ಹಂತದ ನಂತರದಲ್ಲಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ರಾಜ್ಯಗಳ ಮಟ್ಟದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಪ್ರಾಯೋಜನೆಯನ್ನು (District Primary Education Project) 1995ರಲ್ಲಿ ಆರಂಭಿಸಲಾಯಿತು. ಈ ಯೋಜನೆ ಶೈಕ್ಷಣಿಕವಾಗಿ ಹಿಂದುಳಿದಿದ್ದ ಜಿಲ್ಲೆಗಳಲ್ಲಿ ಮಾತ್ರ ಜಾರಿಯಲ್ಲಿತ್ತು. ಇದು ನಿರ್ದಿಷ್ಟ ಕಾಲಮಿತಿಗೆ ಒಳಪಟ್ಟ ಕಾರ್ಯಕ್ರಮವಾಗಿದ್ದು 2002ರ ವೇಳೆಗೆ ಕೊನೆಗೊಂಡಿತು. ನಂತರದಲ್ಲಿ ಇದೇ ಸಮಯದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಉತ್ತಮ ಸಾಧನೆಯನ್ನು ದೃಢಗೊಳಿಸುವ ದೃಷ್ಟಿಯಿಂದ ಕಲಿಕೆಯ ಕನಿಷ್ಠ ಮಟ್ಟಗಳನ್ನು (Minimum Levels of Learning) ನಿಗದಿಪಡಿಸುವುದರ ಮೂಲಕ ಶಾಲಾ ಶಿಕ್ಷಣದ ಮಾನದಂಡಗಳನ್ನು ನಿಗದಿಪಡಿಸಲಾಯಿತು. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದಡಿಯಲ್ಲಿಯೇ ಶಿಕ್ಷಕರ ಹಾಗೂ ಶಿಕ್ಷಣಾಧಿಕಾರಿಗಳ ಜ್ಞಾನ ಮತ್ತು ಸಾಮರ್ಥ್ಯಗಳನ್ನು ವಿಕಾಸಗೊಳಿಸಲು ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳನ್ನು(Cluster Resource Centres) ಮತ್ತು ಬ್ಲಾಕ್ ಸಂಪನ್ಮೂಲ ಕೇಂದ್ರಗಳನ್ನು (Block Resource Centres) ಆರಂಭಿಸಲಾಗಿತ್ತು. ಶಾಲೆಗಳು ಇಲ್ಲದ ಕಡೆಗಳಲ್ಲಿ ಶಾಲೆಗಳನ್ನು ತೆರೆಯಲಾಯಿತು, ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸಲಾಯಿತು, ಸಾಮಗ್ರಿಗಳನ್ನು ಒದಗಿಸಲಾಯಿತು, ಶಾಲಾಕಟ್ಟಡಗಳನ್ನು ನಿರ್ಮಿಸಲಾಯಿತು, ಈ ಎಲ್ಲಾ ಕಾರ್ಯಕ್ರಮಗಳನ್ನು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಒಂದೇ ಉದ್ದೇಶದಲ್ಲಿ ಕೈಗೊಳ್ಳಲಾಯಿತು.

ಈ ನಡುವೆ ವಯಸ್ಕರಲ್ಲಿ ನಿರಕ್ಷರತೆಯನ್ನು ನಿರ್ಮೂಲ ಮಾಡಲು 1988ರಲ್ಲೇ ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ್ನು(National Literacy Mission) ಆರಂಭಿಸಲಾಗಿತ್ತು. ಇದರ ಉದ್ದೇಶವೂ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದರ ಕಡೆಗಿತ್ತು. ಈ ಮಿಷನ್ ಜಿಲ್ಲೆಯನ್ನು ಒಂದು ಘಟಕವಾಗಿ ಇಟ್ಟುಕೊಂಡು ವಯಸ್ಕರ ನಿರಕ್ಷರತೆಯನ್ನು ನಿವಾರಿಸಲು ಸಂಪೂರ್ಣ ಸಾಕ್ಷರತಾ ಆಂದೋಲನ (Total Literacy Campaign) ಮತ್ತು ಅದರ ಮುಂದುವರಿದ ಕಾರ್ಯಕ್ರಮವಾಗಿ ಸಾಕ್ಷರೋತ್ತರ ಆಂದೋಲನ(Post Literacy Campain) ಎಂಬ ಎರಡು ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. 1999ರಲ್ಲಿ ಈ ಎರಡೂ ಕಾರ್ಯಕ್ರಮಗಳನ್ನು ಒಟ್ಟಾಗಿ ಸೇರಿಸಿ "ಸಾಕ್ಷರತಾ ಆಂದೋಲನದ ಮತ್ತು ಪುನರುಜ್ಜೀವನ ಕಾರ್ಯಾಚರಣೆ" (Literacy Campain and Operation Restoration) ಎಂಬ ಪ್ರಾಯೋಜನೆಯನ್ನು ಆರಂಭಿಸಲಾಯಿತು.

ಈ ಮಧ್ಯೆ 1990ರಲ್ಲಿ ಥಾಯ್‌ಲ್ಯಾಂಡಿನ ಜಾಂಟಿಯಾನ್ ಜಾಗತಿಕ ಸಮ್ಮೇಳನದಲ್ಲಿ ನಡೆದ 156 ದೇಶಗಳ ಶಿಕ್ಷಣ ಮಂತ್ರಿಗಳು ಸಭೆ ಸೇರಿ ಹತ್ತು ವರ್ಷಗಳೊಳಗೆ ಅಂದರೆ 2001ರೊಳಗೆ ಸಂಪೂರ್ಣ ಸಾಕ್ಷರತೆಯ ಗುರಿಯನ್ನು ಸಾಧಿಸಬೇಕೆಂದು ನಿರ್ಧರಿಸಿದರು. ಆದರೆ 2001ರಲ್ಲಿ ಸೆನೆಗಲ್ ದೇಶದ ಡಾಕರ್ ಎಂಬಲ್ಲಿ ನಡೆದ ಸಮ್ಮೇಳನದಲ್ಲಿ 1990ರಲ್ಲಿ ಕೈಗೊಂಡ ಸಂಕಲ್ಪದ ಸಾಧನೆ ಆಗಿಲ್ಲವೆಂಬುದು ಬೆಳಕಿಗೆ ಬಂದಿತು. ಭಾರತವೂ ಈ ಗುರಿ ಸಾಧನೆಯಲ್ಲಿ ಹಿಂದೆ ಬಿದ್ದಿರುವುದು ಗಮನಕ್ಕೆ ಬಂದಿತು. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (United Nation Development Programme) ವಿಕಾಸಗೊಳಿಸಿದ ಮಾನವ ವಿಕಾಸ ಸೂಚ್ಯಂಕ (Human Deveopment Index) ಪಟ್ಟಿಯಲ್ಲಿ ಭಾರತದ ಸ್ಥಾನ 124–128ರ ನಡುವೆ ಇರುವುದು ಬೆಳಕಿಗೆ ಬಂತು. ಈ ಸೂಚ್ಯಂಕದ ನಿರ್ಣಯದಲ್ಲಿ ಶಿಕ್ಷಣವೂ ಒಂದು ಮುಖ್ಯ ಅಂಶವಾಗಿದೆ. ಇದೇ ಸಂಸ್ಥೆ ಲೆಕ್ಕಾಚಾರ ಮಾಡಿರುವ ಶಿಕ್ಷಣದ ಸರಾಸರಿ ಮಟ್ಟದಲ್ಲೂ (Minimum Level of Education) ಭಾರತ ಹಿಂದುಳಿದಿತ್ತು.

ಈ ಎಲ್ಲಾ ಬೆಳವಣಿಗೆಗಳಿಂದ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮಂದಗತಿಯಲ್ಲಿ ಸಾಗುತ್ತಿದೆಯೆಂದೂ, ಕನಿಷ್ಠ 2005ರ ಹೊತ್ತಿಗಾದರೂ ಈ ಗುರಿಯನ್ನು ಸಾಧಿಸಬೇಕೆಂದು ನಿರ್ಧರಿಸಲಾಯಿತು. ಇದಕ್ಕಾಗಿ ಶಿಕ್ಷಣದ ಬಗ್ಗೆ ರಾಷ್ಟ್ರೀಯ ಆಶೋತ್ತರಗಳನ್ನು ಪೂರೈಸಲು ಮತ್ತು ಸಮಾಜದ ವಿವಿಧ ಕ್ಷೇತ್ರಗಳಿಂದ ಹಾಗೂ ಜಾಗತಿಕ ಸಂಸ್ಥೆಗಳಿಂದ ಬಂದ ಒತ್ತಾಯಗಳಿಗೆ ಮನ್ನಣೆ ನೀಡಲು ಮತ್ತು ಸಾಕ್ಷರತೆ ಬಗ್ಗೆ ಅದುವರೆಗೆ ಜಾರಿಯಲ್ಲಿದ್ದ ರಾಷ್ಟ್ರ ಮತ್ತು ರಾಜ್ಯ ಮಟ್ಟಗಳ ಎಲ್ಲಾ ಕಾರ್ಯಕ್ರಮಗಳನ್ನು ಸಮಗ್ರಗೊಳಿಸಲು ಭಾರತ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯವು (MHRD) ದೇಶದ ಒಂದು ಮುಂಚೂಣಿ ಕಾರ್ಯಕ್ರಮವಾಗಿ ಸರ್ವ ಶಿಕ್ಷಣ ಅಭಿಯಾನ (Sarvashiksha Abhiyana-SSA) ಮಿಷನ್‌ನ್ನು 2001–02ರಲ್ಲಿ ಆರಂಭಿಸಿತು.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಕಾಸ ಮಂತ್ರಾಲಯದ (MHRD) ಸಾಕ್ಷರತಾ ಇಲಾಖೆಯಲ್ಲಿ ಸರ್ವಶಿಕ್ಷಾ ಅಭಿಯಾನ (ಮಿಷನ್) ಆರಂಭವಾಗಿದೆ. ಪ್ರಧಾನ ಮಂತ್ರಿಗಳು ಈ ಅಭಿಯಾನದ ಅಧ್ಯಕ್ಷರಾಗಿ ನೇತೃತ್ವ ವಹಿಸುತ್ತಾರೆ. ರಾಜ್ಯ ಸರ್ಕಾರಗಳ ಮೂಲಕ ಈ ಅಭಿಯಾನ ಕಾರ್ಯರೂಪಕ್ಕೆ ಬರುತ್ತದೆ. ಅಭಿಯಾನದ ಜಾರಿಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡಲು ಮಾನವ ಸಂಪನ್ಮೂಲ ಮಂತ್ರಾಲಯದಲ್ಲಿ ಸೂಕ್ತ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸಲಾಗಿದೆ.

Digitised by Bharatavani, CIIL

ಸರ್ವಶಿಕ್ಷಣ ಅಭಿಯಾನದ ಕಾರ್ಯಕ್ರಮದ ಎಲ್ಲಾ ಚಟುವಟಿಕೆಗಳು/ಮಧ್ಯಸ್ತಿಕೆಗಳು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯೆಡೆಗೆ ಕೇಂದ್ರೀಕೃತವಾಗಿರುತ್ತದೆ. ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಕಾಸ ಮಂತ್ರಾಲಯದ ಸಹಕಾರ, ನಿರ್ದೇಶನ ಮತ್ತು ಧನ ಸಹಾಯದೊಂದಿಗೆ ರಾಜ್ಯ ಸರ್ಕಾರಗಳು ಅನುಷ್ಠಾನಕ್ಕೆ ತರುತ್ತವೆ. ಇದಕ್ಕಾಗಿ ರಾಜ್ಯಮಟ್ಟದಲ್ಲಿ 35 ಸದಸ್ಯರನ್ನೊಳಗೊಂಡು ವಿಸ್ತೃತ ವ್ಯಾಪ್ತಿಯುಳ್ಳ ಸರ್ವಶಿಕ್ಷಣ ಅಭಿಯಾನ ಸಮಿತಿ ಕರ್ನಾಟಕ ಎಂಬ ಹೆಸರಿನಲ್ಲಿ ಕಾರ್ಯಕಾರಿ ಸಮಿತಿ ಕಾರ್ಯರೂಪಕ್ಕೆ ತರುತ್ತದೆ. ಈ ಸಮಿತಿಯಲ್ಲಿ ಸರ್ಕಾರದ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಇಲಾಖೆಗಳಿಂದ, ಶಿಕ್ಷಣ ಸಂಸ್ಥೆಗಳಿಂದ ಮತ್ತು ಶಿಕ್ಷಣ ತಜ್ಞರಿಂದ ಕಾರ್ಯಕ್ರಮದಲ್ಲಿ ಸಹಕಾರ ಪಡೆಯುವ ದೃಷ್ಟಿಯಿಂದ ಸರ್ಕಾರದ ವಿವಿಧ ವಿಭಾಗಗಳನ್ನು ಮುಖ್ಯ ಶಿಕ್ಷಣ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರನ್ನು ಈ ಸಮಿತಿಯಲ್ಲಿ ಸೇರಿಸಲಾಗಿದೆ. ಆಯ್ದ ಕೆಲವು ಶಿಕ್ಷಣ ತಜ್ಞರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

**ಉದ್ದೇಶಗಳು:**

ಕರ್ನಾಟಕ ರಾಜ್ಯದ 2011–12ನೇ ವರ್ಷದ ಸರ್ವಶಿಕ್ಷಣ ಅಭಿಯಾನದ ವರದಿ ಸರ್ವ ಶಿಕ್ಷಣ ಅಭಿಯಾನದ ಸಾಮಾನ್ಯ ಉದ್ದೇಶಗಳನ್ನು ಹೀಗೆ ನಿರೂಪಿಸಿದೆ.

- 2007ರ ಹೊತ್ತಿಗೆ (ಈಗ ಈ ಕಾಲಮಿತಿಯನ್ನು 2015ರವರೆಗೆ ವಿಸ್ತರಿಸಲಾಗಿದೆ) 14 ವರ್ಷ ವಯಸ್ಸಿನವರೆಗಿನ 1 ರಿಂದ 8ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣದ ಪ್ರವೇಶ ಸಾಧ್ಯತೆಯನ್ನು ಸಾರ್ವತ್ರೀಕರಿಸುವುದು.
- ಪ್ರಾಥಮಿಕ ಶಿಕ್ಷಣಕ್ಕೆ ಎಲ್ಲಾ ಮಕ್ಕಳ ದಾಖಲಾತಿ ಮತ್ತು ಶಾಲೆಯಲ್ಲಿ ಅವರ ಮುಂದುವರಿಕೆಯ ಸಾರ್ವತ್ರೀಕರಣ ಮತ್ತು 8ನೇ ತರಗತಿಯವರೆಗೆ ಮಕ್ಕಳು ಶಾಲೆಯನ್ನು ಪೂರೈಸುವಿಕೆ ಸಾರ್ವತ್ರೀಕರಣವೆಂದರೆ ವಯೋಮಾನಕ್ಕೆ ತಕ್ಕ ತರಗತಿಗೆ ದಾಖಲಿಸುವುದು ಮತ್ತು ದಾಖಲಾದ ಮೇಲೆ ಎಲ್ಲಾ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು.
- ಜೀವನ ಕೌಶಲಗಳಿಗೆ ಹಾಗೂ ಅರ್ಥಪೂರ್ಣ ಶಿಕ್ಷಣಕ್ಕೆ ಒತ್ತು ನೀಡುತ್ತಾ ತೃಪ್ತಿಕರ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು.
- ಲಿಂಗ ಸಮತ್ವ ಮತ್ತು ಸಾಮಾಜಿಕ ಸಮತ್ವಕ್ಕೆ ಸಂಪೂರ್ಣ ಗಮನ ನೀಡುವುದು ಹಾಗೂ ಶೈಕ್ಷಣಿಕವಾಗಿ ಪ್ರಾದೇಶಿಕ ಸಮಾನತೆಯನ್ನು ತರುವುದು.
- ಗ್ರಾಮೀಣ ಮಟ್ಟದವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಸಮುದಾಯಗಳ ಸಂಪೂರ್ಣ ಪಾತ್ರವಿರುವಂತೆ ಮಾಡುವುದು, ವಿಶೇಷತಃ ಶಾಲೆಗಳ ನಿರ್ವಹಣೆಯನ್ನು ಸ್ಥಾನೀಯ ಸರ್ಕಾರ ಸಂಸ್ಥೆಗಳು ನೋಡಿಕೊಳ್ಳುವಂತೆ ಮಾಡಿ ಸ್ವ–ನಿರ್ವಹಣಾ ಶಾಲೆಗಳ ಗುರಿಯತ್ತ ನಡೆಯುವುದು.

**ಸರ್ವಶಿಕ್ಷಣ ಅಭಿಯಾನ ಈ ಕೆಳಗಿನ ನಿರ್ದಿಷ್ಟ ಗುರಿಗಳನ್ನು ಹೊಂದಿದೆ.**

1. ಶಾಲೆಗಳಿಗೆ ಪ್ರವೇಶ ಸಾಧ್ಯತೆಯನ್ನು ಉತ್ತಮ ಪಡಿಸುವುದು.
2. ಶಾಲೆಗಳಲ್ಲಿ ದಾಖಲಾತಿಯನ್ನು ಹೆಚ್ಚಿಸುವುದು.
3. ಶಾಲೆಗಳಲ್ಲಿ ಮಕ್ಕಳ ನಿರಂತರ ಹಾಜರಾತಿಯನ್ನು ಉತ್ತಮ ಪಡಿಸುವುದು.
4. ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಪ್ರಾಥಮಿಕ ಶಿಕ್ಷಣದ ಅವಧಿಯನ್ನು ಪೂರ್ಣಗೊಳಿಸುವುದನ್ನು ಖಚಿತ ಪಡಿಸಿಕೊಳ್ಳುವುದು.
5. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಸೆಕೆಂಡರಿ ಶಾಲೆಗಳಿಗೆ ಸ್ಥಿತ್ಯಂತರಗೊಳ್ಳುವುದನ್ನು ಅಂದರೆ ದಾಖಲಾಗುವುದನ್ನು ಖಚಿತಗೊಳಿಸಿಕೊಳ್ಳುವುದು. ಈ ಕ್ರಮ ಸೆಕೆಂಡರಿ ಮಟ್ಟದ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಸಾಧಿಸಲು ಸಹಾಯಕವಾಗುತ್ತದೆ.
6. ಶಾಲೆಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು (ಕುಡಿಯುವ ನೀರು, ಶೌಚಾಲಯ, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಆಟದ ಮೈದಾನ, ಇತ್ಯಾದಿ) ಒದಗಿಸುವುದು/ ಉತ್ತಮಪಡಿಸುವುದು.
7. ಈ ಕೆಳಗಿನ ಮಧ್ಯಸ್ತಿಕೆ ಚಟುವಟಿಕೆಗಳ ಮೂಲಕ ಶಾಲೆಗಳಲ್ಲಿ ಬೋಧನ ಕಲಿಕಾ ಪ್ರಕ್ರಿಯೆಗಳ ಗುಣಮಟ್ಟವನ್ನು ಹೆಚ್ಚಿಸುವುದು.

(i) ಅಗತ್ಯವಿರುವ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು.

(ii) ಶಿಕ್ಷಕರ ಸೇವಾಸ್ಥಿತಿಗಳನ್ನು (ವೇತನ, ಬಡ್ತಿ ಇತ್ಯಾದಿ) ಉತ್ತಮಪಡಿಸುವುದು.

(iii) ಶಿಕ್ಷಕರಿಗೆ ನಿರಂತರ ತರಬೇತಿ ನೀಡುವುದು.

(iv) ಗ್ರಂಥಾಲಯ, ಪ್ರಯೋಗಶಾಲೆ, ಕಂಪ್ಯೂಟರ್ ಉಪಯೋಗ, ಬೋಧನೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ–ಇವುಗಳನ್ನು ಉತ್ತಮಪಡಿಸುವುದು.

(v) ಓದು, ಬರಹಗಳನ್ನು ಉತ್ತಮಪಡಿಸಲು ಕಾರ್ಯಕ್ರಮಗಳನ್ನು ಯೋಜಿಸುವುದು.

(vi) ಪರಿಸರ ಪ್ರಜ್ಞೆ, ಸಾಹಸ ಪ್ರವೃತ್ತಿ, ಸೌಹಾರ್ದ ನಾಯಕತ್ವ ಮುಂತಾದ ಗುಣಗಳನ್ನು ಮಕ್ಕಳಲ್ಲಿ ವಿಕಾಸಗೊಳಿಸಲು ಕಾರ್ಯಕ್ರಮಗಳನ್ನು ರೂಪಿಸುವುದು.

(vii) ಮಕ್ಕಳ ಶೈಕ್ಷಣಿಕ ಸಾಧನೆಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವುದು.

(viii) ಬಾಲಕಿಯರು ಅಲ್ಪಸಂಖ್ಯಾತ ಮಕ್ಕಳು, ಪರಿಶಿಷ್ಟ

Digitised by Bharatavani, CIIL

ಜಾತಿ/ಬುಡಕಟ್ಟಿನ ಮಕ್ಕಳು, ನಗರ ಪ್ರದೇಶಗಳ ಶೈಕ್ಷಣಿಕವಾಗಿ ವಂಚಿತ ಮಕ್ಕಳು (ಬೀದಿ ಮಕ್ಕಳು, ದುಡಿಯುವ ಮಕ್ಕಳು, ಸಮಸ್ಯಾತ್ಮಕ ಮಕ್ಕಳು, ದುಶ್ಚಟಗಳಿಗೆ ಬಲಿಯಾದ ಮಕ್ಕಳು) –ಇಂಥ ಮಕ್ಕಳ ಶಿಕ್ಷಣಕ್ಕೆ ವಿಶೇಷ ಗಮನ ನೀಡಿ ಅದಕ್ಕಾಗಿ ವಿಶಿಷ್ಟ ಚಟುವಟಿಕೆಗಳನ್ನು ರೂಪಿಸುವುದು.

(ix) ಶಾಲೆಗಳಲ್ಲಿ ಲಿಂಗಬೇಧ, ಅನಪೇಕ್ಷಿತ ಪೂರ್ವಗ್ರಹಗಳು, ದಂಡನೆ ಮುಂತಾದ ನಕಾರಾತ್ಮಕ ಕ್ರಮಗಳನ್ನು ನಿಯಂತ್ರಿಸುವುದು.

(x) ಶಿಕ್ಷಣದ ಬಗ್ಗೆ ವಿಶೇಷವಾಗಿ ಬಾಲಕಿಯರ ಶಿಕ್ಷಣದ ಬಗ್ಗೆ ಸಮುದಾಯದಲ್ಲಿ ಜಾಗೃತಿ ಉಂಟುಮಾಡಲು ಕ್ರಮಗಳನ್ನು ರೂಪಿಸುವುದು.

ಈ ಮಧ್ಯಸ್ತಿಕೆ ಚಟುವಟಿಕೆಗಳ ಜೊತೆಗೆ ಸರ್ವಶಿಕ್ಷಾ ಅಭಿಯಾನ ಶಿಕ್ಷಣ ವ್ಯವಸ್ಥೆಯ ಈ ಕೆಳಗಿನ ಮುಖಗಳನ್ನು ಉತ್ತಮಪಡಿಸಲು/ ಅಭಿವೃದ್ಧಿಗೊಳಿಸಲು ಶಾಲೆಗಳಿಗೆ/ಸರ್ಕಾರೇತರ ಸಂಸ್ಥೆಗಳಿಗೆ ಸಲಹೆ, ಮಾರ್ಗದರ್ಶನವನ್ನು ನೀಡುತ್ತದೆ ಮತ್ತು ಆರ್ಥಿಕ ಅನುದಾನವನ್ನು ನೀಡುತ್ತದೆ.

- ಶಾಲೆ, ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾಮಟ್ಟಗಳಲ್ಲಿ ಶೈಕ್ಷಣಿಕ ಯೋಜನೆಗಳನ್ನು ರೂಪಿಸುವುದು.
- ಆಧುನಿಕ ಮಾಹಿತಿ ಸಂವಹನ ತಂತ್ರಜ್ಞಾನ (Information Communication Technology-ICT) ಆಧಾರದ ಮೇಲೆ ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣ ವ್ಯವಸ್ಥೆಯ ಪುನಾ–ಸಂರಚನೆಗೊಳಿಸುವುದು.
- ಬೋಧನಾ ಕಲಿಕಾ ಪ್ರಕ್ರಿಯೆಗಳಲ್ಲಿ, ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೌಲ್ಯಮಾಪನದಲ್ಲಿ ಶೈಕ್ಷಣಿಕ ತಂತ್ರಜ್ಞಾನದ ಕ್ರಮಗಳನ್ನು ಅಳವಡಿಸುವುದು.
- ಶೈಕ್ಷಣಿಕ ಮೇಲ್ವಿಚಾರಣೆ ಮತ್ತು ನಿಗಾವಣೆ ವ್ಯವಸ್ಥೆಗಳನ್ನು ವ್ಯವಸ್ಥಿತಗೊಳಿಸುವುದು.
- ಶೈಕ್ಷಣಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸಂಶೋಧನ ಅಧ್ಯಂ ಯನಗಳನ್ನು/ಪ್ರಾಯೋಜನೆಗಳನ್ನು ಕೈಗೊಳ್ಳುವುದು.
- ಎಲ್ಲಾ ಮಟ್ಟಗಳಲ್ಲಿಯೂ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು, ನಿರ್ವಹಣೆ ಮಾಹಿತಿ ವ್ಯವಸ್ಥೆಯನ್ನು (Management Information System-MIS) ಕಂಪ್ಯೂಟರೀಕರಣ ಗೊಳಿಸುವುದು.

**ಸಂಘಟನೆಯ ಸಂರಚನೆ**

ಸರ್ವಶಿಕ್ಷಾ ಅಭಿಯಾನದ ಸಂಘಟನೆ ರಾಜ್ಯಮಟ್ಟದಿಂದ ಆರಂಭವಾಗಿ ಜಿಲ್ಲೆ, ಬ್ಲಾಕ್, ಕ್ಲಸ್ಟರ್ ಮಟ್ಟಗಳ ಮೂಲಕವಾಗಿ ಹಾಗೂ ಶಾಲೆಯ ಮಟ್ಟದಲ್ಲಿ ಕೊನೆಗೊಳ್ಳುತ್ತದೆ. ರಾಜ್ಯಮಟ್ಟದ ಸಂಘಟನೆಯ ಸಂರಚನೆ ಈ ಕೆಳಗಿನಂತಿದೆ.

**ರಾಜ್ಯಮಟ್ಟ**

ರಾಜ್ಯ ಪ್ರಾಯೋಜನ ನಿರ್ದೇಶಕ

↓

ನಿರ್ದೇಶಕ (ಕಾರ್ಯಕ್ರಮಗಳು)

↓ ↓ ↓

| | | |
|---|---|---|
| ಸಹ ನಿರ್ದೇಶಕ ಗುಣಾತ್ಮಕತೆ | ಸಹ ನಿರ್ದೇಶಕ ಆಡಳಿತ | ಸಹನಿರ್ದೇಶಕ ಕಾರ್ಯಕ್ರಮಗಳು |
| ↓ | ↓ | ↓ |
| 6 ಮಂದಿ ಪ್ರಾಯೋಜನ ಅಧಿಕಾರಿಗಳು | 6 ಮಂದಿ ಪ್ರಾಯೋಜನ ಅಧಿಕಾರಿಗಳು | 6 ಮಂದಿ ಪ್ರಾಯೋಜನ ಅಧಿಕಾರಿಗಳು |

Digitised by Bharatavani, CIIL

ಜಿಲ್ಲಾ ಮಟ್ಟದ ಸಂಘಟನೆಯಲ್ಲಿ ಸಾರ್ವಜನಿಕ ಶಿಕ್ಷಣದ ಉಪನಿರ್ದೇಶಕರು–ಆಡಳಿತ(DDPI) ಸರ್ವಶಿಕ್ಷಾ ಅಭಿಯಾನದ ಪದನಿಮಿತ್ತ (Ex-Officio) ಪ್ರಾಯೋಜನ ಸಂಯೋಜಕರಾಗಿದ್ದು ಜಿಲ್ಲಾಮಟ್ಟದ ಎಲ್ಲಾ ಚಟುವಟಿಕೆಗಳು ಇವರ ಮೂಲಕ ನಡೆಯುತ್ತವೆ. ಇವರಿಗೆ ಸಹನಿರ್ದೇಶಕರು ವಿಕಾಸ ಮತ್ತು ಜೊತೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (DIET) ನೀಡುತ್ತಾರೆ. ಇವರುಗಳ ಕೈಕೆಳಗೆ ಒಬ್ಬರು ಪ್ರಾಯೋಜನೆ ಉಪ ಸಂಯೋಜಕರಿರುತ್ತಾರೆ.

ಬ್ಲಾಕ್ ಮಟ್ಟದ ಸಂಘಟನೆಯಲ್ಲಿ ಬ್ಲಾಕ್ ಶಿಕ್ಷಣಾಧಿಕಾರಿಗಳು (BEO) ಮತ್ತು ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು (BRP) ಮತ್ತು ಕ್ಲಸ್ಟರ್ ಮಟ್ಟದಲ್ಲಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಪ್ರಮುಖ ಪಾತ್ರವಹಿಸುತ್ತಾರೆ.

ಶಾಲಾ ಮಟ್ಟದ ಸಂಘಟನೆಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಯ (School Development and Monitoring Committee-SDMC) ಸದಸ್ಯರು, ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಪಾತ್ರವಹಿಸುತ್ತಾರೆ.

**SSAಯ ಕಾರ್ಯಕ್ರಮಗಳು (ಚಟುವಟಿಕೆಗಳು/ಮಧ್ಯಸ್ತಿಕೆಗಳು):** ಸರ್ವಶಿಕ್ಷಾ ಅಭಿಯಾನ, ಕರ್ನಾಟಕದ (SSA) ಎಲ್ಲಾ ಕಾರ್ಯಕ್ರಮಗಳು ಸರಿಯಾದ ಯೋಜನೆಯಿಂದ ಆರಂಭಗೊಳ್ಳುತ್ತವೆ. ಈ ಕಾರ್ಯಕ್ರಮಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ನಿಗದಿತ ಕಾಲಮಿತಿಯಲ್ಲಿ ಸಾಧಿಸಲು ರೂಪಿಸುವ ವಿವಿಧ ರೀತಿಯ ಚಟುವಟಿಕೆಗಳು, ಮಧ್ಯಸ್ತಿಕೆಗಳು (Interventions) ಸೇರಿವೆ. ಕಾರ್ಯಕ್ರಮಗಳ ಯೋಚನೆಗಳು, ಜನವಸತಿ, ಶಾಲೆ, ಕ್ಲಸ್ಟರ್(ಸಂಕುಲ), ಬ್ಲಾಕ್, ಜಿಲ್ಲಾಮಟ್ಟಗಳಲ್ಲಿ ರೂಪುಗೊಂಡು ರಾಜ್ಯಮಟ್ಟದಲ್ಲಿ ಅಂತಿಮ ರೂಪ ಪಡೆಯುತ್ತವೆ. –ತಳಮಟ್ಟದಿಂದ ಮೇಲಿನ ಮಟ್ಟಕ್ಕೆ ಮುಂದುವರೆಯುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸುವುದರಲ್ಲಿ, ಸಮುದಾಯದ, ಶಾಲೆಯ ಪಾಲ್ಗೊಳ್ಳುವಿಕೆಯಲ್ಲಿ ವಿಶ್ವಾಸವಿಟ್ಟಿದೆ. ಶಾಲೆಯ ವಿಕಾಸಕ್ಕೆ ಆಯಾ ಶಾಲೆಯ ಶಾಲಾವಿಕಾಸ ಯೋಜನೆಯನ್ನು ಸಿದ್ಧಪಡಿಸಲಾಗುತ್ತದೆ. ಈ ಯೋಜನೆಯನ್ನು ಶಾಲಾ ಅಭಿವೃದ್ಧಿ ಮತ್ತು ನಿಗಾವಣೆ ಸಮಿತಿಯ (SDMC) ಸದಸ್ಯರು, ಸಮುದಾಯದ ಸದಸ್ಯರು, ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ಒಟ್ಟಿಗೆ ಸೇರಿ ವಿಕಾಸಗೊಳಿಸುತ್ತಾರೆ. SSA ಶಾಲೆಗಳ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಮತ್ತು ಜಿಲ್ಲೆಗಳಿಗೆ ಅನುದಾನಗಳನ್ನು ನೀಡಲು ಜಿಲ್ಲೆಗಳ ಅವುಗಳಲ್ಲಿರುವ ಶೈಕ್ಷಣಿಕ ಬ್ಲಾಕ್‌ಗಳ ಶೈಕ್ಷಣಿಕ ವಿಕಾಸ ಸೂಚ್ಯಂಕಗಳನ್ನು (Education Development Intex -EDI) ಆಧಾರವಾಗಿ ಪರಿಗಣಿಸುತ್ತದೆ. ಇದರಿಂದ ಅವಶ್ಯಕತೆಗಳಿರುವ ಜಿಲ್ಲೆ/ಬ್ಲಾಕ್‌ಗಳಿಗೆ ಸಾಕಷ್ಟು ಅನುದಾನ ದೊರೆಯುತ್ತದೆ.

SSA ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಶಾಲೆಗಳಿಗೆ ಪ್ರವೇಶಾವಕಾಶಗಳನ್ನು, ಶಾಲೆಗಳಲ್ಲಿ ಹಾಜರಾತಿಯನ್ನು ಉತ್ತಮಗೊಳಿಸುವುದಕ್ಕೆ ಆದ್ಯತೆ ನೀಡಿದೆ. ಏಕೆಂದರೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಇವು ಮೂಲಭೂತ ಷರತ್ತುಗಳಾಗಿವೆ. ಇದಕ್ಕಾಗಿ ನಗರ/ಗ್ರಾಮೀಣ ಪ್ರದೇಶಗಳಲ್ಲಿ, ಜಿಲ್ಲೆಗಳಲ್ಲಿ ಪ್ರವೇಶಾವಕಾಶಗಳ ಅನುಪಾತಗಳನ್ನು ಹೆಚ್ಚಿಸಲು ಅನೇಕ ಹೊಸ ಶಾಲೆಗಳನ್ನು ತೆರೆಯಲಾಗಿದೆ. ಶಾಲೆಗಳ ಆರಂಭದ ಮಾನದಂಡಗಳ ಪ್ರಕಾರ ಹೊಸ ಶಾಲೆಗಳನ್ನು ತೆರೆಯಲು ಸಾಧ್ಯವಿಲ್ಲದಿದ್ದೆಡೆ ಮಕ್ಕಳಿಗೆ ಬೇರೆ ಬೇರೆ ಕ್ರಮಗಳಿಂದ ಶಾಲೆಯ ಅನುಕೂಲ ಒದಗಿಸಲಾಗುತ್ತದೆ. ಅನೇಕ ಹಿರಿಯ ಪ್ರಾಥಮಿಕ ಶಾಲೆಗಳಿಗೆ 8ನೇ ತರಗತಿಯನ್ನು ಸೇರಿಸಿ ಅವುಗಳನ್ನು ಉನ್ನತೀಕರಣಗೊಳಿಸಲಾಗಿದೆ. ಸೆಕೆಂಡರಿ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ದಿಶೆಯಲ್ಲಿ, ಎಲ್ಲೆಡೆಯಲ್ಲೂ ಹೈಸ್ಕೂಲುಗಳಿಲ್ಲದ ಕಾರಣ 7ನೇ ತರಗತಿ ಮುಗಿಸುವ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರಿಸಲು ಅನುಕೂಲ ಕಲ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಇರುವ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ಬಾಲಕಿಯರ ಶೌಚಾಲಯ ಮುಂತಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಶಾಲಾಕಟ್ಟಡಗಳಿಗೆ ಬೇಕಾದ ರಿಪೇರಿಗಳನ್ನು ಕೈಗೊಳ್ಳಲಾಗುತ್ತದೆ. ಇದೇ ರೀತಿ ಶಾಲೆಗಳಲ್ಲಿ ಗ್ರಂಥಾಲಯ, ಕಂಪ್ಯೂಟರ್‌ಗಳು, ಪ್ರಯೋಗಶಾಲೆ ಮತ್ತು ಪೀಠೋಪಕರಣಗಳನ್ನು ಉತ್ತಮಪಡಿಸಲಾಗುತ್ತಿದೆ. ಇದರ ಜೊತೆಗೆ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಿಗೆ ಶಾಲೆಯ ಅನುರಕ್ಷಣೆಗೆ (Maintenance) ಅನುರಕ್ಷಣಾ ಅನುದಾನ ನೀಡಲಾಗುತ್ತಿದೆ.

ಶಾಲೆಗಳಲ್ಲಿ ಹಾಜರಾತಿಯನ್ನು ಉತ್ತಮಪಡಿಸಲು SSA ಅನೇಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಸಾಮರ್ಥ್ಯ ಹಾಜರಾತಿ ದರ (Gross Enrolment Rate- GER) ಮತ್ತು ನಿವ್ವಳ ಹಾಜರಾತಿ ದರಕ್ಕೂ (Net Enrolment Ratio-NER) ಇರುವ ಅನುಪಾತವನ್ನು ಕಡಿಮೆ ಮಾಡುವುದು ಈ ಕ್ರಮಗಳ ಉದ್ದೇಶವಾಗಿದೆ. ಇದಕ್ಕಾಗಿ ಮುಖ್ಯವಾಗಿ ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಯಿಂದ ಹೊರಗುಳಿದಿರುವ, ಇದುವರೆಗೂ ಶಾಲೆಗೆ ದಾಖಲಾಗದಿರುವ ಮಧ್ಯದಲ್ಲಿ ಶಾಲೆಯನ್ನು ಬಿಟ್ಟಿರುವ ಮಕ್ಕಳನ್ನು (Out Of School Children-OOSC) ಪುನಃ ಶಾಲೆಗೆ ತರಬೇಕಾಗುತ್ತದೆ. ಇದಕ್ಕಾಗಿ SSA ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿದೆ.

- ಶಾಲೆಗಳನ್ನು ತೆರೆಯಲು ಸಾಧ್ಯವಿಲ್ಲದ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಪೂರೈಕೆ ಶಾಲೆಗಳನ್ನು (Feeder School) ಆರಂಭಿಸಲಾಗುತ್ತದೆ.
- ನಂತರದಲ್ಲಿ ಹತ್ತಿರದಲ್ಲಿರುವ ನಿಯಮಿತ ಶಾಲೆಗೆ ಹಾಜರಾಗಲು ಈ ಮಕ್ಕಳಿಗೆ ವಾಹನ ಸೌಕರ್ಯ ಒದಗಿಸಲಾಗುತ್ತದೆ.
- ಪ್ರಗತಿಯಲ್ಲಿ ಹಿಂದುಳಿದು ಪುನಃ ಶಾಲೆಗೆ ದಾಖಲಾಗುವ ಮಕ್ಕಳಿಗೆ 6 ಅಥವಾ 2 ತಿಂಗಳ ಅವಧಿಯ ವಸತಿ ಸಹಿತ/ವಸತಿ ರಹಿತ ವಿಶೇಷ ತರಬೇತಿ ಬೇರೆ ನೀಡಲಾಗುತ್ತದೆ.
- ಇದುವರೆಗೂ ಶಿಕ್ಷಣ ವ್ಯವಸ್ಥೆಯಿಂದ ದೂರ ಉಳಿದು ಕೇವಲ ಧಾರ್ಮಿಕ ಸ್ವರೂಪದ ಶಿಕ್ಷಣ ನೀಡುತ್ತಿದ್ದು ಅಲ್ಪಸಂಖ್ಯಾತ ಮುಸ್ಲಿಂ ಜನಾಂಗದವರ ಮದ್ರಸಾ ಶಾಲೆಗಳಲ್ಲಿ ಔಪಚಾರಿಕ

Digitised by Bharatavani, CIIL

ಪಠ್ಯಕ್ರಮವನ್ನು ಬೋಧಿಸಲು ಅನುಕೂಲ ಕಲ್ಪಿಸಲು ಮದ್ರಸಾ ವಿಕಾಸ ಯೋಜನೆಯನ್ನು ರೂಪಿಸಲಾಗಿದೆ. ಮದ್ರಸಾಗಳಿಗೆ ವಿವಿಧ ರೀತಿಯ ಅನುದಾನಗಳನ್ನು ನೀಡಲಾಗುತ್ತಿದೆ. ಮದ್ರಸಾಗಳಲ್ಲಿರುವ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರುವುದು ಈ ಕಾರ್ಯಕ್ರಮದ ಗುರಿಯಾಗಿದೆ. ಕ್ರಮೇಣ ಹೆಚ್ಚಿನ ಸಂಖ್ಯೆಯ ಮದ್ರಸಾಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆಯುತ್ತಿದ್ದಾರೆ.

- ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವ ಜನಾಂಗದವರ ಮಕ್ಕಳಿಗೆ ತಾತ್ಕಾಲಿಕವಾಗಿ ನಿರ್ಮಿಸಿದ ಗುಡಾರ ಶಾಲೆಗಳಲ್ಲಿ ಬೋಧಿಸಲಾಗುತ್ತಿದೆ.
- ಸಂಚಾರದ ತೊಂದರೆಗಳು ಇರುವ ಜಿಲ್ಲೆಗಳಲ್ಲಿ ಸಂಚಾರಿ ಶಾಲೆಗಳ ಮೂಲಕ ಬೋಧಿಸಲಾಗುತ್ತಿದೆ.
- ಹೊಸದಾಗಿ ಶಾಲೆಗೆ ಸೇರಿಸುವ ಶಾಲೆ ಬಿಟ್ಟಿದ್ದ ಮಕ್ಕಳಿಗೆ 'ಚಿಣ್ಣರ ಅಂಗಳ'ವೆಂಬ ಹೆಸರಿನ ವಿಶೇಷ ತರಬೇತಿ ನೀಡಲಾಗುತ್ತದೆ.
- ದಾಖಲಾತಿ ವಿಶೇಷ ಅಭಿಯಾನವನ್ನು ಏರ್ಪಡಿಸಿ ಮಕ್ಕಳನ್ನು ಶಾಲೆಗೆ ತರಲಾಗುತ್ತಿದೆ.
- ಶ್ರಮ ಇಲಾಖೆ ನಡೆಸುವ ವಸತಿ ಶಾಲೆಗಳಿಗೆ ಬಾಲ ಕಾರ್ಮಿಕರಾಗಿರುವ ಮಕ್ಕಳನ್ನು ಸೇರಿಸಿ ಶಿಕ್ಷಣ ನೀಡಲಾಗುತ್ತಿದೆ.
- ಬಾಲಕಿಯರ ಶಿಕ್ಷಣಕ್ಕೆ ಒತ್ತು ಕೊಡುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು (KGBU) ಆರಂಭಿಸಲಾಗಿದೆ.
- ತೀವ್ರರೂಪದ ಅಂಗವಿಕಲತೆಗಳಿರುವ ಮಕ್ಕಳಿಗೆ ಗೃಹ ಆಧಾರಿತ ಶಿಕ್ಷಣದ ವ್ಯವಸ್ಥೆ ಮಾಡಲಾಗಿದೆ.

ಮಕ್ಕಳನ್ನು ಶಾಲೆಗೆ ಸೇರಿಸುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅವರನ್ನು ನಿರಂತರವಾಗಿ ಪ್ರಾಥಮಿಕ ಶಾಲಾ ಅವಧಿ ಮುಗಿಯುವವರೆಗೆ ಶಾಲೆಯಲ್ಲಿ ಉಳಿಸಿಕೊಳ್ಳುವುದು. ಒಂದನೇ ತರಗತಿಗೆ ಸೇರಿದ ಬಹುತೇಕ ಎಲ್ಲಾ ಮಕ್ಕಳು 7 ಅಥವಾ 8ನೇ ತರಗತಿಯವರೆಗಿನ (ಉನ್ನತೀಕರಣಗೊಂಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿ ಸೇರಿರುತ್ತದೆ) ಶಿಕ್ಷಣವನ್ನು ಮುಗಿಸಿದಾಗಲೇ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯಶಸ್ವಿಯಾಗಿದೆ ಎಂದು ಹೇಳಬಹುದು. ಅದಕ್ಕಾಗಿಯೇ SSA ದಾಖಲಾದ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಅನೇಕ ಮಧ್ಯಸ್ಥಿಕೆ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಮಧ್ಯದಲ್ಲಿ ಶಾಲೆಯನ್ನು ಬಿಡುವ ಮಕ್ಕಳ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡುವುದು ಈ ಮಧ್ಯಸ್ಥಿಕೆಗಳ ಉದ್ದೇಶವಾಗಿದೆ ಶಾಲೆಯಲ್ಲಿ ಮಕ್ಕಳ ಇರುವಿಕೆಯನ್ನು ಅವರ ಕಲಿಕೆಯನ್ನು ಆನಂದದಾಯಕವಾಗಿ ಮಾಡಿದಾಗ ಮಕ್ಕಳು ಶಾಲೆಯಲ್ಲಿ ಕಲಿಯಬಯಸುತ್ತಾರೆ. ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮ, ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳು, ಲೇಖನ ಸಾಮಗ್ರಿ ಮತ್ತು ಶಾಲಾಬ್ಯಾಗ್, ಶಾಲಾದೂರವನ್ನು ಕ್ರಮಿಸಲು ಸೈಕಲ್‌ಗಳ ಪೂರೈಕೆ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ. ಶಿಕ್ಷಣ ಹಕ್ಕು ಕಾಯ್ದೆ(2009)ಯ ಅನ್ವಯ ವಿದ್ಯಾರ್ಥಿ ಶಿಕ್ಷಕ ಅನುಪಾತವನ್ನು 30:1ರ ಮಾನದಂಡದ ಸಮೀಪದಲ್ಲಿರಿಸಲಾಗಿದೆ. ಹೊಸ ಶಾಲೆಗಳನ್ನು ಆರಂಭಿಸಲಾಗಿದೆ. ಬೋಧನ-ಕಲಿಕಾ ಪ್ರಕ್ರಿಯೆಯನ್ನು ಉತ್ತಮಪಡಿಸಲು ಶಿಕ್ಷಕರ ವೇತನಕ್ಕೆ, ಬೋಧನ ಸಾಮಗ್ರಿಗಳನ್ನು (TLM) ತಯಾರಿಸಲು, ಶಾಲೆಯ ಅನುರಕ್ಷಣೆಗೆ ಅನುದಾನ ನೀಡಲಾಗುತ್ತಿದೆ. ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸಲಾಗುತ್ತಿದೆ.

ಶಾಲೆಗಳಲ್ಲಿನ ಬೋಧನ-ಕಲಿಕಾ ಪ್ರಕ್ರಿಯೆಯ ಗುಣಮಟ್ಟವನ್ನು ಹೆಚ್ಚಿಸಿ, ಎಲ್ಲಾ ಮಕ್ಕಳು ಕಲಿಕೆಯ ನಿರೀಕ್ಷಿತ ಮಟ್ಟವನ್ನು ಕಲಿಕೆಯ ಕನಿಷ್ಠ ಮಟ್ಟಗಳನ್ನು ಸಾಧಿಸುವಂತೆ ಮಾಡುವುದು SSAಯ ಗುರಿಗಳಲ್ಲಿ ಒಂದಾಗಿದೆ. ಬೊಧನ-ಕಲಿಕೆಯ ಗುಣಮಟ್ಟದ ಪರಿಕಲ್ಪನೆ ಒಂದು ಸಂಕೀರ್ಣವಾದ ಪರಿಕಲ್ಪನೆ. ಅದನ್ನು ಸ್ಪಷ್ಟ ರೂಪದಲ್ಲಿ ಅರ್ಥೈಸಿ ಅದರ ನಿರ್ಣಾಯಕಗಳನ್ನು ಗುರ್ತಿಸುವುದು SSAಗೆ ಒಂದು ಸವಾಲಾಗಿದೆ. ಶಿಶುಸ್ನೇಹಿ ತರಗತಿಗಳು, ಅನುಕೂಲಕರವಾದ ಕಲಿಕಾ ಪರಿಸರದ ನಿರ್ಮಾಣ, ಬೋಧನ-ಕಲಿಕಾ ಪ್ರಕ್ರಿಯೆಗೆ ಬೇಕಾದ ಪರಿಕರಗಳ ಪೂರೈಕೆ, ಶಿಕ್ಷಕರ ಸಾಮರ್ಥ್ಯ ನಿರ್ಮಾಣ, ಪ್ರೇರಕವಾದ ಶಾಲಾ ನಾಯಕತ್ವ, ನಿರ್ದಿಷ್ಟ ಉದ್ದೇಶಗಳು ಮತ್ತು ಪಠ್ಯಕ್ರಮ ಇವು ಗುಣಮಟ್ಟವನ್ನು ನಿರ್ಣಯಿಸುವ ಕೆಲವು ಕಾರಣಾಂಶಗಳಾಗಿವೆ. ಈ ದಿಶೆಯಲ್ಲಿ ಬೋಧನ-ಕಲಿಕೆ ಗುಣಮಟ್ಟವನ್ನು ಹೆಚ್ಚಿಸಲು SSA ಈ ಕೆಳಕಂಡ ಕಾರ್ಯಕ್ರಮಗಳನ್ನು ಮಧ್ಯಸ್ತಿಕೆಗಳನ್ನು ಆರಂಭಿಸಿದೆ.

ಬೋಧನಾ-ಕಲಿಕಾ ಪ್ರಕ್ರಿಯೆ ಗುಣಮಟ್ಟವನ್ನು ಉತ್ತಮಪಡಿಸುವ ಪ್ರಯತ್ನಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು/ ಚಟುವಟಿಕೆಗಳನ್ನು SSA ಆರಂಭಿಸಿ ಅವುಗಳನ್ನು ಮುಂದುವರಿಸುತ್ತಾ ಬಂದಿದೆ.

- ಗ್ರಂಥಾಲಯಗಳ ಸೌಲಭ್ಯವನ್ನು ಉತ್ತಮಪಡಿಸಲು ಅನುದಾನ ನೀಡುವುದು. ಕ್ರಮಬದ್ಧವಾಗಿ ಪುಸ್ತಕಗಳನ್ನು ಆಯ್ಕೆ ಮಾಡುವುದು.
- ಪಠ್ಯಪುಸ್ತಕಗಳನ್ನು ಉತ್ತಮ ರೀತಿಯಲ್ಲಿ ಸಿದ್ಧಪಡಿಸುವುದು.
- ಕಲಿಕೆಯ ಮಟ್ಟವನ್ನು ಹೆಚ್ಚಿಸಲು ನವೀನ ಚಟುವಟಿಕೆ ಆಧಾರಿತ 'ನಲಿ ಕಲಿ' ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಮಕ್ಕಳ ಕಲಿಕಾ ಮಟ್ಟಗಳನ್ನು ಗುರ್ತಿಸಲು ಪ್ರಯತ್ನಿಸಲಾಗಿದೆ.
- ವಿಜ್ಞಾನ ಕಲಿಕೆಯನ್ನು ಉತ್ತಮಪಡಿಸಲು ಸಂಚಾರಿ ಪ್ರಯೋಗಾಲಯಗಳನ್ನು ಆರಂಭಿಸಲಾಗಿದೆ.
- ಮೂಲಭೂತ ಕಲಿಕಾ ಕೌಶಲಗಳಾದ ಓದು, ಬರಹ ಮತ್ತು ಲೆಕ್ಕಾಚಾರವನ್ನು ಉತ್ತಮಪಡಿಸಲು 'ಸ್ಪಷ್ಟ ಓದು' 'ಶುದ್ಧ ಬರಹ' ಮತ್ತು 'ಸರಳ ಗಣಿತ' ಕಾರ್ಯಕ್ರಮಗಳು ಆರಂಭವಾಗಿವೆ.
- ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಲು ಶೈಕ್ಷಣಿಕ ವರ್ಷದ

Digitised by Bharatavani, CIIL

ಆರಂಭದಲ್ಲೇ 30 ದಿನಗಳ ಪರಿಚಯ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಅಧ್ಯಾಪಕರ ತರಬೇತಿ ಕಾರ್ಯಕ್ರಮಗಳಿಗೆ ಖಾಸಗಿ ನಿಲಯಗಳಾದ ಅಕ್ಷರ ಫೌಂಡೇಷನ್ ಮತ್ತು ಪ್ರಜಾಯತ್ನಗಳ ಸಹಕಾರವನ್ನು ತೆಗೆದುಕೊಳ್ಳಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ಶಿಕ್ಷಕರ ಅಗತ್ಯಗಳನ್ನು ವಿಶ್ಲೇಷಿಸಿ ಬ್ಲಾಕ್/ಕ್ಲಸ್ಟರ್ ಮಟ್ಟಗಳಲ್ಲಿ ವಿಚಾರ ವಿನಿಮಯ ಸಭೆಗಳನ್ನು ನಡೆಸಲಾಗುತ್ತಿದೆ. ಮೇಲ್ವಿಚಾರಣ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದೆ.

– ಶಾಲೆಯ ಗುಣಮಟ್ಟವನ್ನು ನಿಗಾವಣೆ ಮಾಡಲು 2012ರಲ್ಲಿ SSA ಕೆಲವು ಸಾಧನಗಳನ್ನು ರೂಪಿಸಿದೆ. ಇವುಗಳ ಸಹಾಯದಿಂದ ಶಾಲೆ/ಕ್ಲಸ್ಟರ್/ಬ್ಲಾಕ್/ಜಿಲ್ಲೆ/ರಾಜ್ಯ ಮಟ್ಟಗಳಲ್ಲಿ ಶಿಕ್ಷಣದ ಗುಣಮಟ್ಟದ ನಿಗಾವಣೆ ಮಾಡಲಾಗುತ್ತಿದೆ.

– ಸಮುದಾಯಗಳಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸಲು ಮತ್ತು ಮಕ್ಕಳನ್ನು ಶಾಲೆಗೆ ಬರುವಂತೆ ಪ್ರೋತ್ಸಾಹಿಸಲು SSA ಅನೇಕ ರಾಜ್ಯಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅವುಗಳಲ್ಲಿ 'ಶಾಲೆಗಾಗಿ ನಾವು–ನೀವು', 'ಶಿಕ್ಷಣ ಒಂದು ಅಧಿಕಾರದ ಅಭಿಯಾನ', 'ಸಮುದಾಯದತ್ತ ಶಾಲೆ', ಶಿಕ್ಷಣದ ಗುಣಾತ್ಮಕತೆ ಬಗ್ಗೆ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ, ದೂರದರ್ಶನ ಮತ್ತು ರೇಡಿಯೋ ಮಾಧ್ಯಮಗಳ ಮೂಲಕ 'ಶಿಕ್ಷಣ ಮಂಥನ', 'ನಲಿ–ಕಲಿ' ಮುಂತಾದ ಕಾರ್ಯಕ್ರಮಗಳ ಪ್ರಸಾರ, ಪ್ರಚಾರ ಸಾಮಗ್ರಿಗಳ ತಯಾರಿಕೆ ಮತ್ತು ವಿತರಣೆ, "ಪ್ರಾಥಮಿಕ ಶಿಕ್ಷಣ' ನಿಯತಕಾಲಿಕೆಗಳ ಪ್ರಕಾಶನ ಮುಖ್ಯವಾದವುಗಳಾಗಿವೆ.

ಶಿಕ್ಷಣ ವ್ಯವಸ್ಥೆಯಲ್ಲಿ ಕೆಲವು ಸಮೂಹಗಳ ಮಕ್ಕಳು ಶಿಕ್ಷಣದ ಪ್ರಗತಿಯಲ್ಲಿ ಹಿಂದೆ ಬೀಳುತ್ತಿರುವುದು ಭಾರತೀಯ ಶಿಕ್ಷಣದ ಮತ್ತೊಂದು ಸಮಸ್ಯೆಯಾಗಿದೆ. ಬಾಲಕಿಯರು, ಪರಿಶಿಷ್ಟ ಜಾತಿ/ಬುಡಕಟ್ಟುಗಳ ಮಕ್ಕಳು, ಅಲ್ಪಸಂಖ್ಯಾತರ ಮಕ್ಕಳು–ವಿಶೇಷವಾಗಿ ಮುಸ್ಲಿಂ ಮಕ್ಕಳು, ನಗರ ಪ್ರದೇಶಗಳ ಅವಕಾಶ ವಂಚಿತ ಮಕ್ಕಳು (ಬೀದಿ ಮಕ್ಕಳು, ದುಡಿಯುವ ಮಕ್ಕಳು, ಕೊಳಚೆ ಪ್ರದೇಶಗಳ ಮಕ್ಕಳು) ಮತ್ತು ವಿವಿಧ ರೀತಿಯ ಅಸಮರ್ಥತೆಗಳುಳ್ಳ ಮಕ್ಕಳು ಈ ರೀತಿಯ ಶಿಕ್ಷಣಕ್ಕೆ ವಿಶೇಷ ಗಮನ ನೀಡಿ ಈ ಸಮೂಹಗಳ ಮಕ್ಕಳ ಶೈಕ್ಷಣಿಕ ಮಟ್ಟವನ್ನು ಉತ್ತಮಪಡಿಸಲು ನಿರ್ದಿಷ್ಟವಾದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಬಾಲಕಿಯರ ಶಿಕ್ಷಣವನ್ನು ಪ್ರೋತ್ಸಾಹಿಸಿ, ಉತ್ತಮಪಡಿಸಲು ರಾಷ್ಟ್ರಮಟ್ಟದಲ್ಲಿ ಪ್ರಾಥಮಿಕ ಮಟ್ಟದಲ್ಲಿ ಬಾಲಕಿಯರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮವನ್ನು National Programme for Education of Girls at Elementary Level- NPEGEL) ಆರಂಭಿಸಲಾಗಿದೆ. ಇದರಡಿಯಲ್ಲಿ 64 ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ 1451 ಮಾದರಿ ಕ್ಲಸ್ಟರ್ ಶಾಲೆಗಳನ್ನು ಆರಂಭಿಸಲಾಯಿತು. ಇವುಗಳಲ್ಲಿ 108 ಶಾಲೆಗಳನ್ನು ಮಹಿಳಾ ಸಮಾಖ್ಯ ಖಾಸಗಿ ಸಂಸ್ಥೆ ನಿರ್ವಹಣೆ ಮಾಡುತ್ತಿದೆ. ಈ ಶಾಲೆಗಳಲ್ಲಿ ಬಾಲಕಿಯರಿಗೆ ವಿವಿಧ ಔದ್ಯೋಗಿಕ ಕೌಶಲಗಳನ್ನು ಕಲಿಸಲಾಗುತ್ತದೆ. 'ಕಿಶೋರಿ' ಎಂಬ ಕಾರ್ಯಕ್ರಮದ ಮೂಲಕ ಬಾಲಕಿಯರಿಗೆ ಕಿಶೋರಾವಸ್ಥೆಯ ಸಮಸ್ಯೆಗಳಿಗೆ ಹೊಂದಿಕೊಳ್ಳಲು ಸಮಾಲೋಚನೆ ನೀಡಲಾಗುತ್ತಿದೆ. ಬಾಲಕಿಯರಿಗಾಗಿಯೇ 2011–12ರಲ್ಲಿ 71 ಕಸ್ತೂರ್ ಬಾ ಗಾಂಧಿ ವಸತಿ ಶಾಲೆಗಳನ್ನು (Kastur Ba Gandhi Balika Vidyalay-KGBV) ಆರಂಭಿಸಲಾಗಿದೆ. ಈ ಶಾಲೆಗಳಿಗೆ ವಿಶೇಷವಾಗಿ ಶಾಲೆಯನ್ನು ಬಿಟ್ಟಿರುವ ಹೆಣ್ಣು ಮಕ್ಕಳನ್ನು ಪರೀಕ್ಷೆ ಮಾಡಿ ಅವರ ಸಾಧನೆ ಆಧಾರದ ಮೇಲೆ 6, 7 ಅಥವಾ 8ನೇ ತರಗತಿಗೆ ಸೇರಿಸಿಕೊಳ್ಳಲಾಗುತ್ತದೆ. ಅಗತ್ಯವಿದ್ದಲ್ಲಿ ಈ ಬಾಲಕಿಯರಿಗೆ ಪರಿಹಾರಾತ್ಮಕ ಬೋಧನೆ ಮಾಡಲಾಗುತ್ತದೆ. ಯೋಗ, ಕರಾಟೆಗಳಲ್ಲಿ ತರಬೇತಿ ನೀಡಲಾಗುತ್ತದೆ. ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳೂ ಇರುತ್ತವೆ.

ಸಾಮಾಜಿಕವಾಗಿ ವಂಚಿತವಾದ ಗುಂಪುಗಳಿಗೆ ಸೇರಿದ ಎಸ್.ಸಿ/ಎಸ್.ಟಿ ಮತ್ತು ಮುಸ್ಲಿಂ ಮಕ್ಕಳಿಗೆ ಕೆಲವು ನವೀನ ಚಟುವಟಿಕೆಗಳನ್ನು SSA ಆಯೋಜಿಸುತ್ತಿದೆ. ಅವುಗಳಲ್ಲಿ ಎರಡು ಕಾರ್ಯಕ್ರಮಗಳು ಮುಖ್ಯವಾದವುಗಳು. ಮೊದಲನೆಯದು 'ಚಿಣ್ಣರ ಜಿಲ್ಲಾ ದರ್ಶನ', ಇದನ್ನು ಮೊದಲಿಗೆ ಚಿಣ್ಣರ ಕರ್ನಾಟಕ ದರ್ಶನ ಎಂದು ಹೇಳಲಾಗುತ್ತಿತ್ತು. ಈ ಕಾರ್ಯಕ್ರಮದಡಿಯಲ್ಲಿ ಪ್ರತಿವರ್ಷ ಕರ್ನಾಟಕ ರಾಜ್ಯ ಸಾರಿಗೆ ನಿಗಮ ಮತ್ತು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮಗಳ ಸಹಕಾರದೊಂದಿಗೆ ವಂಚಿತ ಗುಂಪುಗಳ ಆಯ್ದ ಮಕ್ಕಳಿಗೆ ಪ್ರತಿವರ್ಷ ಅವರ ಜಿಲ್ಲೆಯ ಪ್ರವಾಸ ಮಾಡಿಸಿ ಜಿಲ್ಲೆಯ ದರ್ಶನ ಮಾಡಿಸಲಾಗುತ್ತದೆ. ಪ್ರವಾಸದ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ. ಇನ್ನೊಂದು ಕಾರ್ಯಕ್ರಮವೆಂದರೆ ಸಾಹಸ ಮತ್ತು ಪ್ರಕೃತಿ ಅಧ್ಯಯನ ಶಿಬಿರಗಳ ಆಯೋಜನೆ. ಈ ಕಾರ್ಯಕ್ರಮದಡಿಯಲ್ಲಿ 2–3 ದಿನಗಳವರೆಗೆ ಆಯ್ದ ಮಕ್ಕಳಿಗೆ ಪ್ರಕೃತಿ ತಾಣ ಒಂದರಲ್ಲಿ ಶಿಬಿರವನ್ನು ಏರ್ಪಡಿಸಿ ಮಕ್ಕಳಿಗೆ ಪ್ರಕೃತಿ ಅಧ್ಯಯನದ ಅವಕಾಶ ಒದಗಿಸುವುದಲ್ಲದೆ ಪರ್ವತಾರೋಹಣ, ಬಂಡೆ ಹತ್ತುವುದು, ಪ್ಯಾರಾಸೇಲಿಂಗ್, ಬೋಟಿಂಗ್ ಮುಂತಾದ ಸಾಹಸ ಚಟುವಟಿಕೆಗಳನ್ನು ಆಯೋಜಿಸಲಾಗುತ್ತದೆ.

ಇವಲ್ಲದೆ ನಗರ ಪ್ರದೇಶಗಳ ಅವಕಾಶವಂಚಿತ ಮಕ್ಕಳಿಗೂ SSA ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿದೆ. ಬೀದಿ ಮಕ್ಕಳು, ಮನೆಯಿಂದ ಓಡಿ ಹೋದ ಮಕ್ಕಳು, ದುಶ್ಚಟಗಳಿಗೆ ಒಳಗಾದ ಮಕ್ಕಳು, ದುಡಿಮೆ ಮಕ್ಕಳನ್ನು ಗುರ್ತಿಸಿ ಅವರು ತಾತ್ಕಾಲಿಕವಾಗಿ ತಂಗಲು ಕಾರ್ಪೋರೇಷನ್ ಇರುವ 8 ಜಿಲ್ಲೆಗಳಲ್ಲಿ 'ಚಿಣ್ಣರ ತಂಗುಧಾಮ'ಗಳೆಂಬ ವಸತಿ ಗೃಹಗಳನ್ನು ಆರಂಭಿಸಲಾಗಿದೆ. ಈ ತಂಗುಧಾಮಗಳಲ್ಲಿ ಮಕ್ಕಳನ್ನು ತಾತ್ಕಾಲಿಕವಾಗಿ ಸ್ವಲ್ಪ ಅವಧಿಯವರೆಗೆ ಇಟ್ಟುಕೊಳ್ಳಲಾಗುತ್ತದೆ. ಅವರ ಆಹಾರ, ಆರೋಗ್ಯದ ಬಗ್ಗೆ ನೋಡಿಕೊಳ್ಳಲಾಗುತ್ತದೆ. ಶೈಕ್ಷಣಿಕ ಚಟುವಟಿಕೆಗಳನ್ನು ಸಮಾಲೋಚನ ಸತ್ರಗಳನ್ನು ಏರ್ಪಡಿಸಲಾಗುತ್ತದೆ. ಮಕ್ಕಳ

Digitised by Bharatavani, CIIL

ತಂದೆ–ತಾಯಿಯನ್ನು ಗುರ್ತಿಸಿ ಮಕ್ಕಳನ್ನು ಅವರ ಮನೆಗಳಿಗೆ ಕಳುಹಿಸುವ ಕ್ರಮ ಕೈಗೊಳ್ಳಲಾಗುತ್ತದೆ. ಮಾದಕ ವಸ್ತುಗಳ ಸೇವನೆ, ಮದ್ಯಪಾನ, ಧೂಮಪಾನ, ಕಳ್ಳತನ ಮುಂತಾದ ದುಶ್ಚಟಗಳಿಗೆ ಬಲಿಯಾಗಿರುವ ಮಕ್ಕಳನ್ನು ಮಾದಕ ನಿರ್ವ್ಯಸನ ಶಿಬಿರಗಳಿಗೆ (Deaddiction Camps) ಸೇರಿಸಿ ಚಿಕಿತ್ಸೆ ಮಾಡಿಸಲಾಗುತ್ತದೆ ಶೈಕ್ಷಣಿಕವಾಗಿ ಆಸಕ್ತಿ, ಸಾಧನೆ ತೋರಿಸುವ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲಾಗುತ್ತದೆ.

ವಿಶೇಷ ಅಗತ್ಯಗಳುಳ್ಳ ಮಕ್ಕಳ (Children with Special Needs-CWSN) ಶಿಕ್ಷಣಕ್ಕೆ SSA ವಿಶೇಷ ಗಮನ ನೀಡಿದೆ. ದೃಷ್ಟಿದೋಷಗಳುಳ್ಳವರು, ಶ್ರವಣ ದೋಷಗಳುಳ್ಳವರು, ಬುದ್ಧಿ ಮಾಂದ್ಯತೆ ಇರುವವರು, ಅಂಗಾಂಗಗಳ ದೋಷಗಳುಳ್ಳವರು, ಸೆರೆಬ್ರಲ್ ಪಾಲ್ಸಿ (ಮೆದುಳಿನ ಪಾರ್ಶ್ವ ವಾಯು), ಎಪಿಲೆಪ್ಸಿ (ಮೂರ್ಛೆರೋಗ) ಪೀಡಿತರು, ಅತಿ ಚಟುವಟಿಕೆ ಮತ್ತು ಅವಧಾನ ತೊಂದರೆ ಇರುವವರು, HADH ಲಕ್ಷಣವಿರುವವರು ಮತ್ತು ನಿರ್ದಿಷ್ಟ ಕಲಿಕಾ ತೊಂದರೆಗಳುಳ್ಳವರು (L.D)– ಈ ಗುಂಪಿನಲ್ಲಿ ಸೇರುತ್ತಾರೆ. ಈ ಮಕ್ಕಳಿಗೆ ವಿವಿಧ ರೀತಿಯ ದೈಹಿಕ ಮಾನಸಿಕ ಅಸಮರ್ಥತೆಗಳಿರುತ್ತವೆ. ಅವರದೇ ವಿಶೇಷ ಸಮಸ್ಯೆಗಳು/ಅಗತ್ಯಗಳಿರುತ್ತವೆ. ಈ ವರ್ಗದ ಮಕ್ಕಳಿಗೆ ವಿಶೇಷ ವಿಧಾನಗಳನ್ನು ಅನುಸರಿಸಿ ವಿಶೇಷ ಶಿಕ್ಷಣ ಕೊಡಬೇಕಾಗುತ್ತದೆ. ಈ ಮಕ್ಕಳಲ್ಲಿ ತೀವ್ರವಾದ ಅಸಮರ್ಥತೆಗಳುಳ್ಳವರನ್ನು ಹೊರತುಪಡಿಸಿ ಬಹುಸಂಖ್ಯೆಯ ಮಕ್ಕಳನ್ನು ಸಾಮಾನ್ಯ ಮಕ್ಕಳೊಂದಿಗೆ ಶಾಲೆಗೆ ಸೇರಿಸಿ ಶಿಕ್ಷಣ ನೀಡುವುದು ಇತ್ತೀಚಿನ ಕ್ರಮವಾಗಿದೆ ಇದನ್ನೇ ಸಮನ್ವಯ ಶಿಕ್ಷಣ (Inclusive Education) ಎನ್ನುತ್ತಾರೆ. ಸಮನ್ವಯ ಶಿಕ್ಷಣದಡಿಯಲ್ಲಿ SSA ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅವುಗಳು ಹೀಗಿವೆ.

- CWSNಗಳನ್ನು ಗುರ್ತಿಸಲು ಮನೆಯಿಂದ ಮನೆಗೆ ಹೋಗಿ ಸಮೀಕ್ಷೆ ಮಾಡಲಾಗುತ್ತದೆ.
- ಕಾರ್ಯಾತ್ಮಕ ಮೌಲ್ಯಮಾಪನ ಶಿಬಿರಗಳನ್ನು ಏರ್ಪಡಿಸಿ ಮಕ್ಕಳ ಅಸಮರ್ಥತೆಯ ಮಟ್ಟವನ್ನು, ಅವರ ವರ್ತನೆಯ ಮಟ್ಟವನ್ನು ನಿರ್ಧರಿಸಲಾಗುತ್ತದೆ.
- ಮಕ್ಕಳ ಅಸಮರ್ಥತೆಗಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸೂಕ್ತವಾದ ಸಹಾಯ ಸಾಧನಗಳನ್ನು/ಉಪಕರಣಗಳನ್ನು ಒದಗಿಸಲಾಗುತ್ತದೆ.
- ಇಂಥ ಮಕ್ಕಳನ್ನು ಸಾಮಾನ್ಯ ಶಾಲೆಗೆ ಸೇರಿಸಿ ಅವರ ಬೋಧನೆಗೆ ಬೇಕಾದ ಸಹಾಯ ನೀಡಲು ಬ್ಲಾಕ್ ಮಟ್ಟದಲ್ಲಿ ಸಂಪನ್ಮೂಲ ಕೊಠಡಿಗಳನ್ನು ತೆರೆಯಲಾಗಿದೆ.
- ಅಸಮರ್ಥತೆಯುಳ್ಳ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಲು ಸಹಚರರ ಸೌಲಭ್ಯವನ್ನು, ವಾಹನ ಸೌಲಭ್ಯವನ್ನು ಒದಗಿಸಲಾಗುತ್ತದೆ.
- ಜಿಲ್ಲಾಮಟ್ಟದಲ್ಲಿ ಮಕ್ಕಳನ್ನು ಗುರ್ತಿಸಿ ಅವರಿಗೆ ಅಗತ್ಯವಾದ ಶಸ್ತ್ರಚಿಕಿತ್ಸೆಯನ್ನು ಮಾಡಿಸಲಾಗುತ್ತದೆ.
- ಈ ಮಕ್ಕಳು ಶಾಲೆಗಳಲ್ಲಿ ಸುಲಭವಾಗಿ ಓಡಾಡಲು ಅನುಕೂಲ ಕಲ್ಪಿಸಲು ರ್‍ಯಾಂಪ್‌ಗಳ ನಿರ್ಮಾಣದ ಮೂಲಕ ಶಾಲೆಗಳನ್ನು ಅಡಚಣೆ ಮುಕ್ತಗೊಳಿಸಲಾಗುತ್ತಿದೆ.
- ತರಗತಿ ಶಿಕ್ಷಕರಿಗೆ ಅಸಮರ್ಥ ಮಕ್ಕಳ ಶಿಕ್ಷಣದಲ್ಲಿ ಸಹಾಯ ನೀಡಲು ಅನೇಕ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರನ್ನು (Inclusive Education Resource Teacher-IERT) ನೇಮಿಸಲಾಗಿದೆ.
- ಶಾಲೆಗೆ ಸುಲಭವಾಗಿ ಬರಲು ಸಾಧ್ಯವಿಲ್ಲದಿರುವ ಅಸಮರ್ಥತೆಗಳುಳ್ಳ ಮಕ್ಕಳಿಗೆ ಮನೆಯಲ್ಲಿಯೇ ಶಿಕ್ಷಣ ನೀಡಲಾಗುತ್ತದೆ. ಸ್ವಯಂ ಸೇವಕರು IERT ಗಳ ಸಹಾಯದೊಂದಿಗೆ ಈ ಕಾರ್ಯ ಕೈಗೊಳ್ಳುತ್ತಾರೆ. ಈ ಕಾರ್ಯಕ್ರಮವೇ ಗೃಹ ಆಧಾರಿತ ಶಿಕ್ಷಣ (Home Based Education- HBE)
- ನಿಯಮಿತ ಶಾಲೆಗಳ ಶಿಕ್ಷಕರಿಗೆ ಅಸಮರ್ಥತೆಗಳುಳ್ಳ ಮಕ್ಕಳ ಬೋಧನೆ ಮತ್ತು ನಿರ್ವಹಣೆ ಬಗ್ಗೆ 90 ಮತ್ತು 5 ದಿನಗಳ ತರಬೇತಿ ನೀಡಲಾಗುತ್ತದೆ.
- CWSN ಸಾಮಾನ್ಯ ಮಕ್ಕಳೊಂದಿಗೆ ಸಹಾಯ ಶಿಬಿರಗಳಲ್ಲಿ ಮತ್ತು ಪ್ರಕೃತಿ ಅಧ್ಯಯನ ಶಿಬಿರಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ.
- ಸಮುದಾಯದಲ್ಲಿ ವಿಶೇಷ ಅಗತ್ಯಗಳುಳ್ಳ ಮಕ್ಕಳ (CWNN) ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

SSA ಕೆಲವು ನವೀನ ಆಚರಣೆಗಳ ಬಗ್ಗೆಯೂ ಕಾರ್ಯಕ್ರಮಗಳನ್ನು ರೂಪಿಸಿದೆ. ಇಡೀ ರಾಜ್ಯದ ಶಾಲೆಗಳ ಮತ್ತು ಶಾಲಾ ವ್ಯವಸ್ಥೆ ನಿರ್ವಹಣೆಯ ಬಗ್ಗೆ ಅವಶ್ಯಕ ಮಾಹಿತಿಗಳನ್ನು ಮತ್ತು ಅಂಕಿ ಅಂಶಗಳನ್ನು ಕಂಪ್ಯೂಟರೀಕರಣಗೊಳಿಸಲು SSA ನಿರ್ವಹಣಾ ಮಾಹಿತಿ ವ್ಯವಸ್ಥೆಯನ್ನು ರೂಪಿಸಿದೆ. ಈ ವ್ಯವಸ್ಥೆಯ ಮೂಲಕ ವಿಳಂಬವಿಲ್ಲದೆ ಒಬ್ಬರನ್ನೊಬ್ಬರು ಸಂಪರ್ಕಿಸಿ ಅಗತ್ಯವಿರುವ ಮಾಹಿತಿಯನ್ನು ಪಡೆಯಲು ಸಾಧ್ಯವಾಗಿರುತ್ತದೆ. ಈ ವ್ಯವಸ್ಥೆಯೇ ಜಿಲ್ಲಾ ಶಾಲಾ ಮಾಹಿತಿ ವ್ಯವಸ್ಥೆ (District Information School Education (DISE).

ಮಕ್ಕಳಿಗೆ ಕಂಪ್ಯೂಟರ್ ಸಹಾಯದಿಂದ ಬೋಧಿಸಲು ಕಂಪ್ಯೂಟರ್ ಸಹಾಯಕ ಬೋಧನಾ ಕೇಂದ್ರಗಳನ್ನು Computer Assisted Learning Centres-CALC) ರಾಜ್ಯಾದ್ಯಂತ ತೆರೆದಿರುವುದು ಮತ್ತೊಂದು ನವೀನ ಅಭಿಪ್ರೇರಣೆಯಾಗಿದೆ. 2011–12ರಲ್ಲಿ 2260 CAL ಕೇಂದ್ರಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆರಂಭಿಸಲಾಗಿದೆ. ಇದುವರೆಗೆ ಒಟ್ಟು 3699

Digitised by Bharatavani, CIIL

ಕೇಂದ್ರಗಳನ್ನು ಆರಂಭಿಸಲಾಗಿದೆ. ಮಕ್ಕಳ ಉಪಯೋಗಕ್ಕಾಗಿ 185 ಶೀರ್ಷಿಕೆಗಳ ಬೋಧನಾ ಕಲಿಕಾ ಸಾಮಗ್ರಿಯನ್ನು ಸಿದ್ಧಪಡಿಸಲಾಗಿದೆ. ದೂರ ಶಿಕ್ಷಣ ಕ್ಷೇತ್ರ SSAಯ ನವೀನ ಆಚರಣೆಗಳ ಮತ್ತೊಂದು ಹೆಜ್ಜೆಯಾಗಿದೆ. ದೂರ ಶಿಕ್ಷಣದ ಮೂಲಕ ಮಕ್ಕಳಿಗೆ ಕಲಿಯಲು ಅವಕಾಶ ಕಲ್ಪಿಸಲು "ಚುಕ್ಕಿ-ಚಿನ್ನ", 'ಚಿಣ್ಣರ ಚುಕ್ಕಿ', 'ಕೇಳಿ ಕಲಿ', ರೇಡಿಯೋ ಕಾರ್ಯಕ್ರಮಗಳನ್ನು ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಬೋಧನೆ ಕಾರ್ಯಕ್ರಮದಡಿಯಲ್ಲಿ ವಾರದಲ್ಲಿ ಕೆಲವು ದಿನಗಳಲ್ಲಿ ಪ್ರಸಾರ ಮಾಡಲಾಗುತ್ತಿದೆ. ಉಪಗ್ರಹದ ಮೂಲಕ ಪ್ರಸಾರಗೊಳ್ಳುವ ಶೈಕ್ಷಣಿಕ ಕಾರ್ಯಕ್ರಮವಾದ 'ಎಡುಸ್ಯಾಟ್' ಕಾರ್ಯಕ್ರಮ ಒಂದು ಮಹತ್ವದ ನವೀನ ಆಚರಣೆಯಾಗಿದ್ದು ಅದು ಸಾಕಷ್ಟು ಜನಪ್ರಿಯವೂ ಆಗಿದೆ.

ಸಿವಿಲ್ ಕಾಮಗಾರಿ ಕಾರ್ಯಕ್ರಮದಲ್ಲಿ ಹೊಸ ಶಾಲಾ ಕಟ್ಟಡ ನಿರ್ಮಿಸಲು, ಶಾಲೆಗಳಲ್ಲಿ ಅತಿರಿಕ್ತ ಕೊಠಡಿಗಳನ್ನು ನಿರ್ಮಿಸಲು, ಶಾಲೆಗಳಿಗೆ ವಿದ್ಯುತ್ ದೀಪ, ಶೌಚಾಲಯ, ರ್‍ಯಾಂಪ್‌ಗಳು, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು, ಗ್ರಂಥಾಲಯ ಪೀಠೋಪಕರಣಗಳು ಮತ್ತು ಅಗ್ನಿಶಾಮಕಗಳ ವ್ಯವಸ್ಥೆಯನ್ನು ಮಾಡಲು SSA ಹಣವನ್ನು ವಿನಿಯೋಗಿಸುತ್ತಿದೆ. ಸಿವಿಲ್ ನಿರ್ಮಾಣ ಕಾರ್ಯಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಮೇಲ್ವಿಚಾರಣೆ ಮಾಡಲು ಇಂಜಿನಿಯರಿಂಗ್ ಅರ್ಹತೆಗಳುಳ್ಳ ಸಿಬ್ಬಂದಿ ವರ್ಗದ ವ್ಯವಸ್ಥೆಯನ್ನು ಮಾಡಲಾಗಿದೆ.

ಸಂಶೋಧನೆ, ಮೌಲ್ಯಮಾಪನ, ನಿಗಾವಣೆ ಮತ್ತು ಮೇಲ್ವಿಚಾರಣೆಗಳಿಗೂ (Research, Evaluation, Monitoring and Supervisor-REMS) SSA ಸಾಕಷ್ಟು ಗಮನ ನೀಡುತ್ತಿದೆ. ಇದಕ್ಕಾಗಿ ರಾಜ್ಯ ಮಟ್ಟದ ಸಂಶೋಧನಾ ಸಲಹಾಸಮಿತಿಯನ್ನು ನೇಮಿಸಲಾಗಿದೆ. ಆಗಾಗ್ಗೆ ಅಗತ್ಯವಿರುವ ವಿಚಾರಗಳ/ಸಮಸ್ಯೆಗಳ ಬಗ್ಗೆ ಚರ್ಚಿಸಲು/ವಿಚಾರ ವಿನಿಮಯ ಮಾಡಲು ವಿಚಾರ ಸಂಕಿರಣವನ್ನು ಮತ್ತು ಪುನರಾವಲೋಕನ ಸಲಹೆಗಳನ್ನು ಆಯೋಜಿಸಲಾಗುತ್ತದೆ. ರಾಷ್ಟ್ರೀಯ ಪಠ್ಯಕ್ರಮ-2005ರ ಬಗ್ಗೆ ಏರ್ಪಡಿಸಿದ್ದ ವಿಚಾರ ಸಂಕಿರಣ ಈ ಬಗೆಯದಾಗಿದೆ. ಶಾಲೆಗಳ ಮಟ್ಟದಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಫ್ಲ್ಯಾನಲ್ ಬೋರ್ಡ್‌ಗಳನ್ನು ಒದಗಿಸಲಾಗಿದೆ. ವಿವಿಧ ಮಟ್ಟಗಳಲ್ಲಿ ವಿದ್ಯಾರ್ಥಿಗಳಿಗಾಗಿ ವಸ್ತು ಪ್ರದರ್ಶಗಳನ್ನು ಮತ್ತು ಬೋಧನಾ ಕಲಿಕಾ ಸಾಮಗ್ರಿಗಳ ಮೇಳ (Teaching Learning Metrial Mela)ಗಳನ್ನು ಏರ್ಪಡಿಲಾಗುತ್ತದೆ. ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗಳು ಅಭಿವ್ಯಕ್ತಿಗೊಳ್ಳಲು ಅನುಕೂಲವಾಗುವಂತೆ ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಮಟ್ಟಗಳಲ್ಲಿ 'ಪ್ರತಿಭಾ ಕಾರಂಜಿ' ಕ್ವಿಜ್ ಮುಂತಾದ ಸಹಪಠ್ಯ ಚಟುವಟಿಕೆಗಳನ್ನು ಏರ್ಪಡಿಸಿ, ಸ್ಪರ್ಧೆಗಳಲ್ಲಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡುವ ವ್ಯವಸ್ಥೆ ಮಾಡಲಾಗಿದೆ. ಶಾಲೆಗಳ ಸಮಗ್ರ ಗುಣಮಟ್ಟವನ್ನು ಮೌಲ್ಯಮಾಪನ ಮಾಡಲು SSA ಕೆಲವು ಶಾಲಾ ಮೌಲ್ಯಮಾಪನ ಪ್ರರೂಪಗಳನ್ನು (Formats) ರೂಪಿಸಿ ಅವುಗಳಿಂದ ಶಾಲೆಗಳ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವ ಕ್ರಮಕೈಗೊಂಡಿದೆ. ಸಾರ್ವಜನಿಕರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಬಗೆಯ ಪ್ರಚಾರ ಸಾಮಗ್ರಿಗಳನ್ನು ಸಿದ್ಧಪಡಿಸಿದೆ. ಸಂಶೋಧನೆಗೆ ಸಂಬಂಧಿಸಿದಂತೆ SSA ಶಿಕ್ಷಕರಿಗೆ ಕ್ರಿಯಾ ಸಂಶೋಧನೆಯ ಬಗ್ಗೆ ತರಬೇತಿ ನೀಡುವ ವ್ಯವಸ್ಥೆ ಮಾಡಿದೆ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (District Institutes of Education and Training-DIET)ಗಳಲ್ಲಿ ನಡೆಸಿದ ಸಂಶೋಧನಾ ಅಧ್ಯಯನಗಳ ಸಾರಾಂಶವನ್ನು ಮತ್ತು ಮಾನೋಗ್ರಾಫ್‌ಗಳನ್ನು ಪ್ರಕಟಿಸಲಾಗಿದೆ. 'ಶಿಕ್ಷಣ ವಾರ್ತೆ' ಮತ್ತು 'ಟೀಚರ್' ಎಂಬ ಕನ್ನಡ ನಿಯತಕಾಲಿಕೆಗಳನ್ನು, ವಿದ್ಯಾರ್ಥಿಗಳಿಂದ ಭಿತ್ತಿಪತ್ರಿಕೆಗಳನ್ನು ಪ್ರಕಟಿಸಲಾಗುತ್ತಿದೆ. SSA ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದಂತೆ ಸೀಮಿತ ವ್ಯಾಪ್ತಿಯ ಸಂಶೋಧನ ಅಧ್ಯಯನಗಳನ್ನು ಕೈಗೊಳ್ಳಲು ಖಾಸಗಿ ಸಂಶೋಧನ ನಿಯೋಗಗಳಿಗೆ ಕೆಲವು ನಿಯಮಗಳಿಗೆ ಒಳಪಟ್ಟಂತೆ ಸಂಶೋಧನ ಅನುದಾನವನ್ನು ನೀಡುತ್ತಿದೆ. 2011-12ರ ವರದಿಯಂತೆ ಇಂಥ 6 ಅಧ್ಯಯನಗಳು ಮುಕ್ತಾಯಗೊಂಡಿದ್ದು ಇನ್ನು 7 ಅಧ್ಯಯನಗಳು ಮುಗಿಯುವ ಹಂತದಲ್ಲಿದ್ದವು.

ರಾಜ್ಯಾದ್ಯಂತ ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸುವ ಉದ್ದೇಶಕ್ಕೆ SSA ಬದ್ಧವಾಗಿದೆ. ಈ ಕಾರ್ಯ ಸುಲಭವಾದುದೇನಲ್ಲ. ಇದರಲ್ಲಿ ಅನೇಕ ಸಮಸ್ಯೆಗಳು, ಸವಾಲುಗಳಿವೆ. ಇವುಗಳನ್ನು SSA ಎದುರಿಸಬೇಕಾಗಿದೆ. SSA ತನ್ನ 2011-12ರ ವಾರ್ಷಿಕ ವರದಿಯಲ್ಲಿ ಈ ಸಮಸ್ಯೆಗಳನ್ನು /ಸವಾಲುಗಳನ್ನು ವಿವರಿಸಿದೆ. ಶಿಕ್ಷಣದ ಹಕ್ಕು ಕಾಯ್ದೆ-2009ರ ಸಂದರ್ಭದಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸುವುದು SSAನ ಪ್ರಮುಖ ಸವಾಲಾಗಿದೆ. ಈ ಕಾಯ್ದೆಯ ಶಿಕ್ಷಣ ಖಾತರಿ ಯೋಜನೆಯಡಿಯಲ್ಲಿನ (Education Guarantee Scheme) ಶಾಲಾ ಪ್ರವೇಶಕ್ಕಾಗಿ ಬರುವ ಬೇಡಿಕೆಗಳನ್ನು ಈಡೇರಿಸಬೇಕಾಗುತ್ತದೆ. ವಿದ್ಯಾರ್ಥಿಗಳ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ (Continuous and Comprehensive Evaluation of Students-CEEC) ಕಾರ್ಯಕ್ರಮವನ್ನು ಸರಿಯಾಗಿ ಮುಂದುವರಿಸಿಕೊಂಡು ಹೋಗಬೇಕಾಗಿದೆ. ಇದಕ್ಕಾಗಿ ರಾಜ್ಯದ 1,84,505 ಶಿಕ್ಷಕರಿಗೆ ತರಬೇತಿ ನೀಡುವುದು ಸುಲಭದ ಕಾರ್ಯವೇನಲ್ಲ. ಪಠ್ಯಕ್ರಮ ಪರಿಷ್ಕರಣದಿಂದಾಗಿ ಬದಲಾದ ಮಾನದಂಡಗಳ ಪ್ರಕಾರ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಮತ್ತೊಂದು ಸವಾಲಾಗಿದೆ. ರಾಜ್ಯಾದ್ಯಂತ ಇನ್ನೂ ಶಾಲೆಯಿಂದ ಹೊರಗುಳಿದಿರುವ ಸಾಕಷ್ಟು ಸಂಖ್ಯೆಯ ಮಕ್ಕಳನ್ನು (Out Of School Children-OOSC) ಶಾಲೆಗೆ ಪುನಃ ದಾಖಲು ಪಡಿಸುವುದೂ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ಇದಕ್ಕೆ SSA ಬದ್ಧವಾಗಿದೆ. ಶಾಲೆಗಳು ತಮ್ಮ ಅಭಿವೃದ್ಧಿಯ ಯೋಜನೆಯನ್ನು ತಾವೇ ಸಿದ್ಧಪಡಿಸಿಕೊಳ್ಳಲು ಶಿಕ್ಷಕರಿಗೆ ಮಾರ್ಗದರ್ಶನ ನೀಡಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಯಲ್ಲಿನ ಮತ್ತೊಂದು ಸವಾಲೆಂದರೆ ಈಗ ಇರುವ ಶಾಲಾವ್ಯವಸ್ಥೆಯ 5+2+3+2 ಸಂರಚನೆಯನ್ನು 5+3+2+2 ಸಂರಚನೆಗೆ ಬದಲಾಯಿಸುವುದು. ಇದರಿಂದ ಉದ್ಭವಿಸಬಹುದಾದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ವಿಶೇಷ ಗಮನದ ಅಗತ್ಯವಿರುವ ಬಾಲಕಿಯರು, ಮತ್ತು ವಿಶೇಷ ಅಗತ್ಯಗಳುಳ್ಳ ಮಕ್ಕಳು- ಈ ಗುಂಪುಗಳ ಬಗ್ಗೆ ವಿಶೇಷ ಗಮನ

Digitised by Bharatavani, CIIL

ನೀಡುವುದನ್ನು ಮುಂದುವರಿಸಿಕೊಂಡು ಹೋಗುವುದು ಒಂದು ಸವಾಲಾಗುತ್ತದೆ.

ವಿದ್ಯಾರ್ಥಿಗಳ ಕಲಿಕೆಗೆ ಸಂಬಂಧಪಟ್ಟಂತೆ 'ನಲಿ-ಕಲಿ' ಕಾರ್ಯಕ್ರಮವನ್ನು ಯಶಸ್ವಿಯಾಗಿಸುವುದನ್ನು ಕಂಪ್ಯೂಟರ್ ಸಹಾಯಿತ ಕಲಿಕೆಯನ್ನು ಸವಾಲಾಗಿ ಪರಿಗಣಿಸಬೇಕಾಗಿದೆ. ವಿದ್ಯಾರ್ಥಿಗಳ ಮೂಲಭೂತ ಕಲಿಕಾ ಕೌಶಲಗಳನ್ನು ಉತ್ತಮ ಪಡಿಸುವ ಕ್ರಮಗಳನ್ನು ಮುಂದುವರಿಸಬೇಕಾಗಿದೆ. ಇದಕ್ಕಾಗಿ ಶಿಕ್ಷಕರ ಸಾಮರ್ಥ್ಯಗಳನ್ನು/ಕೌಶಲಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಶಿಕ್ಷಣ ಕ್ಷೇತ್ರದಲ್ಲಿನ ಇತ್ತೀಚಿನ ಕೆಲವು ಬದಲಾವಣೆಗಳು / ಪ್ರವೃತ್ತಿಗಳಿಂದಾಗಿ ದಾಖಲಾತಿ ಕಡಿಮೆಯಾಗುತ್ತಿರುವ ಶಾಲೆಗಳ ಸಮಸ್ಯೆ ಮತ್ತೊಂದು ಸವಾಲಾಗಿದೆ. ಸಮುದಾಯ ಶಾಲೆಯನ್ನು ಮುಚ್ಚುವುದರ ಬಗ್ಗೆ, ಮಕ್ಕಳನ್ನು ಮತ್ತೊಂದು ಶಾಲೆಗೆ ಸ್ಥಳಾಂತರಿಸುವುದರ ಬಗ್ಗೆ ಸಂವೇಗಾತ್ಮಕವಾಗಿ ಪ್ರತಿಕ್ರಿಯಿಸುವುದರಿಂದ ಈ ಸವಾಲು ಸಂಕೀರ್ಣ ರೂಪ ಪಡೆದುಕೊಂಡಿದೆ. ಆದರೂ ಆರ್ಥಿಕ ದೃಷ್ಟಿಯಿಂದ ಇಂಥ ಶಾಲೆಗಳನ್ನು ಮುಚ್ಚುವುದು ಅನಿವಾರ್ಯವಾಗುವುದರಿಂದ ಈ ಸಮಸ್ಯೆಯನ್ನು ಎಚ್ಚರದಿಂದ ಪರಿಹರಿಸಬೇಕಾಗುತ್ತದೆ. ಇದಕ್ಕಾಗಿ ಸಮುದಾಯದಲ್ಲಿ ಅರಿವು ಮೂಡಿಸಬೇಕಾಗುತ್ತದೆ. ಅಂತಿಮವಾಗಿ ರಾಜ್ಯಾದ್ಯಂತ ಇರುವ ಶಿಕ್ಷಕರು, ಮುಖ್ಯ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಮತ್ತು ಆಡಳಿತ ಹಾಗೂ ಮೇಲ್ವಿಚಾರಣೆಯ ಬಹು ಸಂಖ್ಯೆಯ ಸಿಬ್ಬಂದಿ ವರ್ಗದವರ ನೈತಿಕ ಮತ್ತು ಅಭಿಪ್ರೇರಣೆ ಮಟ್ಟವನ್ನು ಮೇಲ್ವಿಚಾರಣೆ ಮಾಡುವುದು ನಿರಂತರವಾಗಿ ಉಳಿಯುವ ಸವಾಲಾಗಿದೆ.

(**ಸೂಚನೆ:** ಸರ್ವಶಿಕ್ಷಾ ಅಭಿಯಾನ, ಬೆಂಗಳೂರಿನ 2011-12ರ ವಾರ್ಷಿಕ ವರದಿಗೆ ನಾನು ಋಣಿಯಾಗಿದ್ದೇನೆ)

–ಪ್ರೊ. ಮಂಜುನಾಥಯ್ಯ ಬಿ.ಎನ್.

## ಕಲಾ ಶಿಕ್ಷಣ

'ಕಲೆ ಎನ್ನುವುದು ಸೌಂದರ್ಯದ ತಂತ್ರ ಅಥವಾ ರೂಪ ಮಾತ್ರವಲ್ಲ, ಸೌಂದರ್ಯದ ಶೋಧನೆ ಅಥವಾ ಅಭಿವ್ಯಕ್ತಿ ಮಾತ್ರವಲ್ಲ-ಅದು ಸೌಂದರ್ಯೋಪಾಸನೆಯ ದೃಷ್ಟಿ ಮತ್ತು ಪರಿಪೂರ್ಣ ಕಾರ್ಯಗತ ಪ್ರಕ್ರಿಯೆಯ ಸ್ಥಿತಿಯಲ್ಲಿ ಪ್ರಜ್ಞೆಯ ಸ್ವ ಅಭಿವ್ಯಕ್ತಿಯಾಗಿದೆ.

ಕಲೆ ಎನ್ನುವುದು ಸೌಂದರ್ಯದ ಶೋಧನೆ ಮತ್ತು ದರ್ಶನವಾಗಿದೆ. ಪ್ರತಿಬಂಧಕ ಅಥವಾ ಸೀಮಿತ ನಿಯಮದ ಹಾದಿಯಲ್ಲಿ ನಾವು ಇನ್ನೂ ಹೆಚ್ಚಿನದನ್ನು ಹೇಳಲು ಶಕ್ತರಾಗಿಲ್ಲ'.

–ಶ್ರೀ ಅರಬಿಂದೊ

**ಪ್ರವೇಶ :** ಕಲೆಗಳ ಪರಿಚಯ ಮತ್ತು ಶಿಕ್ಷಣ ಹುಟ್ಟಿನಿಂದ ಪ್ರಾರಂಭಗೊಳ್ಳುತ್ತದೆ. ಈಗಾಗಲೇ ವಿಜ್ಞಾನ ಸಾಬೀತುಪಡಿಸಿದಂತೆ ಎಲ್ಲ ಪ್ರಜ್ಞಾ ಗ್ರಹಿಕೆಗಳು ಮತ್ತು ಸಾಮಾನ್ಯ ಗುಣಲಕ್ಷಣಗಳು ಗರ್ಭದಲ್ಲಿಯೇ ಸ್ಫುಟವಾಗತೊಡಗುತ್ತವೆ. ತಾಯಿಯು ಮೊದಲ ಗುರುವಾಗಿರುತ್ತಾಳೆ. ಅವಳ ಮಡಿಲಲ್ಲಿ ಮಗು ಪ್ರೀತಿ, ಸಂತೋಷ, ಸೌಂದರ್ಯ, ಉತ್ತಮ ನಡೆವಳಿಕೆ, ತಾಳ್ಮೆಯನ್ನು ಕಲಿಯುತ್ತದೆ ಮತ್ತು ನಂತರದ ವರ್ಷಗಳಲ್ಲಿ ಶಿಕ್ಷಣ ಸಾಧಿಸಲು ಪ್ರಯತ್ನಿಸುವ ಇತರ ಎಲ್ಲ ಮೌಲ್ಯಗಳನ್ನು ತಿಳಿದುಕೊಳ್ಳುತ್ತದೆ. ತಾಯಿಯ ನೇರ ಸ್ಪರ್ಶ ಮತ್ತು ಸಂಪರ್ಕದಿಂದ ಮಗು ತನ್ನ ಸೌಂದರ್ಯ ಗ್ರಾಹಕತೆಯ ಪ್ರಜ್ಞೆಯನ್ನು, ಸೃಜನಶೀಲತೆಯನ್ನು ಬೆಳೆಸಿಕೊಳ್ಳುತ್ತದೆ. ನಂತರ ಅದನ್ನು ತನ್ನ ಹತ್ತಿರದ ಸಂಬಂಧಿಗಳು, ಸಮುದಾಯ, ಹಳ್ಳಿ ಅಥವಾ ನಗರಪ್ರದೇಶ, ರಾಜ್ಯ-ದೇಶ ಮತ್ತು ಜಗತ್ತಿನಿಂದ ಪಡೆದುಕೊಳ್ಳುತ್ತದೆ.

ಮನೆಯಿಂದ ಹೊರಗೆ ಕಾಲಿಟ್ಟ ಮಗು ಸುತ್ತ ಇರುವ ಸಾಮಾಜಿಕ ಪರಿಸರಗಳು, ಮಾರುಕಟ್ಟೆ ಪ್ರದೇಶ, ಧಾರ್ಮಿಕ ಕೇಂದ್ರಗಳಾದ ದೇವಾಲಯಗಳು, ಮಸೀದಿಗಳು, ಚರ್ಚುಗಳು ಇತ್ಯಾದಿಗಳಿಗೆ ಮುಖಾಮುಖಿಯಾಗುತ್ತದೆ. ಹೀಗೆ ತನ್ನ ಸುತ್ತಮುತ್ತಲಿನ ಪರಿಸರದಿಂದ ಅಪ್ರಜ್ಞಾಪೂರ್ವಕವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಸೌಂದರ್ಯಗ್ರಾಹಕತೆಯ ಮೌಲ್ಯಗಳು ಮತ್ತು ಸೌಂದರ್ಯವನ್ನು ಆಸ್ವಾದಿಸುತ್ತದೆ. ಹೀಗೆ ಮಗು ಇಡುವ ಪ್ರತಿಯೊಂದು ಹೆಜ್ಜೆಯೊಂದಿಗೆ ಶಿಕ್ಷಣ ಪ್ರಾರಂಭಗೊಳ್ಳುತ್ತದೆ.

ಭಾರತದ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದ ಚಾರಿತ್ರಿಕ ಅಧ್ಯಯನಕ್ಕೆ ಅನೇಕ ಸಹಸ್ರ ವರ್ಷಗಳ ಇತಿಹಾಸವಿದೆ. ಈಗ ನಾವು ತಿಳಿದುಕೊಂಡಿರುವ ಔಪಚಾರಿಕ ಶಿಕ್ಷಣ ವ್ಯವಸ್ಥೆಯು ಭಾರತಕ್ಕೆ ಬರುವ ಎಷ್ಟೋ ಮೊದಲು ಬೇರೆ ಬೇರೆ ಹಂತಗಳಲ್ಲಿ ಗುರುಗಳ ಆಶ್ರಮಗಳು, ಪಾಠಶಾಲೆಗಳು ಅಥವಾ ಮದ್ರಾಸಾಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ಈ ಶಿಕ್ಷಣ ಸಂಸ್ಥೆಗಳು ದೇವಾಲಯಗಳು, ಆಶ್ರಮಗಳು, ಚರ್ಚುಗಳು ಮತ್ತು ಮಸೀದಿಗಳು ಅಥವಾ ರಾಜರುಗಳ ಮತ್ತು ವಿದ್ವಾಂಸರ, ಅರಮನೆ, ಗುರುಮನೆಗಳ ಸುಪರ್ದಿಯಲ್ಲಿ ನಡೆಯುತ್ತಿದ್ದು ಅವರೇ ಅದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಶ್ರೇಷ್ಠ ಗುರುಗಳು ನಡೆಸುತ್ತಿದ್ದ ಗುರುಕುಲಗಳೂ ಇರುತ್ತಿದ್ದವು. ಜ್ಞಾನಸಂಪಾದನೆಗಾಗಿ ವಿದ್ಯಾರ್ಥಿಗಳು ಇಲ್ಲಿಗೆ ಹೋಗುತ್ತಿದ್ದರು. ಈ ಗುರುಕುಲವನ್ನು ಸೇರುವ ವಿದ್ಯಾರ್ಥಿಗಳು ಒಂದೊಂದು ವಿಷಯವನ್ನು ತಿಳಿದುಕೊಳ್ಳುವ ಸಲುವಾಗಿ 10-12 ವರ್ಷಗಳ ಕಾಲ ಗುರುಗಳ ಮನೆಯಲ್ಲಿಯೇ ವಾಸಿಸುತ್ತಿದ್ದರು.

ಪರೀಕ್ಷೆಯ ಫಲಿತಾಂಶಗಳನ್ನು ಮಾತ್ರ ಗುರಿಯಾಗಿಟ್ಟುಕೊಂಡಿರುವ ಇಂದಿನ ವಿದ್ಯಾರ್ಥಿಯ ರೇಖೀಯ ಬೆಳವಣಿಗೆಗೆ ಹೋಲಿಸಿದರೆ, ಸಾಮಾನ್ಯ ಶೈಕ್ಷಣಿಕ ಸಂಸ್ಥೆಯ ಶಿಕ್ಷಣವಿರಬಹುದು ಅಥವಾ ವಿಶೇಷ ರೀತಿಯ ತರಬೇತಿ ಇವುಗಳನ್ನು ಪಡೆದಂತಹ ಗುರುಕುಲದ ಪ್ರತಿಯೊಂದು ಮಗು ತನ್ನದೇ ಆದ ನಡೆಯಿಂದ ಮುಂದುವರಿದು ಆ ಮೂಲಕ ತನ್ನ ವ್ಯಕ್ತಿತ್ವ, ಮನಸ್ಸು ಮತ್ತು ಬೌದ್ಧಿಕತೆಯ ಬಹು ಆಯಾಮದ ಪ್ರಗತಿಯನ್ನು ಸಾಧಿಸುತ್ತಿತ್ತು. ಈ ರೀತಿಯ

Digitised by Bharatavani, CIIL

ಮೌಲ್ಯಸಂಚಯದಲ್ಲಿ ಕಲೆ ಅಭಿವೃದ್ಧಿಯನ್ನು ಹೊಂದುತ್ತಿತ್ತು ಮತ್ತು ವ್ಯಕ್ತಿಯ ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಯಾವುದೇ ದ್ವಿಭಜನ ಅಥವಾ ವ್ಯತ್ಯಾಸ ಇರಲಿಲ್ಲ.

ಇನ್ನೊಂದು ಹಂತದಲ್ಲಿ, ಹಿಂದೆ ಮತ್ತು ಈಗ ಕೂಡ ಸೌಂದರ್ಯದ ಮೌಲ್ಯಗಳನ್ನು ಕುಟುಂಬದ ಕಸುಬು ಅಥವಾ ಕುಶಲಕಲೆಗಳ ಕೌಶಲಗಳ ಮೂಲಕ ಮನೆಯಲ್ಲಿಯೇ ಕಲಿಯುವುದರ ಮೂಲಕ ಇಡೀ ಒಂದು ಸಮುದಾಯ ಕಲಾ ಶಿಕ್ಷಣವನ್ನು ಪಡೆಯುತ್ತದೆ. ಸ್ಥಳೀಯವಾಗಿ ಉಪಲಬದ್ಧವಿರುವ ಆವೆಮಣ್ಣು, ಕಲ್ಲು, ಮರ, ಲೋಹ, ಪ್ರಾಕೃತಿಕನಾರು ಇತ್ಯಾದಿಗಳಲ್ಲಿ ಸೂಕ್ಷ್ಮ ಸಂವೇದನೆಯನ್ನು ಸೃಷ್ಟಿಸಿ, ಅಲಂಕಾರಿಕ ಮತ್ತು ಬಳಕೆಗೆ ಉಪಯುಕ್ತವಾದ ವಸ್ತುಗಳನ್ನು ಮಾಡಲು ಇವುಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಕಲಿಸಲಾಗುತ್ತದೆ.

ಕಲೆ ಮತ್ತು ಕುಶಲತೆಗಳು ಮತ್ತು ಇತರ ಸೃಜನಶೀಲ ಅಭಿವ್ಯಕ್ತಿಗಳನ್ನು ಸಹ ಕುಟುಂಬದಲ್ಲಿ ಅಥವಾ ಗುರುಶಿಷ್ಯ ಪರಂಪರೆಯ ಗುರುಕುಲಗಳಲ್ಲಿ ಕೂಡ ತಲೆಮಾರಿನಿಂದ ತಲೆಮಾರಿಗೆ ಮುಂದುವರಿಸಲಾಗುತ್ತಿತ್ತು.

**ಸ್ವತಂತ್ರ ಭಾರತದಲ್ಲಿ ಕಲಾ ಶಿಕ್ಷಣದ ಪ್ರಾಮುಖ್ಯತೆ:**

1946ರಲ್ಲಿ ಶ್ರೀಮತಿ ಹಂಸಾ ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಇಲಾಖೆ ನೇಮಿಸಿದ ಸಮಿತಿಯು ವ್ಯಕ್ತಪಡಿಸಿದ ಅಭಿಪ್ರಾಯಗಳು ಹೀಗಿವೆ: " (ಬಾಂಬೆ) ಪ್ರಾಂತದ ಕಲಾಶಿಕ್ಷಣವು ಕಲೆಯ ಶಾಖೆಗಳ ವಿಶೇಷ ಶಿಕ್ಷಣದ ಅಗತ್ಯಗಳನ್ನು ವಿಶೇಷ ಶಾಲೆಯೊಂದರಲ್ಲಿ ಕಲಿಸುವುದರ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಪೂರೈಸಿಕೊಳ್ಳಬೇಕು....ಮತ್ತು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಸೌಂದರ್ಯ ಶಾಸ್ತ್ರ ಮತ್ತು ಸಂಸ್ಕೃತಿ ಅಗತ್ಯಗಳನ್ನು ಪೂರೈಸಬೇಕು". ಭಾರತೀಯ ಶಾಲೆಗಳಲ್ಲಿ ಕಲಾ ಶಿಕ್ಷಣದ ಅಗತ್ಯವನ್ನು ಡಾ. ಎ. ಕುಮಾರಸ್ವಾಮಿಯವರು ತಮ್ಮ ವರದಿಯಲ್ಲಿ ಒತ್ತಿ ಹೇಳಿದ್ದಾರೆ. ಅವರ ದೃಷ್ಟಿಯಲ್ಲಿ ಭಾರತದಲ್ಲಿ ಕಲೆ ಯಾವಾಗಲೂ ಬದುಕಿನ ಅಂಗವೇ ಆಗಿದೆ. ಲಲಿತ ಕಲೆ, ಅನ್ವಯಿಕ ಕಲೆ ಮತ್ತು ಅಲಂಕರಣ ಕಲೆಗಳು ಪ್ರತ್ಯೇಕ ವಿಭಾಗಗಳಾಗಿರದೆ ಇಡೀ ಸೃಜನಶೀಲ ಪ್ರಯತ್ನದ ಭಾಗವಾಗಿ ರೂಪುಗೊಂಡಿವೆ. ಶಾಲೆಯಲ್ಲಿ ನೀಡುವ ಕಲಾ ಶಿಕ್ಷಣವು ಪ್ರತಿಯೊಬ್ಬ ಮಗುವನ್ನು ಕಲಾವಿದನಾಗಿ ಮಾಡಬೇಕಾಗಿಲ್ಲ. ಆದರೆ ಅದು ಸೌಂದರ್ಯವನ್ನು ಆಸ್ವಾದಿಸಲು ಮಗುವಿಗೆ ನೆರವಾಗಬೇಕೆಂದು ಅವರ ಸೂಚಿಸುತ್ತಾರೆ. ಕಲಾವಿದರು ಕಲೆಯನ್ನು ದೈನಂದಿನ ಬದುಕಿನ ಅಗತ್ಯಗಳಿಗೆ ಅನ್ವಯಿಸಬೇಕು. 'ವಿಜ್ಞಾನವಿಲ್ಲದ ಕಲೆ ಬಡತನವಾದರೆ, ಕಲೆಯಿಲ್ಲದ ವಿಜ್ಞಾನ ಅನಾಗರಿಕತೆ' ಎಂದು ಅವರ ಭಾವನೆ.

ವಿಶ್ವವಿದ್ಯಾನಿಲಯ ಆಯೋಗದ ಅಧ್ಯಕ್ಷರಾಗಿ ಡಾ. ಎಸ್. ರಾಧಾಕೃಷ್ಣನ್ ಅವರು 1949ರಲ್ಲಿ ನಡೆದ ಸಭೆಯಲ್ಲಿ ಸಾಂಸ್ಕೃತಿಕ ಅನನ್ಯತೆಯ ಕುರಿತು ಹೇಳಿದ ಮಾತುಗಳು ಹೀಗಿವೆ:

"ನಮ್ಮ ಸಮಾಜದಲ್ಲಿ ನಾವು ಉಗ್ರ ಕ್ರಾಂತಿಯನ್ನು–ರಾಕ್ಷಸ ರಾಜ್ಯವನ್ನುತರಲು ಬಯಸುವುದಾದರೆ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ನೀಡಿ ಚೈತನ್ಯವನ್ನು ಉಪವಾಸ ಕೆಡವಿ ಬಿಡಬೇಕು. ಆಗ ನಮಗೆ ಅಂತಃಸಾಕ್ಷಿಯಿಲ್ಲದ ವಿಜ್ಞಾನಿಗಳು ಮತ್ತು ಸದಭಿರುಚಿಯಿಲ್ಲದ ತಂತ್ರಜ್ಞರು ದೊರೆಯುತ್ತಾರೆ" ಮುಂದುವರಿದು ಅವರು ಹೇಳಿದ್ದೇನೆಂದರೆ, "ಶಿಕ್ಷಣವಿರುವುದು ವ್ಯಕ್ತಿಯ ಬೆಳವಣಿಗೆಗಾಗಿ, ಸಂಸ್ಕೃತಿಯ ಅಗತ್ಯವಿರುವುದು ಸಮಾಜವನ್ನು ಅದು ಒತ್ತಟ್ಟಿಗೆ ಹಿಡಿದಿಟ್ಟುಕೊಳ್ಳುತ್ತದೆ ಮತ್ತು ವ್ಯಕ್ತಿಗೆ ಸಮತೋಲನ ಮತ್ತು ಯಥಾದೃಷ್ಟಿಯನ್ನು ನೀಡುತ್ತದೆ ಎಂಬ ಕಾರಣಕ್ಕಾಗಿ."

**ಅಂತಾರಾಷ್ಟ್ರೀಯ ರಂಗದಲ್ಲಿ ಕಲೆ:**

ಯುರೋಪು, ಆಫ್ರಿಕಾ ಮತ್ತು ಏಷ್ಯಾದ ಅನೇಕ ದೇಶಗಳಿಗೆ ಯುನೆಸ್ಕೋದಂತಹ ಪ್ರಮುಖ ಅಂತಾರಾಷ್ಟ್ರೀಯ ಕಾರ್ಯಸಂಸ್ಥೆಗಳು ಸಾಂಸ್ಥಿಕ ಬೆಂಬಲವನ್ನು ನೀಡಿವೆ. ಯುನೆಸ್ಕೊ ತನ್ನ ಪ್ರಣಾಳಿಕೆಯಲ್ಲಿ ವಿಭಿನ್ನ ಸಮಾಜೋ–ಆರ್ಥಿಕ ಸನ್ನಿವೇಶಗಳಲ್ಲಿ ಎಲ್ಲ ವಯಸ್ಸಿನ ಜನರ ಬದುಕಿನುದ್ದದ ಶಿಕ್ಷಣದ ಮೇಲೆ ಕಲೆಯು ಬೀರುವ ಪ್ರಮುಖ ಪಾತ್ರವನ್ನು ಉಲ್ಲೇಖಿಸಿದೆ. ವಿಶ್ವಸಂಸ್ಥೆಯು 1979ನ್ನು 'ಮಗುವಿನ ವರ್ಷ'ವಾಗಿ ಘೋಷಿಸಿದೆ. ಯುನೆಸ್ಕೊ ತನ್ನ ವಾರ್ಷಿಕ ಕಾರ್ಯಕ್ರಮಗಳಲ್ಲಿ ಕಲೆ ಮತ್ತು ಕಲಾಶಿಕ್ಷಣದ ವಿಚಾರಗಳನ್ನು ಅಳವಡಿಸಿಕೊಳ್ಳಲು ಸಂಘಟಿತ ಪ್ರಯತ್ನಗಳನ್ನು ನಡೆಸಿದೆ. ಇದರ ಉದ್ದೇಶ ಕಲೆಯನ್ನು ಕುರಿತಾದ ಜಗತ್ತಿನ ಧೋರಣೆಯನ್ನು ಸಾಮಾನ್ಯ ನೆಲೆಯಿಂದ ಎತ್ತರಕ್ಕೇರಿಸುವುದು ಮತ್ತು ಮಕ್ಕಳ ಬದುಕಿನ ಗುಣಮಟ್ಟದ ಸುಧಾರಣೆಯಲ್ಲಿ ಕಲೆ ನಿರ್ವಹಿಸುವ ಮುಖ್ಯ ಪಾತ್ರವನ್ನು ತೋರಿಸುವುದಾಗಿತ್ತು.

ವಿಶ್ವಸಂಸ್ಥೆಯ ಶಿಕ್ಷಣ ಆಯೋಗವು ತನ್ನ ಪ್ರಥಮ ಕಲಾ ರಾಷ್ಟ್ರೀಯ ಸಂಘಟನೆಯಲ್ಲಿ ನಡೆಸಿದಂತಹ ಗಣನೀಯ ಪ್ರಮಾಣದ ಪ್ರಯತ್ನಗಳು ಕಲಾ ಶಿಕ್ಷಣದ ಕುರಿತಾದ ಸಾಹಿತ್ಯದಲ್ಲಿ ಕಾಣಲು ಸಿಗುತ್ತವೆ. ಈ ಅಧ್ಯಯನದಿಂದ ತಿಳಿದುಬಂದಿರುವ ವಿಚಾರವೇನೆಂದರೆ ಅಮೇರಿಕೆಯ ವಿದ್ಯಾರ್ಥಿಗಳು ಕಲೆಗೆ ಮಹತ್ವವನ್ನು ನೀಡುತ್ತಾರೆ ಮತ್ತು ಒಂದಲ್ಲ ಒಂದು ರೂಪದಲ್ಲಿ ಕಲೆಯನ್ನು ಬೆಂಬತ್ತಿ ಹೋಗುತ್ತಾರೆ. ಅವರು ಕಲೆ ಮತ್ತು ಸಂಸ್ಕೃತಿಯ ಕೆಲವು ವಿಚಾರಗಳನ್ನು ಮೆಚ್ಚಿಕೊಳ್ಳುತ್ತಾರೆ ಅಥವಾ ಅರ್ಥ ಮಾಡಿಕೊಳ್ಳುತ್ತಾರೆ. ಕಲೆಯ ವಸ್ತುಸಂಗ್ರಹಾಲಯಗಳ ಮತ್ತು ಪ್ರದರ್ಶನ ಮಂದಿರಗಳ ಕುರಿತು ಕಡಿಮೆ ಅನುಭವವಿದ್ದರೂ, ಅವರು ತಾವು ಬಂದಂತಹ ಸಾಮಾಜಿಕ ಹಿನ್ನೆಲೆಯನ್ನು ಆಧರಿಸಿ ಕಲೆಗಳ ಕುರಿತಾಗಿ ವಿಭಿನ್ನ ಧೋರಣೆಗಳನ್ನು ಪ್ರದರ್ಶಿಸುತ್ತಾರೆ.

ಸೋವಿಯೆಟ್ ಯೂನಿಯನ್, ಆಸ್ಟ್ರೇಲಿಯಾ, ಯು. ಕೆ. ಮತ್ತು ಯುನೈಟೆಡ್ ಸ್ಟೇಟ್ಸ್‌ಗಳಂತಹ ಕೆಲವು ದೇಶಗಳ ಉದಾಹರಣೆಯನ್ನು ಉಲ್ಲೇಖಿಸುವುದಾದರೆ, ಈ ದೇಶಗಳಲ್ಲಿ ಕಲೆಯೊಂದಿಗೆ ತೊಡಗಿಸಿಕೊಳ್ಳುವುದು ಗಂಭೀರ ಪ್ರಯತ್ನವಾಗಿ ಇರುವುದಿಲ್ಲ. ಆದರೆ ಉದ್ಯೋಗದ ಸಮಯ ಕಳೆದ ಬಳಿಕ ಅಥವಾ

Digitised by Bharatavani, CIIL

ಬಿಡುವಿನ ಸಮಯದ ಚಟುವಟಿಕೆಯಾಗಿ ಅದನ್ನು ನಡೆಸುವ ಅಗತ್ಯ ಅವರಲ್ಲಿ ಕಂಡುಬಂದಿರುವುದು ಗೋಚರಿಸುತ್ತದೆ. ಕಲೆಗೆ ಬಳಸಲಾಗುವ 'ಪಠ್ಯೇತರ'ವೆಂಬ ಪದವು ಕಲೆಯನ್ನು ತಕ್ಷಣವೇ ಶೈಕ್ಷಣಿಕ ವ್ಯವಸ್ಥೆಯಿಂದ 'ಹೊರಗೆ' ಇಡುತ್ತದೆ.

**ಸೃಜನಶೀಲತೆಯ ಕುರಿತಾದ ಅಭಿಮತಗಳು:**

ಶಿಕ್ಷಣದ ಬಹುತೇಕ ವರದಿಗಳು ಮತ್ತು ಕಾರ್ಯನೀತಿ ಹೇಳಿಕೆಗಳು ಭಾರತದಲ್ಲಿ ಕಲಾ ಶಿಕ್ಷಣದ ಅಗತ್ಯವನ್ನು ಎತ್ತಿಹಿಡಿದಿವೆ. 1977ರ ವರದಿಯಲ್ಲಿ ಕಲಾ ಶಿಕ್ಷಣದ ಉದ್ದೇಶಗಳನ್ನು ವಿವರವಾಗಿ ನೀಡಲಾಗಿದೆ. ಅದರಲ್ಲಿ 'ಸೃಜನಾತ್ಮಕತೆ' ಪದವು ಕಲಾ ಶಿಕ್ಷಣದೊಂದಿಗೆ ಜೋಡಿಸಿಕೊಂಡಿದೆ. ಅದನ್ನು ಕಲೆ, ನಾಟಕಗಳು ಇತ್ಯಾದಿಗಳಲ್ಲಿ ಬಳಸಿದಾಗ ಅದು ದಿಟವೆಂದು ಕಂಡುಬರುತ್ತದೆ. ಅನೇಕ ಶಿಕ್ಷಣತಜ್ಞರು ಕಲೆ ಮತ್ತು ಸೃಜನಶೀಲತೆಯ ನಡುವಿನ ಸಂಬಂಧಕ್ಕೆ ಮತ್ತು ಸೃಜನಾತ್ಮಕ ವಿಧಾನಗಳ ಮೂಲಕ ಇತರ ವಿಷಯಗಳನ್ನು ಕಲಿಯುವುದರ ನಡುವಿನ ವಿಶೇಷ ಜೋಡಣೆಗೆ ಕೂಡಾ ಪ್ರಾಮುಖ್ಯತೆ ನೀಡುತ್ತಾರೆ. ಇದಕ್ಕೆ ಸೌಂದರ್ಯದ ಕುರಿತಾದ ಮೂಲಭೂತ ಸಂವೇದನೆ ಮತ್ತು ಸೌಂದರ್ಯ ಗುಣಗ್ರಾಹಕತೆ ಮತ್ತು ಸಾಂಸ್ಕೃತಿಕ ವಿಧಿಗಳ ಕುರಿತಾದ ಜ್ಞಾನ ಇರಬೇಕಾಗುತ್ತದೆ. ಆಸಕ್ತಿದಾಯಕ ವಿಚಾರವೇನೆಂದರೆ, ಸೃಜನಾತ್ಮಕತೆಯನ್ನು ವಿವಿಧ ಮಾಧ್ಯಮಗಳೊಂದಿಗೆ ಕೆಲಸ ಮಾಡುವುದರ ಮೂಲಕ ಅಭಿವೃದ್ಧಿಪಡಿಸಬಹುದಾಗಿದೆ. ಕಾಗದ ಮತ್ತು ಪೆನ್ಸಿಲ್, ಒದ್ದೆ ಆವೆಮಣ್ಣು ಇತ್ಯಾದಿಗಳಿಗೆ ಅದು ಸೀಮಿತವಾಗಿರಬೇಕಾಗಿಲ್ಲ. ಸೃಜನಾತ್ಮಕತೆಯ ಪರಿಕಲ್ಪನೆಯ ಕುರಿತಾಗಿ ಕೇಂದ್ರೀಕೃತ ನಿರ್ವಚನದ ಕೊರತೆ ಇರುವುದರಿಂದ ಶಾಲಾ ವ್ಯಾಸಂಗಕ್ರಮದಲ್ಲಿ ಸೃಜನಾತ್ಮಕತೆಯ ಪರಿಕಲ್ಪನೆಯನ್ನು ಸಾಮಾನ್ಯ ಶಿಕ್ಷಣದಲ್ಲಿ ದೂರವಿರಿಸಲಾಗಿದೆ. ಹಾಗಿದ್ದರೂ, ವ್ಯಕ್ತಿತ್ವದ ಬೆಳವಣಿಗೆಯ ಕೇಂದ್ರಬಿಂದುವಾಗಿರುವ ಸಂವಹನವು ಕೂಡಾ ವಿಶೇಷ ಕೌಶಲಗಳು ಮತ್ತು ತಂತ್ರಜ್ಞಾನಗಳ ಅಗತ್ಯವನ್ನು ಹೊಂದಿರುತ್ತದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಮುಖ್ಯ. ಈ ಪರಿಕಲ್ಪನೆಗೆ ಪ್ರೋತ್ಸಾಹ ನೀಡುವ ಸೃಜನಾತ್ಮಕ ಚಿಂತನೆ ಮತ್ತು ತಂತ್ರಜ್ಞಾನಗಳ ಮೂಲಕ ಇದನ್ನು ಹೆಚ್ಚಿಸಬಹುದಾಗಿದೆ.

**ಸೃಜನಾತ್ಮಕ ಅಭಿವ್ಯಕ್ತಿಗಳಲ್ಲಿ ಅಂತರ್-ಅವಲಂಬನ (ಅನ್ಯೋನ್ಯ ಆಶ್ರಯ):**

'ಕಲಾ ಶಿಕ್ಷಣದ ಸ್ಥಾನಮಾನ'ದ ವಿವರಗಳ ಕುರಿತು ತಿಳಿದುಕೊಳ್ಳುವ ಅಗತ್ಯವಿಲ್ಲ. ಆದರೆ ಕಳೆದ ಶತಮಾನದಲ್ಲಿ ಎಲ್ಲ ದೇಶಗಳು ಈ ವಿಷಯದ ಕುರಿತು ಮುಖ್ಯವಾದ ಚಿಂತನಾ ಬದಲಾವಣೆಗಳನ್ನು ಹಾದು ಹೋಗಿವೆ ಎಂದಷ್ಟೇ ಹೇಳಬಹುದು. ಆದರೆ ಶಿಕ್ಷಣದ ಇತರ ಕ್ಷೇತ್ರಗಳಾದ ವಾಚನ, ವಿಜ್ಞಾನ, ಅಂಕಗಣಿತ, ಚರಿತ್ರೆ ಇತ್ಯಾದಿಗಳಿಗೆ ಹೋಲಿಸಿದರೆ ಕಲಾಶಿಕ್ಷಣದ ಕುರಿತಾದ ಸಾಹಿತ್ಯ ಅಥವಾ ಈ ಕ್ಷೇತ್ರದಲ್ಲಿ ನಡೆಸಿದಂತಹ ಸಂಶೋಧನೆ ಅಥವಾ ಧೋರಣಾ ಮೌಲ್ಯಮಾಪನ ಬಹಳ ಕಡಿಮೆ ಎನ್ನಬಹುದು.

ಶಿಕ್ಷಣದಲ್ಲಿನ ಕಲೆಗಳು, ಕಲೆ ಮತ್ತು ಇತರ ಪಠ್ಯಕ್ರಮಗಳ ಬೋಧನಾ ಶಾಖೆಗಳೊಂದಿಗಿನ ಅಂತರ್-ಸಂಬಂಧಕ್ಕೆ ಹೆಚ್ಚಿನ ಒತ್ತನ್ನು ನೀಡುವ ಪ್ರಯತ್ನವನ್ನು ನಡೆಸಿವೆ. ಜಗತ್ತಿನ ವಿವಿಧೆಡೆಗಳಲ್ಲಿ ಕಲಾ ಶಿಕ್ಷಣತಜ್ಞರು ಈ ವಿಚಾರವನ್ನು ಮತ್ತು ಕಲೆಗಳ ಅಂತರ್-ಸಂಬಂಧವನ್ನು ಎತ್ತಿತೋರಿಸಿದ್ದಾರೆ. ಏಷ್ಯಾ ಪ್ರದೇಶದಲ್ಲಿ ಈ ಅಂತರ್-ಸಂಬಂಧವು ಹೆಚ್ಚು ಮುಖ್ಯವಾಗಿದೆ. ಆದರೆ ಬಹಳಷ್ಟು ಪಶ್ಚಿಮ ದೇಶಗಳಲ್ಲಿ ಈ ವಿಚಾರವು ಕಲೆಗಳ ಒಳಗೆ ವಿವಿಧ ಶಿಕ್ಷಣ ವಿಷಯಗಳ ಸಾರಗುಂದಿಸುತ್ತದೆ ಎಂದು ಭಾವಿಸಲಾಗಿದೆ.

ಕಳೆದ ಶತಮಾನದ ತತ್ವಜ್ಞಾನಿ ಮತ್ತು ವಿದ್ವಾಂಸರಾಗಿರುವ ಶ್ರೀ ಅರಬಿಂದೋ ಅವರು ಕಲೆಗಳಲ್ಲಿರುವ ವಿಭಿನ್ನ ವಿದ್ಯಾವಿಭಾಗ ಅಂತರ್-ಅವಲಂಬನವನ್ನು ಬಹಳ ಮನಮುಟ್ಟುವ ರೀತಿಯಲ್ಲಿ ವಿವರಿಸಿದ್ದಾರೆ. ಅವರು ಹೇಳುತ್ತಾರೆ :

"ಸಂಗೀತವು ಅನಂತದೆಡೆಗೆ ಮತ್ತು ವಸ್ತುಗಳ ಸಾರಕ್ಕೆ ಕೊಂಡೊಯ್ಯುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಅದು ಸಂಪೂರ್ಣವಾಗಿ ಪಾರಲೌಕಿಕ ವಾಹನವನ್ನು ಅಂದರೆ 'ಶಬ್ದ'ವನ್ನು ಅವಲಂಬಿಸಿರುತ್ತದೆ. (ಇದೇ ರೀತಿ ವಾಸ್ತುಶಿಲ್ಪ ಕೂಡಾ ತನ್ನ ದ್ರವ್ಯರಾಶಿಯಲ್ಲಿ ಬಂಧಿಯಾಗಿರುವಾಗಲೂ ಇನ್ನೊಂದು ಪರಮಾವಧಿಯಲ್ಲಿ ಇದನ್ನು ನಡೆಸುತ್ತದೆ); ಆದರೆ ವರ್ಣಕಲೆ ಮತ್ತು ಶಿಲ್ಪಕಲೆಗಳು ಕಣ್ಣೋಚರ ರೂಪವನ್ನು ಭಾವೋತ್ಕರ್ಷತೆಗೆ ಬಿಡುಗಡೆಗೊಳಿಸುವುದರ ಮೂಲಕ ತಮ್ಮ ಪ್ರತೀಕಾರವನ್ನು ಸಾಧಿಸುತ್ತವೆ; ಆದರೆ ಧ್ವನಿಯ ಮೂಲಕ ಸಂಗೀತ ನಡೆಸುವುದನ್ನು ಕಾವ್ಯಕ್ಕೆ ಮಾಡಲಾಗದಿದ್ದರೂ, ಅದು ಬಹು-ಎಳೆಗಳ ಮಾಧುರ್ಯವನ್ನು, ಜಗತ್ತಿನ ಸೃಷ್ಟಿಗೆ ರೆಕ್ಕೆ ಮೂಡಿಸುವ ಧ್ವನಿ ಅಭಿವ್ಯಕ್ತಿಯನ್ನು ಮತ್ತು ರೂಪ ಹಾಗೂ ಬಣ್ಣದ ವಿಭಿನ್ನ ಸೂಚನೆಗಳನ್ನು ತೇಲಿಸಿ ಬಿಡುತ್ತದೆ. ಇದರಿಂದ ಎಲ್ಲಾ ಕಲೆಗಳ ಅಧಿಕಾರವನ್ನು ಬಹಳ ಸೂಕ್ಷ್ಮ ರೀತಿಯಿಂದ ಅದು ಪಡೆದುಕೊಳ್ಳುತ್ತದೆ. ಈ ರೀತಿಯ ಬಾಧ್ಯತೆಗಳ ನಡುವೆ ತೀರ್ಮಾನ ತೆಗೆದುಕೊಳ್ಳುವುದು ಅಥವಾ ಈ ದೈವಿಕತೆಗಳಿಗೆ ನ್ಯಾಯ ದೊರಕಿಸಿಕೊಡುವುದು, ಇದನ್ನು ಮಾಡುವವರು ಯಾರು?"

ಜಗತ್ತಿನ ಈ ಭಾಗದಲ್ಲಿನ ಸೃಜನಾತ್ಮಕ ಅಭಿವ್ಯಕ್ತಿಗಳಲ್ಲಿ ಮಾನವ ಪ್ರಯತ್ನಗಳು ಬಹಳ ಪ್ರಾಚೀನ ಕಾಲದಿಂದ ಮುಂದುವರಿದು ಬಂದಿರುವಂತಹವುಗಳು. ಇವು ಭಾವನೆಗಳನ್ನು, ಚಿಂತನೆಯನ್ನು, ತತ್ವಜ್ಞಾನಗಳನ್ನು, ಆದರ್ಶಗಳನ್ನು ಪದಗಳ ಮೂಲಕ, ದೃಗ್ಗೋಚರ ಪ್ರತಿಮಾ ವಿನ್ಯಾಸ ಮತ್ತು ಚಲನೆ, ಧ್ವನಿ ಮತ್ತು ಸ್ವರಗತಿಯನ್ನು ಅತ್ಯಂತ ಉನ್ನತ ಶೈಲಿಯ ಮೂಲಕ ವ್ಯಕ್ತಪಡಿಸುತ್ತವೆ.

ಕಲೆಯ ನಿರ್ಮಾಣ ಅಥವಾ ಸೃಷ್ಟಿ ಕಾರ್ಯವು ಯಾವಾಗಲೂ ಬಹಳ ವೈಯಕ್ತಿಕ ಅಭಿವ್ಯಕ್ತಿಯಾಗಿದ್ದರೂ, ನಮ್ಮ ಸಂಸ್ಕೃತಿಯಲ್ಲಿ ಅದು ದೇಶ ಮತ್ತು ಪ್ರದೇಶದ ಗಡಿಯನ್ನು ದಾಟಿ ವ್ಯಕ್ತಿಗಳ ಮತ್ತು ಸಮುದಾಯಗಳ ನಡುವೆ ಸಂಪರ್ಕಜಾಲ ಕಲ್ಪಿಸಲು ಅವಕಾಶವನ್ನು ಒದಗಿಸಿದೆ. ವಾಸ್ತುಶಿಲ್ಪ, ವರ್ಣಕಲೆ ಇರಬಹುದು ಅಥವಾ ಪ್ರದರ್ಶನ

Digitised by Bharatavani, CIIL

ಕಲೆಗಳು, ಈ ಯಾವುದೇ ಕ್ಷೇತ್ರದ ಕಲಾ ಕಾರ್ಯಶಾಲೆಗಳು, ಸಂಘಗಳು, ಕಲಾವಿದರ ಗುಂಪುಗಳು 'ಕಲೆ'ಯ ಕೃತಿ ನಿರ್ಮಾಣ ಕಾರ್ಯಕ್ಕಾಗಿ ಒಟ್ಟುಗೂಡಿವೆ. ಇದರಲ್ಲಿ ಕಲಾವಿದನ ವೈಯಕ್ತಿಕ ಹೆಸರು ಉಲ್ಲೇಖವಾಗುವುದಿಲ್ಲ. ಹೆಚ್ಚೆಂದರೆ ಕಲಾ ಚರಿತ್ರೆಕಾರರು 'ಕಲಾಕೃತಿ'ಯ ನಿರ್ಮಾಣದ ದಿನಾಂಕವನ್ನು ನೀಡಬಹುದು ಮತ್ತು ಅದರ ಸಂಬಂಧವನ್ನು ರಾಜವಂಶವೊಂದರ ಆಡಳಿತದೊಂದಿಗೆ ಕಲ್ಪಿಸಿಕೊಳ್ಳಬಹುದು ಮತ್ತು ಕಲಾಕೃತಿಯ ಅಧ್ಯಯನದ ಮೂಲಕ ಆ ಕಾಲದ ಸೌಂದರ್ಯ ತತ್ವವನ್ನು, ಕಲಾ ಅಭಿವೃದ್ಧಿಯನ್ನು ವಿಶ್ಲೇಷಿಸಬಹುದು. ಇದರಿಂದಾಗಿ ಮೌರ್ಯ, ಗುಪ್ತ ಅಥವಾ ಮೊಘಲ್ ಕಲೆ, ವರ್ಣಚಿತ್ರಗಳು ಮತ್ತು ವಾಸ್ತುಶಿಲ್ಪಗಳು ಹಾಗೂ ಇತರ ಕಲಾಕೃತಿಗಳನ್ನು ನಾವು ಹೊಂದಿದ್ದೇವೆ.

**ಕಲೆಗಳ ಕುರಿತಾದ ಮನೋವೃತ್ತಿಗಳು (ಧೋರಣೆಗಳು):**

ಸಾಮಾನ್ಯವಾಗಿ ಕಲಾ ಶಿಕ್ಷಣತಜ್ಞರು 'ಮನೋವೃತ್ತಿಯ ಪರಿಕಲ್ಪನೆಯನ್ನು ಅನೇಕ ಅರ್ಥಗಳು ಬರುವಂತೆ ಬಳಸುತ್ತಾರೆ. 'ಕಲೆ' ಎಂಬ ಪದವನ್ನು ಕೂಡಾ ಕಲೆಗಳು, ವಿನ್ಯಾಸ, ಸೌಂದರ್ಯತತ್ವ, ಇತ್ಯಾದಿಗಳನ್ನು ವ್ಯಕ್ತಪಡಿಸುವ ಸಲುವಾಗಿ ಬಳಸಲಾಗುತ್ತದೆ. 'ಮನೋವೃತ್ತಿ'ಯ ಪದವು ಮೌಲ್ಯಗಳು, ತೀರ್ಮಾನ, ಇಷ್ಟಪಡುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದ್ದಾಗಿದೆ. 'ಕಲಾ ಮನೋವೃತ್ತಿ'ಗಳನ್ನು 'ವಿದ್ವತ್ಪೂರ್ಣ ಮತ್ತು ತುಲನಾತ್ಮಕವಾಗಿ ಸಹನಶೀಲ ಅರ್ಹತಾ ನಿರ್ಣಯದ ವ್ಯವಸ್ಥೆ' ಎಂದು ಒಟ್ಟಿಗೆ ನಿರ್ವಚಿಸಬಹುದಾಗಿದೆ. ಈ ನಿರ್ವಚನವನ್ನು ಮತ್ತಷ್ಟು ವಿವರವಾಗಿ ಹೀಗೆ ಹೇಳಬಹುದು: 'ಕಲಾ ಮನೋವೃತ್ತಿಗಳೆಂದರೆ ಪರಿಣಾಮಕಾರಿ ಮೌಲ್ಯಮಾಪಕ ಪರಿಕಲ್ಪನೆಗಳು; ಅಭ್ಯಾಸ; ಪರಾಮರ್ಶೆಯನ್ನು ಕೇಂದ್ರವಾಗಿಟ್ಟುಕೊಂಡವುಗಳು; ಗುಣಮಟ್ಟ ಮತ್ತು ಗಾಢತೆಯಲ್ಲಿ ಹೆಚ್ಚುಕಡಿಮೆ ತಾಳಿಕೆಯನ್ನು ಮೈಗೂಡಿಸಿಕೊಂಡವುಗಳು; ಮತ್ತು ಪರಸ್ಪರ ಸಂಬಂಧವನ್ನು ಹೊಂದಿರುವಂತಹವು.

**ಕಲಾಶಿಕ್ಷಣದಲ್ಲಿ ಯೋಜನಾ ವಿಧಾನಗಳು:** ಕಲೆಗಳ ಕುರಿತಾದ ಮನೋವೃತ್ತಿ, ಸೌಂದರ್ಯ ಮತ್ತು ಶಿಕ್ಷಣದ ಕುರಿತು ಮತ್ತಷ್ಟು ಆಳವಾದ ಸಂಶೋಧನೆ ನಡೆಯಬೇಕಾಗಿದೆ. ಮನೋವೃತ್ತಿ ಬದಲಾವಣೆಗಳಿಗೆ ಕಲೆ ಸಾಕಾಗುತ್ತದೆ ಎಂಬ ಸಾಮಾನ್ಯ ಅನುಭವ ಇದೆ. ಕಲಾ ಶಿಕ್ಷಣದ ಸಾಹಿತ್ಯ ಸೂಚಿಸುವುದೇನೆಂದರೆ, ಕಲೆಯ ಜೊತೆಗಿನ ವ್ಯಾಪಕ ಅನುಭವವು ಶಿಕ್ಷಕರ ಕಲಾ ಮನೋವೃತ್ತಿಗಳ ಮೇಲೆ ಕೂಡಾ ಉತ್ತಮ ಪ್ರಭಾವವನ್ನು ಬೀರುತ್ತದೆ. ಹಾಗಿದ್ದರೂ ಕಲೆಗಳ ಕುರಿತಾದ ಮನೋವೃತ್ತಿಯಲ್ಲಿನ ಬದಲಾವಣೆಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುತ್ತಾ ಅರವಿಂದೋ ಆಶ್ರಮದ ಮಾತೆ ಹೇಳುತ್ತಾರೆ. "ಇಂದು ಕಲೆಯು ಕುಶಲತೆ ಮತ್ತು ಜಾಣತನ ಮತ್ತು ಪ್ರತಿಭೆಗಳನ್ನು ಪ್ರದರ್ಶಿಸುವ ಸಲುವಾಗಿ ಇದೆಯಲ್ಲದೆ ಮನೆಯೊಂದರ ಸಾಮರಸ್ಯ ಮತ್ತು ಸೌಂದರ್ಯದ ಕೆಲವು ಅಖಂಡ ಅಭಿವ್ಯಕ್ತಿಯನ್ನು ಸಾಕಾರಗೊಳಿಸುವುದಕ್ಕಾಗಿ ಅಲ್ಲ."

ಕಲೆಯ ಕುರಿತಾದ 'ಧೋರಣೆ'ಗಳ ಸಮಕಾಲೀನ ಸಾಹಿತ್ಯವು ಸ್ವಲ್ಪಮಟ್ಟಿಗೆ ಕ್ಷೋಭೆಗೊಳಿಸುವಂತಹವು–ಕಲೆಯ ಕುರಿತಾದ ಧೋರಣೆಗಳು ಯಾವಾಗಲೂ ಪ್ರೋತ್ಸಾಹದಾಯಕವಾಗಿ ಇಲ್ಲ. ಕಲಾಶಿಕ್ಷಣವು ಯಾವಾಗಲೂ ಸಾದ್ಯಂತರೂಪದಲ್ಲಿ ಇರುವುದಿಲ್ಲ. ವಿವಿಧ ದೇಶಗಳು ತಮ್ಮ ಸಮಾಜೋ–ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸರವನ್ನು ಆಧರಿಸಿ ಕಲೆಯನ್ನು ಮತ್ತು ಅದರ ಕುರಿತಾದ ಮನೋವೃತ್ತಿಗಳನ್ನು ವಿಭಿನ್ನ ರೀತಿಯಿಂದ ನಿರ್ವಹಿಸಿವೆ. ಸಾಂಸ್ಕೃತಿಕ ಮತ್ತು ಕಲಾತ್ಮಕ ದೃಷ್ಟಿಗಿಂತಲೂ ಹೆಚ್ಚಾಗಿ ಆರ್ಥಿಕ ನೆಲೆಯಿಂದ ಅಭಿವೃದ್ಧಿಶೀಲ ಅಥವಾ ಕಡಿಮೆ ಅಭಿವೃದ್ಧಿ ಹೊಂದಿದೆ ಎಂದು ಕರೆಯಲ್ಪಡುವ ದೇಶಗಳಲ್ಲಿ ಹೆಚ್ಚಾಗಿ ಸಾಂಸ್ಕೃತಿಕ ಹಾಗೂ ಕಲೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಸೀಮಿತವಾಗಿವೆ. ಕಲಾ ಕಾರ್ಯಕ್ರಮಗಳಿಗೆ ಮುಡುಪಾಗಿಡುವ ಹಣ ಸಾಕಷ್ಟಿರುವುದಿಲ್ಲ. ಶಿಕ್ಷಣದ ಜವಾಬ್ದಾರಿಯನ್ನು ವಹಿಸಿ ನಿರ್ಣಯ ತೆಗೆದುಕೊಳ್ಳುವವರಿಗೆ ಕಲೆಯ ಮೌಲ್ಯ ಮತ್ತು ಕಾರ್ಯಸಾಧನೆಯ ಕುರಿತು ಸಾಮಾನ್ಯ ತಿಳುವಳಿಕೆಯ ಕೊರತೆ ಇದೆ. ಆದ್ದರಿಂದ, ಕಲಾ ಶಿಕ್ಷಣತಜ್ಞರು ಇನ್ನುಳಿದ ಶಿಕ್ಷಣ ಸಮುದಾಯದಿಂದ ದೂರ ಉಳಿದಿರುವ ಭಾವನೆಯಲ್ಲಿ ಇರುತ್ತಾರೆ.

ಸ್ವಾತಂತ್ರ್ಯ ದೊರೆತ ಬಳಿಕ, ಕಲೆಗಳ ಕುರಿತಾಗಿ ಗೋಚರಿಸಿದ ಬದಲಾವಣೆ ಧೋರಣೆಗಳು ಹೊಸ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯನೀತಿಗಳಲ್ಲಿ ಪ್ರತಿಫಲಿತವಾಗಿವೆ. ಇದರಿಂದ ಪರಂಪರೆಯಲ್ಲಿ ರಾಷ್ಟ್ರೀಯ ಹೆಮ್ಮೆಯನ್ನು ಸೃಷ್ಟಿಸುವ ಸಲುವಾಗಿ ಕಲಾತ್ಮಕ ಸಂಪ್ರದಾಯಗಳಿಗೆ ಮತ್ತು ಆಧುನಿಕ ಜಗತ್ತಿನಲ್ಲಿ ಕಾರ್ಯ ನಡೆಸಲು ಯುವಜನತೆಗೆ ಹೊಸ ಚೈತನ್ಯ ಬಂದಿದೆ. ಅಪರಿಚಿತ ಸಂಪ್ರದಾಯಗಳನ್ನು ಸ್ಥಳೀಯ ಸಂಸ್ಕೃತಿಗಳ ಮೇಲೆ ಹೇರಿದ್ದರಿಂದ ಸಾಂಪ್ರದಾಯಿಕ ಮತ್ತು ಆಧುನಿಕ ಸೌಂದರ್ಯ ಗ್ರಹಿಕಾ ಮೌಲ್ಯಗಳ ನಡುವಿನ ಸಂಘರ್ಷ ಸಮಸ್ಯೆಕಾರಕವಾಗಿದೆ. ಕಲಾ ಶಿಕ್ಷಣದ ಕುರಿತಾದ ಕಾರ್ಯನೀತಿಗಳ ಎರಡು ಪ್ರವೃತ್ತಿಗಳ ನಡುವೆ ಸಮತೋಲನ ಇರುವಂತೆ ಪ್ರಯತ್ನ ನಡೆಸಬೇಕು ಮತ್ತು ಆಧುನಿಕ ಜಗತ್ತಿನಲ್ಲಿ ಆರ್ಥಿಕ ಪಾತ್ರಕ್ಕೆ ಸಿದ್ಧತೆ ನಡೆಸುವಾಗ ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸುವ ದ್ವಿಪಾತ್ರಕ್ಕಾಗಿ ಕಲಾ ಬೋಧನೆಯ ಸೂಕ್ತ ರೂಪವನ್ನು ಹುಡುಕಿಕೊಳ್ಳುವ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಮುಖ್ಯ.

ಕಳೆದ ಐದು ದಶಕಗಳಲ್ಲಿ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯಲ್ಲಿ ಸಾಮಾನ್ಯ ಶೈಕ್ಷಣಿಕ ಚೌಕಟ್ಟಿನೊಳಗೆ ಕಲೆಗೆ ಸೂಕ್ತ ಸ್ಥಾನವನ್ನು ಕಲ್ಪಿಸುವ ಸಲುವಾಗಿ ಶಿಕ್ಷಣತಜ್ಞರು ಪ್ರಯತ್ನವನ್ನು ನಡೆಸಿದ್ದಾರೆ. ಪ್ರಬಲ ಸಾಂಸ್ಕೃತಿಕ ತಳಹದಿಯನ್ನು ಹೊಂದಿರುವಂತಹ ದೇಶಗಳಲ್ಲಿ, ಉದಾಹರಣೆಗೆ ಭಾರತದಲ್ಲಿ ಕಲೆಗಳ ಸ್ಥಾನವು ಭದ್ರವಾಗಿ ಇದೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದ ಕಾರ್ಯನೀತಿಗಳು ಗೊಂದಲಮಯವಾಗಿವೆ. ಸಮಕಾಲೀನ ಶಾಲಾ ಪರಿಸರದಲ್ಲಿ ಯಶಸ್ವಿಯಾಗಿ ಅನ್ವಯಿಸಿಕೊಳ್ಳಲು ಅಥವಾ ಅನುಷ್ಠಾನಕ್ಕೆ ತರಲು ಅಗತ್ಯವಿರುವ ನಿರ್ದೇಶನಗಳನ್ನು ನೀಡದ ಯೋಜನೆಗಳು ಕಲಾ ಶಿಕ್ಷಕರಿಗೆ ಆಡಳಿತಾತ್ಮಕ ಬೆಂಬಲವಿಲ್ಲದಂತಾಗಿದೆ.

Digitised by Bharatavani, CIIL

ಕಲೆಗಳಲ್ಲಿ ಶಿಕ್ಷಣವು ಮನುಷ್ಯನ ನಡತೆಗೆ ಅತ್ಯಗತ್ಯದ ಘಟಕವನ್ನು ಒದಗಿಸುತ್ತವೆ ಮತ್ತು ನಮ್ಮ ಸುತ್ತಲಿನ ಜನತೆಗೆ ರೂಪ ಮತ್ತು ಪ್ರತಿಕ್ರಿಯೆಯನ್ನು ಒದಗಿಸಲು ಸೌಂದರ್ಯ ಗ್ರಹಿಕೆಯ ಪ್ರಜ್ಞೆಯನ್ನು ಬೆಳೆಸಲು ಅವಕಾಶ ನೀಡುತ್ತವೆ. ಮಹಾಮುನಿ ಶುಕ್ರಾಚಾರ್ಯರು ತಮ್ಮ ಪ್ರಸಿದ್ಧ 'ಶುಕ್ರನೀತಿ'ಯಲ್ಲಿ ಹೇಳಿರುವುದೇನೆಂದರೆ, 'ಕಲೆ ಅಥವಾ 'ಕುಶಲಕಲೆ'ಗಳಲ್ಲಿ ಪಡೆಯುವ ತರಬೇತಿಯು ಸೌಂದರ್ಯದ ಕುರಿತು ಪ್ರೀತಿ ಮತ್ತು ಕಲೆಗಳ ಕುರಿತು ತಿಳಿವಳಿಕೆಯನ್ನು ಒದಗಿಸುವುದರೊಂದಿಗೆ, ಮನಸ್ಸು ಮತ್ತು ಪ್ರಜ್ಞೆಯ ವ್ಯಾಪ್ತಿಯನ್ನು ವಿಸ್ತರಿಸುತ್ತದೆ.' ಕಲಾ ಶಿಕ್ಷಣವು ಅವಲೋಕನ, ಆಯ್ಕೆ, ಕಲ್ಪನಾ ಶಕ್ತಿ ಮತ್ತು ತೀರ್ಮಾನ ಕ್ಷೇತ್ರಗಳನ್ನು ಹೆಚ್ಚಿಸುತ್ತದೆ; ಅದು ಮನಸ್ಸು ಮತ್ತು ಹೃದಯಕ್ಕೆ ತಿಳಿವಳಿಕೆಯನ್ನು ನೀಡುತ್ತದೆ ಮತ್ತು ಅರ್ಥೈಸುವಿಕೆಯನ್ನು ಒದಗಿಸುತ್ತದೆ ಮತ್ತು ಸೃಜನಾತ್ಮಕ ಚಿಂತನೆಗೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ, ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕಲಾ ಶಿಕ್ಷಣವು ದೃಶ್ಯ ಮತ್ತು ಶ್ರಾವ್ಯ ಸಂಕೇತಗಳ ಮೂಲಕ ಸುತ್ತಲಿನ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ವಾತಾವರಣದಲ್ಲಿರುವ ಮಾನವ ನಿರ್ಮಿತ ವಸ್ತುಗಳು ಮತ್ತು ರೂಪಗಳನ್ನು ಸೃಷ್ಟಿಸಲು ಮತ್ತು ಪ್ರತಿಕ್ರಿಯೆ ವ್ಯಕ್ತಪಡಿಸಲು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ.

ಕಳೆದ ಶತಮಾನದ ಎಪ್ಪತ್ತು ಮತ್ತು ಎಂಬತ್ತರ ದಶಕಗಳು ಕಲಾ ಶಿಕ್ಷಣದ ಕುರಿತಾಗಿ ತಳಹಂತದಲ್ಲಿನ ಕ್ರಾಂತಿಕಾರಕ ಬದಲಾವಣೆಗಳಿಗೆ ಸಾಕ್ಷಿಯಾದವು. 1986ರ (1992ರಲ್ಲಿ ತಿದ್ದುಪಡಿ ಅಳವಡಿಸಲಾದ) ರಾಷ್ಟ್ರೀಯ ಶಿಕ್ಷಣ ನೀತಿಯ ಕಾರ್ಯಾಚರಣೆಯ ಕಾರ್ಯಕ್ರಮದಲ್ಲಿ ವ್ಯಾಸಂಗಕ್ರಮದ ವಿಷಯಗಳ ಬೋಧನೆಗೆ ಸಂಬಂಧಿಸಿದಂತೆ ಕಾರ್ಯಾಗತ ಮಾರ್ಗದರ್ಶಕ ಸೂತ್ರಗಳನ್ನು ಜಾರಿಗೊಳಿಸಲಾಯಿತು ಮತ್ತು ಇದರಲ್ಲಿ ಸಾಂಸ್ಕೃತಿಕ ಪರಿಪ್ರೇಕ್ಷ್ಯೆಯ ಅಧ್ಯಾಯವೊಂದನ್ನು ಅಳವಡಿಸಿಕೊಳ್ಳಲಾಯಿತು. ಹಾಗಿದ್ದರೂ, ಆಯೋಗಗಳ ಬಹುಪಾಲು ಶಿಫಾರಸ್ಸುಗಳು ಮತ್ತು ಸಂಸ್ಥೆಗಳ ಮತ್ತು ವ್ಯಕ್ತಿಗಳ ಪ್ರಯತ್ನಗಳು ನಿರೀಕ್ಷಿತ ಫಲಿತಾಂಶಗಳನ್ನು ತಂದುಕೊಟ್ಟಿಲ್ಲ.

**ಕಲೆ ಮತ್ತು ಶಿಕ್ಷಣ:**

ಈ ವಿಭಾಗದಲ್ಲಿ ಕಲೆಯ ಎರಡು ದೃಷ್ಟಿಕೋನಗಳ ಪ್ರಸ್ತಾಪಗಳಿವೆ.

* ಶಿಕ್ಷಣ ವಿಷಯವಾಗಿ ಕಲೆಯಲ್ಲಿ ಅನೇಕ ವರ್ಗೀಕರಣಗಳು ಇವೆ. ಉದಾಹರಣೆಗೆ ದೃಶ್ಯ ಮತ್ತು ಅದರ ವಿಭಿನ್ನ ಪ್ರಕಾರಗಳಾದ ಚಿತ್ರಕಲೆ, ವರ್ಣಕಲೆ ಇತ್ಯಾದಿ, ಸೃಜನಶೀಲ ಬರವಣಿಗೆಯ ಕಲೆ, ಪ್ರದರ್ಶನ ಕಲೆಗಳು– ಕತೆ ಹೇಳುವುದು, ರಂಗ ಚಟುವಟಿಕೆ, ಸಂಗೀತ ಇತ್ಯಾದಿಗಳು.

* ಶಿಕ್ಷಣಕ್ಕಾಗಿ ಮತ್ತು ಶಿಕ್ಷಣಕ್ಕೆ ಒತ್ತಾಸೆಯಾಗಿ ಕಲೆ.

ಶಿಕ್ಷಣದ ಸಂಪೂರ್ಣ ಮತ್ತು ಧನಾತ್ಮಕ ಪ್ರಭಾವಕ್ಕಾಗಿ ಯಾವುದಾದರೂ ಒಂದು ವಿಷಯವನ್ನು ಮಾತ್ರ ಪರಿಗಣಿಸಿದರೆ ಸಾಕಾಗುವುದಿಲ್ಲ, ಮನುಷ್ಯನ ಮಾನಸಿಕ ಬೆಳವಣಿಗೆಗೆ ನೇರವಾಗಿ ಸಂಬಂಧಿಸಿದ, ಕಲೆ ಮತ್ತು ಸಂಸ್ಕೃತಿಯಂತಹ ವಿಷಯಗಳಲ್ಲಿ ಪ್ರವೇಶ ಪಡೆಯಬೇಕಾಗುತ್ತದೆ. ಈ ಶಿಕ್ಷಣ ವಿಷಯಗಳನ್ನು ಪ್ರತ್ಯೇಕ (ವ್ಯಾಸಂಗ) ವಿಷಯವಾಗಿ ಕಲಿಯುವುದರ ಪ್ರಾಮುಖ್ಯತೆಯನ್ನು ಗುರುತಿಸುತ್ತಾ, ಶಿಕ್ಷಣದ ಯಾವುದೇ ಆರೋಗ್ಯಕರ ಅನುಸಂಧಾನಕ್ಕೆ ಬೋಧನಾ ವೃತ್ತಿಯಲ್ಲಿ ಇರುವ ಪ್ರಾಮುಖ್ಯತೆಯನ್ನು ಗುರುತಿಸಬೇಕಾಗುತ್ತದೆ. ಕಲೆಯ ಅಧ್ಯಯನಕ್ಕೆ ಸಂಬಂಧಿಸಿದ ಯಾವುದೇ ಸೃಜನಶೀಲ ಚಟುವಟಿಕೆಯು ಏಕಾಗ್ರತೆಯ ದೀರ್ಘಾವಧಿಗೆ ಅವಕಾಶ ಒದಗಿಸುತ್ತದೆ; ಶೈಕ್ಷಣಿಕ ಸಾಧನೆಯನ್ನು ಹೆಚ್ಚಿಸುತ್ತದೆ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಉತ್ತಮಗೊಳಿಸುತ್ತದೆ. ಇದರಿಂದ ಶಿಕ್ಷಣದ ಎಲ್ಲಾ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯನ್ನು ಗುರಿಯನ್ನಾಗಿಸುತ್ತದೆ. ಕಲೆಯು ಮನಸ್ಸು, ದೇಹ ಮತ್ತು ಪ್ರಜ್ಞೆಯ ಸಾಮರಸ್ಯದಲ್ಲಿ ಕೂಡಾ ನೆರವಾಗುತ್ತದೆ ಮತ್ತು ಅದು ಯಾವ ರೀತಿಯ ವಿಶಿಷ್ಟ ಸನ್ನಿವೇಶವನ್ನು ಸೃಷ್ಟಿಸುವುದೆಂದರೆ, ತರಗತಿಯ ವಾತಾವರಣದಲ್ಲಿ ಬೋಧನೆ ಮತ್ತು ಕಲಿಕೆ (ಅಭ್ಯಾಸ)ಯು ಪರಸ್ಪರ ಸಂಯೋಜಿತ ಕಾರ್ಯಗಳಾಗಿ ವಿದ್ಯಾರ್ಥಿ–ಶಿಕ್ಷಕರ ನಡುವೆ ಉತ್ತಮ ಸಂಬಂಧ ಸ್ಥಾಪಿತಗೊಳ್ಳುತ್ತದೆ.

ಪ್ರಾಥಮಿಕ ಹಂತದಲ್ಲಿ ಕಲೆಗಳ ಔಪಚಾರಿಕ ಬೋಧನೆ ಇರುವುದಿಲ್ಲ. ಆದರೆ ಪ್ರಜ್ಞೆಗಳ ಸೂಕ್ಷ್ಮಾಭಿರುಚಿಗಾಗಿ ಮತ್ತು ಅವಲೋಕನ ಮತ್ತು ಸಂವಹನದ ವಿಷಯಗಳಿಗಾಗಿ ಕಲೆಗಳ ಪರಿಚಯ ಮತ್ತು ಬೋಧನೆ ಸಣ್ಣವಯಸ್ಸಿನಲ್ಲಿ ಪ್ರಾರಂಭವಾದರೆ ಉತ್ತಮ. ಹೆಚ್ಚಿನ ಮಕ್ಕಳು ಬೇರೆ ಶೈಕ್ಷಣಿಕ ವಿಷಯಗಳಲ್ಲಿ ಹೆಚ್ಚಿನ ಸಾಧನೆ ಮಾಡದಿದ್ದರೂ ಸೃಜನಶೀಲ ಅಭಿವ್ಯಕ್ತಿಗಳ ಮೂಲಕ ಸಂವಹನ ನಡೆಸಲು ಸಮರ್ಥರಾಗಿರುತ್ತಾರೆ. ಕಲಾ ಶಿಕ್ಷಣದ ಕಾರ್ಯಕ್ರಮಗಳ ಮೂಲಕ, ಉದಾಹರಣೆಗೆ ಚಿತ್ರಕಲೆ, ವರ್ಣಕಲೆ, ಆವೆಮಣ್ಣಿನ ಮಾದರಿ ಇತ್ಯಾದಿಗಳನ್ನು ರಚಿಸಲು ಬೇಕಾಗುವ ಸಾಮಗ್ರಿಗಳ ಬಳಕೆ ಮತ್ತು ಬೊಂಬೆಗಳ ತಯಾರಿಕೆ, ಕತೆಗಳನ್ನು ಸೃಷ್ಟಿಸುವುದು, ಕವಿತೆಗಳನ್ನು ಬರೆಯುವುದು ಮತ್ತು ಅವುಗಳನ್ನು ಅಭಿನಯಿಸುವುದು, ಇತ್ಯಾದಿಗಳಿಂದ ಮಗುವಿನ ಕೌಶಲಗಳು ಹೆಚ್ಚುತ್ತವೆ. ಕಥನಕಲೆಯ ಪ್ರಾಮುಖ್ಯತೆಯನ್ನು ಉಲ್ಲೇಖಿಸಲಾಗುತ್ತದೆ. ರಂಗಭೂಮಿ ಮತ್ತು ನಾಟಕೀಕರಣಕ್ಕೆ ಕೂಡಾ ಇಲ್ಲಿ ಒತ್ತನ್ನು ನೀಡಬೇಕಾಗುತ್ತದೆ. ಕಲಾವಿದರ ಜೊತೆಗಿನ ಪ್ರತಿಕ್ರಿಯೆಗಳು ಮತ್ತು ಕುಶಲಕರ್ಮಿಗಳು ಮತ್ತು ಸಾಂಪ್ರದಾಯಿಕ ಪ್ರದರ್ಶನಕಾರರೊಂದಿಗಿನ ಆಪ್ತ ಸಂಪರ್ಕದ ಮೂಲಕ ಮಗುವಿನ ದೃಶ್ಯ ಮತ್ತು ಶ್ರವಣ ಕೌಶಲ್ಯಗಳನ್ನು ಬಹಳ ಎಳೆಯ ವಯಸ್ಸಿನಿಂದಲೇ ಬೆಳೆಸಬೇಕು. ಪಠ್ಯಕ್ರಮದ ಬೋಧನೆಯಲ್ಲಿ ಸಾಂಸ್ಕೃತಿಕ ಘಟಕವನ್ನು ಒದಗಿಸುವುದಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ಸ್ಥಳೀಯ–ವಿಶಿಷ್ಟ ಕಲೆಗಳನ್ನು ಪರಿಚಯಿಸುವುದಕ್ಕೆ ಅಗಾಧ ಒತ್ತನ್ನು ನೀಡಲಾಗಿದೆ. ಇಲ್ಲಿ ಸಾಂಸ್ಕೃತಿಕ ಘಟಕವೆಂದರೆ ಭಾರತದ ಚರಿತ್ರೆಯನ್ನು ಅದರ ಕಲಾತ್ಮಕ ಪ್ರದರ್ಶನಗಳ ಮೂಲಕ ಪರಿಚಯಿಸುವುದಾಗಿದೆ. ಬಹಳ ಪ್ರಾರಂಭಿಕ ಹಂತದಿಂದಲೇ ಕಲೆಯ ಚರಿತ್ರೆಯ ಅಧ್ಯಯನ ಅಂದರೆ ಶಾಸ್ತ್ರವನ್ನು ಮತ್ತು ಕಲೆಯ

Digitised by Bharatavani, CIIL

ಪ್ರಯೋಗವನ್ನು ಒಟ್ಟಿಗೆ ಜೋಡಿಸಿಕೊಳ್ಳಬೇಕು. ಸೈದ್ಧಾಂತಿಕ ಮಗ್ಗಲು ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಮತ್ತು ಅವಲೋಕನದ ಕೌಶಲಗಳನ್ನು ಬೆಳೆಸುತ್ತದೆ. ಕಲೆಯ ನಿರ್ಮಾಣದ ಕಾರ್ಯದ ಮೂಲಕ ಅಭ್ಯಾಸವು ಚಿಂತನೆಯನ್ನು ಮತ್ತು ರೂಪ ಮತ್ತು ಪ್ರಜ್ಞೆಯ ವಿಚಾರಗಳ ಸಾಮರಸ್ಯವನ್ನು ನಡೆಸುತ್ತದೆ.

ತರಗತಿಯ ವಾತಾವರಣದಲ್ಲಿ ಚಿತ್ರಕಲೆಯಲ್ಲಿನ ಕಲಾಭಿವ್ಯಕ್ತಿಯು ಗುಹೆ ಮತ್ತು ಭಿತ್ತಿಚಿತ್ರಗಳಿಂದ ಪ್ರಾರಂಭವಾಗಿ ಚಿತ್ರಮಯ ತಾಳೆಗರಿ ಹಸ್ತಪ್ರತಿಗಳು, ಮಧ್ಯಕಾಲೀನ ಚಿಕಣಿಚಿತ್ರಗಳು ಇತ್ಯಾದಿ ವಿವರಗಳನ್ನು ಬಹಳ ಎಳೆ ಮಟ್ಟದಲ್ಲಿಯೇ ಶಾಲಾ ಹಂತದಲ್ಲಿ ಪರಿಚಯಿಸುವ ಅಗತ್ಯವಿದೆ. ಮಕ್ಕಳಿಗೆ ವಸ್ತುಗಳನ್ನು, ಹಣ್ಣು ಅಥವಾ ಹೂವಿನ ಕುಂಡ ಇತ್ಯಾದಿಗಳನ್ನು ಅನುಕರಿಸಿ ಚಿತ್ರ ಬಿಡಿಸುವುದಕ್ಕಿಂತ ಇಂತಹ ವಿಚಾರಗಳು ಹೆಚ್ಚು ಸಂತೋಷದಾಯಕವಾಗಿರುತ್ತವೆ. ಪ್ರಾಚೀನ ಚಿತ್ರಮಯ ಪಠ್ಯಗಳಲ್ಲಿ ಅಳವಡಿಸಿಕೊಂಡಿರುವ ವಿಚಾರ-ಸಾಹಿತ್ಯ ಕೃತಿಗಳ ವಿಶಿಷ್ಟ ಮತ್ತು ಸೃಜನಶೀಲ ಅಭಿವ್ಯಕ್ತಿಯು ದೃಶ್ಯ ಚಿತ್ರಗಳ ಮೂಲಕ ಗೋಚರಿಸಿದಾಗ ವಿದ್ಯಾರ್ಥಿಗೆ ತನ್ನ ಕೆಲಸವನ್ನು ಇನ್ನೂ ಹೆಚ್ಚು ಆಕರ್ಷಕವಾಗಿ ಮತ್ತು ಸುಂದರವಾಗಿ ಮಾಡಲು ಸ್ಫೂರ್ತಿ ಸಿಗುತ್ತದೆ. ತನ್ನ ಸ್ವಂತ ಆಲೋಚನೆ ಮತ್ತು ಕಲ್ಪನೆಯಿಂದ ಸ್ಫೂರ್ತಿಹೊಂದಿ ವಿದ್ಯಾರ್ಥಿ ತನ್ನ ಪುಸ್ತಕದ ಅಂಚನ್ನು ವಿನ್ಯಾಸದ ಮೂಲಕ ಅಲಂಕರಿಸಬಹುದು. ಆಮೇಲೆ ಕಲಾ ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿ ತನ್ನ ಸ್ವಂತ ಸಾಮರ್ಥ್ಯದಲ್ಲಿ ಹೆಮ್ಮೆಯನ್ನು ಹೊಂದಬಹುದು, ತನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬಹುದು, ತನ್ನ ಬರೆವಣಿಗೆಯ ಶೈಲಿ ಸುಧಾರಿಸಿಕೊಳ್ಳಲು ಪ್ರೋತ್ಸಾಹ ಪಡೆಯಬಹುದು ಮತ್ತು ಅವನು ತನ್ನ ಶೈಕ್ಷಣಿಕ ಅಧ್ಯಯನದಲ್ಲಿ ಉನ್ನತ ಶ್ರೇಣಿ ಪಡೆಯುವ ಗುರಿಯನ್ನು ಹೊಂದಬಹುದು. ಇದೇ ಅಲ್ಲದೆ ಕಲಾ ಕಾರ್ಯಶಾಲೆಗಳ ಚರಿತ್ರೆಯಿಂದ ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಕಲಾವಿದರು ಜೊತೆಗೂಡಿ ಕೆಲಸ ಮಾಡಿರುವುದನ್ನು, ಶಾಲೆಗಳನ್ನು ಪ್ರಾರಂಭ ಮಾಡಿರುವುದನ್ನೂ, ಕಲೆ ಮತ್ತು ಸಂಗೀತದ ಸಂಪ್ರದಾಯಗಳು ಮತ್ತು ಘರಾನಾಗಳನ್ನು, ಗಮನಿಸುವ, ಸ್ಫೂರ್ತಿ ಪಡೆದು ಬಹಳ ಎಳೆಯ ವಯಸ್ಸಿನಲ್ಲಿ ತರಗತಿಯಲ್ಲಿಯೇ ಇಂತಹವುಗಳನ್ನು ಪ್ರಾರಂಭಿಸಬಹುದು. ಇದರಿಂದ ಕೊಡುಗೆ ಕೆಲಸಕ್ಕೆ (ಜೊತೆಗೂಡಿ ಕೆಲಸ ಮಾಡುವುದು) ಮತ್ತು ಸೃಜನಶೀಲತೆ ಮತ್ತು ಕಲಾತ್ಮಕ ಅಭಿವ್ಯಕ್ತಿಯಲ್ಲಿ ತಜ್ಞತೆ ಪಡೆಯುವುದಕ್ಕೆ ಅವಕಾಶ ದೊರೆಯಬಹುದು.

ಪ್ರತಿಯೊಂದು ಪ್ರದೇಶದ ಕಲೆ ಮತ್ತು ಕುಶಲ ಕಲಾಕೇಂದ್ರಗಳಿಗೆ ಪ್ರೋತ್ಸಾಹ ಮತ್ತು ಬೆಂಬಲವನ್ನು ನೀಡಬೇಕು. ಕಲೆಗಳ ಕಾರ್ಯವಿಧಾನ ಮತ್ತು ಕುಶಲಕಲೆಗಳ ನಿರ್ಮಾಣವನ್ನು ಹಂಚಿಕೊಳ್ಳಲು ಮತ್ತು ಅವರಲ್ಲಿ ಕೃತಿ (ಕಲಾಪ್ರಕಾರ) ಕುರಿತು ಗೌರವವನ್ನು ಮೂಡಿಸಲು ಶಿಕ್ಷಣದ ಔಪಚಾರಿಕ ವಿಭಾಗವಾಗಿರುವ ಶಾಲೆಗಳಿಗೆ ಈ ಕೇಂದ್ರಗಳ ಅಥವಾ ಸಮುದಾಯಗಳ ಕಲಾವಿದರನ್ನು, ಕುಶಲಕರ್ಮಿಗಳನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಬೇಕು. ಇದು ಕಲಾ ಶಿಕ್ಷಣದ ನಿರಂತರ ಕಾರ್ಯವಿಧಾನಕ್ಕೆ ಪ್ರಮುಖ ಹಿನ್ನೆಲೆಯನ್ನು ಒದಗಿಸುತ್ತದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಾಣಿಸಲಾದ ಸಂವಿಧಾನಾತ್ಮಕ ಬಾಧ್ಯತೆಗಳಲ್ಲಿ ರಾಷ್ಟ್ರೀಯ ಅನನ್ಯತೆ, ಸಾಮಾನ್ಯ ಸಾಂಸ್ಕೃತಿಕ ಪರಂಪರೆ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ, ಪರಿಸರದ ಸಂರಕ್ಷಣೆ ಇತ್ಯಾದಿಗಳ ತರಬೇತಿ ನೀಡುವುದನ್ನು ಒತ್ತಿ ಹೇಳಲಾಗಿದೆ. ಸಂವಿಧಾನದ 4ಎ ಭಾಗದ 51ಎ ವಿಧಿಯಲ್ಲಿ ಅಳವಡಿಸಿಕೊಳ್ಳಲಾದ ಮೂಲಭೂತ ಕರ್ತವ್ಯಗಳಲ್ಲಿ ರಾಷ್ಟ್ರಧ್ವಜ, ರಾಷ್ಟ್ರಗೀತೆ, ಮತ್ತು ಸ್ವಾತಂತ್ರ್ಯ ಚಳವಳಿಯಿಂದ ಸ್ಫೂರ್ತಿ ಪಡೆದಂತಹ ಆದರ್ಶಗಳಿಗೆ ಗೌರವ ಭಾವನೆಯನ್ನು ಸೂಚಿಸಲಾಗಿದೆ. ಅಲ್ಲದೆ ದೇಶದ ಶ್ರೀಮಂತ ಸಮ್ಮಿಳಿತ ಸಂಸ್ಕೃತಿ ಮತ್ತು ಪ್ರಾಕೃತಿಕ ಪರಿಸರಕ್ಕೆ ಕೂಡಾ ಪ್ರಧಾನ್ಯತೆ ನೀಡಬೇಕು ಮತ್ತು ಅದನ್ನು ಉಳಿಸಿಕೊಳ್ಳಬೇಕು. ಈ ಎಲ್ಲದರ ಅನುಷ್ಠಾನದಲ್ಲಿ ಕಲೆಯು ತಳಹದಿಯಾಗಬಹುದು. ನಾವು ಸಂಗೀತ ಮತ್ತು ಕಾವ್ಯದ ಮೂಲಕ ಯುವಜನತೆಗೆ ಸ್ವಾತಂತ್ರ್ಯ ಚಳವಳಿಯ ಹುರಿದುಂಬಿಸುವ ಗಳಿಗೆಗಳನ್ನು ಮತ್ತು ಸ್ವಾಭಾವಿಕ ಮತ್ತು ಸಾಂಸ್ಕೃತಿಕವಾದ ಶ್ರೀಮಂತ ಪರಂಪರೆಯನ್ನು ಕುರಿತಾದ ಪ್ರೀತಿಯನ್ನು ತಲುಪಿಸಬಹುದು.

ವಿದ್ಯಾರ್ಥಿಗಳು ಕಲಾ ಶಾಲೆಗಳಿಗೆ ಮತ್ತು ಕಲಾಕೃತಿಗಳ ಪ್ರದರ್ಶನ ಮಂದಿರಗಳಿಗೆ ಭೇಟಿ ನೀಡಲು ಹಾಗೂ ಶ್ರೇಷ್ಠ ಸಂಗೀತಗಾರರು, ನೃತ್ಯ ಕಲಾವಿದರು ಮೊದಲಾದವರ ಪ್ರದರ್ಶನಗಳನ್ನು ಕಾಣಲು ಸೌಲಭ್ಯಗಳನ್ನು ಒದಗಿಸಿ ಪ್ರೋತ್ಸಾಹಿಸಬೇಕು. ನಮ್ಮ ಸಧ್ಯದ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಕಲಾಜಗತ್ತಿನ ಶ್ರೇಷ್ಠ ವ್ಯಕ್ತಿತ್ವಗಳನ್ನು ಭೇಟಿಯಾಗಲು ಅಥವಾ ವಿಚಾರಗೋಷ್ಠಿ ಅಥವಾ ಮುಶಾಯಿರಗಳಿಗೆ ಹೋಗಲು ಅಥವಾ ಇನ್ನೊಂದು ಹಂತದಲ್ಲಿ ಆವೆಮಣ್ಣಿನ ಪಾತ್ರೆಗಳನ್ನು ತಯಾರಿಸುವ ಕುಂಬಾರನೊಂದಿಗೆ ಮಾತುಕತೆ ನಡೆಸಲು ಅವಕಾಶವಿರುವುದಿಲ್ಲ. ಪ್ರತಿಯೊಂದು ಸಣ್ಣ ಊರು/ಹಳ್ಳಿಗಳ ಸಮುದಾಯದಲ್ಲಿ ಮಕ್ಕಳು ಸೃಜನಶೀಲರಾಗಲು ಸ್ಫೂರ್ತಿ ನೀಡಬಲ್ಲ ವ್ಯಕ್ತಿತ್ವದವರು ಇದ್ದಾರೆ. ಕಲಾವಿದನ ನಿರ್ವಚನವು ಆತನ ಚಿತ್ರಕ್ಕೆ ನಿಗದಿಪಡಿಸುವ ಬೆಲೆ ಅಥವಾ ನೃತ್ಯ ಮತ್ತು ಸಂಗೀತದ ಪ್ರದರ್ಶನಗಳಿಗೆ ನೀಡುವ ಸಂಭಾವನೆ ಅಲ್ಲ, ಅದು ಕಲೆ ಮತ್ತು ಸೌಂದರ್ಯದ ಕುರಿತಾದ ಪ್ರೀತಿಯನ್ನು ಸೃಷ್ಟಿಸುವ ಅವನ ಸಾಮರ್ಥ್ಯವಾಗಿರುತ್ತದೆ. ಈ ರೀತಿಯ ಜನರನ್ನು, ಅವರು ಯಾವುದೇ ಸೃಜನಶೀಲ ಶಿಕ್ಷಣ ವಿಷಯಗಳಿಗೆ ಸಂಬಂಧಿಸಿದವರಾಗಿರಬಹುದು, ಅಥವಾ ಅವರ ಶಿಕ್ಷಣ ಏನೇ ಆಗಿರಬಹುದು, ಅಂತಹವರನ್ನು ಶಾಲೆಗಳಿಗೆ ಆಹ್ವಾನಿಸಬೇಕು.

**ತರಗತಿಯಲ್ಲಿ ಕಲೆಗಳು:**

ಸಾಮಾನ್ಯವಾಗಿ ಕಲೆಗಳನ್ನು ಚಿತ್ರಕಲೆ, ಶಿಲ್ಪಕಲೆ ಮತ್ತು ಪ್ರದರ್ಶನ ಕಲೆಗಳಾದ ಸಂಗೀತ, ನೃತ್ಯ ಇತ್ಯಾದಿಗಳೊಂದಿಗೆ ಸಮೀಕರಿಸಲಾಗುತ್ತದೆ. ಹಾಗಿದ್ದರೂ ಭಾರತೀಯ ಸಂದರ್ಭದಲ್ಲಿ ಕಲಾ ಶಿಕ್ಷಣದ ಬಹಳ ಪ್ರಮುಖ ದೃಷ್ಟಿಕೋನವೆಂದರೆ ಸಾಹಿತ್ಯಕ ಕೃತಿಗಳ ಮೂಲಕ ಕಲಾಶಿಕ್ಷಣವನ್ನು ಪಡೆಯುವುದು. ಇದರಲ್ಲಿ ಕತೆಗಳನ್ನು ಹೇಳುವ ಕಲೆಗೆ ಹೆಚ್ಚಿನ ಪ್ರಾಮುಖ್ಯತೆ ಇರಬೇಕಾಗುತ್ತದೆ. ಈ ರೀತಿಯ ಸ್ಥಳೀಯ ಚಟುವಟಿಕೆಯಿಂದ ವಯಸ್ಕರ (ಶಿಕ್ಷಕರು)

Digitised by Bharatavani, CIIL

ಮೂಲಕ ಮಗು (ವಿದ್ಯಾರ್ಥಿಗಳು) ದೇಹ, ಮಾತು, ನಾಟಕೀಯ ಹಾವಭಾವಗಳು ಮತ್ತು ದೃಶ್ಯ ಕಲ್ಪನೆಗಳ ಮೂಲಕ ಮುಕ್ತ ಸಂವಹನವನ್ನು ಕಲಿಯುತ್ತದೆ. ಇದರಿಂದ ವಿಚಾರಗಳು ಮತ್ತು ಕಲ್ಪನೆಗಳು ವೃದ್ಧಿಗೊಳ್ಳುತ್ತವೆ. ಕಥೆಗಳು ಮುದವನ್ನುಂಟುಮಾಡುತ್ತವೆ. ಏಕೆಂದರೆ ಅವು ಭಾಷೆಗಳಿಗೆ ಆಟದ ಮೈದಾನಗಳಾಗಿರುತ್ತವೆ. ಬಹಳಷ್ಟು ಕತೆಗಳಲ್ಲಿ ತುಂಬಿತುಳುಕುತ್ತಿರುವ ಮಂತ್ರಮುಗ್ಧತೆ ಮತ್ತು ಮೋಹಕತೆ ಕಥೆ ಹೇಳುವ ಮಾಂತ್ರಿಕತೆಯ ಮೂಲಕ ಹೊರಹೊಮ್ಮುತ್ತವೆ. ಈ ಶ್ರೇಷ್ಠ ಕತೆಗಳು 'ಸಮುದಾಯ'ವನ್ನು ಸೃಷ್ಟಿಸುತ್ತವೆ. ಇವು ಕಥನಕಾರ ಮತ್ತು ಕೇಳುವ, ಮತ್ತು ಕೇಳುಗರಲ್ಲಿಯೇ ಅವರ ನಡುವೆ ಕೊಂಡಿಯನ್ನು ಕಲ್ಪಿಸುತ್ತವೆ. ಅತ್ಯಂತ ಪ್ರಾಚೀನ ಮತ್ತು ಅತ್ಯಂತ ಜನಪ್ರಿಯವಾದವುಗಳು ಪವಿತ್ರ ಕತೆಗಳ ರೂಪದಲ್ಲಿ ಇವೆ. ಇವು ಇಡೀ ಸಮುದಾಯಗಳನ್ನು ಒಂದುಗೂಡಿಸುತ್ತವೆ. ಕ್ರಿಶ್ಚಿಯನ್ನರ ಹಾಗೆ ಯೆಹೂದಿಗಳು ಕೂಡಾ ವಿಮೋಚನೆಯ ಹಬ್ಬದ ಘಟನೆಗಳನ್ನು–ಕ್ರಿಸ್ತನ ಹುಟ್ಟು, ಸಾವು ಮತ್ತು ಪುನರುಜ್ಜೀವನದ ಪವಾಡಗಳನ್ನು ಪೂರ್ವಾಭ್ಯಾಸ ಮಾಡುತ್ತಾರೆ. ಗೌತಮ ಬುದ್ಧನೊಂದಿಗೆ ಸಂಯೋಜಿಸಲ್ಪಟ್ಟ ಅನೇಕ ಕತೆಗಳ ಕುರಿತು ಬೌದ್ಧರು ಹೇಳುತ್ತಾರೆ. ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತವು ಕಥನಕಾರರಿಗೆ, ನೃತ್ಯಗಾರರಿಗೆ ಸಂಗೀತಗಾರರಿಗೆ, ಚಿತ್ರಕಲಾವಿದರಿಗೆ ಮತ್ತು ಸಿನೆಮಾ ತಯಾರಕರಿಗೆ ಕೂಡ ಸ್ಫೂರ್ತಿಯನ್ನು ನೀಡಿವೆ. ಕತೆಗಳು ಇನ್ನೊಬ್ಬರ ದೃಷ್ಟಿಯಿಂದ ನೋಡಲು ಕೂಡಾ ನಮಗೆ ಸಹಾಯ ಮಾಡುತ್ತವೆ. ಕತೆಗಳ ಮೂಲಕ ನಾವು ಲಿಂಗ, ಜನಾಂಗ, ಮತ, ಪ್ರಾದೇಶಿಕತೆ ಮತ್ತು ವರ್ಗವನ್ನು ಮೀರಿ ನಡೆಯುತ್ತೇವೆ. ಅದು ಯಾವ ರೀತಿಯಲ್ಲಿ ಇರುವುದೆಂದರೆ ಪಕ್ಷಿಗಳು, ಪ್ರಾಣಿಗಳು ಮತ್ತು ಸಸ್ಯಗಳು ಕೂಡಾ ಮನುಷ್ಯರೊಂದಿಗೆ ಪಾತ್ರಗಳಾಗಿ ಇರುತ್ತವೆ. ಇದರಿಂದ ಮನುಷ್ಯರು ಮತ್ತು ವೃಕ್ಷ ಜಂತು ಜಾಲ ಮತ್ತು ಮಗುವಿನ ನಡುವೆ ಅಪರೂಪದ ಬಂಧ ಸೃಷ್ಟಿಯಾಗುತ್ತದೆ. ಹೀಗೆ ಕತೆ ಹೇಳುವ ಕಲೆ ಮತ್ತು ಕಥೆಗಾರಿಕೆಯು ಕಲಾಶಿಕ್ಷಣದ ಮುಖ್ಯ ಘಟಕವಾಗಿ ರೂಪುಗೊಳ್ಳಬೇಕಾಗಿದೆ. ಸ್ಥಳೀಯ ದೃಶ್ಯ–ಶ್ರವಣ ಕಲೆಗಳನ್ನು–ಕತೆಗಳು, ಕಾಗದದ ಸುರುಳಿಗಳು ಅಥವಾ ಮರದ ಪೆಟ್ಟಿಗೆಗಳ ಮೇಲಿನ ಚಿತ್ರಗಳು; ಪಠಚಿತ್ರ, ಪದ, ಕವಡ್ ಇತ್ಯಾದಿಗಳನ್ನು ಮತ್ತು ಆಸಕ್ತಿದಾಯಕ ಚಿತ್ರಗಳನ್ನು ಹೊಂದಿರುವ ಸಾಂಪ್ರದಾಯಿಕ ಆಟದ ಎಲೆಗಳನ್ನು, ಉದಾಹಣೆಗೆ ಪೂರ್ವ ಪ್ರದೇಶದ ಗಂಜೀಫಾ ಎಲೆಗಳನ್ನು ಪರಿಚಯಿಸುವುದು ಅತಿ ಮುಖ್ಯ.

ಇದೇ ರೀತಿ, ರೂಪದರ್ಶಿತ್ವದ ಮೂರು ಆಯಾಮಗಳ ಆಕೃತಿಗಳ ರೂಪ ಅಥವಾ ಭಾವನೆಗಳನ್ನು ವ್ಯಕ್ತಪಡಿಸಲು ಒದ್ದೆ ಆವೆಮಣ್ಣು, ಪ್ಲಾಸ್ಟಿಕ್ ಸಾಮಗ್ರಿಗಳು, ಕಾಗದ ಮತ್ತು ಸ್ಥಳೀಯ ಪ್ರಾಕೃತಿಕ ವಸ್ತುಗಳಾದ ಪುಕ್ಕಗಳು, ಎಲೆಗಳು, ಮರ ಮತ್ತು ಕಲ್ಲುಗಳು ಇತ್ಯಾದಿಗಳನ್ನು ಬಳಸಲು ಪ್ರೋತ್ಸಾಹ ನೀಡಬೇಕು. ಬಹಳ ವಿದ್ಯಾರ್ಥಿಗಳು ಅತಿ ಚಿಕ್ಕ ವಯಸ್ಸಿನಲ್ಲಿಯೇ ಆಕೃತಿಗಳನ್ನು ಸೃಷ್ಟಿಸಲು ಕಲಿಯಬೇಕು. ಅವರಿಗೆ ಸಾಂಪ್ರದಾಯಿಕ ಸ್ಥಳೀಯ ವಿನ್ಯಾಸಗಳು ಮತ್ತು ವಸ್ತುಗಳನ್ನು ನಂತರದ ಅವಧಿಯಲ್ಲಿ ತಿಳಿಸಿಕೊಡಬಹುದು. ಉದಾಹರಣೆಗೆ ರಾಜಸ್ಥಾನದ ಹಳ್ಳಿಗಳಲ್ಲಿ ತಯಾರಿಸಲಾಗುವ ಜನಪ್ರಿಯ ಮಾದರಿ ಆಕೃತಿಗಳಲ್ಲಿ ಆವೆಮಣ್ಣಿನ ಸಮತಟ್ಟದ ಮೇಲ್ಮೈಗಳನ್ನು ಇತರ ಪದರುಗಳೊಂದಿಗೆ ಅಧ್ಯಾರೋಪಿಸಿ ಪೌರಾಣಿಕ ಆಕೃತಿಗಳು, ಪ್ರಾಣಿಗಳು, ಸಸ್ಯ ಜೀವಗಳು ಮತ್ತು ಎಷ್ಟೋ ವಿಧದ ಅಲಂಕಾರಿಕ ವಿನ್ಯಾಸಗಳನ್ನು ಸೃಷ್ಟಿಸಲಾಗುತ್ತದೆ. ತಮಿಳುನಾಡಿನ ಸುಡುಮಣ್ಣಿನ (ಟೆರ್ರಾಕೋಟಾ) ಕುದುರೆಗಳನ್ನು ಕೂಡಾ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿರುವ ಮತ್ತು ಭಾರತೀಯ ಸಂಪ್ರದಾಯದಲ್ಲಿ ತನ್ನ ಮೂಲ ಬೇರನ್ನು ಹೊಂದಿರುವ ಕಲಾ ಪ್ರಕಾರವೆಂದರೆ, 'ಪ್ರತಿಷ್ಠಾಪನಾ ಕಲೆ'. ಇಲ್ಲಿ ವಾಸ್ತವ ಮತ್ತು ಅಮೂರ್ತ ವಸ್ತುವಿಷಯಗಳನ್ನು ಜೊತೆಗೂಡಿಸಲಾಗುತ್ತದೆ. ಭಾರತೀಯ ಮನೆಗಳ ಗೋಡೆಗಳಲ್ಲಿ ಗೂಡುಗಳು ಇರುತ್ತವೆ. ಈ ಗೂಡುಗಳನ್ನು ದೇವರು, ಪವಿತ್ರ ಗ್ರಂಥಗಳು ಅಥವಾ ಸಾಮಾನ್ಯ ಅಲಂಕಾರಿಕ ವಸ್ತುಗಳನ್ನು ಇಡಲು ಉಪಯೋಗಿಸಲಾಗುತ್ತದೆ. ಮನೆಯವರ ಸೌಂದರ್ಯಪ್ರಜ್ಞೆಯನ್ನು ವ್ಯಕ್ತಪಡಿಸುವ ಈ ಗೂಡುಗಳು ಮನೆಯವರಿಗೆ ಸಂತೋಷ ಮತ್ತು ಸೌಂದರ್ಯವನ್ನು ನೀಡುತ್ತವೆ. ಪ್ರತಿಷ್ಠಾಪನಾ ಕಲೆಯು ಅತ್ಯಂತ ಜನಪ್ರಿಯವಾಗಿದ್ದು ಅನೇಕ ಕಲಾವಿದರು ತಾವು ರಚಿಸಿದ ಚಿತ್ರಗಳು ಮತ್ತು ಶಿಲ್ಪಗಳೊಂದಿಗೆ ಇವುಗಳನ್ನು ಕೂಡ ಪ್ರದರ್ಶಿಸುತ್ತಾರೆ. ಶಾಲೆಯಲ್ಲಿ ಮಗುವಿಗೆ ಮೂರು ಆಯಾಮಗಳನ್ನು ವ್ಯಕ್ತಪಡಿಸಲು ಬೂಟಿನ ಪೆಟ್ಟಿಗೆಗಳು ಅಥವಾ ತರಗತಿಯ ಮೂಲೆ ಪ್ರೇರಣೆ ನೀಡಬಹುದು. ಇದನ್ನು ಮತ್ತೆ ಮತ್ತೆ ಬದಲಿಸಬಹುದು.

ಪ್ರದರ್ಶನ ಕಲೆಗಳು ಹೆಚ್ಚು ಸೂಕ್ಷ್ಮ ಮತ್ತು ಅಮೂರ್ತ. ಇವುಗಳನ್ನು ತಿಳಿದುಕೊಳ್ಳಲು ಆಳವಾದ ಪ್ರಜ್ಞೆ ಇರಬೇಕಾಗುತ್ತದೆ. ಠಾಕೂರರು ಹೇಳುತ್ತಾರೆ. "ವಿಜ್ಞಾನದ ಪ್ರದೇಶದಲ್ಲಿ ಗಣಿತ ಇರುವ ಹಾಗೆ ಸಂಗೀತವು ಎಲ್ಲ ಕಲೆಗಳಲ್ಲಿ ಹೆಚ್ಚು ಅಮೂರ್ತವಾಗಿದೆ. ವಾಸ್ತವವಾಗಿ ಈ ಎರಡು ಶಾಸ್ತ್ರಗಳು ಪರಸ್ಪರ ಆಳವಾದ ಸಂಬಂಧವನ್ನು ಹೊಂದಿವೆ." ಇದು ಅತ್ಯಂತ ಸಮಂಜಸವಾಗಿದೆ. ಈ ಎರಡೂ ಜ್ಞಾನಶಿಸ್ತುಗಳಲ್ಲಿರುವ ನಿಖರತೆ ಮತ್ತು ಅಮೂರ್ತತೆ ಈ ಅಂಶವನ್ನು ಸಾಬೀತುಪಡಿಸುತ್ತದೆ. ಪ್ರದರ್ಶನ ಕಲೆಗಳಲ್ಲಿ ಧ್ವನಿ ಮತ್ತು ಛಂದೋಗತಿಯನ್ನು ಸಂಗೀತದಲ್ಲಿ ಕಂಠ ಮತ್ತು ಕೈಗಳ ಚಪ್ಪಾಳೆ, ಕಾಲಿನ ಬಡಿತದ ಮೂಲಕ ಮೊದಲು ಪರಿಚಯಿಸಲಾಗುವುದು. ನಂತರ ಮಗು 'ತನ್ನ ಸ್ವಂತದ ಸಂಗೀತ'ವನ್ನು ಸೃಷ್ಟಿಸಲು ಅವಕಾಶ ನೀಡುವ ಸಲುವಾಗಿ ಸರಳವಾದ ಸಂಗೀತ ಸಾಧನಗಳ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಇದೇ ರೀತಿ ನೃತ್ಯದ ತರಬೇತಿಗೆ ದೇಹದ ಅಭಿವ್ಯಕ್ತಿ(ಅಂಗಿಕ ಚಲನೆ) ಮೂಲವಾಗಿರುತ್ತದೆ. ನಂತರದ ಘಟ್ಟದಲ್ಲಿ ಸಂಗೀತ ಮತ್ತು ನೃತ್ಯಗಳಂತಹ ಕಲೆಗಳ ತಾಂತ್ರಿಕ ವಿಷಯಾಂಶಗಳನ್ನು ತಿಳಿದುಕೊಳ್ಳಲು ತರಬೇತಿ ಹೊಂದಿರುವ ಶಿಕ್ಷಕರು ಇರಬೇಕಾಗುತ್ತದೆ.

ಕತೆಗಳನ್ನು, ಕವನಗಳನ್ನು ಬರೆಯಲು ಮತ್ತು ಅವುಗಳನ್ನು ಸಂಗೀತ ಮತ್ತು ಮೂಕ ನಾಟಕಗಳಲ್ಲಿ ಬಳಸುವುದನ್ನು ಬಹಳ

Digitised by Bharatavani, CIIL

ಎಳೆಯ ವಯಸ್ಸಿನಲ್ಲಿ ಕಲಿಸಬೇಕು. ನಂತರ ಪದಗಳು, ಧ್ವನಿ ಮತ್ತು ಚಲನೆಯು ಹೇಗೆ ಭಾವನೆಗಳ ಸಾರವನ್ನು–ರಸ ಮತ್ತು ಭಾವಗಳು ತಮ್ಮ ರಂಗ ಚಟುವಟಿಕೆಗಳಲ್ಲಿ ಹೇಗೆ ಅಭಿವ್ಯಕ್ತಗೊಳ್ಳುತ್ತವೆ ಎನ್ನುವುದನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಬೇಕು. ಪ್ರಾಯೋಗಿಕ ಅಭ್ಯಾಸಗಳಿಂದ ಕಲೆಯ ವಿವಿಧ ರೂಪಗಳ ಬಹು ಮಿತಿಯ ಮತ್ತು ಅಂತರ ಸಂಬಂಧಗಳನ್ನು ಅರಿಯಲಾಗುತ್ತದೆ.

ಹೊಸ ತಂತ್ರಜ್ಞಾನವು ಸೃಜನಶೀಲ ಅಭಿವ್ಯಕ್ತಿಗಳಿಗೆ ಬಹಳ ವಿಸ್ತಾರವಾದ ರಂಗಸ್ಥಳವನ್ನು ತೆರೆದಿದೆ. ಈಗ ಬಹಳಷ್ಟು ಶಾಲೆಗಳು ಗಣಕಯಂತ್ರ ಕಲೆಯನ್ನು ಮತ್ತು ಅಂತರ್‌ಜಾಲದಲ್ಲಿ ಕಲಾತ್ಮಕ ಅಭಿವ್ಯಕ್ತಿಗಳನ್ನು ಮತ್ತು ಮಾಹಿತಿಯನ್ನು ಹೇಗೆ ಕಂಡುಕೊಳ್ಳುವುದು ಎಂಬುದನ್ನು ಕಲಿಸುತ್ತವೆ. ತರಬೇತಿ ಹೊಂದಿರುವ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಗಣಕಯಂತ್ರವು ಕಲಾತ್ಮಕ ಅಭಿವ್ಯಕ್ತಿಗಳಿಲ್ಲದೆ ಹೊಸಸೃಷ್ಟಿ ಸಾಧ್ಯವಾಗುವುದು ವಿಶಿಷ್ಟ ಅನುಭವ. ಛಾಯಾಚಿತ್ರಗ್ರಹಣ, ಚಿತ್ರೀಕರಣ, ಆನಿಮೇಶನ್ ತಂತ್ರಜ್ಞಾನಗಳು ಕೂಡ ಕಲಾಶಿಕ್ಷಣ ಭಾಗಗಳೇ ಆಗಿವೆ. ಅಗತ್ಯ ಉಪಕರಣಗಳನ್ನು ಹೊಂದಿರುವ ಶಾಲೆಗಳು ಈ ಕಲಾಪ್ರಕಾರಗಳಲ್ಲಿ ಮಕ್ಕಳಿಗೆ ತರಬೇತಿಯನ್ನು ನೀಡುತ್ತಿವೆ.

**ಶಾಲೆಗಳಿಂದ ಹೊರಗಿನ ಕಲಿಕಾ ಕೇಂದ್ರಗಳಲ್ಲಿ ಕಲಾಶಿಕ್ಷಣ:**

ನಾವು ನಮ್ಮ ಗಮನವನ್ನು ಔಪಚಾರಿಕ ಶಾಲಾ ಶಿಕ್ಷಣದ ಮೇಲೆ ಕೇಂದ್ರೀಕರಿಸುತ್ತೇವೆ. ಆದರೆ ಭಾರತದಲ್ಲಿ ಕಲೆಯ ಬಹಳಷ್ಟು ಜ್ಞಾನಶಿಸ್ತುಗಳು ಇನ್ನೂ ಉಳಿದುಬಂದಿರುವುದನ್ನು ಮತ್ತು ಅವುಗಳನ್ನು ಶಾಲಾ ವ್ಯವಸ್ಥೆಯ ಹೊರಗೆ ಕಲಿಸಿಕೊಡುವ ವಾಸ್ತವತೆಯನ್ನು ತಳ್ಳಿ ಹಾಕುವಂತಿಲ್ಲ. ಈ ಕಲಾಪ್ರಕಾರಗಳನ್ನು ಕಲಾವಿದರ ಮತ್ತು ಕುಶಲಕರ್ಮಿಗಳ ಮನೆಗಳಲ್ಲಿ ಅಥವಾ ಖಾಸಗಿ ಕಲಾ ಸಂಸ್ಥೆಗಳಲ್ಲಿ, ಪ್ರದರ್ಶನ ಮಂದಿರಗಳಲ್ಲಿ, ಕಲಾ ಶಾಲೆಗಳಲ್ಲಿ ಕಲಿಸಿಕೊಡಲಾಗುತ್ತದೆ. ಸ್ಮಾರಕಗಳು ಅಥವಾ ಚಾರಿತ್ರಿಕ ನಿವೇಶನಗಳು ಕೂಡಾ ಪ್ರಮುಖ ಕಲಿಕಾ ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ.

ವಿಶೇಷ ಪ್ರತಿಭೆಯುಳ್ಳ ಮೇಧಾವಿ ಮಕ್ಕಳಿಗೆ ನೀಡುವ ಶಿಕ್ಷಣದಲ್ಲಿ ಕಲ್ಪನಾಸೃಷ್ಟಿ ಮತ್ತು ಕಲೆಗಳು ಘಟಕಗಳಾಗಿ ಇರಬೇಕಾಗಿದೆ. ಇಲ್ಲಿ ಮತ್ತೊಂದು ವಿಚಾರ ಹೇಳಬೇಕೆಂದರೆ, ಶಿಕ್ಷಣದ ಪ್ರಾರಂಭಿಕ ಹಂತಗಳಲ್ಲಿಯೇ ಅಪ್ಪಟ ಕಲಾಶಿಕ್ಷಣವನ್ನು ನೀಡಿದರೆ ಬಹುತೇಕ ವಿದ್ಯಾರ್ಥಿಗಳು ನಮಗೆ 'ಪ್ರತಿಭಾವಂತರು ಮತ್ತು ಮೇಧಾವಿ'ಗಳಾಗಿ ಗೋಚರವಾಗುತ್ತಾರೆ. ಜನ್ಮಜಾತ ಪ್ರತಿಭೆ ಮತ್ತು ಮೇಧಾವಿತನ ಇರುವವರನ್ನು ಪರೀಕ್ಷಿಸುವ ಇನ್ನೊಂದು ವಿಧಾನವೆಂದರೆ ಅವರ ಸೃಜನಾತ್ಮಕ ಕಲ್ಪನೆಯನ್ನು ದೃಶ್ಯ, ಶ್ರವಣ ಮತ್ತು ಮಾತಿನ ಮೂಲಕ ಅಭಿವ್ಯಕ್ತಿಗೊಳ್ಳುವ ಅವರ ಸಾಮರ್ಥ್ಯವನ್ನು ತಿಳಿದುಕೊಳ್ಳುವುದು.

ಲಿಂಗ ತಾರತಮ್ಯ ಇನ್ನೂ ಉಳಿದುಬಂದಿರುವ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಶಿಕ್ಷಣದ ಮೂಲಕ ಕಲಾತ್ಮಕ ಮತ್ತು ಸೃಜನಾತ್ಮಕ ಚಟುವಟಿಕೆಗಳನ್ನು ಮತ್ತು ವಿಶೇಷವಾಗಿ ಪ್ರದರ್ಶನ ಕಲೆಗಳು ಮತ್ತು ಕರಕುಶಲ ಕಲೆಗಳನ್ನು ಪರಿಚಯಿಸಿದ್ದು ಉತ್ತಮ ಫಲಿತಾಂಶವನ್ನು ನೀಡಿದೆ. ಬೊಂಬೆಯಾಟ ಮತ್ತು ಮಾನವ ರಂಗಭೂಮಿ ಮತ್ತು ಇದೇ ರೀತಿಯ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದು ಸಾಧ್ಯವೆನ್ನುವುದು ಈಗಾಗಲೇ ಸ್ವೀಕೃತ ವಿಚಾರವಾಗಿದೆ.

**ಹಬ್ಬಗಳು:**

ದೇಶದ ಯಾವುದೇ ಭಾಗದಲ್ಲಿ ಹತ್ತುದಿನಗಳ ಕಾಲ ಅಥವಾ ಅದಕ್ಕಿಂತ ಹೆಚ್ಚು ಅವಧಿಗೆ ಮುಂದುವರಿಯುವ ಸಾಂಪ್ರದಾಯಿಕ ಮದುವೆ ಕಾರ್ಯಕ್ರಮಗಳಲ್ಲಿ ಎಷ್ಟು 'ಕಲೆಗಳು' ಅಂತರ್ಗತವಾಗಿ ಇವೆ ಎನ್ನುವುದನ್ನು ತಿಳಿದುಕೊಳ್ಳುವುದು ವಿಸ್ಮಯಕಾರಿ ಸಂಗತಿಯಾಗಿದೆ. ಆಹಾರ ತಯಾರಿಕೆ ಮನತುಂಬುವ ದೃಶ್ಯವಾಗಿರುತ್ತದೆ. ಮತ್ತು ಅದು ವಿಭಿನ್ನ ಪ್ರಾದೇಶಿಕ ರುಚಿಗಳನ್ನು ಪ್ರತಿನಿಧಿಸುತ್ತದೆ; ವರ್ಣಮಯ ಉಡುಪುಗಳು; ನೆಲದ ವಿನ್ಯಾಸಗಳು; ಮೆಹಂದಿ; ಹಾಡುಗಳು ಮತ್ತು ನೃತ್ಯಗಳು; ವಿಶೇಷ ಹಾರಗಳು ಮತ್ತು ಅಲಂಕಾರಗಳಿಗೆ ಬಳಕೆಯಾಗುವ ಹೂಗಳು ಇತ್ಯಾದಿ. ಹಾಗಿದ್ದರೂ, ಇತ್ತೀಚಿಗೆ ಇವೆಲ್ಲವೂ ಒಂದು ಸಂಜೆಗೆ ಸೀಮಿತಗೊಂಡಿರುವುದನ್ನು ಕಾಣುತ್ತೇವೆ. ಇಲ್ಲಿ ಚಲನಚಿತ್ರಗಳ ಹಾಡುಗಳನ್ನು ಮತ್ತು ನೃತ್ಯಗಳನ್ನು ಅನುಸರಿಸಲಾಗುತ್ತದೆ. ಮದುವೆ ಸಮಾರಂಭ ಪ್ರಸಿದ್ಧ ಉಪಹಾರಗೃಹಗಳಲ್ಲಿ ನಡೆಯುತ್ತದೆ. ಆಯಾ ಉಪಹಾರಗೃಹದ ಸಂಸ್ಕೃತಿಗೆ ಹೊಂದುವ ಅಲಂಕರಣಗಳು ಅಥವಾ 'ಸಮ್ಮಿಳಿತ' ಆಹಾರವಿರುತ್ತದೆ. ಸಮಾರಂಭದ ಅವಿಭಾಜ್ಯ ಅಂಗವಾಗಿದ್ದ ಅತ್ಯಂತ ಸುಂದರವಾದ ಕವಿತೆಗಳು ಮತ್ತು ಹಾಡುಗಳು ಕಳೆದುಹೋಗಿರುವುದು ನಿಜವಾಗಿಯೂ ಚಿಂತನೆಗೆ ಒಳಪಡಿಸಬೇಕಾದ ಪ್ರಶ್ನೆಯಾಗಿದೆ.

ರಾಮಾಯಣದ ಅಧ್ಯಾಯಗಳೊಂದಿಗೆ ನೇರವಾಗಿ ಸಂಬಂಧಿಸಿದ ಹಬ್ಬಗಳು ಇವೆ. ಉದಾಹರಣೆಗೆ ದೀಪಾವಳಿ, ಬೆಳಕಿನ ಹಬ್ಬವಾಗಿರುವ ಇದನ್ನು ರಾಮನು ಹದಿನಾಲ್ಕು ವರ್ಷಗಳ ವನವಾಸ ಮುಗಿಸಿ ತನ್ನ ರಾಜ್ಯಕ್ಕೆ ಮರಳಿದ ದಿನವಾಗಿ ಆಚರಿಸಲಾಗುತ್ತದೆ. ಭಾರತದ ಕೆಲವು ಭಾಗಗಳಲ್ಲಿ ಸಮೃದ್ಧಿ ಮತ್ತು ಸಂಪತ್ತಿನ ದೇವಿಲಕ್ಷ್ಮಿಯನ್ನು ಇದೇ ದಿನ ಸ್ವಾಗತಿಸಲು ಮನೆಯ ನೆಲವನ್ನು ಸಾಂಪ್ರದಾಯಿಕ ವಿನ್ಯಾಸಗಳು ಮತ್ತು ಸಂಕೇತಗಳಿಂದ ವಿಶಿಷ್ಟ ರೀತಿಯಿಂದ ಅಲಂಕರಿಸಲಾಗುತ್ತದೆ. ಎಲ್ಲ ಭಾರತೀಯ ಹಬ್ಬಗಳು –ಈದ್, ಕ್ರಿಸ್‌ಮಸ್, ಬುದ್ಧ ಜಯಂತಿ ಇತ್ಯಾದಿಗಳು ಸೃಷ್ಟಿಯ ವೈವಿಧ್ಯತೆಗಳನ್ನು ಮತ್ತು ತಾತ್ವಿಕ ಚಿಂತನೆಗಳನ್ನು ಆಚರಿಸುವುದಲ್ಲದೆ ಜನಸಮುದಾಯಗಳನ್ನು ಒಟ್ಟಿಗೆ ತರುತ್ತವೆ.

ಹೊಸ ಸಹಸ್ರ ಮಾನದಲ್ಲಿ ನಮ್ಮ ದೈನಂದಿನ ಬದುಕಿನಲ್ಲಿ 'ಕಲೆ'ಯ ಮರುಸೃಷ್ಟಿ ಅಥವಾ ಮರು–ಶೋಧನೆಯಾಗುವುದು ನಮಗೆ ಬೇಕೆ? ಕಲೆ ಸಮಾಜ ವ್ಯವಸ್ಥೆಯ ಉತ್ಪನ್ನ. ಇಂದು ನಡೆಯುತ್ತಿರುವ ತೀವ್ರ ಬದಲಾವಣೆಗಳು ಮತ್ತು ಶೋಧನೆಗಳು ಹೊಸ ರೂಪಗಳಿಗೆ ಅಥವಾ ಪ್ರಕಾರಗಳಿಗೆ ಜನ್ಮ ನೀಡುತ್ತಿವೆ. ಉದಾಹರಣೆಗೆ ಇವತ್ತು ಸಂಗೀತ

Digitised by Bharatavani, CIIL

ಮನುಷ್ಯನ ಧ್ವನಿಯಾಗಿ ಅಥವಾ ತಲೆಮಾರುಗಳಿಂದ ತಲೆಮಾರಿಗೆ ಪ್ರಾಚೀನ ಸಂಗೀತ ಉಪಕರಣಗಳ ಮೇಲೆ ನುಡಿಸಲಾಗುತ್ತಿದ್ದ ಸಾಂಪ್ರದಾಯಿಕ ಕಲೆಯಾಗಿ ಮಾತ್ರ ಉಳಿದಿಲ್ಲ; ಉಪಲಬ್ಧವಿರುವ ವಿದ್ಯುತ್ ಸಾಧನಗಳ ಮೂಲಕ ಪರಿಶೋಧಿಸಲ್ಪಡುವ ಧ್ವನಿಗೆ ಸಮಗ್ರ ಹೊಸ ಆಯಾಮವನ್ನು ನೀಡುವ ರೀತಿಯದ್ದಾಗಿದೆ. ಇವು ವಿಭಿನ್ನ ರೀತಿಯ ಅಥವಾ ಹೊಸ ವಿಧದ ಧ್ವನಿಗಳ ಸರಣಿಯನ್ನು ಉತ್ಪಾದಿಸಬಹುದು ಅಥವಾ ತಂತಿಗಳು, ಗಾಳಿ, ತಬಲ ಮತ್ತು ಇನ್ನೂ ಹೆಚ್ಚಿನವುಗಳಲ್ಲಿ ಸ್ಥಾನವನ್ನು ಪಡೆಯಬಹುದು. ನಮ್ಮ ಸಾಂಪ್ರದಾಯಿಕ ರಾಗ ಸಂಗೀತದಲ್ಲಿ ಅಗತ್ಯವಿರುವ ಹಾಗೆ ಈ ಸಂಗೀತವು ಮೂಲ ಸ್ವರ ಅಥವಾ ರುಚಿಗೆ ಅಂಟಿಕೊಂಡಿರಬೇಕಾದ ಅವಶ್ಯಕತೆ ಇಲ್ಲ.

**ಶಿಕ್ಷಕರ ತರಬೇತಿ:**

ಕಲಾ ಶಿಕ್ಷಣದಿಂದ ಯಾವುದೇ ಉಪಯೋಗವನ್ನು ಪಡೆಯಬೇಕಾದರೆ ಶಿಕ್ಷಕರ ತರಬೇತಿಯ ಇಡೀ ಪರಿಕಲ್ಪನೆಯನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ಕಲಾ ವಿಷಯವು ಪ್ರಾಯಶಃ ಶಿಕ್ಷಣ ವ್ಯವಸ್ಥೆಯ ಅತ್ಯಂತ ಕೊನೆಯ ಆದ್ಯತೆಯಲ್ಲಿ ಇದೆ. ಶಿಕ್ಷಣಶಾಸ್ತ್ರದ ವಿಧಾನಕ್ರಮಗಳ ಕುರಿತು ಶಿಕ್ಷಕರಿಗೆ ತರಬೇತಿಯನ್ನು ನೀಡುವಾಗ ಚಿತ್ರಬಿಡಿಸುವುದು, ಸಂಗೀತ, ನೃತ್ಯ ಅಥವಾ ಬೇರೆ ಯಾವುದೇ ಸೃಜನಶೀಲ ವಿಷಾಯಂಶಗಳು ಮನಶಾಸ್ತ್ರ ಸೇರಿರುವುದು ಅಪರೂಪ. ಶಾಲೆಗಳು ಕೂಡಾ, ಪ್ರಾಯಶಃ ಮೇಲೆ ನೀಡಿದ ಕಾರಣಗಳಿಗಾಗಿ ಕಲಾ ಶಿಕ್ಷಕರನ್ನು ಮತ್ತು ಕಲಾ ವಿಷಯವನ್ನು, ಅಸಡ್ಡೆಯಿಂದ ಕಾಣುತ್ತಾರೆ ಎಂದರೆ ಅದು ಒರಟು ಮಾತಂತೂ ಖಂಡಿತ ಅಲ್ಲ. ಇದು ಚೆನ್ನಾಗಿ ಕಾಣಿಸಿಕೊಳ್ಳುವುದು ಸರಕಾರದ ಅನುದಾನದಿಂದ ನಡೆಯುತ್ತಿರುವ ಶಾಲೆಗಳಲ್ಲಿ. ಈ ಶಾಲೆಗಳು ಹೆಚ್ಚು ಸಮೃದ್ಧಿಯನ್ನು ಹೊಂದಿರುವುದಿಲ್ಲ. ಇಲ್ಲಿ ಶಿಕ್ಷಕರಿಗೆ ಸಿಗುವ ವೇತನ ಕಡಿಮೆ. ಸ್ಥಳಾವಕಾಶ ಅಥವಾ ಒದಗಿಸಲಾಗುವ ಬೋಧನಾ ಸಾಮಗ್ರಿಗಳೂ ಹೆಚ್ಚು ಇರುವುದಿಲ್ಲ. ಶಿಕ್ಷಣಶಾಸ್ತ್ರದ ಕಾರ್ಯವಿಧಾನಗಳು ಮತ್ತು ಕಲೆಯನ್ನು ವ್ಯಕ್ತಿತ್ವದ ಬೆಳವಣಿಗೆಯ ಪೂರಕ ಸಾಧನವಾಗಿ ಸೇರಿಸಿಕೊಳ್ಳುವ ಕ್ರಮಬದ್ಧತೆಗಳು ಶಿಕ್ಷಕರ ತರಬೇತಿಯ ಭಾಗವಾಗಿ ರೂಪುಗೊಳ್ಳಬೇಕು.

ಕಲಾ ಶಿಕ್ಷಣಕ್ಕಾಗಿ ಶಿಕ್ಷಕರಿಗೆ ನೀಡುವ ತರಬೇತಿಯಲ್ಲಿ ಕಲಾ ಚರಿತ್ರೆ ಅಥವಾ ಶಾಸ್ತ್ರದ ಸೈದ್ಧಾಂತಿಕ ಪರಿಕಲ್ಪನೆಗಳು ಮಾತ್ರ ಸಾಕಾಗುವುದಿಲ್ಲ. ಪ್ರತಿಯೊಬ್ಬ ಶಿಕ್ಷಕರಿಗೆ ಸೇವಾ–ಪೂರ್ವ ತರಬೇತಿಯಲ್ಲಿ ಸಾಧ್ಯವಾದಷ್ಟು ಕಲಾ ಮಾಧ್ಯಮಗಳಲ್ಲಿ ಕೆಲಸ ಮಾಡುವ ಪ್ರಾಯೋಗಿಕ ಅನುಭವ ದೊರೆಯಬೇಕು.ಮತ್ತೊಂದು ಬಹುಮುಖ ಅಗತ್ಯವೆಂದರೆ, ಪ್ರತಿಯೊಂದು ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಕಲಾ ಅಥವಾ ಸಾಂಸ್ಕೃತಿಕ ಸಂಪನ್ಮೂಲ ಕೇಂದ್ರವನ್ನು ಸೃಷ್ಟಿಸುವುದು. ಇಲ್ಲಿ ಶ್ರವಣ–ದೃಶ್ಯ ಸಾಮಗ್ರಿಗಳು ಲಭ್ಯವಿರಬೇಕು ಮತ್ತು ಬೋಧನಾ ಕಲೆಯ ಪಾಠಪ್ರವಚನಗಳ ಕ್ರಮಗಳಲ್ಲಿ ಇದು ಭಾಗವಾಗಿರಬೇಕು. ವಿಮರ್ಶಾತ್ಮಕ ವಿಶ್ಲೇಷಣೆ ಮತ್ತು ಅವಲೋಕನದ ಕೌಶಲ್ಯಗಳ ಕುರಿತಾದ ಚರ್ಚೆಗೆ ಕಲಾತ್ಮಕ ಕೃತಿಗಳ ಮತ್ತು ಪ್ರದರ್ಶನಗಳ ಹೆಚ್ಚಿನ ಪರಿಚಯದ ಅಗತ್ಯವಿರುತ್ತದೆ. ಈ ಸಂಸ್ಥೆಗಳು ಸೇವಾ ಪೂರ್ವ ತರಬೇತಿಯಲ್ಲಿ ಸಂಶೋಧನೆ ಮತ್ತು ಮೌಲ್ಯಮಾಪನದ ಘಟಕವನ್ನು ಒದಗಿಸಬೇಕು ಮತ್ತು ಶಾಲಾ ವ್ಯವಸ್ಥೆಯಲ್ಲಿ ಈಗಾಗಲೇ ಇರುವ ಶಿಕ್ಷಕರ ಸೇವಾ ವ್ಯಾಪ್ತಿಯ ಅಗತ್ಯಗಳನ್ನು ಪೂರೈಸಬೇಕು.

**ಉಪಸಂಹಾರ:** ಅಂತಿಮವಾಗಿ, ಕಲಾ ಶಿಕ್ಷಣದ ಕ್ಷೇತ್ರದಲ್ಲಿ ಶಿಕ್ಷಕ ತರಬೇತಿಯಲ್ಲಿ ಅಗಾಧ ಪ್ರಮಾಣದ ಪ್ರವೇಶ ಸಾಧನಗಳ ಕೊರತೆ ಇರುವಂತೆ ಪಠ್ಯಕ್ರಮದ ವಿನ್ಯಾಸ ಮತ್ತು ರೂಪುರೇಷೆಗಳಲ್ಲಿ ಶಿಕ್ಷಕರ ತೊಡಗಿಸಿಕೊಳ್ಳುವಿಕೆ ಕೂಡಾ ಕಡಿಮೆ ಎನ್ನುವುದನ್ನು ತೋರಿಸಿಕೊಡಬಹುದು. ಈಗಾಗಲೇ ಹೆಚ್ಚಿನ ಹೊರೆಯಾಗಿರುವ ಶಾಲಾ ವ್ಯವಸ್ಥೆಯಲ್ಲಿ ಶಿಕ್ಷಕರ ಮೇಲೆ ಅಗಾಧ ಪ್ರಮಾಣದ ಜವಾಬ್ದಾರಿಯನ್ನು ಹೊರೆಸಲಾಗಿದೆ. ಶಿಕ್ಷಕರ ಕುರಿತಾದ ನಿರೀಕ್ಷೆಯಲ್ಲಿ ಮಗುವಿನ ವ್ಯಕ್ತಿತ್ವದ ಸಮಗ್ರ ಬೆಳವಣಿಗೆ ಇರುತ್ತದೆ. ಹಿಂದೆ ನಿರ್ದಿಷ್ಟ ಜ್ಞಾನಶಿಸ್ತೊಂದನ್ನು ಕಲಿಸುವುದು ಮಾತ್ರ ಶಿಕ್ಷಕರಿಂದ ನಿರೀಕ್ಷಿಸಲಾಗುತ್ತಿತ್ತು. ಇದು ಪರಿವರ್ತನಾ ಕಾಲವಾಗಿದೆ. ನಾವು ಪ್ರಾಚೀನ ಶಿಕ್ಷಣ ವ್ಯವಸ್ಥೆಯಲ್ಲಿರುವ ಉತ್ತಮ ವಿಷಯಾಂಶಗಳನ್ನು ಪುನಶ್ಚೇತನಗೊಳಿಸುವ ಕಡೆಗೆ ನೋಟ ಹರಿಸುತ್ತಿದ್ದೇವೆ. ಹಿಂದೆ ಶಿಕ್ಷಕರು ಜ್ಞಾನ ಭಂಡಾರವಾಗಿರುತ್ತಿದ್ದರು. ಉತ್ತಮ ಮಾದರಿಗಳಾಗಿ ವಿದ್ಯಾರ್ಥಿಗಳಿಗೆ ಅಧ್ಯಾತ್ಮಿಕವಾಗಿ ಮತ್ತು ಭಾವನಾತ್ಮಕವಾಗಿ ಮಾರ್ಗದರ್ಶನ ನೀಡುತ್ತಿದರು. ಇವತ್ತಿನ ದಿನಗಳಲ್ಲಿ ಇದನ್ನು ಸಾಧಿಸುವುದು ಹೇಗೆಂಬುದು ಶಿಕ್ಷಕರ ತರಬೇತಿಯ ಗುಣಮಟ್ಟ ಮತ್ತು ಶಿಕ್ಷಣ ನೀಡಲಾಗುವ ಸಾಮಾಜಿಕ ಪರಿಸರವನ್ನು ಅವಲಂಬಿಸಿದೆ.

ಕಲಾ ಶಿಕ್ಷಣವು ಸ್ಥಳೀಯ ಸಾಂಸ್ಕೃತಿಕ ಅಗತ್ಯಗಳನ್ನು ಆಧರಿಸಿ ಇರಬೇಕು ಮತ್ತು ರಾಷ್ಟ್ರೀಯ ಅನನ್ಯತೆ ಮತ್ತು ಒಗ್ಗಟ್ಟನ್ನು ಬಲಪಡಿಸಬೇಕು. ಇದರಲ್ಲಿ ಸಾಂಸ್ಕೃತಿಕ ಪರಂಪರಾಗತ ಸಂಪ್ರದಾಯಗಳು ಮತ್ತು ವಿಭಿನ್ನ ಮಾನವಕುಲ, ಬುಡಕಟ್ಟು, ಧಾರ್ಮಿಕ ಮತ್ತು ಜನಾಂಗೀಯ ಗುಂಪುಗಳ ದೇಣಿಗೆಗಳು ಒಳಗೊಂಡಿರಬೇಕು. ಹೀಗೆ ಭಾರತೀಯ ಸಂಪ್ರದಾಯಗಳ ಬಹುತ್ವ ಸ್ಥಾಪಿತಗೊಳ್ಳಬೇಕು.

ಕಲಾ ಶಿಕ್ಷಣವು ಶಿಕ್ಷಣ ಶಾಸ್ತ್ರದ ವಿಧಾನಗಳು ಮತ್ತು ವಿಷಯಕ್ರಮಾನುಸರಣೆಗಳ ಮೌಲ್ಯಮಾಪನಕ್ಕೆ ಕೂಡ ನೆರವಾಗಬಲ್ಲದು. ಪ್ರಾಚೀನ ಕಾಲದಲ್ಲಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ಸಮುದಾಯಕ್ಕೆ ಸಂಬಂಧಿಸಿದ ಶಿಕ್ಷಣದ ವಿಚಾರವಿರುತ್ತಿತ್ತು. ಇಂದು ಮನೆ, ಸಮುದಾಯ ಮತ್ತು ಶಾಲೆಯ ನಡುವೆ ಇರುವಂತಹ ವ್ಯತ್ಯಾಸವು ಮಗುವಿನಲ್ಲಿ ಗೊಂದಲವನ್ನು ಉಂಟುಮಾಡಿದೆ. ಆದುದರಿಂದ, ಕಲಿಕೆಯು ಹೆಚ್ಚು ಸಂತೋಷದಾಯಕವಾಗಿಲ್ಲ. ಏಕೆಂದರೆ ಅದರಲ್ಲಿ ಹಬ್ಬಗಳು ಅಥವಾ ಸಮಾರಂಭಗಳು ಅಥವಾ ಜನರ ಜೀವನ ಶೈಲಿ ಒಳಗೊಂಡಿಲ್ಲ. ಆವೆಮಣ್ಣಿನ ಮುದ್ದೆಯೊಂದಿಗೆ ಕೆಲಸ ಮಾಡುವುದು ಅಥವಾ ಹೂವಿನ ಚಿತ್ರ ಬಿಡಿಸುವುದು ಅಥವಾ ಒಳಗಿನ ಧ್ವನಿಗೆ ಚಲಿಸುವುದು, ಪ್ರಕೃತಿಯಲ್ಲಿನ ಛಂದೋಗತಿ ಮತ್ತು

Digitised by Bharatavani, CIIL

ಮಾಧುರ್ಯದೊಂದಿಗೆ ತೂಗಾಡಿಕೊಳ್ಳುವುದು, ಇವೆಲ್ಲವನ್ನೂ ಪ್ರಜ್ಞಾಪೂರ್ವಕವಾಗಿ ಬೋಧನೆಯಲ್ಲಿ ಸೇರಿಸಿಕೊಳ್ಳಬೇಕು. ಹೀಗೆ ಚಟುವಟಿಕೆಯ ಯಾವುದೇ ಕ್ಷೇತ್ರದ ಅನುಭವವು ವ್ಯಕ್ತಿತ್ವದ ಅರಳುವಿಕೆಗೆ ನೆರವಾಗಬಲ್ಲದು.

ಬದಲಾಗುತ್ತಿರುವ ಅಭಿರುಚಿ ಮತ್ತು ಆಸಕ್ತಿ ಹಾಗೂ ಕಲೆಗಳ ಅವಿಚ್ಛಿನ್ನತೆ ಮತ್ತು ಅದರೊಳಗಿನ ಸೌಂದರ್ಯ ಮತ್ತು ಸೃಜನಾತ್ಮಕತೆಯಲ್ಲಿ ಹಿರಿಯರ ತೊಡಗಿಸಿಕೊಳ್ಳುವಿಕೆಯ ಕೊರತೆಯು ಯುವಜನತೆಯನ್ನು 'ಸಾಂಸ್ಕೃತಿಕ ನಿರ್ವಾತ'ವೆಂದು ಕರೆಯಬಹುದಾದ ಶೂನ್ಯದಲ್ಲಿ ಉಳಿದಿದೆ. ಈಗ ಅಗತ್ಯವಿರುವುದು ಯುವಜನತೆಯ ಸೌಂದರ್ಯ ಮತ್ತು ಸೃಜನಶೀಲ ಅಗತ್ಯಗಳನ್ನು ಖಚಿತಪಡಿಸುವ ಸಲುವಾಗಿ ಅವರೊಂದಿಗೆ 'ಮುಕ್ತ ಗೃಹ'ದ ಸಾಧ್ಯತೆಗಳನ್ನು ಉಪಯೋಗಿಸಿಕೊಳ್ಳುವುದು. ಈ ನಿಟ್ಟಿನಲ್ಲಿ ಕಲೆಗಳ ಸೃಜನಶೀಲ ಕಾರ್ಯವಿಧಾನಗಳಲ್ಲಿ ಅವರು ಯಾವುದನ್ನು ಹುಡುಕಾಡುತ್ತಿದ್ದಾರೆ ಎಂಬುದನ್ನು ವಿಶ್ಲೇಷಿಸಲು ಮತ್ತು ತಿಳಿದುಕೊಳ್ಳಲು ಪ್ರೇಕ್ಷಕರೊಂದಿಗೆ 'ಯುವ ಕಲಾವಿದರ ಮುಖಾಮುಖಿ'ಯನ್ನು ಆಯೋಜಿಸಬಹುದು. ಇದರಿಂದ ನಮ್ಮ ಕಲಾ ಶಿಕ್ಷಣ ಕಾರ್ಯಕ್ರಮಗಳಲ್ಲಿ ಕೆಲವು ಬದಲಾವಣೆಗಳನ್ನು ಅಳವಡಿಸಿಕೊಳ್ಳಬಹುದು. ಶಿಕ್ಷಕರು ಪಠ್ಯಕ್ರಮವನ್ನು ರೂಪಿಸುವಲ್ಲಿ ಪಾಲುಗೊಳ್ಳುವ ಅವಶ್ಯಕತೆ ಇದೆ ಎಂದು ನಾವು ಪ್ರತಿಪಾದಿಸುವ ಹಾಗೆ, ರಾಚನಿಕ ಕಲಾ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಇಂದು ಯುವಜನತೆಯ ಸೂಚನೆಗಳನ್ನು ಕೂಡಾ ನಾವು ಸ್ವಾಗತಿಸುವ ಅಗತ್ಯವಿದೆ.

ಇಂದಿನ ಯುವಜನತೆಯಲ್ಲಿ ಕಾರ್ಯರೂಪಕ್ಕೆ ತರಬಹುದಾದ ಅಪಾರ ಸಾಧ್ಯತೆಗಳು ಮತ್ತು ಸೃಜನಶೀಲ ಪ್ರತಿಭೆ ಇದೆ. ಇದರಿಂದ ದೇಶದ ಕಲಾತ್ಮಕ ಹರಿವಿಗೆ ಹೊಸ ಆಯಾಮ ದೊರೆಯಲಿ ಎಂಬ ನಿರೀಕ್ಷೆ ನಮ್ಮದು. ಅವರು ತಮ್ಮ ಕಾರ್ಯಸಾಧ್ಯತೆಗಳನ್ನು ವ್ಯಕ್ತಪಡಿಸಲು ಮತ್ತು ಅನುಭವಿಸಲು ಹೊಸ ದಾರಿಗಳನ್ನು ನಾವು ಅಗತ್ಯವಾಗಿ ಒದಗಿಸಬೇಕು.

**ಮೂಲ: ಪ್ರೇಮಲತ ಪುರಿ**
**ಅನು: ಡಾ. ಗೀತಾಶೆಣೈ**

## ಕಲಿಕಾ ಅಸಮರ್ಥತೆಯುಳ್ಳ ಮಕ್ಕಳ ಶಿಕ್ಷಣ

ತಮ್ಮ ಸ್ವಂತ ಭಾಷೆ ಹಾಗೂ ಬೇರೆಲ್ಲ ಭಾಷೆಗಳಲ್ಲೂ ಮಕ್ಕಳು ಓದುವ ತೊಂದರೆಯನ್ನು ಅನುಭವಿಸುವುದು ಸಾಮಾನ್ಯ. ಈ ವಿಷಯದ ಬಗ್ಗೆ ಮೊದಲು ಆಸಕ್ತಿ ತೋರಿಸಿದವರು ವಿದ್ಯಾಪರಿಣಿತರು, ನಂತರ ನರರೋಗತಜ್ಞರು, ಆಮೇಲೆ ಮನಃಶಾಸ್ತ್ರಜ್ಞರು, ಕೊನೆಗೆ ಭಾಷಾಶಾಸ್ತ್ರಜ್ಞರು.

ಇದರಲ್ಲಿ ಕಲೆಹಾಕಿದ ಮಾಹಿತಿಯಿಂದ ಇದರ ರೂಪುರೇಖೆಗಳು ಸ್ವಲ್ಪಮಟ್ಟಿಗೆ ಈಗ ಪರಿಚಿತವಾಗುತ್ತಿವೆ. ಮಗುವಿಗೆ ಓದು ಕಲಿಯುವ ತೊಂದರೆಯಿರುವುದನ್ನು ತಜ್ಞರೇ ಹೇಳಬೇಕಿಲ್ಲ. ಅದು ಮನೆಯವರಿಗೂ, ಮಗುವಿಗೂ, ಶಿಕ್ಷಕರಿಗೂ ತಿಳಿದುಬರುತ್ತದೆ.

**ಕಲಿಕಾ ಅಸಮರ್ಥತೆಯುಳ್ಳ ಮಗುವಿನ ಲಕ್ಷಣಗಳು:**

ಕಲಿಕಾ ಅಸಮರ್ಥತೆಯುಳ್ಳ ಮಗು ಬಹಳಮಟ್ಟಿಗೆ ಹೆಚ್ಚಾಗಿ ಸಾಮಾನ್ಯ ಮಗುವಿನಂತೆಯೇ ಇರುತ್ತದೆ. ಆದರೂ ಸೂಕ್ಷ್ಮವಾಗಿ ಗಮನಿಸಿದರೆ ಈ ಕೆಲವು ವಿಶೇಷ ಲಕ್ಷಣಗಳನ್ನು ಅಂತಹ ಮಗುವಿನ ಸಾಮಾನ್ಯ ವರ್ತನೆಯಲ್ಲಿ ಮತ್ತು ಶಾಲಾ ವರ್ತನೆಯಲ್ಲಿ ಕಾಣಬಹುದು. ಇವುಗಳಲ್ಲಿ ಎಲ್ಲಾ ಲಕ್ಷಣಗಳು ಒಂದೇ ಮಗುವಿನಲ್ಲಿ ಕಾಣಬರಬೇಕೆಂದಿಲ್ಲ. ಅಂತಹ ಸಾಮಾನ್ಯ ಲಕ್ಷಣಗಳು ಹೀಗಿವೆ:–

- ಮೈ ಬಿಗಿದಂತೆ ನಡೆಯಬಹುದು.
- ಕಲಿಕೆಯಲ್ಲಿ ತೊಂದರೆ
- ಗುಂಡಗಿರದ ಅಕ್ಷರಗಳ ಬರವಣಿಗೆ
- ಒಂದು ಕಾಲಿನ ಮೇಲೆ ನಿಲ್ಲು, ಒಂದು ಗೆರೆಯ ಮೇಲೆ ನಡೆ ಅಂದರೆ ಅದನ್ನು ಸರಿಯಾಗಿ ಮಾಡಲಾಗುವುದಿಲ್ಲ.
- ಮೆಟ್ಟಿಲು ಹತ್ತಿಳಿಯುವಲ್ಲಿ ಬಹಳ ನಿಧಾನ ಮತ್ತು ಅತಿ ಜೋಪಾನವಾಗಿ ಇಳಿಯುವುದು.
- ಆಟವಾಡಲು ಬೇಕಾದ ಚಲನೆಗಳಲ್ಲಿ ಯಾವುದರ ನಂತರ ಯಾವ ಚಲನೆಯನ್ನು ಮಾಡಬೇಕೆನ್ನುವುದರಲ್ಲಿ ಗಲಿಬಿಲಿಗೊಳ್ಳುವುದು.
- "ಹಾಡಿನ ಜೊತೆ ಚಪ್ಪಾಳೆ ತಟ್ಟುವುದು, ತಾಳಕ್ಕೆ ಸರಿಯಾಗಿ ಕೈ ತಟ್ಟುವುದು" ಇಂತಹ ಮಗುವಿಗೆ ಕಷ್ಟವಾಗಿ ಕಾಣಬಹುದು.
- ಪೆನ್ಸಿಲ್ಲನ್ನು ಸರಿಯಾಗಿ ಹಿಡಿಯಲು ಆಗುವುದಿಲ್ಲ.
- ಚಿತ್ರದಲ್ಲಿ ತಪ್ಪಿಸಿಕೊಂಡಿರುವ ಭಾಗವನ್ನು ಗುರುತಿಸುವುದೂ ಕಷ್ಟವಾಗಬಹುದು.
- ಪುಸ್ತಕ ನೋಡಿ ಓದುತ್ತಿದ್ದರೆ ಸಾಲು, ಪದ, ತಪ್ಪುವ ಸಂಭವ ಹೆಚ್ಚು.
- ನೋಡಿದ್ದನ್ನು ಕೂಡಲೇ ಮರೆಯುವುದು.
- ಅಕ್ಷರ ಅಥವಾ ಪದಗಳನ್ನು ತಿರುಗು ಮುರುಗಾಗಿ ಓದುವುದು ಸಾಮಾನ್ಯ.
- ಬರವಣಿಗೆಯನ್ನು ಬಲದಿಂದ ಎಡಕ್ಕೆ ಬರೆಯುತ್ತಾ ಹೋಗುವುದು.
- ಆಕೃತಿಗಳನ್ನು ತಿರುಗಿಸಿದಂತೆ ಬರೆಯುವುದು ಸಾಮಾನ್ಯ. ಅಂದರೆ ಒಂದು ಚೌಕವನ್ನು ಡೈಮಂಡ್ ಆಕೃತಿಯನ್ನಾಗಿ ಬರೆಯಬಹುದು.
- ಬರವಣಿಗೆಯ ಮಧ್ಯೆ ಸಾಕಷ್ಟು ಸರಿಯಾಗಿ ಜಾಗ ಬಿಡದೆ ಹೋಗಬಹುದು. ಹೆಚ್ಚು ಜಾಗಬಿಟ್ಟಂತೆ ಅಥವಾ ಎಲ್ಲವನ್ನೂ

Digitised by Bharatavani, CIIL

ಒಟ್ಟಿಗೇ ಸೇರಿಸಿ ಕೊರೆದಂತೆ ಬರೆಯುವುದು.

**ಅಸ್ತಿತ್ವದ ಅರಿವು:**

ಇಂತಹ ಮಗುವಿಗೆ ರೂಮಿನಲ್ಲಾಗಲಿ, ಕಟ್ಟಡದೊಳಗಾಗಲಿ, ಆಟದ ಮೈದಾನದಲ್ಲಾಗಲಿ ತಾನು ಇರುವ ಸ್ಥಳದ ಅರಿವಿನ ಬಗ್ಗೆ ಗೊಂದಲವಿರುತ್ತದೆ.

- ದಿಕ್ಕುಗಳ ಗೊಂದಲ
- ತನ್ನ ದೇಹದ ಭಾಗಗಳನ್ನು ಗುರುತಿಸುವುದು ಕಷ್ಟವಾಗಬಹುದು.
- ಹತ್ತಿರ–ದೂರ, ಮೇಲೆ–ಕೆಳಗೆ, ಚಿಕ್ಕದು–ದೊಡ್ಡದೆನ್ನುವುದನ್ನು ಹೇಳುವುದರಲ್ಲಿ ಗೊಂದಲವಿರುತ್ತದೆ.
- ಯಾವುದು ಮೊದಲು ಬರುತ್ತದೆ, ಯಾವುದು ಆಮೇಲೆ ಎನ್ನುವುದು, ಒಂದು ಜಾಗದ ಬಗ್ಗೆಯಾಗಲಿ, ಕೆಲಸದಲ್ಲಾಗಲಿ ಗೊಂದಲವಿರಬಹುದು.

ಸರಿಯಾಗಿ ಓದಲು ಆಗದೆ ಇರುವುದು, ಬುದ್ಧಿಶಕ್ತಿಯ ತೊಂದರೆಯಲ್ಲಿ ಒತ್ತಕ್ಷರಗಳು, ಸರಳ ಅಕ್ಷರಗಳು, ಒತ್ತಕ್ಷರಗಳಿದ್ದ ಪದಗಳು, ವಿವಿಧ ಕಾಗುಣಿತವಿದ್ದ ಪದಗಳು, ವಿವಿಧ ವ್ಯಂಜನಾಕ್ಷರಗಳಿಂದಾದ ಅಕ್ಷರಗಳು, ಕಾಗುಣಿತಾಕ್ಷರಗಳಿಂದಾದ ಪದಗಳು ಇವುಗಳನ್ನು ಕಲಿಯುವುದಕ್ಕೆ ಹೆಚ್ಚು ಕಷ್ಟವಾಗುವುದು, ಹೆಚ್ಚು ಪ್ರಾಯವಾದಂತೆ ಹೆಚ್ಚು ತಪ್ಪನ್ನು ಮಾಡುತ್ತಾ ಸಾಗುವುದು, ಮುದ್ರಿತ ಅಕ್ಷರಗಳನ್ನು ತಪ್ಪುತಪ್ಪಾಗಿ ಓದುವುದು, ಪದಗಳನ್ನು ತಿರುಗುಮುರುಗಾಗಿ ಓದುವುದು, (ಉದಾ:– WAYS – or SYAW or 'ಜಯ'ವನ್ನು ಯಜ) ಕಲಿಕಾ ಅಸಮರ್ಥ ಮಕ್ಕಳ ಶೈಕ್ಷಣಿಕ ಸಮಸ್ಯೆಗಳಾಗಿರುತ್ತವೆ.

ಓದು ಬರಹದ ಜೊತೆಗೆ ಲೆಕ್ಕಾಚಾರ ಮಾಡುವುದನ್ನು ಕಲಿಯುವುದು ಒಂದು ಮುಖ್ಯ ಅವಶ್ಯಕತೆಯಾಗಿದೆ. ಕೂಡುವುದು, ಕಳೆಯುವುದು, ಗುಣಿಸುವುದು, ಭಾಗಿಸುವುದು, ಇತರೆ ಲೆಕ್ಕ ಮಾಡುವುದು ಕಲಿಕಾ ಅಸಮರ್ಥ ಮಗುವಿಗೆ ಕಷ್ಟಕರ. ಬರೆದ ಸ್ಥಾನದ ಬಲದಿಂದ ಅಂಕಗಳ ಬೆಲೆ ನಿರ್ಧಾರವಾಗುವುದು. ಈ ಅಂಶವನ್ನು ಕಲಿತುಕೊಳ್ಳುವುದು ಈ ಮಕ್ಕಳಿಗೆ ಕಷ್ಟವಾಗುತ್ತದೆ. ಪುನಃ ಪುನಃ ಬರೆಸುವುದರಿಂದ ಇದನ್ನು ಕಲಿಸಬೇಕಾಗುತ್ತದೆ.

ಕೆಲವು ಮಕ್ಕಳಿಗೆ ರೇಖಾಗಣಿತದ ಕಲಿಕೆಯಲ್ಲಿ ವಿಶೇಷ ತೊಂದರೆಯಿರಲು ಸಾಧ್ಯ. ಆಕಾರಗಳನ್ನು ತಿಳಿಯುವುದರಲ್ಲಿ, ಎಡಬಲಗಳನ್ನು ತಿಳಿಯುವುದರಲ್ಲಿ ತೊಂದರೆಯಿರುವ ಮಗು ಇದರ ಕಲಿಕೆಯಲ್ಲಿ ವಿಶೇಷವಾಗಿ ತೊಂದರೆಗೊಳಗಾಗಬಹುದು.

ಲೆಕ್ಕದ ಕಲಿಯುವಿಕೆಯು ಭಾಷೆಯ ಆಧಾರಿತ ವಿಷಯಗಳನ್ನು ಕಲಿಯುವಂತೆ ಅಲ್ಲದಿರುವುದೇ ಇದರ ಕಲಿಕೆಯಲ್ಲಿ ವಿಶೇಷ ತೊಂದರೆಗೆ ಹೆಚ್ಚಿನ ಕಾರಣವಿರಲು ಸಾಧ್ಯ.

ಕಲಿಕೆಯ ತೊಂದರೆಯ ಮಕ್ಕಳಲ್ಲಿ ಬಲಗೈ ಎಡಗೈಯಂತೆ ಕೆಲಸ ಮಾಡುತ್ತದೆ. ಆದ್ದರಿಂದ ಬರವಣಿಗೆ ಅಸ್ಪಷ್ಟವಾಗಿರುತ್ತದೆ. ದಿಕ್ಕಿನ ತೊಂದರೆ ಅಥವಾ ಗೊಂದಲ ಏಕೆ ಬರುತ್ತದೆಂದು ವಿವರಿಸುವುದು ಸ್ವಲ್ಪ ಕಷ್ಟದ ಕೆಲಸ. ದಿಕ್ಕುಗಳಿಗೆ ಸಂಬಂಧಿಸಿದಂತೆ ಇನ್ನೂ ಕೆಲವು ತೊಂದರೆಗಳು ಕಂಡು ಬರುತ್ತವೆ.

ಓದು ಕಲಿಕೆಯ ತೊಂದರೆಯ (ಡಿಸ್ಲೆಕ್ಸಿಯಾ) ಮಗುವಿನ ಇಡೀ ವ್ಯಕ್ತಿತ್ವವನ್ನು ನಾವು ಅರಿಯದಿದ್ದರೆ ಅವನ ತೊಂದರೆಗಳನ್ನು ಮತ್ತು ಅವುಗಳ ಕಾರಣಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಹಾಗೆ ತಿಳಿಯದಿದ್ದಲ್ಲಿ ಶಿಕ್ಷಕರು, ಪೋಷಕರು ಮಗುವನ್ನು ದೂರುತ್ತಾರೆ. ಈ ದೂರುವ ಮನೋಭಾವನೆ ಮನೆಯವರಲ್ಲಿ ಶಾಲೆಯ ಮೇಷ್ಟ್ರುಗಳಲ್ಲಿ ಒಂದು ಸಲ ಬಂದು ಬಿಟ್ಟರೆ ಅದು ಮಗುವಿನ ಇತರ ತೊಂದರೆಗಳಿಗೆ ಕಾರಣವಾಗುತ್ತದೆ ಎನ್ನಬಹುದು. ಓದಲು ಕಷ್ಟಪಡುವ ಮಕ್ಕಳನ್ನು ತಪ್ಪಿತಸ್ಥರಂತೆ ನೋಡುವುದು ನಮ್ಮಲ್ಲಿ ಸಾಮಾನ್ಯವಾದ ಪ್ರವೃತ್ತಿಯಾಗಿದೆ. ಇದು ನಿಲ್ಲಬೇಕು. ಅದರಿಂದ ಏನೇನೂ ಅನುಕೂಲವಿಲ್ಲ. ಅನ್ಯಾಯವೇ ಹೆಚ್ಚು. ಬದಲಾಗಿ ಅವರಿಗೆ ಸಿಗಬೇಕಾದದ್ದು ಸರಿಯಾದ ಸಮಯದಲ್ಲಿ ನೀಡುವ ಉತ್ತೇಜನ ಮತ್ತು ಪ್ರೋತ್ಸಾಹದ ಮಾತುಗಳು.

ಈ ವಿಧದ ಮಕ್ಕಳ ಮತ್ತೊಂದು ಲಕ್ಷಣ 'ತರಲೆತನ' (Mischievousness). ಅದನ್ನು ಮಗು ಬೇಕಾಗಿಯೇ ಮಾಡುವುದಿಲ್ಲ. ಅಂಥ ವರ್ತನೆಯನ್ನು ಹಿಡಿತದಲ್ಲಿಡುವುದು ಮಗುವಿಗೆ ಕಷ್ಟದ ಕೆಲಸವಾಗುತ್ತದೆ. ಇದರ ಬಗ್ಗೆ ಅನೇಕ ಸಂಶೋಧನೆಗಳು ನಡೆದಿವೆಯಾದರೂ ಅದಕ್ಕೆ ಔಷಧದಂತಹ ಸೂಕ್ತವಾದ ಪರಿಹಾರ ಕ್ರಮ ದೊರೆತಿಲ್ಲ. ಒಂದು ಸಂಶೋಧನೆಯಲ್ಲಿ ಅಮೇರಿಕಾದಲ್ಲಿ ಕ್ಲಾಸಿನಲ್ಲಿ ಟ್ಯೂಬುಲೈಟುಗಳಿದ್ದಾಗ ಇವರು ಹೆಚ್ಚು ತೊಂದರೆಗೀಡಾಗುತ್ತಾರೆಂದು ಅವನ್ನು ಬದಲಿಸಲಾಯಿತು. ರೂಮಿನಲ್ಲಿ ಹೆಚ್ಚು ಗಮನಸೆಳೆಯುವ ವಸ್ತುಗಳಿದ್ದರೆ ಚಲನೆ, ಗಮನ ಪಲ್ಲಟ ಹೆಚ್ಚುವುದು ಎಂದು ತಿಳಿದು ಅವನ್ನು ಕಡಿಮೆ ಮಾಡಲಾಯಿತು. ಅವರ ಆಹಾರದಲ್ಲಿ ಬದಲಾವಣೆ ಮಾಡಿ ವಿಟಮಿನ್ 'ಸಿ'ಯನ್ನು ಹೆಚ್ಚು ಮಿಶ್ರ ಮಾಡಿ ಪರೀಕ್ಷಿಸಲಾಯಿತು. ಇವುಗಳಿಂದ ಇಂಥ ಮಕ್ಕಳ ವರ್ತನೆಯಲ್ಲಿ ಹೇಳಿಕೊಳ್ಳುವ ವ್ಯತ್ಯಾಸ ಆಗಲಿಲ್ಲ. ವಿಚಿತ್ರವೆಂದರೆ ಚಟುವಟಿಕೆಯನ್ನು ಹೆಚ್ಚಿಸುವಂತಹ ಒಂದು ಮೆಡಿಸನ್ "ರಿಟಾಲಿನ್" ಈ ಮಕ್ಕಳ ಚಟುವಟಿಕೆಯನ್ನು ಕುಗ್ಗಿಸುವುದು ಕಂಡುಬಂದಿತು. ಮಕ್ಕಳ ಚಟುವಟಿಕೆಯೇನೋ ಕಡಿಮೆಯಾಯಿತು ನಿಜ. ಆದರೆ ಅದರಿಂದ ಮಕ್ಕಳ ಕಲಿಕೆ ಹೆಚ್ಚು ಉತ್ತಮಗೊಳ್ಳದ್ದರಿಂದ ಆ ಔಷಧ ಕೊಡುವುದನ್ನು ನಿಲ್ಲಿಸಲಾಯಿತು.

ಮಗುವಿಗೆ ಏನನ್ನು ಕಲಿಯಲು ಆಗದೋ ಅದನ್ನು ದೊಡ್ಡ ಕೊರತೆಯಂತೆ ಕಾಣುವುದನ್ನು ನಿಲ್ಲಿಸುವುದು ಮಗುವಿನ ವಿಕಾಸದ ದೃಷ್ಟಿಯಿಂದ ಮುಖ್ಯ. ಎಲ್ಲವನ್ನೂ ಕಲಿಯಲು ಮಗುವನ್ನು ಹುರಿದುಂಬಿಸುವುದೂ, ಕಲಿಕೆಯ ಅವಕಾಶಗಳನ್ನೂ ಹೆಚ್ಚು ಮಾಡುವುದು ಸರಿಯಾದ ದಾರಿಯೇ ಹೊರತು, ಕಲಿಯದವುಗಳನ್ನು ಒತ್ತಾಯ ಮಾಡಿ ಕಲಿಸುವುದು ಸರಿಯಲ್ಲ.

Digitised by Bharatavani, CIIL

ಮಗು ನಿರಾಳವಾಗಿ ಇದ್ದರೆ ಕಲಿಯಬಲ್ಲದು. ಆರಾಮವಾಗಿರುವ ಮಗು, ಖುಷಿಯಾಗಿರುವ ಮಗು ಹೆಚ್ಚು ಕಲಿಯಬಲ್ಲುದು.

ಡಿಸ್ಲೆಕ್ಸಿಯಾ ಇರುವ ಮಗುವಿನ ಮನಸ್ಸಿನ ಬೆಳವಣಿಗೆಯು ಆದಷ್ಟೂ ಸಾಮಾನ್ಯವಾಗಿ ಬೆಳೆಯುವಂತೆ ಮಾಡುವುದು ಮನೆಯವರ ಕೆಲಸ. ಈ ಮಗುವಿನಲ್ಲಿರುವ ಚಿಕ್ಕಪುಟ್ಟ ವ್ಯತ್ಯಾಸವನ್ನು ಗಮನಿಸಿದ ಮನೆಯವರು ಅವನ್ನೇ ಹೆಚ್ಚು ಗಮನಿಸಿ, ಭೂತಗನ್ನಡಿಯಲ್ಲಿ ನೋಡುವಂತೆ ನೋಡಿ ಅವನ ಒಡನಾಟದಲ್ಲಿ ಕ್ರಮವರಿಯದೆಯೇ ಸಾಕಷ್ಟು ವ್ಯತ್ಯಾಸವನ್ನು ಮಾಡಿ ಅವನಲ್ಲಿ ಕೀಳರಿಮೆಯನ್ನು ಹುಟ್ಟುಹಾಕುವ ಸಾಧ್ಯತೆಗಳು ಹೆಚ್ಚು. ಇದು ಸಾಮಾನ್ಯ ಮಕ್ಕಳ ವಿಷಯದಲ್ಲೂ ಅಗಲು ಸಾಧ್ಯ. ಬೆಳೆಯುವ ಮಕ್ಕಳನ್ನು ಚಿವುಟಿಹಾಕುವುದನ್ನು ಡಾ॥ ರತ್ನ ಬಹಳ ಸರಿಯಾದ ರೀತಿಯಲ್ಲಿ "ಮಕ್ಕಳನ್ನು ಬೋನ್ಸಾಯ್ ಮಾಡುವುದು" ಅನ್ನುತ್ತಾರೆ. ಚಿಕ್ಕಂದಿನಲ್ಲಿ ಈ ಕೆಲಸ ಶುರುವಾದರೆ ಮುಂದೆ ಮಗುವನ್ನು ಸರಿಪಡಿಸುವುದು ಕಷ್ಟವಾಗುತ್ತದೆ. ಮಗುವಿನ ಮೇಲೆ ಮನೆಯ ಪರಿಸರ ಬಹಳ ಪ್ರಭಾವ ಬೀರುತ್ತದೆ. ಮನೆಯಲ್ಲಿರುವ ತಂದೆ, ತಾಯಿ, ಇತರ ಮಕ್ಕಳ ಪ್ರಭಾವ ಬಹಳ ಬೆಲೆಯುಳ್ಳದ್ದಾಗಿರುತ್ತದೆ.

ನಿರ್ದಿಷ್ಟ ಕಲಿಕಾ ತೊಂದರೆ ಜೀವನ ಪರ್ಯಂತ ಉಳಿಯುವ ಪರಿಸ್ಥಿತಿಯಾಗಿದ್ದು, ವಿಶ್ವದಾದ್ಯಂತ ಅನೇಕಾನೇಕ ಮಕ್ಕಳು ಹಾಗೂ ವಯಸ್ಕರ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಕಲಿಕಾ ತೊಂದರೆಯು ಖಾಯಿಲೆಯೇನಲ್ಲ. ಆದರೆ ಅದು ಒಂದು ಪರಿಸ್ಥಿತಿ. ಬುದ್ಧಿಮಾಂದ್ಯ ಮಕ್ಕಳಲ್ಲಿ ಬುದ್ಧಿಮಾಂದ್ಯತೆ ಪ್ರಕಟವಾಗುವಂತೆ ಕಲಿಕಾ ತೊಂದರೆ ಇರುವ ಮಕ್ಕಳಲ್ಲಿ ಆ ತೊಂದರೆ ಶೈಶವಾಸ್ಥೆಯಲ್ಲೇ ಕಾಣಿಸಿಕೊಳ್ಳುವುದಿಲ್ಲ. ಕಲಿಕಾ ತೊಂದರೆಯಿರುವ ಮಗುವನ್ನು ಮೌಲ್ಯಮಾಪನ ಮಾಡುವ ನಿರ್ದಿಷ್ಟ ಪರೀಕ್ಷೆಗಳನ್ನು ಕಳೆದ ಹತ್ತಾರು ದಶಕಗಳಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಈ ಪರೀಕ್ಷೆಗಳು ಬರುವುದಕ್ಕೆ ಮುನ್ನ ವಿಶೇಷವಾಗಿ ಅಭಿವೃದ್ಧಿ ಹೊಂದುತ್ತಿರುವ ಭಾರತದಂಥ ರಾಷ್ಟ್ರಗಳಲ್ಲಿ, ಕಲಿಕಾ ತೊಂದರೆಯಿರುವ ಮಕ್ಕಳು, ಬಹುಪಾಲು ಶೈಕ್ಷಣಿಕವಾಗಿ ಸೋತವರೆಂದು ಪರಿಗಣಿಸಿ, ಅವರನ್ನು ಶಾಲೆಗೆ ಕಳುಹಿಸುವುದನ್ನೇ ನಿಲ್ಲಿಸಿಬಿಡುತ್ತಿದ್ದರು. ಆದರೆ ಈಗ ಈ ದೇಶಗಳಲ್ಲಿಯೂ ಕಲಿಕಾ ತೊಂದರೆಗಳ ಬಗ್ಗೆ ಸಾಕಷ್ಟು ಅರಿವು ಮೂಡಿದೆ.

ಭಾರತದಲ್ಲಿ 1995ರ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಮಂಡಿಸಿದ ಅಂಗವಿಕಲತೆಯ ಕಾನೂನಿನಲ್ಲಿ ನಿರ್ದಿಷ್ಟ ಕಲಿಕಾ ತೊಂದರೆಗಳನ್ನು ಅಂಗವೈಕಲ್ಯತೆಗಳಲ್ಲಿ ಒಂದೆಂದು ಪರಿಗಣಿಸಲಾಗಿಲ್ಲ. ಆದರೆ ನಿರ್ದಿಷ್ಟ ಕಲಿಕಾ ತೊಂದರೆಗಳನ್ನು ಶಿಕ್ಷಣ ತಜ್ಞರು ಗುರುತಿಸಿದ್ದಾರೆ. ಉದಾ: 70ರ ದಶಕದ ಉತ್ತರಾರ್ಧದಲ್ಲಿ ಆಯೋಜಿಸಿದ ಕಲಿಕಾ ತೊಂದರೆಯಿರುವ ಮಕ್ಕಳ ಸಮನ್ವಯ ಶಿಕ್ಷಣ ಯೋಜನೆಯಲ್ಲಿ (ಐ.ಇ.ಡಿ.ಸಿ) ನಿರ್ದಿಷ್ಟ ಕಲಿಕಾ ತೊಂದರೆಗಳನ್ನು ಸೇರ್ಪಡೆ ಮಾಡಲಾಗಿತ್ತು.

ನಿರ್ದಿಷ್ಟ ಕಲಿಕಾ ತೊಂದರೆ ಇರುವವರು ಪರಿಪೂರ್ಣತಾಕಾಂಕ್ಷಿಗಳಾಗುತ್ತಾರೆ. ಅಂದರೆ ಎಲ್ಲವನ್ನೂ ಸ್ವಲ್ಪವೂ ಚ್ಯುತಿ ಬಾರದಂತೆ ಮಾಡಬಯಸುತ್ತಾರೆ. ಹಾಗಾಗಿ ಅವರ ಪ್ರಗತಿಯಲ್ಲಿ ತೊಡಕುಗಳು ಉಂಟಾಗುತ್ತವೆ. ತಮ್ಮ ಶಾಲಾ ದಿನಗಳಲ್ಲಿ ವಿಶೇಷ ಶಿಕ್ಷಣದ ನೆರವಿನ ಸೇವೆಗಳನ್ನು ಪಡೆಯುವ ಅತ್ಯಂತ ಕಡಿಮೆ ಸಂಭವವಿರುವ ಗುಂಪುಗಳ ಸಾಲಿಗೆ ಇವರು ಸೇರುತ್ತಾರೆ.

ನಿರ್ದಿಷ್ಟ ಕಲಿಕಾ ತೊಂದರೆಗಳು ಇರುವವರ ಬಗೆಗಿನ ಹಲವಾರು ತಪ್ಪು ಕಲ್ಪನೆಗಳ ಪೈಕಿ ಅದು ಮಕ್ಕಳಲ್ಲಿ ಮಾತ್ರ ಉಂಟಾಗುತ್ತದೆ ಹಾಗೂ ವಯಸ್ಕರು ಕಲಿಕಾ ತೊಂದರೆಗಳಿಂದ ಹೊರಬರುತ್ತಾರೆ ಎಂಬುದೂ ಒಂದು.

ಕಲಿಕಾ ತೊಂದರೆಯೊಂದಿಗೆ ವಯಸ್ಕರಾಗುತ್ತಿರುವವರು ಅನೇಕ ಸಲ ನಾಚಿಕೆಯನ್ನು/ಅವಮಾನದ ಭಾವನೆಯನ್ನು ಅನುಭವಿಸುತ್ತಾರೆ. ಕೆಲವರಿಗೆ, ತೊಂದರೆಯನ್ನು ಕಂಡುಹಿಡಿದಾಗ ನಿರಾಳವಾದರೆ, ಇನ್ನೂ ಕೆಲವರಿಗೆ ಅದರಿಂದ ಮತ್ತಷ್ಟು ಕಳಂಕ ಹೆಚ್ಚಿದಂತೆ ಆಗುತ್ತದೆ. ಡಿಸ್ಲೆಕ್ಸಿಯಾ ಒಂದು ರೀತಿಯ ಓದಿನ ಅಸಾಮರ್ಥ್ಯ. ಬೆಳವಣಿಗೆಯ ಹಂತದಲ್ಲಿ ಡಿಸ್ಲೆಕ್ಸಿಯಾ ಓದಿನ ಸಾಮರ್ಥ್ಯವನ್ನು ಕುಂಠಿತಗೊಳಿಸುವಂತಹುದು. ಒಬ್ಬ ಕಡಿಮೆಮಟ್ಟದ ಓದುಗ ಯಾವುದೇ ವಿಧದ ಪಠ್ಯವನ್ನು ಓದುವಾಗ ಸ್ವಲ್ಪಸಮಯದಲ್ಲೇ ನಿರುತ್ಸಾಹಿತನಾಗಿ ಸರಾಗವಾಗಿ ಓದಲಾಗದೆ ತೊಂದರೆಪಡುತ್ತಾನೆ.

ಓದಬೇಕಾದ ಸಾಮಗ್ರಿ ಈ ಕೆಳಕಂಡಂತೆ ಇದ್ದಾಗ ತೊಂದರೆ ಬೆಳಕಿಗೆ ಬರುತ್ತದೆ.–

- ಕಳಪೆಮಟ್ಟದ ಮುದ್ರಣ–ಸಣ್ಣ ಅಕ್ಷರಗಳು
- ಕಠಿಣವಾದ ವಾಕ್ಯ ರಚನೆ ಹೊಂದಿರುವುದು.
- ದೊಡ್ಡ ಪದಗಳು, ಹೊಸ ಯೋಚನೆಗಳನ್ನು ಒಳಗೊಂಡ ಬಹಳ ಅಂಶಗಳನ್ನು ಹೊಂದಿರುವುದು.

ಡಿಸ್ಲೆಕ್ಸಿಯಾ ತೊಂದರೆ ಹೊಂದಿರುವ ಮಕ್ಕಳು ನೋಟದ ಪ್ರತ್ಯಕ್ಷಾನುಭವ, ಶ್ರವಣದ ಪ್ರತ್ಯಕ್ಷಾನುಭ ಮುಂತಾದ ಸಮಸ್ಯೆಗಳಿಂದ ಓದಿನಲ್ಲಿ ಹಿಂದುಳಿಯುವಂತಾಗುತ್ತದೆ. ಬಹಳಷ್ಟು ಡಿಸ್ಲೆಕ್ಸಿಯಾ ಮಕ್ಕಳು ಹಿಂದು ಮುಂದಾದ ಅಂಕೆಗಳು, ಅಕ್ಷರಗಳು ಪದಗಳನ್ನು ಕಾಣುವರು.

ಮಕ್ಕಳು ದೃಷ್ಟಿ ಅಥವಾ ಶ್ರವಣದ ಅಸಾಮರ್ಥ್ಯ ಹೊಂದಿದ್ದರೆ ಡಿಸ್ಲೆಕ್ಸಿಯಾ ಕಾಣಿಸಿಕೊಳ್ಳುವುದಿಲ್ಲ. ಬದಲಾಗಿ ಮೆದುಳಿನ ಅಸಮರ್ಪಕ ಕಾರ್ಯದಿಂದಾಗಿ ಈ ತೊಂದರೆ ಬರುವಂತಹುದು. ಕಣ್ಣು ಮತ್ತು ಕಿವಿ ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದರೂ ಗ್ರಹಿಸಿದ ವಿಷಯವನ್ನು ಮೆದುಳಿನ ಉನ್ನತಸ್ತರಕ್ಕೆ ತಲುಪಿಸುವ ಮೊದಲೇ ಕೆಳಗಿನ ಸ್ತರದಲೇ ಸರಿಯಾಗಿ ಅದು ಮೂಡಿದಂತಾಗುತ್ತದೆ. ಇದು ಗೊಂದಲಕ್ಕೆ ದಾರಿಯಾಗುತ್ತದೆ ಮತ್ತು ಕಲಿಯುವುದರಲ್ಲಿ ಉತ್ಸಾಹವನ್ನು ಕುಂದಿಸುತ್ತದೆ.

Digitised by Bharatavani, CIIL

**ನಿರ್ದಿಷ್ಟ ಕಲಿಕಾ ತೊಂದರೆಯುಳ್ಳ ಮಕ್ಕಳನ್ನು ಗುರುತಿಸುವುದು:**

ಸಾಮಾನ್ಯ ಶಾಲೆಗಳಲ್ಲಿ ಈ ಮಕ್ಕಳಿಗಾಗಿ ಸಮಗ್ರ ಹಾಗೂ ಸಮನ್ವಯ ಶಿಕ್ಷಣವನ್ನು ಒದಗಿಸುವತ್ತ ಸರ್ವಶಿಕ್ಷಣ ಅಭಿಯಾನವು ಒತ್ತು ನೀಡುತ್ತದೆ. ಜೊತೆಗೆ ನಿರ್ದಿಷ್ಟ ಕಲಿಕಾ ತೊಂದರೆಯಿರುವ ಮಕ್ಕಳ ಶಿಕ್ಷಣಕ್ಕಾಗಿ ವಿವಿಧ ರೀತಿಗಳಲ್ಲಿ ನೆರವನ್ನು ನೀಡುತ್ತದೆ.

**ಈ ಸಹಾಯದ ಅಂಶಗಳು ಹಾಗೂ ತಂತ್ರಗಳು ಕೆಳಕಂಡಂತಿವೆ:**

ಅ) **ಗುರುತಿಸುವಿಕೆ:** ಪ್ರಾಥಮಿಕ ಆರೋಗ್ಯ ಕೇಂದ್ರ, ಐಸಿಡಿಎಸ್, ಇಸಿಸಿಎ ಕೇಂದ್ರಗಳು ಮತ್ತು ಶಾಲೆಗಳಲ್ಲಿ ಪ್ರಾರಂಭಿಕ ಗುರುತಿಸುವಿಕೆಯನ್ನು ಮಾಡಲಾಗುತ್ತದೆ.

ಆ) **ಕಾರ್ಯಾತ್ಮಕ ಹಾಗೂ ಔಪಚಾರಿಕ ಮೌಲ್ಯಮಾಪನ:** ಇದನ್ನು ಪ್ರತಿಯೊಂದು ಮಗುವಿಗೂ ಅನ್ವಯಿಸುವಂತೆ ಕೈಗೊಳ್ಳಬೇಕು. ಮಾಪನವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತದೆ.

ಇ) **ಶೈಕ್ಷಣಿಕ ಸಮನ್ವಯ:** ಸಾಧ್ಯವಾದಷ್ಟೂ ಮಟ್ಟಿಗೆ ಅಗತ್ಯವಿರುವ ಆಧಾರ ಸೇವೆಗಳೊಂದಿಗೆ ಕಲಿಕಾ ತೊಂದರೆ ಮಕ್ಕಳನ್ನು ಸಾಮಾನ್ಯ ಶಾಲೆಗಳಲ್ಲಿ ಸೇರಿಸಬೇಕು.

ಈ) **ಸಾಧನಗಳು ಹಾಗೂ ಉಪಕರಣಗಳು:** ಸಾಧ್ಯವಾದಷ್ಟು ಮಟ್ಟಿಗೆ, ಸಾಮಾಜಿಕ ನ್ಯಾಯ ಹಾಗೂ ಸಶಕ್ತತೆಯ ಮಂತ್ರಾಲಯ, ರಾಜ್ಯ ಕಲ್ಯಾಣ ಇಲಾಖೆಗಳು, ರಾಷ್ಟ್ರೀಯ ಸಂಸ್ಥೆಗಳು ಅಥವಾ ಸರ್ಕಾರೇತರ ಸಂಸ್ಥೆಗಳ ನೆರವಿನೊಂದಿಗೆ ಸಹಾಯಕ ಸಾಧನಗಳ ಅಗತ್ಯವಿರುವ ಮಕ್ಕಳಿಗೆ ಸಾಧನಗಳು ಹಾಗೂ ಉಪಕರಣಗಳನ್ನು ಒದಗಿಸಬೇಕು.

ಉ) **ಶಿಕ್ಷಕರ ತರಬೇತಿ:** ಕಲಿಕಾ ತೊಂದರೆಯುಳ್ಳ ಮಕ್ಕಳ ಸಮರ್ಪಕ ತರಗತಿಯ ನಿರ್ವಹಣೆಯತ್ತ ಸಾಮಾನ್ಯ ಶಿಕ್ಷಕರನ್ನು ಸಂವೇದನಾಶೀಲರನ್ನಾಗಿಸಲು ಅವರಿಗೆ ತೀವ್ರತರವಾದ ತರಬೇತಿಯನ್ನು ನೀಡಬೇಕು.

ಊ) **ಸಂಪನ್ಮೂಲ ನೆರವು:** ವಿಶೇಷ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಸಂಪನ್ಮೂಲ ನೆರವನ್ನು ನೀಡಬೇಕು. ಅಗತ್ಯವಾದೆಡೆ ವಿಶೇಷವಾಗಿ ತರಬೇತಿ ಹೊಂದಿದ ಸಂಪನ್ಮೂಲ ಶಿಕ್ಷಕರನ್ನು ವಿಶೇಷ ಕೌಶಲ್ಯಗಳ ಬೋಧನೆಯನ್ನು ಮಾಡುವ ಸಲುವಾಗಿ ನೇಮಕ ಮಾಡಬೇಕು.

ಋ) **ವೈಯಕ್ತೀಕೃತ ಶೈಕ್ಷಣಿಕ ಯೋಜನೆ:** ಪೋಷಕರು ಹಾಗೂ ತಜ್ಞರ ಸಲಹೆಯೊಂದಿಗೆ, ವಿಶೇಷ ಅಗತ್ಯಗಳಿರುವ ಪ್ರತಿಯೊಂದು ಮಗುವಿಗೂ ಶಿಕ್ಷಕರು ವೈಯಕ್ತೀಕೃತ ಶೈಕ್ಷಣಿಕ ಯೋಜನೆಯನ್ನು (Individual Education Plan - IEP) ತಯಾರು ಮಾಡಬೇಕು. ಅದರ ಅನುಷ್ಠಾನದ ಮೇಲ್ವಿಚಾರಣೆಯನ್ನು ಕಾಲಕಾಲಕ್ಕೆ ಮಾಡಬೇಕು.

**ಪೋಷಕರ ತರಬೇತಿ ಹಾಗೂ ಸಮುದಾಯ ಜಾಗೃತಿ:** ದೃಢವಾದ ತಿಳಿವಳಿಕೆ ಹಾಗೂ ಅರಿವಿನ ಕಾರ್ಯಕ್ರಮಗಳು ವಿಶೇಷ ಅಗತ್ಯಗಳಿರುವ ಪ್ರತಿಯೊಂದು ಮಗುವಿಗೂ ಶಿಕ್ಷಣ ನೀಡುವ ವ್ಯವಸ್ಥೆಯ ಭಾಗವಾಗಬೇಕು.

- ಕಲ್ಪನ ಎಸ್. ಪ್ರಕಾಶ್

## ಕಲಿಕಾ ಶೈಲಿಗಳು

ಕಲಿಕೆ ಒಬ್ಬ ಮಾನವ ಜೀವಿ ಪಡೆದುಕೊಳ್ಳುವ ಎಲ್ಲಾ ಬಗೆಯ ತಿಳಿವು, ನೈಪುಣ್ಯ ಅಥವಾ ವರ್ತನಾ ರೀತಿಯ ಸಂಪಾದನೆ. ಮಾನವ ಹುಟ್ಟಿದಾಗಲೇ ಅವನಿಗೆ ಅವಶ್ಯವಾದ ಎಲ್ಲಾ ಸಾಮರ್ಥ್ಯಗಳು ಬೆಳೆದಿರುವುದಿಲ್ಲ. ಕಾಲಕ್ರಮೇಣ ಕೆಲವು ತನ್ನ ಸ್ವಪ್ರಯತ್ನದಿಂದಲೋ, ವ್ಯಕ್ತಿ ಇತರರಿಂದ ಹೇಳಿಸಿ ಕೊಂಡೋ ತನ್ನ ಸ್ವಂತ ಅನುಭವಗಳಿಂದಲೋ ಕಲಿಯುತ್ತಾನೆ. ಈ ರೀತಿ ಕಲಿಯುವಾಗ ಅವನು ಅನುಸರಿಸುವ 'ಕ್ರಮ' ಅಥವಾ 'ಮಾರ್ಗ'ವನ್ನು 'ಕಲಿಕಾ ಶೈಲಿ' ಎನ್ನಬಹುದು.

ಮಾನವನಿಗೆ ಮಾನವೇತರ ಜೀವಿಗಳಿಗಿಂತ ಕಲಿಕೆಯ ಅವಶ್ಯಕತೆ ಹೆಚ್ಚು. ಜೀವವಿಕಾಸ ವೃಕ್ಷದಲ್ಲಿ ಉನ್ನತ ಮಟ್ಟವನ್ನು ಏರಿದಂತೆಲ್ಲ ಜೀವಿಗಳು ಕಲಿಯಬೇಕಾದ ಅಂಶಗಳು ಹೆಚ್ಚಾಗುತ್ತಾ ಹೋಗುತ್ತವೆ. ವ್ಯಕ್ತಿ ಎಷ್ಟು ವೇಗವಾಗಿ ಕಲಿಯಬಲ್ಲನು ಎಂಬುದು ಆ ಮನುಷ್ಯನ ಸಾಮರ್ಥ್ಯವಲ್ಲದೇ ಅವನು ಎದುರಿಸಬೇಕಾದ ಸಮಸ್ಯೆಗಳನ್ನು ಅವಲಂಬಿಸಿರುತ್ತದೆ. ಮನೋವಿಜ್ಞಾನಿಗಳು ಮಾನವರ ಕಲಿಕೆಯನ್ನು ಪರಿಶೀಲಿಸಲು ಅನೇಕ ಪ್ರಯೋಗಗಳನ್ನು ಮಾಡಿ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪ್ರಾಯೋಗಿಕವಾಗಿ ನಿರ್ಧರಿಸಿದ್ದಾರೆ. ಉದಾಹರಣೆಗೆ ಕಲಿಕೆಗೆ ಒಬ್ಬ ವ್ಯಕ್ತಿಯ ಸಾಮರ್ಥ್ಯಗಳು, ವ್ಯಕ್ತಿತ್ವ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಅವನು ಎದುರಿಸುವ ಸನ್ನಿವೇಶಗಳು ಇತ್ಯಾದಿ; ಸಾಮಾನ್ಯವಾಗಿ ಕಲಿಯಲು ಗ್ರಹಣ ಶಕ್ತಿಯೊಂದೆ ಸಾಲದು. ಕಲಿಯುವವನು ಕಲಿಯಲು ಮಾಡುವ ಪ್ರಯತ್ನ ಹಾಗೂ ಅವನು ಮಾಡುವ ಅಭ್ಯಾಸ ಬಲದಿಂದ ಕೂಡ ಕಲಿಕೆ ಸಿದ್ಧಿಸುತ್ತದೆ.

ಕಲಿಕಾ ಶೈಲಿಗಳ ಪರಿಕಲ್ಪನೆಯನ್ನು ಅರ್ಥೈಸಲು ಅನೇಕ ವ್ಯಾಖ್ಯಾನಗಳಿವೆ. ಪ್ರತಿಯೊಬ್ಬ ವ್ಯಕ್ತಿ ವಿವಿಧ ವಿಷಯಗಳನ್ನು ವಿವಿಧ ರೀತಿಗಳಲ್ಲಿ ಕಲಿಯುತ್ತಾನೆ. ಅವನ ಕಲಿಕಾ ಶೈಲಿ ಅವನು ಏನು ಮತ್ತು ಹೇಗೆ ಕಲಿಯುತ್ತಿದ್ದಾನೆ ಎಂಬುದರ ಮೇಲೆ ಆಧಾರವಾಗಿರುತ್ತದೆ. ಆದುದರಿಂದ ಕಲಿಕಾ ಶೈಲಿಗಳನ್ನು ಕಲಿಕಾ ಮಾರ್ಗಗಳೆನ್ನಬಹುದು. ಶೈಕ್ಷಣಿಕ ದೃಷ್ಟಿಯಿಂದ ಒಂದೊಂದು ವಿಷಯದ ಜ್ಞಾನವನ್ನು ಪಡೆಯಲು ಒಂದೊಂದು ಶೈಲಿಯನ್ನು ಅಳವಡಿಸಿಕೊಳ್ಳಲಾಗುತ್ತದೆ. ಉದಾಹರಣೆಗೆ, ವಿಜ್ಞಾನ ಕಲಿಯಲು ಎಲ್ಲಾ ವಿವರಗಳನ್ನು ವಿಶ್ಲೇಷಣಾತ್ಮಕವಾಗಿ ಕಲಿಯಬೇಕಾಗುತ್ತದೆ. ಅದೇ ತತ್ವಜ್ಞಾನವನ್ನು ಕಲಿಯಲು ಒಬ್ಬ ವ್ಯಕ್ತಿ ವಿಶಾಲವಾದ, ಆಳವಾದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ. ಆದರೆ ಕಲಿಯುವವನು ಜ್ಞಾನದ ದೃಷ್ಟಿಯಿಂದ ಮೇಲಿನ ಮಟ್ಟವನ್ನು ತಲುಪಿದಾಗ ತತ್ವಜ್ಞಾನವಾಗಲಿ, ವಿಜ್ಞಾನವಾಗಲಿ ಈ ವಿಷಯಗಳ ನಡುವೆ ಇರುವ ವ್ಯತ್ಯಾಸ ಮರೆಯಾಗುತ್ತದೆ ಅಥವಾ ಮಸಕಾಗುತ್ತದೆ.

ಕಲಿಕಾ ಸಂಬಂಧಿತ ಅನೇಕ ಶೈಕ್ಷಣಿಕ ಸಂಶೋಧನೆಗಳಿಂದ ವಿವಿಧ ಕಲಿಕಾ ರೀತಿಗಳು ಬೆಳಕಿಗೆ ಬಂದಿವೆ. ಈ ಸಂಶೋಧನೆಗಳಲ್ಲಿ

Digitised by Bharatavani, CIIL

ಕೌಲ್ಬ್‌ರವರ ಸಂಶೋಧನೆ ಅತ್ಯಂತ ಪರಿಣಾಮಕಾರಿಯಾಗಿದೆ. ಕೌಲ್ಬ್‌ರವರು ನಾಲ್ಕು ಕಲಿಕಾ ಶೈಲಿಗಳನ್ನು ಗುರುತಿಸಿದ್ದಾರೆ.

**ಮೊದಲನೆಯದಾಗಿ ವಾಸ್ತವಿಕ ಅನುಭವ:** ಈ ಕಲಿಕಾ ಶೈಲಿಯಲ್ಲಿ ಭಾವನೆಗಳಿಗೆ ಒತ್ತು ನೀಡಲಾಗುತ್ತದೆ.

**ಎರಡನೆಯದಾಗಿ ಚಿಂತನಾತ್ಮಕ ಅವಲೋಕನ ಕಲಿಕಾ ಶೈಲಿ:** ಈ ಕಲಿಕಾ ಶೈಲಿಯಲ್ಲಿ ಹೆಚ್ಚಾಗಿ ಪರಿಶೀಲಿಸುವ ವರ್ತನೆಯನ್ನು ಕಾಣಬಹುದು.

**ಮೂರನೆಯದಾಗಿ ಅಮೂರ್ತ ಪರಿಕಲ್ಪನೆಗಳ ಕಲಿಕಾಶೈಲಿ:** ಈ ಕಲಿಕಾ ಶೈಲಿಯಲ್ಲಿ ಮುಖ್ಯವಾದ ವರ್ತನೆ ಅಮೂರ್ತ ಮಟ್ಟದಲ್ಲಿ ಯೋಚಿಸುವುದಾಗಿರುತ್ತದೆ.

**ನಾಲ್ಕನೆಯದಾಗಿ ಚುರುಕಾದ ಸಂಶೋಧನೆಗೆ ಒತ್ತು ನೀಡುವ ಕಲಿಕಾ ರೀತಿ:** ಈ ಶೈಲಿಯಲ್ಲಿ ಕಲಿಕಾರ್ಥಿ ಹೊಸದಾದ ಏನನ್ನಾದರೂ ಕಂಡು ಹಿಡಿಯಲು ಪ್ರಯತ್ನಿಸುತ್ತಾನೆ.

ಈ ನಾಲ್ಕು ಕಲಿಕಾ ಶೈಲಿಗಳ ಆಧಾರದ ಮೇಲೆ ಕಾಲ್ಬ್‌ರವರು ಕಲಿಯುವವರನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಿದ್ದಾರೆ (1) ಅನುಕೂಲಕರ್ತರು (Accommondators), (2) ಕೇಂದ್ರಾಭಿಮುಖಿಗಳು (Convergers), (3) ಕೇಂದ್ರಾಪಗಾಮಿಗಳು (Divergers) ಮತ್ತು (4) ಸ್ವಾಂಗೀಕರಣ ಕರ್ತರು (Assimilators). ಈ ವರ್ಗಗಳ ಸಾಮಾನ್ಯ ಗುಣಗಳನ್ನು ಈ ರೀತಿ ಗುರುತಿಸಿದ್ದಾರೆ.

**ಅನುಕೂಲಕರ್ತರು (Accommondators):** ಇವರು ಅನುಭವದಿಂದ ಕಲಿಯುವರು. ಇವರಿಗೆ ನೂತನ ಹಾಗೂ ಸವಾಲುಗಳನೊಳಗೊಂಡ ಅನುಭವಗಳು ಅತ್ಯಂತ ಸಂತೋಷಕರ. ಇವರು ಸಾಹಸ ಪೂರ್ವಕ ಕಲಿಕಾ ರೀತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಇವರು ಜ್ಞಾನ ಸಂಗ್ರಹಣಕ್ಕೆ ಅತ್ಯಂತ ಮಹತ್ವವನ್ನು ನೀಡುತ್ತಾರೆ.

**ಕೇಂದ್ರಾಭಿಮುಖಿಗಳು (Convergers):** ಇವರು ವಿಚಾರಗಳಿಗೆ ಹಾಗೂ ತತ್ವಗಳಿಗೆ ವ್ಯಾವಹಾರಿಕ ಉಪಯುಕ್ತತೆಯನ್ನು ಹುಡುಕುವರು. ಈ ವರ್ಗದವರು ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಇವರು ಸಾಮಾಜಿಕ ಪ್ರಾಮುಖ್ಯತೆವುಳ್ಳ ವಿಷಯಗಳಿಗಿಂತ ಕಾರ್ಯ ಹಾಗೂ ಸಮಸ್ಯೆಗಳ ನಿರ್ವಹಣೆಯನ್ನು ಇಷ್ಟ ಪಡುತ್ತಾರೆ. ಇಂಥ ವ್ಯಕ್ತಿಗಳು ವಿಶೇಷವಾದ ವೃತ್ತಿ ಅಥವಾ ತಾಂತ್ರಿಕ ಉದ್ಯೋಗಗಳಲ್ಲಿ ಯಶಸ್ವಿ ಆಗುತ್ತಾರೆ.

**ಕೇಂದ್ರಾಪಗಾಮಿಗಳು (Divergers):** ಇವರು ವಾಸ್ತವಿಕ ಸನ್ನಿವೇಶಗಳನ್ನು ವಿಭಿನ್ನ ನಿಲುವುಗಳಿಂದ ನೋಡುವುದರಲ್ಲಿ ಪರಿಣಿತರು. ಇವರು ತಮ್ಮನ್ನು ತಾವು ಕಾರ್ಯದಲ್ಲಿ ತೊಡಗಿಸಿಕೊಳ್ಳುವುದಕ್ಕಿಂತ ಅವಲೋಕಿಸಲು ಇಷ್ಟ ಪಡುತ್ತಾರೆ. ಇವರು ಚರ್ಚೆ, ವಿಶ್ಲೇಷಣೆ ಹಾಗೂ ಬಹುಮುಖೀ ಚಿಂತನೆಯಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ. ಇವರು ಸೂಕ್ಷ್ಮ ವಿವೇಚನೆ ಹಾಗೂ ಕಲ್ಪನಾ ಶಕ್ತಿಯುಳ್ಳವರಾಗಿರುತ್ತಾರೆ. ಈ ವರ್ಗದವರು ಸೃಜನಶೀಲ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಬಯಸುತ್ತಾರೆ.

**ಸ್ವಾಂಗೀಕರಣಕರ್ತರು (Assimilators):** ಇವರು ಮಾಹಿತಿಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ತಮ್ಮದಾಗಿಸಿಕೊಳ್ಳುತ್ತಾರೆ. ಇವರು ಅಪಾರ ವಿಷಯ ಸಂಗ್ರಹಿಸಿ ಅದನ್ನು ಸಂಕ್ಷಿಪ್ತವಾದ ಒಂದು ರೂಪಕ್ಕೆ ತರುವುದರಲ್ಲಿ ಜಾಣರು. ಇವರಿಗೆ ಕ್ಲಿಷ್ಟವಾದ ವಿಷಯಗಳಲ್ಲಿ ಬಹಳ ಆಸಕ್ತಿಯಿದ್ದು ಯಾವುದೇ ಒಂದು ವಿಷಯವನ್ನು ಪರೀಕ್ಷಿಸುವಾಗ ಅದರ ತರ್ಕಬದ್ಧ ಬಲವನ್ನು ಕುರಿತು ಚಿಂತಿಸುವುದು ಇವರ ವಿಶೇಷ ಗುಣ.

ಕೌಲ್ಬ್‌ನ ಕಲಿಕಾ ಶೈಲಿಗಳ ವಿವರಣೆ ಒಂದು ಉದಾಹರಣೆ ಮಾತ್ರ. ಇದೇ ರೀತಿ ಅನೇಕ ಮನೋವಿಜ್ಞಾನಿಗಳು ಬೇರೆ ಬೇರೆ ರೀತಿಯ ಕಲಿಕಾ ಶೈಲಿಗಳ ಮಾದರಿಗಳನ್ನು ವಿವರಿಸಿದ್ದಾರೆ. ಕಲಿಕಾ ಶೈಲಿಗಳೆಂದರೆ ವಿವಿಧ ಕಲಿಕಾ ಮಾರ್ಗಗಳು. ಕಲಿಕಾ ಶೈಲಿಗಳು ವ್ಯಕ್ತಿ ಆಧಾರಿತ ಕಲಿಯುವ ವಿಧಾನಗಳನ್ನು ಒಳಪಟ್ಟಿರುತ್ತವೆ. ಈ ವಿಧಾನಗಳು ಒಬ್ಬ ವ್ಯಕ್ತಿಯ ಅತ್ಯಂತ ಉತ್ತಮ ಕಲಿಕಾ ಶೈಲಿಗಳು. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತನ್ನ ಪರಸ್ಪರಾನುಕ್ರಿಯೆಗಾಗಿ ಅಥವಾ ವಿಷಯ ಸಂಸ್ಕರಣೆಗಾಗಿ ತನಗೆ ಇಷ್ಟವಾದ, ಪ್ರಿಯವಾದ ವಿಧಾನವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಈ ತರ್ಕದ ಆಧಾರದ ಮೇಲೆ 1970ರಲ್ಲಿ ವೈಯಕ್ತಿಕ ಕಲಿಕಾ ಶೈಲಿಗಳ ಪರಿಕಲ್ಪನೆ ರೂಪಿತವಾಯಿತು. ಕಲಿಕಾ ಶೈಲಿಗಳು ಇತ್ತೀಚೆಗೆ ಜನಪ್ರಿಯವಾಗಿವೆ. ಶಿಕ್ಷಕರು ತಮ್ಮ ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಶೈಲಿ ಅರಿತು ತಮ್ಮ ಬೋಧನಾ ವಿಧಾನಗಳನ್ನು ಅಳವಡಿಸಿದರೆ ಕಲಿಕೆ ಪರಿಣಾಮಕಾರಿ ಆಗಬಹುದೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ದೇಶದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಈ ಸಲಹೆಯನ್ನು ಅನುಷ್ಠಾನಗೊಳಿಸಲು ಅಸಾಧ್ಯವೆಂದು ಕೆಲವು ಶಿಕ್ಷಕರ ಅಭಿಪ್ರಾಯವಾಗಿದೆ. ವಿದ್ಯಾರ್ಥಿಗಳ ಕಲಿಕಾ ಶೈಲಿಗಳನ್ನು ಕೌಲ್ಬ್‌ನ ಮಾದರಿ (Kolbs Model) ಆಧಾರಿತ ಅಂಶಾವಳಿಯನ್ನು ಉಪಯೋಗಿಸಿ ಅಳೆಯಬಹುದು. ಈ ಅಂಶಾವಳಿ ಒಬ್ಬ ವ್ಯಕ್ತಿಯ/ವಿದ್ಯಾರ್ಥಿಯ ವೈಯಕ್ತಿಕ ಕಲಿಕಾ ಪ್ರಕ್ರಿಯೆಗೆ ಬೇಕಾಗುವ ಅವಶ್ಯಕತೆಗಳು ಅಥವಾ ಒಲವುಗಳನ್ನು ಮಾಪನ ಮಾಡುತ್ತದೆ.

ಹಲವು ಸಂಶೋಧಕರು ತರಗತಿಯಲ್ಲಿ ಪರಿಣಾಮ ಬೀರುವಂತ ಕಲಿಕಾಶೈಲಿಗಳನ್ನು ಕುರಿತು ಸಂಶೋಧನೆ ನಡೆಸಿದ್ದಾರೆ. ಇದರಲ್ಲಿ ರೀಟಾಡನ್ ಹಾಗೂ ಕೆನೆತ್‌ಡನ್‌ರವರ ಸಂಶೋಧನೆ ಪ್ರಮುಖವಾದುದು.

ಈ ಲೇಖಕರು "Teaching Students through their Individual Learning Styles: A Practical Approoach" ಎಂಬ ಪುಸ್ತಕದಲ್ಲಿ ತುಂಬಾ ಮುಖ್ಯವಾದ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಉದಾಹರಣೆಗೆ: ಕಲಿಯುವವರ ಶಕ್ತಿ ಸಾಮರ್ಥ್ಯಗಳನ್ನು ದೃಷ್ಠಿಯಲ್ಲಿಟ್ಟುಕೊಂಡು ಅವರ ಕಲಿಕೆಯ ಪ್ರಕ್ರಿಯೆಯಲ್ಲಿ ಪರಿಣಾಮ ಬೀರುವ ಕೆಳಕಂಡ ಅಂಶಗಳನ್ನು ಸೂಚಿಸಿದ್ದಾರೆ.

1. ತಾತ್ಕಾಲಿಕ ಪರಿಸರ (ಧ್ವನಿ, ಬೆಳಕು, ಹವಾಮಾನ ಮತ್ತು ನಕ್ಷೆ)
2. ಕಲಿಕಾರ್ಥಿಯ ಸಂವೇಗಾತ್ಮಕ ಅವಶ್ಯಕತೆಗಳು ಅಭಿಪ್ರೇರಣೆ, ಛಲ, ಬಾಧ್ಯತೆ ಮತ್ತು ನಮ್ಯತೆಯ ಗುಣ ಅಥವಾ ರಚನೆಯ ಅವಶ್ಯಕತೆ

Digitised by Bharatavani, CIIL

3. ಸಾಮಾಜಿಕ ಅವಶ್ಯಕತೆಗಳು –ಏಕಾಂಗಿಯಾಗಿ ಕಲಿಯುವಿಕೆ, ಜೊತೆಗಾರನೊಂದಿಗೆ/ಗುಂಪಿನೊಂದಿಗೆ ಕಲಿಯುವಿಕೆ, ಬೇರೆಯವರಿಗಿಂತ ಭಿನ್ನವಾಗಿರುವಿಕೆ

4. ಭೌತಿಕ ಅವಶ್ಯಕತೆಗಳು (ಪ್ರತ್ಯಕ್ಷ, ಸಂಜ್ಞಾನಾತ್ಮಕ ಬೆಂಬಲ, ಸಮಯ, ಒಳಹಾಯಿಕೆ, ಮಾಹಿತಿ ಪೂರೈಕೆ (Information Intake) ಪ್ರಕ್ರಿಯೆ, ಗತಿಶೀಲತೆ (Mobility).

ರೀಟಡನ್ ಹಾಗೂ ಕೆನೆತ್‌ಡನ್‌ರವರು ಇತರ ಸಂಶೋಧನೆಗಳನ್ನು ವಿಶ್ಲೇಷಣೆ ಆಧಾರದ ಮೇಲೆ ಈ ಅಂಶಾವಳಿ ಫಲಿತಾಂಶಗಳನ್ನು ವಿದ್ಯಾರ್ಥಿಗಳು ತಮ್ಮದೇ ಆದ ಕಲಿಕಾ ಶೈಲಿಗಳನ್ನು ಅನುಸರಿಸುತ್ತಾರೆಂದು ಅವರು ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದುಕೊಳ್ಳುತ್ತಾರೆಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ವಿದ್ಯಾರ್ಥಿಗಳ ಅಭಿವೃತ್ತಿಗಳಲ್ಲಿ (Attitudes) ಧನಾತ್ಮಕವಾಗಿ ಬದಲಾವಣೆಯಾಗುತ್ತದೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ವಿವರಿಸುವ ರೀತಿಯಲ್ಲಿ ಬೋಧಿಸಿದಲ್ಲಿ ಅವರ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಆದುದರಿಂದ ವಿದ್ಯಾರ್ಥಿಗಳು ಇಷ್ಟ ಪಡುವಂಥಾ ಶೈಲಿಯಲ್ಲಿ ಬೋಧಿಸುವುದು ಅಥವಾ ಪರೀಕ್ಷೆ ಮಾಡುವುದು ಬಹಳ ಪ್ರಯೋಜನಕರ. ಕಲಿಕಾ ಶೈಲಿಗಳಿಗನುಗುಣವಾಗಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವಂಥ ರೀತಿಯಲ್ಲಿ ಬದಲಾವಣೆಗಳನ್ನು ತರಬಹುದು. ಉದಾಹರಣೆಗೆ: ಬೋಧಿಸುವ ಸಮಯದಲ್ಲಿ ನಕ್ಷೆಯನ್ನು (ವಿನ್ಯಾಸ) ಪದೇ ಪದೇ ಬದಲಾಯಿಸುವುದು. ತರಗತಿಯ ಪೀಠಯೋಜನೆಯನ್ನು ಸಣ್ಣ ಸಣ್ಣ ಗುಂಪುಗಳಾಗಿ ಸಮಾಲೋಚನೆ ನಡೆಸಲು ಬೇಕಾದ ರೀತಿಯಲ್ಲಿ ಬದಲಾಯಿಸುವುದು, ವಿವಿಧ ರೀತಿಯ ಕಲಿಕಾ ಸನ್ನಿವೇಶಗಳನ್ನು ಬಳಸುವುದು. ಉದಾ: 'ಜ್ಞಾನವೃತ್ತ', ವಿದ್ಯಾರ್ಥಿಗಳು ವೃತ್ತಾಕಾರದಲ್ಲಿ ಕುಳಿತು ಒಂದು ಕಲಿಕಾ ವಿಷಯದ ಬಗ್ಗೆ ಚರ್ಚಿಸುವುದು ತಂಡಬೋಧನೆ, ಮಸ್ತಿಷ್ಕ, ಆಂದೋಲನ (Brain Storming), ಒಡಂಬಡಿಕೆ ಚಟುವಟಿಕೆ, ಪ್ಯಾಕೇಜ್‌ಗಳು ಮುಂತಾದ ಯೋಜನೆಗಳನ್ನು ಉಪಯೋಗಿಸಬೇಕು. ಈ ಯೋಜನೆಗಳು ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.

- ವಿದ್ಯಾರ್ಥಿಗಳ ಕಲಿಕಾ ಅವಶ್ಯಕತೆಗಳು (ಕಲಿಯಬೇಕಾದ ವಿಷಯವಸ್ತು).
- ಬಹು ಜ್ಞಾನೇಂದ್ರಿಯ ಸಂಪನ್ಮೂಲಗಳು

ಉದಾ: ಶ್ರವಣ, ದೃಶ್ಯ, ಸ್ಪರ್ಶಾಧಾರಿತ ಚಟುವಟಿಕೆಗಳು

- ಹೊಸದಾಗಿ ಕಲಿತ ವಿಷಯವನ್ನು ಸೃಜನಾತ್ಮಕವಾಗಿ ಉಪಯೋಗಿಸುವಂಥಾ ಚಟುವಟಿಕೆಗಳು
- ಪೂರ್ವ ಸ್ವ-ಪರೀಕ್ಷೆ ಹಾಗೂ ಅಂತಿಮ ಪರೀಕ್ಷೆ

ಸ್ವರೆಂಜರ್‌ರವರು ತರಗತಿ ಕಲಿಕೆಯನ್ನು ಕುರಿತು ಈ ರೀತಿ ಸಲಹೆಗಳನ್ನು ಸೂಚಿಸಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳಾಗಬೇಕು. ವಿದ್ಯಾರ್ಥಿಗಳು ಶಿಕ್ಷಕರಾಗಬೇಕು; ಶಿಕ್ಷಕ ಸರಿಯಾದ ಕಲಿಕಾ ವಾತಾವರಣದಲ್ಲಿ (ಪರಿಸರದಲ್ಲಿ) ಕಲಿತಿದ್ದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಕೂಡಾ ಕಲಿಯುವಂತೆ ಬೋಧಿಸುತ್ತಾನೆ/ಕಲಿಯಲು ಪ್ರೇರೇಪಿಸುತ್ತಾನೆ.

ಕಲಿಕೆ ಒಂದು ವಿನೋದ ಸರಸವೆಂದು ಹೇಳಬಹುದು. ಆದುದರಿಂದ ಕಲಿಕಾ ಸನ್ನಿವೇಶಗಳು ಸುಂದರವಾದ ಹಾಗೂ ಹಿತವಾಗುವಂತಹ ಅನುಭವಗಳಾಗಬೇಕು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಕಲಿಕಾ ಶೈಲಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಸಕ್ತಿ ಹುಟ್ಟಿಸುವಂಥಾ ಬೋಧನಾ ವಿಧಾನಗಳನ್ನು ಉಪಯೋಗಿಸಬೇಕು.

–ಡಾ. ಪದ್ಮಾವತಿ ಎಂ.

## ಕಲಿಕೆ –ಸ್ವರೂಪ, ಸಿದ್ಧಾಂತಗಳು

ಕಲಿಕೆ ಜೀವಿಗಳ ಸಹಜ ಲಕ್ಷಣ. ಅದು ಎಲ್ಲಾ ವರ್ಗದ ಜೀವಿಗಳಲ್ಲಿಯೂ ಕಂಡು ಬರುತ್ತದೆ. ಹೀಗಾಗಿ ಅದು ಜೀವಿಗಳ ಒಂದು ಸಾಮಾನ್ಯ ಲಕ್ಷಣವೆನಿಸುತ್ತದೆ. ವಿಕಾಸ ಮನೋವಿಜ್ಞಾನಿಗಳು, ಅದರಲ್ಲೂ ಪ್ರಾಣಿ ಮನೋವಿಜ್ಞಾನಿಗಳು (ತೌಲನಿಕ ಮನೋವಿಜ್ಞಾನಿಗಳು) ಏಕಕೋಶ ಜೀವಿಗಳಲ್ಲಿಯೂ ಕಲಿಯುವ ಸಾಮರ್ಥ್ಯದ ಕುರುಹನ್ನು ಪ್ರಾಯೋಗಿಕವಾಗಿ ತೋರಿಸಿದ್ದಾರೆ. ಜೀವ ವಿಕಾಸದ ಕ್ರಮದಲ್ಲಿ ನಾವು ಏಕಕೋಶ ಜೀವಿಗಳಿಂದ ಆರಂಭಿಸಿ ಬಹುಕೋಶ ಜೀವಿಗಳತ್ತ ಮುಂದುವರೆದಂತೆ ಕಲಿಕೆಗೆ ಸಂಬಂಧಿಸಿದಂತೆ ಎರಡು ರೀತಿಯ ಬದಲಾವಣೆಗಳನ್ನು ಕಾಣುತ್ತೇವೆ. ಜೀವಿಗಳ ಸಂಕೀರ್ಣತೆ ಹೆಚ್ಚಿದಂತೆ ಅವುಗಳ ಕಲಿಕಾ ಸಾಮರ್ಥ್ಯ ಹೆಚ್ಚುತ್ತಾ ಬಂದಿದೆ. ಹಾಗೆಯೇ ಜೀವ ವಿಕಾಸ ಕ್ರಮದಲ್ಲಿ ಮೇಲಕ್ಕೆ ಮುಂದುವರೆದಂತೆ ಕಲಿಕೆಯ ವ್ಯಾಪ್ತಿ, ಸಂಕೀರ್ಣತೆ ಹಾಗೂ ವೈವಿಧ್ಯತೆ ಹೆಚ್ಚುತ್ತಾ ಬಂದಿವೆ. ಜೀವ ವಿಕಾಸದ ಮುಕುಟವೆನಿಸಿದ ಮಾನವನಲ್ಲಿ ಬಹುಶಃ ಅವನು ಪಡೆದಿರುವ ಅತ್ಯಂತ ಸಂಕೀರ್ಣವಾದ, ಶಕ್ತಿಶಾಲಿಯಾದ ಮೆದುಳಿನಿಂದಾಗಿ ಅವನಲ್ಲಿ ಕಲಿಕೆಯ ಅಸೀಮ ಸಾಮರ್ಥ್ಯವನ್ನು, ಸಂಕೀರ್ಣತೆಯನ್ನು ವೈವಿಧ್ಯತೆಯನ್ನು ಕಾಣುತ್ತೇವೆ.

ಮನೋವಿಜ್ಞಾನಿಗಳು ಎಲ್ಲಾ ಮಟ್ಟದ ಜೀವವರ್ಗಗಳಲ್ಲಿ ಕಲಿಕೆಯ ಸಾಮರ್ಥ್ಯ, ವ್ಯಾಪ್ತಿ, ಅದರ ಪ್ರಕ್ರಿಯೆಯ ಸಂಕೀರ್ಣತೆಯನ್ನು ಅಧ್ಯಯನ ಮಾಡಿ ಅನೇಕ ತತ್ವಗಳನ್ನು ರೂಪಿಸಿದ್ದಾರೆ. ವಿಶೇಷವಾಗಿ ಮಾನವನ ಕಲಿಕಾ ಸಾಮರ್ಥ್ಯದ ಬಗ್ಗೆ ವಿಪುಲವಾಗಿ ಅಧ್ಯಯನಗಳು ನಡೆದಿವೆ. ಇವುಗಳ ಫಲಿತಾಂಶಗಳ ಆಧಾರದ ಮೇಲೆ ಮನೋವಿಜ್ಞಾನಿಗಳು ಕಲಿಕೆಯ ಪ್ರಕ್ರಿಯೆಯನ್ನು ವ್ಯಾಖ್ಯಾನಿಸುವ, ಅದರಲ್ಲಿ ನಡೆಯಬಹುದಾದ ವಿವಿಧ ಪ್ರಕ್ರಿಯೆಗಳನ್ನು ವಿವರಿಸುವ, ಕಲಿಕೆಯ ಮೇಲೆ ಪ್ರಭಾವ ಬೀರುವ ಕಾರಕಾಂಶಗಳನ್ನು ಗುರ್ತಿಸುವ ಮತ್ತು ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಬೇರೆ ಬೇರೆ ಕಲಿಕಾ ಸಿದ್ಧಾಂತಗಳನ್ನು ರೂಪಿಸುವ ಪ್ರಯತ್ನ ಮಾಡಿದ್ದಾರೆ.

Digitised by Bharatavani, CIIL

**ಕಲಿಕೆಯ ಅರ್ಥ, ಸ್ವರೂಪ:**

ಕಲಿಕೆ ಎಂದರೇನು? ಈ ಪ್ರಶ್ನೆಗೆ ಸಾಮಾನ್ಯವಾದ ಅರ್ಥದಲ್ಲಿ ಹಾಗೂ ಮನೋವೈಜ್ಞಾನಿಕ ಅರ್ಥದಲ್ಲಿ ಉತ್ತರ ದೊರೆಯುತ್ತದೆ. ಸಾಮಾನ್ಯ ಅರ್ಥದಲ್ಲಿ ಜೀವಿ ಅಥವಾ ಮಾನವ ಶಿಶು ದೈಹಿಕವಾಗಿ ಬೆಳೆದಂತೆ ಅದರಲ್ಲಿ ಕಂಡು ಬರುವ ಹೊಸ ಹೊಸ ವರ್ತನೆಗಳು ಕಲಿಕೆಯಿಂದ ಉಂಟಾಗುತ್ತವೆ. ಹುಟ್ಟಿದಾಗ ಸಂಪೂರ್ಣವಾಗಿ ಜೈವಿಕ ರೂಪದಲ್ಲಿದ್ದು, ಕೆಲವು ಜನ್ಮಜಾತ ವರ್ತನ ಪವೃತ್ತಿಗಳನ್ನು ಹೊಂದಿರುವ ಪೂರ್ವತಃ ಪರಾವಲಂಬಿಯಾಗಿರುವ ಮಾನವ ಶಿಶುವಿನಲ್ಲಿ ದಿನಕಳೆದಂತೆ ಹೊಸ ಹೊಸ ವರ್ತನೆಗಳು ಕಂಡು ಬರುತ್ತವೆ. ಮಗು ಬೆಳೆದಂತೆ ಬೇರೆಯವರನ್ನು ಗುರ್ತಿಸಿ, ಪ್ರತಿಕ್ರಿಯಿಸುತ್ತದೆ. ನಡೆದಾಡುವುದನ್ನು ಸಾಧಿಸಿ ಭಾಗಶಃ ಸ್ವತಂತ್ರವಾಗುತ್ತದೆ, ವಸ್ತುಗಳನ್ನು ಹಿಡಿದಾಡುತ್ತದೆ, ಧ್ವನಿಗಳನ್ನು ಶಬ್ದವಾಗಿಸಿ ಅಭಿವ್ಯಕ್ತಿಸುತ್ತದೆ. ಕ್ರಮೇಣ ಪರಸ್ಪರ ಅನ್ಯೋನ್ಯಕ್ರಿಯಿಸಲು, ಭಾಷೆಯನ್ನು ಉಪಯೋಗಿಸತೊಡಗುತ್ತದೆ. ಮಲ–ಮೂತ್ರ ವಿಸರ್ಜನೆ ಬಗ್ಗೆ ಹತೋಟಿ ಸಾಧಿಸುತ್ತದೆ, ತನ್ನ ಸಂವೇಗಗಳನ್ನು ನಿಯಂತ್ರಿಸತೊಡಗುತ್ತದೆ. ಹೀಗೆ ಮುಂದುವರಿಯುತ್ತಾ ತನ್ನ ವರ್ತನೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆ. ಹಾಗೆಯೇ ಅದರ ವರ್ತನೆಗಳು ಹೆಚ್ಚು ಹೆಚ್ಚು ಸಂಕೀರ್ಣವೂ, ವೈವಿಧ್ಯಪೂರ್ಣವೂ, ಪ್ರಯೋಜಿತವು ಆಗತೊಡಗುತ್ತವೆ. ಇಷ್ಟೆಲ್ಲಾ ಬದಲಾವಣೆಗಳು ಹೇಗೆ ಆದವು ಎಂದರೆ ಕಲಿಕೆಯಿಂದ ಎಂದು ಉತ್ತರಿಸಬೇಕಾಗುತ್ತದೆ. ಕಲಿಕೆಯ ಜೊತೆಗೆ ಜೈವಿಕ ಪರಿಪಕ್ವತೆಯೂ ಪ್ರಭಾವ ಬೀರಿರುತ್ತದೆ. ಮಗು ಇಷ್ಟೆಲ್ಲಾ ವರ್ತನೆಗಳನ್ನು ಕಲಿತುಕೊಂಡಿದೆ ಎಂದು ಹೇಳುತ್ತೇವೆ.

ಮಗು ಬೆಳೆದಂತೆ ಮನೆಯಿಂದ ಆರಂಭವಾಗಿ, ಕ್ರಮೇಣ ವಿಸ್ತೃತವಾಗುವ ಪರಿಸರದಿಂದ, ನಂತರ ವ್ಯವಸ್ಥಿತ ಶಾಲಾ ಜೀವನ ಆರಂಭಗೊಂಡು ನಂತರ ಶಾಲೆಯಲ್ಲಿ ವ್ಯವಸ್ಥಿತವಾಗಿ ಏರ್ಪಡಿಸುವ ಕಲಿಕಾನುಭವಗಳಿಂದ ಅನೇಕ ರೀತಿಯ ವರ್ತನೆಗಳನ್ನು ಕಲಿತುಕೊಳ್ಳುತ್ತದೆ. ಪ್ರಚೋದನೆಗಳನ್ನು (ಉದ್ದೀಪಗಳನ್ನು) ಅರ್ಥೈಸಿ ಅವುಗಳಿಗೆ ನಿರ್ದಿಷ್ಟವಾಗಿ ಅನುಕ್ರಿಯೆಗಳನ್ನು ತೋರಿಸುತ್ತದೆ. ಪ್ರಚೋದನೆಗಳಿಗಿರುವ ವ್ಯತ್ಯಾಸಗಳನ್ನು ವಿಭೇದೀಕರಿಸತೊಡಗುತ್ತದೆ. ಪರಿಸರದ ಅಸಂಖ್ಯಾತ ಪ್ರಚೋದನೆಗಳನ್ನು ನಿಭಾಯಿಸಲು ಅವುಗಳನ್ನು ಅರ್ಥಪೂರ್ಣವಾಗಿ ವರ್ಗೀಕರಿಸಿ ಆ ವರ್ಗಗಳನ್ನು ಶಾಬ್ಧಿಕ ಅಥವಾ ಅಶಾಬ್ಧಿಕ ಪ್ರತೀಕಗಳಿಂದ ಪ್ರತಿನಿಧಿಸಲು, ಸೂಚಿಸಲು, ಗುರ್ತಿಸಲು ಸಹಾಯಕವಾಗುವ ಪರಿಕಲ್ಪನೆಗಳನ್ನು (Concepts) ಕಲಿತುಕೊಳ್ಳುತ್ತದೆ. ಎರಡು ಅಥವಾ ಹೆಚ್ಚಿನ ಪರಿಕಲ್ಪನೆಗಳ ನಡುವೆ ಇರುವ ಸಂಬಂಧವನ್ನು ಗುರ್ತಿಸಿ, ಅರ್ಥೈಸಿ ಅದನ್ನು ನಿರೂಪಿಸುವ ನಿಯಮಗಳನ್ನು, ತತ್ವಗಳನ್ನು ಕಲಿತುಕೊಳ್ಳುತ್ತದೆ. ಮುಂದುವರಿದು ಇಂಥ ಅನೇಕ ನಿಯಮಗಳನ್ನು ಉಪಯೋಗಿಸಿ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಸಮಸ್ಯಾ ಪರಿಹಾರವನ್ನು ಕಲಿತುಕೊಳ್ಳುತ್ತದೆ. ಇಷ್ಟೇ ಅಲ್ಲದೆ ತನ್ನ ಜ್ಞಾನೇಂದ್ರಿಯಗಳನ್ನು (ಸಂವೇದನಾಂಗಗಳಾದ) ಕಣ್ಣು, ಕಿವಿ ಇತ್ಯಾದಿಗಳನ್ನು ಮತ್ತು ಕರ್ಮೇಂದ್ರಿಯಗಳಾದ (ಗತ್ಯಾತ್ಮಕ ಅಥವಾ ಚಲನಾಂಗಗಳಾದ) ಕೈಗಳು, ಬೆರಳುಗಳು, ಕಾಲುಗಳನ್ನು ವಿವಿಧ ವಿನ್ಯಾಸಗಳಲ್ಲಿ ಸಂಯೋಜಿಸಿ ಅರ್ಥಪೂರ್ಣವಾದ, ಧ್ಯೇಯಗಮ್ಯವಾದ ಕೌಶಲಗಳನ್ನು ಕಲಿತುಕೊಳ್ಳುತ್ತದೆ. ಸಾಮಾಜಿಕ ಸಂಪರ್ಕಕ್ಕೆ ಬಂದ ನಂತರ ಬೇರೆಯವರೊಡನೆ ಅನುಕ್ರಿಯಿಸುವುದರ ಪರಿಣಾಮವಾಗಿ ವಸ್ತುಗಳು, ವ್ಯಕ್ತಿಗಳು, ಸ್ಥಳಗಳು, ವಿಚಾರಗಳು, ಸಮೂಹಗಳ ಬಗ್ಗೆ ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ವರ್ತಿಸುವಂತೆ ಮಾಡುವ ಮಾನಸಿಕ ಸಿದ್ಧತೆ ಎನಿಸುವ ಅಭಿವೃತ್ತಿಗಳನ್ನು (ಮನೋಭಾವಗಳನ್ನು) ಕಲಿತುಕೊಳ್ಳುತ್ತದೆ. ಈ ಎಲ್ಲಾ ರೀತಿಯ ವರ್ತನ ವಿನ್ಯಾಸಗಳು ಕಲಿಕೆಯ ವ್ಯಾಪ್ತಿಯಲ್ಲಿ ಬರುತ್ತವೆ. ಮಾನವನ ಕಲಿಕೆಯ ವ್ಯಾಪ್ತಿ ಇನ್ನೂ ವಿಸ್ತೃತವಾಗಿ ಇನ್ನೊಂದು ಆಯಾಮವನ್ನು ಹೊಂದಿದೆ. ನಾವು ನಿರ್ದಿಷ್ಟ ವರ್ತನೆಗಳನ್ನು ಕಲಿತುಕೊಳ್ಳುವುದರ ಜೊತೆಗೆ ಹೇಗೆ ಕಲಿತುಕೊಳ್ಳಬೇಕು ಎನ್ನುವುದನ್ನು ಕಲಿಯುತ್ತೇವೆ ಅಥವಾ ಗ್ರಹಿಸುತ್ತೇವೆ. ಅನೇಕ ಸಮಸ್ಯೆಗಳನ್ನು ಬಿಡಿಸುವುದನ್ನು ಕಲಿಯುವುದರೊಂದಿಗೆ ಈ ಸಮಸ್ಯೆಗಳನ್ನು ಬಿಡಿಸುವಾಗ ಯಾವ ಯಾವ ನಿರ್ದಿಷ್ಟ ತಂತ್ರಗಳನ್ನು ಉಪಯೋಗಿಸಿದೆವು ಎನ್ನುವುದನ್ನು ಕಲಿಯುತ್ತೇವೆ. ಈ ರೀತಿಯ ಕಲಿಕೆಯನ್ನು ಮನೋವಿಜ್ಞಾನಿಗಳ ಸಂಜ್ಞಾನಾತ್ಮಕ ತಂತ್ರಗಳು (Cognitive strategies) ಎಂದು ಕರೆದಿದ್ದಾರೆ. ಈ ತಂತ್ರಗಳ ಕಲಿಕೆ ಪರಾಸಂಜ್ಞಾನ (Meta cognition) ಎಂದು ಹೇಳುವ ಪ್ರಕ್ರಿಯೆಗಳಲ್ಲಿ ಸೇರುತ್ತದೆ. ಅನುಭಗಳನ್ನು ಗ್ರಹಿಸುವುದರಲ್ಲಿ, ನೆನಪು ಮಾಡಿಕೊಳ್ಳುವಲ್ಲಿ, ಅವಧಾನ ನೀಡುವಲ್ಲಿ ಉಂಟಾಗುವ ಮೇಲ್ಮಟ್ಟದ ಪ್ರಕ್ರಿಯೆಗಳೂ ಪರಾ–ಸಂಜ್ಞಾನದ ಅಡಿಯಲ್ಲಿ ಸೇರುತ್ತವೆ.

ಇದುವರೆಗೂ ಕಲಿಕೆಯ ಬಗ್ಗೆ ಕೊಟ್ಟಿರುವ ವಿವರಣೆ ಸಾಮಾನ್ಯ ಅರ್ಥದ ಮಟ್ಟದ್ದಾಯಿತು. ಆದರೆ ಮನೋವಿಜ್ಞಾನಿಗೆ ಈ ರೀತಿಯ ಸಾಮಾನ್ಯ ವ್ಯಾಖ್ಯೆ ಸಾಕಾಗುವುದಿಲ್ಲ. ಅವನಿಗೆ ನಿಖರವಾದ, ಹೆಚ್ಚು ವ್ಯಾಪಕವಾದ, ಸರ್ವಸಮ್ಮತವಾದ ಕಲಿಕೆಯ ವ್ಯಾಖ್ಯೆ ಬೇಕಾಗುತ್ತದೆ. ಮನೋವಿಜ್ಞಾನಿಗಳು ಕಲಿಕೆಯನ್ನು ಹೇಗೆ ಪರಿಭಾಷಿಸಿದ್ದಾರೆಂದು ಪರಿಶೀಲಿಸಬೇಕು. ವುಡ್‌ವರ್ಥ್ ಪ್ರಕಾರ "ಅನುಭವದಿಂದ ವ್ಯಕ್ತಿಯಲ್ಲಿ ಉಂಟಾಗುವ ವರ್ತನೆಯ ಸಾಪೇಕ್ಷವಾಗಿ ಸ್ಥಿರವಾದ ಬದಲಾವಣೆಯೇ ಕಲಿಕೆ". ಗುತ್ರಿ ಎಂಬುವನು– "ಪೂರ್ವಾನುಭವದಿಂದಾಗಿ ಒಂದು ಸನ್ನಿವೇಶಕ್ಕೆ ಭಿನ್ನ ರೀತಿಯಲ್ಲಿ ಅನುಕ್ರಿಯಿಸುವುದೇ ಕಲಿಕೆ" ಎಂದಿದ್ದಾನೆ. ಗಾರ್ಡ್‌ನರ್ ಮರ್ಫಿ– "ಕಲಿಕೆ ಆರ್ಜನೆ ಮಾಡಿಕೊಂಡ (ಗಳಿಸಿದ) ಉದ್ವೇಗ ಕಡಿಮೆ ಮಾಡಿಕೊಳ್ಳುವ ಪ್ರಕ್ರಿಯೆ" ಎಂದು ಕಲಿಕೆಯನ್ನು ಸಂಕ್ಷಿಪ್ತವಾಗಿ ಪರಿಭಾಷಿಸಿದ್ದಾನೆ. ಹಿಲ್‌ಗರ್ಡ್ ಮತ್ತು ಮನ್ ಅಭ್ಯಾಸ ಅಥವಾ ಪೂರ್ವಾನುಭವದ ಪರಿಣಾಮವಾಗಿ ವರ್ತನೆಯಲ್ಲಿ ಉಂಟಾಗುವ ಸಾಪೇಕ್ಷವಾಗಿ ಅಂದರೆ ಹೆಚ್ಚು ಕಡಿಮೆ ಸ್ಥಿರವಾಗಿ ಉಳಿಯುವ ವರ್ತನೆಯ ಬದಲಾವಣೆಯೇ ಕಲಿಕೆ ಎಂಬ ಅರ್ಥ ಬರುವಂತೆ ಕಲಿಕೆಯನ್ನು ವ್ಯಾಖ್ಯಾನಿಸಿದ್ದಾರೆ. ಹಿಲ್‌ಗರ್ಡ್ ಮತ್ತು ಬಪಿರ್ ಕಲಿಕೆಗೆ ಇನ್ನೂ ಹೆಚ್ಚು ನಿಖರತೆಯಿಂದ ಕೂಡಿದ ವ್ಯಾಖ್ಯೆ ನೀಡಿದ್ದಾರೆ. ಅವರ ಪ್ರಕಾರ "ಯಾವುದೇ ಒಂದು ದತ್ತ ಪರಿಸ್ಥಿತಿಯಲ್ಲಿ ವ್ಯಕ್ತಿಯ ಪುನರಾವರ್ತಿತ ಅನುಭವಗಳ

Digitised by Bharatavani, CIIL

ಪರಿಣಾಮವಾಗಿ ವ್ಯಕ್ತಿಯ ವರ್ತನೆಯಲ್ಲಿ ಅಥವಾ ವರ್ತನೆಯ ಸತ್ವದಲ್ಲಿ ಉಂಟಾಗುವ ಬದಲಾವಣೆಯನ್ನು ಕಲಿಕೆ ಎನ್ನಲಾಗುತ್ತದೆ. ಆದರೆ ಈ ರೀತಿಯ ವರ್ತನೆಯ ಬದಲಾವಣೆಯನ್ನು ವ್ಯಕ್ತಿಯ ಜನ್ಮಜಾತ ಅನುಕ್ರಿಯಾ ಪ್ರವೃತ್ತಿಗಳಿಂದಾಗಲಿ, ಪರಿಪಕ್ವನದಿಂದಾಗಲಿ ಅಥವಾ ಆಯಾಸ, ಔಷಧ ಸೇವನೆ, ಆಂತರಿಕ ಬೋಧನೆ ಮುಂತಾದ ವ್ಯಕ್ತಿಯಲ್ಲಿ ಉಂಟಾಗುವ ತಾತ್ಕಾಲಿಕ ಸ್ಥಿತಿಗಳಿಂದಾಗಲೀ ವಿವರಿಸಲು ಸಾಧ್ಯವಾಗಬಾರದು.

ಈ ಎಲ್ಲಾ ಪರಿಭಾಷೆಗಳು ಕಲಿಕೆ ಎಂದರೆ ಅಭ್ಯಾಸ ಅಥವಾ ತರಬೇತಿ ಮತ್ತು ಪೂರ್ವಾನುಭವದ ಪರಿಣಾಮವಾಗಿ ವ್ಯಕ್ತಿಯ ವರ್ತನೆಯಲ್ಲಿ ಉಂಟಾಗುವ ಸಾಕಷ್ಟು ದೀರ್ಘಕಾಲ ಉಳಿಯುವ ವರ್ತನೆಯ ಬದಲಾವಣೆ ಎಂದು ಸೂಚಿಸುತ್ತವೆ. ವರ್ತನೆಯ ಬದಲಾವಣೆಗಳನ್ನು ವೀಕ್ಷಿಸಿ, ಅಳತೆ ಮಾಡಲು ಸಾಧ್ಯವಾಗುವುದರಿಂದ ಈ ಪರಿಭಾಷೆಗೆ ನಿಖರತೆಯ ಲಕ್ಷಣವಿದೆ ಎನ್ನಬಹುದು.

ಕಲಿಕೆಯನ್ನು ಪ್ರಕ್ರಿಯೆಯ ರೂಪದಲ್ಲೂ, ಉತ್ಪನ್ನದ ರೂಪದಲ್ಲಿಯೂ ಪರಿಭಾವಿಸಬಹುದು. ಒಂದು ಪ್ರಕ್ರಿಯೆಯಾಗಿ ಕಲಿಕೆಯ ಪರಿಕಲ್ಪನೆ ವರ್ತನೆಯಲ್ಲಿ ಬದಲಾವಣೆ ಉಂಟಾಗುವ ಮೆದುಳಿನಲ್ಲಿ ಉಂಟಾಗುವ ರಾಸಾಯನಿಕ ಪ್ರಕ್ರಿಯೆಗಳನ್ನು, ಮನಸ್ಸಿನಲ್ಲಿ ಉಂಟಾಗುವ ಮಾನಸಿಕ ಪ್ರಕ್ರಿಯೆಗಳನ್ನು ಸೂಚಿಸುತ್ತದೆ. ರಾಸಾಯನಿಕ ಬದಲಾವಣೆಗಳನ್ನು ಆಧುನಿಕ ತಂತ್ರಜ್ಞಾನದಿಂದ ರೂಪಿತವಾಗಿರುವ ಮೆದುಳಿನ ಸ್ಕ್ಯಾನಿಂಗ್, ರಾಸಾಯನಿಕಗಳ ವಿಶ್ಲೇಷಣೆ ತಂತ್ರಗಳಿಂದ ಪರೋಕ್ಷವಾಗಿ ಅಧ್ಯಯನ ಮಾಡಲು ಸಾಧ್ಯವಾಗಿದೆ. ಆದರೆ ಕಲಿಯುವಾಗ ಉಂಟಾಗುವ ಮಾನಸಿಕ ಪ್ರಕ್ರಿಯೆಗಳನ್ನು ಕಲಿಯುವ ವ್ಯಕ್ತಿ ಕೊಡುವ ಸ್ವ–ವರದಿಯ ಆಧಾರದ ಮೇಲೆ ತೀರ್ಮಾನಿಸಬೇಕಾಗುತ್ತದೆ. ಅವುಗಳನ್ನು ನೇರವಾಗಿ ವೀಕ್ಷಿಸಿ, ದಾಖಲಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಕಲಿಕೆಯ ಪ್ರಕ್ರಿಯೆಗಳನ್ನು ವಿವರಿಸುವುದರಲ್ಲಿ ಮನೋವಿಜ್ಞಾನಿಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಬೇರೆ ಬೇರೆ ಕಲಿಕೆಯ ಸಿದ್ಧಾಂತಗಳು ತಮ್ಮದೇ ಆದ ನಿಲುವುಗಳಿಂದ ಕಲಿಕೆಯ ಪ್ರಕ್ರಿಯೆಗಳನ್ನು ವಿವರಿಸಿವೆ.

ಉತ್ಪನ್ನ ರೂಪದಲ್ಲಿ ಕಲಿಕೆ ವರ್ತನೆಯಲ್ಲಿ ಉಂಟಾಗುವುದನ್ನು ವೀಕ್ಷಿಸಿ ಅಳತೆ ಮಾಡಬಹುದಾದ ಬದಲಾವಣೆಗಳನ್ನು ಸೂಚಿಸುತ್ತದೆ. ಕೆಲವು ಕಲಿಕೆಯ ಸಿದ್ಧಾಂತಗಳು ಉದಾಹರಣೆಗೆ ಪ್ಯಾವೆಲೋವ್, ಸ್ಕಿನ್ನರ್ ಮತ್ತು ಹಲ್ ಉತ್ಪನ್ನದ ರೂಪದಲ್ಲಿ ಕಲಿಕೆಯನ್ನು ವಿವರಿಸಿದ್ದಾರೆ. ಕಲಿಕೆಯಿಂದ ವ್ಯಕ್ತಿ ಆರ್ಜಿಸುವ ಜ್ಞಾನಾಂಶಗಳು ಕೌಶಲಗಳು ಮನೋಭಾವಗಳನ್ನು ಸೂಚಿಸುವ ವರ್ತನೆಗಳು, ಪರಿಕಲ್ಪನೆಗಳು ಕಲಿಕೆಯ ಉತ್ಪನ್ನಗಳೆನಿಸುತ್ತವೆ. ಶೈಕ್ಷಣಿಕ ದೃಷ್ಟಿಯಿಂದ ಕಲಿಕೆಯ ಸ್ವರೂಪವನ್ನು ಪ್ರಕ್ರಿಯೆಯ ರೂಪದಲ್ಲಿ ಮತ್ತು ಉತ್ಪನ್ನದ ರೂಪದಲ್ಲಿ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಈ ರೀತಿಯ ಜ್ಞಾನ ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ವರ್ತನೆಗಳನ್ನು ಕಲಿಸಲು, ಕಲಿಕೆಯ ಪ್ರಕ್ರಿಯೆಗಳಿಗೆ ಅನುಗುಣವಾದ ಕಲಿಕಾನುಭವಗಳನ್ನು ಒದಗಿಸಿ ಪ್ರಭಾವಯುತವಾದ ಕಲಿಕೆಯನ್ನುಂಟುಮಾಡಲು ಶಿಕ್ಷಕರಿಗೆ ಸಹಾಯ ಮಾಡುತ್ತದೆ.

ಮಾನವನ ಕಲಿಕೆಯ ವ್ಯಾಪ್ತಿ ವಿಸ್ತೃತವಾದುದು. ಮಾನವ ಕಲಿಕೆಯಲ್ಲಿ ಅನೇಕ ವಿಧಗಳನ್ನು ಗುರ್ತಿಸಬಹುದು. ಈ ಕಲಿಕೆಯ ವಿಧಗಳಲ್ಲಿ ಅವುಗಳು ಒಳಗೊಳ್ಳುವ ಗತ್ಯಾತ್ಮಕ, ಮಾನಸಿಕ, ಚಟುವಟಿಕೆ, ಅವುಗಳ ಫಲಿತಗಳಾದ ವರ್ತನ ವಿನ್ಯಾಸ, ಅವುಗಳು ಒಳಗೊಳ್ಳುವ ಕಲಿಕಾ ತತ್ವಗಳ ಆಧಾರದ ಮೇಲೆ ಮನೋವಿಜ್ಞಾನಿಗಳು ಕಲಿಕೆಯ ಅನೇಕ ವಿಧಗಳನ್ನು ಗುರ್ತಿಸಿ, ಅವುಗಳ ಸ್ವರೂಪವನ್ನು ವಿವರಿಸಿದ್ದಾರೆ. ಗತ್ಯಾತ್ಮಕ ಕಲಿಕೆ, (ಕೌಶಲಗಳ ಕಲಿಕೆ), ಅನುಬಂಧನ (ಸೋಪಾಧಿಕ) ಕಲಿಕೆ, ಶಾಬ್ದಿಕ ಕಲಿಕೆ, ಮನೋಭಾವಗಳ ಕಲಿಕೆ, ಸಂಜ್ಞಾನಾತ್ಮಕ ಕಲಿಕೆ, ನಿಯಮಗಳ ಕಲಿಕೆ, ಸಮಸ್ಯಾಪರಿಹಾರ ಕಲಿಕೆ, ಸಂಜ್ಞಾನಾತ್ಮಕ ತಂತ್ರಗಳ ಕಲಿಕೆ– ಇವು ಕಲಿಕೆಯ ಮುಖ್ಯ ವಿಧಗಳು. ಇವುಗಳ ಸ್ವರೂಪವನ್ನು ಮತ್ತೊಂದು ಲೇಖನದಲ್ಲಿ ವಿವರಿಸಲಾಗಿದೆ. (ನೋಡಿ–ಕಲಿಕೆಯ ವಿಧಗಳು ಪುಟಸಂಖ್ಯೆ 227)

**ಕಲಿಕೆಯ ಸಿದ್ಧಾಂತಗಳು:** ಕಲಿಕೆಯ ಸ್ವರೂಪವನ್ನು ತತ್ವ (ನಿಯಮ) ಗಳನ್ನು ವಿವರಿಸಲು ಮನೋವಿಜ್ಞಾನಿಗಳು ಅನೇಕ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಈ ಸಿದ್ಧಾಂತಗಳು ಪ್ರಾಣಿಗಳು ಹಾಗೂ ಮಾನವರ ಮೇಲೆ ಕೈಗೊಂಡ ಪ್ರಯೋಗಗಳ ಫಲಿತಾಂಶಗಳ ಆಧಾರದ ಮೇಲೆ ರೂಪಿತವಾಗಿವೆ. ಪ್ರತಿಯೊಂದು ಸಿದ್ಧಾಂತವೂ ಕಲಿಕೆಯ ವ್ಯಾಖ್ಯೆ, ಅದರಲ್ಲಿ ಉಂಟಾಗುವ ಪ್ರಕ್ರಿಯೆಗಳ ಸ್ವರೂಪ, ಪ್ರಭಾವ ಬೀರುವ ಅಂಶಗಳು ಅಥವಾ ಕಲಿಕೆಗೆ ಬೇಕಾಗುವ ಷರತ್ತುಗಳು ಮತ್ತು ಕಲಿಕೆಯಲ್ಲಿನ ತತ್ವಗಳನ್ನು ತಮ್ಮದೇ ಆದ ರೀತಿಯಲ್ಲಿ ವಿವರಿಸಲು ಪ್ರಯತ್ನಿಸಿವೆ. ಕಲಿಕೆಯ ಯಾವುದೇ ಸಿದ್ಧಾಂತ ಪರಿಪೂರ್ಣವಾದ ುದಲ್ಲವೆನ್ನುವುದನ್ನು ಗಮನಿಸಬೇಕು. ಪ್ರತಿಯೊಂದು ಸಿದ್ಧಾಂತವೂ ಕಲಿಕೆಯ ಒಂದೊಂದು ಮುಖದ ಮೇಲೆ ಬೆಳಕು ಚೆಲ್ಲುತ್ತದೆ. ಕಲಿಕೆಯ ಕೆಲವು ಅಂಶಗಳನ್ನು ವಿವರಿಸುವಲ್ಲಿ ಪ್ರತಿಯೊಂದು ಸಿದ್ಧಾಂತವೂ ಸೋಲುತ್ತದೆ. ಲಭ್ಯವಿರುವ ಎಲ್ಲಾ ಸಿದ್ಧಾಂತಗಳ ಸಾರವನ್ನು ಗ್ರಹಿಸಿದಾಗ ಮಾತ್ರವೇ ಪ್ರಾಣಿಗಳ/ಮಾನವರ ಕಲಿಕೆಯ ಸ್ವರೂಪ ತಿಳಿಯುತ್ತದೆ.

ಕಲಿಕೆಯ ಸಿದ್ಧಾಂತಗಳನ್ನು ಅವುಗಳು ನೀಡಿರುವ ಪ್ರಕ್ರಿಯೆಗಳ/ ಪರಿಕಲ್ಪನೆಗಳ ಮೇಲಿನ ಮಹತ್ವದ ಆಧಾರದ ಮೇಲೆ ಅವುಗಳನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಲಾಗಿದೆ.

(i) ಕೆಲವು ಸಿದ್ಧಾಂತಗಳು ಕಲಿಕೆಯನ್ನು ಪ್ರಚೋದನೆ ಅನುಕ್ರಿಯೆಗಳ ನಡುವಣ ಬಂಧಗಳ ರೂಪದಲ್ಲಿ ವಿವರಿಸಿವೆ. ಪುನರ್ಬಲನ (Reinforcement), ಪ್ರತಿಪುಷ್ಟಿ (Feed back) ಪರಿಸರದ ಅಂಶಗಳಿಗೆ (ಇವುಗಳನ್ನು ಮುಂದೆ ವಿವರಿಸಿದೆ) ಮಹತ್ವ ನೀಡುತ್ತವೆ. ಈ ಸಿದ್ಧಾಂತಗಳನ್ನು ಪ್ರಚೋದನ–ಅನುಕ್ರಿಯಾ ಸಿದ್ಧಾಂತಗಳು, ಬಂಧವಾದಿ ಸಿದ್ಧಾಂತಗಳು ಅಥವಾ S R (Stimulus Response) ಸಿದ್ಧಾಂತಗಳು ಎಂದು ಕರೆಯುತ್ತೇವೆ. ಥಾರಂಡೈಕ್, ಪ್ಯಾವ್‌ಲೋವ್, ಸ್ಕಿನ್ನರ್, ಹಲ್, ವಾಟಸನ್ ಮತ್ತು ಗುತ್ರಿಯ ಸಿದ್ಧಾಂತಗಳು ಈ ಗುಂಪಿಗೆ ಸೇರುತ್ತವೆ.

(ii) ಇದಕ್ಕೆ ವಿರುದ್ಧವಾದ ನಿಲುವನ್ನು ತೆಗೆದುಕೊಂಡ

Digitised by Bharatavani, CIIL

ಜರ್ಮನಿಯ ಕೊಹ್ಲರ್, ಕಾಫ್ಕ್ ಹಾಗೂ ವರ್ದೈಮರ್ ಎಂಬ ಮೂವರು ಮನೋವಿಜ್ಞಾನಿಗಳು ಬಂಧವಾದಿಗಳು ಕಲಿಕೆಯನ್ನು ಪ್ರಚೋದನೆ–ಅನುಕ್ರಿಯಾ ಬಂಧಗಳ ರೂಪದಲ್ಲಿ ವಿವರಿಸುವುದನ್ನು ಪ್ರಶ್ನಿಸಿ, ಕಲಿಕೆಯನ್ನು ಸಂಜ್ಞಾನಾತ್ಮಕವಾಗಿ ಮಾನವನ ಅನುಭವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವರಿಸಬೇಕೆಂಬ ತಮ್ಮ ಸಿದ್ಧಾಂತವನ್ನು ಮಂಡಿಸಿದರು. ಇವರ ಸಿದ್ಧಾಂತವನ್ನು ಕ್ಷೇತ್ರ–ಸಂಜ್ಞಾನಾತ್ಮಕ ಸಿದ್ಧಾಂತವೆಂದು ಹೆಸರಿಸಲಾಗಿದೆ. ಈ ಮನೋವಿಜ್ಞಾನಿಗಳು ಮಾನವನಲ್ಲಿ ಇಡಿಯಾಗಿ, ಅರ್ಥಪೂರ್ಣ ಆಕೃತಿ, ಘಟಕಗಳ ರೂಪದಲ್ಲಿ ಆಗುವ ಪ್ರತ್ಯಕ್ಷಾನುಭವಗಳ ಆಧಾರದ ಮೇಲೆ ಕಲಿಕೆ ಸಂಜ್ಞಾನಾತ್ಮಕವಾದುದೆಂದೂ, ಇಡಿಯಾದ ಅರ್ಥಪೂರ್ಣ ಆಕೃತಿ, ಘಟಕಗಳನ್ನು ನಾವು ಕಲಿಯುತ್ತೇವೆಂದು ಹೇಳುತ್ತಾರೆ. ಈ ಅರ್ಥಪೂರ್ಣ ಆಕೃತಿಗೆ ಜರ್ಮನ್ ಭಾಷೆಯಲ್ಲಿ 'ಗೆಸ್ಟಾಲ್ಟ್' ಎಂಬ ಪದವನ್ನು ಉಪಯೋಗಿಸುತ್ತಾರೆ. ಆದ್ದರಿಂದ ಕಲಿಕೆಯ ಈ ನಿಲುವನ್ನು ಗೆಸ್ಟಾಲ್ಟ್ ಸಿದ್ಧಾಂತ ಎಂದು ಕರೆಯಲಾಗಿದೆ. ಟೋಲ್‌ಮನ್ ಮತ್ತು ಬ್ರೂನರ್, ಆಸುಬೆಲ್ ಸಂಜ್ಞಾನಾತ್ಮಕ ನಿಲುವಿನಿಂದ ಕಲಿಕೆಯ ಸಿದ್ಧಾಂತಗಳನ್ನು ಮಂಡಿಸಿದ್ದಾರೆ.

(iii) ಬಾಂಡುರ ಮತ್ತು ವಾಲ್ಟರ್ಸ್ ಕಲಿಕೆಯನ್ನು ಸಾಮಾಜಿಕ ಪ್ರಕ್ರಿಯೆಯ ರೂಪದಲ್ಲಿ ವಿವರಿಸಿದ್ದಾರೆ. ಮಗು ಮಾದರಿ ವ್ಯಕ್ತಿಯ ವರ್ತನೆಯನ್ನು ಅವಲೋಕಿಸಿ, ಅನುಕರಣೆ ಮಾಡಿ ಕಲಿಯುತ್ತದೆ ಎಂಬುದು ಇವರ ನಿಲುವು. ಈ ಸಿದ್ಧಾಂತವನ್ನು ಸಾಮಾಜಿಕ ಕಲಿಕೆ ಸಿದ್ಧಾಂತ ಎಂದು ಕರೆಯಬಹುದು.

(iv) ಕಾರ್ಲ್‌ರೋಜರ್ಸ್ ಮಾನವತಾವಾದಿ ಮನೋವಿಜ್ಞಾನದ ದೃಷ್ಟಿಯಿಂದ ಕಲಿಕೆಯನ್ನು ವಿವರಿಸುತ್ತಾನೆ. ಇವನ ವಿವರಣೆಯನ್ನು ಕಲಿಕೆಯ ವ್ಯವಸ್ಥಿತ ಸಿದ್ಧಾಂತವೆಂದು ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ ರೋಜರ್ಸ್ ಕಲಿಕೆಯ ಪ್ರಕ್ರಿಯೆಯನ್ನು ವಿವರಿಸುವುದಕ್ಕಿಂತ ಹೆಚ್ಚಾಗಿ ಕಲಿಕೆ ಯಾವ ಯಾವ ಪರಿಸ್ಥಿತಿಗಳಲ್ಲಿ ಚೆನ್ನಾಗಿ ಆಗುತ್ತದೆ, ಯಾವ ಕಲಿಕೆ ವ್ಯಕ್ತಿಯ ದೃಷ್ಟಿಯಿಂದ ಮಹತ್ವಪೂರ್ಣವೆನ್ನಿಸುತ್ತದೆ ಎಂಬುದಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ.

ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ತಂತ್ರಜ್ಞಾನಗಳು (Information Technology and Communication Technology) ವಿಕಾಸಗೊಂಡ ನಂತರ ಇವುಗಳ ಸಹಾಯದಿಂದ ಮತ್ತು ಮಾಹಿತಿ ಸಂಸ್ಕರಣದ (Information Processing) ತತ್ವಗಳ ದೃಷ್ಟಿಯಿಂದ ಕಲಿಕೆಯ ಪ್ರಕ್ರಿಯೆಗಳನ್ನು ವಿವರಿಸುವ ಪ್ರಯತ್ನ ನಡೆದಿದೆ. ಈ ದಿಶೆಯಲ್ಲಿ ಅನೇಕ ಮಾದರಿಗಳನ್ನು ಸೀಮಿತ ವ್ಯಾಪ್ತಿಯ ಸಿದ್ಧಾಂತಗಳನ್ನು ಪ್ರತಿಪಾದಿಸಲಾಗಿದೆ. ಇವುಗಳನ್ನು ಮಾಹಿತಿ ಸಂಸ್ಕರಣ ಸಿದ್ಧಾಂತಗಳು (Information Processing Theories) ಎಂದು ಹೇಳುತ್ತಾರೆ.

ರಾಬರ್ಟ್‌ಗ್ಯಾನ್ ಎಂಬುವನು ಕಲಿಕೆಯ ಸ್ವರೂಪವನ್ನು ವಿವರಿಸಲು ಯಾವುದೇ ನಿರ್ದಿಷ್ಟ ಸೈದ್ಧಾಂತಿಕ ನಿಲುವನ್ನು ತಳೆಯದೆ ಎಲ್ಲಾ ಮುಖ್ಯ ಕಲಿಕಾ ಸಿದ್ಧಾಂತಗಳ ಸಾರವನ್ನು ಗ್ರಹಿಸಿ ತನ್ನದೇ ಆದ ಕಲಿಕೆಯ ಮಾದರಿಯನ್ನು ವಿಕಾಸಗೊಳಿಸಿದ್ದಾನೆ.

ಪ್ರತಿಯೊಂದು ಕಲಿಕೆಯ ಸಿದ್ಧಾಂತವು ತನ್ನದೇ ಆದ ರೀತಿಯಲ್ಲಿ ಕಲಿಕೆಯನ್ನು ಪರಿಭಾಷಿಸುತ್ತದೆ. ಕಲಿಕೆಯ ಸ್ವರೂಪವನ್ನು ಅದರಲ್ಲಿ ಒಳಗೊಳ್ಳುವ ಪ್ರಕ್ರಿಯೆಗಳನ್ನು ಪ್ರಭಾವ ಬೀರುವ ಕಾರಣಾಂಶಗಳನ್ನು ವಿವರಿಸುತ್ತದೆ. ತನ್ನದೇ ಆದ ವಿಶಿಷ್ಟ ಪರಿಕಲ್ಪನೆಗಳನ್ನು ಉಪಯೋಗಿಸಿ, ಕಲಿಕೆಯ ತತ್ವ/ನಿಯಮಗಳನ್ನು ರೂಪಿಸುತ್ತದೆ.

ವ್ಯವಸ್ಥಿತ ರೀತಿಯಲ್ಲಿ ಕಲಿಕೆಯ ಸ್ವರೂಪವನ್ನು ವಿವರಿಸುವ ಅದರ ಬಗ್ಗೆ ಒಂದು ಸಿದ್ಧಾಂತವನ್ನು ಪ್ರತಿಪಾದಿಸುವ ಮೊದಲ ಪ್ರಯತ್ನವನ್ನು ನ್ಯೂಯಾರ್ಕಿನಲ್ಲಿದ್ದ ಕೊಲಂಬಿಯ ವಿಶ್ವವಿದ್ಯಾನಿಲಯದ ಪ್ರಸಿದ್ಧ ಟೀಚರ್ಸ್ ಕಾಲೇಜಿನ ಮನೋವಿಜ್ಞಾನಿ ಎಡ್ವರ್ಡ್‌ಲೀ ಥಾರಂಡೈಕ್ (1874–1949) ಮಾಡಿದನು. ಇವನು ತನ್ನ ಬಂಧವಾದಿ (Connectionnism) ಸಿದ್ಧಾಂತವನ್ನು 1898ರಲ್ಲಿ ತನ್ನ Animal Intelligence ಎನ್ನುವ ಪುಸ್ತಕದಲ್ಲಿ ಪ್ರತಿಪಾದಿಸಿದನು. ಥಾರಂಡೈಕ್ ಹೊರಗಡೆ ಕಾಣುವಂತಿರುವ ಪಟ್ಟಿಗಳಿಂದ ಕೂಡಿದ ಪೆಟ್ಟಿಗೆಯಲ್ಲಿ ಹಸಿವಿನಿಂದ ಇರುವ ಬೆಕ್ಕನ್ನು ಇಟ್ಟು ಪೆಟ್ಟಿಗೆಯ ಹೊರಗೆ ಮೀನನ್ನು ಬೆಕ್ಕಿಗೆ ಕಾಣುವಂತೆ ಇಟ್ಟನು. ಈ ಪೆಟ್ಟಿಗೆಯ ಬಾಗಿಲನ್ನು ಒಳಗಡೆ ಇರುವ ಗೂಟವನ್ನು ಒತ್ತುವುದರಿಂದ ತೆಗೆಯಬಹುದಾಗಿತ್ತು. ಬೆಕ್ಕು ಪ್ರಾರಂಭದಲ್ಲಿ ಯಾದೃಚ್ಛಿಕವಾಗಿ ಚಟುವಟಿಕೆ ತೋರಿಸುತ್ತಾ ಒಮ್ಮೆ ಆಕಸ್ಮಾತ್ ಆಗಿ ಗೂಟವನ್ನು ಒತ್ತಿತು. ಆಗ ಬಾಗಿಲು ತೆರೆದುಕೊಂಡು ಬೆಕ್ಕು ಹೊರಗೆ ಬಂದು ಮೀನನ್ನು ತಿಂದಿತು. ಇದೇ ಪ್ರಯೋಗವನ್ನು ಅನೇಕ ಸಲ ಪುನರಾವರ್ತಿಸಿದಾಗಲೂ ಯಾದೃಚ್ಛಿಕ ಚಟುವಟಿಕೆಗಳ ನಂತರ ಅಕಸ್ಮಾತ್ ಆಗಿ ಪ್ರಾಣಿ ಗೂಟವನ್ನು ಒತ್ತಿ ಹೊರಗೆ ಬಂದು ಆಹಾರವನ್ನು ಸೇವಿಸಿತು. ಆದರೆ ಪ್ರಯತ್ನಗಳು ಮುಂದುವರಿದಂತೆ ಕ್ರಮೇಣ ಯಾದೃಚ್ಛಿಕ ಚಟುವಟಿಕೆಗಳು ಕಡಿಮೆಯಾಗಿ ಬೆಕ್ಕು ನೇರವಾಗಿ ಬಂದು ಗೂಟವನ್ನು ಒತ್ತಿ ಆಹಾರವನ್ನು ತೆಗೆದುಕೊಂಡಿತು. ಇದರಿಂದ ಥಾರಂಡೈಕ್ ಪ್ರಾಣಿ ಅನೇಕ ಪ್ರಯತ್ನಗಳಲ್ಲಿ ತಪ್ಪುಗಳನ್ನು ಮಾಡಿದರೂ ಕ್ರಮೇಣ ಆ ತಪ್ಪುಗಳನ್ನು ಕಡಿಮೆ ಮಾಡುತ್ತಾ ಬಂದು ಕಡೆಗೆ ಸರಿಯಾದ ಅನುಕ್ರಿಯೆಯನ್ನು (ವರ್ತನೆಯನ್ನು) ಕಲಿತುಕೊಂಡಿತು ಎಂದು ತರ್ಕಿಸಿ, ಈ ರೀತಿಯ ಕಲಿಕೆಯನ್ನು ಪ್ರಯತ್ನ–ದೋಷ ಕಲಿಕೆ (Trial and Error learning) ಎಂದು ಕರೆದನು.

ಪ್ರಯತ್ನ ದೋಷ ಕಲಿಕೆಯ ಮುಖ್ಯಾಂಶಗಳು ಹೀಗಿವೆ. ಜೈವಿಕ ಅಗತ್ಯದ ಸ್ಥಿತಿಯಲ್ಲಿರುವುದರಿಂದ ಅದರಲ್ಲಿ ಚಟುವಟಿಕೆಯ ಪ್ರೇರಣೆ ಉಂಟಾಗುತ್ತದೆ. ಜೀವಿ ಸಮಸ್ಯಾ ಸ್ಥಿತಿಯಲ್ಲಿ (ಬಂಧನದಲ್ಲಿ) ಇರುತ್ತದೆ. ಅಗತ್ಯದ ಪರಿಹಾರ ಅಥವಾ ಗುರಿ (ಪಂಜರದ ಹೊರಗೆ ಇಟ್ಟಿರುವ ಮೀನು) ಗೋಚರವಾಗುತ್ತಿರುತ್ತದೆ. ಆದರೆ ಆ ಗುರಿಯನ್ನು ತಲುಪುವ ಮಾರ್ಗ ಸ್ಪಷ್ಟವಾಗಿರುವುದಿಲ್ಲ. ಅಗತ್ಯದಿಂದ ಪ್ರೇರಿತವಾಗಿರುವುದರಿಂದ ಜೀವಿಯ ಪ್ರವೃತ್ತಿ ಗುರಿಯೆಡೆಗೆ ಇರುತ್ತದೆ. ಜೀವಿ ಗುರಿ ತಲುಪಲು ಅನೇಕ ರೀತಿಗಳಲ್ಲಿ ಪ್ರಯತ್ನಿಸಿ, ವಿಫಲವಾಗುತ್ತಿರುತ್ತದೆ. ಹೀಗೆ ಪ್ರಯತ್ನಿಸುತ್ತಿರುವಾಗ ಆಕಸ್ಮಿಕವಾಗಿ ಸರಿಯಾದ ಮಾರ್ಗ ದೊರೆತು ಜೀವಿ ಅದಕ್ಕೂ

Digitised by Bharatavani, CIIL

ಪ್ರಯತ್ನಿಸಿ ಸಫಲತೆಯನ್ನು ಪಡೆಯುತ್ತದೆ. ಈ ರೀತಿಯ ಪ್ರಯತ್ನ ತಪ್ಪುಗಳ ಪುನರಾವರ್ತನೆಯಲ್ಲಿ ಜೀವಿ ಸರಿಯಾದ ವರ್ತನೆಯನ್ನು ಕಲಿತುಕೊಳ್ಳುತ್ತದೆ.

ಈ ರೀತಿಯ ಸರಳ ಪ್ರಯೋಗದ ಆಧಾರದ ಮೇಲೆ ಥಾರಂಡೈಕ್ ತನ್ನ ಪ್ರಸಿದ್ಧವಾದ ಕಲಿಕೆಯ ನಿಯಮಗಳನ್ನು (Laws of learning) ಗಳನ್ನು ನಿರೂಪಿಸಿದನು.

ಮೊದಲನೆಯ ಅಭ್ಯಾಸ ನಿಯಮ (Law of Exercise) ಪ್ರಯತ್ನಗಳ ಪುನರಾವರ್ತನೆಗೆ (ಅಭ್ಯಾಸಕ್ಕೆ) ಸಂಬಂಧಿಸಿದೆ. ಪ್ರಚೋದನೆ ಅನುಕ್ರಿಯೆಗಳ ಬಂಧವನ್ನು (S-R bond) ಪದೇ ಪದೇ ಅಭ್ಯಾಸ ಮಾಡುವುದರಿಂದ ಆ ಬಂಧ ದೃಢವಾಗುತ್ತದೆ. ಸೈಕಲ್ ಸವಾರಿ, ಈಜುವುದು, ಟೈಪಿಂಗ್ ಮುಂತಾದ ಗತ್ಯಾತ್ಮಕ ಕೌಶಲಗಳನ್ನು ಕಲಿಯಲು ಅವುಗಳನ್ನು ಚೆನ್ನಾಗಿ ಅಭ್ಯಾಸ ಮಾಡಬೇಕೆನ್ನುವುದು ಸರ್ವವಿದಿತ. ಕೌಶಲಗಳ ಕಲಿಕೆಗೆ ಈ ನಿಯಮ ಹೆಚ್ಚಾಗಿ ಅನ್ವಯಿಸುತ್ತದೆ. ಅಭ್ಯಾಸದಿಂದ ಕೌಶಲಗಳ ಅಭಿವ್ಯಕ್ತಿ ಸುಲಭವಾಗುವುದಲ್ಲದೇ, ಸುಲಲಿತವಾಗುತ್ತದೆ. ಹಿಂದಿನ ಕಾಲದಲ್ಲಿ, ಬೋಧನೆಯಲ್ಲಿ ಉಪಯೋಗಿಸುತ್ತಿದ್ದ ಅಭ್ಯಾಸ (Rehearsal) ಮತ್ತು ಪುನರುಚ್ಚಾರಣೆ (Recitation)ಗಳಲ್ಲಿ ಈ ನಿಯಮ ಅಡಗಿದೆ. ಅಭ್ಯಾಸ ಪರಿಪೂರ್ಣತೆಗೆ ಕಾರಣವಾಗುತ್ತದೆ ಎಂಬ ಹೇಳಿಕೆಯೇ ಇದೆ.

ಎರಡನೆ ನಿಯಮವಾದ ಪರಿಣಾಮ ನಿಯಮ (Law of Effect) ಅಭ್ಯಾಸ ಮಾಡುವಾಗ ಕಲಿಯುವ ಅನುಕ್ರಿಯೆಯಿಂದ ಜೀವಿಯ ಮೇಲೆ ಉಂಟಾಗುವ ಪರಿಣಾಮಕ್ಕೆ (ಹಿತಕರ ಅಥವಾ ಅಹಿತಕರ) ಸಂಬಂಧಿಸಿದೆ. ಈ ನಿಯಮ ಸಫಲ ಕಾರ್ಯಕ್ಕೆ (ವರ್ತನೆಗೆ) ಸೂಕ್ತ ಬಹುಮಾನದ ಅಗತ್ಯವನ್ನು ಹೇಳುತ್ತದೆ. ಜೀವಿಯ ಅನುಕ್ರಿಯೆಯಿಂದ ಅದಕ್ಕೆ ಬಹುಮಾನ ದೊರೆತು ಅದರ ಜೈವಿಕ ಅಗತ್ಯ ತೃಪ್ತಿಗೊಂಡಾಗ ಆ ಅನುಕ್ರಿಯೆ ಪ್ರಬಲವಾಗಿ ಅದು ಪುನಃ ಉಂಟಾಗುವ ಸಾಧ್ಯತೆ ಹೆಚ್ಚುತ್ತದೆ. ಅಂದರೆ ಹಿತಕರವಾದ ಪರಿಣಾಮ ಪ್ರಚೋದನೆ–ಅನುಕ್ರಿಯೆಯ ಬಂಧವನ್ನು (A-R band) ಪ್ರಬಲಗೊಳಿಸುತ್ತದೆ. ಇದಕ್ಕೆ ವಿರುದ್ಧವಾಗಿ ಅನುಕ್ರಿಯೆಗಳ ಪರಿಣಾಮ ಅಹಿತಕರವಾಗಿದ್ದಲ್ಲಿ ಅಂದರೆ ಅನುಕ್ರಿಯೆಯ ನಂತರ ಬಹುಮಾನ ದೊರೆಯದಿದ್ದಲ್ಲಿ ಅಥವಾ ತೀರಾ ವಿಳಂಬವಾಗಿ ದೊರೆತಲ್ಲಿ ಅಥವಾ ದೈಹಿಕ ದಂಡನೆ ದೊರೆತಲ್ಲಿ ಅಹಿತಕರ ಪರಿಣಾಮ ಉಂಟಾಗಿ ಪ್ರಚೋದನೆ ಅನುಕ್ರಿಯಾ ಬಂಧ ದುರ್ಬಲಗೊಳ್ಳುತ್ತಾ ಹೋಗುತ್ತದೆ. ಬಹುಮಾನ ಪ್ರೋತ್ಸಾಹಿಕವಾಗಿ (Incentive) ಕೆಲಸ ಮಾಡಿ ವರ್ತನೆಯ ಪ್ರೇರಣೆಯನ್ನು ಹೆಚ್ಚಿಸುತ್ತದೆ.

ಮೂರನೆಯ ನಿಯಮವಾದ ಸಿದ್ಧತಾ ನಿಯಮ (Law of Readiness) ಕಲಿಕೆಯ ಕಾರ್ಯಕ್ಕೆ ಜೀವಿಯ ಸಿದ್ಧತೆಗೆ ಸಂಬಂಧಿಸಿದೆ. ಜೀವಿ ಒಂದು ನಿರ್ದಿಷ್ಟ ರೀತಿಯಲ್ಲಿ ಅನುಕ್ರಿಯೆ (ವರ್ತನೆ) ತೋರಿಸಲು ಎಲ್ಲಾ ರೀತಿಗಳಲ್ಲಿ ಸಿದ್ಧವಾಗಿದ್ದರೆ ಆ ಅನುಕ್ರಿಯೆ ತೋರಿಸುವುದು ಜೀವಿಗೆ ತೃಪ್ತಿ ನೀಡುತ್ತದೆ. ಜೀವಿ ಆ ರೀತಿ ಸಿದ್ಧವಿಲ್ಲದಿದ್ದಲ್ಲಿ ಅನುಕ್ರಿಯೆ ತೋರಿಸುವುದು ಬೇಸರಿಕೆಯನ್ನುಂಟು ಮಾಡುತ್ತದೆ. ಈ ಸಿದ್ಧತೆಯನ್ನು ಮಾಗುವಿಕೆ (Ripeness) ಎಂದು ಹೇಳಬಹುದು. ನಂತರದಲ್ಲಿ ಶಿಕ್ಷಣ ತಜ್ಞರು ಪ್ರತಿಪಾದಿಸಿದ ಕಲಿಕಾ ಸಿದ್ಧತೆ (Learning Readiness) ಪರಿಕಲ್ಪನೆಯಲ್ಲಿ ಈ ನಿಯಮ ಅಂತರ್ಗತವಾಗಿದೆ. ಕಲಿಕಾ ಸಿದ್ಧತೆಯಲ್ಲಿ ಮೂರು ರೀತಿಯ ಸಿದ್ಧತೆಗಳು ಅಡಕವಾಗಿವೆ. ಮಗು ಏನನ್ನಾದರೂ ಕಲಿಯಲು ಅದಕ್ಕೆ ಬೇಕಾದ ಪರಿಪಕ್ವತೆಯನ್ನು ಹೊಂದಿರಬೇಕು, ಇದು ಜೈವಿಕ ವಿಕಾಸದ ಅಂಶವಾಗಿದೆ. ಇದೇ ಪರಿಪಕ್ವನ ಸಿದ್ಧತೆ (Maturational Readiness). ಮಗು ಸೂಕ್ತವಾದ ಮಾನಸಿಕ ಮಟ್ಟವನ್ನು ಹೊಂದಿರಬೇಕು. ಇದು ಮಾನಸಿಕ ಸಿದ್ಧತೆ (Mental Realiners). ಮಗು ಕಲಿಕಾ ಸನ್ನಿವೇಶದ ಕಡೆಗೆ ಗಮನ ನೀಡದಿದ್ದಲ್ಲಿ ಕಲಿಕೆ ಸಫಲವಾಗುವುದಿಲ್ಲ, ಇದು ಅವಧಾನ ಸಿದ್ಧತೆ (Attentional Readiness). ಯಶಸ್ವಿ ಕಲಿಕೆಗೆ ಈ ಮೂರು ರೀತಿಯ ಸಿದ್ಧತೆಗಳು ಬೇಕಾಗುತ್ತವೆ.

ಥಾರಂಡೈಕ್ 1930ರ ನಂತರ ತನ್ನ ಸಿದ್ಧಾಂತದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಕೆಲವು ಉಪನಿಯಮಗಳನ್ನು ನಿರೂಪಿಸಿದನು. ಅನುಕ್ರಿಯೆಯ ಪರಿಣಾಮ ಪ್ರಚೋದನೆಯ ಅಕ್ಕ ಪಕ್ಕದ ಪ್ರಚೋದನೆಗಳಿಗೂ ವಿಸ್ತರಿಸುತ್ತದೆ ಎಂಬ ಹರಡುವಿಕೆಯ ನಿಯಮವನ್ನು (Spread of Effect) ನಿರೂಪಿಸಿದನು. ಅಂಶಗಳ ಪೂರ್ವ–ಸತ್ವದ ನಿಯಮ (Law of pre-potency of Elements) ಕಲಿಕಾ ಸನ್ನಿವೇಶದಲ್ಲಿರುವ ಎಲ್ಲಾ ಅಂಶಗಳು ಅನುಕ್ರಿಯೆಯನ್ನುಂಟು ಮಾಡುವುದರಲ್ಲಿ ಒಂದೇ ರೀತಿಯ ಸತ್ವ ಹೊಂದಿರುವುದಿಲ್ಲ. ಕೆಲವು ಅಂಶಗಳು ಹೆಚ್ಚು ಸತ್ವಯುವಾಗಿದ್ದು ಅನುಕ್ರಿಯೆಯನ್ನು ಉಂಟುಮಾಡುತ್ತವೆ ಎಂದು ಹೇಳುತ್ತಾರೆ. ಕಲಿಕಾ ಸನ್ನಿವೇಶದಲ್ಲಿ ಜೀವಿ ಗುರಿ ತಲುಪಲು ಅನೇಕ ರೀತಿಯ ವರ್ತನೆಗಳನ್ನು ತೋರಿಸಿ, ಅವುಗಳಲ್ಲಿ ಯಾವುದಾದರೊಂದು ಸಫಲವಾಗುತ್ತದೆ ಎಂದು ಬಹು–ಅನುಕ್ರಿಯಾ ನಿಯಮ (Law of Multiple Response)ಸೂಚಿಸುತ್ತದೆ. ಒಂದು ಕಲಿಕಾ ಸನ್ನಿವೇಶದಲ್ಲಿ ಸಫಲವಾದ ಅನುಕ್ರಿಯೆ ಮತ್ತೊಂದು ಹೆಚ್ಚು ಕಡಿಮೆ ಅದೇ ರೀತಿಯ ಸನ್ನಿವೇಶದಲ್ಲಿ ವ್ಯಕ್ತವಾಗುವ ಸಾಧ್ಯತೆ ಇರುತ್ತದೆ ಎಂದು ಸಾದೃಶ್ಯದಿಂದ ಅನುಕ್ರಿಯೆ ನಿಯಮ (Response by Anology) ನಿರೂಪಿಸುತ್ತದೆ. ಒಂದು ಪ್ರಚೋದನೆಯಿಂದ ಉಂಟು ಮಾಡಿದ ಅನುಕ್ರಿಯೆಯನ್ನು ಆ ಪ್ರಚೋದನೆಯೊಂದಿಗೆ ಮತ್ತೊಂದು ಪ್ರಚೋದನೆಯನ್ನು ಜೊತೆಮಾಡಿ ಅನೇಕ ಸಲ ಉಪಯೋಗಿಸಿದಲ್ಲಿ ಮೊದಲನೆ ಪ್ರಚೋದನೆಗೆ ಉಂಟಾಗುವ ಅನುಕ್ರಿಯೆ ಎರಡನೆ ಪ್ರಚೋದನೆಗೂ ಅವುಗಳ ಸಾಹಚರ್ಯದಿಂದಾಗಿ ಉಂಟಾಗುತ್ತದೆ. ಈ ನಿಯಮವೇ ಸಾಹಚರ್ಯ ಪಲ್ಲಟ ನಿಯಮ (Law of Associative Shifting). ಈ ನಿಯಮ ಪ್ರಾವ್‌ಲೋವನ ಅಭಿಬಾಜ್ಯ ಅನುಬಂಧದ ತತ್ವವನ್ನು ಒಳಗೊಂಡಿದೆ.

ಥಾರಂಡೈಕ್ ಪ್ರಯತ್ನ–ದೋಷ ಕಲಿಕೆಯನ್ನು ಬಂಧವಾದಿ ನಿಲುವಿನಿಂದ ವಿವರಿಸುತ್ತದೆ. ಈ ನಿಲುವಿನ ಪ್ರಕಾರ ಮೆದುಳಿನಲ್ಲಿ

Digitised by Bharatavani, CIIL

ಪ್ರಚೋದನೆ–ಅನುಕ್ರಿಯೆಗಳ ನಡುವೆ ನರಕೋಶಾತ್ಮಕ ಬಂಧ (Connection) ಏರ್ಪಟ್ಟು ಅಭ್ಯಾಸ ಮತ್ತು ಪರಿಣಾಮಗಳಿಂದಾಗಿ ಅದು ಪ್ರಬಲಗೊಳ್ಳುತ್ತದೆ. ದೋಷಯುಕ್ತ ಬಂಧಗಳು ದುರ್ಬಲವಾಗಿ ನಶಿಸುತ್ತವೆ. ಥಾರಂಡೈಕ್‌ನ ಪ್ರಕಾರ ಸರಿಯಾದ ಅನುಕ್ರಿಯೆ ಗಳು ಮೆದುಳಿನಲ್ಲಿ ಅಚ್ಚು ಒತ್ತಲ್ಪಡುತ್ತವೆ(Stampedin) ಮತ್ತು ತಪ್ಪಾದ ಅನುಕ್ರಿಯೆಗಳು ನಶಿಸುತ್ತವೆ (Stampedout). ಸರಿಯಾದ ಅನುಕ್ರಿಯೆಗಳು ಆಯ್ಕೆಯಾಗುತ್ತವೆ (Selecting) ಮತ್ತು ಪ್ರಚೋದನೆಯೊಂದಿಗೆ ಬಂಧಿಸಲ್ಪಡುತ್ತವೆ (Connecting). ಇದರಿಂದ ಕಲಿಕೆ ಉಂಟಾಗುತ್ತದೆ. ಆದ್ದರಿಂದ ಪ್ರಯತ್ನ–ದೋಷದಿಂದ ಕಲಿಕೆ ಆಗುತ್ತದೆ ಎಂದು ಹೇಳುವುದಕ್ಕಿಂತ ಅನುಕ್ರಿಯೆಯ ಆಯ್ಕೆ ಮತ್ತು ಬಂಧದಿಂದ ಕಲಿಕೆ ಆಗುತ್ತದೆ ಎಂದು ಪರಿಗಣಿಸುವುದು ಹೆಚ್ಚು ಸೂಕ್ತವಾದ ವಿವರಣೆಯಾಗುತ್ತದೆ.

ನಾಯಿಗಳ ಜೀರ್ಣಶಕ್ತಿ ಬಗ್ಗೆ ಮಾಡಿದ ಪ್ರಯೋಗಗಳಿಗೆ ನೋಬಲ್ ಪ್ರಶಸ್ತಿ ಪಡೆದ ರಷ್ಯಾದ ಶರೀರಶಾಸ್ತ್ರ (Physiology) ವಿಜ್ಞಾನಿ ಇವಾನ್ ಪೆಟ್ರೋವಿಚ್ ಪ್ಯಾವ್‌ಲೋವ್(1849–1936) ತನ್ನ ಪ್ರಯೋಗಗಳ ಅವಧಿಯಲ್ಲಿ ಪ್ರಯೋಗಕ್ಕೆ ತಾತ್ಕಾಲಿಕವಾಗಿ ಬಂಧಿಸಿಟ್ಟಿದ್ದ ನಾಯಿ ಆಹಾರ ಬಾಯಿಯಲ್ಲಿದ್ದಾಗ ಜೊಲ್ಲು ಸುರಿಸುವುದಲ್ಲದೆ, ನಂತರ ಆಹಾರ ತರುವ ಸೇವಕರ ಹೆಜ್ಜೆ ಶಬ್ದಕ್ಕೂ ಜೊಲ್ಲು ಸುರಿಸುವುದನ್ನು ಗಮನಿಸಿದನು. ಈ ಘಟನೆ ಪ್ಯಾವ್‌ಲೋವನ ಕುತೂಹಲವನ್ನು ಕೆರಳಿಸಿತು. ಅವನು ಮನೋವಿಜ್ಞಾನಿಯಲ್ಲದಿದ್ದರೂ ಈ ಘಟನೆಯ ಕಡೆಗೆ ಗಮನ ಹರಿಸಿ, ತನ್ನ ಪ್ರಯೋಗದ ಮೂಲ ಉದ್ದೇಶವನ್ನು ಬದಿಗಿರಿಸಿ ಈ ಕುತೂಹಲಕಾರಿ ಘಟನೆಯ ಬಗ್ಗೆ ಅನೇಕ ಪ್ರಯೋಗಗಳನ್ನು ನಡೆಸಿ ಕಲಿಕೆಯ ಒಂದು ವಿಧಾನವನ್ನು ವಿವರಿಸುವ ಒಂದು ಸಿದ್ಧಾಂತವನ್ನು ರೂಪಿಸಿದನು. ಈ ಸಿದ್ಧಾಂತವನ್ನು ಅನುಬಂಧನ ಅಥವಾ ಸೋಪಾಧಿಕ ಕಲಿಕೆಯ ಸಿದ್ಧಾಂತ (Theory of Conditioned learning) ಎಂದು ಕರೆಯಲಾಗಿದೆ. ಪ್ಯಾವ್‌ಲೋವ್ ಈ ರೀತಿಯ ಪ್ರಕ್ರಿಯೆಯನ್ನು ಮೊದಲು ಗಮನಿಸಿ ವಿವರಿಸಿದ್ದರಿಂದ ಈ ವಿಧದ ಕಲಿಕೆಯನ್ನು ಅಭಿಜಾತ್ಯ ಅನುಬಂಧನ ಅಥವಾ ಅನುಕ್ರಿಯಾತ್ಮಕ ಅನುಬಂಧನ (Classical or Respondent Conditioning) ಎಂದೂ ಹೇಳುತ್ತಾರೆ.

ಅನುಬಂಧನ ಕಲಿಕೆಯನ್ನು ಅರ್ಥಮಾಡಿಕೊಳ್ಳಲು ಕೆಲವು ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಬೇಕು. ಆಹಾರಕ್ಕೂ ಜೊಲ್ಲು ಸುರಿಸುವಿಕೆಗೂ ನೇರವಾದ ಸಹಜ ಸಂಬಂಧವಿದೆ. ಇದು ಜೈವಿಕ ಪ್ರಕ್ರಿಯೆಯಾಗಿದೆ. ಆದರೆ ನಾಯಿ ಹೆಜ್ಜೆ ಶಬ್ದಕ್ಕೆ (ಪ್ಯಾವ್‌ಲೋವ್ ನಂತರದಲ್ಲಿ ಉಪಯೋಗಿಸಿದ ಗಂಟೆ ಶಬ್ದಕ್ಕೆ) ಜೊಲ್ಲು ಸುರಿಸುವುದು ಸಹಜ ಪ್ರಕ್ರಿಯೆಯಲ್ಲ. ಇವುಗಳ ನಡುವಣ ಸಂಬಂಧ ಕಲಿಕೆಯಿಂದ ಉಂಟಾಗಿದೆ ಎಂದು ಪ್ಯಾವ್‌ಲೋವ್ ಗುರ್ತಿಸಿದ. ಆಹಾರಕ್ಕೆ ಜೊಲ್ಲು ಸುರಿಸುವುದರಲ್ಲಿನ ಪ್ರಚೋದನೆಗೆ (ಆಹಾರ) ಅನನುಬಂಧಿತ ಪ್ರಚೋದನೆಯೆಂದೂ(Un-Conditioned Stimulus-US), ಅದಕ್ಕೆ ನಾಯಿ ತೋರಿಸಿದ ಅನುಕ್ರಿಯೆಗೆ ಅನನುಬಂಧಿತ ಅನುಕ್ರಿಯೆ (Unconditioned Response-UR) ಎಂದೂ ಹೇಳಲಾಗುತ್ತದೆ. ನಾಯಿ ಗಂಟೆ ಶಬ್ದಕ್ಕೆ ಜೊಲ್ಲು ಸುರಿಸುವ ಅಸಹಜ ಪ್ರಕ್ರಿಯೆಯಲ್ಲಿನ ಪ್ರಚೋದನೆಗೆ (ಆಹಾರ) ಅನುಬಂಧಿತ ಪ್ರಚೋದನೆ (Conditioned Stimulus-CS) ಎಂದೂ, ಅದಕ್ಕೆ ಉಂಟಾದ ಅನುಕ್ರಿಯೆಯನ್ನು ಅನುಬಂಧಿತ ಅನುಕ್ರಿಯೆ (Conditioned Response-CR) ಎಂದೂ ಹೇಳಲಾಗುತ್ತದೆ. ಇವುಗಳ ನಡುವಣ ಅನುಬಂಧನ ಕಲಿಕೆಯಿಂದ ಉಂಟಾದುದಾಗಿದೆ. ಪ್ರಚೋದನೆಯಾದ ಆಹಾರ ಅದರ ಸಹಜ ಅನುಕ್ರಿಯೆಗೆ (ಜೊಲ್ಲು ಸುರಿಸುವಿಕೆಗೆ) ಸಂಬಂಧಿಸಿದಂತೆ ಅನನುಬಂಧಿತ ಪ್ರಚೋದನೆ (US) ಎನಿಸಿದರೆ, ಅದೇ ಪ್ರಚೋದನೆ ಅಸಹಜ ಅನುಕ್ರಿಯೆಯಾದ ಗಂಟೆ ಶಬ್ದಕ್ಕೆ ಸಂಬಂಧಿಸಿದಂತೆ ಅನುಬಂಧಿತ ಪ್ರಚೋದನೆ (CS) ಎನಿಸುತ್ತದೆ. ಅಂದರೆ ಅನುಬಂಧನ ಕಲಿಕೆಯಲ್ಲಿ ಒಂದು ಸಹಜ ಪ್ರಚೋದನೆಗೂ (ಆಹಾರ) ಮತ್ತೊಂದು ಅಸಹಜ ಅನುಕ್ರಿಯೆಯ ನಡುವೆ ಅನುಬಂಧನ ಉಂಟಾಗುತ್ತದೆ. ಆದ್ದರಿಂದ ಅನುಬಂಧಿತ ಪ್ರಚೋದನೆಗೂ (CS) ಮತ್ತು ಅನುಬಂಧಿತ ಅನುಕ್ರಿಯೆಗೂ ನಡುವೆ ಉಂಟಾಗುವ ಬಂಧದಿಂದ ಉಂಟಾಗುವ ಕಲಿಕೆಯನ್ನು ಅನುಬಂಧನ ಕಲಿಕೆ (Conditioned Learning) ಎಂದು ವ್ಯಾಖ್ಯಾನಿಸಲಾಗಿದೆ. ಈ ರೀತಿಯ ಕಲಿಕೆ ಕೆಲವು ಉಪಾಧಿ ಅಥವಾ ಷರತ್ತುಗಳಿಗೆ (Conditions) ಒಳಪಟ್ಟು ಆಗುವುದರಿಂದ ಇದನ್ನು ಸೋಪಾಧಿಕ ಕಲಿಕೆ (Conditioned Learning)ಎಂದೂ ಕರೆಯಬಹುದು. ಈ ಕಲಿಕೆಯ ಪ್ರಕ್ರಿಯೆಯನ್ನು ಈ ಕೆಳಗಿನ ನಕ್ಷೆ ಸ್ಪಷ್ಟಪಡಿಸುತ್ತದೆ.

**ಅನುಬಂಧನಕ್ಕೆ ಮೊದಲು**

S-1 ಅನನುಬಂಧಿತ ಪ್ರಚೋದನೆ ಆಹಾರ(US)-> ಅನನುಬಂಧಿತ ಅನುಕ್ರಿಯೆ ಜೊಲ್ಲು(UR)

S-2 ಅನನುಬಂಧಿತ ಪ್ರಚೋದನೆ– ಗಂಟೆ ಶಬ್ದ (US)-> ಅನನುಬಂಧಿತ ಅನುಕ್ರಿಯೆ–ಕಿವಿ ನಿಮಿರಿಸುವುದು (UR)

**ಅನುಬಂಧನದ ಅವಧಿಯಲ್ಲಿ**

S-2 ಗಂಟೆಶಬ್ದ (CS) ಮತ್ತು ಜೊಲ್ಲು ಸುರಿಸುವಿಕೆ (UR)

S-1 ಆಹಾರ (US) ಇವುಗಳನ್ನು ಅನೇಕ ಸಲ ಪುನರಾವರ್ತಿಸಲಾಗುತ್ತದೆ (CS)-> ಜೊಲ್ಲು ಸುರಿಸುವಿಕೆ (UR)

**ಅನುಬಂಧನದ ನಂತರ**

S-2 ಅನುಬಂಧಿತ ಪ್ರಚೋದನೆ (CS) ಮಾತ್ರ –> ಅನುಬಂಧಿತ ಅನುಕ್ರಿಯೆ ಜೊಲ್ಲು ಸುರಿಸುವಿಕೆ (CR)

ಪ್ರಯೋಗದ ನಂತರ ಅನುಬಂಧಿತ ಪ್ರಚೋದನೆಯಾದ(CS) ಗಂಟೆಶಬ್ದಕ್ಕೂ ಈಗ ಅನುಬಂಧಿತ ಅನುಕ್ರಿಯೆಯಾಗಿ ಪರಿಣಮಿಸಿರುವ ಜೊಲ್ಲು ಸುರಿಸುವಿಕೆಗೂ (CR) ಅನುಬಂಧನ ಏರ್ಪಟ್ಟು ನಾಯಿ ಗಂಟೆ ಶಬ್ದಕ್ಕೆ ಜೊಲ್ಲು ಸುರಿಸುವುದನ್ನು

Digitised by Bharatavani, CIIL

ಕಲಿತುಕೊಂಡಿದೆ. ಅಂದರೆ ನಾಯಿಯ ಸಹಜ ಅನುಕ್ರಿಯೆಯಾದ ಜೊಲ್ಲು ಸುರಿಸುವಿಕೆಯನ್ನು (UR) ಅಸಹಜ ಪ್ರಚೋದನೆಯಾದ ಗಂಟೆ ಶಬ್ದಕ್ಕೆ ಅನುಬಂಧಿತಗೊಂಡಿದೆ (Conditioned) ಎಂದು ಹೇಳಲಾಗುತ್ತದೆ.

ಅನನುಬಂಧಿತ ಪ್ರಚೋದನೆ (US) ಮತ್ತು ಅನುಬಂಧಿತ ಪ್ರಚೋದನೆಗಳನ್ನು ಬೇರೆ ಬೇರೆ ಕ್ರಮದಲ್ಲಿ ಕೊಡುವುದರಿಂದಲೂ ಅನುಬಂಧನ ಕಲಿಕೆ ಸಾಧ್ಯವಾಗುತ್ತದೆಯೆಂದು ಪ್ಯಾವ್‌ಲೋವ್ ಮತ್ತು ಅವನ ನಂತರದ ಮನೋವಿಜ್ಞಾನಿಗಳು ಪ್ರಯೋಗಾತ್ಮಕವಾಗಿ ತೋರಿಸಿದ್ದಾರೆ. ಅನುಬಂಧಿತ ಪ್ರಚೋದನೆ (CS) ನಂತರ ಅನನುಬಂಧಿತ ಪ್ರಚೋದನೆಯನ್ನು ಸ್ವಲ್ಪ ಕಾಲದ ಅಂತರದಲ್ಲಿ ಕೊಟ್ಟು ಅನುಬಂಧನವನ್ನು ಕಲಿಸುವುದಕ್ಕೆ ಮುಮ್ಮುಖ ಅನುಬಂಧನ (Forward Conditioning) ಎಂದು ಹೆಸರು. ಅನನುಬಂಧಿತ ಪ್ರಚೋದನೆಯನ್ನೇ(US–ಆಹಾರ) ಮೊದಲು ಕೊಟ್ಟು ನಂತರದಲ್ಲಿ ಅನುಬಂಧಿತ ಪ್ರಚೋದನೆಯನ್ನು (CS) ಸ್ವಲ್ಪ ಸಮಯದ ಅಂತರದಲ್ಲಿ ಕೊಡುವುದರಿಂದಲೂ ಅನುಬಂಧನ ಕಲಿಕೆ ಸಾಧ್ಯವಿದೆ. ಇದಕ್ಕೆ ಹಿಮ್ಮುಖ ಅನುಬಂಧನ (Back ward Conditioning) ಎಂದು ಹೆಸರು. ಆದರೆ ಈ ಕ್ರಮದಲ್ಲಿ ಕಲಿಕೆ ಹೆಚ್ಚು ಪ್ರಯತ್ನಗಳನ್ನು ತೆಗೆದುಕೊಳ್ಳುತ್ತದೆ. ಇನ್ನೊಂದು ಕ್ರಮದಲ್ಲಿ ಅನುಬಂಧಿತ ಪ್ರಚೋದನೆ ಇನ್ನೂ ಮುಂದುವರಿಯುತ್ತಿರುವಾಗಲೇ ಅನನುಬಂಧಿತ ಪ್ರಚೋದನೆಯನ್ನು ಪ್ರಸ್ತುತಪಡಿಸಲಾಗುತ್ತದೆ. ಇದಕ್ಕೆ ವಿಳಂಬ ಅನುಬಂಧನ (Delayed Conditioning) ಎಂದು ಹೆಸರು. ಇದೂ ಒಂದು ರೀತಿಯಲ್ಲಿ ಮುಮ್ಮುಖ ಅನುಬಂಧನವೇ ಆಗುತ್ತದೆ. ಅನುಬಂಧಿತ ಮತ್ತು ಅನನುಬಂಧಿತ ಪ್ರಚೋದನೆಗಳನ್ನು (CS and US) ಒಟ್ಟೊಟ್ಟಿಗೆ ಏಕಕಾಲದಲ್ಲಿ ಕೊಡುವುದು ಏಕಕಾಲಿಕ ಅನುಬಂಧನ (Simultaneous Conditioning) ಎನ್ನಿಸಿಕೊಳ್ಳುತ್ತದೆ. ಕುರುಹು ಅನುಬಂಧನ (Trace Conditioning) ಎನ್ನುವ ಮತ್ತೊಂದು ಮುಮ್ಮುಖ ಅನುಬಂಧನ ಕ್ರಮದಲ್ಲಿ ಅನುಬಂಧಿತ ಪ್ರಚೋದನೆ ನೀಡಿದ ನಂತರದಲ್ಲಿ ಸ್ವಲ್ಪ ಸಮಯದ ನಂತರ ಅನನುಬಂಧಿತ ಪ್ರಚೋದನೆಯನ್ನು ಕೊಡಲಾಗುತ್ತದೆ.

ಮೇಲಿನ ವಿಶ್ಲೇಷಣೆಯ ಆಧಾರದಿಂದ ಅನುಬಂಧನ ಕಲಿಕೆಯನ್ನು ಹೀಗೆ ವ್ಯಾಖ್ಯಾನಿಸಬಹುದು: ಕೆಲವು ಷರತ್ತುಗಳಿಗೆ ಒಳಪಟ್ಟು ಒಂದು ಅನನುಬಂಧಿತ ಪ್ರಚೋದನೆಗೂ ಮತ್ತು ಆಯ್ಕೆ ಮಾಡಿಕೊಂಡ ಅನನುಬಂಧಿತ ಅನುಕ್ರಿಯೆಗೂ ನಡುವೆ ಬಂಧವನ್ನು ಉಂಟುಮಾಡುವುದರಿಂದ ಉಂಟಾಗುವ ಕಲಿಕೆಯನ್ನು ಅನುಬಂಧನ ಅಥವಾ ಸೋಪಾಧಿಕ ಕಲಿಕೆ ಎನ್ನಲಾಗುತ್ತವೆ. ಕಲಿಕೆಯ ನಂತರ ಒಳಗೊಂಡ ಪ್ರಚೋದನೆ ಮತ್ತು ಅನುಕ್ರಿಯೆಯನ್ನು ಅನುಬಂಧಿತ ಪ್ರಚೋದನೆ ಮತ್ತು ಅನುಬಂಧಿತ ಅನುಕ್ರಿಯೆ ಎಂದು ಹೆಸರಿಸಲಾಗುತ್ತದೆ.

ಅನುಬಂಧನ ಕಲಿಕೆಯಲ್ಲಿನ ಕೆಲವು ಷರತ್ತುಗಳನ್ನು ಮತ್ತು ತತ್ವಗಳು/ನಿಯಮಗಳನ್ನು ಕೆಳಗೆ ವಿವರಿಸಲಾಗಿದೆ:

1. ಪ್ರಯೋಗದಲ್ಲಿ ಅನುಬಂಧಿತ ಪ್ರಚೋದನೆ ಮತ್ತು ಅನನುಬಂಧಿತ ಪ್ರಚೋದನೆಗಳನ್ನು ಅದೇ ಕ್ರಮದಲ್ಲಿ ಅನೇಕ ಸಲ ಪ್ರಸ್ತುತಪಡಿಸಬೇಕು. ಅವುಗಳಲ್ಲೆಲ್ಲಾ ಸಾತತ್ಯತೆ (Contiguity) ಇರಬೇಕು ಈ ಕ್ರಮವನ್ನು ಮುಮ್ಮುಖ ಅನುಬಂಧನ ಎಂದು ಕರೆಯುತ್ತಾರೆ.

2. ಅನುಬಂಧಿತ ಮತ್ತು ಅನನುಬಂಧಿತ ಪ್ರಚೋದನೆಗಳ ನಡುವೆ ಕಾಲದ ಅಂತರ ಕಡಿಮೆ ಇರಬೇಕು. ಅನನುಬಂಧಿತ ಪ್ರಚೋದನೆ ಅನುಬಂಧಿತ ಪ್ರಚೋದನೆಯನ್ನು ತತ್‌ಕ್ಷಣದಲ್ಲಿಯೇ (ಕೆಲವು ಸೆಕೆಂಡುಗಳು) ಹಿಂಬಾಲಿಸಬೇಕು.

3. ಅನನುಬಂಧಿತ ಪ್ರಚೋದನೆಯು (ಆಹಾರ) ಅನುಬಂಧಿತ ಪ್ರಚೋದನೆಗೂ ಅನುಬಂಧಿತ ಅನುಕ್ರಿಯೆಗೂ ನಡುವೆ ಸಾಹಚರ್ಯವನ್ನು (association) ಪ್ರಬಲಗೊಳಿಸುವ ಪುನರ್ಬಲಕವಾಗಿ (reinforcer) ಕೆಲಸ ಮಾಡುತ್ತದೆ.

4. ಅನನುಬಂಧಿತ ಪ್ರಚೋದನೆಯನ್ನು ಪುನರ್ಬಲನಕ್ಕಾಗಿ ಅನುಬಂಧಿತ ಪ್ರಚೋದನೆಯ ಜೊತೆಗೆ ಅನೇಕ ಪ್ರಯತ್ನಗಳವರೆಗೆ ಕೊಡಬೇಕಾಗುತ್ತದೆ. ಅನುಬಂಧಿತ ಅನುಕ್ರಿಯೆ ಅನುಬಂಧಿತ ಪ್ರಚೋದನೆ ಮಾತ್ರದಿಂದಲೇ ಉಂಟಾದರೆ ಅನನುಬಂಧಿತ ಪ್ರಚೋದನೆಯನ್ನು ನಿಲ್ಲಿಸಬೇಕಾಗುತ್ತದೆ. ಅನುಬಂಧಿತ ಅನುಕ್ರಿಯೆಯನ್ನು ನಿರಂತರವಾಗಿ ಉಳಿಸಿಕೊಳ್ಳಬೇಕಾದಲ್ಲಿ ಆಗಾಗ್ಗೆ ಅನುಬಂಧಿತ ಪ್ರಚೋದನೆಯ ಜೊತೆಗೆ ಅನನುಬಂಧಿತ ಪ್ರಚೋದನೆಯನ್ನು (ಪುನರ್ಬಲನವನ್ನು) ಉಪಯೋಗಿಸಬೇಕಾಗುತ್ತದೆ.

5. ಅನುಬಂಧಿತ ಕಲಿಕೆ ಉಂಟಾದ ನಂತರ ಅದಕ್ಕೆ ಪುನರ್ಬಲನ ನೀಡಿದ್ದ ಅನನುಬಂಧಿತ ಪ್ರಚೋದನೆಯನ್ನು (ಉದಾ:ಆಹಾರ) ಅನೇಕ ಪ್ರಯತ್ನಗಳವರೆಗೆ ಉಪಯೋಗಿಸದಿದ್ದಲ್ಲಿ ಮೊದ ಮೊದಲು ಅನುಬಂಧಿತ ಪ್ರಚೋದನೆ (CS) ಅನುಬಂಧಿತ ಅನುಕ್ರಿಯೆಯನ್ನು (CR) ಉಂಟುಮಾಡುವುದಾದರೂ ಕಾಲ ಕಳೆದಂತೆ ಅಂಥ ಅನುಕ್ರಿಯೆ ದುರ್ಬಲಗೊಳ್ಳುತ್ತಾ ಬಂದು ಕಡೆಗೆ ಸಂಪೂರ್ಣವಾಗಿ ನಿಂತು ಹೋಗುತ್ತದೆ. ಈ ಪ್ರಕ್ರಿಯೆಗೆ ಅಳಿಯುವಿಕೆ (Extinction) ಎಂದು ಹೆಸರು. ಈ ತತ್ವವನ್ನು ಅನಪೇಕ್ಷಿತ ವರ್ತನೆಯನ್ನು (ಸಮಸ್ಯಾ ವರ್ತನೆಯನ್ನು) ನಿವಾರಿಸಲು ಉಪಯೋಗಿಸಲಾಗುತ್ತದೆ. ಅಂಥ ವರ್ತನೆಗೆ ಯಾವ ರೀತಿ ಪುನರ್ಬಲನವಾಗುತ್ತಿದೆಯೆಂದು ಕಂಡುಹಿಡಿದು ಆ ಪುನರ್ಬಲನವನ್ನು ಹಿಂತೆಗೆದುಕೊಂಡರೆ ವರ್ತನೆ ದುರ್ಬಲವಾಗುತ್ತಾ ಬಂದು ಕಡೆಗೆ ನಿಂತು ಹೋಗುತ್ತದೆ. ಅದು ಸಂಪೂರ್ಣವಾಗಿ ಅಳಿದು ಹೋಗಿದೆಯೆ ಎಂದು ಪರೀಕ್ಷಿಸಲು ಅನನುಬಂಧಿತ ಪ್ರಚೋದನೆಯನ್ನು (US) ಅಥವಾ ಪುನರ್ಬಲನವನ್ನು ಕೊಟ್ಟಾಗ ಕೆಲವು ವೇಳೆ ಅನುಬಂಧಿತ ಅನುಕ್ರಿಯೆ (CR) ಪುನಃ ತಲೆದೋರುತ್ತದೆ. ಇದಕ್ಕೆ ಸಹಜ ಪುನಹ ಪ್ರಾಪ್ತಿ (Spontaneous Recovery) ಎಂದು ಹೆಸರು. ಅಂಥ ಸಂದರ್ಭದಲ್ಲಿ ಅನುಬಂಧಿತ ಪ್ರಚೋದನೆ ನೀಡದೆ ಇನ್ನೂ

Digitised by Bharatavani, CIIL

ಅನೇಕ ಪ್ರಯತ್ನಗಳನ್ನು ಮುಂದುವರಿಸಬೇಕು. ಸಹಜ ಪ್ರಾಪ್ತಿ ಪುನಃ ಆಗದಿದ್ದರೆ ಅನುಬಂಧಿತ ಅನುಕ್ರಿಯೆ (CR) ಸಂಪೂರ್ಣವಾಗಿ ನಶಿಸಿದೆ ಎಂದು ತಿಳಿಯಬೇಕು.

6. ಒಂದು ಅನುಕ್ರಿಯೆಯನ್ನು ಮತ್ತೊಂದು ತಟಸ್ಥ ಪ್ರಚೋದನೆಗೆ ಅನುಬಂಧನ ಮಾಡಿದ ನಂತರ ಆ ಅನುಕ್ರಿಯೆ ಆ ನಿರ್ದಿಷ್ಟ ಪ್ರಚೋದನೆಯ ವರ್ಗಕ್ಕೆ ಸೇರಿದ ಅಥವಾ ಅದಕ್ಕೆ ನಿಕಟ ಸಂಬಂಧವಿರುವ ಇತರ ಪ್ರಚೋದನೆಗಳಿಗೂ ಉಂಟಾಗುತ್ತದೆ. ಇದಕ್ಕೆ ಪ್ರಚೋದನ ಸಾಮಾನ್ಯೀಕರಣ (Stimulus Generalization) ಎಂದು ಹೆಸರು.

7. ಪ್ರಚೋದನ ಸಾಮಾನ್ಯೀಕರಣವಾದಾಗ ಒಂದು ನಿರ್ದಿಷ್ಟ ಅನುಬಂಧಿತ ಪ್ರಚೋದನೆಗೆ ಮಾತ್ರ ಪುನರ್ಬಲನ ನೀಡಿದರೆ ಕ್ರಮೇಣ ಅನುಕ್ರಿಯೆ ಆ ನಿರ್ದಿಷ್ಟ ಪ್ರಚೋದನೆಗೆ ಮಾತ್ರ ಉಂಟಾಗುತ್ತದೆ. ಇತರ ಪ್ರಚೋದನೆಗಳಿಗೆ ಅನುಕ್ರಿಯೆ ನಿಂತು ಹೋಗುತ್ತದೆ. ಇದಕ್ಕೆ ಪ್ರಚೋದನ ವಿಭೇದೀಕರಣ (Stimulus Differentiation) ಎಂದು ಹೆಸರು.

8. ಪ್ಯಾವ್‌ಲೋವ್ ಒಂದು ಬೆಳಕಿನ ಬಿಲ್ಲೆಗೆ ಜೊಲ್ಲು ಸುರಿಸುವ ಅನುಕ್ರಿಯೆಯನ್ನು ಅನುಬಂಧನಗೊಳಿಸಿದ. ನಂತರ ಮತ್ತೊಂದು ಸಣ್ಣಗಾತ್ರದ ಬೆಳಕಿನ ಬಿಲ್ಲೆಗೂ ಅನುಬಂಧಿತ ಅನುಕ್ರಿಯೆ ಉಂಟಾಯಿತು. ಅಂದರೆ ಪ್ರಚೋದನ ಸಾಮಾನ್ಯೀಕರಣವಾಯಿತು. ನಂತರ ಎರಡನೇ ಬೆಳಕಿನ ಬಿಲ್ಲೆಯ ಗಾತ್ರವನ್ನು ಕ್ರಮಕ್ರಮವಾಗಿ ಹೆಚ್ಚಿಸಲಾಯಿತು. ಆಗಲೂ ಅನುಕ್ರಿಯೆ ಉಂಟಾಯಿತು. ಆದರೆ ಎರಡನೇ ಬೆಳಕಿನ ಬಿಲ್ಲೆಯ ಗಾತ್ರ ಮೊದಲಿನ ಬೆಳಕಿನ ಬಿಲ್ಲೆಯಷ್ಟೇ ಆದಾಗ ನಾಯಿಗೆ ಗೊಂದಲ ಉಂಟಾಗಿ ಅದು ಜೊಲ್ಲು ಸುರಿಸದೆ ಬುದ್ಧಿ ಭ್ರಮಣೆಯಾದಂತೆ ವರ್ತಿಸಿತು. ಅದು ಪ್ರಯೋಗದ ಬಂಧನದಿಂದ ತಪ್ಪಿಸಿಕೊಳ್ಳಲು ಯತ್ನಿಸಿತು, ಬೊಗಳಲು ಆರಂಭಿಸಿತು. ಈ ಸ್ಥಿತಿಯನ್ನು ಪ್ರಾಯೋಗಿಕ ನರಸ್ತಾಪ (Experimental Neurosis) ಎಂದು ಕರೆಯಲಾಯಿತು. ಮಾನವರಲ್ಲಿಯೂ ಎರಡು ಗುರಿಗಳ ನಡುವೆ ಸಂಘರ್ಷ ಉಂಟಾದಾಗ ಈ ಸ್ಥಿತಿ ಉಂಟಾಗುತ್ತದೆ. ಮೆದುಳಿನಲ್ಲಿ ಉತ್ತೇಜನ ಮತ್ತು ಸಮಾನ (Cerebral Excitation and Cerebral Inhibition) ಎರಡೂ ಏಕಕಾಲದಲ್ಲಿ ಉಂಟಾಗುವುದರಿಂದ ಈ ಸ್ಥಿತಿ ಉಂಟಾಗುತ್ತದೆಯೆಂದು ಪ್ಯಾವ್‌ಲೋವ್ ವಿವರಣೆ ನೀಡಿದ.

ಪ್ಯಾವ್‌ಲೋವ್‌ನ ಅನುಯಾಯಿ ಬೆಕ್ಟ್‌ರೇವ್ ಮಾನವರ ಮೇಲೂ ಅನುಬಂಧನೆಯ ಅನೇಕ ಪ್ರಯೋಗಗಳನ್ನು ಮಾಡಿ ಅದರ ತತ್ವಗಳು/ನಿಯಮಗಳು ಮಾನವರಿಗೂ ಅನ್ವಯಿಸುತ್ತವೆ ಎಂದು ತೋರಿಸಿದ್ದಾನೆ. ಪ್ಯಾವ್‌ಲೋವ್‌ನ ನಂತರದಲ್ಲಿ ನಡೆದ ಅನೇಕ ಪ್ರಯೋಗಗಳಿಂದ ಅನುಬಂಧನ ನಿಯಮಗಳಲ್ಲಿ ಅಪವಾದಗಳೂ ಇವೆ ಎಂದು ತಿಳಿದು ಬಂದಿದೆ.

ಪ್ಯಾವ್‌ಲೋವ್‌ನ ಅಭಿಜಾತ್ಯ ಅನುಬಂಧನದ ತತ್ವಗಳು ಪ್ರಾಣಿಗಳಿಗೆ ತರಬೇತಿ ಕೊಡಲು ಉಪಯೋಗಿಸಲ್ಪಡುತ್ತವೆ. ಮಾನವನ ರೋಗ ಪ್ರತಿಬಂಧಕ ವ್ಯವಸ್ಥೆಯ ಮೇಲೂ ಅನುಬಂಧನ ಪ್ರಭಾವ ಬೀರುತ್ತದೆ ಎಂದು ಕಂಡುಬಂದಿದೆ.

ಪ್ಯಾವ್‌ಲೋವ್‌ನ ಅನುಬಂಧನ ವಿಧಾನದಲ್ಲಿ ಜೈವಿಕ ಪ್ರಚೋದನೆ ಅನುಕ್ರಿಯೆಯ ಅನುಬಂಧನಕ್ಕೆ ಆಧಾರವಾಗುತ್ತದೆ. ಪ್ರಾಣಿಯನ್ನು ಪ್ರಾಯೋಗಿಕ ಬಂಧನಕ್ಕೆ ಒಳಪಡಿಸಿ ಅನುಕ್ರಿಯೆಯನ್ನು ಪ್ರಯತ್ನ ಪೂರ್ವಕವಾಗಿ (ಅನನುಬಂಧಿತ ಪ್ರಚೋದನೆಯನ್ನು ಕೊಟ್ಟು) ಹೊರಸೆಳೆಯಲಾಗುತ್ತದೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿಯಾದ ಬರ್ರೋಸ್ ಫ್ರೆಡರಿಕ್ ಸ್ಕಿನ್ನರ್ (1904–1990) ಪ್ಯಾವ್‌ಲೋವ್‌ನ ಪ್ರಯೋಗಗಳನ್ನು ವಿಶ್ಲೇಷಿಸಿ ತನ್ನದೇ ಆದ ಅನುಬಂಧನ ಕಲಿಕಾ ವಿಧಾನವನ್ನು ಪ್ರತಿಪಾದಿಸಿದ್ದಾನೆ. ಈ ವಿಧಾನವನ್ನು ಕ್ರಿಯಾ ಪ್ರಸೂತ (ಜನ್ಯ) ಅನುಬಂಧನ ಕಲಿಕೆ (Operant Conditioned Learning) ಎಂದು ಹೆಸರಿಸಿದ್ದಾನೆ.

ಅನುಬಂಧಿತ ಅನುಕ್ರಿಯೆಯನ್ನು ಪ್ರಯತ್ನಪೂರ್ವಕವಾಗಿ ಹೊರಸೆಳೆಯುವ ಬದಲು ಅನುಬಂಧಿತ ಅನುಕ್ರಿಯೆಯನ್ನು ಪ್ರಾಣಿ ತಾನಾಗಿ ಹೊರಹೊಮ್ಮಿಸಿದಾಗ (Emitted) ಅನುಬಂಧಿತಗೊಳಿಸಬೇಕಾದ ಪ್ರಚೋದನೆಯೊಂದಿಗೆ ಪ್ರಾಣಿ ತೋರಿಸುವ ಅನುಕ್ರಿಯೆಗೆ ಪುನರ್ಬಲನ ಕೊಟ್ಟರೆ ಕ್ರಮೇಣ ಅನುಬಂಧಿತ ಪ್ರಚೋದನೆಗೆ ಆ ಅನುಕ್ರಿಯೆ ಹೊರಹೊಮ್ಮುವಂತೆ ಮಾಡಲು ಸಾಧ್ಯವಿದೆ ಎಂದು ತೋರಿಸಿದ. ಸ್ಕಿನ್ನರನ ಪೆಟ್ಟಿಗೆ ಎಂಬ ಉಪಕರಣದಲ್ಲಿ ಒಂದು ಗೂಟವನ್ನು ಪ್ರಾಣಿ ಒತ್ತಿದರೆ ಪಂಜರದ (ಪೆಟ್ಟಿಗೆಯ) ಮೇಲಿನಿಂದ ಆಹಾರದ ಪೊಟ್ಟಣ ಬೀಳುವಂತೆ ವ್ಯವಸ್ಥೆಗೊಳಿಸಿ ಪ್ರಾಣಿಯನ್ನು (ಸಾಮಾನ್ಯವಾಗಿ ಪಾರಿವಾಳ, ಇಲಿ ಇತ್ಯಾದಿ) ಪಂಜರದಲ್ಲಿ ಹಸಿವಿನಿಂದ ಇಟ್ಟಾಗ ಪ್ರಾಣಿ ಹಸಿವಿನ ಚಡಬಡಿಕೆಯಿಂದ ಸಕ್ರಿಯವಾಗಿ ಆಕಸ್ಮಿಕವಾಗಿ ಗೂಟವನ್ನು ಒತ್ತಿದಾಗ ಆಹಾರ ದೊರೆಯುತ್ತದೆ. ಅಂದರೆ ಪ್ರಾಣಿಯು ಗೂಟವನ್ನು ಒತ್ತುವ ಅನುಕ್ರಿಯೆಗೆ ಪುನರ್ಬಲನ ದೊರೆಯುತ್ತದೆ. ಹೀಗೆ ಅನೇಕ ಪ್ರಯತ್ನಗಳು ಮುಂದುವರಿದಾಗ, ಪ್ರಾಣಿ ಹಸಿವೆಯಾದಾಗ ನೇರವಾಗಿ ಗೂಟವನ್ನು ಒತ್ತಿ ಆಹಾರ ಪಡೆಯುತ್ತದೆ. ಅಂದರೆ ಪ್ರಾಣಿಯು ಗೂಟವನ್ನು ಒತ್ತುವ ಅನುಕ್ರಿಯೆ ಅನುಬಂಧಿತಗೊಳ್ಳುತ್ತದೆ. ಗೂಟದ ಜೊತೆ ಜೊತೆಗೆ ಬಂದು ಬಜರ್ ಶಬ್ದ, ಬೆಳಕು ಇತ್ಯಾದಿ ತಟಸ್ತ ಪ್ರಚೋದನೆಯನ್ನು ಕೊಟ್ಟರೆ ಆ ಪ್ರಚೋದನೆಗೆ ಗೂಟವನ್ನು ಒತ್ತುವ ಅನುಕ್ರಿಯೆ ಅನುಬಂಧಿತಗೊಳ್ಳುತ್ತದೆ. ಸ್ಕಿನ್ನರ್ ಪಾರಿವಾಳಗಳು ವಿವಿಧ ರೀತಿಯ ತಟಸ್ತ ಪ್ರಚೋದನೆಗಳಿಗೆ ನಿರ್ದಿಷ್ಟ ಬಿಲ್ಲೆಗೆ ಕುಕ್ಕುವುದನ್ನು ಅನುಬಂಧಿತಗೊಳಿಸಿ ತೋರಿಸಿದನು. ಈ ವಿಧಾನದಲ್ಲಿ ಪ್ರಾಣಿಯ ಸ್ವಇಚ್ಛಾ ಕ್ರಿಯೆಯ (ವರ್ತನೆಯ) ಮೂಲಕ ಪುನರ್ಬಲನ ದೊರೆಯುವುದರಿಂದ ಈ ರೀತಿಯ ಅನುಬಂಧನವನ್ನು ಸಾಧಕ ಅನುಬಂಧನ ಕಲಿಕೆ (Instrumental Conditioned Learning) ಎಂದೂ ಹೇಳುತ್ತಾರೆ.

ಸ್ಕಿನ್ನರ್‌ನ ವಿಧಾನದ ಕ್ರಿಯಾ ಪ್ರಸೂತ ಅನುಬಂಧನದ ಹಂತಗಳನ್ನು ಹೀಗೆ ಗುರುತಿಸಬಹುದು.

Digitised by Bharatavani, CIIL

1. ಜೀವಿಯಲ್ಲಿ ಕ್ರಿಯೆಯ (ವರ್ತನೆಯ) ಪ್ರೇರಣೆಯನ್ನುಂಟು ಮಾಡಲು ಅದನ್ನು ಮೂಲ ಅಗತ್ಯಗಳಿಂದ (ಹಸಿವು ಇತ್ಯಾದಿ) ವಂಚಿತಗೊಳಿಸಲಾಗುತ್ತದೆ.
2. ಪ್ಯಾವ್‌ಲೋವನ ವಿಧಾನದಲ್ಲಿದ್ದಂತೆ ಪ್ರಾಣಿಯನ್ನು ಬಂಧನಕ್ಕೆ ಒಳಪಡಿಸದೆ ಸಾಪೇಕ್ಷವಾಗಿ, ಸ್ವತಂತ್ರವಾಗಿ (ಪಂಜರದಲ್ಲಿಟ್ಟಿದ್ದರೂ ಸಹ) ಬಿಡಲಾಗುತ್ತದೆ.
3. ಜೀವಿ ಸಹಜವಾಗಿ ಸಕ್ರಿಯಗೊಂಡು ವರ್ತಿಸತೊಡಗುತ್ತದೆ.
4. ಅನುಬಂಧನಗೊಳಿಸಬೇಕಾದ ಪ್ರಚೋದನೆ ಮತ್ತು ಅನುಕ್ರಿಯೆಯನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.
5. ಅನುಬಂಧನಗೊಳಿಸಬೇಕಾದ ಅನುಕ್ರಿಯೆಯನ್ನು ಪ್ರಾಣಿ ಹೊರಹೊಮ್ಮಿಸಿದಾಗ ಅನುಬಂಧಿತ ಪ್ರಚೋದನೆಯೊಂದಿಗೆ ಪುನರ್ಬಲನವನ್ನು (ಆಹಾರ) ನೀಡಲಾಗುತ್ತದೆ.
6. ಹೀಗೆ ಅನೇಕ ಪ್ರಯತ್ನಗಳನ್ನು ಪುನರಾವರ್ತಿಸಲಾಗುತ್ತದೆ. ನಂತರ ಅನುಬಂಧಿತ ಪ್ರಚೋದನೆಗೆ ಅನುಬಂಧಿತ ಅನುಕ್ರಿಯೆ ಉಂಟಾಗುವ ವೇಗ ಮತ್ತು ಪ್ರಬಲತೆ ಹೆಚ್ಚಾಗುತ್ತದೆ.

ಪ್ಯಾವ್‌ಲೋವ್ ಮತ್ತು ಸ್ಕಿನ್ನರ್‌ನ ಅನುಬಂಧನ ಕ್ರಮಗಳೆರಡರಲ್ಲೂ ಪುನರ್ಬಲನ ಪ್ರಕ್ರಿಯೆ ಬಹಳ ಮಹತ್ವದ್ದಾಗಿರುತ್ತದೆ. ನಿರ್ದಿಷ್ಟ ಅನುಕ್ರಿಯೆಯೊಂದು ಹೊರಹೊಮ್ಮಿದಾಗ ಜೀವಿಗೆ ತೃಪ್ತಿ ನೀಡುವ ಅಥವಾ ಅಹಿತಕರ ಸ್ಥಿತಿಯಿಂದ ಅದನ್ನು ನಿವಾರಿಸುವ ಪ್ರಚೋದನೆಯನ್ನು ನೀಡುವ ಪ್ರಕ್ರಿಯೆಯನ್ನು ಪುನರ್ಬಲನ (Reinforcement) ಎಂದು ವ್ಯಾಖ್ಯಾನಿಸಲಾಗಿದೆ. ಪುನರ್ಬಲನ ನೀಡುವ ಪ್ರಚೋದನೆಗೆ ಪುನರ್ಬಲಕ (Reinforcer) ಎಂದು ಹೆಸರು. ಪುನರ್ಬಲನವನ್ನು ವರ್ತನೆಯ ಮೇಲೆ ವಸ್ತು ಉಂಟುಮಾಡುವ ಪರಿಣಾಮದ ಮೇಲೆ ಅರ್ಥೈಸಲಾಗುತ್ತದೆ.

ಅನುಕ್ರಿಯೆಯ ಪ್ರಬಲತೆಯನ್ನು ಮತ್ತು ಸಂಭಾವ್ಯತೆಯನ್ನು ಹೆಚ್ಚಿಸುವ ಪ್ರಕ್ರಿಯೆಗೆ ಧನಾತ್ಮಕ ಪುನರ್ಬಲನ (Positive Reinforcement) ಎಂದು ಹೆಸರು. ಅನುಕ್ರಿಯೆ ಉಂಟಾದಾಗ ಇರುವ ವಿಮುಖ ಪ್ರಚೋದನೆಯನ್ನು (Aversive stimulus) ಉದಾ: ಶಾಕ್, ಅತಿಯಾದ ಶಬ್ದ ಇತ್ಯಾದಿ) ನಿವಾರಣೆ ಮಾಡಿದರೆ ಆ ಅನುಕ್ರಿಯೆಯು ಪ್ರಬಲಗೊಳ್ಳುತ್ತದೆ. ಇದಕ್ಕೆ ಋಣಾತ್ಮಕ ಪುನರ್ಬಲನ (Negative Reinforcement) ಎಂದು ಹೆಸರು. ದಂಡನೆ (Punishment) ಇದಕ್ಕಿಂತ ಭಿನ್ನವಾದುದಾಗಿದೆ. ಅನುಕ್ರಿಯೆಯೊಂದರ ಸಾಧ್ಯತೆಯನ್ನು ಕಡಿಮೆ ಮಾಡಲು ಪ್ರತಿಕೂಲ ಪ್ರಚೋದನೆಯನ್ನು ಕೊಡುವುದು ದಂಡನೆ ಎನಿಸುತ್ತದೆ. ಇದು ಧನಾತ್ಮಕ ದಂಡನೆಯಾಗುತ್ತದೆ. ಅನುಕ್ರಿಯೆಯೊಂದು ಉಂಟಾದಾಗ ಅಪೇಕ್ಷಿತ ಪ್ರಚೋದನೆಯನ್ನು (ಬಹುಮಾನ ಇತ್ಯಾದಿ) ಹಿಂದೆಗೆದುಕೊಳ್ಳುವುದು ಋಣಾತ್ಮಕ ದಂಡನೆ ಎನ್ನಿಸುತ್ತದೆ.

ಪುನರ್ಬಲನಕ್ಕೆ ಉಪಯೋಗಿಸುವ ಪುನರ್ಬಲಕ ಉದಾ: ಆಹಾರ, ನೀರು, ಜೀವಿಯ ಜೈವಿಕ ಅಗತ್ಯವನ್ನು ತೃಪ್ತಿಪಡಿಸುವ ವಾಸ್ತವಿಕ ಮೌಲ್ಯವನ್ನು ಹೊಂದಿದ್ದರೆ ಅಂಥ ಪುನರ್ಬಲನ ಪ್ರಾಥಮಿಕ ಪುನರ್ಬಲನ (Primary Reinforcement) ಎನಿಸುತ್ತದೆ. ಪ್ರಾಥಮಿಕ ಪುನರ್ಬಲವನ್ನು ತಟಸ್ತ ಪ್ರಚೋದನೆಯೊಂದಿಗೆ ಪದೇ ಪದೇ ಉಪಯೋಗಿಸಿದಾಗ ಆ ತಟಸ್ಥ ಪ್ರಚೋದನೆ ಪುನರ್ಬಲನದ ಮೌಲ್ಯವನ್ನು ಪಡೆದುಕೊಳ್ಳುತ್ತದೆ. ಈ ರೀತಿಯ ಪುನರ್ಬಲನವನ್ನು ಅನುಷಂಗಿಕ ಪುನರ್ಬಲನ (Secondary Reinforcement) ಎಂದು ಹೇಳಲಾಗುತ್ತದೆ. ಸ್ಕಿನ್ನರ್ ಇದನ್ನು ಅನುಬಂಧಿತ ಪುನರ್ಬಲನ (Conditioned Reinforcement) ಎಂದು ಹೆಸರಿಸಿದ್ದಾನೆ. ವರ್ತನೆಯ ಬದಲಾವಣೆಗೆ ಈ ತತ್ವವನ್ನು ಅನೇಕ ರೀತಿಗಳಲ್ಲಿ ಉಪಯೋಗಿಸಿದ್ದಾರೆ. ಈ ವ್ಯವಸ್ಥೆಯನ್ನು ಪ್ರತೀಕ ಅರ್ಥವ್ಯವಸ್ಥೆ (Token Economy) ಎಂದು ಕರೆದಿದ್ದಾರೆ. ವ್ಯಕ್ತಿ ಇಷ್ಟಪಡುವ ಚಟುವಟಿಕೆಗಳನ್ನು, ವರ್ತನೆಯನ್ನು ದೃಢಗೊಳಿಸಲು ಪುನರ್ಬಲನವಾಗಿ ಉಪಯೋಗಿಸಬಹುದೆಂದು ಕಂಡು ಬಂದಿದೆ. ಈ ತತ್ವಕ್ಕೆ ಪ್ರಿಮ್ಯಾಕ್ ನಿಯಮ (Premack Principle) ಎಂದು ಹೆಸರು.

ಕ್ರಿಯಾ ಪ್ರಸೂತ ಅನುಬಂಧನದಿಂದ ಸಂಕೀರ್ಣ ವರ್ತನೆಗಳನ್ನು ಕಲಿಸಬಹುದೆಂದು ಸ್ಕಿನ್ನರ್ ತೋರಿಸಿದ್ದಾನೆ. ಈ ತತ್ವಕ್ಕೆ ರೂಪಿಸುವಿಕೆ (Shaping) ಎಂದು ಹೆಸರು. ಕಲಿಸಬೇಕಾದ ಸಂಕೀರ್ಣ ವರ್ತನೆಯನ್ನು ಮೊದಲು ವಿಶ್ಲೇಷಣೆ ಮಾಡಿ ಅದರ ಹಂತಗಳನ್ನು ಕ್ರಮಾಗತವಾಗಿ ಗುರ್ತಿಸಲಾಗುತ್ತದೆ. ಇದಕ್ಕೆ ಕಾರ್ಯ ವಿಶ್ಲೇಷಣೆ (Task Analysis) ಎಂದು ಹೆಸರು. ನಂತರ ಆ ವರ್ತನೆ ಯಾವ ಪ್ರಚೋದನೆಯಿಂದ ಹೊರಹೊಮ್ಮಬೇಕೆಂಬುದನ್ನು ನಿರ್ಧರಿಸಲಾಗುತ್ತದೆ. ಸೂಕ್ತ ಪುನರ್ಬಲನವನ್ನು ಕೊಟ್ಟು ಮೊದಲು ಆ ಪ್ರಚೋದನೆಗೆ ವರ್ತನೆಯ ಮೊದಲ ಹಂತದ ಅನುಕ್ರಿಯೆಯನ್ನು ಚೆನ್ನಾಗಿ ಕಲಿತ ಅನುಬಂಧಿತಗೊಳಿಸಲಾಗುತ್ತದೆ. ಪ್ರಾಣಿ ಅದನ್ನು ಚೆನ್ನಾಗಿ ಕಲಿತ ನಂತರ ಎರಡನೇ ಹಂತದ ವರ್ತನೆಯನ್ನು ಅನುಬಂಧಿತಗೊಳಿಸಲಾಗುತ್ತದೆ. ಹೀಗೆ ಪ್ರಾಣಿಯ ವರ್ತನೆಯನ್ನು ಕ್ರಮಾಗತವಾಗಿ ಉದ್ದೇಶಿತ ಸಂಕೀರ್ಣ ವರ್ತನೆಯತ್ತ ಕೊಂಡೊಯ್ಯಲಾಗುತ್ತದೆ. ಕಡೆಗೆ ಇದೇ ಸಂಕೀರ್ಣ ವರ್ತನೆ ಉದ್ದೇಶಿತ ಅನುಬಂಧಿತ ಪ್ರಚೋದನೆಗೆ ಅನುಬಂಧಿತ ಗೊಳ್ಳುತ್ತದೆ. ಆದ್ದರಿಂದಲೇ ಈ ತಂತ್ರವನ್ನು ಕ್ರಮಾಗತ ಸಮೀಪಿಸುವಿಕೆಯಿಂದ ರೂಪಿಸುವಿಕೆ (Shaping through successive Approximation) ಎಂದು ಕರೆಯಲಾಗಿದೆ. ಸರ್ಕಸ್ ಪ್ರಾಣಿಗಳು, ಕೋಲೆಬಸವ, ಕೋತಿಗಳು ಸಂಕೇತ ಮಾಡಿದಾಗ ಸಂಕೀರ್ಣ ವರ್ತನೆ ತೋರಿಸುವುದನ್ನು ಕಲಿಸಲು, ಬುದ್ಧಿಮಾಂದ್ಯ ಮಕ್ಕಳಿಗೆ ಸಂಕೀರ್ಣ ಕೌಶಲಗಳನ್ನು ಕಲಿಸಲು ಈ ತಂತ್ರವನ್ನು ಉಪಯೋಗಿಸುತ್ತಾರೆ.

ಪುನರ್ಬಲನ ಕೊಡುವುದರಲ್ಲಿ ಪುನರ್ಬಲನದ ಸಂಖ್ಯೆ ಮತ್ತು ಅವುಗಳನ್ನು ಕೊಡುವುದರಲ್ಲಿ ಸಮಯದ ಅಂತರದಲ್ಲಿ ವ್ಯತ್ಯಾಸ ಮಾಡುವುದರಿಂದ ವರ್ತನೆಯ ಮೇಲೆ ಬೇರೆ ಬೇರೆ ಪ್ರಭಾವ ಉಂಟಾಗುತ್ತದೆಯೆಂಬುದನ್ನು ಸ್ಕಿನ್ನರ್ ತೋರಿಸಿದ್ದಾನೆ. ಇದಕ್ಕೆ ಸಂಬಂಧಿಸಿದ ವಿನ್ಯಾಸಗಳಿಗೆ ಪುನರ್ಬಲನ ತಪಸೀಲುಗಳು

Digitised by Bharatavani, CIIL

(Schedules of Reinforcement) ಎಂದು ಹೆಸರು. ಸ್ಕಿನ್ನರ್ 17 ರೀತಿಯ ತಪಸೀಲುಗಳನ್ನು ವಿವರಿಸಿದ್ದಾನೆ. ಅವುಗಳಲ್ಲಿ ಕೆಲವು ಈ ರೀತಿ ಇವೆ: ಪ್ರತಿ ಪ್ರಯತ್ನಕ್ಕೆ ಉದ್ದೇಶಿತ ಅನುಕ್ರಿಯೆಗೆ ಪುನರ್ಬಲನ ನೀಡುವುದು ನಿರಂತರ ಪುನರ್ಬಲನ ತಪಸೀಲಾಗುತ್ತದೆ (Continuous Reinforcement). ಮಧ್ಯೆ ಮಧ್ಯೆ ಪುನರ್ಬಲನ ಕೊಡದೆ ವ್ಯತ್ಯಾಸ ಮಾಡುವುದು ಆಂಶಿಕ ಅಥವಾ ಅವಧಿಕ ಪುನರ್ಬಲನವೆನಿಸುತ್ತದೆ (Partial or Intermittent Reinforcement). ಇದರಲ್ಲಿ ಅನೇಕ ವಿಧಗಳಿವೆ. ನಿರ್ದಿಷ್ಟ ಸಮಯದ ನಂತರ ಪುನರ್ಬಲನ ನೀಡುವುದಕ್ಕೆ ಸವಿರಾಮ ಪುನರ್ಬಲನ (Fixed interval Reinforcement)ಎಂದು ಹೆಸರು. ಎರಡು ಅನುಬಂಧಿತ ಅನುಕ್ರಿಯೆಗಳ ನಡುವಣ ಅವಧಿಯನ್ನು ಆಗಾಗ್ಗೆ ಬದಲಾಯಿಸಿ ಪುನರ್ಬಲನ ನೀಡುವುದಕ್ಕೆ ವ್ಯತ್ಯಸ್ತಸಾವಧಿ ಪುನರ್ಬಲನ (Variable interval Reinforcement) ಎಂದು ಹೇಳುತ್ತಾರೆ. ಅನುಬಂಧಿತ ಅನುಕ್ರಿಯೆಗಳು ಉಂಟಾಗುವ ಸಂಖ್ಯೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಸಂಖ್ಯೆಗಳ ನಡುವಣ ಅನುಪಾತದ ಮೇಲೆ ಪುನರ್ಬಲನ ಕೊಡಬಹುದು. ಈ ಅನುಪಾತ ನಿಶ್ಚಿತವಾಗಿದ್ದರೆ ಅದು ನಿಶ್ಚಿತ ಅನುಪಾತ ಪುನರ್ಬಲನವಾಗುತ್ತದೆ. (Fixed-Ration Reinforcement) ಈ ಅನುಪಾತವನ್ನು ಆಗಾಗ್ಗೆ ಬದಲಾಯಿಸಿದರೆ ಅದು ವ್ಯತ್ಯಸ್ತ ಅನುಪಾತ ಪುನರ್ಬಲನವಾಗುತ್ತದೆ (Variable Ratio Reinforcement). ಒಂದು ಅನುಕ್ರಿಯೆಯನ್ನು ಅನುಬಂಧಿತಗೊಳಿಸಲು ನಿರಂತರ ಪುನರ್ಬಲನದ ತಪಸೀಲು ಬೇಕಾಗುತ್ತದೆ. ಅನುಬಂಧಿತ ವರ್ತನೆಯ ಆವೃತ್ತಿಯನ್ನು ಮತ್ತು ಪ್ರಬಲತೆಯನ್ನು ಉಳಿಸಿಕೊಳ್ಳಲು ಉಳಿದ ಪುನರ್ಬಲನ ತಪಸೀಲುಗಳು ಬೇಕಾಗುತ್ತವೆ. ಸವಿರಾಮ ತಪಸೀಲುಗಳು ಕಲಿತ ವರ್ತನೆಯ ಆವೃತ್ತಿಯನ್ನು ಉಳಿಸುತ್ತವೆ. ಅನುಪಾತೀಯ ತಪಸೀಲುಗಳು ಕಲಿತ ವರ್ತನೆಯ ಪ್ರಬಲತೆಯನ್ನು ಉಳಿಸುತ್ತವೆ. ಪುನರ್ಬಲನ ತಪಸೀಲುಗಳ ಬಗ್ಗೆ ಸ್ಕಿನ್ನರನ ನಂತರವೂ ಅನೇಕ ಸಂಶೋಧನೆಗಳು ನಡೆದಿವೆ.

ಸ್ಕಿನ್ನರನ ಅನುಬಂಧನ ವಿಧಾನದಲ್ಲಿ ವರ್ತನೆಯನ್ನು ಕ್ರಮಾಗತಗೊಳಿಸಿ ಕಲಿಸುವಿಕೆ, ತತ್ಕ್ಷಣದಲ್ಲಿ ಪುನರ್ಬಲನ ನೀಡುವಿಕೆ ಎರಡು ಮುಖ್ಯ ತತ್ವಗಳಾಗಿವೆ. ಈ ತತ್ವಗಳನ್ನು ಉಪಯೋಗಿಸಿಕೊಂಡು ಪ್ರಭಾವಯುತವಾಗಿ ವಿದ್ಯಾರ್ಥಿಗಳೇ ಸ್ವಪ್ರಯತ್ನದಿಂದ ಕಲಿಯಬಹುದಾದ ಒಂದು ಬೋಧನ ಯಂತ್ರವನ್ನು (Teaching Machine)ಸ್ಕಿನ್ನರ್ ರೂಪಿಸಿದ. ಅವನ ನಂತರ ಈ ತತ್ವಗಳ ಆಧಾರದ ಮೇಲೆ ಯೋಜಿತ ಬೋಧನೆ ವ್ಯವಸ್ಥೆಯನ್ನು (programmed instruction System) ರೂಪಿಸಲಾಯಿತು. ಈ ವ್ಯವಸ್ಥೆಯಲ್ಲಿ ಕಲಿಯಬೇಕಾದ ವಿಷಯವನ್ನು ಸಣ್ಣ ಸಣ್ಣ ಭಾಗಗಳಾಗಿ ಕಲಿಕಾ ಚೌಕಟ್ಟಾಗಿ (Learning Frames)ವಿಭಜಿಸಿ, ಅವುಗಳನ್ನು ಕ್ರಮಾಗತವಾಗಿ ಜೋಡಿಸಿ ತತ್ಕ್ಷಣದಲ್ಲಿ ಅವುಗಳ ಕಲಿಕೆಗೆ ಪುನರ್ಬಲನ (ದೃಢೀಕರಣ–Confirmation) ದೊರೆಯುವಂತೆ ವ್ಯವಸ್ಥಿತಗೊಳಿಸಲಾಗುತ್ತದೆ. (ನೋಡಿ ಯೋಜಿತ ಬೋಧನೆ). ಸ್ಕಿನ್ನರ್‌ನ ಕ್ರಿಯಾ ಜನ್ಯ ಅನುಬಂಧನದ ತತ್ವಗಳ ಆಧಾರದ ಮೇಲೆ ಸಮಸ್ಯಾತ್ಮಕ ವರ್ತನೆಗಳನ್ನು ನಿವಾರಿಸಲು, ಅಪೇಕ್ಷಿತ ವರ್ತನೆಗಳನ್ನು ವಿಕಾಸಗೊಳಿಸಲು ಅನೇಕ ತಂತ್ರಗಳನ್ನು ರೂಪಿಸಲಾಗಿದೆ. ಈ ತಂತ್ರಗಳನ್ನು ವರ್ತನೆಯ ಪರಿವರ್ತನೆ ತಂತ್ರಗಳು (Behaviour Modification Techniques) ಎಂದು ಹೇಳುತ್ತೇವೆ. ಮಾನಸಿಕ ಸಮಸ್ಯೆಗಳ ಚಿಕಿತ್ಸೆಯಲ್ಲಿ ಈ ತಂತ್ರಗಳನ್ನು ಉಪಯೋಗಿಸುವ ಚಿಕಿತ್ಸಾ ಕ್ರಮಕ್ಕೆ ವರ್ತನ ಚಿಕಿತ್ಸೆ (Behaviour Therapy) ಎಂದು ಹೆಸರು.

ವಾಷಿಂಗ್‌ಟನ್‌ನಲ್ಲಿ ಮನೋವಿಜ್ಞಾನವನ್ನು ದೀರ್ಘಕಾಲ ಬೋಧಿಸುತ್ತಿದ್ದ ಎಡ್ವಿನ್.ಇ.ಗುತ್ರಿ (1896–1959) ಪ್ಯಾವ್‌ಲೋವ್ ಮತ್ತು ಥಾರಂಡೈಕನ ಸಿದ್ಧಾಂತಗಳಿಂದ ಪ್ರೇರಿತನಾದರೂ ತನ್ನದೇ ಆದ ವಿನೂತನ ರೀತಿಯಲ್ಲಿ ಕಲಿಕೆಯ ಸಿದ್ಧಾಂತವನ್ನು ಪ್ರತಿಪಾದಿಸಿದನು. ತನ್ನ ಹಿಂದಿನವರ ಕೆಲವು ಪರಿಕಲ್ಪನೆಗಳನ್ನು ಒಪ್ಪಿದರೂ, ಇನ್ನು ಕೆಲವನ್ನು ಒಪ್ಪಲಿಲ್ಲ. ಪ್ರಚೋದನೆ–ಅನುಕ್ರಿಯೆಯ ಸಾಹಚರ್ಯಕ್ಕೆ (S-R Association) ಅವುಗಳ ಸ್ಥಳ ಮತ್ತು ಕಾಲದ ದೃಷ್ಟಿಯಲ್ಲಿ ಒಟ್ಟಿಗೆ ಇರುವ ಸಾತತ್ಯತೆಗೆ (Spatial and Temporal Contiguity) ಹೆಚ್ಚಿನ ಮಹತ್ವವನ್ನು ನೀಡಿದನು. ಆದ್ದರಿಂದಲೇ ಗುತ್ರಿಯ ಸಿದ್ಧಾಂತವನ್ನು ಸಾತತ್ಯತೆಯಿಂದ ಕಲಿಕೆಯ ಸಿದ್ಧಾಂತ (Theory of learning by Contiguity)ಎಂದು ಹೆಸರಿಸಲಾಗಿದೆ.

ಕಲಿಕೆಯಲ್ಲಿ ಪುನರ್ಬಲನಕ್ಕೆ ಪಾತ್ರವಿದೆ ಎಂಬುದನ್ನು ಒಪ್ಪದ ಗುತ್ರಿ ಕಲಿಕೆ ಹೇಗೆ ಆಗುತ್ತದೆಯೆಂಬುದನ್ನು ಸರಳವಾಗಿ ವಿವರಿಸಿದ್ದಾನೆ. ಅವನ ಪ್ರಕಾರ ಒಂದು ಚಲನೆಯೊಂದಿಗೆ ಜೋಡಣೆಯಾಗುವ ಪ್ರಚೋದನೆ, ಮತ್ತೊಮ್ಮೆ ಪ್ರಸ್ತುತಗೊಂಡಾಗ ಅದೇ ಚಲನೆಯನ್ನು ಉಂಟುಮಾಡುತ್ತದೆ. ಅಂದರೆ ನಾವು ಏನನ್ನು ಮಾಡುತ್ತೇವೆಯೋ ಅದನ್ನು ಕಲಿಯುತ್ತೇವೆ. ಇಲ್ಲಿ ಗುತ್ರಿ ಅನುಕ್ರಿಯೆಯನ್ನು ಮಾಂಸಪೇಶೀಯ (Muscular) ಚಲನೆಯ ರೂಪದಲ್ಲಿ ಪರಿಭಾವಿಸಿದ್ದಾನೆ. ಇನ್ನೊಂದು ಅರ್ಥದಲ್ಲಿ ಪ್ರಚೋದನೆ ಮತ್ತು ಚಲನೆ (ಅನುಕ್ರಿಯೆ) ಕಾಲ ಮತ್ತು ಸ್ಥಳದ ದೃಷ್ಟಿಯಿಂದ ಒಟ್ಟಿಗೆ ಬಂದಾಗ ಅವುಗಳ ನಡುವೆ ಬಂಧವೇರ್ಪಟ್ಟು ಕಲಿಕೆ ಉಂಟಾಗುತ್ತದೆ. ಇದಕ್ಕೆ ಸಾತತ್ಯತೆ (Contiguity) ಎಂದು ಹೆಸರು. ಒಂದೇ ಸ್ಥಳದಲ್ಲಿ ಅವು ಒಟ್ಟಿಗೆ ಬಂದರೆ ಅದು ಅವಕಾಶೀಯ ಸಾತತ್ಯತೆಯಾಗುತ್ತದೆ (Spatial Contiguity), ಏಕಕಾಲದಲ್ಲಿ ಉಂಟಾದಾಗ ಅದು ಕಾಲಿಕ ಸಾತತ್ಯತೆ (Temporal contiguity) ಎನಿಸುತ್ತದೆ. ಆದ್ದರಿಂದ ಪ್ರಚೋದನೆ– ಅನುಕ್ರಿಯೆಗಳ ಸಾತತ್ಯತೆ ಒಂದೇ ಕಲಿಕೆಯನ್ನು ವಿವರಿಸಲು ಸಾಕಾಗುತ್ತದೆ ಎಂದು ಗುತ್ರಿ ವಾದಿಸಿದ್ದಾನೆ. ಹೀಗಾಗಿ ಸಾತತ್ಯತೆಯ ನಿಯಮ (Principle of Contiguity) ಕಲಿಕೆ ಪ್ರಮುಖ ನಿಯಮವಾಗುತ್ತದೆ. ಹಾಗಾದರೆ ಪುನರ್ಬಲನದ (ಆಹಾರ ಇತ್ಯಾದಿ) ಪಾತ್ರವೇನೆಂಬುದಕ್ಕೆ ಗುತ್ರಿ ಅದು ಜೀವಿಯನ್ನು ಸಕ್ರಿಯ ವರ್ತನ ಸ್ಥಿತಿಯಲ್ಲಿರಿಸಲು ಸಹಾಯಕವಾಗುತ್ತದೆ ಎಂದು ಹೇಳುತ್ತಾನೆ.

ಪ್ರಚೋದನೆ–ಅನುಕ್ರಿಯೆಗಳನ್ನು ಸರಿಯಾದ ಪರಿಸ್ಥಿತಿಯಲ್ಲಿ ಅಂದರೆ ಜೀವಿಯ ಗಮನ ವಿಚಲಿತವಾಗದಂಥ ಪರಿಸ್ಥಿತಿಯಲ್ಲಿ

Digitised by Bharatavani, CIIL

ಪ್ರಸ್ತುತಪಡಿಸಿದರೆ ಒಂದೇ ಪ್ರಯತ್ನದಲ್ಲಿ ಅವುಗಳ ನಡುವೆ ಸಾಹಚರ್ಯವೇರ್ಪಟ್ಟು ಕಲಿಕೆ ಉಂಟಾಗುತ್ತದೆ. ಇದೇ ಏಕ ಪ್ರಯತ್ನ ಕಲಿಕೆಯ ತತ್ವ (Single Trail Learning Principle). ಆದರೆ ಇತರ ಪ್ರಚೋದನೆಗಳು ಜೀವಿಯ ಗಮನ ಸೆಳೆಯುವುದರಿಂದ ಒಂದೇ ಪ್ರಯತ್ನದಲ್ಲಿ ಕಲಿಕೆ ಯಾವಾಗಲೂ ಉಂಟಾಗುವುದಿಲ್ಲ. ಅದಕ್ಕಾಗಿ ಅನುಬಂಧಿತಗೊಳಿಸಬೇಕಾದ ಪ್ರಚೋದನೆಯ ಸತ್ವ ಇತರ ಪ್ರಚೋದನೆಗಳಿಗಿಂತ ಅಧಿಕವಾಗಿದ್ದು ಜೀವಿಯ ಪೂರ್ಣಅವಧಾನದ ಪರಿಧಿಗೆ ಬರಬೇಕಾಗುತ್ತದೆ.

ಗುತ್ರಿಯ ಸಿದ್ಧಾಂತ ಅವಶ್ಯಕತೆಯನ್ನು ಮೀರಿ ಸರಳವಾಗಿತ್ತಾದರೂ ಅದು ತೀವ್ರ ಟೀಕೆಗೆ ಗುರಿಯಾಗಿ ಹೆಚ್ಚು ಸಮಯ ತನ್ನ ಪ್ರಭಾವವನ್ನು ಉಳಿಸಿಕೊಳ್ಳಲಿಲ್ಲ. ಆದರೂ ಅನಪೇಕ್ಷಿತ ವರ್ತನ ಅಭ್ಯಾಸಗಳನ್ನು (Habits) ನಿಲ್ಲಿಸಲು ಈ ಸಿದ್ಧಾಂತ ನಿಹಿತಾರ್ಥ ಹೊಂದಿದ್ದು ಅದರ ಸಾತತ್ಯತೆಯ ತತ್ವವನ್ನು ಅಭ್ಯಾಸಗಳನ್ನು ತಪ್ಪಿಸಲು ಉಪಯೋಗಿಸಲಾಗಿದೆ. ಇದಕ್ಕಾಗಿ ಕೆಲವು ವಿಧಾನಗಳನ್ನು ಗುತ್ರಿ ವಿವರಿಸಿದ್ದಾನೆ. ಒಂದು ವಿಧಾನದಲ್ಲಿ ಅಭ್ಯಾಸವನ್ನು ಉಂಟುಮಾಡುವ ಪ್ರಚೋದನೆಯ ಪ್ರಮಾಣವನ್ನು ತೀರ ಕಡಿಮೆ ಮಾಡಲಾಗುತ್ತದೆ. ಆಗ ವರ್ತನೆ ಉಂಟಾಗುವುದಿಲ್ಲ. ನಂತರ ಪ್ರಚೋದನೆಯ ಪ್ರಮಾಣವನ್ನು ಸ್ವಲ್ಪ ಸ್ವಲ್ಪವಾಗಿ ಹೆಚ್ಚಿಸಲಾಗುತ್ತದೆ. ಆಗ ವರ್ತನೆ ಉಂಟಾಗುವ ಪ್ರವೃತ್ತಿ ಕಡಿಮೆಯಾಗುತ್ತಾ ಬಂದು ಪ್ರಚೋದನೆ ಪೂರ್ಣ ಪ್ರಮಾಣದಲ್ಲಿದ್ದರೂ ವರ್ತನೆ ಉಂಟಾಗುವುದಿಲ್ಲ. ಉದಾಹರಣೆಗೆ, ಕುದುರೆ ಮೊದಲು ಜೀನನ್ನು ಅದರ ಬೆನ್ನಿನ ಮೇಲಿಟ್ಟಾಗ ಜೋರಾಗಿ ನೆಗೆದಾಡಲು ಆರಂಭಿಸುತ್ತದೆ. ಇದನ್ನು ತಪ್ಪಿಸಲು ಒಂದು ಹಗುರವಾದ ಬಟ್ಟೆಯನ್ನು ಅದರ ಬೆನ್ನಿನ ಮೇಲೆ ಹಾಕಿ ಕುದುರೆ ನೆಗೆದಾಡುವಂತೆ ಮಾಡುತ್ತಾರೆ. ಕ್ರಮೇಣ ಬೆನ್ನಿನ ಮೇಲಿಡುವ ವಸ್ತುವಿನ ಭಾರವನ್ನು ಹೆಚ್ಚು ಮಾಡಲಾಗುತ್ತದೆ. ಆಗಲೂ ನೆಗೆದಾಟ ಉಂಟಾದರೂ ಅದರ ತೀವ್ರತೆ ಕಡಿಮೆಯಾಗುತ್ತಾ ಬರುತ್ತದೆ. ಕಡೆಗೆ ಭಾರವಾದ ಜೀನನ್ನು ಬೆನ್ನಿನ ಮೇಲಿಟ್ಟಾಗಲೂ ಕುದುರೆ ನೆಗೆದಾಟ ನಿಂತುಹೋಗುತ್ತದೆ. ಈ ಕ್ರಮಕ್ಕೆ ಹೊಸ್ತಿಲಿನ (Threshold) ಕ್ರಮವೆಂದು ಹೆಸರು.

ಇನ್ನೊಂದು ಕ್ರಮದಲ್ಲಿ ಅನಪೇಕ್ಷಿತ ವರ್ತನೆಯನ್ನು ನಿಲ್ಲಿಸದೇ ಪದೇ ಪದೇ ಮಾಡುವಂತೆ ವ್ಯಕ್ತಿಯನ್ನು ಒತ್ತಾಯಪಡಿಸಲಾಗುತ್ತದೆ. ಇದರಿಂದ ಆ ಚಟುವಟಿಕೆಯಲ್ಲಿ ವ್ಯಕ್ತಿಗೆ ಬೇಸರ ಬಂದು ಅದು ನಿಂತು ಹೋಗುತ್ತದೆ. ಸಿಗರೇಟು ಸೇದುವ ವ್ಯಕ್ತಿಗೆ ಒಮ್ಮೆಗೇ ನಿಲ್ಲಿಸದೆ ಸತತವಾಗಿ ಸಿಗರೇಟುಗಳನ್ನು ಸೇದುವಂತೆ ಮಾಡಿದಾಗ ಆ ಚಟುವಟಿಕೆಯಲ್ಲಿ ಬೇಸರಿಕೆ ಬಂದು ಅದು ನಿಂತು ಹೋಗುತ್ತದೆ. ಇದಕ್ಕೆ ಆಯಾಸದ ವಿಧಾನ (Fatigue Method) ಎಂದು ಹೆಸರು.

ಅನಪೇಕ್ಷಿತ ಅನುಕ್ರಿಯೆಯನ್ನು ಉಂಟುಮಾಡುವ ಪ್ರಚೋದನೆಯನ್ನು ಆ ಅನುಕ್ರಿಯೆಗೆ ವಿರುದ್ಧವಾದ ಅಪೇಕ್ಷಿತ ಅನುಕ್ರಿಯೆಯನ್ನು ಉಂಟುಮಾಡುವ ಪ್ರಚೋದನೆಯೊಂದಿಗೆ ಪ್ರಸ್ತುತಪಡಿಸಿದಾಗ ಸಾತತ್ಯತೆಯ ನಿಯಮದಂತೆ ಮೊದಲನೆ ಪ್ರಚೋದನೆಗೂ ಅಪೇಕ್ಷಿತ ಅನುಕ್ರಿಯೆಗೂ ನಡುವೆ ಸಾಹಚರ್ಯವೇರ್ಪಟ್ಟು ಅನಪೇಕ್ಷಿತ ಅನುಕ್ರಿಯೆ ನಿಂತು ಹೋಗುತ್ತದೆ. ಉದಾಹರಣೆಗೆ T.V. ಶಬ್ದ ಓದುವುದಕ್ಕೆ ಅಡಚಣೆ ಉಂಟುಮಾಡುತ್ತಿದ್ದರೆ ಸ್ವಲ್ಪ ದಿನಗಳು T.V. ಹಾಕಿದ್ದಾಗ ಆಸಕ್ತಿಪೂರ್ಣ ಕಥೆ, ಕಾದಂಬರಿ ಓದಬೇಕು ಆಗ ಗಮನ ಓದುವುದರ ಕಡೆಗೆ ಕೇಂದ್ರೀಕೃತಗೊಂಡು T.V. ಶಬ್ದ ಅಭ್ಯಾಸವಾಗಿ ಅಡಚಣೆ ಎನ್ನಿಸುವುದಿಲ್ಲ. ನಂತರ ಶಾಲೆ ಕಾಲೇಜು ಪುಸ್ತಕಗಳನ್ನು T.V. ಶಬ್ದ ಮಾಡುತ್ತಿದ್ದರೂ ತೊಂದರೆಯಿಲ್ಲದೆ ಓದುವುದು ಅಭ್ಯಾಸವಾಗುತ್ತದೆ.

ವ್ಯವಸ್ಥಿತವಾಗಿ ರೂಪಿಸಿದ ಆಧಾರ ಕಲ್ಪನೆಗಳು (Postulates) ಮತ್ತು ಅವುಗಳಿಂದ ನಿಗಮನಗೊಳಿಸಿದ (Deduced) ಪ್ರಾಕಲ್ಪನೆಗಳಿಂದ (Hypotheses) ಕೂಡಿದ ಕ್ರಮಬದ್ಧ ವೈಜ್ಞಾನಿಕ ಸ್ವರೂಪದ ಕಲಿಕೆಯ ಸಿದ್ಧಾಂತವನ್ನು ರೂಪಿಸಿದ ಶ್ರೇಯಸ್ಸು ಅಮೇರಿಕಾದ ಯೇಲ್ ವಿಶ್ವವಿದ್ಯಾನಿಲಯದಲ್ಲಿ ಮನೋವಿಜ್ಞಾನವನ್ನು ಬೋಧಿಸುತ್ತಿದ್ದ ಕಾರ್ಕ್ ಹಲ್‌ಗೆ (1884–1952) ಸಲ್ಲುತ್ತದೆ. ಇವನು ತನ್ನ ಸಿದ್ಧಾಂತ ನಿರೂಪಣೆಗೆ ಆಧಾರಕಲ್ಪನೆಗಳು, ಪ್ರಮೇಯಗಳು, ಉಪಪ್ರಮೇಯಗಳು ಪ್ರಾಕಲ್ಪನೆಗಳನ್ನು ಒಳಗೊಂಡ ಯೂಕ್ಲಿಡ್ಡನ ರೇಖಾಗಣಿತದ ಮಾದರಿಯನ್ನು ಅನುಸರಿಸಿದ್ದರಿಂದ ಅವನ ಕಲಿಕಾ ಸಿದ್ಧಾಂತ ಸಂಕೇತಗಳು, ಸೂತ್ರಗಳನ್ನು ಒಳಗೊಂಡ ವ್ಯಾಪಕವಾದ ಮತ್ತು ನಿಖರವಾದ ಸಿದ್ಧಾಂತವೆನ್ನಿಸಿದೆ. ಈ ಕಾರಣದಿಂದಾಗಿ ಇವನ ಸಿದ್ಧಾಂತವನ್ನು ತಾರ್ಕಿಕ ನಿಗಮನಾತ್ಮಕ (Logico-deductive) ಅಥವಾ ಪ್ರಾಕಲ್ಪನಾತ್ಮಕ ಎಂದೂ ಹೇಳುತ್ತಾರೆ. ಹಾಲ್ ತನ್ನ ಸಿದ್ಧಾಂತವನ್ನು 1943ರಲ್ಲಿ ಪ್ರಕಟಿಸಿದ Principles of Behaviour ಎನ್ನುವ ಗ್ರಂಥದಲ್ಲಿ ವಿವರಿಸಿದ್ದಾನೆ. ಹಲ್ ಥಾರಂಡೈಕ್‌ನ ಪರಿಣಾಮ ನಿಯಮ ಮತ್ತು ಪ್ಯಾವ್‌ಲೋವನ ಅನುಬಂಧನ ನಿಯಮಗಳಿಂದ ಪ್ರಭಾವಿತನಾಗಿದ್ದಾನೆ.

ಹಲ್ ಪ್ರಚೋದನೆ → ಅನುಕ್ರಿಯಾ (S→R) ಮಾದರಿಯನ್ನು ಪ್ರಚೋದನೆ→ಜೀವಿ (organism)→ ಅನುಕ್ರಿಯೆ(S→O→R) ಮಾದರಿಗೆ ಬದಲಾಯಿಸಿಕೊಂಡನು. ಪ್ರಚೋದನೆ→ಅನುಕ್ರಿಯೆಗಳಂತೆ ಜೈವಿಕ ಆಂತರಿಕ ಸ್ಥಿತಿಯೂ ಕಲಿಕೆಯಲ್ಲಿ ಮುಖ್ಯವಾಗುತ್ತದೆ ಎಂದು ಅವನು ವಾದಿಸಿದನು. ಜೀವಿಯ ಈ ಆಂತರಿಕ ಸ್ಥಿತಿಯನ್ನು ಹಲ್ ಚೋದನೆ (Drive)ಎಂದು ಪರಿಭಾವಿಸಿಕೊಂಡನು. ಬಹುಮಾನ ಅಥವಾ ಪುನರ್ಬಲನ ನೀಡುವಿಕೆಯಿಂದ ಜೀವಿಯು ತನ್ನ ಚೋದನೆಯನ್ನು ಶಮನಗೊಳಿಸುವ ಅನುಕ್ರಿಯೆಯನ್ನು ಕಲಿತುಕೊಳ್ಳುತ್ತದೆ ಎಂದು ಹಲ್ ವಿವರಿಸಿದ. ಚೋದನೆಯನ್ನು ಶಮನಗೊಳಿಸುವ ಪ್ರಚೋದನೆಗೂ ಅದಕ್ಕೆ ಉಂಟಾಗುವ ಅನುಕ್ರಿಯೆಗೂ ಬಂಧವೇರ್ಪಟ್ಟು ಕಲಿಕೆ ಉಂಟಾಗುತ್ತದೆ. ಆದ್ದರಿಂದಲೇ ಈ ಸಿದ್ಧಾಂತವನ್ನು ಚೋದನ ಶಮನ ಸಿದ್ಧಾಂತ (Drive Reduction Theory) ಎಂದು ಹೇಳುತ್ತಾರೆ.

ಮಧ್ಯವರ್ತಿ ಚಲಕದ (Intervening Variable) ಪರಿಕಲ್ಪನೆಗೆ ಹಲ್ ಮಹತ್ವ ನೀಡಿದ್ದಾನೆ. ಇವು ಪ್ರಚೋದನೆ ಮತ್ತು ಅನುಕ್ರಿಯೆಯ ನಡುವೆ ಪ್ರವೇಶಿಸಿ ವರ್ತನೆಯನ್ನು ಪ್ರಭಾವಗೊಳಿಸುತ್ತವೆ. ಆದ್ದರಿಂದಲೇ ಹಲ್ S→R ಮಾದರಿಗೆ ಬದಲಾಗಿ ಮಧ್ಯವರ್ತಿ ಚಲಕವನ್ನು

Digitised by Bharatavani, CIIL

ಒಳಗೊಂಡ S→O→R ಮಾದರಿಯನ್ನು ಅನುಸರಿಸಿದ್ದಾನೆ. O ಸಂಕೇತ ಜೀವಿಯಲ್ಲಿನ ಮಧ್ಯವರ್ತಿ ಚಲಕವನ್ನು ಸೂಚಿಸುತ್ತದೆ.

ಹಲ್ ತನ್ನ ಸಿದ್ಧಾಂತಕ್ಕೆ ಪ್ಯಾವ್‌ಲೋವ್ ಮತ್ತು ಸ್ಕಿನ್ನರ್ ವಿವರಿಸಿದ ಅನುಬಂಧನ ಕಲಿಕೆಯನ್ನು ಆಧಾರವಾಗಿ ಇಟ್ಟುಕೊಂಡನು. SVR ಎನ್ನುವ ಸಂಕೇತ ಜೈವಿಕವಾದ ಪ್ರಚೋದನೆ ಅನುಕ್ರಿಯೆಯನ್ನು ಸೂಚಿಸುತ್ತದೆ. ಇದನ್ನು ಜೀವಿ ಕಲಿಯಬೇಕಾಗಿಲ್ಲ. SER ಸಂಕೇತ ಅನುಬಂಧನದಿಂದ ಕಲಿತ ಪ್ರಚೋದನೆ–ಅನುಕ್ರಿಯೆಯನ್ನು ಸೂಚಿಸುತ್ತದೆ. ಅನುಕ್ರಿಯೆಗೆ ಹಲ್ ಉತ್ತೇಜನ ಸತ್ವ (Excitatory Potential) ಎನ್ನುವ ಪದವನ್ನು ಉಪಯೋಗಿಸಿದ್ದಾನೆ. ಇದನ್ನು ಅನುಬಂಧಿತ ಪ್ರಚೋದನೆ ಮತ್ತು ಪುನರ್ಬಲನದ (ಪ್ರೋತ್ಸಾಹಕ ಪುನರ್ಬಲನ–K) ಜೊತೆಗೆ ಜೀವಿಯಲ್ಲಿನ ಇನ್ನೂ ಕೆಲವು ಚಲಕಗಳು ಪ್ರಭಾವಗೊಳಿಸುತ್ತದೆ ಎಂದು ಹಲ್ ಹೇಳುತ್ತಾನೆ. ಇವೇ ಮಧ್ಯವರ್ತಿ ಚಲಕಗಳು (Intervening Variables). ಚೋದನೆ (D), ಜೀವಿತಮ ಆಂತರಿಕ ಸ್ಥಿತಿ ($I_R$) ಮುಂತಾದವು ಇವುಗಳ ಉದಾಹರಣೆಗಳಾಗಿವೆ. ಕಲಿಕೆಯನ್ನು ಹಲ್ ಪ್ರಚೋದನೆ–ಅನುಕ್ರಿಯೆಯ ನಡುವೆ ಬಂಧದ ಪ್ರಬಲತೆಯ ರೂಪದಲ್ಲಿ ವಿವರಿಸುತ್ತಾನೆ.

ಕಲಿಕೆಯನ್ನು ಅವನು ಅಭ್ಯಾಸ ಬಲ (Habit Strength-$sH_R$) ಎಂದು ಕರೆದಿದ್ದಾನೆ. ನಿವ್ವಳ(Net) ಅಭ್ಯಾಸ ಬಲವನ್ನು ಪರಿಗಣಿಸುವಾಗ ಕೆಲವು ಮಧ್ಯವರ್ತಿ ಚಲಕಗಳ ಪ್ರಭಾವವನ್ನು ಅನುಕ್ರಿಯೆಯಿಂದ ತೆಗೆದು ಹಾಕಬೇಕೆನ್ನುತ್ತಾನೆ. ಉತ್ತೇಜನ ಸತ್ವದ ಸೂತ್ರವನ್ನು ಹಲ್ ಹೀಗೆ ರೂಪಿಸಿದ್ದಾನೆ: $sE_R=V_2xDxKxJxsH_R-I_R-S/R-sL_R-sO_R$.

ಈ ಸೂತ್ರದ ಸಂಕೇತಗಳ ವಿವರಣೆ ಹೀಗಿದೆ– $sE_R$ ವರ್ತನೆ ಅಥವಾ ಅನುಕ್ರಿಯೆ, $V_2$ = ಪ್ರಚೋದನೆಯ ವಿಧ ಮತ್ತು ತೀವ್ರತೆ, D =ಚೋದನ ಸ್ಥಿತಿ, K= ಪುನರ್ಬಲನದ ಪ್ರಮಾಣ, J= ಪುನರ್ಬಲನದ ವಿಳಂಬ, $I_R$= ಜೀವಿಯ ಆಂತರಿಕ ಪ್ರತಿರೋಧ (ಆಯಾಸ, ಹಿಂದಿನ ಅನುಭವ ಇತ್ಯಾದಿ), $sL_R$ = ಬೇರೆ ಅನುಬಂಧನದಿಂದ ಉಂಟಾಗುವ ಪ್ರತಿರೋಧ $sL_R$ ಪ್ರಚೋದನೆಯ ವ್ಯಕ್ತವಾಗದ ಕನಿಷ್ಠ ಪ್ರಭಾವ, $SO_R$= ಬೇರೆ ಬೇರೆ ಪ್ರಯತ್ನಗಳಲ್ಲಿ ಅನುಕ್ರಿಯೆಯ ಪ್ರಮಾಣದಲ್ಲಿ ಉಂಟಾಗುವ ವ್ಯತ್ಯಾಸ ವರ್ತನ ಆಂದೋಲನ, ಈ ಸೂತ್ರದ ಪ್ರಕಾರ ಉತ್ತೇಜನ ಸತ್ವ ಅಥವಾ ಕಲಿತ (ಅನುಬಂಧಿತಗೊಂಡ) ಅನುಕ್ರಿಯೆ ಸೂತ್ರದಲ್ಲಿನ ಮೊದಲ 5 ಚಲಕಗಳ ಗುಣಕವಾಗಿದೆ. ಇದರಲ್ಲಿ ನಂತರದ 4 ಮಧ್ಯವರ್ತಿ ಚಲಕಗಳ ಪ್ರಭಾವವನ್ನು ತೆಗೆದುಹಾಕಬೇಕು. ಆಗ ನಿವ್ವಳ ಅನುಕ್ರಿಯೆ (Net Responce) ದೊರೆಯುತ್ತದೆ. ಜೀವಿ ಒಂದು ಗುರಿಯನ್ನು ತಲುಪಲು ಅನೇಕ ಪರ್ಯಾಯ ಮಾರ್ಗಗಳನ್ನು ಕಲಿಯುತ್ತದೆ ಅಂದರೆ ಅಭ್ಯಾಸ ಮಾಡುತ್ತದೆ. ಈ ಮಾರ್ಗಗಳು ಗುರಿ ತಲುಪುವ ಕಾಲ ಮತ್ತು ದೊರೆಯುವ ಪುನರ್ಬಲನದ ಪ್ರಮಾಣದ ಆಧಾರದ ಮೇಲೆ ಶ್ರೇಣಿಬದ್ಧಗೊಳ್ಳುತ್ತವೆ. ಯಾವ ಮಾರ್ಗದಲ್ಲಿ ಬಹಳ ಬೇಗ ಒಳ್ಳೆಯ ಪುನರ್ಬಲನ ದೊರೆಯುತ್ತದೆಯೋ ಅದರ ಅಭ್ಯಾಸ ಬಲ ಪ್ರಬಲಗೊಳ್ಳುತ್ತದೆ. ಈ ರೀತಿಯ ಅಭ್ಯಾಸಬಲದ ಶ್ರೇಣಿಗೆ ಅಭ್ಯಾಸಬಲ ಸಮೂಹ ಶ್ರೇಣಿ (Habit Family Hierarchy) ಎಂದು ಹೆಸರು.

ಹಲ್, ಥಾರಂಡೈಕ್, ಪ್ಯಾವ್‌ಲೋವ್ ಮತ್ತು ಸ್ಕಿನ್ನರರ ಪುನರ್ಬಲನದ ಪರಿಕಲ್ಪನೆಯನ್ನು ಒಪ್ಪಿಕೊಂಡು ಅದಕ್ಕೆ ಮಹತ್ವ ಕೊಟ್ಟಿದ್ದಾನೆ. ಪುನರ್ಬಲನ ಜೀವಿಯ ಚೋದನೆಯನ್ನು ಅಥವಾ ಅಗತ್ಯವನ್ನು ತೃಪ್ತಿಗೊಳಿಸಲು (ಶೂನ್ಯಗೊಳಿಸಲು) ಸಹಾಯಕವಾಗುತ್ತದೆ. ಹಲ್ ಪುನರ್ಬಲನವನ್ನು **ಪ್ರಾಥಮಿಕ ಪುನರ್ಬಲನ** (ನೇರ ಜೈವಿಕ ತೃಪ್ತಿ ನೀಡುವುದು) ಮತ್ತು ಅನುಷಂಗಿಕ ಪುನರ್ಬಲನ (Secondary Reinforcement) ಎಂದು ವರ್ಗೀಕರಿಸಿದ್ದಾನೆ. ಇದು ಪರೋಕ್ಷವಾದುದು, ಅನುಬಂಧಿತವಾದುದಾಗಿರುತ್ತದೆ. ಅನುಕ್ರಿಯೆಗೂ ಪುನರ್ಬಲನಕ್ಕೂ (ಗುರಿಗೂ) ಇರುವ ಕಾಲದ ಅಂತರ ಕಲಿಕೆಯ ಮೇಲೆ ಪ್ರಭಾವ ಬೀರುತ್ತದೆ. ಈ ಅಂಶವೇ ಪುನರ್ಬಲನದ ವಿಳಂಬ (J). ಪುನರ್ಬಲನದ ವಿಳಂಬಕ್ಕೂ ವರ್ತನೆಯ ವೇಗಕ್ಕೂ ಇರುವ ಸಂಬಂಧವನ್ನು ಚಿತ್ರಿಸುವ ನಕ್ಷೆಯೆ **ಪುನರ್ಬಲನದ ಇಳುಕಲು** (Gradient of Reinforcement). ಪುನರ್ಬಲನ ಅಥವಾ ಗುರಿ ಸಮೀಪವಾದಷ್ಟು ಅನುಕ್ರಿಯೆಯ ವೇಗ ಹೆಚ್ಚಾಗುತ್ತದೆ.

ಹಲ್ ಪ್ರಚೋದನೆ–ಅನುಕ್ರಿಯೆಯ ಕಲಿಕೆಯ ಅಗತ್ಯವಿಲ್ಲದ ಜೈವಿಕ ಬಂಧದಿಂದ ($sV_R$) ಆರಂಭಿಸಿ ಪ್ರಚೋದನೆಗಳು ಯಾಂತ್ರಿಕವಾಗಿ ವರ್ತನೆಯನ್ನು ನಿರ್ದೇಶಿಸುವ ರೀತಿಯ ಕಲಿಕೆಯ ಎಂಟು ವಿಧದ ಕಲಿಕೆಗಳನ್ನು ವಿವರಿಸಿದ್ದಾನೆ.

ಹಲ್‌ನ ಸಿದ್ಧಾಂತವನ್ನು ವ್ಯವಸ್ಥಿತ ವೈಜ್ಞಾನಿಕ ರೀತಿಯ ಸಿದ್ಧಾಂತ ರಚನೆ ದೃಷ್ಟಿಯಿಂದ ಅಧ್ಯಯನ ಮಾಡಬೇಕು. ಈ ಸಿದ್ಧಾಂತದ ಸ್ಪಷ್ಟವಾದ ಶೈಕ್ಷಣಿಕ ನಿಹಿತಾರ್ಥಗಳು ಇಲ್ಲವೆನ್ನಿಸುತ್ತದೆ. ಹಲ್‌ನ ಸಿದ್ಧಾಂತದ ಮಾದರಿಯನ್ನು ಅನುಸರಿಸಿ **ಡಲ್ಲಾರ್ಡ್ ಮತ್ತು ಮಿಲ್ಲರ್ ಮೌರಲ್ ಸ್ಪೆನ್ಸ್, ಆಮ್‌ಸೆಲ್** ಮತ್ತು **ಲೋಗನ್** ಎಂಬ ಮನೋವಿಜ್ಞಾನಿಗಳು ತಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿದ್ದಾರೆ.

ಜರ್ಮನಿಯಲ್ಲಿ **ಹರ್ಸೆಲ್** ಎಂಬ ತತ್ವಜ್ಞಾನಿಯಿಂದ ಆರಂಭವಾದ ವ್ಯಕ್ತಿಗತ ಅನುಭವಗಳಿಗೆ, ಪ್ರಜ್ಞಾಪೂರ್ವಕ ಅನುಭವದ ವಿಶ್ಲೇಷಣೆಗೆ, ಘಟನೆಗಳ ಇಡಿಯಾದ ಪ್ರತ್ಯಾಕ್ಷನುಭವಕ್ಕೆ, ಅಂತಃಪ್ರೇರಣೆಗೆ ಮಹತ್ವ ನೀಡುವ ಘಟನಾವಾದದಿಂದ (Phenomenology) ಪ್ರಭಾವಿತಗೊಂಡು ಜರ್ಮನಿಯವರೇ ಆದ **ಕೋಹ್ಲರ್, ಕಾಫ್ಕ ಮತ್ತು ವರ್ದೈಮರ್** ಎಂಬ ಮೂವರು ಮನೋವಿಜ್ಞಾನಿಗಳು ರೂಪಿಸಿದ ಕಲಿಕೆಯ ಸಿದ್ಧಾಂತವೇ ಗೆಸ್ಟಾಲ್ಟ್ ಸಿದ್ಧಾಂತ. ಇದು ಮುಖ್ಯವಾಗಿ ಪ್ರತ್ಯಾಕ್ಷನುಭವಕ್ಕೆ (Perception) ಸಂಬಂಧಿಸಿರುವುದರಿಂದ ಇದನ್ನು **ಪ್ರತ್ಯಾಕ್ಷನುಭವದ ಸಿದ್ಧಾಂತ** ಎಂದು ಹೇಳುವುದು ಹೆಚ್ಚು ಸೂಕ್ತವೆನ್ನಿಸುತ್ತದೆ. **ಗೆಸ್ಟಾಲ್ಟ್** (Gestalt) ಎನ್ನುವುದು ಜರ್ಮನ್ ಭಾಷೆಯ ಶಬ್ದ. ಇದರ ಅರ್ಥ ರೂಪ, ವಿನ್ಯಾಸ, ಸಂರಚನೆ

Digitised by Bharatavani, CIIL

ಅಥವಾ ಆಕೃತಿ ಎಂದಾಗುತ್ತದೆ. ಈ ಸಿದ್ಧಾಂತ ಅನುಭವವನ್ನು ಇಡಿಯಾಗಿ, ಸಂಪೂರ್ಣವಾಗಿ ಪ್ರತ್ಯಾಕ್ಷನುಭವಿಸಿ ಅರ್ಥೈಸುವ ಅಥವಾ ವ್ಯಾಖ್ಯಾನಿಸುವ ವಿಧಾನಕ್ಕೆ ಮಹತ್ವಕೊಡುವುದರಿಂದ ಸಿದ್ಧಾಂತಕ್ಕೆ **ಗೆಸ್ಟಾಲ್ ಸಿದ್ಧಾಂತ** ಎಂಬ ಹೆಸರು ಬಂದಿದೆ.

ಗೆಸ್ಟಾಲ್ಟ್ ಸಿದ್ಧಾಂತದ ಮುಖ್ಯ ಕೊಡುಗೆಗಳು ಮೂರು. ಕಾಫ್ಕ್ ರೂಪಿಸಿದ ಪ್ರತ್ಯಾಕ್ಷನುಭವದ (ಕಲಿಕೆಯ) ನಿಯಮಗಳು, ಕೋಹ್ಲರ್‌ನ ಒಳನೋಟ ಕಲಿಕೆ ಮತ್ತು ವರ್ದೈಮರ್ ವಿವರಿಸಿದ ಉತ್ಪಾದಕ ಕಲಿಕೆ.

ಕಾಫ್ಕ್ ಚಲನೆಯ ಭ್ರಮೆಯ (Phi-Phenomenon) ಬಗ್ಗೆ ಅನೇಕ ಪ್ರಯೋಗಗಳನ್ನು ಮಾಡಿ ಈ ಕೆಳಗಿನ ಪ್ರತ್ಯಾಕ್ಷನುಭವದ ನಿಯಮಗಳನ್ನು ರೂಪಿಸಿದ್ದಾನೆ. ಇವುಗಳನ್ನು ಬೋಧನೆಯಲ್ಲಿ ಅಳವಡಿಸಬಹುದು.

1. **ಆಕೃತಿ ಮತ್ತು ಹಿನ್ನೆಲೆ ನಿಯಮ:** ಪ್ರತ್ಯಾಕ್ಷನುಭವದಲ್ಲಿ ಆಕೃತಿ ಮತ್ತು ಹಿನ್ನೆಲೆ ಒಟ್ಟಾಗಿ ಪ್ರತ್ಯಾಕ್ಷನುಭವ ಕ್ಷೇತ್ರವನ್ನು ರೂಪಿಸುತ್ತವೆ. ಆಕೃತಿ ಮತ್ತು ಹಿನ್ನೆಲೆ ಕೆಲವು ಲಕ್ಷಣಗಳಿಂದಾಗಿ (ಸ್ಪಷ್ಟತೆ, ತೀವ್ರತೆ, ಬದಲಾವಣೆ ಇತ್ಯಾದಿ) ಬದಲಾವಣೆ ಹೊಂದುತ್ತಾ ಪ್ರತ್ಯಾಕ್ಷನುಭವದ ನಿಲುಕಿಗೆ ಬರುತ್ತದೆ. ಆಗಾಗ್ಗೆ ಬದಲಾವಣೆ ಹೊಂದುವ ಚಿತ್ರಗಳು ಇದಕ್ಕೆ ಉದಾಹರಣೆಗಳಾಗಿವೆ. ಪಕ್ಕದ ಚಿತ್ರದಲ್ಲಿ ಎರಡು ಮುಖಗಳು ಎದುರೆದುರಾಗುವುದು ಮತ್ತು ಒಂದು ದೊಡ್ಡ ಕಪ್ ಆಗಾಗ್ಗೆ ಗೋಚರಿಸುತ್ತವೆ. ಇವು ತಾವೇತಾವಾಗಿ ನಮಗೆ ಗೋಚರಿಸುತ್ತವೆ.
2. **ಸಮೀಪತೆಯ ನಿಯಮ:** ಪರಸ್ಪರ ಹತ್ತಿರವಿರುವ ಪ್ರಚೋದನೆಗಳನ್ನು ಒಂದು ಗುಂಪಾಗಿ ನೋಡುತ್ತೇವೆ.
3. **ಸಮಾನತೆಯ ನಿಯಮ:** ಸಮಾನ ಲಕ್ಷಣಗಳುಳ್ಳ ಪ್ರಚೋದನೆಗಳು ಒಂದೇ ಗುಂಪಾಗಿ ಕಾಣಿಸುತ್ತವೆ.
4. **ಏಕದಿಶೆಯ ನಿಯಮ:** ಒಂದೇ ದಿಶೆಯಲ್ಲಿ ಮುಂದುವರಿಯುವ ಪ್ರಚೋದನೆಗಳು ನಿರಂತರತೆಯನ್ನು ಸೂಚಿಸುತ್ತವೆ.
5. **ಸರಳತೆಯ ನಿಯಮ:** ಪ್ರತ್ಯಕ್ಷಾನುಭವದ ಕ್ಷೇತ್ರವನ್ನು ಸರಳ ರೀತಿಯಲ್ಲಿ ವ್ಯವಸ್ಥಿತಗೊಳಿಸಿ ನೋಡುವ ಪ್ರವೃತ್ತಿಯಿದೆ. ಇದನ್ನು ಉತ್ತಮ ಆಕೃತಿ (Pragnanzy) ನಿಯಮ ಎಂದು ಹೇಳುತ್ತಾರೆ.
6. **ಪೂರಕ (Closure) ನಿಯಮ:** ಆಕೃತಿಯಲ್ಲಿರುವ ಅಂತರಗಳನ್ನು ಪೂರ್ಣಗೊಳಿಸಿ ಅರ್ಥಪೂರ್ಣವಾಗಿಸಿಕೊಂಡು ನೋಡುತ್ತೇವೆ.

ಕೋಹ್ಲರ್ ಎರಡನೇ ಮಹಾಯುದ್ಧದ ಸಮಯದಲ್ಲಿ ಕಾರಣಾಂತರದಿಂದ ಕೆನರಿ ದ್ವೀಪಗಳಲ್ಲಿ ಉಳಿಯಬೇಕಾಗಿ ಬಂದಿತು. ಈ ಸಮಯದಲ್ಲೇ ಅವನು ಗೆಳೆಯ ಕಾಫ್ಕನೊಂದಿಗೆ ಚಿಂಪಾಂಜಿಗಳ ಮೇಲೆ ತನ್ನ ಪ್ರಸಿದ್ಧ ಕಲಿಕೆಯ ಪ್ರಯೋಗಗಳನ್ನು ಮಾಡಿ ಒಳನೋಟ ಕಲಿಕೆಯನ್ನು (Insight Learning) ವಿವರಿಸಿದನು. ಈ ಪ್ರಯೋಗಗಳನ್ನು ಕೋಹ್ಲರ್ Mentality of Apes ಎಂಬ ಪುಸ್ತಕದಲ್ಲಿ ವಿವರಿಸಿದ್ದಾನೆ. ಹಸಿದ ಚಿಂಪಾಂಜಿಯನ್ನು ಒಂದು ದೊಡ್ಡ ಪಂಜರದಲ್ಲಿಟ್ಟು ಅದರ ಒಳಮಾಳಿಗೆಯಿಂದ ಒಂದು ಬಾಳೆಹಣ್ಣಿನ ಗೊನೆಯನ್ನು ತೂಗುಬಿಟ್ಟನು. ಅದು ಚಿಂಪಾಂಜಿಗೆ ನಿಲುಕದಷ್ಟು ಎತ್ತರದಲ್ಲಿತ್ತು. ಇದರ ಜೊತೆ ಪರಸ್ಪರ ಸೇರಿಸಬಹುದಾದ ಒಂದೆರೆಡು ಕೋಲುಗಳನ್ನು ಇಟ್ಟನು. ಚಿಂಪಾಂಜಿ ಒಂದೆರಡು ಬಾರಿ ನೆಗೆದು ಹಣ್ಣು ಪಡೆಯಲು ಪ್ರಯತ್ನಿಸಿ ವಿಫಲವಾಗಿ ಸುಮ್ಮನಾಯಿತು. ನಂತರ ಇದ್ದಕ್ಕಿಂದ್ದಂತೆ ಏನೋ ಹೊಳೆಯಿತು ಎನ್ನುವಂತೆ ಚಿಂಪಾಂಜಿ ಕೋಲನ್ನು ಉಪಯೋಗಿಸಿ ಹಣ್ಣನ್ನು ಪಡೆದುಕೊಂಡು ತಿಂದಿತು. ಇದೇ ರೀತಿಯ ಇನ್ನೂ ಕೆಲವು ಪ್ರಯೋಗಗಳು ನಡೆದವು. ಪೆಟ್ಟಿಗೆಗಳನ್ನು ಇಟ್ಟಾಗ ಚಿಂಪಾಂಜಿ ಪೆಟ್ಟಿಗೆಗಳನ್ನು ಒಂದರ ಮೇಲೆ ಮತ್ತೊಂದನ್ನಿಟ್ಟು ಹಣ್ಣನ್ನು ಪಡೆದುಕೊಂಡಿದೆ. ಅಂದರೆ ಚಿಂಪಾಂಜಿ ಒಳನೋಟದಿಂದ ಸಮಸ್ಯೆಯ ಪರಿಹಾರವನ್ನು ಕಂಡುಕೊಂಡಿರಬೇಕೆಂದು ಕೊಹ್ಲರ್ ತರ್ಕಿಸಿ ಈ ರೀತಿಯ ಕಲಿಕೆಯನ್ನು **ಒಳನೋಟ ಕಲಿಕೆ** (Insightful Learning) ಎಂದು ಹೆಸರಿಸಿದನು.

ಕೊಹ್ಲರನ ಪ್ರಕಾರ ಒಳನೋಟ ಕಲಿಕೆ ಈ ಲಕ್ಷಣಗಳನ್ನು ಹೊಂದಿದೆ. ಪ್ರತ್ಯಕ್ಷಾನುಭವ ಕ್ಷೇತ್ರವನ್ನು ಎಚ್ಚರಿಕೆಯಿಂದ ವೀಕ್ಷಿಸಲಾಗುತ್ತದೆ. ಗಮನ ಸಮಸ್ಯೆಯ ಕಡೆಗೆ ಕೇಂದ್ರೀಕೃತವಾಗಿರುತ್ತದೆ. ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗೆ ತಪ್ಪಾದ ವರ್ತನೆಯುಂಟಾಗುತ್ತದೆ. ನಂತರ ಸ್ವಲ್ಪ ಸಮಯ ನಿಷ್ಕ್ರಿಯತೆ ಕಂಡುಬರುತ್ತದೆ ಆಮೇಲೆ ಇದ್ದಕ್ಕಿಂದ್ದಂತೆ ಪರಿಹಾರ ಹೊಳೆದು ಅಂದರೆ ಒಳನೋಟವುಂಟಾಗಿ ಸಮಸ್ಯೆಯ ಪರಿಹಾರವಾಗುತ್ತದೆ. ಇದನ್ನು **ಕೊಹ್ಲರ್ 'ಆಹಾ'** ಅನುಭವ ಎಂದು ಕರೆದಿದ್ದಾನೆ. ಒಮ್ಮೆ ಹೊಳೆದ ಒಳನೋಟ ಅದೇ ರೀತಿಯ ಸಮಸ್ಯೆಗಳಿಗೆ ಸುಲಭವಾಗಿ ವರ್ಗಾಯಿಸಲ್ಪಡುತ್ತದೆ. ಒಳನೋಟ ಪ್ರಯತ್ನ–ದೋಷ ಕಲಿಕೆ ಮತ್ತು ಅನುಬಂಧನ ಕಲಿಕೆಗಳಿಗಿಂತ ಮೇಲ್ಮಟ್ಟದ್ದಾಗಿದ್ದು ಮಾನವ ಕಲಿಕೆಯನ್ನು ಅರ್ಥಪೂರ್ಣವಾಗಿ ವಿವರಿಸುತ್ತದೆ. ಒಳನೋಟ ಕಲಿಕೆ ತರಗತಿಯ ಬೋಧನ–ಕಲಿಕೆಗೆ ಹೆಚ್ಚಿನ ನಿಹಿತಾರ್ಥಗಳನ್ನು ಹೊಂದಿದೆ. ಕೊಹ್ಲರ್‌ನ ನಂತರ ಹಾರ್ಲೋ ಮತ್ತು ಯರ್ಕಿಸ್ ಎಂಬುವರು ಚಿಂಪಾಂಜಿಗಳ ಮೇಲೆ ಪ್ರಯೋಗಗಳನ್ನು ಮಾಡಿ ಕಲಿಕೆಯ ಸಿದ್ಧತೆ (Learning Set) ಎಂಬ ಪರಿಕಲ್ಪನೆಯನ್ನು ವಿವರಿಸಿದರು. ಚಿಂಪಾಂಜಿಗಳು ಕಲಿಕೆಯ ಮಾನಸಿಕ ಸಿದ್ಧತೆಯನ್ನು ಪಡೆದುಕೊಂಡು ನೂರಾರು ಸಮಸ್ಯೆಗಳನ್ನು ಪರಿಹರಿಸುವುದನ್ನು ಕಲಿತುಕೊಂಡವು.

ವರ್ದೈಮರ್ 3ನೇ ಗ್ರೇಡ್ ಮಕ್ಕಳಿಗೆ ಮಾಡಿದ ಪ್ರಯೋಗದಲ್ಲಿ ಮೊದಲು ಮಕ್ಕಳು ಆಯತಾಕಾರದ ಕ್ಷೇತ್ರಫಲವನ್ನು ಕಂಡು ಹಿಡಿಯುವುದನ್ನು ಮತ್ತು ಅದರ ಸೂತ್ರವನ್ನು ಕಲಿತುಕೊಂಡರು. ನಂತರ ಅವರಿಗೆ ವಿವಿಧ ಅಳತೆಯ ಸಮಾಂತರ ಚತುರ್ಭುಜದ (Parallelogram) ಆಕೃತಿಗಳನ್ನು ಕೊಟ್ಟು ಅವುಗಳ ಕ್ಷೇತ್ರಫಲವನ್ನು ಕಂಡು ಹಿಡಿಯಲು ಹೇಳಲಾಯಿತು. ಮಕ್ಕಳು ಸಮಸ್ಯೆಗಳನ್ನು

Digitised by Bharatavani, CIIL

ಬಿಡಿಸಲು ಪ್ರಯತ್ನಿಸತೊಡಗಿದಾಗ ಒಬ್ಬ ಹುಡುಗಿ ವರ್ದೈಮರ್‌ನಿಂದ ಕತ್ತರಿಯನ್ನು ಪಡೆದುಕೊಂಡು ಸಮಾಂತರ ಚತುರ್ಭುಜದ ಎರಡೂ ಕಡೆ ಇದ್ದ ತ್ರಿಭುಜಾಕಾರದ ಭಾಗಗಳನ್ನು ಕತ್ತರಿಸಿ ಅವೆರಡನ್ನು ತಿರುಗುಮುರುಗಾಗಿ ಜೋಡಿಸಿ ಚತುರ್ಭುಜವಾಗಿ ಪರಿವರ್ತಿಸಿ ಅದನ್ನು ಕತ್ತರಿಸಿ ಉಳಿದಿದ್ದ ಆಕೃತಿಗೆ ಜೋಡಿಸಿ ಅದನ್ನು ಆಯತಾಕೃತಿಯಾಗಿ ಮಾರ್ಪಡಿಸಿಕೊಂಡಳು. ಈ ಮೊದಲೇ ಆಯತಾಕೃತಿಯ ಕ್ಷೇತ್ರಫಲವನ್ನು ಕಂಡುಹಿಡಿಯುವುದನ್ನು ಕಲಿತಿದ್ದರಿಂದ ಕತ್ತರಿಸಿ ಮಾಡಿದ ಆಯತಾಕೃತಿಯ ಮತ್ತು ಇತರ ಆಯತಾಕೃತಿಗಳ ಕ್ಷೇತ್ರಫಲವನ್ನು ಸುಲಭವಾಗಿ ಕಂಡುಹಿಡಿಯಲು ಸಾಧ್ಯವಾಯಿತು. ವರ್ದೈಮರ್ ಈ ರೀತಿಯ ಸಮಸ್ಯೆ ಪರಿಹಾರವನ್ನು ಉತ್ಪಾದಕ ಯೋಜನೆ (Productive Thinking) ಎಂದು ಕರೆದಿದ್ದಾನೆ. ಈ ರೀತಿಯ ಯೋಜನೆಯ ಗುರಿಯನ್ನು ನಿರ್ಧರಿಸಿಕೊಳ್ಳುವುದು, ಸಮಸ್ಯೆಯ ವಿಶ್ಲೇಷಣೆ, ಸಮಸ್ಯಾ ಸನ್ನಿವೇಶವನ್ನು ಪುನರ್ ಸಂರಚಿಸಿಕೊಳ್ಳುವುದು, ಸಮಸ್ಯೆ ಪರಿಹಾರವನ್ನು ಅರ್ಥಪೂರ್ಣವಾಗಿ ಪ್ರಾಕಲ್ಪಿಸಿಕೊಳ್ಳುವುದು ಮುಂತಾದ ಹಂತಗಳನ್ನು ಒಳಗೊಂಡಿದೆ. ಶಾಲಾಕಲಿಕೆಯಲ್ಲಿ ಈ ರೀತಿಯ ಯೋಜನೆಯ ಮಹತ್ವ ಸ್ಪಷ್ಟವಿದೆ.

ಅಮೇರಿಕಾದ ಮೆಸಾಸುಸೆಟ್ಸ್‌ನಲ್ಲಿ ಜನಿಸಿದ ಎಡ್ವರ್ಡ್ ಚೇಸ್ ಟೋಲ್‌ಮನ್ (1886–1959) ಕ್ಷೇತ್ರ–ಸಂಜ್ಞಾನಾತ್ಮಕವಾದಿ ಕಲಿಕಾ ಸಿದ್ಧಾಂತಗಳ ಗುಂಪಿನಲ್ಲಿ ಮತ್ತೊಬ್ಬ ಪ್ರಸಿದ್ಧ ಮನೋವಿಜ್ಞಾನಿಯಾಗಿದ್ದಾನೆ. ಇವನು ಪ್ರಸಿದ್ಧ ಮೆಸಾಸುಸೆಟ್ಸ್ ತಂತ್ರಜ್ಞಾನ ಸಂಸ್ಥೆಯಲ್ಲಿ (M.I.T) ಇಂಜಿನಿಯರಿಂಗ್ ಪದವಿ ಪಡೆದ ನಂತರವೂ ಮನೋವಿಜ್ಞಾನದಲ್ಲಿ ಆಸಕ್ತಿ ತಳೆದು ಅಧ್ಯಯನ ಮಾಡಿ ಪ್ರಸಿದ್ಧಿ ಪಡೆದನು. ಇವನು ತಾನು ಸಂಜ್ಞಾನಾತ್ಮಕವಾದಿಯಾದರೂ ವರ್ತನವಾದಿಯೂ ಆಗಿದ್ದೇನೆ ಎಂದು ಪ್ರತಿಪಾದಿಸಿ ತನ್ನ ವಾದವನ್ನು ಸಂಜ್ಞಾನಾತ್ಮಕ ವರ್ತನವಾದ (Cognitive Behaviourism) ಎಂದು ಕರೆದಿದ್ದಾನೆ. ಟೋಲ್‌ಮನ್ ಉದ್ದೇಶಪೂರ್ವಕ ವರ್ತನೆಗೆ ಮಹತ್ವಕೊಟ್ಟಿರುವುದರಿಂದ ಇವನ ಕಲಿಕೆಯ ಸಿದ್ಧಾಂತವನ್ನು ಉದ್ದೇಶಾತ್ಮಕ ವರ್ತನವಾದ (Purposive Behaviourism) ಎಂದು ಹೆಸರಿಸಲಾಗಿದೆ.

ಟೋಲ್‌ಮನ್ನನ ನಿಲುವು ವಿರೋಧಾಭಾಸಾತ್ಮಕವಾಗಿ ಕಂಡು ಬಂದರೂ ಅವನ ವಿವರಣೆಯಿಂದ ಈ ನಿಲುವು ಸ್ಪಷ್ಟವಾಗುತ್ತದೆ. ಟೋಲ್‌ಮನ್ ವರ್ತನೆಯಲ್ಲಿ ಸೂಕ್ಷ್ಮ ಅಥವಾ ಆಣವಿಕ (Atomistic) ವರ್ತನೆ (Molecular behaviour) ಮತ್ತು ಸ್ಥೂಲ ವರ್ತನೆ (Molar behaviour) ಎಂದು ಎರಡು ವರ್ಗಗಳನ್ನು ಪರಿಭಾವಿಸಿಕೊಂಡಿದ್ದಾನೆ. ವರ್ತನೆಯನ್ನು ನಿರ್ದಿಷ್ಟ ಪ್ರಚೋದನೆ–ಅನುಕ್ರಿಯೆಯ ಬಂಧಗಳಾಗಿ ಪರಿಗಣಿಸುವುದು ಸೂಕ್ಷ್ಮ (ಆಣವಿಕ) ದೃಷ್ಟಿಯಾಗುತ್ತದೆ. ಆದರೆ ವರ್ತನೆಯನ್ನು ಇಡಿಯಾದ, ಅರ್ಥಪೂರ್ಣವಾದ ಉದ್ದೇಶ (ಧ್ಯೇಯ) ನಿರ್ದೇಶಿತವಾದ ವರ್ತನೆಯ ಘಟಕಗಳಾಗಿ ನೋಡುವುದು ಸ್ಥೂಲ ಉಪಕ್ರಮವಾಗುತ್ತದೆ. ವರ್ತನೆಯನ್ನು ಸ್ಥೂಲ ವರ್ತನೆಗಳಾಗಿ (Molar) ಪರಿಗಣಿಸುವುದರಿಂದಲೂ, ವರ್ತನೆಯ ವಸ್ತುನಿಷ್ಠ ಅಧ್ಯಯನದಲ್ಲಿ ಆಸಕ್ತಿವಹಿಸುವುದರಿಂದಲೂ ತಾನು ಒಬ್ಬ ವರ್ತನವಾದಿ ಎನ್ನುವುದು ಟೋಲ್‌ಮನ್ನನ ಸಮರ್ಥನೆಯಾಗಿದೆ. ಆದರೆ ವರ್ತನೆಯನ್ನು ವ್ಯಾಖ್ಯಾನಿಸುವುದರಲ್ಲಿ ತನ್ನದು ಕ್ಷೇತ್ರ–ಸಂಜ್ಞಾನಾತ್ಮಕ ನಿಲುವು ಎಂದು ಅವನು ವಾದಿಸಿದ್ದಾನೆ. ವರ್ತನೆ ಮೃದುತ್ವದ ಲಕ್ಷಣವನ್ನು ಹೊಂದಿರುವುದರಿಂದ ಅದನ್ನು ಬೇಕಾದಂತೆ ಬದಲಿಸಲು ಸಾಧ್ಯವಿದೆ ಎನ್ನುತ್ತಾನೆ.

ಕಲಿಕೆಯನ್ನು ಟೋಲ್‌ಮನ್ ಪ್ರಚೋದನೆಗಳ ಅರ್ಥಪೂರ್ಣ ಸಮೂಹಕ್ಕೆ ಅವುಗಳ ನಡುವೆ ಸಂಬಂಧಗಳಿಗೆ ಅನುಕ್ರಿಯಿಸುವ ಪ್ರಕ್ರಿಯೆ ಎಂದು ಪರಿಗಣಿಸಿದ್ದಾನೆ. ಈ ರೀತಿಯ ಕಲಿಕೆಯನ್ನು ಅವನು ಸಂಕೇತ–ಗೆಸ್ಟಾಲ್ಟ್ ಕಲಿಕೆ (Sign-Gestalt Learning) ಎಂದು ಕರೆದಿದ್ದಾನೆ. ಸಂಕೇತಗಳೆಂದರೆ ಪ್ರಚೋದನೆಗಳು. ಗೆಸ್ಟಾಲ್ಟ್ ಎಂದರೆ ಅವುಗಳ ಆಕೃತಿ, ವಿನ್ಯಾಸ, ಸಂರಚನೆ, ಅರ್ಥಪೂರ್ಣತೆ. ಸಂಕೇತಗಳು ಮಹತ್ವಪೂರ್ಣವಾದವುಗಳಾಗಿದ್ದು ಗುರಿಗಳನ್ನು, ಬಹುಮಾನಗಳನ್ನು ಸೂಚಿಸುತ್ತವೆ. ಹೊರಗಣ ಸಂವೇದನೆಗಳು (ಸಂಕೇತಗಳು) ಮತ್ತು ಆಂತರಿಕವಾಗಿ ಮೂಡುವ ಮಾನಸಿಕ ಬಿಂಬಗಳ ಅಥವಾ ಪ್ರತ್ಯಾಕ್ಷನುಭವಗಳ ಸಾಹಚರ್ಯದ ರೂಪದಲ್ಲಿ ಮತ್ತು ಪರಸ್ಪರ ಹೆಣೆದುಕೊಳ್ಳುವ ಸಂಬಂಧಗಳು ಉಂಟಾಗಿ ಬಂದು ಗೆಸ್ಟಾಲ್ಟ್ (ಸನ್ನಿವೇಶದ ಸಮಗ್ರ ಚಿತ್ರ) ರಚಿತವಾಗುತ್ತದೆ.

ಟೋಲ್‌ಮನ್ ಕಲಿಕೆಗೆ ಪುನರ್ಬಲನ ಆವಶ್ಯಕ ಷರತ್ತು ಎನ್ನುವುದನ್ನು ನಂಬುವುದಿಲ್ಲವಾದರೂ ಅದು ಜೀವಿಯ ಬೇಡಿಕೆಯನ್ನು ಸೂಚಿಸುತ್ತದೆ ಅಥವಾ ಜೀವಿಯ ನಿರೀಕ್ಷೆಯನ್ನು ಖಚಿತಗೊಳಿಸುತ್ತದೆ ಎಂದು ಹೇಳುತ್ತಾನೆ.

ಮಧ್ಯವರ್ತಿ ಚಲಕಗಳು (Intervening Variables) ಟೋಲ್‌ಮನ್ನನ ಮತ್ತೊಂದು ಪರಿಕಲ್ಪನೆಯಾಗಿದೆ. ವೀಕ್ಷಣೆಗೆ ನಿಲುಕದ ಅನುಮಾನಿತ ಚಲಕಗಳಾದ ಇವು ಸ್ವತಂತ್ರ ಮತ್ತು ಪರತಂತ್ರ ಚಲಕಗಳ ನಡುವೆ ಪ್ರವೇಶಿಸಿ ಪ್ರಭಾವ ಬೀರುತ್ತವೆ. ಅಗತ್ಯಗಳು, ನಂಬಿಕೆ, ಮೌಲ್ಯಗಳು, ವರ್ತನ ಕ್ಷೇತ್ರ–ಇವು ಮಧ್ಯವರ್ತಿ ಚಲಕಗಳ ಕೆಲವು ಉದಾರಣೆಗಳಾಗಿವೆ.

ಕೆಲವು ಸಂದರ್ಭಗಳಲ್ಲಿ ಕಲಿಕೆ ಉಂಟಾಗಿದ್ದರೂ ಅದು ವರ್ತನೆಯ ಮಟ್ಟದಲ್ಲಿ ವ್ಯಕ್ತವಾಗುವುದಿಲ್ಲ. ಆದರೆ ಸೂಕ್ತ ಪುನರ್ಬಲನ (ಬಹುಮಾನ) ದೊರೆತಲ್ಲಿ ಅಥವಾ ಬಹುಮಾನದ ನಿರೀಕ್ಷೆ ಪ್ರಬಲವಾಗಿದ್ದಲ್ಲಿ ಆ ಕಲಿಕೆ ವರ್ತನೆಯ ಮಟ್ಟದಲ್ಲಿ ವ್ಯಕ್ತವಾಗುತ್ತದೆ. ಈ ರೀತಿಯ ಕಲಿಕೆಯನ್ನು ಟೋಲ್‌ಮನ್ ಸುಪ್ತ ಕಲಿಕೆ (Latent Learning)ಎಂದು ಕರೆದಿದ್ದಾನೆ. ಈ ಪರಿಕಲ್ಪನೆಯ ಮೂಲಕ ಅವನು ಕಲಿಕೆಗೂ ನಿಷ್ಪಾದನೆಗೂ (Performance) ವ್ಯತ್ಯಾಸ ಕಲ್ಪಿಸಿದ್ದಾನೆ.

ಕಲಿಕೆ ಹೇಗೆ ಉಂಟಾಗುತ್ತದೆ, ಅದರ ಆಂತರಿಕ ಪ್ರಕ್ರಿಯೆ ಹೇಗಿರುತ್ತದೆ ಎಂಬುದನ್ನು ಟೋಲ್‌ಮನ್ ಸಂಜ್ಞಾನಾತ್ಮಕ ರೀತಿಯಲ್ಲಿ ವಿವರಿಸಿದ್ದಾನೆ. ಕಲಿಕೆ ಮುಂದುವರಿದಂತೆ ಕಲಿಕಾ

Digitised by Bharatavani, CIIL

ಸನ್ನಿವೇಶದ ಮಾನಸಿಕ ಚಿತ್ರದ ಪ್ರತಿನಿಧೀಕರಣ (Representation) ಉಂಟಾಗಿ ಕಲಿಕಾ ಸನ್ನಿವೇಶದ ಚಿತ್ರ ರೂಪುಗೊಳ್ಳುತ್ತದೆ. ಈ ಚಿತ್ರಕ್ಕೆ ಸಂಜ್ಞಾನಾತ್ಮಕ ಚಿತ್ರ (Cognitive Map) ಎಂದು ಹೆಸರು. ಇದು ಕಲಿಕಾ ಸನ್ನಿವೇಶದಲ್ಲಿನ ಮಹತ್ವಪೂರ್ವ ಸಂಕೇತಗಳನ್ನು (ಪ್ರಚೋದನೆಗಳನ್ನು), ಅವುಗಳ ನಡುವಣ ಸಂಬಂಧಗಳನ್ನು, ಸೂಚಕಗಳನ್ನು ಮತ್ತು ನಿರೀಕ್ಷೆಗಳನ್ನು ಒಳಗೊಳ್ಳುತ್ತದೆ. ಸಂಜ್ಞಾನಾತ್ಮಕ ಚಿತ್ರ ಜೀವಿಯನ್ನು ಗುರಿಯೆಡೆಗೆ ನಿರ್ದೇಶಿಸುತ್ತದೆ.

ಜೀವಿ ನಿರ್ದಿಷ್ಟ ಪ್ರಚೋದನೆಗೆ ನಿರ್ದಿಷ್ಟ ಅನುಕ್ರಿಯೆಯನ್ನು ತೋರಿಸುವುದನ್ನು ಪ್ಯಾವ್‌ಲೋವ್, ಸ್ಕಿನ್ನರ್ ಅನುಕ್ರಿಯಾ ಕಲಿಕೆ –Response Learning ಎನ್ನುತ್ತಾರೆ. ನಿರ್ದಿಷ್ಟ ಗುರಿಯೆಡೆಗೆ ತಲುಪುವುದನ್ನು ಕಲಿಯುತ್ತದೆ ಎಂದು ಟೋಲ್‌ಮನ್ ಪ್ರಯೋಗಗಳ ಮೂಲಕ ತೋರಿಸಿದ್ದಾನೆ. ಬೇರೆ ಬೇರೆ ರೀತಿಯ ಮೇಜ್ಸ್ (ಚಕ್ರಮಾರ್ಗ) ಉಪಯೋಗಿಸಿದಾಗ ಇಲಿಗಳು ಗುರಿಯನ್ನು ತಲುಪುವುದನ್ನು ಹೆಚ್ಚಿನ ಕಷ್ಟವಿಲ್ಲದೆ ಕಲಿತುಕೊಂಡವು. ಅನುಕ್ರಿಯಾ ಕಲಿಕೆಯ ವಿವರಣೆಯಂತೆ ನಿರ್ದಿಷ್ಟ ಚಲನೆಗಳನ್ನು ಕಲಿತುಕೊಂಡಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಈ ರೀತಿಯ ಧ್ಯೇಯಗಮ್ಯ ಕಲಿಕೆಯನ್ನು ಟೋಲ್‌ಮನ್ ಸ್ಥಳ ಕಲಿಕೆ (Place Learning) ಎಂದು ಕರೆದಿದ್ದಾನೆ ಮತ್ತು ಇದು ಅನುಕ್ರಿಯಾ ಕಲಿಕೆಗಿಂತ ಉತ್ತಮವಾದುದು ಎಂದು ಹೇಳಿದ್ದಾನೆ. ಇದಲ್ಲದೆ ಟೋಲ್‌ಮನ್ ಆರು ಕಲಿಕೆಯ ವಿಧಗಳನ್ನು ವಿವರಿಸಿದ್ದಾನೆ.

ಶೈಕ್ಷಣಿಕ ಪ್ರಕ್ರಿಯೆಯಲ್ಲಿನ ಬೋಧನೆ–ಕಲಿಕೆಗೆ ನೇರವಾಗಿ ಸಂಬಂಧವಿರುವ ರೀತಿಯಲ್ಲಿ ಕಲಿಕೆ ಪ್ರಕ್ರಿಯೆಯ ಸ್ವರೂಪವನ್ನು ವಿವರಿಸಿದ ಶ್ರೇಣಿಯನ್ನು ಅಮೇರಿಕಾದ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ ಜೆರೋಮ್ ಎಸ್ ಬ್ರೂನರ್‌ಗೆ ಸಲ್ಲುತ್ತದೆ. ಶಿಕ್ಷಣದ ಬಗ್ಗೆ ಇವನು ಬರೆದಿರುವ The Process of Education(1960) ಎನ್ನುವ ಪುಸ್ತಕ ಪ್ರಸಿದ್ಧಿ ಪಡೆದಿದೆ. ಬ್ರೂನರ್ ಸ್ವಿಡ್ಜರ್‌ಲೆಂಡಿನ ಜೀನ್ ಪಿಯಾಜೆಯ ಸಂಜ್ಞಾನಾತ್ಮಾಕ ಸಿದ್ಧಾಂತದಿಂದ ಬಹಳ ಪ್ರಭಾವಿತನಾದವನು. ಬ್ರೂನರ್ ಅನುದೇಶದ (Instruction) ಬಗ್ಗೆ ತನ್ನ ಮೌಲಿಕ ವಿಚಾರಗಳನ್ನು ವಿವರಿಸುವುದರಿಂದ ಕಲಿಕೆಯ ಬಗೆಗಿನ ಇವನ ಸಿದ್ಧಾಂತವನ್ನು ಅನುದೇಶಾತ್ಮಕ ಸಿದ್ಧಾಂತ (Instructional Theory)ವೆಂದು ಪರಿಗಣಿಸಲಾಗಿದೆ. ಪರಿಕಲ್ಪನಾ ಕಲಿಕೆಯ ಬಗ್ಗೆ ಇವನು ವಿವರಿಸಿದ್ದಾನೆ.

ಒಂದು ಬೋಧನೆ ಅಥವಾ ಅನುದೇಶದ ಸಿದ್ಧಾಂತ ನಾಲ್ಕು ಅಂಶಗಳನ್ನು ಒಳಗೊಂಡಿರಬೇಕೆಂದು ಬ್ರೂನರ್ ಹೇಳುತ್ತಾನೆ. (1) ಅದು ಮಗುವಿನಲ್ಲಿ ಕಲಿಕೆಯ ಬಗ್ಗೆ ಪೂರ್ವ ಮಾನಸಿಕ ಸಿದ್ಧತೆಯನ್ನು ಉಂಟುಮಾಡಲು ಅಗತ್ಯವಾದ ಅನುಭವಗಳನ್ನು ಮತ್ತು ಸಂದರ್ಭಗಳನ್ನು ವಿವರಿಸಬೇಕು. (2) ಅದು ಬೋಧಿಸುವ ವಿಷಯವನ್ನು ಬೋಧಪ್ರದವಾಗುವ ರೀತಿಯಲ್ಲಿ ಹೇಗೆ ಸಂರಚಿಸಿಕೊಳ್ಳಬೇಕೆಂಬುದನ್ನು ಸೂಚಿಸಬೇಕು. (3) ವಿಷಯವನ್ನು ಕಲಿಕಾರ್ಥಿಗೆ ಚೆನ್ನಾಗಿ ಅರ್ಥವಾಗುವಂತೆ ಮಾಡಲು ಯಾವ ರೀತಿಯಲ್ಲಿ ಕ್ರಮಾಗತಗೊಳಿಸಿಕೊಳ್ಳಬೇಕೆಂಬುದನ್ನು ತಿಳಿಸಬೇಕು. (4) ಬಹುಮಾನದ (ಪುನರ್ಬಲನದ) ಸ್ವರೂಪವನ್ನು ಮತ್ತು ಗತಿಯನ್ನು ನಿರ್ದಿಷ್ಟಗೊಳಿಸಬೇಕು. ಬೋಧನೆಯಲ್ಲಿ ವಿಷಯ ವಸ್ತುವಿನ ಸಂರಚನೆ (Structure) ಮತ್ತು ಕ್ರಮಾನುಗತತೆ (Sequence) ಸಂಬಂಧಪಟ್ಟಂತೆ ಸಂರಚನೆ ಮತ್ತು ಕ್ರಮಾನುಗತತೆ ಸೂಕ್ತವಾಗಿದ್ದಲ್ಲಿ "ಯಾವುದೇ ವಿಷಯವನ್ನು ವಿಕಾಸದ ಯಾವುದೇ ಹಂತದಲ್ಲಿರುವ ಮಗುವಿಗೆ ಸ್ವಲ್ಪ ಮಟ್ಟಿನ ಬೌದ್ಧಿಕ ಪ್ರಾಮಾಣಿಕತೆಯೊಂದಿಗೆ ಬೋಧಿಸಲು ಸಾಧ್ಯವಿದೆ" ಎಂಬ ಬ್ರೂನರನ ಹೇಳಿಕೆ ಬಹಳಷ್ಟು ಉಲ್ಲೇಖಿತಗೊಂಡಿದೆ. Towards a Theory of Instruction(1966) ಎನ್ನುವ ತನ್ನ ಮತ್ತೊಂದು ಪುಸ್ತಕದಲ್ಲಿ ಬ್ರೂನರ್ ಈ ಮುಂದಿನ ಅಂಶಗಳಿಗೆ ಒತ್ತುಕೊಟ್ಟಿದ್ದಾನೆ. **(i) ಅಭಿಪ್ರೇರಣಾತ್ಮಕ ಸಿದ್ಧತೆ (ii) ಕಲಿಕಾ ಸಾಮಗ್ರಿಯನ್ನು ಅತ್ಯಂತ ಸೂಕ್ತ ರೀತಿಯಲ್ಲಿ ಕ್ರಮಾಗತಗೊಳಿಸುವಿಕೆ (iii) ಮುಂದಿನ ಕಲಿಕೆಗೆ ಉಪಯುಕ್ತವಾದ, ಅರ್ಥಪೂರ್ಣವಾದ, ವಿಚಾರೋತ್ಪಾದನೆಯ ಸಾಮರ್ಥ್ಯವುಳ್ಳ ವಿಷಯದ ಮುಖ್ಯ ಸಂರಚನೆಗಳಿಗೆ (Structures) ಪ್ರಾಧಾನ್ಯ ನೀಡಿ ವಿಷಯವಸ್ತುವನ್ನು ಸಂರಚಿಸಿಕೊಳುವುದು (iv) ಸೂಕ್ತ ರೀತಿಯಲ್ಲಿ ಪುನರ್ಬಲನ ನೀಡುವುದು.** ಕಲಿಕೆಯ ಸಾಮಗ್ರಿಯನ್ನು ಸೂಕ್ತರೀತಿಯಲ್ಲಿ ಸಂರಚಿಸಿಕೊಳ್ಳುವುದು. ವಿಷಯದ ಕಲಿಕೆಯನ್ನು, ಸ್ಮರಣೆಯಲ್ಲಿಟ್ಟುಕೊಳ್ಳುವುದನ್ನು ಮತ್ತು ಪುನಃ ಸ್ಮರಿಸಿಕೊಳ್ಳುವುದನ್ನು ಸುಲಲಿತಗೊಳಿಸುತ್ತದೆ. ಬ್ರೂನರ್ ಕಲಿತ ವಿಷಯದ ವರ್ಗಾವಣೆಗೂ ಹೆಚ್ಚು ಮಹತ್ವ ನೀಡಿದ್ದಾನೆ.

ಬ್ರೂನರ್ ಸಂಜ್ಞಾನಾತ್ಮಕ ವಿಕಾಸದ ಬಗ್ಗೆ ತನ್ನದೇ ಆದ ವಿಚಾರಗಳನ್ನು ವ್ಯಕ್ತಪಡಿಸಿದ್ದಾನೆ. ವ್ಯಕ್ತಿಗಳು ತಮ್ಮ ಪರಿಸರದ ಅನುಭವಗಳನ್ನು ಮೂರು ಹಂತಗಳಲ್ಲಿ ಆಂತರೀಕರಣ ಮಾಡಿಕೊಂಡು ತಮ್ಮ ಸಂಜ್ಞಾನಾತ್ಮಕ ಸಂರಚನೆಯಲ್ಲಿ (ಮನಸ್ಸಿನಲ್ಲಿ) ಪ್ರತಿನಿಧೀಕರಣ ಮಾಡಿಕೊಳ್ಳುತ್ತಾರೆ. ಮೊದಲಿಗೆ ಮಗು ತನ್ನ ಅನುಭವಗಳನ್ನು ಚಟುವಟಿಕೆಗಳು ಮತ್ತು ಸಂವೇದನೆಗಳ ರೂಪದಲ್ಲಿ ಪ್ರತಿನಿಧಿಸಿಕೊಳ್ಳುತ್ತದೆ. ಇದು **ಕ್ರಿಯಾತ್ಮಕ ಹಂತ** (Enactive Phase). ನಂತರ ಮಗು ಬಿಂಬಗಳ, ಚಿತ್ರಗಳ ಮೂಲಕ ತನ್ನ ಅನುಭವಗಳನ್ನು ಪ್ರತಿನಿಧೀಕರಿಸಿಕೊಳ್ಳುತ್ತದೆ. ಇದು **ಬಿಂಬಾತ್ಮಕ ಹಂತ** (Iconic Phase). ವಯಸ್ಸು ಮುಂದುವರಿದಂತೆ, ಬೌದ್ಧಿಕ ವಿಕಾಸ ಮತ್ತು ಭಾಷಾ ವಿಕಾಸ ಮುಂದುವರಿದಂತೆ ವ್ಯಕ್ತಿ ಸಂಕೇತಗಳು, ಅಮೂರ್ತ ರೀತಿಗಳ ಮೂಲಕ ತನ್ನ ಅನುಭವಗಳನ್ನು ಪ್ರತಿನಿಧೀಕರಿಸಿಕೊಳ್ಳುತ್ತಾನೆ. ಇದು **ಸಂಕೇತಾತ್ಮಕ ಹಂತ** (Symobolic Phase). ಇದು ಸಂಜ್ಞಾನಾತ್ಮಕ ವಿಕಾಸದ ಅಂತಿಮ ಹಾಗೂ ಗರಿಷ್ಠ ಮಟ್ಟದ್ದಾಗಿದೆ. ಈ ವಿಚಾರಗಳು ಪಿಯಾಜೆಯ ಸಿದ್ಧಾಂತದಂತೆಯೇ ಇವೆ. ಆದರೆ ಬ್ರೂನರ್ ಪಿಯಾಜೆಯಂತೆ ಈ ಹಂತಗಳಿಗೆ ನಿರ್ದಿಷ್ಟ ವಯೋಮಿತಿಗಳನ್ನು ಸೂಚಿಸುವುದಿಲ್ಲ. ಸ್ಥೂಲವಾಗಿ ಕ್ರಿಯಾತ್ಮಕ ರೀತಿ ಪೂರ್ವ–ಬಾಲ್ಯಾವಸ್ಥೆಯಲ್ಲಿ, ಬಿಂಬಾತ್ಮಕ ರೀತಿ ಉತ್ತರ–ಬಾಲ್ಯಾವಸ್ಥೆಯಲ್ಲಿ ನಂತರದ ಅವಧಿಗಳಲ್ಲಿ ಸಂಕೇತಾತ್ಮಕ ರೀತಿ ಪ್ರಧಾನವಾಗಿರುತ್ತದೆ. ಈ ಕ್ರಮಗಳನ್ನು ಎಲ್ಲಾ ಹಂತಗಳಲ್ಲಿಯೂ ಎಲ್ಲರೂ ಬೇರೆ ಬೇರೆ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ.

Digitised by Bharatavani, CIIL

**ಅನ್ವೇಷಣೆ ಕಲಿಕೆ (Discovery Learning):** ಬ್ರೂನರನ ಮತ್ತೊಂದು ಶೈಕ್ಷಣಿಕ ಕೊಡುಗೆಯಾಗಿದೆ. ಮಕ್ಕಳು ಕಲಿಕೆಯ ಸನ್ನಿವೇಶದೊಂದಿಗೆ ಪ್ರತಿಕ್ರಿಯಿಸಿ ಸ್ವಪ್ರೇರಿತ ಚಟುವಟಿಕೆಯಿಂದ ಕಲಿತುಕೊಳ್ಳುವುದೇ ಅನ್ವೇಷಣೆ ಕಲಿಕೆ. ಇದರಲ್ಲಿ ಮಕ್ಕಳು ಆಂತರಿಕ ಪ್ರೇರಣೆಯೊಂದಿಗೆ ಕಲಿಕೆಯಲ್ಲಿ ಸ್ವಇಚ್ಛೆಯಿಂದ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಶಿಕ್ಷಕ ಕಲಿಕೆಯ ಸನ್ನಿವೇಶವನ್ನು ವ್ಯವಸ್ಥಿತವಾಗಿ ಸಂರಚಿಸಿ, ಬೇಕಾದ ಕಲಿಕಾ ಸಾಮಗ್ರಿಗಳನ್ನು ಒದಗಿಸಿ ನಂತರ ಹಿನ್ನೆಲೆಗೆ ಸರಿಯುತ್ತಾನೆ. ಕಡೆಯಲ್ಲಿ ಮಕ್ಕಳು ತಮ್ಮ ಕಲಿಕೆಯ ಆಧಾರದ ಮೇಲೆ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸಲು, ಸಾಮಾನ್ಯೀಕರಣಗಳನ್ನು ನಿರೂಪಿಸಿಕೊಳ್ಳಲು ಶಿಕ್ಷಕ ಸಹಾಯ ಮಾಡುತ್ತಾನೆ. ಈ ರೀತಿಯ ಬೋಧನಾ ವಿಧಾನವನ್ನು ಬ್ರೂನರ್ **ಅನ್ವೇಷಣ ವಿಧಾನ (Discovery Method)** ಎಂದು ಕರೆದಿದ್ದಾನೆ. ಅನ್ವೇಷಣ ವಿಧಾನದ ಮೂಲಕ ಬೋಧಿಸುವುದು ಪ್ರಭಾವಯುತವಾಗಿ ಸಕ್ರಿಯವಾಗಿ ಕಲಿಯಲು, ಕಲಿತುದನ್ನು ನೆನಪಿನಲ್ಲಿಟ್ಟುಕೊಳ್ಳಲು, ಸ್ವಂತಿಕೆಯಿಂದ ಯೋಚಿಸಲು ಮಕ್ಕಳಿಗೆ ಪ್ರೋತ್ಸಾಹ ನೀಡುತ್ತದೆ. ಅನ್ವೇಷಣಾ ವಿಧಾನವನ್ನು **ಆಸುಬೆಲ್** ಎಂಬ ಮನೋವಿಜ್ಞಾನಿ ಟೀಕಿಸಿದ್ದಾನೆ. ಈ ವಿಧಾನ ಶಿಕ್ಷಣದ ಆರಂಭಿಕ ಹಂತಕ್ಕೆ ಸೂಕ್ತವಾದುದಲ್ಲವೆಂದೂ, ಕೆಲವು ಮಕ್ಕಳು ಅದರಲ್ಲಿ ಭಾಗವಹಿಸಲು ಆಗುವುದಿಲ್ಲವೆಂದೂ, ಎಲ್ಲವನ್ನು ಈ ವಿಧಾನದಿಂದ ಕಲಿಯಲು ಸಾಧ್ಯವಿಲ್ಲವೆಂದೂ ಅವನು ಟೀಕಿಸಿದ್ದಾನೆ. ಆದರೆ ಶಿಕ್ಷಕ ಆಸಕ್ತಿ ವಹಿಸಿದಲ್ಲಿ ಶಿಕ್ಷಣದ ಮೇಲಿನ ಮಟ್ಟಗಳಲ್ಲಿ ಇದು ಸೂಕ್ತ ಕಲಿಕೆಯ ವಿಧಾನವಾಗುತ್ತದೆ. ಪಾಲ್ ತೋರೆನ್ಸ್ ಆರಂಭಿಕ ಮಟ್ಟದ ಮಕ್ಕಳಿಗೆ ಈ ವಿಧಾನದಲ್ಲಿ ಬೋಧಿಸಲು **ಮಾರ್ಗದರ್ಶಿಕ ಅನ್ವೇಷಣಾ ವಿಧಾನವನ್ನು** (Guided Discovery Method) ಸೂಚಿಸುತ್ತಾನೆ. ಈ ವಿಧಾನದಲ್ಲಿ ಕಲಿಕೆ ಆರಂಭವಾಗುವುದಕ್ಕೆ ಮುಂಚೆ ಶಿಕ್ಷಕ ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಪರೀಕ್ಷಿಸಿ ಆಗತ್ಯವೆಂದು ಕಂಡುಬರುವ ಕಲಿಕೆಗಳನ್ನು ಮೊದಲು ಬೋಧಿಸಿ ನಂತರ ಅನ್ವೇಷಣ ಕಲಿಕೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುತ್ತಾನೆ.

ಬ್ರೂನರ್‌ನ ಪ್ರಕಾರ ತರಗತಿಯ ಕಲಿಕೆ ಅನುಗಮನ ರೀತಿಯಲ್ಲಿ ಅಂದರೆ ನಿರ್ದಿಷ್ಟ ಉದಾಹರಣೆಗಳಿಂದ ಆರಂಭವಾಗಿ ವ್ಯಾಪಕ ಸಾಮಾನ್ಯೀಕರಣಗಳ ಕಡೆಗೆ ಮುಂದುವರಿಯಬೇಕು. ವಿಷಯ ವಸ್ತುವಿನ ಸಂರಚನೆ, ಪರಿಕಲ್ಪನೆಗಳಿಂದ ಕೂಡಿದೆ. ಸಾಮಾನ್ಯ ಲಕ್ಷಣಗಳನ್ನು ಹೊಂದಿರುವ ಆದರೆ ಕೆಲವು ಲಕ್ಷಣಗಳಲ್ಲಿ ವ್ಯತ್ಯಾಸವಿರುವ ವಸ್ತುಗಳ/ವಿಚಾರಗಳ ಗುಂಪನ್ನು ಪ್ರತಿನಿಧಿಸುವ ಶಾಬ್ದಿಕ ಅಥವಾ ಅಶಾಬ್ದಿಕ ಸಂಕೇತಗಳು ಅಥವಾ ಪ್ರತೀಕಗಳೇ ಪರಿಕಲ್ಪನೆಗಳೆನಿಸುತ್ತವೆ. ಪರಿಕಲ್ಪನೆಗಳು ಮೂರ್ತ ಮತ್ತು ಅಮೂರ್ತ ಸ್ವರೂಪವುಳ್ಳವು, ವಿಷಯವನ್ನು ಪ್ರಭಾವಯುತವಾಗಿ ಕಲಿಸಲು ಶಿಕ್ಷಕ ಅದರಲ್ಲಿನ ಮೂಲಭೂತ ಪರಿಕಲ್ಪನೆಗಳನ್ನು ಗುರ್ತಿಸಿ ಅವುಗಳನ್ನು ಸರಿಯಾಗಿ ವ್ಯಾಖ್ಯಾನಿಸಿಕೊಂಡು ಅವುಗಳನ್ನು ಮಕ್ಕಳಿಗೆ ಕಲಿಸಬೇಕು. ನಿರ್ದಿಷ್ಟ ಪರಿಕಲ್ಪನೆಗಳನ್ನು ಒಂದುಗೂಡಿಸಿ ವ್ಯಾಪಕ ಪರಿಕಲ್ಪನೆಗಳ ಕಡೆಗೆ ಮುಂದುವರಿಯಬೇಕು. ಪರಿಕಲ್ಪನೆಗಳ ಅಂತರ್ ಸಂಬಂಧಗಳನ್ನು ಸ್ಪಷ್ಟಪಡಿಸಲು ಸಂಕೇತ ವ್ಯವಸ್ಥೆಯನ್ನು **(Coding System)** ರೂಪಿಸಿಕೊಳ್ಳಬೇಕು.

ಬ್ರೂನರನು ಅನ್ವೇಷಣೆ ಕಲಿಕೆ ಮತ್ತು ಅನ್ವೇಷಣಾ ವಿಧಾನದ ಪ್ರಮುಖ ವಿಮರ್ಶಕನೆನಿಸಿದ್ದಾನೆ. ಇವನು ಕಲಿಕೆಯ ಸಾಮಗ್ರಿಯ ಅರ್ಥಪೂರ್ಣತೆ ಮತ್ತು ಅದನ್ನು ಮನದಟ್ಟಾಗುವಂತೆ ವಿವರಿಸುವ ವಿಧಾನಕ್ಕೆ ಮಹತ್ವಕೊಟ್ಟು ಅರ್ಥಪೂರ್ಣ ಸ್ವೀಕೃತಿ ಕಲಿಕೆಯನ್ನು (Meaningful Reception Learning) ಪ್ರತಿಪಾದಿಸಿದ್ದಾನೆ. ಚೇಂಬರ್ಸ್ ಶಬ್ದಕೋಶ 'ಅರ್ಥ'ದ ಅರ್ಥವನ್ನು ಹೀಗೆ ಹೇಳಿದೆ. "ಯಾವುದೇ ಹೇಳಿಕೆ, ಕ್ರಿಯೆ, ಪದ ಮುಂತಾದವುಗಳನ್ನು ಯಾವ ಭಾವದಲ್ಲಿ ಗ್ರಹಿಸಿಕೊಳ್ಳಬೇಕೆಂಬುದೆ ಅರ್ಥವೆನಿಸುತ್ತದೆ". ಈ ಅರ್ಥವನ್ನು ಹೇಳಿಕೆ, ಕ್ರಿಯೆ ಅಥವಾ ಪದ ಪರ್ಯಾಪ್ತ ಪ್ರಮಾಣದಲ್ಲಿ ಹೊಂದಿರುವುದು ಅರ್ಥಪೂರ್ಣತೆ (Meaningfulness) ಎನ್ನಿಸಿಕೊಳ್ಳುತ್ತದೆ. ಕಲಿಕೆಯ ಸಾಮಗ್ರಿ ಅರ್ಥಪೂರ್ಣವಾಗಿದ್ದರೆ ಕಲಿಕೆ ಚೆನ್ನಾಗಿ ಆಗುತ್ತದೆ ಎಂದು ಆಸುಬೆಲ್ ಹೇಳುತ್ತಾನೆ.

ಆಸುಬೆಲ್ಲನ ಪ್ರಕಾರ ಕಲಿಕೆಯ ಸಾಮಗ್ರಿ ಅಂತರ್ನಿಹಿತ ಅರ್ಥಪೂರ್ಣತೆಯನ್ನು (Potential Meaningfulness) ಹೊಂದಿರಬೇಕು. ಇದು ಎರಡು ರೀತಿಯ ಅರ್ಥಪೂರ್ಣತೆಗಳನ್ನು ಒಳಗೊಳ್ಳುತ್ತದೆ. ಒಂದು ತಾರ್ಕಿಕ ನಿಯಮಗಳಿಗೆ ಒಳಪಟ್ಟಂತೆ ಇರುವ ತಾರ್ಕಿಕ ಅರ್ಥಪೂರ್ಣತೆ (Logical Meaningfulness), ಎರಡನೆಯದಾಗಿ ಸಾಮಗ್ರಿ ಪರಿಪೂರ್ಣವಾದ ಅರ್ಥಪೂರ್ಣತೆಯನ್ನು ಹೊಂದಿರಬೇಕು. ಇದು ಪರಿಪೂರ್ಣ ಅರ್ಥಪೂರ್ಣತೆ (Substantive Meaningfulness). ಇದಲ್ಲದೆ ಸಾಮಗ್ರಿ ಕಲಿಕಾರ್ಥಿಯ ಉದ್ದೇಶಗಳಿಗೆ, ಮಾನಸಿಕ ಸಿದ್ಧತೆಗೆ ಸೂಕ್ತವಾಗಿರಬೇಕು. ಇದು ಮಾನಸಿಕ ಅರ್ಥಪೂರ್ಣತೆ (Psychological Meaningfulness). ಕಲಿಕಾ ಸಾಮಗ್ರಿಯನ್ನು ಈ ಎರಡೂ ರೀತಿಯಲ್ಲಿ ಅರ್ಥಪೂರ್ಣವಾಗಿರುವಂತೆ ಕಲಿಕಾರ್ಥಿಗೆ ಪ್ರಸ್ತುತಗೊಳಿಸಿದರೆ ಕಲಿಕೆ ಸುಗಮವಾಗುತ್ತದೆ ಎಂದು ಆಸುಬೆಲ್ ಹೇಳುತ್ತಾನೆ.

ಕಲಿಕೆ ಎರಡು ರೀತಿಯಲ್ಲಿ ಆಗಬಹುದು. ಕಲಿಕಾರ್ಥಿ ಕಲಿತ ವಿಷಯ ವಸ್ತುವನ್ನು ಅರ್ಥಪೂರ್ಣವಾಗಿ ಗ್ರಹಿಸಿ ಕಲಿಯಬಹುದು ಅಥವಾ ಅರ್ಥವನ್ನು ಗ್ರಹಿಸದೆ ಯಾಂತ್ರಿಕವಾಗಿ ಕಲಿಯಬಹುದು (Rote learning). ಅದೇ ರೀತಿ ಅನ್ವೇಷಣ ಬೋಧನೆಯಲ್ಲಿ ಅರ್ಥಪೂರ್ಣವಾಗಿ ಅನ್ವೇಷಿಸಿ ಕಲಿಯಬಹುದು ಅಥವಾ ಆಕಸ್ಮಿಕವಾಗಿ ಅನ್ವೇಷಿಸಿ ಕಲಿಯಬಹುದು. ಆದ್ದರಿಂದ ಕಲಿಕೆಗೆ ಉಪಕ್ರಮ ಯಾವುದೇ ಆದರೂ ಅರ್ಥಪೂರ್ಣವಾಗಿ ಕಲಿಯುವುದು ಮುಖ್ಯವಾಗುತ್ತದೆ ಎನ್ನುವುದು ಆಸುಬೆಲ್ಲನ ನಿಲುವಾಗಿದೆ. ಹೀಗಾಗಿ ಈ ಎರಡೂ ಉಪಕ್ರಮಗಳ ನಡುವೆ ಅಂತಹ ವಿರೋಧ ಕಂಡುಬರುವುದಿಲ್ಲ.

ಕಲಿಕೆ ಹೇಗಾಗುತ್ತದೆ ಎಂಬುದನ್ನು ಆಸುಬೆಲ್ ಹೀಗೆ ವಿವರಿಸುತ್ತಾನೆ: ಅರ್ಥಪೂರ್ಣ ಕಲಿಕಾ ಸಾಮಗ್ರಿಯನ್ನು ಅರ್ಥಪೂರ್ಣವಾಗಿ ಕ್ರಮಾಗತಗೊಳಿಸಿ ಕಲಿಕಾರ್ಥಿಯ ಮುಂದೆ ಪ್ರಸ್ತುತಗೊಳಿಸಿದಾಗ ಕಲಿಕಾರ್ಥಿ ಅದನ್ನು ಅರ್ಥಪೂರ್ಣವಾಗಿಯೇ ಸ್ವೀಕರಿಸಿ ತನ್ನ ಸಂಜ್ಞಾನಾತ್ಮಕ ಸಂರಚನೆಯಲ್ಲಿ ಅಂದರೆ ಮನಸ್ಸಿನಲ್ಲಿ ಸ್ವಾಂಗೀಕರಣ

Digitised by Bharatavani, CIIL

ಮಾಡಿಕೊಂಡು ಅದನ್ನು ತನ್ನ ಹಿಂದಿನ ಕಲಿಕೆಯೊಂದಿಗೆ ವ್ಯವಸ್ಥಿತ ರೀತಿಗಳಲ್ಲಿ ಸೇರಿಸಿಕೊಳ್ಳುತ್ತಾನೆ. ಆದ್ದರಿಂದಲೇ ಈ ಕಲಿಕೆಯನ್ನು ಆಸುಬೆಲ್ **ಅರ್ಥಪೂರ್ಣ ಸ್ವೀಕೃತಿ ಕಲಿಕೆ** ಎಂದು ಕರೆದಿದ್ದಾನೆ.

ಮನಸ್ಸು ತನ್ನದೇ ಆದ ವ್ಯವಸ್ಥಿತ ಸಂರಚನೆಯನ್ನು ಹೊಂದಿದೆ ಎಂದು ಆಸುಬೆಲ್ ಹೇಳುತ್ತಾನೆ. ಕಲಿತ ಅನುಭವಗಳು ಪರಿಕಲ್ಪನೆಗಳ ರೂಪದಲ್ಲಿ ಮನಸ್ಸಿನಲ್ಲಿ ಪ್ರತಿನಿಧೀಕರಣಗೊಳ್ಳುತ್ತದೆ. ನಂತರ ಈ ಪರಿಕಲ್ಪನೆಗಳು, ಪರಸ್ಪರ ಸಂಬಂಧಿತಗೊಂಡು ವ್ಯಾಪಕ ಪರಿಕಲ್ಪನೆಗಳಾಗುತ್ತವೆ. ಕಲಿಕಾರ್ಥಿ ನಿರ್ದಿಷ್ಟ ಪರಿಕಲ್ಪನೆಗಳಿಂದ ಹೆಚ್ಚು ಹೆಚ್ಚು ವ್ಯಾಪಕ ಪರಿಕಲ್ಪನೆಗಳು, ನಿಯಮಗಳು/ತತ್ವಗಳು ಮತ್ತು ಸಾಮಾನ್ಯೀಕರಣಗಳ ಕಡೆಗೆ ಮುಂದುವರಿಯುತ್ತಾನೆ ಇದನ್ನು ಸಮಾವೇಶನ ತತ್ವ (Subsumption Principle) ಎನ್ನುತ್ತಾರೆ. ಮನಸ್ಸಿನ ಈ ವ್ಯವಸ್ಥಿತ ಸಂರಚನೆಗೆ ಸಂಜ್ಞಾನಾತ್ಮಕ ಸಂರಚನೆ (Cognitive Structure) ಎಂದು ಹೆಸರು. ಬೋಧಿಸುವ ವಿಷಯದ ಸಂರಚನೆ ಈ ಸಂಜ್ಞಾನಾತ್ಮಕ ಸಂರಚನೆಗೆ ಹೊಂದುವಂತಿದ್ದರೆ ಕಲಿಕೆ ಅರ್ಥಪೂರ್ಣವಾಗುತ್ತದೆ. ಕಲಿಸುವ ವಿಷಯವೂ ಅರ್ಥಪೂರ್ಣವಾದ ಸಂಜ್ಞಾನಾತ್ಮಕ ಸಂರಚನೆಯನ್ನು ಹೊಂದಿರಬೇಕು.

ವಿಷಯವಸ್ತುವನ್ನು ಅರ್ಥಪೂರ್ಣವಾಗಿ ಬೋಧಿಸಲು ಆಸುಬೆಲ್ ವಿವರಣಾತ್ಮಕ ಬೋಧನಾ ವಿಧಾನವನ್ನು (Expository Teaching Method) ಸಲಹೆ ಮಾಡುತ್ತಾನೆ. ಇದು ವಿಷಯ ವಸ್ತುವನ್ನು ಅರ್ಥಪೂರ್ಣವಾಗಿ ಬೋಧಿಸುವ ವಿಧಾನ ಅಥವಾ ಉಪನ್ಯಾಸ ವಿಧಾನವಾಗಿದೆ. ಆದರೆ ಇದು ಕೇವಲ ನೀರಸ ಶಾಬ್ದಿಕ ಕ್ರಿಯೆ ಆಗಬಾರದು. ವಿವರಣೆಯ ಶಿಕ್ಷಕ, ವಿದ್ಯಾರ್ಥಿಗಳ ನಡುವಣ ಅನ್ಯೋನ್ಯ ಕ್ರಿಯೆಗೆ ಪ್ರಶ್ನೋತ್ತರಗಳ ಮೂಲಕ ಅವಕಾಶ ಕಲ್ಪಿಸುವಂತಿರಬೇಕು, ಉದಾಹರಣೆಗಳನ್ನು, ಪೂರಕ ಸಾಮಗ್ರಿಗಳನ್ನು (ಚಿತ್ರ, ನಕ್ಷೆ ಇತ್ಯಾದಿ) ಹೇರಳವಾಗಿ ಉಪಯೋಗಿಸಬೇಕು. ಅದು ನಿಗಮನಾತ್ಮಕ (deductive) ಯೋಚನೆಯನ್ನು ಪ್ರೇರೇಪಿಸಬೇಕು ಮತ್ತು ಅದು ಕ್ರಮಾಗತವಾಗಿರಬೇಕು.

ಕಲಿಕೆಯ ವಸ್ತುವಿನ ಪ್ರಭಾವಯುತ ಪ್ರಸ್ತುತೀಕರಣಕ್ಕೆ ಆಸುಬೆಲ್ ಮುನ್ ಸಂಘಟಕಗಳ (Advance Organizers) ಉಪಯೋಗವನ್ನು ಸಲಹೆ ಮಾಡಿದ್ದಾನೆ. ಬೋಧನೆಯನ್ನು ಆರಂಭಿಸುವುದಕ್ಕೆ ಮೊದಲು ವಿಷಯಕ್ಕೆ ಸಂಬಂಧಿಸಿದ ಪಾಠದ ವಸ್ತು, ಮುಖ್ಯ ವಿಚಾರಗಳು ಮತ್ತು ಪರಿಕಲ್ಪನೆಗೆ ಸಂಬಂಧಿಸಿದ ಸಾರಾಂಶಭೂತವಾದ ಯಾವುದೇ ಹೇಳಿಕೆ, ಚಟುವಟಿಕೆ, ಚಿತ್ರಪ್ರಯೋಗ, ಪ್ರಾತ್ಯಕ್ಷಿಕೆಗಳಿಗೆ ಮುನ್–ಸಂಘಟಕಗಳು ಎಂದು ಹೆಸರು. ಇವು ಕಲಿಕೆಯ ವಸ್ತುವಿನ ಗೆಸ್ಟಾಲ್ಟ್ ಅನ್ನು, ಸ್ಥೂಲಪರಿಚಯವನ್ನು, ಅದರ ಉದ್ದೇಶ ಮತ್ತು ವ್ಯಾಪ್ತಿಯನ್ನು ಕಲಿಕಾರ್ಥಿಗೆ ಪೂರ್ವಭಾವಿಯಾಗಿ ಪರಿಚಯಿಸುತ್ತವೆ. ಇವು ಕಲಿಕಾರ್ಥಿಯಲ್ಲಿ ಕಲಿಕೆಯ ಸಿದ್ಧತೆಯನ್ನುಂಟುಮಾಡಿ, ಕಲಿಯಬೇಕಾದ ವಿಷಯವನ್ನು ಸಂಜ್ಞಾನಾತ್ಮಕ ಸಂರಚನೆಗೆ ಸಂಬಂಧಿಸಿದಂತೆ ಅರ್ಥಮಾಡಿಕೊಂಡು ಸ್ವಾಂಗೀಕರಣ ಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಗದುಗಿನ ನಾರಣಪ್ಪನ ಭಾರತದಲ್ಲಿ ಪ್ರತಿಯೊಂದು ಸಂಧಿಯ ವಿಷಯ ವಸ್ತುವನ್ನು ಸಂಗ್ರಹವಾಗಿ ಹೇಳುವ ತ್ರಿಪದಿಗಳು ಮತ್ತು ಮಹಾಭಾರತ, ರಾಮಾಯಣ, ಭಾಗವತಗಳ ಸಾರಾಂಶವನ್ನು ಒಂದೇ ಶ್ಲೋಕದಲ್ಲಿ ಹೇಳುವ ಶ್ಲೋಕಗಳು ಮುನ್–ಸಂಘಟಕಗಳಿಗೆ ಒಳ್ಳೆಯ ಉದಾಹರಣೆಗಳಾಗಿವೆ. ಅಬ್ರಹಾಂ ಲಿಂಕನ್ನನ ಪ್ರಜಾಪ್ರಭುತ್ವದ ವ್ಯಾಖ್ಯೆ ಮತ್ತೊಂದು ಒಳ್ಳೆಯ ಉದಾಹರಣೆ. ವಿಜ್ಞಾನ ಪಾಠಗಳಲ್ಲಿ ಪ್ರಯೋಗ ಮಾಡುವುದು, ಸಾಹಿತ್ಯದ ಪಾಠಗಳಲ್ಲಿ ಪದ್ಯಗಳನ್ನು ಓದುವುದು ಇತರ ಕೆಲವು ಉದಾಹರಣೆಗಳಾಗಿವೆ.

ಅಮೆರಿಕಾದ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಕೆನಡಾ ದೇಶದ ಮನೋವಿಜ್ಞಾನಿಯಾದ ಆಲ್ಬರ್ಟ್ ಬಾಂಡುರ್ ಮತ್ತು ಅವನ ಶಿಷ್ಯನಾದ ಇಂಗ್ಲೆಂಡಿನ ರಿಚರ್ಡ್ ವಾಲ್ಟರ್ಸ್ 1963ರಲ್ಲಿ ಪ್ರಕಟಿಸಿದ Social Learning and Personality Development ಎನ್ನುವ ತಮ್ಮ ಪುಸ್ತಕದಲ್ಲಿ ಸಾಮಾಜಿಕ ಸಂದರ್ಭದಲ್ಲಿ ವ್ಯಕ್ತಿಗಳ ನಡುವೆ ನಡೆಯುವ ವರ್ತನೆಯ ಅನುಕರಣೆ ದೃಷ್ಟಿಯಿಂದ ಕಲಿಕೆಯನ್ನು ವಿವರಿಸುವ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇವರಿಗೂ ಮೊದಲು ಮಿಲ್ಲರ್ ಮತ್ತು ಡಲ್ಲಾರ್ಡ್ ಎಂಬುವರು ಈ ವಿಷಯದ ಬಗ್ಗೆ ಬರೆದಿದ್ದರು. ಬಾಂಡುರ್ ಕಲಿಕೆಯಲ್ಲಿ ಸಾಮಾಜಿಕ ಪ್ರಭಾವಕ್ಕೆ ಒತ್ತುಕೊಟ್ಟಿರುವುದರಿಂದ ಇವನ ಸಿದ್ಧಾಂತವನ್ನು ಸಾಮಾಜಿಕ ಕಲಿಕೆಯ ಸಿದ್ಧಾಂತವೆಂದು (Social Learning Theory) ಗುರ್ತಿಸಲಾಗಿದೆ. ಬೇರೆಯವರ ವರ್ತನೆಯ ನಮೂನೆಯ ಅಥವಾ ಮಾದರಿಯ ಅನುಕರಣೆಗೆ (Modelling) ಮಹತ್ವ ಕೊಟ್ಟಿರುವುದರಿಂದ ಈ ಸಿದ್ಧಾಂತವನ್ನು ನಮೂನೀಕರಣ ಸಿದ್ಧಾಂತ (Modelling Theory) ಎಂದೂ ಹೇಳಲಾಗುತ್ತದೆ. ವ್ಯಕ್ತಿ ಬೇರೊಂದು ನಮೂನೆಯ ಅಥವಾ ಮಾದರಿಯ ವರ್ತನೆಯನ್ನು ವೀಕ್ಷಿಸಿ ಕಲಿಯುವುದರಿಂದ ಆ ರೀತಿಯ ಕಲಿಕೆಯನ್ನು ವೀಕ್ಷಣಾತ್ಮಕ ಕಲಿಕೆ (Observational Learning) ಎಂದು ಬಾಂಡುರ ಹೆಸರಿಸಿದ್ದಾನೆ. ದೂರದರ್ಶನ, ಅಂತರ್ಜಾಲ (Internet) ಮುಂತಾದವುಗಳ ಪ್ರಸಾರಗಳನ್ನು ವ್ಯಾಪಕತೆಯಿಂದಾಗಿ ಅವುಗಳನ್ನು ವೀಕ್ಷಿಸುವ ಜನರ, ವಿಶೇಷವಾಗಿ ಮಕ್ಕಳ ವರ್ತನೆಯ ಮೇಲೆ ಆಗುವ ಧನಾತ್ಮಕ ಅಥವಾ ಋಣಾತ್ಮಕ ಪ್ರಭಾವದಿಂದ ಕೆಲವು ಸಾಮಾಜಿಕ ಸಮಸ್ಯೆಗಳು ಉಂಟಾಗಿರುವುದರ ಹಿನ್ನೆಲೆಯಲ್ಲಿ ಅನುಕರಣೆಗೆ ಮಹತ್ವಕೊಟ್ಟಿರುವ ಬಾಂಡುರನ ಸಿದ್ಧಾಂತ ಸಾಕಷ್ಟು ಪ್ರಸಿದ್ಧಿ ಪಡೆದುಕೊಂಡಿದೆ.

ವೀಕ್ಷಣಾ ಕಲಿಕೆಯ ಪ್ರಕ್ರಿಯೆ ಹೀಗೆ ಆಗುತ್ತದೆ. ಕಲಿಯುವ ವ್ಯಕ್ತಿ ತಾನು ನಮೂನೆ ಅಥವಾ ಮಾದರಿಯಾಗಿ ಒಪ್ಪಿಕೊಂಡಿರುವ ವ್ಯಕ್ತಿಯ ನಿರ್ದಿಷ್ಟ ವರ್ತನೆಯನ್ನು ಆ ವ್ಯಕ್ತಿಯೊಂದಿಗೆ ತಾದಾತ್ಮಕತೆ ಹೊಂದಿ ವೀಕ್ಷಿಸುತ್ತಾನೆ. ನಂತರ ಅದೇ ರೀತಿಯ ವರ್ತನೆಯನ್ನು ತಾನು ಪ್ರದರ್ಶಿಸಲು ಪ್ರಯತ್ನಿಸಿ, ತನ್ನ ವರ್ತನೆಯನ್ನು ನಮೂನೆಯ ವರ್ತನೆಗೆ ಹೊಂದಿಸುವ ಪ್ರಯತ್ನದಲ್ಲಿ ತೊಡಗುತ್ತಾನೆ. ಈ ಪ್ರಯತ್ನ ವ್ಯಕ್ತಿಯ ವರ್ತನೆ ನಮೂನೆಯ ವರ್ತನೆಗೆ ಸಂಪೂರ್ಣವಾಗಿ ಹೊಂದಾಣಿಕೆಯಾಗುವವರೆಗೂ ಮುಂದುವರಿಯುತ್ತದೆ. ಈ

Digitised by Bharatavani, CIIL

ಪ್ರಯತ್ನದಿಂದ ವ್ಯಕ್ತಿ ನಮೂನೆಯ ವರ್ತನೆಯನ್ನು ಕಲಿತುಕೊಳ್ಳುತ್ತಾನೆ. ವೀಕ್ಷಣಾ ಕಲಿಕೆ ವ್ಯಕ್ತಿಗೆ ಅರಿವಿಲ್ಲದಂತೆ ಅಪ್ರಜ್ಞಾಪೂರ್ವಕವಾಗಿಯೂ ಆಗಬಹುದು. ನಮೂನೆಯೊಂದಿಗೆ ಆಗಿರುವ ತಾದಾತ್ಮಕತೆ ಸಂವೇಗಾತ್ಮಕವಾಗಿ ಗಾಢವಾಗಿದ್ದಲ್ಲಿ ವ್ಯಕ್ತಿ ತನಗೇ ಅರಿವಿಲ್ಲದಂತೆ ನಮೂನೆಯಂತೆಯೇ ವರ್ತಿಸತೊಡಗಬಹುದು. ಕೆಲವು ವೇಳೆ ನಮೂನೆಯಾಗಿರುವ ವ್ಯಕ್ತಿಗೆ ಸಾಮಾಜಿಕ ಸ್ವೀಕೃತಿ ಇಲ್ಲದಿದ್ದಲ್ಲಿ (ಉದಾ: ಆತಂಕವಾದಿ, ರಹಸ್ಯ ಪ್ರಪಂಚದ 'ಡಾನ್' ಇತ್ಯಾದಿ) ಈ ರೀತಿಯ ಅನುಕರಣ ಕಲಿಕೆಯಿಂದ ಸಮಸ್ಯೆ ಉಂಟಾಗುತ್ತದೆ. ವೀಕ್ಷಣಾ ಕಲಿಕೆಯಲ್ಲಿ ಅಥವಾ ನಮೂನೀಕರಣ ಕಲಿಕೆಯಲ್ಲಿ ಬಾಂಡುರ ನಾಲ್ಕು ಪ್ರಕ್ರಿಯೆಗಳನ್ನು ಗುರ್ತಿಸಿದ್ದಾನೆ.

1. **ಅವಧಾನಾತ್ಮಕ ಪ್ರಕ್ರಿಯೆ:** ವೀಕ್ಷಣಾ ಕಲಿಕೆಯುಂಟಾಗಲು ಮೊದಲು ಕಲಿಕಾರ್ಥಿ ನಮೂನೆಯ ವರ್ತನೆಗೆ ಗಮನ (ಅವಧಾನ) ಕೊಡಬೇಕು. ನಮೂನೆ ವ್ಯಕ್ತಿಯನ್ನು ಕಲಿಕಾರ್ಥಿ ಈಗಾಗಲೇ ಮಾದರಿಯಾಗಿ ಸ್ವೀಕರಿಸಿದ್ದಲ್ಲಿ ನಮೂನೆಯ ವರ್ತನೆಗಳಿಗೆ ಸಹಜವಾಗಿಯೇ ಗಮನ ನೀಡುತ್ತಾನೆ. ನಮೂನೆಯ ವರ್ತನೆಯನ್ನು ಉದ್ದೇಶಪೂರ್ವಕವಾಗಿ ಕಲಿಸಬೇಕೆಂದಿದ್ದರೆ. ಕಲಿಕಾರ್ಥಿಗಳು ತಮ್ಮ ಅವಧಾನವನ್ನು ನಮೂನೆಯ ಕಡೆಗೆ ಮೊದಲು ಕೇಂದ್ರೀಕರಿಸುವಂತೆ ಮಾಡಬೇಕು. ನಮೂನೆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ, ಸಾಧನೆಗಳು, ಜನಪ್ರಿಯತೆ ಬಗ್ಗೆ ವಿವರಿಸುವುದರಿಂದ ಕಲಿಕಾರ್ಥಿಗಳ ಗಮನ ನಮೂನೆಯ ಕಡೆಗೆ ಬರುವಂತೆ ಮಾಡಬಹುದು.

2. **ಧಾರಣಾತ್ಮಕ ಪ್ರಕ್ರಿಯೆ (Retentional Process):** ಕಲಿಕಾರ್ಥಿಗಳ ಗಮನ ಕೇಂದ್ರೀಕೃತವಾದ ನಂತರ ನಮೂನೆ ವರ್ತನೆಯನ್ನು ಪ್ರದರ್ಶಿಸುತ್ತಾನೆ. ಈ ವರ್ತನೆಯನ್ನು ಕಲಿಕಾರ್ಥಿ ಗಮನವಿಟ್ಟು ವೀಕ್ಷಿಸಿ ಅದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆ ವರ್ತನೆಯನ್ನು ಬಿಂಬಾತ್ಮಕವಾಗಿ ಮನಸ್ಸಿನಲ್ಲಿ ಪ್ರತಿನಿಧೀಕರಿಸಿಕೊಳ್ಳಬೇಕು. ನಮೂನೆ ವ್ಯಕ್ತಿ ವರ್ತನೆಯನ್ನು ಪುನರಾವೃತ್ತಿ ಮಾಡುವುದರಿಂದ ಈ ಪ್ರಕ್ರಿಯೆ ಸುಲಭವಾಗುತ್ತದೆ. ಇದರ ಜೊತೆಗೆ ಶಾಬ್ದಿಕ ವಿವರಣೆಯನ್ನು ಕೊಡಬಹುದು.

3. **ಗತ್ಯಾತ್ಮಕ ಪುನರುತ್ಪಾದನೆ (Motoric Reproduction):** ನಮೂನೆಯ ವರ್ತನೆಯನ್ನು ವೀಕ್ಷಿಸಿದ ನಂತರ ಕಲಿತಾರ್ಥಿ ತಾನೇ ಆ ವರ್ತನೆಯನ್ನು ತೋರಿಸಲು ಪ್ರಯತ್ನಿಸಬೇಕು. ಆ ಪ್ರಕ್ರಿಯೆಗೆ ಪರಿಪಕ್ವನ ಸಿದ್ಧತೆ ಇರಬೇಕಾಗುತ್ತದೆ. ವರ್ತನೆ ಸಂಕೀರ್ಣವಾದುದಾಗಿದ್ದರೆ ಅದರ ಬೇರೆ ಬೇರೆ ಭಾಗಗಳನ್ನು ವೀಕ್ಷಿಸಿ, ಅನುಕರಣೆ ಮಾಡಿ ಕಲಿತುಕೊಂಡು ಅವುಗಳನ್ನು ನಂತರದಲ್ಲಿ ಸಮಗ್ರಗೊಳಿಸಿ ಇಡೀ ವರ್ತನೆಯನ್ನು ಕಲಿತುಕೊಳ್ಳಬಹುದು. ವರ್ತನೆಯಲ್ಲಿ ತಪ್ಪುಗಳಿದ್ದರೆ ಪ್ರತಿಪುಷ್ಟಿಯ ಮೂಲಕ ಅವುಗಳನ್ನು ಸರಿಪಡಿಸಬೇಕು. ವ್ಯವಸ್ಥಿತ ಮಾರ್ಗದರ್ಶನ ಮತ್ತು ತರಬೇತಿ ಇದಕ್ಕೆ ಬೇಕಾಗುತ್ತದೆ.

4. **ಅಭಿಪ್ರೇರಣಾತ್ಮಕ ಮತ್ತು ಪುನರ್ಬಲನಾತ್ಮಕ ಪ್ರಕ್ರಿಯೆಗಳು:** ವೀಕ್ಷಣಾ ಕಲಿಕೆಯಲ್ಲಿ ಅಭಿಪ್ರೇರಣೆ ಮತ್ತು ಪುನರ್ಬಲನ ಬಹು ಮುಖ್ಯ ಪಾತ್ರವಹಿಸುತ್ತವೆ. ನಮೂನೆಯನ್ನು ಕಲಿಕಾರ್ಥಿ ಒಪ್ಪಿಕೊಂಡಿದ್ದರೆ ಸಹಜವಾಗಿಯೇ ಅನುಕರಿಸುವ ಪ್ರೇರಣೆ ಉಂಟಾಗುತ್ತದೆ. ಉದ್ದೇಶಪೂರ್ವಕವಾಗಿ ಕಲಿಸಬೇಕಾಗಿದ್ದಲ್ಲಿ ಕಲಿಕಾರ್ಥಿಯಲ್ಲಿ ಪ್ರೇರಣೆಯನ್ನು ಉಂಟುಮಾಡಬೇಕು. ಮಾದರಿ ವ್ಯಕ್ತಿಯ ಮಹತ್ವ, ಅವನ/ಅವಳ ವರ್ತನೆಯ ಮಹತ್ವವನ್ನು ತಿಳಿಸುವುದು ಅನುಕರಿಸುವ ಪ್ರೇರಣೆಯನ್ನು ಉಂಟುಮಾಡುತ್ತದೆ. ಕಲಿಯುವ ವರ್ತನೆಗೆ ಸೂಕ್ತ ಬಹುಮಾನ ನೀಡುವುದು, ಪ್ರಶಂಸೆ ಮಾಡುವುದು, ಕಲಿಯುವ ಅವಧಿಯಲ್ಲಿಯೇ ಆಗಾಗ್ಗೆ ಪ್ರಶಂಸಿಸಿ ಪ್ರೋತ್ಸಾಹಿಸುವುದು ಸರಿಯಾದ ಅನುಕರಣೆಗೆ ಬೇಕಾದ ಪುನರ್ಬಲನ ನೀಡುತ್ತವೆ.

ವೀಕ್ಷಣಾ ಕಲಿಕೆ ಅಥವಾ ಅನುಕರಣ ಕಲಿಕೆಯುಂಟಾಗಬೇಕಾದರೆ ನಮೂನೆ ಅಥವಾ ಮಾದರಿಯಾಗುವ ವ್ಯಕ್ತಿ ಮತ್ತು ಅವನ/ಅವಳ ವರ್ತನೆ ಅನೇಕ ಲಕ್ಷಣಗಳನ್ನು ಹೊಂದಿರಬೇಕೆಂದು ಬಾಂಡುರ್ ಹೇಳುತ್ತಾನೆ. ಆ ಲಕ್ಷಣಗಳು ಹೀಗಿವೆ;

- ನಮೂನೆಯ ವಯಸ್ಸು, ಲಿಂಗ ಮತ್ತು ಸಾಮಾಜಿಕ ಸ್ಥಾನಮಾನ ಅನುಕರಿಸುವ ವ್ಯಕ್ತಿಗಿಂತ ಮೇಲ್ಮಟ್ಟದಲ್ಲಿರಬೇಕು. ಸಿನಿಮಾ ತಾರೆಯರು, ಕ್ರಿಕೆಟ್, ಫುಟ್‌ಬಾಲ್, ಟೆನಿಸ್ ಪಟುಗಳು, ಪ್ರಸಿದ್ಧ ರಾಜಕಾರಣಿಗಳು, ಸಂತರು ಹೆಚ್ಚಿನ ಸಾಮಾಜಿಕ ಸ್ಥಾನಮಾನ (ಅಧಿಕಾರ, ಹಣ, ಸಾಧನೆಯಲ್ಲಿ) ಪಡೆದಿರುವವರು ಪ್ರಭಾವ ಪೂರ್ಣ ಮಾದರಿಗಳಾಗುತ್ತಾರೆ.
- ನಮೂನೆ ವ್ಯಕ್ತಿಗೂ, ಅನುಕರಿಸುವ ವ್ಯಕ್ತಿಗೂ ಸಮಾನತೆ ಇದ್ದರೂ ನಮೂನೀಕರಣ ಚೆನ್ನಾಗಿ ಆಗುತ್ತದೆ. ಮಕ್ಕಳು ತಮ್ಮ ವಯಸ್ಸಿನ ಮಕ್ಕಳನ್ನೇ ಅನುಕರಿಸುವುದು ಹೆಚ್ಚು.
- ವ್ಯಕ್ತಿ ಮತ್ತು ನಮೂನೆಯ ಸಾಮಾಜಿಕ ಸಂಬಂಧ ಮುಖ್ಯವಾಗುತ್ತದೆ. ಮಕ್ಕಳು ತಂದೆ, ತಾಯಿ, ಅಜ್ಜ, ಅಜ್ಜಿ, ಶಿಕ್ಷಕರು, ಅಣ್ಣ–ತಂಗಿಯರನ್ನು ಹೆಚ್ಚಾಗಿ ಅನುಕರಿಸುತ್ತಾರೆ.
- ನಮೂನೆಯ ವರ್ತನೆಗೆ ದೊರೆಯುವ ಸಾಮಾಜಿಕ ಸ್ಥಾನಮಾನ, ಬಹುಮಾನಗಳು, ಜೀವನದ ಸಮೃದ್ಧತೆ ಆ ವರ್ತನೆಯ ಅನುಕರಣೆಗೆ ಪ್ರೋತ್ಸಾಹ ನೀಡುತ್ತವೆ.
- ಮಕ್ಕಳು ಅಕ್ರಮಣಕಾರಿ ವರ್ತನೆಯನ್ನು ಅನುಕರಿಸುವ ಸಾಧ್ಯತೆ ಹೆಚ್ಚು.
- ನಮೂನೆಯ ವರ್ತನೆಯ ಮಹತ್ವಕ್ಕೆ ಕಾರಣವಾಗುವ ಅನೇಕ ಅಂಶಗಳು ಆ ವರ್ತನೆಯ ಅನುಕರಣೆಗೆ ಪ್ರೇರಣೆ ಉಂಟುಮಾಡುತ್ತವೆ. ಸಿನಿಮಾ/ಟಿ.ವಿ. ನಟ–ನಟಿಯರಿಗೆ, ಕ್ರೀಡಾಪಟುಗಳಿಗೆ ವಿಶೇಷವಾಗಿ ಕ್ರಿಕೆಟ್ ಪಟುಗಳಿಗೆ ಕೊಡುತ್ತಿರುವ ಪ್ರಾಮುಖ್ಯ ಅವರ ವರ್ತನೆಯ ಅನುಕರಣೆಗೆ ಹೆಚ್ಚಿನ ಪ್ರೇರಣೆ ನೀಡುತ್ತದೆ.

Digitised by Bharatavani, CIIL

ಬಾಂಡುರ ಮಕ್ಕಳು ಆಕ್ರಮಣಕಾರಿ ಮತ್ತು ಹಿಂಸಾತ್ಮಕ ವರ್ತನೆಗಳನ್ನು ಅನುಕರಣೆಯಿಂದ ಕಲಿತುಕೊಳ್ಳುತ್ತಾರೆಂಬುದನ್ನು ಪ್ರಯೋಗಗಳ ಮೂಲಕ ತೋರಿಸಿದ್ದಾನೆ. ಹಾಗೆಯೇ ಅನೇಕ ಪ್ರಯೋಗಗಳಿಂದ ಅಪೇಕ್ಷಿತ, ಧನಾತ್ಮಕ ವರ್ತನೆಗಳನ್ನು ನಮೂನೀಕರಣದ ಮೂಲಕ ರೂಪಿಸಬಹುದೆಂಬುದನ್ನು ತೋರಿಸಿದ್ದಾನೆ. ಈ ದೃಷ್ಟಿಯಿಂದ ವೀಕ್ಷಣ ಕಲಿಕೆ ಹೆಚ್ಚಿನ ಶೈಕ್ಷಣಿಕ ನಿಹಿತಾರ್ಥವನ್ನು ಹೊಂದಿರುವುದು ಸ್ಪಷ್ಟವಾಗಿದೆ. ಅನೇಕ ಟಿ.ವಿ. ವಾಹಿನಿಗಳ ಅಪೇಕ್ಷಿತ, ಅನಪೇಕ್ಷಿತ ಪ್ರಸಾರಗಳ ಹಾವಳಿಯಿಂದ ಮಕ್ಕಳನ್ನು ಸಂರಕ್ಷಿಸುವುದು ಪೋಷಕರಿಗೆ ಒಂದು ಸವಾಲಾಗಿದೆ. ಹಾಗೆಯೇ ಇಂಟರ್‌ನೆಟ್‌ನಲ್ಲಿ ಎಲ್ಲಾ ರೀತಿಯ ಮಾಹಿತಿಯ ಲಭ್ಯತೆಯೂ ಒಂದು ಸಮಸ್ಯೆಯನ್ನು ಸೃಷ್ಟಿಸಿದೆ. ಸರ್ಕಾರಗಳು ಪ್ರಸಾರ ಮಾಧ್ಯಮಗಳ ಬಗ್ಗೆ ನಿಯಂತ್ರಣ ನೀತಿಯನ್ನು ಅನುಸರಿಸಬಹುದು. ಶಾಲೆಯಲ್ಲಿ ಶಿಕ್ಷಕರು ಮನೆಯಲ್ಲಿ ಪೋಷಕರು ಮಾದರಿಗಳಾಗಬೇಕು. ಸಮಾಜದಲ್ಲಿನ ಅನುಸರಿಸಲು ಯೋಗ್ಯವಾದ ವ್ಯಕ್ತಿಗಳನ್ನು ಮಕ್ಕಳಿಗೆ ಪರಿಚಯಿಸಬೇಕಾದ ಅಗತ್ಯವಿದೆ.

ರಾಬರ್ಟ್ ಎಂ.ಗ್ಯಾನೆ (Gagne) ಎಲ್ಲಾ ಪ್ರಮುಖ ಕಲಿಕೆಯ ಸಿದ್ಧಾಂತಗಳ ಮುಖ್ಯ ಪರಿಕಲ್ಪನೆಗಳನ್ನು, ನಿಯಮಗಳನ್ನು, ಸಮಗ್ರಗೊಳಿಸಲು ಪ್ರಯತ್ನಿಸಿದ್ದಾನೆ. ಕಲಿಕೆಯ ಬಗೆಗಿನ ಎಲ್ಲಾ ಸಿದ್ಧಾಂತಗಳನ್ನು ಕ್ರೋಢೀಕರಿಸಿ ಪ್ರಾಯೋಗಿಕ ಅನ್ವಯಿಕತೆಗೆ ಅನುಕೂಲವಾಗುವಂತೆ ಕಲಿಕೆಯ ಒಂದು ಶ್ರೇಣಿ ಬದ್ಧ ಮಾದರಿಯನ್ನು 1965ರಲ್ಲಿ ಪ್ರಕಟಿಸಿದ Conditions of Learning ಎನ್ನುವ ಪುಸ್ತಕದಲ್ಲಿ ವಿವರಿಸಿದ್ದಾನೆ. ಪುನಃ 1975ರಲ್ಲಿ ಈ ಮಾದರಿಯನ್ನು ಸ್ವಲ್ಪ ಮಟ್ಟಿಗೆ ಪರಿಷ್ಕರಿಸಿದನು. ಈ ಮಾದರಿಯನ್ನು ಗ್ಯಾನೆಯ ಕಲಿಕಾ ವಿಧಗಳ ಶ್ರೇಣಿ (Gagne's Hierarchy of learning Types) ಎಂದು ಹೇಳುತ್ತಾರೆ. ಗ್ಯಾನೆಯ ಕಲಿಕೆಯ ಸ್ವರೂಪದ ವಿವರಣೆಯನ್ನು ಒಂದು ಸಿದ್ಧಂತವೆಂದು ಹೇಳುವುದು ಸರಿಯಲ್ಲ. ಅವನ ಪ್ರಯತ್ನ ಎಲ್ಲಾ ಸಿದ್ಧಾಂತಗಳ ಸಾರವನ್ನು ಕ್ರೋಢೀಕರಿಸಿ ಕಲಿಕೆಯ ವಿಧಗಳನ್ನು ಗುರ್ತಿಸಿ, ಅವುಗಳನ್ನು ಶ್ರೇಣೀಬದ್ಧಗೊಳಿಸಿ ಅವುಗಳ ವಿಕಾಸಕ್ಕೆ ಆವಶ್ಯಕವಾದ ಷರತ್ತುಗಳನ್ನು ಗುರ್ತಿಸುವುದಾಗಿತ್ತು.

ಗ್ಯಾನೆ ಸಾಮರ್ಥ್ಯಕ್ಕೂ (Ability), ಯೋಗ್ಯತೆ ಅಥವಾ ಕ್ಷಮತೆಗೂ (Capability) ವ್ಯತ್ಯಾಸ ಕಲ್ಪಿಸುತ್ತಾನೆ. ಸಾಮರ್ಥ್ಯ ವ್ಯಕ್ತಿಯಲ್ಲಿ ವಿವಿಧ ವರ್ತನೆಗಳನ್ನು ಕಲಿಯಲು ಬೇಕಾದ ಆಂತರಿಕ ಸ್ಥಿತಿಯನ್ನು ಸೂಚಿಸುತ್ತದೆ. ಸಾಮರ್ಥ್ಯ ಜೈವಿಕವಾಗಿದ್ದು ಅದರಲ್ಲಿ ಅನುವಂಶೀಯತೆ ಪಾತ್ರವೂ ಇದೆ. ಇದರಲ್ಲಿ ವ್ಯಕ್ತಿ ವ್ಯತ್ಯಾಸಗಳಿರುತ್ತವೆ. ನಿರ್ದಿಷ್ಟ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಕಲಿಕೆ ಮತ್ತು ತರಬೇತಿಯಿಂದ ನಿರ್ದಿಷ್ಟ ವರ್ತನೆಯನ್ನು ಕಲಿತುಕೊಳ್ಳವುದು ಯೋಗ್ಯತೆ ಅಥವಾ ಕ್ಷಮತೆ ಎನ್ನಿಸುತ್ತದೆ. ಉದಾಹರಣೆಗೆ ಭಾಷೆಯನ್ನು ಕಲಿಯುವ ಸಾಮರ್ಥ್ಯ ಎಲ್ಲರಲ್ಲೂ ಇರುತ್ತದೆ. ಆದರೆ ಈ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಕಲಿಕೆ ಅಥವಾ ತರಬೇತಿಯಿಂದ ವ್ಯಕ್ತಿ ಒಂದು ನಿರ್ದಿಷ್ಟ ಭಾಷೆಯನ್ನು (ಉದಾ:ಕನ್ನಡ ಭಾಷೆ) ಕಲಿತು ಅದರಲ್ಲಿ ಮಾತನಾಡಲು ಶಕ್ತನಾದರೆ ಅವನು ಕನ್ನಡ ಭಾಷೆಯಲ್ಲಿ ವ್ಯವಹರಿಸುವ ಯೋಗ್ಯತೆ (ಕ್ಷಮತೆ)ಯನ್ನು ಪಡೆದುಕೊಂಡಿದ್ದಾನೆ ಎಂದು ಹೇಳಬಹುದು. ಈ ದೃಷ್ಟಿಯಿಂದ ಗ್ಯಾನೆ ಕಲಿಕೆಯನ್ನು ಹೀಗೆ ವ್ಯಾಖ್ಯಾನಿಸಿದ್ದಾನೆ: "ಕಲಿಕೆ ಕೇವಲ ಬೆಳವಣಿಗೆಯ ಪರಿಣಾಮದಿಂದ ಉಂಟಾಗುತ್ತದೆ ಎಂದು ಹೇಳುವುದಕ್ಕಿಂತ ಮಾನವನ ಪ್ರವೃತ್ತಿ ಅಥವಾ ಯೋಗ್ಯತೆಯಲ್ಲಿ ಉಂಟಾಗುವ ಬದಲಾವಣೆ ಎಂದು ಹೇಳಬಹುದು". ಗ್ಯಾನೆಗೆ ಕಲಿಕೆ ವ್ಯಕ್ತಿಯ ವರ್ತನೆಯ ನಿಷ್ಪಾದನೆಯಲ್ಲಿನ (Performance) ಬದಲಾವಣೆಗಾಗಿ ವ್ಯಕ್ತಿಯ ಯೋಗ್ಯತೆಯ ವಿಕಾಸವಾಗಿದೆ.

ಗ್ಯಾನೆಯ 1965ರ ಕಲಿಕೆಯ ವಿಧಗಳ ಶ್ರೇಣಿ ಈ ಕೆಳಕಂಡಂತಿದೆ. ಈ ಮಾದರಿ ಎಂಟು ವಿಧಗಳ ಕಲಿಕೆಗಳನ್ನು ಒಳಗೊಂಡಿದೆ. ಪ್ರತಿ ಕಲಿಕೆಯ ವಿಧದ ಮುಂದೆ ಒಂದು ಉದಾಹರಣೆ ಇದೆ.

| | | |
|---|---|---|
| 1 | ಸಂಕೇತ ಕಲಿಕೆ | ರುಚಿಯಾದ, ಆಕರ್ಷಕ ಖಾದ್ಯ ವಸ್ತುವನ್ನು ನೋಡಿದಾಗ ಜೊಲ್ಲು ಬರುವುದು. |
| 2 | ಪ್ರಚೋದನ–ಅನುಕ್ರಿಯೆಯ ಕಲಿಕೆ | ಕೆಂಪು ದೀಪ ನೋಡಿದಾಗ ವಾಹನ ನಿಲ್ಲಿಸುವುದು, ಹಸಿರು ದೀಪ ಬಂದಾಗ ಮುಂದೆ ಹೋಗುವುದು. |
| 3 | ಶೃಂಖಲಾ ಕಲಿಕೆ | ನೃತ್ಯದ ವಿವಿಧ ಭಂಗಿಗಳನ್ನು ಸೇರಿಸಿ ನೃತ್ಯ ಮಾಡುವುದು. |
| 4 | ಶಾಬ್ದಿಕ ಸಾಹಚರ್ಯ ಕಲಿಕೆ | ಅಕ್ಷರಗಳನ್ನು ಜೋಡಿಸಿ ಪದಗಳನ್ನು, ಪದಗಳನ್ನು ಜೋಡಿಸಿ ವಾಕ್ಯವನ್ನು ರಚಿಸುವುದು. |
| 5 | ಬಹು ವಿಭೇದೀಕರಣ ಕಲಿಕೆ | ವಸ್ತುಗಳ ವೈವಿಧ್ಯತೆಯನ್ನು ಗುರ್ತಿಸುವುದು. |
| 6 | ಪರಿಕಲ್ಪನಾ ಕಲಿಕೆ | ಮೂರ್ತ ಮತ್ತು ಅಮೂರ್ತ ಪರಿಕಲ್ಪನೆಗಳನ್ನು ಕಲಿಯುವುದು. |
| 7 | ನಿಯಮಗಳ ಕಲಿಕೆ | ದಿನ ನಿತ್ಯದಲ್ಲಿ ಕಂಡುಬರುವ, ಶಾಲೆ ವಿಷಯಗಳಲ್ಲಿ ಬರುವ ನಿಯಮಗಳನ್ನು ಕಲಿಯುವುದು, ಉದಾ: ಗಣಿತ/ಭೌತಶಾಸ್ತ್ರದ ನಿಯಮಗಳು. |
| 8 | ಸಮಸ್ಯಾ ಪರಿಹಾರ ಕಲಿಕೆ. | ಎದುರಾಗುವ ಸಮಸ್ಯೆಗಳನ್ನು ಬಿಡಿಸುವುದನ್ನು ಕಲಿಯುವುದು. |

Digitised by Bharatavani, CIIL

ಈ ಕಲಿಕಾ ಶ್ರೇಣಿಯಲ್ಲಿ 'ಸಂಕೇತ ಕಲಿಕೆ' ಅತ್ಯಂತ ಕೆಳಮಟ್ಟದ ಮತ್ತು 'ಸಮಸ್ಯಾ ಪರಿಹಾರ' ಅತ್ಯಂತ ಮೇಲ್ಮಟ್ಟದ ಕಲಿಕೆಯಾಗಿದೆ. ಮೊದಲ ಮೂರು ವಿಧಗಳು ಪ್ರಾಣಿಗಳಿಗೂ ಅನ್ವಯಿಸುತ್ತವೆ. ನಂತರದ 5 ವಿಧಗಳು ಮಾನವನಿಗೆ ಅನ್ವಯಿಸುತ್ತವೆ. ಆದರೆ ಪ್ರಾಣಿಗಳಿಗೆ ಸ್ವಲ್ಪ ಮಟ್ಟಿಗೆ ಬಹು ವಿಭೇದೀಕರಣ ಕಲಿಕೆ ಸಾಧ್ಯವಾಗುತ್ತದೆ. ಒಂದು ಮಟ್ಟದ ಕಲಿಕೆ ಸಾಧ್ಯವಾಗಬೇಕಾದರೆ ಅದರಿಂದ ಕೆಳಗಿನ ಎಲ್ಲಾ ಕಲಿಕೆಗಳು ಉಂಟಾಗಿರಬೇಕಾಗುತ್ತದೆ. ಒಂದು ಮಟ್ಟದ ಕಲಿಕೆ ವ್ಯಕ್ತಿಯನ್ನು ಮುಂದಿನ ಮಟ್ಟದ ಕಲಿಕೆಗೆ ಸಮರ್ಥನನ್ನಾಗಿಸುತ್ತದೆ. ಪ್ರತಿಯೊಂದು ಕಲಿಕೆಯ ತರಬೇತಿಗೆ ಆಂತರಿಕ ಮತ್ತು ಬಾಹ್ಯ ಷರತ್ತುಗಳಿರಬೇಕಾಗುತ್ತದೆ. ಆಂತರಿಕ ಷರತ್ತುಗಳು ಕಲಿಕಾರ್ಥಿಗೆ ಸಂಬಂಧಿಸಿವೆ ಮತ್ತು ಬಾಹ್ಯ ಷರತ್ತುಗಳು ಕಲಿಕೆಯ ಪರಿಸರಕ್ಕೆ ಸಂಬಂಧಿಸಿವೆ.

ತನ್ನ ಕಲಿಕಾ ಶ್ರೇಣಿ ಮಾದರಿಯ 1975ರ ಪರಿಷ್ಕರಣದಲ್ಲಿ ಗ್ಯಾನೆ ತನ್ನ ಕಲಿಕಾ ಶ್ರೇಣಿಯ 1965ರ ಮಾದರಿಯ ಮೊದಲ ನಾಲ್ಕು ಕಲಿಕೆಯ ವಿಧಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾನೆ. ಆದರೆ ನಂತರದ ನಾಲ್ಕು ಮೇಲ್ಮಟ್ಟದ ವಿಧಗಳನ್ನು ಯೋಗ್ಯತೆಯ 5 ವಿಧಗಳಾಗಿ ವಿಭಜಿಸಿದ್ದಾನೆ. ಅವು ಈ ಕೆಳಕಂಡಂತಿವೆ–

**I. ಮೂಲಭೂತ ಕಲಿಕೆಯ ವಿಧಗಳು:** 1965ರ ಮಾದರಿಯಲ್ಲಿನ ಮೊದಲ ನಾಲ್ಕು ವಿಧಗಳು.

**II. ಬೌದ್ಧಿಕ ಕೌಶಲಗಳು:** ಇದರಲ್ಲಿ ಹಿಂದಿನ ಮಾದರಿಯ 5,6,7ನೇ ವಿಧಗಳು ಸೇರಿವೆ.

(a) **ಬಹು ವಿಭೇದೀಕರಣ**

(b) **ಪರಿಕಲ್ಪನಾ ಕಲಿಕೆ–(i) ಮೂರ್ತ ಪರಿಕಲ್ಪನೆಗಳು (ii) ಪಾರಿಭಾಷಿಕ ಪರಿಕಲ್ಪನೆಗಳು (iii) ನಿಯಮಗಳ ಕಲಿಕೆ.**

**III. ಸಮಸ್ಯಾ ಪರಿಹಾರ ಕಲಿಕೆ ಮತ್ತು ಸಂಜ್ಞಾನಾತ್ಮಕ ತಂತ್ರಗಳ ಕಲಿಕೆ**

**IV. ಶಾಬ್ದಿಕ ಜ್ಞಾನ ಅಥವಾ ಮಾಹಿತಿ**

V. **ಅಭಿವೃತ್ತಿಗಳ (ಮನೋಭಾವಗಳ) ಕಲಿಕೆ.**

VI. **ಮನೋಗತ್ಯಾತ್ಮಕ ಕೌಶಲಗಳ ಕಲಿಕೆ.**

ಈ ಮಾದರಿಯಲ್ಲಿ ಬೌದ್ಧಿಕ ಕೌಶಲಗಳ ಜೊತೆಗೆ ಇನ್ನೂ ನಾಲ್ಕು ವಿಧಗಳನ್ನು ಸೇರಿಸಲಾಗಿದೆ. ಈ ಮಾದರಿಯಲ್ಲಿನ ಕಲಿಕಾ ವಿಧಗಳ ಸ್ವರೂಪವನ್ನು, ಷರತ್ತುಗಳನ್ನು ಮುಂದೆ ಸಂಕ್ಷಿಪ್ತವಾಗಿ ವಿವರಿಸಿದೆ.

**(I) ಮೂಲಭೂತ ಕಲಿಕೆಯ ವಿಧಗಳು**

**(i) ಸಂಕೇತ ಕಲಿಕೆ (Signal Learning):** ಇದು ಸಂಕೇತ ಒಂದಕ್ಕೆ ಸ್ಥೂಲವಾದ, ವಿಸ್ತೃತವಾದ ಅನುಕ್ರಿಯೆಯನ್ನು ತೋರಿಸುವುದಾಗಿದೆ. ಇದು ಪ್ಯಾವ್‌ಲೋವನ ರೀತಿಯ ಅನುಬಂಧನ ಕಲಿಕೆಯಾಗಿದೆ. ಇದನ್ನು S→R ಎಂದು ಸಂಕೇತಿಸಲಾಗಿದೆ (ಪ್ರಚೋದನೆ→ ಅನುಕ್ರಿಯೆ ಬಂಧ). ಇದಕ್ಕೆ ಅನುಬಂಧನ ಕಲಿಕೆಯ ಎಲ್ಲಾ ನಿಯಮಗಳನ್ನು ಅನುಸರಿಸಬೇಕು. ಅನುಬಂಧಿತ ಪ್ರಚೋದನೆ (CS) ಮತ್ತು ಅನನುಬಂಧಿತ ಪ್ರಚೋದನೆಗಳನ್ನು (US) ಒಟ್ಟಿಗೆ ಉಪಯೋಗಿಸಬೇಕು. ಅನನುಬಂಧಿತ ಪ್ರಚೋದನೆ ಪುನರ್ಬಲನ ನೀಡುತ್ತದೆ. ಆಂತರಿಕವಾಗಿ ಜೀವಿ ಅಗತ್ಯದಿಂದ ವಂಚಿತವಾಗಿರಬೇಕು.

**(ii) ಪ್ರಚೋದನ– ಅನುಕ್ರಿಯಾ ಕಲಿಕೆ (Stimules- Response Learning):** ಇದರಲ್ಲಿ ನಿರ್ದಿಷ್ಟ ಪ್ರಚೋದನೆಗೆ ನಿರ್ದಿಷ್ಟ ಅನುಕ್ರಿಯೆಯನ್ನು ಕಲಿಯಲಾಗುತ್ತದೆ. ಇದರ ಸ್ವರೂಪ ಸ್ಕಿನ್ನರನ ಕ್ರಿಯಾಜನ್ಯ (ಪ್ರಸೂತ) ಅನುಬಂಧನದಂತಿದೆ. ಇದು ಸಾಧನಾತ್ಮಕ (Instrumental) ಅನುಬಂಧನ ಕಲಿಕೆಯಾಗಿದೆ. (ಜೀವಿ ಗುರಿ ಸಾಧಿಸಲು ನಿರ್ದಿಷ್ಟ ಚಟುವಟಿಕೆಯನ್ನು ಅಥವಾ ಕ್ರಿಯೆಯನ್ನು ತೋರಿಸಬೇಕು) ಸಾತತ್ಯತೆ (CS ಮತ್ತು US ಗಳನ್ನು ಒಟ್ಟಿಗೆ ಕೊಡುವುದು), ಅಭ್ಯಾಸ ಅಥವಾ ಪುನರಾವರ್ತನೆ ಮತ್ತು ಸೂಕ್ತ ಪುನರ್ಬಲನ ತಪಸೀಲನ್ನು ಉಪಯೋಗಿಸಬೇಕು. ಕ್ರಿಯಾಜನ್ಯ ಕಲಿಕೆಯ ಎಲ್ಲಾ ನಿಯಮಗಳು ಅನ್ವಯಿಸುತ್ತವೆ. ಇದನ್ನು $S_S \rightarrow R_S$ ಎಂದು ಸಂಕೇತಿಸಲಾಗುತ್ತದೆ. ಇದು ಪ್ರಚೋದನೆ– ಅನುಕ್ರಿಯೆಯ ನಿರ್ದಿಷ್ಟತೆಯನ್ನು ಸೂಚಿಸುತ್ತದೆ. ಆಂತರಿಕವಾಗಿ ಜೀವಿ ಜೈವಿಕ ಅಗತ್ಯದಿಂದಿರಬೇಕು.

**(iii) ಶೃಂಖಲಾ ಕಲಿಕೆ (Chain Learning):** ಇದರಲ್ಲಿ ಒಂದಕ್ಕಿಂತ ಹೆಚ್ಚು ಪ್ರಚೋದನ–ಅನುಕ್ರಿಯಾ ಬಂಧಗಳನ್ನು ಕಲಿತುಕೊಂಡು ಅವುಗಳನ್ನು ಕ್ರಮಾಗತ ರೀತಿಯಲ್ಲಿ ಶೃಂಖಲಾಬದ್ಧಗೊಳಿಸಲಾಗುತ್ತದೆ ಅಥವಾ ಜೋಡಿಸಲಾಗುತ್ತದೆ. ನೃತ್ಯ, ಟೈಪಿಂಗ್, ಸ್ಕೇಟಿಂಗ್, ಬರವಣಿಗೆಯಂಥ ಸಂಕೀರ್ಣ ವರ್ತನೆಗಳ ಕಲಿಕೆ ಈ ರೀತಿಯದು, ಈ ಕಲಿಕೆಗೆ ಪೂರ್ವಭಾವಿಯಾಗಿ ಬೇಕಾಗುವ ನಿರ್ದಿಷ್ಟ ಪ್ರಚೋದನ–ಅನುಕ್ರಿಯಾ ಬಂಧಗಳನ್ನು ಕಲಿತಿರಬೇಕು. ಆಂತರಿಕವಾಗಿ ಪ್ರೇರಣೆ ಹೊಂದಿರಬೇಕು. ಸರಿಯಾದ ವರ್ತನೆಯ, ಕ್ರಮಾಗತ ವಿಶ್ಲೇಷಣೆ, ಸಾತತ್ಯತೆ, ಪುನರ್ಬಲನ, ಅಭ್ಯಾಸ ಕಲಿಸುವ ಮುಖ್ಯ ತತ್ವಗಳು. ಇದನ್ನು (S→R)→ (S→R)→( S →R) ಎಂದು ಸಂಕೇತಿಸಲಾಗುತ್ತದೆ.

(iv) **ಶಾಬ್ದಿಕ (ಭಾಷಿಕ) ಸಾಹಚರ್ಯ ಕಲಿಕೆ (Verbal Association Learning):** ಇದರ ಸ್ವರೂಪ ಶೃಂಖಲಾ ಕಲಿಕೆಯಂತೆಯೆ ಇದೆ. ಇದರಲ್ಲಿ ಅಕ್ಷರಗಳು, ಪದಗಳು ಮತ್ತು ವಾಕ್ಯಗಳ ಶೃಂಖಲೆಗಳನ್ನು ಅಥವಾ ಜೋಡಣೆಗಳನ್ನು ಕಲಿಯಲಾಗುತ್ತದೆ. ಮಗುವಿನ ಆರಂಭಿಕ ಭಾಷಾ ಕಲಿಕೆಯ ಸ್ವರೂಪ ಶೃಂಖಲಾ ಕಲಿಕೆಯೆ ಆಗಿದೆ. ಈ ಕಲಿಕೆ ಮಾನವರಿಗೆ ಮಾತ್ರ ವಿಶಿಷ್ಟವಾಗಿರುವುದರಿಂದ ಗ್ಯಾನೆ ಈ ವಿಧದ ಕಲಿಕೆಯನ್ನು ಶೃಂಖಲಾ ಕಲಿಕೆಗಿಂತ ಮೇಲಿನ ಮಟ್ಟದೆಂದು ಪರಿಗಣಿಸಿದ್ದಾನೆ. ಶೃಂಖಲಾ ಕಲಿಕೆಯ ಎಲ್ಲಾ ಷರತ್ತುಗಳೂ

Digitised by Bharatavani, CIIL

ಈ ವಿಧದ ಕಲಿಕೆಗೆ ಅನ್ವಯಿಸುತ್ತವೆ. ಜೊತೆಗೆ ಸಂಕೇತಗಳನ್ನು ಅರ್ಥಮಾಡಿಕೊಂಡು ಉಪಯೋಗಿಸುವಷ್ಟು ಬುದ್ಧಿಶಕ್ತಿ ಇರಬೇಕು.

**II. ಬೌದ್ಧಿಕ ಕೌಶಲಗಳು**

**(i) ಬಹು ವಿಭೇದೀಕರಣ (Multiple Discrimination):** ಇದರಲ್ಲಿ ಪ್ರಚೋದನೆಗಳ ನಡುವೆ, ಅನುಕ್ರಿಯೆಗಳ ನಡುವೆ ವೈವಿಧ್ಯತೆಯ ಆಧಾರದ ಮೇಲೆ ವಿಭೇದೀಕರಿಸುವುದನ್ನು ಕಲಿಯುತ್ತೇವೆ. ಈ ರೀತಿಯ ವಿಭೇದೀಕರಣ ನಿರ್ದಿಷ್ಟ ಪ್ರಚೋದನೆಗಳಿಗೆ ನಿರ್ದಿಷ್ಟ ಅನುಕ್ರಿಯೆ ತೋರಿಸುವುದರಲ್ಲಿ ಗೊಂದಲವುಂಟಾಗುವುದನ್ನು ತಪ್ಪಿಸುತ್ತದೆ. ಈ ವಿವಿಧ ಕಲಿಕೆ ಪ್ರಾಣಿಗಳಲ್ಲಿಯೂ ಸ್ವಲ್ಪ ಮಟ್ಟಿಗೆ ಸಾಧ್ಯವಾಗುತ್ತದೆ. ಹಿಂದಿನ ಎಲ್ಲಾ ವಿಧದ ಕಲಿಕೆಗಳು ಆಗಿರಬೇಕು. ಪ್ರೇರಣೆ ಇರಬೇಕು. ವ್ಯತ್ಯಾಸಗಳನ್ನು ಸ್ಪಷ್ಟಗೊಳಿಸಿ ಕಲಿಸಬೇಕು. ತಪ್ಪುಗಳನ್ನು ತತ್ಕಾಲದಲ್ಲೇ ಸರಿಪಡಿಸುವುದು ಉತ್ತಮ.

**(ii) ಪರಿಕಲ್ಪನಾ ಕಲಿಕೆ (Concept Learning):** ಇದರಲ್ಲಿ ಮೂರ್ತ, ಅಮೂರ್ತ, ಸರಳ, ಸಂಕೀರ್ಣ, ಪರಿಕಲ್ಪನೆಗಳನ್ನು ಕಲಿಯಲಾಗುತ್ತದೆ. ಇದು ಮಾನವನಿಗೆ ಮಾತ್ರ ವಿಶಿಷ್ಟವಾದುದು. ಪರಿಕಲ್ಪನೆಗಳ ಸಾಮಾನ್ಯ ಲಕ್ಷಣಗಳನ್ನು ಹೊಂದಿದ ಪ್ರಚೋದನೆ ವರ್ಗಗಳ ಸಂಕೇತಗಳಾಗಿವೆ. ವ್ಯಕ್ತಿಯಲ್ಲಿ ಈ ರೀತಿ ವರ್ಗೀಕರಿಸುವ ಅಗತ್ಯ ಸಹಜವಾಗಿಯೇ ಇರುತ್ತದೆ. ಈ ಕಲಿಕೆಯಲ್ಲಿ ಮುಖ್ಯವಾಗಿ ಎರಡು ತತ್ವಗಳನ್ನು ಅನುಸರಿಸಲಾಗುತ್ತದೆ. ಗ್ರಹಿಸುವಿಕೆ (Abstraction) ಮತ್ತು ಸಾಮಾನ್ಯೀಕರಣ (Generalization). ಮೊದಲು ಒಂದು ವರ್ಗಕ್ಕೆ ಸೇರಿರುವ ಅಥವಾ ಸೇರಿಸಬೇಕಾದ ಪ್ರಚೋದನೆಗಳ ಸಾಮಾನ್ಯ ಲಕ್ಷಣವನ್ನು ಗ್ರಹಿಸುವುದು, ನಂತರ ಈ ಲಕ್ಷಣಗಳನ್ನು ಆ ವರ್ಗಕ್ಕೆ ಸೇರಬಹುದಾದ ಇತರ ಉದಾಹರಣೆಗಳಿಗೆ ಸಾಮಾನ್ಯೀಕರಿಸುವುದು. ಕಲಿಕೆಗೆ ಆಂತರಿಕ ಪ್ರೇರಣೆ ಇರಬೇಕು. ಸಮಾನ ಲಕ್ಷಣಗಳನ್ನು ಮತ್ತು ವ್ಯತ್ಯಾಸಗಳನ್ನು ಸ್ಪಷ್ಟಪಡಿಸಬೇಕು. ಹೇರಳವಾಗಿ ಧನಾತ್ಮಕ ಉದಾಹರಣೆಗಳನ್ನು, ಒಮ್ಮೊಮ್ಮೆ ಋಣಾತ್ಮಕ ಉದಾಹರಣೆಗಳನ್ನು ಕೊಡಬೇಕು. ಕಲಿತ ಪರಿಕಲ್ಪನೆಗಳನ್ನು ಹೊಸ ಉದಾಹರಣೆಗಳಿಗೆ ಅನ್ವಯಿಸಲು ಅವಕಾಶ ಒದಗಿಸಬೇಕು.

**(iii) ನಿಯಮಗಳ ಕಲಿಕೆ (Principle or Rule Learning):** ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಪರಿಕಲ್ಪನೆಗಳ ನಡುವೆ ಇರುವ ಸಂಬಂಧವನ್ನು ಕಲಿಯಲಾಗುತ್ತದೆ. ಇದು ನಿಯಮಗಳನ್ನು ಅರ್ಥಮಾಡಿಕೊಳ್ಳುವುದಲ್ಲದೆ ಅವುಗಳನ್ನು ನಿರೂಪಿಸುವುದನ್ನೂ ಒಳಗೊಳ್ಳುತ್ತದೆ. ಪರಿಕಲ್ಪನಾ ಕಲಿಕೆಯಂತೆ ನಿಯಮಗಳ ಕಲಿಕೆಯೂ ಶೈಕ್ಷಣಿಕವಾಗಿ ಮುಖ್ಯವೆನಿಸುತ್ತದೆ. ಶಾಲಾ ಕಲಿಕೆಯಲ್ಲಿ ಮುಖ್ಯವಾಗಿ ಗಣಿತ, ವಿಜ್ಞಾನ ವಿಷಯಗಳಲ್ಲಿ ಪರಿಕಲ್ಪನೆಗಳನ್ನು, ನಿಯಮಗಳನ್ನು ಕಲಿಯಬೇಕಾಗುತ್ತದೆ. ಕಲಿಕಾರ್ಥಿಯಲ್ಲಿ ಕಲಿಯುವ ಪ್ರೇರಣೆ ಇರಬೇಕು. ನಿಯಮಕ್ಕೆ ಸಂಬಂಧಪಟ್ಟ ಪರಿಕಲ್ಪನೆಗಳನ್ನು ಚೆನ್ನಾಗಿ ಕಲಿತಿರಬೇಕು. ಹೇರಳ ಉದಾಹರಣೆಗಳನ್ನು ಉಪಯೋಗಿಸಬೇಕು. ನಿಯಮಗಳನ್ನು ಎರಡು ರೀತಿಗಳಲ್ಲಿ ಕಲಿಸಬಹುದು. ನಿಯಮವನ್ನು ಮೊದಲು ನಿರೂಪಿಸಿ ನಂತರ ಉದಾಹರಣೆಗಳನ್ನು ಕೊಡುವುದು. ಇದು ನಿಯಮ–ಉದಾಹರಣೆ (Rule-Example) ಕ್ರಮ, ಮೊದಲು ಅನೇಕ ಉದಾಹರಣೆಗಳನ್ನು ಕೊಟ್ಟು ಅವುಗಳ ಆಧಾರದ ಮೇಲೆ ನಿಯಮವನ್ನು ನಿರೂಪಿಸುವ ಕ್ರಮಕ್ಕೆ ಉದಾಹರಣೆ–ನಿಯಮ (Example-Rule-Eg-Rule) ವಿಧಾನ ಎಂದು ಹೆಸರು. ಎರಡನೆ ವಿಧಾನ ಮೊದಲನೆ ವಿಧಾನಕ್ಕಿಂತ ಉತ್ತಮವಾದುದು. ಕಲಿತ ನಿಯಮಗಳಿಗೆ ಉದಾಹರಣೆಗಳನ್ನು ಕೊಡಲು, ನಿಯಮವನ್ನು ಅನ್ವಯಿಸಲು ಕಲಿಕಾರ್ಥಿಯನ್ನು ಪ್ರೋತ್ಸಾಹಿಸಬೇಕು.

III. **ಸಮಸ್ಯಾ ಪರಿಹಾರ ಕಲಿಕೆ ಮತ್ತು ಸಂಜ್ಞಾನಾತ್ಮಕ ಕೌಶಲಗಳ ಕಲಿಕೆ (Learning of Problem Solving and Cognitive Strategies):** ಇದು ಅತ್ಯಂತ ಮೇಲ್ಮಟ್ಟದ ಮತ್ತು ಮಾನವನಿಗೆ ಅತ್ಯಂತ ಮುಖ್ಯವಾದ ಕಲಿಕೆಯಾಗಿದೆ. ಇದರಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವುದನ್ನು ಕಲಿಯುತ್ತೇವೆ. ಪರಿಸರದಿಂದ ಮಾಹಿತಿಯನ್ನು ಪಡೆದುಕೊಂಡು ಅದನ್ನು ಪರಿಷ್ಕರಿಸಿ ಮನಸ್ಸಿನಲ್ಲಿಟ್ಟುಕೊಳ್ಳುವ ಪ್ರಕ್ರಿಯೆಗೆ **ಸಂಜ್ಞಾನ** (Cognition) ಎಂದು ಹೆಸರು. ನಾವು ಸಂಜ್ಞಾನ ಪಡೆದುಕೊಳ್ಳಲು ಅನೇಕ ತಂತ್ರಗಳನ್ನು, ಶೈಲಿಗಳನ್ನು ಉಪಯೋಗಿಸುತ್ತೇವೆ. ಇವುಗಳಿಗೆ **ಸಂಜ್ಞಾನಾತ್ಮಕ ತಂತ್ರಗಳು** (Cognitive Strategies) ಎಂದು ಹೆಸರು. ಇವುಗಳನ್ನು ನಾವು ಕಲಿಸಬಹುದು. ಇವು ಸಮಸ್ಯಾ ಪರಿಹಾರಕ್ಕೆ ಸಹಾಯ ಮಾಡುತ್ತವೆ. ಕಲಿಕಾರ್ಥಿಗೆ ಸಮಸ್ಯೆ ಎದುರಾದಾಗ ಅದನ್ನು ಪರಿಹರಿಸಿಕೊಳ್ಳುವ ಪ್ರೇರಣೆ ಇರಬೇಕು. ಸಮಸ್ಯೆಯಲ್ಲಿರುವ ಪರಿಕಲ್ಪನೆಗಳನ್ನು, ನಿಯಮಗಳನ್ನು ಈ ಮೊದಲೇ ಕಲಿತಿರಬೇಕು ಮತ್ತು ಅವುಗಳನ್ನು ನೆನಪು ಮಾಡಿಕೊಳ್ಳಬೇಕು. ಸಮಸ್ಯೆಯನ್ನು ಇಡಿಯಾಗಿ ಗ್ರಹಿಸಿ ನಂತರ ವಿಶ್ಲೇಷಿಸಿ ಪರಿಹರಿಸುವ ಮಾರ್ಗ ಹುಡುಕಬೇಕು. ಪ್ರಯತ್ನ ದೋಷದ ಕ್ರಮ ಬೇಕಾಗುವುದಾದರೂ, ಒಳನೋಟದಿಂದ ಪರಿಹಾರ ಕಂಡು ಹಿಡಿಯುವುದು ಉತ್ತಮ ಮಾರ್ಗವಾಗಿದೆ.

IV. **ಶಾಬ್ದಿಕ ಮಾಹಿತಿ ಕಲಿಕೆ (Verbal Information Learning):** ಇದು ಜೀವನಕ್ಕೆ ಉಪಯುಕ್ತವಾದ ಜ್ಞಾನವನ್ನು, ಮಾಹಿತಿಯನ್ನು ಕಲಿಯುವುದಾಗಿದೆ.

V. **ಅಭಿವ್ಯಕ್ತಿ (ಮನೋಭಾವಗಳ ಕಲಿಕೆ) (Learning of Attitudes):** ವಸ್ತು, ವ್ಯಕ್ತಿ ಅಥವಾ ವಿಚಾರಗಳ ಬಗ್ಗೆ ಧನಾತ್ಮಕವಾದ ಅಥವಾ ಋಣಾತ್ಮಕವಾದ ದಿಶೆಯಲ್ಲಿ ವರ್ತಿಸುವಂತೆ ಮಾಡುವ ಮಾನಸಿಕ ಸಿದ್ಧತೆಯ ಅಭಿವೃತ್ತಿ ಅಥವಾ ಮನೋಭಾವ,

Digitised by Bharatavani, CIIL

ಮನೋಭಾವಗಳು ಕಲಿಕೆಯಿಂದ ರೂಪಿತವಾಗುತ್ತವೆ. ಅವುಗಳು ಹಿತಕರವಾದ ಅಥವಾ ಅಹಿತಕರವಾದ ಸಂವೇಗಾತ್ಮಕ ಅನುಭವಗಳನ್ನು ಉಂಟುಮಾಡುತ್ತವೆ. (ಹೆಚ್ಚಿನ ವಿವರಗಳಿಗೆ ಸಂಪುಟ–1ರ ಅಭಿವೃತ್ತಿಗಳ ಸ್ವರೂಪ ಲೇಖನ ನೋಡಿ).

**VI. ಮನೋಗತ್ಯಾತ್ಮಕ ಕೌಶಲಗಳು (Psycho-Motor Skills):** ವಿವಿಧ ಅಂಗಗಳನ್ನು ಮುಖ್ಯವಾಗಿ ಕೈ–ಕಾಲುಗಳು, ಕಣ್ಣುಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಂಯೋಜಿಸಿ ತೋರಿಸುವ ಧ್ಯೇಯಗಮ್ಯ ವರ್ತನೆಯ ಮನೋಗತ್ಯಾತ್ಮಕ ಕೌಶಲವಾಗಿದೆ. ಸತತ ಅಭ್ಯಾಸ, ಕ್ರಮಾಗತ ಕಲಿಕೆ, ಅಭಿಪ್ರೇರಣೆ, ಪ್ರತಿಪುಷ್ಟಿ ಕೌಶಲ ಕಲಿಕೆಯ ಮುಖ್ಯತತ್ವಗಳಾಗಿವೆ.

ಗ್ಯಾನೆಯ ಕಲಿಕಾ ವಿಧಗಳ ಶ್ರೇಣಿ ಬಹಳಷ್ಟು ಶೈಕ್ಷಣಿಕ ನಿಹಿತಾರ್ಥಗಳನ್ನು ಹೊಂದಿದೆ. ಈ ಎಲ್ಲಾ ವಿಧಗಳ ಕಲಿಕೆಯನ್ನು ಯಶಸ್ವಿಯಾಗಿ ಉಂಟುಮಾಡಲು ಗ್ಯಾನೆ ಮೂರು ಅಂಶಗಳಿಗೆ ಒತ್ತುಕೊಟ್ಟಿದ್ದಾನೆ. ಮೊದಲಿಗೆ ಕಲಿಕೆಗೆ ಬೇಕಾದ ಷರತ್ತುಗಳೊಂದಿಗೆ ಕಲಿಕಾ ಸನ್ನಿವೇಶವನ್ನು ಆಯೋಜಿಸಬೇಕು. ಎರಡನೆಯದಾಗಿ, ಕಲಿಕಾ ಪ್ರಕ್ರಿಯೆಯನ್ನು ಸರಿಯಾಗಿ ನಿರ್ವಹಿಸಬೇಕು. ಸೂಕ್ತ ಮಾರ್ಗದರ್ಶನ ಕಲಿಕಾರ್ಥಿಗೆ ದೊರೆಯಬೇಕು. ಮೂರನೆಯದಾಗಿ, ಬೋಧನೆ ಅಥವಾ ತರಬೇತಿ ವ್ಯವಸ್ಥಿತ ರೀತಿಯಲ್ಲಿ ಆಗಬೇಕು. ಕಲಿಕೆಯ ಪ್ರಗತಿಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡಿ ಪ್ರತಿಪುಷ್ಟಿ ನೀಡಬೇಕು.

ಕಲಿಕೆಯ ಬಗ್ಗೆ ಮಾನವತಾವಾದಿ ನಿಲುವನ್ನು ಕಾರ್ಲ್‌ರೋಜರ್ಸ್ ವಿವರಿಸಿದ್ದಾನೆ. ಮಾನವತಾವಾದಿ ದೃಷ್ಟಿಕೋನ ಕಲಿಕೆಯ ಪ್ರಕ್ರಿಯೆಗಿಂತ ಕಲಿಕೆಯ ಉದ್ದೇಶ ಮತ್ತು ಸ್ವರೂಪಕ್ಕೆ ಹೆಚ್ಚು ಮಹತ್ವ ನೀಡಿದೆ. ಆದ್ದರಿಂದ ಅವನ ವಿಚಾರಗಳನ್ನು ಕಲಿಕೆಯ ವ್ಯವಸ್ಥಿತ ಸಿದ್ಧಾಂತವೆಂದು ಹೇಳಲು ಸಾಧ್ಯವಿಲ್ಲ. ರೋಜರ್ಸ್ ಮಾನವ ಜೀವಿಗಳು ಕಲಿಕೆಗೆ ಬೇಕಾದ ಅಂತಃಸತ್ವವನ್ನು ಹೊಂದಿದ್ದಾರೆ ಎಂದು ಹೇಳುತ್ತಾನೆ. ಮಾನವ ಶಿಶುವಿನಲ್ಲಿ ಸಹಜವಾಗಿ ಇರುವ ಕುತೂಹಲ ಅದನ್ನು ಕಲಿಯಲು ಪ್ರೇರೇಪಿಸುತ್ತದೆ. ಆದ್ದರಿಂದ ಮಗುವಿನ ಕುತೂಹಲವನ್ನು ತೃಪ್ತಿಪಡಿಸುವ ಕಲಿಕಾನುಭಗಳನ್ನು ಒದಗಿಸಬೇಕು, ರೋಜರ್ಸ್ ಅರ್ಥಹೀನ ಕಲಿಕೆಗೂ ಮಹತ್ವಪೂರ್ಣ ಕಲಿಕೆಗೂ (Significant Learning) ವ್ಯತ್ಯಾಸ ಕಲ್ಪಿಸಿದ್ದಾನೆ. ಯಾವ ಕಲಿಕೆ ಮಗುವಿನ ಉದ್ದೇಶಗಳಿಗೆ, ಅಗತ್ಯಗಳಿಗೆ ಸೂಕ್ತವಾಗಿರುತ್ತದೆಯೋ ಅದು ಮಹತ್ವಪೂರ್ಣ ಕಲಿಕೆ. ಉಳಿದುದೆಲ್ಲವೂ ಅರ್ಥಹೀನ ಕಲಿಕೆಯಾಗುತ್ತದೆ. ಕಲಿಕೆಯಿಂದ ಮಗುವಿನ ಆತ್ಮಪ್ರತ್ಯಯದಲ್ಲಿ (Self-Concept) ಧನಾತ್ಮಕ ಬದಲಾವಣೆ ಉಂಟಾಗಬೇಕು. ಯಾವ ಕಲಿಕಾ ಸನ್ನಿವೇಶ ಮಗುವಿನ ಆತ್ಮ–ಪ್ರತ್ಯಯಕ್ಕೆ ಬೆದರಿಕೆಯನ್ನುಂಟುಮಾಡ ುವುದಿಲ್ಲವೋ ಅಂಥ ಸನ್ನಿವೇಶದಲ್ಲಿ ಮಗು ಚೆನ್ನಾಗಿ ಕಲಿಯುತ್ತದೆ. ಸ್ವಯಂ ಪ್ರೇರಿತವಾದ ಮತ್ತು ಸ್ವಪ್ರಯತ್ನದಿಂದ ಉಂಟಾಗುವ ಕಲಿಕೆ ಕಲಿಕಾರ್ಥಿಯ ಇಡೀ ವ್ಯಕ್ತಿತ್ವವನ್ನು ಒಳಗೊಳ್ಳುತ್ತದೆ. ಇದರಿಂದ ಕಲಿಕಾರ್ಥಿ ಕಲಿಕೆಯಲ್ಲಿ ಅಹಂ–ತಾದಾತ್ಮ್ಯತೆ (Ego Involvent) ಹೊಂದಲು ಸಾಧ್ಯವಾಗುತ್ತದೆ. ಮಗುವಿನ ಕಲಿಕೆಯಲ್ಲಿ ಸ್ವವಿಮರ್ಶೆ ಮತ್ತು ಸ್ವ–ಮೌಲ್ಯಮಾಪನ ಮೂಲಭೂತವಾಗಿ ಇದ್ದರೆ ಮಗುವಿನಲ್ಲಿ ಸ್ವಾತಂತ್ರ್ಯ, ಸೃಜನಶೀಲತೆ ಮತ್ತು ಸ್ವ–ಅವಲಂಬನೆಯ ಲಕ್ಷಣಗಳು ವಿಕಾಸ ಹೊಂದುತ್ತವೆ. ಶಿಕ್ಷಕ ಕಲಿಕೆಯ ಸುಗಮ ತಾರ್ಕರ್ತನಾಗಿ (Facilitator) ಪಾತ್ರವಹಿಸಿ ಕಲಿಕೆಯನ್ನು ನಿರ್ದೇಶಿಸಬೇಕು.

ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಅಂದರೆ 1950ರ ನಂತರ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದಲ್ಲಿ (Information and Communication Technology) ಮಹತ್ತರ ಪ್ರಗತಿ ಉಂಟಾಯಿತು. ಕಂಪ್ಯೂಟರ್, ಮೊಬೈಲ್, ದೂರವಾಣಿ, ಇಂಟರ್‌ನೆಟ್ ಮುಂತಾದವುಗಳ ಆವಿಷ್ಕಾರಗಳು ಮಾಹಿತಿ ಸಂಸ್ಕರಣಕ್ಕೆ ಮತ್ತು ಸಂವಹನದ ವೇಗ ಮತ್ತು ಮಾರ್ಗಕ್ಕೆ ಹೊಸ ಆಯಾಮವನ್ನು ಸೃಷ್ಟಿಸಿದವು. ಇಂಜಿನಿಯರಿಂಗ್ ಕ್ಷೇತ್ರದಲ್ಲಿ ನಡೆದ ಯಂತ್ರ–ಮಾನವ ಶಾಸ್ತ್ರದ (Robotology) ಬೆಳವಣಿಗೆ ಮನೋವಿಜ್ಞಾನಿಗಳಿಗೆ ಕಲಿಕೆಯ ಪ್ರಕ್ರಿಯೆಯನ್ನು ವಿವರಿಸಲು ಹೊಸದೊಂದು ದಿಶೆಯನ್ನು ಚಿಂತಿಸಲು ಪ್ರೇರಣೆ ನೀಡಿತು. ಮಾನವನ ಸೃಜನಾತ್ಮಕ ಚಿಂತನೆಯಿಂದ ಕಂಪ್ಯೂಟರ್‌ನ ರಚನೆಗೆ ಮತ್ತು ಕಂಪ್ಯೂಟರ್‌ಗಳು ಸೂಚನೆಗಳಿಗೆ ಅನುಸಾರವಾಗಿ ಅತಿವೇಗದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವ ಕಂಪ್ಯೂಟರ್ ಕಾರ್ಯಕ್ರಮಗಳನ್ನು ಅಥವಾ ತಂತ್ರಾಂಶಗಳನ್ನು (Software) ರಚಿಸಲು ಸಾಧ್ಯವಾಯಿತು. ಮಾನವನ ವರ್ತನೆಗಳನ್ನು ಯಥಾವತ್ತಾಗಿ ಅನುಕರಿಸಿ ತೋರಿಸುವ ಯಂತ್ರ–ಮಾನವನನ್ನು ಸೃಷ್ಟಿಸಲು ಸಾಧ್ಯವಾಯಿತು. ಒಂದು ಯಂತ್ರ ಮಾನವನ ವರ್ತನೆಯನ್ನು ಅನುಕರಿಸಿದರೆ ಅದರ ಅರ್ಥ ಆ ಯಂತ್ರ ಕಾರ್ಯ ನಿರ್ವಹಿಸುವ ರೀತಿ, ಹಂತಗಳು ಆ ವರ್ತನೆಯ ಸ್ವರೂಪವನ್ನು ವಿವರಿಸುತ್ತದೆ ಎಂದು ಮನೋವಿಜ್ಞಾನಿಗಳು ತರ್ಕಿಸಿದರು. ಆದ್ದರಿಂದ ಒಂದು ಸಿದ್ಧಾಂತದ ಆಧಾರದ ಮೇಲೆ ಕಲಿಕೆಯನ್ನು ವಿಶ್ಲೇಷಿಸಿ ಅದಕ್ಕೆ ಅನುಗುಣವಾಗಿ ಒಂದು ಕಾರ್ಯಕ್ರಮವನ್ನು ಬರೆದು ಅದನ್ನು ವೇಗವಾಗಿ ಕೆಲಸಮಾಡುವ ಕಂಪ್ಯೂಟರ್‌ಗಳಿಗೆ ಅಳವಡಿಸಿ, ಆ ಸಿದ್ಧಾಂತದ ನಿಯಮಗಳ ಸತ್ಯಾಸತ್ಯತೆಯನ್ನು ಏಕೆ ಪರೀಕ್ಷಿಸಬಾರದೆಂಬ ಯೋಚನೆ ಮನೋವಿಜ್ಞಾನಿಗಳಲ್ಲಿ ಮೂಡಿತು. ಇದರ ಪರಿಣಾಮವಾಗಿ ಮಾಹಿತಿ ಸಂಸ್ಕರಣದ ದೃಷ್ಟಿಯಿಂದ ಮಾನವ ವರ್ತನೆಯನ್ನು ವಿವರಿಸಲು ಅನೇಕ ಸಿದ್ಧಾಂತಗಳು ರೂಪಿತಗೊಂಡವು. ಇವುಗಳನ್ನು **ಕಲಿಕೆಯ ಮಾಹಿತಿ ಸಂಸ್ಕರಣ** ಸಿದ್ಧಾಂತಗಳು (Information Processing Learning Theory) ಎಂದು ಹೇಳುತ್ತಾರೆ. ಇವುಗಳನ್ನು ಒರೆಹಚ್ಚಲು **ಕಂಪ್ಯೂಟರ್– ಅನುಕರಣ ಉಪಕ್ರಮವನ್ನು** (Computer Simulation Approach) ಉಪಯೋಗಿಸುತ್ತಾರೆ. ಈ ಉಪಕ್ರಮ ಮಾಹಿತಿ ಸಂಸ್ಕರಣದ ಪಾರಿಭಾಷಿಕ ಶಬ್ದಗಳಾದ–**ಭರಿತ** (Input), ಕೇಂದ್ರೀಯ ಸಂಸ್ಕರಣ ಘಟಕ (Central Processing Unit)

Digitised by Bharatavani, CIIL

ಮತ್ತು **ಫಲಿತ** (Output)ಗಳನ್ನು ಉಪಯೋಗಿಸುತ್ತದೆ. ಈ ಕ್ಷೇತ್ರದಲ್ಲಿ ಸಂಶೋಧನೆ ವಿಪುಲವಾಗಿ ನಡೆದಿದೆ. ಪ್ಯಾವ್‌ಲೋವನ ಅನುಬಂಧನ ಕಲಿಕೆ, ಥಾರಂಡೈಕನ ಪ್ರಯತ್ನ–ದೋಷ ಕಲಿಕೆಗಳನ್ನು ಕಂಪ್ಯೂಟರ್ ಮೂಲಕ ಒರೆಹಚ್ಚಲಾಗಿದೆ. ವಿನ್ಯಾಸಗಳನ್ನು ಗುರ್ತಿಸುವುದನ್ನು ಪರೀಕ್ಷಿಸಲಾಗಿದೆ. ಪರಿಕಲ್ಪನೆಗಳನ್ನು ಕಲಿಯುವ, ಅನುವಾದ ಮಾಡುವ, ಮಾತನ್ನು ಅರ್ಥೈಸಿಕೊಳ್ಳುವ, ಮಾನವ ಚಟುವಟಿಕೆಗಳಿಗೆ ಯೋಜನೆ ರೂಪಿಸುವ, ಸಮಸ್ಯೆಗಳನ್ನು ಬಿಡಿಸುವ ಕಂಪ್ಯೂಟರ್ ಕಾರ್ಯಕ್ರಮಗಳು ತಯಾರಾಗಿವೆ. ಕೆಲವು ಜ್ಞಾನ ಕ್ಷೇತ್ರಗಳ ಜ್ಞಾನಾಂಶಗಳನ್ನು ನಿಮಿಷಾರ್ಧದಲ್ಲಿ ಒದಗಿಸಬಲ್ಲ 'ಜ್ಞಾನ ಪರಿಣತ' ಕಾರ್ಯಕ್ರಮಗಳಿವೆ. ಈ ಎಲ್ಲಾ ಮಾದರಿಗಳು ಅತ್ಯಂತ ತಾಂತ್ರಿಕ ಸ್ವರೂಪದವುಗಳಾಗಿರುವುದರಿಂದ ಅವುಗಳನ್ನು ವಿವರಿಸುವುದು ಸಾಧ್ಯವೂ ಇಲ್ಲ ಮತ್ತು ಅವು ಈ ಲೇಖನದ ವ್ಯಾಪ್ತಿಗೂ ಬರುವುದಿಲ್ಲ.

ಇದುವರೆಗೆ ಕಲಿಕೆಯ ಸ್ವರೂಪವನ್ನು, ಪ್ರಕ್ರಿಯೆಯನ್ನು ವಿವರಿಸಲು ಇರುವ ವಿವಿಧ ಸೈದ್ಧಾಂತಿಕ ಉಪಕ್ರಮಗಳಡಿಯಲ್ಲಿ ಬರುವ ವಿವಿಧ ಸಿದ್ಧಾಂತಗಳ ವಿವರಣೆಯನ್ನು ನೀಡಲಾಯಿತು. ಈ ಸಿದ್ಧಾಂತಗಳಲ್ಲಿ ಬಹಳಷ್ಟು 1960ಕ್ಕೂ ಮೊದಲು ಪ್ರತಿಪಾದಿತವಾದವುಗಳು. ನಂತರದಲ್ಲಿ ಪ್ರತಿಯೊಂದು ಉಪಕ್ರಮದ ಮುಖ್ಯ ಸಿದ್ಧಾಂತಗಳನ್ನು ಅನುಸರಿಸಿ ಅನೇಕ ಸಂಶೋಧನೆಗಳು ನಡೆದು ಆ ಸಿದ್ಧಾಂತಗಳಲ್ಲಿ ಬದಲಾವಣೆಗಳು ಉಂಟಾಗಿವೆ. ಪ್ರಚೋದನ–ಅನುಕ್ರಿಯಾ ಸಂಪ್ರದಾಯದಲ್ಲಿ ಬಂದಿರುವ **ಎಸ್ಟೇಸ್‌ನ ಪ್ರಚೋದನ ಪ್ರತಿದರ್ಶಚಯನ ಸಿದ್ಧಾಂತ** (Stimulus Sampling Theory) ವುಲ್ಪೆ ಮುಂತಾದವರು ವಿವರಿಸಿರುವ **ವರ್ತನೆ ಬದಲಾವಣೆ ಉಪಕ್ರಮ** (Behaviour Modification Approach) ಮುಖ್ಯವಾದವುಗಳು. ಇದೇ ರೀತಿ ಸಂಜ್ಞಾನಾತ್ಮಕ ಸಿದ್ಧಾಂತಗಳ ಕ್ಷೇತ್ರದಲ್ಲಿಯೂ ಅನೇಕ ಸಂಶೋಧನೆಗಳು ನಡೆದಿವೆ. ಮಾಹಿತಿ ಸಂಸ್ಕರಣದಲ್ಲಿ ಸ್ಮರಣೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಲ್ಪಕಾಲೀನ ಮತ್ತು ದೀರ್ಘಕಾಲೀನ ಸ್ಮರಣೆ ಬಗ್ಗೆ ಮಾದರಿಗಳು ರೂಪಿತವಾಗಿದೆ. (ಸಂಪುಟ–1ರಲ್ಲಿ 'ಸ್ಮರಣೆಯ ಸ್ವರೂಪ' ಲೇಖನ ನೋಡಿ). **ಘಟನಾತ್ಮಕ ಸ್ಮರಣೆ** (Episodic Menory), **ಕಾರ್ಯಾತ್ಮಕ ಸ್ಮರಣೆ** (Working Memory), ಸ್ಮರಣೆಯ ಅನ್ವೇಷಣೆ (Memory Search), ಶಾಬ್ದಿಕ ಕಲಿಕೆ (Verbal Learning), ಕಲಿಕಾ ತಂತ್ರಗಳು (Learning Strategies), **ಸ್ಮರಣೆಯ ಸಾಧನಗಳು** (Mneumonic Devices), **ಅರ್ಥಾತ್ಮಕ ಸ್ಮರಣೆ** (Sementic Memory) ಮುಂತಾದ ನಿರ್ದಿಷ್ಟ ಕ್ಷೇತ್ರಗಳಲ್ಲಿ ಸಂಶೋಧನೆಗಳು ನಡೆಯುತ್ತಿರುವುದು ಗಮನಾರ್ಹ ಪ್ರವೃತ್ತಿಯಾಗಿದೆ.

ನರಕೋಶಶಾಸ್ತ್ರ (Neurology) ಕ್ಷೇತ್ರದಲ್ಲಿ ಅದ್ಭುತ ಬೆಳವಣಿಗೆಗಳಾಗಿವೆ. ವೈದ್ಯಕೀಯ ಇಂಜಿನಿಯರಿಂಗ್ ತಂತ್ರಜ್ಞಾನ ಸ್ಕ್ಯಾನಿಂಗ್‌ನಂಥ ತಂತ್ರಗಳ ಮೂಲಕ ಮೆದುಳಿನ ರಚನೆ ಮತ್ತು ಕಾರ್ಯಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳುವುದು ಸಾಧ್ಯವಾಗಿದೆ. ಕಲಿಕೆಯ ಪ್ರಕ್ರಿಯೆಯನ್ನು **ನರಕೋಶ–ಶಾರೀರಿಕ ಶಾಸ್ತ್ರದ** (Neuro-Phisiology) ದೃಷ್ಟಿಯಿಂದ ವಿವರಿಸುವ ಅನೇಕ ಸಂಶೋಧನೆಗಳು ಆಗಿವೆ.

**–ಪ್ರೊ. ಮಂಜುನಾಥಯ್ಯ ಬಿ.ಎಸ್.**

## ಕಲಿಕೆಯ ಕಾರ್ಯವಿಧಾನಗಳು

ಕಲಿಕಾ ಕಾರ್ಯವಿಧಾನ ಪಠ್ಯಕ್ರಮದ ಅಭಿವೃದ್ಧಿಯನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಶೈಕ್ಷಣಿಕ ಸಂಶೋಧನೆ ಮತ್ತು ಅಭಿವೃದ್ಧಿಯ ಪ್ರಯತ್ನಗಳು ಬಹುತೇಕವಾಗಿ ಬೋಧನೆಯ ಸುಧಾರಣೆಗೆ ಮಾತ್ರ ಸೀಮಿತಗೊಂಡಿರುವುದು ಡೇನ್‌ಸೆರೋ(1978) ಅವರ ಗಮನಕ್ಕೆ ಬಂದಿದೆ. ಇದಕ್ಕೆ ಹೋಲಿಸಿದರೆ ಶಿಕ್ಷಣದ ಕಲಿಕೆಯ ವಿಚಾರದ ಕುರಿತು ಅವಗಣನೆ ಕಂಡಬರುತ್ತದೆ. ಬದುಕಿನಲ್ಲಿ ಎದುರಿಸುವ ವೈವಿಧ್ಯಮಯ ಸನ್ನಿವೇಶಗಳಿಗೆ ತರಗತಿಯ ಜ್ಞಾನ ಮತ್ತು ಕೌಶಲಗಳ ವರ್ಗಾವಣೆಯನ್ನು ಉತ್ತಮಗೊಳಿಸುವ ಅಗತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುವಾಗ ಇದು ಪ್ರಾಯಶಃ ಅಸಮರ್ಥನೀಯವಾಗುತ್ತದೆ.

ಬೋಧನೆಯಲ್ಲಿ ಸುಧಾರಣೆಯನ್ನು ವಿಷಯ ಮಂಡನೆಯ ಕೌಶಲ್ಯಪೂರ್ಣ ವಿಧಾನಗಳ ಮೂಲಕ ಪ್ರಯತ್ನಿಸಲಾಗಿದೆ. ಉದಾಹರಣೆಗೆ ಉಪನ್ಯಾಸ, ಚರ್ಚೆ, ಚಲನಚಿತ್ರಗಳು, ಓದು, ಗಣಕಯಂತ್ರ ಇತ್ಯಾದಿ. ವಿದ್ಯಾರ್ಥಿಯ ಚಟುವಟಿಕೆಯ ಹಂತವಾದ ಅಗತ್ಯದ ಪ್ರತಿಕ್ರಿಯೆಗಳು, ಮಂಡನೆಯ ಗತಿಯಂತಹ ಪರೀಕ್ಷಣಗಳು, ಪರಿಕಲ್ಪನೆಗಳನ್ನು ನಿರ್ದಿಷ್ಟ ಕ್ರಮದಲ್ಲಿ ತಿಳಿಸಬಲ್ಲ ಬೋಧನೆಗಳ ಕ್ರಮಗಳು ಮತ್ತು ಅಂತಿಮವಾಗಿ ಶೈಕ್ಷಣಿಕ ವಾತಾವರಣದ ವಿವಿಧ ಅಂಶಗಳನ್ನು ಪರಿಗಣಿಸುವುದು. ಇವೆಲ್ಲವುಗಳ ಹೊರತಾಗಿಯೂ, ಅಂತಿಮ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ನಿರ್ವಹಣೆಯನ್ನು ಪರಿಶೀಲಿಸಿದಾಗ ಮಹಾವಿದ್ಯಾಲಯಗಳ ನಿಜವಾದ ಬೋಧನಾ ವಿಧಾನಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ.

ಕಲಿಕಾ ಕಾರ್ಯವಿಧಾನ ಪ್ರಾಧಾನ್ಯವನ್ನು ಕಲ್ಪಿಸದಿರುವುದರಿಂದ ವಿದ್ಯಾರ್ಥಿಗಳು ಹೊಸಕ್ರಮಗಳನ್ನು ಅಭಿವೃದ್ಧಿಪಡಿಸಲು ಮತ್ತು ಅನ್ವೇಷಿಸಲು ಅವರಿಗೆ ಪ್ರೋತ್ಸಾಹ ದೊರೆಯದಂತಾಗಿದೆ. ಹೀಗೆ ವಿದ್ಯಾರ್ಥಿಗಳಿಗೆ ತಮ್ಮ ಗ್ರಹಿಕೆಯ ಸಾಮರ್ಥ್ಯಗಳ ಕುರಿತು ಅರಿವನ್ನು ಮಿತಗೊಳಿಸಲಾಗಿದೆ. ಈ ಅರಿವಿನ ಕೊರತೆಯು ಹೊಸ ಕಲಿಕಾ ಕಾರ್ಯವಿಧಾನ ಅಗತ್ಯವಿರುವ ಪರಿಸ್ಥಿತಿಯಲ್ಲಿ ವೈಯಕ್ತಿಕ ಸಾಮರ್ಥ್ಯಗಳನ್ನು ನಿರ್ಬಂಧಿಸುತ್ತದೆ. ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಈ ರೀತಿಯ ಕಾರ್ಯವಿಧಾನಗಳನ್ನು ಅಡವಡಿಸಿಕೊಂಡ ಉದಾಹರಣೆಗಳು ಇವೆ. ಆದರೆ ಇವು ಅವರ ಗ್ರಹಿಕಾ ಸಾಮರ್ಥ್ಯಗಳಿಗೆ ಸರಿಸಾಟಿಯಾಗಲಾರವು. ಉದಾಹರಣೆಗೆ, ಬೋಧನೆ ಮತ್ತು ಪರೀಕ್ಷೆಯ ಬಹಳಷ್ಟು ವಿಧಾನಗಳು ನಿರ್ದಿಷ್ಟವಾಗಿ ಯಾವುದನ್ನು ಕಲಿಯಬೇಕು ಎಂದು ಸೂಚಿಸುವ ಕಂಠಪಾಠದ

Digitised by Bharatavani, CIIL

ವಿಧಾನವನ್ನು ಅಂತರ್ಗತಗೊಳಿಸಲು ಪ್ರೋತ್ಸಾಹ ಕೊಟ್ಟು, ಪರೀಕ್ಷೆಯಲ್ಲಿ ಬಾಯಿಪಾಠ ಮಾಡಿದ ಉತ್ತರಗಳಿಗೆ ಅಂಕಗಳನ್ನು ನೀಡಿ, ಒಳಬರುತ್ತಿರುವ ಮತ್ತು ಸಂಗ್ರಹಿತ ಮಾಹಿತಿಯ ನಡುವಿನ ಸಂಬಂಧಗಳ ಬೆಳವಣಿಗೆಗೆ ಕಡಿಮೆ ಒತ್ತನ್ನು ನೀಡುತ್ತವೆ. ಸಾಮಾನ್ಯವಾಗಿ ಕಂಠಪಾಠದ ಮೂಲಕ ತಿಳಿದುಕೊಂಡ ವಿಚಾರವು ಇತರ ಸಂಗ್ರಹಿತ ಮಾಹಿತಿಗೆ ಸಂಬಂಧಿಸಿದಂತೆ ಅರ್ಥಪೂರ್ಣವಾಗಿರುವುದಿಲ್ಲ. ಇದರಿಂದ ಮುಂದಿನ ಸಮಯದಲ್ಲಿ ಈ ರೀತಿಯ ಮಾಹಿತಿಯನ್ನು ಪುನಶ್ಚೇತನಗೊಳಿಸುವ ಸೌಲಭ್ಯಕ್ಕೆ ಮಿತಿಯನ್ನು ಹಾಕಿದಂತಾಗುತ್ತದೆ. ಅಲ್ಲದೆ, ಉರು ಹಚ್ಚುವಾಗ ಮಾಹಿತಿ ಸಂಗ್ರಹಕ್ಕೆ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ಆದುದರಿಂದ ಈ ರೀತಿಯ ಕೌಶಲವು ಅನೇಕ ನೈಜ ಬದುಕಿನ ಸಂದರ್ಭಗಳಲ್ಲಿ ಬಹಳ ತಪ್ಪು ಅಳವಡಿಕೆಯಾಗುತ್ತದೆ. ಇಲ್ಲಿ ಮಾಹಿತಿಯನ್ನು ಬರೀ ಸಂಗ್ರಹಿಸುವುದಕ್ಕಿಂತ ಅರ್ಥೈಸಿಕೊಳ್ಳುವುದು ಎಷ್ಟೋ ಮುಖ್ಯವಾಗಿರುತ್ತದೆ. ಇತರ ಶೈಕ್ಷಣಿಕ ಸಾಧನೆಗಳನ್ನು ಸುಧಾರಿಸಿಕೊಳ್ಳುವ ಬದಲಿಗೆ ಕಂಠಪಾಠಕ್ಕೆ ಹೆಚ್ಚಿನ ಸಮಯವನ್ನು ವಿನಿಯೋಗಿಸುವುದು ವ್ಯರ್ಥ. ಹೀಗೆ ದಕ್ಷವಲ್ಲದ ಕಲಿಕಾ ಕಾರ್ಯವಿಧಾನವನ್ನು ಆಯ್ದುಕೊಳ್ಳುವುದರ ಮೂಲಕ ವಿದ್ಯಾರ್ಥಿಗಳು ಒತ್ತಡಕ್ಕೆ ಒಳಪಡುತ್ತಾರೆ ಮತ್ತು ತಮ್ಮ ವೈಯಕ್ತಿಕ, ಬೌದ್ಧಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ತೊಂದರೆಯನ್ನು ಅನುಭವಿಸುತ್ತಾರೆ. ಇದರ ಪರಿಣಾಮವಾಗಿ ಭಾವನಾತ್ಮಕವಾಗಿ ಅಗಾಧ ಹಾನಿಯುಂಟಾಗುತ್ತದೆ. ಈ ಕಾರಣದಿಂದ ಕಲಿಕೆ ಮತ್ತು ಕಲಿಕೆಯ ಕಾರ್ಯವಿಧಾನದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಅಗತ್ಯ ಬೀಳುತ್ತದೆ.

ಪ್ರಾರಂಭದಲ್ಲಿಯೇ ಹೇಳುವುದಾದರೆ, ಪ್ರತಿಯೊಬ್ಬರ ಕಲಿಕೆಯ ಅನುಭವವು ಒಂದೇ ರೀತಿಯದ್ದಾಗಿ ಇರುವುದಿಲ್ಲ. ಒಬ್ಬ ಶಿಕ್ಷಣಾರ್ಥಿಯು (ವಿದ್ಯಾರ್ಥಿ) ಕಲಿಕೆಯನ್ನು ಸಾಮಾನ್ಯವಾಗಿ ಪುನರಾವರ್ತನೆ ಮತ್ತು ಪಠನಕ್ರಮದ(ಪುನರುಚ್ಚರಣೆಯ) ಮೂಲಕ ಸಾಧಿಸತಕ್ಕಂತಹ ಜ್ಞಾನದ ಪದನಿಷ್ಠ ಧಾರಣವೆಂದು ವರ್ಣಿಸಬಹುದು. ಮತ್ತೊಬ್ಬ ವ್ಯಕ್ತಿಯು ಅದನ್ನು ವಾಸ್ತವತೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶವನ್ನು ಹೊಂದಿರುವ ವ್ಯಾಖ್ಯಾನ ಕಾರ್ಯಗತಿಯೆಂದು ಹೇಳಬಹುದು.

ವರ್ತನಾ ದೃಷ್ಟಿಕೋನದಿಂದ ಹೇಳುವುದಾದರೆ, ಕಲಿಕೆಯು ಸಮಾನರೀತಿಯ ದೃಷ್ಟಿಗೋಚರ ಪ್ರಚೋದನೆಯ ಪರಿಸ್ಥಿತಿಗೆ ವ್ಯಕ್ತಿ ತೋರಿಸುವ ಪ್ರತಿಕ್ರಿಯೆಯ ದೃಷ್ಟಿಗೋಚರ ಬದಲಾವಣೆಯಾಗಿದೆ. ಪ್ರತಿಕ್ರಿಯೆಯಲ್ಲಿ ಉಂಟಾಗುವ ಬದಲಾವಣೆಯು(ಅಂದರೆ ವರ್ತನೆಯಲ್ಲಿ) ಒಮ್ಮೆ ಅದನ್ನು ಕಲಿತುಕೊಂಡ ನಂತರ ಸಾಪೇಕ್ಷವಾಗಿ ಖಾಯಂ ಆಗಿ ಉಳಿಯುವ ರೀತಿಯದೆಂದು ಸಾಂಪ್ರದಾಯಿಕವಾಗಿ ಹೇಳಲಾಗುತ್ತದೆ. ಯಾವುದೇ ಶೈಕ್ಷಣಿಕ ಸನ್ನಿವೇಶದಲ್ಲಿ ನಾವು ಶೈಕ್ಷಣಿಕ ಅನುಭವಗಳ ಫಲಿತಾಂಶವಾಗಿ ಪರೀಕ್ಷಾ ಪ್ರಸಂಗಗಳಿಗೆ(ಉದಾಹರಣೆಗೆ ಪರೀಕ್ಷೆಗಳು, ಪ್ರಬಂಧಗಳು, ಮತ್ತು ಕಂಠಪಾಠಗಳು) ವಿದ್ಯಾರ್ಥಿಗಳ ಬದಲಾದ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತೇವೆ. ಹೀಗೆ ಎಲ್ಲಾ ಶಿಕ್ಷಣತಜ್ಞರು ಒಂದಲ್ಲಾ ಒಂದು ಸಮಯದಲ್ಲಿ ಕಲಿಕೆಯನ್ನು ವರ್ತನಾ ದೃಷ್ಟಿಕೋನದಿಂದ ನೋಡುತ್ತಾರೆ. ಸ್ಕಮೆಕ್(1988) ಅವರು ಅಭ್ಯಾಸದ ಗ್ರಹಿಕಾ ದೃಷ್ಟಿಯನ್ನು ವರ್ತನಾ ವಿಭಾಗದಲ್ಲಿ ಸೇರಿಸುತ್ತಾರೆ. ಏಕೆಂದರೆ ಇತರ ವರ್ತನಾ ಮನಃಶಾಸ್ತ್ರಜ್ಞರು ಇತರ ವರ್ತನೆಗಳನ್ನು ಪರಿಗಣಿಸುವಂತೆಯೇ ಗ್ರಹಿಕಾ ಮನಃಶಾಸ್ತ್ರಜ್ಞರು ಗ್ರಹಿಕಾ ವರ್ತನೆಗಳನ್ನು ಪರಿಗಣಿಸುತ್ತಾರೆ.

ನರಗಳಿಗೆ ಸಂಬಂಧಿಸಿದ ದೃಷ್ಟಿಕೋನದಿಂದ ಕಲಿಕೆಯ ಪ್ರಕ್ರಿಯೆಯನ್ನು ನೋಡಿದಾಗ ಇದರಲ್ಲಿ ನರವ್ಯವಸ್ಥೆಯು ಅದರ ಸ್ವಂತ ಚಟುವಟಿಕೆಯಿಂದ ಪರಿವರ್ತನೆಯನ್ನು ಹೊಂದುತ್ತದೆ. ಆಲೋಚನೆಗಳಿಂದ 'ಜಾಡುಗಳು' ಹಿಂದೆ ಉಳಿಯುತ್ತವೆ. ಅಂದರೆ ನರಗಳ ಚಟುವಟಿಕೆಯು ಕ್ರಿಯಾಶೀಲವಾಗಿರುವ ನ್ಯುರೋನ್‌ಗಳನ್ನು ಬದಲಾಯಿಸುತ್ತದೆ. ಈ ಬದಲಾವಣೆಯು ಕಲಿಕೆಯ ರಚನಾತ್ಮಕ ಆಧಾರವಾಗಿದೆ. ಈ ಬದಲಾವಣೆಯು ನರಗಳ ಚಟುವಟಿಕೆಯ ನೇರ ಫಲಿತಾಂಶವಾಗಿ ಮೂಡಿಬರುತ್ತದೆ. ಅಂದರೆ ಮಾಹಿತಿ ಪರಿಷ್ಕರಣದ ನೇರ ಫಲಿತಾಂಶವಾಗಿರುತ್ತದೆ.

'ಕಾರ್ಯವಿಧಾನ'ವೆನ್ನುವ ಪದವು ಮೂಲತಃ ದಂಡು ಅಥವಾ 'ಮಿಲಿಟರಿ'ಗೆ ಸಂಬಂಧಿಸಿದ್ದಾಗಿದ್ದು, ಇದನ್ನು ದೊಡ್ಡ ಪ್ರಮಾಣದ ಸೈನ್ಯಾಚರಣೆಯಲ್ಲಿ ಯೋಜನೆಯನ್ನು ಸಾಧಿಸಲು ಅನುಸರಿಸುವ ವಿಧಾನಕ್ಕೆ ಬಳಸಲಾಗುತ್ತಿತ್ತು. ಯೋಜನೆಯನ್ನು ಕಾರ್ಯಗತಗೊಳಿಸಲು ತಂತ್ರಗಳು ಹೆಚ್ಚು ವಿಶಿಷ್ಟ ಹೆಜ್ಜೆಗಳಾಗಿರುತ್ತಿದ್ದವು. ಯಾವುದನ್ನಾದರೂ ಸಾಧಿಸಿಕೊಳ್ಳುವುದಕ್ಕಾಗಿ ಜಾರಿಗೆ ತರಲಾಗುವ ವಿಧಾನಗಳ(ತಂತ್ರಗಳ) ಗುಂಪಿಗೆ 'ಕಾರ್ಯವಿಧಾನ' ಪದವನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುತ್ತದೆ. ಹೀಗಾಗಿ ಕಲಿಕೆಯ ಕಾರ್ಯವಿಧಾನವು ಕಲಿಯುವುದನ್ನು ಸಾಧಿಸಿಕೊಳ್ಳುವುದಕ್ಕಾಗಿ ಇರುವಂತಹ ವಿಧಾನಗಳ ಸರಣಿಯಾಗಿದೆ ಮತ್ತು ಈ ಸರಣಿಯೊಳಗಿನ ನಿರ್ದಿಷ್ಟ ವಿಧಾನಗಳನ್ನು ಕಲಿಕಾ ಕಾರ್ಯವಿಧಾನಗಳೆಂದು ಕರೆಯಲಾಗುತ್ತದೆ(ಸ್ನೋಮನ್, 1986). ಕಲಿಕಾ ಕಾರ್ಯವಿಧಾನದ ಬೇರೆ ಕೆಲವು ವ್ಯಾಖ್ಯಾನಗಳು ಹೀಗಿವೆ: ಕಲಿಕಾ ಕಾರ್ಯವಿಧಾನಗಳು ಪ್ರಕ್ರಿಯೆಗಳಾಗಿದ್ದು, ಇವು ಆಲೋಚನಾ ಕಾರ್ಯಗಳಲ್ಲಿ ಕಾರ್ಯನಿರ್ವಹಣೆಯ ಆಧಾರವನ್ನು ಹೊಂದಿರುತ್ತವೆ.(ನಿಸ್‌ಬೆಟ್ ಮತ್ತು ಶಕ್‌ಸ್ಮಿತ್, 1986). ತರಗತಿಯ ಬೋಧನಾ ಅನುಭವವನ್ನು ಆಧರಿಸಿ ಅವರು ತಮ್ಮ ಕಲಿಕಾ ಕಾರ್ಯವಿಧಾನದ ನಿರ್ವಚನವನ್ನು ಯಶಸ್ವಿಯಾಗಿ ಬೆಳೆಸಿಕೊಂಡಿದ್ದಾರೆ. ಅವರು ಕಾರ್ಯವಿಧಾನವನ್ನು ಕೌಶಲಗಳ ಸರಳ ಸರಣಿಗಳು ಅಥವಾ ಸಮುಚ್ಚಯವಾಗಿ ನಿರ್ವಚಿಸುವುದಕ್ಕಿಂತ ಕೆಲವು ಅಧ್ಯಯನ ಕೈಪಿಡಿಗಳಲ್ಲಿ ಸೂಚಿಸಿದಂತಹ 'ಏಣಿಗಳು' ಅಥವಾ ನಿಯತಗಳನ್ನು ಮೀರಿ ಹೋಗುತ್ತಾರೆ. ಅವು ಬಹುತೇಕವಾಗಿ ಯಾವಾಗಲೂ ಅರ್ಥಪೂರ್ಣವಾಗಿರುತ್ತವೆ ಮತ್ತು ಗುರಿ ನಿರ್ದೇಶಿತವಾಗಿರುತ್ತವೆ. ಆದರೆ ಅವುಗಳನ್ನು ಯಾವಾಗಲೂ ಪ್ರಜ್ಞಾಪೂರ್ವಕವಾದ ಅಥವಾ ಉದ್ದೇಶಪೂರ್ವಕವಾದ ಮಟ್ಟದಲ್ಲಿ ನಡೆಸಲಾಗಿರುವುದಿಲ್ಲ. ಅವು ಸುದೀರ್ಘವಾಗಿರಬಹುದು ಅಥವಾ ಚಲಾವಣೆಯಲ್ಲಿ ಎಷ್ಟು ತೀವ್ರವಾಗಿ ಇರುತ್ತವೆಂದರೆ ಅವುಗಳ ಪುನರ್ಗಹಣ, ನೆನಪಿಸಿಕೊಳ್ಳುವುದು ಅಥವಾ ಒಬ್ಬ ವ್ಯಕ್ತಿಯಿಂದ

Digitised by Bharatavani, CIIL

ಕಾರ್ಯವಿಧಾನದ ಬಳಕೆಯಾಗಿದೆ ಎಂಬತಿಳಿವಳಿಕೆ ಹೊಂದುವುದು ಕೂಡ ಅಸಾಧ್ಯ.

ಯಾವುದೇ ರೀತಿಯ ವರ್ತನೆಗಳು ಅಥವಾ ಆಲೋಚನೆಗಳು ಸಂಕೇತೀಕರಣದ ಮೇಲೆ ಪ್ರಭಾವ ಬೀರಿ ಅದರಿಂದ ಜ್ಞಾನದ ಸಮನ್ವಯತೆ ಮತ್ತು ಮರುಗಳಿಕೆ ಹೆಚ್ಚಾಗುವುದಿದ್ದರೆ ಅಂತಹ ವರ್ತನೆಗಳನ್ನು ಅಥವಾ ಆಲೋಚನೆಗಳನ್ನು ಕಲಿಕಾ ಕಾರ್ಯವಿಧಾನವೆಂದು ತಿಳಿಯಬಹುದು. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, ಈ ಆಲೋಚನೆಗಳು ಮತ್ತು ವರ್ತನೆಗಳು ಗುರಿಯೊಂದರ ಸಾಧನೆಗಾಗಿ ಸಂಘಟಿತ ಕ್ರಿಯಾ ಯೋಜನೆಗಳಾಗಿ ವಿನ್ಯಾಸಗೊಳ್ಳುತ್ತವೆ(ಆಂಡರ್‌ಸನ್, 1985; ವೆನ್‌ಸ್ಟೇನ್ ಮತ್ತು ಮೇಯರ್, 1985). ಕಲಿಕಾ ಕಾರ್ಯವಿಧಾನಗಳ ಉದಾಹರಣೆಗಳಲ್ಲಿ ಇರುವುದು: ಕ್ರಿಯಾಶೀಲವಾಗಿ ಪೂರ್ವಾಭ್ಯಾಸ ಮಾಡುವುದು, ಸಂಕ್ಷೇಪಿಸುವುದು, ತಾತ್ಪರ್ಯ ತಿಳಿಸುವುದು, ಕಲ್ಪಿಸುವುದು, ವಿಶದೀಕರಿಸುವುದು ಮತ್ತು ಸ್ಥೂಲ ವಿವರಣೆ ನೀಡುವುದು (ವೆನ್‌ಸ್ಟೇನ್, 1988).

ಕಾರ್ಯವಿಧಾನವೆನ್ನುವುದು ಮಾಹಿತಿ ಪರಿಷ್ಕರಣದ ಚಟುವಟಿಕೆಗಳ ವಿನ್ಯಾಸವಾಗಿದ್ದು, ಇದನ್ನು ನೆನಪಿನ ನಿರೀಕ್ಷಿತ ಪರೀಕ್ಷೆಯ ಸಿದ್ಧತೆಗೆ ಬಳಸಿಕೊಳ್ಳಲಾಗುತ್ತದೆ(ಸ್ಕಮೆಕ್, 1983).

**ಕಾರ್ಯವಿಧಾನಗಳು ಮತ್ತು ಕುಶಲತೆಗಳು:** ಇವುಗಳ ನಡುವಿನ ವ್ಯತ್ಯಾಸವು(ಕಿರಿಬಿ, 1988) ಈ ಚರ್ಚೆಯನ್ನು ಆಧರಿಸಿದೆ: ಕುಶಲತೆಗಳೆಂದರೆ ನಿರ್ದಿಷ್ಟ ಕಾರ್ಯಗಳನ್ನು ನಡೆಸುವ ಸಲುವಾಗಿ ಇರುವಂತಹ ಗ್ರಹಿಕಾ ನಿಯತಗಳಾಗಿವೆ. ಕಾರ್ಯವಿಧಾನಗಳೆಂದರೆ ಈ ಗ್ರಹಿಕಾ ನಿಯತಗಳನ್ನು ಆಯ್ಕೆ ಮಾಡುವ, ಸಂಯೋಜಿಸುವ ಅಥವಾ ಮರುವಿನ್ಯಾಸಗೊಳಿಸುವ ಸಾಧನ(ವಿಧಾನ)ಗಳಾಗಿವೆ... ಕಾರ್ಯವಿಧಾನಗಳಲ್ಲಿ ಆಯ್ಕೆ ಅಥವಾ ನಿರ್ಧಾರ ಕೈಗೊಳ್ಳುವಿಕೆ ಇರುತ್ತದೆ.. ಕಾರ್ಯವಿಧಾನವೆನ್ನುವುದು ತಂತ್ರಗಳ ಸಂಯೋಜನೆಯಾಗಿರುತ್ತದೆ ಅಥವಾ ಸಮಸ್ಯೆಯೊಂದನ್ನು ಪರಿಹರಿಸಿಕೊಳ್ಳುವ ಸುಸಂಬದ್ಧ ಯೋಜನೆಯ ರೂಪ ತಾಳುವ ತಂತ್ರಗಳಲ್ಲಿನ ಆಯ್ಕೆಯಾಗಿರುತ್ತದೆ... ನಾವು ಆಯ್ಕೆ ಮಾಡಿಕೊಳ್ಳುವ ಕಾರ್ಯವಿಧಾನಗಳು ನಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಬಹುದೆಂದು ನಾವು ತಿಳಿದುಕೊಳ್ಳುವ ಕಾರ್ಯವಾಗಿರುತ್ತದೆ ಮತ್ತು ಅದು ಕಾರ್ಯ ಮತ್ತು ನಮ್ಮ ಸ್ವಂತ ಕುಶಲತೆ ಇವೆರಡರ ಕುರಿತು ನಾವು ತಿಳಿದುಕೊಂಡಿರುವ ಕಾರ್ಯವಾಗಿರುತ್ತದೆ(ಪರಿವರ್ತಿತಗ್ರಹಿಕಾ ತಿಳಿವಳಿಕೆ/ಜ್ಞಾನ).

ಕಲಿಕಾ ಕಾರ್ಯವಿಧಾನಗಳು ಕಲಿಕೆಯ(ಅಭ್ಯಾಸದ) ಅನೇಕ ಸಂದರ್ಭಗಳಲ್ಲಿ ಸಂಭಾವ್ಯ ರೀತಿಯಿಂದ ಉಪಯುಕ್ತವಾಗಿವೆ. ಒಬ್ಬ ವ್ಯಕ್ತಿ ಅವುಗಳ ಬಳಕೆಯಲ್ಲಿ ಸೌಲಭ್ಯವನ್ನು ಪಡೆದಾಗ ಮತ್ತು ಅವುಗಳ ಅನ್ವಯತೆಯೊಂದಿಗೆ ನಿಕಟತೆಯನ್ನು ಹೊಂದಿದಾಗ ಅದರ ಸಂಭವನೀಯತೆಯ ಅರಿವು ಉಂಟಾಗುತ್ತದೆ. ಹೀಗೆ ಹೇಳುವುದರಿಂದ ಕಲಿಕಾ ಕಾರ್ಯವಿಧಾನಗಳು ನಿರ್ದಿಷ್ಟ ಕಸುಬಿನ ಕುಶಲತೆಗಳನ್ನು ಅಥವಾ ನಿರ್ದಿಷ್ಟ ಕಾರ್ಯಕ್ಷೇತ್ರದ ವಿಷಯಾಂಶವನ್ನು ಸ್ಥಾನಾಂತರಗೊಳಿಸುತ್ತವೆ ಎಂದೇನಿಲ್ಲ; ಅವು ಇನ್ನೂ ಹೆಚ್ಚಿನ ದಕ್ಷ ಕಲಿಕೆಗೆ ಅಗತ್ಯದ ಸ್ಥಿತಿಯಾಗಿರುತ್ತವೆ ಅಷ್ಟೇ... ಕಲಿಕಾ ಕಾರ್ಯವಿಧಾನದ ಒಂದು ಉದಾಹರಣೆಯೆಂದರೆ, ಸ್ಥಾನದ ವಿಧಾನ. ಈ ಕಾರ್ಯವಿಧಾನವನ್ನು ಬಳಸಿ ಒಬ್ಬ ವ್ಯಕ್ತಿ ಪ್ರತ್ಯೇಕ ಅಂಶಗಳನ್ನು ನಿರ್ದಿಷ್ಟ ಸ್ಥಾನದೊಂದಿಗೆ ಜೋಡಿಸಿಕೊಳ್ಳಲು ಕಲಿಸಿಕೊಡಲಾಗುತ್ತದೆ. ಯಾರಾದರೂ ತಾನು ನೆನಪಿನಲ್ಲಿಟ್ಟ ವಿಚಾರವನ್ನು ಮತ್ತೆ ಸ್ಮರಿಸಿಕೊಳ್ಳಬೇಕೆಂದುಕೊಂಡರೆ ಅವರು ಸರಳವಾಗಿ ಆ ಜಾಗವನ್ನು(ಸ್ಥಾನ) ಮರುಕಲ್ಪಿಸಿಕೊಂಡು ಅದರೊಂದಿಗೆ ಜೋಡಿಸಿಕೊಂಡ ವಿಚಾರಗಳನ್ನು ಮನಸ್ಸಿಗೆ ತಂದುಕೊಳ್ಳುತ್ತಾರೆ. ಈ ಕಾರ್ಯವಿಧಾನವನ್ನು ಬಳಸಿದರೆ ಸಾಮಾನ್ಯವಾಗಿ ಸುಧಾರಿತ ಮರುಸ್ಮರಣೆ ಉಂಟಾಗುವುದು. ಆನಂತರದ ಕಲಿಕೆ ಹೆಚ್ಚು ದಕ್ಷವಾಗಿ ಮತ್ತು ಪರಿಣಾಮಕಾರಿಯಾಗಿರಲು ಈ ಕಾರ್ಯವಿಧಾನವನ್ನು ಬೇರೆ ಪರಿಸ್ಥಿತಿಗಳಲ್ಲಿಯೂ ಉಪಯೋಗಿಸಿಕೊಳ್ಳಬಹುದು(ಓನೆಲ್ ಜ್ಯೂನಿಯರ್, 1978).

ಕಲಿಕಾ ಕಾರ್ಯವಿಧಾನಗಳು ಕಲಿಯುವವರನ್ನು ಆಧರಿಸಿದ ತಂತ್ರಗಳು ಅಥವಾ ಪ್ರಕ್ರಿಯೆಗಳು. ಇವುಗಳೊಂದಿಗೆ ಶೈಕ್ಷಣಿಕ ಅಥವಾ ತಾಂತ್ರಿಕ ವಸ್ತುಗಳ ಸ್ವಾಧೀನತೆ, ಕುಶಲ ನಿರ್ವಹಣೆ, ಮತ್ತು ಬಳಕೆ ಇರುತ್ತದೆ...ಕಾರ್ಯವಿಧಾನಗಳಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ವಿಧಾನಗಳು ಇರುತ್ತವೆ. ವಸ್ತುವಿನ ಮೇಲೆ ನೇರವಾಗಿ ಕಾರ್ಯ ನಡೆಸಲು ಬಳಕೆಯಾಗುವುವು (ಪ್ರಾಥಮಿಕ ಕಾರ್ಯವಿಧಾನಗಳು) ಮತ್ತು ಸೂಕ್ತರೀತಿಯ ಆಂತರಿಕ ಮನಃಶಾಸ್ತ್ರೀಯ ವಾತಾವರಣವನ್ನು ಉಳಿಸಿಕೊಳ್ಳಲು ವ್ಯಕ್ತಿಯ ಮೇಲೆ ಕಾರ್ಯ ನಡೆಸಲು ಬಳಕೆಯಾಗುವುವುಗಳು(ಸೆಕೆಂಡರಿ ಕಾರ್ಯವಿಧಾನಗಳು). ಪ್ರಾಥಮಿಕ ಕಾರ್ಯವಿಧಾನಗಳಿಗೆ ಉದಾಹರಣೆಗಳು: ಯಾವುದೇ ವಸ್ತುವಿಷಯವನ್ನು ಕಲಿಯಬೇಕೆಂದುಕೊಳ್ಳುವ ವ್ಯಕ್ತಿ ಆ ವಸ್ತುವಿಷಯದ ಮುಖ್ಯವಾದ, ಕಷ್ಟಕರವಾದ ಮತ್ತು ಅಪರಿಚಿತ ಭಾಗಗಳನ್ನು ಗುರುತಿಸಿಕೊಳ್ಳಲು, ಆ ವಸ್ತುವಿಷಯವನ್ನು ಗ್ರಹಿಸಿ ಅದನ್ನು ಉಳಿಸಿಕೊಳ್ಳುವ ತಂತ್ರವನ್ನು ಬಳಸಲು ಮತ್ತು ಆನಂತರ, ಸಮುಚಿತ ಸಂದರ್ಭಗಳಲ್ಲಿ ಅಗತ್ಯವಿರುವ ಮಾಹಿತಿಯನ್ನು ಮತ್ತೆ ಸ್ಮರಿಸಿಕೊಂಡು ಉಪಯೋಗಿಸಲು ಸಮರ್ಥನಾಗಿರಬೇಕು. ಮೊದಲನೆಯವುಗಳು ಪ್ರತಿಮಾ ಬಳಕೆ, ಸ್ಮರಣಾ ತಂತ್ರಗಳು ಮತ್ತು ಸಾಧನಗಳು–ಫಲ ಉತ್ಪತ್ತಿಯ ವಿಶ್ಲೇಷಣೆ. ಬೆಂಬಲಿತ ಕಾರ್ಯವಿಧಾನಗಳೆಂದು ಕೂಡ ಕರೆಯಿಸಿಕೊಳ್ಳುವ ಸೆಕೆಂಡರಿ ಕಾರ್ಯವಿಧಾನಗಳ ಉದಾಹರಣೆಗಳಲ್ಲಿ ಪ್ರಾಥಮಿಕ ಕಾರ್ಯವಿಧಾನಗಳನ್ನು ದಕ್ಷರೀತಿಯಿಂದ ಮತ್ತು ಪರಿಣಾಮಕಾರಿಯಾಗಿ ಚಲಿಸುವಂತೆ ಮಾಡುವ ಕಾರ್ಯವಿಧಾನಗಳು ಇವೆ. ಚಾಂಚಲ್ಯ, ಬಳಲಿಕೆ, ಆಶಾಭಂಗ ಅಥವಾ ಇದೇ ರೀತಿಯವುಗಳ ಉಪಸ್ಥಿತಿಯ ಕಾರಣವಾಗಿ ಏಕಾಗ್ರತೆ ಕಳೆದುಹೋದಾಗ ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಸಮುಚಿತ ರೀತಿಯ ಅಭ್ಯಾಸ ಧೋರಣೆ ಮತ್ತು ವಿಧಾನಗಳನ್ನು ಸ್ಥಾಪಿಸಿ ಕೊಳ್ಳುವ ತಂತ್ರಗಳು ಕೂಡ ಇದರಲ್ಲಿ ಸೇರುತ್ತವೆ. ಈ ವಿಭಾಗದಲ್ಲಿ ಹೆಚ್ಚುವರಿಯಾಗಿ ಸೇರಿರುವ

Digitised by Bharatavani, CIIL

ಪ್ರಕ್ರಿಯೆಗಳಲ್ಲಿ ಚಲಾವಣೆಯಲ್ಲಿರುವ ಪ್ರಾಥಮಿಕ ಕಾರ್ಯವಿಧಾನಗಳ ಉಸ್ತುವಾರಿ(ವಿಚಾರಣೆಯನ್ನು) ಮತ್ತು ಅವುಗಳನ್ನು ಸರಿಪಡಿಸುವ ವಿಧಾನಗಳೂ ಸೇರಿವೆ(ಡ್ಯಾನ್‌ಸೆರಾವೊ, 1978).

ಕಾರ್ಯವಿಧಾನಗಳೆಂದರೆ ಕಲಿಕೆಯ ಗುಪ್ತ ಗಣನೆಯ ಛಂದೋಗತಿಗಳಾಗಿವೆ(ಡಫಿ, 1982). ಇಲ್ಲಿ 'ಕಾರ್ಯವಿಧಾನ' ಎಂಬ ಪದವನ್ನು ಕುಶಲತೆಗಳಿಗಿಂತ ಮೇಲಿನ ಮಟ್ಟವನ್ನು ಸೂಚಿಸಲು ಬಳಸಲಾಗಿದೆ: ಕಾರ್ಯವಿಧಾನಗಳು ಕಾರ್ಯ ನಿರ್ವಾಹಕ ಪ್ರಕ್ರಿಯೆಗಳು. ಇವು ಕುಶಲತೆಗಳನ್ನು ಆಯ್ದು, ಸಂಯೋಜಿಸಿ, ಅನ್ವಯಿಸಿಕೊಳ್ಳುತ್ತವೆ. ಕಾರ್ಯವಿಧಾನಗಳು ಕುಶಲತೆಗಳಿಗಿಂತ ಭಿನ್ನವಾಗಿವೆ. ಹೇಗೆಂದರೆ, ಕಾರ್ಯವಿಧಾನಕ್ಕೆ ಒಂದು ಉದ್ದೇಶವಿರುತ್ತದೆ. ಅದು ಚಟುವಟಿಕೆಗಳ ಸರಣಿಯಾಗಿರುತ್ತದೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಬಹುಬೇಗನೆ ಹೊಂದಿಕೊಳ್ಳುವ ರೀತಿಯದ್ದಾಗಿವೆ. ಆದರೆ ಕುಶಲತೆಗಳು ಹೆಚ್ಚು ನಿರ್ದಿಷ್ಟವಾಗಿವೆ ಅಥವಾ 'ಪ್ರತಿಚ್ಛಾಯೆ'ಯದ್ದಾಗಿರುತ್ತವೆ. ಅಭ್ಯಾಸದ ಮತ್ತು ಸ್ವ-ತಿಳಿವಳಿಕೆಯನ್ನು ಪಡೆಯುವ ಕಾರ್ಯವಿಧಾನಗಳನ್ನು ನಾವು ಕಲಿಕೆಯಲ್ಲಿ ಬಳಸುವ ಪ್ರಕ್ರಿಯೆಗಳ ಅರಿವಿನ ರೂಪದಲ್ಲಿ ಅರ್ಥ ಮಾಡಿಕೊಳ್ಳುವುದು ಈ ಪ್ರಕ್ರಿಯೆಗಳನ್ನು ನಿಯಂತ್ರಿಸಲು ನಮಗೆ ನೆರವಾಗುತ್ತವೆ ಮತ್ತು ನಮ್ಮ ಸ್ವಂತದ ಕಲಿಕೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಅದು ಅವಕಾಶವನ್ನು ಒದಗಿಸುತ್ತದೆ (ನಿಸ್ಬೆಟ್ ಮತ್ತು ಸ್ಶುಸ್ಮಿತ್, 1988).

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಡೆಸಲಾದ ಅಧ್ಯಯನಗಳಿಂದ ಮೇಲಿನ ಬಹುತೇಕ ವ್ಯಾಖ್ಯಾನಗಳನ್ನು ತೆಗೆದುಕೊಳ್ಳಲಾಗಿದೆ. ಸಾರಾಂಶವಾಗಿ ಹೇಳುವುದಾದರೆ, 'ಕಾರ್ಯವಿಧಾನಗಳೆಂದರೆ ಅಭ್ಯಾಸವನ್ನು ಜೊತೆಗೂಡಿಸುವ ಸಲುವಾಗಿ ಇರುವಂತಹ ಪ್ರಕ್ರಿಯೆಗಳ ಸರಣಿಯಾಗಿದೆ. ಇವು ಕುಶಲತೆಗಳ ಸರಳ ಸರಣಿಗಳು ಅಥವಾ ಸಮುಚ್ಚಯಗಳಿಗಿಂತ ಹೆಚ್ಚಿನದ್ದಾಗಿವೆ. ಅವು ಗುರಿಯನ್ನು ಸಾಧಿಸುವುದಕ್ಕಾಗಿ ತಿಳಿವಳಿಕೆಯ ಸಮನ್ವಯತೆ ಮತ್ತು ಮರುಗಳಿಕೆಯನ್ನು ಹೆಚ್ಚಿಸುತ್ತವೆ. ಅಲ್ಲದೆ, ವ್ಯಕ್ತಿಯಿಂದ ಮಾಹಿತಿ ಪರಿಷ್ಕರಣದ ಚಟುವಟಿಕೆಗಳನ್ನು ಪರೋಕ್ಷವಾಗಿ ಸೂಚಿಸುತ್ತವೆ. ಕಲಿಕೆಯ ಕಾರ್ಯವಿಧಾನಗಳು ಕಲಿಯುವವರನ್ನು ಆಧರಿಸಿದ ತಂತ್ರಗಳು ಅಥವಾ ಪ್ರಕ್ರಿಯೆಗಳಾಗಿ ಪರಿಣಮಿಸಿ ಪ್ರಾಥಮಿಕ ಮತ್ತು ಸೆಕೆಂಡರಿ ಕಾರ್ಯವಿಧಾನಗಳೆರಡನ್ನೂ ತೊಡಗಿಸಿಕೊಂಡು ಶೈಕ್ಷಣಿಕ ಅಥವಾ ತಾಂತ್ರಿಕ ವಸ್ತುಗಳ ಸ್ವಾಧೀನತೆ, ಕುಶಲ ನಿರ್ವಹಣೆ, ಮತ್ತು ಬಳಕೆಗೆ ನೆರವಾಗುತ್ತವೆ.

ವಿದ್ಯಾರ್ಥಿಗಳಿಗೆ ವಿಷಯ ಹೇಳಿಕೊಡುವುದಕ್ಕಿಂತ ಅವರನ್ನು ಇನ್ನೂ ಪರಿಣಾಮಕಾರಿ ಕಲಿಕಾರ್ಥಿಗಳಾಗಲು ಹೇಳಿಕೊಡುವುದು ಸಾಧ್ಯವಿದೆ ಎಂದು ಕಲಿಕೆಯ ಕಾರ್ಯವಿಧಾನದ ಸೈದ್ಧಾಂತಿಕ ದೃಷ್ಟಿಕೋನವನ್ನು ಬೆಳೆಸುವಲ್ಲಿ ರಿಗ್ನೆ(1978) ಅವರು ಹೇಳಿದ್ದಾರೆ. ಇದನ್ನು ಜ್ಞಾನಗ್ರಹಣದ ಮನಃಶಾಸ್ತ್ರ ಮತ್ತು ಇತರ ಜ್ಞಾನಶಿಸ್ತುಗಳ ಇತ್ತೀಚಿನ ಪ್ರಗತಿಗಳಿಗೆ ಸಂಬಂಧಿಸಿ ಶೋಧಿಸಲಾಗಿದೆ. ಅವರ ಉದ್ದೇಶ ಮೇಲಿನ ಆಕರಗಳಿಂದ ಮಾಹಿತಿಯನ್ನು ಏಕೀಕೃತ ದೃಷ್ಟಿಕೋನವಾಗಿ ಸಂಯೋಜಿಸುವುದು. ಇದು ಸಂಶೋಧನೆಗೆ ಮಾರ್ಗದರ್ಶಿ ನಕ್ಷೆಯಾಗಿ ಮತ್ತು ಚರ್ಚೆಗೆ ಸಂದರ್ಭೋಚಿತವಾಗಿ ಪರಿಣಮಿಸುವುದು. ರಿಗ್ನೆಯವರು ಇನ್ನೂ ಮುಂದುವರಿದು ತಿಳಿಸುತ್ತಾರೆ: ಈ ದೃಷ್ಟಿಕೋನದ ಪ್ರಕಾರ ಮಾಹಿತಿಯ ಸ್ವೀಕರಣ, ಧಾರಣೆ ಮತ್ತು ಮರುಗಳಿಕೆ ಮತ್ತು ಅದರ ಕಾರ್ಯಗತಿಗಾಗಿ ಇರತಕ್ಕಂತಹ ಗ್ರಹಿಕಾ ಕಾರ್ಯವಿಧಾನಗಳು 'ಉದ್ದೇಶಿತ ಕಾರ್ಯಗಳು' ಎನ್ನುವ ವಿಶಿಷ್ಟತೆಗಳಿಂದ ರೂಪುಗೊಂಡಿರುತ್ತವೆ. ಅವುಗಳೆಂದರೆ, ಗ್ರಹಿಕಾ ಪ್ರಕ್ರಿಯೆಗಳನ್ನು ಮತ್ತು ಪ್ರಾತಿನಿಧಿತ್ವ, ಆಯ್ಕೆ ಮತ್ತು ಸ್ವ-ನಿರ್ದೇಶಿತ ಸಂಪನ್ಮೂಲಗಳಿಂದ ಸ್ವೀಕರಿಸಲಾದ ಗ್ರಹಿಕಾ ಕಾರ್ಯವಿಧಾನಗಳನ್ನು ಹೇಗೆ ಬಳಸಬೇಕು ಎಂಬುದನ್ನು ತಿಳಿಸುತ್ತವೆ. ಪ್ರಾತಿನಿಧಿತ್ವದ ಸಂಪನ್ಮೂಲಗಳಲ್ಲಿ ಮಿದುಳಿನ ಎಡ ಮತ್ತು ಬಲಭಾಗದಲ್ಲಿ ಮುಖ್ಯವಾಗಿ ಭಾಷೆ ಮತ್ತು ಕಲ್ಪನೆಯ ಪ್ರತಿಪಾದನಾತ್ಮಕ ಮತ್ತು ಏಕಾನ್ವಯತೆಯ ಪ್ರಕ್ರಿಯೆಗಳು ಇರುತ್ತವೆ. ಆಯ್ಕೆಯ ಸಂಪನ್ಮೂಲಗಳಲ್ಲಿ ಲಕ್ಷ್ಯಾತ್ಮಕ(ಗಮನ ಸೆಳೆಯುವ) ಮತ್ತು ಉದ್ದೇಶಿತ ಪ್ರಕ್ರಿಯೆಗಳು ಇರುತ್ತವೆ. ಸ್ವ-ನಿರ್ದೇಶಿತ ಸಂಪನ್ಮೂಲಗಳಲ್ಲಿ ಸ್ವ-ಆದೇಶಾತ್ಮಕ ಮತ್ತು ಸ್ವ-ಪರಿವೀಕ್ಷಣೆಯ ಪ್ರಕ್ರಿಯೆಗಳು ಇರುತ್ತವೆ. ಈ ವ್ಯಾಖ್ಯಾನದಲ್ಲಿ ಕಲಿಯುವಾಗ ಸ್ವ-ಉತ್ಪಾದಿತ ಚಾಂಚಲ್ಯಗಳನ್ನು ಕಡಿಮೆ ಮಾಡುವ ಸಲುವಾಗಿ ನರ-ಮನಃಶಾಸ್ತ್ರೀಯ ಸೂಚಕಗಳನ್ನು ಬಳಸಿ ವಿದ್ಯಾರ್ಥಿಗಳು ಲಕ್ಷ್ಯಾತ್ಮಕ ಮತ್ತು ಉದ್ದೇಶಿತ ಕಾರ್ಯವಿಧಾನಗಳ ಮೇಲೆ ಉತ್ತಮ ನಿಯಂತ್ರಣವನ್ನು ಸಾಧಿಸುವಂತೆ ಕಲಿಸುವ ಸಾಧ್ಯತೆಗಳನ್ನು ಎತ್ತಿ ಹಿಡಿಯಲಾಗಿದೆ. ಗ್ರಹಿಕಾ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ದೀರ್ಘಾವಧಿ ಸ್ಮರಣೆಯ ಅನೇಕ ವಿಷಯಾಂಶಗಳು, ಪರಿಣಾಮಕಾರಿ ಕಲಿಯುವವರಾಗಲು ಗ್ರಹಿಕಾ ಕಾರ್ಯವಿಧಾನಗಳ ಬೋಧನೆ ಮತ್ತು ಅನುಷ್ಠಾನ ಇವುಗಳು ಸೈದ್ಧಾಂತಿಕ ಚೌಕಟ್ಟಿಗೆ ಗಮನಾರ್ಹ ಸೇರಿಕೆಯೆಂಬುದಾಗಿ ಚರ್ಚಿಸಲಾಗಿದೆ.

ಭವಿಷ್ಯದಲ್ಲಿ ಕಲಿಕಾ ಕಾರ್ಯವಿಧಾನಗಳಿಗೆ ಸೈದ್ಧಾಂತಿಕ ಚೌಕಟ್ಟನ್ನು ರೂಪಿಸುವ ಯಾವುದೇ ಪ್ರಯತ್ನದಲ್ಲಿ ಅಭ್ಯಾಸದ ಶೈಲಿ, ಅದರಲ್ಲಿಯೂ ವಿಶೇಷವಾಗಿ ವ್ಯಕ್ತಿ ಕಾರ್ಯ ನಡೆಸುವ ವಿಧಾನದಲ್ಲಿರುವ ವ್ಯಕ್ತಿಗತ ಗುಣಲಕ್ಷಣಗಳನ್ನು ಹೆಚ್ಚುವರಿಯಾಗಿ ಸೇರಿಸಿಕೊಳ್ಳಬೇಕಾಗುತ್ತದೆ.

ಕಲಿಕಾ ಕಾರ್ಯವಿಧಾನಗಳ ಪರಿಕಲ್ಪನೆಯನ್ನು ಮತ್ತಷ್ಟು ವಿಸ್ತರಿಸುವುದಕ್ಕಾಗಿ ವಿಭಿನ್ನ ಅಭ್ಯಾಸ ದೃಷ್ಟಿಕೋನಗಳಿಂದ ಕೆಲವು ಅಧ್ಯಯನಗಳನ್ನು ಸಂಕ್ಷಿಪ್ತವಾಗಿ ವಿವರಿಸುವುದು ಇಲ್ಲಿ ಸೂಕ್ತವಾಗಿದೆ.

ವಿದ್ಯಾರ್ಥಿಗಳು ಕಲಿಯುವುದನ್ನು ಅಥವಾ ಅಧ್ಯಯನ ನಡೆಸುವುದನ್ನು (ಕಾರ್ಯವಿಧಾನ) ಹೇಗೆ ಕಾಣುತ್ತಾರೆ ಮತ್ತು ಅವರು ಪ್ರಬಂಧಗಳನ್ನು ಬರೆಯುವ ವಿಧಾನ(ಶೈಲಿ)ವನ್ನು ಹೇಗೆ ನಡೆಸುತ್ತಾರೆ, ಇವುಗಳ ನಡುವೆ ಮುಖ್ಯ ಸಂಬಂಧಗಳನ್ನು ವಿದ್ಯಮಾನದ ಅಥವಾ ಅನುಭವವನ್ನು ಆಧರಿಸಿದ ಪ್ರಾಯೋಗಿಕ ದೃಷ್ಟಿಕೋನದಿಂದ ಬಿಗ್ಸ್(1988) ಅವರು ವಿವರಿಸುತ್ತಾರೆ. ಅವರ

Digitised by Bharatavani, CIIL

ಪ್ರಕಾರ, ಯಾರಾದರೂ ಯಾವುದೇ ನಿರ್ದಿಷ್ಟ ಕಾರ್ಯದ ನಿರ್ವಹಣೆಯನ್ನು ಪರಿಗಣಿಸುವಾಗ, ಅಭ್ಯಾಸದ ಶೈಲಿ ಮತ್ತು ಅಭ್ಯಾಸದ ಕಾರ್ಯವಿಧಾನಗಳ ನಡುವೆ ಪರಸ್ಪರ ಪ್ರತಿಕ್ರಿಯೆ ಇದೆಯೇ ಎಂದು ಕೇಳಿಕೊಳ್ಳಬೇಕು. ತಾಳಿಕೆಯ ಕೆಲವು ವೈಯಕ್ತಿಕ ಗುಣಲಕ್ಷಣಗಳನ್ನು ಹೊಂದಿರುವ ವಿದ್ಯಾರ್ಥಿಗಳು ಅತ್ಯಂತ ಅನುಕೂಲಕರವಾದ ಕಲಿಕಾ ವಿಧಾನಗಳನ್ನು ಸ್ವೀಕರಿಸಲು ಮತ್ತು ಅಳವಡಿಸಿಕೊಳ್ಳಲು ಇತರ ವಿದ್ಯಾರ್ಥಿಗಳಿಗಿಂತ ಹೆಚ್ಚು ಸಿದ್ಧರಿರುವರೇ? ಇಂತಹ ಪರಸ್ಪರ ಕ್ರಿಯೆಯು ಅನುಸಂಧಾನ ಪದದಿಂದ ಸೂಚಿತವಾಗುತ್ತದೆ. ಇದು ವಿದ್ಯಾರ್ಥಿಗಳ ವೈಯಕ್ತಿಕ ಗುಣಲಕ್ಷಣಗಳಿಂದ ಪ್ರಭಾವಿತವಾಗಿರುವ ಶೈಕ್ಷಣಿಕ ಕಾರ್ಯದ ಕುರಿತು ಅವರ ದೃಷ್ಟಿಕೋನದಿಂದ ಉಗಮಗೊಳ್ಳುವ ಕಲಿಕೆಯ ಪ್ರಕ್ರಿಯೆಯನ್ನು ಉಲ್ಲೇಖಿಸುತ್ತದೆ. ಹೀಗೆ, ಈ ಪ್ರಸ್ತಾಪದ ಕಲ್ಪನೆಯು ಪರಿಸ್ಥಿತಿಯಾತ್ಮಕವಾದ ಮತ್ತು ವ್ಯಕ್ತಿತ್ವಾತ್ಮಕವಾದ ಅಂಶಗಳನ್ನು ಹೊಂದಿರುತ್ತದೆ.

ಇನ್ನೊಂದು ಅಧ್ಯಯನದಲ್ಲಿ ರ್‍ಯಾಮ್‌ಸ್ಡೆನ್ ಅವರು ಉನ್ನತ ಶಿಕ್ಷಣದ ವಿದ್ಯಾರ್ಥಿಗಳ ಕಲಿಕೆಯನ್ನು ಅದು ನಡೆಯುವಂತಹ ವಾತಾವರಣದಲ್ಲಿನ ಬೋಧನೆ ಮತ್ತು ಮೌಲ್ಯಮಾಪನದ ವಿಚಾರವಾಗಿ ಕಲಿಕೆಯ ಪರಿಕಲ್ಪನಾತ್ಮಕ ವಿಷಯಾಂಶಗಳಿಗೆ ಒತ್ತನ್ನು ನೀಡಿದ್ದಾರೆ. ಇಲ್ಲಿರುವ ಪ್ರಶ್ನೆಯೇನೆಂದರೆ, ಪ್ರತ್ಯೇಕವಾಗಿ ಒಬ್ಬ ವಿದ್ಯಾರ್ಥಿ ಕಲಿಯುವ ವಿಧಾನಗಳ ಮೇಲೆ ಸಾಂಸ್ಥಿಕ ಕ್ರಿಯಾವಿಧಿಗಳು, ಮೌಲ್ಯಮಾಪನ ವಿಧಾನಗಳು, ಬೋಧನಾ ಸಿಬ್ಬಂದಿಗಳ ಕುಶಲತೆಗಳು ಮತ್ತು ಧೋರಣೆಗಳು ಮತ್ತು ಎದುರಿಸಬೇಕಾಗಿರುವ ಕಲಿಕೆಯ ಕಾರ್ಯ ವಿಧಾನಗಳು ಇತ್ಯಾದಿಗಳಿಂದ ನಿರ್ವಹಿಸಿಕೊಂಡಿರುವ ಈ ವಾತಾವರಣ ಹೇಗೆ ಪ್ರಭಾವ ಬೀರಬಲ್ಲದು. ಅವರು ಸೂಚಿಸುವುದೇನೆಂದರೆ, ಕಲಿಕಾ ಫಲಗಳು ಮತ್ತು ಕಲಿಕಾ ವಿಧಾನಗಳ ಗುಣಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಮಧ್ಯಪ್ರವೇಶಿಕೆಗಳು ವಿದ್ಯಾರ್ಥಿಗಳು ಅಳವಡಿಸಿಕೊಳ್ಳುವ ಕಲಿಕಾವಿಧಾನಗಳ ನಮ್ಯತೆಯ ಗುಣ ಮತ್ತು ಶೈಲಿಯ ದೃಢತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇ ಬೇಕು ಮತ್ತು ಇನ್ನೂ ಮುಖ್ಯವಾಗಿ ಭವಿಷ್ಯದ ಪರಿಸ್ಥಿತಿಗಳೊಂದಿಗೆ ಕಾರ್ಯ ನಿರ್ವಹಿಸುವಾಗ ವ್ಯಕ್ತಿಯ ನಮ್ಯತೆಯನ್ನು ಹೆಚ್ಚಿಸಬಹುದೇ ಎಂದು ತಿಳಿದುಕೊಳ್ಳಬೇಕು. ಕಲಿಕೆಯನ್ನು ಹೆಚ್ಚಿಸುವ ಮಧ್ಯವರ್ತಿ ಕಾರ್ಯಕ್ರಮಗಳು ವ್ಯಕ್ತಿ ಮತ್ತು ವ್ಯಕ್ತಿಯ ಸುತ್ತಲಿನ ಜಗತ್ತಿನೊಂದಿಗಿನ ಸಂಬಂಧದ ಕಡೆಗೆ ಗಮನವನ್ನು ಹರಿಸಬೇಕು. ಶಿಕ್ಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಇಬ್ಬರಲ್ಲಿಯೂ ಮಧ್ಯವರ್ತಿ ಸಮಸ್ಯೆ ಸರ್ವೇಸಾಮಾನ್ಯ.

ಗ್ರಹಿಕಾ ವರ್ತನೆಯನ್ನೂ ಒಳಗೊಂಡಂತಹ ವರ್ತನಾ ದೃಷ್ಟಿಕೋನದಿಂದ, ವೆನ್‌ಸ್ಟೇನ್ (1988) ಅವರು ಕಾರ್ಯಕ್ರಮವೊಂದನ್ನು ಪ್ರಸ್ತುತಪಡಿಸುತ್ತಾರೆ. ಇದು ಪರೀಕ್ಷಾ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ತಮ್ಮ ಕಾರ್ಯಸಾಧನೆಯನ್ನು ಸುಧಾರಿಸಿಕೊಳ್ಳಲು ಅಗತ್ಯವಿರುವ ವರ್ತನಾ ಕುಶಲತೆಯ ತರಬೇತಿಯನ್ನು ಅವರಿಗೆ ನೀಡುವ ಕಾರ್ಯಕ್ರಮ. ಬರೆವಣಿಗೆಯನ್ನು ಸುಧಾರಿಸಲು ಬಿಗ್ಸ್(1988) ಸಲಹೆಗಳನ್ನು ಒದಗಿಸುತ್ತಾರೆ. ದಾಸ್(1988) ಮತ್ತು ಕಿರ್ಬಿ(1988)ಯವರು ವಾಚನವನ್ನು ಉತ್ತಮಗೊಳಿಸುವ ವಿಧಾನಗಳ ಬಗ್ಗೆ ಸಲಹೆಗಳನ್ನು ನೀಡುತ್ತಾರೆ.

ಕಿರ್ಬಿಯವರು(1988) ಕಾರ್ಯವಿಧಾನಗಳು ಮತ್ತು ಯುಕ್ತಿಗಳು ಹಾಗೂ ಹತ್ತಿರದ ಸಂಬಂಧವನ್ನು ಹೊಂದಿರುವ ಕುಶಲತೆಗಳ ನಡುವೆ ನಾಜೂಕಾದ ಆದರೆ ಬಹು ಮುಖ್ಯ ವ್ಯತ್ಯಾಸವನ್ನು ಸೇರಿಸುತ್ತಾರೆ. ಕುಶಲತೆಗಳೆಂದರೆ ಸಂಚಯನಶಕ್ತಿಗಳು ಅಥವಾ ಸಾಮರ್ಥ್ಯಗಳಾಗಿದ್ದು, ಇವುಗಳನ್ನು ಯಾವುದೇ ಸಮಯದಲ್ಲಿ ವರ್ತನೆಯಲ್ಲಿ ವ್ಯಕ್ತಪಡಿಸಬಹುದು. ಏಕೆಂದರೆ, ಇವುಗಳನ್ನು ಅಭ್ಯಾಸದ ಮೂಲಕ ಮಸೆಯಲಾಗಿದೆ ಅಥವಾ ಬೆಳೆಸಿಕೊಳ್ಳಲಾಗಿದೆ. ಕುಶಲತೆಗಳು ಸಾಧನಗಳಾಗಿದ್ದು, ಇವುಗಳು ನಮ್ಮ ಗ್ರಹಿಕಾ ಸಾಧನಾಸಂಚಯದಲ್ಲಿ ಲಭ್ಯವಾಗುತ್ತವೆ. ಕುಶಲತೆಗಳನ್ನು ಪ್ರಜ್ಞಾಪೂರ್ವಕ ನಿರ್ಧಾರದಿಂದ ಉದ್ದೇಶಪೂರ್ವಕವಾಗಿ ಅಥವಾ ಪ್ರಜ್ಞಾಪೂರ್ವಕ ನಿರ್ಧಾರವಿಲ್ಲದೆ ಸ್ವಯಂಚಾಲಿತವಾಗಿಯೂ ಬಳಸಿಕೊಳ್ಳಬಹುದು. ಆದರೆ ಕಾರ್ಯವಿಧಾನಗಳು ಮತ್ತು ಯುಕ್ತಿಗಳು ಪ್ರಜ್ಞಾಪೂರ್ವಕ ಮತ್ತು ಉದ್ದೇಶಪೂರ್ವಕವಾಗಿರುತ್ತವೆ. ನಾವು ಕುಶಲತೆಯೊಂದನ್ನು ಪ್ರಜ್ಞಾಪೂರ್ವಕವಾಗಿ ಅನುಷ್ಠಾನಕ್ಕೆ ತರಲು ನಿರ್ಧರಿಸಿದಾಗ ಇವುಗಳು ತೊಡಗಿಕೊಳ್ಳುತ್ತವೆ.

ದಾಸ್((1984) ನೀಡುವ ವಿವರಣೆ ಹೀಗಿದೆ: ಕುಶಲತೆಗಳೆಂದರೆ ನಾವು ಮಾಡಬಹುದಾದ ಕೆಲಸಗಳು; ಕಾರ್ಯವಿಧಾನಗಳು ಮತ್ತು ಯುಕ್ತಿಗಳಲ್ಲಿ ಯೋಜನೆಗಳು ಇರುತ್ತವೆ; ಯುಕ್ತಿಯುತವಾದ ಅಥವಾ ಕಾರ್ಯವಿಧಾನದ ಕುಶಲ ಚಲನೆಯಲ್ಲಿ ಒಳಗೊಂಡಿರುವ ಕುಶಲತೆಯು ಯಾವುದಾದರೊಂದು ಯೋಜನೆಯಲ್ಲಿ ಸಂಯೋಜಿತವಾಗಿರುತ್ತದೆ. ಯೋಜನಾ ಸಂಶೋಧನೆಗಳನ್ನು ಅನುಸರಿಸಿ(ದಾಸ್, 1980, 1984; ದಾ, ಮಿಸ್ರಾ ಮತ್ತು ಮಿಶ್ರಾ, 1993; ದಾಸ್, ನಾಗ್ಲೆರಿ ಮತ್ತು ಕಿರ್ಬಿ, 1994; ದಾಸ್ ಮತ್ತು ಮಿಶ್ರಾ, 1995), ಮಾಥುರ್ ಮತ್ತು ದಾಸ್(1997) ಅವರು ನಿರ್ವಹಣಾ ಕಾರ್ಯದಲ್ಲಿ ಗಮನಾರ್ಹ ಕಾರ್ಯ ನಡೆಸುವ ಕಲ್ಪನಾತ್ಮಕ ಯೋಜನೆಯ ವಾಸ್ತವಾಂಶಗಳ ಅಧ್ಯಯನವನ್ನು ನಡೆಸಿದ್ದಾರೆ. ಕಲ್ಪನಾತ್ಮಕ ಯೋಜನಾಕಾರ್ಯವು ಸಮಸ್ಯೆಗಳಿಗೆ ಮಿತವ್ಯಯದ ಪರಿಹಾರಗಳನ್ನು ಹುಡುಕಿಕೊಳ್ಳುವ ಸಾಮರ್ಥ್ಯದ ಮೂಲಕ ತನ್ನನ್ನು ವ್ಯಕ್ತಪಡಿಸಿಕೊಳ್ಳುತ್ತದೆ ಮತ್ತು ಉತ್ತಮ ತೀರ್ಮಾನಗಳನ್ನು ಮತ್ತು ನಿರ್ಧಾರಗಳನ್ನು ಒದಗಿಸುತ್ತದೆ. ಮಾಹಿತಿಯನ್ನು ಸಂಕೇತೀಕರಿಸಿ, ಅದನ್ನು ಕೂಡಿಟ್ಟು, ಅಗತ್ಯವಿರುವಾಗ ಮತ್ತೆ ಪಡೆಯುವ ಸಾಮರ್ಥ್ಯಕ್ಕಿಂತ ಈ ಸಾಮರ್ಥ್ಯವು ಹೆಚ್ಚಿನದ್ದಾಗಿದೆ. ವಿದ್ವತ್ ಮತ್ತು ಶೈಕ್ಷಣಿಕ ಯಶಸ್ಸಿಗೆ ಇದರ ಅಗತ್ಯವಿರುತ್ತದೆ. ವಿದ್ವತ್ ವಲಯದ ಹೊರಗೆ ಪ್ರಾಮುಖ್ಯತೆ ಇರುವುದು ಯೋಜನೆಯನ್ನು ರೂಪಿಸುವ ಸಾಮರ್ಥ್ಯಕ್ಕೆ. ಕಾರ್ಯನಿರ್ವಾಹಕರ ಗ್ರಹಿಕಾ ಕಾರ್ಯವು ಯೋಜನಾ ಸಾಮರ್ಥ್ಯವಾಗಿದೆ. ಸಾಮಾನ್ಯವಾಗಿ ಇದನ್ನು ಗುರಿ ನಿರ್ಧಾರ, ನಿರ್ಧಾರ ಕೈಗೊಳ್ಳುವಿಕೆ, ನಿರ್ಧಾರದ ಅನುಷ್ಠಾನ, ಮತ್ತು ಹಿಂದೆ ಕೈಗೊಂಡ ನಿರ್ಧಾರಗಳ ಪರಿಣಾಮಗಳ ಮೌಲ್ಯಮಾಪನವೆಂದು ವರ್ಣಿಸಲಾಗುತ್ತದೆ. ವ್ಯಕ್ತಿಗಳು ತಾವು

Digitised by Bharatavani, CIIL

ಕೈಗೊಳ್ಳುವ ಯೋಜನಾ ಸ್ವರೂಪದಲ್ಲಿ ಮತ್ತು ಅವರ ಗ್ರಹಿಕೆಯನ್ನು ಹೊರತು ಪಡಿಸಿದ(ಭಾವನಾತ್ಮಕ, ಪ್ರಚೋದನಾತ್ಮಕ ಮತ್ತು ವ್ಯಕ್ತಿತ್ವ) ಮನೋಧರ್ಮದಲ್ಲಿ ಭಿನ್ನರಾಗಿರುತ್ತಾರೆ. ಮಾಥುರ್ ಮತ್ತು ದಾಸ್ ಅವರು ಇಂಜಿನಿಯರಿಂಗ್ ವಿದ್ಯಾರ್ಥಿಗಳ ಗ್ರಹಿಕಾ ಯೋಜನಾ ಸಾಮರ್ಥ್ಯವನ್ನು ಎರಡು ಪರೀಕ್ಷೆಗಳನ್ನು (ಪ್ಲಾನಿಂಗ್ ಕಾಂಪೊಸಿಶನ್, ದಾಸ್, 1980, 1984 ಮತ್ತು ಪರ್‌ಫಾರ್ಮೆನ್ಸ್ ಟೆಸ್ಟ್: ಕ್ರಾಕ್–ದಿ–ಕೋಡ್, ದಾಸ್ ಮತ್ತು ಹೀಮ್ಸ್‌ಬರ್ಜೆನ್, 1983) ಬಳಸುವುದರ ಮೂಲಕ ಅಳೆದಿದ್ದಾರೆ. ಭವಿಷ್ಯದ ಕಾರ್ಯನಿರ್ವಾಹಕರ ಗ್ರಹಿಕೇತರ ಮನೋಧರ್ಮವನ್ನು ಹೊರತುಪಡಿಸಿ ಅವರ ಗ್ರಹಿಕಾ ದಕ್ಷತೆಯನ್ನು ಈ ಪರೀಕ್ಷೆಗಳಿಂದ ಅಳೆಯಬಹುದು ಎಂಬ ಭಾವನೆಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರ ಫಲಿತಾಂಶದಲ್ಲಿ ತೋರಿಸಿಕೊಟ್ಟಂತೆ, ಸಂಕೀರ್ಣ ಯೋಜನಾ ಕಾರ್ಯವಾಗಿರುವ–ಸಂಕೇತವನ್ನು ಒಡೆಯುವುದು(ಕ್ರಾಕ್ ದಿ ಕೋಡ್), ಇದರ ಕಾರ್ಯಸಾಧನೆಯ ನಿರ್ದಿಷ್ಟತೆಯು ಗಮನಾರ್ಹವಾಗಿದ್ದು, ಯೋಜಿತ ಪ್ರಬಂಧ ಪರೀಕ್ಷೆಯಲ್ಲಿ(ವಾಸ್ತವ ನಿರ್ಬಂಧಗಳ ಕೆಳಗೆ ಗರಿಷ್ಠ ಲಾಭಗಳನ್ನು ಪಡೆಯುವ ನಿರ್ಧಾರ ಕೈಗೊಳ್ಳುವ ಕಾರ್ಯನಿರ್ವಾಹಕ ಸಾಮರ್ಥ್ಯವನ್ನು ಇದು ನಿರ್ಧರಿಸಿದೆ) ಅಗತ್ಯವಿರುವ ಗ್ರಹಿಕೆಯ, ಸಂಯೋಜಿತ ಪ್ರಬಂಧಗಳನ್ನು ಬರೆಯುವ ವಿಷಯದ ಸಾಮರ್ಥ್ಯವನ್ನು ಊಹಿಸಿಕೊಳ್ಳಬಹುದು. ಈ ಪ್ರಬಂಧಗಳ ಮೌಲ್ಯವನ್ನು ನಿರ್ಧರಿಸುವಾಗ ಮೌಲ್ಯಮಾಪಕರು ಮುಖ್ಯವಾಗಿ ವಾಕ್ಯಗಳು ಮತ್ತು ಪರಿಚ್ಛೇಧಗಳ ನಡುವೆ ಇರುವ ಸಾಮಾನ್ಯ ಜೋಡಣೆಗಳನ್ನು ನೋಡುತ್ತಾರೆ. ಈ ರೀತಿಯಾಗಿ ಪ್ರಬಂಧಗಳ ಮೌಲ್ಯವನ್ನು ನಿರ್ಧರಿಸುವುದು ಸಂಪೂರ್ಣವಾಗಿ ವಸ್ತುನಿಷ್ಠ ವಿಧಾನವಾಗಿರುವುದಿಲ್ಲ. ಹಾಗಿದ್ದರೂ, ಪ್ರಬಂಧಗಳ ಮೌಲ್ಯಗಳನ್ನು ಸಂಪೂರ್ಣವಾಗಿ ವಸ್ತುನಿಷ್ಠ ಪರೀಕ್ಷಾ ಕಾರ್ಯಸಾಧನೆಯಿಂದ ಊಹಿಸಿಕೊಳ್ಳುವುದು ಸಾಧ್ಯವಿದೆ.

ದಾಸ್ ಮತ್ತು ಇತರರು ಕಲಿಕೆಯ ನರಸಂಬಂಧಿ ದೃಷ್ಟಿಕೋನವನ್ನು ಅಳವಡಿಕೊಂಡಿದ್ದಾರೆ(1994). ಈ ದೃಷ್ಟಿಕೋನದ ಪ್ರಕಾರ ನರಸಂಬಂಧಿ ಚಟುವಟಿಕೆಯು ಕ್ರಿಯಾತ್ಮಕ ನ್ಯುರೋನ್‌ಗಳನ್ನು ಬದಲಾಯಿಸುತ್ತದೆ ಮತ್ತು ಈ ಬದಲಾವಣೆಯು ಕಲಿಕೆಯ ರಚನಾತ್ಮಕ ತಳಹದಿಯಾಗಿದೆ. ಈ ಬದಲಾವಣೆಯು ನರಗಳ ಚಟುವಟಿಕೆಯ ನೇರ ಫಲಿತಾಂಶವಾಗಿ ವ್ಯಕ್ತಗೊಳ್ಳುತ್ತದೆ. ಅಂದರೆ, ಮಾಹಿತಿ ಪ್ರಕ್ರಿಯೆಯ ನೇರ ಫಲಿತಾಂಶವಾಗಿರುತ್ತದೆ. ಇಲ್ಲಿ ಅವರು ಬಳಸಿರುವ 'ಪ್ರಕ್ರಿಯೆ' ಪದದ ಅರ್ಥವನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದು ಬಹಳ ನಿರ್ದಿಷ್ಟವಾಗಿ ಅಥವಾ ವರ್ತನೆಗಿಂತ ದೊಡ್ಡ ರಾಶಿಯ ಮೂಲಕ ಕಡಿಮೆ ವರ್ತಿಸುವಂತೆ ಕಂಡುಬರುತ್ತದೆ. ಅವರು ಸಂಕೇತೀಕರಣ ಮತ್ತು ಯೋಜನಾ ಪ್ರಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಕಾಣುತ್ತಾರೆ. ಸಂಕೇತೀಕರಣದಲ್ಲಿ ಹೆಚ್ಚು ಉದಾರವಾದ ದಾಖಲೀಕರಣ ಇರುತ್ತದೆ. ಯೋಜನೆಯಲ್ಲಿ ಸಂಕೇತಗಳ ಸಂಯೋಜನೆ ಇರುತ್ತದೆ. ಅವರು ಏಕಕಾಲಿಕ(ಒಟ್ಟೊಟ್ಟಾಗಿ ಸಾಗುವ) ಮತ್ತು ಅನುಕ್ರಮ(ಒಂದರ ಹಿಂದೆ ಒಂದರಂತೆ ನಡೆಯುವ) ಸಂಕೇತೀಕರಣ ಕಾರ್ಯವಿಧಾನಗಳಲ್ಲಿಯೂ ವ್ಯತ್ಯಾಸವನ್ನು ಗುರುತಿಸುತ್ತಾರೆ. ಏಕಕಾಲಿಕ ಸಂಕೇತೀಕರಣ ಕಾರ್ಯವಿಧಾನಗಳು ಹೆಚ್ಚು ಸಮಷ್ಠಿಯಾಗಿ ಅಥವಾ ಸಂಪೂರ್ಣವಾಗಿದ್ದರೆ, ಅನುಕ್ರಮದ ಸಂಕೇತೀಕರಣವು ಹೆಚ್ಚು ಸರಣೀಕೃತ ಅಥವಾ ಸರಣಿಯ ರೂಪದಲ್ಲಾಗಿರುತ್ತವೆ.

ಟೊರೆನ್ಸ್ ಮತ್ತು ರಾಕೆನ್‌ಸ್ಟೇನ್ (1988) ಅವರು ಕೂಡ ಕಲಿಕೆಯ ನರಸಂಬಂಧಿ ದೃಷ್ಟಿಕೋನವನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಅವರು ಆಲೋಚನಾ ಶೈಲಿಗಳು ಮತ್ತು ಸೃಜನಾತ್ಮಕತೆಯ ವಿಚಾರದ ಕುರಿತು ಸಮಗ್ರ ಅಭಿಪ್ರಾಯದಲ್ಲಿದ್ದಾರೆ. ಕಲಿಕಾ ಶೈಲಿಗಳು ಮತ್ತು ಕಾರ್ಯವಿಧಾನಗಳು ಒಬ್ಬರಿಂದ ಇನ್ನೊಬ್ಬರಲ್ಲಿ ಭಿನ್ನವಾಗಿ ಇರಬಹುದಾದರೂ, ಪೂರ್ಣ ರೀತಿಯಲ್ಲಿ ಕಾರ್ಯನಿರ್ವಹಿಸುವ ಮೆದುಳಿನಲ್ಲಿ ಸೃಜನಾತ್ಮಕತೆಯ ಬಳಕೆ ಗರಿಷ್ಠಮಟ್ಟದ್ದಾಗಿರುತ್ತದೆ.

ಮೊದಲ ನೋಟದಲ್ಲಿ ನರಸಂಬಂಧಿ ದೃಷ್ಟಿಕೋನವನ್ನು ಶಿಕ್ಷಣದಿಂದ ತೆಗೆದು ಹಾಕಿದ ಭಾವನೆ ಬರುವುದಾದರೂ, ಅದು ಅತ್ಯಧಿಕ ಶೈಕ್ಷಣಿಕ ಸೂಚ್ಯಾರ್ಥಗಳನ್ನು ಹೊಂದಿದೆ. ಶಿಕ್ಷಕರು ಇನ್ನೂ ಹೆಚ್ಚಿನ ವಿಧದ ನರಸಂಬಂಧಿ ಚಟುವಟಿಕೆಗಳನ್ನು ಪ್ರಚೋದಿಸುವ ದಾರಿಗಳನ್ನು ಪರಿಗಣಿಸಬೇಕು. ಉದಾಹರಣೆಗೆ ತರಗತಿಯಲ್ಲಿ ಆಲೋಚಿಸುವುದು ಮತ್ತು ಸಮಸ್ಯೆ ಪರಿಹರಿಸುವುದು; ಬರೀ ಪುನರುಚ್ಚಾರ ಮತ್ತು ಕಂಠಪಾಠಕ್ಕೆ ಕಡಿಮೆ ಗಮನವನ್ನು ನೀಡುವುದು. ವ್ಯಕ್ತಿಯ ಸಮಗ್ರ ಬೆಳವಣಿಗೆಯಲ್ಲಿ ಅವನ ಅಥವಾ ಆವಳ ನರವ್ಯೂಹ ವ್ಯವಸ್ಥೆ ಪಾಲುಗೊಳ್ಳುತ್ತದೆ ಎಂದು ಹೇಳಬೇಕಾದ ಅಗತ್ಯವಿಲ್ಲ. ಆದುದರಿಂದ, ಅಭ್ಯಾಸವನ್ನು ಮರುವ್ಯಾಖ್ಯಾನಿಸುವುದರಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುವಂತಹ ಮಾನಸಿಕ ವಸ್ತುವಿಷಯ ಮತ್ತು ಕಾರ್ಯಗಳ ಸಂಯೋಜನೆಯು ಬಹುಮುಖ ಸಾಮರ್ಥ್ಯದ ಬೆಳವಣಿಗೆಗೆ ಮತ್ತು ವ್ಯಕ್ತಿತ್ವ ಮತ್ತು ಅನನ್ಯತೆಯು ರೂಪುಗೊಳ್ಳುವುದಕ್ಕೆ ಗಮನಾರ್ಹ ಕೊಡುಗೆಯಾಗಿರುತ್ತದೆ ಎಂದು ಪರಿಗಣಿಸಲಾಗಿದೆ.

ವೆನ್‌ಸ್ಟೇನ್(1978) ಅವರು ಹಿಂದೆ ನಡೆಸಿದ ಒಂದು ಗುಂಪು ಅಧ್ಯಯನದಲ್ಲಿ ಕಲಿಕೆ ಅಥವಾ ಗ್ರಹಿಕಾ ಕಾರ್ಯವಿಧಾನಗಳಾಗಿ ವಿಸ್ತರಿತ ಕುಶಲತೆಗಳು ಅಥವಾ ಅಭ್ಯಾಸಿಗಳು ತಾವು ಕಲಿಯಲೇಬೇಕಾಗಿದ್ದ ಮಾಹಿತಿಗೆ ಅರ್ಥವನ್ನು ಸೇರಿಸಲು ಸಾಂಕೇತಿಕ ನಿರ್ಮಿತಿಯನ್ನು ಬಳಸುತ್ತಾರೆ. ಮೊದಲ ಅಧ್ಯಯನವನ್ನು ಒಂಭತ್ತನೆ ತರಗತಿಯವರ ಕಲಿಕೆ ಮತ್ತು ಧಾರಣಾ ದಕ್ಷತೆಯ ಮೇಲೆ ವಿಭಿನ್ನರೀತಿಯ ವಿಸ್ತರಿತ ಕುಶಲತೆಯ ತರಬೇತಿ ಕಾರ್ಯಕ್ರಮಗಳು ಹೇಗೆ ಪರಿಣಾಮಗಳನ್ನು ಬೀರುತ್ತವೆ ಎಂಬುದನ್ನು ಶೋಧಿಸಲು ವಿನ್ಯಾಸಗೊಳಿಸಲಾಗಿತ್ತು. ಕಲಿಕಾರ್ಥಿಗಳಿಗೆ ವಿಶದೀಕೃತ ಮಧ್ಯವರ್ತಿ ಕುಶಲತೆಗಳನ್ನು ಬಳಸುವುದರಲ್ಲಿ ಮಾರ್ಗದರ್ಶಕ ಅಭ್ಯಾಸವನ್ನು ಒದಗಿಸುವ ಸಲುವಾಗಿ ಅನೇಕ ವಿಧದ ಗ್ರಹಿಕಾ ಕುಶಲತೆಗಳು, ಕಲಿಕಾ ಕಾರ್ಯ ನಮೂನೆಗಳು ಮತ್ತು ಪ್ರಚೋದನಕಾರಿ ವಸ್ತುಗಳನ್ನು ಬಳಸಿಕೊಳ್ಳಲಾಗಿದೆ. ಗ್ರಹಿಕಾ ಕೌಶಲಗಳಲ್ಲಿ ವಾಕ್ಯ ವಿಸ್ತರಣ, ಕಲ್ಪನೆಯ ವಿಸ್ತರಣ, ಸಾದೃಶ್ಯಗಳು, ಚಿತ್ರಬಿಡಿಸುವ ಸೂಚನೆಗಳು, ಸಂಬಂಧಗಳನ್ನು ಸೃಷ್ಟಿಸುವುದು ಮತ್ತು ತಾತ್ಪರ್ಯ ತಿಳಿಸುವುದನ್ನು ತರಬೇತಿಯಲ್ಲಿ ಸೇರಿಸಲಾಗಿದೆ. ಇದರೊಂದಿಗೆ,

Digitised by Bharatavani, CIIL

ಕಲಿಕಾ ಕ್ರಮಗಳಲ್ಲಿ ಸರಳವಾಗಿ ಜೊತೆಗೂಡಿಸಿದ ಸಹವರ್ತಿಗಳು ಮತ್ತು ಸರಳ ಮರುಸ್ಮರಣೆಯೊಂದಿಗೆ ಗ್ರಹಣಶಕ್ತಿಯನ್ನು ಉತ್ತಮಗೊಳಿಸುವ ಓದು ಕೂಡ ಇರುತ್ತದೆ. ಪ್ರಚೋದನಕಾರಿ ವಸ್ತುಗಳನ್ನು ವಿವಿಧ ಪಠ್ಯಕ್ರಮ ಕ್ಷೇತ್ರಗಳಿಂದ ಆಯ್ದುಕೊಳ್ಳಲಾಗಿದೆ. ಇದರ ಫಲಿತಾಂಶದ ಪ್ರಕಾರ ಪ್ರಾಯೋಗಿಕ, ನಿಯಂತ್ರಿತ ಮತ್ತು ಉತ್ತರ–ಪರೀಕ್ಷೆ ಮಾತ್ರವೇ ಆಗಿರುವ ಗುಂಪಿನ ಓದಿನ ಗ್ರಾಹ್ಯತೆಯ ಸರಾಸರಿ ಗುಣಾಂಕಗಳು ಅಥವಾ ಸರಣಿ ಮರುಸ್ಮರಣೆ ಕ್ರಮಗಳಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಇಲ್ಲ. ನಿಯಂತ್ರಣ ಮತ್ತು ಉತ್ತರ ಪರೀಕ್ಷೆ ಮಾತ್ರದ ಗುಂಪುಗಳಿಗೆ ಹೋಲಿಸಿದರೆ ತರಬೇತಿ ಗುಂಪಿನ ಪರವಾಗಿ ಮಾತ್ರ ಮೂರು ಮರುಸ್ಮರಣೆಯ ಗುಣಾಂಕಗಳಲ್ಲಿ ಗಮನಾರ್ಹ ನಿರ್ವಹಣಾ ವ್ಯತ್ಯಾಸಗಳಿವೆ. ಜೊತೆಗೂಡಿರುವ ಸಹವರ್ತಿ ಅಭ್ಯಾಸದಲ್ಲಿ ಪ್ರಾಯೋಗಿಕ ಗುಂಪಿನ ಪರವಾಗಿ ಗಮನಾರ್ಹ ನಿರ್ವಹಣಾ ವ್ಯತ್ಯಾಸವನ್ನು 2ನೇ ದತ್ತಾಂಶ ಪ್ರಯತ್ನದಲ್ಲಿ ಮಾತ್ರ ಕಂಡುಕೊಳ್ಳಲಾಗಿದೆ. ಓದಿನ ಗ್ರಹಿಕೆಯಲ್ಲಿ ಮತ್ತು ವಿಳಂಬಿತ ಉತ್ತರ–ಪರೀಕ್ಷಾ ದತ್ತಾಂಶ ವಿಶ್ಲೇಷಣೆಯಲ್ಲಿನ ಸರಣಿ ಕಲಿಕಾ ಕಾರ್ಯದ ಮೊದಲ ಪ್ರಯತ್ನದಲ್ಲಿ ಗಮನಾರ್ಹ ನಿರ್ವಹಣಾ ವ್ಯತ್ಯಾಸಗಳು ಕಂಡುಬಂದಿವೆ. ಮತ್ತೆ ಈ ವ್ಯತ್ಯಾಸಗಳು ನಿಯಂತ್ರಣ ಮತ್ತು ಪರೀಕ್ಷೆ ಮಾತ್ರ ಗುಂಪುಗಳಿಗಿಂತ ಪ್ರಾಯೋಗಿಕ ಗುಂಪುಗಳ ಪರವಾಗಿ ಕಂಡುಬಂದಿವೆ. ತಕ್ಷಣದ ಮತ್ತು ವಿಳಂಬಿತ ಪರೀಕ್ಷಾ ಗುಂಪುಗಳಲ್ಲಿ ಪ್ರಾಯೋಗಿಕ ಗುಂಪುಗಳನ್ನೊಳಗೊಂಡ ಎಲ್ಲಾ ಹೋಲಿಕೆಗಳು ಸಾಧನಗಳ ನಡುವಿನ ವ್ಯತ್ಯಾಸಗಳ ದಿಕ್ಕಿನಲ್ಲಿ ಪ್ರಾಯೋಗಿಕ ಗುಂಪಿನ ಪರವಾಗಿ ಇವೆ. ಬೇರೆ ಎಲ್ಲಾ ಹೋಲಿಕೆಗಳು ಗಮನಾರ್ಹತೆಯನ್ನು ತಲುಪಲು ವಿಫಲವಾಗಿವೆ.

ವೇನ್‌ಸ್ಟೇನ್‌ನ ಎರಡನೆಯ ಅಧ್ಯಯನವು ಗ್ರಹಿಕಾ ಕಲಿಕೆಯ ಕಾರ್ಯವಿಧಾನಗಳನ್ನು ಕುರಿತಾದ್ದಾಗಿದ್ದು, ಇದರಲ್ಲಿ ಜನಸಮುದಾಯದ ವಿವಿಧ ಘಟಕಗಳ ಕುರಿತಾದ ಕಲಿಕಾ ಚಟುವಟಿಕೆಗಳ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಹೆಚ್ಚು ಯಶಸ್ವಿ ಕಲಿಕಾರ್ಥಿಗಳು ಮತ್ತು ಅನೇಕ ವರ್ಷಗಳ ವಿದ್ಯಾಭ್ಯಾಸವನ್ನು ಹೊಂದಿದವರು ಹೆಚ್ಚಾಗಿ ಉರು ಹಚ್ಚುವುದು ಅಥವಾ ಆಳವಿಲ್ಲದ ಕಾರ್ಯವಿಧಾನಗಳಿಗಿಂತ ಅರ್ಥಪೂರ್ಣವಾದ ವಿಸ್ತರಿತ ಕಾರ್ಯವಿಧಾನಗಳನ್ನು ಬಳಸಿಕೊಳ್ಳುವುದಕ್ಕೆ ಒಲವು ತೋರುತ್ತಾರೆ ಎಂಬುದು ತಿಳಿದುಬಂದಿದೆ. ಉದಾಹರಣೆಗೆ, ಸೈನ್ಯದಲ್ಲಿ ನೇಮಕಾತಿ ಪಡೆದಿರುವ ಪ್ರೌಢಶಾಲೆಯ ಅನುಭವವಿಲ್ಲದವರು ಅಥವಾ (GED) ಸಮಾನವಾದ ಡಿಪ್ಲೊಮಾ ಪಡೆದವರು ತಮ್ಮ ಪ್ರಮುಖ ಕಲಿಕಾ ಕಾರ್ಯವಿಧಾನವಾಗಿ ಕಂಠಪಾಠವನ್ನು ಪುನರುಚ್ಚರಿಸುವುದು ಎಂದು ವರದಿ ಮಾಡಿದರೆ, ಪದವಿಯ ಎರಡನೆಯ ಮತ್ತು ಮೂರನೆಯ ವರ್ಷದ ಕಾಲೇಜ್ ವಿದ್ಯಾರ್ಥಿಗಳು ಅರ್ಥಪೂರ್ಣ ವಿಶದೀಕರಣ(ಸಾದ್ಯಂತ ವಿವರಣೆ) ಮತ್ತು ಇತರ ಇನ್ನೂ ಹೆಚ್ಚು ಕ್ರಿಯಾಶೀಲ ಪರಿಷ್ಕರಣ ಕಾರ್ಯವಿಧಾನಗಳನ್ನು ವರದಿ ಮಾಡಿದ್ದಾರೆ.

ಅನೇಕ ಬಾರಿ ಕಲಿಕಾ ಕಾರ್ಯವಿಧಾನಗಳನ್ನು ಮತ್ತು ಶೈಲಿಗಳನ್ನು ಪರಸ್ಪರ ಪರ್ಯಾಯ ರೂಪವಾಗಿ ಬಳಸಲಾಗುತ್ತದೆ, ಆದರೆ ಶೈಲಿಗೆ ವಿಭಿನ್ನ ಒಳಾರ್ಥಗಳು ಇವೆ:

ಒಂದೇ ವಿಧದ ಕಾರ್ಯವಿಧಾನಗಳ ವರ್ಗವನ್ನು ರೂಢಿಯಿಂದ ಬಳಸುವುದಕ್ಕೆ ಶೈಲಿ ಎಂದು ಹೇಳಲಾಗುತ್ತದೆ. ಉದಾಹರಣೆಗೆ ವಿಶ್ಲೇಷಣಾತ್ಮಕ ಶೈಲಿಯು ಈ ರೀತಿಯ ಕಾರ್ಯವಿಧಾನಗಳನ್ನು ಒಳಗೊಳ್ಳಬಹುದು: ಸಮಸ್ಯೆಯನ್ನು ವಿಭಾಗಗಳಾಗಿ ಭೇಧಿಸುವುದು, ತಿಳಿದ ಮಾಹಿತಿಯನ್ನು ಬರೆದಿಟ್ಟುಕೊಳ್ಳುವುದು, ಬೀಜಗಣಿತ ಮತ್ತು ಅಂಕಗಣಿತವನ್ನು ಬಳಸುವುದು ಇತ್ಯಾದಿ(ಕಿರ್ಬಿ, 1988).

ಶೈಲಿಯೆಂದರೆ ಒಂದು ವರ್ಗದ ಕಲಿಕಾ ಕಾರ್ಯವಿಧಾನವನ್ನು ಅಥವಾ ಒಂದು ವರ್ಗದ ಬೋಧನಾ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವ ಏರ್ಪಾಡು. ಉದಾಹರಣೆಗೆ ಕಲಾ ಶಾಲೆಯೊಂದರಲ್ಲಿ ಸಾಮಾನ್ಯವಾಗಿ ಇದು ಪ್ರಾತ್ಯಕ್ಷಿಕೆಯ ಮೂಲಕ ವ್ಯಕ್ತಗೊಳ್ಳುವಂತಹದು. ಪ್ರೌಢಶಾಲೆಯಲ್ಲಿ ಇದು ಸಾಮಾನ್ಯವಾಗಿ ಬಾಯಿ ಮಾತಿನ ಸಂವಹನ ಅಥವಾ ಪ್ರಯೋಗಶಾಲೆಯ ಅನುಭವವಾಗುತ್ತದೆ. ಇಲ್ಲಿ ಉಳಿಯುವ ಪ್ರಶ್ನೆಯೇನೆಂದರೆ, ಈ ಶೈಲೀಕೃತ ಏರ್ಪಾಡು ಯಾರಿಗೆ ಸೇರಬೇಕು? ವ್ಯಕ್ತಿ ವ್ಯತ್ಯಾಸದ ಮನಃಶಾಸ್ತ್ರಜ್ಞರು ನಂಬಿಕೊಳ್ಳುವುದೇನೆಂದರೆ, ಏಕಾತ್ಮಕ, ಭಾಗಶಃ ಸ್ವಾಯತ್ತದ ಘಟಕ 'ಸಾಮ್ಯತೆ'ಯು ಒಂದು ಏರ್ಪಾಟಾಗಿದ್ದು, ಒಂದು ಅಥವಾ ಬೇರೆ ವರ್ಗದ ಕಾರ್ಯವಿಧಾನವನ್ನು ಆಯ್ದುಕೊಳ್ಳುವುದು ವ್ಯಕ್ತವಾಗಿರುತ್ತದೆ (ಪಾಸ್ಕ್, 1988).

ಕಲಿಕೆಯ ಶೈಲಿಯು ನಿರ್ದಿಷ್ಟ ಕಲಿಕಾ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಲು ಇರುವಂತಹ ಪೂರ್ವ ಏರ್ಪಾಟಾಗಿರುತ್ತದೆ(ಬಿಗ್ಸ್, 1984). ಕಲಿಕಾ ಶೈಲಿ ಮತ್ತು ಕಲಿಕಾ ಕಾರ್ಯವಿಧಾನಗಳು ವಿದ್ಯಾರ್ಥಿಯ ಕಲಿಕೆಯ ಎರಡು ವಿಭಿನ್ನ ಅಂಶಗಳಾಗಿವೆ. ಶೈಲಿಗಳು ಸಹಕಾಲಿಕ ಅಥವಾ ಕ್ರಮಾಗತ ಸಂಕೇತ ರೂಪಿಸುವ ಕಾರ್ಯವಿಧಾನಗಳನ್ನು ಹೊಂದಿರುವ ಕಾರ್ಯವನ್ನು ಸಮೀಪಿಸುವ ಸ್ಥಿರ ವಿಧಾನಗಳಾಗಿವೆ. ದಾಸ್ ಮತ್ತು ಕಿರ್ಬಿ ಇಬ್ಬರೂ ಸೂಚಿಸುವುದೇನೆಂದರೆ ವ್ಯಕ್ತಿಗಳು ಹೆಚ್ಚು ವಿಶ್ಲೇಷಣಾತ್ಮಕ ಕ್ರಮಾಗತ ಕಾರ್ಯವಿಧಾನಗಳಲ್ಲಿ ಅಥವಾ ಹೆಚ್ಚು–ಜಾಗತಿಕ ಕ್ರಮಾಗತ ಕಾರ್ಯವಿಧಾನಗಳಲ್ಲಿ ಹೆಚ್ಚು ನುರಿತವರಾಗಿರಬಹುದು. ಇದು ಅವರ ವರ್ತನೆಯ ಶೈಲಿ–ರೀತಿಯ ಗುಣಕ್ಕೆ ಕೊಡುಗೆಯಾಗಬಹುದು(ದಾಸ್, 1988, ಕಿರ್ಬಿ, 1988).

ಈ ವ್ಯಾಖ್ಯಾನಗಳಿಂದ ಸ್ಪಷ್ಟವಾಗುವುದೇನೆಂದರೆ, ವಿವಿಧ ಗ್ರಹಿಕಾ ಕಾರ್ಯಗಳ ಅನುಸಂಧಾನದಲ್ಲಿ ವ್ಯಕ್ತಿ ಅನುಸರಿಸುವ ವಿಶೇಷ ವಿಧಾನದಲ್ಲಿರುವ ಸುಸಂಗತತೆಯ ಹಾಗಿರುವ ಒಂದು ಸ್ಥಿರ ಲಕ್ಷಣವಾಗಿದ್ದರೆ, ಕಾರ್ಯವನ್ನು ನಡೆಸಿದ ವಿಧಾನವು ವ್ಯಕ್ತಿ ಅಳವಡಿಸಿಕೊಳ್ಳುವ ಕಾರ್ಯವಿಧಾನವಾಗಿರುತ್ತದೆ.

ಕಲಿಕೆಯ ಮೇಲೆ ಪರಿಣಾಮ ಬೀರುವ ಗ್ರಹಿಕಾ ಶೈಲಿಯ ಪ್ರಮುಖ ಆಯಾಮಗಳು ಸಮಷ್ಟಿಯ– ಸಮಗ್ರ ಗಮನವನ್ನು, ದೃಷ್ಟಿಕೋನವು ಒಂದು ಕೊನೆಯಲ್ಲಿ ಆಲೋಚನೆಯನ್ನು ಮತ್ತು ಇನ್ನೊಂದು ಕೊನೆಯಲ್ಲಿ ಕೇಂದ್ರೀಕೃತ ವಿವರಣಾತ್ಮಕ ಗಮನ, ದೃಷ್ಟಿಕೋನ ಮತ್ತು ಆಲೋಚನೆಯನ್ನು ಹೊಂದಿರುತ್ತವೆ ಎಂದು ಕಲಿಕಾ ಶೈಲಿ ಕ್ಷೇತ್ರದ ಅನೇಕ ಸಂಶೋಧಕರು ಒಪ್ಪಿಕೊಳ್ಳುತ್ತಾರೆ.

Digitised by Bharatavani, CIIL

ಸಾಂಪ್ರದಾಯಿಕವಾಗಿ ಗ್ರಹಿಕಾ ಶೈಲಿಯ ಸಂತತ ಪ್ರವಾಹದ ಎರಡೂ ಕೊನೆಗಳು ಕಲಿಕೆಯಲ್ಲಿನ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ಸಮಾನ ರೀತಿಯಿಂದ ಪರಿಣಾಮಕಾರಿಯಾಗಿರುತ್ತವೆ. ಉದಾಹರಣೆಗೆ ವಿದ್ಯಾರ್ಥಿಯು ವಿವರಗಳಲ್ಲಿ ಗಮನವನ್ನು ಕೇಂದ್ರೀಕೃತಗೊಳಿಸಿದರೆ ಪಠ್ಯದಿಂದ ಅರ್ಥವನ್ನು ತೆಗೆಯಲು ಇದು ಸಮಾನ ರೀತಿಯಿಂದ ಪರಿಣಾಮಕಾರಿಯಾಗಿದ್ದು ಆಗ ಪ್ರಧಾನ ಭಾಗಗಳು ಅರಿವಿಗೆ ಬರುತ್ತವೆ(ಪಾಸ್ಕ್‌ನ ಸರಣಿಕ ಅಥವಾ ಕಾರ್ಯನಿರ್ವಹಣೆ ಕಲಿಕಾ ಶೈಲಿ) ಅಥವಾ ವಿದ್ಯಾರ್ಥಿಯು ಪ್ರಧಾನ ಭಾಗಕ್ಕೆ ಮಾತ್ರ ಏಕಾಗ್ರತೆ ಹರಿಸಿ ಅಗತ್ಯವಿದ್ದಾಗ ಮಾತ್ರ ವಿವರಗಳನ್ನು ಸೇರಿಸಿಕೊಳ್ಳುವುದು(ಪಾಸ್ಕನ ಸಮಗ್ರತಾ ಸಿದ್ಧಾಂತ ಅಥವಾ ಗ್ರಹಿಕೆ, ಕಲಿಕಾ ಶೈಲಿ). ಆದರೆ ಶೈಲಿಯ ಆಯಾಮದ ಎರಡು ಕೊನೆಗಳು ಸಮಾನರೀತಿಯಲ್ಲಿ ಪರಿಣಾಮಕಾರಿಯಾಗಿ ಇರಲಾರವು ಎಂದು ಕಿರ್ಬಿ ಹೇಳುತ್ತಾರೆ. ನಿರ್ದಿಷ್ಟ ಕಾರ್ಯಕ್ಕೆ ಒಂದು ವಿಧದ ಕಾರ್ಯನಿರ್ವಹಣಾ ಕ್ರಮವು(ಶೈಲಿಯ ಆಯಾಮದ ಒಂದು ಕೊನೆ) ಸಾಮಾನ್ಯವಾಗಿ ಇನ್ನೊಂದಕ್ಕಿಂತ ಉತ್ತಮವಾಗಿಯೇ ಇರುತ್ತದೆ ಮತ್ತು ಈ ವಿಚಾರದಲ್ಲಿ ಕಾರ್ಯಾನಿರ್ವಹಣೆಯ ಎರಡೂ ಕ್ರಮಗಳು ಜೊತೆಗೂಡಿ ಸಂಯೋಗವಾಗುವಲ್ಲಿನ ಸಮಸ್ಯೆಗೆ ಅಖಂಡತೆಯ ಯಾವುದಾದರೂ ಒಂದು ಕೊನೆಯು(ಕಾರ್ಯನಿರ್ವಹಣೆಯ ಯಾವುದಾದರೂ ಒಂದು ಕ್ರಮ) ಭಾಗಶಃ ಮಾತ್ರ ಪರಿಹಾರವನ್ನು ನೀಡಬಲ್ಲದು(ಸ್ಕೆಮೆಕ್, 1988).

ಕಲಿಕೆಯ ಉತ್ಕೃಷ್ಟತೆಯ ಮಟ್ಟವನ್ನು ಪ್ರೋತ್ಸಾಹಿಸುವ ಅನೇಕ ವಿಧಾನಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಬೇಕಾಗಿದೆ. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ಶಿಕ್ಷಣದ ನೀತಿ ನಿರ್ಮಾಪಕರು ಈಗಾಗಲೇ ಇರುವಂತಹ ಮತ್ತು ಅವರು ಅಪೇಕ್ಷಿಸುವ ಶಾಲಾ ಕಲಿಕೆಯ ಗುಣಮಟ್ಟಗಳ ನಡುವಿನ ಅಂತರವನ್ನು ಕಡಿಮೆ ಮಾಡಬಲ್ಲ ದಾರಿಯ ಶೋಧನೆಯಲ್ಲಿದ್ದಾರೆ. ಇದರಲ್ಲಿ ಒಂದು ವಿಧಾನವನ್ನು ಪರಿಣತಿಯ ಕಲಿಕೆ ಎಂದು ಕರೆಯಲಾಗುತ್ತದೆ. 1960ರ ನಂತರದ ಭಾಗದಲ್ಲಿ ಈ ಪರಿಣತಿಯ ಕಲಿಕೆಯನ್ನು ವೃತ್ತಿಪರ ಸಾಹಿತ್ಯದಲ್ಲಿ ಅಳವಡಿಸಿಕೊಳ್ಳಲಾಯಿತು(ಬ್ಲೂಮ್, 1968). ಮೊದಲನೆಯದಾಗಿ ಪರಿಣತಿ ಕಲಿಕೆಯು ಬೋಧನೆ ಮತ್ತು (ಕಲಿಕೆ) ಯ ಕುರಿತಾದ ಹಳೆಯ ಆಶಾವಾದದ ತಾತ್ವಿಕತೆಯಾಗಿದೆ. ಇದರ ತತ್ವದ ಪ್ರಕಾರ ಯಾವುದೇ ಶಿಕ್ಷಕ ಅಕ್ಷರಶಃ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ಕೃಷ್ಟವಾಗಿ, ಶೀಘ್ರವಾಗಿ ಮತ್ತು ಆತ್ಮವಿಶ್ವಾಸದಿಂದ ಕಲಿಯುವಂತೆ ಮಾಡಬಲ್ಲ. ಶಿಕ್ಷಕನು 'ಪೆದ್ದ', 'ಮಂದ' ಮತ್ತು 'ಅನಾಸಕ್ತ' ವಿದ್ಯಾರ್ಥಿಗಳು 'ಬುದ್ಧಿವಂತ', 'ಶೀಘ್ರ' ಮತ್ತು 'ಆಸಕ್ತ' ವಿದ್ಯಾರ್ಥಿಗಳಂತೆ ಕಲಿಯಲು ಸಹಾಯ ಮಾಡಬಲ್ಲ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ಬದುಕಿನುದ್ದಕ್ಕೂ ತಾವು ಅಭ್ಯಾಸವನ್ನು ಕೈಗೊಳ್ಳುವುದಾಗಿ, ಮತ್ತು ಶಿಕ್ಷಕರು ಬೋಧನೆಗೆ ಅಗತ್ಯವಾದ ಕೆಲವು ಮೂಲಭೂತ ವೃತ್ತಿಪರ ದಕ್ಷತೆಗಳನ್ನು ಪಡೆಯುವ ಆಶ್ವಾಸನೆಯನ್ನು ಹೊಂದುವರು. ಇದರಿಂದಾಗಿ ಅವರು ಬೋಧನೆಯನ್ನು ಮುಂದುವರಿಸುವುದು, ಮತ್ತು ಇದೇ ರೀತಿ ಮುಂದುವರಿಯಬೇಕೆನ್ನುವುದು ಸಾಧ್ಯವಾಗುತ್ತದೆ. ಎರಡನೆಯದಾಗಿ ಪರಿಣತಿ ಕಲಿಕೆಯು ಹಳೆಯ ಮತ್ತು ಹೊಸ ಕಲಿಸುವಿಕೆಯ ಕಲ್ಪನೆಗಳು ಮತ್ತು ಕಾರ್ಯವಿಧಾನಗಳ ಗುಂಪಾಗಿದ್ದು ಇದು ಬಹಳ ವಿದ್ಯಾರ್ಥಿಗಳಿಗೆ ಉತ್ಕೃಷ್ಟವಾಗಿ, ಅತಿ ಶೀಘ್ರದಲ್ಲಿ ಮತ್ತು ಆತ್ಮವಿಶ್ವಾಸದಿಂದ ನಿಯಮಿತವಾಗಿ ಕಲಿಯುವುದಕ್ಕೆ ನೆರವಾಗುತ್ತದೆ. ಈ ವಿಧದ ಕಲ್ಪನೆಗಳು ಮತ್ತು ಕಾರ್ಯವಿಧಾನಗಳು ವ್ಯವಸ್ಥಿತ ಕಲಿಸುವಿಕೆಯನ್ನು ಉಂಟು ಮಾಡಿ ವಿದ್ಯಾರ್ಥಿಗಳು ಕಲಿಯುವಾಗ ತೊಂದರೆಗಳನ್ನು ಅನುಭವಿಸಿದಾಗಲೆಲ್ಲಾ ನೆರವನ್ನು ಒದಗಿಸುತ್ತವೆ ಮತ್ತು ಪರಿಣತಿಯನ್ನು ಹೊಂದಲು ಸಾಕಷ್ಟು ಸಮಯವನ್ನು ಒದಗಿಸುತ್ತವೆ. ಮತ್ತು ಪರಿಣತಿಯ ಸ್ಪಷ್ಟ ಮಾನದಂಡಗಳನ್ನು ಒದಗಿಸುತ್ತವೆ.(ಬ್ಲೂಮ್, 1974). ಪರಿಣತಿ ಕಲಿಕೆಯು ಒಂದು ಕಲ್ಪನೆ-ಒಂದು ನಂಬಿಕೆಯ ವ್ಯವಸ್ಥೆಯಾಗಿದ್ದು, ಅದು ಹಳೆಯದಾದರೂ, ಯಾವುದೇ ಪ್ರಾಯೋಗಿಕ ತಂತ್ರಜ್ಞಾನವಿಲ್ಲದೆ ಶತಮಾನಗಳಿಂದ ಈ ಕಲ್ಪನೆಯನ್ನು ಕಾಲಾನುಕ್ರಮದಲ್ಲಿ ಶಾಲೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ(ಬ್ಲಾಕ್, 1971). ಈ ವಿಧದ ತಂತ್ರಜ್ಞಾನಕ್ಕೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಆಧಾರವನ್ನು ಮೊದಲ ಬಾರಿಗೆ ಒದಗಿಸಿದವನು ಬ್ಲೂಮ್. ಪರಿಣತಿಯ ವಿಕಾಸಕ್ಕೆ ಅವರ ಸೈದ್ಧಾಂತಿಕ ಕೊಡುಗೆಯು ಕಾರೊಲ್‌ನ(1971) ಶಾಲಾ ಕಲಿಕೆಯ ಪರಿಕಲ್ಪನಾತ್ಮಕ ಮಾದರಿಯನ್ನು ಪರಿಣತಿ ಕಲಿಕೆಗಾಗಿ ಕಾರ್ಯಾಗತ ಮಾದರಿಯಾಗಿ ಪರಿವರ್ತಿಸುವಂತಾಯಿತು. ನಾಗರಾಜು (1995)ಅವರು ವ್ಯಕ್ತಪಡಿಸಿದಂತೆ, ಕಲಿಸುವಿಕೆಯ ಈ ಮಾದರಿಯು ಕಾಲಗತಿಯ ಕಾರ್ಯವಾಗಿ ಶೈಕ್ಷಣಿಕ ಪರಿಣಾಮಗಳನ್ನು ಹುಟ್ಟಿಸುತ್ತದೆ. ಪ್ರಮುಖವಾದ ಮೂರು ಪ್ರಸ್ತಾಪಗಳು ವ್ಯಕ್ತಪಡಿಸುವುದೇನೆಂದರೆ, 1. ಕಲಿಕಾರ್ಥಿಯ ಸಹಜ ಒಲವಿನಿಂದ ಪಡೆಯಲಾದ ಸಮಯದ ಪರಿಮಾಣ, 2. ಕಲಿಕಾರ್ಥಿಯ ಅವಿರತ ಪ್ರಯತ್ನದಿಂದ ಪಡೆದಿರುವಂತಹದು, 3. ಕಲಿಕಾರ್ಥಿಗೆ ನೀಡಲಾದ ಅವಕಾಶಗಳಿಂದ ಪಡೆದಿರುವಂತಹದು. ಈ ಮೂರೂ ಅಂಶಗಳು ಒಂದು ಆದರ್ಶ ಬೋಧನೆಯ ಸ್ಥಿತಿಯಲ್ಲಿ ಒಂದು ಕಾರ್ಯವನ್ನು ಕಲಿಯಲು ಬೇಕಾದ ಸಮಯದ ಭಾಗಾಂಶವನ್ನು ಕುರಿತು ವಿವರಿಸುತ್ತವೆ. ಇದು ಶೈಕ್ಷಣಿಕ ಅವಕಾಶಗಳ ಸಮಾನತೆಯ ಸಂದರ್ಭದಲ್ಲಿ ಶೈಕ್ಷಣಿಕ ವ್ಯವಸ್ಥೆಗಳ ಮೌಲ್ಯಮಾಪನ ನಡೆಸುವಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ. ಹೀಗೆ ಕಲಿಕೆಯ ಪ್ರಮಾಣವು ಈ ಭಾಗಾಂಶದಿಂದ ನಿರ್ಧರಿತವಾಗುತ್ತದೆ. ಬ್ಲೂಮ್ ನಡೆಸಿದ ಮೇಲಿನ ಮೂರು ಪ್ರಸ್ತಾಪಗಳ ಸಂಯೋಜನೆಯಲ್ಲಿ, ಸಹಜ ಒಲವು ವಿದ್ಯಾರ್ಥಿಯು ಕಲಿಯಬಹುದಾದ ಗತಿಯನ್ನು ದೃಢೀಕರಿಸಬಹುದಾದರೆ, ಕೆಲವೊಂದು ಪರಿಣತಿ ಹಂತದಲ್ಲಿ ವಿದ್ಯಾರ್ಥಿಗಳಿಂದ ನಿರೀಕ್ಷಿಸಬಹುದಾದ ಕಲಿಕೆಯ ಮಟ್ಟವನ್ನು ನಿಶ್ಚಿತಗೊಳಿಸುವುದು ಸಾಧ್ಯವಾಗಬೇಕು ಮತ್ತು ಕಾರೊಲ್‌ನ ಮಾದರಿಯಲ್ಲಿನ ಸಂಬಂಧಿತ ಬೋಧನಾ ಚರಗಳನ್ನು ವ್ಯವಸ್ಥಿತವಾಗಿ ಬದಲಾಯಿಸುವುದರ ಮೂಲಕ ಎಲ್ಲಾ ಅಥವಾ ಬಹುಪಾಲು ವಿದ್ಯಾರ್ಥಿಗಳು ಪರಿಣತಿಯನ್ನು ಪಡೆಯುವಂತಾಗುವುದು. ಹೀಗೆ ಪ್ರತಿಯೊಬ್ಬ ಕಲಿಕಾರ್ಥಿಗೆ ಏಕರೂಪದ ಬೋಧನೆ ಮತ್ತು ಪ್ರತಿಯೊಬ್ಬ ಕಲಿಕಾರ್ಥಿಗೆ ಗರಿಷ್ಠ ಬೋಧನೆ ನೀಡುವುದರಿಂದ ಈ

Digitised by Bharatavani, CIIL

ಕೆಳಗಿನ ಎರಡು ಪರಿಸ್ಥಿತಿಗಳು ಉಂಟಾಗುತ್ತವೆ:

ವಿದ್ಯಾರ್ಥಿಗಳನ್ನು ಕಾರ್ಯವೊಂದಕ್ಕಾಗಿ ಅವರ ಸಹಜ ಒಲವಿಗೆ ಅನುಗುಣವಾಗಿ ನಿಯಮಾನುಸಾರವಾಗಿ ವಿಂಗಡಿಸಿ ಅವರಿಗೆ ಸಮಯ ಮತ್ತು ಗುಣಮಟ್ಟದ ಕುರಿತು ಸಮಾನ ಆದೇಶಗಳನ್ನು ನೀಡಿದರೆ, ಅವರ ಕಾರ್ಯ ಮುಗಿದಾಗ ಅವರ ಸಾಧನೆಯು ನಿಯಮಾನುಸಾರವಾಗಿಯೂ ಹಂಚಲ್ಪಟ್ಟಿರುತ್ತದೆ. ಅವರ ಸಾಮಾನ್ಯ ಒಲವು ಮತ್ತು ಸಾಧನೆಯ ನಡುವಿನ ಸಂಬಂಧವೂ ಉನ್ನತಮಟ್ಟದ್ದಾಗಿರುತ್ತದೆ.

ವಿದ್ಯಾರ್ಥಿಗಳು ನಿಯಮಾನುಸಾರವಾಗಿ ವಿಂಗಡಿಸಲ್ಪಟ್ಟು, ಪ್ರತಿಯೊಬ್ಬರೂ ಗರಿಷ್ಠ ಗುಣಮಟ್ಟದ ಶಿಕ್ಷಣವನ್ನು ಮತ್ತು ಸಾಕಷ್ಟು ಪ್ರಮಾಣದ ಕಲಿಕಾ ಸಮಯವನ್ನು ಪಡೆಯುವಂತಿದ್ದರೆ, ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಪರಿಣತಿ ಹೊಂದುವುದನ್ನು ನಿರೀಕ್ಷಿಸಬಹುದು. ಅಲ್ಲದೆ ಸಹಜ ಒಲವು ಮತ್ತು ಸಾಧನೆಯ ನಡುವೆ ಅಲ್ಪ ಸಂಬಂಧವನ್ನು ಅಥವಾ ಸಂಬಂಧವನ್ನು ಹೊಂದದೇ ಇರಬಹುದು.

ಶಿಕ್ಷಣದಲ್ಲಿ 'ಪರಿಣತಿ ಕಲಿಕೆ'ಯ ವಿಧಾನವನ್ನು ರೂಪಿಸುವಲ್ಲಿ ಬ್ಲೂಮ್ ನೀಡಿರುವ ಪ್ರಾಯೋಗಿಕ ಕೊಡುಗೆಯು ತರಗತಿಯ ಬೋಧನಾ ಕಾರ್ಯವಿಧಾನದ ಚೌಕಟ್ಟನ್ನು ರೂಪಿಸಲು ನೆರವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಹೇಗೆ ಮತ್ತು ಎಷ್ಟು ಸಮಯದವರೆಗೆ ಕಲಿಸಲಾಗುತ್ತದೆ ಎಂಬುದನ್ನು ಆಧರಿಸಿ ಅಗತ್ಯವಿದ್ದಾಗ ಇದನ್ನು ವ್ಯವಸ್ಥಿತ ರೀತಿಯಲ್ಲಿ ಬದಲಾಯಿಸಬಹುದು(ಆಂಡರ್‌ಸನ್ ಮತ್ತು ಬ್ಲಾಕ್, 1985).

ಈ ವ್ಯಕ್ತಿಗತ ಶೈಕ್ಷಣಿಕ ಕಲ್ಪನೆಗಳನ್ನು ಮತ್ತು ಕಾರ್ಯವಿಧಾನಗಳನ್ನು ಎರಡು ವಿಧಾನಗಳ ಮೂಲಕ ಉಪಯೋಗಿಸಲಾಗಿದೆ. ಒಂದು ಗುಂಪು ಆಧಾರಿತ, ಶಿಕ್ಷಕ ಪರಿಶೀಲನೆಯ ವಿಧಾನ. ಇಲ್ಲಿ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳೊಂದಿಗೆ ಸಹಕಾರದಿಂದ ಕಲಿಯುತ್ತಾರೆ ಮತ್ತು ಶಿಕ್ಷಕರು ಸೂಚನೆಗಳ ನೀಡುವಿಕೆ ಮತ್ತು ಅದರ ಅರಿವನ್ನು ನಿಯಂತ್ರಿಸುತ್ತಾರೆ. ಈ ವಿಧಾನವು ಶಿಕ್ಷಣ ಕ್ಷೇತ್ರದ ಒಳಗಿನಿಂದಲೇ ಹುಟ್ಟಿಬಂದಿರುವುದಾಗಿದೆ. ಇದು ವಿದ್ಯಾಭ್ಯಾಸದ ಪ್ರಾಥಮಿಕ ಮತ್ತು ಸೆಕೆಂಡರಿ ಹಂತಗಳ ಮೇಲೆ ಮುಖ್ಯ ಪ್ರಭಾವವನ್ನು ಹೊಂದಿದೆ. ಇನ್ನೊಂದು ವ್ಯಕ್ತಿ ಆಧಾರಿತ ಮತ್ತು ಕಲಿಕಾರ್ಥಿಗಳ ನಡೆಯ ವಿಧಾನ. ಇಲ್ಲಿ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳಿಗಿಂತ ಸ್ವತಂತ್ರವಾಗಿ ಕಲಿಯುತ್ತಾರೆ ಮತ್ತು ಪ್ರತಿಯೊಬ್ಬ ವಿದ್ಯಾರ್ಥಿ ಸೂಚನೆಗಳ ನೀಡುವಿಕೆ ಮತ್ತು ಹರಿವನ್ನು ನಿಯಂತ್ರಿಸುತ್ತಾನೆ/ತ್ತಾಳೆ. ಈ ರೀತಿಯ ಕಲ್ಪನೆಗಳು ಮತ್ತು ಕಾರ್ಯವಿಧಾನಗಳು ಕೆಲ್ಲರನ ಬೋಧನೆಯ ವ್ಯಕ್ತಿಗತ ವ್ಯವಸ್ಥೆಯ(ಪಿಎಸ್‌ಐ) ತಿರುಳಾಗಿದೆ. ಇದು ಮನಃಶಾಸ್ತ್ರ ಮತ್ತು ಜೀವಶಾಸ್ತ್ರಗಳ ಕ್ಷೇತ್ರಗಳಿಂದ ಹುಟ್ಟಿಬಂದಿದ್ದು ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾನಿಲಯಗಳ ಹಂತಗಳ ಮೇಲೆ ಮುಖ್ಯ ಪ್ರಭಾವ ಬೀರುತ್ತದೆ. ಕೆಲ್ಲರ್ ಯೋಜನೆ ಅಥವಾ ಪಿಎಸ್‌ಐ ವ್ಯಕ್ತಿಗತ ಬೋಧನಾ ವಿಧಾನವಾಗಿದ್ದು ಇದನ್ನು ಅರವತ್ತರ ದಶಕದ ಪ್ರಾರಂಭದಲ್ಲಿ ಕೆಲ್ಲೆರ್ ಮತ್ತು ಅವರ ಸಂಗಾತಿಗಳಿಂದ ಕಾಲೇಜು ಮಟ್ಟದ ಕಲಿಸುವಿಕೆಯ ಬಳಕೆಗಾಗಿ ಅಭಿವೃದ್ಧಿಪಡಿಸಲಾಗಿದೆ. ಪಿಎಸ್‌ಐ ವ್ಯಕ್ತಿಗತ ಬೋಧನಾ ವಿಧಾನವಾಗಿದೆ. ಇದರಲ್ಲಿ ವಿದ್ಯಾರ್ಥಿಗಳಿಗೆ ತಮ್ಮದೇ ಗತಿಯಲ್ಲಿ ಕೋರ್ಸ್ ವಿಷಯದ ಮೂಲಕ ಮುಂದುವರಿಯುವ ಅವಕಾಶವನ್ನು ನೀಡಲಾಗಿದೆ. ಇಲ್ಲಿ ಅವರು ಎಲ್ಲಾ ಪ್ರಮುಖ ಕೋರ್ಸಗಳ ಉದ್ದೇಶಗಳ ಮೇಲೆ ಪರಿಣತಿಯನ್ನು ತೋರಿಸುವುದು ಅಗತ್ಯ. ಇತರ ವ್ಯಕ್ತಿಗತ ವಿಧಾನಗಳಿಗಿಂತ ಪಿಎಸ್‌ಐ ಭಿನ್ನವಾಗಿದೆ. ಅದು ಕೋರ್ಸ್ ಬೋಧಕನಿಗೆ ಸಹಪಾಠಿಗಳಲ್ಲಿಯೇ ವಿದ್ಯಾರ್ಥಿ ಮೇಲ್ವಿಚಾರಕರನ್ನು ಸಹಾಯಕರನ್ನಾಗಿ ಒದಗಿಸುತ್ತದೆ. ಈ ವಿದ್ಯಾರ್ಥಿ ಮೇಲ್ವಿಚಾರಕರು ವಿದ್ಯಾರ್ಥಿಗಳ ಕಾರ್ಯನಿರ್ವಹಣೆಯ ಮೌಲ್ಯಮಾಪನವನ್ನು ಘಟಕ ಪ್ರಶ್ನಾ ಪರೀಕ್ಷೆಯ ಮೂಲಕ ನಡೆಸುವರು ಮತ್ತು ತರಗತಿಯ ಆಂತರಿಕ ವೈಯಕ್ತಿಕ ವಾತವರಣದಲ್ಲಿ ಪಾಲುಗೊಂಡು ವಿದ್ಯಾರ್ಥಿಗಳಿಗೆ ಕೆಲಮಟ್ಟಿನ ಖಾಸಗಿ ಬೋಧನಾ ನೆರವನ್ನು ನೀಡುವರು. ಸಾಂಪ್ರದಾಯಿಕ ಕೋರ್ಸಗಳಿಗಿಂತ ಪಿಎಸ್‌ಐ ಕೋರ್ಸಗಳು ಐದು ವಿಚಾರಗಳಲ್ಲಿ ಭಿನ್ನವಾಗಿವೆ. ಅವುಗಳೆಂದರೆ: 1. ಪರಿಣತಿ ಕೇಂದ್ರಿತ 2. ವ್ಯಕ್ತಿಗತ ಗತಿಯ ಕೋರ್ಸಗಳನ್ನು ಅವು ಬಳಸುತ್ತವೆ: 3. ವಿದ್ಯಾರ್ಥಿಗಳಿಗೆ ಉತ್ತೇಜನ ಮತ್ತು ಪ್ರಚೋದನೆ ನೀಡುವ ಕೆಲವು ಉಪನ್ಯಾಸಗಳು 4. ಮಾಹಿತಿಯನ್ನು ಒದಗಿಸಲು ಮುದ್ರಿತ ಮಾರ್ಗದರ್ಶಿಗಳು, ಮತ್ತು 5. ಪ್ರಶ್ನಾವಳಿಗಳ ಮೌಲ್ಯಮಾಪನಕ್ಕಾಗಿ ವಿದ್ಯಾರ್ಥಿ ಮೇಲ್ವಿಚಾರಕರನ್ನು ಹೊಂದಿರುವುದು. ಈ ಐದು ಅಂಶಗಳು ಒಟ್ಟು ಸೇರಿ ಒಂದು 'ವ್ಯವಸ್ಥೆ' ರೂಪುಗೊಳ್ಳುತ್ತದೆ. ಇಲ್ಲಿ ಪರಿಣತಿಯನ್ನು ಗುರಿಯನ್ನಾಗಿ ಹೊಂದಿರುವುದು– **ಲಕ್ಷಣ: 1**. ಇದರ ಲಕ್ಷಣಗಳು ನೇರವಾಗಿ ಅನುಸರಿಸುವ ಹಾಗಿರುತ್ತವೆ. ಕೋರ್ಸಿನ ಯಾವುದೇ ಭಾಗದಲ್ಲಿ ಪರಿಣತಿಯನ್ನು ಹೊಂದಬೇಕಾದರೆ, ಪ್ರತಿಯೊಬ್ಬ ವಿದ್ಯಾರ್ಥಿಗೆ ಅಗತ್ಯದ ಸಮಯವನ್ನು ನೀಡಬೇಕಾಗುತ್ತದೆ. ಪ್ರತಿಯೊಬ್ಬರ ಗತಿ– **ಲಕ್ಷಣ 2**. ಈ ರೀತಿ ಅಗತ್ಯದಾಗಿ ಕಂಡುಬರುತ್ತದೆ. ಅಗತ್ಯದ ಮಾಹಿತಿಯ ಕುರಿತು ವಿದ್ಯಾರ್ಥಿಗಳ ಗುಂಪುಗಳಿಗೆ ಉಪನ್ಯಾಸ ನೀಡುವುದು ವ್ಯಕ್ತಿಗತ ಗತಿಗೆ ಸಾಮರಸ್ಯವನ್ನು ಹೊಂದಿರುವುದಿಲ್ಲ. ಆದರೆ 'ಉತ್ತೇಜನ'ಕ್ಕಾಗಿ ನೀಡುವ ಐಚ್ಛಿಕ ಉಪನ್ಯಾಸಗಳು ಸಾಧ್ಯವಾಗುತ್ತವೆ– **ಲಕ್ಷಣ (3)**. ಅಗತ್ಯದ ಮಾಹಿತಿಯನ್ನು ಸಂಗ್ರಹಿಸಿಡಬೇಕಾಗುತ್ತದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳ ವೈಯಕ್ತಿಕ ಗತಿಯಲ್ಲಿ ಬರೆಹದ ರೂಪದಲ್ಲಿ– **ಲಕ್ಷಣ (4)**. ಕೊನೆಯದಾಗಿ, ಶಿಕ್ಷಕರ ಸಮಯಕ್ಕೆ ಮಿತಿ ಇರುವುದರಿಂದ ಪದವಿ ಹಂತದ ವಿದ್ಯಾರ್ಥಿ ಮೇಲ್ವಿಚಾರಕರ ಅಗತ್ಯವಿರುತ್ತದೆ. ಇವರು ಪ್ರಶ್ನಾವಳಿ ಪರೀಕ್ಷೆಯ ಮೌಲ್ಯಮಾಪನ ಮತ್ತು ಸಾಂದರ್ಭಿಕವಾಗಿ ಒಬ್ಬರಿಗೊಬ್ಬರು ಪಾಠ ಹೇಳಿಕೊಡುವುದಕ್ಕೆ ನೆರವಾಗುತ್ತಾರೆ–**ಲಕ್ಷಣ (5)**(ಕಲ್ಲಿಕ್, 1985).

ಈ ಎರಡೂ ಪರಿಣತಿ ಕಲಿಕೆಯ ವಿಧಾನಗಳಲ್ಲಿರುವ ಪ್ರಮುಖ ಸಾಮ್ಯವು ಶೈಕ್ಷಣಿಕ ವಾತಾವರಣವನ್ನು ಒದಗಿಸುವುದರಲ್ಲಿರುವ ಅವರ ಪ್ರಯತ್ನಗಳಲ್ಲಿ ಇದೆ. ಈ ರೀತಿಯ ವಾತಾವರಣಗಳನ್ನು ಯಾವ ರೀತಿಯಲ್ಲಿ ಅದು ಬೆಳೆಸಿಕೊಳ್ಳುವುದೆಂದರೆ ವಿಭಿನ್ನ ರೀತಿಯ ಪ್ರವೇಶ ಸಾಮರ್ಥಗಳು, ಕುಶಲತೆಗಳು, ತಿಳಿವಳಿಕೆ,

Digitised by Bharatavani, CIIL

ಧೋರಣೆಗಳು ಮತ್ತು ಮೌಲ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳು ಯಶಸ್ಸನ್ನು ಹೊಂದುವಂತೆ ಮಾಡುವ ಮೂಲಕ ವಿವಿಧ ರೀತಿಯ ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುತ್ತದೆ.

ಈ ಎರಡೂ ಪರಿಣತಿ ಕಲಿಕಾ ವಿಧಾನಗಳ ನಡುವಿನ ಪ್ರಮುಖ ವ್ಯತ್ಯಾಸಗಳು ವ್ಯಕ್ತಿಕೀಕರಣದ ವಿಧ ಮತ್ತು ಸಮಯ, ವ್ಯಕ್ತಿಕೀಕೃತ ಬೋಧನಾ ಕಾರ್ಯಕ್ರಮಗಳು, ವ್ಯಕ್ತಿಕೀಕೃತ ತಿದ್ದುಪಡಿ ಆದೇಶಗಳು ಮತ್ತು ಮಾದರಿ ತರಗತಿ ವಾತಾವರಣದಲ್ಲಿ ಪರಿಣತಿ ಕಲಿಕಾ ವಿಧಾನಗಳ ಬಳಕೆಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ಶಿಕ್ಷಕರು ನಿರ್ದಿಷ್ಟ ಕಾಲಾವಧಿಯಲ್ಲಿ ಮುಗಿಸಬೇಕಾಗಿರುವ ಪಠ್ಯಕ್ರಮವನ್ನು, ಬೋಧನಾ ಸಮಯದ ಸೀಮಿತ ಕಾಲಾವಧಿಯನ್ನು ಈಗಾಗಲೇ ಹೊಂದಿರುತ್ತಾರೆ. ಈ ಬೋಧನಾ ಕಾಲಾವಧಿಯನ್ನು ಪರೀಕ್ಷೆಗಾಗಿ ವಿನಿಯೋಗಿಸಿಕೊಳ್ಳುವ ಹಾಗಿಲ್ಲ. ನಿರ್ದಿಷ್ಟ ಅವಧಿಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಮೌಲ್ಯಮಾಪನವನ್ನು ನಡೆಸಿ ಗ್ರೇಡ್ ಅಥವಾ ಅಂಕಗಳನ್ನು ನೀಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಮೊದಲನೆಯದಾಗಿ ಪರಿಣತಿ ಕಲಿಕಾ ವಿಧಾನಗಳು ತಮ್ಮ ಯಶಸ್ಸಿಗೆ ಯಂತ್ರಗಳನ್ನು ಅಥವಾ ಇತರ ತಾಂತ್ರಿಕ ಉಪಕರಣಗಳಿಗಿಂತ ವ್ಯಕ್ತಿಗಳನ್ನು(ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು) ಅವಲಂಬಿಸಿರುತ್ತವೆ. ಆ ಸಮಯವನ್ನು ಉತ್ಪನ್ನಕಾರಿಯಾಗಿ ಉಪಯೋಗಿಸಿಕೊಳ್ಳುವಂತೆ ಮತ್ತು ಲಭ್ಯವಿರುವ ತಂತ್ರಜ್ಞಾನಗಳು ಮತ್ತು ವಸ್ತುಗಳನ್ನು ಅಗತ್ಯವಿರುವಾಗ ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳುವುದು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಜವಾಬ್ದಾರಿಯಾಗಿದೆ(ಆಂಡರ್‌ಸನ್ ಮತ್ತು ಬ್ಲಾಕ್, 1985).

ಮೇಲಿನ ಎರಡು ವಿಧಾನಗಳು ಭಾರತೀಯ ಶೈಕ್ಷಣಿಕ ವಾತಾವರಣದಲ್ಲಿ ಅತ್ಯಂತ ಅಧಿಕ ಪ್ರಾಮುಖ್ಯತೆಯನ್ನು ಹೊಂದಿವೆ. ಭಾರತೀಯ ಸಂದರ್ಭದಲ್ಲಿ ಪರಿಣತಿ ಕಲಿಕಾ ಕಾರ್ಯವಿಧಾನ ಮತ್ತು ಪಿಎಸ್‌ಐ ಕುರಿತಾಗಿ ಅನೇಕ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ಇವುಗಳಲ್ಲಿ ಕೆಲವನ್ನು ಈ ಕೆಳಗೆ ವರದಿ ಮಾಡಲಾಗಿದೆ:

ಕೌಲ್(1986) ಅವರು ಬ್ಲೂಮ್ ಅವರ 'ಮಾಸ್ಟರಿ ಲರ್ನಿಂಗ್ ಸ್ಟ್ರೆಟಜಿಸ್'(ಎಲ್‌ಎಫ್‌ಎಮ್) ಮತ್ತು ಕೆಲ್ಲರರ 'ಪರ್ಸನಲೈಜಡ್ ಸಿಸ್ಟಮ್ ಆಫ್ ಇನ್‌ಸ್ಟ್ರಕ್ಷನ್'(ಪಿಎಸ್‌ಐ)ನ ಮೇಲೆ ಕೆಲಸ ಮಾಡಿದ್ದಾರೆ. ಅವರ ಉದ್ದೇಶ ಸಾಮಾಜಿಕವಾಗಿ ಅವಕಾಶವಂಚಿತ ಗುಂಪುಗಳ ಸಾಧನಾ ಪ್ರಚೋದನೆ ಮತ್ತು ಪರೀಕ್ಷಾ ಆತಂಕದ ಮೇಲೆ ಅದರ ಪ್ರಭಾವವನ್ನು ಕಂಡುಕೊಳ್ಳುವುದು. ಅವರ ಅಧ್ಯಯನದ ಫಲಿತಾಂಶ ತೋರಿಸಿಕೊಟ್ಟದ್ದು ಹೀಗಿದೆ: 1. ಎಲ್‌ಎಫ್‌ಎಮ್ ಮೂಲಕ ಕಲಿಸಿದ ವಿಜ್ಞಾನ ಕಲಿಯುವ ವಿದ್ಯಾರ್ಥಿಗಳ ಸಾಧನೆಯ ಪ್ರಚೋದನೆಯು, ಸಾಂಪ್ರದಾಯಿಕ ಬೋಧನಾ ವಿಧಾನಗಳ ಮೂಲಕ ಕಲಿಸಿದ ಇತರ ಗುಂಪುಗಳಿಗಿಂತ ಗಮನಾರ್ಹವಾಗಿ ಹೆಚ್ಚು ಇದೆ. ಸಾಧನಾ ಪ್ರಚೋದನೆಯನ್ನು ಹೆಚ್ಚಿಸುವಲ್ಲಿ ಎಲ್‌ಎಫ್‌ಎಮ್ ಮತ್ತು ಪಿಎಸ್‌ಐ ಎರಡೂ ಸಮಾನ ರೀತಿಯಲ್ಲಿ ಪ್ರಭಾವಕಾರಿಯಾಗಿವೆ; 2. ಟಿಎಟಿ ಮೂಲಕ ಅಳೆಯಲಾದ ಮತ್ತು ಪಿಎಸ್‌ಐ ಮೂಲಕ ಕಲಿಸಲಾದ ವಿಜ್ಞಾನ ವಿದ್ಯಾರ್ಥಿಗಳ ಸಾಧನಾ ಪ್ರಚೋದನೆಯು, ಎಲ್‌ಎಫ್‌ಎಮ್ ಮತ್ತು ಸಾಂಪ್ರದಾಯಿಕ ವಿಧಾನಗಳ ಮೂಲಕ ಕಲಿಸಲಾದ ಗುಂಪುಗಳ ಸಾಧನಾ ಪ್ರಚೋದನೆಗಿಂತ ಗಮನಾರ್ಹವಾಗಿ ಹೆಚ್ಚು ಇದೆ. ಈ ಮೇಲಿನ ಎರಡು ವಿಧಾನಗಳು ಸಾಧನಾ ಪ್ರಚೋದನೆಯ ಮೇಲೆ ಸಮಾನ ಪ್ರಭಾವ ಹೊಂದಿರುವುದನ್ನು ಕಂಡುಕೊಳ್ಳಲಾಗಿದೆ; 3. ಎವಿಎಐ ಮೂಲಕ ಅಳೆಯಲಾದ ಮತ್ತು ಪಿಎಸ್‌ಐ ಮತ್ತು ಸಾಂಪ್ರದಾಯಿಕ ಬೋಧನಾ ವಿಧಾನಗಳ ಮೂಲಕ ಕಲಿಸಲಾದ ಸಮಾಜ ಅಧ್ಯಯನಗಳ ವಿದ್ಯಾರ್ಥಿಗಳ ಸಾಧನಾ ಪ್ರಚೋದನೆಯು ಎಲ್‌ಎಫ್‌ಎಮ್ ಗುಂಪಿಗಿಂತ ಗಮನಾರ್ಹ ರೀತಿಯಿಂದ ಹೆಚ್ಚು ಇದೆ; 4. ಟಿಎಟಿ ಮೂಲಕ ಅಳೆಯಲಾದ ಎಲ್‌ಎಫ್‌ಎಮ್ ಮೂಲಕ ಕಲಿಸಲಾದ ಗುಂಪಿನ ಸಾಧನಾ ಪ್ರಚೋದನೆಯು ಸಮಾಜ ಅಧ್ಯಯನಗಳಲ್ಲಿ ಸಾಂಪ್ರದಾಯಿಕ ವಿಧಾನಗಳ ಮೂಲಕ ಕಲಿಸಲಾದ ಗುಂಪುಗಳಿಗಿಂತ ಹೆಚ್ಚು ವ್ಯತ್ಯಾಸವನ್ನು ಹೊಂದಿಲ್ಲ; ಮತ್ತು 5. ಸಾಂಪ್ರದಾಯಿಕ ಬೋಧನಾ ವಿಧಾನಗಳ ಗುಂಪುಗಳಿಗೆ ಹೋಲಿಸಿದರೆ ಗುಂಪುಗಳ ಮೇಲೆ ಪರೀಕ್ಷಾ ಆತಂಕವನ್ನು ಉಂಟುಮಾಡುವಲ್ಲಿ ಎಲ್‌ಎಫ್‌ಎಮ್ ಹೆಚ್ಚು ಗಮನಾರ್ಹವಾಗಿ ಮತ್ತು ಸಮಾನ ರೀತಿಯಲ್ಲಿ ಪ್ರಭಾವ ಬೀರುವುದು ಕಂಡುಬರುತ್ತದೆ. ಎಲ್‌ಎಫ್‌ಎಮ್ ಮೂಲಕ ಕಲಿಸಿರುವ ವಿದ್ಯಾರ್ಥಿಗಳ ಪರೀಕ್ಷಾ ಆತಂಕದ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಎಲ್‌ಎಫ್‌ಎಂ ನ ಬಳಕೆಯು ಸಾಧನಾ ಪ್ರಚೋದನೆಯನ್ನು ಹೆಚ್ಚಿಸುವಲ್ಲಿಯೂ ಪರೀಕ್ಷಾ ಆತಂಕವನ್ನು ಕಡಿಮೆ ಮಾಡುವುದರಲ್ಲಿಯೂ ಮತ್ತು ಇದರ ಪರಿಣಾಮವಾಗಿ ವಿದ್ಯಾರ್ಥಿಗಳ ಅದರಲ್ಲೂ ವಿಶೇಷವಾಗಿ ಬುಡಕಟ್ಟು ಸಮುದಾಯಗಳ ಅವಕಾಶವಂಚಿತ ಗುಂಪಿಗೆ ಸೇರಿದವರು ಉತ್ತಮ ಶೈಕ್ಷಣಿಕ ಸಾಧನೆಯನ್ನು ಗಳಿಸಬಹುದು ಎಂಬುದಾಗಿ ಲೇಖಕರು ತೀರ್ಮಾನಿಸುತ್ತಾರೆ.

ಸಾಂಪ್ರದಾಯಿಕ ವಿಧಾನಕ್ಕೆ ಸಂಬಂಧಿಸಿದಂತೆ ಹಿಂದಿ ಕಲಿಯುವುದರಲ್ಲಿ ಎಲ್‌ಎಫ್‌ಎಮ್ ಮತ್ತು ಕಾನ್ಸೆಪ್ಟ್ ಎಟೇನಮೆಂಟ್ ಮಾದರಿಯ(ಸಿಎಎಮ್) ಪ್ರಭಾವವನ್ನು ವೈದ್ಯ(1990) ಅವರು ಅಧ್ಯಯನ ಮಾಡಿದ್ದಾರೆ. ಇಲ್ಲಿ ಬಳಸಲಾದ ಅಳತೆಯ ಸಾಧನಗಳೆಂದರೆ : ಕಾಟೆಲ್‌ರ 'ಕಲ್ಚರ್ ಫೇರ್ ಇಂಟೆಲಿಜೆನ್ಸ್ ಪರೀಕ್ಷೆ', ಕುಪ್ಪುಸ್ವಾಮಿಯವರ 'ಎಸ್‌ಇಎಸ್' ಅಳತೆ, ಶೆರ್ರಿ ಮತ್ತು ಇತರರ 'ಸೆಲ್ಫ್ ಕಾನ್ಸೆಪ್ಟ್ ಪರೀಕ್ಷೆ', ಒಂದು ಸಾಧನೆಯ ಪರೀಕ್ಷೆ ಮತ್ತು ಅವರೇ ಅಭಿವೃದ್ಧಿಪಡಿಸಿದ 'ಒನ್ ಎಟೇನ್‌ಮೆಂಟ್ ಸ್ಕೇಲ್'. ಅವರು ಕಂಡುಕೊಂಡದ್ದು ಹೀಗಿದೆ: 1. ಕಲಿಕೆಯನ್ನು ಸುಲಲಿತಗೊಳಿಸುವುದರಲ್ಲಿ ಮತ್ತು ಕಲಿಯುವವರ ಸಾಧನೆಯನ್ನು ಹೆಚ್ಚಿಸುವಲ್ಲಿ ಸಿಎಎಮ್ ಅಥವಾ ಸಾಂಪ್ರದಾಯಿಕ ವಿಧಾನಕ್ಕಿಂತ ಎಲ್‌ಎಫ್‌ಎಮ್ ಹೆಚ್ಚು ಪರಿಣಾಮಕಾರಿಯಾಗಿತ್ತು; 2. ಸಿಎಎಮ್ ಗುಂಪಿನ ಸಾಧನೆಯು ಸಾಂಪ್ರದಾಯಿಕ ವಿಧಾನದ ಗುಂಪಿನದ್ದಕ್ಕಿಂತ ಗಮನಾರ್ಹವಾಗಿ ಹೆಚ್ಚು ಇತ್ತು; 3. ವಿದ್ಯಾರ್ಥಿಗಳಲ್ಲಿ ಸ್ವ–ಪರಿಕಲ್ಪನೆಯ ಸುಧಾರಣೆಯನ್ನು ತರುವುದರಲ್ಲಿ ಸಿಎಎಮ್ ಅಥವಾ ಸಾಂಪ್ರದಾಯಿಕ ವಿಧಾನಗಳಿಗಿಂತ ಎಲ್‌ಎಫ್‌ಎಮ್ ಹೆಚ್ಚು ಶಕ್ತವಾಗಿತ್ತು; 4. ಸಿಎಎಮ್ ಮತ್ತು ಸಾಂಪ್ರದಾಯಿಕ

Digitised by Bharatavani, CIIL

ವಿಧಾನಗಳ ಮೂಲಕ ಕಲಿಸಿದ ವಿದ್ಯಾರ್ಥಿಗಳ ಸ್ವ-ಪರಿಕಲ್ಪನೆಯ ಗುಣಾಂಕಗಳಲ್ಲಿ ಗಮನಾರ್ಹ ವ್ಯತ್ಯಾಸ ಕಂಡುಬಂದಿಲ್ಲ. 5. ಹಿಂದಿ ವಿಷಯದ ಪರವಾಗಿ ವಿದ್ಯಾರ್ಥಿಗಳ ಧೋರಣೆ ಬದಲಾಯಿಸುವುದರಲ್ಲಿ ಸಿಎಎಮ್ ಮತ್ತು ಸಾಂಪ್ರದಾಯಿಕ ವಿಧಾನಗಳಿಗಿಂತ, ಎಲ್‌ಎಫ್‌ಎಮ್ ಹೆಚ್ಚು ಲಾಭದಾಯಕವಾಗಿದೆ. 6. ವಿದ್ಯಾರ್ಥಿಗಳಲ್ಲಿ ಹಿಂದಿ ವಿಷಯದಲ್ಲಿ ಧನಾತ್ಮಕ ಧೋರಣೆ ಬೆಳೆಯಲು ಸಾಂಪ್ರದಾಯಿಕ ವಿಧಾನಕ್ಕಿಂತ ಸಿಎಎಮ್ ಹೆಚ್ಚು ಪರಿಣಾಮಕಾರಿಯೆಂಬುದನ್ನು ಕಂಡುಕೊಳ್ಳಲಾಗಿದೆ.

ಸಿಂಗ್(1983) ಅವರು ಕಾರ್ಯಸೂಚಿತ ಬೋಧನೆ, ಬ್ಲೂಮ್‌ನ ಪರಿಣತಿ ಕಲಿಕಾ ಕಾರ್ಯವಿಧಾನ ಮತ್ತು ಸಾಂಪ್ರದಾಯಿಕ ಬೋಧನಾ ವಿಧಾನಗಳ ಪರಿಣಾಮಗಳನ್ನು ಸಮಾಜ ಅಧ್ಯಯನದ ಬೋಧನೆ ಮಾಡಿದ 9ನೇ ಗ್ರೇಡಿನ ವಿದ್ಯಾರ್ಥಿಗಳ ಸ್ವ-ಪರಿಕಲ್ಪನೆ, ಸಾಧನಾ ಪ್ರಚೋದನೆ ಮತ್ತು ಪರೀಕ್ಷಾ ಆತಂಕಗಳೊಂದಿಗೆ ಹೋಲಿಸಿದ್ದಾರೆ. ಈ ಅಧ್ಯಯನದ ಮುಖ್ಯ ಫಲಿತಾಂಶಗಳು ಹೀಗಿವೆ: 1. ಬೋಧನೆಯ ಈ ಮೂರು ವಿಧಾನಗಳು ವಿದ್ಯಾರ್ಥಿಗಳ ಸ್ವ-ಪರಿಕಲ್ಪನೆಯ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿಲ್ಲ; 2. ಕಾರ್ಯಸೂಚಿತ ಬೋಧನೆಯ ಮೂಲಕ ಬೋಧನೆಗಳನ್ನು ಪಡೆದ ವಿದ್ಯಾರ್ಥಿಗಳ ಗುಂಪಿಗೆ ಹೋಲಿಸಿದರೆ ಬ್ಲೂಮ್ ಅವರ ಪರಿಣತಿ ಕಲಿಕಾ ಕಾರ್ಯವಿಧಾನದ ಮೂಲಕ ಶಿಕ್ಷಣವನ್ನು ಪಡೆದ ವಿದ್ಯಾರ್ಥಿ ಗುಂಪಿನ ಸಾಧನಾ ಪ್ರಚೋದನೆಯಲ್ಲಿ ಗಮನಾರ್ಹ ಹೆಚ್ಚಳ ಕಂಡು ಬಂದಿದೆ. ಆದರೆ, ಬ್ಲೂಮ್ ಅವರ ಪರಿಣತಿ ಕಲಿಕಾ ಕಾರ್ಯವಿಧಾನದ ಮೂಲಕ ಮತ್ತು ಸಾಂಪ್ರದಾಯಿಕ ಬೋಧನಾ ವಿಧಾನದ ಮೂಲಕ ಶಿಕ್ಷಣವನ್ನು ಪಡೆದ ವಿದ್ಯಾರ್ಥಿ ಗುಂಪಿನ ಸಾಧನಾ ಪ್ರಚೋದನೆಯಲ್ಲಿ ಗಮನಾರ್ಹ ವ್ಯತ್ಯಾಸ ಕಂಡುಬಂದಿಲ್ಲ. ಹಾಗಿದ್ದರೂ, ಕಾರ್ಯಸೂಚಿತ ಬೋಧನೆಯ ಮೂಲಕ ಶಿಕ್ಷಣವನ್ನು ಪಡೆದ ಮತ್ತು ಸಾಂಪ್ರದಾಯಿಕ ಬೋಧನಾ ವಿಧಾನದ ಮೂಲಕ ಶಿಕ್ಷಣವನ್ನು ಪಡೆದ ವಿದ್ಯಾರ್ಥಿ ಗುಂಪಿನ ಸಾಧನಾ ಪ್ರಚೋದನೆಯಲ್ಲಿ ಗಮನಾರ್ಹ ವ್ಯತ್ಯಾಸ ಕಂಡುಬಂದಿದೆ; 3. ಈ ಎಲ್ಲಾ ಮೂರು ಬೋಧನಾ ವಿಧಾನಗಳು ಶಿಕ್ಷಣವನ್ನು ಪಡೆದ ನಂತರ ಪರೀಕ್ಷಾ ಆತಂಕದ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿಲ್ಲ.

ವಿದ್ಯಾರ್ಥಿಗಳ ಸಾಧನೆ, ಸ್ವ-ಪರಿಕಲ್ಪನೆ ಮತ್ತು ಸಂಖ್ಯಾಶಾಸ್ತ್ರದ ಬಗ್ಗೆ ವಿದ್ಯಾರ್ಥಿಗಳ ಧೋರಣೆಯ ಮೇಲಿನ ಪ್ರಭಾವವನ್ನು ಪರಿಶೋಧಿಸುವ ಸಲುವಾಗಿ ಎಲ್‌ಎಫ್‌ಎಮ್ ಮೇಲೆ ಇತರ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ(ಮಾಥುರ್, 1988). ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಾಧನೆ, ಸ್ವ-ಪರಿಕಲ್ಪನೆ ಮತ್ತು ಸಂಖ್ಯಾಶಾಸ್ತ್ರದ ಕುರಿತ ವಿದ್ಯಾರ್ಥಿಗಳ ಧೋರಣೆ ಕುರಿತಾಗಿ ಎಲ್‌ಎಫ್‌ಎಮ್ ಪರಿಣಾಮಕಾರಿ ಕಾರ್ಯವಿಧಾನವೆಂಬುದನ್ನು ಕಂಡುಕೊಳ್ಳಲಾಗಿದೆ. ಈ ಅಧ್ಯಯನವು ಪುನರಾವರ್ತಿಸುವವರು ಮತ್ತು ಪುನರಾವರ್ತಿಸದವರ ನಡುವಿನ ಅಂತರವನ್ನು ಕಡಿಮೆ ಮಾಡುವುದರಲ್ಲಿ ಎಲ್‌ಎಫ್‌ಎಮ್‌ನ ಪ್ರಭಾವವನ್ನು ಸ್ಥಿರಪಡಿಸಿದೆ.

ವರ್ಮಾ ಅವರು ಶಾಲಾ ಮಟ್ಟದಲ್ಲಿ ದಯಾದಾಕ್ಷಿಣ್ಯಗಳಿಂದ ಕೂಡಿದ ಮಾನದಂಡದ ಮೂಲಕ ಭಡ್ತಿ ಪಡೆದ ವಿದ್ಯಾರ್ಥಿಗಳ ಸಾಧನೆ ಮತ್ತು ಕೆಲವು ಗ್ರಹಿಕೇತರ ಚರಗಳ ಮೇಲೆ ಪಿಎಸ್‌ಐ ಮತ್ತು ಎಲ್‌ಎಫ್‌ಎಮ್‌ನ ಪ್ರಭಾವವನ್ನು ಅಧ್ಯಯನ ಮಾಡಿದ್ದಾರೆ. ಇಲ್ಲಿ ಸಾಂಪ್ರದಾಯಿಕ ವಿಧಾನಗಳ ಮೂಲಕ ಕಲಿಸಲಾದ ವಿದ್ಯಾರ್ಥಿಗಳ ಉತ್ತೀರ್ಣ ಗುಂಪಿಗಿಂತ ಪಿಎಸ್‌ಐ ಮತ್ತು ಎಲ್‌ಎಫ್‌ಎಮ್ ಮೂಲಕ ಕಲಿಸಲಾದ ಎಸ್‌ಸಿಟಿ(ಸಮ್ಮೇಟಿವ್ ಕ್ರೈಟೇರಿಯಾ ಟೆಸ್ಟ್) ಯಲ್ಲಿ ಅದರಲ್ಲೂ ಭೂಗೋಳಶಾಸ್ತ್ರದಲ್ಲಿ ವಿದ್ಯಾರ್ಥಿಗಳ ತೇರ್ಗಡೆ ಗುಂಪು ಹೆಚ್ಚಿನ ಮಟ್ಟದ ಗಮನಾರ್ಹ ಸಾಧನೆಯನ್ನು ದಾಖಲಿಸಿರುವುದು ಕಂಡುಬಂದಿದೆ. ಇನ್ನೂ ಮುಂದುವರಿದು, ಸಾಂಪ್ರದಾಯಿಕ ವಿಧಾನಗಳ ಮೂಲಕ ಕಲಿಸಲಾದ ವಿದ್ಯಾರ್ಥಿಗಳಿಗಿಂತ ಪಿಎಸ್‌ಐ ಮೂಲಕ ಕಲಿಸಲ್ಪಟ್ಟವರು ಎಸ್‌ಸಿಟಿ (ಪರೀಕ್ಷೆ)ಯಲ್ಲಿ ಗಮನಾರ್ಹ ಉನ್ನತ ಮಟ್ಟವನ್ನು ಸಾಧಿಸಿದ್ದಾರೆ. ಆದರೆ ಎಲ್‌ಎಫ್‌ಎಮ್ ಮೂಲಕ ಕಲಿಸಲಾದವರು ಸಾಂಪ್ರದಾಯಿಕ ವಿಧಾನದಲ್ಲಿ ಕಲಿತು ಉತ್ತೀರ್ಣರಾದ ಗುಂಪಿಗಿಂತ ಹೆಚ್ಚಿನ ವ್ಯತ್ಯಾಸಗಳನ್ನು ಹೊಂದಿಲ್ಲ. ಆದರೆ ಎಸ್‌ಸಿಟಿಯಲ್ಲಿ ಸಾಂಪ್ರದಾಯಿಕ ವಿಧಾನದಲ್ಲಿ ಕಲಿತವರಿಗಿಂತ ಇನ್ನೊಂದು ಗುಂಪಿನವರು ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಸಾಂಪ್ರದಾಯಿಕ ವಿಧಾನಗಳ ಮೂಲಕ ಕಲಿತ ಉತ್ತೀರ್ಣ ಗುಂಪಿನ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಪಿಎಸ್‌ಐ ಮತ್ತು ಎಲ್‌ಎಫ್‌ಎಮ್ ಮೂಲಕ ಕಲಿತ ಉತ್ತೀರ್ಣ ಗುಂಪಿನ ವಿದ್ಯಾರ್ಥಿಗಳು ಎಸ್‌ಸಿಟಿಯ ಕಾರ್ಯವನ್ನು ನಡೆಸಲು ಹೆಚ್ಚಿನ ಕಾಲಾವಧಿಯನ್ನು ತೆಗೆದುಕೊಂಡಿದ್ದಾರೆ. ಆದರೆ ಪಿಎಸ್‌ಐ ಮೂಲಕ ಕಲಿಸಿ ಉತ್ತೀರ್ಣರಾದ ಗುಂಪಿನ ವಿದ್ಯಾರ್ಥಿಗಳು ಮತ್ತು ಎಲ್‌ಎಫ್‌ಎಮ್ ಮೂಲಕ ಕಲಿಸಿ ಉತ್ತೀರ್ಣರಾದ ಗುಂಪಿನ ವಿದ್ಯಾರ್ಥಿಗಳು ಎಸ್‌ಸಿಟಿ ಪರೀಕ್ಷಾ ಕಾರ್ಯವನ್ನು ಪೂರ್ಣಗೊಳಿಸುವಲ್ಲಿ ಬಹುತೇಕ ಒಂದೇ ಸಮಯವನ್ನು ತೆಗೆದುಕೊಂಡಿದ್ದಾರೆ.

ವಿಭಿನ್ನ ವಾತಾವರಣದಲ್ಲಿ ಅಂಗವಿಕಲರು ಮತ್ತು ಅಂಗವಿಕಲರಲ್ಲದ ಮಕ್ಕಳಿಗಾಗಿ ಸಹಕಾರಿ ಆಧಾರಿತ ಕಲಿಕಾ ಕಾರ್ಯವಿಧಾನಗಳ ಕುರಿತಾಗಿ ರೈ(1991) ಅವರು ನಡೆಸಿದ ಅಧ್ಯಯನದಲ್ಲಿ ಸಹಕಾರಿ ಕಲಿಕಾ ಅನುಭವಗಳು ಅಂಗವಿಕಲರು ಮತ್ತು ಅಂಗವಿಕಲರಲ್ಲದ ಮಕ್ಕಳ ನಡುವೆ ಹತ್ತಿರದ ಸಂಬಂಧವನ್ನು ಬೆಳೆಸುತ್ತದೆ ಎಂಬುದನ್ನು ಕಂಡುಕೊಂಡಿದ್ದಾರೆ. ಕಲಿಕಾ ವಾತಾವರಣವನ್ನು ಸಹಕಾರಿ ರೂಪದಿಂದ ರಚಿಸಿದಾಗ ಎರಡೂ ವಿಭಾಗಗಳ ವಿದ್ಯಾರ್ಥಿಗಳು ಒಟ್ಟಿಗೆ ಕೆಲಸವನ್ನು ಮಾಡುತ್ತಾರೆ, ಅವರು ಪರಸ್ಪರ ಧನಾತ್ಮಕ ರೀತಿಯಿಂದ ಪ್ರತಿಕ್ರಿಯಿಸುತ್ತಾರೆ ಮತ್ತು ಸಾಧನೆ ನಡೆಸಲು ಬೆಂಬಲ ಮತ್ತು ಪ್ರೋತ್ಸಾಹವನ್ನು ಪಡೆದ ಭಾವನೆಯಲ್ಲಿರುತ್ತಾರೆ. ಸಹಕಾರಿ ಕಲಿಕಾ ರಚನೆಗೆ ಇರುವಂತಹ ಪ್ರಮುಖ ಐದು ಕಾರ್ಯವಿಧಾನಗಳ ಗುಂಪುಗಳೆಂದರೆ: 1. ಪಾಠಗಳ ಉದ್ದೇಶಗಳನ್ನು ಸ್ಪಷ್ಟವಾಗಿ ಸೂಚಿಸುವುದು; 2. ವಿದ್ಯಾರ್ಥಿಗಳ ನಿಯೋಜನೆ ಮತ್ತು ಗುಂಪಿನ ಗಾತ್ರ ನಿರ್ಧಾರ; 3. ವಿದ್ಯಾರ್ಥಿಗಳಲ್ಲಿ ಕಾರ್ಯ, ಪರಸ್ಪರ ಧನಾತ್ಮಕ ಅವಲಂಬನ, ಮತ್ತು ಕಲಿಕಾ ಚಟುವಟಿಕೆಗಳನ್ನು ವಿವರಿಸುವುದು; 4. ಕಲಿಕಾ ಗುಂಪುಗಳ ಮೇಲ್ವಿಚಾರಣೆ ನಡೆಸುವುದು ಮತ್ತು ಕೆಲಸದಲ್ಲಿ ನೆರವನ್ನು ಒದಗಿಸಲು ಮಧ್ಯಪ್ರವೇಶಿಸುವುದು; 5. ವಿದ್ಯಾರ್ಥಿಗಳ

Digitised by Bharatavani, CIIL

ಸಾಧನೆಯಲ್ಲಿ ಅವರ ಮೌಲ್ಯಮಾಪನ ನಡೆಸುವುದು.

ಐದನೇ ಗ್ರೇಡಿನ ರೇಖಾಗಣಿತ ವಿದ್ಯಾರ್ಥಿಗಳ ಮೇಲೆ 'ಪರಿಣತಿ ಕಲಿಕಾ ಕಾರ್ಯವಿಧಾನ'ದ ಕುರಿತು ಮತ್ತು ಸಾಂಪ್ರದಾಯಿಕ ವಿಧಾನದ ಮೂಲಕ ಬೊಧಿಸುವ ವಿಧಾನಕ್ಕೆ ಹೋಲಿಸಿ ವಿದ್ಯಾರ್ಥಿಗಳ ಸಾಧನೆಯಲ್ಲಿ ಇದರ ಪ್ರಭಾವದ ಕುರಿತು ಪಟಾಡಿಯಾ(1991) ಅವರು ಅಧ್ಯಯನವನ್ನು ಕೈಗೊಂಡಿದ್ದಾರೆ. ಸಾಂಪ್ರದಾಯಿಕ ವಿಧಾನಗಳ ಮೂಲಕ ಕಲಿಸಲಾದ ನಿಯಂತ್ರಿತ ಗುಂಪಿಗೆ ಹೋಲಿಸಿದರೆ, 'ಪರಿಣತಿ ಕಲಿಕಾ' ಕಾರ್ಯವಿಧಾನಗಳ ಮೂಲಕ ಕಲಿಸಲಾದ ಪ್ರಾಯೋಗಿಕ ಗುಂಪಿನ ಕಾರ್ಯಸಾಧನೆಯು ಉತ್ತಮವಾಗಿರುವುದನ್ನು ಪಟಾಡಿಯಾ ಕಂಡುಕೊಂಡಿದ್ದಾರೆ. ಪರಿಣತಿ ಕಲಿಕಾ ಕಾರ್ಯವಿಧಾನದಲ್ಲಿ ಶಿಕ್ಷಕರು ಹೆಚ್ಚು ಪರಿಶ್ರಮ ಪಡಬೇಕು, ತಮ್ಮ ಬೋಧನಾ ಗುಣಮಟ್ಟವನ್ನು ಹೆಚ್ಚಿಸಬೇಕು ಮತ್ತು ವಿದ್ಯಾರ್ಥಿಗಳ ವತಿಯಿಂದ ಕಲಿಕೆಯ ಸಾಮರ್ಥ್ಯ ಹೆಚ್ಚಿಸಬೇಕು ಎನ್ನುವ ನಿರೀಕ್ಷೆ ಇರುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆತ್ಮವಿಶ್ವಾಸ ಬೆಳೆದು, ಅವರಿಗೆ ತಮ್ಮ ಸಾಮರ್ಥ್ಯದ ಅರಿವು ಮೂಡಿ ಅನಿರೀಕ್ಷಿತವಾದ ಮತ್ತು ಉತ್ತೇಜನಕಾರಿ ಫಲಿತಾಂಶಗಳಿಗೆ ಅವಕಾಶ ದೊರೆತು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮನೆ ಮಾಡಿದ್ದ ಅಸ್ವಸ್ಥ ಭಾವನೆಗಳನ್ನು ಹೋಗಲಾಡಿಸಲು ನೆರವಾಗುತ್ತವೆ. ಹೀಗೆ ನಿರಂತರವಾಗಿ ಕೆಲಸ ಮಾಡುವ ಅವರ ಬಯಕೆ ಮತ್ತು ಸಾಮರ್ಥ್ಯವನ್ನು ಅದು ಹೆಚ್ಚಿಸುತ್ತದೆ.

ಎರಡು ಶಾಲೆಗಳಿಗೆ ಸಂಬಂಧಿಸಿದ ಚರಗಳ ಸಂಬಂಧವನ್ನು ಕಂಡು ಹಿಡಿಯುವ ಉದ್ದೇಶದಿಂದ ನಾಗರಾಜು(1995) ಅವರು ಕಾರೋಲ್ ಮಾದರಿಯನ್ನು ಕರ್ನಾಟಕದ ಗ್ರಾಮೀಣ ಪ್ರಾಥಮಿಕ ಶಿಕ್ಷಣ ಸಂದರ್ಭದಲ್ಲಿ ಅಧ್ಯಯನ ಮಾಡಿದ್ದಾರೆ. ಈ ಚರಗಳು ಹೀಗಿವೆ: ಪ್ರಾಥಮಿಕ ತರಗತಿಗಳ ಅಂಕಗಣಿತ, ಪರಿಸರ ಅಧ್ಯಯನ ಮತ್ತು ಭಾಷೆ(ಕನ್ನಡ)ಯಲ್ಲಿ ಸಾಧನೆ ಮತ್ತು ಗ್ರಾಮೀಣ ಶಾಲೆಗಳ ಕೆಳ ಪ್ರಾಥಮಿಕ ತರಗತಿಗಳಲ್ಲಿನ ಎಲ್ಲಾ ವಿಷಯಗಳಲ್ಲಿ ಒಟ್ಟು ಸಾಧನೆ. ತರಗತಿ–ಶಿಕ್ಷಕ ಅನುಪಾತದ ನಡುವಿನ ಗಮನಾರ್ಹ ಋಣಾತ್ಮಕ ಸಹ–ಸಂಬಂಧವನ್ನು ವಿವರಿಸುವ ಸಲುವಾಗಿ ಕಾರಲ್ ಬೋಧನಾ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ. ಪ್ರತಿಯೊಂದು ಸಾಧನಾ ಚರಗಳು ಅಂಕಗಣಿತ, ಪರಿಸರ, ಭಾಷೆ ಮತ್ತು ಒಟ್ಟು ಸಾಧನೆಯನ್ನು ಪ್ರತಿನಿಧಿಸುತ್ತವೆ. ವಿದ್ಯಾರ್ಥಿ–ಶಿಕ್ಷಕ ಅನುಪಾತವು ಯಾವುದೇ ಸಾಧನಾ ಗುಣಾಂಕಗಳಿಗೆ ಸಂಬಂಧಿಸಿ ಇರುವುದಿಲ್ಲ. ಆದರೆ ಅದು ತರಗತಿ–ಶಿಕ್ಷಕ ಅನುಪಾತಕ್ಕೆ(ತರಗತಿಯಲ್ಲಿ ಒಂದು ಮಟ್ಟದಲ್ಲಿ ವಿದ್ಯಾರ್ಥಿಯು ಕೆಲಸದ ಸಮಯದಲ್ಲಿ ಶಿಕ್ಷಕರ ಬೋಧನೆಯ ಕೆಳಗೆ ಎಷ್ಟು ಸಮಯವನ್ನು ಕಳೆಯುತ್ತಾನೆ ಎನ್ನುವುದಕ್ಕೆ ಇದು ಸೂಚಕ) ಸಂಬಂಧಿಸಿದಂತೆ ಇರುತ್ತದೆ. ಅಂದರೆ, ಪ್ರಾಥಮಿಕ ಶಾಲೆಯೊಂದರಲ್ಲಿ ಏಕಮಾತ್ರ ಶಿಕ್ಷಕ ಕಲಿಸುವಾಗ, ಶಿಕ್ಷಕನ ರಚನೆ ಮತ್ತು ತರಬೇತಿಯು ಒಂದು ಸಮಯಕ್ಕೆ ಒಂದು ತರಗತಿಯ ಬೋಧನೆಗೆ ಅವಕಾಶವನ್ನು ಒದಗಿಸುತ್ತದೆ ಮತ್ತು ಉಳಿದ ತರಗತಿಗಳನ್ನು ಅವರ ಪಾಡಿಗೆ ಬಿಟ್ಟುಬಿಡಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಬೋಧನೆಯಲ್ಲಿ ಕಳೆಯುವ ಸಮಯ ಕಡಿಮೆಯಾಗುತ್ತದೆ ಮತ್ತು ಸಾಧನೆಯಲ್ಲಿ ತರಗತಿ–ಶಿಕ್ಷಕ ಅನುಪಾತದ ಸಹ–ಸಂಬಂಧವು ಋಣಾತ್ಮಕ ರೂಪದಲ್ಲಿ ವ್ಯಕ್ತಗೊಳ್ಳುತ್ತದೆ. ಐದನೆಯ ತರಗತಿಯ ವಿದ್ಯಾರ್ಥಿಗಳಲ್ಲಿ ನಿಯಂತ್ರಣ ಮತ್ತು ಪ್ರಾಯೋಗಿಕ ಗುಂಪುಗಳಲ್ಲಿ ಸಹಕಾರಿ ಬೋಧನೆಯ ಮೂಲಕ ಗ್ರಹಿಕೆ ಮತ್ತು ಸಾಧನೆಯನ್ನು ಕಂಡುಹಿಡಿಯೋಣ. ಇದರಲ್ಲಿ ಪ್ರಮುಖವಾಗಿರುವ ಫಲಿತಾಂಶಗಳೆಂದರೆ: 1. ಎರಡೂ ಗುಂಪುಗಳ ಪರೀಕ್ಷಾ–ಪೂರ್ವ ಮತ್ತು ಪರೀಕ್ಷೋತ್ತರ ಹಂತಗಳ ಗುಣಾಂಕಗಳ ನಡುವೆ ಗಮನಾರ್ಹ ವ್ಯತ್ಯಾಸವಿತ್ತು; 2, ವಿದ್ಯಾರ್ಥಿಗಳ ಕಾರ್ಯಸಾಧನೆಗೆ(ಸಾಧನೆ) ಗುಂಪುಗಳ ನಡುವೆ ಪರಸ್ಪರ ಧನಾತ್ಮಕ ಪ್ರತಿಕ್ರಿಯೆ ಇತ್ತು. ಎರಡು ಗುಂಪುಗಳ ಪರೀಕ್ಷಾ–ಪೂರ್ವ ಸಾಧನೆಯ ಮಧ್ಯಕಗಳಲ್ಲಿ ಗಮನಾರ್ಹ ವ್ಯತ್ಯಾಸ ಇಲ್ಲ; 3. ಎರಡು ಗುಂಪುಗಳ ವಿದ್ಯಾರ್ಥಿಗಳ ಕಲಿಕೆಯ ಅರಿವಿನ ಗುಣಾಂಕಗಳ ಮಧ್ಯಕಗಳ ನಡುವೆ ಗಮನಾರ್ಹ ವ್ಯತ್ಯಾಸ ಇದೆ.

ಗಣಕ ಸಹಾಯಕ ಕಲಿಕೆಯ(ಸಿಎಎಲ್) ಪ್ಯಾಕೇಜ್ ಮತ್ತು ಮುದ್ರಣ ಸಾಮಗ್ರಿಗಳ ಬಳಕೆಯಿಂದ ವ್ಯಕ್ತಿಯ ಮತ್ತು ಗುಂಪಿನ ಕಲಿಕೆಯ ಪ್ರಭಾವವನ್ನು ಕಪೂರ್(1997) ಪರಿಶೀಲಿಸಿದ್ದಾರೆ. ಸಮರೂಪದ ಗುಂಪುಗಳಿಗೆ ಕಲಿವವರ ಗುಂಪಿನ ಗಾತ್ರದ ಪ್ರಭಾವವು, ಗುಂಪುಗಳಲ್ಲಿ ಕಲಿವವರ ಧೋರಣೆ ಮತ್ತು ಸಿಎಎಲ್ ಪ್ಯಾಕೇಜ್‌ಗಳಿಂದ ಕಲಿಯುವ ಅವರ ಆಸಕ್ತಿಯೊಂದಿಗೆ ನಿರ್ಧಾರಿತವಾಗುತ್ತದೆ. ವ್ಯಕ್ತಿಗತ ಪ್ರಕಾರದಲ್ಲಿ ಅದರಲ್ಲಿಯೂ ವಿಶೇಷವಾಗಿ ಸಹಭಾಗಿತ್ವದ ಗುಂಪು ಕಲಿಕೆ ಪ್ರಕಾರದಲ್ಲಿ ಪ್ರಕಟಣೆಯ ಸಾಮಗ್ರಿಗೆ ಹೋಲಿಸಿದರೆ ಸಿಎಎಲ್ ವಾತಾವರಣವು ಇನ್ನೂ ಹೆಚ್ಚು ಪ್ರಭಾವಶಾಲಿ ಎಂಬುದನ್ನು ಫಲಿತಾಂಶ ತೋರಿಸಿಕೊಟ್ಟಿದೆ. ಸಿಎಎಲ್ ವಾತಾವರಣದಲ್ಲಿ ಸಮಾನ ಬೌದ್ಧಿಕ ಸಾಮರ್ಥ್ಯವಿರುವ ಎರಡರ ಅಥವಾ ಮೂರರ ಗುಂಪುಗಳಲ್ಲಿ ಕಲಿಕಾ ಫಲಗಳಲ್ಲಿ ಹೆಚ್ಚಿನ ವ್ಯತ್ಯಾಸ ಗೋಚರಿಸಿಲ್ಲ. ಗುಂಪುಗಳಲ್ಲಿ ಕಲಿಯುವುದು ಮತ್ತು ಸಿಎಎಲ್ ಪ್ಯಾಕೇಜ್‌ಗಳಿಂದ ಕಲಿಯುವುದರ ಕುರಿತು ಕಲಿಯುವವರ ಅಭಿಪ್ರಾಯ ಧನಾತ್ಮಕವಾಗಿದೆ.

ದೂರಶಿಕ್ಷಣ ಸಂಸ್ಥೆಯೊಂದರಲ್ಲಿ ಇಂಗ್ಲಿಷ್ ವಿದ್ಯಾರ್ಥಿಗಳ ಮೇಲೆ ಗಣಕ ಮಾಧ್ಯಮದ ಬೋಧನಾ ಬೆಂಬಲದ ಪ್ರಭಾವವನ್ನು, ನಿಯಂತ್ರಿತ ಗುಂಪೊಂದಕ್ಕೆ ಸಾಂಪ್ರದಾಯಿಕವಾಗಿ ಮುಖತಃ ನೀಡುವ ಬೋಧನೆಯ ಪ್ರಾಯೋಗಿಕ ಅಧ್ಯಯನದ ಬೋಧನಾ ಕ್ರಮವನ್ನು ಹೋಲಿಸಿ ಸುರಿ(2000) ಅವರು ಅಧ್ಯಯನ ನಡೆಸಿದ್ದಾರೆ. ಇದರ ಫಲಿತಾಂಶ ತೋರಿಸಿದ್ದೇನೆಂದರೆ ಗಣಕದ ಮೂಲಕ ಬೋಧನಾ ಬೆಂಬಲವನ್ನು ಒದಗಿಸಿದಂತಹ ಪ್ರಾಯೋಗಿಕ ಗುಂಪಿನ ಕಾರ್ಯಸಾಧನೆಯು ಗಮನಾರ್ಹ ರೀತಿಯಲ್ಲಿ ಉತ್ತಮವಾಗಿದೆ. ವಿದ್ಯಾರ್ಥಿಗಳ ಲಿಂಗ ಮತ್ತು ಸಮಾಜೋ–ಆರ್ಥಿಕ ವರ್ಗವನ್ನು ಆಧರಿಸಿದ ಯಾವುದೇ ಗುಣಾಂಕಗಳಲ್ಲಿ ವ್ಯತ್ಯಾಸ ಕಂಡುಬಂದಿಲ್ಲ. ಆದರೆ ಗಣಕ ಕಲಿಕೆ ಮತ್ತು ಮೊದಲ ಗಣಕವನ್ನು ಉಪಯೋಗಿಸಿದ ಮನೋಭಾವನೆಯ ಅನುಭವಕ್ಕೆ ಸಂಬಂಧಿಸಿದ ಗುಣಾಂಕಗಳ ನಡುವೆ ಗಮನಾರ್ಹ ಸಂಬಂಧವಿದೆ.

Digitised by Bharatavani, CIIL

ಕಲಿಕಾ ಕಾರ್ಯವಿಧಾನಗಳ ವಿಷಯಾಂಶದಲ್ಲಿ, ಅಭ್ಯಾಸದ ಕನಿಷ್ಠ ಹಂತದ ಪರಿಕಲ್ಪನೆಗೆ(ಎಮ್‌ಎಲ್‌ಎಲ್–ಮಿನಿಮಮ್ ಲೆವೆಲ್ ಆಫ್ ಲರ್ನಿಂಗ್) ಇರುವ ಪ್ರಾಮುಖ್ಯತೆ ವಿಶೇಷ ಉಲ್ಲೇಖವನ್ನು ಬಯಸುತ್ತದೆ. ಯಾರಾದರೂ ಪ್ರಾಥಮಿಕ ಶಿಕ್ಷಣ ಹಂತದಿಂದಲೇ ಎಮ್‌ಎಲ್‌ಎಲ್‌ನ್ನು ಅನುಷ್ಠಾನಕ್ಕೆ ತರಲು ಯೋಜಿಸುವುದಾದರೆ, ಕಲಿಕಾ ಕಾರ್ಯವಿಧಾನಗಳಿಗೆ ಹೆಚ್ಚಿನ ಪ್ರಸ್ತುತತೆ ಇರುತ್ತದೆ. ಭಾರತದಲ್ಲಿ ಎಮ್‌ಎಲ್‌ಎಲ್‌ಗೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ಏಕೆಂದರೆ ಜಾತಿ, ಮತ, ಲಿಂಗ ಮತ್ತು ಪ್ರದೇಶವನ್ನು ಗಣನೆಗೆ ತಂದುಕೊಳ್ಳದೆ, ಎಲ್ಲಾ ಮಕ್ಕಳಿಗೆ ತುಲನಾತ್ಮಕ ಮಟ್ಟದ ಶಿಕ್ಷಣಾವಕಾಶವನ್ನು ನೀಡಬೇಕೆನ್ನುವ ಮೂಲ ಕಾಳಜಿಯ ಕಾರಣವಾಗಿ ಎಮ್‌ಎಲ್‌ಎಲ್ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಭಾರತದಲ್ಲಿ ಪ್ರಾಥಮಿಕ ಶಾಲಾ ಜನಸಮುದಾಯದಲ್ಲಿ ಬಹು ಸಂಖ್ಯೆಯಲ್ಲಿರುವಂತಹ ವಿಭಿನ್ನ ಹಿನ್ನೆಲೆಯುಳ್ಳವರು ಅಂದರೆ, ಸಾಮಾನ್ಯವಾಗಿ ಹೆಣ್ಣುಮಕ್ಕಳ, ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದವರ, ಮತ್ತು ಕೆಲಸ ಮಾಡುವ ಮಕ್ಕಳ ಅಭಿವೃದ್ಧಿಯ ಅಗತ್ಯವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಗುಣಮಟ್ಟದ ಕಾಳಜಿಗಳನ್ನು ಸಮಾನತೆಯ ಕಾಳಜಿಯೊಂದಿಗೆ ಸಂಯೋಜಿಸುವ ಪ್ರಯತ್ನವು ನಡೆಯಬೇಕಾಗಿದೆ. ಪ್ರಾಥಮಿಕ ಶಿಕ್ಷಣವು ವ್ಯವಸ್ಥಾಬದ್ಧ ಕಲಿಕೆಗಾಗಿ ಇರುವ ಅವಕಾಶವಾಗಿದೆ. ಆದುದರಿಂದ, ಎಮ್‌ಎಲ್‌ಎಲ್‌ನ ಮೂಲ ಪರಿಕಲ್ಪನೆಗಳ ವ್ಯಾಖ್ಯಾನಕ್ಕೆ ಪ್ರಾಮುಖ್ಯತೆ ಇದೆ. ಎರಡನೆಯದಾಗಿ, ಎಮ್‌ಎಲ್‌ಎಲ್‌ನ್ನು ನಿರೀಕ್ಷಿತ ಕಲಿಕೆಯ ಫಲಗಳೆಂದು ಹೇಳಬಹುದು. ಇದನ್ನು ನಿರೀಕ್ಷಿತ ಅಂತಿಮ ಸಾಮರ್ಥ್ಯಗಳು ಮತ್ತು ವರ್ತನೆ ಎಂದು ವ್ಯಾಖ್ಯಾನಿಸಬಹುದು. ಇದರಲ್ಲಿ ಪ್ರತಿಯೊಂದು ಮಗುವು ನಿರ್ದಿಷ್ಟ ತರಗತಿಯ ಅಂತ್ಯದಲ್ಲಿ ಅಥವಾ ಶಿಕ್ಷಣದ ಹಂತದಲ್ಲಿ ಪರಿಣತಿಯನ್ನು ಪಡೆಯಬೇಕು. ಮೂರನೆಯದಾಗಿ, ಎಮ್‌ಎಲ್‌ಎಲ್‌ಗಳನ್ನು ರೂಪಿಸಲು ವಿವೇಚನೆಯಿಂದ ಕೂಡಿದ ನಿರ್ಣಾಯಕ ಅಂಶವನ್ನು ಬೆಳೆಸಿಕೊಳ್ಳುವಾಗ ಎರಡು ಮೂಲ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಅವುಗಳೆಂದರೆ, 1. ಬೆಳವಣಿಗೆಯ ವಿಭಿನ್ನ ಹಂತಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ತರಗತಿಗಳ ಅಥವಾ ಗ್ರೇಡ್‌ಗಳ ಮಕ್ಕಳ ಗ್ರಹಿಕಾ ಸಾಮರ್ಥ್ಯಗಳು; ಮತ್ತು 2. ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳ ಗುಣಲಕ್ಷಣವನ್ನು ಅಭಿವ್ಯಕ್ತಿಸುವ ವಾತಾವರಣದ ಸ್ಥಿತಿಗತಿಗಳಿಗೆ ಸಂಬಂಧಿಸಿದ ಅನುಭವಾತ್ಮಕವಾದ ವಾಸ್ತವತೆ.

ನಾಗರಾಜು(1998) ಅವರು ಬಹುಶ್ರೇಣಿ ಶಾಲೆಗಳ ಬಗ್ಗೆ ಮಾಡಿರುವ ಅವಲೋಕನೆಗಳಲ್ಲಿ ಅತಿ ಪ್ರಮುಖವಾದವುಗಳಲ್ಲಿ MLLಗಳಲ್ಲಿ ಸಮರ್ಥಿಸಲ್ಪಟ್ಟ ಸಾಮರ್ಥ್ಯ ಆಧಾರಿತ ಶಾಲಾ ಕಾರ್ಯನೀತಿಯು ಒಂದು. ಅವರು ಗ್ರಾಮೀಣ ಶಾಲೆಗಳ ಕುರಿತಾಗಿ ನಡೆಸಿದ ಕಾರ್ಯದಲ್ಲಿ ಗ್ರಾಮೀಣ ಶಾಲೆಗಳು ಸಂಪನ್ಮೂಲಗಳ(ಉದಾ: ಏಕೋಪಾಧ್ಯಾಯ ಶಾಲೆಯ ಸಮಸ್ಯೆ, ಮೊದಲ ಪೀಳಿಗೆಯ ಕಲಿಕಾರ್ಥಿಗಳ ಸಮಸ್ಯೆ ಇತ್ಯಾದಿ) ಸಮಸ್ಯೆಯನ್ನು ಎದುರಿಸುತ್ತವೆ ಎಂದು ಪರಿಗಣಿಸಲಾಗಿದೆ. ಆದ್ದರಿಂದ ಗ್ರಾಮೀಣ ಸಣ್ಣ ಶಾಲೆಗಳ ಬೋಧನೆ–ಕಲಿಕೆಯೊಂದಿಗೆ ಋಣಾತ್ಮಕ ಧೋರಣೆ ಸೇರಿದೆ. ಈ ಗ್ರಹಿಕೆಯು ಶೈಕ್ಷಣಿಕ ಆಡಳಿತಗಾರರು ಮತ್ತು ಶಿಕ್ಷಣತಜ್ಞರಲ್ಲಿ ಮನೆಮಾಡಿದೆ ಮತ್ತು ಇದು ಶಾಲಾ ಪೂರ್ವ ಶಿಕ್ಷಕ ಶಿಕ್ಷಣದಲ್ಲಿ ಅಭಿವ್ಯಕ್ತಗೊಂಡಿದೆ. ಅಧಿಕೃತ ಪ್ರಾಥಮಿಕ ಶಿಕ್ಷಣ ರಚನೆಯನ್ನು ವಿಶ್ಲೇಷಣೆಗೆ ಒಳಪಡಿಸಿದ ನಂತರ ಅವರು ಸೂಚಿಸಿದ್ದೇನೆಂದರೆ, ಪರಿಣಾಮಕಾರಿ ವಿದ್ಯಾಭ್ಯಾಸವು ಪ್ರತ್ಯೇಕ ತರಗತಿಗಳನ್ನು ಮತ್ತು ಪ್ರತಿಯೊಂದು ತರಗತಿ/ಗ್ರೇಡ್/ಸ್ಟಾಂಡರ್ಡ್‌ಗಳಲ್ಲಿ ಪ್ರತ್ಯೇಕ ಶಿಕ್ಷಕರನ್ನು ಹೊಂದುವ ಪೂರ್ವಭಾವಿ ಶರತ್ತನ್ನು ಹೊಂದಿರಬೇಕು. ಹಾಗೂ ಈ ಉದ್ದೇಶಕ್ಕಾಗಿ ಒಪ್ಪಿಕೊಂಡಿರುವ ಅವಧಿಯಲ್ಲಿ ಶಾಲೆಗೆ ಹಾಜರಾಗಲು ಮಕ್ಕಳನ್ನು ಬಿಟ್ಟುಕೊಡಲು ಕುಟುಂಬಗಳು ಕೂಡ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇರಬೇಕು. ಪ್ರಾಥಮಿಕ ಶಿಕ್ಷಣದ ಸಾಮಾನ್ಯ ರಚನೆಯು ಗ್ರಾಮೀಣ ಸಣ್ಣ ಪ್ರಾಥಮಿಕ ಶಾಲೆಗಳ ಶಾಲಾ ಪರಿಸ್ಥಿತಿಗಳನ್ನು ಗುರುತಿಸುವುದಿಲ್ಲ. ಈ ವಿಧದ ಶಾಲೆಗಳ ಕಾರ್ಯಾಚರಣೆಗೆ ಸೂಕ್ತವೆನಿಸುವ, ಪಠ್ಯಕ್ರಮ ಮತ್ತು ತರಬೇತಿ ಆವಶ್ಯಕತೆಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿದೆ. ತರಬೇತಿ ಸಂಸ್ಥೆಗಳಲ್ಲಿ ಭಾವೀ ಶಿಕ್ಷಕರಿಗೆ ನೀಡಲಾಗುವ ತರಬೇತಿಯು ಬಹುಶ್ರೇಣಿಯಲ್ಲಿ ಕೆಲಸ ಮಾಡುವುದಕ್ಕೆ ಶೇಕಡ 10 ರಷ್ಟು ಕೂಡ ತರಬೇತಿ ಸಮಯವನ್ನು ಒದಗಿಸುವುದಿಲ್ಲ. ಬಹುಶ್ರೇಣಿ ಶಾಲೆಗಳಲ್ಲಿನ ಹಿಂದಿನ ಪ್ರಯತ್ನಗಳಲ್ಲಿದ್ದ ಅಂಶಗಳೆಂದರೆ: 1. ಮಾನೀಟರ್ ವ್ಯವಸ್ಥೆ– ಕೇಂದ್ರದಲ್ಲಿ ಶಿಕ್ಷಕರು, ಒಂದೆರಡು ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಬೋಧನೆಯ ಸಹಾಯವನ್ನು ಪಡೆದರೂ ಕೂಡ, ಅವರು ಗರಿಷ್ಠ ಪ್ರಮಾಣದಲ್ಲಿ ಬಳಸಿದ ಬೋಧನಾ ಸಮಯದ ಮೇಲೆ ಮೇಲ್ವಿಚಾರಕ ವ್ಯವಸ್ಥೆಗಳು ಗಮನವನ್ನು ಕೇಂದ್ರೀಕರಿಸಿವೆ; 2. ಶಿಕ್ಷಕರು ಎಲ್ಲಾ ತರಗತಿಗಳಿಗೆ ಕಲಿಸಲು ಸರದಿಯಲ್ಲಿ ತೆಗೆದುಕೊಂಡ ಸಮಯದ ಬಳಕೆಯ ಮೇಲೆ ಸ್ವ–ಕಲಿಕೆಯ ಚಟುವಟಿಕೆಯ ವಿಧಾನವು ಗಮನವನ್ನು ಕೇಂದ್ರೀಕರಿಸಿದೆ. ಪಠ್ಯಪುಸ್ತಕಗಳ ಮಾಹಿತಿಯನ್ನು ಅರ್ಥ ಮಾಡಿಕೊಂಡು ಅಥವಾ ಅರ್ಥ ಮಾಡಿಕೊಳ್ಳದೆ ಅದಕ್ಕೆ ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡಿ, ಅದನ್ನು ಶಿಕ್ಷಣದ ಅಂತಿಮ ಗುರಿಯಾಗಿ ಭಾವಿಸುವ ಶಾಲಾ ವ್ಯವಸ್ಥೆಯಲ್ಲಿ ಈ ಎರಡೂ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಪಠ್ಯಪುಸ್ತಕಗಳು ರಚನಾತ್ಮಕವಾಗಿ ಇದ್ದರೂ, ಇವುಗಳನ್ನು ಪ್ರತಿಯೊಂದು ತರಗತಿಗೆ ಪ್ರತ್ಯೇಕವಾಗಿ ಬಳಸಲಾಗುತ್ತದೆ. ಆದರೆ ಶ್ರೇಣೀಕರಣಕ್ಕೆ ಸಂಬಂಧಿಸಿದಂತೆ ಇವು ಅನಿಯಮಿತವಾಗಿವೆ. ಬಹು ಶ್ರೇಣಿಯ ಶಾಲೆಯಲ್ಲಿ ನಾಲ್ಕು ಅಥವಾ ಐದು ವರ್ಷಗಳನ್ನು ಪೂರ್ಣಗೊಳಿಸುವ ಮಕ್ಕಳು ಎರಡು ವರ್ಷಗಳ ವಿದ್ಯಾಭ್ಯಾಸಕ್ಕೆ ಸಮಾನವಾಗಿ ಕಲಿಯುವರೆಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. 3. ಬೋಧನೆ–ಕಲಿಕೆಯ ಸಮಯ: ಶಾಲಾ ಹಂತದಲ್ಲಿ ಮಕ್ಕಳ ಸಾಧನೆಯು ತರಗತಿ–ಶಿಕ್ಷಕರ ಅನುಪಾತಕ್ಕೆ ವಿಲೋಮ ಪ್ರಮಾಣವನ್ನು ಹೊಂದಿದೆ(ನಾಗರಾಜು, 1996). ಶಾಲೆಯ 'ಬಹು–ಶ್ರೇಣೀಕರಣ' ದ ಮಟ್ಟ ಹೆಚ್ಚಿದಂತೆ ಮಕ್ಕಳು ಕಡಿಮೆ ಕಲಿಯುತ್ತಾರೆ. ಪ್ರತಿಯೊಂದು ತರಗತಿಗೆ ಒಬ್ಬ ಶಿಕ್ಷಕನನ್ನು ನೇಮಿಸಿಕೊಳ್ಳದಿದ್ದರೆ ಎಮ್‌ಎಲ್‌ಎಲ್‌ನ್ನು ಸಾಧಿಸುವುದು ಸಾಧ್ಯವಾಗುವುದಿಲ್ಲ. ಯಾರಾದರೂ ಬಹು–ಶ್ರೇಣಿ ಶಾಲೆಗಳ

Digitised by Bharatavani, CIIL

ಗುಣಮಟ್ಟವನ್ನು ಸುಧಾರಿಸುವ ಕ್ರಮವನ್ನು ಕೈಗೊಳ್ಳಬಹುದು ಅಥವಾ ಶಾಲೆಯಲ್ಲಿ ವಿದ್ಯಾರ್ಥಿಗಳ ಬಹಳಷ್ಟು ಸಮಯ ಬಳಕೆಯಾಗದೆ ಉಳಿದು, ಸೀಮಿತ ಅವಧಿ ಮಾತ್ರ ಕ್ರಿಯಾಶೀಲ ಬೋಧನೆಯಲ್ಲಿ ಕಳೆಯುವುದರಿಂದ ಮಕ್ಕಳು ಕಡಿಮೆ ಕಲಿಯುತ್ತಾರೆ ಎಂಬ ತೀರ್ಮಾನಕ್ಕೆ ಯಾರೂ ಬರಬಹುದು.

ಶಾಲಾ ಕಲಿಕೆಯು ಸಂಘಟಿತ ಬೋಧನೆ–ಕಲಿಕೆಯ ಚಟುವಟಿಕೆಗಳಲ್ಲಿ ಮಗು ಕಳೆಯುವ ಸಮಯದ ಪ್ರಮಾಣವನ್ನು ಆಧರಿಸಿದೆ(ಕರೋಲ್, 1963). ಈ ಚಟುವಟಿಕೆಗಳು ವಿದ್ಯಾಭ್ಯಾಸದ ರಚನೆಯನ್ನು ಆಧರಿಸಿದ ಶಿಕ್ಷಕರನ್ನು ಅವಲಂಬಿಸಿದೆ. ಆದುದರಿಂದ, ಸಣ್ಣ ಶಾಲೆಗಳಲ್ಲಿ ಕಲಿಯುವ ಮಕ್ಕಳ ಮೇಲೆ ಪರಿಣಾಮ ಬೀರುವ ಮುಖ್ಯ ಕಾಳಜಿಯೆಂದರೆ ಕ್ರಿಯಾಶೀಲ ಬೋಧನೆ–ಕಲಿಕೆಯ ಕಾರ್ಯವಿಧಾನವಾಗಿದೆ. ಇದು ಮಕ್ಕಳ ಸಮಯದ ಕಡಿಮೆ ಬಳಕೆಯಿಂದ ಪ್ರಭಾವಿತವಾಗಿದೆ. ಬಹು–ಶ್ರೇಣಿ ಶಾಲೆಗಳಲ್ಲಿ ಪಠ್ಯಪುಸ್ತಕ ವಿಧಾನವು ವಿದ್ಯಾರ್ಥಿಗಳ ಆಸಕ್ತಿಗೆ ವಿರುದ್ಧವಾಗಿ ಕಾರ್ಯವೆಸಗಿದೆ. ಸಾಮರ್ಥ್ಯವನ್ನು ಆಧರಿಸಿದ ವಿಧಾನದಲ್ಲಿ, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಬ್ಬರಿಗೂ ಪಠ್ಯಪುಸ್ತಕಗಳು ಸಂಪನ್ಮೂಲ ಆಧಾರಗಳಲ್ಲಿ ಒಂದಾಗಿದೆ. ಬಹು–ಶ್ರೇಣಿ ಶಾಲೆಗಳಿಗೆ ಪರ್ಯಾಯ ವಿಧಾನವೆಂದರೆ, ಬಹು–ಶ್ರೇಣಿ ನಿರ್ವಹಣಾ ಪಠ್ಯಕ್ರಮವಾಗಿದೆ(ಎಮ್‌ಟಿಸಿ). ಇದರರ್ಥ ಕಾರ್ಯನೀತಿಯನ್ನು ಪಠ್ಯಪುಸ್ತಕಗಳಿಂದ ಸಾಮರ್ಥ್ಯಗಳಿಗೆ ಬದಲಾಯಿಸಿಕೊಳ್ಳುವುದು. ಇದರಿಂದ ಕಲಿಕಾ ಗುಂಪುಗಳ ಮರುರಚನೆ ಸುಲಲಿತಗೊಳ್ಳುತ್ತದೆ ಮತ್ತು ಬಹು–ಶ್ರೇಣಿ ಶಾಲೆಗಳಿಗೆ ಪಠ್ಯಕ್ರಮದ ಚಲಾವಣೆಯನ್ನು ಅನುಕ್ರಮಿಸುವುದಾಗುತ್ತದೆ. ಇದು ವಿಭಿನ್ನ ಶಾಲೆಗಳಲ್ಲಿ ವಿಭಿನ್ನ ರೀತಿಯದ್ದಾಗಿರುತ್ತದೆ. ಈ ಶಾಲೆಗಳನ್ನು ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಕಲಿಸಲು ಲಭ್ಯವಿರುವ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ವಿಂಗಡಿಸಲಾಗುತ್ತದೆ. ಈ ರೀತಿಯ ಪಠ್ಯಕ್ರಮವು ಮಕ್ಕಳಿಗೆ ಅವಕಾಶದ ಸಮಯವನ್ನು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ. ಶಾಲೆಯಲ್ಲಿ ಮಕ್ಕಳು ತಮ್ಮ ಸಮಯವನ್ನು ಉದ್ದೇಶಪೂರ್ವಕ ಕಲಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಮೀಸಲಾಗಿಡುವರು. ಮಕ್ಕಳನ್ನು ಗುಂಪಾಗಿಸುವ ಈ ಪ್ರಕ್ರಿಯೆಯು ಹಂತವನ್ನು ಆಧರಿಸಿಕೊಂಡು ಇರಬೇಕಾಗುತ್ತದೆ. ಪಠ್ಯಕ್ರಮದ ರಚನೆಯು ಶಾಲೆಯ ಪರಿಣಾಮಕಾರತ್ವದ ಮಾನದಂಡವಾಗಿ ಸಾಮರ್ಥ್ಯವನ್ನು ಆಧರಿಸಿದ ಕಾರ್ಯನೀತಿ ಮತ್ತು ಎಮ್‌ಎಲ್‌ಎಲ್ ಸ್ವೀಕೃತಿಯ ಮೂಲಕ ಮುಂದುವರಿಯುತ್ತದೆ. ಸಾಮರ್ಥ್ಯವನ್ನು ಕೇಂದ್ರವಾಗಿಟ್ಟುಕೊಂಡು ಕಲಿಕಾ ವಸ್ತುಗಳನ್ನು ಸಂಘಟಿಸಿಕೊಳ್ಳುವ ಅನೇಕ ವಿಧಾನಗಳು ಇವೆ. ಇವುಗಳನ್ನು ವಿಷಯ ಕ್ಷೇತ್ರದೊಳಗೆ ಸಂಯೋಜಿತ ವಿಧಾನದ ಮೂಲಕ ಅತ್ಯಗತ್ಯ ಹಾಗೂ ಅಪೇಕ್ಷಿತವೆಂಬುದಾಗಿ ಗುರುತಿಸಲಾಗಿದೆ. ಈ ವಿಧಾನದಲ್ಲಿ ವಿಭಿನ್ನ ವಿಷಯ ಕ್ಷೇತ್ರಗಳಿಂದ ಸಾಮರ್ಥ್ಯಗಳನ್ನು ಆಯ್ದು ಸಂಯೋಜಿಸಬಹುದಾಗಿದೆ. ಈ ರೀತಿಯ ನಿರ್ಧಾರಗಳನ್ನು ಸ್ಥಳಿಯ ಹಂತಗಳಲ್ಲಿ ನಡೆಸಬೇಕಾಗಿದೆ.

ಅಂತಿಮವಾಗಿ ಹೇಳುವುದಾದರೆ ಕಾರ್ಯದಕ್ಷತೆಯನ್ನು ಆಧರಿಸಿದ ವಿದ್ಯಾಭ್ಯಾಸ ಕಾರ್ಯನೀತಿಯ ಫಲವಾಗಿ ಎಮ್‌ಎಲ್‌ಎಲ್ ನಿರ್ಣಾಯಕ ಪರೀಕ್ಷೆಗಳ ಅಳತೆಗಲ್ಲಿನ ಕಲಿಕೆಯ ಪರಿಣಾಮಗಳು ಹೆಚ್ಚು ದೊರೆತಿವೆ. ಇವುಗಳು ಎಮ್‌ಎಲ್‌ಎಲ್‌ಗಳನ್ನು ಆಧರಿಸಿದ ಕಲಿಕಾ ಗುಂಪುಗಳಿಗೆ ನಿರ್ವಹಣಾ ಪಠ್ಯಕ್ರಮದ ಮೂಲಕ ಕಾರ್ಯನಿರ್ವಹಿಸುತ್ತವೆ. ಇದರಲ್ಲಿ ಉತ್ತಮ ಗುಣಮಟ್ಟದ ಶಿಕ್ಷಕರ ಬೆಂಬಲ, ಮರುರಚಿಸಲಾದ ಕಲಿಕಾ ಗುಂಪುಗಳು ಮತ್ತು ಉಲ್ಲಾಸದಾಯಕವಾಗಿ ಕಲಿಯುವ ಕಾರ್ಯಕ್ಕೆ ಹೆಚ್ಚಿನ ಸಮಯವಿರುತ್ತದೆ.

ಇಲ್ಲಿ ವರದಿ ಮಾಡಲಾಗಿರುವ ಸಂಶೋಧಕರು ಕಲಿಕಾರ್ಥಿಗಳ ಕುರಿತು ಖಂಡಿತವಾಗಿ ಹೊಸದಾದ ಮತ್ತು ಸವಾಲಾಗಿ ಪರಿಣಮಿಸಬಲ್ಲ ಊಹೆಗಳನ್ನು ಸೃಷ್ಟಿಸಿದ್ದಾರೆ. ಮನಃಶಾಸ್ತ್ರಜ್ಞರು ಕಲಿಕಾರ್ಥಿಗಳ ಮಾದರಿಯನ್ನು ರೂಪಿಸುವತ್ತ ಚಲಿಸಿದ್ದಾರೆ. ಇಲ್ಲಿ ಕಲಿಕಾರ್ಥಿಗಳು ಸ್ವ–ನಿರ್ಧಾರ ಕೈಗೊಳ್ಳುವ ವ್ಯಕ್ತಿಗಳಾಗಿರುತ್ತಾರೆ. ಇವರು ಮಾಹಿತಿಯನ್ನು ಸಂಕೀರ್ಣ ರೀತಿಯಿಂದ ಬಹುತೇಕ ವಿಶಿಷ್ಟ ಶೈಲಿಯಿಂದ ಪರಿಷ್ಕರಿಸುತ್ತಾರೆ. ಇದನ್ನು ಮೊದಲೇ ಊಹಿಸಿಕೊಳ್ಳುವುದು ಅಥವಾ ನಿಯಮಗಳ ಮೂಲಕ ಸರಳೀಕರಣಗೊಳಿಸುವುದು ಅಥವಾ ಸಾಂಪ್ರದಾಯಿಕ ಪ್ರಯೋಗಶಾಲಾ ಅಭ್ಯಾಸ ಪ್ರಯೋಗಗಳ ಮೂಲಕ ಹಿಡಿದಿಟ್ಟುಕೊಳ್ಳುವುದು ಸಾಧ್ಯವಿಲ್ಲ. ಆದರೆ ಕಲಿಕಾರ್ಥಿಯು ಹೊಸ ಕಲಿಕೆಯ ಕಾರ್ಯವನ್ನು ಕೈಗೊಳ್ಳುವಾಗ ಅವನು ಅಥವಾ ಅವಳು ಉತ್ತಮ ರೀತಿಯಲ್ಲಿ ಹೊಂದಿರಬೇಕಾದ ಸಂಕೀರ್ಣ ಕಲಿಕೆಯ ಅಥವಾ ಗ್ರಹಿಕಾ ಕಾರ್ಯವಿಧಾನಗಳ ಕ್ರಿಯಾತ್ಮಕ ಬಳಕೆಯಿಂದ ಕಲಿಯುತ್ತಾರೆ ಎಂಬುದನ್ನು ನಿರಾಕರಿಸುವ ಹಾಗಿಲ್ಲ. ಕಲಿಕಾರ್ಥಿಯು ಮುಖ್ಯವಾಗಿ ಹೊರಗಿನ ಪರಿಸರದ ಮತ್ತು ತನ್ನ ಸ್ವಂತದ ಆಲೋಚನಾ ಕಾರ್ಯವಿಧಾನಗಳ ನಿರಂತರ ಮಾಹಿತಿ ಅಡ್ಡಕಟ್ಟಿನ ಕ್ರಿಯಾಶೀಲ ವ್ಯಾಖ್ಯಾನಕಾರ, ಸಂಸ್ಕರಣಕಾರ ಮತ್ತು ಸಂಯೋಜಕರಾಗಿರುತ್ತಾರೆ. ಹೀಗೆ, ಪರಿಣಾಮಕಾರಿ ಬೌದ್ಧಿಕ ಕುಶಲತೆಗಳನ್ನು ಬೆಳೆಸಲು ಮತ್ತು ಬಳಸಲು ಕಲಿಕಾರ್ಥಿಗಳ ಸಾಮರ್ಥ್ಯದ ಕುರಿತು ವಿಶ್ಲೇಷಣೆ ಮತ್ತು ಸಂಶೋಧನೆಯನ್ನು ಕೈಗೊಳ್ಳುವುದು ಸಾಧ್ಯವಿದೆ.

ಕಲಿಕಾ ಚಟುವಟಿಕೆಗಳ ಕುರಿತಾದ ಹೊಸ ಪರಿಕಲ್ಪನೆಗಳು ಅಭ್ಯಾಸಿಗಳಿಗೆ ಕ್ರಿಯಾಶೀಲ ಗ್ರಹಿಕಾ ಕಾರ್ಯವಿಧಾನಗಳನ್ನು ಕಲಿಸಲು ಸಾಧನಗಳನ್ನು ಅಭಿವೃದ್ಧಿಪಡಿಸಲು ಅವಕಾಶವನ್ನು ಒದಗಿಸುತ್ತವೆ. ಈ ಕಾರ್ಯವಿಧಾನಗಳು ಅವರಿಗೆ ಉತ್ತಮ ರೀತಿಯಿಂದ ಕಲಿಯಲು ಮತ್ತು ಬಹುಪಾಲು ಕಲಿಕೆಯ ಅಥವಾ ತರಬೇತಿ ಪರಿಸ್ಥಿತಿಗಳಲ್ಲಿ ಸೂಕ್ತರೀತಿಯಲ್ಲಿ ಕಾರ್ಯನಿರ್ವಹಿಸಲು ಶಕ್ತಗೊಳಿಸುತ್ತವೆ. ಇದು ಕಲಿಕಾರ್ಥಿಯ ನಿಯಂತ್ರಣದಲ್ಲಿರಬಹುದಾಗಿದೆ ಮತ್ತು ಇದನ್ನು ಸಂಭವಗಳ ಪ್ರಪಂಚದಿಂದ ಬಹಳ ದೂರವಿಡುವುದು ಸಾಧ್ಯ.

**–ಮೂಲ: ಪೂರ್ಣಿಮ ಮಾಥೂರ್**

**ಅನು: ಡಾ. ಗೀತಾ ಶೆಣೈ**

Digitised by Bharatavani, CIIL

## ಕಲಿಕೆಯ ವರ್ಗಾವಣೆ

ಕಲಿಕೆಗೆ ಮಹತ್ವ ಬರುವುದು ಏನನ್ನು ಕಲಿತಿದ್ದೇವೆ? ಹೇಗೆ ಕಲಿತಿದ್ದೇವೆ? ಎಂಬುವುದರಿಂದ ಅಲ್ಲ. ಕಲಿತಿದ್ದನ್ನು ಉಳಿಸಿಕೊಂಡು ಅಗತ್ಯವಿರುವ ಸಂದರ್ಭಗಳಲ್ಲಿ ಸಮಯೋಚಿತವಾಗಿ ಉಪಯೋಗಿಸಿಕೊಂಡಾಗ ಮಾತ್ರ ಕಲಿಕೆ ಸಾರ್ಥಕವಾಗುತ್ತದೆ. ಒಂದು ಕ್ಷೇತ್ರದಲ್ಲಿನ ಕಲಿಕೆ ಇನ್ನೊಂದು ಕ್ಷೇತ್ರದ ಕಲಿಕೆಯ ಮೇಲೆ ಪ್ರಭಾವ ಬೀರುವುದಕ್ಕೆ ಕಲಿಕೆಯ ವರ್ಗಾವಣೆ ಎನ್ನುತ್ತಾರೆ. ಒಂದು ಸನ್ನಿವೇಶದಲ್ಲಿ ಕಲಿತಿದ್ದು ಇನ್ನೊಂದು ಹೊಸ ಸನ್ನಿವೇಶದಲ್ಲಿ ಸಹಾಯವಾಗುವುದು ಅಥವಾ ಉಪಯೋಗವಾಗುವುದು. ಅಂದರೆ ನಾವು ಕಲಿತಿದ್ದು ವರ್ಗಾವಣೆಯಾಗುವುದು. ಉದಾಹರಣೆಗೆ ಮಗು ಶಾಲೆಯಲ್ಲಿ ಕಲಿತ ಸಂಕಲನವನ್ನು ಕ್ರಿಕೆಟ್ ಆಡುವಾಗ ರನ್‌ಗಳನ್ನು ಕೂಡಿಸಲು ಬಳಸುವುದು.

ಕಲಿಕೆಯ ವರ್ಗಾವಣೆ ಎಂದರೆ ಒಂದು ಕ್ಷೇತ್ರದಲ್ಲಿ ಕಲಿತ ವಿಚಾರ, ಜ್ಞಾನ, ತರಬೇತಿ, ಕೌಶಲ ಮುಂತಾದವುಗಳನ್ನು ಮತ್ತೊಂದು ಕ್ಷೇತ್ರಕ್ಕೆ ಅಥವಾ ನಿಜ ಜೀವನದ ಸನ್ನಿವೇಶಕ್ಕೆ ವರ್ಗಾವಣೆ ಮಾಡುವುದು ಎಂದಾಗಿದೆ. ಇದನ್ನು ತರಬೇತಿಯ ವರ್ಗಾವಣೆ ಎಂದು ಸಹ ಕರೆಯುತ್ತಾರೆ.

ಮೋರಿಸ್ ಒರ್ಗೆಯವರ ಪ್ರಕಾರ 'ಒಂದು ಸನ್ನಿವೇಶದಲ್ಲಿನ ಕಲಿಕೆಯು ಇತರ ಸನ್ನಿವೇಶಗಳ ಕಲಿಕೆಯ ಮೇಲೆ ಪ್ರಭಾವ ಬೀರಿದಾಗ ಕಲಿಕೆಯ ವರ್ಗಾವಣೆಯಾಗುತ್ತದೆ'.

ಕಲಿಕೆಯ ವರ್ಗಾವಣೆ ಹಿಂದೆ ನೆಲೆಗೊಂಡ ಅಭ್ಯಾಸದ ಎರಡನೇ ಅಭ್ಯಾಸದ ಆರ್ಜನೆ, ಕಾರ್ಯನಿರ್ವಹಣೆ ಅಥವಾ ಪುನಃ ಕಲಿಕೆಯ ಮೇಲೆ ಪ್ರಭಾವ ಉಂಟುಮಾಡುವ ಒಂದು ಪ್ರಕ್ರಿಯೆ" ಎಂದು ಮ್ಯಾಕ್ ಗೋಹ್ ಮತ್ತು ಇರಿಯನ್ ಅಭಿಪ್ರಾಯಪಟ್ಟಿದ್ದಾರೆ.

### ಕಲಿಕೆಯ ವರ್ಗಾವಣೆಯ ವಿಧಗಳು

ಕಲಿಕೆಯ ವರ್ಗಾವಣೆಯು ಧನಾತ್ಮಕ, ಋಣಾತ್ಮಕ ಅಥವಾ ಶೂನ್ಯ ಆಗಿರಬಹುದು. ಮೊದಲು ಕಲಿತದ್ದು ಹೊಸ ಕಲಿಕೆಗೆ ಸಹಾಯಕವಾದರೆ ಅಥವಾ ಒಂದು ಸನ್ನಿವೇಶದಲ್ಲಿ ಕಲಿತಿದ್ದು ಸ್ಮೃತಿಯಲ್ಲಿದ್ದು ಮತ್ತೊಂದು ಹೊಸ ಸನ್ನಿವೇಶಕ್ಕೆ ಲಾಭದಾಯಕವಾಗಿ ಅನ್ವಯವಾದರೆ ಅದನ್ನು ಧನಾತ್ಮಕ ವರ್ಗಾವಣೆ ಎನ್ನುತ್ತಾರೆ. ಉದಾಹರಣೆಗೆ ಬೀಜಗಣಿತದ ಕಲಿಕೆ ಕಲನಶಾಸ್ತ್ರದ(Calculus) ಕಲಿಕೆಗೆ, ಬೆರಳಚ್ಚಿನ ಜ್ಞಾನ ಕಂಪ್ಯೂಟರ್ ಕಲಿಕೆಗೆ, ಮನೋವಿಜ್ಞಾನದ ಜ್ಞಾನ ಶಿಕ್ಷಣಶಾಸ್ತ್ರ ಕಲಿಯುವಾಗ ಸಹಾಯಕವಾಗುವುದು. ಮೊದಲು ಕಲಿತದ್ದು ಇನ್ನೊಂದರ ಕಲಿಕೆಗೆ ಅಡ್ಡಿಯಾಗುವುದಕ್ಕೆ ಋಣಾತ್ಮಕ ವರ್ಗಾವಣೆ ಎಂದು ಹೆಸರು. ಉದಾಹರಣೆಗೆ ಮಲಯಾಳಂ ಭಾಷೆಯ ಕಲಿಕೆಯು ಇಂಗ್ಲೀಷ್ ಭಾಷೆಯ ಕಲಿಕೆಗೆ ಅಡ್ಡಿ ಉಂಟುಮಾಡಬಹುದು, ಅಂದರೆ ಇಂಗ್ಲಿಷ್ ಪದಗಳನ್ನು ಮಲಯಾಳಂ ಭಾಷೆಯ ಪದಗಳಂತೆ ಉಚ್ಛಾರಣೆ ಮಾಡುವುದು. ಕನ್ನಡ ಭಾಷೆ ಕಲಿತವರಿಗೆ ಪದವನ್ನಾವಲಂಬಿಸಿ ಲಿಂಗ ನಿರ್ಧಾರವಾಗುವ ಹಿಂದಿ ಭಾಷೆ ಕಲಿಯುವುದು ಕಠಿಣವಾಗುವುದು. ಹಿಂದೆ ಕಲಿತಿದ್ದು ಹೊಸ ಕಲಿಕೆಗೆ ಸಹಾಯಕವೂ ಆಗದೇ ಅಥವಾ ಅಡ್ಡಿಯು ಆಗದೆ ತಟಸ್ಥವಾಗಿ ಉಳಿದರೆ ಅಥವಾ ಕಾರ್ಯದ ಕಲಿಕೆಯು ಇನ್ನೊಂದು ವಿಷಯ ಅಥವಾ ಕಾರ್ಯದ ಕಲಿಕೆಯ ಮೇಲೆ ಯಾವುದೇ ರೀತಿಯ ಪ್ರಭಾವವನ್ನು ಬೀರದಿದ್ದರೆ, ಅದನ್ನು ಶೂನ್ಯ ವರ್ಗಾವಣೆ ಎನ್ನುತ್ತಾರೆ.

ಧನಾತ್ಮಕ ವರ್ಗಾವಣೆಯು ಉಪಯುಕ್ತ ಮತ್ತು ಅಪೇಕ್ಷಿತ ವರ್ಗಾವಣೆಯಾಗಿದೆ.

ವರ್ಗಾವಣೆಯನ್ನು ಅಡ್ಡ (lateral) ಮತ್ತು ಲಂಬೀಯ (vertical) ಎಂದು ಸಹ ವರ್ಗೀಕರಿಸಬಹುದು. ವ್ಯಕ್ತಿಯು ಈಗಾಗಲೇ ಕಲಿತಂತೆ ಇರುವ ಅದೇ ಮಟ್ಟದ ಸಂಕೀರ್ಣತೆ ಇರುವ ಇನ್ನೊಂದು ಕಾರ್ಯನಿರ್ವಹಣೆ ಮಾಡಲು ವಿಷಯ ಕಲಿಯಲು ಸಮರ್ಥನಾದರೆ ಅದನ್ನು ಅಡ್ಡ ವರ್ಗಾವಣೆ(horizontal transfer) ಎನ್ನಲಾಗಿದೆ. ಉದಾಹರಣೆಗೆ ಒಂದು ಮಗುವು ಶಾಲೆಯಲ್ಲಿ ಕೆಲವು ಪದಗಳನ್ನು ಗುರುತಿಸಲು ಕಲಿತು, ನಂತರ ವೃತ್ತಪತ್ರಿಕೆ ಓದುವಾಗ ಅದೇ ಅರ್ಥ ಬರುವ ಹೊಸ ಪದಗಳನ್ನು ಗುರುತಿಸುವುದು. ಲಂಬೀಯ ವರ್ಗಾವಣೆಯು(vertical transfer) ಸಾಮಾನ್ಯವಾಗಿ ಅದೇ ವಿಷಯದಲ್ಲಿ ಅಥವಾ ಕ್ಷೇತ್ರದಲ್ಲಿ ಅದೇ ರೀತಿಯ ಆದರೆ ಹೆಚ್ಚು ಮುಂದುವರಿದ ಮತ್ತು ಸಂಕೀರ್ಣವಾದ ಫಲಿತಗಳ ಆರ್ಜನೆಗಾಗಿ ಹಿಂದೆ ಕಲಿತದ್ದನ್ನು ಅನ್ವಯಿಸುವುದಾಗಿದೆ. ಉದಾಹರಣೆಗೆ ಕ್ರಮಗತ ಶ್ರೇಣಿ ವ್ಯವಸ್ಥೆಯಿಂದ ರಚಿತವಾಗಿರುವ ಗಣಿತ ಮತ್ತು ವಿಜ್ಞಾನಗಳ ಕಲಿಕೆಯಲ್ಲಿ ಹಿಂದಿನ ಕಲಿಕೆಗಳು ಅಗತ್ಯವಾಗುವುದೇ ಆಧಾರಗಳು ಆಗುತ್ತವೆ.

### ವರ್ಗಾವಣೆಯ ಸಿದ್ಧಾಂತಗಳು

ಹಿಂದಿನ ಕಲಿಕೆಯು ಹೊಸ ಕಲಿಕೆಯ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ಎಲ್ಲ ಮನೋವಿಜ್ಞಾನಿಗಳು ಒಪ್ಪುತ್ತಾರೆ. ಆದರೆ ಕಲಿಕೆಯ ವರ್ಗಾವಣೆ ಹೇಗೆ ಆಗುತ್ತದೆ, ಎಂಥ ಕಲಿಕೆ ವರ್ಗಾವಣೆ ಆಗುತ್ತದೆ ಮತ್ತು ಯಾವ ನಿಯಮವನ್ನಾಧರಿಸಿ ನಡೆಯುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯವಿದೆ. ಕಲಿಕೆಯ ವರ್ಗಾವಣೆಯ ಕುರಿತು ಕೆಲವು ಸಿದ್ಧಾಂತಗಳಿವೆ. ಕೆಲವು ಪ್ರಮುಖ ಸಿದ್ಧಾಂತಗಳು ಅಥವಾ ವಾದಗಳು ಈ ಕೆಳಗಿನಂತಿವೆ.

#### ಔಪಚಾರಿಕ ಶಿಸ್ತಿನ ಸಿದ್ಧಾಂತ:

ಹತ್ತೊಂಬತ್ತನೇ ಶತಮಾನದಲ್ಲಿ ಔಪಚಾರಿಕ ಶಿಸ್ತಿನ ಸಿದ್ಧಾಂತ (Theory of Formal Discipline) ರೂಪಿತವಾಯಿತು. ಈ ಸಿದ್ಧಾಂತದ ಪ್ರಕಾರ ಮನಸ್ಸು ಅವಧಾನ, ತರ್ಕಶಕ್ತಿ, ಸ್ಮೃತಿ, ವಿವೇಚನೆ, ಕಲ್ಪನಾಶಕ್ತಿ, ಸಮಸ್ಯಾ ಪರಿಹಾರ ಇತ್ಯಾದಿ ಅನೇಕ ಸಾಮರ್ಥ್ಯಗಳನ್ನು ಒಳಗೊಂಡಿದೆ. ಪ್ರತಿಯೊಂದು ಸಾಮರ್ಥ್ಯ ಕೂಡ ಜಲ-ಅಭೇದ್ಯ ಕೋಣೆಯಂತೆ ಸ್ವತಂತ್ರ. ಪ್ರತಿಯೊಂದು ಸಾಮರ್ಥ್ಯವನ್ನು ಯುಕ್ತ ಅಧ್ಯಯನಗಳಿಂದ ಸ್ವತಂತ್ರವಾಗಿ ವರ್ಧಿಸಿಕೊಳ್ಳಬಹುದು. ನಿಗದಿತವಾದ ಮತ್ತು ನಿಯಮಿತವಾದ ಕಲಿಕೆಯ ಸ್ಮೃತಿಯನ್ನು

Digitised by Bharatavani, CIIL

ಬಲಿಷ್ಠಗೊಳಿಸುವುದು, ದೀರ್ಘವಾದ ಕಾವ್ಯ, ಪದ್ಯ, ಗದ್ಯ ಮುಂತಾದವುಗಳನ್ನು ಕಂಠಪಾಠ ಮಾಡುವ ಮೂಲಕ ಸ್ಮೃತಿಯ ಶಕ್ತಿಯನ್ನು ವರ್ಧಿಸಬಹುದು. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯ ಕಲಿಕೆಯು ತುಲನೆ ಮಾಡುವುದು, ಸಂಶ್ಲೇಷಣೆ, ತರ್ಕಸುವಿಕೆ, ಆಲೋಚನೆ ಮುಂತಾದ ಸಾಮರ್ಥ್ಯಗಳ ವಿಕಾಸಕ್ಕೆ ಉಪಯುಕ್ತ ಮತ್ತು ಅವಧಾನ, ತರ್ಕ ಸಾಮರ್ಥ್ಯಗಳು ವರ್ಧನೆಗೆ ಗಣಿತ ಕಲಿಕೆಯು ಉಪಯುಕ್ತವಾಗಿದೆ. ಈ ಸಿದ್ಧಾಂತವನ್ನು ವಿಲಿಯಂ ಜೇಮ್ಸ್ ಮತ್ತು ಠಾರ್ನ್‌ಡೈಕ್ ಮುಂತಾದವರು ಒಪ್ಪಿಕೊಳ್ಳಲಿಲ್ಲ.

ಜನಪ್ರಿಯವಾದ ಈ ಸಿದ್ಧಾಂತಕ್ಕೆ ಯಾವುದೇ ವೈಜ್ಞಾನಿಕ ಆಧಾರವಿರಲಿಲ್ಲ. ಅನುಭವದ ಆಧಾರದ ಮೇಲೆ ತತ್ವಜ್ಞಾನಿಗಳು ಈ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಆದ್ದರಿಂದ ಈ ಸಿದ್ಧಾಂತ ಸಮಾನ ಅಂಶಗಳ ಸಿದ್ಧಾಂತ.

**ಸಮಾನ ಅಂಶಗಳ ಸಿದ್ಧಾಂತ** (Identical Elements)

ಈ ಸಿದ್ಧಾಂತದ ಪ್ರತಿಪಾದಕರಾದ ಥಾರ್ನ್‌ಡೈಕ್‌ರು ವರ್ಗಾವಣೆ ಉಂಟಾಗಲು ಪ್ರಾರಂಭದ ಕಲಿಕಾ ಸನ್ನಿವೇಶ ನಂತರದ ಕಲಿಕಾ ಸನ್ನಿವೇಶಗಳ ನಡುವೆ ಸಮಾನ ಅಂಶಗಳಿರಬೇಕು ಎಂದು ನಂಬಿದ್ದರು. ಆದ್ದರಿಂದ ಈ ಸಿದ್ಧಾಂತವನ್ನು ಸಮಾನ ಅಂಶಗಳ ಸಿದ್ಧಾಂತ ಎಂದು ಕರೆದರು. ಹಳೆಯ ಮತ್ತು ಹೊಸ ಕಲಿಕಾ ಸನ್ನಿವೇಶಗಳ ಅಥವಾ ಕಾರ್ಯಗಳ ನಡುವೆ ಸಮಾನತೆ ಹೆಚ್ಚಿದಷ್ಟು ವರ್ಗಾವಣೆ ಹೆಚ್ಚಾಗುತ್ತದೆ. ಸಂಕಲನ ಮತ್ತು ಗುಣಾಕಾರ ಈ ಎರಡು ಕ್ರಿಯೆಗಳಲ್ಲಿ ಸಾಮ್ಯ ಹೆಚ್ಚಿರುವುದರಿಂದ ಸಂಕಲನವನ್ನು ಚೆನ್ನಾಗಿ ಕಲಿತವರಿಗೆ ಗುಣಾಕಾರವನ್ನು ಕಲಿಯುವುದು ಸುಲಭ. ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಸಮಾನ ಅಂಶಗಳು ಹೆಚ್ಚಿಗೆ ಇರುವುದರಿಂದ ಇವುಗಳಲ್ಲಿ ಒಂದರ ಲಿಪಿಯನ್ನು ಕಲಿತವನಿಗೆ ಇನ್ನೊಂದರ ಲಿಪಿಯನ್ನು ಕಲಿಯುವುದು ಸುಲಭ. ಥಾರ್ನ್‌ಡೈಕ್ ಪ್ರಕಾರ ಒಂದು ಸನ್ನಿವೇಶದಿಂದ ಇನ್ನೊಂದು ಸನ್ನಿವೇಶಕ್ಕೆ ಆಗುವ ಕಲಿಕೆಯ ವರ್ಗಾವಣೆ ಆ ಸನ್ನಿವೇಶಗಳಲ್ಲಿ ಇರುವ ಸಮಾನವಸ್ತು, ಮನೋಧೋರಣೆ ವಿಧಾನ, ಗುರಿ ಮುಂತಾದ ಅಂಶಗಳಿಗೆ ಅನುಗುಣವಾಗಿ ಇರುತ್ತದೆ.

**ಸಾರ್ವತ್ರೀಕರಣ ಸಿದ್ಧಾಂತ**

ಚಾರ್ಲ್ಸ್ ಜಡ್ ಎನ್ನುವವರು ಸಾರ್ವತ್ರೀಕರಣ ಸಿದ್ಧಾಂತವನ್ನು (Generalisation Theory) ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಒಂದು ಸನ್ನಿವೇಶದಲ್ಲಿ ಕಲಿತ ತತ್ವಗಳು, ಸೂತ್ರಗಳು, ಸಾರ್ವತ್ರೀಕರಣಗಳು ಮಾತ್ರ ಹೊಸ ಸನ್ನಿವೇಶಗಳಿಗೆ ವರ್ಗಾವಣೆಯಾಗುತ್ತವೆ. ಇದನ್ನು ಸಮರ್ಥಿಸುವುದಕ್ಕಾಗಿ ಜಡ್ ಒಂದು ಪ್ರಯೋಗವನ್ನು ಕೈಗೊಂಡರು. ಅದರಲ್ಲಿ ಆಯ್ಕೆಮಾಡಿಕೊಂಡ ಒಂದು ಗುಂಪಿನ ವಿದ್ಯಾರ್ಥಿಗಳಿಗೆ ಬೆಳಕಿನ ವಕ್ರೀಭವನದ ನಿಯಮಗಳನ್ನು ಕಲಿಸಲಾಯಿತು. ಇನ್ನೊಂದು ಗುಂಪಿನ ವಿದ್ಯಾರ್ಥಿಗಳಿಗೆ ಈ ನಿಯಮಗಳನ್ನು ಕಲಿಸಲಿಲ್ಲ. ಬಳಿಕ ಎರಡು ಗುಂಪಿನವರಿಗೂ ನೀರಿನಲ್ಲಿ 12 ಅಂಗುಲ ಆಳದಲ್ಲಿ ಇರುವ ವಸ್ತು ಒಂದಕ್ಕೆ ಗುರಿ ಇಟ್ಟು ಹೊಡೆಯುವ ತರಬೇತಿಯನ್ನು ನೀಡಲಾಯಿತು. ನಂತರದಲ್ಲಿ ನೀರಿನಲ್ಲಿ 4ಅಂಗುಲ ಆಳದಲ್ಲಿ ಇರುವ ವಸ್ತುವಿಗೆ ಗುರಿ ಇಟ್ಟು ಹೊಡೆಯುವ ಪರೀಕ್ಷೆಯನ್ನು ನಡೆಸಿದಾಗ ಬೆಳಕಿನ ವಕ್ರೀಭವನ ನಿಯಮ ಕಲಿತಿದ್ದ ಗುಂಪು ಉತ್ತಮ ಮಟ್ಟದ ಸಾಧನೆ ಮಾಡಿದುದು ಕಂಡುಬಂದಿದೆ. ಅಂದರೆ ಒಂದು ಸನ್ನಿವೇಶದಲ್ಲಿ ಕಲಿತ ತತ್ವ (ನಿಯಮ) ಇನ್ನೊಂದು ಸನ್ನಿವೇಶಕ್ಕೆ ವರ್ಗಾವಣೆ ಆಗಿತ್ತು.

**ಆದರ್ಶಗಳ ಸಿದ್ಧಾಂತ**

ಡಬ್ಲ್ಯೂ. ಸಿ. ಬ್ಯಾಗ್ಲೆ ಆದರ್ಶಗಳ ಸಿದ್ಧಾಂತದ (Theory of Ideals) ಪ್ರತಿಪಾದಕರು. ಇವರು ಸಾರ್ವತ್ರಿಕ ಆದರ್ಶಗಳು ವರ್ಗಾವಣೆಯಾಗುತ್ತವೆ ಎಂದು ತೋರಿಸಿದರು. ಉದಾಹರಣೆಗೆ ಒಂದು ಅಧ್ಯಯನದಲ್ಲಿ ಗಣಿತದ ಅಧ್ಯಾಪಕ ಮೂರನೇ ತರಗತಿಯ ವಿದ್ಯಾರ್ಥಿಗಳಿಗೆ ಶಾಲೆಯ ಎಲ್ಲ ಕೆಲಸಗಳಲ್ಲಿ ಮತ್ತು ಜೀವನದಲ್ಲಿ ಶುಚಿತ್ವ ಮತ್ತು ನಿಖರತೆಯ ಮಹತ್ವವನ್ನು ಒತ್ತಿ ಹೇಳಿದರು. ಗಣಿತದ ಟಿಪ್ಪಣಿ ಪುಸ್ತಕದ ಮೌಲ್ಯ ನಿರ್ಧರಿಸುವಾಗ ಶುಚಿತ್ವ ಮತ್ತು ನಿಖರತೆಯನ್ನು ಗಣನೆಗೆ ತೆಗೆದುಕೊಂಡಿದ್ದರು. ಇದರ ಪರಿಣಾಮವಾಗಿ ಇತರ ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಕೂಡ ಈ ವಿದ್ಯಾರ್ಥಿಗಳು ಇತರರಿಗಿಂತ ಶುಚಿತ್ವ ಮತ್ತು ನಿಖರತೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದು ಕಂಡು ಬಂದಿತು.

**ಗೆಸ್ಟಾಲ್ಟ್ ಅಥವಾ ಸ್ಥಾನಪಲ್ಲಟ ಸಿದ್ಧಾಂತ**

ಇದನ್ನು ಗೆಸ್ಟಾಲ್ಟ್ ವರ್ಗಾವಣೆ ಸಿದ್ಧಾಂತ (Theory of transposition) ಎಂದೂ ಹೇಳಬಹುದು. ಈ ಸಿದ್ಧಾಂತದ ಪ್ರಕಾರ ಒಂದು ಸನ್ನಿವೇಶದಲ್ಲಿ ದೊರೆತ ಒಳನೋಟ ಇನ್ನೊಂದು ಸನ್ನಿವೇಶಕ್ಕೆ ವರ್ಗಾವಣೆಯಾಗುತ್ತದೆ. ಕಲಿತಾರ್ಥಿ ಒಂದು ಸನ್ನಿವೇಶದಲ್ಲಿ ಪಡೆದ ಅಂತರ್‌ದೃಷ್ಟಿಯನ್ನು (ಒಳನೋಟ) ಮತ್ತೊಂದು ಸನ್ನಿವೇಶದ ಮೇಲೆ ಸ್ಥಾನಪಲ್ಲಟಗೊಳಿಸುತ್ತದೆ. ಒಳನೋಟ ಕಲಿಕೆಯಲ್ಲಿ ಸಮಸ್ಯಾ ಸನ್ನಿವೇಶದಲ್ಲಿ ವ್ಯಕ್ತಿಗೆ ಸ್ವ-ಪ್ರಯತ್ನದಿಂದ ಒಳನೋಟ ಉಂಟಾಗಿರುತ್ತದೆ. ಅಂದರೆ ಒಳನೋಟದಿಂದ ಸಾರ್ವತ್ರೀಕರಣವು ಉಂಟಾಗಿರುತ್ತದೆ. ಇಂಥ ಒಳನೋಟ ಕಲಿಕೆಯಿಂದ ಸಂಪಾದಿಸಿದ ಅರಿವು ಇತರ ಸನ್ನಿವೇಶಗಳಿಗೆ ವರ್ಗಾವಣೆಯಾಗುತ್ತದೆ. ವರ್ಗಾವಣೆಯ ಕೇಂದ್ರ ಬಿಂದುವಾಗಿ ಸಂಬಂಧಗಳ ಪೂರ್ಣ ವಿನ್ಯಾಸ, ಸಂರಚನೆ ಅಥವಾ ಗೆಸ್ಟಾಲ್ಟ್‌ಗೆ ಒತ್ತು ನೀಡಲಾಗುತ್ತದೆ. ವಿದ್ಯಾರ್ಥಿಗಳು ಸ್ವತಃ ತಾವೇ ಸಂಬಂಧಗಳನ್ನು ಅನ್ವೇಷಣೆ ಮಾಡಿದ್ದರೆ ವರ್ಗಾವಣೆ ಮತ್ತು ದೀರ್ಘಕಾಲಿಕ ಸಂಬಂಧಗಳು ಉತ್ತಮವಾಗಿರುತ್ತವೆ. ಇದಕ್ಕೆ ಒಂದು ಸನ್ನಿವೇಶದಿಂದ ಇನ್ನೊಂದು ಸನ್ನಿವೇಶಕ್ಕೆ ಒಳನೋಟ ಸ್ಥಾನಪಲ್ಲಟವೆ ಕಾರಣ ಎಂದು ಗೆಸ್ಟಾಲ್ಟ್ ವಾದಿಗಳು ಅಭಿಪ್ರಾಯಪಡುತ್ತಾರೆ.

**ಕಲಿಕಾ ವರ್ಗಾವಣೆಯ ಮಹತ್ವ**

ಕಲಿಕಾ ವರ್ಗಾವಣೆಯು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕಲಿಕೆ/ತರಬೇತಿ ವರ್ಗಾವಣೆ ಕಾಲ ಮತ್ತು ಶ್ರಮವನ್ನು ಕಡಿಮೆ ಮಾಡುತ್ತದೆ. ಇದು ಕಲಿಕೆಯನ್ನು ಸಮರ್ಥವನ್ನಾಗಿ ಮತ್ತು

Digitised by Bharatavani, CIIL

ಪರಿಣಾಮಕಾರಿಯಾಗಿ ಮಾಡುತ್ತದೆ. ಶಾಲೆಗಳಲ್ಲಿ ದೊರೆತ ಜ್ಞಾನ, ಆದ ಅನುಭವಗಳು ಮತ್ತು ಗಳಿಸಿದ ಕುಶಲತೆಗಳನ್ನು ದಿನನಿತ್ಯ ಜೀವನದಲ್ಲಿ ಅನ್ವಯಿಸಲು ಅಥವಾ ವರ್ಗಾವಣೆ ಮಾಡಲು ಸಾಧ್ಯವಾಗುತ್ತದೆ.

**ಕಲಿಕೆಯ ವರ್ಗಾವಣೆಗಾಗಿ ಬೋಧನೆ**

ಕಲಿಕಾ ವರ್ಗಾವಣೆ ತಾನಾಗಿಯೇ ಆಗುವುದಿಲ್ಲ. ಅದನ್ನು ಪ್ರಯತ್ನ ಪೂರ್ವಕವಾಗಿ ಮಾಡಬೇಕಾಗುತ್ತದೆ. ಕಲಿಕಾ ವರ್ಗಾವಣೆ ಸಮರ್ಥವಾಗಿ ಆಗಲು ಪಠ್ಯಕ್ರಮವನ್ನು ಸಮಂಜಸವಾಗಿ ರೂಪಿಸಬೇಕಾಗುತ್ತದೆ ಮತ್ತು ವರ್ಗಾವಣೆಗೆ ಪೋಷಕವಾಗುವ ಬೋಧನಾ ವಿಧಾನಗಳನ್ನು ಬೋಧನೆ ಒಳಗೊಂಡಿರಬೇಕು.

ಪಠ್ಯಕ್ರಮ ವಾಸ್ತವಿಕ ಜೀವನಕ್ಕೆ ಸಮೀಪವಾಗಿರುವಂತೆ ರಚಿತವಾಗಿರಬೇಕು. ಒಂದು ವಿಷಯ ಇನ್ನೊಂದು ವಿಷಯಕ್ಕೆ ಪೂರಕವಾಗಿದ್ದು ತತ್ವ, ಆದರ್ಶ, ಸಾರ್ವತ್ರೀಕರಣ ಇತ್ಯಾದಿಗಳನ್ನು ಒಳಗೊಂಡಿದ್ದು, ಇವುಗಳು ಇನ್ನೊಂದು ಕಲಿಕೆಗೆ ಹೆಚ್ಚು ಪ್ರೋತ್ಸಾಹದಾಯಕವಾಗುವಂತೆ ಇರಬೇಕು.

ಶಿಕ್ಷಕ ಬೋಧಿಸುತ್ತಿರುವಾಗ ವಿಷಯದ ಯಾವ ಯಾವ ಸಾರ್ವತ್ರೀಕರಣಗಳು, ವಿಧಾನಗಳು, ತತ್ವಗಳು, ನಿಯಮಗಳು ಇತರ ಕ್ಷೇತ್ರಗಳಲ್ಲಿ ಕಲಿಕೆಗೆ ವರ್ಗಾವಣೆ ಆಗಬೇಕು ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಶಿಕ್ಷಕನು ಸ್ಪಷ್ಟ ಗುರಿಗಳನ್ನು ರೂಪಿಸಿಕೊಂಡು, ಬೋಧಿಸುತ್ತಿರುವ ವಿಷಯದ ಯಾವ ಅಂಶಗಳು ಇತರ ವಿಷಯಗಳ ಕಲಿಕೆಗೆ, ಜೀವನದ ಸಮಸ್ಯೆಗಳ ಪರಿಹಾರಕ್ಕೆ ಉಪಯುಕ್ತ ಎಂಬುದನ್ನು ಅರಿತು, ಅವುಗಳನ್ನು ಉಪಯೋಗಿಸಲು ಅವಕಾಶ ಕಲ್ಪಿಸಬೇಕು. ಸಮಸ್ಯೆ ಪರಿಹಾರವಿಧಾನ, ಚರ್ಚೆವಿಧಾನ, ಪ್ರಯೋಜನಾ(ಪ್ರಾಜೆಕ್ಟ್) ವಿಧಾನಗಳಂಥ ವರ್ಗಾವಣೆಗೆ ಪೋಷಕವಾಗುವಂತಹ ಬೋಧನಾ ವಿಧಾನಗಳನ್ನು ಬಳಸಬೇಕು. ವಿದ್ಯಾರ್ಥಿಗಳು ಸಾರ್ವತ್ರೀಕರಣಗಳನ್ನು, ನಿಯಮಗಳನ್ನು, ತತ್ವಗಳನ್ನು ಸ್ವತಃ ರೂಪಿಸಿ ವಿಭಿನ್ನ ಸನ್ನಿವೇಶಗಳಲ್ಲಿ ಅವನ್ನು ಉಪಯೋಗಿಸುವ ಅವಕಾಶವನ್ನು ಶಿಕ್ಷಕರು ಕಲ್ಪಿಸಬೇಕು. ಬೋಧಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಅನೇಕ ದೃಷ್ಟಾಂತಗಳು, ನಿದರ್ಶನಗಳು, ಉದಾಹರಣೆಗಳನ್ನು ನೀಡಬೇಕು. ಈ ರೀತಿ ಮಾಡುವುದರಿಂದ ಕಲಿತಿದ್ದನ್ನು ನೆನಪಿನಲ್ಲಿಟ್ಟುಕೊಂಡು ಅವಶ್ಯಕ ಸಂದರ್ಭಗಳಲ್ಲಿ ಬಳಸಲು ಮತ್ತು ಅನ್ವಯಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ

**–ಡಾ. ಶೈಲಜಾ ಪಿ. ಶಾನಭಾಗ್**

## ಕಲಿಕೆಯ ವಿಧಗಳು

ಕಲಿಕೆ ಹೊಸ ಜ್ಞಾನ, ವರ್ತನೆಗಳು, ಕೌಶಲಗಳು, ಮೌಲ್ಯಗಳು ಮತ್ತು ಆದ್ಯತೆಗಳನ್ನು ಅರ್ಜಿಸುವುದು ಮತ್ತು ವಿವಿಧ ರೀತಿಯ ಮಾಹಿತಿಗಳನ್ನು ಸಂಶ್ಲೇಷಿಸುವುದನ್ನು ಒಳಗೊಳ್ಳುತ್ತದೆ. ಮಾನವ ಕಲಿಕೆಯು ಶಿಕ್ಷಣ, ವೈಯಕ್ತಿಕ ವಿಕಾಸ ಅಥವಾ ತರಬೇತಿಯ ಭಾಗವಾಗಿ ಉಂಟಾಗಬಹುದು. ಇದು ಗುರಿ ನಿರ್ದೇಶಿತವಾಗಿರಬಹುದು ಮತ್ತು ಅಭಿಪ್ರೇರಣೆಯ ಫಲಿತಾಂಶವಾಗಿರಬಹುದು. ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರಕವಾಗಿ ಉಂಟಾಗಬಹುದು.

ಕಲಿಕೆಯನ್ನು ಅನುಭವದ ಫಲಿತವಾಗಿ ವರ್ತನೆಗಳಲ್ಲಾಗುವ ಸ್ಥಿರವಾದ ಬದಲಾವಣೆ ಎಂದು ವ್ಯಾಖ್ಯಾನಿಸಿದ್ದಾರೆ. ಕಲಿಯುವ ಸಾಮರ್ಥ್ಯ ಪ್ರತಿಯೊಬ್ಬ ಜೀವಿಗೂ ಬದಲಾಗುತ್ತಿರುವ ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಒದಗಿಸುತ್ತದೆ. ಆದ್ದರಿಂದ ಕಲಿಕೆ ಮನೋವಿಜ್ಞಾನದ ಮೂಲ ಭಾಗವಾಗಿದೆ ಮತ್ತು ಇದು ಮನೋವೈಜ್ಞಾನಿಕ ಪ್ರಕ್ರಿಯೆಯಾಗಿದೆ.

ಕಲಿಕೆ ವಿವಿಧ ರೀತಿಗಳಲ್ಲಿ, ವಿವಿಧ ಸಂದರ್ಭಗಳಲ್ಲಿ ಉಂಟಾಗಬಹುದು. ಮನೋವಿಜ್ಞಾನಿಗಳು ಕಲಿಕೆಯ ಬಗ್ಗೆ ಅನೇಕ ಪ್ರಯೋಗಗಳನ್ನು ಕೈಗೊಂಡು ಅವುಗಳ ಆಧಾರದ ಮೇಲೆ ಕಲಿಕೆಯ ಅನೇಕ ವಿಧಗಳನ್ನು ಗುರ್ತಿಸಿದ್ದಾರೆ. ಅವುಗಳನ್ನು ಈ ಕೆಳಗೆ ವಿವರಿಸಲಾಗಿದೆ.

**ಅಭಿಜಾತ ಅನುಬಂಧನ:**

ಅಭಿಜಾತ ಅನುಬಂಧನ ಅನನುಬಂಧಿತ ಪ್ರಚೋದನೆ (ಉದ್ದೀಪಕ) ಯನ್ನು ಹಿಂದೆ ಸ್ವಾಭಾವಿಕ ಪ್ರಚೋದನೆಯಾದ ಇನ್ನೊಂದರೊಂದಿಗೆ ಪುನರಾವೃತ್ತಿಯಾಗಿ ಜೋಡಿಸುವುದರ ಮೂಲಕ ಉಂಟಾಗುತ್ತದೆ. ಅನುಬಂಧನವನ್ನು ಅನುಸರಿಸುವುದರಿಂದ ಅನನುಬಂಧಿತ ಪ್ರಚೋದನೆ ಮತ್ತು ಇನ್ನೊಂದು ಸಂಬಂಧಿಸಿದ ಪ್ರಚೋದನೆ ಎರಡಕ್ಕೂ ಒಂದೇ ರೀತಿಯ ಅನುಕ್ರಿಯೆ ಉಂಟಾಗುತ್ತದೆ. ಈಗ ಅದನ್ನು 'ಅನುಬಂಧಿತ ಪ್ರಚೋದನೆ' (CS) ಎನ್ನುತ್ತೇವೆ. ಮತ್ತು ಅದಕ್ಕೆ ಉಂಟಾಗುವ ಅನುಕ್ರಿಯೆ ಅನುಬಂಧಿತ ಅನಾಕ್ರಿಯೆ (CR) ಎನ್ನಿಸುತ್ತದೆ.

**ಕ್ರಿಯಾಜನ್ಯ ಬಂಧನ:**

ಇದು ಸಹಚರ್ಯದ (Association) ಕಲಿಕೆಯ ಅಧ್ಯಯನಕ್ಕೆ ಇನ್ನೊಂದು ಮಾರ್ಗೋಪಾಯವಾಗಿದೆ. ಅಭಿಜಾತ–ಅನುಬಂಧನ ಪರಾವರ್ತಿತ ಪ್ರತಿಕ್ರಿಯಾ ವರ್ತನೆಗಳ (Reflexes) ಅನುಬಂಧನಕ್ಕೆ ಸಂಬಂಧಿಸಿದ್ದಾದರೆ ಕ್ರಿಯಾಜನ್ಯ ಅನುಬಂಧನ ಸ್ವ–ಪ್ರೇರಿತ ವರ್ತನೆಯ ಮಾರ್ಪಾಡಿಗೆ ಸಂಬಂಧಿಸಿದೆ. ಅಥವಾ ಇದು ಪುನರ್ಬಲನ ಅಥವಾ ದಂಡನೆ ಮೂಲಕ ಪರಿಣಮಿಸುವ ಕ್ರಿಯಾಜನ್ಯ ವರ್ತನೆಯಾಗಿದೆ. ಈ ರೀತಿಯ ಕಲಿಕೆ ಪುನರ್ಬಲನದ ಪರಿಣಾಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಥವಾ ಪದೇ ಪದೇ

Digitised by Bharatavani, CIIL

ವರ್ತನೆ ಉಂಟಾಗುವಂತೆ ಮಾಡುವುದಕ್ಕೆ ಸಂಬಂಧಿಸಿದೆ. ಶಿಕ್ಷೆಯು ಪರಿಣಾಮವಾಗಿ ವರ್ತನೆ ಕಡಿಮೆ ಸಾರಿ ಉಂಟಾಗುವಂತೆ ಆಗುತ್ತದೆ. ಅನುಕ್ರಿಯೆಯನ್ನು ಅನುಸರಿಸಿ ಯಾವುದೇ ಪರಿಣಾಮದ ಅಭಾವ ಅಥವಾ ಇಲ್ಲದಿರುವುದೆ ಅಳಿವು ಅಥವಾ ಮಾಯವಾಗುವುದು. ಅನುಕ್ರಿಯೆಯ ಪರಿಣಾಮ ಇಲ್ಲಿದಿದ್ದಾಗ ಅಥವಾ ಅನುಕ್ರಿಯೆ ಅನುಕೂಲಕರ ಇಲ್ಲವೆ ಅನುಕೂಲಕರ ಪರಿಣಾಮಗಳನ್ನು ಉಂಟುಮಾಡದಿದ್ದಾಗ ವರ್ತನೆ ವಿರಳವಾಗಿ ಅಥವಾ ಕಡಿಮೆ ಸಾರಿ ಉಂಟಾಗುತ್ತದೆ. ಕ್ರಿಯಾಜನ್ಯ ವರ್ತನೆ ಪರಿಸರದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಇದು ಪರಿಣಾಮಗಳ ಆಧಾರದ ಮೇಲೆ ಮುಂದುವರಿಯುತ್ತದೆ/ಉಳಿದುಕೊಳ್ಳುತ್ತದೆ. ಆದ್ದರಿಂದ ಕ್ರಿಯಾಜನ್ಯ ಅನುಬಂಧನ ಒಂದು ನಿರ್ದಿಷ್ಟ ಪ್ರಚೋದಕ ಪರಿಸರದಲ್ಲಿ ಪುನರ್ಬಲನದೊಂದಿಗೆ ಅನುಕ್ರಿಯೆಯನ್ನು ಅನುಸರಿಸಿ ಅನುಕ್ರಿಯೆಯ ಸಂಭವನೀಯತೆಯನ್ನು ಹೆಚ್ಚಿಸುವ ಪ್ರಕ್ರಿಯೆಯಾಗಿದೆ. ಹೀಗೆ ಕ್ರಿಯಾಜನ್ಯ ಅನುಬಂಧನವನ್ನು ಪುನರ್ಬಲನದಿಂದ ಅಪೇಕ್ಷಿತ ಅನುಕ್ರಿಯೆಯ ಪ್ರಮಾಣವನ್ನು ವರ್ಧಿಸಬಹುದಾದ ಮತ್ತು ಶಿಕ್ಷೆಯಿಂದ ಅನಪೇಕ್ಷಿತ ಅನುಕ್ರಿಯೆಯ ಪ್ರಮಾಣವನ್ನು ಕನಿಷ್ಠಗೊಳಿಸಬಹುದಾದ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಬಹುದು.

**ವೀಕ್ಷಣಾತ್ಮಕ ಕಲಿಕೆ:** ರಾಬರ್ಟ್‌ಬಾಂಡುರ ಈ ರೀತಿಯ ಕಲಿಕೆಯನ್ನು ವಿವರಿಸಿದ್ದಾನೆ. ಇದನ್ನು ಪರೋಕ್ಷ ಕಲಿಕೆ, ಸಾಮಾಜಿಕ ಕಲಿಕೆ, ಮಾದರೀಕರಣ ಎಂದು ಸಹ ಕರೆಯುತ್ತಾರೆ. ಇದು ಇತರರು ಪ್ರದರ್ಶಿಸಿದ ನವೀನ ವರ್ತನೆಯನ್ನು ವೀಕ್ಷಿಸುವ, ಉಳಿಸಿಕೊಳ್ಳುವ ಮತ್ತು ಪುನರಾವೃತ್ತಿಸುವ ಕಾರ್ಯದಿಂದಾಗಿ ಉಂಟಾಗುವ ಕಲಿಕೆಯಾಗಿದೆ. ಪುನರ್ಬಲನ ಹೊಸ ಅನುಕ್ರಿಯೆಯ ವ್ಯಕ್ತಿ ಕಲಿಯುತ್ತಾನೆಂಬುದರ ಮೇಲೆ ಪ್ರಭಾವ ಬೀರುವುದಕ್ಕಿಂತ ಹೆಚ್ಚಾಗಿ ಅವನು ಯಾವ ಅನುಕ್ರಿಯೆಗಳನ್ನು ಕಲಿಯುತ್ತಾನೆಂಬುದರ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಬಾಂಡುರ ಮತ್ತು ಅವನ ಅನುಯಾಯಿ ವಾಲ್ಟರ್ಸ್ ವಾದಿಸಿದ್ದಾರೆ. ಮಾನವರು ಮೂರು ರೀತಿಯ ಮಾಹಿತಿಗಳನ್ನು ಏಕಕಾಲದಲ್ಲಿ ಅನುಸರಿಸಬಹುದು. ಅವುಗಳು ಪ್ರಾತ್ಯಕ್ಷಿಕೆ ನೀಡುವವರ ಉದ್ದೇಶಗಳು, ಕ್ರಿಯೆಗಳು ಮತ್ತು ಪರಿಸರದ ಫಲಿತಗಳು. ಇಂಥ ಅನುಕರಣೆಗಳು ವ್ಯಕ್ತಿಗಳನ್ನು ಅವರ ಸುತ್ತಲಿನ ಸಂಸ್ಕೃತಿಯಲ್ಲಿ ಹೊಂದಿಕೆಯಾಗಲು ಸಮರ್ಥರನ್ನಾಗಿಸುತ್ತದೆ. ಜೀವನದ ಯಾವುದೇ ಹಂತದಲ್ಲಿ ವೀಕ್ಷಣಾ ಕಲಿಕೆ ಉಂಟಾಗುತ್ತದೆಯಾದರೂ ಬಾಲ್ಯಾವಧಿಯಲ್ಲಿ ಅದರ ಹೆಚ್ಚಿನ ಪ್ರಾಮುಖ್ಯವಿದೆ ಎಂದು ಭಾವಿಸಲಾಗುತ್ತದೆ.

**ಕಲಿಕೆಯ ಷರತ್ತುಗಳು (ಉಪಾಧಿಗಳು):**

ರಾಬರ್ಟ್ ಮಿಲ್ಸ್ ಗ್ಯಾನೆ (ಆಗಸ್ಟ್ 21, 1916–ಏಪ್ರಿಲ್ 28, 2002) ಅಮೆರಿಕದ ಶೈಕ್ಷಣಿಕ ಮನೋವಿಜ್ಞಾನಿ. ಅವರು ತಮ್ಮ 'ಕಲಿಕೆಯು ಷರತ್ತುಗಳು' ಗ್ರಂಥದಿಂದಾಗಿ ಹೆಚ್ಚು ಪರಿಚಿತರು. ಗ್ಯಾನೆಯ ಕಲಿಕೆಯ ಬಗೆಗಿನ ನಿಲುವನ್ನು ಒಂದು ಸಿದ್ಧಾಂತವೆಂದು ಕರೆಯುವುದಕ್ಕಿಂತ ಅದನ್ನು ಒಂದು ಮಾದರಿ ಎಂದು ಹೇಳುವುದು ಸೂಕ್ತವೆನಿಸುತ್ತದೆ. ಗ್ಯಾನೆ ಎಲ್ಲಾ ಕಲಿಕೆಯ ಸಿದ್ಧಾಂತಗಳನ್ನು ವಿಶ್ಲೇಷಿಸಿ ಅನೇಕ ಕಲಿಕೆಯ ವಿಧಗಳನ್ನು ಗುರ್ತಿಸಿ ಅವುಗಳನ್ನು ಸರಳತೆಯಿಂದ ಸಂಕೀರ್ಣತೆಯ ದಿಶೆಯಲ್ಲಿ ಶ್ರೇಣೀಬದ್ಧಗೊಳಿಸಿದ್ದಾರೆ. ಈ ಕಲಿಕೆ ವಿಧಗಳು ಒಂದು ಮುಂದಿನದಕ್ಕೆ ಸಂಕುಲಿತಗೊಳ್ಳುವುದರಿಂದ ಈ ಮಾದರಿಯನ್ನು ಸಂಕಲಿತ ಕಲಿಕಾ ಶ್ರೇಣಿ ಮಾದರಿ ಎಂದು ಕರೆಯಲಾಗಿದೆ. ಈ ಮಾದರಿಯಲ್ಲಿ ಹಲವಾರು ವಿದಧ ಕಲಿಕೆಗಳನ್ನು ಶ್ರೇಣಿಬದ್ಧಗೊಳಿಸಬಹುದು ಮತ್ತು ಈ ವಿಧ ರೀತಿಯ ಕಲಿಕೆಗಳನ್ನು ಉಂಟುಮಾಡಲು ವಿವಿಧ ಆಂತರಿಕ ಹಾಗೂ ಬಾಹ್ಯ ಷರತ್ತುಗಳು ಅಗತ್ಯ ಎಂದು ಗ್ಯಾನೆ ವಿವರಿಸಿದ್ದಾರೆ.

ಗ್ಯಾನೆಯವರು 1965ರಲ್ಲಿ ರೂಪಿಸಿದ ತಮ್ಮ ಕಲಿಕಾ ಶ್ರೇಣಿ ಮಾದರಿಯಲ್ಲಿ ಜೋಡಣೆಗಳಿಂದ ಹೆಚ್ಚು ಸಂಕೀರ್ಣ ಕಲಿಕೆ ವಿಧದ ಕಡೆಗೆ ಮುಂದುವರಿಯುವ ಎಂಟು ವಿಧಗಳನ್ನೊಳಗೊಂಡ ಕಲಿಕೆಯ ಶ್ರೇಣಿಯನ್ನು ವಿಕಾಸಪಡಿಸಿದರು. ಮತ್ತು ಈ ಕೆಳಗಿನ ಅನುಕ್ರಮದಲ್ಲಿ ಶ್ರೇಣಿಬದ್ಧಗೊಳಿಸಿದರು.

1. ಸಂಕೇತ ಕಲಿಕೆ ($S \rightarrow R$)
2. ಪ್ರಚೋದನೆ (ಉದ್ದೀಪಕ)– ಅನುಕ್ರಿಯೆ ಕಲಿಕೆ ($S_s \rightarrow R_r$)
3. ಶೃಂಖಲಾ (ಸರಪಳಿ) ಕಲಿಕೆ ($S_s \rightarrow R_r$) ($S_s \rightarrow R_r$)
4. ಶಾಬ್ದಿಕ ಸಹಚರ್ಯ ಕಲಿಕೆ
5. ವಿಭೇದನಾ ಕಲಿಕೆ
6. ಪರಿಕಲ್ಪನೆ ಕಲಿಕೆ
7. ನಿಯಮ ಕಲಿಕೆ
8. ಸಮಸ್ಯಾ ಪರಿಹಾರ ಕಲಿಕೆ

ಗ್ಯಾನೆ 1975ರಲ್ಲಿ ತಮ್ಮ ಕಲಿಕೆಯ ಮಾದರಿಯನ್ನು ಸ್ವಲ್ಪಮಟ್ಟಿಗೆ ಪರಿಷ್ಕರಿಸಿದರು. ಈ ಪರಿಷ್ಕರಣದಲ್ಲಿ ಹಿಂದಿನ ಮಾದರಿಯಲ್ಲಿನ ಕಲಿಕೆಯ ವಿಧಗಳನ್ನು ಹಾಗೆಯೇ ಉಳಿಸಿಕೊಂಡು ಅವುಗಳನ್ನು ಪುನಃ ಕೆಲವು ಗುಂಪುಗಳನ್ನಾಗಿ ಮಾಡಿದ್ದಾರೆ. ಜೊತೆಗೆ ಕಲಿಕೆಯ ಕೆಲವು ವಿಧಗಳನ್ನು ಹೊಸದಾಗಿ ಸೇರಿಸಿದ್ದಾರೆ.

ಗ್ಯಾನೆ ವರ್ಗೀಕರಿಸಿದ ಕಲಿಕೆಯ ಐದು ಪ್ರಧಾನ ಗುಂಪುಗಳು ಹೀಗಿವೆ – ಶಾಬ್ದಿಕ ಮಾಹಿತಿ, ಬೌದ್ಧಿಕ ಕೌಶಲಗಳು, ಸಂಜ್ಞಾನಾತ್ಮಕ ತಂತ್ರಗಳು, ಗತ್ಯಾತ್ಮಕ ಕೌಶಲಗಳು ಮತ್ತು ಮನೋಭಾವಗಳು. ಪ್ರತಿಯೊಂದು ರೀತಿಯ ಕಲಿಕೆಯನ್ನು ಸುಗಮಗೊಳಿಸಲು ಅವಶ್ಯಕ ವಿವಿಧ ಆಂತರಿಕ ಮತ್ತು ಬಾಹ್ಯ ಷರತ್ತು(ಉಪಾಧಿ)ಗಳ ಮಹತ್ವವನ್ನು ಸಹ ಒತ್ತಿ ಹೇಳಿದ್ದಾರೆ. ಗ್ಯಾನೆಯ ಮಾದರಿಯ ಚೌಕಟ್ಟು ಕಲಿಕೆಯ ಎಲ್ಲ ಅಂಶಗಳನ್ನು ಒಳಗೊಂಡಿದ್ದರೆ, ಅದರ ಮಟ್ಟ ಲಕ್ಷ್ಯ ಬೌದ್ಧಿಕ ಕೌಶಲಗಳು ಮತ್ತು ಕಲಿಕೆಯಲ್ಲಿ ಬೋಧನಾ ತಂತ್ರಜ್ಞಾನದ ಪಾತ್ರದ ಮೇಲಿದೆ.

ಗ್ಯಾನೆ, ಬೌದ್ಧಿಕ ಕೌಶಲಗಳ ಸಂಕೀರ್ಣತೆಗೆ ಅನುಗುಣವಾಗಿ ಕಲಿಕೆಯ ವಿಧಗಳನ್ನು ಶ್ರೇಣಿಯಲ್ಲಿ ವ್ಯವಸ್ಥೆಗೊಳಿಸಬಹುದು

Digitised by Bharatavani, CIIL

ಎಂದು ಸೂಚಿಸುತ್ತಾರೆ. ಅವುಗಳು ಪ್ರಚೋದನೆಯನ್ನು ಗುರುತಿಸುವುದು, ಅನುಕ್ರಿಯೆಯನ್ನು ಉತ್ಪತ್ತಿ ಮಾಡುವುದು, ಕ್ರಮವನ್ನು ಅನುಸರಿಸುವುದು, ಪದಗಳ ಬಳಕೆ, ವಿಭೇದನೆಗಳು, ಪರಿಕಲ್ಪನೆ ರೂಪಿಸುವುದು, ನಿಯಮ ಅನ್ವಯಿಸುವುದು ಮತ್ತು ಸಮಸ್ಯೆ ಪರಿಹಾರ. ಶ್ರೇಣಿಯ ಪ್ರಾಥಮಿಕ ಮಹತ್ವ ಪ್ರತಿಯೊಂದು ಹಂತದಲ್ಲಿ ಕಲಿಕೆಯನ್ನು ಸುಗಮಗೊಳಿಸಲು ಗಳಿಸಬೇಕಾದ ಪೂರ್ವಜ್ಞಾನವನ್ನು ಗುರುತಿಸುವುದಾಗಿದೆ. ಕಲಿಕೆ ಅಥವಾ ತರಬೇತಿ ಕಾರ್ಯದ ಕಾರ್ಯವಿಶ್ಲೇಷಣೆಯಿಂದ ಪೂರ್ವಾಪೇಕ್ಷೆಗಳನ್ನು ಗುರುತಿಸಲಾಗುವುದು.

ಇದರೊಂದಿಗೆ ಒಂಬತ್ತು ಬೋಧನಾ ಸಂಗತಿಗಳು ಮತ್ತು ಅವುಗಳಿಗೆ ಅನುರೂಪವಾಗಿರುವ ಸಂಜ್ಞಾನಾತ್ಮಕ ಪ್ರಕ್ರಿಯೆಗಳ ರೂಪುರೇಖೆಗಳು ಗ್ಯಾನೆಯ ಮಾದರಿಯ ಪ್ರಧಾನ ಕೊಡುಗೆಗಳಾಗಿವೆ. ಅವುಗಳು

1. ಅವಧಾನ ಸಂಪಾದಿಸುವುದು (ಸ್ವೀಕಾರ)
2. ಉದ್ದೇಶಗಳ ಬಗೆಗೆ ಕಲಿಕಾರ್ಥಿಗಳಿಗೆ ತಿಳಿಸುವುದು (ನಿರೀಕ್ಷೆ)
3. ಹಿಂದಿನ ಕಲಿಕೆಯನ್ನು ಜ್ಞಾಪಿಸಿಕೊಳ್ಳಲು ಉದ್ದೀಪಿಸುವುದು (ಅರಿವಿಗೆ ತಂದುಕೊಳ್ಳುವುದು)
4. ಪ್ರಚೋದನೆ ಪ್ರಸ್ತುತ ಪಡಿಸುವುದು (ಆಯ್ದ ಪ್ರತ್ಯಾಕ್ಷಾನುಭವ)
5. ಕಲಿಕಾ ಮಾರ್ಗದರ್ಶನವನ್ನು ಒದಗಿಸುವುದು (ಅರ್ಥಾತ್ಮಕವಾದದ್ದನ್ನು ಸಂಕೇತಿಸುವುದು)
6. ಕಾರ್ಯ ನಿರ್ವಹಣೆಯನ್ನು ಹೊರಸೆಳೆಯುವುದು (ಅನುಕ್ರಿಯಿಸುವುದು)
7. ಪುಷ್ಟೀಕರಣ ಒದಗಿಸುವುದು (ಪುನರ್ಬಲನ)
8. ಕಾರ್ಯ ನಿರ್ವಹಣೆಯನ್ನು ಮೌಲ್ಯಮಾಪನ ಮಾಡುವುದು (ಅರಿವಿಗೆ ತಂದುಕೊಡುವುದು)
9. ಧಾರಣ ಮತ್ತು ವರ್ಗಾವಣೆಯನ್ನು ವರ್ಧಿಸುವುದು (ಸಾರ್ವತ್ರೀಕರಣ)

ಈ ಸಂಗತಿಗಳು ಕಲಿಕೆಗೆ ಅವಶ್ಯಕ ಷರತ್ತುಗಳನ್ನು ಒದಗಿಸುತ್ತವೆ. ಮತ್ತು ಬೋಧನೆಯನ್ನು ವಿನ್ಯಾಸಗೊಳಿಸಲು ಮತ್ತು ಸಮರ್ಪಕ ಮಾಧ್ಯಮವನ್ನು ಆಯ್ದುಕೊಳ್ಳಲು ಆಧಾರವಾಗಿ ಕೆಲಸಮಾಡುತ್ತವೆ. ಹೀಗೆ ಕಲಿಕಾ ಶ್ರೇಣಿಗಳು ಕಲಿಯಬೇಕಾದ ಬೌದ್ಧಿಕ ಕೌಶಲಗಳನ್ನು ವ್ಯಾಖ್ಯಾನಿಸುತ್ತವೆ ಮತ್ತು ಬೋಧನೆಯನ್ನು ಕ್ರಮಾನುಗತಗೊಳಿಸಲು ಆಧಾರವನ್ನು ಒದಗಿಸುತ್ತವೆ.

**ಸಂಜ್ಞಾನಾತ್ಮಕ ಕಲಿಕೆ:**

ಸಂಜ್ಞಾನಾತ್ಮಕ ಕ್ರಾಂತಿ ಪ್ರಧಾನ ಮಾರ್ಗೋಪಾಯವಾಗಿ 1960ರಲ್ಲಿ ಸಂಜ್ಞಾನಾತ್ಮಕವಾದ ವರ್ತನಾವಾದವನ್ನು ಸ್ಥಾನಪಲ್ಲಟ ಮಾಡಿತು. 1929ರಲ್ಲಿ ಗೆಸ್ಟಾಲ್ಟ್ ಮನೋವಿಜ್ಞಾನಿಯಾದ ಬೋಡೆಯ ಪ್ರಕಟಣೆ ವರ್ತನಾವಾದಿಗಳಿಗೆ ಮೊದಲನೆ ಸವಾಲಾಗಿ ಪರಿಣಮಿಸಿತು. ಬೋಡೆ ವರ್ತನಾವಾದಿಗಳನ್ನು ಕಲಿಕೆಯನ್ನು ವಿವರಿಸಲು ಬಾಹ್ಯ ವರ್ತನೆಯ ಮೇಲೆ ಅತಿಯಾಗಿ ಅವಲಂಬಿಸಿರುವುದಾಗಿ ಟೀಕಿಸಿದರು. ಸಂಜ್ಞಾನಾತ್ಮಕ ಸಿದ್ಧಾಂತಿಗಳು ಮುಂದುವರಿದು ಸಂಜ್ಞಾನಾತ್ಮಕ ಮಾರ್ಗೋಪಾಯದಲ್ಲಿ ವರ್ತನೆ, ಚಿಂತನೆ, ಸ್ಮೃತಿ, ತಿಳಿಯುವುದು ಮತ್ತು ಸಮಸ್ಯೆ ಪರಿಹರಿಸುವಂತೆ ಮಾನವ ಮನಸ್ಸಿನ ಆಂತರಿಕ ಮಾನಸಿಕ ಪ್ರಕ್ರಿಯೆಗಳನ್ನು ಗಮನಿಸುತ್ತಾರೆ. ಈ ಮಾರ್ಗೋಪಾಯದ ಎರಡು ಮುಖ್ಯ ಊಹನಗಳು:–

1. ಸ್ಮೃತಿ ವ್ಯವಸ್ಥೆ ಮಾಹಿತಿಯ ಸಕ್ರಿಯ ವ್ಯವಸ್ಥಿತ ಸಂಸ್ಕಾರಕವಾಗಿದೆ ಮತ್ತು
2. ಕಲಿಕೆಯಲ್ಲಿ ಪೂರ್ವಜ್ಞಾನ ಪ್ರಮುಖ ಪಾತ್ರವಹಿಸುತ್ತದೆ.

ಗೆಸ್ಟಾಲ್ ಮನೋವಿಜ್ಞಾನಿಗಳು ಪ್ರತ್ಯೇಕಿಸಿದ ಸಂಗತಿಗಳಿಗಿಂತ ಸಂಗತಿಗಳ ವಿನ್ಯಾಸಗಳನ್ನು ಆಧರಿಸಿ ಅವರ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರ ಪ್ರಕಾರ ಕಲಿಕೆಯನ್ನು ಕಲಿಕಾರ್ಥಿಯ ಸಂಜ್ಞಾನಾತ್ಮಕ ರೂಪರೇಖೆ (Schemata) ಗಳಲ್ಲಾದ ಬದಲಾವಣೆ ಎಂದು ವ್ಯಾಖ್ಯಾನಿಸಿದರು. ಸಂಜ್ಞಾನಾತ್ಮಕ ಸಿದ್ಧಾಂತಗಳು ಅಥವಾ ಮಾದರಿಗಳು ಎಂದು ಕರೆಸಿಕೊಳ್ಳುವ ಗೆಸ್ಟಾಲ್ಟರ ಕಲಿಕೆಯ ದೃಷ್ಟಿಕೋನಗಳನ್ನು ಕಲಿಕೆಗೆ ಅಳವಡಿಸಿಕೊಳ್ಳಲಾಗಿದೆ.

### 1. ಕಲಿಕೆಯ ಸಂಜ್ಞಾನಾತ್ಮಕ ರೀತಿಗಳು

ಡಿ. ರುಮಲ್ ಹಾರ್ಟ್ ಮತ್ತು ಡಿ. ನಾರ್ಮನ್‌ರು (1978) ಮಾನವ ಕಲಿಕೆಯ ಸಾಮಾನ್ಯ ಮಾದರಿಯಲ್ಲಿ ಕಲಿಕೆಯ ಮೂರು ರೀತಿಗಳಿವೆ ಎಂದು ಪ್ರಸ್ತಾಪಿಸಿದರು. ಅವುಗಳು ವೃದ್ಧಿಸುವುದು (Accretion) ಸಂರಚಿಸುವುದು ಮತ್ತು ಹೊಂದಿಸುವುದು. ಅವರು ಅನುರೂಪತೆಯ ಪ್ರಕ್ರಿಯೆಗಳನ್ನು ಸೇರಿಸಲು ಮಾದರಿಯನ್ನು ವಿಸ್ತರಿಸಿದರು. ಅವುಗಳು ಕಲಿಕೆ ಮತ್ತು ಅಸ್ತಿತ್ವದಲ್ಲಿರುವ ಸಂಜ್ಞಾನಾತ್ಮಕ ರೂಪುರೇಖೆಯ ಮೇಲೆ ಮಾದರಿಯನ್ನು ಅನುಸರಿಸಿ ಹೊಸ ಸಂಜ್ಞಾನಾತ್ಮಕ ರೂಪರೇಖೆಯನ್ನು ಸೃಷ್ಟಿಸುವುದು ಮತ್ತು ಭವಿಷ್ಯದ ಅನುಭವಗಳನ್ನು ಆಧರಿಸಿ ಸುಧಾರಣೆ ಮಾಡುವುದು.

**ವೃದ್ಧಿಸುವುದು:** ಅಸ್ಥಿತ್ವದಲ್ಲಿರುವ ಸ್ಮೃತಿಗೆ ಹೊಸ ಜ್ಞಾನವನ್ನು ಸೇರಿಸುವುದು ಮತ್ತು ಇದು ತೀರ ಸಾಮಾನ್ಯ ನಮೂನೆಯ ಕಲಿಕೆಯಾಗಿದೆ. ಭಾಷಾ ಕಲಿಕೆಯಲ್ಲಿ ಸಂಕೇತಗಳ ಕಲಿಕೆಯನ್ನು ಉದಾಹರಣೆಯಾಗಿ ಪರಿಗಣಿಸಿದರೆ ವೃದ್ಧಿಸುವ ಪ್ರಕ್ರಿಯೆ ಸಂಕೇತಗಳ ಪ್ರಾರಂಭಿಕ ಕಲಿಕೆಯನ್ನು ಒಳಗೊಳ್ಳುತ್ತದೆ.

**ಸಂರಚಿಸುವುದು:** ಇದು ನವೀನ ಪರಿಕಲ್ಪನಾತ್ಮಕ ಸಂರಚನೆಗಳು ಅಥವಾ ಸಂಜ್ಞಾನಾತ್ಮಕ ರೂಪುರೇಖೆಗಳ ರೂಪಿಸುವಿಕೆಯನ್ನು ಒಳಗೊಳ್ಳುತ್ತದೆ. ಇದಕ್ಕೆ ಸಾಕಷ್ಟು ಪ್ರಯತ್ನದ ಅಗತ್ಯವಿದೆ ಮತ್ತು ಕಡಿಮೆ ಸಲ ಉಂಟಾಗುತ್ತದೆ. ಉದಾ: ಅನುಕ್ರಮವನ್ನು ಅಥವಾ ಒಟ್ಟು ಪದಗಳನ್ನು ಗುರುತಿಸಲು ಕಲಿಯುವುದು.

Digitised by Bharatavani, CIIL

**ಹೊಂದಿಸುವುದು:** ಸಾಮಾನ್ಯವಾಗಿ ಅಭ್ಯಾಸದ ಮೂಲಕ ನಿರ್ದಿಷ್ಟ ಕಾರ್ಯಕ್ಕೆ ಜ್ಞಾನವನ್ನು ಹೊಂದಾಣಿಕೆ (Tuning) ಮಾಡುವುದಾಗಿದೆ. ಹೊಂದಿಸುವುದು ತೀರ ನಿಧಾನವಾಗಿ ಕಲಿಯುವ ರೀತಿಯಾಗಿದೆ ಮತ್ತು ತಜ್ಞ ಕಾರ್ಯನಿರ್ವಹಣೆಗಾಗಿ ಪರಿಗಣಿಸಲ್ಪಡುತ್ತದೆ. ಉದಾಹರಣೆಗೆ ವ್ಯವಹಾರದಲ್ಲಿ ಕ್ರಮೇಣ ಹೆಚ್ಚಾಗುವುದು ಅಥವಾ ರವಾನೆಯ ವೇಗ ಹೊಂದಿಸುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ಮೂಲತಃ ಈ ಮಾದರಿಯನ್ನು ಭಾಷಾ ಕಲಿಕೆಯ ಸಂದರ್ಭದಲ್ಲಿ ಪ್ರಸ್ತಾಪಿಸಿದರು. ಇದು ಈಗಲೂ ಮಾನವ ಕಲಿಕೆಯ ಸಾಮಾನ್ಯ ಮಾದರಿಯಾಗಿ ಬಳಕೆಯಾಗುತ್ತದೆ.

### 1. ಮೇಯರರ ಸಂಜ್ಞಾನಾತ್ಮಕ ಬಹುಮಾಧ್ಯಮ ಕಲಿಕೆ

1974ರಲ್ಲಿ ಬಾಡ್ಡೆಲೆ ಮತ್ತು ಹಿಚ್‌ರು ಕಾರ್ಯಾತ್ಮಕ ಸ್ಮೃತಿ (Working Memory) ಸಿದ್ಧಾಂತವನ್ನು ಪ್ರಸ್ತಾಪಿಸಿದರು ಮತ್ತು ಈ ಸಿದ್ಧಾಂತವು ಎರಡು ದೊಡ್ಡ ಸ್ವತಂತ್ರ ಉಪ ಅಂಗಗಳನ್ನು ಒಳಗೊಂಡಿವೆ. ಅವುಗಳು ಒಂದಕ್ಕೊಂದು ಸಮಾಂತರವಾಗಿ ಕೆಲಸ ಮಾಡುವಂತಹ ದೃಶ್ಯ ಮತ್ತು ಶಾಬ್ದಿಕ/ಶ್ರವಣಗಳಿಗೆ ಸಂಬಂಧವಾದವುಗಳು. ಇವು ಒಂದೇ ಸಮಯಕ್ಕೆ ಕಣ್ಣುಗಳು ಮತ್ತು ಕಿವಿಗಳಿಂದ ಬರುವ ಮಾಹಿತಿಯನ್ನು ಸಂಸ್ಕರಿಸುತ್ತವೆ. ಕಲಿಕಾರ್ಥಿಯು ಬಹುರೀತಿಯ ಬೋಧನೆಯಿಂದ ತಡೆಯಲು ಸಾಧ್ಯವಾಗುವಂತೆ ಅಥವಾ ಮಿತಿಮೀರಿ ಹೇರಲ್ಪಡಬೇಕಾಗಿಲ್ಲ ಮತ್ತು ಕಲಿಕಾರ್ಥಿಗೆ ಅದು ಲಾಭದಾಯಕವಲ್ಲ ಎಂದು ಸಾಬೀತಾಗಬಹುದು. ದೃಶ್ಯಕವಾಗಿ ಮತ್ತು ಶಾಬ್ದಿಕವಾಗಿ ಎರಡು ರೀತಿಯಲ್ಲಿ ಪ್ರಸ್ತುತ ಪಡಿಸಿದ ಅಂಶಗಳನ್ನು ಉತ್ತಮವಾಗಿ ಸ್ಮರಿಸಬಹುದು. ದ್ವಿ-ವಿಧ ಸಂಕೇತ ಕಲಿಕೆಯನ್ನು ಮೊದಲು ಪೈವಿಯೋ ಪ್ರತಿಪಾದಿಸಿದರು ಮತ್ತು ನಂತರದಲ್ಲಿ ರಿಚರ್ಡ್ ಇ. ಮೇಯರರು ಬಹುಮಾಧ್ಯಮಕ್ಕೆ ಅನ್ವಯಿಸಿದರು.

ಮುಂದಿನ ಉಪಯೋಗಕ್ಕಾಗಿ ವ್ಯವಹರಿಸಲು, ದಾಸ್ತಾನು ಮಾಡಲು ಮತ್ತು ಪುನಃ ಪಡೆಯಲು, ಒಳಬರುವ ಮಾಹಿತಿಯನ್ನು ಜ್ಞಾನವಾಗಿ ವ್ಯವಸ್ಥೆಗೊಳಿಸಲು, ಈ ಮಾಹಿತಿಗಳನ್ನು ಪ್ರಸ್ತುತಪಡಿಸಲು ದೃಶ್ಯ ಮತ್ತು ಶಾಬ್ದಿಕ ಸಂಕೇತಗಳೆರಡನ್ನು ಬಳಸಲಾಗುವುದು.

ಮಾಹಿತಿಯನ್ನು ದೃಶ್ಯಕವಾಗಿ ಮತ್ತು ಶಾಬ್ದಿಕವಾಗಿ ಎರಡು ರೀತಿಯಲ್ಲಿ ಸಂಕೇತಿಸಿದರೆ ಅದು ಕಲಿಕಾರ್ಥಿಯ ಸಂಜ್ಞಾನಾತ್ಮಕ ಭಾರವನ್ನು ಕಡಿಮೆ ಮಾಡುತ್ತದೆ. ಇದರಿಂದ ಅವರು ಒಳಬರುವ ಮಾಹಿತಿಯನ್ನು ಉತ್ತಮವಾಗಿ ನಿರ್ವಹಿಸಲು ಸಮರ್ಥರಾಗುತ್ತಾರೆ. ಮೇಯರರು ಇದನ್ನು 'ವಿಧಿತಕ್ರಮ ಪರಿಣಾಮ' ಅಥವಾ 'ವಿಧಿತಕ್ರಮ ತತ್ವ' ಎಂದು ಕರೆದರು.

ಸರಣಿ ಅಧ್ಯಯನಗಳಲ್ಲಿ, ಮೇಯರ ಮತ್ತು ಇತರರು ಪೈವಿಯೊರವರ ದ್ವಿ-ವಿಧ ಸಂಕೇತ ಸಿದ್ಧಾಂತವನ್ನು ಮೇಯರರು ರೂಪಿಸಿದ ಬಹುಮಾಧ್ಯಮ ಕಲಿಕೆಯ ಸಂಜ್ಞಾನಾತ್ಮಕ ಸಿದ್ಧಾಂತಗಳೊಂದಿಗೆ ಪರೀಕ್ಷಿಸಿದರು. ಕಲಿಕಾರ್ಥಿಗಳಿಗೆ ಬಹುವಿಧದ (multi modal) ಬೋಧನೆಯನ್ನು ನೀಡಿದಾಗ ಅವರು ಅವರ ಕಲಿಕೆಯನ್ನು ಉತ್ತಮವಾಗಿ ವರ್ಗಾಯಿಸಲು ಸಮರ್ಥರಾಗುತ್ತಾರೆ ಎಂದು ತಿಳಿಸಿದರು. ಬಹುಮಾಧ್ಯಮದ ಸಂಜ್ಞಾನಾತ್ಮಕ ಸಿದ್ಧಾಂತವು ಮೂರು ಪ್ರಧಾನ ಊಹನೆಗಳನ್ನು ಆಧರಿಸಿದೆ.

- ಮಾಹಿತಿಯನ್ನು ಸಂಸ್ಕರಿಸಲು ಎರಡು ಪ್ರತ್ಯೇಕ ವಾಹಿನಿಗಳಿವೆ (ಶ್ರವ್ಯ ಮತ್ತು ದೃಶ್ಯಕ). (ಕೆಲವೊಮ್ಮೆ ಇದನ್ನು ದ್ವಿ-ವಿಧ ಸಂಕೇತ ಸಿದ್ಧಾಂತ ಎನ್ನುತ್ತಾರೆ.)
- ಪ್ರತಿಯೊಂದು ವಾಹಿನಿಗೆ ಸೀಮಿತ (ನಿರ್ದಿಷ್ಟ) ಧಾರಣಶಕ್ತಿ ಇದೆ.
- ಕಲಿಕೆ ಪೂರ್ವ ಜ್ಞಾನವನ್ನು ಆಧರಿಸಿ ಮಾಹಿತಿಯನ್ನು ಶೋಧಿಸುವ ಆಯ್ದುಕೊಳ್ಳುವ, ವ್ಯವಸ್ಥೆಗೊಳಿಸುವ ಮತ್ತು ಸಮಗ್ರಗೊಳಿಸುವ ಕ್ರಿಯಾಶೀಲ ಪ್ರಕ್ರಿಯೆಯಾಗಿದೆ.

  ಮೇಯರರು ಮೂರು ಸ್ಮೃತಿ ದಾಸ್ತಾನುಗಳ ಪಾತ್ರವನ್ನು ಚರ್ಚಿಸಿದ್ದಾರೆ.
- ಸಂವೇದನದ ಸ್ಮೃತಿ: ಪ್ರಚೋದಕಗಳನ್ನು ಸ್ವೀಕರಿಸುತ್ತದೆ ಮತ್ತು ತೀರ ಕಡಿಮೆ ಅವಧಿಗೆ ಸಂಗ್ರಹಿಸುತ್ತದೆ.
- ಕಾರ್ಯಾತ್ಮಕ ಸ್ಮೃತಿ: ಮಾನಸಿಕ ರೂಪರೇಖೆಗಳು ಅಥವಾ ರಚನೆಗಳನ್ನು ಸೃಷ್ಟಿಸಲು ಮಾಹಿತಿಯನ್ನು ಕ್ರಿಯಾಶೀಲವಾಗಿ ಸಂಸ್ಕರಿಸುತ್ತದೆ.
- ದೀರ್ಘಕಾಲಿಕ ಸ್ಮೃತಿಯು ಎಲ್ಲ ಕಲಿತ ವಿಷಯಗಳ ಉಗ್ರಾಣವಾಗಿದೆ.

ಮುಂದುವರಿದು, ಮಾನವ ಜೀವಿಗಳು ಮಾತ್ರ ಒಂದೇ ಸಮಯಕ್ಕೆ ಒಂದು ವಾಹಿನಿಯಲ್ಲಿ ನಿರ್ದಿಷ್ಟ ಪ್ರಮಾಣದ ಮಾಹಿತಿಯನ್ನು ಸಂಸ್ಕರಿಸುತ್ತಾರೆ ಮತ್ತು ಕ್ರಿಯಾಶೀಲವಾಗಿ ಮಾನಸಿಕ ಚಿತ್ರಣಗಳನ್ನು ಸೃಷ್ಟಿಸುವ ಮೂಲಕ ಒಳಬರುವ ಮಾಹಿತಿಯ ಸಂವೇಗವನ್ನು ಉಂಟುಮಾಡುತ್ತಾರೆ. ಮೇಯರರ ಸಂಜ್ಞಾನಾತ್ಮಕ ಬಹುಮಾಧ್ಯಮ ಕಲಿಕೆ ಪಾರಸ್ಪರಿಕವಾಗಿ ಏಕೈಕ ನಮೂನೆಯಲ್ಲಿ ಮಿದುಳು, ಪದಗಳ, ಚಿತ್ರಗಳ ಮತ್ತು ಶ್ರಾವ್ಯ ಮಾಹಿತಿಗಳ ಬಹುಮಾಧ್ಯಮ ಚಿತ್ರಣವನ್ನು ಅರ್ಥೈಸುವುದಿಲ್ಲ. ಆದರೆ ತಾರ್ಕಿಕ ಮಾನಸಿಕ ರಚನೆಗಳನ್ನು ಉತ್ಪತ್ತಿ ಮಾಡಲು ಆಯ್ದುಕೊಳ್ಳುತ್ತದೆ ಮತ್ತು ಕ್ರಿಯಾತ್ಮಕವಾಗಿ ವ್ಯವಸ್ಥೆಗೊಳಿಸುತ್ತದೆ ಎಂಬ ವಿಚಾರವನ್ನು ತಿಳಿಸುತ್ತದೆ.

### 3. ಜಾನ್ ಸ್ವೇಲರ್‌ರ ಸಂಜ್ಞಾನಾತ್ಮಕ ಹೊರೆ-ಬಹುಮಾಧ್ಯಮ ಕಲಿಕೆ

ಸಂಜ್ಞಾನಾತ್ಮಕ ಹೊರೆ ಸಿದ್ಧಾಂತವನ್ನು ಮಾಹಿತಿ ಪ್ರಸ್ತುತ ಪಡಿಸುವ ರೀತಿಗೆ ಸಹಾಯಕವಾಗುವ ಮಾರ್ಗದರ್ಶಿಗಳನ್ನು ಒದಗಿಸುವ ಮೂಲಕ ಬೌದ್ಧಿಕ ಕಾರ್ಯನಿರ್ವಹಣೆಯನ್ನು ಹೆಚ್ಚಿಸುವ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಗುರಿಯೊಂದಿಗೆ ವಿನ್ಯಾಸಗೊಳಿಸಲಾಗಿದೆ.

ಆಸ್ಟ್ರೇಲಿಯಾದ ಶೈಕ್ಷಣಿಕ ಮನೋವಿಜ್ಞಾನಿಯಾದ ಜಾನ್ ಸ್ವೇಲರ್‌ರು ಮಾನವ ಸಂಜ್ಞಾನಾತ್ಮಕ ವಿನ್ಯಾಸ (Architecture) ದೊಂದಿಗೆ ಹೊಂದಿಕೆಯಾಗುವ ಷರತ್ತುಗಳಡಿಯಲ್ಲಿ ಕಲಿಕೆ

Digitised by Bharatavani, CIIL

ಅತ್ಯುತ್ತಮವಾಗಿ ಉಂಟಾಗುತ್ತದೆ ಎಂದು ಸೂಚಿಸಿದ್ದಾರೆ. ಮತ್ತು ಮಾನವ ಸಂಜ್ಞಾನಾತ್ಮಕ ವಿನ್ಯಾಸವನ್ನು ವರ್ಣಿಸಿದ್ದಾರೆ. ನಮ್ಮ ಮಿದುಳು ಮತ್ತು ಸ್ಮೃತಿಯ ಜ್ಞಾನವನ್ನು ಆಧರಿಸಿ ದೃಢ ಬೋಧನಾ ವಿನ್ಯಾಸ ತತ್ವಗಳನ್ನು ಅನ್ವಯಿಸುವ ಅವಶ್ಯಕತೆಯನ್ನು ಸೂಚಿಸಿದ್ದಾರೆ. ಈ ಸಿದ್ಧಾಂತ ಒಂದು ವ್ಯಕ್ತಿಯ ಜ್ಞಾನ ಮೂಲವನ್ನು ರೂಪಿಸುವ ಸಂಜ್ಞಾನಾತ್ಮಕ ರೂಪರೇಖೆ ಅಥವಾ ಅಂಶಗಳ ಸಂಯೋಜನೆಗಳನ್ನು ಸಂಜ್ಞಾನಾತ್ಮಕ ವಿನ್ಯಾಸಗಳು ಎಂದು ಭಾವಿಸುತ್ತದೆ. ವಿವಿಧ ರೀತಿಯ ಸ್ಮೃತಿಗಳು ಮತ್ತು ಅವುಗಳ ಅನ್ಯೋನ್ಯ ಕಾರ್ಯಗಳಂತಹ ಕಾರ್ಯಾತ್ಮಕ ಸ್ಮೃತಿಯ ಮೇಲೆ ದೀರ್ಘಕಾಲಿಕ ಸ್ಮೃತಿಯ ಪ್ರಭಾವಗಳ ಬಗೆಗೆ ತಿಳಿಸುತ್ತದೆ. ದೀರ್ಘಕಾಲಿಕ ಸ್ಮೃತಿಯಲ್ಲಿ ಇರುವ ರೂಪರೇಖೆಗಳು ಕಾರ್ಯಾತ್ಮಕ ಸ್ಮೃತಿಯಲ್ಲಿ ಮಾಹಿತಿ ವಿಶ್ಲೇಷಣೆಯ ರೀತಿಯ ಮೇಲೆ ನೇರವಾಗಿ ಪರಿಣಾಮ ಬೀರುವುದನ್ನು ಗಮನಿಸಲಾಗಿದೆ.

ಮುಂದುವರಿದು ಸ್ವೇಲರ್‌ರು ಸಂಜ್ಞಾನಾತ್ಮಕ ರೂಪ ರೇಖೆಗಳು ಇಲ್ಲದಿರುವಾಗ ಕಲಿಕಾರ್ಥಿಗಳು ಅವರದ್ದೆ ಆದ ಸಂಜ್ಞಾನಾತ್ಮಕ ರೂಪರೇಖೆಗಳನ್ನು ವಿಕಾಸಗೊಳಿಸಿಕೊಳ್ಳಲು ಪರ್ಯಾಯವಾಗಿ ಬೋಧನೆ ಮಾರ್ಗದರ್ಶನವನ್ನು ಒದಗಿಸುವುದು ಅವಶ್ಯಕ ಎಂದು ವಿವರಿಸುತ್ತಾರೆ. ಅವರು ಮೂರು ರೀತಿಯ ಸಂಜ್ಞಾನಾತ್ಮಕ ಹೊರೆಗಳನ್ನು ವರ್ಣಿಸಿದ್ದಾರೆ. ಅವುಗಳು ಆಂತರಿಕ ಸಂಜ್ಞಾನಾತ್ಮಕ ಹೊರೆ, ಬಾಹ್ಯ ಸಂಜ್ಞಾನಾತ್ಮಕ ಹೊರೆ ಮತ್ತು ಪ್ರಸಕ್ತ ಸಂಜ್ಞಾನಾತ್ಮಕ ಹೊರೆ. ಸಂಜ್ಞಾನಾತ್ಮಕ ಹೊರೆ, (Cognitive Load) ಈ ಪದವನ್ನು ಸಂಜ್ಞಾನಾತ್ಮಕ ಮನೋವಿಜ್ಞಾನದಲ್ಲಿ ಬೋಧನಾ ಪ್ರಕ್ರಿಯೆಯ ಸಮಯದಲ್ಲಿ ಕಲಿಕಾರ್ಥಿಗಳ ಚಿಂತನೆ, ಸಮಸ್ಯೆ ಪರಿಹಾರ ಮತ್ತು ತಾರ್ಕಿಕ ಕೌಶಲಗಳನ್ನು (ಪ್ರತ್ಯಕ್ಷಾನುಭವ, ಸ್ಮೃತಿ, ಭಾಷೆ ಇತ್ಯಾದಿಗಳನ್ನು ಒಳಗೊಳ್ಳುತ್ತದೆ) ಕಾರ್ಯ ನಿರ್ವಹಣ ಸ್ಮೃತಿಯ ಕಾರ್ಯಕಾರಿ ನಿಯಂತ್ರಣಕ್ಕೆ ಸಂಬಂಧಿಸಿದ ಹೊರೆಯನ್ನು ದೃಷ್ಟಾಂತಿಸಲು ಬಳಸಲಾಯಿತು.

➢ **ಆಂತರಿಕ ಸಂಜ್ಞಾನಾತ್ಮಕ ಹೊರೆ:** ಇದು ಎಲ್ಲ ಬೋಧನೆಗಳು, ಅವುಗಳೊಂದಿಗೆ ಅಂತರಿಕ ಕಾಠಿಣ್ಯತೆಯನ್ನು ಒಳಗೊಂಡಿದೆ. ಈ ಕಾಠಿಣ್ಯವನ್ನು ಹೋಗಲಾಡಿಸಲು ಹಲವಾರು ಸಂಜ್ಞಾನಾತ್ಮಕ ರೂಪರೇಖೆಗಳನ್ನು ಪ್ರತ್ಯೇಕ ಉಪ-ರೂಪರೇಖೆಗಳಾಗಿ ಒಡೆಯಬೇಕಾಗಬಹುದು ಮತ್ತು ಅನಂತರ ಒಟ್ಟಿಗೆ ತರಲಾಗುವುದು. ಇದನ್ನು "ಸಂಯೋಜಿತ ಇಡಿ" ಎಂದು ವರ್ಣಿಸಲಾಗಿದೆ. ಆಂತರಿಕ ಹೊರೆ ಸಾಮಾನ್ಯವಾಗಿ ಮಾರ್ಪಡಿಸಲು ಕಠಿಣವಾದುದ್ದರಿಂದ ಈ ಅಂತರಿಕ ಕಾಠಿಣ್ಯವನ್ನು ಬೋಧಕನಿಂದ ಬದಲಾಯಿಸಲಾಗದಿರಬಹುದು.

➢ **ಬಾಹ್ಯ ಸಂಜ್ಞಾನತ್ಮಕ ಹೊರೆ:** ಇದು ಬೋಧನಾ ವಿನ್ಯಾಸಕರ ನಿಯಂತ್ರಣದಲ್ಲಿರುತ್ತದೆ. ಈ ನಮೂನೆಯ ಸಂಜ್ಞಾನಾತ್ಮಕ ಹೊರೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದ ವಿನ್ಯಾಸಕ್ಕೆ ಸಂಬಂಧಿಸಿದಂತೆ ವಿಕಾಸಗೊಳ್ಳುತ್ತದೆ.

➢ **ಪ್ರಸಕ್ತ ಸಂಜ್ಞಾನಾತ್ಮಕ ಹೊರೆ:** ಈ ತರದ ಹೊರೆ ಸಂಸ್ಕರಿಸುವುದು, ರಚಿಸುವುದು ಮತ್ತು ಸಂಜ್ಞಾನಾತ್ಮಕ ರೂಪರೇಖೆಗಳ ಸ್ವಯಂ ಚಾಲನೆಗೆ ಮೀಸಲಾಗಿದೆ. ಬೋಧನಾ ವಿನ್ಯಾಸಕರು ಪ್ರಸಕ್ತ ಹೊರೆಯನ್ನು ಕುಶಲತೆಯಿಂದ ಬಳಸಬಹುದು.

➢ ಬಾಹ್ಯ ಸಂಜ್ಞಾನಾತ್ಮಕ ಹೊರೆ: ಮತ್ತು ಆಂತರಿಕ ಸಂಜ್ಞಾನಾತ್ಮಕ ಹೊರೆ ಮಾಹಿತಿಯ ಸಂಕೀರ್ಣತೆಯ ಮತ್ತು ಸೂಕ್ತವಲ್ಲದ ಬೋಧನಾ ವಿನ್ಯಾಸಗಳ ಫಲವಾದರೆ, ಪ್ರಸಕ್ತ ಸಂಜ್ಞಾನಾತ್ಮಕ ಹೊರೆಯನ್ನು **'ಪರಿಣಾಮಕಾರಿ'** ಎಂದು ಕರೆಯಲಾಗಿದೆ. ಇದು ಯಶಸ್ವಿ ರೂಪರೇಖೆ ರಚನೆಯಿಂದ ಉಂಟಾಗುತ್ತದೆ. ಆದ್ದರಿಂದ ಸ್ವೇಲರ್‌ರು ಬೋಧನಾ ವಿನ್ಯಾಸಗಳ ಗುರಿ ಕಾರ್ಯನಿರ್ವಹಣಾ ಸ್ಮೃತಿಯನ್ನು ಸ್ವತಂತ್ರಗೊಳಿಸಲು ಅವಶ್ಯಕವಾಗಿ ಬಾಹ್ಯ ಸಂಜ್ಞಾನಾತ್ಮಕ ಹೊರೆಯನ್ನು ಕಡಿಮೆ ಮಾಡಬಹುದಾಗಿದೆ ಎಂದು ವಿವರಿಸುತ್ತಾರೆ.

### 4. ಅನುಭವಾತ್ಮಕ ಕಲಿಕೆ

ಅನುಭವಾತ್ಮಕ ಕಲಿಕೆ ಕಲಿಕಾ ಪ್ರಕ್ರಿಯೆಯ ಮೇಲೆ ಗಮನ ಹರಿಸುವುದರಿಂದ ಮತ್ತು ಗುರಿ ನಿರ್ಧರಿಸುತ್ತದೆಯಾದ್ದರಿಂದ ಪ್ರಯೋಗ ಮಾಡುವುದು ಮತ್ತು ವೀಕ್ಷಿಸುವುದರಿಂದ, ಪುನರವಲೋಕಿಸುವುದು ಮತ್ತು ಕೊನೆಯದಾಗಿ ವ್ಯಕ್ತಿಗಳು ನವೀನ ಕೌಶಲಗಳು, ಹೊಸ ಮನೋಭಾವಗಳು ಅಥವಾ ಸಂಪೂರ್ಣವಾಗಿ ಹೊಸ ಚಿಂತನೆಯ ದಾರಿಗಳನ್ನು ಸಹ ಕಲಿಯುವ ಕ್ರಿಯೆಯನ್ನು ಯೋಜಿಸಲು ಸಮರ್ಥರನ್ನಾಗಿ ಮಾಡುವ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ಅನುಭವಾತ್ಮಕ ಕಲಿಕೆಯಲ್ಲಿ ನಿರ್ವಹಿಸಿದ ಚಟುವಟಿಕೆಗಳ ಮೇಲೆ ಪ್ರತಿಫಲಿಸುವುದು ಮತ್ತು ಹೆಚ್ಚು ವೈಯಕ್ತಿಕ ಮಟ್ಟದಲ್ಲಿ ವ್ಯಕ್ತಿಗಳ ಅಗತ್ಯಗಳು ಮತ್ತು ಬೇಡಿಕೆಗಳನ್ನು ತಿಳಿಸುವುದರಿಂದ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಕಲಿಕೆ ಉಂಟಾಗುತ್ತದೆ.

### ಕಲಿಕೆಯ ಇತರ ವಿಧಗಳು

1. **ಕಲಿಕೆಯ ವರ್ಗಾವಣೆ:** ಕಲಿಕೆ ವರ್ಗಾವಣೆಯೂ (Transfer of learning) ಒಂದು ರೀತಿಯ ಕಲಿಕೆ. ಒಂದು ಕಲಿಕೆಯನ್ನು ಸುಗಮಗೊಳಿಸುವುದನ್ನು ಇನ್ನೊಂದು ಕೌಶಲದ ಪ್ರಭಾವವನ್ನು ಆಧರಿಸಿ ಹೊಸ ಕೌಶಲಗಳ ಆರ್ಜನೆಯನ್ನು ಒಳಗೊಳ್ಳುತ್ತದೆ. ಇಂಥ ಕಲಿಕೆಯಲ್ಲಿ ವರ್ಗಾವಣೆಯ ಪರಿಣಾಮಗಳು ಧನಾತ್ಮಕ ಅಥವಾ ಋಣಾತ್ಮಕವಾಗಿರಬಹುದು. ಧನಾತ್ಮಕ ವರ್ಗಾವಣೆಯ ಪರಿಣಾಮಗಳನ್ನು ಕಲಿಕೆಯ ವರ್ಗಾವಣೆ ಅಥವಾ ತರಬೇತಿಯ ವರ್ಗಾವಣೆ ಎನ್ನಲಾಗಿದೆ. ಏಕೆಂದರೆ ಅವುಗಳು ಕೌಶಲಗಳ ಆರ್ಜನೆಯನ್ನು ವರ್ಧಿಸುತ್ತವೆ. ಋಣಾತ್ಮಕ ವರ್ಗಾವಣೆಯ ಪರಿಣಾಮಗಳನ್ನು ಋಣಾತ್ಮಕ ವರ್ಗಾವಣೆ ಅಥವಾ ಅಭ್ಯಾಸ ಅಡ್ಡಬರುವಿಕೆ ಎನ್ನುತ್ತಾರೆ. ಏಕೆಂದರೆ ಅವು ಕೌಶಲಗಳ ಆರ್ಜನೆಯಲ್ಲಿ ಅಡ್ಡ ಬರುತ್ತವೆ.

Digitised by Bharatavani, CIIL

2. **ಒಳನೋಟ ಕಲಿಕೆ:** ಒಳನೋಟ ಕಲಿಕೆ, (Insight Learning) 'ಇಡಿ' ಒಟ್ಟು ಬಿಡಿ ಭಾಗಗಳಿಗಿಂತ ಹೆಚ್ಚಾಗಿದೆ ಎಂಬ ತಿಳುವಳಿಕೆಯಾಗಿದೆ. ಕಲಿಕಾರ್ಥಿ ಸಮಸ್ಯಾ ಸನ್ನಿವೇಶದ ಅಂಶಗಳು ಯಾವ ರೀತಿ ಒಂದಕ್ಕೊಂದು ಸಂಬಂಧಿಸಿವೆ ಎಂದು ಥಟ್ಟನೆ ಗ್ರಹಿಸಿದರೆ ಒಳನೋಟದಿಂದ ಕಲಿಕೆ ಉಂಟಾಗುತ್ತದೆ. ಈ ರೀತಿಯ ಕಲಿಕೆ ನೇರವಾದ ಕಲಿಕೆಯಾಗಿದ್ದು, ಸ್ಪಷ್ಟ ಕಲಿಕೆಯಾಗಿರುತ್ತದೆ.

3. **ಸುಪ್ತ (ಅವ್ಯಕ್ತ) ಕಲಿಕೆ:** ಸುಪ್ತಮಟ್ಟದಲ್ಲಿ ಅಪ್ರಜ್ಞಾಪೂರ್ವಕವಾಗಿ ಉಂಟಾಗುವ ಕಲಿಕೆ ಸುಪ್ತ ಕಲಿಕೆ (Latent Learning). ಆದರೆ ಇದು ಸೂಕ್ತ ಉಪಾಧಿಗಳು (ಷರತ್ತುಗಳು) ಅನುಕೂಲಕರವಾಗುವವರೆಗೆ ವರ್ತನೆಯಲ್ಲಿ ತಕ್ಷಣ ಸ್ಪಷ್ಟವಾಗಿ ಕಾಣುವುದಿಲ್ಲ. ಅಂದರೆ ಕಲಿತ ಜ್ಞಾನ ಸುಪ್ತವಾಗಿ ಉಳಿಯುತ್ತದೆ. ಮತ್ತು ನಿರ್ದಿಷ್ಟ ಸಂಗತಿಗಳು ಅಥವಾ ಅನುಭವಗಳನ್ನು ಪ್ರದರ್ಶಿಸಲು (ಪ್ರಾತ್ಯಕ್ಷಿಸಲು) ಈ ಜ್ಞಾನದ ಅಗತ್ಯವಾಗುವವರೆಗೆ ಇದು ಪ್ರಜ್ಞಾವಸ್ಥೆಗೆ ಲಭ್ಯವಾಗದಿರಬಹುದು.

4. **ಸಂಜ್ಞಾನಾತ್ಮಕ ಅನುಕರಣೆ:** ಸಂಜ್ಞಾನಾತ್ಮಕ ಅನುಕರಣೆ (Cognitive Imitation) ಒಂದು ರೀತಿಯ ಸಾಮಾಜಿಕ ಕಲಿಕೆಯಾಗಿದೆ. ವೀಕ್ಷಣೆಯಿಂದ ನಿರ್ದಿಷ್ಟ ನಿಯಮಗಳನ್ನು ನಕಲು ಮಾಡುವುದನ್ನು ಒಳಗೊಳ್ಳುತ್ತದೆ. ಸಂಜ್ಞಾನಾತ್ಮಕ ಅನುಕರಣೆ ವೀಕ್ಷಕನಿಂದ ಕಲಿತ ಮತ್ತು ನಕಲು ಮಾಡಿದ ಒಂದು ರೀತಿಯ ನಿಯಮ. ಇದು ಸಾಮಾನ್ಯ ಅನುಕರಣ ಕಲಿಕೆಯಿಂದ ಬೇರೆಯಾಗಿದೆ. ಇದರಲ್ಲಿ ವೀಕ್ಷಕನು ನವೀನ ಕ್ರಿಯೆಗಳನ್ನು ಅಥವಾ ನಿರ್ದಿಷ್ಟ ಕ್ರಿಯೆಗಳ ನವೀನ ಅನುಕ್ರಮಗಳನ್ನು ಅಗತ್ಯವಾಗಿ ನಕಲು ಮಾಡಬೇಕು. ಸಂಜ್ಞಾನಾತ್ಮಕ ಅನುಕರಣೆಯಲ್ಲಿ ವೀಕ್ಷಕ ನಿರ್ದಿಷ್ಟ ಕ್ರಿಯೆಗಳು ಅಥವಾ ಚಲನಗಳ ನಮೂನೆಗಳಿಂದ ಸ್ವತಂತ್ರವಾದ ನವೀನ ನಿಯಮಗಳನ್ನು ನಕಲು ಮಾಡಬೇಕು.

5. **ಕಂಠ(ಗಿಳಿ)ಪಾಠ ಕಲಿಕೆ:** ಕಂಠಪಾಠ (ಗಿಳಿಪಾಠ) ಕಲಿಕೆ ಕಲಿಯುತ್ತಿರುವ ವಿಷಯದ ಆಂತರಿಕ ಸಂಕೀರ್ಣತೆಗಳು ಮತ್ತು ಊಹನಗಳನ್ನು ಅರ್ಥಮಾಡಿಕೊಳ್ಳುವುದನ್ನು ತಡೆಯುವ ತಂತ್ರವಾಗಿದೆ ಮತ್ತು ಇದು ನಿಖರವಾಗಿ ಓದಿದ ಅಥವಾ ಕೇಳಿದ ರೀತಿಯಲ್ಲೇ ಕಲಿಕಾರ್ಥಿಯಿಂದ ಜ್ಞಾಪಿಸಕೊಳ್ಳಲಾಗುವಂತೆ ವಿಷಯವನ್ನು ಸ್ಮರಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಕಂಠಪಾಠ ಕಲಿಕಾ ತಂತ್ರಗಳಲ್ಲಿ ಒಳಗೊಳ್ಳುವ ಪ್ರಮುಖ ಅಭ್ಯಾಸವು ಪುನರಾವರ್ತನದಿಂದ ಕಲಿಯುವುದಾಗಿದೆ. ವ್ಯಕ್ತಿ ಹೆಚ್ಚು ಪುನರಾವರ್ತನೆ ಮಾಡಿದಷ್ಟು ಶೀಘ್ರವಾಗಿ ಜ್ಞಾಪಿಸಿಕೊಳ್ಳಲು ಸಮರ್ಥನಾಗುತ್ತಾನೆ ಎಂಬ ವಿಚಾರದ ಮೇಲೆ ಆಧರಿಸಿದೆ. ಕಂಠಪಾಠ ಕಲಿಕೆಯನ್ನು ಗಣಿತ, ಸಂಗೀತದಿಂದ ಧರ್ಮದವರೆಗೆ ವಿವಿಧ ಕ್ಷೇತ್ರಗಳಲ್ಲಿ ಬಳಸಲಾಗುತ್ತದೆ.

6. **ಪ್ರಯತ್ನ ಮತ್ತು ದೋಷ ಕಲಿಕೆ:** ಕೆಲವೊಮ್ಮೆ ಇದನ್ನು ಅನ್ವೇಷಣಾ ಕಲಿಕೆ ಎನ್ನುತ್ತಾರೆ. ಇದು ಪ್ರಯತ್ನ ಮತ್ತು ದೋಷದಿಂದ ಕಲಿಯುವುದಾಗಿದೆ. ಇದು ಸಮಸ್ಯೆ ಪರಿಹಾರದ ಸಾಮಾನ್ಯ ವಿಧಾನವಾಗಿದೆ. ಇದರಲ್ಲಿ ವಿಫಲತೆಗಳಿಂದಲ್ಲ ಆದರೆ ವಿಫಲತೆಗಳನ್ನು ವಿಶ್ಲೇಷಿಸುವುದರಿಂದ ಬದಲಾವಣೆಗಳನ್ನು ಅಳವಡಿಸಿಕೊಳ್ಳುವುದರಿಂದ ಮತ್ತು ನಂತರ ಪುನಃ ಪ್ರಯತ್ನಿಸುವುದರಿಂದ ಕಲಿಕೆ ಉಂಟಾಗುತ್ತದೆ.

7. **ಶಾಬ್ದಿಕ (ಭಾಷಿಕ)ಕಲಿಕೆ:** ಭಾಷೆ ಅಥವಾ ಶಬ್ದಗಳು, ಶಬ್ದ ವಾಕ್ಯಗಳ ಕಲಿಕೆಯೇ ಭಾಷಿಕ ವಿನ್ಯಾಸಗಳ ಅಥವಾ ಶಾಬ್ದಿಕ ಕಲಿಕೆ ಎನಿಸುತ್ತದೆ. ಭಾಷಾ ಕಲಿಕೆಯಲ್ಲಿ ಈ ವಿಧದ ಕಲಿಕೆ ಮುಖ್ಯ ಪಾತ್ರ ವಹಿಸುತ್ತದೆ. ಮನೋವಿಜ್ಞಾನಿಗಳು ಭಾಷಿಕ ಕಲಿಕೆಗೆ ಸಂಬಂಧಿಸಿದಂತೆ ಅರ್ಥಹೀನ ಪದಗಳ ಮತ್ತು ಅರ್ಥಪೂರ್ಣ ಪದಗಳ ಕಲಿಕೆ, ವಿರೋಧ ಪದಗಳ ಕಲಿಕೆ, ಕ್ರಮಾಗತ ಪದ ಸರಣಿಗಳ ಕಲಿಕೆ, ವಾಕ್ಯಗಳ ಮತ್ತು ಅಂಕಿಗಳ ಕಲಿಕೆ ಮುಂತಾದ ಸಂಗತಿಗಳ ಮೇಲೆ ಅನೇಕ ಪ್ರಯೋಗಗಳನ್ನು ಮಾಡಿ ಭಾಷಿಕ (ಶಾಬ್ದಿಕ) ಕಲಿಕೆಯ ಕೆಲವು ತತ್ವಗಳನ್ನು ನಿರೂಪಿಸಿದ್ದಾರೆ. ಭಾಷಾ ಕಲಿಕೆ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಭಾಷಿಕ (ಶಾಬ್ದಿಕ) ಕಲಿಕೆ ಮಹತ್ವವಿದೆ.

8. **ತಥ್ಯಾಂಶಗಳ ಕಲಿಕೆ:** ನಿರ್ದಿಷ್ಟ ಘಟನೆಗಳು, ಹೆಸರುಗಳು, ದಿನಾಂಕಗಳು ಮುಂತಾದವು ತಥ್ಯಾಂಶಗಳೆನಿಸುತ್ತವೆ. ಇವುಗಳನ್ನು ಕಲಿತುಕೊಂಡು ಸ್ಮರಣೆಯಲ್ಲಿಟ್ಟುಕೊಳ್ಳುವುದು, ಅವುಗಳ ಮಹತ್ವ ಮತ್ತು ಅವುಗಳ ನಡುವಣ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು ತಥ್ಯಾಂಶಗಳ ಕಲಿಕೆಯಲ್ಲಿ (Facts Learning) ಒಳಗೊಳ್ಳುತ್ತವೆ. ತಥ್ಯಾಂಶಗಳ ಕಲಿಕೆ ಪರಿಸರವನ್ನು ಅರ್ಥಮಾಡಿಕೊಂಡು ಅದರೊಡನೆ ಅನ್ಯೋನ್ಯ ಕ್ರಿಯಿಸಲು ಮುಖ್ಯವಾಗುತ್ತದೆ. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮತ್ತು ದಿನನಿತ್ಯದ ವ್ಯವಹಾರದಲ್ಲಿ ತಥ್ಯಾಂಶಗಳ ಕಲಿಕೆ ಬೇಕಾಗುತ್ತದೆ. ತಥ್ಯಾಂಶಗಳ ಕಲಿಕೆಯಲ್ಲಿ ಹಿರಿಯರ ಅನುಕರಣೆ, ಮಾರ್ಗದರ್ಶನ, ಪುನರಾವರ್ತಿಸುವುದು (ಪದೇ ಪದೇ ಅವುಗಳ ಅರ್ಥ ತಿಳಿಸುವುದು), ಶಿಕ್ಷಣ ಮುಂದುವರಿದಂತೆ ಔಪಚಾರಿಕವಾದ ಬೋಧನೆ, ನಿದರ್ಶನ ನೀಡುವುದು ಪ್ರಮುಖವಾದ ಬೋಧನಾ ತತ್ವಗಳಾಗುತ್ತವೆ.

9. **ಪರಿಕಲ್ಪನೆಗಳ ಕಲಿಕೆ:** ಕೆಲವು ಲಕ್ಷಣಗಳಲ್ಲಿ (Attributes) ಸಮಾನತೆಯಿದ್ದು, ಮತ್ತೆ ಕೆಲವು ಲಕ್ಷಣಗಳಲ್ಲಿ ವ್ಯತ್ಯಾಸವನ್ನು ಹೊಂದಿರುವ ವಸ್ತುಗಳ, ಘಟನೆಗಳ, ವಿಷಯಗಳ ಮತ್ತು ವಿಚಾರಗಳ ಸಮೂಹವನ್ನು ಪ್ರತಿನಿಧಿಸುವ ಶಾಬ್ದಿಕ ಅಥವಾ ಅಶಾಬ್ದಿಕ ಸಂಕೇತಗಳಿಗೆ (ಪ್ರತೀಕಗಳಿಗೆ) ಪರಿಕಲ್ಪನೆ (Concept) ಎನ್ನುತ್ತಾರೆ. ಪರಿಕಲ್ಪನೆಗಳು ಮೂರ್ತಾತ್ಮಕವಾಗಿರಬಹುದು ಅಥವಾ ಅಮೂರ್ತಾತ್ಮಕವಾಗಿರಬಹುದು, ಸರಳವಾಗಿರಬಹುದು ಅಥವಾ ಸಂಕೀರ್ಣವಾಗಿರಬಹುದು. ಪರಿಕಲ್ಪನೆಗಳು ಪರಿಸರದ ಪ್ರಚೋದನೆಗಳನ್ನು ಗುರುತಿಸಿ ಅವುಗಳನ್ನು ಅರ್ಥಪೂರ್ಣವಾಗಿ ವರ್ಗೀಕರಿಸಲು ಸಹಾಯಮಾಡುತ್ತವೆ. ದಿನನಿತ್ಯದ ಜೀವನದಲ್ಲಿ ನಾವು ಅನೇಕ ಪರಿಕಲ್ಪನೆಗಳನ್ನು ಕಲಿಯಬೇಕಾಗುತ್ತದೆ. ಶೈಕ್ಷಣಿಕವಾಗಿಯೂ ಪರಿಕಲ್ಪನೆಗಳ ಕಲಿಕೆ (Concept Learning) ಅನಿವಾರ್ಯವಾಗುತ್ತದೆ. ಪ್ರತಿಯೊಂದು ಕಲಿಕಾ ವಿಷಯವನ್ನು ಅದರಲ್ಲೂ ವಿಶೇಷವಾಗಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ

Digitised by Bharatavani, CIIL

ಮಕ್ಕಳು ಅನೇಕ ಪರಿಕಲ್ಪನೆಗಳನ್ನು ಔಪಚಾರಿಕ ಬೋಧನೆಯಿಂದ ಕಲಿಯಬೇಕಾಗುತ್ತದೆ. ಪರಿಕಲ್ಪನೆಗಳ ಕಲಿಕೆ ಎರಡು ಮುಖ್ಯ ತತ್ವಗಳನ್ನು ಒಳಗೊಳ್ಳುತ್ತದೆ. ಒಂದು ಗುಂಪಿಗೆ ಸೇರಿಸಬಹುದಾದ ಉದಾಹರಣೆಗಳಲ್ಲಿ ಇರುವ ಸಾಮಾನ್ಯ ಲಕ್ಷಣಗಳನ್ನು ಗುರ್ತಿಸಿ ಅರ್ಥಮಾಡಿಕೊಳ್ಳುವುದು, ಇದು ಗ್ರಹಿಸುವಿಕೆಯ (Abstraction) ಪ್ರಕ್ರಿಯೆ. ನಂತರ ಈ ಸಾಮಾನ್ಯ ಲಕ್ಷಣಗಳನ್ನು ಆ ಗುಂಪಿಗೆ ಸೇರಬಹುದಾದ ಇತರ ಉದಾಹರಣೆಗಳಿಗೆ ಆರೋಪಿಸುವುದು. ಇದಕ್ಕೆ ಸಾಮಾನ್ಯೀಕರಣ (Generalisation) ಪ್ರಕ್ರಿಯೆ ಎಂದು ಹೆಸರು. ಪರಿಕಲ್ಪನೆಗಳನ್ನು ಕಲಿಸುವಾಗ ನಿರ್ದಿಷ್ಟ ಉದಾಹರಣೆಗಳನ್ನು ಗುರ್ತಿಸುವುದು. ಅವುಗಳಲ್ಲಿರುಬಹುದಾದ ಸಾಮಾನ್ಯ ಲಕ್ಷಣಗಳನ್ನು ಗುರ್ತಿಸುವುದು. ಆ ಲಕ್ಷಣಗಳನ್ನು ಶಾಬ್ದೀಕರಿಸುವುದು (Verbalize), ವ್ಯತ್ಯಾಸಗೊಳ್ಳುವ ಲಕ್ಷಣಗಳನ್ನು ಗುರ್ತಿಸುವುದು, ಗ್ರಹಿಸಿದ ಸಾಮಾನ್ಯ ಲಕ್ಷಣಗಳನ್ನು ಆ ಗುಂಪಿಗೆ ಸೇರಿಸಬಹುದಾದ ಇತರ ಉದಾಹರಣೆಗಳಿಗೂ ಸಾಮಾನ್ಯೀಕರಿಸುವುದು, ಗುಂಪಿಗೆ ಸೇರದ ಉದಾಹರಣೆಗಳನ್ನು ಗುರ್ತಿಸುವುದು, ಗುಂಪನ್ನು ಪ್ರತಿನಿಧಿಸುವ ಶಾಬ್ದಿಕ/ಅಶಾಬ್ದಿಕ ಸಂಕೇತ (ಪ್ರತೀಕ)ವನ್ನು ಕಲಿತುಕೊಳ್ಳುವುದು – ಈ ಕಲಿಕಾ ತತ್ವಗಳು ಒಳಗೊಂಡಿವೆ. ಪರಿಕಲ್ಪನೆಗಳನ್ನು ಕಲಿಸುವಾಗ ಅನೇಕ ಉದಾಹರಣೆಗಳನ್ನು ಉಪಯೋಗಿಸಬೇಕು. ಆಗ ಅವುಗಳಲ್ಲಿರುವ ಸಾಮಾನ್ಯ ಲಕ್ಷಣಗಳ ಮತ್ತು ವ್ಯತ್ಯಾಸಗೊಳ್ಳುವ ಲಕ್ಷಣಗಳ ಕಡೆಗೆ ಕಲಿಕಾರ್ಥಿಯ ಗಮನ ಸೆಳೆಯಬೇಕು. ಆಗಾಗ್ಗೆ ಗುಂಪಿಗೆ ಸೇರದ ಉದಾಹರಣೆಗಳನ್ನು ತೋರಿಸಬೇಕು. ಪರಿಕಲ್ಪನೆಯನ್ನು ಪ್ರತಿನಿಧಿಸುವ ಶಾಬ್ದಿಕ/ಅಶಾಬ್ದಿಕ ಸಂಕೇತವನ್ನು ಕಲಿಸಬೇಕು. ಕಡೆಗೆ ಕಲಿತ ಪರಿಕಲ್ಪನೆಯನ್ನು ಗುಂಪಿಗೆ ಸೇರಬಹುದಾದ ಇತರ ಉದಾಹರಣೆಗಳಿಗೂ ಅನ್ವಯಿಸುವುದನ್ನು ಕಲಿಸಬೆಕು.

**10. ನಿಯಮಗಳ (ತತ್ವ)ಕಲಿಕೆ:** ಎರಡು ಅಥವಾ ಹೆಚ್ಚಿನ ಪರಿಕಲ್ಪನೆಗಳ ಅಥವಾ ಘಟನೆಗಳ ನಡುವಣ ಸಂಬಂಧವನ್ನು ನಿರೂಪಿಸುವ ಹೇಳಿಕೆಗೆ ಅಥವಾ ಸೂತ್ರಕ್ಕೆ ನಿಯಮಗಳು ಅಥವಾ ತತ್ವಗಳು (Principles) ಎಂದು ಹೆಸರು. ನಿಯಮಗಳು ಸಾರ್ವತ್ರಿಕವಾಗಿ ಅನ್ವಯಿಸಬಹುದಾದರೆ ಅವುಗಳನ್ನು ಸಾರ್ವತ್ರಿಕ ನಿಯಮ (Universal Law)ಗಳು ಎನ್ನುತ್ತಾರೆ. ವಿಜ್ಞಾನ ಮತ್ತು ಗಣಿತದ ನಿಯಮಗಳು ಈ ರೀತಿಯವು. ಕೆಲವು ನಿಯಮಗಳು ಸೀಮಿತ ವ್ಯಾಪ್ತಿಯಲ್ಲಿ ಸಾಮಾನ್ಯೀಕರಿಸಿಬಹುದವುಗಳಾಗಿರುತ್ತವೆ. ಸಾಮಾಜಿಕ ವಿಜ್ಞಾನ ಮತ್ತು ಕಲೆಗಳ ನಿಯಮಗಳನ್ನು ಸೀಮಿತ ವ್ಯಾಪ್ತಿಯಲ್ಲಿ ಸಾಮಾನ್ಯೀಕರಿಸಬಹುದು. ನಿಯಮಗಳು (ತತ್ವಗಳು) ಪರಿಸರದಲ್ಲಿನ ಘಟನೆಗಳ/ವಸ್ತುಗಳ ನಡುವಣ ಪಾರಸ್ಪರಿಕ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಘಟನೆಗಳ ಪರಿಣಾಮಗಳನ್ನು ಊಹಿಸಲು, ಕಾರಣ–ಪರಿಣಾಮದ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತವೆ. ದಿನನಿತ್ಯದ ಜೀವನದಲ್ಲಿ ನಾವು ಅನೇಕ ನಿಯಮಗಳನ್ನು ಉಪಯೋಗಿಸಿಕೊಳ್ಳುತ್ತೇವೆ. ಶಿಕ್ಷಣದಲ್ಲಿ, ಅದರಲ್ಲೂ ವಿಜ್ಞಾನ ಮತ್ತು ಗಣಿತ ಕಲಿಕೆಯಲ್ಲಿ ಅನೇಕ ನಿಯಮಗಳನ್ನು ಕಲಿತುಕೊಳ್ಳುವುದಲ್ಲದೆ ಅವುಗಳನ್ನು ಅನ್ವಯಿಸುವುದನ್ನು ಕಲಿಯಬೇಕಾಗುತ್ತದೆ. ನಿಯಮಗಳು ಅನೇಕ ಒಂದೇ ರೀತಿಯ ಸಂಬಂಧಗಳಿಗೆ ಅಥವಾ ಘಟನೆಗಳಿಗೆ ಅನ್ವಯಿಸುವುದನ್ನು ಸಾಮಾನ್ಯೀಕರಣ (Generalisation) ಎನ್ನುತ್ತಾರೆ. ಸಾಮಾನ್ಯೀಕರಣಗಳು ವಿಜ್ಞಾನ ಅಥವಾ ಗಣಿತದ ನಿಯಮಗಳಿಗೆ ಸಾರ್ವತ್ರಿಕವಾಗಿರಬಹುದು ಅಥವಾ ಸೀಮಿತ ವ್ಯಾಪ್ತಿಯುಳ್ಳವುಗಳಾಗಿರಬಹುದು.

ನಿಯಮಗಳ ಕಲಿಕೆಯಲ್ಲಿ ಮೊದಲು ಪರಿಕಲ್ಪನೆಗಳ/ಘಟನೆಗಳ ನಡುವಣ ಸಂಬಂಧವನ್ನು ಗ್ರಹಿಸಿ, ಅರ್ಥಮಾಡಿಕೊಳ್ಳಬೇಕು. ನಂತರ ಆ ಸಂಬಂಧವನ್ನು ನಿಯಮ (ತತ್ವ)ವನ್ನು ಹೇಳಿಕೆ ಅಥವಾ ಸೂತ್ರದ ರೂಪದಲ್ಲಿ ನಿರೂಪಿಸಬೇಕು. ಕೊನೆಯಲ್ಲಿ ಈ ನಿಯಮ (ತತ್ವ)ವನ್ನು ಅದೇ ರೀತಿಯ ಸಂದರ್ಭಗಳಿಗೆ ಅನ್ವಯಿಸುವುದನ್ನು ಕಲಿತುಕೊಳ್ಳಬೇಕು. ನಿಯಮಗಳನ್ನು ಎರಡು ಕ್ರಮಗಳಲ್ಲಿ ಕಲಿಸಬಹುದು – ನಿಯಮ (ತತ್ವ)ದ ನಿರೂಪಣೆ ನಂತರ ಅದಕ್ಕೆ ಉದಾಹರಣೆಗಳನ್ನು ಕೊಡುವುದು ಇದು ನಿಯಮ – ದೃಷ್ಟಾಂತ (Rule-Example-Rule-eg.) ಕ್ರಮ. ಇನ್ನೊಂದು ಕ್ರಮದಲ್ಲಿ ಕಲಿಸಬೇಕಾದ ನಿಯಮಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು (ದೃಷ್ಟಾಂತಗಳನ್ನು) ಮೊದಲು ಕೊಟ್ಟು ನಂತರ ಅವುಗಳಲ್ಲಿರುವ ಸಾಮಾನ್ಯ ಅಂಶದ ಬಗ್ಗೆ ಗಮನ ಸೆಳೆದು ನಂತರ ಆ ಸಂಬಂಧವನ್ನು ನಿಯಮ (ತತ್ವ)ದ ರೂಪದಲ್ಲಿ ನಿರೂಪಿಸುವುದು. ಇದು ದೃಷ್ಟಾಂತ–ನಿಯಮ (Example-Rule,Eg-Rule) ಕ್ರಮ. ಕೊನೆಯಲ್ಲಿ ಕಲಿಕಾ ನಿಯಮವನ್ನು ಹೊಸ ಸಂದರ್ಭಗಳಿಗೆ ಅನ್ವಯಿಸಲು, ಸಾಮಾನ್ಯೀಕರಿಸಲು ಅಭ್ಯಾಸ ಮಾಡಿಸಬೇಕು. ಎರಡನೇ ಕ್ರಮ 'ದೃಷ್ಟಾಂತ ನಿಯಮ' ಮೊದಲನೇ ಕ್ರಮವಾದ 'ನಿಯಮ–ದೃಷ್ಟಾಂತ'ಕ್ಕಿಂತ ಹೆಚ್ಚು ಪರಿಣಾಮಕಾರಿ ಎಂದು ಸಂಶೋಧನೆಗಳಿಂದ ಕಂಡು ಬಂದಿದೆ.

**11. ವಿಭೇದೀಕರಣ ಕಲಿಕೆ:** ಪ್ರಚೋದನೆಗಳು ಮತ್ತು ಅನುಕ್ರಿಯೆಗಳು ನಡುವೆ ಇರುವ ಗುಣಾತ್ಮಕ ಪರಿಮಾಣಾತ್ಮಕ ವ್ಯತ್ಯಾಸಗಳನ್ನು ಗುರ್ತಿಸುವುದು ವಿಭೇದೀಕರಣ ಕಲಿಕೆ (Discrimination Learning) ಎನಿಸಿಕೊಳ್ಳುತ್ತದೆ. ಗ್ಯಾನೆ ತನ್ನ ಕಲಿಕಾ ಶ್ರೇಣಿಯ ಮೂಲಭೂತ ಕಲಿಕೆಗಳ ವರ್ಗದಲ್ಲಿ ಸೇರಿಸಿ ನಾಲ್ಕನೇ ಸ್ಥಾನದಲ್ಲಿ ವಿಭೇದೀಕರಣ ಕಲಿಕೆಯನ್ನು ಇಟ್ಟಿದ್ದಾನೆ. ಪರಿಸರದ ಪ್ರಚೋದನೆಗಳು ಮತ್ತು ಅವುಗಳಿಗೆ ನಮ್ಮ ಅನುಕ್ರಿಯೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಗುರ್ತಿಸಲು ವಿಭೇದೀಕರಣ ಕಲಿಕೆ ಸಹಾಯ ಮಾಡುತ್ತದೆ. ಪ್ರಚೋದನೆಗಳ ಮತ್ತು ಅನುಕ್ರಿಯೆಗಳ ಲಕ್ಷಣಗಳಲ್ಲಿರುವ ವ್ಯತ್ಯಾಸಗಳನ್ನು ವಿವರಣೆಯ ಮೂಲಕ, ಉದಾಹರಣೆಗಳ ಮೂಲಕ ವಿಭೇದೀಕರಣವನ್ನು ಕಲಿಸಬಹುದು. ಪರಿಸರದೊಂದಿಗೆ ಅನ್ಯೋನ್ಯ ಕ್ರಿಯಿಸುವ ಅನುಭವಗಳಿಂದಲೂ ವಿಭೇದೀಕರಣ ಕಲಿಕೆ ಉಂಟಾಗುತ್ತದೆ. ವಿಭೇದೀಕರಣ ಕಲಿಕೆ ಮುಂದಿನ ಮೇಲ್ಮಟ್ಟದ ಕಲಿಕೆಗಳಿಗೆ ಅಂದರೆ ಪರಿಕಲ್ಪನೆಗಳ ಕಲಿಕೆ, ನಿಯಮಗಳ ಕಲಿಕೆ ಮತ್ತು ಸಮಸ್ಯಾ ಪರಿಹಾರ ಕಲಿಕೆಗೆ ಆಧಾರವಾಗುತ್ತದೆ.

Digitised by Bharatavani, CIIL

**12. ಸಮಸ್ಯಾ ಪರಿಹಾರ ಕಲಿಕೆ:** ಜೀವನದಲ್ಲಿ ನಮಗೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಬಾಲ್ಯಾವಸ್ಥೆಯಿಂದ ವೃದ್ಧಾವಸ್ಥೆಯವರೆಗೂ ಸಮಸ್ಯೆಗಳು ಉಂಟಾಗುತ್ತವೆ. ಆದರೆ ಜೀವನದ ಬೇರೆ ಬೇರೆ ಅವಧಿಗಳಲ್ಲಿ ಅವುಗಳ ಸಂಖ್ಯೆಯಲ್ಲಿ ಸ್ವರೂಪದಲ್ಲಿ ಮತ್ತು ಸಂಕೀರ್ಣತೆಯಲ್ಲಿ ವ್ಯತ್ಯಾಸಗೊಳ್ಳುತ್ತವೆ. ಈ ಸಮಸ್ಯೆಗಳು ಜೀವನದ ಅನಿವಾರ್ಯ ಭಾಗವಾಗಿವೆ. ಇವುಗಳನ್ನು ಬೇರೆ ಬೇರೆ ರೀತಿಗಳಲ್ಲಿ ಪರಿಹರಿಸಿಕೊಳ್ಳಬೇಕಾಗುತ್ತದೆ. ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕೆಂಬುದನ್ನು ಕಲಿಯುವುದೇ ಸಮಸ್ಯಾ ಪರಿಹಾರ ಕಲಿಕೆ (Problem Solving Learning). ಇದು ಮಾನವ ಕಲಿಕೆಯಲ್ಲಿ ಅತ್ಯಂತ ಮೇಲ್ಮಟ್ಟದ ಮತ್ತು ಅತ್ಯಂತ ಅವಶ್ಯಕವಾದ ಕಲಿಕೆಯ ವಿಧವಾಗಿದೆ. ಆದ್ದರಿಂದಲೇ ಗ್ಯಾನೇ ಸಮಸ್ಯಾ ಪರಿಹಾರ ಕಲಿಕೆಗೆ ಅತ್ಯಂತ ಉನ್ನತ ಸ್ಥಾನವನ್ನು ಕೊಟ್ಟಿದ್ದಾನೆ. ಕೆಳಮಟ್ಟದ ಮೂಲಭೂತ ಕಲಿಕೆಗಳಾದ ಅನುಬಂಧನ ಕಲಿಕೆ, ವಿಭೇದೀಕರಣ ಕಲಿಕೆಯಿಂದ ಮೊದಲುಗೊಂಡು ನಂತರ ಪರಿಕಲ್ಪನಾ ಕಲಿಕೆ ಹಾಗೂ ನಿಯಮಗಳ ಕಲಿಕೆಯ ವಿಧಗಳು ಒಂದಕ್ಕೊಂದು ಕ್ರಮಿಕವಾಗಿ ಸಂಕುಚಿತಗೊಂಡು, ಒಂದಕ್ಕೊಂದು ಆಧಾರವಾಗಿ ಅಂತಿಮವಾಗಿ ಸಮಸ್ಯಾ ಪರಿಹಾರ ಕಲಿಕೆಯಲ್ಲಿ ಪರ್ಯವಸಾನಗೊಳ್ಳುತ್ತವೆ. ಸಮಸ್ಯಾ ಪರಿಹಾರ ಕಲಿಕೆಗಿಂತ ಕೆಳಮಟ್ಟದ ಕಲಿಕೆಗಳನ್ನು ಚೆನ್ನಾಗಿ ಕಲಿತುಕೊಳ್ಳುವುದು ಸಮಸ್ಯೆ ಪರಿಹಾರ ಕಲಿಕೆಗೆ ಅನಿವಾರ್ಯವಾಗುತ್ತದೆ. ಏಕೆಂದರೆ ಸಮಸ್ಯಾ ಪರಿಹಾರದಲ್ಲಿ ಸಮಸ್ಯಾ ಸನ್ನಿವೇಶದಲ್ಲಿರುವ ಪ್ರಚೋದನೆಗಳ, ಅವುಗಳ ಪಾರಸ್ಪರಿಕ ಸಂಬಂಧಗಳ, ವ್ಯತ್ಯಾಸಗಳ, ಒಳಗೊಳ್ಳುವ ಪರಿಕಲ್ಪನೆಗಳ ಹಾಗೂ ನಿಯಮಗಳ ಜ್ಞಾನ ಅನಿವಾರ್ಯವಾಗಿ ಬೇಕಾಗುತ್ತದೆ. ಅಂದರೆ ಈ ಎಲ್ಲಾ ಕಲಿಕೆಯ ತತ್ವಗಳು/ನಿಯಮಗಳು ಸಮಸ್ಯಾ ಪರಿಹಾರದಲ್ಲಿ ಬಂದಲ್ಲಿ ಒಂದು ರೀತಿಯಲ್ಲಿ ಉಪಯೋಗಕ್ಕೆ ಬರುತ್ತವೆ.

ಸಮಸ್ಯಾ ಪರಿಹಾರದಲ್ಲಿ ಮುಖ್ಯವಾಗಿ ಸಮಸ್ಯಾ ಸನ್ನಿವೇಶದ ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಇಡಿಯಾದ ಗ್ರಹಿಕೆ ಬೇಕಾಗುತ್ತವೆ. ಸಮಸ್ಯಾ ಪರಿಹಾರದ ಅನ್ವೇಷಣೆಯನ್ನು ಸಮಸ್ಯೆಯ ಕೇಂದ್ರದಿಂದ ಆರಂಭಿಸಿ ಸಮಸ್ಯೆಯ ಪಾರ್ಶ್ವಕ್ಕೆ ಮಾಡಬಹುದು ಅಥವಾ ಪಾರ್ಶ್ವದಿಂದ ಆರಂಭಿಸಿ ಸಮಸ್ಯೆಯ ಕೇಂದ್ರದ ಕಡೆಗೆ ಮುಂದುವರಿಸಬಹುದು. ಪ್ರಯತ್ನ-ದೋಷ (Trial and Error) ಕ್ರಮದಿಂದಲೂ ಸಮಸ್ಯಾ ಪರಿಹಾರ ದೊರಕಬಹುದು. ಕೆಲವು ವೇಳೆ ಒಳನೋಟ (ಅಂತರ್ ದೃಷ್ಟಿ)ದಿಂದ ಸಮಸ್ಯೆಯ ಪರಿಹಾರ ದೊರಕಬಹುದು. ಬಾಲ್ಯದಲ್ಲಿ ಅನುಕರಣೆಯಿಂದಲೂ ಸಮಸ್ಯಾ ಪರಿಹಾರವನ್ನು ಕಲಿತುಕೊಳ್ಳಬಹುದು. ಒಂದೇ ರೀತಿಯ ಅನೇಕ ಸಮಸ್ಯೆಗಳನ್ನು ಬಿಡಿಸುವ ಅಭ್ಯಾಸ ಮಾಡಿಸುವುದು ಒಳ್ಳೆಯ ಕ್ರಮವಾಗಿದೆ.

**13. ಸಂಜ್ಞಾನಾತ್ಮಕ ತಂತ್ರಗಳ ಕಲಿಕೆ:** ಮಾನವ ಕಲಿಕೆಯಲ್ಲಿ ಕಲಿತುಕೊಳ್ಳುವುದು ಹೇಗೆ ಎಂಬುದನ್ನು, ಮಾಹಿತಿಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಷ್ಕರಿಸಿ, ಸೂಕ್ತ ರೀತಿಯಲ್ಲಿ ಸ್ಮರಣೆಯಲ್ಲಿ ಇಟ್ಟುಕೊಳ್ಳುವುದು ಹೇಗೆ ಎಂಬುದನ್ನು, ಬೇಕಾದ ಪ್ರಚೋದನೆಗಳಲ್ಲಿ ಅವಧಾನ ನೀಡಿ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಹೇಗೆ ಎಂಬುದನ್ನು, ಒಟ್ಟಿನಲ್ಲಿ ಸಂಜ್ಞಾನಾತ್ಮಕ ಪ್ರಕ್ರಿಯೆಗಳ ಮೂಲಕ ಪರಿಸರದೊಂದಿಗೆ ಪ್ರತಿಕ್ರಿಯಿಸಿ ಅದನ್ನು ಪ್ರಭಾವ ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಅನೇಕ ತಂತ್ರಗಳು ಬೇಕಾಗುತ್ತವೆ. ನಾವು ದಿನನಿತ್ಯದ ವ್ಯವಹಾರದಲ್ಲಿ ಮತ್ತು ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ಅನೇಕ ತಂತ್ರಗಳನ್ನು ಉಪಯೋಗಿಸುತ್ತೇವೆ. ಈ ತಂತ್ರಗಳನ್ನು ಸಂಜ್ಞಾನಾತ್ಮಕ ತಂತ್ರಗಳು (Cognitive Strategies) ಎಂದು ಕರೆಯಲಾಗಿದೆ. ಈ ತಂತ್ರಗಳು ಮಾನವ ಕಲಿಕೆಗೆ ಮಾತ್ರ ಸೀಮಿತವಾದವುಗಳು. ಇವು ಇದುವರೆಗೆ ಮೇಲೆ ವಿವರಿಸಲಾದ ಕಲಿಕಾ ವಿಧಗಳಿಂದ ಹೊರತಾದವುಗಳು ಮತ್ತು ಮೇಲ್ಮಟ್ಟದವುಗಳು. ಇವು ಕಲಿಯುವುದನ್ನು ಕಲಿತುಕೊಳ್ಳುವುದು ಹೇಗೆ ಎಂಬುದಕ್ಕೆ ಸಂಬಂಧಿಸಿವೆ. ಆದ್ದರಿಂದಲೇ ಇವುಗಳನ್ನು ಪರಾಕಲಿಕಾ ತಂತ್ರಗಳು (Meta Learning Strategies) ಎಂದೂ ಹೇಳಬಹುದು.

ಬ್ರೂನರನ ಪ್ರಕಾರ ಸಂಜ್ಞಾನಾತ್ಮಕ ತಂತ್ರ, ಪರಿಶೀಲನೆಯ ಒಂದು ವ್ಯವಸ್ಥೆಯಾಗಿದೆ. ಸಂಜ್ಞಾನಾತ್ಮಕ ತಂತ್ರಗಳನ್ನು ವಿವರವಾದ ಪರಿಶೀಲನೆ (Scanning), ಕೇಂದ್ರೀಕರಿಸುವುದು (Focussing), ರೂಢಿಬದ್ಧ ಕೇಂದ್ರೀಕರಣ – ಕೇಂದ್ರೀಕರಣ ಅದೃಷ್ಟ (Focus Gambling), ಘಟನಾತ್ಮಕ ಪ್ರಾಯೋಗಿಕತೆ (Episode empiricism) ಸಂಕಲಿತ ಸಂರಚನಾತ್ಮಕತೆ (Cumulative Constructivism) ಈ ಅಯಾಮಗಳಿಗೆ ಸಂಬಂಧಿಸಿದಂತೆ ಸನ್ನಿವೇಶಕ್ಕೆ ಸೂಕ್ತವಾದಂತೆ ವಿಶ್ಲೇಷಿಸಬಹುದು, ವ್ಯಾಖ್ಯಾನಿಸಬಹುದು ಮತ್ತು ಮೌಲ್ಯಮಾಪನ ಮಾಡಬಹುದು. ಈ ಹೇಳಿಕೆಯಲ್ಲಿ ಬ್ರೂನರ್ ಹೆಸರಿಸಿರುವ ಆಯಾಮಗಳು ಸಂಜ್ಞಾನಾತ್ಮಕ ತಂತ್ರಗಳ ಕೆಲವು ಉದಾಹರಣೆಗಳಾಗಿವೆ.

ರೆನ್ಸ್ ಮತ್ತು ಗ್ಲೇಸರ್ ಪ್ರಕಾರ ಸಂಜ್ಞಾನಾತ್ಮಕ ತಂತ್ರ ಒಂದು ಉಪಕ್ರಮವಾಗಿದ್ದು ಮತ್ತು ಕಲಿಯುವುದನ್ನು ಹೇಗೆ ಕಲಿಯುವುದು' ಎನ್ನುವುದಕ್ಕೆ ಸಂಬಂಧಿಸಿದ್ದು ಇದು ಕಲಿಕಾರ್ಥಿಯನ್ನು ನೇರ ಬೋಧನೆಯ ಮೇಲೆ ಕಡಿಮೆ ಮಟ್ಟದಲ್ಲಿ ಅವಲಂಬಿತನನ್ನಾಗಿಸುತ್ತದೆ.

ಸಂಜ್ಞಾನಾತ್ಮಕ ತಂತ್ರಗಳನ್ನು ನೇರ ಬೋಧನೆಯಿಂದ ಕಲಿಸಲು ಸಾಧ್ಯವಾಗುವುದಿಲ್ಲವೆನ್ನುವುದು ಸಂಶೋಧನೆಗಳಿಂದ ತಿಳಿದು ಬಂದಿದೆ. ಆದಾಗ್ಯೂ ವೈವಿಧ್ಯಪೂರ್ಣ ಕಲಿಕಾನುಭವಗಳನ್ನು ಒದಗಿಸಿ, ಮಕ್ಕಳು ಸಮಸ್ಯೆಯನ್ನು ಹೇಗೆ ಬಿಡಿಸಿದರು ಅಥವಾ ಪರಿಹರಿಸಿದರು ಎನ್ನುವುದನ್ನು ಶಾಬ್ದೀಕರಿಸುವಂತೆ ಮಾಡಿ, ಆ ತಂತ್ರವನ್ನು ವಿವರಿಸುವುದು ಒಳ್ಳೆಯದೇ. ಅನುಭವ ಮುಂದುವರಿದಂತೆ ಮಕ್ಕಳು ತಮಗೆ ತಾವೇ ವಿವಿಧ ಸಂಜ್ಞಾನಾತ್ಮಕ ತಂತ್ರಗಳನ್ನು ಕಂಡುಕೊಳ್ಳುತ್ತಾರೆ.

**14. ಅಭಿವೃತ್ತಿ (ಮನೋಭಾವಗಳ) ಕಲಿಕೆ:** ಒಂದು ವಸ್ತು, ವ್ಯಕ್ತಿ ಅಥವಾ ವಿಚಾರಗಳ ಪ್ರತಿ ನಿರ್ದಿಷ್ಟ ದಿಶೆಯಲ್ಲಿ ವ್ಯಕ್ತಿ ವರ್ತಿಸುವಂತೆ

Digitised by Bharatavani, CIIL

ಮಾಡುವ ಮಾನಸಿಕ ಸಿದ್ಧತೆಯ ಸ್ಥಿತಿಗೆ ಅಭಿವೃತ್ತಿ ಅಥವಾ ಮನೋಭಾವ (Attitude) ಎಂದು ಹೆಸರು. ಅಭಿವೃತ್ತಿಗಳು ಮಾನವನಿಗೆ ಮಾತ್ರ ವಿಶಿಷ್ಟವಾದವುಗಳು. ಮಾನವರು ತಮ್ಮ ವೈವಿಧ್ಯ ಪೂರ್ಣ ಹಿತಕರವಾದ ಅಥವಾ ಅಹಿತಕರವಾದ ಅನುಭವಗಳಿಂದ ಅಭಿವೃತ್ತಿಗಳನ್ನು ಬೆಳೆಸಿಕೊಳ್ಳುತ್ತಾರೆ ಅಥವಾ ಕಲಿತುಕೊಳ್ಳುತ್ತಾರೆ. ದೊಡ್ಡವರ ಅನುಕರಣೆಯಿಂದಲೂ, ವ್ಯವಸ್ಥಿತವಾಗಿ ರೂಪಿಸಿದ ಕಲಿಕಾನುಭವಗಳಿಂದಲೂ ಮನೋಭಾವಗಳ ಕಲಿಕೆ (Attitude Learning) ಉಂಟಾಗುತ್ತದೆ. ಈ ವಿಧದ ಕಲಿಕೆ, ಸಂವೇಗಾತ್ಮಕವಾಗಿ ಆಗುವುದರಿಂದ ಇದನ್ನು ಸಂವೇದಾತ್ಮಕ ಕಲಿಕೆ (Affective Learning) ಎಂದೂ ಹೇಳಲಾಗುತ್ತದೆ. ಮೌಲ್ಯಗಳ ವಿರಾಸವೂ ಈ ಕ್ಷೇತ್ರಕ್ಕೆ ಸಂಬಂಧಿಸಿದೆ. ಮನೋಭಾವಗಳಿಗೆ ಮಾನವ ಜೀವನದಲ್ಲಿ ಅದರದೇಆದ ಸ್ಥಾನವಿದೆ. ಇವುಗಳ ಕಲಿಕೆ ನಮಗೆ ಅರಿವಿಲ್ಲದೇ ಆಗುತ್ತಿರುತ್ತದೆ. ನಾವು ನಮ್ಮ ವೈವಿಧ್ಯಮಯಪೂರ್ಣ ಅನುಭವಗಳಿಂದಾಗಿ ಅನೇಕ ಸಕಾರಾತ್ಮಕ (ಧನಾತ್ಮಕ) ಮತ್ತು ನಕಾರಾತ್ಮಕ (ಋಣಾತ್ಮಕ) ಮನೋಭಾವಗಳನ್ನು ಕಲಿತುಕೊಳ್ಳುತ್ತಿರುತ್ತೇವೆ. ಇವುಗಳಿಂದ ಹಿತಕರವಾದ ಹಾಗೂ ಅಹಿತಕರವಾದ ಪರಿಣಾಮಗಳು ಉಂಟಾಗುತ್ತಿರುತ್ತವೆ.

ಮನೋಭಾವಗಳು ಧನಾತ್ಮಕವಾಗಿರಬಹುದು, ಋಣಾತ್ಮಕವಾ ಗಿರಬಹುದು. ಮನೋಭಾವಗಳು ಸಂಜ್ಞಾನಾತ್ಮಕ (ಸಂಬಂಧಿಸಿದ ಮಾಹಿತಿಗಳು, ಸೂಚನೆಗಳು), ಸಂವೇದಾತ್ಮಕ (ಮನಸ್ಸಿನಲ್ಲಿ ಉಂಟಾಗುವ ಹಿತಕರ/ಅಹಿತಕರ ಸಂವೇಗಾತ್ಮಕ ಅನುಭವಗಳು) ಮತ್ತು ವರ್ತನಾತ್ಮಕ (ಮನೋಭಾವದ ವಸ್ತುವಿನ ಬಗ್ಗೆ ವರ್ತಿಸುವ ರೀತಿ) ಅಂಶಗಳನ್ನು ಹೊಂದಿರುತ್ತವೆ.

ನಿತ್ಯ ಜೀವನದಲ್ಲಿ ಮನೋಭಾವಗಳನ್ನು ಉದ್ದೇಶಪೂರ್ವಕವಾಗಿ, ವ್ಯವಸ್ಥಿತ ಕ್ರಮದಲ್ಲಿ ಕಲಿಸುವುದಿಲ್ಲವಾದರೂ ಶಾಲಾ ಜೀವನದಲ್ಲಿ ಅಪೇಕ್ಷಿತ ಮನೋಭಾವಗಳನ್ನು ವ್ಯವಸ್ಥಿತ ಕ್ರಮದಲ್ಲಿ ಕಲಿಸಬೇಕಾಗುತ್ತದೆ. ದೊಡ್ಡವರ ಮನೋಭಾವಗಳಿಂದ ಪ್ರೇರಿತವಾದ ವರ್ತನೆಯನ್ನು ಮಕ್ಕಳು ಅನುಕರಿಸುವುದು ಅನೇಕ ಮನೋಭಾವಗಳ ಮುಖ್ಯವಾಗಿ ವಾಸ ಪ್ರದೇಶ, ಜಾತಿ, ಧರ್ಮ, ಭಾಷೆ, ಆಹಾರ ಸೇವನೆಗೆ ಸಂಬಂಧಿಸಿದ ಮನೋಭಾವಗಳ ಕಲಿಕೆಗೆ ಕಾರಣವಾಗುತ್ತದೆ. ಮಕ್ಕಳು ಬೆಳೆದಂತೆ ಅವರಿಗೆ ದೊರಕುವ ಮಾಹಿತಿಗಳು, ಸೂಚನೆಗಳಿಂದ, ವೈಯಕ್ತಿಕ ಅನುಭವಗಳಿಂದ ಮನೋಭಾವಗಳ ಕಲಿಕೆ ಉಂಟಾಗುತ್ತದೆ. ಶಾಲಾ ಜೀವನದಲ್ಲಿ ಸೂಕ್ತ ಮಾಹಿತಿಗಳ ಮೂಲಕ, ವರ್ತನೆಯ ಮಾದರಿಗಳ ಮೂಲಕ ಮತ್ತು ಔಪಚಾರಿಕ ಬೋಧನೆಯಿಂದ ಅಪೇಕ್ಷಿತ ಮನೋಭಾವಗಳನ್ನು ಕಲಿಸಲು, ಅನಪೇಕ್ಷಿತ ಮನೋಭಾವಗಳನ್ನು ಧನಾತ್ಮಕ ದಿಶೆಯಲ್ಲಿ ಬದಲಾಯಿಸುವುದು ಸಾಧ್ಯವಿದೆ.

**15. ಕೌಶಲಗಳ ಕಲಿಕೆ:** ಗತ್ಯಾತ್ಮಕ (ಚಲನೆಯ) ಅಂಗಗಳಾದ ಕೈಗಳು, ಕಾಲುಗಳು ಮತ್ತು ಸಂವೇದಾನಾಂಗಗಳಾದ ಕಣ್ಣು, ಕಿವಿಗಳನ್ನು ವಿವಿಧ ವಿನ್ಯಾಸಗಳಲ್ಲಿ ಸಂಯೋಜಿಸಿ ಧ್ಯೇಯಗಮ್ಯವಾಗಿ ಮಾಡುವ ವರ್ತನಾ ವಿನ್ಯಾಸಕ್ಕೆ ಕೌಶಲ ಎಂದು ಹೆಸರು. ಇವು ಚಲನಾತ್ಮಕ ಸ್ವರೂಪವಾದವುಗಳಾಗಿರುವುದರಿಂದಲೂ, ಪ್ರತ್ಯಕ್ಷಾನುಭವವನ್ನು ಇವು ಒಳಗೊಳ್ಳುವುದರಿಂದಲೂ ಇವುಗಳಿಗೆ ಪ್ರತ್ಯಕ್ಷಾತ್ಮಕ, ಗತ್ಯಾತ್ಮಕ ಕೌಶಲಗಳು (Perceptual Motive Skills) ಎಂಬುದಾಗಿಯೂ ಕರೆಯುತ್ತಾರೆ. ಕೌಶಲಗಳು ಪರಿಸರದೊಂದಿಗೆ ಅನ್ಯೋನ್ಯ ಕ್ರಿಯಿಸಲು ಸಹಾಯ ಮಾಡುತ್ತವೆ. ಇವುಗಳಿಗೆ ಮನೋರಂಜನಾತ್ಮಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಮೌಲ್ಯವೂ ಇದೆ. ಇವುಗಳನ್ನು ಕಲಿತುಕೊಳ್ಳುವುದೇ ಕೌಶಲಗಳ ಕಲಿಕೆ (Skill Learning)

ಕೌಶಲಗಳು ಸರಳವಾಗಿರಬಹುದು ಅಥವಾ ಸಂಕೀರ್ಣ ಸ್ವರೂಪದವಾಗಿರಬಹುದು. ನೆಟ್ಟಗೆ ನಿಲ್ಲುವುದು, ಓದುವುದು, ಹತ್ತುವುದು, ಓಡುವುದು, ಬರೆಯುವುದು, ಮುಂತಾದವು ಮೂಲಭೂತ ಕೌಶಲಗಳೆನಿಸುತ್ತವೆ. ಮೇಲ್ಮಟ್ಟದ ಸಂಕೀರ್ಣ ಕೌಶಲಗಳ ಕಲಿಕೆಗೆ ಇವು ಆಧಾರವಾಗುತ್ತವೆ. ಕೆಲವು ಮೂಲಭೂತ ಕೌಶಲಗಳನ್ನು ಮಕ್ಕಳು ಪದೇ ಪದೇ ಪ್ರಯತ್ನಿಸುವುದರಿಂದ, ಅನುಕರಣೆ ಮಾಡುವುದರಿಂದ ಕಲಿತುಕೊಳ್ಳುತ್ತಾರೆ. ಸಂಕೀರ್ಣ ಕೌಶಲಗಳ ಕಲಿಕೆಗೆ ವ್ಯವಸ್ಥಿತವಾದ ಬೋಧನೆ, ತರಬೇತಿ, ಸೂಚನೆಗಳು ಮತ್ತು ಅಭ್ಯಾಸದ ಅಗತ್ಯವಿರುತ್ತದೆ.

ಕೌಶಲಗಳ ಕಲಿಕೆಯಲ್ಲಿ ಮೂರು ಹಂತಗಳಿವೆ. (1) ಸಂಜ್ಞಾನಾತ್ಮಕ ಹಂತ – ಇದರಲ್ಲಿ ಕೌಶಲದ ಸ್ವರೂಪದ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ. ಅದರ ಕಲಿಕೆಯ ಬಗ್ಗೆ ವಿವರಣೆ ನೀಡಲಾಗುತ್ತದೆ. (2) ದೃಢೀಕರಣ ಹಂತ – ಈ ಹಂತದಲ್ಲಿ ಕೌಶಲವನ್ನು ಚೆನ್ನಾಗಿ ಅಭ್ಯಾಸ ಮಾಡಲು ತರಬೇತಿ ನೀಡಲಾಗುತ್ತದೆ. ಸೂಕ್ತ ಮಾರ್ಗದರ್ಶನದಿಂದ ತಪ್ಪುಗಳನ್ನು ತಿದ್ದಲಾಗುತ್ತದೆ. (3) ಯಾಂತ್ರಿಕತೆ ಅಥವಾ ಪರಿಪೂರ್ಣತೆಯ ಹಂತ – ಈ ಹಂತದಲ್ಲಿ ಅಭ್ಯಾಸವನ್ನು ಇನ್ನೂ ಮುಂದುವರಿಸಿ ಕೌಶಲದ ಕ್ರಿಯಾ ಸರಣಿ ಯಾಂತ್ರಿಕವಾಗುವಂತೆ ಆಚರಣೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ವೈಯಕ್ತಿಕ ಶೈಲಿಯನ್ನು ವ್ಯಕ್ತಿ ಬೆಳೆಸಿಕೊಳ್ಳಬಹುದು.

ಕೌಶಲಗಳ ಕಲಿಕೆಯಲ್ಲಿ ಮುಖ್ಯವಾಗಿ ಮೂರು ತತ್ವಗಳು ಅಡಕವಾಗಿವೆ. ಕೌಶಲದ ಸ್ವರೂಪವನ್ನು, ಮಹತ್ವವನ್ನು, ಅದರ ಕಲಿಕೆಯ ಹಂತಗಳನ್ನು ಅರ್ಥಮಾಡಿಕೊಳ್ಳುವುದು. ಸತತವಾಗಿ, ಆದರೆ ಮಧ್ಯೆ ಮಧ್ಯೆ ವಿರಾಮ ಕೊಟ್ಟು ಕೌಶಲವನ್ನು (ಅದರ ಉಪಕೌಶಲಗಳನ್ನು ಚೆನ್ನಾಗಿ ಅಭ್ಯಾಸ ಮಾಡುವುದು) ಪದೇ ಪದೇ ಅಭ್ಯಾಸ ಮಾಡುತ್ತಿರುವುದು, ಮಾದರಿ ಕೌಶಲದ ಅನುಕರಣೆಯೂ ಕಲಿಕೆಗೆ ಸಹಾಯಕವಾಗುತ್ತದೆ.

**–ಮೂಲ: ಡಾ. ವೆಂಕಟೇಶಮೂರ್ತಿ ಸಿ.ಜಿ. ಮತ್ತು ನಂದಿನಿ ಪಿ.**
**ಅನು: ಡಾ. ಶೈಲಜಾ.ಪಿ. ಶಾನಭಾಗ್**

Digitised by Bharatavani, CIIL

## ಕಾನೂನು ಸಾಕ್ಷರತೆ

ಕಾನೂನು ಸಾಕ್ಷರತೆ ಎಂಬುದು ಅತ್ಯಂತ ಪ್ರಮುಖವಾದ ಇತ್ತೀಚಿನ ಒಂದು ಪರಿಕಲ್ಪನೆ. ಆಧುನಿಕ ಜನಕಲ್ಯಾಣ ನ್ಯಾಯಶಾಸ್ತ್ರದಲ್ಲಿ ಮೂಡಿಬಂದ ಅಭಿವ್ಯಕ್ತಿ ಇದು. ಓದುವ ಮತ್ತು ಬರೆಯುವ ಸಾಮರ್ಥ್ಯವನ್ನು ವಿಶೇಷವಾಗಿ ಸಾಕ್ಷರತೆ ಎನ್ನಲಾಗುತ್ತದೆಯಷ್ಟೇ. ಪ್ರಸ್ತುತ ಸನ್ನಿವೇಶದ ನ್ಯಾಯವ್ಯವಸ್ಥೆಯಲ್ಲಿ ನಮೂದಾಗಿರುವಂತೆ, ವ್ಯಕ್ತಿ ತನ್ನ ಹಕ್ಕುಗಳನ್ನು ಅರಿಯುವ ಸಾಮರ್ಥ್ಯಕ್ಕೆ ಸಂಬಂಧಿಸಿದುದು ಕಾನೂನು ಸಾಕ್ಷರತೆ. ಇದೇ ಸಂದರ್ಭದಲ್ಲಿ ಇಂದು ಬಳಸಲಾಗುತ್ತಿರುವ ಮತ್ತೊಂದು ಪದ 'ಸಾಕ್ಷರತಾ ಆಂದೋಲನ'. ಸಾಕ್ಷರರಾಗಲು ಜನಗಳಿಗೆ ಕೊಡುವ ಕರೆಯೇ ಈ ಸಾಕ್ಷರತಾ ಆಂದೋಲನ. ಇದೇ ರೀತಿಯಲ್ಲಿ ಇಂದು ಮಾನವ ಹಕ್ಕುಗಳ ಅಭಿಯಾನವೂ ನಡೆದಿದೆ. ಈ ಅಭಿಯಾನದ ನಂತರದ ಕೆಲವು ದಶಕಗಳಲ್ಲಿ ಕಾನೂನು ಸಾಕ್ಷರತೆಯ ಪರಿಕಲ್ಪನೆ ಹೆಚ್ಚು ಜನಪ್ರಿಯವಾಗಿ ಹೆಚ್ಚು ವಿಶಾಲವಾದ ಅರ್ಥದೊಂದಿಗೆ ಇಂದು ಪ್ರಮಾಣೀಕೃತವಾದ ಅರ್ಥವನ್ನು ಮೈಗೂಡಿಸಿಕೊಂಡಿದೆ. ಇದು ವ್ಯಕ್ತಿ ತನ್ನ ಹಕ್ಕುಗಳನ್ನು ಅರಿಯುವ ಸಾಮರ್ಥ್ಯವನ್ನು ಒಳಗೊಂಡಿರುವುದು ಮಾತ್ರವಲ್ಲದೆ, ಅದನ್ನು ಸಾಧಿಸಲು, ಪ್ರತಿಪಾದಿಸಲು ಆ ಮೂಲಕ ಅಪೇಕ್ಷಿತ ಬದಲಾವಣೆಗಳಿಗಾಗಿ ಅವುಗಳನ್ನು ಚಾಲನೆಗೆ ತರಲು ಅಗತ್ಯವಾದ ಸಾಮರ್ಥ್ಯವನ್ನು ಒಳಗೊಳ್ಳುತ್ತದೆ. ಹೀಗಾಗಿ, ಕಾನೂನು ಸಾಕ್ಷರತೆ ಎಂಬುದು, ಸಾಮಾನ್ಯ ಜನರು ತಮ್ಮ ಹಕ್ಕುಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದ ಸಾಮಾಜಿಕ ಹಾಗೂ ವ್ಯವಹಾರ ಕೌಶಲಗಳು, ಜೊತೆಗೆ ಇವುಗಳಿಗೆ ಸಂಬಂಧಿಸಿದ ಅರಿವನ್ನು ಗ್ರಹಿಕೆಯನ್ನು ಗಳಿಸಿ ಬೆಳೆಸಿಕೊಳ್ಳುವ ಒಂದು ಚಟುವಟಿಕೆ ಎಂದು ಹೇಳಬಹುದು. ರಾಜ್ಯವು ತನ್ನ ಅಗತ್ಯಗಳನ್ನು ಹೇಗೆ ಪೋಷಿಸಿಕೊಳ್ಳುತ್ತದೆ ಎಂಬ ಅರಿವನ್ನು ಪಡೆಯಲೂ ಈ ಪರಿಕಲ್ಪನೆ ಜನಸಾಮಾನ್ಯರಿಗೆ ಅನುವು ಮಾಡಿಕೊಡುತ್ತದೆ.

ಭಾರತದಲ್ಲಿ ಕಾನೂನು ಸಾಕ್ಷರತಾ ಅಭಿಯಾನವು ಸಾಮಾನ್ಯ ಜನರ ಉದ್ಧಾರದ ಉದ್ದೇಶದಿಂದ ಒಂದು ಕಲ್ಯಾಣಪರ ಚಟುವಟಿಕೆಯಾಗಿ ಪ್ರಾರಂಭವಾಯಿತು. ಏಕೆಂದರೆ ಇಲ್ಲಿಯ ಬಹಳಷ್ಟು ಜನರು ಬಡತನದ ರೇಖೆಯಿಂದ ಕೆಳಗಿನ ಸ್ತರದಲ್ಲಿ ವಾಸಿಸುತ್ತಿದ್ದು ಅವರಲ್ಲಿ ಅನೇಕರಿಗೆ ತಮ್ಮ ಕಾನೂನುಬದ್ಧ ಹಕ್ಕುಗಳ ಅರಿವು ಇಲ್ಲವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ತಾನು ಬದುಕುತ್ತಿರುವ ವ್ಯವಸ್ಥೆಯ ಬಗ್ಗೆ ಉತ್ತಮ ಜ್ಞಾನವನ್ನು ಹೊಂದಿರಬೇಕೆಂಬುದು ಆಧುನಿಕ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗಳ ಒಂದು ಆವಶ್ಯಕತೆ. ಉತ್ತಮ ಪೌರನಾಗಿ ಸಮಾಜಕ್ಕೆ ಉಪಕಾರಿಯಾದ ಪ್ರಜೆಯಾಗಿ ಬದುಕಲು ಪ್ರತಿಯೊಬ್ಬರೂ ತಮ್ಮ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಅವಶ್ಯಕವಾದ ಅರಿವನ್ನು ಪಡೆದಿರಬೇಕಾಗುತ್ತದೆ.

ಮೌಲ್ಯ ವ್ಯವಸ್ಥೆಯಲ್ಲಾಗಿರುವ ವಾಸ್ತವಿಕ ಬದಲಾವಣೆಗಳು– ಸಾಮಾಜಿಕ ಮತ್ತು ನೈತಿಕ– ಕಾನೂನಿನ ಅರಿವಿನ ಅಗತ್ಯವು ಅನಿವಾರ್ಯವಾಗಿದೆ. ಅಗತ್ಯಬಿದ್ದ ಯಾವುದೇ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ನ್ಯಾಯ ಒದಗಿಸುವ ವ್ಯವಸ್ಥೆಯನ್ನು ಕುರಿತು ಆಲೋಚನೆ ಮಾಡುವಲ್ಲಿ ಮತ್ತು ನ್ಯಾಯವನ್ನು ಪಡೆಯುವಲ್ಲಿ ಸಮರ್ಥನಾಗಬೇಕಾಗಿದೆ. ಕಾನೂನನ್ನು ಅಪೇಕ್ಷಿತ ಬದಲಾವಣೆ ಮತ್ತು ಬೆಳವಣಿಗೆಯ ಸಾಧನವಾಗಿ ಬಳಸಬಹುದು ಎಂಬ ಅರಿವೂ ಅಷ್ಟೇ ಅಗತ್ಯವಾಗಿದೆ. ಕಾನೂನು ಸಾಕ್ಷರರಲ್ಲದವರು ತಮ್ಮ ಹಕ್ಕುಗಳನ್ನು ಪ್ರಸ್ತಾಪಿಸುವುದಕ್ಕಾಗಲೀ ಅಥವಾ ವಿವಾದಗಳನ್ನು ನ್ಯಾಯಸಮ್ಮತವಾಗಿ ಇತ್ಯರ್ಥ ಮಾಡುವುದಕ್ಕಾಗಲೀ ಸಮರ್ಥರಾಗಿರುವುದಿಲ್ಲ. ಹಾಗಾಗಿ ನ್ಯಾಯಿಕವಾದ ಅರಿವನ್ನು ಮೂಡಿಸುವುದೇ ಪ್ರತಿ ಕಾನೂನು ಸಾಕ್ಷರತಾ ಕಾರ್ಯಕ್ರಮದ ಉದ್ದೇಶ. ನಮ್ಮ ದೇಶದಲ್ಲಿ ಈ ಕುರಿತ ಅರಿವಿನ ಕೊರತೆಯೇ ವಂಚಿತ ವರ್ಗದ ಹೇಳಲಾಗದಷ್ಟು ಸಂಕಷ್ಟಗಳಿಗೆ ಕಾರಣವಾಗಿದೆ.

### ಭಾರತದಲ್ಲಿ ಕಾನೂನು ಸಾಕ್ಷರತೆಯ ಹಿನ್ನೆಲೆ

ಪ್ರಪಂಚದಾದ್ಯಂತ ಹರಡಿರುವ ಮಾನವ ಹಕ್ಕುಗಳ ಚಳುವಳಿಯ ಜೊತೆಯಲ್ಲೇ ಭಾರತದಲ್ಲಿ ಕಾನೂನು ಸಾಕ್ಷರತಾ ಪರಿಕಲ್ಪನೆಯೂ ಮೂಡಿಬಂದಿದೆ. ಅಂತೆಯೇ ಭಾರತೀಯ ನ್ಯಾಯ ಹಾಗೂ ತೀರ್ಪಿನ ವ್ಯವಸ್ಥೆಯನ್ನೂ ಆವರಿಸಿದೆ. ಭಾರತ ಸಂವಿಧಾನದ ಪ್ರಕಾರ ಕಾನೂನು ಸಾಕ್ಷರತೆ ಹಿಂದಿನ ದಿನಗಳಲ್ಲಿ ಕಡ್ಡಾಯವಾಗಿರಲಿಲ್ಲ. ಆದರೆ ಸಂವಿಧಾನದ ಅನೇಕ ಪ್ರಾವಧಾನಗಳು, ಅದರಲ್ಲೂ ಮುಖ್ಯವಾಗಿ ಮೂಲಭೂತ ಹಕ್ಕುಗಳನ್ನು ಕುರಿತ ಭಾಗ III ಮತ್ತು ನಿರ್ದೇಶನಾತ್ಮಕ ತತ್ವಗಳನ್ನು ಕುರಿತ ಭಾಗ IV ಇದರ ಅಪೇಕ್ಷಣೀಯತೆಯನ್ನು ಕುರಿತಂತೆ ಸಾಕಷ್ಟು ವಿವರಣೆ ನೀಡಿತ್ತು. ಸಂವಿಧಾನದ 21 ನೇ ವಿಧಿ ಪ್ರತಿ ವ್ಯಕ್ತಿಗೂ ಘನತೆವೆತ್ತ ಜೀವನವನ್ನು ಖಾತರಿ ಮಾಡುವುದಲ್ಲದೆ ಮಾನವೀಯ ಘನತೆಯ ಗುರಿಯನ್ನು ಸಾಧಿಸುವ ಕ್ರಮಗಳನ್ನು ಸೂಚಿಸಿದೆ. ಇದು ಮೂಲಭೂತವಾಗಿ ವ್ಯಕ್ತಿಯ ಹಕ್ಕುಗಳ ಅರಿವಿನ ಸಹಾಯವಿಲ್ಲದೆ ಸಾಧ್ಯವಾಗುವಂತಹುದಲ್ಲ. ಸಂವಿಧಾನದ ಅಡಿಯಲ್ಲಿ ಕಾನೂನು ಸಾಕ್ಷರತೆಯ ಪರಿಕಲ್ಪನೆಯನ್ನು ಹೆಚ್ಚು ಸ್ಪಷ್ಟೀಕರಿಸಲು 1976ರಲ್ಲಿ, 42ನೇ ತಿದ್ದುಪಡಿಯ ಮೂಲಕ ಪಾರ್ಲಿಮೆಂಟ್ 39A ವಿಧಿಯನ್ನು ಸಂವಿಧಾನಕ್ಕೆ ಸೇರಿಸಿತು. ಈ ವಿಧಿಯು ಸಮಾನ ಅವಕಾಶಗಳ ಆಧಾರದ ಮೇಲೆ, ಅದರಲ್ಲೂ ಮುಖ್ಯವಾಗಿ ಕಾನೂನು ಸೇವೆಯನ್ನು ಒದಗಿಸುವುದರ ಮೂಲಕ ನ್ಯಾಯ ದೊರಕಿಸಿಕೊಡಲು ರಾಜ್ಯಗಳನ್ನು ನಿರ್ದೇಶಿಸುತ್ತದೆ. ಈ ಕಾನೂನಿನ ನೆರವು ಎಂಬುದು ಬಹಳ ವಿಶಾಲವಾದ ಬಹುಮುಖಿ ಪರಿಕಲ್ಪನೆಯಾಗಿದ್ದು ಕಾನೂನು ಸಾಕ್ಷರತೆ ಎಂಬುದು ಇದರ ಒಂದು ಅವಶ್ಯ ಘಟಕವಾಗಿದೆ.

39A ವಿಧಿಯನ್ನು ಸಂವಿಧಾನದಲ್ಲಿ ಅಳವಡಿಸಿದ ನಂತರ, ಮಾನವೀಯ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಸರ್ವೋಚ್ಚ ನ್ಯಾಯಾಲಯವು, ತನ್ನ ಅನೇಕ ನಿರ್ಧಾರಗಳಲ್ಲಿ, ಅರ್ಹರಾದವರಿಗೆ ಕಾನೂನು ಸೇವೆಯನ್ನು ಉಚಿತವಾಗಿ ನೀಡುವ ಜವಾಬ್ದಾರಿಯನ್ನು

Digitised by Bharatavani, CIIL

ರಾಜ್ಯಗಳಿಗೆ ಸಂವಿಧಾನಾತ್ಮಕವಾಗಿ ನೀಡಿತು. ಎಂ ಎಂ ಹೊಸಕೋಟೆ ವಿರುದ್ಧ ಮಹಾರಾಷ್ಟ್ರ ಮೊಕದ್ದಮೆಯಲ್ಲಿ ಸಂವಿಧಾನದ 21ನೇ ವಿಧಿಯ 'ವಿಧಾನ' ಎಂಬ ಪದಕ್ಕೆ ವಿಶಾಲವಾದ ಅರ್ಥವನ್ನು ನೀಡಿ, ದೋಷಾರೋಪಿಗಳಿಗೆ ಅಪರಾಧಕ್ಕೆ ಸಂಬಂಧಪಟ್ಟ ನ್ಯಾಯ ದೊರಕಿಸಿಕೊಡಲು ಕಾನೂನು ಸೇವೆಯನ್ನು ಒದಗಿಸಿಕೊಡಬೇಕಾದ ಅಗತ್ಯವನ್ನು ಒತ್ತಿಹೇಳಲಾಯಿತು. ಪ್ರಾವಧಾನ 21ರ ಪ್ರಕಾರ ನ್ಯಾಯಬದ್ಧವಾಗಿ ಅಲ್ಲದೆ ಯಾವುದೇ ವ್ಯಕ್ತಿಯ ಜೀವವನ್ನು ಅಥವಾ ಆತನನ್ನು ವೈಯಕ್ತಿಕ ಸ್ವಾತಂತ್ರ್ಯವಂಚಿತನಾಗಿ ಮಾಡುವಂತಿಲ್ಲ. ಹೀಗಾಗಿ, ನ್ಯಾಯದ ಸದ್ವಿನಿಯೋಗಕ್ಕಾಗಿ, ಸ್ವಂತವಾಗಿ ನ್ಯಾಯ ಸೇವೆಯನ್ನು ವ್ಯವಸ್ಥೆ ಮಾಡಿಕೊಳ್ಳಲಾಗದ ವ್ಯಕ್ತಿಗಳಿಗೆ ನ್ಯಾಯಸೇವೆಯು ಒದಗುವಂತೆ ಮಾಡಬೇಕು.

ಇದರ ತರುವಾಯ, ಹಲವಾರು ತೀರ್ಪುಗಳಲ್ಲಿ, ಸರ್ವೋಚ್ಚ ನ್ಯಾಯಾಲಯವು ನ್ಯಾಯ ನೆರವನ್ನು ಒಂದು ಮೂಲಭೂತ ಹಕ್ಕು ಎಂಬುದಾಗಿ ಎತ್ತಿ ಹಿಡಿಯಿತು. (ಹುಸೈನಾರಾಖಾಟೂನ್ ವಿರುದ್ಧ ಬಿಹಾರ್ ರಾಜ್ಯ, ಹರಿಯಾಣ ರಾಜ್ಯ ಎದುರು ದರ್ಶನ, ಶೀಲಾ ಬಾರ್ಸೆ ಎದುರು ಮಹಾರಾಷ್ಟ್ರ ರಾಜ್ಯ). ನಂದಿನಿ ಸತ್ಪತಿ ವಿರುದ್ಧ ಪಿ ಎಲ್ ದಾನಿ ಅವರ ಮೊಕದ್ದಮೆಯಲ್ಲಿ, ಪೋಲೀಸ್ ಕಸ್ಟಡಿಯಲ್ಲಿರುವವರಿಗೂ ಆತನ ಆಯ್ಕೆಯ ವಕೀಲರಿಂದ ಸೇವೆ ಪಡೆಯುವ ಹಕ್ಕನ್ನು ಎತ್ತಿಹಿಡಿಯಲಾಯಿತು. ವ್ಯಕ್ತಿ ಬಂಧಿತನಾದರೆ, ಪೊಲೀಸರು ತಕ್ಷಣವೇ ಹತ್ತಿರದ ಕಾನೂನು ಸೇವಾ ಸಮಿತಿಗೆ ವಿಷಯ ತಿಳಿಸಬೇಕು ಹಾಗೂ ಆ ಸಮಿತಿಯು ಬಂಧಿತ ವ್ಯಕ್ತಿ ಇಚ್ಛಿಸಿದರೆ, ರಾಜ್ಯದ ವೆಚ್ಚದಲ್ಲಿ ತಕ್ಷಣವೇ ನ್ಯಾಯಸೇವೆಯನ್ನು ಒದಗಿಸಲು ಕಾರ್ಯೋನ್ಮುಖವಾಗಬೇಕು ಎಂಬ ವಿಷಯವನ್ನೂ ಸ್ಪಷ್ಟೀಕರಿಸಲಾಯಿತು. ಈ ಪರಿಕಲ್ಪನೆಯು ಹುಸೈನಾರಾ ಖಾಟೂನ್ ವಿರುದ್ಧ ಬಿಹಾರ್ ರಾಜ್ಯದ ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ಖೈದಿಗಳ ಶೀಘ್ರ ಮತ್ತು ನ್ಯಾಯಸಮ್ಮತವಾದ ಪರೀಕ್ಷೆಯ ಆವಶ್ಯಕತೆಯನ್ನು ಒತ್ತಿ ಹೇಳುವಾಗ ಮತ್ತೂ ಜನಪ್ರಿಯವಾಯಿತು.

ಸರ್ವೋಚ್ಚ ನ್ಯಾಯಾಲಯದ ನಿಲುವುಗಳಿಗೆ ಇತ್ಯಾತ್ಮಕವಾಗಿ ಸ್ಪಂದಿಸಿದ ಭಾರತ ಸರ್ಕಾರವು 26 ಸೆಪ್ಟಂಬರ್ 1980 ರಂದು ಜಸ್ಟಿಸ್ ಪಿ ಎನ್ ಭಗವತಿ ಅವರ ಅಧ್ಯಕ್ಷತೆಯಲ್ಲಿ ಕಾನೂನು ನೆರವು ಯೋಜನಾ ಅನುಷ್ಠಾನ ಸಮಿತಿಯನ್ನು (CILAS) ನೇಮಿಸಿತು. ಈ ಸಮಿತಿಯು (CILAS) ರಾಷ್ಟ್ರವ್ಯಾಪಿಯಾದ ಕಾನೂನು ನೆರವು ಕಾರ್ಯಕ್ರಮಗಳಿಗೆ ಒಂದು ಆದರ್ಶ ಯೋಜನೆಯನ್ನು ರೂಪಿಸಿತು. ಕಾನೂನು ನೆರವಿನ ವ್ಯವಸ್ಥೆಯನ್ನು ಮತ್ತೂ ಉತ್ತಮಪಡಿಸಲು 1987ರಲ್ಲಿ ಕಾನೂನು ಸೇವಾ ಅಧಿಕಾರ ಅಧಿನಿಯಮವನ್ನು ಜಾರಿಗೆ ತರಲಾಯಿತು. ಇದು ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ಶಾಸನಬದ್ಧವಾದ ಕಾನೂನು ಸೇವಾ ಪ್ರಾಧಿಕಾರಗಳನ್ನು ರೂಪಿಸಲು ಅನುವು ಮಾಡಿಕೊಟ್ಟಿತು. ಇದೇ ಅಧಿನಿಯಮವು ಲೋಕ್ ಅದಾಲತ್ ಗಳಿಗೂ ಒಂದು ಶಾಸನಬದ್ಧ ಆಧಾರವನ್ನು ನೀಡುತ್ತದೆ. ಹಾಗೆಯೇ ಮೇಲುಮನವಿ ಮಾಡಲಾಗದ ನ್ಯಾಯನಿರ್ಣಯಗಳಿಗೆ ಮಾನ್ಯತೆಯನ್ನು ಒದಗಿಸುತ್ತದೆ. 2002ರಲ್ಲಿ ತಿದ್ದುಪಡಿಯಾಗಿರುವಂತೆ, ಈ ಅಧಿನಿಯಮವು ಶಾಶ್ವತ ಲೋಕ್‌ಅದಾಲತ್‌ಗಳ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಈ ಅಧಿನಿಯಮದ ಪ್ರಕಾರ, ಕಾನೂನು ಸೇವಾ ಅಧಿಕಾರಗಳು ಇತರ ವಿಷಯಗಳೊಂದಿಗೆ, ಇವು ಜನರಿಗೆ, ಅದರಲ್ಲೂ ಮುಖ್ಯವಾಗಿ, ದುರ್ಬಲವರ್ಗದವರಿಗೆ, ವಿವಿಧ ಶಾಸನಗಳ ಪ್ರಕಾರ ಮಾನ್ಯ ಮಾಡಿರುವ ಹಕ್ಕುಗಳು, ಸವಲತ್ತುಗಳು ಹಾಗೂ ಅವಕಾಶಗಳನ್ನು ಕುರಿತಂತೆ, ಹಾಗೂ ಈ ಕುರಿತ ಆಡಳಿತಾತ್ಮಕ ಕಾರ್ಯಕ್ರಮಗಳು ಮತ್ತು ಕ್ರಮಗಳನ್ನು ಕುರಿತಂತೆ ಅರಿವು ಮೂಡಿಸಬೇಕು. ಆ ಮೂಲಕ ಕಾನೂನು ಸಾಕ್ಷರತೆ ಮತ್ತು ಕಾನೂನಿನ ಅರಿವನ್ನು ಜನರಲ್ಲಿ ಹರಡಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು.

**ಸಂವಿಧಾನಾತ್ಮಕ ಮತ್ತು ಕಾನೂನು ವಿಧಿಗಳು**

**ಸಂವಿಧಾನಾತ್ಮಕ ನಿರ್ದೇಶನಗಳು:**

ಮೇಲೆ ಹೇಳಿದಂತೆ, ಸಂವಿಧಾನದ 39A ವಿಧಿಯು ದೇಶದ ಎಲ್ಲ ಪೌರರಿಗೆ, ಕಾನೂನು ಸಾಕ್ಷರತೆಯನ್ನು ಒಳಗೊಂಡಂತೆ, ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವನ್ನು ನೀಡಲು ರಾಜ್ಯಗಳನ್ನು ಕೆಳಗಿನ ಮಾತುಗಳಲ್ಲಿ ನಿರ್ದೇಶಿಸುತ್ತದೆ.

ರಾಜ್ಯವು ಸಮಾನ ಅವಕಾಶದ ಆಧಾರದ ಮೇಲೆ ನ್ಯಾಯವು ಲಭಿಸುವಂತೆ ಕಾನೂನು ವ್ಯವಸ್ಥೆಯ ನಿರ್ವಹಣೆಯನ್ನು ಸುನಿಶ್ಚಿತಗೊಳಿಸತಕ್ಕದ್ದು ಮತ್ತು ವಿಶೇಷವಾಗಿ ಆರ್ಥಿಕ ಅಥವಾ ಇತರ ಅಸಮರ್ಥತೆಗಳ ಕಾರಣಗಳಿಂದಾಗಿ ಯಾವುದೇ ನಾಗರಿಕನಿಗೆ ನ್ಯಾಯವು ದೊರಕುವ ಅವಕಾಶಗಳು ತಪ್ಪುವುದನ್ನು ತಡೆಗಟ್ಟಲು ಸೂಕ್ತ ಕಾನೂನು ರಚನೆಯ ಮೂಲಕ ಅಥವಾ ಯೋಜನೆಗಳ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಉಚಿತ ಕಾನೂನು ನೆರವನ್ನು ಒದಗಿಸತಕ್ಕದ್ದು.

ಈ ಅವಕಾಶದಲ್ಲಿ ಕಾನೂನು ಸಾಕ್ಷರತೆಯನ್ನು ಕಾನೂನು ನೆರವಿನ ಜೊತೆಯಲ್ಲೇ ಹೆಣೆಯಲಾಗಿದೆ. ಸಂವಿಧಾನದ ಸಂದರ್ಭದಲ್ಲಿ, ಕಾನೂನು ನೆರವು ಎಂಬುದು ಬಹುಮುಖಿ ಕಲ್ಪನೆಯಾಗಿದ್ದು ಅದು ಕಾನೂನು ಸಾಕ್ಷರತೆಯನ್ನು ಒಳಗೊಳ್ಳುವುದರಿಂದ, ಸಂವಿಧಾನಾತ್ಮಕ ಅವಕಾಶಗಳಲ್ಲಿ 'ಕಾನೂನು ಸಾಕ್ಷರತೆ' ಎಂಬ ಪ್ರತ್ಯೇಕ ಪದವನ್ನು ಬಳಸುವ ಅಗತ್ಯವಿಲ್ಲ. 'ಇತರ ಅಸಾಮರ್ಥ್ಯಗಳು'(other disabilities) ಎಂಬ ಪದವು ಸ್ಪಷ್ಟವಾಗಿ ಕಾನೂನು ಸಾಕ್ಷರತೆಯ ಕೊರತೆಯನ್ನು ಸೂಚಿಸುವುದರೊಂದಿಗೆ, ಯಾವುದೇ ವ್ಯಕ್ತಿ ತನ್ನ ಅಜ್ಞಾನದ ಕಾರಣದಿಂದಾಗಿ ಅಥವಾ ಇತರ ಯಾವುದೇ ಕಾರಣದಿಂದಾಗಲೀ ಜಾರಿಯಲ್ಲಿರುವ ಹಕ್ಕುಗಳಿಂದ ವಂಚಿತನಾಗುವಂತಿಲ್ಲ ಎಂಬುದನ್ನು ಸೂಚಿಸುತ್ತದೆ.

ಕಾನೂನು ಸಾಕ್ಷರತೆ ಎಂಬುದು ಅದರ ಜೊತೆಯಲ್ಲೇ ಶಿಕ್ಷಣದ ಹಕ್ಕು ಮತ್ತು ಮಾಹಿತಿ ಹಕ್ಕು ಇವೆರಡಕ್ಕೂ ತುಂಬ ನಿಕಟ ಸಂಬಂಧ ಹೊಂದಿದೆ. 39A ವಿಧಿಯು, ವಿಧಿ 19(ವಾಕ್‌ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಖಾತರಿಗೊಳಿಸುವ) ಮತ್ತು ವಿಧಿ21(ಬದುಕುವ

Digitised by Bharatavani, CIIL

ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ಖಾತರಿಗೊಳಿಸುವ) ರ ಜೊತೆಗೆ ಎಲ್ಲ ಪೌರರಿಗೂ ಶಿಕ್ಷಣದ ಹಕ್ಕು, ಮಾಹಿತಿ ಹಕ್ಕು ಅಥವಾ ವಿಷಯ ತಿಳಿಯುವ ಹಕ್ಕು ಹಾಗೂ ಘನತೆಯ ಬದುಕಿನ ಹಕ್ಕುಗಳನ್ನು ಪೋಷಿಸುತ್ತದೆ. ಸರ್ವೋಚ್ಚನ್ಯಾಯಾಲಯವು, ಮೋಹಿನಿ ಜೈನ್ ವಿರುದ್ಧ ಕರ್ನಾಟಕ ಮತ್ತು ಜೆ ಪಿ ಉನ್ನಿಕೃಷ್ಣನ್ ವಿರುದ್ಧ ಆಂಧ್ರ ಪ್ರದೇಶ ರಾಜ್ಯ– ಈ ಮೊಕದ್ದಮೆಗಳಲ್ಲಿ ವಿಧಿ 21ರ ಕೆಳಗೆ, ಬದುಕುವ ಹಕ್ಕಿನ ಭಾಗವಾಗಿ, ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕು ಎಂದು ಘೋಷಿಸಿದೆ. ಶಿಕ್ಷಣದ ಹಕ್ಕು, ಒಬ್ಬ ವ್ಯಕ್ತಿಯ ಮಾಹಿತಿ ಹಕ್ಕನ್ನೂ ಒಳಗೊಳ್ಳುತ್ತದಾದ ಕಾರಣ, ಕಾನೂನು ಸಾಕ್ಷರತೆಯ ಹಕ್ಕು ಎಲ್ಲ ಪೌರರಿಗೆ ಮೂಲಭೂತ ಹಕ್ಕು ಆಗಿದೆ. ಸಂವಿಧಾನದ ಭಾಗ IVರಲ್ಲಿರುವ 45ನೇ ವಿಧಿಯು, ರಾಜ್ಯ ಅಧಿನಿಯಮಗಳ ನಿರ್ದೇಶನಾ ತತ್ವಗಳನ್ನು ಪಟ್ಟಿಮಾಡುತ್ತಾ, 14ನೇ ವರ್ಷದವರೆಗೆ ಎಲ್ಲ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡಲು ನಿರ್ದೇಶಿಸುತ್ತದೆ. ನ್ಯಾಯಾಲಯವು ಈ ನಿರ್ದೇಶನವು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಸಂವಿಧಾನದ ಭಾಗ III ರ ಕೆಳಗೆ ಜಾರಿಗೆ ಬರುವಂತೆ ಮಾಡಿದೆ. ಇದಕ್ಕೆ ಸಂಬಂಧಿಸಿದಂತೆ ಸಂವಿಧಾನದ 21A ವಿಧಿಯು ಶಿಕ್ಷಣವನ್ನು ಪಡೆಯುವುದು ಒಂದು ಮೂಲಭೂತ ಹಕ್ಕು ಎಂದು ಸ್ಪಷ್ಟವಾಗುವಂತೆ ಘೋಷಿಸಿದೆ.

**ಶಾಸನಾತ್ಮಕ ವಿಧಿಗಳು**

ಕೇಂದ್ರೀಯ ವಿಧಿಗಳಲ್ಲಿ ಪ್ರಮುಖವಾಗಿ ಎರಡು ರೀತಿಯ ವಿಧಿಗಳಿವೆ. ಒಂದು, 1961ರ ನ್ಯಾಯವಾದಿಗಳ ವಿಧಿ, ಮತ್ತೊಂದು 1987ರ ಕಾನೂನು ಸೇವಾ ಅಧಿಕಾರ ವಿಧಿ. ಇವು ಕಾನೂನು ಸಾಕ್ಷರತೆಗೆ ಇರುವ ಅವಕಾಶವನ್ನು ಕುರಿತದ್ದಾಗಿವೆ. ಕಾನೂನು ಸಾಕ್ಷರತೆಯ ಗುರಿಯನ್ನು ತಲುಪಲು ಕೈಗೊಳ್ಳುವ ಎಲ್ಲ ಚಟುವಟಿಕೆಗಳಿಗೆ ಇವೇ ಬೆನ್ನೆಲುಬಿನಂತಿವೆ.

**1961ರ ನ್ಯಾಯವಾದಿಗಳ ವಿಧಿ**

ನ್ಯಾಯವಾದಿಗಳ ವಿಧಿಯು ಕಾನೂನು ನೆರವು ಮತ್ತು ಕಾನೂನು ಸಾಕ್ಷರತೆ ಇವು ಬಾರ್ ಕೌನ್ಸಿಲ್(ನ್ಯಾಯ ಮಂಡಳಿ)ಗಳ ಪ್ರಮುಖಕಾರ್ಯ ಎಂದು ಘೋಷಿಸುತ್ತದೆ. ಈ ವಿಧಿಯ ಭಾಗ 6, ರಾಜ್ಯ ನ್ಯಾಯಮಂಡಳಿಗಳನ್ನು ನಿರ್ದಿಷ್ಟವಾಗಿ ಕಾನೂನು ನೆರವು ಮತ್ತು ಕಾನೂನು ಸಾಕ್ಷರತಾ ಕಾರ್ಯಕ್ರಮಗಳನ್ನು ಸಂಘಟಿಸುವಂತೆ ನಿರ್ದೇಶಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ, ನ್ಯಾಯಮಂಡಳಿಗಳು ಖ್ಯಾತ ನ್ಯಾಯಶಾಸ್ತ್ರ ಪರಿಣಿತರುಗಳಿಂದ ಸಮ್ಮೇಳನಗಳನ್ನು, ಉಪನ್ಯಾಸಗಳನ್ನು ನಡೆಸಲು, ನಿಯತಕಾಲಿಕೆಗಳನ್ನು ಹಾಗೂ ಕಾನೂನು ವಿಷಯಕ ಪ್ರಬಂಧಗಳನ್ನು ಪ್ರಕಟಿಸಲು, ನಿಯೋಜಿತ ರೀತಿಯಲ್ಲಿ ಬಡವರಿಗೆ ಕಾನೂನು ನೆರವು ಒದಗಿಸಲು, ನಿಯಮಾನುಸಾರವಾಗಿ ಕಾನೂನು ನೆರವು ಅಥವಾ ಸಲಹೆಗಳನ್ನು ಕೊಡಲು ಸೂಕ್ತ ನಿಯಮಕ್ಕನುಸಾರವಾಗಿ ಧನಸಹಾಯ ಒದಗಿಸಲು ನಿರ್ದೇಶನ ನೀಡುತ್ತದೆ. ಅಂತೆಯೇ, ನ್ಯಾಯಸೇವಾ ಅಧಿಕಾರ ವಿಧಿಯ ಭಾಗ 7, ಭಾರತದ ನ್ಯಾಯ ಮಂಡಳಿಯು ಕಾನೂನು ಶಿಕ್ಷಣದ ಮೇಲ್ವಿಚಾರಣೆ ನಡೆಸುವುದರ ಜೊತೆಗೆ, ಕಾನೂನು ಸಾಕ್ಷರತೆಯ ಬೆಳವಣಿಗೆಯಲ್ಲೂ ಪಾತ್ರ ವಹಿಸುವಂತೆ ಅಪೇಕ್ಷಿಸುತ್ತದೆ. ಈ ವಿಧಿಯ ಭಾಗ 9A ಅಡಿಯಲ್ಲಿ ಪ್ರತಿ ನ್ಯಾಯಮಂಡಳಿಗೆ ಕಾನೂನು ನೆರವು ಮತ್ತು ಅರಿವಿಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಕಾನೂನು ಸಮಿತಿಗಳನ್ನು ರಚಿಸಲು ಅಧಿಕಾರ ನೀಡಲಾಗಿದೆ.

**ಕಾನೂನು ಸೇವಾ ಪ್ರಾಧಿಕಾರ ಕಾಯಿದೆ 1987**

ಸಂವಿಧಾನಾತ್ಮಕ ನಿರ್ದೇಶನ 39 A ವಿಧಿಯ ಪ್ರಕಾರ, ಕಾನೂನು ಸೇವಾ ಪ್ರಾಧಿಕಾರ ಕಾಯಿದೆಯು, ಸಮಾಜದ ದುರ್ಬಲ ವರ್ಗದವರಿಗೆ ಉಚಿತ ಮತ್ತು ಸಮರ್ಥ ಕಾನೂನು ಸೇವೆಯನ್ನು ನೀಡಲು, ಆರ್ಥಿಕ ಅಥವಾ ಇನ್ನಾವುದೇ ದುರ್ಬಲತೆಗಳ ಕಾರಣದಿಂದಾಗಿ ಯಾವುದೇ ಪ್ರಜೆ ನ್ಯಾಯವಂಚಿತನಾಗದೆ ಸೂಕ್ತ ನ್ಯಾಯ ಪಡೆಯುವ ಅವಕಾಶಗಳನ್ನು ಖಾತ್ರಿಪಡಿಸಲು, ಸಮಾನ ಅವಕಾಶದ ಆಧಾರದ ಮೇಲೆ ನ್ಯಾಯದೊರಕಿಸುವ ನ್ಯಾಯವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವಂತೆ ಲೋಕ್ ಅದಾಲತ್‌ಗಳನ್ನು ಸಂಘಟಿಸಲು ರಾಜ್ಯ ಹಾಗೂ ಜಿಲ್ಲಾ ಹಂತಗಳಲ್ಲಿ ಕಾನೂನು ಸೇವಾ ಅಧಿಕಾರವನ್ನು ನೀಡುತ್ತದೆ. ಕಾನೂನು ಸೇವೆಗಾಗಿ ಮತ್ತು ಸುಪ್ರೀಂ ಕೋರ್ಟಿಗೆ ಸುಲಭವಾಗಿ ಅವಕಾಶ ಸಿಗುವಂತಾಗಲು ಸರ್ವೋಚ್ಚನ್ಯಾಯಾಲಯವು ಕಾನೂನು ಸೇವಾ ಸಮಿತಿ (CILAS)ಯನ್ನು ರಚಿಸಿದೆ.

ಕಾನೂನು ಸಾಕ್ಷರತೆಯನ್ನು ಬೆಳೆಸುವುದು ಈ ಪ್ರಾಧಿಕಾರದ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ. ಈ ವಿಧಿಯ ಭಾಗ 4ರ ಪ್ರಕಾರ ಕೇಂದ್ರ ಪ್ರಾಧಿಕಾರವು ಸಾಮಾಜಿಕ ನ್ಯಾಯ ಮೊಕದ್ದಮೆಗಳ ಮೂಲಕ ಗ್ರಾಹಕ ರಕ್ಷಣೆ, ಪರಿಸರ ರಕ್ಷಣೆ ಅಥವಾ ದುರ್ಬಲವರ್ಗದವರ ಯಾವುದೇ ವಿಶೇಷ ಕಾಳಜಿಯ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಿಕೆ, ಈ ಉದ್ದೇಶಕ್ಕಾಗಿ ಸಾಮಾಜಿಕ ಕಾರ್ಯಕರ್ತರಿಗೆ ಕಾನೂನು ಕೌಶಲಗಳಲ್ಲಿ ತರಬೇತಿ, ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಕಾರ್ಮಿಕರ ಕಾಲೋನಿಗಳಲ್ಲಿ ಅವರ ಹಕ್ಕುಗಳನ್ನು ಕುರಿತಂತೆ ಲೋಕ್‌ಅದಾಲತ್‌ಗಳಿಂದ ಅವರ ವ್ಯಾಜ್ಯಗಳನ್ನು ತೀರ್ಮಾನಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕಾನೂನು ಶಿಬಿರಗಳ ಏರ್ಪಾಡು, ವಿಶೇಷವಾಗಿ ಬಡಜನರಿಗೆ ಕಾನೂನು ನೆರವಿನ ಆವಶ್ಯಕತೆಗೆ ಸಂಬಂಧಿಸಿದ ಸಂಶೋಧನೆ ಕೈಗೊಳ್ಳುವಿಕೆ, ಕಾಲಕಾಲಕ್ಕೆ ಕಾನೂನು ಸೇವಾ ಕಾರ್ಯಕ್ರಮಗಳ ಅನ್ವಯವನ್ನು ಕುರಿತ ಮೌಲ್ಯಮಾಪನ, ಸ್ವತಂತ್ರವಾಗಿ ಕಾರ್ಯಕ್ರಮ ಮೌಲ್ಯಮಾಪನ ಮಾಡಲು ಸಹಾಯ, ಅತ್ಯಂತ ವಸ್ತುನಿಷ್ಠವಾದ ಕಾನೂನು ಶಿಕ್ಷಣಕ್ಕೆ ಕಾರ್ಯಕ್ರಮಗಳನ್ನು ರೂಪಿಸುವಿಕೆ , ಬಡವರಿಗೆ ಅದರಲ್ಲೂ ಮುಖ್ಯವಾಗಿ ಸಮಾಜದ ದುರ್ಬಲವರ್ಗದವರಿಗೆ ಅವರ ಹಕ್ಕುಗಳು, ಅವಕಾಶಗಳು, ಸವಲತ್ತುಗಳನ್ನು ಕುರಿತಂತೆ ಕಾನೂನು ಬದ್ಧವಾದ ಅರಿವು ಮೂಡಿಸುವಿಕೆ ಮತ್ತು ಕಾನೂನು ಸಾಕ್ಷರತೆಯನ್ನು ಹರಡಲು ಕಾರ್ಯಕ್ರಮಗಳನ್ನು ರೂಪಿಸುವುದು ಇವೆಲ್ಲವನ್ನು ಕುರಿತಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

Digitised by Bharatavani, CIIL

ರಾಜ್ಯ ಹಾಗೂ ಜಿಲ್ಲಾ ಅಧಿಕಾರಿಗಳೂ ಕೇಂದ್ರ ಪ್ರಾಧಿಕಾರದ ನಿಯಮ ನಿರ್ದೇಶನಗಳಿಗೆ ಕರ್ತವ್ಯಬದ್ಧರಾಗಿರಬೇಕು. ಅವರು, 7ಮತ್ತು 10ನೇ ಭಾಗಗಳ ಮಾರ್ಗಸೂಚಿಗಳು ಅನ್ವಯವಾಗುವವರಿಗೆ, ಕಾನೂನು ಸೇವೆಯನ್ನು ನೀಡಬೇಕು–ಲೋಕ್ ಅದಾಲತ್‌ಗಳನ್ನು ನಡೆಸುವುದು, ನಿವಾರಣಾತ್ಮಕ ಹಾಗೂ ನಿರ್ವಹಣಾ ಚಾತುರ್ಯದ ನ್ಯಾಯನೆರವಿನ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಇತ್ಯಾದಿ.

**ಕಾನೂನು ಸೇವೆಯ ಅರ್ಹತೆ ಪಡೆಯಲು ಮಾನದಂಡಗಳು**

ಕಾನೂನು ಸಾಕ್ಷರತೆಯನ್ನು ಒಳಗೊಂಡಂತೆ ಕಾನೂನು ಸೇವೆಗಳಿಗೆ ಅರ್ಹರಾದ ವ್ಯಕ್ತಿಗಳನ್ನು ಈ ನಿಯಾಮಕದ ಭಾಗ 12ರ ಕೆಳಗೆ ಗುರುತಿಸಲಾಗಿದೆ. ಅವು ಈ ಕೆಳಗಿನ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ: (i) ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ ವ್ಯಕ್ತಿ (ii) ಅಪಹರಣಕ್ಕೆ ಒಳಗಾದ ವ್ಯಕ್ತಿ ಅಥವಾ ಸಂವಿಧಾನದ 23ನೆ ವಿಧಿ ಹೇಳಿರುವಂತೆ ಒಬ್ಬ ಭಿಕ್ಷುಕ (iii) ಮಹಿಳೆ ಅಥವಾ ಮಗು (iv) ಬೌದ್ಧಿಕವಾಗಿ ದುರ್ಬಲನಾದ ಅಥವಾ ಬೇರಾವುದೇ ರೀತಿಯಲ್ಲಿ ವಿಕಲಾಂಗನಾಗಿರುವ ವ್ಯಕ್ತಿ, (v)ಸಮೂಹದ ವಿಕೋಪ, ಜನಾಂಗೀಯ ಹಿಂಸೆ, ಜಾತೀಯ ಗಲಭೆಗಳು, ಪ್ರವಾಹ, ಕ್ಷಾಮ, ಭೂಕಂಪ ಅಥವಾ ಕೈಗಾರಿಕಾ ವಿಕೋಪಗಳಿಗೆ ಬಲಿಯಾಗಿ ಇಂತಹ ಸೇವೆಯನ್ನು ಬಯಸುವವ (vi) ಕೈಗಾರಿಕೆಯಲ್ಲಿನ ಕೆಲಸಗಾರ (vii) ಜೈಲಿನಲ್ಲಿ ಅಥವಾ ಬಾಲಾಪರಾಧಿ ಗೃಹಗಳಲ್ಲಿ ಇರುವವ (viii) ಒಂಬತ್ತು ಸಾವಿರ ರೂಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಇದ್ದ ಸರ್ವೋಚ್ಚನ್ಯಾಯಾಲಯೇತರ ನ್ಯಾಯಾಲಯಗಳಲ್ಲಿ ಮೊಕದ್ದಮೆಯಲ್ಲಿ ಭಾಗವಹಿಸಿರುವವ, ಹನ್ನೆರಡು ಸಾವಿರ ವಾರ್ಷಿಕ ವರಮಾನಕ್ಕಿಂತ ಕಡಿಮೆ ಅಥವಾ ಕೇಂದ್ರ ಸರ್ಕಾರ ನಿರ್ಧರಿಸುವ ಮೊತ್ತದಷ್ಟು ಹಣವನ್ನು ವಾರ್ಷಿಕ ಆದಾಯವಾಗಿ ಪಡೆಯುವ ಉಚ್ಚನ್ಯಾಯಾಲಯದ ಮೊಕದ್ದಮೆಯಲ್ಲಿ ಭಾಗವಹಿಸಿರುವವ.

ಈ ಎಲ್ಲ ವರ್ಗದ ಜನರಿಗೆ ಕಾನೂನು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವುದು ಮಾತ್ರವಲ್ಲ, ಕಾನೂನು ಸಾಕ್ಷರತಾ ಅಭಿಯಾನ ಆವರವರ ಮನೆಬಾಗಿಲಿಗೆ ತಲುಪಬೇಕು.

**ಭಾಗವಹಿಸುವ ಅಧಿಕಾರಿಗಳು/ನಿಯೋಗಗಳು**

ಮೇಲಿನ ಎರಡು ಕಾನೂನುಗಳು ಕೆಳಗೆ ಕಾಣಿಸಿರುವ ಕಚೇರಿಗಳಿಗೆ, ಕಾನೂನು ಸಾಕ್ಷರತೆಯನ್ನು ಕುರಿತು ಕೆಲಸಮಾಡಲು ಅವಕಾಶಮಾಡಿಕೊಡುತ್ತವೆ. ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ(National Legal Service Authority- NLSA), ರಾಜ್ಯ ಕಾನೂನು ಸೇವಾ ಪ್ರಾಧಿಕಾರ(State Legal Service Authority- SLSA), ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ(District Legal Service Authority- DLSA), ಸರ್ವೋಚ್ಚನ್ಯಾಯಾಲಯ ಕಾನೂನು ಸೇವಾ ಸಮಿತಿ(Supreme Court Legal Service Committee- SCLSC), ಭಾರತೀಯ ನ್ಯಾಯ ಮಂಡಳಿ ಹಾಗೂ ರಾಜ್ಯ ನ್ಯಾಯ ಮಂಡಳಿಗಳು, ಕಾನೂನು ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು, ಹಾಗೂ ಸರ್ಕಾರೇತರ ಸಂಸ್ಥೆಗಳು.

ಇವುಗಳಲ್ಲಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ– ಇವುಗಳನ್ನು ಕಾನೂನು ಸೇವಾ ಅಧಿಕಾರ ನಿಯಮದ ಅಡಿಯಲ್ಲೂ ಭಾರತೀಯ ನ್ಯಾಯ ಮಂಡಳಿ ಹಾಗೂ ರಾಜ್ಯ ನ್ಯಾಯ ಮಂಡಳಿಗಳನ್ನು 1961 ರ ಅಡ್ವೋಕೇಟ್ ನಿಯಮದ ಅಡಿಯಲ್ಲೂ ರೂಪಿಸಲಾಗಿದೆ. ಈ ಎರಡೂ ವಿಧಿಗಳ ಅಡಿಯಲ್ಲಿ ಕಾನೂನು ಶಿಕ್ಷಣ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಪಾತ್ರವಿದೆ. ಕಾನೂನು ಸೇವಾ ಅಧಿಕಾರ ನಿಯಮದ ಅಡಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ನಿಗದಿಪಡಿಸಲಾಗಿದೆ.

ದೇಶದ ಕೆಲವು ಕಾನೂನು ಶಿಕ್ಷಣ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು, ಬರಹಗಳು, ಸ್ಥಳೀಯ ಸಭೆಗಳು, ಬೀದಿ ನಾಟಕಗಳು ಮೊದಲಾದವುಗಳ ಮೂಲಕ ಕ್ರಮಬದ್ಧವಾಗಿ ಅತ್ಯಂತ ವಸ್ತುನಿಷ್ಠವಾದ ಕಾನೂನು ಅಡಿಯಲ್ಲಿ ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ನಿಯತವಾಗಿ ಮಾಡುತ್ತಿವೆ. ಕಾನೂನು ಸೇವಾ ನಿಯಮವು ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ಹಂತಗಳಲ್ಲಿನ ಎಲ್ಲ ಕಾನೂನು ಸೇವಾ ಪ್ರಾಧಿಕಾರಗಳು ಕಾಲೇಜು, ವಿಶ್ವವಿದ್ಯಾನಿಲಯ ಮತ್ತು ಸರ್ಕಾರೇತರ ಸಂಸ್ಥೆಗಳೊಡನೆ ಸಮನ್ವಯದಿಂದ ಕೆಲಸ ಮಾಡಬೇಕೆಂದು ಬಯಸುತ್ತದೆ.

ಕಾನೂನು ಸೇವೆಯಲ್ಲಿ ನಿರತರಾಗಿರುವ ಎಲ್ಲ ಅಧಿಕಾರಿವರ್ಗದವರೂ ಸಹಕಾರದಿಂದ ಅದರಲ್ಲೂ ಮುಖ್ಯವಾಗಿ ಸರಕಾರೇತರ ಸಂಸ್ಥೆಗಳ ಮುಂದಾಳತ್ವದಲ್ಲಿ ಕೆಲಸಮಾಡುತ್ತಿರುವುದನ್ನು ಕಾರ್ಯನಿರತ ಅನುಭವವೂ ತೋರಿಸಿಕೊಟ್ಟಿದೆ. ಕಾನೂನು ಸೇವಾ ಕಾರ್ಯಕ್ರಮಗಳ ನಿರ್ವಹಣೆಯ ನಿರಂತರತೆಯನ್ನು ಕಾಪಾಡಲು, ಸೆಕ್ಷನ್ 4(j) ವಿಧಿಯ ನಿಯಮವು ವಿವಿಧ ಸ್ವಯಂಪ್ರೇರಿತ ಸಮಾಜ ಕಲ್ಯಾಣ ಸಂಸ್ಥೆಗಳ ನಿರ್ದಿಷ್ಟ ಕಾರ್ಯಕ್ರಮಗಳಿಗೆ ವಿವಿಧ ಕಾನೂನು ಸೇವಾ ಯೋಜನೆಗಳನ್ನು ಜಾರಿಗೆ ತರಲು ನಿಗದಿಮಾಡಿರುವ ನಿಧಿಯಿಂದ ಅನುದಾನ ಕೊಡಲು, ರಾಜ್ಯ ಮತ್ತು ಜಿಲ್ಲಾ ಅಧಿಕಾರಿಗಳ ಜೊತೆಗೆ ಕೇಂದ್ರ ಸರಕಾರಕ್ಕೆ ಶಿಫಾರಸುಮಾಡಲು ಕೇಂದ್ರ ಪ್ರಾಧಿಕಾರಕ್ಕೆ ಅಧಿಕಾರ ಕೊಡಲಾಗಿದೆ.

**ಕಾನೂನು ಸಾಕ್ಷರತೆಯ ಮಾರ್ಗಗಳು ಮತ್ತು ಸಾಧನಗಳು**

**ಪ್ರಾಥಮಿಕ ಮತ್ತು ದ್ವಿತೀಯ ವಿಷಯಕ್ಷೇತ್ರಗಳನ್ನು ಗುರುತಿಸುವಿಕೆ:**

ಕಾನೂನು ಸಾಕ್ಷರತೆಯನ್ನು ವ್ಯವಸ್ಥಿತವಾಗಿ ನೀಡುವಲ್ಲಿ, ಕಾನೂನು ಸಾಕ್ಷರತೆಯ ಪ್ರಾಥಮಿಕ ಮತ್ತು ದ್ವಿತೀಯ ವಿಷಯ ಕ್ಷೇತ್ರಗಳನ್ನು ಗುರುತಿಸಿಕೊಳ್ಳುವುದು ಮೊದಲ ಹೆಜ್ಜೆ. ದೇಶದ ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಆಧುನಿಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಧಾನ ಗುರುತಿಸಿಕೊಂಡಿರುವಂತೆ, ಎಲ್ಲರ ಮೂಲಭೂತ ಮಾನವ ಹಕ್ಕುಗಳು ಪ್ರಾಥಮಿಕ ವಿಷಯಕ್ಷೇತ್ರಗಳಾಗುತ್ತವೆ. ಇವು 'ಘನತೆಯುಕ್ತ ಬದುಕಿನ' ಮೂಲಭೂತ ಆವಶ್ಯಕತೆಗಳಿಗೆ ಸಂಬಂಧಿಸಿದವು. ಆ

Digitised by Bharatavani, CIIL

ಕಾರಣ, ಆರೋಗ್ಯ, ಶಿಕ್ಷಣ, ಸ್ವಾತಂತ್ರ್ಯ, ಶೋಷಣೆಯ ವಿರುದ್ಧ ಹಕ್ಕು, ಪ್ರತಿವ್ಯಕ್ತಿಯೊಂದಿಗಿನ ಸೂಕ್ತ ಮತ್ತು ನ್ಯಾಯಯುತವಾದ ವರ್ತನೆ ಇವು ಕಾನೂನು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಗಮನಕ್ಕೆ ತರಬೇಕಾದ ಪ್ರಾಥಮಿಕ ವಿಷಯ ಕ್ಷೇತ್ರಗಳಾಗಿರುತ್ತವೆ. ಭಾರತದಲ್ಲಿ ಜನರಿಗೆ ಆರೋಗ್ಯ ಮತ್ತು ಶಿಕ್ಷಣ ಮುಂತಾದ ಅತ್ಯಂತ ಪ್ರಮುಖವಾದ ಹಕ್ಕುಗಳಿಗೆ ಸಂಬಂಧಿಸಿದ ಕನಿಷ್ಠಮಟ್ಟದ ಅರಿವೂ ಇಲ್ಲ. ಜನಸಂಖ್ಯೆಯ ಒಂದು ಸಣ್ಣ ಭಾಗ ಮಾತ್ರ ಈ ಶಿಕ್ಷಣ ಮತ್ತು ಆರೋಗ್ಯದ ಸೌಲಭ್ಯಗಳನ್ನು ಪಡೆಯಲು ಸಮರ್ಥವಾಗಿದೆ. ಉಳಿದವರು ತಮ್ಮ ಹಕ್ಕುಗಳಿಗಾಗಿ ಹೋರಾಡಲೂ ವಿಫಲರಾಗಿದ್ದಾರೆ. ತಮ್ಮ ಹಕ್ಕುಗಳನ್ನು ಕುರಿತಂತೆ ಮತ್ತು ದೇಶವಿಡೀ ಜನರಿಗೆ ಈ ಸೌಲಭ್ಯಗಳು ದೊರಕುವಂತೆ ಮಾಡಬೇಕಾದ ರಾಷ್ಟ್ರದ ಕರ್ತವ್ಯವನ್ನು ಕುರಿತಂತೆ ಅವರಿಗಿರುವ ಅಜ್ಞಾನವೇ ಇದಕ್ಕೆ ಕಾರಣ.

ಪ್ರಾಥಮಿಕ ಕಾಳಜಿಯ ಮತ್ತೊಂದು ಕ್ಷೇತ್ರವೆಂದರೆ, ಬಂಧಿತರ ಹಕ್ಕುಗಳನ್ನು ಕುರಿತದ್ದು. ಈ ಹಕ್ಕುಗಳ ಅರಿವಿಲ್ಲದ ಸಮಾಜದ ಅತ್ಯಂತ ಬಡವರ್ಗ ಈ ರೀತಿಯ ಅಜ್ಞಾನದಿಂದ ಗರಿಷ್ಠ ಸಂಕಷ್ಟವನ್ನು ಅನುಭವಿಸುತ್ತಿದೆ. ಅಂತಹವರು ಹೆಚ್ಚಾಗಿ ಅನೇಕ ರೀತಿಯ ನಿಂದೆ ದೂಷಣೆಗಳಿಗೆ ಒಳಗಾಗುತ್ತಾರೆ. ವಿಚಾರಣೆಗೆ ಒಳಗಾಗದೆ ಬಂಧಿತರಾಗುತ್ತಾರೆ. ಭಾರತದಲ್ಲಿ ವಿಚಾರಣೆಗೆ ಒಳಗಾಗದೆ ದೀರ್ಘಕಾಲದಿಂದ ಬಂಧಿತರಾಗಿರುವವರ ದೊಡ್ಡ ಸಂಖ್ಯೆಯೇ ಇದೆ. ಅವರಲ್ಲಿ ಬಹಳಷ್ಟು ಜನರಿಗೆ 'ಸೆರೆ' ಅಥವಾ 'ಬಂಧನ'ವನ್ನು ಕುರಿತ ಹಕ್ಕುಗಳ ಪರಿಚಯವಿಲ್ಲ. ಅದನ್ನು ತಿಳಿದವರಿಗೆ ನ್ಯಾಯಾಲಯಗಳಿಂದ ಅವುಗಳನ್ನು ಪರಿಹರಿಸಿಕೊಳ್ಳುವ ವಿಧಾನಗಳ ಬಗ್ಗೆ ತಿಳುವಳಿಕೆ ಇಲ್ಲ. ವಿಚಾರಣೆಗೆ ಒಳಗಾದ ಬಂಧಿತ ಸ್ತ್ರೀಯರಂತೂ ಅಧ್ವಾನ ಸ್ಥಿತಿಯಲ್ಲಿ ನರಳುತ್ತಿದ್ದಾರೆ.

ಜಾತಿ ಮತ್ತು ಅಂತಸ್ತಿನಿಂದ ಬದ್ಧವಾಗಿರುವ ಭಾರತೀಯ ಸಮಾಜವು ಕಡಿಮೆ ಸವಲತ್ತಿನ ಹಾಗೂ ಶೋಷಿತ ಜನರ ಒಂದು ಆಗರವೇ ಆಗಿದೆ. ಅವರು ತಮ್ಮ ಗೌರವ ಮತ್ತು ಆರ್ಥಿಕತೆಗೆ ಸಂಬಂಧಿಸಿದಂತೆ ನರಳುತ್ತಲೇ ಬಂದಿದ್ದಾರೆ. ಈ ಕಡಿಮೆ ಸವಲತ್ತಿನ ಗುಂಪಿನವರ ಹಕ್ಕುಗಳು ಕಾನೂನು ಸಾಕ್ಷರತೆಯ ಪ್ರಾಥಮಿಕ ಕಾಳಜಿಯಾಗಬೇಕಾಗಿದೆ. ಕಾನೂನು ಪ್ರಕಾರ ಸಮಾನತೆ, ನಿಯಮಗಳ ಸಮಾನ ರಕ್ಷಣೆ, ಸಂರಕ್ಷಣಾತ್ಮಕ ಭೇದಭಾವ, ಶೋಷಣೆಯ ವಿರುದ್ಧ ಹಕ್ಕು ಮುಂತಾದ ಅವರ ಸಾಂವಿಧಾನಿಕ ಭರವಸೆಗಳನ್ನು ಕುರಿತಂತೆ ಅವರಿಗೆ ತ್ವರೆಮಾಡದೆ ಶಿಕ್ಷಣ ನೀಡುವುದು ಅವಶ್ಯಕವಾಗಿದೆ.

ಸ್ತ್ರೀಯರ ಮತ್ತು ಮಕ್ಕಳ ಹಕ್ಕುಗಳು ಕಾನೂನು ಸಾಕ್ಷರತೆಯ ಪ್ರಾಥಮಿಕ ಕಾಳಜಿಯಾಗಬೇಕು. ಏಕೆಂದರೆ, ಪರಂಪರೆಯಿಂದ ಸ್ತ್ರೀಯರು ಮತ್ತು ಮಕ್ಕಳು ಇಲ್ಲಿ ಶೋಷಣೆಗೆ ಒಳಗಾದವರು. ನಮ್ಮ ದೇಶದಲ್ಲಿ ಸ್ತ್ರೀಶಿಕ್ಷಣ ತೃಪ್ತಿಕರ ಮಟ್ಟದಿಂದ ಇನ್ನೂ ದೂರದಲ್ಲೇ ಇದೆ. ಶಾಲಾ ಸಂಸ್ಕೃತಿಯೂ ಪರಿಪೂರ್ಣವಾಗಿ ಬೆಳೆದಿಲ್ಲ. ಶಿಕ್ಷಣ ಪಡೆಯದ ಹಾಗೂ ಶಾಲೆಬಿಟ್ಟ ಲೆಕ್ಕವಿಲ್ಲದಷ್ಟು ಮಂದಿ ಮಕ್ಕಳಿದ್ದಾರೆ. ಉತ್ತಮ ಶಾಲಾ ಸೌಲಭ್ಯವನ್ನು ಪಡೆಯುವುದರ ಮೂಲಕ ರಾಜ್ಯನಿಯೋಗಗಳಿಂದ ಉತ್ತಮ ಪ್ರಯೋಜನ ಪಡೆಯುವುದು ಹೇಗೆ ಎಂಬುದರ ಕುರಿತು ಅವರಿಗೆ ತಿಳಿದಿಲ್ಲ. ಹಾಗಾಗಿ ಇದು ಕಾನೂನು ಸಾಕ್ಷರತಾ ಕಾರ್ಯಕ್ರಮದ ಮೂಲಭೂತ ಕ್ಷೇತ್ರಗಳಲ್ಲಿ ಹೆಚ್ಚು ಪ್ರಮುಖವಾಗುತ್ತದೆ.

ದಿನಗೂಲಿಗಳು ಹಾಗೂ ಅಸಂಘಟಿತ ಕಾರ್ಮಿಕರು, ಕಾರ್ಮಿಕ ಮತ್ತು ಯಜಮಾನನ ನಡುವಿನ ಸಂಬಂಧ, ವೃತ್ತಿಪರ ಸಂಘಟನೆಗಳು, ಆಸ್ತಿರಕ್ಷಣೆ ಮುಂತಾದವುಗಳ ಕುರಿತ ಹಕ್ಕುಗಳ ಅರಿವು ಕಾನೂನು ಸಾಕ್ಷರತೆಯ ದ್ವಿತೀಯ ಕ್ಷೇತ್ರಗಳಾಗುತ್ತವೆ. ಈ ನಿಟ್ಟಿನಲ್ಲಿ ಕಾನೂನು ಸಾಕ್ಷರತಾ ಕಾರ್ಯಕ್ರಮಗಳು ಸರ್ಕಾರ ಹಾಗೂ ಖಾಸಗಿ ಕ್ಷೇತ್ರಗಳಲ್ಲಿನ ವೃತ್ತಿಪರ ಹಾಗೂ ಇತರ ಗುಂಪುಗಳ ಕಡಿಮೆ ವರಮಾನ ಪಡೆಯುವ ನೌಕರ ವರ್ಗದವರಿಗೆ ವಿಶೇಷವಾದ ಗಮನ ಕೊಡಬೇಕು.

**ಕಾನೂನು ಸಾಕ್ಷರತೆಯ ವಿನ್ಯಾಸ ಮತ್ತು ತಂತ್ರಗಳು:**

ಕಾನೂನು ಸಾಕ್ಷರತೆಯ ಅತಿ ಮುಖ್ಯವಾದ ಅಂಶವೆಂದರೆ, ಅದರ ವಿನ್ಯಾಸವನ್ನು ಗುರುತಿಸಿಕೊಳ್ಳುವುದು. ಏಕೆಂದರೆ, ಅದು ಈಗಾಗಲೇ ಸ್ಥಾಪಿತವಾದ ಯಾವುದೇ ಮಾನಕಗಳಿಂದ ಬದ್ಧವಾದುದಲ್ಲ. ಅದರ ನಿಯೋಗಿಗಳ ಪರಿಜ್ಞಾನ ಮತ್ತು ಅನುಸರಣೆಗೆ ಅನುಗುಣವಾಗಿ ಎಷ್ಟು ವಿಶಾಲವಾಗಿರಲು ಸಾಧ್ಯವೋ ಅದು ಅಷ್ಟು ವಿಶಾಲವಾದುದು. ಕಳೆದ ಕೆಲವು ದಶಕಗಳಲ್ಲಿ ಕಾನೂನು ಸಾಕ್ಷರತೆಯು ಹೆಚ್ಚು ವಿಶಾಲವಾದ ಆಯಾಮಗಳನ್ನು ಪಡೆದುಕೊಂಡಿದೆ ಮತ್ತು ಸಂಗತವಾದ ಹೊಸ ಕ್ಷೇತ್ರಗಳನ್ನು ಮೈಗೂಡಿಸಿಕೊಂಡಿದೆ. ಆದಾಗ್ಯೂ ಅದರ ಅಧ್ಯಯನ ಮತ್ತು ಅನ್ವಯಕ್ಕೆ ಹೆಚ್ಚು ನಿರ್ಣಾಯಕವಾದ ವಿಷಯವಾಗಿ ಮಾಡುವಲ್ಲಿನ ಅದರೆ ಸ್ಪಷ್ಟತೆಗೆ ಅಗತ್ಯವಾದ ನೆಲೆಯಾದ, ಅದರ ಮಾರ್ಗಗಳು ಮತ್ತು ವಿಧಾನಗಳು ಇನ್ನೂ ಪರಿಶೀಲನಾ ಹಂತದಲ್ಲೇ ಇವೆ.

ಅಂತೆಯೇ ಕಾನೂನು ಸಾಕ್ಷರತೆಗೆ ಸಾರ್ವತ್ರಿಕವಾಗಿ ಅನ್ವಯಿಸಬಹುದಾದ ಸಿದ್ಧಚೌಕಟ್ಟು ಎಂಬುದೇನೂ ಇಲ್ಲ. ಯಾವುದೇ ಹಂತದಲ್ಲಿ, ಅದರ ಉದ್ದೇಶ ನಿರ್ದಿಷ್ಟವಾಗಿರಬೇಕು. ಪ್ರತಿ ಕಾರ್ಯಕ್ರಮದ ಧ್ಯೇಯ ಮತ್ತು ಯೋಜನೆಯನ್ನು ಕಂಡುಕೊಳ್ಳಲು ಆಯಾ ಸ್ಥಳದ ಮತ್ತು ಭಾಗವಹಿಸುವ ಜನರ ಅಗತ್ಯಗಳಿಗನುಗುಣವಾಗಿ ಹೊಸ ಪ್ರಯತ್ನಗಳನ್ನೇ ಮಾಡಬೇಕು. ಕಾನೂನು ಸಾಕ್ಷರತೆ ಒಳಗೊಳ್ಳಬೇಕಾದ ವಿಷಯಗಳನ್ನು ನಿರ್ಧರಿಸುವಾಗ, ಅದು ವ್ಯಕ್ತಿಗೆ ಕಾನೂನಿನ ಮೂಲಭೂತ ಅಂಶಗಳನ್ನು ತಿಳಿಯಲು , ತನ್ನ ಸುತ್ತಮುತ್ತಲಿನ ಪರಿಸರವನ್ನು ಪ್ರಶಂಸಿಸಲು, ಆ ಪರಿಸರದಿಂದ ಮೂಡುವ ಹಕ್ಕು ಮತ್ತು ಕರ್ತವ್ಯಗಳ ಜ್ಞಾನವನ್ನು ಪಡೆಯಲು, ಆ ಮೂಲಕ ಘನತೆಯಿಂದ ಬಾಳಲು ಮತ್ತು ಸಮಾಜದ ಕ್ರಿಯಾಶೀಲ ಸದಸ್ಯನಾಗಲು ಸಮರ್ಥನಾಗುವ ಸಾಮರ್ಥ್ಯವನ್ನು ಬೆಳೆಸಲು ಸಾಧ್ಯವಾಗಬೇಕು ಎಂಬುದನ್ನು ಮನಸ್ಸಿನಲ್ಲಿಡಬೇಕಾದುದು ಅವಶ್ಯಕ.

ಹಕ್ಕುಗಳನ್ನು ಕುರಿತ ಸರಳವಾದ ಸಂವಹನ ಸಾಕಾಗುವುದಿಲ್ಲ. ವ್ಯಕ್ತಿ ತನ್ನ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿಯಬೇಕಾದುದು

Digitised by Bharatavani, CIIL

ಅಗತ್ಯ ಎಂಬ ಆಲೋಚನೆ ಮೊದಲನೋಟಕ್ಕೆ ಯುಕ್ತವಾದುದೆಂದು ಕಂಡುಬಂದರೂ ಅದೇ ಸಮಯದಲ್ಲಿ ಉದ್ದೇಶಿತ ಪರಿಣಾಮಕ್ಕೆ ಸಂಬಂಧಿಸಿದಂತೆ ಅದು ಪರಿಪೂರ್ಣವಾಗದು. ಏಕೆಂದರೆ ಅದು ಸಮಸ್ಯೆಯ ಮೂಲ ಹಾಗೂ ಸಮಸ್ಯೆ ಎರಡನ್ನೂ ವ್ಯಕ್ತಿಯಲ್ಲಿಯೇ ಗುರುತಿಸುತ್ತದೆ. ರಚನಾತ್ಮಕ ಅಡೆತಡೆಗಳನ್ನು ಹಾಗೂ ಭಾಗವಹಿಸುವಿಕೆಯಲ್ಲಿ ಎದುರಾಗುವ ತೊಂದರೆಗಳನ್ನು ಅದು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಉಪಕ್ರಮ ಹೆಚ್ಚಿನ ಪ್ರಯೋಜನವೇನನ್ನೂ ಮಾಡದೆ ಸಾಮಾನ್ಯ ಜನರನ್ನು ವ್ಯವಸ್ಥೆಗೆ ಒಳಪಡಿಸಲು ಮಾತ್ರ ಅಪೇಕ್ಷಿಸುತ್ತದೆ. ಕಾನೂನು ಸಾಕ್ಷರತೆಯ ಈ ದೃಷ್ಟಿಕೋನ, ಕಾನೂನಿನ ಜ್ಞಾನ ಎಲ್ಲರಿಗೂ ರಕ್ಷಣೆ ಮತ್ತು ಪರಿಹಾರವನ್ನುಕೊಡಲು ಸಮರ್ಥವಾದುದು ಎಂಬ ಧೋರಣೆಯನ್ನು ತಾಳುವುದಲ್ಲದೆ, ಜನರಲ್ಲಿನ ಅರಿವಿನ ಕೊರತೆಯ ದೃಷ್ಟಿಯಿಂದ ಮಾತ್ರ ಸಮಸ್ಯೆಯನ್ನು ಪರಿಗಣಿಸುತ್ತದೆ. ಜನರಿಗೆ ಕಾನೂನು, ಅವರ ಹಕ್ಕುಗಳು ಮತ್ತು ಕರ್ತವ್ಯಗಳ ಅರಿವಿದ್ದರೆ ಅವರು ನಿಷ್ಕ್ರಿಯರಾಗದೆ ಸಕ್ರಿಯರಾದ ಪೌರರಾಗಿರುತ್ತಾರೆ ಎಂಬುದೇ ಇದರ ಸಮರ್ಥನೆ. ಅಂತಹ ದೃಷ್ಟಿಕೋನ ಅವಶ್ಯವಾಗಿ ಅಧಿಕಾರಶಾಹಿ ಸಂಸ್ಕೃತಿಯನ್ನು ಬೆಂಬಲಿಸುತ್ತದೆ. ಅಲ್ಲದೆ ಸೌಲಭ್ಯವಂಚಿತರಿಗೆ ಮತ್ತು ಬಡಜನರಿಗೆ ನಿಜವಾಗಿ ಯಾವುದೇ ಪ್ರಯೋಜನವಾಗದ ವ್ಯವಸ್ಥೆಯ ಸಾಧನೆಗಳ ಕಡೆಗೆ ಮುಖ ಮಾಡಿಕೊಂಡಿರುತ್ತದೆ. ನಿರಂತರ ನೆಲೆಯಲ್ಲಿ ನಿಜವಾಗಿ ಆಗುವ ಪ್ರಯೋಜನಗಳನ್ನು ಮೌಲ್ಯಮಾಪನ ಮಾಡುವ ಯಾವುದೇ ರೀತಿಯ ಮಾರ್ಗದರ್ಶಕ ರಚನಾವ್ಯವಸ್ಥೆಯ ಭರವಸೆಯನ್ನು ಇದು ಒದಗಿಸದು. ಆದುದರಿಂದ, ಕಾನೂನು ಸಾಕ್ಷರತೆಯ ಕ್ರಮ ಹಾಗೂ ವಿಧಾನಗಳು ವೈವಿಧ್ಯಮಯವೂ ಸಮಗ್ರವೂ ಆಗಿರಬೇಕು.

ಕಾನೂನು ಸಾಕ್ಷರತೆಯ ಪರಿಣಾಮಕಾರಿ ಮಾರ್ಗಗಳೆಂದರೆ, (i) ಮಾಹಿತಿಗಳಿಂದ ಕೂಡಿದ ಸಾಹಿತ್ಯದ ರಚನೆ ಮತ್ತು ವಿತರಣೆ ಹಾಗೂ (ii) ಸಾಮಾಜಿಕ ಮತ್ತು ಕಾನೂನಾತ್ಮಕ ಸಂದೇಶಗಳ ಸಂವಹನಕ್ಕೆ ವಿಶೇಷ ಕಾರ್ಯಕ್ರಮಗಳು.

ಮೊದಲನೆಯದು, ಉದ್ದೇಶಿತ ಸಮೂಹಗಳ ಸಾಮಾಜಿಕ ಮತ್ತು ಕಾನೂನಾತ್ಮಕ ಸಮಸ್ಯೆಗಳನ್ನು ಎತ್ತಿ ತೋರಿಸುವ ಮುದ್ರಿತ ಕರಪತ್ರಗಳು ಹಾಗೂ ಇತರ ಸಾಮಗ್ರಿಗಳನ್ನು ಒಳಗೊಳ್ಳುತ್ತದೆ. ಇದರಲ್ಲಿ ಬಳಸುವ ಭಾಷೆ ಸರಳವಾಗಿದ್ದು, ಪರಿಕಲ್ಪನೆಗಳು ಸ್ಪಷ್ಟವಾಗಿ ಅರ್ಥವಾಗುವಂತಿರಬೇಕು. ಉದ್ದೇಶಿತ ಸಮೂಹದ ದೈನಂದಿನ ಬದುಕಿನಿಂದ ಅಥವಾ ಉದ್ದೇಶಿತ ಸಮುದಾಯದಿಂದ ದೃಷ್ಟಾಂತಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಜನಗಳಿಗೆ ಕೊಡಬೇಕಾದ ಸಂದೇಶಗಳನ್ನು ಸಂವಹನ ಮಾಡುವುದಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳು ಇತರ ವಿಷಯಗಳೊಂದಿಗೆ ಕಾನೂನು ಸಾಕ್ಷರತೆಯನ್ನು ನೀಡಲು ಕೆಳಗಿನ ಚಟುವಟಿಕೆಗಳನ್ನು ಬಳಸಿಕೊಳ್ಳಬಹುದು. ಗೊಂಬೆಯಾಟ, ಬೀದಿನಾಟಕಗಳು, ಮೇಳಗಳು, ಗುಂಪು ಸಭೆಗಳು, ಚಲನಚಿತ್ರಪ್ರದರ್ಶನ, ದೇಶೀಯ ಭಾಷೆಗಳಲ್ಲಿ ವಿಚಾರ ಗೋಷ್ಠಿಗಳು, ಆಯ್ದ ಜನಪದ ಕತೆಗಳು, ಜನಪದಗಳು ಇತ್ಯಾದಿ. ಈ ಕಾರ್ಯಕ್ರಮಗಳನ್ನು ಸಂಘಟಿಸಲು ಸ್ಥಳೀಯ ಧಾರ್ಮಿಕ, ರಾಜಕೀಯ ಮತ್ತು ಸಮುದಾಯ ನಾಯಕರುಗಳು ಒಳಗೊಳ್ಳುವಂತೆ ಮಾಡಬೇಕು ಮತ್ತು ಅವರು ಆ ವಿಷಯಗಳಲ್ಲಿ ವ್ಯವಹರಿಸಲು ತರಬೇತು ಪಡೆದವರಾಗಿರಬೇಕು. ಯಾವುದೇ ಸಾಮಗ್ರಿಗಳನ್ನು ವಿತರಿಸುವ ಅಥವಾ ಯಾವುದೇ ಕಾರ್ಯಕ್ರಮವನ್ನು ಸಂಘಟಿಸುವ ಮೊದಲಿಗೆ, ಅದರ ಪರಿಣಾಮವನ್ನು ಕುರಿತಂತೆ ಸಮರ್ಪಕ ಚರ್ಚೆಯಾಗಬೇಕು. ಸಾಮಾನ್ಯ ಜನರಲ್ಲಿ ಕಾನೂನಿನ ಅರಿವನ್ನು ಉಂಟುಮಾಡುವಲ್ಲಿ ಸಮೂಹ ಮಾಧ್ಯಮಗಳು–ವಾರ್ತಾ ಪತ್ರಿಕೆಗಳು, ರೇಡಿಯೊ, ದೂರದರ್ಶನ, ಚಲನಚಿತ್ರಗಳನ್ನೊಳಗೊಂಡಂತೆ–ಪರಿಣಾಮಕಾರಿ ಪಾತ್ರವನ್ನು ವಹಿಸಬಹುದು.

### ಈ ನಿಟ್ಟಿನಲ್ಲಿ ಈವರೆಗಿನ ಪ್ರಯತ್ನಗಳು

ಪ್ರಸ್ತುತ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ(National Legal Service Authority)ವು ಕಾನೂನು ಸೇವೆಯನ್ನು ನಿರ್ವಹಿಸುವಲ್ಲಿ ಅತ್ಯುನ್ನತ ಮಂಡಳಿಯಾಗಿ ಕೆಲಸ ಮಾಡುತ್ತಿದೆ. ರಾಜ್ಯ ಮತ್ತು ಜಿಲ್ಲಾ ಅಧಿಕಾರಿಗಳು ಅದರ ನಿಯಮ ಮತ್ತು ತತ್ವಗಳನ್ನು ರಾಜ್ಯ ಮತ್ತು ಜಿಲ್ಲಾಮಟ್ಟಗಳಲ್ಲಿ ಕಾರ್ಯಗತಗೊಳಿಸುತ್ತಿದ್ದಾರೆ. ಕಾನೂನು ಅರಿವಿನ ಕಾರ್ಯಕ್ರಮಗಳು ಎಲ್ಲಾ ರಾಜ್ಯಗಳಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ನಡೆಯುತ್ತಿದ್ದು ಅವು ಈ ಪ್ರಾಧಿಕಾರಗಳಿಂದ ಧನಸಹಾಯ ಪಡೆಯುತ್ತಿವೆ.

ಉಪಲಬ್ಧವಿರುವ ಮಾಹಿತಿಯ ಪ್ರಕಾರ ದೇಶದ ಎಲ್ಲ ರಾಜ್ಯಗಳಲ್ಲಿ ಕಾನೂನು ಸೇವಾ ಕಾರ್ಯಕ್ರಮಗಳು ನಡೆಯುತ್ತಿವೆ. 2001ರ ಏಪ್ರಿಲ್–ಸೆಪ್ಟಂಬರ್ ಅವಧಿಯಲ್ಲಿ NLSA ಸಂಸ್ಥೆಯು 134 ಲಕ್ಷರೂಗಳನ್ನು ವಿವಿಧ ರಾಜ್ಯಮಟ್ಟದ ಕಾನೂನು ಸೇವಾ ಅಧಿಕಾರ ಸಂಸ್ಥೆಗಳಿಗೆ ಮತ್ತು ಸರ್ವೋಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿಗಳಿಗೆ ಅಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಲು ನೀಡಿದೆ. ವಿವಿಧ ರಾಜ್ಯಗಳ ಸರ್ಕಾರೇತರ ಸಂಸ್ಥೆಗಳಿಗೆ 2.22 ಲಕ್ಷದಷ್ಟು ಧನಸಹಾಯವನ್ನು ಒದಗಿಸಲಾಗಿದೆ.

ಕಾನೂನು ಸೇವೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವು ನಿಯತವಾದ ರೀತಿಯಲ್ಲಿ, ದೇಶದಲ್ಲಿ ನಡೆಯುತ್ತಿರುವ ಕಾನೂನಿನ ಅರಿವು ನೀಡುವ ಕಾರ್ಯಕ್ರಮಗಳ ದಾಖಲೀಕರಣವನ್ನು ಮಾಡುತ್ತಿದೆ. ಇತ್ತೀಚಿನ ವರದಿಯಂತೆ (ನ್ಯಾಯದೀಪ್ : IV; ನ್ಯಾಯಕಿರಣ್ : I ) 2001 ಜುಲೈನಿಂದ ಪ್ರಾರಂಭವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ, ಆಂಧ್ರಪ್ರದೇಶ ಒಂದರಲ್ಲೇ 601 ಕಾನೂನು ಸಾಕ್ಷರತಾ ಶಿಬಿರಗಳು ಸಂಘಟನೆಗೊಂಡಿವೆ. ಆಂಧ್ರಪ್ರದೇಶದ ರಾಜ್ಯ ಪ್ರಾಧಿಕಾರಗಳು, ಆಕಾಶವಾಣಿಯ ಮೂಲಕ ಕಿರುನಾಟಕ ಸರಣಿಗೆ ಪ್ರಾಯೋಜನೆ ಮಾಡುತ್ತಿರುವುದಲ್ಲದೆ ಇಂಗ್ಲಿಷ್ ಮತ್ತು ತೆಲುಗು ಭಾಷೆಗಳಲ್ಲಿ 'ನ್ಯಾಯಸೇವಾ' ಎಂಬ ತ್ರೈಮಾಸಿಕ ನಿಯತಕಾಲಿಕೆಯನ್ನೂ ಹೊರತರುತ್ತಿದ್ದು ನ್ಯಾಯಸೇವಾ ಪ್ರಾಧಿಕಾರಗಳಿಂದ ಮೊದಲುಗೊಂಡಿರುವ ಯೋಜನೆಗಳು ಮತ್ತು

Digitised by Bharatavani, CIIL

ಕಾರ್ಯಕ್ರಮಗಳನ್ನು ಕುರಿತು ಅರಿವು ಮೂಡಿಸುತ್ತಿವೆ.

ಅಸ್ಸಾಮಿನಲ್ಲಿ 17 ಸ್ಥಳಗಳಲ್ಲಿ ಕಾನೂನು ಸಾಕ್ಷರತಾ ಶಿಬಿರಗಳನ್ನು ಪ್ರಾಯೋಜಿಸಲಾಗಿದೆ. ಅವುಗಳಲ್ಲಿ ಕೆಲವು ಬೈದ್ಯಟೂಪ್ ಎಂಬ ಸ್ಥಳದಲ್ಲಿ ನಾಗೊವನ್ ಲಾ ಕಾಲೇಜು ಮತ್ತು ಕನ್ಸ್ಯೂಮರ್ ಎಜುಕೇಷನ್ ಲೀಗಲ್ ಅವೇರ್‌ನೆಸ್ ಅಂಡ್ ರಿಸರ್ಚ್ ಸೊಸೈಟಿ ಎಂಬ ಸರ್ಕಾರೇತರ ಸಂಸ್ಥೆಯಿಂದ ಜೋರ್ ಹಾಟ್ ಎಂಬಲ್ಲಿ ಸಂಘಟಿತವಾಗಿದ್ದವು. ಕಾನೂನು ಸೇವಾ ದಿನಾಚರಣೆಯ (9ನೇ ನವೆಂಬರ್ 2001) ವಿವಿಧ ಕಾರ್ಯಕ್ರಮಗಳಲ್ಲಿ 6772 ಫಲಾನುಭವಿಗಳಿದ್ದು ಇದರಲ್ಲಿ ಸ್ತ್ರೀಯರು, ಮಕ್ಕಳು, ಅವಕಾಶವಂಚಿತರು ಮತ್ತು ಸಾರ್ವಜನಿಕರು ಒಳಗೊಂಡಿದ್ದರು.

ಚಂಡಿಗರ್ ಕೇಂದ್ರಾಡಳಿತ ಪ್ರದೇಶದಲ್ಲಿ ಕಾನೂನಿನ ಅರಿವು ಕೊಡುವ 6 ಕಾರ್ಯಕ್ರಮಗಳು ನಡೆದಿವೆ. ಕಾನೂನು ಸೇವಾ ದಿನಾಚರಣೆಯಂದು ಇಲ್ಲಿ ಒಂದು ವಿಚಾರ ಸಂಕಿರಣ ಮತ್ತು ರೇಡಿಯೋ ಉಪನ್ಯಾಸವನ್ನು ಯೋಜಿಸಲಾಗಿತ್ತು. ಚಂಡೀಗರದ ದೂರಶಿಕ್ಷಣ ವಿಭಾಗ, ಪಂಜಾಬ್ ವಿಶ್ವವಿದ್ಯಾನಿಲಯಗಳು ಕಾನೂನು ಅರಿವು ಕೊಡುವ ಕಾರ್ಯಕ್ರಮಗಳಲ್ಲಿ ಸಹಯೋಗ ನೀಡುತ್ತಿವೆ.

ದೆಹಲಿಯ ನ್ಯಾಯ ಸೇವಾ ಪ್ರಾಧಿಕಾರವು (Delhi Legal Service Authority), 9ನೇ ನವೆಂಬರ್ 2001 ರಂದು ಕಾನೂನು ಸಾಕ್ಷರತಾ ದಿನವನ್ನು ಆಚರಿಸಿದುದಲ್ಲದೆ ಕಾನೂನು ಸೇವಾ ಯೋಜನೆಗಳು ಮತ್ತು ಲೋಕ್ ಆದಾಲತ್‌ಗಳ ವಿವರ, ಆದಕ್ಕೆ ಸಂಬಂಧಿಸಿದ ಮಾನದಂಡಗಳನ್ನು ಒಳಗೊಂಡಂತೆ ಪ್ರಸಿದ್ಧವಾರ್ತಾ ಪತ್ರಿಕೆಗಳಲ್ಲಿ ವಿವರವಾದ ಜಾಹಿರಾತುಗಳನ್ನು ಪ್ರಕಟಿಸುವುದರ ಮೂಲಕ ಕಾನೂನು ಸಾಕ್ಷರತಾ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಚಾರ ನೀಡಿದೆ. ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ವಿವಿಧ ಸ್ಥಳಗಳಲ್ಲಿ 4 ಕಾನೂನು ಸಾಕ್ಷರತಾ ಶಿಬಿರಗಳನ್ನು ಇಲ್ಲಿ ಸಂಘಟಿಸಲಾಗಿತ್ತು. ಸ್ಥಳದಲ್ಲೇ ಸಾರ್ವಜನಿಕರ ದೂರುಗಳನ್ನು ಬೆಳಕಿಗೆ ತರುವ ಪ್ರಶ್ನೋತ್ತರ ಅವಧಿಗಳನ್ನು ಇದು ಒಳಗೊಂಡಿತ್ತು.

ಈ ಪ್ರಾಧಿಕಾರವು ದೇಶದಲ್ಲೇ ಪ್ರಪ್ರಥಮವಾದ ಒಂದು 'ಕಾನೂನು ಸಹಾಯವಾಣಿ' ಯನ್ನು ಪ್ರಾರಂಭಿಸಿತು. ಸಾರ್ವಜನಿಕರಿಗೆ ದೂರವಾಣಿಯ ಮೂಲಕವೇ ಕಾನೂನು ಸೇವೆಯ ವಿವಿಧ ಯೋಜನೆಗಳ ತಿಳಿವಳಿಕೆ ಮತ್ತು ಅವರವರ ದೂರುಗಳಿಗೆ ಸಂಬಂಧಿಸಿದ ಸಮರ್ಪಕ ಮಾಹಿತಿಯನ್ನು ಕೊಡುವುದು ಇದರ ಉದ್ದೇಶವಾಗಿತ್ತು. ಪೋಲಿಸ್ ನೌಕರರು ಮತ್ತು ಸಾರ್ವಜನಿಕರಿಗೆ ಒಟ್ಟಾಗಿ ಶಿಕ್ಷಣ ಕೊಡಲು ಪೊಲೀಸ್ ನಾಗರಿಕ್ ಸಹಯೋಗ್ ಸಮಿತಿಯ ಸಹಯೋಗದೊಂದಿಗೆ ಫೆಬ್ರವರಿ 21, 2002 ರಂದು 'ಮಾನವ ಹಕ್ಕುಗಳು ಮತ್ತು ಪೊಲೀಸ್' ಕುರಿತಂತೆ ಒಂದು ವಿಚಾರ ಸಂಕಿರಣವನ್ನು ಯೋಜಿಸಲಾಗಿತ್ತು. ವಿವಾದ್ ರಹಿತ್ ಗ್ರಾಮಯೋಜನೆಗಳ ಮೂಲಕ NCT ಪ್ರದೇಶಗಳನ್ನು ಮೊಕದ್ದಮೆ ಮುಕ್ತ ಪ್ರದೇಶಗಳಾಗಿ ಮಾಡಲು ಪ್ರಯತ್ನಗಳು ಈಗ ಪ್ರಾರಂಭವಾಗಿವೆ. ಇದಲ್ಲದೆ ಇಲ್ಲಿಯೇ ವೈದ್ಯಕೀಯ ರಕ್ಷಣೆ, HIV/ AIDS ರೋಗಿಗಳಿಗೆ ಸಂಬಂಧಿಸಿದ ಮಾನವೀಯ ಹಕ್ಕುಗಳು, ವಿವಿಧ ಸ್ಥಳಗಳಲ್ಲಿ ಕಾರ್ಮಿಕರ ಹಕ್ಕುಗಳನ್ನು ಕುರಿತಂತೆಯೂ ಜಾಗೃತಿ ಮೂಡಿಸಲು ವಿಚಾರ ಸಂಕಿರಣಗಳು ನಡೆದಿವೆ.

ಗೋವಾದಲ್ಲಿ 7 ಸಾಕ್ಷರತಾ ಶಿಬಿರಗಳನ್ನು ಯೋಜಿಸಲಾಗಿತ್ತು. ಗುಜರಾತ್ ನಲ್ಲಿ ಕಾನೂನು ಸೇವೆಯನ್ನು ಕುರಿತ ಮೂಲಭೂತ ಮಾಹಿತಿ ನೀಡಲು 18,150 ಗ್ರಾಮಸಭೆಗಳನ್ನು ನಡೆಸಲಾಗಿದೆ. ಇದರಲ್ಲಿ 12 ಲಕ್ಷ ಜನರು ಪಾಲ್ಗೊಂಡಿದ್ದರು. ಅಲ್ಲದೆ ಅಹಮದಾಬಾದ್‌ನ ಮುನ್ಸಿಪಲ್ ಕಾರ್ಪೊರೇಷನ್ 129 ಕಾನೂನು ಸಾಕ್ಷರತಾ ಕಾರ್ಯಕ್ರಮಗಳನ್ನು ಸಂಘಟಿಸಿದೆ.

ಹರಿಯಾಣದಲ್ಲಿ ಕಾನೂನು ಸೇವಾ ಯೋಜನೆಗಳು ಮತ್ತು ಜನರ ಮೂಲಭೂತ ಹಕ್ಕುಗಳನ್ನು ಕುರಿತ ಸಾಮೂಹಿಕ ಅರಿವನ್ನು ಉಂಟುಮಾಡಲು ದೂರದ ಹಳ್ಳಿಗಾಡುಗಳಲ್ಲಿ 19 ಕಾನೂನು ಸಾಕ್ಷರತಾಶಿಬಿರಗಳನ್ನು ಆಯೋಜಿಸಲಾಯಿತು. ಇದರಲ್ಲಿ ನ್ಯಾಯ ಇಲಾಖೆಯ ನಿವೃತ್ತ ಅಧಿಕಾರಿಗಳು, ವಕೀಲರು, ನ್ಯಾಯಶಾಸ್ತ್ರ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಭಾಗವಹಿಸಿದ್ದರು. ಇಲ್ಲಿ ಮುಕ್ತ ಕಾನೂನು ಸೇವೆಗೆ ಭಾಜನರಾಗಬಹುದಾದ ಜನರ ವರ್ಗಗಳನ್ನು, ಅವರು ಆ ಸೇವೆಯನ್ನು ಪಡೆಯಬಹುದಾದ ವಿಧಾನಗಳನ್ನು ಮತ್ತು ಇತರ ಸಮರ್ಪಕ ವಿಷಯಗಳನ್ನೊಳಗೊಂಡ ಕರಪತ್ರಗಳನ್ನು ವಿತರಿಸಲಾಯಿತು.

ಹಿಮಾಚಲ ಪ್ರದೇಶದಲ್ಲಿ 10 ಕಾನೂನು ಸಾಕ್ಷರತಾ ಶಿಬಿರಗಳನ್ನು ಆಯೋಜಿಸಿದರೆ ಜಮ್ಮು ಮತ್ತು ಕಾಶ್ಮೀರದ ವಿವಿಧ ಜಿಲ್ಲೆಗಳಲ್ಲಿ ಮತ್ತು ತೆಹಸಿಲ್ ಕೇಂದ್ರಸ್ಥಾನಗಳಲ್ಲಿ ಪ್ರಚಾರಾತ್ಮಕ ಸಾಮಗ್ರಿಯನ್ನು ಕಾನೂನು ಸೇವಾ ದಿನದಂದು ವಿತರಿಸಲಾಯಿತು.

ಕರ್ನಾಟಕದಲ್ಲಿ 59 ಕಾನೂನು ಸಾಕ್ಷರತಾ ಶಿಬಿರಗಳನ್ನು ಆಯೋಜಿಸಲಾಗಿದ್ದು,ಕಾನೂನು ಅರಿವು-ನೆರವು, ಮಹಿಳೆ:ಶೋಷಣೆ, ಕಾನೂನು:ವಿವಾಹ-ವಿಚ್ಛೇದನ, ಕಾನೂನು: ದುಡಿಯುವ ಮಹಿಳೆ, ಬಾಲಕಾರ್ಮಿಕರು, ಗ್ರಾಹಕರ ಹಿತರಕ್ಷಣೆ ಮತ್ತು ಕಾನೂನು: ಮೋಟಾರು ವಾಹನಗಳ ಅಪಘಾತ, ನಷ್ಟ ಪರಿಹಾರ, ಚಾಲನೆ, ನೋಂದಣಿ ಮತ್ತು ವಿಮೆ, ಸ್ತ್ರೀ ಶೋಷಣೆ –ಹೀಗೆ ವಿವಿಧ ವಿಷಯದ ಕುರಿತು ಐದು ಕಿರುಹೊತ್ತಿಗೆಗಳನ್ನು ಬಿಡುಗಡೆಮಾಡಲಾಯಿತು. ಕೇರಳದಲ್ಲಿ ಕಾನೂನು ಸೇವಾ ದಿನದಂದು ಗ್ರಾಹಕ ರಕ್ಷಣೆ, ವೈದ್ಯಕೀಯ ಅವಗಣನೆ, ವಿವಾಹ ಮತ್ತು ಪರಿಹಾರ, ಪಿತ್ರಾರ್ಜಿತ ಮತ್ತು ಅನುಭೋಗದ ಹಕ್ಕುಗಳು ಮೊದಲಾದವುಗಳನ್ನು ಕುರಿತ ಕಾನೂನು ಸೇವಾ ತರಗತಿಗಳನ್ನು ನಡೆಸಲಾಯಿತು.

ಮಹಾರಾಷ್ಟ್ರದಲ್ಲಿ 303 ಸ್ಥಳಗಳಲ್ಲಿ ಕಾನೂನು ಸಾಕ್ಷರತಾ ಶಿಬಿರಗಳು ನಡೆದಿವೆ. ಮಧ್ಯಪ್ರದೇಶದಲ್ಲಿ ಮಾಧ್ಯಮಗಳು, ಬ್ಯಾನರ್‌ಗಳು, ಭಿತ್ತಿಪತ್ರಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಡ್ರಮ್ ಬಡಿಯುವುದರ ಮೂಲಕ ಕಾನೂನು ಸೇವೆಗಳನ್ನು ಕುರಿತ ಪ್ರಚಾರ ಕಾರ್ಯ ನಡೆಯಿತು. ಮೇಘಾಲಯದಲ್ಲಿ 2 ಕಾನೂನು

Digitised by Bharatavani, CIIL

ಸಾಕ್ಷರತಾ ಶಿಬಿರಗಳನ್ನು ಸಂಘಟಿಸಲಾಯಿತು. ಮಿಜೋರಾಂನಲ್ಲಿ ಕಾನೂನು ಸೇವಾ ದಿನದಂದು ಒಂದು ವಿಚಾರ ಸಂಕಿರಣವನ್ನು ನಡೆಸಲಾಯಿತು. ಅಲ್ಲಿ ಕಾನೂನು ಸಾಕ್ಷರತಾ ದಿನದಂದು ಒಂದು ವಿಚಾರ ಸಂಕಿರಣವನ್ನು ವ್ಯವಸ್ಥೆ ಮಾಡಲಾಗಿತ್ತು. ಒರಿಸ್ಸಾದಲ್ಲಿ 169, ಪಾಂಡಿಚೇರಿಯಲ್ಲಿ 7, ರಾಜಸ್ಥಾನದಲ್ಲಿ 249, ಸಿಕ್ಕಿಂನಲ್ಲಿ 62, ಉತ್ತರಪ್ರದೇಶದಲ್ಲಿ 52 ಕಾನೂನು ಸಾಕ್ಷರತಾ ಶಿಬಿರಗಳನ್ನು ಸಂಘಟಿಸಲಾಗಿತ್ತು.

ತಮಿಳುನಾಡಿನಲ್ಲಿ, ಈ ವಿಷಯ ವರದಿಯಾದ ಸಮಯದಲ್ಲಿ (i) ತಮಿಳು ನಾಡಿನ ನ್ಯಾಯ ಸೇವಾ ಪ್ರಾಧಿಕಾರಗಳ ರಚನೆ ಮತ್ತು ಚಟುವಟಿಕೆಗಳು, (ii) ಮೋಟಾರು ವಾಹನಗಳ ಅಪಘಾತಗಳ ಸನ್ನಿವೇಶಗಳಲ್ಲಿ ಪರಿಹಾರ ಪಡೆಯುವ ಕ್ರಮ, (iii) ಪರಿಹಾರ –ಕಾನೂನು ಕ್ರಮ ಎಂಬ ಮೂರು ಕೃತಿಗಳು ಬಿಡುಗಡೆಯಾದವು. ಚೆನ್ನೈನಲ್ಲಿ ಸೈದಾ ಪೇಟ್‌ನಲ್ಲಿ ಒಂದು ಕಾನೂನು ಅರಿವು ಕೇಂದ್ರವನ್ನು ಸ್ಥಾಪಿಸಲಾಗಿದೆ.

ತ್ರಿಪುರದಲ್ಲಿ ಕಾನೂನು ಅರಿವಿನ ಏಳು ಕಾರ್ಯಕ್ರಮಗಳನ್ನು ಸಂಘಟಿಸಲಾಗಿದ್ದು, ಮೊಕದ್ದಮೆಯ ಪೂರ್ವದಲ್ಲಿ ದೂರುಗಳನ್ನು ಪರಿಹರಿಸಿಕೊಳ್ಳುವ ಕ್ರಮವನ್ನು ಕುರಿತಂತೆ ಜನರಿಗೆ ಶಿಕ್ಷಣ ಕೊಡಲಾಯಿತು.

**ಭವಿಷ್ಯದ ಕಾರ್ಯಗತಿ:**

ಈ ವಿಷಯದಲ್ಲಿ ಗಮನಿಸಬೇಕಾದ ಪ್ರಾಥಮಿಕ ಹಾಗೂ ದ್ವಿತೀಯ ಪ್ರಾಮುಖ್ಯತೆಯ ವಿಷಯ ಕ್ಷೇತ್ರಗಳನ್ನು ಗಣನೆಗೆ ತೆಗೆದುಕೊಂಡು, ಕಾನೂನು ಸಾಕ್ಷರತೆಯಲ್ಲಿ ಮೊದಲಿಗೆ ಮಾಡಬೇಕಾದ ಕೆಲವು ಪ್ರಮುಖ ಕಾರ್ಯಗಳನ್ನು ಗುರುತಿಸಬಹುದು. ಕಾನೂನು ಸಾಕ್ಷರತೆಗೆ ಕಾರಣವಾದ ಪ್ರಮುಖ ಪರಿಕಲ್ಪನೆ ಸಬಲೀಕರಣವಾದ್ದರಿಂದ, ಹಾಗೂ ಈ ಸಬಲೀಕರಣವು ವ್ಯಕ್ತಿಗಳ ಮನೋವೈಜ್ಞಾನಿಕ, ಬೌದ್ಧಿಕ, ಸಾಮಾಜಿಕ ಹಾಗೂ ರಾಜಕೀಯ ಸಾಮರ್ಥ್ಯಗಳನ್ನು ಬೆಳೆಸುವುದರಿಂದ, ಅದು ಉದ್ದೇಶಿತ ಸಮೂಹಗಳನ್ನು ನಿರ್ದಿಷ್ಟ ಕ್ಷೇತ್ರಗಳಲ್ಲಿ, ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಸಬಲೀಕರಿಸುವುದು, ಈ ನಿಟ್ಟಿನಲ್ಲಿ ಪ್ರಮುಖ ಮಾರ್ಗೋಪಾಯವಾಗಬೇಕು. ಇದು ಅವರು ಅವಕಾಶವಂಚಿತ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಅದನ್ನು ಪ್ರೋತ್ಸಾಹಿಸುವ ಸಾಮಾಜಿಕ ಸಂಬಂಧಗಳನ್ನು ಪರಿವರ್ತಿಸುವ ಸಾಮರ್ಥ್ಯವನ್ನು ಸಾಧ್ಯವಾಗಿಸಬೇಕು. ಸ್ತ್ರೀಸಬಲೀಕರಣವನ್ನು ಈ ನಿಟ್ಟಿನಲ್ಲಿ ಒಂದು ಪ್ರಯೋಗಾತ್ಮಕ ಸನ್ನಿವೇಶವಾಗಿ ಪರಿಗಣಿಸಬಹುದು. ಮಹಿಳೆಯರಲ್ಲಿ ಅವರ ಹಕ್ಕುಗಳ ಕುರಿತಾದ ಜಾಗೃತಿಯನ್ನು ಮೂಡಿಸಿ, ಪರಿವರ್ತನೆಗೆ ಅಗತ್ಯವಾದ ಸಾಮರ್ಥ್ಯ ಮತ್ತು ಕೌಶಲಗಳನ್ನು ಬೆಳೆಸುವುದು ಕಾನೂನು ಸಾಕ್ಷರತೆಯ ಮೊದಲ ಆವಶ್ಯಕತೆ.

ಶೋಷಿತ ಮಹಿಳೆಯರು ತಮ್ಮ ಬೇಡಿಕೆಗಳಿಗೆ ಪ್ರತಿಕ್ರಿಯಿಸುವಂತೆ ಮಾಡಲು ಒಟ್ಟು ವ್ಯವಸ್ಥೆಯನ್ನು ಬಯಲಿಗೆಳೆಯುವಂತೆ, ಸವಾಲಾಗಿ ಸ್ವೀಕರಿಸುವಂತೆ, ಮಾಡುವುದು ಹೇಗೆ ಎಂಬುದನ್ನು ಅವರು ಕಲಿಯುವಂತೆ ಮಾಡಬೇಕು. ಮಹಿಳೆಯರಿಗೆ ತಮ್ಮನ್ನು ನಿಂದೆ/ ದೂಷಣೆಯ ವಿರುದ್ಧ ರಕ್ಷಿಸಿಕೊಳ್ಳುವ ಅವಕಾಶಗಳ ಅರಿವು ಇಲ್ಲದಿದ್ದಲ್ಲಿ ಸಮಾಜದಲ್ಲಿ ಅವಳ ಸಂಪೂರ್ಣ ಭಾಗವಹಿಕೆಯನ್ನು ಮೊಟಕುಗೊಳಿಸುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಡೆತಡೆಗಳನ್ನು ಅರ್ಥಮಾಡಿಕೊಳ್ಳುವುದು ಅವಳಿಗೆ ಸಾಧ್ಯವಾಗುವುದಿಲ್ಲ.

ಹಾಗೆಯೇ ಪರಿಸರ ಕ್ಷೀಣಿಸುತ್ತಿರುವುದನ್ನು ಕುರಿತಂತೆಯೂ ನಮ್ಮ ದೇಶದಲ್ಲಿ ಬಹಳಷ್ಟು ಮಂದಿಯನ್ನು ಸಾಕಷ್ಟು ಸಂವೇದನಾಶೀಲರನ್ನಾಗಿಸಲು ಸಾಧ್ಯವಾಗಿಲ್ಲ. ಪರಿಸರದ ನಿಯಮಗಳು ಮತ್ತು ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಜವಾಬ್ದಾರಿಯನ್ನು ಹೊತ್ತಿರುವ ಅಧಿಕಾರಿಗಳು ಇವುಗಳನ್ನು ಕುರಿತು ಜನರಿಗೆ ಶಿಕ್ಷಣ ಕೊಡುವ ಗುರಿಯನ್ನು ಹೊಂದಿದ ಕಾನೂನು ಸಾಕ್ಷರತಾ ಕಾರ್ಯಕ್ರಮಗಳನ್ನು ದೇಶದ ಉದ್ದಗಲಕ್ಕೂ ಪ್ರಾರಂಭಿಸಬೇಕು. ಈ ಉದ್ದೇಶಗಳ ಸಾಧನೆಗೆ ಸ್ಥಳೀಯ ವಕೀಲರ ಸಂಘಗಳ ಹಾಗೂ ನ್ಯಾಯಾಲಯಗಳ ಜೊತೆಯಲ್ಲಿ ಪರಿಸರ ಸಂರಕ್ಷಣಾ ಅಧಿಕಾರಿಗಳು ಸೇರಿಕೊಂಡು ತಾವೇ ಕಾನೂನು ಸಾಕ್ಷರತಾ ಕಾರ್ಯಕ್ರಮಗಳನ್ನು ಸಂಘಟಿಸಿದರೆ ಅದು ಹೆಚ್ಚು ಸಮರ್ಪಕವಾಗಿರುತ್ತದೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳ ಕಾನೂನಾತ್ಮಕ ಪಾತ್ರಗಳ ಬಗ್ಗೆ ಜನತೆಯಲ್ಲಿ ಅರಿವನ್ನು ಉಂಟುಮಾಡಬೇಕು. ಇದರಿಂದ ಸ್ಥಳೀಯರ ನೆರವು ಹಾಗೂ ಒತ್ತಡಗಳ ಮೂಲಕ ಪರಿಸರವನ್ನು ರಕ್ಷಿಸುವ ಕಾರ್ಯವನ್ನು ಅವು ಪರಿಣಾಮಕಾರಿಯಾಗಿ ನೆರವೇರಿಸಲು ಸಾಧ್ಯವಾಗುತ್ತದೆ. ಗಿರಿಜನ ಸಮುದಾಯದವರು ಮತ್ತು ತೀರಪ್ರದೇಶದಲ್ಲಿ ವಾಸಿಸುವ ಜನರಿಗೆ ಅವರ ಮೇಲೆ ಪರಿಣಾಮ ಬೀರುವ ನಿರ್ದಿಷ್ಟ ಕಾನೂನುಗಳನ್ನು ಕುರಿತಂತೆ ಮತ್ತು ಆ ಸ್ಥಳಗಳಲ್ಲಿ ಹಲವಾರು ಪ್ರಗತಿಪರ ಯೋಜನೆಗಳ ಕಾರಣದಿಂದಾಗಿ ಅವರು ಸ್ಥಳಾಂತರ ಮಾಡಬೇಕಾದಾಗ ಅವರ ಸ್ವತ್ತಿಗಾಗಿ ಹೋರಾಡುವಲ್ಲಿ ಅನ್ವಯಿಸುವ ವಿಶೇಷ ಹಕ್ಕುಗಳ ಕುರಿತು ಅರಿವು ನೀಡಬೇಕು.

ಗ್ರಾಹಕ ರಕ್ಷಣಾ ಕ್ಷೇತ್ರದಲ್ಲಿ ಇಂದು ಕಾಣುತ್ತಿರುವ ವಾಣಿಜ್ಯ ಕುಟಿಲತೆಯಿಂದಾಗಿ ಕಾನೂನು ಸಾಕ್ಷರತೆಗೆ ವಿಶೇಷ ಆವಶ್ಯಕತೆ ಇದೆ. ಗ್ರಾಹಕ ರಕ್ಷಣಾ ಸಂಘಗಳು ಹಾಗೂ ಸೂಕ್ತ ಕಾನೂನು ಅಧಿಕಾರಿಗಳ ಮೂಲಕ ಗ್ರಾಹಕ ರಕ್ಷಣಾ ನಿಯಮಗಳ ಕೆಳಗೆ ಜನರ ಹಕ್ಕುಗಳು ಮತ್ತು ಅವರು ತಮ್ಮ ದೂರುಗಳ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಅಗತ್ಯ ಶಿಕ್ಷಣವನ್ನು ಕೊಡಲು ಇದು ಅತ್ಯಂತ ಸೂಕ್ತ ಕಾಲ. ಜಾಗತೀಕರಣ ಉಂಟುಮಾಡುತ್ತಿರುವ ಪರಿಣಾಮಗಳು, ಕಾನೂನು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಹೆಚ್ಚು ಗಮನಕೊಡಬೇಕಾದ ವಿಷಯಕ್ಷೇತ್ರ. ಪ್ರಸ್ತುತ ಜಾಗತೀಕರಣ ಚಳುವಳಿ ಆರ್ಥಿಕತೆಗೆ ಮುಖಮಾಡಿದುದು, ಸಮಗ್ರವಾದುದು ಮತ್ತು ಬೃಹತ್ತಾದುದು. ಅದು ದೇಶದ ಗಡಿಗಳನ್ನು ದಾಟಿ, ರಾಷ್ಟ್ರದ ಐಕ್ಯತೆಯನ್ನು ತಳ್ಳಿಹಾಕಿ ಅಂತರರಾಷ್ಟ್ರೀಯ ಕೈವಾಡಕ್ಕೆ ಸ್ಥಳೀಯ ಆರ್ಥಿಕತೆಯನ್ನು ತೆರೆದಿಟ್ಟಿದೆ. ಈ ಪ್ರವೃತ್ತಿಗಳಿಂದಾಗಿ ಬಹುರಾಷ್ಟ್ರೀಯ

Digitised by Bharatavani, CIIL

ಕಂಪೆನಿಗಳು ಆರ್ಥಿಕ ಶಕ್ತಿತಡೆಗಳನ್ನೊಡ್ಡುತ್ತಿದ್ದು, ಪರಿಣಾಮವಾಗಿ ವ್ಯಕ್ತಿಗಳ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತಿದೆ. ಈ ಸನ್ನಿವೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಒಬ್ಬ ಕಾರ್ಮಿಕನಾಗಿ, ವ್ಯಾಪಾರಿ ಪಾಲುದಾರನಾಗಿ, ಗ್ರಾಹಕನಾಗಿ, ಕಾನೂನು ರೀತ್ಯಾ ತನ್ನ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತುಕೊಂಡಿರಬೇಕಾದುದು ಅವಶ್ಯಕ.

**ಮೂಲ: ವರ್ಮಾ ಎಸ್.ಕೆ. ಮತ್ತು ಅಫ್‌ಜಲ್ ವನಿ**

**ಅನು: ಡಾ. ಶಶಿಕಲ ಎ.**

## ಕಾರ್ಯ ವಿಶ್ಲೇಷಣೆ

ಕಾರ್ಯ–ವಿಶ್ಲೇಷಣೆ ಪದವನ್ನು ಗಮನಿಸಿದಾಗ, ಕಾರ್ಯ ಎಂದರೆ ಒಂದು ಕ್ರಿಯೆಗೆ ಸಂಬಂಧಿಸಿದ್ದು ಹಾಗೂ ವಿಶ್ಲೇಷಣೆಯೆಂದರೆ, ಅದನ್ನು ವಿವಿಧ ಹಂತದಲ್ಲಿ ಪರಿಶೀಲಿಸಿ ಅರ್ಥೈಸಿಕೊಳ್ಳುವುದಾಗಿದೆ. ಕಾರ್ಯ–ವಿಶ್ಲೇಷಣೆಯು ಸಾಮಾನ್ಯವಾಗಿ ಒಂದು ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ವಿವಿಧ ಹಂತಗಳಲ್ಲಿ ಕೈಗೊಳ್ಳುವ ಕಾರ್ಯವಾಗಿದೆ. ಕಾರ್ಯ ವಿಶ್ಲೇಷಣೆಯೆಂದರೆ ಯಾವುದಾದರೂ ಒಂದು ಕಾರ್ಯದ ವಿವಿಧ ಮುಖಗಳನ್ನೂ ಮತ್ತು ಅದರ ಘಟಕಗಳನ್ನೂ ವಿವರವಾಗಿ ಪರಿಶೀಲಿಸಿ ಪೂರೈಸುವುದಾಗಿದೆ. ತರಗತಿಯಲ್ಲಿ ಶಿಕ್ಷಕರು ಪಠ್ಯವಿಷಯವನ್ನು ವಿವರಿಸುವುದರ ಜೊತೆಗೆ ವಿದ್ಯಾರ್ಥಿಗಳು ಭಾಗವಹಿಸುವಂತೆ ಕಾರ್ಯ ವಿಶ್ಲೇಷಣೆಯನ್ನು ಮಾಡಬೇಕು. ಕಾರ್ಯ ವಿಶ್ಲೇಷಣೆಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಅನುಗುಣವಾಗಿ ತರಗತಿಯ ವರ್ತನೆಯು ಬದಲಾಗುವುದನ್ನು ಶಿಕ್ಷಕರು ಗುರುತಿಸುತ್ತಾರೆ. ಕಾರ್ಯ ವಿಶ್ಲೇಷಣೆಯ ಪ್ರಮುಖ ಉದ್ದೇಶವು ಅತ್ಯುತ್ತಮ ಕಲಿಕಾ ಅಂಶಗಳನ್ನು ಆಧರಿಸಿ ತರಗತಿಯಲ್ಲಿನ ಪಠ್ಯಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯಾತ್ಮಕವಾಗಿ ಭಾಗವಹಿಸುವಂತೆ ಚಟುವಟಿಕೆಗಳನ್ನು ರೂಪಿಸಲು ಶಿಕ್ಷಕರಿಗೆ ನೆರವಾಗುವುದಾಗಿದೆ.

**ಉದಾಹರಣೆಗೆ:**

1. ಶಿಕ್ಷಕರು ಜ್ಯಾಮಿತಿಯ ಆಕೃತಿಗಳ ಉದಾಹರಣೆಯನ್ನು ನೀಡಿದಾಗ ವಿದ್ಯಾರ್ಥಿಗಳು ತ್ರಿಕೋನಾಕೃತಿಗಳನ್ನು ಮಾತ್ರ ಆಯ್ಕೆ ಮಾಡುತ್ತಾರೆ.
2. ಫ್ರೆಂಚ್ ಪದಗಳ ಪಟ್ಟಿಯನ್ನು ವಿದ್ಯಾರ್ಥಿಗಳಿಗೆ ನೀಡಿದಾಗ ವಿದ್ಯಾರ್ಥಿಗಳು ಅವುಗಳಿಗೆ ಸಮನಾದ ಇಂಗ್ಲಿಷ್ ಪದಗಳ ಪಟ್ಟಿಯನ್ನು ಮಾಡುತ್ತಾರೆ.

ಈ ಎರಡು ಉದ್ದೇಶಗಳು ವಿವಿಧ ವರ್ಗಗಳ ವರ್ತನೆಯನ್ನು ಹೊಂದಿರುತ್ತವೆ. ಮೊದಲನೆಯದು ಪರಿಕಲ್ಪನಾ ಕಲಿಕೆ; ಎರಡನೆಯದು ಶಾಬ್ದಿಕ ಕಲಿಕೆ. ಈ ಎರಡೂ ಕಲಿಕೆಗಳಿಗೆ ಕಾರಣಗಳು ವಿಭಿನ್ನವಾಗಿವೆ. ಸರಿಯಾದ ಕಾರ್ಯ ವಿಶ್ಲೇಷಣೆಯಲ್ಲಿ ಶಿಕ್ಷಕರು ವಿದ್ಯಾರ್ಥಿಯ ವರ್ತನೆಯು ಅಂತರ್ಗತವಾಗಿರುವಿಕೆಯ ಆಧಾರದ ಮೇಲೆ ಪ್ರತಿಯೊಂದು ಉದ್ದೇಶಗಳನ್ನು ಸರಿಯಾಗಿ ವರ್ಗೀಕರಿಸಿ ಉತ್ತಮ ಕಲಿಕಾ ವ್ಯವಸ್ಥೆಗೆ ಹೊಂದುವಂತೆ ರಚಿಸುತ್ತಾರೆ. ವಿದ್ಯಾರ್ಥಿಗಳ ಸಾಮರ್ಥ್ಯಗಳ, ಆಸಕ್ತಿ, ಪಕ್ವತೆ, ವ್ಯಕ್ತಿವಿಭಿನ್ನತೆಗೆ ಅನುಸಾರವಾಗಿ ವಿವಿಧ ಪಠ್ಯಯೋಜನೆಯ ಕಾರ್ಯ ವಿಶ್ಲೇಷಣೆಯನ್ನು ಮಾಡುತ್ತಾರೆ.

ಕಾರ್ಯ ವಿಶ್ಲೇಷಣೆಯನ್ನು ಮಾಡುವಾಗ ಯಾವ ಉದ್ದೇಶದಿಂದ ಮಾಡುತ್ತಿದ್ದೇವೆ, ಯಾವ ವಿಧಾನದಿಂದ ಮಾಡಿದರೆ ಸೂಕ್ತ ಮತ್ತು ಹೇಗೆ ಮಾಡಬೇಕು ಎಂಬ ಅಂಶಗಳನ್ನು ಗಮನದಲ್ಲಿಡಬೇಕಾಗುತ್ತದೆ. ಕಾರ್ಯ ವಿಶ್ಲೇಷಣೆಯನ್ನು ವಿವಿಧ ಉದ್ದೇಶಗಳಿಗೆ ಬಳಸಬಹುದು. ಉದಾಹರಣೆಗೆ ವ್ಯಕ್ತಿಯ ಆಯ್ಕೆ ಮತ್ತು ತರಬೇತಿಯಲ್ಲಿ ಬೋಧನಾ ಮತ್ತು ಮಾಪನಗಳ ವಿನ್ಯಾಸದಲ್ಲಿ ಇತ್ಯಾದಿ.

ಕಾರ್ಯ ವಿಶ್ಲೇಷಣೆಯ ನಿರ್ದಿಷ್ಟ ಗುರಿ ಮತ್ತು ಉದ್ದೇಶಗಳನ್ನು ಗುರುತಿಸಿ ಅದರ ಕಾರ್ಯ ಹಾಗೂ ಉಪಕಾರ್ಯಗಳ ಬಗ್ಗೆ ತಿಳಿಯಬೇಕು.

ಕಾರ್ಯ ವಿಶ್ಲೇಷಣೆಯ ವಿವಿಧ ಹಂತಗಳ ಜೊತೆಯಲ್ಲಿ ಸರಿಯಾದ ಕ್ರಮದಲ್ಲಿ ಸಾಗಬೇಕು. ಕಾರ್ಯ–ವಿಶ್ಲೇಷಣೆಯನ್ನು ಪೂರ್ಣಗೊಳಿಸಲು ಅಗತ್ಯವಾದ ಮಾಧ್ಯಮಗಳ ಬಗೆಗೆ ತಿಳುವಳಿಕೆಯಿರಬೇಕು. ಕಾರ್ಯ ವಿಶ್ಲೇಷಣೆಯನ್ನು ಮಾಡುವಾಗ ಕೈಗೊಳ್ಳುವ ಕಾರ್ಯದ ವಿವಿಧ ಆಯಾಮಗಳ ಬಗೆಗೆ ಸಾಕಷ್ಟು ಅರಿವು ಇರಬೇಕು.

ತರಗತಿಯ ಕಾರ್ಯ ವಿಶ್ಲೇಷಣೆಯಲ್ಲಿ ಶಿಕ್ಷಕರು ಉಪಲಬ್ಧವಿರುವ ನಿರ್ದಿಷ್ಟ ಸಮಯದಲ್ಲಿ ಕಲಿಕಾ ಅಂಶಗಳನ್ನು ಅರ್ಥಮಾಡಿಸಲು ಸೂಕ್ತ ಚಟುವಟಿಕೆಗಳನ್ನು ನಿಯೋಜಿಸಿ ಪರಿಣಾಮಕಾರಿ ಕಲಿಕೆಯನ್ನುಂಟು ಮಾಡುವುದಾಗಿದೆ. ಕಾರ್ಯ ವಿಶ್ಲೇಷಣೆಯು ನಿರ್ದಿಷ್ಟ ಗುರಿಯನ್ನು ಹೊಂದಿದ್ದು ನಿಯಮಿತ ಉದ್ದೇಶಗಳಿಗೆ ಅನುಸಾರವಾಗಿ ಬೋಧನಾ–ಕಲಿಕಾ ಚಟುವಟಿಕೆಯನ್ನು ರೂಪಿಸಲಾಗುತ್ತದೆ. ಬೋಧನಾ–ಕಲಿಕಾ ಚಟುವಟಿಕೆಗಳ ಪರಿಣಾಮಕತೆಯನ್ನು ತಿಳಿಯಲು ನಿರ್ದಿಷ್ಟ ಕಲಿಕಾ ಉದ್ದೇಶಗಳ ಅನುಸಾರವಾಗಿ ಮೌಲ್ಯಮಾಪನವನ್ನು ಮಾಡಲಾಗುತ್ತದೆ.

ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ವಿವಿಧ ವಿಷಯಗಳನ್ನು ಬೋಧಿಸಲು ಪ್ರತ್ಯೇಕ ವಿಧಾನಗಳನ್ನು ಬಳಸಲಾಗುತ್ತದೆ. ತರಗತಿಯ ಬೋಧನಾ–ಕಲಿಕಾ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ನಡುವಿನ ಸಂವಹನ ಪ್ರಕ್ರಿಯೆಯು ಮಹತ್ವವಾದುದಾಗಿದೆ.

ಕಾರ್ಯ–ವಿಶ್ಲೇಷಣೆಯು ಉಪಕಾರ್ಯಗಳನ್ನು ಹೊಂದಿದ್ದು ನಿರ್ದಿಷ್ಟ ಕಲಿಕೆಯ ಪ್ರಕ್ರಿಯೆಯಲ್ಲಿ ಮಹತ್ತರ ಕಾರ್ಯವನ್ನು ನಿರ್ವಹಿಸುತ್ತದೆ. ತರಗತಿಯ ಶಿಕ್ಷಕರು ಕಾರ್ಯ ವಿಶ್ಲೇಷಣೆಯನ್ನು ಮಾಡುವಾಗ ಪ್ರತಿಯೊಂದು ಉದ್ದೇಶಗಳಿಗೆ ನಿರ್ದಿಷ್ಟ ವರ್ತನೆಯನ್ನು ಉಂಟುಮಾಡಲು ಅತ್ಯುತ್ತಮ ಕಲಿಕಾ ಸನ್ನಿವೇಶಗಳನ್ನು ರೂಪಿಸಲು ಅನುಕೂಲಕರವಾಗಿದೆ. ರಾಬರ್ಟ್

Digitised by Bharatavani, CIIL

ಗ್ಲಾಸರ್ ಮತ್ತು ಜೇಮ್ಸ್ ರೆನಾಲ್ಡ್ಸ್ (1968) ಪ್ರಕಾರ ಪ್ರತಿಯೊಂದು ಸೂಚನಾ ಉದ್ದೇಶಗಳು ಹಲವಾರು ಕಾರ್ಯ ವಿಶ್ಲೇಷಣೆಯನ್ನು ಹೊಂದಿರುತ್ತವೆ. ಇವರು 6 ಮತ್ತು 7ನೇ ವಯಸ್ಸಿನ ಮಕ್ಕಳಿಗೆ 'ಸಮಯ ಹೇಳುವ' ಕ್ರಮಾನುಗತ ಬೋಧನಾಂಶವನ್ನು ತಯಾರಿಸಿದ್ದರು. ಇದರಲ್ಲಿನ ಪ್ರಮುಖ ಉಪಕಾರ್ಯಗಳೆಂದರೆ– 1) ಸಮಯದ ಪರಿಕಲ್ಪನೆಯನ್ನು ಮೂಡಿಸುವುದು; 2) ಮಧ್ಯರಾತ್ರಿ 12 ಗಂಟೆಯಿಂದ ಮುಂದಿನ ಮಧ್ಯರಾತ್ರಿ 12 ಗಂಟೆಯವರೆಗೆ ಸಮಯ ಕಳೆಯುವ ಪ್ರಕ್ರಿಯೆಯನ್ನು ತಿಳಿಸುವುದು. 3) ಸಮಯದ ಅಂಶಗಳಾದ ಸೆಕೆಂಡುಗಳು, ನಿಮಿಷಗಳು, ಗಂಟೆಗಳು, ದಿನ, ವಾರ, ತಿಂಗಳು ಬಗ್ಗೆ ತಿಳಿಸುವುದು. ಪ್ರತಿಯೊಂದು ಉಪಕಾರ್ಯಗಳಿಗೆ ಅನುಗುಣವಾಗಿ ನಿರ್ದಿಷ್ಟವಾದ ಉದ್ದೇಶಗಳನ್ನು ನಿಗದಿಸಿ ಪ್ರತಿಯೊಂದು ನಿರ್ದಿಷ್ಟ ಉದ್ದೇಶಗಳಿಗನುಸಾರವಾಗಿ ಪ್ರತ್ಯೇಕ ಕಲಿಕಾ ಚಟುವಟಿಕೆಗಳನ್ನು ನಿರ್ವಹಿಸಿ ಯಶಸ್ವಿಯಾದರು. ತರಬೇತಿಯ ನಂತರ ವಿದ್ಯಾರ್ಥಿಗಳು ಸಮಯವನ್ನು – ಗಟ್ಟಿಯಾಗಿ ಹೇಳುವುದು ಮತ್ತು ಬರೆಯುವುದರಲ್ಲಿ ಪರಿಣತಿ ಹೊಂದಿದರು.

ತರಗತಿಯ ಕಾರ್ಯ ವಿಶ್ಲೇಷಣೆಯು ಯಶಸ್ವಿಯಾಗಲು ಶಿಕ್ಷಕರ ಸಂವಹನ ಕೌಶಲಗಳು ಪರಿಣಾಮಕಾರಿಯಾಗಿರಬೇಕು. ಶಿಕ್ಷಕರು ಎಷ್ಟೇ ಅತ್ಯುತ್ತಮವಾಗಿ ಪಠ್ಯಯೋಜನೆಯ ಕಾರ್ಯ ವಿಶ್ಲೇಷಣೆಯನ್ನು ಮಾಡಿದ್ದರೂ ಪರಿಣಾಮಕಾರಿ ಕಲಿಕೆಯುಂಟಾಗಲು ಉತ್ತಮ ಸಂವಹನ ಕೌಶಲಗಳನ್ನು ಹೊಂದಿರಬೇಕು. ಶಿಕ್ಷಕರು ಸರಳವಾದ, ಸ್ಪಷ್ಟವಾದ ಭಾಷೆಯನ್ನು ಬಳಸದಿದ್ದರೆ ಅಥವಾ ಬೋಧಿಸುವ ವಿಷಯದಲ್ಲಿ ಪರಿಣತಿ ಹೊಂದದಿದ್ದರೆ ಪಠ್ಯ ಯೋಜನೆಯು ನಿರರ್ಥಕವಾಗಿರುತ್ತದೆ. ಶಿಕ್ಷಕರು ವಿದ್ಯಾರ್ಥಿಗಳ ಕಲಿಕಾ ಸಮಸ್ಯೆಗಳನ್ನು ಅರಿತು ಅದಕ್ಕೆ ಅನುಗುಣವಾಗಿ ಸರಿಯಾದ ಪಠ್ಯ ಯೋಜನೆಯ ಕಾರ್ಯ ವಿಶ್ಲೇಷಣೆಯನ್ನು ರೂಪಿಸಬೇಕು. ಕಾರ್ಯ ವಿಶ್ಲೇಷಣೆಯನ್ನು ಮಾಡುವಾಗ ಪಠ್ಯ ವಿಷಯದ ವಸ್ತುವನ್ನು ಉಪ ವಿಭಾಗಗಳನ್ನಾಗಿ ವಿಂಗಡಿಸಿ ಪ್ರತಿ ಉಪವಿಭಾಗಗಳಲ್ಲೂ ಬೋಧನಾಂಶಗಳನ್ನಾಗಿ ವಿಂಗಡಿಸಬೇಕು. ಪ್ರತಿ ಬೋಧನಾಂಶಗಳನ್ನು ಬೋಧಿಸಲು ನಿರ್ದಿಷ್ಟ ಕಲಿಕೆಗೆ ಸೂಕ್ತವಾದ ಚಟುವಟಿಕೆಗಳನ್ನು ರಚಿಸಬೇಕು.

ಶಿಕ್ಷಕರ ಸಂವಹನ ಪರಿಣಾಮಕಾರಿಯಾಗಿರಲು ಸರಳವಾದ, ಸ್ಪಷ್ಟವಾದ ಹಾಗೂ ಅರ್ಥಪೂರ್ಣವಾದ ಭಾಷೆಯನ್ನು ಬಳಸಬೇಕು. ಯಾವ ಬೋಧನಾಂಶಗಳನ್ನು ಬೋಧಿಸಲು ಯಾವ ತಂತ್ರಗಳನ್ನು ಬಳಸಬೇಕು ಮತ್ತು ಯಾವ ಚಟುವಟಿಕೆಗಳನ್ನು ಬಳಸಿದರೆ ಬೋಧನೆ ಹೆಚ್ಚು ಪರಿಣಾಮಕಾರಿ ಎಂಬುದನ್ನು ಕಾರ್ಯ ವಿಶ್ಲೇಷಣೆಯ ಸಂದರ್ಭದಲ್ಲಿ ನಿರ್ಧರಿಸಬೇಕು. ಹೀಗೆ ಕಾರ್ಯ ವಿಶ್ಲೇಷಣೆ ಉತ್ತಮವಾಗಿದ್ದರೆ ಪಾಠ ಯೋಜನೆಯು ಸರಿಯಾಗಿ ಮೂಡುತ್ತದೆ. ಪಾಠ ಯೋಜನೆಯು ಉತ್ತಮವಾಗಿದ್ದರೆ ಶಿಕ್ಷಕರ ಪರಿಣಾಮಕಾರಿಯಾದ ಸಂವಹನದಲ್ಲಿ ತೊಡಗಿ ಅರ್ಥಪೂರ್ಣ ಕಲಿಕೆಯನ್ನುಂಟು ಮಾಡುವಲ್ಲಿ ಯಶಸ್ವಿಯಾಗುತ್ತಾರೆ.

–ಶ್ರೀನಿವಾಸ್ ಕೆ.ಎಸ್.

# ಕಾರ್ಯಕ್ರಮ ಮೌಲ್ಯಮಾಪನ

## ಕಾರ್ಯಕ್ರಮ ಮೌಲ್ಯಮಾಪನದ ಪರಿಕಲ್ಪನೆ

### ಪರಿಕಲ್ಪನಾತ್ಮಕ ಸಂದಿಗ್ಧತೆ

'ಕಾರ್ಯಕ್ರಮ ಮೌಲ್ಯಮಾಪನ'ದ (Programme Evaluation) ಪರಿಕಲ್ಪನೆ ಸಾಕಷ್ಟು ಸರಳವಾಗಿದೆ. ಏಕೆಂದರೆ ಭಾರತೀಯ ಸಂದರ್ಭದಲ್ಲಿ ಈ ಎರಡು ಪದಗಳ ಬಳಕೆಯನ್ನು ಗಮನಿಸಿದಾಗ ಇವು ಅಷ್ಟೊಂದು ವಿಶಿಷ್ಟವೆಂದು ಕಂಡು ಬರುವುದಿಲ್ಲ. ಹೀಗಾಗಿ, ನಾವು ಈ ಎರಡು ಪದಗಳ, ಅಂದರೆ 'ಕಾರ್ಯಕ್ರಮ' ಮತ್ತು 'ಮೌಲ್ಯಮಾಪನ'ದ ಒಳಾರ್ಥಗಳನ್ನು ಕಲ್ಪಿಸೋಣ. ಇದರಿಂದ ನಾವು ಮುಂದೆ ಚರ್ಚಿಸಲಿರುವ ವಿನ್ಯಾಸಗಳು, (ವಿಧಾನಗಳು) ಮತ್ತು ಕಾರ್ಯವಿಧಾನಗಳ ಕುರಿತು ಓದುಗರು ಕೂಡ ಇದೇ ರೀತಿಯ ಅಭಿಪ್ರಾಯಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಯೋಜನೆ ಮತ್ತು ಕಾರ್ಯಕ್ರಮಗಳು ಒಟ್ಟೊಟ್ಟಿಗೆ ಸಾಗುತ್ತವೆ. ವ್ಯಾಪಕ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು, ಪರೀಕ್ಷಾ ಸುಧಾರಣೆಯ ಕಾರ್ಯಕ್ರಮಗಳು, ಡಿಪಿಇಪಿ, ವಿಜ್ಞಾನ ಪ್ರತಿಭಾ ಶೋಧ ಕಾರ್ಯಕ್ರಮಗಳು, ಪ್ರಶ್ನಪತ್ರಿಕೆ ಸಿದ್ಧಪಡಿಸುವವರ ತರಬೇತಿಯ ಕಾರ್ಯಕ್ರಮಗಳು, ಮತ್ತು ಇದೇ ರೀತಿಯ ಬೇರೆ ಅನೇಕ ಕಾರ್ಯಕ್ರಮಗಳು, ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸುವ ಸಲುವಾಗಿ ಇಡೀ ಕಾರ್ಯಕ್ರಮದ ಭಾಗವಾಗಿರುವ ಸಂಬಂಧಿತ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತವೆ. ಉದಾಹರಣೆಗೆ, ಪ್ರಶ್ನೆಪತ್ರಿಕೆಯ ಗುಣಮಟ್ಟದ ಸುಧಾರಣೆಗಾಗಿ ಇರುವ ತರಬೇತಿ ಕೋರ್ಸ್‌ಗಳ ಕಾರ್ಯಕ್ರಮದಲ್ಲಿ, 'ಪ್ರಶ್ನೆ ಭಂಡಾರ' (Question Bank) ಯೋಜನೆಯು ಈ ರೀತಿಯ ಕಾರ್ಯಕ್ರಮದ ಸಮನ್ವಯ ಭಾಗವಾಗುವುದು ಸಾಧ್ಯವಿದೆ. ಇದಲ್ಲದೆ, 'ಪ್ರಶ್ನೆ ಬ್ಯಾಂಕಿಂಗ್' ಕುರಿತಾಗಿ ಪರೀಕ್ಷಾ ಮಂಡಳಿಯವರು ಉತ್ತಮ ರೀತಿಯಲ್ಲಿ ರೂಪಿಸಿದ ಯೋಜನೆಯು ಅನೇಕ ಕಾರ್ಯಕ್ರಮಗಳಿಗೆ ತಳಹದಿಯಾಗಿರುತ್ತದೆ. ಉದಾಹರಣೆಗೆ, ವಿಷಯ ಬರಹಗಾರರ ತರಬೇತಿ, ವಿಷಯ ಸಂಗ್ರಹ, ವಿಷಯಗಳನ್ನು ಪ್ರಯೋಗಕ್ಕೆ ಒಳಪಡಿಸುವಿಕೆ, ಅಥವಾ ವಿಷಯಗಳ ಮಾನ್ಯತೆಗಾಗಿ ಕಾರ್ಯಾಗಾರಗಳ ಆಯೋಜನೆ ಇತ್ಯಾದಿ. ಆದುದರಿಂದ ಕೆಲವು ಕಾರ್ಯಕ್ರಮಗಳು ಪರೀಕ್ಷಾ ಸುಧಾರಣೆಯ ಕುರಿತು ಎರಡು ದಿನದ ಅಧಿವೇಶನವಾಗಿರಬಹುದು ಅಥವಾ ಎನ್‌ಸಿಇಆರ್‌ಟಿಯ ಆಶ್ರಯದಲ್ಲಿ ನಡೆಯತಕ್ಕಂತಹ ಪ್ರತಿಭಾ ಶೋಧ ಮತ್ತು ಪೋಷಣೆಯ ನಿರಂತರ ಕಾರ್ಯಕ್ರಮದ ರೂಪದಲ್ಲಿರಬಹುದು. ಇದೇ ರೀತಿ, ಯೋಜನೆಯು ಒಂದು ವಾರದಷ್ಟು ಕಡಿಮೆ ಅವಧಿಯದ್ದಾಗಿರಬಹುದು ಅಥವಾ ಇತ್ತೀಚಿಗೆ ಎನ್‌ಸಿಇಆರ್‌ಟಿ ಪ್ರಾರಂಭಿಸಿರುವ ಒಂದು ವರ್ಷ, ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ನಿರ್ದಿಷ್ಟ ಪಠ್ಯಪುಸ್ತಕವೊಂದರ ಪರಾಮರ್ಶನ ಅಭ್ಯಾಸ ಪಾಠಗಳ ಪಠ್ಯಕ್ರಮದ ಮಾನ್ಯತೆಯನ್ನು ಕಂಡುಕೊಳ್ಳುವುದಾಗಿರಬಹುದು. ಇಂತಹ ಯೋಜನೆಗಳು ಅಧ್ಯಯನದ ಕೋರ್ಸುಗಳ ಅಭಿವೃದ್ಧಿ, ಪಠ್ಯಪುಸ್ತಕಗಳ ಸಿದ್ಧತೆ, ಶಿಕ್ಷಕರ ಕೈಪಿಡಿಗಳು, ಮೇಲ್ಪಂಕ್ತಿಯ ಸಾಮಗ್ರಿಗಳು ಇತ್ಯಾದಿಗಳಿಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳುತ್ತವೆ.

Digitised by Bharatavani, CIIL

ಶೈಕ್ಷಣಿಕ ಉದ್ಯಮವೊಂದನ್ನು ಕುರಿತು ಮಾಹಿತಿ ಸಂಗ್ರಹಿಸುವ ಕಾರ್ಯವಿಧಾನವನ್ನು ಮೌಲ್ಯಮಾಪನವೆಂದು ನಿರ್ವಚಿಸಲಾಗಿದೆ. ಇದನ್ನು ಆಧರಿಸಿ ತೀರ್ಪನ್ನು ರೂಪಿಸಲಾಗುತ್ತದೆ ಮತ್ತು ಈ ತೀರ್ಪನ್ನು ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಬಳಸಲಾಗುತ್ತದೆ(ಟೆನ್‌ಬ್ರಿಂಕ್, 1975). ವಸ್ತುವಿಷಯವೊಂದರ ಮೌಲ್ಯವನ್ನು ನಿರ್ಧರಿಸುವುದು ಎಂಬುದಾಗಿಯೂ ಮೌಲ್ಯಮಾಪನವನ್ನು ಬಹಳ ಸರಳವಾಗಿ ನಿರ್ವಹಿಸಲಾಗುತ್ತದೆ. ಆದುದರಿಂದ ಶೈಕ್ಷಣಿಕ ವ್ಯವಸ್ಥೆಯೊಂದರ ಕೆಲವು ನಿರ್ದಿಷ್ಟ ವಿಚಾರಗಳನ್ನು ಸುಧಾರಿಸುವ ಕಾರ್ಯಕ್ರಮದ ಮೌಲ್ಯವನ್ನು ಅಥವಾ ಬಳಕೆಯನ್ನು ತೀರ್ಮಾನಿಸುವುದಕ್ಕಾಗಿ ಕೈಗೊಂಡ ಚಟುವಟಿಕೆಗಳು ಕಾರ್ಯಕ್ರಮ ಮೌಲ್ಯಮಾಪನದಲ್ಲಿ ಇರುತ್ತವೆ(ವರ್ದರ್ನ್, 1987). ಈಗ ನಾವು ಶೈಕ್ಷಣಿಕ ಸಂದರ್ಭದಲ್ಲಿ ಕಾರ್ಯಕ್ರಮ ಮೌಲ್ಯಮಾಪನವನ್ನು ಶೈಕ್ಷಣಿಕ ಉದ್ಯಮವಾಗಿ ನಿರ್ವಚಿಸಿಕೊಳ್ಳಬಹುದು. ಇದರ ಗುರಿಯು ನಿರ್ದಿಷ್ಟ ಶೈಕ್ಷಣಿಕ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯುವುದು ಅಥವಾ ಶೈಕ್ಷಣಿಕ ವ್ಯವಸ್ಥೆಯ ಕೆಲವು ವಿಚಾರಗಳನ್ನು ಸುಧಾರಿಸುವುದಾಗಿರುತ್ತದೆ. ವಿಶ್ಲೇಷಣೆ ಮತ್ತು ನಿಯಂತ್ರಣ ಕಾರ್ಯವಿಧಾನವೇ ಕಾರ್ಯಕ್ರಮ ಮೌಲ್ಯಮಾಪನ ಎಂದು ನಿರ್ವಚಿಸಿದ್ದಾರೆ. ನಿರ್ದಿಷ್ಟ ಚಟುವಟಿಕೆಗಳ ಸಮಂಜಸತೆ, ಪರಿಣಾಮಕಾರಿತ್ವ ಮತ್ತು ಪ್ರಾಮುಖ್ಯವನ್ನು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವ ದಕ್ಷತಾ ಮಟ್ಟವನ್ನು ನಿರ್ಧರಿಸುವ ರೀತಿಯಲ್ಲಿ ಕಾರ್ಯಕ್ರಮ ಮೌಲ್ಯಮಾಪನವನ್ನು ವಿನ್ಯಾಸಗೊಳಿಸಲಾಗುವುದು. ಈ ರೀತಿಯ ಕಾರ್ಯಕ್ರಮಗಳು ನಿರ್ದಿಷ್ಟ ಗುರಿಗಳನ್ನು ಹೊಂದಿರುತ್ತವೆ ಮತ್ತು ಕಾರ್ಯಕ್ರಮದಲ್ಲಿ ಅಳವಡಿಕೆಯಾಗಿರುವ ಕಾರ್ಯವಿಧಾನಗಳು, ಸಾಮಗ್ರಿ ಸೌಲಭ್ಯಗಳು ಮತ್ತು ಅಧಿಕಾರಿಗಳ ನಿರ್ವಹಣೆಗೆ ಕೆಲವು ಸಂರಚನೆಗಳನ್ನು ಪ್ರದರ್ಶಿಸುತ್ತವೆ. ಇಂತಹ ಕಾರ್ಯಕ್ರಮಕ್ಕೆ ಸಾಂಕೇತಿಕವಾಗಿ ಸಾರ್ವಜನಿಕರಿಂದ ಅಥವಾ ಖಾಸಗಿ ನಿಧಿಗಳಿಂದ ಹಣಕಾಸನ್ನು ಪೂರೈಸಲಾಗುತ್ತದೆ(ವರ್ದರ್ನ್, 1987).

ಕಾರ್ಯಕ್ರಮದ ಸ್ವರೂಪ ಮತ್ತು ವ್ಯಾಪ್ತಿ ಯಾವುದೇ ಇರಲಿ, ಮೌಲ್ಯಮಾಪಕನಿಗೆ ಎಲ್ಲಾ ಕಾರ್ಯಕ್ರಮಗಳಲ್ಲಿ ಬಹುಪಾಲು ಸಾಮಾನ್ಯವಾಗಿ ಕಂಡುಬರುವ ಈ ಕೆಳಗಿನ ಘಟಕಗಳು ತಿಳಿದಿರಬೇಕೆಂದು ನಿರೀಕ್ಷಿಸಲಾಗುತ್ತದೆ:

1. ಕಾರ್ಯಕ್ರಮವನ್ನು ಪರಿಭಾವಿಸಿದ ಅಥವಾ ರೂಪಿಸಿದ ನಿರ್ದಿಷ್ಟ ಪರಿಸರ.
2. ಉದ್ದೇಶಿತ ಪರಿಣಾಮಗಳಿಗೆ ಸಂಬಂಧಿಸಿದಂತೆ ಉಲ್ಲೇಖಿಸಲಾದ ಕಾರ್ಯಕ್ರಮ ಉದ್ದೇಶಗಳು ಅಥವಾ ಗುರಿಗಳು.
3. ಬಳಸಿಕೊಳ್ಳಲಾಗಿರುವ ಮಾನವ, ಆರ್ಥಿಕ ಮತ್ತು ಸಾಮಗ್ರಿ ಸಂಪನ್ಮೂಲಗಳಿಗೆ ಸಂಬಂಧಿಸಿದ ಸಂಭಾರಗಳು.
4. ಕಾರ್ಯತಂತ್ರಗಳು, ಸಾಮಗ್ರಿಗಳು, ಚಟುವಟಿಕೆಗಳು, ಸಮಯದ ಚೌಕಟ್ಟು ಮತ್ತು ಚಟುವಟಿಕೆಗಳನ್ನು ವೇಳಾಪಟ್ಟಿಯಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ನಿರ್ವಹಣಾ ಕಾರ್ಯವಿಧಾನಗಳು.
5. ಕಾರ್ಯಕ್ರಮದ ಮೇಲ್ವಿಚಾರಣೆ ಮತ್ತು ರೂಪಣಾತ್ಮಕ ಮೌಲ್ಯಮಾಪನ.
6. ನಿಗದಿತ ಕಾರ್ಯಕ್ರಮ ಸೂಚಕಗಳಿಗೆ ಸಂಬಂಧಿಸಿದಂತೆ ಉದ್ದೇಶಿತ ಫಲಿತಾಂಶ ಅಥವಾ ಪರಿಣಾಮ.

**ಕಾರ್ಯಕ್ರಮ ಮೌಲ್ಯಮಾಪನದ ಉದ್ದೇಶ:**

ಕಾರ್ಯಕ್ರಮ ಮೌಲ್ಯಮಾಪನ ಕಾರ್ಯಕ್ರಮ ಸುಧಾರಣೆಯಂತಹ ಪ್ರತ್ಯೇಕ ಉದ್ದೇಶಗಳಿಗೆ ಬಳಕೆಯಾಗಬಹುದು. ರಚನಾ ಪೂರ್ವ ಉದ್ದೇಶ ಅಥವಾ ಕಾರ್ಯಕ್ರಮ ಮುಂದುವರಿಯಬೇಕೇ ಅಥವಾ ಅದನ್ನು ನಿಲ್ಲಿಸಿಬಿಡಬೇಕೇ ಎಂಬುದರ ಕುರಿತು ತೀರ್ಮಾನ ಕೈಗೊಳ್ಳುವುದು, ಸಾರ್ವಜನಿಕ ನಿಧಿಯ ಸದುಪಯೋಗ ಹಾಗೂ ವಿವಿಧ ಚಟುವಟಿಕೆಗಳ ಋಜುತ್ವಗಳನ್ನು ಸಮರ್ಥಿಸಲು ಕಾರ್ಯಕ್ರಮವೊಂದರ ಪರಿಣಾಮಕಾರಿತ್ವವನ್ನು ನಿರ್ಧರಿಸುವುದು ಅವಶ್ಯಕವಾಗುವುದು.ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವುದರಲ್ಲಿ ಕಾರ್ಯಕ್ರಮ ಮೌಲ್ಯಮಾಪನದ ಆರು ಉದ್ದೇಶಗಳು ಸಹಕರಿಸುತ್ತವೆ. ಅವುಗಳೆಂದರೆ: 1. ಕಾರ್ಯಕ್ರಮದ ಸ್ಥಾಪನೆ, 2. ಕಾರ್ಯಕ್ರಮದ ಕೊಡುಗೆ ಅಥವಾ ವಿಸ್ತರಣೆ, 3. ಮಾರ್ಪಾಡು 4. ಬೆಂಬಲಕ್ಕೆ ನಿದರ್ಶನಗಳ ಸಂಗ್ರಹ, 5. ಕಾರ್ಯಕ್ರಮವೊಂದನ್ನು ವಿರೋಧಿಸಲು ನಿದರ್ಶನಗಳ ಸಂಗ್ರಹ, ಮತ್ತು 6. ಮೂಲಭೂತ ಮನಃಶಾಸ್ತ್ರೀಯ, ಸಾಮಾಜಿಕ ಮತ್ತು ಇತರ ಕಾರ್ಯವಿಧಾನಗಳನ್ನು ಅರ್ಥೈಸಲು ನೆರವಿನ ಒದಗಣೆ(ಆಂಡರ್‌ಸನ್ ಮತ್ತು ಬಾಲ್, 1978).

ಕ್ರಿಸ್ತಪೂರ್ವ 2000 ದಷ್ಟು ಹಿಂದೆಯೇ ಚೀನೀ ಅಧಿಕಾರಿಗಳು ನಾಗರಿಕ ಸೇವಾ ಪರೀಕ್ಷೆಗಳನ್ನು ನಡೆಸುತ್ತಿದ್ದ ಕಾಲದಲ್ಲಿ ಕಾರ್ಯಕ್ರಮ ಮೌಲ್ಯಮಾಪನದ ಅನೌಪಚಾರಿಕ ಪದ್ಧತಿಯು ಅಸ್ತಿತ್ವದಲ್ಲಿದ್ದು 1880ರ ಅವಧಿಯಲ್ಲಿ ಶಾಲೆಗೆ ಮಾನ್ಯತೆ ದೊರೆಯಲಾರಂಭಿಸುವವರೆಗೆ ಇದು ಮುಂದುವರಿದಿತ್ತು. ಶೈಕ್ಷಣಿಕ ಕಾರ್ಯಕ್ರಮಗಳ ಪರಿಣಾಮಗಳ ಮೌಲ್ಯಮಾಪನಕ್ಕೆ ಟೇಲರ್ ಮತ್ತು ಸ್ಮಿತ್ ಅವರು 1930ರಲ್ಲಿ ನಡೆಸಿದ ಎಂಟು ವರ್ಷಗಳ ಅಧ್ಯಯನವು ಗಮನಾರ್ಹ ಪ್ರಯತ್ನವಾಗಿತ್ತು. ಐವತ್ತರ ದಶಕದ ಕೊನೆಯ ಭಾಗ ಮತ್ತು ಅರುವತ್ತರ ದಶಕದ ಮೊದಲ ಭಾಗದಲ್ಲಿ ವ್ಯಾಸಂಗಕ್ರಮದ ಸುಧಾರಣಾ ಕಾರ್ಯಕ್ರಮಗಳು ಅವುಗಳ ಮೌಲ್ಯಮಾಪನಕ್ಕೆ ಅನುವು ಮಾಡಿಕೊಟ್ಟವು. 1955 ಮತ್ತು 1960 ರಲ್ಲಿ ನಡೆದ ಶೈಕ್ಷಣಿಕ ಮತ್ತು ಮನಃಶಾಸ್ತ್ರೀಯ ಸಂಶೋಧನೆಗಳು ಕಾರ್ಯಕ್ರಮ ಮೌಲ್ಯಮಾಪನಕ್ಕೆ ಪ್ರಾಯೋಗಿಕ ಉಪಕ್ರಮಗಳನ್ನು ಮತ್ತು ಪ್ರಾಯೋಗಿಕ ಉಪಕ್ರಮಗಳಿಗೆ ಪ್ರಚೋದನೆಯನ್ನು ಒದಗಿಸಿದವು(ಕ್ಯಾಂಬೆಲ್ ಮತ್ತು ಸ್ಟೇನ್ಲಿ). ಅರುವತ್ತರ ದಶಕದಲ್ಲಿ ತ್ಯಜಿಸಲ್ಪಟ್ಟ ಗುಣಾತ್ಮಕ ವಿಧಾನಗಳು ಎಪ್ಪತ್ತರ ದಶಕದಲ್ಲಿ ಹೆಚ್ಚು ಹೆಚ್ಚು ಸ್ವೀಕೃತವಾದವು ಮತ್ತು ಇವುಗಳು ಪಾರ್ಲೆಟ್ ಮತ್ತು ಹ್ಯಾಮಿಲ್ಟನ್, ಸ್ಟೇಕ್, ಐಸ್ನರ್, ಗೌಬಾ, ಲಿಂಕನ್ ಮತ್ತು ಇತರರಿಂದ ಕಾರ್ಯಕ್ರಮ ಮೌಲ್ಯಮಾಪನದಲ್ಲಿ ಬಳಕೆಯಾದವು. ಹಾಗಿದ್ದರೂ, ಇತ್ತೀಚಿಗೆ ಕಾರ್ಯಕ್ರಮ ಮೌಲ್ಯಮಾಪನದ ಎರಡು

Digitised by Bharatavani, CIIL

ವಿಧಾನಗಳನ್ನು ಸಂಯೋಜಿಸುವುದರ ಕುರಿತು ಎರಡು ಗುಂಪುಗಳ ನಡುವೆ ಮಾತುಕತೆ ನಡೆಯುತ್ತಿದೆ(ಕುಕ್ ಮತ್ತು ರೇನ್‌ಚರ್ಡ್, 1979; ವರ್ದರ್ನ್, 1981; ಮತ್ತು ಮಾಡೆ, 1982). ಆಮೇಲಿನ ಅವಧಿಯಲ್ಲಿ ವಿವಿಧ ಮೌಲ್ಯಮಾಪನ ಮಾದರಿಗಳು ಕಾರ್ಯಕ್ರಮ ಮೌಲ್ಯಮಾಪನದ ಔಪಚಾರಿಕ ಘಟಕವನ್ನು ಪ್ರತಿನಿಧಿಸುವ ಮಾರ್ಗದರ್ಶಕ ಮಧ್ಯಂತರ ಖಂಡವಾದವು.

**ಕಾರ್ಯಕ್ರಮ ಮೌಲ್ಯಮಾಪನದ ಕುರಿತು ಅಭಿಪ್ರಾಯಗಳು:**

ಕಾರ್ಯಕ್ರಮ ಪ್ರಾಯೋಜಕರು, ಸರಕಾರಿ ಅಧಿಕಾರಿಗಳು ಮತ್ತು ಶೈಕ್ಷಣಿಕ ಆಡಳಿತಗಾರರು– ಇವರೆಲ್ಲರೂ ಬಹುಮಟ್ಟಿಗೆ ಔಪಚಾರಿಕ ಮೌಲ್ಯಮಾಪನದಲ್ಲಿ ಆಸಕ್ತಿ ಹೊಂದಿದವರಾಗಿದ್ದಾರೆ. ಇದರಿಂದ ಅವರಿಗೆ ಕಾರ್ಯಕ್ರಮಗಳ ಖರ್ಚುವೆಚ್ಚ, ಫಲಿತಾಂಶಗಳನ್ನು ತಿಳಿದುಕೊಳ್ಳಲು, ಕಾರ್ಯಸಾಧನೆಗಳನ್ನು ಜಾಹೀರು ಪಡಿಸಲು, ಸಮಸ್ಯೆಗಳ ಸಂಕೀರ್ಣತೆಗಳನ್ನು ತಿಳಿದುಕೊಳ್ಳಲು ಮತ್ತು ಅವರು ಕೈಗೊಳ್ಳುವ ಕಾರ್ಯಕ್ರಮಗಳ ದಕ್ಷತೆ ಮತ್ತು ಪರಿಣಾಮಗಳನ್ನು ಸುಧಾರಿಸಲು ನೆರವು ದೊರೆಯುತ್ತದೆ. ಹಾಗಿದ್ದರೂ, ಕೆಲವೊಮ್ಮೆ ಉದ್ದೇಶದ ನಿರ್ದಿಷ್ಟತೆಯ ಅಧಿಕೃತತೆ, ಪರೀಕ್ಷೆಗಳ, ಬಳಸಿದ ಉಪಕರಣಗಳ ಮತ್ತು ತಂತ್ರಜ್ಞಾನದ ಗುಣಮಟ್ಟದ ಕುರಿತಾಗಿ ಆಕ್ಷೇಪವನ್ನು ಆಧರಿಸಿ ಕ್ಷೇತ್ರ ಕಾರ್ಯಕರ್ತರಿಂದ ಕಳಪೆ ಫಲಿತಾಂಶಗಳನ್ನು ಮತ್ತು ಉದ್ದೇಶಿತವಲ್ಲದ ಪರಿಣಾಮಗಳ ಜವಾಬ್ದಾರಿಯನ್ನು ಕಾರ್ಯಕ್ರಮ ಪ್ರಾಯೋಜಕರ ಮೇಲೆ ಅಥವಾ ಕೇಂದ್ರ ಕಾರ್ಯಾಲಯದ ಮೇಲೆ ಹೊರೆಸುವ ಪ್ರವೃತ್ತಿ ಕಂಡುಬರುತ್ತದೆ. ಆದರೆ ಪ್ರಾಯೋಜಕರು ,ದಾನಿಗಳು, ಮತ್ತು ನಿರ್ದೇಶನಾಲಯಗಳು ತಮಗೆ ಮಾನ್ಯತೆ ದೊರೆಯಲೆಂದು ಮತ್ತು ಅದರ ಫಲಿತಾಂಶಗಳನ್ನು ತೋರ್ಪಡಿಸುವ ಸಲುವಾಗಿ ಕಾರ್ಯಕ್ರಮ ಯಶಸ್ವಿಯಾಗಬೇಕೆಂದು ಬಯಸುತ್ತಾರೆ.

ಶಿಕ್ಷಕರು, ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕರಂತಹ ಶಿಕ್ಷಣತಜ್ಞರು ಕಾರ್ಯಕ್ರಮ ಮೌಲ್ಯಮಾಪನಕ್ಕಾಗಿ ಹೊಸ ಬೇಡಿಕೆಗಳ ಕುರಿತು ಹಿಂಜರಿಕೆ ತೋರುತ್ತಾರೆ ಮತ್ತು ಫಲಿತಾಂಶಗಳ ಕುರಿತು ಸಂದೇಹವನ್ನು ಹೊಂದಿರುತ್ತಾರೆ. ಕಾರ್ಯಕ್ರಮದ ಮೌಲ್ಯಮಾಪನವನ್ನು ನಡೆಸುವುದರಿಂದ ಒಳ್ಳೆಯದಾಗುವುದಕ್ಕಿಂತ ಕೆಟ್ಟದಾಗುವುದೇ ಹೆಚ್ಚು ಎಂದು ಅವರಲ್ಲಿ ಹಲವು ಮಂದಿಯ ಭಾವನೆ. ಏಕೆಂದರೆ ಕಾರ್ಯಕ್ರಿಯೆ ಇರುವ ಸ್ಥಿತಿಯಲ್ಲಿ ಅದನ್ನು ಸರಿಯಾಗಿ ಗ್ರಹಿಸುವುದು ಮೌಲ್ಯಮಾಪಕರಿಗೆ ಸಾಧ್ಯವಾಗುವುದಿಲ್ಲ. ಏನೇ ಆದರೂ, ಕಾರ್ಯಕ್ರಮ ಮೌಲ್ಯಮಾಪನದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಧ್ಯಯನಗಳ ಕುರಿತು ಆಕ್ಷೇಪಗಳು ವ್ಯಕ್ತಗೊಂಡಿರುವುದು ಬಹಳ ಕಡಿಮೆ. ಶಾಲೆಗಳು, ವ್ಯಾಸಂಗಕ್ರಮ ಮತ್ತು ವಿದ್ಯಾರ್ಥಿಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಮೌಲ್ಯಮಾಪನ ಅಧ್ಯಯನಗಳಿಗೆ ಬಹುಪಾಲು ವೃತ್ತಿನಿರತ ಶಿಕ್ಷಣತಜ್ಞರು ಸಹಕಾರ ನೀಡುತ್ತಾರೆ.

ಶೈಕ್ಷಣಿಕ ಸಂಶೋಧಕರು ಮೌಲ್ಯಮಾಪನ ಕಾರ್ಯಕ್ರಮಗಳಿಗೆ ಬಹಳ ಉತ್ಸಾಹಿಗಳಾಗಿರುತ್ತಾರೆ. ಇದರಲ್ಲಿ ಕೆಲವರು ಶಾಲೆಯ ಗುರಿಗಳು ಮತ್ತು ಆದ್ಯತೆಗಳನ್ನು ಪ್ರಶ್ನಿಸಿದರೆ, ಮತ್ತಿತರರು ಅದಕ್ಷತೆ ಮತ್ತು ನಿರರ್ಥಕತೆಯ ಕುರಿತು ಗಮನವನ್ನು ಸೆಳೆಯುತ್ತಾರೆ. ಅವರು ಕಾರ್ಯಕ್ರಮಗಳ ಮೌಲ್ಯಮಾಪನದಲ್ಲಿ ತಮ್ಮ ಸ್ವಂತ ಶೈಲಿ ಮತ್ತು ತಜ್ಞತೆಯನ್ನು ಅನ್ವಯಿಸುವ ಪ್ರೇರಣೆಯನ್ನು ಹೊಂದಿರುತ್ತಾರೆ. ಕಲಿಕಾರ್ಥಿಗಳ ವೈಯಕ್ತಿಕ ಸಾಧನೆಯನ್ನು ಅಳೆಯುವುದಕ್ಕಾಗಿ ಶೈಕ್ಷಣಿಕ ಮನಃಶಾಸ್ತ್ರಜ್ಞರು, ಸಾಮಾಜಿಕ ಸಂಭಾರಗಳಿಗೆ ಶೈಕ್ಷಣಿಕ ಸಮಾಜಶಾಸ್ತ್ರಜ್ಞರು, ಘಟನೆಗಳ ಕುರಿತಾಗಿ ಇತಿಹಾಸಕಾರರು, ವೆಚ್ಚ ಪರಿಣಾಮಕಾರಿತ್ವಕ್ಕಾಗಿ ಆರ್ಥಿಕ ತಜ್ಞರು, ಮತ್ತು ಮಾಪನೆಯ ಸಿಂಧುತ್ವ ಮತ್ತು ವಿಶ್ವಸನೀಯತೆಗಾಗಿ ಒಬ್ಬ ವಿಜ್ಞಾನಿಯನ್ನು ಬಯಸಲಾಗುತ್ತದೆ. ಮೌಲ್ಯಮಾಪನ ವಿನ್ಯಾಸವು ವಿವೇಚನೆ, ಪೂರ್ವ ನಿರ್ದಿಷ್ಟತೆ, ಕಾರ್ಯನಿರ್ವಹಣಾ ಪರಿಕಲ್ಪನೆಗಳನ್ನು ಹೊಂದಿದ್ದು, ವಿದ್ಯಾರ್ಥಿಗಳ ಮೇಲಿನ ಪ್ರಭಾವದತ್ತ ಕೇಂದ್ರೀಕರಿಸಿರಬೇಕು ಮತ್ತು ನಿರ್ಧಾರ ಕೈಗೊಳ್ಳುವಿಕೆಗೆ ಮರುಮಾಹಿತಿಯನ್ನು ಒದಗಿಸುವಂತಿರಬೇಕೆಂದು ಇವರಲ್ಲಿ ಹಲವರು ಸೂಚಿಸುತ್ತಾರೆ.

ಮೌಲ್ಯಮಾಪನ ಅಧ್ಯಯನಗಳು ಏನನ್ನು ಮಾಡುತ್ತವೆ ಎಂಬುದರ ಕುರಿತು ವಿಭಿನ್ನ ಜನರಲ್ಲಿ ಸಮಸ್ಯೆ ಇದೆ. ಸರಕಾರದ ಅಥವಾ ಶೈಕ್ಷಣಿಕ ಆಡಳಿತಗಾರರನ್ನು ಹೊಂದಿರುವ ಮೊದಲ ಗುಂಪಿನ ಜನರಿಗೆ ಸ್ಪರ್ಧೆಯಲ್ಲಿರುವ ಕಾರ್ಯಕ್ರಮಗಳ ಆಯ್ಕೆಯಲ್ಲಿ ಬಳಸಿಕೊಳ್ಳಲು ಗರಿಷ್ಠ ಮಾಹಿತಿಯನ್ನು ಸಂಗ್ರಹಿಸುವುದರಲ್ಲಿ ಆಸಕ್ತಿ ಇದೆ. ಶಿಕ್ಷಣತಜ್ಞರು ಬೋಧನೆ–ಅಭ್ಯಾಸದ ಸ್ಥಿತಿಗತಿಯನ್ನು ಸುಧಾರಿಸುವ ದಿಕ್ಕಿನಲ್ಲಿ ನೋಡುತ್ತಾರೆ. ಇನ್ನು ಶೈಕ್ಷಣಿಕ ಸಂಶೋಧಕರು ಕಾರ್ಯಕ್ರಮ ಮೌಲ್ಯಮಾಪನವನ್ನು ಬೋಧನಾತ್ಮಕ ಮತ್ತು ಕಲಿಕೆಯ ಕಾರ್ಯವಿಧಾನಗಳ ವ್ಯಾಪಕ ಅರ್ಥೈಸುವಿಕೆಯ ದೃಷ್ಟಿಯಿಂದ ಕಾಣುತ್ತಾರೆ. ಹೀಗೆ, ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡುವ ವಿಭಿನ್ನ ವಿಧಾನಗಳನ್ನು, ಗುರಿಗಳನ್ನು ಮತ್ತು ಸಾಧಿತಗಳನ್ನು ಪರೀಕ್ಷಿಸುವ ಅಗತ್ಯವನ್ನು ಉಪೇಕ್ಷಿಸುವ ಹಾಗಿಲ್ಲ.

**ಬಳಕೆಯಾಗುವ ವಿನ್ಯಾಸಗಳ ವರ್ಗೀಕರಣ:**

ಅನೇಕ ವಿನ್ಯಾಸಗಳು ಲಭ್ಯವಿವೆ.ಮೌಲ್ಯಮಾಪನಕ್ಕೆ ಒಳಪಡುವ ಕಾರ್ಯಕ್ರಮಗಳ ಸ್ವರೂಪ ಮತ್ತು ವ್ಯಾಪ್ತಿಗೆ ಅನುಗುಣವಾಗಿ ಮೌಲ್ಯಮಾಪಕರು ಈ ವಿನ್ಯಾಸವನ್ನು ಆಯ್ದುಕೊಳ್ಳುತ್ತಾರೆ. ಮೈಕೇಲ್ ಸ್ಕ್ರಿವೆನ್(1967)ರ ಮೌಲ್ಯಮಾಪನದ ವಿಧಾನಶಾಸ್ತ್ರ ಮತ್ತು ಬ್ಲೇನರ ಶೈಕ್ಷಣಿಕ ಸಿದ್ಧಾಂತ ಮತ್ತು ಅನುಷ್ಠಾನ, ವರ್ದರ್ನ ಮತ್ತು ಜೇಮ್ಸ್ ಸ್ಯಾಂಡರ್ಸ್(1973)ರ ಮೌಲ್ಯಮಾಪನ ವಿನ್ಯಾಸಗಳ ವರ್ಗೀಕರಣವು (ಸೆಂಟರ್ ಫಾರ್ ಎಡ್ಯುಕೇಶನಲ್ ರಿಸರ್ಚ್ ಆಂಡ್ ಇನ್ನೊವೇಶನ್ಸ್)–ಓಸಿಇಡಿ ಸ್ಟೇಕ್(1976)ರವರ ವಿನ್ಯಾಸಗಳ ವರ್ಗೀಕರಣಕ್ಕೆ ಆಧಾರವಾಗಿವೆ. ಕಾರ್ಯಕ್ರಮಗಳ ಮೌಲ್ಯಮಾಪನಕ್ಕಾಗಿ ವಿನ್ಯಾಸಗಳ ವರ್ಗೀಕರಣಕ್ಕೆ ಅವರು ಬಳಸುವ ಸಾಮಾನ್ಯ ಆಯಾಮಗಳು ಈ ಕೆಳಗಿನಂತಿವೆ:

**ರೂಪಣಾತ್ಮಕ ಹಾಗೂ ಸಂಕಲಿತ ಅಧ್ಯಯನಗಳು:**

ಬೆಳವಣಿಗೆ ಮತ್ತು ಅನುಷ್ಠಾನದ ಸಮಯದಲ್ಲಿ ಕೈಗೊಳ್ಳಲಾಗುವ

Digitised by Bharatavani, CIIL

ಮೌಲ್ಯಮಾಪನ ಅಧ್ಯಯನಗಳು ರಚನಾಪೂರ್ವ ಅಧ್ಯಯನಗಳಾಗಿವೆ. ಈ ಅಧ್ಯಯನಗಳ ಗುರಿ ಅನುಷ್ಠಾನದಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಮರುಮಾಹಿತಿಯನ್ನು ಪಡೆಯುವುದು. ಇದು ಕಾರ್ಯತಂತ್ರಗಳ ಅಳವಡಿಕೆಗೆ ಆಧಾರವನ್ನು ಒದಗಿಸುತ್ತದೆ. ಕಾರ್ಯಕ್ರಮಗಳು ಪೂರ್ಣಗೊಂಡ ಬಳಿಕ ಪಡೆದ ಫಲಿತಾಂಶಗಳ ಕುರಿತು ತೀರ್ಮಾನ ಮತ್ತು ನಿರ್ಧಾರವನ್ನು ಕೈಗೊಳ್ಳುವ ಸಲುವಾಗಿ ಸಂಕಲಿತ ಅಧ್ಯಯನಗಳನ್ನು ಕೈಗೊಳ್ಳಲಾಗುತ್ತದೆ.

**ಔಪಚಾರಿಕ ಮತ್ತು ಅನೌಪಚಾರಿಕ ಅಧ್ಯಯನಗಳು**

ಔಪಚಾರಿಕ ಮೌಲ್ಯಮಾಪನ ಅಧ್ಯಯನಗಳು ಪರಿಕಲ್ಪನಾತ್ಮಕ ಚೌಕಟ್ಟಿನೊಂದಿಗೆ ಹೆಚ್ಚು ಕಾರ್ಯಾನ್ವಿತಗೊಳ್ಳುತ್ತಿವೆ. ಅವುಗಳನ್ನು ಸ್ಪಷ್ಟವಾಗಿ ತಿಳಿಸಲಾದ ಉದ್ದೇಶಗಳು, ಪ್ರತಿದರ್ಶ ಚಯನಗಳು ,ಪ್ರಕ್ರಿಯೆಗಳು, ಉದ್ದೇಶಿತ ಫಲಿತಾಂಶಗಳಿಂದ ನಡೆಸಲಾಗುತ್ತದೆ. ಅವುಗಳು ಮಾನ್ಯತೆ, ಅರ್ಹತೆ, ಉಪಯೋಗ, ಮತ್ತು ವಿಶ್ವಸನೀಯತೆ ಪರೀಕ್ಷೆಯಲ್ಲಿ ಯಶಸ್ವಿಯಾಗಿರಬೇಕು. ನಿರಂತರ ಮರುಮಾಹಿತಿ ಮತ್ತು ಮೇಲ್ವಿಚಾರಣೆಗಾಗಿ ಅನೌಪಚಾರಿಕ ಮೌಲ್ಯಮಾಪನವು ಶೈಕ್ಷಣಿಕ ಕಾರ್ಯವಿಧಾನಗಳಿಗೆ ಸಂಯೋಜಿತವಾಗಿರುತ್ತದೆ. ಸ್ವ-ಮೌಲ್ಯಮಾಪನ, ಹೊಂದಾಣಿಕೆ ಮತ್ತು ಅಳವಡಿಕೆಯ ಕಾರಣದಿಂದಾಗಿ ಇದು ರಚನಾತ್ಮಕವಾಗಿ ಇರುವ ಅಗತ್ಯವಿಲ್ಲ.

**ಪ್ರಕ್ರಿಯೆ-ಉತ್ಪನ್ನ ಅಧ್ಯಯನಗಳು:**

ಕಾರ್ಯವಿಧಾನದ ಅಧ್ಯಯನಗಳಲ್ಲಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ನಿರ್ವಹಣಾ ಚಟುವಟಿಕೆಗಳ ಮೌಲ್ಯಮಾಪನಕ್ಕೆ, ಅಂದರೆ, ವಾಸ್ತವಿಕ ಮೌಲ್ಯಕ್ಕೆ ಹೆಚ್ಚು ಒತ್ತು ಇರುತ್ತದೆ. ಆದರೆ, ಉತ್ಪನ್ನ ಕೇಂದ್ರಿತ ಅಧ್ಯಯನಗಳಲ್ಲಿ ಕಾರ್ಯಕ್ರಮದ ಫಲಿತಾಂಶಗಳು, ತೀರಿಸುವಿಕೆ ಅಥವಾ ಪರಿಣಾಮಗಳಿಗೆ ಹೆಚ್ಚು ಗಮನವನ್ನು ಹರಿಸಲಾಗುತ್ತದೆ. ಕಾರ್ಯಕ್ರಮದ ಉಪಯುಕ್ತತೆಯ ಕುರಿತು ಸಂಪೂರ್ಣ ನಿದರ್ಶನ ಪಡೆಯಬೇಕಾದರೆ ಇವೆರಡರ ಅಗತ್ಯವೂ ಇರುತ್ತದೆ. ಇವೆರಡರಲ್ಲಿ ಯಾವುದಕ್ಕೆ ಗಮನ ದೊರೆಯಬೇಕು ಎನ್ನುವುದು ಪ್ರಾಯೋಜಕರ ಅಥವಾ ಮೌಲ್ಯಮಾಪಕರ ನಂಬಿಕೆಯನ್ನು ಮತ್ತು ಮೌಲ್ಯಮಾಪನಕ್ಕೆ ಒಳಪಟ್ಟ ಕಾರ್ಯಕ್ರಮದ ಸ್ವರೂಪವನ್ನು ಆಧರಿಸಿ ಇರುತ್ತದೆ.

**ಸಾಮಾನ್ಯೀಕೃತ ಮತ್ತು ನಿರ್ದಿಷ್ಟ ಅಧ್ಯಯನಗಳು:**

ಬೋಧನೆ-ಕಲಿಕಾ ಪ್ರಕ್ರಿಯೆಯ ಚೌಕಟ್ಟಿನಲ್ಲಿ ಮತ್ತು ತತ್ಸಂಬಂಧಿತವಾಗಿ ನಡೆಸಲಾದ ಕಾರ್ಯಕ್ರಮದ ಉಪಯುಕ್ತತೆಯನ್ನು ಕಂಡುಹಿಡಿಯುವ ಸಲುವಾಗಿ ಬಳಸಲಾದ ಖಚಿತ ನಿಗದಿತ ಗುರಿಯನ್ನು ಹೊಂದಿದ ನಿರ್ದಿಷ್ಟ ಕಾರ್ಯಕ್ರಮದ ಮೌಲ್ಯಮಾಪನ ಅಧ್ಯಯನವು ನಿರ್ದಿಷ್ಟ(ಪ್ರತ್ಯೇಕ) ಅಧ್ಯಯನ ಎನಿಸಿಕೊಳ್ಳುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಸಾಮಾನ್ಯ ಉಪಕ್ರಮದ ಉಪಯುಕ್ತತೆಯನ್ನು ಕಂಡುಹಿಡಿಯಲು ಇತರ ಅಧ್ಯಯನಗಳ ಪ್ರತಿನಿಧಿಯಾಗಿ ಬಳಸಲಾದ ಕಾರ್ಯಕ್ರಮದ ಅಧ್ಯಯನವನ್ನು ಸಾಮಾನ್ಯೀಕರಣ ಆಧಾರಿತ ಅಧ್ಯಯನವೆಂದು ಕರೆಯಲಾಗುತ್ತದೆ. ಇಂತಹ ಅಧ್ಯಯನಗಳಿಗೆ ಹೆಚ್ಚು ನಿಯಂತ್ರಣಗಳು, ನಿಯಂತ್ರಿತ ಭಿನ್ನತೆಗಳ ಅಗತ್ಯವಿದ್ದು ಮತ್ತು ಕಾಲ, ಸ್ಥಳ ಮತ್ತು ವ್ಯಕ್ತಿ ಬದಲಾವಣೆಗಳ ವಿವರಗಳ ಅವಶ್ಯಕತೆಯಿರುತ್ತದೆ.

**ವರ್ಣನಾತ್ಮಕ-ವಿವೇಚನಾಯುಕ್ತ ಅಧ್ಯಯನಗಳು:**

ಸಮಾಜ ವಿಜ್ಞಾನಗಳ ಹಿನ್ನೆಲೆಯ ಕೆಲವು ಮೌಲ್ಯಮಾಪಕರು ವ್ಯಕ್ತಿನಿಷ್ಠ ದತ್ತಾಂಶಗಳಿಗೆ ಪ್ರಾಮುಖ್ಯವನ್ನು ನೀಡದೆ, ವಸ್ತುನಿಷ್ಠ ದತ್ತಾಂಶಗಳಿಗೆ ಒತ್ತನ್ನು ನೀಡಿದರೆ, ಮಾನವಿಕ ಶಾಸ್ತ್ರದ ಹಿನ್ನೆಲೆಯುಳ್ಳ ಕೆಲವರು ಈ ಒತ್ತನ್ನು ತಿರುಗು ಮುರುಗು ಮಾಡಿ ಅತ್ಯಂತ ಹೆಚ್ಚು ವರ್ಣನಾತ್ಮಕವಾದ ವಿದ್ಯಾರ್ಥಿ ಪರಿಸರವನ್ನು ಬಯಸುತ್ತಾರೆ ಮತ್ತು ನಿರ್ಣಾಯಕ ಅಂಶ ಮತ್ತು ಮೌಲ್ಯಮಟ್ಟಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ನೀಡದ ಯೋಜನಾ ಮೌಲ್ಯಮಾಪನದ ಜಾಗರೂಕತೆಯ ವರದಿಗಳನ್ನು ಒದಗಿಸುತ್ತಾರೆ. ಹಾಗಿದ್ದರೂ ಅನೇಕ ಅಧ್ಯಯನಗಳಲ್ಲಿ ಪರಮಾವಧಿಗಳ ಸಂತೋಷದಾಯಕ ಸಂಯೋಜನೆಯು ಕಾಣಿಸಿಕೊಳ್ಳುತ್ತದೆ.

**ಪೂರ್ವ ನಿಯಾಮಕ ಪ್ರತಿಕ್ರಿಯಾತ್ಮಕ ಅಧ್ಯಯನಗಳು:**

ಪೂರ್ವ ನಿಯಾಮಕ ಅಧ್ಯಯನಗಳು ಹೆಚ್ಚಾಗಿ ಉದ್ದೇಶಗಳು, ಪ್ರಾಕ್ಕಲ್ಪನೆಗಳು ಮತ್ತು ಪೂರ್ವ ನಿರೀಕ್ಷಿತ ಫಲಿತಾಂಶಗಳತ್ತ ಕೇಂದ್ರೀಕೃತವಾಗಿವೆ. ಇವುಗಳಲ್ಲಿ ಹೆಚ್ಚಿನ ಪ್ರತಿಕ್ರಿಯೆಗಳ ದೊಡ್ಡ ಪ್ರಮಾಣವು ಇನ್ನೂ ಹೆಚ್ಚು ಅವಲಂಬಿಸಬಹುದಾದ ಪ್ರತಿಕ್ರಿಯೆಗಳಿಗಾಗಿ ಉದ್ದೇಶಗಳ ನಿರ್ದಿಷ್ಟತೆ, ಉಪಕರಣಗಳ ಅಭಿವೃದ್ಧಿ ಮತ್ತು ಪರಿವರ್ತನೆಗಳಿಗೆ ಸಂಬಂಧಿಸಿದಂತೆ ಇರುತ್ತದೆ. ಕಾರ್ಯಕ್ರಮ ಮುಂದುವರಿಯುತ್ತಿದ್ದಂತೆ ಅನಿರೀಕ್ಷಿತವಾಗಿ ಎದುರಾಗುವ ವಿದ್ಯಮಾನಗಳ ಸುತ್ತಲೂ ಪ್ರತಿಕ್ರಿಯಾತ್ಮಕ ಅಧ್ಯಯನಗಳು ಸಂಘಟಿಸಲ್ಪಡುತ್ತವೆ. ಇವುಗಳನ್ನು ಸಿದ್ಧಗೊಳಿಸಲು ಮತ್ತು ಕಾರ್ಯರೂಪಕ್ಕೆ ತರಲು ಸಾಕಷ್ಟು ದೊಡ್ಡ ಪ್ರಮಾಣದ ಸಂಪನ್ಮೂಲಗಳನ್ನು ಬಳಸಿಕೊಳ್ಳಲಾಗುತ್ತದೆ. ಆದುದರಿಂದ ವೀಕ್ಷಕ ಸಹಭಾಗಿಗಳ ಪಾತ್ರವು ಮುಖ್ಯವಾಗಿರುತ್ತದೆ.

**ಸಮಗ್ರ ಅಧ್ಯಯನಕ್ಕೆ ವಿರುದ್ಧವಾಗಿ ವಿಶ್ಲೇಷಣಾತ್ಮಕ ಅಧ್ಯಯನಗಳು:**

ಇವರಡರ ನಡುವಿನ ವ್ಯತ್ಯಾಸವು ಕಾರ್ಯಕ್ರಮವನ್ನು ಸಮಗ್ರವಾಗಿ ಅಥವಾ ಒಂದೇ ಆಗಿ ಪರಿಗಣಿಸುವುದರಲ್ಲಿ ಇರುತ್ತದೆ. ಇದು ನಿರ್ದಿಷ್ಟ ಪ್ರಕರಣದ ಅಧ್ಯಯನದಲ್ಲಿ ಕಂಡುಬರುವುದು ಅಥವಾ ವರ್ಣನಾತ್ಮಕ ಚಲಕಗಳ ಪರಿಮಾಣಗಳ ನಡುವಿನ ಸಂಬಂಧವನ್ನು ಸೂಚಿಸುವ ಬಹುಚಲಕ ಪರಿಮಾಣ ವಿಶ್ಲೇಷಣೆಯಂತಹ ಅಲ್ಪಸಂಖ್ಯೆಯ ಪ್ರಮುಖ ಗುಣಲಕ್ಷಣಗಳತ್ತ ಕೇಂದ್ರೀಕೃತಗೊಂಡ ಅಧ್ಯಯನವಾಗಿರಬಹುದು.

**ಬಾಹ್ಯ ಅಧ್ಯಯನ - ಆಂತರಿಕ ಅಧ್ಯಯನ:**

ಇಲ್ಲಿ ವ್ಯತ್ಯಾಸವು ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುವವರು ಯಾರು ಎನ್ನುವುದನ್ನು ಆಧರಿಸಿ ಇರುತ್ತದೆ. ಸ್ವತಃ ಸಂಸ್ಥೆಯ ಸಿಬ್ಬಂದಿಗಳೇ ಇದನ್ನು ನಡೆಸುವವರೋ ಅಥವಾ ವಿವಾದಾಂಶಗಳನ್ನು ಎತ್ತಲು, ಫಲಿತಾಂಶಗಳನ್ನು

Digitised by Bharatavani, CIIL

ಮರುವ್ಯಾಖ್ಯಾನಿಸಲು ಮತ್ತು ಮಾಡಬಹುದಾದ ಬದಲಾವಣೆಗಳನ್ನು ಸೂಚಿಸಲು ಸ್ವತಂತ್ರರಾಗಿರುವ ಹೊರಗಿನವರೋ ಎಂಬುದು ಮುಖ್ಯವಾಗುತ್ತದೆ. ಮೌಲ್ಯಮಾಪನಕ್ಕೆ ಹೆಚ್ಚು ಔಪಚಾರಿಕ ಅಂಗೀಕಾರವಿರುವುದಾದರೆ, ಹೆಚ್ಚಿನ ಬಾಹ್ಯ ವಿಧಿಗಳು ವಾಸ್ತವಿಕ ಸತ್ಯವಾಗುತ್ತವೆ. ಶಾಲಾ ಸಿಬ್ಬಂದಿಗಳ ವಾರ್ಷಿಕ ಶಾಲಾ ಸ್ವ-ಮೌಲ್ಯಮಾಪನವು ಆಂತರಿಕವಾಗಿದ್ದರೆ, NCERT ಅಥವಾ NUEPA ಅಥವಾ DIETಗಳು ನಡೆಸುವ ಶಾಲೆಗಳ ಗುಂಪಿನ ಮೌಲ್ಯಮಾಪನವು ಬಾಹ್ಯಸ್ವರೂಪದ್ದಾಗಿರುತ್ತದೆ.

ಮೇಲೆ ಉಲ್ಲೇಖಿಸಲಾದ ಎಂಟು ಆಯಾಮಗಳು 256 ವಿಭಿನ್ನ ವಿನ್ಯಾಸಗಳನ್ನು ರೂಪಿಸಬೇಕೆಂಬ ಅಗತ್ಯವಿಲ್ಲ. ಏಕೆಂದರೆ, ಕೆಲವು ಆಯಾಮಗಳು ಪರಿಕಲ್ಪನಾತ್ಮಕವಾಗಿ ಒಂದರ ಮೇಲೊಂದು ವ್ಯಾಪಿಸಿಕೊಂಡಿದ್ದು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಉದಾಹರಣೆಗೆ ಶಾಲಾ ಸ್ವ-ಮೌಲ್ಯಮಾಪನ ಅಧ್ಯಯನ. ಇದು ಆಂತರಿಕವಾಗಿರುವಂತೆ ರೂಪಣಾತ್ಮಕ, ವರ್ಣನಾತ್ಮಕ, ಪ್ರತಿಕ್ರಿಯಾತ್ಮಕ, ಸಮಗ್ರ ಮತ್ತು ಔಪಚಾರಿಕವಾಗಿಯೂ ಇರಬಹುದಾಗಿದೆ.

**ಕಾರ್ಯಕ್ರಮಗಳ ಉಪಕ್ರಮ-ಆಧಾರಿತ ಮೌಲ್ಯಮಾಪನ:**

ಈ ಆಯಾಮಗಳನ್ನು ಹೊರತುಪಡಿಸಿಯೂ, ಶೈಕ್ಷಣಿಕ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ವಿಭಿನ್ನ ಮೂಲರೂಪಗಳು ಅಥವಾ ಮಾದರಿಗಳಿಗೆ ಅವಕಾಶ ಒದಗಿಸುವ ಪ್ರಾತಿನಿಧಿಕ ಉಪಕ್ರಮಗಳ ದೃಷ್ಟಿಕೋನದಿಂದಲೂ ಕೈಗೊಳ್ಳಬಹುದಾಗಿದೆ. ಹಾಗಿದ್ದರೂ, ವಿಭಿನ್ನ ಉಪಕ್ರಮಗಳಲ್ಲಿನ ವ್ಯತ್ಯಾಸವನ್ನು ಮೇಲೆ ಪಟ್ಟಿ ಮಾಡಲಾಗಿರುವ ವಿಭಿನ್ನ ಆಯಾಮಗಳಿಗೆ ಸಂಬಂಧಿಸಿದಂತೆ ಭಾಗಶಃ ವಿವರಿಸಬಹುದಾಗಿದೆ. ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವುದರಲ್ಲಿ OECDಯ CERI ಗುರುತಿಸಿರುವ ಒಂಭತ್ತು ಉಪಕ್ರಮಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಪರೀಕ್ಷೆಯಿಂದ ವಿದ್ಯಾರ್ಥಿಗಳಿಗೆ ಆಗುವ ಲಾಭ:**

ಇಲ್ಲಿಯ ಉದ್ದೇಶವೆಂದರೆ ವಿದ್ಯಾರ್ಥಿಗಳ ಪ್ರಗತಿ ಮತ್ತು ಕಾರ್ಯಾಚರಣೆಯನ್ನು ಅಳೆಯುವುದು. ಈ ಉಪಕ್ರಮದ ಮುಖ್ಯ ಅಂಶಗಳೆಂದರೆ ಗುರಿಗಳ ನಿರೂಪಣೆ, ಪರೀಕ್ಷಾ ಗುಣಾಂಕಗಳ ವಿಶ್ಲೇಷಣೆ, ಉದ್ದೇಶಿತ ಮತ್ತು ಅವಲೋಕಿತಗಳ ನಡುವಿನ ಭಿನ್ನತೆಗಳು. ಇದು ಶೈಕ್ಷಣಿಕ ಗುರಿಗಳನ್ನು ಸರಳೀಕರಿಸುತ್ತದೆ, ಪ್ರಕ್ರಿಯೆಗಳನ್ನು ಅಲಕ್ಷಿಸುತ್ತದೆ ಆದರೆ ವಿದ್ಯಾರ್ಥಿಗಳ ಪ್ರಗತಿಯನ್ನು ಖಚಿತಪಡಿಸುತ್ತದೆ.

**ಸಿಬ್ಬಂದಿಗಳಿಂದ ಸಾಂಸ್ಥಿಕ ಸ್ವ-ಅಧ್ಯಯನ:**

ಸಿಬ್ಬಂದಿಗಳ ಪರಿಣಾಮಕಾರಿತ್ವವನ್ನು ಪರಿಶೀಲಿಸುವುದು ಮತ್ತು ಸುಧಾರಿಸುವುದು ಇಲ್ಲಿನ ಉದ್ದೇಶವಾಗಿದೆ. ಮುಖ್ಯ ಅಂಶಗಳು- ಸಮಿತಿಯ ಕಾರ್ಯ, ಸಿಬ್ಬಂದಿಗಳ ಮಟ್ಟದ ನಿರ್ಧಾರ, ಚರ್ಚೆ ಮತ್ತು ಸ್ವ-ನಿಯಂತ್ರಣ. ಇದು ಹೊರಗಿನವರ ಮೌಲ್ಯವನ್ನು ಅಲಕ್ಷಿಸುತ್ತದೆ ಮತ್ತು ಕೆಲವು ಸಿಬ್ಬಂದಿಗಳನ್ನು ದೂರವಿರಿಸುತ್ತದೆ ಆದರೆ ಸಿಬ್ಬಂದಿಯಲ್ಲಿ ಅರಿವು ಮತ್ತು ಜವಾಬ್ದಾರಿ ಪ್ರಜ್ಞೆಯನ್ನು ಹೆಚ್ಚಿಸುತ್ತದೆ.

**ಗಣ್ಯ ತಜ್ಞ ಸಮಿತಿ**

ಉದ್ದೇಶವು ಬಿಕ್ಕಟ್ಟನ್ನು ಬಗೆಹರಿಸುವುದು ಮತ್ತು ಸಂಸ್ಥೆಯನ್ನು ಉಳಿಸುವುದಾಗಿದೆ. ಮುಖ್ಯ ಅಂಶಗಳು ಭೇಟಿಗಳು. ಈಗಾಗಲೇ ಇರುವ ದತ್ತಾಂಶಗಳ ಮತ್ತು ದಾಖಲೆಗಳ ಪರಿಶೀಲನೆ. ಇದು ಸಂಸ್ಥೆಯ ಮೇಲೆ ಹೆಚ್ಚು ಅವಲಂಬಿತಗೊಂಡಿದ್ದು ಕಾರ್ಯವನ್ನು ಮುಂದೂಡುತ್ತದೆ, ಆದರೆ ತೀರ್ಮಾನಕ್ಕೆ ಉತ್ತಮ ಒಳನೋಟವನ್ನು ಒದಗಿಸುತ್ತದೆ.

**ಕಾರ್ಯಕಲಾಪಗಳ ಅವಲೋಕನ:**

**ಉದ್ದೇಶ:** ಚಟುವಟಿಕೆಗಳ ಮತ್ತು ಮೌಲ್ಯಗಳನ್ನು ಅರ್ಥೈಸುವುದು. ಮುಖ್ಯಾಂಶಗಳೆಂದರೆ ಶೈಕ್ಷಣಿಕ ವಿಚಾರಗಳು, ತರಗತಿಯ ಅವಲೋಕನ, ಸಾಂದರ್ಭಿಕ ಅಧ್ಯಯನಗಳು, ಮತ್ತು ಬಹುತತ್ವವಾದ. ಅದು ಕಾರಣಗಳನ್ನು ಅಲಕ್ಷಿಸುತ್ತದೆ ಮತ್ತು ವ್ಯಕ್ತಿನಿಷ್ಠ ಗ್ರಹಿಕೆಗಳನ್ನು ಕೂಡ ಅವಲಂಬಿಸಿರುತ್ತದೆ, ಆದರೆ ಕಾರ್ಯಕ್ರಮದ ವ್ಯಾಪಕ ಚಿತ್ರವನ್ನು ನೀಡುತ್ತದೆ ಮತ್ತು ಮೌಲ್ಯಗಳಲ್ಲಿ ಬಿಕ್ಕಟ್ಟನ್ನು ಕಾಣುತ್ತದೆ.

**ನಿರ್ವಹಣೆಯ ವಿಶ್ಲೇಷಣೆ:**

**ಉದ್ದೇಶ:** ದೈನಂದಿನ ಚರ್ಚೆಗಳಲ್ಲಿ ವಿಚಾರಪರತೆಯನ್ನು ಹೆಚ್ಚಿಸುವುದು. ಮುಖ್ಯಾಂಶಗಳೆಂದರೆ ಮುಖ್ಯ ಐಚ್ಛಿಕಗಳು(ಆಯ್ಕೆಗಳು), ಅಂದಾಜುಗಳು, ಹಿನ್ನುಣಿಕೆಯ ಪರಿಪಥಗಳು(feedback loops), ವೆಚ್ಚ ಮತ್ತು ದಕ್ಷತೆಯನ್ನು ಪಟ್ಟಿ ಮಾಡುವುದು. ಇದು ದಕ್ಷತೆಗೆ ಹೆಚ್ಚಿನ ಮೌಲ್ಯವನ್ನು ನೀಡಿ ಸೂಚಿತವಾದುದನ್ನು ಕಡೆಗಣಿಸುತ್ತದೆ. ಆದರೆ ನಿರ್ಧಾರ ಕೈಗೊಳ್ಳಲು ಉತ್ತಮ ಮರುಮಾಹಿತಿಯನ್ನು ಒದಗಿಸುತ್ತದೆ.

**ಬೋಧನಾತ್ಮಕ ಸಂಶೋಧನೆ:**

ಇದರ ಉದ್ದೇಶ ಬೋಧನೆಯ ವಿವರಣೆ ಮತ್ತು ತಂತ್ರಗಳನ್ನು ಉತ್ಪಾದಿಸುವುದು. ಮುಖ್ಯಾಂಶಗಳು: ನಿಯಂತ್ರಿತ ಪರಿಸ್ಥಿತಿಗಳು, ಬಹುಭಿನ್ನತಾ ವಿಶ್ಲೇಷಣೆ ಮತ್ತು ಸಾಮಾನ್ಯೀಕರಣಕ್ಕೆ ಆಧಾರ. ಗಂಡಾಂತರಗಳು, ಕೃತಕವಾದ ಪರಿಸ್ಥಿತಿಗಳು ಮತ್ತು ಮಾನವೀಯ ದೃಷ್ಟಿಯ ಅಲಕ್ಷ್ಯ ಇದರ ಮಿತಿಗಳಾಗಿವೆ.

**ಸಾಮಾಜಿಕ ಕಾರ್ಯನೀತಿ ವಿಶ್ಲೇಷಣೆ:**

**ಉದ್ದೇಶ:** ಸಾಂಸ್ಥಿಕ ಕಾರ್ಯನೀತಿಗಳ ಅಭಿವೃದ್ಧಿಗೆ ನೆರವು ನೀಡಿಕೆ. ಮುಖ್ಯಾಂಶಗಳೆಂದರೆ ಸಾಮಾಜಿಕ ಪರಿಸ್ಥಿತಿಗಳು ಮತ್ತು ಆಡಳಿತಾತ್ಮಕ ಅನುಷ್ಠಾನದ ಮಾಪನೆ.ಇದು ವಿವರಗಳನ್ನು ಮತ್ತು ಶೈಕ್ಷಣಿಕ ವಿವಾದಾಂಶಗಳನ್ನು ಅಲಕ್ಷಿಸುತ್ತದೆ. ಆದರೆ ಸಾಮಾಜಿಕ ಆಯ್ಕೆಗಳು ಮತ್ತು ನಿರ್ಬಂಧಗಳನ್ನು ಸ್ಪಷ್ಟಪಡಿಸುತ್ತದೆ.

**ಧ್ಯೇಯ ರಹಿತ ಮೌಲ್ಯಮಾಪನ:**

ಇದರ ಉದ್ದೇಶ ಕಾರ್ಯಕ್ರಮವೊಂದರ ಪರಿಣಾಮಗಳನ್ನು ಮೌಲ್ಯಮಾಪನ ಮಾಡುವುದು. ಮುಖ್ಯಾಂಶಗಳೆಂದರೆ ತಾಳೆಪಟ್ಟಿಯನ್ನು ಅನುಸರಿಸುವುದು ಮತ್ತು ಪ್ರತಿಪಾದಕರ ಹಕ್ಕು ಸಾಧನೆಯನ್ನು ನಿರ್ಲಕ್ಷಿಸುವುದು. ಇದು ದಾಖಲೆಗಳಿಗೆ

Digitised by Bharatavani, CIIL

ಮತ್ತು ದಾಖಲೀಕರಣಕ್ಕೆ ಅತಿಯಾದ ಮೌಲ್ಯವನ್ನು ನೀಡುತ್ತದೆ ಆದರೆ ಬಳಸಿಕೊಳ್ಳಲು ಅಷ್ಟೇನೂ ಅರ್ಹವಲ್ಲದ ಪರಿಣಾಮಕ್ಕೆ ಸಂಬಂಧಿಸಿದ ದತ್ತಾಂಶಗಳು ಲಭಿಸುತ್ತವೆ.

**ಪ್ರತಿಕೂಲ ಮೌಲ್ಯಮಾಪನ:**

ಇದರ ಉದ್ದೇಶ ದ್ವಿ–ಸಾಧನಗಳೆರಡು ಪರ್ಯಾಯಗಳ ನಡುವೆ ತೀರ್ಮಾನಿಸುವುದು.ಈ ವಿಧಾನದ ಪ್ರಮುಖ ಅಂಶಗಳೆಂದರೆ ವಿರೋಧವಾಗಿ ವಾದಿಸುವವರು, ಪ್ರತಿಪ್ರಶ್ನೆಗಳು ಮತ್ತು ನ್ಯಾಯದರ್ಶಿಗಳು(ಜ್ಯೂರಿ). ಮಿತಿಗಳೆಂದರೆ ಇದು ವೈಯಕ್ತಿಕ, ಹಗುರ ಮತ್ತು ಕಾಲಮಿತಿಯುಳ್ಳದ್ದು.ಆದರೆ ಇದರ ಮಾಹಿತಿ ಪ್ರಭಾವ ಚೆನ್ನಾಗಿದೆ.

ಈ ಉಪಕ್ರಮಗಳಲ್ಲಿ ಪ್ರತಿಯೊಂದು ಬೇರೆ ಬೇರೆ ವಿಧದ ಮೌಲ್ಯಮಾಪಕರಿಂದ ಪ್ರಾಧಾನ್ಯವನ್ನು ಪಡೆದಿವೆ. ಮೊದಲ ವಿಧಾನವನ್ನು ಶೈಕ್ಷಣಿಕ ಮನಃಶಾಸ್ತ್ರಜ್ಞರು, ಎರಡನೆಯ ವಿಧಾನವನ್ನು ಪ್ರಾಧ್ಯಾಪಕರು ಮತ್ತು ಶಿಕ್ಷಕರು, ಮೂರನೆಯದು ಪ್ರಮುಖ ನಾಗರಿಕರು, ನಾಲ್ಕನೆಯದು ಗ್ರಾಹಕರು ಮತ್ತು ಪ್ರೇಕ್ಷಕರು, ಐದನೆಯದು ಕಾರ್ಯನಿರ್ವಾಹಕರು ಮತ್ತು ಅರ್ಥಿಕತಜ್ಞರು, ಆರನೆಯದು ಸಂಶೋಧನಾ ತಜ್ಞರು, ಏಳನೆಯದು ಸಮಾಜಶಾಸ್ತ್ರಜ್ಞರು, ಎಂಟನೆಯದು ಉಪಭೋಗಿಗಳು ಮತ್ತು ಲೆಕ್ಕಿಗರು ಮತ್ತು ಒಂಭತ್ತನೆಯದು ತಜ್ಞರು ಮತ್ತು ನ್ಯಾಯವಾದಿಗಳಿಂದ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಈ ಉಪಕ್ರಮಗಳು ಪರಸ್ಪರ ಸಾಮಾನ್ಯ ಅಂಶಗಳನ್ನು ಹೊಂದಿವೆ ಮತ್ತು ವರ್ಣನಾತ್ಮಕ ಶೀರ್ಷಿಕೆಗಳು ಸರಳೀಕೃತಗೊಂಡದ್ದಾಗಿವೆ. ಯಾವುದೇ ಒಂದು ಉಪಕ್ರಮವು ಎಲ್ಲಾ ಉದ್ದೇಶಗಳಿಗೆ ಆದರ್ಶಪ್ರಾಯವಾಗಿ ಇರುವುದಿಲ್ಲ ಮತ್ತು ಒಂದು ಅಧ್ಯಯನವು ಅನೇಕ ವಿಧಾನಗಳನ್ನು ಒಳಗೊಂಡು ಇರಬಹುದು. ಈ ವಿಚಾರದ ಉದ್ದೇಶವೇನೆಂದರೆ ಕಾರ್ಯಕ್ರಮಗಳ ಮೌಲ್ಯಮಾಪನಕ್ಕೆ ವಿಭಿನ್ನ ಉಪಕ್ರಮಗಳ ನಡುವಣ ಒಟ್ಟು ಸ್ಥೂಲ ವ್ಯತ್ಯಾಸಗಳನ್ನು ತೋರಿಸುವುದಾಗಿದೆ.

**ಕಾರ್ಯಕ್ರಮ ಮೌಲ್ಯಮಾಪನ ಸಂಭಾರತಂತ್ರ:**

ಕಾರ್ಯಕ್ರಮ ಮೌಲ್ಯಮಾಪನ ಅಧ್ಯಯನಗಳಲ್ಲಿ ಪ್ರಾಯೋಜಕರು ಮತ್ತು ಮೌಲ್ಯಮಾಪಕರ ನಡುವೆ ಮಾತುಕತೆ ಅವಶ್ಯಕವಾಗುವುದು. ಜೊತೆಗೆ ವ್ಯಕ್ತಿಗಳು, ದತ್ತಾಂಶಗಳು, ಖರ್ಚುವೆಚ್ಚಗಳು, ಉದ್ದೇಶಗಳು ಇತ್ಯಾದಿಗಳ ಜೊತೆಗೆ ಕಾಣಿಸಿಕೊಳ್ಳಬಹುದಾದ ತೊಂದರೆಗಳು ಮತ್ತು ಸಮಸ್ಯೆಗಳನ್ನು ನಿರೀಕ್ಷಿಸುವುದು ಅಗತ್ಯವಾಗುತ್ತದೆ ಮತ್ತು ಯಶಸ್ವಿ ಅನುಷ್ಠಾನಕ್ಕಾಗಿ ಅಗತ್ಯವಿರುವ ಹೆಜ್ಜೆಗಳು ಮತ್ತು ಮುನ್ನೆಚ್ಚರಿಕೆಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ.. ಅನುಷ್ಠಾನದ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಕಾಣಿಸಿಕೊಳ್ಳಬಹುದಾದ ತೊಂದರೆಗಳಿಗೆ ಪ್ರತಿಕ್ರಿಯಿಸಲಾಗದಷ್ಟು ಅಥವಾ ಅದಕ್ಕೆ ಗಮನ ನೀಡಲಾಗದಷ್ಟು ಕರಾರು ಅತಿ ನಿರ್ದಿಷ್ಟವಾಗಿರಬಹುದು. ಒಂದು ವೇಳೆ ಕರಾರು ಸಾಕಷ್ಟು ನಿರ್ದಿಷ್ಟವಾಗಿ ಇರದೇ ಹೋದರೆ ಅಧ್ಯಯನ ಏನನ್ನು ಒದಗಿಸಬೇಕೆಂದು ಪ್ರಾಯೋಜಕರು ನಿರ್ದಿಷ್ಟವಾಗಿ ನಿರೀಕ್ಷಿಸುವುದು ಸಾಧ್ಯವಾಗುವುದಿಲ್ಲ. ಇನ್ನು ಮೌಲ್ಯಮಾಪಕರಿಗೂ ಕೂಡ ನಿರೀಕ್ಷಿತ ಉದ್ದೇಶವು ನಿಜವಾಗಿಯೂ ಸಾಧಿತವಾಗಿದೆಯೇ ಎನ್ನುವುದು ಖಚಿತವಾಗುವುದಿಲ್ಲ. ನಿರ್ಧಾರ ಕೈಗೊಳ್ಳುವಿಕೆಯನ್ನು ಸುಲಭಗೊಳಿಸುವ ಸಲುವಾಗಿ ಕಾರ್ಯಕ್ರಮ ಪ್ರಾಯೋಜಕರು ಮತ್ತು ಮೌಲ್ಯಮಾಪಕರ ನಡುವೆ ಮೊದಲೇ, ಕನಿಷ್ಠ ಈ ಕೆಳಗಿನ ವಿಚಾರಗಳಲ್ಲಿಯಾದರೂ ಅರಿವು ಇರುವುದು ಅಪೇಕ್ಷಣೀಯ.

**ಕಾರ್ಯಕ್ರಮದ ಮೌಲ್ಯಮಾಪನದ ಉದ್ದೇಶ:**

ಮುಖ್ಯ ಉದ್ದೇಶಗಳೆಂದರೆ ಕಾರ್ಯಕ್ರಮಗಳ ಇತಿಮಿತಿಗಳನ್ನು ಕಂಡುಹಿಡಿಯುವುದು. ಆದರೂ, ಅಂತಿಮ ತೀರ್ಮಾನ ಕೈಗೊಳ್ಳುವಾಗ ಪ್ರಾಯೋಜಕರು, ಶಿಕ್ಷಕರು, ಸಹಭಾಗಿಗಳು, ಸಹಯೋಗ ನೀಡುವ ಸಂಸ್ಥೆಗಳು, ಹೆತ್ತವರು ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕೆಲವು ನಿರ್ದಿಷ್ಟ ಪ್ರಶ್ನೆಗಳಿಗೆ ಗಮನವನ್ನು ಹರಿಸಬೇಕಾಗುತ್ತದೆ. ಅವರಿಗೆ ವಿದ್ಯಾರ್ಥಿಗಳ ಸಾಧನೆ, ಶಿಕ್ಷಕರ ವೃತ್ತಿಪರ ನೈತಿಕತೆ, ಹೆತ್ತವರ ಧೋರಣೆಗಳು ಅಥವಾ ಕಾರ್ಯಕ್ರಮ ಆಡಳಿತದಾರರ ದಕ್ಷತೆಯ ಕುರಿತು ಕೆಲವು ನಿರ್ದಿಷ್ಟ ಮಾಹಿತಿ, ವ್ಯಾಖ್ಯಾನ ಮತ್ತು ಶಿಫಾರಸುಗಳ ಅಗತ್ಯವಿರಬಹುದು. ಅದೇನೇ ಇರಲಿ, ಮೌಲ್ಯಮಾಪನದ ಉದ್ದೇಶದ ಸ್ಪಷ್ಟತೆ ಮತ್ತು ಅಧ್ಯಯನದ ನಿರೀಕ್ಷಿತ ಫಲಿತಾಂಶಗಳು ಕಾರ್ಯಕ್ರಮ ಮೌಲ್ಯಮಾಪನಕ್ಕೆ ದಿಕ್ಕನ್ನು ಒದಗಿಸುತ್ತವೆ.

**ಮೌಲ್ಯಮಾಪನ ವಿಧಾನಕ್ರಮದ ಕಲ್ಪನೆ:**

ಪರಸ್ಪರ ಒಪ್ಪಂದಕ್ಕೆ ಬರುವ ಸಂದರ್ಭದಲ್ಲಿ ಎರಡೂ ಪಕ್ಷದವರಿಗೆ ಬಳಕೆಯಾಗುವ ವಿಧಾನಕ್ರಮದ ಸಮುಚಿತತೆಯ ಕುರಿತು ಕಲ್ಪನೆ ಇರಬೇಕು.ಬಳಸಬಹುದಾದ ಉತ್ತಮ ತಂತ್ರವನ್ನು ಗುರುತಿಸುವುದರಲ್ಲಿ ಮೌಲ್ಯಮಾಪಕರು ಹೆಚ್ಚು ಸಮರ್ಥರಾಗಿ ಇರುವವರಾದರೂ, ಪ್ರಾಯೋಜಕರು ಕೂಡ ಮುಂಚಿನ ಅಧ್ಯಯನಗಳಲ್ಲಿ ಪರಿಣಾಮಕಾರಿಯೆಂದು ಸಾಧಿತವಾಗಿರುವ ತಂತ್ರಗಳ ಬಗ್ಗೆ ಮಾಹಿತಿ ಒದಗಿಸಬಹುದು. ಹಿಂದೆ ವರ್ಣಿಸಲಾದ ಉಪಕ್ರಮಗಳ ಲಾಭವನ್ನು ಪಡೆಯಬಹುದು. ಅದನ್ನು ಗಣ್ಯ ಪತ್ರಿಕೆಗಾಗಿ ಉನ್ನತ ಶೈಲಿಯಲ್ಲಿ ಬರೆಯಬೇಕೆ ಅಥವಾ ಬಳಕೆ ಪ್ರೇಕ್ಷಕರನ್ನು ಗಮನದಲ್ಲಿಟ್ಟು ಸರಳವಾಗಿ ಗ್ರಹಿಸುವ ರೀತಿಯಲ್ಲಿ ಬರೆಯಬೇಕೆ ಎಂಬುದನ್ನು ಕುರಿತಂತೆ ವರದಿ ಮಾಡುವ ಕಲೆಯ ಬಗ್ಗೆ ನಿರ್ಧಾರವನ್ನು ಕೂಡ ತೆಗೆದುಕೊಳ್ಳಬಹುದು.

**ಪ್ರೇಕ್ಷಕರ ಮತ್ತು ಅವರ ಅಗತ್ಯಗಳ ಪರಿಗಣನೆ:**

ಫಲಿತಾಂಶಗಳ ಗ್ರಾಹಕರಿಗೂ ತಮ್ಮದೇ ಆದ ನಿರೀಕ್ಷೆಗಳು ಇರುತ್ತವೆ ಮತ್ತು ಮೌಲ್ಯಮಾಪಕರು ಅವರ ಅಗತ್ಯಗಳಿಗೆ ಅನುಗುಣವಾಗಿ ದತ್ತಾಂಶಗಳನ್ನು ಸಂಗ್ರಹಿಸಬೇಕಾಗುತ್ತದೆ. ಅವರು ತಮ್ಮ ವಿಶ್ವಾಸಾರ್ಹತೆಯ ಮಟ್ಟವನ್ನು ಕಾಯ್ದುಕೊಳ್ಳಲು ಅವಲೋಕನವನ್ನು ನಡೆಸಬೇಕು ಮತ್ತು ಪ್ರೇಕ್ಷಕರು ಗ್ರಹಿಸುವ ರೀತಿಯಲ್ಲಿ ವರದಿಯನ್ನು ಬರೆಯಬೇಕು. ಮೌಲ್ಯಮಾಪಕರ ಪ್ರೇಕ್ಷಕರೆಂದರೆ,ಅವರ ಸಂಶೋಧನಾ ಸಹೋದ್ಯೋಗಿಗಳು, ಹಿರಿಯ ಅಧಿಕಾರಿಗಳು ಮತ್ತು ಇತರ ವೃತ್ತಿಪರ ತಜ್ಞರು. ಇವರ ಗುರುತಿಸುವಿಕೆಯು ಮೌಲ್ಯಮಾಪಕರಿಗೆ ಅತ್ಯಂತ

Digitised by Bharatavani, CIIL

ಮುಖ್ಯವಾಗಿರುತ್ತದೆಂಬುದನ್ನು ಪ್ರಾಯೋಜಕರು ಗಣನೆಗೆ ತೆಗೆದುಕೊಳ್ಳಬೇಕು.

**ಸಾಕ್ಷ್ಯಾಧಾರಗಳ ಗೋಪ್ಯತೆ ಕಾಯ್ದಿಡುವಿಕೆ**

ಕೆಲವು ದತ್ತಾಂಶಗಳು, ಉದಾಹರಣೆಗೆ ಹೆತ್ತವರ ವರಮಾನ, ಶಿಕ್ಷಕರ ಗುಣಾಂಕಗಳು, ವಿದ್ಯಾರ್ಥಿಗಳ ದುರ್ವರ್ತನೆಯ ವರದಿಗಳು, ಕಂಪ್ಯೂಟರ್‌ನಲ್ಲಿ ಕಾಯ್ದಿಡಲಾದ ದತ್ತಾಂಶಗಳು, ಅಂಕಗಳ ಬಿಡುಗಡೆ ಇತ್ಯಾದಿಗಳು ವಿವಿಧ ಹಂತಗಳಲ್ಲಿ ಗೋಪ್ಯತೆಯನ್ನು ಬಯಸುತ್ತವೆ. ಅನಾನುಕೂಲಕರ ಫಲಿತಾಂಶಗಳು, ಅನಿರೀಕ್ಷಿತ ಪರಿಣಾಮಗಳು, ಅನುದ್ದೇಶಿತ ಉತ್ಪತ್ತಿಗಳು, ನೈತಿಕ ಕರ್ತವ್ಯ ಸಮಸ್ಯೆಗಳನ್ನು ಸೃಷ್ಟಿಸಬಹುದು. ಆದುದರಿಂದ, ಯಾವ ಮಾಹಿತಿಯನ್ನು ಗೋಪ್ಯವೆಂದು ಪರಿಗಣಿಸಬೇಕು ಎಂಬುದರ ನಿರ್ಧಾರಗಳನ್ನು ಮೌಲ್ಯಮಾಪಕರು ಮತ್ತು ಕಾರ್ಯಕ್ರಮದ ಆಯುಕ್ತರು ತಮ್ಮೊಳಗೆ ಖಚಿತಪಡಿಸಿಕೊಳ್ಳಬೇಕು. ಎಲ್ಲ ಪರಿಸ್ಥಿತಿಗಳನ್ನು ಮೊದಲೇ ತಿಳಿದುಕೊಳ್ಳುವುದು ಸಾಧ್ಯವಿಲ್ಲದಿದ್ದರೂ, ಎರಡೂ ಪಕ್ಷದವರು ಕಾರ್ಯಕ್ರಮದ ನಿಗಾ ವಹಿಸುವ ಸಂದರ್ಭದಲ್ಲಿ ಎಚ್ಚರದಿಂದ ಇದ್ದರೆ, ಅಗತ್ಯವಿದ್ದಲ್ಲಿ ಪರಸ್ಪರ ಒಪ್ಪಂದದ ಮೂಲಕ ಮೂಲ ಕರಾರಿನಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಬಹುದು.

ಮೊದಲೇ ಗಮನಕ್ಕೆ ಬಾರದ ಬದಲಾವಣೆಗಳು ಮತ್ತು ಅನಪೇಕ್ಷಿತ ಪರಿಣಾಮಗಳನ್ನು ಎದುರಿಸುವ ಸಲುವಾಗಿ ಉಪಕ್ರಮದಲ್ಲಿ ಒಪ್ಪಿಗೆಯ ನಿಬಂಧನೆಗಳಲ್ಲಿ ನಮ್ಯತೆ ಇರಬೇಕಾಗುತ್ತದೆ. ಇದು ಪ್ರಾಯೋಜಕರು ಮತ್ತು ಮೌಲ್ಯಮಾಪಕರ ನಡುವೆ ಸರಳ ಸಂಬಂಧಗಳು ಇರಲು ಅಗತ್ಯವಾಗುತ್ತವೆ ಮತ್ತು ಆ ನಿಯಮಿತ ಸಂಪರ್ಕ ಸಂವಹನಕ್ಕಾಗಿ ಮರುಪರಿಶೀಲನೆಯ ಸಹಾನುಭೂತಿ ಮತ್ತು ಸಮ್ಮತಿಯ ಅಗತ್ಯವಿದೆ. ಕರಾರಿನ ಸ್ಥಿರೀಕರಣಕ್ಕಾಗಿ ಕೆಲವೊಮ್ಮೆ ಶೈಕ್ಷಣಿಕ ಕಾರ್ಯಕ್ರಮದ ಮೌಲ್ಯಮಾಪನಕ್ಕೆ ತಾಳೆಪಟ್ಟಿಯನ್ನು ಸೂಚಿಸಲಾಗುತ್ತದೆ, ಆದರೆ ಈ ಕುರಿತು ಸಂಶೋಧಕರ ಅಭಿಪ್ರಾಯಗಳಲ್ಲಿ ಭಿನ್ನತೆ ಇದೆ.

**ಕಾರ್ಯಕ್ರಮಗಳ ನಿರಂತರ ನಿಗಾವಣೆ:**

ಅಂತಿಮವಾಗಿ ಕಾರ್ಯಕ್ರಮವು ಅನುಷ್ಠಾನಗೊಂಡು ನಡೆಯುತ್ತಿರುವಾಗ, ಅದು ಸರಿಯಾಗಿ ನಡೆಯುತ್ತಿರುವುದೇ ಮತ್ತು ನಿರೀಕ್ಷಿತ ರೀತಿಯಲ್ಲಿ ನಡೆಯುತ್ತಿರುವುದೇ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವಿದೆ. ಸಾಮಾನ್ಯವಾಗಿ ವಿನ್ಯಾಸಗೊಳಿಸಿದ ರೀತಿಯಲ್ಲಿಯೇ ಕಾರ್ಯಕ್ರಮ ಜಾರಿಗೊಂಡಿದೆ ಎಂದು ಊಹಿಸಿಕೊಳ್ಳಲಾಗುತ್ತದೆ, ಆದರೆ ಅದು ಯಾವಾಗಲೂ ಹಾಗೆ ಇರುವುದಿಲ್ಲ. ಕಾಲಾನುಕ್ರಮದಲ್ಲಿ ಕೆಲವು ಅನಿರೀಕ್ಷಿತ ಮತ್ತು ಅನುದ್ದೇಶಿತ ಪರಿಣಾಮಗಳು ಕಾಣಿಸಿಕೊಳ್ಳಬಹುದು. ಆದುದರಿಂದ ಕಾರ್ಯಕ್ರಮದ ನಿರಂತರ ನಿಗಾವಣೆ ಮತ್ತು ಪರೀಕ್ಷೆಯ ಅಗತ್ಯವಿದೆ. ಇದಕ್ಕಾಗಿ ಮೌಲ್ಯಮಾಪಕರು ಈ ಕೆಳಗಿನ ಪ್ರಶ್ನೆಗಳಿಗೆ ಸಂಬಂಧಿತ ಉತ್ತರಗಳನ್ನು ಕಂಡುಕೊಳ್ಳಬೇಕಾಗುತ್ತದೆ(ಬರ್ಕ್ ಮತ್ತು ರೊಸ್ಸಿ):

1. ಕಾರ್ಯಕ್ರಮವು ಉದ್ದೇಶಿತ ಫಲಾನುಭವಿಗಳನ್ನು ತಲುಪುತ್ತಿರುವುದೇ?
2. ಕಾರ್ಯಕ್ರಮವನ್ನು ಸೂಕ್ತರೀತಿಯಿಂದ ಜಾರಿಗೊಳಿಸಲಾಗುತ್ತಿದೆಯೇ?
3. ಸರಿಯಾದ ರೀತಿಯಲ್ಲಿ ಧನರಾಶಿ ಬಳಕೆಯಾಗುತ್ತಿದೆಯೇ?
4. ಪರಿಣಾಮಕಾರಿತ್ವವನ್ನು ಅಂದಾಜಿಸುವುದು ಸಾಧ್ಯವೆ? (ಮೌಲ್ಯಮಾಪಕತ್ವ)
5. ಕಾರ್ಯಕ್ರಮ ಸರಿಯಾಗಿ ನಡೆಯಿತೇ? (ಪರಿಣಾಮಕಾರಿತ್ವ)
6. ಕಾರ್ಯಕ್ರಮ ಮೌಲ್ಯಯುತವಾಗಿದೆಯೇ?(ವೆಚ್ಚಪರಿಣಾಕಾರಿತ್ವ)

**ಕಾರ್ಯಕ್ರಮ ಮೌಲ್ಯಮಾಪನಕ್ಕೆ ಪರ್ಯಾಯ ಉಪಕ್ರಮಗಳು**

ವರ್ದರ್ನ್ ಮತ್ತು ಸ್ಯಾಂಡರ್ಸ್ ಅವರು ಕಾರ್ಯಕ್ರಮ ಮೌಲ್ಯಮಾಪನಕ್ಕೆ ಅನೇಕ ಉಪಕ್ರಮಗಳನ್ನು ಕ್ರೋಢೀಕರಿಸಿದ್ದಾರೆ. ವರ್ದರ್ನರ ಪ್ರಕಾರ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ವ್ಯಾಪಕ ರೀತಿಯಿಂದ ನಡೆಸಲು ಕೆಲವು ಜನಪ್ರಿಯ ಉಪಕ್ರಮಗಳನ್ನು ವಿಭಿನ್ನ ಪರಿಕಲ್ಪನಾತ್ಮಕ ಚೌಕಟ್ಟುಗಳನ್ನು ಪ್ರತಿನಿಧಿಸುವ ಮಾದರಿಗಳನ್ನು ಐದು ವಿಭಾಗಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ಕೆಲವು ಪಠ್ಯಕ್ರಮದ ಮೌಲ್ಯಮಾಪನಕ್ಕೆ ವಿಶಿಷ್ಟವಾಗಿರುವ ಸಾಧ್ಯತೆ ಇದೆ.

**ನಿಷ್ಪಾದನೆ–ವಸ್ತುನಿಷ್ಠ ಸಮಂಜಸ ಉಪಕ್ರಮಗಳು:**

ಮೂಲತಃ ಶಾಲಾ ಕಾರ್ಯಕ್ರಮಗಳ ಶೈಕ್ಷಣಿಕ ಉದ್ದೇಶಗಳು ಎಲ್ಲಿಯವರೆಗೆ ಸಾಧಿತವಾಗಿವೆ ಎಂಬುದನ್ನು ನಿಷ್ಕರ್ಷಿಸಲು ಟೈಲರ್ ಕಾರ್ಯಕ್ರಮ ಮೌಲ್ಯಮಾಪನ ವಿಧಾನಗಳನ್ನು ಮೂಲತಃ ರೂಪಿಸಿದ್ದಾರೆ.ವರ್ತನಾತ್ಮಕವಾಗಿ ವ್ಯಾಖ್ಯಾನಿಸಲಾದ ಗುರಿಗಳ ಅಥವಾ ಉದ್ದೇಶಗಳ ನಿರೂಪಣೆ ಮತ್ತು ವಿದ್ಯಾರ್ಥಿಗಳ ಸೂಕ್ತ ವರ್ತನಾತ್ಮಕ ಉದ್ದೇಶಗಳ ಮಾಪನ. ಮೌಲ್ಯಮಾಪಕರ ಮಾದರಿ ಪರೀಕ್ಷೆಯ ವಿನ್ಯಾಸವು ಕಾರ್ಯಕ್ರಮಗಳ ಮೌಲ್ಯಮಾಪನಕ್ಕೆ ತಳಹದಿಯನ್ನು ಒದಗಿಸುತ್ತವೆ. ಇಲ್ಲಿ ಫಲಿತಾಂಶದ ಅಂಕಿಅಂಶಗಳನ್ನು ವರ್ತನಾ ಉದ್ದೇಶಗಳೊಂದಿಗೆ ಸೇರಿಸಿ ವಿದ್ಯಾರ್ಥಿಗಳ ಕಾರ್ಯಕ್ರಮವು ನಿರೀಕ್ಷಿತ ಅಥವಾ ಉದ್ದೇಶಿತದೊಂದಿಗೆ ಎಷ್ಟು ಹೊಂದಿಕೆಯನ್ನು(ಅನುರೂಪತೆಯನ್ನು) ಪಡೆದಿದೆ ಎನ್ನುವುದನ್ನು ತೀರ್ಮಾನಿಸಬಹುದು. ಕಾರ್ಯವೈಖರಿ ಮತ್ತು ಸೂಚಿತ ಉದ್ದೇಶದ ನಡುವಿನ ವ್ಯತ್ಯಾಸವು ಕಾರ್ಯಕ್ರಮದ ತಿದ್ದುಪಡಿಗೆ ಅವಕಾಶವನ್ನು ಒದಗಿಸುತ್ತದೆ. ಹ್ಯಾಮಂಡ್ಸ್ ಅವರ APIC ಮೌಲ್ಯಮಾಪನ ಮಾದರಿಯಲ್ಲಿ ಕಾರ್ಯಕ್ರಮ ವರ್ಣನೆಯೂ ಸೇರಿರುತ್ತದೆ. ಪ್ರೊವುಸ್ ಅವರ ಅಂತರಾತ್ಮಕ ಮಾದರಿಯು ಟೇಲರ್ ಮಾದರಿಯಂತಿದ್ದು ಕಾರ್ಯಕ್ರಮ ನಿಷ್ಪಾದನೆ ಮತ್ತು ಕಾರ್ಯಕ್ರಮ ಮಟ್ಟವು ಒಂದರ ಮಗ್ಗುಲಲ್ಲಿ ಇನ್ನೊಂದಾಗಿ ಇರುತ್ತದೆ. ಈ ಮಾದರಿಯಿಂದ ಪೋಫಮ್‌ರವರ ಬೋಧನಾತ್ಮಕ ಉದ್ದೇಶವುಳ್ಳ ಉಪಕ್ರಮವೂ ಸಹ ಹೊರಹೊಮ್ಮಿದೆ.

**ನಿರ್ಧಾರ ನಿರ್ವಹಣಾ ಉಪಕ್ರಮಗಳು:**

ಸಂದರ್ಭ ಮೌಲ್ಯಮಾಪನ, ಸಂಭಾರಗಳ ಮೌಲ್ಯಮಾಪನ, ಪ್ರಕ್ರಿಯೆ ಮತ್ತು ಉತ್ಪನ್ನದ ಮೌಲ್ಯಮಾಪನಕ್ಕೆ ಒತ್ತು ನೀಡುವ ಸ್ಟಫಲ್‌ಬೀಮ್ ಸಿಐಪಿಪಿ ಮಾದರಿಯು ಒಂದು ಉದಾಹರಣೆಯಾಗಿದೆ. ಅಲ್ಕಿನ್ಸ್

Digitised by Bharatavani, CIIL

ಮಾದರಿಯು ಇದೇ ರೀತಿಯದ್ದಾಗಿದ್ದರೂ, ಇದರಲ್ಲಿ ಪ್ರಕ್ರಿಯೆಯ ಮೌಲ್ಯಮಾಪನವನ್ನು ಕಾರ್ಯಕ್ರಮ ಜಾರಿಗೊಳಿಸುವಿಕೆ ಮತ್ತು ಕಾರ್ಯಕ್ರಮ ಸುಧಾರಣೆಯಾಗಿ ವಿಂಗಡಿಸಲಾಗಿದೆ. ಈ ಎರಡೂ ನಿರ್ಧಾರ–ಕೇಂದ್ರಿತ ಮಾದರಿಗಳಲ್ಲಿ ಗುರಿಗಳನ್ನು ರೂಪಿಸಲಾಗಿಲ್ಲ, ಆದರೆ ಕಾರ್ಯಕ್ರಮ ಆಯೋಜಕರು ಕಾರ್ಯಕ್ರಮದ ಕುರಿತಾದ ಆಧಾರಭೂತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೌಲ್ಯಮಾಪನವು ಸ್ಪಷ್ಟವಾಗಿ ಸಹಭಾಗಿ ಕಾರ್ಯವಾಗಿದ್ದು, ಮೌಲ್ಯಮಾಪಕರು ಮತ್ತು ನಿರ್ಧಾರ ಕೈಗೊಳ್ಳುವವರ ನಡುವಿನ ಉತ್ತಮ ತಂಡ ಕಾರ್ಯವನ್ನು ಅವಲಂಬಿಸಿ ಇರುತ್ತದೆ. ಈ ಉಪಕ್ರಮ ಕಾರ್ಯಕ್ರಮ ನಿರ್ವಾಹಕರಿಗೆ ಸರಿಯೆನಿಸಿದರೂ ಇತರರು ಇದನ್ನು ಅವಾಸ್ತವಿಕವೆಂದು ಕಾಣುವರು.

**ತೀರ್ಪು–ಕೇಂದ್ರಿತ ಅನುಸಂಧಾನಗಳು:**

ಮೌಲ್ಯಮಾಪನಕ್ಕೆ ತೀರ್ಪು ಅತ್ಯವಶ್ಯಕವೆಂದು ಸ್ಕ್ರೀವೆನ್ ಒತ್ತಿ ಹೇಳುತ್ತಾರೆ. ಕಾರ್ಯಕ್ರಮದ ಕುರಿತಾದ ತೀರ್ಪುಗಳಿಗೆ ಮಾರ್ಗದರ್ಶನ ನೀಡುವ ರೀತಿಯಲ್ಲಿ ಉಪಕ್ರಮವು ತಜ್ಞರ ವೃತ್ತಿಪರ ತಜ್ಞತೆಯನ್ನು ಆಧರಿಸಿರುತ್ತದೆ.ಮೌಲ್ಯಮಾಪಕನು ಕಾರ್ಯಕ್ರಮ ಮೌಲ್ಯಮಾಪನೆಗೆ ಮಾತ್ರವಲ್ಲದೆ ಇನ್ನೂ ಮುಂದುವರಿದು ಕಾರ್ಯಕ್ರಮದ ಗುರಿಗಳನ್ನೇ ಮೌಲ್ಯಮಾಪನ ಮಾಡಬಹುದೆಂದು ತಿಳಿಸುವ ಸ್ಕ್ರೀವನ್ ಮತ್ತೂ ಮುಂದುವರೆದು ಗುರಿಮುಕ್ತ ಮೌಲ್ಯಮಾಪನೆಯನ್ನು ಸೂಚಿಸಿದ್ದಾರೆ. ಕಾರ್ಯಕ್ರಮಗಳ ಕುರಿತಾದ ತೀರ್ಪುಗಳು ಕಾರ್ಯಕ್ರಮಗಳ ಉದ್ದೇಶಗಳಿಗಿಂತ, ಕಾರ್ಯಕ್ರಮಗಳ ಉದ್ದೇಶಿತ ಅಥವಾ ಅನುದ್ದೇಶಿತ ನೈಜ ಫಲಿತಾಂಶಗಳನ್ನು ಆಧರಿಸಿ ಇರಬೇಕಾಗುತ್ತದೆ. ಈ ಉಪಕ್ರಮವು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೀರ್ಪು ಮತ್ತು ಮಾನವ ಬುದ್ಧಿಶಕ್ತಿಯ ಪ್ರಮುಖ ಪಾತ್ರಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತದೆ.

**ಪ್ರತಿಕೂಲ ಉಪಕ್ರಮಗಳು:**

ಇದು ಬೇರೆ ಬೇರೆ ಮೌಲ್ಯಮಾಪನ ಆಚರಣೆಗಳ ಗುಂಪನ್ನು ಒಳಗೊಳ್ಳುತ್ತದೆ.ಇದರಲ್ಲಿ ವಿಭಿನ್ನ ಮೌಲ್ಯಮಾಪಕರು ಅಥವಾ ಮೌಲ್ಯಮಾಪನ ತಂಡಗಳ ದೃಷ್ಟಿಕೋನದಲ್ಲಿ ಯೋಜಿತ ವಿರೋಧವಿರುತ್ತದೆ. ಒಟ್ಟಾರೆ ಮೌಲ್ಯಮಾಪನದೊಳಗೆ ಅಭಿಪ್ರಾಯಗಳ ವಿರೋಧ ಅಂಶಗಳನ್ನು ಉತ್ಪಾದಿಸಲು ಯೋಜಿತ ಪ್ರಯತ್ನವನ್ನು ಪ್ರೋತ್ಸಾಹಿಸಲಾಗುವುದು. ಒಬ್ಬ ಮೌಲ್ಯಮಾಪಕ ಸಕಾರಾತ್ಮಕ ಅಂಶಗಳನ್ನು ಬೆಂಬಲಿಸಿದರೆ, ಮತ್ತೊಬ್ಬ ಮೌಲ್ಯಮಾಪಕ ಶಕ್ತಿ ಮತ್ತು ದುರ್ಬಲತೆಯನ್ನು ಹೊರಗೆಡುವ ಸಲುವಾಗಿ ನಕಾರಾತ್ಮಕ ಅಂಶಗಳೊಂದಿಗೆ ವಿರೋಧ ವ್ಯಕ್ತಪಡಿಸುತ್ತಾನೆ.

**ಬಹುತ್ವ–ಅಂತಃಸ್ಪೂರ್ತಿಯ ಉಪಕ್ರಮಗಳು:**

ಈ ಮಾದರಿಯನ್ನು ಅರ್ನೆಸ್ಟ್ ಹೌಸ್ ಬಳಸಿದ್ದಾನೆ. ಈ ಮಾದರಿಯಲ್ಲಿ ತೀರ್ಪು ಮತ್ತು ನಿರ್ಣಾಯಕ ಅಂಶಗಳ ಬಹುತ್ವವನ್ನು ಅಂತಃಸ್ಪೂರ್ತಿಯಿಂದ ಅಳೆಯುತ್ತಾ ಮತ್ತು ಸಮತೋಲನಗೊಳಿಸುತ್ತಾ ಮೌಲ್ಯಮಾಪಕನು ಕಾರ್ಯಕ್ರಮದಿಂದ ಉಪಯುಕ್ತತೆಯನ್ನು ಪಡೆಯುವ ಎಲ್ಲ ವ್ಯಕ್ತಿಗಳ ಮತ್ತು ಗುಂಪಿನ ವಿಭಿನ್ನ ಮೌಲ್ಯಗಳು ಮತ್ತು ಅಗತ್ಯವನ್ನು ಚಿತ್ರಿಸುತ್ತಾನೆ. ನಿರ್ಣಯಿಸುವವರು ಯಾರೇ ಆಗಿರಲಿ ಬಹುತೇಕ ಅವರ ಮೌಲ್ಯ ಮತ್ತು ಪರಿಪ್ರೇಕ್ಷ್ಯಗಳ ಮೂಲಕವೇ ಉತ್ತಮ ಕಾರ್ಯಕ್ರಮವು ನಿರ್ಧಾರಗೊಳ್ಳುತ್ತದೆ. ಸಾಮಾನ್ಯವಾಗಿ ನಿರ್ಣಯ ತೆಗೆದುಕೊಳ್ಳುವವರ ಮೌಲ್ಯ ಮತ್ತು ಪರಿಪ್ರೇಕ್ಷೆಗಳಿಂದ ಉತ್ತಮ ಕಾರ್ಯಕ್ರಮವು ನಿರ್ಧರಿಸಲ್ಪಡುತ್ತದೆ. ಸ್ಟೇಕ್‌ನ ಕಾರ್ಯಕ್ರಮ ಮೌಲ್ಯಮಾಪನವು ಮೌಲ್ಯ ಪರಿಪ್ರೇಕ್ಷ್ಯೆಯ ದೃಷ್ಟಿಯ ಕುರಿತಾದ ಪ್ರೇಕ್ಷಕರ ಕಾಳಜಿಗೆ ಪ್ರತಿಕ್ರಿಯಿಸುತ್ತದೆ. ಹ್ಯಾಮಿಲ್ಟನ್ ಮತ್ತು ಪಾರ್ಲೆಟ್‌ರು ಸಮಾಜೋ– ಮಾನವಶಾಸ್ತ್ರೀಯ ಪರಿಕಲ್ಪನಾ ಚೌಕಟ್ಟು ಮತ್ತು ಸಹಭಾಗಿ ನಿರೀಕ್ಷಕರ ಸಂಶೋಧನೆಯ ಮೇಲೆ ಆಧರಿಸಿ ಇರುತ್ತದೆ. ರಿಪ್ಪೆಯವರು ಕಾರ್ಯಕ್ರಮ ನಿರ್ವಾಹಕರ ಮೇಲೆ ಕಾರ್ಯಕ್ರಮದ ಪ್ರಭಾವ ಏನೆಂಬುದರ ಮೇಲೆ ಗಮನವನ್ನು ಕೇಂದ್ರೀಕೃತಗೊಳಿಸುತ್ತಾರೆ ಮತ್ತು ಮೌಲ್ಯಮಾಪನವನ್ನು ಬಿಕ್ಕಟ್ಟಿನ ನಿರ್ವಹಣೆಯ ಕಾರ್ಯತಂತ್ರವಾಗಿ ಕೌಶಲವಾಗಿ ಕಾಣುತ್ತಾರೆ. ಡೊನಾಲ್ಡ್‌ರವರು ತಿಳಿದುಕೊಳ್ಳಲು ಇರುವ ಮೌಲ್ಯಮಾಪನವನ್ನು ರಾಜಕೀಯ ಚಟುವಟಿಕೆಯ ಹಕ್ಕು ಎಂದು ಕಾಣುತ್ತಾರೆ.

**ಕಾರ್ಯಕ್ರಮ ಮೌಲ್ಯಮಾಪನದ ಚೌಕಟ್ಟು:**

ಶೈಕ್ಷಣಿಕ ಮೌಲ್ಯಮಾಪನವೆಂದರೆ ಕಾರ್ಯಕ್ರಮವೊಂದು ಜಾರಿಗೆ ಬಂದ ಬಳಿಕ ಅದರ ಯೋಜಿತ ಉದ್ದೇಶಗಳ ಯಶಸ್ಸು ಅಥವಾ ಸೋಲನ್ನು ಅಳೆಯುವ ಅಭ್ಯಾಸವಾಗಿರುತ್ತದೆ. ಇದನ್ನು ಕಾರ್ಯಕ್ರಮ ಜಾರಿಗೆ ಬರುವ ಮೊದಲು ಅಥವಾ ಜಾರಿಯಲ್ಲಿದ್ದಾಗ ಅನುಸರಿಸಲಾಗುವುದಿಲ್ಲ. (ಚಿನ್ನಪಾ ಮತ್ತು ಫೇಗರ್‌ಲಿಂಡ್, 1986). ಈ ರೀತಿಯದನ್ನು ಸಾಮಾನ್ಯವಾಗಿ ಉತ್ಪನ್ನ ಅಥವಾ ಮೌಲ್ಯಮಾಪನದ ಫಲಿತಾಂಶವೆಂದು ಕರೆಯಲಾಗುತ್ತದೆ. ಇದರಿಂದ ಕಾರ್ಯಕ್ರಮದ ವೆಚ್ಚಪರಿಣಾಮಕಾರಿತ್ವವನ್ನು ಮತ್ತು ಪರಿಣಾಮವನ್ನು ಕೂಡ ನಿರ್ಧರಿಸಬಹುದು. ಇದು ಕಾರ್ಯಕ್ರಮದ ಬೆಳವಣಿಗೆ ಮತ್ತು ಅನುಷ್ಠಾನದೊಂದಿಗೆ ಮುಂದುವರಿಯುವ ಚಟುವಟಿಕೆಯಾಗಿರಬಹುದು ಅಥವಾ ಇದು ಫಲಿತಾಂಶವನ್ನು ಮೌಲ್ಯಮಾಪನ ಮಾಡುವುದಕ್ಕಾಗಿ ಇರಬಹುದು ಅಥವಾ ಉತ್ಪಾದನೆಯ ಇಲ್ಲವೆ ಪರಣಾಮಗಳ ಮೌಲ್ಯಮಾಪನ ಮಾತ್ರವಾಗಿರಬಹುದು.

ಮೌಲ್ಯಮಾಪನವು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾತ್ರವನ್ನು ನಿರ್ವಹಿಸುವುದರಿಂದ ಇದನ್ನು ರಾಜಕೀಯ ಚಟುವಟಿಕೆಯಾಗಿಯೂ ಪರಿಗಣಿಸಲಾಗುತ್ತದೆ. ಇದರಿಂದಾಗಿ, ಮೌಲ್ಯಮಾಪನವು ನಿರ್ಣಯ ಕೈಗೊಳ್ಳುವವರಿಗೆ ಕಾರ್ಯಕ್ರಮದ ಆಯೋಜನೆ, ಯೋಜನೆಗಳ ವಿನ್ಯಾಸ ಮತ್ತು ಅನುಷ್ಠಾನ, ಯೋಜನೆಯನ್ನು ಮುಂದುವರಿಸಬೇಕೇ, ವಿಸ್ತರಿಸಿಕೊಳ್ಳಬೇಕೇ ಅಥವಾ ಕೈಬಿಡಬೇಕೆ ಎನ್ನುವುದರಲ್ಲಿ ನೆರವಾಗುತ್ತದೆ. ರೊಸ್ಸಿಯು(1982) ಮೌಲ್ಯಮಾಪನದ ಸಂಶೋಧನೆಯನ್ನು ಹೀಗೆ ಸ್ಪಷ್ಟೀಕರಿಸುತ್ತಾರೆ:

1. ಮಧ್ಯಸ್ಥಿಕೆ ಪರಿಕಲ್ಪನೆ ಮತ್ತು ವಿನ್ಯಾಸಗಳಿಗೆ ಸಂಬಂಧಿಸಿದ ವಿಶ್ಲೇಷಣೆ,

Digitised by Bharatavani, CIIL

2. ಕಾರ್ಯಕ್ರಮ ಅನುಷ್ಠಾನದ ಮೇಲ್ವಿಚಾರಣೆ, ಮತ್ತು

3. ಕಾರ್ಯಕ್ರಮದ ಮೌಲ್ಯಮಾಪನ

ಕಾರ್ಯಕ್ರಮದ ಒಳಗಿರುವವರಿಂದ ನಡೆಯುವ ಕಾರ್ಯಕ್ರಮ ಮೌಲ್ಯಮಾಪನವು ಹೊರಗಿನವರ ಮೌಲ್ಯಮಾಪನಕ್ಕೆ ವಿರುದ್ಧವಾಗಿ ತನ್ನದೇ ಆದ ಲಾಭಗಳನ್ನು ಮತ್ತು ಮಿತಿಗಳನ್ನು ಹೊಂದಿರುತ್ತದೆ. ಇದು ಪೂರ್ವಗ್ರಹ ಪೀಡಿತವಾಗಿರುತ್ತದೆ ಅಥವಾ ವಸ್ತುನಿಷ್ಠವಾಗಿರುವುದಿಲ್ಲ.

**ಕಾರ್ಯಕ್ರಮ ಮೌಲ್ಯಮಾಪನದ ವಿಧಗಳು:**

ಚಿನ್ನಪಾ ಮತ್ತು ಮಿರೋನ್(1990) ಕಾರ್ಯಕ್ರಮ ಮೌಲ್ಯಮಾಪನದಲ್ಲಿ ಮೂರು ವಿಧಗಳನ್ನು ಗುರುತಿಸುತ್ತಾರೆ: ಪ್ರಕ್ರಿಯೆಯ ಮೌಲ್ಯಮಾಪನ, ಪರಿಣಾಮ ಮೌಲ್ಯಮಾಪನ ಮತ್ತು ಸಮಗ್ರ ಮೌಲ್ಯಮಾಪನ. ಒದಗಿಸಲಾದ ಮಾರ್ಗದರ್ಶಕ ಸೂತ್ರಗಳಿಗೆ ಅಥವಾ ಉದ್ದೇಶಿತ ವಿಧಾನಕ್ಕೆ ಅನುಸಾರವಾಗಿ ಕಾರ್ಯಕ್ರಮ ಅಥವಾ ಮಧ್ಯಸ್ಥಿಕೆಗಳನ್ನು ಸರಿಯಾದ ರೀತಿಯಿಂದ ಅನುಷ್ಠಾನಕ್ಕೆ ತರಲಾಗಿದೆಯೇ ಎಂಬುದನ್ನು ನಿರ್ಣಯಿಸಲು ಕೈಗೊಂಡಿರುವುದಾದರೆ ಅದು ಕಾರ್ಯವಿಧಾನ ಮೌಲ್ಯಮಾಪನವಾಗಿರುತ್ತದೆ. ಇದನ್ನು ಸಾಮಾನ್ಯವಾಗಿ ರೂಪಣಾತ್ಮಕ ಮೌಲ್ಯಮಾಪನವೆಂದು ಕರೆಯಲಾಗುತ್ತದೆ. ಮೌಲ್ಯಮಾಪನವನ್ನು ಉದ್ದೇಶಿತ ತೀರ್ಮಾನಗಳು ಅಥವಾ ಫಲಿತಾಂಶಗಳ ಕುರಿತಾಗಿ ಕಾರ್ಯಕ್ರಮದ ಪ್ರಭಾವವನ್ನು ತಿಳಿದುಕೊಳ್ಳುವ ಸಲುವಾಗಿ ಮೌಲ್ಯಮಾಪನವನ್ನು ವಿನ್ಯಾಸಗೊಳಿಸಿದ್ದಾದರೆ ಅದು ಪರಿಣಾಮ ಮೌಲ್ಯಮಾಪನವಾಗುತ್ತದೆ. ಇದನ್ನು ಸಾಮಾನ್ಯವಾಗಿ ಫಲಿತಾಂಶ ಅಥವಾ ಸಂಕಲಿತ ಮೌಲ್ಯಮಾಪನವೆಂದು ಕರೆಯಲಾಗುತ್ತದೆ. ಈ ಎರಡೂ ವಿಧಗಳನ್ನು ಸಂಯೋಜಿಸಿದಾಗ ಮತ್ತು ಕಾರ್ಯಕ್ರಮ ಮೌಲ್ಯಮಾಪನದಲ್ಲಿ ಸೇರಿಸಿದಾಗ ಇದನ್ನು ಸಮಗ್ರ ಮೌಲ್ಯಮಾಪನವೆಂದು ಕರೆಯಲಾಗುತ್ತದೆ. ಆದುದರಿಂದ ಪ್ರಕ್ರಿಯೆಯ ಮೌಲ್ಯಮಾಪನವು ಕಾರ್ಯಕ್ರಮದ ಅನುಷ್ಠಾನದ ಸಂದರ್ಭದಲ್ಲಿನ ಬದಲಾವಣೆಗಳು, ಕೊರತೆಗಳು, ಶಕ್ತಿಗಳು ಮತ್ತು ಇತರ ಪ್ರಭಾವಗಳು ಅಥವಾ ನಿರೀಕ್ಷಿಸದ ಸಮಸ್ಯೆಗಳ ಕುರಿತು ಮಾಹಿತಿಯನ್ನು ಒದಗಿಸುವ ಗುರಿಯನ್ನು ಹೊಂದಿರುತ್ತದೆ.

ಸಾಮಾನ್ಯವಾಗಿ ಫಲಿತಾಂಶ ಅಥವಾ ಸಂಕಲಿತ ಮೌಲ್ಯಮಾಪನವೆಂದೂ ಕರೆಯಲ್ಪಡುವ ಪರಿಣಾಮ ಮೌಲ್ಯಮಾಪನವು ನಿರ್ಣಾಯಕ ಅಂಶಗಳನ್ನು ಅಥವಾ ಸಫಲತೆಯ ಸೂಚಕಗಳಂತಿರುವ ಎಷ್ಟರ ಮಟ್ಟಿಗೆ ಉದ್ದೇಶಿತ ಬದಲಾವಣೆಗಳು ಅಥವಾ ಕಾರ್ಯಕ್ರಮದ ಉದ್ದೇಶಗಳು ಸಾಧಿತವಾಗಿವೆ ಎಂಬುದನ್ನು ಅಳೆಯುವುದನ್ನು ಕುರಿತದ್ದಾಗಿದೆ. ಇದು ಕಾರ್ಯಕ್ರಮದ ಜಾರಿಗೊಳ್ಳುವಿಕೆಯ ಮೌಲ್ಯಮಾಪನವನ್ನು ನಡೆಸಲೇಬೇಕು ಎಂದಿಲ್ಲ. ಈ ರೀತಿಯ ಮೌಲ್ಯಮಾಪನವು ಕಾರ್ಯಕ್ರಮದ ಪರಿಣಾಮವನ್ನು ತೀರ್ಮಾನಿಸುವ ಸಲುವಾಗಿ ಗುಣಮಟ್ಟದ ಮತ್ತು ಪ್ರಮಾಣದ ದತ್ತಾಂಶಗಳನ್ನು ಸಮರ್ಥಿಸುತ್ತದೆ. ಪರಿಣಾಮ ಮೌಲ್ಯಮಾಪನವು ಸಾಮಾನ್ಯವಾಗಿ ಕೆಲವು ಮುಖ್ಯ ಬದಲಾವಣೆಗಳಿಗೆ ಅವಕಾಶ ನೀಡಬಹುದಾದ ವಾಸ್ತವಾಂಶಗಳ ಕುರಿತು ಕಾಳಜಿಯನ್ನು ಹೊಂದಿರುತ್ತದೆ. ಈ ವಾಸ್ತವಾಂಶಗಳು ಕಾರ್ಯಕ್ರಮಕ್ಕೆ ಬಾಹ್ಯದ್ದಾಗಿರುತ್ತವೆ.ಸಹಪರಿಣಾಮಗಳು ಅನುದ್ದೇಶಿತ ಪರಿಣಾಮಗಳಾಗಿವೆ. ಸಮಗ್ರ ಉಪಕ್ರಮದ ವಿಷಯದಲ್ಲಿ ಪ್ರಕ್ರಿಯೆ ಮತ್ತು ಮೌಲ್ಯಮಾಪನ ಉತ್ಪನ್ನ- ಇವೆರಡೂ ಪರಸ್ಪರ ಪೂರಕವಾಗಿದ್ದು ಒಂದು ಮತ್ತೊಂದನ್ನು ಬೆಂಬಲಿಸುತ್ತದೆ.ಪ್ರಮಾಣ ಅಥವಾ ನಿರ್ದಿಷ್ಟವಾಗಿ ಉದ್ದೇಶಿತವಾಗಿರುವ ಕಾರ್ಯಕ್ರಮ ಉದ್ದೇಶಗಳನ್ನು ಆಧರಿಸಿ ತೀರ್ಮಾನಕ್ಕೆ ಬರುವುದು ಸಾಕಾಗುವುದಿಲ್ಲ. ಯಾಕೆಂದರೆ ಹೊಸ ಉದ್ದೇಶಗಳು ಅನುದ್ದೇಶಿತ ಪರಿಣಾಮಗಳ ರೂಪದಲ್ಲಿ ಕಾಣಿಸಿಕೊಳ್ಳಬಹುದು ಅಥವಾ ಜಾರಿಗೆ ಬರುವ ಹಂತದಲ್ಲಿ ಸಹ ಪರಿಣಾಮಗಳು ಕಾಣಿಸಿಕೊಳ್ಳಬಹುದು.

ವಿನ್ಯಾಸಕಾರರಿಗೆ, ಪ್ರವರ್ತಕರಿಗೆ ಮತ್ತು ಪ್ರಕ್ರಿಯೆಯ ಮೌಲ್ಯಮಾಪಕರಿಗೆ ಕಾರ್ಯಕ್ರಮದ ಬೆಳವಣಿಗೆ ಮತ್ತು ನಿರ್ವಹಣೆಯಲ್ಲಿ ನಿಗಾ ವಹಿಸುವ ಅಗತ್ಯವಿರುತ್ತದೆ. ಅನುಷ್ಠಾನದ ಪ್ರಕ್ರಿಯೆಗೆ ಅಡಚಣೆ ಒಡ್ಡಬಹುದಾದ ಕೆಲವು ಆಂತರಿಕ ಮತ್ತು ಬಾಹ್ಯ ವಾಸ್ತವಾಂಶಗಳ ಕಾರಣದಿಂದ ಕಾರ್ಯಕ್ರಮದ ವಿನ್ಯಾಸ ಮತ್ತು ಅದರ ಅನುಷ್ಠಾನಗಳ ನಡುವೆ ಕಾಣಿಸಿಕೊಳ್ಳಬಹುದಾದ ಭಿನ್ನತೆಗಳು ಮತ್ತು ಸಮಸ್ಯೆಗಳ ಕುರಿತು ಮರುಮಾಹಿತಿಯನ್ನು ನೀಡಲು ಇದರ ಅಗತ್ಯವಿರುತ್ತದೆ. ನಿಯಮಿತ ನಿಗಾವಣೆ (Monitoring) ಮೂಲಕ ಮಾತ್ರವೇ ಸಿಬ್ಬಂದಿಗಳಿಗೆ ಪ್ರಯೋಗಾತ್ಮಕ ಮರುಮಾಹಿತಿ ಸಾಧ್ಯವಾಗುವುದು. ವಾಸ್ತವದಲ್ಲಿ ನಿಗಾ ವಹಿಸುವಿಕೆಯು ಕಟ್ಟಿಬೆಳೆಸಲಾದ ಮೌಲ್ಯಮಾಪನ ವ್ಯವಸ್ಥೆಗೆ ಪೂರಕವಾಗಿ ಮತ್ತು ಸಹಾಯಕವಾಗಿ ಇರುತ್ತದೆ. (ಚಿನಪಾ ಮತ್ತು ಫೇಜರ್‌ಲಿಂಡ್, 1986) ಸೂಕ್ತ ವಿಧದ ಕಾರ್ಯಕ್ರಮ ನಿಗಾವಹಿಸುವಿಕೆಯು ಕಟ್ಟಿಬೆಳೆಸಲಾದ ವ್ಯವಸ್ಥೆಗಳಿಂದ ಸೂಕ್ತ ರೀತಿಯ ಮರುಮಾಹಿತಿಯನ್ನು ಚಿತ್ರಿಸುತ್ತದೆ. ಈ ವ್ಯವಸ್ಥೆಯಲ್ಲಿ ಯೋಜನಾ ಕಾರ್ಯ, ವಿನ್ಯಾಸಗೊಳಿಸುವಿಕೆ, ಸಮ್ಮತಿ, ಅನುಷ್ಠಾನ, ಜಾರಿಗೊಳಿಸುವಿಕೆ ಮತ್ತು ಮೌಲ್ಯಮಾಪನ ಹಂತಗಳನ್ನು ವಿಮರ್ಶಾತ್ಮಕವಾಗಿ ವಿಮರ್ಶಿಸಲಾಗುತ್ತದೆ. ಹೀಗೆ, ನಿರ್ವಹಣಾ ಕಾರ್ಯತಂತ್ರಗಳ ತಿದ್ದುಪಡಿ ಕ್ರಮಗಳು ಮತ್ತು ಮರು-ಹೊಂದಾಣಿಕೆಗಾಗಿ ನಿಗಾ ವಹಿಸುವಿಕೆಯು ಸಾಮಾನ್ಯವಾಗಿ ಸೂಚಿತ ಕಾರ್ಯಕ್ರಮವನ್ನು ಮುಂಚೂಣಿಯ ಅನುಷ್ಠಾನಗೊಳಿಸುವವರಲ್ಲಿ ಪ್ರಮುಖರಾದವರನ್ನು ಕುರಿತು ಕಾಳಜಿಯನ್ನು ಹೊಂದಿರುತ್ತದೆ.

**ಕಾರ್ಯಕ್ರಮ ಮೌಲ್ಯಮಾಪನಕ್ಕಾಗಿ ಬಳಸಬಹುದಾದ ಸಲಕರಣೆಗಳು ಮತ್ತು ತಂತ್ರಜ್ಞಾನಗಳು:**

ಕಾರ್ಯಕ್ರಮವೊಂದರ ಮೌಲ್ಯಮಾಪನವನ್ನು ನಡೆಸಲು ಪರೀಕ್ಷೆ, ಅವಲೋಕನ, ಪರಿಶೀಲನೆ ಮತ್ತು ವಿಶ್ಲೇಷಣೆಯ ಎಲ್ಲಾ ನಾಲ್ಕು ಮೂಲಭೂತ ತಂತ್ರಜ್ಞಾನಗಳು ಉಪಯುಕ್ತವಿರುತ್ತವೆ. ಆದುದರಿಂದ ಪ್ರತಿಯೊಂದು ತಂತ್ರಜ್ಞಾನದ ಅಡಿಯಲ್ಲಿರುವ ವಿವಿಧ ಸಲಕರಣೆಗಳನ್ನು ಉಪಯೋಗಿಸಿಕೊಳ್ಳಬಹುದು. ಉದಾಹರಣೆಗೆ ಮಾದರಿ ಸಮೀಕ್ಷೆ, ಪ್ರಕರಣಗಳ ಪರೀಕ್ಷೆಗಳು, ಅವಲೋಕನ ಅನುಸೂಚನೆ, ಅಭಿಪ್ರಾಯಗಳ ಪಟ್ಟಿಗಳು, ಪ್ರಶ್ನಾವಳಿಗಳು, ಸಂದರ್ಶನದ ವೇಳಾಪಟ್ಟಿ, ಶ್ರೇಣಿಮಾಪಕಗಳು, ತಾಳೆಪಟ್ಟಿಗಳು,

Digitised by Bharatavani, CIIL

ಕೇಂದ್ರಿತ ಚರ್ಚೆಗಳು ಇತ್ಯಾದಿ. ನಿರ್ದಿಷ್ಟ ಸಂದರ್ಭವೊಂದರಲ್ಲಿ ಯಾವ ವಿಚಾರಗಳ ಕುರಿತು ಮೌಲ್ಯಮಾಪನ ನಡೆಯುತ್ತಿದೆ ಮತ್ತು ಯಾವ ಕಾರಣಕ್ಕಾಗಿ ಎನ್ನುವುದನ್ನು ಆಧರಿಸಿ ಕಾರ್ಯಕ್ರಮದ ಮೊದಲು, ಅದು ನಡೆಯುತ್ತಿರುವಾಗ ಅಥವಾ ಅದು ಸಂಪೂರ್ಣಗೊಂಡ ಬಳಿಕ ಕಾರ್ಯಕ್ರಮದ ಮೌಲ್ಯಮಾಪಕರು ಸಾಕ್ಷ್ಯಗಳನ್ನು ಸಂಗ್ರಹಿಸುವುದಕ್ಕಾಗಿ ಒಂದು ಅಥವಾ ಹೆಚ್ಚು ಉಪಕರಣಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಈ ಉಪಕರಣಗಳು ಮತ್ತು ತಂತ್ರಜ್ಞಾನಗಳಲ್ಲಿ ಪ್ರತಿಯೊಂದಕ್ಕೂ ಅದರದೇ ಆದ ಸ್ವಂತ ಮಿತಿಗಳು ಇರುತ್ತವೆ, ಮತ್ತು ತೀರ್ಮಾನ ಕೈಗೊಳ್ಳುವ ಮತ್ತು ನಿರ್ಧಾರ ತೆಗೆದುಕೊಳ್ಳುವ ದೃಷ್ಟಿಯಿಂದ ಸಮಂಜಸವಾದ, ಪೂರಕವಾದ ಮತ್ತು ಆಧಾರವಾಗಿ ಪರಿಗಣಿಸಬಹುದಾದ ದತ್ತಾಂಶಗಳನ್ನು ಸಂಗ್ರಹಿಸುವ ಸಂಭಾವ್ಯತೆಯನ್ನು ಹೊಂದಿರುತ್ತದೆ.

ಮಾದರಿ ಸಮೀಕ್ಷೆಯು PMOST ಅಥವಾ DPEPಗಳಂತಹ ದೊಡ್ಡ ಪ್ರಮಾಣದ ಕಾರ್ಯಕ್ರಮಗಳ ಮೌಲ್ಯಮಾಪನದಲ್ಲಿ ಉಪಯೋಗಕ್ಕೆ ಬರುತ್ತದೆ. ಪ್ರಕರಣ ಅಧ್ಯಯನವನ್ನು ವೈಯಕ್ತಿಕ ಪ್ರಕರಣಗಳಲ್ಲಿ ಉಪಯೋಗಿಸಬಹುದು. ಉದಾಹರಣೆಗೆ ನಿರ್ದಿಷ್ಟ ಶಾಲೆಗಳ ಆಂತರಿಕ ಸೇವಾ ತರಬೇತಿ ಕಾರ್ಯಕ್ರಮದಲ್ಲಿ. ವಿದ್ಯಾರ್ಥಿಗಳ ಗ್ರಹಿಕಾ ಸಿದ್ಧಿಗಳು, ಕಾರ್ಯಕ್ರಮದ ಪರಿಣಾಮ, ಜಾರಿಗೊಳಿಸುವ ಕಾರ್ಯತಂತ್ರ ಅಥವಾ ಫಲಿತಾಂಶಗಳ ಕುರಿತು ಮರುಮಾಹಿತಿಯನ್ನು ಪಡೆಯಲು ಶಿಕ್ಷಕರು, ತಜ್ಞರು ಅಥವಾ ಭಾಗವಹಿಸುವವರ ಅಭಿಪ್ರಾಯಗಳು, ದೃಷ್ಟಿಕೋನ ಮತ್ತು ಪ್ರತಿಕ್ರಿಯೆಗಳನ್ನು ಸಂಗ್ರಹಿಸುವ ಪ್ರಶ್ನಾವಳಿಗಳು ಮತ್ತು ಅಭಿಪ್ರಾಯಗಳು– ಇವುಗಳ ಮೇಲೆ ಕಾರ್ಯಕ್ರಮದ ಪ್ರಭಾವದ ಮೌಲ್ಯಮಾಪನಕ್ಕಾಗಿ ಪರೀಕ್ಷೆ ನಡೆಸುವುದು ಒಳ್ಳೆಯದು. ಕಾರ್ಯಕ್ರಮದ ಗುಣಾತ್ಮಕ ಅಂಶಗಳ ಕುರಿತು ಭಾಗವಹಿಸುವವರನ್ನು ಅಳೆಯಲು ಮತ್ತು ಹೋಲಿಸಲು ಗುಣಾಂಕಿತ ಮಾಪಕಗಳು ಸೂಕ್ತವಾಗಿವೆ; ಆರೋಗ್ಯ ಅಭ್ಯಾಸಗಳು, ಕೆಲಸದ ಅಭ್ಯಾಸಗಳಂತಹ ಫಲಿತಾಂಶಗಳ ಮೌಲ್ಯನಿರ್ಧಾರಕ್ಕೆ ತಾಳೆಪಟ್ಟಿಗಳು ಸೂಕ್ತವಾಗಿವೆ. ಇಲ್ಲಿ ಫಲಿತಾಂಶಗಳನ್ನು ಹೌದು–ಇಲ್ಲ, ಒಪ್ಪಿಗೆ ಇದೆ–ಒಪ್ಪಿಗೆ ಇಲ್ಲ ಅಥವಾ ಕೇವಲ ಎರಡೇ ಪರ್ಯಾಯಗಳನ್ನು ಒಳಗೊಂಡಂತೆ ಅಳೆಯಲಾಗುತ್ತದೆ; ಅವಲೋಕನಗಳನ್ನು ದಾಖಲಿಸಲು ಅವಲೋಕನದ ವೇಳಾಪಟ್ಟಿ; ವಿವರಣಾತ್ಮಕವಾದ ತೀರಾ ವೈಯಕ್ತಿಕ ಅಭಿಪ್ರಾಯಗಳನ್ನು ಮುಖತಃ ಪಡೆಯಲು ಸಂದರ್ಶನದ ವೇಳಾಪಟ್ಟಿ ಮತ್ತು ಪ್ರಶ್ನಾವಳಿಗಳು ಬೇಕಾಗುತ್ತವೆ. ಅಗತ್ಯವಿರುವ ಮಾಹಿತಿಯನ್ನು ಉತ್ಪಾದಿಸದೇ ಇದ್ದ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಬಳಕೆಯಾಗಿರುವ ಸಂಭಾರಗಳು ಮತ್ತು ಪ್ರಕ್ರಿಯೆಯ ಪ್ರಸ್ತುತತೆ ಮತ್ತು ಸೂಕ್ತತೆಯ ಕುರಿತು ಭಾಗವಹಿಸುವವರ ಪ್ರತಿಕ್ರಿಯೆಗಳಿಗೆ ಕೇಂದ್ರೀಕರಿಸಲಾದ ಚರ್ಚೆಗಳು ಅಗತ್ಯವಾಗುತ್ತವೆ.

ಕೆಲವೊಮ್ಮೆ ಸೂಕ್ತ ತೀರ್ಮಾನಗಳನ್ನು ರೂಪಿಸಲು ಸಂಗ್ರಹಿಸಲಾದ ನಿದರ್ಶನಗಳೊಂದಿಗೆ ಒಂದಕ್ಕಿಂತ ಹೆಚ್ಚು ಮೂಲಗಳಿಂದ ಸಂಗ್ರಹಿಸಲಾದ ನಿದರ್ಶನಗಳನ್ನು ಪೂರಕವಾಗಿ ಬಳಸಿಕೊಳ್ಳಬೇಕಾಗುತ್ತದೆ. ಸೂಚಿತ ಸಂದರ್ಭದಲ್ಲಿ ಕಾರ್ಯಕ್ರಮದ ಪ್ರಗತಿಯ ನಿರ್ದಿಷ್ಟ ಹಂತವೊಂದರಲ್ಲಿ ಸಂಗ್ರಹಿಸಬೇಕಾದ ನಿದರ್ಶನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶದ ಕುರಿತು ಕಾರ್ಯಕ್ರಮದ ಮೌಲ್ಯಮಾಪಕರಿಗೆ ಅರಿವು ಇದ್ದಾಗ ಮಾತ್ರ ಮೌಲ್ಯಮಾಪನದ ವಿವಿಧ ಸಾಧನಗಳ ಪಾತ್ರವನ್ನು ಉತ್ತಮ ರೀತಿಯಿಂದ ಮನಗಾಣುವುದು ಸಾಧ್ಯವಿದೆ.

**ಸೂಚಿತ ಸಮಗ್ರ ಮಾದರಿ:**

ದೊಡ್ಡ ಪ್ರಮಾಣದ ಯೋಜನೆಗಳ ನಡುವೆ ಸ್ಪಷ್ಟ ವ್ಯತ್ಯಾಸವನ್ನು ಕಂಡುಕೊಳ್ಳುವುದು ಕಷ್ಟ. ಅಂತಹ ಎರಡು ಯೋಜನೆಗಳೆಂದರೆ ಇಲ್ಲಿ ಪಠ್ಯಕ್ರಮ ಜಾರಿಗೆ ಬಂದು ಐದು ವರ್ಷಗಳು ಕಳೆದ ಬಳಿಕ ಅದನ್ನು ನವೀಕರಿಸುವುದರ ಕಡೆಗೆ ಗಮನ ಹರಿಸುವ ರಾಜ್ಯವೊಂದರ ಪಠ್ಯಕ್ರಮದ ಮೌಲ್ಯಮಾಪನಾ ಯೋಜನೆ. ಮತ್ತೊಂದು, ಸಮಾನಾಂತರ ದೊಡ್ಡ ಪ್ರಮಾಣದ ಯೋಜನೆಯಾದ ಭಾರತದ ಬೇರೆ ಬೇರೆ ಪರೀಕ್ಷಾ ಮಂಡಳಿಗಳು ಕೈಗೊಳ್ಳುವ ಪರೀಕ್ಷಾ ಸುಧಾರಣಾ ಕಾರ್ಯಕ್ರಮದ ಮೌಲ್ಯಮಾಪನದ ಕಾರ್ಯಕ್ರಮ. ಇತ್ತೀಚಿಗೆ NCERT ಕೈಗೆತ್ತಿಕೊಂಡಿರುವ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಅಭಿವೃದ್ಧಿ ಹಾಗೂ ನಂತರದ ಪ್ರಾಥಮಿಕ, ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಹಂತಗಳ ಎಲ್ಲಾ ವಿಷಯಗಳಲ್ಲಿನ ಪಠ್ಯವಸ್ತು ಮತ್ತು ಪಠ್ಯ ಸಾಮಗ್ರಿಗಳ(2002) ಅಭಿವೃದ್ಧಿ ಪಠ್ಯಕ್ರಮ ಸುಧಾರಣೆಯು ಬಹುದೊಡ್ಡ ಪ್ರಮಾಣದ ಯೋಜನೆಯಾಗಿದೆ. ಈ ಯೋಜನೆಯನ್ನು ಕೈಗೆತ್ತಿಕೊಂಡಿರುವ ಉದ್ದೇಶವೇನೆಂದರೆ ವಿವಿಧ ಜ್ಞಾನಶಾಖೆಗಳು, ಕಲಿಕಾರ್ಥಿಗಳ ಸಾಮರ್ಥ್ಯಗಳು ಮತ್ತು ಆಸಕ್ತಿಗಳು ಮತ್ತು ಉದ್ದೇಶಿತ ದಕ್ಷತೆಗಳು ಇವೆಲ್ಲದರ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸುವುದು, ಜೊತೆಗೆ ಜಾಗತಿಕ ವಾಸ್ತವತೆಗಳು ಮತ್ತು ಅಂತಾರಾಷ್ಟ್ರೀಯ ಕಾಳಜಿಗಳಿಗೆ ತಕ್ಕಂತೆ ಸಮಾಜದ ಸಾಮಾಜಿಕ–ರಾಜಕೀಯ ಮತ್ತು ಆರ್ಥಿಕ ಬೇಡಿಕೆಗಳನ್ನು ಪ್ರತಿಫಲಿಸುವುದಾಗಿದೆ.

ಈ ಪಠ್ಯಕ್ರಮದ ಅಭಿವೃದ್ಧಿ ಯೋಜನೆಯು ಯೋಜನಾ ಹಂತದಲ್ಲಿ ಕಾರ್ಯಕ್ರಮ ಮೌಲ್ಯಮಾಪನವನ್ನು ಒಳಗೊಂಡಿರುವುದು ನಿಜ. ಇದನ್ನು ಪಠ್ಯಕ್ರಮದ ಬೆಳವಣಿಗೆಯ ಸಂಯೋಜಿತ ಭಾಗವೆಂದು ಪರಿಗಣಿಸಲಾಗುತ್ತದೆ. ಹಾಗಿದ್ದರೂ, ಪಠ್ಯಕ್ರಮವನ್ನು ಜಾರಿಗೆ ತರುವಾಗ ರೂಪಣಾತ್ಮಕ ಅಥವಾ ಪ್ರಕ್ರಿಯೆಯ ಮೌಲ್ಯಮಾಪನವನ್ನು ಕೂಡ ಅನುಷ್ಠಾನದ ಹಂತದಲ್ಲಿ ಊಹಿಸಿಕೊಳ್ಳಬಹುದು. ಜಾರಿಗೆ ಬಂದು ಮೂರು ಅಥವಾ ಐದು ವರ್ಷಗಳು ಕಳೆದ ಬಳಿಕ, ಪ್ರಭಾವ ಮತ್ತು ಉದ್ದೇಶಿತ ಫಲಿತಾಂಶವನ್ನು ತೀರ್ಮಾನಿಸುವುದಕ್ಕಾಗಿ ಸಂಕಲಿತ ಮೌಲ್ಯಮಾಪನ ಅಥವಾ ಫಲಿತಾಂಶದ ಮೌಲ್ಯಮಾಪನವನ್ನು ಕೈಗೊಳ್ಳಬಹುದಾಗಿದೆ. ಇದನ್ನು ಆಧರಿಸಿ ಮುಂದಿನ ಸುಧಾರಣೆಗಾಗಿ ಪಠ್ಯಕ್ರಮದ ಪರಿಶೀಲನೆ ಸಾಧ್ಯವಾಗುತ್ತದೆ.

ಇಲ್ಲಿ ಸೂಚಿಸಲಾದ ಮಾದರಿಯು ಇದರ ಹಿನ್ನೆಲೆಯಲ್ಲಿರುವ ಕೆಲವು ಊಹೆಗಳನ್ನು ಅಂತರ್ಗತಗೊಳಿಸಿಕೊಂಡಿದೆ. ಈ ಊಹೆಗಳನ್ನು ಆಧರಿಸಿ, ಕಾರ್ಯಕ್ರಮ ಮೌಲ್ಯಮಾಪನದ ಮಾದರಿಯನ್ನು ರೂಪಿಸಲಾಗಿದ್ದು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ

Digitised by Bharatavani, CIIL

ವೈಜ್ಞಾನಿಕ ಮೌಲ್ಯಮಾಪನಕ್ಕಾಗಿ ಚೌಕಟ್ಟಿನ ವಾಸ್ತವಾಂಶಗಳನ್ನು ಗುರುತಿಸಲಾಗಿದೆ.

**ಮಾದರಿಯ ಹಿನ್ನೆಲೆಯಲ್ಲಿರುವ ಊಹೆಗಳು**

1. ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಅಂತರ್ನಿರ್ಮಿತ ಮೌಲ್ಯಮಾಪನವು ಪ್ರಕ್ರಿಯೆ ಮತ್ತು ಪ್ರಭಾವಗಳ ಗುಣಮಟ್ಟದ ನಿಯಂತ್ರಣವನ್ನು ಒದಗಿಸುತ್ತದೆ. ಆದುದರಿಂದ ಕಾರ್ಯಕ್ರಮದ ಬೆಳವಣಿಗೆಯಲ್ಲಿ ಮೌಲ್ಯಮಾಪನವನ್ನು ಅದರ ಏಕೀಕೃತ ಭಾಗ ವಾಗಿಸಬೇಕು;ಮರುಮಾಹಿತಿಗಾಗಿ (Feedback) ಅಂತರ್ನಿರ್ಮಿತ ಮೌಲ್ಯಮಾಪನದಿಂದ ದೊರೆಯುವ ನಿದರ್ಶನಗಳನ್ನು ಬಳಸಬೇಕು ಮತ್ತು ಅನುಕ್ರಮವಾಗಿ ತರ್ಕಾಧಾರಿತ ಪ್ರಕ್ರಿಯೆ ಮತ್ತು ಫಲಿತಾಂಶ ಮೌಲ್ಯಮಾಪನಗಳಿಗಾಗಿ ಪ್ರತಿಫಲಿತ, ರೂಪಣಾತ್ಮಕ ಮತ್ತು ಸಂಕಲಿತ ಮೌಲ್ಯಮಾಪನಕ್ಕೆ ಒತ್ತನ್ನು ನೀಡಬೇಕು.

2. ಕಾರ್ಯಕ್ರಮದ ಉದ್ದೇಶಿತ ಗುರಿಗಳು ಅಥವಾ ಫಲಿತಾಂಶಗಳಿಗೆ ಸಂಬಂಧಿಸಿದಂತೆ ವ್ಯಕ್ತಪಡಿಸಿದಾಗ, ಅದು ಕಾರ್ಯಕ್ರಮ ಮೌಲ್ಯಮಾಪನಕ್ಕೆ ಅಗತ್ಯವಿರುವ ದಿಕ್ಕನ್ನು ಮತ್ತು ಆಧಾರವನ್ನು ಒದಗಿಸುತ್ತದೆ. ಆದುದರಿಂದ, ಕಾರ್ಯಕ್ರಮದ ಉದ್ದೇಶಗಳನ್ನು ಅವು ಯಶಸ್ಸು ಅಥವಾ ಫಲಿತಾಂಶದ ಸೂಚಕಗಳು ಸ್ಪಷ್ಟವಾಗಿ ಪ್ರತಿಫಲಿಸುವ ರೀತಿಯಲ್ಲಿ ಪಟ್ಟಿ ಮಾಡಬೇಕು; ನಿರ್ಣಯದ ಕೈಗೊಳ್ಳುವಿಕೆಗಾಗಿ ಸಮಯದ ಗುರಿಯನ್ನು ಮತ್ತು ಪ್ರಮಾಣವನ್ನು ಸೂಚಿಸಬೇಕು ಮತ್ತು ಉದ್ದೇಶಿತ ಗುರಿಗಳು ಅಥವಾ ಪ್ರತಿಫಲದ ಸೂಚಕಗಳ ಸಂದರ್ಭಕ್ಕನುಗುಣವಾಗಿ ತೀರ್ಮಾನಗಳನ್ನು ರೂಪಿಸಿಕೊಳ್ಳಬೇಕು.

3. ಕಾರ್ಯಕ್ರಮದ ಹಿಂದಿನ ಚರಿತ್ರೆ(ವಿವರಗಳು) ಮತ್ತು ಸಂದರ್ಭ ಗೊತ್ತಿದ್ದರೆ ಮತ್ತು ಅದನ್ನು ಪರಿಗಣಿಸಿದ್ದರೆ, ಕಾರ್ಯಕ್ರಮದ ಪರಿಣಾಮಕಾರಿತ್ವದ ಕುರಿತು ಮಾಡಲಾದ ತೀರ್ಮಾನಗಳ ಮೌಲ್ಯವು ಸುಧಾರಿಸುತ್ತದೆ. ಆದುದರಿಂದ ಕಾರ್ಯಕ್ರಮದ ಸಂದರ್ಭದ ಅರಿವನ್ನು ಅಥವಾ ಯೋಜನಾ ಹಂತದಲ್ಲಿ ಅದರ ಪರಿಸರವನ್ನು ತಿಳಿದುಕೊಂಡಿರಬೇಕು; ಸಂಕಲಿತ ಮೌಲ್ಯಮಾಪನ ಹಂತದಲ್ಲಿ ಸಾಂದರ್ಭಿಕ ಮೌಲ್ಯಮಾಪನವನ್ನು ಕೈಗೊಳ್ಳಬೇಕು ಮತ್ತು ನಿರ್ದಿಷ್ಟ ಪರಿಸರದಲ್ಲಿ ನಿರ್ಬಂಧಗಳಿಗೆ ಸಂಬಂಧಿಸಿದಂತೆ ತೀರ್ಮಾನವನ್ನು ವ್ಯಾಖ್ಯಾನಿಬೇಕು.

4. ಗುಣಾತ್ಮಕ ಮಾಪನ(ಸೈಕೊಮೆಟ್ರಿಕ್) ದತ್ತಾಂಶಗಳ ಸಂಗ್ರಹದೊಂದಿಗೆ ಪ್ರಾಯೋಜಕರ,ಸಂಘಟಕರ, ಮೌಲ್ಯಮಾಪಕರ, ಫಲಾನುಭವಿಗಳ, ಕಾರ್ಯಕ್ರಮವನ್ನು ವಿಕಸಿತಗೊಳಿಸುವವರ ಮತ್ತು ಸಹಭಾಗಿ ವೀಕ್ಷಕರ ದೃಷ್ಟಿ, ಅಭಿಪ್ರಾಯ ಅಥವಾ ತೀರ್ಮಾನಗಳಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಿದರೆ, ಪ್ರಕ್ರಿಯೆಯಲ್ಲಿ ಮತ್ತು ಉತ್ಪನ್ನ ಫಲಿತಾಂಶಗಳ ಕುರಿತು ಇನ್ನೂ ಹೆಚ್ಚಿನ ಮೌಲ್ಯಯುತ ತೀರ್ಪುಗಳನ್ನು ಪಡೆಯುವುದು ಸಾಧ್ಯವಿದೆ. ಆದುದರಿಂದ ಗುಣಮಟ್ಟದ ದತ್ತಾಂಶಗಳ ಸಂಗ್ರಹಕ್ಕಾಗಿ ಬೆಳಕು ಚೆಲ್ಲುವ ವಿಧಾನವನ್ನು ಬಳಸಿಕೊಳ್ಳಬೇಕು; ಸಹಭಾಗಿ ವೀಕ್ಷಕರಿಂದ ದತ್ತಾಂಶವನ್ನು ಸಂಗ್ರಹಿಸಲು ವಿಭಿನ್ನ ರೀತಿಯ ಉಪಕರಣಗಳು ಮತ್ತು ತಂತ್ರಜ್ಞಾನಗಳನ್ನು ಬಳಸಬೇಕು ಮತ್ತು ಸಾಧ್ಯವಿರುವ ಎಲ್ಲಾ ಮೂಲಗಳಿಂದ ವೀಕ್ಷಣೆ ಮತ್ತು ತೀರ್ಮಾನಗಳಿಂದ ಲಭಿಸುವ ದತ್ತಾಂಶವನ್ನು ಸಂಗ್ರಹಿಸಬೇಕು.

5. ಹೆಚ್ಚು ಹೆಚ್ಚು ಪ್ರಮಾಣದ ಮತ್ತು ಗುಣಮಟ್ಟದ ಪ್ರವೇಶ್ಯಗಳನ್ನು ನೀಡಿದಂತೆ ಕಾರ್ಯಕ್ರಮದ ಅಂತ್ಯ ಉತ್ಪನ್ನಗಳು ಮತ್ತು ಅವುಗಳ ಪ್ರಭಾವವು ಉತ್ತಮ ಹಾಗೂ ಯಥೋಚಿತವಾಗಿರುತ್ತದೆ. ಆದುದರಿಂದ ಕಾರ್ಯಕ್ರಮದಲ್ಲಿ ನೀಡಲಾದ ಪ್ರವೇಶ್ಯಗಳ ಅಂದಾಜನ್ನು(ಮೌಲ್ಯ ನಿರ್ಧಾರವನ್ನು) ನಡೆಸಬೇಕು; ಲಭ್ಯವಿರುವ ಸಂಭಾರ ಸಂಪನ್ಮೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯಕ್ರಮದ ವರದಿ ಮತ್ತು ಮೌಲ್ಯಮಾಪನಗಳ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ ಮೂಲಗಳು ಪರ್ಯಾಪ್ತವಾಗಿವೆಯೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಚಿಂತಿಸಬೇಕು.

6. ನಿರ್ದಿಷ್ಟ ಪರಿಸ್ಥಿತಿಯೊಂದರಲ್ಲಿ, ಕಾರ್ಯಕ್ರಮದ ಪ್ರವೇಶ್ಯಗಳನ್ನು ಮತ್ತು ನಿವೇಶ್ಯಗಳು (ಉತ್ಪನ್ನಗಳು) ಸಮಾನವಾಗಿದ್ದಾಗ, ಅವುಗಳು ಅನುಷ್ಠಾನದ ಕಾರ್ಯತಂತ್ರಗಳ ಮತ್ತು ನಡೆಸಲಾದ ಮಧ್ಯಸ್ಥಿಕೆಗಳ ಕಾರ್ಯದಕ್ಷತೆ ಮತ್ತು ಪರಿಣಾಮಕಾರಿತ್ವಕ್ಕೆ ನೇರ ಅನುಪಾತದಲ್ಲಿ ಇರುತ್ತವೆ. ಆದುದರಿಂದ, ಮೌಲ್ಯಮಾಪನದ ಪ್ರಕ್ರಿಯೆಯ ಅಂಶಗಳನ್ನು ರೂಪಿಸಬೇಕು; ಕಾರ್ಯಕ್ರಮಗಳ ಮೌಲ್ಯಮಾಪನವನ್ನು ನಡೆಸುವಾಗ ಎಲ್ಲಾ ಅಂಶಗಳ ಅಂದಾಜನ್ನು ನಡೆಸಬೇಕು; ಮತ್ತು ವಿವಿಧ ಹಂತಗಳಲ್ಲಿ ಸಂಗ್ರಹಿಸಬೇಕಾದ ಸಾಕ್ಷ್ಯಗಳ ಸ್ವರೂಪ ಮತ್ತು ಉದ್ದೇಶವನ್ನು ಆಧರಿಸಿ ಮೌಲ್ಯಮಾಪನದ ಎಲ್ಲಾ ವಿಧಾನಗಳನ್ನು ಬಳಸಿಕೊಳ್ಳಬೇಕು.

7. ಕಾರ್ಯಕ್ರಮದ ಫಲಿತಾಂಶಗಳು, ಉತ್ಪನ್ನಗಳು ಮತ್ತು ಪ್ರಭಾವವು ಸಂದರ್ಭ, ಸಂಭಾರ ಮತ್ತು ಪ್ರಕ್ರಿಯೆಯ ನಡುವಿನ ಪರಿಣಾಮಕಾರಿ ಪ್ರತಿಕ್ರಿಯೆಯ ಹಂತವನ್ನು ಅವಲಂಬಿಸಿ ಇರುತ್ತದೆ. ಇದನ್ನು ಕಾರ್ಯಕ್ರಮದ ಆಯೋಜನೆ, ಬೆಳವಣಿಗೆ, ಕಾರ್ಯಗತಗೊಳಿಸುವಿಕೆ ಮತ್ತು ಗುಣಮಟ್ಟದ ನಿಯಂತ್ರಣದ ಹಂತಗಳಲ್ಲಿ ನಿಶ್ಚಿತಗೊಳಿಸಲಾಗುತ್ತದೆ. ಆದುದರಿಂದ ಸೂಚಿಸಲಾದ ಕಾರ್ಯಕ್ರಮದ ಉದ್ದೇಶಗಳಿಗೆ ಸಂಬಂಧಿಸಿದಂತೆ ಉತ್ಪನ್ನದ ಅಂದಾಜು, ಸಂಭಾರ ಅಥವಾ ಪರಿಣಾಮಗಳನ್ನು ತೀರ್ಮಾನಿಸುವಾಗ ಸಂದರ್ಭ, ಪ್ರವೇಶ್ಯ(Input) ಮತ್ತು ಪ್ರಕ್ರಿಯೆಗಳನ್ನು ಗ್ರಹಿಸಿಕೊಳ್ಳಬೇಕು; ಗ್ರಾಹಕರು, ಫಲಾನುಭವಿಗಳು ಮತ್ತು ಇತರ ಸುಧಾರಣಾ ಅಭ್ಯಾಸಿಗಳ ಮೇಲಿನ ಪ್ರಭಾವವನ್ನು ಮತ್ತು ಅನುದ್ದೇಶಿತ ಮತ್ತು ಸಹ ಪರಿಣಾಮಗಳನ್ನು ಕೂಡ ಅಳೆಯಬೇಕು.

**ನಿಗದಿಪಡಿಸಿದ ಕಾರ್ಯಕ್ರಮ ಮೌಲ್ಯಮಾಪನದ ಪರಿಕಲ್ಪನಾ ಚೌಕಟ್ಟು:**

ಇಲ್ಲಿ ಸೂಚಿಸಲಾದ ಮಾದರಿಗೆ ಮಹತ್ವವನ್ನು ನೀಡುವ ಮೂರು ಮೂಲಭೂತ ವಾಸ್ತವಾಂಶಗಳು ಆಧಾರಸ್ತಂಭಗಳಂತಿವೆ. ಅವುಗಳೆಂದರೆ 1. ಮೌಲ್ಯಮಾಪನದ ವಿಷಯಾಂಶಗಳು, 2. ಮೌಲ್ಯಮಾಪನದ ಹಂತಗಳು, ಮತ್ತು 3. ಮೌಲ್ಯಮಾಪನದ

Digitised by Bharatavani, CIIL

ಕ್ರಮ. ಕಾರ್ಯಕ್ರಮ ಮೌಲ್ಯಮಾಪನದ ಕುರಿತಾದ ಮೂರು ಮೂಲಭೂತ ಪ್ರಶ್ನೆಗಳೆಂದರೆ: ಯಾವುದರ ಮೌಲ್ಯಮಾಪನವನ್ನು ನಡೆಸಬೇಕು? ಯಾವಾಗ ಮೌಲ್ಯಮಾಪನವನ್ನು ನಡೆಸಬೇಕು? ಮತ್ತು ಮೌಲ್ಯಮಾಪನವನ್ನು ಹೇಗೆ ನಡೆಸಬೇಕು? ನಮಗೆಲ್ಲಾ ತಿಳಿದಿರುವಂತೆ ಪ್ರತಿಯೊಂದು ಕಾರ್ಯಕ್ರಮವನ್ನು ನಿರ್ದಿಷ್ಟ ಕ್ಷೇತ್ರದ ಅಗತ್ಯಗಳನ್ನು ಪೂರೈಸುವ ಸಲುವಾಗಿ, ನಿರ್ದಿಷ್ಟವಾಗಿ ಗುರಿತಿಸಲಾದ ಗ್ರಾಹಕರಿಗಾಗಿ ನಡೆಸಲಾಗುತ್ತದೆ. ಆದುದರಿಂದ ಈ ಕಾರ್ಯಕ್ರಮವು ಒದಗಿಸಲಾದ ಸಂದರ್ಭದಲ್ಲಿ ನಿರ್ದಿಷ್ಟ ತಾಣ ಅಥವಾ ಪರಿಸರದಲ್ಲಿ ಕಂಡುಬರುತ್ತದೆ. ಇದರ ಬೆಳವಣಿಗೆಗೆ ಕೆಲವು ಕನಿಷ್ಠ ಅಥವಾ ಗರಿಷ್ಠ ಪ್ರವೇಶ್ಯಗಳನ್ನು ನೀಡಬೇಕಾಗುತ್ತದೆ. ಆದುದರಿಂದ ಮೌಲ್ಯಮಾಪನದಲ್ಲಿ ಗ್ರಹಿಸಿಕೊಳ್ಳಬೇಕಾದ ಮತ್ತೊಂದು ಅಂಶವೆಂದರೆ ಸಾಕಷ್ಟು ಪ್ರಮಾಣದ ಸಂಪನ್ಮೂಲ ಪ್ರವೇಶ್ಯಗಳು ಮತ್ತು ಅವುಗಳ ಬಳಕೆ. ಗಮನದಲ್ಲಿ ಇಟ್ಟುಕೊಳ್ಳಬೇಕಾದ ಮತ್ತೊಂದು ವಿಚಾರವೆಂದರೆ ಕಾರ್ಯಕ್ರಮದ ಚಲಾವಣೆ ಅಥವಾ ಕಾರ್ಯಗತಗೊಳಿಸುವಿಕೆಯಲ್ಲಿ ತೊಡಗಿಕೊಂಡಿರುವ ಪ್ರಕ್ರಿಯೆಗಳ ಸ್ವರೂಪ ಮತ್ತು ವ್ಯಾಪ್ತಿ. ವಾಸ್ತವದಲ್ಲಿ ಪರಿಸರ(ಸಂದರ್ಭ) ಸಂಭಾರಪ್ರಕ್ರಿಯೆಗಳು ಕಾರ್ಯಕ್ರಮದ ಉದ್ದೇಶಿತ ಉತ್ಪನ್ನಗಳು ಮತ್ತು ಪ್ರಭಾವಗಳಿಗೆ ಅವಕಾಶವನ್ನು ಒದಗಿಸುತ್ತವೆ. ಹೀಗೆ, ಸಂದರ್ಭ, ಪ್ರವೇಶ್ಯಗಳು ಮತ್ತು ಕಾರ್ಯವಿಧಾನಗಳೊಂದಿಗೆ ಗಮನಿಸಬೇಕಾದ ಇತರ ಅಂಶಗಳೆಂದರೆ ಉತ್ಪನ್ನಗಳು ಅಥವಾ ನಿವೇಶ್ಯಗಳು ಮತ್ತು ಪ್ರಭಾವ ಅಥವಾ ಕಾರ್ಯಕ್ರಮದ ಪರಿಣಾಮಗಳು.

ವಿವಿಧ ಹಂತಗಳಲ್ಲಿ ಕಾರ್ಯಕ್ರಮವನ್ನು ನಡೆಸುವುದರಿಂದ, ಈ ಎಲ್ಲಾ ಹಂತಗಳಲ್ಲಿ ಅದರ ಮೌಲ್ಯಮಾಪನವನ್ನು ಕೂಡ ನಡೆಸಬೇಕಾಗುತ್ತದೆ. ಕಾರ್ಯಕ್ರಮದ ಆಶಯದೊಂದಿಗೆ ಪ್ರಾರಂಭಿಸಿ, ಅಂದರೆ, ಉದ್ದೇಶಿತ ಪರಿಣಾಮಗಳನ್ನು ಪ್ರತಿಫಲಿಸುವ ಕಾರ್ಯಕ್ರಮದ ಗುರಿಗಳು ಆಯೋಜನಾ ಹಂತದ ತಳಹದಿಯಾಗಿ ಪರಿಣಮಿಸುತ್ತವೆ, ಇದನ್ನು ಅನುಸರಿಸಿ ಕಾರ್ಯಕ್ರಮದ ಬೆಳವಣಿಗೆ, ಕಾರ್ಯಕ್ರಮದ ಕಾರ್ಯಗತಗೊಳಿಸುವಿಕೆ ಮತ್ತು ಸಂಕಲಿತ(ಒಟ್ಟು) ಮೌಲ್ಯಮಾಪನವಿರುತ್ತದೆ. ಕಾರ್ಯಕ್ರಮದ ಮೌಲ್ಯಮಾಪನವಷ್ಟೇ ಅಲ್ಲ, ಪರಸ್ಪರ ಜೋಡಣೆಗೊಂಡಿರುವ ಈ ಎಲ್ಲಾ ಹಂತಗಳ ಮೌಲ್ಯಮಾಪನವು ಕಾರ್ಯಕ್ರಮದ ಪ್ರತಿಯೊಂದು ಹಂತದ ಸಂಯೋಜಿತ ಭಾಗವಾಗಿರಬೇಕಾಗುತ್ತದೆ.

ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಬೇರೆ ಬೇರೆ ಅಂಶಗಳ ಮೌಲ್ಯನಿರ್ಧಾರಕ್ಕಾಗಿ ಮೌಲ್ಯಮಾಪನದ ಕ್ರಮವೂ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಸಂಗ್ರಹಿಸಬೇಕಾದ ನಿದರ್ಶನಗಳು ಮತ್ತು ಕಾರ್ಯಕ್ರಮದ ವಿವಿಧ ಘಟಕಗಳನ್ನು ಕುರಿತು ಬದಲಾವಣೆ, ನಿರ್ಧಾರ, ಅಳವಡಿಸಿಕೊಳ್ಳುವಿಕೆ ಅಥವಾ ತೀರ್ಮಾನ ಕೈಗೊಳ್ಳುವಿಕೆಯ ಕುರಿತು ನಿರ್ಧಾರ ತೆಗೆದುಕೊಳ್ಳಲು ಇವುಗಳನ್ನು ಬಳಸಿಕೊಳ್ಳುವ ದೃಷ್ಟಿಯಿಂದ ಇದು ಮುಖ್ಯವಾಗುತ್ತದೆ. ಕೆಲವು ನಿರ್ಧಾರಗಳನ್ನು ಮೌಲ್ಯಮಾಪಕರ, ಪ್ರಾಯೋಜಕರ, ಫಲಾನುಭವಿಗಳ ಮತ್ತು ಇತರ ಸುಧಾರಣಾ ಗುಂಪಿನವರ ತರ್ಕಾಧಾರಿತ ಅಥವಾ ಪ್ರತಿಫಲಿತ ಮೌಲ್ಯಮಾಪನವನ್ನು ಆಧರಿಸಿ ತೆಗೆದುಕೊಳ್ಳಲಾಗುತ್ತದೆ.

ಕಾರ್ಯಕ್ರಮದ ಪ್ರತಿಯೊಂದು ಹಂತದಲ್ಲಿ ತಜ್ಞರು, ಶಿಕ್ಷಕರು, ಮೌಲ್ಯಮಾಪಕರು ಅಥವಾ ಸಹಭಾಗಿ ವೀಕ್ಷಕರ ಪ್ರತಿಫಲನಾತ್ಮಕ ಮೌಲ್ಯಮಾಪನವನ್ನು ಆಧರಿಸಿ, ನಿರ್ಧಾರಗಳನ್ನು ತತ್‌ಪೂರ್ವ ನೆಲೆಯಿಂದ ಕೈಗೊಳ್ಳಲಾಗುತ್ತದೆ. ಇದು ಯೋಜನೆಯ ಉದ್ದೇಶಗಳನ್ನು ರೂಪಿಸುವುದು, ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು, ಕಾರ್ಯಗತ ಕೌಶಲಗಳನ್ನು ಆಯ್ಕೆ ಮಾಡಿಕೊಳ್ಳುವುದು ಅಥವಾ ಶೋಧನೆಗಳನ್ನು ವಿಸ್ತರಿಕೊಳ್ಳುವುದಾಗಿರಬಹುದು, ಆದರೆ, ಕಾರ್ಯಕ್ರಮ ಚಲಾವಣೆಯಲ್ಲಿರುವ ವಿವಿಧ ಹಂತಗಳಲ್ಲಿನ ಮೌಲ್ಯಮಾಪನವು ರೂಪಣಾತ್ಮಕ ರೀತಿಯದ್ದಾಗಿರುತ್ತದೆ. ಇದು ವಸ್ತುಗಳು, ಸಾಮಗ್ರಿಗಳು, ಕೌಶಲಗಳು, ಪ್ರತಿಫಲಗಳು ಅಥವಾ ಸಹ–ಪರಿಣಾಮಗಳ ಕುರಿತು ಮರುಮಾಹಿತಿಯನ್ನು ಒದಗಿಸುತ್ತದೆ. ಇದನ್ನು ಆಧರಿಸಿ ಚಲಾವಣೆಯಲ್ಲಿರುವ ಕಾರ್ಯಕ್ರಮದ ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಸುಧಾರಿಸಲು ತಿದ್ದುಪಡಿಗಳು, ಬದಲಾವಣೆಗಳು, ಪರ್ಯಾಯಗಳು ಮತ್ತು ಅಳವಡಿಕೆಗಳನ್ನು ಕೈಗೊಳ್ಳಲಾಗುತ್ತದೆ.ಮತ್ತೊಂದು ಕಡೆ ತೀರ್ಮಾನದ ಉದ್ದೇಶಗಳಿಗಾಗಿ ನಿರ್ಧಾರ ಕೈಗೊಳ್ಳುವ ಸಂದರ್ಭದಲ್ಲಿ ಒಟ್ಟು ಮೌಲ್ಯಮಾಪನವನ್ನು ನಡೆಸಲಾಗುತ್ತದೆ. ಇದು ಕಾರ್ಯಯೋಜನೆಯನ್ನು ಸ್ಥಾಪಿಸಲು, ಅದನ್ನು ಪ್ರಮಾಣೀಕರಿಸಲು, ಬೆಂಬಲಿಸಲು ಅಥವಾ ವಿರೋಧಿಸಲು ಇರಬಹುದು. ಅಥವಾ ಉದ್ದೇಶಿತ ಅಥವಾ ಅವಲೋಕನದ ಪರಿಣಾಮಗಳು, ಅಂದರೆ ಕಾರ್ಯಕ್ರಮದ ಪರಿಣಾಮಗಳ ನಡುವಿನ ಸುಸಂಗತತೆ ಅಥವಾ ವಿರೋಧಾಭಾಸವನ್ನು ಕಂಡು ಹಿಡಿದು ಅದನ್ನು ಆಧರಿಸಿ ಕ್ರಿಯಾಯೋಜನೆಯನ್ನು ಪ್ರಾರಂಭಿಸಲು ಇರಬಹುದು.

ಹೀಗೆ, ಪರಿಣಾಮಕಾರಿ ಕಾರ್ಯಕ್ರಮ ಮೌಲ್ಯಮಾಪನಕ್ಕೆ ಮೇಲೆ ಉಲ್ಲೇಖಿಸಲಾದ ಕಾರ್ಯಕ್ರಮ ಪ್ರಗತಿಯ ಹಂತಗಳು, ಮೌಲ್ಯಮಾಪನದ ಐದು ಅಂಶಗಳ ಗ್ರಹಿಕೆ–ಉದಾಹರಣೆಗೆ ಸಂದರ್ಭ, ಪ್ರವೇಶ್ಯಗಳು, ರೂಪಣಾತ್ಮಕ ಪ್ರಕ್ರಿಯೆಗಳು,ಉತ್ಪನ್ನಗಳು ಮತ್ತು ಪ್ರಭಾವ, ಜೊತೆಗೆ ಮೌಲ್ಯಮಾಪನದ ಮೂರು ಮಾದರಿಗಳಾದ ಪ್ರಕ್ರಿಯಾತ್ಮಕ, ಪರಿಣಾಮಾತ್ಮಕ ಮತ್ತು ಒಟ್ಟು ಮೌಲ್ಯಮಾಪನಗಳ ಕುರಿತು ಸ್ಪಷ್ಟತೆ ಇರುವುದು ಅತ್ಯವಶ್ಯಕ. ಸೂಚಿತ ಮಾದರಿಯ ಸೂಕ್ತ ಅನ್ವಯತೆಯನ್ನು ತಿಳಿದುಕೊಳ್ಳುವ ಸಲುವಾಗಿ ಮೂರು ಚೌಕಟ್ಟಿನ ವಾಸ್ತವಾಂಶಗಳಿಗೆ(ವಿಷಯಾಂಶಗಳು, ಹಂತಗಳು, ಮೌಲ್ಯಮಾಪನದ ಕ್ರಮ) ಸಂಬಂಧಿಸಿದ ಮೌಲ್ಯಮಾಪನದ ಘಟಕಗಳ ನಿಖರ ಅರ್ಥೈಸುವಿಕೆ ಅತ್ಯಂತ ಅಗತ್ಯ. ಇದರಲ್ಲಿ ಪ್ರತಿಯೊಂದನ್ನು ಇಲ್ಲಿ ವಿವರಿಸಲಾಗಿದೆ:

**ಮೌಲ್ಯಮಾಪನದ ಮುಖಗಳು:**

1. ಪೂರ್ವೋತ್ತರ ಸಂದರ್ಭ ಅಥವಾ ಪರಿಸರದ ಮೌಲ್ಯಮಾಪನ: ಇದರಲ್ಲಿ ಸಾಮಾಜಿಕ ಸಂದರ್ಭ, ಶೈಕ್ಷಣಿಕ ಸಂದರ್ಭ ಮತ್ತು ಸಾಂಸ್ಥಿಕ ಸಂದರ್ಭ ಒಳಗೊಂಡಿರುತ್ತದೆ. (Context – C)
2. ಪ್ರವೇಶ್ಯಗಳ ಮೌಲ್ಯಮಾಪನ: ಇದರಲ್ಲಿ ಮಾನವ ಸಂಪನ್ಮೂಲಗಳು, ಆರ್ಥಿಕ ಸಂಪನ್ಮೂಲಗಳು, ಸರಕಾರದ ಬೆಂಬಲ ಮತ್ತು

Digitised by Bharatavani, CIIL

ಸಮುದಾಯದ ಬೆಂಬಲದ ಮೌಲ್ಯನಿರ್ಧಾರವಿರುತ್ತದೆ. (Inputs-I)

3. ಪ್ರಕ್ರಿಯೆಗಳ ಮೌಲ್ಯಮಾಪನ: ಇದರಲ್ಲಿ ತೊಡಗಿಸಿಕೊಂಡಿರುವ ಅಧಿಕಾರಿ ವರ್ಗ, ಅಳವಡಿಸಿಕೊಳ್ಳಲಾದ ಕೌಶಲ, ಅನುಸರಿಸಲಾದ ಚಟುವಟಿಕೆಗಳು, ಸಂಪನ್ಮೂಲಗಳ ಬಳಕೆ ಮತ್ತು ಕೈಗೊಂಡಿರುವ ರೂಪಣಾತ್ಮಕ ಮೌಲ್ಯಮಾಪನ ಸೇರಿಕೊಂಡಿರುತ್ತದೆ. (Process-P)

4. **ಉತ್ಪನ್ನಗಳು ಅಥವಾ ನಿವೇಶ್ಯಗಳ ಮೌಲ್ಯಮಾಪನ:** ಇದರಲ್ಲಿ ಸಾಮಗ್ರಿಗಳ ಗುಣಮಟ್ಟ, ಉತ್ಪನ್ನಗಳು, ಸಿಬ್ಬಂದಿ ಪ್ರಗತಿ, ಕಲಿಕಾರ್ಥಿ ಸಹಭಾಗಿಗಳ ಬೆಳವಣಿಗೆ ಮತ್ತು ಕಾರ್ಯನಿರ್ವಹಣೆಯ ಉದ್ದೇಶಗಳು ಸೇರಿಕೊಂಡಿರುತ್ತವೆ. (Product-P)

5. **ಪರಿಣಾಮದ ಮೌಲ್ಯಮಾಪನ:** ಇದರಲ್ಲಿ ಅಧಿಕಾರಿ ವರ್ಗದ ಬದಲಾವಣೆಗಳು, ಸಮುದಾಯದ ಬದಲಾವಣೆಗಳು, ಸಾಂಸ್ಥಿಕ ವ್ಯವಸ್ಥೆಯ ಬದಲಾವಣೆಗಳು, ಅನುದ್ದೇಶಿತ ಪರಿಣಾಮಗಳು ಮತ್ತು ಪರಿಣಾಮಗಳು ಸೇರಿಕೊಂಡಿರುತ್ತವೆ.

**ಮೌಲ್ಯಮಾಪನದ ಹಂತಗಳು (PDIS)**

1. **ಯೋಜನಾ ಹಂತ** *(Planning-P:)* ಈ ಹಂತದಲ್ಲಿ ಪರಿಗಣಿಸಬೇಕಾದ ಪ್ರಮುಖ ಘಟಕಗಳೆಂದರೆ ಕಾರ್ಯಕ್ರಮದ ಉದ್ದೇಶಗಳು, ಪ್ರವೇಶ್ಯ ಸಂಪನ್ಮೂಲಗಳು, ಕಾರ್ಯಕ್ರಮದ ಅಂದಾಜು ಆಯವ್ಯಯ ಮತ್ತು ಸಂಘಟನಾತ್ಮಕ ಸಂರಚನೆ.

2. **ಪ್ರಗತಿ ಹಂತ** *(Development - D)*: ಈ ಹಂತದಲ್ಲಿ ಪರಿಗಣಿಸಬೇಕಾದ ಪ್ರಮುಖ ಘಟಕಗಳೆಂದರೆ ಉದ್ದೇಶಿತ ಗುರಿಗಳ ರೂಪಣೆ, ತರಬೇತಿ ಗುಣಮಟ್ಟ, ಕ್ರಿಯಾ ಕಾರ್ಯಗಳ ಗುರುತಿಸುವಿಕೆ ಮತ್ತು ಸಾಮಗ್ರಿಗಳ ಅಭಿವೃದ್ಧಿ.

3. **ಕಾರ್ಯರೂಪಕ್ಕೆ ತರುವ ಹಂತ** *(Implimentation – I)*: ಈ ಹಂತದಲ್ಲಿ ಪರಿಗಣಿಸಬೇಕಾದ ಪ್ರಮುಖ ಘಟಕಗಳೆಂದರೆ ಕಾರ್ಯಗತಗೊಳಿಸುವ ಕೌಶಲಗಳ ಪರಿಣಾಮಕಾರಿತ್ವ, ಸುಧಾರಣೆ, ಸಂಶೋಧನೆ ಮತ್ತು ಇತರ ಬೆಂಬಲಿತ ಸೇವೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊತ್ತವರ ಪ್ರಜಾಸತ್ತಾತ್ಮಕ ಭಾಗವಹಿಸುವಿಕೆ, ಚಟುವಟಿಕೆಗಳ ಮೇಲುಸ್ತುವಾರಿ, ಮತ್ತು ಸುಧಾರಣೆಯ ಮರುಮಾಹಿತಿ ಮತ್ತು ಪ್ರಸರಣ ಮತ್ತು ಪ್ರಚಾರದ ಕ್ರಮ.

4. **ಸಮಗ್ರ ಮೌಲ್ಯಮಾಪನ ಹಂತ** *(Summative Evaluation – S)*: ಇದು ಕಾರ್ಯಗತಗೊಂಡಿರುವ ಕಾರ್ಯಕ್ರಮದ ಗುಣಮಟ್ಟದ ನಿಯಂತ್ರಣವನ್ನು ಸೂಚಿಸುತ್ತದೆ. ಈ ಹಂತದಲ್ಲಿ ಸಮಗ್ರ ತೀರ್ಪುಗಳನ್ನು ತೆಗೆದುಕೊಳ್ಳಲು ಮತ್ತು ಕಾರ್ಯಕ್ರಮ ಉತ್ಪನ್ನಗಳನ್ನು ಸುಧಾರಿಸಲು ಕಾರ್ಯಕ್ರಮ ಘಟಕಗಳ ಮೌಲ್ಯನಿರ್ಧಾರವನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ ಯೋಜನಾ ಉದ್ದೇಶಗಳ ಮೌಲ್ಯನಿರ್ಧಾರ, ಸಂದರ್ಭ, ಪ್ರವೇಶ್ಯ, ಪ್ರಕ್ರಿಯೆ, ಉತ್ಪನ್ನಗಳ ಮೌಲ್ಯಮಾಪನ ಮತ್ತು ಕಾರ್ಯಕ್ರಮದ ಪರಿಣಾಮ, ಕಾರ್ಯಕ್ರಮದ ಗೆಲುವುಗಳು ಮತ್ತು ಸೋಲುಗಳ ನಿಷ್ಕರ್ಷ, ಯೋಜನೆಯ ವೆಚ್ಚ ಪರಿಣಾಮಕಾರಿತ್ವವನ್ನು ತೀರ್ಮಾನಿಸುವುದು, ಸಂಶೋಧನಾ ಬೆಂಬಲಕ್ಕಾಗಿ ಕೈಗೊಂಡಿರುವ ಅಧ್ಯಯನಗಳ ಅನುಸರಣೆ, ಮತ್ತು ಕಾರ್ಯಗತ ಕೌಶಲಗಳ ಅಳವಡಿಕೆ, ಕಾರ್ಯಕ್ರಮ ಆಶಯಗಳು ಮತ್ತು ಕಾರ್ಯಕ್ರಮದ ಆಯವ್ಯಯಗಳು.

**ಮೌಲ್ಯಮಾಪನದ ಮಾದರಿಗಳು:**

ಹಿಂದೆ ವಿವರಿಸಲಾಗಿರುವ ಮೂರು ವಿಧದ ಮೌಲ್ಯಮಾಪನ ಕ್ರಮಗಳೆಂದರೆ: ಆಲೋಚನಾತ್ಮಕ ಮೌಲ್ಯಮಾಪನ, ರೂಪಣಾತ್ಮಕ ಮೌಲ್ಯಮಾಪನ ಮತ್ತು ಸಂಕಲಿತ ಮೌಲ್ಯಮಾಪನ. ಪ್ರತಿಫಲಿತ ಮೌಲ್ಯಮಾಪನದ ಉದ್ದೇಶ ಕಾರ್ಯಕ್ರಮದ ಅಥವಾ ಅದರ ಘಟಕಗಳ ಮೌಲ್ಯವನ್ನು ಸಂಬಂಧಪಟ್ಟ ಕಾರ್ಯಕ್ಷೇತ್ರದ ತಜ್ಞರ ಅಭಿಪ್ರಾಯ, ಗ್ರಹಿಕೆ ಅಥವಾ ವ್ಯಕ್ತಿಯ ತಿಳಿವಳಿಕೆ ಮತ್ತು ಅನುಭವವನ್ನು ಬಳಸಿ ತಾರ್ಕಿಕ ಆಧಾರದಿಂದ ಕಾರ್ಯಕ್ರಮದ ಮೌಲ್ಯವನ್ನು ಕಂಡು ಹಿಡಿಯುವುದು. ರೂಪಣಾತ್ಮಕ ಮೌಲ್ಯಮಾಪನದ ಉದ್ದೇಶ ಕಾರ್ಯಕ್ರಮ ಹೇಗೆ ನಡೆಯುತ್ತಿದೆ ಎಂಬುದನ್ನು ಕಂಡು ಹಿಡಿಯುವುದು. ಅಂದರೆ ವೀಕ್ಷಣೆ, ಅಭಿಪ್ರಾಯ, ವಿಚಾರಣೆ, ವಿಶ್ಲೇಷಣೆ ಅಥವಾ ಪರೀಕ್ಷಾ ತಂತ್ರಗಳನ್ನು ಆಧರಿಸಿ ಕಾರ್ಯಕ್ರಮದ ಹಾದಿಯ ಮೌಲ್ಯಮಾಪನ ನಡೆಸುವುದು. ಇಲ್ಲಿ ಮರುಮಾಹಿತಿಯನ್ನು ಪಡೆದುದನ್ನು ಪ್ರಾಯೋಜಕರು, ಮೌಲ್ಯಮಾಪಕರು ಅಥವಾ ಸಂಬಂಧಪಟ್ಟ ಗ್ರಾಹಕವರ್ಗಕ್ಕೆ ಒದಗಿಸುವುದು ಮತ್ತು ಕಾರ್ಯತಂತ್ರಗಳು, ಕ್ರಿಯಾ ಕಾರ್ಯಗಳು ಇತ್ಯಾದಿಗಳನ್ನು ಅಳವಡಿಸುವುದು ಅಥವಾ ಮರು ಅಳವಡಿಕೆಯತ್ತ ಗಮನವನ್ನು ಕೇಂದ್ರೀಕರಿಸಲಾಗುವುದು. ಸಂಕಲಿತ ಮೌಲ್ಯಮಾಪನದ ಉದ್ದೇಶವು ಫಲಿತಾಂಶಗಳು, ಉತ್ಪತ್ತಿಗಳು, ಪ್ರಕ್ರಿಯೆಗಳು, ಪರಿಣಾಮ ಇತ್ಯಾದಿಗಳನ್ನು ನಿರ್ಣಯಿಸುವುದು, ಕಾರ್ಯಕ್ರಮವನ್ನು ಸ್ಥಾಪಿಸುವುದು, ತಿದ್ದುಪಡಿ ಮಾಡುವುದು, ಹೋಲಿಸುವುದು ಮತ್ತು ಸ್ಪಷ್ಟೀಕರಿಸುವುದು. ಇವನ್ನು ಆಧರಿಸಿ ಕಾರ್ಯಕ್ರಮವು ಇನ್ನೂ ಹೆಚ್ಚು ಪರಿಣಾಮಕಾರಿಯಾಗುವಂತೆ, ಕಾರ್ಯಕ್ರಮದ ನವೀಕರಣಕ್ಕಾಗಿ ಕಾರ್ಯಕ್ರಮದ ಉದ್ದೇಶಗಳನ್ನು ಮರುಮೌಲ್ಯಮಾಪನಕ್ಕೆ ಒಳಪಡಿಸುವುದು, ಕಾರ್ಯಗತ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವುದು ಮತ್ತು ಉತ್ಪತ್ತಿಗಳನ್ನು ನಿರ್ಣಯಿಸುವುದು ಇತ್ಯಾದಿಗಳನ್ನು ಕೈಗೊಳ್ಳಲಾಗುವುದು. ಮೌಲ್ಯಮಾಪನಕ್ಕೆ ಒಳಪಡುತ್ತಿರುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅವಶ್ಯಕ ನಿದರ್ಶನಗಳ ಸಂಗ್ರಹಣೆಯನ್ನು ಖಚಿತಪಡಿಸಲು ಈ ಪ್ರತಿಯೊಂದು ವಿಧದಲ್ಲಿಯೂ ಮೌಲ್ಯಮಾಪನದ ಸಲುವಾಗಿ ಸುಸಂಗತ ಘಟಕಗಳನ್ನು ಪಟ್ಟಿ ಮಾಡಲಾಗುತ್ತದೆ.

1. **ಆಲೋಚನಾತ್ಮಕ ಮೌಲ್ಯಮಾಪನ (Reflective Evaluation – R):** ಕಾರ್ಯಕ್ರಮ ಮೌಲ್ಯಮಾಪನದ ಪರಿಕಲ್ಪನಾ ಚೌಕಟ್ಟು ಚಿತ್ರದಲ್ಲಿ ಸೂಚಿಸಿದಂತೆ, ಕಾರ್ಯಕ್ರಮದ ಪ್ರಗತಿ ಮತ್ತು ಮೌಲ್ಯಮಾಪನದ ಪ್ರತಿಯೊಂದು ಹಂತದಲ್ಲಿ, ಕಾರ್ಯಕ್ರಮದ

Digitised by Bharatavani, CIIL

ಉದ್ದೇಶಗಳನ್ನು ರೂಪಿಸುವುದರಿಂದ ಹಿಡಿದು ಮೌಲ್ಯಮಾಪಕರು ಕಾರ್ಯಕ್ರಮ ಮೌಲ್ಯಮಾಪನವನ್ನು ಕೈಗೊಳ್ಳುವವರೆಗೆ ಅಥವಾ ಆಲೋಚನಾತ್ಮಕ ಮೌಲ್ಯಮಾಪನವನ್ನು ಆಧರಿಸಿ ಮೌಲ್ಯಮಾಪನ ಅಥವಾ ಯೋಜನೆ ಹಾಗೂ ಸಂದರ್ಭ(Context – C), ಪ್ರವೇಶ್ಯ(Input – I), ಕಾರ್ಯವಿಧಾನ (Process – P), ಉತ್ಪತ್ತಿ(Product-P) ಮತ್ತು ಪರಿಣಾಮ (Impact) ದಲ್ಲಿ ಮೌಲ್ಯಮಾಪನದ ವಿಭಿನ್ನ ಮುಖಗಳನ್ನು ಕುರಿತಾದ ಪ್ರತಿಯೊಂದು ನಿರ್ಧಾರವನ್ನು ತೆಗೆದುಕೊ;ಳ್ಳಲಾಗುವುದು. ಇದನ್ನು ಕಾರ್ಯಕ್ರಮ ಉದ್ದೇಶಗಳಿಂದ ಕಾರ್ಯಕ್ರಮ ಮೌಲ್ಯಮಾಪನಕ್ಕೆ, ಮತ್ತು ಸಾಂದರ್ಭಿಕ ಮೌಲ್ಯಮಾಪನದಿಂದ ಪರಿಣಾಮಕಾರಿ ಮೌಲ್ಯಮಾಪನಕ್ಕೆ ಸಾಗುವ ಬಾಣದ ಗುರುತಿನಿಂದ ತೋರಿಸಲಾಗಿದೆ. ಆಲೋಚನಾತ್ಮಕ ಮೌಲ್ಯಮಾಪನಕ್ಕೆ ಸಂಬಂಧಿಸಿದ ಮೂರು ಘಟಕಗಳೆಂದರೆ ದತ್ತಾಂಶ ಸಂಗ್ರಹ, ದತ್ತಾಂಶ ಪರಿಷ್ಕರಣೆ ಮತ್ತು ನಿರ್ಣಯಗಳ ರೂಪಣೆ.

**2. ರೂಪಣಾತ್ಮಕ ಮೌಲ್ಯಮಾಪನ (Formative Evaluation-R):** ಚಿತ್ರದಲ್ಲಿ ಕೊಂಡಿಯ ಮೂಲಕ ತೋರಿಸಿದಂತೆ, ರೂಪಣಾತ್ಮಕ ಮೌಲ್ಯಮಾಪನದ ಗಮನವು ಮೌಲ್ಯಮಾಪನವನ್ನು ಪ್ರತಿಯೊಂದು ಹಂತದ ಮತ್ತು ಮೌಲ್ಯಮಾಪನದ ಐದು ಅಂಶಗಳ(CIPPI) ಸಂಯೋಜಿತ ಭಾಗವಾಗಿ ಮಾಡುವುದಾಗಿದೆ. ಇದನ್ನು ಬಾಣದೊಂದಿಗೆ ವೃತ್ತಾಕಾರದ ಬಿಂದು ಗೆರೆಯಿಂದ ತೋರಿಸಲಾಗಿದೆ. ಇಲ್ಲಿ ಆಶಯ ಏನೆಂದರೆ ಸಂಗ್ರಹವಾಗುವ ನಿದರ್ಶನಗಳನ್ನು ಕಾರ್ಯಕ್ರಮ ನಡೆಯುತ್ತಿರುವಲ್ಲಿಗೆ ತಲುಪಿಸುವುದು. ಇದು ಸಂಘಟಕರಿಗೆ, ಅಭಿವೃದ್ಧಿ ಪಡಿಸುವವರಿಗೆ ಮತ್ತು ಮೌಲ್ಯಮಾಪಕರಿಗೆ ಕ್ರಿಯಾ ಕಾರ್ಯಗಳನ್ನು, ಕಾರ್ಯತಂತ್ರಗಳು ಇತ್ಯಾದಿಗಳನ್ನು ಬದಲಾಯಿಸಲು, ತಿದ್ದುಪಡಿ ಮಾಡಲು, ಹೆಚ್ಚಿಸಲು, ಅಳವಡಿಸಿಕೊಳ್ಳಲು ಅಥವಾ ಸುಧಾರಣೆಗೆ ಒಳಪಡಿಸಲು ನೆರವು ನೀಡುವುದು. ರೂಪಣಾತ್ಮಕ ಮೌಲ್ಯಮಾಪನದಲ್ಲಿ ಅಂದಾಜಿಸಲಾಗುವ ಸಂಬಂಧಪಟ್ಟ ಘಟಕಗಳೆಂದರೆ ನಡುವೆ ಸಂಗ್ರಹಿಸಲಾದ ನಿದರ್ಶನಗಳು, ದತ್ತಾಂಶ ಪರಿಷ್ಕರಣದ ಅನುಸಂಧಾನ ಮತ್ತು ತಂತ್ರಜ್ಞಾನ ಮತ್ತು ತೀರ್ಮಾನ ಕೈಗೊಳ್ಳುವಿಕೆ (ವಿಧಗಳು, ಆಧಾರ ಮತ್ತು ಕ್ರಮ) ಮತ್ತು ಕೈಗೊಂಡಿರುವ ನಿರ್ಧಾರ.

**3. ಸಂಕಲಿತ ಮೌಲ್ಯಮಾಪನ (Summative Evaluation-S):** ಚಿತ್ರದಲ್ಲಿ ಸೂಚಿಸಿದಂತೆ ಸಂಕಲಿತ ಮೌಲ್ಯಮಾಪನವು ಕಾರ್ಯಕ್ರಮವೊಂದರ ಬೇರೆ ಬೇರೆ ಹಂತಗಳ ಮೌಲ್ಯಮಾಪನದ ವಿವಿಧ ಅಂಶಗಳಿಗೆ ಸಂಬಂಧಿಸಿದ ಉದ್ದೇಶಿತ ಮತ್ತು ಅವಲೋಕಿತ ಫಲಿತಾಂಶಗಳ ನಡುವಿನ ಸಮಂಜಸತೆ ಅಥವಾ ಅಸಮಂಜಸತೆಯನ್ನು ಕಂಡು ಹಿಡಿಯುವ ದಿಕ್ಕಿನಲ್ಲಿ ಇರುತ್ತದೆ. ಇದನ್ನು ಆಧರಿಸಿ ಸಂಗ್ರಹಿಸಲಾದ ದತ್ತಾಂಶ, ದತ್ತಾಂಶದ ಪರಿಣಾಮಗಳು, ಪರಿಷ್ಕರಣದ ವಿಧಾನ ಮತ್ತು ವಿಶ್ಲೇಶಣಾ ತಂತ್ರಜ್ಞಾನ ಮತ್ತು ತೀರ್ಮಾನ ಕೈಗೊಳ್ಳುವ ಕ್ರಮ ಮತ್ತು ತೆಗೆದುಕೊಂಡ ನಿರ್ಧಾರಗಳ, ವಿಧಾನಗಳ ಮಾನ್ಯತೆ ಮತ್ತು ವಿಶ್ವಾಸಾರ್ಹತೆ ಇತ್ಯಾದಿಗಳನ್ನು ಕುರಿತು ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ.

ಕಾರ್ಯಕ್ರಮ ಮೌಲ್ಯಮಾಪನದ ಸೂಚಿತ ಮಾದರಿಯ ಕ್ರಿಯಾಸರಣಿಯನ್ನು ಪ್ರತಿಫಲಿಸುವ ಪರಿಕಲ್ಪನಾತ್ಮಕ ಚೌಕಟ್ಟನ್ನು (Paradigm) ಚಿತ್ರ 1 ರಲ್ಲಿ ನಕ್ಷೆಯ ರೂಪದಲ್ಲಿ ತೋರಿಸಿಕೊಡಲಾಗಿದೆ.




**ಕಾರ್ಯಕ್ರಮ ಮೌಲ್ಯಮಾಪನದ ಚೌಕಟ್ಟಿನ ಕಾರಕಾಂಶಗಳು:**

ಮೌಲ್ಯಮಾಪನದ ಮೂರು ವಾಸ್ತವ ಅಂಶಗಳಾಗಿರುವ ಮೌಲ್ಯಮಾಪನದ ಅಂಶಗಳು, ಮೌಲ್ಯಮಾಪನದ ಹಂತಗಳು ಮತ್ತು ಮೌಲ್ಯಮಾಪನದ ಕ್ರಮ – ಇವು ಮೌಲ್ಯಮಾಪನದ ವಿವಿಧ ಘಟಕಗಳನ್ನು ಬಿಂಬಿಸುತ್ತವೆ. ಮೌಲ್ಯಮಾಪನದ ಮೂರು ಮುಖಗಳ ವಿವಿಧ ಘಟಕಗಳ ನಡುವೆ ಪರಸ್ಪರ ಅನ್ಯೋನ್ಯ ಕ್ರಿಯೆಯನ್ನು 3 ಆಯಾಮದ ಪರಿಪ್ರೇಕ್ಷ್ಯೆಯಿಂದ ಕಾಣಿಸುವುದಾದರೆ, ಅದು 5 x 4 x 3 ಅಂದರೆ 60 ಚೌಕಟ್ಟಿನ ವಾಸ್ತವಾಂಶಗಳನ್ನು ಒದಗಿಸುತ್ತದೆ. ಮಾದರಿಯನ್ನು ಪ್ರತಿನಿಧಿಸುವ ಚಿತ್ರ 2 ನೀಡಿದಂತೆ. ಅನೇಕ ಚೌಕಳಿಗಳ ಗಣಿತ ತಾಂತ್ರಿಕತೆಯನ್ನು ಈ ಕೆಳಗಿನ ಚಿತ್ರದಿಂದ ತಿಳಿದುಕೊಳ್ಳಬಹುದಾಗಿದೆ: ಯಾರಿಗಾದರೂ ಯೋಜನಾ ಹಂತ(ಪಿ)ವನ್ನು ಐದು ವಾಸ್ತವಾಂಶಗಳಲ್ಲಿ (CIPPI) ಪ್ರತಿಯೊಂದಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನದ 3 ಕ್ರಮಗಳ ನಿಬಂಧನೆಯಲ್ಲಿ(RFS) ತೀರ್ಮಾನಿಸುವ ಆಸಕ್ತಿ ಇದ್ದರೆ ನಮ್ಮಲ್ಲಿ 5

Digitised by Bharatavani, CIIL

x 3=15 ವಿಧಗಳ ಸಾಕ್ಷ್ಯಗಳು (CIPPI), ಯೋಜನಾ ಹಂತದಲ್ಲಿ ಆರ್‌ಎಫ್‌ಎಸ್ 5 ಪೆಟ್ಟಿಗೆಗಳಲ್ಲಿ ಇರುತ್ತವೆ. ಇದೇ ರೀತಿ ಯೋಜನೆಯ ಒಂದೇ ಒಂದು ಘಟಕ, ಉದಾಹರಣೆಗೆ 'ಕಾರ್ಯಸೂಚಿತವಾಗಿರುವ ಉದ್ದೇಶಗಳು'ವಿನ ಪ್ರಗತಿಯನ್ನು ತೆಗೆದುಕೊಂಡರೆ, ಇದನ್ನು ಕೂಡ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದರ ಮೂಲಕ ಮೌಲ್ಯಮಾಪನ ಮಾಡಬಹುದಾಗಿದೆ:

* ಕಾರ್ಯಕ್ರಮ ಉದ್ದೇಶಗಳು ರಾಷ್ಟ್ರೀಯ ಕಾಳಜಿಗಳಿಗೆ ಸಂಬಂಧಿಸಿವೆಯೇ? (ಸಂದರ್ಭ)
* ಉಪಲಬ್ಧವಿರುವ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮದ ಉದ್ದೇಶಗಳು ವಾಸ್ತವಿಕವಾಗಿರುವುದೇ? (ಸಂಭಾರಗಳು)
* ಕಾರ್ಯಕ್ರಮದ ಈ ಉದ್ದೇಶಗಳನ್ನು ಕಾರ್ಯಗತಗೊಳಿಸುವುದು ಸಾಧ್ಯವೇ? (ಪ್ರಕ್ರಿಯೆ)
* ಉದ್ದೇಶಿತ ಫಲಿತಾಂಶಗಳಿಗೆ ಈ ಉದ್ದೇಶಗಳು ಸೂಚಿತವಾಗಿವೆಯೇ? (ಉತ್ಪನ್ನ)
* ಈ ಉದ್ದೇಶಗಳನ್ನು ಸಾಧಿಸಿದರೆ ನಿರೀಕ್ಷಿತ ಕಾರ್ಯಕ್ರಮ ಪರಿಣಾಮ ಪಡೆಯಬಹುದೇ (ಪರಿಣಾಮ)

ಈ ಪ್ರಶ್ನೆಗಳಲ್ಲಿ ಪ್ರತಿಯೊಂದನ್ನೂ ಆಲೋಚನಾತ್ಮಕ, ರೂಪಣಾತ್ಮಕ ಅಥವಾ ಸಂಕಲಿತ ಅಥವಾ ಒಂದಕ್ಕಿಂತ ಹೆಚ್ಚು ಮೌಲ್ಯಮಾಪನ ಕ್ರಮದ ಸಂಯೋಜನೆಗೆ ಸೂಚಿಸಬಹುದಾಗಿದೆ. ಇದೇ ರೀತಿ ನಾವು ಕಾರ್ಯಕ್ರಮವನ್ನು ಯೋಜನಾ ಹಂತ(ಪಿ), ಪ್ರಗತಿ(ಡಿ), ಅನುಷ್ಠಾನ(ಐ) ಮತ್ತು ಸಂಕಲಿತ ಮೌಲ್ಯಮಾಪನ ಹಂತ(ಎಸ್)ಗಳಲ್ಲಿ ಮೌಲ್ಯಮಾಪನ ನಡೆಸುವಾಗ ಇತರ ಕಾರ್ಯಕ್ರಮ ಘಟಕಗಳನ್ನು ಅಗತ್ಯದ ನಿದರ್ಶನಗಳೊಂದಿಗೆ ಚೌಕಟ್ಟಿನ ವಾಸ್ತವಾಂಶಗಳನ್ನು ಗುರುತಿಸಬಹುದು.

**ಮೌಲ್ಯಮಾಪನದ ಹಂತಗಳು**




**ಚಿತ್ರ: 2**

**ಕಾರ್ಯಕ್ರಮ ಮೌಲ್ಯಮಾಪನದಲ್ಲಿರುವ ಕೆಲವು ಮಿತಿಗಳು:**

1. ಕಾರ್ಯಕ್ರಮ ಮೌಲ್ಯಮಾಪನದ ಕ್ಷೇತ್ರದಲ್ಲಿ ಮಾಡಿರುವ ಸುಧಾರಣೆಯ ಹೊರತಾಗಿಯೂ, ಶೈಕ್ಷಣಿಕ ಮೌಲ್ಯಮಾಪನದ ಕ್ಷೇತ್ರವು ತನ್ನ ಸಂಪೂರ್ಣ ಸಂಭಾವ್ಯ ಸಾಧ್ಯತೆಯನ್ನು ಇನ್ನೂ ತಲುಪಿಲ್ಲ. ಇದಕ್ಕೆ ಕೆಲವು ಪ್ರಮುಖ ಅಡಚಣೆಗಳು ಕಾರಣವೆಂದು ವರ್ದರ್ನ್ ತೋರಿಸಿಕೊಟ್ಟಿದ್ದಾರೆ. ಅದರಲ್ಲಿ ಕಾರ್ಯಕ್ರಮ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪರ್ಯಾಪ್ತ ಜ್ಞಾನದ ಆಧಾರದ ಕೊರತೆ ಒಂದು. ಮೌಲ್ಯಮಾಪನದ ಕುರಿತು ಸಂಶೋಧನೆ ಇನ್ನೂ ಆಗಬೇಕಾಗಿದೆ ಎಂಬುದಾಗಿ ವರ್ದರ್ನ್, ಸ್ಯಾಂಡರ್ಸ್, ಸ್ಮಿತ್, ಮತ್ತು ಇತರರು ಬಯಸುತ್ತಾರೆ. ಈಗಿನ ವಿದ್ಯಮಾನದೊಂದಿಗೆ ಒಟ್ಟು ತೀರ್ಮಾನಗಳು ಅಥವಾ ದತ್ತಾಂಶ ಸಂಗ್ರಹದ ತಂತ್ರಜ್ಞಾನದ ತೀರ್ಮಾನದಲ್ಲಿ ಅಗತ್ಯದ ಮೌಲ್ಯನಿರ್ಧಾರವನ್ನು ನಡೆಸಲು ಅತ್ಯಂತ ಪರಿಣಾಮಕಾರಿ ವಿಧಾನವನ್ನು ಕುರಿತಾದ ಪ್ರಯೋಗಾತ್ಮಕ ಮಾಹಿತಿಯ ಕುರಿತಾದ ತಿಳುವಳಿಕೆ ಬಹಳ ಕಡಿಮೆ. ಯಾವುದರಲ್ಲಿ ಮೌಲ್ಯಮಾಪನವನ್ನು ಅಭ್ಯಾಸಿಸಲಾಗಿದೆ, ಮೌಲ್ಯಮಾಪನದ ಸ್ವರೂಪ, ಬಳಕೆ ಮತ್ತು ನಿರ್ದಿಷ್ಟ ಮೌಲ್ಯಮಾಪನದ ವಿಧಾನಗಳ ಪರಿಣಾಮಕಾರಿತ್ವದ ಕುರಿತು ಸಂಶೋಧನೆಯಾಗಬೇಕೆಂದು ಸ್ಮಿತ್(1981) ಸೂಚಿಸುತ್ತಾರೆ.

2. ಮೌಲ್ಯಮಾಪನ ಅಧ್ಯಯನಗಳ ಮೌಲ್ಯಮಾಪನವನ್ನು ಅಲ್ಲಗಳೆಯಲಾಗದು ಅಂದರೆ ಪರಾಮೌಲ್ಯಮಾಪನ(ಮೆಟಾ ಇವ್ಯಾಲ್ಯುಶನ್) ವನ್ನು ಅಲ್ಲಗೆಳೆಯಲಾಗದು. ಪ್ರಮಾಣಗಳ ಬಳಕೆ, ಸಂಭವನೀಯತೆ, ಗುಣಲಕ್ಷಣ, ಮತ್ತು ನಿರ್ದಿಷ್ಟತೆಯನ್ನು ಮೌಲ್ಯಮಾಪಕರು ಬೆಳೆಸಿಕೊಂಡಿರುವವರಾದರೂ, ಕಾರ್ಯಕ್ರಮ ಮೌಲ್ಯಮಾಪನದಲ್ಲಿ ಅದನ್ನು ಬಳಸಿದ ನಿದರ್ಶನ ಇಲ್ಲವೆಂದೇ ಹೇಳಬಹುದು. ಕೆಲವು ಹೊಸ ಮೌಲ್ಯಮಾಪನದ ಅಧ್ಯಯನಗಳನ್ನು ಆಂತರಿಕವಾಗಿ ನಡೆಸಲಾಗಿದ್ದರೂ, ಬಾಹ್ಯ ಮೌಲ್ಯಮಾಪಕರನ್ನು ತಮ್ಮ ಮೌಲ್ಯಮಾಪನ ಅಧ್ಯಯನಗಳ ಮೌಲ್ಯಮಾಪನವನ್ನು ನಡೆಸುವಂತೆ ಕೇಳಿರುವುದು ಕಡಿಮೆ. ಹೆಚ್ಚು ಹೊಸ-ಮೌಲ್ಯಮಾಪನ ಅಧ್ಯಯನಗಳು ಕೆಲವು ಕಳಪೆ ಮೌಲ್ಯಮಾಪನ ಅಧ್ಯಯನಗಳ ಪರೀಕ್ಷೆಯನ್ನು ನಡೆಸಬಹುದು. ಇಲ್ಲದಿದ್ದರೆ ಇವುಗಳ ಪರೀಕ್ಷೆ ನಡೆಯುವ ಸಂಭವ ಇರುವುದಿಲ್ಲ.

3. ಕಾರ್ಯಕ್ರಮ ಮೌಲ್ಯಮಾಪನದ ರಾಜಕೀಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳದಿರುವುದು ಇನ್ನೊಂದು ತಡೆಯಾಗಿದೆ. ಕ್ರೊನ್‌ಬ್ಯಾಕ್ (1980) ಅವರು ಮೌಲ್ಯಮಾಪನವನ್ನು ಮುಖ್ಯವಾಗಿ ರಾಜಕೀಯ ಚಟುವಟಿಕೆಯಾಗಿ ಮತ್ತು ಸಾಮಾಜಿಕ ಕಾರ್ಯಕ್ರಮಗಳ ಮೇಲೆ ಪ್ರಭಾವ ಬೀರಲು ಉತ್ತಮ ಸಂಸ್ಥೆಯಾಗಿ ವರ್ಣಿಸುತ್ತಾರೆ. ಕೆಲವೊಮ್ಮೆ ಮೌಲ್ಯಮಾಪಕರು ಸಹಭಾಗಿಗಳಿಗೆ ಪ್ರಜಾಸತ್ತಾತ್ಮಕ, ಬಹುತ್ವದ ನಿರ್ಣಯ-ಕೈಗೊಳ್ಳುವ ಪ್ರಕ್ರಿಯೆಯನ್ನು ನಡೆಸಲು ತಿಳಿವಳಿಕೆಯನ್ನು ನೀಡುವ ಬದಲಿಗೆ ಸರಿಯಾದ ನಿರ್ಣಯಗಳನ್ನು ಸರಳೀಕರಿಸುವ 'ಸತ್ಯ'ದ ಅವಾಸ್ತವಿಕ ಗುರಿಗಳನ್ನು ಅನುಸರಿಸುತ್ತಾರೆ. ಕಾರ್ಯಕ್ರಮ ಮೌಲ್ಯಮಾಪನವು ಸಾರ್ವಜನಿಕ ಕಾರ್ಯನೀತಿ

Digitised by Bharatavani, CIIL

ರೂಪಣೆಯೊಂದಿಗೆ ತನ್ನನ್ನು ಜೋಡಿಸಿಕೊಂಡಿರುತ್ತದೆ. ಇಲ್ಲಿ ಎಲ್ಲಾ ರಾಜಕೀಯ ಶಕ್ತಿಗಳು ಒಳಗೊಂಡಿರುತ್ತವೆ.

4. ಮೌಲ್ಯಮಾಪನ ಉಪಕ್ರಮಗಳು ಮತ್ತು ಮೌಲ್ಯಮಾಪನ ತಂತ್ರಗಳು ಪರಿಮಿತ ಆಯ್ಕೆಯು ಮೌಲ್ಯಮಾಪನವನ್ನು ವೈಜ್ಞಾನಿಕ ಶಿಸ್ತಾಗಿಸುವ ಶ್ರದ್ಧಾ ಭರವಸೆಯಿಂದ ನಮ್ಮನ್ನು ತಡೆಯುತ್ತದೆ. ಶಿಕ್ಷಣ ಸಾಮಾಜಿಕ ಕಾರ್ಯವಿಧಾನ ಕ್ಷೇತ್ರ, ಅದು ತನ್ನ ವಿಷಯಾಂಶವನ್ನು ಬೇರೆ ಜ್ಞಾನ ಶಿಸ್ತುಗಳಿಂದ ಪಡೆಯುತ್ತದೆ, ಸ್ವತಃ ಅದು ಜ್ಞಾನ ಶಿಸ್ತು ಅಲ್ಲವೆಂಬ ವ್ಯಾಪಕ ನಂಬಿಕೆ ಇದೆ. ಆದುದರಿಂದ, ಬೇರೆ ಜ್ಞಾನ ಶಿಸ್ತುಗಳಿಂದ ತನ್ನ ವಿಧಾನಗಳು ಮತ್ತು ತಂತ್ರಜ್ಞಾನವನ್ನು ಎರವಲು ಪಡೆಯುತ್ತಿರುವ ಕಾರ್ಯಕ್ರಮ ಮೌಲ್ಯಮಾಪನ ತನ್ನ ಬಲದಿಂದಲೇ ಜ್ಞಾನ ಶಿಸ್ತಿನ ಸ್ಥಾನವನ್ನು ಎಂದಾದರೂ ಪಡೆಯುವ ಸಂಭವನೀಯತೆ ಕಡಿಮೆ. ಶೈಕ್ಷಣಿಕ ಕಾರ್ಯಕ್ರಮದ ಅಂತಸ್ಥ ಸತ್ವವು ಅದು ಅಳವಡಿಸಿಕೊಳ್ಳಬಹುದಾದ ಕಾರ್ಯತಂತ್ರಗಳ ಮತ್ತು ಅವುಗಳನ್ನು ಶಕ್ತಿಯುತ ಅನುಸಂಧಾನಗಳಾಗಿ ಸಂಯೋಜಿಸುವ ಕಾರ್ಯತಂತ್ರಗಳ ಮತ್ತು ಸಾಧನಗಳ ಆಳ ಮತ್ತು ಅಗಲದಲ್ಲಿ ಇರುತ್ತದೆ. ಮೌಲ್ಯಮಾಪಕರ ಸಲಕರಣೆಗಳ ಉತ್ತಮ ಬಳಕೆ ಅನಿಯಮಿತವಾದುದು. ಇಂದಿನ ಕಾರ್ಯಕ್ರಮ ಮೌಲ್ಯಮಾಪನಕ್ಕೆ ಅಗತ್ಯವಿರುವುದು ವಿವಿಧ ಮಾದರಿಗಳು, ವಿಧಾನಗಳು ಮತ್ತು ತಂತ್ರಜ್ಞಾನಗಳಿಂದ ತೆಗೆದುಕೊಳ್ಳಲಾದ ಪಕ್ವ ಮತ್ತು ಸೂಕ್ಷ್ಮಾಭಿರುಚಿಯ ಉಪಕ್ರಮಗಳಾಗಿವೆ..

ಮೌಲ್ಯಮಾಪನ ಸಂಶೋಧನಾ ಕ್ಷೇತ್ರವು ಸಮಾಜ ವಿಜ್ಞಾನ ಚಟುವಟಿಕೆಯಾಗಿ ಇನ್ನೂ ಶೈಶವವಾಸ್ಥೆಯಲ್ಲಿದೆ(ಬರ್ಕ್ ಮತ್ತು ರೊಸ್ಸಿ, 1990). ನಾವು ಮೌಲ್ಯಮಾಪನವನ್ನು ಸಾಧ್ಯವಾದಷ್ಟು ಸರಳವಾಗಿ ಇಟ್ಟುಕೊಳ್ಳೋಣವೆನ್ನುವುದು ಈ ಲೇಖಕರ ಸಂದೇಶ. ಕಾರ್ಯಕ್ರಮದ ಆಡಳಿತಗಾರರು ಮತ್ತು ಮೌಲ್ಯಮಾಪಕರ ನಡುವೆ ಗಮನಾರ್ಹ ಅರ್ಥೈಸುವಿಕೆ ಅಗತ್ಯವಿದೆ. ಗುಣಮಟ್ಟ ನಿಯಂತ್ರಣಾ ಕ್ರಮಗಳನ್ನು ದತ್ತಾಂಶ ಸಂಗ್ರಹ, ನಮೂನೆ ಸಂಗ್ರಹ, ಅಳತೆ ಮಾಡುವುದು, ದತ್ತಾಂಶ ಸೇರಿಸುವುದು ಇತ್ಯಾದಿಗಳನ್ನು ಪ್ರತಿಯೊಂದು ಹಂತದಲ್ಲಿ ಸೇರಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಇನ್ನೂ ಹೆಚ್ಚಿನ ಸಂಶೋಧನಾ ಅಂದಾಜು ಬಂಡವಾಳವನ್ನು ಒದಗಿಸಬೇಕಾಗುತ್ತದೆ(ರೊಸ್ಸಿ). ಆಂತರಿಕ ಸಾಮಂಜಸ್ಯದ ತಪಾಸಣೆಗಳು, ವಿವಿಧ ರೀತಿಯ ತಪ್ಪುಗಳಿಗಾಗಿ ದತ್ತಾಂಶದ ಪರಿಶೀಲನೆ, ಮತ್ತು ಗುಣಮಟ್ಟ ನಿಯಂತ್ರಣದ ಇತರ ಕ್ರಮಗಳು – ಇವುಗಳನ್ನು ಕೂಲಂಕಷ ಅಂಕಿಅಂಶಗಳ ವಿಶ್ಲೇಷಣೆಯನ್ನು ಕೈಗೊಳ್ಳುವ ಮೊದಲೇ ಅಳವಡಿಸಿಗೊಳ್ಳುವ ಅಗತ್ಯವಿದೆ.

ಭಾರತದಲ್ಲಿ ವಿದ್ಯಾರ್ಥಿಗಳ ಮೌಲ್ಯಮಾಪನ ಸುಸ್ಪಷ್ಟವಾಗಿ ಮುಂದುವರಿದ ರೀತಿಯ ಹಾಗೆ ಮೊದಲೇ ಸಿದ್ಧಪಡಿಸಿದ ಕಾರ್ಯಕ್ರಮದ ಮೌಲ್ಯಮಾಪನವು ಜನರ ಗಮನವನ್ನು ಸೆಳೆದಿಲ್ಲ. ಇದು ಖಂಡಿತವಾಗಿಯೂ ಅಂಕಿಅಂಶಗಳನ್ನು ಮತ್ತು ನಿದರ್ಶನಗಳನ್ನು ಒದಗಿಸುತ್ತದೆ. ಇದನ್ನು ಪಠ್ಯಕ್ರಮದ ಫಲೋತ್ಪಾದಕತೆ, ಬೋಧನಾ ಫಲೋತ್ಪಾದಕತೆ, ಮತ್ತು ಕಾರ್ಯಕ್ರಮದ ಪರಿಣಾಮಗಳನ್ನು ಕೂಡ ಸಮರ್ಥಿಸಿಕೊಳ್ಳಲು ತೀರ್ಪಿನ ರೂಪವಾಗಿ ಪರೋಕ್ಷವಾಗಿ ರಚಿಸಬಹುದಾಗಿದೆ. ಉತ್ತಮ ವಿಧಿಯು ಯಶಸ್ವೀ ಕಾರ್ಯಕ್ರಮ ಮೌಲ್ಯಮಾಪನಕ್ಕೆ ಉದ್ದೇಶಿತ ಫಲಿತಾಂಶಗಳನ್ನು ನೀಡಬೇಕಾದ ಅಗತ್ಯವಿರುವುದಿಲ್ಲ. ಮೌಲ್ಯಮಾಪನ ಸಲಕರಣೆಗಳು ಮತ್ತು ತಂತ್ರಜ್ಞಾನಗಳ ವಿಶ್ವಾಸಾರ್ಹತೆ ಎಷ್ಟೇ ಆಗಿದ್ದರೂ, ಬೇಕಾಗಿಲ್ಲದ, ನೀರೀಕ್ಷಿತ ಮತ್ತು ಅನುದ್ದೇಶಿತ ಹಾದಿಯ ನಡುವಿನ ತಡೆಗಳಿಂದಾಗಿ ಅವು ನಿರೀಕ್ಷಿತ ಲಾಭಾಂಶಗಳನ್ನು ಒದಗಿಸಲಾರವು. ಯಾವ ಫಲವನ್ನು ನಿರೀಕ್ಷಿಸಲಾಗಿದೆಯೋ ಅದನ್ನು ವಿವೇಚನೆಯ ಆಧಾರದಿಂದ ನಿರ್ಧರಿಸಲಾಗುತ್ತದೆ ಮತ್ತು ಯಾವುದನ್ನು ವೀಕ್ಷಿಸಲಾಗಿದೆಯೋ ಅದು ಪ್ರಯೋಗಾತ್ಮಕ ನಿದರ್ಶನವಾಗಿರುತ್ತದೆ. ಹೀಗಾಗಿ, ಈ ಕೆಳಗಿನ ಅಂಶಗಳ ನಡುವಿನ ವಿರೋಧಾಭಾಸವನ್ನು ತಿಳಿದುಕೊಳ್ಳಲು ಕಾರ್ಯಕ್ರಮದ ಸಂಕಲಿತ ಮೌಲ್ಯಮಾಪನದ ಅಗತ್ಯವಿರುತ್ತದೆ: ಉದ್ದೇಶಿತ ಗುರಿಗಳು ಮತ್ತು ಕಾಣಿಸಿಕೊಳ್ಳುವ ಗುರಿಗಳು; ಉದ್ದೇಶಿತ ಮತ್ತು ಬಳಸಿಕೊಳ್ಳಲಾದ ಸಂಪನ್ಮೂಲ ಪ್ರವೇಶ್ಯಗಳು; ಉದ್ದೇಶಿತ ಮತ್ತು ನಿಜವಾದ ಕಾರ್ಯಕ್ರಮ ಆಯವ್ಯಯ; ಉದ್ದೇಶಿತ ಮತ್ತು ವೀಕ್ಷಕ ನಿರ್ವಹಣಾ ಚಟುವಟಿಕೆಗಳು; ಉದ್ದೇಶಿತ ಮತ್ತು ವೀಕ್ಷಕ ಸಾಮಗ್ರಿಗಳ ಗುಣಮಟ್ಟ; ಉದ್ದೇಶಿತ ಮತ್ತು ಕಾಣಿಸಿಕೊಳ್ಳುವ ಕಾರ್ಯಅನುಷ್ಠಾನ ಕಾರ್ಯತಂತ್ರಗಳು .ಉದ್ದೇಶಿತ ಮತ್ತು ವಾಸ್ತವ ಉತ್ಪನ್ನಗಳು ಅಥವಾ ಫಲಿತಾಂಶಗಳು; ಕಾರ್ಯನಿರತರ ಉದ್ದೇಶಿತ ಮತ್ತು ಅವಲೋಕಿತ ಸಹಭಾಗಿತ್ವ ಮತ್ತು ಗ್ರಾಹಕರಿಗೆ ಪ್ರಾಪ್ತವಾಗುವ ಉದ್ದೇಶಿತ ಮತ್ತು ನೈಜ ಲಾಭಗಳು.

**ಸಂಶೋಧನೆಗಳ ಸಂಕ್ಷಿಪ್ತ ಸಾರಾಂಶ:**

(a) ಪ್ರಾರಂಭದಲ್ಲಿಯೇ ತಿಳಿಸಬಹುದೇನೆಂದರೆ, ಮೌಲ್ಯನಿರ್ಧಾರ ಮತ್ತು ಮೌಲ್ಯಮಾಪನದ ಕ್ಷೇತ್ರದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳ ಮೌಲ್ಯನಿರ್ಧಾರಕ್ಕೆ ಬಹಳ ಕಡಿಮೆ ಗಮನವನ್ನು ನೀಡಲಾಗಿದೆ. NCERT ಯವರು ಹೊರತಂದಿರುವ ಶಿಕ್ಷಣದ ನಾಲ್ಕನೆಯ ಸಮೀಕ್ಷೆಯಲ್ಲಿನ ಶೈಕ್ಷಣಿಕ ಮೌಲ್ಯಮಾಪನದ ಕುರಿತಾದ ಪ್ರವೃತ್ತಿ ವರದಿಯು ಸುಮಾರು 225 ಅಧ್ಯಯನಗಳನ್ನು ತೋರಿಸಿಕೊಟ್ಟಿದೆ. ಇವುಗಳು ಸಾಧನೆಯ ಪರೀಕ್ಷೆ, ಪತ್ತೆ ಹಚ್ಚುವಿಕೆ, ಪರೀಕ್ಷೆಗಳು, ಸಾಧನೆಯ ಮೇಲೆ ಪ್ರಭಾವ ಬೀರುವ ವಾಸ್ತವಾಂಶಗಳು, ನಿರೀಕ್ಷೆ–ವ್ಯಕ್ತಪಡಿಸುವಿಕೆ–ಪದೋನ್ನತಿ ಮತ್ತು ಸೋಲುಗಳಿಗೆ ಸಂಬಂಧಿಸಿದ್ದಾಗಿವೆ, ಆದರೆ ಇವುಗಳಲ್ಲಿ ಯಾವುದೂ ಕಾರ್ಯಕ್ರಮ ಮೌಲ್ಯಮಾಪನದ ಕುರಿತಾಗಿ ಇರುವುದಲ್ಲ. ಇವುಗಳಲ್ಲಿ 221 ವಿದ್ಯಾರ್ಥಿ ಮೌಲ್ಯಮಾಪನದ್ದಾಗಿವೆ ಮತ್ತು ಇದರಲ್ಲಿ 219 ಲಿಖಿತ ಪರೀಕ್ಷೆಗಳ ಗ್ರಹಿಕಾ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿವೆ. ಅದರಲ್ಲಿಯೂ ಮುಖ್ಯವಾಗಿ ಸಾಧನೆಯ ಪರೀಕ್ಷೆ ಅಳೆಯುವ ಅಂಶಕ್ಕೆ ಮುಖ್ಯ ಆದ್ಯತೆಯನ್ನು ನೀಡಲಾಗಿದೆ. ಪರೀಕ್ಷೆಗಳ; ಅಧ್ಯಾಪನೆಯ ಮತ್ತು ಪರಿಸರ ಅಂಶಗಳನ್ನು ಸಂಪೂರ್ಣವಾಗಿ ಅಲಕ್ಷಿಸಲಾಗಿದೆ.

Digitised by Bharatavani, CIIL

(b) ಐದನೆಯ ಸಮೀಕ್ಷೆಯ ಸಂಪುಟ 2 ರ ಶೈಕ್ಷಣಿಕ ಮೌಲ್ಯನಿರ್ಧಾರ ಮತ್ತು ಮೌಲ್ಯಮಾಪನದ ಅಧ್ಯಾಯ 61 ಪ್ರವೇಶಿಕೆಗಳಲ್ಲಿ ಕೇವಲ 4 ಮಾತ್ರ ಕಾರ್ಯಕ್ರಮ ಮೌಲ್ಯಮಾಪನದ ಕೆಲವು ಅಂಶಗಳಿಗೆ ಸಂಬಂಧಿಸಿವೆ ಎಂದು ವ್ಯಕ್ತಪಡಿಸಿದೆ. ಆದರೆ ಸಂಕ್ಷಿಪ್ತ ಅನುಬಂಧದಲ್ಲಿ ಇನ್ನೂ ಹೆಚ್ಚಿನ 13 ಅಧ್ಯಯನಗಳ ಉಲ್ಲೇಖವನ್ನು ನೀಡಲಾಗಿದೆ. ರಾಷ್ಟ್ರಮಟ್ಟದ NCERT, NCTE, NUEPA, ದೆಹಲಿ ವಿಶ್ವವಿದ್ಯಾಲಯ, ಜಾಮಿಯ ಮಿಲಿಯ ಇಸ್ಲಾಮಿಯಾ, UGC ಮತ್ತು AIU ಮೊದಲಾದ ಸಂಸ್ಥೆಗಳ ವ್ಯಕ್ತಿಗಳನ್ನು, ಅವರು ಯಾರೇ ಇರಬಹುದು, ಸಂಪರ್ಕಿಸಿದಾಗ ಈ ಲೇಖಕನಲ್ಲಿ ಅವರು ಹೇಳಿದ್ದೇನೆಂದರೆ, 'ಗಮನಾರ್ಹವಾದುದು ಯಾವುದೂ ನಡೆದಿಲ್ಲ ಅಥವಾ ಲಭ್ಯವಿಲ್ಲ.' ಮೌಲ್ಯಮಾಪನ ಕಾರ್ಯಕ್ರಮದ ಈ ಕ್ಷೇತ್ರವು ಸಾಕಷ್ಟು ಮಟ್ಟಿಗೆ ಸಂಶೋಧಕರ ಗಮನವನ್ನು ಸೆಳೆದಿಲ್ಲ ಎನ್ನುವುದಂತೂ ಖಂಡಿತ. ಹಾಗಿದ್ದರೂ, ಅದು ಕಾಣುವಷ್ಟು ನಿರಾಶಾದಾಯಕವಾಗಿಲ್ಲ. ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಲಾದ ಸಂಶೋಧನಾ ಸಾರಾಂಶಗಳು ಮತ್ತು ಬೇರೆ ಬೇರೆ ಅಧ್ಯಯನಗಳಿಂದ ಸಂಗ್ರಹಿಸಲಾದ ಇತರ ಅಧ್ಯಯನಗಳಲ್ಲಿ ಸುಮಾರು 67 ಅಧ್ಯಯನಗಳನ್ನು ಗುರುತಿಸಲಾಗಿದೆ. ಇವುಗಳು ಕಾರ್ಯಕ್ರಮ ಮೌಲ್ಯಮಾಪನದ ಒಂದು ಅಥವಾ ಹೆಚ್ಚು ಘಟಕಗಳ ಕುರಿತು ಉಪಯುಕ್ತ ಅಂಕಿಅಂಶಗಳನ್ನು, ಮಾಹಿತಿ ಮತ್ತು ಫಲಿತಾಂಶಗಳನ್ನು ಒದಗಿಸುತ್ತವೆ. ಅದೇನೇ ಇದ್ದರೂ, ವಾಸ್ತವ ಸಂಗತಿಯೇನೆಂದರೆ ಭಾರತದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳ ಮೌಲ್ಯಮಾಪನದ ಕ್ಷೇತ್ರವು ವ್ಯಾಪಕ ನೆಲೆಯಿಂದ ಒಲವನ್ನು ಸಂಪಾದಿಸಿಲ್ಲ ಅದರಲ್ಲಿಯೂ ವಿಶೇಷವಾಗಿ ಎಂ.ಫಿಲ್, ಮತ್ತು ಪಿಹೆಚ್.ಡಿ.ಗಾಗಿ ಸಂಶೋಧನೆ ನಡೆಸಿದವರಲ್ಲಿ. ಈ ಭಾರತೀಯ 67 ಅಧ್ಯಯನಗಳನ್ನು ವಿವಿಧ ವಿಭಾಗಗಳಲ್ಲಿ ವರ್ಗೀಕರಿಸಿದಾಗ, ವಿವಿಧ ಕ್ಷೇತ್ರದಲ್ಲಿ ನಡೆದ ಅಧ್ಯಯನಗಳ ಸಂಖ್ಯೆಯ ಕುರಿತು ಸಿಗುವ ವಿವರಗಳನ್ನು ಕೆಳಗಿನ ತಾಲಿಕೆಯಲ್ಲಿ ನೀಡಲಾಗಿದೆ:

**ತಾಲಿಕೆ – 1**

| ಕ್ರ. ಸಂ. | ಅಧ್ಯಯನ ಕ್ಷೇತ್ರ | ಎಂ. ಫಿಲ್ | ಪಿಎಚ್. ಡಿ. | ಸ್ವತಂತ್ರ ಅಧ್ಯಯನಗಳು | ಸಾಂಸ್ಥಿಕ | ಒಟ್ಟು |
|---|---|---|---|---|---|---|
| 1 | ಬಾಲ್ಯಾವಸ್ಥೆ | 1 | 0 | 2 | 1 | 4 |
| 2 | ಪ್ರಾಥಮಿಕ ಶಿಕ್ಷಣ | 1 | 4 | 3 | 12 | 20 |
| 3 | ಮಾಧ್ಯಮಿಕ ಶಿಕ್ಷಣ | 4 | 6 | 3 | 3 | 16 |
| 4 | ಔದ್ಯೋಗಿಕ ಶಿಕ್ಷಣ | 1 | 0 | 2 | 0 | 3 |
| 5 | ಉನ್ನತ ಶಿಕ್ಷಣ | 1 | 1 | 2 | 1 | 5 |
| 6 | ವಯಸ್ಕರ ಶಿಕ್ಷಣ | 1 | 1 | 3 | 0 | 5 |
| 7 | ಶಿಕ್ಷಕ ತರಬೇತಿ / ಶಿಕ್ಷಕ ಪ್ರಶಿಕ್ಷಣ | 2 | 2 | 1 | 5 | 10 |
| 8 | ಪರೀಕ್ಷೆ/ ಮೌಲ್ಯಮಾಪನ | 0 | 0 | 1 | 0 | 1 |
| 9 | ಪ್ರಾಯೋಜನೆಗಳು | 0 | 0 | 0 | 3 | 3 |
| | **ಒಟ್ಟು** | **11** | **14** | **17** | **25** | **67** |

(c) ನಾಲ್ಕು ವಿಧದ ಅಧ್ಯಯನಗಳನ್ನು ಕೈಗೊಂಡಿರುವ ಹಾಗೆ ಕಾಣುತ್ತದೆ. ಅವುಗಳ ಸಂಕ್ಷಿಪ್ತ ವಿವರಗಳು ಹೀಗಿವೆ:

ಅ. ಬಾಲ್ಯಾವಸ್ಥೆ ಅಥವಾ ಪೂರ್ವ–ಪ್ರಾಥಮಿಕ ಕ್ಷೇತ್ರದಲ್ಲಿ 4 ಅಧ್ಯಯನಗಳು ಮಾತ್ರ ವರದಿಯಾಗಿವೆ.

ಇವುಗಳಲ್ಲಿ 2 ಸ್ವತಂತ್ರ ಅಧ್ಯಯನಗಳಾಗಿದ್ದರೆ, ಒಂದು ಎಂ.ಫಿಲ್ ಮತ್ತು ಇನ್ನೊಂದು ಸಾಂಸ್ಥಿಕ ಹಂತದಲ್ಲಿ ನಡೆದಿವೆ.

ಆ. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ 20 ಅಧ್ಯಯನಗಳನ್ನು ಗುರುತಿಸಲಾಗಿದೆ. ಇವುಗಳು ಕಾರ್ಯಕ್ರಮ ಮೌಲ್ಯ ಮಾಪನಕ್ಕೆ ಸಂಬಂಧಿಸಿದ ಗರಿಷ್ಠ ಸಂಖ್ಯೆಯ ಅಧ್ಯಯನಗಳನ್ನು ಪ್ರತಿನಿಧಿಸುತ್ತವೆ. ಇವುಗಳಲ್ಲಿ 12ನ್ನು ಸಾಂಸ್ಥಿಕ ಹಂತದಲ್ಲಿ ಕೈಗೊಳ್ಳಲಾಗಿದೆ. 3 ಸ್ವತಂತ್ರ ಅಧ್ಯಯನಗಳು, 4 ಪಿಹೆಚ್.ಡಿ ಹಂತದ ಮತ್ತು 1 ಎಂ.ಫಿಲ್ ಹಂತದ್ದಾಗಿದೆ.

ಇ. ಮಾಧ್ಯಮಿಕ ಶಿಕ್ಷಣ ಕ್ಷೇತ್ರದಲ್ಲಿ 16 ಅಧ್ಯಯನಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 4 ಎಂ.ಫಿಲ್, 6 ಪಿಹೆಚ್.ಡಿ ಹಂತದಲ್ಲಿ, 3 ಸ್ವತಂತ್ರ ಅಧ್ಯಯನಗಳು ಮತ್ತು 3 ಸಾಂಸ್ಥಿಕ ನೆಲೆಯವುಗಳು.

ಈ. ಶಿಕ್ಷಣದ ಔದ್ಯೋಗಿಕ ಪರವಾದ ಕ್ಷೇತ್ರದಲ್ಲಿ 3 ಅಧ್ಯಯನಗಳು ವರದಿಯಾಗಿವೆ. ಇವುಗಳಲ್ಲಿ ಒಂದು ಸ್ವತಂತ್ರ ಅಧ್ಯಯನ, 2 ಸಾಂಸ್ಥಿಕ ಹಂತದ ಅಧ್ಯಯನ. ಈ ಅಧ್ಯಯನಗಳನ್ನು ಪ್ರತ್ಯೇಕವಾಗಿ ಭಾರತದ ವಿವಿಧ ರಾಜ್ಯಗಳಲ್ಲಿ ಕೈಗೊಳ್ಳಲಾಗಿದೆ.

ಉ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ 5 ಅಧ್ಯಯನಗಳನ್ನು ಮಹಾವಿದ್ಯಾಲಯ ಹಂತದಲ್ಲಿ ಉಲ್ಲೇಖಿಸಲಾಗಿದೆ. ಇದರಲ್ಲಿ 1 ಎಂ.ಫಿಲ್ ಹಂತದಲ್ಲಿ, 1 ಪಿಹೆಚ್.ಡಿ. ಹಂತದಲ್ಲಿ, 2 ಸ್ವತಂತ್ರವಾಗಿ ಮತ್ತು 1 ಸಾಂಸ್ಥಿಕ ಹಂತದಲ್ಲಿ.

ಊ. ವಯಸ್ಕ ಶಿಕ್ಷಣದಲ್ಲಿ 5 ಅಧ್ಯಯನಗಳನ್ನು ಗುರುತಿಸಲಾಗಿದೆ. ಇದರಲ್ಲಿ 1 ಎಂಫಿಲ್ ಹಂತದಲ್ಲಿ, 1 ಪಿಹೆಚ್.ಡಿ ಹಂತದಲ್ಲಿ ಮತ್ತು 3 ಸ್ವತಂತ್ರ ಅಧ್ಯಯನಗಳು.

ಎ. ಶಿಕ್ಷಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿ ಕ್ಷೇತ್ರದಲ್ಲಿನ 10 ಅಧ್ಯಯನಗಳಲ್ಲಿ, 3 ಸಂಸ್ಥೆಗಳಿಗೆ ಸೇರಿದರೆ, 1 ಸ್ವತಂತ್ರ ಅಧ್ಯಯನ ಮತ್ತು 2 ಪಿಹೆಚ್.ಡಿ ಮತ್ತು ಎಂ.ಫಿಲ್ ಹಂತಕ್ಕೆ ಸೇರಿವೆ.

Digitised by Bharatavani, CIIL

ಏ. ಶೈಕ್ಷಣಿಕ ಮೌಲ್ಯನಿರ್ಧಾರ ಮತ್ತು ಮೌಲ್ಯಮಾಪನ ಕ್ಷೇತ್ರದಲ್ಲಿ ಸಾಧನಾ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಮೌಲ್ಯಮಾಪನದ ಮೇಲೆ ಅನೇಕ ಅಧ್ಯಯನಗಳನ್ನು ವರದಿ ಮಾಡಲಾಗಿದೆ. ಆದರೆ ಸ್ವತಂತ್ರ ಅಧ್ಯಯನವಾಗಿ ಕೇವಲ ಒಂದು ಅಧ್ಯಯನವನ್ನು ಮಾತ್ರ ಕಾರ್ಯಕ್ರಮ ಮೌಲ್ಯಮಾಪನದ ಕ್ಷೇತ್ರದಲ್ಲಿ ಪಟ್ಟಿ ಮಾಡಲಾಗಿದೆ.

ಐ. ಯೋಜನೆಗಳ ಕ್ಷೇತ್ರದಲ್ಲಿ ವಿವಿಧ ಸಂಸ್ಥೆಗಳು ಕೈಗೊಂಡಿರುವ 3 ಅಧ್ಯಯನಗಳನ್ನು ಮಾತ್ರ ಗುರುತಿಸಲಾಗಿದೆ. DPEP ಮತ್ತು ಇತರ ಸಾಂಸ್ಥಿಕ ಯೋಜನೆಗಳಿಗೆ ಸಂಬಂಧಿಸಿದ ಅಧ್ಯಯನಗಳು ಬಹಳ ಕಡಿಮೆ. ಇವುಗಳನ್ನು ಈಗಾಗಲೇ ಅಧ್ಯಯನ ವಿಷಯದ ಸ್ವರೂಪ ಮತ್ತು ವ್ಯಾಪ್ತಿಯನ್ನು ಆಧರಿಸಿ ಇತರ 8 ಕ್ಷೇತ್ರಗಳಲ್ಲಿ ವರ್ಗೀಕರಿಸಲಾಗಿದೆ.

(d) ವರದಿ ಮಾಡಲಾಗಿರುವ 67 ಅಧ್ಯಯನಗಳಲ್ಲಿ ಹಲವನ್ನು ಎಂಫಿಲ್ ಹಂತದಲ್ಲಿ, 14 ಪಿಹೆಚ್.ಡಿ. ಹಂತದಲ್ಲಿ, 17 ಸ್ವತಂತ್ರ ಅಧ್ಯಯನವಾಗಿ ಮತ್ತು 25 ಸಾಂಸ್ಥಿಕ ಹಂತದಲ್ಲಿ ಕೈಗೊಳ್ಳಲಾಗಿದೆ. ಪ್ರಾದೇಶಿಕ ನೆಲೆಯ ಅಧ್ಯಯನಗಳ ಸಂಖ್ಯೆ ತುಂಬಾ ಕಡಿಮೆಯಾಗಿರುವುದರಿಂದ ಯಾವುದೇ ರೀತಿಯ ಸಾಮಾನ್ಯೀಕರಣವನ್ನು ನಡೆಸುವುದರಲ್ಲಿ ತೊಂದರೆ ಇದೆ. ಮತ್ತೊಂದು ಕಾರಣವೇನೆಂದರೆ, ನಿರ್ದೇಶಿತ ಪದಗಳಿಗೆ ಸಮಾನ ಮೂಲವನ್ನುಹುಡುಕಿಕೊಳ್ಳುವುದು. ಉದಾಹರಣೆಗೆ ಮೌಲ್ಯನಿರ್ಧಾರ, ವಿಮರ್ಶಾತ್ಮಕ ಮೌಲ್ಯನಿರ್ಧಾರ, ಇದರ ಮೌಲ್ಯಮಾಪನ, ಮೌಲ್ಯಮಾಪನಾತ್ಮಕ ಅಧ್ಯಯನ, ಪರಿಣಾಮಕಾರಿತ್ವದ ಪ್ರಭಾವ, ಸಮೀಕ್ಷೆ ಇತ್ಯಾದಿ. ಇದರಿಂದ ಪರಿಣಾಮಗಳು ಮತ್ತು ಫಲಿತಾಂಶಗಳನ್ನು ಹೊಂದಿರುವ ಪ್ರತಿಯೊಂದು ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿಯಲ್ಲಿ ಅನುದ್ದೇಶಿತ ಅಸಮತೆಗೆ ಬೇರೆ ಬೇರೆ ಸಂಶೋಧಕರಿಂದ ಬೇರೆ ಬೇರೆ ಅರ್ಥಗಳನ್ನು ನೀಡಲಾಗಿದೆ. ಇದರಿಂದ ಕೆಲವು ಪ್ರವೃತ್ತಿಗಳನ್ನು ಹೋಲಿಸಿ ಪಡೆಯುವುದು ಅಸಾಧ್ಯವಾಗಿದೆ. ಈ ವಿಚಾರದಿಂದಾಗಿಯೇ ಲೇಖಕರಿಗೆ ಕಾರ್ಯಕ್ರಮ ಮೌಲ್ಯಮಾಪನದ ಒಂದಲ್ಲದಿದ್ದರೆ ಮತ್ತೊಂದು ಅಂಶಗಳಲ್ಲಿ ಸಂಬಂಧವನ್ನು ಹೊಂದಿರುವ ಅಧ್ಯಯನಗಳ (ಒಟ್ಟು 67) ಪಟ್ಟಿಯನ್ನು ಮಾಡುವ ಅಗತ್ಯ ಕಂಡುಬಂದಿದೆ. ಓದುಗರು ಸಂಶೋಧಕರ ಮತ್ತು ಅವರಿಗೆ ಸಂಬಂಧಪಟ್ಟ ಅಧ್ಯಯನಗಳ ಪಟ್ಟಿಯನ್ನು ಪರಿಶೀಲಿಸಿ, ಇದರ ಆಧಾರದಿಂದ ಭಾರತದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳ ಮೌಲ್ಯಮಾಪನದ ಕ್ಷೇತ್ರದ ಅಧ್ಯಯನಗಳ ತೊಂದರೆ ಮತ್ತು ಅಭಾವವನ್ನು ಗ್ರಹಿಸುವುದು ಸಾಧ್ಯವಿದೆ.

(e) ಈ ಬಹುಪಾಲು ಅಧ್ಯಯನಗಳಲ್ಲಿ ಸೂಚಿತವಾಗಿರುವ ಗುರಿಗಳು ಬಹುತೇಕವಾಗಿ ಫಲಿತಾಂಶ ಮೌಲ್ಯಮಾಪನ ಮತ್ತು ಪ್ರಕ್ರಿಯೆಯ ಮೌಲ್ಯಮಾಪನವನ್ನು ಪ್ರತಿಫಲಿಸುತ್ತವೆ ಹಾಗೂ ಬಹಳ ಅಪರೂಪಕ್ಕೆ ಪ್ರವೇಶ್ಯ ಮೌಲ್ಯಮಾಪನವನ್ನು ಪ್ರತಿಫಲಿಸುವುದಾದರೂ, ಪರಿಸರ ಅಥವಾ ಸಾಂದರ್ಭಿಕ ಮೌಲ್ಯಮಾಪನವನ್ನು ಕುರಿತು ಮಾತ್ರ ಯಾವುದೂ ಇಲ್ಲ. ಕಾರ್ಯಕ್ರಮದ ಐದು ಅಂಶಗಳಾದ ಸಂದರ್ಭ, ಪ್ರವೇಶ್ಯಗಳು, ಪ್ರಕ್ರಿಯೆಗಳು, ಫಲಿತಾಂಶಗಳು ಅಥವಾ ಪರಿಣಾಮಗಳು ಮತ್ತು ಪ್ರಭಾವ ಅಥವಾ ಕಾರ್ಯಕ್ರಮ ಪರಿಣಾಮಗಳನ್ನು ಒಳಗೊಳ್ಳುವ ನೈಜವಾದ ಸಂಕಲಿತ ಮೌಲ್ಯಮಾಪನವನ್ನು ಯಾವುದೇ ಒಂದು ಅಧ್ಯಯನ ಕೂಡ ಪ್ರತಿನಿಧಿಸುವುದಿಲ್ಲ. ಇದೇ ರೀತಿ ಕಾರ್ಯಕ್ರಮದ ಹಂತಗಳಾದ ಕಾರ್ಯಕ್ರಮ ಆಯೋಜನೆ, ಕಾರ್ಯಕ್ರಮ ಅಭಿವೃದ್ಧಿ, ಕಾರ್ಯಕ್ರಮ ಅನುಷ್ಠಾನ, ಮತ್ತು ಕಾರ್ಯಕ್ರಮ ಫಲಿತಾಂಶಗಳ(ಸಂಕಲಿತ ಮೌಲ್ಯಮಾಪನ) ಮೌಲ್ಯಮಾಪನವನ್ನು ಒಳಗೊಳ್ಳುವ ಯಾವುದೇ ಅಧ್ಯಯನವು ನಡೆದ ಹಾಗೆ ಕಂಡುಬರುವುದಿಲ್ಲ. ಇದೇ ರೀತಿ ಭಾರತದಲ್ಲಿ ಪ್ರತಿಯೊಂದು ಹಂತದಲ್ಲಿ ಕಾರ್ಯಕ್ರಮದ ಗುರಿಗಳು ಮತ್ತು ಆಯೋಜನೆಯಿಂದ ಪ್ರಾರಂಭಿಸಿ ಕಾರ್ಯಕ್ರಮದ ಫಲಿತಾಂಶಗಳು ಮತ್ತು ಕಾರ್ಯಕ್ರಮ ಪರಿಣಾಮಗಳವರೆಗೆ ಪ್ರತಿಯೊಂದು ಹಂತದಲ್ಲಿ ಅಧ್ಯಯನದ ಮೂರು ಕ್ರಮಗಳಾದ ಆಲೋಚನಾತ್ಮಕ ರೂಪಣಾತ್ಮಕ ಮತ್ತು ಸಂಕಲಿತ ಕ್ರಮವನ್ನು ಬಳಸಿದ ಯಾವುದೇ ಅಧ್ಯಯನದ ಕುರಿತು ಲೇಖಕರಿಗೆ ಮಾಹಿತಿ ಇಲ್ಲ.

**ಸೂಚಿಸಲಾದ ಸೂಕ್ತ ಕ್ರಮಗಳು:**

ಅನುಬಂಧ ಎ ಯಲ್ಲಿ ಉಲ್ಲೇಖಿಸಲಾದ ಕಾರ್ಯಕ್ರಮ ಮೌಲ್ಯಮಾಪನದ ಅಧ್ಯಯನಗಳನ್ನು ಕೈಗೊಳ್ಳಲು ಅಧ್ಯಯನಗಳ ಮಿತಿಗಳ ದೃಷ್ಟಿಯಲ್ಲಿ ಕಾರ್ಯಕ್ರಮದ ಬೆಳವಣಿಗೆ, ಅನುಷ್ಠಾನ ಮೌಲ್ಯಮಾಪನ ಮತ್ತು ವಿಸ್ತರಣೆಯ ಎಲ್ಲಾ ಹಂತಗಳಲ್ಲಿ ಗುಣಮಟ್ಟ ನಿಯಂತ್ರಣ ಕ್ರಮಗಳನ್ನು ನಿಶ್ಚಿತಗೊಳಿಸಲು ನಿರ್ದಿಷ್ಟ ಹೆಜ್ಜೆಗಳನ್ನು ಕೈಗೊಳ್ಳುವುದು ಸೂಕ್ತವಾಗಿದೆ ಮತ್ತು ಅಗತ್ಯವಿರುವ ನಿರ್ದೇಶನಗಳನ್ನು ಕಂಡುಕೊಳ್ಳಬೇಕು. ಇದು ಕಾರ್ಯಕ್ರಮ ಮೌಲ್ಯಮಾಪನವನ್ನು ಹೆಚ್ಚು ಪರಿಣಾಮಕಾರಿಯಾಗಿ, ಜ್ಞಾನಪ್ರದವಾಗಿಸಲು ಮತ್ತು ಲಾಭದಾಯಕವಾಗಿಸಲು ಆಧಾರವನ್ನು ಒದಗಿಸುತ್ತದೆ. ಈ ನಿಟ್ಟಿನಲ್ಲಿ ಈ ಕೆಳಗಿನ ಕ್ರಮಗಳನ್ನು ಸೂಚಿಸಲಾಗಿದೆ. ಇವುಗಳನ್ನು ಸೂಕ್ತರೀತಿಯಿಂದ ಅರ್ಥೈಸಿ, ಸಮರ್ಥವಾಗಿ ಕಾರ್ಯಗತಗೊಳಿಸಿದರೆ, ಈ ಅಲಕ್ಷಿತ ಸಂಶೋಧನಾ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಳ್ಳಬಹುದು ಮತ್ತು ಅಧ್ಯಯನಗಳು ಹೆಚ್ಚು ವಾಸ್ತವ ರೂಪದ್ದಾಗಿರುವಂತೆ ಮಾಡಬಹುದು.

1. ಸಂಸ್ಥೆಗಳು ಅಥವಾ ಇತರ ಶೈಕ್ಷಣಿಕ ಏಜೆನ್ಸಿಗಳು ಈಗ ಇರುವ ಸ್ಥಿತಿಗತಿಗಳ ಸುಧಾರಣೆಗಾಗಿ ಕೈಗೊಂಡಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ವೈಜ್ಞಾನಿಕ ಕಾರ್ಯಕ್ರಮ ಮೌಲ್ಯಮಾಪನವನ್ನು ಕಡ್ಡಾಯವಾಗಿಸಬೇಕು ಮತ್ತು ಆ ಶೈಕ್ಷಣಿಕ ಕಾರ್ಯಕ್ರಮಗಳ ಸಂಯೋಜಿತ ಭಾಗವಾಗಿ ಮಾಡಬೇಕು.

2. ಕಾರ್ಯಕ್ರಮ ಸಮಗ್ರ ಮೌಲ್ಯಮಾಪನದ ಅಗತ್ಯಕ್ಕೆ ವಿಶೇಷವಾಗಿ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟಗಳ ಕಾರ್ಯಕ್ರಮಗಳಲ್ಲಿ, ಪ್ರತಿಯೊಂದು ಕಾರ್ಯಕ್ರಮದ ಘಟಕದ ಕುರಿತಾಗಿ, ಎಲ್ಲಾ ಅಂಶಗಳ ಕುರಿತು ಫಲಿತಾಂಶವನ್ನು ಪಡೆಯುವುದಕ್ಕಾಗಿ

Digitised by Bharatavani, CIIL

ಗುಣಮಟ್ಟದ ಮತ್ತು ಪ್ರಮಾಣದ ನಿದರ್ಶನವನ್ನು ಪಡೆಯಲು ಹೆಚ್ಚಿನ ಒತ್ತನ್ನು ನೀಡಲಾಗುವುದಿಲ್ಲ.

3. ಕಾರ್ಯಕ್ರಮಗಳ ಆಯೋಜನೆ ಮತ್ತು ಅನುಷ್ಠಾನದಲ್ಲಿ ತಜ್ಞರ ಅಭಿಪ್ರಾಯ, ವಿದ್ಯಾರ್ಥಿಗಳ ಅನುಭವವನ್ನು ಆಧರಿಸಿದ, ಗ್ರಹಿಕೆಯ ಮತ್ತು ತರ್ಕಾಧಾರದ ಆಲೋಚನಾತ್ಮಕ ಮೌಲ್ಯಮಾಪನವನ್ನು ಬಳಸಬಹುದು. ಪ್ರತಿಯೊಂದು ಹಂತದಲ್ಲಿ ಪ್ರತಿಯೊಂದು ಅಂಶದ ರೂಪಣಾತ್ಮಕ ಮೌಲ್ಯಮಾಪನವನ್ನು ಕಡ್ಡಾಯವೆಂದು ಮಾಡಬಹುದು. ಇದರಿಂದ ಕಾರ್ಯಗತಗೊಳ್ಳುವ ಹಾದಿಯಲ್ಲಿರುವ ಕೊರತೆಗಳು, ಸಮಸ್ಯೆಗಳು ಮತ್ತು ಅನುದ್ದೇಶಿತ ಫಲಿತಾಂಶಗಳ ಕುರಿತು ಅರಿವು, ಮರುಮಾಹಿತಿ ಇರುತ್ತದೆ. ಇದರಿಂದ ಸಂಘಟಕರಿಗೆ ಕಾರ್ಯಕ್ರಮದ ಆಯವ್ಯಯ ಮತ್ತು ಅನುಷ್ಠಾನದ ಕಾರ್ಯನೀತಿಗಳ ಹೊಂದಾಣಿಕೆ ಮತ್ತು ಅಳವಡಿಕೆಗೆ ನೆರವು ದೊರೆಯುತ್ತದೆ. ಕಾರ್ಯಕ್ರಮದ ಆಯೋಜನೆ, ಅಭಿವೃದ್ಧಿ, ಅನುಷ್ಠಾನ ಮತ್ತು ಮೌಲ್ಯಮಾಪನ ಹಂತಗಳಿಗೆ ಸಂಬಂಧಿಸಿದ ಉದ್ದೇಶಿತ ಮತ್ತು ಅವಲೋಕಿತ ಫಲಿತಾಂಶಗಳ ನಡುವಿನ ಅನುರೂಪತೆ(ಹೊಂದಿಕೆ) ಅಥವಾ ಪರಸ್ಪರ ವಿರೋಧವನ್ನು ಕಂಡುಕೊಳ್ಳಲು ಪ್ರತಿಯೊಂದು ಹಂತದ ಸಂಕಲಿತ ಮೌಲ್ಯಮಾಪನ ಕೂಡ ಅಗತ್ಯ.

4. ಈಗಾಗಲೇ ಕೈಗೊಂಡಿರುವ ಕಾರ್ಯಕ್ರಮ ಮೌಲ್ಯಮಾಪನ ಅಧ್ಯಯನಗಳ ಫಲಿತಾಂಶಗಳ ತೀರ್ಮಾನದ ದತ್ತಾಂಶಗಳನ್ನು ಒದಗಿಸಲು ಹೊಸ–ಮೌಲ್ಯಮಾಪನ ಅಧ್ಯಯನಗಳಿಗೆ ಪ್ರೋತ್ಸಾಹ ನೀಡಬೇಕಾಗುತ್ತದೆ. ಇದರಿಂದ ಕಾರ್ಯಕ್ರಮ ಮೌಲ್ಯಮಾಪಕರ ಹೊಣೆಗಾರಿಕೆಯನ್ನು ಖಚಿತಪಡಿಸಬಹುದು.

5. ಈ ಕ್ಷೇತ್ರದ ಮುಂದಿನ ಸಂಶೋಧನಾತ್ಮಕ ಅಧ್ಯಯನಗಳ ಹೆಚ್ಚಳ, ಅಳವಡಿಕೆ ಮತ್ತು ಸುಧಾರಣೆಗಾಗಿ ಕಾರ್ಯಕ್ರಮ ಮೌಲ್ಯಮಾಪನ ಅಧ್ಯಯನಗಳ ಫಲಿತಾಂಶಗಳನ್ನು ಪ್ರಚಾರ ಮಾಡಲಾಗುವುದು, ಬಳಸಲಾಗುವುದು ಮತ್ತು ಅವಳವಡಿಸಿಕೊಳ್ಳಲಾಗುವುದು. ಪ್ರಾಯೋಜಕರು/ ಮೌಲ್ಯಮಾಪಕರು ಮತ್ತು ಇತರ ಸುಧಾರಣೆಯ ಇತರ ಭಾಗಿಗಳು ಅನುಸರಣಾ ಅಧ್ಯಯನಗಳನ್ನು ಕೈಗೊಳ್ಳುವುದು ಅತ್ಯಗತ್ಯ. ಈ ಅಧ್ಯಯನಗಳ ಫಲಿತಾಂಶಗಳನ್ನು ಗ್ರಾಹಕರು ಮತ್ತು ಇತರ ಫಲಾನುಭವಿಗಳೂ ಸೇರಿದಂತೆ ಸಂಬಂಧ ಪಟ್ಟ ಏಜೆನ್ಸಿಗಳಿಗೆ ತಲುಪಿಸಬೇಕಾಗುತ್ತದೆ.

6. ಸೇವಾವಧಿಯ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು(ಏಜೆನ್ಸಿಗಳು) ಪ್ರತಿಯೊಂದು ಕಾರ್ಯಕ್ರಮದ ಮೌಲ್ಯಮಾಪನವನ್ನು ತಾವು ಕೈಗೊಳ್ಳುವ ಪ್ರತಿಯೊಂದು ಕಾರ್ಯಕ್ರಮದ ಅಭಿನ್ನ ಘಟಕವೆಂದು ಪರಿಗಣಿಸಬೇಕು. ಇದು ಕಾರ್ಯಕ್ರಮ ಸಂಘಟಕರಿಗೆ ತಾವು ಸಂಘಟಿಸಿದ ಕಾರ್ಯಕ್ರಮದ ದಕ್ಷತೆ ಮತ್ತು ಪರಿಣಾಮಗಳ ಕುರಿತು ಅಗತ್ಯದ ಮರುಮಾಹಿತಿಯನ್ನು ಒದಗಿಸುತ್ತದೆ ಮತ್ತು ಭವಿಷ್ಯದ ಕಾರ್ಯಕ್ರಮಗಳನ್ನು ಹೆಚ್ಚಿಸಲು ಮತ್ತು ಸುಧಾರಿಸಲು ಅವರಿಗೆ ನೆರವನ್ನು ನೀಡುತ್ತದೆ.

7. NCERT, NUEPA, NCTE, UGC, AIU ಮೊದಲಾದ ಸೇವಾನಿರತ ರಾಷ್ಟ್ರೀಯ ಶೈಕ್ಷಣಿಕ ಏಜೆನ್ಸಿಗಳ ಹಂತದಲ್ಲಿ ಕಾರ್ಯಕ್ರಮ ಅಭಿವೃದ್ಧಿ ಮಾಡುವವರು ಮತ್ತು ಸಂಘಟಕರು ಕಾರ್ಯಕ್ರಮದ ಉದ್ದೇಶಗಳಿಗೆ ಸಂಬಂಧಿಸಿದಂತೆ ಅದರ ಸಫಲತೆ ಮತ್ತು ಅಸಫಲತೆಗಳನ್ನು ತೀರ್ಮಾನಿಸಲು ಕಾರ್ಯಕ್ರಮ ಮೌಲ್ಯಮಾಪನವನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಬೇಕು. ಈ ರೀತಿಯ ಅಧ್ಯಯನಗಳನ್ನು ಈ ವಿಧದ ಯೋಜನೆಗಳನ್ನು ಕಂಡುಕೊಳ್ಳುವ ಮೂಲಕ ಪ್ರೋತ್ಸಾಹಿಸಬಹುದು.

8. ಸೇವಾನಿರತ ಶೈಕ್ಷಣಿಕ ಕಾರ್ಯಕ್ರಮಗಳ ಗುಣಮಟ್ಟ ನಿಯಂತ್ರಣಕ್ಕಾಗಿ ಕಾರ್ಯಕ್ರಮ ಮೌಲ್ಯಮಾಪನದ ಪಾತ್ರ ಮತ್ತು ಪ್ರಾಮುಖ್ಯವನ್ನು ಎತ್ತಿ ಹಿಡಿಯುವ ಸಲುವಾಗಿ ಕಾರ್ಯಕ್ರಮ ಮೌಲ್ಯಮಾಪನದ ಕುರಿತಾಗಿ ಶಾಲಾ ಮಟ್ಟದಲ್ಲಿ NCERT ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ UGC ಅಥವಾ AIU ಪತ್ರಿಕೆಯೊಂದನ್ನು ಹೊರಡಿಸಬಹುದು.

9. ಬಹುತೇಕ ಅಧ್ಯಯನಗಳಲ್ಲಿ ಅಂಕಿಅಂಶಗಳ ಸಂಗ್ರಹ, ವಿಶ್ಲೇಷಣೆ, ಮರುವ್ಯಾಖ್ಯಾನ ಮತ್ತು ತೀರ್ಮಾನದ ಮೇಲೆ ಮನೋಮಾಪನ ಉಪಕ್ರಮವು ಹೆಚ್ಚು ಆಧರಿಸಿದ್ದರೂ ಮೌಲ್ಯಮಾಪನದ ಸಲಕರಣೆಗಳ ಸಿಂಧುತ್ವ ಮತ್ತು ವಿಶ್ವಸನೀಯತೆಯನ್ನು ಉಲ್ಲೇಖಿಸಿದ್ದು ಬಹಳ ಕಡಿಮೆ. ಗ್ರಾಹಕರು, ಪ್ರಾಯೋಜಕರು, ಆಡಳಿತಗಾರರು, ಫಲಾನುಭವಿಗಳು, ಸಹ–ಭಾಗಿಗಳು ಮೊದಲಾದ ಬೇರೆ ಬೇರೆ ಕಾರ್ಯನಿರತರಿಂದ ಸಂಗ್ರಹಿಸಲಾದ ಗುಣಮಟ್ಟದ ದತ್ತಾಂಶದ ಬಳಕೆಯು ಮನೋಮಾಪನೆಯ ದತ್ತಾಂಶದೊಂದಿಗೆ ಹೆಚ್ಚು ನಿಯಮಿತವಾಗಿ ಕ್ರಿಯಾರ್ಥಪೂರಕವಾಗಿ ಇರಬೇಕಾಗುತ್ತದೆ. ಇದರಿಂದ ಗುಣಮಟ್ಟದ ಮತ್ತು ಬೆಳಕನ್ನು ಚೆಲ್ಲುವ ವಿಧಾನಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ(ಪಾರ್ಲೆಟ್ ಮತ್ತು ಹ್ಯಾಮಿಲ್ಟನ್). ಇಲ್ಲದಿದ್ದರೆ ಕಾರ್ಯಕ್ರಮ ಮೌಲ್ಯಮಾಪನದ ಪ್ರತಿಯೊಂದು ಅಧ್ಯಯನವು ಸೀಮಿತ, ಆಂಶಿಕ ಮತ್ತು ಅಪೂರ್ಣ ದತ್ತಾಂಶದ ಕಾರಣದಿಂದಾಗಿ ಅಥವಾ ಇತರ ಮೂಲಗಳಿಂದ ಸಂಗ್ರಹಿಸಲಾದ ಅಸಮಗ್ರ ನಿದರ್ಶನಗಳಿಂದಾಗಿ ಅಸ್ವೀಕೃತವಾಗುವುದು.

ಕೊನೆಯದಾಗಿ, ಭಾರತದಲ್ಲಿ ಕಾರ್ಯಕ್ರಮ ಮೌಲ್ಯಮಾಪನ ಕ್ಷೇತ್ರವನ್ನು ಸಬಲೀಕರಣಗೊಳಿಸಲು ಈ ಕೆಳಗಿನ ಸೂಚನೆಗಳನ್ನು ನೀಡಬಹುದು:

1. ಕೈಗೊಳ್ಳಲಾಗುವ ಪ್ರತಿಯೊಂದು ಕಾರ್ಯಕ್ರಮಕ್ಕೆ ಕಾರ್ಯಕ್ರಮ ಮೌಲ್ಯಮಾಪನವನ್ನು ಕಡ್ಡಾಯವಾಗಿಸಿಕೊಳ್ಳಿ.
2. ಉದ್ದೇಶಿತ ಕಾರ್ಯಕ್ರಮ ಗುರಿಗಳಿಗೆ ಸಂಬಂಧಿಸಿದಂತೆ ಯಶಸ್ಸಿನ ಸೂಚಕಗಳನ್ನು ರೂಪಿಸಿಕೊಳ್ಳಿ.
3. ಜ್ಞಾನಪ್ರದಾತ್ಮಕ ಉಪಕ್ರಮವನ್ನು ಬಳಸಿಕೊಳ್ಳುವ ಮೂಲಕ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಸಹಕಾರಿ

Digitised by Bharatavani, CIIL

ಉದ್ಯಮವಾಗಿಸಿಕೊಳ್ಳಿ.

4. ಕಾರ್ಯಕ್ರಮದ ಅನುಷ್ಠಾನದ ಗುಣಮಟ್ಟದಲ್ಲಿ ತೊಡಗಿಸಿಕೊಂಡಿರುವ ಎಲ್ಲ ಕಾರ್ಯನಿರತರಲ್ಲಿ ಜವಾಬ್ದಾರಿಯ ಅಂಶವನ್ನು ಬೆಳಸಿ ಮತ್ತು ಬಳಸಿಕೊಳ್ಳಿ.

5. ಕಾರ್ಯಕ್ರಮ ಮೌಲ್ಯಮಾಪನದ ಎಲ್ಲಾ ಫಲಿತಾಂಶಗಳನ್ನು ವಿಷಯ, ಪ್ರವೇಶ್ಯಗಳು, ಪ್ರಕ್ರಿಯೆಗಳು, ಪರಿಣಾಮಗಳು(ಉತ್ಪನ್ನಗಳು) ಮತ್ತು ಪ್ರಭಾವ(ಕಾರ್ಯಕ್ರಮದ ಪರಿಣಾಮಗಳು)ಕ್ಕೆ ಸಂಬಂಧಿಸಿದಂತೆ ವರದಿ ಮಾಡಿ.

**ಮೂಲ: ಪ್ರೀತಮ್ ಸಿಂಗ್**
**ಅನು: ಡಾ. ಗೀತಾ ಶೆಣೈ**

## ಕಾರ್ಯಾನುಭವ (ಎಸ್‌ಯುಪಿಡಬ್ಲ್ಯು)

### ಚಾರಿತ್ರಿಕ ದೃಷ್ಟಿಕೋನ:

ಕಾರ್ಯಾನುಭವ : ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಭಾರತದ ಚರಿತ್ರೆಯ ಪ್ರಾಚೀನ ಕಾಲಾವಧಿಗಳಲ್ಲಿ ಮಕ್ಕಳು ತಮ್ಮ ಶಿಕ್ಷಣವನ್ನು ಸಾಮಾನ್ಯವಾಗಿ ಗುರುಮನೆಗಳಲ್ಲಿ ಪಡೆಯುತ್ತಿದ್ದರು. ಅಲ್ಲಿ ಅವರು ಮನೆವಾರ್ತೆಯ ಬೇರೆ ಬೇರೆ ಕೆಲಸಗಳಲ್ಲಿ ಭಾಗವಹಿಸುತ್ತಿದ್ದರು. ವಸಾಹತು ಆಡಳಿತದ ಪ್ರಾರಂಭಿಕ ಹಂತಗಳಲ್ಲಿ ಪರಿಚಯಿಸಲಾದ ಶಿಕ್ಷಣವು ಹೆಚ್ಚಾಗಿ ಉದಾರ ಸ್ವರೂಪದ್ದಾಗಿತ್ತು. ಅಲ್ಲಿ ದೈಹಿಕ ಕೆಲಸಕ್ಕೆ ಅವಕಾಶವಿರಲಿಲ್ಲ. ಈ ಕೊರತೆಯನ್ನು ವೂಡ್ಸ್ ಡಿಸ್ಪೇಚ್‌ನಲ್ಲಿ (1854) ಎತ್ತಿ ತೋರಿಸಲಾಯಿತು ಮತ್ತು ಸೆಕೆಂಡರಿ ಹಂತದಲ್ಲಿ ವೃತ್ತಿಪೂರ್ವ ಶಿಕ್ಷಣವನ್ನು ಅಳವಡಿಸಿಕೊಳ್ಳುವಂತೆ ಸೂಚಿಸಲಾಯಿತು. ಆದರೆ ಈ ಕುರಿತಾಗಿ ಕಾರ್ಯ ನಡೆದದ್ದು ಕಡಿಮೆ. ನಂತರ ವ್ಯಕ್ತಿತ್ವದ ಸಮರಸ ಬೆಳವಣಿಗೆಗಾಗಿ ಶಿಕ್ಷಣದಲ್ಲಿ ದೈಹಿಕ ಚಟುವಟಿಕೆಗಳ ಅಗತ್ಯವನ್ನು ಆಬ್ಬೊಟ್–ವೂಡ್ ಸಲಹಾ ಸಮಿತಿ (1936–37) ಕೂಡ ಒತ್ತಿ ಹೇಳಿತ್ತು.

ಗ್ರಂಥ ಓದುವಿಕೆಯ ಅಪ್ರಯೋಜನವನ್ನು ವ್ಯಥೆಪೂರ್ವಕವಾಗಿ ತಿಳಿಸಿರುವ ರವೀಂದ್ರನಾಥ ಠಾಕೂರ್ ಅವರು ಸಮಗ್ರ ಶಿಕ್ಷಣ ನೀಡುವುದರಲ್ಲಿ ದೈಹಿಕ ಕೆಲಸದ ಪಾತ್ರವನ್ನು ಎತ್ತಿಹಿಡಿದಿದ್ದಾರೆ. ಆಧುನಿಕ ಶಿಕ್ಷಣದ ವ್ಯವಸ್ಥೆಯು ಭಾರತೀಯರನ್ನು ಅವರ ಸ್ವಂತದ ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಸಂಪರ್ಕದ ಕೊಂಡಿಯಿಂದ ದೂರವಿಟ್ಟಿದೆ ಮತ್ತು ಅವರಿಗೆ ಸ್ವಂತಿಕೆ ಸೃಜನಶೀಲತೆ ಮತ್ತು ಉತ್ಪಾದಕತೆಗೆ ಯಾವುದೇ ಅವಕಾಶವನ್ನು ನೀಡಿಲ್ಲ. ಗಾಂಧೀಜಿಯವರು 'ಬುನಿಯಾದಿ ಶಿಕ್ಷಾ' ಅಥವಾ ಮೂಲ ಶಿಕ್ಷಣದ ಕಾರ್ಯಯೋಜನೆಯನ್ನು ಪ್ರಸ್ತಾಪಿಸಿದ್ದಾರೆ. ಈ ಸ್ವರೂಪದ ಕಾರ್ಯಯೋಜನೆಯಲ್ಲಿ ಶಿಕ್ಷಣವು ದೇಹ, ಮನಸ್ಸು ಮತ್ತು ಪ್ರಜ್ಞೆ (ಕೈ, ತಲೆ ಮತ್ತು ಹೃದಯ)ಯ ವಿಕಾಸಕ್ಕೆ ದೈಹಿಕ ಮತ್ತು ಉತ್ಪಾದಕ ಕಾರ್ಯದ ಮೂಲಕ ನೆರವಾಗಬೇಕೆಂದು ತಿಳಿಸಲಾಗಿದೆ. ಮಹಾತ್ಮಾ ಗಾಂಧಿಯವರು ಮಾಡಿರುವ ಈ ಪ್ರಸ್ತಾಪಕ್ಕೆ ವಾರ್ಧಾದಲ್ಲಿ ಅಕ್ಟೋಬರ್, 1937ರಲ್ಲಿ ನಡೆದ ರಾಷ್ಟ್ರೀಯ ಶಿಕ್ಷಣ ಅಧಿವೇಶನದಲ್ಲಿ ಬೆಂಬಲವನ್ನು ಸೂಚಿಸಲಾಗಿದೆ. ಈ ಅಧಿವೇಶನದಲ್ಲಿ ಅಂಗೀಕರಿಸಲಾದ ಗೊತ್ತುವಳಿಯು ಹೀಗಿದೆ: "ಶಿಕ್ಷಣದ ಕಾರ್ಯಗತಿಯು ಈ ಹಂತದ (ಏಳು ವರ್ಷಗಳು) ಉದ್ದಕ್ಕೂ ಕೆಲವು ದೈಹಿಕ ಮತ್ತು ಉತ್ಪಾದಕ ಕಾರ್ಯಸ್ವರೂಪವನ್ನು ಕೇಂದ್ರವಾಗಿಟ್ಟುಕೊಂಡಿರಬೇಕು ಮತ್ತು ಅಭಿವೃದ್ಧಿಪಡಿಸಬೇಕಾದ ಅಥವಾ ತರಬೇತಿ ನೀಡಬೇಕಾದ ಬೇರೆಲ್ಲಾ ಸಾಮರ್ಥ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಮಗುವಿನ ಪರಿಸರಕ್ಕೆ ಸೂಕ್ತ ಗಮನವನ್ನು ನೀಡಿ ಆಯ್ದುಕೊಂಡ ಕೇಂದ್ರ ಕರಕುಶಲ ಕಲೆಗೆ ಆಂತರಿಕವಾಗಿ ಸಂಬಂಧಿಸಿರುವಂತೆ ನೋಡಿಕೊಳ್ಳಬೇಕು." ಇನ್ನು ಗೊತ್ತುವಳಿಯಲ್ಲಿ ಗಮನಕ್ಕೆ ತಂದುಕೊಳ್ಳಲಾದ ಮತ್ತೊಂದು ಅಂಶವೆಂದರೆ, "ಈ ಕುಶಲಕಲೆಯನ್ನು ಪರಿಣಾಮಕಾರಿಯಾಗಿ ಮತ್ತು ಸಮಗ್ರವಾಗಿ ಕಲಿಸಿದರೆ ಶಾಲೆಗೆ ತನ್ನ ಶಿಕ್ಷಕ ಸಿಬ್ಬಂದಿಗಳ ಖರ್ಚನ್ನು ಭರಿಸಲು ಸಾಧ್ಯವಾಗುವಂತಿರಬೇಕು."

ಮಹಾತ್ಮ ಗಾಂಧಿಯವರ ಶೈಕ್ಷಣಿಕ ವಿಚಾರಗಳಿಗೆ ಮೂಲಭೂತ ಶಿಕ್ಷಣ ರೂಪದ ಪ್ರಾಯೋಗಿಕ ಆಕಾರವನ್ನು ಮೊತ್ತಮೊದಲು ನೀಡಿದ್ದು ಝಾಕಿರ್ ಹುಸೇನ್ ಸಮಿತಿ. ಇದನ್ನು ಪ್ರಾಥಮಿಕ ಹಂತಕ್ಕಾಗಿ 1938 ರಲ್ಲಿ ರಾಷ್ಟ್ರೀಯ ಶಿಕ್ಷಣ ವಿನ್ಯಾಸದಲ್ಲಿ ಸ್ವೀಕರಿಸಲಾಯಿತು. ಮೂಲ ಶಿಕ್ಷಣವನ್ನು ಅನುಷ್ಠಾನಕ್ಕೆ ತರುತ್ತಿದ್ದಂತೆ ಅನೇಕ ಪ್ರಾಯೋಗಿಕ ತೊಂದರೆಗಳು ಪಠ್ಯಪುಸ್ತಕಗಳ ಲಭ್ಯತೆ, ಪಠ್ಯ ಕ್ರಮದ ಇತರ ಕ್ಷೇತ್ರಗಳ ಉತ್ಪಾದಕ ವಿಷಯಾಂಶ ಮತ್ತು ಸಂಬಂಧ ಇತ್ಯಾದಿ ಎದ್ದು ಕಾಣಿಸಲಾರಂಭಿಸಿದವು. ಈ ಅಂಶಗಳಿಗೆ ಸಂಬಂಧಿಸಿದಂತೆ 1956ರಲ್ಲಿ ಭಾರತ ಸರಕಾರದ ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ ಮಂತ್ರಾಲಯವು ಸ್ಪಷ್ಟೀಕರಣವನ್ನು ನೀಡಿತು. ಇದರ ನಂತರ (1957) ಭಾರತ ಸರಕಾರದ ಶಿಕ್ಷಣ ಇಲಾಖೆಯು ಮೂಲ ಶಿಕ್ಷಣ ಶಾಲೆಗಳಿಗೆ ಪಠ್ಯವಸ್ತುವನ್ನು ಗೊತ್ತುಪಡಿಸಿತು. ಈ ಪಠ್ಯವಸ್ತುವಿನಲ್ಲಿ ಕುಶಲಕಲೆಗಳಿಗಾಗಿ ಪ್ರತಿದಿನ 1 ಮತ್ತು 2ನೇ ತರಗತಿಗಳಿಗೆ 2 ತಾಸುಗಳು, 3 ರಿಂದ 5ನೇ ತರಗತಿಯವರೆಗೆ 2 ತಾಸುಗಳು, ಮತ್ತು 6 ರಿಂದ 8ನೇ ತರಗತಿಯವರಿಗೆ 3 ತಾಸುಗಳನ್ನು ಒದಗಿಸಿಕೊಡಲಾಯಿತು. ಇದಷ್ಟೇ ಅಲ್ಲ, ಈ ಕಾಲಾವಧಿಯ ಮೂರನೇ ಒಂದರಷ್ಟು ಸಮಯವನ್ನು ಪ್ರಾಯೋಗಿಕ ಕಾರ್ಯಗಳಿಗಾಗಿ ವಿನಿಯೋಗಿಸಬೇಕೆಂದು ತಿಳಿಸಲಾಯಿತು.

ಮೂಲಶಿಕ್ಷಣದಲ್ಲಿ ಪ್ರಸ್ತಾಪಿಸಲಾಗಿರುವ ಚಟುವಟಿಕೆಗಳು ಮುಖ್ಯವಾಗಿ ಗ್ರಾಮೀಣ ಉದ್ಯೋಗ ವಿನ್ಯಾಸಗಳ, ಭಾರತೀಯ ಕುಶಲಕಲೆಗಳ ಕುರಿತು ಮುಖ್ಯ ಕಾಳಜಿಯನ್ನು ಹೊಂದಿರುವ ವಿಚಾರವು 1966ರಲ್ಲಿ ಕೊಠಾರಿ ಆಯೋಗದ ಗಮನಕ್ಕೆ ಬಂದಿತು. ಶಿಕ್ಷಣ ಮತ್ತು ಉತ್ಪಾದಕತೆಯ ನಡುವೆ ಕೊಂಡಿಯನ್ನು ನಿರ್ಮಿಸುವ ಸಲುವಾಗಿ ಕಾರ್ಯಾನುಭವವು (ವರ್ಕ್ ಎಕ್ಸ್‌ಪೀರಿಯನ್ಸ್; WE) ಸಾಮಾನ್ಯ ಶಿಕ್ಷಣದ ಅವಿಭಾಜ್ಯ ಭಾಗವಾಗಿರಬೇಕೆಂದು ಆಯೋಗ ಸೂಚನೆಯನ್ನು ನೀಡಿತು. ಕಾರ್ಯಾನುಭವದ ಪರಿಕಲ್ಪನೆಯು

Digitised by Bharatavani, CIIL

ಮುಖ್ಯವಾಗಿ ಮಹಾತ್ಮಾ ಗಾಂಧಿಯವರು ಪ್ರಸ್ತಾಪಿಸಿದ ಮೂಲ ಶಿಕ್ಷಣ ತತ್ವದ ರೀತಿಯದ್ದೇ ಆಗಿರುತ್ತದೆ ಮತ್ತು ಅದರ ಶಿಫಾರಸ್ಸುಗಳನ್ನು ಕೈಗಾರಿಕೀಕರಣದ ಹಾದಿಯಲ್ಲಿ ಪ್ರಾರಂಭಿಸಬೇಕೆನ್ನುವ ಸಮಾಜದ ಕುರಿತಾದ ಅವರ ಚಿಂತನೆಯ ಮರುವ್ಯಾಖ್ಯಾನವೆಂದು ವರ್ಣಿಸಬಹುದು ಎಂಬುದಾಗಿ ಆಯೋಗವು ಸ್ಪಷ್ಟನೆಯನ್ನು ನೀಡಿದೆ. ಆಯೋಗದ ವ್ಯಾಖ್ಯಾನದಲ್ಲಿ ಕಾರ್ಯಾನುಭವವೆಂದರೆ, "ಶಾಲೆಯಲ್ಲಿ, ಮನೆಯಲ್ಲಿ, ಕಾರ್ಯಾಗಾರದಲ್ಲಿ, ತೋಟದಲ್ಲಿ, ಕಾರ್ಖಾನೆಯಲ್ಲಿ ಅಥವಾ ಯಾವುದೇ ಇತರ ಉತ್ಪಾದಕರ ಸನ್ನಿವೇಶದಲ್ಲಿ ಉತ್ಪಾದಕ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು".

ದೇಶದ ಸಂಸತ್ತಿನಿಂದ 1968ರಲ್ಲಿ ಅಂಗೀಕೃತಗೊಂಡ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಈ ಕೆಳಗಿನ ನಿಯಮವನ್ನು ಕಾರ್ಯಾನುಭವ ಮತ್ತು ರಾಷ್ಟ್ರೀಯ ಸೇವಾ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲಾಗಿದೆ:

ಪರಸ್ಪರ ಸೇವೆ ಮತ್ತು ಬೆಂಬಲಿತ ಕಾರ್ಯಾನುಭವ ಮತ್ತು ರಾಷ್ಟ್ರಸೇವೆಯ ಸೂಕ್ತ ಕಾರ್ಯಕ್ರಮಗಳ ಮೂಲಕ ಶಾಲೆ ಮತ್ತು ಸಮುದಾಯಗಳನ್ನು ಹತ್ತಿರ ತರಬೇಕು. ಇದರಲ್ಲಿ ಸಮುದಾಯ ಸೇವೆ ಮತ್ತು ರಾಷ್ಟ್ರೀಯ ಮರುರಚನೆಯ ಅರ್ಥಪೂರ್ಣ ಮತ್ತು ಅವಿಭಾಜ್ಯ ಒಡ್ಡುವಂತಹ ಕಾರ್ಯಕ್ರಮಗಳಲ್ಲಿನ ಭಾಗವಹಿಸುವಿಕೆ ಸೇರಿಕೊಂಡು ಕ್ರಮೇಣ ಇದು ಶಿಕ್ಷಣದ ಅಭಿನ್ನ ಭಾಗವಾಗಬೇಕು. ಈ ಕಾರ್ಯಕ್ರಮಗಳು ಸ್ವ-ನೆರವು, ವ್ಯಕ್ತಿತ್ವ ರೂಪಣೆ ಮತ್ತು ಸಾಮಾಜಿಕ ಬದ್ಧತೆಯ ಪ್ರಜ್ಞೆಯ ಬೆಳೆಸುವಿಕೆಗೆ ಒತ್ತು ನೀಡುವ ರೀತಿಯಲ್ಲಿ ಇರಬೇಕು.

1968ರ ಕಾರ್ಯನೀತಿಯನ್ನು ಜಾರಿಗೆ ತರುವ ಸಲುವಾಗಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಹೊರತಂದಿರುವ ದಸ್ತಾವೇಜು (ಡಾಕ್ಯುಮೆಂಟ್-ಪ್ರಮಾಣ ಪತ್ರ): ಹತ್ತು ವರ್ಷದ ಶಾಲೆಗಾಗಿ ಪಠ್ಯಕ್ರಮ-ಒಂದು ಚೌಕಟ್ಟು (1976). ಇದರಲ್ಲಿ ಕಾರ್ಯಾನುಭವವನ್ನು ಶಾಲೆಯ ಪಠ್ಯಕ್ರಮದ ಅಭಿನ್ನ ಘಟಕವಾಗಿಸಲಾಗಿದೆ. ಪಠ್ಯಕ್ರಮದ ಎಲ್ಲಾ ಹಂತಗಳಲ್ಲಿ ಅಭಿನ್ನ ಅಂಶವಾಗಿ ಪರಿಗಣನೆಯಾಗಲಿರುವ ಕಾರ್ಯಾನುಭವವು ಅಧ್ಯಾಪನ-ಕಲಿಕೆಯ ಕಾರ್ಯವಿಧಾನದಲ್ಲಿ ಸೂಕ್ತ ಸ್ಥಾನವನ್ನು ಪಡೆದಿಲ್ಲ ಎನ್ನುವ ಕಾರಣಕ್ಕಾಗಿ ಈ ದಸ್ತಾವೇಜನ್ನು ಈಶ್ವರಬಾಯಿ ಪಟೇಲ್ ಸಮಿತಿಯ (1977) ಮರುಪರಿಶೀಲನೆಗೆ ಒಳಪಡಿಸಿದೆ. ಸಮಿತಿಯು ಕಾರ್ಯಾನುಭವದ ಸ್ಥಾನದಲ್ಲಿ ಸಾಮಾಜಿಕ ಉಪಯುಕ್ತ ಉತ್ಪಾದಕ ಕಾರ್ಯವನ್ನು SUPW ಅಳವಸಿಕೊಳ್ಳುವಂತೆ ಶಿಫಾರಸು ಮಾಡಿದೆ. ಕಾರ್ಯಾನುಭವದಲ್ಲಿ ಸಾಮಾಜಿಕ ಉಪಯುಕ್ತತೆಯ ಘಟಕವಿಲ್ಲದಿರುವುದು ಮತ್ತು ಅವುಗಳು ಕಾರ್ಯಕೇಂದ್ರೀಕೃತವಾಗಿ ಇಲ್ಲದಿರುವುದನ್ನು ಕೂಡ ಸಮಿತಿ ಪರಿಗಣಿಸಿದೆ. ಸಮಿತಿಯ ಪ್ರಕಾರ SUPW ವಿನ ಗುರಿಯು, 'ಮಕ್ಕಳಿಗೆ ತರಗತಿಯ ಒಳಗೆ ಮತ್ತು ಹೊರಗೆ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ಒದಗಿಸುವುದು ಮತ್ತು ಬೇರೆಬೇರೆ ವಿಧದ ಕಾರ್ಯದೊಂದಿಗೆ ಜೋಡಿಸಿಕೊಂಡಿರುವ ವೈಜ್ಞಾನಿಕ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು".

ಶ್ರೀ ಶ್ರೀರಾಮ್ ನಾರಾಯಣ್ ಇವರ ಅಧ್ಯಕ್ಷತೆಯಲ್ಲಿ ಡಿಸೆಂಬರ್, 1977ರಲ್ಲಿ ನವದೆಹಲಿಯಲ್ಲಿ ನಡೆದಂತಹ ರಾಷ್ಟ್ರೀಯ ಶಿಕ್ಷಣ ಅಧಿವೇಶನದಲ್ಲಿ ಕೂಡ ಶಾಲೆಯ ಒಟ್ಟು ಸಮಯದ ಶೇಕಡಾ 50ರಷ್ಟು ಭಾಗವನ್ನು ಉತ್ಪಾದಕ, ಸೃಜನಾತ್ಮಕ ಮತ್ತು ಮನರಂಜನಾಕಾರಿ ಚಟುವಟಿಕೆಗಳಿಗೆ ಮೀಸಲಿಡಬೇಕು, ಇದರಲ್ಲಿ ಕನಿಷ್ಠ ಅರ್ಧದಷ್ಟು ಭಾಗವು ಸಾಮಾಜಿಕವಾಗಿ ಉಪಯುಕ್ತವಾಗುವ ವಿವಿಧ ಬಗೆಗಳ ಉತ್ಪಾದಕ ಕಾರ್ಯಗಳಿಗೆ ಗಮನ ನೀಡುವಂತಿರಬೇಕು ಎಂಬ ಶಿಫಾರಸನ್ನು ಮಾಡಿದೆ.

NCERT ಯ 'ಹಿರಿಯ ಮಾಧ್ಯಮಿಕ ಶಿಕ್ಷಣ ಮತ್ತು ಅದರ ವೃತ್ತಿಪರತ್ವ' (1976) ದ ದಸ್ತಾವೇಜನ್ನು ಮರುಪರಿಶೀಲಿಸಿದ ಸಂದರ್ಭದಲ್ಲಿ ಆದಿಶೇಷಯ್ಯ ಸಮಿತಿಯು (1978) ಶಿಕ್ಷಣದ +2 ಶೈಕ್ಷಣಿಕ ಹಂತಕ್ಕಾಗಿ ಈಶ್ವರಬಾಯಿ ಪಟೇಲ್ ಸಮಿತಿ ವ್ಯಾಖ್ಯಾನಿಸಿದ ಪರಿಕಲ್ಪನೆ ಮತ್ತು ಗುರಿಗಳನ್ನು ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಒಪ್ಪಿಕೊಂಡಿದೆ.

ಶ್ರೀ ವಿ.ಸಿ. ಕುಳಂದ್ಯೆ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶಿಕ್ಷಣವನ್ನು ವೃತ್ತಿಪರವಾಗಿಸುವಿಕೆಯ ರಾಷ್ಟ್ರೀಯ ಕಾರ್ಯಕಾರಿ ಗುಂಪು ನೀಡಿದ ಕೆಲವು ಸೂಚನೆಗಳು ಹೀಗಿವೆ: 'ಉತ್ಪಾದನೆಯನ್ನು ಹೆಚ್ಚಿಸಲು ವೃತ್ತಿಪರ ಆಸಕ್ತಿ ಮತ್ತು ಧೋರಣೆಯನ್ನು ಬೆಳೆಸುವ ಸಲುವಾಗಿ ಮತ್ತು ವೃತ್ತಿ ಆಯ್ಕೆಗಳಲ್ಲಿ ಸ್ವ-ಅನ್ವೇಷಣೆಗೆ ಅವಕಾಶವನ್ನು ನೀಡುವ ಸಲುವಾಗಿ ಶಿಕ್ಷಣದ ಕಿರಿಯ ಮಾಧ್ಯಮಿಕ ಶಾಲಾ ಹಂತದಲ್ಲಿ ವೃತ್ತಿಪರವಾಗಿಸುವಿಕೆಯ ಪರಿಚಯ ಮಾಡಿಕೊಡಬೇಕು'

ರಾಷ್ಟ್ರೀಯ ಶಿಕ್ಷಣ ನೀತಿಯು (1986) SUPW ನಿಂದ ಮತ್ತೆ WE ಗೆ ಮರಳಿದೆ. ಆದರೆ ಅದರ ಪರಿಕಲ್ಪನೆಯನ್ನು ಉಳಿಸಿಕೊಂಡಿದೆ. ಅದರ ದೃಷ್ಟಿಯಲ್ಲಿ ಕಾರ್ಯಾನುಭವವು (WE) ಉದ್ದೇಶಪೂರ್ವಕ ಮತ್ತು ಅರ್ಥಪೂರ್ಣ ದೈಹಿಕ ಶ್ರಮವಾಗಿರುತ್ತದೆ. ಇದು ಕಲಿಕಾ ಕಾರ್ಯವಿಧಾನಗಳ ಅಭಿನ್ನ ಭಾಗವಾಗಿ ಸಂಘಟಿತವಾಗಿದೆ ಮತ್ತು ಸಮುದಾಯಕ್ಕೆ ಉಪಯುಕ್ತವಾದ ಸರಕುಗಳು ಅಥವಾ ಸೇವೆಗಳ ಪ್ರತಿಫಲವನ್ನು ನೀಡುವ ರೀತಿಯಾಗಿದ್ದಾಗಿದೆ. ಪ್ರೌಢಶಾಲಾ ಶಿಕ್ಷಣದ ಹಂತದಲ್ಲಿ ವೃತ್ತಿಪೂರ್ವ ಕಾರ್ಯಕ್ರಮಗಳನ್ನು ಅಳವಡಿಸುವ ಅಗತ್ಯವನ್ನು ಕೂಡ ಕಾರ್ಯನೀತಿ ಎತ್ತಿಹಿಡಿದಿದೆ. ರಾಷ್ಟ್ರೀಯ ನೀತಿಯನ್ನು (1986) ಅನುಸರಿಸಿ ಬಂದ ಕ್ರಿಯಾ ಕಾರ್ಯಕ್ರಮದಲ್ಲಿ (ಪ್ರೋಗ್ರಾಮ್ ಆಫ್ ಆಕ್ಷನ್) ಕಾರ್ಯನೀತಿಯನ್ನು ಕಾರ್ಯಕ್ರಮಗಳಾಗಿ ನಮೂದಿಸಲಾಗಿದೆ. ಏಪ್ರಿಲ್, 1988ರಲ್ಲಿ NCERT ಹೊರತಂದ ಇನ್ನೊಂದು ದಸ್ತಾವೇಜು 'ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕಾಗಿ ಪಠ್ಯಕ್ರಮ ಒಂದು ಚೌಕಟ್ಟು', ಈ ಚೌಕಟ್ಟಿನಲ್ಲಿ ಶಿಕ್ಷಣದ ಕಿರಿಯ ಮಾಧ್ಯಮಿಕ ಶಾಲಾ ಹಂತಗಳಲ್ಲಿ ಕಾರ್ಯಾನುಭವವನ್ನು ಒದಗಿಸುವುದರೊಂದಿಗೆ, ಶಿಕ್ಷಣದ ಮೊದಲಿನ ಹಂತಗಳಲ್ಲಿ ವೃತ್ತಿಪೂರ್ವ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ನೀಡಿದೆ.

ಶಿಕ್ಷಣದ ರಾಷ್ಟ್ರೀಯ ನೀತಿಯ ಪರಿಶೀಲನೆಗಾಗಿ ಭಾರತ

Digitised by Bharatavani, CIIL

ಸರಕಾರದಿಂದ 1990ರಲ್ಲಿ ನೇಮಕಗೊಳಿಸಲಾದ ಆಚಾರ್ಯ ರಾಮಮೂರ್ತಿ ಸಮಿತಿಯ ಗಮನಕ್ಕೆ ಬಂದಿರುವ ಅಂಶಗಳೆಂದರೆ, 'ಸೃಜನಾತ್ಮಕ ಕೌಶಲ್ಯಗಳನ್ನು ಬೆಳೆಸಬೇಕಾಗಿದ್ದ ಕಾರ್ಯಾನುಭವವು ಕ್ಷುಲ್ಲಕ ಚಟುವಟಿಕೆಗಳಾಗಿ ಅವನತಿ ಹೊಂದಿದೆ. ಬಹಳಷ್ಟು ಸಂದರ್ಭಗಳಲ್ಲಿ ಅವು ಪಠ್ಯೇತರ ಚಟುವಟಿಕೆಗಾಗಿದ್ದು, ಪರಿಕಲ್ಪನೆಗೆ ಅಗತ್ಯವಾಗಿದ್ದ ಸಾಮಾಜಿಕ ಆಯಾಮದಿಂದ ಅದು ಕಳಚಿಕೊಂಡಿದೆ' ವಿಷಯ ಮತ್ತು ಶಿಕ್ಷಣಶಾಸ್ತ್ರ ಹಂತ ಇವೆರಡರಲ್ಲಿಯೂ WE/SUPW ಅನೇಕ ವಿಷಯಗಳೊಂದಿಗೆ ಸಮಗ್ರವಾಗಿ ಜೋಡಿಸಿಕೊಂಡಿರಬೇಕು ಎಂಬುದಾಗಿ ಅದು ಶಿಫಾರಸು ಮಾಡಿದೆ.

**ಕಾರ್ಯಾನುಭವದ ಪ್ರಮುಖ ಲಕ್ಷಣಗಳು:**

**ಪರಿಕಲ್ಪನೆ:** ಸಮುದಾಯಕ್ಕೆ ಉಪಯುಕ್ತವಾದ ಸರಕುಗಳು ಅಥವಾ ಸೇವೆಗಳನ್ನು ನೀಡುವಂತಹ ಉದ್ದೇಶಪೂರ್ವಕವಾದ, ಅರ್ಥಪೂರ್ಣವಾದ ಕೆಲಸ ಎಂಬುದಾಗಿ ಕಾರ್ಯಾನುಭವ WE ಅಥವಾ SUPW ವನ್ನು ವರ್ಣಿಸಲಾಗಿದೆ. ದೈಹಿಕಶ್ರಮವು ಉದ್ದೇಶಪೂರ್ವಕವಾಗುವುದು ಅದು ಶಿಕ್ಷಣದ ಅಗತ್ಯಗಳನ್ನು ಪೂರೈಸಿದಾಗ, ಮತ್ತು ಸಂಬಂಧಿಸಿದಾಗ, ಕೆಲಸವು ಪ್ರಮುಖವಾಗಿ ದೈಹಿಕವಾಗಿರಬೇಕು. ಹಾಗಿದ್ದಾಗ ಮಾತ್ರ ಅದು ಕಾಯಕದ ಘನತೆಯನ್ನು ಮೈಗೂಡಿಸಿಕೊಳ್ಳಲು ಮತ್ತು ಕಠಿಣ ಕೆಲಸಗಳಿಗೆ ಚೈತನ್ಯವನ್ನು ಬೆಳೆಸಿಕೊಳ್ಳಲು ನೆರವನ್ನು ನೀಡಬಲ್ಲದು, ಕೆಲಸವು ಉತ್ಪನ್ನ ಅಥವಾ ಸೇವೆಯ ಫಲಿತಾಂಶವನ್ನು ಹೊಂದಿರುವುದು ಮುಖ್ಯ. ಸೇವೆಯು ಸಂಭಾವನೆಯನ್ನು ಒಳಗೊಂಡಿರಬಹುದು ಅಥವಾ ಒಳಗೊಳ್ಳದೆ ಇರಬಹುದು. ಅದು ಸಮಾಜಸೇವೆಯಾಗಿರಬಹುದು.

**ಉದ್ದೇಶಗಳು:** NCERT ಯ ಪ್ರಕಟಣೆಯಲ್ಲಿ (1979) ನೀಡಿರುವ WE/SUPW ವಿನ ಉದ್ದೇಶಗಳು ಈ ಕೆಳಗಿನಂತಿವೆ:

1. ಸುಮುದಾಯದಲ್ಲಿ ಚಾಲ್ತಿಯಲ್ಲಿರುವ ಕಾಯಕದ ಜಗತ್ತು ಮತ್ತು ಉತ್ಪಾದಕ ವೃತ್ತಿಗಳನ್ನು ಮಕ್ಕಳು ಪರಿಚಯಿಸಿಕೊಳ್ಳುವಂತೆ ಮಾಡುವುದು ಮತ್ತು ಅವರಲ್ಲಿ ದೈಹಿಕ ಶ್ರಮದ ಕಾರ್ಮಿಕರ ಕುರಿತು ಗೌರವದ ಪ್ರಜ್ಞೆಯನ್ನು ಬೆಳೆಸುವುದು.
2. ಮಕ್ಕಳಲ್ಲಿ ಸಾಮಾಜಿಕ ಸಮಸ್ಯೆಗಳ ಅರಿವನ್ನು ಬೆಳೆಸುವುದು ಮತ್ತು ಅವರಲ್ಲಿ ಸಮುದಾಯ ಸೇವೆಯ ಕಡೆಗೆ ಧನಾತ್ಮಕ ಧೋರಣೆ ಉಂಟಾಗುವಂತೆ ಮಾಡುವುದು.
3. ಅವರಲ್ಲಿ ಸಮಾಜದ ಉಪಯುಕ್ತ ಸದಸ್ಯರಾಗುವ ಬಯಕೆಯನ್ನು ಬೆಳೆಸುವುದು ಮತ್ತು ಅವರು ಎಲ್ಲರ ಒಳಿತಿಗಾಗಿ ತಮಗೆ ಸಾಧ್ಯವಾಗುವಷ್ಟು ನೆರವಾಗುವಂತೆ ಮಾಡುವುದು.
4. ಅವರು ಒಟ್ಟುಗೂಡಿ ಕೆಲಸ ಮಾಡುವ ಧನಾತ್ಮಕ ಧೋರಣೆಯನ್ನು ಮತ್ತು ಸಾಮಾಜಿಕವಾಗಿ ಅಪೇಕ್ಷಿತವಾದ ಸ್ವಾವಲಂಬನೆ, ಕಾಯಕದ ಘನತೆ, ಸಹನೆ, ಸಹಕಾರ, ಅನುಕಂಪ ಮತ್ತು ನೆರವಾಗುವಿಕೆಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುವುದು.
5. ದುಡಿಮೆಯ ವಿಭಿನ್ನ ರೂಪಗಳಲ್ಲಿ ಅಳವಡಿಸಿಕಯಾಗಿರುವಂತಹ ನಿಯಮಗಳನ್ನು ಅರ್ಥೈಸಿಕೊಳ್ಳಲು ಅವರಿಗೆ ನೆರವಾಗುವುದು.
6. ಮಕ್ಕಳು ಶಿಕ್ಷಣದ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸಾಗುತ್ತಿದ್ದಂತೆ ಅವರು ಉತ್ಪನ್ನದಾಯಕ ಕೆಲಸಗಳಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡುವುದು. ಹಾಗೂ ಅವರಿಗೆ ಕಲಿಕೆ ಮತ್ತು ಗಳಿಕೆಯನ್ನು ಕೂಡಿಯೇ ನಡೆಸುವುದು ಸಾಧ್ಯವಾಗುವಂತೆ ಮಾಡುವುದು.
7. ಸೃಜನಾತ್ಮಕ ಸ್ವಅಭಿವ್ಯಕ್ತಿಯನ್ನು ಪರಿಹರಿಸುವ ಸಾಮರ್ಥ್ಯಗಳನ್ನು ಬೆಳೆಸುವ ಅವಕಾಶಗಳನ್ನು ಒದಗಿಸುವುದು.

**ವಸ್ತುವಿಷಯ:** "ಶಾಲಾಶಿಕ್ಷಣದಲ್ಲಿ ಕಾರ್ಯಾನುಭವ– ಮಾರ್ಗದರ್ಶಿಸೂತ್ರಗಳು (1987)" ಇದರಲ್ಲಿನ ವಿಷಯವಸ್ತುವು ಪ್ರಾಥಮಿಕ ಹಂತದಲ್ಲಿ 3 ಘಟಕಗಳನ್ನು ಹೊಂದಿದೆ: ಪರಿಸರ ಅಧ್ಯಯನಗಳು ಮತ್ತು ಅನ್ವಯಗಳು, ವಸ್ತುಗಳು, ಉಪಕರಣಗಳು ಮತ್ತು ತಂತ್ರಜ್ಞಾನದೊಂದಿಗೆ ಪ್ರಯೋಗಗಳು, ಮತ್ತು ಕೆಲಸದ ಅಭ್ಯಾಸ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತಗಳಲ್ಲಿ ವಸ್ತುವಿಷಯವು 2 ಭಾಗಗಳನ್ನು ಹೊಂದಿರುತ್ತದೆ: ಇವುಗಳೆಂದರೆ ಮಕ್ಕಳ, ಅವರ ಕುಟುಂಬದ ಮತ್ತು ಸಮುದಾಯದ ದೈನಂದಿನ ಬದುಕಿನ ಅಗತ್ಯಗಳನ್ನು ಪೂರೈಸುವಂತಹ ಮುಖ್ಯ ಚಟುವಟಿಕೆಗಳು ಮತ್ತು ಉತ್ಪಾದಕ ಕೆಲಸ ಮತ್ತು ಸೇವೆಗಳ ಆಯ್ದ ಕಾರ್ಯಕ್ರಮಗಳು. ಇವುಗಳು ಪುನರಾವರ್ತಿತ ಅನುಷ್ಠಾನದ ಮೂಲಕ ನಗದು ಅಥವಾ ಬೇರೆ ವಿಧದಲ್ಲಿ ಸ್ವಲ್ಪ ಮಟ್ಟಿನ ಸಂಭಾವನೆಯನ್ನು ಪಡೆಯುವಂತಾಗುವುದು. ಶಿಕ್ಷಣದ ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ವಿಶೇಷವಾಗಿ ಉತ್ಪನ್ನದಾಯಕ ಕೆಲಸ ಮತ್ತು ಸೇವೆಗಳಲ್ಲಿ ಆಯ್ದ ಕಾರ್ಯಕ್ರಮಗಳ ಪುನರಾವರ್ತಿತ ಅನುಷ್ಠಾನವು ಮುಖ್ಯವಾಗಿರುತ್ತವೆ. ಕಿರಿಯ ಮಾಧ್ಯಮಿಕ ಹಂತದಲ್ಲಿ, ಕಾರ್ಯಾನುಭವವು (WE) ವೃತ್ತಿಪೂರ್ವ ಶಿಕ್ಷಣದ ರೂಪವನ್ನು ತಾಳುತ್ತದೆ. ವಿದ್ಯಾರ್ಥಿಗಳು ಉತ್ಪಾದನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮತ್ತು ಸೇವೆಗಳನ್ನು ಕೈಗೊಳ್ಳುತ್ತಾರೆ ಮತ್ತು ಉತ್ತೇಜನಕ್ಕೆ ಎಂಬಂತೆ ಬರುವ ಸಂಭಾವನೆಯಲ್ಲಿ ಪಾಲನ್ನು ಪಡೆಯುತ್ತಾರೆ.

**ಅವಧಿ:** NCERT ತನ್ನ ಹತ್ತು ವರ್ಷದ ಶಾಲೆಗಾಗಿ ಪಠ್ಯಕ್ರಮ– ಒಂದು ಚೌಕಟ್ಟು (1976) ವಿನ ದಸ್ತಾವೇಜಿನ ಮೂಲಕ ಸೂಚಿಸಿರುವುದು ಏನೆಂದರೆ, WE ಮತ್ತು ಕಲಾ ವ್ಯಾಸಂಗಗಳಿಗಾಗಿ ಮತ್ತು 2 ತರಗತಿಗಳಿಗೆ ಶೇಕಡ 25 ಸಮಯವನ್ನು, 3ರಿಂದ 5ರವರೆಗಿನ ತರಗತಿಗಳಿಗೆ ಶೇಕಡ 20 ರಷ್ಟು ಸಮಯವನ್ನು ಹಂಚಲಾಗಿದೆ. ಹಾಗೂ 6ರಿಂದ 10ರವರೆಗಿನ ತರಗತಿಗಳಿಗೆ ಶೇಕಡ 10.5 ಸಮಯವನ್ನು ಒದಗಿಸಿದೆ. ಶಿಕ್ಷಣದ ಹಿರಿಯ ಪ್ರಾಥಮಿಕ ಮತ್ತು ಕಿರಿಯ ಮಾಧ್ಯಮಿಕ ಹಂತಗಳಲ್ಲಿ ಕಲೆಯ ವ್ಯಾಸಂಗಕ್ಕೆ

Digitised by Bharatavani, CIIL

ಪ್ರತ್ಯೇಕ ಸಮಯವನ್ನು ನೀಡಲಾಗದೆ. ಈ ಚೌಕಟ್ಟಿನ ದೃಷ್ಟಿಯಲ್ಲಿ ಶಾಲಾ ಪಠ್ಯಕ್ರಮದಲ್ಲಿಯೇ WE ಗೆ ಸಾಧ್ಯವಿರುವಷ್ಟು ಸಮಯವನ್ನು ನೀಡಬೇಕು.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಒಂದು ಚೌಕಟ್ಟು (1988) ನಲ್ಲಿ WE ಗಾಗಿ ಶಿಕ್ಷಣದ ವಿವಿಧ ಹಂತಗಳಲ್ಲಿ ಹಂಚಲಾದ ಸಮಯಾವಧಿ ಹೀಗಿದೆ: ಪ್ರಾಥಮಿಕ ಹಂತಕ್ಕೆ ಶೇಕಡ 20, ಹಿರಿಯ ಪ್ರಾಥಮಿಕ ಹಂತಕ್ಕೆ ಶೇಕಡ 12, ಮತ್ತು ಮಾಧ್ಯಮಿಕ ಹಂತಕ್ಕೆ ಶೇಕಡ 13 ರಷ್ಟು ಸಮಯ.

NCERT ಹೊರಡಿಸಿದ ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (2000)ವಿನಲ್ಲಿ ಗಂಟೆಗಳು/ಪಿರಿಯಡುಗಳ ಸಂಖ್ಯೆಯನ್ನು ಶಾಲೆಯೇ ನಿರ್ಧರಿಸಬೇಕೆಂದು ಸೂಚಿಸಲಾಗಿದೆ. ಒಂದು ವಿಷಯದ ಕ್ಷೇತ್ರ/ಚಟುವಟಿಕೆಗೆ ಮೀಸಲಾದ ಸಮಯವನ್ನು ವೈಯಕ್ತಿಕ ಅಥವಾ ವೈಯಕ್ತಿಕ ದೃಷ್ಟಿಕೋನಕ್ಕೆ ಅನುಗುಣವಾಗಿ ಅತಿಕ್ರಮಿಸಬಾರದು.

**ಚಟುವಟಿಕೆಗಳ ಆಯ್ಕೆ:** ಶಾಲಾ ಅವಧಿಯ ವಿವಿಧ ಹಂತಗಳಲ್ಲಿ ಚಟುವಟಿಕೆಗಳ ಯೋಜನೆಗಳ ಆಯ್ಕೆಯು ಶಾಲೆ ಮತ್ತು ಅದು ಇರುವ ಪ್ರದೇಶದಲ್ಲಿ ಲಭ್ಯವಿರುವ ಪ್ರಾಕೃತಿಕ, ಭೌತಿಕ ಮತ್ತು ಮಾನವ ಸಂಪನ್ಮೂಲಗಳನ್ನು ಆಧರಿಸಿಕೊಂಡು ಇರುತ್ತದೆ. ಇದರೊಂದಿಗೆ, ಒಂದು ಚಟುವಟಿಕೆ ಅಥವಾ ಯೋಜನೆಯಲ್ಲಿ ತೊಡಗಿಸಿಕೊಳ್ಳಲಾದ ಕೆಲಸವು ಉತ್ಪನ್ನದಾಯಕ, ಬೋಧನಾತ್ಮಕ ಮತ್ತು ಸಾಮಾಜಿಕವಾಗಿ ಉಪಯುಕ್ತವಾಗಿ ಇರುವಂತೆ ನೋಡಿಕೊಳ್ಳಬೇಕು. ಇದೇ ವೇಳೆ, ಎಲ್ಲಾ ಶಾಲೆಗಳು ಕೈಗೊಳ್ಳಬಹುದಾದ ಸಾಮಾನ್ಯ ಚಟುವಟಿಕೆಗಳನ್ನು ಕಾರ್ಯಕ್ರಮಗಳನ್ನು ಗುರುತಿಸಲು ಸಾಧ್ಯವಾಗುವಂತಿರಬೇಕು. ಈ ಸಾರ ಪಠ್ಯವಸ್ತು ಹಾಗೂ ಆಯ್ದ ಕಾರ್ಯಕ್ರಮಗಳಲ್ಲಿ ಎಲ್ಲ ಮಕ್ಕಳು ಇಡೀ ವರ್ಷ ಭಾಗವಹಿಸುವಂತಿರಬೇಕು.

ಸಾಧ್ಯವಿರುವಲ್ಲಿ ಉತ್ಪಾದಕ ಕೆಲಸ ಮತ್ತು ಸೇವೆಗಳಿಂದ ವಸ್ತು ಅಥವಾ ನಗದು ರೂಪದ ಸಂಭಾವನೆ ಬರುವಂತಿದ್ದು ಇದು ಸ್ವಾವಲಂಬನದ ದಿಕ್ಕಿನಲ್ಲಿ ಸಾಗಲು ಅವಕಾಶವಿರಬೇಕೆಂದು ನಿರೀಕ್ಷಿಸಲಾಗಿದೆ. ಇವುಗಳನ್ನು ಆರೋಗ್ಯ ಮತ್ತು ನೈರ್ಮಲ್ಯ; ಆಹಾರ; ಆಶ್ರಯ; ಬಟ್ಟೆ; ಸಂಸ್ಕೃತಿ ಮತ್ತು ಮನರಂಜನೆ; ಮತ್ತು ಸಮುದಾಯ ಕೆಲಸ ಹಾಗೂ ಸಮಾಜ ಸೇವೆ–ಈ ಕ್ಷೇತ್ರಗಳಿಂದ ಪಡೆಯಬಹುದಾಗಿದೆ.

ಪಠ್ಯಕ್ರಮದ ಚೌಕಟ್ಟು ಸೂಚಿಸುವುದು ಏನೆಂದರೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳ ಅಧ್ಯಯನಗಳ ಸಾಮಾನ್ಯ ಕಾರ್ಯಯೋಜನೆಯು 'ಕಲಿಕೆಯನ್ನು ಹೇಗೆ ಕಲಿಯುವುದು' ಈ ಕೌಶಲ್ಯದ ಮೇಲಿನ ಒತ್ತಿನ ಮೂಲಕ, ಕಲಿಯುವ ಎಲ್ಲರಿಗೂ ಹೊಂದಿಕೊಳ್ಳುವಂತಹ ಮತ್ತು ವಿಶೇಷ ಅಗತ್ಯಗಳಿರುವವರಿಗೂ ಸೇರಿದಂತೆ ವಿಷಯಾಂಶದಲಿ ನಮ್ಯತೆ ಇರುವ ಕಲಿಕಾ ವಿಧಾನವನ್ನು ಜಾರಿಗೆ ತರಬೇಕಾಗಿದೆ.

**ಮೂಲಭೂತ ವ್ಯವಸ್ಥೆಯ ಸೌಲಭ್ಯಗಳು:** ಸಾಮಾನ್ಯವಾಗಿ WE/ SUPW ವನ್ನು ಜಾರಿಗೆ ತರಲು ಎರಡು ವಿಧದ ಸೌಲಭ್ಯಗಳು ಬೇಕಾಗುತ್ತವೆ. ಅವುಗಳೆಂದರೆ : 1. ಭೌತಿಕ ಸೌಲಭ್ಯಗಳು. ಇದರಲ್ಲಿ ವಸತಿ, ಉಪಕರಣಗಳು, ಸಲಕರಣೆಗಳು, ಕಚ್ಚಾವಸ್ತುಗಳು ಇರುತ್ತವೆ. 2. ಶಿಕ್ಷಕರು. ಇದರೊಂದಿಗೆ ಸಮುದಾಯದ ಸೌಲಭ್ಯಗಳನ್ನು ಕೂಡ ಬಳಸಲಾಗುತ್ತದೆ. ಸಾರ ಚಟುವಟಿಕೆಗಳಲ್ಲಿ ವಸ್ತುಗಳು ಮತ್ತು ಸಲಕರಣೆಗಳ ಅಗತ್ಯವಿದ್ದರೆ, ಆಯ್ದ ಚಟುವಟಿಕೆಗಳಲ್ಲಿ ಅಗತ್ಯಗಳು ವಿಶೇಷ ರೀತಿಯದ್ದಾಗಿರುತ್ತವೆ. ಇವುಗಳನ್ನು ವಿದ್ಯಾರ್ಥಿಗಳು ಹೊಂದಿಸಿಕೊಳ್ಳುತ್ತಾರೆ ಅಥವಾ ಶಿಕ್ಷಕರು ಒದಗಿಸುತ್ತಾರೆ. ಸಾಮಾನ್ಯವಾಗಿ ಸಲಕರಣೆಗಳನ್ನು ಶಾಲೆಗಳೇ ಒದಗಿಸುತ್ತವೆ.

**ಶಿಕ್ಷಕರು :** SUPW ಜಾರಿಗೆ ತರಲು ಸೂಕ್ತ ರೀತಿಯ ತರಬೇತಿಯನ್ನು ಪಡೆದ ಶಿಕ್ಷಕರ ಅಗತ್ಯವಿರುವುದನ್ನು ಈಶ್ವರಭಾಯಿ ಪಟೇಲ್ ಸಮಿತಿ ಒತ್ತಿ ಹೇಳಿದೆ. SUPW ಶಿಕ್ಷಕರ ಸ್ಥಾನಮಾನವು ಬೇರೆ ಶಿಕ್ಷರ ಸ್ಥಾನಮಾನಕ್ಕೆ ಸಮಾನವಾಗಿರಬೇಕು, ಮತ್ತು ಬೇರೆ ಬೇರೆ ಚಟುವಟಿಕೆಗಳಿಗಾಗಿ ಸೂಕ್ತ ಕುಶಲಿಗಳನ್ನು ಅರೆಕಾಲಿಕ ಅವಧಿಗೆ ನೇಮಿಸಿಕೊಳ್ಳುವ ಅವಕಾಶವಿರಬೇಕೆಂದು ಸಮಿತಿ ಪರಿಗಣಿಸಿದೆ. WE ಯ ಅಭಿಶಿಕ್ಷಣ ಮತ್ತು ತರಬೇತಿಯನ್ನು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕೂಡ ಆಯೋಜಿಸಲಾಗುತ್ತದೆ. ಕಾರ್ಯಕ್ರಮಗಳಲ್ಲಿ ಸಮುದಾಯದಲ್ಲಿರುವ ತಜ್ಞರನ್ನು ತೊಡಗಿಸಿಕೊಳ್ಳುವುದರ ಮೂಲಕ ಅವರ ಸೇವೆಗಳನ್ನು ಬಳಸಿಕೊಳ್ಳಬಹುದು. ಭೋಪಾಲದ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯವು WE ಯನ್ನು ಅಳವಡಿಸಿಕೊಂಡ ಪ್ರಾರಂಭಿಕ ವರ್ಷದಲ್ಲಿ ಕೈಗಾರಿಕಾ ಕುಶಲಕಲೆಯ ಒಂದು ವರ್ಷದ ಬಿ.ಎಡ್.ಕೋರ್ಸನ್ನು ಪ್ರಾರಂಭಿಸಿತ್ತು. ಆದರೆ ಅದು ಎರಡು ವರ್ಷಗಳ ನಂತರ ನಿಂತು ಹೋಯಿತು.

**ಮೌಲ್ಯಮಾಪನ:** ಕಾರ್ಯದ ಪ್ರತಿಯೊಂದು ಹೆಜ್ಜೆಯಲ್ಲಿ ಮೌಲ್ಯಮಾಪನವನ್ನು ನಡೆಸಬೇಕು. ಅದು ಚಟುವಟಿಕೆಗಳ ಸ್ವರೂಪಕ್ಕೆ ಅನುಗುಣವಾಗಿ ನಮ್ಯವಾಗಿ ಇರಬೇಕು. ಮಕ್ಕಳ ಪ್ರಗತಿಯ ಮೌಲ್ಯಮಾಪನದ ಸಂಪೂರ್ಣ ಜವಾಬ್ದಾರಿ ಶಿಕ್ಷಕರದ್ದಾಗಿರುತ್ತದೆ. WEಯ ಚಟುವಟಿಕೆಗಳು ಮತ್ತು ಯೋಜನೆಗಳ ಮೌಲ್ಯಮಾಪನದಲ್ಲಿ ಕಾರ್ಯವಿಧಾನ ಮತ್ತು ಉತ್ಪನ್ನದೊಂದಿಗೆ ಕೆಲಸ ಮಾಡುವಾಗಿನ ಧೋರಣೆಯನ್ನು ಪರಿಗಣಿಸುವುದು ಮುಖ್ಯ.

**ಕಾರ್ಯಗತಗೊಳಿಸುವಿಕೆ:** ಶಿಕ್ಷಣವನ್ನು ನೀಡುವಲ್ಲಿ ಕೇಂದ್ರ ಮತ್ತು ರಾಜ್ಯದ ನಡುವೆ ಅರ್ಥಪೂರ್ಣ ಸಹಭಾಗಿತ್ವ ಇರಬೇಕಾದ ಅಗತ್ಯವನ್ನು ರಾಷ್ಟ್ರೀಯ ಶಿಕ್ಷಣ ನೀತಿ (1986) ಒತ್ತಾಯಿಸಿದೆ. ವಾಸ್ತವದಲ್ಲಿ ರಾಜ್ಯಗಳು, ಕೇಂದ್ರ ಆಡಳಿತ ಪ್ರದೇಶಗಳು WE ಕಾರ್ಯಕ್ರಮಗಳನ್ನು ಜಾರಿಗೆ ತಂದರೆ, ಕೇಂದ್ರ ಸರಕಾರವು ತನ್ನ ಸಂಶೋಧನಾತ್ಮಕ ಮತ್ತು ಅಭಿವೃದ್ಧಿ ಸಂಘಟನೆ, ಉದಾಹಣೆಗೆ NCERT ಯ ಮೂಲಕ ಅವುಗಳ ಗುಣಮಟ್ಟಗಳನ್ನು ಮತ್ತು ದರ್ಜೆಗಳನ್ನು ಖಾತರಿಪಡಿಸಿಕೊಳ್ಳುತ್ತವೆ. ರಾಷ್ಟ್ರ ಮತ್ತು ರಾಜ್ಯಮಟ್ಟಗಳಲ್ಲಿ WEP ಯನ್ನು ಕಾರ್ಯಗತಗೊಳಿಸುವಿಕೆಗೆ ತೊಡಗಿಸಿಕೊಂಡಿರುವ ಸಂಸ್ಥೆಗಳೆಂದರೆ NCERT, CBSE (ಮಾಧ್ಯಮಿಕ ಶಿಕ್ಷಣದ ಕೇಂದ್ರ ಮಂಡಳಿ), SCERT ಗಳು (ಶೈಕ್ಷಣಿಕ

Digitised by Bharatavani, CIIL

ಸಂಶೋಧನೆ ಮತ್ತು ತರಬೇತಿಯ ರಾಜ್ಯ ಮಂಡಳಿಗಳು)/SIE ಗಳು (ರಾಜ್ಯ ಶಿಕ್ಷಣ ಸಂಸ್ಥೆಗಳು), ಮಾಧ್ಯಮಿಕ ರಾಜ್ಯ ಮಂಡಲಿಗಳು, ಶಿಕ್ಷಣ ಮತ್ತು ತರಬೇತಿಯ ಜಿಲ್ಲಾ ಸಂಸ್ಥೆಗಳು ಮತ್ತು ಶಾಲೆಗಳು.

ವಿವಿಧ ಸಂಸ್ಥೆಗಳು ನಿರ್ವಹಿಸುವ ಪಾತ್ರಗಳ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿವೆ:

**ರಾಷ್ಟ್ರಮಟ್ಟ :** NCERT ಯ ಹತ್ತುವರ್ಷದ ಶಾಲೆಗಾಗಿ ಪಠ್ಯ ಕ್ರಮ ಒಂದು ಚೌಕಟ್ಟು (1976) ವಿನಲ್ಲಿ WE ಯ ಅಗತ್ಯವನ್ನು ಎತ್ತಿ ಹಿಡಿಯಲಾಗಿದೆ. ರಾಷ್ಟ್ರಮಟ್ಟದ ಆರ್ ಅಂಡ್ ಡಿ ಸಂಸ್ಥೆಯೊಂದು ವ್ಯವಸ್ಥಿತ ರೀತಿಯಿಂದ ಮಧ್ಯಪ್ರವೇಶಿಸುತ್ತಿರುವುದು ಇದೇ ಮೊದಲ ಬಾರಿಯಾಗಿದೆ. ಇಲ್ಲಿ WE ಗೆ ಪಠ್ಯ ಕ್ಷೇತ್ರದ ದರ್ಜೆ ನೀಡಲಾಗಿದೆ. ಆನಂತರ NCERT ಯು ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳನ್ನು ತಯಾರಿಸಿತು. NCERT ಯ ಘಟಕಗಳಲ್ಲಿ ಒಂದಾಗಿರುವ ಭುವನೇಶ್ವರದ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯವು (ಈಗ ಅದನ್ನು ಪ್ರಾದೇಶಿಕ ಶಿಕ್ಷಣ ಸಂಸ್ಥೆಯಾಗಿ ಮರುರೂಪಿಸಲಾಗಿದೆ) SUPW ವಿನ ಅನೇಕ ವಿಷಯಾಂಶಗಳನ್ನು ಕಾರ್ಯಗತಗೊಳಿಸಲು ಶಾಲಾ ಶಿಕ್ಷಕರು ಮತ್ತು ಶೈಕ್ಷಣಿಕ ಆಡಳಿತದಾರರಿಗೆ ನೆರವಾಗುವ ಸಲುವಾಗಿ ಶಾಲೆಯಲ್ಲಿ SUPW ಯ ಕುರಿತಾದ ಒಂದು ಕೈಪಿಡಿಯನ್ನು ಹೊರತಂದಿದೆ. NCERT ಯ ಸಮೀಕ್ಷೆ ಮತ್ತು ದತ್ತಾಂಶ ಪರಿಷ್ಕರಣ ಘಟಕವು ತನ್ನ ಮೂರನೆಯ ಅಖಿಲ ಭಾರತ ಶೈಕ್ಷಣಿಕ ಸಮೀಕ್ಷೆಯಲ್ಲಿ (1973) ಭಾರತದ 41,699 ಶಾಲೆಗಳಲ್ಲಿ WE ಕಾರ್ಯಕ್ರಮ ಪ್ರಗತಿಯಲ್ಲಿ ಇರುವುದನ್ನು ತಿಳಿಸಿದೆ. ಇದು WE ಯನ್ನು ಅನೇಕ ಕಲೆಗಳಾಗಿ ಮತ್ತು ಉತ್ಪಾದಕರ ಹವ್ಯಾಸಗಳಾಗಿ ಅಳವಡಿಸಿಕೊಂಡಿರುವ ಒಟ್ಟು ಶಾಲೆಗಳ ಶೇಕಡ 7.08 ರಷ್ಟಾಗುತ್ತದೆ. NCERT ಯು ಎರಡು ದಸ್ತಾವೇಜುಗಳನ್ನು ಹೊರತಂದಿದೆ. ಅವುಗಳೆಂದರೆ – "ಸಾಮಾಜಿಕವಾಗಿ ಉಪಯುಕ್ತವಾಗುವ ಉತ್ಪಾದಕ ಕಾರ್ಯ – ಕಾರ್ಯಕ್ರಮಗಳ ಅಭಿವೃದ್ಧಿ ಮತ್ತು ಪರಿಪಾಲನೆ" ಹಾಗೂ "ಸಾಮಾಜಿಕ ಉಪಯುಕ್ತ ಉತ್ಪಾದಕ ಕಾರ್ಯ ಮಾದರಿ ಪಠ್ಯಘಟಕ (1979)' ಇದನ್ನು ಮುಖ್ಯವಾಗಿ ಪರಿಕಲ್ಪನೆ ಮತ್ತು ಉದ್ದೇಶಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ಮತ್ತು ಪಠ್ಯಕ್ರಮದ ಅಭಿವೃದ್ಧಿ ಮತ್ತು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಕಾರ್ಯವಿಧಾನಕ್ಕೆ ಮಾರ್ಗದರ್ಶಕ ಸೂತ್ರಗಳನ್ನು ಒದಗಿಸುವ ಸಲುವಾಗಿ ಹೊರತಂದಿದೆ. 1979ರಲ್ಲಿ CBSE ಪ್ರಕಟಿಸಿದ ಕಿರುಗ್ರಂಥ 'ಸಾಮಾಜಿಕ ಉಪಯುಕ್ತ ಉತ್ಪಾದಕ ಕಾರ್ಯ – ಶಿಕ್ಷಕರಿಗೆ ಮಾರ್ಗದರ್ಶಕ ಸೂತ್ರಗಳು'. ಇದನ್ನು ಶಾಲೆಗಳಿಗೆ ಹಂಚಲಾಗಿದೆ. ಮೊದಲ ಗ್ರಂಥದ ಮುಂದುವರಿಕೆಯಾಗಿ CBSE ಪ್ರಕಟಿಸಿದ ಇನ್ನೊಂದು ಕಿರುಗ್ರಂಥ 'ಶಿಕ್ಷಣದ ಮೂರನೆಯ ಆಯಾಮ–ಸಾಮಾಜಿಕ ಉಪಯುಕ್ತ ಉತ್ಪಾದಕ ಕಾರ್ಯ–ಅದರ ಸಾಧ್ಯತೆ ಮತ್ತು ವ್ಯಾಪ್ತಿ'. ಒಂದನೆಯ ತರಗತಿಯಿಂದ ಎಂಟನೆಯ ತರಗತಿಯವರೆಗಿನ ವಿದ್ಯಾರ್ಥಿಗಳ ಉಪಯೋಗಕ್ಕೆಂದು ಕೇಂದ್ರೀಯ ವಿದ್ಯಾಲಯ ಸಂಘಟನೆಯ SUPW ಕುರಿತಾಗಿ ಪ್ರತ್ಯೇಕ ಕಿರುಗ್ರಂಥವನ್ನು ಪ್ರಕಟಿಸಿದೆ. NCERT ಯು 1981, 1982 ಮತ್ತು 1985ರಲ್ಲಿ ಆಕರ ಗ್ರಂಥದ 4 ಸಂಪುಟಗಳನ್ನು ಹೊರತಂದಿದೆ. ಇದರಲ್ಲಿ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಕೈಗೊಳ್ಳಬಹುದಾದ ಮಾದರಿ ಚಟುವಟಿಕೆಗಳನ್ನು ಚಿತ್ರಗಳೊಂದಿಗೆ ವಿವರಿಸಲಾಗಿದೆ.

NCERT ಯ 'ಕೆಲವು ಆಯ್ದ ಸಂಸ್ಥೆಗಳಲ್ಲಿ ಕಾರ್ಯಗತಗೊಳಿಸಲಾಗಿರುವ ಸಾಮಾಜಿಕ ಉಪಯುಕ್ತ ಉತ್ಪಾದಕ ಕಾರ್ಯ' ಎಂಬ ಅಧ್ಯಯನದಲ್ಲಿ (1979) SUPW ಕಾರ್ಯಕ್ರಮಗಳು ಹೆಚ್ಚಾಗಿ ಸ್ವಯಂಸೇವಾ ಸಂಘಟನೆಗಳು ನಡೆಸುವ ಸಂಸ್ಥೆಗಳಲ್ಲಿ ನಡೆಯುತ್ತಿವೆ ಎನ್ನುವ ಅಂಶವನ್ನು ವ್ಯಕ್ತಪಡಿಸಿದೆ. ಈ ಪ್ರತಿಯೊಂದು ಸಂಸ್ಥೆಯ ಹಿನ್ನಲೆಯಲ್ಲಿ ಕೆಲವು ನಿಷ್ಠಾವಂತ, ಶ್ರದ್ಧಾವಂತ ಮತ್ತು ಪ್ರಗತಿಪರ ವ್ಯಕ್ತಿಗಳು ಇರುವುದು ಈ ಸಂಸ್ಥೆಗಳ ವಿಶಿಷ್ಟತೆಯಾಗಿದೆ. ಈ ಸಂಸ್ಥೆಗಳ ಸಿಬ್ಬಂದಿಗಳು ಕೂಡ ಮಿಶನರಿಗಳ ಹಾಗಿನ ಕಾರ್ಯಪಟುತ್ವದೊಂದಿಗೆ ಕೆಲಸ ಮಾಡುತ್ತಿದ್ದಾರೆ. ಈ ಶಾಲೆಗಳಲ್ಲಿ ಹೆಚ್ಚಿನವು ಸಂಪೂರ್ಣ ನಿವಾಸಶಾಲೆಗಳು ಅಥವಾ ಅರೆನಿವಾಸ ಶಾಲೆಗಳು. ಕೆಲವು ಸಂದರ್ಭಗಳಲ್ಲಿ ವಿವಿಧ ಕಾರ್ಯಾನುಭವ ಕಾರ್ಯಕ್ರಮಗಳಿಂದ ಪಡೆದ ಲಾಭವನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಳಗೆ ಹಂಚಿಕೊಡಲಾಗುತ್ತದೆ. ಶಾಲೆಗಳಲ್ಲಿ ನಿಜವಾಗಿಯೂ ಜಾರಿಗೆ ತರಲಾದ ಕಾರ್ಯಾನುಭವದ ಸ್ಥಿತಿಗತಿಯ ಗುಣದೋಷಗಳ ಪರಿಶೀಲನೆ ನಡೆಸುವುದಕ್ಕೆ ಅಧ್ಯಯನವನ್ನು (1981) ಕೈಗೊಳ್ಳಲಾಗಿತ್ತು. ಅದುವೇ 'ಭಾರತದಲ್ಲಿ ಸಾಮಾಜಿಕ ಉಪಯುಕ್ತ ಉತ್ಪಾದಕ ಕಾರ್ಯ ಸ್ಥಾನಮಾನ ಅಧ್ಯಯನ.' ಈ ಅಧ್ಯಯನವು ತಿಳಿಸಿದ ಪ್ರಕಾರ ಎಲ್ಲ ರಾಜ್ಯಗಳಲ್ಲಿ ಸಮಾನ ರೀತಿಯಿಂದ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲಾಗಿಲ್ಲ. ಪ್ರಾಯೋಗಿಕ ಮನೋಧರ್ಮ ಹೊಂದಿದ ಸಾಕಷ್ಟು ಮಂದಿ ಶಿಕ್ಷಕರ ಗಂಭೀರ ಕೊರತೆ ಇದೆ. (NCERT) ಯ ಇನ್ನೊಂದು ಪ್ರಕಟಣೆ 'ಸಾಮಾಜಿಕವಾಗಿ ಉಪಯುಕ್ತ ಉತ್ಪಾದಕ ಕಾರ್ಯ ಕುರಿತಾದ ರಾಷ್ಟ್ರೀಯ ಅಧಿವೇಶನ ವರದಿ' (1983). ಈ ವರದಿಯಲ್ಲಿ ಕೆಲವು ರಾಜ್ಯಗಳಲ್ಲಿನ ಕಾರ್ಯಾನುಭವದ ಸ್ಥಾನಮಾನವನ್ನು ತಿಳಿಸಲಾಗಿದೆ. ಭಾರತದ ಸಾಮಾನ್ಯ ಶಿಕ್ಷಣದಲ್ಲಿರುವ WE ನ ಕುರಿತಾದ 'ಕಾರ್ಯಕೇಂದ್ರಿತ ಶಿಕ್ಷಣದ ಕುರಿತಾದ ಕಾರ್ಯನೀತಿಯ ಪರಿಶೀಲನೆ'ಯನ್ನು ಒಳಗೊಂಡಿರುವ ರಾಷ್ಟ್ರೀಯ ಅಧ್ಯಯನ ಮತ್ತು WE ಗೆ ಸಂಬಂಧಿಸಿದ ಯೋಜನೆಗಳು ಮತ್ತು ಸಂಸ್ಥೆಗಳ ಕುರಿತು ಎರಡು ಸೂಚಿಕೆಗಳನ್ನು ಕೂಡ 1984 ರಲ್ಲಿ NCERT ಯ ಶಿಕ್ಷಣದ ಸಾಮಾಜಿಕವಾಗಿ ಉಪಯುಕ್ತ ಉತ್ಪಾದಕ ಮತ್ತು ವೃತ್ತಿಪರತ್ವದ ಘಟಕಗಳು ತಯಾರಿಸಿವೆ. ಇದಕ್ಕೆ ಪ್ರೇರಣೆ ನೀಡಿದವರು ಯುನೆಸ್ಕೋದ ಏಷ್ಯಾ ಮತ್ತು ಫೆಸಿಫಿಕ್, ಬ್ಯಾಂಕಾಂಕ್‌ನ ಶಿಕ್ಷಣದ ಪ್ರಾದೇಶಿಕ ಕಚೇರಿ, ಅವರು ಇದನ್ನು ಅಭಿವೃದ್ಧಿಗಾಗಿ ಏಷ್ಯಾದ ಶೈಕ್ಷಣಿಕ ಹೊಸ ಕಲ್ಪನೆಗಳ ಏಷ್ಯಾ ಕಾರ್ಯಕ್ರಮಗಳ ವ್ಯಾಪ್ತಿಯಲ್ಲಿ ಪರಿಗಣಿಸಿದ್ದಾರೆ.

NCERT ಯು ರಾಜ್ಯಗಳ ಮತ್ತು UT ಗಳ ಪ್ರಮುಖ ಅಧಿಕಾರಿಗಳಿಗಾಗಿ ಅಭಿಶಿಕ್ಷಣದ ಅನೇಕ ಕಾರ್ಯಕ್ರಮಗಳನ್ನು ಕೂಡ ಸಂಘಟಿಸುತ್ತದೆ. ಈ ಕಾರ್ಯಕ್ರಮಗಳು ಶಾಲೆಗಳಲ್ಲಿನ WE/

Digitised by Bharatavani, CIIL

SUPW ವಿನ ಪರಿಕಲ್ಪನೆ, ತಾತ್ವಿಕತೆ, ಉದ್ದೇಶಗಳು ಮತ್ತು ನೈಜ ಸಂಘಟನೆಯ ಕುರಿತಾಗಿ ಇರುತ್ತವೆ. ಇದು WE/SUPW ಗಾಗಿ ಶಿಕ್ಷಕ ತರಬೇತಿಯನ್ನು ಹಾಗೂ ಶಾಲೆಗಳಲ್ಲಿ WE ತರಗತಿಗಳನ್ನು ನಿಭಾಯಿಸುವ ಹಾಗೂ WE ತರಗತಿಗಳನ್ನು ತೆಗೆದುಕೊಳ್ಳಲು ಸಾಮಾನ್ಯ ಶಿಕ್ಷಣ ಶಿಕ್ಷಕರಿಗಾಗಿ ತರಬೇತಿಯನ್ನುಕೂಡ ಆಯೋಜಿಸುತ್ತದೆ.

'ಶಾಲಾ ಶಿಕ್ಷಣದಲ್ಲಿ WE ನಿರ್ದೇಶನ ತತ್ವ' (1987) ಎನ್ನುವುದು NCERT ಯ ಪ್ರಕಟಣೆಯಾಗಿದೆ. ಇದರ ಹಿಂದಿ ಆವೃತ್ತಿ (1987) ಕೂಡ ಬಂದಿದೆ. ಇದು NCERT ನಿಯೋಜಿಸಿದ WE/SUPW ವಿನ ಕಾರ್ಯನಿರತ ಗುಂಪಿನ ಫಲಿತಾಂಶವಾಗಿದೆ. ಇದು 'ಪ್ರೌಢಶಾಲಾ ಹಂತಕ್ಕಾಗಿ WE (1987)ವಿನ ಕೆಳಗೆ ಕೆಲವು ಅನುಕರಣೀಯ ವೃತ್ತಿಪೂರ್ವ ಕೋರ್ಸ್‌ಗಳ ಗುಂಪನ್ನು ಕೂಡ ಹೊರತಂದಿದೆ. ದೇಶದ ಮಾಧ್ಯಮಿಕ ಶಾಲೆಗಳ ಬಳಕೆಗಾಗಿ ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಿಗಾಗಿ (1988) ಗೈಡ್‌ಲೈನ್ಸ್ ಆಂಡ್ ಸಿಲ್ಲಬಿ ಫಾರ್ ಡಬ್ಲ್ಯುಇ ಕ್ಯುರಿಕುಲ'ವನ್ನು ಪ್ರಕಟಿಸಿದೆ. ಶಿಕ್ಷಕರು, ಅವರು ಯಾವುದೇ ವಿಷಯಕ್ಷೇತ್ರಕ್ಕೆ ಸೇರಿದವರಿರಬಹುದು, ಬಳಸಿಕೊಳ್ಳಬಹುದಾದ ರೀತಿಯಿಂದ ಇದನ್ನು ವಿನ್ಯಾಸಗೊಳಿಸಲಾಗಿದೆ. 1991ರಲ್ಲಿ NCERT ಯು WE ಕುರಿತಾಗಿ ರಾಷ್ಟ್ರೀಯ ಪರಿಶೀಲನಾ ಅಧಿವೇಶನವನ್ನು ಸಂಘಟಿಸಿ, ಮಾಡುವಿಕೆಯ ಮೂಲಕ ಕಲಿಕೆ (ಲರ್ನಿಂಗ್ ಬೈ ಡುಯಿಂಗ್) ಎಂಬ ವರದಿಯನ್ನು ಪ್ರಕಟಿಸಿದೆ. ಈ ಅಧಿವೇಶನವು ರಾಜ್ಯದಲ್ಲಿ ಜಾರಿಗೆ ಬಂದ WE/SUPW ವಿನ ವಿವರಗಳನ್ನು ಸಂಗ್ರಹಿಸಿದೆ ಮತ್ತು ಅವುಗಳಲ್ಲಿನ ಯಶಸ್ಸಿನ ಕತೆಗಳನ್ನು ಎತ್ತಿ ತೋರಿಸಿದೆ. 1991ರಲ್ಲಿ ಸಿಬಿಎಸ್‌ಇ ವರ್ಕ್ಸ್ ಎಕ್ಸ್‌ಪಿಯರೆನ್ಸ್ ಇನ್ ಸ್ಕೂಲ್ಸ್–ಗೈಡ್‌ಲೈನ್ಸ್ ಅಂಡ್ ಸಿಲ್ಲಬಸ್ ಪ್ರಕಟಣೆಯ ಮರು ಮುದ್ರಣವನ್ನು ಹೊರತಂದಿದೆ. ಇದನ್ನು ತನ್ನ ನೋಂದಾಯಿತ ಶಾಲೆಗಳಿಗೆಲ್ಲಾ ಪ್ರಸಾರ ಮಾಡಿದೆ. ಈ ಪಠ್ಯ ಕ್ಷೇತ್ರದ ಮಾಹಿತಿ ಸಂಗ್ರಹಕ್ಕಾಗಿ PSSCIVE, NCERT ಯು WE/SUPW ವಿಚಾರವಾಗಿ ರಾಷ್ಟ್ರೀಯ ಅಧಿವೇಶನವನ್ನು (1998) ಸಂಘಟಿಸಿದೆ. ಇದರೊಂದಿಗೆ, ಪ್ರತಿವರ್ಷ PSSCIVE NCERT ಯು ರಾಜ್ಯಗಳ, ಕೇಂದ್ರ ಆಡಳಿತ ಪ್ರದೇಶಗಳ, ಕೇಂದ್ರೀಯ ವಿದ್ಯಾಲಯಗಳ, ನವೋದಯ ವಿದ್ಯಾಲಯಗಳ ಮತ್ತು ಶಿಕ್ಷಣ ಮತ್ತು ತರಬೇತಿಯ ಜಿಲ್ಲಾ ಸಂಸ್ಥೆಗಳ ಪ್ರಮುಖ ಅಧಿಕಾರಿಗಳಿಗಾಗಿ WE ನ ಅನೇಕ ಅಭಿಶಿಕ್ಷಣ ಕಾರ್ಯಕ್ರಮಗಳನ್ನು ಸಂಘಟಿಸಿದೆ.

ವೃತ್ತಿಪೂರ್ವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ, ಭಾರತ ಸರಕಾರವು 1993ರಲ್ಲಿ 'ಕಿರಿಯ ಮಾಧ್ಯಮಿಕ ಶಾಲಾ ಹಂತದಲ್ಲಿ ವೃತ್ತಿಪೂರ್ವ ಶಿಕ್ಷಣದ ಕಾರ್ಯಯೋಜನೆ'ಯನ್ನು ಅನುಷ್ಠಾನಕ್ಕೆ ತಂದಿದೆ. ಈ ಕಾರ್ಯಯೋಜನೆಯಲ್ಲಿ ಕೆಲವು ರಾಜ್ಯಗಳ ಕೆಲವು ಶಾಲೆಗಳಿಗೆ ಆರ್ಥಿಕ ನೆರವನ್ನು ಒದಗಿಸಲಾಗಿದೆ.

ಪದವಿ ಹಂತದಲ್ಲಿ ಎಲ್ಲ ವಿದ್ಯಾರ್ಥಿಗಳು WE ಕಲಿಯುವುದನ್ನು ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಮಂಡಳಿ NCTE ಹೊರತಂದಿರುವ ಶಿಕ್ಷಕ ತರಬೇತಿ ಪಠ್ಯಕ್ರಮದಲ್ಲಿ ಕಡ್ಡಾಯ ಮಾಡಿದೆ. ಇದರಿಂದ ಎಲ್ಲ ಶಿಕ್ಷಕರು WE ಕಲಿಸಲು ಯೋಗ್ಯತೆಯನ್ನು ಹೊಂದುತ್ತಾರೆ. ಕಾಲಕಾಲಕ್ಕೆ ಸಂಸ್ಥೆಯಲ್ಲಿ ತರಬೇತಿಯನ್ನು ಆಯೋಜಿಸುವುದರ ಮೂಲಕ ಶಿಕ್ಷಕರ ಸಾಮರ್ಥ್ಯ ಹೆಚ್ಚಾಗಿ ಅವರು ಉತ್ತಮ ಸೇವೆಯನ್ನು ನೀಡಲು ಸಮರ್ಥರಾಗುತ್ತಾರೆ.

**ರಾಜ್ಯಮಟ್ಟ:** WE/SUPW ಯನ್ನು ವಿವಿಧ ರಾಜ್ಯಗಳಲ್ಲಿ ವಿವಿಧ ರೀತಿಯಿಂದ ಕರೆಯಲಾಗುತ್ತದೆ. ಉದಾಹರಣೆಗೆ ಸಾಮಾಜಿಕ ಉಪಯುಕ್ತ ಕಾರ್ಯ ಅಥವಾ ಕಾರ್ಯ ಶಿಕ್ಷಣ ಅಥವಾ ಬದುಕು–ಕೇಂದ್ರಿತ ಶಿಕ್ಷಣ ಅಥವಾ ಕುಶಲಕಲಾ ಶಿಕ್ಷಣ. ಬಹುಪಾಲು ಎಲ್ಲ ರಾಜ್ಯಗಳಲ್ಲಿ ಕೇಂದ್ರ ಆಡಳಿತ ಪ್ರದೇಶಗಳಲ್ಲಿ ಇವುಗಳ ಯೋಜನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು SCERT/SIE ಯಲ್ಲಿರುವ ಕಿರುಕೂಟ (ಸೆಲ್) ನೋಡಿಕೊಳ್ಳುತ್ತದೆ. ಆದರೆ ಆಡಳಿತ ನಿಯಂತ್ರಣ ಮಾತ್ರ ರಾಜ್ಯ ಶಿಕ್ಷಣ ನಿರ್ದೇಶಕರಲ್ಲಿಯೇ ಇರುತ್ತದೆ. ಜಿಲ್ಲಾ ಅಧಿಕಾರಿಗಳು/ಉಪ ಶಿಕ್ಷಣ ಅಧಿಕಾರಿಗಳು/ಕ್ಷೇತ್ರ ಮಟ್ಟದ ಅಧಿಕಾರಿಗಳು ಶಾಲೆಯಲ್ಲಿನ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ನೇರ ಜವಾಬ್ದಾರರಾಗಿರುತ್ತಾರೆ. ಕೆಲವು ರಾಜ್ಯಗಳು ಕಾರ್ಯ–ಕೇಂದ್ರಿತ–ಶಿಕ್ಷಣದ ಪರಿಶೀಲನೆಗಾಗಿ ವಿಶೇಷ ಮೌಲ್ಯಮಾಪಕ ಸಮಿತಿಗಳನ್ನು ರೂಪಿಸಿವೆ. ಶಾಲೆಗಳಿಗೆ WE/SUPW ಗಾಗಿ ಅಲ್ಪಮೊತ್ತದ ಹಣವನ್ನು ನೀಡಲಾಗಿದೆ. SUPW ಗಾಗಿ ವಿಶೇಷ ಶುಲ್ಕದ ಅವಕಾಶವಿದೆ. ಇದನ್ನು ಕೆಲವು ರಾಜ್ಯಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುತ್ತದೆ. ಇನ್ನು ಕೆಲವು ರಾಜ್ಯಗಳಲ್ಲಿ ಈ ಕಾರ್ಯಕ್ರಮಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ಶಾಲೆಗಳಿಗೆ ಸಾಕಷ್ಟು ಮೊತ್ತದ ಹಣವನ್ನು ನೀಡಲಾಗುತ್ತದೆ. SCERT ಗಳು ಅಥವಾ SIE ಗಳು ರಾಜ್ಯದ ಮುಖ್ಯ ಕಾರ್ಯನಿರ್ವಾಹಕರಿಗಾಗಿ WE/SUPW ವಿನ ಅಭಿಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುತ್ತವೆ. ರಾಜ್ಯ, ಜಿಲ್ಲಾ ಮಟ್ಟಗಳಲ್ಲಿ ಪಠ್ಯಕ್ರಮದ ನಿರ್ವಹಣೆಗೆ ಪ್ರಸಾರ ನೀಡುವ ಸಲುವಾಗಿ ಮತ್ತು ಶಾಲೆಗಳಲ್ಲಿ ತಯಾರಿಸಲಾದ ವಸ್ತುಗಳನ್ನು ವಿಲೇವಾರಿ ಮಾಡುವುದಕ್ಕಾಗಿ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನು ಮತ್ತು ಪ್ರದರ್ಶನಗಳನ್ನು ಕೂಡ SCERT/SIE ಗಳು ನಡೆಸುತ್ತವೆ.

**ಶಾಲಾಮಟ್ಟ:**

WE/SUPW ವಿನ ಪಠ್ಯಕ್ರಮದ ಕಾರ್ಯನಿರ್ವಹಣೆಯು WE ಶಿಕ್ಷಕರೊಂದಿಗೆ ಇತರ ಎಲ್ಲಾ ಶಿಕ್ಷಕರ ಮೂಲಕವೂ ನಡೆಯುತ್ತದೆ. ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು, NCERT ಯ ಬಹು–ಉದ್ದೇಶಿತ ಪ್ರದರ್ಶಕ ಬೋಧನಾ ಶಾಲೆಗಳು ಮತ್ತು ಪಂಜಾಬ್, ಮಹಾರಾಷ್ಟ್ರ, ಕೇರಳ, ಪಶ್ಚಿಮ ಬಂಗಾಲ ರಾಜ್ಯಗಳಲ್ಲಿ ಮತ್ತು ಇತರೆಡೆಗಳಲ್ಲಿ ಪೂರ್ಣಾವಧಿಯ WE ಶಿಕ್ಷಕರು ಇರುತ್ತಾರೆ. ಈ ಶಿಕ್ಷಕರು ಬೇರೆ ಶಿಕ್ಷಕರೊಂದಿಗೆ ಸೇರಿ ರಾಜ್ಯ ಸರಕಾರಗಳನ್ನೂ ಒಳಗೊಂಡಂತೆ, ಮಾಧ್ಯಮಿಕ ಶಿಕ್ಷಣಾ ಮಂಡಳಿಗಳು, SCERT, SIE ಗಳು ನೀಡಿದ ಮಾರ್ಗದರ್ಶಕ ಸೂತ್ರಗಳನ್ನು ಆಧರಿಸಿ WE ಚಟುವಟಿಕೆಗಳನ್ನು ಸಂಘಟಿಸುತ್ತಾರೆ. ಕೆಲವು ರಾಜ್ಯಗಳು WE ಗಾಗಿ ಶುಲ್ಕವನ್ನು ಸಂಗ್ರಹಿಸುತ್ತವೆ.

Digitised by Bharatavani, CIIL

ಅವಧಿಯ ಪ್ರಮಾಣ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಚಟುವಟಿಕೆಗಳ ಆಯ್ಕೆಯಲ್ಲಿ ಸಾಕಷ್ಟು ನಮ್ಯತೆ ಇರುತ್ತದೆ. ಪ್ರತಿಯೊಂದು, ಶಾಲೆಯ ತನ್ನದೇ ಆದ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಬಹುಪಾಲು ಚಟುವಟಿಕೆಗಳನ್ನು ಶಾಲೆಯಲ್ಲಿಯೇ ನಡೆಸಲಾಗುತ್ತದೆ. ಹಾಗಿದ್ದರೂ ಕೆಲವು ಚಟುವಟಿಕೆಗಳನ್ನು ಸಮುದಾಯದಲ್ಲಿ ಕೂಡ ಆಯೋಜಿಸಲಾಗುತ್ತದೆ. ಶಾಲೆಗಳು ನಡೆಸುವ ಚಟುವಟಿಕೆಗಳು ಸೇವಾ ರೀತಿಯದ್ದಾಗಿರುವುದಕ್ಕಿಂತ, ಬಹುತೇಕವಾಗಿ ಉತ್ಪಾದಕದಾಯಕವಾಗಿರುತ್ತವೆ. ಚಟುವಟಿಕೆಗಳ ಮೌಲ್ಯಮಾಪನವನ್ನು ಶಿಕ್ಷಕರು ನಡೆಸುತ್ತಾರೆ. ಕೆಲವು ರಾಜ್ಯಗಳಲ್ಲಿ ಮೌಲ್ಯಮಾಪನಕ್ಕೆ ಅನುಗುಣವಾಗಿ ಶಿಕ್ಷಕರು ದರ್ಜೆಯನ್ನು (ಗ್ರೇಡ್) ನೀಡುತ್ತಾರೆ. WE ಚಟುವಟಿಕೆಗಳಲ್ಲಿ ಉತ್ಪಾದಿಸಲಾದ ಸರಕುಗಳನ್ನು ಪ್ರದರ್ಶನಗಳ ಮೂಲಕ ವಿಲೇವಾರಿ ಮಾಡಲಾಗುತ್ತದೆ ಅಥವಾ ವಿದ್ಯಾರ್ಥಿಗಳಿಗೆ ಹಂಚಿಬಿಡಲಾಗುತ್ತದೆ.

**WEP ಯಲ್ಲಿನ ಕೆಲವು ಹೆಗ್ಗುರುತುಗಳು:**

ಕುಶಲ ಕಲಾಶಿಕ್ಷಣ WE/SUPW ಕಾರ್ಯಶಿಕ್ಷಣವ ಪಠ್ಯ ಕ್ಷೇತ್ರದಲ್ಲಿ ಒಂದಾಗಿ ಅಳವಡಿಸಿಕೊಂಡಂದಿನಿಂದ, ರಾಜ್ಯಗಳು ಅನೇಕ ನವೀನ ಯೋಜನೆಗಳನ್ನು ಕೈಗೆತ್ತಿಕೊಂಡಿವೆ. WE ಯ ಅನುಷ್ಠಾನದ ಮೇಲೆ ಪ್ರಭಾವ ಬೀರಿದ ಕೆಲವು ಯೋಜನೆಗಳು ಮತ್ತು ಪರಿಶೋಧನೆಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ :

**ಮಧ್ಯಪ್ರದೇಶದ ಕಾರ್ಯಯೋಜನೆ: 'ನೀವು ಕಲಿಯುವಾಗ ಗಳಿಸಿರಿ':**

ಮಧ್ಯಪ್ರದೇಶ ಸರ್ಕಾರದ ಶಿಕ್ಷಣ ಇಲಾಖೆಯು ಅಕ್ಟೋಬರ್, 1978ರಲ್ಲಿ ಪ್ರಾಯೋಗಿಕ ಮಟ್ಟದಲ್ಲಿ ಕಾರ್ಯಯೋಜನೆಯೊಂದನ್ನು ಪ್ರಾರಂಭಿಸಿತು. ಪ್ರಾರಂಭದಲ್ಲಿ ತಾಟ್-ಪಟ್ಟಿ ಮತ್ತು ಸೀಮೆಬಣ್ಣ ತಯಾರಿಕೆಯಲ್ಲಿ ಪರಿಣತವಾಗಲು 6 ಕೇಂದ್ರಗಳನ್ನು ಸ್ಥಾಪಿಸಲಾಯಿತು. ಜನವರಿ, 1979ರಲ್ಲಿ ಈ ಕೇಂದ್ರಗಳಲ್ಲಿ ಉತ್ಪಾದನೆಯು ಪ್ರಾರಂಭವಾಯಿತು. ಎರಡು ತಿಂಗಳೊಳಗೆ ಉತ್ಪನ್ನಗಳನ್ನು ಮಾರಾಟ ಮಾಡಿ ಮಕ್ಕಳು ಲಾಭವನ್ನು ಗಳಿಸಿದರು. ಈ ಫಲಿತಾಂಶದಿಂದ ಪ್ರೋತ್ಸಾಹ ಪಡೆದು ಈ ಕಾರ್ಯಯೋಜನೆಯನ್ನು 198 ಕೇಂದ್ರಗಳಿಗೆ ವಿಸ್ತರಿಸಲಾಯಿತು. ಪ್ರತಿಯೊಂದು ಜಿಲ್ಲೆಯ ಒಂದೊಂದು ಹೆಣ್ಮಕ್ಕಳ ಶಾಲೆಯಲ್ಲಿ ಸೀಮೆಬಣ್ಣ ತಯಾರಿಕೆಯನ್ನು ಪ್ರಾರಂಭಿಸಲಾಯಿತು. ಇಲಾಖೆಯ ವತಿಯಿಂದ ಮೊಹರು ಮೇಣದ ಉತ್ಪಾದನೆ, ಪೀಠೋಪಕರಣಗಳ ತಯಾರಿಕೆ, ಮತ್ತು ಶಾಲಾ ಸಮವಸ್ತ್ರದ ಸಿದ್ಧತೆಗಳನ್ನು ಚಟುವಟಿಕೆಯ ಪಟ್ಟಿಗೆ ಸೇರಿಸಲಾಯಿತು. ಕಾರ್ಯಯೋಜನೆಯು 571 ಕೇಂದ್ರಗಳಲ್ಲಿ ಕಾರ್ಯನಿರತವಾಗಿದೆ. ವಿದ್ಯಾರ್ಥಿಗಳು ನಿಯಮಿತ ಸಮಯದಲ್ಲಿ ಹೆಚ್ಚು ಅಪವ್ಯಯವಿಲ್ಲದೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಬಹುದಾದ ಸರಕುಗಳನ್ನು ಉತ್ಪಾದಿಸಬಲ್ಲರು ಎಂಬುದನ್ನು ಕಾರ್ಯಯೋಜನೆಯ ಸಾಧನೆಗಳು ತೋರಿಸಿಕೊಟ್ಟಿವೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ಕಾರ್ಯಯೋಜನೆಯು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ತನ್ನ ಪರಿಣಾಮಕಾರಿತ್ವವನ್ನು ಸಾಬೀತುಪಡಿಸಿದೆ. ತನ್ನ ಬಹುತೇಕ ಉದ್ದೇಶಗಳನ್ನು ಪೂರೈಸಿಕೊಳ್ಳುವುದರೊಂದಿಗೆ ವಿದ್ಯಾಥಿಗಳಲ್ಲಿ ಉತ್ಪಾದನಾ ಕೌಶಲ್ಯಗಳು ಮತ್ತು ದುಡಿಮೆಯ ಘನತೆಯನ್ನು ಬೆಳೆಸಿದೆ.

**SUPW ವಿನ ಅನುಷ್ಠಾನದಲ್ಲಿ 'ಶಿಬಿರ ಬದುಕು':**

ರಾಜಸ್ಥಾನದ ಸೆಕೆಂಡರಿ ಶಿಕ್ಷಣ ಮಂಡಳಿಯು SUPW ಪಠ್ಯ ಕ್ಷೇತ್ರವನ್ನು ಶಿಬಿರ ಬದುಕಿನ ಮೂಲಕ ಜಾರಿಗೆ ತರಲು ನಿರ್ಧರಿಸಿತು. ಇಲ್ಲಿ ವಿದ್ಯಾರ್ಥಿಗಳು ಒಟ್ಟಿಗೆ ದಿನ ಕಳೆಯಬಹುದು, ಒಟ್ಟಿಗೆ ಕೆಲಸ ಮಾಡಬಹುದು ಮತ್ತು SUPW ಚಟುವಟಿಕೆಗಳನ್ನು ನಡೆಸುವಾಗ ನವೀನ ವಿಧಾನಗಳ ಮೂಲಕ ಪರಸ್ಪರ ಸಹಕಾರ ನೀಡಬಹುದು. 9 ಮತ್ತು 10ನೇ ತರಗತಿಯ ಮಕ್ಕಳು ವಾರದಲ್ಲಿ ನಾಲ್ಕು ಪಿರಿಯಡಿನ ವೃತ್ತಿಪೂರ್ವ ಚಟುವಟಿಕೆಗಳನ್ನು ನಡೆಸಬೇಕು ಮತ್ತು ಪ್ರತಿ ತರಗತಿಯಲ್ಲಿ 5 ದಿನಗಳ ಶಿಬಿರದಲ್ಲಿ ಭಾಗವಹಿಸಬೇಕು. ಶಿಬಿರದಲ್ಲಿ ಮಕ್ಕಳು ಕೈಗೊಳ್ಳಬೇಕಾಗಿರುವುದು: 1. ಸಮುದಾಯ ಸೇವೆ 2. ಸಮೀಕ್ಷೆ ಮತ್ತು ಸಂಗ್ರಹಕಾರ್ಯ 3. ಸಾಂಸ್ಕೃತಿಕ ಮತ್ತು ಮನರಂಜನಾ ಚಟುವಟಿಕೆಗಳು.

ಶಿಬಿರವನ್ನು ಆಯೋಜಿಸಲು ಶಾಲೆ ಹೆಚ್ಚಿನ ತಯಾರಿಯನ್ನು ನಡೆಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಂಡಳಿಯು ವಿವರವಾದ ಮಾರ್ಗದಶಕ ಸೂತ್ರಗಳನ್ನು ಒದಗಿಸಿದೆ. ಈ ರೀತಿ WE ಯನ್ನು ಜಾರಿಗೆ ತರುವ ನವೀನ ಮಾರ್ಗವು ಸಾಕಷ್ಟು ಯಶಸ್ಸನ್ನು ಪಡೆದಿದೆ. ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಶಾಲೆಗಳಲ್ಲಿ. ಮಕ್ಕಳಲ್ಲಿ ಅನೇಕ ಧನಾತ್ಮಕ ಧೋರಣೆಗಳನ್ನು ಪ್ರೋತ್ಸಾಹಿಸಲಾಗಿದೆ.

**ಆಂಧ್ರಪ್ರದೇಶದ 'ಮಂಡಲ ವೃತ್ತಿ ಶಿಕ್ಷಣ ಕೇಂದ್ರಗಳು':**

1984-86ರಲ್ಲಿ 345 ಶಾಲೆಗಳಲ್ಲಿ ವೃತ್ತಿಪೂರ್ವ ಕೋರ್ಸ್‌ಗಳನ್ನು ಜಾರಿಗೆ ತಂದ ನಂತರ ರಾಜ್ಯ ಸರ್ಕಾರಕ್ಕೆ ಕಾರ್ಯಾಗಾರಗಳು, ಸಲಕರಣೆಗಳು, ಉಪಕರಣಗಳು ಮತ್ತು ತರಬೇತಿ ಹೊಂದಿರುವ ಬೋಧಕರ ರೂಪದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಗತ್ಯ ಅರಿವಾಯಿತು. ಅದುದರಿಂದ ಮೊದಲ ಹಂತದಲ್ಲಿ 28 ಮಂಡಲ ವೃತ್ತಿಪರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ಕಾರ್ಯವನ್ನು ಇತರ ಮಂಡಲಗಳಿಗೂ ವಿಸ್ತರಿಸಲಾಯಿತು. ಪ್ರತಿಯೊಂದು ಕೇಂದ್ರವು 4 ಪ್ರೌಢಶಾಲೆಗಳ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸುತ್ತದೆ ಮತ್ತು ಮಂಡಲದ ಜನರ ಸಾಮಾಜೋ ಆರ್ಥಿಕ ಸ್ಥಿತಿಗಳನ್ನು ಆಧರಿಸಿ 4-6 ಚಟುವಟಿಕೆಗಳನ್ನು ಆಯೋಜಿಸುತ್ತದೆ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. 8ರಿಂದ 10ನೇ ತರಗತಿಯ ಮಕ್ಕಳಿಗಾಗಿ 11 ವೃತ್ತಿಪೂರ್ವ ಕೋರ್ಸ್‌ಗಳ ಬೋಧನಾ ಸಾಮಗ್ರಿಗಳನ್ನು ತೆಲುಗಿನಲ್ಲಿ ತಯಾರಿಸಲಾಗಿದೆ. ಪ್ರತಿಯೊಂದು ಕೇಂದ್ರವು ಶಾಲೆಗಳ ಅಗತ್ಯಗಳನ್ನು ಮತ್ತು ನಡುವೆಯೇ ಶಾಲೆಯನ್ನು ಬಿಟ್ಟು ಹೋದವರ ಅಗತ್ಯಗಳನ್ನು ಪೂರೈಸುತ್ತದೆ. ಇದರಲ್ಲಿ ಗುಮಾಸ್ತರೂ ಸೇರಿಕೊಂಡು ಒಟ್ಟು 16 ಸಿಬ್ಬಂದಿಗಳು ಇದ್ದಾರೆ. ಸರಕಾರಿ ಇಲಾಖೆಗಳಿಂದ ತಜ್ಞರನ್ನು ಬೋಧಕರಾಗಿ ನಿಯೋಜಿಸಲಾಗುತ್ತದೆ. ಕೆಲವೊಮ್ಮೆ

Digitised by Bharatavani, CIIL

ನಿವೃತ್ತಿ ಹೊಂದಿದ ಆದರೆ ಹೆಚ್ಚು ಪರಿಣತಿ ಹೊಂದಿದವರನ್ನು ಕೂಡ ನೇಮಕಗೊಳಿಸಲಾಗುತ್ತದೆ. ಮಂಡಲ ವೃತ್ತಿಪರ ಶಿಕ್ಷಣ ಕೇಂದ್ರವು ಇಲ್ಲಿನ ವಿದ್ಯಾರ್ಥಿಗಳು ಅರೆ-ಕುಶಲಿಗಳು ಅಥವಾ ಕುಶಲಿ ಕಾರ್ಮಿಕರಾಗಿ ಮುಂದೆ ನೌಕರಿಗೆ ಸೇರಲು ಯೋಗ್ಯರಾಗಿರುವುದನ್ನು ಪ್ರದರ್ಶಿಸಿದೆ. ಮಂಡಲ ಕೇಂದ್ರಗಳಲ್ಲಿ ಒದಗಿಸಲಾಗುವ ಕಾರ್ಯಕ್ರಮಗಳು +2 ವೃತ್ತಿಪರ ಕಾರ್ಯಕ್ರಮಗಳೊಂದಿಗೆ ಸಂಯೋಜನೆಯನ್ನು ಹೊಂದಿವೆ.

**ಸಮಸ್ಯೆಗಳು ಮತ್ತು ವಿವಾದಾಂಶಗಳು:**

ರಾಷ್ಟ್ರೀಯ ಶಿಕ್ಷಣ ನೀತಿಯು (1986) WE ಪಠ್ಯ ಕ್ಷೇತ್ರದ ಅನುಷ್ಠಾನಕ್ಕೆ ಅತಿ ಹೆಚ್ಚಿನ ಒತ್ತನ್ನು ನೀಡಿದೆ. NCERT ಯು ವ್ಯಾಸಂಗದ ಚೌಕಟ್ಟನ್ನು ಒದಗಿಸಿದೆ. ಇದರಲ್ಲಿ ಯೋಜನೆಯನ್ನು ಸಾಧಿಸಲು ಅನುಸರಿಸುವ ನೀತಿಯನ್ನು ಎತ್ತಿ ತೋರಿಸಲಾಗಿದೆ. ಅದು ರಾಷ್ಟ್ರಮಟ್ಟದಲ್ಲಿ ಅನೇಕ ವಿಚಾರಸಂಕಿರಣಗಳನ್ನು ಕೂಡ ಆಯೋಜಿಸಿದೆ. ಇದೇ ರೀತಿ ರಾಜ್ಯಮಟ್ಟದಲ್ಲಿ SCERT ಗಳು ಮತ್ತು ಮಾಧ್ಯಮಿಕ ಶಿಕ್ಷಣ ಮಂಡಳಿಗಳು ಕೂಡ ಈ ರೀತಿಯ ಕೆಲವು ಪ್ರಯತ್ನಗಳನ್ನು ನಡೆಸಿವೆ. ಕೆಲವು ಸಮಸ್ಯೆಗಳು ಇನ್ನೂ ಉಳಿದಿವೆ. ಅನೇಕ ಹಂತಗಳಲ್ಲಿ ಇದಕ್ಕೆ ಸಂಬಂಧಿಸಿದ ಎಲ್ಲರ ಗಮನವು ಇದರತ್ತ ಹರಿಯಬೇಕಾದ ಅಗತ್ಯವಿದೆ. ಪಠ್ಯಕ್ಷೇತ್ರದ ಅನುಷ್ಠಾನಕ್ಕೆ ತಡೆಯನ್ನು ಒಡ್ಡುವ ಕೆಲವು ಸಮಸ್ಯೆಗಳು ಮತ್ತು ವಿವಾದಾಂಶಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

**ರಾಷ್ಟ್ರಮಟ್ಟ :** 1. ರಾಷ್ಟ್ರಮಟ್ಟದಲ್ಲಿ ಮೇಲುಸ್ತುವಾರಿ ನೋಡುವ ಮತ್ತು ಸಹಯೋಗವನ್ನು ನೀಡುವ ವ್ಯವಸ್ಥೆ ಇಲ್ಲ.

2. ಶಾಲೆಯ ವಿವಿಧ ಹಂತಗಳಲ್ಲಿ ಸಂಘಟಿಸಬಹುದಾದ ಚಟುವಟಿಕೆಗಳ ವಿಧಾನಗಳ ಕುರಿತು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಾಮಾನ್ಯ ಶಿಕ್ಷಣದ ಶಿಕ್ಷಕರನ್ನು ಬಳಸಿಕೊಳ್ಳುವುದರ ಕುರಿತು ಸಂಶೋಧನೆ ನಡೆದಿರುವುದು ಬಹಳ ಕಡಿಮೆ. SUPW ವನ್ನು ಒದಗಿಸುವುದರಲ್ಲಿ ತಗಲುವ ಖರ್ಚು, ಮತ್ತು ಇದರಿಂದ ಪ್ರತಿಫಲಿತವಾಗುವ ವರ್ತನಾ ಬದಲಾವಣೆಗಳು ಒಂದು ಕಡೆಯಲ್ಲಿ ಮತ್ತು ಇನ್ನೊಂದು ಕಡೆಯಲ್ಲಿ ಮಾಡಲ್ಪಡಬಹುದಾದ ಸರಕುಗಳು ಮತ್ತು ಸೇವೆಗಳು ಇವುಗಳ ಕುರಿತು ಅಧ್ಯಯನಗಳು ನಡೆದೇ ಇಲ್ಲ.

3. ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸುವುದಕ್ಕಾಗಿ ಕಾರ್ಯಯೋಜನೆಯೊಂದರ ಮೂಲಕ ಕೇಂದ್ರದ ಮಧ್ಯಸ್ಥಿಕೆ ಇಲ್ಲಿ ಗೈರು ಹಾಜರಾಗಿದೆ. ಇದು ಪಠ್ಯಕ್ಷೇತ್ರದ ಅನುಷ್ಠಾನಕ್ಕೆ ಇರುವ ಪ್ರತಿಬಂಧಕಗಳಲ್ಲಿ ಒಂದಾಗಿದೆ.

**ರಾಜ್ಯಮಟ್ಟ:**

1. ಬಹುಪಾಲು ರಾಜ್ಯಗಳಲ್ಲಿ /ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಡಳಿತಾತ್ಮಕ ಮೇಲ್ವಿಚಾರಣೆ, ಮೇಲುಸ್ತುವಾರಿ ಮತ್ತು ಸಹಯೋಗಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ. ಸಂಶೋಧನೆ ಮತ್ತು ಅಭಿವೃದ್ಧಿ ಬೆಂಬಲ ಕೂಡ ನಿಕೃಷ್ಟವಾಗಿದೆ.
2. ಬಹು ಸಂಖ್ಯೆಯ ರಾಜ್ಯಗಳಲ್ಲಿ WE/SUPW ಗಾಗಿ ನೀಡುವ ಹಣ ಬಹಳ ಕಡಿಮೆ ಮೊತ್ತದ್ದಾಗಿದೆ.
3. ಒಟ್ಟಾರೆ ಕಾರ್ಯಗತಗೊಳಿಸುವ ಬಗ್ಗೆ ಅದರಲ್ಲೂ ಮುಖ್ಯವಾಗಿ ಸರ್ಕಾರಿ ಶಾಲೆಗಳಲ್ಲಿ ನಮ್ಯತೆಯ ದೃಷ್ಟಿ ಖಾಲಿ ಖಾಲಿ.
4. ಎಲ್ಲಾ ರಾಜ್ಯಗಳ ಬಹುತೇಕ ಶಾಲೆಗಳಲ್ಲಿ ಸ್ಥಳೀಯ-ವಿಶಿಷ್ಟ ಚಟುವಟಿಕೆಗಳನ್ನು ನಡೆಸಲು ಅಗತ್ಯವಿರುವ ಯಾವುದೇ ಮೂಲಭೂತ ಸೌಕರ್ಯಗಳು ಇರುವುದಿಲ್ಲ.
5. ಹೆಚ್ಚಿನ ಶಾಲೆಗಳಲ್ಲಿ WE ಗಾಗಿ ಶಿಕ್ಷಕರು ಇರುವುದಿಲ್ಲ. ಈ ಶಿಕ್ಷಕರಿಗೆ ಪದೋನ್ನತಿಯ ಅವಕಾಶ ಬಹಳ ಕಡಿಮೆ. ಅವರು ತಮ್ಮ ಇಡೀ ಬದುಕಿನಲ್ಲಿ ಸ್ಥಗಿತರಾಗಿ ಉಳಿದರೆ, ಬೇರೆ ವಿಷಯ ಕ್ಷೇತ್ರಗಳಲ್ಲಿರುವ ಅವರ ಸಹೋದ್ಯೋಗಿಗಳು ಕಾಲಕ್ಕನುಗುಣವಾದ ಪದೋನ್ನತಿಯನ್ನು ಪಡೆಯುತ್ತಾರೆ ಮತ್ತು ಅನೇಕ ಸಂದರ್ಭಗಳಲ್ಲಿ ಅವರ ಮೇಲಧಿಕಾರಿಗಳಾಗುತ್ತಾರೆ.
6. ಉತ್ಪಾದನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳುವ ಶಾಲೆಗಳು ಮಾರುಕಟ್ಟೆ ಸಮಸ್ಯೆಗಳನ್ನು ಎದುರಿಸುತ್ತವೆ. ಅವರ ಉತ್ಪನ್ನಗಳ ವಿಲೇವಾರಿ ನಡೆಸಲು ಜಿಲ್ಲೆಯ ಅಧಿಕಾರಿಗಳು ಅವರ ನೆರವಿಗೆ ಬರುವುದು ಬಹಳ ಕಡಿಮೆ.

**ಜಿಲ್ಲಾ ಮಟ್ಟ:**

1. ಜಿಲ್ಲಾ ಶಿಕ್ಷಣ ಅಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಶಾಲೆಗೆ ನೀಡುವ ತಮ್ಮ ಭೇಟಿಗಳಲ್ಲಿ ಶಾಲೆಗಳಲ್ಲಿ ಸಾಮಾನ್ಯವಾಗಿ WE ಇರುವುದನ್ನು ಗಮನಿಸುವುದಿಲ್ಲ.
2. ಶಿಕ್ಷಣ ಮತ್ತು ತರಬೇತಿಯ ಜಿಲ್ಲಾ ಸಂಸ್ಥೆಯು ಈ ಪಠ್ಯಕ್ಷೇತ್ರದ ಶಿಕ್ಷಕರಿಗಾಗಿ ಸಾಕಷ್ಟು ಸಂಖ್ಯೆಯ ತರಬೇತಿ ಕಾರ್ಯಕ್ರಮಗಳನ್ನು (ಸಾಮಾನ್ಯ ಹಾಗೂ ವಿಶೇಷ) ಆಯೋಜಿಸುವುದಿಲ್ಲ. ಬಹುತೇಕ ಶಿಕ್ಷಣ ಮತ್ತು ತರಬೇತಿಯ ಜಿಲ್ಲಾ ಸಂಸ್ಥೆಗಳಲ್ಲಿ WE ತರಬೇತಿಯನ್ನು ನೀಡಲು ಅಗತ್ಯವಿರುವ ತರಬೇತಿದಾರರು ಮತ್ತು ಮೂಲಭೂತ ಸೌಕರ್ಯಗಳು ಲಭ್ಯವಿಲ್ಲ. ಇಲ್ಲಿ ಸೌಲಭ್ಯಗಳು ಒಂದೂ ಇರುವುದಿಲ್ಲ ಅಥವಾ ಅವು ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ.

**ಶಾಲಾಮಟ್ಟ:**

1. ದೇಶದ ಎಲ್ಲ ಕಡೆಗಳ ಶಾಲೆಗಳಲ್ಲಿ ಬೇರೆ ಪಠ್ಯ ವಿಷಯಗಳ ಮಟ್ಟದಲ್ಲಿ WE ಯನ್ನು ಪರಿಗಣಿಸುವುದಿಲ್ಲ.
2. ಸಮಯಾವಕಾಶವನ್ನು ಒದಗಿಸಲಾಗಿದ್ದರೂ, ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು ಮತ್ತು ಶಿಕ್ಷಕರು ತಮ್ಮ ಪಠ್ಯಕ್ಷೇತ್ರವನ್ನು ಯೋಜಿಸುವುದರಲ್ಲಿ ಮತ್ತು ಅನುಷ್ಠಾನಕ್ಕೆ ತರುವಲ್ಲಿ ಸಾಕಷ್ಟು ಆಸಕ್ತಿಯನ್ನು ತೆಗೆದುಕೊಳ್ಳುವುದಿಲ್ಲ.
3. ಬಹುಪಾಲು ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ

Digitised by Bharatavani, CIIL

ಕೊರತೆ ಇದೆ.

4. ಸರಕಾರಿ ಶಾಲೆಗಳಲ್ಲಿ ಸರಕುಗಳ ವಿಲೇವಾರಿಯು ಬಹು ಮುಖ್ಯ ಸಮಸ್ಯೆಯಾಗಿ ಮುಂದುವರಿಯುತ್ತಿದೆ. ಇದಕ್ಕೆ ಸೂಕ್ತ ಮಾರ್ಗದರ್ಶಕ ಸೂತ್ರಗಳ ಕೊರತೆ ಕಾರಣವಾಗಿದೆ.

**ಇತ್ತೀಚಿನ ಬೆಳವಣಿಗೆಗಳು:**

ಮೂಲ ಶಿಕ್ಷಣ, WE/SUPW ವನ್ನು ಅಳವಡಿಸಿದ ದೇಶದಲ್ಲಿ ಗಮನಾರ್ಹ ಬೆಳವಣಿಗೆಯೊಂದು ನಡೆದಿದೆ. ಅದೇನೆಂದರೆ, ಜನರು ಕಾರ್ಯ ಶಿಕ್ಷಣದ ಪ್ರಾಮುಖ್ಯವನ್ನು ಸಾಮಾನ್ಯ ಮತ್ತು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಗಳಲ್ಲಿ ಮತ್ತು ನಿರ್ದಿಷ್ಟವಾಗಿ ತರಬೇತಿಯಲ್ಲಿ ತಿಳಿಯಲು ಪ್ರಾರಂಭಿಸಿದ್ದಾರೆ. ಈ ರೀತಿಯ ಅರಿವಿಗೆ ಇರುವ ಕಾರಣಗಳಲ್ಲಿ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ವ್ಯಾಸಂಗವನ್ನು ಬಿಟ್ಟು ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು ಒಂದಾಗಿದೆ. NCERT ಯು ರಾಷ್ಟ್ರೀಯ ಮಾಹಿತಿಗಳ ಕೇಂದ್ರ ಮತ್ತು ರಾಜ್ಯ ಶಿಕ್ಷಣ ಇಲಾಖೆಗಳೊಂದಿಗೆ ನಡೆಸಿದ ಅಖಿಲ ಭಾರತ ಆರನೆಯ ಶಿಕ್ಷಣ ಸಮೀಕ್ಷೆಯಲ್ಲಿ (1990) ವ್ಯಕ್ತಪಡಿಸಿದ ವಿಚಾರವೇನೆಂದರೆ, ಹತ್ತನೆಯ ತರಗತಿ ತಲುಪುವುದರೊಳಗೆ ಶೇಕಡ 75 ರಷ್ಟು ವಿದ್ಯಾರ್ಥಿಗಳು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಹೊರಬರುತ್ತಾರೆ. ಈ ಸಮಸ್ಯೆಯು ಭಾರತ ಸರಕಾರದ ಗಮನಕ್ಕೆ ಬಂದಿದ್ದು, ಅದು 1993ರಲ್ಲಿ ವೃತ್ತಿಪೂರ್ವ ಶಿಕ್ಷಣ ಕಾರ್ಯಯೋಜನೆಯೊಂದನ್ನು ಕಿರಿಯ ಸೆಕೆಂಡರಿ ಹಂತದಲ್ಲಿ ಜಾರಿಗೆ ತಂದಿದೆ. ಈ ವೃತ್ತಿಪೂರ್ವ ಶಿಕ್ಷಣ ಕಾರ್ಯಯೋಜನೆಯ ಮುಖ್ಯಾಂಶಗಳು ಹೀಗಿವೆ :

1. ಶಾಲೆಯ ಒಟ್ಟು ಸಮಯದಲ್ಲಿ ಕನಿಷ್ಠ ಶೇಕಡ 20ರಷ್ಟು ಸಮಯವನ್ನು ವೃತ್ತಿಪೂರ್ವ ಶಿಕ್ಷಣಕ್ಕಾಗಿ ಮೀಸಲಾಗಿ ಇಡಲಾಗುತ್ತದೆ;

2. ವೃತ್ತಿಪೂರ್ವ ಶಿಕ್ಷಣವು ಮಾಡ್ಯೂಲ್ ಅನ್ನು ಆಧರಿಸಿ ಇರುತ್ತದೆ ಮತ್ತು ಪ್ರತಿಯೊಂದು ಸಂಸ್ಥೆಯು ಸ್ಥಳೀಯ ಅಗತ್ಯಗಳಿಗೆ ಅನುಗುಣವಾದ ಕನಿಷ್ಠ 3 ಅಥವಾ 4 ಮಾಡ್ಯೂಲ್ ಆಧಾರಿತ ಚಟುವಟಿಕೆಗಳನ್ನು ಒದಗಿಸುವುದು.

3. +2 ಹಂತದಲ್ಲಿನ ವೃತ್ತಿ ಕೋರ್ಸ್‌ಗಳಿಗೆ ಒದಗಿಸಲಾದ ಉಪಕರಣಗಳು ಮತ್ತು ಮೂಲಭೂತ ಸೌಕರ್ಯಗಳ ಬಳಕೆಯೊಂದಿಗೆ, ಪ್ರತಿಯೊಂದು ಶಾಲೆಗೆ ಹೆಚ್ಚುವರಿ ಸೌಲಭ್ಯಗಳನ್ನು ಸೃಷ್ಟಿಸಿಕೊಳ್ಳುವ ಸಲುವಾಗಿ ಒಂದು ಬಾರಿ ಹತ್ತು ಸಾವಿರ ರೂ. ಮೊತ್ತದ ಹಣವನ್ನು ನೀಡಲಾಗುತ್ತದೆ ಮತ್ತು ಕಚ್ಚಾವಸ್ತುಗಳು ಬಳಕೆಯ ಪದಾರ್ಥಗಳು ಸಾದಿಲ್ವಾರು ಪ್ರತಿಯೊಬ್ಬ ವಿದ್ಯಾರ್ಥಿಗೆ ವಾರ್ಷಿಕ 50 ರೂಪಾಯಿಗಳನ್ನು ನೀಡಲಾಗುತ್ತದೆ; ಮತ್ತು

4. ಸಮುದಾಯ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಆಯ್ದ ಶಾಲೆಗಳಲ್ಲಿ ಉತ್ಪಾದನೆ ಮತ್ತು ಸೇವೆಯನ್ನು ಕೇಂದ್ರವಾಗಿರಿಸಿದ ವೃತ್ತಿಪೂರ್ವ ಚಟುವಟಿಕೆಗಳನ್ನು ಪ್ರಾರಂಭಿಸಲಾಗುತ್ತದೆ.

ಈ ಕಾರ್ಯಯೋಜನೆಯನ್ನು ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 1000 ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಯಿತು. ಈ ಯೋಜನೆ ಪ್ರಸ್ತಾಪಿಸಿದ ಅನೇಕ ಪೂರ್ವಾಪೇಕ್ಷಿತಗಳನ್ನು ಅನುಷ್ಠಾನಕ್ಕೆ ತರುವುದು ಅನೇಕ ರಾಜ್ಯಗಳ ಶಾಲಾ ಆಡಳಿತವರ್ಗ ಮತ್ತು ಮಾಧ್ಯಮಿಕ ಶಿಕ್ಷಣ ಮಂಡಳಿಗಳಿಗೆ ಕಷ್ಟವಾಯಿತು. NCERT ಹೊರಡಿಸಿದ 'ಶಾಲಾಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು'ವಿನಲ್ಲಿ WE ಯ ಪರಿಕಲ್ಪನೆಯನ್ನು ಮಾರ್ಪಡಿಸಿದೆ ಅದನ್ನು ಕಾರ್ಯ ಶಿಕ್ಷಣವೆಂದು ಕರೆಯಲಾಗಿದೆ. ಈ ಚೌಕಟ್ಟಿನ ಪ್ರಕಾರ, ಶಿಕ್ಷಣದ ಎಲ್ಲ ಹಂತಗಳಲ್ಲಿ ಕಾರ್ಯ ಶಿಕ್ಷಣವು ಮುಖ್ಯ ಘಟಕವಾಗಿರಬೇಕು ಮತ್ತು ಉತ್ತಮ ರೀತಿಯಿಂದ ರಚಿತವಾಗಿರುವ ಮತ್ತು ಹಂತ ಹಂತದ ಕಾರ್ಯಕ್ರಮದ ಮೂಲಕ ಅದನ್ನು ಒದಗಿಸಬೇಕಾಗುತ್ತದೆ. ಅದು ಕಾರ್ಯ ಶಿಕ್ಷಣವನ್ನು 5 ಭಾಗಗಳಾಗಿ ವರ್ಗೀಕರಿಸಿದೆ. 1. ವ್ಯಕ್ತಿಯ ಅಗತ್ಯಗಳಿಗೆ ಅನುಗುಣವಾದ ಕಾರ್ಯಗಳು; 2. ಮನೆಯಲ್ಲಿನ ಕಾರ್ಯ; 3. ಶಾಲಾ ತರಗತಿ/ಶಾಲೆಯಲ್ಲಿನ ಕಾರ್ಯ; 4. ಸಮುದಾಯದಲ್ಲಿನ ಕಾರ್ಯ; ಮತ್ತು 5. ವೃತ್ತಿ ಬೆಳವಣಿಗೆಗೆ ಸಂಬಂಧಿಸಿದ ಕಾರ್ಯ.

**ಮೂಲ: ಎ.ಕೆ. ಸಖಿತಿ**
**ಅನು: ಡಾ. ಗೀತಾ ಶೆಣೈ**

## ಕಾಲೇಜು ಶಿಕ್ಷಣ ನಿರ್ದೇಶನಾಲಯ

ಕರ್ನಾಟಕ ರಾಜ್ಯದ ಶಿಕ್ಷಣದ ಶೈಕ್ಷಣಿಕ ಆಡಳಿತದ ಅನುಕೂಲಕ್ಕಾಗಿ ಮತ್ತು ಕರ್ನಾಟಕ ರಾಜ್ಯದ ಶಿಕ್ಷಣ ಇಲಾಖೆ ಹೆಚ್ಚು ದಕ್ಷತೆಯಿಂದ ಕಾರ್ಯ ನಿರ್ವಹಿಸುವಂತಾಗಲು ಈ ಇಲಾಖೆಯನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

1. ಸಾರ್ವಜನಿಕ ಶಿಕ್ಷಣ ಇಲಾಖೆ
2. ಕಾಲೇಜು ಶಿಕ್ಷಣ ಇಲಾಖೆ ಹಾಗೂ
3. ತಾಂತ್ರಿಕ ಶಿಕ್ಷಣ ಇಲಾಖೆ.

ಕರ್ನಾಟಕ ರಾಜ್ಯದಲ್ಲಿ ಕಾಲೇಜಿನ ಹೊಣೆಗಾರಿಕೆಯನ್ನು ನಿರ್ವಹಿಸಲು 24ಜೂನ್ 1960ರಂದು ಕಾಲೇಜು ಶಿಕ್ಷಣ ಇಲಾಖೆಯನ್ನು ಸ್ಥಾಪಿಸಲಾಯಿತು. ಅಲ್ಲಿಯವರೆಗಿದ್ದ ಕಾಲೇಜು ಶಿಕ್ಷಣದ ಆಡಳಿತ ವಿಭಾಗವನ್ನು ಈ ಇಲಾಖೆಗೆ ಜೋಡಿಸಲಾಯಿತು. ಕಾಲೇಜು ಶಿಕ್ಷಣ ಇಲಾಖೆಯ ಕಾರ್ಯಕಲಾಪಗಳನ್ನು ನಿರ್ವಹಿಸಲು ಒಬ್ಬ ನಿರ್ದೇಶಕರನ್ನು ನೇಮಿಸಲಾಗಿದೆ. ಇವರಿಗೆ ಸಹಾಯ ಮಾಡಲು ಸಹ-ನಿರ್ದೇಶಕರು ಹಾಗೂ ಇತರ ಸಿಬ್ಬಂದಿ ವರ್ಗದವರಿರುವರು.

Digitised by Bharatavani, CIIL

ಪ್ರಸ್ತುತವಾಗಿ ಒಟ್ಟು 11 ವಿಶ್ವವಿದ್ಯಾನಿಲಯಗಳು, ಅನುಮೋದನೆ ಪಡೆದ 344 ಸರಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯಗಳು, 292 ಖಾಸಗಿ ಪದವಿ ಮಹಾವಿದ್ಯಾಲಯಗಳು, 5 ಸರಕಾರಿ ಹಾಗೂ 08 ಖಾಸಗಿ ಕಾನೂನು ಮಹಾವಿದ್ಯಾಲಯಗಳು ಕರ್ನಾಟಕ ರಾಜ್ಯದ ಕಾಲೇಜು ಶಿಕ್ಷಣ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಸೇರಿವೆ.

**ನಿರ್ದೇಶಕರ ಕಾರ್ಯಗಳು:**

1. ವಿಶ್ವವಿದ್ಯಾನಿಲಯ ನಿಯಂತ್ರಿತ ಕಾಲೇಜುಗಳನ್ನು ಹೊರತುಪಡಿಸಿ ವಿಜ್ಞಾನ, ಕಲೆ ಹಾಗೂ ವಾಣಿಜ್ಯ ಪ್ರಥಮ ದರ್ಜೆ ಕಾಲೇಜುಗಳ ಮೇಲೆ ನಿಯಂತ್ರಣ ಹೊಂದಿರುವುದು.
2. ಕಾಲೇಜುಗಳ ತಪಾಸಣಾ ಕಾರ್ಯವನ್ನು ಕೈಗೊಳ್ಳುವುದು.
3. ಹೊಸ ಕಾಲೇಜುಗಳ ಸ್ಥಾಪನೆಗಾಗಿ ಮಂಜೂರಾತಿ ನೀಡುವುದು.
4. ಉಪನ್ಯಾಸಕರ ನೇಮಕಾತಿ ಹಾಗೂ ವೇತನಗಳ ಮಂಜೂರಾತಿ, ಹೊಣೆಗಾರಿಕೆ ನಿರ್ವಹಿಸುವುದು.

**ಪ್ರಾದೇಶಿಕ ಕೇಂದ್ರಗಳು:**

ಈ ಇಲಾಖೆಯು ಉತ್ತಮ ಆಡಳಿತ ಹಾಗೂ ನಿರ್ವಹಣೆಗಾಗಿ ರಾಜ್ಯಾದ್ಯಂತ ಆರು ಪ್ರಾದೇಶಿಕ ಕೇಂದ್ರಗಳನ್ನು ಬೆಂಗಳೂರು, ಮೈಸೂರು, ಶಿವಮೊಗ್ಗ, ಗುಲ್ಬರ್ಗಾ, ಧಾರವಾಡ ಹಾಗೂ ಮಂಗಳೂರಿನಲ್ಲಿ ತೆರೆದಿದೆ. ಪ್ರಾದೇಶಿಕ ಕೇಂದ್ರಕ್ಕೆ ಜಂಟಿ ನಿರ್ದೇಶಕರು ಮುಖ್ಯಸ್ಥರಾಗಿರುವರು. ಪ್ರತಿ ಜಂಟಿ ಪ್ರಾದೇಶಿಕ ನಿರ್ದೇಶಕರವರ ಕಛೇರಿಯು ನಿರ್ವಹಿಸುವ ಕಾರ್ಯಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

ಪ್ರಾದೇಶಿಕ ಜಂಟಿ ನಿರ್ದೇಶಕರವರ ಕಛೇರಿಯು ನಿರ್ವಹಿಸಬೇಕಾದ ಕಾರ್ಯಗಳು:

1. ಸರ್ಕಾರಿ ಪದವಿ ಕಾಲೇಜುಗಳ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಮೇಲ್ವಿಚಾರಣೆ ಮಾಡುವುದು ಮತ್ತು ಮಾರ್ಗದರ್ಶನ ನೀಡುವುದು.
2. ಕಾಲೇಜುಗಳ ಶೈಕ್ಷಣಿಕ ಆಡಳಿತದಲ್ಲಿ ಪಾರದರ್ಶಕತೆಯನ್ನು ಜಾರಿಗೆ ತರಲು ಕ್ರಮ ಜರುಗಿಸುವುದು.
3. ಕಾಲೇಜುಗಳ ಸಮಸ್ಯೆಗಳ ಕುರಿತು ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದು ಮತ್ತು ಸ್ಥಳೀಯವಾಗಿ ಬಗೆಹರಿಸಲು ಕ್ರಮ ಕೈಗೊಳ್ಳುವುದು
4. ಪ್ರಾದೇಶಿಕ ಅಸಮತೋಲನೆ ನಿವಾರಿಸುವ ನಿಟ್ಟಿನಲ್ಲಿ ಹಾಗೂ ನಗರ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಇಸ್ರೊ ಸಂಸ್ಥೆ ನೆರವಿನೊಂದಿಗೆ ಎಡುಸ್ಯಾಟ್ ಪ್ರಾಜೆಕ್ಟ್ ಅನ್ನು ಹಮ್ಮಿಕೊಂಡಿದ್ದು, ಈ ಪ್ರಾಜೆಕ್ಟ್‌ನ್ನು ತಮ್ಮ ವ್ಯಾಪ್ತಿಗೆ ಬರುವ ಎಲ್ಲ ಕಾಲೇಜುಗಳಲ್ಲಿ ಅಳವಡಿಸಿಕೊಳ್ಳಲು ಮತ್ತು ಜಾರಿಗೊಳಿಸಲು ಸಂಪೂರ್ಣ ಸಹಕಾರ ಮತ್ತು ಮಾರ್ಗದರ್ಶನವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ನೀಡುವುದು.
5. ಸರ್ಕಾರದ ಆದೇಶಗಳು, ಇಲಾಖೆಯ ಸುತ್ತೋಲೆಗಳು ಹಾಗೂ ಇತರ ಮಾರ್ಗಸೂಚಿಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳುವುದು.
6. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.
7. ಕಾಲೇಜಿನಲ್ಲಿ ಹೊಸ ಕೋರ್ಸ್‌ಗಳನ್ನು ವಿಷಯಗಳ/ಜೋಡಣೆಗಳನ್ನು/ಹೊಸ ವಿಷಯಗಳ ಬೋಧನೆ ಹಾಗೂ ಹೆಚ್ಚುವರಿ ವಿಭಾಗ ಪ್ರಾರಂಭಿಸಲು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡುವುದು.
8. ಸರ್ಕಾರಿ ಕಾಲೇಜುಗಳು ವಿಶ್ವವಿದ್ಯಾಲಯಗಳ ಹಂತದಲ್ಲಿ ಎದುರಿಸುವ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳುವುದು.
9. ಯು.ಜಿ.ಸಿ.ಯಿಂದ 2(ಎಫ್) 12(ಬಿ) ಸರ್ಕಾರಿ ಕಾಲೇಜುಗಳನ್ನು ಒಳಪಡಿಸಲು ಹಾಗೂ ಯು.ಜಿ.ಸಿ.ಯಿಂದ ಸದರಿ ಕಾಲೇಜುಗಳಿಗೆ ದೊರೆಯುವ ಅನುದಾನವನ್ನು ಪಡೆಯಲು ಮತ್ತು ಪಡೆದ ಅನುದಾನವನ್ನು ಉದ್ದೇಶಿತ ಕಾರ್ಯಗಳಿಗೆ ಬಳಸಲು ಕ್ರಮ ಕೈಗೊಳ್ಳುವುದು.
10. ಸರ್ಕಾರಿ ಕಾಲೇಜುಗಳು ಶಾಶ್ವತ ಸಂಯೋಜನೆ ಪಡೆಯಲು ಅವಶ್ಯ ಕ್ರಮ ಜರುಗಿಸುವುದು.
11. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ದೊರೆಯಬಹುದಾದ ಕೇಂದ್ರ, ರಾಜ್ಯ ಹಾಗೂ ವಿವಿಧ ಸಂಸ್ಥೆಗಳು ನೀಡುವ ವಿದ್ಯಾರ್ಥಿವೇತನ, ಮಂಜೂರಾತಿ ಹಾಗೂ ವಿತರಣೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ, ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ, ಯೋಧರು, ಮಾಜಿ ಸೈನಿಕರು, ಅಂಧರು, ಅಂಗವಿಕಲರು ಹಾಗೂ ಬಡ ವರ್ಗದ ಮಕ್ಕಳಿಗೆ ಲಭ್ಯವಿರುವ ವಿದ್ಯಾರ್ಥಿವೇತನಗಳ ಬಗ್ಗೆ ಮಾರ್ಗದರ್ಶನ ನೀಡುವುದು.
12. ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ "ವಿದ್ಯಾರ್ಥಿ ಆಪ್ತ ಸಲಹಾ ಕೇಂದ್ರ" (Students Counselling) ಹಾಗೂ ಆಂತರಿಕ ಗುಣಮಟ್ಟ ಅಭಿವೃದ್ಧಿ ಕೋಶ(Quality Assessment center-QAC) ಕೇಂದ್ರಗಳನ್ನು ಪ್ರಾರಂಭಿಸಿ, ಅವುಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಜಾರಿಗೊಳಿಸುವುದು.
13. ಕಾಲೇಜುಗಳಲ್ಲಿ ಉಪನ್ಯಾಸಕರುಗಳಿಗೆ/ಬೋಧಕೇತರ

Digitised by Bharatavani, CIIL

ವರ್ಗದವರಿಗೆ, ಜಿಲ್ಲಾ ಕಾರ್ಯಪಡೆಯ ಸಹಯೋಗದೊಂದಿಗೆ ತರಬೇತಿ, ಕಾರ್ಯಾಗಾರ, ಸಂಶೋಧನೆ, ಆಪ್ತ ಸಲಹೆ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

14. ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳನ್ನು ಉತ್ತಮಪಡಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವುದು.

15. ಸರ್ಕಾರ ಹಾಗೂ ಇಲಾಖೆಯವರು ಹಮ್ಮಿಕೊಳ್ಳುವ ಎಲ್ಲಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

16. ವಿದ್ಯಾರ್ಥಿಗಳ ಪ್ರವೇಶಾತಿ, ಫಲಿತಾಂಶ ಇತ್ಯಾದಿ ಅಂಕಿ ಅಂಶಗಳನ್ನು ಕ್ರೋಢೀಕರಿಸಿ, ಪ್ರತಿವರ್ಷ ಮೇಲಿನ ಕಛೇರಿಗೆ ಕಳುಹಿಸುವುದು.

17. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ "ಉದ್ಯೋಗ ಮಾರ್ಗದರ್ಶನ ಕೇಂದ್ರ" (Career Guidence Cell) ಪ್ರಾರಂಭಿಸಲು ಕ್ರಮ ಕೈಗೊಳ್ಳುವುದು ಮತ್ತು ಪ್ರಗತಿಯನ್ನು ಪರಿಶೀಲಿಸುವುದು.

18. ಕಾಲೇಜಿನ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡಗಿರುವ ಸಾಂಸ್ಕೃತಿಕ ಮತ್ತಿತರ ಸೃಜನಶೀಲ ಪ್ರತಿಭೆಗಳನ್ನು ವ್ಯಕ್ತಪಡಿಸಲು ವಾರ್ಷಿಕ ಸಂಚಿಕೆಯನ್ನು ಪ್ರತಿ ಕಾಲೇಜಿನವರು ಪ್ರಕಟಿಸಲು ಸೂಚಿಸುವುದು.

19. ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗಾಗಿ ಕಾಲೇಜಿನ ಗ್ರಂಥಾಲಯಗಳಿಗೆ ಮತ್ತು ವಾಚನಾಲಯಗಳಿಗೆ ವಿದ್ಯಾರ್ಥಿಗಳು ಉಪಯೋಗಿಸುವ ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ಖರೀದಿಸಲು ಪ್ರಾಂಶುಪಾಲರಿಗೆ ತಿಳಿಸುವುದು ಮತ್ತು ಕಾಲೇಜುಗಳಿಗೆ ಭೇಟಿ ನೀಡಿದಾಗ ಪರಿಶೀಲಿಸುವುದು.

20. ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳಿಗೆ ಅನಿರೀಕ್ಷಿತ ಭೇಟಿ ನೀಡುವುದು ಮತ್ತು ಅವುಗಳ ಸರ್ವತೋಮುಖ ಅಭಿವೃದ್ಧಿಗಾಗಿ ಮಾರ್ಗದರ್ಶನ ನೀಡುವುದು.

### 4. ಕಾಲೇಜು ಶಿಕ್ಷಣ ನಿರ್ದೇಶನಾಲಯದ ಶೈಕ್ಷಣಿಕ ಕಾರ್ಯಕ್ರಮಗಳು:

4.1 ಪದವಿ ಕಾಲೇಜುಗಳಲ್ಲಿ **Edusat** ಯೋಜನೆಯ ಅನುಷ್ಠಾನ:

ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ

1. ಗ್ರಾಮೀಣ ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳ ನಡುವಿನ ಅಸಮತೋಲನ ಹೋಗಲಾಡಿಸಲು ಹಾಗೂ ಅವರಿಗೆ ಗುಣಮಟ್ಟದ ಶಿಕ್ಷಣ ನೀಡಲು

2. ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಕಾಲೇಜುಗಳಲ್ಲಿ ಹಾಲಿ ಇರುವ ಬೋಧಕ ಸಿಬ್ಬಂದಿ ಕೊರತೆಯನ್ನು ನೀಗಿಸಲು, ಬೋಧಕರ ಹಾಗೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿ, Edusat project ಯೋಜನೆಯನ್ನು **ISRO** ಸಂಸ್ಥೆಯ ನೆರವಿನೊಂದಿಗೆ ಕಾರ್ಯಗತಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.

Edusat project ಯೋಜನೆಯ ವಿಶೇಷತೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. Edusat ಯೋಜನೆಯನ್ನು ಇಲಾಖೆಯಲ್ಲಿ ಪದವಿ ಕಾಲೇಜುಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ತಯಾರಿಸಿದ್ದು, 2005–06ರಲ್ಲಿ 11 ಸರ್ಕಾರಿ ಪದವಿ ಕಾಲೇಜುಗಳಲ್ಲಿ, **ISRO** ಮುಖಾಂತರ ರಿಸೀವಿಂಗ್ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಿ, **ISRO** ಮತ್ತು **VTU** ಸಹಯೋಗದೊಂದಿಗೆ ಪ್ರಸರಣ ಮಾಡಲು ಆರಂಭಿಸಲಾಯಿತು.

2. ಅದಕ್ಕೆ ಸಂಬಂಧಿಸಿದಂತೆ ಪ್ರಥಮ ಹಂತದಲ್ಲಿ 2005–06ರಲ್ಲಿ ಇಲಾಖೆಯ ಕೇಂದ್ರ ಕಛೇರಿ ಹಾಗೂ ಹನ್ನೊಂದು ಸರ್ಕಾರಿ ಪದವಿ ಕಾಲೇಜುಗಳಲ್ಲಿ ರಿಸೀವಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಎಲ್ಲಾ ಕೇಂದ್ರಗಳಿಗೆ ಎಲ್‌ಸಿಡಿ ಪ್ರೊಜೆಕ್ಟರ್‌ಗಳು, ಸ್ಕ್ರೀನ್, ಡಿಟಿಎಚ್ ಹಾಗೂ ಮೋಡೆಮ್‌ಗಳನ್ನು ಖರೀದಿಸಲು ಅನುದಾನವನ್ನು ನೀಡಲಾಯಿತು. ಇಸ್ರೋ ಸಂಸ್ಥೆಯಿಂದ Edusat Project ಪರಿಕರಗಳನ್ನು ಕೇಂದ್ರ ಸರ್ಕಾರದ ಬಿ.ಎ.ಎಲ್ ಸಂಸ್ಥೆಯ ಮುಖಾಂತರ ಒದಗಿಸಿ ಸ್ಥಾಪಿಸಲು ಕ್ರಮಕೈಗೊಳ್ಳಲಾಯಿತು.

### 4.2 ವಿಜ್ಞಾನ ವಸ್ತು ಪ್ರದರ್ಶನ:

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ವತಿಯಿಂದ ಪದವಿ ವಿದ್ಯಾರ್ಥಿಗಳಿಗೆ ವಿಭಾಗ ಮಟ್ಟದ ವಸ್ತು ಪ್ರದರ್ಶನ ಸ್ಪರ್ಧೆಯನ್ನು ಡಿಸೆಂಬರ್ 2006ರಲ್ಲಿ ಹಾಗೂ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯನ್ನು ಡಿಸೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಸುವಂತೆ ಸೂಚಿಸಿ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಸರ್ಕಾರಿ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರಿಗೆ ಸುತ್ತೋಲೆಯನ್ನು ಹೊರಡಿಸಲಾಗಿದೆ.

### 4.3 ತರಬೇತಿ ಕಾರ್ಯಕ್ರಮಗಳು:

1. ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರ ಗುಣಾತ್ಮಕವಾದ ಕಾರ್ಯವೈಖರಿಯನ್ನು ಬೆಳೆಸುವ ನಿಟ್ಟಿನಲ್ಲಿ ಹಲವಾರು ಉಪಯುಕ್ತ ತರಬೇತಿಗಳ ಏರ್ಪಡಿಸಲಾಗುತ್ತಿದೆ.

2. 2005–06ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಆಪ್ತ ಸಲಹೆಯನ್ನು ಒದಗಿಸಲು ಸರ್ಕಾರಿ ಪದವಿ ಕಾಲೇಜುಗಳ ಉಪನ್ಯಾಸಕರಿಗೆ ತರಬೇತಿ ನೀಡಲು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ 2 ತಂಡಗಳಲ್ಲಿ (ಪ್ರತಿ ತಂಡದಲ್ಲಿ 40

Digitised by Bharatavani, CIIL

ಉಪನ್ಯಾಸಕರುಗಳಿಗೆ) ಹಾಗೂ ಬೆಂಗಳೂರಿನ ನಿಮ್ಹಾನ್ಸ್‌ನ ಆಪ್ತ ಸಲಹಾ ತರಬೇತಿ ಕೇಂದ್ರಗಳಲ್ಲಿ 2 ತಂಡಗಳಲ್ಲಿ (ಪ್ರತಿ ತಂಡದಲ್ಲಿ 40 ಉಪನ್ಯಾಸಕರುಗಳಿಗೆ) ವಿದ್ಯಾರ್ಥಿ ಆಪ್ತ ಸಲಹಾ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ.

3. ಇಲಾಖೆಯ ವತಿಯಿಂದ ಸರ್ಕಾರಿ ಪದವಿ ಕಾಲೇಜುಗಳ ಬೋಧಕೇತರ ನೌಕರರಿಗೆ ಟಿ.ಕ್ಯು.ಎಮ್., ಹೆಚ್.ಆರ್.ಡಿ. ಆಡಳಿತಾತ್ಮಕ ವಿಷಯಗಳ ಹಾಗೂ ಕಂಪ್ಯೂಟರ್‌ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಕೇಂದ್ರ ಕಛೇರಿಯಲ್ಲಿ ನಡೆಸಲಾಯಿತು.

4. ಕಾಲೇಜುಗಳಿಗೆ ಸ್ವಾಯತ್ತತೆ, Edusat/Information Act, E-governance and other initiatives ಬಗ್ಗೆ ಕಾರ್ಯಗಾರ ನಡೆಸಲಾಯಿತು.

5. ಕೇಂದ್ರ ಕಛೇರಿಯಲ್ಲಿ ಟಿ.ಕ್ಯೂ.ಎಂ, ಹೆಚ್.ಆರ್.ಡಿ ಶೈಕ್ಷಣಿಕ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು, 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ಕಛೇರಿಯಲ್ಲಿ ಶೈಕ್ಷಣಿಕ ವಿಭಾಗಗಳಲ್ಲಿ ತೆರೆಯಲು ಅನುದಾನವನ್ನು ಒದಗಿಸಲಾಗಿರುತ್ತದೆ ಹಾಗೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**4.4 ಕಾಲೇಜು ಅಭಿವೃದ್ಧಿ ಸಮಿತಿಗಳ ರಚನೆ:**

ಕಾಲೇಜುಗಳಲ್ಲಿ ಅಭಿವೃದ್ಧಿ ಸಮಿತಿ ರಚನೆಯ ಬಗ್ಗೆ ಸರ್ಕಾರದ ಅನುಮೋದನೆಯಿಂದ ಅನೇಕ ಕಾಲೇಜುಗಳ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿದೆ.

**4.5 ಸುವರ್ಣ ಕರ್ನಾಟಕ ಆಚರಣೆ:**

ಸುವರ್ಣ ಕರ್ನಾಟಕ ಆಚರಣೆ ಸಂವತ್ಸರದಲ್ಲಿ ಕಾಲೇಜುಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರಬಂಧ, ಚರ್ಚಾ ಸ್ಪರ್ಧೆ ಹಾಗೂ 6 ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೆ ಬರುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪ್ರಥಮ ಹಾಗೂ ದ್ವಿತೀಯ ರ್‍ಯಾಂಕ್ ಪಡೆದು ತೇರ್ಗಡೆಯಾದಂತಹ ವಿದ್ಯಾರ್ಥಿಗಳಿಗೆ ಕೋರ್ಸುವಾರು ಬಹುಮಾನ ನೀಡಲು ವ್ಯವಸ್ಥೆ ಮಾಡಲಾಗಿದೆ.

**–ಡಾ. ನರಸಿಂಹಮೂರ್ತಿ ಆರ್.**

## ಕುಚೇಷ್ಟೆ (ರ್‍ಯಾಗಿಂಗ್)

ಕಾಲೇಜಿನ ಕೆಲವು ನಿರ್ದಿಷ್ಟ ಕಾಲಾವಧಿಯಲ್ಲಿ ಒಬ್ಬರು ಇನ್ನೊಬ್ಬರನ್ನು ಚುಡಾಯಿಸುವುದು, ಕೀಟಲೆ ಮಾಡುವುದು ಅವರ ಕುರಿತು ಹಾಸ್ಯ ಅಥವಾ ಲೇವಡಿ ಮಾಡುವುದು, ಅಥವಾ ತಮಾಷೆಯಾಗಿ ಕವಾಯಿತು ಮತ್ತು ಇತರ ಚಟುವಟಿಕೆಗಳನ್ನು ನಡೆಸುವುದಕ್ಕೆ 'ಕುಚೇಷ್ಟೆ' ಅಥವಾ 'ರ್‍ಯಾಗಿಂಗ್' ಎಂದು ಕರೆಯಲಾಗುತ್ತದೆ. ಈ ಪದ್ಧತಿ ಬ್ರಿಟಿಷ್ ವಿಶ್ವವಿದ್ಯಾಲಯಗಳಲ್ಲಿ/ಸಾರ್ವಜನಿಕ ಶಾಲೆಗಳಲ್ಲಿ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ. ಇದನ್ನು ಮುಖ್ಯವಾಗಿ ಹೊಸದಾಗಿ ಸೇರಿದವರಿಗೆ ಸಂಸ್ಥೆಯ ವಾತಾವರಣ ಬಳಕೆಯಾಗಲು ಮತ್ತು ದಾನಧರ್ಮದ ಕಾರ್ಯಕ್ರಮಗಳಿಗೆ ಹಣ ಸಂಗ್ರಹಕ್ಕಾಗಿಯೂ ನಡೆಸಲಾಗುತ್ತಿತ್ತು. ಇದರಿಂದ ಹೊಸಬರು ಕಾಲೇಜಿನ ವಾತಾವರಣದಲ್ಲಿ ಸುಲಭವಾಗಿ ಬೆರೆಯುವುದು ಸಾಧ್ಯವಾಗುತ್ತಿತ್ತು. ಆದರೆ ಈ ಪದ್ಧತಿಯು ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಅಪರಿಚಿತವಾಗಿತ್ತು. ಇದು ಸೇನಾ ತರಬೇತಿ ಸಂಸ್ಥೆಗಳಲ್ಲಿ ಬೇರೆ ರೂಪದಲ್ಲಿ ಚಾಲ್ತಿಯಲ್ಲಿ ಇದ್ದಿರಬಹುದು. ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ಪ್ರಸರಣದಿಂದ ಈ ಪರಿಪಾಠ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ನುಸುಳಿಕೊಂಡಿತೆಂದು ತಿಳಿಯಲಾಗುತ್ತದೆ.

ಹಿರಿಯ ವಿದ್ಯಾರ್ಥಿಗಳೊಂದಿಗೆ ಹೊಸ ವಿದ್ಯಾರ್ಥಿಗಳ ಪರಸ್ಪರ ವರ್ತನೆಯು ಆರೋಗ್ಯಪೂರ್ಣವಾಗಿ ಇರುವುದು ಅಗತ್ಯ. ಇದನ್ನು ವಿದ್ಯಾರ್ಥಿಗಳ ಮತ್ತು ಸಂಸ್ಥೆಯ ಒಳಿತಿಗಾಗಿ ಪ್ರೋತ್ಸಾಹಿಸಬೇಕು. ವಿದ್ಯಾರ್ಥಿನಿಲಯದಲ್ಲಿ ಹಿರಿಯ ವಿದ್ಯಾರ್ಥಿಗಳ ಜೊತೆಯಲ್ಲಿ ಹೊಸಬರು ಇರುವುದರಿಂದ ಅವರು ಕೆಲವು ಅನುಕೂಲಗಳನ್ನು ಪಡೆಯುತ್ತಾರೆ. ಹಿರಿಯ ವಿದ್ಯಾರ್ಥಿಗಳ ಸಾಂಗತ್ಯದಲ್ಲಿ ಪ್ರಾರಂಭದಲ್ಲಿಯೇ ಅವರು ತಮ್ಮ ಸೃಜನಶೀಲ ಪ್ರತಿಭೆಗೆ ಅಭಿವ್ಯಕ್ತಿಯನ್ನು ಕಂಡುಕೊಳ್ಳುವುದರಿಂದ ಖುಷಿ ಪಡುತ್ತಾರೆ. ವಿದ್ಯಾರ್ಥಿನಿಲಯದ ವ್ಯವಹಾರಗಳು, ವಿದ್ಯಾರ್ಥಿ ಪ್ರಕಾಶನಗಳು, ಮನರಂಜನೆಯ, ಸೃಜನಶೀಲ ಮತ್ತು ಇತರ ಅನೇಕ ಚಟುವಟಿಕೆಗಳನ್ನು ಅವರು ತಿಳಿದುಕೊಳ್ಳುತ್ತಾರೆ. ಹಿರಿಯ ವಿದ್ಯಾರ್ಥಿಗಳು ಕಿರಿಯರಿಗೆ ಅವರ ಅಧ್ಯಯನದಲ್ಲಿ ಕೂಡ ನೆರವಾಗಬಹುದು. ಇಲ್ಲಿಯ ಪ್ರಶ್ನೆ ಏನೆಂದರೆ ಈ ಪರಸ್ಪರ ವರ್ತನೆಯ ಸ್ವರೂಪ ಹೇಗಿರಬೇಕು? ಅದರ ಇಂತಹ ಒಂದು ರೂಪ : ರ್‍ಯಾಗಿಂಗ್ ಅಥವಾ ಕುಚೇಷ್ಟೆ. ಆದರೆ ಇದು ಕೈಮೀರಿ ಹೋಗುವ ಸಾಧ್ಯತೆಗಳು ಬಹಳ.

ಕುಚೇಷ್ಟೆಯಲ್ಲಿ ಧನಾತ್ಮಕ ಮತ್ತು ಋಣಾತ್ಮಕ ಅಭಿವ್ಯಕ್ತಿಗಳು ಇರುತ್ತವೆ. ಕುಚೇಷ್ಟೆಯನ್ನು ಸಭ್ಯತೆಯ ಮಿತಿಯಲ್ಲಿ ನಡೆಸಿದರೆ ಮತ್ತು ದಾನಧರ್ಮಗಳ ಕಾರ್ಯಗಳಿಗೆ ಧನಸಂಗ್ರಹದ ಉದ್ದೇಶದಲ್ಲಿ ನಡೆಸಿದರೆ ಅದು ಧನಾತ್ಮಕವಾಗುತ್ತದೆ. ಕುಚೇಷ್ಟೆಯ ಸಮಯದಲ್ಲಿ ಸಂಗೀತದ ತುಣಕಿನ ರಚನೆ ಕುಚೇಷ್ಟೆಯ ವಿಧಾನವಾಗಿರಬಹುದು. ಇದರ ಕೆಲವು ಧನಾತ್ಮಕ ಪರಿಣಾಮವೆಂದರೆ ಹಿರಿಯರೊಂದಿಗೆ ಹೊಸಬರು ಆರೋಗ್ಯಪೂರ್ಣವಾಗಿ ವರ್ತಿಸಲು ಪ್ರೋತ್ಸಾಹ ಸಿಗುವುದಾಗಿದೆ. ಇದರಿಂದ ಹೊಸದಾಗಿ ಸೇರಿಕೊಂಡವರು ಈ ಹೊಸ ವಾತಾವರಣದಲ್ಲಿ ಸುಲಭವಾಗಿ ಮತ್ತು ಬೇಗನೆ ಹೊಂದಿಕೊಳ್ಳುವುದು ಸಾಧ್ಯವಾಗುತ್ತದೆ. ಹೀಗಾಗಿ ಇದು ಒಂದು ರೀತಿಯಲ್ಲಿ ಬೆಳೆಯುತ್ತಿರುವ ಸಂಪ್ರದಾಯವಾಗಿದೆ. ಹೊಸಬರು ಹಿಂಜರಿಕೆ ಮತ್ತು ಕೀಳರಿಮೆಯಿಂದ ಹೊರಬರುವುದಕ್ಕೆ ('ದಿಗಿಲು ಮತ್ತು ತಲ್ಲಣದ ಮೂಲಕ ಮುಗ್ಧತೆ ಮತ್ತು ಭೋಳೆತನದಿಂದ ಹೊರತರುವುದು') ಮತ್ತು ಒಂಟಿಯಾಗಿ, ಕ್ಲೇಷದಿಂದ ಹಿಂದೆ

Digitised by Bharatavani, CIIL

ಉಳಿಯುವುದನ್ನು ತಪ್ಪಿಸುವುದಕ್ಕೆ ಕೂಡ ಇದು ನೆರವಾಗುತ್ತದೆ. ವಿದ್ಯಾರ್ಥಿಗಳಲ್ಲಿ ತುಂಬಿಕೊಂಡ ಒತ್ತಡವನ್ನು ಕಡಿಮೆಯಾಗಲು ನೆರವಾಗಿ, ಯಾರಿಗೂ ತೊಂದರೆಯನ್ನು ಉಂಟು ಮಾಡದಿದ್ದರೆ, ಮತ್ತು ಅದು ಎಲ್ಲರೂ ಖುಷಿ ಪಡುವ ರೀತಿಯದ್ದಾಗಿದ್ದರೆ ಕುಚೇಷ್ಟೆಯನ್ನು ಧನಾತ್ಮಕವಾಗಿ ಪರಿಗಣಿಸಲಾಗುತ್ತದೆ.

ಮೂಲತಃ ಕುಚೇಷ್ಟೆಯು ಯಾವುದೇ ನಿಯಮಗಳಿಲ್ಲದ ಆಟವಾಗಿರುವುದರಿಂದ, ಕಳೆದ ಕೆಲವು ವರ್ಷಗಳಿಂದ ಇದು ತಿಳಿ ಆಮೋದದ ಆರೋಗ್ಯಪೂರ್ಣ ಅಭ್ಯಾಸವೆಂದು ಪರಿಗಣಿಸಲ್ಪಡುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳು ಇವೆ. ಇದರಲ್ಲಿ ಶಿಕ್ಷಣ ಸಂಸ್ಥೆಗಳ ಆವರಣದ ಅನಪೇಕ್ಷಿತ ರಾಜಕೀಕರಣವು ಒಂದು ಕಾರಣವಾಗಿದೆ. ಕ್ರಮೇಣ ಕುಚೇಷ್ಟೆಯು ಹೆಚ್ಚು ಹೆಚ್ಚು ಋಣಾತ್ಮಕ ವಿಧಿಗಳನ್ನು ಮತ್ತು ಕುಪ್ರಸಿದ್ಧಿಗಳನ್ನು ಮೈಗೂಡಿಸಿಕೊಂಡಿದೆ. ಈಗ ಇದನ್ನು ಮಾರಕ ಅಭ್ಯಾಸವಾಗಿ ಪರಿಗಣಿಸಲಾಗಿದೆ. ಕುಚೇಷ್ಟೆಯು ಬರೀ ದೈಹಿಕ ಮತ್ತು ಮಾನಸಿಕ ಶೋಷಣೆಯಾಗಿ ಅವನತಿ ಹೊಂದಿದೆ; ಲೈಂಗಿಕ ತಪ್ಪು ನಡವಳಿಕೆ ಮತ್ತು ಹಿಂಸೆಗೂ ನೆಪವಾಗಿದೆ. ವಿದ್ಯಾರ್ಥಿಗಳಿಗೆ ಚಿತ್ರಹಿಂಸೆ ನೀಡಿದ, ಅವರನ್ನು ವಿದ್ಯಾರ್ಥಿ ನಿಲಯದಿಂದ ಓಡಿಸಿದ, ಇನ್ನು ಕೆಲವು ವಿಪರೀತ ಸಂದರ್ಭಗಳಲ್ಲಿ ಹೊಸಬರು ಆತ್ಮಹತ್ಯೆಯನ್ನೂ ಮಾಡಿಕೊಂಡ ಪ್ರಕರಣಗಳು ವರದಿಯಾಗಿವೆ. ಈ ರೀತಿಯ ಪ್ರಕರಣಗಳಲ್ಲಿ ಪ್ರಾರಂಭದಲ್ಲಿದ್ದ ಕುಚೇಷ್ಟೆಯ ಕೀಟಲೆಯ ಅಂಶಗಳನ್ನು ವಿಕೃತಿಯು ಸ್ಥಾನ ಪಲ್ಲಟಗೊಳಿಸಿದೆ. ಹೀಗೆ ಕುಚೇಷ್ಟೆಯು ಸಾಮಾಜಿಕ ಹಗೆತನವನ್ನು ಪ್ರತಿಬಿಂಬಿಸುತ್ತಿದ್ದು, ಅದು ಆರೋಗ್ಯಪೂರ್ಣ ಮನಸ್ಸಿನ ಅಭಿವ್ಯಕ್ತಿ ಆಗಿರುವುದು ಸಾಧ್ಯವಿಲ್ಲ. ಇದರ ಬಹಿರಂಗ ರೂಪವು ವ್ಯಕ್ತಿಯ ವೈಯಕ್ತಿಕ ಘನತೆಯನ್ನು ಗಂಭೀರ ರೀತಿಯಿಂದ ಅತಿಕ್ರಮಿಸುತ್ತದೆ. ಇದು ವಿದ್ಯಾರ್ಥಿಗಳ ಮೇಲೆ ಅಮಾನವೀಯ ಪ್ರಭಾವವನ್ನು ಬೀರಿ, ಅನಗತ್ಯವಾದ ದೈಹಿಕ ಮತ್ತು ಮಾನಸಿಕ ಶೋಷಣೆಯನ್ನು ಉಂಟುಮಾಡುತ್ತದೆ. ಆದುದರಿಂದ, ಇಂದಿನ ದಿನಗಳಲ್ಲಿ ಕುಚೇಷ್ಟೆ ಒಳಗೊಳ್ಳುವುದು ಏನೆಂದರೆ: ಗದ್ದಲಭರಿತ ಕ್ರಮರಹಿತ ನಡತೆ, ಚುಡಾಯಿಸುವಿಕೆ, ಒರಟು ಅಥವಾ ಉದ್ಧಟ ನಡವಳಿಕೆಯಿಂದ ಉದ್ರೇಕ ಅಥವಾ ಪುಂಡತನದ ಕಾರ್ಯಗಳ ನಡೆಸುವಿಕೆ, ಅಶಿಸ್ತಿನ ಚಟುವಟಿಕೆಗಳು. ಇದರಿಂದ ಹೊಸಬರಲ್ಲಿ ಕೆರಳಿಕೆ, ಅನಗತ್ಯ ತೊಂದರೆ, ದೈಹಿಕ ಅಥವಾ ಮಾನಸಿಕ ಹಾನಿ, ಅಥವಾ ದಿಗಿಲು ಅಥವಾ ಹೆದರಿಕೆ ಉಂಟಾಗುವುದು. ಹೊಸಬರಿಗೆ ಸಾಮಾನ್ಯವಾಗಿ ಅವರು ಎಂದೂ ಮಾಡದಿರುವ ಕಾರ್ಯವನ್ನು ಮಾಡುವಂತೆ ತಿಳಿಸುವುದರಿಂದ ಅವರಲ್ಲಿ ಅವಮಾನ ಅಥವಾ ಮುಜುಗರ ಉಂಟಾಗಬಹುದು ಅಥವಾ ಅವರ ಜೀವಕ್ಕೆ ಅದು ಅಪಾಯಕಾರಿಯಾಗಬಲ್ಲದು.

ಕರ್ನಾಟಕ ಶಿಕ್ಷಣ ಅಧಿನಿಯಮ, 1983(ಕರ್ನಾಟಕ ಅಧಿನಿಯಮ 1, 1995), ಭಾಗ 2(29)ರಲ್ಲಿ ರ್‍ಯಾಗಿಂಗ್ ಅಥವಾ ಕುಚೇಷ್ಟೆಯನ್ನು ಹೀಗೆ ವ್ಯಾಖ್ಯಾನಿಸಲಾಗಿದೆ: 'ವಿದ್ಯಾರ್ಥಿಗಳಿಗೆ ಕಾರ್ಯತಃ ಬಳಸಬಲ್ಲ ಹಾಸ್ಯದ ಮೂಲಕ, ಅಥವಾ ಬೇರೆ ರೀತಿಯಿಂದ, ಮಾನವೀಯ ಘನತೆಗೆ ಧಕ್ಕೆ ಬರುವ ರೀತಿಯಲ್ಲಿ ಕಾರ್ಯ ನಡೆಸುವಂತೆ ಅಥವಾ ಅವನ ವ್ಯಕ್ತಿತ್ವವನ್ನು ಮೀರುವ ಅಥವಾ ಅವನು ಯಾವುದೇ ನ್ಯಾಯಬದ್ಧ ಕಾರ್ಯವನ್ನು ನಡೆಸುವಾಗ ಬೆದರಿಸುವುದು, ತಪ್ಪಾಗಿ ನಿಗ್ರಹಿಸುವುದು, ತಪ್ಪಾಗಿ ಅಂಕೆಯಲ್ಲಿ ಇಡುವುದರ ಮೂಲಕ ಪರಿಹಾಸ್ಯ ಮಾಡುವುದು ಅಥವಾ ತಡೆಯುವುದು; ಅಥವಾ ಅವನಿಗೆ ಗಾಯಗೊಳಿಸುವುದು ಅಥವಾ ಪಾತಕಿ ಶಕ್ತಿಗಳನ್ನು ಅವನ ಮೇಲೆ ಪ್ರಯೋಗಿಸುವುದು ಅಥವಾ ಅವನ ಮೇಲೆ ಈ ರೀತಿಯ ನಿಗ್ರಹ, ತಪ್ಪು ಬಂಧನ, ಗಾಯಗೊಳಿಸುವಿಕೆ ಅಥವಾ ಪಾತಕ ಶಕ್ತಿಯ ಪ್ರಯೋಗದ ಮೂಲಕ ವಿದ್ಯಾರ್ಥಿಗಳಿಗೆ ಕುಚೇಷ್ಟೆ ಮಾಡುವುದು, ಉದ್ರೇಕಗೊಳಿಸುವುದು, ಒತ್ತಾಯ ಅಥವಾ ಒತ್ತಡ ಹೇರುವುದು.'

ಈ ವಿಧದ ವಕ್ರರೂಪಗಳ ಕುಚೇಷ್ಟೆಯು ಸಾಮಾನ್ಯವಾಗಿ ವೃತ್ತಿಪರ ಮಹಾವಿದ್ಯಾಲಯಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಕಂಡುಬರುತ್ತಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ, ವಿದ್ಯಾರ್ಥಿಗಳು ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿನಿಲಯದಲ್ಲಿಯೇ ಇರುವುದಾಗಿದೆ. ಶೈಕ್ಷಣಿಕ ವರ್ಷವೊಂದರಲ್ಲಿ ಕುಚೇಷ್ಟೆಯು ಒಂದು ಅಥವಾ ಎರಡು ತಿಂಗಳುಗಳ ಕಾಲ ಕಾಣಿಸಿಕೊಳ್ಳುವುದೆಂದು ತಿಳಿದುಕೊಳ್ಳಲಾಗಿದೆ. ಪ್ರಾರಂಭದಲ್ಲಿ ಅದು ಸಾತ್ವಿಕವಾಗಿಯೇ ಇರುತ್ತದೆ. ಕುಚೇಷ್ಟೆ ಮಾಡುವವರು ಯಾವ ಹಂತವನ್ನು ತಲುಪುತ್ತಾರೆ ಎಂಬುದರ ಮೇಲೆ ಇದು ನಿರ್ಧಾರಿತವಾಗುತ್ತದೆ. ಪ್ರಾರಂಭದಲ್ಲಿಯೇ ಅದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದರೆ ಅದು ನಿಂತು ಹೋಗುವ ಸಾಧ್ಯತೆ ಇದೆ. ರ್‍ಯಾಗಿಂಗ್ ಎನ್ನುವುದು ಒಂದು ರೀತಿಯಲ್ಲಿ ಪ್ರತಿಕ್ರಿಯಾ ಸರಪಣಿಯೂ ಆಗಿದೆ. ಅದನ್ನು ಒಂದೆರಡು ವರ್ಷಗಳ ಕಾಲ ತಡೆ ಹಿಡಿದರೆ ಅದು ಕಣ್ಮರೆಯಾಗುವುದು.

**ಕುಚೇಷ್ಟೆಯ ರೂಪಗಳು**

ವ್ಯಾವಹಾರಿಕವಾಗಿ ಕುಚೇಷ್ಟೆಯು ಈ ಕೆಳಗಿನ ರೂಪಧಾರಣೆ ಮಾಡುವ ಸಾಧ್ಯತೆ ಇದೆ (ಈ ಪಟ್ಟಿ ಕೇವಲ ಸೂಚನಾತ್ಮಕ, ಸರ್ವವ್ಯಾಪಕವಾಗಿ ಅಲ್ಲ.)

* ಹಿರಿಯರನ್ನು(ಹಿರಿಯ ವಿದ್ಯಾರ್ಥಿಗಳನ್ನು) 'ಸರ್' ಎಂದು ಸಂಬೋಧಿಸುವುದು;
* ಹಿರಿಯರಿಗಾಗಿ ತರಗತಿಯ ಟಿಪ್ಪಣಿಗಳನ್ನು ಪ್ರತಿ ಮಾಡಿಕೊಡುವುದು;
* ಸಮೂಹ ಕವಾಯಿತು ನಡೆಸುವುದು;
* ವಿವಿಧ ಸಂದೇಶಗಳನ್ನು ನಿರ್ವಹಿಸುವುದು;
* ಹಿರಿಯರ ಚಾಕರಿ ಮಾಡುವುದು;
* ಅಶ್ಲೀಲ ಪ್ರಶ್ನೆಗಳನ್ನು ಕೇಳುವುದು/ಉತ್ತರಿಸುವುದು;
* ಲಂಪಟ ಚಿತ್ರಗಳನ್ನು ನೋಡುವಂತೆ ಮಾಡುವುದು. ಇದು 'ಹೊಸಬರನ್ನು ಮುಗ್ಧತೆಯಿಂದ ಹೊರತರಲು' ಎಂಬ ಕಾರಣಕ್ಕಾಗಿ ಇದನ್ನು ಸೂಕ್ತವೆಂದು ಪರಿಗಣಿಸಿ ಹಿರಿಯರಿಂದ ವೈಭವೀಕರಿಸಲಾಗಿದೆ.

Digitised by Bharatavani, CIIL

* ಮಾದಕ ಪೇಯ, ಸುಡುವ ಚಹ ಇತ್ಯಾದಿಗಳನ್ನು ಕುಡಿಯುವುದು;
* ಸಲಿಂಗ ಕಾಮವೂ ಸೇರಿದಂತೆ, ಲೈಂಗಿಕ ಭಾವಗಳಿರುವ ಕ್ರಿಯೆಗಳನ್ನು ನಡೆಸುವಂತೆ ಮಾಡುವುದು;
* ದೈಹಿಕ ಗಾಯಗಳು ಅಥವಾ ಮಾನಸಿಕ ಹಾನಿ ಅಥವಾ ಸಾವು ಕೂಡ ಸಂಭವಿಸಬಹುದಾದ ಕಾರ್ಯಗಳನ್ನು ನಡೆಸುವುದು;
* ಬಟ್ಟೆ ಕಳಚುವುದು, ಮುತ್ತಿಡುವುದು, ಇತ್ಯಾದಿ. ಮೇಲೆ ಉಲ್ಲೇಖಿಸಿದ ಕುಚೇಷ್ಟೆಯ ಬಹುಪಾಲು ವಕ್ರ ರೂಪಗಳನ್ನು ಮಟ್ಟ ಹಾಕುವುದು ಅತ್ಯಗತ್ಯವಾಗಿದೆ.

**ಕುಚೇಷ್ಟೆಯ ಕಾರಣಗಳು**

ಅನೇಕ ವಿಶ್ವವಿದ್ಯಾಲಯಗಳಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಭಯಾನಕ ಪ್ರಮಾಣದಲ್ಲಿ ಇರುವುದರಿಂದ ಈ ಸಮಸ್ಯೆಗಳನ್ನು ತಿಳಿದುಕೊಳ್ಳಲು ಮತ್ತು ಇದನ್ನು ನಿಯಂತ್ರಿಸುವ ವಿಧಾನ ಮತ್ತು ದಾರಿಗಳನ್ನು ಕಂಡುಕೊಳ್ಳಲು ಸಮಿತಿಯನ್ನು ರೂಪಿಸಲಾಗಿದೆ. ಹಿರಿಯ ವಿದ್ಯಾರ್ಥಿಗಳು ರ್‍ಯಾಗಿಂಗ್ ಕೃತ್ಯಗಳಲ್ಲಿ ತೊಡಗಿಸಿಕೊಳ್ಳಲು ಇರುವ ಮುಖ್ಯ ಕಾರಣಗಳಲ್ಲಿ ತಮ್ಮ ಶಕ್ತಿ, ಅಧಿಕಾರ ಮತ್ತು ಹಿರಿತನದ ಪ್ರದರ್ಶನ ನಡೆಸಲು ಆತುರ ಪಟ್ಟುಕೊಳ್ಳುವುದು: ಇದು 'ಬೇರೆಯವರು ತನಗೆ ಮಾಡಿರುವುದನ್ನು ತಾನು ಬೇರೆಯವರಿಗೆ ಮಾಡುವ' ಪ್ರತಿಕಾರದ ಭಾವನೆಯಾಗಿರುತ್ತದೆ. ಇದು ಒಂದು ವಿಧದಲ್ಲಿ ಅತ್ತೆ ಮತ್ತು ಸೊಸೆಯ ನಡುವಿನ ಸಂಬಂಧದ ರೀತಿಯದ್ದಾಗಿದೆ. ಇದನ್ನು ಪ್ರತಿಕಾರದ ಭಾವನೆಯಿಂದ ನಡೆಸಲಾಗುತ್ತಿದ್ದು, ವರ್ಷಗಳು ಕಳೆದಂತೆ ಅದು ಸಂಪ್ರದಾಯದ ಮಟ್ಟವನ್ನು ತಲುಪಿದೆ. ಸಂಸ್ಥೆಗೆ ಹೊಸಬರು ಸೇರ್ಪಡೆಯಾಗುವ ಹಂತದಲ್ಲಿ ಹಿರಿಯ ವಿದ್ಯಾರ್ಥಿಗಳಿಗೆ ಪ್ರಾಮುಖ್ಯತೆ ದೊರೆಯುತ್ತದೆ. ಈ ಹಂತದಲ್ಲಿ ಸಂಸ್ಥೆಯ ಕಾರ್ಯವಿಧಾನವು ಹೆಚ್ಚಿನ ಸಹಾಯವನ್ನು ಒದಗಿಸದೇ ಇರುವುದರಿಂದ ಹಿರಿಯ ವಿದ್ಯಾರ್ಥಿಗಳು ಅನೇಕ ವಿಧಾನಗಳಿಂದ ಹೊಸಬರಿಗೆ ನೆರವಾಗುತ್ತಾರೆ. ಇದರಿಂದ ಹೊಸಬರು ಹಿರಿಯರ ಋಣಕ್ಕೆ ಬಿದ್ದು ಅವರು ಹೇಳಿದಂತೆ ಮಾಡುವ ಒತ್ತಡದಲ್ಲಿ ಇರುತ್ತಾರೆ.

**ಕುಚೇಷ್ಟೆಯ ಹೆಚ್ಚಳಕ್ಕೆ ಕಾರಣಗಳು ಮತ್ತು ಅದರ ವಿರುದ್ಧ ಕ್ರಮಗಳ ನಿಷ್ಫಲತೆ**

ಕಳೆದ ಕೆಲವು ದಶಕಗಳಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಘಟನೆಗಳು ಹೆಚ್ಚಾಗತೊಡಗಿದೆ. ಕೆಲವು ಸಂಸ್ಥೆಗಳು ತಮ್ಮದೇ ವಿಧಾನಗಳ ಮೂಲಕ ಈ ಕೆಟ್ಟಚಾಳಿಯನ್ನು ತಡೆಯುವ ಪ್ರಯತ್ನವನ್ನು ನಡೆಸಿದರೂ ಅವರು ತೆಗೆದುಕೊಂಡ ಕ್ರಮಗಳು ಪರಿಣಾಮಕಾರಿಯಾಗಿಲ್ಲದ್ದರಿಂದ ಇದು ಮುಂದುವರಿಯುತ್ತಿದೆ.

ರ್‍ಯಾಗಿಂಗ್ ತಡೆಯಲು ತೆಗೆದುಕೊಳ್ಳುವಂತಹ ಕ್ರಮಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಿರಲು ಮುಖ್ಯ ಕಾರಣವೇನೆಂದರೆ, ಕೆಲವು ವರ್ಷಗಳಿಂದ ವಿದ್ಯಾರ್ಥಿ ನಿಲಯ ಪಾಲಕರ(ವಾರ್ಡನ್) ಮತ್ತು ಸಂಸ್ಥೆಯ ಇತರ ಅಧಿಕಾರಿಗಳ ಅಧಿಕಾರಗಳು ಮತ್ತು ನೈತಿಕ ಜವಾಬ್ದಾರಿಗಳು ಕಡಿಮೆಯಾಗುತ್ತಿರುವುದು. ಇವರಲ್ಲಿ ಅನೇಕ ಮಂದಿ ತಮ್ಮ ಕೆಲಸಕ್ಕೆ ಬದ್ಧರಾಗಿ ಇಲ್ಲದಿರಬಹುದು. ಆ ಸ್ಥಾನಗಳಿಗೆ ಸಿಕ್ಕುವಂತಹ ಲಾಭದ ಸಲುವಾಗಿ ಅವರು ಅಂತಹ ಜವಾಬ್ದಾರಿಗಳನ್ನು ವಹಿಸಿಕೊಂಡು ಇರುತ್ತಾರೆ. ಇನ್ನು, ಪ್ರಾರಂಭದಲ್ಲಿಯೇ ಪರಿಣಾಮಕಾರಿಯಾದ ನಿಯಂತ್ರಣ ಇರುವುದಿಲ್ಲ. ರ್‍ಯಾಗಿಂಗ್ ನಡೆದಾಗ ಅದನ್ನು ವರದಿ ಮಾಡುವುದಿಲ್ಲ ಹಾಗೂ ತಕ್ಷಣ ಪರಿಣಾಮಕಾರಿಯಾದ ಕ್ರಮವನ್ನು ಕೈಗೊಳ್ಳುವುದಿಲ್ಲ. ಇಂತಹ ವಿಚಾರಗಳಲ್ಲಿ ಬಹುಪಾಲು ಬೋಧನಾ ಸಿಬ್ಬಂದಿಗಳ ಆಸಕ್ತಿ ಮತ್ತು ತೊಡಗಿಸಿಕೊಳ್ಳುವಿಕೆ ಇರುವುದಿಲ್ಲ. ಇವರು ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅಧಿಕಾರಿಗಳ ನೆರವಿಗೆ ಮುಂದೆ ಬರುವುದಿಲ್ಲ. ವಿಭಾಗದ ಮುಖ್ಯಸ್ಥರು ಮತ್ತು ಇತರರು ತಾವು ನೀಡಿದ ಶಿಕ್ಷೆಯ ಆಜ್ಞೆಯನ್ನು ಕಡಿತಗೊಳಿಸಲು ಅಥವಾ ಹಿಂದೆ ತೆಗೆದುಕೊಳ್ಳಲು ಒತ್ತಡಕ್ಕೆ ಬಲಿಯಾಗಬಹುದೆಂಬ ಹೆದರಿಕೆ ಅವರಲ್ಲಿ ಇರುತ್ತದೆ.

ಮೇಲೆ ಉಲ್ಲೇಖಿಸಿರುವ ಬಹುತೇಕ ವಿಚಾರಗಳು ಶೈಕ್ಷಣಿಕ ಸಂಸ್ಥೆಗಳ ರಾಜಕಾರಣತ್ವದ ನೇರ ಪರಿಣಾಮಗಳೆಂದು ಹೇಳಬೇಕಾಗಿದೆ. ಇಲ್ಲಿ ಭಾವೀ ರಾಜಕೀಯ ಶಕ್ತಿಗಳು ತಮ್ಮ ಪುಂಡತನದ ತಂತ್ರಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸುವುದರಿಂದ, ನಡತೆಯ ಮಟ್ಟವು ಕುಸಿಯಲಾರಂಭಿಸಿದೆ. ಅತ್ಯಧಿಕ ರಾಜಕಾರಣದ ಮಧ್ಯಸ್ಥಿಕೆಯಿಂದಾಗಿ, ರ್‍ಯಾಗಿಂಗನ್ನು ದಮನ ಮಾಡಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು ಕಷ್ಟಪಡುತ್ತಿದ್ದಾರೆ.

**ಕುಚೇಷ್ಟೆಯನ್ನು ಹತ್ತಿಕ್ಕುವ ಸರಕಾರಿ/ಸಾಂಸ್ಥಿಕ ಪ್ರಯತ್ನಗಳು**

ಎಪ್ಪತ್ತರ ದಶಕದ ಉತ್ತರ ಭಾಗದಲ್ಲಿ ಒಂದು ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಬ್ಬರು ಹೊಸ ವಿದ್ಯಾರ್ಥಿಗಳ ಸಾವು ಸಂಭವಿಸಿದ ಬಳಿಕ ಭಾರತ ಸರಕಾರವು ರ್‍ಯಾಗಿಂಗ್‌ನ್ನು ನಿಷೇಧಿಸುವ ಆಜ್ಞೆಯನ್ನು ಹೊರಡಿಸಿದೆ. ಕಳೆದ ಎರಡು ದಶಕಗಳಲ್ಲಿ ಕೆಲವು ರಾಜ್ಯ ಸರಕಾರಗಳು ಮತ್ತು ವಿಶ್ವವಿದ್ಯಾಲಯಗಳು ಕೂಡ ಇದೇ ಉದ್ದೇಶಕ್ಕಾಗಿ ಅಧಿನಿಯಮಗಳು/ಸುಗ್ರೀವಾಜ್ಞೆಗಳನ್ನು ಹೊರಡಿಸಿವೆ.

ಸಾಂಸ್ಥಿಕ ಪ್ರಯತ್ನಗಳಲ್ಲಿ ಸಮಿತಿಯ ವರದಿಗಳೂ ಸೇರುತ್ತವೆ. ಇಲ್ಲಿ ರ್‍ಯಾಗಿಂಗನ್ನು ಹತೋಟಿಯಲ್ಲಿ ಇಡಲು ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ಉದಾಹರಣೆಗೆ, ರ್‍ಯಾಗಿಂಗ್ ಕುರಿತಾದ ವಿಚಾರಗಳ ಪರಿಶೀಲನೆ ನಡೆಸುವುದಕ್ಕೆ ಮತ್ತು ಶಿಫಾರಸ್ಸುಗಳನ್ನು ಮಾಡುವುದಕ್ಕಾಗಿ ದೆಹಲಿಯ ಐಐಟಿ ನಿರ್ದೇಶಕರು ರಚಿಸಿದ 'ರ್‍ಯಾಗಿಂಗ್'ಗೆ ಸಂಬಂಧಿಸಿದ ಸಮಿತಿಯ ವರದಿ.

ಮೇಲೆ ಉಲ್ಲೇಖಿಸಿದವುಗಳಿಗೆ ಹೊರತಾಗಿಯೂ ವರ್ಷದಿಂದ ವರ್ಷಕ್ಕೆ ಕಿರಿಯ ವಿದ್ಯಾರ್ಥಿಗಳಿಗೆ ಬೆದರಿಸಲು ಮತ್ತು ಶರಣಾಗತಿಗೊಳಿಸಲು ಹಿರಿಯ ವಿದ್ಯಾರ್ಥಿಗಳ ಕೈಯಲ್ಲಿ ರ್‍ಯಾಗಿಂಗ್

Digitised by Bharatavani, CIIL

ಒಂದು ಆಯುಧವಾಗಿ ಮುಂದುವರಿದಿದೆ. ಭಾರತ ಸರಕಾರವು ರ್‍ಯಾಗಿಂಗನ್ನು ನಿಷೇಧಿಸುವ ಆಜ್ಞೆಯನ್ನು ಹೊರಡಿಸಿದ ಬಳಿಕ ರ್‍ಯಾಗಿಂಗ್ ಶೈಲಿಯಲ್ಲಿ ನಿರ್ದಿಷ್ಟ ಬದಲಾವಣೆ ಉಂಟಾಗಿದೆ. ಹಿಂದೆ ರ್‍ಯಾಗಿಂಗನ್ನು 'ಮುಕ್ತ' ವ್ಯವಹಾರವಾಗಿ ಸ್ವೀಕರಿಸಲಾಗುತ್ತಿತ್ತು. ಅದು ಘೋರ ಅಪರಾಧವಾಗಿ ಕಂಡುಬರುತ್ತಿರಲಿಲ್ಲ. ಸಮೂಹ ಭಾಗವಹಿಸುವಿಕೆ ಇದ್ದದ್ದರಿಂದ ಅದಕ್ಕೆ ಅದರದೇ ಆದ ನಿಯಂತ್ರಣ ಇರುತ್ತಿತ್ತು. ಸಾಮಾನ್ಯವಾಗಿ ಹೆಚ್ಚು ಮಾತ್ಸರ್ಯದ ವ್ಯಕ್ತಿಯು ಗುಂಪಿನಲ್ಲಿದ್ದ ಸಾಧು ವ್ಯಕ್ತಿಗಳಲ್ಲಿ ಮೇಲುಗೈ ಸಾಧಿಸುತ್ತಿದ್ದನು. ಆದರೆ ರ್‍ಯಾಗಿಂಗ್ ಅಧಿಕೃತವಾಗಿ ನಿಷೇಧಕ್ಕೆ ಒಳಪಟ್ಟ ನಂತರ ವಿವೇಕಯುಕ್ತ ಜನರು ಆ ಕ್ಷೇತ್ರದಿಂದ ದೂರ ಸರಿದ ಬಳಿಕ, ಅದು ಮುಕ್ತರೀತಿಯಿಂದ ತೆರೆದುಕೊಂಡು ಕಡ್ಡಾಯದ ಚೇಷ್ಟೆಗಾರರಿಗೆ ಆಂತರಿಕ ನಿಯಂತ್ರಣವಿಲ್ಲದಂತಾಗಿದೆ. ಈಗ ರ್‍ಯಾಗಿಂಗ್ ಖಾಸಗಿ ವ್ಯವಹಾರವಾಗಿ ಪರಿಣಮಿಸಿದೆ. ಕೆಲವು ಪುಂಡರಿಂದ ಕತ್ತಲೆಯ ಮೂಲೆಗಳಲ್ಲಿ, ನಿರ್ಜನ ಪ್ರದೇಶಗಳಲ್ಲಿ ಮತ್ತು ಕತ್ತಲೆ ತುಂಬಿದ ಕೋಣೆಗಳಲ್ಲಿ ನಡೆಯುತ್ತಿದೆ. ವಿದ್ಯಾರ್ಥಿಗಳಲ್ಲಿ ಈ ಪುಂಡರ ಸಂಖ್ಯೆ ಅಲ್ಪವಾಗಿದ್ದರೂ ಇವರು ಬಹಳ ಚಟುವಟಿಕೆಯುಳ್ಳವರಾಗಿದ್ದಾರೆ. ಇವರು ಹೊಸದಾಗಿ ಸೇರ್ಪಡೆಗೊಳ್ಳುವವರಿಗೆ ಸಂಸ್ಥೆಯ ಜೀವನವನ್ನು ಕೆಟ್ಟ ಕನಸೆಂಬಂತೆ ಮಾಡುತ್ತಾರೆ.

ಈ ಪಿಡುಗನ್ನು ಕುರಿತು ಸ್ವತಃ ವಿದ್ಯಾರ್ಥಿಗಳು, ಹೆತ್ತವರು, ಸಂಸ್ಥೆಗಳು ಮತ್ತು ಬಹುಪಾಲು ಸಾರ್ವಜನಿಕರು ತಿಳಿದುಕೊಂಡಿದ್ದರೂ ಇದನ್ನು ತಡೆಯುವುದು ಬಹಳ ಸಮಯದಿಂದ ಸಾಧ್ಯವಾಗಿಲ್ಲ. ಅಂತಿಮವಾಗಿ ವಿಶ್ವ ಜಾಗೃತಿ ಮಿಶನ್ ಅವರು 1999ರಲ್ಲಿ ಭಾರತದ ಸ್ವರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ಹೂಡಿದ್ದಾರೆ. ಇದರಲ್ಲಿ ದೇಶದಾದ್ಯಂತ ಶೈಕ್ಷಣಿಕ ಸಂಸ್ಥೆಗಳಲ್ಲಿ ಹೊಸ ವಿದ್ಯಾರ್ಥಿಗಳ ಮೇಲೆ ರ್‍ಯಾಗಿಂಗ್ ಬೀರುವ ಕೆಟ್ಟ ಪರಿಣಾಮವನ್ನು ಎತ್ತಿ ತೋರಿಸಲಾಗಿದೆ. ಈ ಮೊಕದ್ದಮೆಯ ವಿಚಾರಣೆಯೊಂದರಲ್ಲಿ ಸರ್ವೋಚ್ಚ ನ್ಯಾಯಾಲಯವು ಸೂಚಿಸಿದ್ದು ಏನೆಂದರೆ, ಈ ವಿಚಾರದಲ್ಲಿ (ರ್‍ಯಾಗಿಂಗ್ ಕುರಿತು) ಯುಜಿಸಿಯು ಎಚ್ಚರದ ಪರಿಶೀಲನೆಯನ್ನು ನಡೆಸಿ, ಈ ಪಿಡುಗನ್ನು ಎದುರಿಸುವ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸಿಕೊಳ್ಳಬೇಕು. ಇದನ್ನು ಅನುಸರಿಸಿ ಯುಜಿಸಿಯು ರಚಿಸಿದ ಸಮಿತಿಯು ಈ ಪ್ರಶ್ನೆಯನ್ನು ಆಳವಾಗಿ ಪರಿಗಣಿಸಿ ತನ್ನ ವರದಿಯನ್ನು ಸಲ್ಲಿಸಿದೆ.

**ಯುಜಿಸಿ ಸಮಿತಿಯ ಶಿಫಾರಸ್ಸುಗಳು**

**ನಿಷೇಧ:**

ಯುಜಿಸಿಯು ಶೈಕ್ಷಣಿಕ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಪಿಡುಗನ್ನು ಮಟ್ಟ ಹಾಕಲು ಮೂರು ಕವಲಿನ ವ್ಯವಸ್ಥೆಯೊಂದನ್ನು ಸಲಹೆ ಮಾಡಿದೆ. ಅದೆಂದರೆ ನಿಷೇಧ, ವಿರೋಧ (ತಡೆಯುವುದು) ಮತ್ತು ಶಿಕ್ಷೆ. ಅಂದರೆ ಕಾನೂನಿನಿಂದ ನಿಷೇಧ, ಒಂದು ನಿರ್ದಿಷ್ಟ ಮಾರ್ಗದರ್ಶನ ಸೂತ್ರಗಳನ್ನು ಅನುಸರಿಸುವ ಮೂಲಕ ವಿರೋಧಿಸುವುದು ಮತ್ತು ನಿಷೇಧ ಹಾಗೂ ವಿರೋಧಗಳು ಇದ್ದಾಗ್ಯೂ ರ್‍ಯಾಗಿಂಗ್ ನಡೆದಲ್ಲಿ ಶಿಕ್ಷೆ ವಿಧಿಸುವುದು. ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸುವುದರ ಜೊತೆಗೆ ತಪ್ಪಿತಸ್ಥರಲ್ಲದವರಿಗೆ ಮತ್ತು ರ್‍ಯಾಗಿಂಗ್ ಪಿಡುಗನ್ನು ತಡೆಯಲು ನೆರವಾಗುವವರಿಗೆ ಕೆಲವು ಪ್ರೋತ್ಸಾಹಕರ ಬಹುಮಾನಗಳನ್ನು ನೀಡುವ ಮೂಲಕ ಅದನ್ನು ಸರಿತೂಗಿಸಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿದೆ. ಈ ವ್ಯವಸ್ಥೆಯ ಕೆಲವು ವಿವರಗಳು ಇಂತಿವೆ;

1. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಶೈಕ್ಷಣಿಕ ಸಂಸ್ಥೆಗಳಲ್ಲಿ ರ್‍ಯಾಗಿಂಗ್‌ನ್ನು ನಿಷೇಧಿಸುವ ಕಾನೂನನ್ನು ಜಾರಿಗೆ ತರುವ ಸಂದರ್ಭದಲ್ಲಿ(ಎಲ್ಲೆಲ್ಲಿ ಈ ವಿಧದ ಕಾನೂನು ಇಲ್ಲವೋ) ಇನ್ನಿತರವುಗಳ ಜೊತೆಗೆ ಈ ಕೆಳಗಿನ ಉಪಬಂಧಗಳನ್ನು ಕೂಡ ಹೊಂದಿರಬೇಕಾಗುತ್ತದೆ:

- ರ್‍ಯಾಗಿಂಗನ್ನು ವಿಚಾರಣಾರ್ಹ (ಕೋರ್ಟಿನ ಗಮನಕ್ಕೆ ಬರಬಲ್ಲ) ಅಪರಾಧವಾಗಿ ಪರಿಗಣಿಸುವುದು:
- ಕಾನೂನಿನ ಕೆಳಗೆ ತಪ್ಪೆಂದು ಪರಿಗಣಿತವಾಗುವ ರ್‍ಯಾಗಿಂಗ್ ರೂಪಗಳನ್ನು ಗುರುತಿಸುವುದು:
- ನಡೆದ ಅಪರಾಧದ ಗಂಭೀರತೆಯನ್ನು ಅನುಲಕ್ಷಿಸಿ ಸೂಕ್ತ ಶಿಕ್ಷೆಗಳನ್ನು ಗೊತ್ತುಪಡಿಸುವುದು, ಇದರಲ್ಲಿ ದಂಡಗಳು, ಕೆಲವು ಕಾಲ ಪರೀಕ್ಷೆಗೆ ಹಾಜರಾಗದಂತೆ ವಿಶ್ವವಿದ್ಯಾಲಯದಿಂದ ಹೊರದಬ್ಬುವಿಕೆ, ಕಾರಾಗೃಹವಾಸ ಇತ್ಯಾದಿ ಸೇರುತ್ತವೆ:
- ರ್‍ಯಾಗಿಂಗ್‌ನಲ್ಲಿ ತೊಡಗಿಸಿಕೊಂಡ ಯುವಜನತೆಯನ್ನು ನಾಯಕರನ್ನಾಗಿ ಬಿಂಬಿಸುವ ದೃಶ್ಯಗಳನ್ನು ಚಲನಚಿತ್ರಗಳಲ್ಲಿ ಬಿಂಬಿಸಲು ಅವಕಾಶ ನೀಡದಂತೆ ಸಿನೆಮಾ ಸೆನ್ಸಾರ್ ಮಂಡಳಿ ಮತ್ತು ಇತರ ಏಜೆನ್ಸಿಗಳು ನೋಡಿಕೊಳ್ಳುವಂತೆ ಮಾಡುವುದು:

2. ಮೇಲೆ ಉಲ್ಲೇಖಿಸಿದ ರೀತಿಯಲ್ಲಿ ರ್‍ಯಾಗಿಂಗ್‌ನ್ನು ನಿಷೇಧಿಸುವ ಕಾನೂನನ್ನು ಸರಕಾರ ಜಾರಿಗೆ ತರುವವರೆಗೆ, ಈ ವಿಧದ ವಿಶೇಷ ಕಾಯಿದೆ ಅಥವಾ ನಿಯಮಗಳಿಲ್ಲದ ವಿಶ್ವವಿದ್ಯಾಲಯಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳು ಈ ವಿಧದ ವಿಶೇಷ ಶಾಸನಗಳನ್ನು ರೂಪಿಸಿಕೊಳ್ಳಬೇಕು. ಈ ಶಾಸನದಲ್ಲಿ ಮಾರ್ಗದರ್ಶಕ ಸೂತ್ರಗಳು, ನಿಯಮಗಳು, ಶಿಕ್ಷೆಗಳು ಉಲ್ಲೇಖಿತವಾಗಿರಬೇಕು ಮತ್ತು ಅದಕ್ಕೆ ಅನುಗುಣವಾಗಿ ಅವರ ನಿಬಂಧನೆಗಳು ಮತ್ತು/ಅಥವಾ ವಿಶೇಷ ಶಾಸನಗಳಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಬೇಕು.

**ವಿರೋಧ**

1. ಸಂಸ್ಥೆಗೆ ಪ್ರವೇಶದ ಜಾಹಿರಾತನ್ನು ನೀಡಿದ ಸಮಯದಿಂದಲೇ ರ್‍ಯಾಗಿಂಗ್ ವಿರುದ್ಧ ಚಳವಳಿಯನ್ನು ಪ್ರಾರಂಭಿಸಿ ಪ್ರವೇಶದ ಇಡೀ ಕಾಲಾವಧಿಯುದ್ದಕ್ಕೂ ಅದನ್ನು ನಡೆಸಿ, ಆಮೇಲೆ ಪ್ರವೇಶಕಾರ್ಯ /ಪ್ರಕ್ರಿಯೆ ಮುಗಿದ ಬಳಿಕವೂ ಒಂದೆರಡು ತಿಂಗಳುಗಳ ಕಾಲ ಅದನ್ನು ಜಾರಿಯಲ್ಲಿ ಇಡಬೇಕು.

2. ಸಂಸ್ಥೆಯಲ್ಲಿ ರ್‍ಯಾಗಿಂಗನ್ನು ನಿಷೇದಿಸಲಾಗಿರುವುದನ್ನು

Digitised by Bharatavani, CIIL

ಮತ್ತು ಇದರಲ್ಲಿ ತೊಡಗಿಸಿಕೊಂಡವರಿಗೆ ಸೂಕ್ತ ಶಿಕ್ಷೆಯನ್ನು ವಿಧಿಸಲಾಗುವುದು ಎಂಬುದನ್ನು ಶಿಕ್ಷೆಗಳ ವಿವರಗಳೊಂದಿಗೆ ಜಾಹಿರಾತು, ಪ್ರವೇಶದ ಮಾಹಿತಿ ಕೈಪುಸ್ತಕ/ಕೈಪಿಡಿ, ಪ್ರವೇಶ/ನೊಂದಣಿಯ ಅರ್ಜಿ ನಮೂನೆ ಇತ್ಯಾದಿಗಳಲ್ಲಿ ಪ್ರಕಟಿಸಬೇಕು.

3. ರ್‍ಯಾಗಿಂಗ್ ಕುರಿತಾದ ಎಲ್ಲಾ ಕಾನೂನುಗಳು ಮತ್ತು ಶಿಕ್ಷೆಗಳ ಕುರಿತು, ಮತ್ತು ಅಪರಾಧಿಗಳೆಂದು ಪರಿಗಣಿತವಾಗುವವರಿಗೆ ಸೂಕ್ತವಾಗಿ ಶಿಕ್ಷೆ ವಿಧಿಸಲಾಗುತ್ತದೆ ಎಂಬುದರ ಕುರಿತು ತಮಗೆ ಮಾಹಿತಿ ಇದೆ ಎಂಬುದನ್ನು ಅಭ್ಯರ್ಥಿಗಳು ಮತ್ತು ಅವರ ಹೆತ್ತವರಿಂದ ಸಹಿ ಹಾಕಿದ ವಾಗ್ದಾನವನ್ನು ಪಡೆಯಬೇಕು. ಈ ರೀತಿಯ ವಾಗ್ದಾನ ಪತ್ರವನ್ನು ಹಿರಿಯ ವಿದ್ಯಾರ್ಥಿಗಳು ಮತ್ತು ಅವರ ಹೆತ್ತವರಿಂದ ಅವರು ಹೊಸ ಶೈಕ್ಷಣಿಕ ವರ್ಷದ/ಸೆಮಿಷ್ಟರ್ ಅವಧಿಯ ನೋಂದಾವಣಿಗೆ ಬಂದ ಸಮಯದಲ್ಲಿ ಪಡೆದುಕೊಳ್ಳಬೇಕು.

4. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ, ಸಂಸ್ಥೆಯು ಸೂಕ್ತವಿಧದ ಸಮಿತಿಗಳನ್ನು ರೂಪಿಸಬೇಕು. ಈ ಸಮಿತಿಗಳಲ್ಲಿ ಹಿರಿಯ ಬೋಧನಾ ಸಿಬ್ಬಂದಿಗಳು, ವಿದ್ಯಾರ್ಥಿ ನಿಲಯದ ಪಾಲಕರು ಮತ್ತು ಕೆಲವು ಜವಾಬ್ದಾರಿಯುತ ಹಿರಿಯ ವಿದ್ಯಾರ್ಥಿಗಳು ಇರಬೇಕು. ಇದು ರ್‍ಯಾಗಿಂಗ್ ಘಟನೆಗಳ ಪರಿಶೀಲನೆಗೆ ಆಂತರಿಕ ಕ್ರಮವಾಗುತ್ತದೆ.

5. ರ್‍ಯಾಗಿಂಗ್‌ನ ಅಮಾನವೀಯ ಪರಿಣಾಮದ ಕುರಿತು ಕೈಪಿಡಿ, ಪ್ರಕಟಿತ ಕರಪತ್ರಗಳು ಇತ್ಯಾದಿಗಳ ಮೂಲಕ ಸಮುದಾಯಗಳಿಗೆಲ್ಲಾ ತಿಳುವಳಿಕೆಯನ್ನು ನೀಡಬೇಕು.

6. ರ್‍ಯಾಗಿಂಗಿನ ಋಣಾತ್ಮಕ ಪರಿಣಾಮಗಳು, ಈ ಬಗ್ಗೆ ಇರುವಂತಹ ಕಾನೂನುಗಳು, ಶಿಕ್ಷೆಗಳ ವಿಧಗಳು, ಇತ್ಯಾದಿ ಕುರಿತಂತೆ ಶೈಕ್ಷಣಿಕ ವರ್ಷದ ಮೊದಲ ಎರಡು ತಿಂಗಳುಗಳಲ್ಲಿ ಸಾಕಷ್ಟು ಪ್ರಚಾರ ನೀಡುವಂತೆ ಮಾಧ್ಯಮಗಳಲ್ಲಿ ಕೇಳಿಕೊಳ್ಳಬೇಕು.

7. ಈ ತಿಂಗಳುಗಳಲ್ಲಿ ವಿಶೇಷವಾಗಿ ವಿದ್ಯಾರ್ಥಿನಿಲಯದ ಕಟ್ಟಡಗಳು, ಉಪಹಾರಗೃಹಗಳು, ಕ್ಯಾಂಟೀನ್‌ಗಳು, ಖಾಲಿ ತರಗತಿ ಕೋಣೆಗಳು, ಆಟದ ಬಯಲುಗಳು, ಬಸ್ ನಿಲ್ದಾಣಗಳು ಇತ್ಯಾದಿಗಳಲ್ಲಿ ರಕ್ಷಣೆಯನ್ನು ಬಿಗಿಗೊಳಿಸಬೇಕು.

8. ಸಂಸ್ಥೆ ನೀಡುವ ವಲಸೆ ಪ್ರಮಾಣ ಪತ್ರದಲ್ಲಿ ವಿದ್ಯಾರ್ಥಿಗಳ ಸಾಮಾನ್ಯ ನಡತೆ ಮತ್ತು ವರ್ತನೆಗಳ ಜೊತೆಗೆ ಆ ವಿದ್ಯಾರ್ಥಿಯು ರ್‍ಯಾಗಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಲ್ಲಿ ಈ ಅಪರಾಧದಲ್ಲಿ ಶಿಕ್ಷೆ ಅನುಭವಿಸಿರಬಹುದಾದ ವಿವರಗಳನ್ನು ನಮೂದಿಸಿರಬೇಕು.

9. ಸಂಸ್ಥೆಯೊಂದು ರ್‍ಯಾಗಿಂಗನ್ನು ನಿಗ್ರಹಿಸಲು ಅಸಮರ್ಥವಾಗಿದ್ದರೆ, ಅದು ಮತ್ತೆ ಸೂಕ್ತ ರೀತಿಯಲ್ಲಿ ಕಾರ್ಯ ನಿರ್ವಹಿಸುವವರೆಗೆ, ಅಂತಹ ಸಂಸ್ಥೆಗಳಿಗೆ ಯುಜಿಸಿ/ಹಣಕಾಸು ಒದಗಿಸುವ ಏಜೆನ್ಸಿಗಳು ಆರ್ಥಿಕ ನೆರವನ್ನು ನಿಲ್ಲಿಸಬೇಕು.

10. ರ್‍ಯಾಗಿಂಗನ್ನು ಪ್ರತಿಬಂಧಿಸಲು ವಿಫಲವಾದ ಕಾಲೇಜು ಅಥವಾ ಸಂಸ್ಥೆಯ ಮಾನ್ಯತೆಯನ್ನು ವಿಶ್ವವಿದ್ಯಾಲಯವು ರದ್ದುಪಡಿಸಬಹುದು.

**ಶಿಕ್ಷೆಗಳು**

ಶಿಕ್ಷೆಯ ಪ್ರಮಾಣವು ಸಹಜವಾಗಿ ಅಪರಾಧದ ಸ್ವರೂಪ ಮತ್ತು ಗಂಭೀರತೆಯನ್ನು ಅವಲಂಬಿಸಿ ಇರುತ್ತದೆ. ಇದರ ಸ್ವರೂಪದ ನಿರ್ಧಾರವು ಅದಕ್ಕೆ ಸಂಬಂಧಿಸಿದ ಸಮಿತಿ ಅಥವಾ ಕಾನೂನು ನ್ಯಾಯಾಲಯದ್ದಾಗಿರುತ್ತದೆ. ಶಿಕ್ಷೆಯು ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಾಗಿರಬಹುದು ಅಥವಾ ಇವುಗಳ ಯಾವುದಾದರೂ ಸಂಯೋಜನೆಯಾಗಿರಬಹುದು:

- ಪ್ರವೇಶದ ರದ್ಧತಿ;
- ತರಗತಿಯಲ್ಲಿ ಹಾಜರಿರುವುದನ್ನು ಅಮಾನತ್ತಿನಲ್ಲಿಡುವುದು (ಸಸ್ಪೆನ್ಶನ್);
- ವಿದ್ಯಾರ್ಥಿವೇತನ/ಪ್ರತಿಭಾವೇತನ ಮತ್ತು ಇತರ ಅನುಕೂಲತೆಗಳನ್ನು ತಡೆ ಹಿಡಿಯುವುದು;
- ಯಾವುದೇ ಟೆಸ್ಟ್/ಪರೀಕ್ಷೆಯಲ್ಲಿ ಅಥವಾ ಇತರ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಹಾಜರಾಗದಂತೆ ಉಚ್ಚಾಟಿಸುವುದು.
- ಫಲಿತಾಂಶವನ್ನು ತಡೆ ಹಿಡಿಯುವುದು;
- ಸಂಸ್ಥೆಯನ್ನು ಪ್ರತಿನಿಧಿಸಿ ಯಾವುದೇ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಸಭೆ, ಕ್ರೀಡಾಕೂಟ, ಯುವಜನೋತ್ಸವ ಇತ್ಯಾದಿಗಳಲ್ಲಿ ಭಾಗವಹಿಸದಂತೆ ನಿಷೇಧ ಹೇರುವುದು;
- ವಿದ್ಯಾರ್ಥಿನಿಲಯದಿಂದ ಅಮಾನತ್ತು/ಉಚ್ಛಾಟನೆ;
- 1 ರಿಂದ 4 ಸೆಮಿಸ್ಟರ್‌ವರೆಗೆ ಸಂಸ್ಥೆಯಿಂದ ಹೊರದೂಡುವಿಕೆ;
- ಸಂಸ್ಥೆಯಿಂದ ಹೊರ ಹಾಕುವುದು ಮತ್ತು ಇತರ ಯಾವುದೇ ಸಂಸ್ಥೆಯಲ್ಲಿ ಪ್ರವೇಶ ಪಡೆಯದಂತೆ ಉಚ್ಚಾಟಿಸುವುದು.
- ರೂ 25000 ದವರೆಗೆ ದಂಡ; ಮತ್ತು
- 3 ವರ್ಷಗಳವರೆಗೆ ಕಠಿಣ ಸಜೆ (ಶಿಕ್ಷೆಯ ಸ್ವರೂಪ ಮತ್ತು ಅವಧಿಯನ್ನು ನ್ಯಾಯಾಲಯ ನಿರ್ಧರಿಸುವುದು).

**ಉತ್ತೇಜಕಗಳು**

ಸಮಿತಿಯು ಕೆಲವು ಧನಾತ್ಮಕ ಕ್ರಿಯೆಗಳನ್ನು ಮತ್ತು ಉತ್ತೇಜಕಗಳನ್ನು ಕೂಡ ಸೂಚಿಸಿದೆ. ಇದರಲ್ಲಿ ಈ ಕೆಳಗಿನವುಗಳು ಸೇರಿಕೊಂಡಿವೆ:

- ಸೂಕ್ತ ರೀತಿಯ ಸಮಿತಿಗಳನ್ನು ರೂಪಿಸುವುದು. ಇದರಲ್ಲಿ ಕೋರ್ಸ್‌ನ ಉಸ್ತುವಾರಿ ಅಧಿಕಾರಿ, ವಿದ್ಯಾರ್ಥಿ

Digitised by Bharatavani, CIIL

ಸಮಾಲೋಚಕರು, ವಿದ್ಯಾರ್ಥಿನಿಲಯ ಪಾಲಕರು ಮತ್ತು ಕೆಲವು ಹಿರಿಯ ವಿದ್ಯಾರ್ಥಿಗಳು ಇರುತ್ತಾರೆ. ಇವರು ಹೊಸ ವಿದ್ಯಾರ್ಥಿಗಳು ಮತ್ತು ಹಿರಿಯ ವಿದ್ಯಾರ್ಥಿಗಳ ನಡುವೆ ಆರೋಗ್ಯಪೂರ್ಣ ವರ್ತನೆಇರುವಂತೆ ನೋಡಿಕೊಂಡು ಅದರ ಮೇಲ್ವಿಚಾರಣೆ ನಡೆಸಿ ಅದಕ್ಕೆ ಪ್ರೋತ್ಸಾಹ ನೀಡುವರು.

- ವಿದ್ಯಾರ್ಥಿ–ಬೋಧಕ ಸಿಬ್ಬಂದಿಗಳ ನಡುವೆ ಪರಸ್ಪರ ಪ್ರತಿಕ್ರಿಯೆ ಹೆಚ್ಚಾಗಿ ಇರುವಂತೆ ನೋಡಿಕೊಳ್ಳುವುದು. ಇದರಿಂದ ವಾಸ್ತವ ಮೌಲ್ಯಮಾಪನದ ಕಾರ್ಯ ಮತ್ತು ಸಿಬ್ಬಂದಿ ನೇಮಕಾತಿಗಳನ್ನು ಹೊರತುಪಡಿಸಿ ಸಂಸ್ಥೆಯ ಇತರ ಎಲ್ಲಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಕೊಂಡಿರುವಂತೆ ನೋಡಿಕೊಳ್ಳುವುದು.
- ಪ್ರವೇಶದ ಕಾರ್ಯ ಮುಗಿದ ಕೂಡಲೇ ಹಿರಿಯ ವಿದ್ಯಾರ್ಥಿಗಳು ಮತ್ತು ಬೋಧನಾ ಸಿಬ್ಬಂದಿಗಳಿಂದ ಹೊಸಬರ ಸ್ವಾಗತ ಕೂಟಗಳ ಆಯೋಜನೆ. ಇದರಿಂದ ಅವರನ್ನು ಸೂಕ್ತವಾಗಿ ಪರಸ್ಪರ ಪರಿಚಯಿಸಿಕೊಳ್ಳುವುದು ಸಾಧ್ಯವಾಗುತ್ತದೆ.
- ವಿದ್ಯಾರ್ಥಿನಿಲಯ ಪಾಲಕರು ಮತ್ತು ಬೇರೆ ಅಧಿಕಾರಿಗಳನ್ನು ಪದೋನ್ನತಿಗಾಗಿ ಪರಿಗಣಿಸುವಾಗ ಸಂಸ್ಥೆಯ ಆಡಳಿತಕಾರ್ಯಕ್ಕೆ ಅವರು ನೀಡಿರುವ ಕಾಣಿಕೆಗೆ ಯುಕ್ತರೀತಿಯ ಗಮನ ನೀಡುವಿಕೆ.

ಸಮಿತಿಯ ಶಿಫಾರಸುಗಳನ್ನು ಯುಜಿಸಿಯು ಪರಿಗಣಿಸಿ ಅದನ್ನು ಮಂಜೂರು ಮಾಡಿದೆ. ಆನಂತರ, ಸರ್ವೋಚ್ಚ ನ್ಯಾಯಾಲಯವು ಯುಜಿಸಿಯ ಶಿಫಾರಸುಗಳನ್ನು ಪರಿಗಣಿಸಿ ಶೈಕ್ಷಣಿಕ ಸಂಸ್ಥೆಗಳಲ್ಲಿ ರ್‍ಯಾಗಿಂಗನ್ನು ನಿಷೇಧಿಸಿದೆ. ಅದು ಕೆಲವು ಮಾರ್ಗದರ್ಶಕ ಸೂತ್ರಗಳನ್ನು ಕೂಡ ರೂಪಿಸಿದೆ. ಇವುಗಳನ್ನು ಇತರವುಗಳೊಂದಿಗೆ ಜಾರಿಗೆ ತರಲಾಗಿದೆ: ಒಂದು ವೇಳೆ ಸಂಸ್ಥೆಯು ರ್‍ಯಾಗಿಂಗನ್ನು ಪ್ರತಿಬಂಧಿಸಲು ವಿಫಲಗೊಂಡರೆ, ಅದು ಯುಜಿಸಿಯಿಂದ ತನ್ನ ಮಾನ್ಯತೆಯನ್ನು ಮತ್ತು ಆರ್ಥಿಕ ನೆರವನ್ನು ಕಳೆದುಕೊಳ್ಳುವುದು. ಈ ಹಂತದಲ್ಲಿ ಕೆಲವು ರಾಜ್ಯ ಸರಕಾರಗಳು ಕೂಡ ವಿಶ್ವವಿದ್ಯಾಲಯಗಳಲ್ಲಿ ಮತ್ತು ಪದವಿ ಮಹಾವಿದ್ಯಾಲಯಗಳಲ್ಲಿ ರ್‍ಯಾಗಿಂಗಿನ ಮೇಲೆ ನಿಷೇಧವನ್ನು ಹೇರಿವೆ.

**ಮೂಲ: ಕೆ.ಪಿ. ಶಂಕರನ್ ಉಣ್ಣಿ**
**ಅನು: ಡಾ. ಗೀತಾ ಶೆಣೈ**

## ಕುವೆಂಪು ಶೈಕ್ಷಣಿಕ ವಿಚಾರಧಾರೆ

ರಾಷ್ಟ್ರಕವಿ ಕುವೆಂಪು ಅವರು ಮಹಾನ್ ಕವಿಯಾಗಿ, ಸಾಹಿತಿಯಾಗಿ ನಾಡಿನ ಉದ್ದಗಲಕ್ಕೂ ಸುಪರಿಚಿತರು. ಜೊತೆಗೆ ಅವರು ಕಾಲೇಜಿನ ಪ್ರಾಧ್ಯಾಪಕರಾಗಿ, ಒಂದು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಶಿಕ್ಷಣ ಕ್ಷೇತ್ರದಲ್ಲೂ ಅನುಪಮ ಸೇವೆ ಸಲ್ಲಿಸಿದ್ದಾರೆ. ಅವರ ಶೈಕ್ಷಣಿಕ ವಿಚಾರಗಳು ಅವರ ಸಾಹಿತ್ಯ ಕೃತಿಗಳಲ್ಲಿ, ಭಾಷಣಗಳಲ್ಲಿ, ಲೇಖನಗಳಲ್ಲಿ, ಯಥೇಚ್ಛವಾಗಿ, ಸ್ಪಷ್ಟವಾಗಿ ಕಂಡುಬರುತ್ತವೆ.

ಭಾರತೀಯ ಉಜ್ವಲ ಪರಂಪರೆಯ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಣದ ಉದಾತ್ತ ಆಶಯ ಆದರ್ಶಗಳನ್ನು ಕಂಡ ಕುವೆಂಪು ಅವರು ಆಧುನಿಕ ವಿದ್ಯಾಭ್ಯಾಸದ ಇತಿಮಿತಿಗಳನ್ನು ಕುರಿತು ಆಲೋಚಿಸಿದ್ದಾರೆ. ಹಿಂದಿನ ಸತ್ವವನ್ನು ಅರಗಿಸಿಕೊಂಡು ಇಂದಿನ ಪರಿಸರದಲ್ಲಿಟ್ಟು ಪರೀಕ್ಷಿಸಿದ್ದಾರೆ. ಸುಮಾರು ಐವತ್ತು ವರ್ಷಗಳಿಗಿಂತಲೂ ಹಿಂದೆ ಸ್ವಾತಂತ್ರ್ಯಪೂರ್ವದ ಪರಿಸ್ಥಿತಿಯಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳನ್ನುದ್ದೇಶಿಸಿ ಅವರು ಮಾಡಿದ ಕೆಲವು ಭಾಷಣಗಳಲ್ಲಿ ಅವರ ವೈಚಾರಿಕ ಕ್ರಾಂತಿಯ ಕರೆ ಮೊಳಗುವುದಲ್ಲದೆ ಪರಿಪೂರ್ಣ ಶಿಕ್ಷಣದ ಸ್ವರೂಪ ವ್ಯಕ್ತವಾಗಿದೆ ಎಂಬುದಾಗಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ತಿಳಿಸಿದ್ದಾರೆ. ಡಾ. ಸಿ. ಪಿ. ಕೃಷ್ಣಕುಮಾರರು ತಿಳಿಸುವಂತೆ, "ಕುವೆಂಪು ಅವರು ಕವಿವರ ಹಾಗೂ ದ್ರಷ್ಟಾರ ಹೇಗೋ ಶ್ರೇಷ್ಠ ಶಿಕ್ಷಣತಜ್ಞ ಕೂಡ. ಅವರ ಶೈಕ್ಷಣಿಕ ವಿಚಾರಗಳು ದರ್ಶನದೀಪ್ತಿಯಾಗಿರುವಂತೆ ವಿಜ್ಞಾನ ಸಮ್ಮತವೂ ಆಗಿವೆ. ಅವರ ವ್ಯಕ್ತಿತ್ವ, ಸಾಹಿತ್ಯಗಳ ರತ್ನತ್ರಯವಾದ ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿಗಳು ಅವರ ಶಿಕ್ಷಣ ಸಂಬಂಧವಾದ ದೃಷ್ಟಿ ಧೋರಣೆಗಳಲ್ಲೂ ಅಭಿವ್ಯಕ್ತವಾಗಿವೆ..... ಕುವೆಂಪು ಅವರ ವಿದ್ಯಾವಿಚಾರಗಳು ಗಟ್ಟಿಯಾಗಿವೆ. ಅವುಗಳಲ್ಲಿ ಪೂರ್ಣತೆಯಿದೆ; ಪೂರ್ಣ ಮಾನವನನ್ನು ರೂಪಿಸುವುದು ಅವುಗಳ ಉದ್ದೇಶ."

**ಕವಿತೆಗಳು:**

ಕುವೆಂಪು ಅವರಿಗೆ ನಿಸರ್ಗವೆ ಪ್ರಥಮ ಗುರು ಎಂದು ಅವರನ್ನು ಮತ್ತು ಅವರ ಸಾಹಿತ್ಯವನ್ನು ಹತ್ತಿರದಿಂದ ಕಂಡವರು ಅರಿತಿದ್ದಾರೆ. ನಾಲ್ಕು ಗೋಡೆಗಳ ಮಧ್ಯೆ ಕೆಲವಾರು ಗಂಟೆಗಳ ಕಾಲ ಕಲಿಯಬಹುದಾದ ವಿದ್ಯೆ ಮಿತಸ್ವರೂಪದ್ದಾಗಿರುತ್ತದೆ. ಅನೇಕ ವೇಳೆ ಅದು ಪೂರ್ಣವಾಗಿ ಅರ್ಥವೂ ಆಗುವುದಿಲ್ಲ. ವಿದ್ಯಾರ್ಥಿಗಳು ಪ್ರಕೃತಿಯ ಸನ್ನಿಧಿಯಲ್ಲಿ ಕಲಿಯಬೇಕಾದದ್ದು ಅಪಾರವಾಗಿದೆ. ನಿಸರ್ಗದ ರಹಸ್ಯವನ್ನು ಬೇಧಿಸುವುದೇ ಜ್ಞಾನ ವಿಜ್ಞಾನಗಳ ಗುರಿಯಾಗಿದೆ.

'ನಟರಾಜ' ಎಂಬ ಕವಿತೆಯಲ್ಲಿ (ಕೊಳಲು) ವಿಶ್ವದ ಸೃಷ್ಟಿಯನ್ನೇ ಬಣ್ಣಿಸಿ ಕನ್ನಡ ಕವಿತೆಯ ಮೂಲಕ ಖಗೋಳ ವಿಜ್ಞಾನವನ್ನು ವಿವರಿಸಿದ್ದಾರೆ. ಅನೇಕ ವೈಜ್ಞಾನಿಕ ಪರಿಕಲ್ಪನೆಗಳನ್ನು ಇಲ್ಲಿ ಕಾಣಬಹುದಾಗಿದೆ. ಇದನ್ನು ಖಗೋಳ ವಿಜ್ಞಾನದ ಪದ್ಯವಾಗಿಯೂ ಪರಿಗಣಿಸಬಹುದು. ವಿದ್ಯಾರ್ಥಿಗಳಿಗೆ ಜಟಿಲವಾದ ವೈಜ್ಞಾನಿಕ ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ಪದ್ಯದ ಮೂಲಕ ತಿಳಿಯಪಡಿಸುವ ಸಾಧ್ಯತೆಯ ಬಗ್ಗೆ ಈ ಕವನ ಬೆಳಕು ಬೀರುತ್ತದೆ.

ಗಿರ್ರನೆ ತಿರುಗುವ ಬೆಂಕಿಯ ಮುದ್ದೆಯು
ಪುಡಿ ಪುಡಿಯಾಯಿತು ನೃತ್ಯದಲಿ

Digitised by Bharatavani, CIIL

.........................................................

ಭೂಮಿಯು ರವಿಯಿಂ ದೂರಕೆ ಹಾರಿ

ತಿರುಗಲು ತೊಡಗಿತು ಬೆರಗಾಗಿ

.........................................................

ಹುಟ್ಟಿದುವಾಗಲೆ ನದಿ ವನ ಖಗಮಿಗ

ಜನಿಸಿದನಾಗಲೆ ತೆರೆಯ ಬಸಿರಿನಲಿ

ನಿನ್ನನೆ ಹೋಲುವ ಮಾನವನು

'ಪಕ್ಷಿಕಾಶಿ' ಕವನ ಸಂಕಲನದ 'ಶರತ್ಕಾಲದ ಸೂರ್ಯೋದಯದಲ್ಲಿ' ಎಂಬ ಕವನದ ಕೆಳಗಿನ ಸಾಲುಗಳನ್ನು ಗಮನಿಸಬಹುದು.

.........................................................

ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ,

ನೀರಿನ ಹನಿಯಲಿ, ಬೆಂಕಿಯ ಕಿಡಿಯಲಿ,

ನನ್ನಲ್ಲಿ,– ಎಲ್ಲಿಯೂ ಚೈತನ್ಯ..

ಚೇತನ ಮೂರ್ತಿಯು ಆ ಕಲ್ಲು:–

ತೆಗೆ! ಜಡವೆಂಬುದೆ ಬರಿ ಸುಳ್ಳು!

ಹೀಗೆ ಜಡ ಚೇತನಗಳು ಸಮೀಪ ಸಂಬಂಧಿಗಳು, ಜಡವು ಚೇತನದ ಒಂದು ಮುಖ ಎನ್ನುವ ವೈಜ್ಞಾನಿಕ ತತ್ವವನ್ನು ಕವಿ ತಮ್ಮ ಹಲವಾರು ಕವನಗಳಲ್ಲಿ ಕಾಣಿಸಿದ್ದಾರೆ.

ಅನೇಕ ಕವನಗಳಲ್ಲಿ ಕುವೆಂಪು ಪ್ರಕೃತಿಯ ಚೆಲುವಿನ ಒಂದೊಂದು ಮುಖಗಳನ್ನು ಬಿಡಿಸಿಟ್ಟಿದ್ದಾರೆ. ಇವುಗಳಲ್ಲಿ ಅವರು ಪ್ರಕೃತಿಯನ್ನು ಸಖನೆಂದು, ಗುರುವೆಂದು, ಮಾತೆಯೆಂದು ಭಾವಿಸುತ್ತಾರೆ. ಪ್ರಕೃತಿಯನ್ನು ಆರಾಧಿಸಿ ಅದರ ಆನಂದವನ್ನು ಅನುಭವಿಸಲು ಹೇಳುತ್ತಾರೆ. 'ಮನ್ನಿಸಿ ನನ್ನಪರಾಧವನು' ಎನ್ನುವ ಕವನದಲ್ಲಿ (ನವಿಲು) ಪ್ರಕೃತಿಯಲ್ಲಿ ಕಾಣ ಬರುವ ತರು, ಮೃಗ ಪಕ್ಷಿಗಳನ್ನು ಕುರಿತು 'ಗೆಳೆಯನು, ಶಿಷ್ಯನು, ದಾಸನು ನಿಮಗೆ; ಗುರುಗಳು, ಪೂಜ್ಯರು, ನೀವೆನಗೆ; ಚಿರಋಣಿಯಾಗಿಹೆ ನಾ ನಿಮಗೆ' ಎಂದು ಹಾಡಿದ್ದಾರೆ.

ತವಸಿಗಳರಿಯದೆ, ಸಾಧಿಸಿ ಬಯಸುವ

.........................................................

ನಿಮಗಿದೋ ನಮಿಸುವೆ ಭಕ್ತಿಯಲಿ

ಈ ಕವನವೊಂದೆ ಸಾಕು ಕುವೆಂಪು ಪ್ರಕೃತಿಯನ್ನೇ ಹೇಗೆ ಮಾರ್ಗದರ್ಶನಕ್ಕೆ, ಗುರುತ್ವಕ್ಕೆ, ಶಾಂತಿಲಾಭಕ್ಕೆ, ಆನಂದಕ್ಕೆ, ಶಿವದರ್ಶನಕ್ಕೆ, ಶರಣು ಹೋಗಿದ್ದಾರೆ ಎನ್ನುವುದನ್ನು ತೋರಿಸಲು.

'ಕೃತ್ತಿಕೆ': ಈ ಕವನ ಸಂಕಲನದಲ್ಲಿಯ ಒಂದು ಪದ್ಯ "ಖಗೋಲ ವಿಜ್ಞಾನದ ಪ್ರಥಮ ಪರಿಚಯ". ಹನ್ನೆರಡು ಸಾಲುಗಳ ಈ ಒಂದು ಸುನೀತದಲ್ಲಿ ಖಗೋಲ ವಿಜ್ಞಾನವನ್ನು ತಾವು ಪರಿಚಯಿಸಿಕೊಳ್ಳುವುದರೊಂದಿಗೆ ಓದುಗರಿಗೂ ಕುವೆಂಪು ಪರಿಚಯಿಸುತ್ತಾರೆ.

ಭ್ರಮಿಸುತಿದೆ ಮತಿ; ಬೀಳುತಿದೆ ಕಲ್ಪನೆಯ ಪಕ್ಷಿ

ಹಾರಲಾರದೆ ಹಾರಿ ತತ್ತರಿಸಿ!

ಮೇಲಿನೆರಡು ಮೊದಲ ಸಾಲುಗಳಲ್ಲೇ ಖಗೋಲ ವಿಜ್ಞಾನದ ವ್ಯಾಪ್ತಿ ವಿಸ್ತಾರಗಳನ್ನು ಗ್ರಹಿಸುತ್ತಾರೆ. ನಕ್ಷತ್ರ, ನಿಹಾರಿಕೆ, ಬೆಳಕಿನ ವರ್ಷ ಇತ್ಯಾದಿ ವಿಚಾರಗಳನ್ನು ಖಗೋಳ ವಿಜ್ಞಾನ ಒಳಗೊಂಡಿದೆ ಎಂಬುದನ್ನು ಹೀಗೆ ಬಣ್ಣಿಸುತ್ತಾರೆ.

ನಕ್ಷತ್ರ ನೀಹಾರಿಕಾಗ್ನಿ ತೀರ್ಥದ ಮಧ್ಯೆ

ಮಿಂದು ಉರಿಮೆಯ್ವಡೆದ ನೀನು

........................'ಬೆಳಕಿನ ವರ್ಷ'

ಕೋಟಿ ಕೋಟಿಯನಲೆದು, ಕಾಲದೇಶಾನಂತ

ವಿಶ್ವದೊಳಿಳಿದು, ಮಾನುಷತೆಗಾಗಿದೆ ಬ್ರಹ್ಮತಾ ಸ್ಪರ್ಶ!

ಕೇವಲ ನಾನು, ನನ್ನೂರು, ನಾಡು, ಸಂಸ್ಕೃತಿ, ಒಲುಮೆ ಇತ್ಯಾದಿ ಸೀಮಿತ ಅನುಭವಗಳಲ್ಲಿಯೇ ಮುಳುಗಿರುವ ಮಾನವನಿಗೆ ಈ ವಿದ್ಯೆ ಮದ್ದಾಗಿ ಬ್ರಹ್ಮಾಂಡದ ಮಾನಸಿಕ ಸ್ಪರ್ಶವನ್ನು ನೀಡುತ್ತಿದೆ. ಬಾವಿಯ ಕಪ್ಪೆಯಾಗಿದ್ದು ಬಹು ಹೆಮ್ಮೆ ಪಡುತ್ತಿದ್ದ ತಮ್ಮನ್ನು ಒಮ್ಮೆಗೇ ಸಮುದ್ರಕ್ಕೆ ಬೀಸಿದಂತಿದೆ ಈ ಖಗೋಲ ವಿಜ್ಞಾನ ಎಂದು ತಿಳಿಸುತ್ತಾರೆ.

ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಸತ್ಯಾಗ್ರಹದ ಸಮರದಲ್ಲಿ ನಿರ್ಭೀತರಾಗಿ ನುಗ್ಗಿ ಜಯವನ್ನು ಸಾಧಿಸಬೇಕೆಂದು ಕುವೆಂಪು 'ಪಾಂಚಜನ್ಯ' ಎಂಬ ಹೆಸರಿನ ಕವನದಲ್ಲಿ ನಾಡಿನ ಯುವ ಶಕ್ತಿಗೆ ಕರೆ ಕೊಟ್ಟಿದ್ದಾರೆ. ಕುವೆಂಪು ಅವರು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳದಿದ್ದರೂ ಕವಿಯಾಗಿ ತಮ್ಮ ಕವನ ಖಡ್ಗದಿಂದ ನೂರಾರು ಕವನಗಳನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ತುಂಬುವಂತೆ, ಕೆಚ್ಚು ಮೂಡುವಂತೆ ರಚಿಸಿ ಅವರನ್ನು ಹುರಿದುಂಬಿಸಿದ್ದಾರೆ. ಇಂತಹ ಕವನಗಳನ್ನು ರಚಿಸುತ್ತಿರುವುದಕ್ಕಾಗಿ ಅಂದಿನ ಪ್ರಭುತ್ವ ಕುವೆಂಪು ಅವರಿಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾಗ್ಯೂ ಅವರು ಅದನ್ನು ಲಕ್ಷಿಸದೆ ಅನೇಕ ಸಮರ ಗೀತೆಗಳನ್ನು ರಚಿಸಿದ್ದಾರೆ. ಸ್ವಾತಂತ್ರ್ಯ ಬಂದ ಅನೇಕ ದಶಕಗಳ ಬಳಿಕ ಈ ದೇಶದಲ್ಲಿ ಜನಿಸಿರುವ ಮಕ್ಕಳಿಗೆ ಸ್ವಾತಂತ್ರ್ಯ ಸಮರದ ಇತಿಹಾಸವನ್ನು ಶಿಕ್ಷಣದ ಮೂಲಕ ತಿಳಿಸುವುದರ ಅಗತ್ಯವನ್ನು ರಾಷ್ಟ್ರೀಯ ಶಿಕ್ಷಣ ನೀತಿಯೇ ತಿಳಿಸುತ್ತದೆ. ಆ ಹಿನ್ನೆಲೆಯಲ್ಲಿ ಕುವೆಂಪು ಅವರ ಕ್ರಾಂತಿಗೀತೆಗಳು ಇಂದಿಗೂ ಪ್ರಸ್ತುತವಾಗಿದೆ.

Digitised by Bharatavani, CIIL

'ಪಾಂಚಜನ್ಯ' ಎಂಬ ಹೆಸರಿನ ಕವಿತೆಯಲ್ಲಿಯೇ ನಡೆ ಮುಂದೆ, ನಡೆ ಮುಂದೆ ನುಗ್ಗಿ ನಡೆ ಮುಂದೆ! ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ, ನಡೆ ಮುಂದೆ ಎಂದು ಹೇಳುತ್ತಾ ಭಾರತಾಂಬೆಯ ಹಿತವೇ ನನ್ನ ಹಿತ ಎಂದು ಮುನ್ನುಗ್ಗಲು ಕರೆ ನೀಡುತ್ತಾರೆ.

ಭರತ ಖಂಡದ ಹಿತವೆ ನನ್ನ ಹಿತ ಎಂದು

ಭರತಮಾತೆಯ ಮತವೆ ನನ್ನ ಮತ ಎಂದು

ಭಾರತಾಂಬೆಯ ಮುಕ್ತಿ ಮುಕ್ತಿ ನನಗೆಂದು

ನುಗ್ಗು ಮುಂದಕೆ ಧೀರ ಕಾಳಗದ ಕೊನೆಗೆ

ನುಗ್ಗು ಮರಣಕೆ, ವೀರ, ಸಗ್ಗದಾ ನೆಲೆಗೆ.

ಎಷ್ಟು ದೇವರ ನೀನೆಷ್ಟು ನಂಬಿದರೇನೊಂ

ದಿಷ್ಟು ನೀ ನಂಬದಿರೆ ನಿನ್ನ ನೀನು?

'ತರುಣರಿರ ಎದ್ದೇಳಿ!'(ಕೋಗಿಲೆ ಮತ್ತು ಸೋವಿಯತ್ ರಷ್ಯಾ) ಎಂಬ ಕವನ. ಇದು ಭಾರತಕ್ಕೆ ಸ್ವಾತಂತ್ರ್ಯ ದೊರಕುವುದು ಇನ್ನು ಹೆಚ್ಚು ತಡವಾಗಲಾರದು ಎಂಬ ಕಾಲಘಟ್ಟದಲ್ಲಿ ಇಲ್ಲಿಯ ತರುಣರನ್ನು ಎಚ್ಚರಿಸುವಂತೆ ಹೊಸಬಾಳಿಗೆ ಅಣಿಯಾಗುವಂತೆ ಕರೆ ನೀಡಿದೆ. ಇದರಲ್ಲಿ ಹೊಸ ಬಾಳಿಗೆ ಅಣಿಯಾಗುವುದೆಂದರೆ ಹೊಸದಾದ ಮತಿಯನ್ನು, ವಿಜ್ಞಾನ ಬುದ್ಧಿಯನ್ನು ಬೆಳೆಸಿಕೊಳ್ಳುವುದು. ಈ ಕವನ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಗಿದ್ದರೂ ಇಂದಿಗೂ ಪ್ರಸ್ತುತವಾಗಿದೆ. ವಿಜ್ಞಾನಬುದ್ಧಿ, ವೈಜ್ಞಾನಿಕ ಮನೋಭಾವನೆಗಳು ಇಂದಿಗೂ ನಮ್ಮ ತರುಣರಲ್ಲಿ ಶೈಶವಾವಸ್ಥೆಯಲ್ಲಿ ಇರುವುದನ್ನು ಈಗಲೂ ನೋಡುತ್ತಿದ್ದೇವೆ. ಹಾಗಾಗಿ ತರುಣರಿಗೆ, ವಿದ್ಯಾರ್ಥಿಗಳೂ ಸೇರಿದಂತೆ, ಕುವೆಂಪು ಅವರು ನೀಡಿರುವ ಈ ಕರೆ ಇಂದಿಗೂ ಮನನೀಯ:

ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ

ಕೊಚ್ಚಿ ಹೋಗಲಿ! ಬರಲಿ ವಿಜ್ಞಾನ ಬುದ್ಧಿ

ಕವಿ ಯುವ ಜನತೆಯನ್ನು ತಮ್ಮ ಕ್ರಾಂತಿಕಹಳೆಯ ನಾದದಿಂದ ಮನುಜ ಮತಕ್ಕೆ ಸೇರುವಂತೆ ವಿಶ್ವಪಥದಲ್ಲಿ ನಡೆಯುವಂತೆ ಕರೆ ನೀಡಿದ್ದಾರೆ.

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ

ಮತಿಯಿಂದ ದುಡಿಯಿರೈ ಲೋಕಹಿತಕೆ

ಆ ಮತದ ಈ ಮತದ ಹಳೆಮತದ ಸಹವಾಸ

ಸಾಕಿನ್ನು ಸೇರಿರೈ ಮನುಜಮತಕೆ

ಓ ಬನ್ನಿ ಸೋದರರೆ, ವಿಶ್ವಪಥಕೆ!

(ಓ ಬನ್ನಿ ಸೋದರರೆ ಬೇಗ ಬನ್ನಿ- ಕೋಗಿಲೆ ಮತ್ತು ಸೋವಿಯತ್ ರಷ್ಯಾ)

'ತೇನವಿನಾ' (ಅಗ್ನಿಹಂಸ)ಎಂಬ ಕವನವು ಒಂದು ಪ್ರಾರ್ಥನಾ ಪದ್ಯ. ಇದರಲ್ಲಿ ಆ ಭಗವಂತನ ಅನುಗ್ರಹದ ಹೊರತಾಗಿ ಏನೊಂದು ನಡೆಯದು. ಒಂದು ಹುಲ್ಲು ಕಡ್ಡಿಯೂ ಚಲಿಸುವುದಿಲ್ಲ ಎನ್ನುವುದು ಉಪನಿಷತ್ತಿನ ಮಾತು. ಭಗವಂತನು ಸರ್ವಶಕ್ತ, ಸರ್ವವ್ಯಾಪಿ, ಸರ್ವಾಂತರ್ಯಾಮಿ, ಸರ್ವಜ್ಞ ಹಾಗೂ ಸಚ್ಚಿದಾನಂದ ಸ್ವರೂಪನಾದವನು. ಅವನಿರುವಾಗ ನಮಗೆ ಭಯವೇಕೆ? ನಾವು ಅವನಲ್ಲಿ ಶ್ರದ್ಧೆಯನ್ನಿಡಬೇಕು ಎಂದು ಕವಿ ಬೋಧಿಸಿದ್ದಾರೆ. ಮಕ್ಕಳಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಇಂತಹ ಕವನಗಳ ಕಲಿಕೆ ಅವಶ್ಯಕವಾಗುತ್ತದೆ.

ನೀನಿದನು ಎಂದು ಕಲಿಯುವೆ,

..............................................

ತರ್ಕಕ್ಕಿಂತಲು ಬಾಳು ಹಿರಿಯದೆಂದು;

ಜ್ಞಾನವಜ್ಞಾನವನು ಅಳೆಯುವ ಅಳತೆಯೆಂದು

..............................................

ಅನುಭವವೆ ಆತ್ಮಕ್ಕೆ ಸಾಕ್ಷಿ ಎಂದು!

ಶಿವಶಿವಾ, ಇಲ್ಲದುದನರಸಿ ಇರುವುದನು ತೊರೆದು

ಮೋಸ ಹೋಗುತಲಿಹನು : (ಕುಟೀಚಕ)

ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಕಲಿಸಬೇಕಾದುದು ತರ್ಕಕ್ಕಿಂತಲು ಬಾಳು ದೊಡ್ಡದು, ಜ್ಞಾನವೆಂಬುದು ನಮ್ಮ ಅಜ್ಞಾನವನ್ನು ಅಳೆಯುವ ಮಾನವಷ್ಟೆ. ಅನುಭವ ಎಂಬುದು ಎಣೆ ಇಲ್ಲದಿರುವುದು. ಅನುಭವವೇ ಆತ್ಮಕ್ಕೆ ಸಾಕ್ಷಿ. ಯಾವಾಗಲೂ ಇರುವುದರಲ್ಲಿ ತೃಪ್ತಿ, ಆನಂದಗಳನ್ನು ಕಾಣಬೇಕೆ ಹೊರತು ಇಲ್ಲದಿರುವುದನ್ನು ಅರಸಿ ಹೋಗುವುದಲ್ಲ. ಇದನ್ನು ಮೇಲಿನ ಪದ್ಯ ಸ್ಪಷ್ಟಪಡಿಸುತ್ತದೆ.

ಕುವೆಂಪು ಅವರ ನಾಡು, ನುಡಿ ಕುರಿತಾದ ಗೀತೆಗಳು ಒಂದೊಂದೂ ವಿದ್ಯಾರ್ಥಿಗಳಲ್ಲಿ ನಾಡು-ನುಡಿಗಳ ಬಗ್ಗೆ ಪ್ರೇಮ, ಭಕ್ತಿ, ಗೌರವಗಳನ್ನು ಬಿತ್ತುತ್ತವೆ. ಹಾಗೂ ಬೆಳೆಸುತ್ತವೆ. ಪ್ರಸ್ತುತ ಸಂದರ್ಭದಲ್ಲಿ ಇಂಗ್ಲಿಷಿನ ವಿಪರೀತ ಬಳಕೆಯಿಂದಾಗಿ, ನಮ್ಮ ವಿದ್ಯಾರ್ಥಿಗಳಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಅಸ್ಥೆ, ಒಲವುಗಳು ಗಣನೀಯವಾಗಿ ಕುಸಿದಿರುವುದನ್ನು ಕಾಣುತ್ತೇವೆ. ಇದು ಕೊನೆಗೆ ಕನ್ನಡ ಸಂಸ್ಕೃತಿಯನ್ನೇ ಬಡವಾಗಿಸುತ್ತದೆ. ಆದುದರಿಂದ ಅವರ ಈ ಕವನಗಳನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸಬೇಕಾಗುತ್ತದೆ. ಏಕೆಂದರೆ ಕುವೆಂಪು ಅವರ ಗೀತೆಗಳ ಶೈಕ್ಷಣಿಕ ಮೌಲ್ಯ ಅಪಾರವಾದುದಾಗಿದೆ.

ಕುವೆಂಪು ಅವರು 'ವಿದ್ಯೆ' ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೈವತ್ವಕ್ಕೆ ಎತ್ತುವ ಒಂದು ಸಾಧನ ಮತ್ತು ವಿಧಾನ ಎಂದು ಗಾಢವಾಗಿ ನಂಬಿದ್ದರು. ಹಾಗಾಗಿ ಅವರ ಇತರ ಸಾಹಿತ್ಯ ಪ್ರಕಾರಗಳಂತೆ ನಾಟಕ ಸಾಹಿತ್ಯದಲ್ಲಿಯೂ ವಿದ್ಯೆಯನ್ನು ಕುರಿತು ನಿರಂತರವಾಗಿ ಚಿಂತಿಸಿದ್ದಾರೆ. ಉದಾ:

Digitised by Bharatavani, CIIL

'ಬೆರಳ್ ಗೆ ಕೊರಳ್' ನಾಟಕದಲ್ಲಿ ಕುವೆಂಪು ಅವರು ಗುರು, ಕರ್ಮ ಮತ್ತು ಯಜ್ಞ ತತ್ವಗಳನ್ನು ಪ್ರತಿಪಾದಿಸಿ, ಅದಕ್ಕೆ ಅನುಗುಣವಾಗಿ ದೃಶ್ಯಗಳನ್ನು ವಿಂಗಡಿಸಿದ್ದಾರೆ. ಮಹಾಭಾರತದಲ್ಲಿ ಬರುವ ಏಕಲವ್ಯನ ವೃತ್ತಾಂತವನ್ನು ಆಧರಿಸಿ ಬರೆದ ನಾಟಕ ಇದು.

"ಗುರುಕೃಪೆಯಿಂದ ನನಗೆ ಆ ವಿದ್ಯೆ(ಶಬ್ದವೇಧಿ) ಕರತಲಾಮಕವಾಗಿದೆ. ಹುಲಿಯೋ? ಸಿಂಹವೊ? ಹಾವೊ? ಆನೆಯೊ? ... ಹೆದೆಯೇರಿಸಿ ಬಿಲ್ಲಿಗೆ ಬಾಣವನ್ನು ಹೂಡಿ ಗುರುದೇವನನ್ನು ನೆನೆದು ಬಿಟ್ಟೆನೆಂದರೆ ನಾನಿಟ್ಟ ಗುರಿ ಎಂದಿಗೂ ತಪ್ಪದು" ಎನ್ನುತ್ತಾನೆ ಏಕಲವ್ಯ. ಈ ಮಾತುಗಳಲ್ಲಿ ಇವನ ಸಾಧನೆ ಸಿದ್ಧಿಯ ಹಂತವನ್ನು ತಲುಪಿದ ಸಂಗತಿ ನಮಗೆ ಮನವರಿಕೆಯಾಗುತ್ತದೆ. ಇದು ಆತ್ಮಪ್ರಶಂಸೆಯ ಮಾತಲ್ಲ. ಗುರುಕೃಪೆ ಮತ್ತು ಸಾಧನೆ ಇವುಗಳೆರಡರ ಪರಿಣಾಮ ಫಲವಿದು. ಏಕಲವ್ಯ ವಿದ್ಯಾರ್ಜನೆಗಾಗಿ ದ್ರೋಣಾಚಾರ್ಯರಲ್ಲಿಗೆ ಹೋದಾಗ ಅವರು ಇವನು ಶೂದ್ರನೆಂದು ತಿಳಿದಾಗ್ಯೂ ಇವನಲ್ಲಿ ವಿದ್ಯಾರ್ಜನೆಗಾಗಿ ಇರುವ ಹಂಬಲವನ್ನು ಮನಗಂಡು ವಿದ್ಯೆ ಕಲಿಸಲು ಮುಂದಾಗುತ್ತಾರೆ. ಆದರೆ ಅರಸು ಮಕ್ಕಳ ಅಸೂಯೆ ಅಡ್ಡಬರುತ್ತದೆ. ಅದರಲ್ಲೂ ಪಾಂಡವನಾದ ಅರ್ಜುನನು ಏಕಲವ್ಯನ ಬಿಲ್ವಿದ್ಯೆಯ ಏಳಿಗೆಯನ್ನು ಕಂಡು ಕರುಬಿ, ಅಸೂಯಾಪರನಾಗಿ "ಶೂದ್ರನೊಡನೆ ನಮಗೆ ಸಹಚರ್ಯೆ ಸಲ್ಲದು" ಎಂದು ನುಡಿಯುತ್ತಾನೆ. ಗುರುಗಳ ಉಪದೇಶವನ್ನು ಕಡೆಗಣಿಸಿ ಏಕಲವ್ಯನನ್ನು ಹೊರಗಟ್ಟುತ್ತಾರೆ. ಮುಂದೆ ದ್ರೋಣರ ಕರುಣೆಯಿಂದಾಗಿ ತನ್ನ ವಿದ್ಯೆ ಹೇಗೆ ಮುಂದುವರೆಯಿತೆಂಬುದನ್ನು ಏಕಲವ್ಯ ಹೀಗೆ ತಿಳಿಸುತ್ತಾನೆ.

'ಕಣ್ಣೀರು ತುಂಬಿದ ನನ್ನನ್ನು ನೋಡಿ ಕರುಣಿಸಿ ಗುರು, ಕೈಹಿಡಿದು ತಲೆದಡವಿ ಸಮಾಧಾನಿಸಿ, 'ಏಕಲವ್ಯ, ಸಂಕಟಪಡಬೇಡ, ನೀನು ನಮ್ಮ ಮನೆಯಲ್ಲಿ ಆಳಾಗಿರು. ಈ ಗರುಡಿಗೆ ನನ್ನ ಸೇವೆಗೋಸ್ಕರವಾಗಿ ಬರುತ್ತಿರು; ಕಲಿಯುವಷ್ಟನ್ನು. ದೂರದಿಂದ ಕಂಡು ಕಲಿ. ಮತ್ತೆ ಉಳಿದದ್ದನ್ನು, ಮನೆಯಲ್ಲಿಯೇ ಅಶ್ವತ್ಥಾಮನ ಜೊತೆಯಲ್ಲಿ ಕಲಿಸುತ್ತೇನೆ' ಎಂದು ಗುರು ಆಶೀರ್ವದಿಸಿದನು. ಬಿಲ್ವಿದ್ಯೆಯ ಜೊತೆಗೆ ಸಂಸ್ಕೃತವನ್ನು ಕಲಿಸಿದನು'.

ಈ ಮೇಲಿನ ಮಾತುಗಳಲ್ಲಿ ಕುವೆಂಪು ಅವರು ಗುರು ಮತ್ತು ಶಿಷ್ಯರಿಬ್ಬರಲ್ಲೂ ಕಲಿಸುವ ಮನಸ್ಸು ಮತ್ತು ಕಲಿಯುವ ಹಂಬಲ ಹೇಗಿರಬೇಕೆಂಬುದನ್ನು ಅತ್ಯಂತ ನಿಚ್ಚಳವಾಗಿ ಬಣ್ಣಿಸುತ್ತಾರೆ. 'ಗುರು ಕೃಪೆಯಿಂದ ಮತ್ತು ತನ್ನ ಗುರುಭಕ್ತಿಯಿಂದ ಶಬ್ದವೇಧಿ ವಿದ್ಯೆಯೊಂದೆಯಲ್ಲ ನಿಖಿಲ ಅಸ್ತ್ರ ವಿದ್ಯೆಗಳು ನನಗೆ ಕೈಸೇರಿವೆ' ಎನ್ನುತ್ತಾನೆ. ಇಲ್ಲಿ ಒಬ್ಬ ವಿದ್ಯಾರ್ಥಿಯಾದವನು ಹೇಗೆ ತನ್ನ ಸಮಸ್ತ ಸಾಧನೆಗೆ ಗುರುಕೃಪೆಯೇ ಕಾರಣ ಎಂಬುದನ್ನು ಮನಗಂಡು ಅದನ್ನೇ ಮುಂದುಮಾಡಬೇಕೇ ಹೊರತು ಸ್ವಾರ್ಥ-ಅಹಂಕಾರಗಳಿಂದ ತನ್ನ ಹೆಸರನ್ನೇ ಮುಂದುಮಾಡಬಾರದು ಎನ್ನುವಾಗ ನಾಟಕಕಾರರು ಶಿಷ್ಯನ ಲಕ್ಷಣವಾದರೂ ಹೇಗಿರಬೇಕೆಂಬುದನ್ನು ಸೂಚ್ಯವಾಗಿ ತಿಳಿಸುತ್ತಾರೆ.

**ಗುರುತತ್ವ:**

ದ್ರೋಣಾಚಾರ್ಯರು ನಿಜವಾದ ಅರ್ಥದಲ್ಲಿ ಗುರು. ಅವರು ವಿದ್ಯೆಯಲ್ಲಿ ಮಾತ್ರ ಗುರುವಲ್ಲ. ವಿದ್ಯೆ, ವಿನಯ, ಔದಾರ್ಯ, ಕ್ಷೇಮ, ಕ್ಷಮೆ– ಈ ಮುಂತಾದ ಕಲ್ಯಾಣಗುಣಗಳಿಂದಾಗಿಯೂ ಅವರು ಗುರುಸ್ಥಾನವನ್ನು ಅಲಂಕರಿಸಿದ್ದಾರೆ. ಇಂತಹವರು ಗುರುವಾಗಿ ದೊರೆತದ್ದು ಏಕಲವ್ಯನ ಪುಣ್ಯ. ಅವನನ್ನು ಅವರು ತಮ್ಮ ಮನೆಯಲ್ಲಿಯೇ ಇರಿಸಿಕೊಂಡು ಧನುರ್ವೇದವನ್ನು ಮಗನ ಜೊತೆಯಲ್ಲಿಯೇ ಕಲಿಸಿದರು. ಗರಡಿಯಲ್ಲಿ ಬಂದು ದೂರದಲ್ಲಿ ನಿಂತು ಕಲಿಯಬೇಕಾದ್ದನ್ನು ನೋಡಿ ತಿಳಿ ಎಂದರು. ಗುರುಶಿಷ್ಯರು ಪರಸ್ಪರ ಪೂರಕರು. ಶಿಷ್ಯನು ಹಾಗೆ ಭಕ್ತಿಯಿಂದ, ಶ್ರದ್ಧೆಯಿಂದ, ಗುರುಸೇವೆ ಮಾಡಬೇಕು. ಗುರು ಹೇಳಿಕೊಟ್ಟದ್ದನ್ನು ನಿಷ್ಠಾಭಕ್ತಿಗಳಿಂದ ಕಲಿಯಬೇಕು. ಗುರುವಿನಲ್ಲಿ ಶಿಷ್ಯನು ಪರಿಪೂರ್ಣವಾದ ಜಗದ್ಗುರುವನ್ನೇ ಕಾಣುತ್ತಾನೆ. ಶಿಷ್ಯನ ಶ್ರದ್ಧೆಯೇ ಇಲ್ಲಿ ಮುಖ್ಯವಾದದ್ದು. ಶಿಷ್ಯನ ಶ್ರದ್ಧೆ ಹೆಚ್ಚಿದಂತೆ ಅವನ ಅವಿದ್ಯೆ ಮಾಯವಾಗಿ ಅವನು ಗುರುವಿನಲ್ಲಿ ಪರಮಾತ್ಮನನ್ನೇ ಕಾಣುತ್ತಾನೆ. ಗುರುವು ಪ್ರಸನ್ನನಾದರೆ ಶಿಷ್ಯನನ್ನು ಪ್ರಕೃತಿಯ ಚೇತನಾಚೇತನಾತ್ಮಕವಾದ ನಾನಾ ಶಕ್ತಿಗಳಲ್ಲಿ ಕರುಣಿಸಬಹುದು. ಗುರುವನ್ನು ಎಲ್ಲಿ, ಯಾವ ರೀತಿಯಲ್ಲಿ, ಹೇಗೆ ಶಿಷ್ಯನು ಪೂಜಿಸಿದರೂ ಅದು ಆ ಗುರುವಿಗೆ ಅರ್ಪಿತವಾಗುತ್ತದೆ. ಗುರುವು ತನ್ನ ಸರ್ವ ವಿದ್ಯೆಯನ್ನೂ ಅನುಗ್ರಹಿಸುತ್ತಾನೆ. ಇಂತಹ ತತ್ವಗಳೆಲ್ಲಾ ಈ ಶಿಷ್ಯನಲ್ಲಿ ಮೈಗೂಡಿ ಬಂದಿವೆ. ಏಕಲವ್ಯನ ಪ್ರಕೃತಿ ಪ್ರೇಮ ಅವನ ವನ್ಯಜೀವಿ ಪ್ರೇಮ, ಅವನ ಮಾತೃಪ್ರೇಮ, ಅವನ ಸುಸಂಸ್ಕೃತ ಚೇತನ ಇವೆಲ್ಲ ಇಲ್ಲಿ ಸ್ಪಷ್ಟವಾಗಿ ಒಡಮೂಡಿವೆ. ಇಲ್ಲಿ ಬರುವ ಪ್ರಕೃತಿ ಕೂಡ ಗುರು ಶಿಷ್ಯರಿಬ್ಬರ ಪ್ರೀತ್ಯಾದರಗಳನ್ನು ಸಾರತಕ್ಕದ್ದಾಗಿದೆ. ಭಾರತೀಯ ಸಾಹಿತ್ಯದಲ್ಲಿ ಗುರುವಿನ ಮಹಿಮೆಯನ್ನು ಅತ್ಯದ್ಭುತವಾಗಿ ಸಾರಲಾಗಿದೆ. ಅಂತಹ ಗುರುವಿನ ಒಂದು ಸುಂದರ ವ್ಯಕ್ತಿ ವಿಶೇಷ ಈ ನಾಟಕದ ಮೊದಲ ದೃಶ್ಯದಲ್ಲಿ ನಮಗೆ ದೊರೆಯುತ್ತದೆ.

ಈ ಮೇಲಿನ ಮಾತುಗಳಲ್ಲಿ ಕುವೆಂಪು ಅವರು ಗುರು ಮತ್ತು ಶಿಷ್ಯರಿಬ್ಬರಲ್ಲೂ ಕಲಿಸುವ ಮನಸ್ಸು ಮತ್ತು ಕಲಿಯುವ ಹಂಬಲ ಹೇಗಿರಬೇಕೆಂಬುದನ್ನು ಅತ್ಯಂತ ನಿಚ್ಚಳವಾಗಿ ಬಣ್ಣಿಸುತ್ತಾರೆ

ಬಿಂಕಕ್ಕೆ ಡೊಳ್ಳೀವುದದು ವಿದ್ಯೆಯೆ? ಅವಿದ್ಯೆ!

ತವಿಪುದಾವುದು ಅಹಂಕಾರಮಂ ಅದು ವಿದ್ಯೆ;

ಮಿಕ್ಕುದೆಲ್ಲಂ ಅವಿದ್ಯೆ!

ಬಹುಶಃ ದ್ರೋಣ ಹೇಳಿಕೊಂಡ ಈ ಮಾತು ನಮ್ಮ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಪೋಷಿಸುತ್ತಿರುವ ಅಧ್ಯಾಪಕರೂ ಹೇಳಿಕೊಳ್ಳಬಹುದಲ್ಲವೇ? ವಿದ್ಯೆಯು ಸರ್ವ ಜೀವಾತ್ಮರಲ್ಲಿಯೂ ದಯೆ, ಕರುಣೆ ಹೊಂದುವ ಗುಣವನ್ನು ವಿದ್ಯಾರ್ಥಿಗಳಲ್ಲಿ ರೂಢಿಸಬೇಕು. ವಿನಾಕಾರಣ ಪ್ರಾಣಿ ಹಿಂಸೆ, ಸಸ್ಯ ಹಿಂಸೆ ಅದರಿಂದಾಗಿ ಪರಿಸರ ನಾಶ. ಇದರಿಂದಾಗಿ ಇಂದು ನಾವು ಏನೆಲ್ಲ ಸಂಕಷ್ಟಗಳಿಗೆ ಈಡಾಗಿದ್ದೇವೆ ಎಂಬುದರ ಹಿನ್ನೆಲೆಯಲ್ಲಿ

Digitised by Bharatavani, CIIL

ಏಕಲವ್ಯನ ಮೂಲಕ ಕುವೆಂಪು ಅವರು ತಿಳಿಸುವ ಈ ಎಚ್ಚರಿಕೆ ಸಹಿತವಾದ ಸಂದೇಶವನ್ನು ಮನಗಾಣಬೇಕಿದೆ . ವಿದ್ಯೆ, ಗುರು ಮತ್ತು ಶಿಷ್ಯರ ನಡುವೆಯೆ ಸಾಗುವ ಈ ನಾಟಕ ಕುವೆಂಪು ಅವರ ಸಮಸ್ತ ಸಾಹಿತ್ಯ ಸೃಷ್ಠಿಯಲ್ಲಿಯೇ ಅತ್ಯಂತ ಹೆಚ್ಚು ಶೈಕ್ಷಣಿಕ ಮೌಲ್ಯಾಂಶಗಳನ್ನು ಒಳಗೊಂಡಿರುವುದನ್ನು ಕಾಣುತ್ತೇವೆ. ಹಾಗೂ ಈ ಎಲ್ಲ ಮೌಲ್ಯಾಂಶಗಳೂ ಪ್ರಸ್ತುತ ಶಿಕ್ಷಣ ವ್ಯವಸ್ಥೆಗೂ ದಾರಿದೀಪವಾಗಬಲ್ಲದೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಶಿಕ್ಷಣದ ಬಗ್ಗೆ ಬೆಳಕು ಚೆಲ್ಲುವ ಕೆಲವು ಅಂಶಗಳಿವೆ:

ಕುವೆಂಪು ಕೇವಲ ಕವಿಯಲ್ಲ, ರಾಷ್ಟ್ರಕವಿಯಲ್ಲ. ಅವರು ಮನುಕುಲದ ಸಾರೋದ್ಧಾರಕ್ಕಾಗಿ ತಮ್ಮ ಪಂಚಮಂತ್ರ, ಸಪ್ತಸೂತ್ರ ಹಾಗೂ ಅನಿಕೇತನ ಗೀತೆಯೊಂದಿಗೆ ವಿಶ್ವಮಾನವ ಸಂದೇಶವನ್ನು ಸಾರಿದ ವಿಶ್ವಮಾನವಕವಿ. ಇವು ಅವರ ಸಾಹಿತ್ಯ ಬದುಕಿನ ಒಟ್ಟು ಸಾರವೇ ಆಗಿದ್ದು ಅವರ ಕೃತಿರಾಶಿಯಲ್ಲಿ ಮೇಲಿಂದ ಮೇಲೆ ಪ್ರಕಟಗೊಳ್ಳುತ್ತವೆ. ಕುವೆಂಪು ತಮ್ಮ ವಿಶ್ವಮಾನವ ಸಂದೇಶದಲ್ಲಿ ಮತ 'ಮನುಜಮತ'ವಾಗಬೇಕು; ಪಥ 'ವಿಶ್ವಪಥ'ವಾಗಬೇಕು; ಮನುಷ್ಯ 'ವಿಶ್ವಮಾನವ'ನಾಗಬೇಕು ಎಂದು ಹೇಳಿದ್ದಾರೆ (ಸಪ್ತಸೂತ್ರ 5). ಕುವೆಂಪು ತಮ್ಮ ಸಂದೇಶವನ್ನು ಸಂಪೂರ್ಣವಾಗಿ ಅವರ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಅವರು ಪ್ರತಿಯೊಬ್ಬನಲ್ಲಿಯೂ ವಿಶ್ವಮಾನವನನ್ನು ಕಾಣುವ ಪ್ರಯತ್ನ ಮಾಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ ಈ ಸಾಲುಗಳನ್ನು ಗಮನಿಸಬಹುದು:

'ಮಳೆ ತೊಯ್ದ ಮಲೆನಾಡಿನ ಮೇಲೆ ಮೂಡಿದೆಳಬಿಸಿಲಿಗೆ ಮೈಯೊಡ್ಡಿದ ಸುಬ್ಬಣ್ಣ ಹೆಗ್ಗಡೆಯವರಿಗೆ ಸಂಭವಿಸಿದ ಸಂತೋಷಕ್ಕೆ ಬಹುಮಟ್ಟಿಗೆ ಕಾರಣವಾಗಿತ್ತು ಅ 'ಅಸ್ಮೃತಿ'. ಯಾವ ಯಾವ ಕಾಲದಲ್ಲಿ, ಯಾವ ಯಾವ ದೇಶದಲ್ಲಿ, ಯಾವ ಯಾವ ರೂಪದಲ್ಲಿ, ಯಾವ ಯಾವ ಸನ್ನಿವೇಶದಲ್ಲಿ ಯಾವ ಸಾಗರತೀರದಲ್ಲಿ, ಯಾವ ಪರ್ವತ ಶಿಖರದಲ್ಲಿ, ಯಾವ ಅರಣ್ಯಕುಂಜ ಸೀಮೆಯಲ್ಲಿ ಅಂತಹ ಸೂರ್ಯೋದಯದ ಸೊಂಪನ್ನು ಅನುಭವಿಸಿದ್ದರೋ ಏನೋ? ಆ ಸಂಸ್ಕಾರ ಕೋಶದ ಖಜಾನೆಗೆ ಬೀಗದಕೈ ಮಾತ್ರವಾಗಿತ್ತು, ಆವೊತ್ತಿನ ಸೂರ್ಯೋದಯ! ಹಳೆಮನೆಯಾದರೇನಂತೆ? ಹಂದಿಯೊಡ್ಡಿಯಾದರೇನಂತೆ? ಅಕ್ಷರಹೀನ ಅಸಂಸ್ಕೃತ ಒಕ್ಕಲಿಗನಾದರೇನಂತೆ? ಮುಪ್ಪಡಸಿದ್ದರೇನಂತೇ? ಸುಬ್ಬಣ್ಣ ಹೆಗ್ಗಡೆಯೂ ವಿಶ್ವಪ್ರಜೆ!'. ಇದಕ್ಕೆ ಪೂರಕವಾಗಿ ಅವರ ಈ ಮಾತುಗಳನ್ನು ಗಮನಿಸಬಹುದು: ಪ್ರತಿಯೊಂದು ಮಗುವೂ ಹುಟ್ಟುತ್ತಲೇ– ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೆ ವಿದ್ಯೆಯ ಕರ್ತವ್ಯವಾಗಬೇಕು.

ಸಸ್ಯಸಂಕುಲ, ಪ್ರಾಣಿ–ಪಶು ಪಕ್ಷಿ ಸಂಕುಲ ಹಾಗೂ ಮಾನವ ಜೀವಿಗಳಿಂದ ಕೂಡಿದ ಈ ಪರಿಸರದಲ್ಲಿ ಸಮತೋಲನ ಅತ್ಯಗತ್ಯ. ಇದನ್ನು ಕಾಯ್ದುಕೊಳ್ಳುವ ಜವಾಬ್ದಾರಿ ಹೆಚ್ಚಾಗಿ ಮನುಷ್ಯನ ಮೇಲಿದೆ. ಅವನಲ್ಲಿ ಇತರೆ ಜೀವ ಸಂಕುಲದ ಬಗ್ಗೆ ಪ್ರೀತಿ, ದಯೆ, ಕರುಣೆ ಎಲ್ಲವೂ ಇರಬೇಕೆಂಬುದನ್ನು ಶಿಕ್ಷಣ ಹೇಳಿಕೊಡುತ್ತದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕುವೆಂಪು ಚಿತ್ರಿಸಿರುವ ಗುತ್ತಿ ಮತ್ತು ಅವನ ನಾಯಿ ಪಾತ್ರಗಳು ಇದಕ್ಕೆ ಪೂರಕವಾಗಿದೆ. ಗುತ್ತಿ ಮತ್ತು ಅವನ ನಾಯಿ ದಿನದ ಒಂದರಗಳಿಗೆಯೂ ಅಗಲಿರದ ಜೀವಿಗಳು. ಅಂತಹ ನಾಯಿಯನ್ನು ಒಂದುಸಲ ಅವನ ಒಡೆಯನ ಸಮಾನನಾದ ಮುಕುಂದಯ್ಯ ಅವನಲ್ಲಿಯೇ ಬಿಟ್ಟು ಹೋಗುವಂತೆ ಗುತ್ತಿಗೆ ಹೇಳುತ್ತಾನೆ. ಗುತ್ತಿಗೆ ಧರ್ಮಸಂಕಟ ಧಣಿಗಳ ಮಾತಿಗೆ ಎದುರಾಡದ ಗುತ್ತಿ ನಾಯಿ ಹುಲಿಯನನ್ನು ಬಿಟ್ಟು ಹೊರಟವನು ಹಿಂದಿರುಗಿ ಬಂದು... ಮಾತನಾಡದೆ ರೂಪಾಯಿಯೂ ಸೇರಿದಂತೆ ಮುಕುಂದಯ್ಯ ಕೊಟ್ಟ ಸಾಮಾನನ್ನೆಲ್ಲ ಇಟ್ಟು ಕೈ ಮುಗಿದುಬಿಟ್ಟು ಗುತ್ತಿ ಹೇಳುತ್ತಾನೆ ನನಗೆ ನಾಯಿಯನ್ನು ಕೊಡದಿದ್ದರೂ ಪರವಾಗಿಲ್ಲ ಅದನ್ನು ಮಾರಿಬಿಟ್ಟೆ ಎಂದು ನನ್ನ ಮನಸ್ಸಿಗೆ ಇಸ್ಸಿಯಾಗಬಾರದು, ಆದ್ದರಿಂದ ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ ಈ ಸಾಮಾನೆಲ್ಲ ಹಿಂದಕ್ಕೆ ತೆಗೆದುಕೊಳ್ಳಿ ಎಂದು ತಟಕ್ಕನೆ ಹಿಂದಿರುಗಿ ಅಲ್ಲಿ ನಿಲ್ಲದೆ ಹುಲಿಯನ ಹೂಳನ್ನು ಗೋಳನ್ನೂ ಇನಿತೂ ಗಮನಿಸದವನಂತೆ ನಡೆದುಬಿಟ್ಟನು. ತನ್ನ ಮುದ್ದಿನ ನಾಯಿಯ ವಿಷಯದ ಮಮತೆ ಪ್ರೀತಿ ತನ್ನ ಒಡೆಯರಲ್ಲಿದ್ದ ಭಕ್ತಿಗೌರವ ಇವೆರಡೂ ಇಲ್ಲಿ ಕಾಣುತ್ತವೆ. ಇದಕ್ಕೂ ಮಿಗಿಲಾಗಿ ಆಮಿಷಕ್ಕೆ ಒಳಗಾಗದೇ ಇರುವ ಮನೋಭಾವ ನಿಸ್ಪೃಹತೆ. ಇವನು ಹುಟ್ಟನಿಂದ ಹೊಲೆಯ ಅಷ್ಟೆ. ಇವನ ನಾಯಿ ಹುಟ್ಟನಿಂದ ನಾಯಿ ಅಷ್ಟೆ. ಆದರೆ ಇವರಿಬ್ಬರ ಪ್ರೇಮ ಯಾವ ಉನ್ನತ ಮಟ್ಟದ ವ್ಯಕ್ತಿಗಳಲ್ಲಿಯೂ ಕಾಣಲಾರದ ಅಮರಪ್ರೇಮ.

ಕುವೆಂಪು ಅವರ ಗದ್ಯ ಸಾಹಿತ್ಯದಲ್ಲಿ ಅವರ ವೈಚಾರಿಕ ಬರವಣಿಗೆಗಳನ್ನು ಮತ್ತು ಭಾಷಣಗಳನ್ನು ಗಮನಿಸಬಹುದಾಗಿದೆ. ಇವುಗಳಲ್ಲಿ ಶಿಕ್ಷಣ ಕುರಿತಾದ ಅವರ ವಿಚಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

**ವಿದ್ಯಾಭ್ಯಾಸ – ಅಂದು, ಇಂದು –(ಪ್ರಸಾರಾಂಗ)**

ಈ ಲೇಖನದ ಪ್ರಾರಂಭದಲ್ಲಿಯೇ ಕುವೆಂಪು ವಿದ್ಯೆಯ ಉದ್ದೇಶವೇನು? ಮಕ್ಕಳೇಕೆ ಓದಬೇಕು? ಎಂಬ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಾರೆ. ಇವುಗಳಿಗೆ ಎರಡು ಕಾರಣಗಳನ್ನು ನೀಡುತ್ತಾರೆ. ಅವುಗಳೆಂದರೆ ಒಂದು ಲೌಕಿಕೋದ್ದೇಶ. ಮತ್ತೊಂದು ಆಧ್ಯಾತ್ಮಿಕ ಉದ್ದೇಶ. ಲೌಕಿಕೋದ್ದೇಶವೆಂದರೆ ನಮ್ಮ ಹೊಟ್ಟೆ ಬಟ್ಟೆಗಳಿಗೆ ಸಂಪಾದನೆ ಮಾಡಿಕೊಂಡು ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬೇಕೆಂಬುದು. ಇದೇ ಬಹು ಜನರ ಆಶಯ, ಇದನ್ನೇನು ತಪ್ಪೆಂದು ಕುವೆಂಪು ಹೇಳುವುದಿಲ್ಲ. ಅವರು ಹೇಳುವುದು ಹೊಟ್ಟೆಗೆ ಬಟ್ಟೆಗೆ ಬೇಕು. ಆದರೆ ಅಷ್ಟೇ ಸಾಲದು. ಅನ್ನ ಬಟ್ಟೆಗಳನ್ನು ಸಂಪಾದಿಸುವುದು ಮಾತ್ರವೇ ವಿದ್ಯೆಯ ಗುರಿಯಲ್ಲ. ಇಂತಹ ವಿದ್ಯೆಯನ್ನು ಅವಿದ್ಯೆ ಎಂದು ಹೇಳಲಾಗುತ್ತದೆ. ಅನ್ನ ಬಟ್ಟೆಗಳಿಗಾಗಿಯೇ ಬದುಕುವುದು. ಅವುಗಳಿಂದಾಗಿಯೇ ಬದುಕುವುದು ಮನುಷ್ಯನ ಬದುಕಲ್ಲ. ಅದು ಮೃಗದ ಬದುಕು.

Digitised by Bharatavani, CIIL

ಜೊತೆಗೆ, ಭಗವಂತ ಮಾನವನಲ್ಲಿ ಒಂದು ಚೇತನವನ್ನಿಟ್ಟಿದ್ದಾನೆ, ಆತ್ಮವನ್ನಿಟ್ಟಿದ್ದಾನೆ. ಅದು ಭಗವಂತನ ಕಡೆ ಮುಂದುವರಿದಂತೆಲ್ಲ ಬುದ್ಧಿಶಕ್ತಿ, ಹೃದಯಶಕ್ತಿ, ಅಥವಾ ಭಾವಶಕ್ತಿ ವಿಕಾಸವಾಗುತ್ತಾ ಹೋಗುತ್ತದೆ. ಇದು ವಿದ್ಯೆಯಿಂದ ಅತ್ಯಗತ್ಯವಾಗಿ ನಡೆಯಬೇಕು. ನಮ್ಮ ನಾಗರೀಕತೆ ಬೆಳೆದಂತೆ ನಮ್ಮ ಆಧ್ಯಾತ್ಮಿಕತೆ ಅಥವಾ ಆತ್ಮಶ್ರೀಯೂ ಬೆಳೆಯಬೇಕು. ನಮ್ಮ ಹಿರಿಯರು ವಿದ್ಯೆಯನ್ನು ಕುರಿತು 'ಸಾ ವಿದ್ಯಾ ಯಾ ವಿಮುಕ್ತಯೇ' ಎಂದು ಹೇಳಿದ್ದಾರೆ. ನಮ್ಮನ್ನು ಮುಕ್ತರನ್ನಾಗಿ ಮಾಡತಕ್ಕಂತಹುದು ಯಾವುದೋ ಅದೇ ವಿದ್ಯೆ.

ಲೌಕಿಕ ವಿದ್ಯೆ ನಮ್ಮನ್ನು ಲೌಕಿಕದಾಹದಿಂದ ಮುಕ್ತರನ್ನಾಗಿ ಮಾಡುತ್ತದೆ. ಆಧ್ಯಾತ್ಮಿಕ ವಿದ್ಯೆ ನಮ್ಮ ಆತ್ಮ ತೃಷೆಯನ್ನು ಹಿಂಗಿಸುತ್ತದೆ. ಬರಿಯ ಅವಿದ್ಯೆಯನ್ನು ಉಪಾಸಿಸುವವನು ತಮಸ್ಸಿಗೆ ಇಳಿಯುತ್ತಾನೆ. ಅವಿದ್ಯೆಯನ್ನು ಸಂಪೂರ್ಣವಾಗಿ ಬಿಟ್ಟೇ ಬಿಡುತ್ತೇನೆಂದು ಬರಿಯ ವಿದ್ಯೆಯನ್ನೇ ಬೆನ್ನಟ್ಟುವವನು ಅವಿದ್ಯೆಯಿಂದ ಇಳಿಯುವುದಕ್ಕಿಂತಲೂ ಭಯಂಕರವಾದ ಕತ್ತಲೆಗೆ ಇಳಿಯುತ್ತಾನೆ. ವಿದ್ಯೆ ಅವಿದ್ಯೆಗಳೆರಡನ್ನೂ ಪರಸ್ಪರ ವಿರುದ್ಧವಾಗದಂತೆ ಸಮನ್ವಯಗೊಳಿಸಿಕೊಂಡವರು ಸುಖಿಯಾಗುತ್ತಾರೆ ಆದ್ದರಿಂದ ನಮ್ಮ ವಿದ್ಯಾಸಂಸ್ಥೆಗಳು ಮಕ್ಕಳಲ್ಲಿ ಇವೆರಡೂ ಬೆಳೆಯುವಂತೆ ನೋಡಿಕೊಳ್ಳಬೇಕು. ವಿದ್ಯಾಸಂಸ್ಥೆಗಳಲ್ಲಿ ಆಧ್ಯಾತ್ಮಿಕಕ್ಕೆ ಅಗತ್ಯವಾಗಿಯೂ ಬೆಲೆಕೊಡಬೇಕು.

ಕುವೆಂಪು ವಿಶ್ವವಿದ್ಯೆ, ವಿಶ್ವಪ್ರಜ್ಞೆ, ವಿಶ್ವಮೈತ್ರಿ ಮತ್ತು ವಿಶ್ವಮಾನವ ಎಂಬ ನಾಲ್ಕು ಪರಿಕಲ್ಪನೆಗಳನ್ನು ನಮ್ಮ ಮುಂದಿಡುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ ಕೊಡಮಾಡುವ ವಿದ್ಯೆಯನ್ನು ವಿಶ್ವವಿದ್ಯೆ ಎಂದು ಬಣ್ಣಿಸುತ್ತಾರೆ. ಈ ವಿಶ್ವವಿದ್ಯೆ– ಜನಸಾಮಾನ್ಯರಿಗೆಲ್ಲ ಬೆಳಕಾಗಬೇಕು. ವಿಶ್ವವಿದ್ಯೆ ನಮಗೆ ಬರಬೇಕು. ಆ ವಿದ್ಯೆಯಿಂದ ವಿಶ್ವಪ್ರಜ್ಞೆಉಂಟಾಗಬೇಕು. ವಿಶ್ವಪ್ರಜ್ಞೆಯಿಂದ ವಿಶ್ವಮೈತ್ರಿಉಂಟಾಗಬೇಕು. ವಿಶ್ವಮೈತ್ರಿ – ಇದು ಎಲ್ಲದಕ್ಕಿಂತಲೂ ಅತ್ಯಂತ ಅವಶ್ಯಕವಾಗಿದೆ. ಎಲ್ಲ ಶಕ್ತಿಗಳಿಗಿಂತಲೂ ಅತ್ಯಂತ ಅವಶ್ಯಕವಾಗಿರುವ ಶಕ್ತಿ, ನಮ್ಮ ಪ್ರಪಂಚವನ್ನು ಬದುಕಿಸುವ ಶಕ್ತಿ ವಿಶ್ವಮೈತ್ರಿ. ಈ ವಿಶ್ವವಿದ್ಯೆಯಿಂದ ವಿಶ್ವಪ್ರಜ್ಞೆ, ಅದರಿಂದ ಈ ವಿಶ್ವಮೈತ್ರಿ. ಅಂಥ ಮೈತ್ರಿಯನ್ನು ಪಡೆದ ಮಾನವ ವಿಶ್ವಮಾನವ. ಇಂಥ ವಿಶ್ವಮಾನವನನ್ನು ಸೃಷ್ಟಿಸುವ ನಿಲಯಗಳೇ ವಿಶ್ವವಿದ್ಯಾನಿಲಯಗಳಾಗಬೇಕು. ಜನಕ್ಕೆ ಈ ವಿಶ್ವವಿದ್ಯೆ, ಈ ವಿಶ್ವಪ್ರಜ್ಞೆ, ಈ ವಿಶ್ವಮೈತ್ರಿಗಳಿಂದ ಕೂಡಿ ವಿಶ್ವಮಾನವರಾಗುವಂತೆ ನಮ್ಮ ವಿಶ್ವವಿದ್ಯಾನಿಲಯಗಳು ವ್ಯವಹರಿಸಬೇಕು. (ವಿಶ್ವಮಾನವ–ಷಷ್ಠಿನಮನ)

**ಅವರ ವಾದ:** ನಮಗೆ ಬೇಕಾದುದು ತ್ರಿಭಾಷಾ ಸೂತ್ರವಲ್ಲ. ದ್ವಿಭಾಷಾ ಸೂತ್ರ; ಅಂದರೆ ಬಹುಭಾಷೆಗಳಲ್ಲಿ ದ್ವಿಭಾಷೆ. ನಮ್ಮ ವಿದ್ಯಾರ್ಥಿಗಳ ಮುಂದೆ ಅನೇಕ ಭಾಷೆಗಳನ್ನಿರಿಸಿ, ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರಿಗೇ ಕೊಡಬೇಕು. ಕುವೆಂಪು ಪ್ರಕಾರ 'ಬಹುಭಾಷೆಗಳಲ್ಲಿ ದ್ವಿಭಾಷಾ ಸೂತ್ರ ತ್ರಿಭಾಷಾ ಸೂತ್ರಕ್ಕಿಂತ ಪರಿಣಾಮಕಾರಿಯಾಗಿ, ಎಲ್ಲ ಪ್ರದೇಶಗಳಿಗೂ ಸಮಾಧಾನವೊದಗಿಸಿ, ಸ್ವಭಾಷಾಭಿಮಾನಜನ್ಯವಾದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿಕೊಡುತ್ತದೆ. (ಬಹುಭಾಷೆಗಳಲ್ಲಿ ದ್ವಿಭಾಷೆ–ವಿಚಾರ ಕ್ರಾಂತಿಗೆ ಆಹ್ವಾನ)

ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿ ನಮ್ಮಲ್ಲಿ ಬೆಳೆಯಬೇಕು ಎಂದು ಅವರು ತಿಳಿಸಿದ್ದಾರೆ. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪದಗಳು ಮಂತ್ರಗಳಾಗಲಿ ಎಂದು ಹೇಳಿದ್ದಾರೆ.

ಇಂದೂ ಸಹ ನಮ್ಮ ವಿದ್ಯಾರ್ಥಿಗಳಲ್ಲಿ ವಿಷಯವನ್ನು ಮನೋಗತ ಮಾಡಿಕೊಳ್ಳುವುದಕ್ಕಿಂತ ಬಾಯಿಪಾಠ ಮಾಡಿ ತಮ್ಮ ಜ್ಞಾಪಕಶಕ್ತ್ಯಾನುಸಾರ ಅವುಗಳನ್ನು ಬರೆದು ತೇರ್ಗಡೆಹೊಂದುವ ಪ್ರವೃತ್ತಿಯುಳ್ಳವರೇ ಹೆಚ್ಚು. ಅವರಿಂದ ಹೊಸ ಜ್ಞಾನದ ಸೃಷ್ಟಿ ಕಷ್ಟ. ಅವರೇನಿದ್ದರೂ ಸೃಷ್ಟಿತ ಜ್ಞಾನವನ್ನು ಕಂಠಪಾಠ ಮಾಡಿ ಅದರಲ್ಲಿಯೂ ಅನೇಕ ವಿಚಾರಗಳನ್ನು ಮರೆತುಕೊಂಡು ಉಳಿದ ಒಂದಿಷ್ಟು ವಿಚಾರಗಳನ್ನು ಬರೆದು ಪಾಸು ಮಾಡುವ ಭೂಪರು. ಇಂತಹವರನ್ನು ಕುರಿತು ಕುವೆಂಪು ಸ್ವಾರಸ್ಯಕರವಾದ ಹೋಲಿಕೆ ನೀಡಿದ್ದಾರೆ, ಇಂದಿನ ವಿದ್ಯಾರ್ಥಿಗಳು 'ಬತ್ತ ಬೆಳೆಯುವ ಗದ್ದೆಗಳಾಗದೆ, ಬತ್ತ ತುಂಬಿಕೊಳ್ಳುವ ಚೀಲಗಳಾಗಿದ್ದಾರೆ'. ಇಂದು ಶಿಕ್ಷಣ ಪದ್ಧತಿ ಪ್ರತಿಪಾದಿಸುತ್ತಿರುವ ಮಾಹಿತಿ ಸಂಸ್ಕರಣೆ ಪ್ರಕ್ರಿಯೆಯ ಅವಶ್ಯಕತೆಗೆ ಕುವೆಂಪು ಅವರ ಮೇಲಿನ ಮಾತುಗಳು ಆಧಾರವಾಗುತ್ತವೆ.

ಕುವೆಂಪು ಅವರು ಪ್ರತಿಪಾದಿಸಿರುವ ಶಿಕ್ಷಣ ತತ್ವಗಳಿಗೆ ವೈಚಾರಿಕತೆಯೇ ಆಧಾರ. ಅವರು ಯಾವಾಗಲೂ ಒತ್ತು ಕೊಡುತ್ತಿದ್ದ ಅಂಶಗಳೆಂದರೆ ವಿಚಾರಬುದ್ಧಿ ಮತ್ತು ವೈಜ್ಞಾನಿಕ ದೃಷ್ಟಿ. ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಗಳನ್ನು ನಿರ್ಲಕ್ಷಿಸಿದ ಶಿಕ್ಷಣವಾಗಲಿ ಶಿಕ್ಷಣ ತತ್ವ ದರ್ಶನವಾಗಲಿ ಅಗ್ರಾಹ್ಯವೆಂಬುದು ಅವರು ಕೊಟ್ಟ ಕೊನೆಯ ತೀರ್ಮಾನ. ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಮೂಲಕ ಇವೆರಡರ ಬೆಳವಣಿಗೆಗಳು ಇಂದಿಗೂ ತೃಪ್ತಿಕರವಾಗಿ ಆಗುತ್ತಿಲ್ಲವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕುವೆಂಪು ಸಾಹಿತ್ಯದ ಕೊನೆಯ ತೆನೆಯೇ ವಿಶ್ವಮಾನವ ಸಂದೇಶ ಮತ್ತು ವಿಶ್ವಮಾನವ ಗೀತೆ. ಪ್ರತಿಯೊಬ್ಬರು ವಿಶ್ವಪ್ರಜೆಯಾಗಬೇಕು, ವಿಶ್ವಪ್ರಜ್ಞೆಯನ್ನು ತಳೆಯಬೇಕು ಎಂಬುದು ಕುವೆಂಪು ಸಾಹಿತ್ಯದ ಆಶಯ.

ಅವರ 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ' ಸರ್ವೋದಯವನ್ನು ಸಾಕ್ಷಾತ್ಕರಿಸಿಕೊಂಡ ಮೇರುಕೃತಿ; ಅವರ ಕವನಗಳಂತೂ ಹೆಜ್ಜೆಹೆಜ್ಜೆಗೂ ಶ್ರೀಸಾಮಾನ್ಯನನ್ನು ಅಲ್ಪಮಾನವನನ್ನಾಗಿಸದೆ ವಿಶ್ವಪ್ರಜೆಯನ್ನಾಗಿಸಲು, ಉಜ್ಜುಗಿಸುವಂತಹ ಸರ್ವೋದಯ ಬೀಜಮಂತ್ರವನ್ನು, ಯುಗಪ್ರಜ್ಞೆಯನ್ನು, ವಿಜ್ಞಾನಬುದ್ಧಿಯನ್ನು ಗರ್ಭೀಕರಿಸಿಕೊಂಡಿರುವಂಥವು. ಆದುದರಿಂದ ಅವರ ಕವನ, ನಾಟಕ ಮುಂತಾದವುಗಳನ್ನು ಹೆಚ್ಚುಹೆಚ್ಚಾಗಿ ಶಾಲಾ ಶಿಕ್ಷಣದ ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸಿ ವಿದ್ಯಾರ್ಥಿಯನ್ನು ವಿಶ್ವಪ್ರಜೆಯಾಗಿಸುವತ್ತ ಕಾರ್ಯೋನ್ಮುಖವಾದರೆ ಶಿಕ್ಷಣದ ಬಹು ಮುಖ್ಯ ಕರ್ತವ್ಯ ನೆರವೇರಿದಂತೆಯೇ; ಶಿಕ್ಷಣದ ಧ್ಯೇಯೊದ್ದೇಶಗಳು

Digitised by Bharatavani, CIIL

ಈಡೇರಿದಂತೆಯೇ.

ಕುವೆಂಪು ಅವರ ವಿಶ್ವಮಾನವ ಸಂದೇಶವು ಪ್ರತಿಯೊಬ್ಬರೂ ವಿಶ್ವಮಾನವರಾಗಲು ಸಾಧಿಸಲೇಬೇಕಾದ 'ಪಂಚಮಂತ್ರ' ಮತ್ತು 'ಸಪ್ತಸೂತ್ರ'ಗಳನ್ನು ಒಳಗೊಂಡಿದೆ.

'ಪಂಚಮಂತ್ರ'ಗಳೆಂದರೆ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ. ಅಂದರೆ, ನಮಗೆ ಇನ್ನು ಬೇಕಾಗಿರುವುದು ಆ ಮತ ಈ ಮತ ಅಲ್ಲ; ಮನುಜಮತ, ಆ ಪಥ ಈ ಪಥ ಅಲ್ಲ; ವಿಶ್ವಪಥ, ಆ ಒಬ್ಬರ ಈ ಒಬ್ಬರ ಉದಯಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ, ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳಿಸುವುದು, ಮಿತವಾದ ಆಂಶಿಕ ದೃಷ್ಟಿಯಲ್ಲಿ ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನು ಭಗವತ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ. ಸ್ವಾಮಿ ವಿವೇಕಾನಂದರ, ಶ್ರೀರಾಮಕೃಷ್ಣ ಪರಮಹಂಸರ, ಮಹಾತ್ಮಾ ಗಾಂಧೀಜಿಯವರ ಹಾಗೂ ಶ್ರೀಅರವಿಂದರ ದರ್ಶನಗಳೇ ತಳಹದಿಯಾಗಿರುವ ಈ ಪಂಚಮಂತ್ರಗಳು ನಮ್ಮ ಶಿಕ್ಷಣದ ಮೌಲ್ಯಗಳಾಗಬೇಕಿವೆ.

**'ಸಪ್ತಸೂತ್ರ'ಗಳೆಂದರೆ:**

1. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ನಿರುಪಾದಿಕವಾಗಿ ಸ್ವೀಕರಿಸಬೇಕು.
2. ವರ್ಣಾಶ್ರಮವನ್ನು ತಿದ್ದುವುದಲ್ಲ. ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು.
3. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ, ವಿನಾಶಗೊಳಿಸಬೇಕು.
4. ಮತ ತೊಲಗಿ ಆಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು.
5. ಮತ ಮನುಜಮತವಾಗಬೇಕು; ಪಥ ವಿಶ್ವಪಥವಾಗಬೇಕು; ಮನುಷ್ಯ ವಿಶ್ವಮಾನವನಾಗಬೇಕು.
6. ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ ತನ್ನ ಮತಕ್ಕೆ ಮಾತ್ರ ಸೇರಬೇಕು.
7. ಯಾವ ಒಂದು ಗ್ರಂಥವು 'ಏಕೈಕ ಪರಮ ಪೂಜ್ಯ' ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ ದರ್ಶನವನ್ನು ತಾನೇ ನಿರ್ಣಯಿಸಿಕೊಳ್ಳಬೇಕು.

ಈ ಸಪ್ತಸೂತ್ರಗಳು ಒಂದೊಂದು ಸ್ವಯಂ ವಿವರಣೆಯನ್ನು ನೀಡುವಂಥ ಪರಿಪಕ್ವ ಭಾಷ್ಯಗಳಾಗಿದ್ದು ಉತ್ತಮವಾದ ಶಿಕ್ಷಣ ಪದ್ಧತಿಯನ್ನು ರೂಪಿಸಲು ನೆರವುಗೋಲಾಗಿವೆ.

ಕುವೆಂಪು ಅವರ 'ಅನಿಕೇತನ' ಗೀತೆಯನ್ನು 'ವಿಶ್ವಮಾನವಗೀತೆ' ಎಂದು ಕರೆಯಲಾಗಿದೆ. ಜಗತ್ತಿಗೆ ತಾವು ನೀಡಬೇಕಾದ ಸಂದೇಶವನ್ನೆಲ್ಲ ಈ ಗೀತೆಯಲ್ಲಿ ಭಟ್ಟಿ ಇಳಿಸಿದ್ದಾರೆ. ತಮ್ಮ ಒಳ ಚೇತನಕ್ಕೆ ಅವರು ಕೊಡುವ ಈ ಕರೆ ವಿಶ್ವದ ಎಲ್ಲ ಹೃದಯಗಳಲ್ಲಿ ಅನುರಣಿಸುತ್ತದೆ; ವಿಶ್ವದ ಕಲ್ಯಾಣ ಬಯಸುತ್ತದೆ. ಚೇತನಕ್ಕೆ ಯಾವ ಸ್ತರದಲ್ಲಿಯೂ ತೃಪ್ತಿಯ ನಿಲುಗಡೆ ಇರಬಾರದು; ಏನಿದ್ದರೂ ಅದರ ಸತ್ಯಾನ್ವೇಷಣೆಯ ದಾಹ ಅನಂತವಾದುದಾಗಿರಬೇಕು. ಅನಿಕೇತನ ಪ್ರಜ್ಞೆಯನ್ನು ಬೆಳಸಿಕೊಂಡವನೇ ವಿಶ್ವಮಾನವನಾಗಲು ಸಾಧ್ಯ. ಅವನಿಗೆ ಜಾತಿ, ಮತ, ಧರ್ಮ, ದೇವರು, ದೇಶ, ಭಾಷೆ, ಯಾವುವೂ ಅಡ್ಡಿಯಾಗುವುದಿಲ್ಲ. ವಿಶ್ವಮಾನವ ಅಧ್ಯಾತ್ಮ ಸಿದ್ಧಿಯ ಸೀಮಾಪುರುಷನಾಗಿ ವಿಜೃಂಭಿಸುತ್ತಾನೆ.

ಕುವೆಂಪು ಅವರ ಶಿಕ್ಷಣದ ವಿಚಾರಗಳಿಗೆ ಕಳಶಪ್ರಾಯವಾಗಿ ಅವರ ವಿಶ್ವಮಾನವ ಸಂದೇಶ , ಪಂಚಮಂತ್ರ ಮತ್ತು ಸಪ್ತಸೂತ್ರ, ಹಾಗು ವಿಶ್ವಮಾನವಗೀತೆ – ಅನಿಕೇತನ – ಗಳು ನಮ್ಮ ಶಿಕ್ಷಣ ಪದ್ಧತಿ ಹೇಗೆ ರೂಪುಗೊಳ್ಳಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಅವರ ಸಾಹಿತ್ಯ ಮತ್ತು ಅವರ ಶಿಕ್ಷಣದ ವಿಚಾರಗಳು ಎಂದಿಗಿಂತಲೂ ಇಂದು ಹೆಚ್ಚು ಅನುಷ್ಠಾನ ಯೋಗ್ಯವಾಗಿದ್ದು ಶಾಲಾ ಶಿಕ್ಷಣ ಪಠ್ಯಕ್ರಮದಲ್ಲಿ ಅವುಗಳನ್ನು ಸಮರ್ಪಕವಾಗಿ ಅಳವಡಿಸುವುದನ್ನು ಇಂದಿನ ಶಿಕ್ಷಣವೇತ್ತರು ಗಂಭೀರವಾಗಿ ಪರಿಗಣಿಸಬೇಕು.

–ಪ್ರೊ. ಮುದ್ದುಮಲ್ಲೇಶ್ ಎಚ್.

## ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೈಕ್ಷಣಿಕ ಹಣಕಾಸಿನ ಜವಾಬ್ದಾರಿಗಳು

ಶಿಕ್ಷಣವನ್ನು ನಿರ್ವಹಿಸಲು, ವಿಸ್ತರಿಸಲು ಮತ್ತು ಉತ್ತಮಗೊಳಿಸಲು ಹಣಕಾಸು ಅತ್ಯಂತ ಅವಶ್ಯಕ. ಆಧುನಿಕ ಶಿಕ್ಷಣದ ಅಭಿವೃದ್ಧಿ ಮುಖ್ಯವಾಗಿ ಹಣಕಾಸಿನಮೇಲೆ ಅವಲಂಬಿತವಾಗಿದೆ. ಹಣಕಾಸಿನ ವ್ಯವಸ್ಥೆ ಸರಿಯಾಗಿಲ್ಲದಿದ್ದರೆ, ಶಿಕ್ಷಣವು ಅಭಿವೃದ್ಧಿಯಾಗದು. ಹಣಕಾಸು ಶೈಕ್ಷಣಿಕ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ಸಹಾಯ ಮಾಡುವ ಒಂದು ಸಾಧನವಾಗಿದೆ. ಶೈಕ್ಷಣಿಕ ಕ್ಷೇತ್ರದ ಸೌಲಭ್ಯಗಳನ್ನು ಪೂರೈಸಿ ವ್ಯವಸ್ಥಿತವಾಗಿ ಹಾಗೂ ಅಭಿವೃದ್ಧಿಗೆ ಪೂರಕವಾಗಿ ಕಾರ್ಯಮಾಡಲು ಶಿಕ್ಷಣ ಅವಶ್ಯಕ.

**ಶೈಕ್ಷಣಿಕ ಹಣಕಾಸಿನ ಮಹತ್ವ:** ಹಣಕಾಸಿನ ವ್ಯವಸ್ಥೆ ಎಂದರೆ ಹಣವನ್ನು ಒದಗಿಸುವ ಮತ್ತು ವಿನಿಯೋಗಿಸುವ ಒಂದು ಕಲೆ ಎಂದು ಹೇಳಬಹುದು. ಸಂಸ್ಥೆ, ಸಂಘ ಅಥವಾ ವ್ಯಕ್ತಿಗಳಿಗೆ ಬೇಕಾದ ಹಣವನ್ನು ಒದಗಿಸುವ ಅಥವಾ ಹೊಂದಿಸುವ ಹಣವನ್ನು ವಿನಿಯೋಗಿಸುವ ಮಾರ್ಗವನ್ನು ತಿಳಿಸಿಕೊಡುವ ಒಂದು ತಾಂತ್ರಿಕ ವ್ಯವಸ್ಥೆಯಾಗಿದೆ.

1998ರ ಅರ್ಥಶಾಸ್ತ್ರದ ನಿಘಂಟಿನ ಪ್ರಕಾರ ಹಣಕಾಸು ವ್ಯವಸ್ಥೆ ಅರ್ಥಶಾಸ್ತ್ರದ ಉಪವ್ಯವಸ್ಥೆಯಾಗಿದ್ದು ಇದು ಹಣ ವಿನಿಯೋಗಿಸುವ ವಿಧಾನವಾಗಿದೆ. ಇದು ಪ್ರಾಥಮಿಕವಾಗಿ

Digitised by Bharatavani, CIIL

ಬಂಡವಾಳ ಮಾರುಕಟ್ಟೆಯ ಬೇಡಿಕೆ ಮತ್ತು ಪೂರೈಕೆಯನ್ನು ತೋರಿಸುತ್ತದೆ. ಇದು ಹಣಕಾಸಿನ ರೂಪದಲ್ಲಿ ವಸ್ತುಗಳ ಬೆಲೆಗಳನ್ನು ನಿರ್ಧರಿಸುವ ಮತ್ತು ತಿಳಿಸುವ ವಿಧಾನವಾಗಿದೆ. ಇದು ಅನಿರ್ದಿಷ್ಟ ಮತ್ತು ಏರುಪೇರುಗಳಿಂದ ಕೂಡಿದ ಮಾರುಕಟ್ಟೆ ಸಂಬಳ. ಬೆಲೆಯ ಹೆಚ್ಚಳ–ಕಡಿಮೆ ಅಂಶಗಳನ್ನು ತಿಳಿಸಿಕೊಡುವ ಒಂದು ವ್ಯವಸ್ಥೆ ಆಗಿದೆ.

ಇಷ್ಟೆಲ್ಲ ಮಹತ್ವ ಹೊಂದಿರುವ ಹಣಕಾಸು ಶಿಕ್ಷಣದಲ್ಲಿ ವಹಿಸುವ ಪಾತ್ರ ಪ್ರಮುಖವಾಗಿದೆ. ಎಲ್ಲ ಕ್ಷೇತ್ರಗಳಂತೆ ಶಿಕ್ಷಣ ಒಂದು ಮೂಲ ವ್ಯವಸ್ಥೆಯಾಗಿದ್ದು ಆರ್ಥಿಕ ಅಭಿವೃದ್ಧಿಯನ್ನು ಸೂಚಿಸುವ ಒಂದು ಸೂಚ್ಯಾಂಕವಾಗಿದೆ.

ಹಣಕಾಸು ಇಲ್ಲದೆ ಯಾವ ಕ್ಷೇತ್ರದ ಕಾರ್ಯ ನಿರ್ವಹಣೆಯೂ ನಡೆಯುವುದಿಲ್ಲ. ಅದು ಹಣದ ಅವಶ್ಯಕತೆ ಮತ್ತು ಹಣದ ವಿನಿಯೋಗ ಉಪಭೋಗವನ್ನು ತೋರಿಸುತ್ತದೆ.

**ವೆಬಸ್ಟರ್ ನಿಘಂಟಿನ ಪ್ರಕಾರ (1983) ಹಣಕಾಸು ವ್ಯವಸ್ಥೆ ಎಂದರೆ ?**

1) ಹಣವನ್ನು ನಿರ್ವಹಣೆ ಮಾಡುವುದು. 2) ಹಣಕಾಸು ಹಣಚಲಾವಣೆ, ಸಾಲದ ಅನುದಾನ, ಬಂಡವಾಳ ಹೂಡಿಕೆ, ಬ್ಯಾಂಕ್ ಡಿಪಾಜಿಟ್‌ಗಳಿಗೆ ಸಂಬಂಧಿಸಿದ ವ್ಯವಸ್ಥೆ, 3) ಹಣಕಾಸು ಹಣ ಅಥವಾ ನಿಧಿ ನಿರ್ವಹಣೆಯ ಒಂದು ವಿಜ್ಞಾನವಾಗಿದೆ. 4) ಹಣಕಾಸು ಬಂಡವಾಳ ಅಥವಾ ನಿಧಿಗಳನ್ನು ಹೊಂದಿಸುವುದಾಗಿದೆ.

ಹಣಕಾಸಿನ ಸೌಲಭ್ಯ ಶಿಕ್ಷಣದಲ್ಲಿ ನಿರ್ವಹಿಸುವ ಪಾತ್ರದಿಂದ ಪ್ರಮುಖ ಎನಿಸಿಕೊಂಡಿದೆ.

1) ಇದು ಶಿಕ್ಷಣದ ಬೆಳವಣಿಗೆಗೆ ಪೋಷಣೆ ನೀಡುವುದಾಗಿದೆ. 2) ಶಿಕ್ಷಣ ಸಾಧನೆಗೆ ಭದ್ರಬುನಾದಿಯಾಗಿದೆ. 3) ಶಿಕ್ಷಣ ಸೌಲಭ್ಯಗಳ ಒದಗಿಸುವಿಕೆಗೆ ಅನುವು ಮಾಡುವದಾಗಿದೆ. 4) ಶಿಕ್ಷಣಕ್ಕೆ ಹಣ ಒದಗಿಸಿ ಅದನ್ನು ಬಂಡವಾಳವನ್ನಾಗಿ ಮಾಡಿ ಆರ್ಥಿಕ ಉತ್ಪಾದನೆ ಹೆಚ್ಚಿಸುವುದಾಗಿದೆ. 5) ಹಣಕಾಸು ವ್ಯವಹಾರ ಶಿಕ್ಷಣ ವಿಸ್ತರಿಸುವ ಒಂದು ಸಾಧನವಾಗಿದೆ. 6) ಹಣದ ಚಲಾವಣೆ ಮತ್ತು ಶಿಕ್ಷಣದಲ್ಲಿ ಅದರ ಬಹುರೂಪಿ ಉಪಯೋಗ ಎಂದರೆ ಸ್ಟೈ ಫಂಡ್, ಸ್ಕಾಲರ್‌ಶಿಪ್, ಅನುದಾನ ಇತ್ಯಾದಿಗಳ ರೂಪದ ನಿರ್ವಹಣೆಯಾಗಿದೆ. 7) ಹಣಕಾಸು ಶಿಕ್ಷಣದ ಖರ್ಚು, ಆದಾಯ ಮತ್ತು ಉಳಿಕೆಯನ್ನು ಅಭ್ಯಸಿಸುವ ಮತ್ತು ತಿಳಿಸುವ ಒಂದು ಪ್ರಕ್ರಿಯೆಯಾಗಿದೆ. 8) ಶಿಕ್ಷಣವನ್ನು ನಿರ್ವಹಿಸುವ, ವಿಸ್ತರಿಸುವ, ಉನ್ನತಗೊಳಿಸುವ ಅವಶ್ಯ ಸೌಲಭ್ಯ ಒದಗಿಸುವ ಒಂದು ಉತ್ತಮ ಸೌಲಭ್ಯ ಹಣಕಾಸು ಆಗಿದೆ.

ಇಂದಿನ ಅಧುನಿಕ ಶಿಕ್ಷಣದ ಬೆಳವಣಿಗೆ ಹಣಕಾಸಿನ ಸೌಲಭ್ಯವಿಲ್ಲದಿದ್ದರೆ ಅದು ಬೇರಿಲ್ಲದ ಮರದಂತಾಗುತ್ತದೆ ಎಂದು ಹೇಳಬಹುದು. ಶೈಕ್ಷಣಿಕ ಕ್ಷೇತ್ರದಲ್ಲಿ ಅವಶ್ಯಕ ಅಳವಡಿಕೆಗಳಾದ ನವೀನ ತಂತ್ರಜ್ಞಾನ, ವೈಜ್ಞಾನಿಕ ವಿಧಾನ, ಹೊಸ ತಾತ್ವಿಕ ಜ್ಞಾನಗಳ ಅಳವಡಿಕೆಗೆ ಖರ್ಚು ವೆಚ್ಚಗಳು ನಡೆಯುವುದು. ಅದನ್ನು ಪೂರೈಸುವುದು ಹಣಕಾಸು. ಹಣಕಾಸು ಶೈಕ್ಷಣಿಕ ಗುರಿ ತಲುಪಲು ಸಹಾಯ ಮಾಡುವ ಒಂದು ಸಾಧನವಾಗಿದೆ. ನಾವಿಕನ ನಾವೆ ಚಲಿಸಲು ಹುಟ್ಟು ಎಷ್ಟು ಅವಶ್ಯವೋ ಶೈಕ್ಷಣಿಕ ಕ್ಷೇತ್ರದ ಸೌಲಭ್ಯ ಪೂರೈಸಿ ದಡ ಸೇರಲು ಅಂದರೆ ನಿರ್ಧಾರಿತ ಗುರಿ ತಲುಪಲು ಹಣಕಾಸು ಅಷ್ಟೇ ಅವಶ್ಯಕ.

ಶಿಕ್ಷಣದ ಬಗ್ಗೆ ಶೈಕ್ಷಣಿಕ ವಿಷಯವಾಗಿ ಕೇಂದ್ರ ಸರಕಾರದ ಜವಾಬ್ದಾರಿಗಳು ಹೀಗಿವೆ.

1. **ಯೋಜನೆ:** ರಾಜ್ಯ ಸರಕಾರಗಳು ಅನುಸರಿಸಬೇಕಾದಂತಹ ಶಿಕ್ಷಣ ಪದ್ಧತಿಯ ಬಗ್ಗೆ ಸಾಮಾನ್ಯ ನೀತಿಯನ್ನು ನಿರ್ಧರಿಸುವುದು. ಇಡೀ ರಾಷ್ಟ್ರಕ್ಕೆ ಅನ್ವಯಿಸುವ, ಸಾಧಿಸಬೇಕಾದ ಅಂಶಗಳನ್ನು ಹಾಗೂ ಪ್ರಾತಿನಿಧ್ಯಗಳನ್ನು ಗೊತ್ತುಪಡಿಸುವುದು. ಶಿಕ್ಷಣದ ವಿವಿಧ ಅಯೋಗಗಳನ್ನು, ಮಂಡಳಿಗಳನ್ನು ಶಿಕ್ಷಣದ ವಿವಿಧ ಮೂಲಗಳನ್ನು ಪರಿಶೀಲಿಸಿ ಸಲಹೆಗಳನ್ನು ಕೊಡುವುದಕ್ಕಾಗಿ ಆಯೋಜಿಸುವುದು.

2. **ಸಂಘಟನೆ:** ಸಾಮೂಹಿಕ ಶಿಕ್ಷಣ, ವೃತ್ತಿಪರ ಶಿಕ್ಷಣ, ಸುಶಿಕ್ಷಿತರಿಗೆ ನೌಕರಿ, ಹಿಂದುಳಿದ ವರ್ಗಗಳಿಗೆ ಸಹಾಯ, ವಿದ್ಯಾರ್ಥಿಗಳಲ್ಲಿ ಶಿಸ್ತು ಮೊದಲಾದ ಕ್ಷೇತ್ರಗಳಿಗೂ ವಿಶ್ವವಿದ್ಯಾಲಯಗಳಿಗೆ ಧನ ಸಹಾಯ, ಕೇಂದ್ರ ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳು ಮುಂತಾದ ಶೈಕ್ಷಣಿಕ ಕ್ಷೇತ್ರಗಳನ್ನು ಸಂಘಟಿಸಲು ಕೇಂದ್ರ ಸರಕಾರವು ವಿವಿಧ ಆಯೋಗಗಳನ್ನು ಹಾಗೂ ಸಮಿತಿಗಳನ್ನು ನೇಮಿಸುವುದು.

3. **ನಿರ್ದೇಶನ:** ರಾಜ್ಯಸರಕಾರಗಳಿಗೆ ಶಿಕ್ಷಣವನ್ನು ಸೂಕ್ತರೀತಿಯಲ್ಲಿ ನಡೆಸಿಕೊಂಡು ಹೋಗಲು ನಿರ್ದೇಶನ ನೀಡುವುದು. ಕೇಂದ್ರ ಸರಕಾರವು ರಾಜ್ಯ ಸರಕಾರಗಳು ಅನುಕರಿಸಬೇಕಾದ ಮಾನ ಪ್ರಮಾಣಗಳನ್ನು ನಿರ್ಧರಿಸುವುದು.

4. **ನಿಯಂತ್ರಣ:** ಕೇಂದ್ರ ಸರಕಾರವು ವಿವಿಧ ಕೇಂದ್ರ ಶೈಕ್ಷಣಿಕ ಸಂಘ ಸಂಸ್ಥೆಗಳಿಗೆ, ವಿಶ್ವವಿದ್ಯಾನಿಲಯಗಳಿಗೆ ರಾಜ್ಯ ಸರಕಾರಗಳ ಶೈಕ್ಷಣಿಕ ಸಂಘಗಳಿಗೆ ಹಾಗೂ ಖಾಸಗಿ ಸಂಸ್ಥೆಗಳಿಗೆ ಹಣಕಾಸು ಒದಗಿಸುವುದು. ಹಣಕಾಸಿನ ಮುಗ್ಗಟ್ಟಿರುವ ರಾಜ್ಯ ಸರಕಾರಗಳ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹಣಕಾಸನ್ನು ಒದಗಿಸುವುದು ಕೇಂದ್ರ ಸರಕಾರದ ಪ್ರಮುಖ ಕರ್ತವ್ಯವಾಗಿದೆ.

5. **ಶೈಕ್ಷಣಿಕ ಅವಕಾಶಗಳನ್ನು ಸಮಾನಗೊಳಿಸುವುದು:** ಹಿಂದುಳಿದ ರಾಜ್ಯಗಳು ಮುಂದುವರಿದ ರಾಜ್ಯಗಳ ಬೆಳವಣಿಗೆಯ ಹಂತವನ್ನು ತಲುಪಲು ಅನುವಾಗುವಂತೆ ಆರ್ಥಿಕ ಸಹಾಯವನ್ನು ಕೇಂದ್ರ ಸರಕಾರ ಮಾಡುತ್ತದೆ.

Digitised by Bharatavani, CIIL

6. **ಮಾರ್ಗದರ್ಶನ ಯೋಜನೆಗಳು:** ಗ್ರಾಮೀಣ ವಿಶ್ವವಿದ್ಯಾನಿಲಯ, ಶೈಕ್ಷಣಿಕ ವಿಸ್ತರಣಾ ಸೇವೆಗಳು, ವಲಯ ಸಂಸ್ಥೆಗಳು, ಪಠ್ಯಪುಸ್ತಕಗಳು ಹಾಗೂ ಬೋಧನಾ ರೀತಿಗಳು ಮುಂತಾದವುಗಳ ಮೇಲೆ ಮಾರ್ಗದರ್ಶನ ಯೋಜನೆಗಳನ್ನು ಕೇಂದ್ರ ಸರಕಾರವು ಕೈಗೊಂಡು ದೇಶದ ಜನತೆಗೆ ಹೊಸ ಬೆಳಕನ್ನು ತೋರಿಸಲು ಪ್ರಯತ್ನಿಸುತ್ತದೆ.

7. **ಪಾವತಿ ಶೈಕ್ಷಣಿಕ ಗೃಹ ಪದ್ಧತಿಯ (Home assignment) ಕಾರ್ಯ:**

ಕೇಂದ್ರ ಸರಕಾರವು ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಶೈಕ್ಷಣಿಕ ಪ್ರಯೋಗ, ತರಬೇತಿ ಹಾಗೂ ವಿಸ್ತರಣಾ ವಿಚಾರವಾಗಿ ಹಾಗೂ ಮಾಹಿತಿಗಾಗಿ ಪಾವತಿ ಮಾಡುವ ಕಾರ್ಯವನ್ನು ನಿರ್ವಹಿಸುತ್ತದೆ. ಇದು ಕೆಲವೊಂದು ಪ್ರಕಟಣೆಗಳನ್ನು ಹೊರತರುತ್ತದೆ. ಅವು

1 ಎಜುಕೇಷನ್ ಇನ್ ಇಂಡಿಯಾ

2. ಎಜುಕೇಷನ್ ಇನ್ ದಿ ಸ್ಟೇಟ್ಸ್

3. ಎಜುಕೇಷನ್‌ಇನ್ ಇಂಡಿಯನ್ ಯೂನಿವರ್ಸಿಟೀಸ್

ಕೇಂದ್ರಾಡಳಿತ ಪ್ರದೇಶಗಳ ಶಿಕ್ಷಣವನ್ನು, ಕೇಂದ್ರ ಸರಕಾರ ನೇರವಾಗಿ ನೋಡಿಕೊಳ್ಳುತ್ತದೆ. ಇದಲ್ಲದೆ ರಾಷ್ಟ್ರೀಯ ಗ್ರಂಥಾಲಯಗಳು, ಪ್ರಾಣಿ ಸಂಗ್ರಹಾಲಯ, ಆರ್ಟ್ ಗ್ಯಾಲರಿಗಳನ್ನು ಹಾಗೂ ಕೇಂದ್ರೀಯ ಶಾಲೆ ಹಾಗೂ ನವೋದಯ ಶಾಲೆಗಳನ್ನು ಪ್ರಾರಂಭಿಸಿ ಶಿಕ್ಷಣದ ಪ್ರಗತಿಗೆ ಕಾರಣೀಭೂತವಾಗಿದೆ.

**ಶೈಕ್ಷಣಿಕ ವಿಷಯವಾಗಿ ರಾಜ್ಯ ಸರಕಾರದ ಕಾರ್ಯಗಳು ಹಲವು ಇವೆ:**

1. ಹಣಕಾಸು: ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣಕ್ಕೆ ಬೇಕಾಗುವ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸುವುದು ರಾಜ್ಯದ ಪ್ರಮುಖ ಕರ್ತವ್ಯವಾಗಿದೆ. ಈ ಜವಾಬ್ದಾರಿ ಎರಡು ಸಂದರ್ಭದಲ್ಲಿ ಅನ್ವಯಿಸುವುದಿಲ್ಲ–

ಎ) ಅಗಿಂದಾಗ್ಗೆ ಬರಬಹುದಾದ ಕೇಂದ್ರ ಸರಕಾರದ ಆರ್ಥಿಕ ಸಹಾಯ

ಬಿ) ಸ್ಥಳೀಯ ಸಂಸ್ಥೆ ಹಾಗೂ ಖಾಸಗೀ ಸಂಸ್ಥೆಗಳಿಂದ ಕ್ರೋಢೀಕರಿಸಲಾದ ಹಣಕಾಸು.

2. ಕಾನೂನು ಮಾಡುವುದು: ಬೇರೆ ಬೇರೆ ಶಿಕ್ಷಣ ಮಟ್ಟಕ್ಕೆ ತಕ್ಕುದಾದ ಕಾನೂನುಗಳನ್ನು ಜಾರಿಗೊಳಿಸುವುದು, ಪ್ರಾಥಮಿಕ ಹಂತದಲ್ಲಿ ಹಾಜರಾತಿ, ಸ್ತ್ರೀ ಶಿಕ್ಷಣ ಹಾಗೂ ಅಂಗವಿಕಲರಿಗಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಕಾನೂನನ್ನು ಜಾರಿಗೊಳಿಸುವುದು.

3. ತನಿಖೆ ಮತ್ತು ಮೇಲ್ವಿಚಾರಣೆ: ರಾಜ್ಯ ಸರಕಾರವು ಆರ್ಥಿಕ ಸಹಾಯವನ್ನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಮಾಡುವುದರಿಂದ ಅದರ ಸದುಪಯೋಗದ ಬಗ್ಗೆ ಮೇಲ್ವಿಚಾರಣೆ ಮತ್ತು ತನಿಖೆಯನ್ನು ಮಾಡುವ ಅಗತ್ಯ ಇದೆ.

4. ಶಿಕ್ಷಕ ಶಿಕ್ಷಕಿಯರ ನೇಮಕ: ಉಪಾಧ್ಯಾಯರ ನೇಮಕಾತಿ, ವೇತನ, ವೇತನದಲ್ಲಿನ ಬದಲಾವಣೆ, ಸೇವಾ ಸೌಲಭ್ಯಗಳು ಹಾಗೂ ವರ್ಗಾವಣೆಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುವುದು.

5. ಪಠ್ಯಕ್ರಮವನ್ನು ಸಿದ್ಧಗೊಳಿಸುವುದು: ಪ್ರಾಥಮಿಕ, ಪ್ರೌಢ, ಪದವಿಪೂರ್ವ ಶಿಕ್ಷಣ ಹಾಗೂ ವಿಶ್ವವಿದ್ಯಾನಿಲಯಗಳ ಪಠ್ಯಕ್ರಮವನ್ನುರಚಿಸುವುದು ಮತ್ತು ಅನುಷ್ಠಾನಗೊಳಿಸುವುದು. ಇವುಗಳಿಗೆ ಖರ್ಚಾಗುವ ವೆಚ್ಚ ಭರಿಸುವುದು.

6. ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಅವುಗಳು ಎಲ್ಲ ಕಡೆ ದೊರೆಯುವಂತೆ ಮಾಡುವುದು.

7. ಸಮಗ್ರತೆಯನ್ನುಂಟು ಮಾಡಲು ರಾಜ್ಯ ಸರಕಾರ ಪಾವತಿ ಮಾಡುವ ಗೃಹ ಪದ್ಧತಿ ಕಾರ್ಯವನ್ನು ಮಾಡುವುದು.

8. ಸಿಬ್ಬಂದಿಯ ತರಬೇತಿ, ಮೇಲ್ವಿಚಾರಣೆ, ಸಂಶೋಧನೆ ಮತ್ತು ಮಾರ್ಗದರ್ಶಿ ಸಂಶೋಧನೆಗಳನ್ನು ಕೈಗೊಳ್ಳಲು ಹಣ ಖರ್ಚು ಮಾಡುವುದು.

9. ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಸಂಪನ್ಮೂಲ ಒದಗಿಸಲು, ತನ್ಮೂಲಕ ಶೈಕ್ಷಣಿಕ ಸಮಾನತೆಯನ್ನು ಕಾಪಾಡಿಕೊಳ್ಳಲು ರೂಪಿಸುವ ಯೋಜನೆಗಳಿಗೆ ಹಣ ಒದಗಿಸುವುದು.

**ಶೈಕ್ಷಣಿಕ ಯೋಜನೆಗಳನ್ನು ರೂಪಿಸುವಲ್ಲಿ ಕೇಂದ್ರ/ರಾಜ್ಯ ಸರಕಾರಗಳ ಹಣಕಾಸಿನ ನೀತಿಗಳು:**

- ಸಮಾಜದ ಅವಶ್ಯಕತೆಗಳನ್ನು ಆಧರಿಸಿ ಶೈಕ್ಷಣಿಕ ಯೋಜನೆಗಳನ್ನು ತಯಾರಿಸಲಾಗುತ್ತದೆ. ಇದನ್ನು ಅನುಷ್ಠಾನಗೊಳಿಸುವುದರಲ್ಲಿ ಕೇಂದ್ರ/ರಾಜ್ಯ ಸರಕಾರಗಳ ನೀತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.
- ಸರಕಾರ ತನ್ನ ವಾರ್ಷಿಕ ಆಯ – ವ್ಯಯ ಅಂದಾಜಿನಲ್ಲಿ (ಬಜೆಟ್‌ನಲ್ಲಿ) ಶಿಕ್ಷಣದ ವಿವಿಧ ಹಂತಗಳಿಗೆ ಹಂಚುವ ಹಣದ ಮೊತ್ತಕ್ಕೆ ಅನುಗುಣವಾಗಿ ಯೋಜನೆಗಳನ್ನು ರೂಪಿಸುವುದು.
- ಶೈಕ್ಷಣಿಕ ಯೋಜನೆಗಳನ್ನು ಜಾರಿಗೊಳಿಸಲು ಆದ್ಯತೆಗಳನ್ನು ಸೂಚಿಸುವುದು.
- ಯೋಜನೆಗಳಿಗೆ ನಿಗದಿಪಡಿಸುವ ಹಣವನ್ನು ಖರ್ಚು ಮಾಡಲು ಸೂಕ್ತ ನಿಯಮಾವಳಿಗಳನ್ನು ನಿರ್ಧರಿಸುವುದು

ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ಶೈಕ್ಷಣಿಕ ಯೋಜನೆಗಳನ್ನು ಜಾರಿಗೊಳಿಸಲು ಬೇಕಾದ ಹಣವನ್ನು

Digitised by Bharatavani, CIIL

ನಿಗದಿ ಪಡಿಸಿ ಅದನ್ನು ಮಂಜೂರು ಮಾಡುತ್ತವೆ. ಕೇಂದ್ರ ಸರಕಾರ ತಮ್ಮ ಶೈಕ್ಷಣಿಕ ಯೋಜನೆಗಳನ್ನು ರಾಜ್ಯಗಳ ಮೂಲಕ ಜಾರಿಗೊಳಿಸಬೇಕಾಗಿದ್ದಲ್ಲಿ ಅದಕ್ಕೆ ತಗಲುವ ಖರ್ಚಿನ ಹಣವನ್ನು ಆಯಾ ರಾಜ್ಯ ಸರಕಾರಗಳಿಗೆ ರವಾನಿಸುತ್ತದೆ. ರಾಜ್ಯ ಸರಕಾರಗಳು ನಿಗದಿತ ಅವಧಿಯಲ್ಲಿ ನಿಯಮಾನುಸಾರ ಖರ್ಚುಮಾಡಿ ಕೇಂದ್ರ ಸರಕಾರಕ್ಕೆ ವರದಿ ಮಾಡಬೇಕಾಗುತ್ತದೆ. ಇದಲ್ಲದೆ ಕೇಂದ್ರ ಸರಕಾರ ರಾಜ್ಯ ಸರಕಾರಗಳ ಕೆಲವು ಉಪಯುಕ್ತ ಶೈಕ್ಷಣಿಕ ಯೋಜನೆಗಳಿಗೆ ಅಥವಾ ವೆಚ್ಚಗಳಿಗೆ ಭಾಗಶಃ ಆರ್ಥಿಕ ಅನುದಾನ ನೀಡುತ್ತದೆ. ಉದಾಹರಣೆಗೆ, ವಿಶ್ವವಿದ್ಯಾಲಯಗಳ ಅಧ್ಯಾಪಕರಿಗೆ ವೇತನ ಹೆಚ್ಚಳ ಮಾಡಿದಾಗ ಯುಜಿಸಿ ಕೆಲವು ಕಾಲ ಆಗುವ ಅತಿರಿಕ್ತ ವೆಚ್ಚವನ್ನು ತುಂಬಿ ಕೊಡುತ್ತದೆ. ಡಯಟ್‌ಗಳಿಗೆ, ಸರ್ವಶಿಕ್ಷಾ ಅಭಿಯಾನದಂಥ ಯೋಜನೆಗಳಿಗೆ ಭಾಗಶಃ ವೆಚ್ಚವನ್ನು ಕೇಂದ್ರ ಸರಕಾರ ಒದಗಿಸುತ್ತದೆ.

ರಾಜ್ಯ ಸರಕಾರಗಳು ತಮ್ಮ ಶಿಕ್ಷಣ ವ್ಯವಸ್ಥೆಯ ಮೂಲಭೂತ ವೆಚ್ಚಗಳಿಗೆ (ವೇತನ ಇತ್ಯಾದಿ) ಮತ್ತು ಯೋಜನೆಗಳಿಗೆ ಬೇಕಾಗುವ ಹಣಕಾಸನ್ನು ತಾವೇ ಒದಗಿಸುತ್ತವೆ. ಕೆಲವು ವೇಳೆ ಈ ಶೈಕ್ಷಣಿಕ ಯೋಜನೆಗಳಿಗೆ ರಾಜ್ಯ ಸರಕಾರಗಳು ಕೇಂದ್ರ ಸರಕಾರದಿಂದ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಂದ (ಯು. ಎನ್.ಓ., ಯುನೆಸ್ಕೋ, ವಿಶ್ವಬ್ಯಾಂಕ್ ಇತ್ಯಾದಿ) ಆರ್ಥಿಕ ನೆರವನ್ನು ಪಡೆಯಬಹುದು.

ಸರಕಾರಗಳ (ಕೇಂದ್ರ/ರಾಜ್ಯ) ದೃಷ್ಟಿಯಿಂದ ಶಿಕ್ಷಣ ನೇರವಾಗಿ ಉತ್ಪಾದಕ ಕ್ಷೇತ್ರವೆನಿಸುವುದಿಲ್ಲ. ವಿದ್ಯಾರ್ಥಿಗಳು ಕೊಡುವ ಶುಲ್ಕದಿಂದ ಸ್ವಲ್ಪ ಮಟ್ಟಿನ ಆದಾಯ ಬರಬಹುದಾದರೂ, ಶಿಕ್ಷಣಕ್ಕೆ ಬೇಕಾಗುವ ವೆಚ್ಚಕ್ಕೆ ಹೋಲಿಸಿದರೆ ಈ ಆದಾಯ ಏನೇನೂ ಅಲ್ಲ. ಆದ್ದರಿಂದ, ಶೈಕ್ಷಣಿಕ ವೆಚ್ಚವನ್ನು ಉತ್ಪಾದನೆಯ ದೃಷ್ಟಿಯಿಂದ ಪರಿಗಣಿಸಲು ಸಾಧ್ಯವಿಲ್ಲ. ಆದಾಗ್ಯೂ, ಪ್ರಜಾಸತ್ತಾತ್ಮಕ ದೇಶಗಳಲ್ಲಿ ಸಮಾಜದ ಹಿತದೃಷ್ಟಿಯಿಂದ ಜನತೆಗೆ ಶಿಕ್ಷಣ ನೀಡಬೇಕಾದುದು ಅನಿವಾರ್ಯವಾಗುತ್ತದೆ. ಆದ್ದರಿಂದ, ಶಿಕ್ಷಣಕ್ಕೆ ಹಣಕಾಸು ಒದಗಿಸುವುದು ಸರಕಾರಗಳ ಕರ್ತವ್ಯವಾಗುತ್ತದೆ. ಆದರೆ, ಬೇರೆ ಉತ್ಪಾದಕ ಕಾರ್ಯಗಳಿಗೆ, ಭೌತಿಕ ಅಭಿವೃದ್ಧಿ ಕಾರ್ಯಗಳಿಗೆ ಸರಕಾರಗಳು ಮಾಡುವ ಖರ್ಚಿಗೆ ಹೋಲಿಸಿದರೆ ಶಿಕ್ಷಣಕ್ಕೆ ಖರ್ಚುಮಾಡುವ ಹಣಕಾಸಿನ ಪ್ರತಿಶತ ಕಡಿಮೆಯೇ ಆಗಿರುತ್ತದೆ.

–ಡಾ. ಯಾದವಾಡ ಎಸ್.ಪಿ.

## ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ಸಿಎಬಿಇ)

ಶೈಕ್ಷಣಿಕ ಕಾರ್ಯನೀತಿಯ ಸಾಮಾನ್ಯ ಗುರಿಗಳನ್ನು ವ್ಯಾಖ್ಯಾನಿಸುವುದು ಮತ್ತು ಸ್ಥಳೀಯ ಸರಕಾರಗಳಿಗೆ ಸಲಹೆ ಸೂಚನೆ ಮತ್ತು ನೆರವನ್ನು ನೀಡುವುದು ಮತ್ತು ಸಂಯೋಜಿತ ಮಾಹಿತಿಯನ್ನು ಪೂರೈಸುವುದರ ಮೂಲಕ ಭಾರತದ ಪ್ರಾಂತಗಳಲ್ಲಿ ಮತ್ತು ಇತರೆಡೆಗಳಲ್ಲಿ ಶೈಕ್ಷಣಿಕ ಕಲ್ಪನೆಗಳನ್ನು ಅಭಿವೃದ್ಧಿ ಪಡಿಸುವ ಅಮೂಲ್ಯ ಕಾರ್ಯವನ್ನು ನಡೆಸುವುದಕ್ಕಾಗಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ (ಸಿಎಬಿಇ) ಕಲ್ಪನೆ ಮೊದಲ ಬಾರಿ ಕಲ್ಕತ್ತಾ ವಿಶ್ವವಿದ್ಯಾಲಯ ಆಯೋಗದಿಂದ(1917–19) ವ್ಯಕ್ತವಾಯಿತು. ಇದೇ ಸಮಯದಲ್ಲಿ ಭಾರತ ಸರಕಾರದ 1919ನೇ ವಿಧಿಯು ಶಿಕ್ಷಣವನ್ನು ಮುಖ್ಯವಾಗಿ ಪ್ರಾಂತೀಯ ವಿಷಯವಾಗಿ ಮಾಡಿ ಅದರ ಮೇಲೆ ಕೇಂದ್ರ ಸರಕಾರದ ನಿಯಂತ್ರಣ ಕನಿಷ್ಠವಾಗಿರುವಂತೆ ನಿರ್ಧರಿಸಿತ್ತು. ಈ ಮೂಲಭೂತ ನಿರ್ಧಾರವು ಭಾರತ ಸರಕಾರದ ನಡವಳಿಕೆಯನ್ನು (ಜಿಒಐ) ಕಾರ್ಯನಿರ್ವಾಹಕದಿಂದ ಸಲಹಾ ಅಧಿಕಾರವಾಗಿ ಬದಲಾಯಿಸಿತು. ಹಿಂದೆ ಕಲ್ಕತ್ತಾ ವಿಶ್ವವಿದ್ಯಾಲಯ ಆಯೋಗ ವ್ಯಕ್ತಪಡಿಸಿದ ಶಿಫಾರಸಿನ ಸೂಚನೆಯನ್ನು ಅತ್ಯಗತ್ಯವೆಂದು ಪರಿಗಣಿಸಿ, ಅದನ್ನು ಅಳವಡಿಸಿಕೊಂಡು, ಅದಕ್ಕನುಗುಣವಾಗಿ 1921ರಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸ್ಥಾಪನೆಯಾಯಿತು. 1923ರಲ್ಲಿ ಆರ್ಥಿಕ ಬಿಕ್ಕಟ್ಟಿನಿಂದಾಗಿ ತೀವ್ರ ಮಿತವ್ಯಯದ ಕಾರಣವನ್ನು ಮುಂದಿಟ್ಟು ಇದನ್ನು ರದ್ದುಪಡಿಸಲಾಯಿತು. ಮಂಡಳಿ ತಾನು ಅಸ್ತಿತ್ವದಲ್ಲಿದ್ದ ಎರಡು ವರ್ಷಗಳಲ್ಲಿ ಏಳು ಸಭೆಗಳನ್ನು ನಡೆಸಿತು. ಅವುಗಳೆಂದರೆ, 1921ರಲ್ಲಿ ಮೂರು ಸಭೆಗಳು(ಫೆಬ್ರವರಿ, ಜೂನ್ ಮತ್ತು ಅಕ್ಟೋಬರ್), 1922ರಲ್ಲಿ ಮೂರು ಸಭೆಗಳು(ಜನವರಿ, ಮೇ ಮತ್ತು ಅಕ್ಟೋಬರ್), ಮತ್ತು 1923 ಫೆಬ್ರವರಿಯಲ್ಲಿ ಒಂದು ಸಭೆಯನ್ನು ನಡೆಸಲಾಯಿತು. ನಂತರ 12 ವರ್ಷಗಳ ಕಾಲ ಭಾರತ ಸರಕಾರಕ್ಕೆ ಶೈಕ್ಷಣಿಕ ವಿಷಯಗಳ ಕುರಿತು ಸಲಹೆಸೂಚನೆ ನೀಡುವ ಕೇಂದ್ರ ಸಂಸ್ಥೆ ಯಾವುದೂ ಇರಲಿಲ್ಲ. ಆದರೆ, ಅಷ್ಟರಲ್ಲಿಯೇ ಮಂಡಳಿಯನ್ನು ಮುಂದುವರಿಸದೇ ಇದ್ದುದರ ಕುರಿತು ಪಶ್ಚಾತ್ತಾಪದ ಭಾವನೆ ಕಾಣಿಸಿತು. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯನ್ನು ಪುನರುಜ್ಜೀವಿತಗೊಳಿಸುವಂತೆ ಹಾರ್ಟೋಗ್ ಸಮಿತಿ (1928) ಶಿಫಾರಸು ಮಾಡಿತು. ಸೆಪ್ಟೆಂಬರ್ 1935ರಲ್ಲಿ ಮಂಡಳಿ ಮರುಸ್ಥಾಪನೆಯಾಗುವವರೆಗೆ ಈ ವಿಷಯದ ಕುರಿತು ಚರ್ಚೆ ಮುಂದುವರಿಯಿತು. ಮಂಡಳಿಯ ಮರುರಚನೆಗೆ ಸರ್ ಗಿರಿಜಾ ಶಂಕರ್ ವಾಜಪೇಯಿಯವರ ದಣಿವರಿಯದ ಪ್ರಯತ್ನಗಳೇ ಕಾರಣ. ಮರುಸ್ಥಾಪನೆಯಾದ ಮಂಡಳಿಯ ಪ್ರಥಮ ಸಭೆ ಸರ್ ಗಿರಿಜಾ ಶಂಕರ್ ವಾಜಪೇಯಿಯವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 19–20, 1935 ರಲ್ಲಿ ನಡೆಯಿತು. ಆಮೇಲೆ 1975 ರವರೆಗೆ ಯಾವುದೇ ತಡೆಯಿಲ್ಲದೆ ಮಂಡಳಿಯ ಸಭೆಗಳು ನಡೆದವು. ಆದರೆ ನಂತರ 1983ರವರೆಗೆ 8 ವರ್ಷಗಳ ಕಾಲ ಸಭೆಗಳು ಸ್ಥಗಿತಗೊಂಡವು. 1986ರಿಂದ 1994ರವರೆಗೆ ಯಾವುದೇ ನಿಡುಗಡೆಗಳಿಲ್ಲದೆ ಅದು ಸಭೆಗಳನ್ನು ನಡೆಸಿತು. 1994ರಿಂದ ಮಂಡಲಿಗೆ ತನ್ನ ಸಭೆಗಳನ್ನು ನಡೆಸುವುದಕ್ಕೆ ಸಾಧ್ಯವಾಗಲಿಲ್ಲ. ಮಂಡಳಿಯು ವರ್ಷಕ್ಕೊಮ್ಮೆ ಸೇರುವ ಅಭ್ಯಾಸವನ್ನು ಅಳವಡಿಸಿಕೊಂಡಿದ್ದರೂ, 1938, 1943, 1950, 1986, 1988 ಮತ್ತು 1992ರಲ್ಲಿ ವರ್ಷಕ್ಕೆ ಎರಡು ಸಭೆಗಳನ್ನು ನಡೆಸಲಾಗಿದೆ. ಮಂಡಳಿಯ ಬಹುಪಾಲು ಸಭೆಗಳನ್ನು ದೆಹಲಿಯಲ್ಲಿ ಆಯೋಜಿಸಲಾಗಿದೆ; ಆದರೆ, ಕೆಲವು ಸಭೆಗಳು ರಾಜ್ಯಗಳಲ್ಲಿ ಕೂಡ

Digitised by Bharatavani, CIIL

ನಡೆದಿವೆ. 1994ರಲ್ಲಿ ಮಂಡಳಿ ತನ್ನ 50ನೇ ಸಭೆಯನ್ನು ನಡೆಸಿದೆ. 1935ರಿಂದ 1994ರವರೆಗೆ ನಡೆದ 50 ಸಭೆಗಳಲ್ಲಿ ದೆಹಲಿಯಲ್ಲಿ 35 ಸಭೆಗಳು ಮತ್ತು ಇತರ ರಾಜ್ಯಗಳು/ನಗರಗಳಲ್ಲಿ 17 ಸಭೆಗಳು ನಡೆದಿವೆ. ಎರಡು ಸಭೆಗಳನ್ನು ಮದ್ರಾಸ್‌ನಲ್ಲಿ(ಚೆನ್ನೈ), ಸಿಮ್ಲಾ, ಹೈದರಾಬಾದ್, ಲಕ್ನೋ, ಡೆಹರಾಡೂನ್, ಬರೋಡಾ, ಕರಾಚಿ, ಮೈಸೂರು, ಬಾಂಬೆ(ಈಗಿನ ಮುಂಬೈ), ಅಲಹಾಬಾದ್, ಕಟಕ್, ತಿರುವನಂತಪುರ, ಜೈಪುರ, ಪಚಮರ್ಹಿ, ಬೆಂಗಳೂರು ಮತ್ತು ಚಂಡಿಘರ್‌ನಲ್ಲಿ ತಲಾ ಒಂದು ಸಭೆಯನ್ನು ನಡೆಸಲಾಗಿದೆ. ಈ ಸಭೆಯ ಅಧ್ಯಕ್ಷಸ್ಥಾನವನ್ನು ಪ್ರಮುಖ ವ್ಯಕ್ತಿಗಳು ಅಲಂಕರಿಸಿದ್ದಾರೆ. 1948ರಿಂದ 1958ರವರೆಗಿನ ಒಂಭತ್ತು ಸಭೆಗಳ ಅಧ್ಯಕ್ಷರಾಗಿದ್ದವರು ಮೌಲಾನ ಅಬ್ದುಲ್ ಕಲಮ್. 1957ರಿಂದ 1963ರವರೆಗೆ ಆರು ಸಭೆಗಳ ಅಧ್ಯಕ್ಷರಾಗಿದ್ದವರು ಡಾ.ಕೆ.ಎಲ್. ಶ್ರೀಮಾಲಿ. 1986ರಿಂದ 1994ರವರೆಗೆ ಪಿ.ವಿ. ನರಸಿಂಹರಾವ್ ಮತ್ತು ಅರ್ಜುನ್ ಸಿಂಗ್ ಅವರು ನಾಲ್ಕು, ನಾಲ್ಕು, ಸಭೆಗಳ ಅಧ್ಯಕ್ಷರಾಗಿದ್ದರು; 1935ರಿಂದ 1945ರವರೆಗೆ ಕ್ರಮವಾಗಿ ಮೂರು ಸಭೆಗಳ ಅಧ್ಯಕ್ಷರಾಗಿದ್ದವರು ಸರ್ ಗಿರಿಜಾ ಶಂಕರ್ ವಾಜಪೇಯಿ, ಕನ್ವರ್ ಸರ್ ಜಗದೀಶ್ ಪ್ರಸಾದ್ ಮತ್ತು ಸರ್ದಾರ್ ಸರ್ ಜೋಗೇಂದ್ರ ಸಿಂಘ್, ಮತ್ತು 1972ರಿಂದ 1975ರವರೆಗೆ ಪ್ರೊ.ಎಸ್. ನುರೂಲ್ ಹಸನ್ ಅವರು; ಎರಡು ಸಭೆಗಳ ಅಧ್ಯಕ್ಷರಾಗಿದ್ದವರು 1942–43ರಲ್ಲಿ ಸರ್. ಮೌರೀಸ್ ಗ್ವೆರ್, 1965–66ರಲ್ಲಿ ಎಮ್.ಸಿ. ಚಾಗ್ಲಾ, 1967–68ರಲ್ಲಿ ಡಾ. ತ್ರಿಗುಣ್ ಸೇನ್ ಮತ್ತು 1988–89ರಲ್ಲಿ ಪಿ. ಶಿವ ಶಂಕರ್. ಪ್ರತಿಯೊಬ್ಬರೂ ಒಂದೊಂದು ಸಭೆಯ ಅಧ್ಯಕ್ಷ ಸ್ಥಾನ ಹೊಂದಿದ್ದವರೆಂದರೆ, 1946ರಲ್ಲಿ ರೆವರೆಂಡ್ ಜಿ.ಡಿ. ಬರ್ನೆ, 1951ರಲ್ಲಿ ಬಿ.ಜಿ. ಖೇರ್, 1954ರಲ್ಲಿ ಎನ್.ಕೆ. ಶಿದ್ಧಾಂತ, 1983ರಲ್ಲಿ ಶೈಲಾ ಕೌಲ್ ಮತ್ತು 1991ರಲ್ಲಿ ರಾಜಮಂಗಲ ಪಾಂಡೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಭೆಯ ಕಾರ್ಯಕಲಾಪಗಳು ಭಾರತದಲ್ಲಿನ ಶೈಕ್ಷಣಿಕ ಚಿಂತನೆ ಮತ್ತು ಪ್ರಗತಿಯ ವಿಸ್ತರಿತ ವಿವರಗಳನ್ನು ಒದಗಿಸುತ್ತವೆ. ಪ್ರತಿಯೊಂದು ಸಮಸ್ಯೆಯನ್ನು ಅಭಿಪ್ರಾಯ ಮತ್ತು ಸಲಹೆ ಸೂಚನೆಗಳಿಗಾಗಿ ಮಂಡಳಿಯ ಗಮನಕ್ಕೆ ತರುವುದು ಶಿಕ್ಷಣ ಮಂತ್ರಾಲಯದ ವಾಡಿಕೆಯಾಗಿದೆ. ಶಿಕ್ಷಣದ ಪ್ರತಿಯೊಂದು ವಲಯದ ಪ್ರತಿಯೊಂದು ಮುಖ್ಯ ಸಮಸ್ಯೆ ಮಂಡಳಿಯ ಶಿಫಾರಸುಗಳನ್ನು ಒಳಗೊಂಡಿದೆ.

**ಕೇಂದ್ರ ಶಿಕ್ಷಣ ಸಲಹಾ ಮಂಡಳಿಗಾಗಿ ನಿರ್ಧಾರಿತವಾಗಿರುವ ಕಾರ್ಯಗಳೆಂದರೆ:**

1. ಭಾರತ ಸರಕಾರ ಅಥವಾ ಯಾವುದೇ ಸ್ಥಳೀಯ ಸರಕಾರ ಗಮನಕ್ಕೆ ತಂದ ಯಾವುದೇ ಶೈಕ್ಷಣಿಕ ಸಮಸ್ಯೆಗಳಿಗೆ ಸಲಹೆ ನೀಡುವುದು.
2. ಭಾರತಕ್ಕೆ ವಿಶೇಷ ಆಸಕ್ತಿದಾಯಕವಾದ ಅಥವಾ ಮೌಲ್ಯವಿರುವ ಶೈಕ್ಷಣಿಕ ಅಭಿವೃದ್ಧಿಯ ಕುರಿತಾದ ಮಾಹಿತಿ ಮತ್ತು ಸಲಹೆ ಸೂಚನೆಗಳನ್ನು ಗಮನಕ್ಕೆ ತರಿಸಿಕೊಳ್ಳುವುದು, ಮತ್ತು
3. ಈ ಮಾಹಿತಿಯನ್ನು ಪರಿಶೀಲಿಸಿ, ಶಿಫಾರಸುಗಳೊಂದಿಗೆ ಭಾರತ ಸರಕಾರ ಮತ್ತು ಸ್ಥಳಿಯ ಸರಕಾರಗಳಿಗೆ ಹಂಚಿ ಕೊಡುವುದು.

ಈ ಶಿಫಾರಸುಗಳು ಸಂಪೂರ್ಣವಾಗಿ ಸಲಹಾ ರೂಪದಲ್ಲಿ ಇರುತ್ತವೆ. ಅವು ಪ್ರಾಂತೀಯ ಸರಕಾರಗಳಿಗೆ ಶಾಸನವಾಗಿ ಇರುವುದಿಲ್ಲ.

1935ರಲ್ಲಿ ಸಂಯೋಜಿತವಾದ ಮಂಡಳಿಯ ಸಂಯೋಜನೆ ಹೀಗಿದೆ: ಶಿಕ್ಷಣ ವಿಭಾಗದ ಗೌರವಾನ್ವಿತ ಸದಸ್ಯತ್ವ ಹೊಂದಿದವರು(ಅಧ್ಯಕ್ಷರು), ಕೇಂದ್ರ ಸರಕಾರದೊಂದಿಗಿನ ಶಿಕ್ಷಣ ಆಯುಕ್ತರು; ಭಾರತ ಸರಕಾರದಿಂದ ನಿಯುಕ್ತರಾದ 6 ಮಂದಿ, ಇವರಲ್ಲಿ ಕನಿಷ್ಠ ಒಬ್ಬರು ಮಹಿಳೆ: ರಾಜ್ಯ ಮಂಡಳಿಯಿಂದ ಆಯ್ಕೆಯಾದ ಒಬ್ಬ ಸದಸ್ಯರು; ವಿಧಾನ ಸಭೆಯಿಂದ ಆಯ್ಕೆಯಾದ ಇಬ್ಬರು ಸದಸ್ಯರು, ಭಾರತದ ಅಂತರ್‌ವಿಶ್ವವಿದ್ಯಾಲಯದಿಂದ ಆಯ್ಕೆಯಾದ ಮೂರು ಸದಸ್ಯರು; ಮತ್ತು ಪ್ರತಿಯೊಂದು ಸ್ಥಳೀಯ ಸರಕಾರದ ಒಬ್ಬ ಪ್ರತಿನಿಧಿ, ಇವರು ಹಾಲಿ ಮಂತ್ರಿಗಳಾಗಿರುತ್ತಾರೆ ಅಥವಾ ಸಾರ್ವಜನಿಕ ಶಿಕ್ಷಣ ನಿರ್ದೇಶಕರು. ಮಂಡಳಿಯ ಸಂವಿಧಾನ ಮತ್ತು ಕಾರ್ಯಗಳಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಆಗಿಲ್ಲ. ಆದರೆ ಸಂವಿಧಾನಾತ್ಮಕ ಬದಲಾವಣೆಗಳಿಂದಾಗಿ ಅಥವಾ ರಾಜ್ಯಗಳ ಮರುಸಂಘಟನೆಗಳಿಂದ ಮಂಡಳಿಯ ಸಂಯೋಜನೆ ಮಾತ್ರ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದಬೇಕಾಗುತ್ತದೆ.

1947ಕ್ಕಿಂತ ಮೊದಲು, ಭಾರತದ ಗವರ್ನರ್ ಜನರಲ್‌ರ ಕಾರ್ಯಕಾರಿ ಸಮಿತಿಯಲ್ಲಿ ಶಿಕ್ಷಣದ ಮೇಲಧಿಕಾರಿಯಾಗಿದ್ದ ಸದಸ್ಯರು ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಿದ್ದರು. ಈಗ ಮಾನವ ಸಂಪನ್ಮೂಲ ಇಲಾಖೆಯ ಕೇಂದ್ರ ಮಂತ್ರಿಗಳು ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿ ಇರುತ್ತಾರೆ. ಮಾನವ ಸಂಪನ್ಮೂಲ ಇಲಾಖೆಯ ರಾಜ್ಯ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಭಾರತ ಸರಕಾರದ ಪ್ರತಿನಿಧಿಗಳಲ್ಲಿ ಮಾಹಿತಿ ಮತ್ತು ಪ್ರಸಾರ ಇಲಾಖೆಯ ಸಚಿವರು, ಕಲ್ಯಾಣ ಮಂತ್ರಾಲಯದ ಸಚಿವರು, ಕಾರ್ಮಿಕ ಮಂತ್ರಾಲಯದ ರಾಜ್ಯ ಸಚಿವರು, ವಿಜ್ಞಾನ ಮತ್ತು ತಂತ್ರಜ್ಞಾನಗಳ ರಾಜ್ಯ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಯುವಜನ ಕಾರ್ಯ ಮತ್ತು ಕ್ರೀಡಾ ರಾಜ್ಯ ಸಚಿವರು, ಯೋಜನಾ ಆಯೋಗದ ಸದಸ್ಯರು(ಶಿಕ್ಷಣ). ರಾಜ್ಯ ಸರಕಾರಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿಕಾರಿಗಳಲ್ಲಿ ಪ್ರತಿಯೊಂದು ರಾಜ್ಯ ಸರಕಾರದ ಶಿಕ್ಷಣ ಸಚಿವರು, ಲೆಫ್ಟಿನೆಂಟ್ ಗವರ್ನರ್ ಅಥವಾ ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶದ ಶಿಕ್ಷಣ ಸಚಿವರು. ಚುನಾಯಿತ ಸದಸ್ಯರಲ್ಲಿ ರಾಜ್ಯಸಭೆಯ ಇಬ್ಬರು ಸದಸ್ಯರು ಮತ್ತು ಲೋಕಸಭೆಯ ನಾಲ್ಕು ಸಂಸತ್ ಸದಸ್ಯರು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಒಬ್ಬ ಸದಸ್ಯರು, ಇವರನ್ನು ಸಮಿತಿಯ ಅಧ್ಯಕ್ಷರು ಸೂಚಿಸಬೇಕು; ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಒಬ್ಬ ಸದಸ್ಯರು, ಇವರನ್ನು ಸಂಘದ ಕಾರ್ಯನಿರ್ವಾಹಕ ಮಂಡಳಿ ಚುನಾಯಿಸುತ್ತದೆ; ಭಾರತೀಯ ವೈದ್ಯಪದ್ಧತಿಯ ಕೇಂದ್ರ ಮಂಡಳಿಯ ಒಬ್ಬ ಸದಸ್ಯ,

Digitised by Bharatavani, CIIL

ಇವರನ್ನು ಮಂಡಳಿ ನೇಮಕ ಮಾಡುತ್ತದೆ.

**ಈ ಕೆಳಗಿನವರು ಪದನಿಮಿತ್ತ ಸದಸ್ಯರಾಗಿ ಇರುತ್ತಾರೆ:**

ಅಧ್ಯಕ್ಷರು, ಯುಜಿಸಿ; ಮಹಾ ನಿರ್ದೇಶಕರು, ಭಾರತೀಯ ಕೃಷಿ ಸಂಶೋಧನಾ ಮಂಡಳಿ; ಅಧ್ಯಕ್ಷರು, ಕೇಂದ್ರ ಸಮಾಜ ಕಲ್ಯಾಣ ಮಂಡಳಿ; ನಿರ್ದೇಶಕರು, ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆ; ನಿರ್ದೇಶಕರು, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ; ಅಧ್ಯಕ್ಷರು, ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ; ಅಧ್ಯಕ್ಷರು, ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ; ಅಧ್ಯಕ್ಷರು, ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ; ಅಧ್ಯಕ್ಷರು, ಭಾರತೀಯ ತತ್ವಜ್ಞಾನ ಸಂಶೋಧನಾ ಮಂಡಳಿ; ಮಹಾ ನಿರ್ದೇಶಕರು, ರಾಷ್ಟ್ರೀಯ ಸಾಕ್ಷರತಾ ಮಿಶನ್.

ಭಾರತ ಸರಕಾರವು ಮಂಡಳಿಯ ಸದಸ್ಯರಾಗಿ ವಿವಿಧ ವಿಭಾಗಗಳನ್ನು ಪ್ರತಿನಿಧಿಸುವ ಮೂವತ್ತೆರಡು ಶಿಕ್ಷಣತಜ್ಞರನ್ನು ನೇಮಕಗೊಳಿಸುತ್ತದೆ. ಮಂಡಳಿಯ ಅಧ್ಯಕ್ಷರು ಭಾರತ ಸರಕಾರದ ಅಧಿಕಾರಿಯೊಬ್ಬರನ್ನು ಮಂಡಳಿಯ ಸದಸ್ಯ-ಕಾರ್ಯದರ್ಶಿಯಾಗಿ ನೇಮಕಗೊಳಿಸುತ್ತಾರೆ. ಪದನಿಮಿತ್ತ ಸದಸ್ಯರನ್ನು ಬಿಟ್ಟರೆ ಉಳಿದ ಸದಸ್ಯರ ಅಧಿಕಾರಾವಧಿಯು ಮೂರು ವರ್ಷಗಳಾಗಿರುತ್ತದೆ. ಮಂಡಳಿಯ ಸರ್ವೋತ್ಕೃಷ್ಟತೆಯು ಅದರ ಸಂಯೋಜನೆಯಿಂದ ಸುವ್ಯಕ್ತವಾಗುತ್ತದೆ. ಮಂಡಳಿಗೆ ಕಾನೂನಿನ ಅಥವಾ ಶಾಸನಬದ್ಧ ಅಧಿಕಾರ ಇಲ್ಲ ಎಂಬುದೇನೋ ನಿಜ. ಆದರೆ ಅದು ತನ್ನ ಐಡಿಯಾಗಳ ಚಲನಶೀಲ ಅಧಿಕಾರದ ಮೂಲಕ ನೈತಿಕ ಅಧಿಕಾರವನ್ನು ಚಾಲನೆಗೆ ತರುತ್ತದೆ. ಮಂಡಳಿಯನ್ನು ಹೆಚ್ಚುವರಿ-ಸಂವಿಧಾನಾತ್ಮಕ ಸಂಸತ್ತಿನ ಹಾಗೆ ಕಾಣಲಾಗುತ್ತದೆ.

ಕಾಲಾನುಕ್ರಮದಲ್ಲಿ ಭಾರತದ ಶೈಕ್ಷಣಿಕ ಚಿಂತನೆಯನ್ನು ರೂಪುಗೊಳಿಸುವಲ್ಲಿ ಮಂಡಳಿಯ ಕಾಣಿಕೆಯು ವಿಶಿಷ್ಟ ಪ್ರಾಮುಖ್ಯತೆಯನ್ನು ಹೊಂದಿದೆ. ಸ್ವಾತಂತ್ರ್ಯಪೂರ್ವ ಕಾಲವು ಪ್ರಾಥಮಿಕ ಅಧ್ಯಯನಗಳು ಮತ್ತು ಯೋಜನೆಯ ರೂಪಣೆಯಲ್ಲಿ ಕಳೆದಿದೆ. ಪ್ರಪ್ರಥಮ ಸಭೆಯಲ್ಲಿ ಮಂಡಳಿ ಎದುರಿಸಿದ ಸಮಸ್ಯೆಯೆಂದರೆ ವಿದ್ಯಾವಂತ ಯುವಜನರಲ್ಲಿ ಬೆಳೆಯುತ್ತಿದ್ದ ನಿರುದ್ಯೋಗದ ಸಮಸ್ಯೆ. ಈ ಪಿಡುಗನ್ನು ಎದುರಿಸುವುದಕ್ಕಾಗಿ ದೇಶದ ಶಿಕ್ಷಣ ವ್ಯವಸ್ಥೆಯ ಮರುರಚನೆಯಾಗುವುದು ಅಗತ್ಯವೆಂದು ಮಂಡಳಿ ಸರಿಯಾಗಿಯೇ ಶಿಫಾರಸು ಮಾಡಿದೆ. ಇದರ ಫಲವೇ 'ಯುದ್ಧೋತ್ತರ ಶೈಕ್ಷಣಿಕ ಅಭಿವೃದ್ಧಿ ಯೋಜನೆ'(ಪ್ಲಾನ್ ಆಫ್ ಪೋಸ್ಟ್-ವಾರ್ ಎಡ್ಯುಕೇಶನಲ್ ಡೆವಲಪ್‌ಮೆಂಟ್-1944). ಇದು ಭಾರತಕ್ಕೆ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಕಾಣಿಸಿದ ಮೊತ್ತಮೊದಲ ದಾಖಲೆಯಾಗಿದೆ. ಈ ದಾಖಲೆಯನ್ನು ಸಾರ್ಜೆಂಟ್ ಯೋಜನೆ ಅಥವಾ ಸಾರ್ಜೆಂಟ್ ವರದಿ ಎಂದು ಕೂಡಾ ಕರೆಯಲಾಗುತ್ತದೆ. ಹಾಗಿದ್ದರೂ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಬಯಕೆಯನ್ನು ಇನ್ನೂ ಹಿಂದೆ ಕೊಂಡೊಯ್ಯಬಹುದು. ಮಕ್ಕಳನ್ನು ಶಾಲೆಗಳಿಂದ ಮತ್ತು ಮಹಾವಿದ್ಯಾಲಯಗಳಿಂದ ನಿಧಾನವಾಗಿ ಹಿಂದಕ್ಕೆ ಕರೆಸಿಕೊಳ್ಳುವುದು ಮತ್ತು ದೇಶದ ವಿವಿಧ ಪ್ರಾಂತಗಳಲ್ಲಿ ರಾಷ್ಟ್ರೀಯ ಶಾಲೆಗಳನ್ನು ಮತ್ತು ಮಹಾವಿದ್ಯಾಲಯಗಳನ್ನು ಸ್ಥಾಪಿಸುವುದರ ಕುರಿತಾಗಿ ನಾಗಪುರ ಕಾಂಗ್ರೆಸ್(1920) ಅಧಿವೇಶನದಲ್ಲಿ ಸಲಹೆ ಬಂದಿತ್ತು. ಇದಕ್ಕೆ ಮಹಾತ್ಮಾ ಗಾಂಧೀಜಿಯವರ ಬೆಂಬಲ ಇತ್ತು. ಲಾಲಾ ಲಜಪತ ರಾಯ್ ಅವರು ತಮ್ಮ 'ಭಾರತದ ರಾಷ್ಟ್ರೀಯ ಶಿಕ್ಷಣದ ಸಮಸ್ಯೆಗಳು'(ದಿ ಪ್ರಾಬ್ಲೆಮ್ಸ್ ಆಫ್ ನ್ಯಾಶನಲ್ ಎಡ್ಯುಕೇಶನ್ ಆಫ್ ಇಂಡಿಯಾ, 1920) ಗ್ರಂಥದಲ್ಲಿ 'ನಮ್ಮ ಶಿಕ್ಷಣದ ರಾಷ್ಟ್ರೀಯ ವ್ಯವಸ್ಥೆ ಏನಾಗಿರಬೇಕು?' ಎನ್ನುವ ಪ್ರಶ್ನೆಗೆ ಆನಿ ಬೆಸೆಂಟರ ಉತ್ತರವನ್ನು ಉದ್ಧರಿಸುತ್ತಾ, 'ಅದು ಭಾರತೀಯರಿಂದಲೇ ನಿಯಂತ್ರಿಸಲ್ಪಡಬೇಕು, ಭಾರತೀಯರಿಂದಲೇ ರೂಪಿಸಲ್ಪಡಬೇಕು ಮತ್ತು ಭಾರತೀಯರಿಂದಲೇ ಮುಂದುವರಿಯಬೇಕು. ಅದು ಭಾರತೀಯ ಆದರ್ಶಗಳಾದ ಅನುರಕ್ತಿ, ವಿವೇಕ ಮತ್ತು ನೈತಿಕತೆಯನ್ನು ಎತ್ತಿಹಿಡಿಯಬೇಕು. ಭಾರತೀಯ ಧಾರ್ಮಿಕ ಪ್ರಜ್ಞೆಗಳಾದ ಅಂಗೀಕರಿಸುವಿಕೆ, ವಿಶಾಲವಾಗಿರುವಿಕೆ ಮತ್ತು ಸಹನೆಗಳಿಂದ ವ್ಯಾಪಿಸಿಕೊಂಡಿರಬೇಕು' ಎಂದಿದ್ದಾರೆ.

ಇನ್ನೂ ಮುಂದುವರಿದು, ಅವರ ಅವಲೋಕನ ಹೀಗಿದೆ: 'ನಾವು ಬೆಳೆಸಿರುವ ನಾಗರಿಕತೆಯು ಮಹೋನ್ನತ ಗುಣವುಳ್ಳದ್ದಾಗಿತ್ತು, ಅತ್ಯುಚ್ಚವಾಗಿತ್ತು ಮತ್ತು ಶ್ರೇಷ್ಠವಾಗಿತ್ತು. ಧರ್ಮ, ತತ್ವಜ್ಞಾನ, ಕಾನೂನು, ಸಮಾಜ ಶಾಸ್ತ್ರ, ವಿಜ್ಞಾನ ಮತ್ತು ಕಲೆಗಳಲ್ಲಿ ನಮ್ಮ ಸಾಧನೆಗಳು ಪ್ರಾಚೀನ ಜಗತ್ತಿನಲ್ಲಿ ಅತ್ಯುತ್ತಮವಾದವುಗಳೊಂದಿಗೆ ಹೋಲಿಸಬಹುದಾದಷ್ಟು ಮೌಲ್ಯಭರಿತವಾಗಿವೆ. ಹಳೆಯದೆಲ್ಲವೂ ಪರಿಪೂರ್ಣ ಮತ್ತು ಆದರ್ಶವೆಂದು ನಾವು ತಿಳಿಯಬೇಕಾಗಿಲ್ಲ. ಕೆಲವು ಕಲ್ಪನೆಗಳು ತಪ್ಪು ಎಂಬುದಾಗಿ ಸಾಬೀತಾಗಿದೆ; ನಾವು ಅವುಗಳನ್ನು ಸುಧಾರಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಾವು ರಾಷ್ಟ್ರೀಯ ಶಿಕ್ಷಣದ ಸಮಸ್ಯೆಯನ್ನು ಕಾಣಬೇಕಾಗಿದೆ. ಯಾವುದನ್ನೂ ಭಾವಿಸಿಕೊಳ್ಳಬೇಡಿ, ಪ್ರತಿಯೊಂದು ಕಲ್ಪನೆಯನ್ನು ವಿಶ್ಲೇಷಣೆ ಮಾಡಿ ಮತ್ತು ಪ್ರತಿಯೊಂದು ಕಾರ್ಯಯೋಜನೆಯನ್ನೂ ದಿನದ ಬೆಳಕಿನಲ್ಲಿ, ವೈಜ್ಞಾನಿಕ ಸತ್ಯದ ಅನ್ವೇಷಣಾ ಬೆಳಕಿನಲ್ಲಿ ಪರೀಕ್ಷಿಸಿ. ಭಾರತದಲ್ಲಿ ದೇಶಭಕ್ತಿಯನ್ನು ಕಲಿಸುವುದು ಮತ್ತು ರಾಷ್ಟ್ರೀಯ ಶಿಕ್ಷಣದ ಕಾರ್ಯಯೋಜನೆಯಲ್ಲಿ ಅದರ ಸ್ಥಾನದ ಕಲ್ಪನೆಯು ಈ ಕೆಳಗಿನ ವಿಚಾರಗಳಿಂದ ಸುತ್ತುವರಿಯಲ್ಪಡಬೇಕಾಗಿದೆ:

1. ಭಾರತವನ್ನು ಇಡಿಯಾಗಿ ಪ್ರೀತಿಸುವುದು; ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳು ಭಾರತವನ್ನು ಕುರಿತು (ಭಾರತೀಯ ನದಿಗಳು, ಭಾರತೀಯ ಪರ್ವತಗಳು, ಭಾರತದ ಭೂದೃಶ್ಯ, ಹಿಮಾಲಯಗಳು, ಗಂಗೆ ಅಥವಾ ಬ್ರಹ್ಮಪುತ್ರ) ಪ್ರೀತಿಯನ್ನು ಬೋಧಿಸುವಂತಿರಬೇಕು,

2 ವಿವಿಧ ಧರ್ಮಗಳು, ಪಂಗಡಗಳು, ಮತ್ತು ಜಾತಿಗಳನ್ನು ಪರಿಗಣಿಸದೆ ದೇಶವನ್ನು ಸಮಗ್ರವಾಗಿ ಪ್ರೀತಿಸುವಂತೆ, ಮತ್ತು

3. ದೇಶಭಕ್ತಿಯನ್ನು ಕಲಿಸುವುದು.

Digitised by Bharatavani, CIIL

1935ರಲ್ಲಿ ಸ್ಥಾಪನೆಯಾದಂದಿನಿಂದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಭಾರತೀಯ ಶಿಕ್ಷಣದ ಅನೇಕ ಅಂಶಗಳನ್ನು ಒಂದರ ನಂತರ ಇನ್ನೊಂದರಲ್ಲಿ ಬಹಳ ಸೂಕ್ಷ್ಮವಾಗಿ ಪರೀಕ್ಷಿಸುತ್ತಾ ಬಂದಿದೆ. ಮಂಡಳಿಯು ತನ್ನ ಮೊದಲ ಸಭೆಗಳಲ್ಲಿ ಕೈಗೆತ್ತಿಕೊಂಡ ಚರ್ಚಾಸ್ಪದ ವಿಚಾರಗಳೆಂದರೆ, 'ನಿರುದ್ಯೋಗ ಮತ್ತು ಶೈಕ್ಷಣಿಕ ಮರುರಚನೆ' ಮತ್ತು 'ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಮತ್ತು ಅಂತರ್‌ವಿಶ್ವವಿದ್ಯಾಲಯ ಮಂಡಳಿ ನಡುವಿನ ಸಂಬಂಧ'. ಶಿಕ್ಷಣ ವ್ಯವಸ್ಥೆಯ ಮರುರಚನೆಗೆ ಶೈಕ್ಷಣಿಕ ಸಮಸ್ಯೆಗಳಾದ ಹೆಚ್ಚುತ್ತಿರುವ ನಿರುದ್ಯೋಗ, ವಿಶ್ವವಿದ್ಯಾಲಯಗಳಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ವಿಶ್ವವಿದ್ಯಾಲಯದ ಬೋಧನೆಯಿಂದ ಲಾಭ ಪಡೆಯಲು ಅಸಮರ್ಥರಾಗಿರುವುದು, ವಯೋಮಿತಿಗಿಂತ ಹೆಚ್ಚು ವಯಸ್ಸಾದ ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಮತ್ತು ಪದೇ ಪದೇ ನಡೆಯುವ ಪರೀಕ್ಷೆಗಳು ಇವುಗಳ ಕುರಿತು ಹೊಸ ಧೋರಣೆಯ ಅಗತ್ಯವಿತ್ತು. ಅಂತರ್‌ವಿಶ್ವವಿದ್ಯಾಲಯ ಮಂಡಳಿಯೊಂದಿಗಿನ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಂಬಂಧದ ವಿಚಾರವಾಗಿ ಅಂತರ್ ವಿಶ್ವವಿದ್ಯಾಲಯ ಮಂಡಳಿಯು ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ಉದ್ದೇಶಗಳಿಗೆ ಸ್ವಯಂಚಾಲಿತವಾಗಿ ಮತ್ತು ಅನಿವಾರ್ಯವಾಗಿ ಸಮಾಲೋಚಕ ಸಂಸ್ಥೆಯಾಗಿ ಕಾರ್ಯ ನಡೆಸಬೇಕು ಎಂದು ತಿಳಿಸಿದೆ. ಆದರೆ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಅಂತರ್‌ವಿಶ್ವವಿದ್ಯಾಲಯ ಮಂಡಳಿಗೆ ಸೂಚಿತವಾದ ಯಾವುದೇ ಪ್ರಶ್ನೆಯ ಕುರಿತಾಗಿ ಯಾವುದೇ ಶಿಫಾರಸನ್ನು ವ್ಯಕ್ತಪಡಿಸಲು ಸ್ವತಂತ್ರವಾಗಿದೆ.

1935ರಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯಿಂದ ನಾಲ್ಕು ಸಮಿತಿಗಳು ರಚನೆಗೊಂಡಿವೆ. ಅವುಗಳೆಂದರೆ, ಮಹಿಳಾ ಶಿಕ್ಷಣ ಸಮಿತಿ(ಹೆಣ್ಣುಮಕ್ಕಳಿಗೆ ಪ್ರಾಥಮಿಕ ಶಿಕ್ಷಣ), ಮಾಧ್ಯಮಿಕ ಶಿಕ್ಷಣ ಸಮಿತಿ, ದೇಶಿಯ ಭಾಷಾ ಶಿಕ್ಷಣ ಸಮಿತಿ ಮತ್ತು ಕಸಬು ಹಾಗೂ ವೃತ್ತಿಪರ ಶಿಕ್ಷಣ ಸಮಿತಿ. ಎರಡನೆಯ ಸಭೆಯ ಮುಖ್ಯ ಕಾರ್ಯಸೂಚಿ ವಿಷಯಗಳಲ್ಲಿ ಕೆಲವು ಹೀಗಿವೆ : ನಿರುದ್ಯೋಗ ಸಮಿತಿಯ ವರದಿ(ಸಂಯುಕ್ತ ಪ್ರಾಂತ), 1935; ಭಾರತದಲ್ಲಿ ವಿಶ್ವವಿದ್ಯಾಲಯ ಪದವಿಗಳ ಸಮಾನೀಕರಣ ಮತ್ತು ಪ್ರಮಾಣೀಕರಣ; ಮಹಿಳಾ ಸಮಿತಿಯ ವರದಿ; ಭಾರತದಲ್ಲಿರುವ ನಿರುದ್ಯೋಗಿಗಳು ಮತ್ತು ಅಂಗವಿಕಲರ ಶಿಕ್ಷಣದ ಕುರಿತಾದ ಅಂಕಿಅಂಶಗಳ ಸಂಗ್ರಹ ಇತ್ಯಾದಿ. ಮಂಡಳಿಯ 1937ರ ಸಭೆಯ ಮುಖ್ಯ ಕಾರ್ಯಸೂಚಿಗಳೆಂದರೆ ವೃತ್ತಿಶಿಕ್ಷಣದ ಕುರಿತಾದ ವುಡ್–ಅಬಟ್ ವರದಿ, ಮಹಿಳಾ ಶಿಕ್ಷಣದ ಪಠ್ಯಕ್ರಮ, ಪ್ರಾಥಮಿಕ ಹಂತಗಳಲ್ಲಿ ಅಪವ್ಯಯವನ್ನು ತಡೆಯಲು ಪ್ರಾಂತೀಯ ಸರಕಾರ ಕೈಗೊಂಡ ಕ್ರಮ ಮತ್ತು ಕೇಂದ್ರ ಶಿಕ್ಷಣ ಸಲಹಾ ಮಂಡಳಿ ರೂಪಿಸಿದ ಶೈಕ್ಷಣಿಕ ಮರುರಚನೆಯ ಕಾರ್ಯಯೋಜನೆಯ ಕುರಿತು ಪ್ರಾಂತೀಯ ಸರಕಾರಗಳು ಕೈಗೊಂಡ ಕ್ರಮಗಳು, 1936ರಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಶಿಫಾರಸಿನ ಮೇರೆಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ವೃತ್ತಿಪರ ಶಿಕ್ಷಣದ ಸ್ವರೂಪ ಮತ್ತು ವಸ್ತುವಿನ ಕುರಿತಾಗಿ ಸಲಹೆ ಸೂಚನೆಯನ್ನು ಪಡೆಯಲು ಸರಕಾರ ಇಂಗ್ಲೆಂಡಿನಿಂದ ಎ. ಆಬೊಟ್ ಮತ್ತು ಎಸ್.ಹೆಚ್. ವುಡ್ ಎಂಬ ಇಬ್ಬರು ತಜ್ಞರನ್ನು ಆಹ್ವಾನಿಸಿತು. ವರದಿಯನ್ನು ವೃತ್ತಿಪರ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣವೆಂಬ ಎರಡು ಭಾಗಗಳಲ್ಲಿ 1937ರಲ್ಲಿ ಒಪ್ಪಿಸಲಾಯಿತು. ಇದೇ ವೇಳೆ, ಮಹಾತ್ಮಾ ಗಾಂಧೀಜಿಯವರು ತಮ್ಮ 'ಹರಿಜನ' ಪತ್ರಿಕೆಯ ಮೂಲಕ ಸ್ವಾವಲಂಬಿತ, ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಅಳವಡಿಸಿಕೊಳ್ಳುವ ಸಲುವಾಗಿ 'ಮೂಲ ಶಿಕ್ಷಣ'ದ ಕ್ರಾಂತಿಕಾರಿ ಪ್ರಸ್ತಾವನೆಯನ್ನು ಜನತೆಯ ಮುಂದೆ ಇಟ್ಟರು. ವುಡ್–ಆಬೊಟ್ ವರದಿಯ ದೃಷ್ಟಿಯಲ್ಲಿ ವಾರ್ಧಾ ಕಾರ್ಯಯೋಜನೆಯಲ್ಲಿ (ಅಂದರೆ ಡಾ. ಜಾಕೀರ್ ಹುಸೇನ್ ಸಮಿತಿಯ ವರದಿ) ಅಳವಡಿಕೆಯಾಗಿರುವ ಶೈಕ್ಷಣಿಕ ಮರುರಚನೆಯ ಕಾರ್ಯಯೋಜನೆಯನ್ನು ಪರೀಕ್ಷಿಸುವ ಸಲುವಾಗಿ ಜನವರಿ 1938ರಲ್ಲಿ ಬಾಂಬೆಯ ಪ್ರಥಮ ಶಿಕ್ಷಣ ಮಂತ್ರಿಗಳಾಗಿದ್ದ ಬಿ.ಜಿ. ಖೇರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಡಿಸೆಂಬರ್ ತಿಂಗಳಲ್ಲಿ(1938) ಎರಡನೆಯ ಬಾರಿ ಸಭೆ ಸೇರಿದ ಮಂಡಳಿ ಬಿ.ಜಿ. ಖೇರ್ ಸಮಿತಿಯ ವರದಿಯನ್ನು ಪರಿಗಣಿಸಿತು. 'ಮೂಲ ಶಿಕ್ಷಣ'ದ ಕುರಿತಾಗಿ ಸಮಿತಿಯ ಶಿಫಾರಸುಗಳು ಮತ್ತು ಮಂಡಳಿಯ ನಿರ್ಧಾರಗಳು ಹೀಗಿವೆ:

1. 'ಪೂರ್ವ ಮೂಲ' ಶಿಕ್ಷಣಕ್ಕೆ ಅವಕಾಶ ನೀಡುವುದು ಹೆಚ್ಚು ಸಮ್ಮತವಾಗಿದ್ದರೂ, ಅದು ಸಾಧ್ಯವಾಗುವುದಿಲ್ಲ. ಏಕೆಂದರೆ ಪ್ರಾಥಮಿಕ–ಪೂರ್ವ ಶಿಕ್ಷಣವನ್ನು ಕಡ್ಡಾಯವಾದ ರೀತಿಯಿಂದ ಸಮರ್ಥಿಸಿಕೊಳ್ಳಲು ಹಣ ಮತ್ತು ಮಾನವಶಕ್ತಿಯ ಕೊರತೆ ಇದೆ.

2. ಪ್ರಾಂತೀಯ ಸರಕಾರಗಳು ಮಾದರಿ ಶಿಶು ಮತ್ತು ನರ್ಸರಿ ಶಾಲೆಗಳನ್ನು ಒದಗಿಸುವ, ತರಬೇತಿಹೊಂದಿರುವ ನರ್ಸರಿ ಶಿಕ್ಷಕರ ಪೂರೈಕೆಯನ್ನು ಹೆಚ್ಚಿಸುವ ಮತ್ತು ಪೂರ್ವಮೂಲ ಶಿಕ್ಷಣಶಾಲೆಗಳಿಗೆ ಸ್ವಯಂಸೇವಾ ಏಜೆನ್ಸಿಗಳ ಅವಕಾಶದ ಮೂಲಕ ಪ್ರಚೋದನೆ ನೀಡುವ ಗುರಿಯನ್ನು ಹೊಂದಿರಬೇಕು.

3. 'ಮೂಲ ಶಿಕ್ಷಣ'ದ ಕಾರ್ಯಯೋಜನೆಯು 6 ರಿಂದ 14 ವರ್ಷದವರಿಗೆ ಎಂಟು ವರ್ಷಗಳ ಕೋರ್ಸನ್ನು ಒಳಗೊಂಡಿರಬೇಕು.

4. 'ಮೂಲಶಿಕ್ಷಣ' ಶಾಲೆಯಿಂದ ಬೇರೆ ವಿಧದ ಶಾಲೆಗಳಿಗೆ ವಿದ್ಯಾರ್ಥಿಗಳ ವರ್ಗಾವಣೆಗೆ ಅವಕಾಶ ನೀಡಬೇಕು. ಕೆಲಸ ಮಾಡುವಿಕೆಯ ಮೂಲಕ ಕಲಿಕೆಯ ತತ್ವಕ್ಕೆ ಸಂಬಂಧಿಸಿದಂತೆ 'ಮೂಲಭೂತ' ಶಿಕ್ಷಣದ ಕಾರ್ಯಯೋಜನೆಯು ವೂಡ್–ಆಬೊಟ್ ವರದಿಯೊಂದಿಗೆ ಸಂಪೂರ್ಣ ಸಮ್ಮತಿಯನ್ನು ಹೊಂದಿದೆ; ಮತ್ತು

5. ಶಿಕ್ಷಣ ಮಾಧ್ಯಮವು ಮಾತೃಭಾಷೆಯಾಗಿರಬೇಕು.

ಅದು ಶಿಫಾರಸು ಮಾಡಿದ 'ಮೂಲ' ಶಿಕ್ಷಣದಲ್ಲಿ ಕಿರಿಯ ಮೂಲಶಿಕ್ಷಣಕ್ಕೆ ಐದು ವರ್ಷಗಳು ಮತ್ತು ಹಿರಿಯ ಮೂಲಶಿಕ್ಷಣಕ್ಕೆ ಮೂರು ವರ್ಷಗಳು ಇರುತ್ತವೆ; 'ಹಿರಿಯ

Digitised by Bharatavani, CIIL

ಮೂಲಶಿಕ್ಷಣ ಶಾಲೆ'ಗಳಲ್ಲದೆ, ಕೈಗಾರಿಕೆ ಮತ್ತು ವಾಣಿಜ್ಯ ವೃತ್ತಿಗಳಿಗೆ ಮತ್ತು ವಿಶ್ವವಿದ್ಯಾಲಯಗಳಿಗೆ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳಿಗಾಗಿ ಮತ್ತು 'ಹಿರಿಯ ಮೂಲ ಶಿಕ್ಷಣ' ಪಡೆಯುತ್ತಿರುವ ಹೆಣ್ಣುಮಕ್ಕಳಿಗೆ ಸೂಕ್ತ ರೀತಿಯ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಲಾದ ಐದು ವರ್ಷಗಳ ಅವಧಿಯ ಅನೇಕ ವಿಧದ ಪ್ರಾಥಮಿಕೋತ್ತರ ಶಾಲೆಗಳು ಇರಬೇಕು.

ಶೈಕ್ಷಣಿಕ ಮರುರಚನೆಯ ಅನೇಕ ವಿಚಾರಗಳ ಕುರಿತಾಗಿ ತನ್ನ ಆಲೋಚನೆಯನ್ನು ಮುಂದುವರಿಸಿದ ಮಂಡಳಿ, ಮೂಲ ಶಿಕ್ಷಣ ಮತ್ತು ಇತರ ವಿಚಾರಾಂಶಗಳ ಕುರಿತು ರಾಜ್ಯಗಳ ಅಭಿಪ್ರಾಯಗಳನ್ನು ಸಂಗ್ರಹಿಸಿತು ಮತ್ತು ಸಂಯೋಜಿಸಿತು. ಮಂಡಳಿ ಪರಿಗಣಿಸಿದ ಇತರ ಮುಖ್ಯ ವಿಚಾರಾಂಶಗಳೆಂದರೆ, ಭಾರತದಲ್ಲಿ ಶೈಕ್ಷಣಿಕ ರೇಡಿಯೊ ಪ್ರಸಾರ, ವಯಸ್ಕ ಶಿಕ್ಷಣ, ಗ್ರಾಮ ಗ್ರಂಥಾಲಯಗಳು, ಶೈಕ್ಷಣಿಕ ಪದಸಂಪತ್ತಿನಲ್ಲಿ 'ದೇಶಭಾಷೆ'(ವರ್ನಾಕ್ಯುಲರ್) ಎಂಬ ಪದವನ್ನು ಮುಂದುವರಿಸದಿರುವುದು, ಸೂಕ್ತವಲ್ಲದ ಚಲನಚಿತ್ರಗಳನ್ನು ಮಕ್ಕಳಿಗೆ ಪ್ರದರ್ಶಿಸದಿರುವುದು ಮತ್ತು ಭಾರತದಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಏಕರೂಪದ ವೈಜ್ಞಾನಿಕ ಪದಗಳ ಬಳಕೆ. 1944ರಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಮಿತಿಯು ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣದ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಅನೇಕ ಪ್ರಸ್ತಾಪಗಳನ್ನು ಪರಿಗಣಿಸಿತು. ಅದರಲ್ಲಿ ವಾರ್ಧಾ ಕಾರ್ಯಯೋಜನೆ ಕೂಡ ಸೇರಿತ್ತು(ಇದರ ಗುರಿ ಏನಾಗಿತ್ತೆಂದರೆ, ಮೂಲಶಿಕ್ಷಣ ಶಾಲೆಗಳಲ್ಲಿ ಕರಕುಶಲ ಕಾರ್ಯದ ಮಟ್ಟ ಯಾವ ಹಂತವನ್ನು ತಲುಪಬೇಕೆಂದರೆ, ವಿದ್ಯಾರ್ಥಿಗಳು ತಯಾರಿಸಿದ ವಸ್ತುವಿನ ಮಾರಾಟವು ಬಹುತೇಕ ಬೋಧನಾ ವೆಚ್ಚವನ್ನು ಭರಿಸುವಂತಿರಬೇಕು). ಅಂತಿಮವಾಗಿ ಮಂಡಳಿಯು ಹಿಂಜರಿಕೆಯಿಂದ ತೀರ್ಮಾನಕ್ಕೆ ಬಂದದ್ದೇನೆಂದರೆ ಭಾರತವು ಸೂಕ್ತ ವಿಧದ ಶಿಕ್ಷಣ ವ್ಯವಸ್ಥೆಯನ್ನು ಹೊಂದಬೇಕಾದರೆ, ಬೇರೆ ದೇಶಗಳ ರೀತಿಯನ್ನು ಅದು ಅನುಸರಿಸಬೇಕು ಮತ್ತು ಅದಕ್ಕಾಗಿ ಬೆಲೆಯನ್ನೂ ತೆರಬೇಕು.

1944ರೊಳಗೆ ತಾನು ಕಂಡುಕೊಂಡ ಮಾಹಿತಿಗಳನ್ನೆಲ್ಲಾ ಸಂಯೋಜಿಸಿದ ಮಂಡಳಿ, ಭಾರತದಲ್ಲಿ ಯುದ್ಧದ ನಂತರದ ಶೈಕ್ಷಣಿಕ ಅಭಿವೃದ್ಧಿ ಯೋಜನೆಯ ಕುರಿತಾಗಿ ವಿವರವಾದ ವರದಿಯನ್ನು ಸಲ್ಲಿಸಲು ಸಮರ್ಥವಾಯಿತು. ಸಾರ್ಜೆಂಟ್ ವರದಿಯು ಸ್ವಾತಂತ್ರ್ಯಪೂರ್ವದ ಅವಧಿಯ ಒಂದು ಬಹುಮುಖ್ಯ ದಾಖಲೆಯಾಗಿದೆ. ಅದು ಶೈಕ್ಷಣಿಕ ಸಮಸ್ಯೆಯನ್ನು ಇಡಿಯಾಗಿ ನಿಭಾಯಿಸಿದ ಪ್ರಥಮ ವ್ಯವಸ್ಥಿತ ಪ್ರಯತ್ನವಾಗಿದೆ. ಅದು ಸಮಾನ ಶೈಕ್ಷಣಿಕ ಅವಕಾಶವನ್ನು ಒದಗಿಸುವ ಬಯಕೆಯಿಂದ ಪ್ರೇರಿತವಾಗಿರುವ ರಾಷ್ಟ್ರಮಟ್ಟದ ಶಿಕ್ಷಣದ ಮೊದಲ ವ್ಯಾಪಕ ಕಾರ್ಯಯೋಜನೆಯಾಗಿದೆ. ಸಮಾನ ಶೈಕ್ಷಣಿಕ ಅವಕಾಶವೆಂಬುದು ಏನಾದರೂ ಇರುವುದಾದರೆ, ಇತರರಿಗೆ ನೀಡದೆ, ದೇಶಗಳ ಕೆಲವು ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದನ್ನು ಸಮರ್ಥಿಸುವುದು ಸಾಧ್ಯವೇ ಇಲ್ಲವೆಂದು ಅದು ಒತ್ತಿ ಹೇಳಿದೆ. ಆದುದರಿಂದ ರಾಷ್ಟ್ರೀಯ ವ್ಯವಸ್ಥೆಯು ಸಾರ್ವತ್ರಿಕವಾಗದೇ ಸಾಧ್ಯವೇ ಇಲ್ಲ. ಸಮಾನತೆಯನ್ನು ಖಾತ್ರಿಗೊಳಿಸುವ ಸಲುವಾಗಿ ಅದು ಕಡ್ಡಾಯ ಮತ್ತು ಉಚಿತವಾಗಿರಬೇಕು. ಯಾವುದೇ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಗೆ ಪೂರ್ವ-ಪ್ರಾಥಮಿಕ ಶಿಕ್ಷಣವು ಮುಖ್ಯವಾಗಿ ಅನುಷಂಗಿಕವಾಗಿರುತ್ತದೆ ಮತ್ತು 40 ವರ್ಷದೊಳಗೆ ಎಲ್ಲಾ ಮಕ್ಕಳಿಗೆ 6-14 ವರ್ಷದವರೆಗೆ ಎಂಟು ವರ್ಷಗಳ ವ್ಯಾಪಕ, ಉಚಿತ ಮತ್ತು ಕಡ್ಡಾಯ ಮೂಲ ಶಿಕ್ಷಣವಿರಬೇಕು ಎಂದು ಸಾರ್ಜೆಂಟ್ ಯೋಜನೆ ಶಿಫಾರಸು ಮಾಡಿದೆ. ಅದು ಪ್ರೌಢಶಾಲಾ ಪಠ್ಯಕ್ರಮಗಳಿಗಾಗಿ ಎರಡು ವಿಧದ ಯೋಜನೆಗಳನ್ನು ಒದಗಿಸಿದೆ: ಶೈಕ್ಷಣಿಕ ಮತ್ತು ತಾಂತ್ರಿಕ; ವಿಶ್ವವಿದ್ಯಾಲಯ ಶಿಕ್ಷಣ; ತಾಂತ್ರಿಕ, ವಾಣಿಜ್ಯ ಮತ್ತು ಕಲಾ ಶಿಕ್ಷಣ; ವಯಸ್ಕರ ಶಿಕ್ಷಣ; ಅಂಗವಿಕಲರ ಶಿಕ್ಷಣ; ಮತ್ತು ಶೈಕ್ಷಣಿಕ ಆಡಳಿತ. ಸಾರ್ಜೆಂಟ್ ವರದಿಯಲ್ಲಿ ಎಲ್ಲಾ ಮಕ್ಕಳಿಗೆ ಎಂಟು ವರ್ಷಗಳ ಮೂಲ ಶಿಕ್ಷಣವನ್ನು ಒದಗಿಸುವ ಗುರಿಗಾಗಿ ನೀಡಲಾದ ನಲ್ವತ್ತು ವರ್ಷಗಳ ಕಾಲಾವಧಿಯು 1947ರಲ್ಲಿ ತನ್ನ ಸರಕಾರವನ್ನು ರೂಪಿಸಿದ ರಾಷ್ಟ್ರೀಯ ಸರಕಾರಕ್ಕೆ ಹಣ ಮತ್ತು ಮಾನವಶಕ್ತಿಯ ಕೊರತೆಯ ಕಾರಣದಿಂದಾಗಿ ಅಸ್ವೀಕೃತವಾಯಿತು. ಆದುದರಿಂದ, ಭಾರತದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಆರ್ಥಿಕತೆಯನ್ನು ಹುಡುಕಿಕೊಳ್ಳುವ ಸಲುವಾಗಿ 1948ರಲ್ಲಿ ಖೇರ್ ಸಮಿತಿಯನ್ನು ನೇಮಕಗೊಳಿಸಲಾಯಿತು. ಈ ಸಮಿತಿಯು 6-11 ವರ್ಷಗಳ ನಡುವಿನ ವಯೋಮಿತಿಯ ಮಕ್ಕಳಿಗಾಗಿ 10 ವರ್ಷಗಳೊಳಗೆ(ಅಂದರೆ, 1958ರೊಳಗೆ) ಮತ್ತು 6 ಮತ್ತು 14ರ ನಡುವಿನ ವಯಸ್ಸಿನ ಮಕ್ಕಳಿಗೆ 16 ವರ್ಷದೊಳಗೆ(ಅಂದರೆ, ಎರಡು ಪಂಚವಾರ್ಷಿಕ ಯೋಜನೆಗಳು ಮತ್ತು ಒಂದು ಆರು-ವರ್ಷದ ಯೋಜನೆಯ ಒಳಗೆ) ಸಾರ್ವತ್ರಿಕ, ಕಡ್ಡಾಯ ಮೂಲಶಿಕ್ಷಣವನ್ನು ಶಿಫಾರಸ್ಸು ಮಾಡಿತು. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಶಿಫಾರಸಿನ ಮೇರೆಗೆ ಭಾರತ ಸರಕಾರವು ವರದಿಯನ್ನು ಸ್ವೀಕರಿಸಿತು. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಮೂಲ ಶಿಕ್ಷಣದ ಸ್ಥಾಯಿ ಸಮಿತಿಯು ಮೂಲ ಶಿಕ್ಷಣದ ಪರಿಕಲ್ಪನೆಯ ಕುರಿತಾಗಿ ಮೂಲ ಶಿಕ್ಷಣದ ಪರಿಕಲ್ಪನೆಯ ಮರುವ್ಯಾಖ್ಯಾನವನ್ನು ದೃಢೀಪಡಿಸಿಕೊಳ್ಳುವ ಸಲುವಾಗಿ ಹೇಳಿಕೆಯೊಂದನ್ನು ತಯಾರಿಸಿತು. ಮೂಲ ಶಿಕ್ಷಣದ ಕಾರ್ಯಯೋಜನೆಯಲ್ಲಿನ ಕುಶಲ ಕಲೆಯ ಪರಿಕಲ್ಪನೆಯು 1964-66ರ ಶಿಕ್ಷಣ ಆಯೋಗದ ಕಾರ್ಯಾನುಭವದ ಪರಿಕಲ್ಪನೆಯೊಂದಿಗೆ ಸಾಮ್ಯವನ್ನು ಹೊಂದಿದೆ.

ಸ್ವಾತಂತ್ರ್ಯ ದೊರಕಿದ ನಂತರ ನವಭಾರತದ ಶಿಕ್ಷಣಕ್ಕೆ ತಾಜಾತನದ ಆವಶ್ಯಕತೆ ಇದೆ ಎಂದು ಮೌಲಾನಾ ಅಬ್ದುಲ್ ಕಲಮ್ ಆಜಾದ್ ಅವರು 1948ರಲ್ಲಿ ಮಂಡಳಿಗೆ ನೀಡಿದ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದ್ದಾರೆ. ಅವರ ದೃಷ್ಟಿಯಲ್ಲಿ, "ನವ ಭಾರತದ ನವ ಆಕಾಂಕ್ಷೆಗೆ ತನ್ನ ಸಮಸ್ಯೆಗಳನ್ನು ಎದುರಿಸಲು ತಾಜಾ ದೃಷ್ಟಿಕೋನ ಮತ್ತು ಹೊಸ ಕ್ರಮಗಳ ಅಗತ್ಯವಿದೆ." ಹೊಸ ಸಂವಿಧಾನದ ಕೆಳಗೆ ಶೈಕ್ಷಣಿಕ ಕಾರ್ಯನೀತಿಗಳನ್ನು ವ್ಯಾಖ್ಯಾನಿಸುವುದು ರಾಜ್ಯಗಳ ಮತ್ತು ಕೇಂದ್ರದ ನಡುವಿನ ವಿಷಯವಾಗಿ ಪರಿಣಮಿಸಿತು.

Digitised by Bharatavani, CIIL

ಇದರಿಂದಾಗಿ ಸಾಮಾನ್ಯ ಉದ್ದೇಶಕ್ಕಾಗಿ ರಾಜ್ಯಗಳು ಮತ್ತು ಕೇಂದ್ರ ಭಾಗವಹಿಸಬಹುದಾದ ಮತ್ತು ಸಹಯೋಗವನ್ನು ಹೊಂದಬಹುದಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಗೆ ಉನ್ನತ ಸಲಹಾ ಅಂಗವಾಗಿ ಪ್ರಾಮುಖ್ಯತೆ ದೊರೆಯಿತು. ಸ್ವಾತಂತ್ರ್ಯ ದೊರೆತ ನಂತರ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಕಾರ್ಯಚಟುವಟಿಕೆಗಳು, ಅಧ್ಯಕ್ಷರ ಭಾಷಣಗಳ ಮುಖ್ಯ ಭಾಗಗಳು ಮತ್ತು ಮಂಡಳಿಯ ನಿರ್ಣಯಗಳು ಮತ್ತು ಶಿಫಾರಸುಗಳೊಂದಿಗೆ ಶೈಕ್ಷಣಿಕ ಚಿಂತನೆ ಮತ್ತು ಯೋಜನೆಗಳ ಅಭಿವೃದ್ಧಿಗೆ ಮತ್ತು ಸ್ವಾತಂತ್ರದ ನಂತರದ ಶೈಕ್ಷಣಿಕ ಮೈಲಿಗಲ್ಲುಗಳಿಗೆ ಒದಗಿ ಬಂದಿವೆ. ಸ್ವಾತಂತ್ರ್ಯ ದೊರೆತ ನಂತರ ಸರ್ವಸ್ವತಂತ್ರ ಪ್ರಜಾಪ್ರಭುತ್ವದ ಗಣರಾಜ್ಯಕ್ಕೆ ಸೂಕ್ತವೆನಿಸುವ ಆಯೋಗಗಳು, ಪಂಚವಾರ್ಷಿಕ ಯೋಜನೆಗಳು ಮತ್ತು ಶಿಕ್ಷಣದ ಮರುರಚನೆಯ ಯುಗ ಪ್ರಾರಂಭವಾಯಿತು. ಮಂಡಳಿಯು ಶಿಕ್ಷಣದ ಎಲ್ಲಾ ಹಂತಗಳನ್ನು, ವಲಯಗಳನ್ನು ಮತ್ತು ಅಂಶಗಳನ್ನು ಪರಿಗಣಿಸಿತು. ವಿಶ್ವವಿದ್ಯಾಲಯದ ಶಿಕ್ಷಣವು ಚರ್ಚೆಗೆ ಕೈಗೆತ್ತಿಕೊಂಡ ಮೊದಲ ನಿರ್ಣಾಯಕ ಸಮಸ್ಯೆಯಾಗಿದೆ. ಸೆಡ್ಲಾರ್ ಆಯೋಗದ(1917–19) ನಂತರ ವ್ಯಾಪಕ ಸಮೀಕ್ಷೆ ನಡೆಯದೇ ಇದ್ದುದರಿಂದ ಮಂಡಳಿಯ ಒತ್ತಾಯದ ಮೇರೆಗೆ ಪ್ರಸಿದ್ಧ ಶಿಕ್ಷಣತಜ್ಞರಾದ ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯ ಆಯೋಗವನ್ನು(1948–49) ಸ್ಥಾಪಿಸಲಾಯಿತು. ಮಂಡಳಿಯ 1950ರ ವಿಶೇಷ ಸಮಾವೇಶದಲ್ಲಿ ವಿಶ್ವವಿದ್ಯಾಲಯ ಅನುದಾನಗಳ ಸಮಿತಿಯನ್ನು ಮೊದಲ ಬಾರಿ ಸ್ಥಾಪಿಸಲಾಯಿತು. ಆಮೇಲೆ 1953ರಲ್ಲಿ ವಿಶ್ವವಿದ್ಯಾನಿಲಯ ಆಯೋಗದ ಶಿಫಾರಸಿನ ಮೇರೆಗೆ ಭಾರತ ಸರಕಾರವು ಸಮಿತಿಯನ್ನು ಆಯೋಗವಾಗಿಸಿ ಕಾರ್ಯನಿರ್ವಾಹಕ ಆದೇಶವನ್ನು ಹೊರಡಿಸಿತು. ಆಯೋಗದ ಪ್ರಮುಖ ಶಿಫಾರಸುಗಳು ಈ ಕೆಳಗಿನವುಗಳಿಗೆ ಸಂಬಂಧಿಸಿವೆ: ಬೋಧನಾ ಸಿಬ್ಬಂದಿ, ಬೋಧನೆಯ ಮಟ್ಟಗಳು, ಅಧ್ಯಯನದ ಪಠ್ಯಕ್ರಮಗಳು, ಸ್ನಾತಕೋತ್ತರ ತರಬೇತಿ ಮತ್ತು ಸಂಶೋಧನೆ, ವೃತ್ತಿಪರ ಶಿಕ್ಷಣ, ಧಾರ್ಮಿಕ ಶಿಕ್ಷಣ, ಶಿಕ್ಷಣ ಮಾಧ್ಯಮ, ಪರೀಕ್ಷೆಗಳು, ವಿದ್ಯಾರ್ಥಿಗಳ ಚಟುವಟಿಕೆಗಳು ಮತ್ತು ಕ್ಷೇಮಾಭಿವೃದ್ಧಿ, ಮಹಿಳಾ ಶಿಕ್ಷಣ, ಸಂವಿಧಾನ ಮತ್ತು ನಿಯಂತ್ರಣ, ಆರ್ಥಿಕತೆ ಮತ್ತು ಗ್ರಾಮೀಣ ವಿಶ್ವವಿದ್ಯಾನಿಲಯಗಳು. 1951ರಲ್ಲಿ ನಡೆದ ಸಭೆಯಲ್ಲಿ ಮತ್ತೊಮ್ಮೆ ಮಂಡಳಿಯು ಮಾಧ್ಯಮಿಕ ಶಿಕ್ಷಣ ಆಯೋಗದ ಸ್ಥಾಪನೆಯ ತನ್ನ 1948ರ ನಿಲುವನ್ನು ಪುನರುಚ್ಚರಿಸಿತು. ಮಾಧ್ಯಮಿಕ ಶಿಕ್ಷಣ ಆಯೋಗವನ್ನು 1952–53ರಲ್ಲಿ ನೇಮಿಸಲಾಯಿತು. ಆಯೋಗದ ಶಿಫಾರಸಿನ ಮೇರೆಗೆ ಎರಡು ಮುಖ್ಯ ಕಾರ್ಯಕ್ರಮಗಳನ್ನು ಜಾರಿಗೆ ತರುವುದರ ಮೂಲಕ ಮಂಡಳಿಯು ಮಾಧ್ಯಮಿಕ ಶಿಕ್ಷಣದ ಮರುರಚನೆಗೆ ನೆರವನ್ನು ನೀಡಿತು. ಈ ಕಾರ್ಯಕ್ರಮಗಳು ಹೀಗಿವೆ:

1. ಆಯ್ದ ಮಾಧ್ಯಮಿಕ ಶಾಲೆಗಳನ್ನು ಬಹು ಉದ್ದೇಶಿತ ಶಾಲೆಗಳಾಗಿ ಪರಿವರ್ತಿಸುವುದು ಮತ್ತು

2. ಹಳೆಯ ಮಾಧ್ಯಮಿಕ ವ್ಯವಸ್ಥೆಯನ್ನು ಹೊಸ ಉನ್ನತ ಮಾಧ್ಯಮಿಕ ವ್ಯವಸ್ಥೆಯಿಂದ ಸ್ಥಾನಾಂತರಗೊಳಿಸುವುದು.

ಸಂವಿಧಾನದ ನಿರ್ದೇಶಕ ತತ್ವಗಳಿಗೆ ಅನುಗುಣವಾಗಿ ಪ್ರಾಥಮಿಕ ಶಿಕ್ಷಣಕ್ಕಾಗಿ ಸೌಲಭ್ಯಗಳನ್ನು ವಿಸ್ತರಿಸಿಕೊಳ್ಳುವುದು ಮಂಡಳಿಯ ಆಸಕ್ತಿಯಾಗಿ ಮುಂದುವರಿಯಿತು. ಮಂಡಳಿ ಒಪ್ಪಿಕೊಂಡ ಅತ್ಯಂತ ಮುಖ್ಯ ಕ್ರಮಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಿರುವ ಸೌಲಭ್ಯಗಳ ರಾಷ್ಟ್ರವ್ಯಾಪಿ ಸಮೀಕ್ಷೆಯ ಕಲ್ಪನೆ ಸೇರಿದೆ. ಮಂಡಳಿಯ ಗಮನದಲ್ಲಿ ಮೂಲ ಶಿಕ್ಷಣ ಮತ್ತು ಸಾಮಾಜಿಕ ಶಿಕ್ಷಣಗಳ ಪ್ರಗತಿ ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಸಮಸ್ಯೆಗಳು ಯಾವಾಗಲೂ ಇರುತ್ತಿದ್ದವು. ಶಿಕ್ಷಣವನ್ನು ಭಾಗ ಭಾಗವಾಗಿ ಕಾಣುವುದಕ್ಕಿಂತ, ಶಿಕ್ಷಣದ ಎಲ್ಲಾ ವಾಸ್ತವಾಂಶಗಳನ್ನು ಗಮನಿಸುವುದು ಮತ್ತು ಶಿಕ್ಷಣದ ರಾಷ್ಟ್ರೀಯ ವಿನ್ಯಾಸವನ್ನು ರೂಪಿಸುವುದಕ್ಕಾಗಿ ಅಂದು ಶಿಕ್ಷಣ ಸಚಿವರಾಗಿದ್ದ ಎಂ.ಸಿ. ಚಾಗ್ಲಾ ಅವರು ಶಿಕ್ಷಣ ಆಯೋಗವನ್ನು ನೇಮಕಗೊಳಿಸಿದರು. 1967ರಲ್ಲಿ ಶಿಕ್ಷಣ ಆಯೋಗದ (ಕೊಠಾರಿ ಆಯೋಗ) ವರದಿಯನ್ನು ಪರಿಗಣಿಸಿದ ಮಂಡಳಿ ಭಾರತ ಸರಕಾರದ ಪರಿಗಣನೆಗಾಗಿ ಶಿಕ್ಷಣ ಕಾರ್ಯನೀತಿಯ ಕುರಿತಾಗಿ ಕರಡು ಹೇಳಿಕೆಗೆ ಸೂಚನೆಯನ್ನು ನೀಡಿತು. ಸ್ವಾತಂತ್ರ ದೊರೆತ ನಂತರ ಪ್ರಥಮಬಾರಿಗೆ, 1968ರಲ್ಲಿ ಸರಕಾರ ರಾಷ್ಟ್ರೀಯ ಶಿಕ್ಷಣ ನೀತಿಯ ಠರಾವನ್ನು ಹೊರಡಿಸಿತು. ಈ ಕಾಲಾವಧಿಯಲ್ಲಿ ಅನೇಕ ಕ್ಲಿಷ್ಟ ವಿವಾದಾಂಶಗಳು ಪರಿಶೀಲನೆಗೆ ಕಾಣಿಸಿಕೊಂಡವು. ಇವುಗಳಲ್ಲಿ ಮುಖ್ಯವೆನಿಸಿದ ಕೆಲವು ಅಂಶಗಳೆಂದರೆ, ಶಿಕ್ಷಕರ ಸ್ಥಾನಮಾನ, ಶಿಕ್ಷಕರ ವೃತ್ತಿಪರ ಶಿಕ್ಷಣ, ಅಖಿಲ ಭಾರತ ಶಿಕ್ಷಣ ಸೇವೆಯ ಮರುಸ್ಥಾಪನೆ, ವಿದ್ಯಾರ್ಥಿಗಳ ಅಸಹನೆಗೆ ಕಾರಣಗಳು ಮತ್ತು ಪರಿಹಾರಗಳು, ವಿಶ್ವವಿದ್ಯಾಲಯಗಳ ಪ್ರವೇಶದಲ್ಲಿ ನಿರ್ಬಂಧದ ಅಗತ್ಯ, ಹಿಂದಿ ಮತ್ತು ಸಂಸ್ಕೃತದ ಬೆಳವಣಿಗೆ, ತ್ರಿಭಾಷಾ ಸೂತ್ರ, ರಾಷ್ಟ್ರೀಯ ಮತ್ತು ಭಾವನಾತ್ಮಕ ಸಮನ್ವಯಕ್ಕೆ ಕ್ರಮಗಳು, ಅಂಚೆ ತೆರಪಿನ ಅಭ್ಯಾಸಕ್ರಮಗಳ ಕಾರ್ಯಯೋಜನೆ, ವಯಸ್ಕ ಶಿಕ್ಷಣ ಮತ್ತು ಅನಕ್ಷರತೆಯನ್ನು ಹೋಗಲಾಡಿಸುವಿಕೆ ಮತ್ತು ಗಾಂಧೀ ಸಾಹಿತ್ಯವನ್ನು ಜನಪ್ರಿಯಗೊಳಿಸುವಿಕೆ. ಸಾಮಾನ್ಯ ಶಾಲಾ ಶಿಕ್ಷಣ ಮತ್ತು ನೆರೆಹೊರೆಯ ಶಾಲೆಗಳ ಪರಿಕಲ್ಪನೆಗಳನ್ನು ಜಾರಿಗೆ ತರಲಾಯಿತು.

ಮಂಡಳಿ ತನ್ನ ಪರಿಶೀಲನೆಯಲ್ಲಿ ಶಿಕ್ಷಣದ ಎಲ್ಲಾ ಕ್ಷೇತ್ರ ಮತ್ತು ಹಂತಗಳ, ಉದಾಹರಣೆಗೆ ಶಾಲಾ ಪೂರ್ವ ಶಿಕ್ಷಣ, ಮೂಲ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ತಾಂತ್ರಿಕ ಶಿಕ್ಷಣ, ವಯಸ್ಕರ ಶಿಕ್ಷಣ, ಹೆಣ್ಣುಮಕ್ಕಳ ಶಿಕ್ಷಣ, ಪರಿಶಿಷ್ಟ ಜಾತಿ/ಪಂಗಡಗಳ ಶಿಕ್ಷಣ, ಅಂಗವಿಕಲರ ಶಿಕ್ಷಣ, ವೃತ್ತಿಪರ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಪ್ರಗತಿ ಮತ್ತು ನಿರಂತತೆಯನ್ನು ಗಮನದಲ್ಲಿ ಇಟ್ಟುಕೊಂಡಿತು. ಅದು ಧಾರ್ಮಿಕ ಶಿಕ್ಷಣ ಮತ್ತು ನೈತಿಕ ಶಿಕ್ಷಣ, ಕ್ರೀಡೆ ಮತ್ತು ದೈಹಿಕ ಶಿಕ್ಷಣ ಮತ್ತು ಎನ್‌ಎಸ್‌ಎಸ್, ಎನ್‌ಸಿಸಿ, ಎಸಿಸಿ, ಸ್ಕೌಟ್ ಮತ್ತು ಗೈಡ್‌ಗಳ ಕಾರ್ಯಯೋಜನೆ, ತ್ರಿಭಾಷಾ ಸೂತ್ರ, ಪಠ್ಯಕ್ರಮ, ಶಿಕ್ಷಕರ ತರಬೇತಿ, ಸಂಸ್ಕೃತ ಮತ್ತು ಹಿಂದಿ ಬೋಧನೆ ಮತ್ತು ಹಣಕಾಸು, ವೇತನಗಳು, ವಿದ್ಯಾರ್ಥಿಗಳು, ಅಶಿಸ್ತು, ವಿದ್ಯಾರ್ಥಿ ವೇತನಗಳು, ಶಾಲಾ ಕಟ್ಟಡಗಳು ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ

Digitised by Bharatavani, CIIL

ಕೂಡ ವ್ಯವಹಾರವನ್ನು ನಡೆಸಿತು. ಉದಾಹರಣೆಗೆ, ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ 1961ರ ಸಭೆಯಲ್ಲಿ ಚರ್ಚೆಗೆ ಕೈಗೆತ್ತಿಕೊಳ್ಳಲಾದ ವಿಚಾರಗಳು ಹೀಗಿವೆ: ರಾಷ್ಟ್ರದ ರಕ್ಷಣಾ ಬಲಕ್ಕೆ ಶಿಕ್ಷಣದ ಕೊಡುಗೆ, ವಿಜ್ಞಾನ ಶಿಕ್ಷಣದ ಸುಧಾರಣೆ ಮತ್ತು ವಿಸ್ತರಣೆ, ವಿದ್ಯಾರ್ಥಿಗಳ ಭೌತಿಕ ಸಾಮರ್ಥ್ಯದ ವಿಕಾಸ, ಮತ್ತು ಉತ್ಪಾದಕ ವೃತ್ತಿಪರ ಶಿಕ್ಷಣವನ್ನು ಜಾರಿಗೆ ತರುವುದು. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ 1963ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಲ್ಲಿ ಹೆಚ್ಚಿನ ಒತ್ತನ್ನು ನೀಡಲಾದ ವಿಚಾರಗಳೆಂದರೆ: ಹೆಣ್ಣಮಕ್ಕಳ ಶಿಕ್ಷಣದ ಕಾರ್ಯಯೋಜನೆ; ವೃತ್ತಿಪರ ಶಾಲೆಗಳು ಮತ್ತು ಪಾಲಿಟೆಕ್ನಿಕ್‌ಗಳ ಸ್ಥಾಪನೆ; ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸಮಾಜ ಸೇವೆ; ಸಂಜೆ ಕಾಲೇಜುಗಳು, ಅಂಚೆತೆರಪಿನ ಅಭ್ಯಾಸ ಕ್ರಮಗಳು, ಮತ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ 1964ರ ಸಭೆಯಲ್ಲಿಯೂ ಹೆಚ್ಚಿನ ಒತ್ತನ್ನು ಪಡೆದ ವಿಚಾರಗಳಲ್ಲಿ ಕೆಲವು ಹೀಗಿವೆ: ಪ್ರಾಥಮಿಕ ಹಂತದಲ್ಲಿ ಶಿಕ್ಷಣದ ಮಟ್ಟದ ಸುಧಾರಣೆ, ಶಾಲಾ ಆರೋಗ್ಯ ಕಾರ್ಯಕ್ರಮಗಳ ಬೆಳವಣಿಗೆ, ರಾಜ್ಯ ಶಿಕ್ಷಣ ಸಂಸ್ಥೆಗಳ ಹೆಚ್ಚು ಪರಿಣಾಮಕಾರಿ ತನಿಖೆ ಮತ್ತು ಅಭಿವೃದ್ಧಿ. ಮಾಧ್ಯಮಿಕ ಶಿಕ್ಷಣದ ಗುಣಮಟ್ಟ ಉತ್ತಮ ಪಡಿಸುವುದಕ್ಕಾಗಿ ಮಂಡಳಿ ಸೂಚಿಸಿದ ವಿಚಾರಗಳೆಂದರೆ, ಅಭ್ಯಾಸಕ್ರಮಗಳಲ್ಲಿ ವೈವಿಧ್ಯತೆ, ಬಹು ಉದ್ದೇಶಿತ ಶಾಲೆಗಳು ಮತ್ತು ಶಾಲಾ ಗ್ರಂಥಾಲಯ ಸೇವೆಗಳಲ್ಲಿ ಸುಧಾರಣೆ, ವಿಜ್ಞಾನ ಶಿಕ್ಷಕರಿಗೆ ತರಬೇತಿ, ಮತ್ತು ಭಾವನಾತ್ಮಕ ಸಮನ್ವಯಕ್ಕಾಗಿ ಕ್ರಮಗಳು ಹಾಗೂ ಎಲ್ಲಾ ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕಾದ ಪ್ರಮಾಣ ವಚನ. ಈ ಅಂಶಗಳು ಮಂಡಳಿಯ ಮುಂದಿನ ಸಭೆಗಳಲ್ಲಿ ಕೂಡ ಗಮನ ಸೆಳೆಯುವುದನ್ನು ಮುಂದುವರಿಸಿವೆ. ರಾಷ್ಟ್ರೀಯ ಏಕೀಕರಣ ಸಮಿತಿಯ ಶಿಫಾರಸ್ಸನ್ನು ಆಧಾರವಾಗಿಟ್ಟುಕೊಂಡು ಮಂಡಳಿಯು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ರಾಷ್ಟ್ರೀಯ ಸಮನ್ವಯತೆಯನ್ನು ಪರಿಚಯ ಮಾಡಿಕೊಡಲು ತನ್ನ ಒಪ್ಪಿಗೆ ನೀಡಿದೆ. ಹಿಂಸೆಯ ವಿರುದ್ಧ ಹೋರಾಡುವ ಸಲುವಾಗಿ ನೈತಿಕ ಮತ್ತು ಧಾರ್ಮಿಕ ಶಿಕ್ಷಣಕ್ಕೆ ಸ್ಫೂರ್ತಿದಾಯಕ ಸಾಹಿತ್ಯದ ಅಧ್ಯಯನವನ್ನು ಶಿಫಾರಸು ಮಾಡಿದೆ. ಭಾರತೀಯ ಭಾಷೆಗಳನ್ನು ಕಲಿಯುವವರಿಗಾಗಿ ಭಾಷಾ ಪ್ರಯೋಗಶಾಲೆಗಳನ್ನು ತೆರೆಯಲು 1970ರಲ್ಲಿ ಗಮನ ಹರಿಸಲಾಗಿದೆ. ಪೂರ್ವ ಪ್ರಾಥಮಿಕ ಶಿಕ್ಷಣ, ಪಠ್ಯಕ್ರಮದಲ್ಲಿ ಮೆಟ್ರಿಕ್ ಪದ್ಧತಿಯನ್ನು ಜಾರಿಗೆ ತರುವುದು ಮತ್ತು ಪರೀಕ್ಷೆಯಲ್ಲಿ ಸುಧಾರಣೆಯನ್ನು ನಡೆಸುವ ನಿರ್ಣಯವನ್ನು ಕೂಡ ಕೈಗೊಳ್ಳಲಾಗಿದೆ. ಮಂಡಳಿಯ ಶಿಕ್ಷಣದ ವಿವಿಧ ಹಂತಗಳ ಚರ್ಚಾಸ್ಪದ ಅಂಶಗಳು ಮತ್ತು ಸಮಸ್ಯೆಗಳನ್ನು ಪ್ರಗತಿಪರ ಪರಿಕಲ್ಪನೆಗಳಾಗಿ ರೂಪಿಸಿದ ಚಿತ್ರಣವನ್ನು ಕೆಲವು ಉದಾಹರಣೆಗಳ ಮೂಲಕ ಈ ಕೆಳಗೆ ನೀಡಲಾಗಿದೆ:

ಪೂರ್ವ ಪ್ರಾಥಮಿಕ ಶಿಕ್ಷಣದ ಕುರಿತು ಮಂಡಳಿಯು ಅನೇಕ ಸಂದರ್ಭಗಳಲ್ಲಿ ಪರಿಶೀಲನೆಯನ್ನು ನಡೆಸಿದೆ. ಸಣ್ಣ ಮಕ್ಕಳಿಗೆ ಔಪಚಾರಿಕ ಬೋಧನೆಯನ್ನು ನೀಡುವುದಕ್ಕಿಂತ ಸಾಮಾಜಿಕ ಅನುಭವವನ್ನು ಒದಗಿಸುವುದಕ್ಕಾಗಿ ಪೂರ್ವ ಪ್ರಾಥಮಿಕ ಶಾಲಾ ಸೌಲಭ್ಯವನ್ನು ಒದಗಿಸುವಂತೆ 1944ರಲ್ಲಿ ಸಾರ್ಜೆಂಟ್ ಆಯೋಗದ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಮೊದಲಿಗೆ 3–6 ವಯೋಮಿತಿಯ ಗುಂಪಿಗಾಗಿ ಒಂದು ಮಿಲಿಯ ಪ್ರದೇಶಗಳನ್ನು ಒದಗಿಸಬೇಕೆಂದು ವರದಿ ಸೂಚಿಸಿದೆ. ಭಾರತದ ಶೈಕ್ಷಣಿಕ ಚರಿತ್ರೆಯಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಮೀಸಲಾಗಿರುವ ಕೇವಲ ಒಂದೇ ಒಂದು ಸಮಿತಿ ಮಾತ್ರ ಇದೆ. ಅದು ಮೈಸೂರು ಸರಕಾರದಿಂದ 1961ರಲ್ಲಿ ಮೈಸೂರು ರಾಜ್ಯದಲ್ಲಿ ಪ್ರಾರಂಭಿಸಲಾದ ಪ್ರಾಥಮಿಕ ಪೂರ್ವ ಶಿಕ್ಷಣ ಸಮಿತಿಯಾಗಿದೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಬೇರೆ ಎಲ್ಲಾ ರಾಜ್ಯಗಳಿಗೆ ಏಕರೂಪದಲ್ಲಿ ಅನ್ವಯವಾಗುವ ಅನೇಕ ಶಿಫಾರಸುಗಳನ್ನು ಅಳವಡಿಸಿಕೊಂಡಿದೆ. ಜನವರಿ 16–17, 1961ರಲ್ಲಿ ನಡೆದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಭೆಯ 28ನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಪಂಡಿತ್ ನೆಹರೂ ಅವರು ಪೂರ್ವ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆಗೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ. ಅವರ ದೃಷ್ಟಿಕೋನ ಹೀಗಿದೆ: ನನ್ನ ಮಟ್ಟಿಗೆ ಹೇಳುವುದಾದರೆ ಶಿಕ್ಷಣ ಎಂಬುದು ಕೇವಲ ಬರೀ ಓದುವುದು, ಬರೆಯುವುದು ಮತ್ತು ಇಂತಹವುಗಳು ಎಂದು ಅರ್ಥವಲ್ಲ. ಅದು ವಸ್ತುಗಳನ್ನು ಸಾವಿರಾರು ರೀತಿಗಳಿಂದ ಮಾಡುವ ಸಾಮರ್ಥ್ಯವಾಗಿದೆ. ಈ ಸಾಮರ್ಥ್ಯವು ಅನಿವಾರ್ಯವಾಗಿ ಇಡೀ ದೇಶದಲ್ಲಿ ಶಿಕ್ಷಣದ ಹರಡುವಿಕೆಗೆ ಅವಕಾಶವನ್ನು ಒದಗಿಸುತ್ತದೆ. ಅದನ್ನು ಪ್ರಾರಂಭದ ಹಂತಗಳಲ್ಲಿಯೇ ಮಾಡಬೇಕಾಗಿದೆ ಮತ್ತು ಈಗ ನಾವು ಗುರುತಿಸಿರುವಂತೆ ಪ್ರಾರಂಭಿಕ ಹಂತಗಳು ಹುಟ್ಟಿನಿಂದಲೇ ಪ್ರಾರಂಭಗೊಳ್ಳುತ್ತವೆ, ನಿಮ್ಮ ಪ್ರಾಥಮಿಕ ಶಿಕ್ಷಣದ ವಯಸ್ಸಿನಿಂದ ಅಲ್ಲ, ಪೂರ್ವ ಪ್ರಾಥಮಿಕ ಶಾಲೆಯಿಂದ ಅದು ಪ್ರಾರಂಭಗೊಳ್ಳುತ್ತದೆ. ಇದು ಅತ್ಯಂತ ಮುಖ್ಯವಾಗಿದೆ." ಪೂರ್ವ ಪ್ರಾಥಮಿಕ ಶಿಕ್ಷಣದ ವಿಚಾರವು ಶಿಕ್ಷಣ ಆಯೋಗ 1964–65 ರ ಧನಾತ್ಮಕ ಶಿಫಾರಸುಗಳಲ್ಲಿ ಅದರ ಅಭಿವೃದ್ಧಿ ಸೂಚಕವಾಗಿ ಮತ್ತೊಮ್ಮೆ ಪ್ರತಿಫಲಿತವಾಗಿದೆ. ಮಂಡಳಿಯ ನಿರೀಕ್ಷೆಯಲ್ಲಿ 1986ರ ಒಳಗೆ 3–5ರ ವಯೋಮಿತಿ ಗುಂಪಿನ ಶೇಕಡಾ 5ರಷ್ಟು ಮಕ್ಕಳು ಮತ್ತು 5–6 ವಯೋಮಿತಿಯ ಗುಂಪಿನ ಶೇಕಡಾ 50 ರಷ್ಟು ಮಕ್ಕಳು ನರ್ಸರಿ ತರಗತಿಗಳಲ್ಲಿ ಸ್ಥಾನ ಪಡೆಯುತ್ತಾರೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು 1970ರಲ್ಲಿ ನಡೆದ ತನ್ನ 35ನೇ ಸಭೆಯಲ್ಲಿ ಸ್ಥಳೀಯ ಸಮುದಾಯದ ಬೆಂಬಲ ಮತ್ತು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಪೂರ್ವ ಶಿಕ್ಷಣದ ಪ್ರಾಯೋಗಿಕ ಯೋಜನೆಗಳ ಪ್ರಯೋಗಾತ್ಮಕ ಪರೀಕ್ಷೆಗಳನ್ನು ಕೈಗೊಳ್ಳುವಂತೆ ಶಿಫಾರಸು ಮಾಡಿದೆ. ಇದಕ್ಕೆ ಅನುಗುಣವಾಗಿ ಭಾರತ ಸರಕಾರವು ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ಮೂಲಕ ಶಾಲಾ–ಪೂರ್ವ ಮಕ್ಕಳ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ತಯಾರಿಸಲು ಅಧ್ಯಯನ ಗುಂಪಿಗೆ ಚಾಲನೆ ನೀಡಿದೆ. ಸಮಿತಿಯು(ಸಂಚಾಲಕರು: ಮೀನಾ ಸ್ವಾಮಿನಾಥನ್) 3–5 ವಯೋಮಿತಿಯ ಮಕ್ಕಳ ಗುಂಪನ್ನು ಅನುಲಕ್ಷಿಸಿ, ಪೂರ್ವ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆ,

Digitised by Bharatavani, CIIL

ಅಗತ್ಯವಿರುವ ಕೌಶಲಗಳು, ವೈವಿಧ್ಯತೆ ಮತ್ತು ಪ್ರಾಯೋಗಿಕತೆ, ಕಡಿಮೆ ವೆಚ್ಚದ ಮಾದರಿಗಳು, ಅಧಿಕಾರಿಗಳ ತರಬೇತಿ, ಉಪಕರಣಗಳು, ವಿಧಾನಗಳು, ಸಂಶೋಧನೆ, ಮೌಲ್ಯಮಾಪನ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಶಿಫಾರಸುಗಳನ್ನು ಮಾಡಿದೆ. 1968, 1986–87ರ ಶಿಕ್ಷಣ ಕಾರ್ಯನೀತಿ ಮತ್ತು 1992ರ ಶಿಕ್ಷಣ ಕಾರ್ಯನೀತಿಯ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಮಿತಿಯು ಪೂರ್ವ ಪ್ರಾಥಮಿಕ ಶಿಕ್ಷಣದ ವಿಸ್ತರಣೆಗೆ, ಅದರಲ್ಲಿಯೂ ವಿಶೇಷವಾಗಿ ಮೊದಲ ತಲೆಮಾರಿನ ಕಲಿಕೆದಾರರು ಹೆಚ್ಚು ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ವಿಸ್ತರಣೆಗೆ ಅನುಮೋದನೆ ನೀಡಿದೆ.

ಶಿಕ್ಷಣ ಮಾಧ್ಯಮದ ಕುರಿತಾಗಿ 1948ರ ತನ್ನ ಸಭೆಗಳಲ್ಲಿ ಮಂಡಳಿ ತಿಳಿಸಿದ್ದೇನೆಂದರೆ, "...ಭವಿಷ್ಯದಲ್ಲಿ ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷ್ ಉಳಿಯಲಾರದು ಮತ್ತು ಈ ದಿಕ್ಕಿನಲ್ಲಿ ಬದಲಾವಣೆ ತಕ್ಷಣ ಉಂಟಾಗದೆ, ನಿಧಾನವಾಗಿ ಮೂಲಶಿಕ್ಷಣ ನಡೆಯಬೇಕಾಗಿದೆ'. ಕಿರಿಯ ಶಾಲೆಗಳಲ್ಲಿ, ಅಂದರೆ 5 ನೇ ತರಗತಿಯವರೆಗೆ ಇಂಗ್ಲಿಷಿಗೆ ಅವಕಾಶವಿರಬಾರದು ಎಂಬ ಸ್ಥಾಯಿ ಸಮಿತಿಯ ಶಿಫಾರಸುಗಳಿಗೆ ಕೂಡ ಮಂಡಳಿ ತನ್ನ ಸಭೆಯಲ್ಲಿ ಒಪ್ಪಿಗೆ ನೀಡಿದೆ. ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮವು ಮಾತೃಭಾಷೆಯಲ್ಲಿ ಇರಬೇಕು ಎಂಬ ಖೇರ್ ಸಮಿತಿಯ ಶಿಫಾರಸನ್ನು ಭಾರತ ಸರಕಾರ ಸ್ವೀಕರಿಸಿದೆ. ಮಂಡಳಿಯು ಜೈಪುರದಲ್ಲಿ(1962) ಶಿಕ್ಷಣ ಸಚಿವರಾದ ಡಾ. ಕೆ.ಎಲ್. ಶ್ರೀಮಾಲಿಯವರ ಅಧ್ಯಕ್ಷತೆಯಲ್ಲಿ ನಡೆದ ತನ್ನ 29ನೇ ಸಭೆಯಲ್ಲಿ ಶಿಕ್ಷಣ ಮಾಧ್ಯಮದ ಕುರಿತಾದ ತನ್ನ ಹಿಂದಿನ ಶಿಫಾರಸುಗಳನ್ನು ಮತ್ತೆ ದೃಢೀಕರಿಸುತ್ತಾ, "ಕಿರಿಯ ಮೂಲಶಿಕ್ಷಣದ ಹಂತದಲ್ಲಿ ಮಾಧ್ಯಮವು ಮಗುವಿನ ಮಾತೃಭಾಷೆಯಾಗಿರಬೇಕು" ಎಂದು ತಿಳಿಸಿದೆ. ಅದು ತನ್ನ ತ್ರಿಭಾಷಾ ಸೂತ್ರದ ಶಿಫಾರಸನ್ನು ಕೂಡ ಪುನರುಚ್ಚರಿಸಿದೆ ಮತ್ತು ಮೂರನೆಯ ತರಗತಿಯ ಮೊದಲು ಅಥವಾ ಕಿರಿಯ ಮೂಲ ಹಂತದ ಕೊನೆಗಿಂತ ಮೊದಲು ಮಾತೃಭಾಷೆಯಲ್ಲದೆ ಪ್ರಾದೇಶಿಕ ಭಾಷೆಯೊಂದನ್ನು ಅಳವಡಿಸಿಕೊಳ್ಳುವಂತೆ ಶಿಫಾರಸು ಮಾಡಿದೆ. ಸಂಸ್ಕೃತ ಆಯೋಗದ ಶಿಫಾರಸನ್ನು ಮಂಡಳಿ ಬಹಳ ಜಾಗರೂಕತೆಯಿಂದ ಅಧ್ಯಯನ ಮಾಡಿದೆ. ಆ ಆಯೋಗವು ಮಾಧ್ಯಮಿಕ ಹಂತದಲ್ಲಿ ಸಂಸ್ಕೃತವನ್ನು ಕಡ್ಡಾಯ ಅಧ್ಯಯನ ವಿಷಯವಾಗಿ ಸೇರಿಸುವ ಉದ್ದೇಶದಿಂದ ತ್ರಿಭಾಷಾ ಸೂತ್ರದ ತಿದ್ದುಪಡಿಯನ್ನು ಯೋಚಿಸಿದೆ. ಸಂಸ್ಕೃತವನ್ನು ಸಾಂಸ್ಕೃತಿಕ ಮತ್ತು ಸಾಹಿತ್ಯಕ ದೃಷ್ಟಿಯಿಂದ ಕಲಿಯುವ ಅಗತ್ಯವನ್ನು ಗುರುತಿಸಿಕೊಂಡು ಮಂಡಳಿ ಹೊಂದಿದ ಭಾವನೆ ಹೇಗಿತ್ತೆಂದರೆ, ನಾಲ್ಕನೆಯ ಭಾಷೆಯನ್ನು ಕಡ್ಡಾಯ ವಿಷಯವಾಗಿ ಸೇರಿಸುವುದರಿಂದ ಪಠ್ಯ ಕ್ರಮದ ಹೊರೆ ಹೆಚ್ಚಾಗುತ್ತದೆ ಅಥವಾ ಹಿಂದಿಯ ಸ್ಥಾನದಲ್ಲಿ ಸಂಸ್ಕೃತವನ್ನು ಸೇರಿಸಬೇಕಾಗುತ್ತದೆ, ಇದಕ್ಕಾಗಿ ಮಂಡಳಿ ಸೂಚಿಸಿದ್ದೇನೆಂದರೆ, ಸಂಸ್ಕೃತದ ಅಧ್ಯಯನವನ್ನು ಪ್ರತ್ಯೇಕ ವಿಷಯವಾಗಿ ಐಚ್ಛಿಕ ನೆಲೆಯಲ್ಲಿ ಒದಗಿಸುವುದು ಅಥವಾ ನಿರ್ದಿಷ್ಟ ಅಭ್ಯಾಸ ಕ್ರಮದ ಭಾಗವಾಗಿಡುವುದು; ಮಂಡಳಿಯ ಅನುಮೋದನೆ ಪಡೆದ ತ್ರಿಭಾಷಾ ಸೂತ್ರಕ್ಕೆ ಮಾತ್ರ ಧಕ್ಕೆ ತರುವ ಹಾಗಿಲ್ಲ. ತ್ರಿಭಾಷಾ ಸೂತ್ರದ ಕೆಳಗೆ ಕಲಿಯಬೇಕಾದ ಪ್ರಥಮ ಭಾಷೆ ಮಾತೃಭಾಷೆಯಾಗಿರುತ್ತದೆ ಅಥವಾ ಸ್ಥಳೀಯ ಭಾಷೆಯಾಗಿರುತ್ತದೆ. ಹಿಂದಿ ಮಾತನಾಡುವ ರಾಜ್ಯಗಳಲ್ಲಿ ಎರಡನೆಯ ಭಾಷೆಯು ಬೇರೆ ಯಾವುದಾದರೂ ಆಧುನಿಕ ಭಾರತೀಯ ಭಾಷೆ ಅಥವಾ ಇಂಗ್ಲಿಷ್ ಆಗಿರುತ್ತದೆ. ಹಿಂದಿಯೇತರ ಭಾಷೆ ಮಾತನಾಡುವ ರಾಜ್ಯಗಳಲ್ಲಿ ಅದು ಹಿಂದಿ ಅಥವಾ ಇಂಗ್ಲಿಷ್ ಆಗಿರುತ್ತದೆ. ಹಿಂದಿ ಮಾತನಾಡುವ ರಾಜ್ಯಗಳಲ್ಲಿ ಮೂರನೆಯ ಭಾಷೆ ಇಂಗ್ಲಿಷ್ ಅಥವಾ ಎರಡನೆಯ ಭಾಷೆಯಾಗಿ ಕಲಿಯದ ಆಧುನಿಕ ಭಾರತೀಯ ಭಾಷೆಯಾಗಿರುತ್ತದೆ. ತ್ರಿಭಾಷಾ ಸೂತ್ರವು ಅಳವಡಿಕೆಯಾಗಿ ನಾಲ್ಕು ದಶಕಗಳು ಕಳೆದಿದ್ದು, ಅದರ ನೈಜ ಉದ್ದೇಶವನ್ನು ಇನ್ನೂ ಸಾಧಿಸಲಾಗದಿದ್ದರೂ ಅದು ಈಗಲೂ ಪ್ರಸ್ತುತವಾಗಿ ಉಳಿದಿದೆ.

ಶಿಕ್ಷಣದ ಚಟುವಟಿಕೆಯು ಔಪಚಾರಿಕ ವ್ಯವಸ್ಥೆಗೆ ಸೀಮಿತವಾಗಿ ಇರಬಾರದು ಮತ್ತು ವಿವಿಧ ವಯೋ ಗುಂಪುಗಳು ಮತ್ತು ಸಮೀಕ್ಷೆಗಳನ್ನು ಆಧರಿಸಿ ಸಮಾಜದ ವಿವಿಧ ವಿಭಾಗದವರಿಗಾಗಿ ಪ್ರತಿಯೊಂದು ರಾಜ್ಯವು ಅನೌಪಚಾರಿಕ ಶಿಕ್ಷಣದ ವಿವರವಾದ ಯೋಜನೆಯನ್ನು ಸಿದ್ಧಪಡಿಸಬೇಕೆಂದು ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು 1975ರಲ್ಲಿ ನಡೆದ ತನ್ನ 38ನೇ ಸಭೆಯಲ್ಲಿ ಶಿಫಾರಸು ಮಾಡಿದೆ. ಕಾರ್ಯಕ್ರಮಗಳು ಕಲಿಯುವವರ ಅಗತ್ಯಗಳು ಮತ್ತು ಅವರ ಪರಿಸರಕ್ಕೆ ಸಂಬಂಧಿಸಿದಂತೆ ಇರಬೇಕಾಗುತ್ತದೆ. ಈಗಲೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಜಾರಿಗೆ ತರುವಾಗ ಅನೌಪಚಾರಿಕ ಶಿಕ್ಷಣ ಮತ್ತು ಪರ್ಯಾಯ ವಿದ್ಯಾಭ್ಯಾಸಕ್ಕೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ. 1986ರ ರಾಷ್ಟ್ರೀಯ ಶಿಕ್ಷಣ ಕಾರ್ಯನೀತಿಯಲ್ಲಿ ಶಾಲೆಯಿಂದ ಹೊರಗೆ ಇರುವ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣವನ್ನು ಎತ್ತಿ ಹಿಡಿದಿದೆ ಮತ್ತು ಗುರಿಯನ್ನು ತಲುಪುವುದಕ್ಕಾಗಿ ಅತ್ಯಂತ ಜಾಗರೂಕತೆಯ ಯೋಜಿತ ಕಾರ್ಯನೀತಿಯನ್ನು ಸೂಚಿಸಿದೆ. ಇದನ್ನು ತ್ವರಿತಗತಿಯಲ್ಲಿ ಜಾರಿಗೆ ತರಲು ಶಿಕ್ಷಣ ಕಾರ್ಯನೀತಿ 1986–92ರ ನಂತರ ನಡೆದ ಸಭೆಗಳಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಒತ್ತಾಯವನ್ನು ಹೇರಿದೆ.

### ವಯಸ್ಕರ ಶಿಕ್ಷಣ

1935ರಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸ್ಥಾಪನೆಯಾದಂದಿನಿಂದ ಅದರ ಮುಖ್ಯ ಕಾಳಜಿಯು ವಯಸ್ಕ ಶಿಕ್ಷಣವಾಗಿದೆ. ಮಂಡಳಿಯ ವಯಸ್ಕ ಶಿಕ್ಷಣ ಸಮಿತಿಯು 1939ರಲ್ಲಿ ನಡೆದ ತನ್ನ ಸಭೆಯಲ್ಲಿ ಅನಕ್ಷರತೆಯ ಸಮಸ್ಯೆಯ ಕುರಿತು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದೆ. ಅದು ವಯಸ್ಕ ಶಿಕ್ಷಣಕ್ಕಾಗಿ ವ್ಯಾಪಕ ನೆಲೆಯಿಂದ ಸೌಲಭ್ಯಗಳನ್ನು ಒದಗಿಸುವಂತೆ ಸೂಚಿಸಿದೆ. ಮಂಡಳಿಯು ತನ್ನ ಯುದ್ಧೋತ್ತರ ಶೈಕ್ಷಣಿಕ ಅಭಿವೃದ್ಧಿ ಯೋಜನೆಯ ವರದಿಯಲ್ಲಿ ಅನೇಕ ಶಿಫಾರಸುಗಳನ್ನು ಅಳವಡಿಸಿಕೊಂಡಿದೆ ಮತ್ತು ಶ್ರವ್ಯ-ದೃಶ್ಯ ಸಾಧನಗಳ ಪರಿಪೂರ್ಣ ಬಳಕೆ ಮತ್ತು ಗ್ರಂಥಾಲಯಗಳ ಒದಗಿಸುವಿಕೆಯನ್ನು ಸೂಚಿಸಿದೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು 1949ರಲ್ಲಿ ನಡೆದ ತನ್ನ 15ನೇ ಸಭೆಯಲ್ಲಿ ವಯಸ್ಕ ಶಿಕ್ಷಣವನ್ನು 'ಸಾಮಾಜಿಕ ಶಿಕ್ಷಣ'ವೆಂದು

Digitised by Bharatavani, CIIL

ಹೆಸರಿಸಿ, ಈ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳನ್ನು ಜಾರಿಗೆ ತಂದಿದೆ. 1956 ರಲ್ಲಿ ಸಾಮಾಜಿಕ ಶಿಕ್ಷಣಕಾಗಿ ಮಂಡಳಿಯು ಸ್ಥಾಯಿ ಸಮಿತಿಯನ್ನು ನೇಮಿಸಿತು. ವಯಸ್ಕ ಶಿಕ್ಷಣದಲ್ಲಿ ಉನ್ನತ ಹಂತದ ತರಬೇತಿ ಸೌಲಭ್ಯಗಳನ್ನು ಒದಗಿಸಲು ಮತ್ತು ಸಂಶೋಧನೆಗಾಗಿ ರಾಷ್ಟ್ರೀಯ ಮೂಲಭೂತ ಶಿಕ್ಷಣ ಕೇಂದ್ರವನ್ನು(ನ್ಯಾಶನಲ್ ಫಂಡಮೆಂಟಲ್ ಎಡ್ಯುಕೇಶನ್ ಸೆಂಟರ್) ಪ್ರಾರಂಭಿಸಿದೆ. ಕೊಠಾರಿ ಆಯೋಗವು 15–35 ವಯಸ್ಸಿನ ಯುವ–ವಯಸ್ಕರಿಗಾಗಿ ಅರೆಕಾಲಿಕ ಸಾಮಾನ್ಯ ಮತ್ತು ವೃತ್ತಿಪರ ಶಿಕ್ಷಣವನ್ನು ಶಿಫಾರಸು ಮಾಡಿದೆ ಮತ್ತು ಅಂಚೆತೆರಪಿನ ಶಿಕ್ಷಣ ಮತ್ತು ಮುಂದುವರಿಕೆಯ ಶಿಕ್ಷಣದ ಒದಗಿಸುವಿಕೆಯನ್ನು ಕೂಡ ಸೂಚಿಸಿದೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು 1974 ಮತ್ತು 1975ರಲ್ಲಿ ನಡೆದ ತನ್ನ ಸಭೆಗಳಲ್ಲಿ ವಯಸ್ಕರಿಗಾಗಿ ಪ್ರಯೋಜನಾತ್ಮಕ ಸಾಕ್ಷರತೆಗೆ ಹೆಚ್ಚಿನ ಒತ್ತನ್ನು ನೀಡಿ, ಅನೌಪಚಾರಿಕ ಶಿಕ್ಷಣಕ್ಕೆ ಪ್ರಬಲ ಬೆಂಬಲವನ್ನು ನೀಡಿದೆ. ರಾಷ್ಟ್ರೀಯ ಸಾಕ್ಷರತಾ ಮಿಶನ್ ಸ್ಥಾಪನೆಯಾದದ್ದು 1988ರಲ್ಲಿ. ಜನಾರ್ಧನ್ ರೆಡ್ಡಿ ಸಮಿತಿಯು 1992ರಲ್ಲಿ ವಯಸ್ಕ ಸಾಕ್ಷರತೆಯ ಅಗತ್ಯ ಮತ್ತು ಪ್ರಾಮುಖ್ಯತೆಯ ಮೇಲೆ ಮತ್ತೊಮ್ಮೆ ಗಮನವನ್ನು ಕೇಂದ್ರೀಕೃತಗೊಳಿಸಿ ಎರ್ನಾಕುಲಮ್‌ನ ಪ್ರಯೋಗವನ್ನು ಎತ್ತಿಹಿಡಿದು, ವಯಸ್ಕ ಸಾಕ್ಷರತಾ ಕಾರ್ಯಕ್ರಮಗಳ ಮೇಲೆ ತನ್ನ ನಿಲುವನ್ನು ಪುನರುಚ್ಚರಿಸಿದೆ. ವಯಸ್ಕ ಸಾಕ್ಷರತಾ ಕಾರ್ಯಕ್ರಮಗಳು ಇನ್ನೂ ಗಮನವನ್ನು ಸೆಳೆಯುತ್ತಾ ತ್ವರಿತಗತಿಯಿಂದ ಮುಂದುವರಿದಿವೆ.

### ತಾಂತ್ರಿಕ ಶಿಕ್ಷಣ

ತಾಂತ್ರಿಕ ಶಿಕ್ಷಣದ ಬೆಳವಣಿಗೆಯ ಕುರಿತ ಮಾಹಿತಿಯು ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಭೆಗಳು ಮತ್ತು ನಿರ್ಣಯಗಳ ಮೂಲಕ ಯುದ್ಧೋತ್ತರ ಅಭಿವೃದ್ಧಿ ಯೋಜನೆಯಲ್ಲಿ ದೊರೆಯುತ್ತದೆ. ಅಖಿಲ ಭಾರತ ನೆಲೆಯಲ್ಲಿ ತಾಂತ್ರಿಕ ಶಿಕ್ಷಣವನ್ನು ಯೋಜಿಸುವ ಸಲುವಾಗಿ ತಾಂತ್ರಿಕ ಶಿಕ್ಷಣದ ಅಖಿಲ ಭಾರತ ಸಮಿತಿಯನ್ನು ಸ್ಥಾಪಿಸುವಂತೆ ಮಂಡಳಿಯು ಶಿಫಾರಸು ಮಾಡಿದೆ. ಇದಕ್ಕನುಗುಣವಾಗಿ 1945 ರಲ್ಲಿ ತಾಂತ್ರಿಕ ಶಿಕ್ಷಣದ ಅಖಿಲ ಭಾರತ ಸಮಿತಿಯನ್ನು ಆಯೋಜಿಸಲಾಯಿತು. ಭಾರತದಲ್ಲಿ ಮುಂದುವರಿದ ತಾಂತ್ರಿಕ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಹಾದಿಯಲ್ಲಿ ಮೊದಲ ಹೆಜ್ಜೆಯಾಗಿ ಕೇಂದ್ರ ಸರಕಾರವು ಇಂಡಿಯನ್ ಇನ್‌ಸ್ಟಿಟ್ಯೂಟ್ಸ್ ಆಫ್ ಟೆಕ್ನಾಲಜಿ ಎಂಬ ಹೆಸರಿನಲ್ಲಿ ಉನ್ನತ ತಾಂತ್ರಿಕ ಸಂಸ್ಥೆಗಳ ಸರಪಳಿಯನ್ನೇ ಪ್ರಾರಂಭಿಸಿತು. ಈ ಸಂಸ್ಥೆಗಳನ್ನು ಈ ಕೆಳಗಿನ ಪ್ರದೇಶಗಳಲ್ಲಿ ಸ್ಥಾಪಿಸಲಾಯಿತು: ಖರಗಪುರ(1951), ಬಾಂಬೆ(1957), ಮದ್ರಾಸ್(1959), ಕಾನ್‌ಪುರ(1960) ಮತ್ತು ಡೆಲ್ಲಿ(1961). 1952–53ರ ಮಾಧ್ಯಮಿಕ ಶಿಕ್ಷಣ ಆಯೋಗ ವ್ಯಕ್ತಪಡಿಸಿದ ಶಿಫಾರಸುಗಳೆಂದರೆ, ಬಹು ಸಂಖ್ಯೆಯಲ್ಲಿ ತಾಂತ್ರಿಕ ಶಾಲೆಗಳನ್ನು ಪ್ರತ್ಯೇಕವಾಗಿ ಅಥವಾ ಬಹು ಉದ್ದೇಶಿತ ಶಾಲೆಗಳ ಭಾಗವಾಗಿ ಪ್ರಾರಂಭಿಸಬೇಕು, ಮತ್ತು ತರಬೇತಿಯಲ್ಲಿ ಉದ್ಯೋಗಾರ್ಥಿಯ ತರಬೇತಿಯು ಬಹುಮುಖ್ಯ ಭಾಗವಾಗಿರಬೇಕು, ನಿರ್ದಿಷ್ಟ ಪ್ರದೇಶಗಳಲ್ಲಿ ಕೈಗಾರಿಕೆಗಳು ವಿದ್ಯಾರ್ಥಿಗಳಿಗೆ ತರಬೇತಿಯ ಸೌಲಭ್ಯಗಳನ್ನು ಒದಗಿಸುವುದನ್ನು ಕಡ್ಡಾಯ ಮಾಡುವ ಸೂಕ್ತ ರೀತಿಯ ಕಾನೂನನ್ನು ಜಾರಿಗೆ ತರಬೇಕು.

### ಧಾರ್ಮಿಕ ಮತ್ತು ನೈತಿಕ ಶಿಕ್ಷಣ:

ಸಂಯುಕ್ತ ಪ್ರಾಂತಗಳ ಶಿಕ್ಷಣ ಸಚಿವರಾದ ಸಂಪೂರ್ಣಾನಂದರು 1949ರಲ್ಲಿ ನಡೆದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಭೆಯಲ್ಲಿ ಅದರ ಅಧ್ಯಕ್ಷರು ಮತ್ತು ಸದಸ್ಯರನ್ನು ಉದ್ದೇಶಿಸಿ ನೀಡಿದ ಸ್ವಾಗತ ಭಾಷಣದಲ್ಲಿ ಧಾರ್ಮಿಕ ಮತ್ತು ನೈತಿಕ ಶಿಕ್ಷಣದ ಕುರಿತಾಗಿ ತಿಳಿಸಿದ ಮುಖ್ಯ ವಿಚಾರಗಳು ಹೀಗಿವೆ:

'ಜಾತ್ಯತೀತ ದೇಶದ ಪ್ರಜೆಗಳೆಂಬ ಕಾರಣಕ್ಕಾಗಿ ನಾವು ನಮ್ಮ ಬದುಕಿನ ಪರಿಸರದಿಂದ ಉದ್ದೇಶಪೂರ್ವಕವಾಗಿ ನಮ್ಮನ್ನು ದೂರ ಮಾಡಬೇಕಾಗಿಲ್ಲ. ಅದು ನಮ್ಮೆಲ್ಲರ ಒಳಗೆ, ಸುತ್ತಮುತ್ತ ಮಿಡಿಯುತ್ತಿರುತ್ತದೆ. ಭಾರತದಲ್ಲಿ ಸಂದೇಶವೊಂದು ಇರುವುದಾದರೆ, ಅದು ಸಾವಿರಾರು ವರ್ಷಗಳಿಂದ ಋಷಿ, ಮುನಿಗಳ ಮೂಲಕ ಮುಂದುವರಿದು ಬಂದಿರುವುದಾಗಿದೆ. ನಮ್ಮ ಅತಿ ಭೌತಿಕ ಕಾರ್ಯಗಳ ನಿರ್ವಹಣೆಯಲ್ಲಿ ಕೂಡ ಆ ಪ್ರಜ್ಞಾಶಕ್ತಿಯು ತನ್ನ ಇರವನ್ನು ಕಾಣಿಸುವಂತಿರಬೇಕು. ನಮ್ಮ ಶಿಕ್ಷಣ ವ್ಯವಸ್ಥೆ, ಅದರ ವಸ್ತುವಿಷಯ ಮತ್ತು ತಂತ್ರಗಳನ್ನು ರೂಪಿಸಲು ಮಾನವನ ಇರುವಿಕೆಯ ಗುರಿಯಾದ ಪುರುಷಾರ್ಥದ ಸ್ಪಷ್ಟ ಕಲ್ಪನೆಯನ್ನು ನಾವು ಪಡೆದುಕೊಳ್ಳಬೇಕು'

1964–66 ರಲ್ಲಿ ಶಿಕ್ಷಣ ಆಯೋಗವು ಧಾರ್ಮಿಕ, ನೈತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳ ಕುರಿತಾಗಿ ತಿಳಿಸುತ್ತಾ, 'ಧಾರ್ಮಿಕ ಶಿಕ್ಷಣ' ಮತ್ತು 'ಧರ್ಮದ ಕುರಿತಾದ ಶಿಕ್ಷಣ'ದ ನಡುವಿನ ವ್ಯತ್ಯಾಸವನ್ನು ವಿವರಿಸಿದೆ. ಇದರಲ್ಲಿ ಮೊದಲನೆಯದು ಬಹುಮಟ್ಟಿಗೆ ನಿರ್ದಿಷ್ಟ ಧರ್ಮದ ತತ್ವಗಳು ಮತ್ತು ರೂಢಿಗಳನ್ನು ಕಲಿಸುವ ಕಾಳಜಿಯನ್ನು ಹೊಂದಿದ್ದರೆ, ಎರಡನೆಯದು ಧರ್ಮಗಳು ಮತ್ತು ಧಾರ್ಮಿಕ ಚಿಂತನೆಗಳನ್ನು ವಿಶಾಲ ದೃಷ್ಟಿಯಿಂದ–ಆತ್ಮಾನುಭೂತಿಯನ್ನು ಕಲಿಯುವ ಕಾಳಜಿಯನ್ನು ಹೊಂದಿರುತ್ತದೆ. ಆದುದರಿಂದ, ಬಹು–ಧರ್ಮಗಳ ಪ್ರಜಾಪ್ರಭುತ್ವ ದೇಶಕ್ಕೆ ಎಲ್ಲಾ ಧರ್ಮಗಳ ಬಗ್ಗೆ ಸೈರಣೆಯುಳ್ಳ ಅಧ್ಯಯನವನ್ನು ಪ್ರೋತ್ಸಾಹಿಸುವುದು ಅಗತ್ಯವಾಗಿರುತ್ತದೆ. ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ನೀಡುವುದಕ್ಕೆ ನಿಷೇಧ ಹೇರಿದ ಕಾರಣವಾಗಿ ಮತ್ತು ಮನೆ ಪ್ರಭಾವ ಕಡಿಮೆ ಆಗುತ್ತಿರುವುದರಿಂದ, ಮಕ್ಕಳು ತಮ್ಮ ಸ್ವಂತ ಧರ್ಮದ ಕುರಿತು ಸ್ಪಷ್ಟವಾದ ಕಲ್ಪನೆಯಿಲ್ಲದೆ ಮತ್ತು ಇತರ ಧರ್ಮಗಳನ್ನು ತಿಳಿದುಕೊಳ್ಳುವ ಅವಕಾಶಗಳಿಲ್ಲದೆ ಬೆಳೆಯುತ್ತಿರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಜಗತ್ತಿನ ಶ್ರೇಷ್ಠ ಧರ್ಮಗಳನ್ನು ಮತ್ತು ನೈತಿಕ ಹಾಗೂ ಅಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವುದರಲ್ಲಿ ಅವು ನೀಡುವ ಮಹತ್ವವನ್ನು ಶಾಲಾ ಪಠ್ಯವಸ್ತುವಿನಲ್ಲಿ ಎತ್ತಿ ತೋರಿಸಬೇಕು. ಭಾವನಾತ್ಮಕ ಸಮನ್ವಯತೆಯ ಕುರಿತಾಗಿ ಸಮಿತಿ ವ್ಯಕ್ತಪಡಿಸಿದ ಶಿಫಾರಸುಗಳೆಂದರೆ: ರಾಷ್ಟ್ರದ ಐಕ್ಯತೆಯನ್ನು ಬೆಳೆಸುವ ಸೂಕ್ತ ವಿಧದ ಭಾವನೆಗಳು ವಿದ್ಯಾರ್ಥಿಗಳಲ್ಲಿ ಬೆಳೆಯುವಂತಹ

Digitised by Bharatavani, CIIL

ಪರಿಸ್ಥಿತಿಗಳನ್ನು ಸೃಷ್ಟಿಸಬೇಕು. ಶ್ರೀಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಮತ್ತು ನೈತಿಕ ಶಿಕ್ಷಣದ ಸಮಿತಿಯ ವರದಿಯಲ್ಲಿ ಪ್ರತಿಪಾದಿಸಲಾದ ವ್ಯಾಪಕ ವಿಧಾನಗಳು ಮತ್ತು ನಿಯಮಗಳಿಗೆ ಅನುಮೋದನೆ ನೀಡಿದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು, ವರದಿಯಲ್ಲಿದ್ದ ಅನೇಕ ಸೂಚನೆಗಳನ್ನು ಅನುಷ್ಠಾನಗೊಳಿಸುವಂತೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳಿಗೆ ಶಿಫಾರಸು ಮಾಡಿದೆ. ಪ್ರಾಥಮಿಕ ಹಂತಕ್ಕೆ ನೀಡಲಾದ ಶಿಫಾರಸುಗಳು ಹೀಗಿವೆ:

1. ಸಾಮೂಹಿಕವಾಗಿ ಹಾಡುವುದಕ್ಕೆ ಹಾಡಿಗಾಗಿ ಶಾಲಾ ಅಸೆಂಬ್ಲಿಯನ್ನು ಐದು ನಿಮಿಷಗಳವರೆಗೆ ನಡೆಸಬೇಕು;
2. ನೈತಿಕ ಪಾಠಕ್ಕಾಗಿ ವಾರದಲ್ಲಿ ಎರಡು ಪಿರಿಯಡುಗಳನ್ನು ಪ್ರತ್ಯೇಕವಾಗಿ ಇಡಬೇಕು; ಮತ್ತು
3. ಭಾಷಾ ಬೋಧನೆಯ ಪಠ್ಯವಸ್ತುವಿನಲ್ಲಿ ಧಾರ್ಮಿಕ ಗುರುಗಳು, ಪ್ರವಾದಿಗಳು ಮತ್ತು ಸಂತರ ಬದುಕು ಮತ್ತು ಉಪದೇಶಗಳ ಕುರಿತಾದ ಆಸಕ್ತಿದಾಯಕ ಕತೆಗಳನ್ನು ಸೇರಿಸಬೇಕು.

ಮಾಧ್ಯಮಿಕ ಹಂತದಲ್ಲಿ, ಬೆಳಗಿನ ಅಸೆಂಬ್ಲಿಯಲ್ಲಿ ಎರಡು ನಿಮಿಷಗಳ ಮೌನವನ್ನು ಆಚರಿಸಬೇಕು. ಆಮೇಲೆ ಜಾಗತಿಕವಿಶ್ವದ ಪವಿತ್ರ ಗ್ರಂಥಗಳ ಓದನ್ನು ನಡೆಸಬೇಕು ಮತ್ತು ಜಗತ್ತಿನ ಶ್ರೇಷ್ಠ ಧರ್ಮಗಳ ಪ್ರಮುಖ ಬೋಧನೆಗಳ ಅಧ್ಯಯನ ಮಾಡಬೇಕು. ವಾರದಲ್ಲಿ ಒಂದು ಗಂಟೆಯನ್ನು ನೀತಿ ಪಾಠಕ್ಕೆ ಮೀಸಲಾಗಿಡಬೇಕು. ಶಾಲಾ ಸಮಯದ ಹೊರಗೆ ಅಥವಾ ರಜಾದಿನಗಳಲ್ಲಿನ ಪಠ್ಯೇತರ ಚಟುವಟಿಕೆಗಳಲ್ಲಿ ಸಮಾಜ ಸೇವೆಯನ್ನು ಸೇರಿಸಿಕೊಳ್ಳಬೇಕು. ವಿಶ್ವವಿದ್ಯಾನಿಲಯದ ಹಂತದಲ್ಲಿ ಗುಂಪುಗಳಲ್ಲಿ ಮೌನ ಧ್ಯಾನವನ್ನು ಅನುಸರಿಸಬೇಕು. ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಬೆಳೆಸುವುದು ಮತ್ತು ವ್ಯಕ್ತಿತ್ವವನ್ನು ರೂಪಿಸುವ ಜರೂರಿ ಇರುವ ಇಂದಿನ ದಿನಗಳಲ್ಲಿ ಕೂಡ ಈ ಸೂಚನೆಗಳು ಸೂಕ್ತವೆನಿಸುತ್ತವೆ.

1964–66ರ ಶಿಕ್ಷಣ ಕಾರ್ಯನೀತಿಯಲ್ಲಿ 10+2+3ರ ಶಿಕ್ಷಣ ವಿನ್ಯಾಸ, ಮಾಧ್ಯಮಿಕ ಹಂತದಲ್ಲಿ ಶಿಕ್ಷಣದ ವೃತ್ತಿಪರತ್ವ, ಶಾಲಾ ಶಿಕ್ಷಣದಲ್ಲಿ ಅಭಿನ್ನ ಭಾಗವಾಗಿ ಕಾರ್ಯಾನುಭವ, ಸಾಮಾನ್ಯ ಶಾಲಾ ಶಿಕ್ಷಣದ ಜಾರಿಗೊಳಿಸುವಿಕೆ, ನೆರೆಹೊರೆಯ ಶಾಲೆಗಳ ಪರಿಕಲ್ಪನೆ, ಸಾಮಾಜಿಕ ಮತ್ತು ರಾಷ್ಟ್ರೀಯ ಸೇವೆಯನ್ನು ಕಡ್ಡಾಯವಾಗಿಸುವಿಕೆ ಮತ್ತು ಮೌಲ್ಯಗಳನ್ನು ಅಚ್ಚೊತ್ತುವುದು ಇವುಗಳನ್ನು ಸೂಚಿಸುವುದರ ಮೂಲಕ ಶಿಕ್ಷಣದ ರಾಷ್ಟ್ರೀಯ ವ್ಯವಸ್ಥೆಗೆ ಹೊಸ ಚಾಲನೆಯನ್ನು ನೀಡಲಾಗಿದೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ 1968ರ ಸಭೆಯಲ್ಲಿ ಶಿಕ್ಷಣ ವ್ಯವಸ್ಥೆಯ ಪರಿವರ್ತನೆ ಮತ್ತು ಶೈಕ್ಷಣಿಕ ಸಮಾನಾವಕಾಶಗಳ ಅನೇಕ ಶಿಫಾರಸುಗಳಿಗೆ ಕೆಲವು ಬದಲಾವಣೆಗಳೊಂದಿಗೆ ಅನುಮೋದನೆ ನೀಡಿತು. 1972 ಮತ್ತು 1974ರಲ್ಲಿ 10+2+3 ರ ಏಕರೂಪದ ಮಾದರಿಯನ್ನು ಮತ್ತೊಮ್ಮೆ ಎತ್ತಿ ಹಿಡಿಯಲಾಗಿದೆ. 1975ರಲ್ಲಿ ಯುಇಇ ಮತ್ತು ಎನ್ಎಫ್ಇಗಳ ಗುರಿಗಳ ಸಾಧನೆ ಪ್ರಾಮುಖ್ಯತೆಯನ್ನು ಪಡೆಯಿತು. ಇದರೊಂದಿಗೆ ಶಿಕ್ಷಣದ ರಾಷ್ಟ್ರೀಯ ವಿನ್ಯಾಸದಮಾದರಿಯ ಅನುಷ್ಠಾನವನ್ನು ಕೂಡ ಬಯಸಲಾಯಿತು. ಎನ್‌ಸಿಇಆರ್‌ಟಿಯು ಅಧ್ಯಯನದ ಸಾಮಾನ್ಯ ಕಾರ್ಯಯೋಜನೆಯನ್ನು ಹೊಂದಿರುವ ಹತ್ತು ವರ್ಷದ ಶಾಲಾ ಪಠ್ಯಕ್ರಮದ ಚೌಕಟ್ಟನ್ನು ರೂಪಿಸಿತು. ಇದು ಪ್ರಾಥಮಿಕ ಶಿಕ್ಷಣದ ಏಕರೂಪದ ರಚನೆಗೆ ದಾರಿ ಮಾಡಿಕೊಟ್ಟಿತು.

ಎಂಟು ವರ್ಷಗಳ ಅಂತರದ ಬಳಿಕ 1983ರಲ್ಲಿ ಮಂಡಳಿಯ ಸಭೆ ಸೇರಿತು. ಅದರಲ್ಲಿ ಮತ್ತೆ ಚರ್ಚೆಗೆ ಬಂದ ವಿಚಾರಗಳೆಂದರೆ, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ವಯಸ್ಕರ ಸಾಕ್ಷರತೆ, ಮಹಿಳಾ ಶಿಕ್ಷಣ, ಮಾಧ್ಯಮಿಕ ಶಿಕ್ಷಣವನ್ನು ವೃತ್ತಿಪರವಾಗಿಸುವಿಕೆ, ರಾಷ್ಟ್ರೀಯ ಸಮನ್ವಯತೆ ಹಾಗೂ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣ. ಇವುಗಳೊಂದಿಗೆ ಪ್ರತಿಯೊಂದು ಜಿಲ್ಲೆಯಲ್ಲಿ ಮಾದರಿ ಶಾಲೆಗಳ ಪ್ರಾರಂಭ, ಶಿಕ್ಷಣದಲ್ಲಿ ಮಾಧ್ಯಮಗಳ, ಸೌಲಭ್ಯಗಳ ಬಳಕೆ, ಕ್ಯಾಪಿಟೇಶನ್ ಶುಲ್ಕದ ರದ್ದತಿ, ಮತ್ತು ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಶಿಕ್ಷಣ ಮತ್ತು ಸಂಸ್ಕೃತಿಯ ಆಂತರಿಕ ಜೋಡಣೆ.

ಆನಂತರ ಮೂರು ವರ್ಷಗಳ ಅಂತರದ ಬಳಿಕ ಮಂಡಳಿ ಸಭೆ ಸೇರಿದ್ದು 27–28, ಏಪ್ರಿಲ್ 1986ರಲ್ಲಿ, 'ರಾಷ್ಟ್ರೀಯ ಶಿಕ್ಷಣ ಕಾರ್ಯನೀತಿ 1986– ಒಂದು ಪ್ರಸ್ತುತಿ'(ನ್ಯಾಶನಲ್ ಪಾಲಿಸಿ ಆನ್ ಎಡ್ಯುಕೇಶನ್ 1986–ಎ ಪ್ರೆಸೆಂಟೇಶನ್)ಯ ಪರಿಗಣನೆಗಾಗಿ. ಈ ಸಂದರ್ಭದಲ್ಲಿ ಮಂಡಳಿಯು ತನ್ನ ಹಿಂದಿನ ಪಾತ್ರವನ್ನು ಮತ್ತೆ ಸ್ಥಾಪಿಸಿಕೊಳ್ಳಬೇಕೆನ್ನುವ ಪ್ರಸ್ತಾಪವನ್ನು ಅಧ್ಯಕ್ಷರು ಮಾಡಿದರು. ಆಗ ಅದು ಶೈಕ್ಷಣಿಕ ವಿಚಾರಗಳ ಕುರಿತು, ಅವುಗಳಲ್ಲಿ ಸಹಯೋಗವನ್ನು ಪ್ರೋತ್ಸಾಹಿಸಲು ಮತ್ತು ಅದರ ಕಾರ್ಯಗಳಿಗೆ ಹೆಚ್ಚುವರಿಯನ್ನು ಸೇರಿಸಲು ಮತ್ತು ಶಿಕ್ಷಣದ ಕಾರ್ಯನೀತಿಯನ್ನು ಜಾರಿಗೊಳಿಸುವಿಕೆಯ ಕುರಿತಾಗಿ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಅದರ ಮೌಲ್ಯವನ್ನು ನಿರ್ಧರಿಸಲು ಸರಕಾರಕ್ಕೆ ಸಲಹೆ ನೀಡುವ ಮುಖ್ಯ ಸಲಹಾ ಸಂಸ್ಥೆಯಾಗಿರಬೇಕೆನ್ನುವುದು ಅಧ್ಯಕ್ಷರ ಅಭಿಮತ. ಸಾಂಕೇತಿಕವಾಗಿ ಕಪ್ಪುಹಲಗೆ ಕಾರ್ಯಾಚರಣೆ ಎಂದು ಕರೆಯಲಾಗುವುದು. ಹಂತ ಹಂತವಾಗಿ ಪ್ರಾಥಮಿಕ ಶಾಲೆಗಳಲ್ಲಿ ಅಗತ್ಯದ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು, ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದವರಿಗಾಗಿ ಅನೌಪಚಾರಿಕ ಶಿಕ್ಷಣದ ವ್ಯವಸ್ಥಿತ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು ಮತ್ತು ಶಾಲೆಗಳಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವುದಕ್ಕಾಗಿ ದೇಶದಾದ್ಯಂತ ಬಹಳ ಎಚ್ಚರಿಕೆಯಿಂದ ರೂಪಿಸಿದ ಕಾರ್ಯತಂತ್ರಗಳನ್ನು ಆಧರಿಸಿ ಕೂಲಂಕಷವಾಗಿ ರೂಪಿಸಲಾದ ವಿಧಾನಗಳನ್ನು ತಳಮೂಲದಲ್ಲಿ ಅಳವಡಿಸಿಕೊಳ್ಳುವುದನ್ನು ಸದಸ್ಯರು ಸ್ವಾಗತಿಸಿದ್ದಾರೆ. ನವೋದಯ ವಿದ್ಯಾಲಯಗಳನ್ನು ಪ್ರಗತಿ ಸೂಚಕ ಸಂಸ್ಥೆಗಳಾಗಿ ಸ್ಥಾಪಿಸುವುದು ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ (ಡಿಐಇಟಿಗಳು) ಕಾರ್ಯಯೋಜನೆಯನ್ನು ಬಹುಪಾಲು ಸದಸ್ಯರು ಸ್ವಾಗತಿಸಿದ್ದಾರೆ. ಆದರೆ ಪಶ್ಚಿಮ ಬಂಗಾಲದ ಶಿಕ್ಷಣ ಮಂತ್ರಿಯವರು ಮಾತ್ರ ನವೋದಯ ವಿದ್ಯಾಲಯದ ಪ್ರಸ್ತಾಪದ ಕುರಿತು, ಅದು ಗಣ್ಯರಿಗಾಗಿನ ಪರಿಕಲ್ಪನೆ ಎನ್ನುವ ಕಾರಣಕ್ಕಾಗಿ ತಮ್ಮ ಅಭಿಪ್ರಾಯವನ್ನು ಕಾದಿರಿಸಿಕೊಂಡರು. ವೃತ್ತಿಪರ ಶಿಕ್ಷಣವು ನಿರ್ದಿಷ್ಟ

Digitised by Bharatavani, CIIL

ಅಭ್ಯಾಸವಾಗಿರಬೇಕು ಮತ್ತು ಈ ಪಠ್ಯಕ್ರಮಗಳನ್ನು (ಕೋರ್ಸ್‌ಗಳನ್ನು) ಎಂಟನೆಯ ತರಗತಿಯಿಂದಲೇ ಒದಗಿಸಬೇಕೆಂದು ಕೂಡ ಸದಸ್ಯರು ದೃಢಪಡಿಸಿದ್ದಾರೆ. ಮಂಡಳಿಯ ಇನ್ನಿತರ ಶಿಫಾರಸುಗಳೆಂದರೆ, ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯವನ್ನು(1985ರಲ್ಲಿ ಪ್ರಾರಂಭವಾಗಿರುವುದು) ಬಲಪಡಿಸುವುದು, ಆಯ್ದ ಪ್ರದೇಶಗಳಲ್ಲಿ ಪದವಿಗಳನ್ನು ಉದ್ಯೋಗಗಳಿಂದ ಪ್ರತ್ಯೇಕಿಸುವುದು, ಮತ್ತು ಸಮುದಾಯ ಪಾಲಿಟೆಕ್ನಿಕ್‌ಗಳನ್ನು ಬಲಪಡಿಸುವುದು. 1986ರ ಮೇ ತಿಂಗಳಲ್ಲಿ ಮಂಡಳಿಯು ಒಮ್ಮತದಿಂದ ಪರಿಗಣಿಸಿದ ವಿಚಾರಗಳು ಹೀಗಿವೆ: ಮೊದಲ ಹತ್ತು ವರ್ಷಗಳ ಶಾಲಾ ಶಿಕ್ಷಣವನ್ನು ಏಕರೂಪ ರಚನೆಗೆ ಬದಲಾಯಿಸಿಕೊಳ್ಳುವುದು ಮತ್ತು 1995 ರೊಳಗೆ ರಾಜ್ಯಗಳು 5+3+2ರ ವಿನ್ಯಾಸಕ್ಕೆ ಬದಲಾಯಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿಕೊಳ್ಳಬೇಕು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ–ಒಂದು ಚೌಕಟ್ಟು(1988) ಗಾಗಿ ಇರುವ ರಾಷ್ಟ್ರೀಯ ವ್ಯಾಸಂಗ ಕ್ರಮವು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಒದಗಿಸಲಿದೆ. ಇದರಲ್ಲಿ ಏಕರೂಪ ಶೈಕ್ಷಣಿಕ ಅವಕಾಶಗಳ ಅಂಶಗಳನ್ನು ಒದಗಿಸಲಾಗುತ್ತದೆ. ಇದು ಪಡೆಯುವುದಕ್ಕೆ ಮಾತ್ರವಲ್ಲ ಯಶಸ್ಸನ್ನು ಹೊಂದುವುದಕ್ಕೆ ಕೂಡ ಇರಬೇಕಾಗುತ್ತದೆ. ಇದರೊಂದಿಗೆ 10+2+3ರ ಏಕರೂಪ ಶಿಕ್ಷಣ ವಿನ್ಯಾಸ, ಮುಖ್ಯ ಹಾಗೂ ಇತರ ಘಟಕಗಳನ್ನು ಹೊಂದಿರುವ, ಇವು ಸುಲಭಸಾಧ್ಯವಾದುವು. ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು, ಮತ್ತು ಪ್ರತಿಯೊಂದು ಹಂತದಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳು ಇರುತ್ತವೆ. ಆದರೆ, 10 (5+3+2)+2+3 ಈ ರಚನೆಯು ಇನ್ನೂ ಸಾರ್ವತ್ರಿಕವಾಗಿ (2001ರಲ್ಲಿ)ಜಾರಿಗೆ ಬಂದಿಲ್ಲ.

ಮಂಡಳಿ ತನ್ನ 1987ರ ಸಭೆಯಲ್ಲಿ ಹೊಸ ಶಿಕ್ಷಣ ಕಾರ್ಯನೀತಿಯನ್ನು ಜಾರಿಗೆ ತರುವುದರ ಪರಿಶೀಲನೆಯನ್ನು ನಡೆಸಿತು. ಮಂಡಳಿಯು ರಾಷ್ಟ್ರೀಯ ಸಾಕ್ಷರತಾ ಮಿಶನ್‌ನ ಪಾತ್ರವನ್ನು ಎತ್ತಿ ತೋರಿಸಿತು ಮತ್ತು ರಾಷ್ಟ್ರೀಯ ಸಾಕ್ಷರತಾ ಮಿಶನ್ನಿನ ಪ್ರಾಧಿಕಾರವನ್ನು ಸ್ಥಾಪಿಸಿತು. 1988ರ ತನ್ನ ಸಭೆಯಲ್ಲಿ ಕಪ್ಪುಹಲಗೆ ಕಾರ್ಯನಿರ್ವಹಣಾ ಕಾರ್ಯಕ್ರಮ (ಬ್ಲಾಕ್ ಬೋರ್ಡ್ ಆಪರೇಶನ್ ಪ್ರೊಗ್ರಾಮ್), ನವೋದಯ ವಿದ್ಯಾಲಯಗಳು ಮತ್ತು ಅನೌಪಚಾರಿಕ ಶಿಕ್ಷಣಕ್ಕೆ ಅಕ್ಷರಶಃ ಎಲ್ಲಾ ರಾಜ್ಯಗಳಿಂದ ದೊರೆತ ಅದ್ಭುತ ಪ್ರತಿಕ್ರಿಯೆಯನ್ನು ಪ್ರಮುಖಾಂಶವಾಗಿ ಅಭಿವ್ಯಕ್ತಿಸಿದೆ. ಮುಂದಿನ ವರ್ಷದಿಂದ ಕನಿಷ್ಠ ಕಲಿಕೆಯ ಫಲಗಳು ಮತ್ತು ಮೂಲ ವಿಷಯಾಂಶಗಳನ್ನು ಒಳಗೊಂಡಿರುವ ಮಾದರಿ ಪಠ್ಯಕ್ರಮವನ್ನು ಜಾರಿಗೆ ತರಲಾಗುವುದೆಂದು ಅಧ್ಯಕ್ಷರು ತಿಳಿಸಿದರು. ನವೋದಯ ವಿದ್ಯಾಲಯಗಳು ಮತ್ತು ಡಿಐಇಟಿಗಳನ್ನು ಪ್ರಾರಂಭಿಸುವುದನ್ನು ಒಳಗೊಂಡಂತೆ ಅನೇಕ ವಿಷಯಾಂಶಗಳ ಕುರಿತಾದ ಕಾರ್ಯನೀತಿಯನ್ನು ಜಾರಿಗೊಳಿಸಿದ ವರದಿಗಳನ್ನು ರಾಜ್ಯಗಳು ಪ್ರಸ್ತುತಪಡಿಸಿದವು. 1989ರ ಸಭೆಯಲ್ಲಿ ಈವರೆಗೆ ಮುಂದುವರಿದು ಬಂದಿರುವ ಚರ್ಚೆಯ ವಿಷಯಗಳೊಂದಿಗೆ, ನರ್ಸರಿ ಶಾಲೆಗಳು ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಪರಿಷತ್ತು ಸೇರಿದಂತೆ ಶಿಕ್ಷಕ ಶಿಕ್ಷಣವನ್ನು ನಿಯಮಬದ್ಧಗೊಳಿಸುವುದು ಮತ್ತು ಅವುಗಳ ಮೇಲೆ ನಿಯಂತ್ರಣ ಸಾಧಿಸುವುದು, ಮಹಿಳಾ ಶಿಕ್ಷಕರಿಗಾಗಿ ವಸತಿ ಸೌಲಭ್ಯಗಳು, ಉನ್ನತ ಶಿಕ್ಷಣದಲ್ಲಿ ಶೈಕ್ಷಣಿಕ ವೇಳಾಪಟ್ಟಿಯನ್ನು ಮರುಸ್ಥಾಪಿಸುವುದು ಮತ್ತು ಬಾಹ್ಯ ಅನುದಾನವೂ ಸೇರಿದಂತೆ ಶಿಕ್ಷಣಕ್ಕೆ ಸಂಪನ್ಮೂಲಗಳನ್ನು ಕಂಡುಕೊಳ್ಳುವುದು ಕೂಡ ಸೇರಿದೆ. ಮಂಡಳಿ ತನ್ನ ಸಭೆಯಲ್ಲಿ ತನ್ನ(ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ) ಅನೇಕ ಸಮಿತಿಗಳ ವರದಿಗಳನ್ನು ಪರಿಗಣಿಸಿತು. ಅದರಲ್ಲಿ ಪ್ರೊಫೆಸರ್ ಯಶ್‌ಪಾಲ್ ಅವರ ಅಧ್ಯಕ್ಷತೆಯ ಉನ್ನತ ಶಿಕ್ಷಣದ ಗುಂಪಿನ ವರದಿಯೂ ಸೇರಿದೆ. ಈ ವರದಿಯಲ್ಲಿ ಉನ್ನತ ಶಿಕ್ಷಣದ ರಾಜ್ಯ ಸಮಿತಿಗಳನ್ನು ರೂಪಿಸುವುದು, ಮಹಾವಿದ್ಯಾಲಯಗಳು ಮತ್ತು ವಿಶ್ವವಿದ್ಯಾನಿಲಯಗಳ ನೇಮಕಾತಿಯಲ್ಲಿ ರಾಷ್ಟ್ರೀಯ ಅರ್ಹತಾ ಪರೀಕ್ಷೆಯನ್ನು ಪ್ರಾರಂಭಿಸುವುದು, ಸ್ವಾಯತ್ತ ಮಹಾವಿದ್ಯಾಲಯಗಳ ಕಾರ್ಯಯೋಜನೆಯ ಶಿಫಾರಸುಗಳು ಇದ್ದವು. ಡಾ. ಆದಿಶೇಷಯ್ಯನವರ ಅಧ್ಯಕ್ಷತೆಯ ವಯಸ್ಕ ಶಿಕ್ಷಣ ಗುಂಪಿನ ವರದಿಯಲ್ಲಿ ಕಲಿಕಾ ಫಲಗಳ ಮೌಲ್ಯಮಾಪನ, ಮತ್ತು ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಕ್ಷರೋತ್ತರದ ಅವಕಾಶ ಮತ್ತು ಶಿಕ್ಷಣದ ಮುಂದುವರಿಕೆಗೆ ಅವಕಾಶ ನೀಡುವಿಕೆಗೆ ಶಿಫಾರಸುಗಳಿದ್ದವು. ಜೆ.ಎನ್. ದಾಸ್ ಮಹಾಪಾತ್ರರ ಅಧ್ಯಕ್ಷತೆಯ ಪ್ರಾಥಮಿಕ ಶಿಕ್ಷಣದ ಕಾರ್ಯನಿರತ ಗುಂಪಿನ ವರದಿಯಲ್ಲಿ ಶಾಲಾ–ಪೂರ್ವ ಶಿಕ್ಷಣವನ್ನು ನಿಯಮಿತಗೊಳಿಸುವುದು, ಹಿರಿಯ ಪ್ರಾಥಮಿಕ ಹಂತದಲ್ಲಿ ಕಪ್ಪುಹಲಗೆ ಕಾರ್ಯಾಚರಣೆಯ ಯೋಜನೆಯನ್ನು ಜಾರಿಗೆ ತರುವುದು, ಪ್ರಾಥಮಿಕ ಶಾಲೆಯ ಪ್ರವೇಶದ ವಯಸ್ಸನ್ನು 5+ ಮಾಡುವುದು, ಅಣು ಯೋಜನೆಗಳು, ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ, 5 ಮತ್ತು 8ನೇ ತರಗತಿಗಳಲ್ಲಿ ಮೌಲ್ಯಮಾಪನದ ರಾಷ್ಟ್ರೀಯ ಕಾರ್ಯಕ್ರಮ, ಶೈಕ್ಷಣಿಕೇತರ ಕ್ಷೇತ್ರಗಳಲ್ಲಿಯೂ ಅಂಕ ನೀಡಿಕೆ ವ್ಯವಸ್ಥೆಯನ್ನು ಕೈಬಿಟ್ಟು ಗ್ರೇಡ್‌ಗಳನ್ನು ನೀಡುವ ಕ್ರಮಗಳ ಬಗ್ಗೆ ಡಯಟ್ ಮತ್ತು ಶಾಲಾ ಸಂಕೀರ್ಣಗಳು ಪರಿಣಾಮಕಾರಿ ಪಾತ್ರ ವಹಿಸುವಿಕೆಗಳ ಬಗ್ಗೆ ಶಿಫಾರಸುಗಳು ಇದ್ದವು. ಜೊತೆಗೆ ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಪರಿಷತ್‌ಗೆ ಶಾಸನಬದ್ಧ ಸ್ಥಾನ ನೀಡುವಿಕೆಯನ್ನು ಕೂಡ ಅದು ಪ್ರಸ್ತಾಪಿಸಿದೆ. ಡಾ. ರಾಜೇಂದ್ರ ಕುಮಾರಿ ಬಾಜಪೇಯಿ ಅವರ ಅಧ್ಯಕ್ಷತೆಯ ಪ್ರತಿಕೂಲ ಪರಿಸ್ಥಿತಿಯಲ್ಲಿರುವವರ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ಅಂಗವಿಕಲರು) ಮತ್ತು ಸೀಮಾ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮ ಸಮಿತಿಯು ಪ್ರತಿಕೂಲ ಪರಿಸ್ಥಿತಿಯಲ್ಲಿರುವವರ ಗುಂಪುಗಳಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಅನೇಕ ಕ್ರಮಗಳನ್ನು ಶಿಫಾರಸು ಮಾಡಿದೆ. ವಿದ್ಯಾರ್ಹತೆಯಲ್ಲಿ ಸಡಿಲಿಸುವಿಕೆ, ಮೆಟ್ರಿಕೋತ್ತರ ವಿದ್ಯಾರ್ಥಿ ವೇತನಗಳ ಸಂಖ್ಯೆಯಲ್ಲಿ ಹೆಚ್ಚಳ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿಗೃಹ ಸೌಲಭ್ಯಗಳು, ಪ್ರಾಥಮಿಕ ಶಾಲೆಗಳ ಸಮೀಪದಲ್ಲಿಯೇ ಮಕ್ಕಳ–ಸೇವಾ ಸೌಲಭ್ಯಗಳು, ಮಹಿಳೆಯರಿಗೆ ವಸತಿಗೃಹ ಸೌಲಭ್ಯಗಳು, ಮೀನುಗಾರರಿಗೆ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಪ್ರದೇಶಗಳಲ್ಲಿ ಅನೌಪಚಾರಿಕ ಶಿಕ್ಷಣ/ಪರ್ಯಾಯ ಶಿಕ್ಷಣದ ಸೌಲಭ್ಯಗಳ ಶಿಫಾರಸುಗಳು ಇದ್ದವು. ಒರಿಸ್ಸಾದ ಶಿಕ್ಷಣ ಸಚಿವರಾದ ಕಾಂತಿ ಬಿಶ್ವಾಸರ ಅಧ್ಯಕ್ಷತೆಯ ಮಾಧ್ಯಮಿಕ ಶಿಕ್ಷಣದ

Digitised by Bharatavani, CIIL

ಗುಂಪಿನ ವರದಿಯಲ್ಲಿದ್ದ ಶಿಫಾರಸುಗಳೆಂದರೆ– ಕಿರಿಯ ಮಾಧ್ಯಮಿಕ ಹಂತದಲ್ಲಿ ಕಾರ್ಯಾನುಭವದ ಬದಲಾಗಿ ವೃತ್ತಿಪೂರ್ವ ಶಿಕ್ಷಣ ನೀಡುವಿಕೆ, ಶಿಕ್ಷಣದ ವ್ಯಾಪಕತೆ ಕಡಿಮೆ ಇರುವ ರಾಜ್ಯಗಳಲ್ಲಿ ನವೋದಯ ವಿದ್ಯಾಲಯಗಳ ಸ್ಥಾಪನೆ ಮತ್ತು ತರಗತಿ ಯೋಜನೆಯ ಮುಂದುವರಿಕೆ. ಯೋಜನಾ ಆಯೋಗದ ಸದಸ್ಯರಾದ ಪಿ.ಎನ್ ಶ್ರೀವಾಸ್ತವ ಅವರ ಅಧ್ಯಕ್ಷತೆಯ ತಾಂತ್ರಿಕ ಶಿಕ್ಷಣದ ಗುಂಪು ತಾಂತ್ರಿಕ ಶಿಕ್ಷಣದ ಬಗ್ಗೆ ಅಮೂಲ್ಯ ಶಿಫಾರಸುಗಳನ್ನು ನೀಡಿದೆ. ಅವುಗಳೆಂದರೆ, ಪಾಲಿಟೆಕ್ನಿಕ್ ಶಿಕ್ಷಕರ ವೇತನ ಸುಧಾರಣೆ ಮತ್ತು ಅಪ್ರೆಂಟಿಸ್‌ಶಿಪ್ ಸಮಿತಿಗೆ ಹೆಚ್ಚಿನ ಅಧಿಕಾರ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ತನ್ನ 1991ರ ಸಭೆಯಲ್ಲಿ ಈಗಾಗಲೇ ಇರತಕ್ಕಂತಹ ಅನೇಕ ಶಿಫಾರಸುಗಳನ್ನು ಪುನರುಚ್ಚರಿಸಿದೆ. ಅದರಲ್ಲಿಯೂ ವಿಶೇಷವಾಗಿ ಶಿಕ್ಷಣದ ಸಾರ್ವತ್ರೀಕರಣ, ಕಲಿಕೆಯ ಕನಿಷ್ಠ ಮಟ್ಟಗಳ ಕಾರ್ಯಯೋಜನೆಯನ್ನು ಜಾರಿಗೊಳಿಸುವಿಕೆ, ಶಿಕ್ಷಕರ ಶಿಕ್ಷಣ ಮತ್ತು ಸಾರ್ವತ್ರಿಕ ಸಾಕ್ಷರತೆಯ  ಕಾರ್ಯಕ್ರಮಗಳಿಗೆ ಹೆಚ್ಚಿನ ಗಮನವನ್ನು ನೀಡಿದೆ. ಮಂಡಳಿಯು ಉನ್ನತ ಶಿಕ್ಷಣದ ಕುರಿತಾದ ಜ್ಞಾನಮ್ ಸಮಿತಿಯ “ಹೊಸ ಶೈಕ್ಷಣಿಕ ನಿರ್ವಹಣೆಯ ಕಡೆಗೆ’ (ಟುವರ್ಡ್ಸ್ ನ್ಯೂ ಎಡ್ಯುಕೇಶನಲ್ ಮ್ಯಾನೇಜ್‌ಮೆಂಟ್) ವರದಿಯನ್ನು ಪರಿಗಣಿಸಿದೆ. ಈ ವರದಿಯಲ್ಲಿ ಶೈಕ್ಷಣಿಕ ವೇಳಾಪಟ್ಟಿಯ ಅನುಸರಣೆ, ಮಹಾವಿದ್ಯಾಲಯಗಳಲ್ಲಿ ಶಿಕ್ಷಣಮಟ್ಟದ ಸುಧಾರಣಾ ಕ್ರಮಗಳು ಮತ್ತು ದೂರಶಿಕ್ಷಣದ ಸುಧಾರಣಾ ಕ್ರಮಗಳ ಕುರಿತಾದ ವಿಷಯಗಳಿದ್ದವು. ಸಾಮರ್ಥ್ಯಗಳು ಮತ್ತು ಕೌಶಲಗಳಲ್ಲಿ ಮಕ್ಕಳು ಪ್ರಭುತ್ವವನ್ನು ಸಾಧಿಸುವುದಕ್ಕಾಗಿ ಸಾಧನತ್ವ, ಪ್ರಸಕ್ತತೆ ಮತ್ತು ಕ್ರಿಯಾತ್ಮಕತೆಯನ್ನೊಳಗೊಂಡು ವ್ಯಾಪಕವಾಗಿ ಪ್ರಸಾರಗೊಂಡು ಜಾರಿಗೆ ಬರುವಂತಹ ಎಮ್‌ಎಲ್‌ಎಲ್ ಕಾರ್ಯನೀತಿಯನ್ನು ಅನುಸರಿಸುವಂತೆ ಪ್ರಾಥಮಿಕ ಶಿಕ್ಷಣದ ಕಾರ್ಯನಿರತ ಗುಂಪು ಶಿಫಾರಸು ಮಾಡಿದೆ. ಅದು ಅಣು ಯೋಜನೆಯನ್ನು ಮತ್ತು ಶಾಲಾ ಭೂಪಟ ರಚನೆಯನ್ನು ಕೂಡ ತನ್ನ ಗಮನಕ್ಕೆ ತಂದುಕೊಂಡಿದೆ. ಮಕ್ಕಳ ಕಲಿಕೆಯ ಪರಿವೀಕ್ಷಣೆಯಲ್ಲಿ ‘ಮಹಿಳಾ ಸಮೂಹ’ ಮತ್ತು ಗ್ರಾಮ ಶಿಕ್ಷಣ ಸಮಿತಿಗಳ(ವಿಇಸಿಗಳ) ಪಾತ್ರವನ್ನು ಎತ್ತಿ ಹಿಡಿದಿದೆ. ಅದು ಶಿಕ್ಷಕರ ಶಿಕ್ಷಣ ಮತ್ತು ಡಿಐಇಟಿಗಳ ಪಾತ್ರಕ್ಕೂ ಗಮನವನ್ನು ನೀಡಿದೆ. ಪ್ರತಿಕೂಲ ಪರಿಸ್ಥಿತಿಯಲ್ಲಿರುವವರ ಶಿಕ್ಷಣದ ಕಾರ್ಯನಿರತ ಗುಂಪಿನ ವರದಿಯಲ್ಲಿನ(ಅಧ್ಯಕ್ಷರು: ಹೆಚ್. ಎಸ್. ಲ್ಯಾಂಗ್‌ಡೊಹ್, ಮೇಘಾಲಯದ ಮುಖ್ಯಮಂತ್ರಿ) ಶಿಫಾರಸುಗಳೆಂದರೆ: ಪ್ರಾದೇಶಿಕತೆಗೆ ಪ್ರಾಮುಖ್ಯತೆ ನೀಡುವಿಕೆ, ಶಿಕ್ಷಣಕ್ಕೆ ಕ್ಷೇತ್ರೀಯ ತೀವ್ರವಾದ ಸಮೀಪಿಸುವಿಕೆ, ಬಹಳ ಎಳೆ ವಯಸ್ಸಿನಿಂದಲೇ ಕಾಳಜಿ ವಹಿಸುವಿಕೆ ಮತ್ತು ಪ್ರಾಥಮಿಕ ಶಾಲೆಗಳೊಂದಿಗೆ ಶಿಕ್ಷಣ ಕೇಂದ್ರಗಳು.

ಆಚಾರ್ಯ ರಾಮಮೂರ್ತಿ ಮತ್ತು ಜನಾರ್ಧನ ರೆಡ್ಡಿ ಸಮಿತಿಗಳ ವರದಿಗಳಲ್ಲಿದ್ದ ಶಿಫಾರಸುಗಳ ಆಧಾರದಿಂದ ಮೇ 5–6, 1992ರಲ್ಲಿ ನಡೆದಂತಹ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಭೆಯಲ್ಲಿ ಶಿಕ್ಷಣ ಕಾರ್ಯನೀತಿಯಲ್ಲಿ ಸುಧಾರಣೆಯನ್ನು ತರುವುದರ ಕುರಿತು ಚರ್ಚೆ ನಡೆಯಿತು. ಸಂವಿಧಾನದ 45ನೇ ವಿಧಿಯ ವ್ಯಾಪ್ತಿಯಲ್ಲಿ ಇಸಿಸಿಇಯನ್ನು ಸೇರಿಸಲು ವಿಧಿಯ ತಿದ್ದುಪಡಿಯನ್ನು ಮಾಡಬೇಕೆಂಬ ರಾಮಮೂರ್ತಿ ವರದಿಯ ಸೂಚನೆಗೆ ಶ್ರೀ ಜನಾರ್ಧನ ರೆಡ್ಡಿಯವರು ಅಧ್ಯಕ್ಷರಾಗಿರುವ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಶಿಕ್ಷಣ ಕಾರ್ಯನೀತಿ ಸಮಿತಿಯು(ಇದನ್ನು ಜನಾರ್ಧನ ರೆಡ್ಡಿ ಸಮಿತಿಯೆಂದು ಕೂಡ ಕರೆಯಲಾಗುತ್ತದೆ) ತನ್ನ ಬೆಂಬಲವನ್ನು ಸೂಚಿಸಿಲ್ಲ. ಇದೇ ರೀತಿ ಆಚಾರ್ಯ ರಾಮಮೂರ್ತಿ ಸಮಿತಿಯ ವರದಿಯ ಶಿಫಾರಸಿನಲ್ಲಿರುವ ಕನಿಷ್ಠ ಅಗತ್ಯಗಳ ಕಾರ್ಯಕ್ರಮದಲ್ಲಿ ಇಸಿಸಿಇಯನ್ನು ಸೇರಿಸಿಕೊಳ್ಳುವ ವಿಚಾರವನ್ನು ಯೋಜನಾ ಆಯೋಗದೊಂದಿಗೆ ಪ್ರಸ್ತಾಪಿಸಲಾಗುತ್ತದೆ ಎಂಬುದನ್ನು ಗಮನಕ್ಕೆ ತಂದುಕೊಳ್ಳಲಾಗಿದೆ. ಈ ಶಿಫಾರಸುಗಳಲ್ಲಿ ಇರುವುದು: ನವೋದಯ ವಿದ್ಯಾಲಯ ಕಾರ್ಯಯೋಜನೆಗಳ ಮುಂದುವರಿಕೆ, ವಿದ್ಯಾರ್ಥಿಗಳನ್ನು ಗುರುತಿಸಲ್ಪಟ್ಟ ವೃತ್ತಿಗಳಿಗೆ ತಯಾರು ಮಾಡುವುದಕ್ಕಾಗಿ ನಿರ್ದಿಷ್ಟ ವೃತ್ತಿಪರ ವರ್ಗೀಕರಣ, ಅಂಗವಿಕಲರ ಶಿಕ್ಷಣ, ಏಕರೂಪದ ಶಾಲಾ ವ್ಯವಸ್ಥೆ ಮತ್ತು ನೆರೆಹೊರೆಯ ಶಾಲೆಗಳು. ಅದು ಶಾಲಾ ಸಂಕೀರ್ಣಗಳ ಪರಿಕಲ್ಪನೆಯ ವಿಸ್ತೃತ ರೂಪವಾದ ಶೈಕ್ಷಣಿಕ ಸಂಕೀರ್ಣಗಳು, ಭಾರತೀಯ ಶಿಕ್ಷಣ ಸೇವೆ, ಸಮುದಾಯ ಪಾಲಿಟೆಕ್ನಿಕ್‌ಗಳು ಇತ್ಯಾದಿಗಳಿಗೆ ಒತ್ತನ್ನು ನೀಡಿದೆ. ಆಡಳಿತಾತ್ಮಕ ನ್ಯಾಯ ಮಂಡಳಿಗಳು ಇರುವ ಹಾಗೆ ದೂರುಗಳನ್ನು ತೀರ್ಮಾನಿಸುವ ಸಲುವಾಗಿ ಶೈಕ್ಷಣಿಕ ನ್ಯಾಯಮಂಡಳಿಯನ್ನು ಶಿಫಾರಸು ಮಾಡಲಾಗಿದೆ. ರಾಜ್ಯ ಸರಕಾರಗಳು ತಮ್ಮ ಕಾರ್ಯದಲ್ಲಿ ಹೆಚ್ಚು ಮಹತ್ವವನ್ನು ಪಡೆಯಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿಯ(ಎಐಸಿಟಿಇ) ಅಧಿನಿಯಮದ ತಿದ್ದುಪಡಿಯ ಅಗತ್ಯವನ್ನು ಸೂಚಿಸಲಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸದ ಭಾಗವಾಗಿ ಇಸಿಸಿಇಯನ್ನು ಸೇರಿಸಲು 45ನೇ ಅಧಿನಿಯಮದಲ್ಲಿ ತಿದ್ದುಪಡಿ ಅಳವಡಿಸಲು ಕರ್ನಾಟಕದ ಶಿಕ್ಷಣ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಬೆಂಬಲ ನೀಡಿದರು. ಇವತ್ತಿನ ದಿನ ನಾನು ವರದಿಯನ್ನು ಬರೆಯುವುದಿದ್ದರೆ ಅದರ ಶೀರ್ಷಿಕೆಯು ‘ಶಿಕ್ಷಣ ಮತ್ತು ರಾಷ್ಟ್ರಾಭಿವೃದ್ಧಿ’ಯಾಗಿ ಇರುವುದಕ್ಕಿಂತ ‘ಶಿಕ್ಷಣ ಮತ್ತು ಚಾರಿತ್ರ್ಯ(ನಡತೆ) ನಿರ್ಮಾಣ’ವೆಂದು ಇರುತ್ತದೆ ಎಂಬುದಾಗಿ ಡಾ. ಡಿ.ಎಸ್. ಕೊಠಾರಿಯವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಮೌಲ್ಯಗಳ ನಾಶ ಮತ್ತು ಹೆಚ್ಚುತ್ತಿರುವ ಹಿಂಸೆಯನ್ನು ಕುರಿತು ಕಳವಳ ವ್ಯಕ್ತಪಡಿಸುತ್ತಾ ಭಾರತೀಯ ಶಿಕ್ಷಣದಲ್ಲಿ ಭಾರತೀಯತೆಯನ್ನು ಪ್ರೋತ್ಸಾಹಿಸುವಂತೆ ಜನತೆಗೆ ಮತ್ತು ಸರಕಾರಕ್ಕೆ ಕರೆ ನೀಡಿದ್ದಾರೆ. ಮಕ್ಕಳು ಅರ್ಧದಲ್ಲಿ ಶಾಲಾಶಿಕ್ಷಣವನ್ನು ಬಿಟ್ಟು ಹೋಗದಂತೆ ತಡೆಯುವ ಪ್ರಮುಖ ಕ್ರಮವಾದ ಇಸಿಸಿಇಯನ್ನು ಪ್ರಾಥಮಿಕ ಶಿಕ್ಷಣದ ಭಾಗವಾಗಿ ಮಾಡಬೇಕೆಂದು ಶಿಫಾರಸು ಮಾಡಿರುವ ಕೇಂದ್ರ ರಾಜ್ಯ ಸಚಿವರಾದ (ಸಿಬ್ಬಂದಿ ವರ್ಗ, ಸಾರ್ವಜನಿಕ ದೂರುಗಳು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ) ಶ್ರೀಮತಿ ಮಾರ್ಗರೇಟ್ ಆಳ್ವಾ ಅವರು ಸಮಾನತೆಗಾಗಿ ಶಿಕ್ಷಣವನ್ನು ಎತ್ತಿ ಹಿಡಿದಿದ್ದಾರೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಆಗಸ್ಟ್ 8, 1992ರ ಸಭೆಯಲ್ಲಿ (48ನೇ ಸಭೆ) ಮರುಪರಿಶೀಲಿತ ರಾಷ್ಟ್ರೀಯ ಶಿಕ್ಷಣನೀತಿಯ ಕ್ರಿಯಾ ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ ಚರ್ಚಿಸಲಾಗಿದೆ.

Digitised by Bharatavani, CIIL

ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಅಕ್ಟೋಬರ್, 1993ರ 49ನೇ ಸಭೆಯಲ್ಲಿ ಈ ಕೆಳಗಿನವುಗಳನ್ನು ಪರಿಗಣಿಸಲಾಗಿದೆ: ಶಿಕ್ಷಣದ ವಿಕೇಂದ್ರೀಕರಣದ ಸಿಎಬಿಇ ವರದಿ(ಶ್ರೀ ವೀರಪ್ಪ ಮೊಯಿಲಿ ವರದಿ), ವಿಧಾನ ಮಂಡಲದಲ್ಲಿ ಶಿಕ್ಷಕರ ಪ್ರತಿನಿಧೀಕರಣದ ಕುರಿತು ಸಿಎಬಿಇ ಸಮಿತಿಯ ವರದಿ, ಕ್ರೀಡೆ ಮತ್ತು ದೈಹಿಕ ಶಿಕ್ಷಣದ ಕುರಿತು ಸಿಎಬಿಇ ಸಮಿತಿಯ ವರದಿ (ಶ್ರೀ ಕೆ.ಪಿ. ಸಿಂಘ್ ದೇವ್ ಸಮಿತಿ), ಜ್ಞಾನಮ್ ಸಮಿತಿಯ ಕುರಿತು ಸಿಎಬಿಇ ಸಮಿತಿಯ ವರದಿ, ಎಮ್‌ಹೆಚ್‌ಆರ್‌ಡಿಯಿಂದ ನೇಮಕಗೊಂಡ ರಾಷ್ಟ್ರೀಯ ಸಲಹಾ ಸಮಿತಿಯ ವರದಿ. ಇದರ ಉದ್ದೇಶ ಶಾಲಾ ಮಕ್ಕಳ ಶೈಕ್ಷಣಿಕ ಹೊರೆಯನ್ನು ಕಡಿಮೆಗೊಳಿಸುವ ದಾರಿ ಮತ್ತು ವಿಧಗಳನ್ನು ಕಂಡುಕೊಳ್ಳುವುದು, ಶಾಲಾ ಪಠ್ಯಪುಸ್ತಕ ಮೌಲ್ಯಮಾಪನದ ರಾಷ್ಟ್ರೀಯ ಸಂಚಾಲನ ಸಮಿತಿಯ ಮಟ್ಟವನ್ನು ಭಾರತೀಯ ಪರಿಪ್ರೇಕ್ಷೆಯಿಂದ ರಾಷ್ಟ್ರೀಯ ಆಯೋಗ ಮತ್ತು ಎಲ್ಲರಿಗಾಗಿ ಶಿಕ್ಷಣದ ಮಟ್ಟಕ್ಕೇರಿಸುವುದು. ಇಲ್ಲಿ ಕೈಗೊಂಡ ನಿರ್ಧಾರಗಳೆಂದರೆ:

* ಎಲ್ಲ ರಾಜ್ಯ ಸರಕಾರಗಳು, ಕೇಂದ್ರ ಪ್ರದೇಶಗಳ ಆಡಳಿತಗಳು 31 ಡಿಸೆಂಬರ್, 1993ರ ಒಳಗೆ ಶಿಕ್ಷಣದ ಎಲ್ಲ ಹಂತಗಳು ಮತ್ತು ವಿಷಯಾಂಶಗಳನ್ನು ಒಳಗೊಳ್ಳುವ, 1992ರ ಕ್ರಿಯಾ ಯೋಜನೆಯ ರೀತಿಯ ವ್ಯಾಪಕ ಕ್ರಿಯಾ ಯೋಜನೆಗಳನ್ನು ತಯಾರಿಸಬೇಕು.

* 73ರ ಮತ್ತು 74ರ ಸಂವಿಧಾನಾತ್ಮಕ ತಿದ್ದುಪಡಿಗಳಿಗೆ ಅನುಸರಣೆಯಾಗಿ ಶಿಕ್ಷಣದ ಆಡಳಿತ ರಚನೆಯ ವಿಕೇಂದ್ರೀಕರಣಕ್ಕೆ ಅಗತ್ಯವಿರುವ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕು.

* ಮಕ್ಕಳ ಮೇಲಿನ ಶೈಕ್ಷಣಿಕ ಹೊರೆಯ ಕುರಿತಾದ ಯಶಪಾಲ್ ಸಮಿತಿಯಲ್ಲಿರುವ ಪ್ರಸ್ತುತ ವಿಚಾರಗಳಿಗೆ ಸಂಬಂಧಿಸಿದ ವ್ಯಾಪಕ ಚರ್ಚೆಯನ್ನು ಸಂಘಟಿಸಬೇಕು.

* ವಿಧಾನ ಮಂಡಳದಲ್ಲಿ ಶಿಕ್ಷಕರಿಗಾಗಿ ಪ್ರತ್ಯೇಕ ಮತದಾನ ಕ್ಷೇತ್ರದ ಅಗತ್ಯವಿಲ್ಲ. ಆದರೆ ಪಶ್ಚಿಮ ಬಂಗಾಲದ ಉನ್ನತ ಶಿಕ್ಷಣದ ಪ್ರಭಾರ ಸಚಿವರಾದ ಶ್ರಿ ಎಸ್.ಎಸ್. ಚಕ್ರವರ್ತಿಯವರಿಗೆ ಈ ಶಿಫಾರಸಿನ ಕುರಿತು ಅಸಮ್ಮತಿ ಇದೆ.

* ಜ್ಞಾನಮ್ ಸಮಿತಿಯ ಕುರಿತಾದ ಸಿಎಬಿಇ ಸಮಿತಿಯ ವರದಿಯಲ್ಲಿ ವಿಶ್ವವಿದ್ಯಾಲಯದ ಆಡಳಿತವನ್ನು ಇನ್ನೂ ಹೆಚ್ಚು ಪ್ರತಿಕ್ರಿಯಾತ್ಮಕವಾಗಿ ಮತ್ತು ವೃತ್ತಿಪರವಾಗಿ ಮಾಡುವ ಅಗತ್ಯವಿದೆ ಎನ್ನುವುದಕ್ಕೆ ಎಲ್ಲರಿಂದಲೂ ಒಪ್ಪಿಗೆ ದೊರೆತಿದೆ. ಆದರೆ ಜ್ಞಾನಮ್ ಸಮಿತಿಯ ವರದಿಯಲ್ಲಿರುವಂತೆ ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು ಸಮಿತಿಗಳಿಗೆ ಆಯ್ಕೆ ಮಾಡಿಕೊಳ್ಳುವುದಕ್ಕಿಂತ ನಾಮನಿರ್ದೇಶನ ಮಾಡಬೇಕೆನ್ನುವ ರೀತಿಯ ಕೆಲವು ವಿಚಾರಗಳ ಕುರಿತು ಪಶ್ಚಿಮ ಬಂಗಾಲದ ಉನ್ನತ ಶಿಕ್ಷಣದ ಪ್ರಭಾರ ಸಚಿವರಾದ ಶ್ರಿ ಎಸ್.ಎಸ್. ಚಕ್ರವರ್ತಿಯವರು ತಮ್ಮ ಅಭಿಪ್ರಾಯಗಳನ್ನು ಕಾಯ್ದಿರಿಸಿದ್ದಾರೆ.

* ಶಾಲಾ ಪಠ್ಯಪುಸ್ತಕ ಮೌಲ್ಯಮಾಪನದ ರಾಷ್ಟ್ರೀಯ ಸಂಚಾಲನ ಸಮಿತಿಯ ಸ್ಥಾನಮಾನವನ್ನು ರಾಷ್ಟ್ರೀಯ ಆಯೋಗದ ಶಾಸನಬದ್ಧ ಸ್ಥಾನಕ್ಕೇರಿಸುವುದಕ್ಕೆ ಒಪ್ಪಿಗೆ ನೀಡಲಾಗಿದೆ.

1992ರ ಪಿಓಎಯ ಶಿಫಾರಸುಗಳನ್ನು ಗಮನದಲ್ಲಿ ಇಟ್ಟುಕೊಂಡು ಕರ್ನಾಟಕದ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಶಿಕ್ಷಣ ವಿಕೇಂದ್ರೀಕರಣ ಆಡಳಿತ ಸಮಿತಿಯನ್ನು ರಚಿಸಲಾಯಿತು. ಇದರ ಉದ್ದೇಶ 1992ರ ಸಂವಿಧಾನಾತ್ಮಕ ತಿದ್ದುಪಡಿ 73 ಮತ್ತು 74ಕ್ಕೆ ಸಂಬಂಧಿಸಿದಂತೆ ಶಿಕ್ಷಣದ ಆಡಳಿತವನ್ನು ವಿಕೇಂದ್ರೀಕರಣಗೊಳಿಸಲು ಮಾರ್ಗದರ್ಶಕ ಸೂತ್ರಗಳನ್ನು ರೂಪಿಸುವುದಾಗಿದೆ. ಸಮಿತಿಯು ಗುರುತಿಸಿದ ಹಾಗೆ, ಪಿಓಎಯು ಮಾಧ್ಯಮಿಕ ಶಿಕ್ಷಣದವರೆಗಿನ ನಿರ್ವಹಣೆಗಾಗಿ ಜಿಲ್ಲಾ ಶಿಕ್ಷಣ ಮಂಡಳಿಗಳನ್ನು ಸೃಷ್ಟಿಸುವ ಸಾಧ್ಯತೆಯನ್ನು ಅಂಗೀಕರಿಸಿದೆ ಮತ್ತು ಮಂಡಳಿಗಾಗಿ ಸೂಕ್ತವಿಧದ ಶಾಸನಾಧಿಕಾರವನ್ನು ಚಿಂತಿಸಿದೆ. ಆದಾಗ್ಯೂ, ಪಂಚಾಯತ್ ರಾಜ್ಯ ವ್ಯವಸ್ಥೆಗಳ ಕೆಳಗೆ ಸೃಷ್ಟಿಸಲಾಗುವ ವಿಕೇಂದ್ರೀಕೃತ ಆಡಳಿತಾತ್ಮಕ ರಚನೆಯು ಜಿಲ್ಲಾ ಶಿಕ್ಷಣ ಮಂಡಳಿಗಳನ್ನು ಸ್ಥಾನಾಂತರಗೊಳಿಸಲಿದೆ ಎಂಬ ಅರಿವು ಅವರಲ್ಲಿ ಮೂಡಿದೆ. ಸಮಿತಿಯು ತನ್ನ ವ್ಯಾಪ್ತಿಯಲ್ಲಿ ಜಿಲ್ಲೆ, ಉಪ ಜಿಲ್ಲೆ ಮತ್ತು ಗ್ರಾಮ ಹಂತಗಳಲ್ಲಿ ಶಿಕ್ಷಣದ ನಿರ್ವಹಣೆಗಾಗಿ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸಲಿದೆ. ಸಮಿತಿಯು 1993ರಲ್ಲಿ ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಐದು ಸಭೆಗಳನ್ನು ನಡೆಸಿದೆ ಮತ್ತು ಈ ಕೆಳಗಿನವುಗಳ ಕುರಿತು ಶಿಫಾರಸುಗಳನ್ನು ನೀಡಿದೆ:

1. ಒಂದು ಗ್ರಾಮಕ್ಕೆ ಸೀಮಿತವಾದ ವ್ಯಾಪ್ತಿಪ್ರದೇಶವನ್ನು ಹೊಂದಿರುವ ಪಂಚಾಯತು;
2. ಗ್ರಾಮಗಳ ಗುಂಪಿಗೆ ವಿಸ್ತರಣೆ ಪಡೆದ ವ್ಯಾಪ್ತಿಪ್ರದೇಶವನ್ನು ಹೊಂದಿರುವ ಪಂಚಾಯತು;
3. ಪಂಚಾಯತ್ ಸಮಿತಿಗಳು(ನಡುವಣ ಹಂತ); ಮತ್ತು
4. ಜಿಲ್ಲಾ ಪರಿಷತ್ತುಗಳು(ಜಿಲ್ಲಾ ಹಂತ).

1992ರ ಕ್ರಿಯಾ ಯೋಜನೆಯು ಗ್ರಾಮೀಣ ಶಿಕ್ಷಣ ಸಮಿತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರಾಮುಖ್ಯತೆಯನ್ನು ನೀಡಿದೆ. ಎಳೆಯ ವಯಸ್ಸಿನಲ್ಲಿ ಪೋಷಣೆ ಮತ್ತು ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಅನೌಪಚಾರಿಕ ಶಿಕ್ಷಣ ಮತ್ತು ವಯಸ್ಕ ಶಿಕ್ಷಣ ಇತ್ಯಾದಿ ಶೈಕ್ಷಣಿಕ ಪ್ರಯತ್ನಗಳು ಮತ್ತು ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದಕ್ಕೆ ಜನರನ್ನು ಉತ್ತೇಜಿಸಲು ಮತ್ತು ಅವರನ್ನು ತೊಡಗಿಸಿಕೊಳ್ಳಲು ಗ್ರಾಮೀಣ ಶಿಕ್ಷಣ ಸಮಿತಿಗಳು ಆದರ್ಶಪ್ರಾಯ ಎಂದು ಭಾವಿಸಬಹುದಾಗಿದೆ. ಕೇವಲ ಒಂದು ಗ್ರಾಮವನ್ನು ಮಾತ್ರ ಹೊಂದಿರುವ ಪಂಚಾಯತ್‌ನ ಮಟ್ಟದಲ್ಲಿ ಶಿಕ್ಷಣ ಸಮಿತಿಗೆ ಶಿಫಾರಸನ್ನು ಮಾಡಲಾಗಿದೆ. 7–15 ಸದಸ್ಯರನ್ನು ಒಳಗೊಳ್ಳುವ ಈ ಸಮಿತಿಯನ್ನು ಪಂಚಾಯತ್ ಸ್ಥಾಯಿ ಸಮಿತಿಯೆಂದು ಕರೆಯಬಹುದು ಮತ್ತು ಇದಕ್ಕೆ ಪಂಚಾಯತಿ ರಾಜ್ ಕಾನೂನಿನ ಕೆಳಗೆ ಶಾಸನಬದ್ಧ ಅಧಿಕಾರವನ್ನು ನೀಡಬಹುದು. ಒಂದಕ್ಕಿಂತ

Digitised by Bharatavani, CIIL

ಹೆಚ್ಚು ಗ್ರಾಮಗಳನ್ನು ಒಳಗೊಳ್ಳುವ ಪಂಚಾಯತ್ ಗ್ರಾಮ ಶಿಕ್ಷಣ ಸಮಿತಿಗಳನ್ನು(ವಿಇಸಿ) ಸ್ಥಾಪಿಸಿಕೊಳ್ಳಬಹುದು. ಈ ಸಮಿತಿಯು ಪ್ರತಿಯೊಂದು ಗ್ರಾಮಕ್ಕೆ ಸಂಬಂಧಿಸಿದ ಒಂದೊಂದು ಪಂಚಾಯತ್ ಗ್ರಾಮ ಸಮಿತಿಯನ್ನು ಸ್ಥಾಪಿಸಬಹುದು. ಇವೆಲ್ಲವೂ ಗ್ರಾಮಶಿಕ್ಷಣ ಸಮಿತಿಯ ಉಪಸಮಿತಿಗಳಾಗಿರುತ್ತವೆ. ಗ್ರಾಮ ಶಿಕ್ಷಣ ಸಮಿತಿ/ಸ್ಥಾಯಿ ಸಮಿತಿಗಳ ಪಾತ್ರ, ಕಾರ್ಯ, ಅಧಿಕಾರಗಳು, ನಿಧಿಗಳು, ಸಹಯೋಗ ಮತ್ತು ತರಬೇತಿಯನ್ನು ನಿರ್ದಿಷ್ಟವಾಗಿ ವಿವರಿಸಲಾಗಿದೆ. ನಡುವಣ ಹಂತದಲ್ಲಿ 11–17 ಸದಸ್ಯರನ್ನೊಳಗೊಳ್ಳುವ ಪಂಚಾಯತ್ ಸಮಿತಿಯು ಪಂಚಾಯತ್ ರಾಜ ನಿಕಾಯವಾಗಿರುವುದು. ಶೈಕ್ಷಣಿಕ ಕಾರ್ಯಕ್ರಮಗಳ ನಿರ್ವಹಣೆಗಾಗಿ ಶಿಕ್ಷಣದ ಪಂಚಾಯತ್ ಸಮಿತಿಯ ಸ್ಥಾಯಿ ಸಮಿತಿಯನ್ನು ಸ್ಥಾಪಿಸಲಾಗುವುದು ಮತ್ತು ಇದು ಪಂಚಾಯತ್ ಸಮಿತಿಯ ಕಾಲಾವಧಿಯೇ ಇರುತ್ತದೆ. ಅಧಿನಿಯಮದ ಪ್ರಕಾರ ಜಿಲ್ಲಾ ಹಂತದಲ್ಲಿ, ನಗರಸಭಾ ಪ್ರದೇಶಗಳನ್ನು ಹೊರತುಪಡಿಸಿ, ಇಡೀ ಜಿಲ್ಲೆಯ ಉಸ್ತುವಾರಿಯನ್ನು ಜಿಲ್ಲಾ ಪರಿಷತ್ತು ನೋಡಿಕೊಳ್ಳುತ್ತದೆ. ಜಿಲ್ಲಾ ಪರಿಷತ್ತಿನ ಸ್ಥಾಯಿ ಸಮಿತಿಯು ತನ್ನ ನಿರ್ಧಾರಿತ ಪಾತ್ರ ಮತ್ತು ಕಾರ್ಯಗಳೊಂದಿಗೆ ಶೈಕ್ಷಣಿಕ ಕಾರ್ಯಕ್ರಮಗಳ ನಿರ್ವಹಣೆಗೆ ಜವಾಬ್ದಾರಿಯಾಗಿರುತ್ತದೆ. ಇದೇ ರೀತಿ 74ನೇ ತಿದ್ದುಪಡಿಯ ಪ್ರಕಾರ ನಗರಸಭಾ ಪ್ರದೇಶಗಳಲ್ಲಿ ಶಿಕ್ಷಣದ ನಿರ್ವಹಣೆ ಮತ್ತು ನಗರಸಭೆಗಳ ವರ್ಗೀಕರಣವು ಅವುಗಳ ವ್ಯಾಪ್ತಿ ಪ್ರದೇಶ, ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳಿಗೆ ಹೊಂದಿಕೊಂಡು ಇರುತ್ತದೆ ಮತ್ತು ಪ್ರಾಥಮಿಕ, ಹಿರಿಯ ಪ್ರಾಥಮಿಕ ಅಥವಾ ಮಾಧ್ಯಮಿಕ ಹಂತದವರೆಗೆ ನಗರಸಭೆಗಳ ಶಿಕ್ಷಣ ಸ್ಥಾಯಿ ಸಮಿತಿಗಳಿಗೆ ಒಪ್ಪಿಸಬಹುದಾಗಿದೆ.

ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ 50ನೇ ಸಭೆಯನ್ನು2 ಮಾರ್ಚ್, 1994ರಲ್ಲಿ ನಡೆಸಲಾಯಿತು. ಸಭೆಯ ಕಾರ್ಯಸೂಚಿಯಲ್ಲಿ ಇದ್ದದ್ದು: ವ್ಯಾಸಂಗ ಕ್ರಮದ ಹೊರೆಯ ಕುರಿತಾಗಿ ಯಶಪಾಲ್ ಸಮಿತಿಯ ಶಿಫಾರಸುಗಳು, ಕ್ರೀಡೆಗಳು ಮತ್ತು ದೈಹಿಕ ಶಿಕ್ಷಣದ ಕುರಿತು ಕೆ.ಪಿ.ಸಿಂಗ್ ದೇವ್ ಸಮಿತಿಯ ಶಿಫಾರಸುಗಳು ಮತ್ತು ಡಿಸೆಂಬರ್, 1993ರ 'ಎಲ್ಲರಿಗೂ ಶಿಕ್ಷಣ' ಅಧಿವೇಶನದ ಅನುಸರಣೆ. ಯಶಪಾಲ್ ಸಮಿತಿಯ ಶಿಫಾರಸಿನಲ್ಲಿ ಈ ಕೆಳಗಿನ ಅಂಶಗಳಿಗೆ ಗಮನವನ್ನು ಬಯಸಲಾಗಿದೆ:

- ಮಾಹಿತಿಯನ್ನು ನೆನಪಿನಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯವನ್ನು ಆಧರಿಸಿ ಮಕ್ಕಳನ್ನು ಅಳೆಯುವುದನ್ನು ಕೈಬಿಡಬೇಕು. ಮಾಹಿತಿಯ ಮೂಲಕ ನಡೆಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದಕ್ಕೆ ಒತ್ತನ್ನು ನೀಡಬೇಕು.
- ಭೌತಿಕ ಚೀಲಗಳ ಹೊರೆಗಿಂತ ಧಾರಣಶಕ್ತಿ ಇಲ್ಲದ ಹೊರೆಯು ಹೆಚ್ಚು ಗಂಭೀರ ಸ್ವರೂಪದ್ದಾಗಿದೆ.
- ಪಠ್ಯಪುಸ್ತಕಗಳು ಶಾಲೆಯ ಆಸ್ತಿಯಾಗಿರಬೇಕು.(ಈ ಶಿಫಾರಸಿಗೆ ಬಿಹಾರದ ಶಿಕ್ಷಣ ಮಂತ್ರಿ ಸಮ್ಮತಿ ನೀಡಲಿಲ್ಲ.)

ಶಾಲಾ–ಪೂರ್ವ ಕೇಂದ್ರಗಳಿಗೆ ನಿಯಂತ್ರಕ ಕಾರ್ಯವಿಧಾನ ಇರಬೇಕೆಂದು ಮೇಘಾಲಯ ಮತ್ತು ಮಧ್ಯಪ್ರದೇಶದ ಮಂತ್ರಿಗಳು ಶಿಫಾರಸು ಮಾಡಿದ್ದಾರೆ. ಬಂದಿದ್ದ ಇತರ ಸೂಚನೆಗಳೆಂದರೆ: ಶಾಲಾ ಸಮಯದ ಅವಧಿಯಲ್ಲಿಯೇ ಪರಿಕಲ್ಪನೆಯನ್ನು ರೂಪಿಸುವುದು, ಶಾಲಾ ದಿನಗಳು ಮತ್ತು ಗಂಟೆಗಳನ್ನು ಹೆಚ್ಚಿಸುವುದು, ಪಂಚಾಯತಿ ರಾಜ್ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವುದು, ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳು ಹೆತ್ತವರಿಗೆ ನೆರವಾಗುವ ಸಮಯ ಮತ್ತು ಬೆಳೆ ಕಟಾವಿನ ಋತುವಿಗೆ ಅನುಗುಣವಾಗಿ ಶಾಲಾ ಸಮಯವನ್ನು ಹೊಂದಿಸಿಕೊಳ್ಳುವುದು. ಕರ್ನಾಟಕದ ಪ್ರಾಥಮಿಕ ಶಿಕ್ಷಣ ಮಂತ್ರಿಯಾಗಿರುವ ಸಿ. ನಾಗಮ್ಮ ಕೇಶವಮೂರ್ತಿಯವರು ಹೇಳಿದ್ದೇನೆಂದರೆ, ರಾಜ್ಯ ಸರಕಾರವು ಮನೆಕೆಲಸವನ್ನು ಕಡಿಮೆ ಮಾಡಲು ನಿರ್ದೇಶನವನ್ನು ನೀಡುವಾಗ, ಶಿಕ್ಷಣದ ಗುಣಮಟ್ಟಕ್ಕೆ ಹಾನಿಯಾಗದಂತೆ ಮತ್ತು ಶಿಕ್ಷಣವು ಸಂತೋಷದಾಯಕ ಮತ್ತು ಆಕರ್ಷಕವಾಗಿ ಇರುವಂತೆ ಸರಕಾರ 'ಯಾತ್ರಾ ಕಾರ್ಯಯೋಜನೆ'ಯನ್ನು ಜಾರಿಗೆ ತಂದಿದೆ. ಇದರಲ್ಲಿ ಮಕ್ಕಳನ್ನು ಒಂದು ದಿನದ ಪ್ರವಾಸಕ್ಕೆ ಕರೆದೊಯ್ಯಲಾಗುತ್ತದೆ.

ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳ ಸವಲತ್ತುಗಳ ಕುರಿತಾಗಿ ಆಚಾರ್ಯ ರಾಮಮೂರ್ತಿಯವರು ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಸಂಸತ್ ಸದಸ್ಯರಾದ ಸಿಕಂದರ್ ಬಕ್ತ್ ಅವರು ಎತ್ತಿ ತೋರಿದ ಅಗತ್ಯದ ವಿಚಾರಗಳೆಂದರೆ, ಶಾಲಾ ಪಠ್ಯಪುಸ್ತಕಗಳಿಂದ ಕೋಮುವಾದವನ್ನು ಉಚ್ಚಾಟಿಸುವುದು, ಶಿಕ್ಷಣ ಕಾರ್ಯಕ್ರಮಗಳಿಗೆ ಆಹಾರ, ಶಾಲಾ ಆರೋಗ್ಯ ಕಾರ್ಯಕ್ರಮಗಳು ಮತ್ತು ದೈಹಿಕ ಶಿಕ್ಷಣದಲ್ಲಿ ಯೋಗ, ಜುಡೊ ಮತ್ತು ಕರಾಟೆಯನ್ನು ಸೇರಿಸುವುದು. ಕ್ರೀಡೆಗಳನ್ನು ಮತ್ತು ದೈಹಿಕ ಶಿಕ್ಷಣವನ್ನು ಶಿಕ್ಷಣದ ಅವಿಭಾಜ್ಯ ಅಂಗವಾಗಿ ಮಾಡಬೇಕು ಎಂಬುದನ್ನು ಯುವಜನ ಕಾರ್ಯ ಮತ್ತು ಕ್ರೀಡೆಗಳ ರಾಜ್ಯ ಸಚಿವರಾದ ಮುಕುಲ್ ವಾಸ್ನಿಕ್ ಎತ್ತಿ ಹಿಡಿದಿದ್ದಾರೆ. ಈ ಕುರಿತಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಮಿತಿಯ ಶಿಫಾರಸನ್ನು ಅವರು ಒಪ್ಪಿಕೊಂಡಿದ್ದಾರೆ. ಎಲ್ಲಾ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳ ಮೂಲಕ ಸೇವಾನಿರತ ಮತ್ತು ಸೇವಾಪೂರ್ವ ತರಬೇತಿಯನ್ನು ನೀಡುವಂತೆ, ಇದಕ್ಕಾಗಿ ಡಿಐಇಟಿಗಳು ಮತ್ತು ಬಿ.ಎಡ್. ಕಾಲೇಜುಗಳು ಮುಂದೆ ಬರುವಂತೆ ಅವರು ಆದೇಶಿಸಿದ್ದಾರೆ. ಸುಮಾರಾಗಿ ಎಲ್ಲಾ ರಾಜ್ಯಗಳು ಕ್ರೀಡೆಗಳು ಮತ್ತು ದೈಹಿಕ ಶಿಕ್ಷಣದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ವರದಿಯನ್ನು ಅಳವಡಿಸಿಕೊಂಡಿವೆ ಎಂಬುದಾಗಿ ಕೆ.ಪಿ.ಸಿಂಗ್ ದೇವ್ ತಿಳಿಸಿದ್ದಾರೆ. ಈ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಾಗಬೇಕು, ಶೂನ್ಯ ಹೂಡಿಕೆಯಿಂದ ಉನ್ನತಿಯನ್ನು ಸಾಧಿಸಲಾಗದು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜಿಡಿಪಿಯ ಶೇಕಡಾ 6 ಕ್ಕೆ ಶಿಕ್ಷಣ ವೆಚ್ಚವನ್ನು ಹೆಚ್ಚಿಸುವಂತೆ ಕೊಠಾರಿ ಆಯೋಗವು ಬಹಳ ಹಿಂದೆ ನೀಡಿದ ಸೂಚನೆಯನ್ನು ಚರ್ಚೆಗಳಲ್ಲಿ, ಅನೇಕ ಸಭೆಗಳಲ್ಲಿ, ವಿಶೇಷವಾಗಿ 1988 ಮತ್ತು 1993ರ ಸಭೆಯಲ್ಲಿ ತಿಳಿಸಲಾಗಿದೆ.

Digitised by Bharatavani, CIIL

**ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ಸಿಎಬಿಇ)**

ಭಾರತದ ಪ್ರಜೆಗಳ ಅನೇಕ ಆಸಕ್ತಿಗಳು, ಮೌಲ್ಯಸಂಚಯಗಳು ಮತ್ತು ಆಕಾಂಕ್ಷೆಗಳ ಪ್ರತಿನಿಧಿಯಾಗಿರುವ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಭವಿಷ್ಯದಲ್ಲಿ ಕೂಡ ದೇಶದ ಶೈಕ್ಷಣಿಕ ಪ್ರಗತಿಯ ವೇಗವನ್ನು ಹೆಚ್ಚಿಸುವುದರಲ್ಲಿ ಅಮೂಲ್ಯವಾದ ಪಾತ್ರವನ್ನು ನಿರ್ವಹಿಸಬಲ್ಲುದು.

ಕಾಲಾನುಕ್ರಮದಲ್ಲಿ ರೂಪುಗೊಳ್ಳಲಾದ ಸಮಿತಿಗಳ ಅನೇಕ ಉಪಯುಕ್ತ ವರದಿಗಳನ್ನು ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಹೊಂದಿದ್ದು, ಇವು ಉಪಯುಕ್ತ ಓದಿಗೆ ನಿಲುಕುವ ರೀತಿಯದ್ದಾಗಿವೆ. ಇವುಗಳಲ್ಲಿ ಕೆಲವನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ:

1. ಶಿಕ್ಷಣ ಆಡಳಿತದ ವಿಕೇಂದ್ರೀಕರಣದ ಕುರಿತು ಸಿಎಬಿಇ ಸಮಿತಿಯ ವರದಿ, 1994
2. ದೂರ ಶಿಕ್ಷಣದ ಕುರಿತು ಸಿಎಬಿಇ ಸಮಿತಿಯ ವರದಿ, 1994
3. ಕ್ರೀಡೆ ಮತ್ತು ದೈಹಿಕ ಶಿಕ್ಷಣದ ಕುರಿತು ಸಿಎಬಿಇ ಸಮಿತಿಯ ವರದಿ, 1993
4. ತಾಂತ್ರಿಕ ಶಿಕ್ಷಣದ ಕುರಿತು ಸಿಎಬಿಇ ಸಮಿತಿಯ ವರದಿ, 1993
5. ಕಾರ್ಯನೀತಿ(ಪಾಲಿಸಿ)ಯ ಕುರಿತು ಸಿಎಬಿಇ ಸಮಿತಿಯ ವರದಿ, 1992
6. ವಿಧಾನ ಪರಿಷತ್ತುಗಳಲ್ಲಿ ಶಿಕ್ಷಕರ ಪ್ರತಿನಿಧೀಕರಣದ ಕುರಿತು ಸಿಎಬಿಇ ಸಮಿತಿಯ ವರದಿ, 1992
7. ಜ್ಞಾನಮ್ ಸಮಿತಿಯ ವರದಿ ಕುರಿತು ಸಿಎಬಿಇ ಸಮಿತಿಯ ವರದಿ, 1992
8. ನೀತಿ ಮತ್ತು ಧಾರ್ಮಿಕ ಶಿಕ್ಷಣದ ಕುರಿತು(ಶ್ರೀಪ್ರಕಾಶ ಸಮಿತಿಯ ವರದಿ) ಸಿಎಬಿಇ ಸಮಿತಿಯ ವರದಿ, 1960
9. ಭಾರತದಲ್ಲಿ ಶಿಕ್ಷಣ ಅಭಿವೃದ್ಧಿಗೆ ಹಣಕಾಸು ಒದಗಿಸುವ ದಾರಿಗಳು ಮತ್ತು ಮೂಲಗಳು

   (ಖೇರ್ ಸಮಿತಿಯ ವರದಿ) ಕುರಿತು ಸಿಎಬಿಇ ಸಮಿತಿಯ ವರದಿ, 1950
10. ಭಾರತದಲ್ಲಿ ಯುದ್ಧೋತ್ತರ ಶೈಕ್ಷಣಿಕ ಬೆಳವಣಿಗೆಯ ಕುರಿತು ಸಿಎಬಿಇ ಸಮಿತಿಯ ವರದಿ, 1944
11. ಧಾರ್ಮಿಕ ಶಿಕ್ಷಣದ ಕುರಿತು ಸಿಎಬಿಇ ಸಮಿತಿಯ ವರದಿ, 1944
12. ವಾರ್ಧಾ ಶಿಕ್ಷಣ ಕಾರ್ಯಯೋಜನೆಯನ್ನು ಪರಿಗಣಿಸಲು ಸಿಎಬಿಇ ಸಮಿತಿಯ ವರದಿ, 1939 (ಸಿಎಬಿಇ–ಕೇಂದ್ರ ಶಿಕ್ಷಣ ಸಲಹಾ ಮಂಡಳಿ)

**ಮೂಲ: ಜಿ.ಸಿ. ಉಪಾಧ್ಯಾಯ**
**ಅನು: ಡಾ. ಗೀತಾ ಶೆಣೈ**

## ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶಿ ಭಾಷಾ ಸಂಸ್ಥೆ (ಸಿಐಇಎಫ್ಎಲ್) ಹೈದರಾಬಾದ್

**ಸ್ಥೂಲ ಪರಿಚಯ:** ಹೈದರಾಬಾದಿನ ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶಿ ಭಾಷಾ ಸಂಸ್ಥೆ "ಸಿಐಇಎಫ್ಎಲ್", ಅಂತಾರಾಷ್ಟ್ರೀಯ ಮನ್ನಣೆ ಪಡೆದ ಉನ್ನತ ಶಿಕ್ಷಣ ಕೇಂದ್ರವಾಗಿದೆ. ಇದು ರಿಜಿಸ್ಟರ್ಡ್ ಸೊಸೈಟಿಯ ಅನ್ವಯ ಸ್ವಾಯತ್ತ ಸಂಸ್ಥೆಯಾಗಿದ್ದು, ಪರಿಗಣಿತ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಹೊಂದಿದೆ. 1958ರಲ್ಲಿ ವಿಷಯದ ಬೋಧನೆಯನ್ನು ಸಂಶೋಧನಾ ಸಂಸ್ಥೆಯ ಮೂಲಕ ಮತ್ತು ಅತ್ಯಂತ ಸೂಕ್ತ ರೀತಿಯ ತಂತ್ರಜ್ಞಾನದ ನೆರವಿನಿಂದ ಶಿಕ್ಷಕರಿಗೆ ತರಬೇತಿಯನ್ನು ನೀಡುವ ಮೂಲಕ ಇಂಗ್ಲಿಷ್ ಬೋಧನೆಯನ್ನು ಸುಧಾರಿಸುವ ಉದ್ದೇಶದಿಂದ 'ಕೇಂದ್ರೀಯ ಇಂಗ್ಲಿಷ್ ಸಂಸ್ಥೆ' ಹೆಸರಿನಲ್ಲಿ ಇದನ್ನು ಸ್ಥಾಪಿಸಲಾಯಿತು. 1972ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಪ್ರಮುಖ ವಿದೇಶಿ ಭಾಷೆಗಳ ಬೋಧನೆಯನ್ನು ತನ್ನಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ಈ ಸಂಸ್ಥೆ ತನ್ನ ಶೈಕ್ಷಣಿಕ ಕಾರ್ಯಕ್ರಮಗಳ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಇದರ ಫಲವಾಗಿ 'ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಸಂಸ್ಥೆ' ಎಂದು ಇದಕ್ಕೆ ಮರುನಾಮಕರಣ ಮಾಡಲಾಯಿತು.

ಈ ಸಂಸ್ಥೆಗೆ 1973ರಲ್ಲಿ ಪರಿಗಣಿತ ವಿಶ್ವವಿದ್ಯಾಲಯದ ಮಾನ್ಯತೆಯನ್ನು ನೀಡಲಾಯಿತು. ಕಳೆದ ಕೆಲವು ವರ್ಷಗಳಲ್ಲಿ ರಾಷ್ಟ್ರೀಯ ಸರಹದ್ದುಗಳನ್ನು ಮೀರಿ ಬೆಳೆದಿರುವ ಈ ಸಂಸ್ಥೆಯು ಈಗ ಜಗತ್ತಿನ ವಿವಿಧ ಭಾಗಗಳ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಇತರ ವೃತ್ತಿನಿರತರಿಗೆ ಇಂಗ್ಲಿಷಿನಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಒದಗಿಸುತ್ತಿದೆ. ಸದ್ಯ ಈ ಸಂಸ್ಥೆ ಹೊಂದಿರುವ ಪ್ರಮುಖ ಶೈಕ್ಷಣಿಕ ಆಸಕ್ತಿಗಳೆಂದರೆ:

* ಭಾರತದಲ್ಲಿ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಬೋಧನೆಯ ಮಟ್ಟಗಳನ್ನು ಉತ್ತಮಗೊಳಿಸುವುದು.
* ಭಾಷಾ ಬೋಧಕರಿಗೆ ಭಾರತೀಯ ಸಂದರ್ಭಕ್ಕೆ ಅನುಗುಣವಾದ ವಿಧಾನಗಳು ಮತ್ತು ಅನುಸಂಧಾನಗಳಲ್ಲಿ ತರಬೇತಿ ನೀಡುವುದು.
* ಮುದ್ರಣ ಮತ್ತು ವಿದ್ಯುನ್ಮಾನ ಎರಡೂ ಮಾಧ್ಯಮಗಳಲ್ಲಿ ನಾವೀನ್ಯಪೂರ್ಣ ಬೋಧನೆ ಮತ್ತು ಕಲಿಕಾ ಸಾಮಾಗ್ರಿಗಳನ್ನು ಉತ್ಪಾದನೆ ಮಾಡುವುದು.
* ಭಾಷಾ ನೈಪುಣ್ಯವನ್ನು ಪರೀಕ್ಷಿಸುವ ಸ್ವದೇಶೀಯ ವಿಧಾನಗಳನ್ನು ವಿಕಸಿತಗೊಳಿಸಿಕೊಳ್ಳುವುದು.
* ಭಾಷೆ ಮತ್ತು ಶಿಕ್ಷಕ ಶಿಕ್ಷಣದಲ್ಲಿ ವಿದೇಶಿ ವೃತ್ತಿಪರರಿಗೆ ನಿಪುಣತೆ (ಪ್ರಾವೀಣ್ಯ) ಒದಗಿಸುವುದು.
* ಸಾಹಿತ್ಯ ಮತ್ತು ಸಾಂಸ್ಕೃತಿಕ ಅಧ್ಯಯನಗಳಲ್ಲಿ ಅಂತರ್‌ಶಿಸ್ತೀಯ ಸಂಶೋಧನೆಯನ್ನು ಪ್ರೋತ್ಸಾಹಿಸುವುದು.

Digitised by Bharatavani, CIIL

## ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶಿ ಭಾಷಾ ಸಂಸ್ಥೆ (ಸಿಐಇಎಫ್‌ಎಲ್) ಹೈದರಾಬಾದ್

* ನಾಗರಿಕತೆಗಳ ಅಂತರ್‌ಸಾಂಸ್ಕೃತಿಕ ವಿಮರ್ಶಾತ್ಮಕ ಅರ್ಥೈಸುವಿಕೆಯನ್ನು ವರ್ಧಿಸುವುದು.

ಸಂಸ್ಥೆಯ ಪ್ರಧಾನ ಕಾರ್ಯಗಳಾದ, ಶಿಕ್ಷಕ ಶಿಕ್ಷಣ, ಸಾಮಗ್ರಿ ಅಭಿವೃದ್ಧಿ, ಸಂಶೋಧನೆ ಮತ್ತು ಸಮಾಲೋಚನೆಗಳನ್ನು ಭಾರತದ ಈಶಾನ್ಯ ಮತ್ತು ಉತ್ತರ ಭಾಗದವರಿಗೆ ಉಪಯೋಗವಾಗುವಂತೆ ಅನುಕ್ರಮವಾಗಿ ಶಿಲ್ಲೊಂಗ್ ಮತ್ತು ಲಕ್ನೋದಲ್ಲಿರುವ ಪ್ರಾದೇಶಿಕ ಕೇಂದ್ರಗಳಲ್ಲಿ ಕೂಡಾ ನಡೆಸಲಾಗುತ್ತದೆ.

ಈ ಸಂಸ್ಥೆಯು ತನ್ನ ಸ್ಥಾಪನೆಯಾದ ವರ್ಷದಿಂದಲೇ, ಅಂದರೆ 1958ರಿಂದ ಇಂಗ್ಲಿಷ್, ಫ್ರೆಂಚ್, ಜರ್ಮನ್, ರಶ್ಯನ್, ಸ್ಪಾನಿಶ್, ಅರೇಬಿಕ್ ಮತ್ತು ಜರ್ಮನ್ ಭಾಷೆಗಳನ್ನು ಕಲಿಯುವುದರಲ್ಲಿ ಮತ್ತು ಕಲಿಸುವಿಕೆಯ ಮಟ್ಟಗಳನ್ನು ಉನ್ನತೀಕರಿಸುವುದರಲ್ಲಿ ತೀವ್ರ ಆಸಕ್ತಿಯನ್ನು ಹೊಂದಿರುವ, ದೇಶದ ಎಲ್ಲಾ ಗಣ್ಯ ಬೋಧಕರು, ವಿದ್ವಾಂಸರು ಮತ್ತು ಸಂಶೋಧಕರನ್ನು ಆಕರ್ಷಿಸಿದೆ. ಇವರಲ್ಲಿ ಪ್ರತಿಯೊಬ್ಬರು ವಿಶಿಷ್ಟ ಬೌದ್ಧಿಕ ಲಕ್ಷ್ಯ ಮತ್ತು ಶೈಕ್ಷಣಿಕ ಸ್ವಾತಂತ್ರ್ಯದ ಸ್ಪಂದನಶೀಲ ಪರಂಪರೆ ಮತ್ತು ಸ್ವ-ಚಿಂತನೆಯ ಬೆಳವಣಿಗೆಯಲ್ಲಿ ಕೊಡುಗೆಯನ್ನು ನೀಡಿದ್ದಾರೆ.

ಶಿಕ್ಷಕರು, ಶಿಕ್ಷಣತಜ್ಞರು ಮತ್ತು ಇತರ ವೃತ್ತಿಪರರಿಗಾಗಿ ಅಲ್ಪಾವಧಿಯ ಮತ್ತು ಅಗತ್ಯವನ್ನು ಆಧರಿಸಿದ್ದ ಅನೇಕ ಪಠ್ಯಕ್ರಮಗಳೊಂದಿಗೆ ಉನ್ನತ ಮಟ್ಟದ ಎಂ.ಎ., ಸ್ನಾತಕೋತ್ತರ ಸರ್ಟಿಫಿಕೇಟ್, ಡಿಪ್ಲೊಮ, ಎಂ.ಫಿಲ್ ಮತ್ತು ಪಿಹೆಚ್.ಡಿ. ಶಿಕ್ಷಣವನ್ನು ಕೂಡಾ ಸಂಸ್ಥೆ ಒದಗಿಸುತ್ತಿದೆ. ದೂರ ಶಿಕ್ಷಣದ ಮೂಲಕ ಅನೇಕ ಶಿಕ್ಷಕ ತರಬೇತಿ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ಕೂಡಾ ನಡೆಸಲಾಗುತ್ತಿದೆ. ವಿದೇಶಿ ಭಾಷಾ ವಿಭಾಗಗಳು ಕೂಡ ವಿಶೇಷ ಭಾಷಾಂತರ ಪಠ್ಯಕ್ರಮಗಳನ್ನು ಮತ್ತು ಇತರ ನಿರ್ದಿಷ್ಟ ಉದ್ದೇಶದ ಗ್ರಾಹಕೀಕೃತ ಪಠ್ಯಕ್ರಮಗಳನ್ನು ಒದಗಿಸುತ್ತವೆ. ಅನೇಕ ಬಾರಿ ಬೋಧಕರು ಮತ್ತು ಸಂದರ್ಶಕ ಶಿಕ್ಷಕರು ಅರ್ಧವಾರ್ಷಿಕ ಪಠ್ಯಕ್ರಮಗಳನ್ನು ಒದಗಿಸುತ್ತಾರೆ. ಈ ಪಠ್ಯಕ್ರಮಗಳು ಸಂಸ್ಥೆಯ ಮುಖ್ಯವಾಹಿನಿಯ ಶೈಕ್ಷಣಿಕ ಚಟುವಟಿಕೆಯ ಭಾಗವಾಗಿ ಇರಬೇಕೆಂದಿಲ್ಲ. ಇದು ಸಂಸ್ಥೆಯ ಬೌದ್ಧಿಕ ಮರುಫಲವತ್ತತೆ ಮತ್ತು ಧ್ವನಿ ವಿಜ್ಞಾನ ಉಪವಿಭಾಗಗಳ ಇತ್ತೀಚಿಗಿನ ಬೆಳವಣಿಗೆಗಳ ಕುರಿತು ಬೇರೆಬೇರೆ ವಿಭಾಗಗಳಿಂದ ಆಹ್ವಾನಿಸಲಾದ ಅಧ್ಯಾಪಕ ವೃಂದದವರಿಂದ ಸಂಶೋಧನೆ ಮತ್ತು ಬೋಧನೆಯನ್ನು ನಡೆಸಲಾಗಿದೆ. ಈ ವಿಧದ ಚಟುವಟಿಕೆಯನ್ನು ನಡೆಸಿದ ಸಂಸ್ಥೆ ಇಡೀ ದೇಶದಲ್ಲಿ ಇದೊಂದೇ ಆಗಿದೆ. ಸಿಐಎಫ್‌ಎಲ್‌ನಲ್ಲಿ ನಡೆಯುತ್ತಿರುವ ಶೈಕ್ಷಣಿಕ ಚಟುವಟಿಕೆಯ ಚಲನಶೀಲತೆಯು ಬೇರೆ ಸಾಮಾನ್ಯ ವಿಶ್ವವಿದ್ಯಾಲಯದ ಚಟುವಟಿಕೆಗಿಂತ ಸ್ಪಷ್ಟವಾಗಿ ಬೇರೆ ರೀತಿಯದ್ದಾಗಿದೆ. ಸಹಭಾಗಿತ್ವದ ಅಧ್ಯಯನ ಮತ್ತು ಶೈಕ್ಷಣಿಕ ಸಮಾನತ್ವವಾದವನ್ನು ಪ್ರೋತ್ಸಾಹಿಸುವ ಸಂಸ್ಥೆಯೊಂದರ ವಿಶಿಷ್ಟ ಮಟ್ಟವನ್ನು ಸೂಚಿಸುವುದಕ್ಕಾಗಿ ಸಂಸ್ಥೆಯಲ್ಲಿನ ವಿದ್ಯಾರ್ಥಿಗಳು ನಿಯೋಜಿತ ಭಾಗಿಗಳಾಗಿದ್ದಾರೆ.

ಕಳೆದ 25 ವರ್ಷಗಳಲ್ಲಿ ದೂರಶಿಕ್ಷಣ ಶಾಲೆ (ಹಿಂದೆ ವಿಭಾಗವಾಗಿದ್ದ) ನಡೆಸುತ್ತಿರುವ ಪಿಜಿಸಿಟಿಇ ಮತ್ತು ಪಿಜಿಡಿಟಿಇ ಕಾರ್ಯಕ್ರಮಗಳಿಂದ ಭಾರತದಲ್ಲಿ ಇಂಗ್ಲಿಷ್ ಬೋಧನಾ ವೃತ್ತಿಯಲ್ಲಿರುವ ಸಾವಿರಾರು ಮಂದಿಗೆ ಲಾಭವಾಗಿದೆ. ಈ ಅತ್ಯಂತ ಮೌಲ್ಯಯುತ ತರಬೇತಿ ಕಾರ್ಯಕ್ರಮಗಳು ಸಿಐಇಎಫ್‌ಎಲ್‌ನ ಬಾಹ್ಯ ತಲುಪುವಿಕೆಯ ಚಟುವಟಿಕೆಗಳ ಮುಂಚೂಣಿಗಳಾಗಿವೆ. ಈ ಕಾರ್ಯಕ್ರಮಗಳಲ್ಲಿ ಬಳಸಲಾದ ಮೌಲ್ಯನಿರ್ಧಾರ ವ್ಯವಸ್ಥೆಯು ರೂಪಣ ಮೌಲ್ಯಮಾಪನ ಮತ್ತು ಸಂಕಲನ ಮೌಲ್ಯಮಾಪನದ ಹಿತಕರ ಸಂಯೋಜನೆಯಾಗಿದ್ದು, ಇದು ಮಾರ್ಗದರ್ಶನ ಮತ್ತು ಶಿಕ್ಷಣಾರ್ಥಿಯ ನಿರ್ವಹಣೆಯ ಕುರಿತು ಶಿಕ್ಷಕರಿಗೆ ಹಿಮ್ಮಾಹಿತಿಯನ್ನು ಕೂಡಾ ಒದಗಿಸುತ್ತದೆ. ಈ ವ್ಯವಸ್ಥೆಯನ್ನು ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದ (ಐಜಿಎನ್‌ಒಯು) ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾದರಿಯಾಗಿ ನಿಯೋಜಿಸಲಾಗಿದೆ.

ರಾಷ್ಟ್ರೀಯ ಮತ್ತು ರಾಜ್ಯ ಸಂಸ್ಥೆಗಳಾದ (ಏಜೆನ್ಸಿಗಳು) ಎನ್‌ಸಿಇಆರ್‌ಟಿ, ಸಿಬಿಎಸ್‌ಸಿ, ಕೇಂದ್ರೀಯ ವಿದ್ಯಾಲಯ ಸಂಘಟನೆ, ಜವಾಹರ ನವೋದಯ ವಿದ್ಯಾಲಯಗಳು, ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ, ರಾಷ್ಟ್ರೀಯ ಮುಕ್ತ ವಿದ್ಯಾಲಯ, ಮತ್ತು ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಅಸ್ಸಾಮ್, ಕೇರಳ, ಮಹಾರಾಷ್ಟ್ರ, ನಾಗಾಲ್ಯಾಂಡ್ ಮತ್ತು ಒರಿಸ್ಸಾ ರಾಜ್ಯಗಳ ಪ್ರೌಢ ಶಿಕ್ಷಣ ಮಂಡಳಿಗಳಿಗಾಗಿ ಸ್ವದೇಶೀಯ ಭಾಷೆಗಳ ಪಠ್ಯಕ್ರಮಗಳು, ಮತ್ತು ಬೋಧನಾ ಸಾಮಗ್ರಿಗಳ ಅಭಿವೃದ್ಧಿಯಲ್ಲಿ ಸಿಐಇಎಫ್‌ಎಲ್ ನೀಡಿದ ಗಮನಾರ್ಹ ಕೊಡುಗೆ ಕೂಡಾ ಆಗಿದ್ದು ಅದರ ವಿಶೇಷತೆಯನ್ನು ಎತ್ತಿ ತೋರಿಸುವ ಅಂಶವಾಗಿದೆ. ಸಾಮಾನ್ಯ ಮತ್ತು ವಿಶೇಷ ಮಾಲಿಕೆಗಳು, ಸಾಹಿತ್ಯದ ಮೂಲಕ ಭಾಷೆ, ನಿಮ್ಮ ಇಂಗ್ಲಿಷನ್ನು ಸಂಪನ್ನಗೊಳಿಸಿ (ಅಭಿವೃದ್ಧಿಪಡಿಸಿ) ಮತ್ತು ಇಂಗ್ಲಿಷ್ 400 ವಾಚನ ಕರಪತ್ರ (ಕಾರ್ಡುಗಳು) ಗಳಂತಹ ಮುದ್ರಣ ಸಾಮಗ್ರಿಗಳು ಭಾರತೀಯ ಇಎಲ್‌ಟಿ ಪಠ್ಯಕ್ರಮ ವಿನ್ಯಾಸದ ಚಾರಿತ್ರಿಕ ಮೈಲಿಗಲ್ಲುಗಳಾಗಿವೆ. ಭಾಷಾ ಕಲಿಕೆಗಾಗಿ 1963ರಲ್ಲಿ ರೇಡಿಯೋ ಮತ್ತು 1943ರಲ್ಲಿ ಟಿವಿಯನ್ನು ಬಳಸಿದ ಮೊದಲ ಸಂಸ್ಥೆ ಪರಿಮಿತ ಆವರ್ತಕ ಸಿಐಇಎಫ್‌ಎಲ್ ಆಗಿದೆ. ಇದರ ಬಾನುಲಿ ಪಾಠಗಳು ಅಖಿಲಭಾರತ ರೇಡಿಯೋದ 22 ಕೇಂದ್ರಗಳಿಂದ ನಿಯಮಿತವಾಗಿ ಪ್ರಸಾರವಾಗುತ್ತಿವೆ.

ಸಿಐಇಎಫ್‌ಎಲ್‌ನ್ನು ಸಾಹಿತ್ಯ ಸಿದ್ಧಾಂತ, ಭಾಷಾಂತರ ಅಧ್ಯಯನಗಳು, ಸಾಂಸ್ಕೃತಿಕ ಅಧ್ಯಯನಗಳು ಮತ್ತು ಲಿಂಗ ಸಿದ್ಧಾಂತದ ಅಗ್ರ ಕೇಂದ್ರವಾಗಿ ಕೂಡಾ ವ್ಯಾಪಕವಾಗಿ ಪರಿಗಣಿಸಲಾಗಿದೆ. ಸಂಸ್ಥೆ ಆಕರ್ಷಿಸಿದ ಸಂಶೋಧಕ ವಿದ್ಯಾರ್ಥಿಗಳ ಶ್ರೇಣಿ ಹಾಗೂ ಗುಣಮಟ್ಟ ಮತ್ತು ಇದರ ಅಧ್ಯಾಪಕ ವರ್ಗವು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ನೆಲೆಯಲ್ಲಿ ಪಡೆದಂತಹ ಮಾನ್ಯತೆಯಿಂದ ಇದು ಸ್ಪಷ್ಟವಾಗುತ್ತದೆ. ಈ ಕ್ಷೇತ್ರಗಳ ಸಂಶೋಧನಾ ಪ್ರಕಟನೆಗಳು ಇತರ ಭಾರತೀಯ ಭಾಷೆಗಳಿಗೆ ಮತ್ತು ಕೆಲವೊಮ್ಮೆ ಯುರೋಪಿಯನ್ ಭಾಷೆಗಳಿಗೆ ಕೂಡಾ ನಿಯಮಿತವಾಗಿ ಅನುವಾದಗೊಳ್ಳುತ್ತಿವೆ

Digitised by Bharatavani, CIIL

ಹಾಗೂ ಏಕಪ್ರಕಾರವಾಗಿ ಆವೃತ್ತಿಗಳನ್ನೂ ಕಾಣುತ್ತಿವೆ.

ಸಿಐಇಎಫ್‌ಎಲ್‌ನ ಇಂಗ್ಲಿಷ್ ಭಾಷಾ ಬೋಧನೆಯಲ್ಲಿ ಅತ್ಯಂತ ಉನ್ನತ ಮಟ್ಟದ ಎರಡು ಬಾಹ್ಯ ಕಾರ್ಯಕ್ರಮಗಳೆಂದರೆ ಜಿಲ್ಲಾ ಕೇಂದ್ರಿತ ಕಾರ್ಯಯೋಜನೆ (ಡಿಸ್ಟ್ರಿಕ್ಟ್ ಸೆಂಟರ್ ಸ್ಕೀಮ್) ಮತ್ತು ಇಎಲ್‌ಟಿಐ ಬೆಂಬಲ ಕಾರ್ಯಯೋಜನೆ (ಇಎಲ್‌ಟಿಐ ಸಪೋರ್ಟ್ ಸ್ಕೀಮ್). ಈ ಎರಡೂ ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ತರಬೇತಿ ಮತ್ತು ಅಭಿವೃದ್ಧಿ ಕೇಂದ್ರ (ಹಿಂದಿನ ವಿಸ್ತರಣಾ ಸೇವೆಗಳ ವಿಭಾಗ) ನಿರ್ವಹಿಸುತ್ತದೆ. ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಪರವಾಗಿ ನಡೆಸಲಾಗುತ್ತಿರುವ ಜಿಲ್ಲಾ ಕೇಂದ್ರಿತ ಕಾರ್ಯಯೋಜನೆಯಲ್ಲಿ 15 ವರ್ಷಗಳ ಅವಧಿಯಲ್ಲಿ ಸರಕಾರಿ ವಲಯದ 35,000 ಪ್ರೌಢಶಾಲಾ ಆಂಗ್ಲ ಭಾಷಾ ಶಿಕ್ಷಕರಿಗೆ ಅತ್ಯಾವಶ್ಯಕ ಸೇವಾ ನಿರತ ತರಬೇತಿಯನ್ನು ನೀಡಲಾಗಿದೆ. ಈಗ ಕಾರ್ಯನಿರತವಾಗಿರುವ 29 ಕೇಂದ್ರಗಳು ಸಂಸ್ಥೆ ಅಭಿವೃದ್ಧಿಪಡಿಸಿದ ವಿಶೇಷವಾಗಿ ವಿನ್ಯಾಸಗೊಳಿಸಲಾದ ತರಬೇತಿ ಪ್ಯಾಕೇಜನ್ನು ಬಳಸುತ್ತಿವೆ. ಇದು ಶಿಕ್ಷಾರ್ಥಿ ಮೌಲ್ಯಮಾಪನ ಮತ್ತು ಯೋಗ್ಯತಾ ಪತ್ರನೀಡಿಕೆಗೆ ಆಧಾರವನ್ನು ಕೂಡಾ ಒದಗಿಸುತ್ತದೆ. 1985ರಲ್ಲಿ ಪ್ರಾರಂಭವಾದ ಮತ್ತೊಂದು ಮಹತ್ವದ ಬಾಹ್ಯ ಕಾರ್ಯಕ್ರಮ ಇಎಲ್‌ಟಿಐ ಬೆಂಬಲಿತ ಕಾರ್ಯಯೋಜನೆಯು ಭಾರತ ಸರಕಾರದ ಪೋಷಕ ಯೋಜನೆಯಾಗಿದ್ದು ಇದರ ಮೂಲ ಉದ್ದೇಶವು ಭಾರತದಲ್ಲಿರುವ 11 ಇಂಗ್ಲಿಷ್ ಭಾಷಾ ಬೋಧನಾ ಸಂಸ್ಥೆಗಳ (ಇದರಲ್ಲಿ ಬೆಂಗಳೂರು ಮತ್ತು ಚಂಡಿಘರದಲ್ಲಿರುವ ಇಂಗ್ಲಿಷ್ ಪ್ರಾದೇಶಿಕ ಸಂಸ್ಥೆಗಳು ಕೂಡಾ ಸೇರುತ್ತವೆ) ಶೈಕ್ಷಣಿಕ ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು ಮತ್ತು ಪಠ್ಯಕ್ರಮ ವಿನ್ಯಾಸ, ಸಾಮಗ್ರಿ ಅಭಿವೃದ್ಧಿ ಮತ್ತು ತರಬೇತಿದಾರನಿಗೆ – ತರಬೇತಿ ನೀಡುವಿಕೆಯ ಪಠ್ಯಕ್ರಮಗಳ ಮೂಲಕ ಈ ಸಂಸ್ಥೆಗಳಿಗೆ ಸಿಐಇಎಫ್‌ಎಲ್ ಶೈಕ್ಷಣಿಕ ಬೆಂಬಲವನ್ನು ನೀಡುವುದಾಗಿದೆ.

ಸಂಸ್ಥೆಯ ಕಾರ್ಯಗಳಿಗೆ ಸಬಲ ಆಧಾರವನ್ನು ನೀಡುತ್ತಿರುವುದು ಅತ್ಯುತ್ತಮ ಗ್ರಂಥಾಲಯ. ಈ ಗ್ರಂಥಾಲಯವು ಭಾಷಾ ಬೋಧನೆ, ಭಾಷಾವಿಜ್ಞಾನ, ಮತ್ತು ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಸಾಹಿತ್ಯದ ಅಧ್ಯಯನಕ್ಕೆ ಮಾಹಿತಿ ಸೇವೆಯನ್ನು ಒದಗಿಸುತ್ತದೆ. ದಕ್ಷಿಣ ಏಷ್ಯಾದ ಉತ್ಕೃಷ್ಟ ಮಾನವಿಕ ಗ್ರಂಥಾಲಯಗಳಲ್ಲಿ ಒಂದಾಗಿ ಎಲ್ಲೆಡೆ ಪ್ರಸಿದ್ಧವಾಗಿರುವ ಸಿಐಇಎಫ್‌ಎಲ್ ಗ್ರಂಥಾಲಯವು ಪ್ರಗತಿಪರ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಬಳಕೆಯ ಮೂಲಕ ಜ್ಞಾನ ಸಹಸ್ರಯುಗವನ್ನು ಸುಗಮವಾಗಿ ಪ್ರವೇಶಿಸಿದೆ. ಇದು ಈಗ ಟೆಸ್ಟ್, ಸಿಡಿ–ರೋಮ್ ಮತ್ತು ವೆಬ್–ಸೈಟ್ಸ್‌ಗಳಂತಹ ವೈವಿಧ್ಯಪೂರ್ಣ ರಚನೆಗಳ ಮೂಲಕ ಭಾರತೀಯ ಮತ್ತು ವಿದೇಶೀ ದತ್ತಾಂಶಗಳನ್ನು ಪಡೆಯುವ ಅವಕಾಶವನ್ನು ಒದಗಿಸಿದೆ.

ಗ್ರಂಥಾಲಯ ಕಾರ್ಯನಿರ್ವಹಣೆಗಳ ಸ್ವಯಂಚಾಲನೆ ಮತ್ತು ಸೇವೆಗಾಗಿ ಈಗ ತನ್ನದೇ ಆದ ಗಣಕಯಂತ್ರ ಗ್ರಂಥಾಲಯವನ್ನು ಹೊಂದಿದೆ. ಇದು ಸಿಬ್ಬಂದಿವರ್ಗದ ಸದಸ್ಯರಿಗೆ ಮತ್ತು ಸಂಶೋಧಕ ವಿದ್ವಾಂಸರಿಗಾಗಿ ಯಶಸ್ವೀ ಗಣಕಯಂತ್ರ ಸಾಕ್ಷರತಾ ಕಾರ್ಯಕ್ರಮಗಳನ್ನು ನಡೆಸಿದೆ. ಮಾಹಿತಿ ಪ್ರಸಾರದ ಮೇಲೆ ಯುಕ್ತ ಗಮನವನ್ನುಹರಿಸುವ ಮೂಲಕ ಅದು ನಿಯಮಿತವಾಗಿ ನಿಯತಕಾಲಿಕೆಗಳನ್ನು ಹೊರಡಿಸುತ್ತಿದೆ ಮತ್ತು ಡಿಇಎಲ್‌ಎನ್‌ಇಟಿ ಸೇವೆಗಳನ್ನು ಒದಗಿಸುತ್ತಿದೆ. ಮತ್ತು ಐಎನ್‌ಎಫ್‌ಎಲ್‌ಇಟಿಯ ಪ್ರತಿಷ್ಠಿತ ಯೋಜನೆಯನ್ನು ಅನುಷ್ಠಾನಗೊಳಿಸುವ ಕಾರ್ಯದಲ್ಲಿದೆ.

ಸಂಸ್ಥೆಯಲ್ಲಿ 1948ರಲ್ಲಿ ಸ್ಥಾಪಿಸಲಾದ ಶಿಕ್ಷಣ ಮಾಧ್ಯಮ ಸಂಶೋಧನಾ ಕೇಂದ್ರ (ಇಎಮ್‌ಆರ್‌ಸಿ)ದಲ್ಲಿ ಪೂರ್ಣಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾದ ಟೆಲಿವಿಷನ್ ಮತ್ತು ಧ್ವನಿ ಪ್ರಸಾರ (ಸೌಂಡ್ ಸ್ಟುಡಿಯೋ) ಸಂಕೀರ್ಣವಿದ್ದು, ಇದರಲ್ಲಿ ಅತ್ಯಾಧುನಿಕವಾದ ಧ್ವನಿಮುದ್ರಣ ವ್ಯವಸ್ಥೆಗಳು ಅಳವಡಿಕೆಯಾಗಿವೆ. ಕೇಂದ್ರವು ಪ್ರಕೃತಿ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಮಾನವಿಕಗಳ ಕ್ಷೇತ್ರಗಳಲ್ಲಿ ಸುಮಾರು 1,000 ಟಿವಿ ಕಾರ್ಯಕ್ರಮಗಳನ್ನು ತಯಾರಿಸಿದೆ. ಈ ಕಾರ್ಯಕ್ರಮಗಳು ದೂರದರ್ಶನದ ರಾಷ್ಟ್ರೀಯ ಜಾಲದಲ್ಲಿ ಯುಜಿಸಿಯ ರಾಷ್ಟ್ರೀಯ ಪ್ರಸಾರದ ತರಗತಿ ಕಾರ್ಯಕ್ರಮಗಳಲ್ಲಿ ನಿಯಮಿತವಾಗಿ ಪ್ರಸಾರವಾಗುತ್ತಿವೆ. ಇದನ್ನು 20 ಮಿಲಿಯಕ್ಕಿಂತ ಹೆಚ್ಚು ಜನರು ವೀಕ್ಷಿಸುತ್ತಾರೆಂದು ಅಂದಾಜಿಸಲಾಗಿದೆ. ಇವುಗಳಲ್ಲಿ ಬಹುಪಾಲು ಕಾರ್ಯಕ್ರಮಗಳು ವಿಮರ್ಶಾತ್ಮಕ ಮೆಚ್ಚುಗೆಯನ್ನು ಪಡೆದಿವೆ. ಮತ್ತು ಶೈಕ್ಷಣಿಕ ಪ್ರಸರಣದಲ್ಲಿ ರಾಷ್ಟ್ರೀಯ ಪ್ರಶಸ್ತಿಗಳಿಗೆ ಆಯ್ಕೆಯಾಗಿವೆ. ಕೇಂದ್ರವು ತರಬೇತಿ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ಕೂಡಾ ನಡೆಸುತ್ತಿದೆ. ಉದಾಹರಣೆಗೆ ನಿರ್ಮಾಪಕರು, ಛಾಯಾಚಿತ್ರಗ್ರಾಹಕರು ಮತ್ತು ತಾಂತ್ರಿಕ ಸಹಾಯಕರಿಗೆ ಕಾರ್ಯಾಗಾರಗಳನ್ನು ನಡೆಸುತ್ತಿದೆ. ಅನೇಕ ವಿಶ್ವವಿದ್ಯಾಲಯಗಳ ಸಮೂಹ ಸಂವಹನ ವಿದ್ಯಾರ್ಥಿಗಳಿಗೆ ಆಪ್ತಸೇವಾ (ಇಂಟರ್ನ್‌ಷಿಪ್) ಸೌಲಭ್ಯಗಳನ್ನು ಒದಗಿಸುತ್ತಿದೆ. ಮತ್ತು ದೂರದರ್ಶನದಲ್ಲಿ ಪರಸ್ಪರ ಪ್ರತಿಕ್ರಿಯಾತ್ಮಕ ರಾಷ್ಟ್ರೀಯ ಪ್ರಯೋಗಗಳ ವಿನ್ಯಾಸಗಳನ್ನು ರೂಪಿಸುತ್ತದೆ.

ನಿಯಮಿತವಾಗಿ ಸಂಘಟಿಸಲಾಗುತ್ತಿರುವ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಸಂಕಿರಣಗಳು ಮತ್ತು ಕಾರ್ಯಾಗಾರಗಳ ಮೂಲಕವೂ ಸಿಐಇಎಫ್‌ಎಲ್‌ನ ಶೈಕ್ಷಣಿಕ ಚಟುವಟಿಕೆಯ ಸ್ಪಂದನಶೀಲತೆಯು ಅಭಿವ್ಯಕ್ತಗೊಂಡಿದೆ. 1998ರ ಜನವರಿ ತಿಂಗಳಲ್ಲಿ ಯುರೋಪಿನ ಉತ್ಪನ್ನಕಾರಕ ಭಾಷಾವಿಜ್ಞಾನದ ಗುಂಪು 'ಹಳೆ ಜಗತ್ತಿನಲ್ಲಿ ಉತ್ಪನ್ನಕಾರಕ ಭಾಷಾವಿಜ್ಞಾನ' (ಜನರೇಟಿವ್ ಲಿಂಗ್ವಿಸ್ಟಿಕ್ಸ್ ಇನ್ ದಿ ಓಲ್ಡ್ ವರ್ಲ್ಡ್) ಎಂಬ ಪ್ರಥಮ ಏಷ್ಯಾ ಸಂವಾದವನ್ನು ಸಿಐಇಎಫ್‌ಎಲ್‌ನ ಅಧ್ಯಾಪಕವರ್ಗದ ಸಹಯೋಗದೊಂದಿಗೆ ಸಂಸ್ಥೆಯ ಪರಿಸರದಲ್ಲಿಯೇ ನಡೆಸಲು ನಿರ್ಧರಿಸಿದ್ದು ಸಂಸ್ಥೆಯ ಗುಣಮಟ್ಟದ ಅಳತೆಗೋಲಾಗಿದೆ. ಹಲವು ದೃಷ್ಟಿಯಲ್ಲಿ ಪ್ರಥಮವೆಂದು ಪರಿಗಣಿಸಲಾಗಿರುವ ಇನ್ನೊಂದು ಅಂತಾರಾಷ್ಟ್ರೀಯ ವಿಚಾರಸಂಕಿರಣ ಭಾಷಾ ಪಠ್ಯಕ್ರಮ: ಬದಲಾವಣೆಯ ಚಲನಶೀಲತೆ' (ದಿ ಲ್ಯಾಂಗ್ವೇಜ್ ಕರಿಕ್ಯುಲಮ್ : ಡೈನಾಮಿಕ್ಸ್ ಆಫ್ ಚೇಂಜ್). ಇದು ಭಾರತದ ಮತ್ತು ಯು. ಕೆ., ಆಸ್ಟ್ರೇಲಿಯಾ, ಮಲೇಶ್ಯಾ, ಬ್ರೆಜಿಲ್, ಸಿಂಗಾಪೂರ್ ಮತ್ತು

Digitised by Bharatavani, CIIL

ಇಂಡೋನೇಶ್ಯಾ ದೇಶಗಳ ಇಂಗ್ಲಿಷ್ ಬೋಧಕರು ಮತ್ತು ಇಎಲ್‌ಟಿ ವಿಶೇಷಜ್ಞರು ಒಂದೆಡೆ ಸೇರುವ ಅವಕಾಶವಾಗಿತ್ತು. ಇದು ಶಿಕ್ಷಣತಜ್ಞರು ಅಥವಾ (ಭಾಗವಹಿಸಿದವರ ಹೇಳಿಕೆಯ ಪ್ರಕಾರ) 'ಜ್ಞಾನದ ದ್ವಾರಪಾಲಕರು' ಕಾರ್ಯನಿರತ ಶಿಕ್ಷಕರ ಅತೀವ ಪ್ರಭಾವಕ್ಕೆ ತಲೆಬಾಗುವಂತೆ ಮಾಡಿದ ಪ್ರಪ್ರಥಮ ವಿಚಾರಸಂಕಿರಣ ಎಂಬುದಾಗಿ ಮೆಚ್ಚುಗೆಯನ್ನು ಪಡೆದಿದೆ. ಅಪರಿಮಿತ ಹೊಗಳಿಕೆಯನ್ನು ಪಡೆದಂತಹ ಮೂರನೆಯ ಘಟನೆಯೆಂದರೆ 1999ನೇ ಇಸವಿ ಜುಲೈ 12ರಿಂದ 20ರವರೆಗೆ ಸಿಐಇಎಫ್ಎಲ್‌ನಲ್ಲಿ ಸ್ವಂತ ಖರ್ಚಿನಲ್ಲಿ ನಡೆದ 'ಇಂಗ್ಲಿಷ್ ವ್ಯಾಕರಣ ಕುರಿತು ಅಂತಾರಾಷ್ಟ್ರೀಯ ಸಭೆ' (ಇಂಟರ್‌ನ್ಯಾಶನಲ್ ಕಾಂಗ್ರೆಸ್ ಆನ್ ಇಂಗ್ಲಿಷ್ ಗ್ರಾಮರ್). ಇದರಲ್ಲಿ 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಇತ್ತೀಚೆಗೆ ಸಿಐಇಎಫ್ಎಲ್‌ನ ಹಳೆವಿದ್ಯಾರ್ಥಿ ಸಂಘವು 'ಬಹುಭಾಷಿತ ನೆಲೆಯಲ್ಲಿ ಜಾಗತಿಕ ಭಾಷೆಗಳ ಜಾಗತಿಕ ಸಭೆ' (ವರ್ಲ್ಡ್ ಕಾಂಗ್ರೆಸ್ ಆನ್ ವರ್ಲ್ಡ್ ಲಾಂಗ್ವೇಜಸ್ ಇನ್ ಮಲ್ಟಿಲಿಂಗ್ವಲ್ ಕಂಟೆಕ್ಸ್ಟ್)ಯನ್ನು ಚೇತೋಹಾರಿ ರೀತಿಯಲ್ಲಿ ಸಂಘಟಿಸಿದೆ. ಇದರಲ್ಲಿ ಭಾಷಾಧ್ಯಯನ ಕ್ಷೇತ್ರದ ಕೆಲವು ಪ್ರಸಿದ್ಧ ವಿದ್ವಾಂಸರು ಭಾಗವಹಿಸಿದ್ದರು.

ಪ್ರಖ್ಯಾತ ವಿದ್ವಾಂಸರನ್ನು ಗೌರವಿಸುವುದರ ಮೂಲಕವೂ ಸಂಸ್ಥೆ ತನ್ನ ಪ್ರತಿಷ್ಠೆಯನ್ನು ಗಳಿಸಿದೆ. ಇಬ್ಬರು ಖ್ಯಾತನಾಮರಾದ ಅತ್ಯಂತ ಗೌರವಾನ್ವಿತ ಕಾದಂಬರಿಕಾರ ಮತ್ತು ನಾಟಕಕಾರ ಡಾ. ಭೀಷ್ಮ ಸಹಾನಿ ಮತ್ತು ಜರ್ಮನಿಯ ಹೆಸರಾಂತ ವಿದ್ವಾಂಸ ಮತ್ತು ಪ್ರಕಾಶಕ ಡಾ. ಸೆಜ್‌ಫರ್ಡ್ ಯುನ್‌ಸೆಲ್ಡ್‌ಗೆ ಗೌರವ ಡಾಕ್ಟರೇಟ್ ನೀಡುವ ಸಲುವಾಗಿ 1999ನೇ ಇಸವಿ ಅಕ್ಟೋಬರ್ 28ರಂದು 'ವಿಶೇಷ ಪದವಿ ಪ್ರದಾನ' ಸಮಾರಂಭವನ್ನು ಸಿಐಇಎಫ್ಎಲ್‌ನಲ್ಲಿ ಆಯೋಜಿಸಲಾಗಿತ್ತು. ಜನವರಿ, 2001ರಲ್ಲಿ ಅತ್ಯಂತ ಪ್ರಸಿದ್ಧ ಭಾಷಾತಜ್ಞ ಪ್ರೊಫೆಸರ್ ಎಮ್.ಎ.ಕೆ. ಹಾಲ್‌ಡೇ ಹಾಗೂ ಸನ್ಮಾನ್ಯ ಸಮಾಜಶಾಸ್ತ್ರ ಪ್ರೊಫೆಸರ್ ಬ್ರಜ್ ಕಚ್ರು ಅವರಿಗೆ ಪ್ರತಿಷ್ಠಿತ ಸಿಐಇಎಫ್ಎಲ್ ಗೌರವ ಫೆಲೋಶಿಪ್‌ನ್ನು ನೀಡಲಾಯಿತು.

ಕಾಲಾನುಕ್ರಮದಲ್ಲಿ ಈ ಸಂಸ್ಥೆಯು ಭಾರತದ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಅಧ್ಯಯನದ ಅತ್ಯುನ್ನತ ಸಂಸ್ಥೆಯಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಲ್ಲದೆ, ಬೋಧನೆ ಮತ್ತು ಶೋಧನೆಯ ತಜ್ಞತೆ, ವಿಶೇಷ ಕಾರಣಗಳಿಗಾಗಿ ಅಂತರ್‌ಶಿಸ್ತೀಯ ಅಧ್ಯಯನಗಳು ಮತ್ತು ಭಾಷಾ ಕ್ಷೇತ್ರಗಳಲ್ಲಿ ಕೂಡಾ ಉನ್ನತ ಮಟ್ಟವನ್ನು ತಲುಪಿದೆ. ಸಂಸ್ಥೆಯ ಅಸಾಧಾರಣ ಶೈಕ್ಷಣಿಕ ಕೊಡುಗೆ ಮತ್ತು ಶ್ಲಾಘನೀಯ ದಾಖಲೆಯನ್ನು ಗುರುತಿಸಿ ಯುಜಿಸಿಯ ಸ್ವಾಯತ್ತ ಸಂಸ್ಥೆಯಾಗಿರುವ ನ್ಯಾಶನಲ್ ಅಸೆಸ್‌ಮೆಂಟ್ ಆಂಡ್ ಅಕ್ರೆಡಿಟೇಶನ್ ಕೌನ್ಸಿಲ್‌ನವರು 2000 ಇಸವಿಯಲ್ಲಿ ಐದು ವರ್ಷಗಳಿಗೆ ಪಂಚತಾರಾ ಅರ್ಹತಾ ಅಂಕಗಳನ್ನು ನೀಡಿದೆ. ಇಲ್ಲಿ ತಾರೆಗಳು ಸಾಧ್ಯವಿರುವ ಅನುಮೋದನೆಯ ಗರಿಷ್ಠ ಮಟ್ಟವನ್ನು ಸೂಚಿಸುತ್ತವೆ. ಈಗ ಸಿಐಇಎಫ್ಎಲ್ ತನ್ನ ಅಪೇಕ್ಷಣೀಯ ಪರಿಣತಿ ಮತ್ತು ಶ್ರೀಮಂತ ಅನುಭವಗಳನ್ನು ಐದು ಕಕ್ಷೆಗಳಲ್ಲಿ ವಿಸ್ತರಿಸಿಕೊಳ್ಳುವ ತನ್ನ ಚಟುವಟಿಕೆಗಳಿಗೆ ಬಳಸಲಿದೆ.

ಸಿಐಇಎಫ್ಎಲ್‌ನ ಚರಿತ್ರೆಯಲ್ಲಿ ವಿಶೇಷವಾಗಿ ಕಳೆದ ಎರಡು ವರ್ಷಗಳು ಮಹತ್ವಪೂರ್ಣದ್ದಾಗಿವೆ. ಭಾಷಾ ಬೋಧನೆ ಮತ್ತು ಕಲಿಕೆಯ ಅಂತಾರಾಷ್ಟ್ರೀಯ ಬೆಳವಣಿಗೆಗಳು ಮತ್ತು ಪ್ರವೃತ್ತಿಗಳನ್ನು ಜೊತೆಯಾಗಿರಿಸಿ, ಜಾಗತೀಕರಣ ಹಾಗೂ ಮಾಹಿತಿ ತಂತ್ರಜ್ಞಾನದಲ್ಲಿನ ಮಹತ್ವಪೂರ್ಣ ಬದಲಾವಣೆ ಸೃಷ್ಟಿಸಿದ ಅಗತ್ಯಗಳೊಂದಿಗೆ, ಸಂಸ್ಥೆಯು ತನ್ನ ಶೈಕ್ಷಣಿಕ ಸೌಧವನ್ನು ಮರುಪರಿಕಲ್ಪಿಸುವ ಮತ್ತು ತನ್ನ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮರು ಸಂಘಟಿಸುವ ಸ್ಪರ್ಧಾತ್ಮಕ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಹಿಂದೆ ಇದ್ದ ವಿಭಾಗಗಳನ್ನು ಐದು ಶಾಲೆಗಳಾಗಿ ಮರುಸಂಘಟಿಸಲಾಗಿದೆ. ಪ್ರತಿಯೊಂದು ಶಾಲೆಗೆ ಬೇರೆ ಬೇರೆ ಕೇಂದ್ರಗಳು ಇರುತ್ತವೆ; ಇಂಗ್ಲಿಷ್ ಭಾಷಾ ಶಿಕ್ಷಣದ ಶಾಲೆ, ಭಾಷಾ ವಿಜ್ಞಾನಗಳ ಶಾಲೆ, ವಿಮರ್ಶಾತ್ಮಕ ಮಾನವಿಕಗಳ ಶಾಲೆ, ದೂರಶಿಕ್ಷಣ ಶಾಲೆ ಮತ್ತು ವಿದೇಶಿ ಶಿಕ್ಷಣದ ಶಾಲೆ, ಭಾಷಾ ವಿಜ್ಞಾನಗಳ ಶಾಲೆ, ವಿಮರ್ಶಾತ್ಮಕ ಮಾನವಿಕಗಳ ಶಾಲೆ, ದೂರಶಿಕ್ಷಣ ಶಾಲೆ ಮತ್ತು ವಿದೇಶಿ ಭಾಷೆಗಳ ಶಾಲೆ, ಇವುಗಳೊಂದಿಗೆ, ಎರಡು ವರ್ಷಗಳ ಇಂಗ್ಲಿಷ್ ಎಂ.ಎ. ಪ್ರಮಾಣೀಕೃತ ಕಾರ್ಯಕ್ರಮ (ಟಿಇಎಸ್‌ಎಲ್ ಮತ್ತು ಮಾಧ್ಯಮಿಕ ಮತ್ತು ಸಂವಹನದಂತಹ ಕ್ಷೇತ್ರಗಳ ವಿಶೇಷಜ್ಞತೆಯೊಂದಿಗೆ), ಟಿಇಎಸ್‌ಎಲ್, ಭಾಷಾವಿಜ್ಞಾನ, ಇಂಗ್ಲಿಷ್ ಸಾಹಿತ್ಯ ಮತ್ತು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅಧ್ಯಯನಗಳ ಎರಡು ವರ್ಷದ ಎಂ.ಎ. ಕಾರ್ಯಕ್ರಮ, ಟಿಇಎಸ್‌ಎಲ್, ಭಾಷಾವಿಜ್ಞಾನ ಮತ್ತು ಧ್ವನಿಶಾಸ್ತ್ರದಲ್ಲಿ ಒಂದು ವರ್ಷದ ಎಂ.ಎ. (ಆನರ್ಸ್) ಕಾರ್ಯಕ್ರಮ, ದೂರಶಿಕ್ಷಣದ ಮೂಲಕ ಇಂಗ್ಲಿಷ್ ಪಿಹೆಚ್.ಡಿ–ಇವುಗಳನ್ನು 2000ರಲ್ಲಿ ಪ್ರಾರಂಭಿಸಲಾಯಿತು. ಆಯ್ಕೆ ಮತ್ತು ಹೊಂದಾಣಿಕೆಗೆ ಆದ್ಯತೆಯಿರುವ ಸ್ವಸಹಾಯ ವ್ಯವಸ್ಥೆಯನ್ನು ಎಂ.ಎ. (ಆನರ್ಸ್) ಸ್ಥಾನದಲ್ಲಿ ಯಶಸ್ವಿಯಾಗಿ ಹೊಂದಿಸಲಾಯಿತು.

ವಿಮರ್ಶಾತ್ಮಕ ಮಾನವಿಕಗಳ ಶಾಲೆಯ ಎರಡು ಹೊಸ ಕೇಂದ್ರಗಳು ಮಿಶ್ರಸಂಸ್ಕೃತಿ ಮತ್ತು ಅಂತರ್‌ಶಿಸ್ತೀಯ ಅಧ್ಯಯನಗಳು ಮತ್ತು ಸಂಶೋಧನೆಗೆ ಸಂಸ್ಥೆಯು ಬದ್ಧವಾಗಿರುವ ಪ್ರಬಲ ಚಿಹ್ನೆಗಳಾಗಿವೆ. ಯುರೋಪು ಅಧ್ಯಯನಗಳ ಕೇಂದ್ರವು ಬೋಧನೆ ಮತ್ತು ಸಂಶೋಧನೆಗೆ ಸ್ವಾಯತ್ತ ಕಾರ್ಯಸೂಚಿಯ ಕರಡನ್ನು ಸಿದ್ಧಪಡಿಸಿದ್ದು, ಇದು ಬಹು ಸಾಂಸ್ಕೃತಿಕ ಮತ್ತು ಬಹು–ಧರ್ಮೀಯ ನೆಲೆಗಳಲ್ಲಿ ಮತ್ತು ಯುರೋಪಿನೊಂದಿಗೆ ಭಾರತೀಯ ಉಪಖಂಡದ ಸಂಬಂಧದೊಂದಿಗೆ ಜನಾಂಗೀಯತೆ ಮತ್ತು ರಾಷ್ಟ್ರೀಯತೆಯ ವಿಮರ್ಶಾತ್ಮಕ ಪರಿಶೀಲನೆಯಲ್ಲಿ ಗಮನವನ್ನು ಕೇಂದ್ರೀಕೃತಗೊಳಿಸಿದೆ. ಭಾರತೀಯ ಅಧ್ಯಯನಗಳ ಕೇಂದ್ರವು ಭಾರತವನ್ನು ಅರ್ಥೈಸುವ ಪಶ್ಚಿಮದ ಬಹು ಅನುಸಂಧಾನಗಳ ವಿಮರ್ಶಾತ್ಮಕ ಮೌಲ್ಯನಿರ್ಧಾರವನ್ನು ಪಾಲಿಸುವ ಮತ್ತು ಭಾರತದ ಶಾಸನಗಳಲ್ಲಿ, ಸಾಹಿತ್ಯಗಳಲ್ಲಿ ಮತ್ತು ಇತರ ದಾಖಲೆಗಳಲ್ಲಿ ವ್ಯಕ್ತಗೊಂಡಿರುವ ಭಾರತೀಯ ಸಾಂಸ್ಕೃತಿಕ ಪರಂಪರೆಗಳನ್ನು ಅರ್ಥೈಸಲು ವಿದ್ವಾಂಸರಿಗೆ ನೆರವಾಗುವ ಉದ್ದೇಶವನ್ನು ಹೊಂದಿದೆ.

Digitised by Bharatavani, CIIL

ಸಂಸ್ಥೆಯ ಆವರಣದಲ್ಲಿ ದೃಷ್ಟಿಸಮಸ್ಯೆಯನ್ನು ಎದುರಿಸುತ್ತಿರುವವರ ಬಳಕೆಗಾಗಿ ಗಣಕಯಂತ್ರ ಕೇಂದ್ರ ಕೂಡಾ ಇದೆ ಎಂಬುದು ಈ ಸಂಸ್ಥೆಯ ಹೆಮ್ಮೆಯಾಗಿದೆ. ಈ ಕೇಂದ್ರದಲ್ಲಿ ಪಠ್ಯವನ್ನು ಓದುವ ಶೋಧಕ ಯಂತ್ರ ಮತ್ತು ವಾಕ್ ತಂತ್ರಾಂಶವನ್ನೊಳಗೊಂಡ ಉನ್ನತ ತಂತ್ರಜ್ಞಾನದ ಗಣಕಯಂತ್ರಗಳಿವೆ.

**ಪ್ರಾದೇಶಿಕ ಕಕ್ಷೆ:**

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಳಿವಿನ ಅಂಚಿನಲ್ಲಿರುವ ಸಮಾಜದ ವಿಭಾಗಗಳನ್ನು ಶೈಕ್ಷಣಿಕವಾಗಿ ಮೇಲಕ್ಕೆತ್ತುವ ಬದ್ಧತೆಯನ್ನು ಕಾಪಾಡಿಕೊಂಡು ಬಂದಿರುವುದು ಸಿಐಇಎಫ್ಎಲ್ ಕಾರ್ಯದ ಒಂದು ವಿಶಿಷ್ಟ ಅಂಶವಾಗಿದೆ. ಆಂಧ್ರಪ್ರದೇಶ ಸೋಶಿಯಲ್ ವೆಲ್‌ಫೇರ್ ರೆಸಿಡೆನ್ಶಿಯಲ್ ಎಡ್ಯುಕೇಶನಲ್ ಇನ್‌ಸ್ಟಿಟ್ಯೂಶನ್ಸ್ ಸೊಸೈಟಿಯು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಂಚಿತರಾಗಿರುವವರ ಮಕ್ಕಳಿಗಾಗಿ ಪ್ರಾರಂಭಿಸಿದ ವಸತಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವಿಕೆ ಮತ್ತು ಕಲಿಕೆಯ ಮಟ್ಟವನ್ನು ಎತ್ತರಕ್ಕೇರಿಸುವ ಸಲುವಾಗಿ 1999 ರಲ್ಲಿ ಸಿಐಇಎಫ್ಎಲ್ ಸಂಯೋಗದಲ್ಲಿ ಯೋಜನೆಯೊಂದನ್ನು ರೂಪಿಸಿದೆ. ಈ ಯೋಜನೆಯಡಿಯಲ್ಲಿ ಅನೇಕ ಶಿಕ್ಷಕ–ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಮತ್ತು ಮುದ್ರಿತವಾದ ಹಾಗೂ ಶ್ರವ್ಯ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯ ಗಮನಾರ್ಹ ಫಲಿತವೆಂದರೆ 100 ವಾಚನ ಕಾರ್ಡುಗಳ ಗುಚ್ಛದ ರಚನೆ ಈಶಾನ್ಯ ಭಾಗಗಳಲ್ಲಿ ಹೊಸ ಕೇಂದ್ರಗಳನ್ನು ಪ್ರಾರಂಭಿಸುವ ಕ್ರಿಯಾಯೋಜನೆಯೊಂದನ್ನು ಕೂಡಾ ಸಿಐಇಎಫ್ಎಲ್ ಪ್ರಾರಂಭಿಸಿದೆ. ಈ ಪ್ರದೇಶದಲ್ಲಿ ಇಂಗ್ಲಿಷ್ ಕಲಿಸುವಿಕೆಯನ್ನು ಬಲಗೊಳಿಸುವುದು ಇದರ ಉದ್ದೇಶ. ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಶೈಕ್ಷಣಿಕ ಸಂಕೀರ್ಣದ ನಿರ್ಮಾಣ, ಇಂಗ್ಲಿಷ್‌ನಲ್ಲಿ ಭಾಷಾ ಅಭಿವೃದ್ಧಿ ಕಾರ್ಯಕ್ರಮಗಳ ರೂಪಿಸುವಿಕೆ ಮತ್ತು ಈಶಾನ್ಯ ಭಾಗದಲ್ಲಿ ಬುಡಕಟ್ಟು ಸಂಸ್ಕೃತಿಗಳ ರಾಷ್ಟ್ರೀಯ ಭಾಷಾಂತರ ಕೇಂದ್ರದ ಸ್ಥಾಪನೆಗೆ ಗಣನೀಯ ಪ್ರಮಾಣದ ಅನುದಾನವನ್ನು ಮಂಜೂರು ಮಾಡಲು ಶೈಕ್ಷಣಿಕ ಸಂಕೀರ್ಣವನ್ನು ಸ್ಥಾಪಿಸುವ ಸಲುವಾಗಿ ಮೇಘಾಲಯ ಸರಕಾರದಿಂದ ಶಿಲ್ಲೊಂಗ್‌ದಲ್ಲಿ ವಿಶಾಲವಾದ ನಿವೇಶನವೊಂದನ್ನು ಸಂಸ್ಥೆ ತನ್ನ ವಶಕ್ಕೆ ತೆಗೆದುಕೊಂಡಿದೆ.

ಸಂಸ್ಥೆಯ ಪ್ರಭಾವವನ್ನು ಬಲಪಡಿಸುವ ಉದ್ದೇಶದಿಂದ ಹೈದ್ರಾಬಾದಿನ ಹಳೆನಗರ ಪ್ರದೇಶದಲ್ಲಿ ವಿಸ್ತರಣಾ ಕೇಂದ್ರವೊಂದನ್ನು, ಮೊಹಾಲಿ, ಪಂಜಾಬ್ ಮತ್ತು ತಮಿಳು ನಾಡಿನ ತಿರುಚೆಂಗೊಡೆಯಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಪ್ರಾರಂಭಿಸುವ ಕೇಂದ್ರೀಕರಿಸಿದ ಪ್ರಯತ್ನಗಳು ಕಾರ್ಯಾರಂಭ ಮಾಡಿವೆ.

**ರಾಷ್ಟ್ರೀಯ ಕಕ್ಷೆ:**

ಬ್ರಿಟಿಷ್ ಕೌನ್ಸಿಲ್ ಸ್ಥಾಪಿಸಿದ ಸಿಐಇಎಫ್ಎಲ್ ಅನುಷ್ಠಾನಗೊಳಿಸಿದ "ದಿ ಸಿಬಿಎಸ್‌ಇ–ಇಎಲ್‌ಟಿ ಕರಿಕ್ಯುಲಂ ಇಂಪ್ಲಿಮೆಂಟೇಶನ್ ಸ್ಟಡಿ"ಯು ಅನೇಕ ಕಾರಣಗಳಿಗಾಗಿ ಗಮನಾರ್ಹ ಸಾಧನೆಯಾಗಿದೆ. ಇದು ಭಾರತೀಯ ಇಂಗ್ಲಿಷ್ ಭಾಷಾ ಶಿಕ್ಷಕರನ್ನು ಸಂಶೋಧಕರಾಗಿ ನಿಯೋಜಿಸಿದ ಪ್ರಥಮ ಪ್ರಮುಖ ಯೋಜನೆಯಾಗಿದೆ. ಈ ಯೋಜನೆಯಿಂದ ಪಠ್ಯಕ್ರಮದ ವಿಭಿನ್ನ ಹೊಣೆಗಾರರಾದ ಶಿಕ್ಷಕರು, ವಿದ್ಯಾರ್ಥಿಗಳು, ಪ್ರಾಂಶುಪಾಲರು, ಆಡಳಿತಗಾರರು ಮತ್ತು ಹೆತ್ತವರಿಂದ ಮಹತ್ವಪೂರ್ಣ ದತ್ತಾಂಶಗಳನ್ನು ಪಡೆಯಲಾಗಿದೆ. ಈ ಅಧ್ಯಯನದಿಂದ ಕಂಡುಹಿಡಿದ ಅಂಶಗಳು ಮಹಾರಾಷ್ಟ್ರವೂ ಸೇರಿದಂತೆ, ಅನೇಕ ರಾಜ್ಯಗಳ ಮಾಧ್ಯಮಿಕ ಶಿಕ್ಷಣ ಮಂಡಲಿ ರೂಪಿಸಿದ ಪಠ್ಯಕ್ರಮಗಳ ಮೇಲೆ ಪ್ರಭಾವವನ್ನು ಬೀರಿದೆ. ಮತ್ತು ಇಂಗ್ಲಿಷ್ ಶಿಕ್ಷಕರಿಗೆ ಅನೇಕ ಅಗತ್ಯ ಆಧಾರಿತ ತರಬೇತಿ ಕಾರ್ಯಕ್ರಮಗಳಿಗೆ ದಾರಿ ಮಾಡಿಕೊಟ್ಟಿದೆ.

ದೇಶದಲ್ಲಿ ಇಂಗ್ಲಿಷ್ ಮಟ್ಟವನ್ನು ಎತ್ತರಕ್ಕೇರಿಸುವ ಪ್ರಯತ್ನಗಳಿಗೆ ಇತ್ತೀಚಿನ ಕೊಡುಗಡೆ ಸಿಐಇಎಫ್ಎಲ್‌ನ 'ನ್ಯಾಶನಲ್ ಇಂಗ್ಲಿಷ್ ಲಾಂಗ್ವೇಜ್ ಟೆಸ್ಟಿಂಗ್ ಸರ್ವಿಸ್ (NELTS), ಭಾರತದ ಇಂಗ್ಲಿಷ್ ಬಳಕೆಯ ಪ್ರಾವೀಣ್ಯದ ಮಟ್ಟಗಳನ್ನು ಅಧಿಕೃತವಾಗಿ ಘೋಷಿಸಲು ಅನೇಕ ವಿಧದ ಇಂಗ್ಲಿಷ್ ಭಾಷಾ ಪರೀಕ್ಷೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಅನುಷ್ಠಾನಕ್ಕೆ ತರುವುದು ಇದರ ಜವಾಬ್ದಾರಿಯಾಗಿರುತ್ತದೆ. ಇದರ ಮುಖ್ಯ ಉದ್ದೇಶಗಳು ಹೀಗಿವೆ:

* ಇಂಗ್ಲಿಷ್ ಭಾಷಾ ಬಳಕೆದಾರರ ಕ್ರಿಯಾತ್ಮಕ ಸಾಮರ್ಥ್ಯವನ್ನು ಅಳೆಯುವ ಸಲುವಾಗಿ ಮೂರು ಮುಂದುವರಿದ, ಮಧ್ಯಮವರ್ಗದ, ತಳಮಟ್ಟದ ಹಂತಗಳಲ್ಲಿ ಪ್ರಮಾಣೀಕೃತ ಪರೀಕ್ಷೆಗಳನ್ನು ತಯಾರಿಸುವುದು;

* ಸಾರ್ವಜನಿಕ ಮತ್ತು ಖಾಸಗಿ ವಲಯದ ಸಂಸ್ಥೆಗಳೆರಡೂ ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗುವಂತೆ ಅವರಿಗೆ ಸಮಾಲೋಚಕ ಸೇವೆಗಳನ್ನು ಒದಗಿಸುವುದು; ಮತ್ತು

* ಭಾರತದಲ್ಲಿ ದ್ವಿತೀಯ ಮತ್ತು ತೃತೀಯ ಹಂತಗಳಲ್ಲಿ ರಾಜ್ಯ ಮತ್ತು ಕೇಂದ್ರ ಏಜೆನ್ಸಿಗಳ ಸಧ್ಯದ ಮತ್ತು ಭವಿಷ್ಯದ ಅಗತ್ಯಗಳಿಗೆ ಪ್ರತಿಕ್ರಿಯಿಸುವುದು.

ಪ್ರಥಮ ಎನ್‌ಇಎಲ್‌ಟಿಎಸ್ ಪರೀಕ್ಷೆಯನ್ನು ದೇಶದಾದ್ಯಂತ 15,000ಕ್ಕೂ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳಿಗೆ 19, ನವೆಂಬರ್ 2000ದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಎರಡನೆಯ ಪರೀಕ್ಷೆಯನ್ನು 15, ನವೆಂಬರ್ 2001ರಲ್ಲಿ ಭಾರತದಾದ್ಯಂತ 20 ಕೇಂದ್ರಗಳಲ್ಲಿ ನಡೆಸಲಾಯಿತು. ಎನ್‌ಇಎಲ್‌ಟಿಎಸ್ ಪರೀಕ್ಷೆಯು ಇಂಗ್ಲಿಷಿನ ಭಾರತೀಯ ಮಾಲಕತ್ವವನ್ನು ನ್ಯಾಯಬದ್ಧಗೊಳಿಸುವ ಕಾರ್ಯಗಳಿಗೆ ಮತ್ತು ಗಂಭೀರ ರೀತಿಯ ವೈಜ್ಞಾನಿಕ ಮತ್ತು ಬೌದ್ಧಿಕ ವ್ಯಾಖ್ಯಾನಕ್ಕೆ ಭಾರತೀಯ ಭಾಷೆಗಳ ಹಿಂಜರಿಕೆ ಮತ್ತು ನಿರ್ಲಕ್ಷ್ಯವನ್ನು ಹೋಗಲಾಡಿಸಲು ನೆರವಾಗುವ ಕಾರ್ಯಕ್ರಮವನ್ನು ಪ್ರಾರಂಭಿಸಿದೆ.

Digitised by Bharatavani, CIIL

**ಅಂತಾರಾಷ್ಟ್ರೀಯ ಕಕ್ಷೆ:**

ಕಳೆದ ನಾಲ್ಕುವರ್ಷಗಳಲ್ಲಿ ಉನ್ನತಿಯನ್ನು ಸಾಧಿಸಿರುವ ಸಿಐಇಎಫ್‌ಎಲ್, ಇಂಗ್ಲಿಷ್ ಪರಿಣತಿಯನ್ನು ಸುಧಾರಿಸಿಕೊಳ್ಳಲು ಬಯಸುವ ವಿದೇಶಿ ವೃತ್ತಿಪರರಿಗೆ ಅತ್ಯಂತ ಪ್ರತಿಷ್ಠೆಯ ತರಬೇತಿ ಕೇಂದ್ರವಾಗಿ ಅಭಿವೃದ್ಧಿ ಹೊಂದಿದೆ. ಇಂಗ್ಲಿಷಿನ ವಿಶ್ವವ್ಯಾಪಕತೆಯನ್ನು ಬಂಡವಾಳವಾಗಿಸಿಕೊಂಡು ಮತ್ತು ಜಗತ್ತಿನಾದ್ಯಂತ ಇಂಗ್ಲಿಷನ್ನು ಕಲಿಯುವ ನಿರ್ದಿಷ್ಟ ಶೈಕ್ಷಣಿಕ ಮತ್ತು ಉದ್ಯೋಗಪರ ಅಗತ್ಯಗಳು ಉದಯಗೊಂಡುದರಿಂದ ಸಂಸ್ಥೆಯು ಇಂಗ್ಲಿಷಿನಲ್ಲಿ ಪರಿಣತಿಯ ಪಠ್ಯಕ್ರಮಗಳನ್ನು ಕಳಿಸಲು ಅಂತಾರಾಷ್ಟ್ರೀಯ ತರಬೇತಿ ಕಾರ್ಯಕ್ರಮವನ್ನು ನಿಗದಿಪಡಿದೆ. ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿದ್ದು, ಜಗತ್ತಿನಾದ್ಯಂತ ಯಶಸ್ವಿಯಾಗಿದ್ದು, ಜಗತ್ತಿನಾದ್ಯಂತ 25 ಕ್ಕಿಂತಲೂ ಅಧಿಕ ದೇಶಗಳ ನೂರಾರು ವಿದೇಶಿ ವೃತ್ತಿಪರರು ಸಂಸ್ಥೆಗಳಲ್ಲಿ ಇಂಗ್ಲಿಷ್ ಗ್ರಾಹಕೀಯ ಪಠ್ಯಕ್ರಮಗಳಿಗೆ ಹಾಜರಾಗಲು ಅವಕಾಶವನ್ನು ಕಲ್ಪಿಸಿದೆ. ಅನೇಕ ಸಿಐಎಸ್ ದೇಶಗಳೊಂದಿಗೆ ಮತ್ತು ಯುರೋಪು ಸಂಯುಕ್ತ ಒಕ್ಕೂಟದ ಅವಿಗ್ನಾನ್, ಅಲ್ಗರ್ವೆ ಮತ್ತು ಅಲ್ಕಲದಂತಹ ವಿಶ್ವವಿದ್ಯಾಲಯಗಳೊಂದಿಗೆ ಎಮ್‌ಒಯು (MOU) ಸಹಿ ಹಾಕಲಾಗಿದೆ. ಐಟಿಪಿಯ ಬಹುಮುಖ್ಯ ಉಪಶಾಖೆಯು ಹನೊಯ್, ವಿಯೆಟ್ನಾಮ್‌ನಲ್ಲಿ ಸಿಐಇಎಫ್‌ಎಲ್‌ನ ಹಿರಿಯ ಸಹೋದ್ಯೋಗಿಯೋರ್ವರ ಮಾರ್ಗದರ್ಶನದಲ್ಲಿ ಇಂಡಿಯನ್ ಸೆಂಟರ್ ಫಾರ್ ಇಂಗ್ಲಿಷ್‌ನ್ನು ಸ್ಥಾಪಿಸಲಾಗಿದೆ. ಶ್ರೀಲಂಕಾ ಸರಕಾರದ ವಿನಂತಿಯ ಮೇರೆಗೆ ಇದೇ ರೀತಿಯ ಕೇಂದ್ರವನ್ನು ಕೊಲೊಂಬೊದಲ್ಲಿ ಕೂಡಾ ಸಿಐಇಎಫ್‌ಎಲ್ ಸ್ಥಾಪಿಸಲಿದೆ.

**ಸಾಂಸ್ಕೃತಿಕ ಕಕ್ಷೆ:**

ಸುಮಾರು 19ನೇ ಶತಮಾನದ ಪ್ರಾರಂಭ ಕಾಲದ ಹಳೆ ಬಾವಿಯೊಂದನ್ನು ಸಂಗೀತ ರಂಗವಾಗಿ ಮತ್ತು ವರ್ತುಲ ರಂಗಮಂದಿರವಾಗಿ ಪರಿವರ್ತಿಸಲಾಗಿದೆ. ಈ ಚಾರಿತ್ರಿಕ 'ಬಾವಿ'ಯಲ್ಲಿ ಅನೇಕ ಪ್ರಸಿದ್ಧ ಕಲಾವಿದರು ಪ್ರದರ್ಶನ ನೀಡಿದ್ದಾರೆ. ಇನ್ನೊಂದು ಪ್ರಮುಖ ಬೆಳವಣಿಗೆಯೆಂದರೆ ಈ ಬಾವಿಯ ಹತ್ತಿರವೇ ಅಪೂರ್ವ ವಸ್ತುಸಂಗ್ರಹಾಲಯವೊಂದನ್ನು ತೆರೆಯಲು ನಿರ್ಧಾರ ಕೈಗೊಳ್ಳಲಾಗಿದೆ. ಜಗದೀಶ್ ಮಿತ್ತಲ್ ಟ್ರಸ್ಟ್‌ನ ಸಹಯೋಗದೊಂದಿಗೆ ಪ್ರಾರಂಭಿಸಲಾಗುವ ಈ ವಸ್ತುಸಂಗ್ರಹಾಲಯದಲ್ಲಿ ಬಹುಮುಖ್ಯವಾದ ಶ್ರವ್ಯ ಮತ್ತು ದೃಶ್ಯ ಸಾಮಗ್ರಿಗಳು, ಕಿರು ವರ್ಣಚಿತ್ರಗಳು, ಮತ್ತು ಅಪರೂಪದ ಕಲಾವಸ್ತುಗಳನ್ನು ಇಡಲಾಗುವುದು. ಇದು ಸಂಸ್ಥೆಯ ಸಾಂಸ್ಕೃತಿಕ ಅಧ್ಯಯನದ ಗುಣಮಟ್ಟವನ್ನು ಹೆಚ್ಚಿಸಲಿದೆ.

ಅತ್ಯಂತ ಸುಂದರವಾದ ಸಂಸ್ಥೆಯ ಆವಾರವು ಸ್ಥಳೀಯ ನಿವಾಸಿಗಳಿಂದ ಎರಡು ಕಾರಣಗಳಿಂದಾಗಿ ಪ್ರಶಂಸೆಯನ್ನು ಗಳಿಸಿದೆ. ಸ್ವತಃ ಉಪಕುಲಪತಿಗಳು ಮುಖ್ಯಸ್ಥರಾಗಿರುವ ಆವಾರದ ಅಭಿವೃದ್ಧಿ ಸಮಿತಿ' (ಕ್ಯಾಂಪಸ್ ಡೆವಲಪ್‌ಮೆಂಟ್ ಕಮಿಟಿ)ಯು ಸಂಸ್ಥೆಯ ಪರಿಸರವನ್ನು ಎಲ್ಲರ ಕಣ್ಣಿಗೆ ಅತ್ಯಂತ ಮೋಹಕವಾಗಿ ಕಾಣುವಂತೆ ಇಟ್ಟುಕೊಂಡಿರುವುದಲ್ಲದೆ, ಇದರ ಆವಾರದ ನೇರ ನಡುಭಾಗದಲ್ಲಿಯೇ ಇರುವ ಅಪರೂಪದ ಕಿರುಕಾಡನ್ನು ಸಂರಕ್ಷಿಸುವ ಆಶ್ವಾಸನೆಯನ್ನು ಕೂಡಾ ನೀಡಿದೆ. ಎರಡನೆಯ ಆಕರ್ಷಣೆ ಎಂದರೆ, ಅತ್ಯಂತ ಮೋಹಕವಾದ ಚಲನಚಿತ್ರ ಕ್ಲಬ್, ಇದನ್ನು ಬಹುತೇಕವಾಗಿ ಕೆಲವು ಉದ್ಯಮಶೀಲ ಪಾಲುದಾರರು ನಡೆಸುತ್ತಾರೆ. ಇಲ್ಲಿ ಭಾರತ, ಯುರೋಪು ಮತ್ತು ಅಮೇರಿಕೆಯ ಕೆಲವು ಅತ್ಯಂತ ಉತ್ತಮ ಚಿತ್ರಗಳು ಪ್ರದರ್ಶನಗೊಳ್ಳುತ್ತವೆ.

**ಭವಿಷ್ಯದ ಕಕ್ಷೆ:**

ಈ ಮೊದಲು ಉಲ್ಲೇಖಿಸಿರುವ ಸಿಐಇಎಫ್‌ಎಲ್‌ನ ಚರಿತ್ರೆಯ ಚಿತ್ರಣದಲ್ಲಿನ ಹಲವು ಮೈಲಿಗಲ್ಲುಗಳು ಎರಡು ಬಗೆಯ ಪ್ರಾಮುಖ್ಯಗಳನ್ನು ಹೊಂದಿವೆ: ಇವು ಇನ್ನು ಮುಂದಿನ ಉದ್ದೇಶಗಳ ಸೂಚಕಗಳು ಮಾತ್ರವಲ್ಲ, ಉತ್ತಮ ರೀತಿಯಿಂದ ಮುನ್ನಡೆ ಸಾಧಿಸಿದ ಜನಾಂಗದ ಮಾನದಂಡಗಳು ಕೂಡಾ ಆಗಿವೆ. ಈ ಹಿನ್ನೆಲೆಯಲ್ಲಿ ಈ ಕೆಳಗಿನ ಯೋಜನೆಗಳನ್ನು ಆಲೋಚಿಸಲಾಗಿದೆ:

* ಇಂಗ್ಲಿಷ್ ಕಲಿಸುವಿಕೆಗಾಗಿ ದೇಶದಲ್ಲಿ ಹೆಚ್ಚಿನ ಪ್ರಾದೇಶಿಕ ಕೇಂದ್ರಗಳನ್ನು ಮತ್ತು ವಿಯೆಟ್ನಾಮ್, ಶ್ರೀಲಂಕಾದಂತಹ ದೇಶಗಳಲ್ಲಿ ಬೋಧನೆಗಾಗಿ ಅಂತಾರಾಷ್ಟ್ರೀಯ ಕೇಂದ್ರಗಳನ್ನು ಸ್ಥಾಪಿಸುವುದರ ಮೂಲಕ ಸಿಐಇಎಫ್‌ಎಲ್‌ನ ಪರಿಣತಿಯ ಭಾರತ ಮತ್ತು ವಿದೇಶಿ ಗ್ರಾಹಕರಿಗೆ ದೊರೆಯುವಂತೆ ಮಾಡುವುದು;
* ದೇಶದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಇತರ ದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಇಂಗ್ಲಿಷ್ ಕೇಂದ್ರಗಳಿಗೆ ನೌಕರವರ್ಗವನ್ನು ನಿಯಮಿಸಲು ಸಿಐಇಎಫ್‌ಎಲ್‌ಗೆ ನೆರವಾಗುವಂತೆ ಮಾನ್ಯತೆ ಪಡೆದ ಇಂಗ್ಲಿಷ್ ಶಿಕ್ಷಕರ ದೊಡ್ಡ ಪಡೆಯೊಂದನ್ನು ನಿರ್ಮಿಸುವ ಯೋಜನೆಯನ್ನು ರೂಪಿಸುವುದು;
* ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಸಹಭಾಗಿ ವ್ಯಾಸಂಗಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ಪದವಿಗಳ ಜಂಟಿಪ್ರದಾನಕ್ಕಾಗಿ ಇನ್ನೂ ಹೆಚ್ಚಿನ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಮತ್ತು ಶೈಕ್ಷಣಿಕ ಏಜೆನ್ಸಿಗಳೊಂದಿಗೆ ಔಪಚಾರಿಕ ಶಿಕ್ಷಣ ಸಂಬಂಧಗಳನ್ನು ಸ್ಥಾಪಿಸುವುದು; ಮತ್ತು
* ಕಲಿಸುವಿಕೆ ಮತ್ತು ಪರೀಕ್ಷಾವಿಧಾನಗಳನ್ನು ಗ್ರಾಹಕೀಯ, ಪ್ರಯೋಜನಾತ್ಮಕ, ನಿರ್ದಿಷ್ಟ ಉದ್ದೇಶದ ಸಮಾಲೋಚನಾ ಕಾರ್ಯಕ್ರಮಗಳನ್ನು ಅಳವಡಿಸುವುದರ ಮೂಲಕ ಹೆಚ್ಚು ಆಕ್ರಮಣಶೀಲವಾಗಿ ಹಣವನ್ನು ಸಂಗ್ರಹಿಸುವುದು.

ಆಧಾರ: Encyclopedia Indian Education (NCERT Publication, New Delhi)

ಅನು: ಡಾ. ಗೀತಾ ಶೆಣೈ

Digitised by Bharatavani, CIIL

## ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ

ಕೇಂದ್ರ ಮಾಧ್ಯಮಿಕ ಶಿಕ್ಷಣ ಮಂಡಳಿಯು ನವದೆಹಲಿಯಲ್ಲಿ 1962 ರಲ್ಲಿ ಸ್ಥಾಪಿತವಾಯಿತು. ಇದರ ಅಧಿಕಾರ ವ್ಯಾಪ್ತಿಯು ಸಮಗ್ರ ಭಾರತವನ್ನು ಒಳಗೊಂಡಿದೆ. ಇದೊಂದು ಸ್ವಾಯುತ್ತತೆಯುಳ್ಳ ಮಂಡಳಿ. ಇದು ಸೊಸೈಟಿ ಆಫ್ ರಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ರೆಜಿಸ್ಟ್ರಾರರಿಂದ ರಚಿತವಾಗಿದೆ.

ಪ್ರಮುಖ ಚಟುವಟಿಕೆಗಳು ಮತ್ತು ಉದ್ದೇಶಗಳು:

- ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸ, ಅದರಂತೆ ಅವರನ್ನು ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಸುವುದು.
- 10ನೇ ಮತ್ತು 12ನೇ ವರ್ಗಕ್ಕೆ ಶೈಕ್ಷಣಿಕ ಕೊನೆ ಅವಧಿಯಲ್ಲಿ ಸಂಯೋಜಿತ ಶಾಲೆಗಳಲ್ಲಿ ಪರೀಕ್ಷೆಗಳನ್ನು ನಡೆಸಿ ಯಶಸ್ವಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡುವುದು.
- ಪಾಲಕರು ಕೇಂದ್ರ ಸರಕಾರದ ಉದ್ಯೋಗದಲ್ಲಿದ್ದಾಗ ಅವರು ವರ್ಗಾವಣೆಗೊಂಡಾಗ ಅವರ ಮಕ್ಕಳಿಗೆ ಶೈಕ್ಷಣಿಕ ಅಗತ್ಯತೆಯನ್ನು ತುಂಬುವುದು.
- ಕೋರ್ಸಿನ ಪರೀಕ್ಷೆಗಳನ್ನು ಉತ್ತಮವಾಗಿ ನಿರ್ದೇಶಿಸುವುದು.
- ಸಂಯೋಜಿತ ಸಂಸ್ಥೆಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದು.

**ಈ ಕೆಳಗಿನ ಪ್ರಮುಖ ಅಂಶಗಳಿಗೆ ಒತ್ತು ನೀಡುವುದು:**

1. ಕಲಿಕೆ–ಕಲಿಸುವಿಕೆ ವಿಧಾನದಲ್ಲಿ ವಿದ್ಯಾರ್ಥಿಗಳು ಸ್ನೇಹಪರತೆಯಿಂದ ಮತ್ತು ವಿದ್ಯಾರ್ಥಿಕೇಂದ್ರಿತದಿಂದ ಕ್ರಿಯಾ ಮಾದರಿ ರೀತಿಯಲ್ಲಿ ನವೀನಗೊಳಿಸುವುದು.
2. ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಪ್ರಾಯೋಗಿಕತೆ ಮೂಲಕ ಸುಧಾರಿಸುವುದು.
3. ಉದ್ಯೋಗಪರ ತರಬೇತಿ ಮತ್ತು ಅಂತರ್ಗತ ಉದ್ಯೋಗದ ಕುರಿತು ಕೌಶಲವನ್ನು ಕಲಿಯುವುದು.
4. ಶಿಕ್ಷಕರನ್ನು ಮತ್ತು ಆಡಳಿತಗಾರರನ್ನು ಸೇವಾವಧಿ ತರಬೇತಿ ಕಾರ್ಯಕ್ರಮಗಳ ಮೂಲಕ ಉದಾ: ಕಾರ್ಯಾಗಾರ, ವಿಚಾರ ಸಂಕಿರಣ ಮುಂತಾದವುಗಳ ಮೂಲಕ ನಿರಂತರವಾಗಿ ಶಿಕ್ಷಣಶಾಸ್ತ್ರದ ಕೌಶಲಗಳನ್ನು ಉನ್ನತೀಕರಣ ಗೊಳಿಸುವುದು.

**ಪಠ್ಯಕ್ರಮ:**

- ಇದು ರಾಷ್ಟ್ರಮಟ್ಟದ ಪಠ್ಯಕ್ರಮ ಹಾಗೂ ಪಠ್ಯಸೂಚಿಯನ್ನು ಒಳಗೊಂಡಿರುತ್ತದೆ
- ಪ್ರವೇಶವು 6ನೇ ತರಗತಿಯಿಂದ ಪ್ರಾರಂಭವಾಗಿ 12ನೇ ತರಗತಿಗೆ ಮುಕ್ತಾಯವಾಗುವುದು.
- ಪಠ್ಯಕ್ರಮ ಅಭಿವೃದ್ಧಿಪಡಿಸುವುದು ಮತ್ತು ಕಾಲೋಚಿತವನ್ನಾಗಿ ಮಾಡುವುದು.
- ಇದು ಮಾನವ ಸಂಪನ್ಮೂಲ ಅಭಿವೃದ್ಧಿಗೆ ನೇರವಾಗಿ ಒಳಪಟ್ಟಿದ್ದು ಇದಕ್ಕೆ ಸಂಬಂಧಿಸಿದಂತೆ ಇದು ಕೇಂದ್ರೀಯ ವಿದ್ಯಾಲಯ ಸಮಿತಿ ಹಾಗೂ ಎನ್.ಸಿ.ಇ.ಆರ್.ಟಿ ಸಮಿತಿಗೆ ಒಳಗೊಂಡಿರುತ್ತದೆ ಮತ್ತು ಇದು ಎನ್.ಸಿ.ಇ.ಆರ್.ಟಿ ಯ ಪಠ್ಯಪುಸ್ತಕಗಳನ್ನು ತಯಾರಿಸುತ್ತದೆ.
- ಇದು ರಾಷ್ಟ್ರಮಟ್ಟದ ವ್ಯಾಪ್ತಿಗೆ ಒಳಪಟ್ಟಿರುವುದು.

**ಬೋಧನೆ:**

- ವಿದ್ಯಾರ್ಥಿ ಕೇಂದ್ರೀಕೃತ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.
- ವಿದ್ಯಾರ್ಥಿಗಳ ಚಟುವಟಿಕೆಗೆ ಮತ್ತು ಪ್ರಾಯೋಗಿಕ ಅನುಭವಕ್ಕೆ ಹೆಚ್ಚು ಆದ್ಯತೆ ನೀಡಲಾಗುವುದು.
- ಬೋಧನೆ ಮತ್ತು ಕಲಿಕಾ ಪ್ರಕ್ರಿಯೆ ಮುಕ್ತವಾದ ವಾತಾವರಣಕ್ಕೆ ಆಸ್ಪದ ಕಡಿಮೆ ಇರುವುದು.
- ಶಿಕ್ಷಕರ–ವಿದ್ಯಾರ್ಥಿಗಳ ನಡುವಿನ ಪರಸ್ಪರಾನುಕ್ರಿಯೆ ಅತ್ಯಂತ ನಿಕಟವಾಗಿರುವುದು.
- ಆಂಗ್ಲ ಮಾಧ್ಯಮ ಮತ್ತು ಪ್ರಾದೇಶಿಕ ಭಾಷೆಯ ಮೂಲಕ ಬೋಧನೆ.

**ಪರೀಕ್ಷೆ:**

- ಇದು ವರ್ಷದ ಕೊನೆಗೆ ಪರೀಕ್ಷೆ ನಡೆಸುವ ಪದ್ಧತಿಯನ್ನು ಒಳಗೊಂಡಿರುತ್ತದೆ.
- ಪ್ರಶ್ನೆಪತ್ರಿಕೆ ವಸ್ತುನಿಷ್ಠ, ಕಿರುಉತ್ತರ ಮಾದರಿ ಹಾಗೂ ಪ್ರಬಂಧ ಮಾದರಿ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
- ಇಲ್ಲಿ ಉತ್ತೀರ್ಣತೆಗೆ 40% ಅಂಕಗಳು ಇರುತ್ತವೆ. ಲಿಖಿತ ಪರೀಕ್ಷೆಗೆ ಹೆಚ್ಚು ಒತ್ತು ನೀಡಿ ಪ್ರೊಜೆಕ್ಟ್ ಕಾರ್ಯ ಹಾಗೂ ದತ್ತಕಾರ್ಯ ಮತ್ತು ವಿಷಯ ಸಂಬಂಧಿತ ಚಟುವಟಿಕೆಗಳಿಗೆ ಆಂತರಿಕ ಅಂಕ ನೀಡಲಾಗುವುದು.
- ಪರೀಕ್ಷೆ ಏರ್ಪಡಿಸಿ ಅರ್ಹತಾ ಪ್ರಮಾಣ ಪತ್ರವನ್ನು ನೀಡುತ್ತದೆ.
- ಇಲ್ಲಿ 12ನೇ ತರಗತಿ ಮುಗಿಸಿದ ನಂತರ ಐ.ಐ.ಟಿ, ಐ.ಐ ಮತ್ತು ಎಂ.ಎ ಮುಂತಾದ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.
- ಇಲ್ಲಿ ಬಿ.ಇಡಿ ಹಾಗೂ ಪಿ.ಜಿ ಕೋರ್ಸ್‌ಗಳನ್ನು ಪಡೆದಿರಬೇಕಾಗುತ್ತದೆ. ಅವುಗಳನ್ನು ಪಿ.ಜಿ.ಟಿ ಮತ್ತು ಟಿ.ಜಿ.ಟಿ ಎಂದು ಕರೆಯುತ್ತಾರೆ.
- ಬೇರೆ ಯಾವುದಾದರೂ ಪರೀಕ್ಷೆ ನಡೆಸಲು ಆಜ್ಞಾಪಿಸಿದಾಗ ಅವುಗಳನ್ನು ಸಹ ನಡೆಸುವುದು.

Digitised by Bharatavani, CIIL

**ಸಂಯೋಜನೆ:**

- ಶಿಕ್ಷಣ ಸಂಸ್ಥೆಗಳಿಗೆ ಸಂಯೋಜನೆ ನೀಡುವುದು.
- ಇದು 1989ರ ಒಳಗಾಗಿ ಸುಮಾರು 2,816 ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಸಂಯೋಜನೆ ನೀಡಿತ್ತು.
- ಇದು ಚಂಡಿಘಡ, ಅಂಡಮಾನ್ ಮತ್ತು ನಿಕೋಬಾರ್ ನಡುಗಡ್ಡೆಗಳು, ಅರುಣಾಚಲ ಪ್ರದೇಶಗಳು, ಎಲ್ಲಾ ಕೇಂದ್ರೀಯ ವಿದ್ಯಾಲಯಗಳು, ನವೋದಯ ಶಾಲೆಗಳು, ಮಿಲಿಟರಿ ಶಾಲೆಗಳಿಗೆ, ಟಿಬೆಟನ್ ಶಾಲೆಗಳಿಗೆ, ಸಾರ್ವಜನಿಕ ಶಾಲೆಗಳಿಗೆ, ಖಾಸಗಿ ಶಾಲೆಗಳಿಗೆ ಹೀಗೆ ಅನೇಕ ಶಾಲೆಗಳಿಗೆ ಸಂಯೋಜನೆ ನೀಡಿದೆ.
- ಇದು ರೂಪಿಸುವ ಆದರ್ಶಗಳನ್ನು ಯಾವ ಶಾಲಾ ಸಂಸ್ಥೆಗಳು ಪೂರೈಸುತ್ತವೆಯೋ ಅಂತಹವುಗಳಿಗೆ ಸುಲಭವಾಗಿ ಸಂಯೋಜನೆ ನೀಡುವುದು.
- 1962 ರಲ್ಲಿ 309 ಶಾಲೆಗಳಿದ್ದರೆ, 2007ರ ಪ್ರಕಾರ ಒಟ್ಟು 8,979 ಶಾಲೆಗಳಿವೆ. ಅದರಲ್ಲಿ ಕೇಂದ್ರೀಯ ವಿದ್ಯಾಲಯಗಳು, ಸರ್ಕಾರಿ ಶಾಲೆಗಳು, ಸ್ವತಂತ್ರ ಶಾಲೆಗಳು, ಜವಾಹರ್ ನವೋದಯ ವಿದ್ಯಾಲಯಗಳು ಮತ್ತು ಬೇರೆ ದೇಶಗಳಲ್ಲಿ ಕೂಡಾ ಇವೆ.

**ವಿಕೇಂದ್ರೀಕರಣ:** ಪರಿಣಾಮಕಾರಿ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಪ್ರಾದೇಶಿಕ ಕಛೇರಿಗಳನ್ನು ತೆರೆಯಲಾಯಿತು. ಉದಾ: ಅಲಹಾಬಾದ್, ಅಜ್ಮೀರ್, ಚೆನ್ನೈ, ಗೌಹಾತಿ, ಪಂಚಕುಳಾ, ಪಾಟ್ನಾ, ಭುವನೇಶ್ವರ್ ಮತ್ತು ದೆಹಲಿ. ಭಾರತದ ಹೊರಗೂ ಶಾಲೆಗಳನ್ನು ಸ್ಥಾಪಿಸಲಾಗಿದೆ. ಪ್ರಧಾನ ಕೇಂದ್ರದಿಂದ ಪ್ರಾದೇಶಿಕ ಕಛೇರಿಗಳಿಗೆ ಅಂತರ್ಜಾಲದ ಮೂಲಕ ದಿನವೂ ಮಾಹಿತಿಯನ್ನು ಪೂರೈಸುತ್ತದೆ. ತಿದ್ದುಪಡಿ, ಬದಲಾವಣೆ, ಕಾನೂನು/ನೀತಿ ರೂಪಿಸುವುದು ಹಾಗೂ ಅವುಗಳ ಅನುಷ್ಠಾನದ ಕುರಿತು ಚರ್ಚಿಸುವುದು, ಎಲ್ಲವೂ ಕೇಂದ್ರ ಕಛೇರಿ ಮೂಲಕ ನಡೆಯುವುದು. ಆಡಳಿತ ಸಂಯೋಜನೆ ಮತ್ತು ಪೂರ್ವ ಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಗಳನ್ನು ಆಯಾ ಪ್ರಾದೇಶಿಕ ಕೇಂದ್ರದವರು ನಿರ್ವಹಿಸುತ್ತಾರೆ.

**ಸಂಘಟನೆ:** ಈ ಮಂಡಳಿಯು ಸಂಪೂರ್ಣವಾಗಿ ಅಧಿಕಾರಯುತವಾಗಿ ಮೇಲ್ವಿಚಾರಣೆ ಮಾಡುವುದು. ಇದರಲ್ಲಿ ಭಾರತ ಸರ್ಕಾರದ ಶಿಕ್ಷಣ ಕಾರ್ಯದರ್ಶಿಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಇರುತ್ತಾರೆ. ಈ ಮಂಡಳಿಗಳ ಅಭಿವೃದ್ಧಿಗಾಗಿ, ಸಲಹೆಗಾಗಿ ವಿವಿಧ ಉಪ ಮಂಡಳಿಯನ್ನು ಮಾಡಿರುತ್ತಾರೆ. ಅದರಲ್ಲಿ ಮಂಡಳಿಯು ಕಾಯಿದೆ ಮತ್ತು ಕಾನೂನುಗಳನ್ನು ರೂಪಿಸುತ್ತದೆ. ಉಳಿದ ಕಮಿಟಿಗಳು ಅದರ ಒಪ್ಪಿಗೆ ಪಡೆದು ಕಾರ್ಯ ನಿರ್ವಹಿಸುವುದು.

**ಮಂಡಳಿಯ ಸ್ವರೂಪ:**

ಚೇರ್ಮನ್ನರು ಮುಖ್ಯ ಕಾರ್ಯನಿರ್ವಾಹಕರು. ಇವರ ಸಹಾಯಕರಾಗಿ ಐದು ಜನರು ಕಾರ್ಯ ನಿರ್ವಹಿಸುತ್ತಾರೆ – (1) ಕಾರ್ಯದರ್ಶಿಗಳು, (2) ನಿರ್ದೇಶಕರು (ಶೈಕ್ಷಣಿಕ), (3) ಪರೀಕ್ಷಾ ನಿಯಂತ್ರಣಾಧಿಕಾರಿಗಳು, (4) ಮುಖ್ಯಸ್ಥರು ಎಜ್ಯುಸಾಟ್, ಆರ್ ಮತ್ತು ಡಿ ವೃತ್ತಿಶಿಕ್ಷಣ ಹಾಗೂ (5) ಮುಖ್ಯಸ್ಥರು (ವಿಶೇಷ ಪರೀಕ್ಷೆ), ಯೋಜನೆ ಮತ್ತು ತರಬೇತಿ.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಮಂಡಳಿ ನಿಯಂತ್ರಣಾಧಿಕಾರಿಗಳು. ಅವರೇ ಚೇರ್ಮನ್ನರನ್ನು ಮತ್ತು ಮುಖ್ಯಸ್ಥರನ್ನು ನೇಮಿಸುತ್ತಾರೆ.

**ಸಿ.ಬಿ.ಎಸ್.ಸಿ. ಕಾರ್ಯದರ್ಶಿಗಳು:** ಆಡಳಿತ ನಡೆಸುವಲ್ಲಿ ಲೆಕ್ಕ ಹಾಗೂ ತಪಾಸಣೆ ಮಾಡುವಲ್ಲಿ ಕಾರ್ಯೋನ್ಮುಖರಾಗಿರುತ್ತಾರೆ. ಸಾರ್ವಜನಿಕ ಸಂಬಂಧಗಳನ್ನು ಬೆಳೆಸಿ ನಿಯಮಬದ್ಧವಾಗಿ ಶಾಲೆಗಳನ್ನು ಸಂಯೋಜನೆಗೆ ಒಳಪಡಿಸಿ ಅನುದಾನ ನೀಡುವುದು ಇವರ ಜವಾಬ್ದಾರಿಯಾಗಿದೆ.

**ನಿರ್ದೇಶಕರು (ಶೈಕ್ಷಣಿಕ):** ಇವರು ಶೈಕ್ಷಣಿಕ ಅಭಿವೃದ್ಧಿ ಘಟಕದ ಮುಖ್ಯಸ್ಥರು. ಈ ಘಟಕದ ಮುಖ್ಯ ಕಾರ್ಯವೆಂದರೆ, ಮಾಧ್ಯಮಿಕ ಹಂತ ಮತ್ತು ಉನ್ನತ ಮಾಧ್ಯಮಿಕ ಹಂತದಲ್ಲಿ ಎಲ್ಲ ವಿಷಯದಲ್ಲೂ ಶೈಕ್ಷಣಿಕ ಮತ್ತು ವೃತ್ತಿಪರ ಕೋರ್ಸುಗಳ ಕುರಿತು ಪಠ್ಯಕ್ರಮ ಅಭಿವೃದ್ಧಿಗೊಳಿಸುವುದು. ಶಿಕ್ಷಕರ ತರಬೇತಿಯ ಸಲುವಾಗಿ ಕಾರ್ಯಾಗಾರಗಳನ್ನು ಮತ್ತು ವಿದ್ಯಾರ್ಥಿಗಳ ಸಹಾಯಕ್ಕಾಗಿ ಕಲಿಕಾ ಸಾಮಗ್ರಿಗಳನ್ನು ತಯಾರಿಸುವ ಸಲುವಾಗಿ ಮಾರ್ಗದರ್ಶನ ನೀಡುವುದು. ಅದರಂತೆ ಪ್ರೌಢಶಿಕ್ಷಣಕ್ಕೆ, ಉನ್ನತ ಪ್ರೌಢಶಿಕ್ಷಣಕ್ಕೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳನ್ನು ಪ್ರಕಟಿಸುವುದು ಮತ್ತು ಶೈಕ್ಷಣಿಕವಾಗಿ ಯೋಜನಾಕಾರ್ಯದ ಕುರಿತು ಮೇಲುಸ್ತುವಾರಿ ಮಾಡುವುದು.

**ಪರೀಕ್ಷಾ ನಿಯಂತ್ರಣಾಧಿಕಾರಿಗಳು:** ಪರೀಕ್ಷೆಗೆ ಸಂಬಂಧಿಸಿದ ಎಲ್ಲ ಕಾರ್ಯಗಳ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅದರಂತೆ ಮುಖ್ಯವಾಗಿ ಪೂರ್ವಪರೀಕ್ಷೆ ಮತ್ತು ಸಾಧನಾ/ಅಂತಿಮ ಪರೀಕ್ಷೆ ನಡೆಸುವವರಾಗಿರುತ್ತಾರೆ. ಪ್ರಾದೇಶಿಕ ಕಛೇರಿಗಳಲ್ಲಿ ಈ ಪರೀಕ್ಷೆಗಳ ಪ್ರಮಾಣಪತ್ರ ಒದಗಿಸುವಲ್ಲಿ ಸಂಯೋಜನಾಧಿಕಾರಿಯಾಗಿ ಮತ್ತು ಅಖಿಲ ಭಾರತದ ವೈದ್ಯಕೀಯ ಮತ್ತು ದಂತವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಸುವ ಜವಾಬ್ದಾರಿಯುತ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

**ಮುಖ್ಯಸ್ತರು (ಎಜ್ಯುಸ್ಯಾಟ್ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ವೃತ್ತಿ ಶಿಕ್ಷಣ):** ಇವರು ಎಜ್ಯುಸ್ಯಾಟ್ ಮೂಲಕ ದೂರ ಶಿಕ್ಷಣವನ್ನು ಇಸ್ರೋ ಸಹಾಯದಿಂದ ನೀಡುವ ವ್ಯವಸ್ಥೆ ಮಾಡುತ್ತಾರೆ. ಮತ್ತು ವೃತ್ತಿ ವಿಷಯಗಳ ಪಠ್ಯಕ್ರಮ ವಿನ್ಯಾಸವನ್ನು ತಯಾರಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**ಮುಖ್ಯಸ್ಥರು (ವಿಶೇಷ ಶಿಕ್ಷಣ ಯೋಜನೆ ಮತ್ತು ಅಭಿವೃದ್ಧಿ):** ಇವರು ಅಖಿಲ ಭಾರತ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ ನಡೆಸುವರು ಮತ್ತು ಜವಾಹರ್ ನವೋದಯ ವಿದ್ಯಾಲಯಗಳ ಪರೀಕ್ಷೆಯನ್ನು ನಡೆಸಿ ಅವುಗಳಲ್ಲಿನ ಆಯ್ಕೆಯ ಜವಾಬ್ದಾರಿ ಇವರದಾಗಿರುತ್ತದೆ.

Digitised by Bharatavani, CIIL

**ಸಿ.ಬಿ.ಎಸ್.ಇ ಮಂಡಳಿ:**

**ಕಾರ್ಯಗಳು:**

1) ಹಣಕಾಸು ಶುಲ್ಕವನ್ನು ಪರಿಷ್ಕರಿಸುವುದು, ಪರೀಕ್ಷೆ ಮತ್ತು ಶಾಲಾ ಸಂಯೋಜನೆ ಕುರಿತು, ವೇತನ ಮತ್ತು ಅದರ ಕಾರ್ಯ ನಿರ್ವಹಿಸುವುದು.
2) ಪರೀಕ್ಷೆಗಳು ಪ್ರಶ್ನೆಪತ್ರಿಕೆ ತೆಗೆಯುವವರು, ಮಾಡರೇಟರರ ನೇಮಕಾತಿ. ಉತ್ತೀರ್ಣರಾಗಲು ಗರಿಷ್ಠ ಮತ್ತು ಕನಿಷ್ಠ ವರೆಗಳು/ಅಂಕಗಳು, ಪರೀಕ್ಷಾ ಅವಧಿ, ಪ್ರಶ್ನೆಪತ್ರಿಕೆಯ ಗೊಂದಲ/ತಕರಾರು ಮುಂತಾದವುಗಳನ್ನು ಪರೀಕ್ಷಿಸುವುದು.
3) ಪಠ್ಯಕ್ರಮ ಪಠ್ಯಕ್ರಮ ಕಮಿಟಿ ಶಿಫಾರಸ್ಸುಗಳನ್ನು ಸಂಯೋಜಿಸುವಿಕೆ, ಪಠ್ಯಕ್ರಮ ನವೀಕರಿಸುವುದು ಮತ್ತು ಉನ್ನತೀಕರಿಸುವುದು.
4) ಸಂಲಗ್ನತೆ ಸಂಸ್ಥೆಗಳಿಗೆ ಅನುದಾನ ನೀಡುವುದು, ಶಿಕ್ಷಕರ ಅರ್ಹತೆಯನ್ನು ಪರಿಗಣಿಸುವುದು, ಪೆನಲ್‌ಗಳ ಸಹಾಯದಿಂದ ಸಂಸ್ಥೆಯ ತಪಾಸಣೆ, ಕಾಯಿದೆಗಳನ್ನು ಜೋಡಿಸುವುದು ಅಥವಾ ಪರ್ಯಾಯ ನಿಯಮಗಳನ್ನು ರೂಪಿಸುವುದು.
5) ಪಿ.ಎಂ.ಟಿ ಅಖಿಲ ಭಾರತ ವೈದ್ಯಕೀಯ ಮತ್ತು ದಂತವೈದ್ಯಕೀಯ ಪ್ರವೇಶ ಪರೀಕ್ಷೆಯ ನಿರ್ವಹಣೆ ಬಗ್ಗೆ ಹಾಗೂ ಯೋಜನೆಗಳ ಕುರಿತು ಯಾವುದೇ ನೀತಿಯನ್ನು ಜಾರಿಗೊಳಿಸಲು ನಿರ್ಣಯ ಕೈಗೊಳ್ಳುವುದು.

–ಡಾ. ಐಹೊಳ್ಳಿ ವಿ.ಡಿ.

## ಕೇಂದ್ರೀಯ ವಿದ್ಯಾಲಯ ಶಾಲೆಗಳು

1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಕೇಂದ್ರಿಯ ವಿದ್ಯಾಲಯಗಳು 1962 ರಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಸ್ಥಾಪಿತವಾಗಿವೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತ ಬಂದಿರುವ ಈ ಶಾಲೆಗಳು ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಿಂದ ಪ್ರತಿ ಜಿಲ್ಲೆಗೊಂದರಂತೆ ಸ್ಥಾಪಿಸಲಾಗಿದೆ. ಪ್ರಸ್ತುತ 1ನೇ ತರಗತಿಯಿಂದ 12ನೇ ತರಗತಿಯವರೆತೆ ವರ್ಗಗಳು ನಡೆಯುತ್ತಿವೆ.

ಶೈಕ್ಷಣಿಕ ಚಟುವಟಿಕೆಗಳನ್ನೊಳಗೊಂಡ ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಪ್ರದರ್ಶನ, ಶೈಕ್ಷಣಿಕ ಪ್ರವಾಸ, ಸ್ಕೌಟ್ಸ್ ಮತ್ತು ಗೈಡ್ಸ್ ಮುಂತಾದವುಗಳನ್ನು ಒಳಗೊಂಡ ಅಂಶಗಳಿಗೆ ವಿಶೇಷ ಪ್ರಾಧಾನ್ಯತೆ ನೀಡಿರುವ ಈ ಕೇಂದ್ರಿಯ ವಿದ್ಯಾಲಯ ಶಾಲೆಗಳು ಇಂದು ಅತ್ಯಂತ ಸಮರ್ಥಕವಾಗಿ ಕಾರ್ಯನಿರ್ವಹಿಸುತ್ತಿವೆ.

### ಕೇಂದ್ರಿಯ ವಿದ್ಯಾಲಯದ ಉದ್ದೇಶಗಳು:

1. ವಿಶೇಷವಾಗಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಅತ್ಯಾಧುನಿಕ ಶಿಕ್ಷಣ ಹಾಗೂ ಉತ್ತಮ ಗುಣಮಟ್ಟದ ಸಂಸ್ಕೃತಿ ಒಳಗೊಂಡ ಮೌಲ್ಯಾಧಾರಿತ ಶಿಕ್ಷಣ ಕೊಡುವುದರ ಜೊತೆಗೆ ಹಲವು ಚಟುವಟಿಕೆಗಳನ್ನು ಮತ್ತು ಶಾರೀರಿಕ ಶಿಕ್ಷಣ ಕೊಡಲಾಗುವುದು.
2. ಮೇಲಿಂದ ಮೇಲೆ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವರ್ಗಾವಣೆಯಾಗುವ ನೌಕರರ ಮಕ್ಕಳಿಗೆ ಶಿಕ್ಷಣ ನೀಡುವುದು.
3. ಉತ್ತಮ ಗುಣಮಟ್ಟದ ಆಧುನಿಕ ಶಿಕ್ಷಣವನ್ನು ಒದಗಿಸುವುದು.
4. CBSE ಮತ್ತು NCERT ಯಂತಹ ಶಿಕ್ಷಣ ಸಂಸ್ಥೆಗಳೊಂದಿಗೆ ಕೂಡಿ ಪ್ರಾಯೋಗಿಕ ಮತ್ತು ತಂತ್ರಜ್ಞಾನ ಆಧಾರಿತ ಶಿಕ್ಷಣ ಒದಗಿಸುವುದು.
5. ಮಕ್ಕಳಲ್ಲಿ 'ನಾವೆಲ್ಲ ಭಾರತೀಯರು' ಎಂಬ ಭಾವನೆ ಮೂಡಿಸುವುದು ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಬೆಳೆಸುವುದು.
6. ತ್ರಿಭಾಷಾ ಸೂತ್ರವನ್ನು ಅನುಸರಿಸುವ ಮೂಲಕ ಮಕ್ಕಳಿಗೆ ಓದು, ಬರಹ ಕಲಿಯಲು ಅನುವು ಮಾಡಿಕೊಡಲಾಗುವುದು.
7. ಪ್ರತಿ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಅತ್ಯುತ್ತಮ ಗುಣಮಟ್ಟದ ಶಾಲಾ ಶಿಕ್ಷಣ ಅಭಿವೃದ್ಧಿಪಡಿಸುವ ಮತ್ತು ಅನುಭವಗಳನ್ನು, ಸೌಲಭ್ಯಗಳನ್ನು ಪರಸ್ಪರ ವಿನಿಮಯಿಸಿಕೊಳ್ಳುವ ಕೇಂದ್ರವಾಗಿರುವುದು.
8. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದು.
9. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುವ ರಕ್ಷಣಾದಳ, ಸೈನಿಕದಳ, ರೇಲ್ವೆ ಇಲಾಖೆ, ಬ್ಯಾಂಕ್ ನೌಕರರು ಇನ್ನೂ ಮುಂತಾದ ಇಲಾಖೆಗಳಲ್ಲಿರುವವರ ಮಕ್ಕಳಿಗೆ ಶಿಕ್ಷಣ ನೀಡುವುದು.
10. ಸಂಸ್ಕೃತಿಯ ಅಂಶವನ್ನು ಪುಷ್ಠಿಗೊಳಿಸಿ ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸುವುದು.

**ಕೇಂದ್ರಿಯ ವಿದ್ಯಾಲಯದ ಸೌಲಭ್ಯಗಳು**

ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಪ್ರಯೋಗಾಲಯದ ಸೌಲಭ್ಯಗಳು, ಗಣಕಯಂತ್ರ ಪ್ರಯೋಗಾಲಯ, ಕ್ರೀಡಾ ವಿಭಾಗ, ಗ್ರಂಥಾಲಯ ಸೌಲಭ್ಯ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕೊಠಡಿ (SUPW Room), ವೈದ್ಯಕೀಯ ಕೋಣೆ, ಸುವ್ಯವಸ್ಥಿತ ವರ್ಗಕೋಣೆಗಳು, ಚಟುವಟಿಕಾ ಕೋಣೆಗಳು, ವ್ಯವಸ್ಥಿತ ಆಟದ ಮೈದಾನ, ಸ್ಕೌಟ್ಸ್ ಮತ್ತು ಗೈಡ್ಸ್ ವ್ಯವಸ್ಥೆ. ಹೀಗೆ ಕೇಂದ್ರಿಯ ವಿದ್ಯಾಲಯವು ಎಲ್ಲ ಸೌಲಭ್ಯಗಳನ್ನು ಹೊಂದಿ ವಿದಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ದಾರಿದೀಪವಾಗಿದೆ. ಇದು ವಿದ್ಯಾರ್ಥಿಗಳಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಸಂಘಟಿಸುತ್ತದೆ. ಅಧ್ಯಕ್ಷರು, ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗದವರ ಹೊಂದಾಣಿಕೆ ಅವರ ಶ್ರಮ, ಬಲದಿಂದಾಗಿ ಇಂದು ಈ ವಿದ್ಯಾಲಯಗಳ ಗುಣಮಟ್ಟ ಹೆಚ್ಚುತ್ತಿದೆ.

Digitised by Bharatavani, CIIL

**ವಿಶೇಷ ಲಕ್ಷಣಗಳು**

ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದ ವಿದ್ಯಾಲಯಗಳಲ್ಲಿ ಕೇಂದ್ರೀಯ ವಿದ್ಯಾಲಯವೂ ಒಂದು. ಭಾರತ ದೇಶದಲ್ಲಿ 1,073 ಕೇಂದ್ರೀಯ ವಿದ್ಯಾಲಯ ಶಾಲೆಗಳಿವೆ (ವಿವರವನ್ನು ಮುಂದಿನ ಪುಟದಲ್ಲಿ ದಾಖಲಿಸಿದೆ). ಇದರ ಕೇಂದ್ರ ಕಛೇರಿ ನವದೆಹಲಿಯಲ್ಲಿದೆ. ಇದು ಕೇವಲ ಭಾರತ ದೇಶದಲ್ಲಷ್ಟೇ ಅಲ್ಲದೆ ಪ್ರಪಂಚದ ಇತರ ಭಾಗಗಳಲ್ಲಿಯೂ ತನ್ನ ಶಾಖೆಗಳನ್ನು ತೆರೆದಿದೆ. ಉದಾ: ಮಾಸ್ಕೋ ಕೇಂದ್ರೀಯ ವಿದ್ಯಾಲಯದ ಪ್ರಾದೇಶಿಕ ಕಛೇರಿ ಬೆಂಗಳೂರಿನಲ್ಲಿದೆ. ಕರ್ನಾಟಕ, ಗೋವಾ, ಕೇರಳ ಈ ಮೂರು ರಾಜ್ಯಗಳಲ್ಲಿನ ವಿದ್ಯಾಲಯಗಳು ಬೆಂಗಳೂರು ಪ್ರಾದೇಶಿಕ ಕಛೇರಿಯ ವ್ಯಾಪ್ತಿಗೆ ಒಳಪಟ್ಟಿವೆ–ಕರ್ನಾಟಕದಲ್ಲಿ 39 ಕೇಂದ್ರೀಯ ವಿದ್ಯಾಲಯಗಳಿವೆ. ಇವೆಲ್ಲ ಬೆಂಗಳೂರು ಕಛೇರಿಯ ಆಡಳಿತಕ್ಕೆ ಒಳಪಟ್ಟಿವೆ (ವಿವರವನ್ನು ಮುಂದಿನ ಪುಟದಲ್ಲಿ ದಾಖಲಿಸಿದೆ) ಈ ವಿದ್ಯಾಲಯದ ವಿದ್ಯಾರ್ಥಿಗಳಿಗೆ CBSE ಪಠ್ಯಕ್ರಮವನ್ನು ಬೋಧಿಸಲಾಗುತ್ತದೆ–ಆಯಾ ವಿದ್ಯಾಲಯದ ಜವಾಬ್ದಾರಿಯನ್ನು ಆಯಾ ವಿದ್ಯಾಲಯದ ಪ್ರಾಂಶುಪಾಲರು ವಹಿಸಿಕೊಂಡಿರುತ್ತಾರೆ–ಪ್ರತಿ ವಿದ್ಯಾಲಯದ ಮಂಡಳಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಆದರೆ ಈ ವಿಧಾನ ಇನ್ನು ಕೆಲವೆಡೆಗಳಲ್ಲಿ ಭಿನ್ನವಾಗಿರುತ್ತದೆ. ತಾತ್ಕಾಲಿಕ ಶಿಕ್ಷಕರ ನೇಮಕಾತಿ ಮಾಡಬೇಕಾದ ಅವಶ್ಯಕತೆ ಇದ್ದಾಗ ಜಿಲ್ಲಾಧಿಕಾರಿಗಳು ಹಾಗೂ ಪ್ರಾಂಶುಪಾಲರು ಕೂಡಿಕೊಂಡು ಮಾಡುತ್ತಾರೆ.

**ಕೇಂದ್ರೀಯ ವಿದ್ಯಾಲಯದ ಇತರ ಕಾರ್ಯಚಟುವಟಿಕೆಗಳು**

- ಶಿಕ್ಷಕರ–ಪಾಲಕರ ಸಭೆಗಳನ್ನು ಏರ್ಪಡಿಸುವುದು.
- ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷಾ ಜ್ಞಾನವನ್ನು ನೀಡಲು ಸ್ಪೋಕನ್ ಇಂಗ್ಲಿಷ್ (Spoken English) ತರಗತಿಗಳನ್ನು ನಡೆಸುವುದು.
- ಪ್ರತಿದಿನ ಬೆಳಿಗ್ಗೆ ಯೋಗಾಭ್ಯಾಸ ಮಾಡಿಸುವುದು.
- ವ್ಯಕ್ತಿತ್ವ ಬೆಳವಣಿಗೆ (Personality Development)ಗೆ ಸಹಾಯಕವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಉದ್ಯೋಗದ ಕುರಿತು ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಲು ಕಾರ್ಯಕ್ರಮ ಏರ್ಪಡಿಸುವುದು.
- ತಂತ್ರಜ್ಞಾನ ಆಧಾರಿತ ತರಗತಿಗಳನ್ನು ನಡೆಸುವುದು.
- ಕ್ಷೇತ್ರದರ್ಶನ ಹಾಗೂ ಪ್ರವಾಸಗಳನ್ನು ಹಮ್ಮಿಕೊಳ್ಳುವುದು.

**ಕೇಂದ್ರೀಯ ವಿದ್ಯಾಲಯದ ಪ್ರವೇಶಾತಿ ವಿಧಾನ**

- ಮಗು ವಿದ್ಯಾಲಯಕ್ಕೆ ಪ್ರವೇಶ ಪಡೆಯಲು ಸೆಪ್ಟೆಂಬರ್ 30ಕ್ಕೆ 4 ವರ್ಷ ತುಂಬಿರಬೇಕು. ಅಂತಹ ಮಗುವಿಗೆ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ.
- ಒಂದನೇ ತರಗತಿಗೆ ಪ್ರವೇಶ ಪಡೆಯಲು ಮಗುವಿಗೆ 5 ವರ್ಷ ತುಂಬಿರಬೇಕು.
- ವರ್ಗಾಂತರ ಹೊಂದಿದ ಮತ್ತು ನಿವೃತ್ತಿ ಹೊಂದಿದ ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗೆ ಪ್ರವೇಶಾವಕಾಶವಿದೆ.

**ಮೀಸಲಾತಿ:** (ಹೊಸ ಪ್ರವೇಶಾರ್ಥಿಗಳಿಗೆ) 15% ಎಸ್.ಸಿ (SC), 7% ಎಸ್.ಟಿ (ST), 30% ಅಂಗವಿಕಲರಿಗಾಗಿ (PH) ಮೀಸಲಾತಿ ಸೌಲಭ್ಯವಿದೆ. ಈ ಸ್ಥಾನಗಳು ಪೂರ್ತಿಯಾಗದಿದ್ದರೆ, ಉಳಿದ ಪ್ರವೇಶಾರ್ಥಿಗಳಿಗೆ ಆ ಸ್ಥಾನಗಳನ್ನು ಹಂಚಬೇಕು.

**ಶಿಕ್ಷಕರ ನೇಮಕಾತಿ ವಿಧಾನ ಮತ್ತು ವಿದ್ಯಾರ್ಹತೆ:** ರಾಷ್ಟ್ರೀಯ ಶಿಕ್ಷಣ ನೀತಿಯ ನಿಯಮಾವಳಿ ಪ್ರಕಾರ ಶಿಕ್ಷಕರನ್ನು ಮೀಸಲಾತಿಗೆ ಒಳಪಡಿಸಿ ನೇಮಕ ಮಾಡಿ ಕೊಳ್ಳಲಾಗುತ್ತದೆ. ಕೇಂದ್ರೀಯ ವಿದ್ಯಾಲಯದಲ್ಲಿ ಕೇಂದ್ರ ಪಟ್ಟಿಯ ಅರ್ಹತೆ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ. ಕೆಲವೊಮ್ಮೆ ಅವಶ್ಯಕವಿದ್ದಾಗ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರು ನೇಮಕ ಮಾಡಿಕೊಳ್ಳುತ್ತಾರೆ. ಈ ವಿದ್ಯಾಲಯದಲ್ಲಿ ನೇಮಕಾತಿ ಬಯಸುವ ಶಿಕ್ಷಕರು ಟಿ.ಜಿ.ಟಿ (T.G.T) ಮತ್ತು ಪಿ.ಜಿ.ಟಿ (P.G.T) ಅರ್ಹತೆಯನ್ನು ಹೊಂದಿದವರಾಗಿರಬೇಕು.

| | | |
|---|---|---|
| Primary School Teachers | T.G.T | B.A/B.Sc, B.Ed |
| High School Teachers | P.G.T` | B.A/B.Sc, B.Ed, M.A/M.Sc/P.G |

**ಶಿಕ್ಷಕರ ವಿವರ:** ಈ ವಿದ್ಯಾಲಯದಲ್ಲಿರುವ ಒಟ್ಟು ಶಿಕ್ಷಕರ ವಿಷಯವಾರು ವಿಂಗಡಣೆ ಈ ಕೆಳಗಿನಂತಿದೆ

| | |
|---|---|
| ಪ್ರಾಂಶುಪಾಲರು – 01 | ಜೀವಶಾಸ್ತ್ರ – 01 |
| ಉಪಪ್ರಾಂಶುಪಾಲರು – 01 | ಕಂಪ್ಯೂಟರ್ – 01 |
| ಕನ್ನಡ – 02 | ಸಂಗೀತ – 01 |
| ಇಂಗ್ಲಿಷ್ – 03 | ದೈಹಿಕ ಶಿಕ್ಷಣ – 01 |
| ಹಿಂದಿ – 03 | ಕಲೆ – 01 |
| ಗಣಿತ – 02 | ರಸಾಯನಶಾಸ್ತ್ರ – 01 |
| ಸಮಾಜ – 01 | ಭೌತಶಾಸ್ತ್ರ – 01 |
| ವಿಜ್ಞಾನ – 01 | ಗ್ರಂಥಪಾಲಕ – 01 |

ಎಂಪ್ಲಾಯ್‌ಮೆಂಟ್ ನ್ಯೂಸ್ ಪೇಪರ್ (Employment News paper)ದಲ್ಲಿ ಜಾಹೀರಾತು ಹೊರಡಿಸಿ ಅರ್ಜಿ ಕರೆದು 3 ಹಂತಗಳಲ್ಲಿ ಪರೀಕ್ಷೆ ನಡೆಸಿ ನೇಮಕ ಮಾಡಿಕೊಳ್ಳುತ್ತಾರೆ. 1ನೇ ಸಿ.ಇ.ಟಿ. (1st C.E.T) + 2ನೇ ಸಿ.ಇ.ಟಿ. (2nd C.E.T) + 3ನೇ ಸಂದರ್ಶನ (Interview) ಇವುಗಳ ನಂತರ ನೇಮಕ ಮಾಡಿಕೊಳ್ಳುತ್ತಾರೆ.

Digitised by Bharatavani, CIIL

**ಬೋಧಿಸುವ ವಿಷಯಗಳು**

**1 ಮತ್ತು 2ನೇ ತರಗತಿ:** ಇಂಗ್ಲಿಷ್, ಹಿಂದಿ, ಗಣಿತ, ಕಲೆ, ಸಂಗೀತ, ಸ್ಪೋಕನ್ ಇಂಗ್ಲಿಷ್ (Spoken English) ಮತ್ತು A.H.P.L (Art of Healthy Productive Living).

**3 ಮತ್ತು 4ನೇ ತರಗತಿ:** ಪರಿಸರ ಅಧ್ಯಯನ, ಇಂಗ್ಲಿಷ್, ಹಿಂದಿ, ಗಣಿತ, ಕಂಪ್ಯೂಟರ್, ಸಂಗೀತ, ಸ್ಪೋಕನ್ ಇಂಗ್ಲಿಷ್ (Spoken English) ಮತ್ತು A.H.P.L (Art of Healthy Productive Living).

**5ರಿಂದ 8ನೇ ತರಗತಿ:** ವಿಜ್ಞಾನ, ಸಾಮಾಜಿಕ ಅಧ್ಯಯನ, ಇಂಗ್ಲಿಷ್, ಹಿಂದಿ, ಗಣಿತ, ಸಂಸ್ಕೃತ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ (SUPW), ಕಂಪ್ಯೂಟರ್, P.S.H.E.

**9 ಮತ್ತು 10ನೇ ತರಗತಿ:** ವಿಜ್ಞಾನ, ಸಾಮಾಜಿಕ ಅಧ್ಯಯನ, ಇಂಗ್ಲಿಷ್, ಹಿಂದಿ/ಸಂಸ್ಕೃತ, ಗಣಿತ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ (SUPW), ಕಂಪ್ಯೂಟರ್.

**11 ಮತ್ತು 12ನೇ ತರಗತಿ:** ಇಂಗ್ಲಿಷ್, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಕಂಪ್ಯೂಟರ್ ಸೈನ್ಸ್.




ಭಾರತೀಯ ದೇಶದ ಒಟ್ಟು ಕೇಂದ್ರಿಯ ವಿದ್ಯಾಲಯ ಶಾಲೆಗಳ ವಿವರ As on 01/09/2010

DETAILS OF NUMBER OF KENDRIYA VIDYALAYAS (REGIO-WISE/STATE-WISE) SIUTATED IN THE COUNTRY AND ALSO IN FOREIGN COUNTRIES AS ON 01.09.2010

| Sl No | State-Region | KOLKATA | HYDERABAD | SILCHAR | GUWAHATI | PATNA | CHANDIGARH | JABALPUR | AHMEDABAD | DELHI | BANGALORE | JAMMU | BHUBANESWAR | CHENNAI | BHOPAL | MUMBAI | JAIPUR | LUKCNOW | DEHRADUN | FOREIGN KVs | TOTAL |
|---|---|---|---|---|---|---|---|---|---|---|---|---|---|---|---|---|---|---|---|---|---|
| 1 | A&N Island (U.T) | 2 | | | | | | | | | | | | | | | | | | | 2 |
| 2 | Andhra Pradesh | | 52 | | | | | | | | | | | | | | | | | | 52 |
| 3 | Arunchal Pradesh | | | 5 | 8 | | | | | | | | | | | | | | | | 13 |
| 4 | Assam | | | 23 | 30 | | | | | | | | | | | | | | | | 53 |
| 5 | Bihar | | | | | 43 | | | | | | | | | | | | | | | 43 |
| 6 | Chandigarfh (U.T) | | | | | | 5 | | | | | | | | | | | | | | 5 |
| 7 | Chattisgarh | | | | | | | 27 | | | | | | | | | | | | | 27 |
| 8 | D&N Haveli (U.T) | | | | | | | | 1 | | | | | | | | | | | | 1 |
| 9 | Daman & Diu (U.T) | | | | | | | | 1 | | | | | | | | | | | | 1 |
| 10 | Delhi (U.T) | | | | | | | | | 42 | | | | | | | | | | | 42 |
| 11 | Goa | | | | | | | | | | 5 | | | | | | | | | | 5 |
| 12 | Gujarat | | | | | | | | 44 | | | | | | | | | | | | 44 |
| 13 | Haryana | | | | | | 18 | | | 10 | | | | | | | | | | | 28 |
| 14 | Himachal Pradesh | | | | | | 15 | | | | | 7 | | | | | | | | | 22 |
| 15 | Jammu & Kashmir | | | | | | | | | | | 38 | | | | | | | | | 38 |
| 16 | Jharkhand | | | | | | | | | | | | 32 | | | | | | | | 32 |
| 17 | Karnataka | | | | | | | | | | 39 | | | | | | | | | | 39 |
| 18 | Kerala | | | | | | | | | | 9 | | | 25 | | | | | | | 34 |
| 19 | Lakshdweep (U.T) | | | | | | | | | | | | | 1 | | | | | | | 1 |
| 20 | Madhya Pradesh | | | | | | | 37 | | | | | | | 54 | | | | | | 91 |
| 21 | Maharashtra | | | | | | | | | | | | | | 10 | 46 | | | | | 56 |
| 22 | Manipur | | | 7 | | | | | | | | | | | | | | | | | 7 |
| 23 | Meghalaya | | | | 7 | | | | | | | | | | | | | | | | 7 |
| 24 | Mizoram | | | 4 | | | | | | | | | | | | | | | | | 4 |
| 25 | Nagaland | | | 5 | | | | | | | | | | | | | | | | | 5 |
| 26 | Orissa | | | | | | | | | | | | 53 | | | | | | | | 53 |
| 27 | Puducherry (U.T) | | | | | | | | | | | | | 4 | | | | | | | 4 |
| 28 | Punjab | | | | | | 28 | | | | | 19 | | | | | | | | | 47 |
| 29 | Rajasthan | | | | | | | | | | | | | | | | 61 | | | | 61 |
| 30 | Sikkim | 2 | | | | | | | | | | | | 39 | | | | | | | 2 |
| 31 | Tamil Nadu | | | | | | | | | | | | | | | | | | | | 39 |
| 32 | Tripura | | | 9 | | | | | | | | | | | | | | | | | 9 |
| 33 | Uttar Pradesh | | | | | 16 | | | | 8 | | | | | | | | 62 | 16 | | 102 |
| 34 | Uttarakhand | | | | | | | | | | | | | | | | | | 43 | | 43 |
| 35 | West Bengal | 58 | | | | | | | | | | | | | | | | | | | 58 |
| 36 | KVS (HQ) | | | | | | | | | | | | | | | | | | | 3 | 3 |
| | Total | 62 | 52 | 53 | 45 | 59 | 66 | 64 | 46 | 60 | 53 | 64 | 85 | 69 | 64 | 46 | 61 | 62 | 59 | 3 | 1073 |

ಕೇಂದ್ರಿಯ ವಿದ್ಯಾಲಯಗಳಂತಹ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಭಾರತದಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸ್ಥಾಪನೆಯಾಗಿ ಗ್ರಾಮೀಣ ಜನರ ಬಾಳಿನಲ್ಲಿ ಗಗನ ಕುಸುಮವಾಗಿರುವ ಈ ಶಿಕ್ಷಣವನ್ನು ಸುಲಭದಲ್ಲಿ ದೊರೆಯುವಂತೆ ಮಾಡುವಲ್ಲಿ ತುಂಬಾ ಸಹಕಾರಿಯಾಗಿವೆ.

**–ಮಾಧವ ಗುಡಿ**

Digitised by Bharatavani, CIIL

## ಕೇಂದ್ರಿಯ ಹಿಂದಿ ಸಂಸ್ಥಾನ

**ಕೇಂದ್ರೀಯ ಹಿಂದಿ ಶಿಕ್ಷಣ ಮಂಡಲಿ, ಆಗ್ರಾ:** ಈ ಸಂಸ್ಥೆಯು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಶಿಕ್ಷಣ ಇಲಾಖೆಯ ಅಧೀನದ ಪೂರ್ಣವಾಗಿ ಧನಸಹಾಯ ಪಡೆಯುತ್ತಿರುವ ಸ್ವಾಯತ್ತ ಸಂಸ್ಥೆಯಾಗಿದೆ. ಇದು 'ಕೇಂದ್ರಿಯ ಹಿಂದಿ ಸಂಸ್ಥಾನ', ಆಗ್ರಾ (ಸೆಂಟರ್ ಇನ್ಸ್ಟಿಟ್ಯೂಟ್ ಆಫ್ ಹಿಂದಿ) ಎಂಬ ಸಂಸ್ಥೆಯೊಂದನ್ನು ನಡೆಸುತ್ತದೆ. ಸಂಸ್ಥೆಯ ಮುಖ್ಯ ಕಛೇರಿ ಆಗ್ರಾದಲ್ಲಿದ್ದು ದೆಹಲಿ, ಹೈದರಾಬಾದ್, ಗೌಹಾಟಿ, ಷಿಲಾಂಗ್ ಮತ್ತು ಮೈಸೂರು ಈ ಐದು ಸ್ಥಳಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದೆ.

ಈ ಸಂಸ್ಥೆಯು ಹಿಂದಿ ಭಾಷೆಯ ಪ್ರಸಾರ ಮತ್ತು ಅದರ ಬಳಕೆಗೆ ಪ್ರೋತ್ಸಾಹ ಮತ್ತು ನಿರ್ದಿಷ್ಟ ಭಾಷೆಯಲ್ಲಿ ಇದರ ಉಪಯೋಗದ ಬೋಧನೆಯ ಜವಾಬ್ದಾರಿಯನ್ನು ಹೊತ್ತಿದೆಯಲ್ಲದೆ ಬುಡಕಟ್ಟು, ಜನಾಂಗದ ಭಾಷೆಗಳ ಪರ್ಯಾವೀಕ್ಷಣೆ ಮತ್ತು ಅವರ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣದ ಪರಿಚಯ ಮಾಡಿಸಿ ನಂತರ ತಮ್ಮ ಮಾತೃಭಾಷೆಯಿಂದ ಹಿಂದಿ ಭಾಷೆಗೆ ಕ್ರಮೇಣ ಬದಲಾಯಿಸಿಕೊಳ್ಳುವಂತೆ ಮಾಡುವುದು; ಸೇವಾನಿರತ ಹಿಂದಿ ಶಿಕ್ಷಕರಿಗೆ ಅಂಚೆ ವ್ಯವಹಾರದ ಕಾರ್ಯಕ್ರಮಗಳ ಮೂಲಕ ಬೋಧಿಸುವುದು; ರಾಜ್ಯ ಸರ್ಕಾರಗಳಿಂದ ಮತ್ತು ಹಿಂದಿ ಪ್ರಸಾರದ ನಿಯೋಗಗಳಿಂದ ನೇಮಿಸಲ್ಪಟ್ಟ ಶಿಕ್ಷಕರಿಗೆ ಅಲ್ಪಾವಧಿಯ ಪರಿಚಯ ಕಾರ್ಯಕ್ರಮಗಳನ್ನು ನಡೆಸುವುದು; ಇವೇ ಮುಂತಾದ ಜವಾಬ್ದಾರಿಗಳನ್ನು ಸಹ ವಹಿಸಿಕೊಂಡಿದೆ.

**ಸಂಸ್ಥೆಯ ಪ್ರಮುಖ ಕಾರ್ಯಗಳು ಹೀಗಿವೆ:**

- ಹಿಂದಿ ಭಾಷೆಯನ್ನು ದ್ವಿತೀಯ ಭಾಷೆಯಾಗಿ ಮತ್ತು ವಿದೇಶಿ ಭಾಷೆಯಾಗಿ ಬೋಧಿಸುವ ಆಧುನಿಕ ಬೋಧನ ವಿಧಾನಗಳನ್ನು ವಿಕಾಸಗೊಳಿಸುವುದು.
- ಭಾರತದ ಹಿಂದಿ ಮಾತನಾಡದ ಪ್ರದೇಶದ ಹಿಂದಿ ಶಿಕ್ಷಕರಿಗೆ ತರಬೇತಿ ನೀಡುವುದು.
- ಹಿಂದಿ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದು.
- ಭಾರತೀಯ ಭಾಷೆಗಳೊಂದಿಗೆ ತೌಲನಿಕ ಮತ್ತು ತಾರತಮ್ಯವನ್ನು ಎತ್ತಿ ತೋರಿಸುವ ಭಾಷಾಶಾಸ್ತ್ರೀಯ ಸಂಬಂಧಿ ಅಧ್ಯಯನ ಕೈಗೊಳ್ಳುವುದು ಮತ್ತು ಸೌಲಭ್ಯಗಳನ್ನು ಒದಗಿಸುವುದು.
- ಹಿಂದಿಯನ್ನು ದ್ವಿತೀಯ ಭಾಷೆಯಾಗಿ, ವಿದೇಶಿ ಭಾಷೆಯಾಗಿ ಪರಿಗಣಿಸುತ್ತಾ ಭಾಷಾಬೋಧನಾ ಸಾಮಗ್ರಿಗಳನ್ನು ವಿಕಾಸಗೊಳಿಸುವುದು.
- ವಿದೇಶದಲ್ಲಿ ಹಿಂದಿ ಯೋಜನೆ ಮತ್ತು ಸ್ವಯಂ-ಧನಸಹಾಯ ಯೋಜನೆಗಳ ಪ್ರಚಾರದಡಿಯಲ್ಲಿ ವಿದೇಶಿಯರಿಗೆ ಬೋಧನೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಬಿ.ಎಡ್ ಮಟ್ಟದ ಹಿಂದಿ ಭಾಷಾ ಬೋಧನೆಗಾಗಿ ಅಂಚೆ ಮತ್ತು ತೆರಪಿನ ಕಾರ್ಯಕ್ರಮಗಳನ್ನು ನಡೆಸುವುದು.
- ವಿಸ್ತರಣಾ ಸೇವೆ ಮತ್ತು ಪರಿಚಯ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಕಂಪ್ಯೂಟಿಂಗ್ ಏಜೆನ್ಸಿಗಳೊಂದಿಗೆ ಸ್ವಾಭಾವಿಕ ಭಾಷಾ ಪರಿಷ್ಕರಣ(Natural Processing) ವಿಶೇಷವಾಗಿ ಕಂಪ್ಯೂಟರ್ ಸಹಾಯಿತ ಭಾಷಾ ಬೋಧನೆ ಮತ್ತು ಅನುವಾದಗಳ ಕ್ಷೇತ್ರದಲ್ಲಿ, ವಿಕಾಸಕ್ಕಾಗಿ ಸಹಯೋಗದಲ್ಲಿ ಕಾರ್ಯೋನ್ಮುಖವಾಗುವುದು.
- ಬುಡಕಟ್ಟು ಜನಾಂಗಗಳ ಭಾಷೆಗಳ ಸರ್ವೇಕ್ಷಣೆ ಮತ್ತು ಅವರ ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ಮತ್ತು ಕ್ರಮೇಣ ವೈಜ್ಞಾನಿಕವಾಗಿ ಹಾಗೂ ಸುವ್ಯವಸ್ಥಿತ ಶ್ರೇಣಿಬದ್ಧ ಕ್ರಮದಲ್ಲಿ ಮಾತೃಭಾಷೆಯಿಂದ ಹಿಂದಿಗೆ ಬದಲಾಯಿಸಿಕೊಳ್ಳುವುದು ಮತ್ತು ಬುಡಕಟ್ಟು ಭಾಷೆಗಳಿಗೆ ಬೋಧನಾ ಸಾಮಗ್ರಿಗಳನ್ನು ಸಿದ್ಧಪಡಿಸುವುದು.
- ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಮಂತ್ರಿ ಈ ಮಂಡಲದ ಅಧ್ಯಕ್ಷರಾಗಿರುವರು. ಉಪಾಧ್ಯಕ್ಷರಲ್ಲದೆ, ಕಾರ್ಯಕಾರಿ ಸಮಿತಿಯಲ್ಲಿ ಭಾರತ ಸರ್ಕಾರದಿಂದ ನೇಮಕಗೊಂಡ ಹಲವು ಸದಸ್ಯರಿರುವರು.

**ಸಂಸ್ಥೆಯ ವಿಭಾಗಗಳು:**

ಸಂಸ್ಥಾನವು ಹಲವು ವಿಭಾಗಗಳನ್ನು ಸ್ಥಾಪಿಸಿದೆ. ಅದು ಕೆಳಗಿನವುಗಳನ್ನು ಒಳಗೊಂಡಿದೆ.

1. **ಅಧ್ಯಾಪಕ ತರಬೇತಿ ವಿಭಾಗ:**

ಈ ವಿಭಾಗವು 5 ಬೋಧನೆ-ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

I. **ಹಿಂದಿ ಶಿಕ್ಷಣ ನಿಷ್ಣಾತ್ (ಎಂ.ಎಡ್ ಸ್ತರ) ಕಾರ್ಯಕ್ರಮ:**

ಒಂದು ವರ್ಷದ ಅವಧಿಯ ಈ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯಗಳ ಮತ್ತು ಹಿಂದಿ ಮಾತಾಡದ ರಾಜ್ಯಗಳಲ್ಲಿನ ಕಾಲೇಜುಗಳ ಅಧ್ಯಾಪಕರಿಗೆ ತರಬೇತಿ ನೀಡಲು ರೂಪುಗೊಳಿಸಲಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ನಿಯಮಿತ ಎಂ.ಎಡ್. ಕೋರ್ಸ್‌ನಲ್ಲಿ ಬೋಧಿಸಲಾಗುವ ಪಠ್ಯಕ್ರಮದ ಜೊತೆಗೆ ಈ ಕಾರ್ಯಕ್ರಮ ಭಾಷಾಬೋಧನೆ, ಸಮಾಜ ವಿಜ್ಞಾನ ಮತ್ತು ನಿಘಂಟು ರಚನಾಶಾಸ್ತ್ರ, ಭಾಷಾವಿಜ್ಞಾನ, ಮೌಲ್ಯಮಾಪನ ಮತ್ತು ಪರೀಕ್ಷಣೆ, ಶೈಲಿಶಾಸ್ತ್ರ, ಅನುವಾದ- ತತ್ವ ಮತ್ತು ಆಚರಣೆ, ಬೋಧನ ಸಾಮಗ್ರಿಗಳ ಉತ್ಪಾದನೆ ಇತ್ಯಾದಿ ವಿಷಯಗಳ ಪ್ರಾಯೋಗಿಕ ಮುಖದಲ್ಲಿ ತರಬೇತಿಯನ್ನೂ ಸಹ ನೀಡಲಾಗುತ್ತದೆ.

II. **ಹಿಂದಿ ಶಿಕ್ಷಣ ಪಾರಂಗತ (ಬಿ.ಎಡ್. ಸ್ತರ) ಕಾರ್ಯಕ್ರಮ:**

ಈ ಕಾರ್ಯಕ್ರಮ ಒಂದು ವರ್ಷದ ಅವಧಿಯಾಗಿದ್ದು, ಇದನ್ನು

Digitised by Bharatavani, CIIL

ಹಿಂದಿ ಮಾತನಾಡದ ಪ್ರದೇಶಗಳಲ್ಲಿನ ಪ್ರೌಢಶಾಲೆಗಳಿಗೆ ಶಿಕ್ಷಕರನ್ನು ಸಿದ್ಧಪಡಿಸುವ ಸಲುವಾಗಿ ವಿಕಾಸಗೊಳಿಸಲಾಗಿದೆ.

III. **ಹಿಂದಿ ಶಿಕ್ಷಣ ಪ್ರವೀಣ:**

ಹಿಂದಿ ಶಿಕ್ಷಣ ಪ್ರವೀಣ್ ಕಾರ್ಯಕ್ರಮವು ಹಿಂದಿ ಮಾತನಾಡದ ರಾಜ್ಯಗಳಲ್ಲಿನ ಪ್ರೌಢಶಾಲೆಯ ಸ್ತರದ ಹಿಂದಿ ಶಿಕ್ಷಕರಿಗೆ ತರಬೇತಿ ನೀಡುತ್ತದೆ.

IV. **ನಾಲ್ಕು ವರ್ಷದ ಸಮಗ್ರ ಹಿಂದಿ ಬೋಧನಾ ಡಿಪ್ಲೋಮ:**

ದೀಮಾಪುರ್ (ನಾಗಾಲ್ಯಾಂಡ್)ನ ಹಿಂದಿ ತರಬೇತಿ ಸಂಸ್ಥೆಯು ನಡೆಸುವ (ನಾಲ್ಕನೆಯ) ವರ್ಷದ ತರಬೇತಿ ಕಾರ್ಯಕ್ರಮವನ್ನು ಆಗ್ರಾದಲ್ಲಿ ನಡೆಸಲಾಗುತ್ತದೆ.

V. **ವಿಶೇಷ ಆಳವಾದ ಹಿಂದಿ ಬೋಧನೆ–ತರಬೇತಿ ಕಾರ್ಯಕ್ರಮ:**

ಭಾರತದ ಈಶಾನ್ಯ ರಾಜ್ಯಗಳ, ವಿಶೇಷತಃ ಮಿಝೊರಾಮ್, ಮೇಘಾಲಯ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಣಿಪುರ ಮತ್ತು ಸಿಕ್ಕಿಂ ರಾಜ್ಯಗಳ ತರಬೇತಿಯಿಲ್ಲದ ಹಿಂದಿ ಶಿಕ್ಷಕರ ತರಬೇತಿಗಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಈ ಕಾರ್ಯಕ್ರಮದ ಮೂಲಕ ಪ್ರಶಿಕ್ಷಣಾರ್ಥಿಗಳಿಗೆ ಹಿಂದಿಭಾಷೆ ಮತ್ತು ಸಾಹಿತ್ಯದ ಮೂಲಭೂತ ಜ್ಞಾನವನ್ನು ಒದಗಿಸಲಾಗುವುದು ಮತ್ತು ಭಾಷಾ ಬೋಧನೆಯ ಆಧುನಿಕ ರೀತಿಗಳು ಮತ್ತು ತಂತ್ರಗಳಲ್ಲಿಯೂ ಸಹ ತರಬೇತಿ ನೀಡಲಾಗುವುದು.

2. **ಹಿಂದಿ ಬೋಧನ ಸಾಮಗ್ರಿ ಉತ್ಪಾದನೆ ಮತ್ತು ಸಂಶೋಧನಾ ವಿಭಾಗ:**

ಹಿಂದಿ ಪಠ್ಯಪುಸ್ತಕಗಳ ಪರಿಷ್ಕರಣ, ಮಾರ್ಪಾಡು ಮತ್ತು ವಿಸ್ತಾರ; ಕರ್ನಾಟಕ ಸರ್ಕಾರದ ಹಿರಿಯ ಪ್ರಾಥಮಿಕ ತರಗತಿಗಳ ಹಿಂದಿ ಅಧ್ಯಾಪಕರಾಗಿ ಹಿಂದಿ ಸಂಚಯಗಳ ಅಭಿವೃದ್ಧಿ; ಕರ್ನಾಟಕ ಸರ್ಕಾರದ ಪ್ರೌಢಶಾಲೆಗಳ ಹಿಂದಿ ಶಿಕ್ಷಕರಿಗಾಗಿ ಹಿಂದಿ ಸಂಚಯನದ ವಿಕಾಸ (ಮಾಡ್ಯೂಲ್); ಸಂಸತ್ತಿನ ಸದಸ್ಯರಿಗಾಗಿ ಹಿಂದಿ ಭಾಷಾ ಬೋಧನ ಸಾಮಗ್ರಿಗಳ ಅಭಿವೃದ್ಧಿ; ಹಿಂದಿಯಲ್ಲಿರುವ ಭಾರತೀಯ ಸಾಹಿತ್ಯದಿಂದ ಆಯ್ದ ಉಲ್ಲೇಖಗಳ ನಿಘಂಟು ರಚನೆ– ಇವು ಇಲಾಖೆಯ ಪ್ರಮುಖ ಕಾರ್ಯಗಳಾಗಿವೆ.

3. **ವಿದೇಶಿಯರಿಗಾಗಿ ಕಾರ್ಯಕ್ರಮಗಳ ವಿಭಾಗ:**

ಭಾರತ ಸರ್ಕಾರದ 'ವಿದೇಶದಲ್ಲಿ ಹಿಂದಿಯ ಪ್ರಚಾರ' ಎಂಬ ಯೋಜನೆಯ ಅಡಿಯಲ್ಲಿ ಆಯ್ಕೆಗೊಂಡ ವಿದೇಶಿ ವಿದ್ಯಾರ್ಥಿಗಳಿಗೆ ಈ ವಿಭಾಗವು ಕಾರ್ಯಕ್ರಮಗಳನ್ನು ನಡೆಸುತ್ತದೆ. ಪ್ರತಿಯೊಂದು ಕಾರ್ಯಕ್ರಮದ ಅವಧಿ ಒಂದು ಶೈಕ್ಷಣಿಕ ವರ್ಷ. ಹಿಂದಿ ಭಾಷೆಯಲ್ಲಿ ಪ್ರಾವೀಣ್ಯತೆ ಸರ್ಟಿಫಿಕೇಟ್ ಕೋರ್ಸ್, ಹಿಂದಿ ಭಾಷಾ ಪ್ರಾವೀಣ್ಯತೆ ಡಿಪ್ಲೋಮ; ಹಿಂದಿ ಭಾಷಾ ಪ್ರಾವೀಣ್ಯತೆ ಮುಂದುವರೆದ ಡಿಪ್ಲೊಮ; ಹಿಂದಿ ಭಾಷೆಯ ಪ್ರಾಯೋಗಿಕತೆ ಪ್ರಾವೀಣ್ಯತೆ ಡಿಪ್ಲೊಮ; ಇವೇ ಮುಂತಾದ ಕೋರ್ಸುಗಳನ್ನು ಈ ವಿಭಾಗ ಒಳಗೊಂಡಿದೆ.

4. **ಪ್ರಾಯೋಗಿಕ ಹಿಂದಿ ಮತ್ತು ಸಮಾಜ ಭಾಷಾವಿಜ್ಞಾನ ವಿಭಾಗ:**

ಹಿಂದಿ ಮಾತನಾಡದ ರಾಜ್ಯಗಳ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗಾಗಿ ವಿಭಾಗವು ವಿದ್ಯಾರ್ಥಿಗಳ ಶಬ್ದಕೋಶವನ್ನು ಹಾಗೂ ಏಳು ಈಶಾನ್ಯ ರಾಜ್ಯಗಳ ಭಾಷೆಗಳ ದ್ವಿಭಾಷಾ ಶಬ್ದಕೋಶವನ್ನು ಸಿದ್ಧಪಡಿಸಿದೆ.

5. **ಅಂಚೆ–ತೆರಪಿನ ಕಾರ್ಯಕ್ರಮ ವಿಭಾಗ:**

ಹಿಂದಿ ಮಾತನಾಡದ ರಾಜ್ಯಗಳ ಶಾಲಾ ಕಾಲೇಜುಗಳ ಸೇವಾನಿರತ ಹಿಂದೀ ಶಿಕ್ಷಕರಿಗಾಗಿ ಅಂಚೆ ಮತ್ತು ಸಂಪರ್ಕ ಕಾರ್ಯಕ್ರಮದ ಮೂಲಕ ವಿಭಾಗವು 18ತಿಂಗಳ ಅವಧಿಯ 'ಹಿಂದಿ ಶಿಕ್ಷಣ ಪಾರಂಗತ ಕೋರ್ಸ್'(ಬಿ.ಎಡ್ ಸ್ತರ) ನಡೆಸುತ್ತದೆಯಲ್ಲದೆ ಹಿಂದಿ ಪ್ರಚಾರ ಮಾಡುವ ಖಾಸಗಿ ಹಿಂದಿ ಸಂಸ್ಥೆಗಳ ಶಿಕ್ಷಕರಿಗೂ ಈ ಕಾರ್ಯಕ್ರಮವನ್ನು ನಡೆಸಿಕೊಡುತ್ತದೆ. ಅಧ್ಯಾಪಕರ ಸೇವೆಗೆ ಅಡಚಣೆಯಾಗದಂತೆ ತರಬೇತಿ ನೀಡುವುದು ಇದರ ಉದ್ದೇಶವಾಗಿದೆ. ಪ್ರತಿಯೊಂದು ಕೋರ್ಸಿನ ಪ್ರವೇಶ ಸಾಮರ್ಥ್ಯ 500ರಷ್ಟಿದೆ.

6. **ಬುಡಕಟ್ಟು ಭಾಷಾ ಸಂಶೋಧನೆ ಮತ್ತು ಸಾಮಗ್ರಿ ಉತ್ಪಾದನಾ ವಿಭಾಗ:**

ವಿಭಾಗವು ಬುಡಕಟ್ಟು ಭಾಷೆಗಳ ಸರ್ವೇಕ್ಷಣೆ ನಡೆಸುತ್ತದೆಯಲ್ಲದೆ ಅವರ ಮಾತೃಭಾಷೆಯ ಮೂಲಕ ಪ್ರಾಥಮಿಕ ಶಿಕ್ಷಣ ನೀಡಲು ಬೋಧನಾ ಸಾಮಗ್ರಿಗಳನ್ನು ಸಿದ್ಧಪಡಿಸುತ್ತದೆ ಹಾಗೂ ಕ್ರಮೇಣ ತಮ್ಮ ಮಾತೃಭಾಷೆಯಿಂದ ಹಿಂದಿಗೆ ವೈಜ್ಞಾನಿಕವಾಗಿ, ವ್ಯವಸ್ಥಿತ ಶ್ರೇಣಿಬದ್ಧ ರೀತಿಯಲ್ಲಿ ಬದಲಾಯಿಸಿಕೊಳ್ಳುವಂತೆ ಮಾಡುವುದರ ಜೊತೆಗೆ ವಿಭಾಗವು ಬುಡಕಟ್ಟು ಭಾಷೆಯಲ್ಲಿ ಬೋಧನ ಸಾಮಗ್ರಿಗಳನ್ನು ಸಿದ್ಧಪಡಿಸುತ್ತದೆ.

7. **ವಿಸ್ತರಣಾ ಸೇವೆ ಮತ್ತು ಪರಿಚಯ ಕಾರ್ಯಕ್ರಮ ವಿಭಾಗ:**

ಈ ವಿಭಾಗವು ಕೆಳಗಿನ ಕಾರ್ಯಕ್ರಮಗಳನ್ನು ನಡೆಸುತ್ತದೆ.

I. **ಪ್ರಾಯೋಗಿಕ ಹಿಂದಿ ಭಾಷಾವಿಜ್ಞಾನದಲ್ಲಿ ಮುಂದುವರೆದ ಪರಿಚಯ ಕಾರ್ಯಕ್ರಮ:**

ಮೂರು ವಾರಗಳ ಕಾರ್ಯಕ್ರಮದ ಮುಖಾಂತರ ಹಿಂದಿಯನ್ನು ದ್ವಿತೀಯ ಭಾಷೆಯ ರೂಪದಲ್ಲಿ ಬೋಧಿಸುವ ಹೊಸ ತಂತ್ರಗಳ ಮತ್ತು ವಿಧಾನಗಳ ಪರಿಚಯವನ್ನು ಶಿಕ್ಷಕರಿಗೆ ಮಾಡಿಕೊಡಲಾಗುವುದು. ವಿಶ್ವವಿದ್ಯಾನಿಲಯ ಸ್ತರದ ಕೋರ್ಸುಗಳನ್ನು ಹೆಚ್ಚು ಹೆಚ್ಚು ಭಾಷಾ ವೈಜ್ಞಾನಿಕವನ್ನಾಗಿಸಲು ಅವುಗಳಲ್ಲಿ ಭಾಷಾವಿಜ್ಞಾನ, ಶೈಲಿಶಾಸ್ತ್ರ(Stylistic) ಮತ್ತು ನಿಘಂಟುರಚನಾಶಾಸ್ತ್ರದ ಆಯಾಮಗಳನ್ನು ವಿಕಾಸಗೊಳಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ.

II. **ಪರಿಚಯ ಕಾರ್ಯಕ್ರಮ:**

ಹಿಂದಿ ಆಡು ಭಾಷೆಯಲ್ಲದ ರಾಜ್ಯಗಳ ಸೇವೆಯಲ್ಲಿರುವ ಹಿಂದಿ

Digitised by Bharatavani, CIIL

ಶಿಕ್ಷಕರಿಗೆ ಮೂರುವಾರದ ಅಲ್ಪಾವಧಿ ಪರಿಚಯ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರಿಗೆ ಭಾಷಾ ಬೋಧನ ವಿಧಾನಗಳ ಹೊಸ ತಂತ್ರಗಳನ್ನು ಪರಿಚಯಿಸಲಾಗುತ್ತದೆ ಹಾಗೂ ಶ್ರೇಷ್ಠ ಹಿಂದಿ ಭಾಷೆಯ ಬಳಕೆಯ ಬಗ್ಗೆ ಅವರಿಗೆ ಸತತ ಅರಿವು ಮೂಡಿಸುವ ಪ್ರಯತ್ನವನ್ನು ಸಹ ಕೈಗೊಳ್ಳಲಾಗುತ್ತದೆ.

III. **ಭಾಷಾ ಪರಿಕಲ್ಪನಾತ್ಮಕ ವಿಕಾಸ ಕಾರ್ಯಕ್ರಮ:**

ಹಿಂದಿ ಭಾಷಾ ಬೋಧನೆಯಲ್ಲಿ ನಿರತರಾಗಿರುವ ಆದರೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮತ್ತು ಅಧಿಕೃತ ಹಿಂದಿ ಬಳಕೆಯ ಬಗ್ಗೆ ಪರಿಚಿತರಲ್ಲದ ಹಿಂದಿ ಅಧ್ಯಾಪಕ ಪ್ರಶಿಕ್ಷಣಾರ್ಥಿಗಳಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಇಂತಹ ಕಾರ್ಯಕ್ರಮಗಳ ಮೂಲಕ ಪ್ರಶಿಕ್ಷಣಾರ್ಥಿಗಳಿಗೆ ಹಿಂದಿ ಬೋಧನೆಯ ವಿಭಿನ್ನ ಮುಖಗಳ ಪರಿಚಯ ಮಾಡಿಕೊಡಲಾಗುವುದು ಮತ್ತು ಅದರ ಬಳಕೆ ಮತ್ತು ಪ್ರಾಮುಖ್ಯವನ್ನು ಕುರಿತ ಪರಿಕಲ್ಪನಾತ್ಮಕ ವಿಕಾಸದ ಬಗ್ಗೆ ಅವರಲ್ಲಿ ಅರಿವು ಮೂಡಿಸಲಾಗುವುದು.

IV. **ಸುಧಾರಣಾ ಕಾರ್ಯಕ್ರಮ:**

ಈ ಕಾರ್ಯಕ್ರಮವನ್ನು ಸಂಸ್ಥೆಗಳ ಪ್ರಶಿಕ್ಷಣಾರ್ಥಿಗಳಿಗೆ ಮತ್ತು ಕೇಂದ್ರೀಯ ಹಿಂದಿ ಸಂಸ್ಥಾನಕ್ಕೆ ಸೇರಿರುವ ತರಬೇತಿ ಕಾಲೇಜುಗಳ ಅಧ್ಯಾಪಕರಿಗೆ ನಡೆಸಲಾಗುವುದು. ನಿಯಮಿತ ತರಗತಿಗಳ ಜೊತೆಗೆ ಪ್ರಶಿಕ್ಷಣಾರ್ಥಿಗಳ ಬೋಧನಾ ಸಮಸ್ಯೆಗಳ ಪರಿಹಾರದೆಡೆಗೆ ಹೆಚ್ಚಿನ ಗಮನ ನೀಡಲಾಗುವುದು.

V. **ಕೌಶಲ್ಯ ಪ್ರಧಾನ ಕಾರ್ಯಕ್ರಮ:**

ಹಿಂದಿ ಆಡುಭಾಷೆಯಲ್ಲದ ಪ್ರದೇಶಗಳ ಹಿಂದಿ ಶಿಕ್ಷಕರಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ವಾಸ್ತವವಾಗಿ ದ್ವಿತೀಯ ಭಾಷೆಯ ಬೋಧನೆಯಲ್ಲಿ ಭಾಷಾಕೌಶಲಗಳು ಮುಖ್ಯವಾಗುವುವು. ಈ ಕಾರ್ಯಕ್ರಮದಡಿಯಲ್ಲಿ ಭಾಷೆಗೆ ಸಂಬಂಧಿಸಿದಂತೆ ಕೇಳುವ, ಮಾತನಾಡುವ, ಓದುವ ಹಾಗೂ ಬರೆಯುವ ಕೌಶಲಗಳಲ್ಲಿ ಅಭ್ಯಾಸ ಮಾಡಿಸಲಾಗುತ್ತದೆ.

8. **ಭಾಷಾ ತಂತ್ರಜ್ಞಾನ ವಿಭಾಗ:**

ವಿಭಾಗದ ಎಲೆಕ್ಟ್ರಾನಿಕ್ ತರಗತಿಗಳಲ್ಲಿ ಸಂಸ್ಥೆಯ ವಿವಿಧ ವಿಭಾಗಗಳಿಗೆ ಮೌಖಿಕ ಕುಶಲತೆಯನ್ನು ವಿಭಿನ್ನ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ಬೋಧಿಸುವುದರ ಮೂಲಕ ಸಹಾಯ ನೀಡುತ್ತದೆ. ಹಿಂದಿ ಶಿಕ್ಷಣ ನಿಷ್ಣಾತ(ಎಂ.ಎಡ್ ಸ್ತರ) ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಸಹಾಯಿತ ಹಿಂದಿ ಭಾಷಾ ಪರಿಷ್ಕರಣ ಎಂಬ ಐಚ್ಛಿಕ ವಿಷಯವನ್ನು ವಿಭಾಗದಲ್ಲಿ ಬೋಧಿಸಲಾಗುವುದು. ಈಶಾನ್ಯ ಭಾಗದ ಹಿಂದಿ ಮಾತನಾಡದವರಿಗೆ ಉಚ್ಚಾರಣಾ ಕೌಶಲಗಳನ್ನು ಬೋಧಿಸಲು ವಿಭಾಗವು ಆಡಿಯೋ–ಸಾಮಗ್ರಿಗಳನ್ನು ಸಿದ್ಧಪಡಿಸುತ್ತದೆ.

9. **ಸ್ವಾಭಾವಿಕ ಭಾಷಾ ಪರಿಷ್ಕರಣ:**

ನ್ಯಾಚುರಲ್ ಲಾಂಗ್ವೇಜ್ ಪ್ರೊಸೆಸಿಂಗ್ ಕ್ಷೇತ್ರದ ಸಹಯೋಗ ದೊಂದಿಗೆ ವಿವಿಧ ಪ್ರಾಯೋಜನೆಗಳನ್ನು ಸಹ ವಿಭಾಗವು ಕೈಗೆತ್ತಿಕೊಳ್ಳುತ್ತದೆ.

**ಮೂಲ: ಎಂ.ಎಸ್. ಜೈನ್**
**ಅನು: ಚಂದ್ರಶೇಖರ್ ಬಿ.ಎಂ.**

## ಕ್ರೀಡಾ ಕೌಶಲ್ಯಗಳ ಬೋಧನೆ

**ದೈಹಿಕ ಶಿಕ್ಷಣ:**

ದೈಹಿಕ ಶಿಕ್ಷಣವು ಒಟ್ಟು ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಅಷ್ಟೇ ಅಲ್ಲ, ದೈಹಿಕ ಶಿಕ್ಷಣವು ಎಲ್ಲಾ ಕ್ರೀಡಾ ಚಟುವಟಿಕೆಗಳ/ಕ್ರೀಡಾ ವಿಜ್ಞಾನದ ತಾಯಿಯೂ ಆಗಿದೆ.

**ಕ್ರೀಡಾ ಚಟುವಟಿಕೆಗಳು:** ಯಾವುದೇ ಕ್ರೀಡಾ ಚಟುವಟಿಕೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸದೆ, ಅವುಗಳು ವಿವಿಧ ವಿಷಯಗಳ ಮೇಲೆಯೂ ಅವಲಂಬಿತವಾಗಿವೆ. ಉದಾ: ಕ್ರೀಡಾ ಮನೋವಿಜ್ಞಾನ, ಶರೀರ ರಚನಾಶಾಸ್ತ್ರ, ಶರೀರ ವಿಜ್ಞಾನ, ಆರೋಗ್ಯ ಶಾಸ್ತ್ರ, ಯಂತ್ರಶಾಸ್ತ್ರ ಮುಂತಾದ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ.

**ಕ್ರೀಡೆ ಎಂದರೇನು?** ಕ್ರೀಡೆಯು ಎಲ್ಲಾ ತರಹದ ದೈಹಿಕ ಚಟುವಟಿಕೆ ಅಥವಾ ಸ್ಪರ್ಧೆಗಳ ಸಮೂಹವಾಗಿದೆ. ಕ್ರೀಡೆಯಲ್ಲಿ ಭಾಗವಹಿಸುವವರು ಸಾಮಾನ್ಯವಾಗಿ ಉತ್ತಮವಾದ ದೈಹಿಕ ಸದೃಢತೆ ಮತ್ತು ಮಾನಸಿಕ ಸಮತೋಲನ ಹೊಂದಿರಬೇಕಾಗುತ್ತದೆ. ಕ್ರೀಡಾ ಚಟುವಟಿಕೆಗಳು ನಿರ್ದಿಷ್ಟವಾದ ಮತ್ತು ಅನೇಕ ನಿಯಮಗಳಿಂದ ನಿಯಂತ್ರಿಸಲ್ಪಡುತ್ತವೆ.

**ಕ್ರೀಡಾ ಚಟುವಟಿಕೆಗಳ ಉದ್ದೇಶ:** ಪ್ರತಿಯೊಂದು ಕ್ರೀಡಾ ಚಟುವಟಿಕೆಯಲ್ಲಿ ಸಾಮಾನ್ಯವಾಗಿ ಅಥವಾ ಸಂಘಟಿತವಾಗಿ ಭಾಗವಹಿಸುವಾಗ ಅವುಗಳ ಮುಖ್ಯ ಉದ್ದೇಶಗಳೆಂದರೆ, ಭಾಗವಹಿಸುವವರು ದೈಹಿಕ ಮತ್ತು ಮಾನಸಿಕವಾಗಿ ಸ್ವಸ್ಥರನ್ನಾಗಿ ಕಾಪಾಡುವದು ಅಥವಾ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುವುದು, ಭಾಗವಹಿಸುವವರಿಗೂ ಮತ್ತು ಪ್ರೇಕ್ಷಕರಿಗೂ ಆರೋಗ್ಯಕರವಾದ ಮನೋರಂಜನೆಯನ್ನು ಒದಗಿಸುವುದರ ಜೊತೆಗೆ, ತಮ್ಮ ಸ್ವಂತ ಸಂಘಟನೆ, ರಾಜ್ಯ ಮತ್ತು ದೇಶದ ಕೀರ್ತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದಾಗಿದೆ.

**ಕ್ರೀಡಾ ಚಟುವಟಿಕೆಗಳ ವಿಧಗಳು:** ಹರ್ರೆ (Harre) 1983 ಸ್ಪರ್ಧೆಗಳ ಸ್ವರೂಪದ ಆಧಾರದ ಮೇಲೆ ಮೂರು ವಿಧವಾಗಿ ಕ್ರೀಡಾ ಚಟುವಟಿಕೆಗಳನ್ನು ವಿಂಗಡಿಸಿದ್ದಾರೆ.

1. ವೈಯಕ್ತಿಕ ಸ್ಪರ್ಧೆಗಳು: ಉದಾ: ಮೇಲಾಟಗಳು (ಓಟ, ಜಿಗಿತ ಮತ್ತು ಎಸೆತ), ಈಜು, ವಾಕಿಂಗ್, ಸಾಯಕ್ಲಿಂಗ ಮುಂತಾದವುಗಳು.

Digitised by Bharatavani, CIIL

2. ಜೋಡಿ ಸ್ಪರ್ಧೆಗಳು: ಉದಾ: ಟೆನ್ನಿಸ್, ಟೇಬಲ್ ಟೆನ್ನಿಸ್, ಶಟಲ್ ಬ್ಯಾಡಮಿಂಟನ್, ಕುಸ್ತಿ, ಜುಡೊ ಮುಂತಾದವುಗಳು.
3. ಗುಂಪು/ತಂಡ ಸ್ಪರ್ಧೆಗಳು: ಉದಾ: ಬಾಸ್ಕೇಟ್‌ಬಾಲ್, ಫುಟ್‌ಬಾಲ್, ಹಾಕಿ, ರಿಲೇ ಮುಂತಾದವುಗಳು.

**ಕ್ರೀಡಾ ಚಟುವಟಿಕೆಗಳ ವಿಧಾನಗಳು:**

1. ಕಷ್ಟ ಸಹಿಷ್ಣು ಕ್ರೀಡೆಗಳು (Endurance Sports)
2. ವೇಗದ ಓಟ (Sprints)
3. ಶಕ್ತಿ ಪ್ರಧಾನವಾದ ಕ್ರೀಡೆಗಳು (Power Sports)
4. ತಾಂತ್ರಿಕ ಕ್ರೀಡೆಗಳು (Technical Sports)
5. ನಿಯಂತ್ರಿತ ಕ್ರೀಡೆಗಳು (Regulatory Sports)
6. ಗುಂಪು ಆಟಗಳು (Team Games)

**ಕ್ರೀಡಾ ಕೌಶಲ್ಯ:** ಕೌಶಲ್ಯವು ಕೇವಲ ಕ್ರೀಡೆಗೆ ಅಷ್ಟೇ ಸೀಮಿತವಾಗಿರದೆ, ಅದು ಸಾಮಾನ್ಯವಾಗಿ ಜೀವನದ ಅವಿಭಾಜ್ಯ ಅಂಶವಾಗಿದೆ. ಉದಾ: ಕಲಿಯುವದು, ಕಲಿಸುವದು, ವ್ಯವಹರಿಸುವದು, ಮಾತನಾಡುವದು, ಕೊಟ್ಟ ಜವಾಬ್ದಾರಿ ನಿಭಾಯಿಸುವದು, ಜೀವನವನ್ನು ಸುಂದರವಾಗಿ ರೂಪಿಸಿಕೊಳ್ಳುವದು ಇವೇ ಮುಂತಾದವುಗಳಾಗಿವೆ.

ಜೀವನದ ಪ್ರತಿಯೊಂದು ಹಂತದಲ್ಲಿಯೂ ಕೌಶಲ್ಯದ ಅವಶ್ಯಕತೆ ಇದೆ. ಅದಕ್ಕಾಗಿಯೇ ಮೇಧಾವಿಗಳು ಹೇಳಿರುವದು, **"ಜೀವನವೇ ಒಂದು ಕಲೆ" (Life is an art).** ಇದನ್ನು ಸಕಾರಗೊಳಿಸಬೇಕಾದರೆ ಕೌಶಲ್ಯಗಳ ಅವಶ್ಯಕತೆಯಿದೆ. ಕ್ರೀಡಾ ಚಟುವಟಿಕೆಗಳ ಕ್ಷೇತ್ರ ಅತ್ಯಂತ ವಿಶಾಲವಾದ್ದರಿಂದ ಪ್ರತಿಯೊಂದು ಕ್ರೀಡಾ ಚಟುವಟಿಕೆಗೆ ನಿರ್ದಿಷ್ಟವಾದ ಕೌಶಲ್ಯಗಳೇ ಬೇಕಾಗುವವು. ಕಾರಣ ಅವುಗಳು ತಮ್ಮದೇ ಆದ ವಿವಿಧ ಗುಣ ಮತ್ತು ವಿಶೇಷತೆಗಳನ್ನು ಹೊಂದಿವೆ. ಕೌಶಲ್ಯಗಳು ಕ್ರೀಡಾ ಸನ್ನಿವೇಶ, ಸಂದರ್ಭ ಮತ್ತು ಕ್ರೀಡೆಗಳ ಅವಶ್ಯಕತೆಗೆ ಅನುಸಾರವಾಗಿ ಬದಲಾವಣೆಯಾಗುತ್ತವೆ.

ಕ್ರೀಡಾ ಕೌಶಲ್ಯಗಳೆಂದರೆ, ನಾವು ಕ್ರೀಡೆಗಳಲ್ಲಿ ಉಪಯೋಗಿಸುವ ತಂತ್ರ, ಶೈಲಿ ಮತ್ತು ಸಾಧನೆಗಳಿಗೆ ಮೆರಗು ಕೊಡುವುದು ಒಂದು ಕಲೆಯೂ ಆಗಿದೆ.

"ಸ್ಪರ್ಧೆಯ ಪೂರ್ವದಲ್ಲಿಯೇ ನಿರ್ಧರಿಸಿದಂತೆ/ಪೂರ್ವ ಯೋಜನೆಯಂತೆ ನಾವು ಭಾಗವಹಿಸುತ್ತಿರುವ ಕ್ರೀಡೆಯ ಫಲಿತಾಂಶವನ್ನು, ಸ್ವಲ್ಪವೇ ಸಮಯದಲ್ಲಿ ಅಥವಾ ಸ್ವಲ್ಪವೇ ದೈಹಿಕ ಶ್ರಮವನ್ನು ಉಪಯೋಗಿಸಿ ಪಡೆಯುವದು ಅಥವಾ ಸ್ವಲ್ಪವೇ ಸಮಯ ಮತ್ತು ದೈಹಿಕ ಶ್ರಮ ವಹಿಸಿ ನಿರೀಕ್ಷಿತ ಫಲಿತಾಂಶ ಸಾಧಿಸುವ ಕಲೆಗೆ "ಕೌಶಲ್ಯ" ಎನ್ನುವರು.

**ಕ್ರೀಡಾ ಕೌಶಲ್ಯಗಳ ಮಹತ್ವವನ್ನು ಹೀಗೆ ವಿವರಿಸಬಹುದು:**

1. ನಿರ್ದಿಷ್ಟ ಗುರಿಯನ್ನು ನಿಗದಿಪಡಿಸಿಕೊಂಡು ಅದರ ಸಾಧನೆಗೆ ಉತ್ತಮವಾದ ಕೌಶಲ್ಯಗಳನ್ನು ರೂಪಿಸುವದು ಮತ್ತು ಇರುವಂತಹ ಕೌಶಲ್ಯಗಳ ಸರಿಯಾದ ಉಪಯೋಗ ಮಾಡಿಕೊಳ್ಳುವದು.
2. ಈ ಮೊದಲೇ ಇರುವ ಸಾಧನೆಯನ್ನು ವೃದ್ಧಿಗೊಳಿಸುವದು.
3. ಅತ್ಯಂತ ಗರಿಷ್ಠ ಮಟ್ಟದ ಉತ್ತಮ ಸಾಧನೆಗೆ ತಲುಪವದು.
4. ಪ್ರೇಕ್ಷಕರ ಹೊಗಳಿಕೆಗೆ ಪಾತ್ರವಾಗುವಂತೆ ಕ್ರೀಡಾ ಪ್ರದರ್ಶನ ನೀಡುವದು.
5. ಕ್ರೀಡಾ ಮಹತ್ವವನ್ನು ಮತ್ತು ಕ್ರೀಡಾ ಚಟುವಟಿಕೆಯ ಸುಂದರತೆಯನ್ನು ಹೆಚ್ಚಿಸುವದು.
6. ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದ ವಿಶ್ವಾಸ ಹೆಚ್ಚಿಸುವದು.
7. ವಿವಿಧ ಸ್ನಾಯುಗಳ ಹಾಗೂ ಸ್ನಾಯು ಗುಂಪುಗಳ ನಡುವೆ ಸಂಯೋಜನೆಯನ್ನು ಉಂಟುಮಾಡುವದು.
8. ಮನಸ್ಸು ಮತ್ತು ಸ್ನಾಯು ಗುಂಪುಗಳ ನಡುವೆ ಸಂಯೋಜನೆಯನ್ನು ಉಂಟುಮಾಡುವದು.

**ಕೌಶಲ್ಯಗಳನ್ನು ಮುಖ್ಯವಾಗಿ ಎರಡು ವಿಧವಾಗಿ ವಿಂಗಡಿಸಬಹುದು:**

1. ದೈಹಿಕ (ಶಾರೀರಿಕ) ಕೌಶಲ್ಯಗಳು (Physical Skills)

a. ಸಾಮಾನ್ಯ ಚಲನಾ ಕೌಶಲ್ಯಗಳು

b. ಸಮ್ಮಿಶ್ರಿತ ಚಲನಾ ಕೌಶಲ್ಯಗಳು

2. ಮಾನಸಿಕ ಕೌಶಲ್ಯಗಳು (Mental Skills) ಸ್ಥೂಲ ಮತ್ತು ಸೂಕ್ಷ್ಮ ಕೌಶಲ್ಯಗಳು (Gross and Fine Skills)

**ಸಾಮಾನ್ಯ ಕೌಶಲ್ಯಗಳು:**

ಕ್ರೀಡಾ ಪಟುಗಳಿಗೆ ಯಾವುದೇ ಚಟುವಟಿಕೆಗಳನ್ನು ಕಲಿಸುವಾಗ, ಚಟುವಟಿಕೆ ಕುರಿತು ಕ್ರೀಡಾ ನಿಯಮಗಳನ್ನು ಮತ್ತು ಹೇಗೆ ಕಾರ್ಯ ರೂಪಕ್ಕೆ ತರಬೇಕೆಂದು ವಿವರಿಸಿ, ಅದನ್ನು ಕಾರ್ಯ ರೂಪಕ್ಕೆ ತರಲು ಹೇಳುತ್ತೇವೆ. ಉದಾ: 100 ಮೀಟರ್ ಓಟ– ಆನ್ ಯುವರ್ ಮಾರ್ಚ್, ಸ್ಟಾರ್ಟ್ ನಂತರ ಗನ್ ಶಬ್ಧ ಕೇಳುತ್ತಲೇ ಓಟವನ್ನು ಪ್ರಾರಂಭಿಸಬೇಕೆಂದು ಹೇಳುತ್ತೇವೆ.

**ವಿಶೇಷ ಕೌಶಲ್ಯಗಳು:**

ಮೇಲೆ ವಿವರಿಸಿ 100 ಮೀಟರ್ ಓಟವನ್ನೇ ವಿಶೇಷ ಕೌಶಲ್ಯ ಕಲಿಸುವಾಗ ಭಾಗವಹಿಸುವ ಕ್ರೀಡಾ ಪಟುಗಳಾರು ಅವರ ಎತ್ತರ, ವಯಸ್ಸು, ಅವರ ಅನುಭವ ಮುಂತಾದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ, ಅವರಿಗೆ 100 ಮೀಟರ್ ಓಟ ಪ್ರಾರಂಭಿಸಲು ಯಾವ ಸ್ಟಾರ್ಟಿಂಗ್ ಕೌಶಲ್ಯ ಬೇಕು, ಸೆಟ್ ಎಂದಾಗ ಕ್ರೀಡಾಪಟುವಿನ ದೇಹ ಸ್ಥಿತಿ ಹೇಗಿರಬೇಕು, ಸ್ಟಾರ್ಟಿಂಗ್ ಗನ್ ಶಬ್ಧ ಕೇಳಿದ ತಕ್ಷಣ ಕ್ರೀಡಾ ಪಟುಗಳು ಸ್ಟಾರ್ಟಿಂಗ್ ಬ್ಲಾಕ್‌ಗೆ ಜೋರಾಗಿ ಒದ್ದು ಮುಂದೆ ಹೇಗೆ ಗುಂಡಿನ ಹಾಗೆ ಚಿಮ್ಮಬೇಕೆನ್ನುವುದನ್ನು ಕೂಲಂಕುಷವಾಗಿ ವೈಜ್ಞಾನಿಕವಾಗಿ ತಿಳಿಸಿ, ಅದನ್ನು ಹಂತ ಹಂತವಾಗಿ, ಸತತ ಮತ್ತು

Digitised by Bharatavani, CIIL

ಸುದೀರ್ಘ ತರಬೇತಿಯಿಂದ ಯಾಂತ್ರಿಕತೆ ತರುವದೇ ವಿಶೇಷ ಕೌಶಲ್ಯವಾಗಿದೆ.

ಕ್ರೀಡಾ ಚಟುವಟಿಕೆಗಳನ್ನು ಬೋಧಿಸುವಾಗ ಕೌಶಲ್ಯಗಳನ್ನು ಹಂತ ಹಂತವಾಗಿ ಕಲಿಸುತ್ತಾ ಒಟ್ಟು ಕೌಶಲ್ಯಗಳನ್ನು ಹೇಳಿಕೊಡಬೇಕು. ಈಗ ಕ್ರೀಡಾ ಕೌಶಲ್ಯಗಳನ್ನು ಹೇಳಿ ಕೊಡಲು ಅನೇಕ ಹೊಸ ಹೊಸ ತಂತ್ರಜ್ಞಾನ, ಆಧುನಿಕ ಕ್ರೀಡಾ ಸಾಮಗ್ರಿ, ಯಂತ್ರ ಮುಂತಾದವುಗಳನ್ನು ಉಪಯೋಗಿಸಿಕೊಂಡು ಕೌಶಲ್ಯಗಳನ್ನು ಕಲಿಸಬಹುದಾಗಿದೆ.

ಕ್ರೀಡಾ ಪಟುಗಳನ್ನು ಸ್ಪರ್ಧೆಗಳಿಗೆ ಆಯ್ಕೆಮಾಡುವುದಕ್ಕಿಂತಲೂ ಮುಂಚಿತವಾಗಿಯೇ ಕ್ರೀಡಾಪಟುಗಳನ್ನು ವೈಯಕ್ತಿಕ, ಜೋಡು ಅಥವಾ ಗುಂಪು ಆಟಗಳು ಇವುಗಳಲ್ಲಿ ಯಾವ ಸ್ಪರ್ಧೆಗಳಿಗೆಂದು ತಿಳಿದಿರಬೇಕು.

ಸ್ಪರ್ಧೆ ನಡೆಯುವ ಸ್ಥಳ, ಅಲ್ಲಿಯ ವಾತಾವರಣ, ಆಹಾರ, ವಿಹಾರ, ಕ್ರೀಡಾ ಸ್ಪರ್ಧೆಗಳ ಮಟ್ಟ ಭಾಗವಹಿಸುವ ತಂಡಗಳ, ಸಂಪೂರ್ಣ ಮಾಹಿತಿ ಮುಂತಾದವುಗಳನ್ನು ಆಧರಿಸಿ ಕ್ರೀಡಾ ಪಟುಗಳನ್ನು ಆಯ್ಕೆಮಾಡಬೇಕು. ಒಟ್ಟಿನಲ್ಲಿ ಕೌಶಲ್ಯಗಳ ಬೋಧನೆ, ತಂಡಗಳನ್ನು ಅತ್ಯಂತ ಉತ್ಕೃಷ್ಟ ರೀತಿಯಲ್ಲಿ ಸಿದ್ಧಗೊಳಿಸುವಲ್ಲಿ ದೈಹಿಕ ಶಿಕ್ಷಕನ ಪಾತ್ರ ಅತ್ಯಂತ ಮಹತ್ವಪೂರ್ಣವಾಗಿದೆ.

**ಕ್ರೀಡಾ ಕೌಶಲ್ಯಗಳನ್ನು ಬೋಧಿಸುವಲ್ಲಿ ಮತ್ತು ಬೆಳೆಸುವುದರಲ್ಲಿ ದೈಹಿಕ ಶಿಕ್ಷಕರ ಪಾತ್ರ:**

ದೈಹಿಕ ಶಿಕ್ಷಕರಾದವರು ಪರಿಣಾಮಕಾರಿಯಾಗಿ ಕ್ರೀಡಾ ಕೌಶಲ್ಯಗಳನ್ನು ಕಲಿಸಲು, ಬೆಳೆಸಲು ಮತ್ತು ಇನ್ನಿತರ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸಲು ಈ ವಿಶೇಷ ಗುಣಗಳನ್ನು ಹೊಂದಿರಬೇಕು.

1. ಅವರು ಸಾಮಾನ್ಯ ಮತ್ತು ಕ್ರೀಡೆಗೆ ಸಂಬಂಧಿಸಿದ ವಿದ್ಯಾರ್ಹತೆ, ತರಬೇತಿ ಮತ್ತು ಅನುಭವ ಹೊಂದಿರಬೇಕು.
2. ಉತ್ತಮವಾದ ಆರೋಗ್ಯ ಮತ್ತು ದೈಹಿಕ ನಿಲುವಿರಬೇಕು.

**ದೈಹಿಕ ಶಿಕ್ಷಕನ ಗುಣ, ಜ್ಞಾನ ಮತ್ತು ಜವಾಬ್ದಾರಿಗಳು:**

ದೈಹಿಕ ಶಿಕ್ಷಕನು ಮುಖ್ಯವಾಗಿ ತತ್ವಜ್ಞಾನಿಯಾಗಿರಬೇಕಾಗುತ್ತದೆ. ಮಕ್ಕಳ ಸಾಮಾನ್ಯ ಕಲ್ಯಾಣ ಮತ್ತು ವ್ಯಕ್ತಿಯ ಒಟ್ಟು ಅಭಿವೃದ್ಧಿಯೇ ಶಿಕ್ಷಕನ ಸಾಮಾನ್ಯ ದೃಷ್ಟಿಕೋನವಿರಬೇಕು. ಇದಕ್ಕಾಗಿ ಶಿಕ್ಷಕನು ಆದರ್ಶ ಪರಿಸರ ಉಂಟುಮಾಡಲು ಪ್ರಯತ್ನಿಸಿ ಪ್ರತಿಯೊಂದು ಮಗುವಿನ ಸುಪ್ತ ಶಕ್ತಿಯನ್ನು ತಿಳಿಯಲು ಮಾರ್ಗದರ್ಶಕನೂ, ವಿಮರ್ಶಕನೂ, ಪ್ರಯೋಗಶೀಲನೂ, ತಾಳ್ಮೆಯುಳ್ಳವನೂ ಮತ್ತು ಅವಿಶ್ರಾಂತ ಕೆಲಸ ಮಾಡುವ ಶಕ್ತಿಯುಳ್ಳವನೂ ಆಗಿರಬೇಕು. ಶಿಕ್ಷಕನು ಶಿಸ್ತಿನವನಿರಬೇಕು. ಶುಚಿತ್ವವುಳ್ಳವನೂ, ಅಚ್ಚುಕಟ್ಟುಳ್ಳವನೂ, ಆಕರ್ಷಕ ವ್ಯಕ್ತಿತ್ವವುಳ್ಳವನೂ ಉತ್ಸಾಹಿಯೂ ಆಗಿರಬೇಕು.

ಒಳ್ಳೆ ಶಿಕ್ಷಕ ಒಬ್ಬ ಒಳ್ಳೆ ವಿದ್ಯಾರ್ಥಿಯೂ ಆಗಿರುತ್ತಾನೆ. ಅವನು ಯಾವಾಗಲೂ ತನ್ನ ವಿಷಯದ ಬಗ್ಗೆಯೂ, ತನ್ನ ವೃತ್ತಿಯ ತತ್ವಜ್ಞಾನದಲ್ಲಿಯೂ ಹೆಚ್ಚು ಆಳವಾದ ಹಾಗೂ ಅತಿ ಹೊಸದಾದ ಜ್ಞಾನ ಪಡೆಯಲು ಇಚ್ಛಿಸುತ್ತಾನೆ ಮತ್ತು ಪ್ರಯತ್ನಿಸುತ್ತಾನೆ. ಒಳ್ಳೆ ಶಿಕ್ಷಕನ ನಿರ್ಣಯವು ಯಾವಾಗಲೂ ಬುದ್ಧಿಯುತವಾಗಿರುತ್ತದೆ. ಅದು ನಿಷ್ಪಕ್ಷಪಾತವಾಗಿರುತ್ತದೆ. ಶಿಕ್ಷಕನು ವಿದ್ಯಾರ್ಥಿಯ, ಪಾಲಕರ ಅಥವಾ ತಂದೆ ತಾಯಿಯರ ಜೊತೆಗೆ ನಿಷ್ಕರ್ಷಿಸಿ ಅವನಿಗೆ ಯೋಗ್ಯ ಮಾರ್ಗದರ್ಶನ ಮಾಡಲು ಸದಾ ಇಚ್ಛಿಸುತ್ತಾನೆ.

ಒಳ್ಳೆ ದೈಹಿಕ ಶಿಕ್ಷಕನು ತಾನು ಮಾತಾಡುವ, ಕಲಿಸುವ ನಡೆದುಕೊಳ್ಳುವ ಎಲ್ಲ ಸಂಗತಿಗಳಿಗೆ ಜವಾಬ್ದಾರಿಯುಳ್ಳವನಿರುತ್ತಾನೆ. ಅವನು ತನ್ನ ವಿದ್ಯಾರ್ಥಿಗಳ ಅಭ್ಯಾಸ ಮತ್ತು ನೀತಿಗಳನ್ನು ರೂಪಿಸುವಲ್ಲಿ ಜವಾಬ್ದಾರಿಯುಳ್ಳವನಿರುತ್ತಾನೆ. ಅವನು ತನ್ನ ವಿದ್ಯಾರ್ಥಿಯ ಅಭ್ಯಾಸ ಮತ್ತು ನೀತಿಗಳನ್ನು ರೂಪಿಸುವಲ್ಲಿ ಜವಾಬ್ದಾರಿಯನ್ನು ತಳೆಯುತ್ತಾನೆ. ಇವೆಲ್ಲವೂ ಹೃತ್ಪೂರ್ವಕವಾದ ಪರಿಶ್ರಮದಿಂದಲೂ, ನಿಷ್ಕಳಂಕ ನಡತೆಯಿಂದಲೂ ಸಾಧ್ಯವಾಗುವವು.

ದೈಹಿಕ ಶಿಕ್ಷಕನೂ ಕಲಿಸುವವನೇ, ಅಂದರೆ ಶಿಕ್ಷಕನೇ ಆದರೂ, ಸಾಮಾನ್ಯ ಶಿಕ್ಷಕನಿಗಿಂತ ಭಿನ್ನವಾಗಿರತ್ತಾನೆ. ದೈಹಿಕ ಶಿಕ್ಷಕನು ಮಹತ್ವಾಕಾಂಕ್ಷಿಯಾಗಿರುತ್ತಾನೆ. ಅವನು ಆದರ್ಶಕ್ಕಿಂತ ಹೆಚ್ಚು ಪ್ರಾಯೋಗಿಕ ಮನೋವೃತ್ತಿಯವನಾಗಿರುತ್ತಾನೆ. ತಾನು ಆರಿಸಿದ ವಿದ್ಯಾರ್ಥಿಗಳು ಶ್ರೇಷ್ಠ ಮಟ್ಟದ ಆಟಗಾರರಾಗಬೇಕೆಂಬುದೇ ಅವನ ಗುರಿ ಇರುತ್ತದೆ. ದೈಹಿಕ ಶಿಕ್ಷಕನ ಪ್ರತಿಷ್ಠೆಯು ಇದರಲ್ಲಿ ಅಡಗಿದೆ. "ತನ್ನ ವಿದ್ಯಾರ್ಥಿಗಳು ಎಲ್ಲ ಪಂದ್ಯಗಳನ್ನು ಗೆಲ್ಲಬೇಕು. ಪ್ರಥಮರು ಅಲ್ಲದಿದ್ದರೆ ದ್ವಿತಿಯರಾದರೂ ಆಗಬೇಕು. ಆಗ ಎಲ್ಲರೂ ತನ್ನನ್ನು ಗೌರವದಿಂದ ಕಾಣುತ್ತಾರೆ" ಎನ್ನುವ ಮನೀಷೆಯುಳ್ಳವನಿರುತ್ತಾನೆ.

ಆದ್ದರಿಂದ ಅವನು ಕ್ರೀಡಾ ಶಿಕ್ಷಣಕ್ಕೆ, ವಿಶಿಷ್ಟ ಲಕ್ಷಣಗಳುಳ್ಳ ಪಟುಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಅವರ ಶಾರೀರಿಕ ರಚನೆ, ಕ್ರಿಯಾಶಕ್ತಿ, ಮನೋವೃತ್ತಿಗೆ ಯೋಗ್ಯವಾದ ತರಬೇತಿ ಕ್ರಮವನ್ನು ಶಾಸ್ತ್ರಸಮ್ಮತವಾಗಿ ರೂಪಿಸುತ್ತಾನೆ. ಅದನ್ನು ನಿಷ್ಠೆಯಿಂದ ತಪ್ಪದೇ ಕಾರ್ಯಗತ ಮಾಡಿ ಅದರ ಪರಿಣಾಮ ನೋಡಿ ಅದರಲ್ಲಿ ಬದಲಾವಣೆಯ ಅವಶ್ಯವಿದ್ದರೆ ಅದನ್ನೂ ಮಾಡುತ್ತಾನೆ.

ದೈಹಿಕ ಶಿಕ್ಷಕನಿಗೆ ಮನುಷ್ಯನ ಶರೀರ, ಮನಸ್ಸು ಇವು ಸಾಮಾನ್ಯ ಮತ್ತು ಅಸಾಮಾನ್ಯ ಸಂದರ್ಭಗಳಲ್ಲಿ ಹೇಗೆ ಕೆಲಸ ಮಾಡುತ್ತವೆಂಬುದನ್ನು ತಿಳಿದಿರಬೇಕು. ಕ್ರೀಡಾ ಪಟುವಿನ ಒಳ್ಳೆ ಕ್ರಿಯೆಗೆ ಮಾರ್ಗದರ್ಶನ ಮಾಡಲು, ಶರೀರ ಚಲನಶಾಸ್ತ್ರ, ಯಂತ್ರಶಾಸ್ತ್ರ ಮತ್ತು ಸೌಂದರ್ಯಶಾಸ್ತ್ರಗಳ ತತ್ವಗಳನ್ನು ಅರಿತಿರಬೇಕು. ಅವನು ಒಳ್ಳೆ ಪ್ರಚೋದಕನೂ, ವಿಮರ್ಶಾತ್ಮಕನೂ, ವಿಶ್ಲೇಷಕನೂ, ಮೆಚ್ಚುಗಾರ ಶಿಕ್ಷಕನೂ ಆಗಿರಬೇಕು. ತನ್ನ ವಿದ್ಯಾರ್ಥಿಗಳ ಪ್ರಗತಿ ಮತ್ತು ಒಳ್ಳೆ ಕ್ರೀಡಾ ಪಟುತ್ವದ ನೈತಿಕತೆ ಬೆಳೆಸುವ ಜವಾಬ್ದಾರಿಯನ್ನು ದೈಹಿಕ ಶಿಕ್ಷಕ ಅರಿತಿರಬೇಕು.

–ಪ್ರೊ. ಬಿರಾದಾರ ಎಲ್. ಎಸ್.

Digitised by Bharatavani, CIIL

## ಕ್ಲೋಸ್ಡ್ ಸರ್ಕಿಟ್ ಟಿ.ವಿ. (ಸಿ.ಸಿ.ಟಿ.ವಿ.)

ಒಂದು ನಿರ್ದಿಷ್ಟ ದೂರದರ್ಶನ ನಿಲಯದ ಮೂಲಕ ಕ್ಲೋಸ್ಡ್ ಸರ್ಕಿಟ್ ಟಿ.ವಿ. (C.C.T.V. – Closed Circuit Television) ಯ ದೃಶ್ಯಗಳನ್ನು ಪ್ರಸಾರ ಮಾಡುವುದಿಲ್ಲ. C.C.T.V. ಯನ್ನು ಹತ್ತಿರದ, ಸುತ್ತಮುತ್ತಲಿನಲ್ಲಿ ದೃಶ್ಯಗಳನ್ನು ನೋಡಲು ಮಾತ್ರ ಬಳಸಬಹುದಾಗಿದೆ. ಸರಳವಾಗಿ ಹೇಳುವುದಾದರೆ, C.C.T.V ಸಾಮಾನ್ಯ ವೀಕ್ಷಣೆಗೆ ಲಭ್ಯವಿಲ್ಲದೆ ಇರುವ ಒಂದು ನಿರ್ದಿಷ್ಟವಾಗಿ ಗುರುತಿಸಿದ ಕ್ಷೇತ್ರ ಅಥವಾ ವ್ಯವಸ್ಥೆಯ ಒಳಗಡೆ ಘಟನೆಯ ಬಿಂಬಗಳ ವಿದ್ಯುಜ್ಜನಿತ ಸಂವಹನ ಮತ್ತು ಗ್ರಹಿಸುವಿಕೆಗೆ ಅವಕಾಶ ಒದಗಿಸಿಕೊಡುವ ತಂತ್ರವಾಗಿದೆ. ಇದು ಧ್ವನಿ ಹಾಗೂ ಚಿತ್ರಗಳೆರಡನ್ನೂ ಏಕಕಾಲದಲ್ಲಿ ಒದಗಿಸಿಕೊಡುತ್ತದೆ ಎಂಬುದರ ಹೊರತಾಗಿ ಇದನ್ನು ಒಂದು ಒಳಸಂಪರ್ಕ ಅಥವಾ ಕೇಂದ್ರೀಯ ಧ್ವನಿವ್ಯವಸ್ಥೆಯು ನೀಡುವ ತಂತ್ರಗಳಿಗೆ ಹೋಲಿಸಬಹುದು. ಸಂವಹನ ಮೂಲಬಿಂದು ಮತ್ತು ಗ್ರಹಿಸುವ ಕ್ಷೇತ್ರಗಳು ಸಾಮಾನ್ಯವಾಗಿ ಏಕಾಕ್ಷ ತಂತಿಗಳೊಂದಿಗೆ ಸಂಪರ್ಕ ಹೊಂದಿರುತ್ತವೆ. C.C.TV ಯಲ್ಲಿ ರೂಢಿಯಲ್ಲಿರುವ ದೂರದರ್ಶನ ಛಾಯಾ ಚಿತ್ರಗ್ರಾಹಿಗಳು (Cameras) ಅಥವಾ ಕಡಿಮೆ ಬೆಲೆಯ ಛಾಯಾಚಿತ್ರಗ್ರಾಹಿಗಳನ್ನು ಬಳಸಬಹುದಾಗಿದೆ.

C.C.TV ಯು ಬಿತ್ತರಿತ/ಪ್ರಸಾರಿತ ದೂರದರ್ಶನದಂತೆ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ. ಅದು ಒಂದು ವಿಶೇಷ ವಿಧದ ಸೀಮಿತ ಉದ್ದೇಶದ ದೂರದರ್ಶನ ಸಾಧನವಾಗಿದೆ. ಇದನ್ನು ಖಾಸಗಿ ಸಂವಹನ ಮತ್ತು ಗ್ರಹಿಕೆಗಾಗಿ ಬಳಸಲಾಗುತ್ತದೆ. C.C.TV ಯ ದೃಶ್ಯಗಳನ್ನು ಕೇವಲ ಕೆಲವೇ ನಿರ್ದಿಷ್ಟ ಗ್ರಹಿಕೆದಾರರಿಂದ ಸ್ವೀಕರಿಸಲಾಗುತ್ತದೆ. ಏಕಾಕ್ಷ ತಂತಿಗಳನ್ನು ಬಳಸುವುದರ ಹೊರತಾಗಿ, C.C.TV ಯಲ್ಲಿ ರವಾನಿಸುವ ಮತ್ತು ಗ್ರಹಿಸುವ ಬಿಂಬಗಳನ್ನು ಒಂದು ಸೂಕ್ಷ್ಮ ತರಂಗ ವ್ಯವಸ್ಥೆಯ ವಿಕಿರಣದ ಕಿರಿದಾದ ಶಲಾಕೆಯೊಂದಿಗೆ ಜೊತೆಗೂಡಿಸಬಹುದಾಗಿದೆ.

### C.C.TV ಯ ಘಟಕಗಳು:

ಛಾಯಾಚಿತ್ರಕ್ಕಾಗಿ ವ್ಯವಸ್ಥೆ ಮತ್ತು ನಿಯಂತ್ರಕ ವ್ಯವಸ್ಥೆ C.C.TV ಯ ಮುಖ್ಯ ಘಟಕಗಳಾಗಿವೆ. ದೂರದರ್ಶನ ಛಾಯಾಚಿತ್ರಗ್ರಾಹಿ ವ್ಯವಸ್ಥೆಯನ್ನು, ಏಕಾಕ್ಷ ತಂತಿಯ ಮೂಲಕ ನಿಯಂತ್ರಣಕ್ಕೆ ಜೋಡಿಸಲಾಗುತ್ತದೆ. ಈ ಛಾಯಾಚಿತ್ರಗ್ರಾಹಿಯು ಸಾಕಷ್ಟು ಸಂಕ್ಷಿಪ್ತವಾಗಿ ಅಚ್ಚುಕಟ್ಟಾಗಿದೆ ಮತ್ತು ಎಲ್ಲಿ ಬೇಕಾದರೂ ಸ್ಥಾಪಿಸಬಹುದಾಗಿದೆ. ಒಳನುಗ್ಗಿದ ಆಕ್ರಮಣಕಾರರನ್ನು ಕತ್ತಲೆಯಲ್ಲಿ ಅವುಗಳ ಉಷ್ಣದ ಪ್ರಸರಣ ಮೂಲಕ ಕಂಡುಹಿಡಿಯಬೇಕಾದಾಗ ಅವರಕ್ತ/ಅವರೋಹಿತ (Infrared/Ultraviolet) ಛಾಯಾಗ್ರಾಹಿಗಳನ್ನು ಬಳಸಬಹುದು.

ದೂರದಲ್ಲಿ ಇರುವ ವಸ್ತುಗಳನ್ನು ಹತ್ತಿರದಲ್ಲಿ ಇರುವ ಹಾಗೆ ಕಾಣಿಸುವಂತೆ ಮಾಡಲು, 'ದೂರ ಛಾಯಾಚಿತ್ರ' ಮಸೂರದಲ್ಲಿ ಇರುವಂತೆ ಹೆಚ್ಚಿನ ನಾಭಿದೂರ (Focal Distance) ಇರುವ ಮಸೂರಗಳನ್ನು ಬಳಸಬಹುದು. ದೂರ ನಿಯಂತ್ರಣಗಳನ್ನು ಸಾಧಿಸಲು, 'ದೃಷ್ಟಿ ಕೇಂದ್ರೀಕರಿಸುವ' ಮತ್ತು ಕಣ್ಣೆಬರೆ ತೆರೆಯುವಿಕೆಗಳೆರಡನ್ನೂ ನಿಯಂತ್ರಿಸುವ ಮೋಟಾರನ್ನು ಒಳಗೊಂಡ ವಿಶೇಷ ಮಸೂರಗಳನ್ನು ಅಳವಡಿಸಲಾಗಿರುತ್ತವೆ. Pang and Tilt Mount ದೂರ ನಿಯಂತ್ರಣದ ಇನ್ನೊಂದು ಮಾರ್ಗವಾಗಿದೆ. ಇದು ಎರಡು ಛಾಯಾಗ್ರಹಿಗಳನ್ನು ಒಳಗೊಂಡಿದೆ. ಒಂದನ್ನು ಎದುರಿಗೆ ಘಟಿಸುತ್ತಿರುವ ಸನ್ನಿವೇಶವನ್ನು ಸೆರೆ ಹಿಡಿಯಲು ಇನ್ನೊಂದನ್ನು, ಕ್ಯಾಮರಾವನ್ನು ಓರೆಯಾಗಿಸಲು ಹಾಗೂ ತಿರುಗಿಸಿ ಮೇಲೆ ಅಥವಾ ಕೆಳಗೆ ಸರಿಸಲು ಬಳಸಲಾಗುತ್ತದೆ. ಕೆಲವು ಸಲ ವಿಶೇಷವಾಗಿ ನೀರೊಳಗಿನ ಛಾಯಾಗ್ರಾಹಿಗಳಿಗೆ, ಹೊರಗಡೆಯಲ್ಲಿ ನಿರ್ಮಿಸಿದ ಹವಾಬೋಧ್ಯ ದೂರ-ನಿಯಂತ್ರಣದ ಸೌಲಭ್ಯವನ್ನು ಬಳಸಲಾಗುತ್ತದೆ.

ಬಹು ಛಾಯಾಗ್ರಾಹಿ ಕಣ್ಣಾವಲಿನ ವ್ಯವಸ್ಥೆಗಳಲ್ಲಿ, ಪ್ರತಿ ಛಾಯಾಗ್ರಾಹಿಯಲ್ಲಿ ಕಾರ್ಯನಿರ್ವಾಹಕನೂ ತನ್ನದೇ ಆದ ಸ್ವ ನಿಯಂತ್ರಕ ಮತ್ತು ದೃಶ್ಯವನ್ನು ಅಂತಿಮ ಫಲಿತಕ್ಕಾಗಿ ಆಯ್ಕೆಮಾಡಿಕೊಂಡಿರುತ್ತಾನೆ. ಒಂದು ಶ್ರವ್ಯ-ದೃಶ್ಯ ಮಿಶ್ರಣದ ಮೂಲಕ ಶ್ರವಣ ಮತ್ತು ದೃಶ್ಯ ಸಂಕೇತಗಳನ್ನು ಒಟ್ಟಾಗಿ ಮಿಶ್ರ ಮಾಡಲಾಗುತ್ತದೆ ಮತ್ತು ಅಗತ್ಯವಿದ್ದರೆ, ಬಲವರ್ಧಕಗಳನ್ನು ಉಪಯೋಗಿಸುವುದರ ಮೂಲಕ C.C.TV ಯ ಸಂಕೇತಗಳ ಬಲವರ್ಧನೆ ಮಾಡಬಹುದು.

### C.C.TV ಯ ಅನುಕೂಲಗಳು:

1. C.C.TV ಯು ತರಗತಿಯನ್ನು ಮೀರಿ ಒಂದು ಅಥವಾ ಹೆಚ್ಚು ಸ್ಥಳಗಳಲ್ಲಿ ಬೋಧನೆಯ ವ್ಯಾಪ್ತಿಯನ್ನು ವಿಸ್ತರಿಸುತ್ತದೆ.
2. ಬಹಿರಂಗ ಪ್ರದರ್ಶನ/ಪ್ರಯೋಗ ಮಾಡುವಾಗ ಬೋಧಕನು ವಿದ್ಯುಜ್ಜನಕದಿಂದ ವಸ್ತುಗಳನ್ನು ದೊಡ್ಡದಾಗಿ ಕಾಣುವಂತೆ ಮಾಡುವ ಸೌಲಭ್ಯವನ್ನು ಒದಗಿಸುತ್ತದೆ.
3. ದೈಹಿಕವಾಗಿ ಚಲಿಸದೆಯೆ, ಸಂಸ್ಥೆಗಳ ನಡುವೆ ಸೌಲಭ್ಯಗಳ ಹಾಗೂ ವಸ್ತುಗಳ ವಿನಿಮಯಕ್ಕೆ ಅವಕಾಶಗಳನ್ನು ಇದು ಒದಗಿಸಿಕೊಡುತ್ತದೆ.
4. ಇದು ಸಂಸ್ಥೆಗಳಿಗೆ ತಮ್ಮದೇ ಆದ ಅನುಬಂಧಗಳಿಗೆ ಮತ್ತು ಅಗತ್ಯಗಳಿಗೆ ಅನುಗುಣವಾಗಿ ದೂರದರ್ಶನದ ಮೂಲಕ ಬೋಧನೆಯನ್ನು ಒದಗಿಸುವ ಸಾಮರ್ಥ್ಯವನ್ನು ದೊರಕಿಸಿಕೊಡುತ್ತದೆ.
5. ಅಪಾಯ ಮತ್ತು ಸುರಕ್ಷತೆಯ ಸಂದರ್ಭದಲ್ಲಿ ವೀಕ್ಷಕರಿಗೆ ಸಹಾಯಕವಾಗಿದೆ. (ಅಂದರೆ ಸ್ಥಳಕ್ಕೆ ಹೋಗದೆ ಅಪಾಯಕ್ಕೆ ಸಿಲುಕದೆ C.C.TV ಯ ಮೂಲಕ ಕಾರ್ಯ ನಿರ್ವಹಿಸಬಹುದು.)
6. ಒಂದೇ ಸ್ಥಳದಲ್ಲಿದ್ದುಕೊಂಡು ವಿವಿಧ ಸ್ಥಳಗಳಲ್ಲಿ ನಡೆಯುತ್ತಿರುವ

Digitised by Bharatavani, CIIL

ಚಟುವಟಿಕೆಗಳನ್ನು ಏಕಕಾಲದಲ್ಲಿ ನಿಯಂತ್ರಿಸಲು ಸಾಧ್ಯವಾಗುತ್ತದೆ.

**ಅನಾನುಕೂಲಗಳು:**

1. C.C.TV ಯು ತರಗತಿಯನ್ನು ವಿವಿಧ ಸಾಧನಗಳಿರುವ ಕಲಾಗಾರವಾಗಿ ಪರಿವರ್ತಿಸುತ್ತದೆ. ಇದು ಸ್ವಾಭಾವಿಕವಾದ ವಾತಾವರಣದ ಮೇಲೆ ಪ್ರಭಾವ ಬೀರುತ್ತದೆ.
2. ಇದು ವಿದ್ಯುತ್ ಶಕ್ತಿಯ ಲಭ್ಯತೆ ಮತ್ತು ಪ್ರತಿಯೊಂದು ಘಟಕದ ಸರಿಯಾದ ಕಾರ್ಯನಿರ್ವಹಿಸುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ.
3. ಇದಕ್ಕೆ ಪೂರ್ವಭಾವಿ ಯೋಜನೆ ಮತ್ತು ಸಾಧನಗಳನ್ನು ಸ್ಥಾಪಿಸುವಿಕೆಯ ಅಗತ್ಯವಿರುತ್ತದೆ.

**ಅನ್ವಯಿಕತೆಗಳು:**

C.C.TV ಯು ಶಿಕ್ಷಣ, ತರಬೇತಿ, ಉದ್ಯಮ, ವ್ಯಾಪಾರ, ವಿಜ್ಞಾನ, ವೈದ್ಯಕೀಯ ಹಂತದ ಮಾನವನ ಜವಾಬ್ದಾರಿಯುತ ಕಾರ್ಯಗಳಲ್ಲಿ ಅನೇಕ ರೀತಿಯ ಅನ್ವಯಿಕತೆಯನ್ನು ಹೊಂದಿದೆ. ಅದರ ಕೆಲವು ಪ್ರಮುಖವಾದ ಅನ್ವಯಿಕತೆಗಳು ಕೆಳಗಿನಂತೆ ಇವೆ.

**1. ದೃಷ್ಟಿಗೋಚರ ಸಾಧನವಾಗಿ ಬಳಕೆ:**

ನಿದರ್ಶನಗಳನ್ನು/ಪ್ರದರ್ಶನಗಳನ್ನು ಒದಗಿಸುವ ಎಲ್ಲ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆಗಳು ಇದನ್ನು ಬಳಸಬಹುದು. ಉದಾಹರಣೆಗೆ ಶಿಕ್ಷಕನು ಒಂದು ಕೋಶವನ್ನು ಸೂಕ್ಷ್ಮದರ್ಶಕದ ಮೂಲಕ ವೀಕ್ಷಿಸುವ ಕೌಶಲದ ಕಾರ್ಯಾಚರಣೆಯಾಗಿರಬಹುದು ಅಥವಾ ಶಸ್ತ್ರ ಚಿಕಿತ್ಸಾಲಯದಲ್ಲಿ ಕೈಗೊಳ್ಳುವ ಒಂದು ಶಸ್ತ್ರಚಿಕಿತ್ಸೆಯಾಗಿರಬಹುದು.

**2. ಒಂದು ಉಪನ್ಯಾಸದ ವಿಸ್ತರಣೆಯ ಸಾಧನವಾಗಿ ಬಳಕೆ:**

ವಿದ್ಯಾರ್ಥಿಗಳನ್ನು ಅವರ ಶಾಲೆಗಳಿಂದ ಚಲಿಸದೆಯೆ ವಿವಿಧ ಶಾಲೆಗಳಲ್ಲಿಯ ತರಗತಿಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸಿ ಪ್ರೇಕ್ಷಕರನ್ನು ಒಟ್ಟುಗೂಡಿಸುವಲ್ಲಿ ಇದು ಉಪಯುಕ್ತವಾಗಿದೆ. ಇದೇ ರೀತಿಯಲ್ಲಿ, ಸಮೂಹ ಬೋಧನಾ ಸಂದರ್ಭದಲ್ಲಿ, ಶಿಕ್ಷಕರ ಉಪಸ್ಥಿತಿಯು ಇಲ್ಲದೆ ಇರುವಾಗ ಇದು ಒಬ್ಬರಿಗಿಂತ ಹೆಚ್ಚು ಶಿಕ್ಷಕರು ಭೌತಿಕ ಬೋಧನೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಒಂದು ದೊಡ್ಡ ಪ್ರೇಕ್ಷಕರ ಸಮೂಹವು ಒಂದು ದೊಡ್ಡ ಕ್ಷೇತ್ರದಲ್ಲಿ ಹರಡಿಕೊಂಡಾಗ ಶೈಕ್ಷಣಿಕ ಕಾರ್ಯಕ್ರಮದ ಹೆಚ್ಚಿನ ಪ್ರಸ್ತುತೀಕರಣಗಳನ್ನು ಇದರಿಂದ ಮಾಡಬಹುದಾಗಿದೆ.

**3. ತರಬೇತಿಯಲ್ಲಿ ಒಂದು ಸಾಧನವಾಗಿ ಬಳಕೆ:**

ಪ್ರಶಿಕ್ಷಣಾರ್ಥಿಗಳ ದೊಡ್ಡ ಸಮೂಹವನ್ನು, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸಮೂಹವನ್ನು ಅವರ ಗಮನಕ್ಕೆ



ಬರದಂತೆ ಸಾಮಾನ್ಯ ಪರಿಸ್ಥಿತಿಗಳಲ್ಲಿ ಯಾವುದೇ ಅವಧಾನ ಚಾಂಚಲ್ಯಕೆ ಅವಕಾಶವಿಲ್ಲದಂತೆ, ವೀಕ್ಷಿಸಲು ಅ.ಅ.ಖಿಗಿ ಯನ್ನು ಬಳಸಬಹುದು.

**4. ನಿರ್ವಹಣಾ ಸಾಧನವಾಗಿ ಬಳಕೆ:**

ಸಂಸ್ಥೆಯ ಮುಖ್ಯಸ್ಥರು ಯಾವುದೇ ಅಡಚಣೆ ಇಲ್ಲದೆ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕಾರ್ಯಾಚರಣೆಯನ್ನು ವೀಕ್ಷಿಸಲು ಸಾಧ್ಯವಾಗುತ್ತದೆ. ನಿರ್ವಹಣಾಕಾರರು ಕಾರ್ಯಾಚರಣೆಯನ್ನು 'ವೀಕ್ಷಿಸಬಹುದು' ಎನ್ನುವ ಸತ್ಯಾಂಶವು ಅಧೀನದಲ್ಲಿರುವವರಲ್ಲಿ "ಕರ್ತವ್ಯ ಪ್ರಜ್ಞೆಯನ್ನು" ಉಂಟು ಮಾಡುತ್ತದೆ. ಒಂದು ಸಂಸ್ಥೆಯಲ್ಲಿ ಶಿಸ್ತನ್ನು ಪಾಲನೆ ಮಾಡುವುದರಲ್ಲಿ ಸಹ ಇದು ಸಹಾಯಕವಾಗಿದೆ.

**5. ಒಂದು ದೂರದರ್ಶನ/ವೀಡಿಯೋ ಪರದೆಯಾಗಿ ಬಳಕೆ:**

C.C.TV ನಿಯಂತ್ರಣದ ಕೊಠಡಿಯಿಂದ ಏಕಕಾಲದಲ್ಲಿ ಬಿಂಬಗಳ ಸಜೀವ ದೂರ ಪ್ರಸಾರ (Live Telecast) ಕಾರ್ಯಕ್ರಮಗಳ ಮತ್ತು ವೀಡಿಯೋ ಮುದ್ರಿತ ಕಾರ್ಯಕ್ರಮಗಳಲ್ಲಿ ಇದನ್ನು ಬಳಸಬಹುದು. ವಾಹಕಗಳ ಸಾಮರ್ಥ್ಯವನ್ನು ಹೆಚ್ಚಿಸಿದರೆ ಒಂದಕ್ಕಿಂತ ಹೆಚ್ಚು ಕಾರ್ಯಕ್ರಮಗಳನ್ನು ಒಂದಕ್ಕಿಂತ ಹೆಚ್ಚು ತರಗತಿಗಳಿಗೆ ಏಕಕಾಲದಲ್ಲಿ ಪ್ರಸಾರ ಮಾಡಲು ಸಾಧ್ಯವಾಗುತ್ತದೆ.

**–ಡಾ. ಜಾನಕಿ ಎಂ.**

## ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಮತ್ತು ಸಂಕುಲ ಸಂಪನ್ಮೂಲ ಕೇಂದ್ರಗಳು

ಅಧ್ಯಾಪಕ ಶಿಕ್ಷಣವು ಅವರನ್ನು ಖಚಿತ ಗುರಿಯತ್ತ ಮಾರ್ಗದರ್ಶಿಸಲಾಗುವ ಮತ್ತು ಶಿಕ್ಷಕ ವೃತ್ತಿಗೆ ಪರಿಚಯಿಸುವ ಮತ್ತು ಅವರ ಔಪಚಾರಿಕ ಸೇವಾಪೂರ್ವ ತರಬೇತಿಯೊಂದಿಗೆ ಕೊನೆಗೊಳ್ಳುವುದಿಲ್ಲ. ಯಾವುದೇ ವೃತ್ತಿಯು ಕೇವಲ ಸೇವಾಪೂರ್ವ ಶಿಕ್ಷಣ ಮತ್ತು ತನ್ನ ಸದಸ್ಯರ ಪ್ರಶಿಕ್ಷಣ ಇವುಗಳಿಂದ ಮಾತ್ರ ತೃಪ್ತಿಪಡಿಸಲು ಸಾಧ್ಯವಿಲ್ಲ. ಏಕೆಂದರೆ, ಹಾಗಾದಲ್ಲಿ ಅವರು ಆಯಾ ಕ್ಷೇತ್ರದ ಹೊಸ ಬೆಳವಣಿಗೆಗಳ ಬಗ್ಗೆ ಅಜ್ಞಾನಿಗಳಾಗಿ ಉಳಿದಿದ್ದಾರೆ ಎಂದೇ ಅರ್ಥವಾಗುತ್ತದೆ. ಇದು ಅಧ್ಯಾಪಕ ವೃತ್ತಿಯ ವಿಷಯದಲ್ಲಿಯೂ ಸತ್ಯವೇ. ಹೆಂಡರ್‌ಸನ್ (1978) ಹೀಗೆ ಹೇಳಿದ್ದಾನೆ.

"ಸೇವೆಯಲ್ಲಿರುವ ಅಧ್ಯಾಪಕರ ಮುಂದುವರೆದ ತರಬೇತಿ ಟಾನಿಕ್‌ನಂತೆ ದೇಹವನ್ನು ವಿವಿಧ ರೋಗಗಳಿಂದ ರಕ್ಷಿಸುವ ಚುಚ್ಚುಮದ್ದಿನಂತೆ ಕೆಲಸ ಮಾಡುತ್ತದೆ ಮತ್ತು ಶಿಕ್ಷಕರನ್ನು ಬಳಲಿಸುವ ಸಾಮಾನ್ಯ ರೋಗವೆಂದರೆ ಅಪಧಮನಿ ಮಾಂದ್ಯ/ನೆತ್ತರು ನಾಳದ ಗಡುಸು (Arteriosclerosis) ಅಂದರೆ ದೀರ್ಘಕಾಲದ ಅಭ್ಯಾಸಗಳು ಅವರ ಎರಡನೆಯ ಸ್ವಭಾವವೇ ಆಗಿಬಿಟ್ಟು ಅವರ

Digitised by Bharatavani, CIIL

ಸುತ್ತಲಿನ ಮಾರ್ಪಟ್ಟ ಜಗತ್ತಿಗೆ ಸಂಬಂಧವಿಲ್ಲದಂತೆ ಹಳೆಯ ಚೆನ್ನಾಗಿ ಬೇರೂರಿದ ವರ್ತನೆಯಲ್ಲಿ ಸದಾ ತೊಡಗುವಂತೆ ಬಲವಂತಪಡಿಸುತ್ತವೆ".

ಜ್ಞಾನಸ್ಫೋಟ ಮತ್ತು ವಿಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಗಳು ಪಠ್ಯಕ್ರಮ ವ್ಯವಹಾರದ ಮತ್ತು ಮೌಲ್ಯಮಾಪನದ ಹೊಸ ವಿಧಾನಗಳನ್ನು ಅರಸುವಂತೆ ಮಾಡಿದೆ. ಶಿಕ್ಷಕರ ಅಭಿವೃದ್ಧಿಯ ದಿಶೆಯಲ್ಲಿ ಆಗಿರುವ ಬದಲಾವಣೆಗೆ ಮಾರ್ಪಡುತ್ತಿರುವ ಸಾಮಾಜಿಕ ಸನ್ನಿವೇಶವೂ ಸಹ ಒಂದು ಪ್ರಮುಖ ಸಂಗತಿಯಾಗಿದೆ. ಜೊತೆಗೆ, ಶಿಕ್ಷಕರಿಗೆ ತಮ್ಮ ಕೌಶಲ್ಯಗಳನ್ನು ಸುಧಾರಿಸಿಕೊಳ್ಳಲು ಅವಕಾಶಗಳ ಅವಶ್ಯಕತೆಯಿದೆ. ಮುಂದುವರೆದ ಶಿಕ್ಷಣವು ಔಪಚಾರಿಕ ಪ್ರಶಿಕ್ಷಣದ ಮಿತಿಗಳನ್ನು ಪರಿಹರಿಸುತ್ತದೆ. ಆದ್ದರಿಂದ ವೈಯಕ್ತಿಕ ನವೀಕರಣ ವ್ಯವಸ್ಥೆಯು ಶಿಕ್ಷಣವ್ಯವಸ್ಥೆಯನ್ನು ಸುಧಾರಿಸಲು ಶಿಕ್ಷಕರಿಗೆ ನೆರವಾಗುತ್ತದೆ.

ಅಧ್ಯಾಪಕ ಶಿಕ್ಷಣವು ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಇದರ ಸೇವಾಪೂರ್ವ ಹಾಗೂ ಸೇವಾಕಾಲೀನ ಘಟಕಗಳು ಪ್ರತ್ಯೇಕಗೊಳಿಸಲಾಗದ ಘಟಕಗಳಾಗಿವೆ. ಇಂದು ಹೊಸ ಶಿಕ್ಷಣ ನೀತಿ (1986) ಮತ್ತು ಇದರ ಪರಿಷ್ಕೃತ ಆವೃತ್ತಿ (1992) ಬಹಳ ಸ್ಪಷ್ಟವಾಗಿ ಹೇಳಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಜೀವನ ಪರ್ಯಂತ ಪುನರಾವರ್ತಕ ಹಾಗೂ ನಿರಂತರ ಶಿಕ್ಷಣವು ಶಾಲಾ ಶಿಕ್ಷಣದ ಗುಣಮಟ್ಟವನ್ನು ನಿರಂತರವಾಗಿ ಸುಧಾರಿಸಲು ಅವಶ್ಯಕವಾಗಿದೆ.

**ಮುಂದುವರೆದ ಶಿಕ್ಷಣ – ಭಾರತೀಯ ಸನ್ನಿವೇಶ:**

ರಾಷ್ಟ್ರಮಟ್ಟದಲ್ಲಿ NCERT ಹಾಗೂ ಹಾಗೂ ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ವಿಶ್ವವಿದ್ಯಾನಿಲಯ (National University of Educational planning and administration- NUPEA) ದಂತಹ ವಿವಿಧ ಸಂಸ್ಥೆಗಳು ಸೇವಾವಧಿ ಶಿಕ್ಷಣವನ್ನು ಅಧ್ಯಾಪಕ ಶಿಕ್ಷಕರು ಶಿಕ್ಷಣ ವ್ಯವಸ್ಥೆಯ ಮತ್ತು ರಾಜ್ಯಸ್ತರದ ಆಡಳಿತಗಾರರಿಗೆ ಒದಗಿಸುತ್ತಿದೆ. SCERT, IASE, DIET ಮತ್ತು CTEಗಳಂತಹ ರಾಜ್ಯಸ್ತರೀಯ ಸಂಸ್ಥೆಗಳು ಅಧ್ಯಾಪಕ ಶಿಕ್ಷಕರಿಗೆ, ಶಿಕ್ಷಕರಿಗೆ ಮತ್ತು ನಿರೀಕ್ಷಕರಿಗೆ ಸೇವಾವಧಿ ಶಿಕ್ಷಣವನ್ನು ಕೊಡುತ್ತಿವೆ. ಸ್ವಾತಂತ್ರಪೂರ್ವದ ದಿನಗಳಲ್ಲಿಯೂ ದೇಶದ ಹಲವು ರಾಜ್ಯಗಳಲ್ಲಿ ಶಿಕ್ಷಕ ಪ್ರಶಿಕ್ಷಣಕ್ಕಾಗಿ ಸ್ಥಳೀಯ ಮಟ್ಟದಲ್ಲಿ ಶಾಲಾ ಆವರಣಗಳು ಕಾರ್ಯಪ್ರವೃತ್ತವಾಗಿದ್ದವು. ಸ್ವಾತಂತ್ರ್ಯಾನಂತರದಲ್ಲಿ ಪ್ರಥಮ ಬಾರಿಗೆ 1948ರಲ್ಲಿ ಮಹಾರಾಷ್ಟ್ರದ ಶಿಕ್ಷಣ ಸಮಿತಿಯು ತದನಂತರ ಕೊಠಾರಿ ಶಿಕ್ಷಣ ಆಯೋಗ (1964–66) ಮತ್ತು NPE(1986) ನೀತಿಯು ಶಾಲಾಸಂಕೀರ್ಣಗಳ ಸ್ಥಾಪನೆಗೆ ಶಿಫಾರಸು ಮಾಡಿತು. ಶಿಕ್ಷಣದ ಜಿಲ್ಲಾ ಮತ್ತು ಸ್ಥಳೀಯ ಸ್ತರದ ನಿರ್ವಹಣೆಯ ವಿಷಯದಲ್ಲಿ ಕಾರ್ಯಕ್ರಮವು (Programme of Action, 1992) ಹೀಗೆ ಹೇಳಿದೆ: "ನಿಯಮ ಮತ್ತು ವರ್ತನೆಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅನುಭವ ಹಾಗೂ ಸೌಲಭ್ಯಗಳ ವಿನಿಮಯವನ್ನು ಸಾಧ್ಯವಾಗಿಸಲು ಶಿಕ್ಷಕರಲ್ಲಿ ವೃತ್ತಿಪರತೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಸಹಕ್ರಿಯಾತ್ಮಕ ಸಂಬಂಧಗಳನ್ನು ಒದಗಿಸಲು ಶಾಲಾ ಸಂಕೀರ್ಣಗಳನ್ನು ನಮ್ಯತೆಯ ಮಾದರಿಯ ಜಾಲಬಂಧ ಸಂಸ್ಥೆಗಳ ರೂಪದಲ್ಲಿ (Network Institutions) ಉನ್ನತೀಕರಿಸಲಾಗುವುದು". ಶಾಲಾ ಸಂಕೀರ್ಣಗಳು ಕ್ಷೇತ್ರ ಯೋಜನೆಯ ವ್ಯವಹಾರ್ಯಘಟಕದ ರೂಪದಲ್ಲಿ ಕಾರ್ಯನಿರ್ವಹಿಸಬೇಕೆಂದು ನಿರೀಕ್ಷಿಸಲಾಗಿದೆಯಲ್ಲದೆ ಇವು 8–10 ಸಂಸ್ಥೆಗಳ ಒಂದು ಕ್ಲಸ್ಟರ್ (ಸಂಕುಲ) ರೂಪಿಸಿಕೊಂಡು ಸಂಪನ್ಮೂಲಗಳು ಸಿಬ್ಬಂದಿ, ಸಾಮಗ್ರಿ, ಬೋಧನಾ ಸಾಮಗ್ರಿಗಳ ಪರಸ್ಪರ ವಿನಿಮಯ ಮಾಡಿಕೊಂಡು ಅವುಗಳನ್ನು ಹಂಚಿಕೆಯ ಆಧಾರದ ಮೇಲೆ ಉಪಯೋಗಿಸುತ್ತಾ ತಮ್ಮನ್ನು ತಾವು ಪರಸ್ಪರ ಪುನರ್ಬಲನಗೊಳಿಸಿಕೊಳ್ಳಬೇಕು ಎಂದು ನಿರೀಕ್ಷಿಸಲಾಗಿದೆ.

ಕಾಲಾನುಕ್ರಮದಲ್ಲಿ ಶಾಲಾ ಸಂಕೀರ್ಣಗಳು ಪೂರ್ಣವಾಗಿ ವಿಕಸನಗೊಂಡ ನಂತರ ಶೈಕ್ಷಣಿಕ ಭೂಪಟ ರಚನೆ, ಸಂಸ್ಥೆಗಳನ್ನು ಶ್ರೇಣಿಬದ್ಧಗೊಳಿಸುವಿಕೆ ಮತ್ತು ಪ್ರತ್ಯೇಕ ಶಾಲೆಗಳ ಗುಣದೋಷಗಳನ್ನು ಗುರುತಿಸುವುದು ಇತ್ಯಾದಿಗಳನ್ನು ಒಳಗೊಂಡಂತೆ ಬಹುಮಟ್ಟಿನ ನಿರೀಕ್ಷಣೆಯನ್ನು ಇವು ವಹಿಸಿಕೊಳ್ಳುವುವು. ಪ್ರಸ್ತಾವಿತ ಶಾಲಾ ಸಂಕೀರ್ಣಗಳಿಗೆ ತಮ್ಮ ವ್ಯಾಪ್ತಿಯಲ್ಲಿರುವ ಶಿಕ್ಷಕರಿಗಾಗಿ ಸೇವಾವಧಿ, ಶಿಕ್ಷಕ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಸಂಯೋಜಿಸುವ ಮತ್ತು ಆಯೋಜಿಸುವ ಜವಾಬ್ದಾರಿಗಳನ್ನು ವಹಿಸಲಾಗುವುದು. ವಿಶೇಷವಾಗಿ ಈ ಸಂಕೀರ್ಣಗಳು ಶಾಲೆ ಮತ್ತು ಡಯಟ್ (DIET)ಗಳ ನಡುವೆ ಪ್ರಭಾವೀ ಸಂಪರ್ಕ ಮಾರ್ಗವನ್ನು ಒದಗಿಸಿಕೊಡಬೇಕಾಗಿದೆ.

**ಹೊಸ ಮೂಲಮಟ್ಟದ ಸಂರಚನೆಗಳು:**

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (District Primary Education Programme- DPEP) ತನ್ನ ವಿಕೇಂದ್ರೀಕೃತ ಯೋಜನೆ ಮತ್ತು ನಿರ್ವಹಣೆಯ ಕಡೆಗಿನ ಗಮನ ಕೇಂದ್ರದ ಮುಖಾಂತರ ಶಾಲಾಪ್ರಕ್ರಿಯೆಗಳು ಮತ್ತು ತರಗತಿಯ ಆಚರಣೆಗಳೊಂದಿಗೆ ಶಿಕ್ಷಕ ಪ್ರಶಿಕ್ಷಣವನ್ನು ಸಂಬಂಧಿಸಲು ಗಂಭೀರ ಪ್ರಯತ್ನಗಳನ್ನು ಕೈಗೊಂಡಿದೆಯಲ್ಲದೆ ಹೊಸ ಕಾರ್ಯನೀತಿಗಳನ್ನು ರೂಪಿಸಿದೆ. 1994–95ರ ಅವಧಿಯಲ್ಲಿ ಬ್ಲಾಕ್ (ಕ್ಷೇತ್ರ) ಕ್ಲಸ್ಟರ್ ಸ್ತರಗಳಲ್ಲಿ ಬ್ಲಾಕ್ ಸಂಪನ್ಮೂಲ ಕೇಂದ್ರಗಳು (Block Resource Center, BRC) ಮತ್ತು ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳ (Cluster Resource Center, CRC) ರೂಪದಲ್ಲಿ ಬೆಂಬಲ ವ್ಯವಸ್ಥೆ/ಸಂರಚನೆಯನ್ನು ಸ್ಥಾಪಿಸುವುದರ ಮೂಲಕ ಹೊಸದೊಂದು ಮಧ್ಯಸ್ಥಿಕೆ ಕಾರ್ಯನೀತಿಯನ್ನು DPEP ಜಿಲ್ಲೆಗಳಲ್ಲಿ ರೂಪಿಸಲಾಯಿತು. ಶಾಲಾ ಸಂಕೀರ್ಣಗಳ ವಿಚಾರಕ್ಕೆ ಪರ್ಯಾಯವಾಗಿ BRC ಮತ್ತು CRCಗಳ ಸ್ಥಾಪನೆಯ ವಿಚಾರ ನಿಧಾನವಾಗಿ ಹೊರಹೊಮ್ಮಿತು.

**ಪರಿಕಲ್ಪನೆ:**

ಹೆಸರೇ ಹೇಳುವಂತೆ ಬ್ಲಾಕ್ ಸಂಪನ್ಮೂಲ ಕೇಂದ್ರಗಳು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಮುಖ್ಯಸ್ಥರಿಗೆ ಪರ್ಯಾಯ ಶಿಕ್ಷಣ (Alternative Education - AE) ಮತ್ತು ಅನೌಪಚಾರಿಕ

Digitised by Bharatavani, CIIL

ಶಿಕ್ಷಣ (Non-formal Education- NFE) ಕಾರ್ಯಕರ್ತರಿಗೆ ಅವರ ಔದ್ಯೋಗಿಕ ಬೆಳವಣಿಗೆಗಾಗಿ ಅವಕಾಶಗಳನ್ನು ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಬ್ಲಾಕ್ ಸ್ತರದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಚಾಲಕಶಕ್ತಿ ನೀಡುವುವೆಂದು ಭಾವಿಸಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಮುಂದುವರೆದ ಶಿಕ್ಷಣವನ್ನು ಸುಗಮಗೊಳಿಸುವುದು, ಅವರಿಗೆ ವಿಸ್ತರಣ ಸೇವೆಯನ್ನು ನೀಡುವುದು ಮತ್ತು ತಮ್ಮ ತರಗತಿಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಗೂ ಬ್ಲಾಕಿನಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಕ್ರಿಯಾ ಸಂಶೋಧನೆ ಕೈಗೊಳ್ಳಲು ಅವರಿಗೆ ನೆರವು ನೀಡುವುದು ಇವೇ ಮೊದಲಾದವುಗಳನ್ನು ಇವುಗಳು ಕೈಗೊಳ್ಳುವುದೆಂದು ಭಾವಿಸಲಾಗಿದೆ. ಶಾಲೆಗಳ ಅಪೇಕ್ಷೆಗಳಿಗನುಗುಣವಾಗಿ ಸಹಾಯ ನೀಡುವುದು ಮತ್ತು ಬ್ಲಾಕ್‌ನ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿಅಂಶಗಳ ಸಂಗ್ರಹಣೆಗಳ ಮೂಲಕ ಇವುಗಳು ಶೈಕ್ಷಣಿಕ ಆಡಳಿತದಲ್ಲಿ ಬಲವಾದ ಕೊಂಡಿಯಂತೆ ವರ್ತಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

**ಬ್ಲಾಕ್ ಸಂಪನ್ಮೂಲ ಕೇಂದ್ರಗಳ ಸ್ಥಾಪನೆಯ ಅವಶ್ಯಕತೆ:**

ಸದ್ಯದಲ್ಲಿ ರಾಷ್ಟ್ರಮಟ್ಟದಲ್ಲಿ NCERT, NUEPA, ಕೇಂದ್ರೀಯ ಹಿಂದಿ ಸಂಸ್ಥಾನ್, ಕೇಂದ್ರೀಯ ಭಾರತೀಯ ಭಾಷಾ ಸಂಸ್ಥಾನ (CIIL) ಮತ್ತು ಕೇಂದ್ರಿಯ ವಿದ್ಯಾಲಯ ಸ್ಕೂಲುಗಳು(KVS), CBSEನಂತಹ ನಿಯೋಗಗಳು ಶೈಕ್ಷಣಿಕ ತಜ್ಞರಿಗೆ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಸೇವಾಕಾಲೀನ ಶಿಕ್ಷಣ ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ. ರಾಜ್ಯಮಟ್ಟದಲ್ಲಿ ಈ ಕಾರ್ಯವನ್ನು SCERTಗಳು/SIEಗಳು, ರಾಜ್ಯ ಮಾಧ್ಯಮಿಕ ಶಿಕ್ಷಣ ಬೋರ್ಡುಗಳು, ಅಧ್ಯಾಪಕ ಶಿಕ್ಷಣ ಸಂಸ್ಥೆಗಳ ವಿಸ್ತರಣಾ ಸೇವಾ ವಿಭಾಗಗಳು, ಮುಂದುವರೆದ ಶಿಕ್ಷಣ ಕೇಂದ್ರಗಳು ಮತ್ತು ಸ್ವಯಂಸೇವಕ ಸಂಸ್ಥೆಗಳು ನಡೆಸುತ್ತವೆ. ಪ್ರಾಥಮಿಕ ಅಧ್ಯಾಪಕ ಶಿಕ್ಷಣ ಸಂಸ್ಥೆಗಳು ಕೇಂದ್ರೀಯ ಭಾಷಾ ಶಿಕ್ಷಣದ ಸಂಸ್ಥೆ (Central Institute of Education of Foreign Language - CIEFL) ಈ ಸವಾಲನ್ನು ಎದುರಿಸಲು ಸಮರ್ಥವಾಗದಿದ್ದ ಕಾರಣ NPE 1986 ನೀತಿಯು ಮತ್ತು ಅದರ ಕ್ರಿಯಾಯೋಜನೆ (POA) ಯು ಮೂಲಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣಗಳಿಗೆ ಶೈಕ್ಷಣಿಕ ಮತ್ತು ಸಂಪನ್ಮೂಲಗಳ ಬೆಂಬಲ ನೀಡಲು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ (DIET) ಸ್ಥಾಪನೆಗೆ ಶಿಫಾರಸ್ಸು ಮಾಡಿದವು. ಈ ಸಂಸ್ಥೆಗಳು ಮೂರು ಮುಖ್ಯ ಕಾರ್ಯಗಳನ್ನು ಕೈಗೊಳ್ಳುವುವು ಎಂದು ನಿರೀಕ್ಷಿಸಲಾಯಿತು. ತರಬೇತಿ, ಅಭಿವೃದ್ಧಿ ಮತ್ತು ಕ್ರಿಯಾಸಂಶೋಧನೆ. ಆದಾಗ್ಯೂ ಪ್ರತ್ಯೇಕ ಪ್ರಾಥಮಿಕ ಶಾಲಾ ಶಿಕ್ಷಕನನ್ನು ತಲುಪಲು ಬ್ಲಾಕ್ ಸ್ತರದಲ್ಲೂ ಯಾವುದಾದರೊಂದು ವ್ಯವಸ್ಥೆ ತುರ್ತಾಗಿ ಅವಶ್ಯವಿದೆ ಎಂದು ಅನುಭವದಿಂದ ತಿಳಿದುಬಂದಿದೆ. ಈ ವ್ಯವಸ್ಥೆಗೆ ಹಣಕಾಸು, ಭೌತಿಕ ಮತ್ತು ಮಾನವ ಸಂಪನ್ಮೂಲಗಳು, ಸಮುದಾಯದ ಸಂಪೂರ್ಣ ಸಹಭಾಗಿತ್ವ, ಸೂಕ್ತ ಪಠ್ಯಪುಸ್ತಕಗಳು, ಪಠ್ಯಕ್ರಮ ವ್ಯವಹಾರ ಸಂಬಂಧಿ ಕಾರ್ಯನೀತಿಗಳು, ಪರ್ಯಾಪ್ತ ಯೋಜನೆ ಮತ್ತು ನಿರ್ವಹಣೆ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ವ್ಯವಸ್ಥೆಯಲ್ಲಿನ ಸಮರ್ಪಿತ ಅಧ್ಯಾಪಕರು ಇತ್ಯಾದಿಗಳು ಅವಶ್ಯಕವಿದೆಯಾದ್ದರಿಂದ NPE 1986 ಮತ್ತು POA 1992, ಹಂತ ಹಂತವಾಗಿ ಬ್ಲಾಕ್ ಮತ್ತು ಕ್ಷೇತ್ರಸ್ತರ (Area Level)ಗಳಲ್ಲಿ BRC ಮತ್ತು CRCಗಳನ್ನು ಪ್ರಾರಂಭಿಸುವಂತೆ ಶಿಫಾರಸು ಮಾಡಿತು. CRCಗಳು ಮತ್ತು ಸೇವೆಯಲ್ಲಿರುವ ಶಿಕ್ಷಕರ ವೃತ್ತಿಪರವಾದ ಅಭಿವೃದ್ಧಿ ಹಾಗೂ ಜಿಲ್ಲೆ ಮತ್ತು ರಾಜ್ಯಗಳಲ್ಲಿ ಶಿಕ್ಷಣದ ಆಡಳಿತಗಳಲ್ಲಿ ತೊಡಗಿರುವ ಉನ್ನತ ಸಂಸ್ಥೆಗಳ ನಡುವೆ ಬ್ಲಾಕ್ ಸಂಪನ್ಮೂಲ ಕೇಂದ್ರ (BRC) ಕೊಂಡಿಯಂತೆ ವರ್ತಿಸುತ್ತದೆ. ಸಂಕ್ಷಿಪ್ತವಾಗಿ ಇವುಗಳು ಉಪ–ಜಿಲ್ಲಾ/ಬ್ಲಾಕ್‌ಮಟ್ಟಗಳಲ್ಲಿ DIETಗಳ ವಿಸ್ತರಣೆಯಂತಿದ್ದು ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾದ ಚಾಲಕ ಶಕ್ತಿಯನ್ನು ಒದಗಿಸುವ ಸಣ್ಣ 'ಡಯಟ್'ಗಳಂತೆ ಕಾರ್ಯ ನಿರ್ವಹಿಸುತ್ತದೆ.

**ಬ್ಲಾಕ್ ಸಂಪನ್ಮೂಲ ಕೇಂದ್ರದ ಉದ್ದೇಶಗಳು:**

ಬ್ಲಾಕ್ ಸಂಪನ್ಮೂಲ ಕೇಂದ್ರಗಳ ಪ್ರಮುಖ ಉದ್ದೇಶಗಳು ಹೀಗಿವೆ.

(i) CRCಗಳಿಗೆ ಅವುಗಳ ದೈನಂದಿನ ಚಟುವಟಿಕೆಗಳಲ್ಲಿ ಮಾರ್ಗದರ್ಶನ ನೀಡುವುದು.

(ii) CRCಗಳು ಹಾಗೂ ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುವುದು.

(iii) ಬ್ಲಾಕಿನ CRCಗಳಿಗೆ ಬೇಕಾದ ಸಿಬ್ಬಂದಿ ಹಾಗೂ ಸಾಮಗ್ರಿಗಳು, ಗ್ರಂಥಾಲಯ, ಆಡಿಯೋ–ವೀಡಿಯೋ ಕ್ಯಾಸೆಟ್‌ಗಳು ಇತ್ಯಾದಿ ಇತರ ಮೂಲಭೂತ ಸೌಲಭ್ಯಗಳು ಮುಂತಾದ ಸಂಪನ್ಮೂಲ ನೆರವನ್ನು ಒದಗಿಸುವುದು.

(iv) ಪ್ರಾಥಮಿಕ ಶಾಲೆಗಳಲ್ಲಿ ವೃತ್ತಿಯಲ್ಲಿರುವ ಹಾಗೂ AE ಮತ್ತು NFE ಕೇಂದ್ರಗಳ ಕಾರ್ಯಕರ್ತರ ಸೇವಾಕಾಲೀನ ಅವಶ್ಯಕತೆಗಳನ್ನು ಗುರುತಿಸುವುದು.

(v) ಪ್ರಾಥಮಿಕ ಶಾಲೆಗಳ ಮುಖ್ಯಸ್ಥರು, ಪ್ರಾಥಮಿಕ ಶಿಕ್ಷಕರು ಹಾಗೂ AE ಮತ್ತು NFE ಕಾರ್ಯಕರ್ತರುಗಳಿಗೆ ಅಲ್ಪಾವಧಿ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಆಯೋಜಿಸುವುದು.

(vi) ಬ್ಲಾಕ್‌ಗಳ ಶೈಕ್ಷಣಿಕ ಅವಶ್ಯಕತೆಗಳು ಹಾಗೂ ಬ್ಲಾಕ್‌ಗಳಲ್ಲಿರುವ ಸಮಸ್ಯೆಗಳ ಬಗ್ಗೆ ಡಯಟ್‌ಗಳಿಗೆ ಮತ್ತು ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಿಗೆ (Regional Institute of Education, RIE) ಹಿಮ್ಮಾಹಿತಿ (feedback) ಒದಗಿಸುವುದು.

**ಬ್ಲಾಕ್ ಸಂಪನ್ಮೂಲ ಕೇಂದ್ರಗಳ ಕಾರ್ಯಗಳು:**

ಬ್ಲಾಕ್ ಸಂಪನ್ಮೂಲ ಕೇಂದ್ರಗಳು ಈ ಕೆಳಗಿನ ಕಾರ್ಯಗಳನ್ನು ಕೈಗೊಳ್ಳುತ್ತದೆ.

1) ಶಿಕ್ಷಕರ ವೃತ್ತಿಪರವಾದ ವಿಕಾಸದ ಸಲುವಾಗಿ ಔದ್ಯೋಗಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬ್ಲಾಕ್ ಸ್ತರೀಯ ಯೋಜನೆಯನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು. ಪ್ರಾಥಮಿಕ

Digitised by Bharatavani, CIIL

ಶಾಲೆಗಳ ಮುಖ್ಯಸ್ಥರು ಮತ್ತು ಶಿಕ್ಷಕರು AE ಮತ್ತು NFE ಕಾರ್ಯಕರ್ತರು ಹಾಗೂ CRCಗಳ ಸಿಬ್ಬಂದಿಗಳಿಗೆ ಅವರು ತಮ್ಮ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲೆಂದು BRC ವಿವಿಧ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾಕಾಲೀನ ಶೈಕ್ಷಣಿಕ ಕಾರ್ಯಕ್ರಮಗಳು ಆಯೋಜಿಸುವುದು.

ಬಲಗೊಳಿಸಬೇಕಾದ ಹಾಗೂ ಹೆಚ್ಚುವರಿ ಸಂಭಾರ (Input) ಗಳನ್ನು ಒದಗಿಸಬೇಕಾದ CRCಗಳಿರುವ ಪ್ರದೇಶಗಳ ಬಗ್ಗೆ CRCಗಳೊಂದಿಗಿನ ಮಾಸಿಕ ಸಭೆಯಲ್ಲಿ BRCಗಳಿಗೆ ಹಿಮ್ಮಾಹಿತಿ ದೊರಕುವುದು. CRCಗಳ ಕಾರ್ಯವೈಖರಿಯನ್ನು ಖುದ್ದಾಗಿ ಗಮನಿಸಲು ಮತ್ತು ಸೇವಾಕಾಲೀನ ಕಾರ್ಯಕ್ರಮಗಳ ಹಾಗೂ ಇತರ ಶೈಕ್ಷಣಿಕ ವಿಷಯಗಳ ಯೋಜನೆ ನಿರ್ವಹಣೆ ಮತ್ತು ನಿರೀಕ್ಷಣೆಗಳಲ್ಲಿ ಮಾರ್ಗದರ್ಶನ ನೀಡಲು BRCಯ ಸಿಬ್ಬಂದಿ ಕ್ಷೇತ್ರಭೇಟಿಗಳನ್ನು ಕೈಗೊಳ್ಳಬೇಕು.

2) BRCಸಿಬ್ಬಂದಿಯು CRC ಜೊತೆಗಿನ DIET, SCERT, RIE ಇತ್ಯಾದಿ ಸಂಸ್ಥೆಗಳ ಸಂಪರ್ಕವನ್ನು ಕಲ್ಪಿಸಬೇಕಲ್ಲದೆ ತನ್ನ ಅಧಿಕಾರವ್ಯಾಪ್ತಿಯಲ್ಲಿರುವ CRCಗಳ ನಿರ್ಬಾಧಿತ ಸಂಚಾಲನೆಯನ್ನು ಖಚಿತಪಡಿಸಿಕೊಳ್ಳಬೇಕು.

**ಬ್ಲಾಕ್ ಸಂಪನ್ಮೂಲ ಕೇಂದ್ರಗಳ (BRC)ಸ್ಥಾಪನೆ:**

1. **ಸ್ಥಳ ಮತ್ತು ವ್ಯಾಪ್ತಿ:**

ಉತ್ತಮ ಶೈಕ್ಷಣಿಕ ಮಟ್ಟಕ್ಕೆ ಹೆಸರಾಗಿರುವ ತಕ್ಕಷ್ಟು ಭೌತಿಕ ಸೌಲಭ್ಯಗಳನ್ನು ಹೊಂದಿರುವ ಮತ್ತು ತನ್ನ CRC ಕೇಂದ್ರಗಳಿಗೆ ಅನುಕೂಲಕರವಾಗಿ ಸ್ಥಿತವಾಗಿರುವ ಅಥವಾ ಸಾಧ್ಯವಾದರೆ ಡಯಟ್ ಅಥವಾ RIEಸಂಸ್ಥೆಗೆ ಹತ್ತಿರದ ಸ್ಥಳದಲ್ಲಿರುವ ಪ್ರಾಥಮಿಕ ಇಲ್ಲವೇ ಮಾಧ್ಯಮಿಕ ಇಲ್ಲವೇ ಹಿರಿಯ ಮಾಧ್ಯಮಿಕ ಶಾಲೆಯೊಂದರಲ್ಲಿ BRC ಕೇಂದ್ರವನ್ನು ನೆಲೆಗೊಳಿಸಬಹುದು. ಬ್ಲಾಕಿನಲ್ಲಿರುವ CRC ಕೇಂದ್ರಗಳ ಅಬಾಧಿತ ಚಟುವಟಿಕೆಯನ್ನು ಸುಗಮಗೊಳಿಸುವ ಜವಾಬ್ದಾರಿಯನ್ನು ಇದಕ್ಕೆ ವಹಿಸಲಾಗುವುದು.

2. **ಕಟ್ಟಡ:**

ಆದರ್ಶಪ್ರಾಯವಾಗಿ ಹೇಳುವುದಾದರೆ, BRC ತನ್ನದೇ ಆದ ಆವರಣವನ್ನು ಮತ್ತು ಎರಡು ಕೊಠಡಿಗಳುಳ್ಳ (ಇದರಲ್ಲಿ ಒಂದು ಸೇವಾಕಾಲೀನ ಕಾರ್ಯಕ್ರಮಗಳನ್ನು ಆಯೋಜಿಸುವುದಕ್ಕೆ ದೊಡ್ಡ ಕೊಠಡಿ ಅಥವಾ ಸಭಾಂಗಣವಾಗಿರಬೇಕು) ವಸತಿ ಸೌಲಭ್ಯವನ್ನು ಹೊಂದಿರಬೇಕು. ಈ ಕೊಠಡಿಗಳು BRC ಸಿಬ್ಬಂದಿಗಳಿಗೆ ವಸತಿಯನ್ನು ಮತ್ತು ಸೌಲಭ್ಯಗಳನ್ನು ಒದಗಿಸಿ ಸೇವಾಕಾಲೀನ ಕಾರ್ಯಕ್ರಮಗಳನ್ನು ಆಯೋಜಿಸುವುದಕ್ಕೆ ಸಾಕಷ್ಟಾಗಿರಬೇಕು. ಒಂದು BRC ಕೇಂದ್ರವು: (i) ವಿಚಾರಗೋಷ್ಠಿ, ಕಾರ್ಯಾಗಾರಗಳು, ಉಪನ್ಯಾಸಗಳು ಇತ್ಯಾದಿಗಳಿಗಾಗಿ ಬಹುಉದ್ದೇಶಿತ ಕೊಠಡಿ (ii) ಮುದ್ರಣ ಹಾಗೂ ಮುದ್ರಣೇತರ ಸಾಮಗ್ರಿಗಳು, ಕಿಟ್‌ಗಳು, ಮಕ್ಕಳ ಕೃತಿಗಳು ಇತ್ಯಾದಿಗಳಿಗೆ ಸೂಕ್ತ ಸಂಗ್ರಹಣಾ ಮತ್ತು ಪ್ರದರ್ಶನಾ ಸ್ಥಳಗಳುಳ್ಳ ಸಂಪನ್ಮೂಲ ಕೊಠಡಿ ಹೊಂದಿರಬೇಕು. (iii) ಸಿಬ್ಬಂದಿಗೆ ಸ್ಥಳ – ಶೈಕ್ಷಣಿಕ ಸಿಬ್ಬಂದಿಗೆ ಕನಿಷ್ಠ ಪಕ್ಷ ನಾಲ್ಕು ಕೊಠಡಿಗಳು, ಮುಖ್ಯಸ್ಥರಿಗೆ ಒಂದು ಮತ್ತು 6 ಶೈಕ್ಷಣಿಕ ಸಿಬ್ಬಂದಿಗೆ ಮೂರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೆ ಬಹುಉದ್ದೇಶಿತ ಕೊಠಡಿ (iv) ಚೌಕೀದಾರನಿಗೆ ಉಳಿದುಕೊಳ್ಳಲು ಜಾಗ (v) ಸಂದರ್ಶಕರ ಕೊಠಡಿ/ ವಿಶ್ರಾಮ ಕೊಠಡಿ (vi) ಗೃಹವಸತಿ – ಇವೆಲ್ಲವನ್ನೂ BRC ಕೇಂದ್ರವು ಹೊಂದಿರಬೇಕೆಂದು ಅಪೇಕ್ಷಿಸಲಾಗುತ್ತದೆ.

3. **ಶೈಕ್ಷಣಿಕ ಚಟುವಟಿಕೆಗಳಿಗೆ ಉಪಕರಣಗಳು:**

- ಸೇವಾಕಾಲೀನ ಕಾರ್ಯಕ್ರಮಗಳ ಸಹಭಾಗಿಗಳಿಗಾಗಿ ಮೇಜು ಕುರ್ಚಿಗಳು.
- ಓವರ್‌ಹೆಡ್ ಪ್ರೊಜೆಕ್ಟರ್
- ಟಿ.ವಿ, ವಿಸಿಆರ್, ಆಡಿಯೋ–ವೀಡಿಯೊ ಕ್ಯಾಸೆಟ್
- ಕಲೆ ಹಾಗೂ ಕರಕುಶಲಕಲೆಗಳ ಕಾರ್ಯಾಗಾರಗಳು ಮತ್ತು ಆಡಿಯೋ–ವೀಡಿಯೋ ಬೋಧನ ಸಾಮಗ್ರಿಗಳಿಗಾಗಿ ಕಚ್ಚಾ ಸಾಮಗ್ರಿಗಳು.

4. **ಗ್ರಂಥಾಲಯ–ವಾಚನ ಕೊಠಡಿಗಾಗಿ ಉಪಕರಣಗಳು:**

- ಪುಸ್ತಕಗಳಿಗಾಗಿ ಕಪಾಟುಗಳು/ ಸಣ್ಣ ಬೀರುಗಳು
- ವಾಚನ ಕೊಠಡಿಗೆ ಮೇಜು ಕುರ್ಚಿಗಳು
- ವಿಷಯಾನುಕ್ರಮಣಿಕೆಯ ಕಪಾಟು

**ಸಲಹಾ ಸಮಿತಿ:**

ವಾರ್ಷಿಕ ಚಟುವಟಿಕೆ ವೇಳಾಪಟ್ಟಿಯನ್ನು ಸೂತ್ರೀಕರಿಸುವಲ್ಲಿ ನೆರವಾಗಲು, ನೀತಿ ವಿಷಯಕ ಸಲಹೆ ನೀಡಲು ಮತ್ತು ಸಂಪನ್ಮೂಲಗಳ ಗರಿಷ್ಠ ಬಳಕೆಯ ಸಲಹೆ ನೀಡಲು ಮತ್ತು ಬ್ಲಾಕೊಂದರ CRCನ ಕಾರ್ಯಕ್ರಮಗಳ ಮೇಲ್ವಿಚಾರಣೆ, ನಿರೀಕ್ಷಣೆ ಮತ್ತು ಮೌಲ್ಯಮಾಪನದಲ್ಲಿ ನೆರವಾಗಲು ಪ್ರತಿಯೊಂದು BRC ಸಲಹಾ ಸಮಿತಿಯನ್ನು ಹೊಂದಿರುವುದು. ಈ ಸಮಿತಿಯಲ್ಲಿ BRC ಮುಖ್ಯಸ್ಥರು, BRCಯ ಹಿರಿಯ ಸಂಯೋಜಕರು, RIE ಸಂಸ್ಥೆಯಿಂದ ಓರ್ವತಜ್ಞರು, ಡಯಟ್‌ನ ಪ್ರಾಂಶುಪಾಲರು, SCERT ಯಿಂದ ತಜ್ಞರು, ವೃತ್ತಿಪರ ಸಂಘ(ಗಳು)ದಿಂದ ಮತ್ತು/ ಅಥವಾ ಎನ್.ಜಿ.ಒ.ನಿಂದ ತಜ್ಞರು ಮತ್ತು ಪ್ರಸಿದ್ಧ ಶಿಕ್ಷಣತಜ್ಞರು ಇರುವರು.

**ಕಾರ್ಯಕ್ರಮ ಯೋಜನೆ:**

BRC ಕೇಂದ್ರದ ಕಾರ್ಯಕ್ರಮಗಳು ಈ ಮುಂದಿನ ಅಂಶಗಳಿಗೆ ಅದರ ನೇರ ಸಂಬಂಧವನ್ನು ಅನುಸರಿಸಿ ಬದಲಾಗುತ್ತವೆ. – ಡಯಟ್‌ನ ಮತ್ತು BRC ನೆಲೆಗೊಂಡಿರುವ ಬ್ಲಾಕ್‌ನ ನೀತಿ ಆ ಪ್ರದೇಶದ ಭೌಗೋಳಿಕ ಲಕ್ಷಣಗಳು ಶಿಕ್ಷಕರ ಮತ್ತು ಪ್ರಾಥಮಿಕ ಶಾಲೆಗಳ ಮುಖ್ಯಸ್ಥರು ಸೇವಾಕಾಲೀನ ಅವಶ್ಯಕತೆಗಳು, BRCಗೆ

Digitised by Bharatavani, CIIL

ಒದಗಿಸಲಾಗಿರುವ ನೇತೃತ್ವದ ಸ್ವರೂಪ, ಕಾರ್ಯಕ್ರಮಗಳ ವ್ಯಾಪ್ತಿ ಮತ್ತು ವೈವಿಧ್ಯತೆ BRC ಕೇಂದ್ರದ ನಿರ್ದೇಶಕರ/ BRC ಕೇಂದ್ರದ ಮುಖ್ಯಸ್ಥರ ನೇತೃತ್ವವನ್ನು ಅವಲಂಬಿಸುವುದು. ಏಕೆಂದರೆ, ಆತ/ಆಕೆ ಸ್ಥಳೀಯ ಶಿಕ್ಷಣ ಸಮುದಾಯದಲ್ಲಿ ನೀಡಬಹುದಾದ ನೆರವಿನ ಸ್ವರೂಪ, ಕಾರ್ಯಕ್ರಮವೊಂದರಲ್ಲಿ ಬೇಕಾದ ಪ್ರಾಯೋಗಿಕ ಕೆಲಸದ ಸ್ವರೂಪ ಮತ್ತು ಪ್ರಮಾಣ. ಸಂಪನ್ಮೂಲ ಆಧಾರಿತ ಚಟುವಟಿಕೆಯ ಕಾರ್ಯಕ್ರಮವೂ ಅಥವಾ ಸೇವಾವಿಧದ ಚಟುವಟಿಕೆ (ಆಡಿಯೋ, ವೀಡಿಯೋ ಉಪಕರಣ) ಎಂಬ ನಿರ್ಧಾರ ಇತ್ಯಾದಿಗಳನ್ನು ನಿಶ್ಚಯಿಸಬೇಕಾಗುತ್ತದೆ. ವಾಸ್ತವವಾಗಿ ಕಾರ್ಯಕ್ರಮ ಯೋಜನೆ ಒಂದು ಸಮಗ್ರ ಸ್ವರೂಪದ ಕಾರ್ಯವಾಗಿರಬೇಕು. ಉದ್ದೇಶಿತ ವೈಯಕ್ತಿಕ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿ ಕೋರ್ಸುಗಳನ್ನು ರೂಪಿಸಬೇಕು. ಕಾರ್ಯಕ್ರಮ ನೀಡುವವರು ಮತ್ತು ಶಿಕ್ಷಕರು ಇವರೀರ್ವರ ನಡುವೆ ಯಾವ ಸಂವಹನದ ಅಂತರವಿರಬಾರದು. ಗುರಿಗಳು ಮತ್ತು ಕಾರ್ಯಕ್ರಮ ಸಾಮಗ್ರಿಯನ್ನು ಕುರಿತಾದ ಸ್ಪಷ್ಟೀಕರಣವಿರಬೇಕು. ಸ್ವಯಂಸೇವಕರು (ಶಿಕ್ಷಕರು) ತಾವು ಯಾವಾಗ ಮತ್ತು ಏತಕ್ಕೆ ಸ್ವಯಂಸೇವೆ ಮಾಡುತ್ತಿದ್ದೇವೆ ಎಂದು ತಿಳಿಯವಂತೆ ಕಾರ್ಯಕ್ರಮವೊಂದರ ಪ್ರಾರಂಭದ ಬಗೆಗಿನ ಮಾಹಿತಿಯನ್ನು ಸ್ಪಷ್ಟವಾಗಿ ಪ್ರಚಾರ/ಪ್ರಕಾಶನಗೊಳಿಸಬೇಕು. ಕಾರ್ಯಕ್ರಮ ಹಾಜರಾಗುವವರು ಮಿಶ್ರ ಸಾಮರ್ಥ್ಯವುಳ್ಳ ಸಮೂಹವಾಗಿರಬೇಕೆ ಅಥವಾ ನಿರ್ದಿಷ್ಟ ಸ್ತರದ/ತರಗತಿಯ ಶಿಕ್ಷಕರಾಗಿರಬೇಕೆ ಎಂದು ಮುಂಚಿತವಾಗಿ ನಿರ್ಧರಿಸಬೇಕು; ಇದೇ ರೀತಿ ಕಾರ್ಯಕ್ರಮವು ಪರಿಮಿತ ಗುರಿಗಳು ಹಾಗೂ ಸಹಭಾಗಿಗಳನ್ನುಳ್ಳ ಶಾಲಾ–ಆಧಾರಿತ ಕಾರ್ಯಕ್ರಮವೇ ಅಥವಾ ಸಮಾನ ಅವಶ್ಯಕತೆಯಿರುವ ವಿವಿಧ ಶಾಲೆಗಳ ಶಿಕ್ಷಕರನ್ನು ಇದರಲ್ಲಿ ಸಹಭಾಗಿಗಗಳನ್ನಾಗಿಸಿಕೊಳ್ಳಬೇಕೆ ಎಂದೂ ಸಹ ಮುಂಚಿತವಾಗಿ ನಿರ್ಧಾರವಾಗಬೇಕು. ವಾಸ್ತವವಾಗಿ ಪರಿಚಯಿಸಲಾಗುವ ಕಾರ್ಯಕ್ರಮದ ಅವಶ್ಯಕತೆ ಮತ್ತು ಮಹತ್ವ ಮತ್ತು ಸಮಂಜಸತೆಗಳು ಶಿಕ್ಷಕರಿಗೆ ಮನವರಿಕೆಯಾಗುವಂತೆ ಸ್ಥಳೀಯ ಶಿಕ್ಷಕರು ಏನು ಮಾಡುತ್ತಿರುವರೆಂಬ ಅರಿವಿನೊಂದಿಗೆ ಯೋಜನೆ ಮೊದಲುಗೊಳ್ಳಬೇಕು.

BRCಯು ಎರಡು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವುದು. ಒಂದು CRC ಸಿಬ್ಬಂದಿಗಾಗಿ. ಪ್ರತಿಯೊಂದು CRC ಕೈಗೊಂಡಿರುವ ಕಾರ್ಯಗಳೇನೆಂದು ನೋಡಲು ಹಾಗೂ ಅವರ ಭಾವಿ ಕಾರ್ಯಕ್ರಮಗಳ ಯೋಜನೆಗೆ ನೆರವು ನೀಡಿ ಅವರ ದೈನಂದಿನ ಚಟುವಟಿಕೆಗಳನ್ನು ಕುರಿತ ಹಿಮ್ಮಾಹಿತಿ ಒದಗಿಸಲು ತಿಂಗಳಿಗೊಮ್ಮೆ ಇದು ನಡೆಯುವುದು. ಎರಡನೆಯದು, ಕಾಲಕಾಲಕ್ಕೆ ಪ್ರಾಥಮಿಕ ಶಾಲೆಗಳ ಮುಖ್ಯಸ್ಥರು ಮತ್ತು ಶಿಕ್ಷಕರಿಗಾಗಿ AE ಮತ್ತು NFE ಕಾರ್ಯಕರ್ತರಿಗಾಗಿ ನಡೆಸುವ ಸೇವಾಕಾಲೀನ ಕಾರ್ಯಕ್ರಮಗಳು.

BRCಕೇಂದ್ರವು ಕಾರ್ಯಕ್ರಮವೊಂದನ್ನು ಯೋಜಿಸುವಾಗ ಅದರ ಪ್ರಯತ್ನವನ್ನು ಆ ಕ್ಷೇತ್ರದ ಬೆಂಬಲ ಸೇವೆಗಳನ್ನು ಒದಗಿಸುವವರೊಂದಿಗೆ ಸಂಯೋಜಿಸಿಕೊಳ್ಳಬೇಕು. ಅಂದರೆ ಸ್ಥಳೀಯ ಶಿಕ್ಷಣ ಸಂಸ್ಥೆ, ETTIಗಳು, IASEಗಳು, ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗಗಳು, ಡಯಟ್‌ಗಳು, BRCಗಳು, BDO, BEO, ಇತ್ಯಾದಿಗಳೊಂದಿಗೆ ಶಿಕ್ಷಕರಿಗೆ ನೀಡಲಾಗುವ ಸೇವಾವ್ಯಾಪ್ತಿಯಲ್ಲಿನ ಪ್ರಯತ್ನಗಳ ಪುನರಾವೃತ್ತಿಯನ್ನು ಹಾಗೂ ಅಂತರವನ್ನು ನಿವಾರಿಸಲು ತಮ್ಮ ಪ್ರಯತ್ನಗಳನ್ನು ಸಂಯೋಜಿಸಿಕೊಳ್ಳಬೇಕು.

ಬೋಧನಾ ಸಾಮಗ್ರಿಗಳು, ಆಡಿಯೋ–ವೀಡಿಯೋ ಮುದ್ರಣ ಛಾಯಾಗ್ರಹಣ, ಕಲೆ ಮತ್ತು ಕರಕುಶಲಕಲೆ ಇತ್ಯಾದಿ ಬೆಂಬಲ ಸೇವೆಗಳು ಶಿಕ್ಷಕರಿಗೆ ಲಭ್ಯವಾಗುವಂತೆ ಮಾಡಬೇಕು. ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಮುದಾಯವೂ ಸಹಭಾಗಿಯಾಗುವಂತಹ ಅವಕಾಶಗಳನ್ನು ಕಂಡುಕೊಳ್ಳಬೇಕು. ಪ್ರಾಯೋಗಿಕ ಅನುಭವವಿರುವ ಮತ್ತು ನೇತಾರನ ಗುಣಲಕ್ಷಣಗಳಿರುವ ವ್ಯಕ್ತಿಗಳಿಂದ ಚಟುವಟಿಕೆಗಳು ಆಯೋಜಿಸಲ್ಪಡಬೇಕು. ಶಿಕ್ಷಕರು ಸಕಾಲದಲ್ಲಿ ಸೇವಾಕಾಲೀನ ಸಹಭಾಗಿತ್ವವನ್ನು ಯೋಜಿಸಿಕೊಳ್ಳಲು ಸುಲಭವಾಗುವಂತೆ ಅವರಿಗೆ BRCಯ ತ್ರೈಮಾಸಿಕ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಬಗ್ಗೆ ಮಾಹಿತಿ ಒದಗಿಸಬೇಕು. ಅವಶ್ಯವಿದ್ದಲ್ಲಿ, ಅನುಪೂರಕಗಳನ್ನು ಸಹ ಆ ಅವಧಿಯಲ್ಲಿ ಕಳುಹಿಸಬಹುದು. 'ತ್ರೈಮಾಸಿಕ ಕಾರ್ಯಕ್ರಮ'ಗಳ ಬಗ್ಗೆ ಶಿಕ್ಷಕರ ಪ್ರತಿಕ್ರಿಯೆ ಮತ್ತು ಸೇವಾಕಾಲೀನ ಕಾರ್ಯಕ್ರಮಗಳಲ್ಲಿ ಕೆಲವು ವಿಷಯಗಳನ್ನು ಸೇರಿಸುವಂತೆ ಅವರ ಕೋರಿಕೆಗಳನ್ನು ಹಿನ್ನುಣಿಕೆಯ ರೂಪದಲ್ಲಿ ಕೇಂದ್ರಕ್ಕೆ ನೀಡಲು ಪ್ರತಿಶಾಲೆಯಿಂದ ಸಂಪರ್ಕಾಧಿಕಾರಿಯ ಕರ್ತವ್ಯವನ್ನು ವಹಿಸಬಹುದಾಗಿದೆ. BRCತನ್ನ ಕಡೆಯಿಂದ ಶಾಲೆಗಳಿಗೆ ಭೇಟಿ ನೀಡಿ ಸೇವಾಕಾಲೀನ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಾಮಕಾರಿಯನ್ನಾಗಿಸಲು ವಿವಿಧ ಕ್ರಮಗಳ ಬಗ್ಗೆ ಆಯಾ ಮುಖ್ಯಸ್ಥರೊಡನೆ ಚರ್ಚಿಸಬಹುದು.

**ಇತರ ಸಂಸ್ಥೆಗಳೊಡನೆ ಸಂಪರ್ಕ:**

ಅನೇಕ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗಿನ ಜಾಲಬಂಧವು (Network) ಅಗತ್ಯವಿದೆ. ಏಕೆಂದರೆ, ಇದು ಯಾವುದೇ ಯೋಜನೆಯ ಸಫಲತೆಗೆ ಮೂಲಾಧಾರದಂತಿದೆ.

**ಪ್ರಾದೇಶಿಕ ಶಿಕ್ಷಣ ಸಂಸ್ಥೆಯೊಂದಿಗೆ ಸಂಪರ್ಕ:**

RIEಸಂಸ್ಥೆ, DIET ಮತ್ತು BRCಬೋಧಕ ಸಿಬ್ಬಂದಿಗಾಗಿ ಎರಡು ವಿಧದ ಪ್ರಶಿಕ್ಷಣ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಮೊದಲನೆಯದಾಗಿ, ಸೇವಾಕಾಲೀನ ತರಬೇತಿ ಕಾರ್ಯಕ್ರಮಗಳ ಆಯೋಜನೆಯ ಅವಶ್ಯಕತೆ ಮತ್ತು ವಿಧಾನ, ಗ್ರಾಮ ಶಿಕ್ಷಣ ಸಮಿತಿಗಳು/ಶಾಲಾ ಶಿಕ್ಷಣ ಸಮಿತಿಗಳ ಪಾತ್ರ ಮತ್ತು ಕಾರ್ಯಗಳು, ವಿಭಿನ್ನ ಸಂಸ್ಥೆಗಳ ಜಾಲಬಂಧ ನಿರ್ಮಾಣ ಮತ್ತು DIETಗಳ ಪಾತ್ರ; ಪ್ರಾಥಮಿಕ ಶಾಲಾ ಪಠ್ಯಕ್ರಮ ಮೂಲ ಘಟಕಗಳು ಮತ್ತು ಅವುಗಳ ವ್ಯಾವಹಾರಿಕ ಕಾರ್ಯನೀತಿಗಳು, ಕಲಿಕೆಯ ಕನಿಷ್ಠತಮ ಮಟ್ಟಕ್ಕೆ ಸಂಬಂಧಿಸಿದ ದಕ್ಷತೆಗಳ ವಿಕಾಸಕ್ಕಾಗಿ ಉದ್ದೇಶಗಳು ಮತ್ತು ಕಾರ್ಯನೀತಿಗಳು; ಆಪರೇಷನ್ ಕಪ್ಪು ಹಲಗೆಯ ಯೋಜನೆಯ ಪರಿಕಲ್ಪನೆ, ಗುರಿಗಳು ಮತ್ತು ಘಟಕಗಳು; ಬ್ಲಾಕ್ ಮತ್ತು ಗ್ರಾಮ ಮಟ್ಟಗಳಲ್ಲಿನ ಸೂಕ್ಷ್ಮ ಯೋಜನೆಗಾಗಿ ಕಾರ್ಯನೀತಿಗಳು

Digitised by Bharatavani, CIIL

ಇತ್ಯಾದಿಗಳಿಗೆ ಸಂಬಂಧಿಸಿದ ಅರಿವು ಮೂಡಿಸುವ ಸಂಚಯನಗಳನ್ನು (Modules) ಅವರಿಗೆ ಒದಗಿಸಬೇಕಾಗುತ್ತದೆ. ಎರಡನೆಯದಾಗಿ, ಅಂತರ್ವಸ್ತುವನ್ನು (Content) ಉತ್ತಮಪಡಿಸುವುದು ಮತ್ತು ಬೋಧನ ವಿಧಾನಗಳ ಬಗ್ಗೆ ಪರಿಚಯಿಸುವುದು ಅವಶ್ಯಕವಾಗುವುದು. ಬಹುತರಗತಿ ಬೋಧನಾ ವಿಧಾನಗಳ ಬಗ್ಗೆ ಪರಿಚಯಿಸುವುದು ಅವಶ್ಯಕವಾಗುವುದು. ಬಹು ತರಗತಿ ಬೋಧನಾ ಕಾರ್ಯನೀತಿಗಳು, ಗಣಿತದ ಆಯ್ದ ಕಷ್ಟಕರ ಪರಿಕಲ್ಪನೆಗಳು, ಭಾಷೆ, ಪರಿಸರ ಅಧ್ಯಯನ 1ಮತ್ತು 2ನೇ ತರಗತಿಗಳಲ್ಲಿ (EVSI/ II) ಆರೋಗ್ಯ/ ಕಲಾಶಿಕ್ಷಣ ಹಾಗೂ ಅಂತರ್ವಸ್ತು ಮತ್ತು ವಿಧಾನಗಳ (Methodology)ನ್ನು ಕುರಿತ ಪ್ರಾಯೋಗಿಕ ಕಾರ್ಯ – ಇತ್ಯಾದಿಗಳನ್ನು ಪರಿಚಯ ಮಾಡಿಸಬೇಕಾಗುವುದು. ಸಾಮಗ್ರಿಗಳ ವಾಚನ, ಸಮೂಹಚರ್ಚೆ, ಕ್ಷೇತ್ರಕಾರ್ಯ, ತಂಡಕಾರ್ಯ, ಪ್ರಾತ್ಯಕ್ಷಿಕೆಗಳು ಪರೀಕ್ಷೆಗಳನ್ನು ಸಿದ್ಧಪಡಿಸುವಿಕೆ ಇತ್ಯಾದಿಗಳು ವ್ಯಾವಹಾರಿಕ ವಿಧಾನಗಳಲ್ಲಿ ಒಳಗೊಳ್ಳುವುವು. ಹೀಗೆ ಯೋಜನೆ ರೂಪಿಸುವಲ್ಲಿ ಅಂದರೆ ಯೋಜನಾ ಕೌಶಲಗಳ ವಿಕಸನ, ಬಲವರ್ಧನೆ, ಅವುಗಳನ್ನು ಉಳಿಸಿ ಬೆಳೆಸಿಕೊಳ್ಳುವಿಕೆ ಮತ್ತು ಸುಧಾರಣೆಗಳಲ್ಲಿ ಸಾಮರ್ಥ್ಯವರ್ಧನೆ ಜಿಲ್ಲಾಮಟ್ಟದಲ್ಲಿ ಹಾಗೂ ಇದರ ಕೆಳಗಿನ ಸ್ತರಗಳಲ್ಲಿರುವ ಸಂಸ್ಥೆಗಳ ಪಾತ್ರ ನಿರ್ವಹಣೆಗೆ ನಿರ್ಣಾಯಕವಾಗಿದೆ. ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು (Regional Institute of Education - RIE) ಬೋಧಕ ಸಿಬ್ಬಂದಿಗಳ ಸಲುವಾಗಿ ಪರಿಚಯ ಕಾರ್ಯಕ್ರಮಗಳ ಮೂಲಕ ಈ ವಿಷಯದಲ್ಲಿ ಜವಾಬ್ದಾರಿ ವಹಿಸಿಕೊಳ್ಳಬಹುದು. RIEಗಳು, DIET ಮತ್ತು BRCಗಳು ತಮ್ಮ ವಿವಿಧ ಕಾರ್ಯಕ್ರಮಗಳ ವಿನ್ಯಾಸ ಮತ್ತು ಮೌಲ್ಯಮಾಪನ ಹಾಗೂ ಮೇಲ್ವಿಚಾರಣೆ (Monitoring) ಗಳನ್ನು ಕೈಗೊಳ್ಳುವಂತೆ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸಬಹುದು ಎಂದು ಕಡೆಯದಾಗಿ ಹೇಳುತ್ತಿದ್ದರೂ ಇದು ಗೌಣವಾದುದೇನಲ್ಲ. BRC ಮತ್ತು CRCಗಳ ದೈನಂದಿನ ಕಾರ್ಯಗಳಲ್ಲಿ ಶೈಕ್ಷಣಿಕ ಮಾರ್ಗದರ್ಶನವನ್ನು RIEಸಂಸ್ಥೆ ನೀಡಬಹುದಲ್ಲದೆ ಇದಕ್ಕಾಗಿ ಕೇಂದ್ರಗಳಿಂದ ಕೋರಿಕೆ ಬಂದಾಗಲೆಲ್ಲಾ ಈ ವಿಷಯದಲ್ಲಿ ನೆರವಾಗಬಹುದಾಗಿದೆ. ಸಂಕ್ಷೇಪವಾಗಿ RIEಗಳು ಈ ಕೆಲಸದಲ್ಲಿ ಹಂತ–ಹಂತವಾಗಿ ಜೊತೆಯಾಗಬಹುದಾದ ಡಯಟ್ ಸಂಸ್ಥೆಗಳನ್ನು ಗುರುತಿಸುವುವು. ಈ ಕಾರ್ಯದಲ್ಲಿ ಸಹಭಾಗಿಗಳಾಗುವ DIET ಬೋಧಕ ಸಿಬ್ಬಂದಿಗಳ ಅವಶ್ಯಕತೆಗಳ ಮೌಲ್ಯಮಾಪನ, ಅವರಿಗೆ ಸೇವಾಕಾಲೀನ ದಿಶಾನಿರ್ದೇಶನ (Orientation) ಕಾರ್ಯಕ್ರಮಗಳ ಯೋಜನೆ, ಬೋಧನ ಸಾಮಗ್ರಿಗಳ ಸಿದ್ಧತೆ, ಆಯೋಜನೆ(Planning) ಮತ್ತು ನಿರ್ವಹಣೆಗಳಲ್ಲಿನ ಕುಶಲತೆಗಳ ಅಭಿವೃದ್ಧಿ, ಸುಧಾರಣೆ, ಉಳಿಸಿಬೆಳೆಸುವಿಕೆ ಮತ್ತು ಬಲಗೊಳಿಸುವಿಕೆ ಮತ್ತು ಬ್ಲಾಕ್ ಸ್ತರದಲ್ಲಿ ಕಾರ್ಯಕ್ರಮಗಳ ಆಯೋಜನೆ ಇವೆಲ್ಲವನ್ನೂ RIEಗಳು ಕೈಗೊಳ್ಳುವುವು. ಇದಲ್ಲದೆ ಸಹಭಾಗಿಗಳಾಗಿರುವ DIET ಬೋಧಕ ವರ್ಗದ ಕಾರ್ಯ ಉಸ್ತುವಾರಿ ಮಾಡುವುದರ ಜೊತೆಗೆ ಅವರಿಗೆ ಮತ್ತು ಕೇಂದ್ರದ ನಿಯೋಗಕ್ಕೆ ಹಿನ್ನುಣಿಕೆಯನ್ನು ಸಹ ಒದಗಿಸುವರು. ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತುಗಳೊಂದಿಗಿನ ಸಂಪರ್ಕಗಳು.

**ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (State Council of Educational Research And Training):**

ಈ ಸಂಸ್ಥೆಯು ರಾಜ್ಯಸ್ತರದಲ್ಲಿ CRCಗಳ ಯೋಜನೆಗಳನ್ನು ಅನುಷ್ಠಾನಿಸುವ ಕೇಂದ್ರ ನಿಯೋಗದಂತೆ ಕೆಲಸ ಮಾಡುವುದು. ಇದು ಕೇಂದ್ರ ಸರ್ಕಾರದಿಂದ ಅನುದಾನವನ್ನು ಸ್ವೀಕರಿಸುವುದು ಮತ್ತು ರಾಜ್ಯದ DIET, BRCಗಳು ಮತ್ತು CRCಗಳಿಗೆ ತಲುಪುವಂತೆ ಮಾಡುವುದು. ಇದರ ಸದುಪಯೋಗವಾಗುವಂತೆ ನೋಡಿಕೊಳ್ಳುವುದು ಮತ್ತು ಇದರ ಲೆಕ್ಕ ಮತ್ತು ಲೆಕ್ಕ ಪರೀಕ್ಷೆಗಳಿಗೆ ವ್ಯವಸ್ಥೆ ಮಾಡುವುದು ಇವೇ ಮುಂತಾದ ಹಣಕಾಸು ವಿಷಯಗಳನ್ನು SCERT ನೋಡಿಕೊಳ್ಳುತ್ತದೆ. ಕೇಂದ್ರ ನಿಯೋಗಕ್ಕೆ ವೆಚ್ಚದ ವರದಿ ಸಲ್ಲಿಸುವುದು ಇವರ ಜವಾಬ್ದಾರಿಯಾಗಿರುವುದು.

**DIETಗಳೊಂದಿಗಿನ ಸಂಪರ್ಕಗಳು:**

BRCಗಳ ಬೋಧಕ ವರ್ಗದವರಿಗೆ ಅವರ ಪಾತ್ರ ಮತ್ತು ಉತ್ತರದಾಯಿತ್ವಗಳ ಬಗ್ಗೆ ದಿಶಾನಿರ್ದೇಶನ (Orientation)ವನ್ನು ಒದಗಿಸುವ ಮುಖ್ಯ ನಿಯೋಗದ ಪಾತ್ರವನ್ನು DIET ಸಂಸ್ಥೆ ವಹಿಸಬಹುದು. ಇದು ತನ್ನ ಅಧಿಕಾರವ್ಯಾಪ್ತಿಯಲ್ಲಿ ಬರುವ BRCಗಳ ಬೋಧಕ ವರ್ಗದವರಿಗೆ ಪರಿಚಯ ಕಾರ್ಯಕ್ರಮಗಳು, ದಿಶಾ ನಿರ್ದೇಶನ ಕಾರ್ಯಕ್ರಮಗಳು ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸುವುದರಲ್ಲಿ ಶೈಕ್ಷಣಿಕ ನೆರವನ್ನು ಸಹ ನೀಡಬಹುದು. ಸಾಂಸ್ಥಿಕ ವ್ಯವಸ್ಥೆಗಳು, ಸಾಧನೆಗಳು ಅವರ ಕೆಲಸದ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯ ಆಧಾರದ ಮೇಲೆ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ದತ್ತಾಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆ ಇತ್ಯಾದಿ BRCಚಟುವಟಿಕೆಗಳ ಉಸ್ತುವಾರಿಯನ್ನು DIETಸಂಸ್ಥೆ ಕೈಗೊಳ್ಳಬಹುದು. ಅಲ್ಲದೆ, ತನಗೆ ಲಭ್ಯವಾದ ಫಲಿತಾಂಶಗಳನ್ನು BRC ಬೋಧಕವರ್ಗಕ್ಕೆ ತಿಳಿಸಲೂಬಹುದು. ಪ್ರಾಥಮಿಕ ಶಿಕ್ಷಣದಲ್ಲಿ ಅನುಭವವಿರುವ ಮುಖ್ಯಸ್ಥರು ಮತ್ತು ಸಹಾಯಕ ಶಿಕ್ಷಕರು, ಸ್ಥಳೀಯ ಹಿರಿಯ ಮಾಧ್ಯಮಿಕ ಶಾಲೆಗಳ ತಜ್ಞರುಗಳಿಗೆ ಸಂಸ್ಥೆಯ ಭೌತಿಕ ಸೌಲಭ್ಯಗಳನ್ನು BRCಬೋಧಕ ವರ್ಗಕ್ಕೆ ಒದಗಿಸಲು/ ಹಂಚಿಕೊಳ್ಳಲು ದಿಶಾನಿರ್ದೇಶನವನ್ನು ಒದಗಿಸಬಹುದು.

ಬ್ಲಾಕ್ ಸಂಪನ್ಮೂಲ ಕೇಂದ್ರಗಳ ಮುಖ್ಯಸ್ಥರು ಮತ್ತು ಬೋಧಕ ವರ್ಗಕ್ಕೆ ಸಂಬಂಧಿತ DIETಗಳು ಈ ಮುಂದಿನ ವಿಷಯಗಳಲ್ಲಿ ದಿಶಾನಿರ್ದೇಶನ ನೀಡಬಹುದು: ಪ್ರಾಥಮಿಕ ಶಾಲಾಶಿಕ್ಷಕರ ಸೇವಾವಧಿ ಅವಶ್ಯಕತೆಗಳನ್ನು ಗುರುತಿಸುವುದು; ಸೇವಾವಧಿ ಶಿಕ್ಷಣ ಕಾರ್ಯಕ್ರಮಗಳ/ಯೋಜನೆಗಳ ಆಯೋಜನೆ, ಮೌಲ್ಯಮಾಪನ ಮತ್ತು ನಿರ್ವಹಣೆ, ಪ್ರಾಥಮಿಕ ಶಿಕ್ಷಣದ ಉದ್ದೇಶಗಳ ಅರಿವು, ವೈವಿಧ್ಯಮಯ ಹಿನ್ನೆಲೆಯಿಂದ ಬಂದ ಕಲಿಕಾರ್ಥಿಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಅನನುಕೂಲಿತರಾದವರಿಗೆ ಶಿಕ್ಷಣ, ಸಮನ್ವಯ ಸನ್ನಿವೇಶಗಳಲ್ಲಿ ಶಾರೀರಿಕವಾಗಿ, ಮಾನಸಿಕವಾಗಿ ಸವಾಲೆದುರಿಸುತ್ತಿರುವವರಿಗೆ ಬೋಧನೆ, ಸಂವಹನ ಕೌಶಲಗಳನ್ನು ಬೆಳಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು, ಪ್ರಾಥಮಿಕ ಶಿಕ್ಷಣ, ಆಪರೇಷನ್

Digitised by Bharatavani, CIIL

ಕಪ್ಪು ಹಲಗೆ, ಬಹುಶ್ರೇಣಿಯ ಬೋಧನೆ, ವಿದ್ಯಾರ್ಥಿಗಳ ಸಹಭಾಗಿತ್ವ ಮತ್ತು ಉಳಿಸಿಕೊಳ್ಳುವಿಕೆ, ದೊಡ್ಡಗಾತ್ರದ ತರಗತಿಗಳ ನಿರ್ವಹಣೆ, ಸತತ ಸಮಗ್ರ ಮೌಲ್ಯಮಾಪನ, ಕಾರ್ಯಕ್ರಮಗಳ ಆಂತರಿಕ ಮೌಲ್ಯಮಾಪನ, ಪ್ರಾವೀಣ್ಯತಾ ಕಲಿಕೆ, ಅಧ್ಯಾಪಕರ ವಿಷಯವಸ್ತು ಜ್ಞಾನವನ್ನು ಉತ್ತಮಪಡಿಸುವುದು, ವಿದ್ಯಾರ್ಥಿಗಳ ಶಿಕ್ಷಣದಲ್ಲಿ ತಂದೆ ತಾಯಿ ಮತ್ತು ಸಮುದಾಯಗಳನ್ನು ಸಹಭಾಗಿಯಾಗಿಸಿಕೊಳ್ಳುವುದು ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ (UEE) ಗುರಿಗಳಾದ ಲಿಂಗ ಸಮಾನತೆ ಮತ್ತು ಮಹಿಳೆಯರ ಸ್ಥಾನಮಾನಗಳ ಸುಧಾರಣೆಗಳನ್ನು ಸಾಧಿಸುವುದು, ಕ್ರಿಯಾಸಂಶೋಧನೆ, ಪರಿಸರ ಸಂಪನ್ಮೂಲಗಳ ಬಳಕೆ, ಬೋಧನೆಯ ನವೀನ ಕಾರ್ಯನೀತಿಗಳು, ಗ್ರಾಮ ಶಿಕ್ಷಣ ಸಮಿತಿಗಳ ಪಾತ್ರ, ಸಹ–ಪಠ್ಯಕ್ರಮ ಚಟುವಟಿಕೆಗಳ ಆಯೋಜನೆ, DPEP ಅಧೀನ ಸ್ಥಾಪನೆಗೊಂಡ BRCಗಳ ಮತ್ತು CRCಗಳ ಯೋಜನೆಯಡಿ ಸ್ಥಾಪನೆಗೊಂಡ BRCಗಳ ಪ್ರಯತ್ನಗಳು ನಕಲಾಗುವುದನ್ನು ತಪ್ಪಿಸುವುದು ಇತ್ಯಾದಿ. ಇವುಗಳನ್ನು ಸಾಧಿಸಲು ಅಗತ್ಯವಾದ ವಾಚನ ಸಾಮಗ್ರಿಗಳು, ಸಮೂಹ ಚರ್ಚೆ, ಕ್ಷೇತ್ರ ಕಾರ್ಯ, ತಂಡಕಾರ್ಯ, ಪ್ರಾತ್ಯಕ್ಷಿಕೆಗಳು ಇತ್ಯಾದಿಗಳನ್ನು ಒದಗಿಸಬೇಕು.

BRC ಗಳ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ DPEPಗಳಿಗೆ ಹಿಮ್ಮಾಹಿತಿಯನ್ನು ಹಾಗೂ ಸಾಮಗ್ರಿಗಳ ಬೆಳವಣಿಗೆ, ಅವರು ಪ್ರಯತ್ನಿಸಿ ಪರೀಕ್ಷಿಸುವ ನಾವೀನ್ಯತೆಗಳನ್ನು ಸಿದ್ಧಪಡಿಸುವಲ್ಲಿ ನೆರವನ್ನು BRC ಬೋಧಕವರ್ಗವು ನೀಡಬಹುದು. ಇದು ತನ್ನದೇ ಆದ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ವೇಳಾಪಟ್ಟಿಗಳ ಬಗ್ಗೆ DIET ಗೆ ಮಾಹಿತಿ ನೀಡುವುದು.

**ಬ್ಲಾಕ್ ಶಿಕ್ಷಣ ಅಧಿಕಾರಿಗಳೊಂದಿಗೆ ಸಂಪರ್ಕ:**

ಬ್ಲಾಕ್ ಅಧಿಕಾರಿಗಳು (Block Education Officer - BEO)ಬ್ಲಾಕ್ ಸ್ತರದಲ್ಲಿನ ಶೈಕ್ಷಣಿಕ ಯೋಜನೆಗಳು ಮತ್ತು ಅವುಗಳ ಅನುಷ್ಠಾನವನ್ನು ನೋಡಿಕೊಳ್ಳುವುದರಿಂದ ಹಾಗೂ ಆತ/ಆಕೆ ಶಾಲೆಗಳ ನಿರೀಕ್ಷಣೆ ಕೈಗೊಳ್ಳುವುದರಿಂದ BRC ಕೇಂದ್ರಗಳು ಅವರೊಂದಿಗೆ ನೇರ ಸಂಪರ್ಕದಲ್ಲಿ ಇರಬಹುದು. BRC ಶಿಕ್ಷಕರ ವೃತ್ತಿಪರವಾದ ಬೆಳವಣಿಗೆಗಾಗಿ ಕಾರ್ಯಕ್ರಮಗಳನ್ನು ಆಯೋಜಿಸಬಹುದು. ಆದ್ದರಿಂದ, BEO, BRC ಕೇಂದ್ರಗಳ ಕಾರ್ಯಕ್ರಮದಲ್ಲಿ ಏನು ಜರುಗುತ್ತವೆ ಎನ್ನುವುದರ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ಅದರ ಅರಿವನ್ನು ಹೊಂದಿರಬೇಕು. ಕಾರಣ, ಶಾಲೆಗಳಿಗೆ ಭೇಟಿಯಿತ್ತಾಗ ಆ ಕಾರ್ಯಕ್ರಮಗಳನ್ನು ಪ್ರಶಂಸಿಸಲು ಅವರಿಗೆ ಸಾಧ್ಯವಾಗುತ್ತದೆ. BRC ಬ್ಲಾಕ್ ಶಿಕ್ಷಣ ಕಛೇರಿ (Block Education Office) ದಿಂದ ಬಂದ ಸೂಚನೆಗಳನ್ನು ಶಿಕ್ಷಕ ಕೇಂದ್ರಗಳಿಗೆ ಕಳಿಸಿಕೊಡುವುದರ ಮೂಲಕ ಹಾಗೂ ಶಾಲೆಗಳ ನಿರೀಕ್ಷಣೆಯಲ್ಲಿ ನೆರವು ನೀಡುವುದರ ಮೂಲಕ BEO ಅಧಿಕಾರಿಯ ಕೆಲಸವನ್ನು ಸುಗಮಗೊಳಿಸಬಹುದು.

**ಕ್ಲಸ್ಟರ್ ಸಂಪನ್ಮೂಲ ಕೇಂದ್ರದೊಡನೆ ಸಂಪರ್ಕಗಳು:**

BRC ಯು ತನ್ನ ಪ್ರದೇಶದ DIET ಮತ್ತು CRCಗಳ ನಡುವಣ ಪ್ರಮುಖ ಸಂಪರ್ಕದಂತೆ ವರ್ತಿಸುತ್ತದೆ. CRCಗಳ ದಿನನಿತ್ಯದ ಕಾರ್ಯ, ಕಾರ್ಯಕ್ರಮಗಳ ಆಯೋಜನೆಯಲ್ಲಿ ನಾಯಕತ್ವದ ತರಬೇತಿ, CRC ಚಟುವಟಿಕೆಗಳಲ್ಲಿ ಶಿಕ್ಷಕರು ಮತ್ತು ಸಮುದಾಯವನ್ನು ಪ್ರೋತ್ಸಾಹಿಸುವ ಬಗ್ಗೆ ಕಾರ್ಯಗಳನ್ನು ವಹಿಸಿಕೊಡುವ ಬಗ್ಗೆ ಮತ್ತು CRCಯ ಸಾಧನೆಗಳ ಮೌಲ್ಯಮಾಪನದ ರೀತಿ ಇತ್ಯಾದಿಗಳಲ್ಲಿ CRC ಕೇಂದ್ರಗಳಿಗೆ ಮಾರ್ಗದರ್ಶನ ಒದಗಿಸುವುದು. BRC ಸಮಸ್ಯೆಗಳನ್ನು ಗಮನಿಸಿ ಪರಿಹರಿಸುವ ಬಗ್ಗೆ CRC ಕಾಲಕಾಲಕ್ಕೆ ನಿದರ್ಶನಾತ್ಮಕ ಮಾರ್ಗದರ್ಶಿಯನ್ನು ನೀಡುತ್ತದೆ. ಇದಲ್ಲದೆ, BRCಗಳ ಯೋಜನೆಯನ್ನು ಸಂಯೋಜಿಸಿ ಮೇಲ್ವಿಚಾರಿಸುವ ಕೆಲಸವನ್ನು BRC ಕೇಂದ್ರವು ಕೈಗೊಳ್ಳುತ್ತದೆ. ವಿವಿಧ ವಿಷಯಗಳು ವೃತ್ತಿಪರವಾದ ಸಮಸ್ಯೆಗಳು, ಸ್ಥಳೀಯವಾಗಿ ಪ್ರಸಕ್ತವಾದ ಕಲಿಕಾ–ಬೋಧನಾ ಸಾಮಗ್ರಿಗಳು ಪಠ್ಯಕ್ರಮದ ವಿವಿಧ ಕ್ಷೇತ್ರಗಳಿಂದ ಮೌಲ್ಯಮಾಪನ ಉಪಕರಣಗಳು ಇತ್ಯಾದಿಗಳನ್ನು ಕುರಿತ ಸಮೂಹ ಚರ್ಚೆಗಳ ಆಯೋಜನೆ, ಸಮುದಾಯದ ಅನ್ಯೋನ್ಯ ಪ್ರಕ್ರಿಯೆ, ಆಡಿಯೋ–ವೀಡಿಯೋ ಕ್ಯಾಸೆಟ್/ಸಿ.ಡಿ.ಗಳ ಒದಗಣೆ, NFE ಮತ್ತು AF ಅಧಿಕಾರಿಗಳಿಗೆ ಕಾರ್ಯಕ್ರಮಗಳ ಆಯೋಜನೆ ಇವುಗಳ ಮುಖಾಂತರ BRCಯು CRCಗಳಿಗೆ ಶೈಕ್ಷಣಿಕ ಬೆಂಬಲ ಒದಗಿಸುತ್ತದೆ. CRCಯ ಸಂಯೋಜಕರು ಮತ್ತು ಮುಖ್ಯಸ್ಥರುಗಳಿಗೆ EFA, UPA ಮತ್ತು UEEಗಳ ಎಲ್ಲಾ ಪ್ರಕ್ರಿಯೆಗಳು ಮತ್ತು ಕಾರ್ಯಕ್ರಮಗಳ ಸಂಬಂಧವಾಗಿ ದಿಶಾ ನಿರ್ದೇಶನವನ್ನು ನೀಡಲಾಗುವುದು. ಇವರಿಗೆ ಶಿಶುಕೇಂದ್ರಿತ ಕಲಿಕೆ, ಶಿಕ್ಷಕರ ಸಬಲೀಕರಣ, ಹಿಂದುಳಿದ ವರ್ಗ/ಅನನುಕೂಲಿತ ಸಮೂಹಗಳಿಗೆ ಸೇರಿದ ಮಾತಾಪಿತರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೇರೇಪಿಸುವುದು ಇತ್ಯಾದಿಗಳನ್ನು ಕುರಿತಾದ ತರಬೇತಿ ನೀಡಲಾಗುವುದು. ಇದಲ್ಲದೆ ಯೋಜನೆಯೊಂದಿಗೆ ಸಂಬಂಧಿಸಿದಂತೆ DIET ಬೋಧಕವರ್ಗ BRC ಬೋಧಕವರ್ಗದವರಿಗೆ ದಿಶಾನಿರ್ದೇಶನ ನೀಡುವ ವಿಷಯಗಳನ್ನು ಕುರಿತಂತೆಯೂ CRC ಬೋಧಕ ವರ್ಗಕ್ಕೆ BRC ಪರಿಚಯಿಸಬಹುದಾಗಿದೆ.

BRC ಘಟಕವು CRCಗಳ ಚಟುವಟಿಕೆ ಮತ್ತು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ DIETಗಳಿಗೆ ಹಿನ್ನುಣಿಕೆ ನೀಡುವುದಲ್ಲದೆ CRCಗಳ ಕಾರ್ಯವೈಖರಿಯ ಸುಧಾರಣೆಗಾಗಿ DIETನ ಸೂಚನೆಗಳು/ಸಲಹೆಗಳನ್ನು ಕಾರ್ಯರೂಪಕ್ಕೆ ತರುತ್ತದೆ.

**ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು:**

ಪ್ರಾಥಮಿಕ ಶಿಕ್ಷಕರ ವೃತ್ತಿಪರ ವಿಕಾಸಕ್ಕಾಗಿ ಹಾಗೂ ಹೆಚ್ಚಿನ ಸ್ಥಾನೀಯ ಪ್ರಸಕ್ತತೆಯೊಂದಿಗಿನ ಪ್ರಾಥಮಿಕ ಶಿಕ್ಷಣದ ಪ್ರಭಾವಕಾರಿ ಕಾರ್ಯವೈಖರಿ ಮತ್ತು ಗುಣಾತ್ಮಕ ವಿಕಸನಕ್ಕೆಂದು ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಮುಖ್ಯಸ್ಥರಿಗೆ ಸ್ಥಳದಲ್ಲಿಯೇ ನೆರವಾಗಲು ಮತ್ತು

Digitised by Bharatavani, CIIL

ಪ್ರಾಥಮಿಕ ಶಿಕ್ಷಕರ ವೃತ್ತಿಪರ ವಿಕಸನಕ್ಕೆಂದು ಸ್ಥಾಪಿಸಲಾಗಿರುವ ಶೈಕ್ಷಣಿಕ ಏಣಿಯಲ್ಲಿನ ತಳಮಟ್ಟದ ಸಂಸ್ಥೆಯೇ ಸಂಕುಲ ಸಂಪನ್ಮೂಲ ಕೇಂದ್ರಗಳು(Cluster Resource Centres-CRC).

**ಸ್ಥಳ ಮತ್ತು ಅಧಿಕಾರ ವ್ಯಾಪ್ತಿ:**

CRC ಕೇಂದ್ರ ನೆಲೆಸಿರುವ ಸ್ಥಳವು ಅದರ ಕಾರ್ಯ, ಕಾರ್ಯದ ವಿಧಾನ ಮತ್ತು ಕಾರ್ಯವೈಖರಿಗಳನ್ನು ಪ್ರಭಾವಿಸುವುದು. ಆದ್ದರಿಂದ 5–8 ಕಿ.ಮೀ. ವ್ಯಾಸಾರ್ಧವುಳ್ಳ 5ರಿಂದ 10 ಶಾಲೆಗಳ ವ್ಯಾಪ್ತಿಯಲ್ಲಿರುವಂತೆ ಸಣ್ಣ ಪ್ರದೇಶದಲ್ಲಿ ಇದನ್ನು ಸ್ಥಾಪಿಸಬೇಕು. CRC ತನ್ನ ಸೇವೆಯನ್ನು ನೀಡುವ ವಾಸ್ತವಿಕ ಶಾಲೆಗಳ ಸಂಖ್ಯೆ ಶಾಲೆಗಳ ಪರಸ್ಪರ ನಿಕಟತೆಯನ್ನು ಅವಲಂಬಿಸಿದೆ. ಅಂದರೆ ಅವುಗಳಿಗೆ ಸಂಬಂಧಿಸಿದ ಶಾಲೆಗಳು ದೂರ ದೂರವಾಗಿ ಹರಡಿರುವಂತೆ ಇರಬಾರದು.

**ಮೂಲಭೂತ ಸೌಕರ್ಯಗಳು ಮತ್ತು ಉಪಕರಣಗಳು:**

CRC ಕೇಂದ್ರವು ಕಾರ್ಯಕ್ರಮಗಳನ್ನು ಆಯೋಜಿಸಲು ಸಾಕಷ್ಟು ಸಂಖ್ಯೆಯಲ್ಲಿ ಕೊಠಡಿಗಳನ್ನು ಹೊಂದಿರಬೇಕು. ಹಂಚಿಕೆ ಆಧಾರದ ಮೇಲೆ ಬಳಸಿಕೊಳ್ಳಬೇಕೆಂಬ ಉದ್ದೇಶದಿಂದ ಆವರಣದಲ್ಲಿ ಇದನ್ನು ನಿರ್ಮಿಸಬಹುದು. ಆದರೆ, ಕಟ್ಟಡದಲ್ಲಿ ಟಿ.ವಿ, ವಿ.ಸಿ.ಆರ್, ಮತ್ತು ಆಡಿಯೋ–ವೀಡಿಯೋ ಕ್ಯಾಸೆಟ್ ಇತ್ಯಾದಿ ಸೌಲಭ್ಯಗಳ ವಿಸ್ತರಣೆಗೆ ಅವಕಾಶವಿರಬೇಕು.

**ಶೈಕ್ಷಣಿಕ ಚಟುವಟಿಕೆಗಳಿಗೆ ಉಪಕರಣಗಳು:**

- ಬಹುಉದ್ದೇಶಿತ ಬೃಹತ್ ಕೊಠಡಿ/ಸಭಾಂಗಣಕ್ಕಾಗಿ ಕುರ್ಚಿಮೇಜುಗಳು
- ಓವರ್‌ಹೆಡ್ ಪ್ರೊಜೆಕ್ಟರ್
- ಟಿ.ವಿ ಮತ್ತು ವಿ.ಸಿ.ಆರ್, ಆಡಿಯೋ–ವೀಡಿಯೋ ಕ್ಯಾಸೆಟ್ ಇತ್ಯಾದಿ
- ಕಪ್ಪು ಹಲಗೆ

**ಗ್ರಂಥಾಲಯ ಸೌಲಭ್ಯ:**

- ಸಾಕಷ್ಟು ಸಂಖ್ಯೆಯಲ್ಲಿ ಗ್ರಂಥಗಳು, ನಿಯತಕಾಲಿಕೆಗಳು, ಶೈಕ್ಷಣಿಕ ನಿಯತಕಾಲಿಕೆಗಳು
- ಪುಸ್ತಕ ಕಪಾಟುಗಳು
- ವಾಚನಾಲಯಕ್ಕಾಗಿ ಕುರ್ಚಿ ಮೇಜುಗಳು
- ಗ್ರಂಥಸೂಚಿ(Catalogue) ಕಪಾಟುಗಳು

**ಸಿಬ್ಬಂದಿ:**

ಸ್ಥಾನೀಯವಾಗಿ ಒಳ್ಳೆಯ ಕಾರ್ಯಕ್ರಮಗಳನ್ನು ಆಯೋಜಿಸಿ ಅದರ ಅನುಸರಣಾಕಾರ್ಯ ಕೈಗೊಳ್ಳಬೇಕಾದರೆ CRC ಪೂರ್ವಾಪೇಕ್ಷಿತವಾಗಿ ತನ್ನದೇ ಸಾಕಷ್ಟು ಖಾಯಂ ಸಿಬ್ಬಂದಿಯನ್ನು ಹೊಂದಿರಬೇಕು. ಆದರೆ ಈ ಯೋಜನೆಯಲ್ಲಿ ಅಂಗೀಕೃತವಾಗಿರುವ ಕೇಂದ್ರಗಳ ಸಂಖ್ಯೆ ಅಧಿಕವಾದ್ದರಿಂದ CRC ಸ್ಥಾಪಿಸುವ ಕಡೆ ಸಂಸ್ಥೆಯ ಬೋಧಕ ಸಿಬ್ಬಂದಿಯ ಸೇವೆಗಳನ್ನು ಬಳಸಿಕೊಳ್ಳುವುದು ಖಚಿತವಾಗಿದೆ. ದೀರ್ಘಕಾಲದಲ್ಲಿ CRC ಸ್ಥಾಪನೆಯಾದಾಗ ಅದು ತನ್ನದೇ ಸಿಬ್ಬಂದಿಯನ್ನು ಹೊಂದಿರಬೇಕು.

(i) ಕೇಂದ್ರದ ಮುಖ್ಯಸ್ಥ

(ii) ಸಂಯೋಜಕನಂತೆ(ಪೂರ್ಣಕಾಲಿಕ) ಕೆಲಸ ಮಾಡಲು ಓರ್ವಶಿಕ್ಷಕ

(iii) ಕಾರಕೂನ

**ಸಲಹಾ ಸಮಿತಿ:**

ಅಲ್ಪಾವಧಿ ಮತ್ತು ದೀರ್ಘಾವಧಿ ನೀತಿ ಸಂಬಂಧಿತ ವಿಷಯಗಳು, ವಾರ್ಷಿಕ ಚಟುವಟಿಕೆಯ ಕ್ಯಾಲೆಂಡರ್ ತಯಾರಿಕೆ, ಸಂಪನ್ಮೂಲ ಬಳಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ CRC ತನ್ನ ಸಿಬ್ಬಂದಿಗೆ ನೆರವಾಗಲು ಸಲಹಾ ಸಮಿತಿಯನ್ನು ಹೊಂದಿರಬೇಕು. ಸಲಹಾ ಸಮಿತಿಯು ಮುಂದಿನವರೆಲ್ಲವನ್ನು ಒಳಗೊಳ್ಳಬೇಕು. (i) CRC ಸ್ಥಾಪಿಸಲಾಗಿರುವ ಸಂಸ್ಥೆಯ ಮುಖ್ಯಸ್ಥ (ii) ಸಂಯೋಜಕ (iii) ಬ್ಲಾಕ್ ಶಿಕ್ಷಣ ಅಧಿಕಾರಿ ಮತ್ತು CRC ಸಂಯೋಜಕ (iv) CRC ಸ್ಥಾಪಿತವಾಗಿರುವ ಬ್ಲಾಕಿನ BRCಯ ಸದಸ್ಯ (v) ಸ್ಥಳೀಯ ETTIನ ಸದಸ್ಯ (ಅದೇ ಪ್ರದೇಶದಲ್ಲಿ DIET ಇದ್ದರೆ ಅದರ ಸದಸ್ಯ) (vi) ಕೇಂದ್ರದಲ್ಲಿ ಸಕ್ರಿಯ ಪಾತ್ರ ವಹಿಸುವ ಪ್ರಾಥಮಿಕ ಶಾಲಾ ಶಿಕ್ಷಕರು (vii) ವೃತ್ತಿಪರ ಸಂಸ್ಥೆಯ(ಗಳ) ತಜ್ಞರು (viii) ಗ್ರಾಮ ಶಿಕ್ಷಣ ಸಮಿತಿ/ಶಾಲಾ ಶಿಕ್ಷಣ ಸಮಿತಿಯ ಸದಸ್ಯ.

**ಕಾರ್ಯಕ್ರಮದ ಆಯೋಜನೆ:**

ಮಾಸಿಕ ಸಭೆ ಹಾಗೂ ದಿಶಾ ನಿರ್ದೇಶನ ಕಾರ್ಯಕ್ರಮ (Orientation Programme) ಎಂಬ ಎರಡು ವಿಧದ ಕಾರ್ಯಕ್ರಮಗಳನ್ನು ಆಯೋಜಿಸುವುದು. ಪ್ರಾಥಮಿಕ ಶಿಕ್ಷಕರ ಮಾಸಿಕ ಸಭೆಯನ್ನು ಶಿಕ್ಷಕರ ಅನುಭವಗಳು, ಅವರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳು ಬಗ್ಗೆ ಅರಿಯಲು ಆಯೋಜಿಸಲಾಗುವುದು. ಈ ಮುಂದಿನ ಚಟುವಟಿಕೆಗಳನ್ನು ಸಹ ಮಾಸಿಕ ಸಭೆಗಳಲ್ಲಿ ಆಯೋಜಿಸಬಹುದು. (i) ಕ್ಯಾಸೆಟ್, ಸಿಡಿ ಇತ್ಯಾದಿಗಳ ಪ್ರದರ್ಶನ (ii) ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ/ಪ್ರಾತ್ಯಕ್ಷಿಕೆಗಳು (iii) ವೃತ್ತಿಪರವಾದ ಸಮಸ್ಯೆಗಳು, ವಿಷಯಗಳ ಬಗ್ಗೆ ಸಮೂಹ ಚರ್ಚೆ, ಸ್ಥಳೀಯವಾಗಿ ಪ್ರಸಕ್ತವಾದ ಸಾಮಗ್ರಿಗಳ–ಬೋಧನಾ ಕಲಿಕಾ ಸಾಮಗ್ರಿಗಳ ಮೌಲ್ಯಮಾಪನ ವಿಧಾನಗಳ ವಿಕಾಸ, ಪಠ್ಯಕ್ರಮದ ಕ್ಲಿಷ್ಟ ಭಾಗಗಳ ಬಗ್ಗೆ ಚರ್ಚೆ ಇತ್ಯಾದಿ (iv) ಕ್ಷೇತ್ರ ಭೇಟಿ/ಅಧ್ಯಯನ ಭೇಟಿಗಳು (v) ಸ್ವಯಂ ಅಧ್ಯಯನ ಮತ್ತು (vi) ಸಮುದಾಯ ಅನ್ಯೋನ್ಯ ಕ್ರಿಯೆ.

ಒಂದು ದಿನದ ದಿಶಾನಿರ್ದೇಶನ ಕಾರ್ಯಕ್ರಮದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಈ ಕೆಳಗಿನ ವಿಷಯಗಳ ಬಗ್ಗೆ ಸಂವೇದೀಕರಣಗೊಳಿಸಬಹುದು: ಬೋಧನಾ ಸಾಮಗ್ರಿಗಳು, ಬಹುತರಗತಿ ಬೋಧನೆ, ಬೋಧನಾ ವಿಧಾನಗಳು, ವಿದ್ಯಾರ್ಥಿಗಳ

Digitised by Bharatavani, CIIL

ವಿಶೇಷ ಅಗತ್ಯಗಳು, UEE/UPE, ಸರ್ವಶಿಕ್ಷಣ ಅಭಿಯಾನ, ಆಪರೇಷನ್ ಕಪ್ಪು ಹಲಗೆ, ನಿರಂತರ ಸಮಗ್ರ ಮೌಲ್ಯಮಾಪನ, ಪರಿಸರದ ಉಪಯೋಗ, ವಿದ್ಯಾರ್ಥಿಗಳ ಸಂಚಿತ ದಾಖಲೆ ಪತ್ರಗಳು ಇತ್ಯಾದಿ. ಈ ಕಾರ್ಯಕ್ರಮಗಳ ಆಯೋಜನೆ ಈ ಕೆಳಗಿನ ಮಾದರಿಯಲ್ಲಿರುವುದು:

**ಇತರ ಸಂಸ್ಥೆಗಳೊಡನೆ ಸಂಪರ್ಕ:**

ಯೋಜನೆಯೊಂದನ್ನು ಅನುಷ್ಠಾನಿಸಿ ಉಳಿಸಿಕೊಳ್ಳಬೇಕಾದರೆ CRCಗಳು ಮತ್ತು ಇತರ ಸಂಸ್ಥೆಗಳೊಂದಿಗಿನ ಸಂಪರ್ಕ ನಿರ್ಣಾಯಕವಾದುದು. ಆದ್ದರಿಂದ, ಪ್ರಾಥಮಿಕ ಶಿಕ್ಷಣ, AE ಮತ್ತು NFEಗಳ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಪಠ್ಯಕ್ರಮಗಳು ಮತ್ತು ಬೋಧನಶಾಸ್ತ್ರ ಸಾಕಷ್ಟು ಭರಿತಗಳನ್ನು (input) ಕೊಡಲು CRCಗಳು ವಿವಿಧ ಸಂಸ್ಥೆಗಳ ಪ್ರಮುಖ ಅಧಿಕಾರಿಗಳ ವಿಶೇಷಜ್ಞತೆಯನ್ನು ಉಪಯೋಗಿಸಿಕೊಳ್ಳುವುವು.

**ಬ್ಲಾಕ್ ಸಂಪನ್ಮೂಲ ಕೇಂದ್ರದೊಡನೆ ಸಂಪರ್ಕಗಳು:**

ಬ್ಲಾಕ್ ಸಂಪನ್ಮೂಲ ಕೇಂದ್ರ(BRC) ಮತ್ತು ಇದರ ವ್ಯಾಪ್ತಿ ಶಾಲೆಗಳ ನಡುವೆ CRCಯು ಮಹತ್ವಪೂರ್ಣ ಕೊಂಡಿಯಂತೆ ವರ್ತಿಸುವುದು. CRC ತನ್ನ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ BRCಗೆ ಹಿಮ್ಮಾಹಿತಿ ನೀಡಬೇಕಿದ್ದು ಶಿಕ್ಷಕರಿಗೆ ಅಲ್ಪಾವಧಿ ಕಾರ್ಯಕ್ರಮಗಳನ್ನು ಆಯೋಜಿಸಲು ಅವರ ಶೈಕ್ಷಣಿಕ ಮತ್ತು ವೃತ್ತಿಪರ ಅಗತ್ಯಗಳನ್ನು ಸಹ ತಿಳಿಯಬೇಕಾಗುತ್ತದೆ. ತನ್ನ ದೈನಂದಿನ ಕಾರ್ಯಗಳಲ್ಲಿ ಕಾರ್ಯಕ್ರಮಗಳ ಆಯೋಜನೆಯಲ್ಲಿ ನಾಯಕತ್ವದ ತರಬೇತಿ, ಸಮುದಾಯ ಕಾರ್ಯಗಳಲ್ಲಿ ಶಿಕ್ಷಕರನ್ನು ಪ್ರೋತ್ಸಾಹಿಸುವುದು ಮತ್ತು ತನ್ನ ಸಾಧನೆಗಳ ಮೌಲ್ಯಮಾಪನೆ ಇವೇ ಮುಂತಾದವುಗಳಲ್ಲಿ BRCಯಿಂದ ಮಾರ್ಗದರ್ಶನ ಪಡೆಯುವುದು. CRCಗೆ ಕಾಲಕಾಲಕ್ಕೆ ಸಮಸ್ಯೆಗಳನ್ನು ಗುರುತಿಸಿ ಅದರ ನಿವಾರಣೆಯ ಬಗ್ಗೆ BRCಯು ಉದಾಹರಣೆಯಾಗಿ ಮಾರ್ಗದರ್ಶನ ನೀಡುವುದಲ್ಲದೇ ಅವರ ಯೋಜನೆ, ಕಾರ್ಯಕ್ರಮಗಳ ಸಂಯೋಜನೆ, ಉಸ್ತುವಾರಿಗಳನ್ನೂ ಸಹ ನಡೆಸಿಕೊಡುತ್ತದೆ. ವೃತ್ತಿಪರವೂ ಸ್ಥಳೀಯವೂ ಆದ ಬೋಧನಾ ಕಲಿಕಾ ಸಾಮಗ್ರಿಗಳು, ಪಠ್ಯಕ್ರಮದ ವಿವಿಧ ಕ್ಷೇತ್ರಗಳಿಂದ ಮೌಲ್ಯಮಾಪನ ತಂತ್ರಗಳು ಸಮುದಾಯ ಅನ್ಯೋನ್ಯಕ್ರಿಯೆ ಮುಂತಾದ ವಿಷಯಗಳು ಹಾಗೂ ಸಮಸ್ಯೆಗಳ ಬಗ್ಗೆ ಸಮೂಹ ಚರ್ಚೆಯ ಆಯೋಜನೆ, ಆಡಿಯೋ-ವೀಡಿಯೋ ಕ್ಯಾಸೆಟ್‌ಗಳ ಒದಗಣೆ, NFE ಮತ್ತು AE ಅಧಿಕಾರಿಗಳಿಗೆ ಕಾರ್ಯಕ್ರಮಗಳ ಆಯೋಜನೆ ಇವೆಲ್ಲದರ ಮೂಲಕ BRCಯು CRCಗೆ ಶೈಕ್ಷಣಿಕ ಬೆಂಬಲದ ಸಹಾಯ ಹಸ್ತ ನೀಡುತ್ತದೆ.

"ಸರ್ವರಿಗೂ ಶಿಕ್ಷಣ" ಮತ್ತು "ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ"ಗಳ ಬಹುಕಾಲದ ಗುರಿಗಳನ್ನು ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಕೈಗೊಳ್ಳಬೇಕಾದ್ದರಿಂದ BRC ವ್ಯಾಪ್ತಿಯಲ್ಲಿ ಬರುವ CRCಗಳ ಎಲ್ಲಾ ಮುಖ್ಯಸ್ಥರು ಹಾಗೂ ಸಂಯೋಜಕರುಗಳಿಗೆ EFA, UPE ಮತ್ತು UEEಗಳ ಪ್ರಕ್ರಿಯೆ ಹಾಗೂ ಕಾರ್ಯಕ್ರಮಗಳ ಬಗ್ಗೆ ದಿಶಾ ನಿರ್ದೇಶನ ಒದಗಿಸಲಾಗುವುದು. ಅವರಿಗೆ ಶಿಶುಕೇಂದ್ರಿತ ಕಲಿಕೆ, ಶಿಕ್ಷಕರ ಸಬಲೀಕರಣ, ಅನನುಕೂಲಿತ ಗುಂಪಿನ ಮಕ್ಕಳ ತಂದೆ ತಾಯಿಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸಲಾಗುವುದು. ಇವುಗಳ ಬಗ್ಗೆ ಪ್ರಶಿಕ್ಷಣ ನೀಡಲಾಗುವುದು. ಇದಲ್ಲದೇ ಇಂತಹ CRC ಕೇಂದ್ರದ ಸಿಬ್ಬಂದಿಗೆ DIETಗಳು BRC ಸಿಬ್ಬಂದಿಗೆ ಪರಿಚಯಿಸಿರುವ ವಿಷಯಗಳಲ್ಲಿ ದಿಶಾನಿರ್ದೇಶನ ಕೊಡಲಾಗುವುದು.

**ಶಾಲೆಗಳೊಂದಿಗಿನ ಸಂಪರ್ಕಗಳು:**

CRCಯೊಂದರ ಮುಖ್ಯ ಉದ್ದೇಶ ಶಾಲೆಗಳ ಬೆಳವಣಿಗೆಗೆ ಪ್ರೋತ್ಸಾಹನ ಮತ್ತು ಶಿಕ್ಷಕರೊಡನೆ ಸ್ಥಳ-ನಿರ್ದಿಷ್ಟ ಪಠ್ಯಕ್ರಮ ನವೀನತೆಗಳನ್ನು ಹಂಚಿಕೊಳ್ಳಲಾಗುವುದು. ಆದ್ದರಿಂದ ಶಾಲೆಗಳು CRCಯ ಕಾರ್ಯವೈಖರಿಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿವೆ. CRC ಶಾಲೆಗಳಿಗೆ ಅವುಗಳ ದಿನನಿತ್ಯದ ಕಾರ್ಯಗಳಲ್ಲಿ ಮಾರ್ಗದರ್ಶನ ಮತ್ತು ಮಾಸಿಕ ಸಭೆಗಳಲ್ಲಿ ಶೈಕ್ಷಣಿಕ ಮತ್ತು ವೃತ್ತಿ ಸಂಬಂಧಿತ ವಿಷಯಗಳ ಬಗ್ಗೆ ಚರ್ಚೆಗೆ ವೇದಿಕೆಗಳನ್ನು ಒದಗಿಸುತ್ತದೆ. ತರಗತಿಯ ಬೋಧನೆಯ ತತ್ವ ಹಾಗೂ ಪ್ರಯೋಗಗಳ ಜ್ಞಾನವನ್ನು ಉತ್ತಮಪಡಿಸುವುದರ ಜೊತೆಗೆ ಕ್ರಿಯಾ ಸಂಶೋಧನೆಗಳನ್ನು ನಡೆಸಲು ನೆರವಾಗುತ್ತದೆ. CRCಯೊಂದಿಗೆ ಸೇವಾನಿರತ ಶಿಕ್ಷಕರು ಮತ್ತು ಪ್ರಾಂಶುಪಾಲರು ಸಹಕರಿಸಿ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಿ ಅವುಗಳ ಮಹತ್ವ ಹಾಗೂ ಮೌಲ್ಯತೆಗಳನ್ನು ಅರಿತುಕೊಂಡಾಗ ಈ ಗುರಿಗಳು ಸಂಪೂರ್ಣವಾಗಿ ಸಾಧಿತವಾಗುತ್ತವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, CRC ಕೇಂದ್ರವು ಅಧ್ಯಾಪಕರಲ್ಲಿ ಸಕ್ರಿಯ ಸಹಭಾಗಿತ್ವಕ್ಕಾಗಿ ಪ್ರೇರಣೆಯನ್ನು ಒದಗಿಸಿ ವೃತ್ತಿಪರವಾದ ಬದ್ಧತೆಯತ್ತ ಅವರ ಮನೋಭಾವ ದೃಷ್ಟಿಕೋನ ಮತ್ತು ಉತ್ತರದಾಯಿತ್ವಗಳನ್ನು ಬೆಳೆಸಬೇಕು. ಶಾಲೆಯ ಬೋಧಕ ಸಿಬ್ಬಂದಿ ಮತ್ತು CRC ಗಳ ನಡುವೆ ಪ್ರಾಂಶುಪಾಲರು ಪ್ರಮುಖ ಕೊಂಡಿಯಂತಿರುವುದರಿಂದ ಅವರು ತಮ್ಮ ಬೋಧಕ ಸಿಬ್ಬಂದಿಗೆ CRCಯ ಆಗುಹೋಗುಗಳ ಬಗ್ಗೆ ಮಾಹಿತಿ ನೀಡುತ್ತಿರಬೇಕು. ಕಲಿಕೆಯ ಅನುಭವಗಳನ್ನು ಒದಗಿಸಲು ಆತ ಶಿಕ್ಷಕರಿಗೆ ಚಾಲಕ ಶಕ್ತಿಯುಳ್ಳ ನಾಯಕತ್ವ ಒದಗಿಸಿ ಅವರಲ್ಲಿ ವೃತ್ತಿಪರತೆಯನ್ನು ಪ್ರೋತ್ಸಾಹಿಸಬೇಕು.

ಶಿಕ್ಷಕರು ಮೂರು ಸ್ತರಗಳಲ್ಲಿ ಭಾಗವಹಿಸಬಲ್ಲರು. ಮೊದಲನೆಯದಾಗಿ CRCಗೆ ಕೇವಲ ಭೇಟಿ ಮಾತ್ರದಿಂದ (ತಳಮಟ್ಟದ ದಿಶಾ ನಿರ್ದೇಶನ) ತಮ್ಮನ್ನು ಅದನ್ನು ಪರಿಚಯಿಸಿಕೊಂಡು ಅದರ ಸಂಪನ್ಮೂಲಗಳು, ಚಟುವಟಿಕೆಗಳು, ಉಪಕರಣಗಳು ಮತ್ತು ಕೇಂದ್ರದಿಂದ ಯಾವ ಬಗೆಯ ಪ್ರಯೋಜನ ಪಡೆಯಬಹುದೆಂದು ಅರಿತುಕೊಳ್ಳುವುದು. ಎರಡನೆಯ ಸ್ತರದಲ್ಲಿ ಅಧ್ಯಯನ ಗುಂಪುಗಳು, ಕಾರ್ಯಾಗಾರಗಳು, ಹಾಗೂ ಪ್ರಯೋಜನಗಳಲ್ಲಿ ಭಾಗಿಯಾಗುವುದು ಮತ್ತು ಮಾಸಿಕ ಸಭೆಗಳಿಗೆ ಹಾಜರಾಗುವುದು. ಮೂರನೆಯ ಹಾಗೂ ಅತಿ ಮಹತ್ವಪೂರ್ಣಸ್ತರವೆಂದರೆ ಅನುಷ್ಠಾನದ ಹಂತ ಅಂದರೆ CRCಯಲ್ಲಿ ಕಲಿತ ಕಾರ್ಯನೀತಿಗಳನ್ನು ಶಾಲೆಗಳಲ್ಲಿ

Digitised by Bharatavani, CIIL

ಅನುಷ್ಠಾನಿಸುವುದು. ಕೆಲವು ಶಿಕ್ಷಕರು ತಮ್ಮ ಅಂತರ್ನಿಹಿತ ನಾಯಕತ್ವದ ಗುಣಗಳಿಂದಾಗಿ ನಾಯಕರಾಗಿ ಮುಂದೆ ಬರಬಲ್ಲರು. ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಒಂದಲ್ಲ ಒಂದು ಕ್ಷೇತ್ರದಲ್ಲಿ, ಅಂದರೆ ಭಾಷೆ, ಗಣಿತ, ಪರಿಸರ ಅಧ್ಯಯನಗಳು, ಕಲಕುಶಲತೆ, ಕಥಾನಿರೂಪಣೆ(Story Telling), ಆಟಗಳು, ಸಂವಹನ ಕೌಶಲಗಳು, ಸ್ಥಳಜನ್ಯ ಸಾಧನಗಳ ಬಳಕೆ ಇತ್ಯಾದಿ. ಇತರ ಅಧ್ಯಾಪಕರ ದಕ್ಷತೆಯನ್ನು ಸುಧಾರಿಸಬಹುದು. ಹೀಗೆ ಅವರು ಬೋಧನೆಗಿರುವ ವಿವಿಧ ಉಪಕ್ರಮಗಳನ್ನು ಪ್ರದರ್ಶಿಸಬಹುದು.

**ಎನ್.ಜಿ.ಓ/ಸ್ವಯಂಸೇವಕ ಸಂಘಗಳು ವೃತ್ತಿಪರವಾದ ಸಂಘಗಳು ಮತ್ತು ಶಿಕ್ಷಕ ಸಂಘಗಳೊಂದಿಗಿನ ಸಂಪರ್ಕಗಳು:**

ಸರ್ಕಾರೇತರ ಸಂಸ್ಥೆಗಳು (NGO), ವೃತ್ತಿಪರ ಸಂಘಗಳು ಮತ್ತು ಶಿಕ್ಷಕ ಸಂಘಗಳು CRCಗಳ ಶೈಕ್ಷಣಿಕ ಚಟುವಟಿಕೆಗಳ ಆಯೋಜನೆಯಲ್ಲಿ ತಜ್ಞತೆಯನ್ನು ಒದಗಿಸಬಲ್ಲವು. ವ್ಯವಹಾರ್ಯವಾದಲ್ಲಿ, CRCಗಳ ಸಲಹಾ ಸಮಿತಿಗಳಲ್ಲಿ ಇವುಗಳ ಪ್ರತಿನಿಧಿತ್ವವನ್ನು ಹೊಂದಬಹುದು.

**ಇತರ CRCಗಳು ಮತ್ತು ಶಾಲಾ ಸಂಕೀರ್ಣಗಳೊಂದಿಗಿನ ಸಂಪರ್ಕಗಳು:**

ವಿವಿಧ ವಿನೂತನ ವಿಷಯಗಳಲ್ಲಿ ಪ್ರಾದೇಶಿಕ/ ಕ್ಲಸ್ಟರ್‌ನ ಶಿಕ್ಷಕರ ದಿಶಾನಿರ್ದೇಶನಕ್ಕೆ ಸಂಬಂಧಿಸಿದಂತೆ DPEP ಹೊಂದಿರುವ ರಾಜ್ಯಗಳಲ್ಲಿ ಸ್ಥಾಪಿತವಾಗಿರುವ BRCಗಳು CRCಗಳೊಂದಿಗೆ ನಿಕಟ ಸಹಯೋಗದೊಂದಿಗೆ ಕಾರ್ಯೋನ್ಮುಖವಾಗುವುವು. ಸಾಧ್ಯವಾದರೆ ಅಂಥ CRCಗಳ ಕಾರ್ಯಕ್ರಮಗಳನ್ನು ಒಟ್ಟಿಗೆ ಆಯೋಜಿಸಬಹುದು. ಆದರೆ ಈ ಅಂಗಗಳಿಂದ ಆಯೋಜಿತವಾಗುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಶಿಕ್ಷಕರು ಒಂದೇ ಆಗಿರಬಾರದು. CRCಗಳು ಪರಸ್ಪರ ತಮ್ಮ ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು. ಇದೇ ರೀತಿಯ ಸಹಯೋಗವನ್ನು ಶಾಲಾ ಸಂಕೀರ್ಣಗಳ ಜೊತೆಯೂ ಹೊಂದಬಹುದು. ವ್ಯವಹಾರ್ಯವಾದರೆ, ಶಾಲಾ ಸಂಕೀರ್ಣಗಳನ್ನು CRCಗಳಾಗಿ ಉನ್ನತಿಕರಿಸಬಹುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳು (BEO):**

CRC ಕೇಂದ್ರಗಳು ತಮ್ಮ ವ್ಯಾಪ್ತಿಯ ಶಾಲೆಗಳಿಂದ ದಾಖಲಾತಿ ಮತ್ತು ಇತರ ಶೈಕ್ಷಣಿಕ ಅಂಕಿಅಂಶಗಳನ್ನು ಸಂಗ್ರಹಿಸಿ ಅದನ್ನು BRCಕೇಂದ್ರಗಳಲ್ಲಿ ಇಡೀ ಬ್ಲಾಕ್‌ನ್ನು ಕುರಿತಂತೆ ಏಕೀಕೃತಗೊಳಿಸಿ BEO ಕಛೇರಿಗೆ ಒಪ್ಪಿಸಲು ಸಾಧ್ಯವಾಗುವಂತೆ ಆ ದತ್ತಾಂಶಗಳನ್ನು BRCಗಳಿಗೆ ನೀಡಬಹುದು. ಇದೇ ರೀತಿ, BEO ಕಾರ್ಯಾಲಯ CRCಗಳ ಮೂಲಕ ದಿನಂಪ್ರತಿ ವಿಧದ ಸುತ್ತೋಲೆಗಳನ್ನು ವಿವಿಧ ಶಾಲೆಗಳಿಗೆ ತಲುಪಿಸಬಹುದು. ಇದರಿಂದ ಅಧಿಕಾರಿಗೆ ಸಮಯ ಉಳಿತಾಯವಾಗಿ ಆತ/ಆಕೆ ಅದನ್ನು ಇತರ ಮುಖ್ಯ ವಿಷಯಗಳಿಗೆ ವಿನಿಯೋಗಿಸಬಹುದು.

**ತಾಂತ್ರಿಕ ಶಿಕ್ಷಣ ಸಂಸ್ಥೆಗಳ** (Technical Education Institution-TEI) **ಜೊತೆಗಿನ ಸಂಪರ್ಕ:**

ಸ್ಥಳೀಯ TEIಗಳ ಭೌತಿಕ ಮತ್ತು ಮಾನವ ಸಂಪನ್ಮೂಲಗಳನ್ನು CRCಗಳು ತಮ್ಮ ಕಾರ್ಯಕ್ರಮಗಳ ಆಯೋಜನೆಗೆ, ಮಾಸಿಕ ಭೇಟಿಗಳಿಗೆ ಮತ್ತು ಒಂದು ದಿನದ ದಿಶಾನಿರ್ದೇಶನ ಕಾರ್ಯಕ್ರಮಗಳಿಗೆ ಉಪಯೋಗಿಸಕೊಳ್ಳಬಹುದು.

**DIETಗಳೊಂದಿಗಿನ ಸಂಪರ್ಕ:**

ಡಯಟ್ ಸಂಸ್ಥೆಗಳು CRCಬೋಧಕ ಸಿಬ್ಬಂದಿಗೆ ಅವರ ಪಾತ್ರ ಮತ್ತು ಕಾರ್ಯಗಳನ್ನು ಕುರಿತಂತೆ ದಿಶಾನಿರ್ದೇಶನದಲ್ಲಿ ನೆರವಾಗುತ್ತದೆ. ಆಯಾ ಪ್ರದೇಶದ ಶಿಕ್ಷಕರಿಗೆ ಒಂದು ದಿನದ ಕಾರ್ಯಕ್ರಮಕ್ಕೆ ವಿಷಯಗಳ ಮತ್ತು ಸಂಪನ್ಮೂಲ ವ್ಯಕ್ತಿಗಳ ಆಯ್ಕೆಯಲ್ಲಿ DIETಸಂಸ್ಥೆಗಳು CRCಬೋಧಕವರ್ಗಕ್ಕೆ ಸಹಾಯ ನೀಡಬಲ್ಲವು. ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಶಿಕ್ಷಕರು ಅಲ್ಪಕಾಲೀನ ದಿಶಾನಿರ್ದೇಶನ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ವರ್ತಿಸಬಲ್ಲರು. UPE ಮತ್ತು EFAಗಳ ಗುರಿಗಳನ್ನು ಸಾಧಿಸಲು DIET ಶಿಕ್ಷಕ ಕೇಂದ್ರಗಳಿಗೆ ಶೈಕ್ಷಣಿಕ ನೆರವನ್ನು ನೀಡಬಹುದು. ಇದಲ್ಲದೆ, DIETಗಳು BRCಗಳ ಮೂಲಕ CRCಕೇಂದ್ರಗಳ ವಿಭಿನ್ನ ಚಟುವಟಿಕೆಗಳಿಗೆ ಧನಸಹಾಯವು ತಲುಪುವಂತೆ ವ್ಯವಸ್ಥೆ ಮಾಡುವುವು. ಅಂತೆಯೇ CRCಗಳು ತಮ್ಮ ಬಜೆಟ್ಟಿನ ಅಂದಾಜಿಗೆ DIETನಿಂದ ಅಂಗೀಕಾರ ಪಡೆದು ಹಣಕಾಸು ಲೆಕ್ಕವನ್ನು ಲೆಕ್ಕಸಂಶೋಧನೆಗಾಗಿ ಸಲ್ಲಿಸುವುವು.

**ಪ್ರಾದೇಶಿಕ ಶಿಕ್ಷಣ ಸಂಸ್ಥೆ (RIE)ಯೊಂದಿಗೆ ಸಂಪರ್ಕ:**

ಪ್ರಾಯೋಗಿಕ ಹಂತದಲ್ಲಿ RIEಯು CRCಕೇಂದ್ರಗಳನ್ನು ಸ್ಥಾಪಿಸಲು ಕ್ಲಸ್ಟರ್‌ಗಳನ್ನು ಗುರುತಿಸುವ ಮತ್ತು CRCಗಳ ಸ್ಥಾಪನೆಯ ಉತ್ತರದಾಯಿತ್ವವನ್ನು ಹೊಂದಿರುತ್ತದೆ. ಇಚ್ಛಿಸಿದಲ್ಲಿ CRCಗಳು ಶೈಕ್ಷಣಿಕ ನೆರವಿಗಾಗಿ ಮತ್ತು ಮಾರ್ಗದರ್ಶನಕ್ಕಾಗಿ RIEಗಳನ್ನು ಕೋರಿಕೊಳ್ಳಬಹುದು.

**SCERTಸಂಸ್ಥೆಗಳೊಂದಿಗಿನ ಸಂಪರ್ಕಗಳು:**

SCERTಸಂಸ್ಥೆಯು CRCಗಳ ವಿಭಿನ್ನ ಕಾರ್ಯಕ್ರಮಗಳಿಗೆ ಅನುದಾನವನ್ನು ಕೇಂದ್ರಸರ್ಕಾರದಿಂದ ತರಿಸಿಕೊಡುವ ಮತ್ತು ಸಕಾಲದಲ್ಲಿ DIET ಮತ್ತು BRCಗಳ ಮೂಲಕ CRCಗೆ ತಲುಪಿಸುವ ಜವಾಬ್ದಾರಿ ಹೊತ್ತಿದೆ. ಶಿಕ್ಷಕ ಕೇಂದ್ರಗಳು(TCs), ಅನುದಾನದ ಉಪಯೋಗದ ಸರಿಯಾದ ಲೆಕ್ಕವನ್ನಿಟ್ಟು ಲೆಕ್ಕ ಪರಿಶೋಧನೆಗಾಗಿ SCERTಸಂಸ್ಥೆ ಲಭ್ಯವಾಗಿಸುತ್ತವೆ. ಈ ಯೋಜನೆಗೆ ನಿಯೋಜಿತವಾಗಿರುವ SCERT ಸಿಬ್ಬಂದಿ ಈ ಉದ್ದೇಶಕ್ಕಾಗಿ CRCಗಳಿಗೆ ಭೇಟಿ ನೀಡಬಹುದು.

Digitised by Bharatavani, CIIL

**ಉಪಸಂಹಾರ:**

ಅಧ್ಯಾಪಕ ಶಿಕ್ಷಣ ಒಂದು ನಿರಂತರ ಹಾಗೂ ಜೀವಿತದುದ್ದಕ್ಕೂ ನಡೆಯುವ ಪ್ರಕ್ರಿಯೆಯಾಗಿದ್ದು ಶಾಲಾ ಶಿಕ್ಷಣದ ಗುಣಾತ್ಮಕತೆ ನಿರಂತರ ಸುಧಾರಣೆಗೆ ಅವಶ್ಯಕವಾಗಿದೆ. ಬ್ಲಾಕ್ ಮತ್ತು ಸ್ಥಳೀಯ ಸ್ತರಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಚಾಲಕ ಶಕ್ತಿಯನ್ನು ನೀಡಲು ದೇಶದಾದ್ಯಂತ ಸ್ಥಾಪಿಸಲಾಗುತ್ತಿರುವ ತಳಮಟ್ಟದ ಸಂಸ್ಥೆಗಳೇ ಬ್ಲಾಕ್ ಸಂಪನ್ಮೂಲ ಕೇಂದ್ರ ಮತ್ತು ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು. ಇವು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಮುಖ್ಯಸ್ಥರಿಗೆ ಹಾಗೂ AE ಮತ್ತು NFE ಕಾರ್ಯಕರ್ತರಂತಹ ತಳಮಟ್ಟದ ಕಾರ್ಯಕರ್ತರಿಗೆ ಅವರ ವೃತ್ತಿಪರ ಬೆಳವಣಿಗೆಯ ಸಲುವಾಗಿ ಅವಕಾಶಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸುವ ಸಂಸ್ಥೆಗಳೆಂದು ಭಾವಿಸಲಾಗಿದೆ. ಅಲ್ಲದೇ, ವಿಸ್ತರಣಾ ಸೌಲಭ್ಯಗಳನ್ನು ಒದಗಿಸುವ ಮೂಲಕ ಕ್ರಿಯಾಸಂಶೋಧನೆ ನಡೆಸಲು, ತಮ್ಮ ತರಗತಿಯ ಸಮಸ್ಯೆಗಳನ್ನು ಹಾಗೂ ಇತರ ಶೈಕ್ಷಣಿಕ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಿಕೊಳ್ಳಲು ತಳಮಟ್ಟದ ಕಾರ್ಯಕರ್ತರಿಗೆ ಈ ಸಂಸ್ಥೆಗಳು ಸಹಾಯ ಮಾಡುವುವು. ಬ್ಲಾಕಿನ ಮೇಲ್ವಿಚಾರಣೆ ಮತ್ತು ಬ್ಲಾಕಿನ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿಅಂಶಗಳ ಸಂಗ್ರಹಣೆಯಲ್ಲಿ ನೆರವು ನೀಡುವುದರ ಮೂಲಕ ಬ್ಲಾಕ್‌ನ ಶೈಕ್ಷಣಿಕ ಆಡಳಿತದಲ್ಲಿ ಕೊಂಡಿಯಂತೆ ವರ್ತಿಸಬೇಕೆಂದು ಅಪೇಕ್ಷಿಸಲಾಗುತ್ತದೆ. ಸಂಕ್ಷಿಪ್ತವಾಗಿ BRCಗಳು ವಾಸ್ತವವಾಗಿ ಉಪಜಿಲ್ಲೆ/ಬ್ಲಾಕ್ ಸ್ತರಗಳಲ್ಲಿನ DIET ಸಂಸ್ಥೆಗಳ ವಿಸ್ತರಣೆಯೇ ಆಗಿದೆ. ಹಾಗೂ ಇವು ಬ್ಲಾಕ್‌ನ ಪ್ರಾಥಮಿಕ ಶಿಕ್ಷಣದ ಗುಣಾತ್ಮಕತೆಯನ್ನು ಹೆಚ್ಚಿಸುವ ಸಣ್ಣ DIET ಸಂಸ್ಥೆಗಳಂತಿವೆ.

CRCಗಳಿಗೆ ಮಾರ್ಗದರ್ಶನ ಮತ್ತು ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿ, ಸಂಶೋಧನೆಗೆ ನೆರವು ಅಂದರೆ ಮಾನವ ಸಂಪನ್ಮೂಲ ಸಾಮಗ್ರಿ ಮತ್ತು ಆಡಿಯೋ, ವೀಡಿಯೋ ಕ್ಯಾಸೆಟ್ ಇತ್ಯಾದಿ ಮೂಲಭೂತ ಸೌಲಭ್ಯಗಳು, ತಳಮಟ್ಟದ ಕಾರ್ಯಕರ್ತರ ಸೇವಾಕಾಲೀನ ಅಗತ್ಯಗಳನ್ನು ಗುರುತಿಸುವುದು ಮತ್ತು ಅವರಿಗೆ ಅಲ್ಪಾವಧಿ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಆಯೋಜಿಸುವುದು. ಇವುಗಳಿಗೆ ಮತ್ತು ಸಂಸ್ಥೆಗಳಿಗೆ ಬ್ಲಾಕ್‌ನಲ್ಲಿನ ಶೈಕ್ಷಣಿಕ ಅಗತ್ಯಗಳು ಮತ್ತು ಸಮಸ್ಯೆಗಳ ಬಗ್ಗೆ ಹಿನ್ನುಣಿಕೆ ನೀಡುತ್ತವೆ.

CRCಕೇಂದ್ರಗಳು ಪ್ರಾಥಮಿಕ ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಅನುಕೂಲ ಮಾಡಲು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ, ಮುಖ್ಯಸ್ಥರಿಗೆ ಪರಿಣಾಮಕಾರಿ ಕಾರ್ಯವೈಖರಿ ಹಾಗೂ ಅಧಿಕ ಸ್ಥಾನೀಯ ಪ್ರಸಕ್ತತೆಯ ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣದ ಗುಣಾತ್ಮಕ ವಿಕಾಸದ ಸಲುವಾಗಿ ಸ್ಥಳದಲ್ಲಿಯೇ ನೆರವು ನೀಡುವುದಕ್ಕಾಗಿ ಶೈಕ್ಷಣಿಕ ಏಣಿಯಲ್ಲಿ ಇತ್ತೀಚೆಗೆ ಸ್ಥಾಪಿಸಲಾಗಿರುವ ಸಂಸ್ಥೆಗಳಾಗಿವೆ. ಕೇಂದ್ರವೊಂದು ಎರಡು ಪ್ರಕಾರದ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. – ಮಾಸಿಕ ಸಭೆ ಹಾಗೂ ದಿಶಾ ನಿರ್ದೇಶನ ಕಾರ್ಯಕ್ರಮಗಳು. ಈ ಕೇಂದ್ರಗಳು ತಮ್ಮ ವ್ಯಾಪ್ತಿಯ ಎಲ್ಲಾ



ಶಾಲೆಗಳಿಗೆ ಮಾಸಿಕ ಸಭೆಗಳನ್ನು ಆಯೋಜಿಸುವುದರ ಮೂಲಕ ಸ್ಥಳದಲ್ಲಿಯೇ ನೆರವು ನೀಡುವುದಲ್ಲದೆ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಸ್ವಯಂ–ಅಧ್ಯಯನ ಸಾಮಗ್ರಿಗಳನ್ನು ಒದಗಿಸುತ್ತದೆ.

**ಮೂಲ: ಡಿ.ಡಿ. ಯಾದವ್**

**ಅನು: ಚಂದ್ರಶೇಖರ್ ಬಿ.ಎಂ.**

# ಗ

## ಗುಣಾತ್ಮಕ ಸಂಶೋಧನಾ ವಿಧಾನಗಳು

ಸಂಶೋಧನಾ ಕ್ಷೇತ್ರದಲ್ಲಿ ಎರಡು ಮುಖ್ಯ ಉಪಕ್ರಮಗಳನ್ನು ಅನುಸರಿಸಲಾಗುತ್ತದೆ. ಒಂದು, ಪರಿಮಾಣಾತ್ಮಕ ಸಂಶೋಧನಾ ಉಪಕ್ರಮ (Quantitative Research). ಇದರಲ್ಲಿ ಅಳತೆಗೆ, ಮಾಹಿತಿಯನ್ನು ಪರಿಮಾಣೀಕೃತಗೊಳಿಸುವುದಕ್ಕೆ ಹೆಚ್ಚು ಮಹತ್ವಕೊಡಲಾಗುತ್ತದೆ. ದತ್ತಾಂಶಗಳನ್ನು ವಸುನಿಷ್ಠವಾಗಿ ಅಳತೆ ಮಾಡಿ ಅಂಕಿ–ಅಂಶಗಳ ರೂಪದಲ್ಲಿ ಸಂಗ್ರಹಿಸಲಾಗುತ್ತದೆ. ಈ ರೀತಿಯ ದತ್ತಾಂಶಗಳನ್ನು ಒರೆಹಚ್ಚಲು, ಬೇಕಾದ ರೀತಿಗಳಲ್ಲಿ ವ್ಯವಸ್ಥೆಗೊಳಿಸಲು ಮತ್ತು ತಾಳೆ ನೋಡಲು ಸಾಧ್ಯವಾಗುವುದರಿಂದ ಈ ರೀತಿಯ ಸಂಶೋಧನೆ ವೈಜ್ಞಾನಿಕವಾದುದೆಂದೂ, ವೈಜ್ಞಾನಿಕ ವಿಧಾನಕ್ಕೆ ಸರಿಹೊಂದುವ ವಿಧಾನವೆಂದೂ ಪರಿಗಣಿಸಲಾಗಿದೆ. ವೈಜ್ಞಾನಿಕ ವಿಷಯ ಕ್ಷೇತ್ರಗಳಲ್ಲಿ ಈ ಉಪಕ್ರಮವನ್ನು ವ್ಯಾಪಕವಾಗಿ ಉಪಯೋಗಿಸಲಾಗುತ್ತದೆ. ಸಾಮಾಜಿಕ ವಿಜ್ಞಾನಗಳು ಸಹ ತಾವೂ ವೈಜ್ಞಾನಿಕ ಸ್ವರೂಪದವುಗಳು ಎನ್ನುವುದನ್ನು ಸಿದ್ಧಪಡಿಸಲು ತಮ್ಮ ಕ್ಷೇತ್ರಗಳ ಸಂಶೋಧನೆಯಲ್ಲಿ ಪರಿಮಾಣಾತ್ಮಕ (Quantitative) ಸಂಶೋಧನ ಉಪಕ್ರಮವನ್ನು ಅನುಸರಿಸತೊಡಗಿದವು. ಈ ರೀತಿಯ ಸಂಶೋಧನೆಗಳನ್ನು ವಿಶ್ಲೇಷಿಸಲು, ವ್ಯಾಖ್ಯಾನಿಸಲು ಸಂಖ್ಯಾಶಾಸ್ತ್ರದ ವಿವಿಧ ತಂತ್ರಗಳನ್ನು ಬಳಸಲಾಗುತ್ತದೆ. ದತ್ತಾಂಶಗಳನ್ನು ವಸ್ತುನಿಷ್ಠವಾಗಿ ಅಳತೆ ಮಾಡಲು, ದಾಖಲಿಸಲು ವಸ್ತುನಿಷ್ಠ ವಿಧಾನ/ತಂತ್ರಗಳನ್ನು ಮತ್ತು ಯಾಂತ್ರಿಕ ಉಪಕರಣಗಳನ್ನು ಉಪಯೋಗಿಸುತ್ತಾರೆ.

ಸಂಶೋಧನೆಗೆ ಇರುವ ಮತ್ತೊಂದು ಉಪಕ್ರಮವೇ ಗುಣಾತ್ಮಕ ಸಂಶೋಧನ (Qualitative Research) ಉಪಕ್ರಮ. ಈ ಉಪಕ್ರಮದಲ್ಲಿ ದತ್ತಾಂಶಗಳನ್ನು ಸಂಗ್ರಹಿಸಲು ವಿವಿಧ ಗುಣಾತ್ಮಕ ಕ್ರಮಗಳನ್ನು (ಸಂದರ್ಶನ, ನೇರ ವೀಕ್ಷಣೆ, ಸಂಭಾಷಣೆ, ಘಟನೆಗಳ ವಿವರಣೆ, ಘಟನೆಗಳನ್ನು ಯಥಾವತ್ ದಾಖಲಿಸುವಿಕೆ ಇತ್ಯಾದಿ) ಅನುಸರಿಸಲಾಗುತ್ತದೆ. ದತ್ತಾಂಶಗಳ ಅಳತೆಗಿಂತ ಅವುಗಳ ಗುಣಾತ್ಮಕ ವಿವರಣೆಗೆ, ದಾಖಲಿಸುವಿಕೆಗೆ ಹೆಚ್ಚು ಮಹತ್ವ ನೀಡಲಾಗುತ್ತದೆ. ಲಿಖಿತ ಹಾಗೂ ಮಾತನಾಡುವ ಭಾಷೆ ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಅಗತ್ಯವಿದ್ದಷ್ಟು ಪರಿಮಾಣಾತ್ಮಕವಾಗಿಯೂ ದತ್ತಾಂಶಗಳನ್ನು ಸಂಗ್ರಹಿಸಬಹುದು. ವೈಜ್ಞಾನಿಕ ಸಂಶೋಧನೆಗಳಿಗಿಂತ ಸಾಮಾಜಿಕ ವಿಜ್ಞಾನಗಳ ಸಾಹಿತ್ಯ ಕ್ಷೇತ್ರಗಳ ಸಂಶೋಧನೆಗಳಲ್ಲಿ ಈ

Digitised by Bharatavani, CIIL

ಉಪಕ್ರಮವನ್ನು ಹೆಚ್ಚಾಗಿ ಅನುಸರಿಸಲಾಗುತ್ತದೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದವರೆಗೆ ಸಂಶೋಧನೆ ಕ್ಷೇತ್ರದಲ್ಲಿ ಪರಿಮಾಣಾತ್ಮಕ ಸಂಶೋಧನ ಉಪಕ್ರಮಕ್ಕೆ ಹೆಚ್ಚಿನ ಮಹತ್ವ ಕೊಡಲಾಗುತ್ತಿತ್ತು. ಸಾಮಾಜಿಕ ವಿಜ್ಞಾನಗಳಲ್ಲಿನ ಸಂಶೋಧನೆಗಳು ಇದಕ್ಕೆ ಹೊರತಾಗಿರಲಿಲ್ಲ. ಆದರೆ 20ನೇ ಶತಮಾನದ ಉತ್ತರಾರ್ಧದಲ್ಲಿ ಈ ನಿಲುವಿಗೆ ಪ್ರತಿಕ್ರಿಯೆ ಹುಟ್ಟಿಕೊಂಡು ವಿಶೇಷವಾಗಿ ಸಾಮಾಜಿಕ ವಿಜ್ಞಾನಗಳಲ್ಲಿ ಗುಣಾತ್ಮಕ ಸಂಶೋಧನ ಉಪಕ್ರಮಕ್ಕೆ ಹೆಚ್ಚಿನ ಮಹತ್ವ ಕೊಡುವುದು ಆರಂಭವಾಗಿ ಗುಣಾತ್ಮಕ ಸಂಶೋಧನೆಯೇ ಒಂದು ಪ್ರತ್ಯೇಕ ಸಂಶೋಧನ ಉಪಕ್ರಮವಾಗಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡದ್ದೇ ಅಲ್ಲದೇ ಗುಣಾತ್ಮಕ ಸಂಶೋಧನೆಯ ಅನೇಕ ನಿರ್ದಿಷ್ಟ ವಿಧಾನಗಳು ವಿಕಾಸಗೊಂಡವು.

ವಿವಿಧ ಶೈಕ್ಷಣಿಕ ಶಾಸ್ತ್ರ ಕ್ಷೇತ್ರಗಳಲ್ಲಿ ಅದರಲ್ಲೂ ಮುಖ್ಯವಾಗಿ ಸಾಮಾಜಿಕ ವಿಜ್ಞಾನಗಳ ಕ್ಷೇತ್ರದಲ್ಲಿ ಇತ್ತೀಚೆಗೆ ಗುಣಾತ್ಮಕ ಸಂಶೋಧನ ವಿಧಾನಗಳಲ್ಲಿ ಇದನ್ನು ಹೆಚ್ಚಾಗಿ ಅನುಸರಿಸಲಾಗುತ್ತಿದೆ. ಮಾರುಕಟ್ಟೆ ಸಂಶೋಧನೆಯಲ್ಲಿಯೂ ಗುಣಾತ್ಮಕ ಸಂಶೋಧನ ಉಪಕ್ರಮಕ್ಕೆ ಮಹತ್ವ ಬಂದಿದೆ. ಗುಣಾತ್ಮಕ ಸಂಶೋಧನೆಯಲ್ಲಿ ಸಂಶೋಧಕ ಮಾನವರ ವರ್ತನೆಗಳನ್ನು ಆಳವಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಮತ್ತು ಮಾನವರ ವರ್ತನೆಗಳಿಗೆ ಕಾರಣಗಳನ್ನು ಅನ್ವೇಷಿಸಲು ಉಪಯೋಗಿಸುವ ಸಂಶೋಧನ ಕ್ರಮಗಳನ್ನು ಅಥವಾ ವಿಧಾನಗಳನ್ನು ಒಟ್ಟಾಗಿ ಗುಣಾತ್ಮಕ ಸಂಶೋಧನ ವಿಧಾನಗಳು ಎಂದು ಕರೆಯಲಾಗಿದೆ. ಗುಣಾತ್ಮಕ ವಿಧಾನಗಳನ್ನು ಅನುಸರಿಸುವ ಸಂಶೋಧಕ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯ ಏನು, ಎಲ್ಲಿ, ಯಾವಾಗ ಎಂಬುವುಗಳನ್ನು ಮಾತ್ರ ಅಧ್ಯಯನ ಮಾಡುವುದಲ್ಲದೆ, ಆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೇಗೆ ಮಾಡುವಿಕೆ ಎಂಬ ಅಂಶಗಳನ್ನು ಆಳವಾಗಿ ಅಧ್ಯಯನ ಮಾಡುತ್ತಾನೆ. ಆದ್ದರಿಂದ ತನ್ನ ಅಧ್ಯಯನಕ್ಕೆ ಪರಿಮಾಣಾತ್ಮಕ ಸಂಶೋಧನೆಗೆ ತೆಗೆದುಕೊಳ್ಳುವ ಹೆಚ್ಚಿನ ಸಂಖ್ಯೆಯ ವ್ಯಾಪಕವಾದ ಪ್ರತಿದರ್ಶ ಅಥವಾ ನಮೂನೆಗಳನ್ನು (Samples) ತೆಗೆದುಕೊಳ್ಳುವ ಬದಲು ಸಣ್ಣ ಗಾತ್ರದ, ಸರಿಯಾಗಿ ಆಯ್ಕೆ ಮಾಡಿಕೊಂಡ ಗಮನ ಕೇಂದ್ರಿತ (Focused) ಸಮೂಹಗಳನ್ನು ನಮೂನೆಗಳಾಗಿ ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ. ಸಾಂಪ್ರದಾಯಿಕ ಸಂಶೋಧಕದ ದೃಷ್ಟಿಯಲ್ಲಿ ಗುಣಾತ್ಮಕ ಸಂಶೋಧನ ವಿಧಾನಗಳು ನಿರ್ದಿಷ್ಟ ಸಮೂಹಗಳ ಬಗ್ಗೆ ಮಾತ್ರ ಮಾಹಿತಿಗಳನ್ನು ನೀಡುತ್ತವೆಯೇ ಹೊರತು ಪರಿಮಾಣಾತ್ಮಕ ಸಂಶೋಧನೆಯಂತೆ ವ್ಯಾಪಕ ತೀರ್ಮಾನಗಳನ್ನು ಕೊಡುವುದಿಲ್ಲ. ಅವು ನೀಡುವ ತೀರ್ಮಾನಗಳು ಆಧಾರ ಪ್ರತಿಜ್ಞೆ (Proposition) ಗಳಾಗುತ್ತವೆಯೇ ಹೊರತು ಸಾರ್ವತ್ರಿಕ ಸಾಮಾನ್ಯೀಕರಣಗಳಾಗುವುದಿಲ್ಲ. ಪರಿಮಾಣಾತ್ಮಕ ವಿಧಾನಗಳಿಂದ ದತ್ತಾಂಶಗಳನ್ನು ಸಂಗ್ರಹಿಸಿ ಆ ಆಧಾರ ಪ್ರತಿಜ್ಞೆಗಳಿಗೆ ಅಥವಾ ಸಂಶೋಧನ ಪ್ರಾಕ್ಕಲ್ಪನೆ (ಊಹೆ)ಗಳಿಗೆ ಪ್ರಾಯೋಗಿಕ ಬೆಂಬಲವನ್ನು ಕೊಡಬೇಕಾಗುತ್ತದೆ.

**ಹಿನ್ನೆಲೆ:**

ಇಪ್ಪತ್ತನೇ ಶತಮಾನದ ಆರಂಭದವರೆಗೂ ಫ್ರಾನ್ಸಿನ ಅಗಸ್ಟ್ ಕಾಮ್ಟ್ ಪ್ರತಿಪಾದಿಸಿದ್ದ ಪ್ರತ್ಯಕ್ಷವಾದ (Positivism) ವೈಜ್ಞಾನಿಕ ಸಂಶೋಧನೆಗಳನ್ನು ನಿಯಂತ್ರಿಸುತ್ತಿತ್ತು. ನೇರವಾಗಿ ಅನುಭವಕ್ಕೆ, ಪ್ರತ್ಯಕ್ಷಾನುಭವಕ್ಕೆ ಅಳತೆಗೆ ನಿಲುಕುವ ಅನುಭವಗಳು, ಘಟನೆಗಳು ಮತ್ತು ವೈಜ್ಞಾನಿಕ ಅಧ್ಯಯನಗಳ ಆಧಾರವಾಗಿರಬೇಕೆಂದೂ, ವಸ್ತುನಿಷ್ಠವಾದ ಅಳತೆಯಿಂದ ಪಡೆದ ದತ್ತಾಂಶಗಳ ಆಧಾರದ ಮೇಲೆ ತೀರ್ಮಾನಗಳನ್ನು ಕೈಗೊಳ್ಳಬೇಕೆಂಬುದು ಪ್ರತ್ಯಕ್ಷವಾದದ ಮುಖ್ಯ ನಿಲುವುಗಳಾಗಿದ್ದವು. ಈ ನಿಲುವುಗಳಿಗೆ ಅನುಗುಣವಾಗಿ ಸಂಶೋಧನೆಯಲ್ಲಿ ಪರಿಮಾಣಾತ್ಮಕ ವಿಧಾನಗಳನ್ನು ಅನುಸರಿಸುವುದು ಆಗಿನ ಸಂಶೋಧನ ಕ್ರಮವಾಗಿತ್ತು. ಈ ರೀತಿಯ ದತ್ತಾಂಶಗಳನ್ನು ಒರೆಹಚ್ಚಬಹುದು ಎನ್ನುವುದು ಸಮರ್ಥನೆಯಾಗಿತ್ತು. ಆದ್ದರಿಂದ ಆ ಕಾಲದ ಗುಣಾತ್ಮಕ ಉಪಕ್ರಮವನ್ನು ಅನುಸರಿಸುತ್ತಿದ್ದ ಸಂಶೋಧಕರೂ ತಮ್ಮ ಸಂಶೋಧನೆಗಳನ್ನು ಎಷ್ಟು ಸಾಧ್ಯವೋ ಅಷ್ಟು 'ಕಠಿಣವಾದ' (Rigorous) ಪರಿಮಾಣಾತ್ಮಕ ವಾದವುಗಳನ್ನಾಗಿ ಮಾಡಲು ಪ್ರಯತ್ನಿಸಿದ್ದೇ ಅಲ್ಲದೇ, ಗುಣಾತ್ಮಕ ಸಂಶೋಧನೆಯ ವಿವಿಧ ವಿಧಾನಗಳನ್ನು ವಿಕಾಸಗೊಳಿಸಿದರು. ಈ ಪ್ರವೃತ್ತಿ 1970 ಮತ್ತು 1980ರ ದಶಕಗಳವರೆಗೂ ಮುಂದುವರೆಯುತ್ತ ಬಂದಿತು. ಈ ವೇಳೆಗೆ ಸಾಮಾಜಿಕ ವಿಜ್ಞಾನಗಳ ಅನೇಕ ಸಂಶೋಧಕರು ಕಾಮ್ಟ್‌ನ ಪ್ರತ್ಯಕ್ಷವಾದವನ್ನು ನಿರಾಕರಿಸಿದರು. ಮಾನವರ ಸಂಕೀರ್ಣ ವರ್ತನೆಗಳನ್ನು ಅರ್ಥಮಾಡಿಕೊಳ್ಳಲು ಪರಿಮಾಣಾತ್ಮಕ ಕ್ರಮಗಳನ್ನು ಅನುಸರಿಸುವುದರ ಮಿತಿಗಳನ್ನು ಗುರ್ತಿಸಿದುದು ಮತ್ತು ಈ ಅವಧಿಯಲ್ಲಿ ಬೇಗ ವಿಕಾಸಗೊಂಡು ಸರ್ವವ್ಯಾಪಕತೆಯನ್ನು ಪಡೆದ ಕಂಪ್ಯೂಟರ್‌ಗಳ ಮೂಲಕ ಹೆಚ್ಚಿನ ಪ್ರಮಾಣದ, ಎಲ್ಲಾ ವಿಧಗಳ ದತ್ತಾಂಶಗಳನ್ನು ವಿಶ್ಲೇಷಿಸುವುದು ಸುಲಭ ಸಾಧ್ಯವಾದುದು ಪ್ರತ್ಯಕ್ಷವಾದದ ನಿರಾಕರಣೆಗೆ ಕಾರಣವಾದುವು. ಇದರ ಪರಿಣಾಮವಾಗಿ ಪ್ರತ್ಯಕ್ಷವಾದೋತ್ತರವಾದ (Post-Positivism) ಬೆಳಕಿಗೆ ಬಂದಿತು. 1990ರ ದಶಕದಲ್ಲಿ ಅನನ್ಯತೆಯ (Identity) ಪ್ರಶ್ನೆ ಮುಂದೆ ಬಂದಿತು. ರಾಷ್ಟ್ರಗಳು, ಮಾನವ ಸಮಾಜಗಳು, ಕುಲ (Race), ವರ್ಗ, ಅಂಗ, ಭಾಷೆ, ಸಂಸ್ಕೃತಿ, ರಾಷ್ಟ್ರೀಯತೆ, ಧರ್ಮ ಮುಂತಾದವುಗಳ ಮೂಲಕ ತಮ್ಮ ಅನನ್ಯತೆಯನ್ನು ಗುರ್ತಿಸಿಕೊಳ್ಳತೊಡಗಿದವು. ಇದರ ಪರಿಣಾಮವಾಗಿ ಎಲ್ಲಾ ರೀತಿಯ ಬರಹಗಳು (ಲೇಖನಗಳು, ವ್ಯಾಖ್ಯಾನಗಳು) ಹೆಚ್ಚು ಹೆಚ್ಚಾಗಿ ಆತ್ಮಾರ್ಥಕ (Reflexive) ಸ್ವರೂಪ ಪಡೆದುಕೊಳ್ಳತೊಡಗಿದವು. ಇದರ ಪರಿಣಾಮವಾಗಿ 1990ರ ನಂತರ ಸಂಶೋಧನೆಯಲ್ಲಿ ನಿಷ್ಕ್ರಿಯ ವೀಕ್ಷನ/ಸಂಶೋಧಕನ ಪರಿಕಲ್ಪನೆಯನ್ನು ತಿರಸ್ಕರಿಸಲಾಯಿತು ಮತ್ತು ಗುಣಾತ್ಮಕ ಸಂಶೋಧಕ ಸಹಭಾಗಿಯ ಮತ್ತು ಸಕ್ರಿಯ – ನಿಲುವಿನ ಸಂಶೋಧಕನ ಪಾತ್ರವನ್ನು ವಹಿಸತೊಡಗಿದುದರಿಂದ ಗುಣಾತ್ಮಕ ಸಂಶೋಧನೆ ಹೆಚ್ಚು ಹೆಚ್ಚು ಸಹಭಾಗಿತ್ವದ, ಸಕ್ರಿಯಾತ್ಮಕವಾದ ಸ್ವರೂಪವನ್ನು ಪಡೆಯಿತು. ಇದರ ಜೊತೆಗೆ ಈ ಅವಧಿಯಲ್ಲಿ ಸಂಶೋಧಕರು ಮಿಶ್ರ–ವಿಧಾನ ಉಪಕ್ರಮವನ್ನು ಅನುಸರಿಸತೊಡಗಿದರು. ಈ ಪ್ರವೃತ್ತಿ ಪರಿಮಾಣಾತ್ಮಕ ಮತ್ತು

Digitised by Bharatavani, CIIL

ಗುಣಾತ್ಮಕ ವಿಧಾನಗಳ ಮೂಲಭೂತವಾಗಿಯೇ ಪರಸ್ಪರ ವಿರೋಧಿಯಾದ ವಿಧಾನಗಳು ಎಂಬ ಚಿಂತನೆಯಲ್ಲಿ ಬದಲಾವಣೆ ಆಗತೊಡಗಿತು. ಈ ನಿಲುವಿನ ಪರಿವರ್ತನೆಯಲ್ಲಿ ರಾಜಕೀಯವಾದ ಪ್ರಭಾವ ಇಲ್ಲವೆನ್ನಲಾಗುವುದಿಲ್ಲ. ಶೈಕ್ಷಣಿಕ ವಲಯಗಳಲ್ಲಿ 'ಸಾಕ್ಷ್ಯ' ಇರಲೇಬೇಕೆಂಬ ರಾಜಕೀಯ ನಿಲುವು ಮತ್ತು ಶೈಕ್ಷಣಿಕವಾಗಿ ಯಾವ ಸಂಶೋಧನೆಗಳನ್ನು 'ವೈಜ್ಞಾನಿಕ' ಎಂದು ಪರಿಗಣಿಸಬೇಕು ಎಂಬ ಪ್ರಶ್ನೆಗಳು ಚರ್ಚಾತ್ಮಕವಾಗಿಯೇ ಉಳಿದಿವೆ.

**ಗುಣಾತ್ಮಕ ಸಂಶೋಧನೆಯಲ್ಲಿ ದತ್ತಾಂಶ ಸಂಗ್ರಹಣೆ:**

ಗುಣಾತ್ಮಕ ಸಂಶೋಧಕರಿಗೆ ದತ್ತಾಂಶ/ಮಾಹಿತಿಗಳ ಸಂಗ್ರಹಣೆಗೆ ವೈವಿಧ್ಯಪೂರ್ಣ ಕ್ರಮಗಳ ಆಯ್ಕೆಗಳು ಲಭ್ಯವಿವೆ. ಈ ಕ್ರಮಗಳಲ್ಲಿ ವಿವರಣಾ ಕ್ರಮ, ಕಥಾವಾಚನ, ಅಭಿಜಾತ್ಯ (Classical) ಜನಾಂಗ ವರ್ಣನೆ (Ethnography), ಮರೆಯಲ್ಲಿದ್ದುಕೊಂಡು ವೀಕ್ಷಿಸುವುದು. (Shadowing), ಘಟನೆಗಳನ್ನು/ಪರಿಸ್ಥಿತಿಗಳನ್ನು ಯಾಂತ್ರಿಕ ತಂತ್ರಗಳ (ಛಾಯಾಚಿತ್ರ, ಚಲನಚಿತ್ರ, ಧ್ವನಿ/ವೀಡಿಯೋ ಮುದ್ರಣ ಇತ್ಯಾದಿ) ದಾಖಲಿಸುವಿಕೆ, ಸಂಭಾಷಣೆ, ಗುಂಪಿನ ಸದಸ್ಯನ ಪಾತ್ರ ವಹಿಸಿ ಅವಲೋಕಿಸುವುದು, ಚರ್ಚೆ, ಸಂದರ್ಶನ ಮುಂತಾದ ವಿಧಾನಗಳು ಸೇರಿವೆ. ಗುಣಾತ್ಮಕ ಸಂಶೋಧನೆಯಲ್ಲಿ ಅತ್ಯಂತ ಸಾಮಾನ್ಯ ವಿಧಾನವೆಂದರೆ ಗುಣಾತ್ಮಕ ಸಂಶೋಧನ ಸಂದರ್ಶನ. ಇವುಗಳ ಜೊತೆಗೆ ಗುಂಪು ಚರ್ಚೆಗಳು, ಅವಲೋಕನ, ಆಲೋಚನಾತ್ಮಕ ಕ್ಷೇತ್ರ-ಟಿಪ್ಪಣಿಗಳು (Reflexive Field Notes), ಲಭ್ಯ ಗ್ರಂಥಗಳು/ಲಿಖಿತ ದಾಖಲೆಗಳು/ಶಾಸನಗಳು ಇತ್ಯಾದಿಗಳು, ಚಿತ್ರಗಳು, ಚಾರಿತ್ರಿಕ ಕುರುಹುಗಳನ್ನು ಉಪಯೋಗಿಸಬಹುದು. ಕ್ರಿಯಾ ಸಂಶೋಧನೆಯನ್ನು ಉಪಯೋಗಿಸಬಹುದು. ಗುಣಾತ್ಮಕ ಸಂಶೋಧನೆ ಮಾಡುವ ಸಂಶೋಧಕರು ದತ್ತಾಂಶ ಸಂಗ್ರಹಣೆಗೆ ಮುಖ್ಯವಾಗಿ ಸಹಭಾಗಿತ್ವದ ವೀಕ್ಷಣೆ, ಸಹ-ಭಾಗಿತ್ವವಿಲ್ಲದ ವೀಕ್ಷಣೆ, ಕ್ಷೇತ್ರ ಟಿಪ್ಪಣಿಗಳು, ಆತ್ಮವಾಚಕ ದಿನಚರಿಗಳು, (Reflexive Journals) ಸಂರಚಿತ ಸಂದರ್ಶನ, ಸಂರಚಿತವಲ್ಲದ ಸಂದರ್ಶನ, ಅರ್ಧ-ಸಂರಚಿತ ಸಂದರ್ಶನ, ದಾಖಲೆಗಳು ಮತ್ತು ವಸ್ತುಗಳ (ಪ್ರಾಗೈತಿಹಾಸಿಕ, ಐತಿಹಾಸಿಕ, ವರ್ತಮಾನದ) ವಿಶ್ಲೇಷಣೆ ಈ ವಿಧಾನಗಳನ್ನು ಉಪಯೋಗಿಸುತ್ತಾರೆ.

ವೀಕ್ಷಣೆಯ ಕ್ರಮ ಒಂದು ಸನ್ನವೇಶದಿಂದ ಇನ್ನೊಂದು ಸನ್ನಿವೇಶಕ್ಕೆ ಬದಲಾವಣೆ ಹೊಂದುತ್ತದೆ. ಸಹಭಾಗಿತ್ವದ ವೀಕ್ಷಣೆ ಒಂದು ನಿರ್ದಿಷ್ಟ ತಂತ್ರದಲ್ಲಿ ಅದೊಂದು ಆತ್ಮಾರ್ತಕ ಕಲಿಕೆಯ (Reflexive Learning) ಅಂದರೆ ಮಾನವ ವರ್ತನೆಯ ಬಗ್ಗೆ ಕಲಿತುಕೊಳ್ಳುವ ಒಂದು ತಂತ್ರ. ಸಹಭಾಗಿತ್ವದ ಅವಲೋಕನದಲ್ಲಿ ಸಾಮಾನ್ಯವಾಗಿ ವೀಕ್ಷಕ ಒಂದು ಸಾಂಸ್ಕೃತಿಕ ಗುಂಪಿನ ಅಥವಾ ಸನ್ನಿವೇಶದ ಸದಸ್ಯನಾಗಿ ಪಾಲ್ಗೊಂಡು, ಅದರ ಪಾತ್ರವನ್ನು ನೈಜವಾಗಿಯೇ ವಹಿಸಿ ಗುಂಪಿನ ಜೊತೆ ಅನ್ಯೋನ್ಯ ಕ್ರಿಯಿಸುತ್ತಾನೆ. ಹೀಗೆ ಮಾಡುವುದರಿಂದ ಗುಂಪಿನ ಸಾಂಸ್ಕೃತಿಕ ಆಚರಣೆಗಳು, ಪ್ರೇರಣೆಗಳು ಮತ್ತು ಭಾವನೆಗಳ ಬಗ್ಗೆ ನಿಕಟವಾದ, ನೈಜವಾದ ಒಳನೋಟವನ್ನು ಪಡೆದುಕೊಳ್ಳುವುದು ಸಂಶೋಧಕನ ಗುರಿಯಾಗಿರುತ್ತದೆ. ಗುಂಪಿನಲ್ಲಿ ಪಾಲ್ಗೊಳ್ಳದೆ ಅದನ್ನು ವೀಕ್ಷಿಸುವುದು, ಆ ಸಾಂಸ್ಕೃತಿಕ ಗುಂಪಿನ ಅನುಭವಗಳನ್ನು ಅರ್ಥಮಾಡಿಕೊಳ್ಳುವ ಸಂಶೋಧಕನ ಸಾಮರ್ಥ್ಯವನ್ನು ಕುಂಠಿತಗೊಳ್ಳುತ್ತದೆ ಎಂದು ವಾದಿಸಲಾಗಿದೆ.

ಕೆಲವು ವಿಶಿಷ್ಟ ಗುಣಾತ್ಮಕ ವಿಧಾನಗಳನ್ನು ಗುಣಾತ್ಮಕ ಸಂಶೋಧನೆಗಳಲ್ಲಿ ಉಪಯೋಗಿಸುತ್ತಾರೆ. ಉದಾಹರಣೆಗೆ ಗಮನ ಕೇಂದ್ರಿತ ಸಮೂಹ ವಿಧಾನ ಮತ್ತು ಮುಖ್ಯ ಮಾಹಿತಿ ಪ್ರದಾತನ ಸಂದರ್ಶನ (Focussed Group Method and Key Information Interview). ಮೊದಲನೆ ವಿಧಾನದಲ್ಲಿ ಓರ್ವ ಮಧ್ಯಸ್ಥಗಾರ ಒಂದು ನಿರ್ದಿಷ್ಟ ಸಮಸ್ಯೆ/ವಿಚಾರದ ಬಗ್ಗೆ ಆಯ್ಕೆ ಮಾಡಿದ ಸಣ್ಣ ಗುಂಪೊಂದು ಮಾಡುವ ಚರ್ಚೆಯನ್ನು ಸುಗಮಗೊಳಿಸುತ್ತಾ ಮಾಹಿತಿಯನ್ನು ಸಂಗ್ರಹಿಸುತ್ತಾನೆ. ಎರಡನೆ ವಿಧಾನದಲ್ಲಿ ಒಂದು ನಿರ್ದಿಷ್ಟ ಮಾನವ ಸಮಸ್ಯೆ/ವಿಚಾರದ ಬಗ್ಗೆ ಮುಖ್ಯ ಮಾಹಿತಿಗಳನ್ನು ತಿಳಿದಿರುವ ವ್ಯಕ್ತಿಯನ್ನು ಸಂದರ್ಶಿಸಲಾಗುತ್ತದೆ. ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುವ ಮುನ್ನ ಮಾಡುವ ಮಾರುಕಟ್ಟೆ ಸಂಶೋಧನೆಯಲ್ಲಿ ಇದು ಹೆಚ್ಚಾಗಿ ಉಪಯೋಗಕ್ಕೆ ಬರುತ್ತದೆ.

ಸಮೀಕ್ಷಾ ಸಂಶೋಧನೆಗಳನ್ನು ಮಾಡುವಾಗ, ಗೃಹ ಸಮೀಕ್ಷೆಗಳನ್ನು ಮಾಡುವಾಗ ಗುಂಪುಗಳನ್ನು ಕೆಲವೊಮ್ಮೆ ವ್ಯಕ್ತಿಗತ ಸಂದರ್ಶನಗಳನ್ನು ಮಾಡುತ್ತಾರೆ. ಪರಿಮಾಣಾತ್ಮಕ ಸಮೀಕ್ಷೆಗೆ ಪ್ರಶ್ನೆಗಳನ್ನು/ಹೇಳಿಕೆಗಳನ್ನು ರೂಪಿಸುವಾಗ ಅವುಗಳನ್ನು ವಾಸ್ತವಿಕ ಸಮೀಕ್ಷೆಗೆ ಮೊದಲು ಪ್ರಾಯೋಗಿಕವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಅವುಗಳ ಬಗ್ಗೆ ಆಯ್ದ ವ್ಯಕ್ತಿಗಳಿಂದ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ. ಈ ಕ್ರಮ ಮೊದಲಿನಿಂದಲೂ ಇದೆ. ಇದಕ್ಕೆ ಸಂಜ್ಞಾನಾತ್ಮಕ ಪರೀಕ್ಷೆ ಅಥವಾ ಪ್ರಾಯೋಗಿಕ ಪರೀಕ್ಷೆ (Cognitive Testing or Pilot Testing) ಎಂದು ಹೆಸರು. ಈ ಕ್ರಮ ಪ್ರಶ್ನೆಗಳ/ಹೇಳಿಕೆಗಳ ಸಿಂಧುತ್ವ ಮತ್ತು ವಿಶ್ವಸನೀಯತೆಯನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ.

**ದತ್ತಾಂಶ ವಿಶ್ಲೇಷಣ ಕ್ರಮಗಳು:**

ಗುಣಾತ್ಮಕ ಸಂಶೋಧನೆಯಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ವಿಶ್ಲೇಷಿಸಲು ವಿವಿಧ ಕ್ರಮಗಳನ್ನು ಅನುಸರಿಸಲಾಗುತ್ತದೆ. ಗುಣಾತ್ಮಕ ದತ್ತಾಂಶಗಳ ವಿಶ್ಲೇಷಣೆಯ ಅತ್ಯಂತ ಸಾಮಾನ್ಯ ಕ್ರಮವೆಂದರೆ ವೀಕ್ಷಕನ ಅನ್ನಿಸಿಕೆಗಳು. ಅಂದರೆ ಓರ್ವ ತಜ್ಞ ವ್ಯಕ್ತಿ ಅಥವಾ ಘಟನೆಯ/ಪರಿಸ್ಥಿತಿಯ ನಿಕಟವರ್ತಿಯಾಗಿದ್ದ ವ್ಯಕ್ತಿ ಸಂಗ್ರಹಿಸಿದ ದತ್ತಾಂಶಗಳನ್ನು ಕೂಲಂಕುಷವಾಗಿ ಪರೀಕ್ಷಿಸಿ ತನ್ನ ಅನಿಸಿಕೆಗಳನ್ನು ಸಂರಚಿತ ರೂಪದಲ್ಲಿ, ಕೆಲವು ವೇಳೆ ಪರಿಮಾಣಾತ್ಮಕ ರೂಪದಲ್ಲಿ ಸಹ ವರದಿ ಮಾಡುತ್ತಾನೆ. ಇವು ತೀರ್ಮಾನ ತೆಗೆದುಕೊಳ್ಳಲು ಆಧಾರವಾಗುತ್ತವೆ.

ಸಂಕೇತಿಸುವಿಕೆ (Coding)ಯು ದತ್ತಾಂಶ ವಿಶ್ಲೇಷಣೆಯ ಮತ್ತೊಂದು ಮುಖ್ಯವಾದ ತಂತ್ರ. ಇದು ದತ್ತಾಂಶಗಳನ್ನು

Digitised by Bharatavani, CIIL

ವ್ಯವಸ್ಥೆಗೊಳಿಸಲು ಮತ್ತು ಪರಿಮಾಣಾತ್ಮಕ ರೂಪದಲ್ಲಿ ದತ್ತಾಂಶಗಳನ್ನು ವ್ಯಾಖ್ಯಾನಿಸಲು ಸಹಾಯ ಮಾಡುತ್ತದೆ. ಈ ತಂತ್ರದಲ್ಲಿ ದತ್ತಾಂಶ ವಿಶ್ಲೇಷಕ ದತ್ತಾಂಶಗಳನ್ನು ಪರೀಕ್ಷಿಸುವಾಗ ದತ್ತಾಂಶಗಳನ್ನು ಅರ್ಥಪೂರ್ಣವಾಗಿ ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಭಾಗವನ್ನೂ ಒಂದು ಸಂಕೇತದಿಂದ ಗುರ್ತಿಸುತ್ತೇವೆ. ಈ ಸಂಕೇತ ಒಂದು ವಿವರಣಾತ್ಮಕ ಪದವಾಗಿರಬಹುದು ಅಥವಾ ಪದಪುಂಜವಾಗಿರಬಹುದು. ಇವು ಆ ಭಾಗದ ದತ್ತಾಂಶ ಸಂಶೋಧನೆಯ ಉದ್ದೇಶಗಳಿಗೆ ಸಂಬಂಧಿಸಿದ ಯಾವ ಮಾಹಿತಿಯನ್ನು ಕೊಡುತ್ತದೆ ಎಂಬುದನ್ನು ತಿಳಿಸುತ್ತದೆ. ಇಡೀ ದತ್ತಾಂಶದ ಸಂಕೇತೀಕರಣ ಪೂರ್ಣವಾದ ನಂತರ ಸಂಶೋಧಕ ಈ ಸಂಕೇತಗಳ ನಡುವೆ ಇರಬಹುದಾದ ಸಮಾನತೆಗಳನ್ನು ಮತ್ತು ವ್ಯತ್ಯಾಸಗಳನ್ನು, ದತ್ತಾಂಶಗಳನ್ನು ಪಡೆದ ವಿವಿಧ ಮೂಲಗಳು/ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಸಂಕೇತಗಳ ನಡುವಣ ಪರಸ್ಪರ ಸಂಬಂಧಗಳನ್ನು ಪರಿಗಣನೆಗೆ ತೆಗೆದುಕೊಂಡು ಸಂಕೇತಗಳನ್ನು ಸಾರಾಂಶೀಕರಣಗೊಳಿಸಿ ತನ್ನ ವರದಿಯನ್ನು ಬರೆಯುತ್ತಾನೆ.

ಕೆಲವು ದತ್ತಾಂಶಗಳು ಹೆಚ್ಚಿನ ಸಂರಚಿತ ಸ್ವರೂಪದವುಗಳಾಗಿರುತ್ತವೆ. ಉದಾಹರಣೆಗೆ ಸಮೀಕ್ಷೆಗಳಲ್ಲಿ ಬಳಸುವ ಮುಕ್ತ – ಉತ್ತರದ ಪ್ರತಿಕ್ರಿಯೆ ನಿರೀಕ್ಷಿಸುವ ಹೇಳಿಕೆಗಳು/ಪ್ರಶ್ನೆಗಳು ಮತ್ತು (Closed-response type items) ಬಿಗಿಯಾದ ಸಂರಚನೆಯಿಂದ ಕೂಡಿದ ಸಂದರ್ಶನದಿಂದ ಪಡೆದ ದತ್ತಾಂಶಗಳು ಈ ಬಗೆಯವಾಗಿರುತ್ತವೆ. ಈ ರೀತಿಯ ದತ್ತಾಂಶಗಳನ್ನು ಸ್ಥೂಲ, ವ್ಯಾಪಕ ಸಂಕೇತಗಳಿಂದ ವಿಶ್ಲೇಷಿಸಲಾಗುತ್ತದೆ. ಈ ಬಗೆಯ ದತ್ತಾಂಶಗಳನ್ನು ಪರಿಮಾಣಾತ್ಮಕವಾಗಿಯೂ ವಿಶ್ಲೇಷಿಸಲು ಸಾಧ್ಯವಿದೆ.

ಕಂಪ್ಯೂಟರ್‌ಗಳು ಮತ್ತು ಮೃದು ಸಾಮಗ್ರಿ ಕಾರ್ಯಕ್ರಮಗಳು (Soft-ware Programme) ಬಳಕೆಗೆ ಬಂದ ನಂತರ ಗುಣಾತ್ಮಕ ದತ್ತಾಂಶ ಸಾಮಗ್ರಿಗಳ ವಿಶ್ಲೇಷಣೆ ಸುಲಭ ಸಾಧ್ಯವಾಗಿದೆ. ಈ ರೀತಿಯ ಕಂಪ್ಯೂಟರ್ ಕಾರ್ಯಕ್ರಮಕ್ಕೆ ಕಂಪ್ಯೂಟರ್ ಸಹಾಯಿತ ಗುಣಾತ್ಮಕ ದತ್ತಾಂಶ ವಿಶ್ಲೇಷಣೆ ಮೃದು ಸಾಮಗ್ರಿ (Computer Assisted Qualitative Data Analysis Soft-ware) ಎಂದು ಹೆಸರು. ಈ ಮೃದು ಸಾಮಗ್ರಿ ದತ್ತಾಂಶ ವ್ಯಾಖ್ಯಾನದ ಸ್ಥಾನವನ್ನು ತೆಗೆದುಕೊಳ್ಳುವುದಿಲ್ಲ. ಸಂಕೇತಗಳನ್ನು ಉಪಯೋಗಿಸಿಕೊಂಡು ದತ್ತಾಂಶವನ್ನು ವ್ಯಾಖ್ಯಾನಿಸಿ ತೀರ್ಮಾನ ತೆಗೆದುಕೊಳ್ಳಬೇಕಾದ ಕಾರ್ಯವನ್ನು ಸಂಶೋಧಕ ಮಾಡಲೇಬೇಕಾಗುತ್ತದೆ. ಆದರೆ ಈ ರೀತಿಯ ಮೃದು ಸಾಮಗ್ರಿಗಳು ಹೆಚ್ಚಿನ ಪ್ರಮಾಣದ ದತ್ತಾಂಶ ಸಾಮಗ್ರಿಯನ್ನು ದಾಖಲಿಸಿಕೊಳ್ಳಲು, ಸಂಗ್ರಹಿಸಿ ಇಟ್ಟುಕೊಳ್ಳಲು, ಬೇಕಾದಾಗ ದತ್ತಾಂಶಗಳನ್ನು ಪುನಃ ಪಡೆದುಕೊಳ್ಳಲು, ಬೇಕಾದ ರೀತಿಗಳಲ್ಲಿ ದತ್ತಾಂಶಗಳನ್ನು ಸಂಪಾದನೆ (Editing) ಮಾಡಲು, ಪರಿಷ್ಕರಿಸಲು ಸಂಶೋಧಕನಿಗೆ ಸಹಾಯ ಮಾಡುತ್ತವೆ.

ಸಂಕೇತೀಕರಣ ಪ್ರಕ್ರಿಯೆ ಟೀಕೆಗೆ ಒಳಗಾಗಿದೆ. ಗುಣಾತ್ಮಕ ದತ್ತಾಂಶಗಳನ್ನು ಪ್ರಾಯೋಗಿಕವಾದ ಸಿಂಧುತ್ವಪೂರ್ಣ ದತ್ತಾಂಶವಾಗಿ ಮಾಹಿತಿಗಳ ನಿಜವಾದ ಮೌಲ್ಯ ವ್ಯಾಪ್ತಿ, ಸಂರಚನಾತ್ಮಕ ಪ್ರಮಾಣ (ಅನುಪಾತ), ತುಲನಾತ್ಮಕ ಅನುಪಾತ ಮತ್ತು ವೈಜ್ಞಾನಿಕ ಉದ್ದೇಶಗಳ ಲಕ್ಷಣಗಳ ರೂಪದಲ್ಲಿ ಬದಲಾಯಿಸಲು ಸಂಕೇತೀಕರಣ ಉದ್ದೇಶಿಸುತ್ತದೆಯಾದರೂ, ಅದು ದತ್ತಾಂಶಗಳ ವೈವಿಧ್ಯತೆ, ಸಮೃದ್ಧತೆ ಮತ್ತು ವ್ಯಕ್ತಿಗತ ಲಕ್ಷಣವನ್ನು ಇಲ್ಲವಾಗಿಸುವ ಅಪಾಯವಿದೆ. ಆದರೆ ಸಂಕೇತಗಳನ್ನು ಪೂರ್ಣರೂಪದಲ್ಲಿ ವಿವರಣೆ ಮಾಡಿ, ದತ್ತಾಂಶಗಳ ಮುಖ್ಯ ಮಾಹಿತಿಗಳಿಗೆ ಅವುಗಳು ಸಂಬಂಧಿಸುವಂತೆ ಮಾಡುವುದರ ಮೂಲಕ ಈ ಅಪಾಯವನ್ನು ನಿವಾರಿಸಬಹುದೆಂದು ಗುಣಾತ್ಮಕ ದತ್ತಾಂಶಗಳ ವಿಶ್ಲೇಷಕರು ಪ್ರತಿಯಾಗಿ ವಾದಿಸಿದ್ದಾರೆ.

ಕೆಲವು ಬಗೆಯ ಗುಣಾತ್ಮಕ ದತ್ತಾಂಶಗಳನ್ನು ಸಂಕೇತೀಕರಣ ಮಾಡದೆ ವಿಶ್ಲೇಷಿಸುತ್ತಾರೆ. ಈ ಕ್ರಮದಲ್ಲಿ ದತ್ತಾಂಶಗಳ ಗುಂಪನ್ನು ಮೊದಲು ಸಾರಾಂಶೀಕರಿಸಲಾಗುತ್ತದೆ. ನಂತರ ಈ ಸಾರಾಂಶಗಳನ್ನು ಪುನಃ ಸಾರಾಂಶೀಕರಿಸಲಾಗುತ್ತದೆ. ಈ ಕ್ರಮವನ್ನು ಅಂತಿಮವಾಗಿ ಇಡೀ ದತ್ತಾಂಶದ ಸಾರಾಂಶೀಕರಣ ಕನಿಷ್ಠ ಪ್ರಮಾಣದ ಅರ್ಥಪೂರ್ಣ ದತ್ತಾಂಶದ ರೂಪ ಪಡೆಯುವವರೆಗೂ ಮುಂದುವರಿಸಲಾಗುತ್ತದೆ. ಈ ವಿಶ್ಲೇಷಣ ತಂತ್ರಕ್ಕೆ ಪುನರಾವರ್ತಿತ ಪೃಥಕ್ಕರಣ ಅಥವಾ ಬೇರ್ಪಡಿಸುವಿಕೆ (Recursive Abstraction) ಎಂದು ಹೆಸರು.

ಕಂಪ್ಯೂಟರ್‌ಗಳು ಬಳಕೆಗೆ ಬಂದ ನಂತರ ಗುಣಾತ್ಮಕ ದತ್ತಾಂಶ ವಿಶ್ಲೇಷಣೆಗೆ ಯಾಂತ್ರಿಕ ತಂತ್ರಗಳು (ಕಂಪ್ಯೂಟರ್ ಪ್ರೋಗ್ರಾಂಗಳು) ಲಭ್ಯವಾಗಿದೆ. ಹೆಚ್ಚಿನ ಪ್ರಮಾಣದ ದತ್ತಾಂಶಗಳನ್ನು ಕಡಿಮೆ ಸಮಯದಲ್ಲಿ ವ್ಯವಸ್ಥಿತಗೊಳಿಸಲು, ವಿಶ್ಲೇಷಿಸಲು ಈ ಯಾಂತ್ರಿಕ ತಂತ್ರಗಳು ಸಹಾಯಕಗಳಾಗಿವೆ. ಈ ತಂತ್ರಗಳನ್ನು ಪದಗಳ, ಪದಪುಂಜಗಳ ಎಣಿಕೆ, ದತ್ತಾಂಶಗಳಲ್ಲಿ ಪ್ರತೀಕಗಳ ಆಕಸ್ಮಿಕತೆ, ಪದಗಳ ಪುನರಾವೃತ್ತಿ ಇತ್ಯಾದಿ ಅಂಶಗಳ ಸಂಖ್ಯೆಯನ್ನು ಕಂಡುಹಿಡಿಯಲು ಉಪಯೋಗಿಸಲಾಗುತ್ತದೆ. ಈ ರೀತಿ ವಿಶ್ಲೇಷಣೆಯಿಂದ ಸಿಗುವ ಅಂಕಿ–ಅಂಶಗಳಿಗೆ ಮುಂದುವರಿದ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಅನ್ವಯಿಸಬಹುದು. ಈ ರೀತಿಯ ದತ್ತಾಂಶ ವಿಶ್ಲೇಷಣೆಯನ್ನು ವಿಷಯವಸ್ತು ವಿಶ್ಲೇಷಣೆ (Content Analysis) ಎಂದೂ ಹೇಳುತ್ತಾರೆ. ಯಾಂತ್ರಿಕ ವಿಶ್ಲೇಷಣ ಪ್ರಕ್ರಿಯೆಯಲ್ಲಿ ಮಾನವ ವ್ಯಾಖ್ಯಾನ ಕರ್ತ ಇಲ್ಲದಿರುವುದನ್ನು ಟೀಕಿಸಲಾಗಿದೆ. ಆದರೆ ಈ ತಂತ್ರಗಳನ್ನು ಉಪಯೋಗಿಸುವವರಿಗೆ ಸೂಕ್ತ ತರಬೇತಿ ಕೊಟ್ಟರೆ ಕಂಪ್ಯೂಟರ್‌ಗಳನ್ನು ಉಪಯೋಗಿಸಿಯೇ ಅರ್ಥಪೂರ್ಣ ಸಂಶೋಧನ ವರದಿಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ.

**ಗುಣಾತ್ಮಕ ಸಂಶೋಧನೆಯ ವಿಧಗಳು:**

ಶೈಕ್ಷಣಿಕ ಸಾಮಾಜಿಕ ವಿಜ್ಞಾನಗಳ ಕ್ಷೇತ್ರದಲ್ಲಿ ಹೆಚ್ಚಾಗಿ ಕೈಗೊಳ್ಳುವ ಗುಣಾತ್ಮಕ ಸಂಶೋಧನೆಯ ವಿಧಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

Digitised by Bharatavani, CIIL

**1. ಮೂಲಭೂತ/ಸಾಮಾನ್ಯ/ಪ್ರಾಯೋಗಿಕ ಸಂಶೋಧನೆ:** ಇದು ಯಾವುದೇ ಒಂದು ಸಿದ್ಧಾಂತವನ್ನು ಆಧಾರವಾಗಿ ಹೊಂದಿರುವುದಿಲ್ಲ. ಇದು ಗ್ರಹಣಶೀಲ (Eclectic) ಉಪಕ್ರಮವಾಗಿದೆ. ಸಂಶೋಧನ ಪ್ರಶ್ನೆಯನ್ನು ಉತ್ತರಿಸಲು ಅತ್ಯಂತ ಸೂಕ್ತವಾದ ಸಂಶೋಧನ ವಿನ್ಯಾಸವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

**2. ಜನಾಂಗ ವರ್ಣನ ಸಂಶೋಧನೆ:** ಜನಾಂಗ ವರ್ಣನ ಸಂಶೋಧನೆ (Ethnographic Research) ಒಂದು ನಿರ್ದಿಷ್ಟ ಮಾನವ ಸಮೂಹವನ್ನು (ಆದಿಮ, ನಾಗರೀಕ, ಸಾಮಾಜಿಕ ಸಾಂಸ್ಕೃತಿಕ) ಆಳವಾಗಿ ಅಧ್ಯಯನ ಮಾಡಿ ಅದರ ಲಕ್ಷಣಗಳನ್ನು ವಿವರಿಸುವುದನ್ನು ತನ್ನ ಉದ್ದೇಶವಾಗಿ ಹೊಂದಿದೆ. ಇದನ್ನು ಜನಾಂಗ ವಿಧಾನಶಾಸ್ತ್ರ (Ethnomethodology) ಅಥವಾ ಜನಗಳ ಅಧ್ಯಯನ ವಿಧಾನ ಎಂದೂ ಹೇಳುತ್ತಾರೆ. ಒಂದು ಗುಂಪನ್ನು ನಿಕಟವಾಗಿ ಅಥವಾ ಮರೆಯಾಗಿದ್ದು ಅವಲೋಕಿಸಿ ಅಥವಾ ಆ ಗುಂಪಿನ ಸದಸ್ಯರಾಗಿದ್ದುಕೊಂಡು ಗುಂಪಿನ ಚಟುವಟಿಕೆಗಳನ್ನು ಅವಲೋಕಿಸಿ ಅದರ ವಿಶಿಷ್ಟ ಲಕ್ಷಣಗಳನ್ನು ವಿವರಿಸಲಾಗುತ್ತದೆ. ಮಾನವ ಶಾಸ್ತ್ರದಲ್ಲಿ (Anthropology) ಭಾಷಾ ವಿಜ್ಞಾನ ಈ ರೀತಿಯ ಅಧ್ಯಯನಗಳಿಗೆ ಬಹಳ ಮಹತ್ವವಿದೆ.

**3. ಆಧಾರಿತ ಸಿದ್ಧಾಂತ:** ಇದು ಒಂದು ಅನುಗಮನಾತ್ಮಕ (Inductive) ಸಂಶೋಧನ ವಿಧಾನ. ಆಧಾರಿತ ಸಿದ್ಧಾಂತ (Grounded Theory) ಉಪಕ್ರಮವನ್ನು ಬಾನೆರ್ ಗ್ಲೇಸರ್ ಮತ್ತು ಆನ್‌ಸ್ಲೆಮ್ ಸ್ಟ್ರಾಸ್ ಎಂಬುವರು 1987ರಲ್ಲಿ (Awareness of Dying) ಎಂಬ ಪುಸ್ತಕದಲ್ಲಿ ವಿವರಿಸಿದರು. ನಂತರದಲ್ಲಿ 1987ರ ಹೊತ್ತಿಗೆ ಇವರಿಬ್ಬರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ತಮ್ಮದೇ ಆದ ಪರಿಕಲ್ಪನಾತ್ಮಕ ಚೌಕಟ್ಟಿನ (Paradigm) ಅಡಿಯಲ್ಲಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದರು. ಈಗ ಆಧಾರಿತ ಸಿದ್ಧಾಂತದ ಉಪಕ್ರಮ ಸೃಷ್ಟಿರೂಪವನ್ನು ಪಡೆದುಕೊಂಡು ಆ ಉಪಕ್ರಮದಡಿಯಲ್ಲಿ ಅನೇಕ ತಂತ್ರಗಳು ರೂಪಿತವಾಗಿವೆ. ಆಧಾರಿತ ಸಿದ್ಧಾಂತದ ಉಪಕ್ರಮವನ್ನು ಉಪಯೋಗಿಸಿಕೊಂಡು ಅನೇಕ ಗುಣಾತ್ಮಕ ಸಂಶೋಧನ ಅಧ್ಯಯನಗಳು ನಡೆದಿವೆ.

ಸಾಂಪ್ರದಾಯಿಕ ಸಂಶೋಧನ ವಿಧಾನದಲ್ಲಿ ಮೊದಲು ಸಮಸ್ಯೆಯನ್ನು ನಿರೂಪಿಸಿಕೊಂಡು, ಆರಂಭಿಕ ದತ್ತಾಂಶದ ಆಧಾರದ ಮೇಲೆ ಪ್ರಾಕ್ಕಲ್ಪನೆಗಳನ್ನು (Hypotheses)/ಸಂಶೋಧನ ಪ್ರಶ್ನೆಗಳನ್ನು ರೂಪಿಸಿಕೊಂಡು ಅವುಗಳನ್ನು ಒರೆಹಚ್ಚಲು ಅಥವಾ ಪರೀಕ್ಷಿಸಲು ವ್ಯಾಪಕವಾಗಿ ದತ್ತಾಂಶಗಳನ್ನು ಸಂಗ್ರಹಿಸಿ, ಅವುಗಳನ್ನು ವಿಶ್ಲೇಷಿಸಿ ಫಲಿತಾಂಶದ ಪ್ರಾಕ್ಕಲ್ಪನೆಯನ್ನು ಒಪ್ಪಿಕೊಳ್ಳಲಾಗುತ್ತದೆ ಅಥವಾ ತಿರಸ್ಕರಿಸಲಾಗುತ್ತದೆ. ಆಧಾರದ ಮೇಲೆ ಪುನರ್ ನಿರೂಪಣೆ ಮಾಡಲಾಗುತ್ತದೆ. ಆದರೆ ಆಧಾರಿತ ಸಿದ್ಧಾಂತ ಉಪಕ್ರಮದಲ್ಲಿ ಇದಕ್ಕೆ ವಿರುದ್ಧವಾದ ಕ್ರಮವನ್ನು ಅನುಸರಿಸಲಾಗುತ್ತದೆ. ಮೊದಲು ಸಂಶೋಧನ ಪ್ರಶ್ನೆಯನ್ನಾಗಲಿ, ಪ್ರಾಕ್ಕಲ್ಪನೆಯನ್ನಾಗಲಿ ರೂಪಿಸುವುದಿಲ್ಲ. ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಒಂದು ಮಾನವ ಸಮೂಹ ಒಂದು ಸಮಸ್ಯೆಯನ್ನು ಕಠಿಣ ಪರಿಸ್ಥಿತಿಯನ್ನು ಪರಿಹರಿಸಿಕೊಳ್ಳಲು ಯಾವ ರೀತಿಯನ್ನು ಪರಿಹಾರವನ್ನು ಕಂಡುಕೊಂಡಿತು ಎನ್ನುವುದನ್ನೇ ಸಂಶೋಧನ ಸಮಸ್ಯೆಯಾಗಿ ಸಂಶೋಧಕ ಆಯ್ಕೆ ಮಾಡುತ್ತಾನೆ ಎಂದಿಟ್ಟುಕೊಳ್ಳಿ. ಆ ಸಂಶೋಧಕ ಆಧಾರಿತ ಸಿದ್ಧಾಂತದ ಉಪಕ್ರವನ್ನು ಅನುಸರಿಸುವುದಾದರೆ ಮೊದಲು ಆ ಪರಿಸ್ಥಿತಿಯ ಬಗ್ಗೆ ಯಾವ ಯಾವ ಮೂಲಗಳಿಂದ ದತ್ತಾಂಶಗಳನ್ನು ಸಂಗ್ರಹಿಸಲು ಸಾಧ್ಯವೋ ಅವೆಲ್ಲವನ್ನೂ ಸಂಗ್ರಹಿಸುತ್ತಾನೆ. ಇದಕ್ಕೆ ಅವನು ವಿವಿಧ ಸಾಧನಗಳನ್ನೂ/ತಂತ್ರಗಳನ್ನು ಉಪಯೋಗಿಸಿಕೊಳ್ಳಬಹುದು.

ಗ್ಲೇಸರನ ಪ್ರಕಾರ ಆಧಾರಿತ ಸಿದ್ಧಾಂತದ ಮುಖ್ಯ ಲಕ್ಷಣವೇ ಸಂಶೋಧನೆಯಲ್ಲಿ ಪಡೆದುಕೊಳ್ಳುವುದೆಲ್ಲವೂ ದತ್ತಾಂಶವೇ. ಇದಕ್ಕಾಗಿ ಸಂಶೋಧಕ ಬೇಕಾದೆಡೆಗಳಿಂದ ದತ್ತಾಂಶಗಳನ್ನು ಸಂಗ್ರಹಿಸಬಹುದು. ಆಧಾರಿತ ಸಿದ್ಧಾಂತದ ಉಪಕ್ರಮ ಅನುಗಮನ ರೀತಿಯ ಸಂಶೋಧನೆ. ಇದರಲ್ಲಿ ಸಿದ್ಧಾಂತವನ್ನು ಸಂಗ್ರಹಿಸಿದ ದತ್ತಾಂಶಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ವಿಶ್ಲೇಷಿಸಿ ಅರ್ಥೈಸಿ ರೂಪಿಸಲಾಗುತ್ತದೆ. ರೂಪಿಸುವ ಸಿದ್ಧಾಂತ ತನ್ನ ಬೇರುಗಳನ್ನು (ಆಧಾರಗಳನ್ನು) ದತ್ತಾಂಶಗಳಲ್ಲೇ ಹೊಂದಿರುತ್ತದೆ. ಅದು ದತ್ತಾಂಶಗಳ ಆಧಾರಿತವಾಗಿದೆ (Grounded). ಈ ರೀತಿಯ ಸಿದ್ಧಾಂತ ಈ ವಿಕಾಸ ನಿಗಮನಾತ್ಮಕ ಮತ್ತು ಅನುಗಮನಾತ್ಮಕ – ಈ ಎರಡೂ ಕ್ರಮಗಳನ್ನು ಒಳಗೊಂಡಿರುತ್ತದೆ. ಆಧಾರಿತ ಸಿದ್ಧಾಂತದ ಗುರಿ ಆತ್ಯಂತಿಕವಾದ 'ಸತ್ಯ'ವನ್ನು ಕಂಡು ಹಿಡಿಯುವುದಲ್ಲ. ಮಾನವರ ಚಟುವಟಿಕೆಗಳು/ಚಿಂತನೆಗಳು ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಹೇಗೆ ನಡೆಯುತ್ತಿವೆ ಎಂದು ತಿಳಿಯುವುದು ಅದರ ಗುರಿ. ಪೂರ್ವ ನಿರೂಪಿತ ಸಂಶೋಧನ ಪ್ರಶ್ನೆ/ಪ್ರಾಕ್ಕಲ್ಪನೆ ಸಂಶೋಧಕನಲ್ಲಿ ಪೂರ್ವ ನಿರ್ಧಾರಿತ ಮನೋಭಾವವನ್ನು ಉಂಟುಮಾಡುವುದಲ್ಲದೆ ಅವನು ವಿಕಾಸಗೊಳಿಸುವ ಸಿದ್ಧಾಂತಕ್ಕೆ ದತ್ತಾಂಶಗಳ ಗಟ್ಟಿಯಾದ ಆಧಾರವಿರುವುದಿಲ್ಲ.

ಆಧಾರಿತ ಸಿದ್ಧಾಂತ ಉಪಕ್ರಮದ ಸಂಶೋಧನೆಯಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ಸಂಕೇತೀಕರಣದ (Coding) ಮೂಲಕ ವಿಶ್ಲೇಷಿಸಿ ಮುಖ್ಯ ಪರಿಕಲ್ಪನೆಗಳನ್ನು ರೂಪಿಸಲಾಗುತ್ತದೆ. ಈ ಪರಿಕಲ್ಪನೆಗಳ ಪಾರಸ್ಪರಿಕ ಸಂಬಂಧಗಳು ಸಂಶೋಧಿತ ಪರಿಸ್ಥಿತಿಗೆ ಅವುಗಳ ಸಮಂಜಸತೆಯನ್ನು ನಿರ್ಧರಿಸಿ ಕಾರ್ಯಗತಗೊಳ್ಳಬಹುದಾದ ಸಿದ್ಧಾಂತವನ್ನು ರೂಪಿಸಲಾಗುತ್ತದೆ. ಆಧಾರಿತ ಸಿದ್ಧಾಂತದ ಸಂಶೋಧಕ ಸಂಬಂಧಿತ ಸಾಹಿತ್ಯಾವಲೋಕನವನ್ನು ಮಾಡುವುದಿಲ್ಲ. ಏಕೆಂದರೆ ಇದರಿಂದ ಪೂರ್ವ–ಪರಿಕಲ್ಪನೆಗಳು ಮೂಡಿ ಪ್ರಸ್ತುತದ ಸಂಶೋಧನ ಕಾರ್ಯದಲ್ಲಿ ಅಡ್ಡಿಯನ್ನುಂಟುಮಾಡುತ್ತದೆ.

ಗುಣಾತ್ಮಕ ಸಂಶೋಧನ ವಿಧಾನಗಳು ಅವೈಜ್ಞಾನಿಕವಾದವುಗಳು ಎಂದು ಅನೇಕ ವೇಳೆ ಪರಿಗಣಿಸುತ್ತಿದ್ದ ಕಾಲದಲ್ಲಿ ಆಧಾರಿತ ಸಿದ್ಧಾಂತ ವಿಧಾನ ವಿಕಾಸಗೊಂಡಿತು. ನಿರ್ದಿಷ್ಟ ಗುಂಪುಗಳನ್ನು (ಸಣ್ಣ ನಮೂನೆಯ) ಆಳವಾಗಿ ಅಧ್ಯಯನ ಮಾಡುವುದರಿಂದ ಮಾನವ ವರ್ತನೆಯ ಬಗ್ಗೆ ಹೆಚ್ಚಿನ ಒಳನೋಟಗಳು ದೊರಕುತ್ತವೆ ಎನ್ನುವ ತಿಳುವಳಿಕೆ ಮೂಡಿ ಬಂದುದು, ಗುಂಪುಗಳು ವಿವಿಧ

Digitised by Bharatavani, CIIL

ಅಂಶಗಳ ಆಧಾರದ ಮೇಲೆ ತಮ್ಮ ಅನನ್ಯತೆಯನ್ನು (Identity) ಗುರ್ತಿಸಿಕೊಳ್ಳಲು ಮುಂದಾದುದು ಆಧಾರಿತ ಸಿದ್ಧಾಂತದ ವಿಕಾಸಕ್ಕೆ ಬೆಂಬಲ ನೀಡಿದವು. ಈ ಉಪಕ್ರಮ ಬಹು ಬೇಗ ಶೈಕ್ಷಣಿಕ ವಲಯದಲ್ಲಿ ಮಾನ್ಯತೆ ಪಡೆದುಕೊಂಡಿತು. ಈ ಉಪಕ್ರಮದಿಂದ ಮಾಡುವ ಸಂಶೋಧನೆಯನ್ನು ಪ್ರಕಟಿಸಲು ಸಂಶೋಧನ ಪತ್ರಿಕೆಗಳು ಆರಂಭವಾದುವು.

4. **ಘಟನಾವಾದ:** ಘಟನೆಗಳನ್ನು ಅವು ನಡೆದಂತೆಯೇ ಯಥಾವತ್ತಾಗಿ ವರ್ಣಿಸಿ, ವ್ಯಾಖ್ಯಾನಿಸಬೇಕು ಮತ್ತು ಘಟನೆಯನ್ನು ಅನುಭವಿಸುವವರ ವೈಯಕ್ತಿಕ ಪ್ರತ್ಯಕ್ಷಾನುಭವಕ್ಕೆ ಮಹತ್ವ ನೀಡಿ ಘಟನೆಯನ್ನು ಅರ್ಥಮಾಡಿಕೊಳ್ಳಬೇಕು ಎನ್ನುವುದು ಜರ್ಮನಿಯಲ್ಲಿ ವಿಕಾಸಗೊಂಡ ಘಟನಾವಾದದ (Phenomenology) ನಿಲುವಾಗಿದೆ. ಮನೋವಿಜ್ಞಾನದಲ್ಲಿ ಗೆಸ್ಟಾಲ್ಟ್ ಸಿದ್ಧಾಂತ ಈ ವಾದದ ಆಧಾರವನ್ನು ಹೊಂದಿದೆ. ಘಟನಾವಾದ ಒಂದು ಘಟನೆಯ ವ್ಯಕ್ತಿ ನಿಷ್ಠ ವಾಸ್ತವಿಕತೆಯನ್ನು (Subjective Reality) ಘಟನೆಯನ್ನು ಅನುಭವಿಸುವವರ/ನೋಡುವವರ ದೃಷ್ಟಿಯಿಂದ ವರ್ಣಿಸುತ್ತದೆ.

5. **ತಾತ್ವಿಕ (ದಾರ್ಶನಿಕ) ಸಂಶೋಧನೆ**ಯನ್ನು ಒಂದು ನಿರ್ದಿಷ್ಟ ಅಧ್ಯಯನ ಕ್ಷೇತ್ರದ ಅಥವಾ ಒಂದು ವೃತ್ತಿಯ ಪರಿಧಿಯಲ್ಲಿ ಆ ಕ್ಷೇತ್ರದ ವೃತ್ತಿಯ ಪರಿಣತರು ಕೈಗೊಳ್ಳುತ್ತಾರೆ. ಈ ರೀತಿಯ ಸಂಶೋಧನೆಯಲ್ಲಿ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಲು, ನೈತಿಕ ನಿಯಮಗಳನ್ನು ಗುರ್ತಿಸಲು ಯಾವುದಾದರೂ ಒಂದು ವಿಚಾರ/ ವರ್ತನೆಯ ನೈತಿಕ ಮೌಲ್ಯವನ್ನು ನಿರ್ಣಯಿಸಲು ಬೌದ್ಧಿಕ ವಿಶ್ಲೇಷಣೆಯನ್ನು ಮಾಡಲಾಗುತ್ತದೆ.

6. **ವಿಮರ್ಶಾತ್ಮಕ ಸಾಮಾಜಿಕ ಸಂಶೋಧನೆ:** ಸಾಮಾಜಿಕ ಸಮೂಹಗಳಲ್ಲಿ ಸದಸ್ಯರು ಹೇಗೆ ಪರಸ್ಪರ ಸಂಬಂಧಗಳನ್ನು ಹೊಂದಿದ್ದಾರೆ, ಹೇಗೆ ಪಾರಸ್ಪರಿಕವಾಗಿ ಸಂವಹನ ಮಾಡುತ್ತಾರೆ ಎಂದು ಅರ್ಥಮಾಡಿಕೊಳ್ಳಲು ವಿಮರ್ಶಾತ್ಮಕ ಸಾಮಾಜಿಕ ಸಂಶೋಧನೆಯನ್ನು ಕೈಗೊಳ್ಳುತ್ತಾರೆ.

7. **ನೈತಿಕ ಶೋಧನೆ:** ನೈತಿಕ ಸಮಸ್ಯೆಗಳ ಬೌದ್ಧಿಕ ವಿಶ್ಲೇಷಣೆಯೇ ನೈತಿಕ ಶೋಧನೆ. (Ethical Inquiry) ಕರ್ತವ್ಯಗಳು, ಹಕ್ಕುಗಳು, ಬಾಧ್ಯತೆಗಳು, ಸರಿ–ತಪ್ಪುಗಳು, ಆಯ್ಕೆಗಳು ಮುಂತಾದವುಗಳಿಗೆ ಸಂಬಂಧಿಸಿದ ನೈತಿಕ ಸಮಸ್ಯೆಗಳನ್ನು ಬೌದ್ಧಿಕವಾಗಿ ವಿಶ್ಲೇಷಿಸಲು ಕೈಗೊಳ್ಳುವ ಅಧ್ಯಯನವೇ ನೈತಿಕ ಶೋಧನೆ (Ethical Inquiry).

8. **ಮೂಲಭೂತ ಸಂಶೋಧನೆ:** ಈ ರೀತಿಯ ಸಂಶೋಧನೆ ಒಂದು ವಿಜ್ಞಾನದ ಮೂಲಭೂತ ಆಧಾರಗಳನ್ನು ಪರೀಕ್ಷಿಸುತ್ತದೆ. ಆ ವಿಜ್ಞಾನಕ್ಕೆ ಸಂಬಂಧಿಸಿದಂತಿರುವ ನಂಬಿಕೆಯನ್ನು ವಿಶ್ಲೇಷಿಸುತ್ತಾರೆ. ಮತ್ತು ಹೊಸ ಜ್ಞಾನ, ಮಾಹಿತಿಗಳು ದೊರೆತಂತೆಲ್ಲಾ ಆ ನಿರ್ದಿಷ್ಟ ವಿಜ್ಞಾನದ ಜ್ಞಾನಾಧಾರ ಹೇಗೆ ಬದಲಾವಣೆಗೊಳ್ಳಬೇಕು ಎನ್ನುವುದನ್ನು ತಿಳಿಸುತ್ತದೆ.

9. **ಐತಿಹಾಸಿಕ ಸಂಶೋಧನೆ:** ಪ್ರಸ್ತುತದ ಸಂದರ್ಭದಲ್ಲಿ ಗತಕಾಲದ (ಚಾರಿತ್ರಿಕ) ಮತ್ತು ಇಂದಿನ ಘಟನೆಗಳನ್ನು ಕುರಿತು ಚರ್ಚಿಸುತ್ತದೆ. ಪ್ರಸ್ತುತದ ವಿವಾದಾಂಶಗಳಿಗೆ/ಸಮಸ್ಯೆಗಳ ಬಗ್ಗೆ ಚರ್ಚಿಸಿ ಅವುಗಳ ಬಗ್ಗೆ ಚಿಂತನೆ ನಡೆಸಿ, ಸಾಧ್ಯವಿರುವ ಪರಿಹಾರಗಳನ್ನು ಸೂಚಿಸುತ್ತದೆ. ಐತಿಹಾಸಿಕ ಸಂಶೋಧನೆ ನಾವು ಯಾವ ಐತಿಹಾಸಿಕ ಹಿನ್ನೆಲೆ ಹೊಂದಿದ್ದೇವೆ, ಪ್ರಸ್ತುತದಲ್ಲಿ ಎಲ್ಲಿದ್ದೇವೆ, ಈಗ ನಾವು ಏನಾಗಿದ್ದೇವೆ ಮತ್ತು ನಾವು ಯಾವ ದಿಶೆಯಲ್ಲಿ ಸಾಗುತ್ತಿದ್ದೇವೆ ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸುತ್ತದೆ.

10. **ಚಾಕ್ಷುಷ ರೂಪದ ದತ್ತಾಂಶ ಸಂಗ್ರಹಣೆ ವಿಧಾನಗಳ ಮೂಲಕ ಸಂಶೋಧನೆ:** ಇದರಲ್ಲಿ ಛಾಯಾ–ಧ್ವನಿ, (Photo Voice) ಕೊಲ್ಲಾಜಿಂಗ್, (Photo - Elicitation) ರೇಖಾ ಚಿತ್ರಗಳು ಮತ್ತು ಭೂಪಟ (ನಕ್ಷೆ) ತಯಾರಿಕೆ ಮುಂತಾದ ತಂತ್ರಗಳು ಸೇರುತ್ತವೆ.

ಗುಣಾತ್ಮಕ ಅಧ್ಯಯನಗಳಲ್ಲಿ ಸಂಶೋಧಕ ತೋರಿಸುವ ಪ್ರಾಮಾಣಿಕತೆ/ವಿಶ್ವಾಸಾರ್ಹತೆಯನ್ನು ಸಿಂಧುತ್ವ ಎಂದು ಪರಿಗಣಿಸಲಾಗುತ್ತದೆ. ಇದನ್ನು ಅವಲಂಬನಾರ್ಹತೆ, ನಂಬಿಕೆ ಎಂದೂ ಹೇಳಬಹುದು. ಇದನ್ನು ಸ್ಥಾಪಿಸಲು ಗುಣಾತ್ಮಕ ಸಂಶೋಧಕ ಬೇರೆ ಬೇರೆ ಸದಸ್ಯರಿಂದ ಒರೆಹಚ್ಚುವಿಕೆ, ಸಂದರ್ಶಕರ ಪರಸ್ಪರ ಒಪ್ಪಿಗೆ, ದೀರ್ಘ ಕಾಲದವರೆಗೆ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವುದು, ನಕಾರಾತ್ಮಕ ಅಂಶಗಳನ್ನು ವಿಶ್ಲೇಷಿಸುವುದು ಮುಂತಾದ ತಂತ್ರಗಳನ್ನು ಉಪಯೋಗಿಸುತ್ತಾನೆ.

ಸಮಕಾಲೀನ ಗುಣಾತ್ಮಕ ಸಂಶೋಧನೆಗಳನ್ನು ವಿಭಿನ್ನ ಪರಿಕಲ್ಪನಾತ್ಮಕ ಚೌಕಟ್ಟುಗಳಲ್ಲಿ (Paradigms) ನಡೆಸಲಾಗುತ್ತಿದೆ. ಈ ಪರಿಕಲ್ಪನಾತ್ಮಕ ಚೌಕಟ್ಟುಗಳು ಅಧ್ಯಯನದ ತರ್ಕಸಂಗತತೆಯ (Legitimacy) ಪರಿಕಲ್ಪನಾತ್ಮಕ ಮತ್ತು ಸೈದ್ಧಾಂತಿಕ ಕಾಳಜಿಗಳು, ಅಧ್ಯಯನದ ನಿಯಂತ್ರಣ, ದತ್ತಾಂಶ ವಿಶ್ಲೇಷಣೆ, ಅಧ್ಯಯನದ ಉತ್ಪತ್ತಿ ಶಾಸ್ತ್ರೀಯ (Ontological) ಮತ್ತು ಜ್ಞಾನ ಮೀಮಾಂಸಾತ್ಮಕ ಆಧಾರಗಳನ್ನು ಪ್ರಭಾವಗೊಳಿಸುತ್ತವೆ. ಪ್ರತ್ಯಕ್ಷವಾದ, ಪ್ರತ್ಯಕ್ಷೋತ್ತರವಾದ, ವಿಮರ್ಶಾತ್ಮಕ ಸಿದ್ಧಾಂತಗಳು, ರಾಚನಿಕವಾದ (Constructivism) ಇವು ಆಧುನಿಕ ಗುಣಾತ್ಮಕ ಸಂಶೋಧನೆಯ ಕೆಲವು ಪರಿಕಲ್ಪನಾತ್ಮಕ ಚೌಕಟ್ಟುಗಳಾಗಿವೆ.

–ಪ್ರೊ. ಮಂಜುನಾಥಯ್ಯ ಬಿ. ಎಸ್.

## ಗೃಹ ವಿಜ್ಞಾನ ಶಿಕ್ಷಣ

**ಐತಿಹಾಸಿಕ ಹಿನ್ನೆಲೆ:**

ಗೃಹವಿಜ್ಞಾನ ಔಪಚಾರಿಕ ಶಿಕ್ಷಣರೂಪದಲ್ಲಿ ಅಷ್ಟೇನೂ ಹೊಸತಲ್ಲ. ಸಾಮಾಜಿಕ ಸುಧಾರಣೆಗಳ ಉತ್ತುಂಗ ಅವಧಿಯಾದ

Digitised by Bharatavani, CIIL

ಸುಮಾರು 100 ವರ್ಷಗಳಿಗೂ ಹಿಂದಿನ ಕಾಲದಲ್ಲಿ ಇದರ ಮೂಲವನ್ನು ಕಾಣಬಹುದು. ಈ ಶಿಕ್ಷಣದ ವಿಷಯ (Content) ವಿಭಿನ್ನ ಶ್ರೇಣಿಯ ಪ್ರಾಮುಖ್ಯತೆಯನ್ನು ಪಡೆಯುತ್ತಾ ಹಲವಾರು ರೂಪವನ್ನು ಹೊಂದುತ್ತಾ ಬಂದಿದೆ. ನಮ್ಮ ಶಿಕ್ಷಣ ವ್ಯವಸ್ಥೆಯ ಮೇಲೆ ವಿಶೇಷವಾಗಿ ಗೃಹ ವಿಜ್ಞಾನದ ಮೇಲೆ ಆಗಿರುವ ಬಾಹ್ಯ ಪ್ರಭಾವಗಳೇ ಇದಕ್ಕೆ ಕಾರಣ.

ಬಹಳ ಹಿಂದಿನ ಕಾಲದಿಂದಲೂ ಮಹಿಳಾ ಶಿಕ್ಷಣವು ಪೂರ್ಣತಃ ಗೃಹಾಧಾರಿತ ಮತ್ತು ವೃತ್ತಿಪರವಾಗಿತ್ತು. ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿಯೂ ಮಹಿಳಾ ಶಿಕ್ಷಣ ಕಾರ್ಯಕ್ರಮಗಳನ್ನು ಗೃಹಜೀವನದ ಅವಶ್ಯಕತೆಗಳಿಗೆ ಮತ್ತು ಮಹಿಳೆಯರ ವೃತ್ತಿಗೆ ವಿಶೇಷ ಗಮನ ನೀಡುತ್ತಾ ಯೋಜಿಸಬೇಕು ಎಂದು ಭಾರತೀಯ ಶಿಕ್ಷಣ ಆಯೋಗವು (1881) ಶಿಫಾರಸ್ಸು ಮಾಡಿತು. ಇದರಿಂದಾಗಿ, ಹಲವು ಶೈಕ್ಷಣಿಕ ಕಾರ್ಯಕ್ರಮಗಳು ಮಹಿಳೆಯರ ಅಗತ್ಯಗಳನ್ನು ಪೂರೈಸುವುದಕ್ಕಾಗಿಯೇ ವಿನ್ಯಾಸಗೊಂಡವು. ಅವರಿಗಾಗಿ ವಿನ್ಯಾಸಗೊಳಿಸಿದ ಕಾರ್ಯಕ್ರಮಗಳಲ್ಲಿ ಗೃಹ ವಿಜ್ಞಾನ ಶಿಕ್ಷಣವೂ ಒಂದು. ಶಾಲಾ ಮಟ್ಟದಲ್ಲಿ ಗೃಹ ವಿಜ್ಞಾನ ಶಿಕ್ಷಣ ಪ್ರಾರಂಭಗೊಳ್ಳಲು ಪ್ರಮುಖವಾಗಿ ಮೂರು ಅಂಶಗಳು ಕಾರಣವಾಗಿದ್ದವು.

a. ಕಳೆದ ಉತ್ತರಾರ್ಧದಲ್ಲಿ ವಿಶೇಷತಃ ಪ್ರಥಮ ಹಾಗೂ ದ್ವಿತೀಯ ಜಾಗತಿಕ ಸಮರಗಳ ನಂತರ ಸಾಂಪ್ರದಾಯಿಕ ಗೃಹಗಳಲ್ಲಿ ಮತ್ತು ಗೃಹಕೃತ್ಯದಲ್ಲಿ ಅಗಾಧ ಪರಿವರ್ತನೆ ಕಂಡುಬಂದಿದೆ.

b. ಹೊಸ ಸಾಮಾಜಿಕ ಮತ್ತು ಕೌಟುಂಬಿಕ ರಚನೆಯಲ್ಲಿ ಸ್ತ್ರೀ ಪುರುಷರ ಪಾತ್ರಗಳಲ್ಲಿ ಬದಲಾವಣೆಯು ಕಂಡುಬಂದಿದೆ. ಕೇವಲ ಗೃಹಕೃತ್ಯದಲ್ಲಿ ತೊಡಗುವ ಮಹಿಳೆಯ ಪಾತ್ರವು ಹಣಸಂಪಾದನೆಯ ಹಾಗೂ ಸಮುದಾಯದ ಕೆಲಸಗಾರ್ತಿಯ ಪಾತ್ರವಾಗಿ ಪರಿವರ್ತನೆಗೊಂಡಿತು.

c. ಆಧುನಿಕ ಗೃಹವನ್ನು ಹಲವು ಸಾಮಾಜಿಕ–ಆರ್ಥಿಕ ಹಾಗೂ ತಾಂತ್ರಿಕ–ವೈಜ್ಞಾನಿಕ ಮುನ್ನಡೆಗಳ ಫಲಿತಾಂಶವೆಂಬಂತೆ ಪರಿಗಣಿಸಲಾಯಿತು. ಸಾಮಾಜಿಕ–ಆರ್ಥಿಕ ದೃಷ್ಟಿಯಿಂದ ಇದು ಸ್ವತಂತ್ರ ಘಟಕವಾಗಿತ್ತಾದರೂ, ಉತ್ಪಾದನಾ ಘಟಕವಾಗಿ, ಸ್ವಾವಲಂಬಿಯಾಗಿ ಮಾತ್ರ ಉಳಿಯಲಿಲ್ಲ. ಗೃಹವು ತನ್ನಿಂದ ಹೊರಗೆ ಉತ್ಪನ್ನವಾಗುವ ಗೃಹಬಳಕೆಯ ವಸ್ತುಗಳು ಮತ್ತು ಪೂರೈಕೆ (Supplies) ಗಳನ್ನು ಅವಲಂಬಿಸಿ ಬಳಕೆಯ ಘಟಕವಾಗಿ ಪರಿವರ್ತನೆಗೊಂಡಿತು.

ಗೃಹ ವಿಜ್ಞಾನ, ಗೃಹ ಕೌಶಲಗಳು ಮತ್ತು ಗೃಹಿಣಿಯ ಕಾರ್ಯಗಳನ್ನು ವಿಷಯಗಳಾಗಿ ಹೊಂದಿದ್ದ ಕಾರ್ಯಕ್ರಮದ ಪ್ರಾರಂಭವೇ ಗೃಹವಿಜ್ಞಾನ ಶಿಕ್ಷಣದ ಆರಂಭವೆಂದು ಹೇಳಬಹುದು. ಎಸ್.ಎನ್.ಡಿ.ಟಿ ವಿಶ್ವವಿದ್ಯಾನಿಲಯದ ಸ್ಥಾಪಕರಾದ ಮಹರ್ಷಿ ಧೋಂಡೊ ಕೇಶವ ಕಾರ್ವೆಯವರು 1908ರಲ್ಲಿ ವಿಧವಾ ಗೃಹ ಅಥವಾ ಅನಾಥ ಬಾಲಿಕಾಶ್ರಮ, ಡಿಂಗ್ನೆ ಪುಣೆಯಲ್ಲಿ ಸಾಂಸಾರಿಕ ವಿಜ್ಞಾನವೆಂಬ ಹೆಸರಿನಡಿಯಲ್ಲಿ ಗೃಹವಿಜ್ಞಾನ ಕಾರ್ಯಕ್ರಮವನ್ನು ಮಹಿಳಾ ಶಿಕ್ಷಣಕ್ಕಾಗಿ ಪ್ರಾರಂಭಿಸಿದ್ದರಿಂದ ಇವರು ಗೃಹವಿಜ್ಞಾನಕ್ಕೆ ಕಾರಣಕರ್ತರು ಎನ್ನಬಹುದು. ವಿಧವೆಯರ ಹಿಂಗ್ನೆ ಆಶ್ರಮವು ನತದೃಷ್ಟ ಮಹಿಳೆಯರನ್ನು ಸಾಮಾಜಿಕ ಶೋಷಣೆಯ ಸಂಕೋಲೆಯಿಂದ ಮುಕ್ತವಾಗಿಸುವ ಪ್ರತಿನಿಧಿ ಎಂಬಂತೆ ಇತ್ತು. ಗೃಹವಿಜ್ಞಾನ ವಿಷಯವನ್ನು ಸ್ವಂತ ಉದ್ಯೋಗಕ್ಕಾಗಿ ಗೃಹ ಪ್ರಮಾಣದ ಉದ್ಯಮವನ್ನು ಪ್ರಾರಂಭಿಸಲು ಬೇಕಾದ ಕೌಶಲಗಳನ್ನು ಕಲಿಸಲು ಮತ್ತು ಅದರಿಂದ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಡುವ ದೃಷ್ಟಿಯಿಂದಲೂ ವಿನ್ಯಾಸಗೊಳಿಸಲಾಯಿತು. ನಂತರ, 1910ರಲ್ಲಿ ಪ್ರಗತಿಶೀಲ ಆಳರಸರಾದ ಬರೋಡ ರಾಜ್ಯದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡ್‌ರವರು ಮನೆಗಳನ್ನು ಹಾಗೂ ಸಂಸ್ಥೆಗಳನ್ನು ಕಲಾತ್ಮಕ, ಆರೋಗ್ಯಕರ ಮತ್ತು ಯೋಜಿತ ರೀತಿಯಲ್ಲಿ ನಿರ್ವಹಿಸಲು ಈ ವಿಷಯವನ್ನು ವೈಜ್ಞಾನಿಕ ಬಗೆಯಲ್ಲಿ ಪ್ರಯೋಗಿಸುವ ಸಾಧ್ಯತೆಯನ್ನು ಮನಗಂಡರು. ಈ ವಿಷಯದಲ್ಲಿ ಅರಮನೆಯ ನಿರ್ವಾಹಕರಿಗೆ ಹಾಗೂ ಬರೋಡಾ ಪಟ್ಟಣದ ಮಹಿಳೆಯರಿಗೆ ತರಗತಿಗಳನ್ನು ನಡೆಸಲು ಈ ವಿಷಯದಲ್ಲಿ ತಜ್ಞರಾದ ನೀದಮ್ ಮತ್ತು ಸ್ಟ್ರಾಂಗ್ ಎಂಬ ಇನ್ನಿಬ್ಬರನ್ನು ಆಹ್ವಾನಿಸಲಾಯಿತು. ಪ್ರೌಢಶಾಲೆಗಳಲ್ಲಿ ಈ ವಿಷಯವನ್ನು ಔಪಚಾರಿಕ ಕಾರ್ಯಕ್ರಮವನ್ನಾಗಿ ಅಭಿವೃದ್ಧಿಗೊಳಿಸಲು ಈ ಇಬ್ಬರು ಮಹಿಳೆಯರು ಕಾರಣೀಭೂತರಾದರು. ಮಹಾರಾಜರು ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಈ ವಿಷಯವನ್ನು ಬಿ.ಎಸ್‌ಸಿ ಮಟ್ಟದಲ್ಲಿ ಪರಿಚಯಿಸಲು 1913ರಲ್ಲಿ ಮಸೂದೆಯನ್ನು ಮಂಡಿಸಿದರು. ಆದರೆ, ದುರದೃಷ್ಟವಶಾತ್ ಆಗ ಮಸೂದೆ ಅಂಗೀಕೃತವಾಗಲಿಲ್ಲ. ಗೃಹ ವಿಜ್ಞಾನ ಶಿಕ್ಷಣದ ವಿನ್ಯಾಸದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯ ಮೇಲೆ ಆಗಿರುವ ಪಾಶ್ಚಾತ್ಯ ಪ್ರಭಾವವು ಪ್ರತಿಬಿಂಬಿತವಾಗುತ್ತದೆ. ಮನೆಯ ಹಾಗೂ ಕುಟುಂಬದ ಅದರಲ್ಲೂ ಶ್ರೀಮಂತವರ್ಗದ ಗೃಹ ಹಾಗೂ ಕುಟುಂಬದ ಭೌತಿಕ ನಿರ್ವಹಣೆಗೆ ಒತ್ತು ನೀಡುವ ಶಿಕ್ಷಕ ತರಬೇತಿ ಡಿಪ್ಲೋಮ ಕಾರ್ಯಕ್ರಮಗಳು ಆಂಗ್ಲ ಶಿಕ್ಷಣ ವ್ಯವಸ್ಥೆಯ ಆಧಾರದ ಮೇಲೆ ನಿರ್ಮಾಣಗೊಂಡವು.

**ಗೃಹ ವಿಜ್ಞಾನ ಕಾರ್ಯಕ್ರಮಗಳ ವಿಧಗಳು:**

**ಶಾಲಾ ಮಟ್ಟ:**

ಗೃಹ ವಿಜ್ಞಾನವು ಒಂದು ಶೈಕ್ಷಣಿಕ ಕ್ಷೇತ್ರವಾಗಿ 50 ವರ್ಷಗಳು ಸಂದಿವೆ. ಇದು ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಒಂದು ವಿಷಯವಾಗಿ ಅಸ್ತಿತ್ವಕ್ಕೆ ಬಂದಿತು. ಗೃಹವಿಜ್ಞಾನದ ಕ್ಷೇತ್ರದಲ್ಲಿ ನಿಜವಾದ ಅಭಿವೃದ್ಧಿ ಕಳೆದ ಶತಮಾನದ 60ರ ದಶಕದ ನಂತರ ಕಂಡುಬಂದಿತು. ಕೊಠಾರಿ ಶಿಕ್ಷಣ ಆಯೋಗವು (1964–66) ಗೃಹ ವಿಜ್ಞಾನವು ವಿದ್ಯಾರ್ಥಿಗಳಿಗೆ ಗೃಹಕಾರ್ಯ ನಿರ್ವಹಣೆಯಲ್ಲಿ ಜ್ಞಾನಕೌಶಲ್ಯಗಳನ್ನು ಒದಗಿಸುವಂತಿರಬೇಕು ಎಂದು ಅಭಿಪ್ರಾಯಪಟ್ಟಿತು. ವಿದ್ಯಾರ್ಥಿಗಳು ತಮ್ಮ ಗೃಹ ವಿಜ್ಞಾನ ಅಧ್ಯಯನಗಳಲ್ಲಿ ಸಾಮಾಜಿಕ ವ್ಯವಸ್ಥೆಯ ಕ್ರಮದ ಬಗ್ಗೆ ಪರಿಚಯ ಪಡೆದಿರಬೇಕು; ಕುಟುಂಬದ ಸಾಮಾನ್ಯ ಗೃಹ ಕರ್ತವ್ಯಗಳನ್ನು ಹಂಚಿಕೊಳ್ಳುವುದನ್ನು ಮತ್ತು ಶಾಲೆಯಲ್ಲಿ ಹಾಗೂ ಮನೆಯಲ್ಲಿ ಸ್ವಾವಲಂಬಿಯಾಗುವುದನ್ನು ಗೃಹಜೀವನದ ಆರ್ಥಿಕತೆಯ ತತ್ವಗಳನ್ನು ಅವರಿಗೆ ತಿಳಿಸಿಕೊಡಬೇಕು; ದಿನನಿತ್ಯದ

Digitised by Bharatavani, CIIL

ಮನೆಗೆಲಸದ ವಿವಿಧ ರೂಪಗಳನ್ನು ನಡೆಸಿಕೊಂಡು ಹೋಗಲು ಅವಶ್ಯಕವಾದ ಜ್ಞಾನಕೌಶಲಗಳನ್ನು ಅವರಿಗೆ ಕಲಿಸಬೇಕು ಮತ್ತು ಸ್ಥಳವನ್ನು ಒಪ್ಪಓರಣವಾಗಿ, ಶುದ್ಧವಾಗಿ ಮತ್ತು ಅನುಕೂಲವಾಗಿ ಇಟ್ಟುಕೊಳ್ಳುವ ಒಲವನ್ನು ಸತತ ಆಸೆಯನ್ನು ಮತ್ತು ಸಾಮರ್ಥ್ಯವನ್ನು ಅವರಲ್ಲಿ ಬೆಳೆಸಬೇಕು. ವ್ಯಾಪಾರಿ ಆಹಾರ ಒದಗಣೆ ಮತ್ತು ಗೃಹ ಸೇವಾ ಕೇಂದ್ರಗಳಲ್ಲಿನ ಕೆಲಸಗಳಂತಹ ಸಾರ್ವಜನಿಕ ಸೇವೆಗಳ ಸಾಮುದಾಯಿಕ ಸ್ವರೂಪದ ಸಾರ್ವಜನಿಕ ಸೇವೆಯ ಬಗ್ಗೆ ಪರಿಚಯಿಸಬೇಕು ಮತ್ತು ಅವರಿಗೆ ಶ್ರಮ ಕಡಿಮೆ ಮಾಡುವ ಆಧುನಿಕ ಉಪಕರಣಗಳು ಮತ್ತು ವಸ್ತ್ರ ಮತ್ತು ಆಹಾರ ವಸ್ತುಗಳಂತಹ ಕಚ್ಚಾ ವಸ್ತುಗಳ ಬಗ್ಗೆ ಪರಿಚಯ ಮಾಡಿಕೊಡಬೇಕು.

ಆದಾಗ್ಯೂ, ಭಾರತದಲ್ಲಿ ಗೃಹ ವಿಜ್ಞಾನ ಶಿಕ್ಷಣದ ಸರಿಯಾದ ಯೋಜನೆ ಇರಲಿಲ್ಲ. ಶಾಲಾ ಮಟ್ಟದಲ್ಲಿ ಈ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವಂಥ ದೀರ್ಘಕಾಲ ನೆಲೆ ನಿಂತ ನಿರ್ದಿಷ್ಟ ಯೋಜನೆ ಇರಲಿಲ್ಲ.

ಇತ್ತೀಚಿನ ವರ್ಷಗಳಲ್ಲಿ ಗೃಹ ವಿಜ್ಞಾನವು ಒಂದು ಶೈಕ್ಷಣಿಕ ಶಾಖೆಯಾಗಿ ಸಾಕಷ್ಟು ಪ್ರಾಮುಖ್ಯವನ್ನು ಗಳಿಸಿಕೊಂಡಿದೆ. ಇದನ್ನು ಎಲ್ಲಾ ತೆರನ– ಅಂದರೆ ಔಪಚಾರಿಕ ಸಂಪ್ರದಾಯರಹಿತ ಮತ್ತು ಔಪಚಾರಿಕ ಶಿಕ್ಷಣಗಳಲ್ಲಿ– ಸೇರಿಸಲಾಗಿದೆ. ಇದನ್ನು ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ವಿಭಿನ್ನ ಸ್ತರಗಳ ಶಿಕ್ಷಣದಲ್ಲಿಯು ಸಹ ಸೇರಿಸಲಾಗಿದೆ. ಉದಾಹರಣೆಗೆ ಶಾಲಾ ಮಟ್ಟದಲ್ಲಿ ಔದ್ಯೋಗಿಕ ಹಾಗೂ ತಾಂತ್ರಿಕ ಶಿಕ್ಷಣ ಕಾರ್ಯಕ್ರಮದಲ್ಲಿ ಗೃಹ ವಿಜ್ಞಾನವನ್ನು ಅಳವಡಿಸಲಾಗಿದೆ.

ಈಗ 30 ವರ್ಷಗಳಿಂದ ಗೃಹವಿಜ್ಞಾನವನ್ನು ಪ್ರೌಢಶಾಲೆಯ ಮಟ್ಟದಲ್ಲಿ ಪರಿಚಯಿಸಲಾಗುತ್ತಿದೆ. ಭಾರತದ ಹಲವು ರಾಜ್ಯಗಳಲ್ಲಿ ಹಿರಿಯ ಮಾಧ್ಯಮಿಕ ಶಿಕ್ಷಣ ಸ್ತರದಲ್ಲಿ ಹೆಚ್ಚುವರಿ ಶೈಕ್ಷಣಿಕ ಪ್ರವಾಹವಾಗಿ ಇದನ್ನು ಪರಿಚಯಿಸಲಾಗುತ್ತಿದೆ. ಶಾಲಾಮಟ್ಟದಲ್ಲಿ ಬಹು ಉದ್ದೇಶಿತ, ತಾಂತ್ರಿಕ ಮತ್ತು ಔದ್ಯೋಗಿಕ ಕಾರ್ಯಕ್ರಮಗಳ ಅಡಿಯಲ್ಲಿ ಪರಿಚಯಿಸಲಾಗುವ ಹಲವಾರು ಕಾರ್ಯಕ್ರಮಗಳಲ್ಲಿ ಇದೂ ಸಹ ಒಂದಾಗಿದೆ.

**ಶಾಲಾ ಮಟ್ಟದಲ್ಲಿ ವಿವಿಧೋದ್ದೇಶ ಕಾರ್ಯಕ್ರಮದಡಿಯಲ್ಲಿ ಗೃಹವಿಜ್ಞಾನ:**

1954ರಲ್ಲಿ, ಅಂದು ಅಸ್ತಿತ್ವದಲ್ಲಿದ್ದ ಶಿಕ್ಷಣ ವ್ಯವಸ್ಥೆ ಅತಿ ಶಾಸ್ತ್ರೀಯವೂ ಕೃತಕವೂ ಆಗಿತ್ತು ಎಂದು ಮಾಧ್ಯಮಿಕ ಶಾಲಾ ಆಯೋಗ (1952) ಅಭಿಪ್ರಾಯ ವ್ಯಕ್ತಪಡಿಸಿತು. ಇದಕ್ಕೆ ವಿದ್ಯಾರ್ಥಿಯನ್ನು ಒಬ್ಬ ವ್ಯಕ್ತಿಯನ್ನಾಗಿಸುವ ಮತ್ತು ಸಮಾಜದ ಮೌಲ್ಯಯುತ ಘಟಕವನ್ನಾಗಿಸುವ ಅವಕಾಶಗಳನ್ನೀಯುವ ಶಿಕ್ಷಣದ ಅವಶ್ಯಕತೆ ಇತ್ತು. ಶಿಕ್ಷಣವು ವಯಸ್ಕರ ಅವಶ್ಯಕತೆಗಳಿಗೆ ಅವಕಾಶವನ್ನು ಒದಗಿಸಿ ಅವುಗಳನ್ನು ಪೂರೈಸಬೇಕಾದರೆ ಅದು ವಿದ್ಯಾರ್ಥಿಗಳ ಅಗತ್ಯಗಳನ್ನು ಮತ್ತು ಆಸಕ್ತಿಗಳನ್ನು ಪೂರೈಸುವಂಥ ಅವಕಾಶಗಳನ್ನು ಒದಗಿಸುವ ಶಿಕ್ಷಣವಾಗಿರಬೇಕು ಎಂದು ಆಯೋಗವು ಶಿಫಾರಸು ಮಾಡಿತು. ಶಿಕ್ಷಣದ ವಿವಿಧೋದ್ದೇಶ ಕಾರ್ಯಕ್ರಮವು ಸಹಜ ಒಲವುಗಳನ್ನು ಉಪಯೋಗಿಸಿ ಬೆಳೆಸಿಕೊಳ್ಳಲು ಶಾಲೆಗಳಲ್ಲಿ ಅವರು ಆಯ್ದುಕೊಳ್ಳುವ ವಿಶೇಷ ಐಚ್ಛಿಕ ವಿಷಯದ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವಕಾಶಗಳನ್ನು ಒದಗಿಸುವ ಗುರಿಯನ್ನು ಹೊತ್ತು ಬಂದಿದೆ. ಕಾರ್ಯಕ್ರಮದಡಿಯ ವೈವಿಧ್ಯಮಯ ಪಠ್ಯಕ್ರಮವು ಏಳು ಐಚ್ಛಿಕ ವಿಷಯಗಳನ್ನು ಒದಗಿಸಿತ್ತು ಅವು ಯಾವುವೆಂದರೆ; i) ಮಾನವಿಕ ವಿಷಯಗಳು (ii) ವಿಜ್ಞಾನ (iii) ತಾಂತ್ರಿಕ ವಿಷಯಗಳು (iv) ವಾಣಿಜ್ಯ ವಿಷಯಗಳು (v) ಕೃಷಿ ಸಂಬಂಧಿತ ವಿಷಯಗಳು (vi) ಗೃಹ ವಿಜ್ಞಾನ, ಇವುಗಳಲ್ಲಿ ಒಂದು ವಿಷಯದೊಂದಿಗೆ ವಿದ್ಯಾರ್ಥಿಗಳು ಭಾಷೆ, ಸಾಮಾನ್ಯ ವಿಜ್ಞಾನ, ಸಮಾಜ ಅಧ್ಯಯನಗಳು ಮತ್ತು ಕರಕೌಶಲಗಳನ್ನು ಅಧ್ಯಯನ ಮಾಡಬೇಕಿತ್ತು.

**ತಾಂತ್ರಿಕ ಶಾಲೆಗಳಲ್ಲಿ ಗೃಹ ವಿಜ್ಞಾನ:**

ವಿವಿಧ ವಿಷಯ ಕ್ಷೇತ್ರಗಳಲ್ಲಿ ಪ್ರಾಯೋಗಿಕ ಜ್ಞಾನವನ್ನು ನೀಡುವ ಮುಖ್ಯ ಉದ್ದೇಶದಿಂದ ಪ್ರೌಢಶಾಲಾ ಸ್ತರದಲ್ಲಿ ತಾಂತ್ರಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಈ ಯೋಜನೆಯಡಿ ಗೃಹವಿಜ್ಞಾನವನ್ನು ಸಂಯುಕ್ತ ವಿಷಯವಾಗಿ ಬೋಧಿಸಲಾಗುವುದಿಲ್ಲ. ಹೊಲಿಗೆ, ವಸ್ತ್ರ ವಿನ್ಯಾಸ, ಪಾಕಶಾಸ್ತ್ರ, ಬೇಕರಿ, ಆಹಾರ ರಕ್ಷಣೆ, ಮತ್ತು ಕರಕುಶಲತೆ ಮುಂತಾದ ಗೃಹಕೇಂದ್ರಿತ ಕ್ಷೇತ್ರಗಳ ಅನುಭವವನ್ನು ಯೋಜನೆಯಲ್ಲಿ ಸೇರಿಸಿಕೊಳ್ಳಲಾಗಿತ್ತು. ತಾಂತ್ರಿಕ ಶಾಲೆಗಳಲ್ಲಿ ಗೃಹವಿಜ್ಞಾನವೆಂದರೆ ಅಡುಗೆ ಮತ್ತು ಹೊಲಿಗೆಯನ್ನು ಬಿಟ್ಟು ಹೆಚ್ಚೇನೂ ಅಲ್ಲ. ಆಂತರಿಕ ಅಲಂಕರಣ, ಪೀಠೋಪಕರಣ ವಿನ್ಯಾಸ, ಪೀಠೋಪಕರಣಗಳ ಉತ್ಪಾದನೆ ಹಾಗೂ ವಾಸ್ತುಶಿಲ್ಪ ಸಹಾಯದಲ್ಲಿ ಮತ್ತು ಗೃಹೋಪಕರಣ ವಿನ್ಯಾಸದಲ್ಲಿ ಪ್ರಶಿಕ್ಷಣ ಮುಂತಾದ ಇನ್ನೂ ಹೆಚ್ಚಿನ ವಿಷಯಗಳನ್ನು ಅಳವಡಿಸಿ ಈ ಯೋಜನೆಯ ಅಡಿಯಲ್ಲಿ ಗೃಹವಿಜ್ಞಾನಕ್ಕೆ ತಕ್ಕ ಸ್ಥಾನವನ್ನು ಗಳಿಸಿಕೊಡುವಂತೆ ಮಾಡಬೇಕಿತ್ತು. ಉತ್ತಮ ಗೃಹ ಜೀವನಕ್ಕಾಗಿ ಶಿಕ್ಷಣದ ಕಡೆಗೆ ಒಲವುಳ್ಳ ತಾಂತ್ರಿಕ ಸಿಬ್ಬಂದಿಯನ್ನು ತಯಾರು ಮಾಡುವ ಗುರಿಯನ್ನು ಇದು ಹೊಂದಬೇಕು. ಇದಕ್ಕೆ ಹೆಚ್ಚಿನ ಸಂಶೋಧನೆ, ನಾವೀನ್ಯತೆ ಮತ್ತು ಸೃಜನಶೀಲತೆ ಗೃಹವಿಜ್ಞಾನದ ತಾಂತ್ರಿಕ ಶಿಕ್ಷಣ ಕಾರ್ಯಕ್ರಮ ಯೋಜಕರಿಂದ ಆಗಬೇಕಾದ ಅವಶ್ಯಕತೆ ಇದೆ.

**ಔದ್ಯೋಗಿಕ ಶಿಕ್ಷಣದಡಿಯಲ್ಲಿ ಗೃಹವಿಜ್ಞಾನ:**

ಗೃಹವಿಜ್ಞಾನವನ್ನು ಒಂದು ಕಸುಬನ್ನಾಗಿ ಮಾಡುವ ವಿಚಾರ ಹೊಸತೇನೂ ಅಲ್ಲ. 1966ರಷ್ಟು ಹಿಂದೆಯೇ ಈ ಕ್ಷೇತ್ರಕ್ಕೆ ಔದ್ಯೋಗಿಕ ಅವಕಾಶಗಳು ಇರಬೇಕು ಎಂದು ಗೃಹ ವಿಜ್ಞಾನ ಸಂಘ ಒತ್ತಿ ಹೇಳಿತು. ಸಂಘದ ಸಂವಿಧಾನದಲ್ಲಿ ಉಕ್ತವಾಗಿರುವ ಗುರಿಗಳು ಇದನ್ನೇ ಸೂಚಿಸುವಂತಿದೆ. ವೃತ್ತಿಗಳೆಲ್ಲಾ ಹೆಚ್ಚಿನದಾದುದಕ್ಕೆ ಸಿದ್ಧವಾಗುವುದು; ಅಂದರೆ ಪತ್ನಿ ಮತ್ತು ತಾಯಿ ಉದ್ಯೋಗಕ್ಕಾಗಿ ಸಿದ್ಧವಾಗುವುದು; ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುವುದು; ಗೃಹವಿಜ್ಞಾನ ಕಾರ್ಯಕ್ರಮಗಳಲ್ಲಿ ಮುಂದಾಳುತ್ವವನ್ನು ವಹಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು.

Digitised by Bharatavani, CIIL

ಸಾಮಾನ್ಯ ಶೈಕ್ಷಣಿಕ ವ್ಯವಸ್ಥೆಯ ಪರಿಷ್ಕರಣ ಮತ್ತು ವಿಶೇಷತಃ 10+2 ವ್ಯವಸ್ಥೆಯ ಪರಿಚಯ– ಇವುಗಳಿಂದ ಗೃಹವಿಜ್ಞಾನವನ್ನು ಶಾಲೆಗಳಲ್ಲಿ +2 ಸ್ತರದ ಮೂರು ಶೈಕ್ಷಣಿಕ ಪ್ರವಾಹಗಳಲ್ಲಿ ಒಂದಾಗಿ ಪರಿಚಯಿಸಲಾಯಿತು.

ಎಂಟನೆಯ ತರಗತಿಯವರೆಗೆ, ಗೃಹವಿಜ್ಞಾನ ಸಂಬಂಧಿ ಚಟುವಟಿಕೆಗಳನ್ನು ತಾಂತ್ರಿಕ ಶಾಲೆಗಳಲ್ಲಿ ಹೇಳಿಕೊಡುವ ಅಂತರ್ವಸ್ತುವಿನ ಮಾದರಿಯಲ್ಲೇ ಚಟುವಟಿಕೆಯ ಶಿಕ್ಷಣದ ರೂಪದಲ್ಲಿ ಪರಿಚಯಿಸಲಾಗುವುದು. ಇದಕ್ಕೆ ಮುಂಚಿತವಾಗಿ ಇದನ್ನು ಸಾಮಾಜಿಕವಾಗಿ ಉಪಯುಕ್ತ ಉತ್ಪಾದಕ ಕಾರ್ಯ (Socially Useful, Productive Work - SUPW) ಎಂಬ ಯೋಜನೆಯಡಿಯಲ್ಲಿ ಹೇಳಿಕೊಡಲಾಗುತ್ತಿದ್ದು, ಹೆಚ್ಚು ಚಲನ ಕೌಶಲ ಕೇಂದ್ರಿತವಾಗಿತ್ತು. ಈ ಮಟ್ಟದಲ್ಲಿ ಗೃಹವಿಜ್ಞಾನ ವಿಷಯದಲ್ಲಿ ಗೃಹಕೌಶಲ, ಗೃಹವಿಜ್ಞಾನ, ಹೊಲಿಗೆ ಮತ್ತು ಎಂಬ್ರಾಯಿಡ್ರಿ ಮತ್ತು ಗೃಹಜೀವನ ವಿದ್ಯಾ ಇವುಗಳನ್ನು ಬೋಧಿಸಲಾಗುವುದು. ಒಂಬತ್ತು ಮತ್ತು ಹತ್ತನೆಯ ತರಗತಿಯ ಮಟ್ಟದಲ್ಲಿ ಹಲವು ಅಲ್ಪಾವಧಿ ಗೃಹವಿಜ್ಞಾನ ಸಂಚಯಗಳು (Modules) ಔದ್ಯೋಗಿಕ ಪೂರ್ವ ಶಿಕ್ಷಣದಡಿಯಲ್ಲಿ ಲಭ್ಯವಿವೆ. ಹನ್ನೊಂದು ಮತ್ತು ಹನ್ನೆರಡನೆ ತರಗತಿಯ ಔದ್ಯೋಗಿಕ–ಪೂರ್ವಶಿಕ್ಷಣದ ವಿದ್ಯಾರ್ಥಿಗಳಿಗೆ ಗೃಹ ವಿಜ್ಞಾನದಲ್ಲಿ ಎರಡು ವರ್ಷದ ಕಾರ್ಯಕ್ರಮಗಳು ಲಭ್ಯವಿವೆ.

**ವಿಶ್ವವಿದ್ಯಾನಿಲಯದ ಮಟ್ಟ:**

1947ನೆಯ ಇಸವಿಗೆ ಮೊದಲು ಗೃಹವಿಜ್ಞಾನದ ಕಾರ್ಯಕ್ರಮಗಳನ್ನು ಉದಾರಕಲೆಗಳಲ್ಲಿನ (Liberal Arts) ಸಾಮಾನ್ಯ ಶಿಕ್ಷಣದ ಭಾಗವಾಗಿ ಇಲ್ಲವೇ ಅಧ್ಯಾಪಕರ ಸಿದ್ಧತೆಗಾಗಿ ಔದ್ಯೋಗಿಕ ಪ್ರಶಿಕ್ಷಣವಾಗಿ ಪರಿಚಯಿಸಲಾಗುತ್ತಿತ್ತು. 1950 ಮತ್ತು 1952ರಲ್ಲಿ ಗೃಹವಿಜ್ಞಾನವನ್ನು ಕ್ರಮಶಃ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸ್ನಾತಕ ಪದವಿ ಕಾರ್ಯಕ್ರಮವಾಗಿ ಮತ್ತು ಮೆಟ್ರಿಕ್ ನಂತರದ ರಾಷ್ಟ್ರೀಯ ವಿಸ್ತರಣಾ ಸೇವೆಯಲ್ಲಿ ಒಂದು ಕಾರ್ಯಕ್ರಮವಾಗಿ ಪ್ರಾರಂಭಿಸಲಾಯಿತು. ಆದ್ದರಿಂದ, ಈ ಕೆಳಗಿನ ವಿವಿಧ ಗಮನ ಕೇಂದ್ರವುಳ್ಳ ವಿವಿಧ ಕಾರ್ಯಕ್ರಮಗಳು ಅಸ್ತಿತ್ವದಲ್ಲಿದ್ದವು;

1. ವಿಜ್ಞಾನ ಕಾಲೇಜುಗಳಲ್ಲಿ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಸ್ತರಗಳಲ್ಲಿನ ಪದವಿ ಕಾರ್ಯಕ್ರಮಗಳು.
2. ಕೃಷಿ ಕಾಲೇಜುಗಳಲ್ಲಿ ಮತ್ತು ವಿಸ್ತರಣಾ ಕೇಂದ್ರಗಳಲ್ಲಿ ಡಿಗ್ರಿ/ ಡಿಪ್ಲೋಮಾ/ಸರ್ಟಿಫಿಕೇಟ್ ಕಾರ್ಯಕ್ರಮಗಳು.
3. ಸಾಮಾನ್ಯವಾಗಿ ಔದ್ಯೋಗಿಕ ಛಾಯೆಯುಳ್ಳ ಅಧ್ಯಾಪಕರನ್ನು ಹಾಗೂ ಗೃಹಿಣಿಯರನ್ನು ತಯಾರು ಮಾಡುವ ಡಿಪ್ಲೋಮಾ/ಸರ್ಟಿಫಿಕೇಟ್ ಕಾರ್ಯಕ್ರಮಗಳು.
4. ಸಾಮಾನ್ಯ ಶಿಕ್ಷಣದಲ್ಲಿ ಕಲಾ ಕಾಲೇಜುಗಳಲ್ಲಿ ಐಚ್ಛಿಕ ಕಾರ್ಯಕ್ರಮಗಳು. 1950ರಲ್ಲಿ ಗೃಹವಿಜ್ಞಾನವನ್ನು ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಏರಿಸಲಾಯಿತು ಹಾಗೂ ಅದಕ್ಕೆ ಶೈಕ್ಷಣಿಕ ಶ್ರೇಷ್ಠತೆಯನ್ನು ನೀಡಲಾಯಿತು.

ಬರೋಡಾ ವಿಶ್ವವಿದ್ಯಾನಿಲಯವು 1950ರಲ್ಲಿ ಗೃಹ ವಿಜ್ಞಾನದ ವಿಭಾಗವನ್ನು ಸ್ಥಾಪಿಸಿದ ಭಾರತದ ಪ್ರಥಮ ವಿಶ್ವವಿದ್ಯಾನಿಲಯವಾಯಿತು. ವಿಶ್ವವಿದ್ಯಾನಿಲಯದ ಡಿಗ್ರಿ ಕಾರ್ಯಕ್ರಮಗಳು ಅಮೇರಿಕಾ ವಿಶ್ವವಿದ್ಯಾನಿಲಯಗಳ ಗೃಹ ಆರ್ಥಿಕ ಶಿಕ್ಷಣದ ಮಾದರಿಯಲ್ಲಿ ರೂಪುಗೊಂಡವು. ದೇಶದ ಗೃಹ ವಿಜ್ಞಾನ ಶಿಕ್ಷಣದಲ್ಲಿ ಅಮೇರಿಕಾ ಮಾದರಿಯ ಶಿಕ್ಷಣ ಏಕೀಕೃತಗೊಂಡದ್ದರ ಫಲವಾಗಿ ಯು.ಟಿ/ಇಂಡಿಯಾ ತಂಡ 1955–62ರವರೆಗೆ ಭಾರತದಲ್ಲಿ ಕಾರ್ಯಪ್ರವೃತ್ತವಾಯಿತಲ್ಲದೆ 1960–68ರವರೆಗಿನ ವರ್ಷಗಳಲ್ಲಿ ಫೋರ್ಡ್ ಫೌಂಡೇಷನ್ ತಂಡ ಬರೋಡಾದಲ್ಲಿ ಗೃಹವಿಜ್ಞಾನ ವಿಭಾಗವನ್ನು ವಿಕಾಸಗೊಳಿಸಲು ಶ್ರಮಿಸಿತು. ಭಾರತದ ವಿಶ್ವವಿದ್ಯಾನಿಲಯವು ಅಖಿಲ ಭಾರತ ನೆಲೆಯಲ್ಲಿ ಈ ಶಿಕ್ಷಣದ ವಿಸ್ತರಣೆ ಮತ್ತು ವಿಕಾಸದ ಯಶಸ್ಸು ಅಮೇರಿಕದ ವಿಶೇಷತಜ್ಞರ ಯುಟಿ/ಇಂಡಿಯ ತಂಡ ಮತ್ತು ಭಾರತ ಸರ್ಕಾರ ಹಾಗೂ ಯು.ಎಸ್.ಎ ನಡುವಣ ಒಡಂಬಡಿಕೆಗಳಿಗೆ ಸಲ್ಲಬೇಕು. ಈ ದಿಶೆಯಲ್ಲಿ ಯು ಟಿ/ಇಂಡಿಯ ಟೀಮ್‌ನ ಕೊಡುಗೆ ಅಪಾರವೂ, ಮಹತ್ವಪೂರ್ಣವೂ ಆಗಿದೆ.

1975ನೆಯ ವರ್ಷದ ವೇಳೆಗೆ ಗೃಹ ವಿಜ್ಞಾನವನ್ನು ಸ್ನಾತಕ ಪದವಿಯ ಮಟ್ಟದಲ್ಲಿ ಬೋಧಿಸುವ ಇಪ್ಪತ್ತು ವಿಶ್ವವಿದ್ಯಾನಿಲಯಗಳಿದ್ದು ಅವುಗಳಲ್ಲಿ ಹಲವು, ಸ್ನಾತಕೋತ್ತರ ಕಾರ್ಯಕ್ರಗಳನ್ನು ಪಿಹೆಚ್.ಡಿ ಡಿಗ್ರಿಗಳನ್ನು ಪ್ರಾರಂಭಿಸಿದ್ದವು. ಆದರೂ ಸಹ, ಈ ಶಿಕ್ಷಣವು ಇತರ ಶಾಖೆಗಳ ಶಿಕ್ಷಣದ ವಿಷಯದಲ್ಲಿರುವಂತೆಯೇ, ಸಮಾಜದ ಶ್ರೀಮಂತ ವರ್ಗದ ಸ್ವತ್ತಾಗಿ ಉಳಿಯಿತು.

**ಗೃಹ ವಿಜ್ಞಾನ ಶಿಕ್ಷಣದ ಗುರಿಗಳು:**

1952ರಲ್ಲಿ ಭಾರತೀಯ ಗೃಹವಿಜ್ಞಾನ ಸಂಘದ ಆಯೋಗವೊಂದು ಉನ್ನತ ಶಿಕ್ಷಣದಲ್ಲಿ ಗೃಹ ವಿಜ್ಞಾನದ ಗುರಿಗಳ ಆದರ್ಶಪ್ರಾಯವಾಗಿ ವಿಕಸಿಸಿ ಸಮರ್ಥಿಸಿತು. 1959ರಲ್ಲಿ ಬೆಂಗಳೂರಿನಲ್ಲಿ ನಡೆದ ಗೃಹವಿಜ್ಞಾನಿಗಳ ಕಾರ್ಯಾಗಾರದಲ್ಲಿ ಇದನ್ನು ಪುನರ್ ಸಮರ್ಥಿಸಲಾಯಿತು. ತದನಂತರ ದೆಹಲಿಯಲ್ಲಿ 1960ರಲ್ಲಿ ನಡೆದ ಗೃಹವಿಜ್ಞಾನಿಗಳ ಸಭೆಯು ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಗುರಿಗಳನ್ನು ಕುರಿತು ಚರ್ಚಿಸಿ ಅವುಗಳನ್ನು ಶಿಫಾರಸ್ಸು ಮಾಡಿತು. ಸ್ನಾತಕ ಹಾಗೂ ಸ್ನಾತಕೋತ್ತರ ಗೃಹವಿಜ್ಞಾನ ಕಾರ್ಯಕ್ರಮಗಳ ಗುರಿಗಳನ್ನು ಹೀಗೆ ಸಂಗ್ರಹಿಸಬಹುದು; ಸಮಗ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಕುಟುಂಬದ ಸದಸ್ಯರಾಗಲು ವಿದ್ಯಾರ್ಥಿಗಳಿಗೆ ಸಹಾಯ ನೀಡುವುದು ಮತ್ತು ನಿರಂತರ ಶೈಕ್ಷಣಿಕ ಬೆಳವಣಿಗೆಯಲ್ಲಿ ಆಸಕ್ತಿ ಬೆಳೆಸಿ ಜವಾಬ್ದಾರಿ ಪ್ರಜೆಗಳೆಂಬ ಭಾವನೆ ಮೂಡಿಸುವುದು; ಗೃಹದ ಸೌಂದರ್ಯ, ಮಾನಸಿಕ, ಸಾಮಾಜಿಕ, ಭೌತಿಕ ಮತ್ತು ಆರ್ಥಿಕ ಮುಖಗಳ ವಿಷಯದಲ್ಲಿ ಅರಿವು ಮೂಡಿಸುವುದು ಹಾಗೂ ವೃತ್ತಿಜೀವನಕ್ಕಾಗಿ ಅರ್ಹರನ್ನಾಗಿಸುವುದು. ಸ್ನಾತಕೋತ್ತರ ಶಿಕ್ಷಣದ ಮೂಲಕ ವೃತ್ತಿಪರ ವೈಶಿಷ್ಟ್ಯತೆಯನ್ನು ತರುವುದು.

Digitised by Bharatavani, CIIL

ಹೀಗೆ, ಬಿ.ಎಸ್‌ಸಿ. ಪದವಿ ಕಾರ್ಯಕ್ರಮವು ವಿದ್ಯಾರ್ಥಿ ಸಮೂಹದಲ್ಲಿ ಕುಟುಂಬದ ಘಟಕ ಮತ್ತು ಸಮಾಜದ ಸದಸ್ಯರಾಗಿ ವೈಯಕ್ತಿಕ ಗುಣಗಳನ್ನು ಬೆಳೆಸುವ ವಿಶಾಲ ಆಧಾರವುಳ್ಳ ಪ್ರಾಯೋಗಿಕ/ಉದ್ದೇಶಸಾಧಕ ಕಾರ್ಯಕ್ರಮವಾಗಿರಬೇಕು ಎಂದು ನಿರೀಕ್ಷಿಸಲಾಗುತ್ತದೆ. ಸ್ನಾತಕೋತ್ತರ ಕಾರ್ಯಕ್ರಮವು ಗೃಹವಿಜ್ಞಾನದ ಕ್ಷೇತ್ರಗಳೊಂದರಲ್ಲಿ ವಿಶೇಷಜ್ಞತೆಯ ಮೂಲಕ ವೃತ್ತಿದಕ್ಷತೆಯನ್ನು ವಿಕಸಿಸಬೇಕು ಎಂಬ ನಿರೀಕ್ಷೆ ಇದೆ.

**ವಿವಿಧ ದೇಶಗಳಲ್ಲಿ ಗೃಹವಿಜ್ಞಾನ ಕಾರ್ಯಕ್ರಮದ ವ್ಯಾಖ್ಯಾನ:**

ಗೃಹ ವಿಜ್ಞಾನದ ಉದ್ದೇಶಗಳು, ಲಕ್ಷಣಗಳು ಮತ್ತು ವ್ಯಾಪ್ತಿಗಳನ್ನು ಸೂಚಿಸುವ ಸಮಗ್ರ ವ್ಯಾಖ್ಯಾನವನ್ನು ನೀಡಲಾಗಿದೆಯೇ ಎಂಬುದರ ಬಗ್ಗೆ ಘೋಷಿತ ಒಪ್ಪಂದ ಅಸ್ತಿತ್ವದಲ್ಲಿಲ್ಲ ಎನ್ನುವುದರತ್ತ ನಮ್ಮ ಗಮನ ಹರಿಯಬೇಕಾಗಿದೆ. ಈ ಪರಿಸ್ಥಿತಿಯನ್ನು ಇತರ ದೇಶಗಳಲ್ಲಿರುವ ಗೃಹ ವಿಜ್ಞಾನ ಶಿಕ್ಷಣದ ವಿಧಗಳೊಂದಿಗೆ ಹೋಲಿಸಿದಾಗ ಇದೇ ತೆರನ ಕೊರತೆ ಕಂಡುಬರುವುದು.

ವಿವಿಧ ದೇಶಗಳಲ್ಲಿ 'ಗೃಹ ವಿಜ್ಞಾನ'ಕ್ಕೆ ಬಳಸುವ ಪರಿಭಾಷೆಗಳು ಸಹ ವಿಭಿನ್ನವಾಗಿವೆ ಎಂದು ತಿಳಿದು ಬಂದಿದೆ. ಅವು ಹೀಗಿವೆ; ಯು.ಎಸ್.ಎ, ಫಿಲಿಫೈನ್ಸ್, ಸ್ವಿಟ್ಜರ್‌ಲ್ಯಾಂಡ್, ಬೆಲ್ಜಿಯಂ, ಹಾಲೆಂಡ್‌ಗಳಲ್ಲಿ 'ಗೃಹ ಆರ್ಥಿಕತೆ' (Home Economics); ಜಪಾನಿನಲ್ಲಿ 'ಹೋಂ ಮೇಕಿಂಗ್'; ಇಂಗ್ಲೆಂಡಿನಲ್ಲಿ 'ಡೊಮೆಸ್ಟಿಕ್ ಎಕಾನಮಿ' ಮತ್ತು ಭಾರತ ಮತ್ತು ನ್ಯೂಜಿಲ್ಯಾಂಡ್‌ಗಳಲ್ಲಿ 'ಗೃಹ ವಿಜ್ಞಾನ' (Home Science) ಎಂಬ ವಿಭಿನ್ನ ಪರಿಭಾಷೆಗಳು ಅಸ್ತಿತ್ವದಲ್ಲಿವೆ.

ತತ್ಪರಿಣಾಮವಾಗಿ, ಈ ಕೆಳಗೆ ಸೋದಾಹರಣವಾಗಿ ನಿರೂಪಿಸಿರುವಂತೆ ಗೃಹ ವಿಜ್ಞಾನ ಕಾರ್ಯಕ್ರಮಗಳ ಉದ್ದೇಶಗಳು ಸಹ ಈ ದೇಶಗಳಲ್ಲಿ ವೈವಿಧ್ಯಮಯವಾಗಿವೆ;

- **ನೆದರ್‌ಲ್ಯಾಂಡ್ ಗೃಹಕೃತ್ಯ ಕಲಾ ಸಮಿತಿ:** ರಾಷ್ಟ್ರೀಯ ಹಿತಾಸಕ್ತಿಯೆಂಬಂತೆ ದಕ್ಷ ಗೃಹ ಸಂಬಂಧಿ ಮಿತವ್ಯಯವನ್ನು ಪ್ರೋತ್ಸಾಹಿಸುವುದು ಮತ್ತು ಸರ್ಕಾರಿ ಹಾಗೂ ವೈಜ್ಞಾನಿಕ ಸಂಸ್ಥೆಗಳು, ವ್ಯಾಪಾರ ಮತ್ತು ಕೈಗಾರಿಕೆಗಳ ವಿರುದ್ಧ ಬಳಕೆದಾರರನ್ನು ಪ್ರತಿನಿಧಿಸಿ ಅವರ ಮತ್ತು ಗೃಹಕೃತ್ಯ ಸಂಬಂಧಿ ಹಿತಾಸಕ್ತಿಗಳನ್ನು ರಕ್ಷಿಸುವುದು.
- **ಕೆನಡಾದ ಕ್ಯೂಬೆಕ್ ಕುಟುಂಬ ಸಂಸ್ಥೆ:** ಆಧ್ಯಾತ್ಮಿಕ, ಭೌತಿಕ ಮತ್ತು ತಾಂತ್ರಿಕ ಒಲವುಳ್ಳ ಬಾಲಕಿಯರನ್ನು ತಯಾರಿಸುವುದು ಮತ್ತು ಗೃಹ ಆರ್ಥಿಕತೆ ಮತ್ತು ಕುಟುಂಬ ಶಿಕ್ಷಣ ಶಿಕ್ಷಕರ ತರಬೇತಿ.
- ಅಂತರರಾಷ್ಟ್ರೀಯ ಗೃಹ ಆರ್ಥಿಕತೆಯ ಒಕ್ಕೂಟದ ಪರಿಭಾಷೆಯಲ್ಲಿ ಕಾರ್ಯಕ್ಷೇತ್ರದ ಬಗೆಗಿನ ಆಂಗ್ಲ ಮತ್ತು ಫ್ರೆಂಚ್ ವ್ಯಾಖ್ಯಾನವು ಬಹುತೇಕ ಸಮಾನವಾಗಿರುವುದು ಕಂಡು ಬಂದಿತು.
- **ಗೃಹ ಸಂಬಂಧಿತ ಸಮಸ್ತ ಸಮಸ್ಯೆಗಳ ನಿಖರ ಮತ್ತು ಆರ್ಥಿಕ ಜ್ಞಾನ:** ಆಹಾರ, ವಸ್ತ್ರ, ಮನೆ, ಆರೋಗ್ಯ ಮತ್ತು ಮಾನವೀಯ ಸಂಬಂಧಗಳು ಹಾಗೂ ಸಂಪನ್ಮೂಲಗಳ ನಿರ್ವಹಣೆ– ಇವುಗಳಿಗೆ ಸಂಬಂಧಿಸಿದ ಸಂಶೋಧನೆ ಮತ್ತು ಆ ಸಂಶೋಧನೆಯ ಪ್ರಸಾರ.
- **ಗೃಹ ವಿಜ್ಞಾನದಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣ:** ನ್ಯೂಜಿಲ್ಯಾಂಡ್ ವಿಶ್ವವಿದ್ಯಾನಿಲಯ– ಗೃಹ ನಿರ್ವಹಣೆಯನ್ನು ಕುರಿತಾದ ವಿಷಯಗಳಲ್ಲಿ ಮಹಿಳೆಯರಿಗೆ/ಸಂಪೂರ್ಣವಾದ ವೈಜಾನಿಕ ಶಿಕ್ಷಣವನ್ನು ಒದಗಿಸುವುದು. ಪದವಿ ಕಾರ್ಯಕ್ರಮಗಳಲ್ಲಿ ವಿಜ್ಞಾನ ವಿಷಯಗಳಿಗೆ ಹೆಚ್ಚು ಒತ್ತನ್ನು ನೀಡಿದರೆ ಡಿಪ್ಲೋಮಾ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಆಧಾರಭೂತ ತತ್ವಗಳನ್ನು ಅರ್ಥ ಮಾಡಿಕೊಳ್ಳಲು ಸಮರ್ಥರಾಗುವಂತೆ ತಕ್ಕ ಮಟ್ಟಿಗಿನ ಹಿನ್ನೆಲೆಯೊಂದಿಗೆ ಗೃಹ ವಿಜ್ಞಾನದ ಎಲ್ಲ ಮುಖಗಳಲ್ಲಿ ಪೂರ್ಣರೂಪದ ತರಬೇತಿ ಒದಗಿಸುವ ರೀತಿಯಲ್ಲಿ ರೂಪುಗೊಳಿಸಲಾಗಿದೆ.
- **ಬೆಲ್ಜಿಯಂನಲ್ಲಿ ಗೃಹ ಆರ್ಥಿಕತೆ:** ಗೃಹ ಆರ್ಥಿಕತೆಯ ಬೋಧನೆಯು ಸಾಮಾನ್ಯವಾಗಿ ಸಂಸ್ಕೃತಿಯ ಜೊತೆಗೆ ಮಹಿಳೆಯರ ಔದ್ಯೋಗಿಕ ಶಿಕ್ಷಣದ ಅವಿಭಾಜ್ಯ ಅಂಗವಾಗುವುದು, ಸಾಮಾನ್ಯ ಸಂಸ್ಕೃತಿಯಿಂದ ತೆಗೆದುಕೊಂಡು ಕುಟುಂಬದ ಸಂಸ್ಕೃತಿಯ ನಿರ್ದಿಷ್ಟ ವೈವಿಧ್ಯತೆಗಳು, ಕುಟುಂಬ ಶಿಕ್ಷಣಕ್ಕೆ ಅರ್ಹವಾದ ಕೌಟುಂಬಿಕ ಸ್ಫೂರ್ತಿಯನ್ನು ಮೈಗೂಡಿಸುವುದು, ಮಕ್ಕಳ ಆರೋಗ್ಯಕರ ಪಾಲನೆ, ಮಕ್ಕಳ ಶಿಕ್ಷಣ ಮತ್ತು ಗೃಹ ನಿರ್ವಹಣೆ ಇತ್ಯಾದಿ.
- **ಜಪಾನಿನಲ್ಲಿ ಗೃಹ ಆರ್ಥಿಕತೆಯ ಶಿಕ್ಷಣ:** ಗೃಹ ನಿರ್ವಹಣಾ ಶಿಕ್ಷಣದ ಪ್ರಮುಖ ಉದ್ದೇಶಗಳಲ್ಲಿ ಒಂದು. ಪ್ರತಿಯೊಬ್ಬ ವ್ಯಕ್ತಿಯು ಕುಟುಂಬದ ಒಳ್ಳೆಯ ಸದಸ್ಯನಾಗುವಂತೆ ಹಾಗೂ ಒಳ್ಳೆಯ ಗೃಹ ನಿರ್ವಾಹಕನಾಗುವಂತೆ ತರಬೇತಿ ಕೊಡುವುದು ಇದರ ಉದ್ದೇಶಗಳಲ್ಲಿ ಒಂದಾಗಿದೆ.
- **ತತ್ವ ಮತ್ತು ಉದ್ದೇಶಗಳನ್ನು ಕುರಿತಂತೆ ಅಮೇರಿಕ ಗೃಹ ಆರ್ಥಿಕತೆ ಸಂಘ ಸಮಿತಿಯ ವಿವರಣೆ:** ಗೃಹ ಆರ್ಥಿಕತೆಯು ಪ್ರಮುಖವಾಗಿ ಕುಟುಂಬ ಜೀವನಕ್ಕಾಗಿ ವ್ಯಕ್ತಿಯೊಬ್ಬನನ್ನು 'ಶಿಕ್ಷಿತನನ್ನಾಗಿಸುವುದರ ಮೂಲಕ ಕುಟುಂಬ ಜೀವನವನ್ನು ಬಲಗೊಳಿಸುವುದಕ್ಕೆ ಕುಟುಂಬಗಳು ಬಳಸುವ ಸೇವೆಗಳು ಮತ್ತು ಸಾಮಾನುಗಳನ್ನು ಸುಧಾರಿಸುವುದು. ವ್ಯಕ್ತಿಗಳ ಕುಟುಂಬಗಳ ಬದಲಾಗುತ್ತಿರುವ ಅವಶ್ಯಕತೆಗಳನ್ನು ಕಂಡುಹಿಡಿಯಲು ಸಂಶೋಧನೆ ನಡೆಸುವುದು ಮತ್ತು ಆ ಅವಶ್ಯಕತೆಗಳನ್ನು ಪೂರೈಸಲು ಮಾರ್ಗಗಳನ್ನು ಕಂಡು ಹಿಡಿಯುವುದು, ಕುಟುಂಬ ಜೀವನಕ್ಕೆ ಅನುಕೂಲವಾದ ಸಾಮೂದಾಯಿಕ ರಾಷ್ಟ್ರೀಯ ಮತ್ತು ಜಾಗತಿಕ ಪರಿಸ್ಥಿತಿಗಳನ್ನು ಪ್ರೋತ್ಸಾಹಿಸುವುದು ಇತ್ಯಾದಿಗಳಿಗೆ ಸಂಬಂಧಿಸಿದ ಜ್ಞಾನ ಮತ್ತು ಸೇವೆಗಳ ಕ್ಷೇತ್ರ ಇದಾಗಿದೆ.

**ಗೃಹ ವಿಜ್ಞಾನ ಶಿಕ್ಷಣದ ವ್ಯಾಪ್ತಿ:**

ಸಾಮಾನ್ಯ ಜನಪ್ರಿಯತೆಯ ದೃಷ್ಟಿಯಿಂದ ಗೃಹ ವಿಜ್ಞಾನವನ್ನು

Digitised by Bharatavani, CIIL

ಗೃಹ ನಿರ್ವಹಣೆಯ ಶಿಕ್ಷಣದ ಜೊತೆ ಗುರುತಿಸಲಾಗುವುದು. ಹೆಚ್ಚಿನ ಸಂಖ್ಯೆಯ ಪೋಷಕರು ತಮ್ಮ ಹೆಣ್ಣು ಮಕ್ಕಳಿಗೆ ವಿವಾಹದ ಸಿದ್ಧತೆಗಾಗಿ ಮತ್ತು ಗೃಹ ನಿರ್ವಹಣೆ ಸಿದ್ಧತೆಗಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಗೃಹವಿಜ್ಞಾನದ ಅಧ್ಯಯನ ವಿವಾಹಕ್ಕೆ ಮತ್ತು ಗೃಹ ನಿರ್ವಹಣೆಗೆ ಪ್ರಮುಖ ಅಗತ್ಯವೆ ಎಂಬ ಸಂದರ್ಭೋಚಿತ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಇದಕ್ಕೆ ಉತ್ತರ 'ಇಲ್ಲ' ಎಂದೇ ಹೇಳಬೇಕು. ಗೃಹ ವಿಜ್ಞಾನದಲ್ಲಿನ ಶಿಕ್ಷಣವು ಶ್ರೇಷ್ಠ ಗೃಹ ನಿರ್ವಾಹಕನನ್ನು ತಯಾರು ಮಾಡಬೇಕೆಂದು ನಿರೀಕ್ಷಿಸುವುದು ಉಚಿತವಲ್ಲ. ವೈದ್ಯಕೀಯ ಶಿಕ್ಷಣವು ಒಬ್ಬನನ್ನು ವೈಯಕ್ತಿಕವಾಗಿ ಉತ್ತಮ ಆರೋಗ್ಯ ಕ್ರಮಗಳನ್ನು ಅನುಸರಿಸಬೇಕೆಂದು ನಿರೀಕ್ಷಿಸುವಂತೆ ಗೃಹ ವಿಜ್ಞಾನಿಯು ತನ್ನ ದೈನಂದಿನ ಜೀವನದಲ್ಲಿ ಉತ್ತಮ ಗೃಹ ನಿರ್ವಹಣೆಯ ವಿಧಾನಗಳನ್ನು ಅನುಸರಿಸಬೇಕೆಂದು ನಾವು ನಿರೀಕ್ಷಿಸಬಹುದು.

ಹಳೆಯ ಪದ್ಧತಿಗಳು ಮತ್ತು ಸಂಪ್ರದಾಯಗಳು ಹಾಗೂ ಹೊಸತಾಗಿರುವುವು ಇವುಗಳ ಮಧ್ಯೆ ಅಗತ್ಯ ಸಮನ್ವಯ/ಹೊಂದಾಣಿಕೆಯನ್ನು ತರುವುದಕ್ಕಾಗಿ ದಿಶಾ ಜ್ಞಾನವನ್ನು (Orientation) ಹಳತರಲ್ಲಿ ಉಳಿಸಿಕೊಳ್ಳಬಹುದಾದದ್ದು ಏನು ಮತ್ತು ಹೊಸತರೊಂದಿಗೆ ಇವುಗಳನ್ನು ಹೊಂದಿಸುವುದು ಹೇಗೆ – ಇವೆಲ್ಲವೂ ಒಂದು ಸಾಂಸ್ಕೃತಿಕ ಪರಿಸರದಲ್ಲಿನ ಗೃಹ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದ ಹಿತಾಸಕ್ತಿಯ ನಿರ್ಧಾರಕ ಅಂಶಗಳಾಗಿವೆ.

ಒಂದು ಸನ್ನಿವೇಶದಲ್ಲಿ, ಅತ್ಯಾವಶ್ಯಕವಾಗಿರುವ ಸಂದರ್ಭದಲ್ಲಿ, ಜ್ಞಾನವನ್ನು ಉಪಯೋಗಿಸುವ ಮನೋಭಾವವನ್ನು ಬೆಳೆಸಿಕೊಳ್ಳುವುದು ಗೃಹ ವಿಜ್ಞಾನದಲ್ಲಿ ಬಹು ಮುಖ್ಯವಾಗಿದೆ.

ಆದ್ದರಿಂದ, ಗೃಹ ವಿಜ್ಞಾನದ ಕಾರ್ಯಕ್ರಮವು ತನ್ನ ಗುರಿಗಳನ್ನು ರಾಷ್ಟ್ರೀಯ ಆರ್ಥಿಕತೆಯ ಮಿಡಿತಕ್ಕೆ ತಕ್ಕಂತೆ ಹೊಂದಿರಬೇಕು ಎಂಬ ಅಭಿಪ್ರಾಯವಿದೆ. ವಿರಳ ಸಂಪನ್ಮೂಲಗಳನ್ನು ಅತ್ಯಂತ ಹಿತಕರವಾದ ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಸುವ ಅಗತ್ಯ, ವಿಧಾನಗಳ ಹಾಗೂ ಸಾಮಗ್ರಿಗಳ ಸುಧಾರಣೆ, ದುಬಾರಿ ಸಾಮಗ್ರಿಗೆ ಬದಲಾಗಿ ಅಗ್ಗದ ಸಾಮಗ್ರಿಯ ಬಳಕೆ ಆದರೂ ಅದೇ ಸಮಯದಲ್ಲಿ ಅದೇ ಪ್ರಮಾಣದ ತೃಪ್ತಿಯನ್ನು ಹೊಂದುವ ಪ್ರಯತ್ನ– ಇವೆಲ್ಲವೂ ಅವಶ್ಯಕವಾಗಿವೆ. ಆವಿಷ್ಕಾರದ ಸಾಮರ್ಥ್ಯವನ್ನು ಹೊಂದಲು ಅನುಭವಗಳನ್ನು ಗೃಹ ವಿಜ್ಞಾನವು ಒದಗಿಸಬೇಕು. ಉದಾಹರಣೆಗೆ, ಪ್ರೆಜರ್ ಕುಕ್ಕರ್, ಸಾಮಾನ್ಯ ಕುಟುಂಬಕ್ಕೆ ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಸೀಮೆ ಎಣ್ಣೆ ಡಬ್ಬದಲ್ಲಿ ಕುಕ್ಕರ್ ತಯಾರಿಸುವುದು. ಅಧಿಕ ಉತ್ಪಾದನೆಗೆ ಮತ್ತು ಪೂರಕ ಆದಾಯಕ್ಕೆ ಬೇಕಾದ ಜ್ಞಾನ ಮತ್ತು ಕುಶಲತೆಗಳನ್ನು ಸಹ ಗೃಹ ವಿಜ್ಞಾನ ಒದಗಿಸಬೇಕು. ಇದರ ಅರ್ಥವೇನೆಂದರೆ ಕೋಳಿಸಾಕಣೆ, ತೋಟಗಾರಿಕೆ, ಸಣ್ಣ ಪ್ರಮಾಣದ ಗೃಹ ಕೈಗಾರಿಕೆಗಳು ಇವೇ ಮುಂತಾದ ಅಂಗಭೂತ/ಪೂರಕ ಕಸುಬುಗಳಲ್ಲಿ ಪರಿಣಿತಿ ಒದಗಿಸಬೇಕು.

**ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಗೃಹ ವಿಜ್ಞಾನ:**

ಗೃಹ ವಿಜ್ಞಾನವು ಕುಟುಂಬದ ಮತ್ತು ಸಮುದಾಯದ ತೃಪ್ತಿಯ ಅಧ್ಯಯನಕ್ಕೆ ತನ್ನ ಬಹುಮುಖ ಉಪಕ್ರಮದೊಂದಿಗೆ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗೆ ಸಂವೇದನಾಶೀಲವಾಗಿರಬೇಕಲ್ಲದೆ ತನ್ನ ಕಾರ್ಯಕ್ರಮಗಳನ್ನು ಅದಕ್ಕೆ ತಕ್ಕಂತೆ ಅರ್ಥಪೂರ್ಣವಾಗಿ ಹೊಂದಿಸಿಕೊಳ್ಳಬೇಕು. ಈ ಕಾರ್ಯಕ್ರಮದ ಬೌದ್ಧಿಕ ಮತ್ತು ಸೃಜನಾತ್ಮಕ ಯೋಜನೆಯೊಂದಿಗೆ ಈ ಶಿಕ್ಷಣವು ರಾಷ್ಟ್ರದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳನ್ನು ಪ್ರಾರಂಭಿಸುವುದಕ್ಕೆ ಶಕ್ತಿಯುತ ಉಪಕರಣವಾಗಿದೆ ಮತ್ತು ನಮ್ಮ ಆಧುನಿಕ ಸಮಾಜದಲ್ಲಿ ಸಾಂಸ್ಕೃತಿಕ ಅಂತರವನ್ನು ಕಡಿಮೆ ಮಾಡಲು ಕುಶಲತೆಗಳನ್ನು ಬೆಳೆಸಲು ಸಹಾಯಕಾರಿಯಾಗಿದೆ.

ಶಿಕ್ಷಣ ಆಯೋಗವು (1964–66) ಅಂದು ಇದ್ದ ಶಿಕ್ಷಣದಲ್ಲಿ ಕ್ರಾಂತಿಕಾರಿ ಮಾರ್ಪಾಡಿನ ಅವಶ್ಯಕತೆಯನ್ನು ಒತ್ತಿ ಹೇಳುತ್ತಾ ಸಾಮಾನ್ಯತಃ ಶಿಕ್ಷಣಕ್ಕೂ ಮತ್ತು ಉತ್ಪಾದನೆಗೂ, ವಿಶೇಷತಃ ಕೃಷಿ ಶಿಕ್ಷಣಕ್ಕೂ ಹಾಗೂ ಉತ್ಪಾದನೆಗೂ ನೇರ ಸಂಬಂಧವಿದೆ ಎಂಬುದಕ್ಕೆ ಪ್ರಾಶಸ್ತ್ಯ ನೀಡಿದೆ. ಈ ಸಂದರ್ಭದಲ್ಲಿ, ಆಯೋಗದ ವರದಿಯಿಂದ ಒಂದು ಮುಖ್ಯ ಉಲ್ಲೇಖವು ಗೃಹ ವಿಜ್ಞಾನಕ್ಕೆ ಅತ್ಯಂತ ಅನ್ವಯಿಕವಾಗಿದೆ ಮತ್ತು ಅದು ಇಂತಿದೆ;

"ಶಿಕ್ಷಣದ ಪರಿವರ್ತನೆ ಮತ್ತು ನಮ್ಮ ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ಜನರ ಜೀವನದ ಅವಶ್ಯಕತೆಗಳಿಗೆ ಮತ್ತು ಆಶೋತ್ತರಗಳಿಗೆ ಇದರ (ಗೃಹವಿಜ್ಞಾನದ) ಸಂಬಂಧ ಕಲ್ಪಿಸುವುದಕ್ಕಿಂತ ಮಿಗಿಲಾದ ಪ್ರಮುಖವಾದ ಅಥವಾ ತುರ್ತಿನ ಸುಧಾರಣೆ ಮತ್ತೊಂದಿಲ್ಲ".

ಶಿಕ್ಷಣ ಆಯೋಗದ, ಗೃಹ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದ, ಮತ್ತೊಂದು ನಿರ್ದೇಶನ ಹೀಗಿದೆ. 'ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ಹಾಗೂ ಸಂಶೋಧನೆಗಳ ಸುಧಾರಣೆ ಕೃಷಿ ಮತ್ತು ತತ್ಸಂಬಂಧಿತ ವಿಜ್ಞಾನಗಳಿಗೆ ವಿಶೇಷ ಒತ್ತನ್ನು ಹೊಂದಿರಬೇಕು'. ಕಾರ್ಯಾನುಭವ ಶಾಲಾ ಕಾಲೇಜುಗಳ ಪಠ್ಯಕ್ರಮದ ಅವಿಭಾಜ್ಯ ಅಂಗವೆಂದು ಹೇಳಿರುವ ಆಯೋಗದ ಶಿಫಾರಸ್ಸು ಪೂರ್ಣವಾಗಿ ಹೊಸ ವಿಚಾರವೇನಲ್ಲ. ಆಳವಾಗಿ ನೋಡಿದರೆ ಕರಕುಶಲತೆ ಅಥವಾ ಅರ್ಥಪೂರ್ಣ ಕಾರ್ಯ ಶಿಕ್ಷಣದ ಮಾಧ್ಯಮ ಎಂದು ಗಾಂಧೀಜಿ ಹೇಳಿರುವ ವಿಚಾರವನ್ನೇ ಇದು ಪ್ರತಿಬಿಂಬಿಸುತ್ತದೆ. ಕರಕುಶಲ ಶಿಕ್ಷಣವನ್ನು ಪ್ರಾರಂಭಿಸುವಾಗ ಗಾಂಧೀಜಿಯವರು ಕರ್ಮಕ್ಕೆ ಗೌರವ, ಶ್ರಮಕ್ಕೆ ಗೌರವ ಮತ್ತು ವರ್ಗರಹಿತ, ಜಾತಿರಹಿತ ಸಮಾಜ ಇತ್ಯಾದಿ ಮೌಲ್ಯಗಳು ಇದರಲ್ಲಿ ಒಳಗೊಳ್ಳಬೇಕೆಂದು ಅಭಿಪ್ರಾಯಪಟ್ಟಿದ್ದರು. ಕಾರ್ಯಾನುಭವದ ಈ ಪರಿಕಲ್ಪನೆಯನ್ನು ಗೃಹವಿಜ್ಞಾನ ಕ್ಷೇತ್ರದಲ್ಲಿ ಅತ್ಯಂತ ತಾರ್ಕಿಕವಾಗಿ ಸಮನ್ವಯಗೊಳಿಸಬಹುದು. ಪಂತ್ ನಗರ್ ಕೃಷಿ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ಕೃಷಿಯಲ್ಲಿ ಪ್ರಾಯೋಗಿಕ ಅನುಭವವನ್ನು ನೀಡುವ ಮತ್ತು ಕಲಿಯುವಾಗ ಸಂಪಾದಿಸಲು ಅವಕಾಶವನ್ನು ಒದಗಿಸುವ ಎರಡು ಉದ್ದೇಶಗಳನ್ನು ಹೊಂದಿರುವ ಆರು ಕ್ರೆಡಿಟ್‌ಗಳ 'ಆಹಾರ ಉತ್ಪಾದನೆ' (Food

Digitised by Bharatavani, CIIL

Production) ಕಾರ್ಯಕ್ರಮವನ್ನು ನಡೆಸುತ್ತಿದೆ. ಇಲ್ಲಿ ಸಂಪೂರ್ಣ ಕಾರ್ಯ ನಿರ್ವಹಣೆಯನ್ನು ವಿದ್ಯಾರ್ಥಿಗಳೇ ನೋಡಿಕೊಳ್ಳುತ್ತಾರೆ. ಶಿಕ್ಷಣದಲ್ಲಿ ಇಂತಹ ಪ್ರಯೋಗಗಳ ಮಾದರಿಗಳು ಕಾರ್ಯಪ್ರವೃತ್ತಿ ಮತ್ತು ಶ್ರಮವನ್ನು ಗೌರವಿಸುವ ಪ್ರವೃತ್ತಿಗಳನ್ನು ವರ್ಧಿಸುವುದಕ್ಕೆ ಮಹತ್ವಪೂರ್ಣವಾಗಿವೆ. ಇದೇ ಮಾದರಿಯಲ್ಲಿ ಕಾರ್ಯಕ್ರಮಗಳನ್ನು ಆರಂಭಿಸಲು ಗೃಹ ವಿಜ್ಞಾನ ಶಿಕ್ಷಣ ಅನೇಕ ಪಥಗಳನ್ನು ಒದಗಿಸುತ್ತದೆ. ಉದಾಹರಣೆಗೆ, 'ತಿಂಡಿ ತಿನಿಸುಗಳ ಉತ್ಪಾದನೆ' ಅಥವಾ ವಸ್ತ್ರ, ಮಗ್ಗ ಮತ್ತು ಶಿಶುವಿಕಸನಕ್ಕೆ ಸಂಬಂಧಿಸಿದಂತೆ 'ಆಟಿಕೆಗಳ ಉತ್ಪಾದನೆ', ಗೃಹ ನಿರ್ವಹಣೆಯ ಸರಳ ಮತ್ತು ಅಗ್ಗದ ಉಪಸಾಮಗ್ರಿಗಳ ಉತ್ಪಾದನೆ ಇವೇ ಮುಂತಾದ ಸ್ನಾತಕ ಮಟ್ಟದ ಕೆಲವು ಕಾರ್ಯಕ್ರಮಗಳು ಉತ್ಪಾದನಾ ಕಾರ್ಯಕ್ಕೆ ಬೇಕಾದ ತರಬೇತಿ ಮತ್ತು ಕುಶಲತೆಗಳನ್ನು ಕೊಡಬಲ್ಲದು, ಕಾರ್ಯಪ್ರವೃತ್ತಿಯನ್ನು ಬೆಳಸಬಲ್ಲವು ಮತ್ತು ಹಣ ಸಂಪಾದನೆಗೆ ಅವಕಾಶಗಳನ್ನು ಒದಗಿಸಬಲ್ಲವು, ಅಂದರೆ, ಆರ್ಥಿಕ ಸ್ವಾತಂತ್ರಕ್ಕೆ ಬೆಲೆ ಕೊಡಬಲ್ಲವು.

ನಾವೀನ್ಯಯುತ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಅಂತರ್ಗತ ಸಾಮರ್ಥ್ಯವನ್ನು ಬಡಿದೆಬ್ಬಿಸಬೇಕು ಮತ್ತು ಅವರನ್ನು ದೇಶದ ಅವಶ್ಯಕತೆಗಳಿಗೆ ಸ್ಪಂದಿಸುವಂತೆ ಮಾಡಬೇಕು ಹಾಗೂ ಕಾಲೇಜುಗಳು ತಮ್ಮ ಸುತ್ತಮುತ್ತವಿರುವ ಸಮುದಾಯಗಳನ್ನು ಭಾಗಿಯಾಗಿಸಿಕೊಳ್ಳಬೇಕು ಎಂಬುದನ್ನು ಕಾಲೇಜು ಶಿಕ್ಷಣದಲ್ಲಿ ಗಮನದಲ್ಲಿಡಬೇಕು.

**ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಗೃಹವಿಜ್ಞಾನ ಕಾರ್ಯಕ್ರಮದ ಅಂತರ್ವಸ್ತು:**

ಕಳೆದ ಎರಡು ದಶಕಗಳಲ್ಲಿ ಶಾಲೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಸ್ತರದಲ್ಲಿ ಗೃಹವಿಜ್ಞಾನದಲ್ಲಿನ ಶಿಕ್ಷಣವು ಗಮನಾರ್ಹವಾಗಿ ಬೆಳೆದಿದೆ. ಹಲವಾರು ವಿಶ್ವವಿದ್ಯಾನಿಲಯಗಳು ಗೃಹವಿಜ್ಞಾನದಲ್ಲಿ ಬಿ.ಎಸ್‌ಸಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡುತ್ತಿವೆ. ಹಲವಾರು ಸಂಸ್ಥೆಗಳು ಗೃಹವಿಜ್ಞಾನ ಪದವೀಧರರಿಗೆ ಶಿಕ್ಷಕ ಪ್ರಶಿಕ್ಷಣ ಪದವಿಗಳಿಗೆ ಅವಕಾಶ ನೀಡಿವೆ.

ಗೃಹವಿಜ್ಞಾನವು ವಿವಿಧ ಮುಖಗಳ ಅಧ್ಯಯನವನ್ನು ಒಳಗೊಂಡಿರುವ ವ್ಯವಸ್ಥಿತ ಜ್ಞಾನದ ಅಂಗವಾಗಿದೆ. ಗೃಹ ಮತ್ತು ಕುಟುಂಬ ಜೀವನದ ಸಂವೇಗಾತ್ಮಕ ಆರ್ಥಿಕ ಮತ್ತು ಸಾಮಾಜಿಕ ಮುಖಗಳನ್ನು ಇದು ಒಳಗೊಂಡಿದೆ. ಆದ್ದರಿಂದ ಈ ಅಧ್ಯಯನ ಕ್ಷೇತ್ರವು ಭೌತಿಕ, ಜೈವಿಕ ಮತ್ತು ಸಾಮಾಜಿಕ ವಿಜ್ಞಾನಗಳ ಸಮನ್ವಯವಾಗಿದ್ದು ಭೌತಶಾಸ್ತ್ರ, ರಸಾಯನಶಾಸ್ತ್ರ, ಕಾರ್ಬನಿಕ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಮನೋವಿಜ್ಞಾನ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಆಹಾರ ಮತ್ತು ಪೌಷ್ಠಿಕತೆ ಉಡುಪು ಮತ್ತು ನೇಯ್ಗೆ, ಶಿಶುವಿಕಾಸ, ಗೃಹನಿರ್ವಹಣೆ ಮತ್ತು ಕಲೆ ಇತ್ಯಾದಿ ವಿಷಯಗಳನ್ನು ಒಳಗೊಳ್ಳುತ್ತದೆ. ಪದವಿ ಮಟ್ಟದಲ್ಲಿ, ಪಠ್ಯಕ್ರಮದ ಅಂತರ್ವಸ್ತು ವಿಶಾಲ ಆಧಾರವುಳ್ಳದ್ದಾಗಿದ್ದು ಈ ಕ್ಷೇತ್ರದಲ್ಲಿ ಸಮಾವೇಶಗೊಂಡಿರುವ ಎಲ್ಲ ವಿಷಯಗಳ ವಿವಿಧ ಸಂಯೋಜನೆಯನ್ನು ಗೃಹವಿಜ್ಞಾನ ತನ್ನ ವ್ಯಾಪ್ತಿಯಲ್ಲಿ ತರುವುದು. ಸ್ನಾತಕೋತ್ತರ ಪದವಿಯ ಮಟ್ಟದಲ್ಲಿ, ಗೃಹವಿಜ್ಞಾನ ಕ್ಷೇತ್ರದ ಯಾವುದಾದರೂ ಒಂದು ವಿಷಯದಲ್ಲಿ– ಆಹಾರ ಮತ್ತು ಪೌಷ್ಠಿಕತೆ, ಶಿಶು ವಿಕಾಸ ಮತ್ತು ಕೌಟುಂಬಿಕ ಸಂಬಂಧಗಳು, ಗೃಹ ನಿರ್ವಹಣೆ, ಉಡುಪು ಮತ್ತು ನೇಯ್ಗೆ, ಗೃಹವಿಜ್ಞಾನ ಶಿಕ್ಷಣ ಮತ್ತು ವಿಸ್ತರಣೆ– ತಜ್ಞತೆಯನ್ನು ಒದಗಿಸಲಾಗುವುದು ಸ್ನಾತಕೋತ್ತರ ಮಟ್ಟದ ಅಧ್ಯಯನದ ಅಂತರ್ವಸ್ತು ಅಂತರ್‌ಶಿಸ್ತೀಯ (Interdisciplinary) ಸ್ವರೂಪದ್ದಾಗಿದೆ.

ಆಹಾರ ಮತ್ತು ಪೌಷ್ಠಿಕತೆಗೆ ಸಂಬಂಧಿಸಿದ ಪಠ್ಯವಸ್ತು ತನ್ನ ವಿಷಯವನ್ನು ಮುಖ್ಯವಾಗಿ ರಸಾಯನಶಾಸ್ತ್ರ, ಜೈವಿಕ ರಸಾಯನ ಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನಗಳಿಂದ ಎರವಲು ಪಡೆಯುತ್ತದೆ.

**ಶಿಶು ವಿಕಾಸ ಮತ್ತು ಕೌಟುಂಬಿಕ ಸಂಬಂಧಗಳು:**

ಗೃಹವಿಜ್ಞಾನ ಅಧ್ಯಯನ ವಿಷಯವು ತನ್ನ ಪಠ್ಯವಸ್ತುವನ್ನು ಪ್ರಮುಖವಾಗಿ ಶಿಶು ಮನೋವಿಜ್ಞಾನ, ಸಮಾಜ ಶಾಸ್ತ್ರ, ಮಾನವಶಾಸ್ತ್ರ ಮತ್ತು ಅರ್ಥಶಾಸ್ತ್ರ ಇತ್ಯಾದಿ ಶಿಸ್ತುಗಳಿಂದ ತೆಗೆದುಕೊಳ್ಳುತ್ತದೆ. ಕುಟುಂಬದ ಸಾಮಾಜಿಕ ಸಂರಚನೆ, ಕುಟುಂಬದ ಆದಾಯದ ಆರ್ಥಿಕ ನಿರ್ವಹಣೆ ಹಾಗೂ ವಿವಿಧ ಸಾಂಸ್ಕೃತಿಕ ಸಮೂಹಗಳಲ್ಲಿನ ಶಿಶುಪಾಲನಾ ಪದ್ಧತಿಯ ಮೌಲ್ಯ ವ್ಯವಸ್ಥೆಗಳು ಇತ್ಯಾದಿಗಳ ಅಧ್ಯಯನ ಕೈಗೊಳ್ಳುವುದು ಇದರ ಉದ್ದೇಶವಾಗಿದೆ.

ಗೃಹ ನಿರ್ವಹಣೆಯು ಪ್ರಮುಖವಾಗಿ ಭೌತಶಾಸ್ತ್ರ, ಅರ್ಥಶಾಸ್ತ್ರ, ಗಣಿತ, ವಾಸ್ತುಶಿಲ್ಪ ಮತ್ತು ಸಮಾಜಶಾಸ್ತ್ರ– ಈ ಜ್ಞಾನಶಾಖೆಗಳನ್ನು ಆಧರಿಸಿದೆ.

**ಉಡುಪು ಮತ್ತು ನೇಯ್ಗೆ**: ಮುಖ್ಯವಾಗಿ ರಸಾಯನಸಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮನೋವಿಜ್ಞಾನ, ಮತ್ತು ಕಲೆ– ಇವುಗಳನ್ನು ಆಧರಿಸಿ ತನ್ನ ಪಠ್ಯಕ್ರಮವನ್ನು ರಚಿಸುತ್ತದೆ.

**ಗೃಹವಿಜ್ಞಾನ ಶಿಕ್ಷಣ ಮತ್ತು ವಿಸ್ತರಣೆ**: ಶೈಕ್ಷಣಿಕ ಮನೋವಿಜ್ಞಾನ ಮತ್ತು ಗೃಹವಿಜ್ಞಾನ ವಿಷಯಗಳನ್ನು ಬೋಧಿಸುವ ವಿಧಾನಗಳಿಗೆ ನಿಕಟವಾಗಿ ಸಂಬಂಧಿಸಿದೆ. ಸಾರಭೂತವಾಗಿ ಗೃಹವಿಜ್ಞಾನ, ಶಿಕ್ಷಣ ಮತ್ತು ವಿಸ್ತರಣೆ ತನ್ನ ಅಭಿಪಾಯವನ್ನು ತತ್ವಶಾಸ್ತ್ರ, ಶೈಕ್ಷಣಿಕ ಮನೋವಿಜ್ಞಾನ, ಸಮಾಜಶಾಸ್ತ್ರ, ಸಾಂಸ್ಕೃತಿಕ ಮಾನವಶಾಸ್ತ್ರ ಮತ್ತು ಸಂವಹನ ವಿಧಾನಗಳ ಮೇಲೆ ಕಟ್ಟುತ್ತದೆ.

**ಗೃಹವಿಜ್ಞಾನದ ಸ್ಥಾನಮಾನ:**

ಸ್ಥಾನಮಾನವೆಂದರೆ ಪ್ರಸ್ತುತದಲ್ಲಿರುವ ಸ್ಥಿತಿಗತಿ. ಶೈಕ್ಷಣಿಕ ಜ್ಞಾನಶಾಖೆಯ ರೂಪದಲ್ಲಿ ಗೃಹವಿಜ್ಞಾನದ ಪ್ರಸ್ತುತ ಪರಿಸ್ಥಿತಿಯ ವಿಶ್ಲೇಷಣೆಯನ್ನು ವಿವಿಧ ದೃಷ್ಟಿಕೋನಗಳಿಂದ ಕೈಗೊಳ್ಳಬಹುದು.

- ಶೈಕ್ಷಣಿಕ ಕಾರ್ಯಕ್ರಮ
- ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಕ್ಕೆ ಇದರ ಕೊಡುಗೆ

Digitised by Bharatavani, CIIL

- ❖ ಔದ್ಯೋಗಿಕ ಕೊಡುಗೆ ಮತ್ತು
- ❖ ಸಂಶೋಧನೆ

**ಗೃಹವಿಜ್ಞಾನದಲ್ಲಿನ ಶೈಕ್ಷಣಿಕ ಕಾರ್ಯಕ್ರಮಗಳು:**

ಇವುಗಳನ್ನು ಗೃಹವಿಜ್ಞಾನ ಶಿಕ್ಷಣದ ಔಪಚಾರಿಕ ಮತ್ತು ಅರೆ ಔಪಚಾರಿಕ ಕಾರ್ಯಕ್ರಮಗಳೆಂದು ವರ್ಗೀಕರಿಸಬಹುದು.

**ಔಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಗೃಹವಿಜ್ಞಾನ:**

ಹಿಂದೆ ನೋಡಿದಂತೆ ಗೃಹವಿಜ್ಞಾನವು ಔಪಚಾರಿಕ ಶಿಕ್ಷಣ ಕಾರ್ಯಕ್ರಮಗಳ ಅವಿಭಾಜ್ಯ ಅಂಗವಾಗಿ ಮುಂದುವರೆದಿದೆ. ಈ ಸಂಬಂಧದಲ್ಲಿ ಇದನ್ನು ಮಾಧ್ಯಮಿಕ ಶಾಲಾ ಸ್ತರದಲ್ಲಿ ಸಾಮಾಜಿಕವಾಗಿ ಉಪಯುಕ್ತ ಮತ್ತು ಉತ್ಪಾದಕ ಕಾರ್ಯಾನುಭವದ (SUPW) ಅಡಿಯಲ್ಲಿ ಪರಿಚಯಿಸಲಾಗುತ್ತಿದೆ. ಹಿರಿಯ ಮಾಧ್ಯಮಿಕ ಶಾಲಾ ಸ್ತರದಲ್ಲಿ ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಇದು ಪ್ರಮುಖ ಶೈಕ್ಷಣಿಕ ಪ್ರವಾಹಗಳಲ್ಲಿ ಒಂದಾಗಿದೆ.

ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾನಿಲಯಗಳ ಗೃಹವಿಜ್ಞಾನ ವಿಭಾಗಗಳಲ್ಲಿ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಉಡುಪು ಮತ್ತು ನೆಯ್ಗೆ ಶಿಶುವಿಕಾಸ ಮತ್ತು ಕೌಟುಂಬಿಕ ಸಂಬಂಧಗಳು ಆಹಾರ ಮತ್ತು ಪೌಷ್ಠಿಕತೆ , ಗೃಹನಿರ್ವಹಣೆ ಮತ್ತು ಗೃಹವಿಜ್ಞಾನ ಶಿಕ್ಷಣ ಹಾಗೂ ವಿಸ್ತರಣೆ ಎಂಬೀ ಐದು ಕ್ಷೇತ್ರಗಳಲ್ಲಿ ಸಂಯುಕ್ತ ವಿಷಯದಂತೆಯೂ, ವಿಶೇಷಜ್ಞತೆಯಂತೆಯೂ ಪರಿಚಯಿಸಲಾಗುತ್ತಿದೆ. ಇದನ್ನು ಕೇವಲ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರವಲ್ಲದೆ ಕೃಷಿ ವಿಶ್ವವಿದ್ಯಾನಿಲಯ, ಗ್ರಾಮೀಣ ವಿಶ್ವವಿದ್ಯಾನಿಲಯಗಳು, ಪರಿಗಣಿತ ವಿಶ್ವವಿದ್ಯಾನಿಲಯಗಳು ಹಾಗೂ ಮಹಿಳಾ ವಿಶ್ವವಿದ್ಯಾನಿಲಯಗಳ ಮೂಲಕವೂ ಪರಿಚಯಿಸಲಾಗುತ್ತದೆ. ಗೃಹವಿಜ್ಞಾನದಲ್ಲಿ ಎಸ್. ಎಸ್.ಸಿ ನಂತರದ ಸರ್ಟಿಫಿಕೇಟ್ ಅಥವಾ ಡಿಪ್ಲೋಮಾವನ್ನು ಮತ್ತು ಗೃಹವಿಜ್ಞಾನದ ವಿಶೇಷ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಡಿಪ್ಲೋಮಾವನ್ನು ಯಾರಾದರೂ ಪಡೆಯಬಹುದಾಗಿದೆ. ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಜೊತೆಗೆ ಇಂದು ಗೃಹವಿಜ್ಞಾನ ಎಲ್ಲ ಕ್ಷೇತ್ರಗಳಲ್ಲಿಯೂ ಯಾರಾದರೂ ಪಿಎಚ್.ಡಿ ಪದವಿ ಪಡೆಯಬಹುದಾಗಿದೆ. ಶಿಕ್ಷಕ ಪ್ರಶಿಕ್ಷಣ ಕಾಲೇಜುಗಳಲ್ಲಿಯೂ ಸಹ ಅವಕಾಶವಿದೆ.

**ಅರೆ ಔಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಗೃಹವಿಜ್ಞಾನ:**

ಈ ಕಾರ್ಯಕ್ರಮಗಳ ಅಧೀನದಲ್ಲಿ ಗೃಹವಿಜ್ಞಾನವು ವಯಸ್ಕರ ಶಿಕ್ಷಣದ ಮೂಲಕ, ಪ್ರಾಯೋಗಿಕ ಮತ್ತು ಕಾನೂನು ಸಂಬಂಧಿತ ಸಾಕ್ಷರತೆಗಳು ಒಳಗೊಂಡಂತೆ, ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತದೆ. ವಯಸ್ಕರ ಶಿಕ್ಷಣ ತರಗತಿಗಳ ಮೂಲಕ ಗೃಹವಿಜ್ಞಾನವು ಆಹಾರ ಸಂರಕ್ಷಣೆ ಮತ್ತು ಸಂಸ್ಕರಣೆ, ಪಾಕಶಾಸ್ತ್ರ, ಬೇಕರಿ, ಹೊಸ ಪಾಕವಿಧಾನಗಳು, ಅಲ್ಪವೆಚ್ಚದ ಪೌಷ್ಟಿಕ ತಿನಿಸುಗಳು ಹಾಗೂ ಪೌಷ್ಟಿಕತೆಯ ಶಿಕ್ಷಣ ಇವುಗಳಲ್ಲಿ ಕಾರ್ಯಕ್ರಮಗಳನ್ನು ಪರಿಚಯಿಸುತ್ತದೆ. ಆಂತರಿಕ ಅಲಂಕರಣ, ಪುಷ್ಪಸಜ್ಜು, ಉಡುಪು ತಯಾರಿಕೆ ಮತ್ತು ಕರಕುಶಲ ವಸ್ತುಗಳು, ರಂಗು ಹಾಕುವುದು, ಮುದ್ರಣ, ನೆಯ್ಗೆ ಮತ್ತು ಹೆಣಿಗೆ, ಕ್ರೋಷಾದಿಂದ ಹೆಣೆಯುವುದು, ಕಸೂತಿಕೆಲಸ, ಅಲಂಕಾರದ ಕೆಲಸ ಇವೇ ಮುಂತಾದ ಎಲ್ಲೆಂದರಲ್ಲಿ, ಬೇಕೆಂದಾಗ ಆದಾಯ ತರುವ, ಸ್ವಯಂಉದ್ಯೋಗ ನೀಡುವ ಮತ್ತು ಕುಟುಂಬ ಆದಾಯಕ್ಕೆ ಪೂರಕವಾಗಿರುವ ಕಾರ್ಯಕ್ರಮಗಳನ್ನು ಇದು ಪರಿಚಯಿಸುತ್ತದೆ. ಮುಂದುವರೆಯುತ್ತಿರುವ ಶೈಕ್ಷಣಿಕ ಕಾರ್ಯಕ್ರಮದಡಿಯಲ್ಲಿ ಗೃಹವಿಜ್ಞಾನವು ಹಳೆಯ ಗೃಹವಿಜ್ಞಾನ ಪದವೀಧರರಿಗೆ ಉದ್ಯೋಗವನ್ನು ಹೊಂದಲು ಅಥವಾ ವೈಯಕ್ತಿಕ ಬೆಳವಣಿಗೆ ಸಾಧಿಸಲು ತಮ್ಮ ಜ್ಞಾನವನ್ನು ಪೂರ್ಣವಾಗಿಸಲು ನೆರವಾಗುತ್ತದೆ. ವಿಸ್ತರಣ ಶಿಕ್ಷಣದಡಿಯಲ್ಲಿ, ಗೃಹವಿಜ್ಞಾನ ಸಮಗ್ರ ಪಾತ್ರವನ್ನು ವಹಿಸಿದೆ. ಇದನ್ನು 1954ರಲ್ಲಿ ವಿಸ್ತರಣಾ ಶಿಕ್ಷಣ ಕಾರ್ಯಕ್ರಮದ ಅವಿಭಾಜ್ಯ ಅಂಗವಾಗಿ ಸೇರಿಸಲಾಯಿತು ಹಾಗೂ ಇದು ಒಂದು ದಶಕದವರೆಗೆ ಹಾಗೆಯೇ ಮುಂದುವರೆಯಿತು. ಇಂದಿಗೂ ಸಹ ರಾಜ್ಯ ಕೃಷಿ ವಿಭಾಗ ಹಾಗೂ ಕೃಷಿವಿಶ್ವವಿದ್ಯಾನಿಲಯಗಳ ಅಧೀನದಲ್ಲಿ ಇದು ವಿವಿಧ ತರಬೇತಿ ಕಾರ್ಯಕ್ರಮಗಳಡಿಯಲ್ಲಿ ಚೆನ್ನಾಗಿ ವರ್ಧಿಸುತ್ತಿದೆ ಮತ್ತು ವಿಸ್ತರಣೆ ಎನ್ನುವುದು ಕೇವಲ ಕೇಂದ್ರಗಳಲ್ಲಿನ ಸಿಬ್ಬಂದಿಗಳ ತರಬೇತಿಗೆ ಮಾತ್ರ ಸೀಮಿತವಾಗಿರದೆ ಇದರ 'ಪ್ರಯೋಗಾಲಯದಿಂದ ನೆಲಕ್ಕೆ' (Lab to Land Programme) ಕಾರ್ಯಕ್ರಮದ ಮೂಲಕ ಸೂಕ್ತ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರೋತ್ಸಾಹವನ್ನೂ ಒಳಗೊಳ್ಳುವುದರಿಂದ ಹಲವು ಪ್ರಶಿಕ್ಷಣ ಕೇಂದ್ರಗಳಲ್ಲಿ ಮುಖ್ಯ ಸ್ಥಾನಮಾನವನ್ನು ಸಹ ಹೊಂದಿದೆ. ಮಹಿಳೆಯರಿಗಾಗಿ ಅಲ್ಪಾವಧಿ ಒಂದು ದಿನದಿಂದ ಒಂದು ವಾರದವರೆಗೆ) ಕಾರ್ಯಕ್ರಮಗಳ ಮುಖಾಂತರ ಕ್ಷೇತ್ರ ಮಟ್ಟದಲ್ಲಿ ಮಹಿಳೆಯರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ವರ್ಗಾವಣೆಗೆ ಗೃಹವಿಜ್ಞಾನವು ಒಂದು ಮಹತ್ವಪೂರ್ಣ ಅಧ್ಯಯನ ಕ್ಷೇತ್ರವಾಗಿದೆ.

**ರಾಷ್ಟ್ರದ ಅಭಿವೃದ್ಧಿಯಲ್ಲಿ ಗೃಹವಿಜ್ಞಾನ:**

ಕಾಲಕಾಲಕ್ಕೆ ಸರ್ಕಾರವು ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಪ್ರಾರಂಭಿಸಿದ ವಿವಿಧ ಅಭಿವೃದ್ಧಿಪರ ಮತ್ತು ಕಲ್ಯಾಣ ಯೋಜನೆಗಳ ಮುಖಾಂತರ ಗೃಹವಿಜ್ಞಾನ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಿದೆ. ಈ ವಿವಿಧ ಕಾರ್ಯಕ್ರಮಗಳು 1952ರಲ್ಲಿ ಪ್ರಾರಂಭಿಸಲಾದ ಸಮುದಾಯ ವಿಕಾಸ ಕಾರ್ಯಕ್ರಮದೊಂದಿಗೆ ಶುರುವಾಗಿದ್ದು ಈ ಕಾರ್ಯಕ್ರಮದಲ್ಲಿ 100 ಗ್ರಾಮಗಳ ಒಂದು ಬ್ಲಾಕ್‌ನಿಂದ ಇಬ್ಬರು ಗ್ರಾಮಮಟ್ಟದ ಕಾರ್ಯಕರ್ತರನ್ನು 47 ಗೃಹ ವಿಜ್ಞಾನ ಶಾಖೆಯಲ್ಲಿ ಪ್ರಶಿಕ್ಷಿತಗೊಳಿಸಲಾಯಿತಲ್ಲದೆ ಅವರನ್ನು ಮಕ್ಕಳ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ವಿವಿಧ ಅಭಿವೃದ್ಧಿ ಬ್ಲಾಕ್‌ಗಳಲ್ಲಿ ಕೆಲಸಕ್ಕೆ ಇಟ್ಟುಕೊಳ್ಳಲಾಯಿತು. ಈ ಕಾರ್ಯಕ್ರಮ ಒಂದು ದಶಕದವರೆಗೆ ಮುಂದುವರೆಯಿತು ಮತ್ತು ಗ್ರಾಮಸೇವಕಿಯರು ಗೃಹ ನಿರ್ವಹಣಾ ಶಿಕ್ಷಣ ಕ್ಷೇತ್ರದಲ್ಲಿ ಬದಲಿ ಏಜೆಂಟರಾಗಿ ಕೆಲಸ ನಿರ್ವಹಿಸಿದರು. ಹೆಚ್ಚು ಕ್ಷೇತ್ರ ಅಭಿವೃದ್ಧಿ ಉಪಕ್ರಮದೊಂದಿಗೆ

Digitised by Bharatavani, CIIL

ಗೃಹ ವಿಜ್ಞಾನದ ವಿವಿಧ ತಜ್ಞ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿಭಿನ್ನ ನಿರ್ದಿಷ್ಟ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಪೌಷ್ಟಿಕತೆ ಮತ್ತು ಆರೋಗ್ಯಪರ ಕಾರ್ಯಕ್ರಮಗಳು ಇವುಗಳಲ್ಲಿ ಮುಖ್ಯವಾದವು.

**ಅನ್ವಯಿಕ ಪೌಷ್ಟಿಕತೆ ಕಾರ್ಯಕ್ರಮ:**

ಅನ್ವಯಿಕ ಪೌಷ್ಟಿಕತೆ ಕಾರ್ಯಕ್ರಮ (Applied Nutrition Programme-ANP) ಶಿಕ್ಷಣ, ಸ್ವಯಂ-ಸಹಾಯ, ಅಧಿಕ ಉತ್ಪಾದನೆ ಮತ್ತು ಸುಧಾರಿತ ಸಂಪರ್ಕಗಳ ಮುಖಾಂತರ ಸುರಕ್ಷಿತವಲ್ಲದ ಸಮೂಹಗಳ ಆಹಾರಕ್ರಮವನ್ನು ಸುಧಾರಿಸಲು 1959ರಲ್ಲಿ ಪ್ರಾರಂಭಿಸಲಾಯಿತು. ದೇಶದಲ್ಲಿ ಲಭ್ಯವಿಲ್ಲದ, ಆದರೆ ಪ್ರಾಯೋಜನೆಗೆ ಅವಶ್ಯವಾದ ಉಪಕರಣಗಳನ್ನು ಒದಗಿಸಿಕೊಟ್ಟ UNICEF ಸಂಸ್ಥೆಯು ಈ ಕಾರ್ಯಕ್ರಮಕ್ಕೆ ನೆರವು ನೀಡಿತು. ತರಬೇತಿ ಪಡೆಯುತ್ತಿರುವವರ ವೇತನಗಳನ್ನು ಸಹ ಸಂಸ್ಥೆ ಒದಗಿಸಿತು.

ಆಹಾರ ಮತ್ತು ಕೃಷಿ ಸಂಸ್ಥೆ (Food and Agriculture Organisation-FAO) ಮತ್ತು ವಿಶ್ವ ಆರೋಗ್ಯ ಸಂಸ್ಥೆ(World Health Organisation-WHO) ತಾಂತ್ರಿಕ ಸಹಕಾರ ಒದಗಿಸಿದವು. ದ್ವಿದಳ ಧಾನ್ಯಗಳ ಸಾಂದ್ರೀಕೃತ ವ್ಯವಸಾಯದಿಂದ ರಕ್ಷಿತ ಆಹಾರಗಳ ಅಧಿಕ ಉತ್ಪಾದನೆ, ಕೃಷಿ ಪದ್ಧತಿಗಳಲ್ಲಿ ಸುಧಾರಣೆ, ಸಮುದಾಯ, ಶಾಲೆ ಮತ್ತು ಕೈತೋಟಗಳ ಮೂಲಕ ಕಾಲೋಚಿತ ಫಲಗಳ ಉತ್ಪಾದನೆ, ಉತ್ತಮ ಆಹಾರ ಧಾನ್ಯ, ಮೇವು ಮತ್ತು ಪಶು ಆಹಾರದೊಂದಿಗೆ ಹೆಚ್ಚಿನ ಹಾಲು ಉತ್ಪಾದನೆ ಅಧಿಕ ಪೌಲ್ಟ್ರಿ/ಕುಕ್ಕುಟ ಪಕ್ಷಿಗಳ ಉತ್ಪಾದನೆ ಹಾಗೂ ಮೀನು ಭಕ್ಷಿಸುವವರಿಗಾಗಿ ಒಳನಾಡಿನ ಮೀನುಗಾರಿಕೆಯ ಪ್ರೋತ್ಸಾಹಕ್ಕೆಂದು ಮೀನುಸಾಕಣೆ- ಇವೆಲ್ಲವೂ ಕಾರ್ಯಯೋಜನೆಯಲ್ಲಿ ಒಳಗೊಂಡಿದ್ದವು. ಗರ್ಭಿಣಿ ಹೆಂಗಸರು, ಹಾಲೂಡಿಸುವ ತಾಯಂದಿರು ಮತ್ತು ಶಾಲಾ-ಪೂರ್ವ ಹಾಗೂ ಶಾಲೆಗೆ ಹೋಗುವ ಮಕ್ಕಳಂಥ ದುರ್ಬಲ ಗುಂಪುಗಳ ಪೋಷಣೆಗಾಗಿ ಸುರಕ್ಷಿತಗೊಳಿಸಿದ ಕೆಲವು ಆಹಾರ ವಸ್ತುಗಳನ್ನು ತಯಾರಿಸುವುದು ಹಳ್ಳಿ, ಬ್ಲಾಕ್ ಮತ್ತು ಜಿಲ್ಲಾ ಮಟ್ಟಗಳಲ್ಲಿ ಪೌಷ್ಟಿಕತೆ ಶಿಕ್ಷಣ ಒದಗಿಸುವುದು, ತರಬೇತಿ ನೀಡುವುದು ಮತ್ತು ಪ್ರಾಕಲ್ಪನೆಗಳನ್ನು ಏರ್ಪಡಿಸುವುದು ಇದರ ಉದ್ದೇಶವಾಗಿತ್ತು.

ಗೃಹ ವಿಜ್ಞಾನ ಕಾಲೇಜುಗಳು ಈಗಾಗಲೇ ಸೇವೆಯಲ್ಲಿರುವ ಸಿಬ್ಬಂದಿಗಳ ತರಬೇತಿಗಾಗಿ ಸ್ಥಳವನ್ನು ಒದಗಿಸಿತು. ಅವರು ತಮ್ಮ ಪದವೀಧರರು ವಿಶೇಷ ಸ್ಥಾನವನ್ನು ಪಡೆಯುವಂತೆ ಅವರಿಗೆ ತರಬೇತಿ ನೀಡಿ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡಿದರು. ಜನಗಳ ಅಗತ್ಯಗಳನ್ನು ತಿಳಿದುಕೊಳ್ಳಲು ಮತ್ತು ಪುಷ್ಟೀಕರಿಸಿದ ಆಹಾರ ಸಾಮಗ್ರಿಗಳನ್ನು ಒದಗಿಸಲು ಕ್ಷೇತ್ರಮಟ್ಟದಲ್ಲಿ ಮತ್ತು ಪ್ರಯೋಗಾಲಯದಲ್ಲಿ ಪ್ರಯೋಗಗಳನ್ನು ನಡೆಸಿದರು.

ಈ ಕಾರ್ಯಕ್ರಮದ ಜೊತೆಗೆ, ಇತರ ಅನೇಕ ಪೌಷ್ಟಿಕತೆ ಮತ್ತು ಆರೋಗ್ಯ ಸಂಬಂಧಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತಲ್ಲದೆ ಇವುಗಳಲ್ಲಿ ಗೃಹ ವಿಜ್ಞಾನ ಸಂಸ್ಥೆಗಳು ಮತ್ತು ಗೃಹ ವಿಜ್ಞಾನಿಗಳು ಪ್ರಶಿಕ್ಷಣಾರ್ಥಿ (Trainee) ಕಾರ್ಯಪಾಲಕರು ಮತ್ತು ತಜ್ಞರುಗಳು ಮಹತ್ವಪೂರ್ಣ ಪಾತ್ರಗಳನ್ನು ವಹಿಸಿದರು. ಈ ಕಾರ್ಯಕ್ರಮಗಳು ಇಂತಿದ್ದವು;

**ಎ) ಪೌಷ್ಟಿಕತೆಯ ಕಾರ್ಯಕ್ರಮಕ್ಕೆ ವಿಸ್ತೃತ ನೆರವು (Expanded Aid to Nutrition Programme, ENP):**

ಒರಿಸ್ಸಾದಂತಹ (ಈಗಿನ ಒಡಿಶಾ) ನಿರ್ದಿಷ್ಟ ಪ್ರದೇಶಗಳಲ್ಲಿ ಈ ಕಾರ್ಯಕ್ರಮವನ್ನು UNICEF ಮತ್ತು FAD ಸಂಸ್ಥೆಗಳ ಸಹಾಯದಿಂದ ಪ್ರಾರಂಭಿಸಲಾಯಿತು. ಪ್ರಶಿಕ್ಷಿತ ಕಾರ್ಯಕರ್ತರು ಮತ್ತು ಮಹಿಳಾ ಸಮಿತಿಯ ಮೂಲಕ ಸಸ್ಯಾಹಾರ ಹಾಗೂ ಮಾಂಸಾಹಾರ ಮೂಲದ ಪ್ರೋಟೀನ್‌ಗಳನ್ನು ಒಳಗೊಂಡ ಪೌಷ್ಟಿಕ ಆಹಾರಗಳನ್ನು ಗರ್ಭಿಣಿ ಹಾಗೂ ಹಾಲೂಡಿಸುವ ತಾಯಂದಿರು ಮತ್ತು ಐದು ವರ್ಷದ ಕೆಳಗಿರುವ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಉದ್ದೇಶವನ್ನು ಈ ಕಾರ್ಯಕ್ರಮ ಹೊಂದಿತ್ತು. ANP ಕಾರ್ಯಕ್ರಮದಲ್ಲಿ ಇದ್ದಂತೆಯೇ ಈ ಕಾರ್ಯಕ್ರಮದಲ್ಲಿಯೂ ಸಹ ಪೌಷ್ಟಿಕತೆ ಗ್ರಾಮೀಣ ಗೃಹ ಆರ್ಥಿಕತೆ ಮತ್ತು ಶಿಶು ವಿಕಾಸಗಳಲ್ಲಿ ಶ್ರೇಷ್ಠ ಕಾರ್ಯಕ್ರಮಗಳನ್ನು ನೀಡುತ್ತಿರುವ ಗೃಹ ವಿಜ್ಞಾನ ಕಾಲೇಜುಗಳು ಭಾಗಿಯಾಗಿದ್ದವು. ಸೂಕ್ತ ಅರ್ಹತೆಯಿರುವವರ ಮಾಹಿತಿಯನ್ನು ಸಂರಕ್ಷಿಸಿ ವೃತ್ತಿಪರವಾದ ಮಾರ್ಗದರ್ಶನ ನೀಡುವ ಬ್ಯೂರೋವಿನ ಪಾತ್ರ ವಹಿಸಬೇಕೆಂದು ಗೃಹ ವಿಜ್ಞಾನ ಸಂಘವನ್ನು ಕೋರಿಕೊಳ್ಳಲಾಯಿತು.

**ಬಿ) ವಿಟಮಿನ್ ಎ ರೋಗ ನಿರೋಧಕ ಕಾರ್ಯಕ್ರಮ:** ಅಂಧತ್ವ ಮತ್ತು ಇತರ ಕಣ್ಣಿನ ರೋಗಗಳನ್ನು ತಡೆಗಟ್ಟಲು, ಕಡಿಮೆ ಮಾಡಲು ಮತ್ತು ಕೊನೆಯದಾಗಿ ನಿವಾರಿಸಲು 1969ರಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸಮುದಾಯದ ಶೇಕಡಾ 90ರಷ್ಟು ಫಲಾನುಭವಿಗಳು ಈ ಕಾರ್ಯಕ್ರಮವನ್ನು ಅಂಗೀಕರಿಸಿದರು ಹಾಗೂ ಇದು ಪೌಷ್ಟಿಕತೆ ತಜ್ಞರಿಗೆ ಮತ್ತು ವಿಸ್ತರಣಾ ಪದವೀಧರರಿಗೆ ಪಾಲ್ಗೊಳ್ಳಲು ಉತ್ತಮ ಅವಕಾಶ ಒದಗಿಸಿತು.

**ಸಿ) ರಕ್ತಹೀನತೆ ನಿರೋಧಕ ಕಾರ್ಯಕ್ರಮ:** ಇದೂ ಸಹ 1969ರಲ್ಲಿ ಪೌಷ್ಟಿಕತೆಯ ಕೊರತೆಯಿಂದಾಗುವ ರಕ್ತಹೀನತೆಯನ್ನು ತಡೆಗಟ್ಟಲು, ಕಡಿಮೆಗೊಳಿಸಲು ಮತ್ತು ನಿವಾರಿಸಲು ಪ್ರಾರಂಭಗೊಂಡಿತು.

**ಡಿ) ವಿಶೇಷ/ಪೂರಕ ಪೌಷ್ಟಿಕತೆ ಕಾರ್ಯಕ್ರಮ:** ಇದನ್ನು ಸಹ 1969ರಲ್ಲಿ ಪ್ರಾರಂಭಿಸಲಾಯಿತು. ಗುಡ್ಡಗಾಡು ಪ್ರದೇಶ, ಕೊಳಚೆ ಪ್ರದೇಶ ಮತ್ತು ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿನ ಶಿಶುಗಳು, ನಡೆದಾಡಲು ಆರಂಭಿಸಿರುವ ಮಕ್ಕಳು, ನರ್ಸರಿ ಮಕ್ಕಳು, ಗರ್ಭಿಣಿ ಹಾಗೂ ಹಾಲೂಡಿಸುವ ತಾಯಂದಿರು ಇತ್ಯಾದಿ ದೇಶದಲ್ಲಿನ ಅತಿ ಅಸುರಕ್ಷಿತ ಮತ್ತು ಅನನುಕೂಲಿತ ಗುಂಪುಗಳ ಅವಶ್ಯಕತೆಗಳನ್ನು ಇದು ಪೂರೈಸಿತು.

**ಸಿ) ಕೆಲಸದ ಪ್ರತಿಫಲವಾಗಿ ಆಹಾರ ಕಾರ್ಯಕ್ರಮ:** ಇಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (National Rural

Digitised by Bharatavani, CIIL

Employment Programme-NREP) ಎಂದು ಕರೆಯಲ್ಪಡುವ ಈ ಕಾರ್ಯಕ್ರಮ 1974ರಲ್ಲಿ ಪ್ರಾರಂಭವಾಗಿ, NREP ಯೋಜನೆಗಳಲ್ಲಿ ಕೆಲಸ ಮಾಡುವ ಶ್ರಮಿಕರಿಗೆ (ಸಾಮಾನ್ಯವಾಗಿ ಜಮೀನಿಲ್ಲದ ಶ್ರಮಿಕರು ಮತ್ತು ಅಂಚಿನಲ್ಲಿರುವ ರೈತರು) ಆಹಾರ ಧಾನ್ಯಗಳನ್ನು ಕೂಲಿಯ ಒಂದು ಭಾಗವಾಗಿ ವಿತರಿಸಲಾಯಿತು. ಈ ಕಾರ್ಯಕ್ರಮವು ನಿರ್ದಿಷ್ಟವಾಗಿ ಮಹಿಳೆಯರಿಗಾಗಿಯೇ ಇರಲಿಲ್ಲವಾದರೂ ಮಹಿಳೆ ಶ್ರಮಿಕರನ್ನೂ ಈ ಕಾರ್ಯಕ್ರಮದಡಿಯಲ್ಲಿ ತರಲಾಯಿತು. ಈ ಕಾರ್ಯಕ್ರಮ ಕೃಷಿಕಾರ್ಯವಿರದ 2 1/2 ಯಿಂದ 4 ತಿಂಗಳು ಕಾಲ ಮಾತ್ರ ನಡೆಯುತ್ತದಾದ್ದರಿಂದ ಗೃಹವಿಜ್ಞಾನಿಗಳಿಗೆ ಇದರಿಂದ ಉದ್ಯೋಗ ಲಭ್ಯತೆ ನಗಣ್ಯ. ಆದಾಗ್ಯೂ, ಬರೋಡಾದ ಎಂ.ಎಸ್. ವಿಶ್ವವಿದ್ಯಾನಿಲಯದ ಗೃಹ ವಿಜ್ಞಾನ ಬೋಧಕ ಸಿಬ್ಬಂದಿಯನ್ನು UNICEF ಮತ್ತು ಭಾರತ ಸರ್ಕಾರವು ಕ್ಷೇತ್ರಾಭಿವೃದ್ಧಿಯ ಸಾಮಾಜಿಕ ಸಂಭಾರ ಕಾರ್ಯಕ್ರಮ (Food for Work-FFW) ದಲ್ಲಿ ಸಹಭಾಗಿಗಳಾಗಿದ್ದ ಒಂಬತ್ತು ಸಂಸ್ಥೆಗಳಲ್ಲಿ ಒಂದಾಗಿ ಆಯ್ಕೆ ಮಾಡಿದ್ದವು. ಇದರಲ್ಲಿ ಕೆಲಸಕ್ಕಾಗಿ ಆಹಾರ ಕಾರ್ಯಕ್ರಮ(FFW) ಸಹ ಸೇರಿತ್ತು.

**ಸಮಗ್ರ ಶಿಶು ವಿಕಾಸ ಯೋಜನೆ:**

ಅಸುರಕ್ಷಿತ ತಾಯಂದಿರು ಹಾಗೂ ಮಕ್ಕಳಲ್ಲಿನ ರೋಗಗ್ರಸ್ತತೆ ಮತ್ತು ಅಪೌಷ್ಟಿಕತೆಗಳನ್ನು ತಡೆಯಲು, ಕಡಿಮೆಗೊಳಿಸಲು ಮತ್ತು ನಿವಾರಿಸಲು 1974ರಲ್ಲಿ ಸಮಗ್ರ ಶಿಶು ವಿಕಾಸ ಯೋಜನೆಯನ್ನು ಪ್ರಾರಂಭಿಸಲಾಯಿತು. ನಂತರ ಈ ಕಾರ್ಯಕ್ರಮ ಮಗುವಿನ ಹೆಚ್ಚಿದ ಮಾನಸಿಕ, ಸಂವೇಗಾತ್ಮಕ ಮತ್ತು ಸಾಮಾಜಿಕ ವಿಕಾಸಕ್ಕಾಗಿ ಅಡಿಪಾಯವನ್ನು ಹಾಕುವತ್ತ ಲಕ್ಷ್ಯವನ್ನಿಟ್ಟಿತು.

ಆಹಾರ ಮತ್ತು ಕೃಷಿ ಮಂತ್ರಾಲಯದ ಸಹಯೋಗದೊಂದಿಗೆ ಮಾನವ ಸಂಪನ್ಮೂಲ ವಿಕಾಸ ಮಂತ್ರಾಲಯ, ಸಮಾಜ ಕಲ್ಯಾಣ ಮಂತ್ರಾಲಯ, ಗೃಹ ನಿರ್ಮಾಣ ಮಂತ್ರಾಲಯ(ಕುಡಿಯುವ ನೀರಿನ ಸರಬರಾಜಿಗಾಗಿ) ಮತ್ತು ವಿವಿಧ ಮಹಿಳಾ ಮತ್ತು ಶಿಶು ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯೋನ್ಮುಖವಾಗಿರುವ ಸ್ವಯಂ ಸೇವಕ ನಿಯೋಗಗಳು ಅನುಷ್ಠಾನ ನಿಯೋಗಗಳಾಗಿದ್ದವು.

ಅಂತರ್ನಿರ್ಮಿತ ಪೌಷಿಕತೆ, ಆರೋಗ್ಯ ಶಿಕ್ಷಣ ಘಟಕವನ್ನು ಹೊಂದಿರುವ ಏಕಮಾತ್ರ ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಆದ್ದರಿಂದ ಗೃಹ ವಿಜ್ಞಾನದ ಮೂರು ವಿಭಾಗಗಳಾದ ಶಿಶು ವಿಕಾಸ, ಆಹಾರ ಮತ್ತು ಪೌಷ್ಟಿಕತೆ ಹಾಗೂ ಗೃಹ ವಿಜ್ಞಾನ ಶಿಕ್ಷಣ ಮತ್ತು ವಿಸ್ತರಣೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿವೆ.

ಈ ಮೂರು ವಿಭಾಗಗಳ ಪದವೀಧರರು ಶಿಶು ವಿಕಾಸ ಪ್ರಾಯೋಜನಾ ಅಧಿಕಾರಿಗಳಾಗಿ ಹಾಗೂ ನಿರೀಕ್ಷಕರಾಗಿ ಕೆಲಸ ಮಾಡಬಹುದಾಗಿದೆ. ಬಾಲಸೇವಿಕೆಯರು ಮತ್ತು ಅಂಗನವಾಡಿ ಕಾರ್ಯಕರ್ತರನ್ನು ತರಬೇತಿಗೊಳಿಸುವಲ್ಲಿ ಶಿಶು ವಿಕಾಸ ವಿಭಾಗವು ಸಹಭಾಗಿಯಾಗಿದೆ.

ಈ ಮೂರು ವಿಭಾಗಗಳು ಶೈಕ್ಷಣಿಕ ಕಿಟ್‌ಗಳನ್ನು ಸಿದ್ಧಪಡಿಸುವಲ್ಲಿ ಹಾಗೆಯೇ ಯೋಜನೆಯ ಉಸ್ತುವಾರಿ ಮತ್ತು ಮೌಲ್ಯಮಾಪನದಲ್ಲಿ ಸಹ ಪಾಲ್ಗೊಂಡಿವೆ.

**ಮಧ್ಯಾಹ್ನ ಊಟದ ಕಾರ್ಯಕ್ರಮ:**

ಆಗಾಗ್ಗೆ ಶಾಲೆಗೆ ಖಾಲಿ ಹೊಟ್ಟೆಯಲ್ಲಿ ಬರುವ ಶಾಲಾ ಮಕ್ಕಳ ಆಹಾರಕ್ರಮಕ್ಕೆ ಪೂರಕವಾಗಿಸುವ ಉದ್ದೇಶವನ್ನಿಟ್ಟುಕೊಂಡು 1980ರಲ್ಲಿ ಮಧ್ಯಾಹ್ನ ಊಟದ ಕಾರ್ಯಕ್ರಮವನ್ನು (Mid Day-Meal Programme-MDMP) ಪ್ರಾರಂಭಿಸಲಾಯಿತು. ಅಲ್ಲದೇ, ಈ ಕಾರ್ಯಕ್ರಮ ನಿಯಮಿತ ತರಗತಿಯ ಹಾಜರಿಗೆ ಪ್ರೋತ್ಸಾಹ, ಶಾಲೆ ಬಿಟ್ಟುಹೋಗುವಿಕೆಯನ್ನು ಕಡಿಮೆಗೊಳಿಸುವಿಕೆ ಮತ್ತು ಶೈಕ್ಷಣಿಕ ಸಾಧನೆಯ ಸುಧಾರಣೆ ಇವುಗಳನ್ನು ಸಹ ಗುರಿಯಾಗಿಟ್ಟುಕೊಂಡಿತು.

ಇತ್ತೀಚೆಗೆ ಶಾಲಾ ಮಕ್ಕಳ ಮಾನವಮಾಪನ ಆಧಾರಿತ ಪೌಷ್ಟಿಕತೆಯ ಸ್ಥಿತಿಗತಿಗಳ ಅಧ್ಯಯನ ಮತ್ತು ಸುಧಾರಣೆಗಳನ್ನು ಕೈಗೊಳ್ಳುವ ಹೊಸ ಉದ್ದೇಶವನ್ನು ಸೇರಿಸಲಾಗಿದೆ. ಈ ಸಂದರ್ಭದಲ್ಲಿ ಗೃಹ ವಿಜ್ಞಾನಿಗಳು ಈ ಸ್ಥಿತಿಗತಿಗಳನ್ನು ದಾಖಲಿಸಲು ಸುಲಭ ಮಾರ್ಗವನ್ನು ರೂಪಿಸಿ ಶಿಕ್ಷಕರಿಗೆ ಈ ನಿಟ್ಟಿನಲ್ಲಿ ತರಬೇತಿಯನ್ನೂ ಸಹ ಕೊಡುವಲ್ಲಿ ಸಹಭಾಗಿಗಳಾಗಿದ್ದರು.

**ಆದಾಯ ತರುವ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು:**

i) **ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ:**

ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡತನ ನಿರ್ಮೂಲನ ಮತ್ತು ಬಡತನ ರೇಖೆಯ ಕೆಳಗಿರುವ ಕುಟುಂಬಗಳ ಆರ್ಥಿಕ ಸ್ತರವನ್ನು ಹೆಚ್ಚಿಸುವ ಉದ್ದೇಶವನ್ನಿಟ್ಟುಕೊಂಡು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (Intergrated Rural Development Programme-IRDP)ವನ್ನು ಆರಂಭಿಸಲಾಯಿತು. ಆದಾಯ ಉತ್ಪಾದನೆ, ಸಾಲದ ಸೌಲಭ್ಯ, ನಿರಂತರತೆಯ ಆಧಾರವುಳ್ಳ ಆರ್ಥಿಕ ವ್ಯವಹಾರ ಕೌಶಲವನ್ನು ಸಾಧಿಸಲು ಆರ್ಥಿಕವಾಗಿ ಕ್ಷೀಣವಾಗಿರುವ ವರ್ಗಗಳಿಗೆ ನೆರವಾಗಲು ಇತರ ಸಂಭಾರಗಳನ್ನು (Inputs) ನೀಡಲು ಮಾರ್ಗಗಳನ್ನು ಈ ಕಾರ್ಯಕ್ರಮ ತೋರಿಸಿಕೊಟ್ಟಿತು.

ii) **ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ:**

ಈ ಕಾರ್ಯಕ್ರಮವನ್ನು 1984ರಲ್ಲಿ ಆರಂಭಿಸಲಾಗಿದ್ದು ಇದು IRDP ಅಧೀನದಲ್ಲಿ ನಡೆಯುತ್ತಿದೆ. ಸೌಕರ್ಯರಹಿತ ಮಹಿಳೆಯರ ಸ್ಥಾನಮಾನಗಳನ್ನು ಸುಧಾರಿಸುವುದು ಈ ಕಾರ್ಯಕ್ರಮದ ಉದ್ದೇಶ. ಈ ಕಾರ್ಯಕ್ರಮ ಲಾಭದಾಯಕವಾಗಿ ಉದ್ಯೋಗದಲ್ಲಿರುವ ಮಹಿಳೆಯರ ಮಟ್ಟವನ್ನು 1990ರ ವೇಳೆಗೆ 15% ನಿಂದ 25% ವರೆಗೆ ಹೆಚ್ಚಿಸುವ ಭರವಸೆಯನ್ನಿಟ್ಟುಕೊಂಡಿದೆ.

Digitised by Bharatavani, CIIL

ಆದಾಯ ಬರುವ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ತರಬೇತಿ ಆ ಉತ್ಪಾದನೆಗಳಿಗೆ ತಕ್ಕುದಾಗಿ ಮಾರುಕಟ್ಟೆ, ಮಹಿಳೆಯರಿಗೆ ಸುಲಭ ಸಾಲ ಶಿಶುಧಾಮ ಮತ್ತು ದಿನಪಾಲನೆ (day-care) ಕೇಂದ್ರಗಳ ಮೂಲಕ ಬೆಂಬಲ ವ್ಯವಸ್ಥೆಯ ನಿರ್ಮಾಣ, ಅನೇಕ ಮಹಿಳೆಯರು ಕೆಲಸ ಮಾಡಲು ಸೂಕ್ತವಾದ ವಿಶೇಷ ಕಾರ್ಯಸ್ಥಳ, ಮನೆಯ ಬೇಸರಿಕೆ ಚಾಕರಿಕೆಯನ್ನು (drudgery) ಕಡಿಮೆ ಮಾಡಲು ಅಲ್ಪವೆಚ್ಚದ ತಂತ್ರಜ್ಞಾನಗಳ ಲಭ್ಯತೆ ಮತ್ತು IRDP ಕಾರ್ಯಕ್ರಮದ ಸೇವೆಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳುವಂತೆ ಮಹಿಳೆಯರಿಗೆ ಶಿಕ್ಷಣ– ಇವೆಲ್ಲದಕ್ಕೂ ಈ ಕಾರ್ಯಕ್ರಮ ಪ್ರೋತ್ಸಾಹಿಸುತ್ತದೆ. ಪ್ರಸ್ತುತದಲ್ಲಿ ಈ ಕಾರ್ಯಕ್ರಮ 51 ಹಿಂದುಳಿದ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದರೂ ಕಾಲಾನುಕ್ರಮದಲ್ಲಿ ಇದನ್ನು ದೇಶದಾದ್ಯಂತ ಅನುಷ್ಠಾನಕ್ಕೆ ತರಲಾಗುವುದು.

ಗೃಹ ವಿಜ್ಞಾನ ಮತ್ತು ಮೇಲೆ ಹೇಳಿದ ಎರಡು ಕಾರ್ಯಕ್ರಮಗಳ ಫಲಾನುಭವಿಗಳು/ಆಶ್ರಯದಾತರು ಮಹಿಳೆಯರು ಮತ್ತು ಅವರ ಮಕ್ಕಳಾಗಿರುವುದರಿಂದ ಹಾಗೂ ಇವೆರಡರ ಉದ್ದೇಶ ಸುಧಾರಿತ ತಂತ್ರಜ್ಞಾನ ಮತ್ತು ವೈಜ್ಞಾನಿಕ ಆವಿಷ್ಕಾರಗಳನ್ನು ಬಳಸಿ ಜೀವನದ ಮಟ್ಟವನ್ನು ಏರಿಸುವುದು ಮುಖ್ಯ ಗುರಿಯಾಗಿರುವುದರಿಂದ ಗೃಹ ವಿಜ್ಞಾನದ ವಿಶೇಷ ತಜ್ಞತೆಯ ಕ್ಷೇತ್ರಗಳಿಗೆ ಈ ಕಾರ್ಯಕ್ರಮಗಳಿಗೆ ಕೊಡುಗೆ ನೀಡುವ ಅಪಾರ ಸಾಮರ್ಥ್ಯವಿದೆ.

iii) **ಸ್ವಯಂ–ಉದ್ಯೋಗಕ್ಕಾಗಿ ಗ್ರಾಮೀಣ ಯುವ ಪೀಳಿಗೆ ಪ್ರಶಿಕ್ಷಣ:**

ರಾಷ್ಟ್ರ ಮಟ್ಟದ ಸ್ವಯಂ–ಉದ್ಯೋಗಕ್ಕಾಗಿ ಗ್ರಾಮೀಣ ಯುವ ಜನಾಂಗದ ಪ್ರಶಿಕ್ಷಣ (Training Rural Youth for Self-Employment- TRYSEM) ಕಾರ್ಯಕ್ರಮವನ್ನು ಆಗಸ್ಟ್ 1979ರಲ್ಲಿ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಗ್ರಾಮೀಣ ಯುವಜನಾಂಗವು ಉದ್ಯೋಗವನ್ನು ಹಿಡಿಯುವಂತೆ ಇಲ್ಲವೇ ಸ್ವಯಂ–ಉದ್ಯೋಗ ನಿರತರಾಗುವಂತೆ ಸಮರ್ಥರನ್ನಾಗಿಸಲು ಅವರನ್ನು ಅವಶ್ಯವಾದ ಕೌಶಲಗಳು ಮತ್ತು ತಂತ್ರಗಳಿಂದ ಸಜ್ಜುಗೊಳಿಸುವುದಾಗಿದೆ. TRYSEM ಸಹ IRDP ಯ ಅವಿಭಾಜ್ಯ ಅಂಗವಾಗಿದೆ. ಇದು 18 ರಿಂದ 35 ರ ಉತ್ಪಾದಕ ವಯೋಮಾನದ ಒಳಗಿನ ಪುರುಷ–ಮಹಿಳೆಯಿಬ್ಬರನ್ನೂ ತನ್ನ ವ್ಯಾಪ್ತಿಯಲ್ಲಿ ತರುತ್ತದೆ. ಮನೆಯಲ್ಲಿನ ಆಹಾರ ಸಂಸ್ಕರಣೆ ಮತ್ತು ಸಂರಕ್ಷಣೆಯಿಂದ ಮೊದಲಗೊಂಡು ಪೂರ್ವಸಿದ್ಧ ಆಹಾರ, ಬಾಟಲೀಕರಣ ಇವೇ ಮುಂತಾದುವುಗಳನ್ನು ಒಳಗೊಳ್ಳುವ ದೊಡ್ಡ ಪ್ರಮಾಣದ ಆಹಾರ ತಂತ್ರಜ್ಞಾನ ಮತ್ತು ಆಹಾರ ಸಂಸ್ಕರಣದವರೆಗಿನ ಅಸಾಂಪ್ರದಾಯಿಕ ಹಾಗೂ ಸಾಂಪ್ರದಾಯಿಕ ಕೌಶಲಗಳಲ್ಲಿ ಸ್ವಯಂ–ಉದ್ಯೋಗ ನಿರತರಾಗುವಂತೆ ಪ್ರಶಿಕ್ಷಣವನ್ನು ಈ ಕಾರ್ಯಕ್ರಮದಡಿಯಲ್ಲಿ ನೀಡಲಾಗುತ್ತದೆ. ಇದು ಕೇವಲ ಆಹಾರ ಸಂಬಂಧಿತ ಚಟುವಟಿಕೆಗಳಿಗೆ ಸೀಮಿತಗೊಳ್ಳದೆ ಉಡುಪು, ಮಗ್ಗ/ನೇಯ್ಗೆ, ಗೃಹ ಮತ್ತು ಗ್ರಾಮ ಕೈಗಾರಿಕೆಗಳ ಕ್ಷೇತ್ರಗಳಲ್ಲಿಯೂ ಕಾರ್ಯೋನ್ಮುಖವಾಗಿದೆ. ಹೀಗೆ ಈ ಕಾರ್ಯಕ್ರಮವು ವಿವಿಧ ಕುಶಲತೆಗಳಲ್ಲಿ ತರಬೇತಿ ಹಾಗೂ ಯೋಜನೆ ರೂಪಿಸುವುದು, ಕಾರ್ಯರೂಪಕ್ಕೆ ತರುವುದು, ಅವರ ಉಸ್ತುವಾರಿ, ನಿರೀಕ್ಷಣೆ ಹಾಗೂ ಮೌಲ್ಯಮಾಪನ– ಇವೆಲ್ಲದರಲ್ಲಿ ಗೃಹ ವಿಜ್ಞಾನಿಗಳಿಗೆ ಅಪಾರ ಅವಕಾಶಗಳನ್ನು ಒದಗಿಸಿಕೊಡುತ್ತದೆ.

**ರಾಷ್ಟ್ರೀಯ ತಂತ್ರಜ್ಞಾನ ಅಭಿಯಾನ:**

ರಾಷ್ಟ್ರೀಯ ತಂತ್ರಜ್ಞಾನ ಅಭಿಯಾನ (The National Technology Mission-NTM) ಫೆಬ್ರವರಿ, 1986ರಲ್ಲಿ ಪ್ರಾರಂಭಗೊಂಡಿತು. ಮೊದಲ ಮೂರು ಮುಖ್ಯ ಯೋಜನೆಗಳು ಗೃಹ ನಿರ್ಮಾಣ, ಕುಡಿಯುವ ನೀರು ಮತ್ತು ಸಾಕ್ಷರತೆ–ಇವುಗಳಿಗೆ ಸಂಬಂಧಿಸಿತ್ತು. ಮತ್ತೊಂದು ವಿದ್ಯುತ್ ಮತ್ತು ಎಣ್ಣೆ ಬೀಜಗಳ ನಿರ್ವಹಣೆಗೆ ಕುರಿತದ್ದಾಗಿತ್ತು. ಇವುಗಳಲ್ಲಿ ಬಹುತೇಕ ಯೋಜನೆಗಳ ಪ್ರಸಾರದಲ್ಲಿ ಗೃಹವಿಜ್ಞಾನಿಗಳು ಭಾಗವಹಿಸಬಹುದಾದರೂ ಗೃಹನಿರ್ಮಾಣ, ವಿದ್ಯುಚ್ಛಕ್ತಿ ಮತ್ತು ಕುಡಿಯುವ ನೀರಿನ ನಿರ್ವಹಣೆಗಳಿಗೆ ಇವರು ನೇರವಾಗಿ ಸಂಬಂಧಿಸಿದ್ದಾರೆ.

**ಔದ್ಯೋಗಿಕ ಅಭಿವೃದ್ಧಿ:**

ಗೃಹವಿಜ್ಞಾನದ ಔದ್ಯೋಗಿಕ ಸಾಮರ್ಥ್ಯಗಳು ಬಹುಮುಖವಾದುವು. ಅತಿ ಸಾಂಪ್ರದಾಯಿಕವಾದಂಥ ಶಿಕ್ಷಕ ವೃತ್ತಿಯಿಂದ ಹಿಡಿದು ತಕ್ಷಣದ ಆಹಾರ ಕೇಂದ್ರಗಳು (Fast-food centres) ನಾಜೂಕು ಸಾಮಾನಿನ ಅಂಗಡಿಗಳಂಥ ಅತ್ಯಾಧುನಿಕ ಉದ್ಯೋಗಗಳವರೆಗಿನ ಉದ್ಯೋಗಗಳಿಗೆ ಗೃಹ ವಿಜ್ಞಾನಿಗಳು ಪ್ರವೇಶಿಸಬಹುದು.

ಅಧ್ಯಾಪಕ, ಸಂಶೋಧಕ, ವಿಸ್ತರಣ ಮತ್ತು ಸಮಾಜಕಲ್ಯಾಣ ಕಾರ್ಯಕರ್ತ ಮತ್ತು ಸಂಪರ್ಕ, ಸಾಂಸ್ಥಿಕ ನಿರ್ವಹಣೆ, ವ್ಯಾಪಾರ ಮತ್ತು ಕೈಗಾರಿಕಾ ಗೃಹಗಳಲ್ಲಿ ಕೆಲಸ ಮಾಡುವವರು ಹಾಗೂ ಸ್ವಯಂ ಉದ್ಯೋಗಿಗಳು ಎಂಬೀ ಏಳು ವರ್ಗೀಕೃತ ಉದ್ಯೋಗಗಳ ಜೊತೆಗೆ ಇನ್ನೂ ಅಧಿಕ ಮಾರ್ಗಗಳನ್ನು ಗೃಹ ವಿಜ್ಞಾನಿಗಳು ಅರಸಬೇಕಾಗಿದೆ. ಆದರೂ, ಸದ್ಯದ ಪರಿಸ್ಥಿತಿಯಲ್ಲಿ ಗೃಹ ವಿಜ್ಞಾನಿಗಳಿಗೆ ಶಿಕ್ಷಣ ಮತ್ತು ಪ್ರಶಿಕ್ಷಣ ಒದಗಿಸುವುದರ ಮೂಲಕ ಔದ್ಯೋಗಿಕ ಸಾಮರ್ಥ್ಯವನ್ನು ಬೆಳೆಸಬಹುದಾದ ಕ್ಷೇತ್ರಗಳನ್ನು ಗುರುತಿಸುವ ಅಗತ್ಯವಿದೆ. ಸಂಘಟಿತ ಮತ್ತು ಅಸಂಘಟಿತ– ಇವೆರಡೂ ವಲಯಗಳಲ್ಲಿನ ಕಾರ್ಯಜಗತ್ತಿನಲ್ಲಿ ಉತ್ತಮ ಔದ್ಯೋಗಿಕ ಸ್ಥಾನಮಾನಗಳನ್ನು ಸಾಧಿಸಲು ಈ ಕ್ಷೇತ್ರದ ಸುಧಾರಣೆಗೆ ಕಾರ್ಯೋನ್ಮುಖವಾಗಿರುವ ಗೃಹವಿಜ್ಞಾನಿಗಳು, ವ್ಯಕ್ತಿಗಳು ಮತ್ತು ಸಂಘ ಇನ್ನೂ ಹೆಚ್ಚಿನ ಗಂಭೀರ ಚಿಂತನೆ ನಡೆಸಬೇಕಾಗಿದೆ. ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನೇಮಕಾತಿ ನಡೆಸಲಾಗುವ ರಾಷ್ಟ್ರಮಟ್ಟದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈ ಕ್ಷೇತ್ರವನ್ನು 'ಮಾನ್ಯ' ಮಾಡಿಸಲು ಸಾಕಷ್ಟು ಕೆಲಸ ನಡೆಯಬೇಕಾಗಿದೆ.

ಅಪಾರ ಔದ್ಯೋಗಿಕ ಅಭಿವೃದ್ಧಿ ಮತ್ತು ಮಾರ್ಗದರ್ಶನ ಬ್ಯೂರೋದೊಂದಿಗೆ ಗೃಹ ವಿಜ್ಞಾನಿಗಳು ಕಾರ್ಯಪ್ರವೃತ್ತರಾಗುವ ಅವಶ್ಯಕತೆಯಿದೆ. ಔದ್ಯೋಗಿಕ ಮಾರ್ಗದರ್ಶನ ಮತ್ತು

Digitised by Bharatavani, CIIL

ಸಲಹೆ ನೀಡುತ್ತಿರುವ ರಾಷ್ಟ್ರೀಯ ಅಂಗಗಳು ಹಾಗೂ ಖಾಸಗಿ ನಿಯೋಗಗಳಲ್ಲಿಯೂ ಅವಕಾಶಗಳಿವೆಯೇ ಎಂದು ಅನ್ವೇಷಿಸಬೇಕಾಗಿದೆ. ಭಾರತೀಯ ಗೃಹವಿಜ್ಞಾನಿಗಳ ಸಂಘ ಹಾಗೂ ಇದರ ರಾಜ್ಯ ಶಾಖೆಗಳು ಮತ್ತು ಹಳೆಯ ವಿದ್ಯಾರ್ಥಿ ಸಂಘಗಳು ಔದ್ಯೋಗಿಕ ಮಾಹಿತಿಯನ್ನು ಪ್ರಸಾರ ಮಾಡುವ ಅಗತ್ಯವಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಧನಸಹಾಯ ನಿಯೋಗಗಳಿಗೆ ಗೃಹವಿಜ್ಞಾನ ವಿದ್ಯಾರ್ಥಿಗಳ ಔದ್ಯೋಗಿಕ ಸಹಭಾಗಿತ್ವದ ಬಗ್ಗೆ ಮಾಹಿತಿಯನ್ನು ಒದಗಿಸಲು ಈ ಚಟುವಟಿಕೆ ಆಧಾರವೆಂಬಂತಿದೆ.

**ಗೃಹವಿಜ್ಞಾನದಲ್ಲಿ ಸಂಶೋಧನೆ:**

ಗೃಹವಿಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಮುಖ್ಯವಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳು ಕೈಗೆತ್ತಿಕೊಳ್ಳುತ್ತಾರೆ. ಜೊತೆಗೆ, ಸ್ನಾತಕೋತ್ತರ ಅಧ್ಯಯನವನ್ನು ನಡೆಸುತ್ತಿರುವ ಸಂಸ್ಥೆಗಳು ಆಹಾರ ಮತ್ತು ಪೌಷ್ಟಿಕತೆ ಶಿಶುವಿಕಾಸ ಮತ್ತು ಗ್ರಾಮೀಣ ಸಮುದಾಯ ವಿಸ್ತರಣೆಗಳ ತಮ್ಮ ಕ್ಷೇತ್ರಗಳಲ್ಲಿ, ವಿಭಾಗಗಳಲ್ಲಿ ಸಂಶೋಧನೆ ನಡೆಸುತ್ತಿವೆ. ಕುಟುಂಬ ಹಾಗೂ ಸಮುದಾಯ ಜೀವನದ ತೀವ್ರ ಸಮಸ್ಯೆಗಳು–ಉದಾಹರಣೆಗೆ, ಅಸುರಕ್ಷಿತ ಸಮೂಹಗಳ ಪೌಷ್ಟಿಕತೆಯ ಸ್ಥಾನಮಾನ ಮತ್ತು ಸುಧಾರಣೆಗಾಗಿ ಕ್ರಮಗಳು, ಬದಲಿ ಆಹಾರಗಳ ಅಭಿವೃದ್ಧಿಯ ಸಾಧ್ಯತೆಯ ಆವಿಷ್ಕಾರ ಮತ್ತು ಅವುಗಳ ಸ್ವೀಕೃತಿಗಾಗಿ ಅವನ್ನು ಜನಪ್ರಿಯಗೊಳಿಸುವಿಕೆ; ಗ್ರಾಮೀಣ ಸಮುದಾಯ ಜೀವನದ ಅಧ್ಯಯನ ಮತ್ತು ಜೀವನಮಟ್ಟದ ಸುಧಾರಣೆಗಾಗಿ ಕ್ರಮಗಳು; ಮತ್ತು ಹೊಸತಾಗಿ ಅಭಿವೃದ್ಧಿಗೊಳಿಸಿದ ಕೃಷಿ ಉತ್ಪನ್ನಗಳ ಪೌಷ್ಟಿಕತಾ ಮೌಲ್ಯಗಳ ವಿಶ್ಲೇಷಣೆ ಇವು ಸಂಶೋಧನೆಗೆ ಒಳಗಾಗಬೇಕಾದ ವಿಷಯಗಳಾಗಿವೆ.

ಕೈಗೊಂಡ ಸಂಶೋಧನಾ ಅಧ್ಯಯನಗಳ ಪ್ರಕಾರ ಸ್ಪಷ್ಟವಾಗಿರುವಂತೆ ಗೃಹವಿಜ್ಞಾನವು ದೇಶದ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿದೆ. ಗೃಹವಿಜ್ಞಾನಿಗಳಿಗೆ ಉದ್ಯೋಗದ ಅವಕಾಶಗಳು ನಿರಂತರವಾಗಿ ಹೆಚ್ಚುತ್ತಿವೆ. ಶಿಕ್ಷಕರನ್ನಾಗಿ, ಆಸ್ಪತ್ರೆಗಳಲ್ಲಿ ಪೌಷ್ಟಿಕತಾ ತಜ್ಞರಾಗಿ, ರಾಷ್ಟ್ರೀಯ ವಿಸ್ತರಣಾ ಮತ್ತು ಸಮುದಾಯ ಅಭಿವೃದ್ಧಿ ಸಂಘಗಳಲ್ಲಿ ಕ್ಷೇತ್ರ ಕಾರ್ಯಕರ್ತರಾಗಿ; ICMR, ICAR, IARI, CFTRI ಮತ್ತು ಇತರ ಇದೇ ತೆರನ ಸಂಶೋಧನಾ ಸಂಸ್ಥೆಗಳಲ್ಲಿ ಸಂಶೋಧಕರಾಗಿ, ICCW, CSWB ಮತ್ತು ಗೃಹ ಬಳಕೆಯ ಸಾಧನಗಳ ತಯಾರಕ ಸಂಸ್ಥೆಗಳಲ್ಲಿ ಸಲಹೆಗಾರರಾಗಿ ಗೃಹವಿಜ್ಞಾನಿಗಳಿಗೆ ಅವಕಾಶವನ್ನು ನೀಡಲಾಗುತ್ತಿದೆ.

ಗೃಹವಿಜ್ಞಾನವು ಸಾಮಾಜಿಕ ಮತ್ತು ಪ್ರಾಕೃತಿಕ ವಿಜ್ಞಾನಗಳ ಸಂಯೋಜನೆ/ಸಮನ್ವಯವಾಗಿರುವುದರಿಂದ ಅಂತರಾಷ್ಟ್ರೀಯ ಸಹಕಾರದೊಂದಿಗೆ ಇದನ್ನು ತಾರ್ಕಿಕವಾಗಿ ಅಳವಡಿಸಿಕೊಳ್ಳಲು ಸುಲಭವಾಗಿದೆ. ಗೃಹವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ಮಹತ್ವವುಳ್ಳ ಸಂಶೋಧನೆಯನ್ನು ಪ್ರೋತ್ಸಾಹಿಸಬಹುದು, ಪ್ರೋತ್ಸಾಹಿಸಲೇಬೇಕು. ಉದಾಹರಣೆಗೆ, ಸಾಮಾಜಿಕ ಮತ್ತು ವೈದ್ಯಕೀಯ ವಿಜ್ಞಾನಗಳ ಸಹಯೋಗದೊಂದಿಗೆ ಮಗುವಿನ ಶಾರೀರಿಕ ಮತ್ತು ಸಂಜ್ಞಾನಾತ್ಮಕ ವಿಕಾಸದ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ಕೈಗೊಳ್ಳಬೇಕು. ಈ ಸಂಶೋಧನೆಗಳನ್ನು ಕೃಷಿ ವಿಜ್ಞಾನಗಳಲ್ಲಿನ ಸಂಶೋಧನೆಯೊಂದಿಗೆ ಸಮನ್ವಯಗೊಳಿಸಿದ ಪಕ್ವದಲ್ಲಿ ಪೌಷ್ಟಿಕತೆ ಮತ್ತು ಆರೋಗ್ಯದ ಹಲವು ಕ್ಷೇತ್ರಗಳಲ್ಲಿನ ಸಂಶೋಧನೆಗಳು ಬಹಳ ಮಹತ್ವಪೂರ್ಣವಾಗಿ ಪರಿಣಮಿಸುತ್ತವೆ. ಯೋಜಿತ–ಪೋಷಕತ್ವ ಮತ್ತು ಕುಟುಂಬ ಯೋಜನೆ ಕ್ಷೇತ್ರದಲ್ಲಿ ಅಧ್ಯಯನಗಳು ಮತ್ತು ಸಂಶೋಧನೆಗಳಿಗೆ ವೈದ್ಯಕೀಯ ತಜ್ಞರ ಮತ್ತು ಸಾಮಾಜಿಕ ವಿಜ್ಞಾನಿಗಳ ಸಹಕಾರದ ಅವಶ್ಯಕತೆ ಇದೆ. ಹಾಗೆಯೇ ಸಮಯ, ಶಕ್ತಿ ಮತ್ತು ಹಲವು ಗೃಹಗಳಲ್ಲಿ ಮತ್ತು ಜಮೀನುಗಳಲ್ಲಿ ಬಳಸುವ ಉಪಕರಣಗಳ ನಿರ್ವಹಣೆಯ ಅಧ್ಯಯನವು ಬಹಳ ಅಗತ್ಯವಿರುವ ಸಂಶೋಧನೆಗೆ ಅನುವು ಮಾಡಿಕೊಡುವುದು ಹಾಗೂ ಇದಕ್ಕೆ ತಂತ್ರಜ್ಞರು, ಭೌತಶಾಸ್ತ್ರಜ್ಞರು ಮತ್ತು ಗೃಹವಿಜ್ಞಾನಿಗಳ ಸಹಕಾರವೂ ಇರಬೇಕಾಗುತ್ತದೆ.

**ಮೂಲ: ಮೃದುಲಾ**
**ಅನು: ಡಾ.ಚಂದ್ರಶೇಖರ್ ಬಿ.ಎಂ.**

## ಗ್ರಾಮೀಣ ಸಂಸ್ಥೆಗಳು

ಚರಿತ್ರೆಯ ಪ್ರಾರಂಭದಿಂದ ಶಿಕ್ಷಣವೆಂಬುದು ಜ್ಞಾನ ಮತ್ತು ಅರಿವನ್ನು ಹಸ್ತಾಂತರಿಸುವ ಮತ್ತು ಮನುಕುಲದ ಪ್ರತಿಯೊಂದು ಅಂಶದ ಬೆಳವಣಿಗೆಯನ್ನು ಉನ್ನತಸ್ತರಕ್ಕೆ ಕೊಂಡೊಯ್ಯುವ ಕಾರ್ಯವಿಧಾನವಾಗಿದೆ. ಶಿಕ್ಷಣವೆನ್ನುವುದು ಪರಿವರ್ತನೆಯ ಕಾರ್ಯವಿಧಾನವಾಗಿದೆ. ಅದು ಮನುಕುಲವು ಹೆಚ್ಚು ನಾಗರಿಕವಾಗುವುದನ್ನು ಸಾಧ್ಯವಾಗಿಸುತ್ತದೆ.

ಪ್ರಾಚೀನ ಕಾಲದಲ್ಲಿ ಅತ್ಯುತ್ತಮ ಜ್ಞಾನ ಮತ್ತು ತಿಳಿವಳಿಕೆಯನ್ನುಳ್ಳ ಗುರುಗಳನ್ನು ನಾಗರಿಕತೆಯನ್ನು ಎತ್ತಿ ಹಿಡಿಯುವವರು ಎಂದು ಗೌರವಿಸಲಾಗುತ್ತಿತ್ತು. ಗುರುಕುಲ ವ್ಯವಸ್ಥೆಯ ಪ್ರಾಚೀನ ಭಾರತೀಯ ಸಂಪ್ರದಾಯವು ಗುರುಗಳು ಮತ್ತು ಶಿಷ್ಯರ ನಡುವೆ ಆಳವಾದ ವೈಯಕ್ತಿಕ ಸಂಬಂಧಕ್ಕೆ ಮಹತ್ವವನ್ನು ನೀಡುತ್ತಿತ್ತು. ವಿದ್ಯಾರ್ಥಿಗಳು ತಮ್ಮ ಗುರುಗಳೊಂದಿಗೆ ಮುಕ್ತವಾಗಿ ವ್ಯವಹರಿಸುತ್ತಿದ್ದರು. ಅವರಿಗೆ ಗುರುಗಳು ನಿಜವಾದ ಅರ್ಥದಲ್ಲಿ ಸ್ನೇಹಿತರಾಗಿ, ದಾರ್ಶನಿಕರಾಗಿ ಮತ್ತು ಮಾರ್ಗದರ್ಶಕರಾಗಿ ಇರುತ್ತಿದ್ದರು. ಭಾರತದಲ್ಲಿ ಬ್ರಾಹ್ಮಣ ಮತ್ತು ಬೌದ್ಧ ಶಿಕ್ಷಣ ವ್ಯವಸ್ಥೆಗಳು ವ್ಯವಸ್ಥಿತ ಕಲಿಕಾ ಕೇಂದ್ರಗಳಾಗಿ ರೂಪುಗೊಂಡವು. ತಕ್ಷಶಿಲಾ, ನಲಂದ, ವಲಭಿ, ಕಾಶಿ, ಕಾಶ್ಮೀರ ಇತ್ಯಾದಿಗಳು ಆ ಶ್ರೇಷ್ಠ ಸಂಪ್ರದಾಯಗಳ ಮಾದರಿಗಳಾಗಿವೆ.

ಸ್ವಾತಂತ್ರ್ಯಪೂರ್ವ ಘಟ್ಟದಲ್ಲಿ ಈ ಅಗಾಧ ದೇಶದ ಆಡಳಿತವನ್ನು ತಾವೇ ಸ್ವತಃ ನಡೆಸುವುದು ಬ್ರಿಟಿಷರಿಗೆ ಕಷ್ಟವಾಗುತ್ತಿತ್ತು. ಬ್ರಿಟಿಷ್ ಸರಕಾರವು ಭಾರತೀಯರಿಗೆ ಪಾಶ್ಚಾತ್ಯ ಶಿಕ್ಷಣವನ್ನು ನೀಡುವ ಮೂಲಕ ಭಾರತದ ಅತ್ಯುತ್ಕೃಷ್ಟ ಬೌದ್ಧಿಕ ಪ್ರಜ್ಞೆ ಮತ್ತು ಮಾನವ ಶಕ್ತಿಯನ್ನು ಈ ಅಗಾಧ ದೇಶದ ಆಡಳಿತಕ್ಕಾಗಿ ಬಳಸಿಕೊಂಡಿತು.

Digitised by Bharatavani, CIIL

ಈ ಪರಿಯಾಗಿ ನೀಡಲಾದ ಶಿಕ್ಷಣವು ಬ್ರಿಟಿಷರ ಅಗತ್ಯಗಳನ್ನು ಪೂರೈಸುವ ಅಧಿಕಾರಶಾಹಿಯನ್ನು ಸೃಷ್ಟಿಸುವಲ್ಲಿ ತನ್ನ ಗಮನವನ್ನು ಕೇಂದ್ರೀಕರಿಸಿತು.

ಇಂಗ್ಲಿಷ್ ಶಿಕ್ಷಣಕ್ಕೆ ಬೇಡಿಕೆ ಹೆಚ್ಚಾಗಲಾರಂಭಿಸಿತು. ಸಾರ್ವಜನಿಕ ಉದ್ಯೋಗದಲ್ಲಿ ಇಂಗ್ಲಿಷ್ ತಿಳಿದ ಭಾರತೀಯರಿಗೆ ಆದ್ಯತೆ ನೀಡುವ 1844ರ ಸರಕಾರದ ಘೋಷಣೆಯು ಇಂಗ್ಲಿಷ್ ಶಿಕ್ಷಣವನ್ನು ಹೆಚ್ಚು ಜನಪ್ರಿಯಗೊಳಿಸಿತು. ಪ್ರಾಶ್ಚಾತ್ಯ ಸಂಸ್ಕೃತಿಗಳ ಪ್ರವೇಶ, ಅದರಲ್ಲಿಯೂ ವಿಶೇಷವಾಗಿ ಮೆಕಾಲೆಯ ಶಿಕ್ಷಣದ ಪರಿಕಲ್ಪನೆ ಶಿಕ್ಷಣ ವ್ಯವಸ್ಥೆಯ ಮೇಲೆ ಹೆಚ್ಚಿನ ಪರಿಣಾಮ ಬೀರಿತು ಮತ್ತು ಭಾರತೀಯರ ದೃಷ್ಟಿಕೋನವನ್ನು ರೂಪಿಸುವ ಹಂತವನ್ನೂ ತಲುಪಿತು. ಮಹಾತ್ಮಾ ಗಾಂಧೀಜಿಯವರು ಈ ನೆಲಕ್ಕೆ ಮತ್ತು ಇಲ್ಲಿಯ ಜನರ ಬದುಕಿಗೆ ಸೂಕ್ತವೆನಿಸುವ 'ನಯಿ ತಾಲೀಮ್'(ಹೊಸ ಶಿಕ್ಷಣ) ಎಂದು ತಾವು ಹೆಸರಿಸಿದ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಿದರಾದರೂ ಅದು ವ್ಯಾಪಕವಾಗಿ ಸ್ವೀಕೃತವಾಗಲಿಲ್ಲ. ನಯಿ ತಾಲೀಮ್ ಅಥವಾ ಮೂಲಶಿಕ್ಷಣವು ಮೂಲ-ನರ್ಸರಿ ಪೂರ್ವದಿಂದ ಮಾಧ್ಯಮಿಕೋತ್ತರ ಹಂತದವರೆಗೆ ಇದ್ದು, ಆನಂತರ ಸಾಮಾಜಿಕ ಅಥವಾ ವಯಸ್ಕ ಶಿಕ್ಷಣ ಮತ್ತು ಉನ್ನತ ಶಿಕ್ಷಣವನ್ನೂ ಹೊಂದಿರುತ್ತದೆ. ಇದರ ಗುರಿ ಬದುಕಿನುದ್ದಕ್ಕೂ, ಬದುಕಿಗಾಗಿ ಮತ್ತು ಬದುಕಿನ ಶಿಕ್ಷಣವನ್ನು ನೀಡುವುದಾಗಿದೆ.

ಗಾಂಧೀಜಿಯವರ ತತ್ವಗಳಾದ ಗ್ರಾಮೀಣಾಭಿವೃದ್ಧಿ, ಸ್ವಯಂ-ಪೋಷಿತ ಗ್ರಾಮೀಣ ಸಮುದಾಯ ಮತ್ತು ಗ್ರಾಮ ಸ್ವರಾಜ್ಯದ ಪರಿಕಲ್ಪನೆ- ಇವು ಈ ಶಿಕ್ಷಣ ವ್ಯವಸ್ಥೆಯ ಮುಖ್ಯ ಆಸಕ್ತಿಗಳಾಗಿದ್ದವು.

ದೇಶ ಸ್ವತಂತ್ರವಾದ ಬಳಿಕ ಭಾರತ ಸರಕಾರಕ್ಕೆ ದೇಶದಾದ್ಯಂತ ಹರಡಿಕೊಂಡಿರುವ ಮಿಲಿಯಗಟ್ಟಳೆ ಗ್ರಾಮೀಣ ಸಮುದಾಯದ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ವಿಶಿಷ್ಟ ಸಂಸ್ಥೆಗಳ ಅಗತ್ಯವಿದೆ ಎಂಬ ಅರಿವು ಮೂಡಿತು. ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡಿದ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ವ್ಯವಸ್ಥೆಯು ಗ್ರಾಮೀಣ ವಾಸ್ತವಿಕತೆಯಿಂದ ತನ್ನನ್ನು ದೂರವಿಟ್ಟುಕೊಂಡಿತು. ಇದಕ್ಕೆ ಪ್ರತಿಕ್ರಿಯಾತ್ಮಕವಾಗಿ ಉನ್ನತ ಶಿಕ್ಷಣದ ಹಂತದಲ್ಲಿ ಗಾಂಧೀಜಿಯವರ ಮೂಲಶಿಕ್ಷಣದ ಪ್ರಯೋಗದ ಫಲವಾಗಿ ಗ್ರಾಮೀಣ ಸಂಸ್ಥೆಗಳನ್ನು ಕಲ್ಪಿಸಿಕೊಳ್ಳಲಾಯಿತು. ಗ್ರಾಮೀಣ ಸಂಸ್ಥೆಯ ಪರಿಕಲ್ಪನೆಯ ಉಗಮ ತಡವಾಗಿಯಾದರೂ ನಮ್ಮ ಗ್ರಾಮೀಣ ಜನರ ಶೈಕ್ಷಣಿಕ ಅಗತ್ಯಗಳ ಕುರಿತಾಗಿ ಶಿಕ್ಷಣತಜ್ಞರಲ್ಲಿ ಪ್ರಜ್ಞೆಯನ್ನು ಬೆಳೆಸಿದೆ.

ಗ್ರಾಮೀಣ ಪ್ರತಿಭಾವಂತರನ್ನು ರೂಪಿಸಲು ಮತ್ತು ಗ್ರಾಮೀಣ ವಾಸ್ತವತೆಗಳನ್ನು ಅರ್ಥ ಮಾಡಿಕೊಳ್ಳಬಲ್ಲ ಸಿಬ್ಬಂದಿಗಳನ್ನು ಬೆಳೆಸುವುದಕ್ಕಾಗಿ ಉನ್ನತ ಶಿಕ್ಷಣದ ಮಟ್ಟದಲ್ಲಿ ಗ್ರಾಮೀಣ ಸಂಸ್ಥೆಗಳು ಪರ್ಯಾಯ ವ್ಯವಸ್ಥೆಗಳಾಗುತ್ತವೆ. ಇದರಲ್ಲಿ ಶಿಕ್ಷಣದ ಎಲ್ಲ ಮೂರು ಮಜಲುಗಳನ್ನು-ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ-ಯಶಸ್ವಿಯಾಗಿ ನಿರ್ವಹಿಸಬಹುದು.

**ಗ್ರಾಮೀಣ ಸಂಸ್ಥೆಗಳ ಉಗಮ:**

1949ರಲ್ಲಿ ಡಾ.ಎಸ್. ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ವಿಶ್ವವಿದ್ಯಾನಿಲಯ ಆಯೋಗವು ಗ್ರಾಮೀಣ ಪ್ರದೇಶಗಳಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ಗ್ರಾಮೀಣ ಸಂಸ್ಥೆಗಳು/ಗ್ರಾಮೀಣ ಮಹಾವಿದ್ಯಾಲಯಗಳನ್ನು ಪ್ರಾರಂಭಿಸುವ ಅಗತ್ಯಕ್ಕೆ ಹೆಚ್ಚಿನ ಒತ್ತನ್ನು ನೀಡಿತು.

ಇದನ್ನು ಅನುಸರಿಸಿ 1954ರಲ್ಲಿ 'ಗ್ರಾಮೀಣ ಪ್ರದೇಶಗಳಿಗೆ ಉನ್ನತ ಶಿಕ್ಷಣ ಗ್ರಾಮೀಣ ಸಂಸ್ಥೆ' ಯ ಸಮಿತಿಯನ್ನು ನೇಮಕ ಮಾಡಲಾಯಿತು. ಇದರ ಅಧ್ಯಕ್ಷರಾಗಿದ್ದ ಡಾ. ಕೆ.ಎಲ್. ಶ್ರೀಮಾಲಿ. ಸಮಿತಿಯ ಶಿಫಾರಸು ಹೀಗಿದೆ: 'ಗ್ರಾಮೀಣ ಸಂಸ್ಥೆಗಳು ಗ್ರಾಮೀಣ ಮತ್ತು ನಗರ ಸಮುದಾಯದ ನಡುವಿನ ಆರ್ಥಿಕ ಮತ್ತು ಭೌಗೋಳಿಕ ತಡೆಗಳನ್ನು ಭೇದಿಸುವುದರಲ್ಲಿ ನೆರವಾಗಬೇಕು. ಈ ಸಂಸ್ಥೆಗಳು ಸಂಸ್ಕೃತಿ ಮತ್ತು ದುಡಿಮೆ, ಮಾನವಿಕ ಮತ್ತು ತಂತ್ರಜ್ಞಾನ, ಹಾಗೂ ಪ್ರಾಯೋಗಿಕ ಮತ್ತು ಆದರ್ಶಗಳ ನಡುವಿನ ಅಂತರವನ್ನು ತುಂಬುವುದರಲ್ಲಿಯೂ ನೆರವಾಗುತ್ತವೆ.'

ಸಮಿತಿಯು ಕೃಷಿ, ನೈರ್ಮಲ್ಯ, ಗ್ರಾಮೀಣ ಆರೋಗ್ಯ, ಪಾರುಪತ್ಯಗಾರರು/ಮೇಲ್ವಿಚಾರಕರು, ಬೋಧನೆ ಇತ್ಯಾದಿಗಳಿಗೆ ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಮತ್ತು ಪ್ರಥಮ ಪದವಿಗೆ ಸಮಾನವಾದ ಗ್ರಾಮೀಣ ಸೇವೆಗಳ ಮೂರು ವರ್ಷದ ಡಿಪ್ಲೋಮಾ ಕೋರ್ಸನ್ನು ಸೂಚಿಸಿದೆ. ಈ ಕೋರ್ಸುಗಳು ಪೂರ್ವ ಮೂಲಶಿಕ್ಷಣ ಅಥವಾ ಹಿರಿಯ ಮಾಧ್ಯಮಿಕ ಕೋರ್ಸ್‌ಗಳನ್ನು ಪೂರೈಸಿದವರಿಗಾಗಿ ಇರುತ್ತವೆ.

ಗ್ರಾಮೀಣ ಸಂಸ್ಥೆಗಳ ಆಡಳಿತವನ್ನು ನಡೆಸಲು ಕೇಂದ್ರ ಶಿಕ್ಷಣ ಮಂತ್ರಾಲಯದ ಸಲಹಾ ಸಂಸ್ಥೆಯಾಗಿ ಗ್ರಾಮೀಣ ಹಿರಿಯ ಶಿಕ್ಷಣದ ಗ್ರಾಮೀಣ ಪರಿಷತ್ತನ್ನು ಮತ್ತು ರಾಜ್ಯ ಮಟ್ಟದಲ್ಲಿ ಶಿಕ್ಷಣ ವಿಭಾಗದಲ್ಲಿ ಗ್ರಾಮೀಣ ಪ್ರದೇಶಗಳಿಗಾಗಿ ಗ್ರಾಮೀಣ ಹಿರಿಯ ಶಿಕ್ಷಣದ ರಾಜ್ಯ ಪರಿಷತ್ತನ್ನು ರೂಪಿಸುವಂತೆ ಸಮಿತಿ ಶಿಫಾರಸು ಮಾಡಿದೆ.

ಶ್ರೀಮಾಲಿ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಗ್ರಾಮೀಣ ಪ್ರದೇಶಗಳ ಶಿಕ್ಷಣ ಕ್ಷೇತ್ರದಲ್ಲಿನ ಪ್ರವರ್ತಕ ಸ್ಥಾನದ ಈ ಕೆಳಗಿನ ಸಂಸ್ಥೆಗಳನ್ನು 1956ರಲ್ಲಿ ಗ್ರಾಮೀಣ ಸಂಸ್ಥೆಗಳನ್ನಾಗಿ ಮಾನ್ಯ ಮಾಡಲಾಯಿತು.

1. ಶ್ರೀ ಶಿವಾಜಿ ಲೋಕ ವಿದ್ಯಾಪೀಠ ಗ್ರಾಮೀಣ ಸಂಸ್ಥೆ, ಅಮರಾವತಿ, ಬಾಂಬೆ
2. ಬಲವಂತ ವಿದ್ಯಾಪೀಠ ಗ್ರಾಮೀಣ ಸಂಸ್ಥೆ, ಬಿಚ್‌ಪುರಿ(ಆಗ್ರಾ)
3. ಗಾಂಧಿಗ್ರಾಮ ಉನ್ನತ ಶಿಕ್ಷಣದ ಗ್ರಾಮೀಣ ಸಂಸ್ಥೆ, ಮದ್ರಾಸ್
4. ಸರ್ವೋದಯ ಮಹಾವಿದ್ಯಾಲಯ, ಸುಂದರ ನಗರ, ಬಿಹಾರ
5. ಶ್ರೀ ಮೌನಿ ವಿದ್ಯಾಪೀಠ, ಗರ್ಗೋಟಿ, ಕೊತಾಲ್‌ಪುರ
6. ಲೋಕ ಭಾರತಿ ಗ್ರಾಮೀಣ ಸಂಸ್ಥೆ, ಸನೊಸರ

Digitised by Bharatavani, CIIL

7. ಶ್ರೀ ರಾಮಕೃಷ್ಣ ಮಿಶನ್ ಗ್ರಾಮೀಣ ಸಂಸ್ಥೆ, ಕೊಯಂಬತ್ತೂರು
8. ಶ್ರೀನಿಕೇತನ ಗ್ರಾಮೀಣ ಸಂಸ್ಥೆ, ಶಾಂತಿನಿಕೇತನ (ಇದು 1963 ರಲ್ಲಿ ವಿಶ್ವಭಾರತಿ ವಿಶ್ವವಿದ್ಯಾಲಯದೊಂದಿಗೆ ವಿಲೀನಗೊಂಡಿದೆ)
9. ವಿದ್ಯಾಭವನ ಗ್ರಾಮೀಣ ಸಂಸ್ಥೆ, ಉದಯಪುರ, ರಾಜಾಸ್ಥಾನ
10. ಜಮಿಯಾ ಮಿಲಿಯ ಇಸ್ಲಾಮಿಯಾ, ಜಮಿಯಾ ನಗರ, ನ್ಯೂ ಡೆಲ್ಲಿ

**1959 ಮತ್ತು 1963ರ ನಡುವೆ ಈ ಕೆಳಗಿನ ಸಂಸ್ಥೆಗಳನ್ನು ಸೇರಿಸಲಾಗಿದೆ:**

1. ಕಸ್ತುರಿಬಾ ಗ್ರಾಮೀಣ ಸಂಸ್ಥೆ, ರಾಜ್‌ಪುರ (ಪಂಜಾಬ್) (1959)
2. ಗ್ರಾಮೀಣ ಸಂಸ್ಥೆ, ವಾರ್ಧಾ (ಮಹಾರಾಷ್ಟ್ರ) (1961)
3. ಗ್ರಾಮೀಣ ಸಂಸ್ಥೆ, ಹನುಮನಮಟ್ಟಿ (ಮೈಸೂರು) (1961)
4. ಕಸ್ತೂರಬಾಗ್ರಾಮ ಗ್ರಾಮೀಣ ಸಂಸ್ಥೆ, ಇಂದೋರ್ (ಮಧ್ಯಪ್ರದೇಶ) (1963)
5. ಗ್ರಾಮೀಣ ಸಂಸ್ಥೆ, ತವನೂರ್ (ಕೇರಳ) (1963)

ಈ ಮೇಲಿನ 14 ಗ್ರಾಮೀಣ ಸಂಸ್ಥೆಗಳ ಆಡಳಿತವನ್ನು ಗ್ರಾಮೀಣ ಉನ್ನತ ಶಿಕ್ಷಣದ ರಾಷ್ಟ್ರೀಯ ಪರಿಷತ್ತು ನೋಡಿಕೊಳ್ಳುತ್ತಿದ್ದು, ಕೇಂದ್ರ ಸರಕಾರದಿಂದ ಶೇಕಡಾ 75 ರಷ್ಟು ಮತ್ತು ರಾಜ್ಯ ಸರಕಾರದಿಂದ ಶೇಕಡಾ 25 ರಷ್ಟು ಆರ್ಥಿಕ ನೆರವನ್ನು ಪಡೆಯುತ್ತಿದೆ. 1964ರಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ನೇಮಕಗೊಂಡ ಶ್ರೀ ಮಹೊಂಜನಿಯವರ ಅಧ್ಯಕ್ಷತೆಯನ್ನು ಹೊಂದಿರುವ ಸಮಿತಿಯು ಈ ಸಂಸ್ಥೆಗಳ ಶಿಕ್ಷಣದ ವ್ಯಾಪ್ತಿ ಮತ್ತು ಮಟ್ಟವನ್ನು ಪರಿಗಣಿಸಿ ಸೂಚನೆ ನೀಡಿದ್ದು ಹೀಗಿದೆ: 'ಅವುಗಳು(ಗ್ರಾಮೀಣ ಸಂಸ್ಥೆಗಳು) ಉನ್ನತ ಶಿಕ್ಷಣದ ಪ್ರಧಾನ ವಾಹಿನಿಯಿಂದ ದೂರವಾಗಿ ಕಾರ್ಯ ನಿರ್ವಹಿಸಬಾರದು ಮತ್ತು ಸಂಬಂಧಿಸಿದ ಪರಿಸರದಲ್ಲಿ ಇರುವಂತಹ ವಿಶ್ವವಿದ್ಯಾನಿಲಯಗಳಲ್ಲಿ ಮಾನ್ಯತೆ ಪಡೆಯಬೇಕು.' ಗ್ರಾಮೀಣ ಸಂಸ್ಥೆಗಳಿಗೆ ಪರಿಗಣಿತ ವಿಶ್ವವಿದ್ಯಾನಿಲಯದ ಮಟ್ಟವನ್ನು ನೀಡುವುದನ್ನು ಪರಿಗಣಿಸಬಹುದೆಂದೂ ಸೂಚಿಸಲಾಗಿದೆ. 1967ರಲ್ಲಿ ಜಿ.ರಾಮಚಂದ್ರನ್ ಅವರ ಅಧ್ಯಕ್ಷತೆಯಲ್ಲಿದ್ದ ಗ್ರಾಮೀಣ ಉನ್ನತ ಶಿಕ್ಷಣದ ಸಮಿತಿಯು ಉನ್ನತ ಶಿಕ್ಷಣದ ಗ್ರಾಮೀಣ ಸಂಸ್ಥೆಗಳ ತೃಪ್ತಿದಾಯಕ ಕಾರ್ಯನಿರ್ವಹಣೆಯ ಕುರಿತಾಗಿ, ಈ ಸಂಸ್ಥೆಗಳು ಕಾರ್ಯನಿರ್ವಹಿಸುವ ಸ್ಥಿತಿಗತಿಗಳ ಸುಧಾರಣೆಗಾಗಿ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. ಯುಜಿಸಿ ಸಮಿತಿಯ ಶಿಫಾರಸುಗಳು ಮತ್ತು ಗ್ರಾಮೀಣ ಉನ್ನತ ಶಿಕ್ಷಣ ಸಮಿತಿಯ ಶಿಫಾರಸುಗಳನ್ನು ಅನುಸರಿಸಿ, ಗ್ರಾಮೀಣ ಸಂಸ್ಥೆಗಳು ತಮ್ಮ ನೆರೆಹೊರೆಯ ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆಯಲು ಕೋರಬಹುದೆಂದು ಗ್ರಾಮೀಣ ಉನ್ನತ ಶಿಕ್ಷಣದ ರಾಷ್ಟ್ರೀಯ ಪರಿಷತ್ತು ಶಿಫಾರಸು ಮಾಡಿದೆ. ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಯೊಂದನ್ನು ಹೊರತುಪಡಿಸಿ ಬಹುತೇಕ ಎಲ್ಲಾ ಸಂಸ್ಥೆಗಳು ತಮ್ಮ ನೆರೆಹೊರೆಯ ವಿಶ್ವವಿದ್ಯಾನಿಲಯಗಳಲ್ಲಿ ಮಾನ್ಯತೆ ಪಡೆದಿವೆ.

**ಗ್ರಾಮೀಣ ಸಂಸ್ಥೆಗಳ ಮೂಲಭೂತ ನಿಯಮಗಳು**

ಗ್ರಾಮೀಣ ಸಂಸ್ಥೆಗಳ ಮೂಲಭೂತ ನಿಯಮಗಳು ಈ ಕೆಳಗಿನಂತಿವೆ:

- ಜನರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಬೇಕು ಮತ್ತು ಗ್ರಾಮೀಣ ಪ್ರದೇಶಗಳ ಜನರ ಜೀವನ ಮಟ್ಟ ಸುಧಾರಿಸುವ ಪ್ರಯತ್ನ ನಡೆಸಬೇಕು;
- ಗ್ರಾಮೀಣ ಸಮುದಾಯದ ಸೇವೆಯನ್ನು ಮಾಡಬೇಕು ಮತ್ತು ಸಾಮಾಜಿಕ ಬದಲಾವಣೆಗೆ ಸಾಧನವಾಗಬೇಕು.
- ಅಗತ್ಯವನ್ನು ಆಧರಿಸಿದ ಮತ್ತು ಸ್ಥಳೀಯವಾಗಿ ವಿಶಿಷ್ಟವಾಗಿರುವ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಬೇಕು;
- ಯುವಜನತೆಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಬೇಕು ಮತ್ತು ಅವರು ತಮ್ಮ ಶಕ್ತಿಯನ್ನು ಗ್ರಾಮೀಣ ಬದುಕಿನ ಪರಿಸ್ಥಿತಿಯ ಸುಧಾರಣೆಯಲ್ಲಿ ಕೇಂದ್ರೀಕೃತಗೊಳಿಸಬೇಕು;
- ಗ್ರಾಮೀಣ ಸಂಸ್ಥೆಗಳು ತಮ್ಮ ವಿಚಾರಗಳನ್ನು ಮತ್ತು ಆದರ್ಶಗಳನ್ನು ಗ್ರಾಮೀಣರ/ಗ್ರಾಮಸ್ಥರ ಮೇಲೆ ಹೇರುವುದಿಲ್ಲ, ಆದರೆ ಗ್ರಾಮಸ್ಥರು ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ತಮ್ಮ ಸ್ವಂತ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತವೆ;
- ಶುದ್ಧ ಸೈದ್ಧಾಂತಿಕ ಮತ್ತು ಅನ್ವಯಕ ಸಂಶೋಧನೆಯ ನಡುವೆ ಸಮತೋಲನವನ್ನು ಕಾಪಾಡಬೇಕು. ಗ್ರಾಮೀಣ ಸಂಸ್ಥೆಗಳಲ್ಲಿನ ವೈಜ್ಞಾನಿಕ ಸಂಶೋಧನೆಯು ಶಾಶ್ವತವಾಗಿ ಉಳಿಯುವ ಅಭಿವೃದ್ಧಿ, ಜೈವಿಕ ಮತ್ತು ಪರಿಸರದ ಸಂರಕ್ಷಣೆ, ಗ್ರಾಮೀಣ ಪ್ರದೇಶಗಳ ಸಮೃದ್ಧಿಯ ಹೆಚ್ಚಳಕ್ಕೆ ಗಮನವನ್ನು ನೀಡಬೇಕು;
- ಗ್ರಾಮೀಣ ಪರಿಸ್ಥಿತಿಗಳು ಮತ್ತು ಯುವಜನರ ಅಗತ್ಯಗಳನ್ನು ಆಧರಿಸಿ ಉತ್ಕೃಷ್ಟಮಟ್ಟದ ಗ್ರಾಮೀಣ ಕೇಂದ್ರಿತ ಶಿಕ್ಷಣವನ್ನು ಒದಗಿಸುವುದು ಮತ್ತು ಯುವಜನರು ಗ್ರಾಮೀಣ ಪ್ರದೇಶಗಳಿಗೆ ಹಿಂದಿರುಗಿ ಹಳ್ಳಿಗಳಿಗೆ ಸೇವೆ ಸಲ್ಲಿಸುವುದು ಮತ್ತು ಅದರ ಪ್ರಗತಿಗೆ ನೆರವಾಗಬೇಕು.
- ಗ್ರಾಮೀಣ ಸಂಸ್ಥೆಗಳು ಶಿಕ್ಷಣ ಮತ್ತು ವ್ಯಕ್ತಿಯ ಸಮಗ್ರ ಅಭಿವೃದ್ಧಿ ಮತ್ತು ಗ್ರಾಮೀಣ ಪುನಾರಚನಾ ಕಾರ್ಯಕ್ರಮಗಳ ನಡುವೆ ಸೇತುವಾಗಿ ಕಾರ್ಯ ನಿರ್ವಹಿಸಬೇಕು.

**ಈ ಪಾತ್ರಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು:**

1. ಗ್ರಾಮೀಣ ಸೇವೆಗಳಿಗೆ ಶಿಕ್ಷಣ/ಬೋಧನೆ;
2. ಗ್ರಾಮೀಣ ಬದುಕಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಸಂಶೋಧನೆ; ಮತ್ತು
3. ಗುರಿಯನ್ನು ಸಾಧಿಸಲು ಈ ಪ್ರದೇಶಗಳಲ್ಲಿ ವಿಸ್ತರಣೆ.

Digitised by Bharatavani, CIIL

ಭಾರತದಲ್ಲಿ ಈಗ ಕಾರ್ಯ ನಿರ್ವಹಿಸುತ್ತಿರುವ ಎರಡು ಗ್ರಾಮೀಣ ಸಂಸ್ಥೆಗಳೆಂದರೆ ಒಂದು ಗಾಂಧಿಗ್ರಾಮದ ಪರಿಗಣಿತ ವಿಶ್ವವಿದ್ಯಾಲಯ ಮತ್ತು ಆಂಧ್ರಪ್ರದೇಶದ ಪೋಚಂಪಳ್ಳಿಯಲ್ಲಿರುವ ಸಂಸ್ಥೆ. ಎರಡನೆಯದನ್ನು 1995ರಲ್ಲಿ ಪಿ.ವಿ. ನರಸಿಂಹ ರಾವ್ ಅವರು ಉದ್ಘಾಟಿಸಿದ್ದಾರೆ.

**ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆ(ಜಿಆರ್‌ಐ):**

ಪ್ರಸಿದ್ಧ ಗಾಂಧೀವಾದಿಗಳು, ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು ಮತ್ತು ಶಿಕ್ಷಣತಜ್ಞರಾಗಿರುವ ಡಾ. ಟಿ.ಎಸ್. ಸೌಂದ್ರಮ್ ಮತ್ತು ಅವರ ಪತಿ ಡಾ. ಜಿ. ರಾಮಚಂದ್ರನ್ ಅವರು ಮಹಾತ್ಮಾ ಗಾಂಧೀಜಿಯವರ ಆಶೀರ್ವಾದದೊಂದಿಗೆ 1947ರಲ್ಲಿ ಪ್ರಾರಂಭಿಸಿದ ಸಂಸ್ಥೆ ಗಾಂಧಿಗ್ರಾಮ. ಇದರ ಪ್ರಾರಂಭೋತ್ಸವಕ್ಕೆ ಗಾಂಧೀಜಿಯವರ ಸಂದೇಶ ಹೀಗಿತ್ತು: 'ಸತ್ಯ ಆಳುವಲ್ಲಿ ಯಶಸ್ಸು ಹಾಜರಿರುತ್ತದೆ.'

ಗಾಂಧಿಗ್ರಾಮವಿರುವುದು ಕೊಡೈ ಸೌಂದರ್ಯದ ನೆಲೆಯಾಗಿರುವ ಸಿರುಮಲೈ ಬೆಟ್ಟಗಳ ಸಾಲಿನ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಮತ್ತು ಕೊಡೈ ಬೆಟ್ಟಗಳ ಪಶ್ಚಿಮ ಭಾಗದಲ್ಲಿ ಹರಡಿಕೊಂಡಿರುವ ಸುಮಾರು 350 ಎಕರೆ ಪ್ರದೇಶದಲ್ಲಿ. ಇದು ಗಾಂಧೀಜಿಯವರ ಫಿನಿಕ್ಸ್ ಫಾರ್ಮನ ಮಾದರಿಯಲ್ಲಿ ಕೆಲವು ನಿಷ್ಠಾವಂತ ಕಾರ್ಯಕರ್ತರಿಂದ ಪ್ರಾರಂಭಗೊಂಡಿದೆ. ಸ್ಥಾಪಕಿ ಡಾ. ಟಿ.ಎಸ್.ಸೌಂದ್ರಮ್ ಓರ್ವ ವೈದ್ಯರಾಗಿದ್ದುದರಿಂದ ಅವರು ತಮ್ಮ ಸೇವೆಯನ್ನು ದೂರಪ್ರದೇಶದ ಗ್ರಾಮೀಣ ಜನರಿಗೆ ಮೀಸಲಾಗಿಟ್ಟರು. ಹೀಗೆ ಹೊರಹೊಮ್ಮಿದುದೇ ಕಸ್ತೂರ ಬಾ ಆಸ್ಪತ್ರೆ. ಇಲ್ಲಿ ವೈದ್ಯಕೀಯ ಸೇವೆಗಳೊಂದಿಗೆ ಮಹಿಳೆಯರ ಮತ್ತು ಅನಾಥ ಜನರ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನದ ಸುಧಾರಣೆಗಾಗಿ ತಲೆ ಎತ್ತಿದ್ದು ಕಸ್ತೂರಿಬಾ ಆಸ್ಪತ್ರೆ, ಪರಿತ್ಯಕ್ತೆಯರು ಮತ್ತು ವಿಧವೆಯರಿಗಾಗಿ ಸೇವಿಕಾಶ್ರಮ, ಅನಾಥ ಮತ್ತು ಪರಿತ್ಯಕ್ತ ಮಕ್ಕಳಿಗಾಗಿ ಚಿಲ್ಡ್ರನ್ ಹೋಮ್. ಇದೇ ರೀತಿ ಗ್ರಾಮೀಣ ಬಡಜನರ ಆರ್ಥಿಕ ಏಳಿಗೆಗಾಗಿ ಗಾಂಧೀಜಿಯವರ ತತ್ವಕ್ಕನುಗುಣವಾಗಿ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಮೂಲಕ ಜನರಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶದಿಂದ ಅನೇಕ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ.

ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಯ ಮೊದಲ ನಿರ್ದೇಶಕರಾದ ಜಿ. ರಾಮಚಂದ್ರನ್ ಅವರು ರವೀಂದ್ರನಾಥ ಠಾಕೂರರ ವಿಶ್ವಭಾರತಿ ಮತ್ತು ಮಹಾತ್ಮ ಗಾಂಧೀಜಿಯವರ ಸೇವಾಗ್ರಾಮಗಳನ್ನು ಸಂಯೋಜಿಸಿ ಗಾಂಧಿಗ್ರಾಮದಲ್ಲಿ ಶಿಕ್ಷಣದ ಪ್ರಯೋಗವನ್ನು ನಡೆಸಿದ್ದಾರೆ.

ಗ್ರಾಮೀಣ ಸಂಸ್ಥೆಗಳನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಪೂರ್ವ–ಮೂಲಶಿಕ್ಷಣ, ಮೂಲಶಿಕ್ಷಣ, ಮತ್ತು ಮೂಲಶಿಕ್ಷಣ ಶಿಕ್ಷಕರ ತರಬೇತಿ ಶಾಲೆಗಳನ್ನು ವಯಸ್ಕರ ಶಿಕ್ಷಣ ಕೇಂದ್ರಗಳೊಂದಿಗೆ ಗಾಂಧಿಗ್ರಾಮದ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಸ್ಥಾಪಿಸಲಾಗಿದೆ. ಮೊದಲ ಗುಂಪಿನ ವಿದ್ಯಾರ್ಥಿಗಳು ಶಿಕ್ಷಣದ ಮೂಲೋತ್ತರ ಹಂತವನ್ನು 1958ರಲ್ಲಿ ಮುಗಿಸುವವರಿದ್ದುದರಿಂದ ಗಾಂಧಿಗ್ರಾಮದಲ್ಲಿ ಗ್ರಾಮೀಣ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೊದಲ ಚರ್ಚೆ 1954ರಲ್ಲಿ ನಡೆಯಿತು. ಈ ಕಲ್ಪನೆ ಮತ್ತು ಗ್ರಾಮೀಣ ಉನ್ನತ ಶಿಕ್ಷಣದ ಕುರಿತು ಶ್ರೀಮಾಲಿ ಸಮಿತಿಯೊಂದಿಗೆ ನಡೆದ ಚರ್ಚೆಯ ಫಲವಾಗಿ ಸಂಸ್ಥೆಯೊಂದರ ಸ್ಥಾಪನೆಯಾಗಿ, ಇದರ ಔಪಚಾರಿಕ ಉದ್ಘಾಟನೆಯು 17 ಆಗಸ್ಟ್, 1956ರಲ್ಲಿ ಡಾ. ರಾಜೇಂದ್ರ ಪ್ರಸಾದ್ ಅವರಿಂದ ನಡೆಯಿತು.

ಈ ಸಂಸ್ಥೆಯಲ್ಲಿ ಅಧ್ಯಯನಕ್ಕಾಗಿ ಅನುಸರಿಸುತ್ತಿದ್ದ ಕೋರ್ಸ್‌ಗಳಲ್ಲಿ ಗ್ರಾಮೀಣ ಸೇವೆಗಳಲ್ಲಿ ಮೂರು ವರ್ಷಗಳ ಡಿಪ್ಲೋಮ, ಎರಡು ವರ್ಷಗಳ ಕೃಷಿಕೋರ್ಸ್ ಮತ್ತು ಒಂದು ವರ್ಷದ ಸಿದ್ಧತೆಯ ಕೋರ್ಸ್– ಗ್ರಾಮೀಣ ಉನ್ನತ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪರಿಷತ್ತು ಮಾನ್ಯತೆ ನೀಡಿದ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿತ್ತು.

ಡಿಪ್ಲೋಮಾ ಕೋರ್ಸ್‌ನಲ್ಲಿ ಐದು ಆಯ್ಕೆಯ ಗುಂಪುಗಳಿವೆ, ಅವುಗಳೆಂದರೆ, ಸಾರ್ವಜನಿಕ ಆಡಳಿತ, ಸಹಕಾರ, ಗ್ರಾಮೀಣ ಕೈಗಾರಿಕೆಗಳು, ಲಲಿತಕಲೆಗಳು(ಸಂಗೀತ) ಮತ್ತು ಗೃಹ ವಿಜ್ಞಾನ. ಇನ್ನು ಐಚ್ಛಿಕ ವಿಷಯಗಳು: 1. ಪೌರನೀತಿ ಮತ್ತು ಅರ್ಥಶಾಸ್ತ್ರದ ಮೂಲಾಂಶಗಳು, 2. ಸಮಾಜ ಶಾಸ್ತ್ರ ಮತ್ತು ಮನಃಶಾಸ್ತ್ರದ ಮೂಲಾಂಶಗಳು, ಮತ್ತು 3. ಗೃಹ ವಿಜ್ಞಾನ.

ಗ್ರಾಮೀಣ ಕೈಗಾರಿಕೆಗಳ ಕೋರ್ಸ್‌ನಲ್ಲಿ ತರಬೇತಿ ನೀಡುವುದಕ್ಕೆ ಕೂಡ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಇದನ್ನು ತರಬೇತಿ ಮತ್ತು ಉತ್ಪಾದನಾ ಘಟಕವಾಗಿ ಪರಿಗಣಿಸಲಾಗಿದೆ. ಇದರಲ್ಲಿ ಐದು ಕೈಗಾರಿಕೆಗಳು ಇವೆ. ಅವುಗಳೆಂದರೆ, 1. ಕೈಯಿಂದ ಅಕ್ಕಿಯನ್ನು ಕುಟ್ಟುವುದು, 2. ಘನಿ ಎಣ್ಣೆ ತೆಗೆಯುವುದು, 3. ಕೈಯಿಂದ ಕಾಗದದ ತಯಾರಿಕೆ, 4. ಸಾಬೂನು ತಯಾರಿಕೆ, ಮತ್ತು 5. ಸಂಬಂಧಪಟ್ಟ ಮರಗೆಲಸ. ಸಣ್ಣಪುಟ್ಟ ಕೈಗಾರಿಕೆಗಳಾದ ಕೋಳಿಸಾಕಣೆ ಮತ್ತು ಜೇನು ಕೃಷಿಯನ್ನು ಕೂಡ ಒದಗಿಸಿ ಕೊಡಲಾಗಿದೆ. ಹೀಗಿರುವ ಕೋರ್ಸ್‌ಗಳಲ್ಲಿ ಪಠ್ಯದ ಬೋಧನೆ ಮತ್ತು ಪ್ರಾಯೋಗಿಕ ಕಾರ್ಯವನ್ನು ಬಹಳ ಜಾಗರೂಕತೆಯಿಂದ ಸರಿತೂಗಿಸಲಾಗಿದೆ.

ಸಿಬ್ಬಂದಿಗಳ ಮಾರ್ಗದರ್ಶನದಲ್ಲಿ ವಿಸ್ತರಣಾ ಸೇವೆಗಳನ್ನು ಸರಿಯಾದ ಕ್ರಮದಲ್ಲಿ ಕೈಗೊಳ್ಳಲಾಗಿದೆ. ಗಾಂಧಿಗ್ರಾಮದ ಮುಖ್ಯ ತತ್ವ ಸಾಮುದಾಯಿಕ ಬದುಕಾಗಿದೆ. ಗಾಂಧಿಗ್ರಾಮದ ಎಲ್ಲಾ ಸಂಸ್ಥೆಗಳನ್ನು ಸ್ವಾವಲಂಬನೆ ಮತ್ತು ಸ್ವ–ಆಡಳಿತದ ಜೋಡಿ ತತ್ವಗಳನ್ನು ಆಧರಿಸಿ ನಿರ್ಮಿಸಲಾಗಿದೆ.

ಸಾಮುದಾಯಿಕ ಬದುಕು ಎಲ್ಲ ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕರನ್ನು ಒಟ್ಟಿಗೆ ಜೋಡಿಸಿಕೊಂಡಿರುತ್ತದೆ ಮತ್ತು ಇದು ಸಾಮಾನ್ಯ ಶಿಸ್ತು, ಸಮುದಾಯಕಾರ್ಯಗಳಾದ ನೈರ್ಮಲ್ಯದಿಂದ ಹಿಡಿದು ಸಾಂಸ್ಕೃತಿಕ ಕಾರ್ಯಕ್ರಮದವರೆಗೆ ಎಲ್ಲ ವಿಚಾರಗಳನ್ನು ಒಳಗೊಂಡಿರುತ್ತದೆ. ಇಲ್ಲಿ ಆಂತರಿಕ ನೆಲೆಯಿಂದ ಶಿಸ್ತನ್ನು ರೂಪಿಸಿಕೊಳ್ಳಲಾಗಿದೆ ಮತ್ತು ಜಾತಿವಾದ, ಕೋಮುವಾದ ಮತ್ತು ಭಾಷಾವಾದಗಳನ್ನು ಹೊರಗೆ ಇಡಲಾಗಿದೆ.

Digitised by Bharatavani, CIIL

ಸಂಸ್ಥೆಯಲ್ಲಿ ಹಳೆಯ ಗುರುಕುಲದ ಅಂತಸ್ಸತ್ವದ ಮಾದರಿಯಲ್ಲಿ 'ಗುರುಕುಲ ವ್ಯವಸ್ಥೆ' ಎಂಬ ಬೋಧನಾ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ. ಒಬ್ಬ ಶಿಕ್ಷಕ ಅಥವಾ ಗುರುವಿಗೆ ಹತ್ತು ವಿದ್ಯಾರ್ಥಿಗಳನ್ನು ನೀಡಲಾಗುತ್ತದೆ ಮತ್ತು ಆ ಗುಂಪಿಗೆ ಗುರುವು ಮಾರ್ಗದರ್ಶಕ ಮತ್ತು ಸ್ನೇಹಿತನಾಗಿ ವರ್ತಿಸುತ್ತಾನೆ. ವಿದ್ಯಾರ್ಥಿಗಳ ನಡತೆಯನ್ನು ತಿದ್ದುವುದಕ್ಕಾಗಿ ಮತ್ತು ಅವರ ಸಮಗ್ರ ವ್ಯಕ್ತಿತ್ವವನ್ನು ರೂಪಿಸುವುದಕ್ಕಾಗಿ ಅವರ ಬದುಕಿನ ಎಲ್ಲ ವಾಸ್ತವಾಂಶಗಳಲ್ಲಿ ನೆರವಾಗುತ್ತಾನೆ. ಇಂದು ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಗಳ(ಜಿಆರ್‌ಐ) ವಿದ್ಯಾರ್ಥಿಗಳು ಬದುಕಿನ ಬೇರೆ ಬೇರೆ ಹಾದಿಗಳಲ್ಲಿ ಪ್ರಸಿದ್ಧರಾಗಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

**ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಗೆ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಥಾನಮಾನ:**

ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಯು ತನ್ನ ಗ್ರಾಮೀಣ ವಿಸ್ತರಣಾ ಕಾರ್ಯದಲ್ಲಿ ನೀಡಿರುವ ಅತ್ಯುತ್ತಮ ಸೇವೆಗಾಗಿ ಅದಕ್ಕೆ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ನೀಡಲಾಗಿದೆ. ವಿಶ್ವವಿದ್ಯಾನಿಲಯಗಳ ಆಡಳಿತದ ಕುರಿತಾಗಿ ಉತ್ಕೃಷ್ಟ ದಾಖಲೆಯನ್ನು ತಯಾರಿಸಿದ ಭಾರತದ ಮಾಜಿ ಮುಖ್ಯ ನ್ಯಾಯಾಧೀಶರು ಮತ್ತು ಶಿಕ್ಷಣತಜ್ಞರೂ ಆಗಿರುವ ಡಾ. ಪಿ. ಗಜೇಂದ್ರಗಡ್ಕರ್ ಅವರು ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆ, ಪರಿಗಣಿತ ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿಗಳಾದರು(ಇದು 1963ರಲ್ಲಿ ವಿಶ್ವಭಾರತಿ ವಿಶ್ವವಿದ್ಯಾನಿಲಯದೊಂದಿಗೆ ವಿಲೀನಗೊಂಡಿತು). ಇದು ಈ ಕೆಳಗಿನ ಉದ್ದೇಶಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದೆ.

ವರ್ಗರಹಿತ ಮತ್ತು ಜಾತಿರಹಿತ ಸಮಾಜಕ್ಕೆ ಪ್ರೋತ್ಸಾಹ ನೀಡಲು ಬೋಧನೆ ಮತ್ತು ಕಲಿಕೆಯನ್ನು ಒದಗಿಸುವುದು; ಸಂಶೋಧನೆ ಮತ್ತು ತಿಳಿವಳಿಕೆಯ ಪ್ರಗತಿ ಮತ್ತು ಪ್ರಸಾರವನ್ನು ಒದಗಿಸುವುದು; ಸಮಗ್ರ ಗ್ರಾಮೀಣಾಭಿವೃದ್ಧಿಗೆ ದಾರಿ ಮಾಡಿಕೊಡುವ ವಿಸ್ತರಣಾ ಕಾರ್ಯದ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು. ಮೇಲೆ ಉಲ್ಲೇಖಿಸಿದ ಉದ್ದೇಶಗಳ ಈಡೇರಿಕೆಗಾಗಿ ಗಾಂಧಿಗ್ರಾಮ ಸಂಸ್ಥೆಯು ತನ್ನ ಅಧ್ಯಯನದ ಕೋರ್ಸ್‌ಗಳು, ಸಂಶೋಧನೆ ಮತ್ತು ವಿಸ್ತರಣಾ ಮಾರ್ಗಗಳನ್ನು ಮಿತಗೊಳಿಸಿದೆ. ಗ್ರಾಮೀಣಾಭಿವೃದ್ಧಿ, ಅಂತರಾಷ್ಟ್ರೀಯ ಶಾಂತಿಯಲ್ಲಿ ಗಮನವನ್ನು ಕೇಂದ್ರೀಕರಿಸುವುದು, ಗ್ರಾಮೀಣ ಅಭಿವೃದ್ಧಿಯಲ್ಲಿ ಸಂಶೋಧನೆಯನ್ನು ಒಳಗೊಳ್ಳುವುದು, ಸೂಕ್ತವಿಧದ ತಂತ್ರಜ್ಞಾನ, ಗ್ರಾಮೀಣ ಪ್ರದೇಶಗಳಿಗೆ ತಂತ್ರಜ್ಞಾನವನ್ನು ವರ್ಗಾಯಿಸುವಿಕೆ ಇತ್ಯಾದಿಗಳನ್ನು ಪ್ರಾಮಾಣಿಕವಾಗಿ ಕೈಗೆತ್ತಿಕೊಳ್ಳಲಾಗಿದೆ. ಪರಿಗಣಿತ ವಿಶ್ವವಿದ್ಯಾಲಯವಾದ ಬಳಿಕ 25 ವರ್ಷಗಳ ಸುದೀರ್ಘಾವಧಿಯಲ್ಲಿ ಅದು ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಪ್ರಸ್ತುತ ಜಿಆರ್‌ಐ ನಲ್ಲಿ ಈ ಕೆಳಗಿನ ಏಳು ಬೋಧನಾಂಗಗಳು ಇವೆ: ತಮಿಳು, ಭಾರತೀಯ ಭಾಷೆಗಳು ಮತ್ತು ಗ್ರಾಮೀಣ ಕಲೆಗಳ ಬೋಧನಾಂಗ, ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಬೋಧನಾಂಗ, ಕೃಷಿ ಮತ್ತು ಪ್ರಾಣಿಸಾಕಣೆ ಬೋಧನಾಂಗ, ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯಗಳಲ್ಲಿ ಒಂದೇ ವಿಭಾಗವನ್ನು ಹೊಂದಿರುವ ಬೋಧನಾಂಗ.

ಗ್ರಾಮೀಣ ಸಮಾಜ ಶಾಸ್ತ್ರಗಳ ಬೋಧನಾಂಗದಲ್ಲಿರುವ ವಿಭಾಗಗಳೆಂದರೆ, ಸಹಕಾರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತಾಭಿವೃದ್ಧಿ, ಗಾಂಧೀ ಚಿಂತನೆ ಮತ್ತು ಶಾಂತಿ ವಿಜ್ಞಾನ, ಸಮಾಜ ಶಾಸ್ತ್ರ ಮತ್ತು ಗ್ರಾಮೀಣ ಕೈಗಾರಿಕೆಗಳು ಮತ್ತು ನಿರ್ವಹಣೆ. ಗ್ರಾಮೀಣ ಕೇಂದ್ರಿತ ವಿಜ್ಞಾನಗಳ ಬೋಧನಾಂಗದಲ್ಲಿ ಇರುವುದು ಗಣಿತ, ಭವಿಷ್ಯದ ಅಧ್ಯಯನಗಳ ಕೇಂದ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗೃಹವಿಜ್ಞಾನ, ಜೀವಶಾಸ್ತ್ರ, ಗಣಕ ವಿಜ್ಞಾನ ಮತ್ತು ಅನ್ವಯತೆಗಳು ಮತ್ತು ಗ್ರಾಮೀಣ ತಂತ್ರಜ್ಞಾನ ಕೇಂದ್ರ.

ಗ್ರಾಮೀಣಾಭಿವೃದ್ಧಿ ಬೋಧನಾಂಗದಲ್ಲಿ ಇರುವ ವಿಭಾಗಗಳೆಂದರೆ ಗ್ರಾಮೀಣಾಭಿವೃದ್ಧಿ, ಅನ್ವಯಕ ಸಂಶೋಧನೆ, ಮತ್ತು ವಯಸ್ಕರ ಮುಂದುವರಿಕೆ ಶಿಕ್ಷಣ ಮತ್ತು ವಿಸ್ತರಣ.

ಸಂಸ್ಥೆಯ ಗ್ರಾಮೀಣ ಅಭಿವೃದ್ಧಿಯ ನಿಷ್ಠೆಯಿಂದಾಗಿ ಯೋಜನೆಗಳು ಮತ್ತು ವಿಶೇಷ ಕಿರುಕೂಟಗಳಲ್ಲಿ ಅದು ಆಕರ್ಷಣೆಯನ್ನು ಮತ್ತು ಕಾರ್ಯವನ್ನು ಪಡೆದಿದೆ. ಯೋಜನೆಗಳು ಮತ್ತು ಕಿರುಕೂಟಗಳು ಶಾಶ್ವತವಾಗಿ ಉಳಿಯುವಂತಹ ಗ್ರಾಮೀಣ ಅಭಿವೃದ್ಧಿಯ ವಿಚಾರವನ್ನು ಜೋಡಿಸಿಕೊಂಡಿವೆ.

ಶಾಂತಿ ಸೇನೆ, ಸಂಸ್ಕೃತಿ ಮತ್ತು ಕಲೆಗಳಿಗಾಗಿ ಕಿರುಕೂಟ, ಗ್ರಾಮೀಣ ತಂತ್ರಜ್ಞಾನ ಕೇಂದ್ರ, ವಿಶ್ವವಿದ್ಯಾಲಯ ವಿಜ್ಞಾನ ಇನ್‌ಸ್ಟ್ರುಮೆಂಟೇಶನ್ ಕೇಂದ್ರ, ಗ್ರಾಮೀಣ ವಿಸ್ತರಣ ಮತ್ತು ಮೌಲ್ಯಮಾಪನ ಕೇಂದ್ರ, ಉದ್ಯೋಗ ಕಚೇರಿ, ಮಾಹಿತಿ ಅಭಿವೃದ್ಧಿ ಮತ್ತು ಸಂಪನ್ಮೂಲ ಏಜೆನ್ಸಿ(ಐಡಿಎಆರ್‌ಎ), ಕೃಷಿ ವಿಜ್ಞಾನ ಕೇಂದ್ರ(ಕೆವಿಕೆ), ಗ್ರಾಮೀಣ ಶಕ್ತಿ ಕೇಂದ್ರ, ಪಾರ್ಟಿಸಿಪೇಟರಿ ರೂರಲ್ ಅಪ್ರೇಸಲ್ ಯುನಿಟ್, ಜನಸಂಖ್ಯಾ ಶಿಕ್ಷಣ ಮತ್ತು ಸಂಪನ್ಮೂಲ ಏಜೆನ್ಸಿ, ಪಂಚಾಯತಿ ರಾಜ್‌ಗಾಗಿ ರಾಜೀವ ಗಾಂಧಿ ಪೀಠ, ಸಾಹಸೋದ್ಯಮ ಅಭಿವೃದ್ಧಿ ಕೇಂದ್ರ, ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ವಸ್ತುಸಂಗ್ರಹಾಲಯ, ಗ್ರಾಮೀಣ ಕೈಗಾರಿಕೆ-ತರಬೇತಿ ಘಟಕಗಳು ಮತ್ತು ಪ್ರಕಾಶನ ವಿಭಾಗ ಇವುಗಳು ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಯ ಕೆಲವು ವಿಶಿಷ್ಟ ಲಕ್ಷಣಗಳಾಗಿವೆ.

ಗ್ರಾಮೀಣ ನಿಯೋಜನಾ ಕಾರ್ಯಕ್ರಮಗಳು, ಶ್ರಮದಾನ, ಗುರುಕುಲ ವ್ಯವಸ್ಥೆ ಮತ್ತು ಗ್ರಾಮೀಣ ವಿಸ್ತರಣಾ ಕಾರ್ಯಕ್ರಮಗಳು ಗಾಂಧಿ ಗ್ರಾಮ ಸಂಸ್ಥೆಯಲ್ಲಿನ ಶಿಕ್ಷಣದ ಅಖಂಡ ಭಾಗಗಳಾಗಿವೆ. ಇವು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪುಗೊಳಿಸುತ್ತವೆ ಮತ್ತು ಮಾನವಕುಲಕ್ಕೆ ಸೇವೆಗಳನ್ನು ಸಲ್ಲಿಸುವ ಧೋರಣೆಯನ್ನು ಬೆಳೆಸುತ್ತವೆ.

Digitised by Bharatavani, CIIL

ಈ ವಿಶ್ವವಿದ್ಯಾನಿಲಯಕ್ಕೆ ನೀಡಲಾದ ಅನೇಕ ಯೋಜನೆಗಳಿಗೆ ಅನುದಾನ ನೀಡಿದವರು: ಭಾರತ ಸರಕಾರದ ಅನೇಕ ಮಂತ್ರಾಲಯಗಳು, ತಮಿಳು ನಾಡಿನ ಸರಕಾರ, ಸಿಎಪಿಎಆರ್‌ಟಿ, ನಾಬರ್ಡ್, ಯುಜಿಸಿ, ಐಸಿಎಆರ್, ಹುಡ್ಕೋ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಾದ ಎಮ್.ಎಸ್. ಸ್ವಾಮಿನಾಥನ್ ಪ್ರತಿಷ್ಠಾನ, ಅಭಿವೃದ್ಧಿ ಅಧ್ಯಯನ ಕೇಂದ್ರ(ತಿರುವನಂತಪುರ), ಮತ್ತು ರಾಜೀವ ಗಾಂಧಿ ಪ್ರತಿಷ್ಠಾನ. ಕಾರ್ಯಕ್ರಮಗಳಿಗೆ ಸಹಯೋಗವನ್ನು ನೀಡಿದವರು ಜಾಗತಿಕ ಬ್ಯಾಂಕ್, ಫೋರ್ಡ್ ಫೌಂಡೇಶನ್ ಮತ್ತು ಡಾನಿಡಾ (ಡಿಎಎನ್ಐಡಿಎ).

ನಿಯಮಿತ ಕಾರ್ಯಕ್ರಮಗಳೊಂದಿಗೆ ಗಾಂಧಿಗ್ರಾಮ ಸಂಸ್ಥೆಯು ಅನೇಕ ಕ್ಷೇತ್ರಗಳಲ್ಲಿ, ಗ್ರಾಮೀಣ ಜನರಿಗಾಗಿ ಮತ್ತು ಸರಕಾರಿ ಅಧಿಕಾರಿಗಳಿಗಾಗಿ ಅರಿವು ಮೂಡಿಸುವ, ಕೌಶಲ್ಯ ಬೆಳೆಸುವ ಮತ್ತು ಸಾಮರ್ಥ್ಯ ಹೆಚ್ಚಿಸುವ ಅಲ್ಪಾವಧಿಯ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಗ್ರಾಮೀಣ ಪ್ರದೇಶಗಳವರು ಅನೇಕ ಕಾರ್ಯಕ್ರಮಗಳಿಗಾಗಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವುದು ಸಾಮಾನ್ಯ ಸಂಗತಿಯಾಗಿದೆ. ಈ ರೀತಿಯಾಗಿ ಸಂಸ್ಥೆಯು ಗ್ರಾಮೀಣ ಬಡಜನರ ಮನೆಬಾಗಿಲಿಗೆ ಶಿಕ್ಷಣವನ್ನು ತಲುಪಿಸುವ ಉದ್ದೇಶವನ್ನು ಈಡೇರಿಸಿಕೊಂಡಿದೆ. ಅದು ಗ್ರಾಮೀಣ ಪ್ರದೇಶದಲ್ಲಿ ನಿರಕ್ಷರತೆಯನ್ನು ಹೋಗಲಾಡಿಸುವ ಸಲುವಾಗಿ ಗ್ರಾಮೀಣ ಪ್ರದೇಶಗಳಿಂದ ಸುಮಾರು ಶೇಕಡಾ 85ರಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತದೆ ಮತ್ತು ಅವರಿಗೆ ಉದ್ಯೋಗಾವಕಾಶವನ್ನು ಒದಗಿಸುತ್ತದೆ.

**ಸ್ವಾಮಿ ರಮಾನಂದ ತೀರ್ಥ ಗ್ರಾಮೀಣ ಸಂಸ್ಥೆ (ಎಸ್‌ಆರ್‌ಟಿಆರ್ಐ):**

ಆಂಧ್ರಪ್ರದೇಶದ ಪೋಚಂಪಳ್ಳಿ ಗ್ರಾಮದಲ್ಲಿ 1995ರಿಂದ ಕಾರ್ಯ ನಿರ್ವಹಿಸುತ್ತಿರುವ ಸ್ವಾಮಿ ರಮಾನಂದ ತೀರ್ಥ ಗ್ರಾಮೀಣ ಸಂಸ್ಥೆಗೆ ಹಣಕಾಸಿನ ನೆರವು ನೀಡುತ್ತಿರುವುದು ಭಾರತ ಸರಕಾರ ಮತ್ತು ಆಂಧ್ರ ಪ್ರದೇಶ ಸರಕಾರ. ಗ್ರಾಮೀಣ ಸಬಲೀಕರಣದ ಗುರಿಯನ್ನು ಹೊಂದಿರುವ ಈ ಸಂಸ್ಥೆಯನ್ನು ಸಮಗ್ರ ಬೆಳವಣಿಗೆಯಲ್ಲಿ ಗ್ರಾಮೀಣ ಭಾರತವನ್ನು ಕೇಂದ್ರಬಿಂದುವಾಗಿ ಮಾಡುವ ಮಹಾತ್ಮಾ ಗಾಂಧೀಜಿಯವರ ಕನಸನ್ನು ಈಡೇರಿಸಿಕೊಳ್ಳಲು ಪ್ರಾರಂಭಿಸಲಾಗಿದೆ. 1986ರ ಶಿಕ್ಷಣ ನೀತಿಯಲ್ಲಿ ಒತ್ತಿ ಹೇಳಿದಂತೆ, ಭಾರತ ಸರಕಾರವು ಪ್ರಾರಂಭಿಸಿರುವ ಗ್ರಾಮೀಣ ಸಂಸ್ಥೆಗಳು ಮತ್ತು ಗ್ರಾಮೀಣ ಸಂಸ್ಥೆಗಳಿಗೆ ರಾಷ್ಟ್ರೀಯ ಪರಿಷತ್ತನ್ನು ಪ್ರಾರಂಭಿಸುವ ಚಳವಳಿಯಲ್ಲಿ ಇದನ್ನು ಸ್ಥಾಪಿಸಲಾಗಿದ್ದು, ಇದರ ಚೇರಮನ್ ಆಗಿದ್ದವರು ಗಾಂಧಿಗ್ರಾಮ ಗ್ರಾಮೀಣ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿಗಳಾದ ಡಾ. ಎಮ್. ಅರಮ್ ಇವರು ಗಾಂಧಿಗ್ರಾಮದಲ್ಲಿರುವ ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಯನ್ನು ರೂಪಿಸುವುದರಲ್ಲಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಡಾ. ಎಮ್. ಅರಮ್ ಅವರ ನಂತರ ಎಲ್.ಸಿ. ಜೈನ್ ಅವರು ಪರಿಷತ್ತಿನ ಚೇರಮನ್ ಆಗಿದ್ದು, ಈಗ ಪ್ರೊಫೆಸರ್ ಬ್ರಿಜ್ ಕಿಶೋರ್ ಚೇರ್‌ಮನ್ ಆಗಿದ್ದಾರೆ. ಈಗಾಗಲೇ ಇರುವ ಗ್ರಾಮೀಣ ಸಂಸ್ಥೆಗಳನ್ನು ಬಲಪಡಿಸುವುದು ಮತ್ತು ಸಮನ್ವಯಗೊಳಿಸುವುದು ಹಾಗೂ ಹೆಚ್ಚು ಗ್ರಾಮೀಣ ಸಂಸ್ಥೆಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಈಗಿನ ಚೇರಮನ್ ಹೆಚ್ಚು ಕ್ರಮಗಳನ್ನು ಕೈಗೊಂಡಿದ್ದಾರೆ. ಗ್ರಾಮೀಣ ಸಂಸ್ಥೆಗಳ ರಾಷ್ಟ್ರೀಯ ಪರಿಷತ್ತಿನ (ಎನ್‌ಸಿಆರ್ಐ) ಮುಖ್ಯ ಕಾರ್ಯಾಲಯವಿರುವುದು ಹೈದರಾಬಾದ್‌ನಲ್ಲಿ.

**ಸಂಸ್ಥೆಯ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ:**

* ಸಮತೆ ಮತ್ತು ಸಾಮಾಜಿಕ ನ್ಯಾಯಕ್ಕೆ ಪ್ರಾಥಮಿಕ ಆದ್ಯತೆ ನೀಡಿ ಗ್ರಾಮೀಣ ಅಭಿವೃದ್ಧಿಯ ಕಾರಣಕ್ಕಾಗಿ ಪೂರ್ವ ನಿರ್ಮಾಪಕ ಪಾತ್ರವನ್ನು ನಿರ್ವಹಿಸುವುದು.
* ತರಬೇತಿ, ಶಿಕ್ಷಣ, ವಿಸ್ತರಣೆ ಮತ್ತು ಸಮಾಲೋಚನೆಯ ಮೂಲಕ ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುವುದು.
* ಗ್ರಾಮೀಣ ಅಗತ್ಯಗಳಿಗೆ ಸಂಬಂಧಪಟ್ಟ ದೇಶೀಯ ಮತ್ತು ಸಣ್ಣ ತಂತ್ರಜ್ಞಾನಗಳೂ ಒಳಗೊಂಡಂತೆ ತಂತ್ರಜ್ಞಾನವನ್ನು ಬೆಳೆಸಿ, ಅಳವಡಿಸಿ, ಸಂಘಟಿಸಿ, ಪರಿಶೀಲನೆಯನ್ನು ನಡೆಸುವುದು.
* ಶಿಕ್ಷಣ, ತರಬೇತಿ ಮತ್ತು ಉತ್ಪಾದಕ ಉದ್ಯೋಗವನ್ನು ಒಟ್ಟಾಗಿ ಬೆಳೆಸಿ ಜಾರಿಗೆ ತರಲು ಸಂಸ್ಥೆಯು ತರಬೇತಿ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ನಮ್ಯ ಪ್ರವೇಶದ ಮೂಲಕ ಪ್ರೋತ್ಸಾಹಿಸುವುದು.
* ಗ್ರಾಮೀಣ ಅಭಿವೃದ್ಧಿಯ ಅಧ್ಯಯನಕ್ಕಾಗಿ ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡ ಸಂಶೋಧನೆ ಮತ್ತು ದಾಖಲೀಕರಣ ಕೇಂದ್ರದ ಅಭಿವೃದ್ಧಿ ಮತ್ತು ನಿರ್ವಹಣೆ ಮತ್ತು ಗ್ರಾಮೀಣ ಶಿಕ್ಷಣ ಹಾಗೂ ಅಭಿವೃದ್ಧಿಗಳನ್ನು ಒಳಗೊಂಡ ವಿಷಯಗಳ ಮೇಲೆ ಸಂಶೋಧನೆಯನ್ನು ನಡೆಸುವುದು.
* ಮಾಹಿತಿ ತಂತ್ರಜ್ಞಾನದ ಜಾಲದ ಸ್ಥಾಪನೆ ಮತ್ತು ನಿರ್ವಹಣೆ. ಇದರಿಂದ ಸುಲಭವಾಗಿ ಮಾಹಿತಿಯನ್ನು ಪಡೆಯುವುದು ಮತ್ತು ಗ್ರಾಮೀಣ ಉತ್ಪಾದಕರು ಮತ್ತು ಬಳಕೆದಾರರ ನಡುವೆ ಅಂತರ್‌ಸಂಪರ್ಕವನ್ನು ಕಲ್ಪಿಸುವುದು.

ಗ್ರಾಮೀಣ ಪ್ರದೇಶದ ಎಲ್ಲ ಜನರೂ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು ಸಮರ್ಥರಾಗುವುದಕ್ಕೆ ಸಂಸ್ಥೆಯು ಅನೇಕ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಮುಂದುವರಿಕೆಯ ಶಿಕ್ಷಣ ಕಾರ್ಯಕ್ರಮವು ಸಂಸ್ಥೆಯ ಮತ್ತೊಂದು ವಿಶಿಷ್ಟ ಲಕ್ಷಣವಾಗಿದೆ. ಇದು ಗ್ರಾಮೀಣ ಜನರಿಗೆ ತಮ್ಮ ಕೌಶಲ್ಯಗಳನ್ನು ಸಾಣೆ ಹಿಡಿಯುವುದಕ್ಕೆ ಮತ್ತು ತಮ್ಮ ತಿಳಿವಳಿಕೆಯನ್ನು ಆಧುನೀಕರಿಸಿಕೊಳ್ಳಲು ನೆರವಾಗುತ್ತದೆ. ಗ್ರಾಮೀಣ ಇನ್‌ಫೋ–ನೆಟ್ ಮೂಲಕ ಸ್ವಾಮಿ ರಮಾನಂದ ತೀರ್ಥ ಗ್ರಾಮೀಣ ಸಂಸ್ಥೆಯು(ಎಸ್‌ಆರ್‌ಟಿಆರ್ಐ) ತಲುಪದೆ ಇರುವ ಜನರನ್ನು ತಲುಪಿ ಸಾಧ್ಯವಿರುವ ಎಲ್ಲಾ ವಿಧಗಳಿಂದ ಅವರಿಗೆ ನೆರವನ್ನು ನೀಡುತ್ತದೆ.

Digitised by Bharatavani, CIIL

ತರಬೇತಿ ಮತ್ತು ಶಿಕ್ಷಣ, ತಂತ್ರಜ್ಞಾನದ ಅಭಿವೃದ್ಧಿ ಮತ್ತು ವರ್ಗಾವಣೆ, ವಿಸ್ತರಿತ ಸಮಾಲೋಚನೆ ಮತ್ತು ಸಂಶೋಧನೆ ಮತ್ತು ದಾಖಲೀಕರಣಗಳ ವ್ಯಾಪಕ ಪ್ಯಾಕೇಜನ್ನು ಒದಗಿಸುವುದರ ಮೂಲಕ ಸ್ವಾಮಿ ರಮಾನಂದ ತೀರ್ಥ ಗ್ರಾಮೀಣ ಸಂಸ್ಥೆಯು ಅತ್ಯಂತ ಮುಂದುವರಿದ ತಂತ್ರಜ್ಞಾನ ಮತ್ತು ಸರಳ ಗ್ರಾಮೀಣ ವಿಶಿಷ್ಟ ಲಕ್ಷಣಗಳ ನಡುವೆ ಸಂಯೋಜನೆ ಸಾಧಿಸುವುದರಲ್ಲಿ ಭಾಗಶಃ ಯಶಸ್ಸನ್ನು ಪಡೆದಿದೆ. ಅದು ಭವಿಷ್ಯದಲ್ಲಿ ಕೌಶಲ ಆಧಾರಿತ ಶೈಕ್ಷಣಿಕ ವಿಚಾರಗಳನ್ನು ಒಳಗೊಳ್ಳುವ ಮತ್ತು ತರಬೇತಿ ತಂತ್ರಜ್ಞಾನಗಳ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕಲ್ಪಿಸಿಕೊಂಡಿದೆ.

ಎಸ್‌ಆರ್‌ಟಿಆರ್‌ಐ ಒದಗಿಸುವ ಈ ಸೌಲಭ್ಯಗಳನ್ನು ಬಳಸಲು ಇಚ್ಛಿಸುವ ಯಾರು ಬೇಕಾದರೂ ಇದನ್ನು ಪಡೆಯಬಹುದಾಗಿದೆ. ಅವರ ಗೋಪುರದ ರೀತಿಯ ನಾಲ್ಕು ಶ್ರೇಣಿಗಳ – 1. ಕುಶಲ ಕಾರ್ಮಿಕ 2. ತಂತ್ರಜ್ಞ 3. ಇಂಜಿನಿಯರ್ 4. ವಿಶೇಷಜ್ಞ– ಶಿಕ್ಷಣ ಕ್ರಮಗಳು ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯ ಮತ್ತು ಅಗತ್ಯಗಳಿಗೆ ಅನುಗುಣವಾಗಿ ಆಯ್ಕೆ ಮಾಡಲು ನೆರವಾಗುತ್ತವೆ.

ಮೊದಲ ಶ್ರೇಣಿಯಲ್ಲಿ (ಕುಶಲ ಕಾರ್ಮಿಕ) ಮುಖ್ಯ ಆದ್ಯತೆ ಕುಶಲತೆಯನ್ನು ಪಡೆಯುವುದು ಅಥವಾ ಬೆಳೆಸಿಕೊಳ್ಳುವುದಕ್ಕೆ ಇರುತ್ತದೆ. ಎರಡನೆಯ ಶ್ರೇಣಿಯು (ತಂತ್ರಜ್ಞ) ಸಂಸ್ಥೆ ನಿಗದಿಪಡಿಸಿದ ಗ್ರೇಡ್ ಅಂಕಗಳನ್ನು ಆಧರಿಸಿ ಇರುತ್ತದೆ. ಮೂರನೆಯ ಶ್ರೇಣಿಯ(ಇಂಜಿನಿಯರ್) ಪ್ರವೇಶವು ಗ್ರೇಡ್ ಆಧಾರಿತವಾಗಿದೆ. ಇದರ ಮುಖ್ಯ ಗುರಿ ಉನ್ನತ ಹಂತದ ತಾಂತ್ರಿಕ ಶಿಕ್ಷಣವಾಗಿದೆ. ತಾನು ಆಯ್ದುಕೊಳ್ಳುವ ವಿಶೇಷತೆಯಲ್ಲಿ ಪೂರ್ಣ ವಿಕಸಿತ ಇಂಜಿನಿಯರ್‌ನನ್ನು ರೂಪಿಸುವುದು ಇದರ ಗುರಿಯಾಗಿದೆ. ಅವನು ಗ್ರಾಮೀಣ ತಂತ್ರಜ್ಞಾನಗಳನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಅವನು ಗ್ರಾಮೀಣ ಪ್ರದೇಶದ ಆರ್ಥಿಕತೆಯನ್ನು ಅಧಿಕಗೊಳಿಸುವ ಸಲುವಾಗಿ ಗ್ರಾಮೀಣ ಪ್ರದೇಶಕ್ಕೆ ಹಿಂದಿರುಗಬೇಕು. ನಾಲ್ಕನೆಯ ಶ್ರೇಣಿಯಲ್ಲಿ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಕ್ಷೇತ್ರಗಳಲ್ಲಿ ವಿಶೇಷಜ್ಞರಾಗಲು ಅವರನ್ನು ಪ್ರಗತಿಪರ ತರಬೇತಿ ಮತ್ತು ಸಂಶೋಧನೆಗೆ ಒಳಪಡಿಸಲಾಗುತ್ತದೆ. ಇಲ್ಲಿ ಪ್ರವೇಶವು ಅತ್ಯಂತ ನಮ್ಯವಾದುದು. ವ್ಯಾಸಂಗದ ಕಾಲಾವಧಿ ಅಥವಾ ಅವಧಿಯನ್ನು ನಿಶ್ಚಿತವಾಗಿಸಿಲ್ಲ. ಅಭ್ಯರ್ಥಿಗಳು ದೂರಶಿಕ್ಷಣದ ಮೂಲಕವೂ ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

ಎಸ್‌ಆರ್‌ಟಿಆರ್‌ಐ ಯ ಮುಖ್ಯ ಆವರಣದಲ್ಲಿ 12 ಶಾಲೆಗಳು ಇವೆ. ಇವುಗಳು ನಾಲ್ಕು ಶ್ರೇಣಿಗಳ ಕಾರ್ಯಕ್ರಮಗಳನ್ನು ಒದಗಿಸುವ ಜವಾಬ್ದಾರಿ ಹೊಂದಿವೆ. ಶಾಲೆಗಳು ಹೀಗಿವೆ: 1. ವಸ್ತು ಉತ್ಪಾದನೆ ಮತ್ತು ಶ್ರವ್ಯ ದೃಶ್ಯ ಸಂಶೋಧನಾ ಕೇಂದ್ರ, 2. ಗ್ರಾಮೀಣ ಇಂಜಿನಿಯರಿಂಗ್, 3. ಕೃಷಿ ಇಂಜಿನಿಯರಿಂಗ್, 4. ಸಮಾಜ ಶಾಸ್ತ್ರ, 5. ಗ್ರಾಮೀಣ ಮಾರುಕಟ್ಟೆ ಮತ್ತು ನಿರ್ವಹಣೆ, 6. ತರಬೇತಿ ಮತ್ತು ವಿಸ್ತರಣಾ ಸೇವೆಗಳು, 7. ಗ್ರಾಮೀಣ ಅಸಾಂಪ್ರದಾಯಿಕ ಶಕ್ತಿ, 8. ಪ್ರಾಥಮಿಕ ಆರೋಗ್ಯ ಸೇವೆ, ಪೋಷಣೆ, ನೈರ್ಮಲ್ಯ ಮತ್ತು ಭಾರತೀಯ ಔಷಧಿಗಳು, 9. ಬಯೋ–ಮೆಡಿಕಲ್ ಇಂಜಿನಿಯರಿಂಗ್, 10. ಮಹಿಳಾ ಅಧ್ಯಯನಗಳು, 11. ಮುಂದುವರಿಕೆಯ ಶಿಕ್ಷಣ ಮತ್ತು ಮಾನವ ಮತ್ತು ಕಾನೂನು ಹಕ್ಕುಗಳು.

ಮೇಲೆ ಉಲ್ಲೇಖಿಸಿದ ಎಲ್ಲ ಕಾರ್ಯಕ್ರಮಗಳನ್ನು ಶಾಲೆಗಳ ಸಂಕೀರ್ಣದೊಂದಿಗೆ 1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಕ್ರಿಯಾ ಕಾರ್ಯಕ್ರಮದ ಅಡಿಯಲ್ಲಿ ರೂಪಿಸಲಾಗಿದೆ. ಈ ಶಾಲೆಗಳು ಶಿಕ್ಷಣ ಮತ್ತು ತರಬೇತಿಯ ಎಲ್ಲಾ ಅಂಶಗಳನ್ನು ಸಮನ್ವಯಗೊಳಿಸಲು ಪ್ರಯತ್ನ ನಡೆಸುತ್ತವೆ. ಇದರಲ್ಲಿ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ವಿಜ್ಞಾನ, ತಂತ್ರಜ್ಞಾನ, ಮಾನವಿಕ ಮತ್ತು ಸಮಾಜ ವಿಜ್ಞಾನಗಳನ್ನು ಒಳಗೊಂಡಿರುವ ಉತ್ಪಾದಕ ಮತ್ತು ಸೃಜನಶೀಲ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

**ಗ್ರಾಮೀಣ ಸಂಸ್ಥೆಗಳ ರಾಷ್ಟ್ರೀಯ ಪರಿಷತ್ತು(ಎನ್‌ಸಿಆರ್‌ಐ):**

ಗಾಂಧೀಜಿಯವರ ನಯೀ ತಾಲೀಮ್–ಮೂಲಶಿಕ್ಷಣಕ್ಕೆ ಅನುಗುಣವಾಗಿ ಗ್ರಾಮೀಣ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವ ಕೇಂದ್ರ ಸಂಸ್ಥೆಯಾಗಿ ಎನ್‌ಸಿಆರ್‌ಐ ಅನ್ನು 1995ರಲ್ಲಿ ಹೈದ್ರಾಬಾದಿನಲ್ಲಿ ಸ್ಥಾಪಿಸಲಾಯಿತು. ಎನ್‌ಸಿಆರ್‌ಐ ಪ್ರಕಟಿಸಿರುವ ಇದರ ಕೈಪಿಡಿ ('ಗ್ರಾಮೀಣ ಉನ್ನತ ಶಿಕ್ಷಣದಲ್ಲಿ ಹೊಸ ಮುಂಜಾವು')ಯಲ್ಲಿ ಉಲ್ಲೇಖಿಸಲಾದ ಉದ್ದೇಶ ಹೀಗಿದೆ: (ಪುಟ 2).

ಗ್ರಾಮೀಣ ಪ್ರದೇಶದ ಯುವಜನತೆಗೆ ಗುಣಮಟ್ಟದ ಉನ್ನತ ಶಿಕ್ಷಣವನ್ನು ಒದಗಿಸುವ ಎಲ್ಲಾ ಪ್ರಯತ್ನಗಳನ್ನು ಎನ್‌ಸಿಆರ್‌ಐ ಕೈಗೊಂಡಿದೆ. ಇಲ್ಲಿ ಅವರಿಗೆ ಸ್ವ–ಉದ್ಯೋಗಿಯಾಗಲು ಅಥವಾ ಉದ್ಯೋಗಕ್ಕೆ ಅಗತ್ಯವಿರುವ ಕೌಶಲಗಳನ್ನು ಹೊಂದಿ ಉದ್ಯೋಗ ಪಡೆಯಲು ಕಲಿಸಿಕೊಡಲಾಗುತ್ತದೆ. ಉದ್ಯೋಗಕ್ಕೆ ಅರ್ಹರೆನಿಸುವ ಯುವಜನರನ್ನು ಸಿದ್ಧಪಡಿಸುವುದು ಗ್ರಾಮೀಣ ಸಂಸ್ಥೆಗಳ ಕಾರ್ಯಕ್ರಮದ ಗುರಿಯಾಗಿದೆ. ಎನ್‌ಸಿಆರ್‌ಐ ಯು ಆರೋಗ್ಯ, ಗ್ರಾಮೀಣ ನೀರು ಪೂರೈಕೆ, ಶಕ್ತಿ, ಸಂಪರ್ಕಗಳು ಮತ್ತು ಕೃಷಿ ಕ್ಷೇತ್ರದ ಬೀಜ ಮತ್ತು ಕಟಾವೋತ್ತರ ತಂತ್ರಜ್ಞಾನಕ್ಕೆ ಆದ್ಯತೆಯನ್ನು ನೀಡಿ, ಸಾಂಪ್ರದಾಯಿಕ ಮತ್ತು ಆಧುನಿಕ ತಿಳಿವಳಿಕೆ ಮತ್ತು ತಂತ್ರಜ್ಞಾನವನ್ನು ಸಂಯೋಜಿಸುವುದರ ಮೂಲಕ ಹಳ್ಳಿಗಳ ಸಮಗ್ರ ಮತ್ತು ಆದ್ಯಂತ ಅಭಿವೃದ್ಧಿಗೆ ನೆರವಾಗುತ್ತದೆ.

**ಉಪಸಂಹಾರ:**

'ಭಾರತದ ಭವಿಷ್ಯ ಅದರ ತರಗತಿಗಳಲ್ಲಿ ರೂಪಿತವಾಗುತ್ತದೆ' ಎಂಬುದಾಗಿ ಕೊಠಾರಿ ಆಯೋಗ (1964–66)ದ ವರದಿಯಲ್ಲಿ ತಿಳಿಸಲಾಗಿದೆ. ಜನರಿಗೆ ಇಲ್ಲಿ ನೀಡಲಾಗುವ ಶಿಕ್ಷಣದಿಂದ ಭೂಮಂಡಳದ ಭವಿಷ್ಯವನ್ನು ನಿರ್ಧರಿಸಲಾಗುತ್ತದೆ. ಇದನ್ನು ಮಾನವ ನೆಲೆಯಿಂದ ಸೂಚಿಸಿ ನೆಡಲಾಗುವುದಿಲ್ಲ. ಅದನ್ನು ಮಣ್ಣಿನಲ್ಲಿಯೇ ಬಿತ್ತಬೇಕು ಮತ್ತು ಇದೇ ವೇಳೆ ಜಗತ್ತಿನಲ್ಲಿ ಸುತ್ತಮುತ್ತ ನಡೆಯುತ್ತಿರುವ ಬದಲಾವಣೆಗಳಿಗೆ ಕೂಡ ಎಚ್ಚೆತ್ತುಕೊಂಡಿರಬೇಕು. ಉನ್ನತ ಶಿಕ್ಷಣದಲ್ಲಿ ಗಾಂಧೀಜಿಯವರ ಮೂಲಶಿಕ್ಷಣದ ವ್ಯವಸ್ಥೆಯೂ ಉತ್ತರವಾಗಬಲ್ಲದು. ಅವರು

Digitised by Bharatavani, CIIL

ಕಲಿಯುವವರ ಮಾನಸಿಕ, ದೈಹಿಕ ಮತ್ತು ಆಧ್ಯಾತ್ಮಿಕ ಶಕ್ತಿಯ ಉದಾತ್ತೀಕರಣದೊಂದಿಗೆ ವೃತ್ತಿಪರ ಶಿಕ್ಷಣ/ಕುಶಲತೆಗಳಿಗೂ ಒತ್ತು ನೀಡಿದ್ದಾರೆ. ಪ್ರತಿಯೊಂದು ರಾಜ್ಯದಲ್ಲಿರುವ ಗ್ರಾಮೀಣ ಸಂಸ್ಥೆಗಳ ಮೂಲಕ ಗ್ರಾಮೀಣ ಪ್ರದೇಶಗಳ ಜನರ ಬದುಕಿನ ಶೈಲಿಯ ಸುಧಾರಣೆ ಮತ್ತು ಉನ್ನತೀಕರಣಕ್ಕೆ ಗುಣಮಟ್ಟದ ಗ್ರಾಮೀಣ ಉನ್ನತ ಶಿಕ್ಷಣ ಲಭ್ಯವಿರುವಂತೆ ನೋಡಿಕೊಳ್ಳಬೇಕು.

**ಮೂಲ: ಜಿ. ಪಂಕಜಮ್**

**ಅನು : ಡಾ. ಗೀತಾ ಶೆಣೈ**

## ಗ್ರಾಹಕ ಶಿಕ್ಷಣ

ವ್ಯಕ್ತಿಗಳಿಗೆ ಗ್ರಾಹಕರಾಗಿ ಸಮಾಜದಲ್ಲಿ ಅವರ ಪಾತ್ರಗಳೇನು, ಗ್ರಾಹಕರಾಗಿ ಅವರ ಹಕ್ಕುಗಳು ಹಾಗೂ ಜವಾಬ್ದಾರಿಗಳು ಏನು, ಮಾರುಕಟ್ಟೆ ಸ್ಥಳದಲ್ಲಿ ಹೇಗೆ ವರ್ತಿಸಬೇಕು ಹಾಗೂ ಕುಂದುಕೊರತೆಗಳ ನಿವಾರಣೆಯ ಪ್ರಕ್ರಿಯೆಯ ವಿಧಾನ ಹೇಗಿರುತ್ತದೆ ಎಂಬುದರ ಬಗ್ಗೆ ಜಾಗೃತಗೊಳಿಸುವ ಒಂದು ಕಾರ್ಯಕ್ರಮವೇ ಗ್ರಾಹಕ ಶಿಕ್ಷಣ. ಅದು ಅಪ್ರಾಪ್ತರಿಗೆ ಅವರ ಅಗತ್ಯಗಳೇನು ಎಂಬುದರ ಬಗ್ಗೆ ಎಚ್ಚರ ವಹಿಸುವಂತೆ ಮಾಡುವುದಲ್ಲದೆ, ಸಾಪೇಕ್ಷವಾಗಿ ಮುಕ್ತವಾಗಿ ಹಾಗೂ ಯಾವುದೇ ಪ್ರಭಾವಕ್ಕೊಳಗಾಗದ ರೀತಿಯಲ್ಲಿ ವಸ್ತುಗಳನ್ನು ಆಯ್ಕೆಮಾಡುವ ಸಾಮರ್ಥ್ಯ ಹೊಂದುವಂತೆ ಮಾಡುವ ಅರಿವನ್ನು ಹೊಂದಿದ ಹಾಗೂ ವಿಚಾರವಂತ ಗ್ರಾಹಕರನ್ನಾಗಿ ಮಾಡುವ ಗುರಿಯನ್ನು ಹೊಂದಿದೆ. ಇದು ಇನ್ನೊಂದು ರೀತಿಯಲ್ಲಿ, ಗ್ರಾಹಕರ ಅಗತ್ಯಗಳು ಹಾಗೂ ಬಯಕೆಗಳಿಗೆ ಹೊಂದುವಂತಹ ಆರೋಗ್ಯಕರ ಮತ್ತು ಸರಿಯಾದ ಉತ್ಪನ್ನಕ್ಕೆ ದಾರಿ ಮಾಡಿಕೊಡುವುದಲ್ಲದೆ, ಪರಿಣಾಮಕಾರಿಯಾದ ಸ್ಪರ್ಧೆಯನ್ನು ಉಂಟುಮಾಡುತ್ತದೆ. ಇದನ್ನು ಸಾಧಿಸಲು, ವಿದ್ಯಾರ್ಥಿಗಳಿಗೆ ಹಣಕಾಸಿನ ತೊಂದರೆಗಳು (ಎಟುಕದ ಉತ್ಪನ್ನಗಳು), ಭೌತಿಕ ತೊಂದರೆಗಳು (ಸುರಕ್ಷಿತವಲ್ಲದ ಹಾಗೂ ಆರೋಗ್ಯಕರವಲ್ಲದ ಉತ್ಪನ್ನಗಳು) ಹಾಗೂ ಪರಿಸರೀಯ ತೊಂದರೆಗಳು (ಪರಿಸರಕ್ಕೆ ಹಾನಿ ಉಂಟುಮಾಡುವ ಉತ್ಪನ್ನಗಳು) ಮುಂತಾದವುಗಳನ್ನು ಒಳಗೊಂಡ ಗ್ರಾಹಕರ ಬಹುಮುಖ್ಯವಾದ ಸಮಸ್ಯೆಗಳು ಹಾಗೂ ತೊಂದರೆಗಳ ಬಗ್ಗೆ ಜ್ಞಾನವನ್ನು ಹೊಂದುವಂತೆ ಮಾಡಲಾಗುತ್ತದೆ. ತಮಗೂ ಮತ್ತು ಸಮಾಜಕ್ಕೂ ಲಾಭದಾಯಕವಾಗುವಂತಹ ಜವಾಬ್ದಾರಿಯುತವಾದ ಆಯ್ಕೆಗಳನ್ನು ಮಾಡಬಲ್ಲ ಜ್ಞಾನ, ಅರಿವು ಹಾಗೂ ಕೌಶಲಗಳನ್ನು ಗಳಿಸುವಂತೆ ಅವರನ್ನು ತಯಾರು ಮಾಡಲಾಗುತ್ತದೆ ಮತ್ತು ಅವರು ತಮ್ಮ ಸ್ವಂತ ಬಳಕೆಯ ವರ್ತನೆಯ ಬಗ್ಗೆ ತಮ್ಮ ಸ್ವತಂತ್ರವಾದ ಅಭಿಪ್ರಾಯವನ್ನು ಹೊಂದುವಂತೆಯೂ ಅದರ ಬಗ್ಗೆ ಅವರು ವಾದಿಸುವುದೇ ಅಲ್ಲದೆ ಅದರಂತೆ ನಡೆಯಲೂ ಸಹ ಸಮರ್ಥರಾಗುವಂತೆಯೂ ಅವರನ್ನು ರೂಪಿಸಲಾಗುತ್ತದೆ.

### ಗ್ರಾಹಕ ಶಿಕ್ಷಣ, ಏಕೆ?

ಮಾರುಕಟ್ಟೆ ಪ್ರದೇಶ ವಿಕಾಸಗೊಂಡಾಗಿನಿಂದ ಗ್ರಾಹಕರು ಸುಲಿಗೆಗೊಳಗಾಗಿದ್ದಾರೆ. ಹೆಚ್ಚುತ್ತಲೇ ಇರುವ ಲಾಭೋದ್ದೇಶಗಳು ಹಾಗೂ ಲೋಭವು ಗ್ರಾಹಕರನ್ನು ಹಲವಾರು ರೀತಿಯ ಒತ್ತಡಕ್ಕೆ ಗುರಿ ಮಾಡಿದೆ. ನಮ್ಮಲ್ಲಿ ಬಹಳಷ್ಟು ಜನಕ್ಕೆ ನಾವು ಗ್ರಾಹಕರು ಬುದ್ಧಿವಂತಿಕೆಯಿಂದ, ವೈಚಾರಿಕವಾಗಿ ವರ್ತಿಸುತ್ತೇವೆ ಎಂಬ ಸಾಮಾನ್ಯ ನಂಬಿಕೆಯಿದೆ. ನಾವು ನಮ್ಮನ್ನು ಸಾಕಷ್ಟು ಮಾಹಿತಿಯನ್ನುಳ್ಳ, ಸಾಮಾಜಿಕ ಪ್ರವೃತ್ತಿಗಳಿಗೆ ಅಷ್ಟೊಂದು ಸುಲಭವಾಗಿ ಮಣಿಯದವರೆಂದು ಭಾವಿಸುತ್ತೇವೆ. ಆದರೆ, ವಾಸ್ತವವಾಗಿ ನಮ್ಮ ಕೊಳ್ಳುವ ವರ್ತನೆ ಹೆಚ್ಚಿನ ವೇಳೆ ತರ್ಕಬದ್ಧವಾಗಿರುವುದಿಲ್ಲ ಹಾಗೂ ಪೂರ್ವಗ್ರಹಗಳನ್ನು ಆಧರಿಸಿರುತ್ತದೆ. ಇಂದು ಮಾರುಕಟ್ಟೆ ಸ್ಥಳ ದೊಡ್ಡದಾಗಿದ್ದು, ತ್ವರಿತ ತಲುಪುವಿಕೆಯಲ್ಲಿ ಹಾಗೂ ವ್ಯವಸ್ಥಿತ ವ್ಯವಹಾರದ ತ್ವರಿತ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಂಕುಚಿತಗೊಳ್ಳುತ್ತಿದೆ. ಈ ಮಾರುಕಟ್ಟೆಯಲ್ಲಿ, ಹೆಸರಾಂತ ರಾಜಕೀಯ ಮುತ್ಸದ್ದಿ ಹಾಗೂ ಅರ್ಥಶಾಸ್ತ್ರಜ್ಞ ಜಾನ್ ಕೆನೆತ್ ಗಾಲ್‌ಬ್ರೈತ್ ಹೇಳುವಂತೆ, 'ಆರ್ಥಿಕತೆಯಲ್ಲಿ ಬೃಹತ್ ಕಾರ್ಪೋರೇಷನ್ ರಾಜನೇ ಹೊರತು ಗ್ರಾಹಕನಲ್ಲ. ನಡೆಯುವುದೆಲ್ಲವೂ ಗ್ರಾಹಕ ಬಯಸುತ್ತಾನೆಂದಲ್ಲ, ಆದರೆ ಶಕ್ತಿಶಾಲಿ ಬೃಹತ್ ಕಾರ್ಪೋರೇಷನ್‌ಗಳು ಆ ರೀತಿಯಲ್ಲಿ ಆಗಲೆಂದು ಬಯಸುತ್ತವೆ'.

ಜಗತ್ತಿನೆಲ್ಲೆಡೆ, ಶತಮಾನಗಳಿಂದ ರಾಷ್ಟ್ರಗಳು ಆರ್ಥಿಕ ಶೋಷಣೆಯ ವಿರುದ್ಧ ಜನರನ್ನು ರಕ್ಷಿಸಲು ಪ್ರಯತ್ನಿಸಿವೆ. ಮಧ್ಯಕಾಲೀನ ಯುಗದಲ್ಲಿ, ಅಪ್ರಾಮಾಣಿಕ ವ್ಯಾಪಾರಿಗಳ ಕೈಯನ್ನು ಕತ್ತರಿಸಲಾಗುತ್ತಿತ್ತು, ಮೋಸದ ಸರಕನ್ನು ಮಾರುವ ವ್ಯಾಪಾರಿಗಳನ್ನು ಅವರ ಬಟ್ಟೆಯಿಂದಲೇ ಕುತ್ತಿಗೆಯನ್ನು ಕಟ್ಟಿ ಪಟ್ಟಣದೆಲ್ಲೆಡೆ ಎಳೆತರಲಾಗುತ್ತಿತ್ತು. ಕ್ರಿ.ಪೂ. 2000ರಲ್ಲಿಯೇ ಭಾರತದಲ್ಲಿ ಆಹಾರ ಕಲಬೆರಕೆಯ ವಿರುದ್ಧ ಕಾನೂನನ್ನು ಮಾಡಲಾಗಿತ್ತು. ಹಲವು ಶತಮಾನಗಳಷ್ಟು ಹಳೆಯದಾದ ಮನುವಿನ ಕಾನೂನು, ಅಪ್ರಾಮಾಣಿಕ ವ್ಯಾಪಾರಿಗಳಿಗೆ ನೀಡಲಾಗುತ್ತಿದ್ದ ಶಿಕ್ಷೆಯ ಬಗ್ಗೆ ಉಲ್ಲೇಖಿಸುತ್ತದೆ. ಗ್ರೀಕರು ಕೂಡ ಆಹಾರ ಕಲಬೆರಕೆಯನ್ನು ನಿರ್ಬಂಧಿಸುವ ಕಾನೂನನ್ನು ಹೊಂದಿದ್ದರು. ಪ್ರಾಚೀನ ಈಜಿಪ್ತಿನಲ್ಲಿ ಮಾಂಸ ವ್ಯವಹಾರದ ಬಗ್ಗೆ ಹಾಗೂ ಸರಕಾರದ ಇನ್‌ಸ್ಪೆಕ್ಟರ್‌ಗಳು ತನಿಖೆ ನಡೆಸುವ ಬಗ್ಗೆ ಕಾನೂನುಗಳಿದ್ದವು. ಇಂಗ್ಲೆಂಡ್‌ನಲ್ಲಿನ ಮ್ಯಾಗ್ನಕಾರ್ಟ ಉಣ್ಣೆಯ ಪ್ರಮಾಣಬದ್ಧ ಅಳತೆಯನ್ನು ರೂಪಿಸಿತು. 1226ರಲ್ಲಿಯೇ ಬ್ರೆಡ್ ಅಳತೆಗಳ ಬಗ್ಗೆ ಮೊದಲ ನಿಯಮಾವಳಿಗಳನ್ನು ರೂಪಿಸಲಾಗುತ್ತಿತ್ತು. 14ನೇ ಶತಮಾನದಲ್ಲಿ ಕಲಬೆರಕೆ ಆಹಾರ ಹಾಗೂ ಪಾನೀಯಗಳ ಮಾರಾಟಕ್ಕೆ ಕ್ರಿಮಿನಲ್ ದಂಡನೆ ವಿಧಿಸಲಾಗುತ್ತಿತ್ತು. ಮೊದಲ ಗ್ರಾಹಕ ಕಾನೂನು 1784ರಲ್ಲಿ ಮೆಸ್ಸಚೂಸೆಟ್ಸ್‌ನಲ್ಲಿ ಜಾರಿಗೆ ಬಂತು. ಇದರ ನಂತರ 1790ರಲ್ಲಿ ತೂಕ ಮತ್ತು ಅಳತೆಗಳ ಕಾನೂನು ಜಾರಿಗೆ ಬಂದಿತು. ಯುನೈಟೆಡ್ ಕಿಂಗ್‌ಡಮ್‌ನಲ್ಲಿ 1852ರಲ್ಲಿ ವಾಣಿಜ್ಯ ಸರಕು ಗುರುತು (Merchandise Marks) ಕಾಯ್ದೆ ಜಾರಿಗೆ ಬಂದಿತು. ಮೊದಲ ತೂಕ ಮತ್ತು ಅಳತೆ ಕಾನೂನು ಜಾರಿಗೆ ಬಂದಿದ್ದು 1878ರಲ್ಲಿ. ಹೆಸರುವಾಸಿಯಾದ ಸರಕುಗಳ ಮಾರಾಟ ಕಾಯ್ದೆ ಜಾರಿಗೆ ಬಂದಿದ್ದು 1893ರಲ್ಲಿ.

Digitised by Bharatavani, CIIL

ಇವೆಲ್ಲ ಶಾಸಕಾಂಗ ಕ್ರಮಗಳ ಹೊರತಾಗಿಯೂ ಗ್ರಾಹಕರು ಸಾಮಾನ್ಯವಾಗಿ ಉತ್ಪಾದಕರು, ಮಾರಾಟಗಾರರು ಹಾಗೂ ಸೇವಾ ಪೂರೈಕೆದಾರರ ಕೃಪೆಯನ್ನೇ ಅವಲಂಬಿಸಿದ್ದರು. ಇದಕ್ಕೆ ಮೂಲ ಕಾರಣ, ಕಾನೂನಿನ ಬಗ್ಗೆ ತಿಳುವಳಿಕೆ ಮತ್ತು ಮಾಹಿತಿ ಇಲ್ಲದಿರುವಿಕೆ. ಅದಕ್ಕಿಂತಲೂ ಹೆಚ್ಚಾಗಿ ಕಾನೂನನ್ನು ಬಳಸಲು ಅಸಮರ್ಥರಾಗಿರುವುದು. ಈ ದೃಷ್ಟಿಯಿಂದ, ಕೆಲವು ಪ್ರಜ್ಞಾವಂತ ಗ್ರಾಹಕರು ಸಮಾಜದಲ್ಲಿ ಗ್ರಾಹಕರಾಗಿ ಅವರ ಪಾತ್ರ, ಹಕ್ಕುಗಳು ಮತ್ತು ಜವಾಬ್ದಾರಿಗಳು, ಮಾರುಕಟ್ಟೆಸ್ಥಳ ಹಾಗೂ ನೇರ್ಪಡಿಸುವ ಯಾಂತ್ರಿಕ ವ್ಯವಸ್ಥೆಯ ಬಗ್ಗೆ ಅವರಿಗೆ ಅರಿವು ಮೂಡಿಸಲು ಯಾವಾಗಲೂ ಗ್ರಾಹಕ ಶಿಕ್ಷಣದ ಅವಶ್ಯಕತೆಯನ್ನು ಮನಗಂಡಿದ್ದಾರೆ.

ಭಾರತದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಆದಾಯದಲ್ಲಿನ ವ್ಯತ್ಯಾಸಗಳು, ಬಡತನ, ಅನಕ್ಷರತೆ ಹಾಗೂ ಸ್ಫೋಟಗೊಳ್ಳುತ್ತಿರುವ ಜನಸಂಖ್ಯೆಯ ಪರಿಸ್ಥಿತಿಗಳು ಬಳಕೆಯ ನಮೂನೆಯ ಮೇಲೆ ಸಂಬಂಧ ಹೊಂದಿರುವ ಕಾರಣ ಗ್ರಾಹಕ ಶಿಕ್ಷಣದ ಅಗತ್ಯ ಇಲ್ಲಿ ಇನ್ನೂ ಹೆಚ್ಚಾಗಿದೆ. ಇಲ್ಲಿ ಬಳಕೆದಾರರು ಸಂಯೋಜನೆಯಲ್ಲಿ ವಿವಿಧ ಸ್ವರೂಪದವರಾಗಿದ್ದಾರೆ. ಶೇಕಡ 25ಕ್ಕಿಂತ ಕಡಿಮೆ ಜನ ನಗರ ಪ್ರದೇಶಗಳಲ್ಲಿ ವಾಸಿಸಿದರೆ, ಉಳಿದವರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಾರೆ. ಶೇಕಡ 30ಕ್ಕಿಂತ ಹೆಚ್ಚು ಮಂದಿ ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಾರೆ. ಹಾಗಾಗಿ, ಸಾಮಾನ್ಯವಾಗಿ, ಭಾರತೀಯ ಬಳಕೆದಾರರು ಹೆಚ್ಚಾಗಿ ಬಡವರು, ಅಶಿಕ್ಷಿತರು, ಅಜ್ಞಾನಿಗಳು ಹಾಗೂ ನಿರುತ್ಸಾಹಿಗಳಾಗಿರುತ್ತಾರೆ. ಅದರಲ್ಲಿಯೂ ಕೈಗಾರಿಕೀಕರಣ, ತಂತ್ರಜ್ಞಾನ ಅಭಿವೃದ್ಧಿ, ಸಮೂಹ ಮಾಧ್ಯಮದ ವಿಸ್ತರಣೆ, ಜಾಹೀರಾತು, ಜಾಗತೀಕರಣ, ಇತ್ಯಾದಿಗಳು ಉತ್ಪನ್ನಗಳು ಹಾಗೂ ಸೇವೆಗಳನ್ನಷ್ಟೇ ಹೆಚ್ಚಿಸಿಲ್ಲ, ವ್ಯರ್ಥ ಖರ್ಚು, ಸುರಕ್ಷತೆ, ಶೋಷಿಯ ಪ್ರಭಾವಕ್ಕೆ ಒಳಗಾಗಿ ಕೊಳ್ಳುವುದು ಮುಂತಾದವು ಬಳಕೆದಾರರಿಗೆ ಸಾಕಷ್ಟು ಸಮಸ್ಯೆಗಳನ್ನು ತಂದೊಡ್ಡಿವೆ. ಮಕ್ಕಳು, ಹದಿಹರೆಯದವರು ಅದರಲ್ಲೂ ಮುಖ್ಯವಾಗಿ ಯುವಜನತೆ ಈ ಸಮಸ್ಯೆಗಳಿಗೆ ಗುರಿಯಾಗಿದ್ದಾರೆ.

ಭಾರತದ ಒಟ್ಟು ಜನಸಂಖ್ಯೆಯ ಶೇಕಡ 40 ವರ್ಷದವರೆಗಿನ ಮಕ್ಕಳನ್ನು ಹಾಗೂ ಶೇಕಡ 49ರಷ್ಟು 20 ವರ್ಷದವರನ್ನು ಒಳಗೊಂಡಿದೆ. ಅವರು ಸರಿಯಾದ ಆಯ್ಕೆಗಳನ್ನು ಮಾಡುವಷ್ಟು ಪ್ರಬುದ್ಧರಾಗಿಲ್ಲ. ಅಷ್ಟೇ ಯಾಕೆ ಸುರಕ್ಷತೆಯ ಬಗ್ಗೆ ಸಮರ್ಪಕ ಮಾಹಿತಿಯನ್ನು ಅವರು ಹೊಂದಿರುವುದಿಲ್ಲ. ಜಾಹೀರಾತುಗಳ ಮೂಲಕ ಅವರನ್ನು ಬಳಕೆದಾರರೆಂದು ದೊಡ್ಡದಾಗಿ ಉತ್ತೇಜಿಸಲಾಗುತ್ತಿದೆ. ವಿವೇಚನಾಶೀಲರಾಗಿ ಕೊಳ್ಳುವ ನಿರ್ಧಾರವನ್ನು ಮಾಡುವಷ್ಟು ಪ್ರಬುದ್ಧರಾಗದ ಕಾರಣ ಇವರು ಅಪಾಯಕಾರಿ ಮಾರುಕಟ್ಟೆ ಅಭ್ಯಾಸಗಳು ಹಾಗೂ ಹಾನಿಕಾರಕ ವಸ್ತುಗಳಿಗೆ ಪಕ್ಕಾಗಿದ್ದಾರೆ. ಆದ್ದರಿಂದಲೇ ಅಪಾಯಕಾರಿ ಉತ್ಪನ್ನಗಳು ಮತ್ತು ಸೇವೆಗಳಿಂದ ಮಕ್ಕಳನ್ನು ರಕ್ಷಿಸಬೇಕಾದುದು ಅವಶ್ಯಕವಾಗಿದೆ. ಗ್ರಾಹಕ ಸಮಸ್ಯೆಗಳು ಹಾಗೂ ಸುರಕ್ಷತೆಯ ಹಲವಾರು ಅಂಶಗಳ ಬಗ್ಗೆ ಶಿಕ್ಷಣ ನೀಡುವುದು ವಿದ್ಯಾರ್ಥಿಗಳಿಗೆ ಹಣ ಉಳಿಸುವುದಕ್ಕೆ, ಆರೋಗ್ಯ ಮತ್ತು ಪರಿಸರದ ಸಂರಕ್ಷಣೆಗೆ ಸಹಾಯ ಮಾಡುವುದಲ್ಲದೆ ಅವರು ಬೆಳೆದು ದೊಡ್ಡವರಾದಾಗ ಇದು ಒಂದು ಆಸ್ತಿ ಕೂಡ ಆಗುತ್ತದೆ. ಒಟ್ಟಾರೆಯಾಗಿ ಗ್ರಾಹಕ ಶಿಕ್ಷಣ ಮುಖ್ಯ ಹಾಗೂ ಅವಶ್ಯಕ ಏಕೆಂದರೆ,

- ವ್ಯಕ್ತಿಯೊಬ್ಬನನ್ನು ಅವಶ್ಯಕತೆಗಳಿಗೂ ಬಯಕೆಗಳಿಗೂ ಇರುವ ವ್ಯತ್ಯಾಸವನ್ನು ಕಾಣುವ ಕೊಳ್ಳುಗನಾಗಲು ಸಹಾಯ ಮಾಡುತ್ತದೆ;
- ಕುಶಲತೆ ಹಾಗೂ ಚತುರತೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು, ಸಮಸ್ಯೆಗಳನ್ನು ಕಂಡುಹಿಡಿಯುವ ಹಾಗೂ ಅವುಗಳನ್ನು ಬಗೆಹರಿಸಲು ಮತ್ತು ಬದಲಿಯನ್ನು ಹುಡುಕಲು ಸಹಾಯ ಮಾಡುತ್ತದೆ;
- ಜನರು ತಮ್ಮ ಹಾಗೂ ತಮ್ಮ ಕುಟುಂಬದ ಮೊದಲ ಜವಾಬ್ದಾರಿಯಿಂದ ಸಮುದಾಯದ ಹೆಚ್ಚಿನ ಸಾಮಾಜಿಕ ಜವಾಬ್ದಾರಿಗೆ ಸಾಗುವುದಕ್ಕೆ ಸಹಾಯ ಮಾಡುತ್ತದೆ;
- ಕೊಳ್ಳುವಿಕೆಗೆ ಜಾಹೀರಾತು ಹಾಗೂ ಇನ್ನಿತರ ಒತ್ತಡಗಳಿಗೆ ಮಣಿಯದೆ ಹೊಸತಾದ ಬೆಲೆ ಕಟ್ಟುವುದನ್ನು ಯುವಕರಿಗೆ ಕಲಿಸುತ್ತದೆ;
- ಪೂರೈಸುವವರು, ಉತ್ಪತ್ತಿ ಮಾಡುವವರು ಹಾಗೂ ಕೊಳ್ಳುವವರು ಮಾರುವವರ ನಡುವಿನ ಅಸಮತೋಲನವನ್ನು ಅರ್ಥಮಾಡಿಕೊಳ್ಳಲು – ಹಾಗೂ ಈ ಅಸಮತೋಲನವನ್ನು ಕಡಿಮೆ ಮಾಡಲು ಏನಾದರೂ ಸಕಾರಾತ್ಮಕವಾದುದನ್ನು ಮಾಡಲು ಜನರಿಗೆ ಸಹಾಯ ಮಾಡುತ್ತದೆ;
- ರಾಷ್ಟ್ರೀಯ ಆರ್ಥಿಕತೆಗೆ ಸಹಾಯ ಮಾಡುತ್ತದೆ; ಸ್ವದೇಶಿ ಬಳಕೆದಾರರು ಅಂಗೀಕೃತ ಗುಣಮಟ್ಟ ಹಾಗೂ ಉತ್ಕೃಷ್ಟ ದರ್ಜೆಯ ಉತ್ಪನ್ನಗಳಿಗೆ ಆಗ್ರಹಿಸಿದರೆ, ಇಡೀ ರಾಷ್ಟ್ರವು ಆರ್ಥಿಕತೆ ಲಾಭವನ್ನು ಪಡೆದುಕೊಳ್ಳುತ್ತದೆ;
- ವ್ಯಕ್ತಿಯೊಬ್ಬನು ತನ್ನ ಸರಕು ಮತ್ತು ಸೇವೆಗಳನ್ನು ಬುದ್ಧಿವಂತಿಕೆಯಿಂದ ಆಯ್ದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತದೆ;
- ಸರಕು ಮತ್ತು ಸೇವೆಗಳನ್ನು ಖರೀದಿ ಮಾಡುವಾಗ ವಿವೇಚನೆಯುಳ್ಳ ತೀರ್ಮಾನಗಳನ್ನು ಕೈಗೊಳ್ಳುವ ಕೌಶಲವನ್ನು ನೀಡುತ್ತದೆ;
- ಬಳಕೆದಾರರ ಅನುಕೂಲಕ್ಕಾಗಿ ಹಾಲಿಯಿರುವ ಕಾನೂನು ಹಾಗೂ ಮಾನದಂಡಗಳ ಬಗ್ಗೆ ಜ್ಞಾನವನ್ನು ಒದಗಿಸುತ್ತದೆ;
- ಬಳಕೆದಾರ ಸುರಕ್ಷತಾ ಸೇವೆಗಳ ಬಳಕೆಯ ಕುರಿತು ಬಳಕೆದಾರರಿಗೆ ಮಾರ್ಗದರ್ಶನ ಹಾಗೂ ಸಲಹೆಯನ್ನು ನೀಡುತ್ತದೆ;
- ಸಮಸ್ಯಾತ್ಮಕ ಸನ್ನಿವೇಶದಲ್ಲಿ ಸೂಕ್ತವಾದ ಕ್ರಮವನ್ನು

Digitised by Bharatavani, CIIL

ತೆಗೆದುಕೊಳ್ಳಲು ಬಳಕೆದಾರರಿಗೆ ಸಹಾಯ ಮಾಡುವಂತಹ ಸಂಸ್ಥೆಗಳ ಬಗ್ಗೆ ಜಾಗೃತಿ ಮೂಡಿಸುತ್ತದೆ;

- ಹೊಸ, ಸಂಕೀರ್ಣ ಉತ್ಪನ್ನಗಳು ಹಾಗೂ ಸೇವೆಗಳೊಂದಿಗೆ ಹಾಗೂ ಭಿನ್ನವಾದ ಕೊಳ್ಳುವಿಕೆ ಹಾಗೂ ಮಾರುವಿಕೆಗಳೊಂದಿಗೆ ಸಂವಹನ, ಉತ್ಪಾದನೆ ಹಾಗೂ ಪ್ರಚಾರ ವ್ಯವಸ್ಥೆಗಳಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳನ್ನು ನಿಭಾಯಿಸಿಕೊಂಡು ಹೋಗಲು ಸಹಾಯ ಮಾಡುತ್ತದೆ;
- ಕಡಿಮೆ ಆದಾಯವುಳ್ಳ, ಅಶಿಕ್ಷಿತರಾದ ಹಾಗೂ ದೈಹಿಕವಾಗಿ ವಿಕಲವಾಗಿರುವ ಬಳಕೆದಾರರು ಅಥವಾ ವಿಶೇಷ ಅಗತ್ಯವುಳ್ಳವರನ್ನು ಸ್ವಯಂಸೇವಾ ಹಾಗೂ ಸರಕಾರಿ ಸಂಸ್ಥೆಗಳ ಮೂಲಕ ಸಮಸ್ಯೆಗಳನ್ನು ನಿಭಾಯಿಸಿಕೊಂಡು ಹೋಗಲು ಸಜ್ಜುಗೊಳಿಸುತ್ತದೆ;
- ಸುರಕ್ಷಿತ, ನಂಬಲರ್ಹ, ಗುಣಮಟ್ಟದ ಉತ್ಪನ್ನಗಳು ಹಾಗೂ ಸೇವೆಗಳನ್ನು ನ್ಯಾಯವಾದ ಬೆಲೆಗೆ ಪಡೆಯಲು ಬಳಕೆದಾರರನ್ನು ಸಜ್ಜುಗೊಳಿಸುತ್ತದೆ;
- ಸಮಾಜದಲ್ಲಿ ಜನರಿಗೆ ತಮ್ಮ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಜಾಗೃತಿ ಮೂಡಿಸುತ್ತದೆ.

**ಗ್ರಾಹಕ ಶಿಕ್ಷಣ: ಆರಂಭ ಮತ್ತು ಬೆಳವಣಿಗೆ**

ಪಾಶ್ಚಿಮಾತ್ಯ ದೇಶಗಳಲ್ಲಿ ಗ್ರಾಹಕರನ್ನು ಶಿಕ್ಷಿತರನ್ನಾಗಿ ಮಾಡುವ ಪ್ರಕ್ರಿಯೆಯು ಔಪಚಾರಿಕ ಶಿಕ್ಷಣ ಪದ್ಧತಿಗಿಂತ ಅನೌಪಚಾರಿಕವಾಗಿ ಪ್ರಾರಂಭವಾಯಿತು. ಅದು ಜನಪ್ರಿಯ ಪರಿಭಾಷೆಯಲ್ಲಿ ಗ್ರಾಹಕ ಚಳುವಳಿಯಾಗಿ ಹುಟ್ಟಿಕೊಂಡಿತು. 19ನೆಯ ಶತಮಾನದ ಮಧ್ಯಭಾಗದಲ್ಲಿ, ಇಂಗ್ಲೆಂಡ್‌ನಲ್ಲಿನ ಗ್ರಾಹಕವರ್ಗವೊಂದು ಜವಳಿ ಉದ್ದಿಮೆಯಲ್ಲಿನ ಕಾರ್ಮಿಕರ ಶೋಷಣೆಯ ವಿರುದ್ಧ ಪ್ರತಿಭಟಿಸುವ ನಿಟ್ಟಿನಲ್ಲಿ ತಮ್ಮನ್ನು ತಾವು ವ್ಯವಸ್ಥೆಗೊಳಿಸಿಕೊಂಡಿತು. 19ನೆಯ ಶತಮಾನದ ಕೊನೆಯ ಭಾಗದ ವೇಳೆಗೆ ಯುಕೆ, ಯು.ಎಸ್.ಎ ಮತ್ತು ಯುರೋಪ್‌ನಲ್ಲಿ ಮಧ್ಯವರ್ತಿಗಳು ಹಾಗೂ ಲಾಭಕೋರರನ್ನು ತಡೆಯುವುದಕ್ಕಾಗಿ ಗ್ರಾಹಕರ ಕ್ಲಬ್‌ಗಳ ರೂಪದಲ್ಲಿ ಅಲ್ಲೊಂದು ಇಲ್ಲೊಂದು ಪ್ರಯತ್ನಗಳು ನಡೆದವು. 1891ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಮೊದಲ ಗ್ರಾಹಕ ಬಳಗ ಆರಂಭಗೊಂಡಿತು. 45 ವರ್ಷಗಳ ನಂತರ, 1936ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಗ್ರಾಹಕ ಒಕ್ಕೂಟ ಆರಂಭಗೊಂಡಿತು. ಬಹಳ ಕಾಲದವರೆಗೆ ಇಡೀ ವಿಶ್ವದಲ್ಲಿಯೇ ಆ ತರಹದ ಗ್ರಾಹಕ ಸಂಸ್ಥೆ ಇದ್ದದ್ದು ಅದೊಂದೆ. ಗ್ರಾಹಕರಿಗೆ ಪಕ್ಷಪಾತ ರಹಿತವಾದ ಮಾಹಿತಿಯನ್ನು ನೀಡಲು, ಹಾಗೂ ಕುಟುಂಬ ವೆಚ್ಚಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳು ಹಾಗೂ ಗ್ರಾಹಕರ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಸಲಹೆ ನೀಡಲು, Consumer Reports (ಗ್ರಾಹಕ ವರದಿಗಳು) ಎಂಬ ಹೆಸರಿನಲ್ಲಿ ಮಾಸಿಕ ಮ್ಯಾಗಜಿನ್ ಹೊರತರುವುದು ಗ್ರಾಹಕ ಒಕ್ಕೂಟದ ಉದ್ದೇಶವಾಗಿತ್ತು.

ಗ್ರಾಹಕ ಒಕ್ಕೂಟ ಹಾಗೂ ಅದರ ನಿಯತಕಾಲಿಕ Consumer Reports (ಗ್ರಾಹಕ ವರದಿಗಳು) ಪಶ್ಚಿಮದ ಬಹಳಷ್ಟು ದೇಶಗಳಲ್ಲಿ ಅನೇಕ ಗ್ರಾಹಕ ಸಂಸ್ಥೆಗಳನ್ನು ರೂಪಿಸಲು ಪ್ರೋತ್ಸಾಹ ನೀಡಿತು. ಗ್ರಾಹಕ ಚಳವಳಿ ರೂಪ ಪಡೆಯುತ್ತಿದ್ದ ಹಾಗೆಯೇ, ಯುಕೆ, ಯುಎಸ್‌ಎ, ನೆದರ್‌ಲ್ಯಾಂಡ್, ಆಸ್ಟ್ರೇಲಿಯ, ಫ್ರಾನ್ಸ್, ಐಸ್‌ಲ್ಯಾಂಡ್, ಆಸ್ಟ್ರೀಯ, ಇಸ್ರೇಲ್, ಸ್ವೀಡನ್, ನ್ಯೂಜಿಲೆಂಡ್, ಡೆನ್ಮಾರ್ಕ್ ಮತ್ತು ನಾರ್ವೆಯಲ್ಲಿನ ಗ್ರಾಹಕ ಸಮೂಹಗಳು 1960ರ ಏಪ್ರಿಲ್‌ನಲ್ಲಿ International Organisation of Consumers Unions- IOCU (ಅಂತಾರಾಷ್ಟ್ರೀಯ ಗ್ರಾಹಕರ ಒಕ್ಕೂಟಗಳ ಸಂಸ್ಥೆ)ಯನ್ನು ರಚಿಸಲು ದ ಹೇಗ್‌ನಲ್ಲಿ ಸಭೆ ಸೇರಿದವು. 1995ರಲ್ಲಿ IOCU ಹೆಸರನ್ನು Consumers International – CI (ಗ್ರಾಹಕ ಅಂತಾರಾಷ್ಟ್ರೀಯ) ಎಂದು ಬದಲಾಯಿಸಲಾಯಿತು. 1962ರ 15ನೇ ಮಾರ್ಚ್‌ನಂದು ಅಮೆರಿಕದ ಅಂದಿನ ಅಧ್ಯಕ್ಷ ಜಾನ್ ಎಫ್. ಕೆನಡಿ ಅಮೆರಿಕ ಕಾಂಗ್ರೆಸ್‌ಗೆ ನೀಡಿದ ಐತಿಹಾಸಿಕ ಸಂದೇಶದಲ್ಲಿ ಹೆಸರಿಸಿದ ನಾಲ್ಕು ಮೂಲಭೂತ ಗ್ರಾಹಕ ಹಕ್ಕುಗಳು– ಸುರಕ್ಷತೆಯ ಹಕ್ಕು, ಮಾಹಿತಿ ಪಡೆಯುವ ಹಕ್ಕು, ಆಯ್ಕೆಯ ಹಕ್ಕು ಹಾಗೂ ಆಲಿಸಲ್ಪಡುವ ಹಕ್ಕುಗಳಿಂದಾಗಿ ಗ್ರಾಹಕ ಚಳವಳಿ ಮಹತ್ವದ ವೇಗ ಪಡೆದುಕೊಂಡಿತು. ಈ ನಾಲ್ಕು ಹಕ್ಕುಗಳೊಂದಿಗೆ IOCU ಇನ್ನೂ ಮೂರು ಹಕ್ಕುಗಳು – ನೇರ್ಪಡಿಸುವ ಹಕ್ಕು, ಗ್ರಾಹಕ ಶಿಕ್ಷಣದ ಹಕ್ಕು ಹಾಗೂ ಆರೋಗ್ಯಕರ ಪರಿಸರ, ಇವುಗಳನ್ನು ಸೇರಿಸಿತು. 1985ರ 9ನೇ ಏಪ್ರಿಲ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಮಿತಿಯು ವಿಶ್ವಸಂಸ್ಥೆಯ ಗ್ರಾಹಕ ಸಂರಕ್ಷಣೆ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡಿತು. ಈ ಮಾರ್ಗಸೂಚಿಗಳು ಸರಕಾರಗಳು ಬಲವಾದ ಗ್ರಾಹಕ ನೀತಿಯನ್ನು ಅಭಿವೃದ್ಧಿಗೊಳಿಸಲು, ಬಲಪಡಿಸಲು ಅಥವಾ ನಿರ್ವಹಿಸಲು ಕರೆ ನೀಡಿತಲ್ಲದೆ, ಏಳು ವಿಷಯಗಳು ಅಥವಾ ಹಕ್ಕುಗಳಿಗೆ ಸಂಬಂಧಿಸಿದಂತೆ ಹಲವಾರು ಕ್ರಮಗಳನ್ನು ಘೋಷಿಸಿತು. ಏಳು ಹಕ್ಕುಗಳು ಅಥವಾ ವಿಷಯಗಳು– 1. ದೈಹಿಕ ಸುರಕ್ಷತೆ; 2. ಆರ್ಥಿಕ ಹಿತಾಸಕ್ತಿಗಳು; 3. ಪ್ರಮಾಣಕರು; 4. ಅತ್ಯಾವಶ್ಯಕ ಸರಕುಗಳು ಮತ್ತು ಸೇವೆಗಳು; 5. ನೇರ್ಪಡಿಸುವಿಕೆ; 6. ಶಿಕ್ಷಣ ಮತ್ತು ಮಾಹಿತಿ; ಹಾಗೂ 7. ಆರೋಗ್ಯ, ಇವುಗಳ ಮೂಲಕ ಗ್ರಾಹಕರ ಹೆಚ್ಚಿನ ಸಂರಕ್ಷಣೆಗೆ ಒತ್ತು ನೀಡುತ್ತವೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಗ್ರಾಹಕ ಸಂರಕ್ಷಣೆಯ ಪ್ರಮುಖ ಅಂಶವೆಂದರೆ, ಗ್ರಾಹಕ ಶಿಕ್ಷಣ.

ಹಾನಿಕಾರಕವಾದ ಮಾರುಕಟ್ಟೆ ಅಭ್ಯಾಸಗಳು ಹಾಗೂ ಉತ್ಪನ್ನಗಳಿಗೆ ಹೆಚ್ಚು ಒಳಗಾಗುವ ಎಲ್ಲ ಸಮೂಹಗಳನ್ನು ಗ್ರಾಹಕ ಶಿಕ್ಷಣ ತಲುಪಬೇಕೆಂದು ವಿಶ್ವಸಂಸ್ಥೆ ಮಾರ್ಗಸೂಚಿ ಒತ್ತಿ ಹೇಳುತ್ತದೆ. ಅವರಿಗೆ, ಇಂತಹ ಶೋಷಣೆಯ ವಿರುದ್ಧ ಹೋರಾಡಲು ಗ್ರಾಹಕ ಶಿಕ್ಷಣ ಜ್ಞಾನ ಹಾಗೂ ಕೌಶಲವನ್ನು ಖಾತ್ರಿಪಡಿಸುತ್ತದೆ. ಮಾರ್ಗಸೂಚಿಗಳು ಹೇಳುವುದೇನೆಂದರೆ, 'ಸರಕಾರವು ತನಗೆ ಸಂಬಂಧಪಟ್ಟ ಜನರ ಸಾಂಸ್ಕೃತಿಕ ಪರಂಪರೆಗಳನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯ ಗ್ರಾಹಕ ಶಿಕ್ಷಣ ಹಾಗೂ ಮಾಹಿತಿ ಕಾರ್ಯಕ್ರಮಗಳನ್ನು ಅಭಿವೃದ್ಧಿಗೊಳಿಸಬೇಕು ಹಾಗೂ ಪ್ರೋತ್ಸಾಹಿಸಬೇಕು. ಜನರು ವಿವೇಚನೆಯುಳ್ಳ ಗ್ರಾಹಕರಾಗಿ

Digitised by Bharatavani, CIIL

ವರ್ತಿಸಲು, ಸರಕುಗಳು ಮತ್ತು ಸೇವೆಗಳ ಬಗ್ಗೆ ಮಾಹಿತಿ ಹೊಂದಿ ಆಯ್ಕೆ ಮಾಡುವ ಸಾಮರ್ಥ್ಯ ಹೊಂದುವಂತೆ ಹಾಗೂ ತಮ್ಮ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಪ್ರಜ್ಞೆಯುಳ್ಳವರಾಗಿರುವಂತೆ ಮಾಡುವುದು ಅಂತಹ ಕಾರ್ಯಕ್ರಮಗಳ ಗುರಿಯಾಗಿರಬೇಕು'.

ಆಡಳಿತಾತ್ಮಕ ವಿಚಾರಗಳಲ್ಲಿ ಭಾರತವು ಗ್ರಾಹಕ ಸಂರಕ್ಷಣೆ ಕುರಿತಂತೆ ಪ್ರಾಚೀನ ಇತಿಹಾಸವನ್ನೇ ಹೊಂದಿದ್ದರೂ ಭಾರತದಲ್ಲಿ ಗ್ರಾಹಕ ಚಳವಳಿ ಆರಂಭವಾಗಿದ್ದು 20ನೇ ಶತಮಾನದ ಮೊದಲ ಭಾಗದಲ್ಲಿ. ಭಾರತದಲ್ಲಿ ಗ್ರಾಹಕರ ಸಂಘಟಿತ ಸಂಸ್ಥೆ ಮೊದಲು ಸ್ಥಾಪಿತವಾಗಿದ್ದು ಬಾಂಬೆಯಲ್ಲಿ, 1915ರಲ್ಲಿ 'ಪ್ಯಾಸೆಂಜರ್ಸ್ ಅಂಡ್ ಟ್ರಾಫಿಕ್ ರಿಲೀಫ್ ಅಸೋಸಿಯೇಶನ್' (ಪ್ರಯಾಣಿಕರು ಮತ್ತು ಸಂಚಾರಿ ಪರಿಹಾರ ಸಂಸ್ಥೆ) ಮೂಲಕ ಎಂದು ತಿಳಿದುಬರುತ್ತದೆ. 1915ರಲ್ಲೇ ಆರಂಭವಾದ 'ವಿಮೆನ್ ಗ್ರಾಜುಯೇಟ್ಸ್ ಯೂನಿಯನ್ (ಮಹಿಳಾ ಪದವೀಧರರ ಒಕ್ಕೂಟ), ಬಾಂಬೆ, ಇಂತಹ ಮತ್ತೊಂದು ಸಂಸ್ಥೆ. ಆನಂತರ, ಏಕಸ್ವಾಮ್ಯಗಳ ದುರ್ಬಳಕೆಯನ್ನು ತಡೆಗಟ್ಟಲು ಹಾಗೂ ಕೆಳ ಆದಾಯ ವರ್ಗಗಳ ಪರಿಸ್ಥಿತಿಯನ್ನು ಸುಧಾರಿಸಲು ಗ್ರಾಹಕ ಸಹಕಾರಿ ಸಂಸ್ಥೆಗಳು ಆರಂಭಗೊಂಡವು. ಅವೂ ಸಹ ಗ್ರಾಹಕ ಶಿಕ್ಷಣದ ಪ್ರಯತ್ನವನ್ನು ಕೈಗೊಂಡವು. ಎರಡನೇ ಮಹಾಯುದ್ಧ ಮತ್ತು ಅದರ ಜೊತೆಯಲ್ಲಿಯೇ ಬಂದ ಅಭಾವ ಪರಿಸ್ಥಿತಿಯು ಸಹಕಾರಿ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸಿತು. 1940ರಲ್ಲಿ ದಕ್ಷಿಣ ಭಾರತದಲ್ಲಿ ಪ್ರಸಿದ್ಧ ಸ್ವಾತಂತ್ರ್ಯ ಚಳುವಳಿಗಾರರಾದ ತಂಗತುರಿ ಪ್ರಕಾಶಂ ಮತ್ತು ಸಿ. ರಾಜಗೋಪಾಲಚಾರಿಯವರ ಂತಹವರಿಂದ ಗ್ರಾಹಕರನ್ನು ಮಧ್ಯವರ್ತಿಗಳಿಂದ ಸಂರಕ್ಷಿಸಲು ವ್ಯವಸ್ಥಿತವಾದ ಪ್ರಯತ್ನಗಳು ನಡೆದವು. ಜೊತೆಗೆ ಗ್ರಾಹಕ ಸಹಕಾರಿ ಸಂಸ್ಥೆಗಳ ರಚನೆಯ ಮೂಲಕವಾಗಿಯೂ ನಡೆಯಿತು. ಆದರೂ ಸಹಕಾರಿ ಚಳವಳಿಯು ಆಧುನಿಕ ರೀತಿಯ ಗ್ರಾಹಕ ಸಂರಕ್ಷಣೆಗಾಗಿ ಸಂಘಟಿತಗೊಂಡಿದ್ದಲ್ಲ. ಇದು ಭಾರತದಲ್ಲಿ ಆರಂಭಗೊಂಡಿದ್ದು 1960ರಲ್ಲೇ. ಈ ನಿಟ್ಟಿನಲ್ಲಿ ನಿಜವಾಗಿಯೂ ಪರಿಣಾಮ ಬೀರಿದ ಮೊತ್ತಮೊದಲ ಸಂಸ್ಥೆಯೆಂದರೆ ಬಾಂಬೆಯ ಕನ್ಸ್ಯೂಮರ್ ಗೈಡನ್ಸ್ ಸೊಸೈಟಿ ಆಫ್ ಇಂಡಿಯ (ಭಾರತದ ಗ್ರಾಹಕ ಮಾರ್ಗದರ್ಶನ ಸಂಘ). ಭಾರತದಲ್ಲಿನ ಗ್ರಾಹಕ ಚಳವಳಿಗೆ ಮೂಲಕಾರಣಗಳು ಪಶ್ಚಿಮಕ್ಕಿಂತ ಭಿನ್ನವಾಗಿದ್ದವು. ಪಶ್ಚಿಮದ ದೇಶಗಳಲ್ಲಿ, ಗ್ರಾಹಕ ಚಳವಳಿಯು ಕೈಗಾರಿಕೀಕರಣೋತ್ತರ ಸಮೃದ್ಧಿಯ ಪ್ರತಿಫಲವಾಗಿತ್ತು. ಆದರೆ ಭಾರತದಲ್ಲಿ, ಗ್ರಾಹಕ ಚಳವಳಿಗೆ ಮೂಲಕಾರಣಗಳು ಗ್ರಾಹಕ ಉತ್ಪನ್ನಗಳ ಕೊರತೆ, ಹಣದುಬ್ಬರ, ಕಲಬೆರಕೆ ಮತ್ತು ಕಾಳಸಂತೆ ಹಾಗೂ ತಂತ್ರಜ್ಞಾನದಲ್ಲಿನ ಬೆಳವಣಿಗೆಯ ಕೊರತೆಯಿಂದಾಗಿ ಉದ್ಭವವಾದ ಉತ್ಪನ್ನ ಆಯ್ಕೆಗಳ ಕೊರತೆ.

ವ್ಯತ್ಯಾಸಗಳೇನೇ ಆದರೂ ಪಶ್ಚಿಮದಲ್ಲಿದ್ದಂತೆ ಭಾರತದಲ್ಲಿನ ಗ್ರಾಹಕ ಚಳವಳಿಯ ಮುಖ್ಯ ಅಂಶವೆಂದರೆ, ಗ್ರಾಹಕ ಶಿಕ್ಷಣ. ಕಿರುಹೊತ್ತಿಗೆ ಮುದ್ರಿಸುವುದು, ಲೇಖನಗಳನ್ನು ಬರೆಯುವುದು, ಸಭೆಗಳನ್ನು ಆಯೋಜಿಸುವುದು, ಉಪನ್ಯಾಸಗಳನ್ನು ನೀಡುವುದು, ಸುಸಂಘಟಿತ ಪ್ರಯತ್ನ ಮತ್ತು ಶಿಫಾರಸು ಮಾಡುವಿಕೆ, ಪ್ರದರ್ಶನಗಳನ್ನು ಏರ್ಪಡಿಸುವುದು ಮುಂತಾದವುಗಳ ಮೂಲಕ ಈ ಕಾರ್ಯವನ್ನು ಕೈಗೊಳ್ಳಲಾಯಿತು. ಬಡತನ, ಗ್ರಾಮೀಣ ಪ್ರದೇಶಗಳಲ್ಲಿ ಬೃಹತ್ ಸಂಖ್ಯೆಯ ಜನರು ಕೇಂದ್ರೀಕರಿಸಿರುವುದು, ವ್ಯಾಪಕವಾಗಿ ಹರಡಿರುವ ಅನಕ್ಷರತೆಯಿಂದಾಗಿ ಚಳವಳಿಯು ಅಷ್ಟೇನೂ ತೀವ್ರವಾಗಲಿಲ್ಲ. ಗ್ರಾಹಕ ಚಳವಳಿ ಹಾಗೂ ಶಿಕ್ಷಣಕ್ಕೆ ಮಹತ್ವದ ವೇಗ ದೊರೆತಿದ್ದು 1986ರಲ್ಲಿ ಜಾರಿಗೆ ಬಂದ ಕನ್ಸ್ಯೂಮರ್ ಪ್ರೊಟೆಕ್ಷನ್ ಆಕ್ಟ್ (ಸಿಪಿಎ)– ಗ್ರಾಹಕ ಸಂರಕ್ಷಣಾ ಕಾಯ್ದೆಯಿಂದ.

ಸಿಪಿಎ ಆರು ಗ್ರಾಹಕ ಹಕ್ಕುಗಳನ್ನು ಮಾನ್ಯ ಮಾಡಿದೆ: ಸುರಕ್ಷತಾ ಹಕ್ಕು; ಮಾಹಿತಿ ಹಕ್ಕು; ಆಯ್ಕೆಯ ಹಕ್ಕು; ಪ್ರಾತಿನಿಧ್ಯದ ಹಕ್ಕು; ನೇರ್ಪಡಿಸುವಿಕೆಯ ಹಕ್ಕು; ಹಾಗೂ ಗ್ರಾಹಕ ಶಿಕ್ಷಣದ ಹಕ್ಕು. ಸಿಪಿಎನ ಮತ್ತೊಂದು ಮುಖ್ಯ ಅಂಶವೆಂದರೆ, ಸರಳ, ತ್ವರಿತ ಹಾಗೂ ದುಬಾರಿಯಲ್ಲದ ವಿವಾದಗಳನ್ನು ನೇರ್ಪಡಿಸುವಂತಹ ವ್ಯವಸ್ಥೆಯನ್ನು ಒದಗಿಸುವುದು. ದೂರು ಹಂತದ ಭಾಗಶಃ–ನ್ಯಾಯಿಕ ಸ್ವರೂಪವು ಹಣಕಾಸು ಹಾಗೂ ಪ್ರಾದೇಶಿಕ ವ್ಯಾಪ್ತಿಯೊಳಗಿನ ಗ್ರಾಹಕ ದೂರುಗಳನ್ನು ಹಾಗೂ ಕಾಲಮಿತಿಯಲ್ಲಿ ವಿವಾದಗಳ ಇತ್ಯರ್ಥ ಮಾಡುವಿಕೆಯನ್ನು ಷರತ್ತಾಗಿ ವಿಧಿಸುತ್ತದೆ. ಇದರಲ್ಲಿ ಅತ್ಯಂತ ಕೆಳಗಿನ ವೇದಿಕೆಯೆಂದರೆ, ಹೆಚ್ಚು ಕಡಿಮೆ ಭಾರತದ ಎಲ್ಲಾ ಜಿಲ್ಲೆಗಳಲ್ಲಿರುವ ಜಿಲ್ಲಾ ವೇದಿಕೆ.

ನೇರ್ಪಡಿಸುವಿಕೆಯ ವ್ಯವಸ್ಥೆಯು ಇಡೀ ವಿಶ್ವದಲ್ಲಿಯೇ ಅನನ್ಯವಾದುದು. ಆದರೆ, ತಿಳಿವಳಿಕೆಯಿರುವವರು ಮಾತ್ರ ಇದರಿಂದ ನಿಜವಾಗಿಯೂ ಲಾಭ ಪಡೆಯಬಹುದು. ಆದ್ದರಿಂದಲೇ ತಿಳಿವಳಿಕೆ ಮೂಡಿಸುವ ಹಾಗೂ ಶಿಕ್ಷಣ ನೀಡುವ ಅಗತ್ಯವಿದೆ. ಆದ್ದರಿಂದಲೇ 'ಸಿಪಿಎ'ಯು ಗ್ರಾಹಕ ಶಿಕ್ಷಣದ ಹಕ್ಕನ್ನು ತಾನೇ ನೀಡುತ್ತಿದೆ.

ಶಿಕ್ಷಣವು ನಮ್ಮನ್ನು ಕತ್ತಲೆಯಿಂದ ಬೆಳಕಿನೆಡೆಗೆ ನಡೆಸುತ್ತದೆ ಎಂಬುದು ನಮಗೆ ಚೆನ್ನಾಗಿಯೇ ತಿಳಿದಿರುವ ವಿಷಯ. ಔಪಚಾರಿಕ ಅಥವಾ ಅನೌಪಚಾರಿಕ, ಎಲ್ಲ ರೂಪಗಳಲ್ಲೂ ಅದು ಜ್ಞಾನವನ್ನು ಉತ್ತೇಜಿಸುತ್ತದೆ ಹಾಗೂ ಜನರಲ್ಲಿ ತಿಳಿವಳಿಕೆಯನ್ನು ಮೂಡಿಸುತ್ತದೆ. ತಿಳಿವಳಿಕೆಯು ಜನರನ್ನು ಸಂಘಟಿಸುವಲ್ಲಿ ಸಹಾಯ ಮಾಡುತ್ತದೆ. ಅದು, ಭಾಗಶಃ ಹಕ್ಕುಗಳು ಮತ್ತು ಹಿತಾಸಕ್ತಿಗಳ ಉತ್ತೇಜನ ಹಾಗೂ ಸಂರಕ್ಷಣೆಗೆ ಮತ್ತು ಅಂತಹ ಹಕ್ಕುಗಳ ನಿರಾಕರಣೆ ಅಥವಾ ದುರುಪಯೋಗ ತಡೆಯಲು ಅವಶ್ಯಕ ಪೂರ್ವಾಪೇಕ್ಷಿತಗಳಾದ ಅಧಿಕಾರವನ್ನು ನೀಡುತ್ತದೆ. ಗ್ರಾಹಕ ಸಮಸ್ಯೆಗಳು ಮತ್ತು ಹಕ್ಕುಗಳ ಇಂದಿನ ಸ್ಥಿತಿಯ ಬಗೆಗಿನ ತಿಳಿವಳಿಕೆಯ ಮಟ್ಟ ಒಂದೆಡೆ ಹಾಗೂ ಆಡಳಿತಾತ್ಮಕ ಮತ್ತು ನ್ಯಾಯನಿರ್ಣಯ ಸಂಸ್ಥೆಗಳು ಸ್ಥಾಪಿತವಾಗಿರುವುದು ಮತ್ತೊಂದೆಡೆ, ಗ್ರಾಹಕ ಶಿಕ್ಷಣವನ್ನು ಉತ್ತೇಜಿಸುವಲ್ಲಿ ಅನಿವಾರ್ಯವಾಗುತ್ತವೆ.

ಸಾಮಾನ್ಯ ತಿಳುವಳಿಕೆಯನ್ನು ಮೂಡಿಸಲು ಅನೌಪಚಾರಿಕ ಶಿಕ್ಷಣವು ಮುಖ್ಯವಾದರೂ ಔಪಚಾರಿಕ ವ್ಯವಸ್ಥೆಗಳ ಮೂಲಕ ಗ್ರಾಹಕ ಶಿಕ್ಷಣವನ್ನು ನೀಡುವ ಅಗತ್ಯವು ಅಧಿಕವಾಗಿರುವುದು ಎರಡು ಕಾರಣಗಳಿಂದಾಗಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ

Digitised by Bharatavani, CIIL

ಎಂದು ಭಾವಿಸಲಾಗಿದೆ. ಮೊದಲಿನದು, ಗ್ರಾಹಕ ಸಂರಕ್ಷಣೆಯನ್ನು ಒಂದು ಚಟುವಟಿಕೆಯನ್ನಾಗಿ ಮಾಡಿಕೊಳ್ಳಲು ಜನರನ್ನು ತರಬೇತುಗೊಳಿಸಬೇಕಾದ ಅವಶ್ಯಕತೆಯಿದೆ. ತರಬೇತುಗೊಂಡ ಸಿಬ್ಬಂದಿಯು ಗ್ರಾಹಕ ನ್ಯಾಯಾಲಯಗಳ ಬಗ್ಗೆ ಮಾಹಿತಿ ಇಟ್ಟುಕೊಳ್ಳುವುದು, ಗ್ರಾಹಕ ನ್ಯಾಯಾಲಯಗಳ ಮುಂದೆ ತರಬಹುದಾದಂತಹ ಸೂಕ್ತ ಪ್ರಕರಣಗಳನ್ನು ಗುರುತಿಸುವುದು, ದೂರುಗಳನ್ನು ತಯಾರಿಸಿ ದಾಖಲಿಸುವುದು ಹಾಗೂ ಗ್ರಾಹಕ ಸಂರಕ್ಷಣಾ ಸಂಸ್ಥೆಗಳನ್ನು ಸಂಘಟಿಸುವಲ್ಲಿ ನೆರವಾಗುವುದು. ಎರಡನೆಯದು, ಗ್ರಾಹಕ ಚಳವಳಿಯನ್ನು ಒಂದು ಸಮೂಹ ಚಳವಳಿಯನ್ನಾಗಿ ರೂಪಿಸುವ ದೃಷ್ಟಿಯಿಂದ ಜನರಲ್ಲಿ ತಿಳಿವಳಿಕೆಯನ್ನು ಮೂಡಿಸುವ ಕೆಲಸಕ್ಕೆ ಬೃಹತ್ ಪ್ರಮಾಣದ ಕಾರ್ಯಾಚರಣೆ ಬೇಕಾಗುತ್ತದೆ. ನಿಸ್ಸಂದಿಗ್ಧವಾಗಿ ಹೇಳುವುದಾದರೆ ಗ್ರಾಹಕ ತಿಳಿವಳಿಕೆ ಕಾರ್ಯಕ್ರಮಗಳನ್ನು ಯೋಜಿಸಲು ಹಾಗೂ ನಡೆಸಲು ಪೂರ್ಣಾವಧಿಯ ಗಮನದ ಅವಶ್ಯಕತೆಯಿದೆ. ಶೈಕ್ಷಣಿಕ ಪಠ್ಯಕ್ರಮದಲ್ಲಿ ಈ ಬಗೆಗಿನ ತಿಳಿವಳಿಕೆ ಕಾರ್ಯಕ್ರಮಗಳನ್ನು ಸೇರಿಸುವ ಮೂಲಕ ಶೈಕ್ಷಣಿಕ ಸಂಸ್ಥೆಗಳು ಅಂತಹ ಬೇಡಿಕೆಯನ್ನು ಉತ್ತಮವಾಗಿ ಪೂರೈಸಬಹುದು ಎಂಬುದನ್ನು ಒತ್ತಿ ಹೇಳಬೇಕಾದ ಅಗತ್ಯವಿದೆ.

ಸ್ವಾತಂತ್ರ್ಯ ಬಂದ ಕಾಲದಿಂದಲೂ ಶಿಕ್ಷಣದ ಬಗ್ಗೆ ಹೊರತರಲಾದ ನೀತಿ ದಾಖಲೆಗಳು ವಿದ್ಯಾರ್ಥಿಗಳನ್ನು ಜಾಗೃತ ನಾಗರಿಕರನ್ನಾಗಿ ಪರಿವರ್ತಿಸಲು ಉದ್ದೇಶಪೂರ್ವಕ ಹಾಗೂ ಸಂಗತವಾದ ಶಿಕ್ಷಣದ ಬಗ್ಗೆ ಒತ್ತು ನೀಡಿವೆ. ಶಾಲಾ ಪಠ್ಯಕ್ರಮದಲ್ಲಿ ಗ್ರಾಹಕ ಶಿಕ್ಷಣವೂ ಒಂದು ಸ್ಥಾನವನ್ನು ಪಡೆಯಬೇಕೆಂದು ಶಿಕ್ಷಣತಜ್ಞರು ಗುರುತಿಸಿದ್ದಾರೆ. 9ನೇ ಡಿಸೆಂಬರ್ 1993ರಂದು ಗ್ರಾಹಕ ಸಂರಕ್ಷಣೆ ಕುರಿತ ರಾಷ್ಟ್ರೀಯ ಸಮ್ಮೇಳನವು "ಗ್ರಾಹಕ ಶಿಕ್ಷಣವನ್ನು ಶಾಲಾ ಮತ್ತು ಕಾಲೇಜು ಪಠ್ಯಕ್ರಮದ ಭಾಗವಾಗಿಸಬೇಕು ಹಾಗೂ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿಯ ರಾಷ್ಟ್ರೀಯ ಸಮಿತಿ (National Council of Educational Research and Training)ಗೆ ಇದರ ಪಠ್ಯವಸ್ತುವನ್ನು ರಚಿಸುವ ಕಾರ್ಯವನ್ನು ವಹಿಸಬೇಕೆಂದು ಶಿಫಾರಸು ಮಾಡಿತು. ಎನ್‌ಸಿಇಆರ್‌ಟಿ 1975ರಲ್ಲಿ ಪ್ರಕಟವಾದ ತನ್ನ ಹತ್ತು ವರ್ಷಗಳ ಶಾಲಾ ಪಠ್ಯಕ್ರಮ –ಒಂದು ರೂಪುರೇಷೆ"ಯಲ್ಲಿ 'ಅಭಿವೃದ್ಧಿ ಹೊಂದುತ್ತಿರುವ ಸಮಾಜದಲ್ಲಿ ಸಮಾಜೋ–ಆರ್ಥಿಕ ಬದಲಾವಣೆಗಳು ತ್ವರಿತವಾಗಿ ಸಂಭವಿಸುತ್ತಿರುತ್ತವೆ. ದಿನನಿತ್ಯ ಜೀವನವನ್ನು ಪ್ರಭಾವಿಸುವಂತಹ ಆರ್ಥಿಕ ಪರಿಣಾಮಗಳ ಬಗ್ಗೆ ಮೂಲಭೂತವಾದ ತಿಳಿವಳಿಕೆ ನೀಡಿದರೆ ಸಹಾಯಕವಾಗುತ್ತದೆ. ಈ ದೃಷ್ಟಿಕೋನದಿಂದ ಗ್ರಾಹಕ ಆರ್ಥಿಕ ಸ್ಥಿತಿಗೆ ಸಂಬಂಧಿಸಿದ ಸ್ವಲ್ಪ ಪ್ರಾಥಮಿಕ ಜ್ಞಾನವನ್ನು ಅತ್ಯಂತ ಸರಳವಾದ ರೂಪದಲ್ಲಿ ನೀಡುವುದು ಅಪೇಕ್ಷಣೀಯ ಎಂದೆನಿಸುತ್ತದೆ' ಎಂದು ಹೇಳಿದೆ. 1997ರಲ್ಲಿ ಎನ್‌ಸಿಇಆರ್‌ಟಿ ಸಿದ್ಧಪಡಿಸಿದ ಪಠ್ಯಕ್ರಮ ಬೇರೆಬೇರೆ ಮಟ್ಟಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಗ್ರಾಹಕ ಶಿಕ್ಷಣ ದೊರೆಯಬೇಕಾದ ಅವಶ್ಯಕತೆಯನ್ನು ಎತ್ತಿತೋರಿಸುತ್ತದೆ.

ಗ್ರಾಹಕ ಶಿಕ್ಷಣದ ಪ್ರಾಮುಖ್ಯತೆಯನ್ನು ಗುರುತಿಸಲಾಗಿದ್ದರೂ ಇಂದು ಶಾಲೆಗಳಲ್ಲಿ ಗ್ರಾಹಕ ಶಿಕ್ಷಣದ ಹೆಸರಿನಲ್ಲಿ ಅಲ್ಪಸ್ವಲ್ಪವಷ್ಟೇ ಕಲಿಸಲಾಗುತ್ತಿದೆ. ಕೆಲವೊಂದು ರಾಜ್ಯಗಳು ಗ್ರಾಹಕ ಶಿಕ್ಷಣವನ್ನು ತಮ್ಮ ಪಠ್ಯವಸ್ತುಗಳಲ್ಲಿ ಪ್ರತ್ಯೇಕ ಘಟಕವಾಗಿ ಸೇರಿಸಿವೆ. ಇತರೆ ಕೆಲವು ಹೊರಹೊಮ್ಮುತ್ತಿರುವ ಕಾಳಜಿಯ ವಿಷಯಗಳಾದ ಜನಸಂಖ್ಯಾ ಶಿಕ್ಷಣ, ಪರಿಸರ ಶಿಕ್ಷಣ, ಮಹಿಳಾ ಶಿಕ್ಷಣ ಇನ್ನು ಮುಂತಾದವುಗಳಿಗೆ ಹೋಲಿಸಿದರೆ ಈ ವಿಷಯವು ಕೇವಲ ಅಲ್ಪ ಗಮನವನ್ನು ಸೆಳೆದಿದೆ. ಕಾಲೇಜು ಮತ್ತು ವಿಶ್ವವಿದ್ಯಾಲಯದ ಮಟ್ಟದಲ್ಲಿ ಹೇಳುವುದಾದರೆ, ಗೃಹವಿಜ್ಞಾನ, ವಾಣಿಜ್ಯ, ಕಾನೂನು ಇತ್ಯಾದಿ ಕಾರ್ಯಕ್ರಮಗಳಲ್ಲಿ ಕೆಲವೊಂದು ವಿಶ್ವವಿದ್ಯಾಲಯಗಳಲ್ಲಿ ಗ್ರಾಹಕ ರಕ್ಷಣೆ ಕುರಿತ ಕೋರ್ಸ್‌ಗಳನ್ನು ಸೇರಿಸಲಾಗಿದೆ. ಪ್ರೌಢಶಿಕ್ಷಣದ ಕೇಂದ್ರ ಸಮಿತಿಯು ಶಿಕ್ಷಕರಿಗೆ ಅತ್ಯವಶ್ಯಕ ಜ್ಞಾನ ಮತ್ತು ಕೌಶಲಗಳನ್ನು ಒದಗಿಸಲು ಗ್ರಾಹಕ ಶಿಕ್ಷಣ ಕುರಿತ ಕಿರುಹೊತ್ತಿಗೆಯನ್ನು ಸಿದ್ಧಪಡಿಸಿದೆ. ಇದರ ಮೂಲಕ ಪ್ರೌಢಶಿಕ್ಷಣದ ಹಂತದಲ್ಲಿ ಬೇರೆ ಬೇರೆ ವಿಷಯಗಳನ್ನು ಕಲಿಸುತ್ತಿರುವ ಶಿಕ್ಷಕರು ಗ್ರಾಹಕ ಶಿಕ್ಷಣದ ಅಗತ್ಯತೆಗಳನ್ನು ಪೂರೈಸಲು ತಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಹಲವಾರು ರೀತಿಯಲ್ಲಿ ವಿಸ್ತರಿಸಬಹುದು.

ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯವು ಗ್ರಾಹಕ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಕ ಕಾರ್ಯ ಮಾಡುತ್ತಿದೆ. 10+2 ವಿದ್ಯಾರ್ಹತೆ ಇರುವ ಯಾರೇ ಆದರೂ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಗ್ರಾಹಕ ಸಂರಕ್ಷಣೆಯಲ್ಲಿ ಸ್ವತಂತ್ರ ಸರ್ಟಿಫಿಕೇಟ್ ಕಾರ್ಯಕ್ರಮದಡಿ ಕಲಿಯಬಹುದು. ಇದರ ಜೊತೆಗೆ, ಕಲೆ, ವಿಜ್ಞಾನ, ವಾಣಿಜ್ಯ, ಮುಂತಾದ ಯಾವುದೇ ವಿಭಾಗದಲ್ಲಿ ಪದವಿ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ ತೆಗೆದುಕೊಳ್ಳಬಹುದಾದಂತಹ ಗ್ರಾಹಕ ವಿದ್ಯಮಾನಗಳು ಎಂಬ ಆಯ್ಕೆಯ ಕೋರ್ಸ್‌ನ್ನು ವಿಶ್ವವಿದ್ಯಾಲಯವು ಪರಿಚಯಿಸಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಗ್ರಾಹಕ ಶಿಕ್ಷಣವನ್ನು ಕಾಲೇಜು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ವಿಶ್ವವಿದ್ಯಾಲಯಗಳಿಗೆ ಸಲಹೆ ನೀಡಿದೆ. ಕೆಲವು ವಿಶ್ವವಿದ್ಯಾಲಯಗಳು ಈಗಾಗಲೇ ಈ ದಿಕ್ಕಿನಲ್ಲಿ ಮುನ್ನಡೆದಿವೆ.

ಗ್ರಾಹಕ ಶಿಕ್ಷಣವು ಜ್ಞಾನವನ್ನು ಮಾತ್ರ ನೀಡುವುದಿಲ್ಲ, ಸರಿಯಾದ ಧೋರಣೆಗಳು ಮತ್ತು ಕೌಶಲಗಳನ್ನೂ ಬೆಳೆಸುತ್ತದೆ ಎಂದು ಈಗ ಗುರುತಿಸಲ್ಪಟ್ಟಿದೆ. ಇದು ದರ, ಉತ್ತಮ ಗುಣಮಟ್ಟದ ಸರಕು ಮತ್ತು ಸೇವೆಗಳ ಲಭ್ಯತೆಯ ಬಗ್ಗೆ ವಿಮರ್ಶಾತ್ಮಕ ಅರಿವನ್ನು ಮೂಡಿಸುತ್ತದೆ. ಇದು ಕಲಿಯುವವರು ಆತ್ಮವಿಶ್ವಾಸದಿಂದ ನಡೆದುಕೊಳ್ಳುವಂತೆಯೂ ಹಾಗೂ ತಮ್ಮ ಮಾತು ಸಂಬಂಧಪಟ್ಟವರಿಂದ ಕೇಳಿಸಲಾಗುತ್ತಿದೆ ಎಂಬ ಖಾತ್ರಿಯನ್ನು ಉಂಟುಮಾಡಿಸುತ್ತದೆ. ಈ ಹಂತದಲ್ಲಿ ಗ್ರಾಹಕ ಶಿಕ್ಷಣವನ್ನು ಪರಿಚಯಿಸುವ ವಿಧಾನ ಹಾಗೂ ತಂತ್ರಗಳ ಬಗ್ಗೆ ಕೆಲವು ತೊಂದರೆ ಮತ್ತು ವ್ಯತ್ಯಾಸಗಳು ಇದ್ದೇ ಇರುತ್ತವೆ. ಆದರೆ ಇವನ್ನು ನಿವಾರಿಸಿಕೊಳ್ಳಬೇಕು. ಸರಕು ಮತ್ತು ಸೇವೆಗಳು ಸರಿಯಾದ ಬೆಲೆಯಲ್ಲಿ ಮತ್ತು ಸುರಕ್ಷಿತವಾಗಿ ದೊರೆಯುತ್ತವೆ

Digitised by Bharatavani, CIIL

ಎಂಬುದನ್ನು ನಿಯಂತ್ರಿಸುವ ಹಾಗೆಯೇ ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸುವುದು ಕೂಡ ಅಷ್ಟೇ ಮುಖ್ಯ. ಈ ಸಂರಕ್ಷಣೆಗೆ, ಸರಕಾರದಿಂದ ಸಾಕಷ್ಟು ನಿರೀಕ್ಷಿಸಲಾಗುತ್ತದೆಯಾದರೂ ಎಲ್ಲಕ್ಕಿಂತ ಮೊದಲ ಅವಶ್ಯಕತೆಯೆಂದರೆ ಜಾಗೃತಿ ಮತ್ತು ಮಾಹಿತಿ. ಇದಕ್ಕೆ ಅತ್ಯುತ್ತಮವಾದ ಮಾರ್ಗವೆಂದರೆ ಶಿಕ್ಷಣ.

**ಮೂಲ: ಎ.ಎಸ್. ನಾರಂಗ್**

**ಅನು: ಶಶಿಕುಮಾರ್**

# ೮೪

## ಚಲನಚಿತ್ರಗಳ ಮೂಲಕ ಶಿಕ್ಷಣ

ಶಿಕ್ಷಣದಲ್ಲಿ ಶಿಕ್ಷಕರ ಪಾತ್ರದಲ್ಲಿ ಬದಲಾವಣೆಗಳಾಗಲು ತಾತ್ವಿಕ, ಮನೋವೈಜ್ಞಾನಿಕ, ಸಾಮಾಜಿಕ, ತಾಂತ್ರಿಕ ಮತ್ತು ಶೈಕ್ಷಣಿಕ ಮುಂತಾದವುಗಳ ಬಹುಮುಖತ್ವ ಪ್ರಭಾವಗಳ ಅಂತರ ಬೆಸುಗೆ ಫಲಿತಾಂಶ ಕಾರಣವಾಗಿದೆ. 21ನೆಯ ಶತಮಾನದಲ್ಲಿ ಸಂಪೂರ್ಣ ಜೀವನ ನಡೆಸಲು ಮಕ್ಕಳಿಗೆ ತರಬೇತಿಯನ್ನು ನೀಡುವುದು ಇಂದಿನ ಶಿಕ್ಷಕರ ಜವಾಬ್ದಾರಿಯಾಗಿದೆ. ಕಲಿಕೆಯ ಗುರಿಯನ್ನು ಸಾಧಿಸಲು ಇಂದಿನ ಶಿಕ್ಷಕರು ತಮಗೆ ದೊರೆಯುವ ಅಂತರ ಸಂಬಂಧವುಳ್ಳ ಮಾಧ್ಯಮಗಳನ್ನು ಉಪಯೋಗಿಸುತ್ತಾರೆ.

**ಸಮೂಹ ಮಾಧ್ಯಮದ ಅರ್ಥ:**

ಸಾಮಾನ್ಯವಾಗಿ ಶಿಕ್ಷಕರು ವರ್ಗ ಬೋಧನೆಗೆ ಸೀಮಿತವಾಗಿ ಪ್ರಕ್ಷೇಪಿತ ಮತ್ತು ಅಪ್ರೇಕ್ಷಿತ ಪಾಠೋಪಕರಣಗಳನ್ನು ತಯಾರಿಸುವರು. ಆದರೆ ಸುದ್ದಿ ಪತ್ರಿಕೆಗಳು, ಪುಸ್ತಕಗಳು, ರೇಡಿಯೋ, ದೂರದರ್ಶನ, ಜನವಾಣಿ, ಸಿನಿಮಾ, ಸಿಡಿ, ಓಹೆಚ್‌ಪಿ ಮುಂತಾದ ಸಮೂಹ ಮಾಧ್ಯಮಗಳು ಬಹಳಷ್ಟು ಜನರಿಗೆ ಏಕಕಾಲದಲ್ಲಿ ಮಾಹಿತಿಯನ್ನು ತಲುಪಿಸುವವು. ಆ ಉಪಕರಣಗಳನ್ನು ಸಮರ್ಪಕವಾಗಿ ಬಳಸಿಕೊಂಡು ಶಿಕ್ಷಣ ಪ್ರಸಾರ ಮಾಡಬಹುದಾಗಿದೆ. ಉದಾಹರಣೆಗೆ ದೆಹಲಿ ದೂರದರ್ಶನ ಡಿಡಿ–1 ರಲ್ಲಿ ಒಬ್ಬ ತಜ್ಞರು ಭೌತಶಾಸ್ತ್ರ ವಿಷಯದ ಬಗ್ಗೆ ಪಾಠ ಬೋಧನೆಯನ್ನು ಮಾಡಿದರೆ, ಅದನ್ನು ಭಾರತದಾದ್ಯಂತ ಎಲ್ಲರೂ ಏಕಕಾಲಕ್ಕೆ ವೀಕ್ಷಿಸಬಹುದಾಗಿದೆ.

**ಚಲನಚಿತ್ರಗಳು ಅಥವಾ ಸಿನಿಮಾಗಳು:** ಚಲನಚಿತ್ರಗಳು ಮಾಧ್ಯಮದ ಒಂದು ಪ್ರಕಾರವಾಗಿದ್ದು, ಮನರಂಜನೆಯ ಜೊತೆಗೆ ಒಂದು ಕಡೆಯಾದರೆ ಶಿಕ್ಷಕರ ಚಿಂತನೆಯ ಪ್ರಕಾರ ಅದು ಶಿಕ್ಷಣವನ್ನು ನೀಡುತ್ತದೆ, ಜೊತೆಗೆ ಜ್ಞಾನವನ್ನೂ ಕೊಡುತ್ತದೆ. ಚಿಕ್ಕವರಿಗೂ ಹಿರಿಯರಿಗೂ ಯುವಜನತೆಗೂ, ಅವಿದ್ಯಾವಂತರಿಗೂ, ವಿದ್ಯಾವಂತರಿಗೂ ಅವರವರ ಮನಸ್ಸಿಗೆ ತಕ್ಕಂತೆ ರಂಜಿಸುತ್ತಾ ಶಿಕ್ಷಣ ನೀಡುತ್ತದೆ. ಈ ದೃಷ್ಟಿಯಿಂದ ಸಿನಿಮಾದ ತಂತ್ರವನ್ನು ಮೆಚ್ಚಬೇಕಾದುದೆ ! ಏಕೆಂದರೆ ಪ್ರಸ್ತುತ ದಿನಗಳಲ್ಲಿ ಅಷ್ಟೊಂದು ಮನಸೆಳೆಯುವ ಶಕ್ತಿ ಈ ಮಾಧ್ಯಮಕ್ಕಿದೆ. ಹೀಗಾಗಿ ಸಿನೆಮಾ ನೋಡಿ ಜ್ಞಾನ ಪಡೆಯುವವರ ಸಂಖ್ಯೆಯು ಹೆಚ್ಚಾಗಿದೆ. ಆದ್ದರಿಂದ ಈ ಅದ್ಭುತ ತಂತ್ರವನ್ನು ಶೈಕ್ಷಣಿಕವಾಗಿ ಏಕೆ ಪರಿವರ್ತಿಸಬಾರದು? ಎಂದು ತಿಳಿದು ಶಿಕ್ಷಣ ಕ್ಷೇತ್ರದಲ್ಲಿ ಚಲನ ಚಿತ್ರಗಳನ್ನು ಬಳಸಲಾಗುತ್ತಿದೆ. ಇದರಿಂದ ಕಲಿಕೆ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ಶೈಕ್ಷಣಿಕ ತಂತ್ರಜ್ಞಾನವು ವಿವರಿಸುತ್ತದೆ.

ಶಿಕ್ಷಣದಲ್ಲಿ ದೂರದರ್ಶನ ಮಾಡುವ ಎಲ್ಲಾ ಸಹಾಯಗಳನ್ನು ಚಲನಚಿತ್ರ ಮಾಡುವುದು. ಆದರೆ, ಚಲನಚಿತ್ರಗಳಿಗೂ ಮತ್ತು ದೂರದರ್ಶನಕ್ಕೂ ಅಲ್ಪ ವ್ಯತ್ಯಾಸವಿದೆ. ದೂರದರ್ಶನದಿಂದ ಪ್ರಸಾರವಾಗುವ ಕಾರ್ಯಕ್ರಮವನ್ನು ಶಿಕ್ಷಕನು ಸುಲಭವಾಗಿ ತೋರಿಸಬಹುದು. ಸರಿಯಾದ ಸಮಯ ಅರಿತುಕೊಂಡು ವಿದ್ಯಾರ್ಥಿಗಳೆಲ್ಲರನ್ನೂ ದೂರದರ್ಶನ ಗ್ರಾಹಕವಿರುವಲ್ಲಿ ತಂದು ಕೂಡಿಸುವುದು ಅವನ ಕೆಲಸ. ಆದರೆ ಚಲನಚಿತ್ರಗಳನ್ನು ಶಿಕ್ಷಣಕ್ಕಾಗಿ ಉಪಯೋಗಿಸಬೇಕಾದರೆ ಸರಿಯಾದ ಚಲನಚಿತ್ರ, ಸಮಂಜಸವಾದ ಪ್ರಕ್ಷೇಪಕ ಮತ್ತು ಅದನ್ನು ಉಪಯೋಗಿಸುವ ವಿಧಾನವೆಲ್ಲವನ್ನು ತಿಳಿದಿರಬೇಕು.

**ಚಲನ ಚಿತ್ರಗಳ ವಿಧಗಳು:** ಚಲನ ಚಿತ್ರಗಳನ್ನು ಎರಡು ವಿಧಗಳಲ್ಲಿ ವಿಂಗಡಿಸಬಹುದು.

1) ಮನೋರಂಜನೆಯ ಚಲನಚಿತ್ರಗಳು. 2) ಶೈಕ್ಷಣಿಕ ಚಲನಚಿತ್ರಗಳು.

ಎರಡನೆಯ ವಿಧವಾದ ಶೈಕ್ಷಣಿಕ ಚಲನಚಿತ್ರಗಳನ್ನು ಪುನಃ ಎರಡು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ :–

1) ಸಾಮಾನ್ಯ ಶೈಕ್ಷಣಿಕ ಚಲನಚಿತ್ರಗಳು 2) ತರಗತಿ ಚಲನಚಿತ್ರಗಳು.

ತರಗತಿ ಚಲನ ಚಿತ್ರಗಳು ಸಾಮಾನ್ಯವಾಗಿ ಪಠ್ಯ ವಸ್ತುವಿನ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿರುತ್ತವೆ. ಸಾಮಾನ್ಯ ಶೈಕ್ಷಣಿಕ ಚಲನಚಿತ್ರಗಳು ವಿಶಾಲ ವ್ಯಾಪ್ತಿಯ ಸಾಮಾನ್ಯ ಜ್ಞಾನವನ್ನು ಒದಗಿಸುತ್ತವೆ. ಅವು ಸಮಾಜ–ವಿರೋಧಿ ಚಟುವಟಿಕೆಗಳ ದೃಶ್ಯಗಳು ಹಾಗೂ ವಿಪರೀತ ವರ್ತನೆಗಳಿಂದ ದೂರವಿರುತ್ತವೆ. ಮನರಂಜನೆಯ ಕೆಲವು ಚಲನಚಿತ್ರಗಳು ಸಹ ಶೈಕ್ಷಣಿಕ ಚಲನಚಿತ್ರಗಳಾಗಬಲ್ಲವು. ಉತ್ತಮ ಕಲಿಕೆಗೆ ಪ್ರೇರಕವಾಗುವ ಹಾಗೂ ಜ್ಞಾನ, ಉತ್ತಮ ವರ್ತನೆ ಹಾಗೂ ಮನೋವೃತ್ತಿಗಳನ್ನು ಬೆಳೆಸುವ ಯಾವುದೇ ಚಲನಚಿತ್ರವನ್ನು ಶೈಕ್ಷಣಿಕ ಚಲನಚಿತ್ರ ಎಂದು ವರ್ಗೀಕರಿಸಬಹುದು.

ಚಲನಚಿತ್ರಗಳಲ್ಲಿ ಹೆಚ್ಚಿನವು ಒಂದು ನಿರ್ದಿಷ್ಟ ಕಥಾವಸ್ತುವಿಗೆ ಸಂಬಂಧಿಸಿದ್ದು ಎಲ್ಲ ರೀತಿಯ ಮನರಂಜನೆಗೆ ಗಮನ ನೀಡುತ್ತವೆ. ವಾರ್ತಾಚಿತ್ರಗಳು ಅಥವಾ ಡಾಕ್ಯುಮೆಂಟರಿ ಚಿತ್ರಗಳು ಸಾರ್ವಜನಿಕರಿಗೆ ಒಂದು ನಿರ್ದಿಷ್ಟ ವಿಚಾರ, ಘಟನೆಯ ಚಿತ್ರೀಕರಣದ ಮೂಲಕ ಮಾಹಿತಿಯನ್ನು ನೀಡುವುದರಿಂದ ಹೆಚ್ಚು ಶೈಕ್ಷಣಿಕವೆನ್ನಿಸುತ್ತವೆ. ಇವುಗಳ ಮೂಲಕ ಕಲಿಯುವುದು ಬಹಳಷ್ಟು ಇರುತ್ತದೆ. ಶಾಲೆಗಳಲ್ಲಿ ಈ ರೀತಿಯ ಡಾಕ್ಯುಮೆಂಟರಿ ಚಿತ್ರಗಳನ್ನು ಶಿಕ್ಷಣದ ಉದ್ದೇಶಕ್ಕಾಗಿ ಉಪಯೋಗಿಸಬೇಕು. ಕೆಲವು ಉತ್ತಮ

Digitised by Bharatavani, CIIL

ಮನರಂಜನಾ ಚಿತ್ರಗಳಲ್ಲಿಯೂ ಶೈಕ್ಷಣಿಕ ಅಂಶಗಳಿರುತ್ತವೆ. ಕೆಲವು ಚಲನಚಿತ್ರಗಳನ್ನು ಮಕ್ಕಳಿಗಾಗಿಯೇ ನಿರ್ಮಿಸಲಾಗುತ್ತದೆ. ಅವುಗಳಲ್ಲಿ ಮನರಂಜನೆಯ ಜೊತೆಗೆ ಶೈಕ್ಷಣಿಕ ಅಂಶಗಳೂ ಇರುತ್ತವೆ.

ಶೈಕ್ಷಣಿಕ ಚಲನಚಿತ್ರಗಳು ಸಾಮಾನ್ಯವಾಗಿ 16 mm ಅಥವಾ 35 mm ಅಳತೆಯಲ್ಲಿ ಲಭ್ಯವಾಗುತ್ತವೆ. ಕ್ರಮವಾಗಿ 16 mm ಹಾಗೂ 35 mm ಪ್ರಕ್ಷೇಪದ ಮೂಲಕ ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು. ಇವು ಕಪ್ಪು-ಬಿಳುಪು ಅಥವಾ ವರ್ಣಮಯ ಆಗಿರಬಹುದು.

**ಶಿಕ್ಷಣ ಮತ್ತು ಚಲನಚಿತ್ರದ ಉದ್ದೇಶಗಳು:** ಶಿಕ್ಷಣದಲ್ಲಿ ಚಲನಚಿತ್ರವನ್ನು ಬಳಸುವುದಕ್ಕೆ ಕೆಲವು ಉದ್ದೇಶಗಳು ಇರುತ್ತವೆ;

1) ಕಲಿಕೆಗೆ ನೈಜತೆಯನ್ನು ಒದಗಿಸುವುದು.

2) ವಾಸ್ತವ ಪ್ರಜ್ಞೆಯನ್ನು ಮಕ್ಕಳಲ್ಲಿ ಮೂಡಿಸುವುದು.

3) ತರಗತಿಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಿಕೊಡುವುದು.

4) ವಿದ್ಯಾರ್ಥಿಗಳ ಆಸಕ್ತಿ ಕೆರಳಿಸಿ, ಅವರ ಮಾನಸಿಕ ಚಟುವಟಿಕೆಗಳನ್ನು ಪ್ರಚೋದಿಸುವುದು.

5) ಪಾಠದ ಪುನರಾವರ್ತನೆಗೆ ಅವಕಾಶ ಒದಗಿಸುವುದು.

6) ಶ್ರಮ ಮತ್ತು ಸಮಯದ ಮಿತವ್ಯಯ ಮಾಡುವುದು.

7) ವಿದ್ಯಾರ್ಥಿಗಳ ಅವಧಾನವನ್ನು ಅಂತ್ಯದವರೆಗೆ ಕೇಂದ್ರೀಕರಿಸಿಡುವುದು.

8) ಪಠ್ಯವಸ್ತು ಹಾಗೂ ಇತರ ಶೈಕ್ಷಣಿಕ ಅಂಶಗಳನ್ನು ಸ್ಪಷ್ಟಪಡಿಸುವುದು.

9) ವಿದ್ಯಾರ್ಥಿಗಳ ವರ್ತನೆ ಮತ್ತು ಮನೋವೃತ್ತಿಯನ್ನು ಪರಿವರ್ತಿಸುವುದು.

10) ಭೂತಕಾಲ ಹಾಗೂ ವರ್ತಮಾನ ಕಾಲದ ಘಟನೆಗಳು ಹಾಗೂ ದೂರದ ಘಟನೆಗಳನ್ನು ತರಗತಿಯಲ್ಲಿ ಬಿಂಬಿಸುವುದು.

**ಶಿಕ್ಷಕನು ಚಲನಚಿತ್ರಗಳನ್ನು ಬಳಸುವ ವಿಧಾನ:** ಶಿಕ್ಷಕನು ತನ್ನ ಬೋಧನೆಗಾಗಿ ಚಲನಚಿತ್ರಗಳನ್ನು ಈ ಕೆಳಗಿನಂತೆ ಬಳಸಿಕೊಳ್ಳಬಹುದು;

**ಸಿದ್ಧತಾ ಹಂತ:** **1.** ಶೈಕ್ಷಣಿಕ ಚಲನಚಿತ್ರಗಳು ಎಲ್ಲಿ ಲಭ್ಯವಾಗುತ್ತೆ, ವಿವಿಧ ಮೂಲಗಳು ಯಾವುವು ಎಂಬುದನ್ನು ಶಿಕ್ಷಕ ಅರಿತಿರಬೇಕು. **2.** ಶಿಕ್ಷಕನು ಸ್ವತಃ ತಾನೇ ಚಲನಚಿತ್ರ ಪ್ರಕ್ಷೇಪಿಸುವುದನ್ನು ನಿರ್ವಹಿಸುವುದಾದರೆ ಸೂಕ್ತ ತರಬೇತಿ ಪಡೆಯಬೇಕು. **3.** ಶಕ್ಯವಿದ್ದಷ್ಟು ಶಿಕ್ಷಕ ತಾನೇ ಮೊದಲು ಸಹದ್ಯೋಗಿಗಳ ಜೊತೆಯಲ್ಲಿ ಚಲನಚಿತ್ರವನ್ನು ವೀಕ್ಷಿಸಿ ಅದು ತನ್ನ ಬೋಧನೆಯ ಯೋಜನೆಗೆ ಅನುಗುಣವಾಗಿ ಇರುವುದನ್ನು ಖಚಿತ ಪಡಿಸಿಕೊಳ್ಳಬೇಕು. **4.** ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಹಾಗೂ ಮನೋವೈಜ್ಞಾನಿಕವಾಗಿ ಸಿದ್ಧಪಡಿಸಬೇಕು. **5.** ಗಾಳಿ, ಬೆಳಕು, ಆಸನ ವ್ಯವಸ್ಥೆಯನ್ನು ಪ್ರದರ್ಶನ ಪೂರ್ವದಲ್ಲಿ ಪರೀಕ್ಷಿಸಬೇಕು. **6.** ಪ್ರಕ್ಷೇಪದ ಕಾರ್ಯವಿಧಾನ ಹಾಗೂ ಪರದೆಯ ಗುಣಮಟ್ಟವನ್ನು ಪೂರ್ವದಲ್ಲಿಯೇ ಪರೀಕ್ಷಿಸಬೇಕು.

**ಮಂಡನೆಯ ಹಂತ:** **1.** ಎಲ್ಲ ಮುಖ್ಯಾಂಶಗಳಿಗೆ ವಿದ್ಯಾರ್ಥಿಗಳ ಲಕ್ಷ್ಯ ಸೆಳೆಯುವುದಕ್ಕೋಸ್ಕರ ಶಿಕ್ಷಕನು ಚಲನಚಿತ್ರವನ್ನು ಹಂತ-ಹಂತವಾಗಿ ಹಾಗೂ ಕ್ರಮಬದ್ಧವಾಗಿ ಮಂಡಿಸುವುದು ಸೂಕ್ತ. **2.** ಚಲನಚಿತ್ರ ಪ್ರದರ್ಶಿಸುವಾಗ ಆಗಾಗ ಪ್ರದರ್ಶನ ನಿಲ್ಲಿಸಿ ಶಿಕ್ಷಕನು ಪ್ರಶ್ನೆ ಕೇಳಬಹುದು. ವಿದ್ಯಾರ್ಥಿಗಳನ್ನೂ ಪ್ರಶ್ನೆ ಕೇಳಲು ಪ್ರೋತ್ಸಾಹಿಸಬಹುದು. 3. ಚಿತ್ರದ ಮುಖ್ಯ ಅಂಶಗಳನ್ನು ಹಾಗೂ ಅರ್ಥವಾಗದಿರುವ ಅಂಶಗಳನ್ನು ಬರೆದಿಡಲು ತಿಳಿಸಬೇಕು. ಪ್ರದರ್ಶನದ ನಂತರ ಆ ವಿಷಯಗಳನ್ನು ಕುರಿತು ಚರ್ಚಿಸಬೇಕು. 4. ಅಗತ್ಯತೆಗೆ ಅನುಗುಣವಾಗಿ ಸಂಪೂರ್ಣ ಚಲನಚಿತ್ರ ಅಥವಾ ಅದರ ಬಿಡಿಭಾಗಗಳನ್ನು ಮಾತ್ರ ಪ್ರದರ್ಶಿಸಬಹುದು.

**ಅನುಸರಣೀಯ ಹಂತ:** 1) ಬೋಧನೆಯ ಉದ್ದೇಶಗಳ ಈಡೇರಿಕೆಯಲ್ಲಿ ಹಾಗೂ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಬೀರಿದ ಪ್ರಭಾವವನ್ನು ಮೌಲ್ಯಮಾಪನಗೈಯಬೇಕು. 2) ಚಲನಚಿತ್ರದ ವಿಷಯಗಳ ಬಗ್ಗೆ ಮುಕ್ತವಾಗಿ ಚರ್ಚಿಸಬೇಕು. 3) ಚಲನಚಿತ್ರದಲ್ಲಿ ವೀಕ್ಷಿಸಿದ ಅಂಶಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳುವಂತೆ ಸನ್ನಿವೇಶ ಕಲ್ಪಿಸಬೇಕು.

**ಚಲನಚಿತ್ರ ಭಂಡಾರಗಳು:** ಶಾಲೆಗಳಲ್ಲಿ ಚಲನಚಿತ್ರಗಳನ್ನು ಪ್ರದರ್ಶಿಸಲು ಈ ಕೆಳಗಿನ ಸಂಸ್ಥೆಗಳಿಂದ ಚಲನಚಿತ್ರಗಳನ್ನು ಎರವಲಾಗಿ ಪಡೆಯಬಹುದು.

1) ಶಿಕ್ಷಣ ಸಚಿವಾಲಯ, ನವದೆಹಲಿ.

2) ವಾರ್ತಾ ಮತ್ತು ಪ್ರಚಾರ ಸಚಿವಾಲಯ ನವದೆಹಲಿ.

3) ಕೇಂದ್ರ ಚಲನಚಿತ್ರ ಗ್ರಂಥಾಲಯ, ನವದೆಹಲಿ.

4) ಎಲ್ಲ ರಾಜ್ಯಗಳ ಶೈಕ್ಷಣಿಕ ಹಾಗೂ ಪ್ರಚಾರ ಇಲಾಖೆಗಳು.

5) ವಿಸ್ತರಣಾ ಸೇವಾ ಇಲಾಖೆಗಳು.

6) ಅಮೇರಿಕ, ಇಂಗ್ಲೆಂಡ್ ಮತ್ತು ಇತರ ವಿದೇಶಿ ರಾಯಭಾರಿ ಕಛೇರಿಗಳಲ್ಲಿನ ಮಾಹಿತಿ ಕೇಂದ್ರಗಳು.

7) ಚಲನಚಿತ್ರ ಸಂಗ್ರಹಾಲಯ, ಪುಣೆ.

8) ಚಲನಚಿತ್ರ ನಿರ್ವಾಹಕರು.

**ಚಲನಚಿತ್ರದ ಉಪಯೋಗಗಳು:**

1) ಚಲನಚಿತ್ರಗಳನ್ನು ಶಾಲೆಯಲ್ಲಿ ಪರಿಣಾಮಕಾರಿ ಬೋಧನಾ ಸಾಮಗ್ರಿಗಳನ್ನಾಗಿ ಉಪಯೋಗಿಸಬಹುದು. 2) ವಾಸ್ತವಿಕ ಅಂಶಗಳನ್ನು ಮತ್ತು ಕೌಶಲ್ಯಗಳ ಅಭಿವೃದ್ಧಿಯನ್ನು ಸಾಧನದ ಮುಖಾಂತರ ತೋರಿಸಬಹುದಾಗಿದೆ. 3) ಶಿಕ್ಷಣವನ್ನು ನೈಜವನ್ನಾಗಿ ಮಾಡುತ್ತದೆ. 4) ವಿದ್ಯಾರ್ಥಿಗಳಿಗೆ ವಿಷಯದ ಪರಿಜ್ಞಾನ ಸರಿಯಾಗಿ ಆಗಿ ತರಬೇತಿಯಲ್ಲಿ ಚರ್ಚೆ, ವಿಚಾರ ಮಾಡುವ ಪ್ರವೃತ್ತಿ

Digitised by Bharatavani, CIIL

ಬೆಳೆಯುವುದು. 5) ವೈಜ್ಞಾನಿಕ ಪ್ರಯೋಗಗಳನ್ನು, ಭೌಗೋಳಿಕ ಅಂಶಗಳನ್ನು, ಐತಿಹಾಸಿಕ ಘಟನೆಗಳನ್ನು ಪರಿಣಾಮಕಾರಿಯಾಗಿ ತೋರಿಸಬಹುದು. 6) ವಿದ್ಯಾರ್ಥಿಗಳ ಆಸಕ್ತಿ ಕೆರಳಿಸಿ ಮಾನಸಿಕ ಚಟುವಟಿಕೆಗಳನ್ನು ಪ್ರಚೋದಿಸುವುದು. 7) ಪಾಠದ ಪುನರಾವರ್ತನೆ ಮಾಡಲು ಸುಲಭವಾದ ಸಾಧನವಾಗಿದೆ. 8) ವಿದ್ಯಾರ್ಥಿಗಳ ಸಂಖ್ಯೆ ಅಪಾರವಾಗಿದ್ದರೂ ಅಧ್ಯಾಪನವು ಸಮರ್ಥ ರೀತಿಯಲ್ಲಿ ಸಾಗುವುದು. 9) ಚಲನಚಿತ್ರಗಳಿಂದ ವಿದ್ಯಾರ್ಥಿಗಳ ಮನೋವೃತ್ತಿ ಬದಲಾಗುವ ವೈಜ್ಞಾನಿಕ ಪ್ರಜ್ಞೆ ಬೆಳೆಯುವುದು. 10) ಶಿಕ್ಷಕನು ಇಲ್ಲದಿರುವಾಗ ಈ ಚಲನಚಿತ್ರಗಳನ್ನು ಪ್ರದರ್ಶಿಸುವುದರಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಂಯಮ ಕಾಪಾಡಿಕೊಳ್ಳುವಲ್ಲಿ ನೆರವಾಗುವುದು. 11) ವಿವಿಧ ವಿಷಯದ ಲಘು ಚಲನಚಿತ್ರಗಳನ್ನು ಶಾಲೆಗಳಲ್ಲಿ ಆಗಾಗ್ಗೆ 16 mm ಪ್ರಕ್ಷೇಪಕದ ಮೂಲಕ ತೋರಿಸುತ್ತಿದ್ದು ಮಕ್ಕಳಿಗೆ ವಿಷಯದ ಪರಿಜ್ಞಾನವು ಚೆನ್ನಾಗಿ ಆಗುತ್ತದೆ. 12) ಜಗತ್ತಿನಲ್ಲಿ ನಡೆದ ಅನೇಕ ಘಟನೆಗಳನ್ನು ಸುದ್ದಿ ಚಿತ್ರಗಳ ಮುಖಾಂತರ ನೋಡಬಹುದಾಗಿದೆ.

–ಶ್ರೀ ಸುರೇಶ್‌ಬಾಬು ಎಸ್.

## ಚಾರ್ವಾಕರ ಶೈಕ್ಷಣಿಕ ನಿಲುವು

ಭಾರತೀಯ ಶೈಕ್ಷಣಿಕ ನಿಲುವು ಅದರ ತಾತ್ವಿಕ ಸಿದ್ಧಾಂತದ ಬುನಾದಿಯನ್ನು ಹೊಂದಿದೆ. ಪ್ರತಿಯೊಂದು ದರ್ಶನಕ್ಕೂ ತನ್ನದೇ ಆದ ಶೈಕ್ಷಣಿಕ ದೃಷ್ಟಿಕೋನವಿದ್ದು, ಆ ದೃಷ್ಟಿಕೋನಕ್ಕೆ ಬುನಾದಿಯನ್ನು ಒದಗಿಸುವುದು. ಆ ದರ್ಶನದ ತಾತ್ವಿಕ ಸಿದ್ಧಾಂತ ಹೀಗಾಗಿ ಒಂದು ದರ್ಶನದ ಶೈಕ್ಷಣಿಕ ನಿಲುವು ಅದರ ತಾತ್ವಿಕ ಸಿದ್ಧಾಂತದಲ್ಲೇ ಅಡಕವಾಗಿದೆಯೆಂದರೆ ತಪ್ಪಾಗುವುದಿಲ್ಲ. ಚಾರ್ವಾಕರ ಶೈಕ್ಷಣಿಕ ನಿಲುವೂ ಈ ಅಂಶಕ್ಕೆ ಹೊರತಲ್ಲ. ಒಂದು ಅರ್ಥದಲ್ಲಿ ಚಾರ್ವಾಕರ ಶೈಕ್ಷಣಿಕ ನಿಲುವೇನು? ಎಂಬುದನ್ನು ಚರ್ಚಿಸುವುದೂ ಒಂದೇ ಅದರ ತಾತ್ವಿಕ ಸಿದ್ಧಾಂತವನ್ನು ಚರ್ಚಿಸುವುದೂ ಒಂದೇ.

ಭಾರತದಲ್ಲಿ ದರ್ಶನಗಳನ್ನು ಅವೈದಿಕ ಮತ್ತು ವೈದಿಕವೆಂಬ ಎರಡು ವಿಧಗಳಾಗಿ ವಿಂಗಡಿಸುವರು. ಈ ವಿಂಗಡಣೆಯು ಅವು ದೇವರನ್ನು ಒಪ್ಪಿಕೊಳ್ಳುತ್ತವೋ ಇಲ್ಲವೋ ಎಂಬ ಅಂಶವನ್ನು ಅವಲಂಬಿಸಿಲ್ಲ. ಏಕೆಂದರೆ ದೇವರನ್ನು ಒಪ್ಪಿಕೊಳ್ಳದ ಸಾಂಖ್ಯದಂತಹ ವೈದಿಕ ದರ್ಶನವೂ ಭಾರತದಲ್ಲಿದೆ. ಆದ್ದರಿಂದ ಮೇಲಿನ ವಿಂಗಡಣೆಯು ದೇವರ ಅಸ್ತಿತ್ವದ ಅಂಗೀಕಾರ ಅಥವಾ ನಿರಾಕರಣೆಗೆ ಬದಲಾಗಿ ದರ್ಶನಗಳು ವೇದವನ್ನು ಪ್ರಮಾಣವಾಗಿ ಅಂಗೀಕರಿಸುತ್ತವೋ ಇಲ್ಲವೋ ಎಂಬ ಅಂಶವನ್ನು ಆಧರಿಸಿದೆ. ಹೀಗೆ ದರ್ಶನಗಳನ್ನು ನಾಸ್ತಿಕ ಮತ್ತು ಆಸ್ತಿಕವೆಂದು ವಿಂಗಡಿಸುವುದಕ್ಕಿಂತಲೂ ಅವೈದಿಕ ಮತ್ತು ವೈದಿಕವೆಂದು ವಿಂಗಡಿಸುವುದು ಸೂಕ್ತವೆನಿಸುತ್ತದೆ. ವೇದ ಪ್ರಾಮಾಣ್ಯವನ್ನು ನಿರಾಕರಿಸುವ ದರ್ಶನಗಳು ಅವೈದಿಕವಾದರೆ ಅದನ್ನು ಅಂಗೀಕರಿಸುವ ದರ್ಶನಗಳು ವೈದಿಕವಾಗುತ್ತವೆ. ಅವೈದಿಕ ದರ್ಶನಗಳು ಮೂರು ಚಾರ್ವಾಕ, ಬೌದ್ಧ ಮತ್ತು ಜೈನ. ವೈದಿಕ ದರ್ಶನಗಳು ಆರು. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ ಮತ್ತು ವೇದಾಂತ.

ಚಾರ್ವಾಕರು ಭಾರತೀಯ ಭೌತವಾದವನ್ನು ಪ್ರತಿನಿಧಿಸುತ್ತಾರೆ. ಚಾರ್ವಾಕ ಶಬ್ದದ ಅರ್ಥ ಅಷ್ಟು ಸ್ಪಷ್ಟವಿಲ್ಲ. ಕೆಲವರ ಪ್ರಕಾರ ಈ ಶಬ್ದವು ಈ ದರ್ಶನದ ಸ್ಥಾಪಕನ ಶಿಷ್ಯನ ಹೆಸರು. ಅವರ ಪ್ರಕಾರ ಈ ಮತಸ್ಥಾಪಕನು ತನ್ನ ಸಿದ್ಧಾಂತವನ್ನು ಬೋಧಿಸಿದುದು ಚಾರ್ವಾಕನೆಂಬ ತನ್ನ ಮೊದಲ ಶಿಷ್ಯನಿಗೆ. ಆದ್ದರಿಂದ ಚಾರ್ವಾಕ ದರ್ಶನವೆಂಬ ಹೆಸರು. ಇದಕ್ಕಿಂತಲೂ ಇನ್ನೂ ಖಚಿತವಾದ ಅರ್ಥ 'ಚಾರು' ಮತ್ತು 'ವಾಕು' ಎಂಬ ಶಬ್ದಗಳಿಂದ ಬಂದಿರಬಹುದು. 'ಚಾರು' ಎಂದರೆ ಸುಂದರವಾದ ಅಥವಾ 'ಹಿತವಾದ' ಎಂದರ್ಥ. 'ವಾಕ್' ಎಂದರೆ 'ಮಾತು' ಎಂದರ್ಥ. ಎಂದರೆ ಬದುಕಿನ ಪರಮಗುರಿ ಇಂದ್ರಿಯಸುಖವೊಂದೆ ಎಂಬ ಹಿತವಾದ ಮಾತನ್ನು ಆಡುತ್ತಿರುವುದರಿಂದ ಇವರಿಗೆ ಚಾರ್ವಾಕರೆಂಬ ಹೆಸರು ಬಂದಿದ್ದರಬಹುದು. ಜನಸಾಮಾನ್ಯನ ಧೋರಣೆಯನ್ನು ಪ್ರತಿನಿಧಿಸುವುದರಿಂದ ಇವರಿಗೆ 'ಲೋಕಾಯಕ' ಎಂಬ ಹೆಸರೂ ಇದೆ.

ಚಾರ್ವಾಕ ದರ್ಶನದ ಯಾವ ಆಧಾರಗ್ರಂಥವೂ ಉಪಲಬ್ಧವಿಲ್ಲ. ಇತರ ದರ್ಶನದ ಗ್ರಂಥಗಳಲ್ಲಿ ಕಾಣಬರುವ ಚಾರ್ವಾಕ ಮತ ಖಂಡನೆಯಿಂದ ಚಾರ್ವಾಕರ ಮೂಲಭೂತ ಸಿದ್ಧಾಂತವೇನಿರಬಹುದು ಎಂಬ ಬಗ್ಗೆ ನಮಗೆ ಒಂದು ಸ್ಥೂಲ ಮಾಹಿತಿ ದೊರೆಯುತ್ತದೆ. ಇದಲ್ಲದೇ ಮಾಧವ ವಿದ್ಯಾರಣ್ಯರ ಸರ್ವದರ್ಶನ ಸಂಗ್ರಹದಲ್ಲೂ (ಸಂಸ್ಕೃತ) ನಮಗೆ ಮಾಹಿತಿ ಲಭ್ಯವಾಗುತ್ತದೆ. ಈಚೆಗೆ ಈ ದರ್ಶನದ ಬಗ್ಗೆ ಆಳವಾಗಿ ಸಂಶೋಧನೆ ನಡೆಸಿರುವ ವಿದ್ವಾಂಸರೆಂದರೆ ಪ್ರೊ. ದೇವಿಪ್ರಸಾದ್ ಚಟ್ಟೋಪಾಧ್ಯಾಯ. ಇವರು ಬಂಗಾಳಿ ಮತ್ತು ಆಂಗ್ಲಭಾಷೆಯಲ್ಲಿ 'ಭಾರತೀಯ ಭೌತವಾದದ ಬಗ್ಗೆ ಅನೇಕ ಗ್ರಂಥ'ಗಳನ್ನು ಬರೆದಿದ್ದಾರೆ.

ಚಾರ್ವಾಕರ ಶೈಕ್ಷಣಿಕ ದೃಷ್ಟಿಕೋನಕ್ಕೆ ಬುನಾದಿಯನ್ನು ಒದಗಿಸಿಕೊಡುವುದು ಅವರ ಜ್ಞಾನಮಿಮಾಂಸೆ. ಜ್ಞಾನಮಿಮಾಂಸೆಯು ಜ್ಞಾನವೆಂದರೇನು? ಅದನ್ನು ಪಡೆಯುವ ಸಾಧನಗಳೇನು(ಪ್ರಮಾಣ) ಅದು ಯಾವ ಉಪಾದಿಗಳಲ್ಲಿ (cordition) ಉಗಮವಾಗುತ್ತದೆ ಹಾಗೂ ಅದರಲ್ಲಿ ಭ್ರಮೆಯು ಹೇಗೆ ಉಂಟಾಗುತ್ತದೆ? ಎಂಬ ಅಂಶಗಳ ಬಗ್ಗೆ ಚರ್ಚಿಸುತ್ತದೆ. ಈ ಹಿನ್ನೆಲೆಯಲ್ಲಿ ಚಾರ್ವಾಕರ ಪ್ರಕಾರ ಪ್ರತ್ಯಕ್ಷವೊಂದೇ ಜ್ಞಾನವನ್ನು ಪಡೆಯುವ ಸಾಧನ. ಎಂದರೆ ಇಂದ್ರಿಯಗಳು ನೀಡುವ ಜ್ಞಾನವಷ್ಟೇ ನಿಜವಾದ ಜ್ಞಾನ. ಇತರ ಯಾವುದೇ ಪ್ರಮಾಣಕ್ಕೆ ಇಲ್ಲಿ ಸ್ಥಾನವಿಲ್ಲ. ಅನುಮಾನವು(Inference) ಜ್ಞಾನ ಸಾಧನ ಅಥವಾ ಪ್ರಮಾಣವಾಗಲು ಸಾಧ್ಯವಿಲ್ಲ. ಇಲ್ಲಿ ಅನುಮಾನವೆಂದರೆ ಸಂಶಯವೆಂದರ್ಥವಲ್ಲ. ಅನುಮಾನವು ನೀಡುವ ಜ್ಞಾನದಲ್ಲಿ ಖಚಿತತೆಯಿದೆ. ಆದರೆ ಸಂಶಯದಲ್ಲಿ ಖಚಿತತೆಯಿಲ್ಲ. ಹೀಗೆ ಅನುಮಾನದಲ್ಲಿ ನಾವು ಎರಡು ವಸ್ತುಗಳು ಜೊತೆಗಿರುವುದನ್ನು ಅನೇಕ ಬಾರಿ ಕಂಡಿರುತ್ತೇವೆ. ಅನಂತರ ಮತ್ತೊಂದು ಸಂದರ್ಭದಲ್ಲಿ

Digitised by Bharatavani, CIIL

ಈ ಎರಡು ವಸ್ತುಗಳಲ್ಲಿ ಒಂದನ್ನು ಮಾತ್ರವೇ ಕಂಡು ಇನ್ನೊಂದು ವಸ್ತುವಿನ ಅಸ್ತಿತ್ವವನ್ನು ಆ ವಸ್ತುವನ್ನು ನೋಡದೆಯೇ ತರ್ಕಿಸುತ್ತೇವೆ. ಈ ತರ್ಕದಲ್ಲಿ ಖಚಿತತೆಯಿದೆ. ಊಹೆಯಲ್ಲ. ಊಹೆಯು ನಿಜವೂ ಇರಬಹುದು. ಸುಳ್ಳೂ ಇರಬಹುದು. ಆದರೆ ತರ್ಕದಲ್ಲಿ ಈ ಸಂದಿಗ್ಧತೆಯಿಲ್ಲ. ಇಲ್ಲಿ ಸ್ಪಷ್ಟತೆಯಿದೆ. ಉದಾಹರಣೆಗೆ ಹೊಗೆ ಮತ್ತು ಬೆಂಕಿಗಳು ಒಟ್ಟಿಗಿರುವುದನ್ನು ಅನೇಕ ಬಾರಿ ನೋಡಿರುತ್ತೇವೆ. ಅನಂತರ ಬೇರೊಂದು ಸಂದರ್ಭದಲ್ಲಿ ಬೆಟ್ಟದ ಮೇಲೆ ಹೊಗೆಯನ್ನು ಮಾತ್ರ ಕಂಡು ಅಲ್ಲಿ ಬೆಂಕಿ ಇದೆ ಎಂದು ತರ್ಕಿಸುತ್ತೇವೆ. ಹೀಗೆ ಹೊಗೆಬೆಂಕಿಗಳಿಗಿರುವ ಸಂಬಂಧದ ಜ್ಞಾನದ ಆಧಾರದ ಮೇಲೆ ಹೊಗೆಯನ್ನು ಮಾತ್ರ ಕಂಡು ಬೆಂಕಿಯನ್ನು ತರ್ಕಿಸುವ ವಿಧಾನಕ್ಕೆ ಅನುಮಾನವೆಂದು ಹೆಸರು.

ಚಾರ್ವಾಕರಾದರೋ ಅನುಮಾನದ ಪ್ರಾಮಾಣ್ಯವನ್ನು ಪ್ರಶ್ನಿಸುತ್ತಾರೆ. ಹೊಗೆಬೆಂಕಿಗಳು ಒಟ್ಟಿಗಿರುವ ಕೆಲವೇ ಸಂದರ್ಭಗಳನ್ನು ಮಾತ್ರ ಕಂಡು, ಅದರ ಆಧಾರದ ಮೇಲೆ ಬೆಂಕಿಯನ್ನು ತರ್ಕಿಸುವುದು ಸರಿಯೇ ಎಂಬುದು ಅವರ ಪ್ರಶ್ನೆ. ಒಂದು ವರ್ಗಕ್ಕೆ ಸೇರಿದ ಕೆಲವು ಸಂಗತಿಗಳಿಗೆ ಅನ್ವಯಿಸುವ ಸತ್ಯವನ್ನು ಅದೇ ವರ್ಗದ ಉಳಿದ ಸಂಗತಿಗಳಿಗೂ ಅನ್ವಯಿಸುವುದು ಎಷ್ಟು ಸಮಂಜಸ? ನಾವು ಎಲ್ಲಾ ಸಂಗತಿಗಳನ್ನೂ ಪರಿಶೀಲಿಸಿಲ್ಲ. ಎಂದರೆ ಹೊಗೆಬೆಂಕಿಗಳು ಒಟ್ಟಿಗಿರುವ ಎಲ್ಲ ಸಂದರ್ಭಗಳನ್ನೂ ಕಂಡಿಲ್ಲ. ಒಂದು ಪಕ್ಷ ಎಲ್ಲ ಸಂದರ್ಭಗಳನ್ನು ಕಂಡಿದ್ದರೂ ಭವಿಷ್ಯದಲ್ಲಿ ಅವು ಹಾಗೆಯೇ ಇರುತ್ತವೆಂಬುದು ಖಚಿತವಲ್ಲ. ಒಂದು ಪಕ್ಷ ಭೂತ, ವರ್ತಮಾನ ಮತ್ತು ಭವಿಷ್ಯದ ಎಲ್ಲ ಸಂದರ್ಭಗಳನ್ನೂ ಕಾಣಲು ಕಾರ್ಯತಃ ಸಾಧ್ಯವಾದರೂ ಅನುಮಾನವೆಂಬ ಪ್ರತ್ಯೇಕ ಪ್ರಮಾಣದ ಅಗತ್ಯವಿರುವುದಿಲ್ಲ. ಏಕೆಂದರೆ ಪ್ರತ್ಯಕ್ಷ ಪ್ರಮಾಣಕ್ಕೆ ದತ್ತವಾದುದನ್ನು ತಿಳಿಯಲು ತರ್ಕ ಅಥವಾ ಅನುಮಾನವೆಂಬ ಮತ್ತೊಂದು ಪ್ರಮಾಣಕ್ಕೆ ಮೊರೆಹೋಗುವುದು ಹಾಸ್ಯಾಸ್ಪದ ವಾಗುತ್ತದೆ.

ಶಬ್ದ ಅಥವಾ ವೇದ ಪ್ರಮಾಣವು ಚಾರ್ವಾಕರ ಪ್ರಕಾರ ಎರಡು ಕಾರಣಗಳಿಗಾಗಿ ತಿರಸ್ಕೃತ. ಮೊದಲನೆಯದಾಗಿ ವೇದವು ಕಣ್ಣಿಗೆ ಕಾಣದ ಮತ್ತು ಪ್ರತ್ಯಕ್ಷದ ಮೂಲಕ ಪರೀಕ್ಷಿಸಲಾಗದ ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಎರಡನೆಯದಾಗಿ ಅದರ ವಾಕ್ಯಗಳಲ್ಲಿ ಸಂದಿಗ್ಧತೆ, ಅಸ್ಪಷ್ಟತೆ ಮತ್ತು ವಿರೋಧಾಭಾಸಗಳಿವೆ. ಚಾರ್ವಾಕರ ಪ್ರಕಾರ ಇಂದ್ರಿಯಗ್ರಾಹಿ ವಿಷಯಗಳ ಬಗ್ಗೆ ಪ್ರಸ್ತಾಪಿಸುವುದಾದರೆ ವೇದಕ್ಕೆ ಪ್ರಾಮಾಣ್ಯವಿದೆ. ಪ್ರತ್ಯಕ್ಷದ ವಿರುದ್ಧ ವಿಷಯಗಳ ಬಗ್ಗೆ ಪ್ರಸ್ತಾಪಿಸಿದಾಗ ಅದು ತನ್ನ ಪ್ರಾಮಾಣ್ಯವನ್ನು ಕಳೆದುಕೊಳ್ಳುತ್ತದೆ. ಇಂದ್ರಿಯಗ್ರಾಹ್ಯ ವಿಷಯಗಳ ಬಗ್ಗೆ ಪ್ರಸ್ತಾಪಿಸಿದಾಗಲೂ ವೇದಕ್ಕೆ ಯಾವ ಪ್ರತ್ಯೇಕತೆಯೂ ಬರುವುದಿಲ್ಲ. ಏಕೆಂದರೆ ಆಗ ಪ್ರತ್ಯಕ್ಷದ ಪರಿಧಿಯಲ್ಲೇ ಸೇರಿಹೋಗುತ್ತದೆ.

ಹೀಗೆ ಪ್ರತ್ಯಕ್ಷವೊಂದೇ ಪ್ರಮಾಣವಾದ್ದರಿಂದ ಯಾವುದು ಇಂದ್ರಿಯಗಳಿಗೆ ದತ್ತವೋ ಅದು ಮಾತ್ರ ಸತ್ಯ. ಉಳಿದೆಲ್ಲವೂ ಅಸತ್ಯ. ಪೃಥ್ವಿ, ಅಪ್, ತೇಜಸ್, ಮತ್ತು ವಾಯುಗಳು ಮಾತ್ರ ನಮ್ಮ ಇಂದ್ರಿಯಗಳಿಗೆ ಗ್ರಾಹ್ಯ. ಆಕಾಶವು ಇಂದ್ರಿಯಗ್ರಾಹ್ಯವಲ್ಲವಾದ್ದರಿಂದ ಅದು ಅಸತ್ಯ. ಇದೇ ಕಾರಣಕ್ಕಾಗಿ ಚತುರ್ಭೂತಗಳ ಸೂಕ್ಷ್ಮರೂಪಗಳಾದ ತನ್ಮಾತ್ರೆಗಳು ಅಸತ್ಯ. ದೇಹಭಿನ್ನವಾದ ಆತ್ಮ ಮತ್ತು ಜಗನ್ನಿಯಾಮಕನಾದ ದೇವರೂ ಅಸತ್ಯ. ಕಾರಣ ಅವು ಇಂದ್ರಿಯಗ್ರಾಹ್ಯವಲ್ಲ. ಎಲೆ, ಅಡಿಕೆ ಮತ್ತು ಸುಣ್ಣಗಳು ಬಿಡಿಯಾಗಿ ಕೆಂಪಗಿರದಿದ್ದರೂ ಅವು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆತಾಗ ಹೇಗೆ ಕೆಂಬಣ್ಣವು ಅಸ್ತಿತ್ವಕ್ಕೆ ಬರುವುದೋ ಹಾಗೆಯೇ ಮೂಲತಃ ಅಚೇತನವಾಗಿದ್ದರೂ ಚತುರ್ಭೂತಗಳು ನಿರ್ದಿಷ್ಟ ಪ್ರಮಾಣದಲ್ಲಿ ಸೇರಿದಾಗ ಚೈತನ್ಯವು ಅಸ್ತಿತ್ವಕ್ಕೆ ಬರುತ್ತದೆ. ಈ ಭೂತಗಳು ಒಟ್ಟಿಗಿರುವವರೆಗೆ ಚೈತನ್ಯವು ಇರುತ್ತದೆ. ಅವು ಬೇರೆಯಾದಾಗ ಚೈತನ್ಯವೂ ನಷ್ಟವಾಗುತ್ತದೆ. ಹೀಗೆ ಚೈತನ್ಯವು ನಮ್ಮ ಶರೀರದಲ್ಲಿ ಬಂದುಹೋಗುವ ಒಂದು ಅನುಷಂಗಿಕ ಗುಣ ಅಥವಾ ಕಾರ್ಯ. ಅದಕ್ಕೆ ದೇಹಕ್ಕಿಂತಲೂ ಸ್ವತಂತ್ರವಾದ ಯಾವು ಅಸ್ತಿತ್ವವೂ ಇಲ್ಲ. ಚಾರ್ವಾಕರು ಚೈತನ್ಯವನ್ನು ಒಂದು ಸ್ವತಂತ್ರ ದ್ರವ್ಯವಾಗಿ ತಿರಸ್ಕರಿಸುವರೇ ಹೊರತು ಜಡದೇಹದ ಗುಣವಾಗಿ ಅಲ್ಲ. ಚೈತನ್ಯವು ಭೌತಿಕ ದೇಹದ ಗುಣ. ಆದರೆ ಅದು ದೇಹದ ಅನಿವಾರ್ಯ ಗುಣವಲ್ಲ. ಬದಲಾಗಿ ದೇಹದಲ್ಲಿ ಸ್ವಲ್ಪದಿನವಿದ್ದು, ನಂತರ ಮರೆಯಾಗುವ ಒಂದು ಅನುಷಂಗಿಕ ಗುಣ. ಚಾರ್ವಾಕರ ಪ್ರಕಾರ ಸುಖದುಃಖಾದಿಗಳು ಶರೀರಭಿನ್ನವಾದ ಚೈತನ್ಯದ ಅಸ್ತಿತ್ವವನ್ನು ಸೂಚಿಸುವುದಿಲ್ಲ. ಅವು ಶರೀರದ ಲಕ್ಷಣಗಳು. ಇದು ಬೆರಗುಗಣ್ಣು, ರೋಮಾಂಚನ, ಕಣ್ಣೀರು– ಇವೇ ಮೊದಲಾದ ಚಲನವಲನಗಳಿಂದ ನಮಗೆ ಸ್ಪಷ್ಟವಾಗುತ್ತದೆ.

ಹೀಗೆ ಚೈತನ್ಯವು ಶರೀರದ ಅನುಷಂಗಿಕ ಗುಣವಾದ್ದರಿಂದ ಮರಣಾನಂತರ ಬದುಕಿಲ್ಲ. ಸಾವಿನಲ್ಲಿ ಎಲ್ಲವೂ ಪರಿಸಮಾಪ್ತಿಯಾಗುತ್ತದೆ. ಆದ್ದರಿಂದ ಮನುಷ್ಯನು ತನ್ನ ಗಮನವನ್ನು ಪರದಿಂದ ಇಹದೆಡೆಗೆ ಹರಿಸಬೇಕು. ಎಲ್ಲ ಶಿಕ್ಷಣಗಳ ಗುರಿ ಚಾರ್ವಾಕರ ಪ್ರಕಾರ ಪ್ರಾಪಂಚಿಕ ಸುಖವಷ್ಟೇ. ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷವೆಂಬ ಆಧ್ಯಾತ್ಮಿಕ ಮೌಲ್ಯ ಚಾರ್ವಾಕರ ಪ್ರಕಾರ ಅರ್ಥಹೀನ. ಧರ್ಮ, ಅರ್ಥ, ಮತ್ತು ಕಾಮವೆಂಬ ಉಳಿದ ಮೂರು ಪುರುಷಾರ್ಥಗಳ ವಿಷಯಗಳಲ್ಲಿ ಚಾರ್ವಾಕರಲ್ಲೆ ಎರಡು ಪಂಗಡಗಳಿವೆ. ಒಂದು ಪಂಗಡಕ್ಕೆ ಕೇವಲ ಅರ್ಥ ಮತ್ತು ಕಾಮಗಳು ಮಾತ್ರ ಸ್ವೀಕೃತವಾದವು. ಧರ್ಮ ಮತ್ತು ಮೋಕ್ಷಗಳಿಗೆ ಯಾವ ಸ್ಥಾನವೂ ಇಲ್ಲ. ಇವರನ್ನು ಧೂರ್ತಚಾರ್ವಾಕರೆಂದು ಬಣ್ಣಿಸಲಾಗಿದೆ. ಇವರ ಪ್ರಕಾರ ವೈಯಕ್ತಿಕ ಸುಖವೊಂದೇ ಮನುಷ್ಯನ ಗುರಿ. ಅಪಾರ ಸಾರ್ವತ್ರಿಕ ಸುಖವು ವೈಯಕ್ತಿಕ ಸುಖವನ್ನು ಮನುಷ್ಯನು ಹೇಗೆ ಸಾಧಿಸುವನೆಂಬುದೂ ಅಸಂಗತಿ. ಈ ನಿಟ್ಟಿನಲ್ಲಿ ಅವನಿಗೆ ಗುರಿಯು ಮುಖ್ಯವೇ ಹೊರತು ಸಾಧನವಲ್ಲ. ಚಾರ್ವಾಕರ ಮತ್ತೊಂದು ಪಂಗಡವು ಅರ್ಥಕಾಮಗಳ ಜೊತೆಗೆ ಧರ್ಮಕ್ಕೂ ಸ್ಥಾನವನ್ನು ನೀಡುತ್ತದೆ. ಆದರೆ ಅವರ ಧರ್ಮದ ಪರಿಕಲ್ಪನೆ ವೈದಿಕ ಬುನಾದಿಯನ್ನು ಪಡೆದುದಲ್ಲ. ಅವರ ದೃಷ್ಟಿಯಲ್ಲಿ ವ್ಯಾವಹಾರಿಕ ಚತುರತೆಯೇ ಧರ್ಮ. ಯಾವುದು ವ್ಯಕ್ತಿಗಷ್ಟೇ ಅಲ್ಲ ಸಮಾಜದ ಉಳಿದೆಲ್ಲ ಸದಸ್ಯರಿಗೆ ಲೌಕಿಕವಾಗಿ ಪ್ರಯೋಜನವುಳ್ಳದ್ದಾಗಿದೆಯೋ ಮತ್ತು ಯಾವ ಕೆಲಸದಿಂದ ಸಮಾಜದ ಉಳಿದ ಸದಸ್ಯರಿಗೆ ತೊಂದರೆಯಾಗುವುದಿಲ್ಲವೋ ಅದೇ ಧರ್ಮ. ಚಾರ್ವಾಕರ

Digitised by Bharatavani, CIIL

ಈ ಪಂಗಡಕ್ಕೆ "ಸುಶಿಕ್ಷಿತ ಚಾರ್ವಾಕ"ರೆಂದು ಹೆಸರು. ಧೂರ್ತಚಾರ್ವಾಕರ ಮೌಲ್ಯ ಪರಿಕಲ್ಪನೆ ವ್ಯಕ್ತಿಕೇಂದ್ರಿತವಾದರೆ ಸುಶಿಕ್ಷಿತ ಚಾರ್ವಾಕರ ಮೌಲ್ಯ ಪರಿಕಲ್ಪನೆ ಸಮಾಜಕೇಂದ್ರಿತ. ಸುಶಿಕ್ಷಿತರು ತಮ್ಮ ಮೌಲ್ಯಪರಿಕಲ್ಪನೆಯಲ್ಲಿ ಸಮಾಜದ ಇತರ ಸದಸ್ಯರನ್ನು ಗಣನೆಗೆ ತಂದುಕೊಳ್ಳುತ್ತಾರೆ. ಈ ವಿಷಯದಲ್ಲಿ ಹೆಚ್ಚು ಕಡಿಮೆ ಅವರು ಪಾಶ್ಚಾತ್ಯದೇಶದ ಪ್ರಯೋಜನವಾದಿಗಳನ್ನು (Utiliarianists) ಹೋಲುತ್ತಾರೆ.

ಒಟ್ಟಾರೆ ಚಾರ್ವಾಕರ ಶೈಕ್ಷಣಿಕ ನಿಲುವನ್ನು ಹೀಗೆ ಕ್ರೋಢೀಕರಿಸಬಹುದು.

1) ಶಿಕ್ಷಣಕ್ಕೆ ಇಂದ್ರಿಯ ಪ್ರತ್ಯಕ್ಷವೇ ಬುನಾದಿಯಾಗಿರಬೇಕು. ಇಂದ್ರಿಯಗಳು ಬುನಾದಿಯಿಲ್ಲದ ಮತ್ತು ಇಂದ್ರಿಯಪರೀಕ್ಷೆಗೆ ಸ್ಥಾನವಿಲ್ಲದ ಶಿಕ್ಷಣವು ಶಿಕ್ಷಣವೇ ಅಲ್ಲ. ಪ್ರತ್ಯಕ್ಷಕ್ಕೆ ಅಧೀನವಾಗಿ ತರ್ಕಕ್ಕೆ ಸ್ಥಾನವಿದೆಯೇ ಹೊರತು ಸ್ವತಂತ್ರವಾಗಿ ಅದಕ್ಕೆ ಯಾವ ಸ್ಥಾನವೂ ಇಲ್ಲ.

2) ಮನುಷ್ಯನಿಗೆ ವ್ಯಾವಹಾರಿಕ ಚತುರತೆಯನ್ನು ಮತ್ತು ತನ್ಮೂಲಕ ಲೌಕಿಕ ಸುಖವನ್ನು ಸಂಪಾದಿಸಿಕೊಡುವುದು ಶಿಕ್ಷಣದ ಗುರಿ. ಅದಕ್ಕೆ ಯಾವ ಆಧ್ಯಾತ್ಮಿಕ ಗುರಿಯೂ ಇಲ್ಲ.

**–ಡಾ. ಚಂದ್ರಶೇಖರ್ ಎಚ್.ಎಲ್.**

## ಚುರುಕು ಶಾಲೆಗಳು

ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳ ನಡುವೆ ಸಂವಾದವನ್ನು ಏರ್ಪಡಿಸಲು, ನ್ಯಾಯಸಂಗತವಾದ ಸಮಾಜವನ್ನು ನಿರ್ಮಿಸಲು ಮತ್ತು ಮಾನವನಲ್ಲಿ ಈಗಾಗಲೇ ಇರುವ ಪೂರ್ಣತೆಯನ್ನು ವ್ಯಕ್ತಪಡಿಸಲು ಬೇಕಾದ ಸಮಗ್ರ ಉಪಕ್ರಮದ ಅವಶ್ಯಕತೆಗಳನ್ನು ಪೂರೈಸಲು ಇಪ್ಪತ್ತೊಂದನೇ ಶತಮಾನದ ಶಾಲಾಶಿಕ್ಷಣವನ್ನು ಪುನರ್ನಿರ್ಮಿಸಬೇಕಾದ ಅಗತ್ಯವಿದೆ. ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ತಂದೆತಾಯಿಗಳಿಗೆ ಗುಣಮಟ್ಟದ ವಿಷಯವಸ್ತುವನ್ನು (content) ಹಾಗೂ ಕಲಿಕಾ ವಿಧಾನವನ್ನು ವೇಗದೊಡನೆ ತಲುಪಿಸುವ ತಂತ್ರಜ್ಞಾನ ಮಾಹಿತಿ ತಂತ್ರಜ್ಞಾನವಾಗಿದೆ. ಇನ್ನು ಮುಂದೆ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ (Information and communication Technology, ICT) ಮತ್ತು ಮಾಹಿತಿ ತಂತ್ರಜ್ಞಾನ(Information Technology, IT)ಗಳನ್ನು ಪರ್ಯಾಯವಾಗಿ ಬಳಸಲಾಗುವುದು. ಇದರಿಂದ ಶಿಕ್ಷಕರ ಹಾಗೂ ಶಾಲೆಯ ಚಟುವಟಿಕೆಗಳ ನಿರ್ವಹಣೆಗೆ ನೆರವಾಗುವುದಲ್ಲದೆ ಕಾಲದೇಶಗಳ ಮಿತಿಯನ್ನು ನಿವಾರಿಸಿ ಸಹಯೋಗದ ಕಲಿಕೆಯನ್ನು ಸಾಧ್ಯವಾಗಿಸುತ್ತದೆ. ಮಾಹಿತಿ ತಂತ್ರಜ್ಞಾನದ ಅನುಕೂಲವನ್ನು ಬಳಸಿಕೊಂಡು ಸೃಜನಾತ್ಮಕತೆ ಮತ್ತು ಸಹಯೋಗದ ಕಲಿಕೆ ಮತ್ತು ಬೋಧನೆಗಳಿಗೆ ಗಮನವೀಯುತ್ತಾ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಶಾಲಾ ವ್ಯವಸ್ಥಾಪನೆ, ಅಷ್ಟೇ ಏಕೆ, ತಂದೆತಾಯಿಯರಿಗೂ ಕೂಡ ತತ್ಕ್ಷಣದ ಮತ್ತು ಬಳಕೆದಾರ ಸ್ನೇಹಿ ನೆರವನ್ನು ನೀಡುವ ಸಾಮರ್ಥ್ಯದೊಂದಿಗಿನ ಮಾದರಿ ಶಾಲೆಯ ಪರಿಕಲ್ಪನೆಯೇ ಚುರುಕು ಶಾಲೆಗಳು(Smart Schools). ಪ್ರಾಥಮಿಕ ಶಾಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಕೌಶಲಗಳನ್ನು ಬೆಳೆಸುವ ಘಟನೆಯಂತೆ, ವಿವಿಧ ಜ್ಞಾನಕ್ಷೇತ್ರಗಳ ಅಂತರ್ ಸಂಬಂಧಗಳ ಸಂಕೀರ್ಣತೆಗಳನ್ನು ಹೊರಗೆಡಹುವ ಮತ್ತು ಮಾಧ್ಯಮಿಕ ಹಾಗೂ ಹಿರಿಯ ಮಾಧ್ಯಮಿಕ ಸ್ತರಗಳಲ್ಲಿ ಪ್ರಯೋಗಗಳಲ್ಲಿ ಕೌಶಲಗಳನ್ನು ಮೂಡಿಸುವ ಸಂಪನ್ಮೂಲದಂತೆ ಮಾಹಿತಿ ತಂತ್ರಜ್ಞಾನವನ್ನು ಪರಿಗಣಿಸಬೇಕು. ಹಂತ ಹಂತವಾಗಿ ಬೆಳೆಸಲಾಗುವ ಶಿಕ್ಷಣ ಪ್ರಕ್ರಿಯೆಯಲ್ಲಿ ಕೌಶಲಗಳು ಜ್ಞಾನಕ್ಕಿಂತ ಮುಂಚೆ ಬರುವುವು. ಆದ್ದರಿಂದ, ಔದ್ಯೋಗಿಕ ಮತ್ತು ಶೈಕ್ಷಣಿಕ ಪ್ರವಾಹಗಳನ್ನು ಏಕೀಕೃತಗೊಳಿಸುವ ಅಗತ್ಯವಿದೆ.

**ಚುರುಕು ರೂಪಕ**(Smart Metaphor):

'ಚುರುಕು' ಎನ್ನುವುದು ಈ ಕೆಳಗಿನ ಅರ್ಥಗಳನ್ನು ಕೊಡಬಹುದು. ಸರಳ, ನೈತಿಕ, ಜವಾಬುದಾರಿ, ಪ್ರತಿಕ್ರಿಯಾತ್ಮಕ ಮತ್ತು ಪಾರದರ್ಶಕ (SMART- Simple, Moral, Accountable, Responsive, Transparent).

ಚುರುಕು ಆಡಳಿತ ಎಂಬುದು ಇ–ಆಡಳಿತ(e-governance)ಕ್ಕೆ ಸಂಬಂಧಿಸಿದಂತೆಯೂ ಸಹ ಜನಪ್ರಿಯವಾಗಿದೆ. ಶಾಲೆಗಳಿಗೆ ಸಂಬಂಧಿಸಿದಂತೆ 'ಚುರುಕು' ಎನ್ನುವುದು ಅಪಪ್ರಯೋಗವಾಗಿದೆ. 'ಚುರುಕು' ಎಂಬುದು 'ಸಾಧಾರಣ' ಅಥವಾ 'ಮಂಕು' – ಇವುಗಳಿಗೆ ಹೋಲಿಕೆಯಾಗಿರಲೂ ಸಾಧ್ಯ. ಬ್ರೊವರ್ಡ್ ಕೌಂಟಿಯಲ್ಲಿ SMART ಶಾಲೆ ಎಂಬ ಪದಗುಚ್ಛದಲ್ಲಿ SMART ಎಂಬುದು Student Mastering Academic and Related Technologies ಎನ್ನುವ ಅರ್ಥವನ್ನು ಕೊಡುತ್ತದೆ. ರೂಪಕದ ದೃಷ್ಟಿಯಿಂದ ಈ ಪದಕ್ಕೆ ವಿವಿಧ ಅರ್ಥವನ್ನು ನೀಡಬಹುದಾಗಿದ್ದು ಮೂಲತಃ ಇದು ಮೌಲ್ಯವುಳ್ಳ ಮತ್ತು ತಂತ್ರಜ್ಞಾನ, ಆರ್ಥಿಕತೆ ಮತ್ತು ರಾಜನೀತಿಗಳಲ್ಲಿ ವೇಗದ ಬದಲಾವಣೆಯೊಂದಿಗೆ ಸಾಗಲು ಪ್ರಾಯೋಗಿಕತೆಯ ಅಧಿಕ ವೇಗವುಳ್ಳ ಮಾದರಿ ಘಟಕವನ್ನು ಸೂಚಿಸುತ್ತದೆ.

ಚುರುಕು ಶಾಲೆಗಳಲ್ಲಿ ವಿದ್ಯಾರ್ಥಿಗಳು ಸ್ವತಂತ್ರ ಕಲಿಕಾರ್ಥಿಗಳು; ಅವರು "ಕಲಿಯುವುದು ಹೇಗೆ ಎಂಬುದನ್ನು ಕಲಿಯುತ್ತಾರೆ. ಅವರು ಲಭ್ಯವಿರುವ ಮಾಹಿತಿಯಿಂದ ಜ್ಞಾನನಿರ್ಮಾಣದ ಸಾಮರ್ಥ್ಯವನ್ನು ಗಳಿಸುತ್ತಾರೆ. ಈ ಸಾಮರ್ಥ್ಯಗಳು ಕಲಿಕಾ ಸಮಾಜಕ್ಕೆ ನಿರ್ಣಾಯಕವಾದವುಗಳು(UNESCO,1996)

ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ(ICT) ಬೆಂಬಲಿತ ಕಾರ್ಯಕ್ರಮಗಳು, ಮೂಲಭೂತ ಸೌಕರ್ಯಗಳು, ಉಪಕರಣಗಳು, ಶಿಕ್ಷಕರು ಮತ್ತು ವ್ಯವಸ್ಥಾಪನೆಗಳ ಸಹಾಯದಿಂದ ವಿದ್ಯಾರ್ಥಿಗಳ ಚಿಂತನೆ ಮತ್ತು ಆಳವಾದ ಅರಿವಿನ ಕುಶಲತೆಗಳನ್ನು ಬೆಂಬಲಿಸುವ ಶಾಲೆಗಳನ್ನು 'ಚುರುಕು ಶಾಲೆಗಳು' (Smart Schools) ಎಂದು ಹೇಳುವರು.

ಬೌದ್ಧಿಕ ಪಾಲುದಾರನ ರೂಪದಲ್ಲಿ ನೂತನ ಬೋಧನ ವಿಧಾನಗಳ ತತ್ವಗಳ ಅನುಷ್ಠಾನವನ್ನು ಕಂಪ್ಯೂಟರ್ ಸುಗಮಗೊಳಿಸುವುದು.

Digitised by Bharatavani, CIIL

ಜ್ಞಾನ ಸಂಗ್ರಹಣೆಗಿಂತ ಜ್ಞಾನ ನಿರ್ಮಾಣವನ್ನು ವಿದ್ಯಾರ್ಥಿಗಳು ತಾವು ಅಧ್ಯಯನ ಕೈಗೊಳ್ಳುತ್ತಿರುವ ಅಂತರ್ವಸ್ತುವಿನ ಬಗ್ಗೆ ಅವರ ಆಳವಾದ ಚಿಂತನೆಯನ್ನು ಸುಗಮಗೊಳಿಸಿ ಅಮೂರ್ತ ಪರಿಕಲ್ಪನೆಗಳನ್ನು ಚಿಂತನೆಯನ್ನಾಗಿ ಪರಿವರ್ತಿಸಲು ಕಂಪ್ಯೂಟರ್ ಸಹಾಯಮಾಡುತ್ತದೆ. ಕಂಪ್ಯೂಟರ್ ಬಳಕೆಯಿಂದ ಪ್ರಾಯೋಜನೆಗಳಲ್ಲಿ ಸಹಕಾರಿ ಕಲಿಕೆ ಅಧಿಕಗೊಳ್ಳುವುದು.

ಕಲಿಯುವವರ ವೇಗ, ಸಾಮರ್ಥ್ಯಗಳು ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ವ್ಯಕ್ತಿಗತ ಕಲಿಕೆ ಕಾರ್ಯಸಾಧ್ಯ ಆಯ್ಕೆಯಾಗುವುದು. ಉತ್ತಮಭವಿಷ್ಯದ ಸಲುವಾಗಿ ಶಿಕ್ಷಣದಲ್ಲಿನ ಸುಧಾರಣೆಯ ವೇಗವರ್ಧನೆಯಲ್ಲಿ ಕಂಪ್ಯೂಟರ್‌ನ ಸಾಮರ್ಥ್ಯ ಹೆಚ್ಚಿನ ಮೌಲ್ಯವುಳ್ಳದ್ದಾಗಿರುವುದು.

**ಶಿಕ್ಷಣದತ್ತ ಪುನರ್‌ವೀಕ್ಷಣೆ:**

ಯುನೆಸ್ಕೊ ಸಂಸ್ಥೆಯ ಜಾಕಸ್ ಡೆಲಾರ್ಸ್ ಅವರ 21ನೇ ಶತಮಾನದ ವರದಿ ಶಿಕ್ಷಣದ ನಾಲ್ಕು ಆಧಾರಸ್ತಂಭಗಳನ್ನು ವಿವರಿಸುತ್ತದೆ.

- ತಿಳಿಯುವುದಕ್ಕಾಗಿ ಕಲಿಯುವುದು.
- ಕಾರ್ಯೋನ್ಮುಖರಾಗಲು ಕಲಿಯುವುದು.
- ಜೊತೆಯಲ್ಲಿ ಬಾಳಲು ಕಲಿಯುವುದು.
- ಅಸ್ತಿತ್ವದಲ್ಲಿರಲು ಕಲಿಯುವುದು.

ಜೆ.ಡೆಲಾರ್ಸ್ ವರದಿ ಹೀಗೆ ಉಲ್ಲೇಖಿಸಿದೆ. “ಬದಲಾವಣೆಯ ವ್ಯಾಪ್ತಿ ಮತ್ತು ವೇಗದ ಕಾರಣದಿಂದ ಸಮಾಜವು ಹೆಚ್ಚು ಹೆಚ್ಚು ಜ್ಞಾನಾಧಾರಿತವಾಗುತ್ತಿರುವುದರಿಂದ ಉನ್ನತಶಿಕ್ಷಣ ಮತ್ತು ಸಂಶೋಧನೆಗಳು ವ್ಯಕ್ತಿ, ಸಮುದಾಯ ಮತ್ತು ರಾಷ್ಟ್ರಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ಉಳಿಸಿಬೆಳೆಸಬಲ್ಲ ಅಭಿವೃದ್ಧಿಯ ಪ್ರಮುಖ ಘಟಕವಾಗಿದೆ.”

ಸ್ವಾಮಿ ವಿವೇಕಾನಂದರು ಶಿಕ್ಷಣವನ್ನು ಹೀಗೆ ಪರಿಗಣಿಸಿದರು–

“ಚರಿತ್ರೆಯನ್ನು ನಿರ್ಮಾಣ ಮಾಡುವಂಥ, ಬುದ್ಧಿವಿಕಾಸಗೊಳಿಸುವಂಥ ಮತ್ತು ಓರ್ವನು ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡುವಂಥ ಶಿಕ್ಷಣವು ನಮಗೆ ಬೇಕಾಗಿದೆ. ಮಾನವನಲ್ಲಿ ಈಗಾಗಲೇ ಅಡಗಿರುವ ಪೂರ್ಣತೆಯ ಅಭಿವ್ಯಕ್ತಿಯೇ ಶಿಕ್ಷಣ” (ಕಸ್ತೂರಿರಂಗನ್,1999).

ತತ್ವಜ್ಞಾನಿಯೂ, ಋಷಿಯೂ ಆಗಿದ್ದ ಶ್ರೀಅರವಿಂದರ ಮಾತುಗಳಲ್ಲಿ ಹೇಳುವುದಾದರೆ ‘ಗತಕಾಲವು ನಮ್ಮ ಆಧಾರಶಿಲೆ, ವರ್ತಮಾನ ನಮ್ಮ ಪದಾರ್ಥ, ಭವಿಷ್ಯವು ನಮ್ಮ ಗುರಿ ಮತ್ತು ಶಿಖರ. ಪ್ರತಿಯೊಂದಕ್ಕೂ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯಲ್ಲಿ ತನ್ನದೇ ಆದ ಗೌರವ ಮತ್ತು ಸ್ಥಾನಗಳಿವೆ. ಮುಂಬರುವ ಪೀಳಿಗೆಗಳು ಪರಂಪರೆಯ ಸಂಚಿತ ಪಾಠಗಳನ್ನು ಸ್ವೀಕರಿಸಿ ಮುಂದಕ್ಕೆ ಕೊಂಡೊಯ್ಯಲು ಸಾಧ್ಯವಾಗಿಸುವ ಭೂತಭವಿಷ್ಯತ್ ವರ್ತಮಾನಗಳ ನಡುವಣ ಸಂವಾದವೇ ಶಿಕ್ಷಣ ಎಂದು ಶ್ರೀಅರವಿಂದರು ಪರಿಗಣಿಸಿದರು.’ (ಕಸ್ತೂರಿರಂಗನ್,1999).

ರಾಷ್ಟ್ರನಿರ್ಮಾಣ, ಹೆಚ್ಚು ನಿಷ್ಪಕ್ಷಪಾತವುಳ್ಳ ಸಮಾಜ ನಿರ್ಮಾಣ ಮತ್ತು ಜೀವನದ ಒಟ್ಟಾರೆ ಗುಣಮಟ್ಟಗಳನ್ನು ಸುಧಾರಿಸಲು ಬೇಕಾದ ಅತ್ಯಂತ ಮೂಲಭೂತ ಘಟಕಗಳಲ್ಲಿ ಶಿಕ್ಷಣವು ಒಂದಾಗಿದೆ ಎಂದು ಆರ್ಥಿಕತಜ್ಞರು ಮತ್ತು ನೊಬೆಲ್ ಪುರಸ್ಕೃತರೂ ಆದ ಪ್ರೊ॥ ಅಮರ್ತ್ಯಸೇನ್ ಅಭಿಪ್ರಾಯಪಡುತ್ತಾರೆ.

ಬಾಹ್ಯಾಕಾಶ ಆಯೋಗ (Space Commission) ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (Indian Space Research Organization, ISRO)ಯ ಅಧ್ಯಕ್ಷರಾದ ಡಾ॥ ಕೆ. ಕಸ್ತೂರಿರಂಗನ್‌ರವರ ಪ್ರಕಾರ ಕೇವಲ ಭೌತಿಕ ಗುರಿಗಳಿಂದ ಉಚ್ಚತಮ ಪ್ರಜ್ಞೆಗೆ ಏರುವ ಸಾಮರ್ಥ್ಯವನ್ನು ವ್ಯಕ್ತಿಗೆ ನೀಡುವ ಮುಕ್ತಿದಾಯಕ ಶಕ್ತಿ ಮತ್ತು ವಿಕಾಸಶೀಲ ಶಕ್ತಿಯೇ ಶಿಕ್ಷಣ(ಕಸ್ತೂರಿರಂಗನ್,1999).

ಮುಂದಿನ ಶತಮಾನದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳು ಹೆಚ್ಚು ಸಾಂದರ್ಭಿಕತೆಯನ್ನು ಹೊಂದಿರುವುವು. ಮಾಹಿತಿ ತಂತ್ರಜ್ಞಾನವು ಹಳೆಯ ಮಿತಿಗಳನ್ನು ಮುರಿದು ಉದಯವಾಗುತ್ತಿರುವ ಜಾಗತಿಕ ಗ್ರಾಮದಲ್ಲಿ ಹೊಸ ಅಂತರ್‌ಸಂಪರ್ಕಗಳನ್ನು ನಿರ್ಮಿಸುತ್ತಿದೆ. ಅಧಿಕ ಉತ್ಪಾದನೆ, ಉತ್ತಮಗುಣಮಟ್ಟ, ವೇಗದ ಲಭ್ಯತೆ, ಉನ್ನತಮಟ್ಟದ ಅಮೂರ್ತತೆ ಮತ್ತು ಪರಾಮರ್ಶನ– ಇವುಗಳನ್ನು ಸಾಧಿಸಿಕೊಡುವ ತಂತ್ರಜ್ಞಾನವು ಮಾಹಿತಿ ತಂತ್ರಜ್ಞಾನವಾಗಿದೆ.

ಶಿಕ್ಷಕರು, ವಿದ್ಯಾರ್ಥಿಗಳು, ಶಾಲಾವ್ಯವಸ್ಥಾಪನೆ ಮತ್ತು ಸಮುದಾಯ –ಈ ಎಲ್ಲಾ ಶಾಲೆಯ ಪಾಲುದಾರರಿಗೆ ವಿನಿಮಯ ಕಲಿಕಾ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಜ್ಞಾನನಿರ್ವಹಣೆ ಶ್ರೀಮಂತವೂ, ಸವಾಲಿನಿಂದ ಕೂಡಿದ ಅವಕಾಶವನ್ನೂ ಒದಗಿಸುವುವು. ಈ ಪ್ರಕ್ರಿಯೆಯಿಂದ ಶಾಲಾ ಆಧಾರಿತ ಪಠ್ಯಕ್ರಮ ಬೆಳವಣಿಗೆಗಾಗಿ ಮತ್ತು ಕಲಿಕೆಯ ಅಗತ್ಯಗಳನ್ನು ಪೂರೈಸಲು ನಾವಿನ್ಯಯುತ ಬೋಧನೆಯ ಉಪಯೋಗಕ್ಕಾಗಿ ಕ್ರಿಯಾತ್ಮಕ ಕಲಿಕೆ ಹಾಗೂ ಮಾಹಿತಿ ಪರಿಸರವನ್ನು ನಿರ್ಮಿಸಲು ಸಾಧ್ಯವಾಗುವುದು.

ಕಳೆದ 50ವರ್ಷಗಳಲ್ಲಿ ಶೈಕ್ಷಣಿಕ ಮೌಲ್ಯಗಳನ್ನು ಮತ್ತು ಬೋಧನಾಶಾಸ್ತ್ರೀಯ (Pedogogical) ಚಿಂತನೆಗಳನ್ನು ವರ್ಧಿಸಲು ಕಲಿಕೆಯ ಮತ್ತು ಬೋಧನೆಯ ಹೊಸ ವಾದಗಳನ್ನು ಮುಂದಿಡಲಾಗಿದೆ.

- **ಬಹುಬುದ್ಧಿಶಕ್ತಿ ವಾದ** (Theory of Multiple Intelligence, MI)

  (ಹೊವರ್ಡ್ ಗಾರ್ಡ್‌ನರ್‌ನಿಂದ ಮಂಡಿತವಾದುದು.):– ಬುದ್ಧಿಶಕ್ತಿ ಪ್ರತಿಯೊಬ್ಬ ವ್ಯಕ್ತಿಯೂ ಹೊಂದಿರುವಂತಹ ಏಕಮೇವ ಸಾಧಾರಣ ಸಾಮರ್ಥ್ಯ ಎಂಬ ಸಾಂಪ್ರದಾಯಿಕ ಪರಿಕಲ್ಪನೆಯಿಂದ ಭಿನ್ನ ಸರಿದು ಗಾರ್ಡ್‌ನರ್ ಸಂಗೀತ,

Digitised by Bharatavani, CIIL

ಅವಕಾಶೀಯ(Spatial) ಶಾರೀರಿಕ, ಶಾಬ್ದಿಕ, ತಾರ್ಕಿಕ, ಗಣಿತ, ದೈಹಿಕ, ಅಧ್ಯಾತ್ಮಿಕ ಮತ್ತು ಅಂತರ್‌ವ್ಯಕ್ತಾತ್ಮಕ ಇವೇ ಮುಂತಾದ ಬಹುತೆರನ ಬುದ್ಧಿಶಕ್ತಿಗಳಿವೆ ಎಂದು ಸೂಚಿಸಿದ.

- **ಸಂವೇಗಾತ್ಮಕ ಬುದ್ಧಿಶಕ್ತಿವಾದ** (ಡೇನಿಯಲ್ ಗೋಲ್ಡ್‌ಮನ್‌ರವರಿಂದ ಮಂಡಿತವಾದುದು): ಸಂವೇಗಗಳ ಬಗೆಗಿನ ಶಿಕ್ಷಣ ಬೌದ್ಧಿಕ ಸಾಮರ್ಥ್ಯಗಳನ್ನು ಕುರಿತ ಶಿಕ್ಷಣದಷ್ಟೇ ಮುಖ್ಯವಾಗಿದ್ದು, ವಿಶೇಷವಾಗಿ ಇಂದಿನ ಶಾಲೆಗಳಲ್ಲಿ ನಡೆಯುವ ಹಿಂಸಾಚಾರದ ಸಂದರ್ಭದಲ್ಲಿ ಪ್ರಮುಖವಾಗಿದೆ. ಇಸ್ರೇಲ್‌ನ ಟೆಲ್‌ಅವಿವ್‌ನಲ್ಲಿ ಸಂಪೂರ್ಣ ಶಿಕ್ಷಣ ವ್ಯವಸ್ಥೆಯಲ್ಲಿ ಸಂವೇಗಗಳನ್ನು ಕುರಿತ ಶಿಕ್ಷಣಕ್ಕಾಗಿ 'ಬಿನಾತ್ ಹಲೇವ್' (BINAT HALEV) ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

- **ಸಹಕಾರಿ ಕಲಿಕೆಯು** ಶಿಕ್ಷಕರನ್ನು ಮುಕ್ತಗೊಳಿಸುತ್ತದೆಯಲ್ಲದೆ ಸಂವಾದ, ಪ್ರಾರಂಭಿಕ ಪ್ರಯತ್ನ, ಆಯ್ಕೆಗಳನ್ನು ಮಾಡಲು ತಮ್ಮ ಬಲವಾದ ಬುದ್ಧಿಶಕ್ತಿಯ ಬಳಕೆ ಮತ್ತು ಪರಸ್ಪರ ಕಲಿಯುವುದು ಇವೇ ಮೊದಲಾದ ವಿಭಿನ್ನ ಕಾರ್ಯಗಳಲ್ಲಿ ಭಾಗವಹಿಸಲು ಕಲಿಕಾರ್ಥಿಗಳಿಗೆ ಅವಕಾಶವನ್ನು ಒದಗಿಸುತ್ತದೆ.

- **ಸೇವಾ ಕಲಿಕೆ:** ಇದು ಸಮುದಾಯದ ಒಳಿತಿಗಾಗಿ ಹೊರಪ್ರಪಂಚದಲ್ಲಿ ಕಾರ್ಯಕೈಗೊಳ್ಳುವುದನ್ನು ಶಾಲೆಯ ಕಲಿಕೆಯೊಂದಿಗೆ ಕೂಡಿಸುತ್ತದೆ. ಇದು ಶೈಕ್ಷಣಿಕ ಕಾರ್ಯಗಳಲ್ಲಿ ನೀಡಿರುವ ವಾದಗಳ ಆಧಾರಕ್ಕೆ ಒಂದು ಅರ್ಥವನ್ನು, ಸಾಂದರ್ಭಿಕತೆಯನ್ನು ಒದಗಿಸುತ್ತದೆ.

- **ವಿಷಯಾತ್ಮಕ ಬೋಧನೆ:** ಎಂದರೆ ವಿಷಯಕ್ಕಿಂತ ಮಿಗಿಲಾಗಿ ವಿಷಯಗಳನ್ನು ಕುರಿತ ಅಂತರ್‌ಜ್ಞಾನ ಶಾಖೆಯ ರೂಪದ ಬೋಧನೆ ಮತ್ತು ಕಲಿಕೆ.

- **ಸಂವಾದದ ಉಪಕ್ರಮ** (ಎಡ್ನಾ ಅಫೆಕ್‌ರವರಿಂದ ವಿಕಸಿತಗೊಂಡದ್ದು): ಇದು ಶಿಕ್ಷಣವು ಐದು ಘಟಕಗಳನ್ನು ಒಳಗೊಂಡಿದೆಯೆಂದು ಹೇಳುತ್ತದೆ. ಅಂತರ್ವಸ್ತು ಮತ್ತು ಮಾಹಿತಿ ಹರಿವು, ಕಲಿಕಾ ಕೌಶಲಗಳು, ಸಾಮಾಜಿಕ ಮತ್ತು ಸಂವೇಗಾತ್ಮಕ ಕೌಶಲಗಳು, ವ್ಯಕ್ತಿಗತ ಬುದ್ಧಿಶಕ್ತಿ ಮತ್ತು ಮೌಲ್ಯಗಳು.

- **ಚುರುಕು ಶಾಲೆಗಳ ತತ್ವಗಳು** (ಹಾರ್ವರ್ಡ್ ಪ್ರಾಜೆಕ್ಟ್ ಜೂನಲ್ಲಿ ಡೇವಿಡ್ ಪರ್ಕಿನ್ಸ್ ಮತ್ತು ಸಹೋದ್ಯೋಗಿಗಳಿಂದ ವಿಕಸಿತಗೊಂಡದ್ದು)

ಎರಡು ಮಾರ್ಗದರ್ಶಿ ನಂಬಿಕೆಗಳ ಮೇಲೆ ಆಧಾರಗೊಂಡಿದೆ.

– ಸಾಂಪ್ರದಾಯಿಕವಾಗಿ ಹೇಳಲಾಗುವ ಆಲೋಚನೆ ಕಲಿಕೆಯ ಪರಿಣಾಮ ಎಂಬುದಕ್ಕೆ ವಿರುದ್ಧವಾಗಿ ಕಲಿಕೆಯು ಆಲೋಚನೆಯ ಪರಿಣಾಮವಾಗಿದೆ.

– ಕಲಿಕೆಯು ಜ್ಞಾನದ ನಮ್ಯ ಹಾಗೂ ಸಕ್ರಿಯ ಬಳಕೆಯನ್ನು ಒಳಗೊಳ್ಳುವ ಆಳವಾದ ಅರಿವನ್ನು ಒಳಗೊಳ್ಳಬೇಕು.

ಈ ತತ್ವಗಳು ಜಗತ್ತನ್ನು ಜವಾಬ್ದಾರಿಯುತವಾಗಿ ಎದುರಿಸುವ ವೈವಿಧ್ಯಮಯ ಸಮಾಜದ ಚಿಂತಕ ಸದಸ್ಯರಂತಾಗುವ ವಿದ್ಯಾರ್ಥಿಗಳನ್ನು ಉತ್ಪಾದಿಸುವ ಶಾಲೆಗಳಿಗೆ ಒಂದು ಸಂರಚನೆಯನ್ನು (structure) ಒದಗಿಸುತ್ತದೆ.

ಎಲ್ಲಾ ಬೋಧನಶಾಸ್ತ್ರೀಯ ವಾದಗಳು ಶಿಕ್ಷಣವನ್ನು ಅಷ್ಟೇನೂ ಬಿಗಿಯಾದ ಸಂರಚನೆಯುಳ್ಳ ಸಂಕೀರ್ಣ ವ್ಯವಸ್ಥೆಯಲ್ಲ ಎಂದು ಪರಿಗಣಿಸುವುವು. ಶಿಕ್ಷಣ ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯಗಳು ಸ್ಥಗಿತವಾಗಿರದೆ ನಿರಂತರವಾಗಿ ಅಭಿವೃದ್ಧಿಯಾಗುತ್ತಿವೆ. ಇವು ಚಿಂತನಶೀಲತೆಗೆ ಒತ್ತು ನೀಡಿ ಕಂಠಪಾಠದ ಕಲಿಕೆಯನ್ನು ತಪ್ಪಿಸುತ್ತವೆ. ಆಧುನಿಕ ನಾವೀನ್ಯಯುತ ಬೋಧನಶಾಸ್ತ್ರದಲ್ಲಿ ವೈಯಕ್ತಿಕವಾದ ಮಾರ್ಗದಲ್ಲಿ ಕಲಿಯುವುದು, ಆಸಕ್ತಿಯಿಂದ ಕಲಿಯುವುದು, ಸಾಮಾಜಿಕ ಕೌಶಲಗಳನ್ನು ಕಲಿಯುವುದು, ಸಹಕಾರಿ ಕಲಿಕೆಯಲ್ಲಿ ಸಮಗ್ರಗೊಳಿಸುವ ಕೌಶಲವನ್ನು ಬೆಳೆಸಿಕೊಳ್ಳುವುದು ಇತ್ಯಾದಿಗಳು ಮುಖ್ಯವಾಗುವುವು.

ಚುರುಕು ಶಾಲೆಗಳ ಸಂದರ್ಭದಲ್ಲಿ ಮೇಲೆ ಹೇಳಿದ ಅಂಶಗಳಿಂದ ನಾವು ಹೀಗೆ ತೀರ್ಮಾನಿಸಬಹುದು. (i) ಶಿಕ್ಷಣದ ಗುರಿ ಮತ್ತು (ii) ಮಾಹಿತಿ ತಂತ್ರಜ್ಞಾನ(IT)

**ಚುರುಕು ಶಾಲೆಗಳ ಗುರಿಗಳು ಹೀಗಿರಬಹುದು:**

- ಸಾಂಪ್ರದಾಯಿಕ ಶೈಕ್ಷಣಿಕ ವ್ಯವಸ್ಥೆಯನ್ನು ಅದರ ಸ್ಮರಣಾಧಾರಿತ ಕಲಿಕೆ ಮತ್ತು ನಿಷ್ಕ್ರಿಯ ಬೋಧನೆಯನ್ನು ಮಾಡಿ ಕಲಿಯುವ (Learning by Doing) ಮತ್ತು ವಿವಿಧ ಸ್ತರಗಳ ನಡುವಣ ಅನ್ಯೋನ್ಯಕ್ರಿಯೆಗಳನ್ನು ಪ್ರಚೋದಿಸುವ ಶಿಕ್ಷಣವನ್ನಾಗಿ ಪರಿವರ್ತಿಸುವ ಶಾಲಾ ಮಾದರಿಯನ್ನು ಸ್ಥಾಪಿಸುವುದು.

- ಜಾಗತಿಕವಾಗಿ ಸ್ಪರ್ಧಿಸಲು ಅನುವಾಗುವಂತೆ ಶ್ರೀಮಂತಗೊಳಿಸುವ ಜ್ಞಾನಕೌಶಲಗಳಿಗೆ ವಿದ್ಯಾರ್ಥಿಗಳು ಹೆಚ್ಚು ಸ್ಪಂದಿಸುವಂತೆ ಅವರನ್ನು ಸಮರ್ಥರನ್ನಾಗಿಸುವುದು; ಬೋಧನೆಗಳನ್ನು ನೀಡುವುದರಲ್ಲಿ ಮತ್ತು ಅವುಗಳನ್ನು ವಾಸ್ತವಿಕ ಜೀವನದ ಸಮಸ್ಯೆಗಳಿಗೆ ಹಾಗೂ ಭಾವೀ ದಿಶೆಗಳಿಗೆ ಹೊಂದಿಸುವಲ್ಲಿ ಶಿಕ್ಷಕರು ಸೃಜನಶೀಲರಾಗಲು ಅವರನ್ನು ಸಮರ್ಥರನ್ನಾಗಿಸುವುದು; ಜ್ಞಾನಶೃಂಖಲೆಯಲ್ಲಿ ಮೇಲೆರಲು ತಂದೆತಾಯಿ ಹಾಗೂ ಸಮುದಾಯಗಳನ್ನು ಸಮರ್ಥರನ್ನಾಗಿಸುವುದು.

- ಯಮ ಮತ್ತು ನಿಯಮಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುವುದು ಮತ್ತು ಬೌದ್ಧಿಕ, ಶಾರೀರಿಕ ಮತ್ತು ಮಾನಸಿಕ– ಈ ಎಲ್ಲಾ ಸರ್ವತೋಮುಖವಾದ ಅಭಿವೃದ್ಧಿಯನ್ನು ತರುವುದು. 'ಯಮ' ಎಂದರೆ ತನ್ನನ್ನು, ಇಂದ್ರಿಯಗಳನ್ನು, ನಿಯಂತ್ರಿಸುವುದು. 'ನಿಯಮ' ಎಂದರೆ ಬಾಹ್ಯಪ್ರಪಂಚದೊಂದಿಗಿನ ಅಂದರೆ ವ್ಯಕ್ತಿ, ಜೀವರಾಶಿ ಮತ್ತು ಪ್ರಕೃತಿ–ಇವುಗಳೊಂದಿಗಿನ ನ್ಯಾಯಯುತ ವರ್ತನೆ.

Digitised by Bharatavani, CIIL

ಶಿಕ್ಷಕ, ವಿದ್ಯಾರ್ಥಿ ಮತ್ತು ಶಾಲಾ ವ್ಯವಸ್ಥಾಪನೆ– ಈ ಮುಕ್ಕೂಟವು ಪುನರುತ್ಥಾನಗೊಳ್ಳುವ ಜ್ಞಾನಕೌಶಲಗಳನ್ನು ಒದಗಿಸುವ ಶಿಕ್ಷಣದ ದಿಶೆಯಲ್ಲಿ ಯತ್ನಿಸುತ್ತದೆ. ಶ್ರೇಷ್ಠತೆಯನ್ನು ಅರಸಲು ಶರೀರ ಮನೋಬುದ್ಧಿಗಳನ್ನು ಸಮಗ್ರಗೊಳಿಸುತ್ತದೆ. ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಶಾಲಾ ವ್ಯವಸ್ಥಾಪನೆ– ಈ ಮೂರು ಆಧುನಿಕ ಪರಿಪ್ರೇಕ್ಷ್ಯದಲ್ಲಿ ಶಿಕ್ಷಣದ ಗುರಿಗಳತ್ತ ಕೊಡುಗೆ ನೀಡುವುವು. ಮಾಹಿತಿ ತಂತ್ರಜ್ಞಾನ ಸಮರ್ಥಿತ ಕಲಿಕೆ, ಬೋಧನೆ ಮತ್ತು ಶಾಲಾ ವ್ಯವಸ್ಥಾಪನೆ ಈ ಮುಕ್ಕೂಟ ನಿಷ್ಪಾದನೆ ಮತ್ತು ದಕ್ಷತೆಗಳನ್ನು ಹೆಚ್ಚಿಸುವುದು. ಆದಾಗ್ಯೂ, ಮಾಹಿತಿ ತಂತ್ರಜ್ಞಾನದ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ರೂಪದಲ್ಲಿ ಸಮಗ್ರ ಉಪಕ್ರಮವೊಂದನ್ನು ವಿಕಸಿತಗೊಳಿಸುವುದು ಅಗತ್ಯ. ಶಿಕ್ಷಣ ಮತ್ತು ತರಬೇತಿಗಳನ್ನು ಮಾಹಿತಿ ತಂತ್ರಜ್ಞಾನದಿಂದ ಸಮರ್ಥಗೊಳಿಸುವ ಕ್ರಮಗಳನ್ನು ಹೀಗೆ ವರ್ಗೀಕರಿಸಬಹುದು.

i ಮಾಹಿತಿ ತಂತ್ರಜ್ಞಾನದ ಸಾಕ್ಷರತೆ

ii ಮಾಹಿತಿ ತಂತ್ರಜ್ಞಾನ ಸಮರ್ಥಿತ ಶಿಕ್ಷಣ (ಅನ್ಯೋನ್ಯಕ್ರಿಯಾತ್ಮಕ ಪಾಠಗಳು, ಪ್ರಯೋಗಗಳು, ಪರೀಕ್ಷೆಗಳು ಮತ್ತು ಮೌಲ್ಯಮಾಪನ)

iii ಮಾಹಿತಿ ತಂತ್ರಜ್ಞಾನ ಸಮರ್ಥಿತ ಶಾಲಾ ವ್ಯವಸ್ಥಾಪನೆ ಮತ್ತು

iv ಸಹಯೋಗಿ ಕಲಿಕೆ ಮತ್ತು ಬೋಧನೆ

**ಇ–ಕೌಶಲಗಳ ಅಭಿವೃದ್ಧಿ:**

ಇಂದು ಇಪ್ಪತ್ತೊಂದನೆ ಶತಮಾನದ ಉದಯದಲ್ಲಿ ಜ್ಞಾನಯುಗದ ಹೊಸ ಅಲೆಯೊಂದು ಬಾಗಿಲು ತಟ್ಟುತ್ತಿದೆ. ಜಾಗತಿಕ ಆರ್ಥಿಕತೆಗಳನ್ನು ಕೌಶಲಗಳ ಗುಣಾತ್ಮಕತೆ, ವಿವಿಧತೆ ಮತ್ತು ಸಂಖ್ಯೆಗಳ ಶ್ರೀಮಂತಿಕೆಯ ಆಧಾರದ ಮೇಲೆ ಶ್ರೇಣಿಬದ್ಧಗೊಳಿಸಲಾಗುತ್ತಿದೆ. ಇವು ನಾವೀನ್ಯಯುತ ಉತ್ಪಾದಿತ ವಸ್ತು ಹಾಗೂ ಸೇವೆಗಳನ್ನು ಸೃಷ್ಟಿಸುವ ಮತ್ತು ವ್ಯಾಪಾರದ ವೇಗವನ್ನು ಹೆಚ್ಚಿಸುವ ಕೌಶಲಗಳೇ ಆಗಿವೆ. ಅಲ್ಲದೆ ಇವು ಸಮಾಜದ ಪುನರುದಯಕ್ಕೆ ಕಾರಣವಾಗಿದ್ದು ಅನನುಕೂಲತೆಯನ್ನು ಅನುಕೂಲಕ್ಕೆ ಪರಿವರ್ತಿಸುವಂಥದ್ದಾಗಿವೆ. ಸಾಮರ್ಥ್ಯ, ದಕ್ಷತೆ, ಪ್ರಾರಂಭಿಕ ಪ್ರಯತ್ನ ಮತ್ತು ತರ್ಕ, ಅಮೂರ್ತಕಲ್ಪನೆ, ಸಾಮಾನ್ಯೀಕರಣ, ಅಡಕಗೊಳಿಸುವಿಕೆ ಮತ್ತು ಏಕೀಕರಣ, ಈ ಜ್ಞಾನದ ಉಪಕರಣಗಳನ್ನು ಬಳಸುವ ವರ್ತನಾತ್ಮಕ ಮುಖಗಳು ಇವೇ ಮುಂತಾದವು ಕೌಶಲ್ಯಗಳು ಎನಿಸಿಕೊಳ್ಳುವುವು.

ಶಿಕ್ಷಣವನ್ನು ಕೌಶಲಗಳಾಗಿ, ಪುನರಾವರ್ತಿತ ಹಾಗೂ ನಾವೀನ್ಯಯುತ ವರ್ತನೆಯಾಗಿ ಪರಿವರ್ತಿಸಬೇಕಾಗಿದೆ ಹಾಗೂ ಇವುಗಳು ವಿಶ್ವ ಆರ್ಥಿಕ ಭರಿತ/ಉತ್ಪನ್ನ ಮಾದರಿಗೆ ಭರಿತವಾಗಬೇಕು. ಆದ್ದರಿಂದ ನಾವು ಇ–ಕೌಶಲಗಳನ್ನು (ಇಲೆಕ್ಟ್ರಾನಿಕ್ ಮಾಧ್ಯಮದಿಂದ ಕೌಶಲ್ಯಗಳ ಅಭಿವೃದ್ಧಿ) ಪ್ರಸ್ತಾಪಿಸುತ್ತೇವೆ.

'ಸರ್ವರಿಗೂ ಜ್ಞಾನ' ಮತ್ತು 'ಉಳಿದು ಬೆಳೆಯಬಲ್ಲ ಅಭಿವೃದ್ಧಿಗಾಗಿ ಜ್ಞಾನ'ವೆಂಬ ಅಂತಿಮ ಗುರಿಯನ್ನುಳ್ಳ ಸಮಾಜದ ಬೆಳವಣಿಗೆಗಾಗಿ ಇರುವ ಪುನರುಜ್ಜೀವನಗೊಳ್ಳುವ ಪ್ರಕ್ರಿಯೆಯೇ 'ಇ–ಕೌಶಲಗಳು'. ವಿಶ್ವಬ್ಯಾಂಕ್‌ನ 1998–99ರ ವರದಿ ಎರಡು ವಿಧದ ಜ್ಞಾನಗಳನ್ನು ವಿವರಿಸುತ್ತದೆ. (i) ತಾಂತ್ರಿಕ ಜ್ಞಾನ– ತಂತ್ರ, ಉಪಕರಣ, ತಾಂತ್ರಿಕತೆಗಳ ಜ್ಞಾನ ಉದಾ: ಮಾರಾಟ, ಉತ್ಪಾದನೆ ಮತ್ತು ಸೇವೆಗಳು (ii) ಗುಣಲಕ್ಷಣಗಳ ಜ್ಞಾನ ಉದಾ: ಗುಣಾತ್ಮಕತೆ, ಪ್ರಮಾಣೀಕರಣ, ಮೂರನೆಯ ರೀತಿಯದ್ದನ್ನು ಇಲ್ಲಿ ಸೇರಿಸಬಹುದು: (iii) ಕುಶಲತೆಗಳ ಜ್ಞಾನ, ಪೂರ್ಣ ಪರಿಹಾರದತ್ತ ಏಕೀಭವನ.

'ಮಾಡಿ ಕಲಿ' ಎನ್ನುವುದರ ಮೇಲೆ ಶಿಕ್ಷಣತಜ್ಞ ಪಿಯಾಜೆ ಒತ್ತು ನೀಡುವರು. ಕೌಶಲ್ಯದ ನಂತರ ಪರಿಕಲ್ಪನಾತ್ಮಕ ಶಿಕ್ಷಣ ಬರುವ ಹಂತಹಂತವಾದ ಕ್ರಮಬದ್ಧ ಪ್ರಕ್ರಿಯೆಯೇ ಪ್ರಮುಖವಾಗಿ ಕಲಿಕೆಯ ಅರ್ಥವಾಗಿದ್ದು ಉನ್ನತ ಶಿಕ್ಷಣಕ್ಕಾಗಿ ಪ್ರಚೋದನೆ ನೀಡುವಂಥದ್ದಾಗಿದೆ.

'ಇ–ಕೌಶಲ'ಗಳನ್ನು ಸಂಪ್ರದಾಯರಹಿತ ವಲಯದಲ್ಲಿ ಸಂರಚನಾ ರಹಿತವಾಗಿಯೂ, ಔಪಚಾರಿಕ ವಲಯದಲ್ಲಿ ಸಂರಚನಾ ಸಹಿತವಾಗಿಯೂ ಪ್ರೋತ್ಸಾಹಿಸಬಹುದಾಗಿದೆ. 'ವಿಶೇಷಜ್ಞತೆಯಿಂದ ಸಾಮಾನ್ಯೀಕರಣ'ಕ್ಕೆ 'ಮೂಲಭೂತ ಕೌಶಲಗಳಿಂದ ಸಾಮಾನ್ಯ ಕೌಶಲಗಳಿಗೆ', 'ಕ್ಷೇತ್ರ ನಿರ್ದಿಷ್ಟತೆಯಿಂದ ಸಾಮಾನ್ಯಕ್ಷೇತ್ರಕ್ಕೆ', 'ಭಿನ್ನತೆಯಿಂದ ಸಮಗ್ರತೆಗೆ', 'ಅಪೂರ್ಣ/ಮಿತಿಯುಳ್ಳ ಪರಿಹಾರದಿಂದ ಪೂರ್ಣ ಪರಿಹಾರದೆಡೆಗೆ' – ಇವು ಆಧಾರಭೂತ ಉಪಕ್ರಮಗಳಾಗಿರಬೇಕು. ಹೀಗೆ ಬೋಧನಾ ಉಪಕ್ರಮವು ಕ್ಷೇತ್ರ ನಿರ್ದಿಷ್ಟ ಜ್ಞಾನ, ಪೂರ್ಣಪರಿಹಾರ ಕಾರ್ಯತಂತ್ರ, ಕೌಶಲಗಳ ಏಕೀಕರಣ – ಇವುಗಳಿಗೆ ಒತ್ತು ನೀಡುತ್ತದೆ. ಪಠ್ಯಕ್ರಮಗಳನ್ನು ಪುನರ್ರಚಿಸುವ ಅಗತ್ಯವಿದೆ.

ಎಡ ಮಿದುಳು ಪ್ರಮುಖವಾಗಿರುವ(L) ಹಾಗೆಯೇ ಬಲ ಮಿದುಳು(R) ಪ್ರಮುಖವಾಗಿರುವ ವಿದ್ಯಾರ್ಥಿಗಳ ಮೇಲೆ ನಡೆಸಿದ ಪ್ರಯೋಗಗಳನ್ನು ಕುರಿತಂತೆ ಮುರಾತರವರು(1996) ಹೀಗೆ ಉಲ್ಲೇಖಿಸುತ್ತಾರೆ. 'L' ವಿದ್ಯಾರ್ಥಿಗಳು ವಿಶ್ಲೇಷಣೆ ಮತ್ತು ತರ್ಕದಲ್ಲಿ ಚುರುಕಾಗಿರುವರು. ಆದ್ದರಿಂದ ಅವರು ಶಾಸ್ತ್ರೀಯ ವಿಷಯದಲ್ಲಿ (Theory) ಹೆಚ್ಚು ಅಂಕಗಳನ್ನು ಪ್ರಯೋಗಗಳಲ್ಲಿ ಕಡಿಮೆ ಅಂಕಗಳನ್ನು ಗಳಿಸುವರು. 'R' ವಿದ್ಯಾರ್ಥಿಗಳು ಕೈಕೆಲಸದಲ್ಲಿ ಮುಂದಿರುವರು. ಆದ್ದರಿಂದ ಪ್ರಯೋಗಗಳಲ್ಲಿ ಹೆಚ್ಚು ಅಂಕಗಳನ್ನು ಶಾಸ್ತ್ರೀಯ ವಿಷಯಗಳಲ್ಲಿ ಕಡಿಮೆ ಅಂಕಗಳನ್ನು ಗಳಿಸುವರು. ಆದರೆ 'L' (ಎಡ) ಮತ್ತು 'R' (ಬಲ) ಮಿದುಳುಗಳು ಪರಸ್ಪರ ಬಹಳಷ್ಟು ವ್ಯಾಪಿಸಿರುತ್ತವೆ. ಶೇ.20ರಷ್ಟು ಎಡಮಿದುಳು ಹಾಗೂ ಶೇ.20ರಷ್ಟು ಬಲಮಿದುಳಿನ ಪ್ರಾಮುಖ್ಯತೆ ಇದೆಯೆಂದು ಹಾಗೂ ಶೇ.60ರಷ್ಟು ಇವೆರಡರ ಪರಸ್ಪರ ವ್ಯಾಪ್ತಿಯಿದೆಯೆಂದು ನಾವು ಊಹಿಸಬಹುದು.

Digitised by Bharatavani, CIIL

ಈ ಅಂಶವು ಎರಡು ವಿಚಾರಗಳಿಗೆ ದಾರಿಮಾಡುವುದು: (1) ಕೌಶಲ್ಯ ಅಭಿವೃದ್ಧಿ ಪ್ರವಾಹಕ್ಕೋಸ್ಕರ ವಿಭಿನ್ನ ಪಠ್ಯಕ್ರಮದ ಅವಶ್ಯಕತೆಯಿದೆ. (2) ಬುದ್ಧಿಶಕ್ತಿ ಭಾಗಲಬ್ಧ (Intelligence Quotient)ದಂತೆ ಕೌಶಲಗಳ ಅಳತೆಯನ್ನು ವ್ಯಾಖ್ಯಾನಿಸುವ ಉದಾಹರಣೆಗೆ(ಕೌಶಲ್ಯ ಭಾಗಲಬ್ಧ, Skill Quotient, SQ) ಅಗತ್ಯವಿದೆ. ಈಗಿರುವ ಔದ್ಯೋಗಿಕ ಮತ್ತು ಶೈಕ್ಷಣಿಕ ಪ್ರತ್ಯೇಕಿತ ಪ್ರವಾಹದ ವ್ಯವಸ್ಥೆ ಸಫಲವಾಗುವುದಿಲ್ಲ. ಶಾಸ್ತ್ರವಿಷಯಗಳ ಪ್ರಮುಖತೆ ಹಾಗೂ ಪ್ರಯೋಗಗಳ ಪ್ರಮುಖತೆಯುಳ್ಳ ಪ್ರವಾಹಗಳ ನಡುವೆ ಬದಲಾವಣೆಯ ನಮ್ಯತೆ, ಮೇಲ್ಮುಖ ಚಲನೆ, ಉದ್ಯೋಗ ಸಾಧ್ಯತೆ, ತರಬೇತಿಯ ಅನುಕೂಲತೆ, ದಾಖಲಾತಿ ಮತ್ತು ಬಿಟ್ಟುಹೋಗುವಲ್ಲಿ ನಮ್ಯತೆ ಇವುಗಳೊಂದಿಗಿನ ಪಠ್ಯಕ್ರಮಗಳನ್ನು ವಿನ್ಯಾಸಗೊಳಿಸಬೇಕಾಗುವುದು. ಮಾಧ್ಯಮಿಕ ಶಾಲೆಯ ಸ್ತರದಿಂದ ಡಿಪ್ಲೋಮಾಗೆ, ಡಿಪ್ಲೊಮಾದಿಂದ ಸ್ನಾತಕ ಪದವಿಗೆ, ಇಲ್ಲಿಂದ ಸ್ನಾತಕೋತ್ತರ ಪದವಿಗೆ, ಸ್ನಾತಕೋತ್ತರ ಪದವಿಯಿಂದ 'ಡಾಕ್ಟರೇಟ್ ಪದವಿಗೆ' ಏರಲು ಸಾಧ್ಯವಾಗುವ ಅವಕಾಶ ಇರಬೇಕು. ಇತರ ವಿವಾದಾಂಶಗಳು ಹೀಗಿವೆ: (i) ಪಠ್ಯಕ್ರಮ ಆಧಾರಿತ ಶೈಕ್ಷಣಿಕ ಸಾಫ್ಟ್‌ವೇರ್ (ii) ಸಾಂಪ್ರದಾಯಿಕ ಹಾಗೂ ಆಧುನಿಕ ಕುಶಲತೆಗಳ ಡಿಜಿಟಲ್ ಗ್ರಂಥಾಲಯ (iii) ಸಿಮುಲೇಷನ್ ಮತ್ತು ಮಾಡೆಲಿಂಗ್ ತಂತ್ರಗಳ ಬಳಕೆ, ಬಹುಮಾಧ್ಯಮ ತಂತ್ರಜ್ಞಾನ– ಇವುಗಳ ಬಳಕೆಯಿಂದ ಎಲೆಕ್ಟ್ರಾನಿಕ್ ಮಾಧ್ಯಮದ ಪ್ರಯೋಗಗಳು ಮತ್ತು ಆನ್‌ಲೈನ್ ಮೌಲ್ಯಮಾಪನ.

**ಶಾಲಾಶಿಕ್ಷಣದ ಪ್ರಕ್ರಿಯೆಯಲ್ಲಿ ಮಾಹಿತಿ ತಂತ್ರಜ್ಞಾನ:**

ಸಾಮಾಜಿಕ ಸಂರಚನೆ, ಅನುಷ್ಠಾನ ಸಾಧ್ಯತೆ ಮತ್ತು ವಿದ್ಯಾರ್ಥಿಗಳಿಗೆ ಆಗುವ ಶೈಕ್ಷಣಿಕ ಲಾಭಗಳನ್ನು ಗಮನದಲ್ಲಿರಿಸಿದಾಗ ಪ್ರಾಥಮಿಕ ಸ್ತರದಲ್ಲಿ ಮಾಹಿತಿ ತಂತ್ರಜ್ಞಾನವನ್ನು ಪರಿಚಯಿಸುವುದು ತುಸು ಮುಂಚಿತ ಎಂದೆನಿಸುತ್ತದೆ. (ತರಗತಿಗಳು ಕಿಂಡರ್‌ಗಾರ್ಟನ್‌ನಿಂದ ತರಗತಿ 5ರವರೆಗೆ). ಶಾರೀರಿಕವಾದ ಕ್ರೀಡೆಗಳನ್ನು ಆಡುವುದು, ಸಮಾಜಕ್ಕೆ ಸ್ಪಂದಿಸುವುದು, ಅಂತರವನ್ನು ಆಧರಿಸಿದ ಗ್ರಹಣೆಗಿಂತ ಸಮಾನತೆಯ ಮನೋದೃಷ್ಟಿಯನ್ನು ಬೆಳೆಸಿಕೊಳ್ಳುವುದು– ಇವೆಲ್ಲವೂ ಈ ವಯೋಮಾನದ ಮಕ್ಕಳಿಗೆ ತಕ್ಕುದಾಗಿರುವುವು.

ಮಾಧ್ಯಮಿಕ ಶಾಲಾಸ್ತರದಲ್ಲಿ (ತರಗತಿ 6ರಿಂದ8) ಕಂಪ್ಯೂಟರ್ ಸಾಕ್ಷರತೆಯನ್ನು ಪರಿಚಯಿಸಿ ಜೊತೆಗೆ ಕಂಪ್ಯೂಟರನ್ನು ಒಂದು ಸಂಪನ್ಮೂಲವಾಗಿ ಪರಿಚಯಿಸುವತ್ತ ಒತ್ತು ನೀಡುವ ವಿನೂತನ ಪಠ್ಯಕ್ರಮವನ್ನು ಪರಿಚಯಿಸಿ ಮಾಹಿತಿ ಕೌಶಲಗಳಿಗೆ ಒತ್ತು ನೀಡಬೇಕು. ಸಾಧಾರಣವಾಗಿ ಕಂಪ್ಯೂಟರ್ ವ್ಯವಸ್ಥೆ, ಪ್ರೊಗ್ರಾಮಿಂಗ್ ಲಾಂಗ್ವೆಜ್, ನೆಟ್‌ವರ್ಕಿಂಗ್ ಇತ್ಯಾದಿಗಳನ್ನು ಪರಿಚಯಿಸುವುದನ್ನು ಕಂಪ್ಯೂಟರ್ ಸಾಕ್ಷರತೆ ಎಂದು ತಿಳಿಯಲಾಗುವುದು. ಈ ಉಪಕ್ರಮವು ವಾಂಛನೀಯವಲ್ಲ. ಕಂಪ್ಯೂಟರ್ ವಿಜ್ಞಾನದ ಜ್ಞಾನಶಾಖೆಯ ಸಾರವನ್ನು ಸಾಮಾನ್ಯವಾಗಿ ಉಪಯುಕ್ತವಾದ ಕೆಲವು ಮಾಹಿತಿ ಕೌಶಲಗಳಲ್ಲಿ ಅಡಗಿಸಬಹುದು. ಈ ಕೌಶಲಗಳು ಇತರ ಜ್ಞಾನಶಾಖೆಗಳಲ್ಲಿ ಅವಶ್ಯಕ ಅಧ್ಯಯನಗಳನ್ನು ಪ್ರಯೋಗಗಳನ್ನು ಕೈಗೊಳ್ಳಲು ಉಪಯುಕ್ತವಾಗಿವೆ. ಆಶ್ಚರ್ಯವೆಂದರೆ, ಇಂತಹ ಕೌಶಲಗಳಿಗೆ ಪಠ್ಯಕ್ರಮಗಳಲ್ಲಿ ಸ್ಥಾನವಿಲ್ಲ. ಮೂಲ ಮಾಹಿತಿ ಕೌಶಲಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ.

(i) ಸಮಸ್ಯೆಗಳನ್ನು ವ್ಯಾಖ್ಯಾನಿಸುವ ಹಾಗೂ ಗುರಿಗಳನ್ನು ನಿಶ್ಚಿತಗೊಳಿಸುವ ಕೌಶಲಗಳು.

(ii) ವೀಕ್ಷಿಸಿ ಸೂತ್ರೀಕರಣಗೊಳಿಸಲು ಮಾಹಿತಿ ಸಂಗ್ರಹಣಾ ಕೌಶಲಗಳು

(iii) ಸಂಕೇತಿಸಿ (encode) ಪುನಃ ಜ್ಞಾಪಿಸಿಕೊಳ್ಳಲು ಸ್ಮರಣ ಕೌಶಲಗಳು

(iv) ಹೋಲಿಸಲು, ವರ್ಗೀಕರಿಸಲು, ಕ್ರಮಾನುಗತಗೊಳಿಸಲು ಮತ್ತು ಪ್ರತಿನಿಧಿಸಲು ಸಂಯೋಜಕ ಕೌಶಲಗಳು

(v) ಲಕ್ಷಣಗಳು ಮತ್ತು ಘಟಕಗಳ ಸಂಬಂಧಗಳು ಮತ್ತು ವಿನ್ಯಾಸಗಳು(patterns), ಮುಖ್ಯವಿಚಾರಗಳು ಮತ್ತು ತಪ್ಪುಗಳನ್ನು ಗುರುತಿಸಲು ವಿಶ್ಲೇಷಣಾತ್ಮಕ ಕೌಶಲಗಳು

(vi) ನಿಷ್ಕರ್ಷಿಸಲು ಪೂರ್ವಾನುಮಾನ ಮಾಡಲು ಮತ್ತು ವಿಶದಗೊಳಿಸಲು ಉತ್ಪಾದಕ ಕೌಶಲಗಳು.

(vii) ಸಂಕ್ಷೇಪಿಸಲು ಮತ್ತು ಪುನರ್‌ನಿರ್ಮಿಸಲು ಸಂಯೋಜಕ ಕುಶಲತೆಗಳು

(viii) ಮಾನದಂಡಗಳನ್ನು ಸ್ಥಾಪಿಸಲು ಮತ್ತು ಪ್ರಮಾಣೀಕರಿಸಲು ಮೌಲ್ಯಮಾಪನದ ಕುಶಲತೆಗಳು

(ix) ಜೀವನಪರ್ಯಂತ ಕಲಿಕೆಯನ್ನು ಸುಗಮಗೊಳಿಸುವ ಕಲಿಯುವ ಕುಶಲತೆಯನ್ನು ಕಲಿಯುವುದು.

ಈ ಕುಶಲತೆಗಳು ಚಿಂತನೆಯ ಪ್ರಕ್ರಿಯೆಯ ವಿಕಾಸದ ನಾಲ್ಕು ಹಂತಗಳಿಗೆ ಸಂಬಂಧಪಟ್ಟಿರಬಹುದು.

a) **ಜ್ಞಾಪಿಸಿಕೊಳ್ಳುವುದು:** ನೇರ ಚಿಂತನೆ(ವಾಸ್ತವವಾದುದು/ ಇಂದ್ರಿಯಗಮ್ಯ ದತ್ತಾಂಶ ವಿವರಗಳು, ಅಭಿವ್ಯಕ್ತಿಗಳು)

**ಸಂಜ್ಞಾನಾತ್ಮಕ ಪ್ರಕ್ರಿಯೆಗಳು:** ಸ್ಮರಿಸುವುದು, ಹೆಸರಿಸುವುದು, ಸಮಾನತೆಯನ್ನು ಗುರುತಿಸುವುದು.

b) **ಸಂಬಂಧಿಸುವುದು:** ಸಾಂಬಂಧಿಕ ಆಲೋಚನೆ(ವಿಚಾರ, ಕಲ್ಪನೆಗಳು)

**ಸಂಜ್ಞಾನಾತ್ಮಕ ಸಂಕ್ರಿಯೆಗಳು:** ಹೋಲಿಸುವುದು, ವರ್ಗೀಕರಿಸುವುದು, ವಿಂಗಡಿಸುವುದು, ಹೊಂದಿಸುವುದು, ಗುಂಪುಮಾಡುವುದು.

c) **ನಿಷ್ಕರ್ಷಿಸುವುದು:** ಪ್ರತ್ಯಕ್ಷ ಜ್ಞಾನಾತ್ಮಕ ಚಿಂತನೆ (ಪ್ರಾಕಲ್ಪನೆ, ಪ್ರಮುಖ ವಿಚಾರಗಳು, ಪರಿಕಲ್ಪನೆಗಳು)

**ಸಂಜ್ಞಾನಾತ್ಮಕ ಸಂಕ್ರಿಯೆಗಳು**(Interface): ವಿಶ್ಲೇಷಣೆ, ಮೌಲ್ಯಮಾಪನೆ, ಸಾರಸಂಗ್ರಹಿಸುವುದು, ಅಂದಾಜಿಸು,

Digitised by Bharatavani, CIIL

ಉದಾಹರಣೆಯೊಂದಿಗೆ ವಿವರಿಸು.

d) **ಅಂತರ್‌ಪ್ರಕ್ರಿಯೆಗಳು**(Interface): ಸಮಗ್ರ ಚಿಂತನೆ, (ವ್ಯಾಪಕವಾದ ಸಾಮಾನ್ಯೀಕೃತ ಸಿದ್ಧಾಂತಗಳು)

**ಸಂಜ್ಞಾನಾತ್ಮಕ ಸಂಕ್ರಿಯೆಗಳು:** ಸಾರಭೂತಗೊಳಿಸು, ವಾದದಂತೆ ಮಂಡಿಸು, ಪ್ರಾಕಲ್ಪನೆ, ಪೂರ್ವಾನುಮಾನ ಮಾಡು, ಅರ್ಥೈಸು ಮತ್ತು ಆವಿಷ್ಕರಿಸು

ಕರುಣೆ, ಸ್ವಾವಲಂಬನೆ, ಸ್ವಾಭಿಮಾನ, ಇತರರಿಗೆ ಗೌರವ, ಪ್ರೇಮ, ಸ್ವಾತಂತ್ರ, ಧೈರ್ಯ, ಸಹಕಾರ, ಪ್ರಾಮಾಣಿಕತೆ, ನ್ಯಾಯ, ಸರಳತೆ, ಶುಚಿತ್ವ– ಶಾರೀರಿಕ ಹಾಗೂ ಮಾನಸಿಕ ಶುದ್ಧತೆ– ಇವು ಮೌಲ್ಯ ಮತ್ತು ಲಕ್ಷಣಗಳನ್ನು ಒಳಗೊಳ್ಳುತ್ತವೆ.

IEEE (ಜನವರಿ 2001) ಶಾಲೆಗಳು ತಾಂತ್ರಿಕ ಸಾಕ್ಷರ ಮಾನದಂಡಗಳನ್ನು (Technological standards) ಪಡೆಯಬೇಕೆಂದು ಸಲಹೆ ನೀಡುವುದು–20TL ಮಾನದಂಡಗಳು ಐದು ಪ್ರಮುಖ ಕ್ಷೇತ್ರಗಳನ್ನು ಒಳಗೊಳ್ಳುವುವು:

- **ತಂತ್ರಜ್ಞಾನದ ಲಕ್ಷಣ:**

ವ್ಯಾಪ್ತಿ, ಪ್ರಮುಖ ಪರಿಕಲ್ಪನೆಗಳು, ತಂತ್ರಜ್ಞಾನ–ಸಂಬಂಧ

- **ತಂತ್ರಜ್ಞಾನ ಮತ್ತು ಸಮಾಜ**

ಸಾಮಾಜಿಕ– ಆರ್ಥಿಕ, ಸಾಂಸ್ಕೃತಿಕ, ರಾಜನೈತಿಕ ಮತ್ತು ಪರಿಸರ ಸಂಬಂಧಿ ಪರಿಣಾಮಗಳು: ಅಭಿವೃದ್ಧಿಯಲ್ಲಿ ಪಾತ್ರ, ಇತಿಹಾಸದ ಮೇಲೆ ತಂತ್ರಜ್ಞಾನದ ಪ್ರಭಾವ

- **ವಿನ್ಯಾಸ**

ಗುಣಲಕ್ಷಣಗಳು, ತಾಂತ್ರಿಕ ವಿನ್ಯಾಸ

- **ತಾಂತ್ರಿಕ ವಿಶ್ವಕ್ಕಾಗಿ ಸಾಮರ್ಥ್ಯಗಳು**

ಸಮಸ್ಯಾ ಪರಿಹಾರ: ಸಮಸ್ಯಾ ಪರಿಹಾರದಲ್ಲಿ ನಾವಿನ್ಯತೆಗಳು ಮತ್ತು ಪ್ರಯೋಗಗಳು: ವಿನ್ಯಾಸ ಪ್ರಕ್ರಿಯೆಯ ಬಳಕೆ; ಉತ್ಪಾದನೆ ಮತ್ತು ವ್ಯವಸ್ಥೆಗಳ ಪ್ರಭಾವದ ಮೌಲ್ಯಮಾಪನ.

- **ಸಾಮಾನ್ಯ ತಂತ್ರಜ್ಞಾನಗಳು**

ವೈದ್ಯಕೀಯ, ಕೃಷಿ ಮತ್ತು ಜೈವ ತಂತ್ರಜ್ಞಾನ: ಶಕ್ತಿ ಮತ್ತು ವಿದ್ಯುಚ್ಛಕ್ತಿ, ಮಾಹಿತಿ ಮತ್ತು ಸಂವಹನ; ಸಾರಿಗೆ; ಉತ್ಪಾದನೆ; ನಿರ್ಮಾಣ.

ಮಾಹಿತಿ ತಂತ್ರಜ್ಞಾನ ಉಪಕರಣಗಳಾದ ವರ್ಡ್‌ಪ್ರೊಸೆಸರ್, ಸ್ಪ್ರೆಡ್‌ಶೀಟ್ ಮತ್ತು ಡೇಟಾ ಬೇಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್, ಪ್ರಸ್ತುತಿಗಾಗಿ ಬಳಸುವ ಸಾಫ್ಟ್‌ವೇರ್ ಮತ್ತು ಅಂತರ್ಜಾಲ ಉಪಕರಣಗಳು– ಇವುಗಳನ್ನು ಒಳಗೊಳ್ಳುವ ವಿಷಯವೊಂದರ ಪರಿಚಯವು ಮಾಧ್ಯಮಿಕ ಸ್ತರದ (9 ಮತ್ತು 10ನೆಯ ತರಗತಿ) ಕಂಪ್ಯೂಟರ್ ಸಾಕ್ಷರತೆಯಲ್ಲಿ ಒಳಗೊಂಡಿರುವುದು. ಇದು ಎಲ್ಲಾ ಪ್ರವಾಹಗಳಲ್ಲಿಯೂ ಕಡ್ಡಾಯವಾದ ಮಾಹಿತಿ ತಂತ್ರಜ್ಞಾನ ಸಂಚಯವಾಗಿರಬೇಕು.

ಹಿರಿಯ ಮಾಧ್ಯಮಿಕ ಸ್ತರದಲ್ಲಿ (11ಮತ್ತು12ನೆಯ ತರಗತಿ) ಮಾಹಿತಿ ತಂತ್ರಜ್ಞಾನವನ್ನು ಎಲ್ಲಾ ಪ್ರವಾಹಗಳಿಗೂ ಕಡ್ಡಾಯ ಸಂಚಯವನ್ನಾಗಿಸಿ ಮಾಹಿತಿ ತಂತ್ರಜ್ಞಾನ ಉಪಕರಣಗಳು, ಸಮಸ್ಯಾ ಪರಿಹಾರ ಮತ್ತು ಪ್ರಾಯೋಜನೆ, ಇತ್ಯಾದಿಗಳತ್ತ ಕೇಂದ್ರೀಕೃತವಾದ ವಿಷಯದಂತೆ ಮತ್ತು ಮಾಹಿತಿ ತಂತ್ರಜ್ಞಾನದ ಪ್ರಯೋಗವನ್ನು ಔದ್ಯೋಗಿಕ ಪ್ರವಾಹದಂತೆ ಪರಿಚಯಿಸಬಹುದು. ವಿದ್ಯಾರ್ಥಿಗಳಿಗೆ ಇ–ಮೇಲ್, ದತ್ತಾಂಶ ಭಂಡಾರ ಮತ್ತು ವೈವಿಧ್ಯಮಯ ಮಾಹಿತಿಯು ಲಭ್ಯವಾಗುವಂತೆ ಅಂತರ್ಜಾಲ ಉಪಕರಣವು (Internet Tools) ಮೇಲಿನ ಎಲ್ಲಾ ವಿಷಯಗಳನ್ನು ಸಾಮಾನ್ಯವಾಗಿ ಒಳಗೊಂಡಿರಬೇಕು.

ಮಾಹಿತಿ ತಂತ್ರಜ್ಞಾನ ಸಾಮರ್ಥ್ಯದೊಂದಿಗಿನ ಶಿಕ್ಷಣವು ಮಾಹಿತಿ ತಂತ್ರಜ್ಞಾನ ಸಾಮರ್ಥ್ಯದ ಕಲಿಕೆ, ಬೋಧನೆ ಮತ್ತು ಪರೀಕ್ಷೆ ಹಾಗೂ ಮೌಲ್ಯಮಾಪನಗಳನ್ನು ಒಳಗೊಳ್ಳುತ್ತದೆ. ಇಲ್ಲಿ ಮಾಹಿತಿ ತಂತ್ರಜ್ಞಾನವನ್ನು ಕಲಿಕೆ ಬೋಧನೆಗಳನ್ನು ಸುಧಾರಿಸುವ ಸಾಮರ್ಥ್ಯದಾಯಿ ತಂತ್ರಜ್ಞಾನದಂತೆ ಉಪಯೋಗಿಸಲಾಗುವುದು. ಮಾಹಿತಿ ತಂತ್ರಜ್ಞಾನವು ಗ್ರಹಿಕೆಯನ್ನು ಹೆಚ್ಚಿಸುವುದು, ಪ್ರಭಾವಶಾಲಿ ಬೋಧನೆ ನೀಡುವಲ್ಲಿ ಮತ್ತು ಪರೀಕ್ಷೆಯ ಆಯೋಜನೆ ಹಾಗೂ ಮೌಲ್ಯಮಾಪನಗಳಲ್ಲಿ ಶಿಕ್ಷಕರಿಗೆ ನೆರವಾಗುವುದು. ಪಾಠಗಳನ್ನು, ವೇಳಾಪಟ್ಟಿ ಇತ್ಯಾದಿಗಳ ಸಿದ್ಧತೆಯನ್ನು ಮಾಹಿತಿ ತಂತ್ರಜ್ಞಾನವು ಶಿಕ್ಷಕರಿಗೆ ಸುಗಮಗೊಳಿಸುವುದು. ಐಟಿ ಸಾಮರ್ಥ್ಯದೊಂದಿಗಿನ ಶಿಕ್ಷಣದ ಅರ್ಥವೆಂದರೆ ಕಂಪ್ಯೂಟರ್, ಅಂತರ್ಜಾಲ, ಕೇಬಲ್–ಆಧಾರಿತ ದೂರದರ್ಶನ ಇತ್ಯಾದಿಗಳ ಬಳಕೆಯ ಮುಖಾಂತರ ವಿಜ್ಞಾನ, ಗಣಿತ, ಸಾಮಾಜಿಕ ವಿಜ್ಞಾನ, ಪ್ರದರ್ಶನ ಕಲೆ ಮುಂತಾದ ಯಾವುದೇ ವಿಷಯವನ್ನು ಕಲಿಯುವುದು ಮತ್ತು ಬೋಧಿಸುವುದು. ಇದು ಪಠ್ಯಕ್ರಮಗಳನ್ನು ಆಧರಿಸಿದ ಶೈಕ್ಷಣಿಕ ಅಂತರ್ವಸ್ತುವನ್ನು ಸಿದ್ಧಪಡಿಸಲು/ವಿಕಾಸಗೊಳಿಸಲು ವಿಶಾಲ ಅವಕಾಶಗಳನ್ನು ತೆರೆದಿಡುವುದು. ಅಷ್ಟೇ ಅಲ್ಲದೆ, ಆನ್–ಲೈನ್ ಮೌಲ್ಯಮಾಪನ ವ್ಯವಸ್ಥೆಯ ಮತ್ತು ವಾಸ್ತವಭಾಸದ ನೈಜತೆಯನ್ನು (Virtual Reality) ಆಧರಿಸಿದ ಅನುಕರಣೆಯ ಪ್ರಯೋಗಗಳ ವಿಕಾಸದ ಅವಶ್ಯಕತೆ ಮತ್ತು ವ್ಯಾಪ್ತಿಗಳಿವೆ. ವೇತನಪಟ್ಟಿ, ತಪಶೀಲುಪಟ್ಟಿ, ಲೆಕ್ಕಾಚಾರ, ಪ್ರಾಯೋಜನಾ ಸಹಯೋಗ, ಶುಲ್ಕ ಸಂಗ್ರಹಣೆ ಇತ್ಯಾದಿಗಳನ್ನು ಮಾಹಿತಿ ತಂತ್ರಜ್ಞಾನ ಸಾಮರ್ಥ್ಯವುಳ್ಳ ಶಾಲಾವ್ಯವಸ್ಥಾಪನೆಯು ಒಳಗೊಳ್ಳಬಹುದು. ಇದು ಪ್ರಾಂಶುಪಾಲರು ನೌಕರರನ್ನು ಶಾಲಾ ಗುರಿಗಳನ್ನು ಸಾಧಿಸುವತ್ತ ತೀವ್ರವಾಗಿ ಪ್ರಯತ್ನಿಸುವಂತೆ ಪ್ರೇರೇಪಿಸಿ ಆಸಕ್ತರಾಗುವಂತೆ ಮಾಡುವುದು. ಶಾಲೆಯ ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರಿಗೆ ಶಿಕ್ಷಕರ ಪರಿಣತಿಯನ್ನು ಕುರಿತ ತಕ್ಷಣದ ದೈನಂದಿನ/ಸಾಪ್ತಾಹಿಕ ವಿದ್ಯಾರ್ಥಿಗಳ ಗ್ರಹಿಕೆಯ ಹಿನ್ನುಣಿಕೆಯನ್ನು(feedback) ಪಡೆಯಲು, ಪರಿಹಾರಾತ್ಮಕ ತರಗತಿಗಳನ್ನು ಆಯೋಜಿಸಲು, ವೇಳಾಪಟ್ಟಿಯನ್ನು ಸಿದ್ಧಪಡಿಸಲು

Digitised by Bharatavani, CIIL

ಮತ್ತು ಶಿಕ್ಷಕರು, ಬೆಂಬಲ ಸಿಬ್ಬಂದಿ, ಬಸ್‌ಗಳು, ಕ್ರೀಡೆ ಇವೇ ಮುಂತಾದ ಸಂಪನ್ಮೂಲಗಳನ್ನು ಗರಿಷ್ಠವಾಗಿ ಬಳಸಿಕೊಳ್ಳಲು ಸಾಧ್ಯವಾಗುವುದು.

ಶಾಲೆಯ ಆಡಳಿತ ವಿದ್ಯಾರ್ಥಿಗಳ ಆಗುಹೋಗುಗಳು, ಶೈಕ್ಷಣಿಕ ಸಂಪನ್ಮೂಲಗಳು, ಆರ್ಥಿಕ ವಿಷಯಗಳು, ಸೌಲಭ್ಯಗಳು, ಮಾನವ ಸಂಪನ್ಮೂಲಗಳು, ಶಾಲಾ ಆಳ್ವಿಕೆಯ ಸೌಲಭ್ಯಗಳು, ವೇಗದ ಮಾಹಿತಿ ಪ್ರಸಾರ, ತಂದೆತಾಯಿಗಳಿಗೆ ಪ್ರಗತಿಯ ಪ್ರತಿಪುಷ್ಠಿ(feedback), ಬೋಧನೆ ಮತ್ತು ಕಲಿಕಾ ಪರಿಸರದಲ್ಲಿ ಪಠ್ಯಕ್ರಮದ ಹೊಂದಾಣಿಕೆ ಇವೇ ಮುಂತಾದ ಮುಖಗಳು ಚುರುಕು ಶಾಲಾ ವ್ಯವಸ್ಥಾಪನೆಯ ಪರಿಧಿಯಲ್ಲಿ ಬರುವುವು. ವಿದ್ಯಾರ್ಥಿ ಸಂಗತಿಗಳ ನಿರ್ವಹಣೆಯು ವಿದ್ಯಾರ್ಥಿ ದಾಖಲೆಗಳು, ನಿಷ್ಪಾದನೆಯ ಮೌಲ್ಯಮಾಪನ, ಹಾಜರಾತಿ ಇತ್ಯಾದಿಗಳನ್ನು ಒಳಗೊಳ್ಳುತ್ತದೆ. ಶಿಕ್ಷಕ/ವಿದ್ಯಾರ್ಥಿಗಳಿಗೆ ಸುಲಭವಾಗಿ ಕೈಗೆಟುಕುವ ಶ್ರವಣ/ದತ್ತಕಾರ್ಯಗಳ ಸೂಕ್ತ ಮಾರ್ಪಾಡು, ಪಠ್ಯಕ್ರಮ ಆಧಾರಿತ ಶೈಕ್ಷಣಿಕ ಸಾಫ್ಟ್‌ವೇರ್‌ಗಳು– ಇವು ಶೈಕ್ಷಣಿಕ ಸಂಪನ್ಮೂಲಗಳಾಗಿವೆ. ಆಯವ್ಯಯ, ವರದಿ ಒಪ್ಪಿಸುವುದು, ಲೆಕ್ಕಪತ್ರವಿಡುವುದು, ಖರೀದಿ, ಪ್ರಾಯೋಜನೆಗೆ ಧನಸಹಾಯ, ಲೆಕ್ಕಪರೀಕ್ಷೆ, ನಗದು ಹರಿವಿನ ನಿರ್ವಹಣೆ, (cashflow management)– ಇವು ಹಣಕಾಸು ವಿಷಯದಡಿಯಲ್ಲಿ ಬರುವುವು. ಸೌಲಭ್ಯ ನಿರ್ವಹಣೆಯು ಕಾರ್ಯಕ್ರಮ ತಯಾರಿ, ಸಂರಕ್ಷಣೆ, ಆಸ್ತಿ ನಿರ್ವಹಣೆ– ಇವುಗಳನ್ನು ಒಳಗೊಳ್ಳಬಹುದು. ಶಿಕ್ಷಕ ಕಾರ್ಯಕ್ರಮ ತಯಾರಿ(teacher scheduling), ಕೌಶಲ್ಯಗಳು/ತಜ್ಞತೆ ನಿರ್ವಹಣೆ, ಬಡ್ತಿ/ವರ್ಗಾವಣೆ, ದೀರ್ಘಾವಧಿ ರಜೆ/ರಜೆಗಳು, ಸಿಬ್ಬಂದಿ ಪ್ರಶಿಕ್ಷಣ ಮತ್ತು ವೃತ್ತಿಪರವಾದ ಅಭಿವೃದ್ಧಿ– ಇವು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಒಳಗೊಳ್ಳಬಹುದಾಗಿದೆ. ಚುರುಕು ಶಾಲಾ ನಿರ್ವಹಣೆಯು ಈ ಮುಂದಿನವುಗಳನ್ನು ಸಾಧ್ಯವಾಗಿಸುವ ನಿರೀಕ್ಷೆಯಿದೆ. ವ್ಯಕ್ತಿಗಳ ನಡುವಣ ಉತ್ತಮ ಸಂವಹನ, ಶಿಕ್ಷಕ/ವಿದ್ಯಾರ್ಥಿಗಳಿಗೆ ಸುಸಂಗತ ಮಾಹಿತಿಯ ಶೀಘ್ರ ಪ್ರಸಾರ; ಸಮಗ್ರವಾದ ಶಾಲಾ ನೀತಿ ರೂಪಣೆ, ಪಠ್ಯಕ್ರಮ ನಿರ್ವಹಣೆ ಹಾಗೂ ತಂದೆತಾಯಿ/ಸಮುದಾಯದ ಸಹಭಾಗಿತ್ವ; ಆನ್–ಲೈನ್ ವಿದ್ಯಾರ್ಥಿ ದತ್ತಾಂಶ, ಕಾರ್ಯಕ್ರಮ ಸಂಬಂಧಿ ಕಿರುಪರೀಕ್ಷೆಗಳು ಮತ್ತು ಮೌಲ್ಯಮಾಪನ; ಪಠ್ಯಕ್ರಮ ಆಧಾರಿತ ಶೈಕ್ಷಣಿಕ ಸಾಮಗ್ರಿಗಳ ತತ್‌ಕ್ಷಣದ ಪೂರೈಕೆ; ಇತರ ಶಾಲೆಗಳಿಗೆ ವಾಸ್ತವ ಭೇಟಿಗಳು; ಹಣಕಾಸು ನಿಯಂತ್ರಣ; ಸೌಲಭ್ಯ ನಿರ್ವಹಣೆಯ ಮೂಲಕ ಖರ್ಚಿನಲ್ಲಿ ಇಳಿಕೆ.

**ಇ–ಶಿಕ್ಷಣ ತಂತ್ರಜ್ಞಾನಗಳು:**

ಶಾಲಾ ಶಿಕ್ಷಣದ ಅಂತಿಮ ಗುರಿ ಸಹಯೋಗದ ಕಲಿಕೆ ಮತ್ತು ಬೋಧನೆ. ನಿಜವಾಗಿಯು ಇದು ಯಾವುದೇ ಸ್ಥಳದಲ್ಲಿ ಯಾವುದೇ ಸಮಯದಲ್ಲಿ ಶಿಕ್ಷಕ–ಶಿಕ್ಷಕಿ, ಶಿಕ್ಷಕ–ವಿದ್ಯಾರ್ಥಿ ಮತ್ತು ವಿದ್ಯಾರ್ಥಿ–ವಿದ್ಯಾರ್ಥಿ ನಡುವಣ ಅನ್ಯೋನ್ಯಕ್ರಿಯೆಯ ಮೂಲಕ ಸಾಧ್ಯವಾಗಬೇಕು. ಇದಕ್ಕೆ ಸಹಯೋಗಿ ನಿರ್ಮಾಣ ಉಪಕರಣಗಳ ಅಗತ್ಯವಿದೆ ಅಂದರೆ ಮೋಡೆಮ್, ಅಂತರ್ಜಾಲ, ಬಹುಮಾಧ್ಯಮ ಕಾರ್ಯಕ್ರಮ ಸಾಮಗ್ರಿಗಳ ದತ್ತಾಂಶ ಭಂಡಾರ, ಜಾಲ ಸಂಪನ್ಮೂಲಗಳು(network resources), ಬಹುಮಾಧ್ಯಮ ಅಂತರ್ವಸ್ತು/ದತ್ತಾಂಶ ಭಂಡಾರ ಮತ್ತು ಶ್ರವಣ/ದೃಶ್ಯ ಉಪಕರಣಗಳಿರುವ ಕಂಪ್ಯೂಟರ್ ಪ್ರಯೋಗಾಲಯ.

**ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಕರ್ಯಗಳು:**

ಕೇಂದ್ರೀಯ ಸರ್ವರ್(central server) (ಉದಾ: ಅಪ್ಲಿಕೇಷನ್ ಸರ್ವರ್, ಮ್ಯಾನೇಜ್‌ಮೆಂಟ್ ಡೇಟಾಬೇಸ್ ಸರ್ವರ್, ವೆಬ್ ಸರ್ವರ್), ಭದ್ರತಾ ಕಾರಣಗಳಿಂದಾಗಿ ಬದಲಿ ಸರ್ವರ್ (proxy server), ಒಂದು ಸ್ಕ್ಯಾನರ್, ಉತ್ಪಾದನಾ/ ನಿರ್ಮಾಣ ಸೌಲಭ್ಯ, ರಚನಾ ಉಪಕರಣಗಳು(Authoring Tools), ಪಠ್ಯಕ್ರಮ ಆಧಾರಿತ ಸಿ.ಡಿ.ಗಳು ಇತ್ಯಾದಿ. ಬಹುಮಾಧ್ಯಮ ಉಪಕರಣಗಳಲ್ಲಿ ಒಳಗೊಳ್ಳಬಹುದು. ಹೆಡ್‌ಫೋನ್‌ನೊಂದಿಗಿನ 10ರಿಂದ 20 ಕಂಪ್ಯೂಟರ್‌ಗಳು ಮತ್ತು ಓರ್ವ ಸಿಬ್ಬಂದಿಗೆ ಒಂದು ಕಂಪ್ಯೂಟರ್, ಒಂದು ಇಂಕ್‌ಜೆಟ್ ಕಲರ್‌ಪ್ರಿಂಟರ್, ಟಿವಿ/ವಿಸಿಆರ್/ಪ್ರೊಜೆಕ್ಟರ್/ ಒಂದು ಜೂಕ್ ಬಾಕ್ಸ್(Juke box ಹಣ ಹಾಕಿ ಹಾಡು ಕೇಳುವ ಸೌಲಭ್ಯ), ಕಾರ್ಯಕ್ರಮ ಸಾಮಗ್ರಿಯ ದತ್ತಾಂಶ ಭಂಡಾರ, MIDI ಉಪಕರಣ (ಎಲೆಕ್ಟ್ರಾನಿಕ್ ಸಂಗೀತ ಉಪಕರಣಗಳನ್ನು ಕಂಪ್ಯೂಟರ್‌ನೊಂದಿಗೆ ಸಂಪರ್ಕಿಸಲು ಬೇಕಾದ ಸಾಧನ)– ಇವು ಬಹುಮಾಧ್ಯಮ ಉಪಕರಣಗಳಡಿಯಲ್ಲಿ ಬರುವುವು. ಆನ್‌ಲೈನ್ ಕಿರುಪರೀಕ್ಷೆ ಪ್ರಾಯೋಜನೆ, ವಾಸ್ತವಾಭಾಸದ ನೈಜತೆ(virtual reality) ಮತ್ತು ವರ್ಧಿತ ನೈಜ ಪ್ರಯೋಗಗಳು ಇವೇ ಮುಂತಾದ ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಗೊಳಿಸುವ ಅವಶ್ಯಕತೆಯಿದೆ.

ಉಪಗ್ರಹ ರೇಡಿಯೋ ವ್ಯವಸ್ಥೆ ದೇಶದಾದ್ಯಂತ ವಿದ್ಯಾರ್ಥಿಗಳಿಗೆ ಶೂನ್ಯವೆಚ್ಚದಲ್ಲಿ ಕಲಿಕಾ ಸಂಪನ್ಮೂಲಗಳನ್ನು ತಲುಪಿಸುವ ಮತ್ತೊಂದು ಕಾರ್ಯಸಾಧ್ಯವಾದ ವೆಚ್ಚ–ಪರಿಣಾಮಕಾರಿತ್ವದ ಪರ್ಯಾಯ ವ್ಯವಸ್ಥೆಯಾಗಿದೆ. ವರ್ಲ್ಡ್‌ಸ್ಪೇಸ್ ರೇಡಿಯೋ ಸಂಸ್ಥೆ(ವಿಶ್ವ ಬಾಹ್ಯಾಕಾಶ ರೇಡಿಯೋ, http://www.worldspace.com ಪ್ರಸಾರ ಮತ್ತು ಭೌಗೋಳಿಕ ವ್ಯಾಪ್ತಿಯ ಸಲುವಾಗಿ 14 ಮಿಲಿಯನ್ ಚದರ ಕಿ.ಮೀ.ಗಳಷ್ಟು ವ್ಯಾಪ್ತಿಯುಳ್ಳ ಉಪಗ್ರಹ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. ಈ ಪ್ರದೇಶದಲ್ಲಿರುವ ಬಳಕೆದಾರರು ಡಿಜಿಟಲ್ ಧ್ವನಿಯನ್ನು ಮತ್ತು ಡಿಜಿಟಲ್ ದತ್ತಾಂಶವನ್ನು 10 ಸೆಂ.ಮೀ ಅಗಲದ ಉಪಗ್ರಹ ಆ್ಯಂಟೆನಾದ ಸಹಾಯದಿಂದ ಸ್ವೀಕರಿಸಬಹುದು. 'ವರ್ಲ್ಡ್‌ಸ್ಪೇಸ್' ಸಂಸ್ಥೆಯು 'ಡೈರೆಕ್ಟ್–ಟು–ಹೋಮ್' (Direct-to-Home, DTH, ನೇರವಾಗಿ ಮನೆಗೆ) ವಿಧಾನದಲ್ಲಿ 'ಡೈರೆಕ್ಟ್ ಮೀಡಿಯಾ ಸರ್ವಿಸ್'(Direct media service, DMS) ಅಂದರೆ ನೇರ ಮಾಧ್ಯಮ ಸೇವೆಯನ್ನು ಒದಗಿಸುವುದು. PC ಅಡಾಪ್ಟರ್ ಅಥವಾ PC ರೀಸಿವರ್ ಕಾರ್ಡ್ ಜೋಡಣೆಯಾಗಿರುವ ವರ್ಲ್ಡ್‌ಸ್ಪೇಸ್ ಡಿಜಿಟಲ್ ರಿಸೀವರ್‌ನೊಂದಿಗೆ ಸಂಪರ್ಕ ಹೊಂದಿರುವ ಬಳಕೆದಾರನ ಪರ್ಸನಲ್ ಕಂಪ್ಯೂಟರ್ (Personal Computer, PC)ಗೆ ಜಾಲ–ಸಾಮರ್ಥ್ಯದೊಂದಿಗಿನ ಅಗಾಧ ಪ್ರಮಾಣದ ದತ್ತಾಂಶವನ್ನು ಒದಗಿಸುವ ಸೌಲಭ್ಯ ಇದಾಗಿದೆ.

Digitised by Bharatavani, CIIL

ಟೆಲಿಫೋನ್ ಲೈನ್ ಅಥವಾ ಐಎಸ್‌ಪಿಯೊಂದಿಗಿನ ಸಂಪರ್ಕದ ಅವಶ್ಯಕತೆ ಇಲ್ಲ. DMS ಏಕಮುಖೀಯ ಪ್ರಸಾರ ವ್ಯವಸ್ಥೆಯಾಗಿದೆ ಮತ್ತು ಇದು ಅನ್ಯೋನ್ಯ ಕ್ರಿಯಾತ್ಮಕ ಅಂತರ್ಜಾಲ ವ್ಯವಸ್ಥೆಯಲ್ಲ ಡೌನ್‌ಲೋಡ್ ವೇಗ 128 kbps(kilobyte per second)ನಷ್ಟು ಅಧಿಕವಾಗಿರಬಹುದು. ಡೌನ್‌ಲೋಡ್ ಪ್ರಕ್ರಿಯೆ ತಾನೇ ತಾನಾಗಿ ಅದರೆಡೆ ಗಮನಹರಿಸಬೇಕಾದ ಅಗತ್ಯವಿಲ್ಲದೆಯೇ ನಡೆಯುತ್ತದೆ.

ಕ್ಯಾಷ್ ಮೆಮೊರಿಯಲ್ಲಿನ ಅಂತರ್ವಸ್ತು ಬಹುತೇಕ ತತ್‌ಕ್ಷಣವೇ ಲಭ್ಯವಾಗುವುದರಿಂದ ಅತಿವೇಗದ ಸಂಪರ್ಕ ಅಥವಾ CD-Rom ಪರಿಣಾಮವೇ ಇಲ್ಲಿಯೂ ದೊರಕುವುದು. ಭೂಪ್ರದೇಶದ ರೇಡಿಯೋ ಪ್ರಸಾರದೊಂದಿಗೆ DMS ವ್ಯವಸ್ಥೆಯನ್ನು ಜೋಡಿಸಿದ್ದಲ್ಲಿ ಗುಣಾತ್ಮಕ ಅಂತರ್ವಸ್ತುವನ್ನು ವೇಗದಲ್ಲಿ ಪಡೆಯುವ ಮತ್ತೊಂದು ಸಾಧ್ಯತೆಯನ್ನು ನಮ್ಮ ಮುಂದಿಟ್ಟಂತಾಗುವುದು. FM ಪ್ರಸಾರ ಪರ್ಯಾಯ ಧ್ವನಿ ಪ್ರಸಾರ ವಿಧಾನವಾಗಿದೆ. ಉಪಗ್ರಹ ರೇಡಿಯೋಗೆ ಹೋಲಿಸಿದಾಗ ಇದರಲ್ಲಿ ಒಂದು ಅನುಕೂಲವಿದೆ. ಪ್ರಸಾರನಿಲಯದ ವ್ಯಾಪ್ತಿಯಲ್ಲಿರುವ ಕೇಳುಗರು ತಜ್ಞರೊಂದಿಗೆ ಫೋನ್–ಇನ್ ಸೌಲಭ್ಯದ ಮೂಲಕ ಅನ್ಯೋನ್ಯಕ್ರಿಯೆ ನಡೆಸಬಹುದು.

MP3 ತಾಂತ್ರಿಕತೆಯನ್ನು ಬಳಸಿ ಉತ್ತಮ ಗುಣಮಟ್ಟದ ಸಾಂದ್ರಗೊಳಿಸಿದ ಧ್ವನಿ ಫೈಲ್‌ಗಳನ್ನು (compressed sound files) ತಯಾರಿಸಬಹುದಾದ್ದರಿಂದ ಅಂತರ್ಜಾಲದ ಮೂಲಕ ಧ್ವನಿಫೈಲ್‌ಗಳನ್ನು ಪಡೆಯುವ ಮತ್ತೊಂದು ವಿಧಾನ ನಮ್ಮ ಮುಂದಿದೆ. ಅಂತರ್ಜಾಲದ ಆಡಿಯೋ/ಟೆಕ್ಸ್ಟ್ ಕಾನ್ಫರೆನ್ಸಿಂಗ್ ಸೌಲಭ್ಯವು ಸಾಮಾನ್ಯ ಆಸಕ್ತಿಗಳನ್ನು ಹೊಂದಿರುವ ಅನೇಕ ವ್ಯಕ್ತಿಗಳ ನಡುವೆ ಅನ್ಯೋನ್ಯಕ್ರಿಯೆಯನ್ನು ಜರುಗಿಸುವ ಒಂದು ಪ್ರಭಾವಶಾಲಿ ವಿಧಾನವಾಗಿ ಹೊರಹೊಮ್ಮಿದೆ.

ಹಲವಾರು ಬಳಕೆದಾರರು ಮತ್ತು ಅಂತರ್ಜಾಲದೊಡನೆ (internet) ಸಂಪರ್ಕವೇರ್ಪಡಿಸುವುದಲ್ಲದೆ ಅವರ ಸಿಸ್ಟಂಗಳನ್ನು ಶಿಕ್ಷಕರ ಕಂಪ್ಯೂಟರ್‌ನೊಂದಿಗೆ ಕೇಂದ್ರೀಕೃತ ಇಂಟರ್‌ನೆಟ್ ಸರ್ವರ್ ಸಿಸ್ಟಂ ಮೂಲಕ ಸಂಪರ್ಕ ಏರ್ಪಡಿಸುವ ಸಾಫ್ಟ್‌ವೇರ್ ಉತ್ಪಾದನೆಯ ಸಹಾಯದಿಂದ ಬಹುಮಾಧ್ಯಮ ಪಾಠಗಳನ್ನು ತಲುಪಿಸುವ ಮತ್ತೊಂದು ವಿಧಾನ ಲಭ್ಯವಿದೆ.

ಹೀಗೆ ಏಕಕಾಲಿಕ ಮತ್ತು ಏಕಕಾಲಿಕವಲ್ಲದ ವಿಧಾನದಲ್ಲಿ ಬೋಧಿಸಲು ವಿವಿಧ ತಾಂತ್ರಿಕ ಪರ್ಯಾಯಗಳು ನಮ್ಮ ಮುಂದಿವೆ.

**ಶಾಲಾ ದತ್ತಾಂಶ ಭಂಡಾರದ ಬಳಕೆ:**

ಶಾಲಾವ್ಯವಸ್ಥೆಗಳು ಆಂತರಿಕ ಬಳಕೆಗಾಗಿ ಮತ್ತು ರಾಜ್ಯ ಮತ್ತು ಕೇಂದ್ರಗಳಿಗೆ ವರದಿಯೊಪ್ಪಿಸುವ ಉದ್ದೇಶದ ಸಲುವಾಗಿ ಆಶ್ಚರ್ಯವೆನಿಸುವಷ್ಟು ವಿವಿಧ ಹಾಗೂ ಅಪಾರ ಮಾಹಿತಿ ಸಂಗ್ರಹಿಸುತ್ತವೆ: ಕಿರುಪರೀಕ್ಷೆಗಳ ಅಂಕಗಳು, ಶ್ರೇಣಿಗಳು ಮತ್ತು ಶಿಸ್ತಿಗೆ ಸಂಬಂಧಿಸಿದ ವರದಿಗಳು, ಜನಸಂಖೀಯ ಮತ್ತು ಜನಾಂಗೀಯ, ವೈದ್ಯಕೀಯ ದತ್ತಾಂಶಗಳು ಮತ್ತು ವಿಶೇಷ ಶಿಕ್ಷಣದಲ್ಲಿ ಸಹಭಾಗಿತ್ವವನ್ನು ಕುರಿತಾದ ಮಾಹಿತಿ, ದ್ವಿತೀಯ ಭಾಷೆಯಾಗಿ ಇಂಗ್ಲಿಷ್ ಮತ್ತು ಉಚಿತ ಹಾಗೂ ಕಡಿಮೆ ದರದಲ್ಲಿ ಊಟದ ಕಾರ್ಯಕ್ರಮಗಳು. ಶಾಲಾಜಿಲ್ಲೆಗಳು ದತ್ತಾಂಶದಲ್ಲಿ ಶ್ರೀಮಂತವಾಗಿದ್ದು, ಜ್ಞಾನದಲ್ಲಿ ಬಡವಾಗಿವೆ. ಹಲವಾರು ಪ್ರಶ್ನೆಗಳಿಗೆ ಉತ್ತರ ಸಿಗದೆ ಹೋಗುವುದು. ಉದಾ: ಹಾಜರಾತಿ ಮತ್ತು ಸಾಕ್ಷರತೆಗಳ ನಡುವೆ ಹಾಗೂ ಶಿಕ್ಷಕ ಪ್ರಶಿಕ್ಷಣ ಮತ್ತು ವಿದ್ಯಾರ್ಥಿ ಪರೀಕ್ಷೆಗಳ ಅಂಕಗಳ ನಡುವೆ ಇರುವ ಸಂಬಂಧಗಳೇನು? ವಿದ್ಯಾರ್ಥಿಗಳ ಗುಣಲಕ್ಷಣಗಳೇನು? ಯಾವ ಕಾರ್ಯಕ್ರಮಗಳು ಹೆಚ್ಚು ಪ್ರಭಾವಶಾಲಿ? ಪ್ರಾರಂಭಿಕ ಶೈಶವಾವಸ್ಥೆಯ ಶಿಕ್ಷಣಕ್ಕೂ ಮತ್ತು ನಂತರದ ಶೈಕ್ಷಣಿಕ ಸಫಲತೆಗೂ ಏನು ಸಂಬಂಧ?

ದತ್ತಾಂಶ ಭಂಡಾರ ತಂತ್ರಜ್ಞಾನವು ಶಾಲಾಶಿಕ್ಷಣಕ್ಕೆ ಇನ್ನೂ ಹೊಸತು. ಜಿಲ್ಲೆಯ ಕಾರ್ಯೋನ್ಮುಖ ವ್ಯವಸ್ಥೆಗಳಿಂದ ಮಾಹಿತಿಯನ್ನು ಪಡೆದು, ಪ್ರಮಾಣೀಕರಿಸಿ ಏಕೀಕೃತಗೊಳಿಸುವ ವಿಶಾಲ ಮಾಹಿತಿ ಭಂಡಾರವೇ ದತ್ತಾಂಶ ಭಂಡಾರವಾಗಿದೆ. ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವಿರುವ ವ್ಯಕ್ತಿಗಳಿಗೆ ನಿರ್ಧಾರಗಳನ್ನು ಕೈಗೊಳ್ಳಲು ದತ್ತಾಂಶವು ಲಭ್ಯವಿಲ್ಲ ಎಂಬುದು ಮುಖ್ಯವಾದ ವಿಷಯ.

ಬ್ರೊವರ್ಡ್ ದೇಶದಲ್ಲಿ ಐ.ಬಿ.ಎಂ 1997ರಲ್ಲಿ ದತ್ತಾಂಶ ಭಂಡಾರದ ಪ್ರಾಯೋಜನೆಯನ್ನು ಪ್ರಾರಂಭಿಸಿತು. ಶೈಕ್ಷಣಿಕ ಮಾಹಿತಿ ನಿರ್ವಹಣಾ ವ್ಯವಸ್ಥೆ ಮತ್ತು ತಂತ್ರಜ್ಞಾನವನ್ನು ಕುರಿತಾಗಿ ಪರಾಮರ್ಶನ ನೀಡುವ ಸಂಸ್ಥೆಯಾದ KPMGಯು NSFನ ನೆರವಿನಿಂದ ದತ್ತಾಂಶ ಭಂಡಾರಕ್ಕೆ ಸಂಬಂಧಿಸಿದಂತೆ ಲರ್ನಿಂಗ್ ಲ್ಯಾಂಡ್‌ಸ್ಕೇಪ್ ಎಂಬ ಉತ್ಪಾದನೆಯನ್ನು ಅಭಿವೃದ್ಧಿಗೊಳಿಸಿದೆ.

K–12 ದತ್ತಾಂಶ ಭಂಡಾರ ಮಾರುಕಟ್ಟೆಗೆ ವಿಷನ್ ಅಸೋಸಿಯೇಟ್‌ನ 'ಇ–ಸ್ಕಾಲರ್'(e-scholar) ಪ್ರವೇಶಿಸಿದ ಇತ್ತೀಚಿನ ಉತ್ಪಾದನೆಯಾಗಿದೆ. ಈ ಪ್ಯಾಕೇಜಿಗೆ ಪ್ರತಿ ವಿದ್ಯಾರ್ಥಿಗೆ 2ರಿಂದ 3 ಡಾಲರ್‌ನಷ್ಟು ಬೆಲೆಯಾಗುವುದು.

ಜಿಲ್ಲೆಯ ಕಾರ್ಯಪ್ರವೃತ್ತ ವ್ಯವಸ್ಥೆಗಳು ವೈವಿಧ್ಯಮಯವಾದ ದತ್ತಾಂಶ ಪ್ರಾರೂಪಗಳನ್ನು ಬಳಸುವುದರಿಂದ ಈ ವ್ಯವಸ್ಥೆಗಳಿಂದ ದತ್ತಾಂಶವನ್ನು ಹೊರತೆಗೆದು ದತ್ತಾಂಶ ಭಂಡಾರಕ್ಕೆ ಸೇರಿಸುವ ಪ್ರಕ್ರಿಯೆಯು ಬಹಳ ಶ್ರಮದಾಯಕವಾಗಿರುವುದಂತೂ ನಿಜಸಂಗತಿಯಾಗಿದೆ. ಮೈಕ್ರೊಸಾಫ್ಟ್ ಪ್ರಸ್ತಾಪಿಸಿರುವ SIF(schools Interoperability Framework)ಅನ್ನು ಶಾಲೆಗಳ ಅಂತರ್‌ಕಾರ್ಯೋನ್ಮುಖತೆ ಚೌಕಟ್ಟು ದತ್ತಾಂಶ ಭಂಡಾರ ಪ್ಯಾಕೇಜುಗಳಲ್ಲಿ ಸಮಗ್ರಗೊಳಿಸಿದಲ್ಲಿ ಈ ಪ್ರಕ್ರಿಯೆ ಶೀಘ್ರದಲ್ಲಿ ಸುಲಭವಾಗಬಲ್ಲದು. SIF ಕಾರ್ಯಪ್ರವೃತ್ತ ವ್ಯವಸ್ಥೆಗಳ ನಡುವೆ ದತ್ತಾಂಶ ಬದಲಾವಣೆಗಾಗಿ ಒಂದು ಸಾಮಾನ್ಯ ದತ್ತಾಂಶ ಪ್ರಾರೂಪವನ್ನು ನಿಶ್ಚಿತಪಡಿಸುವುದು.

**ಚುರುಕು ಶಿಕ್ಷಣ ಸಾಫ್ಟ್‌ವೇರ್(Smart Education Software):**

ಜೀವನಪರ್ಯಂತದ ನಿರಂತರ ಕಲಿಕೆಯನ್ನು ಒದಗಿಸುವ ಸಾಮರ್ಥ್ಯವಿರುವ ಇ–ಶಿಕ್ಷಣದ ಪ್ರಾರಂಭವನ್ನು ಪ್ರತಿನಿಧಿಸುವ

Digitised by Bharatavani, CIIL

ತಂತ್ರಜ್ಞಾನ ಆಧಾರಿತ ವ್ಯವಸ್ಥೆಯೇ 'ಚುರುಕು ಶಾಲೆಗಳು'. ಇ–ಶಿಕ್ಷಣ ಸಾಫ್ಟ್‌ವೇರ್/ಕೋರ್ಸ್‌ವೇರ್ ಈ ಕೆಳಗಿನವುಗಳನ್ನು ಒಳಗೊಳ್ಳಬೇಕು.

- ಉನ್ನತ ಶ್ರೇಣಿಯ ಅನ್ಯೋನ್ಯ ಕ್ರಿಯಾತ್ಮಕತೆ ಮತ್ತು ಸಂವಹನ; ಸೃಜನಾತ್ಮಕ ಚಿಂತನೆಯನ್ನು ಬೆಳೆಸುವುದಕ್ಕಾಗಿ.
- ಬುದ್ಧಿವಂತ ಏಜೆಂಟುಗಳಂತಹ (Intelligent Agents) ನಿರಂತರ ಹಿನ್ನುಣಿಕೆ ಮತ್ತು ಮೌಲ್ಯಮಾಪನ ಉಪಕರಣಗಳು
- ತತ್‌ಕ್ಷಣದ ಸಂಪರ್ಕ: ಜಾಗತಿಕವಾಗಿ ಅನ್ಯೋನ್ಯಕ್ರಿಯೆ ನಡೆಸಲು ಮತ್ತು ತಂಡದಂತೆ ಸಹಯೋಗ ನೀಡಲು
- ಲಭ್ಯತೆ: ಸಾರ್ವತ್ರಿಕ ಲಭ್ಯತೆಯನ್ನು ಖಚಿತಪಡಿಸಲು

CIE ಚುರುಕು ಶಾಲೆಗಳು ILS (Integrated Learning System, ಸಮಗ್ರ ಕಲಿಕಾ ವ್ಯವಸ್ಥೆ) TA(Teacher Assistant, ಶಿಕ್ಷಕ ಸಹಾಯಕ) ಮತ್ತು SMS (School Management System ಶಾಲಾ ನಿರ್ವಹಣಾ ವ್ಯವಸ್ಥೆ)– ಇವುಗಳನ್ನು ಒಳಗೊಳ್ಳುವ ಒಂದು ಸಮಗ್ರ ವ್ಯವಸ್ಥೆಯ ಪರಿಹಾರವೊಂದನ್ನು ಸೂಚಿಸುತ್ತದೆ.

EDC (Education Development Centre, ಶಿಕ್ಷಣ ಅಭಿವೃದ್ಧಿ ಕೇಂದ್ರವು) ಕಲೆಯ ಮೂಲಕ ಶಿಕ್ಷಣಕ್ಕಾಗಿ ಚುರುಕು ಶಾಲಾ ಕಾರ್ಯಕ್ರಮವನ್ನು ವಿಕಸನಗೊಳಿಸಿದೆ. ಎಲ್ಲಾ ವಿದ್ಯಾರ್ಥಿಗಳನ್ನು ತೊಡಗಿಸಲು ಕಲೆಯನ್ನು ಉಪಯೋಗಿಸಿಕೊಳ್ಳುವ ಮಾನದಂಡ–ಆಧಾರಿತ, ಇಡೀ ಶಾಲೆಯ ಸುಧಾರಣೆಯ ಪ್ರಯತ್ನವೇ ಚುರುಕು ಶಾಲೆಗಳು. ಪ್ರಾರಂಭಿಕ ಪರೀಕ್ಷಾ ಹಂತದಲ್ಲಿ ಉದ್ಯೋಗ, ರಂಗಮಂಟಪ, ಸಂಗೀತ, ನೃತ್ಯ ಮತ್ತು ದೃಶ್ಯಕಲೆಗಳ ಮೂಲಕ ಶೈಕ್ಷಣಿಕ ಅಂತರ್ವಸ್ತುವಿನ ಬಗೆಗಿನ ಅರಿವನ್ನು ಆಳವಾಗಿಸಿಕೊಳ್ಳುವುದು ಹೇಗೆ ಎಂದು ಕಲಿತುಕೊಂಡರು. ಚುರುಕು ಶಾಲಾ ಕಾರ್ಯಕ್ರಮವು ತಂಡಕಾರ್ಯವನ್ನು ಪ್ರೋತ್ಸಾಹಿಸುತ್ತದೆ. ಶಿಕ್ಷಕನು ತಮ್ಮಲ್ಲಿಯೇ ಕಲಿಕಾರ್ಥಿಗಳ ಸಮುದಾಯವನ್ನು ನಿರ್ಮಿಸುತ್ತಾನೆ. ನಿಜವಾದ ಅಂತರ್ವಸ್ತುವಿಗೆ ಕಲೆಯನ್ನು ಪ್ರವೇಶ ಬಿಂದುವಿನಂತೆ ಉಪಯೋಗಿಸಲಾಗುತ್ತದೆ. SALT (School Accountability for Learning and Teachability) ತಂಡವು ಶಿಕ್ಷಕರು ಮೂಲ ಪಠ್ಯಕ್ರಮ ಕ್ಷೇತ್ರಗಳೊಂದಿಗೆ ಕಲೆಯನ್ನು (ಸಂಗೀತ, ದೃಶ್ಯಕಲೆ, ನೃತ್ಯ, ನಾಟಕ ಮತ್ತು ಶಾರೀರಿಕ ಶಿಕ್ಷಣ) ಸಫಲ ಪೂರ್ವಕವಾಗಿ ಸಮಗ್ರಗೊಳಿಸುವರು ಎಂಬುದನ್ನು ಕಂಡುಕೊಂಡಿದೆ. ಪ್ರಾರಂಭಿಕ ಪರೀಕ್ಷಾರ್ಥ ಕಾರ್ಯಕ್ರಮವು ರ್‍ಹೋಡ್ ಐಲೆಂಡ್, ನ್ಯೂ ಹ್ಯಾಂಪ್‌ಷೈರ್ ಮತ್ತು ನಾರ್ಥ್‌ಕಿಂಗಸ್ಟನ್ ಪ್ರದೇಶಗಳಲ್ಲಿನ ಶಾಲೆಗಳನ್ನು(http://www.edc.org) ಒಳಗೊಳ್ಳುತ್ತದೆ.

**ಚುರುಕು ಶಾಲೆಗಳ ಜಾಗತಿಕ ಸನ್ನಿವೇಶ:**

ವಿಶ್ವದ ಹಲವು ಭಾಗಗಳಲ್ಲಿ ಬೋಧನೆ ಮತ್ತು ಕಲಿಕೆ ಸಿಬ್ಬಂದಿ ತರಬೇತಿ ಮತ್ತು ನಿರ್ವಹಣೆ ಇತ್ಯಾದಿ ಶಾಲೆಯ ವಿವಿಧ ಮುಖಗಳಿಗೆ ಮಾಹಿತಿ ತಂತ್ರಜ್ಞಾನವನ್ನು ಪ್ರಯೋಗಿಸುವ ಶಾಲೆಗಳನ್ನು ಸಾಮಾನ್ಯವಾಗಿ ಚುರುಕು ಶಾಲೆಗಳೆಂದು ವರ್ಗೀಕರಿಸಲಾಗುತ್ತದೆ. ಸ್ವಯಂಲಭ್ಯ, ಸ್ವಯಂಗತಿಯುಳ್ಳ ಮತ್ತು ಸ್ವಯಂನಿರ್ದೇಶಿತಗೊಂಡ ಕಲಿಕೆ ಬಹುಮಾಧ್ಯಮ ತಂತ್ರಜ್ಞಾನದ ಬಳಕೆಯಿಂದ ಮಾತ್ರ ಸಾಧ್ಯ.

**ಯು.ಎಸ್.ಎ:**

ಜಾಗತಿಕ ಆರ್ಥಿಕತೆಯಲ್ಲಿ ಪ್ರಭಾವಕಾರಿಯಾಗಿ ಸ್ಪರ್ಧಿಸಬೇಕಾದರೆ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಗಣನೀಯವಾಗಿ ಹೆಚ್ಚು ಸಮಯದ ಅಗತ್ಯವಿದೆಯೇ ಎನ್ನುವುದರ ಬಗ್ಗೆ ಅಮೇರಿಕಾದ ಶಿಕ್ಷಣವೇತ್ತರ ನಡುವೆ ಗಂಭೀರ ಚರ್ಚೆಯಿದೆ. ವರ್ಷಾವಧಿ ಶಾಲೆಗಳು, ತಡವಾದ ಆರಂಭ ಸಮಯದ ಶಾಲೆಗಳು, ವಾರಕ್ಕೆ ನಾಲ್ಕು ದಿನದ ಶಾಲೆ, ತ್ರೈವಾರ್ಷಿಕ ಶಾಲೆ ಇತ್ಯಾದಿ ಪರ್ಯಾಯ ಬೋಧನಾ ವ್ಯವಸ್ಥೆಗಳನ್ನು ಪ್ರಸ್ತಾಪಿಸಿ ಪ್ರಯೋಗಿಸಲ್ಪಡುತ್ತಿದೆ. ವಿಶ್ವದಲ್ಲಿ ಸರಾಸರಿ ವರ್ಷಕ್ಕೆ 200ರಿಂದ 220 ದಿನಗಳಾದರೆ, ಜಪಾನಿನಲ್ಲಿ 243 ದಿನಗಳು, ಸ್ವೀಡನ್ನಿನಲ್ಲಿ ವಿದ್ಯಾರ್ಥಿಗಳು ಉನ್ನತ ನಿಷ್ಪಾದನೆಯುಳ್ಳವರಾಗಿದ್ದು, ಅಲ್ಲಿನ ಶಾಲಾ ದಿನಗಳು ಕೇವಲ 170 ದಿನಗಳು ಮಾತ್ರ.

ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಸಂಬಂಧಿಸಿದಂತೆ ಶಿಕ್ಷಣದ ಪರಿಮಾಣಕ್ಕಿಂತ ಗುಣಾತ್ಮಕ ಸಮಯವು ಕಲಿಕೆಯ ದಕ್ಷತೆಯನ್ನು ನಿರ್ಧರಿಸುವ ಅಂಶವಾಗಿದೆ. K–12 ಕಾರ್ಯಕ್ರಮವು ಶಾಲಾಶಿಕ್ಷಣದಲ್ಲಿ ಮಾಹಿತಿ ತಂತ್ರಜ್ಞಾನವನ್ನು ಪರಿಚಯಿಸುವತ್ತ ಒತ್ತು ನೀಡಿತು. ಶಿಕ್ಷಣದಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ ಮತ್ತು ವಿದ್ಯಾರ್ಥಿ ಹಾಗೂ ಶಿಕ್ಷಕರ ಮೇಲೆ ಅದರ ಪ್ರಭಾವವನ್ನು ಪ್ರದರ್ಶಿಸಲು ಚುರುಕು ಶಾಲೆಗಳನ್ನು ಮಾದರಿಯಾಗಿ ಸ್ಥಾಪಿಸಲಾಯಿತು. ಇದು ನಿರಂತರವಾಗಿ ಹಬ್ಬುತ್ತಿರುವ ಡಿಜಿಟಲ್ ವಿಭಾಗವನ್ನು ಒಂದುಗೂಡಿಸಲು ಇದರ ಅವಶ್ಯಕತೆಯನ್ನು ಮನಗಾಣಿಸುವುದರೊಂದಿಗೆ ಜಗತ್ತನ್ನೇ ಕಲಕಿಬಿಟ್ಟಿತು.

UCLAನ ಚುರುಕು ಇ–ಶಾಲೆಗಳು ಸಮಗ್ರಗೊಳಿಸಿದ ಪಠ್ಯಕ್ರಮ, ಅನ್ಯೋನ್ಯಕ್ರಿಯಾತ್ಮಕ ಬೋಧನೆ ಕಲಿಕೆಯ ಪ್ರಯೋಗಗಳು, ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನ ಉಪಕರಣಗಳು, ವೈಯಕ್ತಿಕ ಮತ್ತು ಸಹಕಾರಾತ್ಮಕ ಕಲಿಕಾ ಕ್ರಮಗಳು ಮತ್ತು ಸಹಭಾಗಿತ್ವ ಇವೇ ಮುಂತಾದವುಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಶಿಕ್ಷಣದ ಎಲ್ಲಾ ಮುಖಗಳನ್ನು ಪರಿಗಣಿಸುತ್ತವೆ. ಚುರುಕು ಶಾಲಾ ಸಂಚಯಗಳು ವಿದ್ಯಾರ್ಥಿಯ ನಿಷ್ಕ್ರಿಯ ಸಹಭಾಗಿತ್ವಕ್ಕಿಂತ ಸಕ್ರಿಯ ಸಹಭಾಗಿತ್ವವನ್ನು ಗರಿಷ್ಠವಾಗಿಸುತ್ತದೆ.

ಈ ವ್ಯವಸ್ಥೆಯು ವೇದಿಕೆಯನ್ನು ಅವಲಂಬಿಸುವುದಿಲ್ಲ (Platform independent) ಮತ್ತು ಜಾವಾ ವರ್ಚುಯಲ್ ಮಷಿನ್‌ಗೆ ಬೆಂಬಲ ನೀಡುವ ಆಪರೇಟಿಂಗ್ ಸಿಸ್ಟಂ ಅನ್ನು ಇದು ಹೊಂದಿರುವುದು. (ಅಂದರೆ ವಿಂಡೋಸ್, ಮ್ಯಾಕ್, ಯುನಿಕ್ಸ್, ಲಿನಕ್ಸ್) ಮತ್ತು ಇದು ಅಸಮಾನ ರೂಪದ ಬಹಳಷ್ಟು ಶಾಲೆಗಳಲ್ಲಿ ಕಂಡುಬರುವ ಕಂಪ್ಯೂಟಿಂಗ್ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೆಯಾಗುತ್ತದೆ. ಈ ವ್ಯವಸ್ಥೆ N–ಟಯರ್(N-tier) ಡಿಸ್ಟ್ರಿಬ್ಯೂಟೆಡ್ ಆರ್ಕಿಟೆಕ್ಚರನ್ನು

Digitised by Bharatavani, CIIL

(TCP/IP ಆಧಾರಿತ ಮತ್ತು ಜಾವಾ ಕೇಂದ್ರಿತ) ಬಳಸುತ್ತದೆ.

ಪುಟ್‌ಹಿಲ್ ಕಾಲೇಜ್(ಯು.ಎಸ್.ಎ) ನ ಸೆಂಟರ್ ಫಾರ್ ಇನ್ನೊವೇಷನ್ ಸ್ಮಾರ್ಟ್ ಸ್ಕೂಲ್ ಮೆಂಟರ್ ಕ್ಲಾಸಿಫೈಡ್ ವ್ಯವಸ್ಥೆಯನ್ನು ಹೊಂದಿರುವುದು. ಇದು ಶಿಕ್ಷಕರಿಗೆ ತರಗತಿಯಲ್ಲಿ ಬೇಕಾದ ಪ್ರಭಾವಶಾಲಿ, ತತ್‌ಕ್ಷಣದ ಸ್ಪಂದನೆ ನೇರ ತಾಂತ್ರಿಕ ನೆರವನ್ನು ಕಂಪ್ಯೂಟರ್ ಮೂಲಕ ನೀಡುವುದು.

**ಕೆನಡಾ:**

ಇತ್ತೀಚಿನ ಇಪ್ಸೋಸ್-ರೀಡ್ ಸಂಸ್ಥೆ ಕೈಗೊಂಡ ಇತ್ತೀಚಿನ ಸರ್ವೇಕ್ಷಣೆಯೊಂದು ಕೆನಡಾ ದೇಶವನ್ನು K-12 ವಿದ್ಯಾರ್ಥಿಗಳಿಗೆ ಅಂತರ್ಜಾಲ ಪರಿಚಯಿಸುವ ನೆಲೆಗಟ್ಟಿನಲ್ಲಿ ಸ್ವೀಡನ್ನಿನ ನಂತರದ ದ್ವಿತೀಯ ಸ್ಥಾನದಲ್ಲಿರಿಸಿದೆ. ಶಾಲಾ ಅಂತರ್ಜಾಲ ಕಾರ್ಯಕ್ರಮವು (The School Net Program) ಸರ್ವರಿಗೂ ಸಮನಾಗಿ ಹೊಸ ಜೀವನದುದ್ದಕ್ಕೂ ಕಲಿಯುವ ಅವಕಾಶಗಳನ್ನು ಗುಣಾತ್ಮಕತೆಯನ್ನು ತ್ಯಜಿಸದೆ ಒದಗಿಸಲು ಇ-ಕಲಿಕೆ ಉಪಕರಣಗಳ ಮೇಲೆ ಒತ್ತು ನೀಡುತ್ತದೆ. ವ್ಯಕ್ತಿಗಳು ಹೇಗೆ ಕಲಿಯುವರು ಮತ್ತು ಕಲಿಕೆಯನ್ನು ಅತ್ಯಂತ ಪ್ರಭಾವಕಾರಿಯಾಗಿ ಹೇಗೆ ನೀಡಬಹುದು ಎನ್ನುವುದರತ್ತ ಗಮನ ಕೇಂದ್ರೀಕರಿಸಿ ಸಾಂಪ್ರದಾಯಿಕ ಮತ್ತು ಆನ್‌ಲೈನ್ ಇವೆರಡೂ ಒಳಗೊಂಡಂತೆ ಶಾಸ್ತ್ರೀಯವಾದ ಮತ್ತು ಪ್ರಾಯೋಗಿಕವಾದ ಕಲಿಕೆಯ ಮೇಲಿನ ಸಂಶೋಧನೆ ಅಂತರ್‌ಶಾಸ್ತ್ರೀಯವೂ, ವಿವಾದಾಂಶ ಆಧಾರಿತ, ಸಮಸ್ಯಾ ಆಧಾರಿತ ಮತ್ತು ಫಲಿತಾಂಶ ಆಧಾರಿತ ಸಂಶೋಧನೆಯಾಗಿರುವುದು. ಕಲಿಕಾ ಉಪಕರಣ ಉತ್ಪಾದನೆ (Learning ware products)ಗಳ ವಿಕಸನಕ್ಕೆ ಅತಿ ಹೆಚ್ಚಿನ ಬದ್ಧತೆಯ ಅವಶ್ಯಕತೆಯಿದೆ. ಉದಾ: ಕಾರ್ಯಕ್ರಮ ನಿರ್ಮಾಣ ವ್ಯವಸ್ಥೆ(course authority systems), ಕೋರ್ಸ್ ನಿರ್ವಹಣಾ ವ್ಯವಸ್ಥೆ, ಕಲಿಕಾ ವಸ್ತುಗಳು ಮತ್ತು ಸಂಚಯಗಳು, ಡಿಜಿಟೀಕೃತ ಕಲಿಕಾ ಸಂಪನ್ಮೂಲಗಳು, ಬಹುಮಾಧ್ಯಮ ಕಲಿಕಾ ಪರಿಸರಗಳು ಇತ್ಯಾದಿ. ಧನಸಹಾಯವು ಇಡೀ ಕೆನಡಾವನ್ನು ಮತ್ತು ಬಹುಶಾಸ್ತ್ರೀಯ ದೃಷ್ಟಿಯನ್ನು ಹೊಂದಿರಬೇಕಿದ್ದು, ಬಹುಶಾಸ್ತ್ರೀಯ ಗಮನಹೊಂದಿದ್ದು, ದೇಶದಾದ್ಯಂತವಿರುವ ಸಮೂಹ ಶಕ್ತಿಯ ಅನುಕೂಲವನ್ನು ಪಡೆಯಬೇಕು.

ಕೆನಡಾ ದ್ವಿಭಾಷಾ (ಫ್ರೆಂಚ್ ಮತ್ತು ಇಂಗ್ಲಿಷ್) ಮತ್ತು ಬಹುಸಂಸ್ಕೃತಿಯುಳ್ಳ ದೇಶವಾಗಿದೆ.

ಕ್ಯೂಟೆಕ್‌ನ 1000 ಶಾಲೆಗಳಿಗೂ ಹೆಚ್ಚು ಶಾಲೆಗಳನ್ನು ಪ್ರತಿನಿಧಿಸುವ 26 ಸ್ಕೂಲ್ ಬೋರ್ಡ್‌ಗಳು ತಮ್ಮ ಶಾಲೆಗಳ ನಡುವೆ ಸಂಬಂಧ ಕಲ್ಪಿಸಲು Dark Fibre Networkಅನ್ನು ಸ್ಥಾಪಿಸಲು ಯೋಜಿಸುತ್ತಿವೆ. ಇಲ್ಲವೇ ಈಗಾಗಲೇ ಸ್ಥಾಪಿಸಿವೆ.

**ಯು.ಕೆ. (ಯುನೈಟೆಡ್ ಕಿಂಗಡಮ್):**

ನ್ಯಾಷನಲ್ ಗ್ರಿಡ್ ಫಾರ್ ಲರ್ನಿಂಗ್ (National Grid for Learning, NGFL) ಈ ಕೆಳಗಿನ ಗುರಿಗಳನ್ನು ಇರಿಸಿಕೊಂಡಿತ್ತು.

- 2002ನೆಯ ಇಸವಿಯ ವೇಳೆಗೆ ಪ್ರತಿಯೊಬ್ಬ ಶಿಕ್ಷಕನು ಶೈಕ್ಷಣಿಕ ಉದ್ದೇಶಕ್ಕಾಗಿ ಮಾಹಿತಿ ತಂತ್ರಜ್ಞಾನವನ್ನು ಬಳಸಲು ಸಮರ್ಥನಾಗಬೇಕು.
- ಪ್ರತಿಯೊಂದು ಶಾಲೆ, ಗ್ರಂಥಾಲಯ ಮತ್ತು ಸಮುದಾಯಕ್ಕೆ NGFL ಸಂಸ್ಥೆಯ ಲಭ್ಯತೆ ಇರುವಂತಾಗಬೇಕು. ಕನಿಷ್ಠ ಶೇ.75ರಷ್ಟು ಶಿಕ್ಷಕರು ಮತ್ತು ಶೇ.50ರಷ್ಟು ವಿದ್ಯಾರ್ಥಿಗಳು ವೈಯಕ್ತಿಕ ಇ-ಮೇಲ್ ವಿಳಾಸವನ್ನು ಹೊಂದಿರಬೇಕು.
- ಬಹುತೇಕ ಸ್ನಾತಕ ಪದವಿಯುಳ್ಳವರು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಉಪಯೋಗದ ಬಗ್ಗೆ ಸಮಗ್ರವಾದ ಅರಿವನ್ನು ಹೊಂದಿರಬೇಕು.

**ಥಾಯ್‌ಲ್ಯಾಂಡ್:**

IBM ಮತ್ತು ಜೊತೆಗಾರರು 'ಥಾಯ್ ಚುರುಕು ಪುಟಾಣಿಗಳು'(Thai Smart Kid, TSK) ಎಂಬ ಪ್ರಾಯೋಜನೆಗೆ ಪ್ರೋತ್ಸಾಹವಿತ್ತರು. ಸದಸ್ಯ ಶಾಲೆಗಳು ಹಾರ್ಡ್‌ವೇರ್, ಸಾಫ್ಟ್‌ವೇರ್ ಮತ್ತು ಸಿಬ್ಬಂದಿಗಳ ವಿನಿಮಯ ಮಾಡಿಕೊಂಡು ಅಂತರ್ಜಾಲದ ಮುಖಾಂತರ ಕಲಿಕಾ ಜಾಲಕ್ಕೆ ಕೊಡುಗೆ ನೀಡುವುವು. Lotus TSK ಪ್ರಾಯೋಜನೆಯಲ್ಲಿ ಬಳಸಲಾಗುವ Learning space 4.0- ಎಂಬುದನ್ನು ವಿಕಸನಗೊಳಿಸಿದೆ.

**ಸಿಂಗಾಪುರ್:**

ಸಿಂಗಾಪುರ್‌ನಲ್ಲಿ ಇ-ಕಲಿಕೆ ಬಹಳ ಮುಖ್ಯವಾಗಿದೆ. ಸಿಂಗಾಪುರ್‌ನಲ್ಲಿ ಇ-ಕಲಿಕೆಯನ್ನು ಪ್ರೋತ್ಸಾಹಿಸಲು ಹಲವಾರು ಮುಖ್ಯ ಪ್ರಾರಂಭಿಕ ಪ್ರಯತ್ನಗಳಾಗುತ್ತಿವೆ. SITF (Singapore IT Federation, ಸಿಂಗಾಪುರ್ ಐ.ಟಿ ಒಕ್ಕೂಟ) ಇ-ಕಲಿಕೆ ಅಧ್ಯಾಯಗಳನ್ನು ಪ್ರಾರಂಭಿಸಿದ್ದು, ಇದು ಇ-ಕಲಿಕೆ ದಕ್ಷತಾ ಕೇಂದ್ರಗಳನ್ನು ಮತ್ತು ಇ-ಕಲಿಕೆ ಕೇಂದ್ರಗಳನ್ನು ತೆರೆಯಲು ಪ್ರೋತ್ಸಾಹಿಸುತ್ತದೆ. ಅಲ್ಲದೆ 196 ಪ್ರಾಥಮಿಕ ಶಾಲೆಗಳಲ್ಲಿ AITP (Accelerating the use of IT, ಐಟಿ ಬಳಕೆಯನ್ನು ವರ್ಧಿಸುವುದು) ಹಾಗೂ 6 ಮಾಧ್ಯಮಿಕ ಶಾಲೆಗಳಲ್ಲಿ STW (Student's & Teaher Work bench, ವಿದ್ಯಾರ್ಥಿ ಮತ್ತು ಶಿಕ್ಷಕ ಕಾರ್ಯಸ್ಥಾನ)ಗಳನ್ನು ಪ್ರೋತ್ಸಾಹಿಸಿತು.

**ನ್ಯೂಜಿಲ್ಯಾಂಡ್:**

My Internet Co. ಎಂಬ ಆಸ್ಟ್ರೇಲಿಯಾದ ಕಂಪೆನಿಯು ಚುರುಕು ಶಾಲೆಗಳನ್ನು ಪ್ರಾಯೋಜಿಸಿದೆ. ಸುಮಾರು 400 ಪರ್ಸನಲ್ ಕಂಪ್ಯೂಟರ್‌ಗಳನ್ನು ಸರಿಪಡಿಸಿ ವೆಲ್ಲಿಂಗ್‌ಟನ್ ನಗರ ಸಮುದಾಯ ಗುಂಪುಗಳಿಗೆ ನೀಡಿತು. ಪ್ರತಿಯೊಂದು ಕಂಪ್ಯೂಟರ್ Windows 95 ಆಪರೇಟಿಂಗ್ ಸಿಸ್ಟಂ ಹೊಂದಿದ್ದು, 125ಡಾಲರ್ ಬೆಲೆಯುಳ್ಳದ್ದಾಗಿದ್ದು, ಕೆಲವು ಉಚಿತ ಸಾಫ್ಟ್‌ವೇರ್‌ಗಳನ್ನು ಹೊಂದಿದೆ. ಇದನ್ನೂ ಚುರುಕು ಶಾಲಾ ಯೋಜನೆಯು ನೋಡಿಕೊಳ್ಳುತ್ತದೆ.

Digitised by Bharatavani, CIIL

**ಇಸ್ರೇಲ್:**

ಎಡ್ನ ಅಪೆಕ್ ಸಹಯೋಗದ ಕಲಿಕೆ, EQ ಮತ್ತು ಸೇವಾಕಲಿಕೆ ಮುಂತಾದ ಹೊಸ ಕಲಿಕೆಯ ಮತ್ತು ಬೋಧನೆಯ ಹೊಸ ವಾದಗಳನ್ನು ಅನುಷ್ಠಾನಿಸಲು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಶಾಲೆಗಳ ಬಗ್ಗೆ ಉಲ್ಲೇಖಿಸುತ್ತಾರೆ.

**ಈಜಿಪ್ಟ್:**

ಚುರುಕು ಶಾಲಾ ಪ್ರಾಯೋಜನೆಯ ಇ-ಪುಸ್ತಕಗಳು ಮತ್ತು ಇ-ಪುಸ್ತಕ ಓದಲು ಸಹಾಯ ಮಾಡುವ ಉಪಕರಣಗಳನ್ನು ನಿರ್ಮಿಸುವ ಇಚ್ಛೆಯನ್ನು ಹೊಂದಿದೆ. ಬುಕ್‌ಜೋನ್ ಇನ್‌ಕಾರ್ಪೊರೇಟೆಡ್ ಕಂಪನಿಯು ಶಿಕ್ಷಣ ಸಚಿವಾಲಯದ ಸಹಯೋಗದೊಂದಿಗೆ ಈಜಿಪ್ಟ್ ಸಂಪರ್ಕ ಮತ್ತು ಮಾಹಿತಿ ಇಲಾಖೆಗಾಗಿ ಇ-ಗ್ರಂಥಾಲಯ ಮತ್ತು ಇ-ಪ್ರಕಟಣಾ ವ್ಯವಸ್ಥೆಗಳನ್ನು ನಿರ್ಮಿಸುವುದರಲ್ಲಿ ಸಹಕರಿಸುತ್ತದೆ.

**ಕೊರಿಯಾ:**

ರು-ಗಾನ್ ಪ್ರಾಥಮಿಕ ಶಾಲೆಯು ಪರಿಸರವ್ಯವಸ್ಥೆಯ ಆಧಾರದ ಮೇಲೆ ವಿಷಯಾತ್ಮಕವಾಗಿ ಸಮಗ್ರಗೊಳಿಸಿದ ಪಠ್ಯಕ್ರಮವನ್ನು ವಿಕಸನಗೊಳಿಸಿದೆ. ಸ್ಥಳೀಯ ಕಪ್ಪೆಗಳು, ಚಿಟ್ಟೆಗಳು, ಮಿಣುಕು ಹುಳುಗಳು ಮತ್ತು ಕೀಟಗಳನ್ನು ಚಿತ್ರೀಕರಿಸಲಾಗಿದೆ ಮತ್ತು ವರ್ಗೀಕರಿಸಲಾಗಿದೆ. ಜೈವಪರಿಸರ ಮತ್ತು ತಾಂತ್ರಿಕ ಕ್ಷೇತ್ರಗಳನ್ನು ಸಂಯೋಜಿಸುವುದರಿಂದ ಕಲಿಕೆಯನ್ನು ವಾಸ್ತವಜ್ಞಾನದಿಂದ 'ಆಳ'ವಾದ ಅರಿವಿನತ್ತ ಕೊಂಡ್ಯೊಯಲು ಸಾಧ್ಯವಾಗುವುದು.

**ಜಪಾನ್:**

1996ರಲ್ಲಿ ಜಪಾನ್ ದೇಶವು ವರೆಗೆ ಪಠ್ಯಕ್ರಮದ ತಿದ್ದುಪಡಿ ಮಾಡಿದೆ. ಸಮಗ್ರತೆ, ಏಕತೆ ಮತ್ತು ಸಾರ್ವಜನಿಕ ಗ್ರಹಿಕೆ- ಇವು ಹೊಸಪಠ್ಯಕ್ರಮದ ಲಕ್ಷಣಗಳು. ಜಪಾನ್ ಸಮಗ್ರಗೊಳಿಸಿದ ಅಧ್ಯಯನವನ್ನು ವಿಕಸನಗೊಳಿಸಲು ಮತ್ತು ಅನುಷ್ಠಾನಗೊಳಿಸಲು ಶಾಲಾ ಸಮಯದ ಶೇ.20ರಷ್ಟು ಸಮಯವನ್ನು ಮೀಸಲಿಡುತ್ತದೆ. ಇದರಿಂದ ಮಕ್ಕಳು ಸಮಗ್ರ ಅನುಭವವನ್ನು ಪಡೆಯಲು ಮತ್ತು ಕಲಿಕೆಯ ಒಂದು ಏಕೀಕೃತಗೊಳಿಸಿದ ಅರ್ಥವನ್ನು ಕಂಡುಕೊಳ್ಳಬಹುದು.

**ಚೈನಾ:**

ತೈವಾನ್ 1996ರಲ್ಲಿ ಶಿಕ್ಷಣದಲ್ಲಿ ನಾವೀನ್ಯತೆಯನ್ನು ಪ್ರಾರಂಭಿಸಿ 2001ರಲ್ಲಿ ಪೂರ್ಣಗೊಳಿಸುವ ಗುರಿಯನ್ನು ಹೊಂದಿತ್ತು. ಹೊಸ ಶಾಲಾ ಪಠ್ಯಕ್ರಮವು ಏಳು ಕಲಿಕಾ ಕ್ಷೇತ್ರಗಳನ್ನು ಒಳಗೊಂಡಿದೆ. (i) ಭಾಷೆ (ii) ಸಾಮಾಜಿಕ ಅಧ್ಯಯನಗಳು (iii) ವಿಜ್ಞಾನ ಮತ್ತು ತಂತ್ರಜ್ಞಾನ (iv) ದೈಹಿಕ ಮತ್ತು ಆರೋಗ್ಯ ಶಿಕ್ಷಣ (v) ಗಣಿತ (vi) ಕಲೆ ಮತ್ತು ಮಾನವಿಕ ಅಧ್ಯಯನಗಳು ಮತ್ತು (vii) ಸಮಗ್ರ ಚಟುವಟಿಕೆ.

ಚುರುಕು ಶಾಲೆಗಳ ತಂತ್ರಜ್ಞಾನದಲ್ಲಿ ಶಿಕ್ಷಣವು ವಿಜ್ಞಾನ ಮತ್ತು ತಂತ್ರಜ್ಞಾನದೊಂದಿಗೆ ಸೇರಿಕೊಂಡಿರುವುದು. ತಾಂತ್ರಿಕ ಶಿಕ್ಷಣದ ಪಠ್ಯಕ್ರಮದಲ್ಲಿ ನಾಲ್ಕು ಘಟಕಗಳಿವೆ- (i) ಜ್ಞಾನ (ii) ಕೌಶಲಗಳು (iii) ಮೌಲ್ಯಗಳು ಮತ್ತು (iv) ಭಾಷೆ. ಸಂಚಯವು ಅಂತರ್ವಸ್ತು, ಸಮಸ್ಯಾ ಪರಿಹಾರ, ಜ್ಞಾನಮೀಮಾಂಸೆ ಮತ್ತು ವಿಚಾರ – ಇವುಗಳನ್ನು ಒಳಗೊಳ್ಳುವುದು, ವಾಸ್ತವಾಂಶಗಳು, ಪರಿಕಲ್ಪನೆಗಳು ಮತ್ತು ತತ್ವಗಳು- ಇವು ಅಂತರ್ವಸ್ತು ಜ್ಞಾನದಲ್ಲಿ ಒಳಪಡುವುವು. ವೈಯಕ್ತಿಕ, ಸಾಮಾಜಿಕ, ಜ್ಞಾನ ಸಂಪಾದನೆ, ಸಾಂಖ್ಯಿಕ, ಚಿಂತನೆ, ವೈಜ್ಞಾನಿಕ, ಸಾಮಾನ್ಯ, ಪರಿಸರ ಸಂಬಂಧಿತ, ಸೃಜನಾತ್ಮಕ ಮತ್ತು ಮಾಹಿತಿ ತಂತ್ರಜ್ಞಾನ ಕೌಶಲ್ಯಗಳು ಕುಶಲತೆಗಳಲ್ಲಿ ಒಳಪಟ್ಟಂಥವುಗಳು. ಮೌಲ್ಯಗಳು ಪ್ರಭಾವ ಬೀರುವ ಮತ್ತು ಸಂವೇದನಾತ್ಮಕ ಕ್ಷೇತ್ರಗಳಲ್ಲಿ ಬರುವುವು. 16 ಮೌಲ್ಯಗಳು ಇಂತಿವೆ- ಕರುಣೆ, ಸ್ವಾವಲಂಬನೆ, ಗೌರವ, ಪ್ರೇಮ, ಸ್ವಾತಂತ್ರ, ಧೈರ್ಯ, ಶಾರೀರಿಕ ಹಾಗೂ ಮಾನಸಿಕ, ಶುಚಿತ್ವ, ಸಹಕಾರ, ಶ್ರಮ, ಮಧ್ಯಮ ಮಾರ್ಗ, ಕೃತಜ್ಞತೆ, ವೈಚಾರಿಕತೆ, ಸಾರ್ವಜನಿಕ ಸ್ಫೂರ್ತಿ, ನಮ್ರತೆ, ಪ್ರಾಮಾಣಿಕತೆ ಮತ್ತು ನ್ಯಾಯಪರತೆ. ಭಾಷಾ ಸಂಚಯವು ವಾಚನ, ಲೇಖನ ಮತ್ತು ಮೌಖಿಕ ಸಂವಹನದ ಬಗ್ಗೆ ಒತ್ತು ನೀಡುವುದು.

ತಾಂತ್ರಿಕ ಶಿಕ್ಷಣದಲ್ಲಿ ಚೈನಾ ಸಂಸ್ಕೃತಿಯ ಅದ್ವಿತೀಯವೂ, ದೇಶಿಯವೂ ಆದ ಯಾವ ಅಂಶವನ್ನು ಉಳಿಸಿಕೊಳ್ಳಬೇಕು ಎನ್ನುವುದನ್ನು ಪರಿಗಣಿಸಿದಾಗ ಚೈನಾ ಒಕ್ಕೂಟಕ್ಕಾಗಿ ತಾಂತ್ರಿಕ ಶಿಕ್ಷಣಕ್ಕೆ ಪಠ್ಯಕ್ರಮ ಸಿದ್ಧಪಡಿಸುವಿಕೆ ಒಂದು ವಿವಾದಾಂಶವಾಗಿದೆ.

**ಮಲೇಷಿಯಾ:**

ಮಲೇಷಿಯಾ 1999ರಲ್ಲಿ Malaysia super corridor ಎಂಬುದನ್ನು ಆರಂಭಿಸಿತು. ಹೈ-ಟೆಕ್ ಕೈಗಾರಿಕೆಗಳನ್ನು ನಿರ್ವಹಿಸಲು ಜ್ಞಾನಕರ್ಮಿಗಳ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಚುರುಕು ಶಾಲೆಗಳನ್ನು ಸ್ಥಾಪಿಸಲಾಯಿತು. ಸಮಗ್ರ ಪರಿಪ್ರೇಕ್ಷ್ಯದೊಂದಿಗೆ ಹಾಗೂ ಸೃಜನಶೀಲತೆ ಮತ್ತು ನಾವೀನ್ಯತೆಗಳೊಂದಿಗೆ 7 ಮಂಚೂಣಿ ಕಾರ್ಯಕ್ರಮಗಳಲ್ಲಿ ಒಂದಾಗಿ ಈ ಶಾಲೆಗಳನ್ನು ಪ್ರಾರಂಭಿಸಿ ಅವುಗಳಿಗೆ ಮಾಹಿತಿ ತಂತ್ರಜ್ಞಾನದ ದಕ್ಷತೆಯನ್ನು ಒದಗಿಸಲಾಯಿತು. ಪ್ರಾರಂಭಿಕ ಹಂತದಲ್ಲಿ (1999) ಕೇವಲ 90 ಶಾಲೆಗಳನ್ನು ಸರ್ಕಾರವು ಆಯ್ಕೆ ಮಾಡಿಕೊಂಡಿತು. 2010ರ ವೇಳೆಗೆ ಎಲ್ಲಾ 10,000 ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಚುರುಕು ಶಾಲೆಗಳಾದುವು. ಶಾಲೆಗಳು ತಮ್ಮ ಪ್ರಯತ್ನದಿಂದಲೇ ಚುರುಕು ಶಾಲೆಗಳಾಗಿ ಮಾರ್ಪಾಡು ಹೊಂದುವ ಪ್ರಯತ್ನಗಳನ್ನು ಶಿಕ್ಷಣ ಸಚಿವಾಲಯವು ಪ್ರೋತ್ಸಾಹಿಸುತ್ತದೆ.

ಚುರುಕು ಶಾಲೆಗಳ ಮೂರು ಪ್ರಾಯೋಗಿಕ ಅನ್ವಯಿಕತೆಗಳು ಹೀಗಿವೆ- (i) ಬೋಧನೆ ಕಲಿಕೆಯ ಸಾಮಗ್ರಿಗಳು (ನಾಲ್ಕು ವಿಷಯಗಳಿಗೆ; ಬಹಸಿ ಮಲೇಷಿಯಾ ಭಾಷೆ, ಇಂಗ್ಲಿಷ್, ವಿಜ್ಞಾನ ಮತ್ತು ಗಣಿತ- ಎಲ್ಲಾ ಶ್ರೇಣಿಗಳಿಗೆ), (ii) ವಿದ್ಯಾರ್ಥಿ ಮೌಲ್ಯಮಾಪನ ವ್ಯವಸ್ಥೆ ಮತ್ತು (iii) ಶಾಲಾ ನಿರ್ವಹಣಾ ವ್ಯವಸ್ಥೆ.

Digitised by Bharatavani, CIIL

ಈ ಮೂರು ಪ್ರಾಯೋಗಿಕ ಅನ್ವಯಿಕತೆಗಳಿಗೆ ಪರಿಹಾರಗಳನ್ನು ಸೂಚಿಸಲು ಕೈಗಾರಿಕೆಗಳನ್ನು ಆಹ್ವಾನಿಸಲಾಯಿತು. ಚುರುಕು ಶಾಲಾ ಪ್ರಾರಂಭಿಕ ಕಾರ್ಯಕ್ರಮಗಳನ್ನು ಏಕೈಕ ಸಮಗ್ರ ಪರಿಹಾರವಾಗಿ ಪರಿವರ್ತಿಸಲು ಸ್ಥಾನೀಯ ಮತ್ತು ಅಂತರರಾಷ್ಟ್ರೀಯ ಒಕ್ಕೂಟಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲಾಗುವುದು.

**ಐರೋಪ್ಯ ಶಾಲಾ ಜಾಲ:**

ಈಗಾಗಲೇ ಲಭ್ಯವಿರುವ ಕಲಿಕಾ ಸಂಪನ್ಮೂಲಗಳ ಲಭ್ಯತೆಯನ್ನು – ಸಂರಚನಾತ್ಮಕ ಮತ್ತು ಬಳಕೆದಾರ ಸ್ನೇಹಿ ಮಾರ್ಗದಲ್ಲಿ – ಐರೋಪ್ಯ ಶಾಲಾ ಜಾಲ(European School net, EUN)ದ ಸುಧಾರಣೆಯ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. ಇದು ಸ್ವೀಡನ್ ದೇಶದ ಶಿಕ್ಷಣ ಸಚಿವಾಲಯದ ಮತ್ತು CEDEFOP ಯ ಐರೋಪ್ಯ ತರಬೇತಿ ಗ್ರಾಮದ (European Training Village) ವೆಬ್‌ಸೈಟ್‌ನ ಪ್ರಯತ್ನವಾಗಿದೆ. ಇದರ ಜೊತೆಗೆ ಸುಮಾರು 1800ಕ್ಕೂ ಅಧಿಕ ಮುಖ್ಯ ಯುರೋಪಿಯನ್ ಸಹಭಾಗಿ ಸದಸ್ಯರಿಗೆ ಸಂರಚಿತ ಮಾಹಿತಿ ಮತ್ತು ಜ್ಞಾನವನ್ನು ವಿಸ್ತೃತವಾಗಿ ಪ್ರಸಾರ ಮಾಡಲು PROMETEUS ಬೆಂಬಲಸೇವೆ(support service)ಯು ಬಹುಭಾಷೀಯ ವೇದಿಕೆಯೊಂದನ್ನು ನಿರ್ಮಿಸುತ್ತಿದೆ.

ಇ–ಕಲಿಕೆ ಕ್ರಿಯಾ ಯೋಜನೆಯಲ್ಲಿ ಮೂರು ವಿಷಯ ಕ್ಷೇತ್ರಗಳನ್ನು ಗುರುತಿಸಲಾಗಿದೆ; ವಿಜ್ಞಾನ, ತಂತ್ರಜ್ಞಾನ ಮತ್ತು ಸಮುದಾಯ; ಮತ್ತು ಕಲೆ, ಸಂಸ್ಕೃತಿ ಮತ್ತು ಪೌರತ್ವ.

IBM, CISCO, Nokia, Smart force, sanoma wsoy ಇವೇ ಮುಂತಾದ ಕಂಪನಿಗಳು ನಾಲ್ಕು ಕ್ರಿಯಾದಿಶೆಗಳನ್ನು ಗುರುತಿಸಿರುವ ಸಂಘದ ಇ–ಕಲಿಕಾ ಪ್ರಾರಂಭಿಕ ಪ್ರಯತ್ನದಲ್ಲಿ ಭಾಗವಹಿಸುವುವು: (i) ಮೂಲಭೂತ ಸೌಕರ್ಯಗಳು ಮತ್ತು ಉಪಕರಣಗಳು (ii) ಎಲ್ಲಾ ಸ್ತರಗಳಲ್ಲಿಯೂ ಪ್ರಶಿಕ್ಷಣ (iii) ಗುಣಾತ್ಮಕ ಅಂತರ್ವಸ್ತು ಮತ್ತು ಸೇವೆಗಳು; (iv) ಯುರೋಪಿಯನ್ ಸಹಕಾರ ಮತ್ತು ನೆಟ್‌ವರ್ಕಿಂಗ್

ಸಂಶೋಧನೆಯನ್ನು ಅನುಭವಗಳ ವಿನಿಮಯ ಮತ್ತು ಶ್ರೇಷ್ಠ ಆಚಾರಗಳಿಗೆ ಒತ್ತು ನೀಡುತ್ತಾ ಬಲಪಡಿಸಬೇಕಾಗಿದೆ– ಹೊಸ ಮೊಬೈಲ್ ಉಪಕರಣಗಳು, ವಿಶೇಷ ಅಂತರ್‌ಪ್ರಕ್ರಿಯೆಗಳು (interface) ಪರಿಸರಾತ್ಮಕ ಬುದ್ಧಿವಂತಿಕೆ ಮುಂತಾದ ಹೊಸ ತಂತ್ರಜ್ಞಾನಗಳು ಹೊಸ ಹಾಗೂ ಇನ್ನೂ ನಿರೀಕ್ಷಿಸದ ಇ–ಕಲಿಕೆಯ ಅವಕಾಶಗಳನ್ನು ಒದಗಿಸುತ್ತವೆ.

ಕುಶಲತೆಗಳು ಮತ್ತು ಉದ್ಯೋಗಗಳ ನಡುವೆ ಅಂತರ್‌ಸಂಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಸಾಮರ್ಥ್ಯವನ್ನು ಹೊರತೆಗೆಯಲು ಮೂಲಭೂತ ಕೌಶಲಗಳ ಮೇಲೆ ಕೆಲಸವು ಮುಂದುವರೆಯುತ್ತಿದೆ. ಈ ಅಧ್ಯಯನದಿಂದ ಭಾಷೆಗಳು, ವೈಯಕ್ತಿಕ ಮತ್ತು ಸಾಮಾಜಿಕ ಕುಶಲತೆಗಳು, ಗಣಿತ ಅಥವಾ IT ಕುಶಲತೆಗಳು ಇತ್ಯಾದಿಗಳನ್ನು ಒಳಗೊಂಡಂತೆ ಮೂಲಭೂತ ದಕ್ಷತೆಗಳು ಮತ್ತು ಅರ್ಹತೆಗಳುಳ್ಳ ಪ್ಯಾಕೇಜ್ ನಮಗೆ ಲಭ್ಯವಾಗುವುದು. ಇ–ಯೂರೋಪ್ 2002 ಕ್ರಿಯಾಯೋಜನೆಯ IT ಕುಶಲತೆಗಳ IT ಡಿಪ್ಲೋಮ, ಯೂರೋಪಿಯನ್ ಕಂಪ್ಯೂಟರ್ ಡ್ರೈವಿಂಗ್ ಲೈಸೆನ್ಸ್‌ನ ಸೂಕ್ತತೆ ಇವುಗಳ ಸಲಹೆ ನೀಡುವುದು.

TT Netಈ ಮುಂದಿನವುಗಳಿಗೆ ಸಂಬಂಧಿಸಿದಂತೆ ಮತ್ತು ತರಬೇತುಗಾರರಿಗೆ ಪ್ರಶಿಕ್ಷಣವನ್ನು ಆರಂಭಿಸಿದೆ.

(i) ನವೀನ ಆಚರಣೆಗಳ ಪ್ರಚಾರ (ii) ತರಬೇತುಗಾರರ ದಕ್ಷತೆಗಳನ್ನು, ಅರ್ಹತೆಗಳನ್ನು ಬಲಪಡಿಸುವುದು ಮತ್ತು (iii) ಶಿಕ್ಷಕರಿಗೆ ಮತ್ತು ತರಬೇತುಗಾರರಿಗೆ ಆನ್‌ಲೈನ್ ಸಂಪನ್ಮೂಲ ಮಾರ್ಗದರ್ಶಿಯನ್ನು ನಿರ್ಮಿಸುವುದು.

**ಮುಕ್ತ ಚುರುಕು ಶಾಲೆಗಳು:**

ಮಲೇಷಿಯಾದಲ್ಲಿ, Linux ಮತ್ತು ಮುಕ್ತ ಸಂಪನ್ಮೂಲ ಸಾಪ್ಟ್‌ವೇರ್ ಸಮುದಾಯ ಮೂರು ಕ್ಷೇತ್ರಗಳಲ್ಲಿ ಅಂದರೆ ಐಟಿ ಮೂಲಭೂತ ಸೌಕರ್ಯಗಳು, ಶಾಲಾ ನಿರ್ವಹಣಾ ವ್ಯವಸ್ಥೆ ಮತ್ತು ಐಟಿ ಪಠ್ಯಕ್ರಮ– ಈ ಕ್ಷೇತ್ರಗಳಲ್ಲಿ ಮಾನದಂಡಗಳನ್ನು ವಿಕಸಿಸಲು ಮುಕ್ತ ಚುರುಕು ಶಾಲೆಗಳ ವಿಚಾರದೊಂದಿಗೆ ಮುಂದೆ ಬಂದಿತು. ಇದರ ಸಫಲಪೂರ್ವಕ ಅನುಷ್ಠಾನದ ಅಗತ್ಯಗಳು ಹೀಗಿದ್ದವು.

(i) ಅಲ್ಪ ವೆಚ್ಚದಿಂದ ಪ್ರಾರಂಭ

(ii) ಹಳತಾಗಿ ಹೋಗದು (ಉನ್ನತೀಕರಣ ಮತ್ತು ಬದಲಾವಣೆಗೆ ಅವಕಾಶ ಕೊಡುವುದು)

(iii) ಎಲ್ಲಾ ವೇದಿಕೆ ಅಥವಾ ರಚನೆಗಳೊಂದಿಗೆ ಕಾರ್ಯೋನ್ಮುಖ ವಾಗುವುದು.

(iv) ಲಭ್ಯವಿದ್ದರೆ ಮುಕ್ತ ಸಂಪನ್ಮೂಲ

(v) ಸೃಜನಾತ್ಮಕ, ಆಸಕ್ತಿಕರ ಮತ್ತು ಪ್ರಭಾವಿ ಉಪಯೋಗ ಮತ್ತು

(vi) ಕೈಗಾರಿಕಾ ಅಗತ್ಯಗಳು ಮತ್ತು ಬೇಡಿಕೆಗೆ ಅಳವಡುವ ವಿನ್ಯಾಸ

**ಶಾಲೆಗಳಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನದ ಸನ್ನಿವೇಶ:**

ಭಾರತದ 1,00,000 ಮಾಧ್ಯಮಿಕ ಶಾಲೆಗಳಲ್ಲಿ ಕೇವಲ 5%ನಷ್ಟು ಶಾಲೆಗಳು ಮಾತ್ರ ಕಂಪ್ಯೂಟರ್‌ಗಳನ್ನು ಹೊಂದಿವೆ. 175 ದಶಲಕ್ಷಕ್ಕಿಂತಲೂ ಅಧಿಕ ವಿದ್ಯಾರ್ಥಿ ಸಂಖ್ಯೆಯಿರುವ ಸನ್ನಿವೇಶದಲ್ಲಿ ಭಾರತೀಯ ಶಾಲೆಗಳಲ್ಲಿ ತಂತ್ರಜ್ಞಾನದ ಅನುಷ್ಠಾನ ಮಂದಗತಿಯ ಪ್ರಕ್ರಿಯೆಯಾಗಿದ್ದು ನಗರ ಪ್ರದೇಶಗಳಿಗೆ ಹೆಚ್ಚು ಲಾಭವಾಗಿದೆ.

ವಿಶ್ವ ಆರ್ಥಿಕ ವೇದಿಕೆ (World Economic Forum, WEF)ಯ 'ಶಿಕ್ಷಣವನ್ನು ಕುರಿತಾದ ಮಾರ್ಗದರ್ಶಕ' ಸಮಿತಿಯ ವರದಿಯ ಪ್ರಕಾರ (2002ನೇ ಇಸವಿಗೆ ಗ್ಲೋಬಲ್ ಡಿಜಿಟಲ್ ಡಿವೈಡ್‌ನ ಪ್ರಯತ್ನದ ಒಂದು ಭಾಗ) ಭಾರತದಷ್ಟು ಯಾವುದೇ

Digitised by Bharatavani, CIIL

ರಾಷ್ಟ್ರದಲ್ಲಿಯೂ 'ಭಾರತದಲ್ಲಿರುವಷ್ಟು ಡಿಜಿಟಲ್ ಅಂತರ ಸಹ ಕಂಡುಬರುವುದಿಲ್ಲ'.

ಐಚ್ಛಿಕ ಚಟುವಟಿಕೆಗಳು, ಐಚ್ಛಿಕ ಐಟಿ ಕಾರ್ಯಕ್ರಮಗಳು ಮತ್ತು ಚುರುಕು ಶಾಲೆಗಳ ಸ್ಥಾಪನೆ ಇವೇ ಮೊದಲಾದ ಮಾಹಿತಿ ತಂತ್ರಜ್ಞಾನಗಳನ್ನು ಪರಿಚಯಿಸುವ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

**CLASS ಪ್ರಾಯೋಜನೆ:**

1980ರ ದಶಕದ ಮಧ್ಯಭಾಗದಲ್ಲಿಯೂ ಸಹ ಕಂಪ್ಯೂಟರ್ ಸಾಕ್ಷರತೆ ಮುಖ್ಯವೆಂದು ಪರಿಗಣಿತವಾಗಿತ್ತು. CLASS (Computer Literacy and Studies in Schools, ಶಾಲೆಗಳಲ್ಲಿ ಕಂಪ್ಯೂಟರ್ ಸಾಕ್ಷರತೆ ಮತ್ತು ಅಧ್ಯಯನ) ಕಾರ್ಯಕ್ರಮವನ್ನು ಮಾಹಿತಿ ತಂತ್ರಜ್ಞಾನ ಇಲಾಖೆ (ಈ ಹಿಂದಿನ ಇಲೆಕ್ಟ್ರಾನಿಕ್ಸ್ ಇಲಾಖೆ) ಮತ್ತು ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳು ಜಂಟಿಯಾಗಿ ಪ್ರಾರಂಭಿಸಿದವು. ಇದರ ಪ್ರಭಾವ ಸೀಮಿತ ಪ್ರಭಾವವುಳ್ಳದಾಗಿದ್ದು, ಸುಮಾರು 2600 ಶಾಲೆಗಳಿಗೆ ಮಾತ್ರ ಇದು ಸೀಮಿತವಾಗಿತ್ತು. ಕಂಪ್ಯೂಟರ್ ಸಾಕ್ಷರತೆ ಪಠ್ಯಕ್ರಮದ ಸಮಗ್ರ ಘಟಕವಾಗಿರದಿದ್ದುದೇ ಇದಕ್ಕೆ ಕಾರಣವಾಗಿದೆ. ಶಿಕ್ಷಕರಿಗೆ ಇದು ಪ್ರೋತ್ಸಾಹಕವಾಗಿ ಕಂಡುಬರಲಿಲ್ಲ. ಪಠ್ಯಕ್ರಮ ಆಧಾರಿತ ಶೈಕ್ಷಣಿಕ ಸಾಫ್ಟ್‌ವೇರ್‌ನ್ನು ಸಹ ಒದಗಿಸಿರಲಿಲ್ಲ. ಕಂಪ್ಯೂಟರ್ ವ್ಯವಸ್ಥೆಗಳು ಸರ್ಕಾರಿ ಮತ್ತು ವ್ಯಾಪಾರಿ ಸಂಬಂಧಿತ ಕಛೇರಿಗಳಲ್ಲಿ ಬಳಸಲಾಗುತ್ತಿದ್ದ IBM ಪರ್ಸನಲ್ ಕಂಪ್ಯೂಟರ್‌ನೊಂದಿಗೆ ಹೊಂದಾಣಿಕೆಯಾಗುತ್ತಿರಲಿಲ್ಲ. ಕೊನೆಯ ಹಂತದಲ್ಲಿ ಕೆಲವು ಶಾಲೆಗಳಿಗೆ Intel386 ಮತ್ತು 486 ಆಧಾರಿತ ಪರ್ಸನಲ್ ಕಂಪ್ಯೂಟರ್‌ಗಳನ್ನು ಒದಗಿಸಲಾಯಿತು. ಕಾರ್ಯಕ್ರಮದ ನಿಷ್ಪಾದನೆಯನ್ನು ಅಳೆಯುವ ಮತ್ತು ಉತ್ತಮ ಕಾರ್ಯಕ್ರಮಕ್ಕೆ ಪ್ರತಿಫಲ ನೀಡುವ ಯಾವುದೇ ಪ್ರಯತ್ನ ನಡೆಯಲಿಲ್ಲ. ಪಠ್ಯೇತರ ಚಟುವಟಿಕೆಯಾಗಿಯೇ ಉಳಿದ ಸಾಪೇಕ್ಷವಾಗಿ ಹೆಚ್ಚು ಖರ್ಚಿನದಾದ ಇಂತಹ ಕಂಪ್ಯೂಟರ್ ಸಾಕ್ಷರತೆ ಸರ್ಕಾರದಿಂದ ಸತತ ಬೆಂಬಲ ಪಡೆಯಲಾಗಲಿಲ್ಲ. ಒಂದು ದಶಕದ ನಂತರಕ್ಕೂ ಅಧಿಕ ಕಾಲದ ನಂತರ ಸನ್ನಿವೇಶವು ಬದಲಾಗಿದೆ. ಕಂಪ್ಯೂಟರ್ ಮತ್ತು ಸಂಪರ್ಕ ತಂತ್ರಜ್ಞಾನಗಳು, ಅಂತರ್ವಸ್ತು ಮತ್ತು ಗ್ರಾಹಕ ಇಲೆಕ್ಟ್ರಾನಿಕ್ಸ್ ಇವುಗಳು ಒಂದೆಡೆ ಸೇರುತ್ತಿವೆ. ಅಂತರ್ಜಾಲ ಮತ್ತು ಅನ್ಯೋನ್ಯಕ್ರಿಯಾತ್ಮಕ ದೂರದರ್ಶನ ಅಲ್ಪವೆಚ್ಚದ ಶೈಕ್ಷಣಿಕ ಸಾಧನಗಳಾಗಿ ಹೊರಹೊಮ್ಮಿವೆ. ಆದರೆ ಸಮಗ್ರವಾದ ಪರಿಹಾರವನ್ನು ಒದಗಿಸಲು ಶೈಕ್ಷಣಿಕ ಅಂತರ್ವಸ್ತುವನ್ನು ಸಿದ್ಧಗೊಳಿಸುವಾಗ ರಾಷ್ಟ್ರ-ನಿರ್ದಿಷ್ಟ ಮತ್ತು ಸಂಸ್ಕೃತಿ-ನಿರ್ದಿಷ್ಟ ವಿವಾದಾಂಶಗಳು ಮುಖ್ಯವಾಗಿಯೇ ಉಳಿಯುತ್ತವೆ. ಹೀಗೆ ಹಾರ್ಡ್‌ವೇರ್ ಜಾಗತಿಕವಾದರೆ ಶೈಕ್ಷಣಿಕ ಸಾಫ್ಟ್‌ವೇರ್ ಆಯಾ ರಾಷ್ಟ್ರಕ್ಕೆ ನಿರ್ದಿಷ್ಟವಾಗಿರುವುದು. ಈ ವಿವಾದಾಂಶದ ಸಂಬಂಧವಾಗಿ ಸಂಘಟಿತ ಪ್ರಯತ್ನಗಳನ್ನು ಕೈಗೊಳ್ಳುವುದು ಅವಶ್ಯಕ. ಈ ವಿವಾದಾಂಶವು ಅನ್ಯೋನ್ಯಕ್ರಿಯಾತ್ಮಕ ವಿಧದಲ್ಲಿ ಪಾಠಗಳು, ಪ್ರಯೋಗಗಳು, ಪರೀಕ್ಷೆ ಮತ್ತು ಮೌಲ್ಯಮಾಪನ-ಇವುಗಳನ್ನು ಒಳಗೊಂಡ ಮಾಹಿತಿ ತಂತ್ರಜ್ಞಾನ ಸಮರ್ಥಿತ ಶಿಕ್ಷಣದಿಂದ ಪರಿಹಾರವಾಗುವುದು. ಕಲಿಕಾರ್ಥಿಯ ಆಸಕ್ತಿ ಉಳಿದು ಬೆಳೆಯಬೇಕಾದರೆ ಪ್ರಜ್ಞಾಪ್ರಾಧಾನ್ಯವಾದ ಅನ್ಯೋನ್ಯಕ್ರಿಯೆಯು ಅವಶ್ಯಕ. ಘನಶಿಕ್ಷಣವೇತ್ತವಾದ ಪಿಯಾಜೆಯವರಿಂದ ಮಂಡಿಸಲಾದ 'ಮಾಡು-ಕಲಿ' ಪರಿಕಲ್ಪನೆಗೆ ಬದಲಿಯಾಗಬಲ್ಲ ವಾಸ್ತವಾಭಾಸದ ಕಾರ್ಯದಿಂದ ಕಲಿಕೆ (Learning by Virtual doing) ವೆಚ್ಚ-ಪರಿಣಾಮಕಾರಿತ್ವವುಳ್ಳದ್ದು ಮತ್ತು ಸಮಯ ಉಳಿತಾಯದ್ದು ಆಗಿದೆ. ಅಂತರ್ಜಾಲದ ಮುಖಾಂತರ ಅಪಾರ ಜ್ಞಾನದ ಶೀಘ್ರ ಪರಾಮರ್ಶನ ಸಾಧ್ಯ. ವಿಷಯವನ್ನು ಬೋಧಿಸಿ ಪ್ರತ್ಯೇಕ ಕಲಿಕಾರ್ಥಿಯಿಂದ ತತ್‌ಕ್ಷಣದ ಪ್ರತಿಪುಷ್ಟಿಯನ್ನು ಪಡೆಯುವ ವೆಚ್ಚ ಪರಿಣಾಮಕಾರಿತ್ವದ ಮಾರ್ಗವೆಂದರೆ ಕೇಬಲ್ ಆಧಾರಿತ ದೂರದರ್ಶನ. ಇದರಿಂದ ಶಿಕ್ಷಕರಿಗೆ ಸೃಜನಾತ್ಮಕವಾಗಿ ಹೊಸಪಾಠಗಳನ್ನು ರಚಿಸಲು ಮತ್ತು ಹೊಸ ಶಿಕ್ಷಣ ವಿಧಾನ ಉಪಕ್ರಮವನ್ನು ಪರೀಕ್ಷಿಸಲು ಅವಕಾಶವು ದೊರೆತಂತಾಗುತ್ತದೆ.

ಪರಿಷ್ಕೃತ CLASS ಯೋಜನೆಯು ಪ್ರತಿಶಾಲೆಗೆ 5 PCಗಳನ್ನು ಪ್ರಸ್ತಾಪಿಸಿತು. 30ರಿಂದ 45 ವಿದ್ಯಾರ್ಥಿಗಳಿರುವ ತರಗತಿಗೆ ಇದು ಅಪರ್ಯಾಪ್ತವೆಂದು ತೋರುವುದು. ತಂಡಸ್ಫೂರ್ತಿಯ ಪ್ರೋತ್ಸಾಹನದ ಪ್ರಾಮುಖ್ಯತೆಯನ್ನು ಪರಿಗಣಿಸಿದಾಗ ಒಬ್ಬ ವಿದ್ಯಾರ್ಥಿಗೆ ಒಂದು ಕಂಪ್ಯೂಟರ್ ತಕ್ಕುದಲ್ಲ. ಇಬ್ಬರಿಗೆ ಒಂದು ಕಂಪ್ಯೂಟರ್ ಆದರ್ಶಪ್ರಾಯವಾದಾಗ್ಯೂ 3 ಅಥವಾ 4 ವಿದ್ಯಾರ್ಥಿಗಳಿಗೆ ಒಂದು ಪರ್ಸನಲ್ ಕಂಪ್ಯೂಟರ್ ಸ್ವೀಕಾರ್ಯವಾದುದು. ಹೀಗೆ ಶಾಲೆಯೊಂದಕ್ಕೆ ಕನಿಷ್ಠ 10 PCಗಳನ್ನು ಒದಗಿಸಬೇಕಾದುದು ಅವಶ್ಯಕ. ಎರಡನೆಯ ಅಂಶವೆಂದರೆ ಕಂಪ್ಯೂಟರ್ ಶಿಕ್ಷಣದ, ವಿಶೇಷತಃ ಸರ್ಕಾರಿ ಶಾಲೆಗಳಲ್ಲಿ, ಸಾರ್ವತ್ರೀಕರಣ, ಮೂರನೆಯದಾಗಿ ಕಂಪ್ಯೂಟರ್ ಸಾಕ್ಷರತೆಗೆ ಯಾವುದಾದರೊಂದು ಅನುಸರಿಸಬೇಕಾದ ಪಠ್ಯಕ್ರಮವಿರಬೇಕು; ವಿದ್ಯಾರ್ಥಿ ನಿಷ್ಪಾದನೆಯ ಮೌಲ್ಯಮಾಪನೆಯಿರಬೇಕು. ಶಿಕ್ಷಕರು ತರಬೇತಿ ಪಡೆದಿರಬೇಕು; ಪ್ರಾಂಶುಪಾಲರು ಕಂಪ್ಯೂಟರ್ ಸಾಕ್ಷರತಾ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವಷ್ಟು ಈ ಕ್ಷೇತ್ರದ ಬಗ್ಗೆ ಅರಿವು ಹೊಂದಿರಬೇಕು. ನಾಲ್ಕನೆಯದಾಗಿ ಯಾವ ಸ್ತರದಲ್ಲಿ ಇದನ್ನು ಪರಿಚಯಿಸಬೇಕು ಎನ್ನುವುದನ್ನು ನಿರ್ಧರಿಸಬೇಕು.

**ಚುರುಕು ಶಾಲೆಗಳು(Smart Schools):**

1000 ಶಾಲೆಗಳನ್ನು ಚುರುಕು ಶಾಲೆಗಳಾಗಿ ಪರಿವರ್ತಿಸಬೇಕಾಗಿದೆ. ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಗಳನ್ನು 'ಕಂಪ್ಯೂಟರ್ ಶಿಕ್ಷಣ ಯೋಜನೆ'(Computer Education Plan, CEP)ಯನ್ನು ಸೂತ್ರೀಕರಿಸಿ ಈಗಾಗಲೇ ಕೈಗೊಂಡಿರುವ ಕ್ರಮಗಳು ಮತ್ತು ಕೇಂದ್ರ ಸರ್ಕಾರದಿಂದ ಬೇಕಾದ ಸಹಾಯದ ಬಗ್ಗೆ ಸೂಚಿಸುವಂತೆ ಕೋರಲಾಗುವುದು. ಉಪಕರಣ, ಸಾಫ್ಟ್‌ವೇರ್, ಇಂಟರ್‌ನೆಟ್ ಸಂಪರ್ಕ, ಅನುಪಾಲನೆ(mainteinance), ಬಳಕೆಯ ವಸ್ತುಗಳು ಮತ್ತು ಶಿಕ್ಷಕ ಪ್ರಶಿಕ್ಷಣಗಳಿಗೆ ಅವಶ್ಯಕವಾದ ನಿಧಿಯ ಶೇ.25ರಷ್ಟನ್ನು ರಾಜ್ಯಸರ್ಕಾರಗಳು ನೀಡಬೇಕಾಗುವುದು. ಮಾಧ್ಯಮಿಕ ಮತ್ತು

Digitised by Bharatavani, CIIL

ಉನ್ನತ ಶಿಕ್ಷಣ ಇಲಾಖೆಯು ಶೈಕ್ಷಣಿಕ ಸಾಫ್ಟ್‌ವೇರ್ ಮತ್ತು ಬೋಧನಾ ಉಪಕರಣಗಳ ವಿಕಸನ, ಪ್ರಶಿಕ್ಷಣ ಸಂಚಯಗಳ ವಿನ್ಯಾಸ ಮತ್ತು ಮೌಲ್ಯಮಾಪನಗಳಿಗೆ ಆರ್ಥಿಕ ನೆರವನ್ನು ನೀಡುವುದು. ಕೇಂದ್ರಿಯ ವಿದ್ಯಾಲಯ; KV(874) ಮತ್ತು ನವೋದಯ ವಿದ್ಯಾಲಯಗಳು; NV(404) ತಮ್ಮ ಶಾಲೆಗಳಲ್ಲಿ ಒಂದನ್ನು ಪ್ರತಿಶಾಲೆಗೆ 2.5ದಶಲಕ್ಷ ರೂ.ಗಳ ಅನುದಾನದೊಂದಿಗೆ ಚುರುಕು ಶಾಲೆಗಳಾಗಿ ಪರಿವರ್ತಿಸುವುವು. KV ಮತ್ತು NVಗಳಿಗೆ ಸಮೀಪದ ಶಾಲೆಯೊಂದಕ್ಕೆ 15,000 ರೂಪಾಯಿಗಳ ಧನವನ್ನು ಅಂತಹ 10,000 ಶಾಲೆಗಳಿಗೆ ಮೂರು ವರ್ಷದ ಅವಧಿಯಲ್ಲಿ ಕಂಪ್ಯೂಟರ್ ಸಾಕ್ಷರತೆಯನ್ನು ನೀಡಲು ಕೊಡಲಾಗುವುದು.

ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಶಾಲೆಗಳಿಗಾಗಿ ಕಂಪ್ಯೂಟರ್ ಸಾಕ್ಷರತಾ ಶ್ರೇಷ್ಠತೆ ಪ್ರಶಸ್ತಿಯನ್ನು ನೀಡಲು ಆರಂಭಿಸಿದೆ. ಆಗಸ್ಟ್ 2002ರಲ್ಲಿ 21ಶಾಲೆಗಳಿಗೆ ಪ್ರಶಸ್ತಿ ನೀಡಲಾಯಿತು.

**ಶಾಲೆಗಳಲ್ಲಿ ಇ-ಕಲಿಕೆ:**

ಭಾರತದಲ್ಲಿ ಕಾರ್ಯಕ್ರಮದ ಪಠ್ಯಕ್ರಮ(course curriculum) ಅಪಾರವಾಗಿರುವುದು. ಸಾಮಾನ್ಯವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು 'ಎಷ್ಟು' ಪಾಠಗಳನ್ನು ಪೂರೈಸಬೇಕು 'ಎಷ್ಟು' ಲೆಕ್ಕಗಳನ್ನು ಅಭ್ಯಾಸ ಮಾಡಬೇಕು ಎನ್ನುವತ್ತ ಗಮನ ಕೇಂದ್ರೀಕರಿಸುತ್ತಾರೆ. ಆದರೆ ಏಕಾಗ್ರತೆ, ಸಮಗ್ರ ಅರಿವು, ಇತರ ಪರಿಕಲ್ಪನೆಗಳಿಗಿರುವ ಸಂಬಂಧ, ಅಂತರ್ಮನದಲ್ಲಿ ಪುನರಾವರ್ತನೆ ಮತ್ತು ವಿಶ್ರಾಂತಿಗಳಿಗೆ ಒತ್ತು ನೀಡುವ 'ಹೇಗೆ ಕಲಿಯಬೇಕು' ಎನ್ನುವುದನ್ನು ಕಲಿಯಬೇಕಾದ್ದೇ ಬಹಳ ಮುಖ್ಯ.

ಶಾಲಾ ಶೈಕ್ಷಣಿಕ ಸಾಫ್ಟ್‌ವೇರ್‌ನ ಮಾರುಕಟ್ಟೆ ಬಹಳ ಅಲ್ಪವಾಗಿದ್ದು ಸುಮಾರು 250ರಿಂದ 300ದಶಲಕ್ಷ ರೂಪಾಯಿಗಳಷ್ಟಿದೆ. ಇದುವರೆಗೆ ಅಂದಾಜು 150ದಶಲಕ್ಷ ರೂಪಾಯಿನಷ್ಟು ವ್ಯಾಪಾರದ ಮೂಲಧನ ಶೈಕ್ಷಣಿಕ ವಲಯದಲ್ಲಿನ ಪ್ರಾರಂಭಿಕ ಯೋಜನೆಗಳಿಗೆ ಹೋಗಿದೆಯಾದರೂ ಈಗ ಇಂತಹ ಸಾಹಸದ ವ್ಯಾಪಾರವು ಭವಿಷ್ಯದ ಬಗ್ಗೆ ಭಯಪಡುತ್ತಿದೆ.

Intel ಸಂಸ್ಥೆ 'ಶಿಕ್ಷಕರಿಗೆ ಬೋಧಿಸು ಕಾರ್ಯಕ್ರಮ'(Teach the Teachers Program)ವನ್ನು ಹೊಂದಿದೆ. 3 ವರ್ಷದ ಅವಧಿಯಲ್ಲಿ ಸುಮಾರು 1,00,000 ಶಿಕ್ಷಕರು ಕಂಪ್ಯೂಟರ್ ಸಾಕ್ಷರರಾಗಲೇಬೇಕು. ಡಿಜಿಟೀಕೃತ ಅಂತರ್ವಸ್ತುವಿನ ವಲಯಕ್ಕಾಗಿ ಸಮರವು ಕಷ್ಟಕರವಾಗಿರುವುದು. ರಾಜ್ಯವೊಂದರ ಬೋರ್ಡ್‌ನ 5ರಿಂದ 12ನೇ ತರಗತಿಗಳ ಇ-ಪಠ್ಯಪುಸ್ತಕಗಳಿಗಾಗಿ 'ಅಬನ್ ಇನ್‌ಫರ್‌ಮ್ಯಾಟಿಕ್' ಕಂಪೆನಿ 2ದಶಲಕ್ಷ ರೂಪಾಯಿಯ ಅಂದಾಜನ್ನು ಮಾಡುವುದು. ಪ್ರತಿ ವಿದ್ಯಾರ್ಥಿಗೆ 12ರಿಂದ 15 ರೂಪಾಯಿಗಳ ಮಾಸಿಕ ಚಂದಾ ಆದಾಯದ ಮಾದರಿಗೆ ಆಧಾರವಾಗಿರುವುದು. ತಮ್ಮ ಪರೀಕ್ಷಾರ್ಥದ ಪ್ರಯತ್ನ-1ರಲ್ಲಿ World Links ಮತ್ತು Intel ಕಂಪೆನಿಗಳು 1000 ಭಾರತೀಯ ಮಾಧ್ಯಮಿಕ ಶಾಲೆಗಳನ್ನು ಕಂಪ್ಯೂಟರ್‌ಗಳಿಂದ ಸಜ್ಜಿತಗೊಳಿಸಲು ಯೋಜಿಸುತ್ತಿವೆ. ಪರೀಕ್ಷಾರ್ಥದ ಪ್ರಯತ್ನ-2ರಲ್ಲಿ ಹೊಸತಾಗಿ ಸಜ್ಜಿತಗೊಳಿಸಲಾದ (ಪರೀಕ್ಷಾರ್ಥ ಪ್ರಯತ್ನ-1) ಶಾಲೆಗಳಿಂದ 5000 ಶಿಕ್ಷಕರನ್ನು ಕಂಪ್ಯೂಟರ್ ಸಾಕ್ಷರತೆಯಲ್ಲಿ ತರಬೇತುಗೊಳಿಸಲು ಯೋಜಿಸುತ್ತದೆ. ಇವರುಗಳು ಪುನಃ ತಮ್ಮ ಶಾಲೆಯ ಇಬ್ಬರು ಶಿಕ್ಷಕರಿಗೆ ತರಬೇತಿ ನೀಡುವರು. ಪರೀಕ್ಷಾರ್ಥ ಪ್ರಯತ್ನ-3 5600 ಭಾರತೀಯ ಮಾಧ್ಯಮಿಕ ಶಾಲಾಶಿಕ್ಷಕರಿಗೆ (ಮೊದಲನೆಯ ಮತ್ತು ಎರಡನೆಯ ಪ್ರಯತ್ನಗಳು ಸೇರಿದಂತೆ) ವೃತ್ತಿಪರ ವಿಕಸನ ಪ್ರಶಿಕ್ಷಣದ ಅವಕಾಶವನ್ನು ನೀಡುವುದು. ಶಿಕ್ಷಕರನ್ನು ತರಬೇತುಗೊಳಿಸಲು ತರಗತಿಯಲ್ಲಿ ತಂತ್ರಜ್ಞಾನದ ಸಮಗ್ರತೆಗಾಗಿ Intelನ 'ಭವಿಷ್ಯಕ್ಕಾಗಿ ಬೋಧಿಸು' ಕಾರ್ಯಕ್ರಮದ ಜೊತೆಗೆ World Linksನ ಪ್ರಶಿಕ್ಷಣ ವಿಧಾನವನ್ನು ಬಳಸಲಾಗುವುದು. World Links ಕಂಪೆನಿಯು ಕಾರ್ಯಕ್ರಮದ ಶೈಕ್ಷಣಿಕ ಮತ್ತು ಆರ್ಥಿಕ ಪ್ರಭಾವವನ್ನು ಮೌಲ್ಯಮಾಪನ ಮಾಡಲು ಉಸ್ತುವಾರಿ ಮತ್ತು ಮೌಲ್ಯಮಾಪನ ಸೇವೆಗಳನ್ನು ಒದಗಿಸುವುದು.

Intel ಕಂಪೆನಿಯು 2002, ಆಗಸ್ಟ್ 29ರಂದು 2003ರ ವೇಳೆಗೆ 2,00,000 ಶಿಕ್ಷಕರನ್ನು ತರಬೇತುಗೊಳಿಸಲು ಮತ್ತು ಡಿಜಿಟಲ್ ಅಂತರವನ್ನು ಇಲ್ಲವಾಗಿಸಲು ಭಾರತ ಸರ್ಕಾರದೊಡನೆ ಒಪ್ಪಂದಕ್ಕೆ ಸಹಿ ಹಾಕಿತು. Intel ಕಂಪೆನಿಯು ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ(ವಿದ್ಯಾವಾಹಿನಿ ಪ್ರಾಯೋಜನೆ) ಮತ್ತು ಶಾಲಾ ನೆಟ್‌ವರ್ಕಿಂಗ್ ಕ್ಷೇತ್ರದಲ್ಲಿ ERNET ಕಂಪೆನಿಯೊಂದಿಗೆ ಸಹಯೋಗ ನೀಡುವ ಪ್ರಸ್ತಾಪ ಮಾಡಿತು.

ಎಡುಎಂಪೈರ್(Eduempire)ನ ಮೆಟ್ರೋಗಳಲ್ಲಿನ ಸರ್ವೇಕ್ಷಣೆ ಪ್ರಕಾರ ನಿಯಮಿತವಾಗಿ ಕೇವಲ 7% ಶಾಲಾ ವಿದ್ಯಾರ್ಥಿಗಳು ಅಂತರ್ಜಾಲದ ಲಭ್ಯತೆ ಪಡೆದಿದ್ದಾರೆ; ಹಣ ವಿನಿಯೋಗವಾಗಿರುವುದು K-12 ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಮಾತ್ರವಲ್ಲ ಇತರ ಚಟುವಟಿಕೆಗಳೆಂದರೆ ಶಿಕ್ಷಕ ಪ್ರಶಿಕ್ಷಣ, ಹಾಜರಾತಿಗಾಗಿ ನಿಷ್ಪಾದನೆಗಾಗಿ ಸ್ಮಾರ್ಟ್‌ಕಾರ್ಡ್, ಎಡುಎಂಪೈರ್ ಪ್ರತಿಯೊಂದು ವ್ಯವಹಾರದ ಮೌಲ್ಯದ 1%ನಷ್ಟು ಮೌಲ್ಯವನ್ನು ಪಡೆಯುತ್ತದೆ.

ನವನೀತ್ ಪಬ್ಲಿಕೇಷನ್ಸ್ ತನ್ನದೇ ಆದ ಶಾಲಾವೇದಿಕೆ connectschool.com-ಯನ್ನು ಹೊಂದಲು ಯೋಜಿಸುತ್ತಿದೆ ಮತ್ತು ಪ್ರತಿಯೊಂದಕ್ಕೆ 200ರಿಂದ 400 ರೂಪಾಯಿಗಳ ಅಗ್ಗದ ಇ-ಕಲಿಕಾ ಸಂಚಯವನ್ನು ಮುಂದಿಡುತ್ತದೆ. ಇದು ಇತರ dot. comಗಳಾದ zee-learn (ರೂ. 500) ಮತ್ತು (800ರಿಂದ 1300ರೂ.)ಗಳಿಗಿಂತ ಅಗ್ಗವಾಗಿದೆ.

ಜೀವಾ ಇನ್ಸಿಟ್ಯೂಟ್(ಇಂಡಿಯಾ) ಚುರುಕು ಶಾಲಾ ಕಾರ್ಯಕ್ರಮವನ್ನು ಅಭಿವೃದ್ಧಿಗೊಳಿಸಿದೆ. ಅಲ್ಲದೆ ಶಾಲಾ ಆಡಳಿತ ಕೊರಡಿ ಸಮೂಹ, ICUT(India's curriculum for Tomorrow) ಎಲ್ಲಾ ತರಗತಿಗಳಿಗೂ ಎಲ್ಲಾ ವಿಷಯಗಳಿಗೂ ಸಂಪೂರ್ಣ ಪಠ್ಯಕ್ರಮ ಪರಿಹಾರ; ಮತ್ತು ಶಿಕ್ಷಕರು ಮತ್ತು ತಂತ್ರಜ್ಞಾನದ ತುದಿಯಂಚಿನಲ್ಲಿರುವಂತೆ ವಿಶೇಷ ವೃತ್ತಿಪರ ವಿಕಾಸ

Digitised by Bharatavani, CIIL

ಕಾರ್ಯಕ್ರಮಗಳನ್ನೂ ಅಭಿವೃದ್ಧಿಗೊಳಿಸಿದೆ. ಕಂಪ್ಯೂಟರ್‌ನ್ನು ಒಂದು ಸಂಪನ್ಮೂಲ ಅಥವಾ ಉಪಕರಣವಾಗಿ ಬಳಸುವುದೇ ಇದರ ಗಮನ ಕೇಂದ್ರ.

ಶ್ರೀ ಸೆಯದಾ(ಇಂಡಿಯಾ) ಚುರುಕು ಶಾಲೆಯ ಪರಿಕಲ್ಪನೆಯನ್ನು ಸಮಗ್ರ ಹಾಗೂ ಮೋಜಿನ ಕಲಿಕಾ ಪರಿಸರದಲ್ಲಿ ಅನುಷ್ಠಾನಗೊಳಿಸಬೇಕೆಂದು ಪ್ರಸ್ತಾಪಿಸಿದ್ದಾರೆ.

ರಾಷ್ಟ್ರಾದ್ಯಂತ 1,00,000ದಷ್ಟು ಶಾಲೆಗಳ ನಡುವೆ ಸಂಪರ್ಕ ಕಲ್ಪಿಸಲು ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ವಿದ್ಯಾವಾಹಿನಿ ಪ್ರಾಯೋಜನೆಯನ್ನು ಆರಂಭಿಸಿದೆ. 1000ಶಾಲೆಗಳ ವಿದ್ಯಾರ್ಥಿಗಳನ್ನು ತಂತ್ರಜ್ಞಾನವನ್ನು ಬಳಸುವಂತೆ ಪ್ರೋತ್ಸಾಹಿಸುವ 'ಚುರುಕು ಶಾಲೆ' ಕಾರ್ಯಕ್ರಮವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಆರಂಭಿಸಿದೆ. ಹಲವಾರು ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಭಾರತದಲ್ಲಿ ತಂತ್ರಜ್ಞಾನದ ಪ್ರಸಾರವನ್ನು ಅಧಿಕಗೊಳಿಸಿವೆ.

**ಸಾರಾಂಶ:**

1970ರ ದಶಕದಲ್ಲಿ ಆಶ್ವಾಸನೆ ನೀಡಿದ ಜ್ಞಾನ ಆಧಾರಿತ ಜಾಗತಿಕ ಸಮಾಜ 1980ರ ದಶಕದಲ್ಲಿ ಅದನ್ನು ಅತಿರಂಜಿತಗೊಳಿಸಲಾಯಿತು. 1990ರ ದಶಕದಲ್ಲಿ ಆಶ್ಚರ್ಯ ಮತ್ತು ಅಪನಂಬಿಕೆಯಿಂದ ಪರಿಗಣಿತವಾಗಿ 21ನೇ ಶತಮಾನದಲ್ಲಿ ತಪ್ಪಿಸಿಕೊಳ್ಳಲಾಗದ ವಾಸ್ತವಿಕತೆಯಾಗಿದೆ. ಮಾಹಿತಿ– ಅದರ ಸೃಷ್ಟಿ, ಸಂಪಾದನೆ, ಹೊಂದಾಣಿಕೆ ಮತ್ತು ಪ್ರಸಾರ ನಮ್ಮ ಕಾಲದಲ್ಲಿ ಚಲಾವಣೆಗೆ ಬಂದಿದೆ.

ಈಗ ಆಗುತ್ತಿರುವ ಬದಲಾವಣೆಗಳು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವಾರು ಶಾಖೋಪಶಾಖೆಗಳಾಗಿ ಒಡೆದಿದ್ದು, ಕಲಿಕಾರ್ಥಿ ಹಾಗೂ ಶಿಕ್ಷಕರ ಮತ್ತು ಸಂಸ್ಥೆಗಳ ಪಾತ್ರ, ಮತ್ತು ಸಮಾಜ ಮತ್ತು ಆರ್ಥಿಕತೆಗೆ ಅವುಗಳ ಸಂಬಂಧ ಇವೇ ಮುಂತಾವುದನ್ನು ಕುರಿತಂತೆ ಸಮಸ್ತ ಕಲಿಕಾ ಉದ್ಯಮದ ಬಗ್ಗೆ ಪುನರ್ಚಿಂತನೆ ನಡೆಸುವ ಅಗತ್ಯವನ್ನು ಸೃಷ್ಟಿಸಿವೆ.

1999ರ ಅಂತ್ಯದ ವೇಳೆಗೆ ವಿಶ್ವದಾದ್ಯಂತ ಅಂತರ್ಜಾಲ ಬಳಕೆದಾರರ ಸಂಖ್ಯೆ 196ದಶಲಕ್ಷದಷ್ಟಿದ್ದು ಈ ಸಂಖ್ಯೆ 2004ರ ವೇಳೆಗೆ ತ್ರಿಗುಣವಾಗಿ 638ದಶಲಕ್ಷದಷ್ಟಾಗುವ ನಿರೀಕ್ಷೆಯಿತ್ತು. ಜಾಗತಿಕವಾಗಿ ಜ್ಞಾನ ಸೇವೆಗಳು 2ಟ್ರಿಲಿಯನ್ ಡಾಲರ್‌ಗಳ ಕೈಗಾರಿಕೆಯಾಗಿದೆ. ತಾಂತ್ರಿಕ ರೂಪಾಂತರಗಳು ಸಹ ಮಾಹಿತಿಯನ್ನು ಸೃಷ್ಟಿಸಿ, ಶೇಖರಿಸಿ, ಪ್ರದರ್ಶಿಸಿ ಮತ್ತು ವಿಶ್ವದಾದ್ಯಂತ ಶೀಘ್ರವಾಗಿ ವಿತರಿಸಲು ನಮಗೆ ಹೊಸದಾದ ಉತ್ತಮವಾದ ಉಪಕರಣಗಳನ್ನು ಸಹ ಕೊಟ್ಟಿವೆ. ತತ್ಫಲವಾಗಿ ಜಾಲಬಂಧಿತ ಮಾಹಿತಿಯ ವೆಚ್ಚ ಪ್ರತಿದಶಕವೂ 100ಪಟ್ಟು ಇಳಿಕೆಯಾಗುತ್ತಲೇ ಇದೆ.

ಶಿಕ್ಷಣವು ಪ್ರಾಥಮಿಕ ಪುನರ್ನವೀಕರಿಸಬಹುದಾದ ಸಂಪನ್ಮೂಲವಾಗಿ ಪರಿಣಮಿಸಿದ್ದು ನಮ್ಮ ಜ್ಞಾನಾಧಾರಿತ ವಿಶ್ವದ ಸಾಮಾಜಿಕ ಮತ್ತು ಆರ್ಥಿಕ ಆರೋಗ್ಯಕ್ಕೆ ಸತತವಾಗಿ ಆರ್ಥಿಕ ನೆರವು ನೀಡುತ್ತಿದೆ. ಜ್ಞಾನಕಾರ್ಯಕರ್ತರನ್ನು ಬೆಳೆಸಿ ಉಳಿಸಿಕೊಳ್ಳುವುದು ಹೊಸ ಆರ್ಥಿಕ ಪರಿಸರದಲ್ಲಿ ನಿರ್ಣಾಯಕ ಕಾರ್ಯವಾಗಿದೆ. ಪೀಟರ್ ಎಫ್. ಡ್ರಕ್ಕರ್ ಹೇಳುವಂತೆ ನಿರ್ಣಾಯಕ ಕಾರಣ ಸರಳವಾಗಿದೆ. "ಇಂದು ಜ್ಞಾನವೇ ಶಕ್ತಿ". ಇದು ಅವಕಾಶ ಮತ್ತು ಮುನ್ನಡೆಗಿರುವ ಲಭ್ಯತೆಯನ್ನು ನಿಯಂತ್ರಿಸುವುದು.

ಕಲಿಕೆ ಚಿಂತನೆಯ ಪರಿಣಾಮವಾಗಿದೆ ಎಂಬ ಆಧಾರ ವಚನದ ಹಿನ್ನೆಲೆಯಲ್ಲಿ ಶಾಲಾ ಪಠ್ಯಕ್ರಮಗಳನ್ನು ಪುನಃ ಪರಿಶೀಲಿಸುವ ಅಗತ್ಯವಿದೆ; ಜ್ಞಾನಕ್ಕಿಂತ ಮುಂಚೆ ಕುಶಲತೆ ಬರುವುದು; ಕಲಿಯುವುದು ಹೇಗೆ ಎಂದು ಕಲಿಯುವುದು, ಮೂಲಭೂತ ಕುಶಲತೆ, ಕಲಿಕೆ ಮತ್ತು ಅಭಿವ್ಯಕ್ತಿ, 'ತಳ್ಳು-ಎಳೆ'(Push-Pull) ಅಂಶಗಳಾಗಿದೆ. ವಾಸ್ತವಾಭಾಸದ ಮಾಡುವಿಕೆಯಿಂದ ಕಲಿಯುವುದನ್ನು ಮಾಹಿತಿ ತಂತ್ರಜ್ಞಾನ ಸುಗಮಗೊಳಿಸುವುದು. ಚುರುಕು ಶಾಲಾ ಪಠ್ಯಕ್ರಮಗಳು, ಜ್ಞಾನ ಕೌಶಲ್ಯಗಳು, ಮೌಲ್ಯಗಳು ಮತ್ತು ಭಾಷೆಗಳ ಸಮಗ್ರ ಪರಿಪ್ರೇಕ್ಷ್ಯಯತ್ತ ಗಮನ ಕೇಂದ್ರೀಕರಿಸಬೇಕು. ಸಾಂಪ್ರದಾಯಿಕ ಮೌಲ್ಯಗಳು ಮತ್ತು ಜ್ಞಾನವ್ಯವಸ್ಥೆಗಳ ಸುದೃಢ ಅಡಿಪಾಯದ ಮೇಲೆ ಹೊಸದನ್ನು ಅನ್ವೇಷಿಸುವ ಕಲಿಕೆ ಆಧಾರಗೊಂಡಿರಬೇಕು.

**ಮೂಲ: ಓಂ. ವಿಕಾಸ**

**ಅನು: ಚಂದ್ರಶೇಖರ್ ಬಿ.ಎಂ.**

ಜ

## ಜಿದ್ದು ಕೃಷ್ಣಮೂರ್ತಿಯವರ ಶೈಕ್ಷಣಿಕ ವಿಚಾರಗಳು

ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಚಿಂತಕರು ಹಾಗೂ ಧಾರ್ಮಿಕ ಜಗದ್ಗುರುಗಳಲ್ಲೊಬ್ಬರಾದವರು ಜಿದ್ದು ಕೃಷ್ಣಮೂರ್ತಿಯವರು. ಅವರನ್ನು ಸಂಕ್ಷಿಪ್ತವಾಗಿ 'ಜಿದ್ದು' ಎಂದೂ ಸಂಬೋಧಿಸುತ್ತಾರೆ. ಇವರು ಧಾರ್ಮಿಕ ಗುರು ಎನಿಸಿದ್ದರೂ ಯಾವುದೇ ಧರ್ಮಕ್ಕಾಗಲಿ, ಮತಕ್ಕಾಗಲಿ, ದೇಶಕ್ಕಾಗಲಿ ಸೇರಿದವರಲ್ಲ. ಯಾವುದೇ ರಾಜಕೀಯ ಅಥವಾ ಆಧ್ಯಾತ್ಮಿಕ/ತಾತ್ವಿಕ ಚಿಂತನೆಗೆ ಅಂಟಿಕೊಂಡವರಲ್ಲ. ತದ್ವಿರುದ್ಧವಾಗಿ, ಇವುಗಳೆಲ್ಲವೂ ಮಾನವರನ್ನು ಪ್ರತ್ಯೇಕಿಸುವ, ಅವರ ನಡುವೆ ಸಂಘರ್ಷ, ಸಮರಗಳನ್ನು ತಂದೊಡ್ಡುವ ಅಂಶಗಳು ಎಂದು ತಿಳಿದವರಾಗಿದ್ದಾರೆ. ನಾವೆಲ್ಲರೂ ಹಿಂದೂ, ಮುಸ್ಲಿಂ, ಕ್ರೈಸ್ತರೆಂಬ ಭೇದಭಾವ ತೊರೆದು ಮೂಲತಃ ಮಾನವರೆಂಬ ಭಾವ ಬೆಳೆಸಿಕೊಳ್ಳಬೇಕು; ಜೊತೆಗೆ ಪ್ರಕೃತಿ ಮತ್ತು ಸೃಷ್ಟಿಯ ಶ್ರೇಷ್ಠತೆಯನ್ನು ಅವಿನಾಭಾವದಿಂದ ಗೌರವಿಸಬೇಕು ಎಂಬ ಅಂಶವನ್ನು ಎತ್ತಿ ಹಿಡಿದಿದ್ದಾರೆ. ಅಂತೆಯೇ ಅವರ ಬೋಧನೆಗಳು/ತತ್ವಗಳು ಮಾನವ ನಿರ್ಮಿತ ಧಾರ್ಮಿಕ ಎಲ್ಲೆಗಳನ್ನು, ರಾಷ್ಟ್ರೀಯ ನಂಬಿಕೆಗಳನ್ನು ಮತ್ತು ಮತೀಯ ದೃಷ್ಟಿಕೋನಗಳನ್ನು ಮೀರಿ ನಿಂತವುಗಳಾಗಿದ್ದು ಸತ್ಯಕ್ಕಾಗಿ ಅಥವಾ ದೈವದ ಬಗೆಗಿನ ಮಾನವ ಶೋಧನೆಗೆ ಹೊಸ

Digitised by Bharatavani, CIIL

ಅರ್ಥ ಮತ್ತು ತಿರುವನ್ನು ತಂದುಕೊಟ್ಟಿವೆ. ಅವರ ವಿಚಾರಧಾರೆಗಳು ಹಾಗೂ ಪ್ರವಚನಗಳೆಲ್ಲವೂ ಕೇವಲ ಪುಸ್ತಕಜ್ಞಾನವಲ್ಲದೆ ಮಾನವ ಮನಸ್ಸು, ಅದರ ಅಂತಃಜ್ಞಾನ ಮತ್ತು ಶ್ರೇಷ್ಠತೆ ಇವುಗಳ ಬಗೆಗೆ ಅವರ ದೃಷ್ಟಿಕೋನವನ್ನು ಆಧರಿಸಿದ್ದಾಗಿವೆ.

ಕೃಷ್ಣಮೂರ್ತಿಯವರು ಸಾಂಪ್ರದಾಯಿಕ ತತ್ವಜ್ಞಾನಿಗಳಂತೆ ಶ್ರೀಸಾಮಾನ್ಯನಿಗೆ ನಿಲುಕದ ಯಾವುದೋ ತಾತ್ವಿಕಾಂಶದ ಬಗೆಗೆ ತಮ್ಮ ವಿಚಾರಧಾರೆ ಹರಿಸದೆ, ಮಾನವನ ದೈನಂದಿನ ಜೀವನದಲ್ಲಿ ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕಾದ, ಎದುರಿಸಬೇಕಾದ ವಾಸ್ತವಾಂಶಗಳ ಬಗೆಗೆ ಬೆಳಕು ಚೆಲ್ಲುವ ಪ್ರಯತ್ನ ನಡೆಸಿದ್ದಾರೆ. ಹಿಂಸೆ, ಆಕ್ರೋಶ, ದೌರ್ಜನ್ಯ, ಭ್ರಷ್ಟಾಚಾರಗಳಿಂದ ಕೂಡಿರುವ ಆಧುನಿಕ ಜಗತ್ತಿನಲ್ಲಿ ಸಾಮಾನ್ಯ ಜನತೆ ಎದುರಿಸಬೇಕಾದ ಸಮಸ್ಯೆಗಳು, ಜೀವನದ ಭದ್ರತೆ ಹಾಗೂ ಸುಖ ಸಂತೋಷ, ನೆಮ್ಮದಿ ಹಾಗೂ ಶಾಂತಿಯುತ ಬಾಳ್ವೆಯ ಹುಡುಕಾಟ, ಆಂತರಿಕ ಹೊರೆಗಳಾದ ಭಯ, ಕೋಪ, ನೋವು, ದುಃಖ, ಸಂಘರ್ಷ ಇತ್ಯಾದಿಗಳಿಂದ ಮುಕ್ತವಾದ ಮಾನಸಿಕ ನೆಮ್ಮದಿ ಸಾಧನೆ ಬಗೆಗೆ ತಮ್ಮ ಮನಸಿನಾಳದ ಮಾತುಗಳನ್ನು ಅವರು ಹೊರಗೆಡಹಿದ್ದಾರೆ. ಮಾನವನ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಸ್ಪಷ್ಟಗೊಳಿಸಿ ಯೋಗ್ಯವಾದ ಹಾಗೂ ಉತ್ತಮಬಾಳ್ವೆಗೆ ಅಗತ್ಯವಾದ ಮನಸ್ಸನ್ನು ಹೇಗೆ ಸಜ್ಜುಗೊಳಿಸಬೇಕು, ತನ್ಮೂಲಕ ಅದನ್ನು ಹೇಗೆ ಪರಿಪಕ್ವಗೊಳಿಸಬೇಕು ಹಾಗೂ ಧ್ಯಾನಾಸಕ್ತಗೊಳಿಸಬೇಕೆಂಬುದನ್ನು ಸವಿಸ್ತಾರವಾಗಿ ಚರ್ಚಿಸಿದ್ದಾರೆ ಮತ್ತು ಆ ದಿಸೆಯಲ್ಲಿ ಕ್ರಿಯಾಸಕ್ತರಾಗಲು ಪ್ರೇರೇಪಿಸಿದ್ದಾರೆ.

ಕೃಷ್ಣಮೂರ್ತಿಯವರ ತಾತ್ವಿಕತೆ ಕೇವಲ ಚಿಂತನೆಯಾಗಿರದೆ ಕ್ರಿಯಾಶೀಲವಾದುದು, ಕಾರ್ಯಾತ್ಮಕವಾದುದು ಎಂಬುದು ಸುಸ್ಪಷ್ಟ. ನಮ್ಮ ಜೀವನ ಹೊತ್ತಿಗೆಯನ್ನು ನಾವೇ ನಮಗಾಗಿ ಓದಿಕೊಳ್ಳಬೇಕು; ಈ ಕೆಲಸವನ್ನು ನಮಗಾಗಿ ಬೇರಾರೂ ಮಾಡುವುದಿಲ್ಲ ಎಂಬುದನ್ನು ಅವರು ಒತ್ತಿ ಹೇಳಿದ್ದಾರೆ. ಸ್ವಯಂ/ಆತ್ಮಜ್ಞಾನವು ಗ್ರಂಥಭಂಡಾರ ಹಾಗೂ ಗ್ರಂಥಗಳಲ್ಲಿ ಅಡಗಿರುವುದಿಲ್ಲ. ಶೈಕ್ಷಣಿಕ ಜ್ಞಾನಕ್ಕಿಂತ ಭಿನ್ನವಾಗಿರುತ್ತದೆ. ಈ ಜ್ಞಾನ ಲೌಕಿಕ ಸಮಸ್ಯೆಗಳಿಗೆಲ್ಲ ಸ್ಪಷ್ಟತೆ ಒದಗಿಸುತ್ತದೆ. ಅನೇಕ ವೇಳೆ ಬಾಹ್ಯ ಜಗತ್ತಿನ ಸಮಸ್ಯೆಗಳಿಗೆ ವ್ಯಕ್ತಿಯ ಆಂತರಿಕ ಸಮಸ್ಯೆಗಳು ಕಾರಣವಾಗುತ್ತವೆ. ಮನದೊಳಗಣ ವ್ಯತ್ಯಯಗಳಿಂದ ಹೊರವಲಯ ಏರುಪೇರಾಗುತ್ತದೆ. ಆದ್ದರಿಂದ, ನಮ್ಮ ಸುತ್ತಮುತ್ತಲಿನ ಜಗತ್ತು ಉತ್ತಮವಾಗಿರಬೇಕಾದರೆ, ನಿರ್ಮಲವಾಗಿರಬೇಕಾದರೆ ನಮ್ಮ ಅಂತರಂಗದ ಸಂತುಲನೆ ಹಾಗೂ ಶುದ್ಧತೆ ಕಾಪಾಡಿಕೊಳ್ಳಬೇಕಾಗುತ್ತದೆ, ಸಮಗ್ರತೆ ಬೆಳೆಸಿಕೊಳ್ಳಬೇಕಾಗುತ್ತದೆ. ಅಂತೆಯೇ ತನ್ನನ್ನು ತಾನು ಅರಿತುಕೊಳ್ಳುವುದು ಅತ್ಯಗತ್ಯ ಎಂದಿದ್ದಾರೆ ಜಿದ್ದುರವರು.

ಶಿಕ್ಷಣದ ಬಗೆಗೆ ಅವರ ವಿಚಾರ ಮಂಡನೆ ವಿಶಿಷ್ಟಪೂರ್ಣವಾಗಿದೆ. ಪ್ರಸ್ತುತ ಶಿಕ್ಷಣ ಬುದ್ಧಿವಂತರನ್ನು/ಪ್ರತಿಭಾವಂತರನ್ನು/ಮೇಧಾವಿಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾದರೂ ಬಹುಮಟ್ಟಿಗೆ ಸ್ವತಂತ್ರ ಚಿಂತನೆ, ವಿವೇಚನೆ, ಸ್ವಯಂ ಅರಿವು ಇತ್ಯಾದಿ ಆಂತರಿಕ ಸತ್ವಯುತ ಲಕ್ಷಣಗಳನ್ನು ಬೆಳೆಸುವಲ್ಲಿ ಅದು ವಿಫಲವಾಗಿದೆ. ವ್ಯಕ್ತಿಯಲ್ಲಿ ಸುಪ್ತವಾಗಿ ಅಡಗಿರುವ ಬಹುಮುಖ ಸಾಮರ್ಥ್ಯ/ಪ್ರತಿಭೆಯನ್ನು ನೀರೆರೆದು ಪೋಷಿಸುವ ಹಾಗೂ ಅವುಗಳೆಲ್ಲವನ್ನು ಸಮನ್ವಯಗೊಳಿಸುವ ಪ್ರಯತ್ನ ನಡೆಸುತ್ತಿಲ್ಲ ಎಂದು ಇಂದಿನ ಶಿಕ್ಷಣದ ಬಗೆಗೆ ಕೃಷ್ಣಮೂರ್ತಿ ಕಟಕಿ ನುಡಿದಿದ್ದಾರೆ. ಅವರ ಪ್ರಕಾರ ಶಿಕ್ಷಣ ಎಂದರೆ ಕೇವಲ ಜ್ಞಾನಸಂಪಾದನೆ, ವಾಸ್ತವಾಂಶಗಳ ಮತ್ತು ಅಂಕಿಅಂಶಗಳ ಸಂಗ್ರಹಣೆ ಹಾಗೂ ಸಂಬಂಧೀಕರಣವಲ್ಲ; ಬುದ್ಧಿವಂತಿಕೆ ಹಾಗೂ ಸಮಗ್ರತೆ ರೂಢಿಸಿಕೊಂಡ ಮಾನವರನ್ನು ಬೆಳೆಸುವುದು ಎಂದರ್ಥ. ಅಂದರೆ ಕೇವಲ ತಜ್ಞರನ್ನು, ತಾಂತ್ರಿಕ ವರ್ಗದವರನ್ನು, ಉದ್ಯೋಗ ಅರ್ಹತೆ ಪಡೆದವರನ್ನು ಸೃಷ್ಟಿಸುವುದು ಶಿಕ್ಷಣದ ಉದ್ದೇಶವಲ್ಲ; ಭಯ ಹಾಗೂ ಹಿಂಜರಿಕೆಯಿಂದ ಮುಕ್ತರಾಗಿ ಸ್ವಯಂ ಅರಿವು, ಪ್ರೀತ್ಯಾದರಗಳನ್ನು ರೂಢಿಸಿಕೊಂಡು ಪರಿಪಕ್ವಗೊಂಡ ಸಮಗ್ರ ವ್ಯಕ್ತಿತ್ವ ರೂಪಿಸಿಕೊಂಡ ವ್ಯಕ್ತಿಗಳನ್ನು ಸೃಷ್ಟಿಸುವುದು ಶಿಕ್ಷಣದ ಪರಮೋದ್ದೇಶವಾಗಿದೆ.

ಜಿದ್ದುರವರ ಪ್ರಕಾರ, ಶಿಕ್ಷಣದ ಮತ್ತೊಂದು ಗುರಿ ಎಂದರೆ ಹೊಸ ಮೌಲ್ಯಗಳನ್ನು ರೂಪಿಸುವುದು. ಆದರ್ಶಗಳೆಂದು ಪರಿಗಣಿಸುವ ಹಳೆಯ ಮೌಲ್ಯಗಳನ್ನೇ ಇಂದಿನ ಪೀಳಿಗೆಗೆ ಹೇರುವುದು ಬೇಡ; ಆಧುನಿಕ ಬದಲಾವಣೆಗಳಿಗನುಗುಣವಾಗಿ ಮಗು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಅಗತ್ಯವಾದ ಮೌಲ್ಯಗಳಿಗೆ ಪ್ರೋತ್ಸಾಹ ನೀಡಬೇಕು ಎಂದಿದ್ದಾರೆ. ಅಂದರೆ, ಹಿಂದಿನ ಆದರ್ಶಗಳನ್ನೆಲ್ಲಾ ಗಾಳಿಗೆ ತೂರಿ ಇಂದಿನ ಗೊಂದಲಮಯ ಆತಂಕಕಾರಿ ಸಮಾಜ ಪ್ರೋತ್ಸಾಹಕ ಮೌಲ್ಯಗಳನ್ನು ಬೆಳೆಸಬೇಕು ಎಂದಲ್ಲ. ಬದಲಾಗುತ್ತಿರುವ ಸಮಾಜವನ್ನು ಇನ್ನೂ ಕಲುಷಿತಗೊಳಿಸದೆ, ಸುಸ್ಥಿತಿ ಕಾಪಾಡಿಕೊಂಡು ಬರಲು ಸಹಾಯಕವಾದ ಮೌಲ್ಯಗಳನ್ನು ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡುವ ಪ್ರಯತ್ನ ನಡೆಸಬೇಕೆಂಬುದು ಅವರ ಆಶಯ. ಜಿದ್ದು ಅವರು ಹೇಳುವಂತೆ ಶಿಕ್ಷಣದ ಮೂಲಕ ಆಗುಗೊಳ್ಳಬೇಕಾದ ಮತ್ತೊಂದು ವಿಷಯವೆಂದರೆ, ವ್ಯಕ್ತಿ ವ್ಯಕ್ತಿಗಳ ನಡುವೆ ಹಾಗೂ ವ್ಯಕ್ತಿ ಸಮಾಜದ ನಡುವೆ ಉತ್ತಮ ಬಾಂಧವ್ಯ ಬೆಳೆಸುವುದು. ವೈಜ್ಞಾನಿಕ ಹಾಗೂ ತಾಂತ್ರಿಕ ಬದಲಾವಣೆಯಿಂದಾಗಿ ಸ್ಪರ್ಧಾತ್ಮಕವಾಗಿ ನಾಗಾಲೋಟದಲ್ಲಿ ಓಡುತ್ತಿರುವ ಸಮಾಜದಲ್ಲಿ ಅನಾರೋಗ್ಯಕರ ಸ್ಪರ್ಧೆ, ಪೈಪೋಟಿ, ಆತಂಕ, ಆಸೆ ಆಕಾಂಕ್ಷೆ ಇತ್ಯಾದಿ ಹೆಚ್ಚಳ ಗಮನಾರ್ಹವೇ ಆಗಿದೆ. ಇವುಗಳೆಲ್ಲವನ್ನು ಬದಿಗಿಟ್ಟು ಪ್ರೀತಿ ವಿಶ್ವಾಸದಿಂದ ನಾವೆಲ್ಲರೂ ಒಟ್ಟಾಗಿ ಸಾಗಬೇಕೆಂಬ ಸದ್ಭಾವನೆ ಬೆಳೆಸಲು ಶಿಕ್ಷಣ ಸಹಾಯಕವಾಗಬೇಕು.

ನಮ್ಮ ದೃಷ್ಟಿಯಲ್ಲಿ ಮಗು ಏನಾಗಬೇಕೆಂಬ ತಮ್ಮ ಆದರ್ಶಗಳನ್ನು ಮಗುವಿನ ಮೇಲೆ ಹೇರದೆ, ಮಗು ತಾನಿರುವ ಹಾಗೆಯೇ ತನ್ನನ್ನು ಅರ್ಥ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದೇ ಸರಿಯಾದ ಶಿಕ್ಷಣ. ಯಾವುದೇ ಅಂಶವನ್ನಾಗಲೀ ಬಲವಂತವಾಗಿ ವಿಧಿಸುವುದರಿಂದ ಮಗುವಿನಲ್ಲಿ ಸ್ವಂತಿಕೆ, ಸೃಜನಶೀಲತೆ, ವಿವೇಚನೆ, ಮನೋಸ್ಥೈರ್ಯಗಳನ್ನು ಬೆಳೆಸಲಾಗುವುದಿಲ್ಲ. ತಾನಿರುವ ಸಮಾಜವನ್ನು ವಾಸ್ತವಾಂಶಗಳೊಂದಿಗೆ ಅರ್ಥಮಾಡಿಕೊಳ್ಳಲು

Digitised by Bharatavani, CIIL

ಸೂಕ್ತಸಾಮರ್ಥ್ಯದೊಂದಿಗೆ ಅವಕಾಶ ಕಲ್ಪಿಸಿಕೊಡುವುದರ ಜೊತೆಗೆ ವ್ಯಕ್ತಿ ವ್ಯಕ್ತಿಗಳೊಂದಿಗೆ ಸಮಾಜದೊಂದಿಗೆ ಸರಿಯಾದ ಬಾಂಧವ್ಯ ಬೆಳೆಸಿಕೊಂಡು ತನ್ನ ಹಾಗೂ ಸಮಾಜದ ಉನ್ನತಿಯ ಸಾಧನೆಯ ದಿಸೆಯಲ್ಲಿ ಸಾಗಲು ಪ್ರೋತ್ಸಾಹಿಸಬೇಕು. ಅದಕ್ಕೆ ಬೇಕಾದ ಸ್ವಾತಂತ್ರ್ಯ ಕೊಡಬೇಕು, ಹೆದರಿಕೆಯಿಂದ ಮುಕ್ತರಾಗಿಸಬೇಕು.

ಶಿಕ್ಷಣದ ಈ ಉದ್ದೇಶಗಳು ಸಫಲಗೊಳ್ಳಬೇಕಾದರೆ ಶಾಲೆಗಳು ಯಾವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕು ಎಂಬುದರ ಬಗೆಗೆ ಕೃಷ್ಣಮೂರ್ತಿಯವರು ಹೀಗೆಂದು ಅಭಿಪ್ರಾಯಪಟ್ಟಿದ್ದಾರೆ. ಶಾಲೆಗಳು, ಮಕ್ಕಳು ಆಧುನಿಕ ಜಗತ್ತಿನಲ್ಲಿ ಸ್ಪಷ್ಟತೆ ಹಾಗೂ ದಕ್ಷತೆಯಿಂದ ಕಾರ್ಯನಿರತರಾಗಲು ಅಗತ್ಯವಾದ ಶ್ರೇಷ್ಠ ತಂತ್ರಜ್ಞಾನದ ಜ್ಞಾನವನ್ನು ಶಾಲೆಗಳು ನೀಡಬೇಕು. ಜೊತೆಗೆ ಸಂಪೂರ್ಣ ಮಾನವನಾಗಲು ಬೇಕಾದ ಉತ್ತಮ ವಾತಾವರಣವನ್ನು ಸೃಷ್ಟಿಸಬೇಕು. ಅಂದರೆ ಜನಗಳಿಗೆ, ವಸ್ತುಗಳಿಗೆ, ಭಾವನೆಗಳಿಗೆ, ಅಷ್ಟೇ ಏಕೆ ಸಂಪೂರ್ಣ ಜೀವನಕ್ಕೆ ಸರಿಯಾದ ರೀತಿಯಲ್ಲಿ ಬೆಸೆದುಕೊಳ್ಳುವ ಉತ್ತಮ ಗುಣವನ್ನು ಅರಳಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು. ಉತ್ತಮ ಬದುಕು ಬೇಕೆಂದರೆ ಉತ್ತಮ ಸಂಬಂಧಗಳು ಬೇಕು; ಉತ್ತಮ ಸಂಬಂಧಕ್ಕೆ ಉತ್ತಮ ಭಾವನೆಗಳು ಬೇಕು; ಉತ್ತಮ ಭಾವನೆಗಳಿಗೆ ಸಹಜತೆ ಇರಬೇಕು. ಪ್ರಕೃತಿಯ ಆರಾಧಕರಾಗಬೇಕು. ಇವೆಲ್ಲವುಗಳನ್ನು ಬೆಳೆಸುವುದೇ ಸರಿಯಾದ ಶಿಕ್ಷಣ. ನಮ್ಮ ಶಾಲೆಗಳು ಈ ರೀತಿ ಶಿಕ್ಷಣವನ್ನು ಕೊಡಬೇಕು ಎನ್ನುತ್ತಾರೆ ಜಿದ್ದುರವರು.

ಕೃಷ್ಣಮೂರ್ತಿಯವರು ಇನ್ನೂ ಮುಂದುವರಿದು, ಇಂತಹ ಶಿಕ್ಷಣ ನೀಡುವ ದಿಸೆಯಲ್ಲಿ ಶಿಕ್ಷಕರ ಹೊಣೆಗಾರಿಕೆ ಏನಾಗಿರಬೇಕೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸಮಾಜದ ಆದರ್ಶಗಳಿಗನುಗುಣವಾಗಿ ಮಕ್ಕಳನ್ನು ರೂಪಿಸುವಲ್ಲಿ ಈಗಿನ ಸಮಾಜದ ಪ್ರಭಾವಗಳ ಬಂಧನದಿಂದ ಅಂದರೆ ಮಗುವನ್ನು ಆಂತರಿಕ ಹಾಗೂ ಬಾಹ್ಯ ಒತ್ತಡಗಳಿಂದ ಬಂಧಮುಕ್ತವಾಗಿಸಲು ಶಿಕ್ಷಕರು ಪ್ರಯತ್ನಿಸಬೇಕು. ಶಿಕ್ಷಕರ, ಕುಟುಂಬವರ್ಗದವರ ಮತ್ತು ಸಮಾಜದ ಪ್ರಭಾವಿಶಕ್ತಿಗಳ ಭಯದಿಂದ ಮಗುವನ್ನು ಮುಕ್ತಗೊಳಿಸುವುದರ ಮೂಲಕ ಪ್ರೀತ್ಯಾದರಗಳಿಂದ ಕೂಡಿದ ಒಳ್ಳೆಯ ಗುಣವರ್ಧನೆಗೆ ಪ್ರೋತ್ಸಾಹಿಸಬೇಕು. ಭಯರಹಿತ, ಸ್ವತಂತ್ರ ವ್ಯಕ್ತಿಯನ್ನಾಗಿ ಬೆಳೆಸುವಾಗ ಹೊಣೆಗಾರಿಕೆಯನ್ನು ಮರೆಯಬಾರದು; ಮಗುವಿನಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ಹೊಣೆಗಾರಿಕೆ ಬಗೆಗೆ ತಿಳುವಳಿಕೆ ಮೂಡಿಸಬೇಕು. ಸಮಾಜದ ಯಾವುದೇ ಬದಲಾವಣೆಗೆ ತಾನೇ ಕಾರಣ ಎಂಬ ಅರಿವು ಮೂಡಿಸಬೇಕು; ಆ ಅರಿವಿನ ಹಿನ್ನೆಲೆಯಲ್ಲಿ ಅವರನ್ನು ಕ್ರಿಯಾಶೀಲರನ್ನಾಗಿಸಬೇಕು. ಇಂತಹ ಹೊಣೆಗಾರಿಕೆ ಹೊತ್ತಿರುವ ಶಿಕ್ಷಕರು, ಜೊತೆಗೆ ಪೋಷಕರು ಮೂಲಭೂತವಾಗಿ ಕೃಷ್ಣಮೂರ್ತಿಯವರ ಶಿಕ್ಷಣದ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು; ತಮ್ಮನ್ನು ತಾವು ಸುಧಾರಿಸಿಕೊಳ್ಳಬೇಕು. ಶಿಕ್ಷಣ ಎಂದರೆ ಈಗಾಗಲೇ ಕೊಳೆತು ನಾರುತ್ತಿರುವ ಸಮಾಜಕ್ಕೆ ಹೊಂದಿಕೊಳ್ಳುವಂತೆ ಮಾಡುವುದಲ್ಲ; ಈ ಕೊಳೆತ ಸಮಾಜದ ಪ್ರಭಾವದಿಂದ ಮುಕ್ತರಾಗಿ, ಇದಕ್ಕಿಂತ ಭಿನ್ನವಾದ, ಸ್ಪಷ್ಟವಾದ ಹೊಸದೊಂದು ಸಮಾಜವನ್ನು ನಿರ್ಮಿಸಲು ಪ್ರೋತ್ಸಾಹಿಸುವುದು. ಉತ್ತಮ ಮನುಷ್ಯರಿಲ್ಲದೆ ಉತ್ತಮ ಸಮಾಜ ಸಾಧ್ಯವಿಲ್ಲ(A good society is not possible without good human beings) ಎಂಬ ಕೃಷ್ಣಮೂರ್ತಿಯವರ ನಂಬಿಕೆಯನ್ನು ಮನದಟ್ಟು ಮಾಡಿಕೊಳ್ಳಬೇಕು; ಉತ್ತಮ ಸಮಾಜದ ನಿರ್ಮಾಣದತ್ತ ಹೆಜ್ಜೆ ಹಾಕಬೇಕು.

ಜೀವನ ಹಾಗೂ ಶಿಕ್ಷಣದ ಬಗೆಗೆ ಜಿದ್ದು ಕೃಷ್ಣಮೂರ್ತಿಯವರ ವಿಚಾರಧಾರೆಯನ್ನು ಅರ್ಥಮಾಡಿಕೊಂಡ ನಮಗೆ ಅವರ ಜೀವನ ಮಾರ್ಗದ ಅರಿವೂ ಅತ್ಯಗತ್ಯ. ಜಿದ್ದುರವರು 1895ನೇ ಮೇ ತಿಂಗಳ 11ರಂದು ಆಂಧ್ರಪ್ರದೇಶದ ಮದನಪಲ್ಲಿ ಪಟ್ಟಣದಲ್ಲಿ ಸಾಂಪ್ರದಾಯಿಕ ಕುಟುಂಬದಲ್ಲಿ ಜನ್ಮ ಪಡೆದರು. ಕೃಷ್ಣಮೂರ್ತಿಯವರು ಯೌವ್ವನಾವಸ್ಥೆ ತಲುಪಿದ ನಂತರದಲ್ಲಿ ದೈವಜ್ಞಾನ(Theosophical) ಸಮಾಜದ ಅಂದಿನ ಅಧ್ಯಕ್ಷರಾಗಿದ್ದ ಡಾ॥ ಅನಿಬೆಸೆಂಟ್‌ರವರು ಅವರನ್ನು ದತ್ತು ತೆಗೆದುಕೊಂಡರು. ಅವರಲ್ಲಿ ಮುಂದಿನ ದಿನಗಳಲ್ಲಿ ಜಗದ್ಗುರು ಎನಿಸಿದ ಲಕ್ಷಣಗಳನ್ನು ದೈವಜ್ಞಾನಿಗಳು ಗುರುತಿಸಿ, ಅದಕ್ಕೆ ಸೂಕ್ತವಾದ ಶಿಕ್ಷಣ ಪಡೆಯಲು ಪ್ರೋತ್ಸಾಹಿಸಿದರು. 1922ರಲ್ಲಿ ಕೃಷ್ಣಮೂರ್ತಿಯವರಿಗಾದ ಅನುಭವಾತ್ಮಕ(mystical) ಅನುಭವದಿಂದಾಗಿ ಜೀವನದ ಬಗೆಗೆ ಅವರ ದೃಷ್ಟಿಕೋನವನ್ನೇ ಬದಲಿಸಿಕೊಂಡರು. 1929ರ ಐತಿಹಾಸಿಕ ಭಾಷಣದಲ್ಲಿ ಅವರು ಯಾವುದೇ ಧಾರ್ಮಿಕ ಸಂಘಟನೆಗಳು ಮಾನವನನ್ನು ಸತ್ಯದೆಡೆಗೆ ಕೊಂಡೊಯ್ಯಲಾರದು; ಸತ್ಯವೆಂಬುದು ಯಾವುದೇ ದಾರಿಯಿಲ್ಲದ ಪ್ರದೇಶ; ಯಾವ ಧರ್ಮದಿಂದಾಗಲೀ ವೇದದಿಂದಾಗಲೀ ಯಾವುದೇ ದಾರಿಯಿಂದಾಗಲೀ ಸತ್ಯವನ್ನು ಮುಟ್ಟಲಾಗುವುದಿಲ್ಲ. ಮಾನವ ಸಂಪೂರ್ಣ ಸ್ವತಂತ್ರನಾಗಿ ತನ್ನನ್ನು ತಾನು ಸ್ಪಷ್ಟವಾಗಿ ಅರಿತುಕೊಂಡರೆ ಸತ್ಯದರ್ಶನವಾದೀತು ಎಂಬುದನ್ನು ಸ್ಪಷ್ಟಪಡಿಸಿದರು. ಅಂದಿನಿಂದ ಸುಮಾರು 50 ವರ್ಷಗಳಿಗಿಂತ ಹೆಚ್ಚಾಗಿ ತಮ್ಮ ಅಂತ್ಯದವರೆಗೆ (1986ನೇ ಫೆಬ್ರವರಿ 17) ಪ್ರಪಂಚದ ಎಲ್ಲೆಡೆ ಸಂಚರಿಸುತ್ತಾ ಅಸಂಖ್ಯಾತ ಸಾರ್ವಜನಿಕ ಭಾಷಣಗಳು, ಖಾಸಗಿ ಸಂದರ್ಶನಗಳು, ಬರಹಗಳು, ಸಂಭಾಷಣೆಗಳಲ್ಲಿ ಅವರು ಪಾಲ್ಗೊಂಡರು; ಜಗತ್ತಿನ ಜನತೆಗೆ ಸತ್ಯಮಾರ್ಗವನ್ನು ಪರಿಚಯಿಸಿ ಅದರೆಡೆಗೆ ಅವರ ಒಲವನ್ನು, ಆಸಕ್ತಿಯನ್ನೂ ಬೆಳೆಸುವ ದಿಸೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಇದೆಲ್ಲ ಮಾಡುವಾಗ ಅವರು 'ತಾನು ಗುರುವಲ್ಲ, ಕೇವಲ ಸತ್ಯದ ಆರಾಧಕ'ನಷ್ಟೆ ಎಂದು ತಮ್ಮನ್ನು ಗುರುತಿಸಿಕೊಂಡರು. ಅವರ ಈ ಎಲ್ಲ ಜ್ಞಾನಧಾರೆಯನ್ನು ಅನೇಕ ಗ್ರಂಥಗಳು, ಶ್ರವಣ ಸುರಳಿಗಳು ಮತ್ತು ದೃಶ್ಯ ಸುರುಳಿಗಳ ರೂಪದಲ್ಲಿ ಹೊರತರಲಾಯಿತು; 50ಕ್ಕಿಂತ ಹೆಚ್ಚು ಭಾಷೆಗಳಿಗೆ ಭಾಷಾಂತರಿಸಲಾಯಿತು. ಶಿಕ್ಷಣದ ಬಗೆಗೆ ಕೃಷ್ಣಮೂರ್ತಿಯವರು ರಚಿಸಿದ ಅನೇಕ ಗ್ರಂಥಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ– Education and the significance of life (1953), Life Ahead(1963), The Mother and Culture(1964), On Education(1974), Beginnings of Learning(1975), Letters to the School(Vol 1-1981, Vol

Digitised by Bharatavani, CIIL

2-1985). ಜನತೆ ಅವರನ್ನು ಪ್ರಪಂಚದ ಪ್ರಸಿದ್ಧ ಜಗದ್ಗುರುಗಳಲ್ಲಿ ಒಬ್ಬರೆಂದು ಪರಿಗಣಿಸಿ ಗೌರವಪೂರ್ವಕವಾಗಿ ಸ್ವೀಕರಿಸಿದೆ.

1928ರಲ್ಲಿ ಜಿದ್ದು ಕೃಷ್ಣಮೂರ್ತಿ, ಡಾ॥ ಅನಿಬೆಸೆಂಟ್ ಮತ್ತು ಇತರೆ ಐದು ಮಂದಿ ಸೇರಿ "ದಿ ಋಷಿ ವ್ಯಾಲಿ ಟ್ರಸ್ಟ್" ಎಂಬ ಹೆಸರಿನಲ್ಲಿ ಒಂದು ಚಾರಿಟೆಬಲ್ ಸಂಸ್ಥೆಯನ್ನು ಪ್ರಾರಂಭಿಸಿದರು. ತದನಂತರ ಅದರ ಹೆಸರನ್ನು 1953ರಲ್ಲಿ "ಫೌಂಡೇಶನ್ ಫಾರ್ ನ್ಯೂ ಎಜುಕೇಷನ್: ಎಂಬುದಾಗಿಯೂ 1970ರಲ್ಲಿ "ಕೃಷ್ಣಮೂರ್ತಿ ಫೌಂಡೇಶನ್ ಆಫ್ ಇಂಡಿಯಾ" ಎಂಬುದಾಗಿಯೂ ಬದಲಾಯಿಸಲಾಯಿತು. ಈ ಸಂಸ್ಥೆಯ ಪ್ರಧಾನ ಕಛೇರಿ ಚೆನ್ನೈನಲ್ಲಿರುವ ನಗರದ ಎಲ್ಲ ಗದ್ದಲ ಹಾಗೂ ಆಕರ್ಷಣೆಗಳಿಂದ ದೂರಸರಿದು ಪ್ರಕೃತಿ ಸೌಂದರ್ಯದ ಪ್ರಶಾಂತ ವಾತಾವರಣದ ಮಡಿಲಲ್ಲಿರುವ 'ವಸಂತವಿಹಾರ' ದಲ್ಲಿ ಸ್ಥಾಪಿತಗೊಂಡಿದೆ. ಈ ಶಾಖೆಯು ಒಂದು ಅಧ್ಯಯನ ಕೇಂದ್ರ, ದಾಖಲೆಗಳ ಸಂಗ್ರಹಾಲಯ (archives), ಪ್ರಕಟಣಾ ವಿಭಾಗ, ಶ್ರವಣ ವಿಭಾಗ, ವೀಡಿಯೋ ವಿಭಾಗ, ಪುಸ್ತಕ ಮಳಿಗೆ ಮತ್ತು ಅತಿಥಿಗೃಹವನ್ನು ಹೊಂದಿದೆ. ಈ ವಸಂತ ವಿಹಾರವು ಅವರ ವಿಚಾರಧಾರೆಯನ್ನು ಪ್ರಸರಿಸುವ ಮೂಲಕ ಜಗತ್ತಿನ ಎಲ್ಲ ಸ್ತರಗಳ ಜನತೆಯಲ್ಲಿ ಸ್ವಯಂ ಅರಿವು ಹಾಗೂ ವಿವೇಚನೆ ಉಂಟುಮಾಡುವ ಕೇಂದ್ರವಾಗಬೇಕೆಂಬುದು ಕೃಷ್ಣಮೂರ್ತಿಯವರ ಆಶಯವಾಗಿತ್ತು. ಇಂದಿಗೂ ಅವರ ಆಶಯಕ್ಕೆ ಧಕ್ಕೆ ಬರದಂತೆ ಸಂಸ್ಥೆ ಕಾರ್ಯ ನಿರ್ವಹಿಸುತ್ತಾ ಬಂದಿದೆ. ವರ್ಷಕ್ಕೆ ಮೂರು ಬಾರಿಯಂತೆ ವಸಂತ ವಿಹಾರ ನ್ಯೂಸ್‌ಲೆಟರ್ ಪ್ರಕಟವಾಗುತ್ತಿದೆ. ಯಾವುದೇ ದೇಶಕ್ಕಾಗಲೀ ಧರ್ಮಕ್ಕಾಗಲೀ ಮುಗಿಬೀಳದೆ ಪ್ರಪಂಚದಾದ್ಯಂತ ಮಾನವನನ್ನು ಎಚ್ಚರಿಸುವ ಕೈಂಕರ್ಯದಲ್ಲಿ ತೊಡಗಿಸಿಕೊಂಡ ಕೃಷ್ಣಮೂರ್ತಿಯವರ ಪ್ರವಾಸ ಹಾಗೂ ಪ್ರವಚನಗಳ ನಿರ್ವಹಣಾ ಹೊಣೆಗಾರಿಕೆಯನ್ನು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಇಂಗ್ಲೆಂಡ್, ಇಂಡಿಯಾ ಮತ್ತು ಲ್ಯಾಟಿನ್ ಅಮೇರಿಕಾದಲ್ಲಿರುವ ನಾಲ್ಕು 'ಕೃಷ್ಣಮೂರ್ತಿ ಫೌಂಡೇಷನ್'ಗಳು ಹೊತ್ತುಕೊಂಡು ಇಂದಿಗೂ ಅವರ ಜ್ಞಾನಧಾರೆಯನ್ನು ಪ್ರಕಟಿಸುವ, ಸಂರಕ್ಷಿಸುವ ಮತ್ತು ಪ್ರಸರಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.

ಕಿರಿಯರು ಹಾಗೂ ಹಿರಿಯರಲ್ಲಿ ಉನ್ನತ ಗುಣಮಟ್ಟದ ಜೀವನದ ಬಗೆಗೆ ಜಾಗೃತಿ ಮೂಡಿಸಲು ಶಿಕ್ಷಣದ ಅವಶ್ಯಕತೆ ಗುರುತಿಸಿ, ಜಿದ್ದುರವರು ದೇಶವಿದೇಶಗಳಲ್ಲಿ ಕಿರಿಯರಿಗಾಗಿ ಅನೇಕ ಶಾಲೆಗಳು ಹಾಗೂ ಹಿರಿಯರಿಗಾಗಿ ಅಧ್ಯಯನ ಕೇಂದ್ರಗಳನ್ನು ಮತ್ತು Retreat ಗಳನ್ನು ತೆರೆದರು. ಅವರ ಶಾಲೆಗಳು ಇತರೆ ಸಾಮಾನ್ಯ ಶಾಲೆಗಳಿಗಿಂತ ಭಿನ್ನವಾಗಿದ್ದು ಅವರ ಆಶಯದಂತೆ ಸರಿಯಾದ ಶಿಕ್ಷಣ ನೀಡಲು ಬೇಕಾದ ಎಲ್ಲ ರೀತಿಯ ವಾತಾವರಣ ಕಲ್ಪಿಸುವ ದಿಸೆಯಲ್ಲಿ ಪ್ರಯತ್ನ ನಡೆಸಿವೆ. ಅವರ ಅಧ್ಯಯನ ಕೇಂದ್ರಗಳು ಯಾವ ಶಿಕ್ಷಕನಿಲ್ಲದೆ, ವೇಳಾಪಟ್ಟಿ ಹಾಗೂ ನಿಯತವಾಗಿ ಏರ್ಪಡಿಸಿದ ಕಾರ್ಯಕ್ರಮಗಳಿಲ್ಲದೆ, ತಮ್ಮನ್ನು ತಾವು ಅರಿತುಕೊಳ್ಳಲು ಕೃಷ್ಣಮೂರ್ತಿಯವರ ಬೋಧನೆಗಳು, ತತ್ವಗಳನ್ನು ಓದಿ ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಗಿವೆ. ಸಾಮಾನ್ಯವಾಗಿ ಈ ಅಧ್ಯಯನ ಕೇಂದ್ರಗಳಲ್ಲಿ ಕೃಷ್ಣಮೂರ್ತಿಯವರ ಕೃತಿಗಳು, ಅವುಗಳ ಭಾಷಾಂತರಗಳು ಹಾಗೂ ಮೌಲ್ಯಮಾಪನಾತ್ಮಕ ಅಧ್ಯಯನಗಳು, ಫೌಂಡೇಷನ್ ಕಿರುಹೊತ್ತಿಗೆಗಳು, ಧ್ವನಿ ಹಾಗೂ ದೃಶ್ಯ ಸುರುಳಿಗಳ ಸಂಗ್ರಹ, ಅವುಗಳನ್ನು ನೋಡಲು ಅವಶ್ಯಕವಾದ ಸೌಲಭ್ಯಗಳು ಮತ್ತು ವಾಚನ/ಧ್ಯಾನಮಾಲೆಗಳು ಇರುತ್ತವೆ. ಪುಸ್ತಕಗಳನ್ನು ಹಾಗೂ ಸುರಳಿಗಳನ್ನು ಮನೆಗೆ ಕೊಂಡೊಯ್ದು ವಾಪಸ್ಸು ಮಾಡುವ ಗ್ರಂಥಾಲಯ ಸೌಲಭ್ಯ ಕೂಡ ಇಲ್ಲಿದೆ.

ಭಾರತದಲ್ಲಿ ಮೊಟ್ಟಮೊದಲಿಗೆ ಆರಂಭಗೊಂಡ 2 ಶಾಲೆಗಳೆಂದರೆ 'ಋಷಿ ವ್ಯಾಲಿ ಶಾಲೆ ಮತ್ತು 'ರಾಜಘಾಟ್ ಬೆಸೆಂಟ್ ಶಾಲೆ'. ಋಷಿ ವ್ಯಾಲಿ ಶಾಲೆ ಆಂಧ್ರಪ್ರದೇಶದ ಮದನಪಲ್ಲಿಯಿಂದ ಸುಮಾರು 22 ಕಿ.ಮೀ ಮೈಲಿ ದೂರದಲ್ಲಿದೆ. ಈ ಶಾಲೆ ಜೊತೆಗೆ ಗ್ರಾಮೀಣ ಶಿಕ್ಷಣ ಕೇಂದ್ರ, ಋಷಿ ವ್ಯಾಲಿ ಅಧ್ಯಯನ ಕೇಂದ್ರಗಳಿದ್ದು ಇವು 'ಋಷಿ ವ್ಯಾಲಿ ಶಿಕ್ಷಣ ಕೇಂದ್ರ' ಎಂಬ ಹೆಸರನ್ನು ಹೊಂದಿದೆ. ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ರಾಜಘಾಟ್ ಶಿಕ್ಷಣ ಕೇಂದ್ರದಲ್ಲಿ ರಾಜಘಾಟ್ ಬೆಸೆಂಟ್ ಶಾಲೆ, ಹುಡುಗಿಯರಿಗಾಗಿ ವಸಂತ ಕಾಲೇಜು, ರಾಜಘಾಟ್ ಗ್ರಾಮೀಣ ಕೇಂದ್ರ, ವಸಂತಾಶ್ರಮ ಮತ್ತು ಪ್ರಜ್ಞಾ ಪರಿಷತ್ (ಕೃಷ್ಣಮೂರ್ತಿ ಅಧ್ಯಯನ ಕೇಂದ್ರ) ಗಳಿವೆ. ಈ ಅಧ್ಯಯನ ಕೇಂದ್ರ ಕೃಷ್ಣಮೂರ್ತಿಯವರ ಕೃತಿಗಳನ್ನು ಹಿಂದಿ, ಬೆಂಗಾಲಿ ಮತ್ತು ಉರ್ದು ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸುವ ಹೊಣೆಗಾರಿಕೆ ಹೊತ್ತಿದೆ. ಆ ನಂತರ ದೇಶದಾದ್ಯಂತ ಅನೇಕ ಶಾಲೆಗಳನ್ನು ತೆರೆಯಲಾಗಿದೆ. ಇವುಗಳಲ್ಲಿ ಬೆಂಗಳೂರು ನಗರದಿಂದ 17 ಕಿ.ಮೀ ದೂರದಲ್ಲಿರುವ ಹರಿದ್ವನಂನಲ್ಲಿ 'ಬೆಂಗಳೂರು ಶಿಕ್ಷಣ ಕೇಂದ್ರ' ಹಾಗೂ 'ದಿ ವ್ಯಾಲಿ ಶಾಲೆ' ಪುಣೆಯ ಬಳಿ 'ದಿ ಸಹ್ಯಾದ್ರಿ ಶಾಲೆ. ಜೊತೆಗೆ ಕೃಷ್ಣಮೂರ್ತಿ ಅಧ್ಯಯನ ಕೇಂದ್ರ; ಮುಂಬಯಿಯಲ್ಲಿರುವ 'ಬಾಲ್ ಆನಂದ್' (ಕೊಳಚೆ ಪ್ರದೇಶಗಳಿಂದ ಬರುವ ಬಡಮಕ್ಕಳಿಗಾಗಿ ಶಾಲಾವೇಳೆ ನಂತರದ ಕೇಂದ್ರ; ಉತ್ತರಾಂಚಲದಲ್ಲಿರುವ 'ಉತ್ತರ ಕಾಶಿ ಶಿಕ್ಷಣ ಕೇಂದ್ರ', ಚೆನ್ನೈಯಲ್ಲಿರುವ 'ಕೆಎಫ್ಐ ಶಾಲೆ'ಗಳು ಪ್ರಮುಖವಾದವು. ಬಹುತೇಕ ಶಾಲೆಗಳು (ಬಾಲ್ ಆನಂದ್ ಹೊರತುಪಡಿಸಿ) ಗಂಡು ಹೆಣ್ಣು ಮಕ್ಕಳಿಬ್ಬರಿಗೂ ಅವಕಾಶ ಕಲ್ಪಿಸಿರುವ ಆಂಗ್ಲಮಾಧ್ಯಮ ವಸತಿಶಾಲೆಗಳಾಗಿವೆ. ವಿದೇಶಗಳಲ್ಲಿ 2 ಕೇಂದ್ರಗಳಿವೆ– ಇಂಗ್ಲೆಂಡ್ ದೇಶದ ಹ್ಯಾಂಪ್‌ಶೈರ್‌ನಲ್ಲಿರುವ ಕೃಷ್ಣಮೂರ್ತಿ ಶಿಕ್ಷಣ ಕೇಂದ್ರ ಮತ್ತು ಅಮೇರಿಕಾದ ಕ್ಯಾಲಿಫೋರ್ನಿಯ ಬಳಿ ಇರುವ ಓಕ್ ಗ್ರೋವ್ ಶಾಲೆ. ಒಟ್ಟಿನಲ್ಲಿ ಕೃಷ್ಣಮೂರ್ತಿ ಅಧ್ಯಯನ ಕೇಂದ್ರಗಳ ಉದ್ದೇಶವನ್ನು ಕೃಷ್ಣಮೂರ್ತಿಯವರ ಈ ಕೆಳಗಿನ ವಾಕ್ಯಗಳೇ ಸ್ಪಷ್ಟಪಡಿಸುತ್ತವೆ.

"This is a place of learning and austere living with inward discipline and work, without a Guru, without a leader and without a system of meditation or worship"

ಹೀಗೆ ಮಾನವ ಭಯ, ಕೋಪ, ತಾಪ, ದುಃಖ ಇತ್ಯಾದಿ ಆಂತರಿಕ

Digitised by Bharatavani, CIIL

ಹೊರೆಯಿಂದ ಮುಕ್ತನಾಗುವ ಅವಶ್ಯಕತೆ ಗುರುತಿಸಿಕೊಳ್ಳುತ್ತಾ ಜೀವನ ಭದ್ರತೆ ಹಾಗೂ ಸಂತೋಷಕ್ಕಾಗಿ ಹುಡುಕಾಟ ನಡೆಸುವ ಹಾದಿಯಲ್ಲಿ ಸಾಗುತ್ತಾ ಆಳವಾದ ಧ್ಯಾನಾಸಕ್ತ ಹಾಗೂ ಧಾರ್ಮಿಕ ಗುಣವುಳ್ಳ ದೈನಂದಿನ ಜೀವನ ನಡೆಸುವ ಬಗೆಗೆ ಪ್ರಪಂಚದಾದ್ಯಂತ ಎಲ್ಲ ಮಾನವರನ್ನು ಬಡಿದೆಬ್ಬಿಸುವ ದಿಸೆಯಲ್ಲಿ ಕೃಷ್ಣಮುರ್ತಿಯವರ ಕೊಡುಗೆ ಅಪಾರವಾಗಿದೆ. ಅವರ ಕೃತಿಗಳ ಹಾಗೂ ಬೋಧನೆಯ ಸಾರವನ್ನು ಹೀಗೆಂದು ಗುರುತಿಸಬಹುದಾಗಿದೆ– ಮಾನವ ತನ್ನ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ತನ್ನ ಮನಸ್ಸಿನ ದ್ವಂದ್ವಗಳನ್ನು ತಿಳಿಯಬೇಕು, ತನ್ನೆಲ್ಲ ಸಮಸ್ಯೆಗಳಿಗೆ ಮೂಲಗಳಾವುವು ಎಂಬುದನ್ನು ಹುಡುಕಿ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಸಾಗಬೇಕು. ಸೃಷ್ಟಿಯ ಮಹತ್ವವನ್ನು ಅರಿತು ಮೆಚ್ಚಿಕೊಳ್ಳಬೇಕು. ಇವರ ಬೋಧನೆಗಳು ಮಾನವ ನಿರ್ಮಿತ ಮತೀಯ ನಂಬಿಕೆಗಳು, ರಾಷ್ಟ್ರೀಯ ತೀವ್ರ ಭಾವನೆಗಳು, ಗುಂಪು ಅಂಧಾಭಿಮಾನದೃಷ್ಟಿಕೋನ ಇತ್ಯಾದಿ ಎಲ್ಲೆಗಳನ್ನು ಮೀರಿ ಸತ್ಯದರ್ಶನಕ್ಕೆ ಮಾನವನ ಹುಡುಕಾಟದಲ್ಲಿ ದಿಗ್ದರ್ಶಕವಾಗಿದೆ. ಈ ಜ್ಞಾನಾಮೃತ ಯಾವುದೇ ಗ್ರಂಥಾಧಾರಿತವಲ್ಲ; ಮಾನವನ ಮನಸ್ಸಿನ ಬಗೆಗೆ ಅವರದೇ ಆದ ಒಳನೋಟ ಹಾಗೂ ಶ್ರೇಷ್ಠತೆಯ ಬಗೆಗೆ ಅವರ ದರ್ಶನವನ್ನು ಆಧರಿಸಿದ್ದಾಗಿದೆ ಎಂಬುದು ಗಮನಾರ್ಹ ಅಂಶ.

**–ಡಾ. ಯಶೋಧರ ಕೆ.**

## ಜೀವನ ಪರ್ಯಂತ ಕಲಿಕೆ

ಒಬ್ಬ ವ್ಯಕ್ತಿಯ ಜೀವನದಲ್ಲಿ ಕೌಶಲಗಳನ್ನು ಮತ್ತು ಜ್ಞಾನವನ್ನು ನಿರಂತರವಾಗಿ ಕಟ್ಟುವುದೇ ಜೀವನ ಪರ್ಯಂತ ಕಲಿಕೆ(Life long Learning). ಜೀವನದುದ್ದಕ್ಕೂ ದೊರಕುವ ಅನುಭವಗಳ ಮೂಲಕ ಇದು ಸಾಧ್ಯವಾಗುವಂತಹುದು. ಹಾರ್ಪರ್ ಕಾಲಿನ್ ನಿಘಂಟಿನ ಪ್ರಕಾರ, ಜೀವನಪರ್ಯಂತ ಕಲಿಕೆ ಎಂಬುದು ವೃತ್ತಿಪರತೆ ಅಥವಾ ವೈಯಕ್ತಿಕ ಪರಿಪೂರ್ಣತೆಯ ದೃಷ್ಟಿಯಿಂದ ಮಾನವನು ಜ್ಞಾನ ಮತ್ತು ಕೌಶಲಗಳನ್ನು ಬೆಳೆಸಿಕೊಳ್ಳುವ ಸಲುವಾಗಿ ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣದ ಅವಕಾಶಗಳನ್ನು ಜೀವನದುದ್ದಕ್ಕೂ ಮಾಡಿಕೊಳ್ಳುವ ಬಳಕೆ. ಇದು ವಯಸ್ಕರಶಿಕ್ಷಣ, ತರಬೇತಿ, ನಿರಂತರ ಶಿಕ್ಷಣ, ಶಾಶ್ವತ ಶಿಕ್ಷಣ ಹೀಗೆ ಔಪಚಾರಿಕ ಶೈಕ್ಷಣಿಕ ವ್ಯವಸ್ಥೆಯಾಚೆಗಿನ ಕಲಿಕೆಯನ್ನು ಸೂಚಿಸುವ ಅರ್ಥವನ್ನೂ ಒಳಗೊಳ್ಳುತ್ತದೆ.

ಜೀವನಪರ್ಯಂತ ಕಲಿಕೆ ಎಂಬುದು ಔಪಚಾರಿಕ, ಔಪಚಾರಿಕೇತರ (Non-formal) ಮತ್ತು ಅನೌಪಚಾರಿಕ ಶಿಕ್ಷಣಗಳ ಸಂಯೋಗದಿಂದಾಗುವ ಫಲಶ್ರುತಿ. ಜೀವನಮಟ್ಟದ ಸುಧಾರಣೆಗಾಗಿ ಸತತವಾಗಿ ಮಾಡುವ ಪ್ರಯತ್ನವಿದು. ಹಾಗಾಗಿ ಈ ವ್ಯವಸ್ಥೆಯಲ್ಲಿ ಕಲಿಕೆ ಎಂಬುದು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಸಾಗುವ ಜೀವನದ ಅವಿಭಾಜ್ಯ ಅಂಶ. ಕುಟುಂಬಗಳಲ್ಲಿ ಮೊದಲುಗೊಂಡು, ಸಮುದಾಯ, ಶಾಲೆಗಳು, ಧಾರ್ಮಿಕ ಸಂಸ್ಥೆಗಳು, ಕಾರ್ಯಕ್ಷೇತ್ರದ ಮಾರ್ಗವಾಗಿ ಮುಂದುವರಿಯುವ ಕಲಿಕೆಯೊಂದಿಗೆ ಇದೊಂದು ನಿರಂತರ ಪ್ರಕ್ರಿಯೆ.

ಜೀವನ ಪರ್ಯಂತ ಕಲಿಕೆಯಲ್ಲಿ ದೊರಕುವ ಅನುಭವಗಳು ವಿಶೇಷವಾದವು. ಇವು ಔಪಚಾರಿಕವಿರಬಹುದು(ತರಬೇತಿ, ಸಮಾಲೋಚನೆ, ಉನ್ನತ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಇತ್ಯಾದಿ) ಅಥವಾ ಅನೌಪಚಾರಿಕವಿರಬಹುದು(ಜೀವನದ ವಿವಿಧ ಸನ್ನಿವೇಶಗಳ ಮೂಲಕ ಸಿಗುವ ಅನುಭವ) ಅಥವಾ ಔಪಚಾರಿಕೇತರವಿರಬಹುದು (ದೂರಶಿಕ್ಷಣ, ಅಂಚೆ ಮತ್ತು ತೆರಪಿನ ಶಿಕ್ಷಣ ಅಥವಾ ಇ–ಕಲಿಕೆ ಇತ್ಯಾದಿ). ಇದು ಮುಖ್ಯವಾಗಿ ಮೂರು ಲಕ್ಷಣಗಳನ್ನು ಹೊಂದಿದೆ. ಒಂದು, ಇದು ಜೀವನ ಪರ್ಯಂತ ಸಾಗುವ ಕಲಿಕೆ, ಎರಡನೆಯದು ಸ್ವ–ಇಚ್ಛೆಯ ಭಾಗವಹಿಕೆ ಮತ್ತು ಮೂರನೆಯದಾಗಿ, ಇದು ಸ್ವ–ಅಭಿಪ್ರೇರಣೆಯಿಂದ ನಡೆಯುವಂತಹುದು. ಈ ಜ್ಞಾನ ಪಿಪಾಸೆ ವ್ಯಕ್ತಿಗತವಾದ ಅಥವಾ ವೃತ್ತಿಪರವಾದ ಉದ್ದೇಶದಿಂದ ಕೂಡಿದುದು. ಜೀವನಪರ್ಯಂತ ಕಲಿಯುವ ಕಲಿಕೆಯನ್ನು ವಿಶಾಲಾರ್ಥದಲ್ಲಿ ನಿರಂತರ ಕಲಿಕೆ (Continuing Education) ಎಂದು ಹೇಳಬಹುದು. ಈ ಕಲಿಕೆಯು ನಮ್ಯವೂ ವೈವಿಧ್ಯವೂ ಆಗಿದ್ದು ಸಾಂಪ್ರದಾಯಿಕ ಅಥವಾ ಔಪಚಾರಿಕ ಕಲಿಕೆಯ ಕಟ್ಟುಪಾಡುಗಳನ್ನು ಮೀರಿ ವಯಸ್ಕ ಜೀವನದ ತುಂಬ ಹರಡಿಕೊಂಡಿರುವಂತಹುದು. ಕಲಿಯಲು ಅಗತ್ಯವಾದ ಕೌಶಲಗಳನ್ನು ಕಲಿಯುವುದರ ಮೇಲೆ ಮತ್ತು ಕಲಿಕೆಯ ಆಸಕ್ತಿಯನ್ನು ಜೀವನಪರ್ಯಂತ ಉಳಿಸಿಕೊಳ್ಳುವುದರ ಮೇಲೆ ಇಲ್ಲಿ ಹೆಚ್ಚಿನ ಒತ್ತು ಕೊಡಲಾಗುತ್ತದೆ. 'ಕಲಿಯಲು ಕಲಿ' ಎಂಬುದು ನಿರಂತರ ಕಲಿಕೆಯ ಮೂಲಮಂತ್ರ.

ಈ ಸಂದರ್ಭದಲ್ಲಿ ಕಲಿಕೆ ಎಂಬುದು ಒಂದು ಗುಣ. ಇದರ ಉದ್ದೇಶವೂ ಅನನ್ಯ. ಇದು ಕೇವಲ ವ್ಯಕ್ತಿಗೆ ಸಂಬಂಧಿಸಿದುದು ಮಾತ್ರವಲ್ಲ; ಜೊತೆಗೆ ವ್ಯವಸ್ಥೆಯ ಒಂದು ಅಂಶ. ಇಡೀ ವ್ಯವಸ್ಥೆಯಲ್ಲಿ ಈ ನಮೂನೆಯ ಶಿಕ್ಷಣ ಅರ್ಥವನ್ನು ಪಡೆದುಕೊಳ್ಳುತ್ತದೆ. ನಿರಂತರ ಕಲಿಕೆ ವಿಶಾಲವಾದ ಶೈಕ್ಷಣಿಕ ಹಾಗೂ ತರಬೇತಿ ವಿಚಾರಗಳನ್ನು ಒಳಗೊಳ್ಳುವುದು ಮಾತ್ರವಲ್ಲದೆ ವಿಭಿನ್ನ ವ್ಯಕ್ತಿಗಳನ್ನು ಉದ್ದೇಶಿಸುತ್ತದೆ.

ಜೀವನ ಪರ್ಯಂತ ಕಲಿಕೆಗೆ ಸಂಬಂಧಿಸಿದ ಸಾಹಿತ್ಯ ಸಾಮಾನ್ಯವಾಗಿ ಒತ್ತು ನೀಡುವ ನಾಲ್ಕು ಪ್ರಮುಖ ಲಕ್ಷಣಗಳಿವೆ. ಈ ಲಕ್ಷಣಗಳು 'ಶಿಕ್ಷಣ ಮತ್ತು ತರಬೇತಿ' ಯ ಪರಿಕಲ್ಪನೆಯನ್ನು 'ನಿರಂತರ ಕಲಿಕೆ' ಯಾಗಿ ಮಾರ್ಪಡಿಸುತ್ತವೆ. ನಿರಂತರ ಕಲಿಕೆಯ ಮೊದಲ ಲಕ್ಷಣವೆಂದರೆ ಅದು ಔಪಚಾರಿಕ, ಅನೌಪಚಾರಿಕ ಮತ್ತು ಔಪಚಾರಿಕೇತರ ಶಿಕ್ಷಣ ಮತ್ತು ತರಬೇತಿಗಳನ್ನು ಒಳಗೊಳ್ಳುತ್ತದೆ. ಔಪಚಾರಿಕ ಶಿಕ್ಷಣವು ಶ್ರೇಣಿಕೃತವಾದ ಪ್ರಾಥಮಿಕ, ಸೆಕೆಂಡರಿ ಹಾಗೂ ವಿಶ್ವವಿದ್ಯಾನಿಲಯ ಹಂತಗಳಲ್ಲಿ ಸಾಗುವ ವ್ಯವಸ್ಥೆಯನ್ನು, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ಒಳಗೊಳ್ಳುತ್ತದೆ. ಆದ–ರೆ ಅನೌಪಚಾರಿಕ ಕಲಿಕೆ ಒಂದು ನಿರಂತರ ಪ್ರಕ್ರಿಯೆಯನ್ನು ವಿವರಿಸುತ್ತದೆ. ಇಲ್ಲಿ ವ್ಯಕ್ತಿಯು ಮನೋಭಾವಗಳು, ಮೌಲ್ಯಗಳು,

Digitised by Bharatavani, CIIL

ಕೌಶಲಗಳು ಮತ್ತು ಜ್ಞಾನ ಇವುಗಳನ್ನು ತನ್ನದೇ ಪರಿಸರದಲ್ಲಿನ ದಿನನಿತ್ಯದ ಅನುಭವ ಮತ್ತು ಶೈಕ್ಷಣಿಕ ಪ್ರಭಾವ ಹಾಗೂ ಸಂಪನ್ಮೂಲಗಳು, ಕುಟುಂಬ, ನೆರೆಕೆರೆ, ಕಾರ್ಯ ಮತ್ತು ಕ್ರೀಡೆ, ಮಾರುಕಟ್ಟೆ, ಗ್ರಂಥಾಲಯ ಹಾಗೂ ಸಮೂಹ ಮಾಧ್ಯಮಗಳು ಇವುಗಳಿಂದ ಪಡೆಯುತ್ತಾನೆ. ನಿರಂತರ ಕಲಿಕೆಯ ಎರಡನೆಯ ಲಕ್ಷಣ ಎಂದರೆ, ಕಲಿಯುವವರ ಸ್ವ ಅಭಿಪ್ರೇರಣೆಯನ್ನು ಕುರಿತದ್ದು. ಈ ಸನ್ನಿವೇಶದಲ್ಲಿ ಕಲಿಯುವ ಎಲ್ಲರೂ ತಮ್ಮ ಕಲಿಕೆಯ ಜವಾಬ್ದಾರಿಯನ್ನು ತಾವೇ ಹೊರಬೇಕಾಗುತ್ತದೆ. ಆದುದರಿಂದ ಈ ವ್ಯವಸ್ಥೆಯಲ್ಲಿ ಕಲಿಕಾರ್ಥಿಗಳನ್ನು ಅವರು ಭಾಗಿಯಾಗುವ ಶಿಕ್ಷಣ ಅಥವಾ ತರಬೇತಿಯ ರೀತಿಗೆ ಅನುಗುಣವಾಗಿಯಲ್ಲದೆ, ಅವರು ಕಲಿಯಬೇಕಾದ ಸನ್ನಿವೇಶದಲ್ಲಿ ಅವರಿಗೇ ನಿರ್ದಿಷ್ಟವಾದ ವೈಯಕ್ತಿಕ ಗುಣಲಕ್ಷಣಗಳ ಹಿನ್ನೆಲೆಯಲ್ಲಿ ವಿವರಿಸಲಾಗುತ್ತದೆ. ನಿರಂತರ ಕಲಿಕೆ ಎಂದರೆ, ಕೆಲವು ನಿರ್ದಿಷ್ಟ ಗುಣಗಳನ್ನುಳ್ಳ ವಿದ್ಯಾರ್ಥಿಗಳು ಕಲಿಯುವ ವ್ಯವಸ್ಥೆ ಎಂತಲೂ ಹೇಳಬಹುದು. ಅವೆಂದರೆ, ಕಲಿಯಲು ಅಗತ್ಯವಾದ ಕೌಶಲಗಳು–ವಿಶೇಷವಾಗಿ ಸಾಕ್ಷರತೆ, ಗಣಿತ– ಮತ್ತು ಮನೋಭಾವವುಳ್ಳವರು, ಕಲಿಯುವುದರ ಬಗ್ಗೆ ವಿಶ್ವಾಸವುಳ್ಳವರು, ಶಿಕ್ಷಣ ಮತ್ತು ತರಬೇತಿ ಇವುಗಳನ್ನು ಕುರಿತ ಕಾಳಜಿ ಇರುವವರು, ಕಲಿಯಲು ಆಸಕ್ತಿ ಮತ್ತು ಅಭಿಪ್ರೇರಣೆ ಇರುವವರು ಇತ್ಯಾದಿ. ಶಿಕ್ಷಣ ಮತ್ತು ತರಬೇತಿಗಳಿಂದ ಆರ್ಥಿಕ ಉಪಯೋಗ ಇರುವುದಾದರೂ ವ್ಯಕ್ತಿಗಳನ್ನು ಶಿಕ್ಷಣದಲ್ಲಿ ತೊಡಗಿಸಿಕೊಳ್ಳಲು ಆರ್ಥಿಕ ಒತ್ತಾಸೆಯೊಂದೇ ಸಾಕಾಗುವುದಿಲ್ಲ. ಅಭಿಪ್ರೇರಣೆಗೆ ಅಡ್ಡಿಯಾಗುವ ಇನ್ನೂ ಅನೇಕ ಅಂಶಗಳಿವೆ. ಅವುಗಳನ್ನು ಗುರುತಿಸಿ ಜನರು ಶಿಕ್ಷಣದಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕು. ಆರ್ಥಿಕ ಅಡ್ಡಿಗಳನ್ನಾದರೆ ಬಾಹ್ಯ ವ್ಯವಸ್ಥೆಯ ಮೂಲಕ ನಿವಾರಿಸಬಹುದು. ಆದರೆ ಕೆಲವರಿಗೆ ಸಾಮಾಜಿಕ ಮತ್ತು ವೈಯಕ್ತಿಕ ಅಂಶಗಳು ಅಡ್ಡಿಯಾಗುತ್ತವೆ. ನಿರಂತರ ಶಿಕ್ಷಣದಲ್ಲಿ ಕಲಿಕೆಯು ಕೇವಲ ಬಾಹ್ಯ ಅಪೇಕ್ಷೆಗಳನ್ನು ತಣಿಸುವುದಕ್ಕೆ ಮಾತ್ರವಲ್ಲದೆ ಆಂತರಿಕವಾದ ಮೌಲ್ಯಗಳನ್ನು ಸಾಧಿಸುವುದಕ್ಕೂ ಸಹಾಯಕವಾಗುತ್ತದೆಂಬುದನ್ನು ಗಮನಿಸಬೇಕು. ಅದು ಬೇರೇನನ್ನೋ ಪಡೆಯುವುದಕ್ಕಾಗಿ ಅಲ್ಲ. ಕಲಿಕೆ ಎಂಬುದು ಆ ಕಲಿಕೆಯಲ್ಲಿ ಸಾರ್ಥಕತೆ, ವ್ಯಕ್ತಿಯ ಅಂತರಂಗದ ಅಥವಾ ಆಂತರಿಕ ಬೆಳವಣಿಗೆಗಾಗಿ ಮಾತ್ರ. ಕಲಿಕೆಯಲ್ಲಿ ಭಾಗಿಯಾಗುವುದೇ ಅದರ ಸಾರ್ಥಕತೆ. ಅದರ ಫಲಶ್ರುತಿಯಲ್ಲಿ ಅಲ್ಲ. ಇಲ್ಲಿನ ಗುರಿಗಳು ಉಪಕರಣಾತ್ಮಕವಾದವುಗಳಲ್ಲ. ಸ್ವಸಾರ್ಥಕತೆಗಾಗಿ ಮಾತ್ರ. ಸ್ವಂತ ಹೂಡಿಕೆಯ ಕಲಿಕೆ ನಿರಂತರ ಕಲಿಕೆಯ ಮೂರನೆಯ ಲಕ್ಷಣ. ಇಲ್ಲಿ ಕಲಿಯುವವ ತಾನೇ ಹಣವನ್ನು ಸ್ವ–ಪ್ರೇರಣೆಯಿಂದಲೇ ತೊಡಗಿಸುವಂತಹುದು. ನಿರಂತರ ಶಿಕ್ಷಣ ಕೈಗೆಟುಕುವಂತೆ ಮಾಡಬೇಕು ಎಂಬುದಕ್ಕೆ ಉತ್ತರವಾಗಿ ತಜ್ಞರು ಇದು ಸ್ವಪ್ರೇರಿತವಾಗಿ ವ್ಯಕ್ತಿ ತಾನೇ ಹಣವನ್ನು ತೊಡಗಿಸಿಕೊಂಡು ಕಲಿಯುವ ಕಲಿಕೆಯಾದ್ದರಿಂದ, ಇದರಲ್ಲಿ –ಔಪಚಾರಿಕ ಶಿಕ್ಷಣದಂತಲ್ಲದೆ– ಸರಕಾರದ ಪಾತ್ರ ಕಡಿಮೆ ಎಂದು ಗುರುತಿಸುತ್ತಾರೆ. ನಿರಂತರ ಕಲಿಕೆಯಲ್ಲಿ ತೊಡಗಿಕೊಂಡ ವ್ಯಕ್ತಿ ಕಾಲ, ಹಣ ಪ್ರಯತ್ನಗಳನ್ನು ತಾನೇ ತೊಡಗಿಸಿ ತನ್ನ ಕಲಿಕೆಯ ಜವಾಬ್ದಾರಿಯನ್ನು ತಾನೇ ಸಂಪೂರ್ಣವಾಗಿ ವಹಿಸಿಕೊಳ್ಳುವವ ಎಂದು ತಜ್ಞರು ಸ್ಪಷ್ಟಪಡಿಸುತ್ತಾರೆ. ನಿರಂತರ ಕಲಿಕೆಯ ನಾಲ್ಕನೇ ವಿಶಿಷ್ಟ ಲಕ್ಷಣ ಎಂದರೆ, ಸಾರ್ವತ್ರಿಕ ಸಹಭಾಗಿತ್ವ. ಶಿಕ್ಷಣ ಮತ್ತು ತರಬೇತಿಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವ ಬದ್ಧತೆ ಎಲ್ಲರಿಗೂ ಇರಬೇಕು. ಈ ಸಾರ್ವತ್ರಿಕ ಸಹಭಾಗಿತ್ವ ಔಪಚಾರಿಕ ಮತ್ತು ಅನೌಪಚಾರಿಕ ಕಲಿಕೆಗಳೆರಡನ್ನೂ ಒಳಗೊಳ್ಳುತ್ತದೆ. ಇದು ಸಾಮಾಜಿಕ, ಆರ್ಥಿಕ ಮತ್ತು ವೈಯಕ್ತಿಕವಾದ ಎಲ್ಲ ಉದ್ದೇಶಗಳಿಗೂ ಸಂಬಂಧಪಟ್ಟುದು.

ಜೀವನ ಪರ್ಯಂತ ಕಲಿಕೆ ಸಾಂಪ್ರದಾಯಿಕ ಕಲಿಕೆಗಿಂತ ಭಿನ್ನಸ್ವರೂಪದ್ದಾಗಿರುತ್ತದೆ. ಸಾಂಪ್ರದಾಯಿಕ ಕಲಿಕೆಯಲ್ಲಿ ಸಾಮಾನ್ಯವಾಗಿ ಅಧ್ಯಾಪಕ ಜ್ಞಾನದ ಏಕೈಕ ಸಂಪನ್ಮೂಲ. ವಿದ್ಯಾರ್ಥಿ ಜ್ಞಾನ ಪಡೆಯುವವ. ವಿದ್ಯಾರ್ಥಿ ಅವನ ಪಾಡಿಗೆ ಕಲಿಯುತ್ತಾನೆ. ವಿದ್ಯಾರ್ಥಿ ಕೌಶಲಗಳನ್ನು ಪಡೆಯುವವರೆಗೆ ಪರೀಕ್ಷೆಗಳನ್ನು ಕೊಟ್ಟು ಕಲಿಸಲಾಗುತ್ತದೆ. ಈ ಮೂಲಕ ಮುಂದಿನ ಕಲಿಕೆಗೆ ಅನುವುಮಾಡಿಕೊಡಲಾಗುತ್ತದೆ. ಎಲ್ಲ ಕಲಿಕಾರ್ಥಿಗಳೂ ಒಂದೇ ರೀತಿಯ ಕೆಲಸವನ್ನು ಮಾಡುತ್ತಾರೆ. ಅಧ್ಯಾಪಕರಿಗೆ ಸೇವಾಪೂರ್ವ ಮತ್ತು ಸೇವಾನಿರತ ತರಬೇತಿ ಕೊಡಲಾಗುತ್ತದೆ. 'ಉತ್ತಮ' ಕಲಿಕಾರ್ಥಿಗಳನ್ನು ಗುರುತಿಸಿ ಕಲಿಕೆಯನ್ನು ಮುಂದುವರಿಸಲು ಅವಕಾಶಕೊಡಲಾಗುತ್ತದೆ. ಈ ರೀತಿಯ ವ್ಯವಸ್ಥೆಗಳು ಜ್ಞಾನಪ್ರಧಾನವಾದ ವ್ಯವಸ್ಥೆಯಲ್ಲಿ ಮಾತ್ರ ಬದುಕಲು ಅನುವು ಮಾಡಿಕೊಡುತ್ತವೆ. ಸಮಾಜವು ಅಪೇಕ್ಷಿಸುವಂತೆ ಗುಂಪಿನಲ್ಲಿ ಕೆಲಸಮಾಡುವುದು, ಸಮಸ್ಯಾ ಪರಿಹಾರ, ನಿರಂತರ ಕಲಿಕೆಗೆ ಅಭಿಪ್ರೇರಣೆ ಇವುಗಳನ್ನು ಸಾಂಪ್ರದಾಯಿಕ ಶಿಕ್ಷಣವ್ಯವಸ್ಥೆಯಲ್ಲಿ ನಿರೀಕ್ಷಿಸಲಾಗದು. ಅಲ್ಲಿ ಅಧ್ಯಾಪಕ ಕಲಿಸುವ ಜ್ಞಾನವನ್ನು ಪುನಃ ಒಂದಲ್ಲ ಒಂದು ರೀತಿಯಲ್ಲಿ ಒಪ್ಪಿಸುವುದಕ್ಕಾಗಿ ಮಾತ್ರ ಕಲಿಕೆ ಸೀಮಿತವಾಗಿರುತ್ತದೆ. ಆದರೆ ಜೀವನಪರ್ಯಂತ ಕಲಿಕೆ ಹೆಚ್ಚು ಹೆಚ್ಚು ಜನರನ್ನು ತಲುಪುವಂತಹುದು. ಭಿನ್ನ ಕಲಿಕಾ ಆವಶ್ಯಕತೆಗಳನ್ನು ಒಳಗೊಂಡಿರುವಂತಹುದು. ಜೀವನ ಪರ್ಯಂತ ಕಲಿಕೆಯಲ್ಲಿ ಶಿಕ್ಷಕರು ಕಲಿಯುವ ಸಾಧನ, ಸಂಪನ್ಮೂಲ ಮತ್ತು ಮಾರ್ಗಗಳನ್ನು ತೋರಿಸಿಕೊಡುವವರಷ್ಟೆ. ವಿದ್ಯಾರ್ಥಿಗಳು ಸ್ವತಃ ಮಾಡಿ ಕಲಿಯುತ್ತಾರೆ. ಗುಂಪಲ್ಲಿ ಕೆಲಸಮಾಡುವುದರ ಮೂಲಕ ಒಬ್ಬರನ್ನೊಬ್ಬರು ನೋಡಿ ಕಲಿಯುತ್ತಾರೆ. ಅಧ್ಯಾಪಕರು ವೈಯಕ್ತಿಕ ಕಲಿಕಾ ಯೋಜನೆಗಳನ್ನು ರೂಪಿಸುತ್ತಾರೆ. ಅಧ್ಯಾಪಕರೂ ಇಲ್ಲಿ ಶಿಕ್ಷಣಾರ್ಥಿಗಳೇ. ಬೋಧನಾ–ಪೂರ್ವ ತರಬೇತಿ ಹಾಗೂ ಬೋಧನಾ ನಿರತ ತರಬೇತಿಗಳೆರಡೂ ಇಲ್ಲಿ ಮಿಳಿತವಾಗಿರುತ್ತವೆ. ಕಲಿಕಾ ಅವಕಾಶಗಳು ಇಲ್ಲಿ ಜೀವನದುದ್ದಕ್ಕೂ ಚಾಚಿಕೊಂಡಿರುತ್ತವೆ.

ಜೀವನ ಪರ್ಯಂತ ಕಲಿಕೆ ಈ ಕಾಲದ ಒಂದು ಆವಶ್ಯಕತೆ ಮಾತ್ರವಲ್ಲ; ಅದು ಇಂದು ಅನಿವಾರ್ಯವೂ ಹೌದು. ಇದನ್ನು 'ಜಾಗತಿಕ ಆವಶ್ಯಕತೆ' ಎಂದು ಗುರುತಿಸಲಾಗಿದೆ. ಜಾಗತೀಕರಣವು ಹೊಸ ಕೌಶಲ ಮತ್ತು ಸಾಮರ್ಥ್ಯಗಳ ಕಲಿಕೆ ಪ್ರಮುಖವೆನಿಸುವ ಫಲಗಳನ್ನು ಮತ್ತು ಪ್ರಕ್ರಿಯೆಗಳನ್ನು ಅಪೇಕ್ಷಿಸುತ್ತದೆ. ನಿರಂತರವಾಗಿ ಬದಲಾಗುತ್ತಿರುವ ಜಾಗತಿಕ ಮಾರುಕಟ್ಟೆ ಮತ್ತು ತಂತ್ರಜ್ಞಾನದ

Digitised by Bharatavani, CIIL

ಜೊತೆಜೊತೆಯಲ್ಲಿ ಸಾಗಲು ಎಲ್ಲ ವ್ಯಕ್ತಿಗಳಿಗೂ ನಿರಂತರ ಕಲಿಕೆ ಅತಿ ಅವಶ್ಯಕ ಎಂಬುದನ್ನು ವಿಶ್ವಬ್ಯಾಂಕ್ ಕೂಡ ಸ್ಪಷ್ಟೀಕರಿಸಿದೆ. ಕ್ಷಣ–ಕ್ಷಣಕ್ಕೆ ಬದಲಾಗುವ ವೃತ್ತಿಗಳ ಸ್ವರೂಪ, ವೃತ್ತಿಪರ ಅಪೇಕ್ಷೆ ಮತ್ತು ಭೌಗೋಳಿಕ ಸ್ಥಳಾಂತರ ಇತ್ಯಾದಿಗಳ ಕಾರಣ ಅಸ್ಥಿರವಾಗುತ್ತಿರುವ ಬದುಕನ್ನು ನಿಭಾಯಿಸುವಲ್ಲಿ, ಇದರ ಮೂಲಕ ಒದಗುವ ಸಿದ್ಧತೆ ಅತಿ ಮಹತ್ವದ್ದಾಗಿರುತ್ತದೆ. ಈ ರೀತಿಯ ಅಲೆಮಾರಿ ಕಾರ್ಯವ್ಯವಸ್ಥೆಯ ಸನ್ನಿವೇಶದಲ್ಲಿ ಜನರು ಹೊಸ ಜೀವನ ಸನ್ನಿವೇಶಗಳಿಗೆ, ತಂತ್ರಜ್ಞಾನಕ್ಕೆ ಮತ್ತು ಕಾರ್ಯಬೇಡಿಕೆಗಳಿಗೆ ಹೊಂದಿಕೊಳ್ಳುತ್ತಲೇ ಇರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಿರಂತರ ಕಲಿಕೆಯನ್ನು ಘೋಷಿಸುವ ರಾಜ್ಯಗಳು, ದೇಶಗಳು ಇಂದು ಅತ್ಯಂತ ಪ್ರಸ್ತುತವೆನಿಸುತ್ತದೆ. ವಿಭಿನ್ನ ಸಾಮಾಜಿಕ ಆರ್ಥಿಕ ಒತ್ತಡಗಳು ಜೀವನಪರ್ಯಂತ ಕಲಿಕೆಯ ಕಡೆಗೆ ಸಮುದಾಯಗಳು ಮುಖಮಾಡುವಂತೆ ಮಾಡಿವೆ. ಜಾಗತೀಕರಣ ಮತ್ತು ತಂತ್ರಜ್ಞಾನದ ಓಟದ ಗತಿ, ಉದ್ಯಮ ಮಾರುಕಟ್ಟೆ ಮತ್ತು ವೃತ್ತಿಸ್ವರೂಪದಲ್ಲಿನ ಬದಲಾವಣೆ, ಜನರ ವಯಸ್ಸಾಗುವಿಕೆ ಇವು ಈ ಒತ್ತಡಗಳಲ್ಲಿ ಪ್ರಮುಖವಾದವು

ಜೀವನ ಪರ್ಯಂತ ಕಲಿಕೆಯಿಂದ ಅನೇಕ ರೀತಿಯ ಪ್ರಯೋಜನಗಳಿವೆ. ಇದು ಸಾಮಾಜಿಕ ಭಾಗವಹಿಕೆ, ಕ್ರಿಯಾತ್ಮಕ ಪೌರತ್ವ ಹಾಗೂ ವೈಯಕ್ತಿಕ ಬೆಳವಣಿಗೆ ಇವುಗಳನ್ನು ಮಾತ್ರವಲ್ಲದೆ ಒಂದು ರೀತಿಯ ಸ್ಪರ್ಧಾತ್ಮಕ ಮನೋಭಾವ ಮತ್ತು ವೃತ್ತಿಪರತೆಯನ್ನೂ ವಿಕಾಸಗೊಳಿಸುತ್ತದೆ. ಜ್ಞಾನ, ಆರ್ಥಿಕತೆ ಮತ್ತು ಸಾಂಪ್ರದಾಯಿಕ ಶೈಕ್ಷಣಿಕ ಕೌಶಲಗಳೆರಡರ ಬೇಡಿಕೆಗಳನ್ನೂ ಜೀವನಪರ್ಯಂತ ಕಲಿಕಾ ಮಾದರಿ ಸಾಧ್ಯಮಾಡಿಕೊಡುತ್ತದೆ. ನಿರಂತರ ಕಲಿಕೆ ಸೃಜನಶೀಲತೆಯನ್ನು ಮೂಡಿಸಿ ವ್ಯಕ್ತಿಯಲ್ಲಿ ಮುಂದಾಳತ್ವ, ಪ್ರತಿಕ್ರಿಯಾಶೀಲತೆ ಇವುಗಳನ್ನು ಉದ್ದೀಪನಗೊಳಿಸಿ ಕೈಗಾರಿಕಾ ಸಮಾಜದ ನಂತರದ ಕಾಲಕ್ಕೆ ಅವಶ್ಯಕವಾದ ಹೊಂದಾಣಿಕೆಯನ್ನು ಅಳವಡಿಸಿಕೊಳ್ಳಲು ಸಾಧ್ಯಮಾಡುತ್ತದೆ. ಇದಕ್ಕೆ ಸಹಾಯಕವಾಗುವ ಅನೇಕ ಕೌಶಲಗಳನ್ನು ಬೆಳೆಸುವ ನಿಶ್ಚಿತತೆಯನ್ನು ನಿರ್ವಹಿಸುವ, ಇತರ ಸಂಸ್ಕೃತಿಯವರೊಂದಿಗೆ ಸಂವಹನಮಾಡುವ, ಘರ್ಷಣೆಯನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯಗಳನ್ನು ಈ ಜೀವನ ಪರ್ಯಂತ ಕಲಿಕಾ ಸನ್ನಿವೇಶದಲ್ಲಿ ಬೆಳೆಸಿಕೊಳ್ಳಲು ಸಾಧ್ಯ. ಅಲ್ಲದೆ ಇದು ಸಹಜವಾದ ಸಾಮರ್ಥ್ಯಗಳು ಅರಳಲು ಸಹಾಯಮಾಡುತ್ತದೆ. ಮನವನ್ನು ವಿಶಾಲವಾದ ಅರಿವಿನ ಕಡೆಗೆ ತೆರೆಯುತ್ತದೆ. ಕುತೂಹಲ, ಕಲಿಕೆಯ ಹಸಿವುಗಳನ್ನು ಹುಟ್ಟುಹಾಕುತ್ತದೆ. ವಿವೇಕವನ್ನು ವೃದ್ಧಿಸುತ್ತದೆ. ಜಗತ್ತನ್ನು ಜೀವಿಸಲು ಉತ್ತಮವಾದ ಸ್ಥಳ ಎಂದೆನಿಸುವಂತೆ ಮಾಡುತ್ತದೆ. ಬದಲಾವಣೆಗಳಿಗೆ ಹೊಂದಿಕೊಳ್ಳಲು ಸಹಾಯಮಾಡುತ್ತದೆ. ನಮ್ಮ ಬದುಕಿನಲ್ಲಿ ಅರ್ಥವನ್ನು ಕಂಡುಕೊಳ್ಳಲು ಅನುವುಮಾಡಿಕೊಡುತ್ತದೆ. ಸಮಾಜದ ಕ್ರಿಯಾಶೀಲ ಕೊಡುಗೆದಾರರಾಗಿ ಭಾಗವಹಿಸುವಂತೆ ಮುಂದೂಡುತ್ತದೆ. ಹೊಸ ಸ್ನೇಹಿತರನ್ನು ಪಡೆದು ಮೌಲ್ಯಯುತವಾದ ಸಂಬಂಧಗಳನ್ನು ಸವಿಯಲು ಸಹಕರಿಸುತ್ತದೆ. ಆತ್ಮತೃಪ್ತಿಯ ಜೀವನದ ಕಡೆಗೆ ನಮ್ಮನ್ನು ಒಯ್ಯುತ್ತದೆ.

ನಿರಂತರ ಕಲಿಕೆಯಲ್ಲಿ ಕಲಿಯುವ ರೀತಿ ಭಿನ್ನವಾದುದು. ಜ್ಞಾನ ವಿವಿಧ ರೀತಿಯದಾಗಿರುತ್ತದೆ. ವಿಷಯದ ಬಗ್ಗೆ ತಿಳಿದುಕೊಳ್ಳುವುದು. ಒಂದು ಬಗೆ. ಉದಾಹರಣೆಗೆ ವಾರ್ತೆಗಳು, ಒಂದು ವಿಷಯದ ಕುರಿತ ಮೂಲ ಅಂಶಗಳು, ಪೀಠಿಕಾತ್ಮಕ ಪರಿಕಲ್ಪನೆಗಳು ಇತ್ಯಾದಿ. ಎರಡನೆಯದು ಮಾಡುವುದನ್ನು ಕುರಿತ ಜ್ಞಾನ ಮತ್ತೊಂದು ರೀತಿಯದು. ಕಾರು ಓಡಿಸುವುದು, ಗಣಿತದ ಒಂದು ಸಮಸ್ಯೆಯನ್ನು ಬಿಡಿಸುವುದು, ಒಂದು ಕಾರ್ಯಕ್ರಮವನ್ನು 'ಕೋಡ್' ಮಾಡುವುದು, ಸಂಶೋಧನೆ ಮಾಡುವುದು. ಮೂರನೆಯದು, ಇರುವಿಕೆಯನ್ನು ಕುರಿತ ಜ್ಞಾನವೂ ಒಂದು ಬಗೆಯ ಜ್ಞಾನವೇ. ಅದನ್ನು ಕಲಿಯಬೇಕು. ಎಂದರೆ ಮಾನವನಾಗಿ 'ಇರಲು' ಕಲಿಯುವುದು, ಅಧ್ಯಾಪಕನಾಗಿ 'ಇರಲು' ಕಲಿಯುವುದು, ವೈದ್ಯನಾಗಿ 'ಇರಲು' ಕಲಿಯುವುದು,ಸಮಾಜ ಒಪ್ಪಿಕೊಂಡಂತೆ ನೈತಿಕವಾಗಿ ಬಾಳುವುದು, ಕರುಣೆಯಿಂದ ಇರುವುದು, ಕಾಳಜಿ ತೋರಿ ಬದುಕುವುದು, ಇತರರನ್ನು ಕುರಿತಂತೆ ಸಂವೇದನಾಶೀಲರಾಗಿ ಬದುಕಲು ಕಲಿಯುವುದು, ಇತ್ಯಾದಿ. ಕಲಿಯಲು ಕಲಿಯುವುದು ಅತ್ಯಂತ ಪ್ರಮುಖವಾಗಿ ಕಲಿಯಬೇಕಾದ ಜ್ಞಾನ. ಕಲಿಯಲು ಎಲ್ಲಿ ಜ್ಞಾನ ಸಿಗುತ್ತದೆ ಎಂದು ತಿಳಿಯುವುದು, ಅಂದರೆ ಅಂತರ್ಜಾಲ ಹುಡುಕಲು ಕಲಿಯುವುದು, ಗ್ರಂಥಾಲಯ ಬಳಸಿಕೊಳ್ಳಲು ಕಲಿಯುವುದು, ಜನರನ್ನು ಸಂಪರ್ಕಿಸಿ ಜ್ಞಾನ ಪಡೆಯುವುದು ಹೇಗೆ ಎಂದು ಕಲಿಯುವುದು. ಸ್ವಪರಿವರ್ತನೆಗಾಗಿ ಕಲಿಯುವುದೂ ಕಲಿಕೆಯೇ. ಉನ್ನತ ಮಟ್ಟದ ಕಲಿಕೆ ಇದು ಎಂದೇ ಹೇಳಬಹುದು. ಸಹನಶೀಲರಾಗಿ, ಕರುಣೆ, ಪ್ರೀತಿಗಳನ್ನು ಮೈಗೂಡಿಸಿಕೊಂಡವರಾಗಿ, ವಿನೀತರಾಗಿ ಬದುಕಲು ಕಲಿಯುವುದು, ಇತ್ಯಾದಿ. ಅಂದರೆ ಈ ಕಲಿಕೆ ನಾವು ಹೇಗೆ ಬದಲಾಗಬೇಕು ಎಂದು ಕಲಿಯುವುದನ್ನು ಕುರಿತದ್ದು. ಉದಾಹರಣೆಗೆ, ಹೊಂದಿಕೊಳ್ಳಲು, ಸಂಶೋಧನಾತ್ಮಕವಾಗಿ, ವೈಜ್ಞಾನಿಕವಾಗಿ ಆಲೋಚನೆ ಮಾಡಲು ಕಲಿಯುವುದು. ಮೊದಲ ನಾಲ್ಕು ರೀತಿಗಳಲ್ಲಿ ಕಲಿಕೆ ಬಾಹ್ಯಸಂಪನ್ಮೂಲಗಳಿಂದ ಸಾಗುತ್ತದೆ. ಆದರೆ ಉನ್ನತ ಮಟ್ಟದ ತಿಳಿವಳಿಕೆ ಕೇವಲ ಅಂತರಾವಲೋಕನ ಮತ್ತು ಅನೌಪಚಾರಿಕವಾದ ಕಲಿಕಾ ಮಾರ್ಗಗಳಿಂದ ಮಾತ್ರ ಸಾಧ್ಯ.

ಜೀವನಪರ್ಯಂತ ಶಿಕ್ಷಣದ ಉದ್ದೇಶಗಳು ಹಾಗೂ ಇಲ್ಲಿನ ಕಲಿಕಾರ್ಥಿಗಳು ವಿಭಿನ್ನವಾಗಿರುವುದರಿಂದ ಹೊಸದಾದ ಬೋಧನಾ ವಿಧಾನಗಳ ಅನ್ವೇಷಣೆ ಮತ್ತು ಆವಿಷ್ಕಾರ ಈ ವ್ಯವಸ್ಥೆಯ ಮೂಲಭೂತ ಅಗತ್ಯ. ಇದರ ಜೊತೆಗೆ ಸಾಂಪ್ರದಾಯಿಕ ಶಿಕ್ಷಣದಲ್ಲಿ ದಾಖಲು ಮಾಡಿಕೊಳ್ಳಲಾಗದ ಜನರೂ ಕಲಿಯುವ ವಿಪುಲ ಅವಕಾಶಗಳಿಗೆ ಇದು ತೆರೆದುಕೊಂಡಿರಬೇಕು. ಜೀವನ ಪರ್ಯಂತ ಕಲಿಕೆಯ ಉದ್ದೇಶಗಳು ಔಪಚಾರಿಕ ಶಿಕ್ಷಣದ ಉದ್ದೇಶಗಳಿಗಿಂತ ಭಿನ್ನವಾದವುಗಳಾಗಿರುವುದರಿಂದ ಇಲ್ಲಿಯ ಬೋಧನಾ ವಿಧಾನವೇ ಭಿನ್ನವಾದುದು.. ಇಲ್ಲಿಯ ಅಧ್ಯಾಪಕರು ಸಲಹೆಗಾರರು, ನೆರವು ನೀಡುವವರು, ಅವರು ವಿಷಯ ವಾಹಕರಲ್ಲ; ಅಲ್ಲದೆ ಇಲ್ಲಿ ಮಾಡಿ ಕಲಿಯಲು, ಕೂಡಿ ಮಾಡಲು, ಸೃಜನಶೀಲವಾಗಿ ಆಲೋಚಿಸಲು ಹೆಚ್ಚಿನ ಆದ್ಯತೆ.

Digitised by Bharatavani, CIIL

ಜೀವನ ಪರ್ಯಂತ ಶಿಕ್ಷಣವನ್ನು ಅಳವಡಿಸುವ ಅನೇಕ ಮಾರ್ಗೋಪಾಯಗಳಿವೆ. ಯಾವುದೇ ದೇಶಕ್ಕೆ ಎಲ್ಲರಿಗೂ ಜೀವನಪರ್ಯಂತ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಡುವ ಗುರಿ ಇದ್ದಲ್ಲಿ, ತನ್ನ ನಿಯಮಗಳನ್ನು ಸುಧಾರಿಸುವಲ್ಲಿ ಐದು ಅಂಶಗಳನ್ನು ಗಮನಿಸಿಕೊಳ್ಳಬೇಕು. ಎಲ್ಲ ರೀತಿಯ ಕಲಿಕೆಯೂ–ಔಪಚಾರಿಕ, ಅನೌಪಚಾರಿಕ ಇತ್ಯಾದಿ–ಪ್ರಮುಖವೆಂದು ಗುರುತಿಸಿಕೊಳ್ಳಬೇಕು. ಮೂಲಭೂತ ಕೌಶಲಗಳನ್ನು ಸಾಂಪ್ರದಾಯಿಕ ಶಿಕ್ಷಣದಲ್ಲಿ ಗುರುತಿಸಿಕೊಂಡಿರುವುದಕ್ಕಿಂತ ವಿಶಾಲವಾಗಿ ಗುರುತಿಸಿಕೊಳ್ಳಬೇಕು. ಇದು ಓದು, ಬರಹ, ಗಣಿತ ಇವುಗಳನ್ನು ಮಾತ್ರವಲ್ಲದೆ, ಅಭಿಪ್ರೇರಣೆ ಮತ್ತು ಸ್ವಯಂನಿರ್ದೇಶಿತ ಕಲಿಕಾ ಕೌಶಲಗಳನ್ನೂ ಒಳಗೊಳ್ಳಬೇಕು. ಉನ್ನತ ಸೆಕೆಂಡರಿ ಶಿಕ್ಷಣ ಅಥವಾ ಅತಿ ಗಟ್ಟಿಯಾದ ಸಾಕ್ಷರತಾ ಕೌಶಲಗಳಿಲ್ಲದವರು ಮುಂದಿನ ಶಿಕ್ಷಣದಲ್ಲಿ ಪಾಲ್ಗೊಳ್ಳಲು ಅಥವಾ ವಯಸ್ಕರಾಗಿ ತರಬೇತಿ ಹೊಂದಲು ಅಥವಾ ಯಾವುದೇ ವೃತ್ತಿಯಲ್ಲಿ ತಮ್ಮನ್ನು ಸಮರ್ಪಕವಾಗಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅಂತರರಾಷ್ಟ್ರಿಯ ಪ್ರಮಾಣಗಳು ಸ್ಪಷ್ಟವಾಗಿ ತಿಳಿಸಿಕೊಟ್ಟಿವೆ. ವಯಸ್ಕ ಕಲಿಕೆಯನ್ನು ಬೆಳೆಸುವಲ್ಲಿ ಒಂದು ಮಟ್ಟದ ಕಲಿಕಾ ಸಂಸ್ಕೃತಿ ಅತಿ ಅವಶ್ಯಕ. ಸರಕಾರಗಳು ಮತ್ತು ಸಾಮಾಜಿಕ ಪಾಲುದಾರರು ವಯಸ್ಕ ಕೌಶಲಗಳನ್ನು ಪುನರ್ರೂಪಿಸುವ ಮತ್ತು ಉನ್ನತೀಕರಿಸುವ ಅವಶ್ಯಕತೆಯನ್ನು ಎಷ್ಟರಮಟ್ಟಿಗೆ ಒಪ್ಪಿಕೊಂಡಿದ್ದಾರೆ ಎಂಬುದೂ ಜೀವನ ಪರ್ಯಂತ ಕಲಿಕೆಯ ನಿರ್ಣಾಯಕಗಳಲ್ಲಿ ಒಂದಾಗಿರುತ್ತದೆ. ಅಂದರೆ ಜೀವನ ಪರ್ಯಂತಕಲಿಕೆ ಯಶಸ್ವಿಯಾಗಬೇಕಾದರೆ ಸಾಕ್ಷರತೆಯ ಭದ್ರಬುನಾದಿಯ ಜೊತೆಗೆ ಒಂದು ಸುಸಂಸ್ಕೃತ ಶೈಕ್ಷಣಿಕ ವಾತಾವರಣದ ನಿರ್ಮಾಣವೂ ಅತ್ಯಗತ್ಯ ಎಂದು ರಾಷ್ಟ್ರಗಳಿಗೆ ಮನವರಿಕೆಯಾಗಬೇಕು. ಜೀವನ ಪರ್ಯಂತ ಶಿಕ್ಷಣದ ಸನ್ನಿವೇಶದಲ್ಲಿ ನಿರಂತರ ಕಲಿಕೆಗೆ ಅವಕಾಶ ಮತ್ತು ಸಮತೆಗೆ ಆದ್ಯತೆಯನ್ನು ಕುರಿತ ಸುಧಾರಣೆಗೆ ಒತ್ತು ಸಿಗಬೇಕು. ಜನರಿಗೆ ಅವರ ಜೀವನಪರ್ಯಂತ ಸಿಗುವ ಅವಕಾಶಗಳು ಮತ್ತು ಕಲಿಕೆ ಸಾಧ್ಯವಾಗುವ ವಿಭಿನ್ನ ಸನ್ನಿವೇಶಗಳು ಇವುಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಸಮಾಜದ ಹೆಚ್ಚು ಭಾಗದ ಜನರು ಶಿಕ್ಷಣ ಮತ್ತು ಕಲಿಕೆಯ ಅವಕಾಶಗಳಿಗೆ ವಂಚಿತರಾಗುವ ಸನ್ನಿವೇಶವನ್ನು ಜ್ಞಾನ ಆಧರಿತ ಆರ್ಥಿಕ ಸನ್ನಿವೇಶಗಳು ಮತ್ತು ಸಮುದಾಯಗಳು ಅವಗಣನೆ ಮಾಡಬಾರದು. ನಾಲ್ಕನೆಯದಾಗಿ, ಸಂಪನ್ಮೂಲಗಳ ಸಮಾನ ವಿತರಣೆ ಈ ವ್ಯವಸ್ಥೆಯಲ್ಲಿ ಬಹಳ ಪ್ರಮುಖವಾದ ಅಂಶ. ಇದು ಎಲ್ಲ ಭಾಗದ, ಎಲ್ಲ ವರ್ಗದ ಜನರಿಗೆ ಸಮನಾಗಿ ಆಗಬೇಕು. ಜೀವನಪರ್ಯಂತ ಶಿಕ್ಷಣದ ನಿಯಮಾವಳಿಗಳ ರೂಪಣೆ ಮತ್ತು ಅನ್ವಯಗಳಲ್ಲಿ ಎಲ್ಲ ಪಾಲುದಾರರ ಕ್ರಿಯಾತ್ಮಕ ಸಹಕಾರ ಮತ್ತು ಭಾಗವಹಿಸುವಿಕೆ ಇರಬೇಕು. ಇದು ಶಿಕ್ಷಣ ಖಾತೆ ಮಾತ್ರವಲ್ಲದೆ ಸಂಬಂಧಪಟ್ಟ ಉಳಿದೆಲ್ಲ ಖಾತೆಗಳಿಗೂ ಅನ್ವಯಿಸುವಂತಹುದು.

ಜೀವನ ಪರ್ಯಂತ ಕಲಿಕೆಯ ಹಂತಗಳನ್ನು ಗುರುತಿಸುವ ಪ್ರಯತ್ನ ಈ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿ ಕಾಣಬರುತ್ತದೆ. 6 ರಿಂದ 24ನೇ ವಯಸ್ಸಿನವರೆಗಿನ ಕಲಿಕೆ ಸಾಮಾನ್ಯವಾಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ–ಪ್ರಾಥಮಿಕ, ಪ್ರೌಢ ಹಾಗೂ ಮುಂದಿನ ಹಂತಗಳಲ್ಲಿ–ನಡೆಯುತ್ತದೆ. ಕುಟುಂಬ, ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಸಮೂಹ ಮಾಧ್ಯಮಗಳು ಇದೇ ಸಂದರ್ಭದಲ್ಲಿ, ಆದರೆ ಔಪಚಾರಿಕೇತರ ಹಾಗೂ ಅನೌಪಚಾರಿಕ ನಿಯೋಗಗಳ ರೀತಿಯಲ್ಲಿ ಪಾತ್ರ ವಹಿಸುತ್ತವೆ. ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ವಲಯಗಳಲ್ಲಿನ ಬೆಳವಣಿಗೆಯ ಮೂಲಕ ಸರ್ವಾಂಗೀಣ ಬೆಳವಣಿಗೆಯನ್ನು ಸಾಧಿಸುವುದೇ ಈ ಅವಧಿಯಲ್ಲಿ ಕಲಿಕೆಯ ಉದ್ದೇಶ. ಮುಂದಿನದು ಕೆಲಸಮಾಡುವ ಅಥವಾ ದುಡಿಮೆಯ ಕಾಲ. ಇದನ್ನು ಸಾಮಾನ್ಯವಾಗಿ 25 ರಿಂದ 60 ವರ್ಷಗಳವರೆಗೆ ಗುರುತಿಸಲಾಗುತ್ತದೆ. ಈ ಹಂತದಲ್ಲಿ ಮುಖ್ಯವಾಗಿ ಬೋಧನಾ ಮಾಧ್ಯಮಗಳು, ಕಾರ್ಯಕ್ಷೇತ್ರಗಳು, ಕಾರ್ಯಪರಿಸರಗಳು, ಸಹೋದ್ಯೋಗಿಗಳು, ಪ್ರವಾಸ, ಬಹುಮಾಧ್ಯಮ, ಮಾಹಿತಿ ತಂತ್ರಜ್ಞಾನ, ಪರಿಸರ ಇವುಗಳಿಂದ ಕಲಿಕೆ ನಿರಂತರವಾಗಿ ಸಾಗುತ್ತದೆ. ಅರವತ್ತು ವರ್ಷದ ನಂತರದ ಕಾಲ ಮುಂದಿನ ಹಂತ. ಇಳಿವಯಸ್ಸಿನಲ್ಲಿ ಅವರ ವಯಸ್ಸಿಗೆ ಅನುಗುಣವಾದ ಚಟುವಟಿಕೆಗಳಿಂದ ಕಲಿಯುವ ಅವಕಾಶಗಳು ಹೆಚ್ಚು. ಉದಾಹರಣೆಗೆ, ಕಲೆ, ಸಂಗೀತ, ವಯಸ್ಕ ಕ್ರೀಡೆಗಳು, ಕಸೂತಿ, ಸಮಾಜ ಸೇವೆ ಇತ್ಯಾದಿ. ಇವು ಸಾಮಾನ್ಯವಾಗಿ ಎಲ್ಲ ಸಮಾಜಗಳಲ್ಲೂ ಹೆಚ್ಚು ಗೌರವಿಸಲ್ಪಡುತ್ತವೆ. ಇದಲ್ಲದೆ ಈ ಸಮಯದಲ್ಲಿ, ಸಮುದಾಯ ಸಂಘಗಳಲ್ಲಿ, ಸಮಾಜಸೇವಾಸಂಸ್ಥೆಗಳಲ್ಲಿ ಸ್ವಯಂಪ್ರೇರಿತರಾಗಿ ಕೆಲಸಮಾಡುವ ಸನ್ನಿವೇಶದಲ್ಲಿ ಹೆಚ್ಚು ಹೆಚ್ಚು ಕಲಿಯುವ ಅವಕಾಶಗಳಿರುತ್ತವೆ. ಅದು ಅವರಿಗೆ ಆಂತರಿಕವಾದ ತೃಪ್ತಿ, ಸಮಾಧಾನ ನೆಮ್ಮದಿಗಳನ್ನು ಕೊಡುತ್ತದೆ.

ಕಲಿಕಾ ಸಮಾಜದ (Learning Society) ಸಂದರ್ಭದಲ್ಲಿ ಬೆಳೆಸಬೇಕಾದ ಸಾಮರ್ಥ್ಯಗಳನ್ನು ಕುರಿತಂತೆ ವಿಶ್ವಬ್ಯಾಂಕ್ ವಿಶೇಷವಾಗಿ ಚಿಂತಿಸಿದೆ. ಇದು ಸೂಚಿಸುವ ಉಪಕ್ರಮ ಹಲವಾರು ಸಾಮರ್ಥ್ಯಗಳನ್ನು ಒಳಗೊಂಡಿದೆ. ಅಕ್ಷರತೆ ಇತ್ಯಾದಿಗಳನ್ನು ಒಳಗೊಂಡಂತೆ ಶೈಕ್ಷಣಿಕ ಕೌಶಲಗಳು, ವಿದೇಶೀ ಭಾಷೆ, ಗಣಿತ, ವಿಜ್ಞಾನ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಸುವ ಸಾಮರ್ಥ್ಯಗಳ ಜೊತೆಗೆ ಅವುಗಳನ್ನು ಪರಿಣಾಮಕಾರಿಯಾಗಿ ಮತ್ತು ಸ್ವತಂತ್ರವಾಗಿ, ಆಲೋಚನಾಪರವಾಗಿ ಬಳಸಿಕೊಳ್ಳುವ ಸಾಮರ್ಥ್ಯ ಇದರ ಪ್ರಕಾರ ಬಹಳ ಮುಖ್ಯವಾದವುಗಳು. ಇದೆಲ್ಲದರ ಜೊತೆಗೆ ಸಾಮಾಜಿಕವಾಗಿ ವಿಭಿನ್ನವಾದ ಗುಂಪುಗಳ ಜೊತೆಯಲ್ಲಿ ಬೆರೆತು ಕೆಲಸಮಾಡುವ ಸಾಮರ್ಥ್ಯ ಜೀವನಪರ್ಯಂತ ಕಲಿಕೆಗೆ ಅವಶ್ಯಕ ಎಂಬುದು ಜಾಗತಿಕ ಬ್ಯಾಂಕ್‌ನ ಅಭಿಪ್ರಾಯ. ಈ ಕಲಿಕಾ ವ್ಯವಸ್ಥೆಯಲ್ಲಿ ನಿರತನಾದವ, ಬದುಕಿನ ಯೋಜನೆಯನ್ನು ಸ್ವತಂತ್ರವಾಗಿ ರೂಪಿಸುವ ಸಾಮರ್ಥ್ಯವನ್ನು ಪಡೆದಿರುವುದರ ಜೊತೆಗೆ ಬಹುಸಾಂಸ್ಕೃತಿಕ ಸನ್ನಿವೇಶದಲ್ಲಿ ಕೆಲಸಮಾಡಲು ಸಿದ್ಧನಾಗಿರುವ ಮನಸ್ಥಿತಿ ಇರುವವನಾಗಿರಬೇಕು.

ಜೀವನಪರ್ಯಂತ ಕಲಿಕೆಗೆ ಸಂಬಂಧಿಸಿದಂತೆ ಯುನೆಸ್ಕೋದ ಚಿಂತನೆ ಜಾಗತಿಕ ಬ್ಯಾಂಕ್‌ನ ಚಿಂತನೆಗಿಂತ ಹೆಚ್ಚು ಮಾನವೀಯವಾಗಿದೆ. ಅದು ವ್ಯಕ್ತಿಯ ಸಂಪೂರ್ಣ ಅಥವಾ

Digitised by Bharatavani, CIIL

ಸರ್ವಾಂಗೀಣ ಬೆಳವಣಿಗೆಯನ್ನು ಗಮನಕ್ಕೆ ತೆಗೆದುಕೊಂಡಿದೆ. ಶಿಕ್ಷಣ ಕಲಿಯಲು ಕಲಿಸಬೇಕೇ ವಿನಾ ಶಾಲೆಯ ಹೊಂದಾಣಿಕೆಗಾಗಲೀ ಉದ್ಯೋಗ ಮಾರುಕಟ್ಟೆಗಳ ಆವಶ್ಯಕತೆಗಳ ಪೂರೈಕೆಗಾಗಲೀ ಅಲ್ಲ. ಅದರ ಪ್ರಕಾರ ವ್ಯಕ್ತಿ ವ್ಯಕ್ತಿಯಾಗಿ ಬದುಕಲು ಸಮರ್ಥನಾಗಿ ಮಾಡುವುದೇ ಜೀವನ ಪರ್ಯಂತ ಶಿಕ್ಷಣದ ಗುರಿಯಾಗಬೇಕು.

ಕಲಿಕೆಯ ಪ್ರೀತಿ ನಿರಂತರ ಕಲಿಕೆಗೆ ಒಂದು ಆಶೆಯನ್ನು ಹುಟ್ಟಿಸುತ್ತದೆಯಲ್ಲದೆ ಒಂದು ಕಲಿಕಾ ಸಮಾಜವನ್ನು ಮುಂದುವರಿಸಿಕೊಂಡು ಹೋಗುತ್ತದೆ. ಹಾಗಾಗಿ ಜನರಿಗೆ ಆರ್ಥಿಕ, ವೈಜ್ಞಾನಿಕ ಮತ್ತು ತಂತ್ರಜ್ಞಾನಾತ್ಮಕ ಬೆಳವಣಿಗೆಯ ಮೇಲೆ ಪ್ರಜಾಸತ್ತಾತ್ಮಕವಾದ ಹಿಡಿತವನ್ನು ಸಾಧಿಸಲು ಅಧಿಕಾರವನ್ನು ಕೊಡುವುದು ಜೀವನಪರ್ಯಂತ ಕಲಿಕೆಯ ಗುರಿಯಾಗಿರಬೇಕು. ಹೀಗೆ ಯುನೆಸ್ಕೊ ಜೀವನಪರ್ಯಂತ ಕಲಿಕೆಯನ್ನು ಕುರಿತ ಸಂಪೂರ್ಣ ಆರ್ಥಿಕವಾದ ವಾದಗಳನ್ನು ಅಲ್ಲಗಳೆದಿದೆ.

ಒಟ್ಟಿನಲ್ಲಿ ಜೀವನಪರ್ಯಂತ ಕಲಿಕೆಯ ಸಂದರ್ಭದಲ್ಲಿ ಪ್ರಮುಖವಾದ ಸಾಮರ್ಥ್ಯಗಳನ್ನು ಹೀಗೆ ವಿವರಿಸಬಹುದು. ಮಾತೃಭಾಷೆಯಲ್ಲಿ ಉತ್ತಮ ಸಂವಹನ – ಇದು ಮೌಖಿಕವಾಗಿ ಮತ್ತು ಲಿಖಿತವಾಗಿ ಪರಿಕಲ್ಪನೆ, ಆಲೋಚನೆ, ಭಾವನೆ, ಘಟನೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯ. ಇದರ ಜೊತೆಗೆ ಸಾಮಾಜಿಕವಾದ ಮತ್ತು ಆಯಾ ಭಾಷೆಯ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಸಮರ್ಪಕವಾಗಿ ಸಂವಹನ ಮಾಡುವ ಸಾಮರ್ಥ್ಯ ಅಗತ್ಯ. ಇದರ ಜೊತೆಗೆ ಅನ್ಯ ಅಥವಾ ಪರದೇಶೀಯ ಭಾಷೆಗಳಲ್ಲಿ ಸಂವಹನ ಸಾಮರ್ಥ್ಯವೂ ಮುಖ್ಯವಾದುದು. ಇದು ಅಂತರ್‌ಸಂಸ್ಕೃತಿಯ ಅರಿವನ್ನು ಒಳಗೊಂಡಿರುವಂತಹುದು. ಇತರ ಭಾಷೆಗಳಲ್ಲಿ ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ ಕೌಶಲಗಳನ್ನು ಇದು ಒಳಗೊಳ್ಳುತ್ತದೆ. ಈ ಸನ್ನಿವೇಶದಲ್ಲಿ ಮೂಡಿಸಿಕೊಳ್ಳಬೇಕಾದ ಮತ್ತೊಂದು ಸಾಮರ್ಥ್ಯ ಎಂದರೆ, ಗಣಿತ ವಿಷಯಕವಾದ ಸಾಮರ್ಥ್ಯ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಕುರಿತ ಮೂಲಭೂತ ಸಾಮರ್ಥ್ಯಗಳು. ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಗಣಿತ ಸಂಬಂಧಿತ ಆಲೋಚನೆಯನ್ನು ಬೆಳೆಸುವುದು ಮತ್ತು ಅದನ್ನು ಅನ್ವಯಿಸುವುದು ಇಲ್ಲಿ ಮುಖ್ಯವಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಕುರಿತ ಮೂಲಭೂತ ಜ್ಞಾನ ಪ್ರಾಕೃತಿಕ ಜಗತ್ತನ್ನು ವಿವರಿಸುವ ಜ್ಞಾನ ಮತ್ತು ವಿಧಾನಗಳ ಬಳಕೆ ಮತ್ತು ಅನ್ವಯಗಳನ್ನು ಕುರಿತಾದುದು. ಇದು ಮಾನವನ ಚಟುವಟಿಕೆಗಳಿಂದಾಗಿರುವ ಬದಲಾವಣೆಗಳು ಮತ್ತು ಪೌರನಾಗಿ ಪ್ರತಿ ವ್ಯಕ್ತಿಗಿರುವ ಜವಾಬ್ದಾರಿಯನ್ನೂ ಒಳಗೊಳ್ಳುತ್ತದೆ. ಮುಂದಿನದು ಡಿಜಿಟಲ್ ಸಾಮರ್ಥ್ಯ. ಇದು ಮಾಹಿತಿ–ಸಂವಹನ ತಂತ್ರಜ್ಞಾನವನ್ನು ವಿಶ್ವಾಸದಿಂದ ಮತ್ತು ವಿಮರ್ಶಾತ್ಮಕವಾಗಿ ಬಳಸುವ ಸಾಮರ್ಥ್ಯ. ಹಾಗಾಗಿ ಇದು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಮೂಲಭೂತ ಕೌಶಲವೂ ಹೌದು. ಇವೆಲ್ಲದರ ಜೊತೆಗೆ, ಕಲಿಯಲು ಕಲಿಯುವ ಸಾಮರ್ಥ್ಯ ಅತ್ಯಂತ ಪ್ರಮುಖವಾಗುತ್ತದೆ. ಇದು ಈ ಸಂದರ್ಭದಲ್ಲಿನ ಸಾಮರ್ಥ್ಯಗಳ ರಾಜ ಎಂದು ಹೇಳಬಹುದು. ಇದು, ವ್ಯಕ್ತಿ ತನ್ನ ಕಲಿಕೆಯನ್ನು ಮುಂದುವರಿಸುವ ಮತ್ತು ಸಂಘಟಿಸಿಕೊಳ್ಳುವ ಸಾಮರ್ಥ್ಯಕ್ಕೆ ಸಂಬಂಧಿಸಿದುದು. ಇದು ವೈಯಕ್ತಿಕವಾಗಿಯೂ ಇರಬಹುದು, ಸಾಮೂಹಿಕವಾಗಿಯೂ ಇರಬಹುದು. ಇದು ವ್ಯಕ್ತಿಯ ಅಗತ್ಯಗಳು, ವಿಧಾನವನ್ನು ಕುರಿತ ಅರಿವು ಮತ್ತು ಅವಕಾಶಗಳಿಗನುಗುಣವಾಗಿರುತ್ತದೆ. ಇದರ ಜೊತೆಜೊತೆಯಲ್ಲೇ ಗಮನಿಸಬೇಕಾದ ಇತರ ಸಾಮರ್ಥ್ಯಗಳೆಂದರೆ, ಸಾಮಾಜಿಕ ಮತ್ತು ಪೌರ ಸಾಮರ್ಥ್ಯಗಳು. ಸಾಮಾಜಿಕ ಸಾಮರ್ಥ್ಯಗಳು ವ್ಯಕ್ತಿಯ ವೈಯಕ್ತಿಕ ಮತ್ತು ಇತರ ವ್ಯಕ್ತಿಗಳ ಜೊತೆಗಿನ ಮತ್ತು ಅಂತರ್‌ಸಾಂಸ್ಕೃತಿಕ ಸನ್ನಿವೇಶಗಳಿಗೆ ಸಂಬಂಧಿಸಿದವು. ಇವು ವ್ಯಕ್ತಿಯನ್ನು ಸಾಮಾಜಿಕ ಮತ್ತು ವೃತ್ತಿಪರ ಬದುಕಿನಲ್ಲಿ ಪರಿಣಾಮಕಾರಿಯಾಗಿ ಮತ್ತು ರಾಚನಿಕವಾಗಿ ಭಾಗವಹಿಸಲು, ಸಿದ್ಧಗೊಳಿಸುವ, ಎಲ್ಲ ರೀತಿಯ ವರ್ತನೆಗಳನ್ನು ಒಳಗೊಳ್ಳುತ್ತವೆ. ವ್ಯಕ್ತಿ ವ್ಯವಹರಿಸುವ ವಿವಿಧ ಸನ್ನಿವೇಶಗಳಲ್ಲಿನ ವರ್ತನೆಗಳ ನೀತಿಸಂಹಿತೆಯ ಅರಿವು ಇಲ್ಲಿ ಪ್ರಮುಖವಾದುದು. ಪೌರ ಸಾಮರ್ಥ್ಯಗಳು ಎಂದರೆ ನಿರ್ದಿಷ್ಟವಾಗಿ, ವ್ಯಕ್ತಿಯ ಪರಿಸರದ ಸಾಮಾಜಿಕ ಮತ್ತು ರಾಜಕೀಯ ಪರಿಕಲ್ಪನೆಗಳು ಮತ್ತು ರಚನೆಗಳು ಪ್ರಜಾಪ್ರಭುತ್ವ, ನ್ಯಾಯ, ಸಮಾನತೆ, ಪೌರತ್ವ, ಪೌರಹಕ್ಕುಗಳು ಇತ್ಯಾದಿ. ಇವುಗಳ ಅರಿವು ಮತ್ತು ಅನ್ವಯಿಕ ಸಾಮರ್ಥ್ಯ .ಇವು ವ್ಯಕ್ತಿಯು ಕ್ರಿಯಾಶೀಲವಾಗಿ ಪ್ರಜಾಸತ್ತಾತ್ಮಕವಾಗಿ ಭಾಗವಹಿಸಲು ಅನುವು ಮಾಡಿಕೊಡುತ್ತವೆ. ಈ ಎಲ್ಲ ಸಾಮರ್ಥ್ಯಗಳಿಗೆ ಪೂರಕವಾದ ಸಾಮರ್ಥ್ಯಗಳೆಂದರೆ, ಮುಂದಾಳುತ್ವ ಮತ್ತು ಉದ್ಯಮಶೀಲತೆ. ಇವು ಇಂದಿನ ಸನ್ನಿವೇಶಗಳಲ್ಲಿ ಅತಿ ಮುಖ್ಯವಾದವುಗಳು. ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸುವ ಸಾಮರ್ಥ್ಯಗಳಿವು. ಇವು ಸೃಜನಶೀಲತೆ, ಆವಿಷ್ಕಾರ, ಮತ್ತು ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನೂ ಗುರಿಸಾಧನೆಗೆ ಯೋಜನೆಗಳನ್ನು ಯೋಜಿಸುವ ಮತ್ತು ನಿರ್ವಹಿಸುವ ಸಾಮರ್ಥ್ಯವನ್ನೂ ಒಳಗೊಳ್ಳುತ್ತವೆ. ವೃತ್ತಿಗೆ ಸಂಬಂಧಿಸಿದ ಅವಕಾಶಗಳ ಸಮಗ್ರ ಅರಿವು ವ್ಯಕ್ತಿಗೆ ಜಾಗೃತವಾಗಿದ್ದು, ಎಲ್ಲ ಅವಕಾಶಗಳನ್ನು ಇತ್ಯಾತ್ಮಕವಾಗಿ ಉಪಯೋಗಿಸಿಕೊಳ್ಳುವುದೂ ಇದಕ್ಕೆ ಸಂಬಂಧಿಸಿದುದೇ. ಸಾಮಾಜಿಕ ಮತ್ತು ವ್ಯಾಪಾರೀ ಚಟುವಟಿಕೆಗಳನ್ನು ಪ್ರಾರಂಭಿಸುವವರಿಗೆ ಅಥವಾ ಅದಕ್ಕೆ ಪೂರಕವಾಗಿ ಕೆಲಸಮಾಡುವವರಿಗೆ ಈ ಜ್ಞಾನ ಮತ್ತು ಕೌಶಲಗಳು ಅತ್ಯಾವಶ್ಯಕ. ಇವು ನೀತ್ಯಾತ್ಮಕವಾದ ಮೌಲ್ಯಗಳು ಮತ್ತು ಉತ್ತಮ ನಿರ್ವಹಣೆಯನ್ನು ಒಳಗೊಳ್ಳುತ್ತದೆ. ಇತರ ಸಾಮರ್ಥ್ಯಗಳೆಂದರೆ, ಸಾಂಸ್ಕೃತಿಕ ಅರಿವು ಮತ್ತು ಅಭಿವ್ಯಕ್ತಿಯನ್ನು ಕುರಿತ ಸಾಮರ್ಥ್ಯ. ಮಾಧ್ಯಮಗಳ ಕಾರ್ಯಕ್ರಮಗಳಲ್ಲಿ – ಸಂಗೀತ, ಸಾಧನಾ ಕಲೆಗಳು, ಸಾಹಿತ್ಯ, ದೃಶ್ಯ ಕಲೆಗಳು–ಆಲೋಚನೆ, ಅನುಭವ ಮತ್ತು ಭಾವನೆಗಳ ಅಭಿವ್ಯಕ್ತಿಯನ್ನು ಅನುಭವಿಸುವ ಮತ್ತು ಪ್ರಶಂಸಿಸುವ ವರ್ತನೆಗಳಿವು. ಇವು ಒಂದಕ್ಕೊಂದು ಪೂರಕವಾದವು, ಈ ಎಲ್ಲದರ ಜೊತೆಗೆ ಪ್ರತಿ ವಿಷಯದಲ್ಲಿಯೂ ವಿಮರ್ಶಾತ್ಮಕ ಆಲೋಚನೆ, ಸೃಜನಶೀಲತೆ, ಮುಂದಾಳುತ್ವ, ಸಮಸ್ಯಾ ಪರಿಹಾರ, ಕ್ಲಿಷ್ಟತೆಗಳ ವಿಶ್ಲೇಷಣೆ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಸಂವೇಗಗಳ ಕ್ರಿಯಾಶೀಲ ನಿರ್ವಹಣೆ ಇವು ಮುಖ್ಯವಾದವು.

Digitised by Bharatavani, CIIL

ಜೀವನ ಪರ್ಯಂತ ಕಲಿಕೆ ಅತ್ಯಂತ ಪ್ರಮುಖವಾಗುವುದು ಅದು ಅಡಗಿಸಿಕೊಂಡಿರುವ ವಿಶೇಷ ಮೌಲ್ಯಗಳಿಂದಾಗಿ. ಮಾನವನಿಗೆ ಅತ್ಯಂತ ಉನ್ನತವಾದ, ಸ್ವ–ಪರಿವರ್ತನೆ ಮತ್ತು ಇತರರ ಬಗೆಗಿನ ಕಾಳಜಿಗಳನ್ನು ಮೈಗೂಡಿಸಿಕೊಂಡು ಹೋಗಲು ಅನುವು ಮಾಡಿಕೊಡುವ ಸಾಧ್ಯತೆ ಇರುವ ಈ ಶಿಕ್ಷಣ ವ್ಯವಸ್ಥೆ ಈ ಕಾರಣದಿಂದಲೇ ಇಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯವೆನಿಸುತ್ತದೆ.

–ಡಾ. ಶಶಿಕಲ ಎ.

## ಜೈನ ಧರ್ಮದ ಶೈಕ್ಷಣಿಕ ಚಿಂತನೆಗಳು

ಜೈನಧರ್ಮವು ವೇದ ಹಾಗೂ ಪುರಾಣಗಳ ಆಧಾರ ರೀತ್ಯಾ ಬೌದ್ಧ ಹಾಗೂ ವೈದಿಕ ಧರ್ಮಗಳಂತೆ ವಿಶ್ವದ ಅತಿ ಪ್ರಾಚೀನವಾದ ಪವಿತ್ರ ಆಧ್ಯಾತ್ಮಿಕ, ಸಾಂಪ್ರದಾಯಿಕ, ವೈಚಾರಿಕ ಹಾಗೂ ವೈಜ್ಞಾನಿಕ ಧರ್ಮವಾಗಿದೆ. ಇದು ಭಾರತೀಯ ಅವೈದಿಕ ಧರ್ಮಶಾಸ್ತ್ರಗಳಲ್ಲಿ ನೀತಿಪ್ರಧಾನವಾಗಿ ಮುಖ್ಯವಾದುದು. ಇದರ ಉದಾತ್ತ ನೈತಿಕ ಕರ್ಮತತ್ತ್ವಗಳು ಜೀವಜಗತ್ತಿನ ಮಾನಸಿಕ, ಬೌದ್ಧಿಕ ಹಾಗೂ ದೈಹಿಕ ಸ್ವಾಸ್ಥ್ಯಕ್ಕೆ ನೆರವಾಗಿವೆ; ಧಾರ್ಮಿಕ ಹಾಗೂ ಶಾಸ್ತ್ರದರ್ಶನಗಳು ಐತಿಹಾಸಿಕ ಮಹತ್ವವನ್ನು ಹೊಂದಿವೆ. ಜೈನ ಸಿದ್ಧಾಂತಗಳು ಮುಕ್ತ, ವಿಶುದ್ಧ, ಅನಾದಿ ಎಂದು ಹೆಸರಾಗಿವೆ. ಭಾಗವತ ಪುರಾಣದಲ್ಲಿನ ಋಷಭದೇವನ ಕಥೆಯು ಜೈನಧರ್ಮದ ಪ್ರಾಚೀನತೆಗೆ ಉತ್ತಮ ಉದಾಹರಣೆಯಾಗಿದೆ. ಜೈನಧರ್ಮದ 24 ತೀರ್ಥಂಕರರುಗಳಲ್ಲಿ ಪ್ರಥಮ ತೀರ್ಥಂಕರ ಭಗವಾನ್ ಋಷಭದೇವ ಅರ್ಥಾತ್ ಆದಿನಾಥನು ಜಿನಧರ್ಮವನ್ನು ಸ್ಥಾಪಿಸಿ ಬೋಧನೆ ಮಾಡಿ ಪ್ರತಿಪಾದಿಸಿದನು. ಈತನ ಕಾಲವನ್ನು ನಿರ್ದಿಷ್ಟವಾಗಿ ಎಣಿಕೆಮಾಡುವುದು ಕ್ಲಿಷ್ಟಕರವಾದುದು. ಆದಾಗ್ಯೂ ಸಾಂಪ್ರದಾಯಿಕ ಕಾಲನಿಗದಿಯ ಪ್ರಕಾರ ಒಂದು ಸಾಗರೋಪಮ ವರ್ಷಗಳ ಹಿಂದೆ (ಕ್ರಿ.ಪೂ.3000) ಅರ್ಥಾತ್ ಗಣಿತಶಾಸ್ತ್ರ ಜಾಮಿತಿಯ ರೀತ್ಯ ಅಸಂಖ್ಯಾತ ವರುಷಗಳ ಹಿಂದಿನ ಕಾಲಘಟ್ಟದಲ್ಲಿ ಜೀವಿಸಿದ್ದನೆನ್ನಲಾಗಿದೆ. ಆದಿ ತೀರ್ಥಂಕರನನ್ನು ಋಗ್ವೇದದಲ್ಲಿ ಉಲ್ಲೇಖಿಸಿರುವುದರಿಂದ ಚರಿತ್ರೆಪೂರ್ವದ ಕಾಲಘಟ್ಟಕ್ಕೆ ಸೇರಿದವನೆಂಬುದಾಗಿಯೂ ತಿಳಿಯಲಾಗಿದೆ.

ಭಾರತೀಯ ಧಾರ್ಮಿಕ ಪರಂಪರೆಯ ಹಿನ್ನೆಲೆಯಲ್ಲಿ ವಿಸ್ತೃತ, ವಿಶೇಷ ಹಾಗೂ ಸದೃಢವಾಗಿ ಬೆಳೆದುಬಂದ ಪ್ರಮುಖ ನೀತಿಧರ್ಮಗಳಲ್ಲಿ ಜೈನಧರ್ಮವೂ ಒಂದು. ಇದರ ಇತಿಹಾಸ, ಪರಂಪರೆ, ಸಿದ್ಧಾಂತ, ಸಾಹಿತ್ಯ, ಸಂಸ್ಕೃತಿ, ಆಚಾರ ವಿಚಾರಗಳು ಉನ್ನತವಾದುವು, ಜೀವನಪಾವನದ ಸೋಪಾನಗಳು. ಇದರ ಪತಾಕೆ ವಿಶ್ವದಾದ್ಯಂತ ಹರಡಿ ಭೂಮ್ಯಾಕಾಶಗಳಲ್ಲಿ ಶಾಂತಿಯು ನೆಲೆಸುವಂತೆ ಮಾಡಿತು. ಇದು ಶ್ರವಣಪಂಥ ಧರ್ಮ. ಜಿನನಿಂದ ಉಪದೇಶಿಸಲ್ಪಟ್ಟ ಧರ್ಮವೇ ಜೈನಧರ್ಮ. ಜಿನನೆಂದರೆ ರಾಗದ್ವೇಷಗಳನ್ನು ಹುಟ್ಟು ಸಾವುಗಳನ್ನು ಗೆದ್ದವನು, ತನ್ನ ದಿವ್ಯವಾಣಿಯಿಂದ ಕರ್ಮ ಹಾಗೂ ಮನಸ್ಸನ್ನು ಗೆದ್ದವನು. ಯಾರು ತನ್ನ ಮನೋವಿಕಾರ ಭಾವನೆಗಳನ್ನು ಸಂಪೂರ್ಣವಾಗಿ ತೊಡೆದುಹಾಕಿ ಜಯಿಸಿರುವವನೋ ಆತನೇ ಜಿನನು.

ಜೈನಧರ್ಮವು ಜೀವ, ಜಗತ್ತು ಮತ್ತು ಈಶ್ವರ ಮೊದಲಾದ ಮೂಲಭೂತ ವಿಚಾರಗಳ ಬಗ್ಗೆ ತನ್ನದೇ ಆದ ವಿಶಿಷ್ಟ ಜ್ಞಾನವನ್ನು ನೀಡುತ್ತಾ ಸ್ವತಂತ್ರ ಚಿಂತನೆ, ದರ್ಶನ, ಧರ್ಮಗ್ರಂಥಗಳ ಅರಿವು, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಹೊಂದಿದೆ. ಇದು ವೇದಗಳನ್ನು ಪ್ರಮಾಣವೆಂಬುದಾಗಿ ಸ್ವೀಕರಿಸದ ಭಾರತೀಯ ಧರ್ಮ; ಇದನ್ನು ಅರ್ಹದ್ಧರ್ಮ ಮತ್ತು ನಿರ್ಗ್ರಂಥಧರ್ಮ ಎಂಬ ಹೆಸರುಗಳಿಂದಲೂ ಕರೆಯಲಾಗಿದೆ. ಇದರ ಕರ್ಮತತ್ತ್ವಗಳು ವಿಜ್ಞಾನ ತಳಹದಿಯ ಮೇಲೆ ನಿಂತಿದ್ದು ನಿಖರ ದಾರ್ಶನಿಕ ದೃಷ್ಟಿಯನ್ನು ಹೊಂದಿವೆ. ಆತ್ಮ ಮತ್ತು ಕಾಲಗಳೆರಡಕ್ಕೂ ಸಂಬಂಧಿಸಿದ ಒಂದು ವಿಚಾರ ವಾಹಿನಿಯನ್ನು ತೀರ್ಥಂಕರರು ಜಗತ್ತಿನಲ್ಲಿ ಹರಿಸಿದರು. ತೀರ್ಥಂಕರರೇ ಜೈನರಿಗೆ ಆರಾಧ್ಯರು. ಜಿನಧರ್ಮ (ಧರ್ಮಚಕ್ರ), ಜಿನಾಗಮ(ಶಾಸ್ತ್ರಗ್ರಂಥ), ಜಿನಚೈತ್ಯ(ಜಿನಬಿಂಬ), ಜಿನಚೈತ್ಯಾಲಯ(ಜಿನಮಂದಿರ)ವು ಧಾರ್ಮಿಕ ಪರಿಜ್ಞಾನದ ಆಕರಗಳು, ನಿಲಯಗಳು.

**ಪರಿಕಲ್ಪನೆಗಳು:**

ದೇವರ ಅಸ್ತಿತ್ವದ ಬಗೆಗಿನ ಜೈನಧರ್ಮದ ನಂಬಿಕೆಯು ಇತರ ಭಾರತೀಯ ಧರ್ಮಗಳಿಗಿಂತ ವಿಭಿನ್ನವಾದುದು. ಜೈನರ ದೈವತ್ವದ ಕಲ್ಪನೆಯೇ ಅಮೂರ್ತವಾದುದು. ಅವರು ಆರಾಧಿಸುವುದು ಗುಣಗಳನ್ನು.ದೇವನಾದರೂ ಒಬ್ಬ ಆಧ್ಯಾತ್ಮಿಕಮೂರ್ತಿಯಾಗಿರುತ್ತಾನೆ; ದೇವರು ಸುಖ ಸಂತೋಷಗಳ ದಾತಾರನಲ್ಲ. ಈ ಧರ್ಮ ಅತಿಮಾನುಷ ಶಕ್ತಿಯನ್ನು ಒಪ್ಪುವುದಿಲ್ಲ. ಜೈನಧರ್ಮ ಒಂದು ವಿಧದಲ್ಲಿ ಈಶ್ವರ(ದೇವರು)ನನ್ನು ಒಪ್ಪುವುದಾದರೂ ಆತನು ಜಗತ್ತಿನ ಸೃಷ್ಟಿಕರ್ತನೆಂಬುವುದನ್ನು, ನಿಶ್ಚಯಕರ್ತನೆಂಬುದನ್ನು, ಅವತಾರದ ಬಗೆಗಿನ ಧೋರಣೆಗಳನ್ನು ಹಾಗೂ ಅಂತರ್ಯಾಮಿಯಾಗಿ ನಿಯಮಿಸುತ್ತಿರುವನೆಂಬುದನ್ನು ಒಪ್ಪುವುದಿಲ್ಲ. ಜೈನ ಸಿದ್ಧಾಂತದ ಪ್ರಕಾರ ಸೃಷ್ಟಿಕರ್ತನಾದ ಪರಮಾತ್ಮನೆಂಬುವನಿಲ್ಲ, ಅಗೋಚರ ಲೋಕದಿಂದ ಇಳಿದುಬಂದ ಒಂದು ಅಲೌಕಿಕ ಶಕ್ತಿಯೂ ಅಲ್ಲ. ಆದರೆ ಪರಮಾತ್ಮನು ಪರಿಶುದ್ಧನಾದ ಸಿದ್ಧಾತ್ಮ, ದಿವ್ಯಾತ್ಮ. ಇದರಂತೆ ಪ್ರತಿಯೊಂದು ಜೀವಿಯೂ ಪರಮಾತ್ಮನಾಗಲು ಸಾಧ್ಯ. ಆದರೆ ಈ ಲೋಕದಲ್ಲಿರುವ ಪ್ರತಿಯೊಂದು ಚರಾಚರ ವಸ್ತುವಿನಲ್ಲಿಯೂ ಒಂದೊಂದು ಆತ್ಮವಿದೆ. ಅದು ಅನಂತ, ಅನಾದಿ. ಮೋಕ್ಷಪ್ರಾಪ್ತಿಯ ನಂತರ ವ್ಯಕ್ತಿ ಮತ್ತೆ ಜಗತ್ತಿಗೆ ಹಿಂದಿರುಗುವುದಿಲ್ಲ. ಆದಾಗ್ಯೂ ಜೈನರು ನಿರೀಶ್ವರವಾದಿ ಅಥವಾ ನಿರಾಶಾವಾದಿಗಳಲ್ಲ. ಜೈನರು ಬದುಕಿನ ನಶ್ವರತೆಯನ್ನು ಎತ್ತಿ ತೋರಿಸಿದ್ದಾರೆ. ಈ ಬ್ರಹ್ಮಾಂಡವು ಸರ್ವಶಕ್ತನ ಕ್ರಿಯೆಯಾಗಿರದೆ ಇದರ ಪ್ರತಿಯೊಂದು ವಸ್ತುವೂ ಸ್ವಯಂ ಅಸ್ತಿತ್ವದಲ್ಲಿರುವ ಶಾಶ್ವತ ವಸ್ತುವಾಗಿದೆ ಹಾಗೂ ಭೂತ, ಭವಿಷ್ಯತ್, ವರ್ತಮಾನಕಾಲದಲ್ಲಿದ್ದುದಾಗಿದೆ. ಈ ವಿಚಾರ ಜೈನಧರ್ಮದ ತತ್ತ್ವಗಳನ್ನು ವಿಶಾಲ ಭೂಮಿಕೆಯಿಂದ ನೀತಿಯುತ, ವೈಜ್ಞಾನಿಕ ಹಾಗೂ ತರ್ಕಸಮ್ಮತವಾಗಿ ವಿವರಿಸಿ ವಿಶ್ವಪ್ರೇಮ, ವಿಶ್ವಬಂಧುತ್ವವನ್ನು

Digitised by Bharatavani, CIIL

ಸಾರಿದೆ ('ಪರಸ್ಪರೋಪಗ್ರಹೋ ಜೀವಾಣಾಂ'). ಅಹಿಂಸೆ, ತ್ಯಾಗ ಮತ್ತು ತಪಸ್ಸು ಜೈನಧರ್ಮದ ಮುಖ್ಯಾಂಶಗಳು, ಪರಮಲಕ್ಷಣಗಳು; ಜೈನರು ಶೂನ್ಯವಾದಿಗಳಲ್ಲ. ನಿರ್ವಾಣಾವಸ್ಥೆ (ಮುಕ್ತಾವಸ್ಥೆ)ಯು ಜೈನಧರ್ಮದ ಆತ್ಮನಿರ್ವಾಣವು. ಕೆಲವು ಮೌಲಿಕ ಆತ್ಮಗಳು ಸ್ವಯಂಪ್ರಭಾವದಿಂದಾಗಿ ತೀರ್ಥಂಕರ ಪದವಿಯನ್ನು ಹೊಂದಿ 'ಅರ್ಹತ್' (ಅರಿಹಂತ) ಎಂಬ ಕೈವಲ್ಯಪದವಿಯನ್ನು ಪಡೆದು ಆರಾಧ್ಯಗೊಳ್ಳುವವು. ಅಂಥ ಜೀವಾತ್ಮಗಳನ್ನು 'ಕೇವಲಿ' ಎನ್ನುತ್ತಾರೆ. ಕೇವಲಿ ('ಸರ್ವಜ್ಞ')ಯು ಸಮಯ ಮತ್ತು ಸ್ಥಾನದ ಅಂತರವನ್ನು ದಾಟುತ್ತ ಶುದ್ಧ ಹಾಗೂ ಪೂರ್ಣಜ್ಞಾನವನ್ನು ಪಡೆಯುತ್ತಾನೆ. ಕೇವಲಜ್ಞಾನಿಯು ದಿವ್ಯಜ್ಯೋತಿಯಾಗಿ ಪ್ರಜ್ವಲಿಸುವನು.

**ಚಾರಿತ್ರಿಕ ಹಿನ್ನೆಲೆ:**

ಭಗವಾನ್ ಮಹಾವೀರನು (ಕ್ರಿ.ಪೂ. 599–527) 2500 ವರ್ಷಗಳ ಹಿಂದೆ ಸಿದ್ಧಾರ್ಥ–ತ್ರಿಶಲಾದೇವಿ ದಂಪತಿಗಳಿಗೆ ಉತ್ತರ ಭಾರತದ ಕುಂಡಲಪುರದಲ್ಲಿ ಜನಿಸಿ ತನ್ನ ಉಪದೇಶವನ್ನು ಪ್ರಾಕೃತ ಭಾಷೆಯಲ್ಲಿ ನೀಡಿದನು. ತನ್ನ ಮೂವತ್ತೆರಡು ವರ್ಷಗಳ ಸುದೀರ್ಘ ವಿಹಾರ(ಸನ್ಮತಿ ಶ್ರೀವಿಹಾರ)ದಲ್ಲಿ ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿ ಅಹಿಂಸಾತತ್ತ್ವವನ್ನು ಬೋಧಿಸಿ ಸಮಾಜವನ್ನು ಅಂಧಶ್ರದ್ಧೆ, ಹಿಂಸಾಕೃತ್ಯಗಳಿಂದ ಮುಕ್ತಮಾಡಿದನು. ತನ್ನ ದಿವ್ಯೋಪದೇಶಗಳಲ್ಲಿ ಯಾವುದೇ ಭೇದಭಾವಗಳಿಲ್ಲದೆ ಸಾಮಾಜಿಕವಾಗಿ 4 ಸ್ತರಗಳನ್ನುಳ್ಳ (ಸಾಧುಗಳು, ಸಾಧ್ವಿಯರು, ಶ್ರಾವಕರು, ಶ್ರಾವಿಕೆಯರು) ಒಂದು ನಿಶ್ಚಿತ ವ್ಯವಸ್ಥೆಯನ್ನು ರೂಪುಗೊಳಿಸಿದನು, ಜೈನಧರ್ಮದ ಸುಧಾರಕ, ಪುನರುದ್ಧಾರಕನಾದನು. ಈತನ ಬೋಧನೆಗಳು ಮುಖ್ಯವಾಗಿ ಧರ್ಮ ಮತ್ತು ದರ್ಶನಗಳಿಂದ ಕೂಡಿವೆ. ಶೈಕ್ಷಣಿಕ ಚಿಂತನೆಯ ಪರಿವಿಡಿಯಲ್ಲಿ ಸರ್ವಾಧಾರಿತ ಮನೋಭೂಮಿಕೆಯ ಬುದ್ಧಿ, ಭಾವ, ಸಂಚಯ, ಕ್ರಿಯೆಗಳೆಂಬ ನಾಲ್ಕು ತತ್ತ್ವಗಳ ಸಮ್ಮಿಲನವಿದೆ. ಇವುಗಳು ಬದುಕಿನಲ್ಲಿ ವಿಶ್ವಾಸ, ವಿಚಾರ, ಆಚಾರಗಳನ್ನು ಅನುಸರಿಸುವಲ್ಲಿ ದಾರಿದೀಪವಾಗಿವೆ. ಸಮಾಜದ ಸುವ್ಯವಸ್ಥೆಗಾಗಿ ಮಹಾವೀರನು ಮೈತ್ರಿ (ಸ್ನೇಹ), ಪ್ರಮೋದ (ಉಲ್ಲಾಸ), ಕಾರುಣ್ಯ ಮತ್ತು ಮಧ್ಯಸ್ಥ ಭಾವನೆಗಳೆಂಬ ನಾಲ್ಕು ಭಾವನೆಗಳನ್ನು ನೀಡಿದನು. ಇವುಗಳು ದಯೆ, ಸೇವೆ, ಪರಸ್ಪರ ಸಹಕಾರ ಸಮಾಜವನ್ನು ವೃದ್ಧಿಸುತ್ತವೆ; ಉದಾರ ದೃಷ್ಟಿಕೋನ, ಸಂಘಟನಾಶಕ್ತಿ, ಚೈತನ್ಯಗಳನ್ನು ಒದಗಿಸುತ್ತವೆ.

**ಶೈಕ್ಷಣಿಕ ಧಾರ್ಮಿಕಾಂಶಗಳು:**

**ಸಪ್ತಶೀಲವ್ರತಗಳು:**

4 ಶಿಕ್ಷಾವ್ರತಗಳು– ಸಾಮಾಯಿಕ, ಅತಿಥಿ ಸಂವಿಭಾಗ, ಭೋಗೋಪಭೋಗ, ಪರಿಮಾಣ.

3 ಗುಣವ್ರತಗಳು– ದಿಗ್ವ್ರತ, ದೇಶವ್ರತ, ಅನರ್ಥದಂಡತ್ಯಾಗವ್ರತ.

**ಸಪ್ತತತ್ತ್ವಗಳು (ಪ್ರಮೇಯ ಪದಾರ್ಥಗಳು):**

ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ.

**ಪಂಚಾಣುವ್ರತಗಳು (ಅಣು=ಮಿತಿ; ವ್ರತ=ಶಕ್ತ್ಯಾನುಸಾರ ಪಾಲಿಸುವುದು):**

1. **ಅಸ್ತೇಯ:** ಇನ್ನೊಬ್ಬರ ವಸ್ತುವನ್ನು ಕದಿಯದಿರುವುದು. ಇದರಿಂದ ಸುಖ, ಶಾಂತಿಯಿಂದ ಬಾಳನ್ನು ಸವೆಸಲು ಸಾಧ್ಯ (ಅಚೌರ್ಯ).
2. **ಅಪರಿಗ್ರಹ:** ಇದು ಜೈನಧರ್ಮದ ಅತ್ಯುನ್ನತ ಸ್ಥಿತಿಯಾದ ದಿಗಂಬರತ್ವವನ್ನು ಜಗತ್ತಿನ ಎದುರು ವಾಸ್ತವೀಕರಿಸುವುದು. ಎಲ್ಲವನ್ನೂ ತ್ಯಜಿಸಿ ಆತ್ಮನನ್ನು ಮುಕ್ತಿಗೊಯ್ಯುವುದೇ ಜೀವನದ ಮೂಲ ಉದ್ದೇಶ. ಮಮಕಾರವನ್ನು ತ್ಯಜಿಸುವುದು ಅಥವಾ ಆಸೆಯಿಲ್ಲದಿರುವುದೇ ಅಪರಿಗ್ರಹ. ಅವಶ್ಯಕತೆಗಿಂತ ಹೆಚ್ಚಿನದನ್ನು ಸಂಗ್ರಹ ಮಾಡಬಾರದು. ಇದು ಮಾನವಜೀವಿಯು ಕರ್ಮಬಂಧನದಿಂದ ಬಿಡುಗಡೆಹೊಂದಿ ನಿರ್ವಾಣಹೊಂದುವುದಾಗಿದೆ. ಇದು ಸಮಾಜದ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಆಶಯಗಳಿಗೆ ಪೂರಕವಾದ ಸಮಾನತೆಯ ಸಿದ್ಧಾಂತವಾಗಿದೆ. ಇದು ಜೈನಧರ್ಮದ ಪ್ರಮುಖ ಚಿಂತನೆಗಳಲ್ಲಿ ಒಂದು.
3. **ಸತ್ಯ:** ಇದು ಅಹಿಂಸೆಯನ್ನು ಪೋಷಿಸುವ ವ್ರತವಾಗಿದೆ. ಸುಳ್ಳನ್ನು ಹೇಳದಿರುವುದು.
4. **ಬ್ರಹ್ಮಚರ್ಯ:** ವ್ಯಕ್ತಿಯು ವಿಷಯಸುಖಗಳಿಗೆ ದಾಸನಾಗದೆ, ಭೋಗಾಸಕ್ತಿಯಲ್ಲಿಯೇ ಮಗ್ನನಾಗಿರದೆ ಇಂದ್ರಿಯನಿಗ್ರಹ ಮಾಡುವುದು ಅವಶ್ಯ. ಅಶ್ಲೀಲ ಮನೋವಿಕಾರ ಉಂಟುಮಾಡುವ ನುಡಿ ಕೂಡದು.
5. **ಅಹಿಂಸೆ:** ಹಿಂಸೆಯಿಂದ ನಿವೃತ್ತನಾಗುವುದು.

ಪಂಚಾಣುವ್ರತಗಳನ್ನು ಗೃಹಸ್ಥರು ಮತ್ತು ಮಹಾಣುವ್ರತಗಳನ್ನು ಸನ್ಯಾಸಿಗಳು ಚಾಚೂತಪ್ಪದೆ ಪಾಲಿಸಬೇಕು. ಇವುಗಳು ಸಮ್ಯಕ್‌ದರ್ಶನಕ್ಕೆ ಆಧಾರವಾಗಿವೆ. ವ್ರತಗಳು ಶುದ್ಧಚಿತ್ತ ಚಿಂತನದಂತಹ ಶಿಕ್ಷಣ ಮೌಲ್ಯಗಳನ್ನು ವೃದ್ಧಿಸುತ್ತವೆ.

**ಪಂಚ ನಡಾವಳಿಗಳು:** ಜ್ಞಾನ (ಅನೇಕ ಭಾಷೆಗಳ ದೇಸೀಯ ಭಾಷೆಗಳ ಪರಿಜ್ಞಾನ), ಪರಿಣತ ತರ್ಕಶಾಸ್ತ್ರಜ್ಞತೆ, (ಯಾವುದೇ ಜೈನ ಸಿದ್ಧಾಂತಗಳ ವ್ಯಾಖ್ಯೆಯ ವಿಷಯದಾಳಕ್ಕೆ ತೆರಳಿ ಅದರ ಸಾರಸರ್ವಸ್ವವನ್ನು ಅರ್ಥೈಸಿ ವ್ಯಾಖ್ಯಾನಿಸುವ ಸಾಮರ್ಥ್ಯ ಹಾಗೂ ಸಂಬಂಧಿತ ಶಿಸ್ತುಬದ್ಧ ಆಲೋಚನಾ ಕ್ರಮಗಳ ಬಗೆಗೆ ತಾತ್ತ್ವಿಕ ಸಂಬಂಧಿತ ಮೇಧಾವಿ ಪಾಂಡಿತ್ಯ), ಧರ್ಮನಿಷ್ಠೆ, ಚರ್ಯೆ (ವರ್ತನೆ), ಮನೋನಿಗ್ರಹ (ಆತ್ಮಕ್ರಿಯಾರ್ಹತೆ).

**ಪಂಚಚರ್ಯೆಗಳು:** ನಡಿಗೆ, ಮಾತು, ಆಹಾರ ಸೇವನೆ, ವಸ್ತುಗಳ ವ್ಯವಸ್ಥೆ, ಸ್ವಾಸ್ಥ್ಯ (ನಿಶ್ಚಿಂತತೆ).

ಚತುರ್ಮನೋವಿಕಾರಗಳು: ಕ್ರೋಧ, ಗರ್ವ (ಪ್ರತಿಷ್ಠೆ), ಲೋಭ, ಕಾಮ, ಭಾವೋದ್ರೇಕಗಳ ನಿಯಂತ್ರಣ.

Digitised by Bharatavani, CIIL

ಚತುರ್ವಿಧ ದಾನಗಳು: ಆಹಾರದಾನ, ಅಭಯದಾನ, ಔಷಧದಾನ, ಶಾಸ್ತ್ರದಾನ.

ಚತುರ್ವಿಧ ಪುರುಷಾರ್ಥಗಳು: ಧರ್ಮ, ಅರ್ಥ, ಕಾಮ, ಮೋಕ್ಷ – ಇವುಗಳಲ್ಲಿ ಮೋಕ್ಷವು ಪ್ರಧಾನವಾದುದು. ಇವುಗಳನ್ನು ತ್ರಿರತ್ನಗಳಿಂದ (ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ್ಯ) ಪಡೆಯಬಹುದೆಂದು ಜೈನಧರ್ಮ ಪ್ರತಿಪಾದಿಸುತ್ತದೆ.

ತ್ರಿನಿಯಂತ್ರಣಗಳು: ದೇಹ (ಶರೀರ), ವಾಕ್, ಮನ.

**ಶೈಕ್ಷಣಿಕ ಚಿಂತನೆಗಳು:**

ಭಾರತೀಯ ಪ್ರಸ್ಥಾನವು ಜೈನಧರ್ಮದ ಲಕ್ಷಣಗಳನ್ನು ಒಳಗೊಂಡಿದೆ; ಮೂಲಭೂತವಾಗಿ ಧಾರ್ಮಿಕ ಏಕತ್ವದ ಆಧ್ಯಾತ್ಮಿಕ ತಳಹದಿಯಲ್ಲಿ ಶೈಕ್ಷಣಿಕ ವಿಚಾರಗಳಿವೆ; ಮೋಕ್ಷಮಾರ್ಗ ಗುರಿಯತ್ತ ದೃಷ್ಟಿಹರಿಸಿ ಅಂತಿಮವಾಗಿ ದಿವ್ಯಾನಂದ ಸ್ವರೂಪವನ್ನು ಹೊಂದಿದೆ; ತನ್ನ ಮೌಲಿಕ ಸಂಘಟನಾಶಕ್ತಿಯಿಂದಾಗಿ ಸಂಪೂರ್ಣ ಶೈಕ್ಷಣಿಕ ಪದ್ಧತಿಯನ್ನು ಹೊಂದಿದೆ. ತನ್ನ ನಿರಂತರ ಅಸ್ತಿತ್ವದಿಂದಾಗಿ ಸಮಾಜದ ಬಾಹ್ಯ ಹಾಗೂ ಅಂತರಂಗ ದೃಷ್ಟಿಗಳ ಉಪಯೋಗಕ್ಕಾಗಿ ಅನಂತ ಕೊಡುಗೆಯನ್ನಿತ್ತಿದೆ. ಜೈನತತ್ತ್ವಗಳು ಮತ್ತು ದರ್ಶನಗಳು ಜಾತ್ಯತೀತ ಪದ್ಧತಿಯ ಹಾದಿಯಲ್ಲಿನ ಶೈಕ್ಷಣಿಕ ಬೆಳವಣಿಗೆಗಾಗಿ ಅನನ್ಯತೆಯನ್ನು ಹೊಂದಿ ಮುನಿಗಳು ಮತ್ತು ಶ್ರಾವಕರು ಮಾನವೀಯ ಶಕ್ಯತಾದರ್ಶಕ ತತ್ತ್ವಗಳನ್ನು ಹಾಗೂ ಗುಣವಿಶೇಷಗಳನ್ನು ಹೊಂದಲು ಶೈಕ್ಷಣಿಕ ಚಿಂತನೆಗಳು ಅವಶ್ಯವಾದವು. ಮಾನವನು 'ವೀತರಾಗಭಾವ'(ರಾಗದ್ವೇಷರಹಿತನಾದ ಭಾವಕರ್ಮ ವಿರಾಗಿ)ವನ್ನು ಹೊಂದಿ ಮಾನವ ಸಹಜ ದೌರ್ಬಲ್ಯಗಳಿಂದ ವಿಮುಕ್ತ(ಮುಕ್ತಾತ್ವ)ನಾಗಲು ನೆರವಾಗುವವು. ತನ್ನ ನಡೆನುಡಿಗಳಲ್ಲಿ ಸರ್ವಜ್ಞತ್ವವನ್ನು ಹೊಂದುವ ಶಕ್ತಿಸಾಮರ್ಥ್ಯವನ್ನು ಮತ್ತು ಸ್ವಾಭಾವಿಕ ಗುಣಗಳನ್ನು ಪಡೆಯುವವನು.

ಜೈನ ಶೈಕ್ಷಣಿಕ ವಿಚಾರಗಳು ಬದುಕಿನ ನಡುಘಟ್ಟಗಳಲ್ಲಿ ಎದುರಾಗುವ ನೇತ್ಯಾತ್ಮಕ ಧೋರಣೆ ಹಾಗೂ ಸಮಸ್ಯೆಗಳನ್ನು ಶಮನಮಾಡಬಲ್ಲವು. ತತ್ಪರಿಣಾಮವಾಗಿ ವ್ಯಕ್ತಿಯ ಚಾರಿತ್ರ್ಯ ಮತ್ತು ಸನ್ನಡತೆ ವೃದ್ಧಿಯಾಗುತ್ತವೆ; ಮೌಲಿಕ ಸತ್ಯ ಹಾಗೂ ಸತ್ವಯುತ ಮೌಲ್ಯಗಳು ಅನಿಷ್ಟವಾದುದನ್ನು ಕನಿಷ್ಠ ಮಾಡುತ್ತವೆ; ಮಾನವೀಯ ಸಮಾಜವು ನಿರ್ಮಾಣಗೊಳ್ಳುತ್ತದೆ. ಈ ತಾತ್ತ್ವಿಕ ಗುಣಗಳಿಂದಾಗಿ ವ್ಯಕ್ತಿಯು ಎಂಥ ಕಠಿಣತಮ ಸ್ಥಳ–ಪರಿಸ್ಥಿತಿ–ಸಂದರ್ಭ–ಸನ್ನಿವೇಶಗಳನ್ನು ಎದುರಿಸಿ ಜಯಶಾಲಿಯಾಗುವ, ಪಕ್ಷಪಾತರಹಿತನಾಗುವ ಗುಣಗಳನ್ನು ಹೊಂದಿ ದಿಟ್ಟ ನಡವಳಿಕೆಯನ್ನು ರೂಢಿಸಿಕೊಳ್ಳುವನು. ಜೈನವಿಚಾರಕ್ಕೆ ಆಚಾರದ ನೈತಿಕ ನಿಯಮಗಳ ಚೌಕಟ್ಟು ಇದೆ. ಇದೇ ರೀತಿ ಕರ್ಮತತ್ತ್ವ, ಪದಾರ್ಥತತ್ತ್ವಗಳ ವಿಚಾರಗಳಲ್ಲಿ ಕೂಡ ನೈತಿಕತೆಯ ಎಳೆಗಳನ್ನು ಕಾಣಬಹುದು.

ಜೈನದರ್ಶನವು ಅತಿ ಪ್ರಬುದ್ಧವಾದುದು. ಅದಕ್ಕೆ ಕರ್ಮಸಿದ್ಧಾಂತದಲ್ಲಿ ಅಚಲ ನಂಬಿಕೆ. ಇದನ್ನು ಸೊಗಸಾಗಿ ನಿರೂಪಿಸಿದೆ. ಇಹಪರಗಳೆರಡರಲ್ಲೂ ನಂಬಿಕೆಯನ್ನಿರಿಸಿಕೊಂಡಿದೆ, ಜನ್ಮ ಜನ್ಮಾಂತರಗಳಲ್ಲಿ ನಂಬಿಕೆಯಿದೆ. ತನ್ನದೇ ಆದ ಜೈನಾಗಮಗಳನ್ನು ಹೊಂದಿದ್ದು ಅವುಗಳಲ್ಲಿ ಧರ್ಮದರ್ಶನದ ಆದರ್ಶವನ್ನು ಬೋಧಿಸುತ್ತದೆ. ವ್ಯಕ್ತಿಯ ಜೀವಿತದಲ್ಲಿ ಇಂದ್ರಿಯನಿಗ್ರಹ ಮತ್ತು ಉಗ್ರ ತಪಶ್ಚರ್ಯಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಿದೆ. ಕರ್ಮಬಂಧನದಿಂದ ಮುಕ್ತನಾದ ದಿವ್ಯಾತ್ಮನೇ ಜಿನನು. ತೀರ್ಥಂಕರರು ಇಲ್ಲಿಯ ಕರ್ಮಭೂಮಿಯಲ್ಲಿಯೇ ಜನಿಸಿ, ಅನಾದಿ ಕರ್ಮವನ್ನು ಅನುಭವಿಸಿ ಜಿನರಾದವರು. ಸಿದ್ಧಿಸಾಧನೆಯೇ ಅವರ ಮೂಲಸ್ರೋತ. ಧರ್ಮ ಮತ್ತು ದರ್ಶನಗಳು ಮಾನವನ ಸಾರ್ಥಕ ಬದುಕಿನ ವಾಹಕಗಳು. ಧರ್ಮದಲ್ಲಿ ಭಾವನೆ, ಬುದ್ಧಿ ಮತ್ತು ಕ್ರಿಯೆಗಳೆಂಬ ಮೂರು ಪರಮ ತತ್ತ್ವಗಳಿವೆ. ಜೈನಧರ್ಮವು ಕರ್ಮಸಿದ್ಧಾಂತವನ್ನು ಪ್ರತಿಪಾದಿಸುತ್ತ ಪರಲೋಕದ ಅಸ್ತಿತ್ವವನ್ನು ಒಪ್ಪುತ್ತದೆ; ಜನ್ಮಾಂತರದ ವಾದವನ್ನು ಅಂಗೀಕರಿಸುತ್ತದೆ. ಜ್ಞಾನ–ದರ್ಶನ–ಚೇತನ–ಸುಖಾನಂದವನ್ನು ಹೊಂದುವುದು ಆತ್ಮನ ಸಹಜ ಸ್ವಭಾವಗಳು. ಮಾನವನು ತನ್ನ ಸಾಧನೆಯಿಂದ ಭೌತಿಕ ಕ್ರಿಯೆಗಳು ಆತ್ಮನೊಡನೆ ಸಾಧನೆಗೈದಾಗ ಅಂತಿಮ ಗುರಿಯಾದ ತನ್ನ ಕರ್ಮಬಂಧನಗಳಿಂದ ವಿಮುಕ್ತನಾಗುವನು. ತತ್ಪರಿಣಾಮವಾಗಿ ಜೀವರಲ್ಲಿ ಭವ್ಯ, ಅಭವ್ಯ, ಆಸನ ಭವ್ಯ ಮತ್ತು ದೂರಭವ್ಯವೆಂದು ನಾಲ್ಕು ಭೇದಗಳನ್ನು ಗುರುತಿಸಲಾಗಿದೆ. ಕರ್ಮವೆಂದರೆ ಪ್ರತಿಯೋರ್ವ ಜೀವಾತ್ಮನಿಗೆ ಪ್ರತಿಸಮಯದಲ್ಲಿ ಬಂದು ಸೇರುವ ಜಡಪದಾರ್ಥದ ಬಹು ಸೂಕ್ಷ್ಮ ಪರಿಣಾಮಗಳ ಸಮೂಹ. ಈ ಪರಮಾಣುಗಳ ಪೈಕಿ ಕೆಲವು ಜಿಗುಟಾಗಿಯೂ ಮತ್ತೆ ಕೆಲವು ಒರಟಾದ ಗುಣಗಳನ್ನು ಹೊಂದಿರುತ್ತವೆ. ಅವುಗಳು ಒಂದಕ್ಕೊಂದು ಸೇರಿಕೊಂಡು ಪಿಂಡರೂಪವಾಗಿರುವ ಶಕ್ತಿಯು ಇವುಗಳಲ್ಲಿದೆ. ಹೊರಗಿನ ನಿಮಿತ್ತ ಕಾರಣಗಳಿಂದ ಈ ಪರಮಾಣಗಳು ಚದುರಿ ಬೇರೆ ಬೇರೆಯಾಗುವ ಶಕ್ತಿಯಿದೆ. ಈ ಕರ್ಮಕ್ಕೆ ಅದೃಷ್ಟವೆಂದು ಹೆಸರು. ಅದೃಷ್ಟವೆಂದರೆ ಇಂದ್ರಿಯಕ್ಕೆ ಗೋಚರವಾಗದಿರುವುದು.

ತಾನು ಮಾಡಿದ ಕರ್ಮಫಲದ ಕಾರ್ಯಕ್ಕೆ ಅನುಗುಣವಾಗಿ ಜೀವನಫಲವನ್ನು ಅನುಭವಿಸುವ ಕರ್ಮವು ಪುದ್ಗಲ; ಭೌತಿಕವಾದರೂ ಮಾನವನ ಕ್ರಿಯೆಯಿಂದ ಆಕರ್ಷಣೆಹೊಂದಿ ಆತ್ಮನೊಡನೆ ಸೇರಿಕೊಳ್ಳುತ್ತದೆ. ಇದರಿಂದಲೇ ಅದನ್ನು ಕರ್ಮವೆನ್ನುವುದು. ಇದನ್ನು 'ದ್ರವ್ಯಕರ್ಮ' (ಜೀವದೊಡನೆ ಬದ್ಧವಾದ ಕರ್ಮಗಳು) ಮತ್ತು 'ಭಾವಕರ್ಮ'ವೆಂದು ವಿಂಗಡಿಸಲಾಗಿದೆ. ಇವುಗಳ ಪ್ರಭಾವದಿಂದ ಜೀವನದಲ್ಲಿ ಉಂಟಾಗುವ ರಾಗದ್ವೇಷದ ಪರಿಣಾಮವನ್ನು ವಿಶ್ಲೇಷಿಸಲಾಗಿದೆ. ಸಮನ್ವಯವೇ ಜೈನಧರ್ಮದ ಮುಖ್ಯ ತಿರುಳು. ಈ ಸಿದ್ಧಾಂತಕ್ಕೆ ಅನೇಕಾಂತವಾದ ಮತ್ತು ಸ್ಯಾದ್ವಾದವೆನ್ನುತ್ತಾರೆ. ಇವುಗಳು ಮೂಲ ಸಿದ್ಧಾಂತಗಳು ಹಾಗೂ ಪ್ರಮುಖ ಆಧಾರಸ್ತಂಭಗಳು. ಇವು ಮಹಾವೀರನ ಸರ್ವಾಧಾರಿತ ವಿಶಾಲ, ಪ್ರಗತಿಶೀಲ ಮನೋಭೂಮಿಕೆಯ ತತ್ತ್ವಗಳಾಗಿವೆ.

ಅನೇಕಾಂತವಾದ: ಜೈನ ತತ್ತ್ವಗಳು ಏಕಮುಖವಾದುವಲ್ಲ. ಯಾವುದೇ ಒಂದು ವಸ್ತುವು ಪೂರ್ಣಸತ್ ಅಥವಾ ಪೂರ್ಣಅಸತ್

Digitised by Bharatavani, CIIL

ಆಗಿರದು. ಅನೇಕಾಂತ(ಅನೇಕ+ಅಂತ)ವಾದವು ಒಂದೇ ವಸ್ತುವನ್ನು ವಿವಿಧ ಹಾಗೂ ವಿಭಿನ್ನ ದೃಷ್ಟಿಕೋನಗಳಿಂದ ಕಾಣುವುದಾಗಿದೆ. ಬಹುಮುಖ – ಬಹುಧರ್ಮ – ಬಹುಆಯಾಮಗಳಿಂದ ಕೂಡಿರುವುದು ಎಂದಾಗಿದೆ. ಒಂದೇ ನಾಣ್ಯದ ಎರಡು ಮುಖಗಳಿರುವ ಹಾಗೆ ಇತರೆ ವಸ್ತುಗಳಿಗೆ ಅನೇಕ ಮುಖಗಳಿರಬಹುದು. ಇದು ಪದಾರ್ಥವೊಂದರ ಪೂರ್ಣಸತ್ಯವನ್ನು ತೆರೆದಿಟ್ಟು ಅರಿಯುವಂತೆ ಮಾಡುತ್ತದೆ, ಸೂಕ್ಷ್ಮವಾಗಿ ಪರಿಚಯಿಸುತ್ತದೆ. ಅವುಗಳಲ್ಲಿ ಪಕ್ಷಭೇದವಿಲ್ಲ. ಯಾವುದೇ ವ್ಯಕ್ತಿ, ವಸ್ತು ಅಥವಾ ಸ್ಥಿತಿಯು ಸಾಪೇಕ್ಷ ದೃಷ್ಟಿ(Relative View)ಯನ್ನು ಹೊಂದಿರಲು ಸಾಧ್ಯ. ವ್ಯಕ್ತಿಗೆ ಒಂದು ಮುಖವಾದರೆ ವ್ಯಕ್ತಿತ್ವಕ್ಕೆ ಹಲವು ಮುಖಗಳು. ಇದೇ ಜೈನಧರ್ಮದ ಸಂಪೂರ್ಣ ಜ್ಞಾನ – ಪುಣ್ಯ – ಸತ್ಯದ ಅಗತ್ಯ ಮತ್ತು ಮಹತ್ವವಾದುದನ್ನು ಅರುಹುತ್ತದೆ. ಯಥಾರ್ಥ ಜ್ಞಾನಭಾವದಿಂದ ವಿಪರೀತ ಭಾವ ಉಂಟಾಗದು. ಇದು ತುಂಬಾ ಉಪಯುಕ್ತವಾದ ಅಥವಾ ಪರಿಪೂರ್ಣ ಸತ್ಯಶೋಧನೆಯುಳ್ಳದ್ದು. ಇದು ಸಹನಶೀಲತೆ ಮತ್ತು ಅಹಿಂಸಾವಾದವನ್ನು ಪ್ರತಿಪಾದಿಸುತ್ತದೆ, ಪ್ರೇರೇಪಿಸುತ್ತದೆ; ಏಕತೆಯ ಸಂದೇಶವನ್ನು ಹೊಂದಿದ ಸತ್ಯದ ನಾನಾ ಮುಖಗಳನ್ನು ಪರಿಚಯಿಸುತ್ತದೆ. ಇದು ಸಮನ್ವಯತೆಯ ಸಾರಸರ್ವಸ್ವವಾಗಿದೆ. ಇದನ್ನು ಪಡೆಯಲು ಮತ್ತು ಚಾರಿತ್ರ್ಯವನ್ನು ರೂಪಿಸಿಕೊಳ್ಳಲು ಸರಿಯಾದ ಮಾರ್ಗ ತೋರುವಲ್ಲಿ ಯಶಸ್ವಿಯಾಗಿದೆ. ಇದು ಸತ್ಯಶೋಧನೆಯ ಆಕರವಾಗಿದೆ.

**ಸ್ಯಾದ್ವಾದ:** ಇದು 'ಸ್ಯಾತ್' ಮತ್ತು 'ವಾದ' ಎಂಬ ಎರಡು ಶಬ್ದಗಳಿಂದ ಉತ್ಪನ್ನವಾದ ಸಮಾಸಪದವಾಗಿದೆ (ಸ್ಯಾದ್ = ಕದಾಂಚಿತ್ = ಒಂದು ದೃಷ್ಟಿಯಿಂದ ಇಷ್ಟೆಲ್ಲಾ ಹೇಳಿದರೂ ಸಹ; ವಾದ = ಇನ್ನೂ ಹೇಳುವುದು ಇದೆ; ಅಂದರೆ ಇರುತ್ತದೆ ಅಥವಾ ಇರುವುದಿಲ್ಲ). ಜೈನ ವಿಚಾರ ಮತ್ತು ದೃಷ್ಟಿಕೋನಕ್ಕೆ ಸ್ಯಾದ್ವಾದವೇ ಮೂಲ, ಜಿನಧರ್ಮದ ಆದಿ ಬುನಾದಿ. ಸತ್ಯವಾದಿಗಳಾದ ಜಿನರು ಬೋಧಿಸಿದ ಸಿದ್ಧಾಂತವೇ ಸ್ಯಾದ್ವಾದ. ಇದು ಒಂದು ವಸ್ತುವಿನ ಪೂರ್ಣ ಅಥವಾ ಅಪೂರ್ಣ ಆದರೆ ಸತ್ಯದರ್ಶನ ಮಾಡುತ್ತ ಎಲ್ಲ ವ್ಯಕ್ತಿಗಳ ವಿಚಾರಗಳ ಸಮನ್ವಯವನ್ನುಂಟುಮಾಡುತ್ತದೆ. ಇದು ಮನುಷ್ಯನಲ್ಲಿ ಮನೋವೈಜ್ಞಾನಿಕ ಮತ್ತು ಆಧ್ಯಾತ್ಮಿಕವಾದದ ಸಮತೋಲನವನ್ನು ಉಂಟುಮಾಡಿ ಅದನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. "ಒಬ್ಬ ವ್ಯಕ್ತಿಯು ಒಂದು ಪದಾರ್ಥದ ವರ್ಣನೆಯನ್ನು ಆಸ್ತಿ, ನಾಸ್ತಿ ಹಾಗೂ ಉಭಯರೂಪದಿಂದ ಪಡೆಯುವಂತಾಗಬಹುದು. ಈ ಮೂರರ ಸಂಯೋಗದಿಂದ 7 ವಿಶೇಷಣಗಳು ಸಿದ್ಧವಾಗುತ್ತವೆ. 'ಸ್ಯಾತ್' ಶಬ್ದವನ್ನು ಜೋಡಿಸುವುದರಿಂದ ವಿಷಯವನ್ನು ತಿಳಿಯುವ ಮತ್ತು ತಿಳಿಸುವ ಒಂದು ಸಮುಚಿತ ಮಾರ್ಗವು ಸಿದ್ಧವಾಗುತ್ತದೆ". ಯಾವುದೇ ವಸ್ತು ಅಥವಾ ಸ್ಥಿತಿಗೆ ಸಂಬಂಧಿಸಿದಂತೆ, 'ಎಷ್ಟು ಹೇಳಬೇಕಾಗಿತ್ತೋ ಅದನ್ನು ಅಂತಿಮವಾಗಿ ಅಥವಾ ಪೂರ್ಣವಾಗಿ ಹೇಳುವುದು ಸಾಧ್ಯವಾಗುವುದಿಲ್ಲ'. ಇದನ್ನು ಯಾವುದೇ ಸಂದರ್ಭದಲ್ಲಿ ಹೇಳಬಹುದು. ಸ್ಯಾದ್ವಾದ ವಿಚಾರಗಳು ಜೈನ ತಾರ್ಕಿಕ ಚಿಂತನೆಗೆ ಗಂಭೀರತೆ, ಪ್ರೌಢಿಮೆ ಮತ್ತು ಗಟ್ಟಿತನವನ್ನು ತಂದಿತ್ತಿವೆ; ಉದಾರ ಮನೋಭಾವದ ಚಿಂತನಾಪದ್ಧತಿಯನ್ನು ಒಳಗೊಂಡಿವೆ. ಯಾವುದೂ ಪರಿಪೂರ್ಣವಲ್ಲ, ಅಪೂರ್ಣತೆಯೇ ಪರಿಪೂರ್ಣತೆಯ ಹೆಗ್ಗುರಿ.

'ಅನೇಕಾಂತವಾದ' ಮತ್ತು 'ಸ್ಯಾದ್ವಾದ' ಸಹೋದರ ಶಬ್ದಗಳಾಗಿದ್ದು ಜೈನದರ್ಶನದ ಚಿಂತನ ಮಂಥನ ಪ್ರಕ್ರಿಯೆಯಲ್ಲಿ ಗಹನವಾದ ಸಂಬಂಧವನ್ನು ಹೊಂದಿವೆ. ಜೈನದರ್ಶನದ ಪ್ರಕಾರ ಕಾಣುವ ಸಂಸಾರದ ಎಲ್ಲ ವಸ್ತುಗಳು ನಾನಾ ವಿಧಗಳ ಧರ್ಮಾತ್ಮಕವಾಗಿವೆ, ಬಹು ಆಯಾಮಗಳಿಂದ ಕೂಡಿವೆ. ಅವುಗಳು ಒಂದೇ ಆಯಾಮ ಅಥವಾ ಪಕ್ಷವಲ್ಲ. ಯಾವುದೇ ವಸ್ತು ಅಥವಾ ಸ್ಥಿತಿಯು ಒಂದೇ ಆಯಾಮವನ್ನು ಒಂದೇ ಸಮಯದಲ್ಲಿ ಒಂದೇ ಸಾರಿ ಹೇಳಬಹುದು ಅಥವಾ ನೋಡಬಹುದು ಅರ್ಥಾತ್ ಅದರ ಮೂಲತತ್ತ್ವದಲ್ಲಿ 'ಅನೇಕಾಂತ' ದೃಷ್ಟಿ ಇದ್ದೇ ಇದೆ. ಇದರ ಕಥನಶೈಲಿಯನ್ನು 'ಸ್ಯಾದ್ವಾದ'ವೆಂದು ಕರೆಯಲಾಗಿದೆ.

**ನಯ:** ಇದು ಯಾವುದೇ ವಿಷಯವನ್ನು ತಿಳಿಯುವ ಹಾಗೂ ಅದರ ಪರಸ್ಪರ ಸಂಬಂಧಗಳನ್ನು ವಿಶ್ಲೇಷಿಸುವ ವಿಶೇಷ ಸುಂದರ ಉಪಾಯಮಾರ್ಗವಾಗಿದೆ. ಯಾವುದೇ ಪದಾರ್ಥದ ಕುರಿತು ವಿಭಿನ್ನ ದೃಷ್ಟಿಕೋನವನ್ನು ಹೊಂದಿ ಸಂಪೂರ್ಣ ವಿವೇಚನೆಗೈಯುತ್ತದೆ.

**ಅಹಿಂಸೆ:** ಜೈನಧರ್ಮವು ಅಹಿಂಸೆಯನ್ನು ಪರಮೋಚ್ಛ ತತ್ತ್ವವನ್ನಾಗಿ ಹೊಂದಿದೆ. ಅಹಿಂಸೆ ಮತ್ತು ದಯೆಯ ಅಭಿವ್ಯಕ್ತಿ ಜೈನಧರ್ಮದ ಅಂತಃಸತ್ವ, ತಿರುಳು, ಜೀವಾಳ, ಲಕ್ಷಣ, ಭದ್ರ ತಳಹದಿ ಹಾಗೂ ಹೃದಯಾಂತರಾಳದ ಉಸಿರು. ಇದು ಮಾನವನ ಉನ್ನತಿ, ಜೀವಿಗಳ ರಕ್ಷಣೆಗೆ ಅನುಸರಿಸಬೇಕಾದ ಅತಿಮೌಲಿಕ ತತ್ತ್ವ. ಇದು ಜಾತ್ಯತೀತ, ಧರ್ಮಾತೀತ, ಮತಾತೀತ, ದೇಶಾತೀತ ಮತ್ತು ಕಾಲಾತೀತವಾದುದು. ಸಕಲ ಜೀವಿಗಳ ಒಳಿತಿಗಾಗಿ ಅನುಸರಿಸಬೇಕಾದ ಸನ್ಮಾರ್ಗಕ್ಕೆ ಮಾರ್ಗತತ್ತ್ವ. ಇದರಲ್ಲಿ ಸುಖ, ಶಾಂತಿ, ನೆಮ್ಮದಿ, ಪ್ರೀತಿ, ಭ್ರಾತೃತ್ವ, ಗೌರವ ಎಲ್ಲವೂ ಅಡಗಿವೆ. ಜೀವದಯೆಯೇ ಜೈನಧರ್ಮ, ಪರಮಧರ್ಮ, ವ್ರತ, ಪ್ರತಿಜ್ಞೆ, ಇದು ಭಯ ನಿವಾರಣೆಯ ಪ್ರಬಲ ಅಸ್ತ್ರ, ಹಿಂಸೆಯ ವಿರುದ್ಧ ಸ್ವರಕ್ಷಣೆಗಾಗಿ ಹೋರಾಡುವ ಬ್ರಹ್ಮಾಸ್ತ್ರ. ಜೈನ ಆಚಾರಕ್ಕೆ ಅಹಿಂಸೆಯೇ ಆಧಾರ; ಖಗ, ಮೃಗ, ದುಷ್ಟ ಮನುಷ್ಯರಿಂದ ಸಾತ್ವಿಕರು ತಮ್ಮನ್ನು ರಕ್ಷಿಸಿಕೊಳ್ಳುವ ಶಸ್ತ್ರವಿಧಾನ. ಇದರ ಶಿಕ್ಷಣ ಅತ್ಯವಶ್ಯ. ಇದರಿಂದ ಸದಾಚಾರಭಾವ ಉಂಟಾಗುತ್ತದೆ, ಕರುಣಾಭಾವನ ಪ್ರವೃತ್ತಿ ಬೆಳೆಯುತ್ತದೆ. ಇದು ಸಾರ್ವಕಾಲಿಕ, ಸಾರ್ವತ್ರಿಕ, ಸರ್ವವೇದ್ಯ, ಸರ್ವವೈದ್ಯ, ಸರ್ವಶ್ರೇಷ್ಠ ಸಿದ್ಧಾಂತ. 'ಅಹಿಂಸಾ ಪರಮೋಧರ್ಮಃ' ಎಂಬುದು ಎಲ್ಲ ತೀರ್ಥಂಕರರು, ಆಚಾರ್ಯರು, ಕವಿಪರಮೇಷ್ಠಿಗಳು ಹಾಗೂ ಸಿದ್ಧಪುರುಷರ ಬೋಧನೆ. ಧರ್ಮದ ಪರಮಗುರಿಯಾದ ಮೋಕ್ಷಸಾಧನೆಗೆ ನೀತಿಪೂರ್ಣ ಅಹಿಂಸೆಯೇ ಸಾಧನಾಮಾರ್ಗವಾಗಿದೆ. ಅಹಿಂಸಾಧರ್ಮ ಪಾಲನೆಯಿಂದ ಮನುಷ್ಯನಿಗೆ ತಾಳ್ಮೆ, ಜಾಣ್ಮೆ, ಸಹಬಾಳ್ವೆ, ವಿಶ್ವಾಸ ಮೂಡುವುದು. 'ಧರ್ಮೋ ರಕ್ಷತಿ ರಕ್ಷಿತಃ'. ತ್ಯಾಗ ಮನೋಭಾವ ಮೂಡಿದಲ್ಲಿ ಆಮಿಷಗಳು ಸಡಿಲಗೊಂಡು ಅಹಿಂಸಾಭಾವನೆ ಒಡಮೂಡುತ್ತದೆ. ಅಹಿಂಸೆಯ ಮೂಲಕ ಲೋಕಕಲ್ಯಾಣ, ಆತ್ಮಕಲ್ಯಾಣ, ಆತ್ಮೋನ್ನತಿ

Digitised by Bharatavani, CIIL

ಭಾವನೆಗಳು ಉದ್ದೀಪನಗೊಳ್ಳುತ್ತವೆ. ಇದು ಜೈನಧರ್ಮದ ಪರಮ ಧ್ಯೇಯವಾದ ಉದಾತ್ತ ವಿಚಾರಧಾರೆ; ಯಾರನ್ನೂ ಯಾವ ಬಗೆಯಲ್ಲಿಯೂ ಹಿಂಸಿಸಬಾರದು, ಎಲ್ಲ ಜೀವಿಗಳ ವಿಚಾರದಲ್ಲಿಯೂ ಸಮಭಾವದಿಂದಿರುವುದು ಅಹಿಂಸೆ. ಇದೇ ಎಲ್ಲ ಜ್ಞಾನಿಗಳ ಉಪದೇಶ ಸಾರ.

**ಸ್ವಾಧ್ಯಾಯ:** (ಸ್ವ=ತನ್ನ; ಅಧಿ–ಜ್ಞಾನ, ಆಯ=ಪಡೆಯುವುದು) ಇದು ಶಾಸ್ತ್ರಾಧ್ಯಯನವಾಗಿದ್ದು ಜಿನಾಗಮದ ಪಠಣ, ಶ್ರವಣ, ಚಿಂತನವನ್ನು ಒಳಗೊಂಡಿದೆ. ಲೌಕಿಕ ದೃಷ್ಟಿಯಿಂದ ಆಧ್ಯಾತ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ತನ್ನ ಜ್ಞಾನ ಅಂದರೆ ಧಾರ್ಮಿಕವಾಗಿ ಆತ್ಮಜ್ಞಾನವನ್ನು ಪಡೆಯಲು ಅದಕ್ಕೆ ಸಂಬಂಧಪಟ್ಟಂತಹ ಗಂಭೀರ ಧರ್ಮಶಾಸ್ತ್ರಗ್ರಂಥಗಳ ಸತತಾಧ್ಯಯನ ಮಾಡುವುದು; ವಸ್ತುವಿನ ಅಖಂಡ ಸ್ವರೂಪವನ್ನು ಅರಿತು ಅದರ ತಿರುಳು ಹಾಗೂ ಪೂರ್ಣತೆಯನ್ನು ತಿಳಿಯುವುದು. ಇದು ಪಾರಾಯಣವಲ್ಲ, ಜ್ಞಾನಾರ್ಜನೆ ಹೊರತಾಗಿ ಮಿಕ್ಕೆಲ್ಲವೂ ಗೌಣ. ಸ್ವಾಧ್ಯಾಯದಿಂದ ಅನೇಕಾಂತವಾದದ ಅರಿವಾಗುತ್ತದೆ. ಇದು ಮನೋಸ್ಥಿಮಿತಕ್ಕೆ ಸಾಧನ. ಸ್ವಾಧ್ಯಾಯದಿಂದ ಜ್ಞಾನೋದಯ ಅರ್ಥಾತ್ ಜೈನನ್ಯಾಯದಿಂದ ಸುಜ್ಞಾನ ಪ್ರಾಪ್ತಿ.

5 ವಿವಿಧ ವಿಧಿವಿಧಾನಗಳ ಸ್ವಾಧ್ಯಾಯವನ್ನು ವಿವಿಧ ಹಂತಗಳಲ್ಲಿ ಹೇಳಲಾಗಿದೆ:

1. ವಾಚನಾಸ್ವಾಧ್ಯಾಯ: ನಿರ್ದೋಷರೂಪದಿಂದ ಗ್ರಂಥಗಳ ವಿವರಣೆ ಹಾಗೂ ಭವಿಗಳಿಗೆ ಓದಿ ಹೇಳುವುದು.

2. ಪೃಚ್ಛನಾಸ್ವಾಧ್ಯಾಯ: ಅನುಮಾನ(ಸಂಶಯ)ಗಳು ಅಥವಾ ಗಂಭೀರ ಪ್ರಶ್ನೆಗಳಿಗೆ ಖಚಿತ ಉತ್ತರ ಪಡೆಯುವುದು.

3. ಅನುಪ್ರೇಕ್ಷಾಸ್ವಾಧ್ಯಾಯ: ಓದಿದ್ದನ್ನು ಮತ್ತು ಜ್ಞಾನಿಗಳಿಂದ ಪ್ರಶ್ನಿಸಿ ತಿಳಿದಿದ್ದನ್ನು ಕುರಿತು ಅನೇಕ ಬಾರಿ ಗಂಭೀರವಾಗಿ ಚಿಂತನೆ ಮಾಡುವುದು.

4. ಕಂಠಪಾಠಸ್ವಾಧ್ಯಾಯ: ಓದುವಿಕೆ, ಕೇಳುವಿಕೆ ಮತ್ತು ವಿಚಾರಕ್ರಿಯೆಗಳ ನಂತರ ಸ್ಮರಣೆ ಮಾಡುವುದು.

5. ಧರ್ಮೋಪದೇಶ ಸ್ವಾಧ್ಯಾಯ: ಧರ್ಮದ ಉಪದೇಶ ಮಾಡುವುದು.

ಶ್ರಾವಕನು ಪಂಚಾಣುವ್ರತಗಳ ಜೊತೆಗೆ ಸ್ವಾಧ್ಯಾಯವನ್ನು ಮಾಡಬೇಕು. ಸ್ವಾಧ್ಯಾಯ ಮಾಡುವುದು ಶ್ರೇಷ್ಠ ತಪವೆಂದಾಗುತ್ತದೆ. ಪ್ರತಿಕ್ಷಣದಲ್ಲೂ ಅಧ್ಯಯನ ಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಇದರ ಫಲ ವಿಶೇಷ ಸುಜ್ಞಾನ ಪ್ರಾಪ್ತಿ. ಇದು ಅಂತರಂಗ ಹಾಗೂ ಬಹಿರಂಗ ಸ್ವರೂಪದ್ದಾಗಿದೆ. ನಿತ್ಯವೂ ಜಿನವಾಣಿಯ ಹಾಗೂ ಆಗಮಶಾಸ್ತ್ರಗಳ ಅಧ್ಯಯನ ಮಾಡುವುದು ಮನೋಸ್ಥಿಮಿತಕ್ಕೆ ಸಾಧನ; ಅಜ್ಞಾನ ಮತ್ತು ದುಃಖ ನಾಶ. ಇದು ಜಿನಧರ್ಮದ ಆಧಾರಸ್ತಂಭ.

ಜೈನ ಶೈಕ್ಷಣಿಕ ಸಿದ್ಧಾಂತವು ಅಧ್ಯಾತ್ಮ ಮತ್ತು ಚಿಂತನಾವ್ಯಾಪಿಯನ್ನು ಮೂಲತಃ ದ್ವೈತ ಹಾಗೂ ಜೈನ ಸ್ವರೂಪವನ್ನುಳ್ಳದ್ದಾಗಿದ್ದು ಆತ್ಮ ಮತ್ತು ವಸ್ತು(ಪುದ್ಗಲ)ವಿನ ನೈಜ ಸ್ವರೂಪವನ್ನು ಅವಲಂಬಿಸಿರುವುದರ ಸತ್ಯವನ್ನು ಆಧುನಿಕ ವಿಜ್ಞಾನದ ಸೂಚನೆಗಳಲ್ಲಿ ಕಾಣಬಹುದು. ಮಾನವನ ಭೌತಿಕ ಮತ್ತು ಬೌದ್ಧಿಕ ವ್ಯಕ್ತಿತ್ವವನ್ನು ಕುರಿತಂತೆ ಮುಖ್ಯವಾಗಿ ಶರೀರ, ಶ್ವಾಸ, ಪ್ರಾಣ, ಮನ, ಚಿತ್ತ (ಭಾವಪ್ರಾಣ), ವರ್ಣಲೇಶ್ಯಾ ಮತ್ತು ಕರ್ಮವೆಂಬ ಏಳು ಎಳೆಗಳನ್ನು ಹೇಳಲಾಗಿದೆ. ಜೈವಿಕ ವಿಜ್ಞಾನದ ಹಿನ್ನೆಲೆಯಲ್ಲಿ ವ್ಯಕ್ತಿತ್ವ ವಿಕಾಸ ಪ್ರೇಕ್ಷಾಧ್ಯಾನ, ಲೇಶ್ಯಾಧ್ಯಾನ, ಕಾಯೋತ್ಸರ್ಗ, ಅನುಪ್ರೇಕ್ಷಾ, ಪುನರಾವೃತ್ತಿ, ಆಸನಗಳು ಹಾಗೂ ಪ್ರಾಣಾಯಾಮ ಮುಂತಾದ ಯೋಗವಿಧಾನಗಳನ್ನು ಒಳಗೊಂಡಿದೆ. ಇವುಗಳ ಕ್ರಮಬದ್ಧ ಅನುಸರಣೆಯಿಂದ ಮೂಲಭೂತವಾದ ಪರಿಣಾಮ ಉಂಟಾಗುತ್ತದೆ. ನೈತ್ಯಾತ್ಮಕ ಮಾನಸಿಕ ಹಾಗೂ ದೈಹಿಕ ಧೋರಣೆ, ನಡವಳಿಕೆಗಳಿಂದ ಮುಕ್ತನಾಗಲು ನೆರವಾಗುವುದು. ಅಣುಯೋಗವನ್ನು 4 ವಿಭಾಗಗಳಲ್ಲಿ ವಿಂಗಡಿಸಲಾಗಿದೆ:

1. ದ್ರವ್ಯಾಣುಯೋಗ (ಅಧ್ಯಾತ್ಮ ವಿದ್ಯೆಯ ಮೂಲಕ ವಿವರಣೆ– Metaphysics) 2. ಚರಣ – ಕರುರ್ಣಾಣುಯೋಗ (ನೀತಿ ತತ್ತ್ವಾನುಮೂಲಕ ವಿವರಣೆ– Ethics) 3. ಗಣಿತಾಣುಯೋಗ 4. ಧರ್ಮಕರ್ಣಾಣುಯೋಗ. ಪ್ರಾಚೀನ ಕಾಲದಲ್ಲಿ ಪ್ರತಿಯೊಂದು ಗ್ರಂಥವನ್ನು ಈ ನಾಲ್ಕು ವಿಧಗಳಲ್ಲಿ ವಿವರಣಾತ್ಮಕವಾಗಿ ಪ್ರಚುರಪಡಿಸಲಾಗುತ್ತಿದ್ದಿತು. ಆದರೆ ನಂತರದ ದಿನಗಳಲ್ಲಿ ವಿದ್ಯಾರ್ಥಿಗಳ ಬೌದ್ಧಿಕ ಗ್ರಾಹಕ ಶಕ್ತಿಯು ಕ್ಷೀಣಿಸಲು 'ಅಣುಯೋಧಾರಸೂತ್ರ'ದ ಕರ್ತೃ ಆಚಾರ್ಯ ರಕ್ಷಿತರ ಸರಳ ವಿಧಾನದ ಮುಖೇನ ಪರಿಚಯಿಸಲಾಯಿತು. ಇದು ಮೂವತ್ತೆರಡು ಪವಿತ್ರಗ್ರಂಥಗಳಲ್ಲಿ ಒಂದಾಗಿದೆ. ಇದರ ಕರ್ತೃವು ಸಂಪೂರ್ಣ ಮೂಲ ಪವಿತ್ರ ಗ್ರಂಥಗಳಲ್ಲಿನ ಅಣುಯೋಗವನ್ನು ನಾಲ್ಕು ವಿಭಾಗಗಳಲ್ಲಿ ತೆರೆದಿಟ್ಟರು. ಇದರಿಂದಾಗಿ ವಿದ್ಯಾರ್ಥಿಗಳು ವಿಶೇಷವಾಗಿ ಪ್ರತಿಯೊಂದು ಪಠ್ಯವಿಷಯವನ್ನು ಪ್ರತ್ಯೇಕವಾಗಿ ಅಭ್ಯಸಿಸಿದರು. ಆದರೆ ಈ ಬದಲಾವಣೆಯು ಶೈಕ್ಷಣಿಕ ಚಿಂತನಾವಿಧಾನದ ಮೇಲೆ ನೇತ್ಯಾತ್ಮಕ ಪರಿಣಾಮವನ್ನು ಬೀರಿತು. ಏಕೆಂದರೆ ಮೊದಲಿನ ಪಠ್ಯಗಳಲ್ಲಿನ 'ನಯ' ಮಾಯವಾಗಿದ್ದಿತು.

ಜೈನಧರ್ಮದ ಶೈಕ್ಷಣಿಕ ಚಿಂತನೆಗಳು, ರೂಪುರೇಷೆಗಳು ನಿಶ್ಚಿತವಾಗಿಯೂ ಪವಿತ್ರಾತ್ಮರಾದ ತೀರ್ಥಂಕರರ ತತ್ತ್ವಧರ್ಮೋಪದೇಶಗಳಾಗಿವೆ, ವೈಚಾರಿಕ ಹಾಗೂ ವೈಜ್ಞಾನಿಕ ತಳಹದಿಯನ್ನು ಹೊಂದಿವೆ, ಆತ್ಮವಿದ್ಯೆ ಮತ್ತು ಆತ್ಮವಿಕಸನದ ಪರಮೋತ್ಕರ್ಷ ಪ್ರತೀಕವೂ, ಚಿಂತನಾನು ಕ್ರಮದತ್ತ ಪ್ರೇರೇಪಿಸುವಂಥವೂ ಆಗಿವೆ. ಅಲ್ಲದೆ ಲೌಕಿಕ ಮಾರ್ಗಸೂಚಿಯಾಗಿರುವಂತೆಯೇ ಆಧ್ಯಾತ್ಮಿಕ ನೆಲೆಯ ದಿಕ್ಸೂಚಿಗಳಾಗಿವೆ. ಭಗವಾನ್ ಮಹಾವೀರನ ಸರ್ವಾಧಾರಿತ, ವಿಶಾಲ ವ್ಯಾಪ್ತಿಯ ಪ್ರಗತಿಶೀಲ, ಕ್ರಿಯಾಶೀಲ ಹಾಗೂ ಪರಿವರ್ತನಶೀಲ

Digitised by Bharatavani, CIIL

ಮನೋಭೂಮಿಕೆಯ ಬೋಧನೆಗಳು ಉದಾರ ಮನೋಭಾವದ ಚಿಂತನಾಕ್ರಮಗಳನ್ನು ಒಳಗೊಂಡಿವೆ. ಜೈನಧರ್ಮವು ಧಾರ್ಮಿಕ ವೈಚಾರಿಕತೆ ಮತ್ತು ಪರಂಪರೆಯನ್ನು ಉದ್ದೀಪನಗೊಳಿಸಿದೆ.

ಕಲಿಕಾರ್ಥಿಯು ಸಮ್ಯಕ್ತ್ವವೆಂಬ ತತ್ತ್ವಾರ್ಥಗಳಲ್ಲಿ ಶ್ರದ್ಧೆಯನ್ನಿಡಬೇಕು. ಗುರುವಿನ ಆರಾಧಕನೇ ನಿಜವಾದ ಶಿಷ್ಯನು. ವಿದ್ವಾಂಸರು ಮತ್ತು ಮುನಿಗಳಿಂದ ಬೋಧನೆಯಾದ ಚಿಂತನೆಗಳು ತಾರ್ಕಿಕ ರೀತಿಯಲ್ಲಿ ಸುರಕ್ಷಿತವಾಗಿವೆ, ಮುಕ್ತಿದಾಯಕ ಹಾಗೂ ಶಕ್ತಿದಾಯಕವಾಗಿವೆ. ಇವುಗಳನ್ನು ತ್ರಿಕರಣಪೂರ್ವಕ ಶಿಷ್ಯತ್ವದಿಂದ ಗ್ರಹಿಸಿ ಅನುಸರಿಸಬೇಕು.

**ರತ್ನತ್ರಯಗಳು:** 'ತತ್ತ್ವಾರ್ಥಸೂತ್ರ' ನೀತಿಗನುಗುಣವಾಗಿ 'ಸಮ್ಯಕ್‌ದರ್ಶನ', 'ಸಮ್ಯಕ್‌ಜ್ಞಾನ' ಮತ್ತು 'ಸಮ್ಯಕ್‌ಚಾರಿತ್ರ್ಯ'ವೆಂಬ ತ್ರಿರತ್ನಗಳ ಪಾಲನೆಯೇ ಮೋಕ್ಷಮಾರ್ಗ (ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ). ಇವುಗಳು ಜೈನಧರ್ಮದ ಪ್ರಮುಖ ತಿರುಳು ಹಾಗೂ ಪರಮ ಪರಂಜ್ಯೋತಿಗಳಾಗಿವೆ. ಜೀವಾದಿ ತತ್ತ್ವಗಳ ವರ್ಣನೆಯ ಸಮ್ಯಕ್‌ಪಾರಾಯಣವಾಗಬೇಕು. ಇವುಗಳ ಆರಾಧನೆ ಉಪಾದೇಯವಾಗಿದೆ.

**ಸಮ್ಯಕ್‌ದರ್ಶನ:** ಇದು ಆಪ್ತ, ಆಗಮ ಮತ್ತು ಗುರುವಿನ ಸ್ವರೂಪವನ್ನು ತಿಳಿಸುತ್ತದೆ ಹಾಗೂ ಅವುಗಳ ಅಷ್ಟಾಂಗ ಲಕ್ಷಣಗಳನ್ನು ವಿವರಿಸುತ್ತದೆ – 1. ನಂಬುಗೆ: ಸರಿಯಾದ ಶ್ರದ್ಧೆಯ ಆಚರಣೆಯು ಉತ್ತಮ ಧಾರ್ಮಿಕ ಜೀವನವಾಗಿದೆ. 2. ನಿಃಕಾಶಿತ: ಸಾಧಕನು ನಿಷ್ಕಾಮಿಯಾಗಿರಬೇಕು; ಅಮಿತ ಆಕಾಂಕ್ಷೆಗಳನ್ನು ಇಟ್ಟುಕೊಂಡರೆ ಆತ್ಮೋನ್ನತಿ ಸಾಧ್ಯವಾಗದು. 3. ನಿರ್ವಿಚಿಕಿತ್ಸಾ: ಶುಶ್ರೂಷೆಯನ್ನು ಬಹುಪವಿತ್ರವಾದ ಕಾರ್ಯವೆಂದು ತಿಳಿದು ತನ್ನ ಬಂಧುಬಾಂಧವರ ಆರೈಕೆಮಾಡುವಂತೆ ಮುನಿಗಳ ಹಾಗೂ ರೋಗಿಗಳ ಅವಸ್ಥೆ ಕಂಡು ಹೇಸದೆ ಶುಶ್ರೂಷೆ ಮಾಡಬೇಕು. 4. ಅಮೂಢದೃಷ್ಟಿ: ಮಿಥ್ಯ ಹಾಗೂ ಢಾಂಬಿಕ ಆಚರಣೆ ಹಾಗೂ ಮೂಢನಂಬಿಕೆಗಳನ್ನು ತ್ಯಾಜ್ಯ ಮಾಡಬೇಕು. ವಿಶೇಷವಾಗಿ ಲೋಕಮೂಢತ್ವ, ದೇವಮೂಢತ್ವ (ಲಾಂಛನಕ್ಕೆ ಸರಿಹೊಂದದ ಕಪಟ ಸನ್ಯಾಸಿಗಳ ಬೋಧನೆ ಕೇಳುವುದು) ಮತ್ತು ಪಾಷಂಡಿ ಮೂಢತ್ವವೆಂಬ ಮೂರು ಮೌಢ್ಯಗಳನ್ನು ಬಿಡಬೇಕು. 5. ಉಪಗುಹನ: ಅಯೋಗ್ಯರು ಧರ್ಮನಿಂದನೆ ಮಾಡುತ್ತಿದ್ದರೆ ಸಹಿಸಿಕೊಂಡಿರಬಾರದು. 6. ಸ್ಥಿರೀಕರಣ: ಸಾಧಕರು ಯಾವುದೇ ಕಾರಣದಿಂದ ದಾರಿತಪ್ಪಿ ನಡೆದರೆ ಅವರಿಗೆ ಮರುಉಪದೇಶವಿತ್ತು ಮೊದಲಿನ ಸನ್ಮಾರ್ಗದಲ್ಲಿ ಕೊಂಡೊಯ್ಯಬೇಕು. 7. ವಾತ್ಸಲ್ಯ: ಸಹೋದ್ಯೋಗಿ ಹಾಗೂ ಧರ್ಮಾವಲಂಬಿಗಳನ್ನು ಸ್ನೇಹದಿಂದ ಕಾಣುವುದು. 8. ಪ್ರಭಾವನ: ಪ್ರತಿಭೆಯುಳ್ಳ ಆಚರಣೆಯಲ್ಲಿ ಪೂರ್ಣನಾಗಿ ಧರ್ಮವಿಲ್ಲದೆಡೆ ತನ್ನ ಅಂತಃಶಕ್ತಿಯಿಂದ ಅಹಿಂಸಾಧರ್ಮದ ಪ್ರಭಾವವು ಜನರ ಮೇಲೆ ಆಗುವಂತೆ ಪ್ರಚಾರಮಾಡಬೇಕು.

**ಸಮ್ಯಕ್‌ಜ್ಞಾನ:** ಇದು ವಸ್ತುವಿನ ಪೂರ್ಣ ಇಲ್ಲವೇ ಅಪೂರ್ಣ ಸತ್ಯದರ್ಶನ ಮಾಡಿಸುವುದು. ಈ ಸತ್ಯಜ್ಞಾನದಲ್ಲಿ ನಂಬಿಕೆ, ಶ್ರದ್ಧೆ, ದರ್ಶನವಿದೆ. ಶ್ರುತಜ್ಞಾನವು ದ್ರವ್ಯಶ್ರುತವನ್ನು ಅವಲಂಬಿಸಿದೆ. ಸಂಶಯವಿಲ್ಲದ ಆತ್ಮಜ್ಞಾನಿಯೇ ನಿಜವಾದ ಜ್ಞಾನಿ. ಸಾಧಕನಿಗೆ ಜ್ಞಾನವೇ ಗುರು. ಸದಾ ಸಂತೋಷವಾಗಿರುವುದು ಜ್ಞಾನದ ಫಲವಾಗಿದೆ. ಆತ್ಮಜ್ಞಾನದಿಂದ ಉತ್ತಮ ಲಾಭವಿದೆ. ಇದರ ಆರ್ಜನೆಗಾಗಿ ನಾಲ್ಕು ಅನುಯೋಗ ಬಗೆಗಳನ್ನು ಹೇಳಲಾಗಿದೆ 1. **ಪ್ರಥಮಾನುಯೋಗ:** ತೀರ್ಥಂಕರರು, ಚಕ್ರವರ್ತಿಗಳು, ವಾಸುದೇವರು, ಪ್ರತಿವಾಸುದೇವರು ಮುಂತಾದ ಪುಣ್ಯಪುರುಷರ ಚರಿತ್ರೆಯ ಅಧ್ಯಯನ. 2. ಕರುಣಾನುಯೋಗ: ಲೋಕದ ಆಕಾರವನ್ನು ಒಳಗೊಂಡಿದ್ದು ಮಧ್ಯ, ಸ್ವರ್ಗ ಮತ್ತು ನರಕ ಲೋಕಗಳ ವರ್ಣನೆ. 3. ಚರಣಾನುಯೋಗ: ಶ್ರಾವಕರು ಮತ್ತು ಮುನಿಗಳ ಆಚಾರ, ವಿಚಾರ, ವಿವರಣೆಗಳು. 4. ದ್ರವ್ಯಾನುಯೋಗ: ಅಧ್ಯಾತ್ಮ ವಿದ್ಯೆಯ ಮೂಲಕ ಜೀವ, ಪುದ್ಗಲ, ಧರ್ಮ, ಅಧರ್ಮ, ಕಾಲ, ಆಕಾಶವೆಂಬ ಆರು ದ್ರವ್ಯಗಳ ವಿವರಣೆ.

**ಸಮ್ಯಕ್‌ಚಾರಿತ್ರ್ಯ:** ಇದರ ಲಕ್ಷಣವನ್ನು 'ಸಕಲ' ಮತ್ತು 'ವಿಕಲ' ಎಂದು ವಿಂಗಡಿಸಲಾಗಿದೆ. ಇದು ಮೋಕ್ಷಮಾರ್ಗ, ನೈತಿಕ ಆಚರಣೆಯ ಹಾದಿ; ಶುದ್ಧ ಹಾಗೂ ಪರಿಪೂರ್ಣ ಜೀವನದ ರೀತಿ, ನೀತಿ, ಆಚಾರ, ನಡವಳಿಕೆಯನ್ನು ಒಳಗೊಂಡಿದೆ. ಇದು ಆತ್ಮಸಾಕ್ಷಾತ್ಕಾರಕ್ಕೆ ಅವಶ್ಯವಾದ ದಿವ್ಯಸೋಪಾನ. ಸಮ್ಯಕ್‌ದರ್ಶನ ಮತ್ತು ಸಮ್ಯಕ್‌ಜ್ಞಾನಗಳೆರಡರ ಆಚರಣೆಯೇ ಸಮ್ಯಕ್‌ಚಾರಿತ್ರ್ಯ. ಇದು ಸುಲಭಸಾಧ್ಯವಾದುದಲ್ಲ. ಇದನ್ನು ಹೊಂದಲು ಸತತ ಪ್ರಯತ್ನ, ಪರಿಶ್ರಮವಿರುವ ಶುದ್ಧ ಜೀವಿಗಳಿಗೆ ಮಾತ್ರ ಸಾಧ್ಯ.

ಭಕ್ತಿ–ಜ್ಞಾನ–ಕರ್ಮ ಈ ಮೂರೂ ಒಟ್ಟಿಗೆ ಸಂಗಮಿಸಿದರೆ ಮೋಕ್ಷಮಾರ್ಗ ಪ್ರಾಪ್ತಿ. ಜ್ಞಾನ ಮತ್ತು ಆಚಾರದಲ್ಲಿ ವಿಚಾರವಿದೆ, ಸಮನ್ವಯತೆಯಿದೆ. ಇವುಗಳಿಂದ ಲಭಿಸುವುದು ಆತ್ಮಸಾಕ್ಷಾತ್ಕಾರ, ಆತ್ಮತೃಪ್ತಿ ಮತ್ತು ಆತ್ಮವಿಕಾಸಗಳ ಪರಮೋತ್ಕರ್ಷ.

ಜೈನ ಶೈಕ್ಷಣಿಕ ಚಿಂತನೆಯ ಪದ್ಧತಿಯು ಸಹಿಷ್ಣುತೆ, ಶಾಂತಿನಿಷ್ಠೆ ಹಾಗೂ ಪ್ರಗತಿಶೀಲ ಧೋರಣೆಗಳನ್ನು ಒಳಗೊಂಡಿದೆ. ಜೈನಾಚಾರ್ಯರ ಧರ್ಮಬೋಧನೆಯು ಮಾನವ ಸಂವೇದನೆಯ ಪ್ರಣೀತವಾಗಿದೆ. ಅಲ್ಲದೆ ಆಚಾರ್ಯರಿಗೆ ಪ್ರತ್ಯೇಕವಾದ ಧಾರ್ಮಿಕ ಅರ್ಹತಾ ವಿಶೇಷಣಗಳನ್ನು ವಿಧಿಸಲಾಗಿದೆ. ಜೈನಧರ್ಮ ಸಾರಸರ್ವಸ್ವವಾದ ಪರಿಣಾಮ ವಿಶುದ್ಧಿ, ಅಹಿಂಸಾಧರ್ಮದಿಂದ ಬದುಕು, ನೆಮ್ಮದಿ, ಸಂತೋಷ ಮತ್ತು ಅದು ಪ್ರತಿಪಾದಿಸುವ ಮಾನವೀಯ ಮೌಲ್ಯಗಳು ಅನಂತ, ಅನನ್ಯವಾದವು. ಸಮಾಲೋಚನಾತ್ಮಕ ಅಧ್ಯಯನದ ರೀತ್ಯ ಜೈನಧರ್ಮವು ಉದಾತ್ತ ಹಾಗೂ ಉದಾರಿ ಧರ್ಮವಾಗಿದೆ. ಇದರ ಪ್ರಕಾರ ಯಾವುದೇ ಜಾತಿ, ಧರ್ಮ, ವರ್ಗ ಹಾಗೂ ಸ್ಥಾನಮಾನಗಳ ಭೇದಭಾವವಿಲ್ಲದ ಜೀವನವು ಪೂರ್ಣರೂಪದಿಂದ ಪವಿತ್ರವು ಹಾಗೂ ಸನ್ಮಾನನೀಯವೂ ಆಗಿದೆ. ಸರ್ವೋದಯವೆಂಬುದು ಮೂಲತಃ ಜೈನಧರ್ಮದ ಪದ ಮತ್ತು ಪರಿಕಲ್ಪನೆ. ಜೈನಧರ್ಮದ ತತ್ತ್ವಗಳ ಬಗೆಗೆ ಸತ್ಪ್ರವೃತ್ತಿ ಬೆಳೆದು ಪುನರ್‌ಚಿಂತನೆಮಾಡುವ ಶಕ್ತಿ ಮೂಡುತ್ತದೆ. ಇವುಗಳು ಧಾರ್ಮಿಕ ವೈಚಾರಿಕತೆಯನ್ನು ಹಾಗೂ ಸಾಂಸ್ಕೃತಿಕ

Digitised by Bharatavani, CIIL

ಪರಂಪರೆಯನ್ನು ಸಮೃದ್ಧಿಗೊಳಿಸಿವೆ. ಶೈಕ್ಷಣಿಕ ಜ್ಞಾನಾರ್ಜನೆಯು ಜ್ಞಾನಪ್ರಸಾರದ ಮೂಲಸ್ರೋತವಾಗಿದೆ. ಜಿನಧರ್ಮದ ನಂಬಿಕೆ ಮತ್ತು ಚಿಂತನೆಗಳು ಸಾರ್ವಕಾಲಿಕವಾದವು. ಚಿಂತನೆಗಳನ್ನು ರೂಢಿಸಿಕೊಳ್ಳುವಲ್ಲಿ ಅಹಂಕಾರಮನೋಭೂಮಿಕೆಯ ತ್ಯಾಜ್ಯ ಪೋಷಕವಾದುದು. ಇದರಲ್ಲಿ ಬುದ್ಧಿವಂತಿಕೆಯ ಬಳಕೆ, ದೈವಿಕ ಮತ್ತು ಮಾನವಿಕ – ಮಾನಸಿಕ ಸಮೃದ್ಧಿ, ಸಂಪತ್ತಿನ ಗಳಿಕೆ ಹಾಗೂ ತಪೋಸ್ಥೈರ್ಯ ಮುಖ್ಯಪಾತ್ರವಹಿಸಬಲ್ಲವು. ಬುದ್ಧಿವಂತನಾದವನು 'ಪರಸ್ಪರೋಪಗ್ರಹೋ ಜೀವಾನಾಂ' ಗುಣವನ್ನು ಅಧ್ಯಯನಿಸಿ ಆಚರಿಸಿದಲ್ಲಿ ಅವನಲ್ಲಿ ಉಚ್ಚ, ಆದರ್ಶ, ಪ್ರಬುದ್ಧ ವಿಚಾರಪರತೆ ಒಡಮೂಡುತ್ತದೆ. ಅಧ್ಯಯನ, ಅಧ್ಯಾಪನ, ಅನುಭವ, ಅನುಭಾವ ತತ್ತ್ವಗಳ ಅನುಸರಣೆಯಿಂದ ಬೌದ್ಧಿಕ ಸ್ತರವು ವಿಸ್ತಾರಗೊಳ್ಳುತ್ತದೆ.

**ಗುರು–ಶಿಷ್ಯ ಸಂಬಂಧ:**

ಧಾರ್ಮಿಕ ಶಿಕ್ಷಣದ ಮುಖೇನ ಸಾಮಾನ್ಯರನ್ನೂ ಧರ್ಮಮಾರ್ಗದತ್ತ ಒಲಿಯುವಂತೆ ಮಾಡುವುದು ಸುತ್ತ್ಯಕ್ರಮ. ಶ್ರಾವಕರಿಗೆ ಷಟ್‌ಕರ್ಮಗಳಾದ ದೇವಪೂಜೆ, ಗುರುಸೇವೆ, ಸ್ವಾಧ್ಯಾಯ, ಸಂಯಮ, ತಪ, ಧ್ಯಾನ ಕಡ್ಡಾಯವಾಗಿವೆ. ಇವುಗಳ ಆಚರಣೆಯಲ್ಲಿ ಗೊತ್ತು, ಗುರಿ ಹಾಗೂ ದಾರಿ ಇರಬೇಕು. ಗುರುಗಳು ದೇವತೆಗಳನ್ನು ಜಪ, ತಪ, ಧ್ಯಾನ, ವ್ರತಾದಿ ಮುಂತಾದ ಸಾಧನೆಗಳಿಂದ ತೃಪ್ತಿಗೊಳಿಸಿ ಬದುಕನ್ನು ಸಾರ್ಥಕಪಡಿಸಿಕೊಳ್ಳುತ್ತಾರೆ. ಜ್ಞಾನದ ಏಕಾಂತತೆಯೇ ಧ್ಯಾನ. ಇದರಿಂದ ವ್ಯಕ್ತಿಯ ಬದುಕಿನಲ್ಲಿನ ಆತ್ಮನ ಸಹಜ ಪ್ರವೃತ್ತಿಗಳಾದ ಚೈತನ್ಯ – ಬೆಳಕು – ಚಾರಿತ್ರ್ಯ – ತಿಳಿವು ವ್ಯಕ್ತಿತ್ವವನ್ನು ಉದಾತ್ತೀಕರಿಸಿ ಪರಿಶುದ್ಧವಾಗಿರಿಸಲು ನೆರವಾಗುತ್ತವೆ. ಆಚಾರ್ಯ, ಉಪಾಧ್ಯಾಯ, ಗಣಧರ, ಸ್ಥವಿರ, ಪ್ರವರ್ತಕ ಇವು ಮುನಿಗುಂಪಿನ ಪಂಚ ವಿಭಾಗಗಳು. ಶೈಕ್ಷಣಿಕ ಶ್ರೇಣಿಯಲ್ಲಿ ನಿರ್ಮೋಹಿಗಳಾದ ಮಹಾವ್ರತೀ ಮುನಿಗಳೇ ಸದ್ಗುರುಗಳು. ಅವರ ವಚನಗಳು ಪರಿಪಾಲನಾರ್ಹ. ಧಾರ್ಮಿಕ ಗುರುವಾದ ಉಪಾಧ್ಯಾಯನು ಸ್ವತಂತ್ರಾಭಿವ್ಯಕ್ತಿಯ ಸ್ಥಾನಮಾನವನ್ನುಳ್ಳವನಾದಾಗ್ಯೂ ಅವನ ಸ್ಥಾನ ಆಚಾರ್ಯನ ನಂತರದ ಸ್ಥಾನವಾಗಿದೆ. ಈತನ ಪ್ರಮುಖ ಕರ್ತವ್ಯವೆಂದರೆ ವಿಶೇಷವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಶಿಷ್ಯೋಪದೇಶ ಮತ್ತು ಪವಿತ್ರ ಗ್ರಂಥಗಳಲ್ಲಿನ ಕ್ಲಿಷ್ಟತಮ ಅರ್ಥ–ತಾತ್ಪರ್ಯವನ್ನು–ಸರಳೀಕರಿಸಿ ತಿಳಿಸಿಕೊಡುವುದು. ಗುರುವು ತನ್ನ ಶಿಷ್ಯರು ಎಸಗುವ ಪ್ರಮಾದಗಳ ಬಗ್ಗೆ ವಿಮುಖನಾಗಬಾರದು. ಗುರುವು ಪ್ರಜ್ಞೆ, ತಾಳ್ಮೆ, ಜಾಣ್ಮೆ, ಮೇಧಾವಿತನ, ಪವಿತ್ರಗ್ರಂಥಗಳಲ್ಲಿ ಹುದುಗಿರುವ ನಿಗೂಢತೆಗಳು ಹಾಗೂ ಲೋಕವ್ಯವಹಾರಗಳ ಬಗ್ಗೆ ಅರಿತು ಅನಗತ್ಯ ಪ್ರಾಪಂಚಿಕ ವಹಿವಾಟುಗಳಿಗೆ ಒಳಗಾಗುವುದರಿಂದ ದೂರವಿರುವುದು, ಸಹಿಷ್ಣುತೆ, ಶಿಷ್ಯಗಣದ ಮನೋಭೂಮಿಕೆಯ ಅರಿವು, ವ್ಯಕ್ತಿನಿಂದೆಯಿಂದ ಮುಕ್ತತೆ, ಶೃತಜ್ಞಾನ, ಕಾಯಾ ವಾಚಾ ಮನಸಾ ಶುದ್ಧಿ, ಇತರರನ್ನು ಉದ್ದೀಪನಗೊಳಿಸುವ ಕೌಶಲ್ಯ, ಅರ್ಹತೆ ಬಗ್ಗೆ ಮೆಚ್ಚುಗೆ, ಗುಣಗ್ರಾಹ್ಯತೆ, ನಮ್ರತೆ, ಮೋಕ್ಷಮಾರ್ಗದಲ್ಲಿನ ಜ್ಞಾನ, ಜಾತ್ಯತೀತತೆ, ಖ್ಯಾತಿ ಮತ್ತು ಪ್ರಚಾರದ ಆಕಾಂಕ್ಷೆಯಿಂದ ದೂರವಿರುವಿಕೆ ಮುಂತಾದ ಗುಣಗಳನ್ನು ಹೊಂದಿರಬೇಕು. ಆಚಾರ್ಯರು ಮತ್ತು ಉಪಾಧ್ಯಾಯರ ಗುಣಲಕ್ಷಣಗಳನ್ನು ಪೂರೈಸಿದಲ್ಲಿ ಸಾಧುಗಳು ಗುರುಗಳಾಗಬಹುದು. ಅವರು ತಮ್ಮ ಹಿರಿತನದ ಸ್ಥಾನದಿಂದ ವಿದ್ಯಾರ್ಥಿಗಳಿಗೆ ಚಾರಿತ್ರ್ಯ ಮತ್ತು ನಡವಳಿಕೆಗಳ ಮಾದರಿಯಾಗಬೇಕು. ಜ್ಞಾನದ ಪಕ್ವತೆಯೆಂದರೆ ಚಾರಿತ್ರ್ಯ, ಧರ್ಮ, ವಿನಯ, ಬುದ್ಧಿ ಮತ್ತು ಸಭ್ಯತೆಯುಳ್ಳವನೇ ನಿಜವಾದ ಶಿಷ್ಯನು.

ಶೈಕ್ಷಣಿಕ ಗುಣವಿಶೇಷಗಳು ಜೀವಧರ್ಮದ ದೀಪ್ತಿಯಾಗಿವೆ. ಸರ್ವೇಸಾಮಾನ್ಯವಾಗಿ ಭಾರತೀಯ ಶಿಕ್ಷಣ ಮತ್ತು ಜೈನಶಿಕ್ಷಣ ಪದ್ಧತಿಗಳು 'ವಿನಯ' ಮತ್ತು 'ಅನುಶಾಸನ'ವನ್ನು ಬೆನ್ನೆಲುಬಾಗುಳ್ಳ ಶೈಕ್ಷಣಿಕ ಗುಣವಿಶೇಷಗಳನ್ನಾಗಿ ಆತ್ಮೀಕರಿಸಿಕೊಂಡಿವೆ. ಇವುಗಳು ಶಿಕ್ಷಣದ ಅರ್ಥವಿಹೀನ ಹಾಗೂ ವ್ಯರ್ಥಸಾಧ್ಯತೆಗಳನ್ನು ತಡೆಗಟ್ಟುತ್ತವೆ. "ಶಿಕ್ಷಣಾರ್ಥಿಯೂ ಸ್ವಯಂ ಅಗಾಧ ಪಾಂಡಿತ್ಯವನ್ನು ಹೊಂದಿದ್ದರೂ ತನ್ನ 'ಗುರು' ಮತ್ತು 'ಆಚಾರ್ಯ'ನಿಗೆ ಗೌರವ ಮತ್ತು ಸನ್ಮಾನವನ್ನು ನೀಡಬೇಕು". ಅಂತೆಯೇ, "ಯಾವ ಶಿಷ್ಯನು ತನ್ನ 'ಅನುಚಿತ' ನಡವಳಿಕೆಯಿಂದ ತನ್ನ 'ಗುರು' ಅಥವಾ 'ಆಚಾರ್ಯ'ನನ್ನು ಅಸಂತೋಷಗೊಳಿಸುವನೋ ಅಂತಹವನಲ್ಲಿ ಜ್ಞಾನವಿಕಾಸ ಆಗುವುದಿಲ್ಲ. ಯಾರು ಅಗೌರವ ಹಾಗೂ ಅವಮಾನ ತೋರುತ್ತಾನೋ ಅವನಿಗೆ ಮೋಕ್ಷವು ಸಿದ್ಧಿಸಲಾಗದು. ಗುರುವಿನ ಆಜ್ಞಾರಾಧಕನೇ ನಿಜವಾದ ವಿದ್ಯಾರ್ಥಿ." ಗುರುನಿಂದನೆ ಅಕ್ಷಮ್ಯ, ಮಹಾಪಾಪ. ಗುರುನಿಂದಕರಿಗೆ ವಿದ್ಯೆ ಸಿದ್ಧಿಸದು. ವಿನಯ–ವಿಧೇಯತೆ ವಿದ್ಯಾವಂತನಲ್ಲಿರಬೇಕಾದ ಗುಣಗಳು. ಶಿಕ್ಷಣಾರ್ಥಿಯು ತನ್ನ ವಿದ್ಯಾರ್ಥಿ ಜೀವನಾವಧಿಯಲ್ಲಾದರೂ 'ಬ್ರಹ್ಮಚರ್ಯ' ವ್ರತವನ್ನು ಪರಿಪಾಲಿಸಬೇಕು.

'ಉತ್ತರಾಧ್ಯಯನಸೂತ್ರ'ವು ವಿದ್ಯಾರ್ಥಿಯು ವಿಧೇಯತೆಯಿಂದ ಪಾಲಿಸಬೇಕಾದ ಶಿಷ್ಟಾಚಾರದ ನಾನಾ ನಿಯಮಗಳು ಮತ್ತು ವಿನಯದ ಪ್ರಗತಿಯನ್ನು ತಿಳಿಸಿದೆ. ಕಲಿಕಾರ್ಥಿಗಳಲ್ಲಿನ ಅನುಶಾಸನದ ಬೆಳವಣಿಗೆಗಾಗಿ ಈ ಕೆಲವು ಕೌಶಲ್ಯಗಳನ್ನು ವಿಧಿಸಲಾಗಿದೆ –

ಪದೋಚ್ಚಾರಣೆ, ನಿಶ್ಶಬ್ದತೆ, ಉದ್ದೇಶ ಪೂರೈಕೆ, ಇಷ್ಟಾನಿಷ್ಟಗಳ ನಡುವೆಯ ಸಮತೋಲನ ಕಾಯ್ದುಕೊಳ್ಳುವಿಕೆ, ಸಂಯಮ, ಹೀನ ವ್ಯಕ್ತಿಗಳೊಡನೆಯ ಸಖ್ಯ ತ್ಯಾಜ್ಯ, ಸ್ವಾಧ್ಯಾಯ ಹಾಗೂ ಧ್ಯಾನದಲ್ಲಿ ಏಕಾಗ್ರತೆ, ಸತ್ಯಸಂಧತೆ, ಸ್ವನಿಯಂತ್ರಣಶಕ್ತಿ, ಧಮನವಿರೋಧಿಕ್ರಮ, ಮುಕ್ತಕ್ರಿಯಾಶೀಲತೆ, ಕಳಂಕರಹಿತ ನಡೆನುಡಿ, ಮೆಚ್ಚುಗೆ, ಸಮಯಪಾಲನೆ ಹಾಗೂ ಆಚಾರ್ಯನ ಶಿಸ್ತುವಿಧಾನಕ್ಕೆ ಸಕಾರಾತ್ಮಕ ಸ್ಪಂದನ ಇತ್ಯಾದಿಗಳಾಗಿವೆ. ಇವುಗಳನ್ನು ಕ್ರಮೇಣವಾಗಿ ಕಲಿತು ಮುನ್ನಡೆಯುವುದೇ 'ನಿರ್ವಾಣಸ್ಥಿತಿ'ಯಾಗಿದೆ. ಅನ್ವಯಿಕ ಶಿಕ್ಷಣವು ಗ್ರಾಂಥಿಕ ಸ್ವರೂಪದ 'ಗ್ರಹಣ' ಮತ್ತು ವ್ಯಾವಹಾರಿಕ ಸ್ವರೂಪದ 'ಅಸೇವನೆ' ಎಂಬ ಎರಡು ಅಗತ್ಯಪೂರ್ಣ ಅಂಶಗಳನ್ನು ಒಳಗೊಂಡಿರುತ್ತದೆ.

**ಪರಿಸಮಾಪ್ತಿ:**

ಶ್ರವಣವು ಜೈನ ಶಿಕ್ಷಣ ಪದ್ಧತಿಯ ಕಲಿಕಾವಿಧಾನ ಜ್ಞಾನ, ವಿಜ್ಞಾನ, ಪ್ರತ್ಯಾಖ್ಯಾನ, ಸಂಯಮ, ಅನಾಶ್ರವ, ತಪ. ನಿರ್ಜರ

Digitised by Bharatavani, CIIL

ಮತ್ತು ಮನ–ಮಾತು–ಶರೀರದ ನಡುವೆಯ ವಿರೋಧವನ್ನು ನಿರ್ಮೂಲನಗೈಯ್ಯುವ ಅಂಶಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳಲ್ಲಿ ಉತ್ಕಟ ಮಾನವೀಯ ಸೇವಾಮನೋಭಾವದ ಸ್ಫೂರ್ತಿಯ ಮನವನ್ನು ಅಳವಡಿಸಿಕೊಳ್ಳುವಲ್ಲಿ ಗುರು ಮತ್ತು ಸಾಧುಸಂತರ ಪಾತ್ರ ಪ್ರಮುಖವಾದುದು. ಇದರೊಡನೆ ಅನುಯೋಗ(ಕಲಿಕಾವಿಧಾನ)ವಿಧಾನ ಕುರಿತಂತೆ 'ಕಷಾಯಪಾಹುಡ' ಮತ್ತು 'ದ್ರವ್ಯಸಂಗ್ರಹ' ಗ್ರಂಥಗಳು ಸವಿವರ ಮಾಹಿತಿಯನ್ನು ಒದಗಿಸಿವೆ. ಇದು ಉಪಕ್ರಮ (ಉಪೋದ್ಘಾತ), ನಿಕ್ಷೇಪ, ಅನುಗಮನ ಮತ್ತು ನಯ ಎಂಬ ನಾಲ್ಕು ಮಾರ್ಗಗಳನ್ನು ಒಳಗೊಂಡಿದೆ. ಉಪೋದ್ಘಾತವೆಂದರೆ ಪಠ್ಯದ ಮೇಲ್ಪದರಗಳನ್ನು ಒಳಗೊಂಡ ವಿಷಯ ಪೀಠಿಕೆಯಾಗಿಯೂ, ನಿಕ್ಷೇಪವೆಂದರೆ ಅಪೇಕ್ಷಿತ ಪರಿಜ್ಞಾನವನ್ನು ಹೊಂದುವುದಾಗಿಯೂ, ಅನುಗಮನವೆಂದರೆ ಅಸ್ತಿತ್ವದ ವಿಷಯವಾಗಿಯೂ ಹಾಗೂ ನಯವೆಂದರೆ ಅನೇಕಾಂತವಾದ ಮತ್ತು ಸ್ಯಾದ್ವಾದ(ಸಪ್ತಭಂಗಿ)ದ ವಿಧಾನಗಳಾಗಿವೆ. ಒಂದು ವಸ್ತುವನ್ನು ದ್ರವಾರ್ಥಿಕ (ಗಟ್ಟಿಯಾದ) ಹಾಗೂ ಪರ್ಯಾಯಾರ್ಥಿಕ(ವಾಡಿಕೆಯ ಪದ್ಧತಿ)ವಾಗಿ ವಿಂಗಡಿಸಲಾಗಿದೆ. ದ್ರವಾರ್ಥವನ್ನು ನೈಗಮವನ್ನು (ಸಾಮನ್ಯವ್ಯಕ್ತಿಯ ದೃಷ್ಟಿ), ಸಂಗ್ರಹ (ವರ್ಗವಿಶಿಷ್ಟವಾದ ದೃಷ್ಟಿ), ಸಭಾ (ವಾಚ್ಯಾರ್ಥದೃಷ್ಟಿ), ಸಮಭಿದುಧಿರ (ಶಬ್ದನಿಷ್ಪತ್ತಿ) ಮತ್ತು ಏವಂಭೂತ(ಸಹಜದೃಷ್ಟಿ) ವೆಂಬ ನಾಲ್ಕು ಉಪವಿಧಗಳಲ್ಲಿ ವಿಂಗಡಿಸಲಾಗಿದೆ. ಜೈನಗುರುಗಳು ಅನುಸರಿಸುವ ಶೈಕ್ಷಣಿಕ ಬೋಧನಾವಿಧಾನವು ವಿಶಿಷ್ಟವೂ ಹಾಗೂ ಉಚ್ಚಮಟ್ಟದ ವೈಜ್ಞಾನಿಕ ವಿಧಾನವೂ ಆಗಿದೆ.

–ಡಾ. ಪಾರ್ಶ್ವನಾಥ್ ಹೆಚ್.ಎ.

## ಜ್ಞಾನದ ಸಿಂಧುತ್ವ

ಜ್ಞಾನವು ಜ್ಞಾತೃ ಮತ್ತು ಜ್ಞೇಯಗಳೆಂಬ ಎರಡು ಅಂಶಗಳಿಂದ ಕೂಡಿದೆ. ವಸ್ತುವನ್ನು ತಿಳಿಯುವವನು ಜ್ಞಾತೃ ಅಥವಾ ಪ್ರಮಾತೃ. ತಿಳಿಯಲ್ಪಡುವ ವಸ್ತುವು ಜ್ಞೇಯ ಅಥವಾ ಪ್ರಮೇಯ. ಜ್ಞಾತೃ ಮತ್ತು ಜ್ಞೇಯಗಳಿಗೆ ಸಂಪರ್ಕವೇರ್ಪಟ್ಟಾಗ ಜ್ಞಾನವು ಉಂಟಾಗುತ್ತದೆ. ಜ್ಞಾತೃವು ಚೇತನಾತ್ಮಕವಾದ್ದರಿಂದ ಅದು ವಸ್ತುವನ್ನು ತಿಳಿಯಬಲ್ಲದು. ಜ್ಞೇಯವು ಜಡವೋ ಚೇತನವೋ ಎಂಬ ಬಗ್ಗೆ ತಾತ್ವಿಕರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರ ಪ್ರಕಾರ ಜ್ಞೇಯವು ಚೇತನಾತ್ಮಕವಲ್ಲ. ಆದರೂ ಅದು ಚೇತನಾತ್ಮಕವಾದ ಜ್ಞಾತೃವಿನೊಂದಿಗೆ ಸಂಪರ್ಕವನ್ನು ಹೊಂದಿ ತಿಳಿಯಲ್ಪಡುತ್ತದೆ. ಇವರನ್ನು ವಾಸ್ತವಿಕವಾದಿಗಳೆಂದು (Realists) ಕರೆಯುತ್ತಾರೆ. ವಾಸ್ತವಿಕವಾದಿಗಳ ಪ್ರಕಾರ ಜ್ಞೇಯ ಅಥವಾ ಬಾಹ್ಯವಸ್ತುವು ಜ್ಞಾತೃವನ್ನು ಅವಲಂಬಿಸಿಲ್ಲ. ಜ್ಞಾತೃವು ಅದನ್ನು ತಿಳಿಯಲಿ ಬಿಡಲಿ, ಬಾಹ್ಯವಸ್ತುವು ಸ್ವತಂತ್ರವಾಗಿ ಇರಬಲ್ಲದು. ಇನ್ನು ಕೆಲವರ ಪ್ರಕಾರ ಜ್ಞಾತೃವಿನ ಜ್ಞೇಯವೂ ಕೂಡ ಚೇತನಾತ್ಮಕವಾದುದು. ಸಮಾನ ಲಕ್ಷಣವನ್ನು ಹೊಂದಿರುವುದರಿಂದಲೇ ಅದು ಜ್ಞಾತೃವಿನೊಂದಿಗೆ ಸಂಬಂಧವನ್ನು ಹೊಂದಿ ಜ್ಞಾನವು ಸಾಧ್ಯವಾಗುವುದು. ಇವರನ್ನು ಜ್ಞಾತೃ ಪ್ರಧಾನವಾದಿಗಳೆಂದು (Subjectivists) ಕರೆಯುತ್ತಾರೆ.

ಜ್ಞಾನವನ್ನು ಕುರಿತಂತೆ ತಾತ್ವಿಕರಲ್ಲಿ ಏನೇ ಭಿನ್ನಾಭಿಪ್ರಾಯವಿರಲಿ. ಈಗ ನಮ್ಮ ಮುಂದಿರುವ ಪ್ರಶ್ನೆ ಜ್ಞಾನದ ಸಿಂಧುತ್ವವನ್ನು ಹೇಗೆ? ಜ್ಞಾನದ ಸಿಂಧುತ್ವವನ್ನು ನಿರ್ಧರಿಸುವ ಅಳತೆಗೋಲು ಯಾವುದು? ಈ ಪ್ರಶ್ನೆಗಳಿಗೆ ತಾತ್ವಿಕರಲ್ಲಿ ಸ್ಥೂಲವಾಗಿ ಮೂರು ಉತ್ತರಗಳಿವೆ.

ಮೊದಲನೆಯದು ಸತ್ಯದ ಸಾಂಗತ್ಯವಾದ (Correspondance Theory of Truth): ಈ ವಾದವನ್ನು ದ್ವಂದ್ವ ವಾಸ್ತವಿಕವಾದಿಗಳು (Dualistic Realists) ಅಥವಾ ಸಾಮಾನ್ಯಜ್ಞಾನ ವಾದಿಗಳು (Commonsense Theorists) ಪ್ರತಿಪಾದಿಸುತ್ತಾರೆ. ಬ್ರಿಟಿಷ್ ತಾತ್ವಿಕನಾದ ಜಾನ್ ಲಾಕ್ (1632–1704) ಇದರ ಪ್ರತಿಪಾದಕ. ಈತನ ಪ್ರಕಾರ ಜ್ಞಾನವು ಸಾಧ್ಯವಾಗಿರಬೇಕಿದ್ದರೆ ಮನಸ್ಸು ಮತ್ತು ಬಾಹ್ಯಜಗತ್ತುಗಳ ನಡುವಣ ಸಂಪರ್ಕವಿರಬೇಕು. ಆದರೆ ಇವೆರಡೂ ವಿರೋಧಲಕ್ಷಣಗಳಿಂದ ಕೂಡಿದೆ. ಲಾಕ್‌ನ ಪ್ರಕಾರ ಮನಸ್ಸಿನ ಸ್ವಭಾವವು ಆಲೋಚನೆಯಾದರೆ (Thought) ಬಾಹ್ಯವಸ್ತುವಿನ ಲಕ್ಷಣ ದೇಶವ್ಯಾಪ್ತಿ (Extension) ಯಾಗಿದೆ. ಎಂದರೆ ಬಾಹ್ಯವಸ್ತುವು ದೇಶವನ್ನು ಆಕ್ರಮಿಸಬಲ್ಲದಾಗಿದೆ. ಹಾಗೆಯೇ ಮನಸ್ಸು ಸರಳ (ಭಾಗರಹಿತ) ಮತ್ತು ಅವಿಭಾಜ್ಯವಾದರೆ ಬಾಹ್ಯವಸ್ತುವು ಸಂಕೀರ್ಣ ಹಾಗೂ ಅವಿಭಾಜ್ಯ ಎಂದರೆ ಭಾಗಗಳಿಂದ ಕೂಡಿರುವುದರಿಂದ ಮನಸ್ಸು ಮತ್ತು ಬಾಹ್ಯವಸ್ತುಗಳ ನಡುವೆ ಸಂಪರ್ಕವು ತನ್ಮೂಲಕ ಜ್ಞಾನವು ಹೇಗೆ ಸಾಧ್ಯ ಎಂಬ ಪ್ರಶ್ನೆಯು ಬರುತ್ತದೆ. ಲಾಕ್‌ನು "ಪ್ರತ್ಯಕ್ಷ ಪ್ರಾತಿನಿಧ್ಯವಾದದ (Representative Theory of Perception)" ಮೂಲಕ ಈ ಪ್ರಶ್ನೆಯನ್ನು ಉತ್ತರಿಸುತ್ತಾನೆ. ಈ ವಾದದ ಪ್ರಕಾರ ಬಾಹ್ಯವಸ್ತುವು ತನ್ನ ಸಂವೇದನೆಯನ್ನು ಇಂದ್ರಿಯದ್ವಾರದ ಮೂಲಕ ಮನಸ್ಸಿನ ಮೇಲೆ ಮುದ್ರಿಸುತ್ತದೆ. ಇದು ಮುದ್ರಿತವಾದ ಸಂವೇದನೆಯೇ ಜ್ಞಾನ ಅಥವಾ ಆಲೋಚನೆ(Idea or Knowledge). ಈ ಆಲೋಚನೆಯು ಬಾಹ್ಯವಸ್ತುವಿನ ಒಂದು ಪ್ರತಿ (Copy), ಪ್ರತಿನಿಧಿ(Representative) ಅಥವಾ ಪ್ರತಿಬಿಂಬ (Reflection). ಲಾಕ್‌ನ ಪ್ರಕಾರ ಮನಸ್ಸು ಬಾಹ್ಯವಸ್ತುವನ್ನು ಅರಿಯುವುದು ಮನಸ್ಸಿನೊಳಗಿರುವ ಈ ಪ್ರತಿಯ ಮೂಲಕವೇ ಹೊರತು ಬಾಹ್ಯವಸ್ತುವನ್ನೇ ನೇರವಾಗಿ ಅರಿಯಲಾರದು. ಮನೋಬಾಹ್ಯವಾದ ವಸ್ತುವಿನ ಜ್ಞಾನವು ಮನಸ್ಸಿನೊಳಗಿರುವ ವಸ್ತುವಿನ ಪ್ರತಿಯ ಮೂಲಕ ಮಾತ್ರ ಸಾಧ್ಯವೆನ್ನುವ ಈ ವಾದವನ್ನು "ಪ್ರತ್ಯಕ್ಷಪ್ರಾತಿನಿಧ್ಯ ವಾದ" (Representative Theory of perception) ಎಂದು ಕರೆಯುತ್ತಾರೆ.

ಈ ವಾದದ ಪ್ರಕಾರ ಜ್ಞಾನ ಅಥವಾ ಆಲೋಚನೆಯೊಂದರ ಸಿಂಧುತ್ವವನ್ನು ನಿರ್ಧರಿಸುವ ಅಳತೆಗೋಲು ಸಾಂಗತ್ಯ ಅಥವಾ ಹೊಂದಾಣಿಕೆ. ಮನಸ್ಸಿನಲ್ಲಿರುವ ಆಲೋಚನೆಗೂ ಮತ್ತು

Digitised by Bharatavani, CIIL

ಮನಸ್ಸಿನ ಹೊರಗಿರುವ ವಸ್ತುವಿಗೂ ಸಾಂಗತ್ಯವಿದ್ದಾಗ ಮಾತ್ರ ಆಲೋಚನೆಯು ಸರಿ. ಇಲ್ಲದಿದ್ದರೆ ಅದು ತಪ್ಪು. ಹೂವೊಂದನ್ನು ಕುರಿತ ನನ್ನ ಆಲೋಚನೆಗೂ ಮತ್ತು ಹೂವೆಂಬ ವಸ್ತುಸ್ಥಿತಿಗೂ ಹೊಂದಾಣಿಕೆಯಿದ್ದರೆ ಮಾತ್ರ ಹೂವನ್ನು ಕುರಿತ ನನ್ನ ಜ್ಞಾನವು ಸರಿ. "ಹೂವು ನೀಲಿಬಣ್ಣದಿಂದ ಕೂಡಿದೆ" ಎಂಬ ಹೇಳಿಕೆಯನ್ನು ನಾನು ನೀಡುತ್ತೇನೆ. ಈ ಹೇಳಿಕೆಯ ಸಿಂಧುತ್ವವನ್ನು ನಿರ್ಧರಿಸಲು ನಾನು ಹೂವೆಂಬ ವಾಸ್ತವತೆಯನ್ನು ಪರಿಶೀಲಿಸಬೇಕಾಗುತ್ತದೆ. ಹೇಳಿಕೆಗೂ ವಾಸ್ತವತೆಗೂ ಸಾಂಗತ್ಯವಿದ್ದಲ್ಲಿ ಹೂವನ್ನು ಕುರಿತ ನನ್ನ ಹೇಳಿಕೆಯು ಸರಿ. ಅಸಾಂಗತ್ಯವಿದ್ದರೆ ತಪ್ಪು.

ಪ್ರಾಕಲ್ಪನೆಗಳ (Hypotheses), ಯಥಾರ್ಥತೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸಲು ಸಾಂಗತ್ಯವಾದವು ನಮಗೆ ನೆರವಾಗುತ್ತದೆ. ಇಲ್ಲಿ ಪ್ರಾಕಲ್ಪನೆಗಳ ಸತ್ಯಾಸತ್ಯತೆಯನ್ನು ನಿರ್ಧರಿಸಲು ನಾವು ವೈಜ್ಞಾನಿಕ ಪರೀಕ್ಷೆಗೆ ಮೊರೆಹೋಗುತ್ತೇವೆ.

ಆದರೆ ಸಾಂಗತ್ಯವಾದದಲ್ಲಿ ಕೆಲವು ಪರಿಮಿತಿಗಳಿವೆ. ಮೊದಲನೆಯದಾಗಿ, ವಸ್ತುವನ್ನು ನಾವು ನೇರವಾಗಿ ತಿಳಿಯಲು ಅಸಾಧ್ಯವಾದರೆ ನಾವು ವಸ್ತುವನ್ನು ತಿಳಿಯಲು ಸಾಧ್ಯವೇ ಇಲ್ಲ. ಏಕೆಂದರೆ ಮನಸ್ಸಿಗೂ ವಸ್ತುವಿಗೂ ನೇರಸಂಪರ್ಕವಿಲ್ಲ. ಮನಸ್ಸಿಗೆ ನೇರಸಂಪರ್ಕವಿರುವುದು ವಸ್ತುವಿನ ಪ್ರತಿಯೇ ಹೊರತು ವಸ್ತುವಲ್ಲ. ಅಂತಹ ಬಾಹ್ಯವಸ್ತುವಿನ ಅಸ್ತಿತ್ವದ ಬಗ್ಗೆ ನಮಗೆ ಖಚಿತತೆ ಇರುವುದಿಲ್ಲ. ನಾವು ಹೊರವಸ್ತುವನ್ನು ನೇರವಾಗಿ ಸಂಪರ್ಕಿಸಲಾರವಾದರೆ, ಅಂತಹ ವಸ್ತುವು ಇರುವುದೆಂದು ಖಚಿತವಾದರೂ ಏನು? ನಮ್ಮ ಆಲೋಚನೆಗೆ ಒಂದು ಕಾರಣವಿರಬೇಕೆಂಬ ಲಾಕ್‌ನ ವಾದವು ಸರಿಯಲ್ಲ. ಏಕೆಂದರೆ ಜಾರ್ಜ್‌ಬಾರ್ಕ್‌ಲೆ ಹೇಳುವಂತೆ ಮನಸ್ಸಿನಲ್ಲಿ ಆಲೋಚನೆಯನ್ನು ಬಾಹ್ಯವಸ್ತುವೇ ಸೃಷ್ಟಿಸಬೇಕಿಲ್ಲ. ಅದನ್ನು ಮನಸ್ಸೇ ಸ್ವತಂತ್ರವಾಗಿ ಸೃಷ್ಟಿಸಿಕೊಂಡಿರಬಹುದು. ಎರಡನೆಯದಾಗಿ, ಜ್ಞಾನ ಮತ್ತು ವಸ್ತುಗಳಿಗೆ ಸಾಂಗತ್ಯವನ್ನು ಕಂಡುಹಿಡಿಯುವುದಾದರೂ ಹೇಗೆ? ಹಾಗೆ ಮಾಡಬೇಕಿದ್ದರೆ ನಮ್ಮ ಮನಸ್ಸಿಗೆ ಆಲೋಚನೆ ಮತ್ತು ವಸ್ತು ಇವೆರಡೂ ನೇರವಾಗಿ ದತ್ತವಾಗಿರಬೇಕು. ಆದರೆ ಸಾಂಗತ್ಯವಾದದ ಪ್ರಕಾರ ಮನಸ್ಸು ವಸ್ತುವಿನ ಪ್ರತಿಯಾದ ಆಲೋಚನೆಯೊಂದಿಗೆ ನೇರ ಸಂಪರ್ಕವನ್ನು ಹೊಂದಿದೆಯೇ ಹೊರತು ಬಾಹ್ಯವಸ್ತುವಿನೊಂದಿಗೆ ಅಲ್ಲ. ಇದು ಭಾವಚಿತ್ರವೊಂದು ಈ ಹಿಂದೆ ನಾವೆಂದಿಗೂ ಈವರೆಗೆ ಕಂಡೇ ಇರದ ವ್ಯಕ್ತಿಯೊಂದಿಗೆ ಸದೃಶ್ಯವೋ ಅಲ್ಲವೋ ಎಂದು ನಿರ್ಧರಿಸಿದಂತೆ. ಅದೇ ರೀತಿ ಮನಸ್ಸಿನೊಳಗಿರುವ ಈವರೆಗೆ ಕಂಡೆ ಇರದ ವ್ಯಕ್ತಿಯೊಂದಿಗೆ ಸದೃಶ್ಯವೋ ಅಲ್ಲವೋ ಎಂದು ನಿರ್ಧರಿಸಿದಂತೆ ಅದೇ ರೀತಿ ಮನಸ್ಸಿನೊಳಗಿರುವ ಆಲೋಚನೆ ಮತ್ತು ಮನಸ್ಸಿನ ಹೊರಗಿದ್ದು ನೇರವಾಗಿ ಕಾಣಲು ಸಾಧ್ಯವೇ ಇಲ್ಲದ ವಸ್ತುಗಳ ನಡುವೆ ಹೊಂದಾಣಿಕೆಯನ್ನು ಕಂಡುಹಿಡಿಯಲು ಸಾಧ್ಯವೇ ಇಲ್ಲ.

**ತರ್ಕಸಾಮಂಜಸ್ಯ ವಾದ (Coherence Theory):**

ಈ ವಾದವನ್ನು ಎಫ್ಕ್.ಡಿ ಬ್ರಾಡ್ಲಿ, ಬೊಸಂಖ್ವೆ(Bosanquet) ಮತ್ತು ಜೊಯಾಕ್ಚಿಂ ಮಂಡಿಸುತ್ತಾರೆ. ಸಾಂಗತ್ಯವಾದವು ಆಲೋಚನೆ ಮತ್ತು ಬಾಹ್ಯವಸ್ತುಗಳಲ್ಲಿ ಹೊಂದಾಣಿಕೆಯನ್ನು ನಿರೀಕ್ಷಿಸಿದರೆ, ಸಾಮಂಜಸ್ಯವಾದವು ಈ ಹೊಂದಾಣಿಕೆಯನ್ನು ಆಲೋಚನೆ ಮತ್ತು ವಸ್ತುಗಳಲ್ಲಿ ನಿರೀಕ್ಷಿಸದೇ ಒಂದು ಆಲೋಚನೆ ಮತ್ತು ಇನ್ನೊಂದು ಆಲೋಚನೆಗಳ ನಡುವೆ ನಿರೀಕ್ಷಿಸುತ್ತದೆ. ಈ ವಾದದ ಪ್ರಕಾರ ಎರಡು ಆಲೋಚನೆಗಳ ನಡುವೆ ಇರುವ ಸಾಮಂಜಸ್ಯ ಅಥವಾ ಸುಸಂಬದ್ಧತೆಯೇ ಜ್ಞಾನದ ಸಿಂಧುತ್ವವನ್ನು ನಿರ್ಧರಿಸುವ ಅಳತೆಗೋಲು, ಜ್ಞಾನವೊಂದು ಸಿಂಧುವೆನಿಸಬೇಕಿದ್ದಲ್ಲಿ ಅದು ಈಗಾಗಲೇ ಸತ್ಯವೆಂದು ಸ್ಥಾಪಿತವಾಗಿರುವ ಇತರ ಜ್ಞಾನಗಳೊಂದಿಗೆ ಸುಸಂಬದ್ಧವಾಗಿರಬೇಕು. ಅಸಂಬದ್ಧವಾಗಿದ್ದರೆ ಆ ಜ್ಞಾನವು ಅಸಿಂಧುವಾದುದು.

ಆದರೆ ಸಾಮಾನ್ಯ ಮನುಷ್ಯನಿಗೆ ಎಲ್ಲ ಜ್ಞಾನಗಳಲ್ಲೂ ಸಾಮಂಜಸ್ಯವನ್ನು ಕಂಡುಹಿಡಿಯಲು ಕಾರ್ಯತಃ ಸಾಧ್ಯವೇ ಇಲ್ಲ. ಜ್ಞಾನವೆಂಬುದು ಒಂದು ವಿಶಾಲವ್ಯವಸ್ಥೆ. ಈ ಇಡೀ ವಿಶಾಲವ್ಯವಸ್ಥೆಯನ್ನು ಮೈಗೂಡಿಸಿಕೊಳ್ಳುವುದು ಮನುಷ್ಯಮಾತ್ರನಿಗೆ ಕಷ್ಟವೇ ಸರಿ. ಆದ್ದರಿಂದ ಅವನು ಈ ವ್ಯವಸ್ಥೆಯನ್ನು ತನ್ನ ಸೌಲಭ್ಯಕ್ಕೋಸ್ಕರ ವಿವಿಧ ಶಾಖೆಗಳಾಗಿ ವಿಂಗಡಿಸಿಕೊಳ್ಳುತ್ತಾನೆ. ಪ್ರತಿಯೊಂದು ಶಾಖೆಗೂ "ಚರ್ಚೆಯ ಸಮಷ್ಟಿ" (Universe of Discourse) ಎಂದು ಹೆಸರು. ಈ ಸೀಮಿತ ಪರಿಧಿಯಲ್ಲಿ ಮಾತ್ರ ತರ್ಕಸಾಮಂಜಸ್ಯವಾದವು ಅರ್ಥಪೂರ್ಣವೇ ಹೊರತು ವಿಶಾಲ ಅರ್ಥದಲ್ಲಿ ಅಲ್ಲ. ಎರಡನೆಯದಾಗಿ, ತರ್ಕಸಾಮಂಜಸ್ಯವಾದವು ಆಲೋಚನೆಗಳ ಸುಸಂಬದ್ಧತೆಗೆ ಅನುಚಿತಪ್ರಾಧಾನ್ಯ ನೀಡುತ್ತದೆ. ಎಂದರೆ ಅದು ವಿಚಾರದ ಆಕಾರಕ್ಕೆ (Form) ಮಹತ್ವವನ್ನು ನೀಡುವುದೇ ಹೊರತು ವಿಚಾರದ ವಸ್ತುವಿಗಲ್ಲ (Matter). ವಿಚಾರ, ಆಲೋಚನೆ ಅಥವಾ ಜ್ಞಾನಕ್ಕೆ ಆಕಾರವೇ ಮುಖ್ಯವಾದಲ್ಲಿ ಕೆಳಗಿನ ವಾದವನ್ನು ನಾವು ಸರಿಯೆನ್ನಬೇಕಾಗುತ್ತದೆ.

ಎಲ್ಲ ಮಾನವರು ವಾನರರು
ಎಲ್ಲ ಮಂತ್ರಿಗಳೂ ಮಾನವರು
ಎಲ್ಲ ಮಂತ್ರಿಗಳೂ ವಾನರರು

ಈ ಮೇಲಿನ ವಾದವು ಆಕಾರದ ವಿಷಯದಲ್ಲಿ ಸುಸಂಬದ್ಧವಾಗಿದ್ದರೂ ಮತ್ತು ಅದು ಎಲ್ಲ ತಾರ್ಕಿಕ ನಿಯಮಗಳಿಗೆ ಬದ್ಧವಾಗಿದ್ದರೂ ಅದರ ತೀರ್ಮಾನವು ಪ್ರತಿಜ್ಞೆಯನ್ನು (Promise) ಆಧರಿಸಿದೆ. ಮಾನವತ್ವ ಮತ್ತು ವಾನರತ್ವಕ್ಕೆ ಯಾವುದೇ ರೀತಿಯ ಆವಶ್ಯಕ ಸಂಬಂಧವಿಲ್ಲ ಅಥವಾ ಸಂಭಾವ್ಯ ಸತ್ಯವಾಗಿರುವ (Probable Truth) ಆಲೋಚನೆಯ ಆಧಾರವನ್ನು ಹೊಂದಿರುವ ತೀರ್ಮಾನವು ನಿಖರವಾಗಿರಲು ಸಾಧ್ಯವಿಲ್ಲ.

ಕಡೆಯದಾಗಿ ಕಾಲ್ಪನಿಕವಾದ ಕಥೆಗಳಲ್ಲಿ ನಾವು ಅನೇಕವೇಳೆ ಅವುಗಳ ಚೌಕಟ್ಟಿನೊಳಗೆ ಸುಸಂಬದ್ಧತೆಯನ್ನು ಕಾಣಲು ಸಾಧ್ಯವುಂಟು. ಅಂದಮಾತ್ರಕ್ಕೆ ಕಥೆಗಳು ನಿಜವೆನ್ನಲು ಸಾಧ್ಯವಿಲ್ಲ.

Digitised by Bharatavani, CIIL

**ಫಲವಾದ (Pragmatism)**

ಮೇಲಿನ ಎಲ್ಲ ಕಾರಣಗಳಿಂದ ಜ್ಞಾನದ ಸಿಂಧುತ್ವವನ್ನು ನಿರ್ಧರಿಸುವ ಮೂರನೆಯ ಮಾನದಂಡವು ಉಗಮವಾಯಿತು. ಅದೇ ಫಲವಾದ ಅಥವಾ ವ್ಯಾವಹಾರಿಕವಾದ ಅಮೇರಿಕರನ್ನರು ಈ ವಾದವನ್ನು ಮುಂದಿಟ್ಟರು. ಈ ವಾದವನ್ನು ತರ್ಕೋಪಕರಣವಾದ (Instrumentalism) ಮತ್ತು Voluntarism ಎಂದೂ ಕರೆಯುತ್ತಾರೆ. ಭಾರತೀಯ ತತ್ವಶಾಸ್ತ್ರದಲ್ಲಿ ಬೌದ್ಧರು ಮತ್ತು ನೈಯಾಮಿಕರು ಈ ವಾದವನ್ನು ಪ್ರತಿಪಾದಿಸಿದ್ದಾರೆ. ಅವರು ಈ ವಾದವನ್ನು ಅರ್ಥಕ್ರಿಯಾವಾದ ಎಂದು ಕರೆಯುತ್ತಾರೆ.

ಫಲವಾದದ ಪ್ರಕಾರ ಜ್ಞಾನವೊಂದರ ಸಿಂಧುತ್ವವನ್ನು ನಾವು ಅದರ ಕಾರ್ಯ (Function), ಫಲ (Result), ಪರಿಣಾಮ (Consequence), ಪ್ರಯೋಜನ ಅಥವಾ ಉಪಯುಕ್ತತೆಯಿಂದ ನಿರ್ಧರಿಸಬೇಕು. ಜ್ಞಾನದ ಸಿಂಧುತ್ವವು ಸಾಂಗತ್ಯವಾದಿಗಳು ಹೇಳುವಂತೆ ಜ್ಞಾನ ಮತ್ತು ವಸ್ತುಗಳ ಸಾಂಗತ್ಯದಲ್ಲಾಗಲೀ ಅಥವಾ ತರ್ಕಸಾಮಂಜಸ್ಯವಾದಿಗಳು ಹೇಳುವಂತೆ ಜ್ಞಾನ ಮತ್ತು ಜ್ಞಾನಿಗಳ ಸುಸಂಬದ್ಧತೆಯಲ್ಲಾಗಲೀ ಇಲ್ಲ. ಒಂದು ಪಕ್ಷ ಸಾಂಗತ್ಯ ಅಥವಾ ಸುಸಂಬದ್ಧತೆಯ ಅಗತ್ಯವಾಗಿದ್ದರೂ ಮುಖ್ಯವಾದುದು, ಜ್ಞಾನದ ಉಪಯುಕ್ತತೆ. ಜ್ಞಾನದ ಸಿಂಧುತ್ವವನ್ನು ನಾವು ಅದರ ಪರಿಣಾಮದಿಂದ ನಿರೀಕ್ಷಿಸಬೇಕಾಗುತ್ತದೆ. ಯಾವ ಜ್ಞಾನವು ನಿರೀಕ್ಷಿತ ಫಲವನ್ನು ನೀಡುವುದೋ ಅದು ಸತ್ಯ. ಇಲ್ಲದಿದ್ದರೆ ಅದು ಅಸತ್ಯ. ಯಾವ ಜ್ಞಾನವು ನೈಜ ಬದುಕಿನಲ್ಲಿ ಪ್ರಾಯೋಗಿಕವೋ ಅದು ಮಾತ್ರ ನಿಜವೆಂಬುದು ಫಲವಾದಿಗಳ ವಾದ ಮಾನವಿ ಬದುಕಿನ ಯಶಸ್ಸು ಬರಿಯ ಸಿದ್ಧಾಂತದಲ್ಲಿರದೆ ಆ ಸಿದ್ಧಾಂತದ ಕಾರ್ಯಸಾಧ್ಯತೆಯಲ್ಲಿ, ಪ್ರಾಯೋಗಿಕ ಔಚಿತ್ಯದಲ್ಲಿದೆ. ಸತ್ಯವೆಂಬುದು ಆಲೋಚನೆಯಲ್ಲಿ ಅಂತಸ್ಥವಾಗಿರದೇ ಆಲೋಚನೆಯ ಪರಿಣಾಮದಲ್ಲಿ ಅಂತಸ್ಥವಾಗಿದೆ. ಉಪಯುಕ್ತತೆಗೆ ಅಧೀನವಾಗಿದೆ. ಉದಾಹರಣೆಗೆ ನೀರಿನ ಅಸ್ತಿತ್ವವು ನನ್ನ ಬಾಯಾರಿಕೆಯನ್ನು ಹಿಂಗಿಸುವ ಅದರ ಸಾಮರ್ಥ್ಯದಲ್ಲಿದೆ. ಹಾಗೆಯೇ ವಿದ್ಯುತ್ತಿನ ಅಸ್ತಿತ್ವವು ಅದರ ಕಾರ್ಯಗಳಲ್ಲಿದೆ.

ಫಲವಾದಿಗಳ ಪ್ರಕಾರ ಸತ್ಯವು (Truth) ನಿರ್ದಿಷ್ಟ ಉಪಾಧಿ (Conditions) ಸಮೂಹಕ್ಕೆ ಸಾಪೇಕ್ಷವಾದುದು. ಈ ಉಪಾಧಿಗಳು ಬದಲಾಗುತ್ತಿದ್ದರೆ ಸತ್ಯವೂ ಬದಲಾಗುತ್ತದೆ. ಆದ್ದರಿಂದ ಫಲವಾದಿಗಳ ಪ್ರಕಾರ ಸತ್ಯವು ಸಾಪೇಕ್ಷವಾದುದು, ಉಪಾಧಿಗಳಿಗೆ ಒಳಪಟ್ಟುದು.

ಫಲವಾದದಲ್ಲಿ ದೋಷಗಳಿಲ್ಲವೆಂದಿಲ್ಲ. ಫಲವಾದಿಯು ಜೀವನವನ್ನು ಬಹಳ ಸಂಕುಚಿತ ದೃಷ್ಟಿಯಿಂದ ಕಾಣುತ್ತಾನೆ. ಆತನು ಬದುಕನ್ನು ಆಳವಾಗಿ ನೋಡುವುದಿಲ್ಲ. ಕ್ಷುಲ್ಲಕ ಮತ್ತು ತಾತ್ಕಾಲಿಕ ಲೌಕಿಕತೆಗೆ ಪ್ರಾಧಾನ್ಯ ನೀಡಿ ಬದುಕಿನ ಆಕ್ಷಣಿಕ ಗುರಿಯನ್ನು ಕಡೆಗಣಿಸುತ್ತಾನೆ. ಮನುಷ್ಯನ ಗುರಿ ಜೀವನದ ಲೌಕಿಕ ಉದ್ದೇಶಗಳನ್ನು ಪರಿಹರಿಸಿಕೊಳ್ಳುವುದಷ್ಟೇ ಅಲ್ಲ ಮಾನವನಿಗೆ ಲೌಕಿಕವು ಅವನಿಗೆ ಎಷ್ಟೇ ಅಗತ್ಯವಿರಬಹುದು. ಅವನ ಬದುಕಿಗೆ ಒಂದು ತಾತ್ವಿಕ ಗುರಿಯೂ ಇದೆ. ಫಲವಾದಿಯು ಬದುಕಿನ ತಾತ್ವಿಕ ಮುಖವನ್ನು ಅಲಕ್ಷಿಸಿ ಕೇವಲ ಲೌಕಿಕ ಮುಖಕ್ಕೆ ಒತ್ತನ್ನು ನೀಡುತ್ತಾನೆ. ಎರಡನೆಯದಾಗಿ, ಜ್ಞಾನದ ಪರಿಣಾಮ ಬಹಳ ಒಳ್ಳೆಯದಿದ್ದರೂ ಅದು ಸುಳ್ಳಿರಬಹುದು. ಕೆಲವು ಸುಳ್ಳುಗಳು ಜೀವನದಲ್ಲಿ ಉಪಯುಕ್ತ ಪರಿಣಾಮಗಳನ್ನು ನೀಡಲು ಸಾಧ್ಯವುಂಟು. ಅಂದ ಮಾತ್ರಕ್ಕೆ ಸುಳ್ಳು ನಿಜವೆನ್ನಲು ಬರುವುದಿಲ್ಲ. ಉಪಯುಕ್ತತೆಯು ಜ್ಞಾನದ ಸಿಂಧುತ್ವವನ್ನು ನಿರ್ಧರಿಸುವುದಿಲ್ಲ. ವಾಸ್ತವವಾಗಿ ಜ್ಞಾನವೊಂದು ಫಲಕಾರಿಯಾಗಿದ್ದಲ್ಲಿ ಅದು ಸತ್ಯವಾಗಿರುವುದೇ ಕಾರಣ ಎಂಬ ವಾದವು ಇದೆ. ಅನೇಕ ವೇಳೆ ನಂಬಿಕೆಯೊಂದರ ಪರಿಣಾಮವನ್ನು ಪರೀಕ್ಷಿಸಲು ನಮಗೆ ಕಾರ್ಯತಃ ಸಾಧ್ಯವೇ ಆಗುವುದಿಲ್ಲ. ಉದಾಹರಣೆಗೆ ನಾನು ಜನನಿಬಿಡ ರಸ್ತೆಯೊಂದರ ಬದಿಯಲ್ಲಿ ನಿಂತಿದ್ದೇನೆ. ರಸ್ತೆಯನ್ನು ದಾಟಬೇಕಿದೆ. ರಸ್ತೆಯಲ್ಲಿ ವಾಹನವೊಂದು ವೇಗವಾಗಿ ಬರುತ್ತಿದೆ. ಈ ವಾಸ್ತವತೆಯನ್ನು ನಂಬದೇ ನಾನು ರಸ್ತೆಯನ್ನು ದಾಟುವ ಸಾಹಸವನ್ನು ಮಾಡಿದರೆ ನನಗೆ ಅಪಘಾತವಾಗುವ, ಪರಿಣಾಮವು ಕೆಟ್ಟದಾಗುವ ಸಂಭವವಿರುತ್ತದೆ. ಇಲ್ಲಿ ವಾಹನ ಬರುವುದು ನಿಜವಾದ್ದರಿಂದ ನನಗೆ ಅಪಘಾತವು ತಪ್ಪುವುದೇ ಹೊರತು ನನಗೆ ಅಪಘಾತ ತಪ್ಪುವುದರಿಂದ ವಾಹನ ಬರುವುದು ನಿಜವಾಗುವುದಿಲ್ಲ. ಅಲ್ಲದೇ ಉಪಯುಕ್ತತೆಯೆಂಬುದು ಒಂದು ವ್ಯಕ್ತಿನಿಷ್ಠ ಪರಿಕಲ್ಪನೆ. ಒಬ್ಬನಿಗೆ ಉಪಯುಕ್ತವಾದುದು ಮತ್ತೊಬ್ಬನಿಗೆ ಅನುಪಯುಕ್ತವಾಗಿರಬಹುದು ಮತ್ತು ಒಬ್ಬನಿಗೆ ಒಂದು ಕಾಲದಲ್ಲಿ ಉಪಯುಕ್ತವಾದುದು ಮತ್ತೊಬ್ಬನಿಗೆ ಬೇರೊಂದು ಕಾಲದಲ್ಲಿ ಅನುಪಯುಕ್ತವಾಗಿರಬಹುದು. ಉದಾಹರಣೆಗೆ ದೇವರಲ್ಲಿನ ನಂಬಿಕೆಯು ಒಬ್ಬನಿಗೆ ನೆಮ್ಮದಿಯನ್ನು ನೀಡಬಹುದು. ಈ ನಂಬಿಕೆಯು ಮತ್ತೊಬ್ಬನಿಗೆ ನೆಮ್ಮದಿಯನ್ನು ನೀಡದಿರಬಹುದು. ಅಂದ ಮಾತ್ರಕ್ಕೆ ದೇವರು ಏಕಕಾಲದಲ್ಲಿ ಇರಲು ಮತ್ತು ಇಲ್ಲದಿರಲು ಸಾಧ್ಯವಿಲ್ಲ.

ಆದ್ದರಿಂದ ಜ್ಞಾನವು ಸಾರ್ವತ್ರಿಕ (Universal). ಅದು ಸಿಂಧುವೆನಿಸಬೇಕಿದ್ದರೆ ಅದು ಎಲ್ಲರಿಗೂ ಯಾವಾಗಲೂ ಅವಶ್ಯಕವಾಗಿ ಸತ್ಯವಾಗಿರಬೇಕು. ಜ್ಞಾನದ ಸಿಂಧುತ್ವವು ವಸ್ತುನಿಷ್ಠತೆ ಸಂಬಂಧಿಸಿದ್ದೇ ಹೊರತು ಅದರ ಪರಿಣಾಮಕ್ಕಲ್ಲ. ಯಥಾರ್ಥ ಜ್ಞಾನದ ಪರಿಣಾಮವು ಒಳ್ಳೆಯದಿರಲಿ ಬಿಡಲಿ ಅದು ಸತ್ಯವೇ. ಜ್ಞಾನದ ಸಿಂಧುತ್ವವು ಯಾವುದೇ ಒಬ್ಬ ವ್ಯಕ್ತಿಗೆ ಅಥವಾ ಒಂದು ತಲೆಮಾರಿನ ವ್ಯಕ್ತಿಗೆ ಸೀಮಿತವಲ್ಲ. ಬದಲಾಗಿ ಅದು ಎಲ್ಲರಿಗೂ ಮತ್ತು ಎಲ್ಲ ತಲೆಮಾರಿನವರಿಗೂ ವಿಸ್ತೃತವಾದುದು.

**–ಚಂದ್ರಶೇಖರ್ ಹೆಚ್.ಎಲ್.**

## ಜ್ಞಾನದ ಸಿದ್ಧಾಂತಗಳು

ಜ್ಞಾನವು 'ಜ್ಞಾತೃ' ಮತ್ತು 'ಜ್ಞೇಯ'ಗಳೆಂಬ ಎರಡು ಅಂಶಗಳಿಂದ ಕೂಡಿದೆ. ವಸ್ತುವನ್ನು ತಿಳಿಯುವವನು ಜ್ಞಾತೃ ಅಥವಾ ಪ್ರಮಾತೃ (Subject) ತಿಳಿಯಲ್ಪಡುವ ವಸ್ತುವು ಜ್ಞೇಯ ಮತ್ತು ಪ್ರಮೇಯ (Object) ಜ್ಞಾತೃ ಮತ್ತು ಜ್ಞೇಯಗಳಿಗೆ ಸಂಪರ್ಕವೇರ್ಪಟ್ಟಾಗ ಜ್ಞಾನವು ಉಂಟಾಗುತ್ತದೆ. ಜ್ಞಾತೃವು ಚೇತನಾತ್ಮಕವಾದ್ದರಿಂದ ಅದು

Digitised by Bharatavani, CIIL

ವಸ್ತುವನ್ನು ತಿಳಿಯಬಲ್ಲದು. ಜ್ಞೇಯವು ಚೇತನಾತ್ಮಕವೋ, ಜಡವೋ ಎಂಬ ಬಗ್ಗೆ ಜ್ಞಾನಮೀಮಾಂಸಕರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರ ಪ್ರಕಾರ ಜ್ಞೇಯವು ಚೇತನಾತ್ಮಕವಲ್ಲ ಅದು ಜಡವಾಗಿರುತ್ತದೆ. ಇಲ್ಲವೇ ಅದು ಇತ್ತ ಜಡವೂ ಅಲ್ಲದ ಅತ್ತ ಚೇತನವೂ ಅಲ್ಲದ ಒಂದು ತಟಸ್ಥ ಸಾಮಗ್ರಿಯಾಗಿರುತ್ತದೆ. ಇಂತಹ ತಾತ್ವಿಕರನ್ನು ವಾಸ್ತವವಾದಿಗಳು (Realists) ಎಂದು ಕರೆಯುತ್ತಾರೆ. ಇವರ ಪ್ರಕಾರ ಬಾಹ್ಯವಸ್ತುವು ತನ್ನ ಅಸ್ತಿತ್ವಕ್ಕೆ ತಿಳಿಯುವವನನ್ನು ಅವಲಂಬಿಸಿಲ್ಲ. ಜ್ಞಾತೃವು ಅದನ್ನು ತಿಳಿಯಲಿ ಬಿಡಲಿ ಅದು ಸ್ವತಂತ್ರವಾಗಿ ಇದ್ದೇ ಇರುತ್ತದೆ. ಇನ್ನೂ ಕೆಲವರ ಪ್ರಕಾರ ಜ್ಞಾತೃವಿನಂತೆ ಜ್ಞೇಯವೂ ಕೂಡ ಚೇತನಾತ್ಮಕವಾಗಿದೆ. ಹೀಗೆ ಜ್ಞಾತೃ ಮತ್ತು ಜ್ಞೇಯಗಳು ಸಮಾನ ಲಕ್ಷಣವನ್ನು ಹೊಂದಿರುವುದರಿಂದಲೇ ಅವೆರಡರ ನಡುವೆ ಸಂಪರ್ಕವು ಸಾಧ್ಯವಾಗಿ ತನ್ಮೂಲಕ ಜ್ಞಾನವುಂಟಾಗುವುದು. ಇಂತಹ ತಾತ್ವಿಕರನ್ನು ಚಿತ್‌ಪ್ರಧಾನವಾದಿಗಳು (Idealists) ಎಂದು ಕರೆಯುತ್ತಾರೆ. ಚಿತ್‌ಪ್ರಧಾನವಾದಿಗಳ ಪ್ರಕಾರ ತಿಳಿಯುವವನಿಲ್ಲದೇ ತಿಳಿಯಲ್ಪಡುವ ವಸ್ತುವಿನ ಜ್ಞಾನವು ಸಾಧ್ಯವಿಲ್ಲ. ಜ್ಞಾತೃವಿಲ್ಲದೇ ಜ್ಞೇಯದ ಜ್ಞಾನವು ಸಾಧ್ಯವಿಲ್ಲ. ವಾಸ್ತವವಾದಿಗಳು ಜ್ಞೇಯಕ್ಕೆ ಹೆಚ್ಚು ಪ್ರಾಧಾನ್ಯವನ್ನು ನೀಡಿದರೆ, ಚಿತ್‌ಪ್ರಧಾನವಾದಿಗಳು ಜ್ಞಾತೃವಿಗೆ ಮಹತ್ವವನ್ನು ನೀಡುತ್ತಾರೆ.

ಮೇಲಿನ ಎರಡೂ ವಾದಗಳಲ್ಲಿ ಪುನಃ ಹಲವಾರು ಪ್ರಭೇದಗಳಿವೆ.

1. **ಸರಳವಾಸ್ತವವಾದ (Naive Realism) :** ನಿಜ ಹೇಳಬೇಕೆಂದರೆ ಇದೊಂದು ತಾತ್ವಿಕ ಸಿದ್ಧಾಂತವೇ ಅಲ್ಲ. ಈ ದೃಷ್ಟಿಕೋನವು ಜನಸಾಮಾನ್ಯರ ಧೋರಣೆಯನ್ನು ಪ್ರತಿಬಿಂಬಿಸುತ್ತದಷ್ಟೆ. ಇದರ ಪ್ರಕಾರ ಜ್ಞಾತೃ ಮತ್ತು ಜ್ಞೇಯಗಳಿಗೆ ನೇರಸಂಪರ್ಕವಿದ್ದು, ಜ್ಞಾತೃವು ಜ್ಞೇಯವನ್ನು ನೇರವಾಗಿ ತಿಳಿಯಬಲ್ಲದು. ಆದರೆ ಈ ವಾದದಲ್ಲಿ ಮುಖ್ಯವಾಗಿ ಎರಡು ದೋಷಗಳಿವೆ. ಮೊದಲನೆಯದಾಗಿ ಅದು ಜ್ಞಾನದಲ್ಲಿ ಭ್ರಾಂತಿಯನ್ನು (Illusion) ತೃಪ್ತಿಕರವಾಗಿ ವಿವರಿಸುವುದಿಲ್ಲ. ಒಂದು ವಸ್ತುವನ್ನು ಅದು ಇದ್ದಂತೆ ನೇರವಾಗಿ ತಿಳಿಯಬಲ್ಲವಾದರೆ ಅದನ್ನು ನಾವು ತಪ್ಪು ತಿಳಿಯುವ ಸಂಭವವೇ ಇರುವುದಿಲ್ಲ. ಎಂದರೆ ಜ್ಞಾನದಲ್ಲಿ ಪ್ರಮೆ (ಸರಿಯಾದ ಜ್ಞಾನ) ಮತ್ತು ಭ್ರಮೆ (ತಪ್ಪು ಜ್ಞಾನ)ಗಳಿಗಿರುವ ವ್ಯತ್ಯಾಸವನ್ನು ಈ ವಾದವು ಸ್ಪಷ್ಟಪಡಿಸುವುದಿಲ್ಲ. ಎರಡನೆಯದಾಗಿ ಜ್ಞಾನದಲ್ಲಿ ಮನಸ್ಸಿನ (Mind) ಪಾತ್ರವೇನೆಂಬ ಬಗ್ಗೆ ಈ ವಾದದಲ್ಲಿ ಸ್ಪಷ್ಟತೆಯಿಲ್ಲ.

2. **ದ್ವಂದ್ವ ವಾಸ್ತವವಾದ (Dualistic Realism):** ಈ ವಾದವನ್ನು ಸಾಮಾನ್ಯಜ್ಞಾನ ಸಿದ್ಧಾಂತ (Common sense Theory) ಎಂದೂ ಕರೆಯುತ್ತಾರೆ. ಬ್ರಿಟಿಷ್ ತತ್ವಜ್ಞಾನಿ ಜಾನ್‌ಲಾಕ್ (1632–1704) ಇದರ ಪ್ರತಿಪಾದಕ. ಈತನ ಪ್ರಕಾರ ಜ್ಞಾನವು ಸಾಧ್ಯವಾಗಬೇಕಿದ್ದರೆ ಜ್ಞಾತೃ ಮತ್ತು ಜ್ಞೇಯಗಳ ನಡುವಣ ಸಂಪರ್ಕವಿರಬೇಕು ಅಥವಾ ಮನಸ್ಸು ಮತ್ತು ಮನಸ್ಸಿನ ಹೊರಗಿರುವ ವಸ್ತು – ಇವುಗಳ ನಡುವಣ ಸಂಪರ್ಕವಿರಬೇಕು. ಆದರೆ ಮನಸ್ಸು ಮತ್ತು ಬಾಹ್ಯವಸ್ತುಗಳೆರಡೂ ವಿರೋಧ ಲಕ್ಷಣಗಳಿಂದ ಕೂಡಿವೆ. ಮನಸ್ಸಿನ ಸ್ವಭಾವ ಆಲೋಚನೆಯೆಂದರೆ (Thought) ಬಾಹ್ಯವಸ್ತುವು ಜಡ. ಹಾಗೆಯೇ ಮನಸ್ಸು ಸರಳ (Simple). ಅದರಲ್ಲಿ ಯಾವುದೇ ಭಾಗಗಳಿಲ್ಲ. ಆದ್ದರಿಂದಲೇ ಅದು ಅವಿಭಾಜ್ಯ (Indivisible). ಆದರೆ ಭಾಗಗಳಿಂದ ಕೂಡಿರುವ ಬಾಹ್ಯವಸ್ತುವು ಸಂಕೀರ್ಣ (Complex). ಆದ್ದರಿಂದಲೇ ಅದು ವಿಭಾಜ್ಯ (Divisible). ಹೀಗೆ ವಿರೋಧಲಕ್ಷಣಗಳಿರುವ ಮನಸ್ಸು ಮತ್ತು ಬಾಹ್ಯವಸ್ತುಗಳ ನಡುವಣ ಸಂಪರ್ಕವು ಹೇಗೆ ಸಾಧ್ಯ? ತನ್ಮೂಲಕ ಜ್ಞಾನವು ಹೇಗೆ ಸಾಧ್ಯವೆಂಬುದು ಪ್ರಶ್ನೆ. ಎರಡು ತತ್ವಗಳಿಗೆ ಸಂಪರ್ಕವು ಸಾಧ್ಯವಾಗಬೇಕಿದ್ದರೆ ಅವುಗಳನ್ನು ಒಂದುಗೂಡಿಸುವ ಸಮಾನ ಅಂಶವು ಅವೆರಡರಲ್ಲೂ ಇರಬೇಕು. ಈ ಸಮಾನ ಅಂಶದ ಅಭಾವದಲ್ಲಿ ಮತ್ತು ಪೂರ್ಣವೈರುಧ್ಯದ ಹಿನ್ನೆಲೆಯಲ್ಲಿ ಜ್ಞಾತೃ–ಜ್ಞೇಯಗಳ ಸಂಪರ್ಕ ತನ್ಮೂಲಕ ಜ್ಞಾನವು ಹೇಗೆ ತಾರ್ಕಿಕವಾಗಿ ಸಾಧ್ಯವೆಂಬುದು ಪ್ರಶ್ನೆ.

ಜಾನ್‌ಲಾಕ್ ಮೇಲಿನ ಪ್ರಶ್ನೆಗೆ ತನ್ನದೇ ಆದ ರೀತಿಯಲ್ಲಿ ಉತ್ತರಿಸುತ್ತಾನೆ. ಈತನ ಪ್ರಕಾರ ಬಾಹ್ಯವಸ್ತುವು ತನ್ನ ಸಂವೇದನೆಯನ್ನು (Sensation) ಇಂದ್ರಿಯಗಳೆಡೆಗೆ ಕಳುಹಿಸುತ್ತದೆ. ಈ ಸಂವೇದನೆಯು ಇಂದ್ರಿಯ ದ್ವಾರದ ಮೂಲಕ ಮನಸ್ಸನ್ನು ಪ್ರವೇಶಿಸಿ ಮನಸ್ಸಿನ ಮೇಲೆ ತನ್ನ ಅಚ್ಚನ್ನು ಒತ್ತುತ್ತದೆ. ಹೀಗೆ ಮನಸ್ಸಿನಲ್ಲಿ ಮುದ್ರಿತವಾದ ಈ ಸಂವೇದನೆಗೆ ಆಲೋಚನೆ (Idea) ಎಂದು ಹೆಸರು. ಎಂದರೆ ಆಲೋಚನೆಯೆಂಬುದು ಮನಸ್ಸಿನಲ್ಲಿರುವ ವಸ್ತು ಸಂವೇದನೆಯ ಒಂದು ಪ್ರತಿ(Copy), ಪ್ರತಿನಿಧಿ(Representative), ನಕಲು ಅಥವಾ ಪ್ರತಿಬಿಂಬ (Reflection), ಮನಸ್ಸು ತನ್ನೊಳಗೆ ಮುದ್ರಿತವಾಗಿರುವ ಈ ನಕಲು ಅಥವಾ ಪ್ರತಿನಿಧಿಯ ಮೂಲಕ ವಸ್ತುವನ್ನು ತಿಳಿಯುವುದೇ ಹೊರತು ವಸ್ತುವನ್ನೇ ನೇರವಾಗಿ ತಿಳಿಯಲಾರದು. ಏಕೆಂದರೆ ಮನಸ್ಸಿಗೆ ನೇರವಾಗಿ ದತ್ತವಾಗಿರುವುದು ವಸ್ತುವಿನ ಈ ಪ್ರತಿಯೇ ಹೊರತು ವಸ್ತುವಲ್ಲ. ವಸ್ತುವಿನ ಜ್ಞಾನವು ವಸ್ತುವಿನ ಪ್ರತಿಯೇ ಹೊರತು ವಸ್ತುವಲ್ಲ. ವಸ್ತುವಿನ ಜ್ಞಾನವು ವಸ್ತುವಿನ ಪ್ರತಿಯ ಮೂಲಕ ಪರೋಕ್ಷವಾಗಿ ಸಾಧ್ಯವೆನ್ನುವುದರಿಂದ ಲಾಕ್‌ನ ಈ ವಾದಕ್ಕೆ ಪ್ರತ್ಯಕ್ಷ ಪ್ರಾತಿನಿಧ್ಯವಾದ (Representitative Theory) ಎಂದು ಹೆಸರು.

ಮೇಲಿನ ವಾದದಲ್ಲಿ ಕೆಲವು ದೋಷಗಳುಂಟು. ಮೊದಲನೆಯದಾಗಿ ಮನಸ್ಸು ವಸ್ತುವನ್ನು ನೇರವಾಗಿ ತಿಳಿಯಲಾರದಾದರೆ ಅದು ವಸ್ತುವನ್ನು ತಿಳಿಯಲು ಸಾಧ್ಯವಿರಲಿ. ಅಂತಹ ವಸ್ತುವಿನ ಅಸ್ತಿತ್ವದ ಬಗ್ಗೆ ನಮಗೆ ಖಚಿತವಿರುವುದಿಲ್ಲ. ಅಂತಹ ಮನೋಬಾಹ್ಯವಾದ ವಸ್ತುವಿರುವುದೆಂದು ಖಚಿತವೇನು? ನಮ್ಮ ಆಲೋಚನೆಗೆ ಒಂದು ಕಾರಣವಿದ್ದು, ಅದು ಬಾಹ್ಯವಸ್ತುವಾಗಿರಬೇಕೆಂಬ ದ್ವಂದ್ವ ವಾಸ್ತವವಾದಿಯ ನಿಲುವು ಸರಿಯಲ್ಲ. ಏಕೆಂದರೆ ಮನಸ್ಸಿನಲ್ಲಿ

Digitised by Bharatavani, CIIL

ಆಲೋಚನೆಗಳನ್ನು ಬಾಹ್ಯವಸ್ತುವೇ ಸೃಷ್ಟಿಸಬೇಕಿಲ್ಲ. ಅವುಗಳನ್ನು ಮನಸ್ಸೇ ಸೃಷ್ಟಿಸಿಕೊಂಡಿರಬಹುದು. ಎರಡನೆಯದಾಗಿ ಈ ವಾದವನ್ನು ಒಪ್ಪಿಕೊಂಡಲ್ಲಿ ಯಾವ ಆಲೋಚನೆಯು ಸರಿ ಮತ್ತು ಯಾವ ಆಲೋಚನೆಯು ತಪ್ಪು ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ. ಲಾಕ್‌ನ ಪ್ರಕಾರ ನಮ್ಮ ಮನಸ್ಸಿನಲ್ಲಿರುವ ಆಲೋಚನೆ ಅಥವಾ ಜ್ಞಾನವನ್ನು ಹೊರವಸ್ತುವಿನೊಂದಿಗೆ ಹೋಲಿಸಬೇಕು. ಆಲೋಚನೆಗೂ ಮತ್ತು ಬಾಹ್ಯವಸ್ತುವಿಗೂ ಹೊಂದಾಣಿಕೆಯಿದ್ದರೆ, ಅಥವಾ ಸಾಂಗತ್ಯವಿದ್ದರೆ ನಮ್ಮ ಆಲೋಚನೆಯು ಸರಿ, ಇಲ್ಲದಿದ್ದರೆ ಅದು ತಪ್ಪು. ಹೂವೊಂದನ್ನು ಕುರಿತು ನನ್ನ ಮನಸ್ಸಿನಲ್ಲಿರುವ ಆಲೋಚನೆಗೂ ಮತ್ತು ಹೂವೆಂಬ ವಸ್ತುಸ್ಥಿತಿಗೂ ಸಾಂಗತ್ಯವಿದ್ದರೆ (Correspondence or Agreement) ಹೂವನ್ನು ಕುರಿತ ನನ್ನ ಆಲೋಚನೆಯು ಸರಿ. ಇಲ್ಲದಿದ್ದರೆ ಹೂವನ್ನು ಕುರಿತ ನನ್ನ ಆಲೋಚನೆಯು ತಪ್ಪು. ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ ಆಲೋಚನೆ ಮತ್ತು ಬಾಹ್ಯವಸ್ತುಗಳ ನಡುವಣ ಸಾಂಗತ್ಯವನ್ನು ಕಂಡುಹಿಡಿಯುವುದು ಹೇಗೆಂಬುದು. ಈ ಸಾಂಗತ್ಯವು ಸಾಧ್ಯವಾಗಬೇಕಿದ್ದರೆ ಆಲೋಚನೆ ಮತ್ತು ಅದರ ವಸ್ತು ಇವೆರಡೂ ಮನಸ್ಸಿಗೆ ನೇರವಾಗಿ ಹತ್ತಿರವಾಗಬೇಕು. ಆದರೆ ದ್ವಂದ್ವ ವಾಸ್ತವವಾದಿಯ ಪ್ರಕಾರ ನಮ್ಮ ಮನಸ್ಸಿಗೆ ನೇರವಾಗಿ ದತ್ತವಾಗಿರುವುದು ಆಲೋಚನೆಯೆ ಹೊರತು ಮನಸ್ಸು ಮತ್ತು ಹೊರವಸ್ತುವಲ್ಲ. ನೇರ ಸಂಪರ್ಕವಿರುವುದು ಮನಸ್ಸು ಮತ್ತು ಆಲೋಚನೆಗೇ ಹೊರತು ಮನಸ್ಸು ಮತ್ತು ಹೊರವಸ್ತುವಿಗಲ್ಲ. ನಮ್ಮ ಮನಸ್ಸಿನ ಆಲೋಚನೆಯನ್ನು ನಾವೆಂದಿಗೂ ನೇರವಾಗಿ ಕಾಣಲು ಸಾಧ್ಯವೇ ಆಗದ ವಸ್ತುವಿನೊಂದಿಗೆ ತಾಳೆ ನೋಡಿ ಆಲೋಚನೆಯ ಸತ್ಯಾಸತ್ಯತೆಗಳನ್ನು ನಿರ್ಧರಿಸುವುದಾದರೂ ಹೇಗೆ? ಇದು ಯಾವ ರೀತಿಯೆಂದರೆ ಭಾವಚಿತ್ರವೊಂದು ಈ ಹಿಂದೆ ನಾವೆಂದಿಗೂ ಕಂಡೇ ಇರದ ಮತ್ತು ಮುಂದೆಯೂ ಕಾಣಲಾಗದಂತಹ ವ್ಯಕ್ತಿಯದೇ ಎಂದು ಹೇಳಿದಂತೆ. ಆದ್ದರಿಂದ ದ್ವಂದ್ವವಾಸ್ತವವಾದವು ತಾರ್ಕಿಕವಾಗಿ ಅಜ್ಞೇಯತಾವಾದದಲ್ಲಿ (Agnosticism) ಕೊನೆಗೊಳ್ಳುತ್ತದೆ. ಅಜ್ಞೇಯತಾವಾದವು ವಸ್ತುವನ್ನು ಒಪ್ಪಿಕೊಳ್ಳುವುದಾದರೂ ಅದರ ಜ್ಞಾನವನ್ನು ನಿರಾಕರಿಸುತ್ತದೆ.

ವಾಸ್ತವವಾದದ ಈ ಪರಿಮಿತಿಗಳು ಚಿತ್‌ಪ್ರಧಾನವಾದಕ್ಕೆ ಎಡೆಮಾಡಿಕೊಟ್ಟವು. ಇದರಲ್ಲಿ ವ್ಯಕ್ತಿನಿಷ್ಠ ಚಿತ್ ಪ್ರಧಾನವಾದ ಮತ್ತು ವಸ್ತುನಿಷ್ಠ ಚಿತ್‌ಪ್ರಧಾನವಾದವೆಂಬ ಎರಡು ಸ್ಥೂಲ ಪ್ರಭೇದಗಳಿವೆ.

**3. ವ್ಯಕ್ತಿನಿಷ್ಠ ಚಿತ್‌ಪ್ರಧಾನವಾದ:** ಈ ವಾದವನ್ನು ವ್ಯಕ್ತಿ ನಿಷ್ಠವಾದವೆಂದೂ (Subjectivism) ಕರೆಯುತ್ತಾರೆ. ಇದು ದ್ವಂದ್ವ ವಾಸ್ತವವಾದ ತಾರ್ಕಿಕ ಪರಿಣಾಮ. ಬ್ರಿಟಿಷ್ ತಾತ್ವಿಕನಾದ ಜಾರ್ಜ್ ಬಾರ್ಕ್ಲೇ (1685–1753). ಇದರ ಪ್ರತಿಪಾದಕ. ವ್ಯಕ್ತಿನಿಷ್ಠ ಚಿತ್‌ಪ್ರಧಾನವಾದದ ಪ್ರಕಾರ ಮನಸ್ಸು ನೇರವಾಗಿ ಅರಿಯುವುದು ಆಲೋಚನೆಯನ್ನು ಮಾತ್ರ. ಬಾಹ್ಯವಸ್ತುವನ್ನಲ್ಲ. ಇದು ತಾರ್ಕಿಕವಾಗಿ ವ್ಯಕ್ತಿನಿಷ್ಠವಾದದಲ್ಲಿ ಕೊನೆಗೊಳ್ಳುತ್ತದೆ. ಮನಸ್ಸು ನೇರವಾಗಿ ಅರಿಯುವುದು ಆಲೋಚನೆಯನ್ನು ಮಾತ್ರವಾದರೆ, ಅಸ್ತಿತ್ವದಲ್ಲಿರುವುದು ನಾನು ಮತ್ತು ನನ್ನ ಆಲೋಚನೆಗಳು ಮಾತ್ರ. ಈ ಆಲೋಚನೆಗಳಿಗೆ ಸಂಗತವಾದ ಬಾಹ್ಯವಸ್ತುಗಳಿರುವುದಿಲ್ಲ.

ಬೊಸ್ಯಾಂಕೆ (Bosanqvet) ಎಂಬ ಬ್ರಿಟಿಷ್ ತಾತ್ವಿಕನು ಈ ವಾದವನ್ನು ಎರಡು ರೀತಿಯಲ್ಲಿ ಖಂಡಿಸುತ್ತಾನೆ. (1) ಇರುವುದು ಕೇವಲ ನಾನು ನನ್ನ ಆಲೋಚನೆಗಳಾದರೆ ಯಾವ ಆಲೋಚನೆಯು ಸರಿ ಮತ್ತು ಯಾವ ಆಲೋಚನೆಯು ತಪ್ಪು ಎಂಬುದನ್ನು ವಸ್ತುನಿಷ್ಠವಾಗಿ ಪರೀಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಹಾಗೆ ಪರೀಕ್ಷಿಸಲು ಆಲೋಚನೆಗೆ ಸಂಗತವಾಗಿದ್ದಿರಬಹುದಾದ ಬಾಹ್ಯವಸ್ತುವೇ ಇಲ್ಲ. ದ್ವಂದ್ವ ವಾಸ್ತವವಾದಿಯು ನೇರವಾಗಿ ತಿಳಿಯಲು ಸಾಧ್ಯವಿಲ್ಲ. ಮನೋಬಾಹ್ಯವಾದ ವಸ್ತುವನ್ನಾದರೂ ಅಂಗೀಕರಿಸಿದ. ಆದರೆ ವ್ಯಕ್ತಿನಿಷ್ಠವಾದಿಯು ಅಂತಹ ವಸ್ತುವಿನ ಅಸ್ತಿತ್ವವನ್ನು ನಿರಾಕರಿಸಿದ.

2) ಈ ವಾದದಲ್ಲಿ ಸ್ವವಿರೋಧವಿದೆ. ಏಕೆಂದರೆ ಎಲ್ಲವೂ ವ್ಯಕ್ತಿನಿಷ್ಠವಾದರೆ ವ್ಯಕ್ತಿನಿಷ್ಠವಾದವೂ ಇದಕ್ಕೆ ಅಪವಾದವಾಗಲು ಸಾಧ್ಯವಿಲ್ಲ. ಎಂದರೆ ಅದಕ್ಕೆ ಅನುವಾದವಾಗಲು ಸಾಧ್ಯವಿಲ್ಲ. ಅದಕ್ಕೆ ಸಾರ್ವತ್ರಿಕತೆ (Universality) ಮತ್ತು ವಸ್ತುನಿಷ್ಠವಾದ ಪ್ರಾಮಾಣ್ಯವಿರಲು ಸಾಧ್ಯವಿಲ್ಲ.

**ವಸ್ತುನಿಷ್ಠ ಚಿತ್‌ಪ್ರಧಾನವಾದ (Objective Idealism):** ಈ ವಾದವನ್ನು ಬೊಸ್ಯಾಂಕೆ (1848–1923) ಮಂಡಿಸುತ್ತಾನೆ. ಆತನು ತನ್ನ ವಾದದಲ್ಲಿ ದ್ವಂದ್ವ ವಾಸ್ತವವಾದ ಮತ್ತು ವ್ಯಕ್ತಿನಿಷ್ಠವಾದಗಳೆರಡರ ಸತ್ವವನ್ನು ಸ್ವೀಕರಿಸಿ ಅವುಗಳಲ್ಲಿರುವ ಪರಿಮಿತಿಗಳನ್ನು ಹೊರದೂಡುತ್ತಾರೆ. ಜ್ಞೇಯವು ಹೊರಜಗತ್ತಿಗೆ ಸೇರಿದ್ದು. ಅದು ಎಲ್ಲ ಮನಸ್ಸುಗಳಿಗೂ ಸಮಾನವೆಂಬುದು ದ್ವಂದ್ವ ವಾಸ್ತವವಾದದ ಸತ್ತ್ವ (Merit). ಆದರೆ ಜ್ಞೇಯವು ಜಡವೆಂಬುದು ಈ ವಾದದ ದೋಷ. ಈ ಕಾರಣದಿಂದಲೇ ಜ್ಞಾತೃ-ಜ್ಞೇಯಗಳ ನೇರಸಂಪರ್ಕ ತನ್ಮೂಲಕ ಜ್ಞಾನದ ಸಾಧ್ಯತೆಯ ಪ್ರಶ್ನೆಯು ಉದಯಿಸುವುದು. ಆದರೆ ವ್ಯಕ್ತಿನಿಷ್ಠವಾದದಲ್ಲಿ ಈ ಪ್ರಶ್ನೆಗೆ ಪರಿಹಾರವಿದೆ. ಅದರ ಪ್ರಕಾರ ಜ್ಞೇಯವು ಜಡವಾಗಿರದೆ ಚೇತನಾತ್ಮಕವಾಗಿದೆ. ಬೇರೆ ರೀತಿ ಹೇಳಬೇಕೆಂದರೆ ಅದು ಮನಸ್ಸಿಗೆ ಸೇರಿದ ಆಲೋಚನೆಯಾಗಿದೆ ಈ ಕಾರಣದಿಂದಲೇ ಮನಸ್ಸು ಮತ್ತು ಆಲೋಚನಾರೂಪವಾದಿ ವಸ್ತುಗಳ ನೇರಸಂಪರ್ಕವು ತನ್ಮೂಲಕ ಜ್ಞಾನವು ಸಾಧ್ಯವಾಗುವುದು. ಆದರೆ ಜ್ಞೇಯದ ಸಾರ್ವತ್ರಿಕತೆಯ ಬಗ್ಗೆ ವ್ಯಕ್ತಿನಿಷ್ಠವಾದದಲ್ಲಿ ಸಂಶಯ ಮೂಡುತ್ತದೆ. ಇರುವುದು ಮನಸ್ಸು ಮತ್ತು ಆಲೋಚನೆಗಳಾದರೆ ಈ ಆಲೋಚನೆಗಳು ಹೇಗೆ ಎಲ್ಲ ಮನಸ್ಸುಗಳಿಗೂ ಸಮಾನ ಮತ್ತು ಅವು ಏಕೆ ನಿರ್ದಿಷ್ಟ ಮನಸ್ಸಿಗೆ ಮಾತ್ರ ಸೀಮಿತವಾಗಿರಬಾರದು ಎಂಬ ಪ್ರಶ್ನೆಯು ಬರುತ್ತದೆ.

ಬೊಸ್ಯಾಂಕೆ ಮೇಲಿನ ಎರಡು ವಾದಗಳ ಪರಿಮಿತಿಗಳನ್ನು

Digitised by Bharatavani, CIIL

ತನ್ನ ಸಿದ್ಧಾಂತದಲ್ಲಿ ಸರಿಪಡಿಸುತ್ತಾನೆ. ಆತನ ಪ್ರಕಾರ ಜ್ಞಾತೃ-ಜ್ಞೇಯಗಳೆರಡೂ ಚೇತನಾತ್ಮಕವಾಗಿವೆ. ಆದ್ದರಿಂದಲೇ ಅವುಗಳ ನಡುವಣ ಸಂಪರ್ಕ ತನ್ಮೂಲಕ ಜ್ಞಾನವು ಸಾಧ್ಯವಾಗುವುದು. ಹಾಗೆಯೇ ಬೊಸ್ಯಾಂಕೆ ಪ್ರಕಾರ ಜ್ಞೇಯವು ನಿರ್ದಿಷ್ಟ ಮನಸ್ಸಿಗೆ ಮಾತ್ರ ಸೀಮಿತವಲ್ಲ. ಅದು ವಸ್ತುನಿಷ್ಠ ಜಗತ್ತಿಗೆ ಸೇರಿದ್ದು. ಅದು ಎಲ್ಲ ಮನಸ್ಸುಗಳಿಗೂ ಸಮಾನವಾಗಿದೆ. ಈ ಕಾರಣದಿಂದಲೇ ಬೊಸ್ಲಾಂಕೆ ಬಾಹ್ಯವಸ್ತುವನ್ನು "ವಸ್ತುನಿಷ್ಠ ಆಲೋಚನೆ"(Objective Idea) ಎಂದು ಕರೆಯುವುದು. ಎಂದರೆ ಇಲ್ಲಿ ವಸ್ತುವು ಚೇತನಾತ್ಮಕವಷ್ಟೇ ಅಲ್ಲ ವಸ್ತುನಿಷ್ಠವೂ ಹೌದು. ಆದ್ದರಿಂದಲೇ ಬೊಸ್ಯಾಂಕೆಯ ಜ್ಞಾನಮಿಮಾಂಸೆಯನ್ನು "ವಸ್ತುನಿಷ್ಠ ಚಿತ್‌ಪ್ರಧಾನವಾದ (Objective Idealism)" ಎಂದು ಕರೆಯುವುದು.

ಆದರೆ ಇಲ್ಲೊಂದು ವಿಷಯವು ಗಮನಾರ್ಹ. ಬೊಸ್ಯಾಂಕೆ ಪ್ರಕಾರ ಜ್ಞಾತೃ ಮತ್ತ ಜ್ಞೇಯಗಳ ಚೈತನ್ಯವು ಒಂದೇ ಅಂತಸ್ತಿನದಲ್ಲ. ಜ್ಞೇಯಕ್ಕೆ ಹೋಲಿಸಿದಾಗ ಜ್ಞಾತೃವಿನ ಚೈತನ್ಯವು ಸಂಪೂರ್ಣವಾಗಿ ವಿಕಾಸಗೊಂಡಿದೆ. ಆದ್ದರಿಂದಲೇ ಅದು ವಸ್ತುವನ್ನು ತಿಳಿಯಲು ಸಮರ್ಥವಾಗಿರುವುದು. ಆದರೆ ಜ್ಞೇಯದಲ್ಲಿ ಚೈತನ್ಯದ ಅಭಿವ್ಯಕ್ತಿಯು ಅಷ್ಟು ಸ್ಪಷ್ಟವಾಗಿಲ್ಲ. ಆದ್ದರಿಂದಲೇ ಅದು ತಿಳಿಯಲ್ಪಡುವ ವಸ್ತುವಿನ ಸ್ಥಾನದಲ್ಲಿದೆ. ಒಟ್ಟಾರೆ ಬೊಸ್ಲ್ಯಾಂಕೆ ಪ್ರಕಾರ ವಸ್ತುವೊಂದು ಜ್ಞೇಯವೆನಿಸಲು ಕಾರಣ ಅದು ಜಡವೆಂಬುದಲ್ಲ. ಬದಲಾಗಿ ಜ್ಞಾತೃವಿಗೆ ಹೋಲಿಸಿದಾಗ ಅದರ ಚೈತನ್ಯವು ಕಡಿಮೆ ಅಂತಸ್ತಿನದೆಂಬುದು.

ನವೀನವಾಸ್ತವವಾದ (Neo Realism): ಈ ವಾದವನ್ನು R.B ಪೆರ್ರಿ (1876–1957), E.B ಹೋಲ್ಟ್ (1873–1946), W.P ಮಾಂಟೆಗ್ಯೂ (1873–1953), W.P ಪಿಟ್‌ಕಿನ್ (1878–1953), E.G ಸ್ಪಾಲ್ಡಿಂಗ್ (1873–1940), ಮತ್ತು W.T ಮಾರ್ವಿನ್ (1872–1944) ಎಂಬ ತಾತ್ವಿಕರು ಮಂಡಿಸುತ್ತಾರೆ. ಇದು ಬಹುತೇಕ ಅಮೇರಿಕನ್ ಮೂಲವನ್ನು ಹೊಂದಿರುವ ಒಂದು ಚಳುವಳಿ. ಈ ಆರು ತಾತ್ವಿಕರು 1910ರಲ್ಲಿ "The Journal of Philosophy"ಎಂಬ ನಿಯತಕಾಲಿಕೆಯಲ್ಲಿ "The Program and First Platform of Six Realists" ಎಂಬ ಲೇಖನವನ್ನು ಪ್ರಕಟಿಸಿದರು. ಅಲ್ಲದೇ ಇವರೆಲ್ಲರೂ ಅನಂತರ 'The New Realism'ಎಂಬ ಸಂಪುಟವನ್ನು ಹೊರತಂದರು. ಇವರ ಪ್ರಕಾರ ಬಾಹ್ಯವಸ್ತುವು ತಿಳಿಯುವ ಮನಸ್ಸಿಗಿಂತಲೂ ಸ್ವತಂತ್ರವಾಗಿ ಇರಬಲ್ಲದು. ಅದು ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ತಂದುಕೊಳ್ಳದೇ ಅರಿವಿನ ವಸ್ತುವಾಗಬಲ್ಲದು. ಮಾಂಟೆಗ್ಯೂ ಹೀಗೆ ಹೇಳುತ್ತಾನೆ. "ಮನಸ್ಸಿನಿಂದ ತಿಳಿಯಲ್ಪಟ್ಟರೂ ವಸ್ತುವು ಯಾವುದೇ ಬದಲಾವಣೆಗೆ ಒಳಗಾಗದೇ ಅಸ್ತಿತ್ವದಲ್ಲಿರಬಲ್ಲದು ಅಥವಾ ಅರಿಯುವ ಮನಸ್ಸಿನ ಸಂಬಂಧವನ್ನು ಹೊಂದಿದ್ದರೂ ಅದು ತನ್ನ ಅಸ್ತಿತ್ವಕ್ಕೆ ಧಕ್ಕೆ ತಂದುಕೊಳ್ಳಲಾರದು". ನವೀನ ವಾಸ್ತವವಾದಕ್ಕೂ ದ್ವಂದ್ವ ವಾಸ್ತವವಾದಕ್ಕೂ ಒಂದು ಮುಖ್ಯ ವ್ಯತ್ಯಾಸವಿದೆ. ದ್ವಂದ್ವ ವಾಸ್ತವವಾದವು ಹೆಸರೇ ಸೂಚಿಸುವಂತೆ ಮನಸ್ಸಿನಲ್ಲಿರುವ ಆಲೋಚನೆಗೂ ಮತ್ತು ಆಲೋಚನೆಗೆ ಸಂಗತವಾಗಿರುವ ಬಾಹ್ಯವಸ್ತುವಿನ ಭಿನ್ನತೆಯನ್ನು ಎತ್ತಿ ಹಿಡಿಯುತ್ತದೆ. ಆದರೆ ನವೀನ ವಾಸ್ತವವಾದವು ಇವುಗಳ ಏಕತೆಯನ್ನು ಎತ್ತಿಹಿಡಿಯುತ್ತದೆ. ಬಾಹ್ಯವಸ್ತು ಮತ್ತು ಅದರ ಪ್ರತಿನಿಧಿಯಾದ ಆಲೋಚನೆಗಳೆರಡೂ ಒಂದೇ ಹೊರವಸ್ತುವಿನ ಪ್ರತಿಯೊಂದು ಅಂಶವೂ ಆಲೋಚನೆಯ ಪ್ರತಿಯೊಂದು ಅಂಶಕ್ಕೂ ತಾದಾತ್ಮವಾಗಿರುತ್ತದೆ.

ನವೀನ ವಾಸ್ತವವಾದದ ಪ್ರಕಾರ ಜಗತ್ತಿನ ಸಾಮಗ್ರಿ (Stuff) ತಟಸ್ಥವಾದುದು. ಅದು ಪೂರ್ಣವಾಗಿ ಚೇತನವೂ ಅಲ್ಲ. ಪೂರ್ಣವಾಗಿ ಜಡವೂ ಅಲ್ಲ. ಮನಸ್ಸೆಂಬುದು ಪರಿಸರಕ್ಕೆ ಜೀವವು ತೋರುವ ಜೈವಿಕ ಪ್ರತಿಕ್ರಿಯೆಯ ಪರಿಣಾಮ. ಅದಕ್ಕೆ ತನ್ನದೇ ಆದ ಯಾವ ಸಾಮಗ್ರಿಯಿಲ್ಲ. ತನ್ನೆಲ್ಲಾ ಸಾಮಗ್ರಿಯನ್ನು ಅದು ಬಾಹ್ಯ ಜಗತ್ತಿನಿಂದ ಪಡೆದುಕೊಂಡಿದೆ. ಹೋಲ್ಟ್ ಹೀಗೆ ಹೇಳುತ್ತಾನೆ, "ಚೈತನ್ಯವು ಒಂದು ದ್ರವ್ಯವಲ್ಲ. ಅದು ಜೀವಕ್ಕೂ ಮತ್ತು ಅದು ವಿಶೇಷವಾಗಿ ಸ್ಪಂದಿಸುವ ಪರಿಸರಕ್ಕೂ ಇರುವ ಸಂಬಂಧವಷ್ಟೇ". ನವೀನ ವಾಸ್ತವವಾದವನ್ನು ಜೀವಕೇಂದ್ರಕ ದೃಷ್ಟಿಯೆಂದು (Bio-centric View) ಕರೆಯುವರು. ಏಕೆಂದರೆ ಅದು ಜೀವವನ್ನು (Life) ಮುಖ್ಯವಾಗಿಸಿ ಮನಸ್ಸನ್ನು (Mind) ಗೌಣವಾಗಿಸುತ್ತದೆ. ಇಲ್ಲಿ ಸಜೀವ ಮಿದುಳು ತೋರುವ ನರಗಳ ಪ್ರತಿಕ್ರಿಯೆಯೇ ಮನಸ್ಸು.

ನವೀನ ವಾಸ್ತವವಾದದ ಮೇಲೆ ಮೂರು ಟೀಕೆಗಳಿವೆ. 1) ಅದು ಜ್ಞಾನದ ಉತ್ಪತ್ತಿಯಲ್ಲಿ ಮನಸ್ಸಿನ ಕ್ರಿಯಾಶೀಲ ಪಾತ್ರವನ್ನು ಕಡೆಗಣಿಸುತ್ತದೆ. ಏಕೆಂದರೆ ಅದರ ಪ್ರಕಾರ ಮನಸ್ಸೆಂಬುದು ಜೀವವು ಪರಿಸರಕ್ಕೆ ತೋರುವ ಪ್ರತಿಕ್ರಿಯೆಯ ಪರಿಣಾಮವಷ್ಟೇ. (2) ಅಲ್ಲದೇ ಬಾಹ್ಯವಸ್ತು ಮತ್ತು ಆಲೋಚನೆಗಳ ತಾದಾತ್ಮ ಸಂಬಂಧವನ್ನು ಎತ್ತಿಹಿಡಿಯುವ ಉತ್ಸಾಹದಲ್ಲಿ ಅದು ಜ್ಞಾನದಲ್ಲಿ ಭ್ರಾಂತಿಯು ಹೇಗೆ ಉಂಟಾಗುವುದೆಂದು ವಿವರಿಸಲು ಅಸಮರ್ಥವಾಗಿದೆ ಎಂದರೆ ಅವರ ಪ್ರಕಾರ ಎಲ್ಲ ಜ್ಞಾನವೂ ನೇರವಾಗಿದ್ದರೆ, (Immediate) ಮತ್ತು ದ್ವಂದ್ವವಾಸ್ತವವಾದಿಯು ಹೇಳುವಂತೆ ಪರೋಕ್ಷವಲ್ಲವಾದರೆ (Mediate) ಸರಿಯಾದ ಜ್ಞಾನಕ್ಕೂ ಮತ್ತು ತಪ್ಪುಜ್ಞಾನಕ್ಕೂ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಿಲ್ಲ, (3) ಕಡೆಯದಾಗಿ ಈ ವಾದವು ಮಿದುಳಿನಲ್ಲಿ ಜರುಗುವ ನರಗಳ ಪ್ರತಿಸ್ಪಂದನವು ಹೇಗೆ ಮನಸ್ಸಿಗೆ ಕಾರಣವೆಂಬುದನ್ನು ಸ್ಪಷ್ಟಪಡಿಸುವುದಿಲ್ಲ.

**ವಿಮರ್ಶಾತ್ಮಕ ವಾಸ್ತವವಾದ (Critical Realism)**: ಈ ವಾದವನ್ನು ಡ್ಯೂರೆಂಟ್ ಡ್ರೇಕ್ (Durant Drake 1878–1933), J.B ಪ್ರಾಟ್ (Pratt, 1875-1944), G. ಸಂಟಾಯನ (Santayana, 1863-1952), A.K ರೋಜರ್ಸ್ (Rogers, 1868–1936) ಎಂಬ ತಾತ್ವಿಕರು ತಮ್ಮ "Essays on Realism" ಎಂಬ ಹೊತ್ತಿಗೆಯಲ್ಲಿ ಪ್ರತಿಪಾದಿಸುತ್ತಾರೆ.

Digitised by Bharatavani, CIIL

ನವೀನವಾಸ್ತವವಾದಿಗಳು ಜ್ಞಾನದಲ್ಲಿ ಮನಸ್ಸಿನ ಪಾತ್ರವನ್ನು ಕಡೆಗಣಿಸಿದರೆ ವಿಮರ್ಶಾತ್ಮಕ ವಾಸ್ತವವಾದಿಗಳು ಅದರ ಪಾತ್ರವನ್ನು ಎತ್ತಿಹಿಡಿಯುತ್ತಾರೆ. ಇವರ ಪ್ರಕಾರ ಜ್ಞಾನವು ಮೂರು ಅಂಶಗಳಿಂದ ಕೂಡಿದೆ. ಒಂದು ಜ್ಞೇಯ, ಇದು ಮನಸ್ಸಿನ ಹೊರಗಿದ್ದು ಭೌತಜಗತ್ತಿನ ಅವಿಭಾಜ್ಯ ಅಂಗವಾಗಿದೆ. ಅದು ಮನಸ್ಸಿನಲ್ಲಿಲ್ಲ. ಎಂದರೆ ಅದು ವ್ಯಕ್ತಿನಿಷ್ಠವಾಗಿರದೇ ವಸ್ತುನಿಷ್ಠವಾಗಿದೆ. ಎರಡನೆಯದು ಮನಸ್ಸು ಇದು ಜ್ಞಾನದ ವ್ಯಕ್ತಿನಿಷ್ಠ ಅಂಶ. ಇದು ಹೊರಜಗತ್ತನ್ನು ತಿಳಿಯಲು ಸಾಧನವಾಗಿದೆ. ಮೂರು ಮನಸ್ಸಿಗೆ ನೇರವಾಗಿ ದತ್ತವಾಗಿರುವ ಸತ್ವ (Essence ಅಥವಾ Datum). ಈ ಸತ್ವವು ತಟಸ್ಥವಾದುದು (Neutral). ಎಂದರೆ ಅದು ಚೇತನವೂ ಅಲ್ಲ ಅಚೇತನವೂ ಅಲ್ಲ. ವಿಮರ್ಶಾತ್ಮಕವಾದಿಗಳ ಪ್ರಕಾರ ಜ್ಞಾನವು ಮನಸ್ಸು ಮತ್ತು ಈ ಸತ್ವದ ನೇರಸಂಪರ್ಕದಿಂದ ಉಂಟಾಗುವುದೇ ಹೊರತು ಮನಸ್ಸು ಮತ್ತು ಭೌತಜಗತ್ತಿನ ಸಂಪರ್ಕದಿಂದಲ್ಲ. ಹಾಗಾದರೆ ಈ ಸತ್ವದ ನೆಲೆ ಯಾವುದು? ಆಂತರಿಕವಾದ ಮನಸ್ಸೊ ಅಥವಾ ಬಾಹ್ಯವಸ್ತುವೋ? ವಿಮರ್ಶಾತ್ಮಕವಾದಿಗಳ ಪ್ರಕಾರ ಬಾಹ್ಯವಸ್ತುವೇ ಸತ್ತ್ವದ ನೆಲೆಯಾಗಿದೆ. ಈ ಸತ್ವವು ಬಾಹ್ಯವಸ್ತುವಿನ ವಿಶೇಷಣವಾಗಿದ್ದು (Attribute), ಮನಸ್ಸು ಈ ಸತ್ವದ ಮೂಲಕ ವಸ್ತುವನ್ನು ತಿಳಿಯುತ್ತದೆ. ಈ ಸತ್ವವು ನಿರ್ದಿಷ್ಟವರ್ಗಕ್ಕೆ ಸೇರಿದ ಎಲ್ಲ ವಸ್ತುಗಳಲ್ಲೂ ಇರುವುದರಿಂದ ಅದನ್ನು ಸಾಮಾನ್ಯವೆಂದೂ (Universal ಅಥವಾ Whatness) ಕರೆಯುತ್ತಾರೆ. ಯಾವ ನಿರ್ದಿಷ್ಟ ವಸ್ತುವಿಗೆ ಈ ಸಾಮಾನ್ಯವು ಸೇರಿರುವುದೋ ಅದನ್ನು ವಿಶೇಷವೆಂದು (Particular ಅಥವಾ Thisness) ಕರೆಯುವರು. ಸಾಮಾನ್ಯದ ಮೂಲಕ ವಿಶೇಷವನ್ನು ತಿಳಿಯುವ ಪ್ರಕ್ರಿಯೆಯೇ ಜ್ಞಾನ.

ವಿಮರ್ಶಾತ್ಮಕವಾಸ್ತವವಾದಕ್ಕೂ ಮತ್ತು ದ್ವಂದ್ವವಾಸ್ತವವಾದಕ್ಕೂ ಇರುವ ಒಂದು ಮುಖ್ಯವ್ಯತ್ಯಾಸವೆಂದರೆ ದ್ವಂದ್ವವಾಸ್ತವವಾದದ ಪ್ರಕಾರ ವಸ್ತುವನ್ನು ತಿಳಿಯುವ ಮಾಧ್ಯಮವು ಆಲೋಚನೆಯಾಗಿದ್ದು, ಈ ಆಲೋಚನೆಯು ಮನಸ್ಸಿನಲ್ಲಿರುತ್ತದೆ. ಆದರೆ ವಿಮರ್ಶಾತ್ಮಕ ವಾಸ್ತವವಾದಿಗಳ ಪ್ರಕಾರ ವಸ್ತುವನ್ನು ತಿಳಿಯುವ ಮಾಧ್ಯಮವು ಆಲೋಚನೆಯಲ್ಲ. ಬದಲಾಗಿ ಅದು ಸತ್ವ ಅಥವಾ ಸಾಮಾನ್ಯವಾಗಿದೆ. ಈ ಮಾಧ್ಯಮವು ದ್ವಂದ್ವವಾಸ್ತವವಾದಿಯು ಹೇಳುವಂತೆ ಮನಸ್ಸಿನೊಳಗಿರದೇ ಹೊರಗಿನ ವಸ್ತುವಿನಲ್ಲಿ (ವಿಶೇಷ) ಇರುತ್ತದೆ. ಈ ಮಾಧ್ಯಮದ ಆಶ್ರಯ ಮನಸ್ಸಲ್ಲ. ಬದಲಾಗಿ ಅದು ಮನೋಬಾಹ್ಯವಾದ ವಿಶೇಷ. ಇದು ಮನಸ್ಸಿಗಿಂತಲೂ ಸ್ವತಂತ್ರವಾದುದು. ಒಟ್ಟಾರೆ ಎರಡೂ ವಾದಗಳ ಪ್ರಕಾರ ಬಾಹ್ಯವಸ್ತುವಿನ ನೇರಜ್ಞಾನ ಸಾಧ್ಯವಿಲ್ಲ. ದ್ವಂದ್ವವಾದದ ಪ್ರಕಾರ ಮನಸ್ಸು ತನ್ನೊಳಗಿರುವ ಆಲೋಚನಾ ಮಾಧ್ಯಮದ ಮೂಲಕ ಬಾಹ್ಯವಸ್ತುವನ್ನು ತಿಳಿದರೆ ವಿಮರ್ಶಾತ್ಮಕವಾದಿಯ ಪ್ರಕಾರ ಅದು ಬಾಹ್ಯವಸ್ತುವಿಗೇ ಸೇರಿದ ಸತ್ವವೆಂಬ ಮಾಧ್ಯಮದ ಮೂಲಕ ಬಾಹ್ಯವಸ್ತುವನ್ನು ಅರಿಯುತ್ತದೆ.

ವಿಮರ್ಶಾತ್ಮಕ ವಾಸ್ತವವಾದದಲ್ಲಿ ಎರಡು ಮುಖ್ಯ ದೋಷಗಳುಂಟು.

1) ದ್ವಂದ್ವವಾಸ್ತವವಾದವನ್ನು ಕುರಿತ ಆಕ್ಷೇಪವು ಈ ವಾದಕ್ಕೂ ಅನ್ವಯಿಸುತ್ತದೆ. ಮನಸ್ಸು ವಸ್ತುವನ್ನು ನೇರವಾಗಿ ತಿಳಿಯಲಾರದಾದರೆ ಅದು ವಸ್ತುವನ್ನು ತಿಳಿಯಲು ಸಾಧ್ಯವೇ ಇಲ್ಲ. ಅಂತಹ ವಸ್ತುವಿನ ಅಸ್ತಿತ್ವದ ಬಗ್ಗೆ ನಮಗೆ ಖಚಿತವಿಲ್ಲದೇ ಈ ವಾದವು ಅಜ್ಞೇಯತಾವಾದದಲ್ಲಿ (Agnosticism) ಪರ್ಯವಸಾನವಾಗುತ್ತದೆ.

2) ಅಲ್ಲದೇ ಇಲ್ಲಿ ಸಾಮಾನ್ಯಕ್ಕೂ ವಿಶೇಷಕ್ಕೂ ಇರುವ ಸಂಬಂಧವು ಅಷ್ಟು ಸ್ಪಷ್ಟವಿಲ್ಲ. ಮನಸ್ಸು ಕೇವಲ ಸಾಮಾನ್ಯವನ್ನು ತಿಳಿಯಬಲ್ಲದಾದರೆ ಅದು ಹೇಗೆ ನಿರ್ದಿಷ್ಟ ವಸ್ತುವಿನ ಜ್ಞಾನಕ್ಕೆ ಒಯ್ಯುವುದೆಂಬ ಬಗ್ಗೆ ನಮಗೆ ಖಚಿತವಾದ ಉತ್ತರವಿಲ್ಲ. ಏಕೆಂದರೆ ಆ ಸಾಮಾನ್ಯವು ನಿರ್ದಿಷ್ಟವಸ್ತುವಿಗೇ ಸೇರಿದೆಯೆಂಬ ಬಗ್ಗೆ ನಮಗೆ ಖಾತರಿಯಿಲ್ಲ.

### ಉಪಯುಕ್ತತಾವಾದ/ ಫಲವಾದ (Pragmatism)/ಫಲಪ್ರಮಾಣವಾದ:

ಅಮೇರಿಕಾದಲ್ಲಿ ಉಗಮವಾದ ಈ ವಾದದ ಮುಖ್ಯಪ್ರವರ್ತಕರು ವಿಲಿಯಂ ಜೇಮ್ಸ್ (1842–1910) ಮತ್ತು ಜಾನ್ ಡ್ಯೂಯಿ (1859–1952). ಈ ವಾದವನ್ನು ಡ್ಯೂಯಿಯ ತರ್ಕೋಪಕರಣವಾದ (Dewey Instrumentalism) ಮತ್ತು Experimentalism ಎಂದೂ ಕರೆಯುತ್ತಾರೆ. Voluntarism ಎಂಬ ಮತ್ತೊಂದು ಹೆಸರೂ ಈ ವಾದಕ್ಕಿದೆ.

Pragmatism ಎಂಬ ಶಬ್ದವು Pragma ಎಂಬ ಗ್ರೀಕ್ ಮೂಲದಿಂದ ಬಂದುದು. Pragma ಎಂದರೆ ಕ್ರಿಯೆಯೆಂದರ್ಥ. ಎಂದರೆ ಫಲವಾದವು ಜ್ಞಾನದ ಕ್ರಿಯಾಶೀಲತೆಗೆ, ಪ್ರಾಯೋಗಿಕತೆಗೆ ಅಥವಾ ಉಪಯುಕ್ತತೆಗೆ ಹೆಚ್ಚು ಮಹತ್ವವನ್ನು ನೀಡುತ್ತದೆ. ಜ್ಞಾನವೊಂದು ಯಾಥಾರ್ಥತೆಯು, ಅದರ ಕಾರ್ಯ, ಫಲ, ಪರಿಣಾಮ, ಪ್ರಯೋಜನ ಅಥವಾ ಉಪಯುಕ್ತತೆಯಲ್ಲಿದೆ. ನನ್ನ ಮುಂದೆ ಕಾಣುವ ನೀರಿನ ಅಸ್ತಿತ್ವವು ನನ್ನ ಬಾಯಾರಿಕೆಯನ್ನು ಹಿಂಗಿಸುವ ಅದರ ಸಾಮರ್ಥ್ಯದಲ್ಲಿದೆ. ಹಾಗೆಯೇ ವಿದ್ಯುತ್ತಿನ ಅಸ್ತಿತ್ವವು ಅದರ ಕಾರ್ಯಗಳಲ್ಲಿದೆ. ಹೀಗೆ ಜ್ಞಾನವೊಂದು ನಿರೀಕ್ಷಿತ ಫಲವನ್ನು ನೀಡಿದ್ದಲ್ಲಿ ಅದು ಸತ್ಯ. ಇಲ್ಲದಿದ್ದರೆ ಅದು ಅಸತ್ಯ. ಯಾವುದು ನಮ್ಮ ಜೀವನದಲ್ಲಿ ಪ್ರಾಯೋಗಿಕವೋ ಅದು ಮಾತ್ರ ಸತ್ಯ. ಮಾನವ ಬದುಕಿನ ಯಶಸ್ಸು ಬರಿಯ ಸಿದ್ಧಾಂತದಲ್ಲಿರದೇ ಪ್ರಾಯೋಗಿಕ ಔಚಿತ್ಯದಲ್ಲಿದೆ. ಸತ್ಯವು ಆಲೋಚನೆಯಲ್ಲಿ (Idea) ಅಂತಸ್ಥವಾಗಿರದೇ ಆಲೋಚನೆಯ ಪರಿಣಾಮದಲ್ಲಿ ಅಂತಸ್ಥವಾಗಿದೆ.

ಡ್ಯೂಯಿ ಪ್ರಕಾರ ಒಂದು ಸಿದ್ಧಾಂತದ ಉಪಯುಕ್ತತೆಯು ಕೆಲವು ಹಂತಗಳಿಂದ ನಿರ್ಧರಿಸಲ್ಪಡುತ್ತದೆ. ಒಂದು ನಮ್ಮ ಮನಸ್ಸನ್ನು

Digitised by Bharatavani, CIIL

ಆಲೋಚನೆಗೆ ಪ್ರೇರೇಪಿಸುವ ಒಂದು ಕ್ಲಿಷ್ಟ ಸಂದರ್ಭ. ಈ ಸಂದರ್ಭ ಅಥವಾ ಸನ್ನಿವೇಶವು ನಮ್ಮ ಮನಸ್ಸಿನಲ್ಲಿ ಒತ್ತಡವನ್ನು ಸೃಷ್ಟಿಸಿ, ಆ ಸಂದರ್ಭವನ್ನು ವಿಶ್ಲೇಷಿಸುವಂತೆ ಮಾಡುತ್ತದೆ. ಎರಡನೆಯದಾಗಿ ಸಮಸ್ಯೆಯನ್ನು ಜಾಗರೂಕವಾಗಿ ಪರಿಶೀಲಿಸಿದಾಗ ಅದರ ನೈಜಸ್ವರೂಪವು ನಮಗೆ ಅರ್ಥವಾಗುತ್ತದೆ. ಇಲ್ಲಿ ಸಮಸ್ಯೆಯ ಅಸ್ಪಷ್ಟಸ್ವರೂಪವು ಸ್ಪಷ್ಟರೂಪವನ್ನು ತಳೆಯುತ್ತದೆ. ಮೂರನೆಯದಾಗಿ ಸಮಸ್ಯೆಯು ನಮಗೆ ಅರ್ಥವಾದ ಮೇಲೆ ಮನಸ್ಸು ಸಮಸ್ಯೆಗೆ ವಿವಿಧ ಪರಿಹಾರಗಳನ್ನು ಹುಡುಕಲು ಪ್ರಾರಂಭಿಸುತ್ತದೆ. ಈ ಪ್ರಾಕಲ್ಪನೆಗಳು/ಪರಿಹಾರಗಳಿಗೆ (Hypotheses) ಹೆಸರು. ಪ್ರಾಕಲ್ಪನೆಯೆಂದರೆ ಸಮಸ್ಯೆಯನ್ನು ಬಿಡಿಸಲು ನಾವು ಮಾಡಿಕೊಳ್ಳುವ ತಾತ್ಕಾಲಿಕ ಊಹೆಯಷ್ಟೆ. ಪ್ರಾಕಲ್ಪನೆಗೆ ಅಗತ್ಯವಾದ ಎರಡು ಮುಖ್ಯ ಅಂಶಗಳೆಂದರೆ ಜೀವನದ ಆಳವಾದ ಅನುಭವ (Experience) ಮತ್ತು ಕಲ್ಪನಾಶಕ್ತಿ (Imaginative Power), ಇವಿಲ್ಲದೇ ಸಮಸ್ಯೆಗೆ ಯಾವ ಪರಿಹಾರವನ್ನೂ– ಅದು ತಾತ್ಕಾಲಿಕವಾಗಿದ್ದರೂ ಕಂಡುಕೊಳ್ಳಲು ಸಾಧ್ಯವಿಲ್ಲ.

ಕೊನೆಯ ಹಂತದಲ್ಲಿ ನಾವು ಪ್ರತಿಯೊಂದು ಪ್ರಾಕಲ್ಪನೆಯನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸುತ್ತೇವೆ. ಯಾವ ಪ್ರಾಕಲ್ಪನೆಯು ನಿರೀಕ್ಷಿತ ಫಲವನ್ನು ನೀಡುವುದೋ ಅದು ಸ್ವೀಕೃತ. ಉಳಿದೆಲ್ಲವೂ ತಿರಸ್ಕೃತ. ಹೀಗೆ ಸ್ವೀಕೃತವಾದ ಪ್ರಾಕಲ್ಪನೆಯನ್ನು ಸಿದ್ಧಾಂತವೆಂದು (Thesis) ಕರೆಯುತ್ತಾರೆ. ಒಟ್ಟಿನಲ್ಲಿ ಫಲವಾದಿಯ ಪ್ರಕಾರ ಜ್ಞಾನವೊಂದರ ಸತ್ಯತೆ ಬದುಕಿನಲ್ಲಿ ಅದು ಎಷ್ಟರಮಟ್ಟಿಗೆ ಕಾರ್ಯಸಾಧ್ಯವೆಂಬುದನ್ನು ಅವಲಂಬಿಸಿದೆ. ಆದರೆ ಜ್ಞಾನದ ಉಪಯುಕ್ತತೆಯು ಸಾರ್ವಕಾಲಿಕವಲ್ಲ. ಬದಲಾಗುವ ಸನ್ನಿವೇಶಗಳಿಗೆ ಅನುಗುಣವಾಗಿ ಸಿದ್ಧಾಂತಗಳ ಉಪಯುಕ್ತತೆಯೂ ಬದಲಾಗುತ್ತದೆ. ಆದ್ದರಿಂದ ಫಲವಾದಿಯ ಪ್ರಕಾರ ಸತ್ಯವು ಸಾರ್ವಕಾಲಿಕವಲ್ಲ. ಅನೇಕತೆ ಮತ್ತು ಬದಲಾವಣೆ ಅದರ ಮುಖ್ಯ ಲಕ್ಷಣ.

ಆದರೆ ಫಲವಾದದ ಮೇಲೆ ಕೆಲವು ಟೀಕೆಗಳಿವೆ.

1) ಅದು ಬದುಕನ್ನು ಕೇವಲ ಲೌಕಿಕಕ್ಕೆ –ಲೌಕಿಕವು ಮನುಷ್ಯನಿಗೆ ಎಷ್ಟೇ ಅಗತ್ಯವಾದರೂ ಸೀಮಿತಗೊಳಿಸುತ್ತದೆ. ಮನುಷ್ಯನ ಗುರಿಯು ಜೀವನದ ಲೌಕಿಕ ಉದ್ದೇಶಗಳನ್ನು ಪರಿಹರಿಸುವುದಷ್ಟೇ ಅಲ್ಲ. ಅವನ ಬದುಕಿಗೆ ತಾತ್ವಿಕಗುರಿಯೂ ಇದೆ. ಫಲವಾದಿಯು ಜೀವನವನ್ನು ಆಳವಾಗಿ ನೋಡುವುದಿಲ್ಲ.

2) ಅನೇಕ ವೇಳೆ ಫಲವಾದವು ಪ್ರಾಯೋಗಿಕವಲ್ಲ. ಅಂದರೆ ನಂಬಿಕೆಯೊಂದರ ಸತ್ಯಾಸತ್ಯತೆಗಳನ್ನು ಅದರ ಪರಿಣಾಮದ ಆಧಾರದ ಮೇಲೆ ನಿರ್ಧರಿಸಲು ಕಾರ್ಯತಃ ಸಾಧ್ಯವಿಲ್ಲ. ಉದಾಹರಣೆಗೆ ವಾಹನವೊಂದು ವೇಗವಾಗಿ ಬರುತ್ತಿದೆಯೆನ್ನೋಣ. ಈ ವಾಸ್ತವತೆಯನ್ನು ನಾನು ನಂಬದಿದ್ದರೆ ವಾಹನವು ನನ್ನ ಮೇಲೆ ಹರಿದು ಪರಿಣಾಮ ಕೆಟ್ಟದಾಗುತ್ತದೆ. ಇಲ್ಲಿ ವಾಹನ ಬರುವುದು ನಿಜವಾದ್ದರಿಂದ ನನಗೆ ಅಪಘಾತ ತಪ್ಪುವುದೇ ಹೊರತು ಅಪಘಾತ ತಪ್ಪುದರಿಂದ ವಾಹನ ಬರುವುದು ನಿಜವಾಗುವುದಿಲ್ಲ. ಆದ್ದರಿಂದ ನಂಬಿಕೆಗಳು ಮೊದಲು ನಿಜವಾದ್ದರಿಂದ ಅವು ಪರಿಣಾಮಕಾರಿ. ಇಲ್ಲಿ ಸತ್ಯವು ಮೊದಲು ಸತ್ಯವಾಗುತ್ತದೆ. ಅನಂತರ ಅದು ಫಲಕಾರಿಯಾಗುತ್ತದೆ.

3) ಅಲ್ಲದೇ ಉಪಯುಕ್ತತೆಯೆಂಬುದು ಒಂದು ವ್ಯಕ್ತಿನಿಷ್ಠ ಪರಿಕಲ್ಪನೆ. ಒಬ್ಬನಿಗೆ ಉಪಯುಕ್ತವಾದುದು ಮತ್ತೊಬ್ಬನಿಗೆ ಉಪಯುಕ್ತವಲ್ಲದಿರಬಹುದು. ಉದಾಹರಣೆಗೆ ದೇವರಲ್ಲಿನ ನಂಬಿಕೆಯು ಒಬ್ಬನಿಗೆ ಮನಶಾಂತಿಯನ್ನು ನೀಡಬಹುದು, ಮತ್ತೊಬ್ಬನಿಗೆ ಅದು ನೀಡದಿರಬಹುದು. ಅಂದ ಮಾತ್ರಕ್ಕೆ ದೇವರು ಏಕಕಾಲದಲ್ಲಿ ಇರಲು ಮತ್ತು ಇಲ್ಲದಿರಲು ಸಾಧ್ಯವಿಲ್ಲ.

ಆದ್ದರಿಂದ ಜ್ಞಾನವು ಜ್ಞಾನವೆನಿಸಿಕೊಳ್ಳಬೇಕಿದ್ದರೆ, ಅದು ಸಾರ್ವತ್ರಿಕ ಲಕ್ಷಣವನ್ನು ಹೊಂದಿರಬೇಕು. ಎಂದರೆ ಅದು ಎಲ್ಲರಿಗೂ ಯಾವಾಗಲೂ ಸತ್ಯವಿರಬೇಕು. ಅದರ ಸತ್ಯತೆಯು ವಸ್ತುನಿಷ್ಠೆಗೆ ಸಂಬಂಧಿಸಿದ ವಿಷಯವೇ ಹೊರತು ಪರಿಣಾಮಕ್ಕಲ್ಲ. ಸತ್ಯವೆಂಬುದು ಯಾವುದೇ ಒಬ್ಬ ವ್ಯಕ್ತಿಗೆ ಅಥವಾ ಒಂದು ತಲೆಮಾರಿನ ವ್ಯಕ್ತಿಗೆ ಸೀಮಿತವಲ್ಲ. ಅದು ಎಲ್ಲರಿಗೂ ಮತ್ತು ಎಲ್ಲ ತಲೆಮಾರಿನ ವ್ಯಕ್ತಿಗಳಿಗೂ ವಿಸ್ತೃತವಾದುದು.

### ಪ್ರತ್ಯಕ್ಷ ಪ್ರಮಾಣವಾದ

ಸತ್ಯವು ವೈಜ್ಞಾನಿಕ ವಿಧಾನಕ್ಕೆ ಮಾತ್ರ ಗೋಚರವೆಂದು ಸಾರುವ ವಾದಕ್ಕೆ ಪ್ರತ್ಯಕ್ಷ ಪ್ರಮಾಣವಾದವೆಂದು (Positivism) ಹೆಸರು. ಅಗಸ್ಟ್ ಕಾಮ್ಟ್ (1798–1857) ಎಂಬ ಫ್ರೆಂಚ್ ತಾತ್ವಿಕ ಈ ವಾದದ ಪ್ರತಿಪಾದಕ. ಆತನು ತನ್ನ ತಾತ್ವಿಕ ನಿಲುವನ್ನು Positive Philosophy ಎಂಬ ಗ್ರಂಥದಲ್ಲಿ ಮಂಡಿಸುತ್ತಾನೆ. ಆತನ ಪ್ರಕಾರ ಆರೋಗ್ಯಕರ ಸಮಾಜದ ಅಸ್ತಿತ್ವವು ವೈಜ್ಞಾನಿಕತೆಯನ್ನು ಅವಲಂಬಿಸಿದೆ. ಸಮಾಜವನ್ನು ಕುರಿತ ಧೋರಣೆಯು ಆತನಿಗೆ ಸಮಾಜಶಾಸ್ತ್ರದ ಸ್ಥಾಪಕನೆಂಬ ಬಿರುದನ್ನು ತಂದುಕೊಟ್ಟಿತು.

ಕಾಮ್ಟನ್ ಪ್ರಕಾರ Positive ಶಬ್ದವು ಖಚಿತ, ನಿಸ್ಸಂದಿಗ್ಧ ಮತ್ತು ಉಪಯುಕ್ತವೆಂಬ ಅರ್ಥವನ್ನು ಸೂಚಿಸುತ್ತದೆ. ಎಂದರೆ ಯಾವ ಜ್ಞಾನವು ಖಚಿತವಿದ್ದು ನಮ್ಮ ದೈನಂದಿನ ಬದುಕಿನ ಉದ್ದೇಶವನ್ನು ಪೂರೈಸುವುದೋ ಅದು ಮಾತ್ರ ಸತ್ಯ. ವಿಜ್ಞಾನವು ಮಾತ್ರ ಈ ಉದ್ದೇಶಗಳನ್ನು ಪೂರೈಸಬಲ್ಲದು. ಏಕೆಂದರೆ ಅದು ಅವಲೋಕನ (Observation) ಮತ್ತು ಅನುಭವಗಳ (Experience) ಬುನಾದಿಯ ಮೇಲೆ ನಿಂತಿದೆ. ವಿಜ್ಞಾನದ ಗುರಿಯು ನಿಸರ್ಗದ ಘಟನೆಗಳ ನಡುವಣ ಸಂಬಂಧವನ್ನು ಮತ್ತು ಅವುಗಳ ಹಿನ್ನೆಲೆಯಲ್ಲಿರುವ ನಿಯಮಗಳನ್ನು ಕಂಡುಹಿಡಿಯುವುದು.

ಆದರೆ ಈ Positive ಎಂದರೆ ವೈಜ್ಞಾನಿಕ ಹಂತವು ಒಮ್ಮೆಲೇ ಸಾಧಿಸುವಂತಹುದಲ್ಲ. ಈ ಆದರ್ಶವು ಹಂತ ಹಂತವಾಗಿ ಸಾಧಿಸಲ್ಪಡಬೇಕು. ಕಾಮ್ಟನ ಪ್ರಕಾರ ಮನುಷ್ಯನ ಬುದ್ಧಿಯು

Digitised by Bharatavani, CIIL

ಮೂರು ಹಂತಗಳಲ್ಲಿ ವಿಕಾಸಗೊಳ್ಳುತ್ತದೆ. ಈ ಹಂತಗಳಿಗೆ ಮೂರು ಹಂತಗಳ ನಿಯಮ (Law of Three Stages) ಎಂದು ಹೆಸರು. ಪ್ರತಿಯೊಂದು ಹಂತಕ್ಕೂ ತನ್ನದೇ ಆದ ಪ್ರಾಯೋಗಿಕ ಮೌಲ್ಯವಿದೆ.

ಮೊದಲನೆಯದಾದ ದೇವತಾಶಾಸ್ತ್ರೀಯ ಹಂತವು (Theological Stage) ಮಾನವ ಬುದ್ಧಿಯ ಶೈಶವಾವಸ್ಥೆಯ್ನನು ಪ್ರತಿನಿಧಿಸುತ್ತದೆ. ಇಲ್ಲಿ ಮಾನವನು ನಿಸರ್ಗದ ಘಟನೆಗಳಿಗೆ ಅತಿಮಾನುಷ ಶಕ್ತಿಗಳೇ ಕಾರಣವೆಂದು ಬಗೆಯುತ್ತಾನೆ. ಈ ಶಕ್ತಿಗಳನ್ನು ತನ್ನ ನಮೂನೆಯಲ್ಲಿ ಕಲ್ಪಿಸಿಕೊಂಡು ಅವುಗಳನ್ನು ಆರಾಧಿಸುತ್ತಾನೆ. ಎಂದರೆ ನಿರ್ಜೀವವಸ್ತುಗಳಿಗೆ ಆತ್ಮವಿದೆಯೆಂದು ಭಾವಿಸಿ ಅವಕ್ಕೆ ಮಾನವನ ರೂಪಗುಣಗಳನ್ನು ಆರೋಪಿಸುತ್ತಾನೆ. ಇದಕ್ಕೆ ಮನುಷ್ಯತಾರೋಪಣೆಯೆಂದು (Anthropomorphism) ಹೆಸರು. ಘಟನೆಗಳ ಸಂಖ್ಯೆ ಅನೇಕವಾದ್ದರಿಂದ ಅವುಗಳನ್ನು ನಿಯಂತ್ರಿಸುವ ಅತಿಮಾನುಷಶಕ್ತಿಗಳೂ ಅನೇಕವಾಗುತ್ತವೆ. ಆದರೆ ಕ್ರಮೇಣ ಮಾನವಬುದ್ಧಿಯು ಬಹುದೇವತಾವಾದದಿಂದ (Polytheism) ಏಕದೇವತಾವಾದದೆಡೆಗೆ (Monotheism) ಚಲಿಸುತ್ತದೆ. ಎಂದರೆ ಅವನು ಜಗತ್ತಿನ ಎಲ್ಲ ಘಟನೆಗಳನ್ನೂ ನಿಯಂತ್ರಿಸುವ ಒಂದೇ ಒಂದು ದೇವರನ್ನು ನಂಬಲು ಪ್ರಾರಂಭಿಸುತ್ತಾನೆ.

ಮನಸ್ಸು ವಿಕಾಸಗೊಳ್ಳುತ್ತಿದ್ದಂತೆ ಮನುಷ್ಯನು ಎರಡನೆಯದಾಗಿ ಭೌತಾತೀತ ಹಂತಕ್ಕೆ (Metaphysical Stage) ಬರುತ್ತಾನೆ. ಈ ಹಂತವು ಮಾನವಬುದ್ಧಿಯ ತಾರುಣ್ಯಾವಸ್ಥೆಯನ್ನು ಪ್ರತಿನಿಧಿಸುತ್ತದೆ. ಇಲ್ಲಿ ಅವನು ನಿಸರ್ಗದ ಘಟನೆಗಳನ್ನು ಅಮೂರ್ತ ಪರಿಭಾಷೆಯಲ್ಲಿ ವಿವರಿಸಲು ಯತ್ನಿಸುತ್ತಾನೆ. ಇಲ್ಲಿ ಮೂರ್ತದೇವತೆಗಳ ಸ್ಥಾನವನ್ನು ಅಮೂರ್ತವು ಆಕ್ರಮಿಸುತ್ತದೆ. ವಸ್ತುವೈವಿಧ್ಯಕ್ಕೆ ಅನುಗುಣವಾಗಿ ಈ ತತ್ತ್ವಗಳೂ ಅನೇಕವಾಗಿದ್ದು, ಈ ತತ್ತ್ವಗಳೇ ಘಟನೆಗಳಿಗೆ ಕಾರಣವಾಗುತ್ತವೆ.

ಆದರೆ ಮಾನವಬುದ್ಧಿಯ ವಿಕಾಸದ ತುತ್ತತುದಿಯನ್ನು ಮುಟ್ಟುವುದು ಕೊನೆಯದಾದ ವೈಜ್ಞಾನಿಕ ಹಂತದಲ್ಲಿ (Positive Stage). ಇಲ್ಲಿ ಮನುಷ್ಯನು ಅತೀತದಲ್ಲಿನ ಆಸಕ್ತಿಯನ್ನು ಕೈಬಿಟ್ಟು ತನ್ನ ಅನ್ವೇಷಣೆಯನ್ನು ಅವಲೋಕನ ಮತ್ತು ಪ್ರತ್ಯಕ್ಷಾನುಭವಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳುತ್ತಾನೆ. ಇಲ್ಲಿ ಅವನಿಗೆ ವಸ್ತುಗಳ ಏಕೆ? ಎಂಬ ಪ್ರಶ್ನೆಗಿಂತಲೂ ವಸ್ತುಗಳ ಹೇಗೆ? ಎಂಬ ಪ್ರಶ್ನೆಯು ಮುಖ್ಯವಾಗುತ್ತದೆ. ಇಂದ್ರಿಯಾನುಭವದ ಮೂಲಕ ಕಂಡುಕೊಂಡ ಸಾಮಾನ್ಯ ನಿಯಮಗಳ ಮೂಲಕ ಅವನು ನಿರ್ದಿಷ್ಟ ಘಟನೆಯನ್ನು ವಿವರಿಸಲು ಯತ್ನಿಸುತ್ತಾನೆ. ಆದರೆ ಈ ವಿವರಣೆಯು ಸಾರ್ವತ್ರಿಕ ಮತ್ತು ಸಾರ್ವಕಾಲಿಕವಾಗಲು ಸಾಧ್ಯವಿಲ್ಲ. ಕಾಮ್ಟನ ಪ್ರಕಾರ ಯಾವ ಜ್ಞಾನವು ನಿರಪೇಕ್ಷವಲ್ಲ. ಎಲ್ಲವೂ ಸಾಪೇಕ್ಷ. ಜ್ಞಾನವು ಪ್ರಸ್ತುತ ನಮ್ಮ ಪ್ರಾಯೋಗಿಕ ಉದ್ದೇಶವನ್ನು ಪೂರೈಸಿದರೆ ಅಷ್ಟೇ ಸಾಕು. ಈ ನಿಟ್ಟಿನಲ್ಲಿ ಕಾಮ್ಟ್ ಒಬ್ಬ Positivist ಅಷ್ಟೇ ಅಲ್ಲ, Pragmatist ಕೂಡ ಹೌದು.

ಕಾಮ್ಟ್ ಗಣಿತಶಾಸ್ತ್ರ (ಅಂಕಗಣಿತ, ಜ್ಯಾಮಿತಿ ಮತ್ತು ಯಂತ್ರಶಾಸ್ತ್ರ), ಖಗೋಳವಿಜ್ಞಾನ, ಭೌತಶಾಸ್ತ್ರ, ರಸಾಯನಶಾಸ್ತ್ರ, (ಮನಶಾಸ್ತ್ರವೂ ಸೇರಿದಂತೆ), ಜೀವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳೆಂಬ ಆರು ಶಾಸ್ತ್ರಗಳನ್ನು ಗುರುತಿಸುತ್ತಾನೆ. ಆತನ ಪ್ರಕಾರ ಈ ಶಾಸ್ತ್ರಗಳಲ್ಲಿ ಸರಳ ಸಂಕೀರ್ಣತೆಯ ಒಂದು ಕ್ರಮಬದ್ಧ ಶ್ರೇಣಿಯಿದೆ (Hierarchy). ಸರಳ, ಅಮೂರ್ತ ಮತ್ತು ಸಾಮಾನ್ಯತತ್ತ್ವಗಳನ್ನು ಒಳಗೊಂಡ ಗಣಿತಶಾಸ್ತ್ರವು ಮೊದಲು ಬಂದು ಅದು ಉಳಿದ ಎಲ್ಲ ಶಾಸ್ತ್ರಗಳಿಗೂ ಬುನಾದಿಪ್ರಾಯವಾಗಿದೆ. ಸಮಾಜಶಾಸ್ತ್ರವು ಎಲ್ಲಕ್ಕಿಂತಲೂ ಅತ್ಯಂತ ಸಂಕೀರ್ಣವಿಜ್ಞಾನ. ಅದು ಉಳಿದ ಶಾಸ್ತ್ರಗಳ ಅಂಶಗಳನ್ನು ಒಳಗೊಂಡಿರುವುದರಿಂದ ಅದರ ಜ್ಞಾನಕ್ಕೆ ಉಳಿದ ಶಾಸ್ತ್ರಗಳ ಜ್ಞಾನವು ಅಗತ್ಯ. ಮಾನವ ಬುದ್ಧಿಯು ವಿಕಾಸಗೊಳ್ಳುತ್ತಿದ್ದಂತೆ ಇನ್ನೂ ಹೆಚ್ಚಿನ ಸಂಕೀರ್ಣಶಾಸ್ತ್ರಗಳು ಅಸ್ತಿತ್ವಕ್ಕೆ ಬರುತ್ತವೆ. ಈ ದಿಶೆಯಲ್ಲಿ ಕಾಮ್ಟ್ ಸಮಾಜಶಾಸ್ತ್ರದೊಂದಿಗೆ ಅನಂತರ ನೀತಿಶಾಸ್ತ್ರವನ್ನೂ (Ethics) ಸೇರಿಸಿ ಅದನ್ನು ಎಲ್ಲ ವಿಜ್ಞಾನಗಳ ಪರಾಕಾಷ್ಠೆಯೆಂದು ಭಾವಿಸುತ್ತಾನೆ.

ಕಾಮ್ಟ್‌ನ ಪ್ರಕಾರ ಎಲ್ಲ ಘಟನೆಗಳನ್ನೂ ಒಂದೇ ಒಂದು ನಿಯಮದಿಂದ ಅಥವಾ ಒಂದು ಶಾಸ್ತ್ರದ ಸಂಗತಿಯನ್ನು ಮತ್ತೊಂದರ ಪರಿಭಾಷೆಯಲ್ಲಿ ವಿವರಿಸಲು ಕಾರ್ಯತಃ ಸಾಧ್ಯವೇ ಇಲ್ಲ. ಕಾರಣ, ಪ್ರತಿಯೊಂದು ಶಾಸ್ತ್ರದಲ್ಲೂ ಉಳಿದ ಶಾಸ್ತ್ರಗಳ ಅಂಶಗಳಷ್ಟೇ ಅಲ್ಲ, ಹೊಸ ಹೊಸ ಅಂಶಗಳೂ ಸೇರಿದ್ದು, ಈ ಹೊಸ ಅಂಶಗಳೇ ಅದಕ್ಕೆ ಒಂದು ಪ್ರತ್ಯೇಕತೆಯನ್ನು ನೀಡುವುದು. ಹೀಗಾಗಿ ಅದರ ಘಟನೆಗಳನ್ನು ಅದರ ನಿಯಮಗಳಿಂದ ಮಾತ್ರವೇ ವಿವರಿಸಬೇಕಾಗುತ್ತದೆ. ಉದಾಹರಣೆಗೆ ಜ್ಯಾಮಿತಿಯ ನಿಯಮಗಳು ಪ್ರದೇಶವನ್ನು ಆಕ್ರಮಿಸುವ ಸ್ಥಿರವಸ್ತುಗಳಿಗೆ ಮಾತ್ರವೇ ಅನ್ವಯಿಸುವುದು. ಹಾಗೆಯೇ ಯಂತ್ರವಿಜ್ಞಾನದ (Mechanics) ನಿಯಮಗಳು ಚಲನೆಯಲ್ಲಿರುವ ವಸ್ತುಗಳಿಗೆ ಮಾತ್ರ ಅನ್ವಯಿಸುವುದು. ಜೀವಶಾಸ್ತ್ರದ (Biology) ಸಂಗತಿಗಳನ್ನು ಯಂತ್ರವಿಜ್ಞಾನದ ಅಥವಾ ರಸಾಯನಶಾಸ್ತ್ರದ ಪರಿಭಾಷೆಯಲ್ಲಿ ವಿವರಿಸಲು ಸಾಧ್ಯವಿಲ್ಲ. ಇದು ಒಂದೇ ಶಾಸ್ತ್ರದ ವಿವಿಧ ಸಂಗತಿಗಳೂ ಅನ್ವಯವಾಗುತ್ತದೆ. ಉದಾಹರಣೆಗೆ ಸಸ್ಯಶಾಸ್ತ್ರದ ಎಷ್ಟೋ ನಿಯಮಗಳು ಪ್ರಾಣಿಶಾಸ್ತ್ರಕ್ಕೆ ಅನ್ವಯವಾಗುವುದಿಲ್ಲ. ಇದಕ್ಕೆ ಕಾರಣ ಸಂಗತಿಗಳ ವೈವಿಧ್ಯ.

–ಡಾ. ಚಂದ್ರಶೇಖರ್ ಎಚ್.ಎಲ್.

# ಡ

## ಡಾ. ವಿನಾಯಕ ಕೃಷ್ಣ ಗೋಕಾಕರ ಶೈಕ್ಷಣಿಕ ಚಿಂತನೆಗಳು

### ಪ್ರಸ್ತಾವನೆ

ಕನ್ನಡ ನಾಡಿನಲ್ಲಿ ಜೀವನ ಮತ್ತು ಸಾಹಿತ್ಯ ಎರಡೂ ಕ್ಷೇತ್ರಗಳಲ್ಲಿ ಸಾಮಾನ್ಯ ಸಾಧನೆಗೈದು, ಜೀವನದಲ್ಲಿ ಶ್ರೇಷ್ಠ ಮೌಲ್ಯಗಳ ಪಾಲನೆಯ

Digitised by Bharatavani, CIIL

ಮೂಲಕ ಇತರರಿಗೆ ಬೆಳಕು ನೀಡಿದ, ಉದ್ದಾಮ ಸಾಹಿತಿ, ಶಿಕ್ಷಣ ತಜ್ಞ ವಿನಾಯಕ ಕೃಷ್ಣ ಗೋಕಾಕ. (ವಿ.ಕೃ.ಗೋಕಾಕ್)

ವಿನಾಯಕರೆಂಬ ಕಾವ್ಯ ನಾಮದಿಂದ ಪ್ರಸಿದ್ಧರಾದ ಡಾ. ವಿ. ಕೃ. ಗೋಕಾಕರು 1909ನೇ ಅಗಸ್ಟ್ 9ರಂದು ಅವಿಭಾಜಿತ ಧಾರವಾಡ ಜಿಲ್ಲೆಯ ಸವಣೂರಿನಲ್ಲಿ ಕೃಷ್ಣರಾಯ– ಸುಂದರಕ್ಕ ದಂಪತಿಗಳ ಮಗನಾಗಿ ಜನಿಸಿದರು. ತಮ್ಮ ಅಜ್ಜ ಪಾಂಡುರಂಗ ಜೋಯಿಸರ ಮನೆಯಲ್ಲಿಯೇ ವಿನಾಯಕರ ಬಾಲ್ಯ ಮತ್ತು ಶಿಕ್ಷಣ ನಡೆಯಿತು. ಸವಣೂರಿನ ಕನ್ನಡ ಶಾಲೆಯಲ್ಲಿರುವಾಗಲೇ ಸಂಸ್ಕಾರಬಲದಿಂದ ಇಂಗ್ಲಿಷ್ ಕಲಿಯುವ ಚಾಪಲ್ಯ ಬೆಳೆಯಿತು. ಸವಣೂರಿನ ಮಜೀದ್ ಹೈಸ್ಕೂಲಿನಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಾಲೇಜ್ ಶಿಕ್ಷಣಕ್ಕೆ ಧಾರವಾಡಕ್ಕೆ ಬಂದರು. ಧಾರವಾಡದಲ್ಲಿ ದ.ರಾ.ಬೇಂದ್ರೆಯವರ ಕಾವ್ಯಶ್ರೀ ನೀಲಕಂಠ ತಾಖಾಖಾವರ ಆಂಗ್ಲ ವಿದ್ಯೆಯ ಸಂಸ್ಕಾರ ದೊರೆಯಿತು.

ವಿ.ಕೃ. ಗೋಕಾಕರು ತಮ್ಮ ಸೇವೆಯಲ್ಲಿರುವಾಗ ಶಿಕ್ಷಣದ ವಿಚಾರವಾಗಿ ಇದ್ದ ಅನಿಸಿಕೆಗಳನ್ನು ಪೂರ್ಣವ್ಯಕ್ತಪಡಿಸಲು ಅವಕಾಶ ದೊರೆತಂತಿಲ್ಲ. ನಿವೃತ್ತಿಯ ನಂತರ ಆಂಧ್ರಪ್ರದೇಶದ ಪುಟಪರ್ತಿಯ ಶ್ರೀ ಸಾಯಿಬಾಬಾರ ಆಮಂತ್ರಣದ ಮೇರೆಗೆ ಅವರ ಸಂಸ್ಥೆಗಳಲ್ಲಿ ಗೌರವ ನಿರ್ದೇಶಕರಾಗಿ ಸೇವೆಗೈದರು. ಆದರೆ ಅವರು ಎಂದೂ ಯಾರ ಪ್ರಭಾವಕ್ಕೂ ಒಳಗಾಗದೇ ಶಿಕ್ಷಣದಲ್ಲಿ ಹೊಸ–ಹೊಸ ಪ್ರಯೋಗಗಳನ್ನು ಮಾಡಿದರು.

ಸಾಯಿಬಾಬಾರ ಬಾಲವಿಕಾಸ ಕೇಂದ್ರಗಳ ಪಠ್ಯಕ್ರಮ ರಚನೆಯಲ್ಲಿ ತೊಡಗಿ ಸಾಯಿಬಾಬಾರು ಬೋಧಿಸಿದ ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆ ಎಂಬ ಪಂಚಮೌಲ್ಯಗಳನ್ನು ಎನ್‌ಸಿಆರ್ ಟಿಯ 83 ಮೌಲ್ಯಗಳಿಗೆ ಹೊಂದಿಸಿ 'Stories for Children' ಪುಸ್ತಕಗಳನ್ನು ಮಕ್ಕಳ ವಯೋಮಾನಕ್ಕನುಗುಣವಾದ ಸುಲಭವಾದ ಕಥೆಗಳನ್ನು ರಚಿಸಿದರು.

ತದನಂತರ ಪುಟಪರ್ತಿಯಲ್ಲಿ ಪರಿಗಣಿತ ವಿಶ್ವವಿದ್ಯಾನಿಲಯವಾದ ಸಾಯಿಬಾಬಾರ ಪೂರ್ಣವಿದ್ಯಾಪೀಠದ ಪ್ರಥಮ ಕುಲಪತಿಗಳಾಗಿ ಸೇವೆ ಪ್ರಾರಂಭಿಸಿ ಅಲ್ಲಿ ಬಾಲವಾಡಿಗಳಿಂದ ಹಿಡಿದು ಸ್ನಾತಕೋತ್ತರ ವರ್ಗಗಳವರೆಗೆ ಅಭ್ಯಾಸ ಕ್ರಮ (Syllabus) ವನ್ನು ತಯಾರಿಸಿ ಕೊಟ್ಟರು.

ಮಾತೃಭಾಷೆಯ ಸ್ಥಾನಮಾನ ಕುರಿತಂತೆ ಕನ್ನಡಕ್ಕೆ ಅಗ್ರಸ್ಥಾನದ ಬಗ್ಗೆ ವರದಿ ಸಲ್ಲಿಸಿ, ವರದಿ ಜಾರಿಗೆ ಬಾರದಿದ್ದಾಗ ಹೋರಾಟ ನಡೆಸಿ, ಸಫಲರಾಗಿದ್ದಾರೆ. ಆದರೆ ಅವರು ಎಂದೂ ಪರಭಾಷೆಯ ದ್ವೇಷಮನೋಭಾವ ಹೊಂದಿದವರಲ್ಲ. ಇಂಗ್ಲಿಷ್ ಭಾಷೆಯ ಪ್ರಾಧ್ಯಾಪಕರಾಗಿಯೂ ಕನ್ನಡ ಭಾಷೆಯ ಸಾಹಿತ್ಯ ಉಳಿಸಿ ಬೆಳೆಸಿದರು. ತಮ್ಮ ಮನೆಯ ಭಾಷೆ ಕನ್ನಡವಾಗಿರಿಸಿಕೊಂಡ ಅಪ್ರತಿಮ ವ್ಯಕ್ತಿತ್ವ ಅವರದ್ದು. ಅಲ್ಲದೆ ಕನ್ನಡ ಭಾಷಾ ಹೋರಾಟದಲ್ಲಿ ಗೋಕಾಕ ವರದಿಯಷ್ಟೇ ಪ್ರಸಿದ್ಧರು. ಇಂದಿನ ದಿನಗಳಲ್ಲಿ ಕನ್ನಡ ಕಡ್ಡಾಯವಾಗಬೇಕೇ? ಇಂಗ್ಲಿಷ್ ಒಂದನೇ ತರಗತಿಯಿಂದ ಕಲಿಸಬೇಕೇ? ಬೇಡವೇ? ಎಂಬ ದ್ವಂದ್ವ ನೀತಿಗೆ ಗೋಕಾಕ ವರದಿ ಉತ್ತರವನ್ನು ನೀಡುತ್ತದೆ. ಮೊದಲು ನಾವು ಆ ವರದಿಯನ್ನು ಅರಿಯಬೇಕು.

ಅವರು ಶಿಕ್ಷಣ ಕ್ಷೇತ್ರದ ಬಗ್ಗೆ ತಮ್ಮದೇ ಆದ ವಿಚಾರಧಾರೆಯನ್ನು ಹೊಂದಿದ್ದು, ಅವುಗಳನ್ನು ನೇರವಾಗಿ ಮತ್ತು ತಮ್ಮ ಸಾಹಿತ್ಯದ ಮೂಲಕವಾಗಿ, ವಿಚಾರಗೋಷ್ಠಿ, ಭಾಷಣಗಳ ಮೂಲಕ ವ್ಯಕ್ತಪಡಿಸಿದ್ದಾರೆ. ನೈತಿಕ, ಆಧ್ಯಾತ್ಮಿಕ, ಧಾರ್ಮಿಕ ಹಾಗೂ ವಿವಿಧ ಹಂತಗಳ ಶಿಕ್ಷಣಕ್ಕೆ ಮೌಲ್ಯಯುತವಾದ ಶೈಕ್ಷಣಿಕ ವಿಚಾರಗಳನ್ನು ನೀಡಿದ್ದಾರೆ. ಅವುಗಳನ್ನು ತಿಳಿಯುವಂತಹದ್ದು ಪ್ರಚಲಿತ ವಿದ್ಯಮಾನಕ್ಕೆ ಅವಶ್ಯವಿದೆ. ಇವು ವಿ.ಕೃ. ಗೋಕಾಕರು ಶಿಕ್ಷಣರಂಗಕ್ಕೆ ನೀಡಿದ ಅಪಾರ ಕೊಡುಗೆಗಳು.

ಶಿಕ್ಷಣವು ಮಾನವನ ಭೌತಿಕ, ಬೌದ್ಧಿಕ, ಭಾವನಾತ್ಮಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಮುಖಗಳನ್ನೊಳಗೊಂಡ ವ್ಯಕ್ತಿತ್ವ ಪರಿಪೂರ್ಣಗೊಳಿಸುವುದು. ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಯೋಜನೆ ಸಾಮರಸ್ಯ ಮತ್ತು ತಾಳ್ಮೆವುಳ್ಳ ನಾಡಿನಲ್ಲಿ ಒಂದು ಪ್ರಜಾಸತ್ತಾತ್ಮಕ ಗಣತಂತ್ರದ ಪ್ರಜೆಯಾಗುವ ವ್ಯಕ್ತಿಯನ್ನು ರೂಪಿಸುವುದು ಶಿಕ್ಷಣದ ಸಾಮಾಜಿಕ ಉದ್ದೇಶ.

- ಬಾಲಕರ ಗುಣ ನಡತೆಯ ವಿಕಾಸದ ದೃಷ್ಟಿಯಿಂದ ಈ ಕಥೆಗಳು ಮಹತ್ವವುಳ್ಳವಾಗಿದೆ. ಕಥಾವಿಧಾನವು ಗೋಕಾಕರಿಗೆ ಪ್ರಿಯವಾಗಿದ್ದು, ಎಲ್ಲ ವಿಧಾನಗಳಿಗಿಂತ ಈ ವಿಧಾನದ ಮುಖಾಂತರ ಮಕ್ಕಳಿಗೆ ಬೋಧನೆಯು ಪರಿಣಾಮಕಾರಿಯಾಗಬಲ್ಲದೆಂಬುದನ್ನು ತೋರಿಸಿಕೊಟ್ಟಿದ್ದಾರೆ.
- ಮಕ್ಕಳ ವಯೋಮಿತಿಗನುಗುಣವಾಗಿ ಯಾವ ಕಥೆಗಳನ್ನು ಹೇಳುವುದರಿಂದ ಮಕ್ಕಳಿಗೆ ಪರಿಣಾಮಕಾರಿಯಾಗಬಲ್ಲವೆಂಬುದನ್ನು ಮನಗಂಡು ಬರೆದಿದ್ದಾರೆ.
- ಈ ಕಥೆಗಳು ಸರಳ ಮತ್ತು ಸುಲಭವಾಗಿ ಬೇರೊಂದು ಭಾಷೆಗೆ ಭಾಷಾಂತರಿಸಲು ಅನುಕೂಲವಾಗುವಂತೆ ರಚಿಸಿದ್ದಾರೆ.
- ಶಿಕ್ಷಕರು ಮಕ್ಕಳಿಗೆ ಈ ಕಥೆಗಳನ್ನೇ ಹೇಳಬೇಕೆಂಬ ಕಡ್ಡಾಯವಿಲ್ಲ ಮತ್ತು ಈ ತತ್ವಗಳ ತಳಹದಿಯ ಮೇಲೆ ಯಾವ ಕಥೆಗಳನ್ನಾದರೂ ಹೇಳಬಹುದೆಂಬುದನ್ನು ಅವರೇ ತಿಳಿಸಿದ್ದಾರೆ.
- ಎನ್.ಸಿ.ಇ.ಆರ್.ಟಿ. ಯವರು ಪೂರ್ಣ ಶಿಕ್ಷಣ ಯೋಜನೆಯಲ್ಲಿ ಸೂಚಿಸಿರುವ **83 ಮೌಲ್ಯಗಳನ್ನು** ವಿ.ಕೃ.ಗೋಕಾಕರು ಶ್ರೀ ಸತ್ಯ ಸಾಯಿಬಾಬಾರವರ ಪಂಚಮೌಲ್ಯಗಳಲ್ಲಿ ವಿಲೀನಗೊಳಿಸಿ ವಿವರಿಸಿರುವಂತದ್ದು, ಇನ್ನೂ ಯಾರೂ ಈ ರೀತಿ ಮಾಡಿಲ್ಲ ಎಂಬುದು ಕಟುಸತ್ಯ.
- ಕಥೆಗಳನ್ನು ಹೇಳಲು ಬಳಸಬಹುದಾದ ಮಾಧ್ಯಮ ಮತ್ತು ವಿಧಾನಗಳಾದ ನಾಟಕೀಕರಣ ಚಿತ್ರೀಕರಣ ಮತ್ತು ಸರಿಯಾದ ಭಾಷೆಯ ಬಳಕೆಯಿಂದ ಕಥೆಗಳನ್ನು ಪರಿಣಾಮಕಾರಿಯಾಗಿ

Digitised by Bharatavani, CIIL

ವಿವರಿಸಬಹುದೆಂಬುದನ್ನು ತಿಳಿಸಿದ್ದಾರೆ.

- ಪ್ರಶಾಂತಿ ನಿಲಯದಿಂದಲೇ ಇಂತಹ ಮಹಾನ್ ಕಾರ್ಯ ಕೈಕೊಂಡಿರುವುದು ಶ್ಲಾಘನೀಯವಾದಂತದ್ದು.
- ಒಟ್ಟಿನಲ್ಲಿ ಬಾಲಕರ ಗುಣ ನಡತೆಗಳ ವಿಕಾಸದಲ್ಲಿ ಇಂತಹ ಕಥೆಗಳು ಅವರನ್ನು ಉತ್ತಮ ಮಾರ್ಗದತ್ತ ಕೊಂಡೊಯ್ಯಲು ದಾರಿದೀಪವಾಗಿವೆ ಎಂದು ಹೇಳಬಹುದು.
- ಬಾಲ್ಯದ ಕಲಿಕಾಚಟುವಟಿಕೆಗಳು ಮತ್ತು ವಾತಾವರಣದ ಬಗ್ಗೆ ಒಂದು ಪದ್ಯದ ಸಾಲುಗಳಲ್ಲಿ ಹೀಗೆ ವ್ಯಕ್ತವಾಗಿವೆ.

> "ಮಗುವು ಬಂದಾಡಿತ್ತು ಗುಡಿಯ ಪ್ರಾಂಗಣದಲ್ಲಿ
> ಮುಗ್ಧ ನಯನಗಳ ತೆರೆದು
> ವಾತ್ಸಲ್ಯ-ಪ್ರಕೃತಿ ಸಿರಿಯಲ್ಲಿ
> ಮುಕ್ತಿಯನು ಕಂಡುಳಿದುದನು ತೊರೆದು."

**ಪ್ರೌಢ ಶಿಕ್ಷಣಕ್ಕೆ ಮೂಲ ತತ್ವಗಳ ನಿರೂಪಣೆ :**

ವಿನಾಯಕರು ಪ್ರೌಢಶಿಕ್ಷಣ ಕುರಿತು ತಮ್ಮದೇ ಆದ ಸೃಜನಶೀಲ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. "ಪ್ರೌಢ ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷಣವು ಸತ್ಯತೆಯ ಕಡೆಗೆ ಸಾಗುವಂತಿರಬೇಕು. ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಲ್ಲಿ ಬ್ರಹ್ಮ ಸತ್ಯದ ಪರಿಕಲ್ಪನೆ ಒಳಗೊಂಡಿರಬೇಕು ಎಂಬುದು ಗೋಕಾಕರ ಅಭಿಪ್ರಾಯ. ಅವರ ಪ್ರಕಾರ ಕಾವ್ಯವು ಕೂಡ ಸತ್ಯದ ಪರಿಕಲ್ಪನೆಯಿಂದ ಪ್ರತ್ಯೇಕವಲ್ಲ.

**'ಸತ್' ಸುಂದರ, ಶಕ್ತಿ, ಮೌಲ್ಯ** (ಸಾಮಾಜಿಕ ಮಹತ್ವವುಳ್ಳದ್ದು), **ಪ್ರೇಮ** (ಪ್ರೀತಿಗೆ ಯೋಗ್ಯವಾಗುವಿಕೆ), **ಆನಂದ,** ಇವು ಬ್ರಹ್ಮ ಸತ್ಯದ ಲಕ್ಷಣಗಳಾದ -ಸತ್, ಚಿತ್, ಆನಂದ ಎಂಬ ಮೂರು ಅಂಶಗಳಿಂದ ನಿಷ್ಪನ್ನವಾಗುತ್ತವೆ.

ಹೀಗೆ ಸತ್ ನಿಂದ ಸತ್ಯ ಮತ್ತು ಸುಂದರ ತತ್ವಗಳು, ಚಿತ್‌ನಿಂದ ಶಕ್ತಿ ಮತ್ತು ಜ್ಞಾನ (ಶಕ್ತಿ ಮತ್ತು ಮೌಲ್ಯ); ಆನಂದದಿಂದ ಪ್ರೇಮ (ವಿಷಯ ಪ್ರೀತಿ) ಮತ್ತು ಹಿಗ್ಗು.

**ಬೋಧನೆಯಲ್ಲಿ ಸಹ ಸಂಬಂಧ ತತ್ವ:**

ಪ್ರೌಢ ಶಿಕ್ಷಣ ತತ್ವದಲ್ಲಿ Correlation of subjects ಎಂದರೆ ವಿವಿಧ ವಿಷಯಗಳ ಸಮನ್ವಯತೆಯನ್ನು ಕಲಿಸುತ್ತಾರೆ. ಆದರೆ ಯಾವ ಸಮನ್ವಯದ ಪರಿಕಲ್ಪನೆಯೂ ಡಾ. ಗೋಕಾಕರು ಕಂಡಿರುವ ಪರಮಾತ್ಮ ತತ್ವ ಪರಿಜ್ಞಾನದವರೆಗಿನ ಶಿಕ್ಷಣ ಯೋಜನೆಯನ್ನು ಗುರುತಿಸಿಲ್ಲ. ಡಾ. ಗೋಕಾಕರು ಶಿಕ್ಷಣ ತತ್ವಕ್ಕೆ ನೀಡಿದ ಅಪೂರ್ವ ಆಯಾಮ ಇದು. ವಿದ್ಯಾರ್ಥಿಗಳಿಗೆ ಯಾವುದೇ ವಿಷಯವನ್ನು ಕಲಿಸಿದರೂ ಅದರ ಬೇರುಗಳನ್ನು ಸಚ್ಚಿದಾನಂದದಲ್ಲಿ ಕಂಡುಕೊಳ್ಳುವ ಹಾಗೆ ಸಮನ್ವಯಿಸಿ ಕಲಿಸಬೇಕು. ಜಡದಲ್ಲಿ ಮೂಡಿರುವ ಬೆಡಗಿನ ರೂಪಗಳು ಈ ಜಗತ್ತನ್ನು ಈಶಾವಾಸ್ಯವನ್ನಾಗಿ ಮಾಡಿದೆ. ಜಡದಿಂದ ಸ್ಫುರಿಸುವ ಶಕ್ತಿಯು ದೈವೀಶಕ್ತಿಯ ಅದ್ಭುತಗಳನ್ನು ಎತ್ತಿ ತೋರುತ್ತದೆ. ವಿಜ್ಞಾನವು ನಮ್ಮನ್ನು ನಿರೀಶ್ವರ ಭಾವಕ್ಕೆ ಕೊಂಡೊಯ್ಯುತ್ತದೆಂಬುದಕ್ಕಿಂತ ಈಶ್ವರ ಶ್ರದ್ಧೆಗೆ ಸಮೀಪ ಒಯ್ಯುತ್ತದೆ ಎನ್ನಬೇಕು.

ಇದೇ ಮಾರ್ಗವಾಗಿ ನಾವು ಸ್ವಲ್ಪ ಅದಲು ಬದಲುಗಳಿಂದ ವಿದ್ಯಾರ್ಥಿಗಳಲ್ಲಿ ಜೀವ ವಿಜ್ಞಾನಗಳನ್ನು, ಸಾಮಾಜಿಕ ವಿಜ್ಞಾನಗಳನ್ನು, ಉಪವಿಜ್ಞಾನಗಳನ್ನು, ಮಾನವಿಕಗಳನ್ನೂ-ಸಚ್ಚಿದಾನಂದದ ಅಂತಿಮ ಅವುಗಳ ಸಂಕೀರ್ಣತೆಯೊಂದಿಗೆ ಅನುಭವಿಸದೆ ವ್ಯಕ್ತಿಯ ಶಿಕ್ಷಣವು ಪರಿಪೂರ್ಣವೆನಿಸಲಾರದು.

**ಕಾಲೇಜು ಶಿಕ್ಷಣದಲ್ಲಿ ತುಂಡರಿಕೆ ಜ್ಞಾನದಿಂದ ಅಖಂಡ ಜ್ಞಾನದೆಡೆಗೆ:**

ನಮ್ಮ ಇಂದಿನ ಕಾಲೇಜು ಶಿಕ್ಷಣವು ಸರ್ವವಿಧದಲ್ಲಿಯೂ ಅಸಮರ್ಥತೆಯನ್ನು ಬೆಳೆಸಿಕೊಂಡಿದ್ದು, ಜ್ಞಾನೋಪಾಸನೆ, ಆಧ್ಯಾತ್ಮಿಕ ದೃಷ್ಟಿಯಿಲ್ಲದೆ ಅದಕ್ಕೆ ಉಳಿಗಾಲವಿಲ್ಲವೆಂಬ ಶ್ರೀಸತ್ಯಸಾಯಿಬಾಬಾ ಅವರ ಅಭಿಪ್ರಾಯವನ್ನು ಸಮರ್ಥಿಸಿದ ಡಾ. ಗೋಕಾಕರು **"ಶ್ರೀ ಸತ್ಯಸಾಯಿ ಶಿಕ್ಷಣ ಸಿದ್ಧಾಂತ** (The Sathya Sai Theory of Education) ಎಂಬ ಮಹತ್ವದ ಲೇಖನದ ನಾಲ್ಕನೆ ವಿಭಾಗದಲ್ಲಿ **'ಕಾಲೇಜು ಶಿಕ್ಷಣ'** ಎಂಬ ಶೀರ್ಷಿಕೆಯ ಅಡಿಯಲ್ಲಿ ಮನಗಾಣುವರೀತಿಯಲ್ಲಿ ವಿವೇಚಿಸಿದ್ದಾರೆ.

ಇಂದಿನ ಶಾಲಾ ಕಾಲೇಜುಗಳು ಸರಸ್ವತಿ ಮಂದಿರಗಳಾಗಿರದೆ ವ್ಯಾಪಾರಿ ಕೇಂದ್ರಗಳಾಗಿವೆ. ಈ ರೋಗದಿಂದ ನಮ್ಮ ವಿದ್ಯಾಸಂಸ್ಥೆಗಳು ಮುಕ್ತವಾಗಬೇಕು ಎಂಬ ಮಹತ್ವದ ಅಂಶವನ್ನು ಗೋಕಾಕರು ಎತ್ತಿಕೊಂಡು ಅದಕ್ಕೆ ಬಾಬಾ ಅವರ ಪರಿಭಾಷೆಯಲ್ಲಿಯೇ ಪರಿಹಾರ ಸೂಚಿಸುತ್ತಾರೆ. ಇಂದಿನ ಶಾಲಾ ಕಾಲೇಜುಗಳು ವಿದ್ಯಾರ್ಥಿಗಳಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಜಾಗ್ರತಗೊಳಿಸಿ ಅವರ ವ್ಯಕ್ತಿತ್ವವು ಬೆಳೆದು ಪರಿಪೂರ್ಣವಾಗುವಂತೆ ಅವರನ್ನು ತರಬೇತಿ ಗೊಳಿಸುವುದಲ್ಲದೇ ಬರಿ ಸುದ್ದಿ ಸಮಾಚಾರಗಳನ್ನು ಅವರ ಮಿದುಳಿನಲ್ಲಿ ತುರುಕುವದಲ್ಲ, ಎಂಬ ಬಾಬಾ ಅವರ ಧೋರಣೆಯನ್ನು ಡಾ. ಗೋಕಾಕರು ಸಮರ್ಥಿಸಿ, ಅದನ್ನು ಸ್ಪಷ್ಟೀಕರಿಸಿದ್ದಾರೆ.

**ವಿಶ್ವವಿದ್ಯಾಲಯ ಶಿಕ್ಷಣ:**

ಉನ್ನತ ಶಿಕ್ಷಣದ ಪ್ರಮುಖ ಉದ್ದೇಶ ಆಯಾ ಕ್ಷೇತ್ರದಲ್ಲಿಯ ವ್ಯಕ್ತಿಗಳಿಗೆ ವಿಶೇಷವಾದ ಜ್ಞಾನವನ್ನು ಕೊಡುವುದು. ಅವರನ್ನು ರಾಷ್ಟ್ರದ ನಾಯಕರನ್ನಾಗಿ ಮಾಡುವುದು ಹಾಗೂ ಅವರವರ ಕ್ಷೇತ್ರಗಳಲ್ಲಿ ಸಂಪೂರ್ಣ ಸಾಧನೆ ಮಾಡಲು ಅವಕಾಶ ಕೊಡುವುದು ಅದರ ಪ್ರಮುಖ ಕಾರ್ಯ.

ವಿಶ್ವ ವಿಜ್ಞಾನವನ್ನು ನೀಡುವ ಕೇಂದ್ರಗಳೇ ವಿಶ್ವವಿದ್ಯಾಲಯಗಳು. ಇಂದು ವಿಶ್ವವಿದ್ಯಾಲಯಗಳು ನೀಡುತ್ತಿರುವುದು ತುಂಡರಿಕೆ ಜ್ಞಾನ; ಈ ತುಂಡರಿಕೆ ಜ್ಞಾನ ವಿರೂಪಗೊಳಿಸಿದ ಜ್ಞಾನ. ಮಾನವನು ನಾಗರೀಕನಾಗಲು ಪೂರ್ಣಜ್ಞಾನ ಅಗತ್ಯ. ಇದರಿಂದ ಜೀವನದಲ್ಲಿ ಅಭಿವೃದ್ಧಿಸಾಧಿಸಲು ಸಾಧ್ಯ. ಇದು ಗೋಕಾಕರ ತರ್ಕ.

ವಿ.ಕೃ. ಗೋಕಾಕರು ಆಧುನಿಕ ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಪದ್ಧತಿ ರೂಪಿಸುವುದರ ವಿಷಯವಾಗಿ ವಿವೇಚಿಸಿದರು.

Digitised by Bharatavani, CIIL

ಅವರಂತೆ – "ವಿಶ್ವ ವಿದ್ಯಾಲಯಗಳು ಸಂಸ್ಕೃತಿಯ ಸ್ವರ್ಗ"ವಾಗಿ ಕಾರ್ಯಮಾಡಬೇಕು. ಅವರು ಶಿಕ್ಷಣ ಮಾಧ್ಯಮಗಳ ಸಾಧಕ–ಬಾಧಕಗಳನ್ನು ಕುರಿತೂ ಗಂಭೀರವಾಗಿ ವಿವೇಚಿಸಿದ್ದಾರೆ. ಅಲ್ಲದೆ ವಿಶ್ವವಿದ್ಯಾಲಯಗಳ ಪರೀಕ್ಷಾಪದ್ಧತಿ, ವಿದ್ಯಾರ್ಥಿಗಳ ಕಲ್ಪನಾತೀತಜ್ಞಾನ, ಶೈಕ್ಷಣಿಕ ಆಡಳಿತಮಂಡಳಿಗಳ ಪಾತ್ರ, ಕುಲಪತಿಗಳು ಹೇಗಿರಬೇಕು, ಶಿಕ್ಷಕರು ಹೇಗಿರಬೇಕು, ಪಠ್ಯಕ್ರಮ ಮತ್ತು ವಿಶ್ವವಿದ್ಯಾಲಯದ ಧನಸಹಾಯ ಆಯೋಗಗಳ ಪಾತ್ರ–ಹೀಗೆ ಹಲವು ಗಹನ ವಿಚಾರಗಳು ಅವರ ಪರಿಗಣನೆಗೆ ಬಂದಿವೆ.

ಇಂದಿನ ವಿಶ್ವವಿದ್ಯಾಲಯಗಳ ಸ್ಥಿತಿ–ಗತಿಯ ಬಗ್ಗೆ ವಿನಾಯಕರ ಕಟು ಅಭಿಪ್ರಾಯವಿದು– "ಪ್ರಸ್ತುತ ವಿಶ್ವವಿದ್ಯಾಲಯಗಳ ಚಿತ್ರಣವನ್ನು ನಾನು ನೀಡ ಹೊರಟಿದ್ದೇನೆ. ವಿಶ್ವವಿದ್ಯಾಲಯಕ್ಕೆ ಏನಾದರೂ ವ್ಯತ್ಯಾಸವಿರುವುದೇ ಆದರೆ ಅದು ತೀಕ್ಷ್ಣತೆಯಲ್ಲಿ ಮಾತ್ರ. ಮೂಲ ಪ್ರಶ್ನೆಗಳು ನಮ್ಮೆದುರು ತುಮುಲ ಮತ್ತು ಕಳವಳ ಮೂಡಿಸುವಷ್ಟು ಬೃಹದ್ರೂಪ ತಳೆದು ನಿಲ್ಲುವುದು. ಅವು ಯಾವುವೆಂದರೆ–

### ತಾತ್ವಿಕ ಶಿಕ್ಷಣದ ಚಿಂತನೆ

#### 1. ಆಧ್ಯಾತ್ಮದಲ್ಲಿ ವಿಶ್ವಾಸದ ಪರಿವೆ:

ಜನಸಾಮಾನ್ಯರಲ್ಲಿ ಆಧ್ಯಾತ್ಮಿಕ ಪರಿಸರದ ಕೊರತೆ ಇದೆ. ಅಲ್ಲದೆ ವಿಜ್ಞಾನ–ತಂತ್ರಜ್ಞಾನಗಳ ಮುನ್ನಡೆಯಿಂದ ಜೀವನದಲ್ಲಿ ಸಂಕೀರ್ಣತೆ ಹೆಚ್ಚುತ್ತಿದೆ. ಮಾನವರಲ್ಲಿ ಸುಪ್ತವಾಗಿರುವ ದೈವಿಕತೆ ಕಡಿಮೆಯಾಗುತ್ತಿದೆ. ಸಮರ್ಥ ಬೋಧಕರ ಕೊರತೆಯೂ ಇದೆ. ಆಧ್ಯಾತ್ಮಿಕ ತತ್ವಗಳ ಸರಳೀಕರಣ ಜನಸಾಮಾನ್ಯರಿಗೆ ಅಗತ್ಯ. ಆಧ್ಯಾತ್ಮಿಕ ಶಿಕ್ಷಣಕ್ಕೆ ಧರ್ಮ ಗ್ರಂಥಗಳ ತತ್ವಗಳ ಅಭ್ಯಾಸಬೇಕಾದರೂ ಧಾರ್ಮಿಕ ತತ್ವಗಳೇ. ಆಧ್ಯಾತ್ಮಿಕ ಸಾರ್ವತ್ರಿಕ ಶಿಕ್ಷಣವಲ್ಲ. ಮನುಷ್ಯನ ಮನಸ್ಸು, ಭಾವನೆ ಮತ್ತು ವೈಚಾರಿಕತೆ, ಧಾರ್ಮಿಕ ಮನೋಭಾವ ಅಗತ್ಯ. 'ಆತ್ಮ' ವೆಂಬುದೊಂದಿದೆ ಎನ್ನುವ ಬೇಧವಿರುವ ವ್ಯಕ್ತಿಗೆ ಅಗತ್ಯ.

ಪ್ರಕೃತಿಯನ್ನು ತಿಳಿಯಲಾರದೆ ಆತ್ಮ ಜ್ಞಾನವನ್ನು ತಿಳಿಯಲು ಸಾಧ್ಯವಿಲ್ಲ. ಆತ್ಮಜ್ಞಾನವನ್ನು ತಿಳಿಯಲಾರದೆ ಪ್ರಕೃತಿಯನ್ನು ತಿಳಿಯಲು ಸಾಧ್ಯವಿಲ್ಲ. ಪ್ರಕೃತಿಯ ಮೂಲಕ ಆತ್ಮ ಜ್ಞಾನ ಪಡೆಯಲು ಸುಲಭ ಸಾಧ್ಯ. ಪ್ರಕೃತಿ ಮತ್ತು ಆತ್ಮ ಇವೆರಡನ್ನು ಅರಿತಾಗಲೇ ಮನುಷ್ಯ ವಿಶ್ವ ಆತ್ಮವನ್ನು ಅರಿಯಲು ಸಾಧ್ಯವಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣಲು ಕವಿ ಹಂಬಲಿಸಿದ್ದಾರೆ.

ಮಗುವಿಗೆ ಕೊಡುವ ಶಿಕ್ಷಣದಲ್ಲಿ ಭಾರತೀಯ ಸಾಂಸ್ಕೃತಿಕ ವೈವಿಧ್ಯತೆಯನ್ನು ಹೇಳುತ್ತ (ಧರ್ಮ, ಮತ, ಭಾಷೆ, ಪಂಥ) ಧಾರ್ಮಿಕ ವಿಚಾರಗಳು, ಧಾರ್ಮಿಕ, ಆಧ್ಯಾತ್ಮಿಕ ಮಹಾನ್ ಚಿಂತಕರ ಚಿಂತನೆಗಳ ಮುಖಾಂತರ ಭಾವೈಕ್ಯತೆಯ ಮನೋಧರ್ಮವನ್ನು ಬೆಳೆಸುವುದು. ಇದರಿಂದ ಮಗುವಿನಲ್ಲಿ ಪರಧರ್ಮ ಸಹಿಷ್ಣುತೆಯನ್ನು ಬೆಳೆಸಲು ಸಾಧ್ಯವಾಗುತ್ತದೆ.

### ಗೋಕಾಕರು ಕಂಡ : ಸ್ತ್ರೀ ಸಂಸ್ಕೃತಿ ಸ್ವಾವಲಂಬನೆಗಾಗಿ ಶಿಕ್ಷಣ

ಹೆಣ್ಣು ಮಕ್ಕಳಿಗೂ ಶಿಕ್ಷಣ ಅವಶ್ಯ. ಅವರು ಪುರುಷನ ಸರಿಸಮಾನರಾಗಿ ಎಲ್ಲ ರಂಗಗಳಲ್ಲೂ ದುಡಿಯಬಲ್ಲರು. ಆದ್ದರಿಂದ ಶಿಕ್ಷಣದಲ್ಲಿ ಪುರುಷರಿಗೆ ಇರುವಷ್ಟು ಸ್ಥಾನಮಾನಗಳನ್ನು ಸ್ತ್ರೀಯರಿಗೂ ಕೊಡಬೇಕೆಂದು ಗೋಕಾಕರು ಅಭಿಪ್ರಾಯ ಪಟ್ಟಿದ್ದಾರೆ. ಅದರಂತೆ ಪ್ರೋತ್ಸಾಹ ಕೊಟ್ಟಿದ್ದಾರೆ.

ವೇದಕಾಲದಲ್ಲಿ ಸ್ತ್ರೀಯರಿಗೆ ಯೋಗ್ಯವಾದ ಸರಿಸಮಾನವಾದ ಸ್ಥಾನಮಾನಗಳು ಇದ್ದವು. ಸ್ತ್ರೀಯು ಸಮಾಜದಲ್ಲಿ ಪುರುಷರಂತೆ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಸ್ಥಾನ, ಸೌಲಭ್ಯ, ಅಧಿಕಾರ, ಗೌರವ ಹೊಂದಿದ್ದಳು. ಸ್ತ್ರೀಯು ಬಾಳಸಂಗಾತಿ ಆಯ್ಕೆಯಲ್ಲಿ ಸ್ವತಂತ್ರಳಾಗಿದ್ದಳು. ಶಿಕ್ಷಣ, ಸಾಹಿತ್ಯ, ಧಾರ್ಮಿಕ ಮುಂತಾದ ವಿಷಯಗಳಲ್ಲಿ ಸ್ವತಂತ್ರಳಿದ್ದಳು. ಆದರೆ ವೇದಕಾಲದ ನಂತರ ಸ್ತ್ರೀಯರ ಸ್ಥಾನಮಾನಗಳಲ್ಲಿ ಅನೇಕ ಬದಲಾವಣೆಗಳಾದವು. "ಹಿಂದೊಮ್ಮೆ ನಮ್ಮ ದೇಶದಲ್ಲಿ ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹವಿರಲಿಲ್ಲ. ಇದರಿಂದ ಸಮಾಜದ ಅರ್ಧಾಂಗವು ಪಾರ್ಶ್ವವಾಯುವಿನಿಂದ ಬಾಳಬೇಕೆಂದಿತ್ತು. ಆದರೆ ಸ್ತ್ರೀ ಶಿಕ್ಷಣ ವಿಷಯದಲ್ಲಿ ಒಂದು ದೊಡ್ಡ ಕ್ರಾಂತಿಯೇ ಉಂಟಾಗುತ್ತದೆ. ಸ್ತ್ರೀಯರು ಹೆಚ್ಚು–ಹೆಚ್ಚಾಗಿ ಸ್ವಾವಲಂಬಿಗಳಾಗಿರುತ್ತಿದ್ದರು. ಆದರೆ ಗ್ರಾಮಾಂತರ ಪ್ರದೇಶದಲ್ಲಿಯೂ ಸ್ತ್ರೀಯರಿಗೆ ಆಧುನಿಕ ಭಾರತದ ವಿಚಾರಸರಣಿ ಮತ್ತು ಸಂಸ್ಕೃತಿಯ ಸ್ವರೂಪ ಕಲ್ಪನೆಯನ್ನು ಮಾಡಿಕೊಡಬೇಕು. ಅಲ್ಲದೆ ಪರರಾಷ್ಟ್ರಗಳ ಅಂಧಾನುಕರಣೆಯನ್ನು ಮಾಡದಂತೆಯೂ ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ಮೆರೆಯುವಂತೆಯೂ ಭಾರತೀಯ ಮಹಿಳೆಯರು ಮುನ್ನಡೆಯಬೇಕು.

### ಗೋಕಾಕ ಆಯೋಗ ರಚನೆಯ ಹಿನ್ನೆಲೆ

"ಗೋಕಾಕ ಆಯೋಗವು ರಚನೆಯಾಗುವ ಹಿಂದೆ ಕರ್ನಾಟಕದ ಪ್ರೌಢಶಾಲೆಗಳ ಕಲಿಸುತ್ತಿದ್ದ ವಿವಿಧ ಭಾಷೆಗಳ ವಿಷಯದಲ್ಲಿ ಒಂದು ವಿವಾದವೆದ್ದಿತು. ವಿವಿಧ ಮಾಧ್ಯಮಗಳ ಪ್ರೌಢಶಾಲೆಗಳಲ್ಲಿ ಕನ್ನಡ, ಇಂಗ್ಲಿಷ್, ತಮಿಳು, ತೆಲುಗು, ಮರಾಠಿ ಮುಂತಾದ ಆಡು ಮಾತುಗಳ ಜೊತೆಗೆ ಸಂಸ್ಕೃತವೂ ಪ್ರಥಮ ಭಾಷೆಯಾಗಿತ್ತು. ಪ್ರಾಥಮಿಕ ಶಾಲೆಗಳಲ್ಲಿ ಸಂಸ್ಕೃತವನ್ನು ಕಲಿಯುವ ವ್ಯವಸ್ಥೆ ಇರದಿದ್ದರೂ, ಪ್ರೌಢಶಾಲೆಗಳಲ್ಲಿ ಆ ಭಾಷೆಯನ್ನು ಮೊದಲ ಭಾಷೆಯಾಗಿ ಆರಿಸಿಕೊಂಡ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸದಿಂದ ಶಿಕ್ಷಣ ಪ್ರಾರಂಭವಾಗುತ್ತಿತ್ತು. ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಯು ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಆರಿಸಿಕೊಂಡಿದ್ದರೆ ತುಂಬಾ ಸುಲಭವಾದ ಪಾಠಗಳನ್ನು ಕಲಿತು, ಸಾಕಷ್ಟು ಹೆಚ್ಚು ಅಂಕಗಳನ್ನು ಪಡೆಯುತ್ತಿದ್ದ. ಅಲ್ಲದೇ, ವಿದ್ಯಾರ್ಥಿಗಳನ್ನು ಆಕರ್ಷಿಸುವ ದೃಷ್ಟಿಯಿಂದ ಸಂಸ್ಕೃತ ಅಧ್ಯಾಪಕರು ಧಾರಾಳವಾಗಿ ಅಂಕಗಳನ್ನು ಕೊಡುವ ರೀತಿಯಿತ್ತು. ಈಗಲೂ ಇದೆ. ಅಲ್ಲದೆ ಸಮಗ್ರ ಕರ್ನಾಟಕ ಕನ್ನಡ ನಾಡು ನುಡಿಯ ಬಗ್ಗೆ ವಿ.ಕೃ. ಗೋಕಾಕರು ವರದಿ ಸಲ್ಲಿಸಿ ಹೋರಾಟ ಮಾಡಿ ಕನ್ನಡ ನಾಡಿನ ಜನರನ್ನು ಜಾಗೃತಗೊಳಿಸಿದರು.

Digitised by Bharatavani, CIIL

**ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳು:**

ಇಲ್ಲಿ ಯಾವುದೇ ಒಂದು ಧರ್ಮದ ಪದರಿನಿಂದ ಅಥವಾ ವಾತಾವರಣದಿಂದ ಮುಕ್ತಗೊಂಡ ಮಾನವೀಯ ಮೌಲ್ಯಗಳ ಸಿದ್ಧಾಂತ ಇರುತ್ತದೆ. ಈ ಸಿದ್ಧಾಂತವು ಪರಿಪಕ್ವ ಜಾತ್ಯಾತೀತ (ನಿರಪೇಕ್ಷ) ಸಿದ್ಧಾಂತವಿದ್ದು, ಯಾವುದೇ ಒಂದು ಆಚರಣೆಯಲ್ಲಿರುವ ಧರ್ಮದ ನಂಬಿಕೆಯನ್ನು ಒಳಗೊಂಡಿರುವುದಿಲ್ಲ. ಈ ಶಿಕ್ಷಣದ ಸಿದ್ಧಾಂತವು ವಿಶಾಲ ರೂಪದಲ್ಲಿ ಸ್ವೀಕಾರಪಡೆಯಬೇಕು. ಈ ಸಿದ್ಧಾಂತವು ಪ್ರೌಢ ವಿದ್ಯಾರ್ಜನೆಯ, ನೈತಿಕ ಹಾಗೂ ಸ್ಫೂರ್ತಿದಾಯಕ ಶಿಕ್ಷಣದ ಅಡಿಪಾಯ ಅಥವಾ ತಳಹದಿ ಆಗಬಲ್ಲದು. ಈ ಸಿದ್ಧಾಂತವು ಜಾಗತಿಕ ದೃಷ್ಟಿಕೋನವನ್ನು ನೀಡುತ್ತದೆ.

ಈಗಿನ ದಿನಗಳಲ್ಲಿ ಪ್ರಚಲಿತವಿರುವ ಸಾಮಾನ್ಯ ಶಿಕ್ಷಣ ನೀತಿಯನ್ನು ಐದು ಸರಳ ಪರಿಕಲ್ಪನೆಗಳಲ್ಲಿ ತಿರುಳು ಬರುವಂತೆ ನೀಡಲಾಗಿದೆ.

1. **ಜ್ಞಾನ (ಅರಿವು):** ಜ್ಞಾನವು ಸತ್ಯ ಬೌದ್ಧಿಕವಾಗಿ ತಿಳಿಯುವ ವಾಸ್ತವತೆಯದಾಗಿದೆ.

2. **ಕೌಶಲ್ಯ :** ಕೌಶಲ್ಯವು ಶಿಕ್ಷಣದಲ್ಲಿ ಪರಿಗಣಿಸುವ ಮುಖ್ಯ ಪರಿಕಲ್ಪನೆ. ಕೌಶಲ್ಯದ ಮುಖಗಳು ಹಲವಾರು ಕೌಶಲ್ಯವು ವೈಯಕ್ತಿಕ ಆರೋಗ್ಯದಿಂದ ವೃತ್ತಿ ಹಾಗೂ ಪ್ರೌಢ-ವಿದ್ಯಾರ್ಜನೆಯ ಶಿಸ್ತನ್ನು ಜೀರ್ಣಿಸಿಕೊಳ್ಳುವವರೆಗೂ ವಿಸ್ತರಿಸಿದೆ. ನಿಜವಾಗಿ ಅದು ನೈತಿಕ ಕೌಶಲ್ಯವೇ.

3. **ಶಾಂತಿ:** 'ಶಾಂತಿ' ಎಂಬುದು 'ಮಾನಸಿಕ ಸಮತೋಲನ' ಎಂಬುದಾಗಿ ಶಿಕ್ಷಣ ನೀತಿ ನೀಡುತ್ತದೆ. ಇದು ಶಿಕ್ಷಣವು ನೀಡಬೇಕಾದ ಮಹತ್ವದ ಅಂಶಗಳಲ್ಲಿ ಒಂದು. ಶಾಂತಿಯು ಶಿಕ್ಷಣದ ಶ್ರೇಷ್ಠ ಕೊಡುಗೆಗಳಲ್ಲಿ ಒಂದಾಗಿದೆ. ಇದು ಶಿಕ್ಷಣದಲ್ಲಿ ಅಲ್ಪಭಿನ್ನಾಭಿಪ್ರಾಯಗಳನ್ನು ದೂರಮಾಡಿ, ವಿರೋಧಾಭಾಸಗಳನ್ನು ನಿವಾರಿಸಿ ವಿಚಾರಗಳ ಸಂಶ್ಲೇಷಣೆ ಉಂಟುಮಾಡುತ್ತದೆ. ಮಾನಸಿಕ ಸಂತುಲನೆಯು, ಒಬ್ಬ ವ್ಯಕ್ತಿಯ ಘನತೆ ಹಾಗೂ ಸಂಸ್ಕಾರದ ಸಂಕೇತ. ಶಾಂತ ಚಿತ್ತ, ಸಮತೋಲನದಿಂದ ವಿವಿಧ ಅಭಿಪ್ರಾಯಗಳನ್ನು ಪರೀಕ್ಷಿಸಿ ಪುನ: ಪರಿಶೀಲಿಸಬಹುದು.

4. **ಪರಿಸರ ಪ್ರಜ್ಞೆ :** ಸಮಾಜದ ಬಗ್ಗೆ ಜಾಗೃತಿ ಅಥವಾ ಸುತ್ತಲಿನ ಪರಿಸರದ ತಿಳುವಳಿಕೆಯು ಶಿಕ್ಷಣ ನೀತಿಯ ನಾಲ್ಕನೆಯ ಪರಿಕಲ್ಪನೆ. ತಿಳಿವಳಿಕೆಯು ವಿಚಾರ ಹಾಗೂ ಅನಿಸಿಕೆಗಳ ಸಮ್ಮಿಶ್ರಣವಾಗಿದ್ದು, ವಿವೇಕಯುಕ್ತ ನಿಲುವು ತಳೆಯಲು ಸಹಾಯ ಮಾಡುತ್ತದೆ. ಈ ಪ್ರಜ್ಞೆಯಿಂದಲೇ ಮನುಷ್ಯ ಉತ್ತಮ ಪರಿಸರ, ಉನ್ನತ-ಸಮಾಜ, ಸಾಮಾಜಿಕ ಸ್ಥಾನಮಾನದ ಪ್ರಕ್ರಿಯಿಸುತ್ತಾನೆ. ಇದು ಶಿಕ್ಷಣದ ಸೂಕ್ಷ್ಮ ಪರಿಕಲ್ಪನೆಗಳಲ್ಲಿ ಒಂದಾಗಿದೆ.

5. **ಸೌಜನ್ಯತೆ (ವಿನಯತೆ) :** ಇಂದಿನ ನವ ಪೀಳಿಗೆಯ ಮನುಷ್ಯನನ್ನು ತಿಳಿಯುವುದು, ವ್ಯಾಖ್ಯಾನಿಸುವುದು ಆತನ ಸೌಜನ್ಯದಿಂದಲೇ. ಸುಶಿಕ್ಷಿತ ವ್ಯಕ್ತಿಯನ್ನು ಸೌಜನ್ಯತೆಯಿಂದಲೇ ಗುರುತಿಸಬಹುದು. ಆದ ಕಾರಣ ಐದನೇ ಪರಿಕಲ್ಪನೆಯೂ ನೀತಿಯ ಭದ್ರ ಬುನಾದಿ ಆಗಿದೆ.

ಮೇಲೆ ಕಾಣಸಿದ ಐದು ತತ್ವಗಳು, ಶಿಕ್ಷಣ ನೀತಿಯ ಭದ್ರ ಬುನಾದಿ ಅಥವಾ ಅಡಿಪಾಯ. ಜ್ಞಾನ, ಕೌಶಲ್ಯ, ಶಾಂತಿ, ಪರಿಸರಜ್ಞಾನ (ಸಮಾಜದ ಅರಿವು) ಹಾಗೂ ಸೌಜನ್ಯತೆ ಶಿಕ್ಷಣ ರಂಗದ ಉತ್ಕೃಷ್ಟ ಗುಣಗಳಾಗಿವೆ. ನಮ್ಮ ಸಮಾಜದಲ್ಲಿ ಮಕ್ಕಳು ಪ್ರಾಥಮಿಕ -ಶಿಕ್ಷಣದಿಂದ ವಿಶ್ವವಿದ್ಯಾಲಯದ ಶಿಕ್ಷಣದವರೆಗೆ ಈ ಗುಣಗಳನ್ನು ಮನೋಗತಮಾಡಿಕೊಳ್ಳಬೇಕು.

**ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಶಿಕ್ಷಕ:**

**ಶ್ರೇಷ್ಠ ಶಿಕ್ಷಕನ ಅಧ್ಯಯನಶೀಲತೆ**

ಒಳ್ಳೆಯ ಮತ್ತು ಪ್ರಚೋದನೆಯನ್ನುಂಟುಮಾಡುವ ಶಿಕ್ಷಕರನ್ನು ಶೈಕ್ಷಣಿಕ ಪ್ರಕ್ರಿಯೆಯ 'ಆತ್ಮ' ಎಂದು ಹೇಳಬಹುದು. ಪ್ರಾಚೀನ ಸಿದ್ಧಾಂತಗಳನ್ನು ಒಬ್ಬ ಒಳ್ಳೆಯ ಶಿಕ್ಷಕ ಮಾತ್ರ ಜೀವತುಂಬಿ ವಿದ್ಯಾರ್ಥಿಗಳಲ್ಲಿ ಆಲೋಚಿಸುವಂತೆ ಮಾಡಬಲ್ಲ. ಅಲ್ಲದೆ ಯಾವುದೇ ವಿಷಯವನ್ನೂ ವಿದ್ಯಾರ್ಥಿಯ ಮನಸ್ಸಿಗೆ ನಾಟಿಸಬಲ್ಲವನಾಗಿರುತ್ತಾನೆ.

'ಶೈಕ್ಷಣಿಕ ಮೂಲ ಪ್ರವೃತ್ತಿ ಕಲಿಯುವುದಲ್ಲಿದೆ. ಆದರೆ, ಕಲಿಸುವುದರಲ್ಲಿ ಅಲ್ಲ. ಆಧುನಿಕ ಕಾಲದಲ್ಲಿ ರೇಡಿಯೋ, ದೂರದರ್ಶನ, ಗಣಕಯಂತ್ರಗಳು ಅಧ್ಯಯನದ ವಿಷಯಗಳನ್ನು ವ್ಯಕ್ತಿಯ ಅಥವಾ ವಿದ್ಯಾರ್ಥಿಯ ಮನೆಯ ಬಾಗಿಲಿಗೆ ತಂದಿವೆ. ಅವನಿಗೆ ಬೇಕಾದ ಎಲ್ಲಾ ಕಲಿಕೆಯ ಉಪಕರಣಗಳು ಇಂದು ಲಭ್ಯವಾಗಿವೆ. ಹೀಗಿದ್ದು ಅವನು ಶಿಕ್ಷಕ ಅಥವಾ ಟ್ಯೂಟರ್ ಅಥವಾ ಪ್ರೊಫೆಸರ್‌ನನ್ನು ಏಕೆ ಅವಲಂಬಿಸಬೇಕು.? ಕುದುರೆಯನ್ನು ನೀರಿರುವಲ್ಲಿಗೆ ತೆಗೆದುಕೊಂಡು ಹೋಗಬಹುದು. ಆದರೆ, ಯಾರೂ ಅದರ ಬಾಯಿಯಲ್ಲಿ ನೀರನ್ನು ಹಾಕಲಾರರು."

ಆದರೆ, ಶಿಕ್ಷಕನೆಂಬುವವನು ಬೌದ್ಧಿಕ ವಿಷಯಗಳನ್ನು ಮಾರಾಟಮಾಡುವವನಲ್ಲ. ವಸ್ತುಸಂಗ್ರಹಾಲಯದ ನಿರ್ದೇಶಕನೂ ಅಲ್ಲ. ಅವನು ತಾನು ಪಡೆದ ಜ್ಞಾನ ಅನುಭವಗಳನ್ನು ವಿವೇಚನೆ ಮಾಡಿಸಿ ವಿದ್ಯಾರ್ಥಿಗಳಿಗೆ ನೀಡುತ್ತಾನೆ. ಚರ್ಚೆ, ಅವಗಾಹನೆ, ಶಿಷ್ಯನ ಮನ:ಪಟಲದಲ್ಲಿ ವಿಧಾನಗಳಾಗಿ ಉಳಿಯುವಂತೆ ಮಾಡುತ್ತಾನೆ. ಇಂಥ ಶಿಕ್ಷಕನಿಗೆ ಜೀವನವೇ ಕಲಿಯುವ, ಕಲಿಸುವ ಮಾರ್ಗ. ಅದೇ ಜ್ಞಾನದ ಆಗರ. ಕಲಿಸುವವ ಅಧ್ಯಯನಶೀಲ ಜೀವನ ತನ್ನದಾಗಿಸಿಕೊಳ್ಳಬೇಕು.

**ಶಿಕ್ಷಕನ ನಾಲ್ಕು ಯೋಗ್ಯತೆಗಳು**

ಗೋಕಾಕರ ಪ್ರಕಾರ ಶಿಕ್ಷಕನಲ್ಲಿರಬೇಕಾದ ನಾಲ್ಕು ಯೋಗ್ಯತೆಗಳನ್ನು ಈ ಕೆಳಗಿನಂತೆ ಉದ್ಧರಿಸಿದ್ದಾರೆ.

**ಅಭಿವ್ಯಕ್ತಿ (ವಾಕ್ ಚಾತುರ್ಯ):** ಶಿಕ್ಷಕನ ಮಾತು ನೇರವಾಗಿ

Digitised by Bharatavani, CIIL

ವಿದ್ಯಾರ್ಥಿಗೆ ಅರ್ಥವಾಗುವಂತಿರಬೇಕು. ಸರಿಯಾದ ಪದಬಳಕೆ, ಸರಳವಾಕ್ಯ, ವೈಚಾರಿಕ ತಿರುಳು, ವಿದ್ಯಾರ್ಥಿಗಳ ಹೃದಯ ಮುಟ್ಟುವಂತಹ ಅಭಿವ್ಯಕ್ತಿ ಶಿಕ್ಷಕನಿಗೆ ಅಗತ್ಯ. ಶಿಕ್ಷಕನು ಕಲಿಸುವುದನ್ನು ಪ್ರೀತಿಸುತ್ತಾನೆ. ಆ ಅವಧಿಯಲ್ಲಿ ತನ್ನನ್ನು ತಾನು ಮರೆಯುತ್ತಾನೆ. ಬೋಧನೆ ಹಾಗೂ ಅಭಿವ್ಯಕ್ತಿಯಲ್ಲಿ ಒಂದಾಗುತ್ತಾನೆ. ಬೋಧನಾ ಅವಧಿ ಜೀವನದ ಅತ್ಯುತ್ತಮ ಘಳಿಗೆಯಾಗಿರುತ್ತದೆ. ಇದು ಎಳೆಯರಲ್ಲಿ ಎಳೆಯನಾಗಿರುವಂತೆ ಅನುಭವ ನೀಡುತ್ತದೆ. ಬೋಧನೆಯು ಸ್ಫೂರ್ತಿಕೊಡುವ, ಅವರ ಅಂತರಂಗ ಬೆಳಗಿಸುವ ತಮ್ಮನ್ನು ಗುರುತಿಸಿಕೊಳ್ಳುವಂತೆ ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು.

**ವಸ್ತುಸಂಗ್ರಹಣ (ವಿಷಯಪ್ರಭುತ್ವ):** ಕಲಿಸುವ ವಿಷಯದ ಮೇಲೆ ಪ್ರಭುತ್ವ ಸಾಧನೆ ಬಹುಮುಖ್ಯ. ಸ್ಫಟಿಕದಂತೆ, ಶುದ್ಧ ಜಲದಂತೆ, ಹಸಿಹಾಲಿನಂತೆ, ಸಂಗ್ರಹಿತ ಪ್ರಭುತ್ವ ಶಿಕ್ಷಕನಿಗಿರಬೇಕು.

**ಶಿಕ್ಷಕ– ವಿದ್ಯಾರ್ಥಿ ಸಂಬಂಧ :** ಚಿಂತನೆ, ಅಂತ:ದೃಷ್ಟಿ, ಶ್ರೇಷ್ಠ ಕ್ಷಣಗಳ ಸೃಷ್ಠಿಯಲ್ಲಿ ತೊಡಗಿದ ಶಿಕ್ಷಕ–ವಿದ್ಯಾರ್ಥಿ ಸಂಬಂಧ ಅನನ್ಯವಾಗಿರುವುದು. ಸಂತೃಪ್ತಿಯುಂಟುಮಾಡುವುದು. ಶಿಕ್ಷಕ ವಿದ್ಯಾರ್ಥಿಯನ್ನು ಪ್ರೀತಿಸಿದಾಗ ಆ ವಿದ್ಯಾರ್ಥಿಯು ಅವನು ಕಲಿಸುವ ವಿಷಯದ ಮೇಲೆ ಅಷ್ಟೇ ಪ್ರೇಮವನ್ನು ವ್ಯಕ್ತಪಡಿಸುತ್ತಾನೆ. ಇದರಿಂದ ವಿಷಯದ ಕಾಠಿಣ್ಯತೆ ಶಮನವಾಗುತ್ತದೆ.

**ಧ್ವನಿ ಹಾವಭಾವ :** ಪಾಠ ನೀಡುವ ಮತ್ತು ನಡೆಯುವ ಪರಸ್ಪರ ಕ್ರಿಯೆಯು, ಧ್ವನಿಮಾಧುರ್ಯ, ಹಾವಭಾವ, ಪಠ್ಯಕ್ರಮಕ್ಕನುಗುಣವಾಗಿ ಏರಿಳಿತ ಹೊಂದಿರಬೇಕು.

**ಇಂದಿನ ಶಿಕ್ಷಣದ ಬದಲಾವಣೆಯ ವಿಚಾರ :** ಗೋಕಾಕರು ಪ್ರಸ್ತುತ ಸಮಾಜದ ವಾಸ್ತವ ಬದುಕಿಗೆ ಹೊಂದುವಂತೆ ವಿಚಾರಗಳನ್ನು **ಸಹವೀರ್‍ಯಂ ಕರವಾವಹೈ!** ಎಂಬ ತತ್ವದಲ್ಲಿ ಲೀನವಾಗಿಸಿದ್ದಾರೆ. ಸಾಮೂಹಿಕ ದೇಹ ಶ್ರಮದಿಂದ ಆರೋಗ್ಯವನ್ನು ಹೆಚ್ಚಿಸಿಕೊಂಡು ಸ್ನೇಹವನ್ನು, ಐಕ್ಯವನ್ನು ಬೆಳೆಸಿ ಬುದ್ಧ ವಿಕಾಸವನ್ನು ಹೊಂದುವುದು.

ವಿವಿಧ ಹಂತದ ಶಿಕ್ಷಣ ಸಂಸ್ಥೆಯ ಈ ವ್ಯವಸ್ಥೆಯಲ್ಲಿ ಶಿಶು ಶಿಕ್ಷಣ ಕೇಂದ್ರ, ಪ್ರಾಥಮಿಕ, ಮಾಧ್ಯಮಿಕ ಕೇಂದ್ರಗಳು, ಉಚ್ಚ ಶಿಕ್ಷಣವನ್ನು ಕೊಡುವ ವಿವಿಧ ವಿಷಯಗಳ ಕೇಂದ್ರಗಳು, ಒಂದು ವಿಶ್ವವಿದ್ಯಾಲಯವನ್ನೇ ಪೂರ್ಣ ಜೀವನ ಕೇಂದ್ರದ ಅಂಗವಾಗಿ ಕಟ್ಟಬೇಕಾಗಿತ್ತು ಎಂಬ ವಿಚಾರ ಪೂರ್ಣ ಆಲೋಚನೆ ರವೀಂದ್ರನಾಥ ಠಾಗೋರರ 'ಶಾಂತಿನಿಕೇತನ' ಹಾಗೂ 'ವಿಶ್ವಭಾರತಿ" ಸಂಸ್ಥೆಗಳ ಮಾದರಿಯನ್ನೇ ಹೋಲುವ ಗೋಕಾಕರ ಸಮರಸವೇ ಜೀವನ ಕಾದಂಬರಿಯಲ್ಲಿ ಮೂಡಿಬಂದಿವೆ.

**ಆಧ್ಯಾತ್ಮಿಕ ಶಿಕ್ಷಣ ಅಂಶ:** ಸಾಮಾನ್ಯ ಶಿಕ್ಷಣಕ್ಕೆ ಆಧ್ಯಾತ್ಮಿಕ ಶಿಕ್ಷಣದ ಅಗತ್ಯತೆಯೂ ಕೂಡ ಇದೆ. ಆಧ್ಯಾತ್ಮಿಕ ಶಿಕ್ಷಣಕ್ಕೆ ಭಾರತವು ತಾಯಿ ಬೇರಿನಂತೆ ಪಸರಿಸಿದೆ. ಎಲ್ಲರಿಗೂ ಒಂದಿಲ್ಲೊಂದು ರೀತಿಯಿಂದ ಆಧ್ಯಾತ್ಮಿಕ ಶಿಕ್ಷಣದ ಸಂಸ್ಕಾರವೂ ಅಗತ್ಯವೆಂದು ಹೇಳುತ್ತಾರೆ. **ತೇಜಸ್ವಿನಾವಧೀತ ಮಸ್ತು!** ಎಂಬ ತತ್ವವೂ **ಸಹಜೀವನದಿಂದ, ಸಹಭೋಗದಿಂದ, ಸಹವೀರ್‍ಯದಿಂದ ಪರಿಶುದ್ಧರಾದವರು ತೇಜಸ್ವಿಗಳಾಗುತ್ತಾರೆ** ಎಂಬ ವಿಚಾರ ಗೋಕಾಕರಿಂದ ವ್ಯಕ್ತವಾಗಿದೆ.

ಪೂರ್ಣ ಜೀವನದ ಕೇಂದ್ರದಲ್ಲಿ ವಿಜ್ಞಾನ ಪ್ರಯೋಗ, ಸಾಧನೆಯ ವಿಚಾರ, ಧಾರ್ಮಿಕ– ಸಾಮಾಜಿಕ ಕ್ಷೇತ್ರಕ್ಕೆ ಮಹತ್ವ, ಸಾಮರಸ್ಯದ ಹಿರಿಮೆ, ಮೂಲ ಶಿಕ್ಷಣದ ಜಾಗೃತಿ ಮುಂತಾದ ವಿಚಾರಗಳನ್ನೊಳಗೊಂಡ ಆಶ್ರಮ ಶಿಕ್ಷಣದ ಮನೋಧರ್ಮದ ವ್ಯವಸ್ಥೆಯನ್ನು ಗೋಕಾಕರು ಸಂಪೂರ್ಣ ಸಮನ್ವಯ ದೃಷ್ಟಿಯಿಂದ ವಿವರಣೆ ನೀಡಿ, ತಮ್ಮ ಅನಿಸಿಕೆಗಳನ್ನು ಕಾದಂಬರಿಯ ನಾಯಕನ ಪಾತ್ರದ ಮೂಲಕ ಬಿತ್ತರಿಸಿರುವುದನ್ನು ನಾವು ಕಾಣುತ್ತೇವೆ.

ಪೂರ್ಣ ಜೀವನ ಕೇಂದ್ರದ ಕಲ್ಪನೆಯ ಚಟುವಟಿಕೆಗಳು **ಓ ಶಾಂತಿ: ಶಾಂತಿ: ಶಾಂತಿ:!** ಸೂತ್ರದಿಂದ ಮುಕ್ತಾಯವಾಗುತ್ತವೆ.

ಗೋಕಾಕರ ಈ ಪೂರ್ಣ ಜೀವನ ಕೇಂದ್ರ ವ್ಯವಸ್ಥೆಯು ಭಾರತೀಯ ಪರಂಪರಾಗತ ಆಶ್ರಮ ಶಿಕ್ಷಣದ ಆಧುನಿಕ ಪರಿಕಲ್ಪನೆಯ ವಿಚಾರಗಳಿಂದ ಕೂಡಿದ್ದು, ಅತ್ಯುತ್ತಮವಾದ ಸನ್ನಿವೇಶದೊಂದಿಗೆ ವಿಚಾರಗಳು ಹೆಣೆಯಲ್ಪಟ್ಟಿದೆ. ಈ ಮಾದರಿಯನ್ನು ನೋಡಿದಾಗ ಅವರಲ್ಲಿದ್ದ ಆಶ್ರಮ ಶಿಕ್ಷಣ ಧರ್ಮದ ಪರಿಕಲ್ಪನೆ, ಅರವಿಂದರ ಹಾಗೂ ಶ್ರೀ ಸತ್ಯಸಾಯಿಬಾಬಾರ ಪ್ರಭಾವದ ಪ್ರೇರಣೆಯಿಂದ ಹೊರಬಂದು ತಮ್ಮಲ್ಲಿದ್ದ ಪೂರ್ಣ ಜೀವನ ಕೇಂದ್ರದ ಪರಿಕಲ್ಪನೆಯನ್ನು ಬಾಬಾರ ಆಮಂತ್ರಣದ ಮೇರೆಗೆ ಅವರ ಸಂಸ್ಥೆಗಳಲ್ಲಿ ತಮ್ಮ ಸೇವಾ ನಿವೃತ್ತಿಯಾದ ನಂತರ ಸಾಕಾರಗೊಳಿಸಿಕೊಂಡಿದ್ದಾರೆ ಎಂಬುದು ಸುತ್ಯ.

ಹೀಗೆ ವಿ.ಕೃ. ಗೋಕಾಕರು ಪ್ರವೃತ್ತಿಯಿಂದ ಸಾಹಿತಿಯಾದರೂ ಸೇವಾ ಕ್ಷೇತ್ರವೇ ಶಿಕ್ಷಣವಾಗಿರುವದರಿಂದ ವಿವಿಧ ಹಂತಗಳ ಶಿಕ್ಷಣ, ಶಿಕ್ಷಣದ ತಾತ್ವಿಕ ಚಿಂತನೆ ಮತ್ತು ಶಿಕ್ಷಣ ವ್ಯವಸ್ಥೆಯ ಸುಧಾರಣೆ ಕುರಿತು ತಮ್ಮ ಅಮೂಲ್ಯವಾದ ವಿಚಾರಗಳನ್ನು ಕನ್ನಡ ಮತ್ತು ಇಂಗ್ಲಿಷ್ ಕಾವ್ಯ ಕೃತಿಗಳಲ್ಲಿ , ಉಪನ್ಯಾಸ, ವಿಚಾರ ಸಂಕಿರಣ ಮತ್ತು ಶೈಕ್ಷಣಿಕ ಪ್ರಯೋಗಗಳ ಮೂಲಕವಾಗಿ ತೋರಿಸಿಕೊಟ್ಟಿದ್ದಾರೆ. ಶಿಕ್ಷಣ ಕ್ಷೇತ್ರದ ಸಲುವಾಗಿ ಹಗಲಿರುಳು ತಮ್ಮ ಜೀವನದ ಉಸಿರಿರುವವರೆಗೂ ಶ್ರಮಿಸಿದ ಸೌಜನ್ಯದ ಸಾಕಾರ ಮೂರ್ತಿಯಾಗಿದ್ದಾರೆ.

**–ಡಾ. ಸುರೇಶ ಎಸ್. ಸಮ್ಮಸಗಿ**

## ಡ್ರಗ್ ಶಿಕ್ಷಣ

ಇಂದಿನ ಪ್ರಪಂಚದಲ್ಲಿ ಹದಿಹರೆಯದವರು ತುಂಬ ಗೊಂದಲಕ್ಕೊಳಗಾಗಿದ್ದಾರೆ. ಅವರು ಎಲ್ಲ ಬಂಧನಗಳಿಂದ ಮುಕ್ತರಾಗಲು ಬಯಸುತ್ತಿದ್ದಾರೆ. ಅದು ಕುಟುಂಬ, ಸಮಾಜ ಅಥವಾ ಪರಂಪರೆ ಯಾವುದಾದರೂ ಆಗಿರಬಹುದು. ಸಂಕುಚಿತಗೊಳ್ಳುತ್ತಿರುವ ಜಾಗತಿಕ ಪರಿಧಿಯಲ್ಲಿ ಸಾಂಸ್ಕೃತಿಕ

Digitised by Bharatavani, CIIL

ಪರಂಪರೆಯ ಮೇಲಿನ ಹೆಮ್ಮೆ ತನ್ನ ಮಹತ್ವವನ್ನು ಕಳೆದುಕೊಂಡಿದೆ. ಬಹುಮಾಧ್ಯಮ ಸಂವಹನ ವ್ಯವಸ್ಥೆಯ ಮೂಲಕ ದೊರೆಯುವ ತೆರೆದಿಡಲ್ಪಡುವಿಕೆ ರಾತ್ರೋರಾತ್ರಿ ತಲೆಮಾರುಗಳ ನಡುವಿನ ಅಂತರವನ್ನು ಹೆಚ್ಚಿಸಿದೆ. ಹದಿಹರೆಯದವರು ತಮಗೆ ಆಕರ್ಷಕ ಎನಿಸುವಂತಹ ಸಂಗತಿಗಳಿಗೆ ಆತುರಾತುರವಾಗಿ ಮುಗಿಬಿದ್ದಿದ್ದಾರೆ. ವಯಸ್ಕರು ವೈಚಾರಿಕತೆಯ ಮೌಲ್ಯವನ್ನು ಹಾಗೂ ಕುರುಡಾಗಿ ಆಲೋಚನೆಗಳನ್ನು ಎರವಲು ಪಡೆಯುವುದರಿಂದ ಉಂಟಾಗುವ ಅಪಾಯಗಳನ್ನು ತೋರುವಲ್ಲಿ ತುಂಬ 'ಅಸಹಾಯಕರಾಗಿ', ತುಂಬ 'ನಿಧಾನ'ದ ವರ್ತನೆ ತೋರುತ್ತಿದ್ದಾರೆ.

ಭಾರತದಲ್ಲಿ ಹದಿಹರೆಯದವರು ಹಾಗೂ ಯುವಕರು 'ಮೌಲ್ಯ ಬಿಕ್ಕಟ್ಟಿ'ನ ನಡುವೆ ಇದ್ದಾರೆ. ಹಿಂದಿನ ಪದ್ಧತಿಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿದ್ದು, ಒಟ್ಟಾರೆಯಾಗಿ ಪಾಶ್ಚಾತ್ಯ ಮೌಲ್ಯಗಳ ಅಳವಡಿಕೆ ಎನ್ನುವುದು ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ ಆತ್ಮಹತ್ಯಾತ್ಮಕ. ಇಂದು ಬಹುಸಂಖ್ಯಾತ ಹದಿಹರೆಯದವರು/ಯುವಕರಿಗೆ ಯಾವುದೇ ಗುರಿ ಇಲ್ಲದಂತಾಗಿದೆ.

ಅವರು ಅಸಾಧಾರಣವಾದ ಆಂತರಿಕ ಹಾಗೂ ಬಾಹ್ಯ ಒತ್ತಡದಲ್ಲಿದ್ದಾರೆ. ದಿಕ್ಕಿಲ್ಲದ ಸ್ಥಿತಿಯಲ್ಲಿ ಒಂದು ಉದ್ದೇಶ ಅಥವಾ ಅರ್ಥಪೂರ್ಣವಾದ ಜೀವನದ ಗೈರುಹಾಜರಿಯಲ್ಲಿ ಸ್ಪರ್ಧಾತ್ಮಕವಾದ ಜಗತ್ತಿನ ಸಂದರ್ಭದಲ್ಲಿ ಅವನು/ಅವಳು ಹೊಂದಿಕೊಳ್ಳಲಾರದ ಸ್ಥಿತಿಯಲ್ಲಿದ್ದಾರೆ. ಇದಕ್ಕೆ 'ಡ್ರಗ್ಸ್' ತುಂಬ ಸುಲಭವಾದ ಹಾಗೂ ತುಂಬ ಉತ್ತಮವಾದ ಮತ್ತೊಂದು ಪರ್ಯಾಯವಾಗಿದೆ. ಡ್ರಗ್ಸ್ ದಂಧೆಕೋರರು ಈಗಾಗಲೇ ಹದಿಹರೆಯದವರನ್ನು ಡ್ರಗ್ಸ್ ಕೂಪಕ್ಕೆ ತಳ್ಳಿದ್ದಾರೆ.

**ಶಾಲಾ ವ್ಯವಸ್ಥೆಯಲ್ಲಿ ಡ್ರಗ್ ದುರ್ಬಳಕೆಯ ಇಂದಿನ ಚಿತ್ರಣ**

ಮಾದಕ ವಸ್ತು ಡ್ರಗ್ ಭೂತವು ಭಾರತೀಯ ಶಾಲಾ ವ್ಯವಸ್ಥೆಯನ್ನು ಕಂಗೆಡಿಸಿದ್ದು, ಇದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಸಲಾಗಿರುವ ಹಲವಾರು ಸಂಶೋಧನೆಗಳು ಹಾಗೂ ಸಮೀಕ್ಷೆಗಳಿಂದ ವಿಶದವಾಗಿದೆ. ಇದನ್ನು ಕಡೆಗಣಿಸಿದಲ್ಲಿ ಈ ಪಿಡುಗು ಹತೋಟಿ ಮೀರಲಿದೆ. ವಿಶ್ವಸಂಸ್ಥೆಯು 1990ನ್ನು ಮಾದಕ ದ್ರವ್ಯ ಸೇವನೆಯ ವಿರುದ್ಧದ ವರ್ಷವನ್ನಾಗಿ ಘೋಷಿಸಿದೆ. ಇದಕ್ಕೂ ಮುಂಚೆ, ಈ ಮಾದಕ ವಸ್ತುವಿನ ಪಿಡುಗು ಕೇವಲ ಪಶ್ಚಿಮದ ಶ್ರೀಮಂತ ದೇಶಗಳಿಗಷ್ಟೇ ಸೀಮಿತವಾಗಿತ್ತು. ಈಗ ಅದು ಅಭಿವೃದ್ಧಿಶೀಲ ದೇಶಗಳಿಗೂ ತನ್ನ ಕೆನ್ನಾಲಗೆಯನ್ನು ಚಾಚಿದ್ದು ವಿಶ್ವದ 40 ದಶಲಕ್ಷ ಮಾದಕ ವ್ಯಸನಿಗಳಲ್ಲಿ ಶೇ. 20ರಷ್ಟಾಗಿದೆ. ಭಾರತದಲ್ಲಿ, ಮಣಿಪುರವು ಅತ್ಯಂತ ಭೀಕರ ಪಿಡುಗಿಗೆ ತುತ್ತಾಗಿರುವ ರಾಜ್ಯವಾಗಿದೆ. ಇದಲ್ಲದೆ, ಈ ಡ್ರಗ್ ದುರಾಚಾರವು ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಚಂಡೀಘಢ್ ಹಾಗೂ ಅನೇಕ ಗ್ರಾಮೀಣ ಪ್ರದೇಶಗಳಿಗೂ ಹಬ್ಬಿದೆ. ಈ ಲೇಖಕನ ಇತ್ತೀಚಿನ 'ದೆಹಲಿ, ಹರಿಯಾಣ ಮತ್ತು ಚಂಡೀಘಢ್‌ನ ಶಾಲೆಗಳಲ್ಲಿ ಡ್ರಗ್ ವ್ಯಸನದ ಸಮಸ್ಯೆ' ಕುರಿತ ಅಧ್ಯಯನವು (ಸೀನಿಯರ್ ಫೆಲೊ, ಐಸಿಎಸ್‌ಎಸ್‌ಆರ್ ಯೋಜನೆ, 2001) ಶಾಲಾ ವಿದ್ಯಾರ್ಥಿಗಳಲ್ಲಿ ಡ್ರಗ್ ದುರಾಚಾರದ ಸಮಸ್ಯೆಯು ಇದ್ದು, ಇದು ಹೆಚ್ಚಾಗುತ್ತಲೇ ಇದೆ ಎಂದು ಸೂಚಿಸುತ್ತದೆ.

**ಮಾದಕ ವಸ್ತುಗಳಿಗೆ ಇತ್ತೀಚಿನ ಸೇರ್ಪಡೆ**

ಹೆರಾಯಿನ್, ಅಫೀಮು, ಉಗುರು ಬಣ್ಣ – ದ್ರಾವಕಗಳು, ಫೋಟೋಕಾಪಿಯರ್ ಕ್ಯಾನಬಿಸ್ (ಹಶಿಶ್ –ಸ್ಥಳೀಯ ಹೆಸರುಗಳೆಂದರೆ ಗಾಂಜಾ, ಚರಸ್, ಗ್ರಾಸ್, ಪಾಟ್, ಭಂಗ್) ಆಂಪತಿರೂಮ್ಸ್ (ಪೆಪ್ ಪಿಲ್ಸ್, ಬಾರ್ಬಿಟ್ಯೂರೇಟ್ಸ್, ಮಾರ್ಫೀನ್ ಮತ್ತು ಕೊಡೇನ್) ಕೊಕೇನ್, ಮಾರಿಜುವನ ಮತ್ತು ಎಸ್ಟಸಿ, ಇತ್ಯಾದಿಗಳು ಸಾಂಪ್ರದಾಯಿಕ ಹಾಗೂ ಹಳೆಯ ಮಾದಕ ವಸ್ತುಗಳಾಗಿವೆ.

ಮೇಲೆ ಹೆಸರಿಸಿದ ಸಾಂಪ್ರದಾಯಿಕ ಹಾಗೂ ಹಳೆಯ ಮಾದಕ ವಸ್ತುಗಳು ಈಗ ಥೈಲೆಂಡ್‌ನ 'ಹಾವು ಕಡಿತ' (ಸ್ನೇಕ್ ಬೈಟ್)ದಿಂದ ಆಕ್ರಮಿಸಲ್ಪಡುತ್ತಿವೆ. ಈ ಹೊಸ ಮಾದಕ ವಸ್ತುವು ಭಾರತದ ಮಹಾನಗರಗಳಲ್ಲಿ ದೊರೆಯುತ್ತದೆ. 'ನಿರ್ವಾಣ ಹುಡುಕುವವರು' ಸಣ್ಣ ಬಾಟಲಿಗಳಲ್ಲಿಡುವ ಎರಡು ಸೆ.ಮೀ. ನಿಂದ ಎರಡು ಇಂಚಿನ ಸಣ್ಣ ಉದ್ದದ ಹಾವುಗಳ ಹುಚ್ಚು ಹತ್ತಿಸಿಕೊಂಡಿದ್ದಾರೆ. ಈ ಹಾವು ವ್ಯಸನಿಯ ನಾಲಗೆಗೆ ಕಡಿಯುವುದರಿಂದ ಮತ್ತೇರುತ್ತದೆ. ಇದು ತಕ್ಷಣವೇ ಪರಿಣಾಮ ಬೀರುವುದಲ್ಲದೆ ಇದನ್ನು ಬೇರಾವುದೇ ಮಾದಕ ವಸ್ತುವಿಗೂ ಹೋಲಿಸಲಾಗದು. ಇತ್ತೀಚಿನ ಇತರೆ ಮಾದಕ ದ್ರವ್ಯಗಳೆಂದರೆ, ವಿದೇಶಿ ನಿರ್ಮಿತ 'ಸ್ವಿಸ್ ಮೇಡ್' ಹಾಗೂ 'ಕೊಲಂಬಿಯನ್ ಪ್ಯೂರ್' ಇವು ದೆಹಲಿ, ಮುಂಬೈ ಹಾಗೂ ಗೋವಾದಂತಹ ಬಹುತೇಕ ಕಾಸ್ಮೊಪಾಲಿಟನ್ ನಗರಗಳಲ್ಲಿ ದೊರೆಯುತ್ತವೆ. ಮಾದಕ ದ್ರವ್ಯಗಳಿಗೆ ಮತ್ತೊಂದು ಹೊಸ ಸೇರ್ಪಡೆಯೆಂದರೆ 'ಡಿಸೈನರ್ ಡ್ರಗ್ಸ್'. ಇದು ನಾಜೂಕಿನದಾಗಿದ್ದು, ಮೂಲ ವಸ್ತುವಿಗಿಂತ ಹೆಚ್ಚು ಶಕ್ತಿಶಾಲಿಯಾದುದಾಗಿದೆ.

**ಸಮಸ್ಯೆಗೆ ಸಂಭವನೀಯ ಪರಿಹಾರ**

ಸಾಂಸ್ಕೃತಿಕ ಮೌಲ್ಯಗಳು, ಪರಂಪರೆಯ ಬಗ್ಗೆ ಹೆಮ್ಮೆ ಮೂಡಿಸುವುದು ಹಾಗೂ ನಮ್ಮ ಶಿಕ್ಷಕರು ಹಾಗೂ ತಂದೆತಾಯಿಯರು ಮಾದರಿಯಾಗಿ ವರ್ತಿಸುವುದು ಸದ್ಯದ ಈ ವಿಷಾದಕಾರಿ ಸನ್ನಿವೇಶಕ್ಕೆ ಪರಿಹಾರವಾಗಿ ಕಾಣುತ್ತದೆ. ಶಾಲಾ ಪಠ್ಯಕ್ರಮವು ಮೌಲ್ಯಗಳ ಬಗ್ಗೆ ಸ್ಪಷ್ಟೀಕರಣವನ್ನು ಒಳಗೊಳ್ಳಬೇಕಾಗುತ್ತದೆ. ಇವೆಲ್ಲದಕ್ಕಿಂತ ಹೆಚ್ಚಿನ ಮೌಲ್ಯವೆಂದರೆ, ದೇವರ ಸೃಷ್ಟಿಯೆಡೆಗೆ ಪ್ರೀತಿ ಮತ್ತು ಗೌರವ. ಆಗ ಮಾತ್ರವೇ ಒಬ್ಬರ ಜೀವನ ಹಾಗೂ ಉದ್ದೇಶವನ್ನು ಕಂಡುಕೊಳ್ಳಲು ಸಾಧ್ಯ.

ಈ ಧ್ಯೇಯವನ್ನು ಸಾಧಿಸಲು, ಶಿಕ್ಷಕರು ಮಾದಕ ವ್ಯಸನಿಗಳಾಗಿರುವಂತಹ ವಿದ್ಯಾರ್ಥಿಗಳೆಡೆ ತಮ್ಮ ಪ್ರೀತಿ, ಅಕ್ಕರೆಯನ್ನು ತೋರಿಸಬೇಕು. ಪ್ರೀತಿಯನ್ನು ಹುಟ್ಟಿಸುವಂತಹ ಪ್ರೀತಿ, ಪ್ರೀತಿಯನ್ನು ಖಾತ್ರಿಗೊಳಿಸುವಂತಹ ಪ್ರೀತಿ, ಪ್ರೀತಿಯನ್ನು

Digitised by Bharatavani, CIIL

ವ್ಯಕ್ತಪಡಿಸುವಂತಹ ಪ್ರೀತಿಯನ್ನು ಇಂತಹ ವ್ಯಸನಿ–ವಿದ್ಯಾರ್ಥಿಗಳಿಗೆ ತೋರಿಸಬೇಕು. ಶಿಕ್ಷಕರು ಮಮತೆ, ಮೆಚ್ಚಿಕೆ, ತರ್ಕ, ಅರಿವುಗಳಿಂದ ವ್ಯಸನಿಗಳಾಗಿರುವಂತಹ ವಿದ್ಯಾರ್ಥಿಗಳ ಬಳಿ ಸಾರಬೇಕು. ತರಗತಿಯಲ್ಲಿ ವ್ಯಸನಿ–ವಿದ್ಯಾರ್ಥಿಗಳನ್ನು ಅಪಹಾಸ್ಯ ಮಾಡುವುದಾಗಲಿ, ಎಲ್ಲರಿಂದ ದೂರ ಮಾಡುವುದಾಗಲಿ ಮಾಡಬಾರದು.

ಸದಾ ಹೆಚ್ಚುತ್ತಿರುವ ಶಾಲಾ ಪಠ್ಯಕ್ರಮ ಹಾಗೂ ಶಾಲಾ ಜನಸಂಖ್ಯೆಯ ಭಾರಿ ಒತ್ತಡದ ನಡುವೆ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಗಮನ ನೀಡಲಾಗುವುದಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ. ಶಾಲೆಗಳೆಂದರೆ ನಾಲ್ಕು ಗೋಡೆಗಳಿರದ ಜೈಲು ಎಂದು ಕರೆಯದಂತಾಗದಿರಲು ಪಠ್ಯಕ್ರಮ ವಿತರಣೆಯನ್ನು ಸೂಕ್ತ ರೀತಿಯಲ್ಲಿ ಮಾರ್ಪಾಡುಗೊಳಿಸಬೇಕು ಎಂಬ ಅಗತ್ಯವನ್ನು ಒತ್ತಿ ಹೇಳುತ್ತದೆ. ಬೋಧನೆ/ಕಲಿಕೆಯ ವಾತಾವರಣವು ವಿದ್ಯಾರ್ಥಿಗಳ ಗುಣಾತ್ಮಕ ಸ್ವಚಿತ್ರಣವನ್ನು ಅಭಿವೃದ್ಧಿಗೊಳಿಸುವುದಕ್ಕೆ ಪೂರಕವಾಗಿರಬೇಕು. ಇದಕ್ಕಿಂತ ಹೆಚ್ಚಾಗಿ, ಪಠ್ಯಕ್ರಮವು ಪ್ರತಿ ವಿದ್ಯಾರ್ಥಿಯೂ ನಿರಂತರವಾಗಿ ಪ್ರಗತಿ ಪಥದಲ್ಲಿ ಮುನ್ನಡೆದಿದ್ದಾನೆ ಎಂಬುದನ್ನು ಖಾತ್ರಿಪಡಿಸಬೇಕು. ಶಿಕ್ಷಕರು ವ್ಯಸನಿ ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂಬಂಧ ಹೊಂದಿರಬೇಕು.

**ತಡೆಗಟ್ಟುವ ಕಾರ್ಯತಂತ್ರಗಳು**

ಶಾಲೆಗಳಲ್ಲಿ ಡ್ರಗ್ ಬಳಕೆ ತಡೆಗಟ್ಟಲು ನಾವು ಕೆಲವು ಕಾರ್ಯ ಸಮರ್ಥ ಹಾಗೂ ಕಾರ್ಯಸಾಧ್ಯವಾದ ತಂತ್ರಗಳನ್ನು ರೂಪಿಸಬೇಕು. ಭಾರತ ಸರಕಾರ ಹಾಗೂ ಎನ್‌ಜಿಒ ಗಳು ಈ ದಿಸೆಯಲ್ಲಿ ಪ್ರಶಂಸನೀಯ ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ, ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆಗೆ ಸಾಕಷ್ಟು ಅವಕಾಶವಿದೆ. ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದ್ದು, ಶಿಕ್ಷಣ ತಜ್ಞರಿಗೆ ಪರಿಚಯ ಕಾರ್ಯಕ್ರಮಗಳನ್ನು ನಡೆಸಲು ಸಹ ಮುಂದಾಗಿದೆ. ಹಾಗೆಯೇ, ಶಾಲಾ ಪಠ್ಯಕ್ರಮದಲ್ಲಿ ಡ್ರಗ್ ಸಂಬಂಧಿ ಸಮಸ್ಯೆಗಳ ಕುರಿತ ಚರ್ಚೆಯನ್ನು ಸೇರಿಸಲು ಪ್ರಯತ್ನಿಸುತ್ತದೆ.

ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಡ್ರಗ್ ಬಳಕೆಯನ್ನು ತಡೆಗಟ್ಟಲು ಈ ಕೆಳಕಂಡ ಕೆಲವು, ಸಾಮಾನ್ಯ ಕಾರ್ಯತಂತ್ರಗಳಾಗಿವೆ. ಇವು ಕಟ್ಟಳೆಯಾಗಿರದೆ, ನಿರ್ದಿಷ್ಟ ಸನ್ನಿವೇಶಗಳಿಗೆ ಅನುಗುಣವಾಗಿ ಹೊಂದಿಕೊಳ್ಳುವ ಗುಣವನ್ನು ಹೊಂದಿವೆ.

**ವರ್ತನೆಯನ್ನು ಮಾರ್ಪಡಿಸುವ ಕೌಶಲಗಳು**

ಡ್ರಗ್ ಬಳಸುವ ವಿದ್ಯಾರ್ಥಿಗಳ ವರ್ತನೆಯ ನಮೂನೆಯಲ್ಲಿ ಬದಲಾವಣೆಯನ್ನು ತರುವಲ್ಲಿ ಈ ಕೆಳಕಂಡ ಕೌಶಲಗಳು ಶಿಕ್ಷಕರಿಗೆ ನೆರವಾಗಬಹುದು.

- ತಾಳ್ಮೆಯಿಂದ ಕೇಳುವುದು
- ತಾರ್ಕಿಕ ವಿಧಾನಗಳಿಂದ ಸಲಹೆಗಳನ್ನು ನೀಡುವುದು
- ಮಾರ್ಗದರ್ಶನ ಮಾಡುವುದು
- ಸಮಾಲೋಚನೆ ನಡೆಸುವುದು
- ಕಲಿಸುವ/ಕಲಿಯುವ ವಾತಾವರಣವನ್ನು ಪ್ರೀತಿಯ ತಳಹದಿಯ ಮೇಲೆ ನಿರ್ಮಾಣ ಮಾಡುವುದು ಮತ್ತು
- ಶಿಕ್ಷಕರು ಮಾದರಿಯ ವರ್ತನೆ ತೋರುವುದು

**ಶಾಲೆಗಳಲ್ಲಿ ಡ್ರಗ್ ತಡೆಗಟ್ಟುವ ಬಗ್ಗೆ ಶಿಕ್ಷಕರಿಗೆ ಪರಿಚಯಾತ್ಮಕ ಕಾರ್ಯಕ್ರಮಗಳು**

ಹಿಂದೆಲ್ಲ ಶಾಲಾ ಆಡಳಿತದ ವಿರೋಧ ಹಾಗೂ ಪೋಷಕರ ಬಿಗುಮಾನದಿಂದಾಗಿ ಶಾಲೆಗಳಲ್ಲಿ ಡ್ರಗ್ ವ್ಯಸನದಂತಹ ಸೂಕ್ಷ್ಮ ಸಮಸ್ಯೆಯ ಕುರಿತು ಚರ್ಚಿಸಲು ಹಿಂಜರಿಯುತ್ತಿದ್ದರು. ಆದರೆ ಈಗ ವಿದ್ಯಾರ್ಥಿಗಳ ಮನಸ್ಸಿನ ಮೇಲಾಗುತ್ತಿರುವ ಹಿಂಸೆ ಹಾಗೂ ಅಪರಾಧದ ಪ್ರಭಾವವನ್ನು ಎದುರಿಸಲು ಅವರಿಗೆ ಡ್ರಗ್ ದುರ್ಬಳಕೆಯ ಕುರಿತು ಅರಿವು ಮೂಡಿಸುವುದು ಅತ್ಯಗತ್ಯವಾಗಿದೆ. ಶಿಕ್ಷಕರಿಗೆ ಸರಿಯಾದ ರೀತಿಯ ಪರಿಚಯ ಮಾಡಿಕೊಡುವುದು ಅವಶ್ಯಕವಾಗಿದೆ. ಉದಾಹರಣೆಗೆ, ವಿದ್ಯಾರ್ಥಿಗಳಲ್ಲಿ ಡ್ರಗ್ ದುರ್ಬಳಕೆಯ ಪರಿಣಾಮಗಳ ಬಗ್ಗೆ 'ಆತಂಕದ ಧೋರಣೆ' ಮೂಡಿಸುವುದು ಅಥವಾ 'ಅತಿ ವೈಭವೀಕರಣ' ಮಾಡುವುದು ನಕಾರಾತ್ಮಕ ಪ್ರತಿಕ್ರಿಯೆಯನ್ನು ಉಂಟುಮಾಡುವುದು ಎಂದು ಅಧ್ಯಯನಗಳು ತೋರಿಸಿಕೊಟ್ಟಿವೆ. ಆದ್ದರಿಂದ ಇದಕ್ಕೆ ಪ್ರತಿಯಾಗಿ ಶಿಕ್ಷಕರು ಡ್ರಗ್ ಬಳಕೆ ಹಾಗೂ ಡ್ರಗ್ ದುರ್ಬಳಕೆ ವಿದ್ಯಾರ್ಥಿಗಳ ಭವಿಷ್ಯದ ಜೀವನ ಹಾಗೂ ವೃತ್ತಿಗಳಲ್ಲಿ ಒಡ್ಡುವ ಸಮಸ್ಯೆಗಳ ತೀವ್ರತೆಯ ಬಗ್ಗೆ ತಿಳಿಸಿಕೊಡಬೇಕು.

ರೋಟರಿ ಕ್ಲಬ್, ಲಯನ್ಸ್ ಗ್ರೂಪ್ ಮತ್ತು ಆರ್‌ಎಡಿಎ ಮುಂತಾದ ಸರ್ಕಾರೇತರ ಸಂಸ್ಥೆಗಳು ಶಿಕ್ಷಕರಿಗೆ ಪರಿಚಯಾತ್ಮಕ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಸಮಾಧಾನಕರ ಅಂಶವಾಗಿದೆ. ಭಾರತದ ಆರ್‌ಎಡಿಎ, ಅನುಸರಿಸುವ ಮೂಲ ವಿಧಾನವು ವಿದ್ಯಾರ್ಥಿಗಳ ದಿನನಿತ್ಯದ ಅನುಭವಗಳನ್ನು ಬಳಸಿಕೊಂಡು ಅವುಗಳನ್ನು ಗುಣಮಟ್ಟದ ಆದರ್ಶ ಜೀವನವನ್ನು ನಡೆಸಬೇಕೆಂಬುದರ ಹತ್ತಿರ ತರುವ ಮೂಲಕ ಶಾಲೆಗಳಲ್ಲಿ ಡ್ರಗ್ ದುರ್ಬಳಕೆಯನ್ನು ನಿರುತ್ಸಾಹಗೊಳಿಸುವುದು.

**ಶಾಲೆಗಳಲ್ಲಿ ಹಿತಕರ ವಾತಾವರಣ**

ವಿದ್ಯಾರ್ಥಿ ವ್ಯಸನಿಗಳಲ್ಲಿ ಸಕಾರಾತ್ಮಕವಾದ ಸ್ವ ಸ್ವರೂಪ ಭಾವನೆ ಮೂಡುವಂತೆ ಮಾಡಲು ಶಾಲೆಗಳಲ್ಲಿನ ಬೋಧನೆ ಹಾಗೂ ಕಲಿಕೆಯ ವಾತಾವರಣವು ಶ್ರಮಿಸಬೇಕು. ಇದರಲ್ಲಿ ಅವರನ್ನು (ಡ್ರಗ್ ಬಳಸುವ ವಿದ್ಯಾರ್ಥಿಗಳು) ವಾಸ್ತವವಾದ ತರಗತಿ ಸನ್ನಿವೇಶಗಳ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವುದು ಸಹ ಸೇರಿದೆ.

Digitised by Bharatavani, CIIL

**ಚಾರಿತ್ರ್ಯ ವರ್ಧನೆ ಹಾಗೂ ಮೌಲ್ಯಗಳ ಸ್ಪಷ್ಟೀಕರಣಕ್ಕಾಗಿ ಶಿಕ್ಷಣ**

ಡ್ರಗ್ ಬಳಕೆಯನ್ನು ಉತ್ತೇಜಿಸುವ ಸಹಪಾಠಿಗಳ ಗುಂಪಿನ ಒತ್ತಡಕ್ಕೆ ಮಣಿಯದಿರಲು ವಿದ್ಯಾರ್ಥಿಗಳು 'ಇಲ್ಲ' ಎಂದು ಹೇಳಲು ಕಲಿಯಬೇಕು. ಇದರ ಜೊತೆಗೆ, ಚಾರಿತ್ರ್ಯ ವರ್ಧನೆ ಹಾಗೂ ಮೌಲ್ಯಗಳ ಸ್ಪಷ್ಟೀಕರಣಕ್ಕಾಗಿ ಶಿಕ್ಷಣ ನೀಡುವುದು ಕೂಡ ಅವಶ್ಯಕ.

ಚಾರಿತ್ರ್ಯ ವರ್ಧನೆ ಹಾಗೂ ಮೌಲ್ಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಗದು. ಆದರೆ, ಅವೆರಡನ್ನೂ ವಿದ್ಯಾರ್ಥಿಗಳಿಗೆ ಎಚ್ಚರಿಕೆಯಿಂದ ತಿಳಿಸಬಹುದು. ಉತ್ತಮ ಚಾರಿತ್ರ್ಯವನ್ನು ಹೊಂದಿದ ಸಮಗ್ರ ವ್ಯಕ್ತಿಯೆಂದರೆ ದೈಹಿಕ ಶಿಕ್ಷಣ, ಭಾವನಾತ್ಮಕ ಶಿಕ್ಷಣ, ಸೌಂದರ್ಯಾತ್ಮಕ ಶಿಕ್ಷಣ ಹಾಗೂ ಆಧ್ಯಾತ್ಮಕ ಶಿಕ್ಷಣವನ್ನು ಒಳಗೊಂಡ ಬೆಳವಣಿಗೆ ಹೊಂದಿದ ವ್ಯಕ್ತಿತ್ವ ಎಂದರ್ಥ. ಈ ಧ್ಯೇಯವನ್ನು ಸಾಧಿಸಲು ಶಿಕ್ಷಕರು, ಪೋಷಕರು, ಹಿರಿಯರು ಹಾಗೂ ಸಮುದಾಯದ ಸದಸ್ಯರು ಮಾದರಿಯಾಗಿರಬೇಕು ಎನ್ನುವುದು ಅತ್ಯವಶ್ಯಕ ಎನ್ನುವುದನ್ನು ಒತ್ತಿ ಹೇಳಬೇಕಾಗಿಲ್ಲವಷ್ಟೆ. ಆದ ಕಾರಣ, ವಿದ್ಯಾರ್ಥಿಗಳು ಡ್ರಗ್ ವ್ಯಸನಕ್ಕೊಳಗಾಗಲು ತಮ್ಮ ಸಹಪಾಠಿಗಳು ಹೇರುವ ಒತ್ತಡವನ್ನು ಪ್ರತಿರೋಧಿಸುವಂತಹ ಮನಃಶಕ್ತಿಯನ್ನು ಬೆಳೆಸಿಕೊಳ್ಳಲು ಚಾರಿತ್ರ್ಯ ನಿರ್ಮಾಣಕ್ಕಾಗಿ ಶಿಕ್ಷಣ ಅತ್ಯವಶ್ಯಕ.

**ಡ್ರಗ್ ತಡೆಗಟ್ಟುವ ಕಾರ್ಯಕ್ರಮಗಳಲ್ಲಿ ಶಾಲಾ ಸಮಾಲೋಚಕರ ಸೇವೆಗಳನ್ನು ಬಳಸಿಕೊಳ್ಳುವುದು**

ಬಹಳಷ್ಟು ಶಾಲೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಸರಕಾರಿ ಸಂಸ್ಥೆಗಳಲ್ಲಿ ಸಮಾಲೋಚಕರಿರುವುದಿಲ್ಲ. ಡ್ರಗ್ ವ್ಯಸನ ಹಾಗೂ ಅದರ ತಡೆಗಟ್ಟುವಿಕೆ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿಯನ್ನು ಮೂಡಿಸಲು ಸಮಾಲೋಚಕರ ಪಾತ್ರ ಅತ್ಯಂತ ಮಹತ್ವದ್ದು. ಅದೇ ರೀತಿ, ಶಾಲಾ ಸಮಾಲೋಚಕರ ನಿಯೋಜನೆ ಕೂಡ ಅತ್ಯಂತ ಅವಶ್ಯಕ.

**ಪ್ರತಿಯೊಬ್ಬ ವಿದ್ಯಾರ್ಥಿಯು ನಿರಂತರ ಪ್ರಗತಿಯನ್ನು ದಾಖಲಿಸುವುದನ್ನು ಖಾತ್ರಿಪಡಿಸುವುದು**

ಡ್ರಗ್ ಬಳಸುವ ವಿದ್ಯಾರ್ಥಿಗಳು ಕಲಿಕೆಯ ಮೇಲೆ ಪ್ರೀತಿ ಬೆಳೆಸಿಕೊಳ್ಳಲು, ಸಂಸ್ಕೃತಿಯ ಅರಿವು ಹಾಗೂ ಭದ್ರತೆಯ ಭಾವನೆಯನ್ನು ಹೊಂದುವಂತೆ ಮಾಡಲು ನಾವು 'ಮೊದಲು' 'ವಿದ್ಯಾರ್ಥಿ' 'ಆನಂತರ' ಪಠ್ಯಕ್ರಮ ಎನ್ನುವಂತಹ ಶಾಲಾ ವಾತಾವರಣವನ್ನು ನಿರ್ಮಾಣ ಮಾಡಬೇಕು. ಅಂತಹ ವಾತಾವರಣದಲ್ಲಿ ಅಷ್ಟೇ ಕಾಲಾವಧಿಯಲ್ಲಿ ವಿದ್ಯಾರ್ಥಿಗಳು ತಮ್ಮ ಸಹಪಾಠಿ ಗುಂಪಿನೊಂದಿಗೆ ಹೆಚ್ಚು ಸಕಾರಾತ್ಮಕವಾಗಿ ನಡೆದುಕೊಳ್ಳುತ್ತಾರೆ ಹಾಗೂ ಸ್ನೇಹದಿಂದಿರುವ ಮೂಲಕ ಶಾಲೆಯಲ್ಲಿ ಪ್ರಗತಿ ಸಾಧಿಸುತ್ತಾರೆ. ಆದ ಕಾರಣ ಪೋಷಕರು ಭಾರೀ ಕಾರ್ಯಭಾರ ಹಾಗೂ ಕಾರ್ಯರೂಪಕ್ಕೆ ತರಲಾಗದಂತಹ ನಿರೀಕ್ಷೆಗಳನ್ನು ಹೇರುವುದನ್ನು ತಡೆಯಬೇಕು.

**ಶಾಲಾ ಪಠ್ಯಕ್ರಮದಲ್ಲಿ ಡ್ರಗ್ ಸಂಬಂಧಿ ವಿಷಯಗಳನ್ನು ಅಳವಡಿಸುವುದು**

ವಿದ್ಯಾರ್ಥಿಗಳ ಆಸಕ್ತಿಯನ್ನು ಹಿಡಿದಿಡುವ ರೀತಿಯಲ್ಲಿ ಡ್ರಗ್ ಸಂಬಂಧಿ ವಿಷಯಗಳ ಕುರಿತು ಪಠ್ಯವಿಷಯವನ್ನು ಪ್ರಸ್ತುತಪಡಿಸಬೇಕು. ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಹೇಗೆ ಬಗೆಹರಿಸಬೇಕು ಎಂಬುದಕ್ಕೆ ಪಠ್ಯಪುಸ್ತಕಗಳಿಗೆ ಬರೆಯುವ ಶಿಕ್ಷಕರ ಕೈಪಿಡಿಗಳು ಸೂಕ್ತ ಬೋಧನೆ–ಕಲಿಕೆಯ ಕಾರ್ಯತಂತ್ರಗಳನ್ನು ಸೂಚಿಸಬಹುದು.

ಶಾಲೆಗಳಲ್ಲಿ ಡ್ರಗ್ ಬಳಕೆಯಿರುವುದರಿಂದ ಶಾಲಾ ವಿದ್ಯಾರ್ಥಿಗಳು, ಅದರಲ್ಲೂ ಪ್ರೌಢಶಾಲಾ ಹಂತದಲ್ಲಿರುವವರಿಗೆ ಡ್ರಗ್ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಬೇಕು. ಈ ಸವಾಲನ್ನು ಎದುರಿಸಲು ಕೆಲವು ಶಾಲೆಗಳು ಈಗಾಗಲೇ ಕೆಲವು ಕ್ರಮಗಳನ್ನು ತೆಗೆದುಕೊಂಡಿವೆ. ಉದಾಹರಣೆಗೆ, ಪಂಜಾಬ್‌ನ ಹಲವಾರು ಶಾಲೆಗಳಲ್ಲಿ ಡ್ರಗ್ ವ್ಯಸನದ ಸಮಸ್ಯೆಯನ್ನು ಜಾನಪದ ರಂಗಭೂಮಿ ಹಾಗೂ ಶಾಲಾ ಸಭೆಗಳಲ್ಲಿ ಹಾಡುಗಳ ಮೂಲಕ ಪ್ರದರ್ಶಿಸಲಾಗುತ್ತಿದೆ.

ಶಾಲಾ ಪಠ್ಯಕ್ರಮ ಹಾಗೂ ಅದರ ನಿರ್ವಹಣೆಯಲ್ಲಿ ಈ ದುರಭ್ಯಾಸವನ್ನು ತೋರಿಸಲಾಗಿದೆಯೇ ಎಂಬುದರ ಮಟ್ಟದ ಪಾರದರ್ಶಕತೆಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೂ ಡ್ರಗ್ ದುರ್ಬಳಕೆಯ ಸಮಸ್ಯೆಯ ಬಗ್ಗೆ ಶಾಲಾ ಶಿಕ್ಷಣ ವ್ಯವಸ್ಥೆಯು ಡ್ರಗ್ ದುರ್ಬಳಕೆಯ ಬಗ್ಗೆ ಅಸಡ್ಡೆ ತೋರಿದಲ್ಲಿ ಅನತಿಕಾಲದ ಭವಿಷ್ಯದಲ್ಲಿ ರಾಷ್ಟ್ರವು ಭಾರೀ ಬೆಲೆಯನ್ನು ತೆರಬೇಕಾಗುತ್ತದೆ. ಆದಕಾರಣ ಶಾಲೆಗಳಲ್ಲಿನ ಡ್ರಗ್ ವ್ಯಸನದ ಸಮಸ್ಯೆಗಳ ಕುರಿತು ವ್ಯವಸ್ಥಿತವಾದ ದತ್ತಾಂಶ ಆಧಾರಿತ ಅಧ್ಯಯನಗಳನ್ನು ಆದ್ಯತೆಗನುಸಾರವಾಗಿ ಕೈಗೆತ್ತಿಕೊಳ್ಳುವುದು ಕಡ್ಡಾಯವಾಗುತ್ತದೆ.

ಕೊನೆಯದಾಗಿ, ಡ್ರಗ್ ಬಳಸುವ ವಿದ್ಯಾರ್ಥಿಗಳು ತಮಗಾಗಿ ಹಾಗೂ ತಮ್ಮ ಸಮುದಾಯಕ್ಕಾಗಿ ತಾರ್ಕಿಕ ವಿಚಾರಣೆ, ಪರೀಕ್ಷೆಗೊಳಪಡಿಸಲಾದ ಒಳ ಅರಿವು ಹಾಗೂ ಸೃಷ್ಟಿಶೀಲತೆಯ ಸಾಮಾನ್ಯ ಪ್ರಕ್ರಿಯೆಯನ್ನು ಶೋಧಿಸುವಂತೆ ಮಾಡಲು ಹಾಗೂ ಸಂಪೂರ್ಣ ಸುಖಮಯ ಜೀವನ ನಡೆಸಲು ನಾವೆಲ್ಲರು ವೃತ್ತಿಪರರಾಗಿ ಚಿಂತಿಸೋಣ, ವ್ಯವಸ್ಥಿತವಾಗಿ ಹಾಗೂ ಶ್ರಮವಹಿಸಿ ದುಡಿಯೋಣ. ವೈಯಕ್ತಿಕ ಗುರಿಯನ್ನು ಮುಟ್ಟಲು ನಮ್ಮೊಳಗೆ ಪ್ರೇರಣೆ ಇರದಿದ್ದಲ್ಲಿ, ಹಾಗೂ ನಿಮ್ಮ ಹತ್ತಿರದವರ ಕಲ್ಯಾಣವೂ ಸಮಾನವಾಗಿ ಮುಖ್ಯವೆನಿಸದಿದ್ದಲ್ಲಿ ಜೀವನ ಸಂಪೂರ್ಣವಾಗುವುದಿಲ್ಲ.

**ಮೂಲ: ಆರ್.ಎಂ. ಕಾಲ್ರ**

**ಅನು: ಶಶಿಕುಮಾರ್**

Digitised by Bharatavani, CIIL

# ತ

## ತತ್ವಶಾಸ್ತ್ರದ ಸ್ವರೂಪ ಮತ್ತು ವ್ಯಾಪ್ತಿ

ತತ್ವಶಾಸ್ತ್ರ ಎಂಬ ಶಬ್ದದ ಆಂಗ್ಲ ಪದವಾದ 'Philosophy' ಎಂಬ ಪದಕ್ಕೆ ನಿಖರವಾದ ವ್ಯಾಖ್ಯೆಯನ್ನು ನೀಡುವುದು ಕಷ್ಟ. ಈ ಶಬ್ದದ ಮೂಲಾರ್ಥ 'ಜ್ಞಾನಪ್ರೇಮ' ಎಂದು. ಈ ಶಬ್ದವನ್ನು ಪಾಶ್ಚಾತ್ಯ ತಾತ್ವಿಕ ಇತಿಹಾಸದಲ್ಲಿ ಮೊಟ್ಟಮೊದಲು ಬಳಸಿದವನು ಗ್ರೀಕ್ ತಾತ್ವಿಕನಾದ ಪೈಥಾಗೊರಾಸ್ (ಕ್ರಿ.ಪೂ.580–500). ಜನರು ಆತನನ್ನು ಜಗತ್ತಿನ ಅತ್ಯಂತ ಶ್ರೇಷ್ಠಜ್ಞಾನಿ ಎಂದು ಹೊಗಳಿದಾಗ, ಆತನು "ತನಗೆ ತಿಳಿದಿರುವುದು ತನ್ನ ಅಜ್ಞಾನದ ಬಗ್ಗೆ ಮಾತ್ರ. ತಾನು ಜ್ಞಾನಿಯಲ್ಲ, ಜ್ಞಾನಪ್ರೇಮಿ"(Philosopher) ಎಂದು ಹೇಳಿಕೊಂಡ. ಅಂದಿನಿಂದ Philosophy ಎಂಬ ಶಬ್ದವು ಆಲೋಚನೆಯಲ್ಲಿನ ಪ್ರೀತಿ ಅಥವಾ ಜೀವನವನ್ನು ಕುರಿತ ಒಂದು ವೈಚಾರಿಕ ನಿಲುವು ಎಂಬ ಅರ್ಥವನ್ನು ಪಡೆದುಕೊಳ್ಳುತ್ತಾ ಬಂತು.

ಪ್ರಾರಂಭದಲ್ಲಿ Philosophy ಎಂಬ ಶಬ್ದವು ಜ್ಞಾನದ ಯಾವುದೇ ಕ್ಷೇತ್ರದ ಆಳವಾದ ಅಧ್ಯಯನ ಎಂಬ ಅರ್ಥವನ್ನು ಸೂಚಿಸುತ್ತಿತ್ತು. ಇಂದಿಗೂ ಇದೇ ಅರ್ಥವು ಉಳಿದುಕೊಂಡಿದ್ದು, ಇದು ನಮ್ಮ ವಿಶ್ವವಿದ್ಯಾನಿಲಯಗಳು ನೀಡುವ "Doctor of Philosophy" ಪದವಿಗಳಲ್ಲಿ ಸೂಚಿತವಾಗುತ್ತದೆ. ಎಂದರೆ ಪ್ರಾರಂಭದಲ್ಲಿ ತತ್ವಶಾಸ್ತ್ರದ ಅಧ್ಯಯನಕ್ಕೆ ನಿಗದಿತ ಎಲ್ಲೆಯಿರಲಿಲ್ಲ. ಅದರ ಚರ್ಚೆಯ ವ್ಯಾಪ್ತಿಯಲ್ಲಿ ಇಂದ್ರಿಯಾತೀತ ವಿಷಯಗಳಷ್ಟೇ ಅಲ್ಲ ಇಂದ್ರಿಯಗ್ರಾಹ್ಯ ವಸ್ತುಗಳೂ ಬರುತ್ತಿದ್ದವು. ಕ್ರಮೇಣ ಜ್ಞಾನವು ಬೆಳೆಯುತ್ತಿದ್ದಂತೆ ಇತರ ಶಾಸ್ತ್ರಗಳು ಅದರಿಂದ ಪ್ರತ್ಯೇಕವಾದವು. ಹಾಗೆ ಪ್ರತ್ಯೇಕಗೊಂಡ ಕೊನೆಯ ಶಾಸ್ತ್ರಗಳೆಂದರೆ ಮನಶಾಸ್ತ್ರ ಮತ್ತು ಸಮಾಜಶಾಸ್ತ್ರ. ಈಗ ತತ್ವಶಾಸ್ತ್ರದ ವ್ಯಾಪ್ತಿಯು ಸಂಕುಚಿತವಾಗಿ ಅದು ಈ ವಿಷಯಗಳನ್ನು ಚರ್ಚಿಸುತ್ತದೆ. ಜಗತ್ತಿನ ಮೂಲಸ್ವರೂಪವೇನು? ಅದನ್ನು ತಿಳಿಯುವ ವಿಧಾನವೇನು? ಮತ್ತು ಅದನ್ನು ತಿಳಿಯುವುದರಿಂದ ನಮಗಾಗುವ ಪ್ರಯೋಜನವೇನು? ಇತ್ತೀಚೆಗಂತೂ ಅದರ ಎಲ್ಲೆಯು ಇನ್ನೂ ಸಂಕುಚಿತಗೊಂಡು ಅದು ವಸ್ತುವಿಗಿಂತಲೂ ಹೆಚ್ಚಾಗಿ ವಸ್ತುವನ್ನು ತಿಳಿಯುವ ವಿಧಾನವನ್ನು ಕುರಿತು ಚರ್ಚಿಸುತ್ತಿದೆ.

ತತ್ವಶಾಸ್ತ್ರದ ಬಗ್ಗೆ ಒಂದು ಆಕ್ಷೇಪವಿದೆ. ಅದು ಎಲ್ಲ ವಿಷಯವನ್ನು ಚರ್ಚಿಸಿಹೋಗಿ ಕೊನೆಗೆ ಯಾವ ವಿಷಯವನ್ನು ಪೂರ್ಣವಾಗಿ ಚರ್ಚಿಸುವುದಿಲ್ಲವೆಂಬುದು, ಇದಕ್ಕೆ ಕಾರಣವು ಉಂಟು. ಅದರ ತೀರ್ಮಾನಗಳಲ್ಲಿ ಒಮ್ಮತವಿಲ್ಲ. ಯಾವುದೇ ಒಂದು ವಿಷಯದ ಬಗ್ಗೆ ಇಬ್ಬರು ತಾತ್ವಿಕರಿಗೆ ಏಕಾಭಿಪ್ರಾಯವಿರುವುದಿಲ್ಲ. ಆದರೆ ಇಲ್ಲಿ ಒಂದು ವಿಷಯವು ಗಮನಾರ್ಹ. ತಾತ್ವಿಕರಲ್ಲಿ ಒಮ್ಮತವಿಲ್ಲದಿದ್ದರೂ ಅವರ ತೀರ್ಮಾನಗಳು ಪರಸ್ಪರ ಪೂರಕವಾಗಿ ಅವು ಜಗತ್ತಿನ ಬಗ್ಗೆ ಒಂದು ಸಮಗ್ರ ಚಿತ್ರಣವನ್ನು ಪಡೆಯಲು ನಮಗೆ ನೆರವಾಗುತ್ತವೆ. ಹೀಗಾಗಿ ತಾತ್ವಿಕತೆಯ ವೈಯಕ್ತಿಕವಷ್ಟೇ ಅಲ್ಲ, ಒಂದು ಸಾಮಾಜಿಕ ಪ್ರಕ್ರಿಯೆಯೂ ಆಗುತ್ತದೆ.

ಸಾಂಪ್ರದಾಯಿಕವಾಗಿ ತತ್ವಶಾಸ್ತ್ರವು ತತ್ವಮೀಮಾಂಸೆ, ಜ್ಞಾನಮೀಮಾಂಸೆ ಮತ್ತು ಉದ್ದೇಶಮೀಮಾಂಸೆ ಎಂಬ ಮೂರು ಶಾಖೆಗಳನ್ನು ಒಳಗೊಂಡಿದೆ. ಇವುಗಳನ್ನು ಕ್ರಮವಾಗಿ ಆಂಗ್ಲಭಾಷೆಯಲ್ಲಿ Ontology, Epistemology, Axiology ಅಥವಾ Teleology ಎಂದು ಕರೆಯುತ್ತಾರೆ. Logy ಶಬ್ದವು Logus ಎಂಬ ಗ್ರೀಕ್ ಮೂಲದಿಂದ ಬಂದುದು. ಮೀಮಾಂಸೆ ಸಿದ್ಧಾಂತ ಅಥವಾ ಶಾಸ್ತ್ರ ಎಂದು ಇದರ ಅರ್ಥ. Ontology ಎಂದರೆ ಅಸ್ತಿತ್ವಮೀಮಾಂಸೆ ಅಥವಾ ತತ್ವಮೀಮಾಂಸೆಯೆಂದರ್ಥ. ಇದಕ್ಕೆ Metaphyrick (ಪರಾಭೌತಶಾಸ್ತ್ರ)ಎಂಬ ಹೆಸರೂ ಇದೆ. ತತ್ವಮೀಮಾಂಸೆಯು ಕೆಳಕಂಡ ಪ್ರಶ್ನೆಗಳನ್ನು ಚರ್ಚಿಸುತ್ತದೆ.

ಇಂದ್ರಿಯಗ್ರಾಹ್ಯವಾದ ಈ ಬಹುತ್ವ ಪ್ರಪಂಚವು ಸತ್ಯವೋ ಅಥವಾ ಮಿಥ್ಯವೋ? ಸತ್ಯವಾದರೆ ಅದಕ್ಕೆ ಕಾರಣವಿದೆಯೇ? ಕಾರಣವಿದ್ದರೆ ಅದರ ಸ್ವರೂಪವೇನು? ಅದು ಜನಸ್ವರೂಪವೋ ಅಥವಾ ಚೇತನಾತ್ಮಕವೋ? ಈ ಕಾರಣದ ಸಂಖ್ಯೆಯೇನು? ಅದು ಏಕವೋ, ಅನೇಕವೋ ಅಥವಾ ದ್ವೈತಸ್ವರೂಪವೋ? ಉಪನಿಷತ್ತುಗಳು ಸಾರುವಂತೆ ನಾವು ಏಕರೋ ಅಥವಾ ಭಿನ್ನರೋ? ಅಥವಾ ನಮಗೂ ಮತ್ತು ಈ ಕಾರಣಕ್ಕೂ ಇರುವುದು ಭೇದಾಭೇದ ಸಂಬಂಧವೋ?

ಇನ್ನು Epistemology ಎಂಬ ಶಬ್ದವು Episteme ಎಂಬ ಗ್ರೀಕ್ ಮೂಲದಿಂದ ಬಂದುದು. Episteme ಎಂದರೆ ಯಥಾರ್ಥಜ್ಞಾನವೆಂದರ್ಥ. Plato ಈ ಶಬ್ದವನ್ನು Doxa ಎಂಬ ಶಬ್ದದಿಂದ ಪ್ರತ್ಯೇಕಿಸುತ್ತಾನೆ. ಆತನ ಪ್ರಕಾರ Episteme ಯಥಾರ್ಥವಾಗಿದ್ದರೆ Doxa ಅಯಥಾರ್ಥವಾಗಿದೆ. Doxa ಎಂದರೆ ಅಭಿಪ್ರಾಯವೆಂದರ್ಥ. ಅಭಿಪ್ರಾಯವು ನಿಜವೂ ಇರಬಹುದು ಸುಳ್ಳೂ ಇರಬಹುದು. ಆತನ ದೃಷ್ಟಿಯಲ್ಲಿ ನಿಜದ ನರವಾದ ಈ ಪ್ರಪಂಚದ ಜ್ಞಾನವೆಲ್ಲವೂ 'Doxa' ವ್ಯಾಪ್ತಿಯಲ್ಲಿ ಬರುತ್ತದೆ. ಪ್ರಪಂಚಾತೀತವಾದ ಸಾರ್ವತ್ರಿಕಗಳ (Universal) ಜ್ಞಾನವು ಮಾತ್ರ 'Episteme' ಆಗುತ್ತದೆ. ಹೀಗಾಗಿ Plato ಪ್ರಕಾರ Epistemology ಚರ್ಚೆಯ ಪರಿಧಿಯಲ್ಲಿ ಯಥಾರ್ಥಜ್ಞಾನವು ಮಾತ್ರ ಬರುತ್ತದೆ. ಆದರೆ ನಂತರದ ತಾತ್ವಿಕರು ಈ ಶಾಸ್ತ್ರದ ಪರಿಧಿಯಲ್ಲಿ ಅಯಥಾರ್ಥಜ್ಞಾನದ ಚರ್ಚೆಯನ್ನು ತಂದರು. ಭಾರತೀಯ ಜ್ಞಾನಮೀಮಾಂಸಕರ ಪರಿಭಾಷೆಯನ್ನು ಬಳಸಬೇಕೆಂದರೆ ಜ್ಞಾನಮೀಮಾಂಸೆಯಲ್ಲಿ 'ಪ್ರಮೆ'ಯಷ್ಟೇ (ಸರಿಯಾದ ಜ್ಞಾನ) ಭ್ರಮೆಯ ಚರ್ಚೆಯೂ ಬಂದಿತು. ಜ್ಞಾನಮಿಮಾಂಸೆಯು ಕೆಳಕಂಡ ಪ್ರಶ್ನೆಗಳ ಬಗ್ಗೆ ಚರ್ಚಿಸುತ್ತದೆ.

ಜ್ಞಾನವೆಂದರೇನು? ಅದ ಯಾವ ಉಪಾದಿಗಳಲ್ಲಿ

Digitised by Bharatavani, CIIL

(Conditions) ಉತ್ಪನ್ನವಾಗುತ್ತದೆ? ಅದನ್ನು ಪಡೆಯುವ ವಿಧಾನಗಳೇನು? ಜ್ಞಾನದಲ್ಲಿ ಭ್ರಮೆಯು ಹೇಗೆ ಉಂಟಾಗುತ್ತದೆ? ಜ್ಞಾನದ ಸರಿತಪ್ಪುಗಳನ್ನು ನಿರ್ಧರಿಸುವ ಮಾನದಂಡಗಳಾವುವು?

ಇನ್ನು Axiology ಎಂಬ ಶಬ್ದವು Axios ಎಂಬ ಗ್ರೀಕ್ ಮೂಲದಿಂದ ಬಂದುದು. Axios ಎಂದರೆ ಮೌಲ್ಯಗಳೆಂದರ್ಥ. Axiology ಎಂದರೆ ಉದ್ದೇಶ ಅಥವಾ ಮೌಲ್ಯಮೀಮಾಂಸೆಯೆಂದರ್ಥ. ಅದು ಸತ್ಯ, ಸದ್ಗುಣ ಮತ್ತು ಸೌಂದರ್ಯವನ್ನು ಕುರಿತು ಚರ್ಚಿಸುತ್ತದೆ. ಈ ಮೂರು ಮೌಲ್ಯಗಳನ್ನು ಕುರಿತು ಚರ್ಚಿಸುವ ತತ್ವಶಾಸ್ತ್ರದ ಉಪಶಾಖೆಗಳನ್ನು ಕ್ರಮವಾಗಿ ತರ್ಕಶಾಸ್ತ್ರ (Logic), ನೀತಿಶಾಸ್ತ್ರ (Ethic), ಮತ್ತು ಸೌಂದರ್ಯಶಾಸ್ತ್ರ (Aesthetics) ಎಂದು ಕರೆಯುತ್ತಾರೆ. ಒಟ್ಟಾರೆ ತತ್ವಶಾಸ್ತ್ರವು ಜಗತ್ತಿನ ಮೂಲಸ್ವರೂಪವನ್ನು, ಅದನ್ನು ತಿಳಿಯುವ ವಿಧಾನವನ್ನು ಮತ್ತು ಅದನ್ನು ತಿಳಿಯುವುದರಿಂದ ಮನುಷ್ಯನಿಗೆ ಆಗುವ ಪ್ರಯೋಜನವನ್ನು ಕುರಿತು ಚರ್ಚಿಸುತ್ತದೆ.

ಇಲ್ಲಿ ಮತ್ತೊಂದು ಸಂಗತಿ ಬರುವುದಾದರೂ ಅದರ ಪಾಶ್ಚಾತ್ಯ ತತ್ವಶಾಸ್ತ್ರವು ಜೀವನದ ಉದ್ದೇಶವನ್ನು ಕುರಿತು ಚರ್ಚಿಸುವುದಾದರೂ ಮತ್ತು ಅದರಲ್ಲಿ ಸತ್ಯ, ಸದ್ಗುಣ ಮತ್ತು ಸೌಂದರ್ಯಗಳೆಂಬ ಮೌಲ್ಯಗಳ ಚರ್ಚೆಯು ಬರುವುದಾದರೂ ಅದರ ಉಗಮ ಜಗತ್ತಿನ ರಹಸ್ಯವನ್ನು ತಿಳಿಯಬೇಕೆಂಬ ಕುತೂಹಲದಿಂದ ಉಂಟಾದುದು. ಅರಿಸ್ಟಾಟಲ್ ತನ್ನ Metaphysics ಎಂಬ ಗ್ರಂಥದ ಪ್ರಾರಂಭದಲ್ಲಿ "All men naturally desire to know" ಎಂದು ನುಡಿದ. ಕುತೂಹಲವೆಂಬುದು ಮಾನವ ಸಹಜವಾದರೂ ಜೀವನದ ಅವಿಭಾಜ್ಯ ಅಂಗವಾದ ದುಃಖ ಅಥವಾ ಕೆಡುಕು ಒಂದು ಗಂಭೀರ ಸಮಸ್ಯೆಯಾಗಿ ಪಾಶ್ಚಾತ್ಯ ತಾತ್ವಿಕರನ್ನು ಕಾಡಿದಂತಿಲ್ಲ. ಪಾಶ್ಚಾತ್ಯ ಧರ್ಮಮೀಮಾಂಸೆಯಲ್ಲಿ ಕೆಡಕಿನ ಸಮಸ್ಯೆಯು ಚರ್ಚಿಸಲ್ಪಟ್ಟಿದ್ದರೂ ಈ ಸಮಸ್ಯೆಯ ಚರ್ಚೆಯಾಗಿರುವುದು ಮಾನವ ಸಹಜವಾದ ಬೌದ್ಧಿಕ ಕುತೂಹಲವು ತಣಿಯಲೆಂದು

ಮೇಲಿನ ಸಮಸ್ಯೆಯು ನಿಜವಾಗಿಯೂ ಕಾಡಿರುವುದು ಭಾರತೀಯ ತಾತ್ವಿಕವನ್ನು, ಅವನ ದರ್ಶನವೆಲ್ಲವೂ ರೂಪಿತವಾಗಿರುವುದು ಕುತೂಹಲಕೋಸ್ಕರವಲ್ಲ. ಜೀವನದ ಅವಿಭಾಜ್ಯ ಅಂಗವಾಗಿ ದುಃಖವನ್ನು ನಾಶಪಡಿಸುವುದಕ್ಕೋಸ್ಕರ ಈ ಅರ್ಥದಲ್ಲಿ ಭಾರತೀಯ ತತ್ವಶಾಸ್ತ್ರವು ಕೇವಲ ಜೀವನವನ್ನು ಕುರಿತ ನಿಲುವಷ್ಟೇ ಅಲ್ಲ. ಜೀವನದ ವಿಧಾನವನ್ನು ಪ್ರತಿನಿಧಿಸುತ್ತದೆ. It is not only a view of life, but also a way of life. ಈ ಧೋರಣೆಯನ್ನು ನಾವು ಬೌದ್ಧರಿಂದಾದಿಯಾಗಿ, ಸಮಕಾಲೀನ ವೇದಾಂತಿಗಳವರೆಗೆ ಎಲ್ಲರಲ್ಲೂ ಕಾಣಬಹುದು. ಪ್ರತಿಯೊಬ್ಬ ದಾರ್ಶನಿಕನೂ ದುಃಖವನ್ನು ನೀಗುವ ಪರಿಹಾರವನ್ನು ತನ್ನದೇ ಆದ ರೀತಿಯಲ್ಲಿ ರೂಪಿಸಿದನು. ಎಲ್ಲರೂ ಸತ್ಯಸಾಕ್ಷಾತ್ಕಾರ– ಸತ್ಯದ ಸ್ವರೂಪವನ್ನು ಕುರಿತ ಅವರ ನಿಲುವು ಎಷ್ಟೇ ಭಿನ್ನವಾಗಿದ್ದರೂ ಮಾನವನ ದುಃಖವು ಅತ್ಯಂತಿಕವಾಗಿ ಪರಿಹರಿಸುತ್ತದೆಂದು ನಂಬಿದರು. ಈ ಅರ್ಥದಲ್ಲಿ ಅವರ ಸೈದ್ಧಾಂತಿಕವಷ್ಟೇ ಅಲ್ಲ (Theoretical) ಪ್ರಾಯೋಗಿಕವೂ (Practical) ಹೌದು. ಅವರದು ತತ್ವವನ್ನು ಕುರಿತ ಚರ್ಚೆಯಷ್ಟೇ ಅಲ್ಲ. ದೋಷವನ್ನು ಕುರಿತ ಮತ್ತು ಅದನ್ನು ತಲುಪುವ ಸಾಧನವನ್ನು ಕುರಿತ ಚರ್ಚೆಯೂ ಹೌದು. ಪ್ರತಿಯೊಬ್ಬ ದಾರ್ಶನಿಕನು ಮುಕ್ತಿಯ ಭರವಸೆಯನ್ನು ನೀಡಿದುದಷ್ಟೇ ಅಲ್ಲ. ಅದನ್ನು ಹೊಂದುವ ಮಾರ್ಗವನ್ನು ಸ್ಪಷ್ಟವಾಗಿ ಸೂಚಿಸುತ್ತಾನೆ. ಈ ರೀತಿಯ ಆಧ್ಯಾತ್ಮಿಕ ಸಾಧನದ ಒಂದು ವ್ಯವಸ್ಥಿತ ನಿರೂಪಣೆಯನ್ನು ಕಾಣುವುದು ನಾವು ಭಾರತೀಯ ದರ್ಶನಗಳಲ್ಲಿ ಮಾತ್ರ.

–ಡಾ. ಚಂದ್ರಶೇಖರ್ ಹೆಚ್.ಎಲ್.

## ತಪಸ್ಸು

ಭಾರತೀಯ ತತ್ವಶಾಸ್ತ್ರದಲ್ಲಿ ಆತ್ಮಜ್ಞಾನವನ್ನು ಒಳಗೊಂಡಂತೆ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳುವಾಗ ತಪಸ್ಸು ಅತ್ಯಗತ್ಯವೆಂದೆನಿಸಿಕೊಂಡು ಅದರ ಪರಿಕಲ್ಪನೆ ಅತಿಮುಖ್ಯ ಸ್ಥಾನವನ್ನು ಪಡೆದಿದೆ. ನಮ್ಮ ದೃಷ್ಟಿಕೋನ ಮತ್ತು ಅಭ್ಯಾಸಗಳ ಸಂಪೂರ್ಣ ಆದರೆ ಕ್ರಮಶಃ ಪುನರ್‌ಹೊಂದಾಣಿಕೆ, ಸ್ವಯಂ ನಿಗ್ರಹ, ಶಿಸ್ತು, ಶೀತೋಷ್ಣ, ಸಿರಿತನ ಅಥವಾ ಬಡತನ, ಸುಖದುಃಖ, ನಿಂದೆಸ್ತುತಿ, ಮಿಲನ ಅಥವಾ ಅಗಲಿಕೆಗಳಂಥ ದ್ವಂದ್ವ ಪರಿಸ್ಥಿತಿಗಳಲ್ಲಿ ಸಮಭಾವ ಮನಸ್ಸಿನ ಸಮತ್ವ, ಆಲೋಚನೆ ಮತ್ತು ಕರ್ಮಗಳಲ್ಲಿ ಶುದ್ಧತೆ, ಆಳವಾದ ಏಕಾಗ್ರತೆ ಮತ್ತು ಧ್ಯಾನ ಮತ್ತು ದೇಹ ಮನಸ್ಸು ಮತ್ತು ಅಂತರಾತ್ಮಗಳ ಮೇಲಿನ ಸಂಪೂರ್ಣ ನಿಯಂತ್ರಣ ಇವೆಲ್ಲವುಗಳಿಂದಲೂ ಸಾಧ್ಯವಾಗುವ ಮನಸ್ಸಿನ ನವೀಕರಣವಾಗದೆ ವಾಸ್ತವಿಕವಾಗಿ ನಾವೇನನ್ನೂ ಸಾಧಿಸಲಾಗುವುದಿಲ್ಲ. ಮಾನಸಿಕ ಶಕ್ತಿಯನ್ನು ಮನಸ್ಸಿನ ಕಲ್ಮಶಗಳನ್ನು ನಿವಾರಿಸುವುದರ ಮೂಲಕ ಸಂಚಯನ ಮಾಡುವ ಅಭ್ಯಾಸವನ್ನು ಹಾಗೂ ಭಾರತೀಯ ತತ್ವಶಾಸ್ತ್ರದ ಪ್ರಕಾರ ಮಾನವನ ಗುರಿಯಾದ ಆತ್ಮಪರಮಾತ್ಮನ ಏಕತೆಯನ್ನು ಸಾಧಿಸುವುದರೆಡೆಗೆ ಮನಸ್ಸಿನ ಮಾರ್ಗದರ್ಶನ ಮಾಡುವುದನ್ನು ತಪಸ್ಸು ಎನ್ನುವರು.

ಹೊಳೆಯುವುದು, ಅಗ್ನಿಯಂತೆ ಉರಿಯುವುದು, ಶಾಖವನ್ನು ನೀಡುವುದು, ನೋವನ್ನು ಅನುಭವಿಸುವುದು, ದೇಹದಂಡಿಸುವುದು, ತಪಿಸುವುದು ಮುಂತಾದ ಅರ್ಥಬರುವ ಸಂಸ್ಕೃತದ ತಪ್ ಧಾತುವಿನಿಂದ ತಪಸ್ಸು ಎಂಬ ಶಬ್ದ ಬಂದಿದೆ. ಇದರ ಅಕ್ಷರಶಃ ಅರ್ಥ ಶಾಖ ಎಂದು ಇಂಥ ಶಾಖದ ಮುಖಾಂತರ ಉಂಟಾಗಬಹುದಾದ ಶಕ್ತಿಪ್ರವಾಹ, ಕ್ರಿಯಾಶಕ್ತಿ, ನಮ್ಮೆಡೆಗೇ ತಿರುಗಿಸಲ್ಪಟ್ಟ ಪ್ರಜ್ಞಾಪೂರ್ವಕ ತಾಪಸಿಕಶಕ್ತಿ–ಇವುಗಳನ್ನು ಸಹ ತಪಸ್ಸು ಎಂಬುದು ಸೂಚಿಸುತ್ತದೆ. ಪುರಾತನ ಉಪಮೆಯ ಪ್ರಕಾರ ಈ ವಿಶ್ವ ತಪಸ್ಸಿನ ಮೂಲಕ ಮೊಟ್ಟೆಯ ರೂಪದಲ್ಲಿ ಜನಿಸಿತು. ಪ್ರಜ್ಞಾಪೂರ್ವಕ ಶಕ್ತಿರೂಪವುಳ್ಳ ಈ ತಪಸ್ಸಿನ ಕಾಲ ಈ ಮೊಟ್ಟೆಯನ್ನು ಒಡೆಯುವಂತೆ ಮಾಡಿತಲ್ಲದೆ ಪುರುಷ ಹಾಗೂ ಪ್ರಕೃತಿಯ ಅಂತರಾತ್ಮಗಳು ಈ ಮೊಟ್ಟೆಯಿಂದ ಹೊರಬಂದವು, ಆತ್ಮ ಸಂಯಮ, ದೇಹದಂಡನೆ ಶುದ್ಧೀಕರಣ ಕ್ರಿಯೆಗಳ ಆಚರಣೆ ಮುಂತಾ ಅರ್ಥಗಳು ತಪಸ್ಸು ಎಂಬ ಶಬ್ದಕ್ಕೆ

Digitised by Bharatavani, CIIL

ಇದೆಯಾದರೂ ಇವೆಲ್ಲವುಗಳ ಹಾಗೂ ಇವೆಲ್ಲವುಗಳಿಗೂ ಮೀರಿದ ಅರ್ಥ ಈ ಪದಕ್ಕಿದೆ. ಪ್ರಜ್ಞೆಯ ಮೇಲಿನ ದೈಹಿಕ ಅಗತ್ಯಗಳ ಅಧಿಪತ್ಯದ ಸಂಪೂರ್ಣ ನಿಯಂತ್ರಣವನ್ನು ವ್ಯಕ್ತಪಡಿಸುವುದು ಮತ್ತು ಆಧ್ಯಾತ್ಮಿಕ ಅಥವಾ ಇನ್ನಾವುದೇ ಗುರಿಸಾಧಿಸಲು ಪ್ರಜ್ಞೆ ಮತ್ತು ಕ್ರಿಯಾಶಕ್ತಿಗಳನ್ನು ಬಲಪಡಿಸುವುದು– ಈ ಪ್ರಕ್ರಿಯೆಗೆ ತಪಸ್ಸು ಎಂದು ಹೇಳಬಹುದು.

**ಯೋಗ ತತ್ವ ಪದ್ಧತಿಯಲ್ಲಿ ತಪಸ್ಸು:** ಪತಂಜಲಿಯ ಯೋಗಸೂತ್ರ (2:32)ದ ಪ್ರಕಾರ ಯೋಗಿಯಾಗಬಯಸುವವರು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಐದು ಮೂಲತತ್ವಗಳಲ್ಲಿ ತಪಸ್ಸೂ ಒಂದು ತತ್ವವಾಗಿದೆ. ಇವು ಯಾವುವೆಂದರೆ, ಕಾಯಾವಾಚಾ ಮನಸಾ ಶುದ್ಧತೆ, ತೃಪ್ತಿ, ತಪಸ್ಸು, ಸ್ವಾಧ್ಯಾಯ ಈಶ್ವರಪ್ರಣೀಧಾನ, ದೇಹ ಮತ್ತು ಅದರ ಇಂದ್ರಿಯಗಳನ್ನು ಅವುಗಳ ಕಲ್ಮಶವನ್ನುತೆಗೆದು ಶುದ್ಧೀಕರಿಸುವುದು ತಪಸ್ಸಿನ ಕೆಲಸ ಎಂದು ಪತಂಜಲಿ ತಮ್ಮ ಯೋಗ ಸೂತ್ರ (2:43)ದಲ್ಲಿ ಹೇಳಿದ್ದಾರೆ. ಕುಡಿಯಲು, ತಿನ್ನಲಿರುವ ಇಚ್ಛೆ, ಮೋದಪಡುವ ಇಚ್ಛೆ, ಇತ್ಯಾದಿ ದ್ವಂದ್ವಗಳ ನಿಯಂತ್ರಣದಿಂದ ಶುದ್ಧೀಕರಣವು ಸಾಧ್ಯವಾಗುತ್ತದೆ. ಉಪವಾಸ ಹಾಗೂ ಬೌದ್ಧಿಕ ಮತ್ತು ಸಂವೇಗಾತ್ಮಕ ನಿರ್ಬಲತೆ (Emotional weakness) ಮುಂತಾದ ಪೀಡೆಗಳಿಗೆ ಸರ್ವರೂ ಅಧೀನರು ಎಂಬುದು ಸರ್ವವಿಧಿತ.

ಅಶಾಶ್ವತವಾದುದನ್ನು ಶಾಶ್ವತವೆಂದೆಣಿಸುವುದು ದೇಹವನ್ನೇ ಆತ್ಮವೆಂದು ತಿಳಿಯುವುದು, ಸುಖದಾಯಕ ವಸ್ತುಗಳ ಬೆನ್ನ ಹತ್ತುವುದು, ದುಃಖದಾಯಕ ವಸ್ತುವಿಷಯಗಳನ್ನು ದ್ವೇಷಿಸುವುದು. ಮೂಲಪ್ರವೃತ್ತಿಯಂತಿರುವ ಮರಣದ ಭಯ ಮತ್ತು ಜೀವದ ಮೇಲೆ ಆಸೆ ಇವೆಲ್ಲಾ ಕಲ್ಮಶಗಳು ದೋಷಗಳ ರೂಪದಲ್ಲಿವೆ. ತಪಸ್ಸಿನ ಮೂಲಕ ಇವೆಲ್ಲಾ ಮಾನಸಿಕ ಕಲ್ಮಶಗಳು ಹಾಗೂ ಸಂಶಯಗಳು ನಿವಾರಣೆಗೊಂಡು ಮನಸ್ಸು ವಸ್ತುಗಳನ್ನು ಇದ್ದ ಹಾಗೆ ಸ್ಪಷ್ಟರೂಪದಲ್ಲಿ ಪ್ರತಿಫಲಿಸುವ ಶುದ್ಧಸ್ಫಟಿಕಮಣಿಯಂತಾಗ ುತ್ತದೆ.

ಪತಂಜಲಿ ತಮ್ಮ ಮತ್ತೊಂದು ಸೂತ್ರದಲ್ಲಿ (II.1) ತಪಸ್ಸು ಕ್ರಿಯಾಯೋಗವನ್ನು ಕೈಗೊಳ್ಳಲು ಅವಶ್ಯಕವೆಂದು ಹೇಳುತ್ತಾರೆ. ಕರ್ಮಯೋಗವೇ ತಪಸ್ಸು, ಸ್ವಾಧ್ಯಾಯ ಮತ್ತು ದೈವಭಕ್ತಿ, ತಪಸ್ಸನ್ನಾಚರಿಸದವರಿಗೆ ಯೋಗವನ್ನು ಸಾಧಿಸಲಾಗದು. ಸತತವಾಗಿ ಸುಖಭೋಗಗಳ ಜಾಲಕ್ಕೆ ಅಂಟಿಕೊಳ್ಳುವುದರ ಮೂಲಕ ವಿಷಯಸುಖಕ್ಕೆ ಬಲಿಯಾಗುವುದು ಮಾನವನ ಸಹಜ ಸ್ವಭಾವ. ನಮ್ಮ ಮನಸ್ಸನ್ನು ಬಹಿರ್ಮುಖಗೊಳಿಸುತ್ತಿರುವ ಇಂದ್ರಿಯಗಳನ್ನು ನಿಯಂತ್ರಿಸುವುದೇ ತಪಸ್ಸು. ಇಂದ್ರಿಯಗಳು ಹಾಗೂ ಕೆಳಮನಸ್ಸು ಏನನ್ನು ಮಾಡಲು ನಮ್ಮನ್ನು ಪ್ರೇರೇಪಿಸುವುದೋ ಅದಕ್ಕೆ ತದ್ವಿರುದ್ಧವಾದುದನ್ನು ಮಾಡಬೇಕು.

**ಶೌಚ ಸಂತೋಷ ತಪಃ ಸ್ವಾಧ್ಯೇಯೇಶ್ವರ ಪ್ರಣೀಧಾನಾನಿ (ಯೋಗದರ್ಶನಂ 2.32)**

**ಕಾರ್ಯೇಂದ್ರಿಯ ಸಿದ್ಧಿರಶುದ್ಧಿ ಕ್ಷಯತ್ತಾಪಸಃ (2.43)**

**ತಪಃ ಸ್ವಾಧ್ಯಾಯ ಈಶ್ವರ ಪ್ರಣೀಧಾನಾನಿ ಕ್ರಿಯಾಯೋಗಃ(II.1)**

**ಕರ್ಮಾಚರಣೆಯ ಅಭ್ಯಾಸದ ರೂಪದಲ್ಲಿ ತಪಸ್ಸು:** ಮೇಲಿನ ಸೂತ್ರಗಳಿಗೆ ಟೀಕೆಯನ್ನು ಬರೆದಿರುವ ಟೀಕಾಕಾರರು ಸಾಂಪ್ರದಾಯಿಕ ಕರ್ಮಾಚರಣೆಯ ನಿತ್ಯಾನುಷ್ಠಾನವನ್ನೂ ತಪಸ್ಸು ಎಂದು ಹೇಳಿದ್ದಾರೆ. ಆರಂಭದಲ್ಲಿ ವ್ಯಕ್ತಿಯ ಚಂಚಲ ಮನಸ್ಸಿಗೆ ಅತ್ಯುತ್ತಮ ತರಬೇತಿಯಂತೆ ಈ ನಿತ್ಯಾನುಷ್ಠಾನಗಳು ಪ್ರತಿಯೊಂದು ಕರ್ಮವು ಮನಸ್ಸಿಗೆ ಆ ಕರ್ಮದ ಹಿಂದಿನ ಭಾವವನ್ನು ನೆನಪಿಸುತ್ತದೆ. ಆಗ ವ್ಯಕ್ತಿ ಬೇರೆ ಬೇರೆ ಆಲೋಚನೆಯನ್ನು ಮಾಡಲಾಗದಷ್ಟು ಕರ್ಮನಿರತನಾಗಿರುತ್ತಾನೆ. ಆಲೋಚನೆ ಮತ್ತು ಕರ್ಮ, ಕರ್ಮ ಮತ್ತು ಆಲೋಚನೆ– ಇವೆರಡು ನಿರಂತರ ಸರಪಳಿಯಂತೆ. ಆದ್ದರಿಂದ ಪ್ರಾರಂಭದಿಂದಲೇ ಕರ್ಮಾನುಷ್ಠಾನದಿಂದ ಸಾಕಷ್ಟು ಉತ್ತಮ ಮಟ್ಟದ ಏಕಾಗ್ರತೆ ಲಭಿಸುವುದು ಆಶ್ಚರ್ಯದ ಸಂಗತಿಯೆ. ದೇವರನ್ನು ಪುಷ್ಪಗಳಿಂದ ಸುಗಂಧ ದ್ರವ್ಯಗಳಿಂದ ಹಾಗೂ ಇನ್ನಿತರ ಪೂಜಾ ಸಾಮಗ್ರಿಗಳಿಂದ ಆರಾಧಿಸುವುದು, ವ್ರತಾನುಷ್ಠಾನ, ಯಜ್ಞ–ಇವೆಲ್ಲವುಗಳಿಂದ ನಮ್ಮ ಮನಸ್ಸು ನಿಧಾನವಾಗಿ ದೇವರಲ್ಲಿ ಏಕಾಗ್ರತೆಗೊಡು ಆರಾಧನೆಯಿಂದ ಆನಂದವು ಲಭಿಸುತ್ತದೆ. ಅಶಾಶ್ವತವಾದ ಆಸೆಗಳನ್ನು ಇದರ ಮೂಲಕ ಗೆಲ್ಲಲು ಸಾಧ್ಯವಾಗಿ ಸರಿಯಾದ ಜ್ಞಾನ ಹಾಗೂ ಅರಿವಿನಿಂದ, ಸೂಕ್ತವಾದ ತರ್ಕ ಹಾಗೂ ವಿವೇಕದಿಂದ ಬುದ್ಧಿಯು ಒಂದೊಂದು ಹೆಜ್ಜೆಯನ್ನಿಡಲು ಸಾಧ್ಯವಾಗುತ್ತದೆ. ಸ್ವಲ್ಪ ಕಷ್ಟವನ್ನು ಅನುಭವಿಸುವುದರಿಂದ ಹಾಗೂ ಎಲ್ಲಾ ಬದಲಾವಣೆ ಹಾಗೂ ಸಂಕಷ್ಟಗಳನ್ನು ಸಹಿಸುವುದರಿಂದ ಮನಸ್ಸು ಶಕ್ತಿಯುತವಾಗುವುದಲ್ಲದೆ ದೇಹವನ್ನು ನಿಯಂತ್ರಿಸುವ ಶಕ್ತಿಯೂ ಅಧಿಕಗೊಳ್ಳುತ್ತದೆ. ಇದರಿಂದ ದೇಹ ಮನಸ್ಸಿಗೆ ಅಡಿಯಾಳಾಗಿ ನಿಲ್ಲುತ್ತದೆ. ಇದು ತಪಸ್ಸು. ಇದನ್ನು ಹೆಚ್ಚು ಹೆಚ್ಚು ಆಚರಿಸಿದಷ್ಟು ನಾವು ಹೆಚ್ಚು ಹೆಚ್ಚು ಶಕ್ತಿ, ಇಚ್ಛಾಶಕ್ತಿ, ಸ್ಪಷ್ಟದೃಷ್ಟಿ ಹಾಗೂ ವಿವೇಚನಾಶಕ್ತಿ–ಇವುಗಳನ್ನು ಪಡೆಯುತ್ತೇವೆ.

**ಭಗವದ್ಗೀತೆಯಲ್ಲಿ ತಪಸ್ಸು:** ಭಗವದ್ಗೀತೆಯಲ್ಲಿ ತಪಸ್ಸನ್ನು ದೈಹಿಕ, ವಾಚಿಕ, ಹಾಗೂ ಮಾನಸಿಕ ತಪಸ್ಸುಗಳೆಂದು ವಿಂಗಡಿಸಲಾಗಿದೆ. ದೈವ, ಗುರು, ಋಷಿಗಳು, ದೃಷ್ಟಾರರು ಇವರುಗಳಲ್ಲಿ ಗೌರವಭಕ್ತಿ, ಅಹಿಂಸೆ, ಆರ್ಜವ, ಬ್ರಹ್ಮಚರ್ಯ, ದೈಹಿಕಶುದ್ಧತೆ– ಇವುಗಳ ಆಚರಣೆಯನ್ನು ಶಾರೀರಿಕ ತಪಸ್ಸು ಎಂದು ಹೇಳಲಾಗಿದೆ.

ಮತ್ತೊಬ್ಬರಿಗೆ ನೋವಾಗದಂತೆ ಮಾತನಾಡುವುದು, ಸತ್ಯಭಾಷಣೆ, ಸದಾ ಸೌಮ್ಯವಾದುದನ್ನು ಹಿತಕರವಾದುದನ್ನು ನುಡಿಯುವುದು, ನಿತ್ಯ ಧರ್ಮಗ್ರಂಥಗಳನ್ನು ಅಧ್ಯಯನ ಮಾಡುವುದು– ಇವೆಲ್ಲವನ್ನು ವಾಚಿಕ ತಪಸ್ಸು ಎಂದು ಹೇಳಲಾಗಿದೆ.

ಮನಃ ಪ್ರಶಾಂತತೆ, ಕರುಣೆ, ಆತ್ಮನ ಮೇಲೆ ಧ್ಯಾನಿಸುವುದು, ವಿಷಯ ವಸ್ತುಗಳಿಂದ ಮನಸ್ಸನ್ನು ಹಿಂತೆಗೆದುಕೊಳ್ಳುವುದು, ಭಾವಸಂಶುದ್ಧಿ–ಇವುಗಳ ಆಚರಣೆ ಮಾನಸಿಕ ತಪಸ್ಸು ಎಂದು ಹೇಳಲಾಗಿದೆ.

ಮೇಲೆ ಹೇಳಿರುವ ಕಾಯಿಕ, ವಾಚಿಕ ಹಾಗೂ ಮಾನಸಿಕ

Digitised by Bharatavani, CIIL

ತಪಸ್ಸುಗಳನ್ನು ಪುನಃ ಸಾತ್ವಿಕ ರಾಜಸಿಕ ಮತ್ತು ತಾಮಸ ತಪಸ್ಸುಗಳೆಂದು ವಿಂಗಡಿಸಲಾಗಿದೆ. ಫಲಾಪೇಕ್ಷೆಯಿಲ್ಲದೆ ಯೋಗಿಗಳಿಂದ ಪರಮಶ್ರದ್ಧೆಯಿಂದ ಆಚರಿಸಲ್ಪಡುವ ಸಾತ್ವಿಕ ತಪಸ್ಸು ಎಂದು ಕರೆಯಲಾಗಿದೆ. & ಅಸ್ಥಿರವೂ ಹಾಗೂ ಅಶಾಶ್ವತವೂ ಅದ ಫಲವುಳ್ಳ ಮತ್ತು ಗೌರವ, ಮಾನ್ಯತೆ ಹಾಗೂ ಆಡಂಬರಕ್ಕಾಗಿ ಮಾಡುವ ತಪಸ್ಸನ್ನು ರಾಜಸಿಕ ತಪಸ್ಸು ಎನ್ನಲಾಗಿದೆ. ಮನಸ್ಸು, ದೇಹ ಹಾಗೂ ಇಂದ್ರಿಯಗಳ ಪೀಡನೆಯಿಂದ ಮಾಡುವ ಅಥವಾ ಮತ್ತೊಬ್ಬರಿಗೆ ಹಾನಿ ತರುವ ಉದ್ದೇಶವನ್ನಿಟ್ಟುಕೊಂಡು ತಪ್ಪು ಗ್ರಹಿಕೆಯಿಂದ ಆಚರಿಸುವ ತಪಸ್ಸು ತಾಮಸಿಕ ತಪಸ್ಸು (ಗೀತೆ 17.17–19)

**ದೇವದ್ವಿಜಗುರುಪ್ರಾಜ್ಞ ಪೂಜನಂ ಶೌಚಮಾರ್ಜವಂ**

**ಬ್ರಹ್ಮಚರ್ಯಂ ಅಹಿಂಸಾ ಚ ಶಾರೀರಂ ತಪಉಚ್ಯತೆ(ಗೀತಾ 17/14)**

**ಅನುದ್ವೇಗಕರಂ ವಾಕ್ಯಂ ಸತ್ಯಂಪ್ರಿಯ ಹಿತಂಯತ್**

**ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೆ (ಗೀತಾ 17/15)**

**ಮನಃ ಪ್ರಸಾದಃ ಸೌಮ್ಯತ್ವಂ ಮೌನಂ ಆತ್ಮವಿನಿಗ್ರಹಃ**

**ಭಾವ ಸಂಶುದ್ಧಿರಿತ್ಯೇತತ್ ತಪೊ ಮಾನಸಮುಚ್ಯತೆ (ಗೀತಾ 17/16)**

**ಶ್ರದ್ಧಯಾ ಪರಯಾ ತಪಂ ತಪಸ್ತತ್ ತ್ರಿವಿಧಂ ನರೈಃ**

**ಅಫಲಾಕಾಂಕ್ಷಿಭಿರ್ಯುಕ್ತೈಃ ಸಾತ್ವಿಕಂ ಪರಿಚಕ್ಷ್ಯತೆ (ಗೀತಾ 17/17)**

**ಸತ್ಕಾರ ಮಾನ ಪೂಜಾರ್ಥಂ ತಪೊ ದಂಭೇನ ಚೈವಯತ್**

**ಕ್ರಿಯತೆ ತದಿತಿ ಪ್ರೋಕ್ತಂ ರಾಜಸಂ ಚಲಿಮಧ್ರುವಂ(ಗೀತಾ 17/18)**

**ಮೂಢಗ್ರಾಹೇಣಾತ್ಮನೊ ಯತ್ಪೀಡಯಾ ಕ್ರಿಯತೆತಪಃ**

**ಪರಸ್ಯೋತ್ಸಾದನಾರ್ಥಂ ವಾ ತತ್ತಾಮಸಮುದಾಹೃತಂ (ಗೀತಾ 17/19)**

**ಮಹಾಭಾರತದ ಇನ್ನಿತರ ಅಧ್ಯಾಯಗಳಲ್ಲಿ ವಿವರಿಸಿರುವಂತೆ ತಪಸ್ಸು:** ಚಿತ್ತೈಕಾಗ್ರತೆ ಮತ್ತು ಇಂದ್ರಿಯಗಳ ಮೇಲೆ ಸಂಪೂರ್ಣ ಹತೋಟಿ– ಇವೇ ತಪಸ್ಸು ಎಂದು ಮಹಾಭಾರತದಲ್ಲಿ ಸ್ಪಷ್ಟವಾಗಿ ಹೇಳಿದೆ. ಸ್ಥೂಲ–ಸೂಕ್ಷ್ಮ ಶರೀರಗಳನ್ನು ಶುದ್ಧೀಕರಿಸಿ ಅಹಿಂಸೆ, ಸತ್ಯ, ಮತ್ತೊಬ್ಬರಿಗೆ ಹಿತವನ್ನು ಬಯಸುವುದು, ದ್ವೇಷರಾಹಿತ್ಯತೆ ಮುಂತಾದುವುಗಳಿಂದ ಅವುಗಳನ್ನು ಹತೋಟಿಗೆ ತರಬೇಕು. ಇಂಥ ಸಂಯಮಗಳಿಂದ ಅಮಚಿತ್ತತೆ ಲಭಿಸುತ್ತದೆ.

ವ್ಯಾಸ ಮಹರ್ಷಿಗಳ ಪ್ರಕಾರ ದೇಹ ಮತ್ತು ಮನಸ್ಸುಗಳನ್ನು ಮುನ್ನಡೆಸುವಾಗ ಅವುಗಳ ಲಗಾಮನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವುದೇ ತಪಸ್ಸು, ಇದರ ಅರ್ಥ ಹಿಂಸೆ ಎಂದಲ್ಲ. ದ್ವೇಷಾಸೂಯೆ, ಭಯ, ಹಿಂಸೆ ಇವೆಲ್ಲವೂ ಮನಸ್ಸಿನ ವಿರೂಪಗೊಂಡ ಸ್ಥಿತಿಯಾಗಿದ್ದು ನಮ್ಮ ಬಹಳಷ್ಟು ದೈಹಿಕ ಹಾಗೂ ಮಾನಸಿಕ ಖಾಯಿಲೆಗಳ ಮೂಲವಾಗಿದೆ. ದ್ವೇಷ, ಕೋಪ, ಹಿಂಸೆ, ಇತ್ಯಾದಿ ರೂಪಗಳಲ್ಲಿ ನಾವು ತೋರುವ ಪ್ರತಿಕ್ರಿಯೆ, ದೇಹ ಮತ್ತು ಮನಸ್ಸುಗಳ ಶಕ್ತಿ ವ್ಯಯವೇ ಆಗಿದ್ದು ಪ್ರತಿಬಾರಿಯೂ ಅಂಥ ಪ್ರತಿಕ್ರಿಯೆಯನ್ನು ತೋರದೆ ಸಂಯಮದಿಂದ ಇದ್ದಲ್ಲಿ ಹಿತಕರ ಶಕ್ತಿ ಸಂಚಯನವಾಗುತ್ತದೆ. ಅಲ್ಲದೆ ಅದನ್ನು ಉದಾತ್ತ ಶಕ್ತಿಗಳಾಗಿ ಪರಿವರ್ತಿಸಲು ನಮಗೆ ಸಾಧ್ಯವಾಗುತ್ತದೆ. ಆದ್ದರಿಂದ ಮಹರ್ಷಿ ವ್ಯಾಸರು ನಮ್ಮ ಹೃದಯಶುದ್ಧಿ ಮತ್ತು ಮನಶ್ಯಾಂತಿಯನ್ನು ಸಾಧ್ಯವಾಗಿಸುವಂಥ ಮನೋದೃಷ್ಟಿಯನ್ನು ನಾವು ಹೊಂದಬೇಕೆಂದು ಆಶಿಸುತ್ತಾರೆ. ಮಹಾಭಾರತದಲ್ಲಿ ತಪಸ್ಸನ್ನು ಈ ರೀತಿ ಗ್ರಹಿಸಲಾಗಿದೆ.

ಮನಶ್ಚೇಂದ್ರಿಯಾಣಾಂ ಚಾಪ್ಯೇಕಾಗ್ರ್ಯಂ ನಿಶ್ಚಿತಂ ತಪಸ್ (ವನಪರ್ವ 260/025) (ಅಂದರೆ ಚಿತ್ತೈಕಾಗ್ರ್ಯತೆ ಮತ್ತು ಇಂದ್ರಿಯಗಳ ಸಂಪೂರ್ಣ ನಿಯಂತ್ರಣವೇ ತಪಸ್ಸು).

**ಅಹಿಂಸಾ ಸತ್ಯವಚನಮ್ ಶಮಸ್ಯಂ ದಮೋಘೃಣಾ ಏತತ್‌ತಪಃ**

**ವಿದುರ್ಧೀರಾಃ ನ ಶರೀರಸ್ಯ ಶೋಷಣಂ (ಶಾಂತಿ ಪರ್ವ 70/18)**

**(ಅಹಿಂಸೆ, ಸತ್ಯ, ಮತ್ತೊಬ್ಬರಿಗೆ ತೊಂದರೆ ಕೊಡದಿರುವುದು, ಮನೋನಿಯಂತ್ರಣ, ದ್ವೇಷವಿಲ್ಲದಿರುವಿಕೆ–ಇವೇ ತಪಸ್ಸಿನ ಅಂಗಗಳೇ ಹೊರತು ಕೇವಲ ಶರೀರ ಪೀಡನೆಯಲ್ಲ)**

**ಯೇ ಪಾಪಾಗಿ ನ ಕುರ್ವಂತಿ ಮನೋವಾಕ್ಕರ್ಮಬುದ್ಧಿಭಿಃ**

**ತೇ ತಪಂತಿ ಮಹಾತ್ಮಾನೊ ನ ಶರೀರಸ್ಯ ಶೋಷಣಂ (ವನಪರ್ವ202/29)**

**(ಮನಸ್ಸು, ವಚನ, ಕರ್ಮ ಮತ್ತು ಬುದ್ಧಿಗಳ ಮೂಲಕ ಯಾವ ಪಾಪವನ್ನು ಮಾಡದಿರುವ ಮಹಾತ್ಮರು ತಪಸ್ಸನ್ನಾಚರಿಸಿದಂತಾಗುತ್ತದೆ. ತಪಸ್ಸೆಂದರೆ ಶರೀರ ಪೀಡನೆಯಲ್ಲ)**

**ಮಹಾನ್ ಸಾಧುವಿನಿಂದ ಮನುಕುಲಕ್ಕೆ ಸತ್ಕರ್ಮವು ನಡೆಯಬೇಕು.**

**ಮನುಸ್ಮೃತಿಯ ಪ್ರಕಾರ ತಪಸ್ಸು:** ಸಚ್ಚಾರಿತ್ರ್ಯವೇ (Good conduct) ತಪಸ್ಸೆಂದು ಮನು ಹೇಳುತ್ತಾನೆ. ಸಚ್ಚಾರಿತ್ರ್ಯವಿಲ್ಲದೆ, ಸದ್ವರ್ತನೆಯಿಲ್ಲದೆ ಮಾತಾಪಿತೃಗಳ ಪೂಜೆಸೇವೆಗಳನ್ನು ಮಾಡದೆ ತನ್ನ ಕರ್ತವ್ಯವನ್ನು ಪಾಲಿಸದೆ ಮಾಡಿದ ತಪಸ್ಸು ನಿರರ್ಥಕ. ಇವುಗಳನ್ನು ಯಥೋಚಿತವಾಗಿ ಕೈಗೊಂಡಲ್ಲಿ ಮತ್ತಾವ ತಪಸ್ಸಿನ ಅಗತ್ಯವೂ ಇಲ್ಲ. ಈ ರೀತಿಯ ತಪಸ್ಸು ಮಾನವ ಮಾತ್ರರಿಗಲ್ಲದೆ ದೇವದೇವತೆಗಳಿಗೂ ಆನಂದವನ್ನು, ಸಂತೋಷವನ್ನುಂಟು ಮಾಡುವುದು. ಜೀವನದ ಪರಮಧ್ಯೇಯವನ್ನು ಸಾಧಿಸುವ ದಿಶೆಯಲ್ಲಿ ಕೈಗೊಳ್ಳುವ ಸರ್ವ ಪ್ರಯತ್ನಗಳ ಆದಿ ಮಧ್ಯಾಂತವೇ ತಪಸ್ಸು. ದುರಾಲೋಚನೆಯುಳ್ಳವರು ಎಂದಿಗೂ ಸಫಲತೆಯನ್ನು ಪಡೆಯಲಾರರು.

**ಸರ್ವಸ್ಯತಪಸೋ ಮೂಲಮಚರಂ ಜಗುಃ ಪರಂ (ಮನು 1/110)**

**(ಸರ್ವ ತಪಸ್ಸಿನ ಮೂಲ ಸಚ್ಚಾರಿತ್ರ್ಯ)**

**ವೇದಸ್ತ್ಯಗಶ್ಚ ಯಜ್ಞಶ್ಚ ನಿಯಮಶ್ಚ ತಪಾರಿಸ ಚ**

**ನ ವಿಪ್ರದುಷ್ಟಭಾವಸ್ಯ ಸಿದ್ಧಿಂ ಗಚ್ಛಂತಿ ಕರ್ಹಿಚಿತ್ (ಮನುಸ್ಮೃತಿ 2/97)**

Digitised by Bharatavani, CIIL

**(ದುರಾಲೋಚನೆಯುಳ್ಳವರ ತಪಸ್ಸು ಎಂದಿಗೂ ಸಫಲವಾಗುವುದಿಲ್ಲ)**

**ತೇಷ್ವೇವ ತ್ರಿಸು ತುಷ್ಟೇಷು ತಪ: ಸರ್ವಂ ಸಮಾಪ್ಯತೆ**

**ತೇಷಾಂ ತ್ರಯಾಣಾಂ ಶುಷ್ರೂಷಾ ಪರಮಾಂತಪುಚ್ಯತೆ(ಮನುಸ್ಮೃತಿ 2.228)**

(ತಂದೆತಾಯಿ ಹಾಗೂ ಗುರುಗಳನ್ನು ಸಂತುಷ್ಟಿಪಡಿಸಲು ಮಾಡುವ ಸೇವೆಯೆ ಮಹಾತಪಸ್ಸು. ಈ ಮೂವರು ಸಂತುಷ್ಟರಾದಲ್ಲಿ ಇನ್ನಾವ ತಪಸ್ಸು ಬೇಕಾಗಿಲ್ಲ)

ತಪೋಮೂಲಮಿದಂ ಸರ್ವಂ ದೈವಮಾನುಷಕಂ ಸುಖಂ

ತಪೋಮಧ್ಯಂ ಬುಧೈಃ ಫ್ರೋಕ್ತಂ ತಪೋಂತಂ ವೇದದರ್ಶಿಭಿಃ (ಮನುಸ್ಮೃತಿ 11/234)

(ಯಾವುದು ದೇವತೆಗಳಿಗೆ ಹಾಗೂ ಮಾನವರಿಗೆ ಪ್ರಸನ್ನಕರವಾಗಿದೆಯೋ ಅದರ ಮೂಲದಲ್ಲಿ ತಪಸ್ಸಿದೆ.

ಜ್ಞಾನಿಗಳು ತಪಸ್ಸು ಮಾಧ್ಯಮವೆಂದು ಹೇಳಿದರೆ ವೇದದರ್ಶಿಗಳು ತಪಸ್ಸೆ ಅಂತ್ಯವೆಂದು ಹೇಳಿದ್ದಾರೆ)

ಆದ್ದರಿಂದ ಧ್ಯೇಯವನ್ನು ನಾವು ಮಾಡುವ ಸರ್ವ ಪ್ರಯತ್ನಗಳ ಆದಿ ಮಧ್ಯಾಂತವು ತಪಸ್ಸೇ ಆಗಿದೆ.

**ಸಮಾಜದ ವಿವಿಧ ವರ್ಗದವರಿಗೆ ತಪಸ್ಸು:** ಮನು ಜನ್ಮದ ಆಧಾರದ ಮೇಲಿನ ವರ್ಗ ವಿಂಗಡಣೆಯನ್ನು ಒಪ್ಪುವುದಿಲ್ಲ. ಆದರೆ ಸಮಾಜದ ಅಸ್ತಿತ್ವಕ್ಕೆ ಅಗತ್ಯವಾದ ವಿವಿಧ ವೃತ್ತಿಗಳ ಆಧಾರದ ಮೇಲಿನ ವರ್ಗ ವಿಂಗಡಣೆಯನ್ನು ಒಪ್ಪುತ್ತಾರೆ. ಸಮಾಜದ ಈ ವರ್ಗಗಳು ಯಾವುವೆಂದರೆ ಬುದ್ಧಿಜೀವಿಗಳು (academicians) ಯುದ್ಧ ಮಾಡುವವರು (warriors), ವ್ಯಾಪಾರಿಗಳು ಮತ್ತು ಸೇವಾಕಾರ್ಯದಲ್ಲಿ ತೊಡಗಿರುವವರು. ಮಹಾಭಾರತದಲ್ಲಿ ಹೇಳಿರುವಂತೆ ಮನುಸ್ಮೃತಿಯೂ ಇಂಥ ಪ್ರತಿಯೊಂದು ವರ್ಗದ ಜನರಿಗೆ ವಿವಿಧ ಕರ್ತವ್ಯಗಳನ್ನು ಕಾರ್ಯಗಳನ್ನು ವಿಧಿಸುತ್ತದೆಯಲ್ಲದೆ ಈ ಕರ್ತವ್ಯಗಳನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುವುದನ್ನು ತಪಸ್ಸು ಎಂದು ಪರಿಗಣಿಸುತ್ತದೆ. ಆದ್ದರಿಂದ ಬ್ರಾಹ್ಮಣನಿಗೆ ವಿದ್ಯಾರ್ಜನೆ ತಪಸ್ಸಾದರೆ ಪ್ರಜೆಗಳನ್ನು ರಕ್ಷಿಸುವುದು ಕ್ಷತ್ರಿಯನಿಗೆ ತಪಸ್ಸು. ಕೃಷಿ, ವ್ಯಾಪಾರಗಳು ವೈಶ್ಯನಿಗೆ ತಪಸ್ಸಾದರೆ ಶೂದ್ರನಿಗೆ ಸೇವೆಯೆ ತಪಸ್ಸು.

ಬ್ರಾಹ್ಮಣಸ್ಯ ತಪೋ ಜ್ಞಾನಂ ತಪಃ ಕ್ಷಾತ್ರಸ್ಯ ರಕ್ಷಣಂ

ವೈಶಸ್ಯ ತು ತಪೋ ವರ್ತ ತಪಃ ಪರಮಹಿಯೋಚ್ಯತೆ (ಮನುಸ್ಮೃತಿ 2/166)

ಮನುಸ್ಮೃತಿಯ ಪ್ರಕಾರ, ಬಾಳಿನಲ್ಲಿ ಏನನ್ನಾದರೂ ಸಾಧಿಸಬೇಕಾದರೆ ತಪಸ್ಸು ಅಪರಿಹಾರ್ಯ. ದೇಹಮನಸ್ಸುಗಳನ್ನು ಶುದ್ಧಿಯ ಸಾಧನದಂತಿರುವ ತಪಸ್ಸಿನಿಂದ ಅತ್ಯಂತ ಕಷ್ಟಕರವಾದ ಕಾರ್ಯವನ್ನು ಸಾಧಿಸಬಲ್ಲೆವು.

**ಯದ್ದುಸ್ತರಂ ಯದ್ದುರಾಪಂ ಯದ್ದುರ್ಗಂ ಯಚ್ಚ ದುಷ್ಕರಂ**

**ಸರ್ವಂ ತು ತಪಸಾ ಸಾಧ್ಯಂ ತಪೋ ಹಿ ದುರಾತ್ರಕ್ರಮಂ(ಮನುಸ್ಮೃತಿ11/238)**

(ದುಸ್ತರವೂ, ದುಸ್ಸಾಧ್ಯವೂ, ಸಮೀಪಿಸಲು ದುಸ್ಸಾಧ್ಯವೂ, ದುಷ್ಕರವೂ ಆದುವುಗಳನ್ನು ತಪಸ್ಸಿನಿಂದ ಮಾತ್ರ ಸಾಧಿಸಬಹುದು. ವಾಸ್ತವವಾಗಿ ತಪಸ್ಸು ಅಪರಿಹಾರ್ಯವಾದುದು)

ಸದ್ವರ್ತನೆ ಮತ್ತು ಸೇವೆ ಸಾಮಾನ್ಯವಾಗಿ ಸಾರ್ವಜನಿಕವಾಗಿ ಬಹುಮುಖ್ಯ ಆದರೆ ಮನು ಅಲ್ಲಿಗೆ ನಿಲ್ಲುವುದಿಲ್ಲ. ಯೋಗಸಿದ್ಧಿಯನ್ನು ಗಳಿಸಲು ಪ್ರಾಣಾಯಾಮದಂಥ ವಿವಿಧ ಮೆಟ್ಟಿಲುಗಳನ್ನು ಆತನು ವಿವರಿಸಿದ್ದಾನೆ.

ಪ್ರಾಣಾಯಾಮಃ ಬ್ರಾಹ್ಮಣಸ್ಯ ತ್ರಯೋಪಿ ವಿಧಿವಸ್ಕೃತಃ

ವ್ಯಾಹೃತಿ ಪ್ರಣವೈರ್ಯುಕ್ತ ವಿಜ್ಞೇಯಂ ಪರಮಂತಪಃ (ಮನುಸ್ಮೃತಿ 6.70)

(ಪ್ರಾಣಾಯಾಮದ ರೇಚಕ, ಕುಂಭಕ ಮತ್ತು ಪೂರಕಗಳು ಏಳುವಿಧದ ವ್ಯಾಹೃತಿಗಳು ಓಂಕಾರದ ಹತ್ತು ವಿಧದ ಉಚ್ಚಾರಣೆ–ಇವೆಲ್ಲವೂ ಕೂಡಿ ತಪಸ್ಸಿನ ಭಾಗವಾಗಿದೆ)

**ಮನು ಹೀಗೂ ಹೇಳಿದ್ದಾನೆ:**

ಗ್ರೀಷ್ಮೆ ಪಂಚ ತಪ್ತಸ್ತು ಸ್ಯಾದ್ವರ್ಷಸ್ವ ಭ್ರುವಕಾಶಿಕಃ

ಆರ್ದವಸಸ್ತುಹೇಮಂತೆ ಕ್ರಮಶೊ ವರ್ಧಯಾನ್‌ಸ್ತಪಃ (ಮನುಸ್ಮೃತಿ 6.23)

ಉಪಸ್ಪೃಷಮಸ್ತ್ರಿಸವನಂ ಪಿತೃನ್ದೇವಂಶ್ಚ ತರ್ಪಯೇತ್

ತಪಶ್ಚರಂಶ್ಚೋಗ್ರತರಂ ಶೋಷಯೇದ್ದೇಹ ಮಾತ್ಮನಃ(ಮನುಸ್ಮೃತಿ 6.24)

(ಬೇಸಿಗೆಯಲ್ಲಿ ಸುತ್ತಲೂ ನಾಲ್ಕು ದಿಕ್ಕುಗಳಲ್ಲೂ ಅಗ್ನಿ ಹಾಗೂ ಮೇಲೆ ಸೂರ್ಯ – ಇವುಗಳನ್ನು ಸಹಿಸಿಕೊಳ್ಳುವುದು, ಮಳೆಯಲ್ಲಿ ನಿಂತುಕೊಳ್ಳುವುದು, ಚಳಿಗಾಲದಲ್ಲಿ ತಣ್ಣನೆ ಬಟ್ಟೆ ತೊಡುವುದು, ದೇವತೆಗಳನ್ನು ಪಿತೃಗಳನ್ನು ತೃಪ್ತಿಪಡಿಸುವುದು, ಅತಿ ಕಷ್ಟಕರವಾದ ತಪಸ್ಸನ್ನಾಚರಿಸುವುದು–ಇವೆಲ್ಲವುಗಳಿಂದ ದೇಹವನ್ನು ದಂಡಿಸಬೇಕು).

ವಾಸ್ತವದಲ್ಲಿ ನಮ್ಮಿಚ್ಛೆಯಂತೆ ಸರಿಹೊಂದಿಸಿಕೊಳ್ಳಬಲ್ಲ ಯಂತ್ರದಂತೆ ಈ ದೇಹ. ಸತ್ಕರ್ಮ ಹಾಗೂ ಕರ್ತವ್ಯ ಪಥದಲ್ಲಿ ಕ್ರಮಿಸುತ್ತಿರುವವರಿಗೆ ಇಂಥ ಸರಿಹೊಂದಾಣಿಕೆ ಮಾಡಿಕೊಳ್ಳಬಲ್ಲ ಸಾಮರ್ಥ್ಯ ಅತ್ಯಗತ್ಯ. ಸಂಕಷ್ಟಗಳನ್ನು ಸಹಿಸಿಕೊಳ್ಳುವುದರಿಂದ ಮನಸ್ಸು ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತದೆಯಲ್ಲದೆ ಅಶಾಂತ ಸ್ಪಂದನ (disturbing vibrations) ಗಳಿಗೆ ಹೆಚ್ಚು ಹೆಚ್ಚು ಸಂವೇದಿ (susceptible) ಯಾಗುತ್ತದೆ. ಸೃಷ್ಟಿಯ ರಹಸ್ಯ ಮತ್ತು ವೇದಗಳ ಆವಿರ್ಭಾವಗಳನ್ನು ಕುರಿತು ಮನು ವಿವರಿಸಿದ್ದಾನೆ. “ಭಗವಂತ ಜ್ಞಾನವನ್ನು ಸೃಷ್ಟಿಸಿದ ಋಷಿಗಳಿಗೆ ಅದನ್ನು ತಪಸ್ಸಿನ ಮೂಲಕ

Digitised by Bharatavani, CIIL

ಮಾತ್ರ ಗ್ರಹಿಸಲು ಶಕ್ತವಾಯಿತು" (ಮನುಸ್ಮೃತಿ 11.243).

**ವೇದ ಸಾಹಿತ್ಯದಲ್ಲಿ ತಪಸ್ಸು:** ಸೃಷ್ಟಿಯ ಆವಿರ್ಭಾವದ ಪ್ರಕ್ರಿಯೆಯನ್ನು ವಿವರಿಸುವ ಹಲವಾರು ಪ್ರಕರಣ (References) ಗಳು ವೇದದಲ್ಲಿ ಬರುವುವು. ತಪಸ್ಸಿನ ಶಾಖದ ಬಲದಿಂದ ಒಂದು ವ್ಯವಸ್ಥೆ (law and order) ಮತ್ತು ಸತ್ಯಗಳು ಜನಿಸಿದವು. ನಂತರ ರಾತ್ರಿಗಳು ಜನ್ಮತಾಳಿದವು. ಅದಾದನಂತರ ಸದಾ ಹರಿಯುವ ಸಾಗರಗಳ ಸೃಷ್ಟಿಯಾಯಿತು. ಅದಾದ ಮೇಲೆ ಕಾಲ ಉದಿಸಿತು. ಹೀಗೆ ಸೃಷ್ಟಿಯು ಮೊದಲುಗೊಂಡಿತು. ಪ್ರಜ್ಞಾಬಲದ ಸಾಮರ್ಥ್ಯದ ರೂಪದಲ್ಲಿ ಕೇಂದ್ರೀಕೃತ ಪ್ರಜ್ಞೆಯು ಯಾವಾಗಲೂ ಅಸ್ತಿತ್ವದ ನಿರಂತರತೆಯಲ್ಲಿ ನೆಲೆಗೊಂಡಿರುವುದು. ಈ ಕೇಂದ್ರೀಕೃತ ಪ್ರಜ್ಞೆಯೇ ತಪಸ್ಸು. ಈ ವಿಷಯವನ್ನು ವೇದಗಳು ಸ್ಪಷ್ಟಪಡಿಸಲು ಇಚ್ಛಿಸುತ್ತವೆ.

ಯತಂ ಚ ಸತ್ತಂ ಚ ಅಭಿದ್ಧಾತ್ ತಪಸೋಧ್ಯಜಾಯತ

ತಪೋ ರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ (ಋಗ್ವೇದ, 10.190.1)

ಎಲ್ಲೆಲ್ಲಿಯೂ ಕತ್ತಲೇ ಪಸರಿಸಿತ್ತು. ಎಲ್ಲವೂ ಈ ದಟ್ಟ ಕತ್ತಲಲ್ಲಿ ಅಡಗಿಹೋಗಿತ್ತು. ಅವಲ್ಲದೇ ಮತ್ತೇನೂ ಇರಲಿಲ್ಲ. ತಪಶ್ಶಕ್ತಿಯಿಂದಲೇ ಈ ವಿಶ್ವವು ಅಸ್ತಿತ್ವಕ್ಕೆ ಬಂದಿತು(ಋಗ್ವೇದ 10.129.3). ಇದೇ ಕಲ್ಪನೆಯನ್ನು ಉಪನಿಷತ್ತುಗಳು ಪುಷ್ಟೀಕರಿಸುತ್ತವೆ. ಆತ ನಾನಾರೂಪವಾಗಲು ಇಚ್ಛಿಸಿದ. ಆತ ತಪಸ್ಸನ್ನು ಆಚರಿಸಿದ ಅದರ ಮೂಲಕ ಈ ಸಮಸ್ತ ವಿಶ್ವವನ್ನು ಸೃಷ್ಟಿಸಿದ (ತೈತ್ತೀರೀಯ ಉಪನಿಷತ್ತು 206).

ತಪಸ್ಸಿನಿಂದ ಬ್ರಹ್ಮವು ದೊಡ್ಡದಾಗುತ್ತಾ ಹೋಯಿತು. ನಂತರ ಸೃಷ್ಟಿಸಲಾರಂಭಿಸಿತು. ವಿಕಾಸವನ್ನಾರಂಭಿಸಿತು. ಅನ್ನವು ಸೃಷ್ಟಿಯಾಯಿತು. ಅನ್ನದಿಂದ ಉಸಿರು, ಮನಸ್ಸು, ಸತ್ಯ, ಸರ್ವಲೋಕಗಳು, ಕರ್ಮ ಮತ್ತು ಅಮೃತ ಜನಿಸಿದವು. ಆದ್ದರಿಂದ ತಪಸ್ಸು ಎಂದರೆ ಸೃಜನಾತ್ಮಕತೆಯ ಶ್ರೇಷ್ಠತೆ() (ಮುಂಡಕ ಉಪನಿಷತ್ತು 1.8). ತಪಸ್ಸನ್ನಾಚರಿಸಿ ಯುಗಳವನ್ನು ಸೃಷ್ಟಿಸಿತು (ಪ್ರಶ್ನೆ 1.4). ಕೇನೋಪನಿಷತ್ತು ಈ ಚರ್ಚೆಯ ಸಾರವನ್ನು ಹೇಳುತ್ತಾ ಹೀಗೆ ನಿರ್ಧರಿಸಿದೆ– ಭೌತಿಕ ದೇಹದ ಮೇಲಿನ ನಿಯಂತ್ರಣವಾದ ತಪಸ್ಸು, ಮನಸ್ಸು, ಕರ್ಮಗಳ ಮೇಲಿನ ನಿಯಂತ್ರಣವಾದವು ಹಾಗೂ ನಿಷ್ಕಾಮಕರ್ಮ–ಈ ಮೂರು ಆಧಾರಸ್ತಂಭಗಳ ಮೇಲೆ ಆತ್ಮಜ್ಞಾನದ ಅಡಿಪಾಯವು ನಿಂತಿದೆ.

ಆದ್ದರಿಂದ ಎಲ್ಲಾ ಸೃಜನಾತ್ಮಕತೆಯ ಮೂಲ ತಪಸ್ಸು. ಸಕಲ ಪ್ರಾಪಂಚಿಕ ಸುಖಗಳಿಂದ ದೂರವಾಗಿ ಮನಸ್ಸಿನ ಆಳವಾದ ಏಕಾಗ್ರತೆಯಿಲ್ಲದೆ ಯಾವ ಆವಿಷ್ಕಾರವಾಗಲಿ, ಸಂಶೋಧನೆಯಾಗಲಿ, ಸತ್ಯದ ಹುಡುಕಾಟವಾಗಲಿ ಸಾಧ್ಯವಿಲ್ಲ. ಕಠೋಪನಿಷತ್ತಿನಲ್ಲಿ ದೇಹವನ್ನು ರಥಕ್ಕೆ ಹೋಲಿಸಿ ಇಂದ್ರಿಯಗಳನ್ನು ಕುದುರೆಗಳಿಗೆ ಹೋಲಿಸಲಾಗಿದೆ. ಇಂದ್ರಿಯ ವಿಷಯಗಳನ್ನು ಪಥಕ್ಕೆ ಹೋಲಿಸಿದರೆ ಮನಸ್ಸನ್ನು ಲಗಾಮಿಗೆ ಬುದ್ಧಿಯನ್ನು ಸಾರಥಿಗೆ ಹಾಗೂ ಅತ್ಮನನ್ನು ರಥದಲ್ಲಿ ಕುಳಿತು ಸಂಚರಿಸುವವನಿಗೆ (ಅಥವಾ ರಥದ ಯಜಮಾನನಿಗೆ) ಹೋಲಿಸಲಾಗಿದೆ(ಕಠೋಪನಿಷತ್ತು 3.3.4).

ಸೃಜನಾತ್ಮಕತೆಗೆ ಬುದ್ಧಿ ಮನಸ್ಸು ಹಾಗೂ ಇಂದ್ರಿಯಗಳನ್ನು ನಿಯಂತ್ರಣದಲ್ಲಿಡಬೇಕು. ಲಗಾಮನ್ನು ಗಟ್ಟಿಯಾಗಿ ಹಿಡಿದುಕೊಂಡು ರಥವನ್ನೆಳೆಯುತ್ತಿರುವ ಕುದುರೆಗಳೆಂಬ ಇಂದ್ರಿಯಗಳು ದಿಕ್ಕಾಪಾಲಾಗಿ ಓಡಿಹೋಗದಂತೆ ನೋಡಿಕೊಳ್ಳಬೇಕು. ಅಧಿಕ ವಿವೇಚನಾಶಕ್ತಿಯುಳ್ಳವನು, ಸಂಯಮಿತ ಮನಸ್ಸುಳ್ಳವನು, ರಥದ ಪಳಗಿದ ಕುದುರೆಯಂತಿರುವ ಇಂದ್ರಿಯಗಳುಳ್ಳವನು ಆದ ಮನುಷ್ಯನು ಮಾರ್ಗದಲ್ಲಿರುವ ಅನನುಕೂಲತೆ ಅಪಾಯ ಹಾಗೂ ಸಂಕಷ್ಟಗಳಿಂದ ತಪ್ಪಿಸಿಕೊಳ್ಳುತ್ತಾ ಪ್ರಯಾಣದ ಗುರಿಯನ್ನು ತಲುಪಬಲ್ಲನು. ಇದು ತಪಸ್ಸಿನ ಫಲ ಆಗ ದೇಹ ಸೇವಕನಂತಾಗಿ, ಮನಸ್ಸು ಇಂದ್ರಿಯಗಳ ಒಡೆಯನಂತಾಗುವುದು. ಬುದ್ಧಿ ಮನಸ್ಸಿನ ನಿಯಂತ್ರಕನಾದರೆ ಬುದ್ಧಿ ಇಚ್ಛಾಶಕ್ತಿಯ ಒಡೆಯನಂತಾಗುತ್ತದೆ.

**ಅವೈದಿಕ ತತ್ವಶಾಸ್ತ್ರಗಳಲ್ಲಿ ತಪಸ್ಸು:**

**ಬೌದ್ಧ ಧರ್ಮದಲ್ಲಿ ತಪಸ್ಸು:** ಬೌದ್ಧ ಧರ್ಮ ಮತ್ತು ಜೈನ ಧರ್ಮಗಳನ್ನೊಳಗೊಂಡಂತೆ ತಪಸ್ಸು ಎಲ್ಲಾ ತತ್ವಶಾಸ್ತ್ರ ಪದ್ಧತಿಗಳಿಗೆ ಸಾಮಾನ್ಯವಾಗಿ ಅಂತರ್‌ಪ್ರವಾಹದಂತಿದೆ. ಬಾಳಿನ ವಿಕಾಸ ಮತ್ತು ನಿಜಜೀವನಕ್ಕೆ ತಾತ್ವಿಕ ಸಮಸ್ಯೆಗಳು ಯಾವ ರೀತಿಯಲ್ಲೂ ಉಪಯುಕ್ತವಲ್ಲವೆಂದು ಪರಿಗಣಿಸಿ ಮಹಾನ್‌ದೃಷ್ಟಾರನಾದ ಬುದ್ಧ ಈ ಸಮಸ್ಯೆಗಳ ಚಿಂತನೆಯಲ್ಲಿ ಸಮಯ ವ್ಯರ್ಥ ಮಾಡುವುದು/ನಿರರ್ಥಕವೆಂದು ಭಾವಿಸಿದ. ಎಲ್ಲಾ ದುಃಖಗಳಿಗೂ ಅಜ್ಞಾನವೇ ಮೂಲವೆಂದು ಆತ ಒಪ್ಪಿದ ಆದ್ದರಿಂದ ಅಜ್ಞಾನವನ್ನು ನಿವಾರಿಸಿದರೆ ದುಃಖಾಂತ್ಯ ಸಾಧ್ಯ. ಬುದ್ಧನ ಪ್ರಕಾರ ನಾವು ಜೀವಿಸುವ ಮರ್ತ್ಯ ಪ್ರಪಂಚದ ನಾಲ್ಕು ಆರ್ಯಸತ್ಯಂ(ಚತ್ವಾರಿ ಆರ್ಯ ಸತ್ವಾರಿ)ಗಳಿವೆ. ಅವು ಯಾವುವೆಂದರೆ,

i) ಬಯಸಿದ್ದನ್ನು ಮಾನವ ಪಡೆಯುವಲ್ಲಿ ಅಸಫಲನಾದಾಗ ಅದರಿಂದ ದುಃಖವುಂಟಾಗುತ್ತದೆ.

ii) ಈ ದುಃಖಗಳಿಗೆ ಕಾರಣಗಳಿವೆ

iii) ಈ ದುಃಖಗಳನ್ನು ಅಂತ್ಯಗೊಳಿಸಲು ಸಾಧ್ಯವಿದೆ

iv) ಈ ದುಃಖಗಳನ್ನು ಕೊನೆಗಾಣಿಸುವ ದಾರಿಗಳೂ ಇವೆ.

ಶ್ರೇಣಿಬದ್ಧಗೊಳಿಸಿರುವ ಸಮಗ್ರವಾದ ಎಂಟುಪಥಗಳನ್ನು ಬುದ್ಧ ಅಜ್ಞಾನ ನಿವಾರಣೆಗೆಂದು ರೂಪಿಸಿದ. ಈ ಪಥ ಒಳ್ಳೆಯ ಶುದ್ಧ ಹಾಗೂ ಧರ್ಮನಿಷ್ಠ ಜೀವನಕ್ಕೆ ದಾರಿ ಮಾಡಿಕೊಡುತ್ತದೆ. ಇದನ್ನು ಬುದ್ಧ 'ಅಷ್ಟಾಂಗ ಮಾರ್ಗ' ಎಂದು ಹೇಳಿದ. ಸಮ್ಯಕ್‌ದೃಷ್ಟಿ, ಸಮ್ಯಕ್‌ಸಂಕಲ್ಪ, ಸಮ್ಯಕ್‌ವಾಕ್, ಸಮ್ಯಕ್‌ಕರ್ಮ, ಸಮ್ಯಕ್‌ಆಜೀವಿಕಾ, ಸಮ್ಯಕ್‌ವ್ಯಯಕ, ಸಮ್ಯಕ್‌ಸ್ಮೃತಿ ಮತ್ತು ಸಮ್ಯಕ್‌ಸಮಾಧಿ–ಇವು ಅಷ್ಟಾಂಗ ಮಾರ್ಗದ ವಿವಿಧ ಅಂಗಗಳು. ನಿರ್ವಾಣವನ್ನು ತಂದುಕೊಡುವ ಸದಾಚಾರದ ಅಷ್ಟಾಂಗ ಪಥವು ತಪಸ್ಸನ್ನು ಒಳಗೊಳ್ಳುತ್ತದೆ ಎಂದು ಬೇರೆ ಹೇಳಬೇಕಾದ ಅಗತ್ಯವಿಲ್ಲ.

Digitised by Bharatavani, CIIL

**ಜೈನ ಧರ್ಮದಲ್ಲಿ ತಪಸ್ಸು:** ಜಡ ಮತ್ತು ಚೈತನ್ಯದ ನಡುವೆ ಭೇದವನ್ನು ಕಾಣುವ ಅಸಾಮರ್ಥ್ಯವೇ ಮಾನವನ ಬಂಧನಕ್ಕೆ ಕಾರಣವೆಂದು ಜೈನಧರ್ಮ ನಂಬುತ್ತದೆ. ತನ್ನ ಕರ್ಮಾನುಸಾರವಾಗಿ ಜೀವ ಜಡವನ್ನು (Matter) ಧರಿಸಿ ತನ್ನನ್ನು ತಾನು ಜಡ (ಪುದ್ಗಲ್) ದಿಂದ ಆವರಿಸಿಕೊಳ್ಳುತ್ತದೆ. ಈ ಆವರಣವೇ ಬಂಧನಕ್ಕೆ ಕಾರಣ ಹಾಗೂ ಈ ಆವರಣದಿಂದ ಬೇರ್ಪಡುವುದೇ ಮೋಕ್ಷ. ಅಧ್ಯಯನದಿಂದ, ಓದುವುದರಿಂದ ಸಿಗುವ ಸಮ್ಯಕ್‌ಜ್ಞಾನ ಈ ದಿಶೆಯಲ್ಲಿ ವ್ಯಕ್ತಿಯು ನಡೆಯಲು ಸಹಾಯ ಮಾಡುತ್ತದೆ. ಆದರೆ ನಿಜವಾದ ಶ್ರದ್ಧೆ ಅನುಚಿತವಾದವುಗಳಲ್ಲಿ ಮತ್ತು ಅಜ್ಞಾನದಲ್ಲಿ ಅನಾಸಕ್ತಿ ಇದ್ದರೆ ಮಾತ್ರ ಬೆಳೆಯುತ್ತದೆ. ಜೈನಧರ್ಮದ ಪದಪ್ರಯೋಗಶಾಸ್ತ್ರದಲ್ಲಿ (terminology) ಈ ಅನಾಸಕ್ತಿಯನ್ನು ನಿರ್ಜರ ಎಂದು ಕರೆಯಲಾಗಿದೆ. ಮನಶುದ್ಧೀಕರಣಕ್ಕೆ ತಪಸ್ಸು ಅತ್ಯುತ್ತಮ ಮಾರ್ಗವೆಂದು ಪರಿಗಣಿಸಲಾಗಿದೆ. ನಿರ್ಜರದಲ್ಲಿ ಹನ್ನೆರಡು ವಿಧದ ತಪಸ್ಸನ್ನು ಹೇಳಲಾಗಿದೆ – ಆರು ಬಾಹ್ಯವಾದುದು ಆರು ಆಂತರಿಕವಾದುದು. ಬಾಹ್ಯ ತಪಸ್ಸುಗಳು ಅಥವಾ ಶುದ್ಧೀಕರಣ ಕ್ರಿಯೆಗಳು ಹೀಗಿವೆ – ಅನ್‌ಶನ್(ಉಪವಾಸ, ನಿರಾಹಾರಿಯಾಗಿರುವುದು), ಅವಮಾಂದರ್ಯ(ಅಗತ್ಯಕ್ಕಿಂತ ಕಡಿಮೆ ತಿನ್ನುವುದು, ಕ್ರಮೇಣ ಆಹಾರ ಪ್ರಮಾಣವನ್ನು ಕಡಿಮೆ ಮಾಡುವುದು), ವೃತ್ತಿಪರಿಸಾಂಖ್ಯಾನ(ಭಿಕ್ಷಾಹಾರದ ಉತ್ಕೃಷ್ಟತೆಯನ್ನು ಕಡಿಮೆಗೊಳಿಸುವುದು), ರಸಪರಿತ್ಯಾಗ (ಹಾಲು, ಮೊಸರು, ತುಪ್ಪ, ಎಣ್ಣೆ, ಸಕ್ಕರೆ, ಬೆಲ್ಲ, ಇತ್ಯಾದಿಗಳನ್ನು ಸೇವಿಸದಿರುವುದು), ವಿವಿಕ್ತ ಶಯ್ಯಾಸನ (ಏಕಾಂತದಲ್ಲಿರುವುದು ಮತ್ತು ಇಂದ್ರಿಯಗಳನ್ನು ನಿಗ್ರಹಿಸುವುದು) ಮತ್ತು ಕಾಯಕ್ಲೇಷ (ದೈಹಿಕ ಸಂಕಷ್ಟಗಳನ್ನು ಸಹಿಸುವುದು– ನೆಲದ ಮೇಲೆ ಮಲಗುವುದು ಇತ್ಯಾದಿ). ಆರು ಆಂತರಿಕ ತಪಸ್ಸುಗಳು ಹೀಗಿವೆ– ಪ್ರಾಯಶ್ಚಿತ್ತ (ತಾವು ಮಾಡಿದ ಕರ್ಮಗಳನ್ನು ಅವಲೋಕಿಸುವುದು ಮತ್ತು ಮಾಡಿದ ತಪ್ಪುಗಳಿಗಾಗಿ ಪಶ್ಚಾತ್ತಾಪ ಪಡುವುದು), ವಿನಯ (ವಿನಯಶೀಲನಾಗಿರುವುದು, ದೊಡ್ಡವರಿಗೆ ಗೌರವ ತೋರುವುದು), ವೈಯಾವೃತ್ಯ (ದೇಹದ ಮಮಕಾರವನ್ನು ತೊರೆಯುವುದು) ಸ್ವಾಧ್ಯಾಯ (ಆತ್ಮನ ಪೂರ್ಣಜ್ಞಾನಕ್ಕಾಗಿ ಶಾಸ್ತ್ರಗಳನ್ನು ಅಧ್ಯಯನ ಮಾಡುವುದು), ಮತ್ತು ಧ್ಯಾನ (ಧ್ಯಾನಿಸುವುದು, ಮೌನವನ್ನಾಚರಣೆ, ಧ್ಯೇಯ ವಸ್ತುವಿನ ಮೇಲೆ ಆಳವಾದ ಏಕಾಗ್ರತೆ).

ಈ ಶುದ್ಧೀಕರಣ ಕ್ರಿಯೆಗಳು ಮನಸ್ಸಿನ ಕಲ್ಮಷಗಳನ್ನು ನಾಶಮಾಡುವುದರ ಮೂಲಕ ಮೋಕ್ಷಕ್ಕೆ ಎಡಮಾಡಿಕೊಡುತ್ತವೆ. ಬಾಹ್ಯ ತಪಸ್ಸುಗಳನ್ನಾಚರಿಸುವುದರಿಂದ ದೇಹವು ಶುದ್ಧಿಗೊಂಡರೆ ವಿವಿಧ ಆಂತರಿಕ ತಪಸ್ಸುಗಳು ಮನಸ್ಸಿನ ಚಿತ್ತವಿಕ್ಷೇಪ (distraction) ವನ್ನು ಸುಟ್ಟುಬೂದಿ ಮಾಡುತ್ತದೆ. ಬೆಣ್ಣೆಯನ್ನು ಕಾಯಿಸಿದಾಗ ಅದರ ಕಲ್ಮಷಗಳೆಲ್ಲ ನಾಶಗೊಂಡು ನಮಗೆ ಶುದ್ಧ ತುಪ್ಪವು ಲಭಿಸುವಂತೆ ತಪಸ್ಸು ಆಲೋಚನೆ ಮತ್ತು ಕರ್ಮಗಳ ಕಲ್ಮಷವನ್ನು ಹಾಗೂ ಕೋಪ, ಅಹಂಕಾರ, ಲೋಭ, ಭ್ರಮೆ, ವಿಷಯಾಭಿಲಾಷೆ ಮುಂತಾದ ಕಷಾಯಗಳನ್ನು ಸುಟ್ಟುಬೂದಿಮಾಡುತ್ತದೆ.

**ತಪಸ್ಸಿನ ಶೈಕ್ಷಣಿಕ ನಿಹಿತಾರ್ಥ:** ಶಿಕ್ಷಣವೆಂದರೆ ವಿದ್ಯಾರ್ಥಿಯ ವ್ಯಕ್ತಿತ್ವದ ಪೂರ್ಣವಿಕಾಸ. ಭಾರತ ಅದರ ಸಾಂಪ್ರದಾಯಿಕ ತತ್ವಶಾಸ್ತ್ರಕ್ಕೆ ಗೌರವಿಸಲ್ಪಟ್ಟಂಥ ದೇಶ. ಭಾರತೀಯ ಪರಂಪರೆ ಮೂಲತಃ ಆದರ್ಶವಾದಿ. ಅದು ಮಾನವನನ್ನು ದೇವರ ಸರ್ವೋತ್ತಮ ಸೃಷ್ಟಿ ಎಂದು ಹೇಳಿದೆ. ಜೀವನದ ಗುರಿ ಆತ್ಮಜ್ಞಾನವೇ ಆಗಿದೆ. ಅಂದರೆ ಮಾನವನಲ್ಲಿರುವ ನಿಹಿತಶಕ್ತಿಗಳ ಸಂಪೂರ್ಣ ವಿಕಾಸವೇ ಜೀವನದ ಗುರಿಯಾಗಿದೆ. ಆತ್ಮಜ್ಞಾನಕ್ಕೆ ನಾಲ್ಕು ಹಂತಗಳಿವೆ. ಅವು ಭೌತಿಕ ವ್ಯಕ್ತಿತ್ವ, ಸಾಮಾಜಿಕ ವ್ಯಕ್ತಿತ್ವ, ಮಾನಸಿಕ ವ್ಯಕ್ತಿತ್ವ, ಅಧ್ಯಾತ್ಮಿಕ ವ್ಯಕ್ತಿತ್ವ. ದೇಹದ ಮೇಲೆ ನಿಯಂತ್ರಣ ತನ್ನ ಅಗತ್ಯಕ್ಕಿಂತ ಮತ್ತೊಬ್ಬರ ಅಗತ್ಯದ ಬಗ್ಗೆ ಕಾಳಜಿ ವಹಿಸುವುದು, ಸ್ವನಿರ್ದೇಶಿತ ವಿವೇಕದಿಂದ ಹಾಗೂ ಬುದ್ಧಿಯಿಂದ ಮನಸ್ಸನ್ನು ನಿಯಂತ್ರಿಸುವುದು, ಮತ್ತು ವ್ಯಕ್ತಿಗತ ಅಹಂ ಅನ್ನು ವಿಶ್ವ ಅಹಂನಲ್ಲಿ ಅದರ ಮೂರು ಲಕ್ಷಣಗಳಾದ ಸತ್ಯಂ, ಶಿವಂ ಮತ್ತು ಸುಂದರಂ ಮುಖಗಳಲ್ಲಿ ಒಂದಾಗಿಸುವುದು. ವಿಶ್ವಪ್ರಜ್ಞೆಯ ಮೂರು ಲಕ್ಷಣಗಳನ್ನು ಸಿದ್ಧಿಸಿಕೊಳ್ಳುವುದು ಆತ್ಮಜ್ಞಾನದ ಅಂತಿಮ ಫಲಿತಾಂಶವಾಗಿರುವುದು.

ಜೈನಧರ್ಮದ ಪ್ರಕಾರ ಶಿಕ್ಷಣ ಸಮ್ಯಕ್‌ಜ್ಞಾನವನ್ನು ಕೊಡಬೇಕು. ತಪಸ್ಸಿನ ಮೂಲಕ ನಿರ್ಜರವನ್ನು ಪಡೆದಾಗ ಹಾಗೂ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಮುಂತಾದ ಪಂಚಮಹಾವ್ರತಗಳನ್ನು ಪಾಲಿಸಿದಾಗ ಮತ್ತು ಕೋಪ ಅಹಂಕಾರ, ಸಂಪತ್ತು ಮತ್ತು ಲೋಭಗಳಿಂದ ದೂರವಿದ್ದಾಗ ಮಾತ್ರ ಸಮ್ಯಕ್‌ಜ್ಞಾನ ಅಂದರೆ ನಿಜವಾದ ಜ್ಞಾನ ಲಭಿಸುವುದು.

ಸಮತೋಲನ ಹಾಗೂ ಸಂತೋಷಕರ ಜೀವನವನ್ನು ವಿದ್ಯಾರ್ಥಿಗಳು ರಕ್ತಗತವಾಗಿಸಬೇಕಾದ ವಿವಿಧ ರೀತಿಯ ಮೌಲ್ಯಗಳಲ್ಲಿ ಶ್ರದ್ಧೆಯನ್ನು ಬೆಳೆಸಿಕೊಳ್ಳುವಂತೆ ಬೌದ್ಧಧರ್ಮ ಬೋಧಿಸುತ್ತದೆ. ಆದರೆ ಬೌದ್ಧಧರ್ಮ ಯಾವುದೇ ಅತಿರೇಕವನ್ನು ವಿರೋಧಿಸಿ ಮಧ್ಯಮ ಮಾರ್ಗವನ್ನು ಸಲಹೆ ಮಾಡುತ್ತದೆ. ಬೌದ್ಧಧರ್ಮ ಸಂಸ್ಕಾರದ ಪರಿಕಲ್ಪನೆಯಲ್ಲಿ ನಂಬಿಕೆಯಿಡುತ್ತದೆಯಲ್ಲದೆ, ಇಚ್ಛಿಸಿದಂತೆ ಆಗಬಹುದು (will to become) ಎಂಬುದನ್ನು ಒತ್ತಿಹೇಳುತ್ತದೆ. ಅಲ್ಲದೆ ಈ ಮಾರ್ಗದಲ್ಲಿ ಶಿಕ್ಷಕನು ವಿದ್ಯಾರ್ಥಿಯ ಶ್ರೇಷ್ಠ ಪ್ರಜೆಯಾಗಬೇಕೆಂಬ ಸದಿಚ್ಛೆಯನ್ನು ಕೈಗೊಳ್ಳಲು ನೆರವಾಗಬಲ್ಲನು.

**ಉಪಸಂಹಾರ:**ಮೃಗೀಯ ಸ್ಥಿತಿಯಿಂದ ಉನ್ನತೋನ್ನತ ಜೀವಿತ ಸ್ಥಿತಿಗೆ ಏರಿ ಹೋಗುತ್ತ ಪೂರ್ಣ ವಿಕಾಸವನ್ನು ತರುತ್ತಾ ಪರಮಾನಂದ ಸಿದ್ಧಿಗೆ ದಾರಿ ಮಾಡುಕೊಡುವಲ್ಲಿ ತಪಸ್ಸು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆಯೆಂದು ಅಂತಿಮವಾಗಿ ನಿರ್ಧರಿಸಬಹುದು.

ತಪಸ್ಸು ಕೇವಲ ದೇಹದಂಡನೆಗೆಂದು ದೇಹ ದಂಡಿಸುವುದಲ್ಲ. ಅದು ದೇಹ ಮನೋಬುದ್ಧಿಗಳ ನಿಯಂತ್ರಣದ ಮೂಲಕ ಸಚ್ಚಾರಿತ್ರ್ಯ ನಿರ್ಮಾಣ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ. ಅಂತರ್ ನಿಹಿತವಾದ ಸಾಮರ್ಥ್ಯಗಳನ್ನು (talents) ಹೊರತರುವುದಕ್ಕೆ ಮತ್ತು ಮಹಾನ್ ಆವಿಷ್ಕಾರಗಳು ಹಾಗೂ ನವಸೃಷ್ಟಿಗಳ ರೂಪದಲ್ಲಿ ಅವುಗಳ ಅಭಿವ್ಯಕ್ತಿಗೆ ತಪಸ್ಸು ಸಹಕರಿಸುತ್ತದೆ. ಮರಣವನ್ನು ಜಯಿಸಬಲ್ಲ

Digitised by Bharatavani, CIIL

ಪೂರ್ಣಮಾನವನನ್ನು ತಪಸ್ಸು ವಿಕಸಿಸಬಲ್ಲದು. ಋಗ್ವೇದವು ಹೇಳುವಂತೆ ದೇವತೆಗಳೂ ಬ್ರಹ್ಮಚರ್ಯ ಮತ್ತು ತಪಸ್ಸನ್ನಾಚರಿಸುತ್ತಾ ಮರಣವನ್ನು ಜಯಿಸಬಲ್ಲರು.

ಬ್ರಹ್ಮಚರ್ಯೇಣ ತಪಸಾ ದೇವಮೃತ್ಯುಂ ಅಪಘ್ನತ್. ಹೀಗೆ ತಪಸ್ಸು ವಿವಿಧ ವಾಸನೆಗಳನ್ನು ಅಳಿಸಿ ಮನಸ್ಸನ್ನು ಶುದ್ಧಿಗೊಳಿಸುವ ಉಪಕರಣವಾಗಿದೆ. ಹಾಗೂ ದೈವತ್ವ ಮತ್ತು ಸೃಜನಾತ್ಮಕತೆ ತಮ್ಮೆಲ್ಲಾ ಪರಿಪೂರ್ಣ ಮಹಿಮೆಯಿಂದ ವ್ಯಕ್ತವಾಗುವುದು ಶುದ್ಧ ಮನಸ್ಸಿನಲ್ಲಿ ಮಾತ್ರ.

**ಮೂಲ: ಶಶಿಪ್ರಭಾ ಗೋಯಲ್**

**ಅನು: ಚಂದ್ರಶೇಖರ್ ಬಿ.ಎಂ.**

## ತರಗತಿ ಕೋಣೆ ನಿರ್ವಹಣೆ

**ಐತಿಹಾಸಿಕ ಹಿನ್ನೆಲೆ:** ನಮ್ಮ ಪುರಾತನ ಪವಿತ್ರ ಗ್ರಂಥಗಳಲ್ಲಿ ಹೇಳಿರುವ ಶಿಕ್ಷಕ ವಿದ್ಯಾರ್ಥಿಯೊಂದಿಗಿರುವ ಸಂಬಂಧವು ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕನ ರೀತಿಯದು. ಆದ್ದರಿಂದ ಮಗುವಿನ ವ್ಯಕ್ತಿತ್ವ ವಿಕಸನವಾಗುವುದು. ಅದರಲ್ಲಿ ವಿದ್ಯಾರ್ಥಿ ಅವನು ತನ್ನ ಭಾವನೆಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲು ವಿಶೇಷ ಒತ್ತು ನೀಡಲಾಗಿದೆ. ವಿದ್ಯಾರ್ಥಿಯ ಪರಿಸರ ಮತ್ತು ಪರಿಸ್ಥಿತಿಗೆ ತಕ್ಕಂತೆ ಬೋಧಿಸುವುದು ಅಂದು ಪ್ರಮುಖವಾಗಿತ್ತು. (ಜಾ.1969). ಇವುಗಳ ಫಲಿತವಾದ ತರಗತಿ ನಿರ್ವಹಣೆಯು ಮೇಲಿನ ಕಲ್ಪನೆಗಳ ಸುತ್ತ ಕೇಂದ್ರಿಕೃತವಾಗಿತ್ತು. ನಂತರ ಬಂದ ಗುರುಕುಲ ಪದ್ಧತಿಯು ಪ್ರಾಚೀನ ಗ್ರೀಕ್, ರೋಮನ್ನರು, ಈಜಿಪ್ಟರು, ಹಿಬ್ರೂಸ್, ಅಸ್ಸಿರಿಯನ್ ಮತ್ತು ಬ್ಯಾಬಿಲೋನಿಯನ್, ಪಾರ್ಸಿಗಳು, ಅರಬ್, ಮತ್ತು ಚೀನಾ ಶಿಕ್ಷಣ ಪದ್ಧತಿಗಳೊಂದಿಗೆ ಸಮಾನತೆ ಹೊಂದಿತ್ತು. ಪಾಶ್ಚಿಮಾತ್ಯ ಶಿಕ್ಷಣ ತಜ್ಞರಾದ ಲೋಕ್, ರೂಸೋ, ಪೆಸ್ಟಲೋಜಿ, ಕಾಂಟ್, ಹರ್ಬಟ್, ಫ್ರೊಬೆಲ್, ಡ್ಯೂಯಿ ಮತ್ತು ವಿಟ್ಟರಿನೊ ಮಂಡಿಸಿದ ಶಿಕ್ಷಣದ ಉದ್ದೇಶಗಳ ಸಾಧನೆಗಾಗಿ ಅವರು ವಿಭಿನ್ನ ರೀತಿಯ ತರಗತಿ ನಿರ್ವಹಣಾ ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ಪ್ರಸ್ತಾಪಿಸಿದ್ದರು. ಋಷಿಗಳ ಅಥವಾ ದೈವ ಸಾಕ್ಷಾತ್ಕಾರದ ಶ್ರೇಷ್ಠತೆಯನ್ನು ಸಾರುವ ಸಲುವಾಗಿ (ಶರಣ್ 1954) ತರಗತಿಗಳು ಧಾರ್ಮಿಕ ವಾತಾವರಣವನ್ನು ಹೊಂದಿದ್ದವು. ಆಶ್ರಮ ಪದ್ಧತಿಯು (ದಿವೇಕರ್ 1960) ಆಸಕ್ತಿ, ಅವಶ್ಯಕತೆ ಮತ್ತು ಒಬ್ಬ ವ್ಯಕ್ತಿಯ ಜೀವನದ ವಿವಿಧ ಹಂತಗಳಲ್ಲಿನ ಸಾಮರ್ಥ್ಯದ ಮಾನಸಿಕ ಅಧ್ಯಯನದ ಮೇಲೆ ಆಧರಿಸಲಾಗಿತ್ತು. ಶಿಕ್ಷಕನು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮತ್ತು ಅನ್ವೇಷಣೆಯ ಚೈತನ್ಯವನ್ನು ಪೋಷಿಸಬೇಕೆಂದು ನಿರೀಕ್ಷಿಸಲಾಗಿತ್ತು. ಮನಸ್ಸಿನ ಏಕಾಗ್ರತೆಯು ಈ ವಿಧದ ನಿರ್ವಹಣೆಯಲ್ಲಿ ಎಲ್ಲ ರೀತಿಯ ಕಲಿಕೆಯ ಮೂಲಮಂತ್ರವಾಗಿತ್ತು.

ಇತ್ತೀಚಿನವರೆಗೂ ಬೋಧನೆ ಮತ್ತು ಶಿಕ್ಷಕನ ವರ್ತನೆಯ ಬಗ್ಗೆ ಯಾವುದೇ ರೀತಿಯ ಗಮನ ಹರಿಸಿರಲಿಲ್ಲ. ಯಾವುದೇ ರೀತಿಯ ಸಂಸ್ಥೆಗಳೂ ಅದರ ಮೇಲೆ ಒತ್ತು ನೀಡಿರಲಿಲ್ಲ. ಹೀಗಿದ್ದರೂ ಶಿಕ್ಷಣತಜ್ಞನ ಸ್ಥಾನವನ್ನು ಬಹಳ ಹಿಂದಿನಿಂದಲೂ ಮಾನ್ಯ ಮಾಡಲಾಗಿತ್ತಾದರೂ, ಅವನ ಸ್ಥಾನಮಾನಗಳು ನಂತರದ ವರ್ಷಗಳಲ್ಲಿ ಕ್ರಮವಾಗಿ ಕುಗ್ಗಿ, ಅವನನ್ನು ಆಧುನಿಕ ಪದ್ಧತಿಯಲ್ಲಿ ಒಬ್ಬ ಪ್ರತಿನಿಧಿಯನ್ನಾಗಿ ಮಾಡಲಾಯಿತು. (ಪಾಂಡ್ಯ 1959) ಪ್ರಸ್ತುತ ಚಾಲ್ತಿಯಲ್ಲಿರುವ ಶಿಕ್ಷಣದಲ್ಲಿನ ವಿರೋಧಾಭಾಸದ ಸ್ಥಿತಿಯು ಶೈಕ್ಷಣಿಕ ಮೌಲ್ಯಗಳನ್ನು ಸರಿಯಾಗಿ ತಿಳಿದುಕೊಳ್ಳಲಾಗದಿರಲು ಕಾರಣವಾಯಿತು. ಭಾರತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಲು ಮತ್ತು ಬದಲಾವಣೆಗಳನ್ನು ತರಲು ಇರುವ ಏಕೈಕ ಸಾಧನವೆಂದರೆ ಶಿಕ್ಷಣ ಎಂದು ಶಿಕ್ಷಣ ಆಯೋಗ (1964–66) ಒತ್ತಿ ಹೇಳಿತು. ಇಂತಹ ಶಿಕ್ಷಣ ಪ್ರಕ್ರಿಯೆಗಳು ತರಗತಿಯಲ್ಲಿ ನಡೆಯುವ ಬೋಧನೆ–ಕಲಿಕೆಯ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರಿಕರಿಸಬೇಕಿದೆ. ತರಗತಿಯ ನಿರ್ವಹಣೆಯಲ್ಲಿ ಬೋಧನಾ ಪ್ರಕ್ರಿಯೆ ಮತ್ತು ಪ್ರದಾನ ಮಾಡುವಿಕೆ–ಪ್ರಕ್ರಿಯೆ–ಫಲಿತಾಂಶಗಳ ಪ್ರಕ್ರಿಯೆ ಹಾಗೂ ಸಮಸ್ಯೆಗಳನ್ನು ನಿವಾರಿಸದೆ ಶಿಕ್ಷಣದ ಬಹುಮುಖ್ಯ ಸಮಸ್ಯೆಗಳ ನಿವಾರಣೆ ಸಾಧ್ಯವಿಲ್ಲ.(ಜಂಗೀರಾ 1972; ಶರ್ಮ 1972).

ಶಿಕ್ಷಕ ಅಥವಾ ವಿದ್ಯಾರ್ಥಿಯ ಗುಣಲಕ್ಷಣಗಳು (ಪ್ರದಾನ ಮಾಡುವಿಕೆ) ಶಿಕ್ಷಕ ಮತ್ತು ಅವನು ಕಲಿಸಿದ ಪಾಠಗಳ ನಡುವಿನ ಪರಸ್ಪರ ಕ್ರಿಯೆ (ಪ್ರಕ್ರಿಯೆ) ಮತ್ತು ವಿಭಿನ್ನ ಪ್ರಕಾರಗಳಲ್ಲಿ ವಿದ್ಯಾರ್ಥಿಯ ಸಾಧನೆಯ ವ್ಯಾಪ್ತಿ (ಫಲಿತಾಂಶ)ಯು ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. (ಅಡವಲ್–1952; ಕೌಲ್,1972; ರಾಯ್,1970; ವಶಿಷ್ಠ,1976; ಶರ್ಮ,1972). ಇದರಿಂದಾಗಿ ಬೋಧನಾ ಪದ್ಧತಿಗಳ ಆಗಮನಾತ್ಮಕ ಮತ್ತು ನಿಗಮನಾತ್ಮಕ ಸ್ವರೂಪದ್ದಾಗಿದೆ. ಸ್ವಯಂಶಿಕ್ಷಣ ಅಥವಾ ತಾನೇ ಕಲಿಯಲು ಸ್ವಾತಂತ್ರ್ಯ ನೀಡುವ ಪದ್ಧತಿಗಳು, ಕಿಂಡರ್‌ಗಾರ್ಟನ್ ಮತ್ತು ಆಟದ ವಿಧಾನಗಳಲ್ಲಿ ಇದರ ಅಭಿವ್ಯಕ್ತಿಯನ್ನು ಕಾಣಬಹುದು ಮತ್ತು ಇಪ್ಪತ್ತನೆಯ ಶತಮಾನದ ಭಾರತೀಯ ಶಿಕ್ಷಣದಲ್ಲಿ ಈ ರೀತಿಯ ಸ್ವಾಭಾವಿಕ ಪದ್ಧತಿಗಳನ್ನು ಅನುಸರಿಸಲಾಯಿತು. (ಡಿಯೊಪರ್ಕರ್,1964). ಪ್ರಯೋಗ ವಿಧಾನಗಳಾದ 'ಹೇಳುವುದು, ವ್ಯಾಖ್ಯಾನ ಮತ್ತು ಚರ್ಚೆಗಳ ತಂತ್ರಗಳನ್ನು ಬಳಸಲಾಯಿತು. ತರಗತಿ ಬೋಧನೆಯಲ್ಲಿ ಚರ್ಚೆಗಳು, ವೈಯಕ್ತಿಕ ಗಮನ ನೀಡುವಿಕೆ, ಬುದ್ಧಿಮತ್ತೆಯ ಪರೀಕ್ಷೆಗಳ ಬಳಕೆ, ಖಾಸಗಿ ಶಿಕ್ಷಣ, ಹಿರೇಮಣಿ ಪದ್ಧತಿಯಂತಹ ಇತರ ಪ್ರಯೋಗ ವಿಧಾನಗಳನ್ನು ಬಳಸಲಾಯಿತು. ಶೈಕ್ಷಣಿಕ ನಾವೀನ್ಯದ ಮೇಲಿನ ಸಂಶೋಧನಾ ಅಧ್ಯಯನದ ಪ್ರಕಾರ ತರಗತಿಯನ್ನು ನಿರ್ವಹಿಸಲು ಉತ್ತಮ ಸೌಕರ್ಯಗಳು, ಹೆಚ್ಚು ಶ್ರಾವ್ಯ–ದೃಶ್ಯ ಪರಿಕರಗಳು, ಶಿಕ್ಷಕರು–ವಿದ್ಯಾರ್ಥಿಗಳಿಗಾಗಿ ಪುಸ್ತಕ ಮತ್ತು ನಿಯತಕಾಲಿಕಗಳು, ಪ್ರಗತಿಪರ ನಿರ್ವಹಣೆಗಳನ್ನು ಕಾಲಕ್ರಮೇಣ ಪರಿಚಯಿಸಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಭಾರತೀಯ ತರಗತಿ ನಿರ್ವಹಣೆಯ ಜಾಗತಿಕ ಸ್ವರೂಪದ್ದಾಗುತ್ತಾ ಬಂದಿತು.

Digitised by Bharatavani, CIIL

**'ತರಗತಿ' ಮತ್ತು 'ನಿರ್ವಹಣೆಯ' ಬಗ್ಗೆ:**

ತರಗತಿಯ ಶಬ್ದಕೋಶದ ಅರ್ಥವೆಂದರೆ ಸಾಮಾನ್ಯ ಗುಣಲಕ್ಷಣಗಳಿರುವ ಸದಸ್ಯರು ಅಥವಾ ವ್ಯಕ್ತಿಗಳು, ಅಥವಾ ಒಂದೇ ರೀತಿಯ ಸಂದರ್ಭಗಳಲ್ಲಿರುವ ಅಥವಾ ಸಾಮಾನ್ಯ ಉದ್ದೇಶಗಳನ್ನು ಹೊಂದಿರುವವರು ಇತ್ಯಾದಿ. ಶಿಕ್ಷಣದಲ್ಲಿ ತರಗತಿಯೆಂದರೆ ಒಬ್ಬ ಶಿಕ್ಷಕನ ಜೊತೆಯಲ್ಲಿರುವ ವಿದ್ಯಾರ್ಥಿಗಳ ಗುಂಪು ಅಥವಾ ಒಟ್ಟಿಗೆ ನಡೆಸುವ ಅಧ್ಯಯನ. ತರಗತಿ ಕೋಣೆಯೆಂದರೆ ತರಗತಿಗಳು ನಡೆಯುವ ಶಾಲೆಯಲ್ಲಿನ ಕೊಠಡಿ. ಇದು ಬೋಧನೆ ಮತ್ತು ಕಲಿಕೆಗಾಗಿ ವಿದ್ಯಾರ್ಥಿಗಳ ಒಂದು ಗುಂಪು ಭೇಟಿಮಾಡುವ ಸ್ಥಳ.

ಈಗಿನ ಕಾಲದಲ್ಲಿ ನಿರ್ವಹಣೆಯನ್ನು ಒಂದು ಗಂಭೀರ ಅನ್ವಯಿಕ ಸಮಾಜಶಾಸ್ತ್ರವನ್ನಾಗಿ ಸ್ವೀಕರಿಸಲಾಗಿದೆ. ಇದರನ್ವಯ ಸಂಘಟನೆಯ ಗುರಿಗಳನ್ನು ತಲುಪಲು ವ್ಯಕ್ತಿಗಳ ಮತ್ತು ಗುಂಪಿನೊಡನೆ ಮಾಡುವ ಕೆಲಸದ ಪ್ರಕ್ರಿಯೆ ಅಥವಾ ಸಂಘಟನೆಯ ಕೆಲವು ಪೂರ್ವ ಉದ್ದೇಶಿತ ಗುರಿಗಳಿಗಾಗಿ ನಾಲ್ಕು ಅಥವಾ ಐದು ಮೂಲ ಸಂಪತ್ತುಗಳಾದ ವ್ಯಕಿಗಳು, ಹಣ, ವಸ್ತುಗಳು, ಮಾಹಿತಿ ಮತ್ತು ಸಮಯವನ್ನು ಅತ್ಯಂತ ಹೆಚ್ಚು ಉಪಯೋಗಿಸುವ ಪ್ರಕ್ರಿಯೆ. ಕೆಲವು ಸಾಮಾನ್ಯ ಚಿಂತನೆಗಳ ಆಧಾರದ ಮೇಲೆ ಎಲ್ಲ ನಿರ್ವಾಹಕರು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಪ್ರಮುಖ ಸಾಮಾನ್ಯ ಕ್ರಿಯೆಗಳಾದ ಮುಂದಾಲೋಚನೆ, ಯೋಜನೆ, ಸಂಘಟನೆ, ನಿರ್ದೇಶನ ಮತ್ತು ನಿಯಂತ್ರಣಗಳನ್ನು ಸಾಧಿಸುತ್ತಾರೆ. ಹೀಗಾಗಿ ಕಾರ್ಖಾನೆಯ ಮುಖ್ಯಸ್ಥ, ಸೇನಾಮುಖ್ಯಸ್ಥ, ಗೃಹಿಣಿ, ಶಾಲಾ ಪ್ರಾಂಶುಪಾಲ ಅಥವಾ ಶಿಕ್ಷಕ ಎಲ್ಲರೂ ನಿರ್ವಹಣೆಯನ್ನು ಮಾಡುತ್ತಾರೆ.(ಹರ್ಸಿ ಮತ್ತು ಬ್ಲಂಕಾರ್ಡ್ 1977; ವೀರ್ಮಣಿ 1984) ಶೈಕ್ಷಣಿಕ ನಿರ್ವಹಣೆಗಾಗಿ ಕೆಲವು ನಿರ್ದಿಷ್ಟ ಕೌಶಲಗಳ ಸೇರುವಿಕೆಯಿಂದ ಪ್ರಾಂಶುಪಾಲನು ಶಾಲೆಯ ನಿರ್ವಹಣೆಯನ್ನು ಮತ್ತು ಶಿಕ್ಷಕನು ತರಗತಿ ಕೋಣೆಯ ನಿರ್ವಹಣೆಯನ್ನು ಮಾಡುತ್ತಾನೆ.

**ತರಗತಿ ಕೋಣೆಯ ನಿರ್ವಹಣೆ: ಇದು ಯಾವುದರ ಬಗ್ಗೆ?**

ಬೋಧನಾ ಗುರಿಗಳನ್ನು ಕಲಿಕೆಯ ಅನುಭವಗಳನ್ನಾಗಿ ಪರಿವರ್ತಿಸುವುದೇ ತರಗತಿ ಕೋಣೆಯ ನಿರ್ವಹಣೆಯೆಂದು ಎಲ್ಲ ಅರ್ಥದಲ್ಲೂ ಹೇಳಬಹುದು. ಎಲ್ಲ ತರಗತಿ ಕೋಣೆಗಳಲ್ಲಿ ಶಿಕ್ಷಕನಿಗೆ ಪರಿಸರದ ಸಂಘಟನೆ, ಕಲಿಕಾ ಪ್ರಕ್ರಿಯೆ ಮತ್ತು ವಿದ್ಯಾರ್ಥಿಯ ವರ್ತನೆಯ ನಿರ್ವಹಣೆ ಹಾಗೂ ಶೋಧನಾ ಚೈತನ್ಯವನ್ನು ಒಂದು ಚೌಕಟ್ಟಿನಲ್ಲಿಡುವ ಹೊಣೆಯಿರುತ್ತದೆ. 'ನನ್ನ ವಿದ್ಯಾರ್ಥಿಗಳು ನಿಜವಾಗಿಯೂ ನನ್ನ ತರಗತಿಗೆ ಬರಲು ಮತ್ತು ಪೋಷಕರು ಮಕ್ಕಳ ದೈನಂದಿನ ಪ್ರಗತಿಯನ್ನು ಬಲು ಕಟ್ಟುನಿಟ್ಟಾದ ಮಾನದಂಡಗಳಿಂದ ಅಳೆದ ನಂತರ ಮಕ್ಕಳನ್ನು ಶಾಲೆಗೆ ಕಳುಹಿಸಲು ಬಹಳ ಇಚ್ಛಿಸುತ್ತಾರೆ' ಎನ್ನುವುದು ಅತ್ಯುತ್ತಮ ತರಗತಿ ಕೋಣೆಯ ನಿರ್ವಹಣೆಯ ಅಂತಿಮ ವಿಶ್ಲೇಷಣೆ. ತರಗತಿ ಕೋಣೆಯಲ್ಲಿ ಪಠ್ಯಕ್ರಮವನ್ನು ಉಪಯೋಗಿಸುವವರಿಗೆ ಇಂತಹ ಫಲಿತಾಂಶವನ್ನು ನೀಡುವ ಸಲುವಾಗಿ ಕಲೆ ಅಥವಾ ಅನ್ವಯಿಕ ಸಮಾಜಶಾಸ್ತ್ರದ ಅಧ್ಯಯನ ಎಂದಿಗೂ ಸವಾಲಿನ ಕೆಲಸ. ಹೆಚ್ಚು ಯಶಸ್ವೀ ಶಿಕ್ಷಕರು ವ್ಯಕ್ತಿಯಂತೆ ಮತ್ತು ವೃತ್ತಿಪರರಂತೆ ಹೆಚ್ಚು ವಿಭಿನ್ನರು. ಅವರು ವಿಭಿನ್ನ ಬೋಧನಾ ತಂತ್ರಗಳನ್ನು ಉಪಯೋಗಿಸುತ್ತಾರೆ ಮತ್ತು ವಿದ್ಯಾರ್ಥಿಯ ಶಿಸ್ತನ್ನು ಸಂರಕ್ಷಿಸುವ ಸಲುವಾಗಿ ವಿಭಿನ್ನ ಯೋಜನೆಯಗಳನ್ನು ಸೂಚಿಸುತ್ತಾರೆ. ತರಗತಿ ಕೋಣೆಯಲ್ಲಿನ ಈ ಬೋಧನಾ ತಾರೆಗಳ ಹೋಲಿಕೆಯಲ್ಲಿ ಅವರು ಹೇಗೆ ಕಲಿಕಾ ವಾತಾವರಣವನ್ನು ಕಟ್ಟಿಕೊಡುತ್ತಾರೆ ಮತ್ತು ಹೇಗೆ ತರಗತಿ ಕೋಣೆಯನ್ನು ನಿರ್ವಹಣೆ ಮಾಡುತ್ತಾರೆ ಎಂಬುದರಲ್ಲಿ ಪ್ರಮುಖವಾದ ವ್ಯತ್ಯಾಸಗಳನ್ನು ಕಾಣಬಹುದು.

ತರಗತಿ ಕೋಣೆ ನಿರ್ವಹಣೆಯ ಆಳವನ್ನು ಬಯಲು ಮಾಡುವ ಏಳು ಸೂಚಕಗಳಿವೆ. ಇವು ಪರಿಪೂರ್ಣವೇನಲ್ಲ. ಅವುಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ. ಮುಂದೆ ಅವುಗಳನ್ನು ವಿವರಿಸಲಾಗುತ್ತದೆ.

1. ತರಗತಿ ಕೋಣೆಯ ವಾತಾವರಣ
2. ತರಗತಿ ಕೋಣೆಯ ಸಂವಹನ
3. ವಿದ್ಯಾರ್ಥಿಯ ಕಲಿಕೆಯು ನಡೆಯುವ ತರಗತಿ ಕೋಣೆಯ ನಿರ್ವಹಣೆ
4. ತರಗತಿ ಕೋಣೆಯಲ್ಲಿನ ವಿದ್ಯಾರ್ಥಿಯ ವರ್ತನೆಯ ನಿರ್ವಹಣೆ ಮತ್ತು ಶಿಸ್ತು
5. ಬೋಧನಾ ತಂತ್ರಗಳು
6. ತರಗತಿ ಕೋಣೆಯ ನಿರ್ವಹಣೆಯ ಮೂಲಕ ಮನೆ ಮತ್ತು ಶಾಲೆಯ ಸಂಪರ್ಕ
7. ಹೊಸ ಪೀಳಿಗೆಯ ತರಗತಿ ಕೋಣೆಯ ನಿರ್ವಹಣೆ

**1. ತರಗತಿ ಕೋಣೆಯ ವಾತಾವರಣ:** ಸಂಘಟನಾ ವಾತಾವರಣದ ಪರಿಣಿತರು ವ್ಯಾಖ್ಯಾನಿಸಿದ ಸೂಚನೆಗಳನ್ನು ಗಣನೆಗೆ ತೆಗೆದುಕೊಳ್ಳುವುದಾದರೆ, ತರಗತಿ ಕೋಣೆಯ ವಾತಾವರಣವನ್ನು ಬೇರೆ ತರಗತಿ ಕೋಣೆಗಳಿಗಿಂತ ವಿಭಿನ್ನವಾಗಿರುವ ಮತ್ತು ಕಾಲಕ್ರಮದಲ್ಲಿ ಅವುಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ವರ್ತನೆಯನ್ನು ಪ್ರಭಾವಕ್ಕೊಳಪಡಿಸುವ ಅನೇಕ ಗುಣಲಕ್ಷಣಗಳ ಒಂದು ಗುಂಪು ಎಂದು ನಿರೂಪಿಸಬಹುದು. (ಹಾಲ್ಪನ್ ಮತ್ತು ಕ್ರಾಫ್ಟ್ 1963) ಶಾಲೆಯ ವಾತಾವರಣವು ಶಾಲೆಯ ಸಾಧನೆಯೊಂದಿಗೆ ಅದರಲ್ಲೂ ಮುಖ್ಯವಾಗಿ ಶಿಕ್ಷಕರೊಂದಿಗೆ ಸಂಬಂಧವಿರಿಸಿಕೊಂಡು ಬಂದಿರುವುದು ಕಂಡುಬಂದಿದೆ. ಅಂತೆಯೇ ನಿರ್ದಿಷ್ಟ ತರಗತಿ ಕೋಣೆಯಲ್ಲಿನ ವಿದ್ಯಾರ್ಥಿಗಳ ಸಾಧನೆಯೊಂದಿಗೆ ತರಗತಿ ಕೋಣೆಯ ವಾತಾವರಣವು ಸಂಬಂಧವಿರಿಸಿಕೊಂಡಿದೆ ಎಂಬುದೂ ತಿಳಿದುಬಂದಿದೆ. (ಜಿಂದಾಲ್ 1976; ಶರ್ಮ 1982)

ಸಂಘಟನಾ ವಾತಾವರಣವು ಒಂದು ವರ್ಗೀಕರಣದ ಪ್ರಕಾರ ನಾಲ್ಕು ವಿಭಾಗಗಳನ್ನು ಒಳಗೊಂಡಿದೆ; ಪರಿಸರ ವಿಜ್ಞಾನ, ಸಾಮಾಜಿಕ ಪರಿಸರ, ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿ.

Digitised by Bharatavani, CIIL

ಪರಿಸರ ವೈಜ್ಞಾನಿಕ ರಚನೆಯು ತರಗತಿ ಹಾಗೂ ಶಾಲೆಯಲ್ಲಿನ ಭೌತಿಕ ಮತ್ತು ಪ್ರಾಪಂಚಿಕ ವಾತಾವರಣವನ್ನು ವಿವರಿಸುತ್ತದೆ. ಪ್ರತಿ ಹಂತದಲ್ಲಿನ ವ್ಯಕ್ತಿಗಳ ಗುಣಲಕ್ಷಣಗಳನ್ನು ಸಾಮಾಜಿಕ ಪರಿಸರವು ವಿವರಿಸುತ್ತದೆ. ಸಾಮಾಜಿಕ ವ್ಯವಸ್ಥೆಯು ಆಡಳಿತದ ಮಾದರಿ ಮತ್ತು ನಿಯಮಗಳನ್ನು ಹಾಗೂ ವಿದ್ಯಾರ್ಥಿ ಮತ್ತು ಸಿಬ್ಬಂದಿಗಳ ನಡುವಿನ ಸಂಬಂಧದ ಸ್ವರೂಪವನ್ನು ಒಳಗೊಂಡಿದೆ. ಕಾರ್ಯಸಂಸ್ಕೃತಿಯು ತರಗತಿ ಅಥವಾ ಶಾಲೆಯನ್ನು ಒಂದು ಸಂಸ್ಥೆಯಾಗಿ ಭಾವಿಸಿ ಚಾಲ್ತಿಯಲ್ಲಿರುವ ಸಮಾಜ ವ್ಯವಸ್ಥೆಯ ಮಾನದಂಡಗಳನ್ನು ಮತ್ತು ಮೌಲ್ಯಗಳನ್ನು ಚಿತ್ರಿಸುತ್ತದೆ. ಇವೆಲ್ಲವೂ ಒಟ್ಟಾರೆಯಾಗಿ ಸೇರಿ ಶಾಲೆಯ ವಿಶಿಷ್ಟ ಲಕ್ಷಣಗಳನ್ನು ವರ್ಣಿಸುತ್ತದೆ. ಅಂತಿಮವಾಗಿ, ಒಳ್ಳೆಯ ತರಗತಿಯ ಕೋಣೆಯ ವಾತಾವರಣವು ತರಗತಿಯ ಹಾಗೆಯೇ ಶಾಲೆಯನ್ನು ಉತ್ತಮ ಸಂಸ್ಕೃತಿಯೆಡೆಗೆ ಕರೆದೊಯ್ಯುತ್ತದೆ ಹಾಗೂ ಶಾಲೆಯ ಸಂಸ್ಕೃತಿಯೊಂದಿಗೆ ಹೊಂದಿರುವ ಅತ್ಯುತ್ತಮ ಬದ್ಧತೆಯ ಶಾಲಾ ವಾತಾವರಣವನ್ನು ಶಕ್ತಿಗೊಳಿಸುತ್ತದೆ. ಇಂತಹ ವಾತಾವರಣವು ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸಹೃದಯತೆ ಹಾಗೂ ಗೌರವವನ್ನು ವಿದ್ಯಾರ್ಥಿಗಳು ತಮ್ಮ ತಮ್ಮಲ್ಲಿ ಪರಸ್ಪರ ಗೌರವ ಹೊಂದುವ ಬಗ್ಗೆಯೂ ಇದು ವಿದ್ಯಾರ್ಥಿಯೆಡೆಗೆ ಶಿಕ್ಷಕನು ತೋರುವ ಅಕೃತ್ರಿಮವಾದ ಕಾಳಜಿ ಮತ್ತು ಗೌರವದೊಂದಿಗೆ ಪ್ರಾರಂಭವಾಗುತ್ತದೆ. ವಿದ್ಯಾರ್ಥಿಗಳು ಶಿಕ್ಷಕರಿಗೆ ಕೇವಲ ಅವರ ಹುದ್ದೆಗಾಗಿಯಿಲ್ಲದೆ, ವ್ಯಕ್ತಿಯನ್ನಾಗಿಯೂ ಪರಿಗಣಿಸಿ ಗೌರವವನ್ನು ಸೂಚಿಸುತ್ತಾರೆ. ವಿದ್ಯಾರ್ಥಿಗಳು ಅಕೃತ್ರಿಮವಾದ ಕಾಳಜಿ ಪರಸ್ಪರರಿಗೂ ಹಾಗೂ ಅವರನ್ನು ವಿದ್ಯಾರ್ಥಿಗಳೆಂದು ಭಾವಿಸಿಯೂ ತೋರಿಸುವರು.

ಉತ್ತಮ ತರಗತಿ ಕೋಣೆ ಪರಿಸರಕ್ಕಾಗಿ ದುಡಿಯುವ ಪ್ರಮುಖ ಉದ್ದೇಶವೆಂದರೆ ವಿದ್ಯಾರ್ಥಿಗಳಿಗೆ ಕ್ರಿಯಾಶೀಲವಾದ ಭಾಗವಹಿಸುವಿಕೆ ಮೂಲಕ ತಮ್ಮನ್ನು ತೋರ್ಪಡಿಸಿಕೊಳ್ಳುವುದು, ಕುತೂಹಲ ಮತ್ತು ವಿಷಯಗಳ ಪ್ರತಿಯೊಂದು ವಿಭಾಗಕ್ಕೂ ತಮ್ಮ ಆಸಕ್ತಿಯನ್ನು ತೋರುವರು. ಇದನ್ನು ಅವರು ತಮ್ಮ ಟಿಪ್ಪಣಿಗಳನ್ನು ತಾವೇ ಪರಿಷ್ಕರಿಸಿಕೊಳ್ಳುವ ಮೂಲಕ ಸಹಪಾಠಿಗಳಿಗೆ ಸಹಾಯ ಮಾಡುವ ಮೂಲಕ ಮತ್ತು ಉತ್ಕೃಷ್ಟ ದರ್ಜೆಯ ಕೆಲಸವನ್ನು ಖಾತ್ರಿಪಡಿಸುತ್ತಾ ಪ್ರದರ್ಶಿಸುವರು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜೊತೆಗೂಡಿ ಕಲಿಕಾ ಚಟುವಟಿಕೆಗಳ ಯೋಜನೆ, ಪರಸ್ಪರ ಕ್ರಿಯೆಗಳು ಎಲ್ಲಾ ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚು ಅಪೇಕ್ಷಿಸುವಂತಹ ತರಗತಿ ಕೋಣೆಯ ವಾತಾವರಣವನ್ನು ಹುಟ್ಟುಹಾಕಿ, ಅದನ್ನು ಸಂರಕ್ಷಿಸುವರು. ಕಲಿಕೆಯ ಸಂಸ್ಕೃತಿಯಿರುವ ತರಗತಿಗಳು ಶ್ರೇಷ್ಠಮಟ್ಟದ ಮೌಲ್ಯಗಳನ್ನು ನಿರ್ಮಿಸುವ ಶಿಕ್ಷಕರು ವಿದ್ಯಾರ್ಥಿಗಳ ಶ್ರೇಷ್ಠ ಕೆಲಸಗಳನ್ನು ಪ್ರದರ್ಶಿಸುವ ಬೌದ್ಧಿಕವಾದ ಚಟುವಟಿಕೆಯಿಂದ ಕೂಡಿದ ಸ್ಥಳ ಹಾಗೂ ಶಿಕ್ಷಕರು ವಿದ್ಯಾರ್ಥಿಗಳ ಪರಸ್ಪರ ಕ್ರಿಯೆಗಳ ಸಹಾಯದಿಂದ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ಅವಕಾಶ ಮಾಡಿಕೊಡುತ್ತದೆ. ವಿದ್ಯಾರ್ಥಿ ಶಿಕ್ಷಕರು ವಿಷಯವನ್ನು ಬಹುಮುಖ್ಯವಾಗಿ ಕಾಣುತ್ತಾರೆ ಮತ್ತು ವಿದ್ಯಾರ್ಥಿಗಳು ತಮ್ಮ ಕೆಲಸಕ್ಕಾಗಿ ಹೆಮ್ಮೆ ಪಡುತ್ತಾರೆ.

ಬೇರೆ ವಾತಾವರಣದಲ್ಲಿ ಕಲಿಯುವ ಸಂಸ್ಕೃತಿಯಿಂದ ತರಗತಿ ಕೋಣೆಯಲ್ಲಿ ಶಿಕ್ಷಕನಾಗಲೀ, ವಿದ್ಯಾರ್ಥಿಯಾಗಲೀ ಕಲಿಯಬೇಕಾದ ವಿಷಯದ ಬಗ್ಗೆ ಆಸಕ್ತಿಯನ್ನು ತೋರುವುದಿಲ್ಲ. ಶಿಕ್ಷಕನು ಪರೋಕ್ಷವಾಗಿ ಪಠ್ಯಪುಸ್ತಕ, ಆಡಳಿತ ಮಂಡಳಿ, ಶಾಲೆ, ಪಠ್ಯಕ್ರಮವನ್ನು ದೂಷಿಸಬಹುದು. ಅವುಗಳಲ್ಲಿ ಮೌಲ್ಯದ ಕೊರತೆಯಿದೆಯೆಂದೂ ದೂರಬಹುದು. ವಿದ್ಯಾರ್ಥಿಗಳು ನಿರಾಸಕ್ತರು ಅಥವಾ ಅನಾದರ ಹೊಂದಿರುವವರು ಆಗಿರುತ್ತಾರೆ. ತಮ್ಮ ಶಕ್ತಿಯನ್ನು ಕೆಲಸಕ್ಕಾಗಿ ವಿನಿಯೋಗಿಸುವುದಿಲ್ಲ ಮತ್ತು ಅತ್ಯಂತ ಅಲ್ಪ ಪ್ರಮಾಣದ ಪರಿಶ್ರಮದ ಅಪೇಕ್ಷೆಯಿಂದ ಪ್ರಚೋದಿತರಾಗುವಂತೆ ಕಾಣುತ್ತಾರೆ.

ಉತ್ತಮ ಬೋಧನೆಯು ಸಂಭವಿಸುವುದಕ್ಕೂ ಮುಂಚೆ ಬೋಧನೆಯು ನಿಯಮ ಮತ್ತು ಕ್ರಮಗಳ ಉತ್ತಮ ನಿರ್ವಹಣೆಯನ್ನು ಅಪೇಕ್ಷಿಸುತ್ತದೆ. ಸಂಪೂರ್ಣ ಅವ್ಯವಸ್ಥೆಯಿರುವ ಪರಿಸರದಲ್ಲಿ (ವಾತಾವರಣ) ಶ್ರೇಷ್ಠ ಬೋಧನಾ ಪ್ರಯೋಗ ವಿಧಾನಗಳೂ ಬೆಲೆ ಕಳೆದುಕೊಳ್ಳುತ್ತವೆ. ಆದ್ದರಿಂದ ತರಗತಿ ಕೋಣೆಯ ಸುಗಮ ನಿರ್ವಹಣೆಗಾಗಿ ಶಿಕ್ಷಕರು ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾಗುತ್ತದೆ. ತರಗತಿ ಕೋಣೆಯ ಗುಂಪುಗಳ ಚಲನೆ, ಪರಿಕರಗಳ ಸಂಗ್ರಹಣೆ ಮತ್ತು ಹಂಚುವಿಕೆ, ಬೋಧನೇತರ ಕರ್ತವ್ಯಗಳ ಜವಾಬ್ದಾರಿಗಳಿಗಾಗಿ ನಿತ್ಯಗಟ್ಟಳೆ ಕರ್ತವ್ಯಗಳು ಸ್ಥಿರಪಡಿಸಲಾಗಿರುತ್ತವೆ. ವಿದ್ಯಾರ್ಥಿಗಳು ಅತೀ ಕಡಿಮೆ ಗೊಂದಲದಿಂದ ಎಲ್ಲಿಗೆ ಹೋಗಬೇಕು? ಏನನ್ನು ಮಾಡಬೇಕು? ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ. ದುಸ್ಥಿತಿಯಲ್ಲಿ ನಿರ್ವಹಣೆಯ ತರಗತಿ ಕೋಣೆಯನ್ನು ಸುಲಭವಾಗಿ ಕಂಡುಹಿಡಿಯಬಹುದು; ಬೋಧನೇತರ ಕರ್ತವ್ಯಗಳಲ್ಲಿ ಸಮಯವು ಹಾಳಾಗುವುದು, ಶಿಕ್ಷಕರ ಗಮನ ಸೆಳೆಯಲು ವಿದ್ಯಾರ್ಥಿಗಳು ಕಾಯಬೇಕಾಗುವುದು, ಬೋಧನಾ ಗುಂಪುಗಳಿಗೆ ಕಾರ್ಯಗಳಲ್ಲದಿರುವುದು, ಪರಿಕರಗಳು ಕೈಗೆಟುಕದಂತೆ ಇರುವುದು, ಒಂದನೇ ಅವಧಿ ಮತ್ತು ಎರಡನೇ ಅವಧಿಗಳ ನಡುವಿನ ವ್ಯತ್ಯಾಸದಲ್ಲಿ ಗೊಂದಲ ಇರುವುದು. ಉತ್ತಮ ನಿರ್ವಹಣೆಯಿರುವ ತರಗತಿಗಳಲ್ಲಿ ಕಾರ್ಯವಿಧಾನಗಳು ಅತಿ ಸರಾಗವಾಗಿ ಬದಲಾವಣೆ ಹೊಂದುವಂತೆ ಇರುತ್ತದೆ ಮತ್ತು ಸುಗಮ ನಿರ್ವಹಣೆಗಾಗಿ ವಿದ್ಯಾರ್ಥಿಗಳು ಜವಾಬ್ದಾರಿ ವಹಿಸಿಕೊಳ್ಳುತ್ತಾರೆ. ಬೋಧನಾ ಗುಂಪುಗಳು ಎಲ್ಲ ಸಮಯದಲ್ಲಿ ಕಾರ್ಯನಿರತರಾಗಿದ್ದು, ವಿದ್ಯಾರ್ಥಿಗಳು ಅಂತಹ ಗುಂಪುಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವರು. ಅಂತಹ ಗುಂಪುಗಳನ್ನು ಚಟುವಟಿಕೆಗಳನ್ನು ಶಿಕ್ಷಕರು ನೇರವಾಗಿ ನೋಡಿಕೊಳ್ಳುವುದಿಲ್ಲವಾದರೂ ವಿದ್ಯಾರ್ಥಿಗಳು ತಾವೇ ಶಿಸ್ತನ್ನು ಕಾಯ್ದುಕೊಂಡು ಅವಶ್ಯಕತೆ ಇದ್ದಾಗ ಶಿಕ್ಷಕರ ನೆರವನ್ನು ಪಡೆಯುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಬೋಧನೆಯೆಂದರೆ ವ್ಯಕ್ತಿಗಳ ನಡುವಿನ ಸಂಬಂಧದ ವಿಷಯವೆಂದೂ, ಶಾಲೆಯೆಂಬುದು ಒಂದು ಸಂಕೀರ್ಣ ಸಂಘಟನೆಯಾಗಿದ್ದು, ಅದು ಪರಸ್ಪರ ಅವಲಂಬಿತವಾದ ಭಾಗಗಳನ್ನು ಹೊಂದಿದೆ ಎಂದು ಎನ್ನಬಹುದು. ಅದು ತನ್ನದೇ ಆದ ವಿಭಿನ್ನ ಕಾನೂನು ಮತ್ತು ವರ್ತನೆಯ

Digitised by Bharatavani, CIIL

ಸಂಪ್ರದಾಯ ನಡವಳಿಕೆಯನ್ನು ಸುಭದ್ರತೆ ಮತ್ತು ಬೆಳವಣಿಗೆಗಾಗಿ ಅಳವಡಿಸಿಕೊಳ್ಳುತ್ತದೆ.(ಛಬ್ 1988). ಶಾಲೆಯೆಂಬುದು ಈ ರೀತಿಯ ಪರಸ್ಪರ ಸಂಪರ್ಕ ಹೊಂದಿದ ಸಂಬಂಧಗಳ ಅತಿಸೂಕ್ಷ್ಮವಾದ ಸಂಪರ್ಕಜಾಲ. ವಿದ್ಯಾರ್ಥಿಗಳೊಂದಿಗಿನ ಪರಸ್ಪರ ಕ್ರಿಯೆಯ ಮೂಲಕ ಪ್ರೋತ್ಸಾಹ, ಪರಸ್ಪರ ಗೌರವಿಸುವ ಹಾಗೂ ಸಹೃದಯ ಸಂಬಂಧವಿರುವ ವಾತಾವರಣವನ್ನು ಶಿಕ್ಷಕರು ನಿರ್ಮಿಸುವರು. ಗೌರವಯುತ ವಾತಾವರಣದಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ಸುರಕ್ಷಿತರು ಹಾಗೂ ಬೆಲೆಯುಳ್ಳವರೆಂದುಕೊಳ್ಳುವರು. ಅವರು ಬೌದ್ಧಿಕ ಸಂಕಷ್ಟಗಳನ್ನು ಎದುರಿಸಿದಾಗಲು ಸಹ ಅವರನ್ನು ಗೌರವದಿಂದ ನಡೆಸಿಕೊಳ್ಳುವರೆಂದು ಅವರಿಗೆ ತಿಳಿದಿರುತ್ತದೆ. ಸ್ನೇಹಪರತೆ, ಬಿಚ್ಚುಮನಸ್ಸು ಹಾಗೂ ಸಾಕಷ್ಟು ಹಾಸ್ಯವಿದ್ದರೂ ಶಿಕ್ಷಕಿ ಎಂದಿಗೂ ತಾನೊಬ್ಬ ವಯಸ್ಕಳು ಎಂಬುದನ್ನು ಮರೆಯಬಾರದು.

ಕೆಲವು ವೇಳೆ ಸೂಕ್ಷ್ಮ ಮನಸ್ಸಿನ ಶಿಕ್ಷಕರು ರಕ್ಷಣಾತ್ಮಕ ಮನೋಭಾವವನ್ನು ಪ್ರದರ್ಶಿಸುವರು. ಈ ವಿಷಯದಲ್ಲಿ ಶಿಶುವಿಹಾರದ ಮಕ್ಕಳಿಗೆ ಯಾವುದು ಸೂಕ್ತವೋ ಅಥವಾ ಸಮಂಜಸವೋ ಅದು ಪ್ರೌಢಶಾಲಾ ವಿದ್ಯಾರ್ಥಿಗೆ ಅಸಾಧಾರಣ ಅಥವಾ ಅಸಮಂಜಸವಾಗಿರುತ್ತದೆ.

ಕಟುಹಾಸ್ಯ, ಅಪಹಾಸ್ಯ, ಪಕ್ಷಪಾತ, ಸೂಕ್ತವಲ್ಲದ ಸ್ನೇಹ(ವಿದ್ಯಾರ್ಥಿಯೊಂದಿಗೆ)ಕ್ಕೆ ಈ ವಾತಾವರಣದಲ್ಲಿ ಜಾಗವಿಲ್ಲ. ಈ ರೀತಿಯ ಪರಸ್ಪರಕ್ರಿಯೆಯ ಭಾಗಗಳು ಸಾಂಸ್ಕೃತಿಕ ಸಂಪ್ರದಾಯದಿಂದ ಪ್ರಭಾವಗೊಂಡಿರುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು ಹೇಗೆ ಪ್ರಪಂಚವನ್ನು ನೋಡುತ್ತಾರೆ, ಹೇಗೆ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ, ಹೇಗೆ ಹೊಸ ಮಾಹಿತಿಗಳನ್ನು ಗ್ರಹಿಸುತ್ತಾರೆ. ಈ ಎಲ್ಲ ವಿಷಯಗಳ ಮೇಲೆ ಅವರು ಬೆಳೆದು ಬಂದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಗುಣಲಕ್ಷಣಗಳು ಪ್ರಭಾವಬೀರುತ್ತವೆ. ಕೆಲವು ಸಂಸ್ಕೃತಿಗಳಲ್ಲಿ ವಯಸ್ಸಿನ ಅಧಿಕಾರಕ್ಕೆ ಸವಾಲು ಹಾಕುವುದು, ಅಗೌರವವನ್ನು ಸೂಚಿಸದಂತೆ ಎಂಬ ಭಾವನೆ ಇದೆ. ಇಂತಹ ವಿದ್ಯಾರ್ಥಿಗಳಿಗೆ ಶಿಕ್ಷಕನ ವಾಸ್ತವಾಂಶದೊಡಗಿನ ವ್ಯಾಖ್ಯಾನಗಳನ್ನು ಸವಾಲು ಹಾಕುವುದು ಕಷ್ಟವಾಗುತ್ತದೆ.

**ತರಗತಿ ಕೋಣೆಯ ಸಂವಹನ:**

ಸರಳವಾಗಿ ಹೇಳುವುದಾದರೆ, ಸಂವಹನವು ಒಂದು ಶಕ್ತಿಯುತ ಪ್ರಕ್ರಿಯೆಯಾಗಿದ್ದು, 'ಯಾರು ಯಾರಿಗೆ ಏನು ಹೇಳಿದರು?', ಯಾವ ರೀತಿ ಮತ್ತು ಯಾವ ಪರಿಣಾಮದಲ್ಲಿ' ಎಂಬುದನ್ನು ಒಳಗೊಂಡಿರುತ್ತದೆ ಅಥವಾ ಉದ್ದೇಶವನ್ನು ಹೊಂದಿರುವವನು ಅದನ್ನು ಸಾಧಿಸಲು ಅಂದರೆ ಶಿಕ್ಷಕನು ಮತ್ತೊಬ್ಬನಿಗೆ ಅಂದರೆ ವಿದ್ಯಾರ್ಥಿಯು ಅದನ್ನು ಸಾಧಿಸುವಂತೆ ಮಾಡಲು ಏನನ್ನಾದರೂ ತಿಳಿಸಲು ಪ್ರಯತ್ನಿಸುವುದು. ಸಂವಹನವು ಮಾಹಿತಿಯ ಬದಲಾಯಿಸುವಿಕೆ ಮತ್ತು ಅರ್ಥವನ್ನು ತಲುಪಿಸುವುದು, ಇವೆರಡನ್ನು ಒಳಗೊಂಡಿದೆ ಅಥವಾ ಸಂವಹನಶಾಸ್ತ್ರದ ಪರಿಣತರು ಒತ್ತಿಹೇಳುವ ಹಾಗೆ ಇದು ಬಾಣವನ್ನು ಗುರಿಯಿಟ್ಟು ಹೊಡೆಯುವುದೇ ಅಲ್ಲದೆ ಅದು ಗುರಿ ತಲುಪುವ ಹಾಗೆ ಮಾಡುವುದನ್ನು ಒಳಗೊಂಡಿದೆ. (ಬೋಲ್ಸ್ ಮತ್ತು ಡಾವನ್‌ಪೋರ್ಟ್, 1975; ಟಿಮ್ 1984). ಒಳ್ಳೆಯ ಸಂವಹನವು ಸಂದೇಶದ ಹಾಗೂ ಉದ್ದೇಶಗಳ ಸ್ಪಷ್ಟತೆಯನ್ನು ಹೊಂದಿರುತ್ತದೆ. ಆದರೆ ಕೇವಲ ಪುನರಾವರ್ತಿಸುವ ಸಂವಹನವು ಇದಲ್ಲ.

ಪರಿಣಾಮಕಾರಿ ತರಗತಿ ಕೋಣೆಯ ಸಂವಹನದ ಫಲಶ್ರುತಿಯೆಂದರೆ, ಸಂವಹನ ನಡೆದಾಗ ಶಿಕ್ಷಕನ ಮಾರ್ಗದರ್ಶನ ಮತ್ತು ಕಾರ್ಯವಿಧಾನವು ವಿದ್ಯಾರ್ಥಿಗೆ ಸ್ಪಷ್ಟವಾಗಿದ್ದು, ಅದು ವಿದ್ಯಾರ್ಥಿಯಲ್ಲಿ ಉಂಟಾಗಬಹುದಾದ ತಪ್ಪು ತಿಳುವಳಿಕೆಯನ್ನು ನಿರೀಕ್ಷಿಸಿರುತ್ತದೆ. ಮೂಲಭೂತವಾಗಿ ಪಾಠದ ಶಕ್ತಿಯನ್ನು ಅಭಿವೃದ್ಧಿಪಡಿಸಲು ಶಿಕ್ಷಕನು ಸರಿಯಾದ ಮತ್ತು ಅರ್ಥಗರ್ಭಿತವಾದ ಮೌಖಿಕ ಮತ್ತು ಲಿಖಿತ ಭಾಷೆಯನ್ನು ಚೆನ್ನಾಗಿ ಆಯ್ಕೆ ಮಾಡಿದ ಶಬ್ದಗಳ ಮೂಲಕ ಅಭಿವ್ಯಕ್ತಿಸಬೇಕು.

ಶಿಕ್ಷಕ ಮತ್ತು ವಿದ್ಯಾರ್ಥಿಗಳ ಯಶಸ್ಸು ಹೆಚ್ಚಾಗಿ ಅವರು ಅಭಿವೃದ್ಧಿಪಡಿಸಿಕೊಂಡ ಮೌಖಿಕ ಹಾಗೂ ಶಾಬ್ದಿಕ ಸಂವಹನ ಕೌಶಲಗಳ ಮೇಲೆ ಅವಲಂಬಿಸಿದೆ. ತರಗತಿ ಕೋಣೆಯ ಸಂವಹನದ ಬಗ್ಗೆ ಬಹುಮುಖ್ಯವಾಗಿ ಗಮನಿಸಬೇಕಾದ ಐದು ಮೂಲತತ್ವಗಳಿವೆ. ಆದರೆ ಇವೇ ಪರಿಪೂರ್ಣವಲ್ಲವಾದರೂ ಜೀವನಕ್ಕೆ ಸಂಬಂಧಿಸಿದ ಮೂಲತತ್ವಗಳಾಗಿವೆ. ಅವುಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ ಮತ್ತು ಅವುಗಳನ್ನು ಮುಂದೆ ಸೂಕ್ಷ್ಮವಾಗಿ ವಿವರಿಸಲಾಗಿದೆ.

- ನಿಷ್ಕಪಟ ಪರಿಪಾಲನೆಗಾಗಿ ತಳಹದಿಯನ್ನು ಒದಗಿಸುವುದು
- ಎಲ್ಲ ವಿದ್ಯಾರ್ಥಿಗಳೂ ಪರಿಣಾಮಕಾರಿ ಸಂವಹನಕಾರರಾಗಬಹುದು.
- ಪರಿಣಾಮಕಾರಿ ತರಗತಿ ಕೋಣೆಯ ಸಂವಹನವನ್ನು ಯೋಜಿಸುವುದು.
- ತರಗತಿ ಕೋಣೆಯ ಸಂವಹನವನ್ನು ವಾಸ್ತವದ ಹತ್ತಿರಕ್ಕೆ ತರುವುದು.
- ಪರಿಣಾಮಕಾರಿ ಸಂವಹನಕ್ಕಾಗಿ ಕ್ರಮಬದ್ಧವಾದ ಅಭ್ಯಾಸ.

ವಿದ್ಯಾರ್ಥಿಗಳನ್ನು ನೋಡಿಕೊಳ್ಳುವುದು, ವಿದ್ಯಾರ್ಥಿಗಳ ಬಗ್ಗೆ ಗಮನ ನೀಡುವುದಕ್ಕಿಂತ ಭಿನ್ನವಾದುದು, ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಪ್ರೇರಣಾಶಕ್ತಿಯನ್ನು ಅರಿತಾಗ ಮಾತ್ರ ಶಿಕ್ಷಕರು ಅವರಿಗೆ ಅಕೃತಿಮವಾದ ಗಮನ ನೀಡಿದಂತೆ ಆಗುತ್ತದೆ. ವಿದ್ಯಾರ್ಥಿಗಳು ಸ್ವಯಂ–ನಿರ್ದೇಶಿತ ಜವಾಬ್ದಾರಿಯುತ ಕಲಿಕಾರ್ಥಿಗಳಾಗಲು ಶಿಕ್ಷಕರು ಅವರಿಗೆ ಅಗತ್ಯವಾದ ಸೂಕ್ತ ಪ್ರಮಾಣದ ಬೆಂಬಲ, ರೂಪ ಮತ್ತು ನಿರೀಕ್ಷೆಗಳನ್ನು ನೀಡಿ ಪರಿಪಾಲನೆ ಮಾಡುವರು. ವಿದ್ಯಾರ್ಥಿಯ ಬಗ್ಗೆ ಕಾಳಜಿ ವಹಿಸುವ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಸಾಧನೆಯೆಡೆಗೆ ಗಮನ ನೀಡಿ ಅದಕ್ಕೆ ತಕ್ಕ ರೀತಿಯಲ್ಲಿ ಸಂವಹನ ನಡೆಸುತ್ತಾರೆ.

Digitised by Bharatavani, CIIL

ಎಲ್ಲ ವಿದ್ಯಾರ್ಥಿಗಳು ಪರಿಣಾಮಕಾರಿ ಸಂವಾಹಕರಾಗಬೇಕೆನ್ನುವ ತತ್ವವು ಪರಿಪಾಲನೆ ತತ್ವದ ಮೇಲಿನ ತಾತ್ವಿಕ ಘಟಕದ ಚರ್ಚೆಯ ಮುಂದುವರಿಕೆ. ಎಲ್ಲ ಮಕ್ಕಳನ್ನು ಚೆನ್ನಾಗಿ ಜತನ ಮಾಡಬೇಕೆನ್ನುವ ಶಿಕ್ಷಕರು ಯಾವೊಬ್ಬರನ್ನೂ ಬಿಟ್ಟುಕೊಡುವುದಿಲ್ಲ. ಜತನಮಾಡುವ ಸಹಪಾಠಿಗಳು ಪರಿಣಾಮಕಾರಿ ಕಲಿಯುವವರಾಗುತ್ತಾರೆ. ಯೋಜನೆ ಮಾಡದೇ ಬಿಟ್ಟರೆ ತರಗತಿ ಕೋಣೆಯ ಸಂವಹನವು ಹೆಚ್ಚಾಗಿ ಅನುಷಂಗಿಕವಾಗಬಹುದು. ಹೆಚ್ಚೆಂದರೆ ಪ್ರಾಸಂಗಿಕವಾಗಬಹುದು. ವಿದ್ಯಾರ್ಥಿಗಳಿಗೆ ಕಣ್ಣಿಗೆ ಕಾಣುವುದು ಸಾಕಾಗುವುದಿಲ್ಲ. ಅವರನ್ನು ಅರ್ಥಪೂರ್ಣ ಮಾತು, ಜವಾಬ್ದಾರಿಯುತ ಕೇಳಿಸಿಕೊಳ್ಳುವಿಕೆ ಮತ್ತು ಸ್ಪಷ್ಟವಾದ ಬರಹದ ಮೂಲಕ ಸೆಳೆಯಬೇಕು.

ಪರಿಣಾಮಕಾರಿ ತರಗತಿ ಕೋಣೆಯ ಸಂವಹನದ ಶಕ್ತಿಯುತ ವಾತಾವರಣದ ಯೋಜನೆಗಾಗಿ ಪರಿಪಾಲನೆಯು ಶಕ್ತಿಯುತ ಅಡಿಪಾಯವನ್ನು ಒದಗಿಸುತ್ತದೆ. ಅದು ವಿದ್ಯಾರ್ಥಿಗಳು ತಮ್ಮ ತಮ್ಮಲ್ಲಿಯೇ ತೋರುವ ಪಾಲನೆಯಿಂದ ಅಂತ್ಯಗೊಳ್ಳುತ್ತದೆ. ಯಾವಾಗ ಅವರು ಹಾಗೆ ಮಾಡುವುದಿಲ್ಲವೋ ಅಥವಾ ಹಾಗೆ ಮಾಡಲು ಹೇಳಿಕೊಡುವುದಿಲ್ಲವೋ ಮತ್ತು ಮತ್ತೊಬ್ಬರಿಗಾಗಿ ಕಾಳಜಿ, ಸಹಕಾರ ತೋರುವುದಿಲ್ಲವೋ ಅದರ ಪರಿಣಾಮ ಕೆಲವು ವಿದ್ಯಾರ್ಥಿಗಳು ಶ್ರೇಷ್ಠ ಶೈಕ್ಷಣಿಕ ಸ್ಥಾನವನ್ನು, ಕೆಲವರು ಸಾಮಾನ್ಯ ಸ್ಥಾನವನ್ನು, ಉಳಿದವರು ಋಣಾತ್ಮಕ ವಿದ್ಯಾರ್ಥಿ ವರ್ತನೆಯನ್ನು ತೋರುವ ಕೆಳಮಟ್ಟದ ಶೈಕ್ಷಣಿಕ ಸ್ಥಾನವನ್ನು ಗಳಿಸುತ್ತಾರೆ. ಪರಿಣಾಮಕಾರಿ ತರಗತಿ ಕೋಣೆಯ ಸಂವಹನದ ಯೋಜನೆಯಿಂದ ಎಲ್ಲ ವಿದ್ಯಾರ್ಥಿಗಳು ಚಟುವಟಿಕೆಯಿಂದ ಭಾಗವಹಿಸುತ್ತಾರೆ. ಇದರಿಂದ ಎಲ್ಲ ವಿದ್ಯಾರ್ಥಿಗಳು ಚುರುಕಾಗಿ ಕೇಳಿಸಿಕೊಳ್ಳುತ್ತಾರೆ. ವಿಮರ್ಶನಶೀಲ ಚಿಂತನೆ ಮತ್ತು ಜವಾಬ್ದಾರಿಯುತ ಮಾತುಗಾರಿಕೆಯನ್ನು ಸುಭದ್ರಗೊಳಿಸಿಕೊಳ್ಳುತ್ತಾರೆ. ನಾವೀನ್ಯವಿರುವ ಶಿಕ್ಷಕರು ಸಂಪ್ರದಾಯಬದ್ಧ ಕಲಿಕಾ ಅನುಭವಗಳಾದ ಪಠ್ಯದಿಂದ ನಕಲು ಮಾಡುವುದನ್ನು ಅವರ ಬೌದ್ಧಿಕ ಸಹಜಶಕ್ತಿಯನ್ನು ಚುರುಕುಗೊಳಿಸುವ ಕಾರ್ಯನಿರತ ಹಾಗೂ ಆಸಕ್ತಿಯುಕ್ತ ಚಟುವಟಿಕೆಯನ್ನಾಗಿ ಮಾರ್ಪಡಿಸಬಲ್ಲರು.

ತರಗತಿ ಕೋಣೆಯ ಸಂವಹನವು ವಾಸ್ತವಿಕವಾಗುವುದರಿಂದ ಅದು ವಿದ್ಯಾರ್ಥಿಗಳ ಚುರುಕಾದ ಕಾರ್ಯನಿರತತೆಯನ್ನೂ ಸ್ವಯಂಸ್ಫೂರ್ತಿಯುತ ಅಧಿಕಾರಯುತ ಮೊಕಾಬಿಲೆಯನ್ನು ಪ್ರೋತ್ಸಾಹಿಸುತ್ತದೆ. ಇವು ತಾಜಾ ಹಾಗೂ ಅನುರಣಿಸುತ್ತಿರುವ ಲವಲವಿಕೆಯ ಧ್ವನಿಯ ವಿದ್ಯಾರ್ಥಿ ಸಂವಹನಕಾರರ ಮೌಖಿಕ ಮತ್ತು ಬರಹದ ಭಾಷೆಯನ್ನು ಪ್ರೋತ್ಸಾಹಿಸುತ್ತವೆ. ಪ್ರಮುಖವಾದ ಅನುಭವಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಅವಕಾಶ ನೀಡುವುದರಿಂದ ಅವರು ಉತ್ಸಾಹಭರಿತರಾಗಿ ಪ್ರತಿಕ್ರಿಯಿಸಲು ಪರಿಪಾಲನಾ ಹಾಗೂ ಜವಾಬ್ದಾರಿಯುತ ಹಂತದ ಸಂವಹನವನ್ನು ಶಿಕ್ಷಕರೊಂದಿಗೆ ಹಾಗೂ ಒಬ್ಬರು ಮತ್ತೊಬ್ಬರೊಂದಿಗೆ ನಡೆಸಲು ಸಾಧ್ಯವಾಗುತ್ತದೆ.

ದುರದೃಷ್ಟವಶಾತ್ ನಮ್ಮ ಹೆಚ್ಚಿನ ತರಗತಿ ಕೋಣೆಯ ವಿದ್ಯಾರ್ಥಿಗಳು ನಿಶ್ಯಬ್ದವಾಗಿ ಪುಸ್ತಕದಿಂದ ವಾಕ್ಯಗಳನ್ನು ನಕಲು ಮಾಡಲು ಅಥವಾ ವ್ಯಾಕರಣ ಪ್ರಶ್ನೆಗಳಲ್ಲಿನ ಬಿಟ್ಟ ಪದ ತುಂಬಲು ನಿರತರಾಗಿರುತ್ತಾರೆ. ಒಬ್ಬರು ಮತ್ತೊಬ್ಬರ ಬಗ್ಗೆ ಅಕೃತಿಮವಾದ ಕಾಳಜಿ ತೋರುವುದನ್ನು ಆಧರಿಸಿದ ವಿಭಿನ್ನ ಅವಕಾಶಗಳನ್ನು ನೀಡಿ ಪರಿಣಾಮಕಾರಿ ಸಂವಹನವನ್ನು ನಡೆಸಿ ಶಿಕ್ಷಕರು ಈ ಸಮಸ್ಯೆ ಬಗೆಹರಿಸಬಹುದು.

ಜನರು ತಮ್ಮ ತಮ್ಮಲ್ಲಿ ಹೇಗೆ ಮಾತನಾಡುತ್ತಾರೆಂಬುದು ಬಹಳ ಮುಖ್ಯ. ಶಿಕ್ಷಕರು ಮತ್ತು ಅವರ ವಿದ್ಯಾರ್ಥಿಗಳು ಕೇಳಿಸಿಕೊಳ್ಳಬೇಕು, ವಿವರಿಸಬೇಕು, ಮತ್ತು ಪ್ರಶ್ನೆಗಳನ್ನು ಕೇಳಬೇಕು. ಹಾಗೂ ಉತ್ತರಿಸಬೇಕು. ತರಗತಿ ಕೋಣೆಯಲ್ಲಿ ಸಂವಹನ ಮಾಡಲು ಸಾಧ್ಯವಾಗುವುದು ತುಂಬಾ ಅವಶ್ಯಕ. ಮನೋವಿಶ್ಲೇಷಣಾ ತತ್ವದಲ್ಲಿ ತನ್ನ ಬೇರನ್ನು ಹೊಂದಿರುವ ನಿರ್ವಹಣಾ ವಿಶ್ಲೇಷಣೆಯನ್ನು ಈಗ ಇಬ್ಬರು ವ್ಯಕ್ತಿಗಳ ನಡುವಿನ ಸಂವಹನಾ ತತ್ವವೆಂದು ಮಾನ್ಯ ಮಾಡಲಾಗುತ್ತಿದೆ. (ಎರಿಕ್‌ಬರ್ನ್ 1967) ಅವರ ಅಭಿಪ್ರಾಯದ ಪ್ರಕಾರ ಇಬ್ಬರು ವ್ಯಕ್ತಿಗಳು ಸಂವಹನ ನಡೆಸಿದಾಗ ಅವರು ಮೂರು ಮೂಲಶೈಲಿಗಳನ್ನು ಅನುಸರಿಸುತ್ತಾರೆ.

ಮೊದಲನೆಯದು ಒಬ್ಬ ಪೋಷಕನಾಗಿ (P) ಅವರು ದೃಢವಾಗಿ ಹೇಳುತ್ತಾರೆ. ಟೀಕೆ ಮಾಡುತ್ತಾರೆ ಮತ್ತು ಸಲಹೆ ನೀಡುತ್ತಾರೆ. ಎರಡನೆಯದು ಒಬ್ಬ ವಯಸ್ಕನಾಗಿ (A) ತಾತ್ವಿಕ, ವಿಶ್ಲೇಷಣಾ ರೀತಿಯಲ್ಲಿ ಸಮಸ್ಯೆಗೆ ಪರಿಹಾರವನ್ನು ಸೂಚಿಸುತ್ತಾರೆ. ಕೊನೆಯದಾಗಿ ಒಬ್ಬ ಮಗುವಾಗಿ (C) ಭಾವನೆಗಳೇ ಅವರ ಮುಖ್ಯ ಪ್ರತಿಕ್ರಿಯೆ. ಇದೊಂದು ಉತ್ಸಾಹಭರಿತ ಸಂವಹನದ ಹಾಸ್ಯಭರಿತ ದಾರಿಯಾಗಬಹುದು ಹಾಗೂ ಕೋಪದ ಹಾಗೂ ಬಂಡಾಯದ್ದೂ ಆಗಬಹುದು. ಈ ರೀತಿಯ ಭಾವನೆಗಳೊಂದಿಗಿನ ವ್ಯವಹಾರವು ಸವಾಲಿನ ಕೆಲಸ ಮಾತುಕತೆಗಳು ತರಗತಿಯಲ್ಲಿ ಹಲವು ಸಂದರ್ಭಗಳಲ್ಲಿ ಸಂಭವಿಸಬಹುದು. ಆದರೆ ನಿರ್ವಹಣಾ ವಿಶ್ಲೇಷಣೆಯು ಈ ಪ್ರಮುಖ ಮಾತುಕತೆಗಳ ಯಶಸ್ವಿ ಮತ್ತು ಕಡಿಮೆ ಯಶಸ್ವಿ ಮಾರ್ಗಗಳನ್ನು ವಿಶ್ಲೇಷಿಸಲು ಪ್ರಾರಂಭಿಸುವಂತೆ ಸಹಾಯ ಮಾಡುವುದು.

**ವಿದ್ಯಾರ್ಥಿಯ ಕಲಿಕೆಯು ಒಳಪಡುವ ತರಗತಿ ಕೋಣೆಯ ನಿರ್ವಹಣೆ**

ಪ್ರಪಂಚದೆಲ್ಲೆಡೆ ಸಮಾಜದಲ್ಲಿ ಸಾಮಾನ್ಯ ಸೌಜನ್ಯ ಮತ್ತು ಸಭ್ಯತೆಗಳು ನಾಶವಾಗತೊಡಗಿವೆ. ಬೇರೊಬ್ಬರಿಗಾಗಿ ಜವಾಬ್ದಾರಿಯುತರಾಗುವ ನೈತಿಕತೆಯನ್ನು ಬೋಧಿಸುವ ನೈತಿಕತೆಯ ಶಿಕ್ಷಕ ಮತ್ತು ಪೋಷಕರ, ಚರ್ಚುಗಳ ಜವಾಬ್ದಾರಿಗಳನ್ನು ಪಕ್ಕಕ್ಕೆ ತಳ್ಳದ ದೃಢನಿರ್ಧಾರದ ಸತತ ಪ್ರಯತ್ನ ಇಂದು ಅಗತ್ಯವಾಗುತ್ತಿದೆ. ಶಾಲಾ ಚಾರಿತ್ರ್ಯದ ಪರಿಣಾಮಕಾರಿತ್ವದ ಬಗ್ಗೆ ಅತಿ ಕಡಿಮೆ ಸಂಶೋಧನೆಗಳು ನಡೆದಿದ್ದರೂ ಕನಿಷ್ಠ ಒಂದು ಸಂಶೋಧನೆಯು ಹೀಗೆ ಸೂಚಿಸುತ್ತದೆ. ಪೂರ್ಣಪ್ರಮಾಣದ ಮುಂತೊಡಗುವಿಕೆಯು ಅತಿಕ್ರಮಣವನ್ನು ಕಡಿಮೆ ಮಾಡುತ್ತದೆಯಲ್ಲದೆ ಶಾಲೆಗೆ ಕಳ್ಳತನದಿಂದ ಬಂದೂಕು

Digitised by Bharatavani, CIIL

ತರುವ ರೋಷದಿಂದ ಕೂಡಿರುವ ಕಿರಿಯ ಹದಿವರ್ಷದವರ ಶೈಕ್ಷಣಿಕ ಸಾಧನೆಯನ್ನು ಮೇಲಕ್ಕೇರಿಸುತ್ತದೆ ಎಂದು ಸೂಚಿಸುತ್ತದೆ. ಇತ್ತೀಚಿನ ಒಂದು ಸರ್ವೆಯ ಪ್ರಕಾರ ಅಮೇರಿಕಾದಲ್ಲಿನ ಅನೇಕ ವಿದ್ಯಾರ್ಥಿಗಳು ನೈತಿಕವಾಗಿ ದಿಕ್ಕು ತಪ್ಪಿದ್ದಾರೆ. (ಟೈಮ್ಸ್ ಆಫ್ ಇಂಡಿಯಾ, 11 ಏಪ್ರಿಲ್ 2001).

ಎಲ್ಲ ವಿದ್ಯಾರ್ಥಿಗಳಿಂದಲೂ ಹೆಚ್ಚು ನಿರೀಕ್ಷೆಗಳನ್ನು ಇಟ್ಟುಕೊಳ್ಳುವ ಎಲ್ಲ ವಿದ್ಯಾರ್ಥಿಗಳೂ ಶ್ರೇಷ್ಠ ಸಾಧನೆ ಮಾಡುತ್ತಾರೆಂದು ಭಾವಿಸುವ, ನಿರಂತರ ಸುಧಾರಣೆಯನ್ನು ಕಾಣುವ, ಸೃಜನಶೀಲತೆಯಿಂದ ಸಮಸ್ಯೆಯನ್ನು ಬಗೆಹರಿಸುತ್ತಾರೆಂಬ ಗುಣಲಕ್ಷಣಗಳಿರುವ ಶಕ್ತ ಸಂಸ್ಕೃತಿಯ ಪರಿಪಾಲನೆಯ ಮತ್ತು ವೈಯಕ್ತಿಕ ಸಂಸ್ಕೃತಿಯ ಭದ್ರವಾದ ತಳಹದಿಯ ಲಕ್ಷಣ. ಇಂತಹ ಸಂಸ್ಕೃತಿಯು ಸಂಪ್ರದಾಯ ನಡವಳಿಕೆಯ ಒಂದು ಮೂಲಭೂತ ಮಾನದಂಡವನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಅಂತಹ ನಡವಳಿಕೆಗಳು ಮತ್ತು ಮೌಲ್ಯಗಳು ಪರಿಚಿತವಾಗಿರುತ್ತದೆ ಮತ್ತು ವರ್ತನೆಯ ಅನೌಪಚಾರಿಕ ಮಾರ್ಗದರ್ಶಿ ಸೂಚಕಗಳಾಗಿರುತ್ತವೆ. ಇಂತಹ ಸಂಸ್ಕೃತಿಯು ಶಾಲಾ ಸಮುದಾಯದ ಬಗ್ಗೆ ಅದಕ್ಕೆ ಸೇರಿರುವ ಭಾವನೆಯನ್ನು ಅಲ್ಲಿನ ಪೋಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಉಂಟುಮಾಡುತ್ತದೆ.

ಶಾಲೆಯ ತಾಂತ್ರಿಕ ಭಾಗವು ಪಠ್ಯಕ್ರಮ, ಬೋಧನಾಕ್ರಮ, ವಿದ್ಯಾರ್ಥಿಗಳ ಕಲಿಕೆ, ವರ್ತನೆ, ನಡವಳಿಕೆ ಹಾಗೂ ವರ್ತನೆ, ವರ್ತನಾ ಕ್ರಮ, ತನ್ನದು ಎಂಬ ಭಾವನೆಯನ್ನುಂಟು ಮಾಡುವ ಸಂಸ್ಕೃತಿಯ ಮೇಲೆ ಕೇಂದ್ರಿಕೃತವಾಗಿದೆ. ಇವೆಲ್ಲವೂ ತಾಂತ್ರಿಕ ಗುರಿಗಳ ಸಾಧನೆಗಾಗಿ ಕೆಲಸ ಮಾಡುತ್ತದೆ. ಶಿಕ್ಷಕರು ವಿವಿಧ ವಿಧಾನಗಳಿಂದ ವಿದ್ಯಾರ್ಥಿಗಳ ಕೌಶಲ, ಶಾಲೆಯ ಹೊರಗಿನ ಆಸಕ್ತಿಗಳು, ಸಾಂಸ್ಕೃತಿಕ ಹಿನ್ನೆಲೆ, ವಿಶೇಷ ಅಗತ್ಯಗಳ ಹಿನ್ನೆಲೆಯನ್ನು ಅರಿತುಕೊಂಡು ಕಲಿಕಾ ಅನುಭವಗಳನ್ನು ನಿರ್ಮಿಸುವರು.(ಡಾನಿಯಲ್‌ಸನ್, 1996)

ಬೆಂಬಲ ಮತ್ತು ಸಹಕಾರಗಳು ಸಂಬಂಧಗಳ ವಿಶಿಷ್ಟಗುಣಗಳು, ಶಿಕ್ಷಕನು ತರಗತಿಯಲ್ಲಿ ನಾಯಕತ್ವಕ್ಕೆ ಅವಕಾಶ ಮಾಡಿಕೊಡುವುದರಿಂದ ವಿದ್ಯಾರ್ಥಿಗಳಲ್ಲಿ ತಮ್ಮತನವನ್ನು ಬೆಳೆಸುತ್ತಾನೆ. ಶಿಕ್ಷಕರು ಇಂತಹದರಲ್ಲಿ ಸ್ವಯಂಪ್ರೇರಿತರಾಗಿ ಭಾಗವಹಿಸಿ ಶಾಲಾ ಜೀವನಕ್ಕೆ ಕೆಲವು ಭಾಗಗಳಾದರೂ ತಮ್ಮದೇ ಆದ ಕೊಡುಗೆಯನ್ನು ನೀಡುವರು. ವಿದ್ಯಾರ್ಥಿಗಳ ಚಟುವಟಿಕೆಗಳಿಗಿಂತ ವಿದ್ಯಾರ್ಥಿಗಳ ಕಲಿಕೆಯೇ ಮುಖ್ಯ. ಶೈಕ್ಷಣಿಕವಾಗಿ ತೊಡಗಿರುವುದರ ಫಲಿತವಾಗಿ ವಿದ್ಯಾರ್ಥಿಗಳು ಏನನ್ನು ಕಲಿಯುತ್ತಾರೆ ಎಂಬುದು ಮುಖ್ಯವೇ ವಿನಃ ವಿದ್ಯಾರ್ಥಿಗಳು ಏನು ಮಾಡುತ್ತಾರೆಂಬುದು ಅಲ್ಲವೆಂದು ತರಗತಿ ಕೋಣೆಯ ನಿರ್ವಹಣೆಯ ಸೇರಿರುವಿಕೆ ಗುರಿ.

**ತರಗತಿ ಕೋಣೆಯಲ್ಲಿನ ವಿದ್ಯಾರ್ಥಿ ವರ್ತನೆಯ ನಿರ್ವಹಣೆ; ಶಿಸ್ತು**

ವಿದ್ಯಾರ್ಥಿಯ ವರ್ತನೆಯು ಹದ್ದು ಮೀರಿದ ಸ್ಥಿತಿಯಲ್ಲಿದ್ದರೆ ಅಲ್ಲಿ ಕಲಿಕೆಯು ಸಂಭವಿಸುವುದಿಲ್ಲ. ವಿದ್ಯಾರ್ಥಿಗಳು ಅಲ್ಲಿ ಇಲ್ಲಿ ಓಡಾಡತೊಡಗಿದರೆ, ಶಿಕ್ಷಕರನ್ನು ಧಿಕ್ಕರಿಸುತ್ತಿದ್ದರೆ ಹೊಡೆದಾಟ ಪ್ರಾರಂಭಿಸಿದರೆ ಅವರು ವಿಷಯದ ಅಳಕ್ಕಿಳಿಯುವುದು ಸಾಧ್ಯವಿಲ್ಲ. ಇದಕ್ಕೆ ವ್ಯತ್ತಿರಿಕ್ತವಾದದ್ದೂ ನಿಜ. ಅನುಭವಿ ಶಿಕ್ಷಕರು ವಿದ್ಯಾರ್ಥಿಗಳ ದುರ್ನಡತೆಗಳು (ಹೊರಕ್ಕೆ ಹೋಗುವಂತೆ ನಟಿಸುವುದು, ಟಿಪ್ಪಣಿಗಳ ಸಾಗಾಣೆ, ತರಗತಿಯ ಹೊರಗಿನ ವಿಷಯದ ಚರ್ಚೆ, ಪೆನ್ಸಿಲ್‌ನ್ನು ಕಾರೆಂದು ಭಾವಿಸಿ ಡೆಸ್ಕಿನ ಮೇಲೆ ಓಡಿಸುವುದು, ಇತರ ವಿದ್ಯಾರ್ಥಿಗಳೊಂದಿಗೆ ಮೌಖಿಕ ಮತ್ತು ದೈಹಿಕ ಜಗಳಗಳು) ಮುಂತಾದ ವರ್ತನೆಗಳನ್ನು ವಿದ್ಯಾರ್ಥಿಗಳ ದುರ್ನಡತೆಗಳೆಂದು ಭಾವಿಸಿದರೂ ಇವು ವಾಸ್ತವದಲ್ಲಿ ಬೇರೆಯೇ ಕಾರಣದ ಫಲಿತಾಂಶಗಳು.

ವಿದ್ಯಾರ್ಥಿಗಳ ಒಂದು ಪರಿಣಾಮಕಾರಿ ಹಾಗೂ ಗೌರವಯುತ ವರ್ತನೆಯ ನಿರ್ವಹಣೆಯ ಕೀಲಿಯು ಮಿತಿ ಮೀರಿದರೆ ಆಗುವ ಪರಿಣಾಮಗಳ ಸ್ಪಷ್ಟ ಕಲ್ಪನೆಯ ಬಗ್ಗೆ ಪರಸ್ಪರ ಒಪ್ಪಿತವಾದ ಮಾನದಂಡದಲ್ಲಿದೆ. ವಿದ್ಯಾರ್ಥಿಯ ನಡತೆಯ ಮಾನದಂಡಗಳನ್ನು ಸರಿದೂಗಿಸುವುದರಲ್ಲಿ ಸ್ಪಷ್ಟ ನಿರೀಕ್ಷೆಗಳು, ವಿದ್ಯಾರ್ಥಿಗಳ ಅಭಿವೃದ್ಧಿಯ ಮಟ್ಟಕ್ಕೆ ಸೂಕ್ತವಾದ ಮಾನದಂಡಗಳು, ನಿಷ್ಪಕ್ಷಪಾತತೆ, ಶಿಕ್ಷಕನು ತನ್ನ ಬೆನ್ನಹಿಂದೆ ಏನು ನಡೆಯುತ್ತಿದೆ ಎಂಬುದನ್ನು ಕಾಣುವ ಕಣ್ಣುಗಳು, ತಾಳ್ಮೆಯನ್ನು ಕಳೆದುಕೊಳ್ಳದಿರುವುದು. ವಿದ್ಯಾರ್ಥಿಗಳು ತಮ್ಮ ವರ್ತನೆಯನ್ನು ತಾವೇ ಗಮನಿಸಿ ನಿಯಂತ್ರಿಸಿಕೊಳ್ಳುವುದು ಇತ್ಯಾದಿಗಳು ಸೇರಿವೆ. ಇದನ್ನು ಕಾರ್ಯಗತ ಮಾಡುವುದು ತುಂಬಾ ವಿಷಮಾವಸ್ಥೆಯದು.

ತರಗತಿಯಲ್ಲಿ ಶಿಸ್ತನ್ನು ಕಾಯ್ದುಕೊಳ್ಳುವುದು ತರಗತಿ ಕೋಣೆಯ ನಿರ್ವಹಣೆಯ ಒಂದು ಪ್ರಮುಖ ಭಾಗ. ಶಿಸ್ತನ್ನು ನಿರ್ವಹಿಸುವುದು ಮತ್ತು ಶಿಸ್ತನ್ನು ಕಾಪಾಡುವುದು ಎರಡೂ ವಿಭಿನ್ನವಾದವು. ಶಿಸ್ತು ಎಂದರೆ ಕೆಲವು ಮಾನದಂಡಗಳಿಗನುಸಾರವಾದ ವರ್ತನೆಗಳನ್ನು ತರಗತಿಯಲ್ಲಿ ನಾಯಕತ್ವದ ಮೂಲಕ ನಿಷ್ಠವಾಗಿ ಪಾಲಿಸುವುದು. ಸೂಜಿ ಬಿದ್ದರೂ ಕೇಳುವಂತಹ ನಿಶಬ್ದವಾಗಿ ಇರುವುದನ್ನು ಶಿಸ್ತೆಂದು ಕರೆಯಲು ಇನ್ನು ಮುಂದೆ ಸಾಧ್ಯವಿಲ್ಲ. ಇಂತಹ ಸನ್ನಿವೇಶವು ವಿದ್ಯಾರ್ಥಿಗೆ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸಲು, ಪ್ರಶ್ನೆ ಕೇಳಲು, ಸಲಹೆ ನೀಡಲು ಅವಕಾಶ ನೀಡುವುದಿಲ್ಲ. ಇದು ಬೋಧನೆಯಲ್ಲಿ ಭಾಗವಹಿಸುವಿಕೆ ವರ್ತನೆ ಮತ್ತು ಪರಸ್ಪರ ಕ್ರಿಯಾ ಕಲಿಕೆಗೆ ವಿರೋಧವಾಗಿ ಕಾರ್ಯನಿರ್ವಹಿಸುತ್ತದೆ. ಇದು ಶಿಕ್ಷಕ ಕೇಂದ್ರಿಕೃತವೇ ಹೊರತು ಶಿಶು ಕೇಂದ್ರಿತವಲ್ಲ. ಶಿಸ್ತನ್ನು ಕಾಪಾಡುವ ಹೆಸರಿನಲ್ಲಿ ತರಗತಿ ಕೋಣೆಯ ಸಂವಹನವು ಈಗಲೂ ಏಕಮುಖ ಸಂವಹನವಾಗಿಯೇ ಉಳಿದಿವೆ.

ನಿರ್ವಹಣಾ ನಾಯಕರು ಶಿಸ್ತನ್ನು ಐದು ಹಂತದಲ್ಲಿ ನಿರ್ವಹಿಸುತ್ತಾರೆ. ನಿಯಮಾವಳಿ ಪುಸ್ತಕವು ಅತೀ ಮುಖ್ಯವಾಗುವ ನಿಯಮಬದ್ಧ ರೀತಿಯಿಂದ ಶಿಕ್ಷಕನು ಶಿಸ್ತನ್ನು ತರಬಹುದು. ಹಾಗಾಗಿಯೇ ಬೇರೆ ಸಾಧ್ಯತೆಗಳು ಸಹ ಶಿಕ್ಷಕ–ನಿರ್ವಾಹಕನ ಬಳಿ ಲಭ್ಯವಿದೆ. ಅವನ ವರ್ತನೆಯು ಶಾಸಕಾಂಗ, ನ್ಯಾಯಾಂಗ ಬದ್ಧವಾಗಿದ್ದು, ಕೆಲವು ಸಂದರ್ಭಗಳಲ್ಲಿ ವಿನಾಯಿತಿಯನ್ನು ನೀಡಬಹುದಾಗಿದೆ. ಇನ್ನು ಒಂದು ಹೆಜ್ಜೆ ಸರಿಯಾದ ದಿಕ್ಕಿನಲ್ಲಿ

Digitised by Bharatavani, CIIL

ಚಲಿಸಬಹುದಾದರೆ ಇದು ನ್ಯಾಯಾಂಗ–ಚಿಕಿತ್ಸಕವಾಗಬೇಕು. ಇದರಲ್ಲಿ ಶಾಲೆ ಅಥವಾ ಶಾಲೆಯ ಮುಖ್ಯಸ್ಥನು ವಿದ್ಯಾರ್ಥಿಯ ಉದ್ದೇಶ ಮತ್ತು ಸಂದರ್ಭವನ್ನು ಗುರುತಿಸುವ ಪ್ರಯತ್ನ ಮಾಡಬೇಕು. ಇದು ಕೆಲವೊಮ್ಮೆ ಚಿಕಿತ್ಸಕ ಮಾನವೀಯತಾಪರವಾಗಿಯೂ ಮತ್ತು ಕೇವಲ ಮಾನವೀಯತಾ ಪರವಾಗಿದ್ದು ನಿಯಮಗಳು ಮಾರ್ಗದರ್ಶಕ ಮತ್ತು ಅಭಿವೃದ್ಧಿಯ ಉದ್ದೇಶಗಳಿಗಾಗಿ ಉಪಯೋಗವಾಗಬೇಕು. ಕೊನೆಯದಾದ ಈ ವಿಧಾನವೇ ಅಪೇಕ್ಷಿತವಾಗಿರಬೇಕು. ತರಗತಿ ಕೋಣೆಯ ಶಿಸ್ತಿನಲ್ಲಿ ಇನ್ನೂ ಹಲವು ವಿಧಗಳಿವೆ. ಅವೆಂದರೆ ಅಧಿಕಾರಯುತವಾಗಿ ನಿಯಂತ್ರಿಸಬಹುದು. ಮಕ್ಕಳನ್ನು ತರಗತಿಯನ್ನು ಅರಿತು ತಂತ್ರಗಾರಿಕೆಯಿಂದ ನಿಯಂತ್ರಿಸುವುದು ಮತ್ತು ಯಶಸ್ವೀ ಸಂಬಂಧಗಳಿಂದ ಹಾಗೂ ವರ್ತನೆಯನ್ನು ಬದಲಾಯಿಸಿಕೊಳ್ಳುವುದು.(ಸ್ಮಿತ್, 2002)

ಕಲಿಕೆಯನ್ನು ಗರಿಷ್ಠ ಮಟ್ಟಕ್ಕೇರಿಸಲು ಶಿಕ್ಷಕನು ವಿಷಯವನ್ನು ಮಾತ್ರ ಕಲಿತರೆ ಸಾಲದು. ಅಧ್ಯಾಪನಶಾಸ್ತ್ರವನ್ನು ಜೊತೆಗೆ ವಿದ್ಯಾರ್ಥಿಗಳನ್ನು ಅರಿತುಕೊಳ್ಳಬೇಕು. ಪ್ರತಿ ವಯಸ್ಸಿನ ಗುಂಪು ಕೆಲವು ನಿರ್ದಿಷ್ಟ ಅಭಿವೃದ್ಧಾತ್ಮಕ ಗುಣಲಕ್ಷಣಗಳನ್ನು ಹೊಂದಿದೆ. ಬೌದ್ಧಿಕ, ಸಾಮಾಜಿಕ, ಹಾಗೂ ಭಾವನಾತ್ಮಕ ಪ್ರಾಥಮಿಕ ಮತ್ತು ಮಾಧ್ಯಮ ಶಾಲೆಯಲ್ಲಿನ ಮಕ್ಕಳು ಗೆಳೆತನ ಮತ್ತು ಸಹಪಾಠಿಗಳ ಸಂಬಂಧಗಳಿಗೆ ಸಂಬಂಧಿಸಿದ ಕೌಶಲಗಳನ್ನು ಕಲಿಯುತ್ತಾರೆ. ಗಣಿತದ ಮತ್ತು ವಿಜ್ಞಾನದ ಕೌಶಲಗಳು ಸಿದ್ಧಿಸುವುದು ಕೆಲವು ಅಬಿವೃದ್ಧಾತ್ಮಕ ಗುಣಲಕ್ಷಣಗಳ ಮೇಲೆ ಅವಲಂಬಿತವಾಗಿದೆ. ವಿದ್ಯಾರ್ಥಿಗಳು ಕಲಿಕೆಗಾಗಿ ತಮ್ಮ ಪ್ರತಿಭೆ, ಆಸಕ್ತಿ, ವರ್ತನೆಗಳಲ್ಲಿ ಅಗಾಧವಾದ ವ್ಯತ್ಯಾಸಗಳನ್ನು ಹೊಂದಿರುತ್ತಾರೆ. ಒಬ್ಬ ವಿದ್ಯಾರ್ಥಿ ಕಲಾವಂತಿಕೆಯವನಾದರೆ, ಮತ್ತೊಬ್ಬ ಗಣಿತದಲ್ಲಿ ಪರಿಣತನಾಗಿರಬಹುದು. ಮತ್ತೊಬ್ಬ ಶ್ರೇಷ್ಠ ಸೃಜನಶೀಲ ಯೊ ೀಚನೆಯುಳ್ಳವನಾಗಿರಬಹುದು. ಇವೆಲ್ಲವೂ ವಿದ್ಯಾರ್ಥಿಗಳನ್ನು ಶಿಸ್ತಿನಲ್ಲಿಡಬೇಕಾದಾಗ ಗಮನದಲ್ಲಿರಿಸಿಕೊಳ್ಳಬೇಕಾದ ಅಂಶಗಳು.

ತರಗತಿ ಕೋಣೆಯ ವಿಶಿಷ್ಟ ಲಕ್ಷಣಗಳು ಸ್ಥಿರತೆ, ನ್ಯಾಯಪರತೆ ಮತ್ತು ಸಾಮಂಜಸ್ಯತೆಯ ಮೇಲೆ ನಿಲ್ಲಬೇಕು.(ಸ್ಮಿತ್, 2002) ತನ್ನ ವರ್ತನೆಯ ಪರಿಣಾಮವಾಗಿ ಉದ್ರೇಕಗೊಳ್ಳುವ ಶಿಕ್ಷಕನು ಕ್ಲಿಷ್ಟಕರವಾದ ಸಂಬಂಧಗಳನ್ನು ಉಪೇಕ್ಷಿಸುತ್ತಾನೆ. ಪ್ರತ್ಯೇಕಿಸುವ ಶಿಕ್ಷಕನು ವಿದ್ಯಾರ್ಥಿಗಳು ಮತ್ತು ಶಿಕ್ಷಕನು ಒಟ್ಟಿಗೆ ಚೆನ್ನಾಗಿ ದುಡಿಯುವ ಹಾಗೆ ವರ್ತಿಸುತ್ತಾನೆ.

ತರಗತಿ ಕೋಣೆಯಲ್ಲಿನ ಉತ್ತಮ ಶಿಸ್ತು ಅನೇಕ ವಸ್ತುಗಳ ಮೇಲೆ ನಿಂತಿದೆ. ಅದರಲ್ಲಿ ಕೆಲವು ಪ್ರಮುಖವಾದವು ಕೆಳಕಂಡತಿವೆ.

- ನಡವಳಿಗಳು ಎಲ್ಲ ವಿದ್ಯಾರ್ಥಿಗಳಿಗೂ ಸ್ಪಷ್ಟವಾಗಿವೆ ಮತ್ತು ಅವು ವಿದ್ಯಾರ್ಥಿಗಳ ಭಾಗವಹಿಸುವಿಕೆಯಿಂದ ಅಭಿವೃದ್ಧಿಗೊಂಡಿರುವಂತೆ ಕಾಣುತ್ತದೆ.
- ಶಿಕ್ಷಕನ ಮೇಲ್ವಿಚಾರಣೆಯು ಸೂಕ್ಷ್ಮವೂ, ರಕ್ಷಣಾತ್ಮಕವೂ ಆಗಿದೆ.
- ವಿದ್ಯಾರ್ಥಿಗಳು ತಮ್ಮ ಮತ್ತು ತಮ್ಮ ಸಹಪಾಠಿಗಳ ವರ್ತನೆಯನ್ನು ನಿಯಂತ್ರಿಸುತ್ತಾರೆ ಹಾಗೂ ಒಬ್ಬರು ಮತ್ತೊಬ್ಬರನ್ನು ಗೌರವಯುತವಾಗಿ ಸರಿಪಡಿಸಿಕೊಳ್ಳುತ್ತಾರೆ.
- ದುರ್ನಡತೆಗೆ ಶಿಕ್ಷಕನ ಪ್ರತಿಕ್ರಿಯೆಯು ಅತ್ಯಂತ ಪರಿಣಾಮಕಾರಿಯಾಗಿರುತ್ತದೆ ಮತ್ತು ವಿದ್ಯಾರ್ಥಿಯ ವೈಯಕ್ತಿಕ ಅಗತ್ಯಗಳಿಗೆ ಅತಿ ಸಂವೇದನಾಶೀಲವಾಗಿರುತ್ತದೆ ಅಥವಾ ವಿದ್ಯಾರ್ಥಿಯ ವರ್ತನೆಯು ಸಂಪೂರ್ಣ ಸಮರ್ಪಕವಾಗಿರುತ್ತದೆ.

**ಬೋಧನಾ ತಂತ್ರಗಳು:**

ಪಾಶ್ಚಿಮಾತ್ಯ ಶಿಕ್ಷಣ ತಜ್ಞರ ಬೋಧನಾ ಪ್ರಯೋಗ ವಿಧಾನಗಳನ್ನು ಗುರುತಿಸಿ ಅದಕ್ಕೆ ಸೂಕ್ತ ಮನ್ನಣೆ ನೀಡುವಂತೆ ಭಾರತೀಯ ಶಿಕ್ಷಣತಜ್ಞರು ತಮ್ಮ ಅಧ್ಯಾಪನಾ ಶಾಸ್ತ್ರವನ್ನು ಪುನರ್ ವಿನ್ಯಾಸ ಮಾಡಿದ್ದಾರೆ. ಬೋಧನಾ ತಂತ್ರಗಳು ಬಹುತೇಕ ವರ್ತನಾತ್ಮಕ, ಬೌದ್ಧಿಕ ಮತ್ತು ಮನವಾಸಕ್ತ ದೃಷ್ಟಿಕೋನಗಳಿಂದ ಬಂದಿದೆ.

ಪರಿಣಾಮಕಾರಿ ಶಾಲೆಗಳು ತರಗತಿ ಹಂತದ ಮೇಲ್ವಿಚಾರಣೆ/ತಂತ್ರಗಳನ್ನು ಬಳಸುತ್ತವೆ.(ಸ್ಕಿರೇನ್ಸ್, 2001) ಅವುಗಳೆಂದರೆ,

a) ಉಚ್ಚಮಟ್ಟದ ಶಾಲಾ ಸಂಪನ್ಮೂಲಗಳಾದ ಕಡಿಮೆ ವಿದ್ಯಾರ್ಥಿ–ಶಿಕ್ಷಕನ ಅನುಪಾತ, ಹೆಚ್ಚು ಬೋಧನಾ ಪರಿಕರಗಳು, ನುರಿತ ಶಿಕ್ಷಕರು

b) ತರಗತಿ ಕೋಣೆಗಳು ಬಹುಶ್ರೇಣಿಯ ತರಗತಿಗಳಾಗಿರುವುದಿಲ್ಲ ಮತ್ತು ವಿದ್ಯಾರ್ಥಿಗಳನ್ನು ಸಾಮರ್ಥ್ಯ ಆಧರಿಸಿ ಗುಂಪುಗಳನ್ನಾಗಿ ವಿಂಗಡಿಸಿರುವುದಿಲ್ಲ.

c) ಆಗಾಗ್ಗೆ ವಿದ್ಯಾರ್ಥಿಗಳನ್ನು ಪರೀಕ್ಷಿಸುವಂತಹ ತರಗತಿ ಕೋಣೆಗಳು.

d) ವಿಶೇಷವಾಗಿ ತರಗತಿ ಕೋಣೆಯ ಶಿಸ್ತಿಗೆ ಸಂಬಂಧಿಸಿದಂತೆ ತರಗತಿಗಳು ಗುಣಾತ್ಮಕ ವಾತಾವರಣವನ್ನು ಹೊಂದಿವೆ.

ಒಮ್ಮೆ ಶಿಕ್ಷಕನು ತನ್ನ ತರಗತಿಯ ಅವಶ್ಯಕತೆ ಮತ್ತು ಕಲಿಕೆ ಅನುಭವಗಳ ಬಗ್ಗೆ ಜಾಗೃತನಾಗಿ, ಮೇಲ್ವಿಚಾರಣೆ ಮಾಡಿದರೆ, ಮೂರು ಮೂಲ ಪದ್ಧತಿಗಳನ್ನು ಉಪಯೋಗಿಸಬಹುದು.

a) ಪೂರ್ತಿ ತರಗತಿಯ ಬೋಧನೆ

b) ಗುಂಪುಗಳಿಗೆ ಬೋಧನೆ

c) ಏಕವ್ಯಕ್ತಿ ಕೆಲಸ.

ಪ್ರತಿ ತರಗತಿಯ ಪಾಠವನ್ನು ದಾಖಲಿಸುವುದರಿಂದ ತರಗತಿಕೋಣೆಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು. ಶಿಕ್ಷಕರ ದಿನಚರಿ ಪುಸ್ತಕದ ಮೂಲಕ ಅವರು ತಮ್ಮ ಕೌಶಲಗಳನ್ನು ಪ್ರಾತ್ಯಕ್ಷಿಕೆ ತೋರಬಹುದು. ವಿದ್ಯಾರ್ಥಿಗಳ ಮಾಪನ, ಕೌಶಲಗಳು, ವರ್ಕ್‌ಶೀಟುಗಳು ಮೊದಲಾದವುಗಳ

Digitised by Bharatavani, CIIL

ಕರಾರುವಕ್ಕಾದ ದಾಖಲೆಯನ್ನು ಇಡುವ ಶಿಕ್ಷಕನ ದಿನಚರಿಯನ್ನು ಇಡುವ ಶಿಕ್ಷಕರ ಕೌಶಲ ಮತ್ತು ಶೈಕ್ಷಣಿಕ ಕರ್ತವ್ಯಗಳೂ ಸಹ ಪರಿಣಾಮಕಾರಿ ತರಗತಿ ಕೋಣೆಯ ತಂತ್ರಗಳ ಮೈಲಿಗಲ್ಲು.

ತರಗತಿಯ ಸಂಪೂರ್ಣ ಗುಣಮಟ್ಟ ನಿರ್ವಹಣೆಯು ಶಿಕ್ಷಕನ ಪಾತ್ರವನ್ನು ಬದಲಾಯಿಸಿದೆ.(ಹೆನ್ಸನ್ ಮತ್ತು ಜಾಕ್ಸನ್, 1998) ವಿವಿಧ ಉದ್ದೇಶಗಳ (ವಿಷಯ, ಸಾಮರ್ಥ್ಯಗಳು ಮತ್ತು ಮೌಲ್ಯಮಾಪನ) ಮೂಲಕ ಬೋಧಕನು ಜ್ಞಾನದ ಗುರುವಾಗದೆ ಸಂಪನ್ಮೂಲಗಳ ನಿರ್ವಾಹಕನಾಗುತ್ತಿದ್ದಾನೆ. ತರಗತಿಯ ಅನೇಕ ಉದ್ದೇಶಗಳ ಈಡೇರಿಕೆಗಾಗಿ ವಿನ್ಯಾಸಗೊಳಿಸಿದ ಅನೇಕ ಚಟುವಟಿಕೆಗಳಿಗೆ ಪರಿಪೂರ್ಣ ಯೋಜನೆ ಮತ್ತು ಸಿದ್ಧತೆ, ಸಹಕಾರ(ಚಟುವಟಿಕೆಗಳಿಗೆ) ವನ್ನು ಮುಂದುವರೆಸಬಹುದು. ಸಮಸ್ಯೆಗಳು ಎದುರಾದರೆ ಅದಕ್ಕೆ ಹೊಂದಿಕೊಂಡು ಹೋಗುವುದು ಅಗತ್ಯವಾಗಿದೆ ಹಾಗೂ ಶಿಕ್ಷಕನು ವಿದ್ಯಾರ್ಥಿಯ ಸಮಯದ ನಿರ್ಬಂಧದ ಬಗ್ಗೆ ಜಾಗೃತನಾಗಿರಬೇಕು. ನಿರ್ವಹಿಸಬೇಕಾದ ಅತ್ಯಂತ ಅಪೂರ್ವ ಸಂಪನ್ಮೂಲವೆಂದರೆ ವಿದ್ಯಾರ್ಥಿಗಳ ಸಮಯ ಮತ್ತು ಸದ್ಭಾವನೆ.

ಅಭ್ಯಾಸೀ ಶಿಕ್ಷಕನ ಆದ್ಯತೆಗಳು (ವಿವಿಧ ಬೋಧನಾ ಕೌಶಲಗಳ ಹಂತದಲ್ಲಿ) ಸಂಬಂಧದ ಪ್ರಾಮುಖ್ಯತೆಯ ಅಧ್ಯಯನದಲ್ಲಿ (ಶರ್ಮ ಮತ್ತು ಕುಮಾರ್, 1993) ಕಂಡ ಮುಖ್ಯ ಅಂಶಗಳು: ವಿದ್ಯಾರ್ಥಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು, ಬೋಧನಾ ಪರಿಕರಗಳ ಬಳಕೆಯಲ್ಲಿನ ಕೌಶಲ, ಪ್ರಶ್ನಿಸುವುದು, ವ್ಯಾಖ್ಯಾನಿಸುವುದು, ವಿವರಿಸುವುದು, ಮೌಲ್ಯಮಾಪನ ಮಾಡುವುದು, ಯೋಜನಾ ಬರಹಗಳನ್ನು ನೀಡುವುದು, ಪಾಠದ ಯೋಜನೆ, ಪಾಠವನ್ನು ಪರಿಚಯಿಸುವುದು, ತರಗತಿ ಕೋಣೆಯ ನಿರ್ವಹಣೆ, ಬಲವರ್ಧನೆ, ಬೋಧನಾ ಉದ್ದೇಶಗಳನ್ನು ಬರೆಯುವುದು ಮತ್ತು ಪ್ರಚೋದನಾ ವ್ಯತ್ಯಾಸಗಳು.

ತಂತ್ರಗಳು ಸಮಸ್ಯಾ ಪರಿಹಾರದ ಜೀವಾವಧಿಯ ಕಲಿಕಾ ಕೌಶಲಗಳನ್ನು ಮತ್ತು ಸ್ವಯಂ ನಿರ್ದೇಶಿತ ಕಲಿಕೆಯನ್ನು ಸುಗಮ ಮಾಡಬೇಕು. ಎಲ್ಲ ಕಲಿಕೆಯು ಅನ್ವೇಷಣಾಶೀಲ ಕಲಿಕಾರ್ಥಿಯಿಂದ ಪ್ರಾರಂಭವಾಗುತ್ತದೆ. ಅನ್ವೇಷಣಾ-ಆಧಾರಿತ ಬೋಧನೆಯು ವಿದ್ಯಾರ್ಥಿ ನಿರ್ಮಿತ ಶಿಕ್ಷಕ ಮಾರ್ಗದರ್ಶಿಸಿದ ಬೋಧನಾ ವರ್ತನೆ, ಒಂದು ವಿಶಾಲ ವಿಷಯದಿಂದ ಆಯ್ಕೆ ಮಾಡಿಕೊಂಡ ವಾಸ್ತವ ಪ್ರಪಂಚದ ಪ್ರಶ್ನೆಗಳನ್ನು ಕಂಡು ಹಿಡಿಯುವಲ್ಲಿ ವಿದ್ಯಾರ್ಥಿಯನ್ನು ಹಚ್ಚುತ್ತದೆ. ವಿದ್ಯಾರ್ಥಿಯು ಮಾಹಿತಿಯನ್ನು ಪಡೆದುಕೊಂಡು ವಿಶ್ಲೇಷಿಸವಂತಹ, ಮತ್ತು ಸಮಸ್ಯೆಗಳನ್ನು ಅಭಿವೃದ್ಧಿಪಡಿಸಿ, ಬೆಂಬಲಿಸಿ, ಅದಕ್ಕೆ ಉತ್ತರಗಳನ್ನು ಕಂಡುಹಿಡಿಯುವುದು. ಇಂತಹ ಪ್ರತಿಕ್ರಿಯೆಗಳು ಅವರ ಚಿಂತನೆಗಳನ್ನು ಪ್ರತಿಫಲಿಸುತ್ತದೆ ಮತ್ತು ಅವರ ಕಲಿಕೆಯನ್ನು ಕಾಣುವಂತೆ ಮಾಡುತ್ತದೆ.(ವಿಪ್ರೋ: ಶಾಲೆಯಲ್ಲಿ ಚಿಂತನೆಯನ್ನು ತೊಡಗಿಸುವುದು, 2002) ಪರಿಣಾಮಕಾರಿಯಾದ ಬೇರೆ ಬೋಧನಾ ತಂತ್ರಗಳೆಂದರೆ: ಸಹಭಾಗಿತ್ವ ಮತ್ತು ಸಹಕಾರಿ ಕಲಿಕೆ, ಬುದ್ಧಿ ದಾಳಿ, ಸಂದರ್ಶನ, ಕ್ಷೇತ್ರಪ್ರವಾಸ, ಪಾತ್ರ ನಿರ್ವಹಣೆ, ಸಂಘಗಳು ಮತ್ತು ಕ್ರಿಯಾ ಸಂಶೋಧನೆಗಾಗಿ ತರಗತಿ ಕೋಣೆಯಲ್ಲಿ ಪ್ರಯತ್ನಿಸುವುದು.

**ತರಗತಿಯ ಕೋಣೆಯ ನಿರ್ವಹಣೆಯ ಮೂಲಕ ಮನೆ ಮತ್ತು ಶಾಲೆಯ ನಡುವೆ ಸಂಬಂಧ ಬೆಸೆಯುವುದು**

ವಿದ್ಯಾರ್ಥಿಯ ಕುಟುಂಬಕ್ಕೆ ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಅವಕಾಶ ನೀಡುವುದರಿಂದ ವಿದ್ಯಾರ್ಥಿಯ ಕಲಿಕೆಯನ್ನು ಅಭಿವೃದ್ಧಿಪಡಿಸಬಹುದೆಂದು ಶಿಕ್ಷಣ ತಜ್ಞರು ಬಹಳ ಹಿಂದೆಯೇ ಕಂಡುಕೊಂಡಿದ್ದರು. ಮನೆ-ಶಾಲೆಯ ಸಂಬಂಧವು ಬಹಳ ಶಕ್ತಿಯುತವಾದುದ್ದು. ಪೋಷಕರು ತಮ್ಮ ಮಕ್ಕಳಿಗಾಗಿ ಉತ್ತಮಗುಣಮಟ್ಟದ ಶಿಸ್ತು, ಬೋಧನೆ ಮತ್ತು ಫಲಿತಾಂಶವಿರುವ ಶಾಲೆಯನ್ನು ಇಷ್ಟಪಡುತ್ತಾರೆ. (ಮಾನ್ಯುಅಲ್, 1964)

ಈಗಿನ ಪೋಷಕರು ಹೆಚ್ಚು ವಿದ್ಯಾವಂತರಾಗಿದ್ದು, ಅವರ ಮಕ್ಕಳು ತರಗತಿಯಲ್ಲಿ ಏನನ್ನು ಕಲಿಯಬೇಕೆಂಬುದನ್ನು ತಿಳಿದಿದ್ದಾರೆ. ಶಿಕ್ಷಕರು ಪೋಷಕರು ಮತ್ತು ಪೋಷಕರ ಬೇಡಿಕೆಗಳಿಗೆ ಉತ್ತರಿಸಬೇಕಾಗಿ ಬಂದಿದೆ. ಪ್ರತಿ ವಿದ್ಯಾರ್ಥಿಯು ಯಶಸ್ಸು ಗಳಿಸಿದಾಗ ಅಥವಾ ಅವನಿಗೆ ಸಮಸ್ಯೆ ಎದುರಾದಾಗ ಪೋಷಕರೊಡಗಿನ ಸಂವಹನವು ದ್ವಿಮುಖವಾಗಿರಲೇಬೇಕು.

ಮುಂದಿನ ಶತಮಾನವು 'ಕಲಿಯುವ ಸಮಾಜ'ದಲ್ಲಿ ಬೆಳಕು ಕಾಣುತ್ತದೆ. (ಡೆಲರ್ಸ್ ರಿಪೋರ್ಟ್, 1996) 'ಅಜೀವ ಪರ್ಯಂತ ಕಲಿಕೆ'ಯ ಮೇಲೆ ಹೆಚ್ಚು ಒತ್ತು ನೀಡಲಾಗಿರುತ್ತದೆ. ಪೋಷಕರ ಶಿಕ್ಷಣವು 'ಮಕ್ಕಳ ಶಿಕ್ಷಣ'ದಷ್ಟೇ ಮುಖ್ಯವಾದುದು. ವಿದ್ಯಾರ್ಥಿಯು ಸ್ವಯಂ ನಿರ್ಧಾರ ಕೈಗೊಳ್ಳುವ ಹಾಗೆ ಮಾಡುವುದನ್ನು ಗುಂಪಿನಲ್ಲಿ ಕೆಲಸ ಮಾಡುವ ಶಕ್ತಿಯನ್ನು, ಕಾರ್ಯಸಂಸ್ಕೃತಿ ಮತ್ತು ಪರಸ್ಪರ ಸಂಬಂಧದ ಸೂಕ್ಷ್ಮಗಳನ್ನು ಅರಿಯುವುದನ್ನು ತರಗತಿ ಕೋಣೆ ನಿರ್ವಹಣೆಯ ಮೂಲಕ ಮನೆ ಮತ್ತು ಶಾಲೆಯ ನಡುವಿನ ಸಂಬಂಧ ಬೆಸೆಯುವುದು.

**ಹೊಸ ಪೀಳಿಗೆಯ ತರಗತಿ ಕೋಣೆಯ ನಿರ್ವಹಣೆ**

ಕೆಲವು ಪ್ರಗತಿಪರ ಶಾಲೆಗಳಲ್ಲಿ ತರಗತಿ ನಿರ್ವಹಣೆಯು ಗಣಕಯಂತ್ರ ಪ್ರಯೋಗಾಲಯದ ನಿರ್ವಹಣೆಗಾಗಿ ಬದಲಾಗಿದೆ. ಎಲ್ಲ ಶಾಲೆಗಳಲ್ಲಿನ ಇಂದಿನ ಶಿಕ್ಷಕರು, ಶೈಕ್ಷಣಿಕ ಯೋಜನೆಗಾರರು ಮತ್ತು ಆಡಳಿತಗಾರರು ಮುಂದಿನ ಪೀಳಿಗೆಯ ತರಗತಿ ಕೋಣೆಗಳು ಹೇಗಿರುತ್ತವೆಂಬ ದೃಷ್ಟಿಯನ್ನು (ಇದೇನೂ ತುಂಬ ದೂರವಿಲ್ಲ) ಇಟ್ಟು ಕೊಂಡಿರಬೇಕು. (www.EDUMATICS.COM, 2000)

ಶಿಕ್ಷಕಿ ಗಣಕಯಂತ್ರ ಪ್ರಯೋಗಾಲಯವನ್ನು ಪ್ರವೇಶಿಸಿ ತನ್ನ PCಯ ಗುಂಡಿಯನ್ನು ಒತ್ತುತ್ತಾಳೆ. ಅನಂತರ ಒಂದು ಜನಪ್ರಿಯ ವಿಶ್ವಕೋಶದಲ್ಲಿ ತನ್ನ ಅಂದಿನ ಪಾಠವನ್ನು PC Encarta ದಿಂದ ಪ್ರಾರಂಭಿಸುತ್ತಾಳೆ. ಇಂದು ತರಗತಿಯು ಪುರಾತನ ಈಜಿಪ್ಟಿನ ಬಗ್ಗೆ ತಿಳಿದುಕೊಳ್ಳುತ್ತದೆ ಎಲ್ಲ ವಿದ್ಯಾರ್ಥಿಗಳು ತಮ್ಮ ಮಾನಿಟರ್ ಪರದೆಯಲ್ಲಿ ಶಿಕ್ಷಕಿ ಏನು ಹೇಳುತ್ತಿದ್ದಾಳೆಂಬುದನ್ನು ನೋಡುವರು. ಶಿಕ್ಷಕಿಯು ವಿಶ್ವಕೋಶದಿಂದ ಸಂಬಂಧಪಟ್ಟ ಭಾಗವನ್ನು ತಂದು

Digitised by Bharatavani, CIIL

ತೋರಿಸುವಳು. ವಿದ್ಯಾರ್ಥಿಗಳು ಅವಳ ಮಾತನ್ನು ಹೆಡ್‌ಫೋನಿನ ಮೂಲಕ ಕೇಳಿಸಿಕೊಳ್ಳುವರು. ಶಿಕ್ಷಕಿ ತನ್ನ ಕಂಪ್ಯೂಟರಿನಲ್ಲಿ ಇಂಟರ್‌ನೆಟ್ (ಅಂತರ್ಜಾಲ)ಗೆ ಭೇಟಿ ನೀಡುತ್ತಾಳೆ. ಅದರಿಂದ ವಿದ್ಯಾರ್ಥಿಗಳು ಈಜಿಪ್ಟಿನ ಬಗ್ಗೆಯಿರುವ ಪ್ರಚೋದನಾತ್ಮಕವಾದ ಕೆಲವು ವೆಬ್‌ಸೈಟ್‌ನ್ನು ವೀಕ್ಷಿಸುತ್ತಾರೆ. ನಂತರ ಶಿಕ್ಷಕಿಯು ಈಜಿಪ್ಟಿನ ಬಗೆಗಿನ ವೀಡಿಯೋ ಚಿತ್ರಗಳನ್ನು ತೋರಿಸುವಳು. ವಿದ್ಯಾರ್ಥಿಗಳು ಅದನ್ನು ತಮ್ಮದೇ ಆದ ಮಾನೀಟರ್ ಪರದೆಯಲ್ಲಿ ನೋಡುವರು. ಪಾಠವು ಮುಗಿದ ನಂತರ ಶಿಕ್ಷಕಿಯು ವಿದ್ಯಾರ್ಥಿಗಳು ತಮ್ಮ ಸ್ವತಃ ಸಿ.ಡಿ.ಯಲ್ಲಿ ಕೆಲಸಮಾಡುವಂತೆ ಹೇಳುವಳು. ವಿದ್ಯಾರ್ಥಿಗಳು ಸಿ.ಡಿ. ಸರ್ವರ್‌ನ ಸಹಾಯದಿಂದ ಸಿ.ಡಿ.ಯನ್ನು ಏಕಕಾಲದಲ್ಲಿ ಮತ್ತು ಪರಸ್ಪರ ಪರಿಣಾಮ ಬೀರುವಂತೆ ಅದರ ಉಪಯೋಗ ಪಡೆಯುತ್ತಾರೆ.

ನಂತರದ ತರಗತಿ ವಿದ್ಯಾರ್ಥಿಗಳಿಗೆ ಪ್ರಾಚೀನ ಈಜಿಪ್ಟಿನ ಬಗ್ಗೆ ಒಂದು ಪ್ರಬಂಧ ಬರೆಯಲು ಹೇಳಲಾಗುತ್ತದೆ. ಅವರು ತಮ್ಮದೇ ಆದ ಮೈಕ್ರೋಸಾಫ್ಟ್ ವರ್ಡ್‌ನಲ್ಲಿ ಅದನ್ನು ಟೈಪ್ ಮಾಡುತ್ತಾರೆ. ಶಿಕ್ಷಕಿ ಅದರ ಮೇಲ್ವಿಚಾರಣೆಯನ್ನು ತನ್ನ ಕಂಪ್ಯೂಟರಿನಲ್ಲಿಯೇ ಕುಳಿತು ಮಾಡುತ್ತಾಳೆ. ಯಾವುದಾದರೂ ವಿದ್ಯಾರ್ಥಿ ಬರೆಯಲು ಕಷ್ಟಪಡುತ್ತಿದ್ದಾನೆಂದರೆ ಶಿಕ್ಷಕಿ ತನ್ನ ಕಂಪ್ಯೂಟರಿನಿಂದ ಆತನ ಕಂಪ್ಯೂಟರಿಗೆ ಪ್ರವೇಶ ಪಡೆದು ಸಹಾಯ ಮಾಡುತ್ತಾಳೆ. ವಿದ್ಯಾರ್ಥಿ ಮತ್ತು ಶಿಕ್ಷಕಿ ಒಟ್ಟಿಗೆ ಕಂಪ್ಯೂಟರಿನಲ್ಲಿ ಕೆಲಸ ಮಾಡುತ್ತಾರೆ.

ಮೇಲಿನ ಸನ್ನಿವೇಶಗಳು ಯಾವುದೇ ಕಲ್ಪನಾ ವಿಹಾರವಲ್ಲ. ಇದು ಭಾರತದ 'ಆಯ್ಕೆ ಮಾಡಿದ' ಕೆಲವು ಶಾಲೆಗಳಲ್ಲಿ ಸಂಭವಿಸುತ್ತದೆ. ಆ ಶಾಲೆಗಳು ಈ ರೀತಿಯ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಶಕ್ತರಾಗಿದ್ದಾರೆ. ತಂತ್ರಜ್ಞಾನದಲ್ಲಿ ಮುಂದುವರೆದ ರಾಷ್ಟ್ರಗಳು ಪ್ರಶಸ್ತಿ ವಿಜೇತ ಶಿಕ್ಷಕರು ತಂತ್ರಜ್ಞಾನವನ್ನು ಪಠ್ಯಕ್ರಮಕ್ಕೆ ತಕ್ಕಂತೆ ಉದ್ದಕ್ಕೂ ಪೋಣಿಸಿ, ಸಮಾವೇಶ ಗೊಳಿಸಿದ್ದಾರೆ. ಕೆಲವು ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ.(ಸ್ಟೋನ್,1999)

ಆಸ್ಟಿನ್, ಟೆಕ್ಸಾಸ್‌ನ ಗ್ರಹಾಂ ಎಲಿಮೆಂಟರಿ ಸ್ಕೂಲಿನಲ್ಲಿ ನಾಲ್ಕನೇ ತರಗತಿಯ ಶಿಕ್ಷಕಿಯಾದ ಲೋನಾ ಸಾಂಡರ್‌ಸನ್ ಒಂದು ಪಾಠವನ್ನು ಬರೆದಿದ್ದು ಅದರ ಹೆಸರು 'ಸರೀಸೃಪಗಳು; ಗೆಳೆಯರಾ ಅಥವಾ ಶತ್ರುಗಳಾ?' ಅದರಲ್ಲಿ ಸರೀಸೃಪಗಳ ಬಗ್ಗೆ ವಿವರಿಸಲು ಆಕೆ ಹೇಗೆ ಶಾಲೆಯ ನಾಲ್ಕು ಕಂಪ್ಯೂಟರ್‌ನ್ನು ಬಳಸಿಕೊಂಡಳೆಂದು ವಿವರಿಸಿದ್ದಾಳೆ.

ಹಂಟ್ಸ್‌ವಿಲ್ಲೆ, ಅಲಬಾಮದಲ್ಲಿನ ಫಾರ್ಲೆ ಎಲಿಮೆಂಟರಿ ಸ್ಕೂಲಿನಲ್ಲಿ ಐದನೇ ತರಗತಿಯ ಶಿಕ್ಷಕಿಯಾದ ಲೀಸಾ ಎಚ್. ರೋಬರ್ಟ್ಸ್ ತರಗತಿಯಲ್ಲಿ ಸ್ಕ್ಯಾನರ್, ಡಿಜಿಟಲ್ ಕ್ಯಾಮೆರಾ ಮತ್ತು ವೀಡಿಯೋ ಡಿಸ್ಕ್‌ಗಳನ್ನು ಹೇಗೆ ಬಳಸಿಕೊಳ್ಳಬಹುದೆಂದು ವಿವರಿಸಿದ್ದಾಳೆ.

ನ್ಯೂಜೆರ್ಸಿಯಾ ಮೆಡ್‌ಫೋರ್ಡ್, ಟಾಂಟನ್ ಫೋರ್ಜ್ ಸ್ಕೂಲಿನ ಐದನೇ ತರಗತಿ ಶಿಕ್ಷಕಿಯಾದ ಸ್ವಾಸಿ ಕಾಸ್ಸಿ ಶಾಲೆ ಪ್ರಾರಂಭವಾಗುವ ಮೊದಲೇ ತಂತ್ರಜ್ಞಾನದ ಸಹಾಯದಿಂದ ವಿದ್ಯಾರ್ಥಿಗಳ ಪೋಷಕರೊಡನೆ ಉತ್ತಮ ಸೌಹಾರ್ದ ಸಂಬಂಧವನ್ನು ಸಾಧಿಸುತ್ತಾಳೆ.

ನ್ಯೂ ಓರ್ಲಿನ್ಸ್, ಲೂಸಿಯಾದ ಆಲಿಸ್ ಹಾರ್ಟ್ ಎಲಿಮೆಂಟರಿ ಶಾಲೆಯಲ್ಲಿ ಮೂರನೇ ಮತ್ತು ನಾಲ್ಕನೇ ತರಗತಿಯ ಶಿಕ್ಷಕಿಯಾದ ಜಾನಿಸ್ ಎಸ್. ಕಾಟ್‌ಲೆಡ್ಜ್ ಅಂತರ್ಜಾಲವನ್ನು ಚಿಟ್ಟೆಗಳನ್ನು ಹಿಡಿಯುವ ಸಲುವಾಗಿ ಬಳಸುತ್ತಿದ್ದಾಳೆ.

ಮುಂದಿನ ಹತ್ತಿರದ ಭವಿಷ್ಯದ ಶಿಕ್ಷಣವು ಅವಕಾಶ, ಸಮಯ, ಪರಿಸರ ಮತ್ತು ಬೆಲೆಗಳ ಬಂಧನದಿಂದ ಮುಕ್ತವಾಗಿರುತ್ತದೆ. ಮೇಲೆ ವಿವರಿಸಲಾದ ತಂತ್ರಜ್ಞಾನಗಳು ಶಿಕ್ಷಣವನ್ನು ವಿನೋದ, ಸೃಜನಶೀಲ ಮತ್ತು ಸ್ಫೂರ್ತಿಭರಿತವನ್ನಾಗಿ ಮಾಡುತ್ತದೆ. ಅಂತರ್ಜಾಲದ ಬಳಕೆಯು ವಿದ್ಯಾರ್ಥಿಯ ದೈನಂದಿನ ಜೀವನದ ಚಟುವಟಿಕೆಯನ್ನಾಗಿ, ಸಂಸ್ಕೃತಿಯನ್ನಾಗಿ ಗುರಿಯನ್ನಾಗಿಟ್ಟುಕೊಂಡ ಶಿಕ್ಷಣವಾಗಿ ಮಾರ್ಪಡುತ್ತದೆ. ವಿದ್ಯಾರ್ಥಿಯು ಇಂದು ಸೀಮಾತೀತ ಜಾಗತಿಕ ಸಮುದಾಯದ ಭಾಗವಾಗುತ್ತಿದ್ದಾನೆ ಮತ್ತು ಲಭ್ಯವಿರುವ ಎಲ್ಲ ಕಲಿಕಾ ಸಂಪನ್ಮೂಲದ ಸಂಪತ್ತನ್ನು ಬಳಸಿಕೊಳ್ಳಲು ಯೋಗ್ಯನಾಗುತ್ತಾನೆ. ಸಹಜವಾಗಿ ಹೊಸ ಪೀಳಿಗೆಯ ತರಗತಿ ಕೋಣೆ ನಿರ್ವಹಣೆಯು ಸಾಕಷ್ಟು ವಿಭಿನ್ನವಾಗಬೇಕಿದೆ, ಬಹಳ ವಿಭಿನ್ನವಾಗಲಿದೆ.

ಬ್ರಿಟನ್ನಿನ ಉದಾಹರಣೆಯೊಂದು ಇಲ್ಲಿದೆ ದೇಶದ ಶಿಕ್ಷಣ ಕಾರ್ಯದರ್ಶಿಯ ಭವಿಷ್ಯ. ದೃಷ್ಟಿಯ ಪ್ರಕಾರ, ಬ್ರಿಟನ್ನಿನ ಶಾಲೆಗಳು ಭವಿಷ್ಯದಲ್ಲಿ ಗಣಕಯಂತ್ರ ತಂತ್ರಜ್ಞಾನವನ್ನು ಹೆಚ್ಚಾಗಿಯೇ ಬಳಸಲಿವೆ.(ಬಿಬಿಸಿ, 2002) ವಿದ್ಯಾರ್ಥಿಗಳು ಸ್ವಾಗತ ಕಚೇರಿಯ ಮೂಲಕ ಪ್ರವೇಶ ಪಡೆಯದೆ ಸ್ವೈಪ್ ಕಾರ್ಡಿನ ಮೂಲಕ ಪ್ರವೇಶಿಸಿ 'ಸ್ವಯಂ–ನಿರ್ದೇಶಿಸಿದ ಕಲಿಕೆ'ಯ ಭಾಗವಾಗಿ ಮುಂದುವರೆದ ತಂತ್ರಜ್ಞಾನವನ್ನು ಬಳಸುತ್ತಾರೆ. ಒಂದು ಹೆಜ್ಜೆ ಮುಂದಿಡುತ್ತಾ ಬ್ರಿಟನ್ನಿನ ಎಲ್ಲ ಶಿಕ್ಷಕರಿಗೂ ಲ್ಯಾಪ್‌ಟಾಪ್ ಕಂಪ್ಯೂಟರ್‌ನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ 1,00,000 ಶಿಕ್ಷಕರಿಗೆ (ಮೂರನೇ ಒಂದು ಭಾಗ) ಈ ಸಲಕರಣೆ ಒದಗಿಸಲು ನೂರು ದಶಲಕ್ಷ ಪೌಂಡ್ ಖರ್ಚಾಗುವುದು. ಮಾಹಿತಿ ತಂತ್ರಜ್ಞಾನದ ಮೂಲಕ ಶಿಕ್ಷಣದಲ್ಲಿ ಕ್ರಾಂತಿ ತರುವುದು ಇದರ ಉದ್ದೇಶ. ಈ ವಿಧಾನವು ಸಿಬ್ಬಂದಿಯ ಏರ್ಪಾಟು, ವೇಳಾಪಟ್ಟಿಗೆ ಹೊಂದಿಕೆಯಾಗಿ ಕಲಿಯುತ್ತಿದ್ದ ವಿದ್ಯಾರ್ಥಿಗಳು ಹೀಗೆ ಎಲ್ಲವನ್ನು ಬದಲಿಸಲಿದೆ. ಸಾಂಪ್ರದಾಯಿಕ ಶಾಲೆಗಳಲ್ಲಿ ಇರದಂತಹ ಪದ್ಧತಿಯ ಪ್ರಕಾರ, ಮಕ್ಕಳು ಕಲಿಯಲು ತಮ್ಮದೇ ಆದ ಸಮಯವನ್ನು ತೆಗೆದುಕೊಳ್ಳುವರು. ಈ ದೃಷ್ಟಿಯು ತೆರೆದ ಯೋಜನೆ ಸ್ಥಳಗಳು, ಅದರಲ್ಲಿ ಪಾಮ್‌ಟಾಪ್, ಪ್ಲಾಸ್ಮಾ ಪರದೆ ಮತ್ತು ಎಲೆಕ್ಟ್ರಾನಿಕ್ ಬಿಳಿ ಹಲಗೆಯನ್ನು ಹೊಂದಿರುವ ಉನ್ನತ ತಂತ್ರಜ್ಞಾನದ ಓದುವ ಸ್ಥಳಗಳು ಒಳಗೊಂಡಿರುತ್ತದೆ.

ತರಗತಿಯಲ್ಲಿ ತಂತ್ರಜ್ಞಾನದ ಪ್ರಭಾವದಿಂದ, ಕಲಿಕಾ ಕೌಶಲಗಳಲ್ಲಾದ ಬದಲಾವಣೆಗಳಿಂದ ಉಂಟಾಗುವ ಕೆಲವು ಹೊಸ

Digitised by Bharatavani, CIIL

ಪದ್ಧತಿಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ. (ಬಾಲಸುಬ್ರಮಣ್ಯಮ್, 2002)

- ವಿದ್ಯಾರ್ಥಿಗಳು ಸುದ್ದಿ ಕಳುಹಿಸುವ ಸಲಕರಣೆಯಿಂದ ತಮ್ಮ ಸ್ವತಂತ್ರ ಇಚ್ಛೆಯಿಂದ ಕಲಿಯುವರು.
- ಕಲಿಕೆಯು ಸ್ವಯಂ-ವೇಗದ್ದು.
- ಕಲಿಕೆಯು ಪರಸ್ಪರ ಕ್ರಿಯಾತ್ಮಕವಾಗಿರುತ್ತದೆ.
- ಕಲಿಕೆಯು ಸ್ವಯಂ-ಮೌಲ್ಯಮಾಪಕವಾಗಿರಬಹುದು.

ಏನೇ ಆದರೂ ಶಿಕ್ಷಕಿಯು ವಿದ್ಯಾರ್ಥಿಯ ಮನಸ್ಸನ್ನು ಮತ್ತು ಚೈತನ್ಯಗಳಲ್ಲಿ ಅತ್ಯಂತ ಮಹತ್ತರವಾದ ಪಾತ್ರವನ್ನು ವಹಿಸುತ್ತಾಳೆ. ಬಹುಮುಖವಾದ ಪರಸ್ಪರ ಕ್ರಿಯೆಯು ತರಗತಿಯಲ್ಲಿ ಉಂಟಾಗುವುದರಿಂದ ವಿದ್ಯಾರ್ಥಿಯ ಭಾವನಾತ್ಮಕ ಬಹು ವಿಧಗಳ ಬುದ್ಧಿಶಕ್ತಿಯು ಹೆಚ್ಚುತ್ತದೆ.

**ಉಪಸಂಹಾರ: ತರಗತಿ ಕೋಣೆಯಲ್ಲಿನ ನಿರ್ವಹಣಾ ವೃತ್ತಿಪರತೆ**

ವ್ಯವಸ್ಥಿತ ಜ್ಞಾನದ ಆಧಾರದ ಮೇಲೆ ವಿಶೇಷ ಚಟುವಟಿಕೆಗಳನ್ನು ನಡೆಸುವವರು ಮತ್ತು ತಮ್ಮ ಕೆಲಸಕ್ಕೆ ಬದ್ಧರಾದವರನ್ನು ವೃತ್ತಿಪರರು ಎನ್ನುತ್ತಾರೆ. ತಾವು ಕೆಲಸ ಮಾಡುವ ರೀತಿಯಿಂದಲೇ ವೃತ್ತಿಪರರು ಆಡಳಿತಾತ್ಮಕ ಒತ್ತಡವನ್ನು ತಡೆದುಕೊಳ್ಳುವ ಶಕ್ತಿ ಹೊಂದಿರುತ್ತಾರೆ ಮತ್ತು ವೃತ್ತಿಪರರು ಷರತ್ತಿನ ಬದ್ಧತೆಯನ್ನು ತಮ್ಮ ಸಂಸ್ಥೆಯೆಡೆಗೆ ತೋರುತ್ತಾರೆ. ನಿರ್ವಹಣಾ ಶಿಕ್ಷಣದ ವ್ಯವಹಾರ ಕುಶಲ ವಿದ್ಯಾರ್ಥಿಗಳ ಪ್ರಕಾರ ವೃತ್ತಿಪರರು ಕಿರಿಯ ಅಥವಾ ಹಿರಿಯ ಕೆಲಸಗಾರರಂತೆ ಕೆಲಸ ಮಾಡುತ್ತಾರೆಯೇ ಹೊರತು ಯಜಮಾನ ಅಥವಾ ನೌಕರರಂತಲ್ಲ. ಚಟುವಟಿಕೆ ಅಥವಾ ಯೋಜನೆಗೆ ಸಂಬಂಧಿಸಿದಂತೆ ಒಬ್ಬರು ಉಸ್ತುವಾರಿಯನ್ನು ನೋಡಿಕೊಳ್ಳುವುದನ್ನು ಇವರು ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಯೋಜನೆಯನ್ನು ಗುಂಪು ಕಾರ್ಯವೆಂದೂ ಎಲ್ಲರಿಗೂ ತಮ್ಮದೇ ಆದ ಸ್ವತಂತ್ರ ಜವಾಬ್ದಾರಿಗಳಿರುತ್ತವೆಂಬುದನ್ನು ತಿಳಿದುಕೊಳ್ಳುತ್ತಾರೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಮೇಲಾಧಿಕಾರಿಯು ಸಮನ್ವಯಾಧಿಕಾರಿ ಅಥವಾ ಶಿಕ್ಷಕನಾಗಬೇಕೆ ಹೊರತು ಮೇಲಧಿಕಾರಿಯಲ್ಲ. (ವೀರಮಣಿ, 1984) ಈ ತರಗತಿ ಕೋಣೆಗಳಲ್ಲಿ ಬೋಧನೆಯು ವಿದ್ಯಾರ್ಥಿಸ್ನೇಹಿಯಾಗಿದ್ದು, ವಿಮರ್ಶಾತ್ಮಕ ಚಿಂತನೆಯನ್ನು ಹೆಚ್ಚಿಸಲು ಅವಕಾಶ ಕಲ್ಪಿಸಲಾಗುವುದು ಮತ್ತು ಪಠ್ಯಕ್ರಮವು ವ್ಯಕ್ತಿಪರ ಪರಸ್ಪರ ಕ್ರಿಯಾತ್ಮಕ ಮತ್ತು ಅಭಿವೃದ್ಧಾತ್ಮಕವಾಗಿರುತ್ತದೆ.

ಕೊನೆಯದಾಗಿ, ಪರಿಣಾಮಕಾರಿ ತರಗತಿ ಕೋಣೆ ನಿರ್ವಹಣೆಗೆ ಸಮಾಜಸ್ನೇಹಿ(ವಾದಿ) ತರಗತಿಯೆಡೆಗೆ ಮುನ್ನಡೆಯುವ, ಷರತ್ತುಗಳಿಂದಾಚೆಗೆ ಚಲಿಸುವುದಾಗಿರಬೇಕು. ಇದು ಮಕ್ಕಳಿಗೆ ಸಮಾಜಪರ ವರ್ತನೆಯನ್ನು ಕಲಿಸಿಕೊಡುವುದರಲ್ಲಿ ಪರಿಣಾಮಕಾರಿಯಾಗಿದೆ.(ಡಿಗಿಯುಲಿಯೊ, 2002) ಗುಣಾತ್ಮಕ ತರಗತಿ ಕೋಣೆಯ ನಿರ್ವಹಣೆಯ ಪ್ರಾಯೋಗಿಕ ದೃಷ್ಟಿಕೋನದ ಮೂರು ಮುಖ್ಯ ಆಯಾಮಗಳೆಂದರೆ; ಉತ್ಪಾದನಾ ಸಾಮರ್ಥ್ಯವುಳ್ಳ ಕಲಿಕೆಯ ವಾತಾವರಣವನ್ನು ಕೇಂದ್ರಿಕರಿಸುವ ಭೌತಿಕ ಆಯಾಮ, ವಿದ್ಯಾರ್ಥಿಗಳ ಶ್ರದ್ಧೆಯನ್ನು ಕೇಂದ್ರಿಕರಿಸುವಂತೆ ಹೇಗೆ ಬೋಧಿಸುವುದೆಂಬುದನ್ನು ಹೇಳುವ ಬೋಧನಾ ಆಯಾಮ ತರಗತಿಯ ಸುಲಭ ನಿರ್ವಹಣೆಗೆ ಬೇಕಾದ ಮೂಲ ಸಂಗತಿಗಳು ಮತ್ತು ಬೋಧನೇತರ ದಿನಚರಿಗಳನ್ನು ಕೇಂದ್ರಿಕರಿಸಿದ ನಿರ್ವಹಣಾ ಆಯಾಮ. ಪ್ರತಿ ಆಯಾಮದಲ್ಲೂ ಮೂರು ರೀತಿಯ ಶಿಕ್ಷಕನ ಹಸ್ತಕ್ಷೇಪವು ಬರುತ್ತದೆ. ರಕ್ಷಣಾತ್ಮಕ ಹಸ್ತಕ್ಷೇಪವು ಬೋಧನೆಯ ಮುಂಚೆಯೇ ಸಂಭವಿಸುತ್ತದೆ. ಬೆಂಬಲಾತ್ಮಕ ಹಸ್ತಕ್ಷೇಪವು ಬೋಧನೆಯು ನಡೆಯುವಾಗ ಸಂಭವಿಸುತ್ತದೆ ಮತ್ತು ದೋಷ ಸರಿಪಡಿಸುವ ಹಸ್ತಕ್ಷೇಪವು ಬೋಧನೆ ಘಟಿಸಿದ ನಂತರದ ಪ್ರತಿಕ್ರಿಯೆಗಳಲ್ಲಿ ಸಂಭವಿಸುತ್ತದೆ. ಬೋಧನಾ ಪರಿಣಾಮಕಾರಿತ್ವದ ಸುಧಾರಣೆಗೆ ಮತ್ತು ಇಂದಿನ ತರಗತಿಗಳ ಸವಾಲನ್ನು ಎದುರಿಸಲು ಕ್ರಮಬದ್ಧ ಪುನರಾಲೋಚನೆಯು ಅವಶ್ಯಕ. ಸಿದ್ಧತೆ ಮಾಡಿಕೊಳ್ಳಲು ತಯಾರಿರುವ, ಅದನ್ನು ಅನುಸರಿಸುವ ಮತ್ತು ಫಲಿತಾಂಶಗಳಲ್ಲಿ ಅಂತರ್ವೀಕ್ಷಣೆ ಮಾಡಿಕೊಳ್ಳಬಲ್ಲ ಪ್ರತಿಯೊಬ್ಬ ಶಿಕ್ಷಕನಿಗೂ ತರಗತಿ ಕೋಣೆಯ ನಿರ್ವಹಣೆಯ ಸಮಸ್ಯೆಗಳ ಪರಿಹಾರವು ತನ್ನಲ್ಲಿಯೇ ಇರುತ್ತದೆ.

**ಮೂಲ: ಇಂದು ಖೇತರಪಾಲ್**

**ಅನು: ವಸಂತಕುಮಾರಿ.ಸಿ**

## ತರಗತಿಯ ನಿರ್ವಹಣೆ

ಸರಿಯಾದ ತರಗತಿ ನಿರ್ವಹಣೆಯನ್ನು ಮಾಡಲು ತಿಳಿಯದ ಶಿಕ್ಷಕರು ತರಗತಿಯ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತಾರೆ. ಆದ್ದರಿಂದ ಶಿಕ್ಷಕರಿಗೆ 'ತರಗತಿಯ ನಿರ್ವಹಣೆಯ ತಾಂತ್ರಿಕತೆ'ಯು ಯಶಸ್ವಿ ಶಿಕ್ಷಕರಾಗಲು ಬೇಕಾದ ಮುಖ್ಯವಾದ ಜ್ಞಾನವಾಗಿದೆ. ಶಿಕ್ಷಕನು ತಾನು ಯಾವ ತರಗತಿಗೆ ಪಾಠ ಮಾಡುತ್ತಿದ್ದೇನೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಅದು ಪೂರ್ವ ಪ್ರಾಥಮಿಕ ಅಥವಾ ಪ್ರಾಥಮಿಕ ಅಥವಾ ಪ್ರೌಢಶಾಲಾ ತರಗತಿಯ ಪಾಠ ಮಾಡುವ ಪ್ರತಿಯೊಬ್ಬ ಶಿಕ್ಷಕನಿಗೂ ತನ್ನ ದೇಆದ ರೀತಿ-ನೀತಿಗಳಿರುತ್ತವೆ. ಆದರೆ ಅದನ್ನು ಸರಿಯಾಗಿ ನಿರ್ವಹಿಸಲು ಬರದಿದ್ದರೆ, ಅವನಿಗೆ ತರಗತಿಯ ಮೇಲಿನ ನಿಯಂತ್ರಣ ತಪ್ಪಿಹೋಗುತ್ತದೆ. ಒಂದು ಸಾರಿ ನಿಯಂತ್ರಣ ಕಳೆದುಕೊಂಡರೆ ಬೋಧನೆಯಾಗಲಿ, ಅಥವ ಕಲಿಕೆಯಾಗಲಿ ಶೂನ್ಯಕ್ಕೆ ಇಳಿದುಹೋಗುತ್ತದೆ. ತರಗತಿಯನ್ನು ಉತ್ತಮವಾಗಿ ನಿರ್ವಹಿಸಲು ಈ ಕೆಳಗಿನ ಸಲಹೆಗಳನ್ನು ಅನುಸರಿಸಬಹುದು.

**ಪ್ರತಿದಿನ ತರಗತಿಗೆ ಸಿದ್ಧತೆ ನಡೆಸುವುದು:**

ತರಗತಿಯಲ್ಲಿ ವಿದ್ಯಾರ್ಥಿಗಳು ಪಾಠವನ್ನು ಕೇಳುತ್ತಾ ಅಥವಾ ಶಿಕ್ಷಕರು ಕೊಟ್ಟ ಬರಹ ಮುಂತಾದ ಕೆಲಸಗಳನ್ನು ಮಾಡುತ್ತಾ, ಒಟ್ಟಿನಲ್ಲಿ ಕಾರ್ಯನಿರತರಾಗಿರಬೇಕು. ಹಾಗೆ ಮಾಡಲು ಶಿಕ್ಷಕರು ತರಗತಿ ಸಮಯದ ಪೂರ್ಣ ಉಪಯೋಗಕ್ಕೆ ತಮ್ಮ ಪಾಠದ

Digitised by Bharatavani, CIIL

ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಕೊನೆಯಲ್ಲಿ ಸ್ವಲ್ಪ ಸಮಯ ಉಳಿದರೂ ಏನೂ ಮಾಡದೆ ಸುಮ್ಮನಿದ್ದಾಗ ತರಗತಿಯ ಶಿಸ್ತು ಹಾಳಾಗುತ್ತದೆ. ಕೊನೆಯಲ್ಲಿ ಸ್ವಲ್ಪ ಪಾಠ ಉಳಿದರೂ ಪರವಾಗಿಲ್ಲ ಅದನ್ನು ಮುಂದಿನ ತರಗತಿಯಲ್ಲಿ ಮುಗಿಸಬಹುದು ಆದರೆ ಸಮಯ ಉಳಿಯಬಾರದು. ಆದ್ದರಿಂದ ಹೆಚ್ಚಿನ ತಯಾರಿಕೆ ಉತ್ತಮ, ಕಡಿಮೆ ತಯಾರಿಕೆ ಕೂಡದು.

**ಸಮಯಕ್ಕೆ ಸರಿಯಾಗಿ ಪ್ರಾರಂಭಿಸಬೇಕು:**

ಶಿಕ್ಷಕರಿಗೆ ಒಂದು ತರಗತಿಯ ವಿಷಯದ ನಂತರ ಮತ್ತೊಂದು ತರಗತಿಯ ವಿಷಯಕ್ಕೆ ಗಮನಕೊಡುವುದು ಅಷ್ಟೇನೂ ಸುಲಭವಲ್ಲ. ತರಗತಿಯಿಂದ ತರಗತಿಗೆ ಚಲಿಸುವುದಕ್ಕೂ ಸಮಯ ಬೇಕಾಗುತ್ತದೆ. ಆದರೆ ತರಗತಿಯಲ್ಲಿರುವ ವಿದ್ಯಾರ್ಥಿಗಳು ತಮ್ಮ ಶಿಕ್ಷಕರು ಸಿದ್ಧರಾಗಿಲ್ಲದಿದ್ದರೆ ಪಾಠದಕಡೆ ತಮ್ಮ ಗಮನವನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ. ಹೀಗೆ ಗಮನ ಕಳೆದುಕೊಂಡಾಗ ಮತ್ತೆ ಅದನ್ನು ಶಿಕ್ಷಕರು ಕೇಂದ್ರೀಕರಿಸುವಂತೆ ಮಾಡಲು ಒಂದಕ್ಕೆ ಎರಡರಷ್ಟು ಸಮಯ ಬೇಕಾಗಬಹುದು. ಆದ್ದರಿಂದ ಸಮಯಕ್ಕೆ ಸರಿಯಾಗಿ ತರಗತಿಯಲ್ಲಿ ಶಿಕ್ಷಕರಿಂದ ಕೆಲಸ ಪ್ರಾರಂಭವಾದರೆ ಆಗ ವಿದ್ಯಾರ್ಥಿಗಳಿಗೆ ತಾವೂ ಕೆಲಸ ಪ್ರಾರಂಭಿಸಬೇಕೆಂಬುದು ಅನಿವಾರ್ಯವಾಗುತ್ತದೆ.

**ಕಟ್ಟುನಿಟ್ಟಾಗಿ ಪ್ರಾರಂಭಿಸಿ:**

ವರ್ಷದ ಪ್ರಾರಂಭ ಇರಬಹುದು ಅಥವಾ ಸೆಮಿಸ್ಟರ್ ಪ್ರಾರಂಭ ಇರಬಹುದು, ಮೊದಲನೇ ತರಗತಿಯಲ್ಲಿ ಕಟ್ಟುನಿಟ್ಟಾಗಿ ತರಗತಿಯ ಕಟ್ಟಲೆಗಳನ್ನು, ಅವರು ತರಗತಿಯಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನೂ, ಪಠ್ಯ ವಿವರಣೆಯನ್ನೂ, ವೇಳಾಪಟ್ಟಿಯನ್ನೂ, ವಿದ್ಯಾರ್ಥಿಗಳಿಗೆ ಕೊಡಿ. ಹೀಗೆ ವರ್ಷದ ಪ್ರಾರಂಭವನ್ನು ಕಟ್ಟುನಿಟ್ಟಾಗಿ ಪ್ರಾರಂಭಿಸಿ ನಂತರದ ದಿನಗಳಲ್ಲಿ ತರಗತಿಯನ್ನು ಸಂತೋಷವಾಗಿಟ್ಟರೆ ಯಾವತೊಂದರೆಯೂ ಇರುವುದಿಲ್ಲ.

**ಪ್ರತಿದಿನ ಅವರು ಏನನ್ನು ನಿರೀಕ್ಷಿಸುತ್ತಾರೆ ಎಂಬುದು ಅವರಿಗೆ ತಿಳಿದಿರಲಿ:**

ಅವರು ತರಗತಿಯಲ್ಲಿ ಏನು ಮಾಡಬೇಕು ಎಂಬುದು ವಿದ್ಯಾರ್ಥಿಗಳಿಗೆ ಮೊದಲೇ ಗೊತ್ತಿದ್ದರೆ ಅವರು ಅದನ್ನು ಮಾಡಲು ಪೂರ್ವ ಸಿದ್ಧತೆ ಮಾಡಿಕೊಂಡು ಬರುತ್ತಾರೆ. ಹೀಗೆ ಅವರಿಗೆ ಮೊದಲೇ ತಿಳಿಸಲು ಹಲವು ಮಾರ್ಗಗಳಿವೆ. ಮುಂದಿನ ತರಗತಿಯಲ್ಲಿ ಏನು ಮಾಡಬೇಕೆಂಬುದನ್ನು ತರಗತಿಯಲ್ಲಿ ಪಾಠದ ಕೊನೆಯಲ್ಲಿ ಹೇಳಬಹುದು, ಅಥವ ವಾರದ ಕೆಲಸದ ಪೂರ್ಣ ಮಾಹಿತಿಯನ್ನು– ಸೋಮವಾರದಿಂದ ಶನಿವಾರದವರೆಗೆ ಬರೆದು ಪ್ರಕಟಿಸಬಹುದು. ಹೀಗೆ ಪ್ರತಿ ಶಿಕ್ಷಕರಿಗೂ ತಮ್ಮದೇ ಆದ ರೀತಿಯಲ್ಲಿ ಮುಂದಿನ ಕೆಲಸವನ್ನು ಪ್ರಕಟಿಸುವ ಮಾರ್ಗ ಇರುತ್ತದೆ.

**ಬೋಧನೆಯಲ್ಲಿ ವೈವಿಧ್ಯತೆ ಇರಲಿ:**

ತರಗತಿಯಲ್ಲಿರುವವರು ಮಕ್ಕಳು ಎಂಬುದು ಶಿಕ್ಷಕರಿಗೆ ತಿಳಿದ ವಿಷಯವೇ ಆಗಿದೆ. ಅವರಿಗೆ ಒಂದೇ ಸಮನೆ ಪಾಠ, ಮನೆ ಕೆಲಸ, ವಾರದ ಕಿರು ಪರೀಕ್ಷೆಗಳು, ಮುಂತಾದವುಗಳಿಂದ ಬೇಸರವಾಗುತ್ತದೆ. ಆದ್ದರಿಂದ ಶಿಕ್ಷಕರು ತರಗತಿಯಲ್ಲಿ ವೈವಿಧ್ಯಮಯವಾದ ಪಾಠ ಬೋಧನಾ ವಿಧಾನಗಳು, ಚಟುವಟಿಕೆಗಳು, ಮಾತು, ಸಂವಾದ, ಮುಂತಾದವುಗಳನ್ನು ಉಪಯೋಗಿಸುವ ಚತುರತೆಯನ್ನು ಹೊಂದಿರಬೇಕು. ಹಾಗೆ ಬೇರೆ ಬೇರೆ ತರಗತಿಗಳಲ್ಲಿ ಬೇರೆ ಬೇರೆ ರೀತಿಯನ್ನು ಅನುಸರಿಸಿ ಪಾಠವನ್ನು ಮಾಡಬೇಕು. ಹಲವು ವೇಳೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ ಎನಿಸಿದರೂ ವಿದ್ಯಾರ್ಥಿಗಳು ಏನಾದರೂ ಕಲಿತೇಯಿರುತ್ತಾರೆ.

**ತರಗತಿಯಲ್ಲಿ ಶಿಕ್ಷಕರ ಚಲನೆ:**

ತರಗತಿಯಲ್ಲಿ ಶಿಕ್ಷಕರು ಮಾಡುವ ಪ್ರತಿಯೊಂದು ಚಲನೆಯನ್ನೂ ವಿದ್ಯಾರ್ಥಿಗಳು ಗಮನಿಸುತ್ತಿರುತ್ತಾರೆ. ಅವರ ಗಮನ ಪಾಠದಲ್ಲಿ ಕೇಂದ್ರೀಕೃತವಾಗಲು ಶಿಕ್ಷಕರ ಮಾತು ಮತ್ತು ಅವರ ದೇಹಭಾಷೆ ಸಹಾಯಕ. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನೂ ಶಿಕ್ಷಕರು ಗಮನಿಸುತ್ತಿದ್ದಾರೆ ಎನ್ನುವುದು ವಿದ್ಯಾರ್ಥಿಗಳಿಗೆ ತಿಳಿಯಬೇಕು. ಆಗ ತರಗತಿಯ ನಿರ್ವಹಣೆ ಯಶಸ್ವಿಯಾಗುತ್ತದೆ.

**ಯೋಜನಾಬದ್ಧವಾದ ಬೋಧನೆಯಿಂದ ತರಗತಿಯ ನಿರ್ವಹಣೆ (ಬೋಧನೆಯಿಂದ ತರಗತಿಯಲ್ಲಿ ಶಿಸ್ತನ್ನು ಕಾಪಾಡುವುದು):**

ಬಿಡುವಿನ ಸಮಯ ದೊರೆತಾಗ ಮಕ್ಕಳು ಅದನ್ನು ಉಪಯೋಗಿಸಿಕೊಳ್ಳಲು ಬಯಸುತ್ತಾರೆ. ಅದಕ್ಕೆ ಗುರಿ ಸಾಧನೆಯನ್ನು ಹೊಂದಿರುವ, ವ್ಯವಸ್ಥಿತವಾದ ಯೋಜನೆಯ, ಬೋಧನೆಯು ಮಕ್ಕಳನ್ನು ತರಗತಿಯಲ್ಲಿ ಯಾವಾಗಲೂ ಕಾರ್ಯನಿರತರನ್ನಾಗಿಸಬಹುದು. ಆಗ ಅವರು ತರಗತಿಯ ಪಾಠ ಪ್ರವಚನಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾರೆ.

ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಅದು ಕಾಣುವಂತೆ ಇಟ್ಟುಕೊಂಡು ಅದನ್ನು ಪ್ರತಿ ದಿನ ಪರಿಪಾಲಿಸಬೇಕು. ವಿದ್ಯಾರ್ಥಿಗಳಿಗೂ ಅದು ಕಾಣಬೇಕು. ಮುಂದಿನ ಕಾರ್ಯಕ್ರಮವನ್ನು ಅವರು ಅರಿಯಬೇಕು. ಸಣ್ಣ ಮಕ್ಕಳಾದರೆ ಅವರ ದಿನಚರಿಯಲ್ಲಿ ನಮೂದಿಸಿಕೊಡಬೇಕು. ಇದರಿಂದ ಮಕ್ಕಳಿಗೆ ತಮ್ಮ ಜವಾಬ್ದಾರಿ ತಿಳಿಯುತ್ತದೆ ಮತ್ತು ಅವರಲ್ಲಿ ಉತ್ತರದಾಯಿತ್ವವನ್ನೂ ಬೆಳೆಸಬಹುದು.

ಶಿಕ್ಷಕರು ತಯಾರಿಸುವ ಕಾರ್ಯಕ್ರಮ ಪಟ್ಟಿಯನ್ನು ಅವರು ಆಗಾಗ್ಗೆ ಸರಿಪಡಿಸುತ್ತಿರಬೇಕು. ಹಳೆಯದನ್ನು ತೆಗೆದು ಹೊಸದು ಮಾತ್ರ ಪಟ್ಟಿಯಲ್ಲಿರುವಂತೆ ನೋಡಿಕೊಳ್ಳಬೇಕು. ಇದನ್ನು ಸರಿಯಾಗಿ ನೋಡಿಕೊಳ್ಳದ ಶಿಕ್ಷಕರು ಮಕ್ಕಳ ದೃಷ್ಟಿಯಲ್ಲಿ ತಮ್ಮ ಬೆಲೆಯನ್ನು ಕಳೆದುಕೊಳ್ಳುತ್ತಾರೆ.

ಕಾರ್ಯಕ್ರಮ ಪಟ್ಟಿಯಲ್ಲಿ ಮೂರು ವಿಷಯಗಳು ಮುಖ್ಯ. 1. ಹಿಂದಿನ ದಿನದ ಪಾಠವನ್ನು ಪುನರಾವಲೋಕನ ಮಾಡಬೇಕು.

Digitised by Bharatavani, CIIL

ಇದರಲ್ಲಿ ಕೊಟ್ಟ ಮನೆ ಕೆಲಸವನ್ನು ನೋಡುವುದೂ ಸೇರಿಕೊಳ್ಳುತ್ತದೆ. 2. ಮುಖ್ಯವಾಗಿ ದಿನದ ಪಾಠದ ಪಠ್ಯವನ್ನು ತಯಾರಿಸಿಕೊಂಡು ಸಿದ್ಧರಾಗುವುದು. 3. ದಿನದ ಪಾಠದ ನಂತರ ಕೊಡಬೇಕಾದ ಮನೆ ಕೆಲಸವನ್ನು ತೀರ್ಮಾನಿಸುವುದು.

ಶಿಕ್ಷಕರು ಪೂರ್ಣಸಿದ್ಧತೆಯನ್ನು ಮಾಡಿಕೊಂಡಿದ್ದಾರೆನ್ನುವುದು ವಿದ್ಯಾರ್ಥಿಗಳಿಗೆ ಪಾಠದ ಬಗ್ಗೆ ಸಂಪೂರ್ಣ ಗಮನ ಕೊಡಲು ಪ್ರೇರಕವಾಗುತ್ತದೆ. ಇದು ಕಾರ್ಯಕ್ರಮ ಪಟ್ಟಿಯಿಂದ ವಿದ್ಯಾರ್ಥಿಗಳಿಗೆ ತಿಳಿಯುತ್ತದೆ. ಬೋಧನೆಯನ್ನು ಸರಿಯಾಗಿ ಯೋಜಿಸದೇ ಹಾಗೂ ಪ್ರಸ್ತುತ ಪಡಿಸದೇ ಇದ್ದರೆ ತರಗತಿ ನಿಯಂತ್ರಣ ತಪ್ಪುತ್ತದೆ. ತಾವು ಏನು ಕಲಿಯಬೇಕು ಮತ್ತು ತಮ್ಮಿಂದ ಏನು ನಿರೀಕ್ಷಿಸಲಾಗಿದೆ ಎಂಬುದನ್ನು ತಿಳಿಯದ ವಿದ್ಯಾರ್ಥಿಗಳು ಹತಾಶರಾಗುತ್ತಾರೆ. ಅದರಿಂದ ಅವರು ನಿಶ್ಕ್ರಿಯರಾಗುತ್ತಾರೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸಂಪೂರ್ಣವಾಗಿ ಪಾಠದಲ್ಲಿ ತಲ್ಲೀನರಾಗಿದ್ದರೆ ಬೇರೆ ಯಾವ ಗಲಾಟೆಗಳಿಗೂ ಅವಕಾಶಗಳಿರುವುದಿಲ್ಲ.

**ಪ್ರತಿದಿನದ ಪಾಠಕ್ಕೆ ಒಂದು ಉದ್ದೇಶ ಇರಬೇಕು:**

ಕಾರ್ಯಕ್ರಮ ಪಟ್ಟಿಯಂತೆ ಪ್ರತಿದಿನದ ಪಾಠದ ಉದ್ದೇಶವೂ ಪ್ರಮುಖ ಸ್ಥಾನವನ್ನು ಪಡೆಯಬೇಕು. ಅದು ಆ ಪಾಠದಿಂದ ಯಾವ ಗುರಿಯನ್ನು ಸಾಧಿಸಬೇಕು ಎಂಬುದನ್ನು ತೋರಿಸುತ್ತದೆ. ಅದು ಎಲ್ಲರ ದೃಷ್ಟಿಯನ್ನೂ ಒಂದು ಗೊತ್ತಾದ ಫಲಿತಾಂಶದತ್ತ ಕೇಂದ್ರೀಕರಿಸುತ್ತದೆ. ಮುಖ್ಯವಾಗಿ ಅದು ಒಂದು ಪೀರಿಯಡ್‌ನಲ್ಲಿ ವಿದ್ಯಾರ್ಥಿಗಳು ಏನನ್ನು ಕಲಿಯುತ್ತಾರೆ ಎಂಬುದನ್ನು ತಿಳಿಸುತ್ತದೆ. ಪಾಠದ ನಂತರ ಅವರು ಅದನ್ನು ಕಲಿತದ್ದನ್ನೂ ದೃಢಪಡಿಸುತ್ತದೆ. ಹೀಗೆ ಉದ್ದೇಶವು ಕಲಿಯಬೇಕಾದ ಒಂದು ನಿರ್ದಿಷ್ಟ ವಿಷಯವನ್ನು ಖಚಿತಪಡಿಸುತ್ತದೆ. ಎಲ್ಲಿಗೆ ಹೋಗಿ ತಲಪಬೇಕು ಎಂಬುದೇ ಗೊತ್ತಿಲ್ಲದಿದ್ದರೆ ಹೋಗಿ ಸೇರಲು ಪ್ರಚೋದನೆಯೇ ಇರುವುದಿಲ್ಲ. ಉತ್ತರದಾಯಿತ್ವದಿಂದ ಜವಾಬ್ದಾರಿ ತಿಳಿಯುತ್ತದೆ.

**ಮೊದಲೇ ತಿಳಿದಿರಬೇಕಾದದ್ದು:**

ವಿದ್ಯಾರ್ಥಿಗಳು ತರಗತಿಯಲ್ಲಿ ತಮ್ಮ ಪಾಠಕ್ಕೆ ಸಂಪೂರ್ಣ ಗಮನ ಕೊಡಬೇಕಾದರೆ ಅವರಿಗೆ ಆ ಪಾಠ/ವಿಷಯದ ವಿನಹ ಬೇರೆ ಏನೂ ಕೈಗೆ ಸಿಗುವಂತಿರಬಾರದು. ಅವರು ತಮ್ಮ ಡೆಸ್ಕಿನ ಮೇಲೆ ಆ ಅವಧಿಯ ಪಾಠದ ಪುಸ್ತಕವನ್ನಲ್ಲದೆ ಬೇರೆ ಏನನ್ನೂ ಇಟ್ಟುಕೊಳ್ಳಬಾರದು. ಆಗ ತರಗತಿಯ ನಿರ್ವಹಣೆ ಮತ್ತಷ್ಟು ಸುಲಭವಾಗುತ್ತದೆ ಮತ್ತು ಮಾಡಿದ ಪಾಠದ ಸಂಪೂರ್ಣ ಉಪಯೋಗವಾಗುತ್ತದೆ. ವಿದ್ಯಾರ್ಥಿಗಳು ಯಾವುದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಶಿಕ್ಷಕರು ಭಾವಿಸುತ್ತಾರೋ ಅದನ್ನು ಮೊದಲು ಅವರು ಗಂಭೀರವಾಗಿ ತೆಗೆದುಕೊಳ್ಳಬೇಕು.

**ಹೊಸ ಶಿಕ್ಷಕರಿಗೆ ತರಗತಿಯ ನಿರ್ವಹಣೆ ಬಗ್ಗೆ ಹಲವು ಸೂಚನೆಗಳು:**

ಹೊಸದಾಗಿ ಶಿಕ್ಷಕ ವೃತ್ತಿಗೆ ಬರುವವರು ಮೊದಮೊದಲು ಹಲವು ತಪ್ಪುಗಳನ್ನು ಮಾಡುವುದು ಸಹಜ. ಅದರಿಂದಾಗಿ ಅವರು ಆಮೇಲೆ ವ್ಯಸನ ಪಡುತ್ತಾರೆ. ಆದರೆ ನಿಧಾನವಾಗಿ ಎಲ್ಲರೂ ಕಲಿಯುತ್ತಾರೆ. ಮೊದಲು ಅವರು ಮಾಡಿದ ತಪ್ಪು–ಸರಿಗಳು ಅವರಿಗೆ ತರಗತಿಯ ನಿರ್ವಹಣೆಗೆ ಮುಂದಿನ ಪಾಠವಾಗುತ್ತದೆ. ಶಾಲೆಯಲ್ಲಿನ ಇತರ ಹಿರಿಯ ಶಿಕ್ಷಕರ ಉಪದೇಶವು ಸಹಾಯಕವಾಗಬಹುದು. ಅವರು ಮೊದಲೇ ನಡೆದು ಮುಗ್ಗರಿಸಿ ನಂತರ ಸರಿಪಡಿಸಿಕೊಂಡಿರುವುದು ಹೊಸಬರು ಮುಗ್ಗರಿಸುವುದನ್ನು ಸ್ವಲ್ಪ ಮಟ್ಟಿಗಾದರೂ ತಡೆಯಬಹುದು. ಶಿಕ್ಷಕರು ಈ ಕೆಳಗಿನ ಸೂಚನೆಗಳಿಗೆ ಗಮನ ನೀಡುವುದು ಒಳ್ಳೆಯದು.

**1. ಸ್ವಾಭಾವಿಕವಾದ ಹಾಗೂ ಸಾಮಾನ್ಯವಾದ ಧ್ವನಿಯನ್ನೇ ಬಳಸಿ:**

ಶಿಕ್ಷಕರು ತಾವು ಸ್ವಾಭಾವಿಕವಾದ ಹಾಗೂ ಸಾಮಾನ್ಯವಾದ ಧ್ವನಿಯಲ್ಲಿ ಬೋಧಿಸುತ್ತಿದ್ದಾರಾ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು. ಪ್ರಾರಂಭದ ಮೊದಲ ಹಲವು ದಿನ ಅವರು ಉಪಯೋಗಿಸಿದ ಧ್ವನಿಯನ್ನು ಜ್ಞಾಪಿಸಿಕೊಂಡರೆ ಆಗ ತಿಳಿಯುತ್ತದೆ ಅವರಿಗೆ ಧ್ವನಿ ಏಕೆ ಆಗ ಬಿದ್ದುಹೋಗಿತ್ತು ಎಂದು. ವಿದ್ಯಾರ್ಥಿಗಳ ಗಮನ ಸೆಳೆಯಲು ಧ್ವನಿ ಎತ್ತರಿಸಿ ಮಾತನಾಡುವುದು ಸರಿಯಾದ ಮಾರ್ಗವಲ್ಲ. ಅದರಿಂದ ತರಗತಿಯಲ್ಲಿ ಉಂಟಾಗುವ ಒತ್ತಡ ಹಾಗೂ ತಲ್ಲಣ ಎಂದಿಗೂ ಒಳ್ಳೆಯದಲ್ಲ. ವಿದ್ಯಾರ್ಥಿಗಳೂ ಅದೇ ಜೋರಿನಲ್ಲಿ ಮಾತನಾಡಬಹುದು. ಆದ್ದರಿಂದ ಅಂತಹ ಕೂಗಾಟದ ಧ್ವನಿಯನ್ನು ಬಿಟ್ಟು ಸರಿಯಾದ ಧ್ವನಿಯಲ್ಲಿ ಮಾತನಾಡುವುದು ಒಳ್ಳೆಯದು. ಶಾಲೆಯ ಮಕ್ಕಳು ಸರಿಯಾಗಿ ಮಾತನಾಡಬೇಕಾದರೆ ಮೊದಲು ಶಿಕ್ಷಕರು ಸರಿಯಾಗಿ ಮಾತನಾಡಬೇಕು.

ಶಿಕ್ಷಕರು ತಮ್ಮ ಧ್ವನಿಯನ್ನು ಹೆಚ್ಚು–ಕಡಿಮೆ ಮಾಡುತ್ತಿರಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಕೆಲವು ವೇಳೆ ಆಜ್ಞೆಮಾಡಬೇಕಾಗುತ್ತದೆ, ಪ್ರಶ್ನೆ ಕೇಳುವಾಗ ನಿರೀಕ್ಷಿಸುವ ಉತ್ತರಕ್ಕನುಗುಣವಾಗಿ ಧ್ವನಿಯನ್ನು ಸೂಕ್ಷ್ಮಗೊಳಿಸಬೇಕಾಗುತ್ತದೆ, ಸಂಭಾಷಣೆಯ ಧ್ವನಿಯನ್ನು ಬಳಸಬೇಕಾಗುತ್ತದೆ.

**2. ಯಾವಾಗಲೂ ವಿದ್ಯಾರ್ಥಿಗಳು ನಿಶ್ಶಬ್ದವಾಗಿರುವಾಗ ಮಾತನಾಡಬೇಕು:**

ಶಿಕ್ಷಕರು ತರಗತಿಗೆ ಪ್ರವೇಶ ಮಾಡಿದ ಕೂಡಲೆ ವಿದ್ಯಾರ್ಥಿಗಳು ಮಾತನಾಡುವುದನ್ನು ನಿಲ್ಲಿಸುತ್ತಾರೆ. ಹಾಗೂ ಸ್ವಲ್ಪ ಸಮಯ ಗಲಾಟೆ ಮುಂದುವರೆಯಬಹುದು. ಅದೇ ರೀತಿ ಮಾತಿನಿಂದ ತರಗತಿಯಲ್ಲಿ ಗಲಾಟೆಯು ಕೆಲವು ಸಮಯದಲ್ಲಿ ಉಂಟಾಗುತ್ತದೆ. ಆಗ ಶಿಕ್ಷಕರು ಏನು ಮಾತನಾಡಿದರೂ ಪ್ರಯೋಜನವಿಲ್ಲ. ಅದು ಸರಿಯಾಗಿ ಕೇಳಿಸುವುದೂ ಇಲ್ಲ ಮತ್ತು ಧ್ವನಿ ಎತ್ತಿದರೆ ಸರಿಯಾಗಿರುವುದಿಲ್ಲ. ಆಗ ಶಿಕ್ಷಕರು ತಾಳ್ಮೆ ವಹಿಸಬೇಕು. ಸ್ವಲ್ಪ ಸುಮ್ಮನೆ ನಿಂತರೆ ನಿಶ್ಶಬ್ದ ಉಂಟಾಗುತ್ತದೆ ಆಮೇಲೆ ಮಾತನಾಡಬಹುದು.

**3. ಕೈ ಸೂಚನೆ ಮತ್ತು ಇತರ ಮಾತು ರಹಿತ ಸಂವಾದವನ್ನು ಉಪಯೋಗಿಸಿ:**

Digitised by Bharatavani, CIIL

ಈ ಬಗೆಯ ಸಂವಾದವೂ ಹಲವು ವೇಳೆ ಬಹಳ ಉಪಯೋಗಕ್ಕೆ ಬರುತ್ತದೆ. ಅವರ ಗಮನ ಕೇಂದ್ರೀಕೃತವಾಗಲು ಇಂತಹ ಶಬ್ದ ರಹಿತ ಸಂವಾದ ಉಪಯುಕ್ತವಾದದ್ದು. ಚಪ್ಪಾಳೆ ಬಾರಿಸುವುದು, ಕೈ ಮೇಲೆತ್ತಿ ಸನ್ನೆ ಮಾಡಿ ತಿಳಿಸುವುದು, ವಿದ್ಯಾರ್ಥಿಗಳೂ ಹಾಗೇ ಮಾಡಲು ಪ್ರೇರೇಪಿಸುವುದು ಮುಖ್ಯವಾದುದು.

**4. ನಡುವಳಿಕೆ ಪ್ರಕರಣಗಳಿಗೆ ಬೇಗ ಮತ್ತು ಬುದ್ಧಿವಂತಿಕೆಯಿಂದ ಪರಿಹಾರ ಒದಗಿಸಿ:**

ಶಿಕ್ಷಕರು ತಮ್ಮ ಮತ್ತು ತಮ್ಮ ವಿದ್ಯಾರ್ಥಿಗಳ ನಡುವಣ ಅಥವಾ ವಿದ್ಯಾರ್ಥಿಗಳ ನಡುವಣ ಮನಸ್ತಾಪ ಅಥವಾ ಯಾವುದೇ ವಿಧವಾದ ವ್ಯತ್ಯಾಸಗಳನ್ನು ತಕ್ಷಣವೇ ಸರಿಪಡಿಸಬೇಕು. ಅದನ್ನು ಮುಂದುವರೆಯಲು ಬಿಡಬಾರದು ಅಥವಾ ಮುಂದಕ್ಕೆ ಹಾಕಬಾರದು. ಹಾಗೇನಾದರೂ ಮುಂದಕ್ಕೆ ಹಾಕಿದರೆ ಒಂದು ಸಣ್ಣ ವಿಷಯ ದೊಡ್ಡಸಮಸ್ಯೆಯಾಗಿ ಬೆಳೆದು ಇಲ್ಲದ ತೊಂದರೆಯನ್ನುಂಟುಮಾಡಬಹುದು.

ಇಂತಹ ಘರ್ಷಣೆಗಳನ್ನು ಬುದ್ಧಿವಂತಿಕೆಯಿಂದ ನಿಭಾಯಿಸಬೇಕು. ಇತರರಿಂದ ದೂರ ಹೋಗಿ ಮಾತನಾಡುವುದು, ಸ್ನೇಹ ಪೂರ್ಣ ಪ್ರಶ್ನೆಗಳನ್ನು ಕೇಳಿ ಸಮಸ್ಯೆಯನ್ನು ತಿಳಿದುಕೊಂಡು ಪರಿಹಾರವನ್ನು ನೀಡಬೇಕು. ಕೋಪ ಇಲ್ಲದ ಮಾತಿಗೆ ವಿದ್ಯಾರ್ಥಿಗಳಾಗಲೀ ಯಾರೇ ಆಗಲಿ ಬೇಗ ಸುಮ್ಮನಾಗುತ್ತಾರೆ ಮತ್ತು ಆಡಿದ ಮಾತನ್ನು ನಂಬುತ್ತಾರೆ.

**5. ಯಾವಾಗಲೂ ಉತ್ತಮವಾಗಿ ಮತ್ತು ಆಸಕ್ತಿದಾಯಕವಾಗಿರುವಂತಹ ಪಾಠವನ್ನು ತಯಾರಿಸಿ.**

ಎಲ್ಲರಿಗೂ ತಿಳಿದಿರುವಂತೆ, ವಿದ್ಯಾರ್ಥಿಗಳಿಗಾಗಿ ಶಿಕ್ಷಕರು ಒಳ್ಳೆಯ ಪಾಠಯೋಜನೆಯನ್ನು ತಯಾರಿಸಿಕೊಳ್ಳದಿದ್ದರೆ, ವಿದ್ಯಾರ್ಥಿಗಳೇ ಶಿಕ್ಷಕರಿಗಾಗಿ ಒಂದು ಯೋಜನೆಯನ್ನು ಮಾಡುತ್ತಾರೆ. ಯಾವಾಗಲೂ ಪಾಠದ ತಯಾರಿ ಅವಧಿಗಿಂತಲೂ ಹೆಚ್ಚಾಗಿರಲಿ. ಸಮಯ ಸಾಕಾಗದೇ ಇದ್ದರೆ ಪರವಾಗಿಲ್ಲ. ಆದರೆ ಕೊನೆಯಲ್ಲಿ ಸಮಯ ಉಳಿದು, ಏನೂ ಕೆಲಸವಿಲ್ಲದೇ ಇರಬಾರದು.

ಪಾಠದಲ್ಲಿ ಹಲವು ಉತ್ತಮ ಉದಾಹರಣೆಗಳು ಮತ್ತು ಬೊಧನೋಪಕರಣಗಳು ಬಳಸಿದರೆ ಪಾಠ ಆಸಕ್ತಿದಾಯಕವಾಗಿರುತ್ತದೆ. ಇದರಿಂದ ಶಿಕ್ಷಕರ ಬೊಧನೆ ಸುಲಭವಾಗುವುದಲ್ಲದೆ, ವಿದ್ಯಾರ್ಥಿಗಳಿಗೆ ಪಾಠವು ಸುಲಭವಾಗಿ ಅರ್ಥವಾಗುತ್ತದೆ. ಇಂತಹ ವಾತಾವರಣದಲ್ಲಿ ತರಗತಿಯ ಅಶಿಸ್ತಿಗೆ ಅವಕಾಶವೇ ಇರುವುದಿಲ್ಲ. ಪಾಠವು ಆಸಕ್ತಿದಾಯಕವಾಗಿ ಪರಿಣಮಿಸುತ್ತದೆ. ಶಿಕ್ಷಕರಿಗೆ ಪಾಠ ಮುಗಿದಮೇಲೆ ಹೆಚ್ಚಿನ ತೃಪ್ತಿ ಉಂಟಾಗುತ್ತದೆ.

**– ಡಾ. ರಾಘವೇಂದ್ರರಾವ್ ಎಚ್.ಎಸ್**

## ತರಗತಿಯ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆ

ತಂತ್ರಜ್ಞಾನದ ವಿಕಾಸ ನಿರಂತರವಾಗಿ ಮತ್ತು ತ್ವರಿತಗತಿಯಲ್ಲಿ ಮುಂದುವರಿಯುತ್ತಿದೆ. ದಿನನಿತ್ಯ ತಂತ್ರಜ್ಞಾನದ ಹೊಸ ವಿಚಾರಗಳು ಮತ್ತು ಸಾಧನಗಳು ಸೃಷ್ಟಿಯಾಗುತ್ತಿವೆ. ತಂತ್ರಜ್ಞಾನ ನಮ್ಮ ಚಿಂತನೆ, ಕೆಲಸಮಾಡುವ ರೀತಿ ಮತ್ತು ಮನೋರಂಜನೆಯ ರೀತಿಗಳಲ್ಲಿ ಕ್ರಾಂತಿಕಾರಿ ಎನ್ನಬಹುದಾದ ಮಹತ್ತರವಾದ ಬದಲಾವಣೆಗಳನ್ನು ತಂದಿದೆ. ಕಂಪ್ಯೂಟರ್ ಮತ್ತು ಅಂತರ್‌ಜಾಲದ ಆವಿಷ್ಕಾರಗಳು ನಾವು ಜಗತ್ತಿನ ಯಾವುದೇ ಪ್ರದೇಶದ ವ್ಯಕ್ತಿಗಳೊಂದಿಗೆ ಸ್ಪರ್ಧಿಸುವಂತೆ ಮಾಡಿವೆ. ಈ ಬದಲಾವಣೆಗಳಿಂದಾಗಿ ಇಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಅತ್ಯಂತ ಭಿನ್ನವಾದ ಸಾಮಾಜಿಕ ಅನುಭವಗಳು ದೊರೆಯುವಂತಾಗಿದೆ. ತಂತ್ರಜ್ಞಾನದ ವಿಕಾಸವು ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆಯಾದ್ದರಿಂದ ಇದರ ಬಗೆಗೆ ನಿರಂತರ ಕಲಿಕೆಯೂ ಅನಿವಾರ್ಯವಾಗಿದೆ. ಈ ಹೊಸ ಬದಲಾವಣೆಗೆ ತಕ್ಕಂತೆ ಇಂದಿನ ಶಿಕ್ಷಣರಂಗದಲ್ಲಿಯೂ ಬದಲಾವಣೆಗಳಾಗುತ್ತಿದ್ದು ಅವುಗಳು ಅತ್ಯವಶ್ಯಕವಾಗಿವೆ.

ಬಹಳ ಹಿಂದಿನ ಕಾಲದಿಂದಲೂ ತರಗತಿಯ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆಯು ನಡೆಯುತ್ತಾ ಬಂದಿದೆ. ಹಿಂದೆ ಶಾಲಾ ತರಗತಿಗಳಲ್ಲಿ ಚಿತ್ರಪಟಗಳು, ಮಾದರಿಗಳು, ರೇಖಾ ಚಿತ್ರಗಳು ಇತ್ಯಾದಿಗಳನ್ನು ಬಳಸಲಾಗುತ್ತಿತ್ತು. ಮುಂದೆ ದೃಕ್–ಶ್ರವಣೋಪಕರಣಗಳನ್ನು ತರಗತಿ ಬೋಧನೆಯಲ್ಲಿ ಬಳಸಲಾಯಿತು. ತಂತ್ರಜ್ಞಾನದ ಅರ್ಥಪೂರ್ಣ ಸಂಯೋಜನೆ 20ನೇ ಶತಮಾನದ ಪ್ರಾರಂಭಿಕ ಭಾಗದಲ್ಲಿ ಅಮೇರಿಕಾದ ಸಾರ್ವಜನಿಕ ಶಾಲೆಗಳಲ್ಲಿ ಆಗಿದೆ ಎಂದು ಗುರುತಿಸಬಹುದಾಗಿದೆ. ದೃಕ್–ಶ್ರವಣ ಸಹಾಯಕಗಳಂತಹ ಜಾರು ಲಾಂದ್ರ, ಚಿತ್ರ ಸುರುಳಿ ಪ್ರಕ್ಷೇಪಕ, ಚಲನಚಿತ್ರ ಪ್ರಕ್ಷೇಪಕ, ವಾಕ್ ಚಲನಚಿತ್ರಗಳು, ರೇಡಿಯೋ, ಧ್ವನಿಮುದ್ರಕ, ಮೇಲೆ ಪ್ರಕ್ಷೇಪಕ, ದೂರದರ್ಶನ, ವೀಡಿಯೋ ಕ್ಯಾಸೆಟ್ ಮುದ್ರಕಗಳು, ಕಂಪ್ಯೂಟರ್, ಮೊಬೈಲ್, ಅಂತರ್‌ಜಾಲ ಇತ್ಯಾದಿಗಳ ಆವಿಷ್ಕಾರಗಳು ತರಗತಿಯ ಬೋಧನೆಯಲ್ಲಿ ಇವುಗಳ ಸಂಯೋಜನೆಗೆ ಕಾರಣವಾದವು.

**ತರಗತಿಯ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆಯ ಅರ್ಥ:**

ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆ ವಿಶಾಲವಾದ, ವ್ಯಾಪಕವಾದ ಪ್ರಕ್ರಿಯೆಯಾಗಿದ್ದು ಇದು ಹಲವಾರು ವೈವಿಧ್ಯಮಯ ತಂತ್ರಜ್ಞಾನದ ಸಾಧನಗಳ ಬಳಕೆ ಮತ್ತು ಆಚರಣೆಗಳನ್ನು ಒಳಗೊಳ್ಳುತ್ತದೆ. ಈ ಕ್ರಮ ಕೇವಲ ತಂತ್ರಜ್ಞಾನದ ಸಾಧನಗಳನ್ನು ಶಾಲೆಯಲ್ಲಿ ಹೊಂದುವುದಕ್ಕಿಂತ ಹೆಚ್ಚಾಗಿದೆ. ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆ ಎಂದರೆ ದಿನನಿತ್ಯದ ತರಗತಿಗಳಲ್ಲಿ ತಂತ್ರಜ್ಞಾನದ ಸಂಪನ್ಮೂಲಗಳು ಅಥವಾ ಸಾಧನಗಳಾದ ಜಾರುಚಿತ್ರ, ಚಿತ್ರಸುರುಳಿ, ಕಂಪ್ಯೂಟರ್, ದೂರದರ್ಶನವಲ್ಲದೆ ಮೊಬೈಲ್ ಸಾಧನಗಳಂತಹ ಸ್ಮಾರ್ಟ್ ಫೋನ್‌ಗಳು, ಟ್ಯಾಬ್ಲೆಟ್‌ಗಳು, ಜಾಲ ಕಾರ್ಯಗಳು, ಡಿಜಿಟಲ್ ಕ್ಯಾಮರ, ತಂತ್ರಾಂಶಗಳ ಅನ್ವಯಿಕೆ, ಅಂತರಜಾಲ ಇತ್ಯಾದಿಗಳನ್ನು

Digitised by Bharatavani, CIIL

ಅರ್ಥಪೂರ್ಣವಾಗಿ ಅಳವಡಿಸಿಕೊಂಡು ಬೋಧಿಸುವುದಾಗಿದೆ.

**ತರಗತಿಯ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆಯ ಮಹತ್ವ:**

ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಸಂಯೋಜನೆ ಹಲವಾರು ದೃಷ್ಟಿಗಳಿಂದ ಮಹತ್ವಪೂರ್ಣವಾಗಿದೆ. ಇದರ ಮಹತ್ವ ಹೀಗೆ ಸಮರ್ಥಿಸಬಹುದು.

- ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಸಾಧನಗಳ ಪರಿಣಾಮಕಾರಿ ಸಂಯೋಜನೆ ಕಲಿಕೆಯನ್ನು ಬಲಯುತವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುತ್ತದೆ.
- ಇದರಿಂದಾಗಿ ವಿದ್ಯಾರ್ಥಿಗಳು ಹೆಚ್ಚು ಕ್ರಿಯಾಶೀಲರಾಗಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.
- ಇದು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇತ್ತೀಚಿನ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಾಯಕ.
- ಅವಶ್ಯಕ ದತ್ತಾಂಶಗಳನ್ನು ಸಂಗ್ರಹಿಸಲು ಮತ್ತು ದಾಖಲಿಸಲು ಕೂಡ ಇದು ಉಪಯುಕ್ತವಾಗಿದೆ.
- ಜಗತ್ತಿನ ಎಲ್ಲೆಡೆಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪರಿಣಿತರು ಜೊತೆಗೂಡಿ ಕೆಲಸ ಮಾಡುವಂತೆ ಮಾಡುವುದು ಇದರಿಂದ ಸಾಧ್ಯವಾಗುತ್ತದೆ.
- ಅರ್ಥಪೂರ್ಣ ಕಲಿಕೆ ಮತ್ತು ವಿಶ್ವಾಸಾರ್ಹ ಮೌಲ್ಯ ಮಾಪನವನ್ನು ಇದರಿಂದ ಸಾಧ್ಯಗೊಳಿಸಬಹುದು.
- ವಿದ್ಯಾರ್ಥಿಗಳಿಗೆ ಹೊಸ ಜ್ಞಾನವನ್ನು ನೀಡಲು ಮತ್ತು ಆ ಜ್ಞಾನವನ್ನು ಅನ್ವಯಿಸಲು ತರಬೇತಿ ನೀಡಲು ಕೂಡ ಇದು ಸಹಾಯಕ.

**ತಂತ್ರಜ್ಞಾನ ಸಂಯೋಜನೆಯ ವಿಧಗಳು:**

ಕೆಲವೊಮ್ಮೆ ತಂತ್ರಜ್ಞಾನ ಕಲಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂದು ವರ್ಣಿಸುವುದು ಕಠಿಣ. ಏಕೆಂದರೆ ತಂತ್ರಜ್ಞಾನದ ಸಂಯೋಜನೆ ವ್ಯಾಪಕವಾದ ಕ್ಷೇತ್ರವಾಗಿದ್ದು, ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವಿಧ ಸಾಧನಗಳನ್ನು ವೈವಿಧ್ಯಮಯ ರೀತಿಯಲ್ಲಿ ಸಂಯೋಜಿಸಬಹುದಾದ ವ್ಯಾಪ್ತಿಯುಳ್ಳದ್ದಾಗಿದೆ. ತಂತ್ರಜ್ಞಾನ ಸಂಯೋಜನೆಯ ಕೆಲವು ವಿಧಗಳು ಇಂತಿವೆ.

- **ಆನ್‌ಲೈನ್ ಕಲಿಕೆ ಮತ್ತು ಸಮ್ಮಿಶ್ರಗೊಂಡ (Blended) ತರಗತಿಗಳು:** ಆನ್‌ಲೈನ್ ಕಲಿಕೆ ಶಿಕ್ಷಣದಲ್ಲಿ ವಿಶೇಷವಾಗಿ ಕಲಿಕೆಯಲ್ಲಿ ಕಂಪ್ಯೂಟರ್ ಮೂಲಕ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಸುವುದಾಗಿದ್ದು, ಇದನ್ನು ತರಗತಿ ಕಲಿಕೆಗಾಗಿ ಇತರ ಬೋಧನಾ ಕಲಿಕಾ ವಿಧಾನಗಳೊಂದಿಗೆ ಬಳಸಬಹುದಾಗಿದೆ. ಜಗತ್ತಿನಾದ್ಯಂತ ಕೆ–12 ಆನ್‌ಲೈನ್ ಕಲಿಕೆ ಪ್ರಾಮುಖ್ಯವನ್ನು ಪಡೆಯುತ್ತಿದೆ. ಅಮೇರಿಕದ ಕೆಲವು ಶಾಲೆಗಳು ಆನ್‌ಲೈನ್ ಕಲಿಕೆಗೆ ಸಂಬಂಧಿಸಿದಂತೆ ಪ್ಯಾಕೇಜುಗಳನ್ನು ಸಿದ್ಧಪಡಿಸುತ್ತಿವೆ. ಹಲವಾರು ಶಿಕ್ಷಕರು ಆನ್‌ಲೈನ್ ಮತ್ತು ಮುಖಾಮುಖಿ ಕಲಿಕೆಯನ್ನು ಸಂಯೋಜಿಸಿ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುತ್ತಿದ್ದಾರೆ.
- **ತಂತ್ರಜ್ಞಾನ ಆಧಾರಿತ ಪ್ರಾಯೋಜಿತ ಕಾರ್ಯ:** ಇದು ಪ್ರಾಯೋಜಿತ ಕಾರ್ಯದ ಪ್ರಾರಂಭದಿಂದ ಮುಕ್ತಾಯದವರೆಗೆ ತಂತ್ರಜ್ಞಾನ ಬಳಕೆಯ ಅಗತ್ಯವಿರುವ ಅಥವಾ ತಂತ್ರಜ್ಞಾನ ಆಧಾರಿತವಾದಂತಹ ಕಾರ್ಯವಾಗಿದೆ. ವಿದ್ಯಾರ್ಥಿ ನಿಯೋಜಿತ ಕಾರ್ಯವನ್ನು ನಿರ್ವಹಿಸಲು ತಂತ್ರಜ್ಞಾನವನ್ನು ಬಳಸುವುದು ಅನಿವಾರ್ಯವಾಗುತ್ತದೆ.
- **ಆಟ ಆಧಾರಿತ ಕಲಿಕೆ:** ಇದು ಕಂಪ್ಯೂಟರ್ ಆಟ ಅಥವಾ ಚಟುವಟಿಕೆಗಳ ಮೂಲಕ ಕಲಿಯುವುದಾಗಿದೆ.
- **ಮೊಬೈಲ್ ಮೂಲಕ ಕಲಿಕೆ:** ಮೊದಲು ತರಗತಿಯಲ್ಲಿ ಅಥವಾ ಕಲಿಕೆಗೆ ಅಡಚಣೆಯನ್ನು ಉಂಟುಮಾಡುವಂಥದ್ದು ಎಂದು ಪರಿಗಣಿಸಲಾದ ಮೊಬೈಲ್‌ಅನ್ನು ಕಲಿಕೆಗೆ ಅತ್ಯುತ್ತಮ ಸಾಧನವಾಗಿ ಬಳಸಲಾಗುತ್ತಿದೆ. ಮೊಬೈಲ್ ಅಂತರ್ಜಾಲದ ಲಭ್ಯತೆ ಪಡೆಯಬಹುದಾದಂತಹ ಸುಲಭವಾಗಿ ಎಲ್ಲೆಂದರಲ್ಲಿ ಕೊಂಡೊಯ್ಯಬಹುದಾದಂತಹ ಒಂದು ಚಿಕ್ಕ ಸಾಧನವಾಗಿದೆ. ಇದು ಟ್ಯಾಬ್ಲೆಟ್ಸ್, ಸ್ಮಾರ್ಟ್ ಫೋನ್‌ಗಳು, ಈ–ಪುಸ್ತಕ ವಾಚಕಗಳು, ಎಂಪಿ3 ಪ್ಲೇಯರ್‌ಗಳನ್ನು ಒಳಗೊಂಡಿರುತ್ತದೆ. ಇದನ್ನು ತರಗತಿ ಕಲಿಕೆಯಲ್ಲಿ ಅತ್ಯುತ್ತಮವಾಗಿ ಸಂಯೋಜಿಸಿಕೊಳ್ಳಬಹುದಾಗಿದೆ.
- **ಅನ್ಯೋನ್ಯ ಕ್ರಿಯೆ (ಪರಸ್ಪರ ಕ್ರಿಯೆ)ಯ ಬಿಳಿ ಹಲಗೆ ಮತ್ತು ವಿದ್ಯಾರ್ಥಿಗಳ ಅನುಕ್ರಿಯೆಯ ವ್ಯವಸ್ಥೆ:** ಅನ್ಯೋನ್ಯ ಕ್ರಿಯೆಯ ಬಿಳಿ ಹಲಗೆ ಕಂಪ್ಯೂಟರ್‌ಗೆ ಜೋಡಿಸಿದ ಅನ್ಯೋನ್ಯ ಕ್ರಿಯೆಯನ್ನು ಪ್ರದರ್ಶಿಸುವ ಒಂದು ದೊಡ್ಡ ಹಲಗೆಯಾಗಿದೆ. ಒಂದು ಪ್ರಕ್ಷೇಪಕ ಕಂಪ್ಯೂಟರ್‌ನ ಡೆಸ್ಕ್‌ಟಾಪ್ (Desktop) ನ್ನು ಹಲಗೆಯ ಮೇಲೆ ಪ್ರಕ್ಷೇಪಿಸುತ್ತದೆ. ಅನ್ಯೋನ್ಯ ಕ್ರಿಯೆಯ ಬಿಳಿ ಹಲಗೆಯನ್ನು ಬಳಸುವವನು ಪೆನ್ನು, ಬೆರಳು, ಸ್ಟೈಲಸ್ ಅಥವಾ ಇತರ ಸಾಧನದಿಂದ ಕಂಪ್ಯೂಟರ್‌ನ್ನು ನಿಯಂತ್ರಿಸುತ್ತಾನೆ. ಅಮೇರಿಕದ ಬಹಳಷ್ಟು ಶಾಲೆಗಳಲ್ಲಿ ಕಪ್ಪು ಹಲಗೆ ಮತ್ತು ಹಸಿರು ಹಲಗೆಗಳ ಬಳಕೆಯ ಕಾಲ ಮುಗಿದಿದ್ದು ಅನ್ಯೋನ್ಯ ಕ್ರಿಯೆಯ ಹಲಗೆಗಳು ಬಳಕೆಯಲ್ಲಿವೆ. ಇದರಲ್ಲಿ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳು, ಉತ್ತರಗಳು, ಪ್ರಶ್ನೆಗಳು ಮತ್ತು ಶಿಕ್ಷಕರ ಬೋಧನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ದಾಖಲಿಸಿಕೊಳ್ಳಬಹುದಾಗಿದ್ದು, ಬೇಕಾದಾಗ ಅನುಗತ ಚಟುವಟಿಕೆಗಳಿಗೂ ಅವಕಾಶವಿದೆ.
- **ಜಾಲ ಕ್ಷೇತ್ರಗಳು (Websites)**

ಸುಲಭವಾಗಿ ಅಂತರ್ಜಾಲದಲ್ಲಿ ತರಗತಿಯ ಬೋಧನೆ ಕಲಿಕೆಗಾಗಿ ಸಂಯೋಜಿಸಿ ಬಳಸಿಕೊಳ್ಳಬಹುದಾದ ಹಲವಾರು

Digitised by Bharatavani, CIIL

ಜಾಲ ಕ್ಷೇತ್ರಗಳಿವೆ. ಅಂತರ್ಜಾಲವು ಎಲ್ಲ ರೀತಿಯ ತರಗತಿಗಳಿಗೆ ಬಳಸಬಹುದಾದಂತಹ ವೈವಿಧ್ಯಮಯ ಮಾಹಿತಿ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಜಾಲ ಕ್ಷೇತ್ರಗಳಿಂದ ಕೂಡಿದೆ.

**ತಂತ್ರಜ್ಞಾನದ ಸಂಯೋಜನೆಗೆ ಚೌಕಟ್ಟು:**

ಡಾ. ರುಬೆನ್ ಪೆನ್‌ಡುರ (On Ruben Pendura) ರು ಸೃಷ್ಟಿಸಿದ ಮಾದರಿ ನಾವು ನಮ್ಮ ತರಗತಿಗಳಲ್ಲಿ ತಂತ್ರಜ್ಞಾನವನ್ನು ಹೇಗೆ ಸಂಯೋಜಿಸುತ್ತೇವೆ ಎಂಬುದನ್ನು ಪ್ರತಿಬಿಂಬಿಸುವ ಪ್ರಕ್ರಿಯೆಯನ್ನು ಮಾರ್ಗದರ್ಶಿಸುತ್ತದೆ.

ತಂತ್ರಜ್ಞಾನ ಸಂಯೋಜನೆಯ ಅಂತಿಮ ಗುರಿ ನಾವು ಹೇಗೆ ಬೋಧಿಸುತ್ತೇವೆ ಮತ್ತು ಕಲಿಯುತ್ತೇವೆ ಎಂಬುದನ್ನು ಸಂಪೂರ್ಣವಾಗಿ ಪುನಃ ವ್ಯಾಖ್ಯಾನಿಸುವುದಾಗಿದೆ. ಅವರು ನೀಡಿದ ಮಾದರಿಯನ್ನು ಇಲ್ಲಿ ನೀಡಲಾಗಿದೆ.

**ಪುನರ್ ವ್ಯಾಖ್ಯಾನ**

ತಂತ್ರಜ್ಞಾನ ಈ ಮೊದಲು ಗ್ರಹಿಸಿರದಂತಹ ನವೀನ ಕಾರ್ಯಗಳನ್ನು ಸೃಷ್ಟಿಸಲು ಅವಕಾಶ ನೀಡುತ್ತದೆ.

**ಸುಧಾರಿಸುವುದು**

ತಂತ್ರಜ್ಞಾನ ಮಹತ್ವಪೂರ್ಣ ಕಾರ್ಯಗಳನ್ನು ಪುನರ್ ವಿನ್ಯಾಸಗೊಳಿಸಲು ಅನುವು ಮಾಡಿಕೊಡುತ್ತದೆ.

**ವೃದ್ಧಿಪಡಿಸುವುದು**

ತಂತ್ರಜ್ಞಾನ ಬೋಧನಾ ಕಾರ್ಯವನ್ನು ಉತ್ತಮಪಡಿಸುವಲ್ಲಿ ನೇರ ಪರ್ಯಾಯ ಸಾಧನದಂತೆ ವರ್ತಿಸುತ್ತದೆ.

**ಪ್ರತಿನಿಧಿಸುವಿಕೆ**

ತಂತ್ರಜ್ಞಾನ ಬೋಧನಾ ಕಾರ್ಯನಿರ್ವಹಣೆಯಲ್ಲಿ ಬದಲಾವಣೆಯಾಗದಂತೆ ಪ್ರತಿಯಾದ ಇನ್ನೊಂದು ನೇರ ಸಾಧನದಂತೆ ವರ್ತಿಸುತ್ತದೆ.

**ತಂತ್ರಜ್ಞಾನ ಸಂಯೋಜನೆಯ ಹಂತಗಳು**

ಮೇರಿ ಬೆತ್ ಹರ್ಟ್ಜ್ (Meary Beth Hertz)ಳು ಶಾಲೆಗಳ ತರಗತಿಗಳಲ್ಲಿ ತಂತ್ರಜ್ಞಾನದ ಸಂಯೋಜನೆ ಹಲವು ಹಂತಗಳಲ್ಲಿ ನಡೆಯುತ್ತದೆ ಎಂಬುದನ್ನು ಅವಲೋಕಿಸಿದ್ದಾಳೆ. ಪ್ರಾರಂಭದಲ್ಲಿ ತಂತ್ರಜ್ಞಾನವನ್ನು ತರಗತಿಯಲ್ಲಿ ವಿರಳವಾಗಿ ಬಳಸಲಾಗುತ್ತದೆ ಅಥವಾ ತಂತ್ರಜ್ಞಾನದ ಲಭ್ಯತೆ ವಿರಳವಾಗಿರುತ್ತದೆ. ಅಂದರೆ ವಿದ್ಯಾರ್ಥಿಗಳು ನಿಯೋಜಿತ ಕಾರ್ಯ ಅಥವಾ ತರಗತಿಯ ಇತರ ಕಲಿಕಾ ಚಟುವಟಿಕೆಗಳನ್ನು ಪೂರ್ಣಗೊಳಿಸಲು ವಿರಳವಾಗಿ ಬಳಸುತ್ತಾರೆ. ನಂತರದಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ತರಗತಿಗಿಂತ ಪ್ರಯೋಗ ಶಾಲೆಯಲ್ಲಿ ಕೆಲವೊಮ್ಮೆ ಬಳಸುತ್ತಾರೆ. ಮುಂದಿನ ಹಂತದಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ತರಗತಿಯಲ್ಲೇ ನಿರಾಳವಾಗಿ ಸಾಕಷ್ಟು ನಿಯಮಿತವಾಗಿ ಬಳಸುತ್ತಾರೆ. ವಿದ್ಯಾರ್ಥಿಗಳು ತಂತ್ರಜ್ಞಾನದ ವಿವಿಧ ಸಾಧನಗಳನ್ನು ನಿಯೋಜಿತ ಕಾರ್ಯವನ್ನು ಸೃಷ್ಟಿಸಲು, ವಿಷಯ ವಸ್ತುವಿನ ಗ್ರಹಿಕೆಯನ್ನು ಪ್ರದರ್ಶಿಸಲು ಸಾಕಷ್ಟು ಬಾರಿ ಬಳಸುತ್ತಾರೆ. ಕೊನೆಯ ಹಂತದಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನದ ವಿವಿಧ ಸಾಧನಗಳನ್ನು ತರಗತಿಯ ಎಲ್ಲಾ ರೀತಿಯ ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿಷಯ ವಸ್ತುವಿನ ಆಳವಾದ ಜ್ಞಾನವನ್ನು ಪ್ರದರ್ಶಿಸಲು ದಿನನಿತ್ಯ ಬಳಸುತ್ತಾರೆ. ಅಂದರೆ ತಂತ್ರಜ್ಞಾನದ ಬಳಕೆ ಬೋಧನೆ–ಕಲಿಕೆ ಪ್ರಕ್ರಿಯೆಯ ಭಾಗವೇ ಆಗಿಬಿಡುತ್ತದೆ.

21ನೇ ಶತಮಾನದ ತರಗತಿಗಳಿಗೆ ತಂತ್ರಜ್ಞಾನದ ಸಂಯೋಜನೆ ಒಂದು ಪ್ರಮುಖ ತಂತ್ರವಾಗಿದೆ. ಇದು ವ್ಯಕ್ತಿಕೃತ ಕಲಿಕೆ, ಸಹಕಾರ ಕಲಿಕೆ ಮತ್ತು ಭವಿಷ್ಯದ ಕಲಿಕೆಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುತ್ತದೆ. ತಂತ್ರಜ್ಞಾನ ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿದೆ. ಅದರ ಅನ್ವಯಿಕೆಯ ಗುಣಮಟ್ಟದಲ್ಲಿ ಮತ್ತು ಬಳಕೆಗೆ ಸಂಬಂಧಿಸಿದಂತೆಯು ವ್ಯಾಪಕವಾಗಿ ವಿಕಾಸ ಉಂಟಾಗುತ್ತಿದೆ. ತಂತ್ರಜ್ಞಾನದ ಸಾಧನಗಳ ಬಳಕೆ ತರಗತಿಯ ಬೋಧನೆ ಕಲಿಕೆ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಅಂದರೆ ಶಿಕ್ಷಕರ ಬೋಧನೆ ಮತ್ತು ವಿದ್ಯಾರ್ಥಿಗಳ ಕಲಿಕೆಗೆ ಸಂಬಂಧಿಸಿದಂತೆ ಇರಬೇಕು. ಇವುಗಳು ಸುಲಭವಾಗಿ ದೊರೆಯುವಂತೆ ಮತ್ತು ಪಠ್ಯಕ್ರಮದ ಗುರಿಗಳನ್ನು ಸಾಧಿಸುವುದಕ್ಕೆ ಸಹಾಯಕವಾಗುವಂತೆ ಇರಬೇಕು. ತಂತ್ರಜ್ಞಾನದ ಸಂಯೋಜನೆಯಿಂದ ಉಂಟಾಗುವ ಬದಲಾವಣೆಯನ್ನು ಶಿಕ್ಷಕರು ಸ್ವೀಕರಿಸುವಂತಿದ್ದರೆ ತರಗತಿಯ ಬೋಧನೆ–ಕಲಿಕೆಯಲ್ಲಿ ತಂತ್ರಜ್ಞಾನದ ಸಂಯೋಜನೆ ಯಶಸ್ವಿಯಾಗುವ ಸಾಧ್ಯತೆಗಳು ಹೆಚ್ಚು.

ತರಗತಿಯ ಬೋಧನೆಯಲ್ಲಿ ಕಲಿಕೆಯ ನಾಲ್ಕು ಪ್ರಮುಖ ಅಂಶಗಳಾದ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವಿಕೆ, ಸಮೂಹದಲ್ಲಿ ಪಾಲ್ಗೊಳ್ಳುವಿಕೆ, ಹೆಚ್ಚಿನ ಅನ್ಯೋನ್ಯ ಕ್ರಿಯೆ ಮತ್ತು ಪುಷ್ಟೀಕರಣ, ಮತ್ತು ನೈಜ ಜಗತ್ತಿನ ಪ್ರಾವೀಣ್ಯತೆ ಹೊಂದಿದ (ಪರಿಣಿತ) ವ್ಯಕ್ತಿಗಳೊಂದಿಗೆ ಸಂಪರ್ಕ ಇವುಗಳನ್ನು ಸಾಧಿಸುವಂತಿದ್ದರೆ ತರಗತಿಯಲ್ಲಿನ ತಂತ್ರಜ್ಞಾನದ ಸಂಯೋಜನೆ ಪರಿಣಾಮಕಾರಿಯಾಗುತ್ತದೆ.

– ಡಾ. ಶೈಲಜಾ ಪಿ. ಶಾನಭಾಗ್

Digitised by Bharatavani, CIIL

## ತರಗತಿಯ ಸಂವಹನ

ಸಂವಹನ ಎಂಬ ಪದವನ್ನು ಆಂಗ್ಲ ಭಾಷೆಯ 'ಕಮ್ಯೂನಸ್' ಪದಕ್ಕೆ ಅನುಗುಣವಾಗಿ ಬಳಸಲಾಗುತ್ತಿದೆ. ಕಮ್ಯುನಿಕೇಷನ್ ಎಂಬ ಪದವು ಲ್ಯಾಟೀನ್ ಪದವಾದ 'ಕಮ್ಯುನಿಕೊ' ಎಂಬ ಪದದಿಂದ ಬಂದಿದೆ. ಕಮ್ಯುನಿಕೊ ಎಂದರೆ ಸಾಮಾನ್ಯವಾದುದು ಎಂದರ್ಥ. ಕೇಳುವವ ಮತ್ತು ಹೇಳುವವರಿಬ್ಬರೂ ತಮಗೆ ತಿಳಿಯುವಂತಹ ಸಾಮಾನ್ಯ ಭಾಷೆಯನ್ನು ಬಳಸಿಕೊಂಡು ವಿಚಾರ, ಭಾವನೆ ಅಥವಾ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುವುದಾಗಿದೆ.




ಸಂವಹನ ಪ್ರಕ್ರಿಯೆಯು ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಡುವಿನ ಸೌಹಾರ್ದ ಸಂಬಂಧವನ್ನು ಬಲಪಡಿಸುತ್ತದೆ. ಇದು ವಿದ್ಯಾರ್ಥಿಗಳ ಪರಿಣಾಮಕಾರಿ ಕಲಿಕೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಸಂವಹನ ಪ್ರಕ್ರಿಯೆಯಲ್ಲಿ ಮಾಹಿತಿಯನ್ನು ಕಳುಹಿಸುವವರು ಹಾಗೂ ಸ್ವೀಕರಿಸುವವರು ಶಿಕ್ಷಕ ಅಥವಾ ವಿದ್ಯಾರ್ಥಿಯಾಗಿರಬಹುದು. ಮಾಹಿತಿಯನ್ನು ಕಳುಹಿಸುವವರು ಮಾಹಿತಿಯನ್ನು ಸಂಕೇತಿಸಿ ಸೂಕ್ತ ಮಾಧ್ಯಮದಲ್ಲಿ ರವಾನಿಸುತ್ತಾರೆ. ಹೀಗೆ ರವಾನಿಸಿದ ಮಾಹಿತಿಯನ್ನು ಸ್ವೀಕರಿಸುವವರು ವಿಸಂಕೇತಿಸಿ ಅರ್ಥೈಸಿಕೊಳ್ಳುತ್ತಾರೆ. ಹೀಗೆ ಪಡೆದ ಮಾಹಿತಿಗೆ ಅನುಸಾರವಾಗಿ ಹಿಮ್ಮಾಹಿತಿಯನ್ನು ನೀಡುತ್ತಾರೆ. ಈ ಪ್ರಕ್ರಿಯೆಯು ಒಂದು ಚಕ್ರದಂತೆ ಪುನಃ ಪುನಃ ನಡೆಯುವುದನ್ನು ಕೆಳಗಿನ ಚಿತ್ರದಿಂದ ಅರ್ಥೈಸಿಕೊಳ್ಳಬಹುದು.

ತರಗತಿಯ ಸಂವಹನ ಪ್ರಕ್ರಿಯೆಯಲ್ಲಿ ಕಂಡುಬರುವ ಪ್ರಮುಖ ಅಂಶಗಳೆಂದರೆ– ಕಳುಹಿಸುವವ, ಸ್ವೀಕರಿಸುವವ, ಮಾಧ್ಯಮ, ಮಾಹಿತಿ, ಹಿಮ್ಮಾಹಿತಿ ಮತ್ತು ಕಂದಕಗಳು/ಅಡಚಣೆಗಳು.

1. **ಕಳುಹಿಸುವವ:** ಮಹಿತಿಯನ್ನು ಸರಿಯಾಗಿ ಸಂಕೇತಿಸಿ ರವಾನಿಸುವವರನ್ನು ಕಳುಹಿಸುವವ ಎನ್ನುತ್ತಾರೆ. ಯಾರಿಗೆ, ಏನನ್ನು, ಹೇಗೆ ಕಳುಹಿಸಬೇಕು ಎಂಬುದನ್ನು ಸರಿಯಾಗಿ ಸಂಕೇತಿಸಿ ರವಾನಿಸಬೇಕು. ಸಂವಹನಕ್ಕೆ ಪ್ರೇರಣೆ ಇವರಿಂದಲೇ ಪ್ರಾರಂಭವಾಗುತ್ತದೆ. ಉದಾಹರಣೆಗೆ– ಶಿಕ್ಷಕರು ತರಗತಿಯಲ್ಲಿ ಸಂವಹನ ಮಾಡುವಾಗ ಪಠ್ಯ ವಿಷಯವನ್ನು ವಿದ್ಯಾರ್ಥಿಗಳ ಮನೋಜ್ಞಾನಕ್ಕೆ ಅನುಗುಣವಾಗಿ ಸರಳವಾದ ಭಾಷೆಯಲ್ಲಿ ಮಾಹಿತಿಯನ್ನು ರವಾನಿಸುತ್ತಾರೆ. ತರಗತಿಯಲ್ಲಿ ಮಾಹಿತಿಯನ್ನು ಕಳುಹಿಸುವವರು ಶಿಕ್ಷಕ ಅಥವಾ ವಿದ್ಯಾರ್ಥಿಯಾಗಿರಬಹುದು.

2. **ಮಾಹಿತಿ:** ಕಳುಹಿಸುವವ ಸಂವಹನ ಕಾರ್ಯಕ್ಕೆ ಬಳಸುವ ವಿಷಯವನ್ನು ಮಾಹಿತಿ ಎನ್ನುತ್ತೇವೆ. ಸಂವಹನದ ಮಾಹಿತಿಯು ಉತ್ತಮ ವಿಷಯವನ್ನು ಒಳಗೊಂಡಿರಬೇಕು. ಕಳುಹಿಸುವವರಲ್ಲಿರುವ ಜ್ಞಾನ, ಆಲೋಚನೆ, ಅಭಿಪ್ರಾಯ ಅಥವಾ ಭಾವನೆ ಯಾವುದಾದರೂ ಮಾಹಿತಿ ಆಗಿರಬಹುದು. ತರಗತಿಯಲ್ಲಿ ಶಿಕ್ಷಕರು ರವಾನಿಸುವ ಮಾಹಿತಿಯು ಸೃಜನಾತ್ಮಕವಾಗಿ ಮತ್ತು ಸರಳವಾಗಿರಬೇಕು. ಮಾಹಿತಿ ಕಳುಹಿಸುವವರು ಯಾವ ವಿಷಯವನ್ನು ಎಷ್ಟರ ಮಟ್ಟಿಗೆ ಕ್ರಮಬದ್ಧವಾಗಿ ಹೇಳಬೇಕು ಎಂಬುದನ್ನು ತಿಳಿದಿರಬೇಕು. ಶಿಕ್ಷಕರು ವಿದ್ಯಾರ್ಥಿಗಳ ಮನೋಜ್ಞಾನಕ್ಕೆ ಅನುಗುಣವಾಗಿ ಮಾಹಿತಿಯನ್ನು ರವಾನಿಸಬೇಕು.

3. **ಮಾಧ್ಯಮ:** ಸಂವಹನ ಪ್ರಕ್ರಿಯೆಯಲ್ಲಿ ಮಾಧ್ಯಮಗಳನ್ನು ಶಾಬ್ದಿಕ ಮತ್ತು ಅಶಾಬ್ದಿಕ ಮಾಧ್ಯಮಗಳಾಗಿ ವಿಂಗಡಿಸಬಹುದು. ಕೇವಲ ಭಾಷೆಯಿಂದಲೇ ಸಂವಹನ ಪ್ರಕ್ರಿಯೆ ನಡೆದರೆ ಅದನ್ನು ಶಾಬ್ದಿಕ ಸಂವಹನ ಎನ್ನುತ್ತಾರೆ. ಭಾಷೆಯನ್ನು ಹೊರತುಪಡಿಸಿದ ಮುಖಭಾವ, ಹಾವಭಾವ, ಚಲನವಲನ, ಕಣ್ಣಿನಭಾಷೆ, ಕೈಚರ್ಯೆ ಮೊದಲಾದವುಗಳ ಮೂಲಕ ನಡೆಯುವ ಪ್ರಕ್ರಿಯೆಯನ್ನು ಅಶಾಬ್ದಿಕ ಸಂವಹನ ಎನ್ನುತ್ತಾರೆ. ಮಾಹಿತಿಯನ್ನು ಕಳುಹಿಸುವವರು ಸಂದೇಶವನ್ನು ಸಂಜ್ಞೆ, ಶಬ್ದ, ಬರವಣಿಗೆ, ಚಿತ್ರ ಮೊದಲಾದ ಸಂಕೇತಗಳ ಮೂಲಕ ರವಾನಿಸುತ್ತಾರೆ. ಹೀಗೆ ರವಾನಿಸಿದ ಸಂಕೇತಗಳನ್ನು ಸ್ವೀಕರಿಸುವವರು ವಿಸಂಕೇತಿಸಿ ಅರ್ಥೈಸಿಕೊಳ್ಳುತ್ತಾರೆ.

4. **ಸ್ವೀಕರಿಸುವವ:** ಕಳುಹಿಸುವವರು ಸಂಕೇತಿಸಿ ರವಾನಿಸಿದ ಮಾಹಿತಿಯನ್ನು ವಿಸಂಕೇತಿಸಿ ಅರ್ಥೈಸಿಕೊಳ್ಳುವವರನ್ನು ಸ್ವೀಕರಿಸುವವರು ಎನ್ನುತ್ತಾರೆ. ತರಗತಿಯಲ್ಲಿನ ಸಂವಹನ ಪ್ರಕ್ರಿಯೆಯಲ್ಲಿ ಶಿಕ್ಷಕರು ಸಂಕೇತಿಸಿ ರವಾನಿಸಿದ ಮಾಹಿತಿಯನ್ನು ವಿದ್ಯಾರ್ಥಿಗಳು ವಿಸಂಕೇತಿಸಿ ಅರ್ಥೈಸಿಕೊಳ್ಳುತ್ತಾರೆ. ಸ್ವೀಕರಿಸುವವರ ಮನಃಸ್ಥಿತಿ, ಆಸಕ್ತಿ, ಸಮೂಹದ ವರ್ತನೆ, ಪುನರ್ಬಲನ, ಕಲಿಕಾ ಪರಿಸರ ಇನ್ನಿತರ ಅಂಶಗಳು ಮಾಹಿತಿಯನ್ನು ವಿಸಂಕೇತಿಸುವಲ್ಲಿ

Digitised by Bharatavani, CIIL

ಪ್ರಭಾವ ಬೀರುತ್ತವೆ. ತರಗತಿಯಲ್ಲಿ ಮಾಹಿತಿಯನ್ನು ಸ್ವೀಕರಿಸುವವರು ಶಿಕ್ಷಕ ಅಥವಾ ವಿದ್ಯಾರ್ಥಿಯಾಗಿರಬಹುದು. ಸ್ವೀಕರಿಸುವವರು ಮಾಹಿತಿಯನ್ನು ವಿಸಂಕೇತಿಸುವಾಗ ಮುಕ್ತ ಮನಸ್ಸಿನಿಂದ ಸಂವಹನದಲ್ಲಿ ಭಾಗವಹಿಸಿದಾಗ ಕಳುಹಿಸುವವರ ಜೊತೆಯಲ್ಲಿ ಉತ್ತಮ ಸಂವಹನ ನಡೆಯಲು ಸಾಧ್ಯವಾಗುತ್ತದೆ.

5. **ಹಿಮ್ಮಾಹಿತಿ:** ಸ್ವೀಕರಿಸುವವರು ವಿಸಂಕೇತಿಸಿ ಅರ್ಥೈಸಿಕೊಂಡ ಸ್ವೀಕೃತ ಮಾಹಿತಿಗೆ ಅನುಗುಣವಾಗಿ ಸಂದೇಶ ಕಳುಹಿಸುವವರಿಗೆ ಹಿಂತಿರುಗಿಸುವ ಮಾಹಿತಿಯನ್ನು ಹಿಮ್ಮಾಹಿತಿ ಎನ್ನುತ್ತಾರೆ. ಶಿಕ್ಷಕರು ಸಂಕೇತಿಸಿ ರವಾನಿಸಿದ ಮಾಹಿತಿಯನ್ನು ವಿದ್ಯಾರ್ಥಿಗಳು ವಿಸಂಕೇತಿಸಿ ಅರ್ಥೈಸಿಕೊಂಡು ಹಿಮ್ಮಾಹಿತಿಯನ್ನು ನೀಡುತ್ತಾರೆ. ಹಿಮ್ಮಾಹಿತಿಯನ್ನು ನೀಡುವವರು ಶಿಕ್ಷಕ ಅಥವಾ ವಿದ್ಯಾರ್ಥಿಯಾಗಿರಬಹುದು. ಸ್ವೀಕರಿಸುವವರು ಹಿಂತಿರುಗಿಸುವ ಹಿಮ್ಮಾಹಿತಿಯು ಸ್ಪಷ್ಟತೆಯಿಂದ ಕೂಡಿರಬೇಕು.

6. **ಕಂದಕಗಳು/ಅಡೆತಡೆಗಳು:** ಸಂವಹನ ಪ್ರಕ್ರಿಯೆಯಲ್ಲಿ ಮಾಹಿತಿಯನ್ನು ರವಾನಿಸುವಾಗ ಮತ್ತು ಸ್ವೀಕರಿಸುವಾಗ ಮಾಧ್ಯಮದಲ್ಲಿ ಏರ್ಪಡುವ ಅಂತರಗಳನ್ನು ಕಂದಕಗಳು/ಅಡೆತಡೆಗಳು ಎನ್ನುತ್ತೇವೆ.

ತರಗತಿಯಲ್ಲಿ ಶಿಕ್ಷಕರು ಹೆಚ್ಚಾಗಿ ಶಾಬ್ದಿಕ ಸಂವಹನದಲ್ಲಿ ಕಾರ್ಯನಿರತರಾಗಿರುತ್ತಾರೆ. ಹೇಗೆ ಬಳಸುವ ಶಾಬ್ದಿಕ ಸಂವಹನದಲ್ಲಿ ಹೆಚ್ಚು ಮೌಖಿಕವಾಗಿ ಸಂವಹನ ಮಾಡಿದರೆ ಅವಶ್ಯಕತೆಗೆ ಅನುಗುಣವಾಗಿ ಲಿಖಿತ ಸಂವಹನವನ್ನು ಬಳಸುತ್ತಾರೆ. ಸಂಶೋಧನೆಯ ಮೂಲಕ ತಿಳಿದಿರುವುದೇನೆಂದರೆ ಅಶಾಬ್ದಿಕ ಸಂವಹನದಿಂದ ಶೇಕಡ 55% ಅರ್ಥೈಸಿಕೊಂಡರೆ 47% ಮೌಖಿಕ ಸಂವಹನದಿಂದ ಅರ್ಥವಾಗುವುದು. ಹಾಗಿದ್ದರೂ ತರಗತಿ ಸಂವಹನದಲ್ಲಿ ಹೆಚ್ಚು ಮೌಖಿಕ ಸಂವಹನದಲ್ಲಿ ಪಾಲ್ಗೊಂಡು ಸ್ವಲ್ಪ ಲಿಖಿತ ಸಂವಹನದಲ್ಲಿ ಭಾಗಿಯಾಗಿ ಅಶಾಬ್ದಿಕ ಸಂವಹನವನ್ನು ಮಿತವಾಗಿ ಬಳಸುವುದರಿಂದ ಸಂವಹನವು ಹೆಚ್ಚು ಪರಿಣಾಮಕಾರಿಯಾಗಲಾರದು.

ತರಗತಿಯ ಶಿಕ್ಷಕರು ಹೆಚ್ಚು ವಿವರಣೆಯನ್ನು ನೀಡುತ್ತಾ ಕಡಿಮೆ ಪ್ರಶ್ನೆಗಳನ್ನು ಕೇಳುತ್ತಿದ್ದರೆ ತರಗತಿಯ ಸಂವಹನವು ಹೆಚ್ಚು ನೀರಸವಾಗಿರುತ್ತದೆ. ಹೆಚ್ಚು ಸರಳವಾದ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳನ್ನು ಪಠ್ಯ ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶ ನೀಡಿದರೆ ಕಲಿಕೆಯು ಪರಿಣಾಮಕಾರಿಯಾಗಿ ಸಾಗುವುದು. ಶಿಕ್ಷಕರು ಪಠ್ಯ ವಿಷಯಗಳನ್ನು ಸರಳದಿಂದ ಸಂಕೀರ್ಣದೆಡೆಗೆ ತಿಳಿಸುವಂತಿರಬೇಕು.

– ಶ್ರೀನಿವಾಸ ಕೆ.ಎಸ್.

## ತಾತ್ವಿಕ ವಿಶ್ಲೇಷಣೆ

ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ಮತ್ತು ವಿಚಾರಗಳು ಇತರೆ ಅಧ್ಯಯನ ವಿಷಯಗಳಂತಲ್ಲದೆ ವಿವಿಧ ಸ್ವರೂಪವುಳ್ಳವಾಗಿರುತ್ತವೆ, ವಿಶಿಷ್ಟವಾಗಿರುತ್ತವೆ. ಕೆಲವಂತೂ ಅತ್ಯಂತ ವಿಭಿನ್ನವಾಗಿದ್ದು, ಅವುಗಳನ್ನು ವಿಶ್ಲೇಷಿಸಿ, ಪರಿಶೀಲಿಸುವುದರ ಮೂಲಕ ಮಾತ್ರ ಅರ್ಥ ಮಾಡಿಕೊಳ್ಳಬಹುದಾಗಿರುತ್ತದೆ. ಯಾವುದೇ ಜ್ಞಾನಶಾಖೆಯಲ್ಲಾಗಲೀ ಜ್ಞಾನಾರ್ಜನೆ, ಜ್ಞಾನ ಪ್ರತಿಪಾದನೆ ಬಹುತೇಕವಾಗಿ ಪರಸ್ಪರ ಸ್ಪಷ್ಟ ವಿಚಾರ ವಿನಿಮಯದಿಂದ ಸಾಧ್ಯವಾಗುತ್ತದೆ. ಈ ವಿಚಾರ ವಿನಿಮಯದಲ್ಲಿ ಸ್ಪಷ್ಟತೆ ಉಂಟಾಗುವುದು ಬಳಸುವ ಭಾಷೆಯ ಸ್ಪಷ್ಟತೆಯಿಂದ. ಯಾವುದೇ ಭಾಷೆಯಲ್ಲಿ ನಿರೂಪಿತವಾಗಿರುವ ಹೇಳಿಕೆ ಸ್ಪಷ್ಟವಾಗಬೇಕಾದರೆ, ಆ ಹೇಳಿಕೆಯಲ್ಲಿ ಅಡಗಿರುವ ಪರಿಕಲ್ಪನೆಗಳ ಸ್ಪಷ್ಟ ಅರಿವು ಅಗತ್ಯ. ಸಾಧನೆ, ಕೌಶಲ, ಬುದ್ಧಿಶಕ್ತಿ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ವಿಶೇಷ ಶಿಕ್ಷಣ, ಸರ್ವರಿಗೂ ಶಿಕ್ಷಣ ಇತ್ಯಾದಿ ಶೈಕ್ಷಣಿಕ ಪರಿಕಲ್ಪನೆಗಳನ್ನು/ಸಿದ್ಧಾಂತಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ತತ್ವಶಾಸ್ತ್ರದಲ್ಲಿ ಅಡಗಿರುವ ವಿಧಾನಗಳನ್ನು ಅಳವಡಿಸಿ ವಿಶ್ಲೇಷಿಸಬೇಕಾಗುತ್ತದೆ. ಅಂದರೆ ತಾತ್ವಿಕ ವಿಶ್ಲೇಷಣೆಗೆ (Philosophical Analysis) ಒಳಪಡಿಸಬೇಕಾಗುತ್ತದೆ. ಈ ರೀತಿಯ ವಿಶ್ಲೇಷಣೆಯಿಂದ ಪರಿಕಲ್ಪನೆಗಳ ನಿಖರವಾದ, ಸ್ಪಷ್ಟವಾದ, ಅರ್ಥ ಉಂಟಾಗುವುದಲ್ಲದೆ ಶೈಕ್ಷಣಿಕ ಸಿದ್ಧಾಂತಗಳ ಸಿಂಧುತ್ವ ಹಾಗೂ ಸಮರ್ಥನೆಗಳನ್ನು ದೃಢಪಡಿಸಿಕೊಳ್ಳಲು ಸಹಾಯಕವಾಗುತ್ತದೆ. ಜೊತೆಗೆ ಶಿಕ್ಷಣ ನೀಡುವಲ್ಲಿ ನಾವು ಯಾವುದರೆಡೆಗೆ ಸಾಗುತ್ತಿದ್ದೇವೆ. ನಿರ್ದಿಷ್ಟ ಗುರಿ ಮುಟ್ಟಲು ಏನು ಮಾಡಬೇಕಾಗುತ್ತದೆ ಎಂಬುದರ ಬಗೆಗೆ ಸ್ಪಷ್ಟ ಅರಿವುಂಟಾಗುತ್ತದೆ. ಅಂದರೆ, ಶಿಕ್ಷಣಕ್ಕೆ ಸ್ಪಷ್ಟ ನಿರ್ದೇಶನ ದೊರೆಯುತ್ತದೆ. ತಾತ್ವಿಕ ವಿಶ್ಲೇಷಣೆ ಬಗೆಗೆ ವಿಚಾರ ಮಾಡುವ ಮೊದಲು ವಿಶ್ಲೇಷಣಾತ್ಮಕ ತತ್ವಶಾಸ್ತ್ರ (Analytical Philosophy)ದ ಬಗೆಗೆ ತಿಳಿಯುವುದು ಅಗತ್ಯವಾಗಿದೆ.

ಸಾಂಪ್ರದಾಯಕ ತತ್ವಶಾಸ್ತ್ರ ಪ್ರಕೃತಿ, ಮಾನವ ಸ್ವರೂಪ ಮತ್ತು ಪ್ರಕೃತಿಯೊಂದಿಗೆ ಅವನ ಸಂಬಂಧ, ಮನಸ್ಸು ಮತ್ತು ಆತ್ಮದ ನಡುವಿನ ಸಂಬಂಧ, ದೇವರ ಅಸ್ತಿತ್ವ, ಸತ್ಯ, ಸೌಂದರ್ಯ, ಧರ್ಮ ಎಂದರೇನು? ಆತ್ಮ, ಪರಮಾತ್ಮ ಎಂದರೇನು? ಜ್ಞಾನ ಹೇಗೆ ಉಂಟಾಗುತ್ತದೆ? ಈ ಲೋಕ ಸತ್ಯವೇ? ಇತ್ಯಾದಿ ಪ್ರಶ್ನೆಗಳನ್ನೆತ್ತಿ ಉತ್ತರ ಹುಡುಕುವ ಪ್ರಯತ್ನದಲ್ಲಿ ಮುಂದೆ ಸಾಗಿತ್ತು. ಈ ಚಿಂತನಾತ್ಮಕ ಪ್ರಯತ್ನದ ಫಲವಾಗಿ ಅನೇಕ ಸಿದ್ಧಾಂತಗಳು, ಪಂಥಗಳು ಹುಟ್ಟಿಕೊಂಡವು. ಇನ್ನೂ ಮುಂದುವರಿದು ಮಾನವ ಆಲೋಚನೆಗಳು ಹಾಗೂ ಕ್ರಿಯೆಗಳಿಗೆ ಮಾನಕಗಳನ್ನು ಗುರುತಿಸಿ ಧ್ಯೇಯೋದ್ದೇಶ ರೂಪಿಸುವ ಪ್ರಯತ್ನ ನಡೆಸಲಾಯಿತು. ಸುಮಾರು 20ನೇ ಶತಮಾನದ ಮಧ್ಯದಲ್ಲಿ ವಿಶ್ಲೇಷಣಾತ್ಮಕ ತತ್ವಜ್ಞಾನಿಗಳು ತಲೆಯೆತ್ತಿ ತತ್ವಶಾಸ್ತ್ರದ ಸಾಂಪ್ರದಾಯಕ ಪಾತ್ರವನ್ನು ಪ್ರಶ್ನಿಸುವ ಮೂಲಕ ತತ್ವಶಾಸ್ತ್ರದ ಇತಿಹಾಸದಲ್ಲಿ ಒಂದು ತಾತ್ವಿಕ ಕ್ರಾಂತಿಯನ್ನೇ ಉಂಟು ಮಾಡಲಾಯಿತು. 19ನೇ ಶತಮಾನದ ಉತ್ತರಾರ್ಧದಲ್ಲಿ

Digitised by Bharatavani, CIIL

ಬ್ರಿಟನ್‌ನಲ್ಲಿ ಪ್ರಬಲವಾಗಿದ್ದ ವಿಶ್ಲೇಷಣಾತ್ಮಕ ತತ್ವಶಾಸ್ತ್ರದ ಬಗೆಗೆ ಜಿ.ಇ.ಮೂರ್, ಬರ್ಟಂಡ್ ರಸೆಲ್, ವಿಟಂಗ್‌ಸ್ಟನ್ ಮತ್ತು ಇತರರು ಹೆಚ್ಚಿನ ಚಿಂತನೆ ನಡೆಸಿ ತತ್ವಶಾಸ್ತ್ರವು ಜ್ಞಾನದ ಒಡಲಲ್ಲ, ಅದು ಸಾಮಾನ್ಯ ಭಾಷೆಯ ವಿಶ್ಲೇಷಣೆ. ಯಾವುದೇ ಜ್ಞಾನಕ್ಷೇತ್ರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ವಿಶ್ಲೇಷಣೆಯೇ. ಅರ್ಥಸ್ಪಷ್ಟತೆ ಹಾಗೂ ವಿಮರ್ಶೆ ಮಾಡುವ ಒಂದು ಚಟುವಟಿಕೆಯೇ ತತ್ವಶಾಸ್ತ್ರ ಎಂದು ಪ್ರತಿಪಾದಿಸಿದರು. ಓಕೊನಾರ್‌ರವರ ಹೇಳಿಕೆಯಂತೆ– "ಜೀವನವನ್ನು ಅರ್ಥೈಸುವ, ಜೀವನದ ಅರ್ಥ ಸ್ಪಷ್ಟಪಡಿಸುವ ಹಾಗೂ ವಿಮರ್ಶಿಸುವ ಚಟುವಟಿಕೆಯೇ ತತ್ವಶಾಸ್ತ್ರ" (an activity of criticism, clarification and interpretation of life).

ತತ್ವಶಾಸ್ತ್ರ ಒಂದು ಚಟುವಟಿಕೆ ಎಂಬ ತೀರ್ಮಾನ ಈ ಕೆಳಗಿನ 3 ಅಂಶಗಳನ್ನು ಆಧರಿಸಿದ್ದಾಗಿದೆ – 1. ಯಾವ ವಿಧದ ಪರಾಮರ್ಶೆಯೇ ಆಗಲೀ ಸಾರ್ವತ್ರಿಕವಾಗಿ ಒರೆಹಚ್ಚಿ ನೋಡಲು ಸಾಧ್ಯವಾದಾಗ, ವಿಶ್ವಾಸನೀಯವಾಗಿದ್ದಾಗ ಮತ್ತು ಇತರ ಸಾರ್ವತ್ರಿಕ ಜ್ಞಾನದೊಡನೆ ಸುಸಂಗತವಾಗಿದ್ದಾಗ ಮಾತ್ರ ಒಪ್ಪಿಗೆಗೆ ಅರ್ಹವೆನಿಸುತ್ತದೆ. 2. ತಾತ್ವಿಕ ಪ್ರಶ್ನೆಗಳು ಜ್ಞಾನದಂತೆ ಸಂಗ್ರಹಾತ್ಮಕ ಅನುಭವ ಸಾಪೇಕ್ಷವಾದವೂ ಅಲ್ಲ, ಗಣಿತದಂತೆ ವಿಶ್ಲೇಷಣಾತ್ಮಕ ಅನುಭವ ನಿರಪೇಕ್ಷವಾದವೂ ಅಲ್ಲ. ಆದ್ದರಿಂದ ಅವುಗಳನ್ನು ಪ್ರಯೋಗಾತ್ಮಕ ಅಥವಾ ನಿಗಮನ ಕ್ರಮಗಳಿಗಿಂತ ಬೇರೆ ರೀತಿಯಲ್ಲಿಯೇ ನೋಡಬೇಕಾಗುತ್ತದೆ. 3. ಬಹುತೇಕ ಸಾಂಪ್ರದಾಯಕ ಮೀಮಾಂಸಾ ಪ್ರಶ್ನೆಗಳು ಭಾಷಿಕ ದ್ವಂದ್ವದಲ್ಲಿ ಪರ್ಯವಸನಗೊಳ್ಳುತ್ತದೆ.

ಒಟ್ಟಿನಲ್ಲಿ, ಶಿಕ್ಷಣ, ಭೌತಶಾಸ್ತ್ರ, ಪ್ರಾಣಿಶಾಸ್ತ್ರ ಇತ್ಯಾದಿ ಅಧ್ಯಯನ ವಿಷಯ ಪ್ರಥಮ ಶ್ರೇಣಿ ಚಟುವಟಿಕೆಗಳೆಂದು ಪರಿಗಣಿಸಿದ್ದು, ಇವುಗಳಲ್ಲಿಯ ವ್ಯಾಖ್ಯೆಗಳನ್ನು, ಸಿಂಧುತ್ವ ನಿರ್ಣಯಗಳನ್ನು ಪರಿಶೀಲಿಸಲು ಪ್ರಯತ್ನಿಸುವ ತತ್ವಶಾಸ್ತ್ರವನ್ನು ದ್ವಿತೀಯ ಶ್ರೇಣಿ ಚಟುವಟಿಕೆ ಎಂದು ಪರಿಗಣಿಸಲಾಗಿದೆ. ಪ್ರತಿಯೊಂದು ಅಧ್ಯಯನ ವಿಷಯವೂ ತನ್ನದೇ ಆದ ಭಾಷೆಯನ್ನು (ಪರಿಕಲ್ಪನೆಗಳು, ಹೇಳಿಕೆಗಳು, ಸಿದ್ಧಾಂತಗಳು ಇತ್ಯಾದಿ ರೂಪದಲ್ಲಿ) ಹೊಂದಿರುತ್ತವೆ ವಿಜ್ಞಾನಭಾಷೆ, ಶಿಕ್ಷಣಭಾಷೆ, ಗಣಿತಭಾಷೆ, ಕಲಾಭಾಷೆ ಇತ್ಯಾದಿ. ಇದನ್ನು ಆಯಾ ವಿಷಯದ ಪರಿಭಾಷೆ ಎನ್ನಲಾಗುತ್ತದೆ. ಪ್ರಥಮ ಶ್ರೇಣಿ ಚಟುವಟಿಕೆಗಳು ಪ್ರಶ್ನೆಗಳನ್ನೆತ್ತಿಕೊಂಡು ಅವುಗಳಿಗೆ ಉತ್ತರ ಒದಗಿಸಿದರೆ, ತತ್ವಶಾಸ್ತ್ರ ಆ ಉತ್ತರಗಳ ಸಿಂಧುತ್ವವನ್ನು ಪ್ರಶ್ನಿಸುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ತಾರ್ಕಿಕ ವಿಶ್ಲೇಷಣೆ ಶಿಕ್ಷಣದ ಪರಿಭಾಷೆಯನ್ನು ವಿಶ್ಲೇಷಿಸಿ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಹಾಗೂ ಶಿಕ್ಷಣಕ್ಕೆ ವಿಶಿಷ್ಟವಾದ ತಾರ್ಕಿಕ ನಿರ್ಣಯಗಳನ್ನು ಗುರುತಿಸುವ ಮೂಲಕ ಹೇಳಿಕೆಗಳು ಮತ್ತು ಸಿದ್ಧಾಂತಗಳನ್ನು ಸ್ಪಷ್ಟಪಡಿಸುತ್ತದೆ. ಅಂತೆಯೇ, ಶಿಕ್ಷಣದಲ್ಲಿ ತಾರ್ಕಿಕ ವಿಶ್ಲೇಷಣೆ ಈ ಮೂರು ಅಂಶಗಳನ್ನು ಒಳಗೊಂಡಿರುತ್ತದೆ–

i) ಪರಿಕಲ್ಪನಾ ವಿಶ್ಲೇಷಣೆ ii) ಶೈಕ್ಷಣಿಕ ಹೇಳಿಕೆಗಳ ಸ್ಪಷ್ಟೀಕರಣ iii) ಶೈಕ್ಷಣಿಕ ಸಿದ್ಧಾಂತಗಳ ಸಿಂಧುತ್ವ ಪರಿಶೀಲನೆ.

**i) ಪರಿಕಲ್ಪನಾ ವಿಶ್ಲೇಷಣೆ:**

ವಸ್ತುಗಳನ್ನು/ವಿಷಯಗಳನ್ನು ಅವುಗಳ ನಿರ್ದಿಷ್ಟ ಲಕ್ಷಣಗಳಿಗೆ ಅನುಗುಣವಾಗಿ ಯಾವುದಾದರೊಂದು ವರ್ಗಕ್ಕೆ ಸೇರುವಂತೆ ಸಾಮಾನ್ಯೀಕರಿಸುವ ಚಿಂತನೆ/ಭಾವನೆಯೇ ಪರಿಕಲ್ಪನೆ. ಪರಿಕಲ್ಪನೆ ಭಾಷೆಯ ಪದಗಳಿಗೆ ಅರ್ಥವನ್ನು ಕಲ್ಪಿಸುತ್ತದೆ; ಪದಗಳ ನಿಖರವಾದ ಅರ್ಥವನ್ನು ನಿಗದಿಪಡಿಸಲು ಅಥವಾ ಸ್ಪಷ್ಟಪಡಿಸಲು ಮತ್ತು ಚಿಂತನಕಾರ್ಯದಲ್ಲಿ ಅವುಗಳನ್ನು ಕ್ರಿಯಾಶೀಲವಾಗಿ ಬಳಸಿಕೊಳ್ಳಲು ಸಹಾಯ ಮಾಡುತ್ತದೆ. ಈ ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಪರಸ್ಪರ ವಿಚಾರ ವಿನಿಮಯ ಕೈಗೊಳ್ಳಲು, ಜ್ಞಾನದ ಮುಂದುವರಿಕೆಗೆ ಅನುವು ಮಾಡಿಕೊಳ್ಳಲು ಪರಿಕಲ್ಪನೆಗಳ ತಾತ್ವಿಕ ವಿಶ್ಲೇಷಣೆ ಅಗತ್ಯ. ತತ್ವಶಾಸ್ತ್ರದ ಆಕ್ಸ್‌ಫರ್ಡ್ ನಿಘಂಟಿನ ಪ್ರಕಾರ "ಪರಿಕಲ್ಪನಾ ವಿಶ್ಲೇಷಣೆ ಎಂದರೆ ಪರಿಕಲ್ಪನೆಯ ತಾರ್ಕಿಕ ಸ್ವರೂಪವನ್ನು ಪ್ರಕಟಪಡಿಸುವುದಕ್ಕಾಗಿ ಪರಿಕಲ್ಪನೆಯನ್ನು ಅನೇಕ ಚಿಕ್ಕ ಚಿಕ್ಕ ಸರಳ ಭಾಗಗಳನ್ನಾಗಿ ವಿಭಜಿಸುವ ಪ್ರಕ್ರಿಯೆ". ಪರಿಕಲ್ಪನೆಗಳನ್ನು ವಿಭಜಿಸುವ ಪ್ರಕ್ರಿಯೆಯ ಮೂಲ ಪ್ರಾಚೀನ ಗ್ರೀಕ್ ರೇಖಾಗಣಿತ ಮತ್ತು ತತ್ವಶಾಸ್ತ್ರದಲ್ಲಿ ಕಂಡುಬಂದಿದ್ದು ಅದು ಪ್ಲೇಟೊ ಮತ್ತು ಅರಿಸ್ಟಾಟಲ್ ಮೇಲೆ ಪ್ರಭಾವ ಬೀರಿದೆ. ಅಂತೆಯೇ ಪರಿಕಲ್ಪನಾ ವಿಶ್ಲೇಷಣೆಯ ಮೂಲವನ್ನು ಪ್ಲೇಟೊರವರ ವ್ಯಾಖ್ಯೆಗಳ ಹುಡುಕಾಟದಲ್ಲಿ ಗುರುತಿಸಲಾಗಿದೆ. ಇದಕ್ಕೂ ಹಿಂದೆಯೇ, ಸಾಕ್ರಟೀಸ್‌ರವರಿಗಿದ್ದ ವ್ಯಾಖ್ಯೆಗಳ ಬಗೆಗಿನ ಕಾಳಜಿಯಲ್ಲಿ ಪರಿಕಲ್ಪನಾ ವಿಶ್ಲೇಷಣೆಯ ಪೂರ್ವಭಾವೀ ಪ್ರಯತ್ನ ಕಂಡುಬರುತ್ತದೆ. ಒಟ್ಟಿನಲ್ಲಿ, ಪರಿಕಲ್ಪನಾ ವಿಶ್ಲೇಷಣೆ ಎಂದರೆ ನಿಗದಿತ ಪರಿಕಲ್ಪನೆಯನ್ನು ಒಳಗೊಂಡಿರುವ ನಿರ್ದಿಷ್ಟ ತಾರ್ಕಿಕ ವಿಚಾರವನ್ನು ಉತ್ತಮವಾಗಿ ಗ್ರಹಿಸಲು ಹಾಗೂ ಜ್ಞಾನ ಸಂಪಾದಿಸಲು ಸಂಬಂಧಿತ ಭಾಗಗಳನ್ನಾಗಿ ವಿಶ್ಲೇಷಿಸುವುದು ಅಥವಾ ವಿಭಜಿಸುವುದು ಎಂದು ಅರ್ಥೈಸಿಕೊಳ್ಳಲಾಗಿದೆ.

ಪರಿಕಲ್ಪನೆಯನ್ನು ತಾತ್ವಿಕವಾಗಿ ವಿಶ್ಲೇಷಿಸುವಾಗ ಆ ಪರಿಕಲ್ಪನೆಯ ವ್ಯಾಖ್ಯೆಯನ್ನು ಪರಿಗಣಿಸಲಾಗುತ್ತದೆ. ಆ ವ್ಯಾಖ್ಯೆ ಹೇಳಿಕೆ ರೂಪದಲ್ಲಿದ್ದು, ಅದರಲ್ಲಿ ಬಳಕೆಯಾಗಿರುವ ಪದಗಳ ಅರ್ಥ ಮತ್ತು ಹಿನ್ನೆಲೆ ತಿಳಿಯಬೇಕಾಗುತ್ತದೆ. ಅಂದರೆ ವ್ಯಾಖ್ಯೆಯನ್ನು ವಿಶ್ಲೇಷಿಸಲಾಗುತ್ತದೆ. ಸಾಮಾನ್ಯವಾಗಿ ಎರಡು ರೀತಿ ವ್ಯಾಖ್ಯೆಗಳಿರುತ್ತವೆ– 1. ಬಲವಾದ ಅರ್ಥವುಳ್ಳ ವ್ಯಾಖ್ಯೆ (strong sense definition) 2. ದುರ್ಬಲ ಅರ್ಥವುಳ್ಳ ವ್ಯಾಖ್ಯೆ (weak sense definition). ಪದದ ಬಳಕೆಗೆ ತಾರ್ಕಿಕವಾಗಿ ಅಗತ್ಯವಾದ (logically necessary) ಮತ್ತು ಸಮರ್ಥನೀಯವಾದ (sufficient) ಅಂಶಗಳೆರಡನ್ನೂ ಸ್ಪಷ್ಟಪಡಿಸುವುದಾದರೆ ಅದು ಬಲವಾದ ವ್ಯಾಖ್ಯೆಯಾಗುತ್ತದೆ. ಬಹುತೇಕವಾಗಿ ವಿಜ್ಞಾನ. ಗಣಿತ ಇತ್ಯಾದಿ ನಿಖರತೆಯುಳ್ಳ ವಿಷಯಗಳಲ್ಲಿ ಬಲವಾದ ವ್ಯಾಖ್ಯೆಗಳಿರುತ್ತವೆ. ಉದಾ: ಆಯತವನ್ನು ಗುರುತಿಸಬೇಕಾದರೆ ತಾರ್ಕಿಕವಾಗಿ ಅಗತ್ಯವಾದ ಅಂಶಗಳು – ನಾಲ್ಕು ಬಾಹುಗಳನ್ನು ಹಾಗೂ ನಾಲ್ಕು ಕೋನಗಳನ್ನು ಹೊಂದಿರಬೇಕು, ನಾಲ್ಕು ಬಾಹುಗಳು ಸಮನಾಗಿರಬೇಕು,

Digitised by Bharatavani, CIIL

ಪರಸ್ಪರ ವಿರುದ್ಧ ಬಾಹುಗಳು ಸಮಾನಾಂತರವಾಗಿರಬೇಕು – ಈ ಲಕ್ಷಣಗಳನ್ನು ಹೊಂದಿರಬಹುದಾದ ಇತರ ರೇಖಾಚಿತ್ರಗಳು ಇರಬಹುದಾದ್ದರಿಂದ ಆಯತ ಎಂದು ನಿಖರವಾಗಿ ಹೇಳಲು ಸಮರ್ಥವಾದ ಅಂಶವೊಂದು ಅಗತ್ಯವಾಗುತ್ತದೆ. ಅದೆಂದರೆ ಈ ನಾಲ್ಕು ಕೋನಗಳು ಲಂಬಕೋನಗಳಾಗಿರಬೇಕು. ಪದದ ಬಳಕೆಗೆ ತಾರ್ಕಿಕವಾಗಿ ಅಗತ್ಯವಾದ ಅಂಶವಷ್ಟನ್ನೇ ಸ್ಪಷ್ಟಪಡಿಸುವುದಾದರೆ ಅದನ್ನು ದುರ್ಬಲ ವ್ಯಾಖ್ಯೆ ಎನ್ನಲಾಗುತ್ತದೆ. ಸಾಮಾನ್ಯವಾಗಿ ಶಿಕ್ಷಣದಲ್ಲಿ ಅಥವಾ ಮಾನವಶಾಸ್ತ್ರ ವಿಷಯಗಳಲ್ಲಿ ದುರ್ಬಲ ವ್ಯಾಖ್ಯೆಗಳು ಬಹಳವಾಗಿರುತ್ತವೆ. ಉದಾ: ಸಮಾನತೆ, ಶಿಕ್ಷೆ, ಪ್ರಜಾಪ್ರಭುತ್ವ, ಸಮಾನಾವಕಾಶ ಇತ್ಯಾದಿ.

ಶಿಕ್ಷಣದಲ್ಲಿ ಪರಿಕಲ್ಪನೆ ವಿಶ್ಲೇಷಿಸುವ ಕ್ರಮ: ಮೊದಲಿಗೆ ನಿಗದಿತ ಪರಿಕಲ್ಪನೆಗೆ ಸಂಬಂಧಿಸಿದ ಒಂದು ಸಮಗ್ರ ವ್ಯಾಖ್ಯೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಅನಂತರ ಕೆಳಕಂಡ ಕ್ರಮ ಅನುಸರಿಸಬೇಕು.

1. ವ್ಯಾಖ್ಯೆಯಲ್ಲಿ ಬಳಕೆಯಾಗಿರುವ ಪದಗಳ 'ಭಾಷಿಕ' ಮತ್ತು ಭಾಷಿಕವಲ್ಲದ ಅಂಶಗಳನ್ನು ಗುರುತಿಸಬೇಕು ಹಾಗೂ ಪದಗಳ ಅರ್ಥಸ್ಪಷ್ಟತೆ ಪರಿಶೀಲಿಸಬೇಕು ಮತ್ತು ಪದದ ಬಳಕೆ ಗೊಂದಲಮಯವಾಗಿದೆಯೇ, ಸಂವೇಗಾತ್ಮಕವಾಗಿದೆಯೇ, ಸ್ಪಷ್ಟವಾದ ಅರ್ಥ ಹೊಂದಿದೆಯೇ ಇತ್ಯಾದಿ ಅಂಶಗಳನ್ನು ಪರಿಶೀಲಿಸಬೇಕು.

2. ಪರಿಕಲ್ಪನೆಯ ಬಳಕೆಗೆ ಸಹಾಯಕವಾಗುವಂತೆ ತಾರ್ಕಿಕವಾಗಿ ಅಗತ್ಯವಾದ ಅಂಶಗಳನ್ನು ಗುರುತಿಸುವ ಮೂಲಕ ಪರಿಕಲ್ಪನೆಯ ಲಕ್ಷಣಗಳನ್ನು ಸ್ಪಷ್ಟಪಡಿಸಬೇಕು. ಉದಾ: 'ಶಿಕ್ಷೆ' ಎಂಬ ಪರಿಕಲ್ಪನೆ, ವ್ಯಾಖ್ಯೆ–ದಂಡನೆ/ನೋವನ್ನುಂಟುಮಾಡಲು ಅರ್ಹನಾದ ವ್ಯಕ್ತಿಯಿಂದ ತಪ್ಪು ಮಾಡಿದ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ನೋವನ್ನುಂಟು ಮಾಡುವುದೇ/ದಂಡನೆ ನೀಡುವುದೇ ಶಿಕ್ಷೆ (Punishment means intentional infliction of pain/ unpleasantness on a person who has committed breach of rules by someone in authority).

ಈ ವ್ಯಾಖ್ಯೆಯಲ್ಲಿ 'ಶಿಕ್ಷೆ' ಎಂಬ ಪರಿಕಲ್ಪನೆಗೆ ಸಂಬಂಧಿಸಿದಂತೆ ಗುರುತಿಸಬಹುದಾದ ತಾರ್ಕಿಕವಾಗಿ ಅಗತ್ಯವಾದ ಅಂಶಗಳು ಈ ಕೆಳಗಿನಂತಿವೆ–

ಎ) ನೋವನ್ನುಂಟು ಮಾಡಬೇಕು/ದಂಡನೆ (ಸಂತೋಷದಾಯಕವಲ್ಲದ್ದು).

ಬಿ) ಉದ್ದೇಶಪೂರ್ವಕವಾಗಿರಬೇಕು.

ಸಿ) ಅಧಿಕಾರಯುತವಾಗಿರಬೇಕು.

ಡಿ) ತಪ್ಪು ಮಾಡಿರಬೇಕು.

3. ಪರಿಕಲ್ಪನೆಯ ತಾರ್ಕಿಕ ವ್ಯಾಪ್ತಿಯನ್ನು ಗುರುತಿಸಬೇಕು ಅಂದರೆ ಪರಿಕಲ್ಪನೆಯ ಎಲ್ಲೆಯನ್ನು ನಿಗದಿಪಡಿಸಬೇಕು. ಒಂದೇ ಪರಿಕಲ್ಪನೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆಯಾಗಿ ಬಳಸುವ ಸಾಧ್ಯತೆ ಉಂಟು. ಆಗ ಅವುಗಳ ಬಳಕೆಯ ಸಂದರ್ಭಗಳನ್ನು ಸ್ಪಷ್ಟಪಡಿಸಬೇಕು. ಪರಿಕಲ್ಪನೆ ವೈಯಕ್ತಿಕವಲ್ಲ, ಸಾಮೂಹಿಕ ಹಾಗೂ ಸಾಮಾಜಿಕವಾದದ್ದು, ನೈತಿಕ ಕಲ್ಪನಾಧಾರಗಳನ್ನು ಅವಲಂಬಿಸಿರುತ್ತದೆ. ಅಂತೆಯೇ ಪರಿಕಲ್ಪನೆಗಳಲ್ಲಿ ಸಾಮಾನ್ಯವಾದ ಅಂಶ ಕಂಡುಬಂದರೂ ಬೇರೆ ಬೇರೆ ಲಕ್ಷಣಗಳನ್ನು ಗುರುತಿಸಲು ಸಾಧ್ಯ.

ಪರಿಕಲ್ಪನೆಗಳನ್ನು ನಿರ್ದಿಷ್ಟ ಲಕ್ಷಣದಿಂದ ಮಾತ್ರ ಅರ್ಥಮಾಡಿಸಲಾಗುವುದಿಲ್ಲ. ಇತರೆ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಅರ್ಥಮಾಡಿಸಬೇಕಾಗುತ್ತದೆ. ಉದಾ: ಗಂಭೀರ ಚಟುವಟಿಕೆ ಎನ್ನುವುದನ್ನು ಅರ್ಥೈಸಲು, ಆಟದ ಚಟುವಟಿಕೆಯನ್ನು ಅರ್ಥ ಮಾಡಿಕೊಳ್ಳಬೇಕು. ಇದಕ್ಕೆ ವಿರುದ್ಧವಾಗಿ ಆಟ ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಗಂಭೀರ ಚಟುವಟಿಕೆ ಯಾವುದು ಎಂದು ತಿಳಿದಿರಬೇಕು. ಅಲ್ಲದೆ ಪರಿಕಲ್ಪನೆಗಳನ್ನು ವಾಸ್ತವಾಂಶದಿಂದ, ಮೌಲ್ಯದಿಂದ, ನೈತಿಕ ಅನಿಸಿಕೆಯಿಂದ ಪ್ರತ್ಯೇಕಿಸಬೇಕು.

4. ಮಾನಕ ಉದಾಹರಣೆಗಳನ್ನು / ಮಾದರಿಗಳನ್ನು ಹುಡುಕುವ ಮೂಲಕ ಪರಿಕಲ್ಪನೆ ಸ್ಪಷ್ಟಪಡಿಸಬೇಕು.

ಮಾದರಿ ಉದಾಹರಣೆ: ವಿದ್ಯಾರ್ಥಿ ಶಾಲೆಗೆ ವಿಳಂಬವಾಗಿ ಬಂದ ಕಾರಣ ಶಿಕ್ಷಕರು ಆ ವಿದ್ಯಾರ್ಥಿಗೆ ಸೋಮಾರಿ ಟೋಪಿ ಹಾಕಿಸುವುದು.

ತಾರ್ಕಿಕವಾಗಿ ಅಗತ್ಯವಾದ ಎಲ್ಲ 4 ಅಂಶಗಳನ್ನು ಇಲ್ಲಿ ಕಾಣಬಹುದಾಗಿದೆ. ಅಂತೆಯೇ ಇದು 'ಶಿಕ್ಷೆ' ಪರಿಕಲ್ಪನೆಗೆ ಮಾದರಿ ಉದಾಹರಣೆಯಾಗಿದೆ.

1. ನೋವನ್ನುಂಟುಮಾಡುವುದು– ವಿದ್ಯಾರ್ಥಿಗೆ ಮಾನಸಿಕವಾಗಿ ನೋವುಂಟಾಗುತ್ತದೆ.
2. ನೋವನ್ನುಂಟು ಮಾಡುವುದು ಉದ್ದೇಶಪೂರ್ವಕವಾಗಿದೆ.
3. ಶಿಕ್ಷಕರಿಗೆ ನೋವುಂಟುಮಾಡಲು ಅಧಿಕಾರವಿದೆ.
4. ವಿದ್ಯಾರ್ಥಿ ವಿಳಂಬವಾಗಿ ಬಂದು ತಪ್ಪು ಮಾಡಿದ್ದಾನೆ.

**ಇತರೆ ಉದಾಹರಣೆಗಳು:**

1. ತರಗತಿಯಲ್ಲಿ ಯಾರೋ ಇಬ್ಬರು ತುಂಟಾಟ ಮಾಡಿದ್ದಕ್ಕಾಗಿ ಶಿಕ್ಷಕರು ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ಬೆಂಚಿನ ಮೇಲೆ ನಿಲ್ಲಲು ಹೇಳುವುದು. ಇಲ್ಲಿ ತಪ್ಪು ಮಾಡದ ವಿದ್ಯಾರ್ಥಿಗಳಿಗೂ ಶಿಕ್ಷೆಯಾಗುವುದರಿಂದ, ನಾಲ್ಕನೆಯ ಅಂಶ 'ತಪ್ಪು ಮಾಡಿರಬೇಕು' ಪೂರೈಸಲಾಗಿರುವುದಿಲ್ಲ.
2. ಕುಸ್ತಿಯಲ್ಲಿ ನೋವುಂಟಾಗುವುದು. ಇಲ್ಲಿ ನೂವು ಅಧಿಕಾರಶಾಹಿಗಳಿಂದ ಬರುವುದಿಲ್ಲ, ಯಾರೂ ತಪ್ಪು ಮಾಡಿರುವುದಿಲ್ಲ.
3. ಅನೂದೇಶ, ತರಬೇತಿ, ಏಕೀತತ್ವಬೋಧೆ– ಈ ಪರಿಕಲ್ಪನೆಗಳು 'ಬೋಧನೆ' ಎಂಬ ಪರಿಕಲ್ಪನೆಯಲ್ಲಿ ಗುರುತಿಸಬಹುದಾದ ಒಂದು ತಾರ್ಕಿಕ ಅಂಶ 'ವಿಷಯ ವರ್ಗಾವಣೆಯಾಗುತ್ತದೆ' ಈ

Digitised by Bharatavani, CIIL

ಮೂರು ವಿಷಯ ವರ್ಗಾವಣೆ ಅಂಶವನ್ನು ಸಾಮಾನ್ಯವಾಗಿ ಹೊಂದಿದ್ದರೂ ಇತರೆ ತಾರ್ಕಿಕ ಅಂಶಗಳು ಇವುಗಳಲ್ಲಿ ಬೇರೆ ಬೇರೆಯಾಗಿರುತ್ತವೆ.

**ಪರಿಕಲ್ಪನಾ ವಿಶ್ಲೇಷಣೆಯ ಉಪಯುಕ್ತತೆ:**

ಪರಿಕಲ್ಪನಾ ವಿಶ್ಲೇಷಣೆ ಅರ್ಥ ಸ್ಪಷ್ಟತೆ ಉಂಟುಮಾಡುತ್ತದೆ. ಪದಗಳ ಭಾಷೆಯನ್ನಾಧರಿಸಿದ ತಾರ್ಕಿಕ ಹಾಗೂ ನೈತಿಕ ಕಲ್ಪನಾಧಾರಾಂಶಗಳನ್ನು ಸ್ಪಷ್ಟಪಡಿಸುತ್ತದೆ. ಆದರೆ, ಇದು ಅಷ್ಟರಲ್ಲಿಯೇ ಅಂತ್ಯಗೊಳ್ಳುವ ಪ್ರಕ್ರಿಯೆಯಲ್ಲ. ಮುಂದುವರಿದು ಶೈಕ್ಷಣಿಕ ನಿರ್ಧಾರ ಮತ್ತು ನೀತಿಗಳವಿಚಾರಣೆ ಒಳಗೊಳ್ಳುವ ತಾತ್ವಿಕ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸುತ್ತದೆ. ಪರಿಕಲ್ಪನೆಗಳನ್ನು ಸ್ಪಷ್ಟಪಡಿಸುವುದರೊಂದಿಗೆ ವಿವಿಧ ರೀತಿಯ ಹೇಳಿಕೆಗಳು ವಾದವಿವಾದಗಳನ್ನು ತಾರ್ಕಿಕವಾಗಿ ಮಾಪನಮಾಡಲು ಶೈಕ್ಷಣಿಕ ಸಿದ್ಧಾಂತಗಳ ಸಿಂಧುತ್ವ ನಿರ್ಣಯಿಸಲು, ಜ್ಞಾನ ಮತ್ತು ನಂಬಿಕೆಗಳ ಆಧಾರಗಳನ್ನು ಸಮರ್ಥಿಸಲು ಸಹಾಯಕವಾಗುತ್ತದೆ. ಅಲ್ಲದೆ ವಾಸ್ತವತೆ, ಚಿಂತನೆ ಮತ್ತು ಭಾಷೆಗಳಿಗಿರುವ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ. ಅಂತೆಯೇ ಇದು ಶೈಕ್ಷಣಿಕ ನಿರ್ಧಾರ ಹಾಗೂ ನೀತಿಗಳಲ್ಲಿ ಅಡಗಿರುವ ತಾತ್ವಿಕ ವಿಷಯಗಳನ್ನು ಆಳವಾಗಿ ವಿಚಾರ ಮಾಡಲು ಸಹಾಯಕವಾಗುವ ಪೂರ್ವಭಾವೀ ಪ್ರಕ್ರಿಯೆಯಾಗಿದೆ.

**ಉದಾ: 1.** ಯಾವುದೇ ವ್ಯಕ್ತಿಗೆ ಶಿಕ್ಷೆ ನೀಡಲು ಬಲವಾದ ಕಾರಣಗಳಿವೆ ಎಂದು ಸಮರ್ಥಿಸಿಕೊಳ್ಳುವ ಮುನ್ನ 'ಶಿಕ್ಷೆ' ಎಂದರೇನು ಎಂಬುದರ ಬಗೆಗೆ ಸ್ಪಷ್ಟ ಪರಿಕಲ್ಪನೆ ಇರಬೇಕಾಗುತ್ತದೆ. 2. ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯ ಹಕ್ಕು ಎನ್ನುವಾಗ 'ಶಿಕ್ಷಣ' ಎಂದರೇನು ಎಂಬ ಪರಿಕಲ್ಪನೆಯ ಸ್ಪಷ್ಟತೆ ಅಗತ್ಯವಾಗುತ್ತವೆ.

ಪರಿಕಲ್ಪನಾ ವಿಶ್ಲೇಷಣೆ ಬಗೆಗೆ ಪ್ರಮುಖವಾಗಿ ಎರಡು ಟೀಕೆಗಳು ಕೇಳಿಬರುತ್ತವೆ.

1. ತತ್ವಶಾಸ್ತ್ರಕ್ಕೆ ಪರಿಕಲ್ಪನಾ ವಿಶ್ಲೇಷಣೆ ಕೇವಲ ಅಗತ್ಯವಾದ ಚಟುವಟಿಕೆ ಮಾತ್ರವೇ ವಿನಃ ಸಮರ್ಪಕವಾದುದಲ್ಲ.
2. ಇದು ಮೌಲ್ಯನಿಷ್ಪಕ್ಷಪಾತವಾದುದಲ್ಲ. ಸ್ಪಷ್ಟತೆ ಉಂಟುಮಾಡುವಾಗ ಆಯಾ ಪಂಥದ ಮೌಲ್ಯವನ್ನಾಧರಿಸಿರಬಹುದು.

ಈ ಟೀಕೆಗಳಿದ್ದರೂ ಪರಿಕಲ್ಪನಾ ವಿಶ್ಲೇಷಣೆಯ ಮಹತ್ವ ಗಣನೀಯವಾಗಿದೆ. ಇದು ಅರ್ಥಸ್ಪಷ್ಟತೆ, ಸ್ಥಿರತೆ, ಚಿಂತನ ತೀವ್ರತೆ/ನಿಷ್ಠುರತೆ, ವಾಕ್ಯ ಅರ್ಥ ಪೂರ್ಣತೆ, ಕ್ರಮಬದ್ಧಾತ್ಮಕ ತಿಳುವಳಿಕೆ, ಕಲ್ಪನಾಧಾರಗಳ ಅರಿವು ಇತ್ಯಾದಿಗಳನ್ನುಂಟುಮಾಡುತ್ತವೆ. ಅಂತೆಯೇ ಇಂದಿನ ಶಿಕ್ಷಣದ ತಾತ್ವಿಕ ತಿಳುವಳಿಕೆಗೆ ಅತ್ಯಗತ್ಯವೆನಿಸುತ್ತವೆ.

**ಶೈಕ್ಷಣಿಕ ಹೇಳಿಕೆಗಳನ್ನು ಮತ್ತು ವಿವಾದಗಳನ್ನು ಸ್ಪಷ್ಟಪಡಿಸುವುದು:**

**1. ಹೇಳಿಕೆಯಲ್ಲಿರುವ ತಾರ್ಕಿಕ ವ್ಯಾಕರಣವನ್ನು ವಿಶ್ಲೇಷಿಸಿ, ಆ ಹೇಳಿಕೆಯ ತಾರ್ಕಿಕ ಸ್ಥಾನವನ್ನು ನಿರ್ಧರಿಸುವುದು:**

ಎಲ್ಲ ಹೇಳಿಕೆಗಳೂ ವ್ಯಾಕರಣಬದ್ಧವಾಗಿದ್ದರೂ ಅವು ಸಂಪೂರ್ಣವಾಗಿ ವಿವಿಧ ತರ್ಕಗಳನ್ನು ಆಧರಿಸಿರುತ್ತವೆ. ಉದಾಹರಣೆಗೆ ಈ ಕೆಳಗಿನ ಒಂದು ವಾಕ್ಯಗಳನ್ನು ಗಮನಿಸಿ–

ಎ) ವ್ಯಕ್ತಿಗಳನ್ನು ಕೊಲ್ಲುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ

ಬಿ) ವ್ಯಕ್ತಿಗಳನ್ನು ಕೊಲ್ಲುವುದು ಭಯಾನಕ

ಸಿ) ವ್ಯಕ್ತಿಗಳನ್ನು ಕೊಲ್ಲುವುದು ನೈತಿಕವಾಗಿ ತಪ್ಪು

ಈ ಮೂರು ವಾಕ್ಯಗಳು ವ್ಯಾಕರಣಬದ್ಧವಾಗಿ ಒಂದೇ ರೀತಿ ಕಂಡುಬರುತ್ತವೆ. ಅಂದರೆ ಕರ್ತೃ ಮತ್ತು ಕರ್ಮ ಪದಗಳನ್ನು ಹೊಂದಿವೆ. ಪ್ರತಿ ವಾಕ್ಯದಲ್ಲಿಯೂ 'ವ್ಯಕ್ತಿಗಳನ್ನು ಕೊಲ್ಲುವುದು' ಎಂಬುದು ಕರ್ತೃ ಪದವಾಗಿದ್ದು, ಕರ್ಮಪದಗಳು ಬೇರೆ ಬೇರೆಯಾಗಿವೆ. ಈ ವಾಕ್ಯಗಳನ್ನು ಆಳವಾಗಿ ಪರಿಶೀಲಿಸಿದಾಗ ಈ ವಾಕ್ಯಗಳಲ್ಲಿ ಬೇರೆ ಬೇರೆ ಭಾಷೆಗಳೇ ಕಂಡುಬರುತ್ತವೆ. ವಾಕ್ಯ 1– ವಾಸ್ತವಾಂಶವನ್ನು ವರದಿ ಮಾಡುವ ಭಾಷೆಯಾದರೆ, ವಾಕ್ಯ 2– ವ್ಯಕ್ತಿಗತ ಭಾವನೆ ತಿಳಿಸುವ ಭಾಷೆಯಾಗಿದೆ, ವಾಕ್ಯ 3– ನೈತಿಕ ಭಾಷೆಯಾಗಿದೆ. ಅಂದರೆ, ಈ ವಾಕ್ಯಗಳು ಬೇರೆ ಬೇರೆ ಛಾಯೆಯನ್ನು ಹೊಂದಿವೆ. ಆದ್ದರಿಂದ ಯಾವುದೇ ಹೇಳಿಕೆಯಲ್ಲಾಗಲೀ ಕೇವಲ ಭಾಷಿಕ ವ್ಯಾಕರಣಕ್ಕಿಂತ ತಾರ್ಕಿಕ ವ್ಯಾಕರಣವನ್ನು ಪರಿಗಣಿಸಬೇಕಾಗುತ್ತದೆ. ವಾಕ್ಯದ ರೀತಿಯನ್ನು ಅಂದರೆ ವಾಕ್ಯವು ವಿವರಣಾತ್ಮಕವೇ, ಪ್ರಶ್ನಾರ್ಹವೇ, ಆಶ್ಚರ್ಯದಾಯಕವೇ, ವಿಶ್ಲೇಷಣಾತ್ಮಕವೇ ಎಂಬುದನ್ನು ಗುರುತಿಸಬೇಕಾಗುತ್ತದೆ. ವಿವಿಧ ರೀತಿಯ ವಾಕ್ಯಗಳಿಂದ ಸ್ಫುರಿಸುವ ಅರ್ಥಕ್ಕೆ ಗಮನ ನೀಡಬೇಕಾಗುತ್ತದೆ.

**2. ಹೇಳಿಕೆಗಳು ಹಾಗೂ ವಾದ ವಿವಾದಗಳ ವಿಶ್ಲೇಷಣೆ:**

ಮೇಲೆ ಹೇಳಿದ ರೀತಿಯಲ್ಲಿಯೇ ಹೇಳಿಕೆಗಳನ್ನು ವಾದ ವಿವಾದಗಳನ್ನು ವಿಶ್ಲೇಷಿಸಿ, ಅವುಗಳಲ್ಲಿರುವ ತಪ್ಪು ಒಪ್ಪುಗಳನ್ನು ಗುರುತಿಸಬೇಕು ಹಾಗೂ ಅವುಗಳಿಂದ ತಿಳಿದುಬರುವ ತೀರ್ಮಾನದ ಸಿಂಧುತ್ವವನ್ನು ಪರೀಕ್ಷಿಸಬೇಕು.

**3. ಘೋಷಣೆಗಳು ಮತ್ತು ಉಪಮೆಗಳ ವಿಶ್ಲೇಷಣೆ:**

ಶಿಕ್ಷಣದಲ್ಲಿ ಸರ್ವರಿಗೂ ಶಿಕ್ಷಣ, ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣ, ಶೈಕ್ಷಣಿಕ ಸಮಾನಾವಕಾಶಗಳು, ಪೌರತ್ವಕ್ಕಾಗಿ ಶಿಕ್ಷಣ ಇತ್ಯಾದಿ ಘೋಷಣೆಗಳು; ಜೀವನವೇ ಶಿಕ್ಷಣ, ಜ್ಞಾನ ಒಂದು ಶಕ್ತಿ ಇತ್ಯಾದಿ ಉಪಮೆಗಳು ಕೇಳಿಬರುತ್ತವೆ. ಈ ಘೋಷಣೆಗಳ ಬಗೆಗೆ ನಿರ್ಲಿಪ್ತವಾಗಿರುವುದಾಗಲೀ ಯಾವ ವಿವರಗಳನ್ನು ತಿಳಿಯದೆ, ವಿವೇಚಿಸದೆ ಕುರುಡು ನಂಬಿಕೆ ಬೆಳೆಸಿಕೊಳ್ಳುವುದಾಗಲೀ ಸಲ್ಲದು. ಅವುಗಳನ್ನು ವಿಶ್ಲೇಷಿಸಿ, ವಿವರಗಳನ್ನು ನಿರೂಪಿಸಿ, ಆಚರಣೆಗಳಿಗೆ ಸಂಬಂಧಿಸಿ, ಸ್ಪಷ್ಟೀಕರಿಸಿ ಗುರುತಿಸಬೇಕಾಗುತ್ತದೆ, ಗೌರವಿಸಬೇಕಾಗುತ್ತದೆ. ಈ ದಿಸೆಯಲ್ಲಿ ಪರಿಕಲ್ಪನಾ ವಿಶ್ಲೇಷಣೆ ಉಪಯುಕ್ತವೆನಿಸುತ್ತದೆ.

**ಸಿದ್ಧಾಂತಗಳ ಸಿಂಧುತ್ವೀಕರಣ:**

ಶಿಕ್ಷಣಕ್ಷೇತ್ರದಲ್ಲಿ ಪ್ರತಿಪಾದಿತವಾಗಿರುವ ಸಿದ್ಧಾಂತಗಳು ಸಾಮಾನ್ಯವಾಗಿ ಪ್ರತಿಕ್ಷಣದ ಯಾವುದಾದರೂ ಆಯಾಮಕ್ಕೆ ಸಂಬಂಧಿಸಿದ ಸಾಮಾನ್ಯೀಕರಣಗಳ ಸರಣಿಯಿಂದ ಪ್ರತಿನಿಧಿಸಲಾಗಿರುತ್ತವೆ. ಈ ಸಾಮಾನ್ಯೀಕರಣಗಳು ಮಾಹಿತಿಯನ್ನು

Digitised by Bharatavani, CIIL

ಆಧರಿಸಿದ್ದರೂ ಸಂಶೋಧನೆ ಮೂಲಕ ದೃಢೀಕೃತಗೊಂಡಿದ್ದರೂ ಅವುಗಳ ನಂಬಿಕೆಗಾಗಿ, ಉಪಯುಕ್ತತೆಗಾಗಿ ಅಥವಾ ನಿಯಮಬದ್ಧತೆಗಾಗಿ ಪರಿಶೀಲಿಸಬೇಕಾಗುತ್ತದೆ. ಒಂದು ಸಿದ್ಧಾಂತದ ಮೂಲಭೂತ ಕಲ್ಪನಾಧಾರಾಂಶಗಳನ್ನು ಹಾಗೂ ತಾರ್ಕಿಕ ವಸ್ತು ವಿಷಯವನ್ನು, ಉದ್ದೇಶಗಳನ್ನು ಆ ಸಿದ್ಧಾಂತಗಳನ್ನು ಎಷ್ಟರಮಟ್ಟಿಗೆ ವಿವರಿಸುತ್ತವೆ ಎಂಬುದನ್ನು ಮತ್ತು ಅದರಿಂದ ತೀರ್ಮಾನಗಳ ಸಾಧ್ಯತೆಯನ್ನು ವಿಶ್ಲೇಷಿಸಬೇಕಾಗುತ್ತವೆ. ಜೊತೆಗೆ ಸಿದ್ಧಾಂತದ ವ್ಯಾಪ್ತಿ, ಒಳಗೊಳ್ಳುವ ದತ್ತಾಂಶದ ವ್ಯಾಪ್ತಿ, ಮಿತನ್ಯಾಯ, ಸ್ಪಷ್ಟತೆ, ತಾರ್ಕಿಕ ಸ್ಥಿರತೆ, ನಿಖರತೆ, ನಿರೂಪಣಾ ಮಾಧ್ಯಮ (ಶಾಬ್ದಿಕ/ಗಣಿತಾತ್ಮಕ/ಸಾದೃಶ್ಯಾತ್ಮಕ/ತುಲನಾತ್ಮಕ ಅಂಶ)ಗಳ ಬಗೆಗೆ ಪರಿಶೀಲಿಸಬೇಕಾಗುತ್ತದೆ. ಕೆಲವೊಮ್ಮೆ ಸಿದ್ಧಾಂತಗಳು ದತ್ತಾಂಶ ಆಧಾರಿತವಾಗಿರುವ ಬದಲು ಪರಿಕಲ್ಪನಾತ್ಮಕವಾಗಿ ನಿರ್ಧರಿತವಾಗಿರುತ್ತದೆ. ಉದಾ: ಪಿಯಾಜೆ ಸಿದ್ಧಾಂತ (ದತ್ತಾಂಶಕ್ಕಿಂತ ಪರಿಕಲ್ಪನಾಧಾರಿತವಾಗಿದೆ). ಇಂತಹ ಸಿದ್ಧಾಂತಗಳನ್ನು ಎಷ್ಟರಮಟ್ಟಿಗೆ ಒರೆಹಚ್ಚಿ ನೋಡಲು ಸಾಧ್ಯವಾಗುತ್ತದೆ ಎಂಬುದನ್ನು ತಿಳಿಯಲು ವಿಶ್ಲೇಷಣೆ ಕೈಗೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ, ಪ್ರಾಯೋಗಿಕ ವಿಷಯ ಹೆಚ್ಚಾಗಿದ್ದು, ಸಿದ್ಧಾಂತವು ಅತಿ ನಿಖರವಾಗಿ ರೂಪಿತಗೊಂಡಿದ್ದರೆ, ಅದರಲ್ಲಿ ತಪ್ಪುಗಳು ಗೋಚರಿಸುವ ಸಾಧ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಅಂತೆಯೇ ಒಂದು ಸಿದ್ಧಾಂತದ ವಿಶ್ಲೇಷಣೆಗೆ ಆ ಸಿದ್ಧಾಂತಕ್ಕಿರುವ ಪ್ರಾಯೋಗಿಕ ಬಲದ ಪರಿಮಾಣವೂ ಒಂದು ನಿರ್ಣಯಾಕಾಂಶವಾಗುತ್ತದೆ. ಅಂತಿಮವಾಗಿ ಸಿದ್ಧಾಂತಗಳನ್ನು ಅವುಗಳ ಅನ್ವೇಷಣಾ ಮೌಲ್ಯಕ್ಕಾಗಿ, ಅದರಲ್ಲೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ಆಚರಣಾ ಸಂಬಂಧಿ ಅಂಶಗಳಿಗಾಗಿ ಪರಿಶೀಲಿಸಲಾಗುತ್ತದೆ.

ಆದ್ದರಿಂದ, ಶಿಕ್ಷಣದಲ್ಲಿ ಪರಿಕಲ್ಪನೆಗಳನ್ನು ವರ್ಗೀಕರಿಸುವುದರಲ್ಲಿ, ಹೇಳಿಕೆಗಳನ್ನು ಸ್ಪಷ್ಟಪಡಿಸುವುದರಲ್ಲಿ ಮತ್ತು ಸಿದ್ಧಾಂತಗಳನ್ನು ಸಿಂಧುತ್ವೀಕರಿಸುವಲ್ಲಿ ತಾತ್ವಿಕ ವಿಶ್ಲೇಷಣೆ ಸಹಾಯವಾಗುತ್ತದೆ. ಆದರೆ, ಈ ವಿಶ್ಲೇಷಣೆ ಶೈಕ್ಷಣಿಕ ಸಂಶೋಧನೆ ಸ್ಥಾನವನ್ನು ಪಡೆಯಬಹುದು ಮತ್ತು ಎಲ್ಲ ವಾಸ್ತವಾಂಶಗಳ ಪ್ರಶ್ನೆಗಳಿಗೆ ಉತ್ತರ ದೊರಕಿಸಬಹುದೆಂದಾಗಲೀ ಆಚರಣೆ ಸಂಬಂಧಿ ಸಮಸ್ಯೆಗಳಿಗೆಲ್ಲ ನಿರ್ದಿಷ್ಟ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದಾಗಲೀ ತೀರ್ಮಾನಿಸಲಾಗುವುದಿಲ್ಲ. ವಿವಿಧ ಕ್ಷೇತ್ರಗಳಲ್ಲಿರುವ ಜ್ಞಾನ, ಮೌಲ್ಯನಿರ್ಧಾರ ಮತ್ತು ನಂಬಿಕೆಗಳನ್ನು ಪಡೆದುಕೊಳ್ಳುವ ಶಿಕ್ಷಣದ ಚಟುವಟಿಕೆಯಲ್ಲಿ ಪರಿಕಲ್ಪನೆಗಳನ್ನು ಅಪಾರ್ಥಮಾಡಿಕೊಂಡು ತಪ್ಪಾಗಿ ಬಳಸುವುದನ್ನು ತಡೆಗಟ್ಟಲು ತಾತ್ವಿಕ ಚಟುವಟಿಕೆ ಅಗತ್ಯವೆನಿಸುತ್ತದೆ. ವಿವಿಧ ಕ್ಷೇತ್ರಗಳಿಂದ ತೆಗೆದುಕೊಂಡ ಪರಿಕಲ್ಪನೆಗಳ ತಾರ್ಕಿಕತೆ ಹಾಗೂ ನೈತಿಕ ಅಥವಾ ಮೌಲ್ಯಗಳ ತೀರ್ಮಾನ ಮತ್ತು ಪ್ರಾಯೋಗಿಕ ತೀರ್ಮಾನಗಳ ತಾರ್ಕಿಕತೆ ನಡುವಿರುವ ವ್ಯತ್ಯಾಸವನ್ನು ತಿಳಿಯುವುದು ಪ್ರಮುಖವಾಗುತ್ತದೆ. ಈ ಹಿನ್ನೆಲೆಯಲ್ಲಿ, ಶೈಕ್ಷಣಿಕ ಸಿದ್ಧಾಂತಗಳಲ್ಲಿ ತಲೆದೋರುವ ಸಮಸ್ಯೆಗಳನ್ನು ಸಮಗ್ರವಾಗಿ ಚರ್ಚಿಸಲು ತಾತ್ವಿಕ ವಿಶ್ಲೇಷಣೆಯ ಕೊಡುಗೆ ಗಣನೀಯವಾಗಿದೆ.

–ಡಾ. ಯಶೋಧರ ಕೆ.

# ದ

## ದೃಷ್ಟಿ ಸವಾಲುಗಳುಳ್ಳ ಮಕ್ಕಳ ಶಿಕ್ಷಣ

**ಅಂಧತ್ವದ ಪರಿಕಲ್ಪನೆ:**

ಸಾಮಾನ್ಯವಾಗಿ ಅಂಧತ್ವ ಎಂದರೆ ಬ್ರೈಲ್‌ನ ಮತ್ತು ಕಲಿಕೆಗೆ ಪರ್ಯಾಯ ವಿಧಾನಗಳ ಅವಶ್ಯಕತೆ ಇರುವ ಸ್ಥಿತಿ ಎಂದಾಗುತ್ತದೆ, ಅಂಧರ ದೃಷ್ಟಿಯ ತೀಕ್ಷ್ಣತೆ (Visual Acuity) ಮತ್ತು ದೃಷ್ಟಿಯ ಕಾರ್ಯನಿರ್ವಹಣೆಯ ಆಧಾರದ ಮೇಲೆ ಅವರನ್ನು ಬೇರೆ ಬೇರೆಯಾಗಿ ವಿಂಗಡಿಸಬಹುದು. ದೃಷ್ಟಿಯ ತೀಕ್ಷ್ಣತೆಯನ್ನು ಆಧರಿಸಿ, ಅಂಧರನ್ನು ಅಲ್ಪ ದೃಷ್ಟಿಯಿರುವವರು, ಬ್ರೈಲ್‌ನ ಅಗತ್ಯವಿರುವವರು ಮತ್ತು ಸಂಪೂರ್ಣ ಅಂಧರು ಎಂದು ವಿಂಗಡಿಸಬಹುದು. ಕಲಿಕಾ ಕೌಶಲ್ಯಗಳ ಆಧಾರದ ಮೇಲೆ ಅಂಧರನ್ನು ಶೈಕ್ಷಣಿಕ ಅಂಧರು, ಶಾಸನಬದ್ಧ ಅಂಧರು ಮುಂತಾದ ರೀತಿಯಲ್ಲಿ ವಿಂಗಡಿಸಬಹುದು. ಒಂದು ಮೇಲ್ಮೈಯಿಂದ ಇನ್ನೊಂದು ಮೇಲ್ಮೈಗೆ ಬೆಳಕು ಹಾದುಹೋಗುವಾಗ, ಬೆಳಕಿನ ಕಿರಣಗಳು ನೇರವಾಗಿರಬಹುದು ಅಥವಾ ತಮ್ಮ ವ ಘೂಲಹಾದಿಯಿಂದ ವಿಚಲಿತವಾಗಬಹುದು, ಅಥವಾ ವಸ್ತುವಿನ ಸಾಂದ್ರತೆಯನ್ನು ಆಧರಿಸಿ, ಬೆಳಕು ಬಿದ್ದ ವಸ್ತುವಿನಲ್ಲಿ ಅದು ಭಾಗಬಹುದು. ಇದನ್ನು ವಕ್ರೀಭವನ (Refraction) ಎಂದು ಕರೆಯುತ್ತಾರೆ. ಎರಡು ಕಣ್ಣುಗಳೂ ಎರಡು ವಿಭಿನ್ನ ಪ್ರತಿಬಿಂಬಗಳನ್ನು ಪಡೆದು, ಕೇಂದ್ರ ನರಮಂಡಲಕ್ಕೆ ರವಾನಿಸುತ್ತವೆ. ಮೆದುಳು ಈ ಎರಡು ವಿಭಿನ್ನ ಪ್ರತಿಬಿಂಬಗಳನ್ನು ಪಡೆದ ನಂತರ, ಅವರೆಡನ್ನು ಸಂಯೋಜನಾ ಪ್ರಕ್ರಿಯೆ ccccಎಂದು ಕರೆಯಲ್ಪಡುವ ವಿಧಾನದ ಮೂಲಕ ಕಣ್ಣುಗಳಿಗೆ ಒಂದೇ ಪ್ರತಿಬಿಂಬ ಕಾಣುವಂತೆ ಮಾಡುತ್ತದೆ.

ಹೀಗೆ ವಿವಿಧ ಪ್ರಕಾರಗಳಲ್ಲಿ ವಿಂಗಡಿಸುವುದರಿಂದ, ದೃಷ್ಟಿದೋಷವಿರುವ ಮಕ್ಕಳಲ್ಲಿ ಕೌಶಲಗಳನ್ನು ಬೆಳೆಸಲು ಸೂಕ್ತವಾಗುವ ಬೋಧನಾ ವಿಧಾನಗಳನ್ನು ರೂಪಿಸಲು ಶಿಕ್ಷಕರಿಗೆ ಅನುಕೂಲವಾಗುತ್ತದೆ. ಈ ಮಕ್ಕಳ ಸೇವೆಯಲ್ಲಿ ಬಳಸಬಹುದಾದ ಬೋಧನಾ ವಿಧಾನಗಳನ್ನು ಮತ್ತು ಬೋಧನಾ ಸಾಮಗ್ರಿಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

**ಶಾಸನಬದ್ಧ ಅಂಧತ್ವ:**

ಶಾಸನಬದ್ಧ ಅಂಧತ್ವ ಎಂದರೆ, ಉತ್ತಮವಾದ ಕಣ್ಣಿನ ದೃಷ್ಟಿಯ ತೀಕ್ಷ್ಣತೆ ಅತ್ಯುತ್ತಮ ರೀತಿಯಲ್ಲಿ ಕಣ್ಣಿನ ದೋಷವನ್ನೂ ಸರಿಮಾಡಿದ ಮೇಲೆ, 20/200 ಇರುವುದು ಅಥವಾ ದೃಷ್ಟಿಯ ಕ್ಷೇತ್ರದಲ್ಲಿ ದೃಷ್ಟಿ 20 ಡಿಗ್ರಿಗಳನ್ನು ಮೀರದಿರುವುದು (ದೃಷ್ಟಿಯ ತೀಕ್ಷ್ಣತೆ ಎಂದರೆ ದೃಷ್ಟಿಯ ಕೇಂದ್ರದ ಸ್ಪಷ್ಟತೆ, ಓದುವಾಗ ಇರುವಂತೆ). ವ್ಯಾಖ್ಯಾನಿಸುವಾಗ, ಈ ಪದಗಳನ್ನು ಸರಿಯಾದ ಅರ್ಥದಲ್ಲಿ ಬಳಸಬೇಕು.

**1. 20/200**: ಸಾಮಾನ್ಯ ವ್ಯಕ್ತಿ ಒಂದು ವಸ್ತುವನ್ನು 200 ಅಡಿ

Digitised by Bharatavani, CIIL

ಅಂತರದಿಂದ ನೋಡಿದರೆ, ಅದೇ ವಸ್ತುವನ್ನು ದೃಷ್ಟಿ ದೋಷವಿರುವ ವ್ಯಕ್ತಿ, 20 ಅಡಿ ಅಂತರದಿಂದ ನೋಡುತ್ತಾನೆ. ಈ ಅನುಪಾತವನ್ನು ಮೀಟರ್‌ನಲ್ಲಿ 6/60 ಎಂದು ಹೇಳಬಹುದು.

2. **ದೃಷ್ಟಿಯ ಕ್ಷೇತ್ರ:** ಇದು ದೃಷ್ಟಿಯ ಸ್ಪಷ್ಟತೆಯನ್ನು ಸೂಚಿಸುತ್ತದೆ ಮತ್ತು ದೃಷ್ಟಿಯ ಕೇಂದ್ರವನ್ನು ನಿರೂಪಿಸುತ್ತದೆ.

3. **ಉತ್ತಮವಾದ ಕಣ್ಣು:** ಅಂಧತ್ವವನ್ನು ಎರಡು ಕಣ್ಣುಗಳಿಗೂ ನಿರ್ಧರಿಸಬೇಕು. ಒಂದು ಕಣ್ಣು ಸಾಮಾನ್ಯವಾಗಿದ್ದು, ಮತ್ತೊಂದು ಅಂಧತ್ವವನ್ನು ಹೊಂದಿದ್ದರೆ, ವ್ಯಕ್ತಿಯನ್ನು ಅಂಧನೆಂದು ಪರಿಗಣಿಸಲಾಗುವುದಿಲ್ಲ. ಶೈಕ್ಷಣಿಕ ಉದ್ದೇಶಗಳಿಗಾಗಿ, ಅಂಧತ್ವವನ್ನು ನಿರ್ಧರಿಸುವಾಗ ಉತ್ತಮ ಕಣ್ಣನ್ನು ಗಣನೆಗೆ ತೆಗೆದುಕೊಳ್ಳಬೇಕು.

4. **ಪಾರ್ಶ್ವ ದೃಷ್ಟಿ:** ಈ ಸ್ಥಿತಿಯಲ್ಲಿ ದೃಷ್ಟಿದೋಷವು ತೀವ್ರವಾಗಿರುತ್ತದೆ, ಸಾಧಾರಣವಾಗಿ ಉತ್ತಮ ಕಣ್ಣಿನಲ್ಲಿ ದೃಷ್ಟಿಯ ತೀಕ್ಷ್ಣತೆಯು, ಸರಿಪಡಿಸಿದ ನಂತರ 20/200 ರಿಂದ 20/70 ಇರುತ್ತದೆ. ಹಲವಾರು ಸಾಧನಗಳಿಂದ ಮತ್ತು ಶೈಕ್ಷಣಿಕ ವಿಧಾನಗಳಿಂದ ಇಂತಹ ಮಕ್ಕಳಿಗೆ ಸಾಮಾನ್ಯ ಮಕ್ಕಳಂತೆ ಶಿಕ್ಷಣ ನೀಡಬಹುದು, ಇವರು ಸಂಪೂರ್ಣ ಅಂಧರಂತಲ್ಲ.

5. **ಅಲ್ಪ ದೃಷ್ಟಿ:** ಈ ಸ್ಥಿತಿಯಲ್ಲಿ, ವ್ಯಕ್ತಿಯಲ್ಲಿ ದೃಷ್ಟಿಯ ಕಾರ್ಯನಿರ್ವಹಣಾ ಶಕ್ತಿಯು ಬಹಳ ಕಡಿಮೆಯಿರುತ್ತದೆ. ಇವರಿಗೆ ದೊಡ್ಡಕ್ಷರಗಳ ಪುಸ್ತಕಗಳನ್ನು ಮತ್ತು ಓದಲು ಮಸೂರಗಳನ್ನು ಒದಗಿಸಬೇಕಾಗುತ್ತದೆ. ಇತ್ತೀಚಿಗೆ ತಂತ್ರಜ್ಞಾನದಲ್ಲಾಗಿರುವ ಬೆಳವಣಿಗೆಯಿಂದ ಇವರಿಗೆ ಉತ್ತಮ ಶೈಕ್ಷಣಿಕ ಅವಕಾಶಗಳು ದೊರಕುವಂತಾಗಿದೆ.

ಸಾಮಾನ್ಯ ಜನರು ಅಂಧತ್ವವನ್ನು ದೂರವಿಡಲು, ದೃಷ್ಟಿಯ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಹೇಳುವುದಾದರೆ, ದೃಷ್ಟಿದೋಷವಿರುವವರು ಶೈಕ್ಷಣಿಕವಾಗಿ ಹಾಗೂ ವೈದ್ಯಕೀಯವಾಗಿ ಮುಂದೆ ಇನ್ನೂ ಹೆಚ್ಚಿನ ತೊಂದರೆಗಳಾಗಬಾರದೆನ್ನುವ ಉದ್ದೇಶದಿಂದ, ದೃಷ್ಟಿಯ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಬೇಕು.

**ದೃಷ್ಟಿದೋಷಕ್ಕೆ ಕಾರಣಗಳು:**

1. ಶೈಶವದಲ್ಲಿ ವಿಟಮಿನ್ "ಎ" ಕೊರತೆ ಉಂಟಾಗುವುದರಿಂದ ಇರುಳುಕುರುಡುತನ ಉಂಟಾಗುತ್ತದೆ.
2. ಅಕಾಲಿಕ ಜನ್ಮವಾದ ಶಿಶುವನ್ನು ಇನ್‌ಕ್ಯೂಬೇಟರ್ ನಲ್ಲಿ ಇಟ್ಟಾಗ ಆಮ್ಲಜನಕ ಹೆಚ್ಚಾದರೆ ದೃಷ್ಟಿಯು ಸಂಪೂರ್ಣವಾಗಿ ಹೋಗುತ್ತದೆ.
3. ಮಧ್ಯಮ ವಯಸ್ಸಿನಲ್ಲಿ ಆಗುವ ಕಣ್ಣಿನ ಪೊರೆ.
4. ಗ್ಲೂಕೋಮಾ–ಕಣ್ಣಿನಲ್ಲಿ ಒತ್ತಡ ಹೆಚ್ಚಾದಾಗ ಕಣ್ಣಿನ ಗುಡ್ಡೆಗೆ ಘಾಸಿಯಾಗುತ್ತದೆ.
5. ತಾಯಿ ಮತ್ತು ತಂದೆಯ ರಕ್ತ ಹೊಂದಾಣಿಕೆಯಾಗದಿರುವುದು (ರಕ್ತದ Rh ಅಂಶ ಹೊಂದದಿರುವುದು)
6. ಪೌಷ್ಟಿಕ ಆಹಾರದ ಕೊರತೆ
7. ರಕ್ತಸಂಬಂಧಿಕರಲ್ಲಿ ವಿವಾಹವಾಗುವುದು.
8. ಮಗು ಹುಟ್ಟುವಾಗ ಆಮ್ಲಜನಕದ ಕೊರತೆ

**ಸಾಮಾನ್ಯವಾಗಿರುವ ಕಣ್ಣಿನ ರೋಗಗಳು:**

ಕಣ್ಣಿನ ರೋಗಗಳನ್ನು ಹೊರಗಿನ ರೋಗಗಳು ಮತ್ತು ಒಳಗಿನ ರೋಗಗಳೆಂದು ವಿಭಾಗಿಸಬಹುದು. ಹೊರಗಿನ ರೋಗಗಳೆಂದರೆ, ಕಣ್ಣಿನ ಮೇಲ್ಮೈಯಲ್ಲಿ ಮತ್ತು ಕಣ್ಣಿನ ಅಕ್ಕಪಕ್ಕದ ಜಾಗದಲ್ಲಾಗುವ ರೋಗಗಳು. ಒಳಗಿನ ರೋಗಗಳೆಂದರೆ, ಕಣ್ಣಿನ ರಚನೆ ಮತ್ತು ಕಾರ್ಯಗಳಲ್ಲಿ ತೊಡಕನ್ನುಂಟುಮಾಡುವ ಮತ್ತು ಕೇಂದ್ರ ನರಮಂಡಲ ಜೋಡಣೆಗೆ ಸಂಬಂಧಿಸಿದ ರೋಗಗಳು.

**ಕಣ್ಣಿನ ಪೊರೆ:** ಮಸೂರ ಅಥವಾ ಅದರ ಮಧ್ಯಭಾಗ ಅಪಾರದರ್ಶಕವಾಗುವುದನ್ನು ಪೊರೆ ಎನ್ನುತ್ತಾರೆ. ಇದು ಮಸೂರದ ತುಂಬಾ ಇರಬಹುದು ಅಥವಾ ಅದರ ಒಂದು ಭಾಗದಲ್ಲಿರಬಹುದು. ಇದು ಕೇವಲ ಸುತ್ತಂಚಿನಲ್ಲಿದ್ದರೆ, ದೃಷ್ಟಿ ಸಹಜವಾಗಿರುತ್ತದೆ ಅಥವಾ ಸ್ವಲ್ಪ ವ್ಯತ್ಯಾಸವಾಗಬಹುದು. ಆದರೆ ಸಮಸ್ಯೆ ನೇರ ದೃಷ್ಟಿಯ ಮಧ್ಯಭಾಗದಲ್ಲಿದ್ದರೆ, ಅದರಿಂದ ಬಿಂಬ ಮೂಡುವ ಮೊದಲೆ ಅದು ವಿಚಲಿತಗೊಳ್ಳುತ್ತದೆ. ಕಣ್ಣಿನ ಪೊರೆಯಿಂದ ಆಗುವ ಅತ್ಯಂತ ಹೆಚ್ಚಿನ ತೊಂದರೆ ಎಂದರೆ ಬೆಳಕನ್ನು ಗ್ರಹಿಸುವ ಶಕ್ತಿಯಲ್ಲಿ ಕೊರತೆಯುಂಟಾಗುವುದು. ಮಸೂರದ ಸಹಜ ಸ್ಪಷ್ಟತೆ ಕಡಿಮೆಯಾಗುವುದರಿಂದ ದೃಷ್ಟಿಯ ನಾಶವಾಗುತ್ತದೆ ಮತ್ತು ಮಸೂರವು ಅಕ್ಷಿಪಟಲದ ಮೇಲೆ ಬಿಂಬವು ಮೂಡುವಂತೆ ಕಿರಣಗಳನ್ನು ಕೇಂದ್ರೀಕರಿಸಲಾರದು. ಗರ್ಭಸ್ಥ ಶಿಶುವಿನ ಮೊದಲ 3–4 ತಿಂಗಳುಗಳಲ್ಲಿ ಮಸೂರವು ರೂಪುಗೊಳ್ಳುತ್ತದೆ. ತಾಯಿಯು ಗರ್ಭವತಿಯಾದ ಪ್ರಾರಂಭದಲ್ಲಿ ಅವಳಿಗೆ ಖಾಯಿಲೆಯಾದರೆ, ಮಸೂರವು ದೋಷಪೂರ್ಣವಾಗಬಹುದು. ಸೀಮೆ ದಡಾರ, ವೈರಸ್ಸಿನ ಸೋಂಕಿನಿಂದ ತಾಯಿಗಾಗುವ ಸ್ವಲ್ಪ ತೊಂದರೆಗಳಿಂದಲೂ, ಬೆಳೆಯುವ ಮಗುವಿನ ಮೇಲೆ ಅದರ ದೃಷ್ಟಿಗೆ ಧಕ್ಕೆಯಾಗುವಂತಹ ತೀವ್ರತರ ಪರಿಣಾಮಗಳಾಗಬಹುದು. ಈ ರೀತಿಯಲ್ಲುಂಟಾಗುವ ಕಣ್ಣಿನ ಪೊರೆಗೆ ಅನುವಂಶೀಯ ಪೊರೆ ಎಂದೆನ್ನುತ್ತಾರೆ.

ಪೊರೆಗಳು ವಂಶಾವಳಿ ಕುಂದುಗಳಿಂದಲೂ ಉಂಟಾಗುತ್ತವೆ. ಬಾಲ್ಯದಲ್ಲಿ ಮಧುಮೇಹ, ಥೈರಾಯ್ಡಿನ ಹೆಚ್ಚಿನ ಚಟುವಟಿಕೆ ಮತ್ತು ಹೆಚ್ಚಾದ ಕ್ಯಾಲ್ಸಿಯಂ ಮುಂತಾದ ದೇಹದಲ್ಲಾಗುವ ರಾಸಾಯಿನಿಕ ಬದಲಾವಣೆಗಳ ವ್ಯತ್ಯಯಗಳಿಗೂ, ಪೊರೆಗೂ ಸಂಬಂಧವಿದೆ. ಈ ರೀತಿಯಲ್ಲುಂಟಾಗುವ ಪೊರೆಗಳಿಗೆ ಎರಡನೆ ಹಂತದ ಪೊರೆಗಳೆನ್ನುತ್ತಾರೆ. ಹೆಚ್ಚಿನ ಶಾಖಕ್ಕೆ, ವಿದ್ಯುಚ್ಛಕ್ತಿಗೆ ಮತ್ತು ಅಣುವಿಕಿರಣಗಳ ಸಂಪರ್ಕಕ್ಕೆ ಮಸೂರವು ಬಂದಾಗಲೂ ಅದು ಅಪಾರದರ್ಶಕವಾಗುತ್ತದೆ. ಕಣ್ಣಿಗೆ ಗಾಯವಾದಾಗ ಯಾವುದೇ

Digitised by Bharatavani, CIIL

ವಯಸ್ಸಿನ ವ್ಯಕ್ತಿಗೆ ಪೊರೆಯುಂಟಾಗಬಹುದು. ಇದನ್ನು ಪೆಟ್ಟಿನ (ಟ್ರಾಮಾಟಿಕ್) ಪೊರೆ ಎನ್ನುತ್ತಾರೆ. ಪೊರೆಗೆ ಚಿಕಿತ್ಸೆ ಎಂದರೆ, ಶಸ್ತ್ರಕ್ರಿಯೆಯಿಂದ ಮಂಜಾದ ಮಸೂರವನ್ನು ತೆಗೆದುಹಾಕುವುದು. ತೆಗೆದ ಮಸೂರದ ಜಾಗದಲ್ಲಿ ಕೃತಕ ಮಸೂರವನ್ನು ಒಳಗೆ ಜೋಡಿಸುತ್ತಾರೆ (ಇಂಟರಾಓಕ್ಯುಲರ್ ಲೆನ್ಸ್ ಇಂಪ್ಲಾಂಟ್–IOA) ಅಥವಾ ಪೊರೆಯ ಕನ್ನಡಕಗಳನ್ನು ನೀಡುತ್ತಾರೆ.

**ಹತ್ತಗಣ್ಣು (ಗ್ಲೂಕೋಮ):** ಹತ್ತಗಣ್ಣು ಒಂದು ರೋಗವಲ್ಲ, ಆದರೆ ಇದೊಂದು ದೃಷ್ಟಿಯ ತೊಂದರೆಗಳ ಸಂಕೀರ್ಣ ಸ್ಥಿತಿ, ಮಧುಮೇಹ (ಡಯಾಬಿಟಿಸ್), ಅತಿ ಉದ್ವೇಗ (ಹೈಪರ್ ಟೆನ್‌ಶನ್), ಅಲರ್ಜಿಗಳಿಗೆ ಆಸ್ತಮಾ, ಚರ್ಮರೋಗಗಳಿಗೆ ಸ್ಟೀರಾಯಿಡ್ ಔಷದಗಳ ಬಳಕೆ– ಇವುಗಳ ಪರಿಣಾಮವಾಗಿ ಕಣ್ಣಿನ ಒಳ ಒತ್ತಡ ಹೆಚ್ಚಾಗಿ ದೃಷ್ಟಿಯ ನಾಶವಾಗುತ್ತದೆ. ಇದನ್ನು ಸರಿಪಡಿಸದಿದ್ದರೆ, ಅಂಧತ್ವ ಉಂಟಾಗುತ್ತದೆ. ಅಂಧತ್ವ ಸಾಮಾನ್ಯವಾಗಿ ಸುತ್ತಂಚಿನಿಂದ ಪ್ರಾರಂಭವಾಗುತ್ತದೆಯೆ ಹೊರತು ಮಧ್ಯದಿಂದಲ್ಲ. ಸಾಮಾನ್ಯವಾಗಿ ಮುಂದಿನ ಮತ್ತು ಹಿಂದಿನ ಗೂಡುಗಳಲ್ಲಿ ನೀರಿನ ದ್ರವ ತುಂಬಿ ಮಂದದ್ರವದೊಳಗೆ ಸೋರುತ್ತದೆ. ಬಾಸೆದಿಂಡು ನೀರಿನದ್ರವವನ್ನು ಉತ್ಪತ್ತಿಮಾಡುತ್ತದೆ, ಈ ದ್ರವ ಘಟಿಕಜಲದಂತಿರುತ್ತದೆ. ಇದು ವಕ್ರೀಭವನದ ಮಾಧ್ಯಮದಂತೆ ವರ್ತಿಸುವುದರ ಜೊತೆಗೆ, ರಕ್ತನಾಳಗಳಲ್ಲಿದ ಮಸೂರ, ಪಾರದರ್ಶಕಪೊರೆಗಳಿಗೆ ಪೋಷಕಾಂಶಗಳನ್ನು ಒದಗಿಸುತ್ತದೆ ಮತ್ತು ಒಳ ಒತ್ತಡವು ಸಮರ್ಪಕವಾಗಿರುವಂತೆ ನೋಡಿಕೊಳ್ಳುತ್ತದೆ. ನೀರಿನದ್ರವ ಉತ್ಪತ್ತಿಯಾಗುವ ದರ ಮತ್ತು ಕಣ್ಣಿನಿಂದ ಹೊರಹೋಗುವ ನೀರಿನದ್ರವವನ್ನು ತಡೆಯುವ ಗತಿಗಳ ಸಹಾಯದಿಂದ ಕಣ್ಣಿನ ಒಳ ಒತ್ತಡವನ್ನು ಕಂಡುಹಿಡಿಯಲಾಗುತ್ತದೆ. ಸಾಮಾನ್ಯವಾಗಿ ಇವರೆಡರ ದರದಲ್ಲಿ ಒಂದು ಸಮತೋಲನವಿರುತ್ತದೆ. ಹಿಂದಿನ ಗೂಡಿನಿಂದ ನೀರಿನ ದ್ರವ ಕರಿಯಾಲಿ ಮತ್ತು ಮಸೂರಗಳ ನಡುವೆ ಹಾದು ಪಾಪೆಯ ಮೂಲಕ ಹೊರಹೋಗುತ್ತದೆ. ಪಾಪೆಯ ಮೂಲಕ ಹೊರಬಂದ ಈ ದ್ರವ ಮುಂದಿನ ಗೂಡನ್ನು ತುಂಬುತ್ತದೆ, ಉಳಿದ ದ್ರವ ಗೂಡಿನ ಕೋನದ ಟ್ರಾಬೆಕ್ಯುಲರ್ (trabecular) ಜಾಲದ ಮೂಲಕ ಹಾದು ಶ್ಲೆಮ್ (Shlemm) ಕಾಲುವೆಗಳ ಮೂಲಕ ಅಪಿಧಮನಿ ರಕ್ತನಾಳಗಳಗಳಲ್ಲಿ ಹರಿದು ಮುಂದಿನ ಬಾಸೆ ರಕ್ತನಾಳಗಳನ್ನು ಸೇರುತ್ತದೆ. ಇದು ನೀರಿನದ್ರವದ ಪ್ರಮುಖ ಹೊರಹೋಗುವ ಹಾದಿ. ಇದಲ್ಲದೆ, ಉಳಿದ ಸ್ವಲ್ಪ ಭಾಗ ಕರಿಯಾಲಿಯ ರಕ್ತನಾಳಗಳಿಂದ ಹೀರಲ್ಪಡುತ್ತದೆ, ಮತ್ತಷ್ಟು ಭಾಗ ಮಂದದ್ರವದೊಡನೆ ಸೇರಿ, ಅದರೊಡನೆ ಹಿಂಭಾಗದ ಸಾಗಾಲುವೆಗಳ ಮೂಲಕ ಕಣ್ಣಿನಿಂದ ಹೊರಗೆ ಹೋಗುತ್ತದೆ.

ಟ್ರಾಬೆಕ್ಯುಲರ ಜಾಲ ಮತ್ತು ಶ್ಲೆಮ್ ಕಾಲುವೆಯಲ್ಲಿ ಅಡಚಣೆಯುಂಟಾದಾಗ, ಮುಂದಿನ ಗೂಡಿನ ಕೋನಕ್ಕೆ ಹರಿಯುವ ನೀರಿನದ್ರವಕ್ಕೆ ತಡೆಯುಂಟಾಗುವುದರಿಂದ ಹತ್ತಗಣ್ಣು (ಹೆಚ್ಚಿದ ಕಣ್ಣಿನ ಒಳ ಒತ್ತಡ) ಉಂಟಾಗುತ್ತದೆ.

ಹತ್ತಗಣ್ಣಿನಲ್ಲಿ ಅನೇಕ ವಿಧಗಳಿವೆ, ಬೇರೂರಿದ (ಕ್ರಾನಿಕ್) ಸರಳ ಹತ್ತಗಣ್ಣು, ತೀವ್ರತಮ ನಿಬಿಡ (ಕಂಜೆಸ್ಟೆಡ್) ಹತ್ತಗಣ್ಣು ಮತ್ತು ದ್ವಿತೀಯ ಹಂತದ (ಸೆಕೆಂಡರಿ) ಹತ್ತಗಣ್ಣು. ಶಾಶ್ವತವಾದ ದೃಷ್ಟಿನಾಶವನ್ನು ತಡೆಗಟ್ಟಲು ಪ್ರಾರಂಭದಲ್ಲೆ ರೋಗವನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡುವುದು ಅತ್ಯವಶ್ಯಕ.

**ಸೋಂಕು**: ಈ ರೋಗ ವಿಶ್ವವ್ಯಾಪಿಯಾದುದು ಮತ್ತು ವಿಶ್ವದ ಜನಸಂಖ್ಯೆಯ ಸುಮಾರು ಶೇ.15 ರಷ್ಟು ಜನ ಇದರಿಂದ ಬಳಲುತ್ತಿದ್ದಾರೆಂದು ಅಂದಾಜುಮಾಡಲಾಗಿದೆ. ಸೋಂಕು ಎಂದರೆ, ಕೂಡುಪೊರೆ ಮತ್ತು ಪಾರದರ್ಶಕ ಪೊರೆಗಳ ಬೇರೂರುವ ಸೋಂಕು ರೋಗವಾಗಿದೆ, ಇದು ವೈರಸ್ ಮತ್ತು ರಿಕೆಟ್ಸಿಯಗಳ ನಡುವಿನ ಒಂದು ಬಗೆಯಾಗಿರಬಹುದೆಂದು ತಿಳಿದಿರುವ ಜೀವಾಣುಗಳಿಂದ ಉಂಟಾಗುತ್ತದೆ. ಇದು ಬಹಳ ಸಾಂಕ್ರಾಮಿಕವಾದದ್ದು ಮತ್ತು ಸೂಕ್ತ ಚಿಕಿತ್ಸೆ ನೀಡದಿದ್ದರೆ ಅಂಧತ್ವ ಉಂಟಾಗುತ್ತದೆ. ಈ ರೋಗ ಹರಡದಂತೆ ಎಚ್ಚರಿಕೆ ವಹಿಸಲು ವೈಯುಕ್ತಿಕ ಸ್ವಚ್ಛತೆಗೆ ಗಮನ ನೀಡುವುದೂ ಮುಖ್ಯ, ಎಂದು ಶಿಕ್ಷಕರು ತಿಳಿಸಬೇಕು, ಏಕೆಂದರೆ ಇದು ಒಬ್ಬರಿಂದ ಒಬ್ಬರಿಗೆ ನೇರ ಸಂಪರ್ಕದಿಂದ ಹರಡುತ್ತದೆ.

**ಪಾರದರ್ಶಕ ಪೊರೆಯ ಹುಣ್ಣು:** ಅಕ್ಷಿಪಟಲದ ಮೇಲೆ ಬಿಂಬ ಮೂಡುವುದಕ್ಕೆ ಮುಂಚೆ ಕಣ್ಣಿನ ಮುಂಭಾಗದಲ್ಲಿರುವ ಪಾರದರ್ಶಕಪೊರೆಯ ಮೂಲಕವೆ ಬೆಳಕು ಹಾದು ಹೋಗುತ್ತದೆ. ಇಲ್ಲಿ ಎರಡು ವಿಧದ ಪಾರದರ್ಶಕಪೊರೆಯ ತೊಂದರೆಗಳನ್ನು ಚರ್ಚಿಸಲಾಗಿದೆ. ಮೊದಲನೆಯದು, ಪಾರದರ್ಶಕಪೊರೆಯ ಉರಿ ಅಥವಾ ಕೆರಟೈಟಿಸ್. ಎರಡನೆಯದು, ಬೆಳವಣಿಗೆಯ ತೊಡಕುಗಳು, ಇವುಗಳಲ್ಲಿ ಹಲವು ಹುಟ್ಟಿದಾಗಲೆ ಅಥವಾ ಆನಂತರ ಜೀವನದಲ್ಲಿ ಕಾಣಿಸಿಕೊಳ್ಳುವಂತಹ ಅನುವಂಶೀಯವಾದ ತೊಡಕುಗಳು. ಪಾರದರ್ಶಕ ಪೊರೆಯ ಉರಿಯ ಸಾಮಾನ್ಯ ಲಕ್ಷಣಗಳೆಂದರೆ, ನೋವು, ಬೆಳಕಿಗೆ ಹೆದರುವುದು, ಕಣ್ಣೀರು ಸುರಿಯುವುದು ಮತ್ತು ದೃಷ್ಟಿಯ ತೊಂದರೆ. ಈ ಉರಿಗಳನ್ನು ಹೀಗೆ ವಿಭಜಿಸಬಹುದು:

1) ಸಾಧಾರಣ ಉರಿ 2) ತೀವ್ರತರ ಉರಿ 3) ಪಾರದರ್ಶಕಪೊರೆಯ ಹುಣ್ಣು.

ವಯಸ್ಸಾದ ವ್ಯಕ್ತಿಗಳು ದಡಾರದಂತಹ ತೀವ್ರ ಸೋಂಕಿನ ಖಾಯಿಲೆಗಳಿಂದ ಬಳಲುವಾಗ ಅಥವಾ ರೋಗ ಗುಣವಾದ ನಂತರ, ಪಾರದರ್ಶಕಪೊರೆಯ ನಿರೋಧಕ ಗುಣ ಅಥವಾ ಪಾರದರ್ಶಕಪೊರೆಯ ಹೊದಿಕೆಯ ಪದರ (ಕಾರ್ನಿಯ ಎಪಿಥೇಲಿಯಂ) ತೆಳುವಾದಾಗ ಪಾರದರ್ಶಕಪೊರೆಯ ಹುಣ್ಣಾಗುತ್ತದೆ. ಕೆಲವು ಬ್ಯಾಕ್ಟೀರಿಯಾಗಳಿಂದಲೂ ಹುಣ್ಣಾಗಬಹುದು. ರೋಗನಿರೋಧಕ (ಆಂಟಿಬೈಯಾಟಿಕ್ಸ್) ಔಷಧಗಳ ಮತ್ತು ಸ್ಟೆರಾಯ್ಡುಗಳ ವಿವೇಚನೆಯಿಲ್ಲದ ಹೆಚ್ಚಿನ ಬಳಕೆಯಿಂದ ಹುಣ್ಣುಗಳಾಗುತ್ತವೆ. ಸೋಂಕು ಹರಡುವ ಬ್ಯಾಕ್ಟೀರಿಯ, ಕೆಟ್ಟಬೆಳೆ (ಫಂಗೈ) ಮತ್ತು ವಿಷಾಣುಗಳು (ವೈರಸ್) ಮುಂತಾದವು ಕೆಲವೊಮ್ಮೆ ಕಣ್ಣನ್ನು ಪ್ರವೇಶಿಸಿ, ಅಲ್ಲಿ ಅಭಿವೃದ್ಧಿಹೊಂದಲು ಅವಕಾಶ ಸಿಗಬಹುದೆಂದು ಕಾತರಿಸುತ್ತಿರುತ್ತವೆ. ಜೀವಕಣಗಳು ಬಲವಾಗಿಲ್ಲದಿದ್ದರೆ, ಸಹಜ ರೋಗನಿರೋಧಕ ಶಕ್ತಿ ಕುಂದುತ್ತದೆ, ಪಾರದರ್ಶಕ ಪೊರೆಯಲ್ಲಿ ಹುಣ್ಣಾಗಿ, ದೃಷ್ಟಿಯ ಹಾದಿಯಲ್ಲಿ

Digitised by Bharatavani, CIIL

ಕಲೆಗಳು ಕಾಣಿಸಿಕೊಳ್ಳುತ್ತವೆ. ಚಿಕ್ಕಪುಟ್ಟ ಗಾಯಗಳಾದಾಗ ಮತ್ತು ಸ್ವಲ್ಪ ಸೋಂಕು ತಗುಲಿದಾಗ ಕಂಡುಬರುವ ಸಾಧಾರಣ ಲಕ್ಷಣಗಳನ್ನು ಕಡೆಗಣಿಸಬಾರದೆಂದು, ಮುಂದೆ ಅಂಧತ್ವ ಉಂಟಾಗುವ ಸಾಧ್ಯತೆಗಳಿವೆ, ಎಂದು ಪ್ರತಿಯೊಬ್ಬರಿಗೂ ಯಾವಾಗಲೂ ತಿಳಿಸಿ ಹೇಳುವುದು ಅತ್ಯಂತ ಮುಖ್ಯವಾದ ಕೆಲಸ. ಪಾರದರ್ಶಕ ಪೊರೆಯ ಉರಿ ಕೇವಲ ಮೇಲ್ಮೈಯ ಉರಿಯಾಗಿರಬಹುದು ಅಥವಾ ಮಧ್ಯಭಾಗಕ್ಕೆ ತಗಲುವ ತೀವ್ರರೂಪದ್ದಿರಬಹುದು. ಹೊರಗಿನ ಪದರದ ಜೀವಕೋಶಗಳು ನಾಶಹೊಂದಿದರೆ, ಪಾರದರ್ಶಕತೆ ಮಂಜಾಗುತ್ತದೆ, ಆದರೆ ಇದು ತಾತ್ಕಾಲಿಕವಾಗಿದ್ದು ಈ ಜೀವಕೋಶಗಳು ಸಹಜವಾಗಿ ಮತ್ತೆ ಹುಟ್ಟಿಕೊಳ್ಳುತ್ತವೆ. ಉರಿ ಮೇಲ್ಮೈಯಿಂದ ಒಳಹೊಕ್ಕರೆ ಪಾರದರ್ಶಕ ಪೊರೆ ಮಂಜಾಗುತ್ತದೆ. ಪಾರದರ್ಶಕಪೊರೆಯ ಅತ್ಯಂತ ಸೂಕ್ಷ್ಮ ನರಜಾಲವು ಸ್ಪರ್ಶಕ್ಕೆ ಮತ್ತು ನೋವಿಗೆ ಸಂವೇದಿಸುತ್ತದೆ. ಸಾಮಾನ್ಯವಾಗಿ ನಡೆಯುವ ಕಣ್ಣನ್ನು ಮಿಟುಕಿಸುವ ಅನೈಚ್ಛಿಕ ಕ್ರಿಯೆಯಲ್ಲಿ ಒಣಗಿದ ಅನುಭವ ಉಂಟಾಗತೊಡಗುತ್ತದೆ. ಗಾಳಿಯಲ್ಲಿರುವ ತುರಿಕೆಯುಂಟು ಮಾಡುವ ಕಣಗಳಿಂದಲೂ ಮಿಟುಕಿಸುವುದು ಹೆಚ್ಚಾಗುತ್ತದೆ. ಪಾರದರ್ಶಕ ಪೊರೆಯ ಸ್ವಲ್ಪ ಭಾಗವನ್ನು ತೆಗೆದರೆ ಬಹಳ ನೋವಾಗುತ್ತದೆ, ಬೆಳಕಿಗೆ, ಕಣ್ಣು ಮತ್ತು ರೆಪ್ಪೆಗಳ ಅನೈಚ್ಛಿಕ ಮುಚ್ಚುವ ಕ್ರಿಯೆಗೆ ಸೂಕ್ಷ್ಮವಾಗಿ ಪ್ರತಿಕ್ರಿಯೆ ಒಂಟಾಗುತ್ತದೆ. ಹೊರಗಿನಿಂದ ಒಳಹೊಕ್ಕುವ ಸಣ್ಣ ವಸ್ತುಗಳು, ಚಿಕ್ಕಪುಟ್ಟ ತರಚುವಿಕೆ ಮತ್ತು ಸುಟ್ಟಗಾಯಗಳು, ಇವೆಗಳೆಲ್ಲವೂ ಆಗಾಗ್ಗೆ ಪಾರದರ್ಶಕ ಪೊರೆಯ ಮೇಲ್ಮೈಯಲ್ಲಿ ಉರಿಯನ್ನುಂಟು ಮಾಡುತ್ತವೆ. ಇದರಿಂದ ಸೋಂಕಿಗೆ ತಡೆಗೋಡೆಯಾಗಿರುವ ಕಣ್ಣಿನ ಸಹಜ ಭಾಗಕ್ಕೆ ಧಕ್ಕೆಯಾಗಿ, ಪಾರದರ್ಶಕ ಪೊರೆ ರೋಗಗಳಿಗೆ ಸುಲಭವಾಗಿ ತುತ್ತಾಗುತ್ತದೆ.

**ಬೋಧನೆ ಮತ್ತು ಕಲಿಕೆ:**

ಅಂಧ ಮಕ್ಕಳ ಬೋಧನೆ ಮತ್ತು ಕಲಿಕೆ ಬಗ್ಗೆ ಶಿಕ್ಷಕರಿಗೆ ಅನೇಕ ಪ್ರಶ್ನೆಗಳು ಏಳುತ್ತವೆ. ಇವುಗಳಲ್ಲಿ ಮುಖ್ಯವಾದ ಪ್ರಶ್ನೆಗಳಿಗೆ ಈ ಮುಂದೆ ಉತ್ತರ ನೀಡಲಾಗಿದೆ.

**1. ಅಂಧಮಕ್ಕಳ ಕಲಿಕಾ ವಿಧಾನವು ಯಾವುದು?**

ಸಾಮಾನ್ಯ ಮಕ್ಕಳು ತಮ್ಮ ಸುತ್ತಮುತ್ತಲಿನ ಪ್ರಪಂಚದ ಬಗ್ಗೆ ಏನು ತಿಳಿದಿರುತ್ತಾರೋ, ಅದರಲ್ಲಿ ಅವರು ಸುಮಾರು ಶೇ 85–90 ಭಾಗವನ್ನು ತಮ್ಮ ಕಣ್ಣುಗಳ ಮೂಲಕ ಕಲಿತಿರುತ್ತಾರೆ. ದೃಷ್ಟಿದೋಷವಿರುವ ಮಕ್ಕಳು, ಇತರ ಇಂದ್ರಿಯಗಳನ್ನು ಅಂದರೆ ತಮ್ಮ ಶ್ರವಣ ಮತ್ತು ಸ್ಪರ್ಶೇಂದ್ರಿಯಗಳನ್ನು ಬಳಸಬೇಕು. ಬ್ರೈಲ್ ಓದುವುದು ಮತ್ತು ಬರೆಯುವುದು, ವಿಶೇಷ ರೀತಿಯ ಶ್ರವಣ ತರಬೇತಿ, ತನ್ನ ಪರಿಸರದಲ್ಲಿ ಸ್ವತಂತ್ರವಾಗಿ ಹೇಗೆ ನಡೆದಾಡುವುದು ಎನ್ನುವುದರ ಬಗ್ಗೆ ತರಬೇತಿ, ಮುಂತಾದ ಪರಿಹಾರಾತ್ಮಕ ಕೌಶಲಗಳ ಮೂಲಕ, ಸಾಮಾನ್ಯ ಮಕ್ಕಳಿಗೆ ಬೋಧಿಸುವುದನ್ನು ಅವರ ಜೊತೆಯಲ್ಲಿ ಅಂಧಮಕ್ಕಳು ತಾವೂ ಕಲಿತು, ಅವರಂತೆಯೆ ಮನೋಭಾವಗಳನ್ನು ರೂಪಿಸಿಕೊಂಡು, ಅವರಿಗೆ ಸಿಗುವ ಮಾಹಿತಿಯನ್ನು ತಾವೂ ಪಡೆದು, ಅವರಷ್ಟೆ ಆತ್ಮವಿಶ್ವಾಸವನ್ನು ಗಳಿಸುತ್ತಾರೆ.

**2. ಶಿಕ್ಷಕರು ಸಾಮಾನ್ಯ ಮಕ್ಕಳಲ್ಲಿ ನಿರೀಕ್ಷಿಸುವ ಶೈಕ್ಷಣಿಕ ಮಟ್ಟವನ್ನು ಅಂಧಮಕ್ಕಳಲ್ಲೂ ನಿರೀಕ್ಷಿಸಬಹುದೇ ಅಥವಾ ಏನಾದರೂ ವ್ಯತ್ಯಾಸವಿರುತ್ತದೆಯೇ?**

ಶಿಕ್ಷಕರು ಎಲ್ಲರಲ್ಲೂ ಏಕರೂಪದ ಶೈಕ್ಷಣಿಕ ಮಟ್ಟವನ್ನು ನಿರೀಕ್ಷಿಸಬೇಕು. ಮಾಹಿತಿಯ ಸಂಗ್ರಹ ಮತ್ತು ಪರಿಕಲ್ಪನೆಗಳ ಗ್ರಹಿಕೆ ಒಂದೇ ತೆರನಾಗಿರಬೇಕೆಂಬ ನಿರೀಕ್ಷೆಯನ್ನಿಟ್ಟುಕೊಳ್ಳುವುದು ಒಳ್ಳೆಯದು, ಒಮ್ಮೊಮ್ಮೆ, ಪಾಠವನ್ನು ಬದಲಾಯಿಸಬೇಕಾಗಬಹುದು ಅಥವಾ ಅದರ ಬದಲಿಗೆ ಬೇರೆ ಪಾಠವನ್ನು ಹೇಳಬೇಕಾಗಬಹುದು. ಚಿಕ್ಕ ಮಕ್ಕಳಿದ್ದಾಗ, ಪಠ್ಯವಸ್ತು ಹೆಚ್ಚಾಗಿ ಅಥವಾ ಕೇವಲ ದೃಷ್ಟಿ ಆಧಾರಿತವಾಗಿದ್ದರೆ, ಅಂತಹ ಅಪರೂಪದ ಪಾಠವನ್ನು ಬಿಟ್ಟುಬಿಡಬೇಕು. ಆದರೆ, ಈ ಸಮಸ್ಯೆಗಳು ಮಗು ಪ್ರಾರಂಭದ ತರಗತಿಗಳಿಂದ ಮುಂದೆ ಹೋದಂತೆ ಕಡಿಮೆಯಾಗುತ್ತವೆ. 3ನೆಯ ತರಗತಿಯ ಮಧ್ಯದಲ್ಲಿ ಅಥವಾ ಕೊನೆಯಲ್ಲಿ ಮಾಮೂಲು ಪಠ್ಯಕ್ರಮ ಮತ್ತು ದೈನಂದಿನ ಸಾಧನಗಳನ್ನು ಸುಮಾರು ಶೇ. 80–85 ಭಾಗದಷ್ಟು, ಅದೇ ರೂಪದಲ್ಲಿ ಅಂಧಮಕ್ಕಳಿಗೆ ಅಳವಡಿಸಬಹುದು.

**3. ದೈನಂದಿನ ಶಿಕ್ಷಕರಿಗೆ ಬ್ರೈಲ್‌ನಲ್ಲಿ ಏನು ಹೇಳಿದೆ ಎಂದು ಗೊತ್ತಾಗುವುದು ಹೇಗೆ? ಅವರು ಬ್ರೈಲ್‌ನ್ನು ಕಲಿಯಬೇಕೇ?**

ಮೊದಲೆರಡು ವರ್ಷಗಳಲ್ಲಿ, ಪ್ರತಿಯೊಂದು ವಿಷಯವನ್ನೂ ಮುದ್ರಣದ ಮೇಲೆ ಬ್ರೈಲ್‌ನ್ನು ಬರೆಯುವ ಮೂಲಕ ನೀಡಬೇಕು (ಇದನ್ನು ನಾವು ಸಂಕಲಿಸುವುದು ಎನ್ನುತ್ತೇವೆ), ಇದರಿಂದ ದೈನಂದಿನ ಶಿಕ್ಷಕರು ಮಗು ಓದುವಾಗ ಯಾವ ಪದವನ್ನು ಓದುತ್ತಿದೆ ಎಂದು ಸರಿಯಾಗಿ ಗಮನಿಸಲು ಸಾಧ್ಯವಾಗುತ್ತದೆ. ಪ್ರಶ್ನೆಗಳನ್ನು ಕೇಳಿದಾಗ, ಅವರು ಅಂಧಮಕ್ಕಳಿಗೆ ವಿವರಣೆ ನೀಡುವುದು, ಆ ಮಕ್ಕಳು ಪ್ರಶ್ನೆ ಕೇಳಿದಾಗ ಉತ್ತರಿಸುವುದು ಮುಂತಾದವನ್ನು, ಸಾಮಾನ್ಯ ಮಕ್ಕಳಿಗೆ ನೀಡುವ ಮಾಹಿತಿಯ ಮೂಲಕವೇ ಮಾಡಬಹುದು. ಮಗು 3ನೇ ತರಗತಿಗೆ ಬರುವಷ್ಟರಲ್ಲಿ, ಈ ಸಂಕಲನ ಕಾರ್ಯವು ನಿಲ್ಲುತ್ತದೆ, ಏಕೆಂದರೆ, ಆಗ ಮಗು ಓದಲು ಕಲಿಯುವುದಕ್ಕಾಗಿ ಓದುವುದಕ್ಕಿಂತ, ವಿಷಯವನ್ನು ತಿಳಿಯಲು ಓದುವಷ್ಟು, ಅದರ ದಕ್ಷತೆ ಓದುವ ಕೌಶಲದಲ್ಲಿ ಇರಬೇಕಾಗುತ್ತದೆ. ದೈನಂದಿನ ಶಿಕ್ಷಕರು ಬ್ರೈಲ್ ಓದುವವರನ್ನು, ತರಗತಿಯಲ್ಲಿ ಪರಿಣಾಮಕಾರಿಯಾಗಿ ಸಮನ್ವಯಗೊಳಿಸಲು, ಬ್ರೈಲ್‌ನ್ನು ಕಲಿಯುವ ಅಗತ್ಯವೇ ಇಲ್ಲ. ಆದರೆ, ಅವರಿಗೆ ಕಲಿಯುವ ಆಸಕ್ತಿ ಇದ್ದರೆ, ಸಂಪನ್ಮೂಲ ಶಿಕ್ಷಕರು ಸಂತೋಷದಿಂದ ಬಹುಶಃ ಅನೌಪಚಾರಿಕವಾಗಿ ಕಲಿಸುತ್ತಾರೆ, ಅಥವಾ ಆಸಕ್ತಿ ಹೆಚ್ಚಾಗಿದ್ದರೆ, ವಿಶೇಷ ತರಗತಿಗಳ ಮೂಲಕ ಔಪಚಾರಿಕವಾಗಿಯೇ ಕಲಿಸುತ್ತಾರೆ. ಅಂಧಮಕ್ಕಳು ಬಳಸುವ ವಿಶೇಷ

Digitised by Bharatavani, CIIL

ಸಾಧನಗಳ ಬಳಕೆಯನ್ನು ದೈನಂದಿನ ಶಿಕ್ಷಕರೂ ಕಲಿತುಕೊಂಡರೆ ಪ್ರಯೋಜನಕಾರಿಯಾಗುತ್ತದೆ.

**4. ಶಿಕ್ಷಕರು ಬೋಧಿಸುವಾಗ ತಾವು ಬಳಸುವ ಪದಗಳ ಬಗ್ಗೆ ಎಚ್ಚರಿಕೆಯಿಂದಿರಬೇಕೆ?**

ಖಂಡಿತ ಇಲ್ಲ. ಅವರು "ಇಲ್ಲಿ ನೋಡು!", " ನಾನೇನು ಹೇಳುತ್ತಿದ್ದೀನಿ ಎಂದು ನಿನಗೆ ಗೊತ್ತಾಗುತ್ತಿದೆಯೇ? ಆ ವಾಕ್ಯದ ಅರ್ಥವನ್ನು ಪಠ್ಯಪುಸ್ತಕದಲ್ಲಿ ನನಗೆ ನೋಡಕ್ಕಾಗಲ್ಲವಾ? ಮುಂತಾದ ವಾಕ್ಯಗಳನ್ನು ಅವರು ಬಳಸಬಹುದು. "ಶಿಕ್ಷಕರು ಸಂಪೂರ್ಣವಾಗಿ ಸಹಜವಾಗಿರಬಹುದು. ಅಂಧಮಗು ನಾಜೂಕಾದ ವಸ್ತುವಲ್ಲ, ಮಗು ಇಂತಹ ಸಾಮಾನ್ಯವಾದ ಮತ್ತು ಬಳಕೆಯಲ್ಲಿರುವ ವಾಕ್ಯಗಳ ಅರ್ಥವನ್ನು, ಪರಿಶೀಲಿಸುವುದು, ಅರ್ಥಮಾಡಿಕೊಳ್ಳುವುದು, ಗ್ರಹಿಸುವುದು ಎಂದು ತಿಳಿಯಬೇಕಾಗುತ್ತದೆ.

**5. ಶಿಕ್ಷಕರು ಬೋಧನೆಗೆ ಯಾವುದಾದರೂ ವಿಶೇಷ ತಂತ್ರಗಳನ್ನು ಬಳಸಬೇಕೆ?**

ಬಹುಶಃ ಬೇಡ. ಸಮನ್ವಯ ವ್ಯವಸ್ಥೆಯಲ್ಲಿ, ಅಂಧಮಗುವನ್ನು ದೈನಂದಿನ, ಉತ್ತಮ ಬೋಧನೆಗೆ ಸಿದ್ಧಪಡಿಸಲು, ದೈನಂದಿನ ತರಗತಿಯಲ್ಲಿ ಕಲಿಸುವ ಮೊದಲೆ, ಜಟಿಲ ಪರಿಕಲ್ಪನೆಗಳನ್ನು ಮೂಡಿಸುವುದು, ಅಪರಿಚಿತ ಪುಟ ವಿನ್ಯಾಸದ ಬಗ್ಗೆ ತಿಳಿಹೇಳುವುದು ಮುಂತಾದವು ಸಂಪನ್ಮೂಲ ಶಿಕ್ಷಕನ ಮುಖ್ಯ ಜವಾಬ್ದಾರಿಗಳಲ್ಲಿ ಒಂದಾಗಿದೆ. ಸಂಪನ್ಮೂಲ ಶಿಕ್ಷಕರು ತರಗತಿಯಲ್ಲಿ ಮಾಡಿದ ಪಾಠಗಳ ಬಗ್ಗೆ ಚರ್ಚಿಸಿ, ಅಂಧಮಕ್ಕಳು ಪಾಠಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ ಮತ್ತು ಮುಂದಿನ ಹಂತದ ಕಲಿಕೆಗೆ ಸಿದ್ಧವಾಗಿದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಕೆಲವು ಶಿಕ್ಷಕರು ಮಾರನೆಯ ದಿನಕ್ಕೆ ನಿರ್ದೇಶಗಳು, ವಿಶೇಷ ಆದೇಶಗಳು ಮುಂತಾದವನ್ನು ಕಪ್ಪು ಹಲಗೆಯ ಮೇಲೆ ಬರೆಯುವಾಗ, ತಾವು ಏನನ್ನು ಬರೆಯುತ್ತಿದ್ದಾರೋ ಅದನ್ನು ಬಾಯಲ್ಲಿ ಜೋರಾಗಿ ಹೇಳದಿದ್ದರೆ, ಆ ವಿಷಯದ ಬಗ್ಗೆ ಅಂಧಮಗುವಿಗೆ ಏನೂ ಗೊತ್ತಾಗದೆ, ಆ ಮಾಹಿತಿ ಅದಕ್ಕೆ ದೊರಕುವುದಿಲ್ಲ. ಒಬ್ಬ ಒಳ್ಳೆಯ ಶಿಕ್ಷಕನು ತಾನು ಬಹು ಇಂದ್ರಿಯ ವಿಧಾನವನ್ನು ಬಳಸಬೇಕು ಎಂದು ತಿಳಿದಿರುತ್ತಾನೆ, ಅಂದರೆ, ತಾನು ಕಪ್ಪು ಹಲಗೆಯ ಮೇಲೆ ಬರೆಯುವಾಗ, ತಾನು ಬರೆಯುತ್ತಿರುವುದನ್ನು ಜೋರಾಗಿ ಹೇಳಿದರೆ, ಅದು ನಿಜವಾಗಲೂ ಎಲ್ಲ ಮಕ್ಕಳಿಗೂ, ಎಲ್ಲರೂ ಸಾಮಾನ್ಯ ಮಕ್ಕಳಾದರೂ, ಒಂದು ಉತ್ತಮ ಬೋಧನಾ ವಿಧಾನವಾಗುತ್ತದೆ, ಎಂದು ತಿಳಿದಿರುತ್ತಾನೆ, ಏಕೆಂದರೆ, ಮಕ್ಕಳ ಕಲಿಕೆಯ ವಿಧಾನಗಳು ವಿಭಿನ್ನವಾಗಿರುತ್ತವೆ. ದೈನಂದಿನ ಶಿಕ್ಷಕನಿಗೆ ಈ ತಂತ್ರದ ಬಗ್ಗೆ ತಿಳಿದಿರಬೇಕು. ತಮ್ಮ ತರಗತಿಯಲ್ಲಿ ಅಂಧಮಗುವನ್ನು ಹೊಂದಿರುವ ಅತ್ಯುತ್ತಮ ಶಿಕ್ಷಕರೂ, ಸ್ವಲ್ಪ ಸಮಯದ ನಂತರ, "ಪರಿಹಾರಾತ್ಮಕ ಕೌಶಲಗಳ ಮೂಲಕ ಕಲಿಯುವುದರ ಬಗ್ಗೆ ಸ್ವಲ್ಪ ಯೋಚನೆ ಮಾಡಿದಾಗ, ಅದು ಅದ್ಭುತ ಎಂದನಿಸುತ್ತದೆ. ನಾನು ಸಾಮಾನ್ಯ ಮಕ್ಕಳ ಶಿಕ್ಷಕನಾಗಿ ಇನ್ನೂ ಉತ್ತಮನಾಗಿದ್ದೇನೆ ಎಂದು ನನಗೆ ಅನಿಸುತ್ತದೆ." ಎಂದು ಹೇಳುತ್ತಾರೆ ಎನ್ನುವುದು ಅನುಭವವೇದ್ಯ.

**6. ದೈನಂದಿನ ತರಗತಿಯಲ್ಲಿ ಅಂಧಮಕ್ಕಳಿಗಾಗಿ ವಿಶೇಷ ಪೀಠೋಪಕರಣಗಳನ್ನು,**

**ಸಲಕರಣೆಗಳನ್ನು ಅಥವಾ ಸಾಮಾನುಗಳನ್ನಿಡಲು ಜಾಗವನ್ನು ಒದಗಿಸಬೇಕೆ?**

ಅಂಧಮಕ್ಕಳು ಬಳಸುವ ಕೆಲವು ವಸ್ತುಗಳು ಅನಾನುಕೂಲ ವಾಗುವಂತಹವು. ಪುಸ್ತಕಗಳು ಬಹಳ ದೊಡ್ಡದಾಗಿರುತ್ತವೆ, ಇಳಿಜಾರು ಮೇಜಿನಿಂದ ಬರೆಯುವ ಹಲಗೆಗಳು ಮತ್ತು ಬರೆಯುವ ಸಾಧನಗಳು ಜಾರಿಬಿಡಬಹುದು. ಮುಖ್ಯೋಪಾಧ್ಯಾಯರು ಮತ್ತು ಸಂಪನ್ಮೂಲ ಶಿಕ್ಷಕರ ಜೊತೆ ಚರ್ಚಿಸಿ, ಕೆಲವು ಚಿಕ್ಕ ಬದಲಾವಣೆಗಳನ್ನು ಮಾಡಬೇಕಾಗಬಹುದು. ಏನೇ ಆಗಲಿ, ಇವು ಕನಿಷ್ಟ ಮಟ್ಟದಲ್ಲಿರಬೇಕು.

**ಅಂಧಮಕ್ಕಳಿಗೆ ಬ್ರೈಲ್ ಬೋಧನೆ:** ತೀವ್ರ ದೃಷ್ಟಿದೋಷದಿಂದ ಬಳಲುತ್ತಿರುವ ಅಂಧವ್ಯಕ್ತಿಗಳು ಜೀವಿಸುವ ಪರಿಸರದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಸ್ಪರ್ಶವೇ ಪ್ರಮುಖ ಮಾಧ್ಯಮ. ಅಂಧವ್ಯಕ್ತಿಗಳು ಶಿಕ್ಷಣವನ್ನು ಪಡೆಯತೊಡಗಿದ ದಿನದಿಂದಲೇ, ಈ ಅಂಶವು ಬೆಳಕಿಗೆ ಬಂತು. ಇದರ ಫಲವೇ, ತಮ್ಮ ಶಿಕ್ಷಣದಲ್ಲಿ ಅಂಧರು ಬಳಸುವ ಹಲವಾರು ಓದುವ ಮತ್ತು ಬರೆಯುವ ತಂತ್ರಗಳು. ಇವುಗಳಲ್ಲಿ ಕೆಲವು ಕೆತ್ತಲ್ಪಟ್ಟ ಅಕ್ಷರಗಳು ಹಾಗೂ ತಂತಿಯ ಗಂಟುಗಳಿಂದ ಬರೆಯಲ್ಪಟ್ಟ ಅಕ್ಷರಗಳು ಇತ್ಯಾದಿ.

ಈ ತಂತ್ರಗಳು ಎರಡು ಕಾರಣಗಳಿಗಾಗಿ ಸಫಲವಾಗಲಿಲ್ಲ. ಮೊದಲನೆಯದು ಇಂಥ ಓದುವ ಪುಸ್ತಕಗಳನ್ನು ಸಿದ್ಧಪಡಿಸುವುದು ಬಹಳ ಕಷ್ಟದ ಕೆಲಸವಾಗಿದೆ ಮತ್ತು ಎರಡನೆಯದಾಗಿ, ಅಂಧವ್ಯಕ್ತಿಗಳು ಬರೆವಣಿಗೆಯನ್ನು ಸ್ವತಂತ್ರವಾಗಿ ಮಾಡಲಾರರು, ಲೊಯನ್‌ಫೆಲ್ಡ್ (1973). ಅಂಧವ್ಯಕ್ತಿಗಳನ್ನು ಓದುವ ಮತ್ತು ಬರೆಯುವ ಕಾರ್ಯಗಳಲ್ಲಿ ಸ್ವತಂತ್ರರನ್ನಾಗಿ ಮಾಡುವಂತಹ ಸೂಕ್ತ ವಿಧಾನಕ್ಕಾಗಿ ಜನರು ಹುಡುಕಾಟ ನಡೆಸಿದ್ದರು. ಈ ಹುಡುಕಾಟದ ಫಲವಾಗಿ ಬ್ರೈಲ್ ಎಂಬ ಸ್ಪರ್ಶ ಲಿಪಿಯ ಆವಿಷ್ಕಾರವಾಯಿತು.

**ಬ್ರೈಲ್‌ನ ಬೆಳವಣಿಗೆ – ಬ್ರೈಲ್‌ನ ಆವಿಷ್ಕಾರ:** ಸ್ವತಃ ಅಂಧನಾದ ಲೂಯಿ ಬ್ರೈಲ್ ಎಂಬ ಒಬ್ಬ ಫ್ರೆಂಚ್ ನಾಗರಿಕ (1809–1852), ಕ್ಯಾ. ಚಾರ್ಲ್ಸ್ ಬಾರ್ಬಿಯರ್‌ರವರ ಸ್ಫೂರ್ತಿಯಿಂದ, 1829ರಲ್ಲಿ ಸ್ಪರ್ಶ ಓದುವಿಕೆ ತಂತ್ರವನ್ನು ರೂಪಿಸಿದನು. ಆತ ಇದನ್ನು ಕಂಡುಹಿಡಿದುದರಿಂದ ಆತನ ಹೆಸರಿನಿಂದ ಇದನ್ನು ಬ್ರೈಲ್ ಎಂದು ಕರೆಯಲಾಯಿತು. 6ಮಿ. ಮೀ **x** 3.6 ಮಿ. ಮೀ ಅಳತೆಯ ಒಂದು ಸೆಲ್‌ನಲ್ಲಿ 3, 3 ಚುಕ್ಕಿಗಳನ್ನು ಎರಡು ಲಂಬರೇಖೆಗಳಲ್ಲಿ ಜೋಡಿಸುವ, ಒಟ್ಟು 6 ಚುಕ್ಕಿಗಳ ವ್ಯವಸ್ಥೆ ಇದಾಗಿದೆ. ಮೇಲಿನ ಎರಡು ಚುಕ್ಕಿಗಳಿಗೆ ಎಡದಿಂದ ಬಲಕ್ಕೆ 1, 4, ಮಧ್ಯದ ಚುಕ್ಕಿಗಳಿಗೆ 2, 5 ಮತ್ತು ಕೆಳಗಿನ ಚುಕ್ಕಿಗಳಿಗೆ 3, 6 ಸಂಖ್ಯೆಗಳನ್ನು ನೀಡಲಾಗಿದೆ. ಹೀಗೆ 1, 2, 3 ಎಡಗಡೆ ಮತ್ತು 4, 5, 6 ಬಲಗಡೆ ಇರುತ್ತವೆ. ಈ ಚುಕ್ಕಿಗಳ ವಿವಿಧ ಸಂಯೋಜನೆಗಳನ್ನು ಆಧರಿಸಿ,

Digitised by Bharatavani, CIIL

ಅತ್ಯಂತ ಹೆಚ್ಚೆಂದರೆ 63 ಸಂಯೋಜನೆಗಳನ್ನು ರೂಪಿಸಲಾಗಿದೆ. ಪ್ರತಿಯೊಂದು ಸಂಯೋಜನೆಗೂ ಒಂದು ಪ್ರತ್ಯೇಕ ಆಕಾರವಿದೆ.




ಈ ಲಿಪಿ ಫ್ರಾನ್ಸ್‌ನಿಂದ ಯೂರೋಪ್‌ಗೆ, ಅಲ್ಲಿಂದ ಅಮೇರಿಕ ಮುಂದೆ ಪ್ರಪಂಚದ ವಿವಿಧ ಭಾಗಗಳಿಗೆ ಹರಡಿತು. ಆದರೆ, ಇದು ಹಿಂದೆ ಇದ್ದ ಸ್ಪರ್ಶ ಲಿಪಿಗಳಿಗಿಂತ ಹೆಚ್ಚಿನ ಮನ್ನಣೆ ಪಡೆಯಲಿಲ್ಲ. ಆದಾಗ್ಯೂ, ವಿಶ್ವದೆಲ್ಲೆಡೆ ಬ್ರೈಲ್ ಲಿಪಿ ಅದರ ಆವಿಷ್ಕಾರದ ನಂತರ ಅಂಧರಿಗೆ ಜ್ಞಾನದ ಹೆಬ್ಬಾಗಿಲನ್ನು ತೆರೆಯಿತು, {ಫರೆಲ್ (Farrell) (1956)}.,

**ಭಾರತಿ ಬ್ರೈಲ್ ಬೆಳವಣಿಗೆ:–** 1887ರಲ್ಲಿ ಅಮೃತಸರದಲ್ಲಿ ಮಿಸ್. ಆನಿ ಶಾರ್ಪ್ ಭಾರತದಲ್ಲಿ ಮೊಟ್ಟಮೊದಲ ಅಂಧರ ಶಾಲೆಯನ್ನು ಸ್ಥಾಪಿಸಿದ ಮೇಲೆ, ಭಾರತದ ಶಾಲೆಗಳಲ್ಲೂ ಬ್ರೈಲ್‌ನ್ನು ಬಳಸತೊಡಗಿದರು, ಆದರೆ ಸ್ವಾತಂತ್ರ್ಯದ ಮೊದಲು, ದೇಶದಲ್ಲಿ ವಿವಿಧ ಅಂಧಮಕ್ಕಳ ಶಾಲೆಗಳು ವಿವಿಧ ಭಾಷೆಗಳಿಗಾಗಿ ತಮ್ಮದೇ ಸಂಕೇತಗಳನ್ನು ರೂಪಿಸಿ, ಬಳಸಿದವು. ಹೀಗಾಗಿ ಅನೇಕ ಬಗೆಯ ಸಂಕೇತಗಳು ಬಳಕೆಯಲ್ಲಿದ್ದವು. ಇದರಿಂದ ಅಂಧಮಕ್ಕಳ ಶಿಕ್ಷಣವನ್ನು ಸುಗಮಗೊಳಿಸಲು ಮತ್ತು ಪ್ರೋತ್ಸಾಹಿಸಲು ತೊಡಕುಗಳುಂಟಾದವು ಮತ್ತು ಬ್ರೈಲ್ ಪುಸ್ತಕಗಳ ಸಿದ್ಧತೆ ಕಷ್ಟಕರವಾಯಿತು, ಏಕೆಂದರೆ, ಒಂದು ಶಾಲೆಗಾಗಿ ಸಿದ್ಧಪಡಿಸಿದ ಪುಸ್ತಕಗಳನ್ನು ಇನ್ನೊಂದು ಶಾಲೆಯಲ್ಲಿ ಓದಲಾಗುತ್ತಿರಲಿಲ್ಲ, {ಆದ್ವಾನಿ (1991)}.

ಮೊಟ್ಟಮೊದಲು 1941ರಲ್ಲಿ, ಆಗಿನ ಕೇಂದ್ರ ಸರಕಾರವು ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಲಭ್ಯವಿರುವ ಎಲ್ಲ ಸಂಕೇತಗಳನ್ನು ಪರಾಮರ್ಶಿಸಿ, ಭಾರತದ ಎಲ್ಲ ಭಾಷೆಗಳಿಗೂ ಅನ್ವಯವಾಗುವಂತಹ ಏಕರೂಪದ ಸಂಕೇತವನ್ನು ರೂಪಿಸಲು ಒಂದು ಸಮಿತಿಯನ್ನು ಸ್ಥಾಪಿಸಿತು. ಈ ಪ್ರಯತ್ನ ಸಫಲವಾಗಲಿಲ್ಲ. ಆದುದರಿಂದ ಭಾರತ ಸರಕಾರವು ಸ್ವಾತಂತ್ರ್ಯಾನಂತರ ಈ ವಿಷಯವನ್ನು ಯುನೆಸ್ಕೊಗೆ ವಹಿಸಿತು. ಯುನೆಸ್ಕೊ ಪರಿಣತರ ಅನೇಕ ಸಭೆಗಳನ್ನು ನಡೆಸಿ ಈ ವಿಷಯದ ಚರ್ಚೆಯನ್ನು ಮಾಡಿತು. ಗಹನವಾಗಿ ಚರ್ಚಿಸಿದ ನಂತರ, ಧ್ವನಿಶಾಸ್ತ್ರದ ತತ್ವಗಳಿಗೆ ಅನುಸಾರವಾಗಿ, ಭಾರತಿ ಬ್ರೈಲ್ ಎಂಬ ಹೆಸರಿನ ಏಕರೂಪದ ಬ್ರೈಲ್ ಸಂಕೇತಗಳನ್ನು ಅಳವಡಿಸಿಕೊಳ್ಳಲಾಯಿತು. ಈ ತತ್ವಗಳ ಪ್ರಕಾರ ಒಂದೇ ಬಗೆಯ ಧ್ವನಿಯನ್ನು ಉತ್ಪತ್ತಿಮಾಡುವ ಬೇರೆ ಬೇರೆ ಭಾಷೆಗಳ ಅಕ್ಷರಗಳಿಗೆ, ಒಂದೇ ಸಂಯೋಜನೆಯನ್ನು ಬ್ರೈಲ್‌ಲ್ಲಿ ಬಳಸುವುದು. ಉದಾ. 1, 2 ಚುಕ್ಕಿಗಳು ಆಂಗ್ಲ ಭಾಷೆಯಲ್ಲಿ 'ಬಿ' ಆದರೆ, ಹಿಂದಿಯಲ್ಲಿ 'ಬ' ಆಗುವುದು, ಅದೇ ರೀತಿ ತಮಿಳು, ಬಾಂಗ್ಲಾ, ಕನ್ನಡ ಮರಾಠಿ ಮುಂತಾದ ಭಾಷೆಗಳಲ್ಲೂ ಅದು 'ಬ' ಆಗುವುದು.

**ಈ ಕೆಳಗೆ ಬ್ರೈಲ್ ಲಿಪಿಯನ್ನು ಕನ್ನಡ ವರ್ಣಮಾಲೆ ಕೊಟ್ಟಿದೆ.**

**ಕನ್ನಡ ಬ್ರೈಲ್ ಅಕ್ಷರಗಳು**

**ಬ್ರೈಲ್ ಓದುವುದನ್ನು ಕಲಿಸುವುದು:** ಅಂಧ ಶಿಕ್ಷಣ ಕ್ಷೇತ್ರದ




ವಿಶೇಷತಜ್ಞರು ಬ್ರೈಲ್ ಓದುವಿಕೆಯನ್ನು ಕಲಿಸಲು ಹಲವಾರು ವಿಧಾನಗಳನ್ನು ಸಲಹೆ ಮಾಡಿದ್ದಾರೆ. ಇವುಗಳಲ್ಲಿ ಅಕ್ಷರ ವಿಧಾನ, ಪದ ವಿಧಾನ ಹಾಗೂ ವಾಕ್ಯ ವಿಧಾನಗಳಿವೆ.

**1. ಬ್ರೈಲ್ ಓದುವಿಕೆ ಬೋಧನೆಯ ಸಾಂಪ್ರದಾಯಿಕ ವಿಧಾನ:** ಶಿಕ್ಷಕನು ಸಾಂಪ್ರದಾಯಿಕವಾಗಿ ಬ್ರೈಲ್ ಓದುವುದನ್ನು ಅಕ್ಷರಗಳ ವಿಧಾನದಲ್ಲಿ ಬೋಧಿಸುತ್ತಿದ್ದನು. ಈ ವಿಧಾನದಲ್ಲಿ ಮಗುವಿಗೆ ಪ್ರತಿಯೊಂದು ಅಕ್ಷರದಲ್ಲಿರುವ ಚುಕ್ಕಿಗಳ ಆಕಾರ ಮತ್ತು ಸಂಖ್ಯೆಗಳನ್ನು ಕಲಿಸಲಾಗುತ್ತಿತ್ತು. ಮಗು ಕೆಲವು ಅಕ್ಷರಗಳನ್ನು ಕಲಿತಮೇಲೆ, ಮಗುವಿಗೆ ಪದಗಳನ್ನು ಓದಲು ಕಲಿಸಲಾಗುತ್ತಿತ್ತು. ಇದಕ್ಕಾಗಿ, ಸುಮಾರು 5" **x** 3" ನ ಒಂದು ಮರದ ಹಲಗೆಯನ್ನು ಬಳಸುತ್ತಿದ್ದರು. ಈ ಹಲಗೆಯಲ್ಲಿ 6 ಹಳ್ಳಗಳನ್ನು ಮಾಡಿರುತ್ತಿದ್ದರು, 3 ಹಳ್ಳಗಳು ಎಡಗಡೆ ಮತ್ತು ಅವುಗಳಿಗೆ ಸಮಾನಾಂತರವಾಗಿ ಬಲಗಡೆ 3 ಹಳ್ಳಗಳು ಇರುತ್ತಿದ್ದವು.

ಈ ಹಳ್ಳಗಳಲ್ಲಿ ಗಾಜಿನ ಗೋಲಿಗಳನ್ನು ವಿವಿಧ ಆಕಾರದ ಅಕ್ಷರಗಳಾಗುವಂತೆ ಜೋಡಿಸಲಾಗುತ್ತಿತ್ತು. ಮಗುವಿಗೆ ಚುಕ್ಕಿಗಳ

Digitised by Bharatavani, CIIL

ಸಂಖ್ಯೆಯನ್ನು ಮತ್ತು ಆಕಾರವನ್ನು ಕಲಿಸಲಾಗುತ್ತಿತ್ತು. ನಂತರ ಈ ವಿಧಾನವನ್ನು ಉಬ್ಬಿದ ಚುಕ್ಕಿಗಳಿರುವ ಲೋಹದ ತಗಡನ್ನು ಬಳಸಲಾಗುತ್ತಿತ್ತು. ಈ ಮಧ್ಯೆ ಬೇಕಾದರೆ ಚಿಕ್ಕ ಚಿಕ್ಕ ಹಳ್ಳಗಳ ಅನೇಕ ಸಾಲುಗಳಿರುವ ಬ್ರೈಲ್ ಹಲಗೆಯನ್ನು ಬಳಸಬಹುದು. ಲೋಹದ ಬೆಣೆಗಳನ್ನು ಸಿಕ್ಕಿಸುವ ಮೂಲಕ ಅಕ್ಷರಗಳನ್ನು ರೂಪಿಸಿ, ಸ್ಪರ್ಶಿಸಲು ಸುಲಭವಾಗುವಂತೆ ಮಾಡಬಹುದು.

ಹಲವಾರು ಸಂಶೋಧಕರ [ನೋಲನ್ ಮತ್ತು ಕ್ಯಾಡ್ರಿಸ್ ಹಾಗೂ ನೋಲನ್ ಮತ್ತು ಮಾರಿಸ್ (Nolan and Cadric & Nolan and Morris)] ಪ್ರಕಾರ, ಈ ವಿಧಾನವು ಹೆಚ್ಚು ಪರಿಣಾಮಕಾರಿಯಲ್ಲ, ಏಕೆಂದರೆ ನಾವು ಯಾವುದನ್ನು ಒಂದೊಂದೇ ಅಕ್ಷರ ಓದುವ ಮೂಲಕ ಓದುವುದಿಲ್ಲ. ಅದಲ್ಲದೆ, ಅವರ ಪ್ರಕಾರ ಇದು ಆಕಾರವನ್ನು ಗುರುತಿಸುವುದಕ್ಕಿಂತ, ನೆನಪಿನ ಶಕ್ತಿ ಮೇಲೆ ಹೆಚ್ಚು ಒತ್ತು ನೀಡುತ್ತದೆ. ಆದುದರಿಂದ ಕೆಲವು ವಿಶೇಷತಜ್ಞರು ಪದ ವಿಧಾನ ಮತ್ತು ವಾಕ್ಯ ವಿಧಾನಗಳನ್ನು ಶಿಫಾರಸು ಮಾಡುತ್ತಾರೆ.

2. **ಪದ ವಿಧಾನ:** ಈ ವಿಧಾನದಲ್ಲಿ ನಾವು ಮಗುವಿನ ಶಬ್ದಭಂಡಾರದಲ್ಲಿರುವ ಪದಗಳನ್ನು ನೇರವಾಗಿ ಪರಿಚಯಿಸುತ್ತೇವೆ. ಕೆಲವು ಬ್ರೈಲ್ ಪದಗಳ ಮಿಂಚು ಫಲಕಗಳನ್ನು (ಫ್ಲಾಶ್ ಕಾರ್ಡುಗಳು) ಮಗುವಿಗೆ ಕೊಟ್ಟು ಓದಲು ಹೇಳುವುದು. ಉದಾ. ಮಾವು, ಸೀಬೆ, ಹುಡುಗ, ಹುಡುಗಿ ಮುಂತಾದ ಪದಗಳ ಪ್ರತ್ಯೇಕ ಫಲಕಗಳು. ಪ್ರತಿಯೊಂದು ಫಲಕದ ಪದಗಳನ್ನು ಓದಿದ ಮೇಲೆ, ಪ್ರತಿಯೊಂದು ಪದದಲ್ಲಿರುವ ಅಕ್ಷರಗಳನ್ನು ಬೇರೆ ಬೇರೆಯಾಗಿ ಬರೆಯುವುದು. ಮಗುವಿಗೆ ಪ್ರತಿಯೊಂದು ಅಕ್ಷರವನ್ನು ಪದದಲ್ಲಿರುವ ಅಕ್ಷರದೊಂದಿಗೆ ಹೋಲಿಸಲು ಹೇಳುವುದು. ಹೀಗೆ ಮಗು ಪದಗಳನ್ನು ಕಲಿಯುವುದಲ್ಲದೆ, ಆ ಪದಗಳಲ್ಲಿರುವ ಅಕ್ಷರಗಳನ್ನೂ ಕಲಿಯುತ್ತದೆ.

ಈ ವಿಧಾನವೂ ಅಷ್ಟಾಗಿ ಮನ್ನಣೆ ಪಡೆಯಲಿಲ್ಲ, ಏಕೆಂದರೆ ನಾವು ಪದಗಳನ್ನು ಪ್ರತ್ಯೇಕವಾಗಿ ಓದುವುದಿಲ್ಲ. ಅದಲ್ಲದೆ ಈ ವಿಧಾನ ಮತ್ತು ಹಿಂದೆ ಹೇಳಿದ ವಿಧಾನಗಳೆರಡೂ ಓದುವ ವೇಗ ಬೇಕಾಗುವ ಮಟ್ಟವನ್ನು ತಲುಪಲು ಸಹಾಯಮಾಡುವುದಿಲ್ಲ ಎಂದು ಹಲವಾರು ಸಂಶೋಧಕರು ಅಭಿಪ್ರಾಯಪಡುತ್ತಾರೆ.

3. **ವಾಕ್ಯ ವಿಧಾನ:** ನಾವು ವಾಕ್ಯಗಳನ್ನು ಬರೆಯುತ್ತೇವೆ ಹಾಗೂ ವಾಕ್ಯಗಳ ಮೂಲಕ ಸಂಭಾಷಿಸುತ್ತೇವೆ. ಆದುದರಿಂದ ಅನೇಕ ವಿಶೇಷತಜ್ಞರ ಅಭಿಪ್ರಾಯವೆಂದರೆ, 'ಇದೊಂದು ಪುಸ್ತಕ', ಇದೊಂದು ಪೆನ್', 'ನನ್ನ ಹೆಸರು ಮೋಹನ', 'ಇದು ನನ್ನ ಪುಸ್ತಕ', 'ಇದು ನನ್ನ ಚೀಲ' ಎಂದು ಬರೆದಿರುವ ಚಿಕ್ಕ ಚಿಕ್ಕ ವಾಕ್ಯಗಳ ಮಿಂಚು ಫಲಕಗಳ ಮೂಲಕ ಬ್ರೈಲ್ ಓದುವುದನ್ನು ಕಲಿಸಬೇಕು. ಪ್ರತಿಯೊಂದು ವಾಕ್ಯವನ್ನು ಓದಿದ ಮೇಲೆ, ವಾಕ್ಯದಲ್ಲಿರುವ ಪದಗಳನ್ನು, ಆನಂತರ ಆ ಪದಗಳಲ್ಲಿರುವ ಅಕ್ಷರಗಳನ್ನು ಪ್ರತ್ಯೇಕವಾಗಿ ಬೇರೆ ಕ್ರಮದಲ್ಲಿ ಬರೆಯಬೇಕು. ಅಕ್ಷರಗಳಿಗೆ ಗಮನವನ್ನು ನೀಡುವ ಶ್ರಮವನ್ನು ತೆಗೆದುಕೊಳ್ಳದೆ ವಾಕ್ಯಗಳನ್ನು ಮತ್ತೆ ಮತ್ತೆ ಓದಲು ಮಗುವಿಗೆ ತಿಳಿಸಬೇಕು. ಚೆನ್ನಾಗಿ ಅಭ್ಯಾಸವಾದ ಮೇಲೆ ಮಗುವಿಗೆ ಪದಗಳನ್ನು ಓದಲು ಹೇಳಬೇಕು, ಈ ಪದವನ್ನು ವಾಕ್ಯದಲ್ಲಿರುವ ಪದದೊಂದಿಗೆ ಹೋಲಿಸಲು ಹೇಳಬೇಕು, ಆನಂತರ ಹೀಗೆ ಅಕ್ಷರಗಳ ಬಗ್ಗೆ ಮಾಡಬೇಕು.

ಈ ವಿಧಾನವನ್ನು ಅನುಸರಿಸುವವರ ಪ್ರಕಾರ ಇದು ತಾರ್ಕಿಕವಾದುದು ಹಾಗೂ ಮನಃಶಾಸ್ತ್ರಕ್ಕೆ ಅನುಗುಣವಾದುದು, ಏಕೆಂದರೆ ಇದು ನಾವು ನಿಜವಾಗಿ ಸಂಭಾಷಣೆ ನಡೆಸುವ ರೀತಿಯಲ್ಲಿದೆ. ಪ್ರತಿಯೊಂದು ಮಗುವಿಗೆ ಮೇಲೆ ಹೇಳಿದ ಯಾವುದೇ ವಿಧಾನವು ಪರಿಣಾಮಕಾರಿಯಲ್ಲ ಎನ್ನುವುದನ್ನು ನೆನಪಿಡಿ. ಕೆಲವು ಮಕ್ಕಳು ಸಾಂಪ್ರದಾಯಿಕ ವಿಧಾನದಲ್ಲಿ ಸುಲಭವಾಗಿ ಕಲಿತರೆ, ಮತ್ತೆ ಕೆಲವು ಮಕ್ಕಳು ವಾಕ್ಯ ವಿಧಾನದಲ್ಲಿ ಬೇಗ ಕಲಿಯುತ್ತಾರೆ ಎನ್ನುವುದು ಅನುಭವದಿಂದ ಗೊತ್ತಾಗಿದೆ. ನಮ್ಮ ದೇಶದಲ್ಲಿ ಸಾಂಪ್ರದಾಯಿಕ ವಿಧಾನವನ್ನೆ ಹೆಚ್ಚಾಗಿ ಬಳಸುತ್ತಾರೆ. ಬ್ರೈಲ್ ಓದುವಿಕೆಯನ್ನು ವಾಕ್ಯ ವಿಧಾನ ಅಥವಾ ಪದ, ವಾಕ್ಯ ವಿಧಾನಗಳ ಸಂಯೋಜನೆಯ ಮೂಲಕ ಕಲಿಸಿದರೆ ಓದುವ ವೇಗವನ್ನು ಹೆಚ್ಚಿನ ಮಟ್ಟದಲ್ಲಿ ಸಾಧಿಸಬಹುದು ಎಂದು ಹಲವಾರು ಅಧ್ಯಯನಗಳು ತೋರಿಸಿವೆ. ಬ್ರೈಲ್ ಓದುವಿಕೆಗೆ ಈ ವಿಧಾನಗಳನ್ನು ಪರಿಣಾಮಕಾರಿಯಾಗಿ ಬಳಸಬೇಕಾದರೆ, ಮಗುವಿಗೆ ಅದರ ಬೆರಳುಗಳನ್ನು ಸಮತಟ್ಟಾಗಿ ಸಾಲಿನಲ್ಲಿ ಚಲಿಸುವಂತೆ ಮಾಡಲು ಸಾಧ್ಯವಾಗುವ ಅಭ್ಯಾಸವನ್ನು ಧಾರಾಳವಾಗಿ ನೀಡಬೇಕು. ಮಗು ತನ್ನ ಎರಡು ತೋರ್ಬೆರಳುಗಳನ್ನೂ ಬಳಸುವಂತೆ ಪ್ರೋತ್ಸಾಹಿಸಬೇಕು. ಬಲ ತೋರ್ಬೆರಳನ್ನು ಓದಲು ಮತ್ತು ಎಡ ತೋರ್ಬೆರಳು ಬಲ ತೋರ್ಬೆರಳನ್ನು ಅನುಸರಿಸಲು ಬಳಸಬೇಕು. ಅರ್ಧ ವಾಕ್ಯವನ್ನು ಓದಿದ ತಕ್ಷಣ, ಬಲ ತೋರ್ಬೆರಳು ಆ ಸಾಲನ್ನು ಓದಿ ಮುಗಿಸುವುದರಲ್ಲಿ, ಎಡ ತೋರ್ಬೆರಳು ಮುಂದಿನ ಸಾಲಿನ ಪ್ರಾರಂಭಕ್ಕೆ ಹೋಗಿ ಎರಡು ಮೂರು ಪದಗಳನ್ನು ಗುರುತಿಸಿರಬೇಕು. ಇದರಿಂದ ಓದುವ ವೇಗ ಹೆಚ್ಚಾಗಲು ಅನುಕೂಲವಾಗುತ್ತದೆ, ಏಕೆಂದರೆ ಬಲಬೆರಳು ವಾಕ್ಯವನ್ನು ಮುಗಿಸಿ ಮುಂದಿನ ಸಾಲಿಗೆ ಬರುವಷ್ಟು ಸಮಯ ಉಳಿತಾಯವಾಗಿರುತ್ತದೆ.

**ಬ್ರೈಲ್ ಬರೆವಣಿಗೆಯ ಬೋಧನೆ:** ಅನೇಕ ಸಲ ಜನರು ಬ್ರೈಲ್ ಓದುವಿಕೆಯನ್ನು ಕಲಿಸಿದ ಮೇಲೆ ಬರೆವಣಿಗೆಯನ್ನು ಕಲಿಸಬೇಕೆ ಅಥವಾ ಬರೆವಣಿಗೆಯ ನಂತರ ಓದುವುದನ್ನು ಕಲಿಸಬೇಕೆ ಎಂದು ಪ್ರಶ್ನಿಸುತ್ತಾರೆ. ಈ ವಿಚಾರದಲ್ಲಿ ಯಾವುದೇ ಕಠಿಣ ನಿಯಮಗಳಿಲ್ಲ. ಒಬ್ಬ ಸಮರ್ಥ ಶಿಕ್ಷಕನಿಗೆ ತನ್ನ ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ತಕ್ಕಂತೆ ಯಾವುದನ್ನು ಮೊದಲು ಕಲಿಸಬೇಕೆಂದು ನಿರ್ಧರಿಸಲು ಸಾಧ್ಯವಾಗುತ್ತದೆ. ಬ್ರೈಲ್ ಬರೆವಣಿಗೆಯನ್ನು ಓದುವಿಕೆ ಜೊತೆಗೆ ಮಾಡಬೇಕು {ಚಾಪ್‌ಮನ್ (1988)}. ಮೊದಲು ಮಗುವಿಗೆ ಬ್ರೈಲ್ ಸೆಲ್‌ನ ಪರಿಕಲ್ಪನೆಯನ್ನು ಮೂಡಿಸಬೇಕು, ನಂತರ ಸೆಲ್‌ನಲ್ಲಿ ಚುಕ್ಕಿಗಳ ಸ್ಥಾನದ ಬಗ್ಗೆ ತಿಳಿಸಬೇಕು.

1. **ಬ್ರೈಲ್ ಬರೆವಣಿಗೆ ಸಾಧನಗಳ ಪರಿಚಯ:** ಸಾಮಾನ್ಯವಾಗಿ ಅಂಧ ವಿದ್ಯಾರ್ಥಿಗಳು ಎರಡು ರೀತಿಯ ಬರೆವಣಿಗೆ ಸಾಧನಗಳನ್ನು

Digitised by Bharatavani, CIIL

ಬಳಸುತ್ತಾರೆ. ಒಂದು ಕೈಗಳಿಂದ ಬಳಸುವ **ಬ್ರೈಲ್ ಬರೆವಣಿಗೆ ಹಲಗೆ** ಎಂಬ ಸಾಧನ, ಮತ್ತೊಂದು ಬೆರಳಚ್ಚು ಯಂತ್ರದಂತಹ **ಬ್ರೈಲರ್** ಅಥವಾ ಬ್ರೈಲ್ ಬರೆವಣಿಗೆ ಯಂತ್ರ.

ಬ್ರೈಲ್ ಹಲಗೆಯ ಮೇಲೆ ಪ್ರತಿಯೊಂದು ಅಕ್ಷರದಲ್ಲಿರುವ ಚುಕ್ಕಿಗಳನ್ನು ಪ್ರತ್ಯೇಕವಾಗಿ ಚುಚ್ಚಲಾಗುತ್ತದೆ. ಆದುದರಿಂದ ಬ್ರೈಲ್ ಹಲಗೆಯ ಮೇಲೆ ಬರೆಯುವುದು ಆಯಾಸಕರವಾಗುತ್ತದೆ ಮತ್ತು ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳುತ್ತದೆ. ಬ್ರೈಲರ್ ಅಥವಾ ಬ್ರೈಲ್ ಯಂತ್ರವಾದರೆ ಬೆರಳಚ್ಚು ಯಂತ್ರದಲ್ಲಿ ಒಂದೊಂದೇ ಸಲ ಒತ್ತಿ **ಅ, ಆ, ಇ, ಈ** ಅಕ್ಷರಗಳನ್ನು ಮೂಡಿಸುವ ಹಾಗೆ ಅಕ್ಷರದ ಎಲ್ಲ ಚುಕ್ಕಿಗಳನ್ನು ಒಂದೇ ಸಲ ಒತ್ತಬಹುದು.

**2. ಬ್ರೈಲ್ ಹಲಗೆಯ ಮೇಲೆ ಬರೆಯುವುದನ್ನು ಕಲಿಸುವುದು:** ಬ್ರೈಲ್ ಹಲಗೆಗಳಲ್ಲಿ ಎರಡು ವಿಧ. (i) ಒಂದು ಮರದ ಹಲಗೆಯ ಮೇಲ್ಭಾಗದಲ್ಲಿ ಲೋಹದ ಹಿಡಿಗೆ ಬ್ರೈಲ್ ಹಾಳೆಯನ್ನು ಸಿಕ್ಕಿಸುವಂತಹದು. ಪ್ರತಿಯೊಂದು ಸಾಲಿನಲ್ಲೂ 36 ಸೆಲ್‌ಗಳನ್ನು ಹೊಂದಿರುವ 2 ಅಥವಾ 4 ಸಾಲುಗಳಿರುವ ಒಂದು ಲೋಹದ ಚೌಕಟ್ಟಿರುತ್ತದೆ. ಹಾಳೆಯನ್ನು ಈ ಚೌಕಟ್ಟು ಹಾಗೂ ಹಲಗೆಯ ಮಧ್ಯೆ ಸಿಕ್ಕಿಸಿ, ಸ್ಟೈಲಸ್‌ನ (ಹಿಡಿಯಿರುವ ಸಣ್ಣ ಲೋಹಸಲಾಕೆ) ಮೊಳೆಯಿಂದ ಸೆಲ್‌ನಲ್ಲಿ ಚುಕ್ಕಿಗಳನ್ನು ಚುಚ್ಚಲಾಗುತ್ತದೆ.

ಈ ಎಲ್ಲ ಅಂಶಗಳ ಕಡೆ ಮಗುವಿನ ಗಮನವನ್ನು ಸೆಳೆದನಂತರ ಬ್ರೈಲ್ ಹಾಳೆಯನ್ನು ಹಲಗೆಗೆ ಸಿಕ್ಕಿಸುವುದನ್ನು ಕಲಿಸಬೇಕು. ಸಾಮಾನ್ಯವಾಗಿ 40 ಜಿ.ಎಸ್.ಎಮ್ ಹಾಳೆ ಬ್ರೈಲ್ ಬರವಣಿಗೆಗೆ ಸೂಕ್ತ ಎಂದು ಕಂಡುಬಂದಿದೆ. ಹಾಳೆ ಸಿಕ್ಕಿಸುವುದನ್ನು ಕಲಿಸಿದ ನಂತರ, ಮಗುವಿಗೆ ಸ್ಟೈಲಸ್‌ನ್ನು ಹಿಡಿದುಕೊಳ್ಳಲು ಕಲಿಸಬೇಕು, ಇದಾದನಂತರ ಚುಕ್ಕಿಗಳ ಚುಚ್ಚುವಿಕೆಯನ್ನು ಕಲಿಸಬೇಕು. ಮೊದಲೇ ನಾವು ಮಗುವಿಗೆ ನಿರ್ದಿಷ್ಟ ಅಕ್ಷರಗಳನ್ನು ಬರೆಯಲು ಹೇಳಬಾರದು, ಅದನ್ನು ಪ್ರತಿಯೊಂದು ಸೆಲ್‌ನಲ್ಲಿರುವ ಎಲ್ಲ 6 ಚುಕ್ಕಿಗಳನ್ನು ಚುಚ್ಚಲು ಪ್ರೋತ್ಸಾಹಿಸಬೇಕು. ಆನಂತರ ಮಗುವಿಗೆ ಅದರ ಹೆಸರಿನಲ್ಲಿರುವ ಅಕ್ಷರಗಳನ್ನು ಬರೆಯಲು ಕಲಿಸಬೇಕು. ಈ ರೀತಿಯಾಗಿ ನಾವು ಮಗುವಿಗೆ ಗೊತ್ತಿರುವ ಪದಗಳ ಮೂಲಕ ಎಲ್ಲ ಅಕ್ಷರಗಳನ್ನು ಕ್ರಮೇಣ ಕಲಿಸಬೇಕು. ಹಲಗೆಯಲ್ಲಿ ಬರೆಯುವಾಗ 1, 2, 3 ಚುಕ್ಕಿಗಳು ಬಲಗಡೆ ಮತ್ತು 4, 5, 6 ಚುಕ್ಕಿಗಳು ಎಡಗಡೆ ಇರುತ್ತವೆ ಎನ್ನುವುದನ್ನು ನೆನಪಿಡಿ ಏಕೆಂದರೆ ನಾವು ಓದುವಾಗ ಹಾಳೆಯನ್ನು ಮಗಚುತ್ತೇವೆ. ಆಗ 1, 2, 3 ಚುಕ್ಕಿಗಳು ಎಡಗಡೆ ಮತ್ತು 4, 5, 6 ಚುಕ್ಕಿಗಳು ಬಲಗಡೆ ಇರುತ್ತವೆ.

**3. ಬ್ರೈಲರ್ ಮೂಲಕ ಬರೆಯುವುದನ್ನು ಕಲಿಸುವುದು:** ಬ್ರೈಲರ್‌ನ ಪ್ರತಿಯೊಂದು ಭಾಗವನ್ನು ಮಗುವಿಗೆ ಪರಿಚಯಿಸಬೇಕು. ನಂತರ ಮಗುವಿಗೆ ಹಾಳೆ ಸಿಕ್ಕಿಸುವುದನ್ನು ಕಲಿಸಬೇಕು. ಬ್ರೈಲರ್‌ನಲ್ಲಿ (ಪರ್ಕಿನ್ಸ್ ಬ್ರೈಲರ್) ಎಡತುದಿಯಲ್ಲಿ ಒಂದು ಕೀಲಿ ಇದೆ, ಇದರಿಂದ ಸಾಲನ್ನು ಮೇಲೆ ಕೆಳಗೆ ಮಾಡಬಹುದು. ಬಲತುದಿಯಲ್ಲಿರುವ ಕೀಲಿಯಿಂದ ಒಂದು ಸೆಲ್ ಹಿಂದಕ್ಕೆ ಹೋಗಬಹುದು. ಮಧ್ಯದಲ್ಲಿ 7 ಕೀಲಿಗಳಿವೆ. ಮಧ್ಯದಲ್ಲಿರುವುದು ಅಂತರ ನೀಡುವ ಕೀಲಿ. ಈ ಅಂತರದ ಕೀಲಿಯ ಎಡಗಡೆ 1, 2, 3 ಚುಕ್ಕಿಗಳ ಕೀಲಿಗಳು, ಅದರ ಬಲಗಡೆ 4, 5 ,6 ಚುಕ್ಕಿಗಳ ಕೀಲಿಗಳಿವೆ. ತೋರ್ಬೆರಳುಗಳನ್ನು 1, 4, ಮಧ್ಯದ ಬೆರಳುಗಳನ್ನು 2, 5 ಹಾಗೂ ಉಂಗುರದ ಬೆರಳುಗಳನ್ನು 3, 6 ಕೀಲಿಗಳ ಮೇಲೆ ಇಡಬೇಕು. ಬಲ/ಎಡ ಹೆಬ್ಬೆರಳನ್ನು ಅಂತರದ ಕೀಲಿಗೆ ಬಳಸಬೇಕು. ಹೀಗೆ ನಾವು 'ಪ' (1, 2, 3, 4) ಅಕ್ಷರವನ್ನು ಒತ್ತಬೇಕಾದರೆ, 1, 2, 3, 4 ಚುಕ್ಕಿಗಳನ್ನು ಒಟ್ಟಿಗೆ ಒಂದೇಸಲಕ್ಕೆ ಒತ್ತಬೇಕು. ಇದು ಬರವಣಿಗೆಗೆ ವೇಗವನ್ನು ನೀಡುವುದಲ್ಲದೆ, ಅಷ್ಟು ಆಯಾಸಕರವಲ್ಲ.

**ದೃಷ್ಟಿದೋಷವುಳ್ಳ ಮಕ್ಕಳ ವಿವಿಧ ಬೋಧನೋಪಕರಣಗಳು:**

1. **ಬ್ರೈಲ್ ಉಪಕರಣಗಳು:** ಗೋಲಿ ಪ್ರೆಸ್, ಪೆಗ್ ಬೋರ್ಡ್, ಕ್ಯೂಬ್, ಮರದ ಹಲಗೆ, ಇಂಟರ್ ಪಾಯಿಂಟ್‌ಸ್ಲೇಟ್, ಇವು ಕೆಲವೇ ಆದ ಬೋಧನೋಪಕರಣಗಳು.

**ಎ). ಗೋಲಿ ಪ್ರೆಸ್:** ಪ್ರತಿಯೊಂದು ಅಂಧ ಮಗುವಿಗೂ ಪ್ರಾರಂಭಿಕ ಹಂತದಲ್ಲಿ ಬ್ರೈಲ್ ಬರೆಯುವುದನ್ನು ಕಲಿಸುವ ಪ್ರಥಮ ಹಾಗೂ ಸರಳ ಸಾಧನ ಎಂದರೆ ಗೋಲಿ ಪ್ರೆಸ್. ಇದು ಒಂದು ಚಿಕ್ಕ ಮರದ ಹಲಗೆಯ ತುಂಡಿನಿಂದ ಮಾಡಲಾಗಿದ್ದು, ಆರು ರಂಧ್ರಗಳನ್ನು ಒಳಗೊಂಡು ಆಯತಾಕಾರದಲ್ಲಿದೆ. ಇದರಲ್ಲಿ ಕೆಲವು ಆರು ಚುಕ್ಕೆಗಳಿಂದ ಅರವತ್ತಮೂರು ಅಕ್ಷರಗಳ ವಿನ್ಯಾಸವನ್ನು ಕಾಣಬಹುದು.

ಇದರ ಪ್ರತಿಯೊಂದು ರಂಧ್ರಗಳಲ್ಲಿ ಒಂದೊಂದು ಗೋಲಿಗಳನ್ನು ಇಟ್ಟು ಕಲಿಯುವುದರಿಂದ ಇದು ಹೆಚ್ಚಿನ ಸ್ಪರ್ಶ ಜ್ಞಾನಕ್ಕೆ ಸಹಾಯಕವಾಗಿದೆ. ಇದರಿಂದ ಮಕ್ಕಳಿಗೆ ಉತ್ತಮ ಸ್ಪರ್ಶಜ್ಞಾನವನ್ನು ಮೂಡಿಸಬಹುದು. ಇದರಿಂದ ಮಕ್ಕಳಿಗೆ ಬ್ರೈಲ್ ಕಲಿಯುವುದು ಸರಳವಾಗುತ್ತದೆ.

**ಬಿ). ಪೆಗ್ ಬೋರ್ಡ್:** ಗೋಲಿ ಪ್ರೆಸ್ ನಂತರ ಬ್ರೈಲ್ ಬರೆಯುವುದನ್ನು ಕಲಿಸಲು ಬಳಸುವ ಸಾಧನ ಪೆಗ್ ಬೋರ್ಡ್. ಇದು ನೋಡಲು ಗೋಲಿ ಪ್ರೆಸ್‌ನ ಆಕಾರವನ್ನು ಹೊಂದಿದ್ದು, ಅದಕ್ಕಿಂತ ಅರ್ಧದಷ್ಟು ಚಿಕ್ಕದ್ದಾಗಿರುತ್ತದೆ. ಇದು ಸಹ ಹಲಗೆಯಿಂದಲೇ ಮಾಡಲ್ಪಟ್ಟಿದ್ದು ಆಯಾತಾಕಾರವನ್ನು ಹೊಂದಿರುತ್ತದೆ. ಇದರಲ್ಲೂ ನಾವು ಆರು ರಂಧ್ರಗಳನ್ನು ಕಾಣಬಹುದು. ಇದಕ್ಕೆ ನಾವು ಪ್ಲಾಸ್ಟಿಕ್ ಮೊಳೆಗಳನ್ನು ಜೋಡಿಸುವುದರ ಮೂಲಕ ಅಕ್ಷರಗಳನ್ನು ಕಲಿಯಬಹುದು. ಇದರಿಂದ ಗೋಲಿ ಪ್ರೆಸ್‌ನ ಸ್ಪರ್ಶಜ್ಞಾನಕ್ಕಿಂತ ಸ್ವಲ್ಪ ಕಡಿಮೆ ಮಟ್ಟದಲ್ಲಿ ಸ್ಪರ್ಶಜ್ಞಾನವಾಗುತ್ತದೆ.

**ಸಿ). ಕ್ಯೂಬ್:** ಇದು ಸಹ ಅಂಧಮಕ್ಕಳಿಗೆ ಬರವಣಿಗೆಗೆ ಸಹಾಯಕವಾಗಿರುವ ಒಂದು ಸರಳ ಸಾಧನ. ಇದರಲ್ಲಿ ಮೂರು ತಿರುಗುವ ಮರದ ತುಂಡುಗಳನ್ನು ಜೋಡಿಸಲಾಗಿದೆ. ಅವು ಮೂರು ಸಮಾನವಾಗಿವೆ. ನಾಲ್ಕು ಮೊಳೆಗಳುಳ್ಳ ಚೌಕಾಕಾರದ ಹಲಗೆಗಳ ಎರಡು ಕೋನದ ಎರಡು ಪಕ್ಕದಲ್ಲಿ ಒಂದು ಹಲಗೆಗೆ ತಲಾ ನಾಲ್ಕರಂತೆ ಚುಕ್ಕೆಗಳು ರೂಪುಗೊಂಡಿವೆ. ಮಧ್ಯದಲ್ಲಿ ಒಂದು

Digitised by Bharatavani, CIIL

ರಂಧ್ರವನ್ನು ಕೊರೆದು ನಟ್ ಬೋಲ್ಟ್ ಹಾಕಿ ಬಿಗಿಗೊಳಿಸಲಾಗಿದೆ. ಅವುಗಳು ಸುಲಭವಾಗಿ ತಿರುಗಿಸುವಂತೆ ಇರಬೇಕು. ಇದು ತಮಗೆ ಬೇಕಾದಂತೆ ಇಷ್ಟಾನುಸಾರ ತಿರುಗಿಸಿಕೊಂಡು ತಮಗೆ ಬೇಕಾದ ಅಕ್ಷರಗಳನ್ನು ರೂಪಿಸಿಕೊಂಡು ಸ್ಪರ್ಶದ ಮೂಲಕ ಸಹಾಯಕವಾಗಿದೆ. ಇದರಿಂದ ಮಕ್ಕಳಿಗೆ ಬೇಸರವಾಗದಂತೆ ಆಟದ ರೂಪದಲ್ಲಿ ಸುಲಭವಾಗಿ ಕಲಿಸಬಹುದು. ಇದು ಮಕ್ಕಳಿಗೆ ಸಹಜ ಕಲಿಕೆಗೆ ನೆರವಾಗುತ್ತದೆ.

ಪ್ರಾಥಮಿಕ ಹಂತದಲ್ಲಿ ಅಕ್ಷರದ ಮೂಲಕ ಅಭ್ಯಾಸಕ್ಕೆ ಇದನ್ನು ಬಳಸಲಾಗುತ್ತದೆ.

**ಡಿ). ಬ್ರೈಲ್ ನೆಟ್‌ಬೋರ್ಡ್:** ಈ ಸಾಧನವು ಸಹ ಮರದ ಹಲಗೆಯಿಂದಲೇ ಮಾಡಲ್ಪಟ್ಟ ಆಯಾತಾಕಾರದ ಹಲಗೆಯನ್ನು ಒಳಗೊಂಡಿದೆ. ಮೇಲೆ ಮುಚ್ಚಳವಿರುತ್ತದೆ ಇದನ್ನು, ಪುಸ್ತಕ ತೆರೆದಂತೆ ತೆರೆದರೆ ಒಳಭಾಗದಲ್ಲಿ ಅತಿ ಚಿಕ್ಕದಾದ ಪೆಗ್ ಬೋರ್ಡ್‌ನ ಆಕಾರವನ್ನು ಕಾಣಬಹುದು. ಅಂತಹ ಚುಕ್ಕೆಗಳು ಮೂರು ಸಾಲುಗಳನ್ನು ಒಳಗೊಂಡು ಪ್ರತಿಯೊಂದು ಸಾಲಿನಲ್ಲಿ ಏಳು, ಏಳು ಮನೆಗಳನ್ನು ಕಾಣುತ್ತೇವೆ. ದುಂಡುತಲೆಯ ಮೊಳೆಗಳನ್ನು ಜೋಡಿಸುವುದರ ಮೂಲಕ ಕಾಗುಣಿತಗಳು, ಅಕ್ಷರಗಳು, ಪದಗಳನ್ನು ಮೂಡಿಸಬಹುದು.

**ಇ). ವುಡನ್ (ಮರದ) ಸ್ಲೇಟ್:** ಇದು ಒಂದು ಅಂಧರು ಬ್ರೈಲ್ ಬರೆಯುವ ಅತಿ ಮುಖ್ಯ ಸಾಧನವಾಗಿದೆ. ಇದು ಮರದಹಲಗೆಯಿಂದ ಮಾಡಲಾಗಿದ್ದು, ಆಯಾತಾಕಾರದಲ್ಲಿದೆ. ಈ ಸಾಧನದ ಮೇಲ್ಭಾಗದ ಎಡ ಮತ್ತು ಬಲ ಭಾಗದಲ್ಲಿ 9 ರಂಧ್ರಗಳನ್ನು ಕಾಣಬಹುದು. ಇದರಲ್ಲಿ ಅನೇಕ ತರಹದ ಗೈಡುಗಳನ್ನು ಕಾಣುತ್ತೇವೆ. ಈ ಗೈಡ್‌ಗಳನ್ನು ಕಟ್ಟಡದ ಸಲಾಕೆಯಿಂದ ಮಾಡಲಾಗಿರುತ್ತದೆ. ಇದರಲ್ಲಿ ನಾವು ಎರಡು ಸಾಲಿನ ಮತ್ತು ನಾಲ್ಕು ಸಾಲಿನ ಗೈಡ್ ಗಳನ್ನು ಕಾಣುತ್ತೇವೆ. ಈ ಪ್ರತಿಯೊಂದು ಗೈಡಿನ ಪ್ರತಿಸಾಲುಗಳಲ್ಲಿ ಮೂವತ್ತಾರು ಮನೆಗಳನ್ನು ಒಳಗೊಂಡು ಪ್ರತಿಮನೆಯಲ್ಲೂ 6 ಚುಕ್ಕೆಗಳನ್ನು ಕಾಣಬಹುದು. ಈ ಸಾಧನವು ಎಲ್ಲಾ ಹಂತದ ಮಕ್ಕಳಿಗೂ ಬ್ರೈಲ್ ಬರೆಯಲು ಅನುಕೂಲವಾಗಿದೆ.

**ಎಫ್). ಇಂಟರ್‌ಪಾಯಿಂಟ್ ಸ್ಲೇಟ್:** ಈ ಸಾಧನ ಅತ್ಯಂತ ಜನಪ್ರಿಯವಾಗಿದ್ದು ಇದನ್ನು ಪ್ಲಾಸ್ಟಿಕ್‌ನಿಂದ ತಯಾರಿಸಲಾಗಿದ್ದು, ಬಹಳ ಹಗುರ ಹಾಗೂ ಪ್ರಯೋಜನಕಾರಿಯಾಗಿದೆ. ಇದರಲ್ಲಿ 27 ಅಡ್ಡಸಾಲುಗಳನ್ನು ಮತ್ತು 36 ಲಂಬ ಸಾಲುಗಳನ್ನು ಕಾಣಬಹುದು. ಪ್ರತಿಯೊಂದು ಮನೆಯು 6 ಚುಕ್ಕೆಗಳನ್ನು ಒಳಗೊಂಡಿರುತ್ತದೆ. 2 ಸಾಲುಗಳ ಮಧ್ಯದ ಬಲಭಾಗದಲ್ಲಿ ಬ್ರೈಲ್ ಅಂಕಿಗಳನ್ನು ಕಾಣಲಾಗುತ್ತದೆ. ಇಂಟರ್ ಪಾಯಿಂಟ್‌ನ ಒಳಭಾಗದ ಕೆಳಭಾಗ ಹಾಗೂ ಮೇಲ್ಭಾಗದಲ್ಲಿ 4 ಮುಳ್ಳುಗಳನ್ನು ಕಾಣುತ್ತೇವೆ. ಈ ಮುಳ್ಳುಗಳು ಹಾಳೆಯ ಜೋಡಣೆಗೆ ಸಹಾಯಕವಾಗಿದೆ.

2. **ಗಣಿತದ ಸಾಧನಗಳು:** ಅಬಾಕಸ್, ಟೇಲರ್ ಫ್ರೇಮ್ ಹಾಗೂ ಜಾಮಿತಿಯ ಉಪಕರಣಗಳು–ಆಯತಗಳು, ಸಿಲೆಂಡರ್, ಪಿರಮಿಡ್ಡ್‌ಗಳು,ಶಂಖಾಕೃತಿಗಳು,ಚೌಕಾಕೃತಿಗಳು,ತ್ರಿಕೋನಾಕೃತಿಗಳು, ಓವೇಲ್ ಆಕೃತಿ, ಇಂಚುಪಟ್ಟಿಗಳು, ಕೋನಗಳು,

**ಅಂಧಮಕ್ಕಳಿಗೆ ಹೆಚ್ಚುವರಿ ಪಠ್ಯಕ್ರಮ**

**1. ಇಂದ್ರಿಯ ತರಬೇತಿ:**

ಇಂದ್ರಿಯ ತರಬೇತಿ ಎಂದರೆ ಅನುಭವಗಳನ್ನು ಪಡೆಯಲು ಮತ್ತು ಅನುಭವಗಳನ್ನು ಹಾಗೂ ಭಾವನೆಗಳನ್ನು ಅರ್ಥೈಸುವ ಕೇಂದ್ರವಾದ ಮೆದುಳಿಗೆ ಮಾಹಿತಿಯನ್ನು ರವಾನಿಸಲು, ವಿವಿಧ ಇಂದ್ರಿಯಗಳನ್ನು ತರಬೇತಿಗೊಳಿಸುವುದು. ವಿವಿಧ ಇಂದ್ರಿಯಗಳನ್ನು ತನ್ನ ಪರಿಸರದ ಬಗ್ಗೆ ಮಾಹಿತಿ ಪಡೆಯಲು, ಮಗು ಅವುಗಳನ್ನು ಚೆನ್ನಾಗಿ ಬಳಸಲು ಸಹಾಯ ಮಾಡುವುದೆ ಇಂದ್ರಿಯ ತರಬೇತಿಯ ಉದ್ದೇಶವಾಗಿದೆ. ಉತ್ತೇಜನಗಳು, ಲಭ್ಯವಿರುವ ಸಂಪನ್ಮೂಲಗಳು, ಆಸಕ್ತಿ ಮತ್ತು ಅವಕಾಶಗಳು, ಇಂದ್ರಿಯಗಳನ್ನು ಉತ್ತಮಪಡಿಸಿಕೊಳ್ಳುವ ಹಾಗೂ ಚುರುಕಾಗಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

**ಅಗತ್ಯ ಮತ್ತು ಪ್ರಾಮುಖ್ಯ:**

ಅಂಧಮಗುವಿನ ಶೈಕ್ಷಣಿಕ ಬೆಳವಣಿಗೆಯಲ್ಲಿ, ಇಂದ್ರಿಯ ತರಬೇತಿಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ದೃಷ್ಟಿ ಹಾನಿಯಿಂದಾದ ನಷ್ಟವನ್ನು ತುಂಬಿಸಿಕೊಳ್ಳಲು, ಅಂಧಮಗು ತನ್ನ ಇತರ ಇಂದ್ರಿಯಗಳನ್ನು ಮತ್ತು ಅಲ್ಪ ದೃಷ್ಟಿಯನ್ನು ಪರಿಣಾಮಕಾರಿಯಾಗಿ ಬಳಸಲು ಕಲಿಯಲೇ ಬೇಕು. ಒಬ್ಬ ವ್ಯಕ್ತಿ ತಾನು ಪಡೆಯುವ ಹೆಚ್ಚಿನ ಮಾಹಿತಿಯನ್ನು ಎರಡು ಅಥವಾ ಮೂರು ಇಂದ್ರಿಯಗಳಿಂದ ಗಳಿಸಬಹುದು. ಆದುದರಿಂದ, ಒಂದು ಇಂದ್ರಿಯದ ಅನುಪಸ್ಥಿತಿಯಲ್ಲಿ ಇನ್ನಿತರ ಇಂದ್ರಿಯಗಳನ್ನು ಪರಿಣಾಮಕಾರಿಯಾಗಿ ಹಾಗೂ ಹೆಚ್ಚಾಗಿ ಬಳಸಿ ಪರಿಹಾರವನ್ನು ಕಂಡುಕೊಳ್ಳಬಹುದು. ಉದಾ. ಒಂದು ಕುರ್ಚಿಯ, ಮೇಜಿನ ಅಥವಾ ಒಂದು ಪಕ್ಷಿಯ ಆಕಾರ ಮತ್ತು ಅಳತೆಗಳನ್ನು ನೋಟದಿಂದ ಅಥವಾ ಸ್ಪರ್ಶದಿಂದಲೂ ತಿಳಿಯಬಹುದು. ಆದರೆ, ಈ ವಸ್ತುಗಳ ಆಕಾರ ಮತ್ತು ಅಳತೆಗಳ ಬಗ್ಗೆ ಮಾಹಿತಿಯನ್ನು ಪಡೆಯಲು ಸ್ಪರ್ಶವನ್ನು ಪರಿಣಾಮಕಾರಿಯಾಗಿ ಬಳಸುವುದನ್ನು ಕಲಿಯಬೇಕಾಗುತ್ತದೆ. ಅರ್ಥಮಾಡಿಕೊಳ್ಳಲು ಎರಡು ಅಂಶಗಳ ಅಗತ್ಯವಿದೆ: ಮೊದಲನೆಯದು, ಮಗು ತನ್ನ ಸ್ಪರ್ಶೇಂದ್ರಿಯವನ್ನು ಪರಿಣಾಮಕಾರಿಯಾಗಿ ಬಳಸುವ ಸಾಮರ್ಥ್ಯವನ್ನು ಹೊಂದಿರಬೇಕು, ಎರಡನೆಯದು, ಮಗು ವಸ್ತುವಿನ ಎಲ್ಲ ಲಕ್ಷಣಗಳನ್ನು ತಿಳಿಯಲು ಸಾಧ್ಯವಾಗುವಂತೆ ಅದನ್ನು ಪರಿಶೀಲಿಸಬೇಕು. ಅಂಧಮಗು ತನ್ನ ಉಳಿದ ಇಂದ್ರಿಯಗಳನ್ನು, ಅವುಗಳ ಪ್ರಾಥಮಿಕ ಕಾರ್ಯಗಳನ್ನು ನಿರ್ವಹಿಸುವಷ್ಟು ಬಳಸಲು ಕಲಿಯುವುದಲ್ಲದೆ, ದೃಷ್ಟಿಹಾನಿಯಿಂದಾದ ನಷ್ಟದ ಪರಿಹಾರಾತ್ಮಕ ರೂಪದಲ್ಲಿಯೂ ಬಳಸಲು ಕಲಿಯಬೇಕು. [ಶೂಲ್ (Schol), 1986]. ಮಗು ಸ್ಪರ್ಶ, ಶ್ರವಣ, ರುಚಿ ಮತ್ತು ಚಾಲನಾ ಇಂದ್ರಿಯಗಳ ಬಳಕೆಯಲ್ಲಿ ಹೆಚ್ಚು ದಕ್ಷನಾದಷ್ಟು, ತನ್ನ ಶೈಕ್ಷಣಿಕ ಸಾಧನೆಯ ಪ್ರಯತ್ನಗಳಲ್ಲಿ ಹೆಚ್ಚಿನ ಮಟ್ಟದ ಯಶಸ್ಸನ್ನು ಗಳಿಸಬಹುದು.

Digitised by Bharatavani, CIIL

**ಸ್ಪರ್ಶೇಂದ್ರಿಯವನ್ನು ಉತ್ತಮಪಡಿಸುವುದು:**

ಸ್ಪರ್ಶದ ಮೂಲಕ ಮಗುವಿಗೆ ಒರಟಾಗಿರುವಿಕೆ, ನಯವಾಗಿರುವಿಕೆ, ಗಟ್ಟಿಯಾಗಿರುವಿಕೆ ಮತ್ತು ಮೃದುವಾಗಿರುವಿಕೆ, ಬಿಸಿಯಾಗಿರುವಿಕೆ, ತಣ್ಣಗಿರುವಿಕೆ, ನಮ್ಯತೆ, ಗಡಸಾಗಿರುವಿಕೆ ಹಾಗೂ ಸ್ಥಿತಿಸ್ಥಾಪಕತ್ವಗಳ ಬಗ್ಗೆ ಮಾಹಿತಿ ಸಿಗುತ್ತದೆ. ಸ್ಪರ್ಶದಿಂದ ಒಂದು ವಸ್ತುವಿನ ಆಕಾರವನ್ನೂ ಗ್ರಹಿಸಬಹುದು, ಈ ಬಗ್ಗೆ ಮಾಹಿತಿಯನ್ನು ಗ್ರಹಿಸಲು ಸ್ಪರ್ಶೇಂದ್ರಿಯವನ್ನು ಚುರುಕುಗೊಳಿಸಿ, ಉತ್ತಮಪಡಿಸಿಕೊಳ್ಳಬೇಕು. ಇದು ಬಹಳ ಅಗತ್ಯವಾದುದರಿಂದ, ಅಂಧಮಕ್ಕಳ ಶಾಲೆಗಳ ಕಾರ್ಯಕ್ರಮಗಳಲ್ಲಿ ಇಂತಹ ಚಟುವಟಿಕೆಗಳನ್ನು ಅಳವಡಿಸಿರಬೇಕು. ಇಂದ್ರಿಯ ತರಬೇತಿಗಾಗಿ ಶಿಕ್ಷಕನು ಹಲವಾರು ಚಟುವಟಿಕೆಗಳನ್ನು ರೂಢಿಸಬಹುದು. ಶಿಕ್ಷಕನು ವಿವಿಧ ರಚನೆಗಳ ವಸ್ತುಗಳನ್ನು ಮಕ್ಕಳಿಗೆ ನೀಡುವುದರಿಂದ, ಮಕ್ಕಳಿಗೆ ವಿವಿಧ ರಚನೆಗಳಲ್ಲಿರುವ ವ್ಯತ್ಯಾಸಗಳು ಗೊತ್ತಾಗಿ, ಆ ವಸ್ತುಗಳ ಲಕ್ಷಣಗಳನ್ನು ಅರಿಯಲು ಸಹಾಯಕವಾಗುತ್ತದೆ. ಇನ್ನೊಂದು ಚಟುವಟಿಕೆಯೆಂದರೆ, ವಿಂಗಡಣೆ ಮತ್ತು ಹೋಲಿಸುವಿಕೆ. ವಸ್ತುಗಳನ್ನು ಕ್ರಮವಾಗಿ ದೊಡ್ಡದರಿಂದ ಚಿಕ್ಕದರವರೆಗೆ ಅಥವಾ ಚಿಕ್ಕದರಿಂದ ದೊಡ್ಡದವರೆಗೆ ಜೋಡಿಸುವುದು, ಇದರಿಂದ ಕೈಗಳ ಸೂಕ್ಷ್ಮತೆ ಹಾಗೂ ಸ್ಪರ್ಶದ ಸಾಮರ್ಥ್ಯ ಹೆಚ್ಚಾಗುತ್ತದೆ. ಚಟುವಟಿಕೆಗಳು ಮಗುವಿಗೆ ಆಸಕ್ತಿದಾಯಕವಾಗಿರುವಂತೆ ಶಿಕ್ಷಕನು ನೋಡಿಕೊಳ್ಳಬೇಕು, ಇಲ್ಲದಿದ್ದರೆ, ಮಗು ಅವುಗಳಲ್ಲಿ ಭಾಗವಹಿಸುವುದಿಲ್ಲ. ಈ ತತ್ವದ ಆಧಾರದ ಮೇಲೆ 'ಮಾಂಟಸೆರಿ' ಶಿಕ್ಷಣ ವಿಧಾನ ರೂಪಿಸಲ್ಪಟ್ಟಿದೆ. ಮೇಡಂ ಮಾಂಟಸೆರಿ ಅಂಗವಿಕಲ ಮಕ್ಕಳು ಹಾಗೂ ಸಮಸ್ಯಾತ್ಮಕ ಮಕ್ಕಳ ವೈದ್ಯರಾಗಿದ್ದರು. ಮೊಟ್ಟಮೊದಲ ಸಲ, ಆಕೆ ಶೈಕ್ಷಣಿಕ ಸಾಧನೆಗಳನ್ನು ಉತ್ತಮಗೊಳಿಸುವಲ್ಲಿ ಇಂದ್ರಿಯ ತರಬೇತಿಯು ಸಹಾಯಕವಾಗುತ್ತದೆ ಎನ್ನುವುದನ್ನು ಪ್ರತ್ಯಕ್ಷವಾಗಿ ನಿರೂಪಿಸಿದರು. ಅಂಧರ ಶಿಕ್ಷಣದಲ್ಲೂ, ಇದು ಅತ್ಯಂತ ಸೂಕ್ತ ಹಾಗೂ ಪರಿಣಾಮಕಾರಿ.

**2. ಸ್ಥಳ ಪರಿಚಯ ಮತ್ತು ಚಲನವಲನ:**

**ಸ್ಥಳ ಪರಿಚಯ:** ಸ್ಥಳ ಪರಿಚಯ ಎಂದರೆ ತಾನಿರುವ ಪರಿಸರವನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳುವುದು. ನೀವು ನಿಮ್ಮ ಕೊಠಡಿಯಲ್ಲಿ, ನಿಮ್ಮ ಮೇಜಿನ ಮುಂದೆ ಕುಳಿತು ಈ ಪಾಠವನ್ನು ಓದುತ್ತಿದ್ದೀರಿ ಎಂದುಕೊಳ್ಳೋಣ, ನಿಮ್ಮ ಕೊಠಡಿಯಲ್ಲಿ ನಿಮ್ಮ ಮೇಜಿರುವ ಜಾಗ, ನಿಮ್ಮ ಮನೆಯಲ್ಲಿ ನಿಮ್ಮ ಕೊಠಡಿಯಿರುವ ಸ್ಥಳ, ನಿಮ್ಮ ಊರಲ್ಲಿ ಅಥವಾ ಹಳ್ಳಿಯಲ್ಲಿ ನಿಮ್ಮ ಮನೆಯಿರುವ ಪ್ರದೇಶ ಇತ್ಯಾದಿಯನ್ನು ಸ್ಥಳ ಪರಿಚಯ ಎನ್ನುತ್ತೇವೆ. ಹಾಗಾಗಿ ಸ್ಥಳ ಪರಿಚಯ ಎಂದರೆ ಎಲ್ಲಿ, ಯಾವ ದಿಕ್ಕಿನಲ್ಲಿ, ಮತ್ತು ನೀವು ಸದ್ಯ ಇರುವ ನಿಮ್ಮ ಪರಿಸರ ಅಥವಾ ಸ್ಥಳದಲ್ಲಿ, ನೀವಿರುವ ಸ್ಥಳವನ್ನು ಸರಿಯಾಗಿ ಗುರುತಿಸಲು, ಅನುಕೂಲವಾಗುವ ಹತ್ತಿರದ ಪ್ರಮುಖ ಸ್ಥಳಗಳು ಇತ್ಯಾದಿಯನ್ನು ತಿಳಿದುಕೊಳ್ಳುವುದು. ನೀವು ಕರಾರುವಾಕ್ಕಾಗಿ ಸ್ಥಳ ಪರಿಚಯವನ್ನು ಮಾಡಿಕೊಳ್ಳಬೇಕಾದರೆ ನಿಮ್ಮ ಇಂದ್ರಿಯಗಳ ಮೂಲಕ ಮಾಹಿತಿಯನ್ನು ಗ್ರಹಿಸಿ, ಅದನ್ನು ಪರಿಷ್ಕರಿಸಬೇಕು. ಆದುದರಿಂದ, ಒಬ್ಬ ಅಂಧವ್ಯಕ್ತಿಯ ದೃಷ್ಟಿಯಲ್ಲಿ, ತನ್ನ ಉಳಿಕೆ ಇಂದ್ರಿಯಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿ, ಪರಿಷ್ಕರಿಸುವುದರ ಮೂಲಕ ತನ್ನ ಪರಿಸರವನ್ನು ಪರಿಚಯಮಾಡಿಕೊಳ್ಳುವುದು ಎನ್ನುವ ಪ್ರಕ್ರಿಯೆ ಸ್ಥಳ ಪರಿಚಯ ಕೌಶಲ್ಯ ಎಂದಾಗುವುದು.

**ಚಲನವಲನ:** ಚಲನವಲನ ಎಂದರೆ ಸ್ಥಳದಿಂದ ಸ್ಥಳಕ್ಕೆ ಹೋಗುವುದು. ಅಂದರೆ ತಾನಿರುವ ಜಾಗದಿಂದ ತನಗೆ ಬೇಕಾದ ಜಾಗಕ್ಕೆ ಹೋಗುವ ಕ್ರಿಯೆ. ಅಂಧ ವ್ಯಕ್ತಿಗೆ ಚಲನವಲನ ಎಂದರೆ ಅದು,

- ಸ್ವತಂತ್ರವಾದುದು
- ಸುರಕ್ಷಿತವಾದುದು
- ಉದ್ದೇಶಪೂರ್ವಕವಾದುದು
- ಸಹಜವಾದುದು

ಒಬ್ಬ ವ್ಯಕ್ತಿಗೆ ತನ್ನ ಸ್ಥಳದ ಪರಿಚಯವಿಲ್ಲದಿದ್ದರೆ, ಒಂದು ಸ್ಥಳದಿಂದ ತನಗೆ ಬೇಕಾದ ಮತ್ತೊಂದು ಸ್ಥಳಕ್ಕೆ, ಸ್ಥಳ ಪರಿಚಯ ಚೆನ್ನಾಗಿ ಆಗುವತನಕ ಹೋಗಲಾಗುವುದಿಲ್ಲ. ಸ್ಥಳ ಪರಿಚಯ ಚಲನವಲನಕ್ಕೆ ಅಗತ್ಯವಿರುವ ಒಂದು ಕೌಶಲ. ಆದುದರಿಂದ ಸ್ಥಳ ಪರಿಚಯ, ಚಲನವಲನ ಪದಗಳನ್ನು ಒಟ್ಟಾಗಿ 'ಸ್ಥಳ ಪರಿಚಯ ಮತ್ತು ಚಲನವಲನ'(Orientation and Mobility) ಎಂದು ಬಳಸುತ್ತಾರೆ.

ಒಂದು ಸ್ಥಳದಿಂದ ತನಗೆ ಬೇಕಾದ ಮತ್ತೊಂದು ಸ್ಥಳಕ್ಕೆ ಒಬ್ಬ ವ್ಯಕ್ತಿ ಹೋಗಬೇಕಾದರೆ, ಆತ ಸ್ವತಂತ್ರವಾಗಿ, ಸುರಕ್ಷಿತವಾಗಿ ನಡೆಯುವಂತಾಗಬೇಕು. ಆದುದರಿಂದ, ಒಬ್ಬ ಅಂಧವ್ಯಕ್ತಿ ವಸ್ತುಗಳನ್ನು / ಅಡೆತಡೆಗಳನ್ನು ನಿವಾರಿಸಲು ಕೆಲವು ತಂತ್ರಗಳನ್ನು ಅಳವಡಿಸಿಕೊಳ್ಳಬೇಕು. ಹೀಗೆ, ಚಲನವಲನದಲ್ಲಿ ಬಳಸುವ ಯಾವುದೇ ತಂತ್ರವನ್ನು ಚಲನವಲನ ಕೌಶಲಗಳು ಅಥವಾ ಚಲನವಲನ ತಂತ್ರಗಳೆಂದು ಕರೆಯುತ್ತಾರೆ.

**ಸ್ಥಳ ಪರಿಚಯ ಮತ್ತು ಚಲನವಲನಗಳ ಹಲವಾರು ವಿಧಾನಗಳು:–**

ಸಾಮಾನ್ಯವಾಗಿ, ಅತ್ಯಂತ ಹೆಚ್ಚು ಬಳಕೆಯಲ್ಲಿರುವ ಅಂಧಮಕ್ಕಳಿಗೆ ಚಲಿಸಲು ಸಹಾಯಕವಾಗುವ ವಿಧಾನಗಳು.

- ಮಾರ್ಗದರ್ಶಕ ಸಾಮಾನ್ಯ ವ್ಯಕ್ತಿ
- ಮಾರ್ಗದರ್ಶಕ ತರಬೇತಿ ಹೊಂದಿದ ನಾಯಿ
- ಕೋಲುಗಳು ಅಥವಾ ಊರುಗೋಲು – ಚಲನವಲನ ಕೋಲುಗಳು ಮತ್ತು
- ವಿದ್ಯುನ್ಮಾನ (ಎಲಕ್ಟ್ರಾನಿಕ್) ಸಾಧನಗಳು

1. **ಮಾರ್ಗದರ್ಶಕ ಸಾಮಾನ್ಯ ವ್ಯಕ್ತಿ:** ಈ ವಿಧಾನದಲ್ಲಿ ಒಬ್ಬ ಅಂಧವ್ಯಕ್ತಿ ಒಬ್ಬ ಸಾಮಾನ್ಯ ವ್ಯಕ್ತಿಯ ಸಹಾಯದಿಂದ ನಡೆದಾಡುತ್ತಾನೆ. ಹೊಸ ಸ್ಥಳಗಳಲ್ಲಿ, ಜನ ಮತ್ತು ವಾಹನನಿಬಿಡ

Digitised by Bharatavani, CIIL

ರಸ್ತೆಗಳಲ್ಲಿ, ಅಪರಿಚಿತ ರಸ್ತೆಗಳಲ್ಲಿ ಮತ್ತು ಕಟ್ಟಡಗಳಲ್ಲಿ ಅಂಧವ್ಯಕ್ತಿ ನಡೆದಾಡುವಾಗ ಈ ಮಾರ್ಗದರ್ಶನದ ಅಗತ್ಯವಿರುತ್ತದೆ.

2. **ಮಾರ್ಗದರ್ಶಕ ತರಬೇತಿ ನಾಯಿಗಳು:** ಅಂಧವ್ಯಕ್ತಿಗಳ ಮಾರ್ಗದರ್ಶನಕ್ಕಾಗಿ ಕೆಲವು ನಿರ್ದಿಷ್ಟ ತಳಿಗಳ ನಾಯಿಗಳನ್ನು ಮಾತ್ರ ತರಬೇತಿಗೊಳಿಸಬಹುದು. ನಾಯಿಗೆ ತರಬೇತಿ ನೀಡಿದಮೇಲೆ ಅಂಧವ್ಯಕ್ತಿ ಮತ್ತು ನಾಯಿಯನ್ನು ಒಟ್ಟಿಗೆ ತರಬೇತಿಗೆ ಒಳಪಡಿಸಬೇಕಾಗುತ್ತದೆ. ಮಾರ್ಗದರ್ಶಕ ನಾಯಿಗೆ ಅಂಧವ್ಯಕ್ತಿಯ ಪರಿಚಯ ಚೆನ್ನಾಗಿರಬೇಕು. ಸರಳವಾಗಿ ಹೇಳಬೇಕೆಂದರೆ ನಾಯಿ ಮತ್ತು ಅಂಧವ್ಯಕ್ತಿ ಸ್ನೇಹಿತರಾಗಬೇಕು. ತರಬೇತಿಯಲ್ಲಿ ಅಂಧವ್ಯಕ್ತಿ ಸಾಮಾನ್ಯವಾಗಿ ಓಡಾಡುವ ಎಲ್ಲ ಸ್ಥಳಗಳಲ್ಲೂ ನಡೆದಾಡುವ ಕಾರ್ಯಕ್ರಮವಿರುತ್ತದೆ. ಮಾರ್ಗದರ್ಶಕ ನಾಯಿಗಳು ಅಡೆತಡೆಗಳನ್ನು ಮಾತ್ರ ನಿವಾರಿಸುತ್ತದೆ, ಅಂಧವ್ಯಕ್ತಿಗೆ ಹಾದಿ ಗೊತ್ತಿರಬೇಕು.

3. **ನಡೆದಾಡುವ ಕೋಲುಗಳು ಅಥವಾ ಚಲನವಲನ ಕೋಲುಗಳು:** ವಿಶೇಷವಾಗಿ ಭಾರತದಲ್ಲಿ ಅಂಧವ್ಯಕ್ತಿಗಳು ನಡೆದಾಡಲು ಅತ್ಯಂತ ಸುಲಭವಾಗಿ ಸಿಗುವ ಮತ್ತು ಅನುಕೂಲವಾಗಿರುವ ವಿಧಾನವೆಂದರೆ ಇದೇ. ಅಂಧವ್ಯಕ್ತಿ ಒಂದು ಉದ್ದನೆಯ ಕೋಲು ಅಥವಾ ಮಡಚುವ ಕೋಲಿನ ಸಹಾಯದಿಂದ ಸೂಕ್ತ ತಂತ್ರವನ್ನು ಬಳಸಿ ನಡೆದಾಡುತ್ತಾನೆ. ಕೋಲನ್ನು ಬಳಸಲು ಆತನಿಗೆ ತರಬೇತಿ ನೀಡಬೇಕು.

4. **ವಿದ್ಯುನ್ಮಾನ (ಎಲಕ್ಟ್ರಾನಿಕ್) ಪ್ರವಾಸ ಸಾಧನಗಳು:** ಪ್ರವಾಸದಲ್ಲಿರುವ ಅಂಧವ್ಯಕ್ತಿಗಳಿಗೆ ನೆರವಾಗಲು ಮುಂದುವರಿದ ವಿಜ್ಞಾನ ಮತ್ತು ತಂತ್ರಜ್ಞಾನಗಳು ವಿವಿಧ ಸಲಕರಣೆಗಳನ್ನು ಅಭಿವೃದ್ಧಿಪಡಿಸಿವೆ. ಬಳಕೆಯಲ್ಲಿರುವ ಕೆಲವು ತಂತ್ರಜ್ಞಾನಗಳೆಂದರೆ, ಲೇಸರ್, ಅಲ್ಟ್ರಾಸೊನೋಗ್ರಫಿ. ಈ ತಂತ್ರಜ್ಞಾನದ ಕೆಲವು ಸಲಕರಣೆಗಳು: ಮಾರ್ಗಸೂಚಕ ಶಬ್ದಗ್ರಾಹಿ, (path sounder), ಮಾರ್ಗದರ್ಶಕ ಶಬ್ದಗ್ರಾಹಿ (sonic guide), ಲೇಸರ್ ಕೋಲು ಇತ್ಯಾದಿ.

5. ಹಾದಿಯಲ್ಲಿ ಸಿಗುವ ಅಡೆತಡೆಗಳನ್ನು ತಾಗಿಸಿಕೊಳ್ಳುವ ಮೊದಲೆ, ಅವುಗಳನ್ನು ಪತ್ತೆಹಚ್ಚಿ ಅವುಗಳ ಬಗ್ಗೆ ಪ್ರವಾಸಿಗೆ ತಿಳಿಸುವ ಕೆಲಸವನ್ನು ಈ ಸಾಧನಗಳು ಮಾಡುತ್ತವೆ.

**ಸ್ಥಳ ಪರಿಚಯ ಮತ್ತು ಚಲನವಲನ ಕೌಶಲ್ಯಗಳು:**

ಈ ಕೌಶಲ್ಯಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು.

1. ಸ್ಥಳ ಪರಿಚಯ ಕೌಶಲ್ಯಗಳು.
2. ಚಲನವಲನ ಕೌಶಲ್ಯಗಳು.

1. **ಸ್ಥಳ ಪರಿಚಯ ಕೌಶಲಗಳು:** ಸ್ಥಳ ಪರಿಚಯ ಕೌಶಲಗಳೆಂದರೆ, ಮಾಹಿತಿಯನ್ನು ಸಂಗ್ರಹಿಸುವುದು, ಪರಿಷ್ಕರಿಸುವುದು ಮತ್ತು ಸಮನ್ವಯಗೊಳಿಸುವುದು. ಇದರಲ್ಲಿ ಅನೇಕ ಪ್ರಕಾರಗಳಿವೆ. ಕೆಲವನ್ನು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ.

**ಅ). ಉಳಿದ ಇಂದ್ರಿಯಗಳ ಬಳಕೆ:** ದೃಷ್ಟೇಂದ್ರಿಯದ ಬದಲು ಬೇರೆ ಯಾವ ಇಂದ್ರಿಯವನ್ನೂ ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿಲ್ಲ. ಆದರೂ, ಉಳಿದ ಇಂದ್ರಿಯಗಳಾದ, ಶ್ರವಣ (ಧ್ವನಿ), ಸ್ಪರ್ಶ (ಮುಟ್ಟುವಿಕೆ), ರುಚಿ ಮತ್ತು ಘ್ರಾಣ (ವಾಸನೆ) ಗಳನ್ನು ಪರಿಣಾಮಕಾರಿಯಾಗಿ ಬಳಸಿ, ದೃಷ್ಟಿಯ ತೊಂದರೆಯನ್ನು ಮೀರಬಹುದು. ನಾವು ಅನೇಕ ಧ್ವನಿಗಳನ್ನು ಆಲಿಸುತ್ತೇವೆ, ನಾವು ಅವುಗಳನ್ನು ಗುರುತಿಸಿದರೆ, ಅಂದರೆ ಧ್ವನಿಯ ಮೂಲವನ್ನು ತಿಳಿದಾಗ ಅಥವಾ ಧ್ವನಿಯನ್ನು ಅರ್ಥೈಸಿದಾಗ, ಅದನ್ನು ಗ್ರಹಿಸಿದಂತಾಗುವುದು. ಒಬ್ಬ ವ್ಯಕ್ತಿಯು ತನಗೆ ಪರಿಚಯವಿರುವವರನ್ನು ಅವರ ಧ್ವನಿಯ ಮೂಲಕ ಗುರುತಿಸಬಹುದು. ಉದಾ. ನಾವು ಹಾಡನ್ನು ಕೇಳಿದಾಕ್ಷಣ ಹಾಡುವವರನ್ನು ಗುರುತಿಸುತ್ತೇವೆ. ಅದೇ ರೀತಿ ಅನೇಕ ವಸ್ತುಗಳನ್ನು, ಪದಾರ್ಥಗಳನ್ನು ಗುರುತಿಸಬಹುದು. ಹೂವಿನಂಗಡಿ, ಫಲಹಾರಮಂದಿರ, ದಿನಸಿ ಅಂಗಡಿ, ಔಷಧಗಳಂಗಡಿ, ಪಕ್ಷಿಗಳು, ಪ್ರಾಣಿಗಳು, ತರಕಾರಿಗಳು ಮತ್ತು ಹಣ್ಣುಗಳನ್ನು ದೃಷ್ಟಿಯನ್ನು ಹೊರತುಪಡಿಸಿ ಉಳಿದ ಇಂದ್ರಿಯಗಳನ್ನು ಬಳಸಿ ಅಂಧವ್ಯಕ್ತಿಗಳು ಗುರುತಿಸಬಹುದು.

**ಆ). ಆಂಗಿಕ ಚಾಲನಾ ಇಂದ್ರಿಯ:** ಮಾಂಸಖಂಡಗಳ ಚಲನೆ ಮತ್ತು ಸ್ಥಿತಿಯ ಮೂಲಕ ನಾವು ಸಂಗ್ರಹಿಸುವ ಮಾಹಿತಿಯನ್ನು ಆಂಗಿಕ ಚಾಲನಾ ಇಂದ್ರಿಯ ಎನ್ನುತ್ತೇವೆ ನಾವು ಹತ್ತುತ್ತಿರುವಾಗ ನಮ್ಮ ಕಾಲುಗಳ/ಮಾಂಸಖಂಡಗಳ ಸ್ಥಿತಿ ಮತ್ತು ಚಲನೆಯಿಂದ ನಾವು ಸುಲಭವಾಗಿ ಏನನ್ನು ಹತ್ತುತ್ತಿದ್ದೇವೆ ಎನ್ನುವುದನ್ನು ಗುರುತಿಸಬಹುದು.

**ಇ). ಸ್ಥಳ ಸೂಚಕಗಳು:** ಒಂದು ಪರಿಸರದಲ್ಲಿ ಶಾಶ್ವತವಾಗಿರುವ, ಗುರುತಿಸಲು ಸುಲಭವಾಗಿರುವ ಪರಿಚಿತ ವಸ್ತುಗಳು, ಧ್ವನಿಗಳು ಅಥವಾ ಯಾವುದೇ ರೀತಿಯ ಉತ್ತೇಜನಗಳು ಇತ್ಯಾದಿಯನ್ನು ಸ್ಥಳ ಸೂಚಕಗಳೆನ್ನುತ್ತೇವೆ. ನಿಮ್ಮ ಮನೆ ಗೇಟ್ ಪಕ್ಕದಲ್ಲಿರುವ ದೂರವಾಣಿಯ ಕಂಬವನ್ನು ಸ್ಥಳ ಸೂಚಕ ಎನ್ನಬಹುದು.

**ಈ). ಸುಳಿವು:** ಪರಿಸರದಲ್ಲಿ ಶಾಶ್ವತವಾಗಿರದ ಯಾವುದೇ ಪರಿಚಿತ ವಸ್ತು ಅಥವಾ ಯಾವುದೇ ರೀತಿಯ ಇಂದ್ರಿಯ ಸಂವೇದನೆಯನ್ನು ಸುಳಿವು ಎನ್ನುತ್ತೇವೆ. ಬೆರಳಚ್ಚು ಯಂತ್ರದ ಶಬ್ದ ಕೇಳಿದಾಗ ಬೆರಳಚ್ಚುಗಾರ ಕೆಲಸಮಾಡುತ್ತಿದ್ದಾನೆ ಎಂದು ಗೊತ್ತಾಗುತ್ತದೆ. ಆದರೆ ಈ ಶಬ್ದ ಯಾವಾಗಲೂ ಇರುವುದಿಲ್ಲ. ನೆರಳಿನಿಂದ ನಮಗೆ ಸುಮಾರಾಗಿ ಸಮಯದ ಅರಿವಾಗುತ್ತದೆ. ಈ ಸುಳಿವುಗಳಿಂದ ನಮಗೆ ನಾವು ಕ್ರಮಿಸಿದ ಹಾದಿ, ಕ್ರಮಿಸಬೇಕಾಗಿರುವ ಹಾದಿಯನ್ನು ಅಂದಾಜು ಮಾಡಲು ಮತ್ತು ಸ್ಥಳಗಳನ್ನು ಗುರುತಿಸಲು ಸಹಾಯವಾಗುತ್ತದೆ.

**ಉ). ಪರಿಕಲ್ಪನಾ ಕೌಶಲ್ಯಗಳು:** ಪರಿಕಲ್ಪನಾ ಕೌಶಲಗಳು ಮೂರು ಕ್ಷೇತ್ರಗಳಿಗೆ ಸಂಬಂಧಿಸಿವೆ: ದೇಹ, ಪರಿಸರ ಮತ್ತು ಆಕ್ರಮಿಸುವ ಜಾಗ. ದೈಹಿಕ ಪರಿಕಲ್ಪನೆಗಳೆಂದರೆ, ದೇಹದ ಪರಿಕಲ್ಪನೆ ಮತ್ತು ದೇಹದ

Digitised by Bharatavani, CIIL

ಸಮತೋಲನ. ಆಕ್ರಮಿಸುವ ಜಾಗದ ಪರಿಕಲ್ಪನೆ ಎಂದರೆ, ಇರುವ ಸ್ಥಿತಿ, ಸಂಬಂಧಗಳು ಮತ್ತು ಅಳತೆ. ಪರಸರದ ಪರಿಕಲ್ಪನೆಗಳೆಂದರೆ ವಾಹನಗಳು, ರಸ್ತೆ ದಾಟುವಿಕೆ ಮತ್ತು ಪಾದಚಾರಿಗಳ ಜಾಗ ಇತ್ಯಾದಿ.

**ಚಲನವಲನ ಕೌಶಲ್ಯಗಳು:**

**ಅ). ರಕ್ಷಣಾ ತಂತ್ರಗಳು:** ತನ್ನ ದಾರಿಯಲ್ಲಿರುವ ಅಡೆತಡೆಗಳನ್ನು ನಿವಾರಿಸಲು ಅಂಧವ್ಯಕ್ತಿ ಬಳಸುವ ರಕ್ಷಣಾ ತಂತ್ರಗಳನ್ನು ಈ ಹೆಸರಿನಿಂದ ಕರೆಯುತ್ತೇವೆ. ಇದರಿಂದ ಸ್ವತಂತ್ರವಾಗಿ, ಸುರಕ್ಷಿತವಾಗಿ ನಡೆಯಬಹುದು.

**ಆ).** ದೇಹದ ಕೆಳಭಾಗದ ರಕ್ಷಣೆಯನ್ನು, ಕಾಲುಗಳ ಮುಂದೆ ಯಾವುದಾದರೊಂದು ಕೈಯನ್ನು, ಅಂಗೈಯನ್ನು ಮಡಿಚಿ, ಅಡ್ಡವಾಗಿ ಹಿಡಿದುಕೊಳ್ಳುವ ರೀತಿಯಲ್ಲಿ ಮಾಡಬಹುದು. ಆಗ ಅಡೆತಡೆಗಳ ಸಂಪರ್ಕವಾದಾಗ ಕೈ ಹಿಂಭಾಗ ಪತ್ತೆಹಚ್ಚುತ್ತದೆ.

**ಇ).** ದೇಹದ ಮೇಲ್ಭಾಗದ ರಕ್ಷಣೆಯನ್ನು ಯಾವುದಾದರೊಂದು ಕೈಯನ್ನು ಮುಖದ ಮುಂದೆ, ಕಣ್ಣುಗಳ ಮೇಲ್ಭಾಗದಲ್ಲಿ ಅಂಗೈಯನ್ನು ಹೊರಚಾಚಿ ಇಟ್ಟುಕೊಳ್ಳುವುದರ ಮೂಲಕ ಮಾಡಬಹುದು. ಅಂಗೈಯಿಂದ ಮುಂಗೈವರೆಗಿನ ಕೈ ಸಮತಟ್ಟಾಗಿರಬೇಕು. ಇದರಿಂದ ನೇತಾಡುವ ಗಿಡದ ಕುಂಡಗಳು, ಮರಗಿಡಗಳು, ರಸ್ತೆಫಲಕಗಳು, ತಲೆಗೆ ತಗುಲಬಹುದಾದ ಮಹಡಿ ಮೆಟ್ಟಲಿನ ತಳಭಾಗ, ಮುಂತಾದ ಅಡಚಣೆಗಳನ್ನು ಪತ್ತೆ ಹಚ್ಚಿ, ಅವುಗಳಿಂದ ತಪ್ಪಿಸಿಕೊಳ್ಳಬಹುದು.

**ಈ).** ಈ ಎರಡು ವಿಧಾನಗಳನ್ನು ಒಂದೊಂದು ಕೈಯನ್ನು ಒಂದೊಂದು ವಿಧಾನದಲ್ಲಿ ಇಟ್ಟುಕೊಳ್ಳುವ ಮೂಲಕ ಒಟ್ಟಿಗೆ ಬಳಸಬಹುದು.

**ಉ). ಜರಗಿಸುವುದು:** ಗಣಿಕೆಗಳಿಂದ (ಕೈ ಬೆರಳುಗಳ ಹಿಂಭಾಗ) ಯಾವುದೇ ಮಾರ್ಗವನ್ನು ಉದ್ದಕ್ಕೂ ಗುರುತಿಸುತ್ತಾ ಹೋಗುವುದು. ಗೋಡೆ, ಬಸ್ಸಿನ ಒಂದು ಭಾಗ ಇತ್ಯಾದಿ.

**ಊ). ಚೌಕಾಕಾರ:** ಈ ತಂತ್ರವನ್ನು ದಿಕ್ಕನ್ನು ಗುರುತಿಸಲು ಬಳಸಲಾಗುತ್ತದೆ. ಎರಡು ಕಾಲುಗಳ ಹಿಮ್ಮಡಿಗಳನ್ನು ಒಂದಕ್ಕೊಂದು ತಾಗಿಸಿ ನಿಲ್ಲಬೇಕು. ಒಂದು ಹಿಮ್ಮಡಿಯನ್ನು ಬೇಕಾದ ಕಡೆಗೆ ಇನ್ನೊಂದಕ್ಕೆ ತಾಗಿರುವಂತೆಯೆ ತಿರುಗಿಸಿ, ನಂತರ ಇನ್ನೊಂದು ಹಿಮ್ಮಡಿಯನ್ನು ತಿರುಗಿದ ಹಿಮ್ಮಡಿ ಹತ್ತಿರ ತರಬೇಕು.

**ಸಾಮಾನ್ಯ ವ್ಯಕ್ತಿ ಮಾರ್ಗದರ್ಶನ:** ಸಾಮಾನ್ಯ ವ್ಯಕ್ತಿಯ ಸಹಾಯದಿಂದ ನಡೆದಾಡುವುದನ್ನು ಸಾಮಾನ್ಯ ವ್ಯಕ್ತಿ ಮಾರ್ಗದರ್ಶನ ತಂತ್ರ ಎನ್ನುತ್ತೇವೆ. ಸಾಮಾನ್ಯ ಮಾರ್ಗದರ್ಶಕ ಸಿಕ್ಕಾಗ ಈ ತಂತ್ರವನ್ನು ಬಳಸುತ್ತೇವೆ. ಈ ತಂತ್ರವನ್ನು ಜನನಿಬಿಡ ಪ್ರದೇಶಗಳಲ್ಲಿ, ಅಪರಿಚಿತ ಪ್ರದೇಶಗಳಲ್ಲಿ ಬಳಸಬೇಕು. ಈ ತಂತ್ರವನ್ನು ಬಳಸುವಾಗ ಅಂಧವ್ಯಕ್ತಿ ಮತ್ತು ಮಾರ್ಗದರ್ಶಕ ವ್ಯಕ್ತಿ ತೊಡಕಿಲ್ಲದೆ, ಸುಗಮವಾಗಿ ನಡೆಯಲು ಕೆಲವು ತಂತ್ರಗಳನ್ನು ಅನುಸರಿಸಬೇಕು. ಈ ತಂತ್ರಗಳನ್ನು ಬಳಸುವ ಮೊದಲು ಈ ಬಗ್ಗೆ ತಿಳಿಯಬೇಕು.

**ಅ. ಸಂಪರ್ಕವನ್ನು ಬೆಳೆಸುವುದು:** ಮಾರ್ಗದರ್ಶಕ ಅಂಧವ್ಯಕ್ತಿಯ ಪಕ್ಕ ನಿಂತು, ಆತನ ಯಾವುದಾದರೊಂದು ಕೈಯ ಹಿಂಭಾಗವನ್ನು ತನ್ನ ಕೈಯ ಹಿಂಭಾಗದಿಂದ ಮುಟ್ಟಬೇಕು. ನಂತರ ಅಂಧವ್ಯಕ್ತಿ ಮಾರ್ಗದರ್ಶಕ ವ್ಯಕ್ತಿಯ ಕೈಯನ್ನು ಗುರುತಿಸಿ ಆತನ ಮೊಣಕೈಯನ್ನು ಹಿಡಿದುಕೊಳ್ಳಬೇಕು.

**ಆ. ಹಿಡಿತ:** ಹಿಡಿತ ಸುಮಾರಾಗಿರಬೇಕು. ಬಹಳ ಗಟ್ಟಿಯಾಗಿಯೂ / ಹಗುರವಾಗಿಯೂ ಇರಬಾರದು.

**ಇ. ಸ್ಥಿತಿ:** ಅಂಧವ್ಯಕ್ತಿ ಮಾರ್ಗದರ್ಶಕನ ಯಾವುದಾದರೊಂದು ಕೈಯನ್ನು ಹಿಡಿದುಕೊಳ್ಳಬಹುದು. ಆದರೆ ಮಾರ್ಗದರ್ಶಕನದು ಬಲಗೈಯಾದರೆ ಅಂಧವ್ಯಕ್ತಿಯದು ಎಡಗೈಯಾಗಿರಬೇಕು, ಆತನದು ಎಡಗೈಯಾದರೆ ಅಂಧವ್ಯಕ್ತಿಯದು ಬಲಗೈಯಾಗಬೇಕು.

ಅಂಧವ್ಯಕ್ತಿ ಮಾರ್ಗದರ್ಶಕನ ಹಿಂದೆ 1 ಅಥವಾ 1 1/2 ಅಡಿ ಹಿಂದೆ ಇರಬೇಕು. ಈ ಸ್ಥಿತಿಯಲ್ಲಿ ಅಂಧವ್ಯಕ್ತಿಯ ಕೈ ಆಂಗ್ಲಭಾಷೆಯ ಎಲ್ ಆಕಾರದಲ್ಲಿರುತ್ತದೆ, ಮುಂಗೈ ಸಮತಲದಲ್ಲಿರುತ್ತದೆ. ಅಂಧವ್ಯಕ್ತಿಯ ಎಡಭುಜ ಮಾರ್ಗದರ್ಶಕನ ಬಲಭುಜಕ್ಕೆ ನೇರವಾಗಿರಬೇಕು.

**ಈ. ನಡೆಯುವುದು:** ನಡೆಯುವಾಗ ಅಂಧವ್ಯಕ್ತಿ ಮತ್ತು ಮಾರ್ಗದರ್ಶಕ ಒಟ್ಟಿಗೆ ನಡೆಯಬೇಕು. ಮಾರ್ಗದರ್ಶಕ ಅಡೆತಡೆಗಳನ್ನು ಪತ್ತೆಹಚ್ಚುತ್ತಾನೆ ಮತ್ತು ಆತ/ಆಕೆ ವೇಗವಾಗಿ ನಡೆಯಬಾರದು.

**ಉ. ಬಾಗಿಲುಗಳು:** ಬಾಗಿಲುಗಳ ಹತ್ತಿರ ಬಂದಾಗ ಮಾರ್ಗದರ್ಶಕ ಅಂಧವ್ಯಕ್ತಿಗೆ ಬಾಗಿಲುಗಳಿರುವುದನ್ನು ಮತ್ತು ಅವುಗಳ ಮೂಲಕ ಹಾದುಹೋಗಬೇಕೆನ್ನುವುದನ್ನು ತಿಳಿಸಬೇಕು. ಮಾರ್ಗದರ್ಶಕ, ಅಂಧವ್ಯಕ್ತಿಯ ಕೈಯನ್ನು ಬಾಗಿಲ ಚಿಲಕದ ಮೇಲಿಟ್ಟು, ತಾನು ಬಾಗಿಲೊಳಗೆ ಹೊಗಬೇಕು, ಅಂಧವ್ಯಕ್ತಿ ತನ್ನ ಹಿಂದೆ ಒಳಗೆ ಬಂದ ಮೇಲೆ ಬಾಗಿಲನ್ನು ಹಾಕಿ, ಅಂಧವ್ಯಕ್ತಿಯ ಸಂಪರ್ಕವನ್ನು ಮಾರ್ಗದರ್ಶಕ ಮುಂದುವರಿಸಬೇಕು.

**ಊ. ಕಿರಿದಾದ ರಸ್ತೆಗಳು:** ಕಿರಿದಾದ ಜಾಗಗಳಲ್ಲಿ ಅಂದರೆ ಪಾದಚಾರಿ ಹಾದಿಗಳಲ್ಲಿ ಮಾರ್ಗದರ್ಶಕನು ತನ್ನ ಕೈಯನ್ನು ದೇಹದ ಪಕ್ಕದಿಂದ ಓರೆಯಾಗಿ ಹಿಂದಕ್ಕೆ ನೀಡಬೇಕು. ಅಂಧವ್ಯಕ್ತಿ ಆ ಕೈಯನ್ನು ಹಿಡಿದುಕೊಂಡು ನೇರವಾಗಿ ಮಾರ್ಗದರ್ಶಕನ ಹಿಂದೆ ನಡೆಯಬೇಕು.

**ಋ. ಕುರ್ಚಿಯಲ್ಲಿ ಕುಳಿತುಕೊಳ್ಳುವಿಕೆ:** ಮಾರ್ಗದರ್ಶಕ ಕುರ್ಚಿಯ ಹತ್ತಿರ ನಿಲ್ಲಬೇಕು, ಅಂಧವ್ಯಕ್ತಿಯ ಕೈಯನ್ನು ಕುರ್ಚಿಯ ಕೈಮೇಲೆ ಇಟ್ಟಾಗ, ಅಂಧವ್ಯಕ್ತಿ ಕುರ್ಚಿಯಲ್ಲಿ ಏನಾದರೂ ಇದೆಯಾ ಎಂದು ನೋಡಿ, ಕುಳಿತುಕೊಳ್ಳಬೇಕು. ಕುರ್ಚಿಯಲ್ಲಿ ಯಾವುದಾದರೂ ವಸ್ತುವಿದ್ದರೆ, ಅಂಧವ್ಯಕ್ತಿ ಅದನ್ನು ತನ್ನ ಕೈಗೆ ತೆಗೆದುಕೊಂಡು, ಮತ್ತೆ ಕುಳಿತುಕೊಳ್ಳಬೇಕು.

Digitised by Bharatavani, CIIL

**ಎ. ಮೆಟ್ಟಿಲುಗಳನ್ನು ಹತ್ತುವುದು ಮತ್ತು ಇಳಿಯುವುದು:** ಮೆಟ್ಟಿಲುಗಳನ್ನು ಹತ್ತುವ ಮತ್ತು ಇಳಿಯುವ ಮೊದಲು ಅಂಧವ್ಯಕ್ತಿಗೆ ಮಾರ್ಗದರ್ಶಕನು ಮೆಟ್ಟಿಲು ಹತ್ತಬೇಕೋ ಅಥವಾ ಇಳಿಯಬೇಕೋ ಎನ್ನುವುದನ್ನು ತಿಳಿಸಬೇಕು. ಅನೇಕ ಸಲ ಮಾರ್ಗದರ್ಶಕನು ಸ್ವಲ್ಪ ನಿಂತಾಗ ಮೆಟ್ಟಿಲುಗಳನ್ನು ಹತ್ತುವ ಅಥವಾ ಇಳಿಯುವ ಕೆಲಸ ಎಂದು ಅಂಧವ್ಯಕ್ತಿಗೆ ಗೊತ್ತಾಗುತ್ತದೆ. ಮೆಟ್ಟಿಲುಗಳಿಗೆ ಹಿಡಿದುಕೊಳ್ಳುವ ಕಂಬಿಯಿದ್ದರೆ ಅಂಧವ್ಯಕ್ತಿ ಅದನ್ನು ಹುಡುಕಿ ಹಿಡಿದುಕೊಳ್ಳಬೇಕು.

**ಕೋಲಿನ ವಿಧಾನಗಳು:** 3 ಬಗೆಯ ಕೋಲುಗಳು ಲಭ್ಯವಿವೆ.

1. ಉದ್ದನೆಯ ಕೋಲು 2. ಮಡಿಕೆಯ ಕೋಲು

3. ವಿದ್ಯುನ್ಮಾನ ಕೋಲು.

ಎಲ್ಲ ಕೋಲುಗಳಲ್ಲೂ ಸಾಮಾನ್ಯವಾಗಿ ಎಲ್ಲ ಭಾಗಗಳೂ ಇರುತ್ತವೆ. ಉದ್ದನೆಯ ಕೋಲನ್ನು ಮಡಚಲಾಗುವುದಿಲ್ಲ. ಆದರೆ ಮಡಿಕೆಯ ಕೋಲನ್ನು, ಉದ್ದಕ್ಕೆ ಅನುಸಾರವಾಗಿ 4–5 ಮಡಿಕೆಗಳಾಗಿ ಮಡಚಬಹುದು. ವಿದ್ಯುನ್ಮಾನ ಕೋಲಿನಲ್ಲಿ ಒಂದು ವಿಶೇಷ ಸಾಧನವಿದ್ದು ಇದು ಲೇಸರ್ ಅಥವಾ ಶಬ್ದಾತೀತ (ಅಲ್ಟ್ರಾ ಸೌಂಡ್) ತರಂಗಗಳನ್ನು ಹೊಮ್ಮಿಸಬಲ್ಲದು ಹಾಗೂ ಸ್ವೀಕರಿಸಬಲ್ಲದು.

–ನರಸಿಂಗರಾವ್ ಕೆ.ವಿ.

## ಧ್ವನಿ ಸುರುಳಿಗಳು

**ಅರ್ಥ ಮತ್ತು ವ್ಯಾಖ್ಯಾನ:** ಶ್ರವಣೋಪಕರಣಗಳಲ್ಲಿ ಧ್ವನಿ ಸುರುಳಿ ಒಂದು ಪ್ರಮುಖವಾದ ಸಾಧನವಾಗಿದೆ, ಅತಿಮುಖ್ಯವಾದ ಅಥವಾ ನಮಗೆ ಬೇಕಾದ ವಿಷಯಗಳನ್ನು, ತತ್ವಜ್ಞಾನಿಗಳ ಭಾಷಣಗಳನ್ನು ಕೆಲವು ಸೂಚನೆಗಳನ್ನು, ನಾಟಕ, ಚಿತ್ರಗೀತೆ, ವಿವಿಧ ತರಗತಿಗಳ ಪಾಠಗಳು, ವಿವಿಧ ಕಾರ್ಯಕ್ರಮಗಳ ಮುದ್ರಣ ಇನ್ನು ಅನೇಕ ಅಂಶಗಳನ್ನು ಧ್ವನಿ ಸುರುಳಿಗಳಲ್ಲಿ ಮುದ್ರಿಸಿಕೊಂಡು ಅವಶ್ಯಕತೆಯಿದ್ದಾಗ ಕೇಳುವ ಒಂದು ವೈಜ್ಞಾನಿಕ ಸಾಧನವೇ ಧ್ವನಿ ಸುರಳಿಯಾಗಿದೆ.

ರೇಡಿಯೋ ಜೊತೆಗೆ ಸಮಾನಾಂತರದಲ್ಲಿಯೇ ಶ್ರವ್ಯ ಉಪಕರಣವಾಗಿ ಬಳಸುವ ಒಂದು ಉತ್ತಮ ಸಾಧನವೇ ಧ್ವನಿಮುದ್ರಣ ಅಥವಾ ಟೇಪ್ ರೆಕಾರ್ಡರ್. ಇದರಲ್ಲಿ ಧ್ವನಿಸುರಳಿಗಳನ್ನು ಮಾತ್ರ ಬಳಕೆ ಮಾಡಲು ಸಾಧ್ಯ.

ಧ್ವನಿಸುರಳಿಗಳು ಅಥವಾ ಮುದ್ರಿತ ಕ್ಯಾಸೆಟ್‌ಗಳನ್ನು ಸ್ವ–ಅಭಿಪ್ರೇರಣೆಗಳ ಮಾಹಿತಿಯನ್ನು ಮೌಖಿಕವಾಗಿ ವಿಶ್ಲೇಷಿಸಲು, ಹಾಗೂ ಮಾಹಿತಿ/ವಿಷಯವನ್ನು ಅಭ್ಯಾಸಿಸಲು ಮತ್ತು ಪುನಃ ವ್ಯಾಖ್ಯಾನಿಸಲು ಅಥವಾ ಒಂದು ಕೌಶಲ್ಯವನ್ನು ಬೋಧಿಸಲು ಬಳಸಲಾಗುವುದು.

ಧ್ವನಿಮುದ್ರಿತ ಕ್ಯಾಸೆಟ್‌ನ್ನು ಬೋಧನೆ ಅಥವಾ ಅಭ್ಯಾಸದ ಹಾಳೆಗಳು ಮತ್ತಿತರ ಸಾಮಗ್ರಿಗಳ ಜೊತೆ ಬಳಸಬಹುದು. ಧ್ವನಿ ಮುದ್ರಿತ ಸುರಳಿಗಳು ಅಭ್ಯಾಸದ ಮಾರ್ಗದರ್ಶಿಗಳಾಗಿ ಮತ್ತು ಮಾಹಿತಿಯ ಸಂಪನ್ಮೂಲಗಳಾಗಿ ಸೇವೆ ಸಲ್ಲಿಸುತ್ತವೆ.

ಧ್ವನಿಸುರಳಿಗಳು ಮಾತಿನ ಶಬ್ದಗಳನ್ನು ಸಂಗ್ರಹಿಸುವ ಸಾಧನವಾಗಿವೆ. ತಜ್ಞರ ಹಾಗೂ ವಿಜ್ಞಾನಿಗಳ ಉಪನ್ಯಾಸಗಳನ್ನು ದಾಖಲು ಮಾಡಿಕೊಂಡು ಅಗತ್ಯವಿದ್ದಾಗ ಅವುಗಳನ್ನು ತರಗತಿಯಲ್ಲಿ ಕೇಳಿಸಬಹುದಾಗಿದೆ. ಇದು ದೂರದರ್ಶನಕ್ಕಿಂತ ಕಡಿಮೆ ವೆಚ್ಚದಲ್ಲಿ, ಸುಲಭವಾಗಿ ಎಲ್ಲರೂ ಹಾಗೂ ಎಲ್ಲಾ ಶಾಲಾ–ಕಾಲೇಜುಗಳ/ಶೈಕ್ಷಣಿಕ ಸಂಸ್ಥೆಗಳ ವಿಷಯದ ಅಗತ್ಯತೆಗೆ ಅನುಗುಣವಾಗಿ ಉಪಯೋಗಿಸಬಹುದಾಗಿದೆ.

ಧ್ವನಿಮುದ್ರಿತ ಸುರಳಿಗಳನ್ನು ಪ್ರಮುಖವಾಗಿ ಎರಡು ಉದ್ದೇಶಗಳಿಗಾಗಿ ರಚಿಸಲಾಗುತ್ತದೆ ಅವುಗಳೆಂದರೆ:

1) ಮಾಹಿತಿಯನ್ನು ಪ್ರಸರಿಸುವ ಧ್ವನಿಮುದ್ರಿತ ಸುರಳಿಗಳು.

2) ಸೂಚನೆಯನ್ನು ಪ್ರಸರಿಸುವ ಧ್ವನಿಮುದ್ರಿತ ಸುರಳಿಗಳು.

**1) ಮಾಹಿತಿಯನ್ನು ಪ್ರಸರಿಸುವ ಧ್ವನಿಮುದ್ರಿತ ಸುರಳಿಗಳು.**

ಧ್ವನಿಮುದ್ರಿತ ಸುರಳಿಗಳನ್ನು ಸಿದ್ಧಪಡಿಸುವ ಮುನ್ನ ಒಂದು ವಿಷಯದ ಬಗ್ಗೆ ಪೀಠಿಕೆ, ಸಾರಾಂಶ ಮತ್ತು ಪ್ರಸ್ತುತ ಪಡಿಸುವುದು, ಇತರೆ ಅಂಶಗಳನ್ನು ಯೋಜನೆ ಮಾಡುವುದು ತುಂಬಾ ಮುಖ್ಯ.

**ಯೋಜನೆ ಮತ್ತು ಕಾರ್ಯಗೊಳಿಸುವ ಹಂತಗಳು:**

**ಹಂತ 1:** ಯಾವ ವಿಷಯದ ಬಗ್ಗೆ ಮಾಹಿತಿಯನ್ನು ನೀಡಬೇಕೋ ಆ ವಿಷಯದ ಮಹತ್ವ ಮತ್ತು ಸಾಮಾನ್ಯ ಉದ್ದೇಶಗಳನ್ನು ಗುರುತಿಸುವುದು.

**ಹಂತ 2:** ಆ ವಿಷಯನ್ನು ಯಾರಿಗೆ ಸಿದ್ಧಪಡಿಸಲಾಗುವುದೋ ಅವರ ಅಂದರೆ ಕೇಳುಗರ ಗುಂಪಿನ ವಯಸ್ಸು, ಅವರ ಆಸಕ್ತಿ ಮತ್ತು ಅವರ ಉತ್ಸುಕತೆ – ಇನ್ನಿತರ ಅಂಶಗಳನ್ನು ನಿರ್ಧರಿಸಿಕೊಳ್ಳುವುದು.

**ಹಂತ 3:** ವಿಷಯ ಅಥವಾ ಮಾಹಿತಿಯನ್ನು ಪ್ರಸಾರ ಅಥವಾ ವ್ಯಕ್ತಪಡಿಸುವ ಅಥವಾ ಪ್ರಸ್ತುತ ಪಡಿಸುವ ವಿಧಾನ, ಧ್ವನಿಗಳ ಸಂಖ್ಯೆ, ವಿಷಯದ ಬಗೆಗಿನ ಹಿನ್ನೆಲೆ (ಪೂರ್ವ) ಮಾಹಿತಿ – ಹೀಗೆ ಇನ್ನು ಅನೇಕ ಅಂಶಗಳ ಬಗ್ಗೆ ತಿಳಿದಿರುವುದು.

**ಹಂತ 4:** ವಿಷಯ ಅಥವಾ ಮಾಹಿತಿಯ ಮುಖ್ಯ ಅಂಶಗಳನ್ನು ಸಿದ್ಧಪಡಿಸುವುದು.

**ಹಂತ 5:** ಕೈ ಬರವಣಿಗೆಯ (ಸ್ಕ್ರಿಪ್ಟ್)ನ್ನು ತಯಾರಿಸಿ ಇದನ್ನು ಕ್ರಮವಾಗಿ ಜೋಡಿಸುವುದು, ಪಾತ್ರವರ್ಗಗಳು ಮತ್ತು ಮಾಹಿತಿಯ ಮುಖ್ಯಾಂಶಗಳನ್ನು ರಚಿಸಿಕೊಳ್ಳುವುದು.

Digitised by Bharatavani, CIIL

**ಹಂತ 6:** ಆಯಾ ಪಾತ್ರಕ್ಕೆ ಅನುಗುಣವಾಗಿ ಅಭಿವ್ಯಕ್ತ/ವಿಷಯ ಮಂಡಿಸುವವರನ್ನು ಅವರ ಆಸಕ್ತಿಗನುಗುಣವಾಗಿ ಗುರುತಿಸಿ ನಂತರ ಮುದ್ರಣಕ್ಕೆ ಸಂಘಟಿಸುವುದು.

**ಹಂತ 7:** ಆಯಾ ಸಂದರ್ಭಕ್ಕೆ ಅನುಗುಣವಾಗುವಂತೆ ಧ್ವನಿಸುರುಳಿಯನ್ನು ಮುದ್ರಿಸಲು ಸ್ಟುಡಿಯೋ(ಕಾರ್ಯಾಲಯ) ವನ್ನು ಸಿದ್ಧಪಡಿಸುವುದು.

**ಹಂತ 8:** ಧ್ವನಿಸುರುಳಿಗೆ ವಿವಿಧ ಮಾಹಿತಿಯನ್ನು ಆಯ್ಕೆಮಾಡುವ ಮೂಲಕ ಜೋಡಿಸುವ ಮೂಲಕ, ವಿವಿಧ ಧ್ವನಿಗಳನ್ನು ಮತ್ತು ಹಿನ್ನಲೆ ಸಂಗೀತಗಳನ್ನು ಆಯ್ಕೆ ಮಾಡುವ ಮೂಲಕ ಎಡಿಟ್ ಮಾಡುವುದು.

**2) ಸೂಚನೆಯನ್ನು ಪ್ರಸರಿಸುವ ಧ್ವನಿಮುದ್ರಿತ ಸುರಳಿಗಳು.**

ಇದರಲ್ಲಿ ಎರಡು ವಿಧಗಳಿವೆ

A. ಗುಂಪಿನಲ್ಲಿ ಕೇಳುಗರಿಗೆ ಅಥವಾ ಗುಂಪು ಕೇಳುಗರಿಗಾಗಿ ಮತ್ತು ಚರ್ಚೆಗೆ.

B. ವೈಯಕ್ತಿಕ– ಸ್ವಯಂಗತಿ ಕಲಿಕೆಗಾಗಿ.

A. ಗುಂಪಿನಲ್ಲಿ ಕೇಳುಗರಿಗಾಗಿ ಧ್ವನಿಮುದ್ರಣವು ಮೇಲಿನ ಮಾಹಿತಿಯನ್ನು ಪ್ರಸರಿಸುವ ಧ್ವನಿಮುದ್ರಿತ ಸುರುಳಿ ಮುದ್ರಿಸಿ ಗುಂಪಿಗೆ ಅಥವಾ ಚರ್ಚೆಗೆ ಬಳಸಬಹುದು.

B. ವೈಯಕ್ತಿಕ– ಸ್ವಯಂಗತಿ ಕಲಿಕೆ.

ಸ್ವಯಂಗತಿ ಕಲಿಕೆಯ ಮುದ್ರಣಕ್ಕೆ ವೈಯಕ್ತಿಕ ಭಿನ್ನತೆಗಳು ಮತ್ತು ಸೂಚನೆಗಳಿಗೆ ಪ್ರತಿಕ್ರಿಯೆ ನೀಡುವ ಹಾಗೆ, ಬದಲಾವಣೆಗಳಿಗೆ ಪ್ರಾತಿನಿಧ್ಯ ನೀಡುವ ಹಾಗೆ ಮತ್ತು ಏನಾದರೂ ಕೆಲಸ ಮಾಡಲು ವೇಳೆಯನ್ನು ಕೊಡುವುದು, ಹಿಮ್ಮಾಹಿತಿ ನೀಡುವುದು ಇತ್ಯಾದಿ. ಆದ್ದರಿಂದ ಇಂತಹ ಧ್ವನಿಮುದ್ರಣಗಳನ್ನು ಈ ಕೆಳಗಿನ ಮೂರು ರೀತಿಯಲ್ಲಿ ಸೂಚನೆಗಳನ್ನು ಅನುಸರಿಸಿ ಮುದ್ರಿಸಲಾಗುವುದು, ಅವುಗಳೆಂದರೆ:

a) ಶ್ರವಣ ಟಿಪ್ಪಣಿ ಪುಸ್ತಕ(Audio note book)

b) ಶ್ರವಣ ಬೋಧನೆ(Audio Tutorial)

c) ಶ್ರವಣ ಚಿತ್ರಣ (Audio Vision)

**a) ಶ್ರವಣ ಟಿಪ್ಪಣಿ ಪುಸ್ತಕ:**

ಶ್ರವಣ ಟಿಪ್ಪಣಿ ಪುಸ್ತಕದಲ್ಲಿ ಅಭ್ಯಾಸ ಮಾರ್ಗದರ್ಶನ ಜೊತೆಗೆ ಅಭ್ಯಾಸ ಪುಸ್ತಕವು ಇರುತ್ತದೆ, ಅಥವಾ ಧ್ವನಿಮುದ್ರಣದ ಜೊತೆಗೆ ಎರಡು ಪ್ರತ್ಯೇಕ ಅಭ್ಯಾಸ ಹಾಳೆಗಳಿರುತ್ತವೆ, ಧ್ವನಿಮುದ್ರಕ ಅಥವಾ ಅಭ್ಯಾಸ ಮಾರ್ಗದರ್ಶಿಯು ಘಟಕವನ್ನು ಪರಿಚಯಿಸುತ್ತದೆ, ಅನಂತರ ಧ್ವನಿಮುದ್ರಕವು ವಿಷಯವನ್ನು ವಿವರಿಸುವುದು ಮತ್ತು ನಿಯಮಿತವಾಗಿ ಕಲಿಕಾಕಾರನಿಗೆ ಅಭ್ಯಾಸ ಪುಸ್ತಕದಲ್ಲಿರುವ ಚಟುವಟಿಕೆಗಳನ್ನು ಮಾಡಲು/ಬಿಡಿಸಲು ನಿರ್ದೇಶನಗಳನ್ನು ನೀಡುತ್ತದೆ. ಅಭ್ಯಾಸ ಪುಸ್ತಕದಲ್ಲಿ ಚರ್ಚೆಗೆ ಸಂಬಂಧಿಸಿದ ಪ್ರಶ್ನೆಗಳು – ಅಭ್ಯಾಸಗಳಲ್ಲಿರುವ ಸಮಸ್ಯೆಗಳನ್ನು ಬಿಡಿಸಲು ಸೂಚನೆಗಳನ್ನು ನೀಡಲಾಗುತ್ತದೆ, ಮತ್ತು ವಸ್ತುನಿಷ್ಠ ಪ್ರಶ್ನೆಗಳು – ಅಂಕೆ/ಸಂಖ್ಯೆಗೆ ಸಂಬಂಧಿಸಿದ ಸಮಸ್ಯೆಗಳು ಇವುಗಳನ್ನು ಬಿಡಿಸಲು ಸೂಚನೆಗಳನ್ನು ನೀಡಲಾಗುತ್ತದೆ.

ಧ್ವನಿಮುದ್ರಕದಲ್ಲಿ ಉತ್ತರ ಮತ್ತು ಚರ್ಚೆಗಳನ್ನು ನೀಡಲಾಗುವುದು. ಅಭ್ಯಾಸ ಮಾರ್ಗದರ್ಶಿಯು ಹೆಚ್ಚಿನ ಓದುವ ಮಾಹಿತಿ, ಆಧಾರ ಗ್ರಂಥಗಳು ಮತ್ತಿತರ ಹೆಚ್ಚಿನ ಮಾಹಿತಿಗಳನ್ನು ಇವುಗಳ ಜೊತೆಗೆ ವಿದ್ಯಾರ್ಥಿಗಳ ಕಲಿಕೆಯನ್ನು ಸ್ವಯಂ ಪರೀಕ್ಷಿಸುವ ಪ್ರಶ್ನೆಗಳು ಮತ್ತು ಉತ್ತರಗಳನ್ನು ಒಳಗೊಂಡಿರುತ್ತದೆ.

**b) ಶ್ರವಣ ಬೋಧನೆ :**

ಶ್ರವಣ ಬೋಧನೆಯು ಒಂದು ವ್ಯವಸ್ಥಿತ ಕಲಿಕೆಯಾಗಿದ್ದು ಇದು ಧ್ವನಿಮುದ್ರಕ/ಸುರುಳಿಗಳನ್ನು ಹೊಂದಿದೆ. ಇದನ್ನು ಟ್ಯೂಟೋರಿಯಲ್ ನಡೆಸಲು ಬಳಸಬಹುದು, ಇದರಿಂದ ಕಲಿಕೆಗೆ ಸಂಬಂಧಿಸಿದ ಅನೇಕ ಚಟುವಟಿಕೆಗಳಾದ ಪೀಠಿಕೆ ನೀಡುವುದು, ಮಾಹಿತಿ ನೀಡುವುದು, ಸೂಚನೆಗಳನ್ನು ನೀಡುವುದು ಮತ್ತು ನಿರ್ದೇಶನಗಳನ್ನು ನೀಡಲು ಬಳಸಬಹುದಾಗಿದೆ. ಕೆಲವು ಸಲ ಅಭ್ಯಾಸ ಮಾರ್ಗದರ್ಶಿ ಅಥವಾ ಅಭ್ಯಾಸ ಪುಸ್ತಕಗಳಿಲ್ಲದ ಸಂದರ್ಭದಲ್ಲಿ ಇದು ತುಂಬಾ ಲಾಭದಾಯಕ, ಏಕೆಂದರೆ ನಮಗೆ ದೊರೆತ ಪುಸ್ತಕ, ನಿಯತಕಾಲಿಕೆ ಅಥವಾ ಪೇಪರ್ ಪೆನ್ಸಿಲ್‌ಗಳನ್ನು ಬಳಸಿ ಇನ್ನು ಅನೇಕ ಚಟುವಟಿಕೆಗಳನ್ನು ಮಾಡಬಹುದು. ಉದಾಹರಣೆ:– ಧ್ವನಿಸುರುಳಿಯಿಂದ (ಕ್ಯಾಸೆಟ್‌ನ ಮೂಲಕ) ಮೊದಲನೆಯ ನಿಲುಗಡೆಯವರೆಗೂ ಆಲಿಸಲು ವಿದ್ಯಾರ್ಥಿಗಳಿಗೆ ತಿಳಿಸಿ, ನಂತರ ಪಠ್ಯಪುಸ್ತಕದ ಇಂತಹ ಪುಟದಿಂದ ಇಲ್ಲಿಯವರೆಗೂ ಓದಲು ಹೇಳಿ, ಆನಂತರ ಪ್ರಯೋಗಶಾಲೆಯಲ್ಲಿ ಪ್ರಯೋಗಮಾಡಿ ನೋಡಿ, ಅನುಭವಗಳನ್ನು ಪಡೆದ ನಂತರ ಮುಂದಿನ ಭಾಗವನ್ನು ಧ್ವನಿಸುರುಳಿಯಲ್ಲಿ ಕೇಳಲು ಸೂಚಿಸಬಹುದು, ಚಿತ್ರಗಳನ್ನು ಸಹ ಬಿಡಿಸಲು ನಿರ್ದೇಶನ ನೀಡಬಹುದು, ಇದರ ಜೊತೆಗೆ ವ್ಯಕ್ತಿ ಅಧ್ಯಯನಗಳನ್ನು ಕೇಳಲು ಮತ್ತು ಹೋಲಿಕೆಗಳನ್ನು ಮಾಡಲು ಸೂಚಿಸಬಹುದು.

ಶ್ರವಣ ಬೋಧನಾ ವ್ಯವಸ್ಥೆಯು ವಿದ್ಯಾರ್ಥಿಗಳು ತಮ್ಮ ಸ್ವಪರಿಕಲ್ಪನೆಯಿಂದ ಮುನ್ನುಗ್ಗುವುದನ್ನು ಬೆಳೆಸುವುದು ಮತ್ತು ಇನ್ನು ಹೆಚ್ಚಿನ ಮಾರ್ಗದರ್ಶನ ಬೇಕಾದರೆ ಧ್ವನಿಸುರುಳಿಯನ್ನು ಬಳಸಲು ಅವಕಾಶ ನೀಡುವುದು.

**c) ಶ್ರವಣ ಚಿತ್ರಣ:**

ಶ್ರವಣ ಚಿತ್ರಣವನ್ನು ಬ್ರಿಟಿಷ್ ಬಾನುಲಿ ಸಂಸ್ಥೆ ಬೆಳಕಿಗೆ ತಂದಿತು. ಧ್ವನಿಸುರುಳಿಯ ಮೂಲಕ ಕೇಳಿದ ವಿಷಯಗಳಿಗೆ ಒಂದು ನಿರ್ದಿಷ್ಟ ಚಿತ್ರಣದ ಮೂಲಕ ಮುಂದಿನ ಕಲಿಕೆಗೆ ಪ್ರೇರಣೆಗಳನ್ನು ನೀಡುವುದೇ ಶ್ರವಣ ಚಿತ್ರಣವಾಗಿದೆ. ಇದರಲ್ಲಿ ಚಿತ್ರಣಗಳಾದ – ಸ್ಥಿರಚಿತ್ರ ಪಟಗಳು, ಛಾಯಾಚಿತ್ರಗಳು, ಚಾರ್ಟ್‌ಗಳು, ಸ್ಲೈಡ್‌ಗಳು ಮತ್ತು

Digitised by Bharatavani, CIIL

ಮಾದರಿಗಳು ಇವೆಲ್ಲವುಗಳನ್ನು ಶೈಕ್ಷಣಿಕ ದೂರದರ್ಶನದ ಬದಲಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಬಳಕೆ ಮಾಡಬಹುದಾಗಿದೆ, ಆದ್ದರಿಂದ ಇದು ಕಲಿಕೆಗೆ ತುಂಬಾ ಪರಿಣಾಮಕಾರಿಯಾಗಿ ಅಭಿಪ್ರೇರಣೆಯನ್ನುಂಟು ಮಾಡುತ್ತದೆ ಹಾಗೂ ಅತಿ ವೆಚ್ಚದಾಯಕವೆನಿಸುವುದಿಲ್ಲ, ವಿದ್ಯಾರ್ಥಿಗಳ ಗಮನವನ್ನು ಕೇಂದ್ರೀಕರಿಸಲು ತುಂಬಾ ಅನುಕೂಲಕರವಾದ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತದೆ.

**ಸೂಚನೆಯನ್ನು ಪ್ರಸರಿಸುವ ಧ್ವನಿಮುದ್ರಿತ ಸುರಳಿಗಳನ್ನು ತಯಾರಿಸುವಾಗ ಅನುಸರಿಸುವ ಹಂತಗಳು:**

**ಹಂತ 1:** ನಿರ್ದಿಷ್ಟ ಉದ್ದೇಶಗಳನ್ನು ಗುರುತಿಸಿ ಪಟ್ಟಿಮಾಡುವುದು.

**ಹಂತ 2:** ಆ ಸೂಚನೆಯನ್ನು ಯಾರಿಗೆ ಸಿದ್ದಪಡಿಸಲಾಗುವುದೋ ಅವರ ಅಂದರೆ ವೀಕ್ಷಕರ/ಕೇಳುಗರ ಗುಂಪಿನ ವಯಸ್ಸು, ಅವರ ಆಸಕ್ತಿ ಮತ್ತು ಅವರ ಉತ್ಸುಕತೆ ಹಾಗೂ ಕಲಿಕಾಮಟ್ಟವನ್ನು ಗಣನೆಗೆ ತೆಗೆದುಕೊಳ್ಳುವುದು.

**ಹಂತ 3:** ವಿಷಯದ ಮುಖ್ಯ ಅಂಶಗಳನ್ನು ರಚಿಸುವುದು

**ಹಂತ 4:** ಮೇಲಿನ ವಿಷಯದ ಸ್ವಭಾವವನ್ನು ತಿಳಿದು ಅದಕ್ಕೆ ಅನುಗುಣವಾದ ಚಟುವಟಿಕೆಗಳು ಮತ್ತು ಅವಶ್ಯಕವಾದ ಸಂಪನ್ಮೂಲಗಳನ್ನು ಆಯ್ಕೆ ಮಾಡುವುದು.

**ಹಂತ 5:** ಸೂಚನಾವ್ಯವಸ್ಥೆಯಲ್ಲಿ ಶ್ರವಣ ಟಿಪ್ಪಣಿ ಪುಸ್ತಕ ಅಥವಾ ಬೋಧನಾ ವಿಧಾನಗಳನ್ನು ನಿಗದಿಪಡಿಸುವುದು.

**ಹಂತ 6:** ಧ್ವನಿಮುದ್ರಿತ ಕ್ಯಾಸೆಟ್‌ಗಾಗಿ ಕೈಬರಹವ(ಸ್ಕ್ರಿಪ್ಟ್)ನ್ನು ಸಂಪನ್ಮೂಲ ವ್ಯಕ್ತಿ ಅಥವಾ ವ್ಯಕ್ತಿಗಳು ಮತ್ತು ಮಂಡಿಸುವವರನ್ನು ಗುರುತಿಸುವುದು.

**ಹಂತ 7:** ಪ್ರಶ್ನೆಗಳಿಗೆ ತತ್‌ಕ್ಷಣ ಪರಿಹಾರಗಳನ್ನು ನೀಡುವ ಮೂಲಕ ಪುನರ್‌ಬಲನಗಳ ಸೂಚನೆಗಳನ್ನು ತಯಾರಿಸುವುದು.

**ಹಂತ 8:** ಟೇಪ್ ರೆಕಾರ್ಡರ್‌ನಿಂದ ಧ್ವನಿಸುರುಳಿಯನ್ನು ಬಳಸುವಾಗ ನಿಲುಗಡೆ ಅಥವಾ ನಿಲ್ಲಿಸುವ ಹಾಗೆ ಸೂಚನೆಗಳನ್ನು, ರೆಕಾರ್ಡ್ (ಮುದ್ರಣ) ಮಾಡುವಾಗ ಸರಿಯಾದ ಕ್ರಮದಲ್ಲಿ 'ಎಡಿಟ್' ಮಾಡುವುದು.

**ಹಂತ 9:** ಧ್ವನಿಮುದ್ರಣ ಪ್ಯಾಕೇಜ್‌ನ್ನು ನಮಗೆ/ಆ ಶಾಲಾ ಶಿಕ್ಷಣಕ್ಕೆ ಅನುಕೂಲವಾಗುವ ವ್ಯವಸ್ಥೆಯಸುರುಳಿಯನ್ನು ಬಳಸುವಾಗ ನಿಲುಗಡೆ ಅಥವಾ ನಿಲ್ಲಿಸುವ ಹಾಗೆ ಸೂಚನೆಗಳನ್ನು, ರೆಕಾರ್ಡ್‌ನಲ್ಲಿ ರಚಿಸುವುದು.

**ಬೋಧನಾ – ಕಲಿಕಾ ಪ್ರಕ್ರಿಯೆಯಲ್ಲಿ ಧ್ವನಿಸುರುಳಿಗಳ ಉಪಯೋಗಗಳು/ ಅನುಕೂಲಗಳು:**

- ಧ್ವನಿಮುದ್ರಕವು ಗಾತ್ರದಲ್ಲಿ ಚಿಕ್ಕದಾಗಿರುವುದರಿಂದ ಸುಲಭವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಬಹುದು.
- ಧ್ವನಿಮುದ್ರಣ ಸುರುಳಿಯನ್ನು ತುಂಬಾ ಸರಳವಾಗಿ ಹಾಗೂ ಸುಲಭವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಿ ಬಳಸಬಹುದು.
- ಧ್ವನಿಮುದ್ರಕ ಮತ್ತು ಧ್ವನಿಮುದ್ರಣ ಸುರಳಿಗಳನ್ನು ಸುಲಭವಾಗಿ ಕಾರ್ಯ ನಿರ್ವಹಿಸಬಹುದು.
- ಧ್ವನಿಮುದ್ರಕ ಮತ್ತು ಧ್ವನಿಮುದ್ರಣ ಸುರಳಿಗಳು ಸ್ವಲ್ಪ ದುಬಾರಿಯದು, ಆದರೆ ಒಂದು ಸಲ ತೆಗೆದುಕೊಂಡು ಅನೇಕ ಬಾರಿ ಅಥವಾ ಪುನ: ಪುನ: ಧ್ವನಿಸುರುಳಿಯಲ್ಲಿ ಮಾಹಿತಿಯನ್ನು ಬಳಕೆ ಮಾಡಬಹುದು ಮತ್ತು ಇವುಗಳ ಬಾಳಿಕೆ ತುಂಬಾ ಹೆಚ್ಚು.
- ಧ್ವನಿಸುರುಳಿಯಲ್ಲಿ ಮಾಹಿತಿ ಅಥವಾ ಸೂಚನೆಗಳನ್ನು ಕಲಿಕೆಗೆ ಅಥವಾ ವಿಷಯಕ್ಕೆ ಅನುಗುಣವಾಗಿ, ಶಾಲೆಗೆ ಅನುಗುಣವಾಗಿ ಎಡಿಟ್ ಮಾಡುವುದು (ಸಿದ್ದಪಡಿಸುವುದು) ಸುಲಭ.
- ಬಳಕೆದಾರನಿಗೆ ಅನುಗುಣವಾಗಿ ಮಾಹಿತಿ ಅಥವಾ ಸೂಚನೆಗಳನ್ನು ತೆಗೆದು ಹಾಕುವುದು ಮತ್ತು ಸೇರಿಸಬಹುದು ಅಂದರೆ ಪುನಃ ಮುದ್ರಿಸಬಹುದು.
- ಮೊದಲೇ ಮುದ್ರಿಸಿದ ಮಾಹಿತಿಯನ್ನು ಕಲಿಕೆಗೆ ಯಾವಾಗ ಬೇಕೋ ಆಗ ಪುನಃ; ಪುನಃ; ಬಳಕೆಮಾಡಲು ಧ್ವನಿಸುರುಳಿ ತುಂಬಾ ಉಪಯೋಗವಾಗುವ ಸಾಧನವಾಗಿದೆ.
- IGNOU ಮತ್ತು KSOU ಸಂಸ್ಥೆಗಳು ಅತಿ ಹೆಚ್ಚಾಗಿ ಮಾಹಿತಿ ಮತ್ತು ಸೂಚನೆಗಳನ್ನು ಬಾನುಲಿ ಪಾಠಗಳ ಮೂಲಕ ನೀಡುತ್ತಿವೆ.
- ಪ್ರಸ್ತುತ ಬಾನುಲಿ ಕಾರ್ಯಕ್ರಮಗಳಲ್ಲಿ ಧ್ವನಿಸುರುಳಿಗಳ ಬಳಕೆಯಾಗುತ್ತಿದೆ ಉದಾ – ಬಾನ್‌ದನಿ ಕಾರ್ಯಕ್ರಮ...
- ಧ್ವನಿಮುದ್ರಿತ ಕಲಿಕೆ ಆಸಕ್ತಿದಾಯಕ, ಕಡಿಮೆ ವೆಚ್ಚದಾಯಕ ಮತ್ತು ಸ್ವ–ಕಲಿಕೆಗೆ ಸರಳ ಮಾಧ್ಯಮವಾಗಿದೆ.

ಈ ಮೇಲಿನ ಅಂಶಗಳಿಂದ ಕಂಡುಬರುವುದೇನೆಂದರೆ ಧ್ವನಿಸುರುಳಿಯು ತನ್ನದೆ ಆದ ಮೌಲ್ಯವನ್ನು ಶಿಕ್ಷಣಕ್ಷೇತ್ರದಲ್ಲಿ ಹೊಂದಿದೆ, ಆದರೂ ಆಧುನಿಕ ಯುಗವು ದೂರದರ್ಶನ, ಗಣಕಯಂತ್ರ, ಮೊಬೈಲ್, ಇ–ಕಲಿಕೆ ಇತ್ಯಾದಿಗಳಂತಹ ಅತಿ ಹೆಚ್ಚು ಪರಿಣಾಮಕಾರಿ ಬೋಧನಾ ತಂತ್ರಜ್ಞಾನಗಳನ್ನು ಹೊಂದಿದ್ದರೂ ಹಿಂದಿನಿಂದ ಇಂದಿನ ಆಧುನಿಕ ಯುಗದಲ್ಲಿ ತುಂಬಾ ಸರಳವಾಗಿ, ಸುಲಭವಾಗಿ ಅತಿ ಹೆಚ್ಚು ಖರ್ಚಿಲ್ಲದೆ ಆಯಾಯ ವಿಷಯಗಳಿಗೆ ಮತ್ತು ತರಗತಿಗಳಿಗೆ ಅನುಗುಣವಾಗಿ ಧ್ವನಿಸುರುಳಿಗಳನ್ನು ರಚಿಸಿ ಬಳಸಿದಲ್ಲಿ ತರಗತಿಯ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯ, ಅಂತೆಯೇ ವಿದ್ಯಾರ್ಥಿಗಳಲ್ಲಿ ಉತ್ತಮ ಕಲಿಕೆ ಹಾಗೂ ಉತ್ತಮ ಫಲಿತಾಂಶಗಳನ್ನು ನಿರೀಕ್ಷಿಸಬಹುದು.

**–ನಾಗರಾಜ್ ಜಿ. ಯು.**

Digitised by Bharatavani, CIIL

# ನ

## ನಾಯಕತ್ವ ತರಬೇತಿ ಕಾರ್ಯಕ್ರಮಗಳು

ನಾಯಕತ್ವದ ಗುರುತರವಾದ ಮಹತ್ವವನ್ನು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನೋಡಬಹುದು. ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣ ಎಂಬುವುದಾದಾರೆ, ಉತ್ತಮ ನಾಯಕತ್ವ ತರಬೇತಿ ಇಲ್ಲದೆ ಇರುವ ಪ್ರಜಾಪ್ರಭುತ್ವವನ್ನು ಅಪೂರ್ಣ ಎಂದು ಪರಿಗಣಿಸಬೇಕಾಗುತ್ತದೆ.

ಶಾಲಾ ಪರಿಸರದಲ್ಲಿ ನಾಯಕತ್ವ ತರಬೇತಿ ನೀಡುವಂತಹ ವಾತಾವರಣವನ್ನು ಸೃಷ್ಟಿಸಿ ಗುಂಪಿನಲ್ಲಿ ತರಬೇತಿಯನ್ನು ನೀಡುವಂತಹ ಶೈಕ್ಷಣಿಕ ಗುರಿಗಳಲ್ಲಿ ನಾಯಕತ್ವ ತರಬೇತಿಯು ಪ್ರಮುಖ ಸ್ಥಾನವನ್ನು ಪಡೆದಿದೆ. ಆದ್ದರಿಂದ ಈ ತರಬೇತಿಯಲ್ಲಿ ಶಿಕ್ಷಕನ ಪಾತ್ರ ಮಹತ್ತರವಾದುದು. ಹಾಗೂ ಜವಾಬ್ದಾರಿಯುತವಾದದ್ದು

ನಾಯಕತ್ವ ತರಬೇತಿ ಕಾರ್ಯಗಳು ಈ ಮುಂದಿನ ಉದ್ದೇಶಗಳನ್ನು ಹೊಂದಿರಬೇಕು.

**ಪ್ರಜಾಪ್ರಭುತ್ವ ಮೌಲ್ಯಗಳನ್ನು ವಿಕಾಸಗೊಳಿಸುವುದು:**

ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ನ್ಯಾಯ, ಗೌರವ, ಪರಸ್ಪರ ಸಹಕಾರ ಮುಂತಾದ ಮೌಲ್ಯಗಳನ್ನು ಪಠ್ಯಕ್ರಮದಲ್ಲಿ ಸೂಕ್ತವಾಗಿ ಅಳವಡಿಸಿ ಬೋಧಿಸುವುದರಿಂದ ವಿದ್ಯಾರ್ಥಿಗಳಲ್ಲಿ ಈ ಬಗೆಯ ಮೌಲ್ಯಗಳನ್ನು ಬೆಳೆಸಬಹುದಾಗಿದೆ.

**ಸಾಮಾಜಿಕ, ನೈತಿಕ ಮೌಲ್ಯಗಳನ್ನು ವಿಕಾಸಗೊಳಿಸುವುದು:**

ಶಿಕ್ಷಕನು ಮಕ್ಕಳಲ್ಲಿ ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಅಭಿವೃದ್ಧಿಪಡಿಸಬೇಕು. ಮೌಲ್ಯರಹಿತ ಶಿಕ್ಷಣ ನಿಷ್ಪ್ರಯೋಜಕವಾದುದು. ಇವುಗಳನ್ನು ಬೆಳೆಸಲು ಸೂಕ್ತವಾದ ಬೋಧನಾ ವಿಧಾನಗಳು, ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬೇಕು. ಮಕ್ಕಳಲ್ಲಿ ಜಾತ್ಯತೀತ ಹಾಗೂ ಧಾರ್ಮಿಕ ಸಹಿಷ್ಣುತೆಯ ಗುಣಗಳನ್ನು ಬೆಳೆಸಲು ಪ್ರಯತ್ನಿಸಬೇಕು.

**ಪೌರತ್ವ ಗುಣಗಳನ್ನು ವಿಕಾಸಗೊಳಿಸುವುದು:**

ಪೌರತ್ವದ ಬಗೆಗೆ ಅರಿವು ಮೂಡಿಸಲು ಸೂಕ್ತ ಜ್ಞಾನ, ತಿಳಿವಳಿಕೆ, ಮನೋಭಾವ, ಸಾಮಾಜಿಕ ಕೌಶಲಗಳ ಬೆಳವಣಿಗೆ, ಸಹೋದರತೆ, ಸಮಾನತೆ, ಸಂಯಮ ನಿಷ್ಪಕ್ಷಪಾತ, ಸಹಿಷ್ಣುತೆ, ಶಿಸ್ತು ಸಹಕಾರ, ಜಾತ್ಯತೀತತ ಮುಂತಾದ ಗುಣಗಳನ್ನು ಬೆಳೆಸಬೇಕು. ವೈಜ್ಞಾನಿಕ ಚಿಂತನೆಯನ್ನು ಅಭಿವೃದ್ಧಿಪಡಿಸಬೇಕು. ಪರಂಪರೆಯ ಬಗೆಗೆ ಹೆಮ್ಮೆಪಡುವ, ಪೋಷಿಸುವ, ಪ್ರೋತ್ಸಾಹಿಸುವ ಗುಣ ಬೆಳೆಸಿ ಮುಕ್ತ ಚಿಂತನೆಗೆ ಎಡೆಮಾಡಿಕೊಟ್ಟ ಹೃದಯ ವೈಶಾಲ್ಯತೆಯಿಂದ ದೇಶಪ್ರೇಮದ ಜೊತೆಗೆ ವಿಶ್ವಪೌರತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು.

**ನಾಯಕತ್ವ ವ್ಯಕ್ತಿತ್ವವನ್ನು ವಿಕಾಸಗೊಳಿಸುವುದು:**

ಮಾನವನ ಎಲ್ಲಾ ಗುಣಗಳ ಮೊತ್ತವೇ ವ್ಯಕ್ತಿತ್ವವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಸೃಜನಾತ್ಮಕತೆಯನ್ನು, ನಾಯಕತ್ವದ ಲಕ್ಷಣಗಳನ್ನು ಹೊರತಂದು, ವ್ಯಕ್ತಿತ್ವವನ್ನು ವಿಕಾಸಗೊಳಿಸಬೇಕು. ನಾಯಕತ್ವವನ್ನು ವಹಿಸಲು ಅಗತ್ಯವಾದ ಲಕ್ಷಣಗಳನ್ನು ವಿದ್ಯಾರ್ಥಿಗಳ ವ್ಯಕ್ತಿತ್ವದಲ್ಲಿ ಬೆಳೆಸಬೇಕು.

**ಅಂತರರಾಷ್ಟ್ರೀಯ ಸಹಕಾರ ಮತ್ತು ಶಾಂತಿಯುತ ಸಹಬಾಳ್ವೆ:**

ಶಿಕ್ಷಣವು ವಿಶ್ವದೃಷ್ಟಿಯನ್ನು ಸಶಕ್ತಗೊಳಿಸಿ ಯುವ ಪೀಳಿಗೆಯಲ್ಲಿ ಅಂತರರಾಷ್ಟ್ರೀಯ ಸಹಕಾರ ಮತ್ತು ಶಾಂತಿಯುತ ಸಹಬಾಳ್ವೆಯ ಬೆಳವಣಿಗೆಗೆ ಪ್ರಚೋದನೆಯನ್ನು ನೀಡಬೇಕು.

ನಾಯಕತ್ವ ಲಕ್ಷಣಗಳನ್ನು ವಿಕಾಸಗೊಳಿಸುವ ತಂತ್ರಗಳು

**ಸಂವಹನ ಕೌಶಲಗಳನ್ನು ಬೆಳಸುವುದು:**

ಭಾವನೆ, ವಿಚಾರ ಹಾಗೂ ಮಾಹಿತಿಯನ್ನು ವರ್ಗಾಯಿಸಲು ವಿದ್ಯಾರ್ಥಿಗಳು ನಾಯಕತ್ವ ವಹಿಸಲು ಸಂವಹನ ಕೌಶಲಗಳು ಅತ್ಯಗತ್ಯ ಇಂಥ ಸಂವಹನ ಕೌಶಲಗಳನ್ನು ಬೆಳೆಸುವುದು ನಾಯಕತ್ವ ತರಬೇತಿಯ ಒಂದು ಮುಖ್ಯ ಉದ್ದೇಶವಾಗಿರಬೇಕು.

**1) ಚರ್ಚಾ ಕೌಶಲವನ್ನು ಉತೇಜಿಸುವುದು:**

ನಾಯಕತ್ವದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ತರ್ಕಬದ್ಧ ಚರ್ಚೆಯ ಅವಶ್ಯಕತೆಯಿರುತ್ತದೆ. ಕೌಶಲಗಳಿಂದ ಅವಶ್ಯಕ ವಿಷಯವೊಂದನ್ನು ವಿಭಿನ್ನ ದೃಷ್ಟಿಕೋನಗಳಲ್ಲಿ ಚರ್ಚಿಸುವ ಕೌಶಲಗಳಿಂದ ವಿದ್ಯಾರ್ಥಿಗಳ ವಿವೇಚನಾ ಸಾಮರ್ಥ್ಯ ಮತು ತಾರ್ಕಿಕ ಸಾಮರ್ಥ್ಯ ವೃದ್ಧಿಸುವುದು. ಚರ್ಚಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯು ಕ್ರಿಯಾಶೀಲನಾಗಿ, ಭಾಗವಹಿಸುವುದರಿಂದ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

**2) ವಿಚಾರಗೋಷ್ಠಿ:**

ವಿಚಾರಗೋಷ್ಠಿಯು ವಿಮರ್ಶೆ ಹಾಗೂ ಚಿಂತನಾ ಸಾಮರ್ಥ್ಯವನ್ನು ಬೆಳೆಸುವುದು. ವಿದ್ಯಾರ್ಥಿಗಳಲ್ಲಿ ಸಂಶೋಧನಾ ಪ್ರವೃತ್ತಿಯನ್ನು ಬೆಳೆಸುವುದು ಹಾಗೂ ಮಂಡನೆಕಾರನಲ್ಲಿ ಆತ್ಮವಿಶ್ವಾಸ ವೃದ್ಧಿಸುವುದು. ಅಧ್ಯಾಪಕರು ಶೈಕ್ಷಣಿಕ ನಾಯಕತ್ವವಹಿಸುವರು.

**ಪಾತ್ರ ನಿರ್ವಹಣಾ ತಂತ್ರ:**

ಅಭಿವ್ಯಕ್ತಿ ಮತ್ತು ಅಭಿನಯ ಸಾಮರ್ಥ್ಯವನ್ನು ವೃದ್ಧಿಸುವುದು. ಹಾಗೂ ಮಕ್ಕಳ ಸೃಜನಶೀಲತೆಯನ್ನು ಹೊರಗೆಳೆಯುವುದು.

**ನಿಯಮಪಾಲನೆ/ಶಿಸ್ತು:**

ವಿದ್ಯಾರ್ಥಿಗಳಲ್ಲಿ ಸಮಯಪ್ರಜ್ಞೆ ಮತ್ತು ಕರ್ತವ್ಯಪ್ರಜ್ಞೆ ಮೂಡಿಸುವುದು. ಆತ್ಮನಿಯಂತ್ರಣ, ಸ್ವಯಂನಿಯಂತ್ರಣ, ಸ್ವನಿರ್ದೇಶನಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಿ ಕೊಡುವುದು.

**ಮಾನಸಿಕ ಆರೋಗ್ಯ:**

ಭಾವೋದ್ರೇಕ, ಆಕ್ರಮಣ ಪ್ರವೃತ್ತಿಗಳನ್ನು ಕಡಿಮೆಗೊಳಿಸಿ

Digitised by Bharatavani, CIIL

ಸಾಂಘಿಕ ಭಾವನೆ, ಸ್ನೇಹಪರತೆ, ಆತ್ಮವಿಶ್ವಾಸ, ಮನೋವೈಶಾಲ್ಯ ಮುಂತಾದ ಗುಣಗಳನ್ನು ಬೆಳೆಸುವುದು.

**ವಿಶೇಷ ಅಭಿರುಚಿಗಳಿಗೆ ಚಾಲನೆ:**

ವಿದ್ಯಾರ್ಥಿಗಳಲ್ಲಿ ವಿಶೇಷ ಅಭಿರುಚಿಗಳು ಕಂಡುಬರುತ್ತವೆ. ಅವರು ಸಂಗೀತ, ಸಾಹಿತ್ಯ, ಕಲೆ, ವಿಜ್ಞಾನ, ಯಾಂತ್ರಿಕ, ತಾಂತ್ರಿಕ ಮುಂತಾದ ಕ್ಷೇತ್ರಗಳಲ್ಲಿ ಪ್ರೋತ್ಸಾಹವನ್ನು ನೀಡಬೇಕು. ಆ ಕ್ಷೇತ್ರದಲ್ಲಿ ಮುಂದುವರೆಯಲು ಮತ್ತು ಹೆಚ್ಚಿನ ಸಾಧನೆ ಮಾಡಲು ಸಾಧ್ಯವಾಗುವಂತೆ ಅವಕಾಶಗಳನ್ನು ಒದಗಿಸಬೇಕು ಮತ್ತು ಅಗತ್ಯ ಮಾರ್ಗದರ್ಶನ ನೀಡಬೇಕು.

**ಔಪಚಾರಿಕ ಸಂಘಗಳು:**

ವಿಷಯಸಂಘಗಳು, ಸಮೀಕ್ಷಾಸಂಘಗಳು, ಕಲಾಸಂಘಗಳು, ಗಣಿತ ಸಂಘಗಳು, ವಿಜ್ಞಾನ ಸಂಘಗಳು, ಸಾಹಿತ್ಯದ ಸಂಘ ಇನ್ನೂ ಮುಂತಾದವುಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವುದು. ಈ ಸಂಘಗಳಿಗೆ ನಾಯಕತ್ವ ವಹಿಸುವುದರ ಮೂಲಕ ವಿದ್ಯಾರ್ಥಿಗಳು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವರು.

**ಕ್ರೀಡಾಕೂಟಗಳು:**

ಕ್ರೀಡೆ ಮತ್ತು ಆಟಗಳು, ಯೋಗಾಸನಗಳು, ಒಳಾಂಗಣ ಮತ್ತು ಹೊರಾಂಗಣಾಟಗಳು, ಸ್ಕೌಟ್ಸ್ ಮತ್ತು ಗೈಡ್ಸ್, ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ಮುಂತಾದವುಗಳಲ್ಲಿ ಭಾಗವಹಿಸುವುದು, ತಂಡದ ನಾಯಕತ್ವ ವಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ವಹಿಸುವುದು.

**ಶೈಕ್ಷಣಿಕ ಪ್ರವಾಸ:**

ಕಿರು ಪ್ರವಾಸ, ಪ್ರವಾಸ, ಶೈಕ್ಷಣಿಕ, ಶೈಕ್ಷಣಿಕ ಪ್ರವಾಸ, ವಿವಿಧ ಸ್ಥಳಗಳಿಗೆ ಭೇಟಿ ನೀಡುವುದು. ಶೈಕ್ಷಣಿಕ ಪ್ರವಾಸ ನಾಯಕ್ವದ ಗುಣಗಳನ್ನು ಬೆಳೆಸಲು ಹೆಚ್ಚಿನ ಅವಕಾಶ ನೀಡುತ್ತದೆ.

**ಸಾಮಾಜಿಕ ಸೇವಾ ಶಿಬಿರಗಳು:**

ಸಾಮಾಜಸೇವೆ, ಶ್ರಮದಾನ, ಪ್ರಥಮಚಿಕಿತ್ಸೆ, ರೆಡ್‌ಕ್ರಾಸ್ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡಿ ಅವರಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಬಹುದು.

**ಸಾಹಸ ಪ್ರವೃತ್ತಿ:**

ಸಾಹಸ ಪ್ರವೃತ್ತಿಯ ಬೆಳವಣಿಗೆಗೆ – ಸಾಹಸ ಕ್ರೀಡೆಗಳು, ಪರ್ವತಾರೋಹಣ, ಸೈಕ್ಲಿಂಗ್, ಟ್ರೆಕ್ಕಿಂಗ್, ಎನ್.ಸಿ.ಸಿ. ವೈಜ್ಞಾನಿಕ ಅನ್ವೇಷಣೆ ಮುಂತಾದ ಚಟುವಟಿಕೆಗಳಲ್ಲಿ ನಾಯಕತ್ವ ತರಬೇತಿಗೆ ಉತ್ತಮ ಅವಕಾಶಗಳಾಗುತ್ತವೆ.

**ನಾಯಕರ ಜೀವನ ಚರಿತ್ರೆ/ಆತ್ಮ ಚರಿತ್ರೆ ಅಧ್ಯಯನವನ್ನು ಪ್ರೋತ್ಸಾಹಿಸುವುದು:**

ಬೇರೆ ಬೇರೆ ಕ್ಷೇತ್ರಗಳ ನಾಯಕರ ಜೀವನ ಚರಿತ್ರೆ, ಆತ್ಮಚರಿತ್ರೆಯನ್ನು ಅಧ್ಯಯನ ಮಾಡುವುದರ ಮೂಲಕ ವಿದ್ಯಾರ್ಥಿಗಳು ಅಂಥ ನಾಯಕರ ಗುಣಗಳನ್ನು ತಮ್ಮಲ್ಲಿ ಬೆಳೆಸಿಕೊಳ್ಳಬಹುದು. ಆದ್ದರಿಂದ ಬೇರೆಬೇರೆ ಕ್ಷೇತ್ರಗಳ ನಾಯಕರ ಜೀವನ/ಆತ್ಮ ಚರಿತ್ರೆಗಳನ್ನು ಓದುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು.

ನಾಯಕತ್ವದ ತರಬೇತಿಯ ಇನ್ನೂ ಕೆಲವು ವಿಧಾನಗಳು ತಂತ್ರಗಳಾಗಿವೆ

**1. ವಿಶೇಷ ಕೋರ್ಸುಗಳು:** ನಾಯಕತ್ವ ತರಬೇತಿಗೆ ವಿಶೇಷ ಕೋರ್ಸುಗಳನ್ನು ಸಾಮಾನ್ಯವಾಗಿ ಪರಿಣಿತರ ಸಹಾಯದೊಂದಿಗೆ ಸಂಘಟಿಸಲಾಗುವುದು. ವಿದ್ಯಾರ್ಥಿಗಳು ಈ ಕೋರ್ಸುಗಳಲ್ಲಿ ಭಾಗವಹಿಸುತ್ತಾರೆ. ಮತ್ತು ನಿರ್ವಹಣ ಸಂಸ್ಥೆಗಳು ಇಂಥ ವಿಶೇಷ ಕೋರ್ಸುಗಳನ್ನು ಆಯೋಜಿಸುತ್ತಾರೆ.

**2. ಪ್ರಾಯೋಜನೆಗಳು:** ಈ ವಿಧಾನದಲ್ಲಿ ಪ್ರಾಯೋಜನೆಗಳನ್ನು ವಿದ್ಯಾರ್ಥಿಗಳಿಗೆ ಕೊಡಲಾಗುವುದು. ವಿದ್ಯಾರ್ಥಿಯು ಪ್ರಾಯೋಜನೆಯನ್ನು ಕ್ರಮಬದ್ಧವಾಗಿ ಮಾಡಿ ಸಮಸ್ಯೆಗೆ ಪರಿಹಾರಗಳನ್ನು ಹುಡುಕಬೇಕು / ಕಂಡುಹಿಡಿಯಬೇಕು. ಈ ಪ್ರಾಯೋಜನೆಗಳನ್ನು ಕೈಗೊಳ್ಳುವಾಗ ವಿದ್ಯಾರ್ಥಿಗಳು ನಾಯಕರಾಗಿಯೂ ಪಾತ್ರವಹಿಸ ಬೇಕಾಗುತ್ತದೆ.

**3. ಸಮಿತಿ ನಿಯೋಜಿತ ಕಾರ್ಯ (ಕಮಿಟಿ ಅಸೈನ್‌ಮೆಂಟ್):** ಈ ಸಮಿತಿ ನಿಯೋಜಿತ ಕಾರ್ಯ ವಿಧಾನವು ಎಲ್ಲ ವಿಧಾನಗಳಲ್ಲಿ ಪ್ರಮುಖವಾದುದು. ಈ ವಿಧಾನವು ವಿದ್ಯಾರ್ಥಿಗಳನ್ನು ನಾಯಕತ್ವವನ್ನು ತಿಳಿಯಲು ಅವಕಾಶ ಕಲ್ಪಿಸುತ್ತದೆ. ಸಮಿತಿಯ ವಿಷಯಗಳನ್ನು ಚರ್ಚಿಸುವುದು ಹಾಗೂ ಸೂಚನೆ ಮತ್ತು ಸಲಹೆಗಳನ್ನು ನೀಡುವುದು.

**4. ವ್ಯಕ್ತಿ ಅಧ್ಯಯನ:** ಈ ವಿಧಾನದಲ್ಲಿ ತರಬೇತಿದಾರರಿಗೆ /ವಿದ್ಯಾರ್ಥಿಗಳಿಗೆ ವಿಶ್ಲೇಷಿಸಿ ಪರಿಹಾರವನ್ನು ಸೂಚಿಸುವಂಎ ಹೇಳಲಾಗುತ್ತದೆ. ಸೂಕ್ತ ಹಾಗೂ ನಿಜವಾದ ನಿರ್ಧಾರ ಈ ಕಾರ್ಯಕ್ರಮ ನಡೆಸಿಕೊಡುವವರಿಗೆ ತಿಳಿದಿರುತ್ತದೆ. ಒಬ್ಬ ವ್ಯಕ್ತಿಯ/ಸಂಸ್ಥೆಯ ಸಮಸ್ಯೆಯನ್ನು ಕೊಟ್ಟು ವಿದ್ಯಾರ್ಥಿ ಸೂಚಿಸುವ ಪರಿಹಾರವನ್ನು ಇದರೊಂದಿಗೆ ತುಲನೆ ಮಾಡಲಾಗುತ್ತದೆ.

ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಸಮಸ್ಯೆ ಪರಿಹಾರಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ನಂತರ ನಿರ್ಧಾರವನ್ನು ತರಬೇತುದಾರರೊಂದಿಗೆ ಚರ್ಚಿಸಲಾಗುತ್ತದೆ.

**5. ಸಮ್ಮೇಳನ ತರಬೇತಿ:** ಸಮ್ಮೇಳನ ತರಬೇತಿಯು ತಂಡದ ಸಭೆಯಾಗಿದ್ದು ಸುವ್ಯವಸ್ಥಿತವಾದ ಯೋಜನೆಯಾಗಿದೆ. ಭಾಗವಹಿಸುವ ವಿದ್ಯಾರ್ಥಿಯು ವಿಷಯದ ಬಗ್ಗೆ ಅವರವರ ಅಭಿಪ್ರಾಯವನ್ನು ತಿಳಿಸಬಹುದು. ಸಮ್ಮೇಳನದಲ್ಲಿ ಭಾಗವಹಿಸುವವ, ವ್ಯಕ್ತಿಯ ಗುಂಪಿನ (ತಂಡದ) ಇತರ ಸದಸ್ಯರಿಂದ ಬೇರೆಯವರ ಅಭಿಪ್ರಾಯವನ್ನು ತಿಳಿಯಬಹುದು. ಸಮ್ಮೇಳನವು ಯಾವಾಗಲೂ ಕಲಿಯುವವನಿಗೆ ಆದರ್ಶಪ್ರಾಯವಾಗಿದ್ದು ಕಲಿಕೆಗೆ ಮತ್ತು ಸಮಸ್ಯೆಗೆ, ಘಟನೆಗಳಿಗೆ ಹಲವಾರು ಅಳತೆ ಗೋಲುಗಳನ್ನು /ಪರಿಹಾರೋಪಾಯಗಳನ್ನು ನೀಡುತ್ತದೆ.

Digitised by Bharatavani, CIIL

**6. ನಿರ್ವಹಣಾ ಆಟಗಳು (ಮ್ಯಾನೇಜ್‌ಮೆಂಟ್ ಗೇಮ್ಸ್):** ನಾಯಕತ್ವ ತರಬೇತಿಗೆ ನಿರ್ವಹಣಾ ತಜ್ಞರು ಆಸಕ್ತಿಕರವಾದ ಅನೇಕ ಆಟಗಳನ್ನು ರೂಪಿಸಿದ್ದಾಗ್ಗೆ, ಈ ಆಟಗಳನ್ನು ತರಗತಿಯಲ್ಲಿ ಸಹಾಯಕರ ತರಬೇತಿಗೆ ಉಪಯೋಗಿಸಬಹುದು. ತರಗತಿಯಲ್ಲಿ ವಿದ್ಯಾರ್ಥಿ ತಂಡಗಳನ್ನು ರಚಿಸಿ ಸಹಪಾಠಿಗಳೊಂದಿಗೆ ನಾಯಕತ್ವದ ಆಟಗಳನ್ನು ಆಸಬಹುದು. ಶಿಕ್ಷಕ ವಿದ್ಯಾರ್ಥಿಗಳನ್ನು ವೀಕ್ಷಿಸಿ ಮೌಲ್ಯಮಾಪನ ಮಾಡಬಹುದು.

**7. ಸಂವೇದನಾಶೀಲತೆ ತರಬೇತಿ (ಸೆನ್ಸಿಟಿವಿಟಿ ಟ್ರೈನಿಂಗ್):** ಇದಕೆ ಇನ್ನೊಂದು ಹೆಸರು ಗ್ರೂಪ್ ಟ್ರೇನಿಂಗ್. ನಾಯಕತ್ವಕ್ಕೆ ಬೇಕಾದ ಸನ್ನಿವೇಶಗಳ ಸೂಕ್ಷ್ಮತೆಯ ಅರಿವನ್ನು ಮೂಡಿಸಲು ಹಾಗೂ ನಿರ್ದಿಷ್ಟ ವರ್ತನೆಯನ್ನು ತರಲು ಈ ವಿಧಾನವನ್ನು ಉಪಯೋಗಿಸಲಾಗುತ್ತದೆ. ಹೆಚ್ಚಾಗಿ ಈ ವಿಧಾನವನ್ನು ಪ್ರಯೋಗಾಲಯದ ವ್ಯವಸ್ಥೆಯಲ್ಲಿ ವ್ಯಕ್ತಿ–ವ್ಯಕ್ತಿಗಳ ನಡುವಣ ಸಂಬಂಧವನ್ನು ಅರಿಯಲು ಬಳಸಲಾಗುತ್ತದೆ. ಈ ತರಬೇತಿಯಿಂದ ಸಹನಾಶಕ್ತಿ ಸಾಮರ್ಥ್ಯವನ್ನು ವ್ಯಕ್ತಿಯಲ್ಲಿ ಹೆಚ್ಚಿಸಬಹುದು. ವಿದ್ಯಾರ್ಥಿಗಳು ಗುಂಪುಗಳಾಗಿ ಸೇರಿ ತಮ್ಮ ಸಮಸ್ಯೆಗಳನ್ನು ಭಾವನೆಗಳನ್ನು ಅನ್ನಿಸಿಕೆಗಳನ್ನು ಮುಕ್ತವಾದ ರೀತಿಯಲ್ಲಿ ಪರಸ್ಪರ ಅಭಿವ್ಯಕ್ತಿಗೊಳಿಸುವುದು ಈ ತರಬೇತಿಯ ವಿಶೇಷ.

**8. ಪಾತ್ರ ಅಭಿನಯ:** ವಿದ್ಯಾರ್ಥಿಗಳಿಗೆ ವಿಭಿನ್ನ ಪಾತ್ರಗಳನ್ನು ನೀಡಿ ಹಲವಾರು ಕೌಶಲಗಳ ತರಬೇತಿಯನ್ನು ನೀಡಲಾಗುತ್ತದೆ. ಈ ತರಬೇತಿಯಲ್ಲಿ ಮಾನವೀಯ ಸಂಬಂಧ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾರೆ.

ನಾಯಕತ್ವ ತರಬೇತಿಯನ್ನು ಸಂಘಟಿಸುವಾಗ ಗಮನದಲ್ಲಿಡಬೇಕಾದ ಅಂಶಗಳು

1. ತರಬೇತಿ ಕಾರ್ಯಕ್ರಮವು ಸ್ಪಷ್ಟವಾದ ಗುರಿಯನ್ನು ಹೊಂದಿರುವುದೇ ಎಂಬುದನ್ನು ಗಮನಿಸಿ ಹಾಗೂ ಈ ಗುರಿ ಸಂಸ್ಥೆಗೆ ಮತ್ತು ಶಾಲೆಯ ಉದ್ದೇಶಕ್ಕೆ ಹೊಂದುಂವತಿರಬೇಕು.
2. ತರಬೇತಿಯ ಪ್ರಾಯೋಗಿಕ ಕೌಶಲಗಳನ್ನು ಒಳಗೊಂಡಿದ್ದು ಸದ್ಯದಲ್ಲಿ ಶೀಘ್ರವಾಗಿ ವಿದ್ಯಾರ್ಥಿಗೆ ಸಹಾಯಕವಾಗುವಂತೆಯು ಮತ್ತು ಮುಂದಿನ ದಿನಗಳಲ್ಲಿಯೂ ಅನುಕೂಲವಾಗುವಂತಿರಬೇಕು.
3. ತರಬೇತಿ ನಡೆಯುವ ಸಮಯದಲ್ಲಿ ಹಿರಿಯ (ಮುಂದಿನ ತರಗತಿಯ) ವಿದ್ಯಾರ್ಥಿಗಳು ಕೆಲವು ಸಂದರ್ಭದಲ್ಲಿ ತರಬೇತಿಯಲ್ಲಿ ಸ್ವತಃ ಭಾಗವಹಿಸುವಿಕೆಗೆ ಅವಕಾಶ ಒದಗಿಸುವುದು.
4. ಎಚ್ಚರಿಕೆಯಿಂದ ಆಯ್ಕೆ ಮಾಡಿದ ತರಬೇತಿ ಉತ್ತಮವಾಗಿ ನೀಡುವುದರಿಂದ ಕಲಿಕೆಯ ಅನುಭವದಲ್ಲಿ ಉತ್ತಮ ಗುಣಾತ್ಮಕ ಪ್ರಭಾವುಂಟಾಗುವುದು.
5. ತರಬೇತಿ ಕಾರ್ಯಕ್ರಮವನ್ನು ಪರಿಶೀಲಿಸಿ ಆಗಾಗ್ಗೆ ತರಬೇತಿ ಪಡೆಯುವವರು ಗುರಿ ಮತ್ತು ಉದ್ದೇಶಗಳನ್ನು ಸಾಧಿಸಿದ್ದಾರೆಯೇ ಎಂದು ಗಮನಿಸಿ ಅಗತ್ಯವಾದ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕು.

ತರಬೇತಿ ಕಾರ್ಯಕ್ರಮವು ಸಫಲವಾಗಿದೆಯೆಂದು ತಿಳಿಯಲು ಈ ಅಂಶಗಳು ಸೂಚಿಸುತ್ತವೆ.

1. ಉತ್ಪಾದನೆಯ ಮೇಲೆ ಆಗಿರುವ ಪರಿಣಾಮ
2. ಕಲಿಕಾವಧಿ
3. ಗುಣಾತ್ಮಕ ಕಲಿಕೆ
4. ಹಾಜರಾತಿ
5. ಗುಣಾತ್ಮಕವಾಗಿ ಸೇವಾ ಹಂತವನ್ನು ಹೆಚ್ಚಿಸುವುದು.

ಒಂದು ಒಳ್ಳೆಯ ನಾಯಕತ್ವ ತರಬೇತಿಯಲ್ಲಿ ಈ ಮುಖ್ಯ ಘಟಕಾಂಶಗಳನ್ನು ಇರಬೇಕು.

1. ಜ್ಞಾನ ಅರ್ಥೈಸಿಕೊಳ್ಳುವಿಕೆ ಕೌಶಲ
2. ಅಪೇಕ್ಷಿತ ಮನೋಭಾವಗಳು
3. ವ್ಯಕ್ತಿತ್ವ ವಿಕಾಸ
4. ಸಾಮಾಜಿಕ ಸಂಬಂಧಗಳು
5. ಕ್ಷೇತ್ರ ಅನುಭವಗಳು
6. ಸಂಪನ್ಮೂಲ/ಅನುಭವಿ ನಾಯಕರ ಭೇಟಿ
7. ಸಮೂಹ ಸಂಬಂಧ
8. ಧನಾತ್ಮಕ ಮನೋಭಾವ

ಭಾರತದಲ್ಲಿನ ನಾಯಕತ್ವ ತರಬೇತಿ ಶಾಲೆ ಮತ್ತು ಕಾಲೇಜುಗಳು

1. ಅಡ್ಮಿನಿಸ್ಟ್ರೇಟಿವ್ ಸ್ಟಾಫ್ ಕಾಲೇಜು ಆಫ್ ಇಂಡಿಯಾ, ರಾಜಭವನ ರಸ್ತೆ, ಖೈರತಾಬಾದ್, ಹೈದರಾಬಾದ್–500082.
2. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076
3. ಕ್ರೈಸ್ಟ್ ವಿಶ್ವವಿದ್ಯಾನಿಲಯ, ಹೊಸೂರು ರಸ್ತೆ, ಬೆಂಗಳೂರು–560 029
4. ಇಂಡಿಯನ್ ಸ್ಕೂಲ್ ಆಫ್ ಬಿಸಿನೆಸ್, ಗಚಿಬೋಲಿ, ಹೈದರಾಬಾದ್–500032.
5. ಪವರ್ ಮ್ಯಾನೇಜ್‌ಮೆಂಟ್, ಇನ್‌ಸ್ಟಿಟ್ಯೂಟ್ ನೋಯ್ಡ, ಗೌತಮಬುದ್ಧನಗರ, ಉತ್ತರ ಪ್ರದೇಶ–201801.
6. ಕ್ಸೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕ್ಸೇವಿಯರ್ ಸ್ಕ್ವೇರ್, ಭುವನೇಶ್ವರ–75013
7. ನಿಯೋವೇ ಅಕಾಡೆಮಿ, ರೆಸಿಡೆನ್ಸಿ ರಸ್ತೆ, ಬೆಂಗಳೂರು
8. ಎನ್.ಎಂ.ಐ.ಎಂ.ಐಸ್ ವಿಶ್ವವಿದ್ಯಾನಿಲಯ

ಮುಂಬೈ–400056

–ವಸಂತಕುಮಾರಿ ಸಿ.

Digitised by Bharatavani, CIIL

# ನ

## ನಾಯಕತ್ವ ಮತ್ತು ಶಾಲೆ

ಗುಂಪು ಯಾವುದೇ ಆಗಿರಬಹುದು, ಪ್ರತಿಯೊಂದು ಸಾಮಾಜಿಕ ಗುಂಪಿಗೆ ಅದರ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವುದು ಮುಖ್ಯವಾಗಿರುತ್ತದೆ. ಗುಂಪು ಒಂದು ಉತ್ತಮವಾದ ಸಾಧನೆ ಮಾಡಬೇಕಾದರೆ ಅದಕ್ಕೆ ಒಬ್ಬ ನಾಯಕನ ಅವಶ್ಯಕತೆ ಇರುತ್ತದೆ. ಒಂದು ಗುಂಪಿನ ಗುರಿಯನ್ನು ಮುಟ್ಟಲು ಅದಕ್ಕೆ ಒಬ್ಬ ನಾಯಕನ ಅವಶ್ಯಕತೆ ಇರುತ್ತದೆ. ಹೀಗೆ ನಾಯಕನು ತನ್ನ ಕಾರ್ಯವನ್ನು ನಿರ್ವಹಿಸುವುದಕ್ಕೆ ಜವಾಬ್ದಾರಿಯನ್ನು ಹೊತ್ತುಕೊಂಡಿರುತ್ತಾನೆ. ನಾಯಕರು ಸಾಂಪ್ರದಾಯಿಕವಾಗಿರಬಹುದು, ನಿಯುಕ್ತಿಯಿಂದಿರ ಬಹುದು, ಆರಿಸಬಹುದು ಅಥವಾ ಸಮಯಕ್ಕೆ ಅನುಗುಣವಾಗಿ ಅವನು ಹುಟ್ಟಿಕೊಂಡಿರಬಹುದು. ಈ ಮೇಲಿನ ಅಂಶವನ್ನು ಗಮನಕ್ಕೆ ತಂದಾಗ ನಾಯಕನು ಒಂದು ಸಂಘಟನೆಯ ಅಥವಾ ಸಂಸ್ಥೆಯ ಒಟ್ಟಾರೆ ದಕ್ಷತೆಯ ಮೇಲೆ ವಿಶೇಷವಾದ ಮಹತ್ವಪೂರ್ಣ ಪ್ರಭಾವವನ್ನು ಬೀರುವವ ನಾಗಿರುತ್ತಾನೆ. ಬೇರೆ ಕ್ಷೇತ್ರಗಳಿಗೆ ಹೋಲಿಸಿದಾಗ ಶೈಕ್ಷಣಿಕ ಕ್ಷೇತ್ರದಲ್ಲಿ ನಾಯಕನ ಕರ್ತವ್ಯ ಮತ್ತು ಜವಾಬ್ದಾರಿ ಬಹಳಷ್ಟು ಪ್ರಮುಖವಾಗಿರುತ್ತದೆ. ಕಾರಣ ಶಿಕ್ಷಣ ಕ್ಷೇತ್ರವು ಉಳಿದ ಎಲ್ಲ ಕ್ಷೇತ್ರಗಳಿಗೆ ಒಂದು ಬೆನ್ನೆಲುಬು ಆಗಿರುತ್ತದೆ. ಆದ್ದರಿಂದ ಶೈಕ್ಷಣಿಕ ನಾಯಕನೂ ಪ್ರಮುಖ ವ್ಯಕ್ತಿಯಾಗಿರುತ್ತಾನೆ. ಪ್ರಸ್ತುತದಲ್ಲಿ ಒಬ್ಬ ವ್ಯಕ್ತಿ ಒಂದು ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರೆ ಪ್ರಾರಂಭದ ದಿನದಿಂದ ಕೊನೆಯ ದಿನದವರೆಗೆ ಅವನು ಹಲವಾರು ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಬೇಕು. ಇದು ಒಂದು ಸರಳ ವ್ಯವಹಾರವಲ್ಲ. ಏಕೆಂದರೆ ಇದು ಒಂದು ಸಂಕೀರ್ಣ ರಚನೆ ಯಾಗಿರುತ್ತದೆ. ಯಾವುದೇ ಒಂದು ಸಂಸ್ಥೆಯು ಹಲವಾರು ಔಪಚಾರಿಕ ಮತ್ತು ಅನೌಪಚಾರಿಕ ಸಮೂಹಗಳಿಂದ ರಚಿತವಾಗಿರುತ್ತದೆ. ಆ ಸಂಸ್ಥೆಯ ಮುಖ್ಯಸ್ಥರಿಗೆ ಸಮೂಹ ಗತಿಶಾಸ್ತ್ರ ಮತ್ತು ನಾಯಕತ್ವದ ಪಾತ್ರದ ಬಗೆಗೆ ತಿಳಿದಿರುವುದು ಅವಶ್ಯಕವಾಗಿದೆ. ಅಂತಹ ಸಂಸ್ಥೆಯ ಮುಖ್ಯಸ್ಥರ ಕಾರ್ಯಗಳ ಬಗೆಗೆ ನೋಡಿದಾಗ ಅವರು ಶಿಕ್ಷಕರೊಂದಿಗೆ, ವಿದ್ಯಾರ್ಥಿಗಳೊಂದಿಗೆ, ವ್ಯವಸ್ಥಾಪನಾ ಮಂಡಳಿಯ ಸದಸ್ಯರೊಂದಿಗೆ, ಅಧಿಕಾರಿಗಳೊಂದಿಗೆ, ಪೋಷಕರೊಂದಿಗೆ ಮತ್ತು ಸಮುದಾಯದೊಂದಿಗೆ ವ್ಯವಹರಿಸಬೇಕಾಗುತ್ತದೆ. ಇಂತಹ ಸಂಸ್ಥೆಯ ನಾಯಕರೆಂದು ಪರಿಗಣಿಸುವ ಮುಖ್ಯಸ್ಥರು ವಿವಿಧ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಅದಕ್ಕೆ ಸಂಸ್ಥೆಯ ಮುಖ್ಯಸ್ಥರಿಗೆ ಅವರ ಪಾತ್ರಗಳ ಬಗ್ಗೆ ತನ್ನದೇ ಆದ ಗ್ರಹಿಕೆ ಇರುತ್ತದೆ. ಯಾವುದೇ ಆಡಳಿತಾತ್ಮಕ ಸನ್ನಿವೇಶ ಎದುರಾದರೂ ಅತ್ಯಂತ ದಕ್ಷತೆಯಿಂದ ಮತ್ತು ಜಾಣತನದಿಂದ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಅಂದಾಗ ಮಾತ್ರ ಆ ಸಂಸ್ಥೆಯ ಯಶಸ್ಸು ಆಗುತ್ತದೆ. ಅದಕ್ಕೆ ಕಾರಣ ದಕ್ಷ ನಾಯಕನೆಂದು ಹೇಳಬಹುದು.

ಸಾಮಾನ್ಯವಾಗಿ ನಾಯಕ ಎಂಬ ಪದವನ್ನು ಶೈಕ್ಷಣಿಕ ಸಂಸ್ಥೆಯ ಆಡಳಿತ ಮತ್ತು ನಿರ್ವಹಣೆಯೊಂದಿಗೆ ಸಂಬಂಧ ಪಟ್ಟಂತೆ ನೋಡುತ್ತೇವೆ. ಒಂದು ಸಂಸ್ಥೆಯ ಗುರಿ ಮತ್ತು ಉದ್ದೇಶಗಳನ್ನು ಹಾಕಿಕೊಂಡು ಸಂಯಮದಿಂದ ಅವುಗಳನ್ನು ಸಾಧಿಸುವವರೆಗೆ ನಾಯಕನ ಚಟುವಟಿಕೆಗಳು ಅತ್ಯಂತ ಪ್ರಮುಖವಾಗಿರುತ್ತವೆ. ಒಂದು ಸಂಸ್ಥೆಯ ವಿಕಾಸಕ್ಕಾಗಿ ಕಾರ್ಯ ನಿರ್ವಹಿಸಲು ಆ ಸಂಸ್ಥೆಯ ಮುಖ್ಯಸ್ಥರು ಮಾರ್ಗದರ್ಶನ ನೀಡುತ್ತಾರೆ. ಅದರಂತೆ ಕಾರ್ಯ ಚಟುವಟಿಕೆಗಳು ನಡೆಯುತ್ತವೆ. ಹೀಗಾಗಿ ಸಂಸ್ಥೆಯ ಮುಖ್ಯಸ್ಥರು ಹಲವಾರು ವ್ಯಕ್ತಿಗಳಿಂದ ಕೆಲಸವನ್ನು ತೆಗೆದುಕೊಳ್ಳುವುದರಲ್ಲಿ ಯಶಸ್ವಿ ಯಾಗಿರುತ್ತಾರೆ. ಒಂದು ಸಂಸ್ಥೆಯ ಮುಖ್ಯಸ್ಥರು ಚಲನಶೀಲತ್ವದಿಂದ ಉತ್ತಮ ಹೆಸರು ಮತ್ತು ಪ್ರಸಿದ್ಧಿಯನ್ನು ಪಡೆದುಕೊಂಡಿರುತ್ತಾರೆ. ಒಂದು ಸಂಘಟನೆಯ ಗುರಿಗಳನ್ನು ಸಾಧಿಸಲು, ಒಂದು ಸಮೂಹಕ್ಕೆ ಕೆಲವು ಕ್ರಿಯೆಗಳನ್ನು ನಿರ್ವಹಿಸುವ, ಪ್ರಾರಂಭಿಸುವ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಒಬ್ಬ ವ್ಯಕ್ತಿಯ ನಾಯಕತ್ವದ ಅವಶ್ಯಕತೆ ಇದೆ ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ನಾಯಕ ಎನ್ನುವ ಪದವನ್ನು ಎಸ್.ಎನ್.ಸಿಂಗ್‌ರವರು ಹೀಗೆ ಹೇಳುತ್ತಾರೆ "ಸಮೂಹದ ಸದಸ್ಯರಿಗೆ ಸಹಾಯ ಮಾಡುವ ವ್ಯಕ್ತಿಯಾಗಿ, ಸಮಸ್ಯೆಗಳ ಬಗೆಗೆ ಚಿಂತಿಸುವ, ಜವಾಬ್ದಾರಿಯನ್ನು ಸ್ವೀಕರಿಸುವ ಮತ್ತು ಕಂಡುಹಿಡಿಯಬೇಕಾದ ಪರಿಹಾರಗಳನ್ನು ಯೋಚಿಸುವಂತವರು ನಾಯಕರು". ಮನೋವಿಜ್ಞಾನದ ದೃಷ್ಟಿಕೋನದಿಂದ ನಾಯಕತ್ವದ ಪರಿಕಲ್ಪನೆಯನ್ನು ಅಭಿಪ್ರೇರಣೆ, ಶಕ್ತಿ, ಅಗತ್ಯದ ಸಾಧನೆ, ಸ್ವ ಗೌರವ ಮತ್ತು ಸಮೂಹದೆಡೆಗೆ ಆಕರ್ಷಣೆಯಂತಹ ವ್ಯಕ್ತಿತ್ವದ ಲಕ್ಷಣಗಳು ಮತ್ತು ಗುಣಗಳು ಎಂದು ಕೆಲವು ಪದಗಳಲ್ಲಿ ವರ್ಣಿಸಿದ್ದಾರೆ. ಸಾಮಾಜಿಕ ದೃಷ್ಟಿಕೋನದಲ್ಲಿ ನಾಯಕತ್ವವನ್ನು ಸಂಘಟನೆಯ ನಿಯಮಗಳು ಮತ್ತು ಸಂಬಂಧಗಳ ಪದಗಳಲ್ಲಿ ನೋಡಲಾಗಿದೆ.

**ಪ್ರಜಾಸತ್ತಾತ್ಮಕ ನಾಯಕತ್ವ:** ಪ್ರಜಾಸತ್ತಾತ್ಮಕ ನಾಯಕನು ಯಾವತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವನ ಗುಂಪಿನ ಸದಸ್ಯರು ಭಾಗವಹಿಸುವುದನ್ನು ಪ್ರೋತ್ಸಾಹಿಸುತ್ತಾನೆ ಮತ್ತು ಅವನು ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಸಮೂಹದ ಪ್ರಯತ್ನವನ್ನು ಸಮನ್ವಯಗೊಳಿಸುತ್ತಾನೆ. ಅವರ ಅಂತಃಸತ್ವವನ್ನು ಪ್ರದರ್ಶಿಸಲು ಅಧೀನ ನೌಕರರನ್ನು ಪ್ರೋತ್ಸಾಹಿಸುತ್ತಾನೆ ಮತ್ತು ಹೆಚ್ಚಿನ ಸವಾಲುದಾಯಕ ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಾನೆ. ನಾಯಕನ ಕಾರ್ಯ ಮತ್ತು ವ್ಯಕ್ತಿಗಳಿಗೆ ಹೆಚ್ಚು ಪ್ರಾಧಾನ್ಯವನ್ನು ನೀಡುತ್ತಾನೆ. ನಾಯಕನ ಇಂತಹ ಮನೋಭಾವನೆ ಉದ್ಯೋಗಿಗಳ ತೃಪ್ತಿಯನ್ನು ಮತ್ತು ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇದು ಹೆಚ್ಚು ತೃಪ್ತಿ ಮತ್ತು ಒಗ್ಗಟ್ಟಿರುವ ಸಮೂಹದಿಂದ ಸೇವೆಯನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಯಾವುದೇ ನಿಯಮಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳು ಒಟ್ಟಾಗಿ ಅಥವಾ ಈ ಕಾರ್ಯಕ್ರಮಗಳಿಂದ ಪರಿಣಾಮವುಂಟಾಗುವ ವ್ಯಕ್ತಿಗಳು ಯೋಜಿಸುತ್ತಾರೆ. ಇಲ್ಲಿ ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರು ಕಾರ್ಯ ಯೋಜನೆಯನ್ನು ತಯಾರಿಸಿ ಸಹೋದ್ಯೋಗಿಗಳನ್ನು ಒಟ್ಟಿಗೆ ಸೇರಿಸಿ ಚಿಂತಿಸಿ ಸಂಸ್ಥೆಯ

Digitised by Bharatavani, CIIL

ಕಾರ್ಯಕ್ರಮಗಳ ಅಥವಾ ನಿಯಮಗಳ ಅಂತಿಮ ಒಪ್ಪಿಗೆ ತೆಗೆದುಕೊಳ್ಳುತ್ತಾರೆ. ಹಾಗೂ ಪ್ರಜಾಸತ್ತಾತ್ಮಕ ನಾಯಕನು ಯಾವುದೇ ಕಾರ್ಯಕ್ರಮವನ್ನು ಜಾರಿಗೆ ತರುವ ಮೊದಲು ಸೂಕ್ತವಾದ ಯೋಜನೆಯನ್ನು ಹಾಕಿಕೊಳ್ಳುತ್ತಾನೆ. ಯೋಜನೆಯನ್ನು ಅದರ ಆಡಳಿತಾತ್ಮಕ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲರಿಗೂ ಒಟ್ಟಿಗೆ ಸೇರಿಸಿ ರೂಪಿಸುತ್ತಾನೆ. ಇಂತಹ ನಾಯಕನು ಯಾವುದೇ ನಿರ್ಧಾರವನ್ನು ಪರಸ್ಪರ ಸಲಹೆ ಮತ್ತು ಸಮಾಲೋಚನೆ ನಡೆಸಿ ತೆಗೆದುಕೊಳ್ಳುತ್ತಾನೆ. ಜೊತೆಗೆ ಪ್ರಜಾಸತ್ತಾತ್ಮಕ ನಾಯಕನಿಗೆ ತನ್ನ ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಮತ್ತು ಆ ಸಂಘಟನೆಯಲ್ಲಿರುವ ಎಲ್ಲಾ ವ್ಯಕ್ತಿಗಳ ಕಲ್ಯಾಣ ಮತ್ತು ಹಿತದ ಬಗೆಗೆ ಕಾಳಜಿ ಇರುತ್ತದೆ. ಅವರ ತಂತ್ರಗಳು, ವ್ಯಕ್ತಿಗಳ ಸೂಕ್ಷ್ಮತೆ ಮತ್ತು ಅವರ ವಿವಿಧ ಮನೋಭಾವಗಳನ್ನು ಅವಲಂಬಿಸಿ ಇರುತ್ತದೆ. ಅದು ಉತ್ತಮ ಫಲಿತಾಂಶ ನೀಡುವಂತಾದರೆ ಅವನು ನಿಯಮಗಳನ್ನು ಬದಲಾಯಿಸಲು ಯಾವತ್ತೂ ಸಿದ್ಧನಿರುತ್ತಾನೆ. ಅವನು ಬಳಸಬಾರದ ನಿರ್ದಿಷ್ಟ ಪಡಿಸಿದ ಪದ್ಧತಿಗಳಿಗೆ ಅಡಿಯಾಳಾಗಿರಲು ಇಚ್ಛಿಸುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ತನ್ನ ಮಾರ್ಗೋಪಾಯಗಳನ್ನು ಸುಧಾರಿಸಿಕೊಳ್ಳುತ್ತಾನೆ.

ಪ್ರಜಾಸತ್ತಾತ್ಮಕ ನಾಯಕತ್ವವು ಸಮೂಹಕ್ಕೆ ಸಂಬಂಧಿಸಿದ ನಿಯಮಗಳನ್ನು ಎಲ್ಲರ ಒಳಗೊಳ್ಳುವಿಕೆಯಿಂದ ನಿರ್ಧರಿಸಲಾಗುತ್ತದೆ. ಪ್ರಜಾಸತ್ತಾತ್ಮಕ ನಾಯಕನು ಅನುಯಾಯಿಗಳಿಗೆ ಪ್ರಾಮುಖ್ಯ ನೀಡುವ ಮತ್ತು ಅವಕಾಶ ನೀಡುವಂತವನಾಗಿರುತ್ತಾನೆ. ನಾಯಕನು ತನ್ನ ಅಧೀನ ನೌಕರರ ಬಗೆಗೆ ಕಾಳಜಿ ವಹಿಸುವ, ಅವರ ಅಗತ್ಯಗಳನ್ನು ಗುರುತಿಸುವ ಮತ್ತು ಮಾನವ ಘನತೆಯನ್ನು ಗುರುತಿಸುವವನಾಗಿರುತ್ತಾನೆ. ನಿರ್ಣಯ ತೆಗೆದುಕೊಳ್ಳುವುದು ನಿಧಾನ ಪ್ರಕ್ರಿಯೆಯಾಗಿದೆ. ಇಲ್ಲಿ ಬದಲಾವಣೆಗೆ ಪ್ರತಿರೋಧವಿರುವುದಿಲ್ಲ. ನಾಯಕನು ಸುಲಭವಾಗಿ ಅನುಯಾಯಿಗಳ ವಿಶ್ವಾಸ ಮತ್ತು ಸಹಕಾರವನ್ನು ಪಡೆಯುತ್ತಾನೆ.

**ನಾಯಕ ಮತ್ತು ವಿದ್ಯಾರ್ಥಿಗಳು:** ನಾಯಕನು ವಿದ್ಯಾರ್ಥಿಗಳ ಕಲ್ಯಾಣ ಮತ್ತು ಒಳಿತಿಗೆ ಪ್ರಥಮ ಆದ್ಯತೆಯನ್ನು ನೀಡುತ್ತಾನೆ. ವಿದ್ಯಾರ್ಥಿಗಳು ಯಾವಾಗಲೂ ಸಂಸ್ಥೆಯಲ್ಲಿ ಪರಿಣಾಮಕಾರಿ ಕಲಿಕಾ ಅನುಭವಗಳನ್ನು ನೀಡುವುದಕ್ಕೆ ವ್ಯವಸ್ಥೆ ಮಾಡುವ ನಾಯಕರನ್ನು ಇಷ್ಟಪಡುತ್ತಾರೆ. ನಾಯಕನು ಮಾನವ ಅನ್ಯೋನ್ಯಕ್ರಿಯೆಯ ಮೌಲ್ಯಗಳನ್ನು ಪ್ರಶಂಸಿಸುತ್ತಾನೆ. ಸಹಕಾರ, ಸ್ಮರಣೆ ಮತ್ತು ಗ್ರಹಿಕೆಯ ಗುಣಗಳನ್ನು ಬೆಳೆಸಲು ಮತ್ತು ಅಭಿವೃದ್ಧಿಗೊಳಿಸಲು ಶ್ರಮಿಸುತ್ತಾನೆ. ಬಹಳಷ್ಟು ಶಾಲೆಗಳ ಮತ್ತು ಕಾಲೇಜುಗಳ ನಾಯಕರು ಅವರ ಬೋಧನಾ ಯೋಜನೆಗಳನ್ನು ಬದಲಾಯಿಸುತ್ತಾರೆ. ವಿದ್ಯಾರ್ಥಿಗಳ ಆಸಕ್ತಿಗಳನ್ನು ಪರಿಗಣನೆಗೆ ತೆಗೆದುಕೊಂಡು ಬೋಧನೆಗೆ ಅವರ ಉಪಕ್ರಮವನ್ನು ಬದಲಾಯಿಸುತ್ತಾರೆ. ಬೋಧನಾ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಮತ್ತು ಯಶಸ್ವಿಯಾಗಿ ನಿರ್ವಹಿಸಲು ಬೇಕಾಗುವ ಮತ್ತು ಉಪಯುಕ್ತವಾಗುವ ಬೋಧನಾ ಸಹಾಯಕಗಳು, ಕಂಪ್ಯೂಟರ್‌ಗಳು ಮತ್ತು ದೃಕ್-ಶ್ರವಣ ಸಾಮಗ್ರಿಗಳನ್ನು ಬಳಸುತ್ತಾರೆ. ಒಂದು ಸಂಸ್ಥೆಯ ಮುಖ್ಯಸ್ಥರು ಇಂಥವುಗಳನ್ನು ವ್ಯವಸ್ಥೆಗೊಳಿಸಬೇಕೆಂದು ಅಪೇಕ್ಷಿಸಲಾಗುತ್ತದೆ. ಹೊಸ ಬೋಧನಾ ಸಲಕರಣೆಗಳನ್ನು ಖರೀದಿಸುವ ಮೊದಲು ನಾಯಕನು ಶಿಕ್ಷಕರ ಸಲಹೆಗಳನ್ನು ಪಡೆದುಕೊಳ್ಳುತ್ತಾನೆ. ಸಂಸ್ಥೆಯ ಮುಖ್ಯಸ್ಥರು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ ಬೇಕಾಗುವ ಸೌಲಭ್ಯಗಳನ್ನು ಕುರಿತು ವಿಚಾರಿಸುತ್ತಾರೆ. ಈ ರೀತಿಯಾಗಿ ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸಕ್ಕಾಗಿ ಬೋಧನಾ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸುವಲ್ಲಿ ನಾಯಕನ ಪಾತ್ರವು ಅತ್ಯಂತ ಮುಖ್ಯವಾದುದು.

**ನಾಯಕ ಮತ್ತು ಶಿಕ್ಷಕರು:** ಯಾವುದೇ ಒಂದು ಬೋಧನೆಯ ಉದ್ದೇಶವು ಈಡೇರಬೇಕಾದರೆ ಅಲ್ಲಿ ಶಿಕ್ಷಕರ ಪಾತ್ರ ಬಹಳಷ್ಟು ಮುಖ್ಯವಾಗಿರುತ್ತದೆ. ಹೀಗೆ ಶಿಕ್ಷಕರು ತಮ್ಮ ಬೋಧನಾ ಕಾರ್ಯವನ್ನು ಹೇಗೆ ಸಮರ್ಥವಾಗಿ ವಿದ್ಯಾರ್ಥಿಗಳ ಪ್ರಗತಿಗನುಗುಣವಾಗಿ ನಿರ್ವಹಿಸುತ್ತಿದ್ದಾರೆ ಎನ್ನುವುದು ಶಾಲೆಯ ನಾಯಕನು ಅದನ್ನು ಗಂಭಿರವಾಗಿ ಪರಿಗಣಿಸ ಬೇಕಾಗುತ್ತದೆ. ಹಾಗೂ ಯಾವುದೇ ಸಂಸ್ಥೆಯ ಮುಖ್ಯಸ್ಥರು ಎಲ್ಲ ಶಿಕ್ಷಕರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಬೋಧನಾ ಕಾರ್ಯ ಯಶಸ್ವಿಯಾಗುವಂತೆ ಸಲಹೆ ಹಾಗೂ ಮಾರ್ಗದರ್ಶನ ಮೇಲಿಂದ ಮೇಲೆ ಕೊಡಬೇಕಾಗುತ್ತದೆ. ಬೋಧನೆಯಲ್ಲಿ ಉತ್ತಮ ಸಹಕಾರವನ್ನು ಪಡೆದುಕೊಳ್ಳುವಲ್ಲಿ ಶಿಕ್ಷಕರನ್ನು ಗೌರವಿಸಬೇಕು, ಆದರಿಸಬೇಕು ಮತ್ತು ಪ್ರಶಂಸಿಸಬೇಕು. ಒಂದು ವೇಳೆ ನಾಯಕನು ಎಲ್ಲ ಶಿಕ್ಷಕರ ಕಾರ್ಯಗಳನ್ನು ಪ್ರಶಂಸಿಸಿದರೆ ಅವರ ಪ್ರೀತಿ ಮತ್ತು ಸ್ನೇಹವನ್ನು ಗೆಲ್ಲಲು ಸಾಧ್ಯವಾಗುತ್ತದೆ. ಸರಿಯಾಗಿ ನಿರ್ಧಾರ ತೆಗೆದುಕೊಳ್ಳಲಾಗದ ನಾಯಕರ ನಾಯಕತ್ವದಡಿಯಲ್ಲಿ ಶಾಲಾ ಬೋಧನಾ ಕಾರ್ಯಕ್ರಮಗಳು ಯಶಸ್ವಿಯಾಗಲು ಸಾಧ್ಯವಿಲ್ಲ. ಈ ರೀತಿ ನಾಯಕರು ಶಿಕ್ಷಕರನ್ನು ಕಾರ್ಯಾಗಾರಗಳು, ವಿಚಾರ ಗೋಷ್ಠಿಗಳು ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದರಲ್ಲಿ ಆಸಕ್ತಿ ತೋರಿಸುತ್ತಿರಬೇಕು. ಇಂತಹ ನಾಯಕರ ಅಧೀನದಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಬೋಧನಾ ಜವಾಬ್ದಾರಿಗೆ ಸಂಬಂಧಿಸಿದಂತೆ ಅವರ ಸ್ಥಾನದ ಅರಿವು ಇರುತ್ತದೆ ಮತ್ತು ಅವರ ಆಡಳಿತಾತ್ಮಕ ಸಂಬಂಧದ ಬಗೆಗೂ ತಿಳುವಳಿಕೆ ಇರುತ್ತದೆ. ಆದ್ದರಿಂದ ಯಾವುದೇ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಶಿಕ್ಷಕರೊಂದಿಗೆ ಚರ್ಚಿಸಿ ಮತ್ತು ಅವರ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಮಾತ್ರ ಸಂಸ್ಥೆಯ ನಾಯಕನು ಶಿಕ್ಷಕರೊಂದಿಗೆ ಒಳ್ಳೆಯ ಸಂಬಂಧವನ್ನು ಬೆಳೆಸಿ ಆಡಳಿತವನ್ನು ಸುಗಮವಾಗಿ ಕೊಂಡೊಯ್ಯುವಲ್ಲಿ ಯಶಸ್ವಿಯಾಗುತ್ತಾನೆ.

ನಾಯಕರನ್ನು ತಯಾರು ಮಾಡುವಲ್ಲಿ ಶಾಲೆಗಳ ಪಾತ್ರ: ಅಧ್ಯಾಪಕರು ವಿದ್ಯಾರ್ಥಿಗಳನ್ನು ಪ್ರಜಾಸತ್ತಾತ್ಮಕ ಕ್ರಮಗಳನ್ನು ಅನುಸರಿಸಿ ನಾಯಕತ್ವವನ್ನು ಪಡೆಯುವಂತೆ ಪ್ರೇರೇಪಿಸಬೇಕು. ವಿದ್ಯಾರ್ಥಿಗಳಿಗೆ ವಿವಿಧ ಸನ್ನಿವೇಶಗಳನ್ನು ಒದಗಿಸಿ ಕೊಡುವುದರ ಮುಖಾಂತರ ನಾಯಕತ್ವವನ್ನು ನೀಡಬಹುದು. ಎಲ್ಲರನ್ನೂ ವಿಶ್ವಾಸದಿಂದ ಕಾಣುವ ಹಾಗೂ ಎಲ್ಲರೊಂದಿಗೆ ಹೊಂದಾಣಿಕೆ

Digitised by Bharatavani, CIIL

ಮಾಡಿಕೊಂಡು ಹೋಗುವ ಕ್ರಮದ ಮುಖಾಂತರ ನಾಯಕತ್ವದ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬಹುದಾಗಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವವನ್ನು ಬೆಳೆಸುವಾಗ ಕೆಲವು ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ನಾಯಕನಲ್ಲಿ ಗುಂಪಿನ ನಿಯಮಗಳನ್ನು ಪ್ರತಿನಿಧಿಸುವ ಮತ್ತು ಸನ್ನಿವೇಶಗಳನ್ನು ಬದಲಾಯಿಸುವ ಗುಣ ಇರಬೇಕು. ನಾಯಕತ್ವವು ಎಲ್ಲರಿಗೂ ಅವಕಾಶ ಕಲ್ಪಿಸುವಂತಿರಬೇಕು ಮತ್ತು ತರತರಹದ ಕಾರ್ಯಕ್ಕೆ ಒತ್ತು ನೀಡುವಂತಿರಬೇಕು.

ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಸ್ಥಾನಗಳನ್ನು ಹೇಗೆ ನಿಭಾಯಿಸುವುದು, ಗುಂಪಿನ ನಾಯಕನಾಗಿ ಹೊರ ಹೊಮ್ಮುವುದು ಹೇಗೆ, ಅನುಸರಿಸಬೇಕಾದ ಕ್ರಮಗಳು ಯಾವುವು ಎಂಬುದನ್ನು ತಿಳಿಸಿಕೊಡಬೇಕು. ವಿದ್ಯಾರ್ಥಿಗಳು ವಿದ್ಯಾರ್ಥಿ ಸಮಿತಿಯಲ್ಲಿ ಕಾರ್ಯ ನಿರ್ವಹಿಸಿ ಶಾಲಾ ವ್ಯವಸ್ಥೆಯನ್ನು ನಿರ್ವಹಿಸಿಕೊಂಡು ಸಾಗುವಂತೆ ನಾಯಕರನ್ನು ತಯಾರಿಸಬೇಕು. ಉದಾ: ಅಧ್ಯಕ್ಷ, ಕಾರ್ಯದರ್ಶಿ ಇತ್ಯಾದಿ ಪದಾಧಿಕಾರಿಗಳ ಅನುಭವ ನಿರ್ವಹಿಸುವುದು. ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ, ನಾಗರಿಕ ಜವಾಬ್ದಾರಿ ದೊರೆತು ಶಾಲಾ ದಿನಗಳ ನಂತರ ಆ ಕ್ಷೇತ್ರಗಳಲ್ಲಿ ಮುನ್ನಡೆಯಲು ಸಹಾಯಕವಾಗುತ್ತವೆ.

ಶಾಲಾ ವಿದ್ಯಾರ್ಥಿಗಳಿಗೂ ಚಟುವಟಿಕೆ ನಡೆಸಲು ಗುಂಪು, ಸಮೂಹ ರಚಿಸಿ ಕಲಿಕೆ ಕೈಗೊಳ್ಳಲು ಅವಕಾಶ ಒದಗಿಸಬೇದು. ಸಮಸ್ಯೆಗಳಿಗೆ ಸಂಬಂಧಿಸಿದಂತೆ ಒಂದು ಗುಂಪು ನಿಯೋಜಿತ ಕಾರ್ಯದ ಮುಖಾಂತರ ಹೇಗೆ ಪರಿಹಾರ ಸೂಚಿಸಬೇಕೆನ್ನುವುದು, ಗುಂಪು ತಂತ್ರಗಳನ್ನು ಹೇಗೆ ಬಳಸಿಕೊಳ್ಳಬೇಕು, ಹೀಗೆ ಗುಂಪು ಕಲಿಕೆ ಮುಖಾಂತರ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡುವುದು ಕೂಡ ಮುಖ್ಯವಾಗಿರುತ್ತದೆ. ಹಾಗೆಯೇ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಸರಿಯಾಗಿ ನಿರ್ವಹಿಸುವಂತೆ ಅವಕಾಶ ಕಲ್ಪಿಸಿಕೊಡುವುದು. ಶಾಲೆಯಲ್ಲಿ ನಡೆಯುವ ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ನಾಯಕತ್ವವನ್ನು ಬೆಳೆಸಿಕೊಳ್ಳಲು ದಾರಿಮಾಡಿಕೊಡುತ್ತವೆ. ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಈ ಕ್ಷೇತ್ರದಲ್ಲಿ ನಾಯಕತ್ವವನ್ನು ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ. ಹೀಗೆ ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಸಮಗ್ರ ಅವಕಾಶ ಕಲ್ಪಿಸಿ ಶಾಲಾ ಜೀವನದಲ್ಲಿ ಸಮಯವನ್ನು ಸರಿಯಾದ ರೀತಿಯಲ್ಲಿ ಬೆಳೆಸಕೊಂಡು ಒಳ್ಳೆಯ ನಾಯಕನಾಗಲು ಅನುಕೂಲವಾಗುತ್ತವೆ. ವಿದ್ಯಾರ್ಥಿಗಳಿಗೆ ನಾಯಕರನ್ನಾಗಿ ಮಾಡಲು ಗುಂಪು ಚಟುವಟಿಕೆಗಳು ಕೂಡ ಸಹಾಯಕವಾಗುತ್ತವೆ. ಇದು ನಾಯಕತ್ವ ಹಂಚಿಕೆ, ಜವಾಬ್ದಾರಿಯನ್ನು ಊಹಿಸಿಕೊಳ್ಳುವುದಕ್ಕೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಸಲಹೆಯನ್ನು ನೀಡಿದಂತಾಗುತ್ತದೆ. ತಂಡದ ಕಾರ್ಯದ ನಂತರ ಯಾವ ವಿದ್ಯಾರ್ಥಿ ಹೇಗೆ ತಂಡದ ಕಾರ್ಯದಲ್ಲಿ ಭಾಗಹಿಸುತ್ತಾನೆ ಎಂಬುದನ್ನು ತಿಳಿಯಬಹುದು. ಇದರೊಂದಿಗೆ ತಂಡದ ಸದಸ್ಯರು ಹೇಗೆ ಈ ವಿಷಯವನ್ನು ಪೂರ್ಣಗೊಳಿಸುವರು, ಸನ್ನವೇಶಗಳನ್ನು ಹೇಗೆ ಸಕಾರಾತ್ಮಕವಾಗಿ ಸ್ವೀಕರಿಸುವರು ಎಂಬುದನ್ನು ತಿಳಿದು ನಾಯಕತ್ವವನ್ನು ವಹಿಸಿಕೊಳ್ಳಲು ಅನುಕೂಲವಾಗುತ್ತದೆ.

ಒಳ್ಳೆಯ ನಾಯಕರನ್ನು ತಯಾರು ಮಾಡುವಲ್ಲಿ ಶಾಲೆಯು ವಿದ್ಯಾರ್ಥಿಗಳಿಗಾಗಿ ಅಣಕು ಸಂಸತ್ತನ್ನು ಹಮ್ಮಿಕೊಳ್ಳಬಹುದು. ಯಾವುದೇ ಒಂದು ವಿಷಯವನ್ನು ತೆಗೆದುಕೊಂಡು ಅದಕ್ಕನುಗುಣವಾಗಿ ಅವರಲ್ಲಿ ಶಿಸ್ತಿನ ಪರಿಕಲ್ಪನೆ, ಶಿಸ್ತಿನ ಬಗ್ಗೆ ಉತ್ತಮ ಹವ್ಯಾಸಗಳನ್ನು ಬೆಳೆಸುವುದು, ಸಹಿಷ್ಣುತೆ, ಸಹೋದರತೆ, ಸಮಭಾವ ಇತ್ಯಾದಿ ಅಂಶಗಳನ್ನು ವಿದ್ಯಾರ್ಥಿ ಸಮುದಾಯದಲ್ಲಿ ಬೆಳೆಸುವುದರಿಂದ ಪ್ರತಿನಿಧಿ ಸಂಘಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಅದಲ್ಲದೆ ಪ್ರಜಾಸತ್ತಾತ್ಮಕ ಕಾರ್ಯಕ್ರಮದ ಅರಿವು ವಿದ್ಯಾರ್ಥಿಗಳಲ್ಲಿ ಮೂಡುವಂತೆ ಮತ್ತು ಅವರಲ್ಲಿ ಒಳ್ಳೆಯ ನಾಯಕತ್ವದ ಗುಣಗಳನ್ನು ಬೆಳೆಸಲು ಸಹಾಯಕವಾಗುತ್ತದೆ.

**–ಡಾ. ರಾಜ್‌ಕುಮಾರ್ ಆರ್.ಮದನ್‌ಕರ್**

## ನಾಯಕತ್ವದ ಮೌಲ್ಯಮಾಪನ

ಪ್ರತಿಯೊಂದು ಗುಂಪಿಗೂ ಅದರ ಉದ್ದೇಶಗಳನ್ನು ಸಾಧಿಸಲು ಗುಂಪಿನ ಒಬ್ಬ ಸಮರ್ಥ ಸದಸ್ಯನ ಮಾರ್ಗದರ್ಶನ ಅವಶ್ಯಕತೆ ಇರುತ್ತದೆ. ಇಂತಹ ವ್ಯಕ್ತಿಯನ್ನು ನಾವು 'ನಾಯಕ' ಎಂದು ಕರೆಯುತ್ತೇವೆ. ಗುಂಪನ್ನು ಅದರ ಗುರಿಯೆಡೆಗೆ ಕೊಂಡೊಯ್ಯಲು ಅವನು ಕಾರ್ಯ ನಿರ್ವಹಿಸುವ ಶೈಲಿಯನ್ನು 'ನಾಯಕತ್ವ' ಎಂದು ಕರೆಯುತ್ತಾರೆ. ನಾಯಕನು ಒಂದು ಸಂಘಟನೆಯ ಅಥವಾ ಸಂಸ್ಥೆಯ ಒಟ್ಟಾರೆ ದಕ್ಷತೆಯ ಮೇಲೆ ವಿಶೇಷ ಮಹತ್ವಪೂರ್ಣ ಪ್ರಭಾವವನ್ನು ಬೀರುವವನಾಗಿರುತ್ತಾನೆ. ಒಂದು ಸಂಸ್ಥೆಯ ಸಮೂಹಗಳ ಬಗೆಗೆ ಬೇರೆ ಬೇರೆ ಗುರಿಗಳು ಮತ್ತು ಉದ್ದೇಶಗಳು ಸಾಧನೆಯಾಗುವ ಅವಕಾಶಗಳು ಉತ್ತಮ ನಾಯಕತ್ವದ ಅಡಿಯಲ್ಲಿ ಹೆಚ್ಚಿರುತ್ತವೆ. ಒಂದು ವೇಳೆ ಆ ಸಂಸ್ಥೆಯ ನಾಯಕನು ಸಹಕರಿಸದಿದ್ದರೆ ಇಟ್ಟುಕೊಂಡಂತಹ ಗುರಿಗಳು ಮತ್ತು ಉದ್ದೇಶಗಳ ತಲುಪುವುದಕ್ಕೆ ಸಾಧ್ಯವಿಲ್ಲ. ರಾಲ್ಫ್ ಎಂ. ಸ್ಟೋಗಿಲ್‌ರು ನಾಯಕತ್ವವನ್ನು "ಗುಂಪಿನ ಸದಸ್ಯರ ನಡುವೆ ಕಾರ್ಯಕಾರಿ ಸಂಬಂಧವನ್ನು ಒಳಗೊಳ್ಳುವದಾಗಿದ್ದು ಅದರಲ್ಲಿ ನಾಯಕನ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ಸಹಕಾರಿ ಕಾರ್ಯವನ್ನು ಯಶಸ್ವಿಯಾಗಿ ಸಂಪೂರ್ಣಗೊಳಿಸುವ ಅವನ ಸಾಮರ್ಥ್ಯವನ್ನು ಪ್ರಕ್ಷೇಪಿಸುವ ಮೂಲಕ ಮಾನ್ಯತೆಯನ್ನು ಗಳಿಸಿಕೊಳ್ಳುವುದಾಗಿದೆ" ಎಂದು ಹೇಳಿದ್ದಾರೆ. ಶಿಕ್ಷಣದಲ್ಲಿ ನಾಯಕತ್ವ ಎಂಬುದು ಸರ್ವವ್ಯಾಪಿಯಾಗಿದ್ದು ನಾಯಕತ್ವ ಮತ್ತು ಮೌಲ್ಯೀಕರಣ ಇಂದು ಶಿಕ್ಷಣದಲ್ಲಿ ಹೆಚ್ಚಿನ ಸ್ಥಾನ ಪಡೆದಿದೆ. ನಾಯಕತ್ವವು ಹೇಗೆ ವಿಕಾಸವಾಗುತ್ತಾ ಹೋಗುತ್ತದೆಯೋ ಹಾಗೆ ಅದರ ಮೌಲ್ಯೀಕರಣ ಮಾಡುವುದು ತುಂಬ ಅವಶ್ಯಕವಾಗಿದೆ.

**ನಾಯಕತ್ವದ ಮೌಲ್ಯಮಾಪನದ ಅವಶ್ಯಕತೆ:** ಭವಿಷ್ಯದ ದಿನಗಳಲ್ಲಿ ನಮಗೆ ಯಾವ ರೀತಿಯ ಶೈಕ್ಷಣಿಕ ನಾಯಕತ್ವದ ಅಗತ್ಯವಿದೆ,

Digitised by Bharatavani, CIIL

ನಾಯಕರ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಲು ಯಾವ ಬಗೆಯ ವ್ಯಕ್ತಿಗಳ ಅವಶ್ಯಕತೆ ಇದೆ ಎಂಬುದನ್ನು ತಿಳಿಯಬೇಕು. ಈ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘಟನೆಗಳು ಈ ಪ್ರಶ್ನೆಗೆ ಎರಡು ರೀತಿಯಲ್ಲಿ ಉತ್ತರ ಹುಡುಕುತ್ತವೆ. ಮೊದಲನೆ ಮಾರ್ಗವೆಂದರೆ ನಾಯಕನಾಗುವವನಿಗೆ ಇರಬೇಕಾದ ವೈಯಕ್ತಿಕ ಗುಣಲಕ್ಷಣಗಳನ್ನು ಸ್ಪಷ್ಟಪಡಿಸುತ್ತಿದೆ. ಅಂದರೆ ನಾಯಕನಾಗುವವನಿಗೆ ಬುದ್ಧಿವಂತಿಕೆ, ವ್ಯಕ್ತಿತ್ವ, ನಿರ್ದಿಷ್ಟ ಜ್ಞಾನಕ್ಕೆ ಹೆಚ್ಚು ಒತ್ತು ನೀಡುವುದು ಇವುಗಳನ್ನು ಪಡೆದುಕೊಳ್ಳುವುದು ಮುಖ್ಯ ಎಂದು ತಿಳಿಸಿದೆ. ಯಾವುದೇ ನಾಯಕತ್ವ ನಿರ್ದಿಷ್ಟವಾಗಲು ಸಾಮಾನ್ಯ ನಾಯಕತ್ವದಂತೆ ಶೈಕ್ಷಣಿಕ ನಾಯಕತ್ವದಲ್ಲಿಯೂ ಒಳ್ಳೆಯ ಗುಣಲಕ್ಷಣಗಳನ್ನು ಹೊಂದುವುದು ಅವಶ್ಯಕ. ಈ ರೀತಿಯಾಗಿ ಎಲ್ಲಾ ಗುಣಲಕ್ಷಣಗಳನ್ನು ಮೌಲ್ಯೀಕರಿಸುವುದು, ಪರಿಶೀಲಿಸುವುದು ಸುಲಭವಾದ ಕೆಲಸವಾಗಲಾರದು. ಇಂತಹ ಮೌಲ್ಯೀಕರಣಕ್ಕೆ ಅನೇಕ ವಿಧಾನಗಳನ್ನು ಮತ್ತು ತಂತ್ರಗಳನ್ನು ಬಳಸಿಕೊಳ್ಳುವುದು ಅವಶ್ಯವಾಗಿದೆ. ಅವುಗಳಲ್ಲಿ ಮುಖ್ಯವಾದವು ಈ ಕೆಳಗಿನಂತಿವೆ:

**1. ಪ್ರಶ್ನಾವಳಿಗಳು:** ನಾಯಕತ್ವದ ಬಗ್ಗೆ, ನಾಯಕತ್ವದ ನಮೂನೆಯ ಬಗ್ಗೆ, ಪ್ರಶ್ನಾವಳಿಗಳನ್ನು ಬಳಸಿ ಅಳೆಯ ಬಹುದಾಗಿದೆ. ಇವುಗಳೇ 'ನಾಯಕತ್ವ ವರ್ತನಾ ಪ್ರಶ್ನಾವಳಿ' ಇವುಗಳನ್ನು ಕೊಲಂಬಿಯಾ ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸಿದೆ. ಇದು ಹತ್ತು ಮಾಪನದಲ್ಲಿ 50 ವಿವಿಧ ಅಂಶಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ – ಕೇಂದ್ರ ಬಿಂದು, ನಂಬಿಕೆಗೆ ಅರ್ಹ, ಸಂವಹನ ಕೌಶಲ, ಇತರರಿಗೆ ಗೌರವ ತೋರಿಸುವುದು, ಕೆಳಹಂತದ ಕಾರ್ಯಾಚರಣೆ, ಅಧಿಕಾರದ ಸದುಪಯೋಗ, ದೀರ್ಘಕಾಲಿಕ ಕ್ರಮಗಳು, ಸಂಘಟನಾತ್ಮಕ ನಾಯಕತ್ವ ಮತ್ತು ಸಾಂಸ್ಕೃತಿಕ ನಾಯಕತ್ವ. ಈ ಸಾಧನವನ್ನು ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ರಚಿಸಲಾಗಿದ್ದು ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಪ್ರಾಂಶುಪಾಲರ ಕುರಿತು ಇರುತ್ತದೆ. ಶೈಕ್ಷಣಿಕ ನಾಯಕತ್ವಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಲಾಗಿದೆ.

**2. ವ್ಯಕ್ತಿ ಅಧ್ಯಯನ:** ಈ ವಿಧಾನವು ಒಬ್ಬ ವ್ಯಕ್ತಿ ಹಾಗೂ ಆತನ ಪರಿಸರದೊಂದಿಗೆ ಆತ ಹೊಂದಿರುವ ಸಂಬಂಧವನ್ನು ಕುರಿತು ಸಂಗ್ರಹಿಸಿರುವ ಮಾಹಿತಿಯನ್ನು ಅರ್ಥೈಸುತ್ತದೆ ಮತ್ತು ಸಂಯೋಜಿಸುತ್ತದೆ. ಇದು ವ್ಯಕ್ತಿಯ ನಡೆವಳಿಕೆ, ವ್ಯಕ್ತಿತ್ವದ ಒಲವು ಮತ್ತು ಹೊಂದಾಣಿಕೆಗಳಲ್ಲಿ ಕಂಡುಬರುವ ಸಮಸ್ಯೆಗಳು ಇತ್ಯಾದಿಗಳ ಸ್ವಭಾವ ಮತ್ತು ಕಾರಣಗಳನ್ನು ಅರ್ಥ ಮಾಡಿಕೊಳ್ಳಲು ಸಹಕರಿಸುತ್ತದೆ. ಇದು ಪ್ರತಿ ವ್ಯಕ್ತಿಯ ಇತಿಹಾಸವನ್ನು ಪರಿಗಣಿಸಿ ವ್ಯಕ್ತಿಯ ಬೆಳವಣಿಗೆಯನ್ನು ಕ್ರಮಬದ್ಧವಾಗಿ ಗುರುತಿಸುತ್ತದೆ. ನೇರ ಅವಲೋಕನದೊಂದಿಗೆ ಪ್ರಾರಂಭವಾಗಿ, ಅಂಕಿ ಅಂಶಗಳ ಅರ್ಥ ವಿವರಣೆಯ ಸಹಾಯದಿಂದ ಪರಿಹಾರ ದೊರೆಯುವುದರೊಂದಿಗೆ ಕೊನೆಗೊಳ್ಳುತ್ತದೆ.

ವ್ಯಕ್ತಿ ಅಧ್ಯಯನವು ಜನಪ್ರಿಯ ಗುಣಾತ್ಮಕ ವಿಶ್ಲೇಷಣೆಯಾಗಿದ್ದು, ಒಬ್ಬ ವ್ಯಕ್ತಿ, ಕುಟುಂಬ, ಸಂಘ, ಸಾಂಸ್ಕೃತಿಕ ಗುಂಪು ಅಥವಾ ಸಮುದಾಯವನ್ನು ಅರಿತು ಅಧ್ಯಯನವನ್ನು ಒಳಗೊಂಡಿದೆ. ಇದು ಮಿತಿಯನ್ನು ಆಳವಾಗಿ ಅಧ್ಯಯನ ಮಾಡುತ್ತದೇ ಹೊರತು ವಿಸ್ತಾರವಾಗಿ ಅಲ್ಲ. ಇದು ಮಿತವಾದ ಘಟಕಗಳ ಪರಿಸ್ಥಿತಿಗಳನ್ನು ಮತ್ತು ಅವುಗಳ ಪರಸ್ಪರ ಸಂಬಂಧವನ್ನು ವಿಶ್ಲೇಷಣೆ ಮಾಡುತ್ತದೆ. ಇದರ ಮುಖ್ಯ ಉದ್ದೇಶವೆಂದರೆ ಒಂದು ನಿರ್ದಿಷ್ಟ ಘಟಕದ ಮನೋಪ್ರವೃತ್ತಿಗೆ ಕಾರಣವಾಗುವ ಅಂಶಗಳನ್ನು ಗುರುತಿಸುವುದಾಗಿದೆ.

**3. ದರ್ಜಾಮಾಪನ:** ದರ್ಜಾಮಾಪನಗಳು ವ್ಯಕ್ತಿಯ ಗುಣಲಕ್ಷಣಗಳನ್ನು ವಸ್ತುನಿಷ್ಠವಾಗಿ ಮತ್ತು ಕ್ರಮಬದ್ಧವಾಗಿ ಅವಲೋಕನ ಮಾಡಲು ಸಹಕರಿಸುವುದಲ್ಲದೆ ಅದನ್ನು ದಾಖಲು ಮಾಡಲು ಅವಕಾಶ ಮಾಡುತ್ತದೆ. ದರ್ಜಾ ಮಾಪನದಲ್ಲಿ ಅನೇಕ ವಿಧಗಳಿದ್ದು ಎಲ್ಲಾ ಮಾಪನಗಳು ಹೆಚ್ಚು ಕಡಿಮೆ ಒಂದೇ ರೀತಿಯದಾಗಿದ್ದು ಅವಲೋಕನದ ಮೂಲಕ ವಸ್ತುಗಳನ್ನು ಅಥವಾ ವ್ಯಕ್ತಿಯ ಕೊಡುಗೆ ಹಾಗೂ ಕೊನೆಯಲ್ಲಿ ಅಂತಹ ವಸ್ತುಗಳಿಗೆ ಅಂಕಿ ಅಂಶಗಳನ್ನು ಕೊಡುವುದಕ್ಕೆ ಪ್ರಯತ್ನಿಸುತ್ತದೆ. ಸಾಮಾನ್ಯವಾಗಿ ಆಯ್ಕೆ ಮಾಡಿದ ವಸ್ತು ಅಥವಾ ವ್ಯಕ್ತಿಯ ಬಗ್ಗೆ ಗುಣಾತ್ಮಕ ಮತ್ತು ಪರಿಮಾಣಾತ್ಮಕ ತೀರ್ಮಾನ ಕೈಗೊಳ್ಳಲು 5 ರಿಂದ 7 ವಿಭಾಗಗಳನ್ನು ಮಾಡಬಹುದು. ಉದಾ: (1) ಶ್ರೇಷ್ಠವಾದದ್ದು, (2) ಒಳ್ಳೆಯ, (3) ಸಾಧಾರಣದಿಂದ ಮೇಲಿನ ಮಟ್ಟದ್ದು, (4) ಸಾಧಾರಣ, (5) ಕನಿಷ್ಠವಾದದ್ದು ಹೀಗೆ 5 ಅಥವಾ 7 ವಿಭಾಗಗಳುಳ್ಳ ಯಾವುದೇ ಒಂದು ದರ್ಜಾಮಾಪನ ಸಿದ್ಧಪಡಿಸುವುದು. ಅವುಗಳಲ್ಲಿ ನಾಯಕನಿಗೆ ಸಂಬಂಧಿಸಿದ ಹಲವಾರು ಪ್ರಶ್ನೆಗಳು ಒಳಗೊಂಡಿರುತ್ತವೆ. ಹೀಗೆ ಸಿದ್ಧಪಡಿಸಿದ ದರ್ಜಾಮಾಪನದಿಂದ ನಾಯಕತ್ವವನ್ನು ಮಾಪನ ಮಾಡುವಲ್ಲಿ ಸಹಾಯಕವಾಗುತ್ತದೆ.

**4. ಸಂದರ್ಶನ:** ಇದೊಂದು ಸಂವಹನ ಪ್ರಕ್ರಿಯೆಯಾಗಿದ್ದು ಸಂದರ್ಶಕ ಹಾಗೂ ಸಂದರ್ಶಿತ ಇವರಿಬ್ಬರ ನಡುವೆ ನಡೆಯುವ ಪ್ರಕ್ರಿಯೆಯಾಗಿದೆ. ಉತ್ತಮ ಸಂದರ್ಶನ ಸಂದರ್ಶಕ ನೀಡುವ ಪ್ರೇರಣೆ ಹಾಗೂ ಸಂದರ್ಶಿತನು ವ್ಯಕ್ತಪಡಿಸುವ ಉತ್ತಮ ಅಂಶಗಳ ಹಿನ್ನೆಲೆಯಲ್ಲಿ ರೂಪಿತವಾಗುತ್ತದೆ. ಸಂದರ್ಶನ ತಂತ್ರವು ಪ್ರಾಯೋಗಿಕ ಹಾಗೂ ಮನೋವೈಜ್ಞಾನಿಕ ವಾತಾವರಣದ ಮೇಲೆ ರೂಪಿತವಾಗುತ್ತದೆ. ಇತರ ತಂತ್ರಗಳಿಗಿಂತ ಸಂದರ್ಶನ ಉಪಕರಣವು ಹೆಚ್ಚು ನಮ್ಯವಾಗಿದ್ದು ಹೆಚ್ಚು ವಿಷಯ ಸಂಗ್ರಹಿಸುವ, ವಿವರಣೆಗೆ ಅವಕಾಶವಿರುವ, ಸಂದರ್ಭಕ್ಕೆ ಸಂಬಂಧಿಸಿದಂತೆ ಹೊಂದಿಕೊಂಡು ಬದಲಾಗಬಲ್ಲ ತಂತ್ರವಾಗಿರುವುದರಿಂದ ಹೆಚ್ಚು ವ್ಯಾಪಕತೆಯೊಂದಿಗೆ ಬಳಸಬಹುದಾಗಿದೆ. ಹೀಗೆ ಸಂದರ್ಶನ ತಂತ್ರವನ್ನು ಬಳಸಿಕೊಳ್ಳುವುದರಿಂದ ನಾಯಕನ ನಿಜವಾದ ಮಾಹಿತಿಯನ್ನು ನೇರವಾಗಿ ಸಂಗ್ರಹಿಸಬಹುದು. ಇದರಿಂದ ಅವನ ನಾಯಕತ್ವದ ವಿವರವಾದ ಮಾಹಿತಿಯನ್ನು ತಿಳಿದುಕೊಂಡು ಎಷ್ಟರ ಮಟ್ಟಿಗೆ ಅವನು ಪರಿಪೂರ್ಣ ನಾಯಕತ್ವದ ಗುಣಗಳನ್ನು ಅಳವಡಿಸಿಕೊಂಡಿದ್ದಾನೆ ಎನ್ನುವುದನ್ನು ತಿಳಿದುಕೊಳ್ಳಲು ಇಂತಹ ಸಂದರ್ಶನಗಳು ಮೇಲಿಂದ ಮೇಲೆ ಸಹಾಯಕವಾಗುತ್ತವೆ.

Digitised by Bharatavani, CIIL

**5. ಸ್ವಯಂ ಮೌಲ್ಯಮಾಪನ:** ನಾಯಕನು ತಾನು ಕೈಗೊಂಡಿರುವ ಕಾರ್ಯಗಳು ಹಾಗೂ ಆಡಳಿತದ ಜವಾಬ್ದಾರಿಗಳ ಬಗ್ಗೆ ಎಷ್ಟೋ ಸಲ ತನ್ನಷ್ಟಕ್ಕೆ ತಾನೇ ಮೌಲ್ಯಮಾಪನ ಮಾಡಿಕೊಳ್ಳುವುದು ಬಹಳಷ್ಟು ಸಂದರ್ಭಗಳಲ್ಲಿ ಅನುಕೂಲವಾಗುತ್ತದೆ. ಇದರಿಂದ ಅವನು ಮುಂದೆ ಮಾಡಬೇಕಾದ ಕಾರ್ಯಗಳ ಬಗ್ಗೆ ತಿಳಿದುಕೊಳ್ಳಲು, ಆಡಳಿತದಲ್ಲಿ ನಡೆದ ತಪ್ಪುಗಳನ್ನು ತಿದ್ದಿಕೊಳ್ಳಲು ಸಹಾಯವಾಗುತ್ತದೆ. ಇದಕ್ಕೆ ಹೊರಗಿನ ಯಾವುದೇ ವ್ಯಕ್ತಿಯ ಒತ್ತಡವು ಇರುವುದಿಲ್ಲ. ಸ್ವಯಂ ಮಾಪನ ಮಡಿಕೊಳ್ಳಲಿಕ್ಕೆ ಹಲವಾರು ವಿಧದ ಸ್ವಯಂ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ಸ್ವ ಮೌಲ್ಯಮಾಪನ ಸಾಧನಗಳಲ್ಲಿ ತಾಳೆಪಟ್ಟಿಗಳು ಇದ್ದು ಭಾಗವಹಿಸುವವರು ಇವುಗಳಿಗೆ ಪ್ರತಿಕ್ರಯಿಸುವಂತೆ ಕೇಳಲಾಗುತ್ತದೆ. ಕೊನೆಯಲ್ಲಿ ಸ್ವ ಮೌಲ್ಯಮಾಪನದಿಂದ ನಾಯಕತ್ವದ ಕೌಶಲದ ಬಗ್ಗೆ ಆಲೋಚಿಸುವುದು ಸಾಧ್ಯ. ಆದರೆ ಸಹೋದ್ಯೋಗಿಗಳಿಂದ ಯಾವುದೇ ಪ್ರತಿಪುಷ್ಠಿ ಇರುವುದಿಲ್ಲ. ಇದು ಕೂಡಾ ಇತರ ತಂತ್ರಗಳಿಗಿಂತ ಉತ್ತಮವಾದ ತಂತ್ರವಾಗಿದೆ.

**6. ಸಾಂದರ್ಭಿಕ ಪರೀಕ್ಷಣಗಳು:** ಒಂದು ಸನ್ನಿವೇಶಕ್ಕೆ ಸಂಬಂಧಿಸಿದಂತೆ ಪರೀಕ್ಷಕನಿಗೆ ನೀಡುವುದೇ ಸಾಂದರ್ಭಿಕ ಪರೀಕ್ಷೆಗಳು, ಇದರಿಂದ ಆ ನಿರ್ದಿಷ್ಟ ಸಮಯದಲ್ಲಿ ದೊರೆಯುವ ಹಲವಾರು ವಿಚಾರಗಳು ಹೆಚ್ಚು ಉಪಯುಕ್ತವಾಗುತ್ತದೆ. ನೈಜ ಜೀವನಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯ ಸಾಮರ್ಥ್ಯವನ್ನು ಅಳೆಯಬಲ್ಲಂತಹ ಪರೀಕ್ಷಣವನ್ನು ಸಾಂದರ್ಭಿಕ ಪರೀಕ್ಷಣ ಎಂದು ಕರೆಯಲಾಗಿದೆ. ಅಂದರೆ ವ್ಯಕ್ತಿಯ ಭಾವನಾತ್ಮಕ ಮನೋಧೋರಣೆ, ವರ್ತನಾತ್ಮಕ ಪ್ರತಿಕ್ರಿಯೆಗಳು ಇವೆಲ್ಲವನ್ನು ಅಸಲಿ ಜೀವನಕ್ಕೆ ಸಮೀಕರಿಸಿ ಅಳೆಯಬಲ್ಲಂತಹವು. ಇದನ್ನು ಸಾಂದರ್ಭಿಕ ಪರೀಕ್ಷಣ ಎನ್ನಲಾಗಿದೆ. (ಉದಾ: ವಾಹನ ಚಾಲಕನಿಗೆ ಪರವಾನಗಿ ನೀಡುವ ಪರೀಕ್ಷೆ). ಪ್ರಥಮವಾಗಿ ಸಾಂದರ್ಭಿಕ ಪರೀಕ್ಷೆಗಳನ್ನು ಎರಡನೇ ಮಹಾಯುದ್ಧದಲ್ಲಿ ಬಳಸಲಾಯಿತು. ಆಫೀಸ್ ಆಫ್ ಸ್ಟ್ರಾಟಜಿಕ್ ಸರ್ವೀಸ್ – ಇದು ಯುದ್ಧದ ಸಮಯದಲ್ಲಿ ಅಭ್ಯರ್ಥಿಗಳು ಸೈನ್ಯದ ಒತ್ತಡ ಸಹಿಸಬಲ್ಲರೆ, ಮಿಲಿಟರಿ ಬೇಹುಗಾರಿಕೆ ಬಗ್ಗೆ ಅಭ್ಯರ್ಥಿಗಳಲ್ಲಿ ಇರುವ ಸಾಮರ್ಥ್ಯ ಅಳೆಯಬಲ್ಲ ಶಕ್ತಿ ಪರೀಕ್ಷೆಗಾಗಿ ಸಾಂದರ್ಭಿಕ ಪರೀಕ್ಷೆ ಬಳಸಲಾಯಿತು. ಅದೇ ರೀತಿ ಇಲ್ಲಿ ನಾಯಕನು ಒಂದು ಸಂದರ್ಭವನ್ನು ಹೇಗೆ ಎದುರಿಸಲು ಸಶಕ್ತನಾಗಿದ್ದಾನೆ ಎಂಬುದನ್ನು ಪತ್ತೆ ಹಚ್ಚಲು, ಹಾಗೂ ನಾಯಕನ ಆಸಕ್ತಿ, ಮನೋಭಾವ, ವರ್ತನೆ ಇತ್ಯಾದ ಹೇಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಲು ಈ ರೀತಿಯಾದ ಸಾಂದರ್ಭಿಕ ಪರೀಕ್ಷೆಗಳು ಬಳಸಲಾಗುತ್ತದೆ.

ಒಟ್ಟಿನಲ್ಲಿ ಒಬ್ಬ ನಾಯಕ ತನ್ನ ನಾಯಕತ್ವವನ್ನು ಸಮರ್ಥವಾಗಿ ಮುಂದುವರಿಸಿಕೊಂಡು ಹೋಗಲು ಎಷ್ಟರ ಮಟ್ಟಿಗೆ ಸಮಂಜಸ ಮತ್ತು ಸೂಕ್ತ ವ್ಯಕ್ತಿಯಾಗಿದ್ದಾನೆ ಎಂದು ತಿಳಿದುಕೊಳ್ಳಲು ಅದಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ/ಅಳತೆ ಮಾಡಲು ಮೇಲೆ ಹೇಳಿದ ಯಾವುದಾದರೂ ತಂತ್ರ ಅಥವಾ ವಿಧಾನವನ್ನು ಬಳಸಿ ಕೊಳ್ಳಬಹುದು. ಇವುಗಳ ಜೊತೆಗೆ ಸಾಧ್ಯವಾದರೆ ಸಾಮರ್ಥ್ಯ ನಿಷ್ಕರ್ಷೆ, ಮನೋಮಿತಿ ಪರೀಕ್ಷಣಗಳನ್ನು ನಾಯಕತ್ವದ ಅಂಶಗಳಿಗೆ ಅಗತ್ಯ ಮಾಹಿತಿ ಪಡೆಯಲು, ನಾಯಕತ್ವದ ಗುಣ ತಿಳಿಯಲು ವಿವಿಧ ರೀತಿಯ ಪರೀಕ್ಷಣಗಳು ಸಹಾಯಕವಾಗಿವೆ.

–ಡಾ. ರಾಜ್‌ಕುಮಾರ್ ಆರ್.ಮದನ್‌ಕರ್

## ನಿಯಂತ್ರಣ ಕೇಂದ್ರ

ಕೆಲವು ವ್ಯಕ್ತಿಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಂಡು ಅವರಿಗೆ ನಿಮ್ಮ ಜೀವನದಲ್ಲಿನ ಸಫಲತೆಗಳಿಗೆ ಅಥವಾ ವಿಫಲತೆಗಳಿಗೆ ಯಾವ ಅಂಶ ಕಾರಣೀಭೂತವಾಗಿದೆ ಎಂದು ಪ್ರಶ್ನಿಸಿ ನಮಗೆ ಈ ಪ್ರಶ್ನೆಗೆ ಮೂರು ರೀತಿಯಲ್ಲಿ ಉತ್ತರ ದೊರೆಯುವ ಸಾಧ್ಯತೆ ಇದೆ. ಕೆಲವರು ತಮ್ಮ ಸಫಲತೆ ತಮ್ಮ ಸಾಮರ್ಥ್ಯ, ಪ್ರಯತ್ನ, ಶ್ರಮದಿಂದ ದೊರೆತಿದೆ ಎನ್ನುತ್ತಾರೆ, ಹಾಗೆಯೇ ತಮ್ಮ ವಿಫಲತೆಗೆ ತಮ್ಮ ಮಿತಿಗಳೇ ಕಾರಣ, ತಾವು ಸಾಕಷ್ಟು ಶ್ರಮ ವಹಿಸಿ ಪ್ರಯತ್ನಿಸಲಿಲ್ಲ ಎನ್ನಬಹುದು. ಇನ್ನು ಕೆಲವರು ತಮ್ಮ ಸಫಲತೆಗೆ ಅಥವಾ ವಿಫಲತೆಗೆ ಯಾವುದೇ ಕಾಣದ ಕೈ ಅಥವಾ ವಿಧಿ, ದೇವರು, ಗ್ರಹಗತಿ ಅಥವಾ ಹೊರಗಣ ಪರಿಸರದಲ್ಲಿನ ಪರಿಸ್ಥಿತಿಗಳು, ವ್ಯಕ್ತಿಗಳು ಕಾರಣ ಎಂದು ಉತ್ತರಿಸಬಹುದು. ಇನ್ನು ಕೆಲವರು ಸಫಲತೆಗೆ ತಾವೇ ಕಾರಣವೆಂದೂ, ವಿಫಲತೆಗೆ ತಮ್ಮ ಕೈ ಮೀರಿದ ಹೊರಗಣ ಅಂಶಗಳು ಕಾರಣ ಎಂದು ಉತ್ತರಿಸಬಹುದು. ಹೀಗೆ ವ್ಯಕ್ತಿಗಳು ತಮ್ಮ ಸಫಲತೆ ಅಥವಾ ವಿಫಲತೆಗೆ ಕಾರಣವಾದ ಅಂಶಗಳ ನಿಯಂತ್ರಣದ ಜವಾಬ್ದಾರಿ ಯಾರದು ಎಂದು ನಂಬುವುದರಲ್ಲಿ ಬೇರೆ ಬೇರೆ ನಿಲುವು ಹೊಂದಿರುತ್ತಾರೆಂದು ನಿಮಗೆ ತಿಳಿಯುತ್ತದೆ.

ವ್ಯಕ್ತಿಗಳಲ್ಲಿ ಕಂಡು ಬರುವ ಈ ಪ್ರವೃತ್ತಿಯನ್ನು ಆಧಾರ ಕೇಂದ್ರವಾಗಿಟ್ಟುಕೊಂಡು ಮನೋವಿಜ್ಞಾನಿ ಜೂಲಿಯಸ್.ಜ.ರಾಟರ್ 1954ರಲ್ಲಿ ತಮ್ಮ ಸಾಮಾಜಿಕ ಕಲಿಕಾ ವ್ಯಕ್ತಿತ್ವ ಸಿದ್ಧಾಂತವನ್ನು ರೂಪಿಸಿದ್ದಾರೆ. ವ್ಯಕ್ತಿಗಳು ತಮ್ಮ ಭವಿಷ್ಯದ (ಸಫಲತೆ/ವಿಫಲತೆಯ) ಸ್ಥಾನ ಎಲ್ಲಿದೆ ಎಂದು ನಂಬುವುದನ್ನು ಆಧಾರವಾಗಿಟ್ಟುಕೊಂಡು ರೂಪಿಸಿದ ನಿಯಂತ್ರಣ ಕೇಂದ್ರದ (ಲೋಕಸ್ ಆಫ್ ಕಂಟ್ರೋಲ್) ಪರಿಕಲ್ಪನೆ ರಾಟರ್‌ನ ವ್ಯಕ್ತಿತ್ವ ಸಿದ್ಧಾಂತದ ಮುಖ್ಯ ಪರಿಕಲ್ಪನೆಯಾಗಿದೆ. ರಾಟರನು ತಮಗೂ ಮೊದಲು ಜನರು ಬೇರೆಯವರ ವರ್ತನೆಗಳಿಗೆ ಪ್ರೇರಣೆಗಳನ್ನು ಹೇಗೆ ಊಹಿಸಿ ಆರೋಪಿಸುತ್ತಾರೆ ಎನ್ನುವುದನ್ನು ಅರ್ಥೈಸಲು ಫ್ರಿಟ್ಜ್ ಹೈಡರ್ ಪ್ರತಿಪಾದಿಸಿದ್ದ ಆರೋಪಣ ಸಿದ್ಧಾಂತದಿಂದ (ಅಟ್ರಿಬ್ಯೂಶನ್ ಥಿಯರಿ) ಪ್ರಭಾವಿತರಾಗಿದ್ದಾರೆ. ಹೈಡರನ ಆರೋಪಣ ಸಿದ್ಧಾಂತ ಬೇರೆಯವರ ಪ್ರೇರಣೆಗಳನ್ನು ಊಹಿಸಿಕೊಳ್ಳುವುದಕ್ಕೆ ಸಂಬಂಧಿಸಿದ್ದರೆ, ರಾಟರನ ಸಿದ್ಧಾಂತ ತಮ್ಮ ಆಗುಹೋಗುಗಳನ್ನು ನಿಯಂತ್ರಿಸುವ ಕೇಂದ್ರದ ಬಗ್ಗೆ ಇಟ್ಟಿರುವ ನಂಬಿಕೆಯಲ್ಲಿ ವ್ಯಕ್ತಿ ವ್ಯತ್ಯಾಸಕ್ಕೆ ಸಂಬಂಧಿಸಿದೆ. ರಾಟರನ ವಿದ್ಯಾರ್ಥಿ ಫ.ಊ. ಜೇಮ್ಸ್ ಫಲಿತಾಂಶದ ಈ ರೀತಿಯ ನಿರೀಕ್ಷೆಯಲ್ಲಿ ಎರಡು ವಿಧಗಳಿವೆ ಎಂದು ಸೂಚಿಸಿದ್ದಾನೆ. ಕೆಲವು ವ್ಯಕ್ತಿಗಳು ತಮ್ಮ ಪ್ರಯತ್ನಗಳ ಸಫಲತೆ ಅಥವಾ ವಿಫಲತೆ ತಮ್ಮ ನಿರೀಕ್ಷೆಗೆ

Digitised by Bharatavani, CIIL

ಅನುಗುಣವಾಗಿರುತ್ತದೆ ಎಂದು ನಂಬುತ್ತಾರೆ. ಇದು ಸಾಮಾನ್ಯ ರೀತಿಯ ನಿರೀಕ್ಷಾ ಪಲ್ಲಟ ಇನ್ನೂ ಕೆಲವರು ತಮ್ಮ ಪ್ರಯತ್ನಗಳ ಸಫಲತೆ ಅಥವಾ ವಿಫಲತೆ ತಮ್ಮ ನಿರೀಕ್ಷೆಗೆ ವಿರುದ್ಧರಾಗಿರುತ್ತದೆ ಎಂದು ನಂಬುತ್ತಾರೆ. ಇದು ಅಸಾಮಾನ್ಯ ರೀತಿಯ ನಿರೀಕ್ಷಾ ಪಲ್ಲಟ ನಿರೀಕ್ಷಾ ಪಲ್ಲಟಕ್ಕೆ ನಿಯಂತ್ರಣ ಕೇಂದ್ರಕ್ಕೆ ನಿಕಟವಾದ ಸಂಬಂಧವಿದೆ.

ವ್ಯಕ್ತಿಗಳು ತಾವು ಎಷ್ಟರ ಮಟ್ಟಿಗೆ ಘಟನೆಗಳನ್ನು ನಿಯಂತ್ರಿಸಬಲ್ಲೆವೆಂದು ನಂಬುವುದಕ್ಕೆ 'ನಿಯಂತ್ರಣ ಕೇಂದ್ರ' (Locus Control) ಎನ್ನಲಾಗುತ್ತದೆ. ನಮ್ಮ ಕ್ರಿಯೆಗಳ ಫಲಿತಾಂಶಗಳು/ಪರಿಣಾಮಗಳು ನಾವು ಏನು ಮಾಡುತ್ತೇವೆ ಎಂಬುದನ್ನು ಅವಲಂಬಿಸಿದೆ (ಆಂತರಿಕ ನಿಯಂತ್ರಣದ ನಿಲುವು) ಎಂದು ಅಥವಾ ನಮ್ಮ ವ್ಯಯಕ್ತಿಕ ನಿಯಂತ್ರಣವನ್ನು (ಬಾಹ್ಯ ನಿಯಂತ್ರಣ ನಿಲುವು) ಅವಲಂಬಿಸಿವೆ ಎಂಬ ನಂಬಿಕೆಯ ನಿಲುವಿಗೆ "ನಿಯಂತ್ರಣ ಕೇಂದ್ರ" ಎಂದು ಹೆಸರು. (ಜಿಂಬಾ ಡ್ರೋ) ಲ್ಯಾಟಿನ್ ಭಾಷೆಯಲ್ಲಿ 'Locus' ಎಂದರೆ 'ಸ್ಥಳ' ಎಂದರ್ಥ. ಆದ್ದರಿಂದ ನಮ್ಮ ವರ್ತನೆಯ ನಿಯಂತ್ರಣ ಕೇಂದ್ರದ ಬಗ್ಗೆ ನಂಬಿಕೆ ಎರಡು ವಿಧಗಳಾಗಿರಬಹುದು. ಆಂತರಿಕ ಕೇಂದ್ರದ ನಂಬಿಕೆ ಅಥವಾ ಬಾಹ್ಯ ಕೇಂದ್ರದ ನಂಬಿಕೆ ಇದು ವಾಸ್ತವಿಕ ರೀತಿಯದಾಗಿರದೆ ವ್ಯಕ್ತಿಯ ಪ್ರತ್ಯಕ್ಷಾನುಭವದಿಂದ ಉಂಟಾಗುವ ನಂಬಿಕೆಯಾಗಿದೆ. ಈ ರೀತಿಯ ನಂಬಿಕೆ ವ್ಯಕ್ತಿಯ ವರ್ತನೆಗಳ ಮೇಲೆ ಪ್ರಭಾವ ಬೀರುವುದರಿಂದ ವ್ಯಕ್ತಿತ್ವ ವಿಕಾಸದ ಮೇಲೆ ಪ್ರಭಾವ ಬೀರುತ್ತದೆ. ರಾಟರ್ ಈ ಪರಿಕಲ್ಪನೆಯನ್ನು ಪುನರ್ಬಲನದ ನಿಯಂತ್ರಣ ಕೇಂದ್ರ (Locus of Control of Reinforcement) ಎಂದು ಕರೆದಿದ್ದಾನೆ. ಏಕೆಂದರೆ ನಮ್ಮ ಪ್ರಯತ್ನಗಳಿಗೆ / ತೀರ್ಮಾನಗಳಿಗೆ ಪುನರ್ಬಲನ ಆಂತರಿಕವಾಗಿ ದೊರೆಯುತ್ತಿದೆಯೆ ಅಥವಾ ಬಾಹ್ಯ ಕಾರಕಗಳಿಂದ ದೊರೆಯುತ್ತದೆಯೆ ಎಂಬುದು ಪುನರ್ಬಲನ ಸಂಬಂಧಿಸಿದೆ. ಪುನರ್ಬಲನ ವರ್ತನವಾದದ ಪರಿಕಲ್ಪನೆ, ನಂಬಿಕೆ / ಸಂಜ್ಞಾನಾತ್ಮಕ ವಾದದ ಪರಿಕಲ್ಪನೆ. ಹೀಗಾಗಿ ರಾಟರನ ಪರಿಕಲ್ಪನೆಯಲ್ಲಿ ಈ ಎರಡು ವಾದಗಳನ್ನು ಸಂಯೋಜಿಸಲು ಪ್ರಯತ್ನಿಸಿದ್ದಾನೆ.

ಆಂತರಿಕ ನಿಯಂತ್ರಣದ ನಂಬಿಕೆಯಿರುವ ವ್ಯಕ್ತಿಗಳು ತಮ್ಮ ವರ್ತನೆಗಳು, ಅವುಗಳ ಸಫಲತೆ ಅಥವಾ ವಿಫಲತೆ ತಮ್ಮ ವೈಯಕ್ತಿಕ ಸಾಮರ್ಥ್ಯಗಳು ಮತ್ತು ತೀರ್ಮಾನಗಳಿಂದ ನಿಯಂತ್ರಿತವಾಗುತ್ತವೆ ಎಂದು ನಂಬುತ್ತಾರೆ. ರಾಟರ್ ಆಂತರಿಕ ನಿಯಂತ್ರಣ ಕೇಂದ್ರದ ನಿಲುವಿನ ವ್ಯಕ್ತಿಗಳು ಈ ಮುಂದಿನ ವ್ಯಕ್ತಿತ್ವ ಲಕ್ಷಣಗಳನ್ನು ಹೊಂದಿರುತ್ತಾರೆ ಎಂದು ತಮ್ಮ ಅಧ್ಯಯನಗಳಿಂದ ತೀರ್ಮಾನಿಸಿದ್ದಾರೆ.

1. ಘಟನೆಗಳು, ಅವುಗಳ ಪರಿಣಾಮಗಳು ಮುಖ್ಯವಾಗಿ ತಮ್ಮ ವರ್ತನೆಗಳು, ಪ್ರಯತ್ನಗಳು, ಸಾಮರ್ಥ್ಯಗಳನ್ನು ಅವಲಂಬಿಸಿದೆ ಎಂದು ನಂಬುತ್ತಾರೆ.
2. ಇಂಥ ವ್ಯಕ್ತಿಗಳು ತಮ್ಮ ವರ್ತನೆಯ ಮೇಲೆ ಹೆಚ್ಚಿನ ನಿಯಂತ್ರಣವನ್ನು ಹೊಂದಿರುತ್ತಾರೆ. ಹೆಚ್ಚಿನ ವ್ಯಾವಹಾರಿಕ ವರ್ತನೆಯನ್ನು ಪ್ರದರ್ಶಿಸಿ ವ್ಯಕ್ತಿಗಳ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಾರೆ.
3. ಇಂಥ ವ್ಯಕ್ತಿಗಳು ಬಹುತೇಕ ತಮ್ಮ ಪ್ರಯತ್ನಗಳು ಸಫಲವಾಗುತ್ತವೆ ಎಂದು ನಂಬುತ್ತಾರೆ.
4. ಪರಿಸ್ಥಿತಿಗಳ ಮಾಹಿತಿಗಳನ್ನು ಪಡೆಯುವುದರಲ್ಲಿ ಇವರು ಹೆಚ್ಚು ಸಕ್ರಿಯವಾಗಿರುತ್ತಾರೆ.
5. ತಮ್ಮ ಜೀವನದಲ್ಲಿ ಹೆಚ್ಚಿನ ಕ್ರಿಯಾಶೀಲತೆಯ ಭಾವನೆಯನ್ನು ಹೊಂದಿರುತ್ತಾರೆ.
6. ತಮ್ಮ ಭವಿತವ್ಯ (ಭವಿಷ್ಯ)ದ ಮೇಲೆ ತಾವು ಬಲವಾದ ನಿಯಂತ್ರಣ ಹೊಂದಿದ್ದೇವೆ ಎಂದು ಇವರು ನಂಬುತ್ತಾರೆ.
7. ತಮ್ಮ ಕ್ರಿಯೆ (ವರ್ತನೆ)ಗಳಿಗೂ ಮತ್ತು ಜೀವನದಲ್ಲಿ ಸಕಾರಾತ್ಮಕ (ಸಫಲಪೂರ್ಣ) ಫಲಿತಾಂಶಗಳನ್ನು ಪಡೆಯುವುದಕ್ಕೂ ವಾಸ್ತವಿಕವಾದ ಸಂಬಂಧವಿದೆ ಎಂದು ಇವರು ಭಾವಿಸುತ್ತಾರೆ.
8. ತಮ್ಮ ಕ್ರಿಯೆಗಳಿಗೆ ತಾವೇ ಜವಾಬ್ದಾರರು ಎಂದು ಇವರು ತಿಳಿಯುತ್ತಾರೆ.
9. ಬೇರೆಯವರ ಅಭಿಪ್ರಾಯಕ್ಕೆ ಸುಲಭವಾಗಿ ಒಳಗಾಗದೆ ತಮ್ಮದೇ ಅಭಿಪ್ರಾಯ ಹೊಂದುವ ಪ್ರವೃತ್ತಿ ಇವರಲ್ಲಿ ಹೆಚ್ಚಾಗಿರುತ್ತದೆ.
10. ಇವರು ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಿ, ತಮ್ಮ ಗುರಿಗಳನ್ನು ಪಡೆಯುವುದರಲ್ಲಿ ಸಫಲರಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇವರು ತಮ್ಮ ಹಿಂದಿನ ಅನುಭವಗಳಿಂದ ಪಾಠ ಕಲಿಯುತ್ತಾರೆ. ಮತ್ತು ತಮ್ಮ ಅನುಭವಗಳ ಜ್ಞಾನವನ್ನು ಭವಿಷ್ಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅನ್ವಯಿಸುತ್ತಾರೆ.

ಬಾಹ್ಯ ನಿಯಂತ್ರಣ ಕೇಂದ್ರದಲ್ಲಿ ನಂಬಿಕೆ ಇಟ್ಟಿರುವ ವ್ಯಕ್ತಿಗಳು ತಮ್ಮ ವರ್ತನೆಗಳು, ಪ್ರಯತ್ನಗಳು, ವೈಯಕ್ತಿಕ ಸಾಮರ್ಥ್ಯಗಳು, ತೀರ್ಮಾನಗಳು, ಸಫಲತೆ ಅಥವಾ ವಿಫಲತೆ ಬಾಹ್ಯ ಕಾರಣಗಳಾದ ವಿಧಿ, ಅದೃಷ್ಟ ಅಥವಾ ಬಾಹ್ಯ ಪರಿಸ್ಥಿತಿಗಳಿಂದ ನಿಯಂತ್ರಿತವಾಗುತ್ತವೆ ಎಂದು ನಂಬುತ್ತಾರೆ. ರಾಟರನ ಪ್ರಕಾರ ಬಾಹ್ಯ ನಿಯಂತ್ರಣ ಕೇಂದ್ರದ ನಿಲುವಿನ ವ್ಯಕ್ತಿಗಳ ವ್ಯಕ್ತಿತ್ವದಲ್ಲಿ ಈ ಮುಂದಿನ ಲಕ್ಷಣಗಳನ್ನು ಗುರ್ತಿಸಬಹುದು.

1. ಇಂಥ ವ್ಯಕ್ತಿಗಳು ತಮ್ಮ ಸಫಲತೆ ಅಥವಾ ವಿಫಲತೆಗಳನ್ನು ವಿಧಿ/ಅದೃಷ್ಟಕ್ಕೆ ಆರೋಪಿಸುತ್ತಾರೆ.
2. ಆದ್ದರಿಂದ ಇವರು ತಮ್ಮ ಕಾರ್ಯ ಸಾಧನೆಗೆ ಬೇಕಾಗುವಷ್ಟು ಪ್ರಯತ್ನವನ್ನು ಮಾಡುವುದಿಲ್ಲ.

Digitised by Bharatavani, CIIL

3. ತಮ್ಮ ಜೀವನದ ನಿಯಂತ್ರಣ ತಮ್ಮ ಕೈಯಲ್ಲಿ ಇಲ್ಲ ಎಂದು ಇಂಥ ವ್ಯಕ್ತಿಗಳು ನಂಬುವುದರಿಂದ ತಮ್ಮ ಕಾರ್ಯ ಸಾಧನೆಗೆ ಪ್ರಯತ್ನಿಸುವಾಗ ಹೆಚ್ಚಿನ ಆತಂಕವನ್ನು ಅನುಭವಿಸುತ್ತಾರೆ.
4. ಬಾಹ್ಯ ನಿಯಂತ್ರಣಕ್ಕೆ ಒತ್ತು ಕೊಡುವುದರಿಂದ ತಾವು ಪರಿಸ್ಥಿತಿಗಳಿಗೆ ಬಲಿಯಾಗಿ ವಿಫಲತೆ ಹೊಂದಿದ್ದೇವೆಂದು ಭಾವಿಸುತ್ತಾರೆ.
5. ಇವರು ತಮ್ಮ ಕ್ರಿಯೆ (ಪ್ರಯತ್ನಗಳಿಗೆ) ಮತ್ತು ಸಫಲತೆ ಅಥವಾ ವಿಫಲತೆಗೂ ಸಂಬಂಧವಿದೆ ಎಂಬುದನ್ನು ಮನಗಾಣಲು ಅಸಮರ್ಥರಾಗುತ್ತಾರೆ.
6. ಇವರು ಬೇರೆಯವರ ಅದರಲ್ಲೂ ಬೇರೆಯವರು ನಮಗಿಂತ ಮೇಲ್ಮಟಟದವರು ಎಂದು ಭಾವಿಸುವ ವ್ಯಕ್ತಿಗಳ ಅಭಿಪ್ರಾಯ/ಹೇಳಿಕೆ/ತೀರ್ಮಾನಗಳಿಗೆ ಬೇಗ ಬದ್ಧರಾಗುತ್ತಾರೆ.
7. ತಮ್ಮ ಪ್ರಯತ್ನಗಳಿಗೆ ಪುನರ್ಬಲನ ಬಾಹ್ಯಮೂಲಗಳಿಂದ ಬರುತ್ತದೆ ಎಂದು ಇವರು ನಂಬುತ್ತಾರೆ.
8. ತಮ್ಮ ಪ್ರಯತ್ನಗಳ ಸಫಲತೆಯಲ್ಲಿ ಇವರಿಗೆ ಖಚಿತವಾದ ನಂಬಿಕೆಯಿರುವುದಿಲ್ಲ.
9. ಪರಿಸ್ಥಿತಿಗಳ ಬಗ್ಗೆ ಸೂಕ್ತ ಮಾಹಿತಿ ಪಡೆಯುವುದರಲ್ಲಿ ಇವರಿಗೆ ಆಸಕ್ತಿಯಿರುವುದಿಲ್ಲ.
10. ಇವರು ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಿ, ಸಫಲತೆ ಪಡೆಯುವ ಸಾಧ್ಯತೆ ಅಷ್ಟಾಗಿ ಇರುವುದಿಲ್ಲ.

ನಿಯಂತ್ರಣ ಕೇಂದ್ರದ ನಿಲುವಿಗೆ ಸಂಬಂಧಿಸಿದಂತೆ ಆಂತರಿಕ ಮತ್ತು ಬಾಹ್ಯ ನಿಯಂತ್ರಣ ಕೇಂದ್ರದ ನಿಲುವಿನ ವ್ಯಕ್ತಿಗಳಲ್ಲಿ ಅನೇಕ ಅಂಶಗಳಲ್ಲಿ ವ್ಯಕ್ತಿ ವ್ಯತ್ಯಾಸಗಳಿರುವುದು ಅಧ್ಯಯನಗಳಿಂದ ಕಂಡು ಬಂದಿದೆ. ಪುರುಷರು ಸ್ತ್ರೀಯರಿಗಿಂತ ಹೆಚ್ಚಾಗಿ ಆಂತರಿಕ ನಿಲುವು ಹೊಂದಿರುತ್ತಾರೆ. ವ್ಯಕ್ತಿಗಳು ವಯಸ್ಸಿನಲ್ಲಿ ಮುಂದುವರಿದಂತೆ ಬಾಹ್ಯ ನಿಲುವಿನಿಂದ ಆಂತರಿಕ ನಿಲುವಿನ ಕಡೆಗೆ ಪ್ರವೃತ್ತರಾಗುವುದು ಕಂಡು ಬಂದಿದೆ. ಸಂಘಟನೆಗಳಲ್ಲಿ ಮೇಲ್ಮಟ್ಟದ ಅಧಿಕಾರಗಳಲ್ಲಿರುವವರು ಸಾಮಾನ್ಯವಾಗಿ ಹೆಚ್ಚಿನ ಆಂತರಿಕ ನಿಯಂತ್ರಣ ಕೇಂದ್ರದ ನಿಲುವಿನವರಾಗಿರುತ್ತಾರೆ. ಆಂತರಿಕ ನಿಯಂತ್ರಣ ಕೇಂದ್ರದ ನಿಲುವಿನ ಕೆಲವು ವ್ಯಕ್ತಿಗಳು ಮಾನಸಿಕವಾಗಿ ಅಸ್ವಸ್ಥರಾಗಿರುವ ಅಸ್ಥಿರತೆಯುಳ್ಳವರಾಗುವ ಸಾಧ್ಯತೆ ಇದೆ. ಆದರೆ ಇವರಲ್ಲಿ ದಕ್ಷತೆ, ಸ್ವಪ್ರಯತ್ನದಲ್ಲಿ ನಂಬಿಕೆ, ಸ್ವನಿಯಂತ್ರಣ ಮುಂತಾದ ಲಕ್ಷಣಗಳಿರುವುದರಿಂದ ಮಾನಸಿಕ ಸಮಸ್ಯೆಗಳನ್ನು ಧೈರ್ಯವಾಗಿ ಪರಿಹರಿಸಿಕೊಳ್ಳಬಲ್ಲರು. ಬಾಹ್ಯ ನಿಯಂತ್ರಣದ ನಿಲುವಿನವರು ಸುಲಭವಾದ, ಆರಾಮದಾಯಕ, ಜೀವನ ನಡೆಸುವ ಪ್ರವೃತ್ತಿಯವರಾಗಿರುತ್ತಾರೆ. ಆಂತರಿಕ ನಿಲುವಿನವರು ಬಾಹ್ಯ ನಿಲುವಿನವರಿಗಿಂತ ಹೆಚ್ಚು ಸಾಧನಾ ಪ್ರೇರಣೆಯುಳ್ಳವರಾಗಿರುತ್ತಾರೆ. ಅವರ ಗಮನ ಹೆಚ್ಚಾಗಿ ತಮ್ಮ ಅಂತರ್ಯದ ಕಡೆಗೆ ಇರುತ್ತದೆ. ಬಾಹ್ಯ ನಿಲುವಿನವರು ತಮ್ಮ ಸಫಲತೆ ಅಥವಾ ವಿಫಲತೆಗೆ ತಮ್ಮ ಆಂತರಿಕ ಸಾಮರ್ಥ್ಯ, ಪ್ರಯತ್ನ, ಕಾರ್ಯದ ಕಠಿಣತೆಯ ಮಟ್ಟ ಮುಂತಾದ ಸ್ಥಿರವಾದ, ನೈಜವಾದ ಕಾರಣಗಳನ್ನು ಕೊಟ್ಟರೆ ಆಂತರಿಕ ನಿಲುವಿನವರು ವಿಧಿ, ಅದೃಷ್ಟ, ಪರಿಸ್ಥಿತಿಯ ಒತ್ತಡ, ದೈವ, ಸಹಾಯದ ಕೊರತೆ ಮುಂತಾದ ಅಸ್ಥಿರ ಕಾರಣಗಳನ್ನು ಕೊಡುತ್ತಾರೆ. ಲೆವಿನ್‌ಸನ್ನನ ಅಧ್ಯಯನಗಳಿಂದ ಆಂತರಿಕ ನಿಲುವಿನವರು ತಮ್ಮ ಸ್ವಾಸ್ಥ್ಯವನ್ನು ಸ್ವಯಂ-ನಿರ್ಧಾರ, ಜೀವನಶೈಲಿಗಳನ್ನು ಅವಲಂಬಿಸಿವೆ ಎಂದು ನಂಬಿದರೆ, ಬಾಹ್ಯ ನಿಲುವಿನವರು ತಮ್ಮ ಸ್ವಾಸ್ಥ್ಯ ವೈದ್ಯರು, ಅದೃಷ್ಟ, ದೇವರ ಕೃಪೆಯನ್ನು ಅವಲಂಬಿಸಿದೆ ಎಂದು ನಂಬಿದ್ದಾರೆ ಎಂದು ತಿಳಿದು ಬಂದಿದೆ. ನಿಯಂತ್ರಣ ಕೇಂದ್ರದ ನಿಲುವಿಗೂ ಕುಟುಂಬದ ಜೀವನಶೈಲಿ, ಸಂಪನ್ಮೂಲಗಳು, ಸಾಂಸ್ಕೃತಿಕ ಸ್ಥಿರತೆ ಮತ್ತು ಪುನರ್ಬಲನಗಳ ಅನುಭವ ಈ ಅಂಶಗಳಿಗೂ ಸಂಬಂಧವಿರುವುದು ಕಂಡು ಬಂದಿದೆ. ಸ್ವಪ್ರಯತ್ನ, ಶಿಕ್ಷಣ, ಆತ್ಮವಿಶ್ವಾಸ, ಜವಾಬ್ದಾರಿ, ಚಿಂತನಶೀಲತೆಗೆ ಒತ್ತು ಕೊಡುವ ಕುಟುಂಬಗಳ ಮಕ್ಕಳು ಆಂತರಿಕ ನಿಲುವು ಬೆಳೆಸಿಕೊಳ್ಳುತ್ತಾರೆ. ಇವುಗಳಿಗೆ ಒತ್ತುಕೊಡದ ಕೆಳಮಟ್ಟದ ಸಾಮಾಜಿಕ ಆರ್ಥಿಕ ಕುಟುಂಬಗಳಲ್ಲಿ ಬೆಳೆಯುವ ಮಕ್ಕಳು ಬಹುತೇಕ ಬಾಹ್ಯ ನಿಯಂತ್ರಣದ ನಿಲುವು ಹೊಂದುತ್ತಾರೆ. ಸಣ್ಣ ವಯಸ್ಸಿನ ಮಕ್ಕಳಿಗಿಂತ ಬೆಳೆದ ಮಕ್ಕಳು ಆಂತರಿಕ ನಿಲುವಿನವರಾಗಿರುತ್ತಾರೆ. ಅಧಿಕ ಸಾಧನೆ ಮಾಡುವ ವಿದ್ಯಾರ್ಥಿಗಳು ಸ್ವಪ್ರಯತ್ನವನ್ನು ನಂಬಿದರೆ, ಕಡಿಮೆ ಸಾಧನೆ ಮಾಡುವ ವಿದ್ಯಾರ್ಥಿಗಳು ಅದೃಷ್ಟವನ್ನು ನಂಬುತ್ತಾರೆ.

ನಿಯಂತ್ರಣ ಕೇಂದ್ರದ ಪರಿಕಲ್ಪನೆಯ ಅನ್ವಯಿಕತೆ ಹೆಚ್ಚಾಗಿ ಆರೋಗ್ಯ ಮನೋವಿಜ್ಞಾನ ಕ್ಷೇತ್ರದಲ್ಲಿ ಕಂಡು ಬಂದಿದೆ. ರೋಗಿಯ ಮಾನಸಿಕ ನಿಲುವು ಚಿಕಿತ್ಸೆಯ ಪರಿಣಾಮದ ಮೇಲೆ ಪ್ರಭಾವ ಬೀರುವುದು ಕಂಡು ಬಂದಿದೆ. ರೋಗಿ ತನ್ನ ಆರೋಗ್ಯಕ್ಕೆ ಆಂತರಿಕ ಕಾರಕಗಳು (ಆಹಾರ ವಿಧಾನ, ಜೀವನಶೈಲಿ ಇತ್ಯಾದಿ) ಕಾರಣವಾಗುತ್ತವೆ ಎಂದು ದೃಢವಾಗಿ ನಂಬಿದರೆ ಚಿಕಿತ್ಸೆ ಫಲಕಾರಿಯಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಔದ್ಯೋಗಿಕ ಮತ್ತು ಪ್ರಬಂಧಕರ ಸಂಘಲನಾತ್ಮಕ ಮನೋವಿಜ್ಞಾನದಲ್ಲೂ ಈ ಪರಿಕಲ್ಪನೆಗೆ ಮಹತ್ವ ಬಂದಿದೆ ಮತ್ತು ಕಾರ್ಮಿಕರು ಆಂತರಿಕ ನಿಲುವು ಹೊಂದಿದ್ದರೆ ತಮ್ಮ ವಿಫಲತೆಗೆ ಬೇರೆಯವರನ್ನು ತೋರಿಸುವ ಪ್ರವೃತ್ತಿ ಕಡಿಮೆಯಾಗಿ, ಆತ್ಮವಿಮರ್ಶೆ ನೋಡಿಕೊಂಡು ತಮ್ಮ ದೋಷಗಳನ್ನು ಗುರ್ತಿಸಿ ಅವುಗಳನ್ನು ದೂರ ಮಾಡಿ ದಕ್ಷತೆಯನ್ನು ಸಾಧಿಸುವ ಪ್ರವೃತ್ತಿ ಉಂಟಾಗುತ್ತದೆ. ಪೋಷಕರು ಮೊದಲಿನಿಂದಲೂ ಮಕ್ಕಳಲ್ಲಿ ಆತ್ಮವಿಶ್ವಾಸ, ಆತ್ಮ-ನಿರೀಕ್ಷಣೆ, ಆತ್ಮ-ವಿಮರ್ಶೆ ಮುಂತಾದ ಧನಾತ್ಮಕ ಗುಣಗಳನ್ನು ಬೆಳೆಸಬೇಕು. ತಮ್ಮ ಸಫಲತೆ, ವಿಫಲತೆಗಳಿಗೆ ತಾವೇ ಹೊಣೆಗಾರರು ಎಂಬ ಭಾವನೆ ಬೆಳೆಸಬೇಕು ಶಾಲೆಗಳಲ್ಲಿ ಅಧ್ಯಾಪಕರು ಮಕ್ಕಳಲ್ಲಿ ಆಂತರಿಕ ನಿಯಂತ್ರಣ ಕೇಂದ್ರದ ನಿಲುವನ್ನು ಬೆಳೆಸಲು ಪ್ರಯತ್ನಿಸಬೇಕು. ಸಾಮಾನ್ಯವಾಗಿ ಮಕ್ಕಳು ಪರೀಕ್ಷೆಗಳಲ್ಲಿ ತಮ್ಮ ವಿಫಲತೆಯನ್ನು ಓದಲು ಸಮಯದ ಕೊರತೆ, ಪರಿಸ್ಥಿತಿಯ ಒತ್ತಡ, ಪ್ರಶ್ನೆಪತ್ರಿಕೆ ಕಠಿಣತೆ, ಅದೃಷ್ಟದ ಕೊರತೆ ಮುಂತಾದ ಬಾಹ್ಯಕಾರಕಗಳಿಗೆ ಆರೋಪಿಸುವ ಪ್ರವೃತ್ತಿಯುಳ್ಳವರಾಗಿರುತ್ತಾರೆ. ತಮ್ಮ ಶೈಕ್ಷಣಿಕ ಸಾಧನೆ ಪ್ರಯತ್ನ, ಸಾಮರ್ಥ್ಯ, ಸರಿಯಾದ ಕ್ರಮಬದ್ಧ

Digitised by Bharatavani, CIIL

ಅಧ್ಯಯನವನ್ನು ಅವಲಂಭಿಸಿರುತ್ತದೆ ಎಂಬ ದೃಢವಾದ ನಿಲುವನ್ನು ಮಕ್ಕಳಲ್ಲಿ ಬೆಳೆಸುವ ಪ್ರಯತ್ನವನ್ನು ಶಿಕ್ಷಕರು ಮಾಡಬೇಕಾಗುತ್ತದೆ. ತಮ್ಮ ಪ್ರಯತ್ನಗಳಿಗೆ, ಶೈಕ್ಷಣಿಕ ಸಾಧನೆಗಳಿಗೆ ದೊರೆಯುವ ಅಥವಾ ನಿರೀಕ್ಷಿಸುವ ಬಾಹ್ಯ ಪುನರ್ಬಲನಕ್ಕಿಂತ ಆತ್ಮತೃಪ್ತಿ, ಸ್ವಸಾಮರ್ಥ್ಯದ ಅರಿವು, ಪ್ರಯತ್ನದ ಸಫಲತೆ ಮುಂತಾದ ಆಂತರಿಕ ಮೂಲದ ಪುನರ್ಬಲನ ಹೆಚ್ಚು ಮಹತ್ವಪೂರ್ಣವಾದುದು ಎಂಬುದನ್ನು ವಿದ್ಯಾರ್ಥಿಗಳು ಮನಗಾಣುವಂತೆ ಮಾಡಬೇಕು.

**–ಪ್ರೊ. ಶ್ಯಾಮಲ ಹೆಚ್.ಪಿ.**

## ನೆರೆಹೊರೆ ಶಾಲಾ ವ್ಯವಸ್ಥೆ

**ಪೀಠಿಕೆ:** ಸಂವಿಧಾನದ ನಿರ್ಮಾತೃಗಳು ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಕೊಡುವದರೊಂದಿಗೆ ಶಿಕ್ಷಣಕ್ಕೂ ಮಹತ್ವದ ಸ್ಥಾನವನ್ನು ಕಲ್ಪಿಸಿದ್ದಾರೆ. ನಮ್ಮ ಸಂವಿಧಾನ ರಾಷ್ಟ್ರ, ರಾಜ್ಯಗಳ ಧೋರಣೆ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಅತ್ಯಂತ ಉಪಯುಕ್ತ ಅವಕಾಶಗಳು ನಮ್ಮ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಜನರ ಆಕಾಂಕ್ಷೆಗಳನ್ನು ಶಿಕ್ಷಣ ಮಾಧ್ಯಮದ ಮೂಲಕ ತುಂಬಿಕೊಡುವ ಆಸೆಯನ್ನು ಮೂಡಿಸಿದೆ.

ಒಂದು ದೇಶದ ಪ್ರಗತಿ ಹಾಗೂ ಸುಧಾರಣೆ ಆದೇಶದ ವಿದ್ಯಾವಂತ, ವಿಚಾರಶೀಲ ಹಾಗೂ ಕ್ರಿಯಾಶೀಲ ವ್ಯಕ್ತಿಗಳನ್ನು ಅವಲಂಬಿಸಿದೆ. ಆದ್ದರಿಂದ ಭಾರತ ಸರಕಾರ 1961ರಲ್ಲಿ ಸಂವಿಧಾನದ 45ನೇ ಕಲಮಿನ ಪ್ರಕಾರ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿತು. ಈ ತತ್ವವನ್ನು ಎಲ್ಲಾ ರಾಜ್ಯಗಳು ಸರ್ವಾನುಮತದಿಂದ ನಡೆಸಿಕೊಂಡು ಬರುತ್ತವೆ. ದೇಶದಾದ್ಯಂತ ಏಕರೀತಿಯ ಶಿಕ್ಷಣ ಪದ್ಧತಿ ಹಾಗೂ ಪಠ್ಯವಸ್ತುವನ್ನು ಅಳವಡಿಸಿಕೊಂಡು ಬರಲಾಗುತ್ತದೆ. ಎಲ್ಲ ಮತದವರಿಗೂ, ಜನಾಂಗದವರಿಗೂ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದವರಿಗೂ ಶಿಕ್ಷಣದ ಸಮಾನ ಅವಕಾಶಗಳನ್ನು ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಇವುಗಳನ್ನು ಈಡೇರಿಸಲು ಕೆಳಗಿನ ಉದ್ದೇಶಗಳನ್ನು ಸಾಧಿಸಬೇಕಾದುದು ಅನಿವಾರ್ಯವಾಗಿದೆ.

1. ಎಲ್ಲರನ್ನು ಅಕ್ಷರಸ್ಥರನ್ನಾಗಿಸಬೇಕು.
2. ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದವರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಿ ಶಿಕ್ಷಣ ನೀಡಬೇಕು.
3. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ನೀಡಬೇಕು ಹಾಗೂ ಅವರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಬೇಕು.
4. ಅಂಗವಿಕಲರಿಗೆ ಪ್ರತ್ಯೇಕ ಶಾಲೆ ಹಾಗೂ ವಿಶೇಷ ಸೌಲಭ್ಯಗಳನ್ನು ಒದಗಿಸಬೇಕು.

ಆದರೆ ಮೇಲಿನ ಎಲ್ಲ ಉದ್ದೇಶಗಳು ಇಂದಿಗೂ ಅಂದರೆ ಮೂರುವರೆ ದಶಕ ಕಳೆದರೂ ಈಡೇರಿಸಲ್ಪಟ್ಟಿಲ್ಲದಿರುವುದು ಅತ್ಯಂತ ಖೇದದ ಸಂಗತಿ ಎಂದು ಹೇಳದೆ ವಿಧಿಯಿಲ್ಲ. ಈ ಉದ್ದೇಶಗಳನ್ನು ಸಾಧಿಸಲು ಭಾರತ ಸರ್ಕಾರ ಚಿಂತನೆ ನಡೆಸಿದುದರ ಪ್ರತಿಫಲವೇ ಕೇಂದ್ರ ಸರ್ಕಾರ ರೂಪಿಸಿ ಜಾರಿಗೊಳಿಸಿದ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ (ಶಿಕ್ಷಣ ಹಕ್ಕು ಕಾಯ್ದೆ – 2009) ಮತ್ತು ಸರ್ವಶಿಕ್ಷಣ ಅಭಿಯಾನವಾಗಿದೆ.

**ನೆರೆಹೊರೆ ಶಾಲೆ – ಪರಿಕಲ್ಪನೆ:**

ಶಿಕ್ಷಣ ಹಕ್ಕು ಕಾಯ್ದೆ (Right to Education Act-RTE) ಪ್ರಕಾರ ಒಂದು ಕಿ.ಮೀ ವ್ಯಾಪ್ತಿಯಲ್ಲಿರುವ ಶಾಲೆಗಳನ್ನು ನೆರೆಹೊರೆ ಶಾಲೆಗಳೆಂದು ವ್ಯಾಖ್ಯಾನಿಸಲಾಗಿದೆ. ನಗರ ಪ್ರದೇಶದಲ್ಲಿ ವಾರ್ಡ್ ಅನ್ನು ನೆರೆಹೊರೆ ಎಂದು ವ್ಯಾಖ್ಯಾನಿಸಿದೆ. ಕೆಲವೊಂದು ವಾರ್ಡ್‌ಗಳು 6–7 ಕಿ.ಮೀ. ವಿಸ್ತಾರವಾಗಿದ್ದು ಅವುಗಳಲ್ಲಿ ಬರುವ 25–30ಕ್ಕಿಂತಲೂ ಅಧಿಕ ಶಾಲೆಗಳನ್ನೂ ನೆರೆಹೊರೆ ಶಾಲೆಗಳೆನ್ನುವರು.

**ನೆರೆಹೊರೆಯ ಶಾಲೆಗಳನ್ನು ಗುರುತಿಸುವುದು:**

ಶಿಕ್ಷಣ ಇಲಾಖೆ ತನ್ನದೇ ಆದ ನಿಯಮಗಳ ಅನುಸಾರವಾಗಿ ಪ್ರತಿಜಿಲ್ಲೆಗಳಲ್ಲಿ ಬರುವ ನೆರೆಹೊರೆ ಶಾಲೆಗಳ ಜಿಲ್ಲಾವಾರು ಪಟ್ಟಿಯನ್ನು ಬಿಡುಗಡೆ ಮಾಡುವುದು. ಇಂತಹ ಶಾಲೆಗಳನ್ನು ಗುರುತಿಸಲು ಇಲಾಖೆ ಈ ಕೆಳಗಿನ ಮಾನದಂಡಗಳನ್ನು ಹಾಕಿಕೊಂಡಿದೆ.

- ಗ್ರಾಮೀಣ ಪ್ರದೇಶದಲ್ಲಿ ಒಂದರಿಂದ ಐದನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಒಂದು ಕಿ.ಮೀ. ವ್ಯಾಪ್ತಿಯಲ್ಲಿಯಲ್ಲಿರುವ ಶಾಲೆ ನೆರೆಹೊರೆ ಶಾಲೆ ಆಗುವುದು.
- 6.7 ತರಗತಿಯ ವಿದ್ಯಾರ್ಥಿಗಳಿಗೆ ಮೂರು ಕಿ.ಮೀ. ವ್ಯಾಪ್ತಿಯಲ್ಲಿರುವ ಶಾಲೆಯು ನೆರೆಹೊರೆ ಶಾಲೆ ಎನಿಸುವುದು.
- 8ನೇ ತರಗತಿ ವಿದ್ಯಾರ್ಥಿಗಳಿಗೆ ಐದು ಕಿ.ಮೀ. ವಾಪ್ತಿಯಲ್ಲಿರುವ ಶಾಲೆ ನೆರೆಹೊರೆ ಶಾಲೆ ಆಗಲಿದೆ.
- ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ವಾರ್ಡ್‌ನ್ನು ನೆರೆಹೊರೆ ಎಂದು ಶಿಕ್ಷಣ ಇಲಾಖೆ ವ್ಯಾಖ್ಯಾನಿಸಿದೆ.
- ನೆರೆಹೊರೆ ಶಾಲೆ ನಿಯಮದ ಪ್ರಕಾರ ಕೇಂದ್ರ ರಾಜ್ಯಗಳಲ್ಲಿ ವಿಧಾನಸಭೆಯ ಅನುಮತಿ ಪಡೆಯದೇ ಅವಶ್ಯಕತೆ ಕಂಡು ಬಂದಲ್ಲಿ ಹೊಸ ಶಾಲೆಗಳನ್ನು ತೆರೆಯಬಹುದಾಗಿದೆ.

ನೆರೆಹೊರೆ ಶಾಲೆಗಳಲ್ಲಿ ಮಗು ಶಿಕ್ಷಣ ಪಡೆಯುವ ಹಕ್ಕು:

ಕೇಂದ್ರ ಸರ್ಕಾರ ರೂಪಿಸಿ ಜಾರಿಗೊಳಿಸಿದ ಉಚಿತ ಮತ್ತು ಕಡ್ಡಾಯ, ಶಿಕ್ಷಣಕ್ಕಾಗಿ ಮಕ್ಕಳ ಕಾಯ್ದೆಯ (ಶಿಕ್ಷಣ ಹಕ್ಕು ಕಾಯ್ದೆ 2009) ಅನ್ವಯ ಪ್ರತಿಯೊಂದು ಮಗು ನೆರೆಹೊರೆ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ಪಡೆದಿದೆ. ಈ ಕಾಯ್ದೆಯ ಪ್ರಕಾರ ಶೇ 25 ಸೀಟುಗಳಿಗೆ ಖಾಸಗಿ, ಅನುದಾನಿತ ಶಾಲೆಗಳು ನೆರೆಹೊರೆ ಮಕ್ಕಳಿಗೆ ಮಾತ್ರ ಪ್ರವೇಶ ನೀಡಬೇಕು. ಈ ಹಿನ್ನಲೆಯಲ್ಲಿ ಸರ್ಕಾರ "ನೆರೆಹೊರೆ ಶಾಲೆ" ಕುರಿತ ವ್ಯಾಖ್ಯಾನ ಮಾಡುವುದರ ಮೂಲಕ

Digitised by Bharatavani, CIIL

ಅನೇಕ ಗೊಂದಲಗಳಿಗೆ ತೆರೆ ಎಳೆದಿದೆ. ಪಟ್ಟಣ – ನಗರ ಪ್ರದೇಶಗಳಲ್ಲಿ ನೆರೆಹೊರೆ ಎಂದರೆ ವಾರ್ಡ್ ಎಂದು ಪರಿಗಣಿಸಲಾಗಿದೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಒಂದು ಕಿ.ಮೀ. ವಾಪ್ತಿಯಲ್ಲಿರುವ ಶಾಲೆ ಎಂದು ಸ್ಪಷ್ಟ ಪಡಿಸಲಾಗಿದೆ ವಾರ್ಡ್ ಒಳಗೆ ಒಂದಕ್ಕಿಂತ ಹೆಚ್ಚಿನ ಶಾಲೆಗಳು ಇದ್ದರೆ ಪೋಷಕರು ಬಯಸಿದ ಶಾಲೆಯಲ್ಲಿ ಪ್ರವೇಶ ನೀಡಲಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಏನಾದರೂ ಗೊಂದಲ ಉಂಟಾದರೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅದನ್ನು ಪರಿಹರಿಸುವರು. ವಾರ್ಷಿಕ ಆದಾಯ ರೂ.3.5 ಲಕ್ಷಕ್ಕಿಂತ ಕಡಿಮೆ ಇರುವ ಪೋಷಕರ ಮಕ್ಕಳು ಉಚಿತ ಕಾಯ್ದಿರಿಸುವಿಕೆಯಡಿಯಲ್ಲಿ ಪ್ರವೇಶ ಪಡೆಯಲು ಅರ್ಹರು.

**ನೆರೆಹೊರೆ ಶಾಲಾ ವ್ಯವಸ್ಥೆಯಲ್ಲಿನ ಅನಾನುಕೂಲತೆಗಳು:**

ನೆರೆಹೊರೆ ಶಾಲಾ ವ್ಯವಸ್ಥೆ ಅನೇಕ ಧನಾತ್ಮಕ ಅಂಶಗಳನ್ನು ಹೊಂದಿದ್ದರೂ ಹಲವಾರು ಅನಾನುಕೂಲತೆಯ ಅಂಶಗಳನ್ನು ಹೊಂದಿವೆ. ಇವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ಸರ್ಕಾರ/ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರವೇಶ ಪ್ರಕ್ರಿಯೆ ಆರಂಭಗೊಂಡ ಅಥವಾ ಮುಗಿದನಂತರ ನೆರೆಹೊರೆಯ ಶಾಲೆಗಳನ್ನು ಪ್ರಕಟಿಸುವುದು.

2. ಶಿಕ್ಷಣದ ಹಕ್ಕು ಕಾನೂನು ಪ್ರಕಾರ ಒಂದು ಕಿ.ಮೀ. ವ್ಯಾಪ್ತಿಯ ಶಾಲೆಗಳನ್ನು ನೆರೆಹೊರೆ ಶಾಲೆಗಳೆಂದು ವ್ಯಾಖ್ಯಾನಿಸಲಾಗಿದೆ. ಆದರೆ ಇಲಾಖೆಯು ನಗರ ಪ್ರದೇಶದಲ್ಲಿ ವಾರ್ಡನ್ನು ನೆರೆಹೊರೆ ಎಂದು ವ್ಯಾಪಿಸಿದೆ. ಕೆಲವೊಂದು ವಾರ್ಡ್‌ಗಳು 6–7 ಕಿ.ಮೀ. ವಿಸ್ತಾರವಿದ್ದು 25–30ಕ್ಕೂ ಅಧಿಕ ಶಾಲೆಗಳು ಇರುತ್ತವೆ. ಇದರಿಂದಾಗಿ ಪೋಷಕರಲ್ಲಿ ಯಾವ ಶಾಲೆಗೆ ಮಗುವನ್ನು ಸೇರಿಸಬೇಕು ಎಂಬ ಗೊಂದಲ ಮೂಡಬಹುದು.

3. ನಗರ / ಪಟ್ಟಣ ಪ್ರದೇಶದಲ್ಲಿ ಕೆಲವು ಕಡೆಗಳಲ್ಲಿ ಮನೆಯಿಂದ ನೂರು ಮೀಟರ್ ದೂರದಲ್ಲಿರುವ ಶಾಲೆಯೂ "ನೆರೆಹೊರೆ ಶಾಲೆ" ಆಗಲಾರದು. ಆ ಶಾಲೆ ಪಕ್ಕದ ವಾರ್ಡ್‌ನಲ್ಲಿರಬಹುದು. ಇದರಿಂದಾಗಿ ಅನಿವಾರ್ಯವಾಗಿ ಮಕ್ಕಳನ್ನು ದೂರದ ಶಾಲೆಗಳಿಗೆ ಕಳುಹಿಸಬೇಕಾಗುತ್ತದೆ.

4. ಶಾಲಾ ವ್ಯಾಪ್ತಿಯ ಪ್ರದೇಶದ ಬಗ್ಗೆ ಪಾಲಕರು ಸೂಕ್ತ ಅರಿವನ್ನು ಹೊಂದಿರುವುದಿಲ್ಲ.

5. ಖಾಸಗಿ ಶಾಲೆಗಳು ಪ್ರವೇಶ ಸೀಟುಗಳ ಸಂಖ್ಯೆಗಳ ಬಗ್ಗೆ ಪಾಲಕರಿಗಾಗಲಿ, ಸರ್ಕಾರಕ್ಕಾಗಲಿ ಸೂಕ್ತ ಮಾಹಿತಿ ನೀಡುವುದಿಲ್ಲ. ಇದರಿಂದ ಉಚಿತ ಶಿಕ್ಷಣ ಕಾಯ್ದಿರಿಸುವಿಕೆಯಡಿಯಲ್ಲಿ ಪ್ರವೇಶ ಪಡೆಯುವ ಮಕ್ಕಳಿಗೆ ಅನ್ಯಾಯವಾಗುತ್ತದೆ.

6. ಕೆಲವು ಗ್ರಾಮ/ವಾರ್ಡ್‌ಗಳಲ್ಲಿ ಬಡ ಕುಟುಂಬಗಳಿದ್ದಾಗಲೂ ಉಚಿತ ಸೀಟುಗಳಲ್ಲಿ ಕಡಿಮೆ ಸೀಟುಗಳು ಇದ್ದರೆ ಅನೇಕ ಮಕ್ಕಳು ಶಿಕ್ಷಣದಿಂದ ವಂಚಿತರಾಗುವ ಸಾಧ್ಯತೆಗಳಿವೆ.

7. ನೆರೆಹೊರೆ ಶಾಲೆಯಲ್ಲಿ ಭಾಷೆ ಮಾಧ್ಯಮದ ಸಮಸ್ಯೆ ಕಂಡು ಬರುವುದು. ನಿಯಮದ ಪ್ರಕಾರ 1994ಕ್ಕೂ ಮುಂಚೆ ಆರಂಭವಾಗಿರುವ ಶಾಲೆಗಳಲ್ಲಿ ಪೂರ್ವ–ಪ್ರಾಥಮಿಕ ಅಥವಾ ಒಂದನೇ ತರಗತಿಯಿಂದಲೇ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಅವಕಾಶವಿದೆ. 1994ರ ನಂತರ ಆರಂಭವಾಗಿರುವ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಮಾತ್ರ ಬೋಧಿಸಲು ಅವಕಾಶವಿದೆ.

8. ಸರ್ಕಾರವು ಪ್ರತಿ ಜಿಲ್ಲೆಗೂ ನೆರೆಹೊರೆ ಪ್ರದೇಶಗಳು ಹಾಗೂ ನೆರೆಹೊರೆ ಶಾಲೆಗಳ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಬೇಕು. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾವಾರು ನೆರೆಹೊರೆ ಶಾಲೆಗಳ ಪಟ್ಟಿಯನ್ನು ಸಾಕಷ್ಟು ಸಮಯದ ಮುಂಚೆ ಪ್ರಕಟಿಸಬೇಕು. ಹಾಗಾಗದಿದ್ದಾಗ ಪಾಲಕರಿಗೆ ತೊಂದರೆಯಾಗುತ್ತದೆ.

9. ಅನೇಕ ಮಕ್ಕಳಿಗೆ ತಮಗೆ ಸಮೀಪವಿರದ ಶಾಲೆಗಳಲ್ಲಿ (ದೂರದ ಶಾಲೆಗಳಲ್ಲಿ) ಶಿಕ್ಷಣ ಪಡೆಯುವ ಅನಿವಾರ್ಯತೆ ಇರುವುದರಿಂದ ಅಂಥ ಮಕ್ಕಳು ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣದಿಂದ ಶಾಲಾ ಶಿಕ್ಷಣದಿಂದ ವಂಚಿತರಾಗುವರು. ಇದನ್ನು ಮನಗೊಂಡು, ಶಿಕ್ಷಣ ಹಕ್ಕು ಕಾಯ್ದೆಯ ಅಡಿಯಲ್ಲಿ ನೆರೆಹೊರೆ ಶಾಲೆಗಳಲ್ಲೆ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕನ್ನು ನೀಡುತ್ತದೆ.

–ರತನ್ ಭೀ.ಚೌವ್ಹಾಣ್

## ನೈತಿಕ ವಿಕಾಸದ ಸಿದ್ಧಾಂತಗಳು

ನೈತಿಕ ವಿಕಾಸಕ್ಕೆ ಸಂಬಂಧಿಸಿರುವಂತೆ ಎರಡು ಪ್ರಬಲ ಸಿದ್ಧಾಂತಗಳಿವೆ. 1932 ರಲ್ಲಿ ಜೀನ್ ಪಿಯಾಜೆನಿಂದ ಪ್ರತಿಪಾದಿಸಲ್ಪಟ್ಟಸಲ್ಪಟ್ಟ ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತವು 1950ರ ನಂತರ ಹಾರ್ವರ್ಡ್ ವಿಶ್ವವಿದ್ಯಾಲಯದ ಲಾರೆನ್ಸ್ ಕೋಹ್ಲ್‌ಬರ್ಗರವರಿಂದ ಮಾರ್ಪಾಟು ಹೊಂದಿದೆ.

ಪಿಯಾಜೆಯು ವಿವಿಧ ವಯೋಮಾನದ ಮಕ್ಕಳಿಗೆ ಪ್ರಾಕಲ್ಪನೆಯ ಸನ್ನಿವೇಶಗಳ ಕುರಿತು ನೈತಿಕ ನಿರ್ಣಯಗಳನ್ನು ತೆಗೆದುಕೊಳ್ಳಲು ಹೇಳಿದನು. ಆ ಮಕ್ಕಳು ಕೈಗೊಂಡ ನೈತಿಕ ತೀರ್ಮಾನಗಳ ಆಧಾರದ ಮೇಲೆ ಪಿಯಾಜೆ ತನ್ನ ನೈತಿಕ ಸಿದ್ಧಾಂತವನ್ನು ರೂಪಿಸಿದನು. ಸಾಮಾನ್ಯವಾಗಿ ನೈತಿಕ ವಿಕಾಸ ಬೌದ್ಧಿಕ ವಿಕಾಸದ ಹಂತಗಳೊಡನೆ ಸಂಬಂಧಿತ ರೀತಿಯಲ್ಲಿ ಉಂಟಾಗುತ್ತದೆ. ನೈತಿಕ ವಿಕಾಸ ಎರಡು ಪ್ರಮುಖ ಹಂತಗಳಲ್ಲಿ ಉಂಟಾಗುತ್ತದೆ ಎಂದು ಪಿಯಾಜೆ ಹೇಳುತ್ತಾನೆ. ಮೊದಲನೇ ಹಂತವನ್ನು ಪಿಯಾಜೆ ಬಾಹ್ಯ ನಿಯಂತ್ರಿತ ಹಂತ (Heteronomus Stage) ಎಂದು ಕರೆದಿದ್ದಾನೆ. ಒಂಬತ್ತು ವರ್ಷದವರೆಗಿನ ಮಕ್ಕಳು ಈ ಹಂತದಲ್ಲಿ ಪರಿಸರದಿಂದ ತಮ್ಮ ಮೇಲೆ ಉಂಟಾಗುವ ಪರಿಣಾಮದ ಆಧಾರದ ಮೇಲೆ ನೈತಿಕ

Digitised by Bharatavani, CIIL

ತೀರ್ಮಾನ ಕೈಗೊಳ್ಳುತ್ತಾರೆ. ಒಳ್ಳೆಯ ವರ್ತನೆ, ಕೆಟ್ಟ ವರ್ತನೆಯ ತೀರ್ಮಾನ ತನ್ನ ಮೇಲೆ ಉಂಟಾಗುವ ಪರಿಣಾಮದ (ಬಹುಮಾನ, ದಂಡನೆ) ಮೇಲೆ ಆಧಾರಿತವಾಗಿ ಆಗುತ್ತದೆ. ಕ್ರಿಯೆಯ ಹಿಂದಿರುವ ಇಚ್ಛೆ ಉದ್ದೇಶ ಗಮನಕ್ಕೆ ಬರುವುದಿಲ್ಲ.

**ಹಂತ –1 ಮನೋವೃತ್ತಿ ನಿರೋಧ ನೈತಿಕತೆ**

ಏಳರಿಂದ ಒಂಬತ್ತನೆಯ ವಯೋಮಾನದ ಮಕ್ಕಳು ವಯಸ್ಕರನ್ನು ಬಲಾಢ್ಯ ಹಾಗೂ ಸಶಕ್ತ ವ್ಯಕ್ತಿಗಳೆಂದು ಭಾವಿಸುತ್ತಾರೆ. ಅವರಿಂದ ರೂಪಿತವಾದ ನೈತಿಕ ನಿಯಮಗಳನ್ನು ಯಾವುದೇ ತೆರನಾಗಿ ಪ್ರಶ್ನಿಸದೇ ಸ್ವಿಕರಿಸುತ್ತಾರೆ. ಈ ಹಂತದಲ್ಲಿ ಮೂರು ನಿರ್ದಿಷ್ಟ ಲಕ್ಷಣಗಳಿವೆ.

**ಅ. ನೈತಿಕ ವಾಸ್ತವತೆ :** ಕೃತ್ಯಗಳನ್ನು ಘಟನೆಗಳು ಅಥವಾ ಪರಿಣಾಮಗಳ ಆಧಾರದ ಮೇಲೆ ನಿರ್ಣಯಿಸಬೇಕೇ ಹೊರತು ಅಭಿಪ್ರಾಯಗಳಿಂದಲ್ಲವೆಂಬ ನಂಬಿಕೆ ಇರುತ್ತದೆ. ಒಂದು ವೇಳೆ ರಾಮು ಚಹಾದ ಕಪ್ಪನ್ನು ಒಡೆದರೆ ಅವನು ದಂಡನೆಗೆ ಅರ್ಹನು ಎಂದು ಮಕ್ಕಳು ತೀರ್ಮಾನಿಸುತ್ತಾರೆ.

**ಬ. ನೈಸರ್ಗಿಕ ನ್ಯಾಯ :** ಬಾಹ್ಯ ವಸ್ತುವಿನಿಂದಾಗಿ ಸ್ವಯಂ–ಕೃತ ದುಷ್ಕೃತ್ಯಗಳಿಗೂ ಅನಿವಾರ್ಯವಾಗಿ ಶಿಕ್ಷೆಯಿದೆ. ವಿನಯನು ಹೇಳಿದ ಮಾತನ್ನು ಕೇಳದೆ ಅವಿಧೇಯತೆಯಿಂದ ಚಾಕುವಿನ ಜೊತೆಗೆ ಆಟವಾಡುತ್ತಿರುವಾಗ ಕೈಗೆ ಗಾಯಮಾಡಿಕೊಂಡರೆ ಅದು ಚಾಕುವಿನಿಂದಾದ ಶಿಕ್ಷೆಯೆಂದು ಪರಿಗಣಿಸಲಾಗುತ್ತದೆ.

**ಕ. ಶಿಕ್ಷೆಯೂ ಒಂದು ಕಲಿಕೆ ಮತ್ತು ಪ್ರಾಯಶ್ಚಿತ್ತ :** ಪಾಪದ ಕೃತ್ಯವನ್ನು ಮಾಡುವವರು ಯಾವಾಗಲೂ ಶಿಕ್ಷೆಗೊಳಗಾಗಬೇಕೆಂದು ಹಿಂದಿನಿಂದಲೂ ಬಂದ ನಂಬುಗೆ. ಅವರು ತಾವು ಮಾಡಿದ ದುಷ್ಕೃತ್ಯದ ಗಂಭೀರತೆಯ ಅರಿವಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಶಿಕ್ಷೆ ನೀಡಬೇಕು.

ಮಕ್ಕಳು ಕೈಗೊಂಡ ನೈತಿಕ ತೀರ್ಮಾನಗಳ ಆಧಾರದ ಮೇಲೆ ಪಿಯಾಜೆ ತನ್ನ ನೈತಿಕ ಸಿದ್ಧಾಂತವನ್ನು ರೂಪಿಸಿದ್ದಾನೆ. ಮೊದಲನೇ ಹಂತವನ್ನು ಪಿಯಾಜೆ ಬಾಹ್ಯ ನಿಯಂತ್ರಿತ ಹಂತ (Heteronomus Stage) ಎಂದು ಕರೆದಿದ್ದಾನೆ. ಒಂಬತ್ತು ವರ್ಷದವರೆಗಿನ ಮಕ್ಕಳು ಈ ಹಂತದಲ್ಲಿ ಪರಿಸರದಿಂದ ತಮ್ಮ ಮೇಲೆ ಉಂಟಾಗುವ ಪರಿಣಾಮದ ಆಧಾರದ ಮೇಲೆ ನೈತಿಕ ತೀರ್ಮಾನ ಕೈಗೊಳ್ಳುತ್ತಾರೆ. ಒಳ್ಳೆಯ ವರ್ತನೆ, ಕೆಟ್ಟ ವರ್ತನೆಯ ತೀರ್ಮಾನ ತನ್ನ ಮೇಲೆ ಉಂಟಾಗುವ ಪರಿಣಾಮ (ಬಹುಮಾನ, ದಂಡನೆ) ಮೇಲೆ ಆಧಾರಿತವಾಗಿ ಆಗುತ್ತದೆ. ಕ್ರಿಯೆಯ ಹಿಂದಿರುವ ಉದ್ದೇಶ, ಇಚ್ಛೆ ಗಮನಕ್ಕೆ ಬರುವುದಿಲ್ಲ.

ಎರಡನೇ ಹಂತದಲ್ಲಿ ನೈತಿಕ ತೀರ್ಮಾನ ಆಂತರಿಕ ಯೋಚನೆ, ವಿವೇಚನೆಯ ಆಧಾರದ ಮೇಲೆ ಆಗುತ್ತದೆ. ನೈತಿಕ ವರ್ತನೆ ಹಾಗೂ ನೈತಿಕ ತೀರ್ಮಾನ ಆಂತರಿಕವಾಗಿ ನಿರ್ದೇಶಿತವಾಗುತ್ತದೆ. ಆದ್ದರಿಂದ ಪಿಯಾಜೆ ಈ ಹಂತವನ್ನು ಸ್ವಾಯತ್ತತೆಯ ಹಂತ (Autonomous Stage) ಎಂದು ಕರೆದಿದ್ದಾನೆ. ಈ ಹಂತದಲ್ಲಿ ಮಕ್ಕಳು ಬಾಹ್ಯ ನೈತಿಕ ಪ್ರಾಧಿಕಾರವನ್ನು (ನೈತಿಕ ನಿಯಮಗಳನ್ನು) ಆಂತರೀಕರಣ ಮಾಡಿಕೊಳ್ಳುವುದರಿಂದ ಆಂತರಿಕ ನೈತಿಕ ಪ್ರಜ್ಞೆ (Conscience) ರೂಪುಗೊಳ್ಳುತ್ತದೆ. ಕ್ರಿಯೆಯ ಹಿಂದಿರುವ ಇಚ್ಛೆಯ ಉದ್ದೇಶ ಮುಖ್ಯವಾಗುತ್ತದೆ.

**ಸಹಕಾರದ ನೈತಿಕತೆ :** ಒಂಬತ್ತನೇ ವಯೋಮಾನದ ಮಕ್ಕಳಲ್ಲಿ ಸಹಕಾರ, ಪರಿಪಕ್ವಗೊಂಡ ನೈತಿಕತೆ, ಪರಸ್ಪರಾನುಸಂಬಂಧ ಮತ್ತು ಪರಸ್ಪರ ಗೌರವ ಮೂಡುತ್ತವೆ. ನಿಗದಿತವಾದ ದೀರ್ಘಕಾಲೀನ ನಿಯಮಗಳು ಇರುವುದಿಲ್ಲ. ಆದರೆ ಅವು ಪರಸ್ಪರ ಕೊಡಕೊಳ್ಳುವಿಕೆ ನಿಯಮದ ಮೇಲೆ ಆಧರಿಸಿರುತ್ತವೆ. ಅವುಗಳನ್ನು ಸಂದರ್ಭಕ್ಕನುಸಾರವಾಗಿ ಮಾರ್ಪಡಿಸಬಹುದು ಎಂದು ಮಗು ತಿಳಿದುಕೊಳ್ಳುತ್ತದೆ. ಈ ಹಂತದಲ್ಲಿ ಮಗುವು ಈ ಕೆಳಗಿನ ಅಂಶಗಳನ್ನು ವಿವೇಚಿಸಲು ಶಕ್ತವಾಗುತ್ತದೆ.

ಅ. ಉಳಿದವರ ಹಕ್ಕುಗಳನ್ನು ಗೌರವಿಸುವುದು ವ್ಯಕ್ತಿ ನಿಷ್ಠ ಜವಾಬ್ದಾರಿಯಾಗುತ್ತದೆ.

ಬ. ದುಷ್ಕೃತ್ಯದ ಪ್ರಮಾಣಕ್ಕೆ ಅನುಗುಣವಾಗಿ ಶಿಕ್ಷೆಯ ಪ್ರಮಾಣವನ್ನು ಯೋಗ್ಯ ರೀತಿಯಲ್ಲಿ ನಿಷ್ಪಕ್ಷಪಾತವಾಗಿ ನೀಡಬೇಕು ಮತ್ತು ಆ ದುಷ್ಕೃತ್ಯಕ್ಕೆ ಕಾರಣವಾದ ಅಂಶಗಳನ್ನು ಹಾಗೂ ಸಂದರ್ಭವನ್ನು ಪರಿಗಣಿಸಬೇಕು.

**ಕ. ನಷ್ಟ ಪರಿಹಾರ :** ತಪ್ಪು ಮಾಡಿದವರು ಸರಿ0ಯಾಗಿ ನಡೆದುಕೊಳ್ಳಬೇಕು. ಇಲ್ಲದಿದ್ದರೆ ತಾವು ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಬೇಕು. ಅನ್ಯಾಯಕ್ಕೆ ಒಳಗಾದ ವ್ಯಕ್ತಿಗೆ ಅನ್ಯಾಯ ಮಾಡಿದ ವ್ಯಕ್ತಿ ನಷ್ಟ ತುಂಬಿಕೊಡಬೇಕು.

ಡ. ಕೃತ್ಯದ ಹಿನ್ನೆಲೆ ಮತ್ತು ಅದರ ಪರಿಣಾಮಗಳ್ನು ಪರಿಗಣಿಸಬೇಕು. ಈಗ ಮಗುವು ಕೃತ್ಯದ ಉದ್ದೇಶ / ಇಚ್ಛೆಯನ್ನು ತಿಳಿದುಕೊಳ್ಳುವುದು ಮತ್ತು ಕ್ಷಮಿಸುವುದು. ಕೆಲವು ವೇಳೆ ಬಾಹ್ಯದ ಪರಿಣಾಮ ಅಹಿತಕರವಾಗಿದ್ದರೂ ಅದರ ಹಿಂದಿನ ಉದ್ದೇಶ ಒಳ್ಳೆಯದಿರುತ್ತದೆ. ವಿವೇಚನಾ ವಿಕಾಸದೊಂದಿಗೆ ನೈತಿಕ ಮೌಲ್ಯಗಳು ರೂಪುಗೊಳ್ಳುತ್ತವೆ. ಸಮಾಜದಲ್ಲಿ ವ್ಯಕ್ತಿಯು ಹೊಂದುವ ಜೀವನಾನುಭವಗಳು ನೈತಿಕ ವಿಕಾಸಕ್ಕೆ ವಸ್ತುವನ್ನು ಪೂರೈಸುವುದನ್ನು ಪಿಯಾಜೆ ಗುರುತಿಸಿದ್ದಾನೆ. ನಂತರದ ನೈತಿಕ ವಿಕಾಸದ ಅಧ್ಯಯನಗಳು ಪಿಯಾಜೆಯ ಸಿದ್ಧಾಂತಕ್ಕೆ ಬೆಂಬಲ ನೀಡಿವೆ. ಪಿಯಾಜೆಯ ನೈತಿಕ ವಿಕಾಸದಲ್ಲಿ ಈ ಕೆಳಗಿನ ಆರು ತತ್ವಗಳನ್ನು ಗುರುತಿಸಬಹುದು.

1. **ನೈತಿಕ ನೈಜವಾದ:** ಕೃತ್ಯದ ಹಿಂದಿನ ಉದ್ದೇಶ ಅಥವಾ ಪ್ರೇರಕಗಳನ್ನು ಗಣನೆಗೆ ತೆಗೆದುಕೊಂಡು ತೀರ್ಮಾನ ಕೈಗೊಳ್ಳದೇ ಅದರ ನೇರ ಪರಿಣಾಮಗಳನ್ನು ಆಧರಿಸಿ ತೀರ್ಮಾನ ತೆಗೆದುಕೊಳ್ಳುವುದು.

2. ಅಹಂ–ಕೇಂದ್ರಿಕೃತವಾದ: ಮಗುವಿನ ಸ್ವಂತ ಅಗತ್ಯಗಳು ಮತ್ತು

Digitised by Bharatavani, CIIL

ಅಭಿರುಚಿಗಳು ಮುಖ್ಯವಾಗುತ್ತವೆ. ಕ್ರಿಯೆಯ ಒಳ್ಳೆಯತನ/ ಕೆಟ್ಟತನ ವ್ಯಕ್ತಿಯ ಅಗತ್ಯಗಳ ತೃಪ್ತಿಯನ್ನು ಆಧರಿಸಿರುತ್ತದೆ.

3. **ನೈತಿಕ ನಿಯಮಗಳು:** ನೈತಿಕ ನಿಯಮಗಳು ಮತ್ತು ಪ್ರಮಾಣಗಳು ಪೂರ್ವ ನಿಗದಿತವಾಗಿವೆ.

ಅವುಗಳನ್ನು ಪ್ರಶ್ನಿಸುವಂತಿಲ್ಲ ಮತ್ತು ಮಾರ್ಪಡಿಸುವಂತಿಲ್ಲ. ಪಾರಸ್ಪರಿಕ ಒಪ್ಪಂದದ ಮೇಲೆ ಅವುಗಳನ್ನು ಬದಲಿಸಬಹುದು.

4. **ಗೌರವ :** ವಯಸ್ಕರಿಗೆ, ಹಿರಿಯರಿಗೆ, ಸಾಮಾಜಿಕ ವ್ಯವಸ್ಥೆಗಳಿಗೆ, ನಿಯಮಾವಳಿಗಳಿಗೆ ಗೌರವ ನೀಡಬೇಕು.

5. **ನೈತಿಕ ಸಂಬಂಧವಾದ:** ಎಲ್ಲಾ ನೈತಿಕ ಸಂಬಂಧಿತ ಅಂಶಗಳ ಸಡಿಲತೆ ಮತ್ತು ನಿಬಂಧನೆಗಳು, ಸಾಮಾಜಿಕ ಸಹಕಾರ ಇತ್ಯಾದಿ ಅಂಶಗಳ ಆಧಾರದ ಮೇಲೆ ರೂಪಿತವಾಗಿವೆ.

6. **ನೈತಿಕ ವ್ಯಕ್ತಿ ಸ್ವಾತಂತ್ರ್ಯ(ಏಕಸಾಮ್ಯ):** ನೈತಿಕ ಪ್ರಜ್ಞೆ ಮತ್ತು ಮುಕ್ತ ಆಟ, ನ್ಯಾಯಾಧಾರ, ಸ್ವತಂತ್ರ ತೀರ್ಮಾನ. ಆಂತರಿಕ ವಿವೇಚನೆ, ನೈತಿಕ ಪ್ರಜ್ಞೆ ಮತ್ತು ನೈತಿಕ ತರ್ಕದ ಆಧಾರದ ಮೇಲೆ ಆಗುತ್ತವೆ.

**ಕೋಹ್ಲ್‌ಬರ್ಗರವರ ನೈತಿಕತೆಯ ವಿಕಾಸದ ಸಿದ್ಧಾಂತ:**

ಪಿಯಾಜೆಯವರ ನೈತಿಕ ವಿಕಾಸವು ಲಾರೆನ್ಸ್ ಕೋಹ್ಲ್‌ಬರ್ಗರವರಿಂದ ಗಣನೀಯವಾಗಿ ವಿಶದೀಕರಿಸಲ್ಪಟ್ಟಿದೆ. ಕೋಹ್ಲ್‌ಬರ್ಗರವರ ದೃಷ್ಟಿಯಲ್ಲಿ ನೈತಿಕ ವಿಕಾಸವು ನೈತಿಕ ತೀರ್ಮಾನದ ಬೆಳವಣಿಗೆಯಲ್ಲಿ ಮೂರು ಮಟ್ಟಗಳನ್ನು ಒಳಗೊಂಡಿದ್ದು ಪ್ರತಿಯೊಂದು ಮಟ್ಟವು ತಲಾ ಎರಡು ಹಂತ (ನಿಲುವು)ಗಳನ್ನು ಒಳಗೊಂಡಿದೆ.

1. ಸಾಂಪ್ರದಾಯಿಕ ಪೂರ್ವ ಮಟ್ಟ: ಈ ಮಟ್ಟದಲ್ಲಿ ನೈತಿಕ ತೀರ್ಮಾನ ಪರಿಸರದ ಬಾಹ್ಯ ಅಂಶಗಳಲ್ಲಿ ನೆಲೆಸಿರಿತ್ತದೆ. ಒಳ್ಳೆಯವನು ಮತ್ತು ಕೆಟ್ಟವನು ಎಂಬ ತೀರ್ಮಾನ ಬೇರೆಯವರ ಮೇಲೆ ಉಂಟಾಗುವ ವರ್ತನೆ ಪರಿಣಾಮಗಳನ್ನು ಅವಲಂಬಿಸಿರುತ್ತದೆ. ಸರಿ ಮತ್ತು ತಪ್ಪು, ಬಹುಮಾನ ಮತ್ತು ಶಿಕ್ಷೆ, ವರ್ತನೆಯನ್ನು ಅವಲಂಬಿಸಿರುತ್ತದೆ. ಕ್ರಿಯೆಯ ಹಿಂದಿನ ಉದ್ದೇಶ ಪರಿಗಣನೆಗೆ ಬರುವುದಿಲ್ಲ.

**ಹಂತ –1 : ಶಿಕ್ಷೆ ಮತ್ತು ವಿಧೇಯತೆಯ ನಿಲುವು:**

ಕೃತ್ಯದ ದೈಹಿಕ ಪರಿಣಾಮವು ಅದರ ಒಳ್ಳೆಯದು ಅಥವಾ ಕೆಟ್ಟದ್ದನ್ನು ನಿರ್ಧರಿಸುತ್ತದೆ. ಶಿಕ್ಷೆಯನ್ನು ದೂರೀಕರಿಸುವುದು ಮತ್ತು ಹಿರಿಯರಿಗೆ ತಲೆಬಾಗುವಿಕೆಗಳು ಧನಾತ್ಮಕ ಮೌಲ್ಯ ಹೊಂದಿರುತ್ತವೆ. ಅದು ಒಳ್ಳೆಯದು ಎಂಬ ಹೊಗಳಿಕೆಯಾಗಿ ಮಾರ್ಪಡುತ್ತದೆ, ಹಿರಿಯರಿಂದ ಮನ್ನಣೆ ಪಡೆಯುವುದು, ಹೀಗೆ ದಂಡನೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಹೊಗಳಿಕೆ ಪಡೆಯುವುದಕ್ಕಾಗಿ ನಿಯಮಗಳಿಗೆ ವಿಧೇಯರಾಗಿರುತ್ತಾರೆ.

**ಹಂತ –2 :** ನೈಮಿತ್ತಿಕ ಸಾಪೇಕ್ಷತಾ ನಿಲುವು: ಸರಿಯಾದ ಕೃತ್ಯವು ವರ್ತನೆಯನ್ನು ಒಳಗೊಂಡಿರುತ್ತದೆ. ಅದು ವ್ಯಕ್ತಿಯ ಸ್ವಂತ ಅಗತ್ಯಗಳನ್ನು ಈಡೇರಿಸುವ ಸಾಧನ. ಮಾನವ ಸಂಬಂಧಗಳು ವ್ಯಾವಹಾರಿಕವಾದವುಗಳು ಎಂಬ ಅಭಿಪ್ರಾಯವಿದೆ. ಪರಸ್ಪರ ಸಂಬಂಧದ ಘಟಕಾಂಶಗಳು ಮತ್ತು ಸಮಾನ ಪಾಲ್ಗೊಳ್ಳುವಿಕೆಗಳು ಪ್ರಸ್ತುತ ಇವೆ. ಆದರೆ ಅವು ಪ್ರತಿಗಾಮಿ ಕ್ರಮದಲ್ಲಿ ಇವೆ. ಅದು ಒಳ್ಳೆಯದು ಎನ್ನುವುದು ಅಗತ್ಯವನ್ನು ತೃಪ್ತಿಪಡಿಸುತ್ತದೆ. ಹೀಗೆ ಇದರಲ್ಲಿ ವ್ಯಕ್ತಿಗಳು ಬಹುಮಾನ ಪಡೆಯುವ ವಿಶೇಷ ಕೃಪೆಯ ಸಲುವಾಗಿ ವರ್ತಿಸುತ್ತಾರೆ.

2. **ಸಾಂಪ್ರದಾಯಿಕ ಹಂತ:** ಈ ಹಂತದಲ್ಲಿ ನೈತಿಕ ಮೌಲ್ಯಗಳು ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ಪಾತ್ರವನ್ನು ನಿರ್ವಹಿಸುತ್ತದೆ. ಸಾಂಪ್ರದಾಯಿಕ ವ್ಯವಸ್ಥೆಯನ್ನು ಕಾಪಾಡುವಲ್ಲಿ ಮತ್ತು ಬೇರೆಯವರ ನಿರೀಕ್ಷಣೆಗಳನ್ನು ಸಾಧಿಸುವಲ್ಲಿ ನಿರತವಾಗಿರುತ್ತವೆ. ಅವುಗಳಲ್ಲಿ ಎರಡು ಹಂತಗಳು ಇವೆ.

**ಹಂತ –3 ಅಂತರ ವೈಯಕ್ತಿಕ ಒಪ್ಪಿಗೆ (ಒಳ್ಳೆಯ ಹುಡುಗಿ, ಸಭ್ಯ ಹುಡುಗ) ನಿಲುವು:** ಉತ್ತಮ ವರ್ತನೆಯು ಬೇರೆಯವರಿಗೆ ತೃಪ್ತಿ (ಸಮಾಧಾನ) ನೀಡುತ್ತದೆ. ಮನ್ನಣೆ ಪಡೆಯುತ್ತದೆ. ಮನ್ನಣೆಗೆ ಹೆಚ್ಚು ಮಹತ್ವವಿದೆ. ಈ ಹಂತದಲ್ಲಿ ಇತರರ ಪ್ರೀತಿಗೆ ಪಾತ್ರರಾಗಲು ವರ್ತಿಸುತ್ತಾರೆ.

**ಹಂತ –4 : ಕಾನೂನು ಮತ್ತು ಸುವ್ಯವಸ್ಥೆಯ ನಿಲುವು:** ಅಧಿಕಾರ, ನಿಗದಿತ ನಿಯಮಗಳು ಮತ್ತು ಸಾಮಾಜಿಕ ವ್ಯವಸ್ಥೆಯ ಕುರಿತು ಗಮನವಿರುತ್ತದೆ. ಸರಿಯಾದ ವರ್ತನೆಯು ತನ್ನ ಕರ್ತವ್ಯದ ನಿರ್ವಹಣೆ, ಅಧಿಕಾರಿಗಳಿಗೆ ಗೌರವ ತೋರಿಸುವಿಕೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ. ಅದು ಒಳ್ಳೆಯದೆಂದು ವ್ಯಕ್ತಿಯು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಹೀಗೆ ಅಧಿಕಾರಯುಕ್ತ ಹಿರಿಯರ ಟೀಕೆ ತಪ್ಪಿಸಿಕೊಳ್ಳುವ ಸಲುವಾಗಿ ವರ್ತಿಸುವರು.

**3) ಸಾಂಪ್ರದಾಯಿಕೋತ್ತರ ( ಸ್ವಾಯತ್ತತೆ ಅಥವಾ ತತ್ವಗಳು):**

ಈ ಮಟ್ಟದಲ್ಲಿ ನೈತಿಕ ಮೌಲ್ಯಗಳನ್ನು ವ್ಯಾಖ್ಯಾನಿಸುವ ಪ್ರಯತ್ನ ಮಾಡಲಾಗುತ್ತದೆ. ಈ ನೈತಿಕ ಮೌಲ್ಯಗಳಲ್ಲಿ ಸಿಂಧುತ್ವ ಮತ್ತು ಅನ್ವಯ ಇರುತ್ತದೆ. ಈ ಮಟ್ಟ ಮತ್ತೆರಡು ಹಂತಗಳನ್ನು ಹೊಂದಿದೆ.

**ಹಂತ –5 : ಸಾಮಾಜಿಕ ಒಪ್ಪಂದದ ನಿಲುವು:**

ಈ ಹಂತದಲ್ಲಿ ಉಪಯುಕ್ತ, ಶಾಸನೀಯ ಧ್ವನಿಯಿರುತ್ತದೆ. ಉತ್ತಮ ವರ್ತನೆಯನ್ನು ವೈಯಕ್ತಿಕ ಹಕ್ಕುಗಳು, ಇಡೀ ಸಮಾಜದಿಂದ ಒಪ್ಪಲ್ಪಟ್ಟ ಮಟ್ಟಗಳನ್ನಾಧರಿಸಿ ವ್ಯಾಖ್ಯಾನಿಸಲಾಗುತ್ತದೆ. ಅಲ್ಲಿ ವೈಯಕ್ತಿಕ ಮೌಲ್ಯಗಳ ಸಂಬಂಧವಾದ ಮತ್ತು ಅಭಿಪ್ರಾಯಗಳ ಸ್ಪಷ್ಟ ಅರಿವು ಮತ್ತು ಅಂತಃಪ್ರಜ್ಞೆ ಅಗತ್ಯತೆ ಮಹತ್ವದ್ದಾಗಿದೆ. 'ಒಳ್ಳೆಯದು' ಎಂಬುದು ಆತ್ಮ ಚಿಂತನೆಯಿಂದ ಸಾಧಾರಣೀಕರಣಗೊಂಡಿದ್ದಾಗಿದೆ. ಹೀಗೆ ಇದರಲ್ಲಿ ಸಮಾಜ ಕಲ್ಯಾಣ ಪರಿಭಾಷೆಯಲ್ಲಿ ತೀರ್ಮಾನ

Digitised by Bharatavani, CIIL

ಕೈಗೊಳ್ಳುವ ನಿಷ್ಪಕ್ಷಪಾತ ಪ್ರೇಕ್ಷಕನ ನಿಲುವು, ಗೌರವಕ್ಕೆ ತಕ್ಕಂತೆ ವರ್ತಿಸುವಿಕೆ ಇರುತ್ತವೆ.

**ಹಂತ –6 ಸಾರ್ವತ್ರಿಕ ನೈತಿಕ ತತ್ವದ ನಿಲುವು:**

ಇದಕ್ಕೆ ಅಂತಃಪ್ರಜ್ಞೆಯ ಹಂತವೆಂತಲೂ ಕರೆಯುತ್ತಾರೆ. ತಾರ್ಕಿಕ ಸಮಗ್ರತೆ, ಸಾರ್ವತ್ರಿಕತೆ ಮತ್ತು ಸ್ಥಿರತೆಗೆ ನೈತಿಕ ತತ್ವಗಳ ಮನವರಿಕೆ ಮಾಡುವುದರೊಂದಿಗೆ ವಿವೇಕದ ತೀರ್ಮಾನವೇ ನೈತಿಕತೆಯೆಂದು ವ್ಯಾಖ್ಯಾನಿಸಲಾಗುತ್ತದೆ. ಈ ತತ್ವಗಳು ಮೂರ್ತ ನಿಯಮಗಳಲ್ಲ. ಅವುಗಳು ಅಮೂರ್ತ ಪರಿಕಲ್ಪನೆಗಳಾಗಿವೆ. ಹೃದಯದಲ್ಲಿ ಈ ನ್ಯಾಯದ ಸಾರ್ವತ್ರಿಕ ತತ್ವಗಳು, ಪರಸ್ಪರತೆ ಮತ್ತು ಮಾನವನ ಹಕ್ಕುಗಳು ಸಮಾನತೆ ಮತ್ತು ವೈಯಕ್ತಿಕ ವ್ಯಕ್ತಿಗಳಾದ ಮಾನವ ಜೀವಿಗಳಿಗೆ ಗೌರವಿಸುವ ಭಾವ ಇರುತ್ತವೆ. ಅಂದರೆ 'ಒಳ್ಳೆಯದು' ಎಂಬುದು ನೈತಿಕ ತತ್ವಗಳಿಂದ ನಿರ್ಧರಿಸಲ್ಪಡುತ್ತದೆ. ಆತ್ಮ ನಿಂದನೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ವ್ಯಕ್ತಿ ವರ್ತಿಸುತ್ತಾನೆ.

ಕೋಹ್ಲ್‌ಬರ್ಗನು ಈ ವಿಕಾಸದಲ್ಲಿ ಕೆಲವರು ಕ್ಷಿಪ್ರವಾಗಿಯೂ, ಕೆಲವರು ಮಂದಗಾಮಿಯಿಂದಲೂ ತಲುಪುತ್ತಾರೆಂದು ಹೇಳುತ್ತಾನೆ. ಆದರೆ ಅದು ಯಾವುದೇ ಹಂತದಲ್ಲಿ ಅತಿಕ್ರಮಣವಿಲ್ಲ. ಅಲ್ಲದೇ ಈ ವ್ಯವಸ್ಥೆಯು ಯಾವುದೇ ಧಾರ್ಮಿಕ ಗುಂಪುಗಳಿಗೆ ಸಂಬಂಧಿಸಿಲ್ಲ. ವಿವಿಧ ಧಾರ್ಮಿಕ ಗುಂಪುಗಳ ಪ್ರತಿನಿಧಿಗಳಲ್ಲಿಯ ನೈತಿಕ ವಿವೇಚನೆಯ ವಿಕಾಸದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದುದರಿಂದ ನೈತಿಕ ವಿವೇಚನೆಯು ಸಾರ್ವತ್ರಿಕ ಪದ್ಧತಿಯನ್ನು ಅನುಸರಿಸುತ್ತದೆ.

ಮುಂದೆ ಕೋಹ್ಲ್‌ಬರ್ಗನು ಈ ಆರು ಹಂತಗಳನ್ನು ಐದಕ್ಕೆ ಇಳಿಸಿದನು. ಕೊನೆ0ಯ ಎರಡು ಹಂತಗಳನ್ನು ಸಮನ್ವಯಗೊಳಿಸಿದನು.

**ಶೈಕ್ಷಣಿಕ ನಿಹಿತಾರ್ಥಗಳು:**

ಮಗುವಿನ ವ್ಯಕ್ತಿತ್ವ ವಿಕಾಸದ ಪ್ರಕ್ರಿಯೆಯಲ್ಲಿ ನೈತಿಕ ವಿಕಾಸವು ಮಹತ್ವದ ಅಂಶವಾಗಿದೆ. ನೈತಿಕ ವಿಕಾಸವು ಮಗುವಿನ ಬೌದ್ಧಿಕ ಮತ್ತು ಸಾಮಾಜಿಕ ವಿಕಾಸದೊಂದಿಗೆ ನಿಕಟವಾದ ಸಂಬಂಧ ಹೊಂದಿದೆ. 'ನೈತಿಕ' ಎಂಬ ಪದವು ಇಂಗ್ಲೀಷ್ ಭಾಷೆಯ ಪದವಾದ Moral ಪದದ ಕನ್ನಡ ರೂಪ. Moral ಪದವು ಲ್ಯಾಟಿನ ಭಾಷೆಯ Mores ಪದದಿಂದ ಬಂದಿದೆ. Mores ಎಂದರೆ ಶಿಷ್ಟಾಚಾರಗಳು ಅಥವಾ ನಡವಳಿಕೆಗಳು ಅಥವಾ ಸಂಪ್ರದಾಯಗಳು. ನೈತಿಕ ವಿಕಾಸ ಎಂದರೆ ಸಮಾಜದಿಂದ ರೂಪಿತವಾದ ನೀತಿನಿಯಮಗಳು ಮತ್ತು ನಡವಳಿಕೆಗಳನ್ನು ವ್ಯಕ್ತಿ ಮೈಗೂಡಿಸಿಕೊಳ್ಳುವುದರ ಜೊತೆಗೆ ವ್ಯಕ್ತಿ ತನ್ನ ಆತ್ಮ ಸಾಕ್ಷಿಗಳಿಗನುಗುಣವಾಗಿ ಸ್ವಯಂಪ್ರಜ್ಞೆಯಿಂದ ಸರ್ವಹಿತವನ್ನು ದೃಷ್ಟಿಯಲ್ಲಿರಿಸಿಕೊಂಡು ವರ್ತಿಸುವುದು. ಪೂರ್ವ ಬಾಲ್ಯದಿಂದಲೇ ಮಗುವಿನ ನೈತಿಕ ವಿಕಾಸವು ಆರಂಭವಾಗುವುದು. ಆದುದರಿಂದ ಈ ಹಂತದಿಂದಲೇ ಮಗುವಿಗೆ ಸರಿಯಾದ ನೈತಿಕ ಶಿಕ್ಷಣ ನೀಡುವುದು ಅಗತ್ಯವಾಗಿರುತ್ತದೆ. ಮಕ್ಕಳ ನೈತಿಕ ವಿಕಾಸದಲ್ಲಿ ಈ ಮುಂದಿನ ಚಟುವಟಿಕೆಗಳು, ಕ್ರಮಗಳು ಉಪಯುಕ್ತವೆನಿಸುತ್ತವೆ.

1. ಮಕ್ಕಳ ದೈಹಿಕ ಶಿಕ್ಷಣಕ್ಕೆ, ಪ್ರಾಯೋಗಿಕ ಚಟುವಟಿಕೆಗಳಿಗೆ ಒತ್ತು ಕೊಡಬೇಕು. ಅವುಗಳ ನಿಯಮದ ಪಾಲನೆಗೆ ಗಮನ ನೀಡಬೇಕು.
2. ಆಟಗಳು ಮತ್ತು ಗುಂಪು ಚಟುವಟಿಕೆಗಳ ಮೂಲಕ ಅಪೇಕ್ಷಿತ ಸಾಮಾಜಿಕ ಗುಣಗಳನ್ನು ಬೆಳೆಸುವುದು.
3. ಶಿಕ್ಷೆಯನ್ನು ಸಾಧ್ಯವಾದಷ್ಟು ದೂರವಿಡುವುದು.
4. ಆರೋಗ್ಯಕರ ಹವ್ಯಾಸವನ್ನು ಪ್ರೋತ್ಸಾಹಿಸುವುದು.
5. ಬೇರೆ ಬೇರೆ ಪರಿಸ್ಥಿತಿಗಳಲ್ಲಿ ವರ್ತನೆಯ ತೀರ್ಮಾನದ ಬಗ್ಗೆ ಪ್ರತ್ಯಕ್ಷಾನುಭವಗಳನ್ನು ಒದಗಿಸುವುದು.
6. ಮಕ್ಕಳಲ್ಲಿ ಜವಾಬ್ದಾರಿ, ಆತ್ಮವಿಸ್ವಾಸ, ವಿಧೇಯತೆ ಮತ್ತು ಸೌಜನ್ಯವನ್ನು ಮೂಡಿಸುವುದು.
7. ಮಕ್ಕಳಲ್ಲಿ ಅವರವರ ಮನೋಭಾವ ಮತ್ತು ನಡತೆಯನ್ನು ಸಾಮಾಜಿಕ ನಿರೀಕ್ಷೆಗಳಿಗೆ ಹೊಂದುವಂತೆ ರೂಪಿಸಿಕೊಳ್ಳಬೇಕಾದರ ಅಗತ್ಯ ತಿಳಿಸುವುದು.
8. ಜೀವನಮೌಲ್ಯಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವುದು.
9. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಮಾಡಿಸುವುದು ಮತ್ತು ಅದರ ಮಹತ್ವ ತಿಳಿಸುವುದು.
10. ನೈತಿಕ ಕಥೆಗಳನ್ನು ಹೇಳುವುದು.
11. ಸಹಪಠ್ಯ ಚಟುವಟಿಕೆ, ಚರ್ಚಾಗೋಷ್ಠಿ, ಚರ್ಚೆ. ಆಟಪಾಟಗಳು ಮುಂತಾದವುಗಳಲ್ಲಿ ಸಕ್ರಿಯವಾಗಿ, ನಿಯಮಬದ್ಧವಾಗಿ ಭಾಗವಹಿಸುವಂತೆ ಮಾಡುವುದು.
12. ಶಿಕ್ಷಕರು ಮತ್ತು ಪಾಲಕರು ಆದರ್ಶ ಯೋಗ್ಯವಾದ ವರ್ತನೆ ಮಾದರಿ ಒದಗಿಸುವುದು.
13. ಶಾಲಾ ಪಂಚಾಯತಿಯನ್ನು ನಡೆಸುವುದು.
14. ಶಾಲೆಗಳಲ್ಲಿ ಪ್ರತಿದಿನ ಬೆಳಗ್ಗಿನ ಪ್ರಾರ್ಥನೆ, ರಾಷ್ಟ್ರೀಯ ದಿನಗಳನ್ನು, ಇತರ ಧಾರ್ಮಿಕ ಹಬ್ಬಗಳನ್ನು ಆಚರಿಸುವುದು.
15. ಕ್ಯಾಂಪ್‌ಗಳನ್ನು ನಡೆಸುವುದು.
16. ನೈತಿಕ ವರ್ತನೆಗೆ ಮಾದರಿಯಾದ ಪ್ರಸಿದ್ಧ ವ್ಯಕ್ತಿಗಳ ಜೀವನದ ಬಗ್ಗೆ ತಿಳಿಸುವುದು.

ಈ ಎಲ್ಲ ಚಟುವಟುಕೆಗಳಿಂದ ಮಕ್ಕಳಲ್ಲಿ ಆತ್ಮವಿಸ್ವಾಸ, ಧೈರ್ಯ, ಸಹಬಾಳ್ವೆ, ಸಹಕಾರ ಮುಂತಾದ ನೈತಿಕ ಗುಣಗಳು ಬೆಳೆದು ಮಕ್ಕಳು ಸಮಾಜದಲ್ಲಿ ಉತ್ತಮ ಪ್ರಜೆಯಾಗುತ್ತಾರೆ.

–ಸಿ. ಲಿಯೋನಿಲ್ಲಾ ಮಿನೇಜಸ್

Digitised by Bharatavani, CIIL

# ಪ

## ಪಠ್ಯಕ್ರಮ

ಶಿಕ್ಷಣ ಪತ್ರಿಕೆಯ ಜೀವಾಳವೇ ಪಠ್ಯಕ್ರಮ. ಶಿಕ್ಷಣದ ಸಾಧನಗಳಲ್ಲಿ ಪಠ್ಯಕ್ರಮಕ್ಕೆ ಅಗ್ರಸ್ಥಾನ. ಪಠ್ಯಕ್ರಮವು ಶಿಕ್ಷಣದ ಹೃದಯದಂತೆ. ಶೈಕ್ಷಣಿಕ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವ ಕೇಂದ್ರಬಿಂದುವೇ ಪಠ್ಯಕ್ರಮ. ಇದು ಕೇವಲ ವರ್ಗಕೋಣೆಯ ನಾಲ್ಕು ಗೋಡೆಗೆ ಸೀಮಿತವಾಗಿರದೆ ಮಗುವಿನ ಸರ್ವಾಂಗೀಣ ವಿಕಾಸಗೈಯುವ ಸಾಧನವಾಗಿದೆ. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಪರ್ಕದಿಂದ ಉಂಟಾಗುವ ಎಲ್ಲ ಅನುಭವಗಳ ಮೊತ್ತವನ್ನು ಒಳಗೊಂಡಿರುವುದೇ ಪಠ್ಯಕ್ರಮವಾಗಿದೆ. ಇದು ಪಠ್ಯ ಚಟುವಟಿಕೆಗಳನ್ನಲ್ಲದೆ ಸಹಪಠ್ಯ ಚಟುವಟಿಕೆಗಳು ಹಾಗೂ ಪಠ್ಯೇತರ ಚಟುವಟಿಕೆ ಗಳನ್ನು ಒಳಗೊಂಡಿದೆ.

ಪಠ್ಯಕ್ರಮ ಪದವು ಆಂಗ್ಲ ಭಾಷೆಯ "Curriculum" ಎಂಬ ಪದಕ್ಕೆ ಸಮಾನವಾದುದು. "Curriculum" ಎಂಬ ಪದವು ಲ್ಯಾಟಿನ್ ಭಾಷೆಯ "Curriculum" ಎಂಬ ಶಬ್ದದಿಂದ ಹುಟ್ಟಿದೆ. ಅದರ ಅರ್ಥ "a course to be run for reaching a certain goal or destination". ಅಂದರೆ ನಿಗದಿತ ಗುರಿ ಮುಟ್ಟಲು ಅನುಸರಿಸಬೇಕಾದ ದಾರಿ ಎಂದಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ತಲುಪಲು ಅನುಸರಿಸುವ ಅಭ್ಯಾಸಕ್ರಮ, ಬೋಧನಾ ವಿಧಾನಗಳು, ಕಲಿಕಾ ತಂತ್ರಗಳು ಹಾಗೂ ಮಕ್ಕಳು ವರ್ಗಕೋಣೆಯಲ್ಲಿ, ಪುಸ್ತಕ ಭಂಡಾರದಲ್ಲಿ, ಪ್ರಯೋಗಾಲಯದಲ್ಲಿ, ಆಟದ ಬಯಲಿನಲ್ಲಿ, ಶಿಕ್ಷಕರೊಡನೆ, ಸಮಾಜದೊಡನೆ ಬರುವ ಸಂಪರ್ಕದಿಂದ ಪಡೆಯುವ ಅನುಭವಗಳೆಲ್ಲಾ ಪಠ್ಯಕ್ರಮದಲ್ಲಿ ಸೇರಿರುತ್ತದೆ. ಸುವ್ಯವಸ್ಥಿತವಾದ, ಕ್ರಮಬದ್ಧವಾದ ಜ್ಞಾನವನ್ನು ಹೊಂದಿದ ವಿಜ್ಞಾನ ಪಠ್ಯಕ್ರಮವು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ವಿವೇಚನಾ ಶಕ್ತಿ, ಆಲೋಚನಾ ಶಕ್ತಿ, ತಾರ್ಕಿಕ ವಿಚಾರ, ಶೋಧನಾ ಮನೋಭಾವ, ಸತ್ಯದ ಶೋಧನೆ, ವೈಜ್ಞಾನಿಕ ವಿಶ್ಲೇಷಣೆ ಮುಂತಾದವುಗಳನ್ನು ಬೆಳೆಸುವುದು.

ವ್ಯಾಖ್ಯೆಗಳು: ಹಲವಾರು ಶಿಕ್ಷಣ ತಜ್ಞರು 'ಪಠ್ಯಕ್ರಮ'ಕ್ಕೆ ತಮ್ಮದೇ ಆದಂತಹ ವ್ಯಾಖ್ಯೆಗಳನ್ನು ನೀಡಿದ್ದಾರೆ. ಕನ್ನಿಂಗ್ ಹ್ಯಾಮ್: "ಛಾಯಾಗ್ರಾಹಕ ಕೊಠಡಿಯಲ್ಲಿ (ಶಾಲೆಯಲ್ಲಿ) ತನ್ನ ವಿಚಾರ (ಉದ್ದೇಶ)ಗಳಿಗೆ ತಕ್ಕಂತೆ ವಸ್ತುವಿಗೆ (ವಿದ್ಯಾರ್ಥಿಗೆ) ಸಹಾಯಕವಾಗುವ ಸಾಧನವೇ ಪಠ್ಯಕ್ರಮ". ಕೆ.ಜೆ.ಸಯ್ಯುದ್ದೀನ್: "ಮಗುವನ್ನು ಒಂದು ಪರಿಸರಕ್ಕೆ ಹೊಂದಿಸಲು ನೆರವಾಗಲು ಒಂದು ವ್ಯವಸ್ಥಿತ ಹಾಗೂ ಕ್ರಮಬದ್ಧ ಮಾರ್ಗವೇ ಪಠ್ಯಕ್ರಮ". ಫ್ರೊಬೆಲ್: "ಮಾನವ ಜನಾಂಗದ ಜ್ಞಾನ ಮತ್ತು ಅನುಭವಗಳ ಸಾರ ಸಂಗ್ರಹವೇ ಪಠ್ಯಕ್ರಮವೆಂದು ಹೇಳಬಹುದು". ಜಾನ್ ಡ್ಯೂಯಿ: "ಉದ್ದೇಶಿತ ಸತತ ಕ್ರಿಯೆಯಲ್ಲಿ ಸಂಪನ್ಮೂಲಗಳಾಗಿ ಅಥವಾ ತೊಂದರೆಗಳಾಗಿ ಬರುವ ವಸ್ತುಗಳು, ವಿಚಾರಗಳು ಮತ್ತು ಅನುಭವಗಳೇ ಪಠ್ಯಕ್ರಮ". ವಿ.ಶ್ಯಾಮವೆಲ್: "ಶಾಲೆಯಲ್ಲಿ, ವರ್ಗಕೋಣೆಯಲ್ಲಿ, ಪ್ರಯೋಗಾಲಯದಲ್ಲಿ, ಕಾರ್ಯಾಗಾರದಲ್ಲಿ, ಆಟದ ಬಯಲಿನಲ್ಲಿ ನಡೆಯುವ ವಿವಿಧ ಬಗೆಯ ಚಟುವಟಿಕೆಗಳ ಹಾಗೂ ಶಿಕ್ಷಕ ಮತ್ತು ವಿದ್ಯಾರ್ಥಿಗಳು ಅನೌಪಚಾರಿಕ ಸಂಪರ್ಕದಿಂದ ವಿದ್ಯಾರ್ಥಿಯು ಸಂಪೂರ್ಣವಾಗಿ ಪಡೆಯುವ ಅನುಭವಗಳನ್ನು ಪಠ್ಯಕ್ರಮ ಎನ್ನಬಹುದು". ಮನ್ರೋ: "ಪಠ್ಯಕ್ರಮವು ಶಾಲೆಯಲ್ಲಿಯ ಎಲ್ಲಾ ಅನುಭವಗಳನ್ನು ಸದುಪಯೋಗ ಪಡಿಸಿಕೊಳ್ಳಲು ಬೇಕಾಗಿರುವ ಶಿಕ್ಷಣದ ಗುರಿಗಳನ್ನು ಮೈಗೂಡಿಸಿಕೊಂಡಿರುತ್ತದೆ". ಕ್ರೋ ಮತ್ತು ಕ್ರೋ: "ಮಾನಸಿಕವಾಗಿ, ಶಾರೀರಿಕವಾಗಿ, ಭಾವನಾತ್ಮಕವಾಗಿ, ಸಾಮಾಜಿಕವಾಗಿ ಮತ್ತು ನೈತಿಕವಾಗಿ ವಿದ್ಯಾರ್ಥಿಗಳು ಬೆಳೆಯಲು ಸಹಾಯ ಮಾಡುವ ಗುರಿಗಳನ್ನು ಹೊಂದಿರುವ ಶಾಲೆಯ ಒಳಗೆ ಮತ್ತು ಹೊರಗೆ ನೀಡಬಹುದಾದ ಅನುಭವಗಳ ಸೂಚನಾ ಪಟ್ಟಿಯೇ ಪಠ್ಯಕ್ರಮ".

ಈ ಎಲ್ಲ ವ್ಯಾಖ್ಯೆಗಳನ್ನು ವಿಶ್ಲೇಷಿಸಿದಾಗ ಸಾಮಾನ್ಯವಾಗಿ ಪಠ್ಯಕ್ರಮವು ಶಿಕ್ಷಣ ನೀಡುವ ಪೂರ್ವಯೋಜಿತ ಅಭ್ಯಾಸ ಕ್ರಮ ಮತ್ತು ಕಲಿಕಾ ಚಟುವಟಿಕೆಗಳು ಹಾಗೂ ಕಲಿಕಾ ಅನುಭವಗಳನ್ನೊಳಗೊಂಡ ಒಂದು ಸಂಚಯ ವಾಗಿದೆ. ವಿದ್ಯಾರ್ಥಿಗಳನ್ನು ಸದಾ ಕಲಿಕೆಯಲ್ಲಿ ಆಸಕ್ತಿ ಉಳ್ಳವರನ್ನಾಗಿ ಮಾಡಿ ಸಾಮಾಜಿಕ, ವೈಜ್ಞಾನಿಕ, ಪ್ರಾಯೋಗಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅವರು ಪ್ರಗತಿ ಹೊಂದಲು ಭೂಮಿತಿಯನ್ನು ಹೊಂದಿಸಿ ಕೊಡುವುದೇ ಪಠ್ಯಕ್ರಮ. ಆಧುನಿಕ ಪರಿಕಲ್ಪನೆ ಪ್ರಕಾರ ಪಠ್ಯಕ್ರಮವು ಮಗುವಿನ ಸರ್ವತೋಮುಖ ವ್ಯಕ್ತಿತ್ವವನ್ನು ವಿಕಾಸಗೈಯುವ ಸಾಧನವಾಗಿದೆ. ಪಠ್ಯಕ್ರಮವು ಮಗುವಿನ ಬೌದ್ಧಿಕ, ದೈಹಿಕ, ನೈತಿಕ, ಸಾಮಾಜಿಕ ಸಾಮರ್ಥ್ಯಗಳನ್ನು ಬಲಗೊಳಿಸುವ ಶಿಕ್ಷಣ ವ್ಯವಸ್ಥೆಯ ಕೇಂದ್ರ ಬಿಂದು.

ಪಠ್ಯಕ್ರಮದ ಉದ್ದೇಶಗಳು: ಪಠ್ಯಕ್ರಮದ ಪ್ರಮುಖವಾದ ಉದ್ದೇಶವೆಂದರೆ ವಿದ್ಯಾರ್ಥಿಯ ಸರ್ವಾಂಗೀಣ ವಿಕಾಸ ಗೈಯುವುದು. ಅಂದರೆ, ಮಗುವಿನ ಬೌದ್ಧಿಕ, ಮಾನಸಿಕ, ಶಾರೀರಿಕ, ಸಾಮಾಜಿಕ, ಭಾವನಾತ್ಮಕ ಕ್ಷೇತ್ರಗಳಲ್ಲಿ ವಿಕಾಸ ಸಾಧಿಸುವುದು. ಇದು ಭಾವಿಜೀವನಕ್ಕೆ ಮಕ್ಕಳನ್ನು ತಯಾರುಗೊಳಿಸುವಂತೆ ಇರಬೇದು. ಅವರು ಸ್ವತಂತ್ರವಾಗಿ ಬದುಕುವ ಸಾಮರ್ಥ್ಯ ಪಡೆಯಬೇಕು. ನೈಜ ಜೀವನದ ವಿವಿಧ ಚಟುವಟಿಕೆಗಳಿಗೆ ಅವಕಾಶ ಕೊಡಬೇಕು. ಇದರಿಂದ ಸಮಾಜ, ಸಮೃದ್ಧ ಜೀವನದ ಅರಿವುಂಟಾಗುವುದು. ಮಕ್ಕಳು ಸ್ವತಂತ್ರ ವಿಚಾರ, ತುಲನೆ, ತರ್ಕಶಕ್ತಿ, ಆಲೋಚನೆ,

Digitised by Bharatavani, CIIL

ವೈಜ್ಞಾನಿಕ ಮನೋಭಾವ, ಪ್ರಯೋಗ ಹಾಗೂ ನಿರೀಕ್ಷಣೆ ಬೆಳೆಯುವಂತೆ ಪ್ರಯತ್ನಿಸಬೇಕು. ಅದು ಬೋಧನೆಯ ಗುರಿ ಮತ್ತು ಉದ್ದೇಶಗಳನ್ನು ವಿವರಿಸುತ್ತದೆ. ವಿವಿದ ಅಭಿರುಚಿಯುಳ್ಳ ಮಕ್ಕಳ ಬೇಡಿಕೆಗಳನ್ನು ಪೂರೈಸುವುದು. ಪರಿಣಾಮ ಕಾರಿ ಬೋಧನೆಗೆ ಶಿಕ್ಷಕನಿಗೆ ಮಾರ್ಗದರ್ಶನ ಹಾಗೂ ಸಹಾಯ ಮಾಡುವುದು. ತಿಳುವಳಿಕೆ, ವಿವೇಚನೆ, ಕೌಶಲ್ಯ, ಮೆಚ್ಚುಗೆ ಮನೋಭಾವ ಮುಂತಾದ ಉತ್ತಮ ಗುಣಗಳನ್ನು ಬೆಳೆಸುವುದು.

ಪ್ರಸ್ತುತ ಪಠ್ಯಕ್ರಮದ ದೋಷಗಳು: ಪಠ್ಯಕ್ರಮವು ಶಿಕ್ಷಣದ ಕೇಂದ್ರ ಬಿಂದು. ಶಿಕ್ಷಣದ ಗುರಿಗಳು ಹಾಗೂ ಉದ್ದೇಶಗಳು ಸಮರ್ಪಕವಾಗಿ ಈಡೇರಬೇಕಾದಲ್ಲಿ ಉತ್ತಮ ಪಠ್ಯಕ್ರಮದ ಅವಶ್ಯಕತೆ ಇದೆ. ಆದರೆ ಹಲವಾರು ಕಾರಣಗಳಿಂದ ಅಸಮರ್ಪಕ ಸಂಘಟನಾ ಹಾಗೂ ರಚನಾ ತತ್ವಗಳಿಂದ ಇಂದಿನ ಪಠ್ಯಕ್ರಮ ಹಲವಾರು ದೋಷಗಳಿಂದ ಕೂಡಿದೆ. ಈ ದೋಷಗಳು ಕೆಳಗಿನಂತಿವೆ:

(1) ಇಂದಿನ ಪಠ್ಯಕ್ರಮವು ಮನೋವೈಜ್ಞಾನಿಕ ತತ್ವದ ಆಧಾರದ ಮೇಲೆ ರಚಿಸಲ್ಪಟ್ಟಿರುವುದಿಲ್ಲ. ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ, ಮನೋಭಾವ, ವೈಯಕ್ತಿಕ ವಿಭಿನ್ನತೆ ಮುಂತಾದವುಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟಿರುವುದಿಲ್ಲ. (2) ಪಠ್ಯ ಕ್ರಮವು ವಿಷಯದ ಪಾಠಗಳನ್ನು ಸರಳತೆಯಿಂದ ಕ್ಲಿಷ್ಟತೆಯ ಆಧಾರವಾಗಿ ಜೋಡಿಸಿರದೇ, ಸಾಕಷ್ಟು ಪ್ರಮಾಣದಲ್ಲಿ ಉದಾಹರಣೆಗಳಿರುವುದಿಲ್ಲ. ಆ ಉದಾಹರಣೆಗಳನ್ನು ಜೀವನದ ನೈಜ ಘಟನೆಗಳಿಂದ ಆಯ್ದುಕೊಂಡಿರುವುದಿಲ್ಲ. (3) ಪಠ್ಯಕ್ರಮದ ರಚನೆಯಲ್ಲಿ ಅನುಭವಿ ಶಿಕ್ಷಕರಿಗೆ ಅವಕಾಶ ದೊರೆಯದೆ ಇರುವುದು. (4) ಪಠ್ಯಕ್ರಮವು ಸಂಕುಚಿತ ಮನೋಭಾವ ಉಳ್ಳದ್ದಾಗಿದ್ದು, ವಿದ್ಯಾರ್ಥಿಗಳ ಬುದ್ಧಿ ವಿಕಾಸಕ್ಕೆ ಅವಕಾಶವಿಲ್ಲ. ಕೇವಲ ಯಾಂತ್ರಿಕವಾಗಿ ಕಲಿಯುತ್ತಾ ಹೋಗುವುದಾಗಿದೆ. (5) ಪಠ್ಯಕ್ರಮವು ಕೇವಲ ಪರೀಕ್ಷಾ ಪೂರಕವಾಗಿದೆಯೇ ಹೊರತು ಜ್ಞಾನ ವಿಕಾಸಕ್ಕಲ್ಲ. (6) ಪಠ್ಯಕ್ರಮವು ವಿದ್ಯಾರ್ಥಿ ಕೇಂದ್ರೀಕೃತವಾಗಿರುವುದಿಲ್ಲ. ಕೇವಲ ಶಿಕ್ಷಕ ಕೇಂದ್ರೀಕೃತ ಮತ್ತು ಪರೀಕ್ಷಾ ಕೇಂದ್ರೀಕೃತವಾಗಿರುವುದು. (7) ಹೊಸತನವನ್ನು ಪಠ್ಯಕ್ರಮ ಅಳವಡಿಸಿಕೊಂಡಿಲ್ಲ. ಬದಲಾಗುತ್ತಿರುವ ಸಮಾಜದ ಬೇಡಿಕೆಗಳನ್ನು ಪೂರೈಸುವುದಿಲ್ಲ. (8) ಪಠ್ಯಕ್ರಮದಲ್ಲಿ ಚಟುವಟಿಕೆಗಳಿಗೆ ಮತ್ತು ವಿದ್ಯಾರ್ಥಿಗಳ ಸೃಜನಾತ್ಮಕತೆಗೆ ಅವಕಾಶವಿಲ್ಲ. (9) ಪಠ್ಯಕ್ರಮದಲ್ಲಿ ವಿಷಯದ ಜೋಡಣೆ ತರ್ಕಬದ್ಧವಾಗಿ ಮತ್ತು ತಾತ್ವಿಕವಾಗಿ ಇರುವುದಿಲ್ಲ ಅಲ್ಲದೆ ಪಠ್ಯಕ್ರಮದಲ್ಲಿ ವಿಷಯದ ಸರಿಯಾದ ಮಾರ್ಗಸೂಚಿ ಇರುವುದಿಲ್ಲ. (10) ಪಠ್ಯಕ್ರಮದಲ್ಲಿ ಹೊಸ ಹೊಸ ಕಲಿಸುವ ಪದ್ಧತಿಗಳನ್ನು ಹಾಗೂ ವೈಜ್ಞಾನಿಕ ತಂತ್ರಗಳನ್ನು ಅಳವಡಿಸಿಕೊಳ್ಳಲು ಅವಕಾಶವಿಲ್ಲ. (11) ಪಠ್ಯಕ್ರಮದಲ್ಲಿ ನೈಜ್ಯತೆ ಇರುವುದಿಲ್ಲ. ನಿತ್ಯ ಜೀವನದಲ್ಲಿ ನಡೆಯುತ್ತಿರುವ ಸಮಸ್ಯೆಗಳ ಬಗ್ಗೆ ಅರ್ಥ ಕಲ್ಪಿಸುವುದಿಲ್ಲ. (12) ಪಠ್ಯಕ್ರಮದಲ್ಲಿ ವಿಷಯಕ್ಕೆ ಪೂರಕವಾದ ಆಧಾರ ಗ್ರಂಥಗಳ ಬಗ್ಗೆ, ಸಹಾಯಕ ಗ್ರಂಥಗಳ ಬಗ್ಗೆ ನಮೂದನೆ ಇರುವುದಿಲ್ಲ. (13) ಎಲ್ಲಾ ಬೋಧನಾ ಉದ್ದೇಶಗಳಿಗೆ ಅನುಗುಣವಾಗಿ ಪಠ್ಯಪುಸ್ತಕವು ರಚನೆಯಾಗಿರುವುದಿಲ್ಲ. (14) ಪಟ್ಟಣ ಪ್ರದೇಶದ ಮತ್ತು ಗ್ರಾಮೀಣ ಪ್ರದೇಶದ ಭೇದಭಾವ ಪಠ್ಯಕ್ರಮದಲ್ಲಿಯೂ ಸ್ವಲ್ಪವಾಗಿ ಕಂಡುಬರುತ್ತದೆ.

**ಪಠ್ಯಕ್ರಮದ ರಚನಾ ತತ್ವಗಳು:**

1. **ಉಪಯುಕ್ತತೆಯ ತತ್ವ:** ದಿನನಿತ್ಯ ಜೀವನದಲ್ಲಿ ಪಠ್ಯಕ್ರಮವು ಅತಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ, ದಿನನಿತ್ಯ ಜೀವನಕ್ಕೆ ಉಪಯೋಗವಾಗುವಂತಹ ಹಾಗೂ ಇಂದಿನ ಜೀವನಕ್ಕೆ ಸಹಾಯವಾಗುವಂತಹ ಅಂಶಗಳನ್ನು ಪಠ್ಯಕ್ರಮ ಒಳಗೊಂಡಿರಬೇಕು.

2. **ಶಿಸ್ತಿನ ತತ್ವ:** ಪಠ್ಯಕ್ರಮವು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಮೂಡಿಸುವಂತೆ ರೂಪುಗೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಆಂತರಿಕ ಶಿಸ್ತು ಬೆಳೆದರೆ ತಾನಾಗಿಯೇ ಬಾಹ್ಯ ಶಿಸ್ತು ಬೆಳೆಯುತ್ತದೆ.

3. **ಸಾಂಸ್ಕೃತಿಕ ತತ್ವ:** ಕಾಲ ಕಾಲಕ್ಕೆ ಬದಲಾಗುವ ನಾಗರಿಕತೆ ಹಾಗೂ ಸಂಸ್ಕೃತಿಗಳನ್ನು ನಿರ್ಧರಿಸುವಂತೆ ಪಠ್ಯಕ್ರಮ ವಿರಬೇಕು. ಜೀವನದ ಮೇಲೆ ಪ್ರಭಾವ ಬೀರುವ ಪಠ್ಯಕ್ರಮವು ಪ್ರಪಂಚದ ಬಗೆಗೆ ನಮ್ಮನ್ನು ಪ್ರಜ್ಞಾವಂತ ರನ್ನಾಗಿಸುವಲ್ಲಿ, ಬೌದ್ಧಿಕ ವಿವೇಚನೆಯನ್ನು ಉನ್ನತಕ್ಕೇರಿಸುವಲ್ಲಿ ಸಹಾಯ ಮಾಡಬೇಕು. ವಿದ್ಯಾರ್ಥಿಯನ್ನು ಒಳ್ಳೆಯ ನಾಗರಿಕನನ್ನಾಗಿ ರೂಪಿಸುವ ಮೌಲ್ಯಗಳನ್ನು ಒಳಗೊಂಡಂತೆ ಪಠ್ಯಕ್ರಮದ ರಚನೆಯಾಗಬೇಕು.

4. **ಮಗು ಕೇಂದ್ರಿತ ತತ್ವ:** ನಮ್ಮ ಇಂದಿನ ಶಿಕ್ಷಣ ಪದ್ಧತಿಯು 'ಮಗು ಕೇಂದ್ರಿತ ಶಿಕ್ಷಣ ಪದ್ಧತಿ'ಯಾಗಿರುವುದರಿಂದ, ಶಿಕ್ಷಣ ಪದ್ಧತಿಯ ಮುಖ್ಯ ಉದ್ದೇಶ ಮಗುವಿನ ಸರ್ವಾಂಗೀಣ ವಿಕಾಸ. ಆದ್ದರಿಂದ, ಪಠ್ಯಕ್ರಮವು ಈ ತತ್ವವನ್ನು ಆಧರಿಸಿ ರಚನೆಯಾಗಬೇಕು. ಪಠ್ಯಕ್ರಮವು ವಿದ್ಯಾರ್ಥಿಗಳ ವಯಸ್ಸು, ಬುದ್ಧಿಮಟ್ಟ, ಬೇಡಿಕೆಗಳು, ಅಭಿರುಚಿ, ಆಸಕ್ತಿ, ಮನೋಭಾವ ಮುಂತಾದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ರಚನೆಯಾಗಬೇಕು.

5. **ಸಮಾಜ ಕೇಂದ್ರಿತ ತತ್ವ:** ಶಾಲೆ ಸಮಾಜದ ಅವಿಭಾಜ್ಯ ಅಂಗ. ಮಗು ಸಮಾಜದ ಒಂದು ಘಟಕ. ಆದ್ದರಿಂದ, ಸಮಾಜದ ಬೇಕು ಬೇಡಗಳನ್ನು ಆಧರಿಸಿ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಅವಶ್ಯವಾಗಿ ಬೇಕಾದಂತಹ ವಿಷಯಗಳನ್ನು, ಸಮಾಜದ ಉದ್ದೇಶಗಳನ್ನು ಹಾಗೂ ದಿನನಿತ್ಯ ಸಮಾಜದಲ್ಲಿ ನಡೆಯುವ ಚಟುವಟಿಕೆಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ರಚಿಸಬೇಕು.

6. **ವಿವಿಧತೆಯ ತತ್ವ:** ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಭೇದಗಳಿರುವವು. ಆದ್ದರಿಂದ, ವಿದ್ಯಾರ್ಥಿಗಳ ಮನೋವೈಜ್ಞಾನಿಕ ಅಂಶಗಳನ್ನು

Digitised by Bharatavani, CIIL

ಆಧಾರವಾಗಿಟ್ಟುಕೊಂಡು ವೈವಿಧ್ಯಪೂರ್ಣವಾದ ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿ ರಚಿಸಬೇಕು. ವಿದ್ಯಾರ್ಥಿಗಳ ಸಾಮರ್ಥ್ಯಕ್ಕನುಗುಣವಾಗಿ, ಮನೋಮಟ್ಟಕ್ಕನುಗುಣವಾಗಿ ವಿವಿಧ ಬಗೆಯ ಚಟುವಟಿಕೆ ಗಳನ್ನು ಹಾಗೂ ಅನುಭವಗಳನ್ನು ಒಳಗೊಂಡ ಪಠ್ಯಕ್ರಮ ರಚನೆಯಾಗಬೇಕು.

7. **ಪ್ರಾಯೋಗಿಕ ತತ್ವ:** ನೋಡಿ ಹಾಗೂ ಕೇಳಿ ಕಲಿತದ್ದಕ್ಕಿಂತ 'ಮಾಡಿ ಕಲಿತದ್ದು' ಹೆಚ್ಚು ಪರಿಣಾಮಕಾರಿ ಯಾಗಿರುವುದು. ಯಾವುದೇ ಸಿದ್ಧಾಂತವು ರೂಢಿಗೆ ಬರಬೇಕಾದರೆ ಅದು ಪ್ರಾಯೋಗಿಕ ಆಧಾರದ ಮೇಲೆಯೇ. ಆದ್ದರಿಂದ, 'ಮಾಡುತ್ತಾ ಕಲಿ' ಎಂಬ ತತ್ವವನ್ನು ಆಧಾರವಾಗಿಟ್ಟಕೊಂಡು ಹೆಚ್ಚು ಪ್ರಾಯೋಗಿಕ ಚಟುವಟಿಕೆಗಳಿಗೆ ಪಠ್ಯಕ್ರಮದಲ್ಲಿ ಅವಕಾಶ ಕೊಡಬೇಕು.

8. **ಶಿಥಿಲತೆಯ ತತ್ವ:** ಕಾಲ ಬದಲಾದಂತೆ ಜನರ ಜೀವನ ಕ್ರಮ, ಸಂಸ್ಕೃತಿ, ಆಚಾರ ವಿಚಾರಗಳು, ನಡೆನುಡಿಗಳಲ್ಲಿ ಬದಲಾವಣೆ ಕಾಣುತ್ತೇವೆ. ಬದಲಾದ ಸಮಾಜದ ಜನರ ದೃಷ್ಟಿಕೋನವನ್ನು ಆಧರಿಸಿ ಅವರವರ ಮೂಲ ಬೇಡಿಕೆ ಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ಬದಲಾವಣೆ ಮಾಡಬೇಕು. ಅದು ಸ್ಥಿರತೆಯನ್ನು ಹೊಂದಿರಬಾರದು. ಕಾಲಕಾಲಕ್ಕೆ ಬದಲಾಗುತ್ತಿರುವ ಸಮಾಜದ ದೃಷ್ಟಿಕೋನವನ್ನು ಅರಿತು ಪಠ್ಯಕ್ರಮ ರಚನೆಯಾಗಬೇಕು.

9. **ಮುಂದಾಲೋಚನೆಯ ತತ್ವ:** ಪಠ್ಯಕ್ರಮ ರಚಿಸುವಾಗ ಮುಂದಾಲೋಚನೆಯನ್ನು ಅರಿತು ರಚಿಸಬೇಕು. ಮಕ್ಕಳ ಭಾವಿ ಜೀವನಕ್ಕೆ ಉಪಯೋಗವಾಗುವಂತಹ ಅಂಶಗಳು ಪಠ್ಯಕ್ರಮದಲ್ಲಿ ಇರಬೇಕು. ಸಮಾಜದಲ್ಲಿ ಮಗುವಿನ ಪಾತ್ರವೇನು? ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ಪಠ್ಯಕ್ರಮ ರಚೆನಯಾಗಬೇಕು.

10. **ಸೃಜನಶೀಲತೆಯ ತತ್ವ:** ಸಾಮಾನ್ಯವಾಗಿ ಪೂರ್ಣವಾದ ಅಥವಾ ಭಾಗಶಃ ಹೊಸದನ್ನು ಉತ್ಪಾದಿಸುವುದೇ ಸೃಜನಶೀಲತೆ. ಇದು ಪ್ರವೃತ್ತಿ, ಸೂಕ್ಷ್ಮತೆ, ಸಂಬಂಧಗಳನ್ನು ನೋಡುವ ಅರ್ಹತೆ, ಸಂಯೋಜನೆಗೊಳಿಸುವ ಶಕ್ತಿ ಹಾಗೂ ದೀರ್ಘಪ್ರಯತ್ನ ಮುಂತಾದವುಗಳು ಸೃಜನಶೀಲತೆಗೆ ಸ್ಫೂರ್ತಿ ನೀಡುವ ಅಂಶಗಳಾಗಿರುವುದರಿಂದ ಈ ಪೂರಕ ಅಂಶಗಳು ಪಠ್ಯಕ್ರಮದಲ್ಲಿರಬೇಕು. ಪಠ್ಯಕ್ರಮದಲ್ಲಿ ಸೃಜನಶೀಲ ಚಟುವಟಿಕೆಗಳನ್ನು ಅಳವಡಿಸಬೇಕು.

11. **ಚಟುವಟಿಕಾ ಕೇಂದ್ರಿತ ತತ್ವ:** ಪಠ್ಯಕ್ರಮದಲ್ಲಿ ಹೆಚ್ಚು ಚಟುವಟಿಕೆಗಳಿಗೆ ಅವಕಾಶ ನೀಡಬೇಕು. ಅವುಗಳು ವಿದ್ಯಾರ್ಥಿಗಳಿಗೆ ಹಾಗೂ ವಿಷಯಕ್ಕೆ ಅನುಗುಣವಾಗಿರಬೇಕು. ಪಠ್ಯಕ್ರಮದಲ್ಲಿ ಯೋಚನಾ, ಸಂಶೋಧನಾ, ಚಟುವಟಿಕಾ, ಪ್ರಾತ್ಯಕ್ಷಿಕಾ ವಿಧಾನಗಳಿಗೆ ಹೆಚ್ಚು ಅವಕಾಶ ಕಲ್ಪಿಸಬೇಕು.

12. **ಸಹಸಂಬಂಧ ತತ್ವ:** ಸಹಸಂಬಂಧವು ಸಾಮಾನ್ಯವಾಗಿ ಒಂದೇ ರೀತಿಯ ಸ್ವರೂಪ ಹೊಂದಿರುವ ವಿಷಯಗಳ ನಡುವೆ ಇರಬೇಕು. ಸಹಸಂಬಂಧೀಕರಿಸಿ ಬೋಧಿಸುವುದರಿಂದ ಪಡೆದ ಜ್ಞಾನವು ಸ್ಥಿರವಾಗಿರುವುದು. ವಿಷಯ ವಸ್ತುವನ್ನು ಇತರ ವಿಷಯಗಳೊಂದಿಗೆ ಮಾತ್ರ ಸಹಸಂಬಂಧೀಕರಿಸದೆ ದಿನನಿತ್ಯದ ಜೀವನದ ಘಟನೆಗಳಿಗೆ ಸಹ ಸಂಬಂಧೀಕರಿಸುವಂತೆ ರಚನೆಯಾಗಬೇಕು.

13. **ಸಮಗ್ರತೆಯ ತತ್ವ:** ಪಠ್ಯಕ್ರಮವು ಸಮಗ್ರತೆಯಿಂದ ಕೂಡಿರಬೇಕು. ಹಿಂದಿನ ಕಾಲದ ಸಂಸ್ಕೃತಿ, ಪರಂಪರೆಯನ್ನು ಆಧರಿಸಿ ವಿದ್ಯಾರ್ಥಿಗಳ ಬೆಳವಣಿಗೆಗೆ ಅನುಗುಣವಾಗಿ ಶಿಕ್ಷಕರ ಬೋಧನಾ ವಿಧಾನ ಹಾಗೂ ಅನುಭವಗಳನ್ನು ಒಳಗೊಂಡಂತೆ ಪಠ್ಯಕ್ರಮ ರಚನೆಯಾಗಬೇಕು.

**ಪಠ್ಯಕ್ರಮ ವಿಷಯ ಸಂಘಟನೆ:** ಪಠ್ಯಕ್ರಮ ವಿಷಯ ಸಂಘಟನೆಯ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ. ಇಡೀ ಶಿಕ್ಷಣ ವ್ಯವಸ್ಥೆಯ ಕೇಂದ್ರ ಬಿಂದು ಪಠ್ಯಕ್ರಮವಾಗಿದ್ದರೂ, ಶಿಕ್ಷಣದ ಇತರ ದೃಷ್ಟಿಗಳೂ, ಪ್ರಕ್ರಿಯೆಗಳೂ ಅದರ ಮೇಲೆ ಪ್ರಭಾವ ಬೀರುತ್ತವೆ. ಆ ಅಂಶಗಳು ಯಾವುವೆಂದರೆ: ಶಿಕ್ಷಕ, ಪಠ್ಯಪುಸ್ತಕ, ಸಾಧನ ಸಲಕರಣೆಗಳು, ಮಾರ್ಗದರ್ಶನ ಮತ್ತು ಸಮಾಲೋಚನೆ, ಮೇಲ್ವಿಚಾರಣೆ ಮತ್ತು ಆಡಳಿತ, ಪರೀಕ್ಷೆ ಮತ್ತು ಮೌಲ್ಯಮಾಪನ ಹಾಗೂ ವಿದ್ಯಾರ್ಥಿಗಳು.

**ಮನೋವೈಜ್ಞಾನಿಕ ವ್ಯವಸ್ಥೆ:** ಮಗುವಿನ ಸರ್ವತೋಮುಖ ವಿಕಾಸವೇ ಶಿಕ್ಷಣದ ಪ್ರಮುಖ ಉದ್ದೇಶ. ಈ ಅಂಶವನ್ನು ಆಧಾರವಾಗಿಟ್ಟುಕೊಂಡು ಪಠ್ಯಕ್ರಮವನ್ನು ರಚಿಸಲಾಗುವುದು. ಮಗು ಕೇಂದ್ರಿತ ಅಂಶವು ಮನೋವೈಜ್ಞಾನಿಕ ಕ್ರಮಕ್ಕೆ ಪೂರಕವಾಗಿದೆ. ಪಠ್ಯಕ್ರಮದಲ್ಲಿ ಮಗುವಿನ ಮಾನಸಿಕ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ವಿದ್ಯಾರ್ಥಿಗಳ ವಯಸ್ಸು, ಮಾನಸಿಕ ಮಟ್ಟ, ಬುದ್ಧಿ ಮಟ್ಟ, ಮನೋಭಾವ, ಬೇಕು–ಬೇಡಗಳು, ಆಸೆ–ಆಕಾಂಕ್ಷೆ, ಆಸಕ್ತಿ, ಒಲವು, ವೈಯಕ್ತಿಕ ಭಿನ್ನತೆ ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪಾಠಗಳನ್ನು ಸಂಘಟಿಸಬೇಕು. ಇಲ್ಲಿ ಮಗುವಿನ ವಯಸ್ಸು ಹಾಗೂ ಕಲಿಕಾ ಸಾಮರ್ಥ್ಯಕ್ಕೆ ಮಹತ್ವ ನೀಡಬೇಕು.

**ತಾರ್ಕಿಕ ವ್ಯವಸ್ಥೆ:** ತಾರ್ಕಿಕ ವ್ಯವಸ್ಥೆಯು ವಿಷಯ ಕೇಂದ್ರಿತ ಪದ್ಧತಿಯಾಗಿದ್ದು, ಮಗುವಿನ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಪಠ್ಯಕ್ರಮವು ವಿಷಯದ ಸಂಘಟನೆಯನ್ನು ತಾರ್ಕಿಕವಾಗಿ ವ್ಯವಸ್ಥೆ ಮಾಡುವುದು ಒಂದು ಉತ್ತಮ ವ್ಯವಸ್ಥೆಯಾಗಿದೆ. ತರ್ಕಬದ್ಧವಾದ ವಿಷಯಗಳನ್ನು ವಿದ್ಯಾರ್ಥಿಗಳು ಹೆಚ್ಚು ಆಸಕ್ತಿಯುತವಾಗಿ ಕೇಳುವುದರಿಂದ ತರ್ಕಬದ್ಧವಾಗಿ ಇರುವ ವಿಷಯವು ಅವರಿಗೆ ಕಠಿಣವೆನಿಸದು. ಇಲ್ಲಿ ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ಒಂದಾದ ಮೇಲೆ ಒಂದರಂತೆ ತರ್ಕಬದ್ಧವಾಗಿ ಕಲಿಯುತ್ತಾ ಒಂದು ಕ್ರಿಯೆಯ ಸಂಬಂಧವನ್ನು ಮತ್ತೊಂದರೊಂದಿಗೆ ಹೋಲಿಸಿಕೊಂಡು ಮುಂದುವರಿಯುವರು.

Digitised by Bharatavani, CIIL

**ಅಧ್ಯಾಯ (ವಿಷಯವಾರು) ವ್ಯವಸ್ಥೆ:** ಒಂದು ಅಧ್ಯಾಯಕ್ಕೆ ಸಂಬಂಧಿಸಿದ ಎಲ್ಲ ವಿಷಯವನ್ನು ಸಂಪೂರ್ಣವಾಗಿ ಒಂದು ವರ್ಷ ಅವಧಿಯಲ್ಲಿ ಬೋಧನೆ ಮಾಡಿ ಮುಗಿಸುವುದಕ್ಕೆ ಅಧ್ಯಾಯ ವ್ಯವಸ್ಥೆ ಎನ್ನುವರು. ಆ ಅಧ್ಯಾಯದ ವಿಷಯವಸ್ತುವನ್ನು ಉಪಭಾಗಗಳಾಗಿ ವಿಂಗಡಿಸಿ ಬೋಧಿಸಲು ಸಾಧ್ಯವಾಗುವಂತಿರಬೇಕು. ಈ ಕ್ರಮದಿಂದ ಯಾವುದೇ ಒಂದು ಪರಿಕಲ್ಪನೆಯ ಸಂಪೂರ್ಣವಾದ ಜ್ಞಾನವನ್ನು ಪಡೆಯಬಹುದು. ಇಲ್ಲಿ ಕಲಿತ ವಿಷಯಗಳು ಪುನರಾವರ್ತನೆಗೊಳ್ಳದೆ ನಿರಂತರವಾಗಿ ಮುಂದೆ ಸಾಗುತ್ತವೆ. ಅಧ್ಯಾಯ ವ್ಯವಸ್ಥೆಯಲ್ಲಿ ವಿಷಯದ ಪರಿಕಲ್ಪನೆಗಳು ಸರಳವಾಗಿರಲಿ, ಕಠಿಣವಾಗಿರಲಿ ಅದನ್ನು ವಿದ್ಯಾರ್ಥಿಗಳಿಗೆ ಏಕ ಕಾಲಕ್ಕೆ ಬೋಧಿಸುವ ಕ್ರಮವಾಗಿದೆ. ಉನ್ನತ ಹಂತದ ಶಿಕ್ಷಣಕ್ಕೆ ಹಾಗೂ ವಿಷಯ ಕಡಿಮೆ ಇದ್ದಾಗ ಈ ಕ್ರಮವನ್ನು ಅನುಕರಿಸಲಾಗುವುದು.

**ಸುರುಳಿರೂಪದ ವ್ಯವಸ್ಥೆ:** ಒಂದು ಅಧ್ಯಾಯಕ್ಕೆ ಸಂಬಂಧಿಸಿದ ಎಲ್ಲ ವಿಷಯವನ್ನು ಚಿಕ್ಕ ಚಿಕ್ಕ ಭಾಗಗಳನ್ನಾಗಿ ಮಾಡಿ, ವಿದ್ಯಾರ್ಥಿಗಳ ವಯಸ್ಸು, ಮಾನಸಿಕ ಮಟ್ಟ, ಬುದ್ಧಿ ಮಟ್ಟಕ್ಕೆ ತಕ್ಕಂತೆ ಬೋಧಿಸುವ ಕ್ರಮಕ್ಕೆ ಸುರುಳಿ ವ್ಯವಸ್ಥೆ ಎನ್ನುವರು. ಈ ಕ್ರಮದಿಂದ ಪೂರ್ವಜ್ಞಾನದ ಮೂಲಕ ಮುಂದಿನ ಜ್ಞಾನವು ಅರ್ಥವಾಗುವುದು. ಇಲ್ಲಿ ಈ ಹಿಂದೆ ಕಲಿತ ವಿಷಯಗಳು ಪುನರಾವರ್ತನೆಗೊಂಡು ಅವುಗಳ ಆಧಾರದ ಮೇಲೆ ಉನ್ನತ ವ್ಯಾಸಂಗ ಸಾಗುತ್ತದೆ. ಈ ಕ್ರಮವು ವಿಷಯದ ಪರಿಕಲ್ಪನೆಯನ್ನು ಚಿಕ್ಕ ಚಿಕ್ಕ ಭಾಗಗಳನ್ನಾಗಿ ಮಾಡಿ, ಅವುಗಳನ್ನು ಅನುಕ್ರಮವಾಗಿ ಪ್ರತಿವರ್ಷ ಸ್ವಲ್ಪ ಸ್ವಲ್ಪ ಕಲಿಸುವ ಕ್ರಮವಾಗಿದೆ. ವಿದ್ಯಾರ್ಥಿಗಳ ಮನೋಮಟ್ಟ ಬೆಳೆದಂತೆ ವಿಷಯದ ಸಂಕೀರ್ಣ ಭಾಗಗಳು ಬರುತ್ತವೆ. ಈ ವ್ಯವಸ್ಥೆಯಲ್ಲಿ ಸರಳವಾದ ವಿಷಯಗಳನ್ನು ಮೊದಲು ತಿಳಿಸಿ, ಅನಂತರ ಕಠಿಣವಾದ ವಿಷಯಗಳನ್ನು ಕಲಿಸಲಾಗುತ್ತದೆ. ವಿಷಯ ವಸ್ತುವು ಬಹಳ ದೊಡ್ಡದಿದ್ದಾಗ ಈ ಕ್ರಮವನ್ನು ಅನುಸರಿಸುವರು. ಈ ರೀತಿಯಾಗಿ ಪ್ರತಿ ವರ್ಷವೂ ವಿಷಯ ವಸ್ತುವು ಪುನರಾವರ್ತನೆಗೊಳ್ಳುವುದರಿಂದ ಕಲಿಕೆ ಪರಿಣಾಮಕಾರಿಯಾಗುವುದು.

ಈ ಮೇಲಿನ ಎಲ್ಲಾ ಚಟುವಟಿಕೆಗಳು ಶಿಕ್ಷಣದಲ್ಲಿ ಪಠ್ಯಕ್ರಮದ ಪ್ರಮುಖ ಪಾತ್ರವನ್ನು ತೋರಿಸಿಕೊಡುತ್ತವೆ. ಪಠ್ಯಕ್ರಮವು ಶಿಕ್ಷಣರಂಗದಲ್ಲಿ ರೂವಾರಿಯಾಗಿದ್ದು ಶಿಕ್ಷಣದ ಗುಣಮಟ್ಟ ಮತ್ತು ಶಿಕ್ಷಣ ಅಭಿವೃದ್ಧಿಯಾಗಲು ನೇರವಾದ ಪಾತ್ರ ವಹಿಸಿರುವುದು ಕಂಡುಬರುತ್ತದೆ.

– ಪ್ರೊ. ಶಿವಲಿಂಗಪ್ಪ ಎಸ್. ಜಿ

## ಪಠ್ಯಕ್ರಮ ವಿಕಾಸದ ಆಧಾರಗಳು

ಒಂದು ದೇಶದ ಪ್ರಗತಿಯನ್ನು ಶೈಕ್ಷಣಿಕ ದೃಷ್ಟಿಕೋನದಲ್ಲಿ ವಿಶ್ಲೇಷಿಸುವುದಾದರೆ, 'ಒಂದು ದೇಶದ ಅಭಿವೃದ್ಧಿ ಅಲ್ಲಿಯ ಶೈಕ್ಷಣಿಕ ಪಠ್ಯಕ್ರಮವನ್ನು ಪ್ರತ್ಯಕ್ಷವಾಗಿಯೂ ಹಾಗೂ ಪರೋಕ್ಷವಾಗಿಯೂ ಅವಲಂಬಿಸಿದೆ' ಎಂಬುದನ್ನು ನಿಸ್ಸಂಶಯವಾಗಿ ಒಪ್ಪಬಹುದಾಗಿದೆ. ಏಕೆಂದರೆ ವಿದ್ಯಾರ್ಥಿಯ ಪರಿಪೂರ್ಣ ಬೆಳವಣಿಗೆಯ ಸಾಧನವಾಗಿ ಅಂತೆಯೇ ದೇಶದ ಅಭ್ಯುದಯದ ಸಾಧನವಾಗಿಯೂ ಪಠ್ಯಕ್ರಮದ ವ್ಯಾಪ್ತಿಯನ್ನು ನಾವು ಅರ್ಥೈಸಿಕೊಳ್ಳಬಹುದು.

ಪಠ್ಯಕ್ರಮ ಅಭಿವೃದ್ಧಿ ಪಡಿಸುವಾಗ ನಾವು ವಿದ್ಯಾರ್ಥಿಗಳ ಅಗತ್ಯತೆ, ಆಸಕ್ತಿ, ದಕ್ಷತೆ, ಸಾಮಾಜಿಕ ಅಗತ್ಯತೆ-ನಿರೀಕ್ಷೆ ಮತ್ತು ಸಾಮಾಜಿಕ ಸಮಸ್ಯೆಗಳು ಈ ಎಲ್ಲಾ ಅಂಶಗಳನ್ನು ಪಠ್ಯಕ್ರಮ ಅಭಿವೃದ್ಧಿಯಲ್ಲಿ ಪರಿಗಣಿಸಬೇಕು.

ಪಠ್ಯಕ್ರಮ ರಚನೆಯಲ್ಲಿ ಈ ಕೆಳಗಿನ ಆಧಾರಗಳು ಮುಖ್ಯವಾಗುತ್ತವೆ.

- ಐತಿಹಾಸಿಕ ಆಧಾರಗಳು
- ತತ್ವಶಾಸ್ತ್ರೀಯ ಆಧಾರಗಳು
- ಸಮಾಜಶಾಸ್ತ್ರೀಯ ಆಧಾರಗಳು
- ಮನೋವೈಜ್ಞಾನಿಕ ಆಧಾರಗಳು
- ಧಾರ್ಮಿಕ ಆಧಾರಗಳು
- ಸಾಂಸ್ಕೃತಿಕ ಆಧಾರಗಳು
- ಅರ್ಥಶಾಸ್ತ್ರೀಯ ಆಧಾರಗಳು
- ರಾಜಕೀಯ ಸ್ಥಿತಿಗತಿಗಳ ಆಧಾರಗಳು

**ಐತಿಹಾಸಿಕ ಆಧಾರಗಳು:** ಪಠ್ಯಕ್ರಮ ರಚನೆಯಲ್ಲಿ ಐತಿಹಾಸಿಕ ಆಧಾರಗಳನ್ನು ಪರಿಗಣಿಸಬೇಕು. ಒಂದು ದೇಶದ ಶಿಕ್ಷಣ ವ್ಯವಸ್ಥೆಗೆ ಸಂಬಂಧಪಟ್ಟ ಐತಿಹಾಸಿಕ ಘಟನೆಗಳು, ಪರಂಪರೆ, ಸಂಪ್ರದಾಯಗಳು ಇಂದಿನ ಶಿಕ್ಷಣ ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತವೆ. ಉದಾಹರಣೆಗೆ ಭಾರತದ ಪ್ರಾಚೀನ ಕಾಲದಲ್ಲಿದ್ದ ಗುರುಕುಲ ವ್ಯವಸ್ಥೆ, ಗುರುವಿನ ಸ್ಥಾನ, ಗುರುಶಿಷ್ಯ ಸಂಬಂಧ, ಬೋಧನೆಯ ಗುರಿಗಳು, ಪಠ್ಯಕ್ರಮ ವಿಕಾಸದಲ್ಲಿ ಪ್ರಭಾವ ಬೀರಿವೆ. ಇಂದಿನ ಪಠ್ಯಕ್ರಮ ಹಿಂದೆ ಇತಿಹಾಸದ ವಿವಿಧ ಕಾಲಗಳಲ್ಲಿ ಪ್ರಚಲಿತವಿದ್ದ ಶಿಕ್ಷಣದ ಒಳ್ಳೆಯ ಅಂಶಗಳನ್ನು ಪ್ರತಿಬಿಂಬಿಸುವಂತಿರಬೇಕು. ಐತಿಹಾಸಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮವನ್ನು ರಚಿಸಬೇಕು. ಐತಿಹಾಸಿಕ ಬದಲಾವಣೆಗಳು ಆದಂತೆಲ್ಲಾ ಪಠ್ಯಕ್ರಮದಲ್ಲಿಯೂ ಬದಲಾವಣೆ ತರುವುದು ಅನಿವಾರ್ಯವಾಗುತ್ತದೆ.

**ತತ್ವಶಾಸ್ತ್ರೀಯ ಆಧಾರಗಳು:** ತತ್ವಶಾಸ್ತ್ರ ಮಾನವನ ಬಗ್ಗೆ, ಮಾನವನ ಬದುಕಿನ ಅರ್ಥ, ಮಾನವನ ಅಭಿವೃದ್ಧಿ ಹಾಗೂ ಜೀವನದ ಮೂಲಭೂತ ಸಮಸ್ಯೆಗಳ ಬಗ್ಗೆ ತಿಳಿಸುತ್ತದೆ.

ಪಠ್ಯಕ್ರಮ ವಿಕಾಸದಲ್ಲಿ ತತ್ವಶಾಸ್ತ್ರೀಯ ಬುನಾದಿ, ಉದ್ದೇಶ, ಬೋಧನೆ, ಕಲಿಕೆ, ಶಿಸ್ತಿನ ಅಂಶಗಳಿಗೆ ಆಧಾರವಾಗುತ್ತದೆ. ಪಠ್ಯಕ್ರಮ ವಿಕಾಸದಲ್ಲಿ ದೇಶದ ತತ್ವಶಾಸ್ತ್ರ ಒಲವು ಹೆಚ್ಚಿನ ಪ್ರಭಾವ ಬೀರುತ್ತದೆ.

Digitised by Bharatavani, CIIL

ದೇಶದ ಅಭ್ಯುದಯಕ್ಕೆ ಎಂತಹ ಪಠ್ಯಕ್ರಮಬೇಕು ಎಂಬುದನ್ನು ತತ್ವಶಾಸ್ತ್ರ ನಿರ್ಧರಿಸುತ್ತದೆ. ತತ್ವಶಾಸ್ತ್ರದಿಂದ ರೂಪಿತವಾದ ಮೌಲ್ಯಗಳು, ಜನಜೀವನದ ಆದರ್ಶಗಳು ಪಠ್ಯವಸ್ತುವಿನಲ್ಲಿ ಪ್ರತಿಬಿಂಬಿತವಾಗಬೇಕು. ಪಠ್ಯಕ್ರಮ ಉನ್ನತ ಸಾಮಾಜಿಕ ಆದರ್ಶ ಸಾರ್ವತ್ರಿಕತೆ, ಮಕ್ಕಳ ಆಸಕ್ತಿ ಅಭಿರುಚಿ, ವಿಶಾಲ ದೃಷ್ಟಿಕೋನ, ಸಮಾನದ ಹಿತದೃಷ್ಟಿಯನ್ನು ನಿರ್ಧರಿಸುತ್ತದೆ ಎಂದು ಕಿಲ್‌ಪ್ಯಾಟ್ರಿಕ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಶಿಕ್ಷಕರು ತತ್ವಶಾಸ್ತ್ರದ ಸಹಾಯದಿಂದ ಬೋಧನಾ ಕ್ರಮವನ್ನು ಅಳವಡಿಸಿಕೊಳ್ಳಬೇಕು. ತತ್ವಶಾಸ್ತ್ರ ಆಧಾರಿತ ಜೀವನ ಮೌಲ್ಯಗಳು ಪಠ್ಯಕ್ರಮದಲ್ಲಿ ಪ್ರತಿಫಲಿತವಾಗಬೇಕು. ಪಠ್ಯಕ್ರಮ ರಚನೆಯಲ್ಲಿ ತತ್ವಶಾಸ್ತ್ರ ಜೀವನದ ದರ್ಶನವನ್ನು ನೀಡುತ್ತದೆ.

ತತ್ವಶಾಸ್ತ್ರ ಶಿಕ್ಷಣದ ಸಾಮಾನ್ಯ ಸಿದ್ಧಾಂತ ಎಂಬುದಾಗಿ 'ಜಾನ್‌ಡ್ಯೂಯಿ' ಹೇಳಿದ್ದಾರೆ. ಶಿಕ್ಷಣ ತತ್ವಶಾಸ್ತ್ರದ ಕ್ರಿಯಾಶೀಲ ಮುಖ ಎಂದು 'ಆಡಮ್ಸ್'ರವರು ಹೇಳುತ್ತಾರೆ

**ಸಮಾಜಶಾಸ್ತ್ರೀಯ ಆಧಾರಗಳು:** ಸಮಾಜದ ಅಸ್ತಿತ್ವಕ್ಕೆ ಸಾಮಾಜಿಕ ಸಮೂಹ ಹಾಗೂ ಮಾನವ ಸಂಬಂಧಗಳ ಅತಿಮುಖ್ಯ ಶಾಲೆಯೂ ಸಮಾಜದ ಒಂದು ಭಾಗವಾಗಿದ್ದು, ಸಮಾಜವನ್ನು ಪ್ರತಿಬಿಂಬಿಸುತ್ತದೆ. ಶಾಲಾ ಚಟುವಟಿಕೆಗಳು ಮತ್ತು ಶಾಲಾ ಸಂಸ್ಕೃತಿಯನ್ನು ಸಮಾಜದ ರೀತಿ ನೀತಿಗಳು ಪ್ರಭಾವಗೊಳಿಸುತ್ತವೆ. ವಿದ್ಯಾರ್ಥಿಯು ಸಮಾಜದ ಉತ್ತಮ ನಾಗರಿಕನಾಗಿ ರೂಪುಗೊಳ್ಳಬೇಕಾದರೆ ಪಠ್ಯಕ್ರಮ ಸಮಾಜದ ನಿರೀಕ್ಷೆಯಂತೆ ರಚಿತವಾಗಬೇಕು. ಶಾಲೆ ವಿದ್ಯಾರ್ಥಿಯಲ್ಲಿ ಸಮಾಜದ ಬಗ್ಗೆ ಮನೋಭಾವವನ್ನು ಮತ್ತು ಆಸಕ್ತಿಯನ್ನು ಬೆಳೆಸುವಂಥ ಪಠ್ಯಕ್ರಮದ ರಚನೆ ಆಗಬೇಕು. ಪಠ್ಯಕ್ರಮ ಸಮಾಜದ ವಿವಿಧ ವರ್ಗಗಳ (ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರೂ ಸೇರಿದಂತೆ) ವಿದ್ಯಾರ್ಥಿಗಳಿಗೆ ಆಶೋತ್ತರಗಳನ್ನು ಈಡೇರಿಸುವಂತಿರಬೇಕಾಗುತ್ತದೆ.

ಶಾಲೆ ಸಮಾನತೆಯ ಆಧಾರದಲ್ಲಿ ರಚಿತವಾದ ಸಾಮಾಜಿಕ ಸಮುದಾಯ, ಶಾಲೆಯಲ್ಲಿ ಹಲವು ವರ್ಗ, ಧರ್ಮ, ಜಾತಿ, ವಿದ್ಯಾರ್ಥಿಗಳು ಇರುತ್ತಾರೆ. ಸರ್ವಧರ್ಮ ಸಮನ್ವಯಭಾವ ಹಾಗೂ ಬಹುಜನರ ಹಿತವನ್ನು ಕಾಪಾಡುವ ಸಮಾಜಮುಖಿ ಪಠ್ಯಕ್ರಮದ ರಚಿತವಾಗಬೇಕು. ಎಲ್ಲ ವರ್ಗದ ಜನಗಳ ನಿರೀಕ್ಷೆಗಳಿಗೆ ಅನುಗುಣವಾಗಿ ಪಠ್ಯಕ್ರಮ ರೂಪಿತವಾಗಬೇಕು. ಕೊಠಾರಿ ಶಿಕ್ಷಣ ಆಯೋಗ ಉಚ್ಚರಿಸುವಂತೆ "ದೇಶದ ಭವ್ಯ ಭವಿಷ್ಯ ತರಗತಿ ಕೋಣೆಯಲ್ಲಿ ರೂಪುಗೊಳ್ಳುತ್ತದೆ". ಈ ಹೇಳಿಕೆ ಸಾರ್ಥಕವಾಗಬೇಕಾದರೆ ಸಮಾಜದ ಆಶೋತ್ತರಗಳನ್ನು ಪೂರೈಸುವಂತಿರಬೇಕು. ಸಮಾಜದ ರಚನಾ ವ್ಯವಸ್ಥೆ, ಸಂಪ್ರದಾಯಗಳು, ರೀತಿನೀತಿಗಳು, ಉಪ-ಸಂಸ್ಕೃತಿಗಳು ಮುಂತಾದವುಗಳು ಪಠ್ಯಕ್ರಮ ರಚನೆಗೆ ಆಧಾರಗಳಾಗಬೇಕು.

**ಮನೋವೈಜ್ಞಾನಿಕ ಆಧಾರಗಳು:** ಮನೋವಿಜ್ಞಾನವು ಶಾಲಾ ಪಠ್ಯಕ್ರಮ ರಚನೆಯ ಪ್ರಮುಖ ಆಧಾರಗಳನ್ನು ಒದಗಿಸುತ್ತದೆ. ಪಠ್ಯಕ್ರಮದಲ್ಲಿ ಬೋಧನೆ ಮತ್ತು ಕಲಿಕೆ ಪ್ರಮುಖ ಘಟಕಾಂಶಗಳು. ಮನೋವಿಜ್ಞಾನವು ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯ ಬಗ್ಗೆ ತಿಳಿಸುತ್ತದೆ. ಪಠ್ಯಕ್ರಮ ರಚನೆಗೆ ಮನೋವಿಜ್ಞಾನ ಈ ಮುಂದಿನ ಆಧಾರಗಳನ್ನು ಒದಗಿಸುತ್ತದೆ. ಪಠ್ಯಕ್ರಮದ ಉದ್ದೇಶಗಳು ಮಕ್ಕಳ ಮನೋವಿಜ್ಞಾನಕ್ಕೆ ಅನುಗುಣವಾಗಿ ನಿರೂಪಿತವಾಗುತ್ತವೆ. ಮನೋವಿಜ್ಞಾನ ಮಕ್ಕಳ ವಿಕಾಸದ ಕ್ರಮದ ಬಗ್ಗೆ, ವಿಕಾಸದ ವಿವಿಧ ಹಂತಗಳು ಮತ್ತು ಸಮಸ್ಯೆಗಳ ಬಗ್ಗೆ ಜ್ಞಾನ ಒದಗಿಸುತ್ತದೆ. ವ್ಯಕ್ತಿತ್ವದ ಸಿದ್ಧಾಂತಗಳು ಮಕ್ಕಳ ವ್ಯಕ್ತಿತ್ವ ವಿಕಾಸದ ಬಗ್ಗೆ ತಿಳಿಸುತ್ತವೆ. ಕಲಿಕೆಯ ಸಿದ್ಧಾಂತಗಳು ಮಕ್ಕಳ ಕಲಿಕೆಯ ಸ್ವರೂಪವನ್ನು ಕಲಿಕೆಯ ಶೈಲಿಗಳನ್ನು ಅವುಗಳಿಗೆ ಅನುಗುಣವಾದ ಬೋಧನಾ ವಿಧಾನಗಳನ್ನು/ತಂತ್ರಗಳನ್ನು ವಿವರಿಸುತ್ತವೆ. ಮಕ್ಕಳು ತಮ್ಮ ಪರಿಸರಕ್ಕೆ ಹೇಗೆ ಹೊಂದಿಕೊಳ್ಳಬೇಕೆಂಬುದನ್ನು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಗಳನ್ನು ಮನೋವಿಜ್ಞಾನ ತಿಳಿಸುತ್ತದೆ. ಈ ಎಲ್ಲಾ ಮನೋವೈಜ್ಞಾನಿಕ ಅಂಶಗಳನ್ನು ಪಠ್ಯಕ್ರಮ ರಚನೆಯಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು. ಮನೋವಿಜ್ಞಾನದಲ್ಲಿ ಸಂಶೋಧನೆಗಳು ಮುಂದುವರಿದಂತೆ ಹೊಸ ಬೋಧನಾ ವಿಧಾನಗಳು, ಶೈಲಿಗಳು ರೂಪಿತವಾಗುತ್ತವೆ. ಪಠ್ಯಕ್ರಮ ಬದಲಾದಂತೆ ಈ ಎಲ್ಲಾ ಹೊಸ ವಿಧಾನಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕಾಗುತ್ತದೆ. ಆದ್ದರಿಂದಲೇ ಪಠ್ಯಕ್ರಮವನ್ನು ವಿಕಾಸಗೊಳಿಸುವ ಶಿಕ್ಷಕರಿಗೆ, ತಜ್ಞರಿಗೆ, ಶೈಕ್ಷಣಿಕ ಆಡಳಿತಗಾರರಿಗೆ ಶೈಕ್ಷಣಿಕ ಮನೋವಿಜ್ಞಾನದ ತತ್ವಗಳ ಜ್ಞಾನ ಅನಿವಾರ್ಯವಾಗಿ ಇರಬೇಕಾಗುತ್ತದೆ.

ಕಲಿಕೆಯನ್ನು ಈ ಕೆಳಗಿನ ಶೈಕ್ಷಣಿಕ ಮನೋವಿಜ್ಞಾನದ ಕಲಿಕಾ ಸಿದ್ಧಾಂತಗಳಿಂದ ವಿವರಿಸಬಹುದು.

**ಧಾರ್ಮಿಕ ಆಧಾರಗಳು:** ಭಾರತವು ಬಹುಧರ್ಮೀಯ ದೇಶ. ವಿವಿಧತೆಯಲ್ಲಿನ ಏಕತೆಯೇ ಭಾರತದ ಶ್ರೇಷ್ಠತೆ. ಭಾರತದ ಸಂವಿಧಾನದ 28ನೇವಿಧಿ ಶಿಕ್ಷಣ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶ ನೀಡಿದೆ. 1960ರಲ್ಲಿ ಶ್ರೀ. ಪ್ರಕಾಶರವರ ಸಮಿತಿಯು ಧಾರ್ಮಿಕ ಹಾಗೂ ನೈತಿಕ ಅಂಶಗಳ ಅಡಿಯಲ್ಲಿ ಶಾಲಾ ಪಠ್ಯಕ್ರಮ ವಿಕಾಸದಲ್ಲಿ ಜಾತ್ಯತೀತತೆ ಮತ್ತು ಎಲ್ಲಾ ಧರ್ಮಗಳಿಗೂ ಸಮಾನ ಗೌರವ ತೋರಿಸಬೇಕೆಂದು ಅಭಿಪ್ರಾಯಪಟ್ಟಿದೆ.

ಎಲ್ಲ ಧರ್ಮಗಳ ಸಾರವೂ ಸಮಾಜಕ್ಕೆ ಒಳಿತನ್ನು ಭಿತ್ತರಿಸುವುದೇ ಆಗಿದೆ. ಪಠ್ಯಕ್ರಮದಲ್ಲಿ ಸರ್ವಧರ್ಮ ಸಮನ್ವಯ ನೀತಿಯನ್ನು ಅಳವಡಿಸಿ ವಿದ್ಯಾರ್ಥಿಗಳಲ್ಲಿ ನೈತಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವ ಗುರಿಯನ್ನು ಪಠ್ಯಕ್ರಮ ಹೊಂದಿರಬೇಕು. ಧರ್ಮಗಳಿಂದ ಮಾನವೀಯತೆ, ಮನುಷ್ಯ ಪ್ರೀತಿ ಸಮಾಜದಲ್ಲಿ ಮೂಡುತ್ತದೆ. ಆದ್ದರಿಂದ ಪಠ್ಯಕ್ರಮ ಎಲ್ಲಾ ಧರ್ಮಗಳ ಮುಖ್ಯ ಧ್ಯೇಯಗಳನ್ನು ಪ್ರತಿಬಿಂಬಿಸಬೇಕು.

ಪಠ್ಯಕ್ರಮ ರಚನೆಯಲ್ಲಿ ಜಾತ್ಯತೀತತೆ ತತ್ವವಿರಬೇಕಾದರೂ ಅದರ ಅರ್ಥ ಧರ್ಮವನ್ನು ಉಪೇಕ್ಷಿಸಬೇಕೆಂಬುದಲ್ಲ. ಅದರ ನಿಜವಾದ ಅರ್ಥ ಪಠ್ಯಕ್ರಮ ಎಲ್ಲಾ ಧರ್ಮಗಳ ಸಾರವನ್ನು

Digitised by Bharatavani, CIIL

ಹೊಂದಿರಬೇಕೆಂಬುದಾಗಿದೆ. ಪಠ್ಯಕ್ರಮ ವಿಕಾಸದಲ್ಲಿ ಶ್ರೀ. ಪ್ರಕಾಶ್ ಕಮಿಟಿಯು ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

* ಶೈಕ್ಷಣಿಕ ಸಂಸ್ಥೆಗಳಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಬೋಧಿಸಬೇಕು.
* ದೇಶಭಕ್ತಿ, ಉತ್ತಮ ವ್ಯಕ್ತಿತ್ವ, ಸಮಾಜ ಸೇವೆ ವಿದ್ಯಾರ್ಥಿಯಲ್ಲಿ ಒಡಮೂಡಬೇಕು.
* ಧ್ಯಾನದ ಬಗ್ಗೆ ಶಾಲೆಗಳು ಪರಿಚಯಿಸಬೇಕು.
* ಶಾಲಾ ಪಠ್ಯಕ್ರಮ ಧರ್ಮಗಳ ಬಗ್ಗೆ, ಶ್ರೇಷ್ಠ ಧಾರ್ಮಿಕ ಮುಖಂಡರು ಹಾಗೂ ತತ್ವಶಾಸ್ತ್ರಜ್ಞರ ಬಗ್ಗೆ ತಿಳಿಸಬೇಕು.
* ಧರ್ಮ-ಧರ್ಮಗಳ ನಡುವೆ ಸಹಮತ, ಸಹಿಷ್ಣುತಾ ಭಾವ ಏರ್ಪಡುವ ಉಪನ್ಯಾಸ ಏರ್ಪಡಬೇಕು.

1966ರ ಕೊಠಾರಿ ಶಿಕ್ಷಣ ಆಯೋಗವು ಸಹ ಭಾರತದ ಪ್ರಮುಖ ಧರ್ಮಗಳ ಉತ್ತಮ ತಿರುಳನ್ನು ಪಠ್ಯಕ್ರಮದಲ್ಲಿ ಅಳವಡಿಸಿ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕನನ್ನಾಗಿ ಪರಿವರ್ತಿಸಬೇಕು ಎಂದು ತಿಳಿಸುತ್ತದೆ. ಎಲ್ಲಾ ಧರ್ಮಗಳ ಸಾರವನ್ನು ಪಠ್ಯಕ್ರಮದಲ್ಲಿ ಸೇರಿಸುವುದರೊಂದಿಗೆ ವಿದ್ಯಾರ್ಥಿಗಳಲ್ಲಿ ಪರಧರ್ಮ, ಆಧ್ಯಾತ್ಮಿಕ ಭಾವನೆ, ಸಹಿಷ್ಣುತೆ, ನೈತಿಕತೆ, ಐಕ್ಯತೆಯ ಭಾವನೆ- ಈ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ವಿಕಾಸಗೊಳಿಸಲು ಸಾಧ್ಯವಾಗುತ್ತದೆ.

**ಸಾಂಸ್ಕೃತಿಕ ಆಧಾರಗಳು:** ಶಿಕ್ಷಣ ಸಂಸ್ಕೃತಿಯ ಒಂದು ಭಾಗ. ಸಂಸ್ಕೃತಿ ಎಂಬುದು ಸಾಹಿತ್ಯ, ಕಲೆ, ಜ್ಞಾನ, ವಿಜ್ಞಾನ, ನಂಬಿಕೆ, ನೈತಿಕತೆ, ಕಾನೂನು, ರೂಢಿ ಮತ್ತು ಸಂಪ್ರದಾಯಗಳನ್ನೊಳಗೊಂಡಿದೆ. ಅಂತೆಯೇ ಸಂಸ್ಕೃತಿ ವಿಶಾಲ ಅರ್ಥವನ್ನು ಹೊಂದಿದೆ. ಸಂಸ್ಕೃತಿಯ ವರ್ಗಾವಣೆ ಮತ್ತು ಆಚರಣೆಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಕೂಡ ಭಾಗಿಯಾಗುತ್ತಾನೆ. ಯಾವುದೇ ಒಂದು ಸಮಾಜ ತನ್ನದೇ ಆದ ರೀತಿಯಲ್ಲಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ತನ್ನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ವರ್ಗಾಯಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಶಿಕ್ಷಣದ ಪಾತ್ರವೂ ಇರುತ್ತದೆ. ಆದ್ದರಿಂದ ಶಿಕ್ಷಣ ಸಂಸ್ಥೆಗಳ ಪಠ್ಯಕ್ರಮಗಳು ಆಯಾ ಪ್ರದೇಶದ, ಪ್ರದೇಶಗಳ ಸಾಂಸ್ಕೃತಿಕ ಪರಂಪರೆಗೆ ಪೂರಕವಾಗಿರಬೇಕು. ಪಠ್ಯಕ್ರಮ ನಮ್ಮ ಸಂಸ್ಕೃತಿಯ ಮುಖ್ಯ ಪರಂಪರೆಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವಂತಿರಬೇಕು. ಅವುಗಳ ಸಂರಕ್ಷಣೆಗೆ ಸಹಾಯಕವಾಗುವಂತಿರಬೇಕು. ಪಠ್ಯಕ್ರಮದಲ್ಲಿ ಭಾಷೆ, ಕಲೆಗಳು, ಮನರಂಜನೆ, ರೀತಿನೀತಿಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಪರಂಪರೆಗಳನ್ನು ಅಳವಡಿಸುವುದರಿಂದ ನಮ್ಮ ದೇಶದ ಭವ್ಯ ಸಂಸ್ಕೃತಿ ಮುಂದುವರಿಯಲು ಅನುಕೂಲವಾಗುತ್ತದೆ.

**ಅರ್ಥಶಾಸ್ತ್ರೀಯ ಆಧಾರಗಳು:** ಪಠ್ಯಕ್ರಮ ರಚನೆಯಲ್ಲಿ ದೇಶದ ಆರ್ಥಿಕ ವ್ಯವಸ್ಥೆಯನ್ನು ಪರಿಗಣಿಸಬೇಕಾಗುತ್ತದೆ. ಏಕೆಂದರೆ ಭದ್ರವಾದ ಆರ್ಥಿಕ ಆಧಾರವಿಲ್ಲದಿದ್ದರೆ ಶಿಕ್ಷಣ ವ್ಯವಸ್ಥೆ ನಡೆಯಲು ಸಾಧ್ಯವಿಲ್ಲ. ಪಠ್ಯಕ್ರಮ ದೇಶದ ಉತ್ಪಾದನಾ ನೀತಿಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಕೈಗಾರಿಕಾಭಿವೃದ್ಧಿ ದೇಶದ ಆರ್ಥಿಕ ಅಭಿವೃದ್ಧಿಗೆ ನೇರವಾಗಿ ಸಂಬಂಧಿಸಿದೆ. ಆದ್ದರಿಂದ ನಮ್ಮ ದೇಶದ ನೈಸರ್ಗಿಕ ಸಂಪನ್ಮೂಲದ ಸಮಯೋಚಿತ ಬಳಕೆ, ವಾಣಿಜ್ಯಕ್ಷೇತ್ರದ ಅಭಿವೃದ್ಧಿ ಮತ್ತು ಕೃಷಿ ಕ್ಷೇತ್ರದ ಸಾಧನೆ ದೇಶದ ಅಭಿವೃದ್ಧಿಗೆ ಪೂರಕವಾದ ಅಂಶಗಳು ಪಠ್ಯಕ್ರಮದಲ್ಲಿ ಸೇರಬೇಕಾಗುತ್ತದೆ. ಒಂದು ದೇಶದ ಸುಭದ್ರ ಆರ್ಥಿಕವ್ಯವಸ್ಥೆ ಆ ದೇಶದ ಅಭಿವೃದ್ಧಿಯ ಸಂಕೇತ. ಇದು ಸಾಧ್ಯವಾಗುವುದು ವ್ಯವಸ್ಥಿತ ಶಿಕ್ಷಣಕ್ರಮ. ಆದ್ದರಿಂದ ಅಂಥ ಶಿಕ್ಷಣಕ್ಕೆ ಬೋಧನಾಪಠ್ಯಕ್ರಮದ ರಚನೆ ಆಗಬೇಕು.

**ಶಿಕ್ಷಣ ಆರ್ಥಿಕ ಅಭಿವೃದ್ಧಿಗೆ ಹೀಗೆ ಸಹಕಾರಿಯಾಗಿದೆ;**

* ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಅವರಲ್ಲಿ ಕೌಶಲ್ಯಗಳನ್ನು ಬೆಳೆಸುವುದರಿಂದ ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚಿನ ಉತ್ಪಾದನೆಯನ್ನು ನಿರೀಕ್ಷಿಸಬಹುದು.
* ದೇಶದ ಅಭಿವೃದ್ಧಿಗೆ ಪ್ರತಿ ವಿದ್ಯಾರ್ಥಿಯು ಅತಿಮುಖ್ಯ. ಹಾಗಾಗಿ ಅವನಲ್ಲಿ ಮೌಲ್ಯಯುತ ಜೀವನಶೈಲಿ, ಉತ್ತಮ ನಂಬಿಕೆ, ಶ್ರೇಷ್ಠ ವರ್ತನೆ, ಉತ್ತಮ ಜವಾಬ್ದಾರಿಯನ್ನು ಮೂಡಿಸಬೇಕಾಗುತ್ತದೆ.

ಹೀಗೆ ಪ್ರತಿ ವ್ಯಕ್ತಿಯ ತಲಾದಾಯ ಆ ದೇಶದ ಆರ್ಥಿಕ ಭದ್ರತೆಗೆ ಕಾರಣವಾಗುತ್ತದೆ. ಹಾಗಾಗಿ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಇದರಿಂದ ವಿದ್ಯಾರ್ಥಿಯನ್ನು ಸ್ವಾವಲಂಬಿಯನ್ನಾಗಿ ಮಾಡಬಹುದು. ಸುವ್ಯವಸ್ಥಿತವಾದ ಪಠ್ಯಕ್ರಮದಿಂದ ಕೂಡಿದ ಸಾರ್ವತ್ರಿಕ ಶಿಕ್ಷಣ ದೇಶದ ಆರ್ಥಿಕ ಸುಭದ್ರತೆಗೆ ಬುನಾದಿಯಾಗುತ್ತದೆ.

**ರಾಜಕೀಯ ಆಧಾರಗಳು:** ಶಿಕ್ಷಣ ವ್ಯವಸ್ಥೆಯ ಮೇಲೆ ದೇಶದ ಸ್ಥಿತಿಗತಿಗಳು ನೇರವಾಗಿ ಪ್ರಭಾವಬೀರುತ್ತವೆ. ರಾಜಕೀಯ ವ್ಯವಸ್ಥೆಯ ವಿಧಗಳಾದ ಪ್ರಜಾಪ್ರಭುತ್ವ, ರಾಜಪ್ರಭುತ್ವ, ಅಧ್ಯಕ್ಷೀಯ ಮಾದರಿ, ಪ್ರಜಾಪ್ರಭುತ್ವ ಕಮ್ಯೂನಿಸ್ಟ್ ಮಾದರಿ ಇವು ಆಯಾ ದೇಶದ ಶಿಕ್ಷಣದ ಮೇಲೆ ಬಹುಮುಖ್ಯ ಪ್ರಭಾವಬೀರುತ್ತವೆ. ಪ್ರತಿ ದೇಶ ರಾಜಕೀಯ ತಾತ್ವಿಕ ಬದ್ಧತೆಯ ಮೇಲೆ ನಿಂತಿರುತ್ತದೆ. ಹಾಗಾಗಿ ಆಯಾ ದೇಶದ ರಾಜಕೀಯ ಸ್ಥಿತಿಗತಿಗಳ ಮೇಲೆ ಶಿಕ್ಷಣ ವ್ಯವಸ್ಥೆ ಹಾಗೂ ಪಠ್ಯಕ್ರಮ ರೂಪುಗೊಳ್ಳಬೇಕಾಗುತ್ತದೆ. ಉದಾ:- ಚೀನಾ ದೇಶದಲ್ಲಿ ಕಮ್ಯೂನಿಸ್ಟ್ ತತ್ವ ಸಿದ್ಧಾಂತಕ್ಕೆ ಪೂರಕವಾದ ಶಾಲಾ ಪಠ್ಯಕ್ರಮ ಹಾಗೂ ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಲ್ಲಿ ಇರುವ ಪ್ರಜಾಪ್ರಭುತ್ವದ ನೀತಿ ನಿಯಾಮವಳಿಗಳಿಗೆ ಅನುಗುಣವಾದ ಪಠ್ಯಕ್ರಮಗಳು ರೂಪಿತವಾಗಿವೆ. ಅದೇ ರೀತಿ ಗಮನದಲ್ಲಿಟ್ಟುಕೊಂಡು ಪ್ರಜಾಪ್ರಭುತ್ವದ ಮೌಲ್ಯಗಳಾದ ಸಮಾನತೆ-ಸಹೋದರತೆ-ಸಹಬಾಳ್ವೆ, ಜಾತ್ಯತೀತತೆ ಬೆಳೆಸುವ ಕ್ರಮಗಳು ಮುಂತಾದವುಗಳನ್ನು ಪಠ್ಯಕ್ರಮದಲ್ಲಿ ಒಳಗೊಳ್ಳುವಂಥ ಪಠ್ಯಕ್ರಮ ರಚನೆಯಾಗಬೇಕು. ಪಠ್ಯಕ್ರಮದಿಂದ ಗುರಿ ಕೂಡ ವಿದ್ಯಾರ್ಥಿಯನ್ನು ಶ್ರೇಷ್ಠ ಪ್ರಜಾಪ್ರಭುತ್ವದ ಶ್ರೇಷ್ಠ ನಾಗರಿಕರನ್ನಾಗಿ ರೂಪಿಸುವುದೇ ಆಗಿರಬೇಕು. ವಿದ್ಯಾರ್ಥಿಯನ್ನು ಪ್ರಜಾಪ್ರಭುತ್ವದ ಉತ್ತಮ ನಾಗರಿಕರನ್ನಾಗಿಸಿ ಉತ್ತಮ ಸಾಮಾಜಿಕ ಪ್ರಜ್ಞೆ-ನೈತಿಕತೆ ಉತ್ತಮ ಆಲೋಚನೆ-ಸಮಾನತೆ-ನೀತಿಯುತ ಬದುಕನ್ನು ವಿದ್ಯಾರ್ಥಿಯಲ್ಲಿ ರೂಢಿಸಬೇಕು. ಅಂತೆಯೇ

Digitised by Bharatavani, CIIL

ಸಾಮಾಜಿಕ ನ್ಯಾಯಕ್ಕೆ ಅವನು ಪೂರಕವಾಗಿರಬೇಕು. ದೇಶಪ್ರೇಮ, ಧರ್ಮಸಹಿಷ್ಣುತಾ ಮನೋಭಾವನೆ ಅವನಲ್ಲಿ ಪಠ್ಯಕ್ರಮ ಪ್ರಜಾಸತ್ತೆಗೆ ಸೂಕ್ತವಾದ ನಾಯಕತ್ವ ಗುಣ, ಹಾಗೂ ಸಾಮಾಜಿಕ ಗುಣಗಳನ್ನು ಬೆಳೆಸುವಂತಿರಬೇಕು. ವಿದ್ಯಾರ್ಥಿ ಸಂಘ, ಗುಂಪು ಕ್ರೀಡೆಗಳು, ಸ್ಕೌಟ್ಸ್, ಗೈಡ್ ಮತ್ತು ಕಾರ್ಯಕ್ರಮಗಳಿಂದ ವಿದ್ಯಾರ್ಥಿಯಲ್ಲಿ ಸಾಂಘಿಕ ಬದುಕು, ಸಮುದಾಯ ಜೀವನ, ರಾಜಕೀಯ ಪ್ರಜ್ಞೆ ಮೂಡುವಂತಾಗಬೇಕು. ಹೀಗೆ ನಮ್ಮ ದೇಶದ ರಾಜಕೀಯ ಇತಿಹಾಸ, ಪ್ರಜಾಪ್ರಭುತ್ವ ಮೌಲ್ಯಗಳು ಶಾಲಾ ಪಠ್ಯಕ್ರಮದಿಂದ ಮುಂದಿನ ಪೀಳಿಗೆಗೆ ವರ್ಗಾವಣೆಯಾಗುವುದರೊಂದಿಗೆ ದೇಶದ ಅಭ್ಯುದಯಕ್ಕೆ ಪೂರಕವಾಗಬೇಕು.

ಹೀಗೆ ಪಠ್ಯಕ್ರಮ ಅಭಿವೃದ್ಧಿಯಲ್ಲಿ ತತ್ವಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ, ಧರ್ಮ, ಸಂಸ್ಕೃತಿ, ಅರ್ಥಶಾಸ್ತ್ರ ಮತ್ತು ರಾಜಕೀಯ ಬುನಾದಿಗಳು ಅತ್ಯವಶ್ಯಕ ಹಾಗೂ ಮಹತ್ವಪೂರ್ಣವಾಗಿವೆ.

–ಚಿದಾನಂದ ಎಸ್.ಕೆ.

## ಪಠ್ಯಕ್ರಮ ವಿನ್ಯಾಸ – ವಿವಿಧ ಹಂತಗಳಲ್ಲಿ

ಪಠ್ಯಕ್ರಮ ಪದಕ್ಕೆ ಆಂಗ್ಲಭಾಷೆಯಲ್ಲಿ curriculum ಎಂದು ಕರೆಯಲಾಗುವುದು. ಈ ಪದವು ಲ್ಯಾಟಿನ್ ಭಾಷೆಯ 'currer' ಎಂಬ ಪದದಿಂದ ಉದ್ಭವಿಸಿದೆ. ಇದರರ್ಥ ' A course to be run for reaching a certain goal or destination' ಅಂದರೆ ನಿಗದಿತ ಗುರಿ ಮುಟ್ಟಲು ಅನುಸರಿಸುವ ದಾರಿ ಎಂದಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣದ ಗುರಿ ತಲುಪಲು ಅನುಸರಿಸುವ ಅಭ್ಯಾಸ ಕ್ರಮ, ಬೋಧನಾ ವಿಧಾನಗಳು, ಕಲಿಕಾ ತಂತ್ರಗಳು ಹಾಗೂ ಮಕ್ಕಳು ವರ್ಗಕೋಣೆಯಲ್ಲಿ ಪುಸ್ತಕ ಭಂಡಾರದಲ್ಲಿ, ಪ್ರಯೋಗಾಲಯದಲ್ಲಿ, ಆಟದ ಬಯಲಿನಲ್ಲಿ, ಶಿಕ್ಷಕರೊಡನೆ, ಸಮಾಜದೊಡನೆ ಬರುವ ಸಂಪರ್ಕದಿಂದ ಪಡೆಯುವ ಅನುಭವಗಳ ಮೊತ್ತವೆ ಪಠ್ಯಕ್ರಮವಾಗಿದೆ.

**ಪಠ್ಯಕ್ರಮದ ಉದ್ದೇಶಗಳು:**

– ಕಲಿಕಾರ್ಥಿಗಳಲ್ಲಿ ಸ್ವತಂತ್ರ ವಿಚಾರ, ತುಲನೆ, ಪ್ರಯೋಗ, ತರ್ಕಶಕ್ತಿ ಮತ್ತು ಪ್ರಯೋಗಶೀಲತೆ ಹಾಗೂ ನಿರೀಕ್ಷಣೆ– ಈ ಸಾಮರ್ಥ್ಯಗಳು ಬೆಳೆಯುವಂತೆ ಮಾಡಿ ವಿವಿಧ ಅಭಿರುಚಿಗಳುಳ್ಳ ಕಲಿಕಾರ್ಥಿಗಳ ಬೇಡಿಕೆಗಳನ್ನು ಪೂರೈಸುವುದು.

– ಪರಿಣಾಮಕಾರಿ ಬೋಧನೆಗಾಗಿ ಶಿಕ್ಷಕನಿಗೆ ಬೋಧನೆಯ ಮಾರ್ಗದರ್ಶನ, ಉದ್ದೇಶ, ವ್ಯಾಪ್ತಿ ಬಗ್ಗೆ ಸಹಾಯ ಒದಗಿಸಲು ಪಠ್ಯಕ್ರಮದ ಉದ್ದೇಶಗಳನ್ನು ನಿರೂಪಿಸುವುದು.

– ನೈಜ ಜೀವನದ ವಿವಿಧ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿ, ಮುಂದಿನ ಭಾವೀ ಜೀವನಕ್ಕೆ ಕಲಿಕಾರ್ಥಿಗಳು ಅವರ ಬೌದ್ಧಿಕ, ಮಾನಸಿಕ, ದೈಹಿಕ, ಸಾಮಾಜಿಕ, ಸಂವೇಗಾತ್ಮಕ ಕ್ಷೇತ್ರಗಳಲ್ಲಿ ಅಪೇಕ್ಷಿತ ರೀತಿಯಲ್ಲಿ ವಿಕಾಸ ಹೊಂದಲು ಕಲಿಕಾನುಭವಗಳನ್ನು ಒದಗಿಸುವುದು

– ಕಲಿಕಾರ್ಥಿಗಳ ಶೈಕ್ಷಣಿಕ ಸಾಧನೆಗಳನ್ನು ಮೌಲ್ಯಮಾಪನ ಮಾಡಲು ಕ್ರಮ ರೂಪಿಸುವುದು

ಪಠ್ಯಕ್ರಮ ರಚನೆಯು ಶೈಕ್ಷಣಿಕ ಉದ್ದೇಶಗಳಿಗೆ ನೇರವಾಗಿ ಸಂಬಂಧಿಸಿರುತ್ತದೆ. ಅದಕ್ಕಾಗಿ ಪಠ್ಯಕ್ರಮವನ್ನು ಶೈಕ್ಷಣಿಕ ಉದ್ದೇಶಗಳ ಸಾಧನೆಗಾಗಿ ಪಠ್ಯಕ್ರಮವನ್ನು ವಿವಿಧ ಹಂತಗಳಲ್ಲಿ ಕಲಿಕಾರ್ಥಿಗಳ ಸಾಮರ್ಥ್ಯಗಳಿಗೆ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ರೂಪಿಸುವುದು ಅಗತ್ಯವಾಗಿರುತ್ತದೆ. ಪ್ರತಿಯೊಂದು ಶೈಕ್ಷಣಿಕ ಹಂತದ ಪಠ್ಯಕ್ರಮ ವಿನ್ಯಾಸ ಆಯಾ ಹಂತದ ಉದ್ದೇಶಗಳನ್ನು ಅವಲಂಬಿಸಿರುತ್ತದೆ.

**ಪೂರ್ವ ಪ್ರಾಥಮಿಕ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸ:**

ಪೂರ್ವ ಪ್ರಾಥಮಿಕ ಹಂತದಲ್ಲಿ ಮಗುವಿಗೆ ಭೌತಿಕ ಪರಿಸರದ ಪರಿಚಯ ಮತ್ತು ಸಾಮಾಜಿಕ ಪರಿಸರದ ಅಂಶಗಳನ್ನು ಒಳಗೊಂಡ ಪಠ್ಯಕ್ರಮದ ವಿನ್ಯಾಸದ ಮೂಲಕ ಮಕ್ಕಳ ಮಾನಸಿಕ ಬೆಳವಣಿಗೆಗೆ ಸಹಾಯವಾಗುವಂತೆ ಮಾಡಲಾಗುವುದು, ಚಟುವಟಿಕೆಗಳ ಮೂಲಕ ಕಲಿಕೆ ಸಂತಸದಾಯಕವಾಗುವಂತೆ ಹಾಗೂ ಸಾಮಾಜಿಕ ಪರಿಸರದಲ್ಲಿ ತನ್ನ ಸ್ಥಾನವನ್ನು ಅರಿಯುವಂತೆ ಕಲಿಕಾನುಭವಗಳನ್ನು ಒದಗಿಸಬೇಕು. ಮಾಂಟೆಸ್ಸೋರಿ ಮತ್ತು ಕಿಂಡರ್ ಗಾರ್ಟನ್ ತತ್ವಗಳನ್ನು ಅನುಸರಿಸಬೇಕು. ವ್ಯವಸ್ಥಿತ ರೀತಿಯಲ್ಲಿ ಓದು, ಬರಹ ಕಲಿಸುವುದರ ಅಗತ್ಯ ಅಷ್ಟಾಗಿ ಇರುವುದಿಲ್ಲ.

**ಪ್ರಾಥಮಿಕ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸ:**

ಪ್ರಾಥಮಿಕ ಹಂತದಲ್ಲಿ ಸರಳವಾದ ಕಲಿಕಾ ವಿಷಯಗಳನ್ನು ಒಳಗೊಂಡಿರುವ ಪಠ್ಯಕ್ರಮವನ್ನು ರೂಪಿಸುವುದರ ಜೊತೆಗೆ ಮಕ್ಕಳ ಆಸಕ್ತಿ ಮತ್ತು ಅವರ ಬೌದ್ಧಿಕ ಮಟ್ಟಕ್ಕೆ ಸೂಕ್ತವಾದ ಪಠ್ಯವಿನ್ಯಾಸವನ್ನು ರಚಿಸುವುದು ಅಗತ್ಯವಾಗಿರುತ್ತದೆ. ದಿನನಿತ್ಯ ಜೀವನದಲ್ಲಿ ಬರುವ ಹಲವು ಅಂಶಗಳನ್ನು ಪಠ್ಯವಸ್ತುವನ್ನಾಗಿಸಿ ವಿವಿಧ ರೀತಿಯ ವಸ್ತುಗಳನ್ನು ಪರಿಚಯಿಸುವುದು ಅಗತ್ಯವಾಗಿರುತ್ತದೆ. ಭೌತಿಕ ಪರಿಸರ ಮತ್ತು ಸಾಮಾಜಿಕ ಪರಿಸರದಲ್ಲಿ ಕಂಡುಬರುವ ಹಲವು ಅಂಶಗಳ ಬಗೆಗಿನ ಸ್ಥೂಲ ಪರಿಚಯ, ಆರೋಗ್ಯ, ಆಹಾರ, ನೀರು, ನೈರ್ಮಲ್ಯಗಳ ಮಹತ್ವವನ್ನು ತಿಳಿಸುವ ಪಠ್ಯವಸ್ತುವನ್ನು ಹೊಂದಿರುವ ಪಠ್ಯಕ್ರಮವಾಗಿರುತ್ತದೆ. ಕಲಿಕೆಯ ಮೂಲ ಕೌಶಲಗಳಾದ ಓದು, ಬರಹ, ಲೆಕ್ಕಾಚಾರಕ್ಕೆ ಮುಖ್ಯವಾಗಿ ಒತ್ತುಕೊಡಬೇಕು. ವಿಜ್ಞಾನವನ್ನು ಪರಿಸರ ಅಧ್ಯಯನ ರೂಪದಲ್ಲಿ ಪರಿಚಯಿಸಬೇಕು, ಕ್ರೀಡೆಗಳಿಗೂ ಮಹತ್ವ ನೀಡಬೇಕು.

**ಪ್ರೌಢಶಾಲೆ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸ:**

ಪ್ರೌಢಶಾಲೆ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸವು ಪ್ರಾಥಮಿಕ ಹಂತದ ಪಠ್ಯಕ್ರಮದಲ್ಲಿ ಇರುವ ಪಠ್ಯವಸ್ತುವಿಗಿಂತ ಸ್ವಲ್ಪ ಹೆಚ್ಚಿನ

Digitised by Bharatavani, CIIL

ಮಾಹಿತಿಯನ್ನು ಒಳಗೊಂಡಿರುತ್ತದೆ, ದೈನಂದಿನ ಜೀವನದಲ್ಲಿ ಎದುರಿಸುವ ಹಲವು ಸಮಸ್ಯೆಗಳನ್ನು ಪರಿಹರಿಸುವ ಅಂಶಗಳನ್ನು ಒಳಗೊಂಡ ಪಠ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿರುತ್ತದೆ. ಮೂರ್ತ ಅಂಶಗಳ ಜೊತೆಗೆ ಅಮೂರ್ತ ವಿಷಯವನ್ನು ಒಳಗೊಂಡ ಪಠ್ಯವಸ್ತುವನ್ನು ಈ ಹಂತದಲ್ಲಿ ರಚಿಸಲಾಗಿರುತ್ತದೆ. ಈ ಹಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಅಂತಿಮ ಘಟ್ಟವಾಗಿರುವುದರಿಂದ ಯಾವುದಾದರೂ ಜೀವನ ಕೌಶಲದಲ್ಲಿ ತರಬೇತಿ ನೀಡುವ ಅವಕಾಶ ಪಠ್ಯಕ್ರಮದಲ್ಲಿರಬೇಕು. ಬೋಧನಾ ವಿಷಯದ ವಿಷಯ ವಸ್ತು ಸಾಂದ್ರತೆ ಹೆಚ್ಚಾಗಿರಬೇಕು ವಿಷಯ ವಿಶೇಷಜ್ಞತೆ ಬೇಕಾಗಿಲ್ಲ.

**ಪದವಿ ಪೂರ್ವ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸ:**

ಪದವಿಪೂರ್ವ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸವು ವಿದ್ಯಾರ್ಥಿ ಆಯ್ಕೆ ಮಾಡಿಕೊಳ್ಳುವ ವಿಷಯದ ಮೇಲೆ ಅವಲಂಬಿಸಿರುತ್ತದೆ. ಏಕೆಂದರೆ ಈ ಹಂತದಲ್ಲಿ ವಿದ್ಯಾರ್ಥಿಗಳು ಕಲೆ, ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳಲ್ಲಿ ವಿಶೇಷಜ್ಞತೆ ಪಡೆಯಲು ಬೇರೆ ಬೇರೆ ವಿಷಯಗಳ ಗುಂಪನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಹಂತದ ಪಠ್ಯಕ್ರಮ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಅಥವಾ ವೃತ್ತಿ ಅಥವಾ ಔದ್ಯೋಗಿಕ ಶಿಕ್ಷಣ ಪಡೆಯಲು ತಯಾರು ಮಾಡಬೇಕು. ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಸಾರವಾಗಿ ವಿಷಯಗಳ ಆಯ್ಕೆಗೆ ಅವಕಾಶವಿರುತ್ತದೆ. ವಿಜ್ಞಾನ ವಿಷಯದಲ್ಲಿ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ವಿಚಾರ ಸಂಗ್ರಹಣೆಯ ಜೊತೆಗೆ ಪ್ರಾಯೋಗಿಕ ಅಂಶಗಳಿಗೆ ಮಹತ್ವವನ್ನು ನೀಡಲಾಗುತ್ತದೆ. ವಾಣಿಜ್ಯ ವಿಷಯದಲ್ಲಿ ಕೆಲವು ಕೌಶಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ, ಕಲಾ ವಿಭಾಗದಲ್ಲಿ ವಿಶೇಷ ಜ್ಞಾನಾರ್ಜನೆಗೆ ಹೆಚ್ಚಿನ ಪ್ರಾಧಾನ್ಯವಿರುವಂತೆ ಪಠ್ಯಕ್ರಮವನ್ನು ರಚಿಸಬೇಕಾಗುತ್ತದೆ.

**ಪದವಿ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸ:**

ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಹಂತದ ಶಿಕ್ಷಣವನ್ನು ವಿಶ್ವವಿದ್ಯಾನಿಲಯ ಶಿಕ್ಷಣ ಅಥವಾ ಉನ್ನತ ಶಿಕ್ಷಣ ಅಥವಾ ಕಾಲೇಜು ಶಿಕ್ಷಣ ಎಂದು ಕರೆಯಲಾಗುತ್ತದೆ. ಈ ಹಂತಗಳಲ್ಲಿ ಆಳವಾದ ಅಧ್ಯಯನಕ್ಕೆ ಪ್ರಾಯೋಗಿಕತೆಗೆ ವಿಶೇಷತೆಗೆ ಸಂಶೋಧನೆಗೆ ವಿಫುಲವಾದ ಅವಕಾಶವಿರಬೇಕು. ಪದವಿ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸವು ಸಹ ಪದವಿಪೂರ್ವ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸದಂತೆ ವೈವಿಧ್ಯಮಯವಾದ ವಿಷಯಗಳನ್ನು ಒಳಗೊಂಡಿರುತ್ತದೆ. ಪದವಿ ಹಂತದಲ್ಲಿಯು ಸಹ ವಿಷಯ ಸಂಗ್ರಹಣೆ, ಕೌಶಲ್ಯಗಳ ಬೆಳವಣಿಗೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯದವರು ನೇಮಿಸಿದ ಮಂಡಳಿಯಿಂದ ರಚಿಸಲ್ಪಟ್ಟಿರುತ್ತದೆ, ಹಾಗೂ ಒಂದು ವಿಶ್ವವಿದ್ಯಾನಿಲಯದ ಪಠ್ಯಕ್ರಮಕ್ಕೂ ಮತ್ತೊಂದು ವಿಶ್ವವಿದ್ಯಾನಿಲಯದ ಪಠ್ಯಕ್ರಮಕ್ಕೂ ವ್ಯತ್ಯಾಸವಿರುತ್ತದೆ. ಕೆಲವು ವಿಶ್ವವಿದ್ಯಾನಿಲಯದ ಪಠ್ಯಕ್ರಮ ವಿಶಿಷ್ಟವಾದ ಅಧ್ಯಯನ ವಿಷಯಗಳನ್ನು ಒಳಗೊಂಡಿರುತ್ತದೆ. ಜೊತೆಗೆ ಯು.ಜಿ.ಸಿ.ಯಿಂದ ಕಡ್ಡಾಯವಾಗಿ ಬೋಧನೆ ಮಾಡಬೇಕೆಂಬ ನಿಯಮವಿರುವ ವಿಷಯಗಳಾದ ಪರಿಸರ ವಿಜ್ಞಾನ, ಭಾರತದ ಸಂವಿಧಾನವನ್ನು ಪಠ್ಯಕ್ರಮದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯದವರು ಅಳವಡಿಸಿಕೊಂಡಿದ್ದಾರೆ ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನಕ್ಕೆ ಮತ್ತು ಪ್ರಾಯೋಗಿಕ ಪರೀಕ್ಷೆಗೆ ಅವಕಾಶವಿರುತ್ತದೆ. ಪದವಿ ಮಟ್ಟದ ಪಠ್ಯಕ್ರಮ ಭಾಷೆಗಳು, ವಿಶೇಷ ವಿಷಯಗಳನ್ನು ಒಳಗೊಂಡಿರುತ್ತದೆ. ಕಲಿಕಾರ್ಥಿ 1 ಅಥವಾ 2 ಭಾಷೆಗಳು ಮೂರು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಬೇಕು ವಿಜ್ಞಾನ ವಿದ್ಯಾರ್ಥಿಗಳಿಗೆ ಪ್ರಯೋಗಾನುಭವಕ್ಕೆ ಅವಕಾಶವಿರುತ್ತದೆ.

**ಉನ್ನತ ಶಿಕ್ಷಣದ ಪಠ್ಯಕ್ರಮ:**

ಉನ್ನತ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸವು ಸಹ ಪದವಿ ಹಂತದಲ್ಲಿನ ಪಠ್ಯಕ್ರಮ ವಿನ್ಯಾಸದಂತೆ ವೈವಿಧ್ಯಮಯವಾದ ವಿಷಯಗಳನ್ನು ಒಳಗೊಂಡಿದ್ಧೀ ಹಂತದಲ್ಲಿ ಪದವಿಯಲ್ಲಿ ಓದಿದ ಮೂರು ವಿಷಯಗಳಲ್ಲಿ ಒಂದನ್ನು ಅಧ್ಯಯನ ಮಾಡಬೇಕು. ಉನ್ನತ ಹಂತದಲ್ಲಿಯು ಸಹ ವಿಷಯ ಸಂಗ್ರಹಣೆ, ಕೌಶಲ್ಯಗಳ ಬೆಳವಣಿಗೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಪಠ್ಯಕ್ರಮ ವಿನ್ಯಾಸವು ವಿಶ್ವವಿದ್ಯಾನಿಲಯದವರು ನೇಮಿಸಿದ ಮಂಡಳಿಯಿಂದ ರಚಿಸಲ್ಪಟ್ಟಿರುತ್ತದೆ, ಹಾಗೂ ಒಂದು ವಿಶ್ವವಿದ್ಯಾನಿಲಯದ ಪಠ್ಯಕ್ರಮಕ್ಕೂ ಮತ್ತೊಂದು ವಿಶ್ವವಿದ್ಯಾನಿಲಯದ ಪಠ್ಯಕ್ರಮಕ್ಕೂ ವ್ಯತ್ಯಾಸವಿರುತ್ತದೆ. ಬಹುತೇಕ ವೃತ್ತಿಪರ ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಅಂತಿಮ ಸೆಮಿಸ್ಟರಿನ ಕೆಲವು ವಿಷಯಗಳಲ್ಲಿ ಸಂಶೋಧನೆ ಆಧಾರಿತ ಲಘು ಪ್ರಬಂಧವನ್ನು (Dissertation) ಅಥವಾ ಪ್ರಾಯೋಜನೆಯನ್ನು (Project Work) ಸಲ್ಲಿಸಬೇಕಾಗುತ್ತದೆ. ನಿಯೋಜಿತ ಕಾರ್ಯವನ್ನು ನೀಡಲಾಗಿರುತ್ತದೆ.

ಪಠ್ಯಕ್ರಮ ವಿನ್ಯಾಸವು ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖವಾದ ಅಂಶವಾಗಿದ್ದು, ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪಠ್ಯಕ್ರಮ ವಿನ್ಯಾಸವನ್ನು ಆಗಾಗ್ಗೆ ನವೀಕರಿಸಿ ಮಾರ್ಪಾಡುಗಳನ್ನು ಮಾಡುವುದು ಅತ್ಯಗತ್ಯವಾಗಿರುತ್ತದೆ. ಇದರಿಂದಾಗಿ ಪಠ್ಯಕ್ರಮವನ್ನು ಆಯಾ ಸಮಯದ ಸಮಾಜದ, ಜ್ಞಾನ ಪ್ರಪಂಚದ ಅಗತ್ಯಗಳಿಗೆ ಹೊಂದುವಂತೆ ರೂಪಿಸುವುದು ಸಾಧ್ಯವಾಗುತ್ತದೆ.

–ಕಾಂತರಾಜು ಎಂ. ಎಸ್.

## ಪಠ್ಯಕ್ರಮ ವ್ಯವಹಾರ

ಯಾವುದೇ ಶೈಕ್ಷಣಿಕ ಕಾರ್ಯಕ್ರಮವನ್ನು ರೂಪಿಸುವಾಗ ನಾವು ಕೆಲವು ಮುಖ್ಯವಾದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗ ುತ್ತದೆ. ಮೊದಲಿಗೆ ನಾವು ಯಾವ ಮಟ್ಟದ ಕಲಿಕಾರ್ಥಿಗಳಿಗಾಗಿ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ ಎಂದು ನಿರ್ಧರಿಸಬೇಕು. ರೂಪಿಸುವ ಶೈಕ್ಷಣಿಕ ಕಾರ್ಯಕ್ರಮ ವಿದ್ಯಾರ್ಥಿಗಳ ವಯಸ್ಸು, ಮಾನಸಿಕ ಹಾಗೂ ಸಾಮಾಜಿಕ ಲಕ್ಷಣಗಳಿಗೆ ತಕ್ಕುದಾಗಿರಬೇಕು.

Digitised by Bharatavani, CIIL

ಆ ಕಾರ್ಯಕ್ರಮದ ಶೈಕ್ಷಣಿಕ ಉದ್ದೇಶಗಳನ್ನು ನಿರೂಪಿಸಬೇಕು. ನಂತರದಲ್ಲಿ ಆ ಉದ್ದೇಶಗಳನ್ನು ಸಾಧಿಸಲು ಬೇಕಾದ ಶೈಕ್ಷಣಿಕ ಅನುಭವಗಳನ್ನು, ಚಟುವಟಿಕೆಗಳನ್ನು ಒದಗಿಸಲು ಪಠ್ಯಕ್ರಮವನ್ನು ರೂಪಿಸಬೇಕು. ಈ ಪಠ್ಯಕ್ರಮ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಸಹ–ಪಠ್ಯ ಚಟುವಟಿಕೆಗಳನ್ನು ಒಳಗೊಂಡಿರಬೇಕು.

ಹೀಗೆ ರೂಪಿಸಿದ ಪಠ್ಯಕ್ರಮವನ್ನು ಶಾಲೆಯ ತರಗತಿಗಳಲ್ಲಿ ಆಚರಣೆಗೆ ತರುವುದು ಮುಂದಿನ ಹಂತ. ಈ ಹಂತವನ್ನು ಪಠ್ಯಕ್ರಮ ವ್ಯವಹಾರದ ಹಂತವೆಂದು ಹೇಳುತ್ತೇವೆ. ಯಾವುದೇ ಶೈಕ್ಷಣಿಕ ಕಾರ್ಯಕ್ರಮದಲ್ಲಿನ ಬೋಧನಾ–ಕಲಿಕಾ ಪ್ರಕ್ರಿಯೆಗಳಲ್ಲಿ ಈ ಹಂತ ಬಹಳ ಮುಖ್ಯವಾದುದು. ಏಕೆಂದರೆ ಒಂದು ಶೈಕ್ಷಣಿಕ ಕಾರ್ಯಕ್ರಮದ ಗುರಿಗಳು ಎಷ್ಟೇ ಸಮರ್ಥನೀಯವಾಗಿರಲಿ ಅದರ ಉದ್ದೇಶಗಳು ಎಷ್ಟೇ ಸ್ಪಷ್ಟತೆ ಹಾಗೂ ನಿಖರತೆಯಿಂದ ನಿರೂಪಿತವಾಗಿರಲಿ ಅದಕ್ಕೆ ಸಾಧನವಾದ ಪಠ್ಯಕ್ರಮವನ್ನು ಎಷ್ಟೇ ವ್ಯವಸ್ಥಿತವಾಗಿ ರಚಿಸಿರಲಿ, ಆ ಪಠ್ಯಕ್ರಮವನ್ನು ತರಗತಿಗಳಲ್ಲಿ ವ್ಯವಸ್ಥಿತ ರೀತಿಯಲ್ಲಿ ಆಚರಣೆಗೆ ತರದಿದ್ದಲ್ಲಿ ರೂಪಿಸಿದ ಉದ್ದೇಶಗಳು ಸಾಧಿತವಾಗದೇ ಅರ್ಥಹೀನವಾಗಿರುತ್ತವೆ. ರಚಿತವಾದ ಒಳ್ಳೆಯ ಪಠ್ಯಕ್ರಮ ಪ್ರಯೋಜನಕ್ಕೆ ಬರುವುದಿಲ್ಲ. ಆದ್ದರಿಂದ ಪಠ್ಯಕ್ರಮವನ್ನು ತರಗತಿಯಲ್ಲಿ ವ್ಯವಹಾರಕ್ಕೆ ತರುವುದು ಬಹಳ ಮುಖ್ಯವಾಗುತ್ತದೆ. ಪಠ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ವ್ಯವಹಾರಕ್ಕೆ ತಂದರೆ ರೂಪಿತವಾದ ಉದ್ದೇಶಗಳನ್ನು ಪೂರ್ತಿಗೊಳಿಸುವುದು ಸಾಧ್ಯವಾಗುತ್ತದೆ ಮತ್ತು ಕಾರ್ಯಕ್ರಮದ ಶೈಕ್ಷಣಿಕ ಗುರಿಗಳು ನೆರವೇರುತ್ತವೆ.

ಪಠ್ಯಕ್ರಮ ವ್ಯವಹಾರದಲ್ಲಿ ಶೈಕ್ಷಣಿಕ ಸಂಸ್ಥೆಯ ವ್ಯವಸ್ಥಾಪನ (ಆಡಳಿತ) ಮಂಡಳಿ ಸದಸ್ಯರು, ಸಂಸ್ಥೆಯ ಮುಖ್ಯಸ್ಥರು (ಮುಖ್ಯೋಪಾಧ್ಯಾಯರು, ಪ್ರಾಂಶುಪಾಲರು), ತರಗತಿಯ ಶಿಕ್ಷಕರು ಮುಖ್ಯವಾಗಿ ಪಾಲ್ಗೊಳ್ಳಬೇಕಾಗುತ್ತದೆ. ಸಂಸ್ಥೆಯ ಬೋಧಕೇತರ ಸಿಬ್ಬಂದಿ ವರ್ಗದವರು ಪಠ್ಯಕ್ರಮ ವ್ಯವಹಾರಕ್ಕೆ ಸ್ವಲ್ಪಮಟ್ಟಿಗೆ ತಮ್ಮ ಕೊಡುಗೆಯನ್ನು ನೀಡುತ್ತಾರೆ. ಪಠ್ಯಕ್ರಮ ವ್ಯವಹಾರದಲ್ಲಿ ಮುಖ್ಯ ಭಾಗಗಳು ಇವು:

1. ಆಡಳಿತಕ್ಕೆ ಸಂಬಂಧಿಸಿದ ಅಂಶಗಳು. ಇವುಗಳಲ್ಲಿ ವ್ಯವಸ್ಥಾಪನ ಮಂಡಳಿ ಮತ್ತು ಮುಖ್ಯಸ್ಥರ ಪಾತ್ರ ಮುಖ್ಯವಾಗಿರುತ್ತದೆ.
2. ತರಗತಿ ಬೋಧನೆ ಕಲಿಕೆ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಅಂಶಗಳು. ಇವುಗಳಲ್ಲಿ ಶಿಕ್ಷಕರು ಮುಖ್ಯವಾಗಿ ಪಾತ್ರವಹಿಸುತ್ತಾರೆ.
3. ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಶಗಳು. ಇವುಗಳಲ್ಲಿ ಶಿಕ್ಷಕರ ಜೊತೆಗೆ, ದೈಹಿಕ ಶಿಕ್ಷಕರು, ಯೋಗ ಶಿಕ್ಷಕರು ಪಾಲ್ಗೊಳ್ಳಬೇಕಾಗುತ್ತದೆ.

ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರು ಇಡೀ ಸಂಸ್ಥೆಯ ಆಡಳಿತವನ್ನು ನೋಡಿಕೊಳ್ಳಬೇಕು. ಶಾಲೆಯ ಎಲ್ಲಾ ತರಗತಿಗಳಲ್ಲಿ ಪಠ್ಯಕ್ರಮದ ಆಚರಣೆ ಮುಖ್ಯೋಪಾಧ್ಯಾಯರ (ಪ್ರಾಂಶುಪಾಲರ) ಜವಾಬ್ದಾರಿಯಾಗಿರುತ್ತದೆ. ಪಠ್ಯಕ್ರಮ ವ್ಯವಹಾರಕ್ಕೆ ಸಂಬಂಧಿಸಿದಂತೆ ಮುಖ್ಯಸ್ಥರು ಈ ಕೆಳಗಿನ ಅಂಶಗಳನ್ನು ನೋಡಿಕೊಳ್ಳಬೇಕಾಗುತ್ತದೆ.

1. ಪಠ್ಯಕ್ರಮದ ಉದ್ದೇಶಗಳ ಬಗ್ಗೆ, ಪಠ್ಯಕ್ರಮದ ವ್ಯಾಪ್ತಿಯ ಬಗ್ಗೆ, ಪಠ್ಯಕ್ರಮದ ವಿವಿಧ ವಿಷಯಗಳ ಪಠ್ಯವಸ್ತು (Syllabus) ಬಗ್ಗೆ, ಅದನ್ನು ಪೂರ್ತಿಗೊಳಿಸಲು ಬೇಕಾದ ಸಮಯ ಮಿತಿಯ ಬಗ್ಗೆ ಶಿಕ್ಷಕರಲ್ಲಿ ತಿಳಿವಳಿಕೆ ಮೂಡಿಸುವುದು.
2. ಶಿಕ್ಷಕರ ಸಹಕಾರದೊಂದಿಗೆ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ವಾರ್ಷಿಕ ಹಾಗೂ ಮಾಸಿಕ ಯೋಜನೆಗಳನ್ನು ರೂಪಿಸುವುದು.
3. ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ವೇಳಾ ಪಟ್ಟಿಯನ್ನು ರಚಿಸುವುದು. ಒಂದು ಒಳ್ಳೆಯ ವೇಳಾಪಟ್ಟಿಯನ್ನು ರಚಿಸುವಾಗ ಕೆಲವು ನಿಯಮಗಳನ್ನು, ತತ್ವಗಳನ್ನು ಗಮನ ದಲ್ಲಿಡಬೇಕಾಗುತ್ತದೆ.
4. ಪಠ್ಯಕ್ರಮದ ವಿಷಯಗಳ ಬೋಧನ ಕಾರ್ಯವನ್ನು ಮತ್ತು ಸಹ–ಪಠ್ಯ ಚಟುವಟಿಕೆಗಳ ಕಾರ್ಯಗಳನ್ನು ಶಿಕ್ಷಕರಿಗೆ ಸೂಕ್ತ ರೀತಿಯಲ್ಲಿ ಹಂಚುವುದು.
5. ಇಡೀ ಶಾಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳ ಶಿಸ್ತನ್ನು ನೋಡಿಕೊಳ್ಳುವುದು.
6. ತರಗತಿಯ ಬೋಧನೆಗೆ ಬೇಕಾದ ಪಠ್ಯಪುಸ್ತಕಗಳು, ಪರಾಮರ್ಶನ ಗ್ರಂಥಗಳು, ದೃಶ್ಯ–ಶ್ರಾವ್ಯ ಬೋಧನೋಪಕರಣಗಳು, ಭೂಪಟ ಇತ್ಯಾದಿಗಳು, ಗ್ರಂಥಾಲಯ ಹಾಗೂ ಪ್ರಯೋಗ ಶಾಲೆಯ ವ್ಯವಸ್ಥೆಗಳು – ಇವುಗಳು ಸಾಕಷ್ಟು ಪ್ರಮಾಣದಲ್ಲಿ ಬೇಕಾದ ಸಮಯದಲ್ಲಿ ತರಗತಿ ಶಿಕ್ಷಕರಿಗೆ ದೊರೆಯುವಂತೆ ನೋಡಿಕೊಳ್ಳಬೇಕು. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಕ್ಷೇತ್ರದಲ್ಲಿನ ಅಭೂತ ಪೂರ್ವ ಬೆಳವಣಿಗೆಯಿಂದಾಗಿ ತರಗತಿಯ ಬೋಧನೆ–ಕಲಿಕೆಯನ್ನು ಸಮೃದ್ಧಗೊಳಿಸಲು ಈಗ ಬಹುಮಾಧ್ಯಮ ಉಪಕ್ರಮ (Multimedia Approaches), ಅಂತರ್‌ಜಾಲ (Internet), ಟೆಲಿವಿಷನ್ ಕಾರ್ಯಕ್ರಮಗಳು, ದೂರ–ಸಂಪರ್ಕ ವ್ಯವಸ್ಥೆ ಮುಂತಾದ ಅನೇಕ ಸಾಧ್ಯತೆಗಳು ಲಭ್ಯವಾಗಿವೆ. ಈ ಸಾಧನಗಳನ್ನು ಅಳವಡಿಸಿಕೊಳ್ಳುವ ಶಾಲೆ ಹಾಗೂ ತರಗತಿ ಚುರುಕು ಶಾಲೆ/ತರಗತಿ (Smart School/ class room) ಎನ್ನಿಸಿವೆ. ಆರ್ಥಿಕ ಅನುಕೂಲತೆ ಇದ್ದಲ್ಲಿ ಮುಖ್ಯಸ್ಥರು ಈ ಆಧುನಿಕ ಅನುಕೂಲತೆಗಳನ್ನು ಶಾಲೆಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು.
7. ಶೈಕ್ಷಣಿಕ ವರ್ಷದ ಆರಂಭ ಮತ್ತು ಅಂತ್ಯದ ದಿನಾಂಕಗಳು, ಬರುವ ರಜಾದಿನಗಳು, ಮಧ್ಯಮಾವಧಿ ರಜೆ, ಮುಖ್ಯವಾದ ವಾರ್ಷಿಕ ದಿನಾಚರಣೆಯ ದಿನಗಳು, ರಾಷ್ಟ್ರೀಯ ಮತ್ತು ಸ್ಥಳೀಯ ಹಬ್ಬಗಳನ್ನು ಶಾಲೆಯಲ್ಲಿ ಆಚರಿಸುವ ದಿನಗಳು, ಕ್ರೀಡೆಗಳ ಪಂದ್ಯಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಪರೀಕ್ಷಾ

Digitised by Bharatavani, CIIL

ದಿನಾಂಕಗಳು, ಶಾಲಾ ಪ್ರವಾಸದ ಕಾರ್ಯಕ್ರಮ, ದೀರ್ಘಾವಧಿ (ಬೇಸಿಗೆ) ರಜೆಯ ಅವಧಿ ಮತ್ತು ಮುಂದಿನ ಶೈಕ್ಷಣಿಕ ವರ್ಷದ ಆರಂಭ ಈ ಎಲ್ಲಾ ವಿವರಗಳನ್ನು ಒಳಗೊಂಡ ಶಾಲಾ ಕ್ಯಾಲೆಂಡರನ್ನು ಮುಖ್ಯಸ್ಥರು ಶಿಕ್ಷಕರ ಸಹಕಾರದೊಂದಿಗೆ ಸಿದ್ಧಗೊಳಿಸಬೇಕು.

8. ಸಹ–ಪಠ್ಯ ಚಟುವಟಿಕೆಗಳ ಆಯೋಜನೆಗೆ ಬೇಕಾದ ಕೀಡಾ ಸಾಮಗ್ರಿಗಳು ಮತ್ತು ಇತರ ಸಾಮಗ್ರಿಗಳ ವ್ಯವಸ್ಥೆಯನ್ನು ನೋಡಿಕೊಳ್ಳಬೇಕು.

9. ಎಲ್ಲಾ ಶಿಕ್ಷಕರು ತಮಗೆ ನಿಗದಿಗೊಳಿಸಿರುವ ಬೋಧನೆ ಮತ್ತು ಇತರ ಕಾರ್ಯಗಳನ್ನು ವೇಳಾಪಟ್ಟಿಗೆ ಅನುಸಾರವಾಗಿ ನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು.

10. ಬೋಧಕೇತರ ಸಿಬ್ಬಂದಿ ತರಗತಿ ಶಿಕ್ಷಕರಿಗೆ ಅಗತ್ಯವಾದ ಸಹಾಯವನ್ನು ನೀಡುವಂತೆ ನೋಡಿಕೊಳ್ಳಬೇಕು.

11. ಶಾಲೆಗೆ ಬೇಕಾಗುವ ಸಂಪನ್ಮೂಲಗಳನ್ನು ಕ್ರೋಢೀಕರಿಸಲೂ, ವಿದ್ಯಾರ್ಥಿಗಳ ಕಲಿಕೆ ಬಗ್ಗೆ ಚರ್ಚಿಸಲೂ ಸಮುದಾಯದೊಂದಿಗೆ ನಿಕಟ ಸಂಪರ್ಕ ಬೆಳೆಸಿಕೊಳ್ಳಬೇಕು.

12. ವಿದ್ಯಾರ್ಥಿಗಳಲ್ಲಿ, ಶಿಕ್ಷಕರಲ್ಲಿ ಉಂಟಾಗಬಹುದಾದ ಸಾಮಾಜಿಕ, ಮಾನಸಿಕ ಸಂಘರ್ಷದಿಂದಾಗಿ ಪಾರಸ್ಪರಿಕ ತಪ್ಪು ತಿಳುವಳಿಕೆಯಿಂದಾಗಿ ಉದ್ಭವಿಸುವ ಸಮಸ್ಯೆಗಳಿಗೆ ಸೌಹಾರ್ದಪೂರ್ಣ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು.

ಪಠ್ಯಕ್ರಮ ವ್ಯವಹಾರಕ್ಕೆ ಸಂಬಂಧಿಸಿದಂತೆ ಶಿಕ್ಷಕರು ಈ ಕೆಳಗಿನ ಜವಾಬ್ದಾರಿಗಳನ್ನು ಹೊಂದಿರುತ್ತಾರೆ.

1. ತಾವು ಬೋಧಿಸಬೇಕಾದ ಪಠ್ಯವಸ್ತುವನ್ನು ಆಮೂಲಾಗ್ರವಾಗಿ ತಿಳಿದುಕೊಂಡು ಅದನ್ನು ಪ್ರಭಾವಯುತವಾಗಿ ಬೋಧಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಇದುವರೆಗೂ ಬೋಧಿಸದೇ ಇದ್ದ ವಿಷಯವನ್ನು ಬೋಧಿಸಬೇಕಾದಾಗ ಈ ರೀತಿಯ ಸಿದ್ಧತೆ ಅನಿವಾರ್ಯವಾಗುತ್ತದೆ.

2. ತಾವು ಬೋಧಿಸಬೇಕಾದ ವಿಷಯದ ಬೋಧನೆಗೆ ಬೇಕಾದ ಯೋಜನೆಯನ್ನು ತಯಾರಿಸಿಕೊಳ್ಳಬೇಕು. ಈ ಯೋಜನೆಯಲ್ಲಿ ಘಟಕ ಯೋಜನೆ, ದಿನನಿತ್ಯದ ಪಾಠ ಯೋಜನೆಗಳು, ಘಟಕ ಪರೀಕ್ಷೆಗಳು ಸೇರುತ್ತವೆ. ಶಿಕ್ಷಕ ತರಬೇತಿಯಲ್ಲಿರುವಾಗ ಶಿಕ್ಷಕರು ಇವೆಲ್ಲವನ್ನೂ ವಿವರವಾಗಿ ಬರೆಯಬೇಕಾಗುತ್ತದೆ. ಆದರೆ ಶಿಕ್ಷಕ ವೃತ್ತಿಯಲ್ಲಿ ತೊಡಗಿದಾಗ ಇವುಗಳನ್ನು ಸಂಕ್ಷಿಪ್ತವಾಗಿ, ಸ್ಥೂಲವಾದ ರೀತಿಯಲ್ಲಿ ಸಿದ್ಧಗೊಳಿಸಿಕೊಳ್ಳಬಹುದು. ಇದು ಶಿಕ್ಷಣ ಇಲಾಖೆಯ ಒಂದು ನಿಯಮವೂ ಆಗಿದೆ. ವಿಷಯ ನಿರೀಕ್ಷಕರು (Subject Inspector) ಮೇಲ್ವಿಚಾರಣೆಗೆ ಬಂದಾಗ ಶಿಕ್ಷಕರು ಅವರಿಗೆ ತಮ್ಮ ಪಾಠಯೋಜನೆಯನ್ನು ತೋರಿಸಬೇಕಾಗುತ್ತದೆ. ಮುಖ್ಯೋಪಾಧ್ಯಾಯರು ಪಾಠ ಯೋಜನೆ ಕಡೆಗೆ ಗಮನ ಹರಿಸಬೇಕಾಗುತ್ತದೆ.

3. ವೇಳಾಪಟ್ಟಿಯಂತೆ ತಮಗೆ ನಿಗದಿಗೊಳಿಸಿರುವ ಬೋಧನೆ ಅವಧಿಗಳನ್ನು ತಪ್ಪದೆ ತೆಗೆದುಕೊಂಡು ಬೋಧನೆಯನ್ನು ಮಾಡಬೇಕು. ಅನಿವಾರ್ಯ ಕಾರಣಗಳಿಂದ ಯಾವುದಾದರೂ ಅವಧಿಗೆ ಹಾಜರಾಗಲು ಸಾಧ್ಯವಿಲ್ಲದಿದ್ದಲ್ಲಿ ಮುಖ್ಯೋಪಾಧ್ಯಾಯರಿಗೆ ಮುಂಚಿತವಾಗಿ ಮಾಹಿತಿ ನೀಡಿದರೆ, ಅವರು ಪರ್ಯಾಯ ವ್ಯವಸ್ಥೆ ಮಾಡುತ್ತಾರೆ. ಯಾವುದೇ ಕಾರಣದಿಂದ ವಿದ್ಯಾರ್ಥಿಗಳು ತರಗತಿಯ ವೇಳೆಯನ್ನು ವ್ಯರ್ಥವಾಗಿ ಕಳೆಯುವಂತೆ ಆಗಬಾರದು.

4. ತರಗತಿಯ ಬೋಧನೆಗೆ ಬೇಕಾದ ಅತಿರಿಕ್ತ ಬೋಧನಾ ಸಾಮಗ್ರಿಗಳು, ದೃಶ್ಯ–ಶ್ರವಣ ಉಪಕರಣಗಳು (LCD Projector, Slide Projector etc.,) ಭೂಪಟಗಳು, ಚಾರ್ಟುಗಳು, ಪ್ರಯೋಗಗಳಿಗೆ ಬೇಕಾದ ಉಪಕರಣಗಳು, ರಾಸಾಯನಿಕಗಳು ಮುಂತಾದವುಗಳನ್ನು ಶಿಕ್ಷಕರು ಮೊದಲೇ ವ್ಯವಸ್ಥಿತವಾಗಿ ಸಿದ್ಧಪಡಿಸಿ ಇಟ್ಟುಕೊಳ್ಳಬೇಕು. ದೃಶ್ಯ–ಶ್ರವಣ ಉಪಕರಣಗಳನ್ನು ತರಗತಿಯಲ್ಲಿ ಮೊದಲೇ ಜೋಡಿಸಿ ಇಡುವಂತೆ ಪ್ರಯೋಗ ಶಾಲೆಯ ನಿರ್ವಾಹಕರಿಗೆ ಪ್ರಯೋಗಗಳಿಗೆ ಮೊದಲೇ ಸಿದ್ಧಪಡಿಸುವಂತೆ ಶಿಕ್ಷಕರು ಸೂಚಿಸಬೇಕು.

5. ತರಗತಿಗಳಲ್ಲಿ ಆಯಾದಿನದ ಪಾಠವನ್ನು ಯೋಜನೆಯಂತೆ ಪ್ರಭಾವಯುತವಾಗಿ ಬೋಧಿಸುವುದು ಶಿಕ್ಷಕನ ಅತ್ಯಂತ ಮುಖ್ಯವಾದ ಕಾರ್ಯವಾಗುತ್ತದೆ. ಪಠ್ಯಕ್ರಮ ವ್ಯವಹಾರದಲ್ಲಿ ಈ ಕಾರ್ಯ ಅತ್ಯಂತ ಮಹತ್ವಪೂರ್ಣವಾದುದು. ಈ ಕಾರ್ಯದ ಮೂಲಕವೇ ಶಿಕ್ಷಕರ ಬೋಧನ ಕೌಶಲಗಳು ವ್ಯಕ್ತವಾಗಬೇಕು. ಶಿಕ್ಷಕರು ವಿವಿಧ ರೀತಿಯ ಬೋಧನ ತಂತ್ರಗಳನ್ನು, ಬೋಧನ ಕೌಶಲಗಳನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಬೇಕು. ಸೂಕ್ತವಾದ ಪ್ರಶ್ನೆಗಳನ್ನು ಕೇಳುವುದು, ಸೀಮಿತವಾಗಿ ಚರ್ಚಿಸುವುದು, ಬೋಧನ ಸಾಧನಗಳನ್ನು ಉಪಯೋಗಿಸುವುದು, ಪ್ರಶ್ನೆಗಳನ್ನು ತರಗತಿಯಲ್ಲಿ ವಿತರಿಸುವುದು, ಆಕರ್ಷಕ ರೀತಿಯಲ್ಲಿ ವಿವರಣೆ ನೀಡುವುದು ವಿದ್ಯಾರ್ಥಿಗಳ ಗಮನವನ್ನು ಬೋಧನೆಯ ಕಡೆಗೆ ಆಕರ್ಷಿಸುವುದು. ಈ ಹಂತದಲ್ಲಿ ಶಿಕ್ಷಕರು ಅನುಸರಿಸಬೇಕಾದ ಬೋಧನ ಕೌಶಲಗಳಿವೆ. ಪಠ್ಯಕ್ರಮದ ಸಾರ್ಥಕತೆ ಶಿಕ್ಷಕರ ಪ್ರಭಾವಯುತ ಬೋಧನೆಯನ್ನು ಅವಲಂಬಿಸಿದೆ ಎನ್ನುವುದರಲ್ಲಿ ಸಂಶಯವಿಲ್ಲ.

6. ಬೋಧನೆ ಜೊತೆಜೊತೆಗೆ ಶಿಕ್ಷಕ ತರಗತಿಯಲ್ಲಿ ವಿದ್ಯಾರ್ಥಿಗಳ ಶಿಸ್ತನ್ನು ನಿರ್ವಹಣೆ ಮಾಡಬೇಕು. ಕೆಲವು ವಿದ್ಯಾರ್ಥಿಗಳು ಪಾಠದ ಕಡೆಗೆ ಗಮನ ಕೊಡದೆ ಕೀಟಲೆ ಮಾಡಿ ತರಗತಿಯ ಶಿಸ್ತನ್ನು ಕದಡುವುದು ಸಾಮಾನ್ಯ ಸಮಸ್ಯೆ. ಕೆಲವು ವಿದ್ಯಾರ್ಥಿಗಳು ಇತರರ ಗಮನ ಸೆಳೆಯಲು ಈ ರೀತಿಯ ಶಿಸ್ತಿನ

Digitised by Bharatavani, CIIL

ಸಮಸ್ಯೆಯನ್ನುಂಟು ಮಾಡುತ್ತಾರೆ. ಶಿಕ್ಷಕರು ದಂಡನೆಯನ್ನು ಮಾಡದೆ ವಿದ್ಯಾರ್ಥಿಗಳ ಅಶಿಸ್ತಿನ ವರ್ತನೆಯನ್ನು ತಿದ್ದಬೇಕು. ಅಂತಹ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುವುದು ಅಂಥಹ ಒಂದು ಕ್ರಮ. ತೀರ ಹದ್ದು ಮೀರಿ ಯಾವುದೇ ವಿದ್ಯಾರ್ಥಿ ಅಶಿಸ್ತಿನಿಂದ ವರ್ತಿಸಿದರೆ ಶಿಕ್ಷಕ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಶಿಸ್ತಿನ ನಿರ್ವಹಣೆ ಬಗ್ಗೆ ಮುಂದೆ ವಿವರಿಸಲಾಗಿದೆ.

7. ಸಮೂಹ ಕಾರ್ಯಗಳನ್ನು ಆಯೋಜಿಸಿ ಸಂಘಟಿಸುವುದು ಶಿಕ್ಷಕನ ಮತ್ತೊಂದು ಮುಖ್ಯ ಕಾರ್ಯ. ಈ ಕಾರ್ಯವನ್ನು ಮುಂದೆ ವಿವರಿಸಲಾಗಿದೆ.

8. ಮೌಲ್ಯಮಾಪನ ಬೋಧನೆಯ ಅಭಿನ್ನ ಅಂಗವಾಗಿದೆ. ಏಕೆಂದರೆ ಬೋಧನೆಯ ಪರಿಣಾಮಕಾರಿತ್ವ ತಿಳಿದುಬರುವುದೇ ಮೌಲ್ಯಮಾಪನದ ಮೂಲಕ. ಆದ್ದರಿಂದಲೇ ಮೌಲ್ಯಮಾಪನ ಶಿಕ್ಷಕನ ಮತ್ತೊಂದು ಮುಖ್ಯವಾದ ಕಾರ್ಯ. ಮೌಲ್ಯಮಾಪನವನ್ನು ಬೋಧನೆ ಮಾಡುವಾಗ ಬೋಧನೆಯ ಅಂತ್ಯದಲ್ಲಿ ಮತ್ತು ಬೋಧನೆಯ ನಂತರದಲ್ಲಿ ಮಾಡಬೇಕಾಗುತ್ತದೆ. ಬೋಧನೆ ಮಾಡುತ್ತಿರುವಾಗ ವಿದ್ಯಾರ್ಥಿಗಳು ಪಾಠವನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆಯೆ ಎಂದು ತಿಳಿದುಕೊಳ್ಳಲು ಶಿಕ್ಷಕರು ಪ್ರಶ್ನೆಗಳನ್ನು ಕೇಳಿ ತಾತ್ಕಾಲಿಕ ಮೌಲ್ಯಮಾಪನ ಮಾಡುತ್ತಾರೆ. ಪಾಠದ ಅಂತ್ಯದಲ್ಲಿ ಪಾಠವನ್ನು ಸಾರಾಂಶೀಕರಿಸಲು ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳು ಪಾಠವನ್ನು ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಮೌಲ್ಯಮಾಪನ ಮಾಡುತ್ತಾರೆ. ನಂತರ ಕಲಿಕೆಯ ಅನುಸರಣ ಕಾರ್ಯಕ್ಕಾಗಿ (Follow up), ಗೃಹ ಕಾರ್ಯಕ್ಕಾಗಿ, ನಿಯೋಜಿತ ಕಾರ್ಯಗಳನ್ನು ಕೊಟ್ಟು ಅವುಗಳಿಗೆ ವಿದ್ಯಾರ್ಥಿಗಳು ಬರೆಯುವ ಉತ್ತರಗಳನ್ನು ಶಿಕ್ಷಕ ಮೌಲ್ಯಮಾಪನ ಮಾಡಬೇಕಾಗುತ್ತದೆ. ಶಿಕ್ಷಕರು ಶ್ರದ್ಧೆಯಿಂದ, ವಸ್ತು ನಿಷ್ಠೆಯಿಂದ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಬೇಕಾದುದು ಬಹಳ ಮುಖ್ಯ. ಮೌಲ್ಯಮಾಪನದ ಫಲಿತಾಂಶಗಳನ್ನು ಮುಖ್ಯಸ್ಥರು, ಸಹಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಚರ್ಚಿಸುವುದು ಒಂದು ಒಳ್ಳೆಯ ಅಭ್ಯಾಸ.

9. ಸಹ ಪಠ್ಯಕ್ರಮ ಚಟುವಟಿಕೆಗಳನ್ನು ಯೋಜಿಸಿ, ಸಂಘಟಿಸಿ, ನಿರ್ವಹಿಸುವುದು ಪಠ್ಯಕ್ರಮ ವ್ಯವಹಾರದ ಮತ್ತೊಂದು ಮುಖ್ಯವಾದ ಕಾರ್ಯ. ಸಂಸ್ಥೆಯ ಮುಖ್ಯಸ್ಥರು ಈ ಕಾರ್ಯದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಎಲ್ಲಾ ಶಿಕ್ಷಕರಿಗೂ ಈ ಕಾರ್ಯದಲ್ಲಿ ಪಾತ್ರವಿದೆಯಾದರೂ ದೈಹಿಕ ಶಿಕ್ಷಕರ, ಯೋಗ ಶಿಕ್ಷಕರ ಮತ್ತು ಬೋಧಕೇತರ ಸಿಬ್ಬಂದಿಯ ಪಾತ್ರ ಈ ಕಾರ್ಯದಲ್ಲಿ ಹೆಚ್ಚಾಗಿರುತ್ತದೆ. ಇಡೀ ವರ್ಷದ ಸಹ ಪಠ್ಯ ಚಟುವಟಿಕೆಗಳ ಬಗ್ಗೆ ಮೊದಲೇ ಯೋಜನೆ ರೂಪಿಸಬೇಕು. ಯಾವ ಯಾವ ಚಟುವಟಿಕೆಗಳನ್ನು ಆಯೋಜಿಸಬೇಕೆಂದು ತೀರ್ಮಾನಿಸಿಕೊಳ್ಳಬೇಕು. ಅನೇಕ ರೀತಿಯ ಕ್ರೀಡೆಗಳು (ಕ್ರಿಕೆಟ್, ಟೆನಿಸ್, ಫುಟ್‌ಬಾಲ್ ಇತ್ಯಾದಿ), ಅಥ್ಲೆಟಿಕ್ಸ್ ಚಟುವಟಿಕೆಗಳು (ಓಟ, ನೆಗೆತ, ಡಿಸ್ಕಸ್ ಎಸೆತ ಇತ್ಯಾದಿ), ಸಾಂಸ್ಕೃತಿಕ ಚಟುವಟಿಕೆಗಳು (ನೃತ್ಯ, ಸಂಗೀತ, ನಾಟಕ, ಏಕಪಾತ್ರಾಭಿನಯ ಇತ್ಯಾದಿ), ಸಾಹಿತ್ಯ ಚಟುವಟಿಕೆಗಳು (ಆಶುಭಾಷಣ, ಚರ್ಚಾಸ್ಪರ್ಧೆ, ಆಶು ಕವಿತ್ವ, ನಿಬಂಧ, ಕಥೆ, ಕವನ ರಚನೆ ಇತ್ಯಾದಿ), ಕ್ರೀಡಾ ಪಂದ್ಯಗಳು, ಸಾಂಸ್ಕೃತಿಕ, ಸಾಹಿತ್ಯದ ಸ್ಪರ್ಧೆಗಳು ಮುಂತಾದವು ಏರ್ಪಡಿಸಬಹುದಾದ ಸಹ ಪಠ್ಯ ಚಟುವಟಿಕೆಗಳಾಗಿವೆ. ಸಹ ಪಠ್ಯಕ್ರಮಕ್ಕೆ ಪಠ್ಯಕ್ರಮದಷ್ಟೇ ಮಹತ್ವವಿದೆ. ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು, ಅವರಲ್ಲಿ ಸೂಕ್ತವಾಗಿರುವ ಸೃಜನಾತ್ಮಕ ಸಾಮರ್ಥ್ಯಗಳ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು ಹಾಗೂ ಅವರ ವ್ಯಕ್ತಿತ್ವ ವಿಕಾಸಕ್ಕೆ ಬೇಕಾದ ಚಟುವಟಿಕೆಗಳನ್ನು ಏರ್ಪಡಿಸುವುದು ಸಹ ಪಠ್ಯಕ್ರಮದ ಉದ್ದೇಶಗಳಾಗಿವೆ. ಸಹ ಪಠ್ಯಕ್ರಮ ಚಟುವಟಿಕೆಗಳನ್ನು ಪ್ರತಿ ದಿನ ಸೀಮಿತ ಪ್ರಮಾಣದಲ್ಲಿ ತಿಂಗಳಿಗೆ ಅಥವಾ 6 ತಿಂಗಳಿಗೆ ಅಥವಾ ವರ್ಷಕ್ಕೆ, ವಾರ್ಷಿಕೋತ್ಸವದ ಸಮಯದಲ್ಲಿ ವಿಶೇಷ ಚಟುವಟಿಕೆಗಳನ್ನು ಏರ್ಪಡಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅಭಿರುಚಿ, ಸಾಮರ್ಥ್ಯಕ್ಕೆ ಅನುಗುಣವಾದ ಯಾವುದಾದರೂ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು. ಎಲ್ಲಾ ಶಿಕ್ಷಕರೂ ಸಹ ಪಠ್ಯ ಚಟುವಟಿಕೆಗಳಲ್ಲಿ ಸಹಕರಿಸುವುದು ಒಳ್ಳೆಯದು. ಸಹ ಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನೂ ಮೌಲ್ಯಮಾಪನ ಮಾಡಿ ಅವರನ್ನು ಬಹುಮಾನ, ಅರ್ಹತಾ ಪತ್ರಗಳ ಮೂಲಕ ಪ್ರೋತ್ಸಾಹಿಸಬೇಕು.

ಬೋಧನಾ ಸಾಮಗ್ರಿಗಳು: ಪಠ್ಯಕ್ರಮ ನಿರ್ವಹಣೆಯಲ್ಲಿ ಅನೇಕ ರೀತಿಯ ಬೋಧನಾ ಸಾಮಗ್ರಿಗಳು ಬೇಕಾಗುತ್ತವೆ. ಇವುಗಳು ತರಗತಿಯ ಶಿಕ್ಷಕನಿಗೆ ಬೋಧನೆಯಲ್ಲಿ ಸಹಾಯ ಮಾಡುತ್ತವೆ. ಈ ಬೋಧನಾ ಸಾಮಗ್ರಿಗಳು ಶಿಕ್ಷಕನಿಗೆ ಅಗತ್ಯ ಬಿದ್ದಾಗ ಸುಲಭವಾಗಿ ದೊರೆಯುವಂತೆ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಸಾಮಗ್ರಿಗಳು ಎಲ್ಲಾ ಶಿಕ್ಷಕರಿಗೂ ದೊರೆಯಲು ಅನುಕೂಲವಾಗಲು ಇವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವುದು ಒಳ್ಳೆಯದು. ಈ ಸಾಮಗ್ರಿಗಳನ್ನು ಮುಂದೆ ವಿವರಿಸಲಾಗಿದೆ.

ಪಠ್ಯವಸ್ತು – ಪಠ್ಯವಸ್ತು (Syllabus) ಪಠ್ಯಕ್ರಮದಲ್ಲಿ ಬೋಧಿಸಬೇಕಾದ ವಿವಿಧ ವಿಷಯಗಳ (Subjects) ವ್ಯಾಪ್ತಿಯನ್ನು ತೋರಿಸುತ್ತದೆ. ಆಯಾ ವಿಷಯದಲ್ಲಿ ತಜ್ಞ ಸಮಿತಿ ನಿಗದಿಗೊಳಿಸಿದ ವಿಷಯವಸ್ತುವನ್ನು (Content) ಘಟಕಗಳ (Unit) ರೂಪದಲ್ಲಿ ಪಠ್ಯವಸ್ತುವಿನಲ್ಲಿ ವಿವರಿಸಲಾಗಿರುತ್ತದೆ. ಇದು ಯಾವ ವಿಷಯದಲ್ಲಿ ಎಷ್ಟು ವಿಷಯವನ್ನು ಬೋಧಿಸಬೇಕು ಎನ್ನುವುದಕ್ಕೆ ಮಾರ್ಗದರ್ಶನ ನೀಡುತ್ತದೆ. ಕಾಲೇಜು ಮಟ್ಟದಲ್ಲಿ ಪಠ್ಯವಸ್ತುವಿಗೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ಪ್ರಶ್ನೆ ಪತ್ರಿಕೆಗಳನ್ನು ಪಠ್ಯವಸ್ತುವಿನ ಆಧಾರದ ಮೇಲೆ ಅದರ ವ್ಯಾಪ್ತಿಯಲ್ಲೇ ರಚಿಸಬೇಕಾಗುತ್ತದೆ. ಪಠ್ಯವಸ್ತುವಿನಲ್ಲಿ ಆಗಾಗ್ಯೆ ಬದಲಾವಣೆಗಳು ಆಗುತ್ತವೆ. ಈ ಬದಲಾವಣೆಗಳನ್ನು ಶಿಕ್ಷಕರು ತಿಳಿದಿರಬೇಕು. ಪ್ರತಿಯೊಬ್ಬ ಶಿಕ್ಷಕನು ಪಠ್ಯವಸ್ತುವಿನ ಬಗ್ಗೆ ತಿಳಿದಿದ್ದು, ಅದರ ಒಂದು ಪ್ರತಿಯನ್ನು ಹೊಂದಿರಬೇಕು.

Digitised by Bharatavani, CIIL

**ಪಠ್ಯಪುಸ್ತಕಗಳು:**

ಪಠ್ಯಪುಸ್ತಕಗಳು ಶಾಲಾ ಹಂತದವರೆಗೆ ಪಠ್ಯವಸ್ತುವಿನ ವಿಷಯ ವಸ್ತುವನ್ನು ವಿವರಿಸಿರುತ್ತವೆ. ಕಾಲೇಜು ಹಂತದ ಪಠ್ಯಪುಸ್ತಕಗಳು ಪಠ್ಯವಸ್ತುವಿನ ವ್ಯಾಪ್ತಿಯನ್ನು ಮೀರಿದ ವಿವರಗಳನ್ನೂ ಹೊಂದಿರುತ್ತವೆ. ಪಠ್ಯಪುಸ್ತಕಗಳನ್ನು ಕೆಲವು ನಿಯಮಗಳಿಗೆ ಒಳಪಟ್ಟು ತಜ್ಞ ಲೇಖಕರು ಅಥವಾ ತಜ್ಞ ಸಮಿತಿಯ ಸದಸ್ಯರು ಸಿದ್ಧಪಡಿಸುತ್ತಾರೆ. ಶಾಲಾ ಹಂತದ ಪಠ್ಯಪುಸ್ತಕಗಳನ್ನು ಶಿಕ್ಷಣ ಇಲಾಖೆಯೇ ಸಿದ್ಧಪಡಿಸಿ ಒದಗಿಸುತ್ತದೆ. ಕಾಲೇಜು ಹಂತದಲ್ಲಿ ತಜ್ಞ ಲೇಖಕರು ಬರೆದಿರುವ ಕೆಲವು ಪುಸ್ತಕಗಳನ್ನು ಪಠ್ಯಪುಸ್ತಕಗಳಾಗಿ ಪಠ್ಯವಸ್ತುವಿನ ಕೊನೆಯಲ್ಲಿ ನಮೂದಿಸಲಾಗುತ್ತದೆ. ಪಠ್ಯಪುಸ್ತಕಗಳು ಶಿಕ್ಷಕರಿಗೆ ಪೂರಕ ಸಾಮಗ್ರಿಗಳಾಗಿ ಮಾತ್ರ ಸಹಾಯ ಮಾಡಬೇಕು. ಶಿಕ್ಷಕರು ಯಾವುದೇ ಒಂದು ಅಥವಾ ಎರಡು ಪಠ್ಯಪುಸ್ತಕಗಳಿಗೆ ಅಂಟಿಕೊಂಡಿರಬೇಕಾಗಿಲ್ಲ. ತಮ್ಮ ವಿಚಾರವ್ಯಾಪ್ತಿಗೆ, ಅಭಿರುಚಿಗೆ ತಕ್ಕುದಾದ ಯಾವುದೇ ಪುಸ್ತಕವನ್ನು ಉಪಯೋಗಿಸಬಹುದು. ಪಠ್ಯವಸ್ತುವನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಅರ್ಥಪೂರ್ಣವಾಗಿ ಬೋಧಿಸುವುದು ಮುಖ್ಯವಾಗುತ್ತದೆ.

**ಪೂರಕ ವಾಚನ ಸಾಮಗ್ರಿಗಳು:**

ವಿದ್ಯಾರ್ಥಿಗಳು ಪಠ್ಯವಸ್ತುವನ್ನು ಸ್ವಲ್ಪ ವ್ಯಾಪಕವಾಗಿ ಅಧ್ಯಯನ ಮಾಡಲು ಅವರಲ್ಲಿ ವಾಚನಾಭಿರುಚಿಯನ್ನು ಪ್ರೋತ್ಸಾಹಿಸಲು ಪೂರಕ ವಾಚನ ಸಾಮಗ್ರಿಗಳು (Supplementary Reading Materials) ಸಹಾಯ ಮಾಡುತ್ತವೆ. ಪಠ್ಯವಸ್ತುವಿಗೆ ಸಂಬಂಧಿಸಿದ ಪುಸ್ತಕಗಳು, ಕಥೆ ಪುಸ್ತಕಗಳು, ಚಿತ್ರ ಮಾಲಿಕೆಗಳು, ಶೈಕ್ಷಣಿಕವಾದ ಕಾಮಿಕ್ಸ್‌ಗಳು ಮುಂತಾದವು ಪೂರಕ ವಾಚನ ಸಾಮಗ್ರಿಗಳಲ್ಲಿ ಸೇರುತ್ತವೆ. ಇವುಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಒದಗಿಸಿ ಅವುಗಳನ್ನು ಓದುವಂತೆ ಪ್ರೋತ್ಸಾಹಿಸಬೇಕು.

**ಪರಾಮರ್ಶನ ಗ್ರಂಥಗಳು:**

ಶಬ್ದಕೋಶಗಳು, ವಿಶ್ವಕೋಶಗಳು, ವರದಿಗಳು, ವಾರ್ಷಿಕೆಗಳು (Year book), ವಿಷಯ ಸಂಗ್ರಹ ಗ್ರಂಥಗಳು ಮುಂತಾದವು ಪರಾಮರ್ಶನ ಗ್ರಂಥಗಳೆನಿಸುತ್ತವೆ (Reference Books). ಈ ಗ್ರಂಥಗಳು ವಿದ್ಯಾರ್ಥಿಗಳಿಗಿಂತ ಶಿಕ್ಷಕರಿಗೆ ಹೆಚ್ಚು ಉಪಯುಕ್ತವೆನಿಸುತ್ತವೆ. ಕಾಲೇಜು ವಿದ್ಯಾರ್ಥಿಗಳಿಗೆ ಈ ಪರಾಮರ್ಶನ ಗ್ರಂಥಗಳು ಉಪಯೋಗಕ್ಕೆ ಬರುತ್ತವೆ. ಶಾಲಾ ಮಟ್ಟದಲ್ಲಿ ಶಿಕ್ಷಕರು ಶಬ್ದಕೋಶಗಳಲ್ಲಿ ಶಬ್ದಗಳ ಅರ್ಥವನ್ನು ಹುಡುಕಲು, ವಿಶ್ವಕೋಶಗಳ ಮೂಲಕ ಹೆಚ್ಚಿನ ಮಾಹಿತಿಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು ಒಳ್ಳೆಯದು.

ಶಿಕ್ಷಕರ ಕೈಪಿಡಿಗಳು – ಶಿಕ್ಷಕರ ಕೈಪಿಡಿ (Teachers Hand book) ಶಿಕ್ಷಕರಿಗೆ ಸಹಾಯ ನೀಡುತ್ತದೆ. ಶಿಕ್ಷಕರ ಕೈಪಿಡಿಗಳು ಶಿಕ್ಷಕರಿಗೆ ಉಪಯುಕ್ತವಾದ ಮಾಹಿತಿಗಳನ್ನು, ಯೋಜಿಸಬೇಕಾದ ಶೈಕ್ಷಣಿಕ ಚಟುಟಿಕೆಗಳ ವಿವರಗಳನ್ನು, ಸ್ವಮೌಲ್ಯಮಾಪನದ ಸೂಚಿಯನ್ನು, ಬೋಧನಾ ಸಾಮಗ್ರಿಗಳ ವಿವರಗಳನ್ನು ಒಳಗೊಂಡಿರಬೇಕು.

**ವಿವರಣಾ ಪುಸ್ತಿಕೆ, ಕಾರ್ಯಪುಸ್ತಕಗಳು:**

ವಿವರಣಾ ಪುಸ್ತಿಕೆ (Prospectus) ಶೈಕ್ಷಣಿಕ ಕಾರ್ಯಕ್ರಮದ ವಿವರಗಳನ್ನು, ಶೈಕ್ಷಣಿಕ ವರ್ಷದ ಕಾರ್ಯಕ್ರಮದ ವಿವರಗಳನ್ನು ಒಳಗೊಂಡಿರುತ್ತದೆ. ಇದನ್ನು ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಎಲ್ಲಾ ವಿದ್ಯಾರ್ಥಿಗಳಿಗೂ ಒದಗಿಸಬೇಕು. ವಿದ್ಯಾರ್ಥಿಗಳು ವಿವರಣಾ ಪುಸ್ತಿಕೆಯನ್ನು ವರ್ಷದ ಅಂತ್ಯದವರೆಗೂ ಜೋಪಾನವಾಗಿ ಇಟ್ಟುಕೊಂಡಿರಬೇಕು. ಏಕೆಂದರೆ ರಜೆಯ ವಿವರಗಳು, ನಿಯೋಜಿತ ಕಾರ್ಯಗಳನ್ನು ಸಲ್ಲಿಸಬೇಕಾದ ದಿನಾಂಕಗಳು, ಪರೀಕ್ಷೆಯ ದಿನಾಂಕಗಳು ಮುಂತಾದ ಮಾಹಿತಿಗಳು ವಿವರಣಾ ಪುಸ್ತಿಕೆಯಲ್ಲಿರುತ್ತವೆ. ಕಾರ್ಯಪುಸ್ತಕಗಳು (Work Books) ಶಾಲಾ ಮಟ್ಟದಲ್ಲಿ ಉಪಯುಕ್ತವೆನಿಸುತ್ತವೆ. ವಿದ್ಯಾರ್ಥಿಗಳು ಇಂಗ್ಲಿಷ್, ಹಿಂದಿ, ಕನ್ನಡ ಭಾಷೆಗಳನ್ನು ಮತ್ತು ಗಣಿತವನ್ನು ಕಲಿಯುವಾಗ ಪದೇ ಪದೇ ಅಭ್ಯಾಸ ಮಾಡಲು ಕಾರ್ಯಪುಸ್ತಕಗಳನ್ನು ಉಪಯೋಗಿಸಬೇಕು. ಕಾಲೇಜು ಮಟ್ಟದಲ್ಲಿ ಪ್ರಯೋಗ ಶಾಲೆಯ ಪ್ರಯೋಗಗಳ ಸೂಚನೆಗಳನ್ನು ನೀಡುವ ಪುಸ್ತಿಕೆ ಮತ್ತು ಗ್ರಂಥಾಲಯದ ವಿವರಗಳನ್ನು ನೀಡುವ ವಿವರಣಾ ಪುಸ್ತಕ ವಿದ್ಯಾರ್ಥಿಗಳಿಗೆ ಉಪಯುಕ್ತವೆನಿಸುತ್ತವೆ.

**ಶಿಸ್ತಿನ ನಿರ್ವಹಣೆ:**

ಪಠ್ಯಕ್ರಮ ಜಾರಿಯಾಗಲು ತನ್ಮೂಲಕ ತರಗತಿಯಲ್ಲಿ ಕಲಿಕೆಯುಂಟಾಗಲು, ಹಲವಾರು ಅಂಶಗಳು ಪಾತ್ರ ನಿರ್ವಹಿಸುತ್ತವೆ. ಅದರಲ್ಲಿ ಶಿಸ್ತಿನ ನಿರ್ವಹಣೆಯೂ ಒಂದು. ಶಿಸ್ತು ಎಂಬುದು ಶಾಲೆಯ/ತರಗತಿಯ ನಿಯಮಗಳ ಪಾಲನೆಗೆ ಸಂಬಂಧಿಸಿದ ವಿಚಾರ. ಶಿಸ್ತನ್ನು ಪಾಲಿಸಲು ಮೂರು ರೀತಿಗಳನ್ನು ಅನುಸರಿಸಬಹುದು.

ಮೊದಲನೆಯದಾಗಿ ಶಿಕ್ಷಕರು ಬೋಧನೆಯ ಸಂದರ್ಭದಲ್ಲಿ ಅತಿಯಾದ ಶಿಸ್ತನ್ನು ಅಪೇಕ್ಷಿಸಿ ಅದನ್ನು ಅನುಷ್ಠಾನಗೊಳಿಸಿದರೆ ವಿದ್ಯಾರ್ಥಿಗಳಲ್ಲಿ ಕಲಿಕೆ ತಾತ್ಕಾಲಿಕವಾಗಿಯೂ ನಾಮ ಮಾತ್ರದ ಕಲಿಕೆಯಾಗಿ ಆಲೋಚನೆಯ ಗತಿ ಕುಂಠಿತಗೊಳ್ಳುತ್ತದೆ. ಅಂತೆಯೇ ಪಠ್ಯದಲ್ಲಿ ಉದ್ಭವಿಸುವ ಸಂಶಯಗಳಿಗೆ, ಸಂದೇಹಗಳಿಗೆ ಅವಕಾಶಗಳು ಕ್ಷೀಣವಾಗಿ ಅನಂತರ ಅವುಗಳು ಅಭಿವ್ಯಕ್ತಿಯೇ ಆಗುವುದಿಲ್ಲ. ಆಗ ಕಲಿಕೆಗಿಂತ ಶಿಸ್ತಿನ ವರ್ತನೆಗೇ ವಿದ್ಯಾರ್ಥಿ ಆದ್ಯತೆ ನೀಡುವ ಸಾಧ್ಯತೆಯಿರುತ್ತದೆ. ಕೃತಕವಾದ ವಾತಾವರಣ ಸೃಷ್ಟಿಯಾಗಿ ಒಮ್ಮೊಮ್ಮೆ ಹಲವರಿಗಾದರೂ ಉಸಿರುಗಟ್ಟಿಸುವಂತಹ ಅನುಭವ ಉಂಟಾಗುತ್ತದೆ.

ಎರಡನೆಯ ರೀತಿಯಲ್ಲಿ ಶಿಕ್ಷಕರು ಶಿಸ್ತನ್ನು ಅಷ್ಟಾಗಿ ನಿರ್ವಹಿಸದೆ ಇದ್ದಾಗಲೂ ಪಠ್ಯಕ್ರಮದ ಅನುಷ್ಠಾನ ಸಂಪೂರ್ಣವಾಗಿ ಆಗುವುದಿಲ್ಲ. ಏಕೆಂದರೆ ಅಲ್ಲಿ ವಾತಾವರಣ ಮುಕ್ತವಾಗಿರುವುದರಿಂದ ಸ್ವತಂತ್ರ ಚಟುವಟಿಕೆಗಳು ಗರಿಗೆದರಿ ಕಲಿಯುವ ಬದ್ಧತೆಯನ್ನು ಮೊಟಕುಗೊಳಿಸುತ್ತವೆ. ಎಲ್ಲಾ ರೀತಿಯ ವಿದ್ಯಾರ್ಥಿಗಳಿಗೆ ಇದು

Digitised by Bharatavani, CIIL

ಸೂಕ್ತವಲ್ಲ. ಇತರರಿಗೂ ಇಂತಹ ವಾತಾವರಣದಿಂದ ಗಮನ ವ್ಯತ್ಯಯವಾಗಿ ಮನಸ್ಸನ್ನು ಕೇಂದ್ರೀಕರಿಸುವುದು ಕಷ್ಟವಾಗುತ್ತದೆ. ಸಹಜ ವಾತಾವರಣದ ಅಭಾವದಿಂದ ಪ್ರಶ್ನಿಸುವ, ಸಂದೇಹ ನಿವಾರಣೆಗೆ ಅವಕಾಶವಿರುವುದಿಲ್ಲ.. ಆಲೋಚನೆಗಳು ವಿಭಿನ್ನ ದಿಕ್ಕುಗಳಲ್ಲಿ ಸಾಗುತ್ತವೆ. ಒಮ್ಮೊಮ್ಮೆ ಪಠ್ಯದ ಚೌಕಟ್ಟಿನಿಂದ ಹೊರತಾಗಿಯೂ ಸಾಗಬಹುದು. ಋಣಾತ್ಮಕವಾಗಿಯೂ ಪ್ರಭಾವ ಉಂಟಾಗಬಹುದು.

ಮೂರನೇ ರೀತಿಯಲ್ಲಿ ಶಿಸ್ತಿನ ನಿರ್ವಹಣೆ ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಅಗತ್ಯವಿದ್ದಷ್ಟು ಮಾತ್ರ ಇದ್ದಾಗ ವಿದ್ಯಾರ್ಥಿಗಳಿಗೆ ಪಠ್ಯವಸ್ತುವಿನ ಬೋಧನೆ ಸೂಕ್ತವಾಗಿ ಎಷ್ಟು ಅಗತ್ಯವಿದೆಯೋ ಅಷ್ಟು ಪರಿಣಾಮಕಾರಿಯಾಗಿ ಉಂಟಾಗುತ್ತದೆ. ಅತಿ ಮುಕ್ತವೂ ಅಲ್ಲದೆ, ಅತಿಯಾದ ಬದ್ಧತೆಯೂ ಇರದಿದ್ದರಿಂದ ಒಂದು ಕಲಿಕೆಗೆ ಬೇಕಾದ ಪೂರಕ ವಾತಾವರಣ ನಿರ್ಮಾಣವಾಗಿ ಪಠ್ಯವಸ್ತುವಿನ ವರ್ಗಾವಣೆ ಉದ್ದೇಶ ಸಫಲವಾಗುತ್ತದೆ. ಅಪೇಕ್ಷಿತ ವರ್ತನೆಗಳಿಗೆ ಧನಾತ್ಮಕ ಪ್ರಚೋದನೆಯೂ ಇರುವುದರಿಂದ ನಿರಂತರತೆಯೂ ಸಾಧ್ಯ.

ಆದ್ದರಿಂದ ಶಿಕ್ಷಕ ತರಗತಿಯಲ್ಲಿ ಬೋಧನೆ ಪ್ರಕ್ರಿಯೆಗಳಲ್ಲಿ ತೊಡಗಿದಾಗ ಶಿಸ್ತನ್ನು ನಿರ್ವಹಿಸುವ ಮೂರನೇ ರೀತಿಯ ಕ್ರಮವನ್ನು ಅನುಸರಿಸುವುದು ಒಳ್ಳೆಯದು. ಶಿಸ್ತು ತರಗತಿಯಲ್ಲಿನ ಬೋಧನಾ ಪ್ರಕ್ರಿಯೆಯ ಪೂರಕ ಉತ್ಪನ್ನ (by product) ಆಗಿರಬೇಕೆಂಬುದು ಶಿಕ್ಷಣ ತಜ್ಞರ ಅಭಿಪ್ರಾಯವಾಗಿದೆ. ಇದೇ ಮಾತು ಇಡೀ ಶಾಲೆಯಲ್ಲಿನ ಶಿಸ್ತಿನ ನಿರ್ವಹಣೆಗೂ ಅನ್ವಯಿಸುತ್ತದೆ. ಶಿಸ್ತು ವಿದ್ಯಾರ್ಥಿಗಳಲ್ಲಿ ಸಹಜವಾಗಿ ಮೂಡಿಬರಬೇಕು. ನಿಯಮ ಪಾಲನೆಗೆ ಒತ್ತಾಯ ಆದಷ್ಟು ಕಡಿಮೆ ಪ್ರಮಾಣದಲ್ಲಿದ್ದರೆ ಸೂಕ್ತವೆನಿಸುತ್ತದೆ.

**ಗುಂಪು ಕಾರ್ಯಗಳು:**

ತರಗತಿಯಲ್ಲಿ ಹಲವಾರು ರೀತಿಯ ಸಹವರ್ತಿತ ಚಟುವಟಿಕೆಗಳಿಂದ ಪಠ್ಯಕ್ರಮದ ವ್ಯವಹಾರಕ್ಕೆ ಸಹಾಯವಾಗುತ್ತವೆ. ಇವುಗಳಲ್ಲಿ ಗುಂಪು ಕಾರ್ಯವೂ ಒಂದು.

ಶಿಕ್ಷಕನಿಂದ ವಿದ್ಯಾರ್ಥಿಗೆ ನಡೆಯುವ ಕ್ರಿಯೆ ಎಲ್ಲರಿಗೂ ತಿಳಿದಂತಹ ಸಾಮಾನ್ಯ ಸಂಗತಿ. ಬೋಧನೆಯ ಕ್ರಮವಿರುವುದೇ ಹಾಗೆ. ವಿದ್ಯಾರ್ಥಿ ಚರ್ಚೆಯಲ್ಲಿ ತೊಡಗಿದಾಗ, ಪ್ರಶ್ನೆಯನ್ನು ಕೇಳಿದಾಗ, ವಿದ್ಯಾರ್ಥಿ ಶಿಕ್ಷಕರ ಅನ್ಯೋನ್ಯ ಕ್ರಿಯೆ ಉಂಟಾಗುತ್ತದೆ. ಆದರೆ ಇದರ ಹೊರತಾಗಿಯೂ ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯ ನಡುವೆ ನಡೆಯಬಹುದಾದ ಕ್ರಿಯೆಗೆ "ಗುಂಪು ಕಾರ್ಯಗಳು" ಪುಷ್ಟೀಕರಣ ನೀಡುತ್ತವೆ.

ಯಾವುದೇ ಒಂದು ಉದ್ದೇಶಿತ ಕ್ರಿಯೆಯನ್ನು ಒಬ್ಬರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಹಾಗೂ ಗರಿಷ್ಠ 8–9 ಜನರ ತಂಡದಲ್ಲಿ ಒಟ್ಟಾಗಿ ಸಾಧಿಸುವ ಚಟುವಟಿಕೆಯನ್ನು ಗುಂಪು ಕಾರ್ಯ ಎನ್ನುವರು. ಗುಂಪು ಕಾರ್ಯವು ಸಾಮಾನ್ಯವಾಗಿ ಬೋಧನೆಯ ಏಕಮುಖ ಕ್ರಿಯೆಗಿಂತ ಭಿನ್ನವಾಗಿ ವಿದ್ಯಾರ್ಥಿಯ ಪಾಲ್ಗೊಳ್ಳುವಿಕೆಯಿಂದಾಗಿ ಕಲಿಯುವವರು ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗುವರು. ಹಾಗೆಯೇ ಗುಂಪಿನ ಸದಸ್ಯನೋರ್ವ ಜವಾಬ್ದಾರಿಯಿಂದ ಎಲ್ಲರನ್ನೂ ತೊಡಗಿಸಿ ನಿಯಂತ್ರಿಸುವ ಮೂಲಕ ಓರ್ವ ನಾಯಕನಂತೆ ವರ್ತಿಸುವನು. ಈ ರೀತಿಯ ಚಟುವಟಿಕೆಯಿಂದ ಪಠ್ಯವಸ್ತುವಿನ ಸಮರ್ಪಕ ನಿರ್ವಹಣೆ ಸಾಧ್ಯ. ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯ, ವಿವೇಚನೆ, ಚಿಂತನೆ, ಚಾಕಚಕ್ಯತೆ ಇತ್ಯಾದಿಗಳಿಗೆ ಇಲ್ಲಿ ವಿಪುಲ ಅವಕಾಶ ದೊರೆತು ಶಿಕ್ಷಕರ ಮಾರ್ಗದರ್ಶನದಲ್ಲಿ ಸಂಶಯ ನಿವಾರಣೆಯಾಗಿ ಸೂಕ್ತ ಕಲಿಕೆ ಉಂಟಾಗುತ್ತದೆ.

ಹಾಗೆಯೇ ಗುಂಪು ಕಾರ್ಯ ನೀಡಿ ಮಾರ್ಗದರ್ಶನ, ಮೇಲ್ವಿಚಾರಣೆ ಮಾಡದೇ ಇದ್ದಾಗ ಯಾವುದೇ ಉದ್ದೇಶದ ಸಾಧನೆಯಾಗದೆ ಕೇವಲ ಸಮಯ ವ್ಯಯವಾಗುವುದು. ಹಲವು ಬಾರಿ ಅನಪೇಕ್ಷಿತ ಪರಿಣಾಮಗಳು ತೋರಬಹುದು. ಆದ್ದರಿಂದ ಶಿಕ್ಷಕರ ಮೇಲ್ವಿಚಾರಣೆ ತುಂಬಾ ಅವಶ್ಯಕ.

**ಗುಂಪು ಕಾರ್ಯದಲ್ಲಿ ತೊಡಗಿಸಿಕೊಳ್ಳಬಹುದಾದ ವಿಷಯಗಳು:**

1. ಸಂಸತ್ನ/ಶಾಸನ ಸಭೆಯ ಅಣಕು, 2. ಐತಿಹಾಸಿಕ ಘಟನಾವಳಿಗೆ ಕಾರಣಗಳು, 3. ಪರಿಸರ ಸಮತೋಲನಕ್ಕೆ ಪರಿಹಾರಗಳು, 4. ಸಮಸ್ಯೆಗಳಿಗೆ ಪರಿಹಾರ ಹುಡುಕುವುದು, 5. ಸಾಮಾಜಿಕ ಉಪಯೋಗಿ ವಸ್ತುಗಳ ತಯಾರಿಕೆ., 6. ಘನತಾಜ್ಯದ ನಿರ್ವಹಣೆ, 7. ಭಾಷಾ ಪಠ್ಯದ ನಾಟಕೀಕರಣ, 8. ವಿಜ್ಞಾನದ ಮಾದರಿಗಳ ತಯಾರಿಕೆ.

ಹೀಗೆ ಗುಂಪುಕಾರ್ಯಗಳು ಪಠ್ಯಕ್ರಮ ವ್ಯವಹಾರದಲ್ಲಿ ತಮ್ಮದೇ ಪಾತ್ರ ವಹಿಸುತ್ತವೆ.

**ದೃಕ್–ಶ್ರವಣ ಮಾಧ್ಯಮಗಳ ಬಳಕೆ:**

ತರಗತಿಯಲ್ಲಿ ಕೇವಲ ಉಪನ್ಯಾಸಗಳ ಮೂಲಕ ಕಲಿಯುವುದು ಏಕತಾನತೆಯನ್ನುಂಟು ಮಾಡುವುದರ ಜೊತೆಗೆ ಪಠ್ಯವಿಷಯ ವಿದ್ಯಾರ್ಥಿಗಳ ಗ್ರಹಿಕೆಗೆ ಸಿಲುಕದು. ಹಾಗಾಗಿ ಉತ್ತಮ ಶಿಕ್ಷಕ ಅನೇಕ ದೃಕ್ ಶ್ರವಣ ಮಾಧ್ಯಮಗಳನ್ನು ತನ್ನ ಬೋಧನೆಯಲ್ಲಿ ಬಳಸುತ್ತಾನೆ. ಇದರಿಂದ ವಿಷಯವು ಅಮೂರ್ತದಿಂದ ಮೂರ್ತಗೊಂಡು ಮನದಟ್ಟಾಗಲು ಸಹಾಯವಾಗುತ್ತದೆ. ದೃಶ್ಯ ಮಾಧ್ಯಮದಲ್ಲಿ ಬಳಸುವ ಚಾರ್ಟ್‌ಗಳು, ಛಾಯಾಚಿತ್ರಗಳು, ನಕ್ಷೆಗಳು, ಚಿತ್ರಗಳು, ಆಡಿಯೋ/ವೀಡಿಯೋಗಳು ಕಲಿಕೆಗೆ ಸಹಾಯ ಮಾಡುತ್ತವೆ.

ಅಂತೆಯೇ 3D (ತ್ರಿ–ಆಯಾಮ) ಮಾದರಿಗಳು, ಗ್ಲೋಬ್‌ಗಳು, ಕಾರ್ಯನಿರತ ಮಾದರಿಗಳು ಇಡೀ ವಿಷಯದ ಕಲ್ಪನೆಯನ್ನು ಸ್ಪಷ್ಟಪಡಿಸುತ್ತವೆ. ಜೈವಿಕ ನಮೂನೆಗಳು (Biological Specimen), ನೈಜ ಅಂಶಗಳನ್ನು ಕಣ್ಣ ಮುಂದೆ ತರುವ ಮೂಲಕ ಕಲಿಕೆ ಉಂಟಾಗಲು ಅನುವು ಮಾಡಿಕೊಡುತ್ತವೆ.

ಇನ್ನು ದೃಕ್ ಶ್ರವಣ ಮಾಧ್ಯಮಗಳಾದ ವೀಡಿಯೋ ಚಿತ್ರೀಕರಣಗಳು, ಚಿಕ್ಕ ಅವಧಿಯ 16ಎಂ.ಎಂ. ಫಿಲ್ಮ್‌ಗಳು, ಡಾಕ್ಯುಮೆಂಟರಿಗಳು ಆಕರ್ಷಕವಾಗಿರುವುದರಿಂದ ವಿದ್ಯಾರ್ಥಿಗಳ

Digitised by Bharatavani, CIIL

ಆಸಕ್ತಿ ಕೆರಳಿಸಿ ತರಗತಿಯ ಕಲಿಕೆಯನ್ನು ಸಕ್ರಿಯಗೊಳಿಸುತ್ತವೆ.

ಜೊತೆಗೆ ನಿಯತಕಾಲಿಕೆಗಳು, ದಿನಪತ್ರಿಕೆಯಲ್ಲಿ ಬರುವ ವರ್ತಮಾನಗಳು, LAN (Local Area Network) ಬಳಸಿದ ಕಂಪ್ಯೂಟರ್ ಕಾರ್ಯಕ್ರಮಗಳು, SMART CLASS ಗಳು ಕಡಿಮೆ ಸಮಯದಲ್ಲಿ ಹೆಚ್ಚಿನ ಬೋಧನಾ ಕಲಿಕಾ ಕಾರ್ಯವನ್ನು ನಿರ್ವಹಿಸಲು ಸಹಕರಿಸುತ್ತವೆ.

ಹಾಗೆಯೇ ಈ ಎಲ್ಲಾ ಮಾಧ್ಯಮಗಳು ತರಗತಿಯ ಪಠ್ಯಕ್ರಮ ವ್ಯವಹಾರದಲ್ಲಿ ಮಾರ್ಪಾಡುಗಳನ್ನು ತರುವ ಮೂಲಕ ಹಲವು ಬಾರಿ ಬೋಧಿಸಲ್ಪಡುವ ವಿಷಯದಿಂದ ದೂರವಾಗಿ, ಕೇವಲ ದೃಕ್-ಶ್ರವಣ ಮಾಧ್ಯಮಗಳೇ ವಿದ್ಯಾರ್ಥಿಗಳ ನೆನಪಿನಲ್ಲಿ ಉಳಿಯುವಂತಾಗಬಹುದು. ಅಥವಾ ತರಗತಿಯ 'ಕಲಿಕಾ ವಾತಾವರಣ'ಕ್ಕೆ ಧಕ್ಕೆಯಾಗಿ ಗಮನವು ಬೇರೆಡೆ ಹರಿಯಬಹುದು. ಸೂಕ್ತ ನಿರ್ವಹಣೆಯ ಕೊರತೆಯಿಂದ ತರಗತಿಯು ಅನಿಯಂತ್ರಿತವಾಗಿ ಅಶಿಸ್ತಿನ ವಾತಾವರಣ ಉಂಟಾಗಬಹುದು. ಆದ್ದರಿಂದ ಯಾವುದೇ ಶ್ರವ್ಯ - ದೃಶ್ಯ ಮಾಧ್ಯಮವನ್ನು ತರಗತಿಯಲ್ಲಿ ಎಚ್ಚರಿಕೆಯಿಂದ ಉಪಯೋಗಿಸಿದಾಗ ಕಲಿಕೆಯು ಪ್ರಭಾವಯುತವಾಗಿ ಉಂಟಾಗುತ್ತದೆ.

**ಸುಪ್ತ ಪಠ್ಯಕ್ರಮ:**

ಪಠ್ಯಕ್ರಮ ನಿರ್ದಿಷ್ಟವಾಗಿ ನಿರೂಪಿಸಿದ ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸಲು ವ್ಯವಸ್ಥಿತ ರೀತಿಯಲ್ಲಿ ಯೋಜಿಸಿದ ತರಗತಿಯ ಒಳಗೆ ಮತ್ತು ಹೊರಗೆ ಏರ್ಪಡಿಸುವ ಪಠ್ಯ ಹಾಗೂ ಸಹ-ಪಠ್ಯ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಒದಗಿಸುವ ಎಲ್ಲಾ ಕಲಿಕಾನುಭವಗಳನ್ನು ಒಳಗೊಳ್ಳುತ್ತದೆ. ಇದನ್ನು ವ್ಯಕ್ತ ಪಠ್ಯಕ್ರಮ (Expressed Curriculum) ಎಂದು ಹೆಸರಿಸಬಹುದು. ಎಷ್ಟೇ ಎಚ್ಚರಿಕೆಯಿಂದ ರಚಿತವಾಗಿದ್ದರೂ ಯಾವುದೇ ಪಠ್ಯಕ್ರಮ ಶಾಲೆಯಲ್ಲಿ ಮಕ್ಕಳಿಗೆ ಉಂಟಾಗುವ ಎಲ್ಲಾ ವ್ಯಕ್ತ ಹಾಗೂ ಅವ್ಯಕ್ತ ಅನುಭವಗಳನ್ನು ಒಳಗೊಳ್ಳುವುದಿಲ್ಲ. ಶಾಲಾ ಜೀವನದಲ್ಲಿ ಮತ್ತೊಂದು ಪಠ್ಯಕ್ರಮ ಸೂಕ್ತವಾಗುವುದಿಲ್ಲ. ಶಾಲಾ ಜೀವನದಲ್ಲಿ ಮತ್ತೊಂದು ಪಠ್ಯಕ್ರಮ ಸುಪ್ತವಾಗಿದ್ದುಕೊಂಡು ವಿದ್ಯಾರ್ಥಿಗಳ ಕಲಿಕೆಯ ಮೇಲೆ, ಅವರುಗಳ ವ್ಯಕ್ತಿತ್ವ ವಿಕಾಸದ ಮೇಲೆ ಪ್ರಭಾವ ಬೀರುತ್ತದೆ ಎಂದು ಇತ್ತೀಚಿನ ಶಿಕ್ಷಣ ತಜ್ಞರು ಗುರ್ತಿಸಿ ಈ ಅಗೋಚರವಾದ ಪಠ್ಯಕ್ರಮವನ್ನು ಸುಪ್ತ ಪಠ್ಯಕ್ರಮ (Hidden Curriculum) ಎಂದು ಕರೆದಿದ್ದಾರೆ. ಇದರ ಸ್ವರೂಪವೇನು, ಪ್ರಭಾವವೇನು ಎಂಬುದನ್ನು ನೇರವಾಗಿ, ವಸ್ತುನಿಷ್ಠವಾಗಿ ಗುರ್ತಿಸಲು ಸಾಧ್ಯವಾಗುವುದಿಲ್ಲ. ಇವು ಶಾಲೆಯಿಂದ ಶಾಲೆಗೆ ವ್ಯತ್ಯಾಸಗೊಳ್ಳುತ್ತವೆ. ಶಾಲೆಯ ಇತಿಹಾಸ, ಅದು ಪ್ರತಿನಿಧಿಸುವ ಮೌಲ್ಯಗಳು, ಸಾಂಸ್ಕೃತಿಕ ಸಂಪ್ರದಾಯಗಳು, ಅದರ ಸಾಮಾಜಿಕ ಸಂಘಟನೆ, ಕಾರ್ಯಶೈಲಿ ಮುಂತಾದ ಅಂಶಗಳು ಶಾಲೆಯ/ಕಾಲೇಜಿನ ಸುಪ್ತ ಪಠ್ಯಕ್ರಮವನ್ನು ನಿರ್ಧರಿಸುತ್ತವೆ.

ಶಾಲೆ ಪ್ರತಿನಿಧಿಸುವ, ಒತ್ತುಕೊಡುವ ವರ್ತನ ವಿನ್ಯಾಸಗಳು ನೈತಿಕ/ಸಾಮಾಜಿಕ/ಸಾಂಸ್ಕೃತಿಕ ಮೌಲ್ಯಗಳು, ಸಾಮಾಜೀಕರಣ ಪ್ರಕ್ರಿಯೆಗಳು, ಸಂಪ್ರದಾಯಗಳು ಆಚರಣೆಯಲ್ಲಿರುವ ನೀತಿ-ನಿಯಮಗಳು ಸುಪ್ತ ಪಠ್ಯಕ್ರಮದಲ್ಲಿ ಸೇರುತ್ತವೆ. ಶಾಲೆಯ ಸಂಘಟನೆ, ಸಾಮಾಜಿಕ ವಾತಾವರಣ, ಶಿಕ್ಷಕರ ವರ್ತನೆ, ಮನೋಭಾವಗಳು, ಆದರ್ಶಗಳು, ವಿದ್ಯಾರ್ಥಿಗಳ ಮೇಲೆ ಶಿಕ್ಷಕರ ಅರಿವಿಗೆ ಬರದಂತೆ ಪ್ರಭಾವ ಬೀರುತ್ತವೆ. ಆದ್ದರಿಂದಲೇ ಶಿಕ್ಷಕರು ತಮ್ಮ ವರ್ತನೆಯ ಬಗ್ಗೆ ತುಂಬಾ ಕಾಳಜಿ ವಹಿಸಬೇಕು. ಎಷ್ಟೋ ವೇಳೆ ನಿರ್ದಿಷ್ಟ ಉದ್ದೇಶವಿಲ್ಲದೆ ಯಾದೃಚ್ಛಿಕವಾಗಿ ವಿದ್ಯಾರ್ಥಿಗಳ ಬಗ್ಗೆ ಶಿಕ್ಷಕರ ಹೇಳಿಕೆಗಳು, ವರ್ತನೆಗಳು, ವಿದ್ಯಾರ್ಥಿಗಳಿಂದ ಬೇರೆ ಬೇರೆ ರೀತಿಗಳಲ್ಲಿ ಅರ್ಥೈಸಲ್ಪಟ್ಟು ಅವರ ಮೇಲೆ ಬೇರೆ ಬೇರೆ ರೀತಿಯ ಪ್ರಭಾವ ಬೀರುವ ಸಾಧ್ಯತೆಯಿದೆ. ಆದ್ದರಿಂದಲೇ ಶಾಲೆ/ಕಾಲೇಜಿನ ಇಡೀ ವಾತಾವರಣ ಸ್ನೇಹಪೂರ್ಣವಾಗಿಯೂ, ಸೌಹಾರ್ದಪೂರ್ಣವಾಗಿಯೂ ಇರುವಂತೆ ನೋಡಿಕೊಳ್ಳಬೇಕು. ವೈದಿಕ ಕಾಲದ ಋಷಿಗಳು ತಮ್ಮ ಗುರುಕುಲ ಆಶ್ರಮಗಳಲ್ಲಿ ಇಂತಹ ಪರಿಸರವನ್ನು ಸೃಷ್ಟಿಸುವುದಕ್ಕೆ ಮಹತ್ವಕೊಡುತ್ತಿದ್ದರು. ಈಗಲೂ ಸಹ ಶಾಲೆ/ಕಾಲೇಜುಗಳ ಮುಖ್ಯಸ್ಥರು, ತರಗತಿ ಶಿಕ್ಷಕರು ಈ ಸುಪ್ತ ಪಠ್ಯಕ್ರಮದ ಅಸ್ತಿತ್ವವನ್ನು ಗಮನಕ್ಕೆ ತೆಗೆದುಕೊಂಡು ಅದರ ಪ್ರಭಾವವನ್ನು ಮನಗಾಣಬೇಕು.

**-ವಿಜಯಲಕ್ಷ್ಮಿ ದೇಸಾಯಿ**
**-ಪ್ರೊ. ಮಂಜುನಾಥಯ್ಯ ಬಿ.ಎನ್.**

## ಪಠ್ಯಕ್ರಮದ ಐತಿಹಾಸಿಕ ವಿಕಾಸ

ಪಠ್ಯಕ್ರಮವನ್ನು ನಾವು ಕೇವಲ ಬೋಧನೆ, ಕಲಿಕೆ, ಮೌಲ್ಯಮಾಪನಕ್ಕೆ ಸೀಮಿತಗೊಳಿಸಿದರೆ ಅದರ ಅರ್ಥ ಸಂಕುಚಿತಗೊಳ್ಳುತ್ತದೆ. ವಿಶಾಲ ಅರ್ಥದಲ್ಲಿ ಶಿಕ್ಷಣ ತಜ್ಞ ಫ್ರೋಬೆಲ್‌ರವರ ವ್ಯಾಖ್ಯೆಯೊಂದಿಗೆ ಅರ್ಥೈಸುವುದಾದರೆ "ಪಠ್ಯ ಕ್ರಮವೆಂಬುದು ಮಾನವ ಜನಾಂಗದ ಜ್ಞಾನ ಮತ್ತು ಅನುಭವಗಳ ಸಾರ ಸಂಗ್ರಹ." ಪಠ್ಯಕ್ರಮದ ಬಹು ಮುಖ್ಯ ಲಕ್ಷಣಗಳಲ್ಲಿ ಮುಖ್ಯವಾದುದೆಂದರೆ ಅದರ ನಮ್ಯತೆ (ಸ್ಥಿತಿಸ್ಥಾಪಕ) ಗುಣ. ಅಂತೆಯೇ ಪಠ್ಯಕ್ರಮ ಸಮಾಜದಿಂದ ಸಮಾಜಕ್ಕೆ, ಪರಿಸರದಿಂದ ಪರಿಸರಕ್ಕೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ಮತ್ತು ಜನಾಂಗದ ಬೇಕು ಬೇಡಗಳನ್ನು ಆಧರಿಸಿ ಶಿಕ್ಷಣ ಕ್ಷೇತ್ರದಲ್ಲಿ ಧನಾತ್ಮಕವಾಗಿ ತನ್ನ ಪರಿವರ್ತಿತ ವಿಕಾಸವನ್ನು ಕಂಡುಕೊಂಡು ಸಾಗಿದೆ.

ನಮ್ಮ ಭಾರತದ ಶೈಕ್ಷಣಿಕ ಇತಿಹಾಸದಲ್ಲಿಯೂ ಪಠ್ಯಕ್ರಮ ತನ್ನದೇ ಆದ ಸ್ಥಾನಮಾನವನ್ನು ಕಂಡುಕೊಂಡು ಇಂದು ಪಠ್ಯಕ್ರಮ ತನ್ನದೇ ದೃಢತೆಯನ್ನು ಕಂಡುಕೊಂಡಿದೆ. ಹೀಗೆ ಭಾರತೀಯ ಪಠ್ಯ ಕ್ರಮದ ಐತಿಹಾಸಿಕ ವಿಕಾಸವನ್ನು ನಿರ್ದಿಷ್ಟವಾಗಿ ಈ ಶೈಕ್ಷಣಿಕ ಹಂತಗಳಲ್ಲಿ ಕಂಡುಕೊಳ್ಳಬಹುದಾಗಿದೆ. ಇಲ್ಲಿನ ಪಠ್ಯ ಕ್ರಮದ ವಿಕಾಸವೂ ಬಹುಮುಖ್ಯವಾಗಿ ಭರತಭೂಮಿಯಲ್ಲಿ ಕಂಡುಬಂದ ಶೈಕ್ಷಣಿಕ ಪದ್ಧತಿಗಳನ್ನು ಬುನಾದಿಯಾಗಿಸಿ ಕೊಂಡಿದೆ. ಭಾರತದ

Digitised by Bharatavani, CIIL

ಪಠ್ಯಕ್ರಮದ ಐತಿಹಾಸಿಕ ವಿಕಾಸವನ್ನು ಇಲ್ಲಿ ನೆಲೆಗೊಂಡ ಪ್ರಮುಖ ಶಿಕ್ಷಣಪದ್ಧತಿಗಳ ಶ್ರೇಷ್ಠತೆಯೊಂದಿಗೆ ಅರಿತುಕೊಳ್ಳಬಹುದಾಗಿದೆ.

**ಭಾರತದ ಪಠ್ಯಕ್ರಮದ ಐತಿಹಾಸಿಕ ವಿಕಾಸದ ಹಂತಗಳು:**

ವೈದಿಕ ಕಾಲದ ಪಠ್ಯಕ್ರಮ (ಕ್ರಿ.ಪೂ.1500 –ಕ್ರಿ.ಪೂ.600): ವೇದಕಾಲದ ಪಠ್ಯಕ್ರಮದಲ್ಲಿ ಧಾರ್ಮಿಕ ಶಿಕ್ಷಣ ಮಹತ್ವದ ಸ್ಥಾನ ಪಡೆದಿತ್ತು. ವೇದಗಳ ಕಲಿಕೆ, ಉಪನಿಷತ್ತುಗಳ ಕಲಿಕೆ, ಮಾನವನ ಆಂತರಿಕ ಮತ್ತು ಬಾಹ್ಯ ಶುದ್ಧತೆಗೋಸ್ಕರ ಅವಶ್ಯವಾದ ಜ್ಞಾನ ಇವುಗಳು ಪಠ್ಯವಸ್ತುವಿನ ಪ್ರಮುಖ ವಿಷಯಗಳಾಗಿದ್ದವು. ಬ್ರಾಹ್ಮಣ ಧಾರ್ಮಿಕ ವಿಧಿ–ವಿಧಾನಗಳಿಗೆ ಸಂಬಂಧಿಸಿದಂತೆ ಸಾಹಿತ್ಯ ನಿರ್ಮಾಣ ಹಾಗೂ ಕಲಿಕೆಯನ್ನು ಹೇಳಿಕೊಡಲಾಗುತ್ತಿತ್ತು. ವಿದ್ಯಾರ್ಥಿಗಳಿಗೆ ಧರ್ಮವನ್ನು ಆಚರಿಸುವ ಧಾರ್ಮಿಕ ವಿಧಿ ನಿಯಮಗಳನ್ನು ಪಾಲಿಸಿಕೊಂಡು ಬರುವ ಶಿಕ್ಷಣ ನೀಡಲಾಗುತ್ತಿತ್ತು. ವೇದಗಳ ಕಾಲದ ಪಠ್ಯಕ್ರಮದಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ಎರಡೂ ಅಂಶಗಳಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿತ್ತು.

ವೇದಾಂತಗಳಲ್ಲಿ ಪ್ರಮುಖವಾದ ಧ್ವನಿಶಾಸ್ತ್ರ, ಧಾರ್ಮಿಕ ವಿಧಿಗಳ ಕುರಿತಾದ ಶಾಸ್ತ್ರ, ವ್ಯಾಕರಣ, ವೇದಾಭ್ಯಾಸ ಅಥವಾ ವೇದಗಳ ಕುರಿತಾದ ಶಾಸ್ತ್ರ, ದಶಮಾಂಶ ಪದ್ಧತಿ ಮತ್ತು ಖಗೋಳಶಾಸ್ತ್ರ ಈ ವಿಷಯಗಳನ್ನು ಒಟ್ಟಾರೆಯಾಗಿ "ಅನುಶಾಸನ" ಎಂದು ಕರೆಯುತ್ತಿದ್ದರು. ಅನುವ್ಯಾಖ್ಯಾನ (ಮಂತ್ರಗಳ ಕುರಿತಾದ ವಿಮರ್ಶೆ), ವ್ಯಾಖ್ಯಾನ (ಮಂತ್ರಗಳ ಕುರಿತಾದ ವಿವರಣೆ), ರಾಶಿ ಎಂದರೆ ಸಂಖ್ಯಾಶಾಸ್ತ್ರ ಅಥವಾ ಅಂಕಗಣಿತ, ಕ್ಷಾತ್ರ ವಿದ್ಯೆ (ಯುದ್ಧ ಕಲೆ), ಖಗೋಳ ಶಾಸ್ತ್ರ, ವೇದಗಳ ವೇದ (ಹಳೆಯ ಸಂಸ್ಕೃತದ ವ್ಯಾಕರಣ), ಏಕಾಯನ, ನೀತಿಶಾಸ್ತ್ರ ಮುಂತಾದವುಗಳನ್ನು ಅಭ್ಯಾಸ ಮಾಡುವುದು ಈ ವೇದಗಳ ಕಾಲದ ಪಠ್ಯಕ್ರಮದ ವಿಶೇಷವಾಗಿತ್ತು.

ಬೌದ್ಧ ಕಾಲದ ಪಠ್ಯಕ್ರಮ (ಕ್ರಿ.ಪೂ.563–ಕ್ರಿ.ಪೂ.483): ವೇದಗಳ ಕಾಲದ ಶಿಕ್ಷಣ ಪದ್ಧತಿಯ ನಂತರ ಬಂದ ಬೌದ್ಧ ಕಾಲದ ಶಿಕ್ಷಣ ಪದ್ಧತಿಯು ಗೌತಮ ಬುದ್ಧ ಮತ್ತು ಬೌದ್ಧ ಧರ್ಮದ ವೃತ್ತಾಂತವನ್ನು ಆಧರಿಸಿದೆ. ಗೌತಮ ಬುದ್ಧನು ಅಸಮಾನ್ಯವಾದ ಧಾರ್ಮಿಕ ದೃಷ್ಟಿಯನ್ನು ಹೊಂದಿದವನಾಗಿರುವುದರೊಂದಿಗೆ ಶ್ರೇಷ್ಠ ತತ್ವಜ್ಞಾನಿ ಹಾಗೂ ಶಿಕ್ಷಣ ತಜ್ಞನೂ ಆಗಿದ್ದನು.

ಬೌದ್ಧ ಶಿಕ್ಷಣ ಪದ್ಧತಿ ಅಥವಾ ಪಠ್ಯಕ್ರಮವನ್ನು ವೇದಗಳ ಕಾಲದ ಪಠ್ಯಕ್ರಮದ ಒಂದು ಸುಧಾರಿತ ಘಟ್ಟವೆಂದು ಹೇಳಬಹುದು. ಈ ಹಂತದಲ್ಲಿ ಶಿಕ್ಷಣದ ಮೂಲ ಉದ್ದೇಶ ಧಾರ್ಮಿಕತೆಯಾಗಿರದೇ ನೈತಿಕತೆಯಾಗಿತ್ತು. ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಗೆ ಅಂದರೆ ಬೌದ್ಧಿಕ, ನೈತಿಕ, ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದ ಬೆಳವಣಿಗೆಗೆ ಪಠ್ಯಕ್ರಮ ಪೂರಕವಾಗಿತ್ತು.

ಬೌದ್ಧ ಕಾಲದ ಶಿಕ್ಷಣದಲ್ಲಿ ಶೈಕ್ಷಣಿಕ, ತಾಂತ್ರಿಕ ಮತ್ತು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಶಿಕ್ಷಣ ನೀಡಲಾಗುತ್ತಿತ್ತು. ಚೀನದ ಬೌದ್ಧ ಯಾತ್ರಿಕ 'ಇತ್ಸಿಂಗ್'ನ ಪ್ರಕಾರ ಸಂಜೆಯ ಪ್ರದಕ್ಷಿಣೆಯ ನಂತರ ಭಿಕ್ಷುಗಳು ನಾಗಾರ್ಜುನನ 'ಸುಹುಲ್ಲೇಖ', ಚಂದ್ರನ 'ಸುದಾನ', ಆಯುತ ಶೂರನ 'ಜಾತಕಮಾಲ', ಅಶ್ವಘೋಷನ 'ಬುದ್ಧ ಚರಿತ' ಮುಂತಾದ ಕೃತಿಗಳನ್ನು ನಾಲಂದದಂತಹ ಬೌದ್ಧ ವಿಹಾರಗಳಲ್ಲಿ ಓದುತ್ತಿದ್ದರು. ನಾಗಾರ್ಜುನನ ಕೃತಿ ಮೂಲತಃ ಸಂಸ್ಕೃತದಲ್ಲಿದೆ. (ಅದನ್ನು ಟಿಬೇಟಿ ಹಾಗೂ ಇಂಗ್ಲಿಷ್ ಭಾಷೆಗಳಿಗೆ ಅನುವಾದಿಸಲಾಗಿದೆ). ಇಲ್ಲಿ ವಿದ್ಯಾರ್ಥಿಯು ತನಗೆ ಬೇಕಾದ ವಿಷಯಗಳನ್ನು ಸ್ವತಂತ್ರವಾಗಿ ಆಯ್ಕೆ ಮಾಡಿಕೊಳ್ಳಬಹುದಿತ್ತು. ಇದು ವಿದ್ಯಾರ್ಥಿ ಕೇಂದ್ರಿತವಾಗಿ ಪಠ್ಯಕ್ರಮದ ಆಯ್ಕೆಯಲ್ಲಿ ಆದಂತಹ ವಿಶೇಷವಾದ ಸುಧಾರಣೆ ಎನ್ನಬಹುದು.

ಸಾಹಿತ್ಯ, ತತ್ವಶಾಸ್ತ್ರ, ಕಲೆ, ವಾಣಿಜ್ಯ, ಧರ್ಮ, ವ್ಯವಸಾಯ, ಯುದ್ಧ ಕಲೆ, ನೂಲುವುದು, ನೇಯುವುದು, ಬಟ್ಟೆಗಳ ಮೇಲೆ ಚಿತ್ರಗಳನ್ನು ಮುದ್ರಿಸುವುದು, ಬಟ್ಟೆ ಹೊಲಿಯುವುದು, ಗಣಿತಶಾಸ್ತ್ರ (ಲೆಕ್ಕಶಾಸ್ತ್ರ), ತೈಲಚಿತ್ರಕಲೆ, ಶಸ್ತ್ರ ಚಿಕಿತ್ಸೆ, ತರ್ಕಶಾಸ್ತ್ರ, ಕಾಯ್ದೆ, ಚಿಕ್ಕ ಉದ್ದಿಮೆಗಳು, ಪಶುಪಾಲನೆ ಮುಂತಾದ ವಿಷಯಗಳು ಪಠ್ಯಕ್ರಮದಲ್ಲಿ ಅಳವಡಿಕೆ ಗೊಂಡಿದ್ದವು. ಬೌದ್ಧ ಕಾಲದಲ್ಲಿ ಪಾಲಿ, ಸಂಸ್ಕೃತ ಮುಂತಾದ ಭಾಷೆಗಳನ್ನು ಸಹ ಕಲಿಸಲಾಗುತ್ತಿತ್ತು.

ತಕ್ಷಶಿಲೆಯ ವಿಶ್ವವಿದ್ಯಾಲಯದಲ್ಲಿ ಜಾದೂ, ಮಂತ್ರ, ಯಕ್ಷಿಣಿ, ಬೇಟೆಯಾಡುವುದು, ಗಜ ವಿದ್ಯೆ, ಬಿಲ್ಲು ವಿದ್ಯೆ, ಜೋತಿಷ್ಯ, ವೈದ್ಯಕೀಯ ವಿಷಯಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಅಂತೆಯೇ, ಸಂಸ್ಕೃತಿ, ವೇದಾಂಗಗಳು, ಕಾವ್ಯ, ಇತಿಹಾಸ, ವ್ಯಾಕರಣ, ಯೌಗಿಕ ಶಾಸ್ತ್ರ, ಖಗೋಳಶಾಸ್ತ್ರ, ಸಂಗೀತ ಮುಂತಾದ ವಿಷಯಗಳಲ್ಲಿಯೂ ಶಿಕ್ಷಣವನ್ನು ನೀಡಲಾಗುತ್ತಿತ್ತು. ಬೌದ್ಧ ಧರ್ಮ ಗ್ರಂಥಗಳೂ ಪಠ್ಯಕ್ರಮವಾಗಿ ಮಾರ್ಪಾಡಾಗಿದ್ದವು.

**ತ್ರಿಪಿಟಕಗಳು:** ಭಗವಾನ್ ಬುದ್ಧರು ಮರಣ ಹೊಂದಿದ ನಂತರ ಅವರ ಶಿಷ್ಯರು ಅವರ ಉಪದೇಶಗಳನ್ನು ಮೂರು ಸಂಪುಟಗಲ್ಲಿ ಸಂಗ್ರಹಿಸಿದರು. ಹೀಗೆ ಸಂಗ್ರಹಿಸಿದ ಸಾಹಿತ್ಯವನ್ನು ತ್ರಿಪಿಟಕ ಎಂದು ಕರೆಯಲಾಗಿದೆ.

**ವಿನಯ ಪಿಟಕ:** ಬೌದ್ಧ ಭಿಕ್ಷುಗಳಿಗೆ ಉಪಯುಕ್ತವಾದ ನೀತಿ ನಿಯಮಗಳನ್ನು ಇದರಲ್ಲಿ ಸಂಗ್ರಹಿಸಲಾಗಿದೆ.

**ಸುತ್ತ ಪಿಟಕ:** ಇದರಲ್ಲಿ ಗೌತಮ ಬುದ್ಧನ ಧಾರ್ಮಿಕ ವಿಚಾರಗಳಿವೆ.

**ಅಭಿದಮ್ಮ ಪಿಟಕ:** ಇದರಲ್ಲಿ ಬೌದ್ಧ ಧರ್ಮದಲ್ಲಿ ಹೇಳಲಾದ ತತ್ವಗಳ ತಾತ್ವಿಕ ಚರಿತ್ರೆ ಕ್ರೋಢೀಕರಿಸಲಾಗಿದೆ.

**ಜಾತಕ ಕಥೆಗಳು:** ಇದರಲ್ಲಿ ಭಗವಾನ್ ಬುದ್ಧನ ಹಿಂದಿನ ಜನ್ಮಗಳ ಕಥೆಗಳಿವೆ.

**ಮುಸ್ಲಿಂ ಕಾಲದ ಅಥವಾ ಮಧ್ಯಕಾಲೀನ ಶಿಕ್ಷಣದ ಪಠ್ಯಕ್ರಮ:**

ಕ್ರಿ.ಶ. 8ನೇ ಶತಮಾನದಲ್ಲಿ ಭಾರತದ ಮೇಲೆ ಮಹಮ್ಮದೀಯರ ದಾಳಿ ಆರಂಭವಾಯಿತು. ಆದರೆ ಅವರು 13ನೆಯ ಶತಮಾನದಲ್ಲಿ

Digitised by Bharatavani, CIIL

ಭಾರತದಲ್ಲಿ ಶಾಶ್ವತವಾದ ಸಾಮ್ರಾಜ್ಯವನ್ನು ಸ್ಥಾಪಿಸುವುದರಲ್ಲಿ ಯಶಸ್ಸನ್ನು ಕಂಡರು. ಕುರಾನಿನಲ್ಲಿ ಶಿಕ್ಷಣವನ್ನು ಕರ್ತವ್ಯವೆಂದು ಹೇಳಿರುವುದರಿಂದ ವಿವಿಧ ಮುಸಲ್ಮಾನ ಅರಸರು ಇಸ್ಲಾಂ ಧರ್ಮಕ್ಕೆ ಅನುಗುಣವಾದ ಹೊಸ ಶಿಕ್ಷಣ ಪದ್ಧತಿಯನ್ನು ಅನುಷ್ಠಾನಗೊಳಿಸಿ ಬೆಳೆಸಿದರು. ಅಂತೆಯೇ ಪಠ್ಯಕ್ರಮದಲ್ಲಿಯೂ, ಮಧ್ಯಯುಗೀಯ ಕಾಲದ ಅಗತ್ಯತೆಗೆ ತಕ್ಕಂತೆ ಬದಲಾವಣೆ ಕಂಡು ಬಂತು. ಭಾರತೀಯ ಪಠ್ಯಕ್ರಮ ನಿಧಾನವಾಗಿ ಹೊಸರೂಪ ಪಡೆಯುತ್ತ ನಡೆಯಿತು. ಅನೇಕ ಹಿಂದುಗಳು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳಲ್ಲಿ ಪ್ರಾವೀಣ್ಯವನ್ನು ಪಡೆದು ಮುಸ್ಲಿಂ ಅರಸರ ಆಸ್ಥಾನದಲ್ಲಿ ಜವಾಬ್ದಾರಿ ಯುತ ಹುದ್ದೆಗಳನ್ನು ಅಲಂಕರಿಸಿದರು. ಅದೇ ರೀತಿ ತತ್ವಶಾಸ್ತ್ರ, ವೈದ್ಯಕೀಯ, ವಿಜ್ಞಾನ ಮತ್ತು ವೃತ್ತಿ ಶಿಕ್ಷಣದ ಕ್ಷೇತ್ರಗಳಲ್ಲಿ ಮುಸ್ಲಿಂ ಶಿಕ್ಷಣ ಪದ್ಧತಿಯಲ್ಲಿನ ಪಠ್ಯಕ್ರಮವು ಹಿಂದೂ ಮತ್ತು ಬೌದ್ಧಕಾಲದ ಶಿಕ್ಷಣ ಪಠ್ಯಕ್ರಮದಿಂದ ಪ್ರಭಾವಿತವಾಯಿತು.

ಇಸ್ಲಾಂ ಧರ್ಮದ ಅನುಯಾಯಿಗಳಲ್ಲಿ ಜ್ಞಾನದ ಬೆಳಕನ್ನು ಪಠ್ಯಕ್ರಮದ ಸಹಾಯದಿಂದ ಹರಡುವುದೇ ಮುಸ್ಲಿಂ ಶಿಕ್ಷಣದ ಪ್ರಮುಖ ಗುರಿಯಾಗಿತ್ತು. ಇಸ್ಲಾಂ ಧರ್ಮದ ಸಿದ್ಧಾಂತಗಳು, ಕಾಯ್ದೆಗಳು, ಸಾಮಾಜಿಕ ಪದ್ಧತಿಗಳು ಮುಂತಾದವುಗಳನ್ನು ಅಭಿವೃದ್ಧಿ ಪಡಿಸುವುದರಲ್ಲಿ ಪಠ್ಯಕ್ರಮ ಸಹಕಾರಿಯಾಗಿತ್ತು. ಧರ್ಮ ಪ್ರಸಾರಕ್ಕೆ ಪಠ್ಯಕ್ರಮವೂ ಸಹಾಯಕವಾಗಿತ್ತು. ಪಠ್ಯಕ್ರಮದಲ್ಲಿ ಮುಸ್ಲಿಂ ಧರ್ಮದ ತತ್ವಜ್ಞಾನ, ಸಾಹಿತ್ಯ ಹಾಗೂ ಇತಿಹಾಸ ಅಡಕಗೊಂಡಿತ್ತು.

ಮುಸ್ಲಿಂ ಶಿಕ್ಷಣದ ಪಠ್ಯಕ್ರಮವು ಭೌತಿಕ ಪ್ರಗತಿ ಹಾಗೂ ಸಿರಿ ಸಂಪತ್ತುಗಳ ಅಭಿವೃದ್ಧಿಗೆ ಗಮನ ಹರಿಸಿತ್ತು. ಮಕ್ತಬ್‌ಗಳಲ್ಲಿ ಮೂಲಾಕ್ಷರಗಳು, ಧಾರ್ಮಿಕ ಗೀತೆಗಳು, ನೀತಿಶಾಸ್ತ್ರ, ಪರ್ಶಿಯನ್ ಭಾಷೆಯ ವ್ಯಾಕರಣ, ಕಾವ್ಯ, ಅಂಕ ಗಣಿತ, ಸಂಭಾಷಣೆಯ ಕಲೆ, ಪ್ರಾಯೋಗಿಕ ಜ್ಞಾನ ಮುಂತಾದವುಗಳು ಪಠ್ಯಕ್ರಮವಾಗಿದ್ದವು.

ಮದರಸಾಗಳಲ್ಲಿಯೂ ಪಠ್ಯಕ್ರಮ ಧಾರ್ಮಿಕ ಹಾಗೂ ಪ್ರಾಪಂಚಿಕ ಎರಡೂ ಅಂಶಗಳನ್ನು ಒಳಗೊಂಡಿತ್ತು. ಪ್ರಾಪಂಚಿಕ ಶಿಕ್ಷಣದಲ್ಲಿ ಅರಬ್ಬೀ ಭಾಷೆಯ ಸಾಹಿತ್ಯ, ತರ್ಕಶಾಸ್ತ್ರ, ತತ್ವಶಾಸ್ತ್ರ, ಖಗೋಳಶಾಸ್ತ್ರ, ಅಂಕಗಣಿತ, ಇತಿಹಾಸ, ಭೂಗೋಳ, ವೈದ್ಯಕೀಯ ಶಾಸ್ತ್ರ ಮತ್ತು ವ್ಯವಸಾಯ ಮುಂತಾದವುಗಳು ಇದ್ದವು. ಶಿಕ್ಷಣದ ಮಾಧ್ಯಮವು ಮಾತೃ ಭಾಷೆಯೇ ಆಗಿರಬೇಕೆಂದು ಪ್ರಯತ್ನಿಸಿದರೂ ಅರಬ್ಬೀ ಭಾಷೆಯೇ ಶಿಕ್ಷಣ ಮಾಧ್ಯಮವಾಗಿತ್ತು.

ಅಕ್ಬರನು ಹಿಂದೂ ಜನರಿಗಾಗಿ ಪರ್ಶಿಯನ್ ಸಾಹಿತ್ಯದೊಂದಿಗೆ ಹಿಂದೂ ಧರ್ಮ, ತತ್ವಜ್ಞಾನ ಮತ್ತು ಸಾಹಿತ್ಯಗಳನ್ನು ಪಠ್ಯಕ್ರಮದ ಅಳವಡಿಕೆಗಾಗಿ ಶ್ರಮಿಸಿದನು. ಅವನು ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಮಾಡಿ ಪಠ್ಯಕ್ರಮವನ್ನು ಜೀವನದ ಅವಶ್ಯಕತೆಗೆ ತಕ್ಕಂತೆ ರೂಪಿಸಿ ಉಪಯುಕ್ತಗೊಳಿಸಿದನು.

ಹೀಗೆ ಮಧ್ಯಯುಗೀಯ/ಮುಸ್ಲಿಂ ಕಾಲದ ಶಿಕ್ಷಣ ಪದ್ಧತಿಯಲ್ಲಿ ಪಠ್ಯಕ್ರಮ ತನ್ನದೇ ಆದ ಛಾಪನ್ನು ಮೂಡಿಸಿಕೊಂಡು ಭಾರತೀಯ ಪಠ್ಯಕ್ರಮದ ಐತಿಹಾಸಿಕ ವಿಕಾಸದಲ್ಲಿ ಪ್ರಾಶಸ್ತ್ಯವನ್ನು ಹೊಂದಿದೆ.

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿನ ಶಿಕ್ಷಣ ಪದ್ಧತಿಯಲ್ಲಿ ಪಠ್ಯಕ್ರಮ: ದೇಶೀಯ ಶಿಕ್ಷಣ ಪದ್ಧತಿ ಬ್ರಿಟಿಷರ ಆಗಮನ ದಿಂದಾಗಿ ಒಂದು ಹೊಸ ಅಥವಾ ನವ್ಯ ಆಯಾಮವನ್ನೇ ಕಂಡುಕೊಂಡಿತು. ಅದೇ ರೀತಿ ಬ್ರಿಟಿಷರು ಪಠ್ಯಕ್ರಮದಲ್ಲೂ ತೀವ್ರತರವಾದ ಬದಲಾವಣೆ ಬಯಸಿ ಸಫಲತೆಯನ್ನು ಕಂಡುಕೊಂಡರು. ಇಂದಿಗೂ ಪ್ರಸಕ್ತ ಭಾರತದಲ್ಲಿ ಬ್ರಿಟಿಷರ ಪಠ್ಯಕ್ರಮದ ಪ್ರಭಾವ ಮುಂದುವರೆದಿರುವುದನ್ನು ಕಾಣುತ್ತೇವೆ. ಭಾರತದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯನ್ನು ಸ್ಥಾಪಿಸಿದ ಕೀರ್ತಿ ಕ್ರೈಸ್ತ ಪಾದ್ರಿಗಳಿಗೆ ಸಲ್ಲುತ್ತದೆ. ಈ ಅವಧಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ಉಪಯೋಗಿಸುವುದು ಜನಪ್ರಿಯವಾಗಿತ್ತು. ಭಾರತೀಯ ಸಂಸ್ಕೃತಿಯನ್ನು ಉಳಿಸುವ ಪಠ್ಯಕ್ರಮ ಬೇಕೋ, ಸಂಪೂರ್ಣ ಪಾಶ್ಚಾತ್ಯ ಪದ್ಧತಿಯ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಬೇಕೋ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಪ್ರೌಢ ಶಾಲೆ ಮತ್ತು ವಿಶ್ವವಿದ್ಯಾನಿಲಯಗಳಲ್ಲಯೂ ಆಂಗ್ಲ ಭಾಷೆಯು ಶಿಕ್ಷಣದ ಮಾಧ್ಯಮವಾಯಿತು.

ಕ್ರಿ.ಶ.1854 ರಲ್ಲಿ ಚಾರ್ಲ್ಸ್ ವುಡ್‌ರ ನಾಯಕತ್ವದಲ್ಲಿ ರಚಿತವಾದ ಸಮಿತಿ ತನ್ನ ವರದಿಯಲ್ಲಿ ಉನ್ನತ ಶಿಕ್ಷಣ ಮಾತ್ರ ಇಂಗ್ಲಿಷ್ ಭಾಷೆಯಲ್ಲಿ ಇರಬೇಕು ಹಾಗೂ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಬೇಕು ಎಂದಿದೆ. ಶಿಕ್ಷಣ ಶಾಸ್ತ್ರದ ಇತಿಹಾಸದಲ್ಲಿ ಈ ವರದಿಯನ್ನು ಆಂಗ್ಲ ಶಿಕ್ಷಣದ ಮ್ಯಾಗ್ನ ಕಾರ್ಟ ಎಂದು ಕರೆಯಲಾಗಿದೆ. ಸಾಮಾನ್ಯ ಶಿಕ್ಷಣದ ಜೊತೆಗೆ ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣಕ್ಕೆ ಪ್ರಾಶಸ್ತ್ಯ ಬಂದಿತು. ನಂತರದಲ್ಲಿ ಬಂದ ಅನೇಕ ಶಿಕ್ಷಣ ಸಮಿತಿಯ ವರದಿಗಳು ಶಿಕ್ಷಣ ಕ್ರಮ ಹಾಗೂ ಪಠ್ಯಕ್ರಮದ ರಚನೆಯಲ್ಲಿ ಎರಡು ಭಾಗಗಳಾಗಿ ವಿಂಗಡಿಸಿ ಅದರಲ್ಲಿ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಗೆ ಸೂಚನೆಯಲ್ಲಿ ಒಂದನೇ ಭಾಗ ಸೂಚಿಸಿದರೆ ಇನ್ನೊಂದು ಭಾಗ ವಾಣಿಜ್ಯ ಹಾಗೂ ಸಾಹಿತ್ಯೇತರ ಸಹಾಯಕವಾಗಿರುವಂತೆ ಸೂಚಿಸಿತು.

ನಂತರದಲ್ಲಿ ಕ್ರಿ.ಶ. 1902 ರಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಆಯೋಗ ತನ್ನ ವರದಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪಠ್ಯಕ್ರಮಕ್ಕೆ ಹೊಂದಿಕೊಂಡಂತೆ ಅನೇಕ ಬದಲಾವಣೆಗೆ ಕಾರಣವಾಯಿತು. ನಂತರದಲ್ಲಿ ಕ್ರಿ.ಶ. 1917–19ರ ಕಲ್ಕತ್ತ ವಿಶ್ವವಿದ್ಯಾನಿಲಯ ಆಯೋಗ ವಿಶ್ವವಿದ್ಯಾನಿಲಯದಲ್ಲೂ ದೈಹಿಕ ಶಿಕ್ಷಣಕ್ಕೆ ಪ್ರಾಧಾನ್ಯ ನೀಡಿತು. 1929ರ ಹರ್ಟಾಗ್ ಸಮಿತಿಯು ಪಠ್ಯಕ್ರಮದಲ್ಲಿ ಅನೇ ಸಲಹೆಗಳನ್ನು ಸೂಚಿಸಿತು. ಕ್ರಿ.ಶ. 1935 ರಲ್ಲಿ ರಚಿತವಾದಂತಹ ವುಡ್‌ರ ವರದಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಪಠ್ಯಕ್ರಮವನ್ನು ಕುರಿತು ಚರ್ಚಿಸಿ ಪಠ್ಯಕ್ರಮಕ್ಕೆ ಮತ್ತಷ್ಟು ಪುಷ್ಠಿ ನೀಡಿತು. ಇವರ ಸಲಹೆಯಂತೆ ಗ್ರಾಮಾಂತರ ಮಾಧ್ಯಮಿಕ ಶಾಲೆಯ ಪಠ್ಯಕ್ರಮ ಗ್ರಾಮಾಂತರ ಸನ್ನಿವೇಶ ಮತ್ತು ಅಗತ್ಯತೆಗಳಿಗೆ ತಕ್ಕಂತಿರಬೇಕು. ಕುಶಲ ಕೈಗಾರಿಕೆಗಳ ಜ್ಞಾನ ಪಠ್ಯಕ್ರಮದಲ್ಲಿ ಅಳವಡಿಸಲಾಯಿತು (ಐಚ್ಛಿಕ

Digitised by Bharatavani, CIIL

ವಿಷಯಗಳಾಗಿ). ಕ್ರಿ.ಶ. 1944 ರಲ್ಲಿ ರಚಿತವಾದ ಸಾರ್ಜೆಂಟರ ವರದಿಯಲ್ಲಿ ಪ್ರೌಢಶಾಲಾ ಹಂತದಲ್ಲಿ ಹೊಸ ರೀತಿಯ ಪಠ್ಯಕ್ರಮ ರಚನೆಯಾಯಿತು. ವಿಷಯ ಪ್ರಧಾನವಿರುವ ಪ್ರೌಢಶಾಲೆಗಳಲ್ಲಿ ಕಲೆ ಮತ್ತು ಶುದ್ಧ ವಿಜ್ಞಾನಗಳನ್ನು ಅಂತೆಯೇ ತಾಂತ್ರಿಕ ಪ್ರೌಢಶಾಲೆಗಳಲ್ಲಿ ಅನ್ವಯ ವಿಜ್ಞಾನ, ವಾಣಿಜ್ಯ ಹಾಗೂ ಕೈಗಾರಿಕೆಗಳಿಗೆ ಸಂಬಂದಿಸಿದ ವಿಷಯಗಳನ್ನು ಗೊತ್ತುಪಡಿಸಲಾಯಿತು. ಮಹಿಳೆಯರಿಗಾಗಿ ಇತರ ವಿಷಯಗಳ ಜೊತೆಗೆ ಗೃಹ ವಿಜ್ಞಾನ ವಿಷಯದ ಪಠ್ಯಕ್ರಮ ರಚನೆಯಾಯಿತು. ಹೀಗೆ ಬ್ರಿಟಿಷ್ ಶಿಕ್ಷಣದಲ್ಲಿ ವಿವಿಧ ಶಿಕ್ಷಣ ವಿಭಾಗದಲ್ಲಿ ಮೇಲಿಂದ ಮೇಲೆ ಪಠ್ಯಕ್ರಮ ಬದಲಾಗುತ್ತಲೇ ಬಂದವು.

**ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಪಠ್ಯಕ್ರಮ:** ಭಾರತದ ಸ್ವತಂತ್ರದ ನಂತರ ಶಿಕ್ಷಣ ಹಾಗೂ ಪಠ್ಯಕ್ರಮದಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡುವ ಪ್ರಯತ್ನ ನಡೆಯಿತು. ಕ್ರಿ.ಶ. 1948 ರಲ್ಲಿ ಸರ್ಕಾರವು ಡಾ॥ ಎಸ್.ರಾಧಾ ಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವನ್ನು ನೇಮಿಸಿತು. ಈ ಆಯೋಗವು 1949 ರಲ್ಲಿ ತನ್ನ ವರದಿ ಸಲ್ಲಿಸಿ ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಲಹೆ ನೀಡಿತು. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ವೈಜ್ಞಾನಿಕ, ತಾಂತ್ರಿಕ, ಔದ್ಯೋಗಿಕ, ಕೃಷಿ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣಕ್ಕೆ ಮಹತ್ವ ನೀಡಿತು.

ಕ್ರಿ.ಶ.1952 ರಲ್ಲಿ ಡಾ॥ಎ.ಲಕ್ಷ್ಮಣಸ್ವಾಮಿ ಮೊದಲಿಯಾರ್ ಅಧ್ಯಕ್ಷತೆಯಲ್ಲಿ ಪ್ರೌಢ ಶಿಕ್ಷಣ ಆಯೋಗ ರಚಿಸಲಪಟ್ಟಿತು. ಈ ಆಯೋಗದ ಸಲಹೆಯಂತೆ ಭಾಷೆಗಳು, ಸಾಮಾಜಿಕ ಪಾಠಗಳು, ಸಾಮಾನ್ಯ ವಿಜ್ಞಾನ, ಗಣಿತಶಾಸ್ತ್ರ, ಕಲೆ ಮತ್ತು ಸಂಗೀತ, ಕುಶಲ ಕಲೆ, ದೈಹಿಕ ಶಿಕ್ಷಣವನ್ನು ಪಠ್ಯಕ್ರಮದಲ್ಲಿ ಸೇರಿಸಲಾಯಿತು.

ಕ್ರಿ.ಶ.1964 ರಲ್ಲಿ ಸಾಮಾನ್ಯ ಶಿಕ್ಷಣ ರಾಷ್ಟ್ರೀಯ ವಿಧಾನವನ್ನು ಕುರಿತು ಸಲಹೆ ನೀಡಲು ಡಾ॥ ಡಿ.ಎಸ್.ಕೊಠಾರಿ ಯವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಲಾಯಿತು. ಈ ಆಯೋಗವು ಪಠ್ಯಕ್ರಮಕ್ಕೆ ಸಂಬಂಧಿಸಿ ದಂತೆ ಈ ಕೆಳಗಿನ ಸಲಹೆಗಳನ್ನು ನೀಡಿತು:

**ಕಿರಿಯ ಪ್ರಾಥಮಿಕ ಹಂತ (1 ರಿಂದ 4ನೇ ತರಗತಿ):** ಒಂದು ಭಾಷೆ (ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ), ಗಣಿತಶಾಸ್ತ್ರ, ಪರಿಸರ ಅಧ್ಯಯನ (ವಿಜ್ಞಾನ ಮತ್ತು ಸಮಾಜ ಅಧ್ಯಯನ 3 ರಿಂದ 5ನೇ ತರಗತಿಗೆ), ಚಟುವಟಿಕೆಗಳು, ಆರೋಗ್ಯ ಶಿಕ್ಷಣ.

**ಹಿರಿಯ ಪ್ರಾಥಮಿಕ ಹಂತ (5 ರಿಂದ 7ನೇ ತರಗತಿ):** ಎರಡು ಭಾಷೆಗಳು (1. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ, 2. ಹಿಂದಿ ಅಥವಾ ಇಂಗ್ಲಿಷ್), ಗಣಿತಶಾಸ್ತ್ರ, ವಿಜ್ಞಾನ, ಸಮಾಜ ಅಧ್ಯಯನ, ಕಾರ್ಯಾನುಭವ, ದೈಹಿಕ ಶಿಕ್ಷಣ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಶಿಕ್ಷಣ.

**ಕಿರಿಯ ಸೆಕೆಂಡರಿ ಹಂತ (8 ರಿಂದ 10ನೇ ತರಗತಿ):** ಮೂರು ಭಾಷೆಗಳು (1. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ, 2. ಹಿಂದಿ, 3. ಇಂಗ್ಲಿಷ್), ಗಣಿತಶಾಸ್ತ್ರ, ವಿಜ್ಞಾನ, ಇತಿಹಾಸ, ಭೂಗೋಳ ಮತ್ತು ಪೌರನೀತಿ, ಕಲೆ, ಕಾರ್ಯಾನುಭವ, ದೈಹಿಕ ಶಿಕ್ಷಣ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಶಿಕ್ಷಣ. ಇದರೊಂದಿಗೆ ವಿಜ್ಞಾನ(ಪಿ.ಸಿ.ಎಂ.), ಕಲಾ ವಿಷಯಗಳು)ಹೆಚ್.ಇ.ಪಿ.) ಇತ್ಯಾದಿ ಐಚ್ಛಿಕ ವಿಷಯಗಳು ಇದಕ್ಕೆ ಮೊದಲು ಇದ್ದವು

ಮೇಲಿನ ಪಠ್ಯಕ್ರಮವನ್ನು ಆಯೋಗ ಸೂಚಿಸಿದಂತೆ ಸ್ವತಂತ್ರ ಭಾರತದಲ್ಲಿ ಜಾರಿಗೆ ತರಲಾಯಿತು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ – 1986ರ ಪಠ್ಯಕ್ರಮ ಅಥವಾ ಭಾರತದ ಪ್ರಸಕ್ತ ಪಠ್ಯಕ್ರಮ: 1964ರ ಕೊಠಾರಿ ಶಿಕ್ಷಣ ಆಯೋಗದ ಸಲಹೆಯಂತೆ ಭಾರತೀಯ ಶಿಕ್ಷಣ ಕ್ಷೇತ್ರ ಪ್ರಗತಿ ಪಥದತ್ತ ಸಾಗಿತು. ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳನ್ನು ಕಂಡಿತು. ಆದರೂ ಸಂಪೂರ್ಣವಾಗಿ ಜಾರಿಗೆ ತರಲು ವಿಫಲತೆ ಕಂಡುಕೊಂಡಿತು ಎಂದು ಹೇಳ ಬಹುದಾಗಿದೆ. ಅದಕ್ಕೆ ಕಾರಣ ತೀವ್ರಗತಿಯಲ್ಲಿ ಏರುತ್ತಿರುವ ಜನಸಂಖ್ಯೆ ಮತ್ತು ಪಠ್ಯಕ್ರಮದಲ್ಲಿ ನವೀನ ತಂತ್ರ ಗಾರಿಕೆಯನ್ನು ಬಳಸದೇ ಇರುವುದು. ಮುಂದುವರಿದ ರಾಷ್ಟ್ರಗಳೊಡನೆ ನಮ್ಮ ದೇಶದ ಶೈಕ್ಷಣಿಕ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ನಮ್ಮ ದೇಶದ ಶಿಕ್ಷಣ ಮತ್ತು ಪಠ್ಯಕ್ರಮ ಕಾಲಕ್ಕೆ ತಕ್ಕಂತೆ ಪುನರ್ ರಚಿಸಬೇಕಾದ ಅಗತ್ಯತೆ ಕಂಡು ಬಂತು. ಆಗಿನ ಪ್ರಧಾನಿಗಳಾದ ರಾಜೀವ್ ಗಾಂಧಿಯವರು ಶಿಕ್ಷಣ ತಜ್ಞರ ಸಲಹೆ ಪಡೆದು ಒಂದು ಸಮಿತಿಯನ್ನು ರಚಿಸಿದರು. ಆ ಸಮಿತಿಗೆ 21ನೇ ಶತಮಾನಕ್ಕೆ ಕಾಲಿಡುವ ಸಂದರ್ಭದಲ್ಲಿ ಆಧುನಿಕ ಶಿಕ್ಷಣಕ್ಕೆ ಸರಿಹೊಂದುವ ಶೈಕ್ಷಣಿಕ ಪಠ್ಯ ನೀತಿಯನ್ನು ರಚಿಸಬೇಕೆಂದು ಕೇಳಿಕೊಳ್ಳಲಾಯಿತು. ಲೋಕ ಸಭೆಯಲ್ಲಿ ಅಂದಿನ ಶಿಕ್ಷಣ ಮಂತ್ರಿಗಳಾದ ಕೆ.ಸಿ. ಪಂತ್‌ರವರು ವರದಿಯನ್ನು ಅರ್ಪಿಸಿದರು. ಅದು ಎಲ್ಲಾ ಹಂತಗಳಲ್ಲಿ ಚರ್ಚೆ ನಡೆದು ಕೊನೆಗೆ ಬಂದ ಸಲಹೆ ಸೂಚನೆಗಳನ್ನು ಪರಿಶೀಲಿಸಿ ಹೊಸ ಶಿಕ್ಷಣ ನೀತಿಯ ಕರಡನ್ನು ತಯಾರಿಸಿ 1986 ರಲ್ಲಿ ಸಿದ್ಧ ಮಾಡಲಾಯಿತು. ಈ ನೀತಿಯ ಪ್ರಕಾರ ಸಾಮಾನ್ಯ ಶಾಲೆಗಳ ಮೂಲಕ ಮೂಲಭೂತ ಶಿಕ್ಷಣ ಒದಗಿಸುವುದು. 10+2+3 ಶಿಕ್ಷಣ ಪದ್ಧತಿಯನ್ನೇ ಮುಂದುವರಿಸುವುದು. ಇದು ರಾಷ್ಟ್ರೀಯ ಪಠ್ಯಕ್ರಮ ಯೋಜನೆಯನ್ನು ಪ್ರಚಾರಪಡಿಸಿತು. ಇದು ಸಾಮಾನ್ಯ ವಿಷಯಗಳ ಗುಂಪು ಮತ್ತು ಇತರ ಚಟುವಟಿಕೆಗಳನ್ನು ಒಳಗೊಂಡಿರಬೇಕು. ಸಾಮಾನ್ಯ ವಿಷಯಗಳ ಪಠ್ಯ ಕ್ರಮದಲ್ಲಿ ಭಾರತದ ಸ್ವಾತಂತ್ರ್ಯ ಸಮರ, ಪ್ರಕೃತಿಯ ಅಭ್ಯಾಸ, ರಾಷ್ಟ್ರೀಯ ಸಮಸ್ಯೆಗಳ ಅಭ್ಯಾಸವು ಒಳಗೊಂಡಿದ್ದು ಆಯಾ ವಿಷಯಗಳಲ್ಲಿ ಸಮನ್ವಯಗೊಳಿಸಿ ಭಾರತೀಯ ಸಂಸ್ಕೃತಿ, ಜಾತ್ಯತೀತತೆ, ಪ್ರಜಾಪ್ರಭುತ್ವ, ರಾಷ್ಟ್ರೀಯ ಏಕತೆ, ಪರಿಸರ ರಕ್ಷಣೆ, ಸಾಮಾಜಿಕ ಅನಿಷ್ಟಗಳ ನಿರ್ಮೂಲನೆ, ಚಿಕ್ಕ ಕುಟುಂಬದ ಮಹತ್ವ ಮುಂತಾದ ವಿಷಯಗಳ ಬೋಧನೆಗೆ ಅವಕಾಶ ಕಲ್ಪಿಸುವುದು, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವಂತಹ ಪಠ್ಯಕ್ರಮ ರಚನೆಗೆ ಶಿಫಾರಸ್ಸು ಮಾಡಲಾಯಿತು. ವೃತ್ತಿ ಶಿಕ್ಷಣಕ್ಕೆ ಆದ್ಯತೆ ನೀಡಲಾಯಿತು.

ಪಠ್ಯಕ್ರಮದಲ್ಲಿ ನವೀನ ಪದ್ಧತಿ, ಶೈಕ್ಷಣಿಕ ತತ್ವಗಳು ಮತ್ತು

Digitised by Bharatavani, CIIL

ರಾಷ್ಟ್ರೀಯ ಏಳ್ಗೆಯನ್ನು ಗಮನದಲ್ಲಿಟ್ಟುಕೊಂಡು ರಚಿಸಲು ತೀರ್ಮಾನಿಸಲಾಯಿತು. ಭಾರತ ಸಂಸ್ಕೃತಿಯ ರಕ್ಷಣೆ ಜೊತೆಗೆ ಬದಲಾದ ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗುವ ಪಠ್ಯಕ್ರಮ ರಚನೆಗೆ ಪ್ರೇರಣೆ ದೊರೆಯಿತು. ಅವಶ್ಯಕ ವಿಷಯಗಳೊಂದಿಗೆ ಶಾರೀರಿಕ ಚಟುವಟಿಕೆಗಳು, ವೈಜ್ಞಾನಿಕ ಪ್ರಯೋಗಗಳು, ಪ್ರವಾಸಗಳು ಪಠ್ಯಕ್ರಮದಲ್ಲಿ ಮಿಳಿತಗೊಂಡವು. ಪ್ರತಿಯೊಂದು ಶಾಲೆಯಲ್ಲಿ ಆಯಾ ಪ್ರದೇಶ ವೃತ್ತಿಗೆ ಅನುಗುಣವಾಗಿ ಒಂದು ವಿಷಯವನ್ನು ಕಲಿಸುವುದು ಇವೇ ಮೊದಲಾದ ವಿಷಯಗಳನ್ನು ಒಳಗೊಂಡಂತೆ ಪಠ್ಯಕ್ರಮ ರಚನೆಗೆ ಚಾಲನೆ ದೊರೆಯಿತು. ಶಾಲಾ ಹಂತದಲ್ಲಿ ಸಾಮಾನ್ಯ ವಿಷಯಗಳಾದ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಕಡ್ಡಾಯಗೊಳಿಸುವುದು, ಗಣಿತ ಪಾಠಗಳನ್ನು ನವೀಕರಿಸುವುದು, ಅನ್ವಯಿಕ ಮಟ್ಟಕ್ಕೆ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಕಾರ್ಯಾನುಭವಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದಲ್ಲಿ ಕಾರ್ಯಾನುಭವವನ್ನು ಸಾಮಾಜಿಕ ಉಪಯುಕ್ತತಾ ಉತ್ಪದನಾ ಕಾರ್ಯ (SUPW) ಎಂಬ ವಿಷಯದಲ್ಲಿ ಹೆಸರಿಸಿ, ಮಕ್ಕಳನ್ನು ಸ್ವಾವಲಂಬಿಗಳಾಗಿ ಮಾಡುವಲ್ಲಿ ನೆರವಾಗುವಂತಹ ಪಠ್ಯಕ್ರಮ ಅಳವಡಿಕೆಗೊಂಡಿತು.

ಈ ಮೇಲಿನ ಎಲ್ಲಾ ಅಂಶಗಳೂ ಜಾರಿಗೆ ತರಲು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಯತ್ನಿಸಿದರೂ ಇನ್ನೂ ಪರಿ ಪೂರ್ಣತೆಯನ್ನು ಕಂಡುಕೊಳ್ಳುವ ಹಾದಿಯಲ್ಲಿ ಸಾಗಿದ್ದೇವೆ. ಪಠ್ಯಕ್ರಮವು ನಿರಂತರತೆಯ ತತ್ವದಡಿ ಸಾಗುವಂತಹದ್ದು. ಸಮಾಜದ ಬೇಕು–ಬೇಡ ಅಗತ್ಯತೆಗನುಸಾರವಾಗಿ ಶೈಕ್ಷಣಿಕ ವ್ಯವಸ್ಥೆಗಳನ್ನು ಧನಾತ್ಮಕವಾಗಿ ಕೊಂಡೊಯ್ಯಲು 'ಪಠ್ಯಕ್ರಮ' ಒಂದು ಶ್ರೇಷ್ಠ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ.

ಅಂತೆಯೇ ಭಾರತೀಯ ಪಠ್ಯಕ್ರಮದ ವಿಕಾಸವೂ ವೈದಿಕ ಕಾಲದ ಪಠ್ಯಕ್ರಮದಿಂದ ಪ್ರಸಕ್ತ ಭಾರತದ ಪಠ್ಯಕ್ರಮದ ವರೆಗೂ ಹಲವು ಬೇಕು–ಬೇಡಗಳಿಂದ ಸಾಗಿ ಬಂದಿದೆ. ಹಾಗೆಯೇ ಇಂದಿಗೆ ನಾವು ರೂಪಿಸಿಕೊಂಡಿರುವ ಪಠ್ಯಕ್ರಮವೂ ಪರಿಪೂರ್ಣ ಅಥವಾ ಸ್ಥಿರ ಎಂಬಂತಿಲ್ಲ. ಓಡುತ್ತಿರುವ ಈ ವೈಜ್ಞಾನಿಕ ಜಗತ್ತಿಗೆ ಪಠ್ಯಕ್ರಮದ ವಿಕಾಸ ಇನ್ನೂ ಹೊಸ ರೂಪು ಪಡೆಯುವುದು.

–ಚಿದಾನಂದ .ಎನ್.ಕೆ.

## ಪಠ್ಯಕ್ರಮವನ್ನು ಪ್ರಭಾವಿಸುವ ನಿಯೋಗಗಳು

ಪಠ್ಯಕ್ರಮದ ಆಧಾರ ತತ್ವಗಳು ವ್ಯಾಪ್ತಿ ಬದಲಾಗುತ್ತಾ ಸಾಗಿದೆ. ಶಿಕ್ಷಣದ ಎಲ್ಲ ನಿಯೋಗಗಳು (ಒಂದರ್ಥದಲ್ಲಿ) ಪಠ್ಯಕ್ರಮವನ್ನೂ ಪ್ರಭಾವಿಸುತ್ತವೆ. ಆದರೆ ಅವುಗಳ ಪಾತ್ರದ ಪ್ರಭಾವದ ಪ್ರಮಾಣದಲ್ಲಿ ಏಕರೂಪತ್ವವಿರಲಾರದು.

'ಕುಟುಂಬ' (ಮನೆ) ಶಿಕ್ಷಣದ ಅಸಂಪ್ರದಾಯಿಕ/ಅನೌಪಚಾರಿಕ ನಿಯೋಗ. ಇಲ್ಲಿ ತಾತ್ವಿಕವಾಗಿ ಸಾಮಾಜಿಕವಾಗಿ ಹಾಗೂ ನೈತಿಕ ಕಾನೂನು ಅನ್ವಯವಾಗಿ ಹಿರಿಯರು, ತಂದೆ–ತಾಯಿ, ಇತರರುಗಳೇ ಮಕ್ಕಳ ಲಾಲನೆ, ಪಾಲನೆ ಹಾಗೂ ಶಿಕ್ಷಣದ ಜವಾಬ್ದಾರಿ ಹೊಂದಿರುತ್ತಾರೆ. ಇದರ ಪ್ರಭಾವ ಅಪಾರವೆಂದು ಪರಿಗಣಿಸುತ್ತೇವೆ, ಆದರೆ ಪಠ್ಯಕ್ರಮ 'ಸಾರ್ವತ್ರಿಕ'ವಾಗಿ ಸ್ವೀಕಾರವಾಗುವಾಗ 'ಪಠ್ಯಕ್ರಮ' ರೂಪಿಸುವಲ್ಲಿ ಕುಟುಂಬದ ಪಾತ್ರ/ಪ್ರಭಾವ ಗೌಣವಾಗುತ್ತದೆ. ಹಾಗೆಯೇ ಶಾಲೆಯು ಬಹುತೇಕ 'ಆಡಳಿತ ಯಂತ್ರ'ದ ಹಿಡಿತದಲ್ಲಿರುತ್ತದೆ. ರಾಜ್ಯ (State) ಸರ್ಕಾರವು ಪಠ್ಯಕ್ರಮದ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಕಳೆದ ಅರ್ಧ ಶತಮಾನದಿಂದ ಹೆಚ್ಚು ಮಾನ್ಯವಾಗಿದೆ. ಸರ್ಕಾರದ ಧೋರಣೆ, ನೀತಿ, ರೀತಿಗಳ ಅನುಸಾರವಾಗಿ ಪಠ್ಯಕ್ರಮ ರೂಪಿತವಾಗುತ್ತದೆ. ನಿರಂಕುಶ ಪ್ರಭುತ್ವವಿದ್ದಲ್ಲಿ ಸಮುದಾಯದ ಆಶಯಗಳಿಗೆ "ಧ್ವನಿ" ಇರುವುದಿಲ್ಲ. ಆದರೆ ಪ್ರಪಂಚದಲ್ಲಿ ಪ್ರಜಾಸತ್ತಾತ್ಮಕ ಆಡಳಿತ ಹೆಚ್ಚೆಚ್ಚು ವ್ಯಾಪಿಸಿದಂತೆ ಸರ್ಕಾರದ ಧೋರಣೆಗಳು ಏಕಪಕ್ಷೀಯವಾಗುವುದಕ್ಕೆ ಅವಕಾಶ ಕಡಿಮೆಯಾಗುವುದನ್ನು ಗಮನಿಸಬಹುದು; ಅಂದರೆ ವಿಪಕ್ಷಗಳೂ ತಮ್ಮ ತಮ್ಮ ಧೋರಣೆಗಳ ಸೇರ್ಪಡೆಗೆ ಇಚ್ಚಿಸುತ್ತವೆ, ಅದಕ್ಕಾಗಿ ಪ್ರಯತ್ನಿಸುತ್ತವೆ. ಒಂದು ದೇಶ/ರಾಜ್ಯ/ರಾಷ್ಟ್ರಗಳ ಪರಸ್ಪರ ಸಂಬಂಧ ಆ ವ್ಯವಸ್ಥೆಯಲ್ಲಿನ ಏರ್ಪಾಡುಗಳು ನಿಗದಿತವಾದ, ದೃಢವಾಗಿ ರೂಪಿತವಾದ ಹಿನ್ನೆಲೆ–ಮುನ್ನೆಲೆಗಳನ್ನು ಹೊಂದಿದ್ದು ಆ ಅಂಶಗಳು ಶಿಕ್ಷಣದ ಧೋರಣೆ/ನೀತಿಗಳ ಮೇಲೆ ಪ್ರಭಾವಿಸುವುದರಿಂದ ಪಠ್ಯಕ್ರಮವು ಅದರಿಂದ ಹೊರತಾಗಲು ಸಾಧ್ಯವಿಲ್ಲ.

ಫೆಡರಲ್ ಆಡಳಿತ ವ್ಯವಸ್ಥೆ, ರಾಜ್ಯಗಳು ಹಾಗೂ ರಾಷ್ಟ್ರದ ಆಶಯಗಳು ಮತ್ತು ಧೋರಣೆಗಳ ಪ್ರಭಾವ ಪಠ್ಯಕ್ರಮದ ರಚನೆಯಲ್ಲಿ ಪಾತ್ರ ವಹಿಸುತ್ತವೆ. ಸರ್ಕಾರ ಎಂದಾಗ ಅದು ಆಡಳಿತ ನಡೆಸುವ ರಾಜಕೀಯ ಪಕ್ಷಗಳು, ಅವುಗಳ ಸಿದ್ಧಾಂತದ ಅನುಷ್ಠಾನವೆಂದೇ ಅರ್ಥೈಸಬೇಕಾಗುತ್ತದೆ. ಹಾಗಾಗಿ ಪಠ್ಯಕ್ರಮದ ಮೇಲಿನ ಹಿಡಿತ ಆಡಳಿತ ಹಿಡಿದ ರಾಜಕೀಯ ಪಕ್ಷದ ಧೋರಣೆಗೆ ಹೆಚ್ಚು ಹತ್ತಿರವಾಗುತ್ತದೆ. ಆಗ ವಿಪಕ್ಷಗಳು ಅದಕ್ಕೆ ಅಡೆ–ತಡೆ ಒಡ್ಡುತ್ತವೆ. ಅನಿವಾರ್ಯವಾದ ಕೆಲವು ಹೊಂದಾಣಿಕೆ ಮಾರ್ಪಾಡು ಪಠ್ಯಕ್ರಮದಲ್ಲಿ ಆಗುತ್ತದೆ

ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಸಂಘ–ಸಂಸ್ಥೆಗಳು ತಮ್ಮ ಪ್ರಭಾವ ಬೀರಲು ಪ್ರಯತ್ನಿಸುತ್ತವೆ. ಒತ್ತಡ ಹೇರುತ್ತವೆ. ಅಮೇರಿಕಾದಲ್ಲಿ ಅಲ್ಲಿನ ವಿಜ್ಞಾನ ಬೋಧನೆಯ ಪಠ್ಯಕ್ರಮ ರೂಪಿಸುವಲ್ಲಿ ಶಿಕ್ಷಕರ ಸಮುದಾಯದಂತೆ, ಪೋಷಕರ ಸಮುದಾಯವು ಮಾರ್ಗದರ್ಶನ– ಪ್ರಭಾವ ಬೀರಿದವು. ಇಂತಹ ಸಂಗತಿಗಳನ್ನು ಇಂದು ಮುಂದುವರೆದ ಕೆಲವು ದೇಶಗಳಲ್ಲಿ ಕಾಣಬಹುದಾಗಿದೆ.

ಧಾರ್ಮಿಕ ಸಂಸ್ಥೆಗಳು, ಸಂಘಟನೆಗಳು ತಮ್ಮ ತಮ್ಮ ವಿಚಾರಗಳನ್ನು ಪಠ್ಯಕ್ರಮದಲ್ಲಿ ಸೇರಿಸುವ ಪ್ರಯತ್ನ, ಹೋರಾಟ (Lobbycreating) ನಡೆಸುತ್ತವೆ. ವಿದ್ಯಾರ್ಥಿ ಸಂಘಟನೆಗಳು ಇದರಲ್ಲಿ ಹಿಂದೆ ಬೀಳುವುದಿಲ್ಲ, ಕೆಲವೊಮ್ಮೆ ಈ ಸಂಘಟನೆಗಳಿಗೆ ರಾಜಕೀಯ ಸಂಘಟನೆಗಳ ಬೆಂಬಲ, ಮಾರ್ಗದರ್ಶನವೂ ಇರುತ್ತದೆ.

Digitised by Bharatavani, CIIL

ವಿವಿಧ ಸಾಮಾಜಿಕ ಸಂಸ್ಥೆಗಳು ಪಠ್ಯಕ್ರಮದ ಮೇಲೆ ಪ್ರಭಾವ ಬೀರುತ್ತವೆ.

ರಾಷ್ಟ್ರ /ರಾಜ್ಯದ ಸಾಮಾಜಿಕ ಪರಿಸ್ಥಿತಿ ಮತ್ತು ಸಂವಿಧಾನವು ಪಠ್ಯಕ್ರಮ ನಿರ್ಮಾಣದಲ್ಲಿ ಪ್ರಭಾವ ಬೀರುತ್ತವೆ. ವಿವಿಧ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳ ಸೇರ್ಪಡೆಯ ತುಡಿತ ಇಲ್ಲಿರುತ್ತದೆ. ದೇಶದ ಆರ್ಥಿಕ ಸ್ಥಿತಿಯು ಮುಖ್ಯ, ಏಕೆಂದರೆ ಪಠ್ಯಕ್ರಮ ಕೇವಲ ಕೆಲವೇ ತಾತ್ವಿಕ ಸಂಗತಿಯಲ್ಲಿ ಅದು ಕಾರ್ಯಾಚರಣೆ/ಅನುಷ್ಠಾನಗೊಳಿಸಬೇಕಾದ, 'ಫಲನಿರೀಕ್ಷೆ'ಯ ಕಾರ್ಯ. ಈ ಅಂಶಗಳು ರಾಷ್ಟ್ರವು ಎಲ್ಲ ಸಮುದಾಯ/ಸಾಮಾಜಿಕ ಸ್ತರಗಳಿಗೂ, ಎಲ್ಲ ರಾಜ್ಯಗಳಿಗೂ ವಿಭಿನ್ನ ಸಂಸ್ಕೃತಿಗಳಿಗೂ ಗಮನ ಕೊಡಬೇಕಾದ ಅವಶ್ಯಕತೆ ಹಾಗೂ ಅನಿವಾರ್ಯತೆಯನ್ನು ಆರ್ಥಿಕ ಸ್ಥಿತಿಯನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕಾಗುತ್ತದೆ, ಅಂದರೆ ಪಠ್ಯಕ್ರಮದ ರಚನೆ ಹಾಗೂ ಅನುಷ್ಠಾನದಲ್ಲಿ ಇವುಗಳೆಲ್ಲವೂ 'ನಿಯೋಗ'ಗಳಾಗಿ ತಮ್ಮ ಕಾರ್ಯಕ್ರಮವನ್ನು ಈಡೇರುವಂತೆ ಮಾಡುತ್ತವೆ. ಶಾಲಾ ಶಿಕ್ಷಣವಿರಲಿ, ಪ್ರೌಢಶಿಕ್ಷಣವಿರಲಿ, ಉನ್ನತ ಶಿಕ್ಷಣವಿರಲಿ ತಂತ್ರಜ್ಞಾನ ಹಾಗೂ ವಿಜ್ಞಾನಕ್ಷೇತ್ರದ ಪ್ರಭಾವವಿದೆ. ಈ ಸಂಘಟನೆಗಳು ಎಲ್ಲ ಹಂತಗಳ ಪಠ್ಯಕ್ರಮ ರಚನೆ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ ಪಠ್ಯಕ್ರಮ ರಚನೆಯಲ್ಲಿ ಈ ನಿಯೋಗಗಳ ಪಾತ್ರ ಹಿಂದಾದುದು ವಿಶ್ವವಿದ್ಯಾನಿಲಯದ ಪಠ್ಯಕ್ರಮ ರಚನೆಯಲ್ಲಿ ಆಯಾ ವಿಶ್ವವಿದ್ಯಾಲಯದ ನಿಯಂತ್ರಕಗಳು ಹಾಗೂ ಸಮಕಾಲೀನ ಸಾಮಾಜಿಕ, ಆರ್ಥಿಕ, ಸೈದ್ಧಾಂತಿಕ, ಸಾಂಸ್ಕೃತಿಕ, ಸಾಹಿತ್ಯಿಕ, ವೈಜ್ಞಾನಿಕ, ತಾಂತ್ರಿಕ ತುಡಿತಗಳು ವಿವಿಧ ಖಾಸಗಿ ವೃತ್ತಿಪರರು ರೂಪಿಸುವ ಪಠ್ಯಕ್ರಮದಲ್ಲಿ ಆಯಾ ಸಂಸ್ಥೆಗಳು ತಮ್ಮ ಉದ್ದೇಶಗಳಿಗೆ ಅನುಗುಣವಾಗಿ ಪಠ್ಯಕ್ರಮ ನಿರ್ಮಾಣ, ನಿರ್ವಹಣೆ ರೂಪಿಸಿಕೊಳ್ಳುತ್ತಾರೆ.

ಸರ್ಕಾರದ ವಿವಿಧ ಇಲಾಖೆ/ಸಚಿವಾಲಯಗಳು ತಮ್ಮ ಸಚಿವಾಲಯಕ್ಕೆ ಸಂಬಂಧಿಸಿದ ಮಾಹಿತಿಗಳು ಶಾಲಾಶಿಕ್ಷಣದಲ್ಲಿ ಸೇರ್ಪಡೆಯಾಗಲು ಅಪೇಕ್ಷಿಸುತ್ತವೆ, ಉದಾಹರಣೆಗೆ ಆರೋಗ್ಯ ಸಚಿವಾಲಯವು 'ಕುಟುಂಬ ಯೋಜನೆ'ಯನ್ನು ಅರಣ್ಯ ಸಚಿವಾಲಯ, 'ಪರಿಸರ–ಸಂರಕ್ಷಣೆ'ಯನ್ನು ಕಾನೂನು ಇಲಾಖೆ 'ಮಕ್ಕಳ ಹಕ್ಕುಗಳನ್ನು, ಆಹಾರ ಇಲಾಖೆ 'ಗ್ರಾಹಕರ ಹಕ್ಕುಗಳನ್ನು' ಪಠ್ಯಕ್ರಮದಲ್ಲಿ ಸೇರಿಸುವುದಕ್ಕೆ ಪ್ರಭಾವಿಸುತ್ತವೆ, ಇವೆಲ್ಲವೂ ಒಂದು ರೀತಿಯಲ್ಲಿ 'ನಿಯೋಗ'ದ ವಿವಿಧ ಅಂಗಗಳು (Segments of an agency).

ಲೈಂಗಿಕ ಶಿಕ್ಷಣವನ್ನು ಪಠ್ಯಕ್ರಮದಲ್ಲಿ ಸೇರಿಸುವ ವಿಚಾರದ ಬಗ್ಗೆ ಸಮುದಾಯದ ಪ್ರಭಾವ ಹೆಚ್ಚಾಗಿ ಕಾಣುತ್ತವೆ. ಅದರ ಅಭಿಪ್ರಾಯಕ್ಕೆ ಮನ್ನಣೆ ದೊರೆಯುತ್ತದೆ. ಹಗೆಯೇ 'ಜೀವ ವಿಕಾಸ'ವನ್ನೋ 'ಜಗತ್ ಸೃಷ್ಟಿ'ಯನ್ನೋ ಹೇಳುವಾಗ ಪ್ರಾಚೀನ/ಪರಂಪರೆಗಿಂತ ವಿಜ್ಞಾನದ ಶೋಧನೆಗಳು ಹಾಗೂ ಆ ವಿಚಾರಗಳ ಪ್ರತಿಪಾದಕರು 'ನಿಯೋಗ'ದ ಪಾತ್ರ ವಹಿಸುತ್ತಾರೆ.

'ಯೂನಿಸೆಫ್' ಸಹ ಪಠ್ಯಕ್ರಮ ರೂಪಿಸುವಲ್ಲಿನ ನಿಯೋಗವಾಗಿ ಪಠ್ಯಕ್ರಮ ರೂಪಿಸುವಲ್ಲಿನ 'ಪ್ರಭಾವಿ'ಯಾಗಿ ಕಾರ್ಯನಿರ್ವಹಿಸಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ (UEE-ಯೂನಿವರ್ಸಲ್ ಎಲಿಮೆಂಟರಿ ಎಜುಕೇಷನ್) ಹಾಗೂ ಮಾನವೀಯ ಮೌಲ್ಯಗಳಿಂದ ವಿಶ್ವಭಾತೃತ್ವ ಇಂತಹ ಸಂಗತಿಗಳಿಗೆ 'ಯೂನಿಸೆಫ್' ಕಾರಣವಾಗುತ್ತದೆ.

ತಂತ್ರಜ್ಞಾನದ ಬೆಳವಣಿಗೆ–ಅದಕ್ಕೆ ಸಂಬಂಧಿಸಿದ ನಿಯೋಗಗಳು ಪಠ್ಯಕ್ರಮ ನಿರ್ವಹಣೆಯಲ್ಲಿ ಮತ್ತು ಅದರ ಮೌಲ್ಯಮಾಪನ ಕ್ರಮದಲ್ಲಿ ಪ್ರಭಾವ ಬೀರುತ್ತವೆ.

ವ್ಯಕ್ತಿ, ಕುಟುಂಬ, ಸಮಾಜ, ಸಮುದಾಯ, ಸಂಘಟನೆಗಳು ದೇಶ, ರಾಜ್ಯ, ರಾಷ್ಟ್ರ, ವಿಶ್ವಸಂಸ್ಥೆ, ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಈ ಹಲವು ಹನ್ನೊಂದು ಪ್ರಕಾರಗಳು ಸಹ ಪಠ್ಯಕ್ರಮ ನಿರ್ಮಾಣ, ನಿರ್ವಹಣೆ, ಅನುಷ್ಠಾನ, ಫಲಪರೀಕ್ಷೆಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಪ್ರಭಾವಿಸುವ ನಿಯೋಗ'ಗಳಾಗಿವೆ.

–ಕಾಳೇಶ್ವರ್ ರಾವ್ ಎಸ್.

## ಪರ್ಯಾಯ ಶಾಲಾ ಶಿಕ್ಷಣ

ಮಹಾತ್ಮ ಗಾಂಧಿ, ರವೀಂದ್ರನಾಥ್ ಠಾಗೋರ್, ಶ್ರೀ ಅರಬಿಂದೋ ಮತ್ತು ಸ್ವಾಮಿ ವಿವೇಕಾನಂದರ ಶೈಕ್ಷಣಿಕ ಚಿಂತನೆಗಳು ಭಾರತೀಯ ಸಂದರ್ಭದಲ್ಲಿ 'ಶಿಕ್ಷಣ' ಮತ್ತು 'ಶಾಲಾ ಶಿಕ್ಷಣ'ಗಳ ದರ್ಶನವನ್ನು ವ್ಯಕ್ತಪಡಿಸುತ್ತವೆ. ಇವರೆಲ್ಲರೂ ಮತ್ತೆ ಮತ್ತೆ ಶಿಕ್ಷಣ ಮತ್ತು ಶಾಲಾಶಿಕ್ಷಣ ಇವೆರಡೂ ಪದಗಳ ನಡುವಣ ವ್ಯತ್ಯಾಸವನ್ನು ಕಂಡಿದ್ದಾರೆ. ಅವರ ಪ್ರಕಾರ 'ಶಾಲಾ ಶಿಕ್ಷಣ' ತರಗತಿಯ ಸಂಕುಚಿತ ಎಲ್ಲೆಗಳನ್ನು ಮೀರಿ ವಿಸ್ತರಿಸುವುದು. ಶಿಕ್ಷಣವೆಂದರೆ ಮಗುವಿನಲ್ಲಿರುವ ಶ್ರೇಷ್ಠವಾದುದನ್ನು ಹೊರತರುವ ಪ್ರಕ್ರಿಯೆ. ಈ ಎಲ್ಲ ಶೈಕ್ಷಣಿಕ ಚಿಂತಕರ ಪ್ರಮುಖ ಸಂದೇಶವು ಮುಕ್ತತೆ, ಎಲ್ಲಾ ತೆರನಾದ ಮಿತಿಗಳಿಂದ ವಿದ್ಯಾರ್ಥಿಯ ಸ್ವಾತಂತ್ರ್ಯ, ಸೃಜನಾತ್ಮಕ ಸಂರಚನೆ ಮತ್ತು ಕಲಿಕಾ ಪ್ರಕ್ರಿಯೆಯ ಸಹಜತೆ, ಕಾರ್ಯಕ್ರಮದ ಸುಸಂಗತತೆ ಮತ್ತು ಶೈಕ್ಷಣಿಕ ಪೂರೈಕೆ ವ್ಯವಸ್ಥೆಯ ವಿವಿಧತೆ – ಈ ಮೂಲಭೂತ ತತ್ವಗಳನ್ನು ಒತ್ತಿ ಹೇಳುತ್ತದೆ.

ಇತ್ತೀಚಿನ ಶೈಕ್ಷಣಿಕ ಸಾಹಿತ್ಯದಲ್ಲಿ 'ಪರ್ಯಾಯ ಶಾಲಾ ಶಿಕ್ಷಣ'ವೆಂಬ ನುಡಿಗಟ್ಟನ್ನು ಆಗಾಗ್ಗೆ ಬಳಸಲಾಗುತ್ತಿದೆ. 'ಶಾಲೆ'(School) ಮತ್ತು ಶಾಲಾ ಶಿಕ್ಷಣ (Schooling) ಎಂಬ ಪದಗಳ ಅರ್ಥಗಳನ್ನು ಶಬ್ದಕೋಶದಲ್ಲಿ ನೋಡಿದಾಗ 'ಶಾಲಾ ಶಿಕ್ಷಣವೆಂಬುದು ಶಿಕ್ಷಣವನ್ನು ಸಾಂಸ್ಥೀಕರಣಗೊಳಿಸುವ ಪ್ರಕ್ರಿಯೆಯಿಂದ ಹೊಮ್ಮಿಬಂದಿದ್ದು ಎಂದು ತಿಳಿಯುವುದು (ಡೇವಿಡ್ ಹ್ಯಾಮಿಲ್‌ಟನ್, ಲರ್ನಿಂಗ್ ಅಬೌಟ್ ಎಜುಕೇಷನ್ 1990).

Digitised by Bharatavani, CIIL

ದಿ ಇಲ್ಲಸ್ಟ್ರೇಟೆಡ್ ಆಕ್ಸ್‌ಫರ್ಡ್ ಡಿಕ್ಷನರಿ (ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, 1998, ಪು. 738) 'ಶಾಲೆ' (ಸ್ಕೂಲ್) ಎಂಬುದನ್ನು '19ವರ್ಷಗಳ ಕೆಳಗಿರುವ ಮಕ್ಕಳಿಗಾಗಿ ಶಿಕ್ಷಣ ಅಥವಾ ಸೂಚನೆಗಳನ್ನು ನೀಡಲು ಇರುವ ಸಂಸ್ಥೆ' ಎಂದು ಪರಿಭಾಷಿಸುತ್ತದೆ. ಶಾಲಾ ಶಿಕ್ಷಣ/ಬೋಧನೆ/ಶಿಕ್ಷಣ ಅಥವಾ ತರಬೇತಿಗಳನ್ನು, ವಿಶೇಷವಾಗಿ ಶಾಲೆಯಲ್ಲಿ ಸ್ವೀಕರಿಸಿದಲ್ಲಿ ಅದು ಶಾಲೆಯೆಂದಾಗುತ್ತದೆ ಎಂದು ವೆಬ್‌ಸ್ಟರ್ ಕಾಲೇಜು ಡಿಕ್ಷನರಿ (1996) ವಿವರಿಸುತ್ತದೆ. "ಯಾವುದೇ ನಿರ್ದಿಷ್ಟ ಸಮಾಜದಲ್ಲಿ ಸಾಂಸ್ಥಿಕವಾಗಿ ವ್ಯಕ್ತಿಗೊಳ್ಳುವ ಶಿಕ್ಷಣದ ಪ್ರಕ್ರಿಯೆಯೇ ಶಾಲಾ ಶಿಕ್ಷಣ (Schooling). ಅದೇ ಸಮಯದಲ್ಲಿ ಶಿಕ್ಷಣವು ಸಾಮಾಜಿಕ ಸಂಸ್ಥೆಯೂ ಆಗಿದೆ.

ಪ್ರತಿಯೊಂದು ಸಮಾಜವು ಮೂಲತಃ ಶಿಕ್ಷಣವನ್ನು ಸಂಸ್ಥೆಯ ರೂಪದಲ್ಲಿಯೇ ಹೊಂದಿರುವುದು ಎಂದು ಶಾಲಾ ಶಿಕ್ಷಣವನ್ನು ಅಂಬ್ರಷ್ಟ್ (2001) ಪರಿಭಾಷಿಸುತ್ತಾರೆ. ಸ್ಥಾನೀಯ ನಿರ್ದಿಷ್ಟತೆ, ನಮ್ಯತೆ, ಗಾಢ ಸಮುದಾಯ ಸಹಭಾಗಿತ್ವ, ಸೂಕ್ತ ಬೋಧನಾಶಾಸ್ತ್ರದ ಬಳಕೆ ಮತ್ತು ವೆಚ್ಚ ಪರಿಣಾಮಕಾರಿತ್ವ ಇವೇ ಮುಂತಾದ ಲಕ್ಷಣಗಳಿಂದ ಕೂಡಿದ ಪೂರ್ಣವಾಗಿ ವಿಕೇಂದ್ರೀಕರಣಗೊಳಿಸಿದ ಅನೌಪಚಾರಿಕ ಶಿಕ್ಷಣ (Nonformal Eduction) ಕಾರ್ಯಕ್ರಮವನ್ನು ಪರ್ಯಾಯ ಶಾಲಾ ಶಿಕ್ಷಣ ಎಂದು ಪಾಂಡೆ (2000) ವ್ಯಾಖ್ಯಾನಿಸುತ್ತಾರೆ. ಹಲವಾರು ಪೂರೈಕೆಯ ವಿಧಾನ (Delivery Modes) ಗಳ ಮುಖಾಂತರ ವಿವಿಧ ವರ್ಗಗಳ ಕಲಿಕಾರ್ಥಿಗಳ ವೈವಿಧ್ಯಮಯ ಅವಶ್ಯಕತೆಗಳನ್ನು ಪೂರೈಸುವ ಉದ್ದೇಶವುಳ್ಳ ಡಿ.ಪಿ.ಇ.ಪಿ ಪ್ರಯೋಗಗಳೇ (DPEP Experiments) ಪರ್ಯಾಯ ಶಾಲಾ ಶಿಕ್ಷಣ ಎಂದು ಅಗರ್‌ವಾಲ್ (2001) ವ್ಯಾಖ್ಯಾನಿಸುವರು. ಇವೆರಡರೂ ವ್ಯಾಖ್ಯಾನಗಳು ವಿಕೇಂದ್ರಿತ ನಿರ್ವಹಣೆ ಮತ್ತು ಸಮುದಾಯ ಪ್ರಯತ್ನಗಳೆಂಬ ಪರ್ಯಾಯ ಶಾಲಾ ಶಿಕ್ಷಣದ ಎರಡು ಮೂಲಭೂತ ಘಟಕಗಳತ್ತ ಗಮನ ಸೆಳೆಯುತ್ತವೆ. ತಲುಪಲು ಅಶಕ್ಯವಾದ ಜನವಸತಿಗಳು ಹಾಗೂ ನಗರದ ಕೊಳಚೆ ಪ್ರದೇಶಗಳಿಂದ ಬರುವ ಉಪೇಕ್ಷೆಗೆ ಒಳಗಾಗಿರುವ ಮಕ್ಕಳ ಗುಂಪುಗಳ ವಿವಿಧ ಕಲಿಕೆಯ ಅಗತ್ಯಗಳನ್ನು ಪೂರೈಸುವ ಮೂಲಭೂತ ಶಿಕ್ಷಣದ ಅಸಾಂಪ್ರದಾಯಿಕ (Non Conventional) ಕಾರ್ಯಕ್ರಮಗಳ ಮೇಲೆ ಈ ಎರಡು ಘಟಕಗಳು ಆಧರಿಸಿವೆ.

### ಪರ್ಯಾಯ ಶಾಲಾ ಶಿಕ್ಷಣ – ವಿಕಸಿಸುತ್ತಿರುವ ಪರಿಕಲ್ಪನೆ

ದೇಶದ ಶೈಕ್ಷಣಿಕ ಬೆಳವಣಿಗೆಗಳ ವಿಶ್ಲೇಷಣೆಯಿಂದ ಪರ್ಯಾಯ ಶಾಲಾ ಶಿಕ್ಷಣ ಎನ್ನುವುದು ಒಂದು ವಿಕಸನಗೊಳ್ಳುತ್ತಿರುವ ಪರಿಕಲ್ಪನೆ ಎಂದು ತಿಳಿದುಬರುವುದು. ಅದು ದೇಶದ ಶೈಕ್ಷಣಿಕ ಬೆಳವಣಿಗೆಯ ವಿವಿಧ ಹಂತಗಳನ್ನು ದಾಟಿ ಇಂದಿನ ಪ್ರಸ್ತುತ ರೂಪವನ್ನು ಪಡೆದಿದೆ. ವಿವಿಧ ವರ್ಗಗಳ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಅವರು ಪಡೆಯಲು ವಂಚಿತರಾದ ಉತ್ತಮ ಗುಣಮಟ್ಟದ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಲು ಅವಕಾಶವನ್ನು ಒದಗಿಸಲೋಸುಗ ಮುಕ್ತ–ಕಲಿಕೆಯ ಉಪಕ್ರಮಗಳ ಆಧಾರದ ಮೇಲೆ ವಿವಿಧ ನವೀನ ವಿನ್ಯಾಸಗಳನ್ನು ರೂಪಿಸುವುದಕ್ಕಾಗಿ ಹೆಚ್ಚಿನ ಬೇಡಿಕೆಯಿದೆ ಎಂದು ಅಂಬಷ್ಟ್ (2001) ಸರಿಯಾಗಿಯೇ ಹೇಳಿದ್ದಾರೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪ್ರಮುಖ ಕಾಳಜಿಗಳು ಮೂಲಭೂತ ವಿವಾದಾಂಶಗಳಾದ ನಿಷ್ಪಕ್ಷಪಾತ, ಸಮಾನತೆ ಮತ್ತು ಗುಣಾತ್ಮಕ ಶಿಕ್ಷಣಕ್ಕೆ ಸಂಬಂಧಿಸಿವೆ. ಈ ಮೂರು ವಿವಾದಾಂಶಗಳ ನಡುವೆ ಸಮತ್ವವನ್ನು ತರುವ ಪ್ರಯತ್ನದ ಫಲವಾಗಿ ಸಾರ್ವತ್ರೀಕರಣದ ಗುರಿಗಳನ್ನು ಸಾಧಿಸಲು ಸಮರ್ಥ ಪೂರೈಕೆ ವ್ಯವಸ್ಥೆಯಾಗಿ ಪರ್ಯಾಯ ಶಿಕ್ಷಣ ಹೊರಹೊಮ್ಮಿತು.

### ಐತಿಹಾಸಿಕ ಪರಿಪ್ರೇಕ್ಷ್ಯ

ಶೈಕ್ಷಣಿಕ ಬೆಳವಣಿಗೆಗಳ ಐತಿಹಾಸಿಕ ಪರಿಪ್ರೇಕ್ಷ್ಯದ ಪುನರಾವಲೋಕನವು ಅಸಾಂಪ್ರದಾಯಿಕ ಶಿಕ್ಷಣವು ಪರ್ಯಾಯ ಶಾಲಾಶಿಕ್ಷಣದ ಪೂರ್ವಗಾಮಿ ಎಂದು ಸೂಚಿಸುವುದು. ಶಾಲೆಗಳನ್ನು ಒದಗಿಸಿದ್ದಲ್ಲಿ ಸರ್ವರೂ ಅದರ ಲಾಭವನ್ನು ಪಡೆಯುವರು ಎಂಬ ಉದ್ದೇಶದೊಂದಿಗೆ ಮೊದಲ ಎರಡು ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ದೇಶದ ಎಲ್ಲಾ ಭಾಗಗಳಲ್ಲಿಯೂ ಮುಕ್ತ ಔಪಚಾರಿಕ ಶಾಲೆಗಳನ್ನು ತೆರೆಯುವ ಕೇಂದ್ರೀಕೃತ ಪ್ರಯತ್ನವನ್ನು ಕೈಗೊಳ್ಳಲಾಯಿತು. ಈ ಪರಿಮಾಣಾತ್ಮಕ ವಿಸ್ತರಣಾ ಹಂತದ ಕಾಲದಲ್ಲಿ ಶಾಲಾ ಕಟ್ಟಡಗಳ, ಶಿಕ್ಷಕರ ಮತ್ತು ಶಾಲೆಗಳಲ್ಲಿ ದಾಖಲಾತಿಗಳ ಸಂಖ್ಯೆಯಲ್ಲಿ ಅಪಾರ ಹೆಚ್ಚಳ ಕಂಡುಬಂದಿತು. ಆದರೆ, ದಾಖಲಾತಿಯ ಪ್ರಗತಿಗೆ ತಕ್ಕುದಾದ ಮಕ್ಕಳ ಸಹಭಾಗಿತ್ವ ಮತ್ತು ಸಾಧನೆಯು ಕಂಡುಬರಲಿಲ್ಲ. ಔಪಚಾರಿಕ/ಸಾಂಪ್ರದಾಯಿಕ ಶಾಲೆಗಳು ದೇಶದ ದೂರದ ಹಳ್ಳಿಗಳಿಗೆ ಮತ್ತು ಪ್ರತ್ಯೇಕಿತ ಪ್ರದೇಶಗಳಿಗೆ ತಲುಪುವಲ್ಲಿ ವಿಫಲವಾದವು. ಭೌತಿಕ ಲಭ್ಯತೆಯ ವಿವಾದಾಂಶವು ನಿಷ್ಪಕ್ಷಪಾತದ ಸಮಸ್ಯೆಗೆ ಸವಾಲಾಗಿ ಪರಿಣಮಿಸಿತು. ಪ್ರಮಾಣದ ದೃಷ್ಟಿಯಿಂದ ಸಾಂಪ್ರದಾಯಿಕ ಶಾಲೆಗಳ ನಿರ್ಬಂಧಗಳು ಶಾಲೆಯನ್ನು ಬಿಟ್ಟು ಹೋಗುವ ಮಕ್ಕಳ ಅಧಿಕ ಸಂಖ್ಯೆಗೆ ಸಹಾಯಕವಾದವು. ಹಲವು ಮಕ್ಕಳು, ವಿಶೇಷವಾಗಿ ಎಸ್‌.ಸಿ/ಎಸ್‌.ಟಿ. ಪಂಗಡಗಳ ಬಾಲಕಿಯರು ಮತ್ತು ಮಕ್ಕಳು ಶಾಲೆಯಿಂದ ಹೊರಗೇ ಉಳಿದರು. ಸಾಂಪ್ರದಾಯಿಕ ಶಾಲೆಗಳೆಂಬ ಏಕಮೇವ ಪೂರೈಕೆ ವ್ಯವಸ್ಥೆಯು 14 ವರ್ಷದವರೆಗೆ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವೆಂಬ ಮುಖ್ಯ ಉದ್ದೇಶವನ್ನು ಪೂರೈಸುವುದಕ್ಕೆ ಸೂಕ್ತವಾದುದಲ್ಲ ಎಂದು ಬಹಳ ಬೇಗ ಅರಿವಿಗೆ ಬಂತು. ವಿಶೇಷವಾಗಿ ಶಾಲೆಯಿಂದ ಹೊರಗುಳಿದವರು. ಅಂದರೆ ಶಾಲೆ ಬಿಟ್ಟು ಹೋದವರು ಮತ್ತು ಸೇವಾರಹಿತ ಜನವಸತಿ, ಪ್ರತ್ಯೇಕಿತ ಗ್ರಾಮಗಳು ಮತ್ತು ನಗರದ ಕೊಳಚೆ ಪ್ರದೇಶಗಳಲ್ಲಿನ ಶಾಲೆಗೇ ಸೇರದ ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚು ಸಮಗ್ರವಾದ ಕಾರ್ಯತಂತ್ರಗಳನ್ನು ಅರಸುವುದು. ನೆಲಮಟ್ಟದ ವಾಸ್ತವಿಕತೆಗಳ ಅವಲೋಕನವನ್ನು ಅನಿವಾರ್ಯವನ್ನಾಗಿಸಿತು.

ಕೊಠಾರಿ ಶಿಕ್ಷಣ ಆಯೋಗವು 1964–66ರಲ್ಲಿ ಈ ದೇಶದ ಶೈಕ್ಷಣಿಕ ಯೋಜನೆಗೆ ಹೊಸ ಒತ್ತನ್ನು ನೀಡಿತು. ಪ್ರಾಥಮಿಕ ಶಿಕ್ಷಣಕ್ಕೆ ವಿಸ್ತೃತ ಲಭ್ಯತೆಯನ್ನು ಒದಗಿಸಲು ಅರೆ–ಕಾಲಿಕ ಶಿಕ್ಷಣದ

Digitised by Bharatavani, CIIL

ಸಾಮರ್ಥ್ಯಗಳ ಬಗ್ಗೆ ಅನ್ವೇಷಿಸುವ ದಿಶೆಯಲ್ಲಿ ಆಯೋಗವು ಒತ್ತು ನೀಡಿತು. ತದನಂತರದ ಶಿಕ್ಷಣದ ಬೆಳವಣಿಗೆಗಳಲ್ಲಿ ಜೀವನದ ಕೆಲವು ಮಿತಿಯನ್ನು ಹೇರುವ ಪರಿಸ್ಥಿತಿಗಳಿಂದಾಗಿ ಶಾಲೆಗಳಿಗೆ ಹಾಜರಾಗದ ಮಕ್ಕಳಿಗೆ ಬಹುಪ್ರವೇಶ ವ್ಯವಸ್ಥೆ ಮತ್ತು ಅರೆಕಾಲಿಕ ಶಿಕ್ಷಣದ ದೊಡ್ಡ ಪ್ರಮಾಣದ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುವುದಕ್ಕೆಂದು ಕೇಂದ್ರ ಶಿಕ್ಷಣ ಸಲಹಾ ಸಮಿತಿ (1974) ನಿರ್ಣಯವನ್ನು (Resolution) ಜಾರಿಗೊಳಿಸಿತು. 6–14 ವಯೋಮಾನದ ಗುಂಪಿನ ಪ್ರತಿಯೊಂದು ಮಗುವು ಸಾಧ್ಯವಾದರೆ ಪೂರ್ಣಕಾಲಿಕವಾಗಿ ಕಲಿಯಬೇಕೆಂದು ಹಾಗೂ ಅವಶ್ಯವಿದ್ದಲ್ಲಿ ಅರೆ–ಕಾಲಿಕವಾಗಿ ಕಲಿಯಬೇಕೆಂದು 1978ರಲ್ಲಿ ಯೋಜನಾ ಆಯೋಗದ ಕಾರ್ಯತಂಡದ ಸಭೆಯು ಸಲಹೆ ನೀಡಿದುದು ಮತ್ತೊಂದು ಪ್ರಮುಖ ಬೆಳವಣಿಗೆಯಾಯಿತು.

ತತ್ಪರಿಣಾಮವಾಗಿ, ಶಾಲೆಯಿಂದ ಹೊರಗುಳಿದ ಮಕ್ಕಳ ಸಮಸ್ಯೆಗಳತ್ತ ಗಮನ ಕೇಂದ್ರೀಕರಿಸುವ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ಕೈಗೊಳ್ಳುವ ಸೂಕ್ಷ್ಮ–ಸ್ತರದ ಪ್ರಾರಂಭಿಕ ಪ್ರಯತ್ನಗಳು ಜರುಗಿದವು. ಶಾಲೆಯಿಂದ ಹೊರಗುಳಿದ ಮಕ್ಕಳ ಮತ್ತು ಶಾಲೆಗೇ ಸೇರದ ಮಕ್ಕಳ ವಿಶೇಷ ಅವಶ್ಯಕತೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು, 1977–78ರ ಅವಧಿಯಲ್ಲಿ ಭಾರತ ಸರ್ಕಾರವು ಸಂಪ್ರದಾಯ–ರಹಿತ (Non Formal Education) ವೆಂಬ ಕೇಂದ್ರದಿಂದ ಪ್ರಾಯೋಜಿತವಾದ ಯೋಜನೆಯನ್ನು ರೂಪಿಸಿತು. ಈ ಅವಧಿಯಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ಪ್ರಶಿಕ್ಷಣ ಪರಿಷತ್ತಿನ (NCERT) ಶೈಕ್ಷಣಿಕ ಬೆಂಬಲದೊಂದಿಗೆ ಅಂದಿನ ಒಂಭತ್ತು ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯಗಳು ಸಂಪ್ರದಾಯ ರಹಿತ ಶಿಕ್ಷಣ ಕಾರ್ಯಕ್ರಮವನ್ನು ಕಾರ್ಯಾನ್ವಿತಗೊಳಿಸಲು ವ್ಯವಸ್ಥಿತ ಪ್ರಯತ್ನವನ್ನು ಕೈಗೊಂಡವು. ದೇಶದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿಯನ್ನು ಸಾಧಿಸಲು ಪರ್ಯಾಯ ಕ್ರಮದ ಅಳವಡಿಕೆಯು ಪ್ರಾರಂಭವಾಗಿತ್ತು. 1992ರಲ್ಲಿ ಪರಿಷ್ಕೃತಗೊಂಡ ರಾಷ್ಟ್ರೀಯ ಶಿಕ್ಷಣ ನೀತಿ 1986ರ ಸಲಹೆಯ ಪ್ರೇರಣೆಯಿಂದ ಸಂಪ್ರದಾಯ–ರಹಿತ ಶಿಕ್ಷಣ ಕಾರ್ಯಕ್ರಮವು ಮತ್ತಷ್ಟು ಬಲಗೊಂಡಿತು. 1992ರ ಕ್ರಿಯಾ ಕಾರ್ಯಕ್ರಮವು ಶಿಕ್ಷಣದಲ್ಲಿ ವಿಕೇಂದ್ರೀಕೃತ ಯೋಜನೆಗೆ ಅನುವು ಮಾಡಿಕೊಡುವ ಕಾರ್ಯಕ್ರಮ ಅವಶ್ಯವೆಂದು ಹೇಳಿತು. ಈ ಕಾರ್ಯಕ್ರಮವು ಸಾಂದರ್ಭಿಕವೂ, ವಿವಿಧ ಗುಂಪುಗಳ ಹಾಗೂ ಪಾಲುದಾರರ ನಿರ್ದಿಷ್ಟ ಅಗತ್ಯಗಳಿಗೆ ಸ್ಪಂದಿಸುವಂತೆಯೂ ಇರಬೇಕು. ರಾಷ್ಟ್ರೀಯ ಶಿಕ್ಷಣ ನೀತಿ ಕೊಟ್ಟಿರುವ ಮಾರ್ಗದರ್ಶಿ ಸೂತ್ರವು ಹೀಗೆ ಹೇಳುತ್ತದೆ – "ಸಂಪ್ರದಾಯ–ರಹಿತ ಶಿಕ್ಷಣ ಕಾರ್ಯಕ್ರಮಗಳ ವಿಭಿನ್ನ ಮಾದರಿಗಳನ್ನು ರೂಪಿಸಲು ಪ್ರಯತ್ನಗಳನ್ನು ಕೈಗೊಳ್ಳಲಾಗುವುದು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ನಿಯೋಗಗಳನ್ನು ಉದ್ದೇಶಿತ ಗುಂಪುಗಳ ಪುನರ್‌ನಿರ್ದೇಶನದ ಆಧಾರದ ಮೇಲೆ ಅತ್ಯಂತ ಸೂಕ್ತ ಮಾದರಿಯನ್ನು ರೂಪಿಸಿ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುವುದು." ವಾಸ್ತವವಾಗಿ, ಈ ಮಾರ್ಗದರ್ಶಿ ಸೂತ್ರಗಳು ಇಂದಿನ ಪರ್ಯಾಯ ಶಾಲಾ ಶಿಕ್ಷಣಕ್ಕೆ ಪರಿಕಲ್ಪನಾತ್ಮಕ ಚೌಕಟ್ಟನ್ನು (Conceptual Framework) ಒದಗಿಸಿದವು. ಲೋಕ ಜುಂಬಿಶ್ (ರಾಜಸ್ಥಾನ), ಉತ್ತರ ಪ್ರದೇಶ ಪ್ರಾಥಮಿಕ ಶಿಕ್ಷಣ ಯೋಜನೆ, ಬಿಹಾರ ಎಜುಕೇಷನ್ ಪ್ರಾಜೆಕ್ಟ್, ಋಷಿ ವ್ಯಾಲಿ ಎಜುಕೇಷನ್ ಫೌಂಡೇಷನ್ (ಆಂಧ್ರ ಪ್ರದೇಶ), ಆಂಧ್ರ ಪ್ರದೇಶದ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳು, ಮಹಿಳಾ ಸಮಾಖ್ಯಾ ಕಾರ್ಯಕ್ರಮ (ಮಹಾರಾಷ್ಟ್ರ) ಇತ್ಯಾದಿ ಕಾರ್ಯಕ್ರಮಗಳಡಿಯಲ್ಲಿ 1990ರ ದಶಕದಲ್ಲಿ ದೇಶದಲ್ಲಿ ಪ್ರಾಥಮಿಕ ಸ್ತರದಲ್ಲಿ ನಡೆಸಲಾದ ನವೀನ ಪ್ರಯೋಗಗಳು ಮತ್ತು ಇನ್ನಿತರ ಸಂಸ್ಥೆಗಳು ಸಣ್ಣ ಜನ ವಸತಿಯಲ್ಲಿ, ದೂರ ದೂರದ ಪ್ರದೇಶಗಳಲ್ಲಿ ವಾಸಿಸುತ್ತಿರುವ ವೈವಿಧ್ಯಮಯ ಮಕ್ಕಳ ಗುಂಪುಗಳ ಕಲಿಕಾ ಅಗತ್ಯಗಳನ್ನು ಪೂರೈಸಲು ಸ್ಪಂದಿಸುತ್ತಾ ಪರ್ಯಾಯ ಶಿಕ್ಷಣ ಕಾರ್ಯಕ್ರಮಗಳ ವಿನ್ಯಾಸಕ್ಕಾಗಿ ಸಾಂಸ್ಥಿಕ ಹಾಗೂ ಕಾರ್ಯಕ್ರಮ ಮಟ್ಟದ ಅಂತರ್‌ದೃಷ್ಟಿಯನ್ನು ಒದಗಿಸಿದವು.

1992ರ ಅವಧಿಯ ನಂತರ ಕಾರ್ಯಾನ್ವಯಗೊಳಿಸಿದ ಸಂಪ್ರದಾಯ ರಹಿತ ಶಿಕ್ಷಣ (Non Formal Education-NFE) ಕಾರ್ಯಕ್ರಮವು 25 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಸುಮಾರು 74 ಲಕ್ಷ ಮಕ್ಕಳಿಗೆ ಅನುಕೂಲ ಮಾಡಿಕೊಟ್ಟಿತು. ಆದಾಗ್ಯೂ, ಸಾಂಪ್ರದಾಯಿಕ ಶಾಲೆಗಳ ಪ್ರತಿಬಂಧಗಳಿಂದಲೂ ಹಾಗೂ ಸರ್ಕಾರಿ ಎನ್.ಎಫ್.ಇ. ಪ್ರಾಯೋಜನೆಗಳಿಂದ ಮತ್ತು ಸ್ವಯಂಸೇವಕ ಸಂಸ್ಥೆಗಳು ಪ್ರಾರಂಭಿಸಿದ (NFE) ಪ್ರಾಯೋಜನೆಗಳಿಂದ ವ್ಯಕ್ತವಾಗಿರುವಂತೆ ಅಸಾಂಪ್ರದಾಯಿಕ ಶಿಕ್ಷಣದ ಅಂತರ್ಗತ ಕೊರತೆಗಳಿಂದಲೂ ಮುಕ್ತವಾದ ಪರ್ಯಾಯ ಶಾಲಾ ಶಿಕ್ಷಣದ ಸೌಲಭ್ಯಗಳ ತುರ್ತಿನ ಅಗತ್ಯವಿದೆಯೆಂದು ನೆಲಮಟ್ಟದ ವಾಸ್ತವಿಕತೆಗಳು ಸೂಚಿಸಿದವು. ರಾಜ್ಯಮಟ್ಟದಲ್ಲಿ ನಡೆಸಲಾದ ಸಂಪ್ರದಾಯ–ರಹಿತ ಶಿಕ್ಷಣ ಯೋಜನೆಯ ಪುನರಾವಲೋಕನ ಮತ್ತು ಮೌಲ್ಯಮಾಪನವು ಮತ್ತು ವಿಶೇಷವಾಗಿ ಯೋಜನಾ ಆಯೋಗದ ಕಾರ್ಯಕ್ರಮ ಮೌಲ್ಯಮಾಪನ ಸಂಸ್ಥೆ (Programme Evaluation Organization, PEO) ಯು ನಡೆಸಿದ ಮೌಲ್ಯಮಾಪನವು ಓಈಇ ಯೋಜನೆಗಳ ಅನುಷ್ಠಾನದ ಅಂತರ್ಗತ ಕೊರತೆಗಳನ್ನು ಹಾಗೂ NFE ಯೋಜನೆಗಳನ್ನು ಕೂಲಂಕುಷವಾಗಿ ಪರೀಕ್ಷಿಸುವ ಅಗತ್ಯದ ಬಗ್ಗೆ ಸ್ಪಷ್ಟರೂಪದಲ್ಲಿ ತೋರಿಸಿಕೊಟ್ಟಿತು. ಸಂಪ್ರದಾಯ–ರಹಿತ ಶಿಕ್ಷಣ ಯೋಜನೆ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಒದಗಿಸಲಾರದೆಂದೂ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕಔಂ (1992) ಗಳಲ್ಲಿ ಕಾಣಿಸಿರುವ ಗುರಿಗಳನ್ನು ಹಾಗೂ ಕ್ರಮಗಳನ್ನು ಸಾಧಿಸಲಾರದೆಂದು ಅರಿವಿಗೆ ಬರತೊಡಗಿತು. ದೇಶದಲ್ಲಿ ಕಾರ್ಯಾನ್ವಯಗೊಂಡಿದ್ದ ಓಈಇ ಯೋಜನೆಯ ಮೂಲಕ ಕ್ರಿಯಾ ಯೋಜನೆಯ ಕಔಂ ಮಾರ್ಗದರ್ಶಿ ಸೂತ್ರಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ. ಮಾರ್ಪಡಿಸಿದ ಯೋಜನೆಯು (2001) ಈಗ ಶಿಕ್ಷಣ ಭರವಸೆ ಯೋಜನೆ ಮತ್ತು ಪರ್ಯಾಯ ಮತ್ತು ನಾವಿನ್ಯಯುತ ಶಿಕ್ಷಣ (Education Guarantee Scheme & Alternative and Innovative Education – EGS & AIE) ಎಂಬ ಹೆಸರು ಪಡೆದಿದೆ .

Digitised by Bharatavani, CIIL

ಮೇಲ್ಕಂಡ ಈ ಎಲ್ಲಾ ಗಮನಾರ್ಹ ಶಿಕ್ಷಣದ ಬೆಳವಣಿಗೆಗಳಿಂದ ಭಾರತ ಸರ್ಕಾರದ ಕೇಂದ್ರೀಕೃತ ಪ್ರಾಯೋಜಿತ ಯೋಜನೆಯಾಗಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು (District Primary Education Programme – DPEP) ಭಾರತ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿ 1994ರಲ್ಲಿ ಪ್ರಾರಂಭಗೊಂಡಿತು.

ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳಿಗೆ ಹೊಸ ಆಯಾಮವನ್ನು, ಒತ್ತನ್ನು ನೀಡುವುದು DPEPಕಾರ್ಯಕ್ರಮದ ಮುಖ್ಯ ಗುರಿಯಾಗಿದೆ. ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮ DPEPಯ ಒಟ್ಟು ಕಾರ್ಯಕ್ರಮದ ಪ್ರಮುಖ ಘಟಕಗಳಲ್ಲಿ ಒಂದಾಗಿದೆ. ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ಪರಿಕಲ್ಪನಾತ್ಮಕ ಹಾಗೂ ಕಾರ್ಯಾತ್ಮಕ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಕಾರ್ಯಕ್ರಮದ ಮೂಲಭೂತ ಆಯಾಮಗಳಿಗೆ (Dimensions) ಸಂಬಂಧಿಸಿದಂತೆ ಸಮಗ್ರವಾದ ವಿಶ್ಲೇಷಣೆಯನ್ನು ಪ್ರಸ್ತುತಪಡಿಸಲಾಗಿದೆ. ಕ್ಷೇತ್ರಸ್ತರದಲ್ಲಿ ಲಭ್ಯವಾಗುವ ಕ್ಷೇತ್ರ ಸಂಶೋಧನಾ ಫಲಿತಾಂಶಗಳು ಹಾಗೂ ಜಂಟಿ ಪುನರ್ ಪರಿಶೀಲನಾ ಮಿಷನ್ನಿನ (Joint Review Mission - JRM) ವೀಕ್ಷಣೆಗಳಿಗೆ ಸಂಬಂಧಿಸಿದ ಹೆಚ್ಚುವರಿ ಮಾಹಿತಿಯು ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ಸರಿಯಾದ ಅರಿವನ್ನು ಒದಗಿಸಬಲ್ಲದು. ಅಂತ್ಯದಲ್ಲಿ ನೀತಿರೂಪಿಸುವವರು. ಪಠ್ಯಕ್ರಮ ತಜ್ಞರು, ಕ್ಷೇತ್ರ ಕಾರ್ಯಕರ್ತರು ಮತ್ತು ಸಂಶೋಧಕರಿಗೆ ನೆರವಾಗಬಲ್ಲದೆಂದು ತಿಳಿಯಲಾಗುವ ಅವಶ್ಯಕ ಮಧ್ಯಸ್ಥಿಕೆಗಳ ಕುರಿತ ವಿವರವಾದ ಟಿಪ್ಪಣಿಯನ್ನು ಒದಗಿಸಲಾಗಿದೆ.

**ಪರ್ಯಾಯ ಶಾಲಾ ಶಿಕ್ಷಣದ ಗುರಿಗಳು ಮತ್ತು ತತ್ವಗಳು**

**ಪರ್ಯಾಯ ಶಾಲಾ ಶಿಕ್ಷಣದ ಪ್ರಮುಖ ಗುರಿಗಳು ಹೀಗಿವೆ:**

(i) ಸಾಂಪ್ರದಾಯಿಕ ಶಾಲೆಯನ್ನು ತೆರೆಯುವುದಕ್ಕೆ ಅರ್ಹತೆ ಹೊಂದಿರದ ಪ್ರವೇಶದ ಅಲ್ಪ ಜನಸಂಖ್ಯೆಯುಳ್ಳ ಬಹು ದೂರದ ಸಮುದಾಯಗಳಿಗೆ ಶೈಕ್ಷಣಿಕ ಸೇವೆಗಳನ್ನು ವಿಸ್ತರಿಸುವುದು.

(ii) ಜೀವನದ ಅನಿವಾರ್ಯತೆಗಳಿಂದ ಭೌತಿಕವಾಗಿ ಶಾಲೆಯ ಸೌಲಭ್ಯವನ್ನು ಹೊಂದಲಾಗದ ಮಕ್ಕಳ ಅವಶ್ಯಕತೆಗಳನ್ನು ಪೂರೈಸುವುದು.

(iii) ಬಹಳ ವೈವಿಧ್ಯಮಯ ಮಕ್ಕಳ ಗುಂಪಿಗೆ ಅವರ ಸ್ಥಾನೀಯ ಸಂದರ್ಭದಲ್ಲಿ ವಿವಿಧ ತರದ ಪರ್ಯಾಯ ಶಿಕ್ಷಣ ಕಾರ್ಯಕ್ರಮವನ್ನು ಒದಗಿಸುವುದು ಮತ್ತು

(iv) ಮಕ್ಕಳು ಹಾಗೂ ಕುಟುಂಬದ ಸದಸ್ಯರು ಸಿದ್ಧರಾಗಿದ್ದ ಪಕ್ಷದಲ್ಲಿ ಅವರಿಗೆ ಪರ್ಯಾಯ ಶಿಕ್ಷಣ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ರೂಪಿಸುವುದು.

**ದೂರದ/ತಲುಪಲಾಗದ ಜನವಸತಿಯ ಮಕ್ಕಳು.**

(i) ನಗರದ ಕೊಳಚೆ ಪ್ರದೇಶ ಹಾಗೂ ಅಪಾಯಕರ ಹಾಗೂ ಅಧಿಕ ಶ್ರಮದ ಅಗತ್ಯವಿರುವ ಕೈಗಾರಿಕೆಗಳನ್ನು ಹೊಂದಿರುವ ಜಿಲ್ಲೆಗಳ ಮಕ್ಕಳು

(ii) ಮನೆಗೆಲಸದಲ್ಲಿ ತೊಡಗಿರುವ ಯುವ ಹಾಗೂ ಪ್ರೌಢ ಬಾಲಕಿಯರು

(iii) ವಲಸೆ ಹೋಗುವ ಕುಟುಂಬದ ಮಕ್ಕಳು

(iv) ವಿಕಲಚೇತನ ಮಕ್ಕಳು – ಇವರೆಲ್ಲರನ್ನೂ ಒಳಗೊಳ್ಳುವ ಬಹುತೇಕ ಶಾಲೆಯಿಂದ ಹೊರಗುಳಿದ ವೈವಿಧ್ಯಮಯ ಮಕ್ಕಳ ಗುಂಪನ್ನು ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮ ಗಮನದಲ್ಲಿರಿಸುತ್ತದೆ.

ಶೈಕ್ಷಣಿಕ ಸೌಲಭ್ಯಗಳ ಲಭ್ಯತೆಯಲ್ಲಿ ಸಮಾನತೆ ತರುವ ಕಾಳಜಿಯಿಂದಾಗಿ ವಿವಿಧ ನಾವೀನ್ಯಯುತ ಹಾಗೂ ಪ್ರಯೋಗಾತ್ಮಕ ಕಾರ್ಯಕ್ರಮ ವಿನ್ಯಾಸದ ಮುಖಾಂತರ ಪರ್ಯಾಯ ಶಾಲಾ ಶಿಕ್ಷಣ ಪೂರೈಕೆಯ ವಿಧಾನ ಹೊರಹೊಮ್ಮಿದೆ.

**ಇದರ ಪ್ರಮುಖ ಕಾಳಜಿಗಳು ಇಂತಿವೆ:**

(i) ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಾಲಾ ಶಿಕ್ಷಣ ಅಥವಾ ಅದಕ್ಕೆ ಸಮನಾದ ವಿವಿಧ ಸಂಪ್ರದಾಯ ರಹಿತ ಶೈಕ್ಷಣಿಕ ವಿನ್ಯಾಸಗಳು ಲಭ್ಯವಾಗುವಂತೆ ಮಾಡುವುದು.

(ii) ದಾಖಲಾತಿ ಮತ್ತು ಶಾಲೆ ಬಿಟ್ಟು ಹೋಗುವವರ ನಡುವೆ ಹಾಗೂ ಬಾಲಕ ಬಾಲಕಿಯರ ಹಾಗೂ ವಿವಿಧ ಸಾಮಾಜಿಕ ವರ್ಗಗಳ ನಡುವಣ ಕಲಿಕಾ ಸಾಧನೆಯ ಅಂತರಗಳನ್ನು ಶೇ 5 ಕ್ಕಿಂತ ಕಡಿಮೆಯಾಗಿಸುವುದು.

(iii) ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮಟ್ಟದಲ್ಲಿ ಬಿಟ್ಟು ಹೋಗುವವರ ಒಟ್ಟು ದರವನ್ನು ಶೇ 10ಕ್ಕಿಂತ ಕಡಿಮೆಯಾಗಿಸುವುದು.

**ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮ ನಿರ್ಮಾಣವು ಈ ಕೆಳಗಿನ ಮೂಲ ತತ್ವಗಳನ್ನು ಆಧರಿಸಿದೆ:**

(i) ವಿಕೇಂದ್ರಿತ ವಿನ್ಯಾಸ ಮತ್ತು ನಿರ್ವಹಣೆ (ಶೈಕ್ಷಣಿಕ ವಿನ್ಯಾಸಗಳು ಸ್ಥಳೀಯ ನಿರ್ದಿಷ್ಟ ಅಗತ್ಯಗಳಿಗೆ ಸ್ಪಂದಿಸಿ ಶಾಲೆಗಳ ಸ್ಥಳೀಯ ಆಡಳಿತ ಮತ್ತು ಸಮುದಾಯಗಳ ನಡುವೆ ಸಹಭಾಗಿತ್ವವನ್ನು ಪ್ರೋತ್ಸಾಹಿಸಬೇಕು.)

(ii) ನಮ್ಯತೆ (ಭಾರತ ಪ್ರತಿನಿಧಿಸುವ ಸ್ಥಳೀಯ ಪರಿಸ್ಥಿತಿಗಳ ವಿವಿಧತೆಯನ್ನು ಗಮನಕ್ಕೆ ತೆಗೆದುಕೊಳ್ಳುವಂತೆ ಕಾರ್ಯಕ್ರಮ ಘಟಕಗಳು ಮತ್ತು ಉಪಕ್ರಮಗಳು ಹೊಂದಿಕೊಳ್ಳುವಂತೆ ಇರಬೇಕು.)

(iii) ಸಮಗ್ರವಾದ ಉಪಕ್ರಮ (ಲಭ್ಯತೆ, ಪಠ್ಯಕ್ರಮ ಮತ್ತು ಬೋಧನಾ–ಕಲಿಕಾ ಸಾಮಗ್ರಿಗಳು, ಶಿಕ್ಷಕರು, ಸಮುದಾಯ–ಶಾಲೆಯ ಅಂತರ್ಸಂಬಂಧ, ಕಟ್ಟಡಗಳ ನಿರ್ಮಾಣ, ಬೋಧನಾತ್ಮಕ ನೆರವು ಇತ್ಯಾದಿ. ಪ್ರಾಥಮಿಕ ಶಿಕ್ಷಣದ ಎಲ್ಲಾ ಮುಖಗಳನ್ನು

Digitised by Bharatavani, CIIL

ಕಾರ್ಯಕ್ರಮವು ಸಮಗ್ರ ರೀತಿಯಲ್ಲಿ ಕಾಣಬೇಕು.)

(iv) ನಿಷ್ಪಕ್ಷಪಾತದ ಗುರಿ (ಕಾರ್ಯಕ್ರಮವು ಸ್ಪಷ್ಟವಾಗಿ ಬಾಲಕಿಯರು ಹಾಗೂ ಇತರ ಅಂಚಿನಲ್ಲಿರುವ ಗುಂಪುಗಳನ್ನು ಗುರಿಯಲ್ಲಿಟ್ಟುಕೊಳ್ಳಬೇಕು.)

(v) ಗುಣಾತ್ಮಕತೆಗೆ ಒತ್ತು (ಗುಣಾತ್ಮಕತೆಯು ಕಾರ್ಯಕ್ರಮದ ಎಲ್ಲಾ ಮುಖಗಳಲ್ಲಿಯೂ, ಎಲ್ಲಾ ಮಟ್ಟಗಳಲ್ಲಿಯೂ – ಅಂದರೆ ಕಲಿಕೆಯ ಗುಣಮಟ್ಟ, ಲಭ್ಯತೆ ಮತ್ತು ನಿರ್ವಹಣೆ – ಹಾಸು ಹೊಕ್ಕಾಗಿರಬೇಕು.)

(vi) ಸಾಮರ್ಥ್ಯವರ್ಧನೆ (ಹೊಸ ದರ್ಶನವನ್ನು ಸಾಕಾರಗೊಳಿಸಿ ಉಳಿಸಿ ಬೆಳೆಸುವುದಕ್ಕಾಗಿ ಕಾರ್ಯಕ್ರಮವು ಸದ್ಯದಲ್ಲಿರುವ ಸಾಮರ್ಥ್ಯವನ್ನು ಬಲವರ್ಧನೆಗೊಳಿಸಬೇಕು.)

ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮವನ್ನು ವ್ಯವಸ್ಥಿತ ರೀತಿಯಲ್ಲಿ ರೂಪಿಸಲು ಈ ಆರು ತತ್ವಗಳನ್ನು ವಿಶಾಲ ಮಾರ್ಗದರ್ಶಿ ಸೂತ್ರಗಳ ರೂಪಕ್ಕೆ ಪರಿವರ್ತಿಸಲಾಯಿತು. ಈ ಸೂತ್ರಗಳನ್ನು ಆಧರಿಸಿ ಪ್ರತಿಯೊಂದು ಜಿಲ್ಲೆಯು ತನ್ನದೇ ಆದ ಪರ್ಯಾಯ ಶಾಲಾ ಶಿಕ್ಷಣದ ವಿನ್ಯಾಸವನ್ನು ರೂಪಿಸಿತು. ನಿರ್ದಿಷ್ಟವಾಗಿ ಹೇಳುವುದಾದರೆ ಈ ಮಾರ್ಗದರ್ಶಿ ಸೂತ್ರಗಳು ಈ ಮುಂದಿನವುಗಳನ್ನು ಪ್ರತಿಬಿಂಬಿಸುತ್ತವೆ.

(i) ಗುಣಾತ್ಮಕ ಪ್ರಾಥಮಿಕ ಶಿಕ್ಷಣ ಪ್ರತಿಯೊಂದು ಮಗುವಿನ ಅಧಿಕಾರವಾಗಿರುವುದು ಮತ್ತು ಮಕ್ಕಳ ಶೈಕ್ಷಣಿಕ ಅಗತ್ಯ ಅವರ ಹಿನ್ನೆಲೆಯ ಕಾರಣದಿಂದಾಗಿ ವ್ಯತ್ಯಾಸವಾಗುವುದಿಲ್ಲ.

(ii) ಶಾಲೆಯಿಂದ ಹೊರಗುಳಿದ ಮಕ್ಕಳ ಸ್ವಭಾವ ವೈವಿಧ್ಯಮಯವಾಗಿರುವುದರಿಂದ ಈ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ವಿವಿಧ ರೀತಿಯ ಕಾರ್ಯತಂತ್ರಗಳು ಅವಶ್ಯಕ, ಪರಿಸ್ಥಿತಿಯ ನಿರ್ದಿಷ್ಟತೆಯನ್ನು ಗಮನದಲ್ಲಿರಿಸಿ ಕಾರ್ಯತಂತ್ರಗಳನ್ನು ವಿನ್ಯಾಸಗೊಳಿಸಬೇಕಲ್ಲದೆ ವೈವಿಧ್ಯತೆಯನ್ನು ಪ್ರೋತ್ಸಾಹಿಸಲು ಕಾರ್ಯಕ್ರಮಕ್ಕೆ ಸಾಕಷ್ಟು ನಮ್ಯತೆಯನ್ನು ಒದಗಿಸಬೇಕು.

(iii) ಜನವಸತಿಯ ಎಲ್ಲಾ ಕುಟುಂಬಗಳ ಮೌಲ್ಯಮಾಪನವನ್ನು ಆಧರಿಸಿ ಸಮುದಾಯದ ಸದಸ್ಯರನ್ನು ಸಹಭಾಗಿಗಳನ್ನಾಗಿಸಿ ಕಾರ್ಯತಂತ್ರವನ್ನು ರೂಪಿಸಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಅತ್ಯಂತ ಸೂಕ್ತವಾದ ಕಾರ್ಯತಂತ್ರ ಲಭ್ಯವಾಗಿ ವಿವಿಧ ವ್ಯವಸ್ಥೆಗಳಲ್ಲಿನ ಮಕ್ಕಳ ವ್ಯಾಪ್ತಿ ಪುನರಾವೃತ್ತಿಯಾಗದಿರಲು ಸಾಧ್ಯವಾಗುವುದು.

(iv) ಸಮುದಾಯ ಮತ್ತು ಪರ್ಯಾಯ ಶಾಲಾ ಶಿಕ್ಷಣಗಳ ನಡುವೆ ಸಾಕಷ್ಟು ಸಂಪರ್ಕ ಅವಶ್ಯಕ. ಶಿಕ್ಷಕನು ಸಮುದಾಯದೊಡನೆ ನಿತ್ಯವೂ ಅನ್ಯೋನ್ಯ ಕ್ರಿಯೆಯನ್ನು ಹೊಂದಿರಬೇಕು. ಅಲ್ಲದೆ, ಶಿಕ್ಷಕನು ಸ್ಥಳೀಯ ಸಾಮಾಜಿಕ–ಸಾಂಸ್ಕೃತಿಕ ಸಂದರ್ಭ ಹಾಗೂ ಆಚಾರಗಳನ್ನು ಚೆನ್ನಾಗಿ ತಿಳಿದವನಾಗಿದ್ದು ವಿದ್ಯಾರ್ಥಿಗಳ ಸಮುದಾಯಕ್ಕೇ ಸೇರಿದವನಾಗಿರಬೇಕು.

(v) ಶಿಕ್ಷಕನ ಸ್ವಾತ್ಮಾಭಿಮಾನ, ಅಭಿಪ್ರೇರಣೆ ಮತ್ತು ವೃತ್ತಿಪರವಾದ ಸಿದ್ಧತೆ ಕಾರ್ಯಕ್ರಮವೊಂದರ ಸಫಲತೆಗೆ ನಿರ್ಣಾಯಕ ಅಂಶಗಳಾಗಿವೆ.

(vi) ಶಿಕ್ಷಕರಿಗೆ ನಿರಂತರ ಮತ್ತು ಸಮಗ್ರ ರೀತಿಯ ಶೈಕ್ಷಣಿಕ ನೆರವಿನ ವ್ಯವಸ್ಥೆಯು ಅವರ ಶೈಕ್ಷಣಿಕ ಕುಶಲತೆಗಳನ್ನು ಸುಧಾರಿಸಿಕೊಳ್ಳಲು ಅವಶ್ಯಕವಾಗಿದೆ. ಶಿಕ್ಷಕರಿಗೆ ತಮ್ಮ ಅನುಭವಗಳನ್ನು ಸಮಸ್ಯೆಗಳನ್ನು ಮತ್ತು ಸಫಲತೆಗಳನ್ನು ಹಂಚಿಕೊಳ್ಳಲು ವೇದಿಕೆಯೊಂದರ ಅಗತ್ಯವಿದ್ದು ಆ ಪ್ರಕ್ರಿಯೆಯಲ್ಲಿ ಪರಸ್ಪರ ಕಲಿತುಕೊಳ್ಳಬೇಕು.

(vii) ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಬೋಧನಾ–ಕಲಿಕೆಯನ್ನು ಆಧರಿಸಿದ ಸೂಕ್ತವಾದ ಬೋಧನ ಶಾಸ್ತ್ರವನ್ನು ಶಾಲೆಯು ಅಳವಡಿಸಿಕೊಳ್ಳಬೇಕಲ್ಲದೆ ಸಾಮಗ್ರಿ ಸಮೃದ್ಧ ಶಾಲಾ ಪರಿಸರವನ್ನು ಒದಗಿಸಬೇಕು.

(viii) ಕಲಿಕಾರ್ಥಿಗಳ ಮೌಲ್ಯಮಾಪನ ಒಂದು ನಿರಂತರ ಪ್ರಕ್ರಿಯೆಯಾಗಿರಬೇಕು ಮತ್ತು ವಿವಿಧ ಚಟುವಟಿಕೆಗಳಿಂದ ಒಡಗೂಡಿದ ಒಂದು ಸಮಗ್ರ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು ಮತ್ತು

(ix) ವ್ಯವಸ್ಥೆಯು ವಿಕೇಂದ್ರೀಕೃತ ನಿರ್ವಹಣಾ ಸಂರಚನೆಯೊಂದಿಗೆ ನಮ್ಯತೆಗೆ ಅವಕಾಶ ನೀಡಬೇಕು.

ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ರೂಪಿಸಲಾದ ಶೈಕ್ಷಣಿಕ ವಿನ್ಯಾಸಗಳು ಕಲಿಕಾರ್ಥಿಯ ನಿರ್ದಿಷ್ಟ ಅಗತ್ಯಗಳಿಗೆ ಕುರಿತಂತೆ ನಮ್ಯತೆ, ವಿವಿಧತೆ ಮತ್ತು ಸಾಂದರ್ಭಿಕತೆಗಳೆಂಬ ಮೂರು ಪ್ರಮುಖ ತತ್ವಗಳನ್ನು ಪ್ರತಿಬಿಂಬಿಸುತ್ತವೆ. ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಮತ್ತು ಮೇಲೆ ಹೇಳಿದ ಮಾರ್ಗದರ್ಶಿ ಸೂತ್ರಗಳ ಆಧಾರದ ಮೇಲೆ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮಕ್ಕೆ ಶೈಕ್ಷಣಿಕ ವಿನ್ಯಾಸಗಳನ್ನು ರೂಪಿಸಲು ರಾಜ್ಯಗಳಿಗೆ ಸ್ವಾತಂತ್ರ್ಯವನ್ನು ನೀಡಲಾಯಿತು. ದೇಶದ ವಿವಿಧ ಭಾಗಗಳಲ್ಲಿನ ಶಾಲೆಯಿಂದ ಹೊರಗುಳಿದ ವಿವಿಧ ಮಕ್ಕಳ ಗುಂಪುಗಳನ್ನು ತಲುಪಲು ರಾಜ್ಯಗಳು ವಿವಿಧ ಕಾರ್ಯತಂತ್ರಗಳನ್ನು ರೂಪಿಸಿದವು. ಪರ್ಯಾಯ ಶಾಲಾ ಶಿಕ್ಷಣದ ವಿವಿಧ ಕಾರ್ಯತಂತ್ರಗಳನ್ನು ಕಾರ್ಯರೂಪಕ್ಕೆ ತರಲು ರಾಜ್ಯಗಳಿಗೆ DPEP ಮಾರ್ಗದರ್ಶಿ ಸೂತ್ರಗಳಲ್ಲಿ ಉಕ್ತವಾದ ಮೂಲತತ್ವಗಳು ಮಾರ್ಗದರ್ಶಿಗಳಾದವು.

ವಿಕಾಸಗೊಳ್ಳುತ್ತಿರುವ ಪರ್ಯಾಯ ಶಾಲಾ ಶಿಕ್ಷಣ ವಿಧಾನಗಳು

ದೇಶದ ವಿವಿಧ ಭಾಗಗಳಲ್ಲಿ ವಿಕಾಸಗೊಳಿಸಲಾದ ಕೆಲವು ಪರ್ಯಾಯ ಶಾಲಾ ಶಿಕ್ಷಣ ವಿನ್ಯಾಸಗಳು ಜನಪ್ರಿಯವಾಗಿವೆ. ಏಕೆಂದರೆ, ಅವು ನಮ್ಯತೆ, ನಿಷ್ಪಕ್ಷಪಾತತೆ, ಗುಣಾತ್ಮಕತೆ ಮತ್ತು ಸಾಮರ್ಥ್ಯ ವರ್ಧನೆಗಳ ಸಂದರ್ಭದಲ್ಲಿ ಅರ್ಥಪೂರ್ಣವಾಗಿವೆ.

**ಕೇವಲ 15 ಮಕ್ಕಳಿರುವ ಜನವಸತಿಗಳಲ್ಲಿ ಸಮುದಾಯ ಶಾಲೆಗಳು:**

ಇವುಗಳು ಬಹುತೇಕ ಆಂಧ್ರಪ್ರದೇಶದ ಗಿರಿ ನಿವಾಸಿಗಳ

Digitised by Bharatavani, CIIL

ಪ್ರದೇಶಗಳಲ್ಲಿ ಹಾಗೂ ಹಲವು ಬುಡಕಟ್ಟು ಜನವಸತಿಗಳಲ್ಲಿ ಅಸ್ತಿತ್ವದಲ್ಲಿವೆ. ಈ ಶಾಲೆಗಳ ಒಂದು ಪ್ರಮುಖ ಲಕ್ಷಣವೆಂದರೆ ಇವುಗಳನ್ನು ತಂದೆ ತಾಯಿಗಳಿಂದ ರಚಿತವಾದ ಶಾಲಾ ಸಮಿತಿಯು ನಿರ್ವಹಿಸುತ್ತದೆ. ಈ ಸಮಿತಿ ಶಿಕ್ಷಕರ ಆಯ್ಕೆ ಮತ್ತು ನೇಮಕಾತಿ, ಶಾಲೆಯನ್ನು ನಡೆಸಲು ಸೂಕ್ತ ಜಾಗದ ಒದಗಣೆ ಮತ್ತು ಮಕ್ಕಳು ನಿಯಮಿತವಾಗಿ ಹಾಜರಾಗುವಂತೆ ನೋಡಿಕೊಳ್ಳುವುದು, ಈ ಎಲ್ಲ ಜವಾಬ್ದಾರಿಯನ್ನು ಹೊತ್ತಿರುವುದು. ಕೆಲವು ಸಂದರ್ಭಗಳಲ್ಲಿ ಸಮುದಾಯವು ಶಿಕ್ಷಕರ ಗೌರವ ಸಂಭಾವನೆಯನ್ನು ಪೂರೈಸಲು ಹಣ ಸಂಗ್ರಹವನ್ನು ಮಾಡುವುದು.

ಕೇರಳದ ಗುಡ್ಡಗಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಬಹುಶ್ರೇಣಿ ಕೇಂದ್ರಗಳ ರೂಪದಲ್ಲಿ ಪೂರ್ಣಕಾಲಿಇಕ ಶಾಲೆಗಳು, ಮಹಾರಾಷ್ಟ್ರದ ಕೆಲವು ಬುಡಕಟ್ಟು ಜಿಲ್ಲೆಗಳಲ್ಲಿ ಒಪ್ಪಂದದ ಶಾಲೆಗಳು ಉತ್ತರ ಪ್ರದೇಶದ ದೂರದ ಜನವಸತಿಗಳಲ್ಲಿ ಏಕ ಶಿಕ್ಷಕ ಬಹುವರ್ಗ ಶಾಲೆಗಳು ಮತ್ತು ಮಧ್ಯಪ್ರದೇಶದ ಇಉಖ (ಶಿಕ್ಷಣ ಖಾತರಿ ಯೋಜನೆ) ಶಾಲೆಗಳು ಔಪಚಾರಿಕ ಶಾಲೆಗಳಿಗೆ ಅರ್ಹತೆ ಪಡೆಯದ ಜನವಸತಿಗಳಲ್ಲಿ ಮಕ್ಕಳಿಗೆ ಶಾಲಾ ಶಿಕ್ಷಣ ಲಭ್ಯವಾಗುವಂತೆ ಮಾಡುವುದು, ಈ ಶಾಲೆಗಳ ಕಾರ್ಯತಂತ್ರವಾಗಿದೆ.

ಕಿಶೋರಾವಸ್ಥೆಯ ಬಾಲಕಿಯರಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಿದ ಪಠ್ಯಕ್ರಮ ಮತ್ತು ಸಾಮಗ್ರಿಗಳನ್ನು ಹೊಂದಿರುವ ಶಾಲೆಗಳು: ಪ್ರಾಥಮಿಕ ಶಾಲಾ ಪಠ್ಯಕ್ರಮದೊಂದಿಗೆ ಬಾಲಕಿಯರಿಗೆ ಸ್ಥಳೀಯವಾದ ಸೂಕ್ತ ಕರಕುಶಲತೆಯಲ್ಲಿ ಕೌಶಲ್ಯದ ತರಬೇತಿ ನೀಡಲಾಗುವುದು. ಸ್ಥಾನೀಯವಾಗಿ ಅಂಗಣ ವಿದ್ಯಾಲಯ (ಅಂಗಣ ಶಾಲೆಗಳು) ಎಂದು ಹೆಸರಾಗಿರುವ ಈ ಶಾಲೆಗಳು ಜೀವನದ ಸಾಮಾಜಿಕ, ಆರ್ಥಿಕ ಅನಿವಾರ್ಯತೆಗಳಿಂದ ಶಾಲೆಯಿಂದ ಹೊರಗುಳಿಯುವ ಗ್ರಾಮೀಣ ಪ್ರದೇಶಗಳ ಕಿಶೋರಾವಸ್ಥೆ ಬಾಲಕಿಯರ ಅಗತ್ಯಗಳನ್ನು ಪೂರೈಸುವುವು. ಈ ಶಾಲೆಗಳನ್ನು ಮಹಿಳಾ ಸಮಾಖ್ಯದ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಸಂಘಟಿಸಲಾಗಿದೆ. ಈ ವಿಧದ ಶಾಲೆಗಳ ವಿಶೇಷ ಲಕ್ಷಣಗಳಲ್ಲಿ ಒಂದು ಅವುಗಳ ನಿರ್ವಹಣಾ ಮಾದರಿ. ಇದನ್ನು ಮಹಿಳಾ ಶಿಕ್ಷಕಿಯರು (ಸಹೇಲಿಯಾ) ನಡೆಸುತ್ತಾರಲ್ಲದೆ ನಿರ್ವಹಣೆಯು ಮಾತಾ ಸಮಿತಿಗಳ (ಮಾತೃ ಸಮಿತಿ) ಕೈಯಲ್ಲಿರುವುದು.

ಮಾತೆಯರು ಸಹಭಾಗಿಗಳಾಗಿರುವುದರಿಂದ ಸ್ಥಳೀಯ ಮಟ್ಟದಲ್ಲಿ ಮಹಿಳಾ ಸಬಲೀಕರಣವು ಸಾಧ್ಯವಾಗುವುದು. ಅಧಿಕ ವಯಸ್ಸಿನ ಕಾರಣದಿಂದ ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿಯಾಗದಂಥ ಬಾಲಕಿಯರ ದಾಖಲಾತಿ ಮತ್ತು ಉಳಿಸಿಕೊಳ್ಳುವಿಕೆ ಸಾಧ್ಯವಾಗಿರುವುದು ಈ ಅಂಶದಿಂದ ಎಂದು ಖಚಿತವಾಗಿದೆ. 'ಬಾಲಶಾಲೆ' 3ರಿಂದ 11 ವಯೋವರ್ಗದ ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮವನ್ನು ಒದಗಿಸುವುದು. ಈ ತೆರನಾದ ಪರ್ಯಾಯ ಶೈಕ್ಷಣಿಕ ಕೇಂದ್ರಗಳಲ್ಲಿ 3 ರಿಂದ 6 ವಯೋವರ್ಗದ ಮಕ್ಕಳಿಗೆ ಶಾಲಾ ಸಿದ್ಧತಾ ಪ್ಯಾಕೇಜ್ ಒದಗಿಸಲಾಗುವುವು. ಇಲ್ಲಿ ಮಕ್ಕಳಿಗೆ ಒಂದು ಮತ್ತು ಎರಡನೇ ತರಗತಿಗಳಿಗೆ ಸಮನಾದ ಶಿಕ್ಷಣ ನೀಡಲಾಗುವುದು. ಈ ತೆರನ ಶಿಕ್ಷಣ ಒದಗಿಸಿ ಹಿರಿಯ ಬಾಲಕಿಯರು ಪರ್ಯಾಯ ಶಿಕ್ಷಣ ಕೇಂದ್ರಗಳಿಗೆ ಹಾಜರಾಗಬಹುದಲ್ಲದೆ ಅವರ ಕಿರಿಯ ತಮ್ಮ ತಂಗಿಯರನ್ನು 'ಬಾಲಶಾಲಾ' ಶಿಕ್ಷಕರು ನೋಡಿಕೊಳ್ಳಬಹುದು.

**ದೀರ್ಘ ಹಾಗೂ ಅಲ್ಪಕಾಲೀನ, ಕ್ಯಾಂಪ್ ಮತ್ತು ಸೇತುಬಂಧ ಕಾರ್ಯಕ್ರಮಗಳು:**

ದಾಖಲಾಗದ ಮತ್ತು ಶಾಲೆ ಬಿಟ್ಟುಹೋದ ಮಕ್ಕಳಿಗೆ ಶಿಕ್ಷಣದಲ್ಲಿ ಎರಡನೇ ಅವಕಾಶ ನೀಡುವುದು ಇದರ ಉದ್ದೇಶ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಅವರವರ ವಯಸ್ಸಿಗೆ ಸೂಕ್ತವಾದ ಉದ್ದೇಶಿತ ಮಟ್ಟದ ಕಲಿಕಾ ದಕ್ಷತೆಯನ್ನು ಸಾಧಿಸಿದ ನಂತರ ಪುನಃ ಶಾಲೆಗೆ ತರುವುದು ಈ ಕಾರ್ಯಕ್ರಮಗಳ ಗಮನ ಕೇಂದ್ರವಾಗಿದೆ. ಅಲ್ಪ ಕಾಲದ ಕ್ಯಾಂಪ್‌ಗಳು 3ರಿಂದ 10 ದಿನಗಳವರೆಗೆ ನಡೆಯುವುವು ಹಾಗೂ ದೀರ್ಘ ಕಾಲದ ಕ್ಯಾಂಪ್‌ಗಳನ್ನು 90ರಿಂದ 100 ದಿನಗಳವರೆಗೆ ಆಯೋಜಿಸಲಾಗುವುದು. ಇವು ವಸತಿಸಹಿತ ಹಾಗೂ ವಸತಿರಹಿತ ಈ ಎರಡೂ ಸ್ವರೂಪದ್ದಾಗಿವೆ. ಅಲ್ಪಕಾಲೀನ ಕ್ಯಾಂಪ್‌ಗಳನ್ನು ಮಕ್ಕಳನ್ನು ಸಾಂಪ್ರದಾಯಿಕ ಶಾಲಾ ಶಿಕ್ಷಣ ವ್ಯವಸ್ಥೆಗೆ ಸೇರುವಂತೆ ಪ್ರೇರೇಪಿಸುವ ಸಲುವಾಗಿ ಆಯೋಜಿಸಲಾಗುತ್ತದೆ. ದೀರ್ಘಕಾಲೀನ ಕ್ಯಾಂಪ್‌ಗಳು ಎಂದೂ ಶಾಲೆಗೆ ದಾಖಲಾಗದ ಅಥವಾ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸದೆ ಶಾಲೆ ಬಿಟ್ಟು ಹೋದ ಮಕ್ಕಳ ಕಲಿಕಾ ಅಗತ್ಯಗಳನ್ನು ಪೂರೈಸುವತ್ತ ನಿರ್ದೇಶಿತಗೊಂಡಿವೆ.

ಈ ತೆರನ ಶಾಲಾ ಶಿಕ್ಷಣದ ಮುಖ್ಯ ಗಮನ ಕೇಂದ್ರ 'ಮರಳಿ ಶಾಲೆಗೆ' ಎಂಬುದಾಗಿದ್ದು ಕ್ಯಾಂಪ್ ಚಟುವಟಿಕೆಗಳ ಕೊನೆಯಲ್ಲಿ ಮಕ್ಕಳಿಗೆ ಮುಖ್ಯಪ್ರವಾಹಕ್ಕೆ ಸೇರಲು ಒಂದು ಅವಕಾಶ ಲಭ್ಯವಾಗುವುದು. ಎಂ.ವಿ.ಫೌಂಡೇಷನ್ನಿನ (ಆಂಧ್ರ ಪ್ರದೇಶ) 'ಮರಳಿ ಶಾಲೆಗೆ' ಎಂಬ ಕಾರ್ಯಕ್ರಮವನ್ನು ಅಳ:ವಡಿಸಿಕೊಂಡು ಈ ಮಾದರಿಯನ್ನು ವಿನ್ಯಾಸಗೊಳಿಸಲಾಗಿದೆ. ಈ ರೀತಿಯ ಪರ್ಯಾಯ ಶಾಲಾ ಶಿಕ್ಷಣದ ವಿನ್ಯಾಸವನ್ನು ಬಹುತೇಕ ಉತ್ತರಪ್ರದೇಶ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಕಾಣಬಹುದು.

**ಅಲ್ಪಸಂಖ್ಯಾತ ಸಮುದಾಯದ ಮಕ್ಕಳಿಗೆ ಮಕ್ತಬ್/ಮದರಸಾಗಳು:**

ತಲುಪಲು ಕಷ್ಟಕರವಾದ ಜನಸಮುದಾಯಗಳನ್ನು ಗುರಿಯಲ್ಲಿರಿಸಿ ನಮ್ಮ ಶೈಕ್ಷಣಿಕ ವಿನ್ಯಾಸವೊಂದನ್ನು ರೂಪಿಸುವ ಕಾಳಜಿಗೆ ಪ್ರತಿಕ್ರಿಯೆಯಾಗಿ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಮಕ್ತಬ್ ಮತ್ತು ಮದರಸಾಗಳಿಗೆ ನೆರವಿನ ಯೋಜನೆ ಕೈಗೊಳ್ಳಲಾಯಿತು. ಈ ಶೈಕ್ಷಣಿಕ ಸೇವೆಗಳ ಮುಖಾಂತರವೇ ಉತ್ತರ ಪ್ರದೇಶ, ಅಸ್ಸಾಂ, ಮಧ್ಯಪ್ರದೇಶ, ಮತ್ತು ರಾಜಸ್ಥಾನಗಳಲ್ಲಿ ಲಿಂಗ ಸಮತ್ವದ ಸವಾಲನ್ನು ಎದುರಿಸಲು ಮಧ್ಯಸ್ಥಿಕೆಗಳನ್ನು ಕೈಗೊಳ್ಳಲಾಗಿದೆ. ಮದರಸಾ ಶೈಕ್ಷಣಿಕ ಕಾರ್ಯಕ್ರಮ ಧಾರ್ಮಿಕ ಘಟಕಗಳ ಜೊತೆಗಿನ ಸಾಂಪ್ರದಾಯಿಕ ಶಾಲಾ ಪಠ್ಯಕ್ರಮವನ್ನು ಬಾಲಕ ಬಾಲಕಿಯರಿಗೆ ಬೋಧಿಸುವ ಇವುಗಳು

Digitised by Bharatavani, CIIL

ಸಮುದಾಯದಿಂದ ಪ್ರಾರಂಭಿಸಲಾದ, ಪೋಷಿಸಲಾದ ಶಾಲೆಗಳಿಗೆ ಉದಾಹರಣೆಗಳಾಗಿವೆ. ಪಠ್ಯಕ್ರಮದ ಬಲವರ್ಧನೆ ಹಾಗೂ ಅದರ ಉಪಯೋಗ ವಿಶೇಷವಾಗಿ ವಿನ್ಯಾಸಗೊಳಿಸಲಾದ ತರಬೇತಿ ಸಂಚಯದ (ಮಾಡ್ಯೂಲ್) ದೆಸೆಯಿಂದ ಸಾಧ್ಯವಾಗುವುದು. ಮಕ್ತಬ್‌ನ ಶಿಕ್ಷಕರಿಗೆ ಮತ್ತು ಕೆಲವು ಸಂದರ್ಭಗಳಲ್ಲಿ ಸಾಂಪ್ರದಾಯಿಕ ಶಾಲಾ ಪಠ್ಯಕ್ರಮವನ್ನು ಉಪಯೋಗಿಸಿ ಅನುಭವವಿರುವ ಆಯ್ದ ಸ್ಥಳೀಯ ಶಿಕ್ಷಕರಿಗೆ ಸ್ಥಾನೀಯ ಸಮುದಾಯದ ವ್ಯಕ್ತಿಗಳೊಡನೆ ಹಾಗೂ ಮೌಲ್ವಿಗಳೊಡನೆ ಪರಾಮರ್ಶಿಸಿ ಮಕ್ತಬ್/ಮದರಸಾಗಳಲ್ಲಿನ ಕಲಿಕಾ ಸನ್ನಿವೇಶವನ್ನು ನಿಯಂತ್ರಿಸಲು ತರಬೇತಿ ನೀಡಲಾಗುವುದು. ಉಚಿತ ಪಠ್ಯಪುಸ್ತಕಗಳು ಮತ್ತು ವಿದ್ಯಾರ್ಥಿಗಳ ಕಲಿಕಾ ಸಾಮಗ್ರಿಗಳನ್ನು ಮಕ್ತಬ್/ಮದರಸಾ ಕಾರ್ಯಕ್ರಮಗಳನ್ನು ಬಲಗೊಳಿಸಲು ಪ್ರವೇಶಗಳಾಗಿ (ಇಟಿಠಿಣಜ) ಒದಗಿಸಲಾಗುವುದು.

**ರಜಾದಿನಗಳಲ್ಲಿ ಸೇತುಬಂಧ ಕಾರ್ಯಕ್ರಮ:**

ಔಪಚಾರಿಕ ಶಾಲೆಗಳನ್ನು ಬಿಟ್ಟು ಹೋದವರು ಅಥವಾ ಅನಿಯಮಿತ ಹಾಜರಿ ಇಲ್ಲವೆ ಕಾಲಕಾಲಕ್ಕೆ ವಲಸೆ ಹೋಗುವ ಕುಟುಂಬಗಳಿಂದಾಗಿ ದೀರ್ಘಕಾಲ ಶಾಲಾ ಕಾರ್ಯಕ್ರಮಕ್ಕೆ ಗೈರು ಹಾಜರಿಯಿಂದಾಗಿ ಶಾಲೆ ಬಿಟ್ಟು ಹೋಗಬಹುದಾದ ಮಕ್ಕಳ ನಡುವೆ ಕಲಿಕೆಯ ಅಂತರವನ್ನು ಕಡಿಮೆ ಮಾಡುವ ಗುರಿಯುಳ್ಳ ಶೈಕ್ಷಣಿಕ ಪೂರೈಕೆಯ ವಿಧಾನವನ್ನು ರೂಪಿಸುವ ಕಾರ್ಯತಂತ್ರ ಇದಾಗಿದೆ. ಇವುಗಳು ಗುಜರಾತ್, ಆಂಧ್ರಪ್ರದೇಶ ಮತ್ತು ಉತ್ತರಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ತರಗತಿಯ ಪುನರಾವೃತ್ತಿ ಹಾಗೂ ಪರೀಕ್ಷಾ ಅಸಫಲತೆಗಳ ಸಮಸ್ಯೆಗಳನ್ನು ಕಡಿಮೆಗೊಳಿಸಲು ಔಪಚಾರಿಕ ಶಾಲಾ ವ್ಯವಸ್ಥೆಯನ್ನು ಬಳಸಿಕೊಂಡು ಶಾಲೆಗಳ ಬೇಸಿಗೆ ರಜಾದಿನಗಳಲ್ಲಿ ಉಪಚಾರಾತ್ಮಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಗುಜರಾತಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ತಮ್ಮ ಪೋಷಕರೊಂದಿಗೆ ವಲಸೆ ಬರುವ ಮಕ್ಕಳ ಕಲಿಕಾ ಅಗತ್ಯಗಳನ್ನು ಪೂರೈಸುವ ಸಲುವಾಗಿ ಔಪಚಾರಿಕ ಶಾಲೆಯ ಶಿಕ್ಷಕರು ಅಲ್ಪಾವಧಿಯ ಸಂಕ್ಷಿಪ್ತ ರೂಪದ ಕಾರ್ಯಕ್ರಮವನ್ನು ಏರ್ಪಡಿಸುವರು. ಈ ಮಕ್ಕಳು ಹಿಂದಿರುಗಿದ ನಂತರ ಕಾರ್ಯಕ್ರಮದ ಅಂತ್ಯದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವರು ಹಾಗೂ ಅವರನ್ನು ಮುಖ್ಯ ಪ್ರವಾಹಕ್ಕೆ ಸೇರಿಸಲಾಗುವುದು.

**ಉದ್ಯೋಗದಲ್ಲಿ ತೊಡಗಿರುವ ಮಕ್ಕಳಿಗಾಗಿ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳು:**

ಈ ಕೇಂದ್ರಗಳನ್ನು ಹಲವು ಜಿಲ್ಲೆಗಳಲ್ಲಿ ನಗರದ ಕೊಳಚೆ ಪ್ರದೇಶಗಳಿಂದ ಹಾಗೂ ವಲಸೆ ಹೋಗುವ ಕುಟುಂಬಗಳಿಂದ ಬರುವ ಕೆಲಸ ಮಾಡುವ ಮಕ್ಕಳಿಗಾಗಿ ವಿಕಾಸಗೊಳಿಸಲಾಗಿದೆ. ವಿನ್ಯಾಸದ ದೃಷ್ಟಿಯಿಂದ ಮೂಲಭೂತ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ವಿಕಸನಗೊಳಿಸಿದ ಸಂಪ್ರದಾಯ ರಹಿತ ಶಿಕ್ಷಣ ಕೇಂದ್ರಗಳಂತೆಯೇ (ಶಿಕ್ಷಾಘರ್) ಇದ್ದರೂ ಒಂದು ವ್ಯತ್ಯಾಸವಿದೆ. ಸ್ವಾಸ್ಥ್ಯ ಕಾಳಜಿ, ಪೌಷ್ಟಿಕತೆ, ಪರಿಸರದ ಅರಿವು, ಜೀವನ ಮತ್ತು ಸಂವಹನ ಕುಶಲತೆಗಳನ್ನು ಸಾಕ್ಷರತಾ ಮತ್ತು ಸಾಂಖ್ಯಿಕ ಕಾರ್ಯಕ್ರಮಗಳಲ್ಲಿ ಸಮಗ್ರಗೊಳಿಸಲಾಗಿದೆ. ಅಗತ್ಯವಾದ ಜ್ಞಾನ ಹಾಗೂ ಕೌಶಲಗಳನ್ನು ಸಾಧಿಸಿ ತಮ್ಮ ಕೊರತೆಗಳನ್ನು ನೀಗಿ ಹೊರಬರುವಂತೆ ಅವರಿಗೆ ಬಲವನ್ನೀಯುವುದು ಮತ್ತು ಅವರನ್ನು ಮುಖ್ಯಪ್ರವಾಹಕ್ಕೆ ತರುವ ಮುನ್ನ ಅಂತರವನ್ನು ಹೋಗಲಾಡಿಸುವುದು ಪ್ರಮುಖ ಗುರಿಯಾಗಿದೆ. ಇವಲ್ಲದೇ, ರೈಲ್ವೇ ಪ್ಲಾಟ್‌ಫಾರಂ ಶಾಲೆಗಳು, ಡ್ರಾಪ್–ಇನ್ ಕೇಂದ್ರಗಳು, ಶೈಕ್ಷಣಿಕ ಪುನರ್ವಸತಿ ಕೇಂದ್ರಗಳು, ಪಾಲನಾ ಗೃಹಗಳು ಇತ್ಯಾದಿ ನಮ್ಮ ಹಾಗೂ ನಾವೀನ್ಯತೆಯುತ ಕಾರ್ಯಕ್ರಮಗಳು ಬೀದಿ ಮಕ್ಕಳಿಗಾಗಿ ಅನಾಥ ಬಾಲಕ ಬಾಲಕಿಯರಿಗಾಗಿ ನಡೆಸಲಾಗುತ್ತಿರುವ ವಿಕಾಸಪರ ಕಾರ್ಯಕ್ರಮಗಳಾಗಿವೆ. ಜೀವನ, ಜೀವನದುದ್ದಕ್ಕೂ ಶಿಕ್ಷಣ ಎಂಬ ಆಶಯವನ್ನು ಪುಷ್ಟೀಕರಿಸುವ ಸಮಗ್ರದೃಷ್ಟಿಯ ಉಪಕ್ರಮವನ್ನು ಒಟ್ಟಾರೆ ವಿನ್ಯಾಸವು ಆಧರಿಸಿ ನಿಂತಿದೆ. ಶಾಲೆಗೆ ಹಾಜರಾಗದ ಅಥವಾ ತಮ್ಮ ಕುಟುಂಬದ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಶಾಲೆಯನ್ನು ಬಿಟ್ಟು ಹೋದ ಮಕ್ಕಳನ್ನು ಶಿಕ್ಷಣಕ್ಕೆ ಕರೆತರುವ ಬಹುಮುಖ್ಯ ವಿಚಾರವನ್ನು ಈ ಕೇಂದ್ರಗಳು ಗಮನದಲ್ಲಿರಿಸಿಕೊಂಡಿರುತ್ತವೆ.

ವಲಸೆ ಹೋಗುವ ಕೂಲಿಕಾರರ ಮಕ್ಕಳ ವಿಶೇಷ ಅಗತ್ಯಗಳತ್ತ ಹಲವಾರು ನಾವೀನ್ಯಯುತ ಕಾರ್ಯಕ್ರಮಗಳು ಗಮನಹರಿಸುತ್ತವೆ. ವಲಸೆ ಹೋಗುವ ಕುಟುಂಬಗಳ ಮಕ್ಕಳಿಗಾಗಿ ಇರುವ ಇವುಗಳನ್ನು ಋತುಕಾಲಿಕ Seasonal ವಿದ್ಯಾರ್ಥಿ ಗೃಹವೆಂದು, ಕಬ್ಬಿನ ಗದ್ದೆ ಹಾಗೂ ಉಪ್ಪಿನ ಫಾರಂ (Salt Farms) ಗಳಲ್ಲಿನ ಕೂಲಿಗಳ ಮಕ್ಕಳಿಗಾಗಿ ಇರುವ ಇವುಗಳನ್ನು ಶಾಲೆಗಳೆಂದು ಕರೆಯಲಾಗುತ್ತದೆ.

ಕೃಷಿಕಾಲವಲ್ಲದ ಸಮಯದಲ್ಲಿ ಪೋಷಕರು ಕೆಲಸವನ್ನು ಅರಸಿ ಬೇರೊಂದು ಸ್ಥಳಕ್ಕೆ ವಲಸೆ ಹೋದಾಗಲೂ ಸಹ ಶಾಲೆಯಲ್ಲಿ ತಮ್ಮ ಅಧ್ಯಯನವನ್ನು ಮುಂದುವರಿಸಲು ಸಾಧ್ಯವಾಗುವಂತೆ ಅವರ ಮಕ್ಕಳಿಗೆ ಋತುಕಾಲಿಕ ವಿದ್ಯಾರ್ಥಿವಸತಿ ಗೃಹದ ಸೌಲಭ್ಯವನ್ನು ಒದಗಿಸಲಾಗುವುದು. ಈ ಕಾರ್ಯತಂತ್ರದ ಅಳವಡಿಕೆಯಿಂದಾಗಿ ಮಕ್ಕಳು ತಮ್ಮ ಪೋಷಕರು ಇತರ ಕೆಲಸದ ಸ್ಥಳಗಳಿಗೆ ವಲಸೆ ಹೋದಾಗಲೂ ಅಧ್ಯಯನವನ್ನು ಮುಂದುವರಿಸಲು ಸಹಾಯವಾಗಿದೆ. ಗುಜರಾತಿನಲ್ಲಿ ಈ ಪ್ರಯೋಗವನ್ನು ಲಭ್ಯತೆ, ಉಳಿಸಿಕೊಳ್ಳುವಿಕೆ ಮತ್ತು ಸಹಭಾಗಿತ್ವ 5ನೇ ತರಗತಿಯವರೆಗೆ ಓದಿನ ಪೂರೈಕೆ ಇವುಗಳನ್ನು ಪ್ರೋತ್ಸಾಹಿಸಲು ಸಣ್ಣ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ.

ಕಬ್ಬಿನ ಗದ್ದೆ ಮತ್ತು ಉಪ್ಪಿನ ಫಾರಂಗಳಲ್ಲಿನ ವಲಸೆ ಹೋಗುವ ಕೂಲಿಕಾರರ ಮಕ್ಕಳಿಗೆ ಶಾಲೆಯನ್ನು ತೆರೆಯುವುದು ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ಒಂದು ನಿರ್ದಿಷ್ಟ ಗುರಿಯುಳ್ಳ ಮಾದರಿಯಾಗಿದೆ. ತಮ್ಮ ಪೋಷಕರ ಹೊಸ ಕಾರ್ಯಕ್ಷೇತ್ರದಲ್ಲಿಯೂ ಸಹ ಅಧ್ಯಯನವನ್ನು ಮುಂದುವರೆಸಲು ಮಕ್ಕಳಿಗೆ ನೆರವಾಗುವುದು ಈ ತೆರನ ಶಾಲೆಗಳ ವಲಸೆ ಹೋಗುವ ಪೋಷಕರ ಉದ್ಯೋಗದಾತರನ್ನು ಮಕ್ಕಳು ತಮ್ಮ ಅಧ್ಯಯನವನ್ನು

Digitised by Bharatavani, CIIL

ಸುಗಮವಾಗಿ ಮುಂದುವರಿಸಲು ಸಹಾಯವಾಗುವಂತೆ ಕನಿಷ್ಠ ಸೌಲಭ್ಯಗಳನ್ನು ಕೆಲಸದ ಜಾಗದಲ್ಲಿ ಒದಗಿಸಿಕೊಡುವಂತೆ ಕೋರುತ್ತಾರೆ. ಇಂತಹ ಸಂದರ್ಭಗಳಲ್ಲಿ ಶಾಲೆ ಬಿಟ್ಟು ಹೋಗುವಿಕೆ ಮತ್ತು ಒಂದೇ ತರಗತಿಯಲ್ಲಿ ಉಳಿದುಕೊಳ್ಳುವುದನ್ನು ತಡೆಯಲೋಸುಗ ಸೂಕ್ತ ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸಲು ಸಮೀಪದ ಔಪಚಾರಿಕ ಶಾಲೆಯಿಂದ ಶಿಕ್ಷಕರೊಬ್ಬರನ್ನು ನಿಯೋಜಿಸುವುದರ ಮೂಲಕ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಗುಜರಾತಿನಲ್ಲಿ, ಈ ವಿಧದ ಹಲವಾರು ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳು ವಲಸೆ ಹೋಗುವ ಕುಟುಂಬದ ಮಕ್ಕಳಿಗೆ ಸೇವೆಯನ್ನು ಒದಗಿಸುತ್ತವೆ. ಈ ಮೇಲೆ ಹೇಳಿದ ಸಕಲ ಶೈಕ್ಷಣಿಕ ಮಧ್ಯಸ್ಥಿಕೆಗಳು ಸಮಾಜದ ವಂಚಿತ ಮತ್ತು ಅಂಚಿನಲ್ಲಿರುವ ವರ್ಗದವರಿಗಾಗಿ ನೀಡುವ ಶಿಕ್ಷಣದಲ್ಲಿ ನಿಷ್ಪಕ್ಷಪಾತತೆ, ಸಮಾನತೆ ಮತ್ತು ಗುಣಾತ್ಮಕ ಶಿಕ್ಷಣದ ಕಾಳಜಿಗಳ ನಡುವೆ ಸಮತೂಕವಿರುವಂತೆ ಮಾಡುವ ಪ್ರಜ್ಞಾಪೂರ್ವಕ ಪ್ರಯತ್ನಗಳಾಗಿವೆ. ಪರ್ಯಾಯ ಶಾಲಾ ಶಿಕ್ಷಣ ಒಂದು ಬೆಳೆಯುತ್ತಿರುವ ಹಾಗೂ ವಿಕಸನಗೊಳ್ಳುತ್ತಿರುವ ಪರಿಕಲ್ಪನೆಯಾಗಿದೆ. ಒಂದು ನಿರ್ದಿಷ್ಟ ಸ್ಥಾನೀಯ ಸನ್ನಿವೇಶದಲ್ಲಿನ ಉದ್ದೇಶಿತ ಗುಂಪಿನ ಕಲಿಕಾ ಅಗತ್ಯಗಳಿಗೆ ಪ್ರತಿಕ್ರಿಯೆಯ ರೂಪದಲ್ಲಿ ಹೊಸ ಕಾರ್ಯತಂತ್ರಗಳನ್ನು ಮತ್ತು ಶೈಕ್ಷಣಿಕ ವಿನ್ಯಾಸಗಳನ್ನು ರೂಪಿಸಲು ರಾಜ್ಯಗಳು ನಿರಂತರ ಪ್ರಯತ್ನಗಳನ್ನು ಕೈಗೊಳ್ಳುತ್ತಿವೆ. ನವ ವಿನ್ಯಾಸಗಳು ಹೊರಹೊಮ್ಮುತ್ತಿವೆ. ದೇಶದಾದ್ಯಂತ 36 ಹೊಸ ಮಾದರಿಗಳು ಕಾರ್ಯೋನ್ಮುಖವಾಗಿವೆ.

ರಾಜ್ಯಗಳು ವಿಕಾಸಗೊಳಿಸಿರುವ ಶೈಕ್ಷಣಿಕ ಮಾದರಿಗಳ ವಿವಿಧತೆಯು ಕಾರ್ಯತಂತ್ರಗಳು ಸಾಂದರ್ಭಿಕವಾದುದು ಎಂಬುದನ್ನು ಪ್ರತಿಬಿಂಬಿಸುತ್ತದೆ. ಇವುಗಳನ್ನು ಕ್ಷೇತ್ರಮಟ್ಟದಲ್ಲಿ ಕಾರ್ಯೋನ್ಮುಖವಾಗಿರುವ ತಂಡಗಳು ಗುರುತಿಸುವ ಅಗತ್ಯಗಳ ಆಧಾರದ ಮೇಲೆ ಕಾರ್ಯಪ್ರವೃತ್ತಗೊಳಿಸಲಾಗಿದೆ. ಗುಣಾತ್ಮಕ ಶಿಕ್ಷಣ ಕಾರ್ಯಕ್ರಮವನ್ನು ಒದಗಿಸುವುದರ ಮೂಲಕ ದೂರದ ಜನವಸತಿಗಳಲ್ಲಿನ ಪ್ರತಿಯೊಂದು ಮಗುವಿಗೂ ಭೌತಿಕ ಮತ್ತು ಸಾಮಾಜಿಕ ಸಮಾನತೆಯೊಂದಿಗೆ ಶೈಕ್ಷಣಿಕ ಅವಕಾಶದಲ್ಲಿ ಸಮಾನತೆಯನ್ನು ಒದಗಿಸುವುದು ವಿಕಸನಶೀಲ ಪರ್ಯಾಯ ಶಾಲಾ ಶಿಕ್ಷಣ ವಿನ್ಯಾಸಗಳ ಮೂಲಭೂತ ಕಾಳಜಿಯಾಗಿದೆ. ಈ ಗುರಿಯನ್ನು ಸಾಕಾರಗೊಳಿಸುವ ಪ್ರಯತ್ನದಲ್ಲಿ ರಾಜ್ಯಗಳು ಹತ್ತು ಹಲವು ಕಾರ್ಯಗಳನ್ನು ಅಳವಡಿಸಿಕೊಂಡಿವೆ. ಇವುಗಳು ತಲುಪಲಾಗದ ಮಕ್ಕಳನ್ನು ತಲುಪಲು ಬಹುಮುಖ ಉಪಕ್ರಮವನ್ನು ಪ್ರತಿಬಿಂಬಿಸುತ್ತವೆ.

**ಪರ್ಯಾಯ ಶಾಲಾ ಶಿಕ್ಷಣ ವಿನ್ಯಾಸಗಳ ಸೂತ್ರೀಕರಣ ಪ್ರಕ್ರಿಯೆ**

ಸಿದ್ಧತೆಯ ಹಂತದ ನಂತರವೇ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮವನ್ನು ವಾಸ್ತವವಾಗಿ ಆರಂಭಿಸಲಾಯಿತು. ಯೋಜನೆಯನ್ನು ಕ್ಷೇತ್ರದಲ್ಲಿ ಪ್ರಾರಂಭಿಸುವ ಮುನ್ನ ಪರ್ಯಾಪ್ತ ಸಿದ್ಧತೆಗಾಗಿ ಸಾಕಷ್ಟು ಸಮಯವನ್ನು ವಿನಯೋಗಿಸಲಾಯಿತು. ನೆಲಮಟ್ಟದಲ್ಲಿ ಪರ್ಯಾಯ ಶಾಲಾ ಶಿಕ್ಷಣವನ್ನು ಕಾರ್ಯಗತಗೊಳಿಸುವಲ್ಲಿ ಅಗತ್ಯವಾದ ಕಾರ್ಯಗಳಿಗೆ ಜಿಲ್ಲೆಗಳನ್ನು ಸಿದ್ಧಪಡಿಸಿ ಸನ್ನದ್ಧಗೊಳಿಸುವ ಎಲ್ಲಾ ಚಟುವಟಿಕೆಗಳು ಇದರಲ್ಲಿ ಒಳಗೊಂಡಿದ್ದವು.

**ಸಿದ್ಧತೆಯ ಹಂತದಲ್ಲಿ ಒಳಗೊಂಡ ನಿರ್ದಿಷ್ಟ ಚಟುವಟಿಕೆಗಳು ಹೀಗಿವೆ:**

(i) ಸಮುದಾಯದ ವ್ಯಕ್ತಿಗಳು, ಶಿಕ್ಷಕರು, ಸ್ವಯಂ–ಸೇವಕ ಸಂಘಗಳ ಪ್ರತಿನಿಧಿಗಳು ಮತ್ತು ಇತರ ಪಾಲುದಾರರನ್ನು ಒಳಗೊಂಡಂತೆ ಜನವಸತಿವಾರು ಗೃಹಸರ್ವೇಕ್ಷಣೆಯ ಮೂಲಕ ಅವಶ್ಯಕತೆಯ ಮೌಲ್ಯಮಾಪನ. ಶಾಲೆಯಿಂದ ಹೊರಗುಳಿದು ಕಲಿಯುತ್ತಿರುವವರು, ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಾನಮಾನ, ಅವರು ಶಾಲೆಯನ್ನು ಅಕಾಲಿಕವಾಗಿ ಬಿಟ್ಟುಹೋದುದಕ್ಕೆ ಕಾರಣಗಳನ್ನು ಕಂಡುಹಿಡಿಯಲು ಸರ್ವೇಕ್ಷಣೆಗಳನ್ನು ಕೈಗೊಳ್ಳಲಾಯಿತು.

(ii) ವಿವಿಧ ವರ್ಗಗಳ ಮಕ್ಕಳನ್ನು ಹಾಗೂ ಅವರ ನಿರ್ದಿಷ್ಟ ಅವಶ್ಯಕತೆಗಳನ್ನು ಗುರುತಿಸುವ ಸಲುವಾಗಿ ಗ್ರಾಮವಾಸಿಗಳ ಸಕ್ರಿಯ ಸಹಭಾಗಿತ್ವದೊಂದಿಗಿನ ಸೂಕ್ಷ್ಮ ಯೋಜನಾ ಚಟುವಟಿಕೆಗಳು ಮತ್ತು ಸೂಕ್ತ ಸ್ಥಳಗಳಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳನ್ನು ತೆರೆಯುವ ವಿವಿಧ ಕಾರ್ಯತಂತ್ರಗಳನ್ನು ರೂಪಿಸುವುದಕ್ಕಾಗಿ ಸಹಭಾಗಿತ್ವದೊಂದಿಗಿನ ವಿಕೇಂದ್ರೀಕೃತ ಯೋಜನೆ

(iii) ಶಾಲಾ ಶಿಕ್ಷಣ ಸಮಿತಿ (Village Education Committee – VEC) ಮತ್ತು ಸಮುದಾಯ ಸದಸ್ಯರುಗಳ ನೆರವಿನೊಂದಿಗೆ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಸ್ಥಳಗಳನ್ನು ಗುರುತಿಸುವಿಕೆ, ಸ್ಥಳೀಯ ಸಮುದಾಯದ ಸದಸ್ಯರೊಂದಿಗೆ ಚರ್ಚಾ ಸಭೆಗಳು, ಆ ಪ್ರದೇಶದಿಂದ ಅರ್ಹ ಶಿಕ್ಷಕರ ಗುರುತಿಸುವಿಕೆ, ಈ ಉದ್ದೇಶಕ್ಕೆ ಸೂತ್ರೀಕರಣಗೊಂಡಿರುವ ಮಾನದಂಡಗಳ ಆಧಾರದ ಮೇಲೆ ಅವರ ಆಯ್ಕೆ :

(iv) ಗ್ರಾಮ ಶಿಕ್ಷಣ ಸಮಿತಿಯ ರಚನೆ, ಮಾತೃ–ಶಿಕ್ಷಕ ಸಂಘದ ರಚನೆ ಹಾಗೂ ಉದ್ದೇಶಿತ ಗುಂಪುಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಬೇರೆ ಬೇರೆ ಜನವಸತಿಗಳಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮವನ್ನು ಯೋಜಿಸುವಲ್ಲಿ ಅವರ ನೆರವನ್ನು ಕೋರುವುದು.

(v) ಅಭಿವೃದ್ಧಿ ಮತ್ತು ಕಲ್ಯಾಣ ಇಲಾಖೆಗಳು, ಶ್ರಮಿಕ ಇಲಾಖೆ (Department of Labour), ತಾಯಿ ಮಕ್ಕಳನ್ನು ನೋಡಿಕೊಳ್ಳುವ ಸರ್ಕಾರಿ ಘಟಕಗಳು, ಪ್ರಾಥಮಿಕ ಶಿಕ್ಷಣದಲ್ಲಿ ಆಳವಾದ ಅನುಭವವುಳ್ಳ ಸರ್ಕಾರೇತರ ಸಂಸ್ಥೆ – ಇತ್ಯಾದಿಗಳೊಂದಿಗೆ ಪರ್ಯಾಯ ಶಾಲಾ ಶಿಕ್ಷಣ ಪೂರೈಕೆಯ ಸೇವೆಗಳನ್ನು ಬಳಸಿ ಮಕ್ಕಳನ್ನು ಶಿಕ್ಷಿತರನ್ನಾಗಿಸುವ ಅಗತ್ಯದ ಬಗ್ಗೆ ಪೋಷಕರಿಗೆ ತಿಳಿವು ನೀಡುವ ಪ್ರಚಾರ ಕಾರ್ಯಕ್ರಮಗಳು

(vi) ಆಯ್ದ ಸ್ಥಳಗಳಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮ ಪ್ರಾರಂಭಿಸಲು ಸಮುದಾಯ ಸಂಪನ್ಮೂಲಗಳ ಕ್ರೋಢೀಕರಣ.

Digitised by Bharatavani, CIIL

(vii)ಸೂಕ್ತ ಸ್ಥಳಗಳಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸಲು ಮಾನದಂಡಗಳನ್ನು ವಿಕಸಿಸುವುದು.

(viii) ಸರ್ವೇಕ್ಷಣೆಯ ದತ್ತಾಂಶಗಳ ಏಕೀಕರಣ ಮತ್ತು ನಿರ್ದಿಷ್ಟ ಪ್ರದೇಶದಲ್ಲಿ ಕೇಂದ್ರಗಳ ಸಂಖ್ಯೆಯನ್ನು ಗುರುತಿಸಲು ವಿಶ್ಲೇಷಣೆ.

(ix) ಸ್ಥಳೀಯ ಸಮುದಾಯದ ವಾಸ್ತವಿಕ ಬೇಡಿಕೆ ಹಾಗೂ ಉದ್ದೇಶಿತ ಗುಂಪಿನ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವಲ್ಲಿ ಕೇಂದ್ರ ಅದೆಷ್ಟು ಸೂಕ್ತ ಎಂಬೀ ಅಂಶಗಳ ಆಧಾರದ ಮೇಲೆ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳನ್ನು ತೆರೆಯುವಿಕೆ.

(x) ಪುನರಾವರ್ತಕ ಪ್ರಶಿಕ್ಷಣ ಹಾಗೂ ನವೀನ ಆಚರಣೆಯುಳ್ಳ ಶಿಕ್ಷಣ ಕೇಂದ್ರಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜ್ಞಾನದಾಯಿ ಭೇಟಿಗಳ ಮುಖಾಂತರ ವಿವಿಧ ಹಂತಗಳಲ್ಲಿ ಸಾಮರ್ಥ್ಯ ವರ್ಧನೆ.

(xi) ಜಿಲ್ಲಾ ನಗರಾಭಿವೃದ್ಧಿ ನಿಯೋಗ, ಯೂನಿಸೆಫ್ ಲೋಕ ಕಲ್ಯಾಣ ಸಂಘಟನೆಗಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಆರೋಗ್ಯ ಮತ್ತು ಶ್ರಮ ಇಲಾಖೆ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ, ಅಂತರರಾಷ್ಟ್ರೀಯ ಸ್ತರಗಳಲ್ಲಿ ಸಂಪರ್ಕ ಸಾಧಿಸಲು ಕಾರ್ಯತಂತ್ರಗಳನ್ನು ಹಾಗೂ ಕಾರ್ಯಕ್ರಮಗಳನ್ನು ವಿಕಸಿಸುವುದು

(xii)ಜಿಲ್ಲೆ, ಉಪ-ಜಿಲ್ಲೆ ಮತ್ತು ಗ್ರಾಮ ಸ್ತರಗಳ ವ್ಯಕ್ತಿಗಳೊಂದಿಗೆ ವಿದ್ಯಾರ್ಥಿಗಳ ಆಧಾರ ರೇಖೆ ಕಲಿಕಾ ಸಾಧನೆಯನ್ನು ಕುರಿತ ದತ್ತಾಂಶಗಳ ವಿನಿಮಯ.

(xiii) ಅಂತರ್ನಿಹಿತ ಹಾಗೂ ಸುಪ್ತವಾಗಿರುವ ಸ್ಥಳೀಯ ಸ್ತರದ ಪ್ರತಿಭೆಯನ್ನು ಗುರುತಿಸುವುದು ಮತ್ತು ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮವನ್ನು ಸದೃಢಗೊಳಿಸಲು ಅದರ ಸರಿಯಾದ ಉಪಯೋಗ.

(xiv) ವಿವಿಧ ಸ್ತರಗಳಲ್ಲಿ ವಿಕೇಂದ್ರೀಕೃತ ಸಂಪನ್ಮೂಲ ಸಂರಚನೆಗಳ ಸೃಷ್ಟಿ-ರಾಜ್ಯ ಸಂಪನ್ಮೂಲ ಸಮೂಹ, (State Resource Group – SRG), ಜಿಲ್ಲಾ ಸಂಪನ್ಮೂಲ ಸಮೂಹ, (District Resource Group – DRG), ಬ್ಲಾಕ್ ಸಂಪನ್ಮೂಲ ಕೇಂದ್ರಗಳು, (BRC) ನ್ಯಾಯ ಪಂಚಾಯತ ಸಂಪನ್ಮೂಲ ಕೇಂದ್ರಗಳು, (NPRs/CRCs) ಮತ್ತು ಗ್ರಾಮ ಶಿಕ್ಷಣ ಸಮಿತಿ (VECs)

(xv)ಸೇವಾ ಪೂರ್ವ/ಸೇವಾಕಾಲೀನ ಪ್ರಶಿಕ್ಷಣ ಕಾರ್ಯಕ್ರಮದಂತಹ ಸಮಗ್ರ ರೂಪದ ಕಾರ್ಯಕ್ರಮ ದರ್ಶನ ಕಾರ್ಯಾಗಾರಗಳು (Vision Workshops) ಮತ್ತು ಹೊಸ ವಿಚಾರಗಳ ಸೃಷ್ಟಿಗಾಗಿ ಪ್ರಾಯೋಗಿಕ ಹಾಗೂ ನಾವೀನ್ಯಯುತ ಶೈಕ್ಷಣಿಕ ಕೇಂದ್ರಗಳಿಗೆ ಜ್ಞಾನದಾಯಿ ಭೇಟಿ – ಇವುಗಳ ಮುಖಾಂತರ ಜಿಲ್ಲಾ ಶಿಕ್ಷಣ ಪ್ರಶಿಕ್ಷಣ ಸಂಸ್ಥೆ (DIET), B.R.C., C.R.C., ಜಿಲ್ಲಾ ಪ್ರಾಯೋಜನಾ ಕಾರ್ಯಾಲಯ (ಆಕಔ) ದಲ್ಲಿ ಸೇವೆಯಲ್ಲಿರುವ ಜಿಲ್ಲಾ ಸಂಯೋಜಕರು ಹಾಗೂ ರಾಜ್ಯ ಸಂಪನ್ಮೂಲ ತಂಡದ ಸದಸ್ಯರು ಮೊದಲಾದ ಸಂಪನ್ಮೂಲ ಸಂಸ್ಥೆಗಳ ಸಾಮರ್ಥ್ಯ ನಿರ್ಮಾಣ.

(xvi) CRC, BRC ಜಿಲ್ಲಾ ಸಂಯೋಜಕರುಗಳಿಂದ ಶಿಕ್ಷಕರಿಗೆ ಕ್ಷೇತ್ರದಲ್ಲಿಯೇ ನೆರವು ಒದಗಿಸುವುದರ ಮೂಲಕ ಒಳ್ಳೆಯ ಶೈಕ್ಷಣಿಕ ನೆರವಿನ ವ್ಯವಸ್ಥೆಯ ನಿರ್ಮಾಣ.

(xvii) ನಿರ್ವಹಣೆಯ ವಿಷಯ ಅಥವಾ ಯಾವುದೇ ಇತರ ಕ್ಷೇತ್ರ ಸಮಸ್ಯೆಗಳಿಗೆ ಸಂಬಂಧಿಸಿದ ಸಹಭಾಗಿತ್ವ ಚರ್ಚೆಯ ಪ್ರಯುಕ್ತ ನಿಯತ ಮಾಸಿಕ ಸಭೆ ಕರೆಯುವುದು.

(xviii) ವಿವಿಧ ಉಪಕ್ರಮಗಳನ್ನು ಅಳವಡಿಸಿಕೊಂಡು ಸ್ಥಳೀಯ ಸನ್ನಿವೇಶಗಳನ್ನು ಪ್ರತಿಬಿಂಬಿಸುವ ಬೋಧನೆ-ಕಲಿಕಾ ಸಾಮಗ್ರಿಗಳ ಪುನರ್ನವೀಕರಿಸಿದ ಅಭಿವೃದ್ಧಿ.

(xix) CREDA, ಋಷಿ ವ್ಯಾಲಿ ಎಜುಕೇಷನಲ್ ಫೌಂಡೇಷನ್, ಬೌದ್ಧ ಶಿಕ್ಷಾ ಸಮಿತಿ, ಎಮ್.ವಿ. ಫೌಂಡೇಸನ್, ನಳಂದ (NALANDA) ಇತ್ಯಾದಿ ಸರ್ಕಾರೇತರ ಸಂಸ್ಥೆಗಳ ವಿಶೇಷಜ್ಞರ ಮತ್ತು ಎಸ್.ಆರ್.ಜಿ. ಸದಸ್ಯರ ಸಹಭಾಗಿತ್ವದೊಂದಿಗೆ ನಿರ್ದಿಷ್ಟ ಶೈಕ್ಷಣಿಕ ವಿನ್ಯಾಸಗಳ ಅಗತ್ಯಗಳಿಗೆ ಅನುಗುಣವಾಗಿ ವಿವಿಧ ಪ್ರಶಿಕ್ಷಣ ಸಂಸ್ಥೆಗಳ ಸಿದ್ಧತೆ.

(xx) ಬಿಆರ್‌ಸಿ/ಸಿಆರ್‌ಸಿ ಸಂಯೋಜಕರು ಮತ್ತು ಎಸ್.ಆರ್.ಜಿ ಸದಸ್ಯರುಗಳ ಪರಾಮರ್ಶನದೊಂದಿಗೆ ಪರ್ಯಾಯ ಶಾಲಾ ಶಿಕ್ಷಣ ಸಂಯೋಜಕರಿಂದ ಕ್ಷೇತ್ರವಾರು ಸಮಗ್ರ ಜಿಲ್ಲಾ ಯೋಜನೆಯ ತಯಾರಿ.

ಸೇವಾಪೂರ್ವ ಪ್ರಶಿಕ್ಷಣ ಕಾರ್ಯಕ್ರಮವನ್ನು ಶಿಕ್ಷಕರು ಪೂರೈಸಿದ ನಂತರ ಮತ್ತು ಇತರ ಅಗತ್ಯ ಏರ್ಪಾಡುಗಳ ನಂತರವೇ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಯಿತು.

ಈ ಸಮಗ್ರ ಪ್ರಕ್ರಿಯೆಯಲ್ಲಿ ಸಾಂದರ್ಭಿಕತೆ, ಕೆಳಮೇಲ್ಮುಖ ನಿರ್ವಹಣಾ ವ್ಯವಸ್ಥೆ, ವಿಕೇಂದ್ರೀಕೃತ ಯೋಜನೆ, ಸಮುದಾಯ ಸಹಭಾಗಿತ್ವ ಮತ್ತು ಉದ್ದೇಶಿತ ಗುಂಪಿನ ಬೋಧನಾ ಶಾಸ್ತ್ರ ಉಚಿತವಾಗಿದೆಯೇ ಎನ್ನುವುದಕ್ಕೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವಿಕೆ ಸ್ವರೂಪದಲ್ಲಿ ಶಿಕ್ಷಕ ಸಬಲೀಕರಣದ ಮೂಲಕ ಗುಣಾತ್ಮಕ ಸುಧಾರಣೆ, ಸ್ಥಾನೀಯ ನಿರ್ದಿಷ್ಟ ಕಲಿಕಾ ಸಾಮಗ್ರಿಗಳನ್ನು ಸ್ವಯಂ-ಸಿದ್ಧಪಡಿಸುವಂತೆ ಶಿಕ್ಷಕರಿಗೆ ಪ್ರೋತ್ಸಾಹ; ಸ್ಥಳೀಯ ನಿರ್ದಿಷ್ಟತೆ ಮತ್ತು ಸಾಂದರ್ಭಿಕತೆಗಳನ್ನು ಖಚಿತಪಡಿಸಲು ಬೋಧನೆ-ಕಲಿಕಾ ಸಾಮಗ್ರಿಗಳ ಪುನರ್ನವೀಕರಣ; CRC, BRC ಮತ್ತು DIETಗಳಂತಹ ಸಂಪನ್ಮೂಲ ಸಂಸ್ಥೆಗಳ ಮೂಲಕ ಶಿಕ್ಷಕರಿಗೆ ಅವರ ಕಾರ್ಯಸ್ಥಳದಲ್ಲಿಯೇ ಕ್ಷೇತ್ರ ನೆರವು (On-site support) ಒದಗಿಸಲು ಒತ್ತು ಮತ್ತು DIETUಗಳ ಪ್ರಶಿಕ್ಷಣ ಸಾಮರ್ಥ್ಯವನ್ನು ಉನ್ನತೀಕರಿಸುವುದು.

Digitised by Bharatavani, CIIL

ಪ್ರೌಢಶಾಲೆಯಲ್ಲಿ ಓದಿ ಸಫಲರಾದ, ಸ್ಥಳೀಯ ವ್ಯಕ್ತಿಯನ್ನು ವಿಶೇಷವಾಗಿ, ಓರ್ವ ಮಹಿಳೆಯನ್ನು ಪರ್ಯಾಯ ಶಾಲಾ ಶಿಕ್ಷಣ ಕೇಂದ್ರದ ಶಿಕ್ಷಕರಾಗಲು ಅರ್ಹರೆಂದು ನಿರ್ಣಯಿಸಲಾಯಿತು.

ಸೇವಾಪೂರ್ವ ಪ್ರಶಿಕ್ಷಣದ ರೂಪದಲ್ಲಿ 30 ದಿನಗಳ ಕಾಲ ಜರುಗುವ ಪ್ರಶಿಕ್ಷಣ ಕಾರ್ಯಕ್ರಮ ಸರಣಿಯ ಮೂಲಕ ಶಿಕ್ಷಕರನ್ನು ಅವರ ಕಾರ್ಯಗಳಿಗೆ ಸಿದ್ಧಗೊಳಿಸಲಾಗುವುದರಿಂದ, 12 ದಿನಗಳ ಪುನಶ್ಚೇತನ ಕಾರ್ಯಕ್ರಮಗಳನ್ನು ಮತ್ತು ಚರ್ಚಾವೇದಿಕೆಗಳನ್ನು ಕ್ಲಸ್ಟರ್ ಸ್ತರದಲ್ಲಿ ಆಯೋಜಿಸಲಾಯಿತು. ಇದಲ್ಲದೆ ಈ ಕ್ಷೇತ್ರದಲ್ಲಿಯೇ ಲಭ್ಯವಾಗುವ ಶೈಕ್ಷಣಿಕ ನೆರವನ್ನು ಸಿಆರ್‌ಸಿಗಳು ಶಿಕ್ಷಕರಿಗೆ ಅವರ ಕಾರ್ಯತಾಣದಲ್ಲಿಯೇ ಒದಗಿಸುವುವು.

**ನಿರ್ವಹಣೆ ಮತ್ತು ಶೈಕ್ಷಣಿಕ ನೆರವುಗಳಲ್ಲಿ ನಾವೀನ್ಯತೆ:**

ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದಲ್ಲಿ ಮೇಲ್ವಿಚಾರಣೆಗೆ ಸಂಬಂಧಿಸಿದ ಪರಿಕಲ್ಪನೆಯು ಸಂಪೂರ್ಣ ಬದಲಾವಣೆ ಹೊಂದುವುದನ್ನು ಗಮನಿಸಬಹುದು. ಕೆಲವೇ ಮೇಲ್ವಿಚಾರಕರು ಕೇಂದ್ರಗಳನ್ನು ಮೇಲ್ವಿಚಾರಿಸುವ ಸಾಮಾನ್ಯ ವ್ಯವಸ್ಥೆಗೆ ತದ್ವಿರುದ್ಧವಾಗಿ ಇಲ್ಲಿ ಜವಾಬ್ದಾರಿಯನ್ನು NPRC ಯ ಸಂಯೋಜಕರು, ಗ್ರಾಮ ಶಿಕ್ಷಣ ಸಮಿತಿ ಸದಸ್ಯರು, ಪೋಷಕರು, ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರ ಜೊತೆಗೆ ಸಮುದಾಯದ ಸದಸ್ಯರು ಹಂಚಿಕೊಳ್ಳುವುದು ಜಂಟಿ ಜವಾಬ್ದಾರಿಯಾಗಿದೆ. ಆಟಗಳು, ಚಟುವಟಿಕೆಯ ವಿಧಾನಗಳು ಮತ್ತು ಗುಂಪು ಚಟುವಟಿಕೆಗಳ ಮೂಲಕ ಸಹಭಾಗಿತ್ವದ ಕಲಿಕಾ ಪರಿಸರವನ್ನು ಸೃಷ್ಟಿಸುವಲ್ಲಿ ಶಿಕ್ಷಕರಿಗೆ ಸ್ಥಳದಲ್ಲಿಯೇ ಮಾರ್ಗದರ್ಶನ ಒದಗಿಸುವ ಸಲುವಾಗಿ ಅಖಅ, ಃಖಅ ಮತ್ತು ಖಖಉ ಸದಸ್ಯರು ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳಿಗೆ ಕಾಲಕಾಲಕ್ಕೆ ಭೇಟಿ ನೀಡುವರು.

ಜಿಲ್ಲಾ ಸ್ತರದಲ್ಲಿ ಪರ್ಯಾಯ ಶಾಲಾ ಶಿಕ್ಷಣ ಸಂಯೋಜಕನು ಶಿಕ್ಷಕರು ಸೇರಿದಂತೆ ಅಧಿಕಾರಿಗಳಿಗೆ ಶೈಕ್ಷಣಿಕ ಮಾರ್ಗದರ್ಶನ ಒದಗಿಸುವಲ್ಲಿ ಮತ್ತು ನಿಯಮಿತವಾಗಿ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳ ಮೇಲುಸ್ತುವಾರಿ ಕೈಗೊಳ್ಳುವಲ್ಲಿ ಸಮನಾದ ಜವಾಬ್ದಾರಿಯನ್ನು ಹೊಂದಿರುವನು. ಆತ ಕ್ರಿಯಾಯೋಜನೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲು ಪ್ರತಿಪುಷ್ಟಿ ಮಾಹಿತಿಯನ್ನು ಬಳಸುವನು.

ಒಂದು ರೀತಿಯಲ್ಲಿ, ವೈಯಕ್ತಿಕವಾಗಿ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳ ಮೇಲುಸ್ತುವಾರಿಗಾಗಿ ಜಿಲ್ಲೆಗಳಿಗೆ ಆಗಾಗ್ಗೆ ಭೇಟಿ ಕೊಡುವ ರಾಜ್ಯ ಪ್ರಾಯೋಜನಾ ಅಧಿಕಾರಿಗಳು ಸಹ ಈ ಜವಾಬ್ದಾರಿಯನ್ನು ಹಂಚಿಕೊಳ್ಳುವರು. ರಾಜ್ಯ ಪ್ರಾಯೋಜನಾ ಕಾರ್ಯಾಲಯದ ಸ್ತರದಲ್ಲಿ ವಿವಿಧ ಜಿಲ್ಲೆಗಳ ಸಂಯೋಜಕರೊಂದಿಗೆ ಮಾಸಿಕ ಸಭೆಗಳನ್ನು ನಡೆಸುವುದರ ಮೂಲಕ ಕ್ಷೇತ್ರ ಪರಿಸ್ಥಿತಿಗಳನ್ನು ಪುನರಾವಲೋಕಿಸಲೆಂದು ವ್ಯವಸ್ಥೆಯೊಂದನ್ನು ರೂಪಿಸಲಾಗಿದೆ. ಈ ಸಭೆಯಲ್ಲಿ ರಾಜ್ಯ ಸಂಪನ್ಮೂಲ ತಂಡದ ಸದಸ್ಯರು, ವಿವಿಧ ಜಿಲ್ಲೆಗಳ ಸಂಯೋಜಕರು, ರಾಜ್ಯ ಪ್ರಾಯೋಜನಾ ಕಾರ್ಯಾಲಯದ ಸದಸ್ಯರು ಮತ್ತು ಸರ್ಕಾರೇತರ ಸಂಸ್ಥೆಗಳ ಸದಸ್ಯರೊಂದಿಗೂ ಸಹ ಅನ್ಯೋನ್ಯ ಕ್ರಿಯೆಯಲ್ಲಿ ಭಾಗವಹಿಸುವರು. ಕ್ಷೇತ್ರದಲ್ಲಿ ಹೊರಹೊಮ್ಮುತ್ತಿರುವ ಪರಿಸ್ಥಿತಿಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಪರಿಶೀಲಿಸಿ, ಮಾರ್ಪಡಿಸಲು ಅದ್ವಿತೀಯ ಅವಕಾಶವನ್ನು ಇದು ಒದಗಿಸುವುದು.

ಮೇಲುಸ್ತುವಾರಿ ಪ್ರಕ್ರಿಯೆಯು ರಾಜ್ಯದಿಂದ ರಾಷ್ಟ್ರ ಸ್ತರದವರೆಗೆ ವಿಸ್ತರಿಸುವುದು. ರಾಷ್ಟ್ರಮಟ್ಟದಲ್ಲಿ ವರ್ಷಕ್ಕೆ ಎರಡು ಬಾರಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಎಡ್.ಸಿ.ಐ.ಎಲ್. ನವದೆಹಲಿ (Ed. CIL, New Delhi) ಯ ತಾಂತ್ರಿಕ ಸಂಪನ್ಮೂಲ ತಂಡದೊಂದಿಗೆ (Technical Research Group – TRG) ಮೇಲುಸ್ತುವಾರಿ ಮತ್ತು ನಿರ್ಣಯ ಕೈಗೊಳ್ಳುವಿಕೆಗಳ ಪ್ರಕ್ರಿಯೆಗಳನ್ನು ಸುಗಮಗೊಳಿಸುವ ಅನ್ಯೋನ್ಯ ಕ್ರಿಯೆಯ ಸಭೆಗಳನ್ನು ಜಿಲ್ಲಾ ಸಂಯೋಜಕರು ಮತ್ತು RPO ಸದಸ್ಯರೊಂದಿಗೆ ನಡೆಸುತ್ತದೆ. ಈ ಸಂದರ್ಭದಲ್ಲಿ NUEPA ಮತ್ತು NCERT ಸಂಸ್ಥೆಗಳ ಕೊಡುಗೆ ಮಹತ್ವಪೂರ್ಣವಾದುದು. ಪರ್ಯಾಯ ಶಾಲಾ ಶಿಕ್ಷಣದಲ್ಲಿನ ಪ್ರಮುಖ ನಿರ್ವಹಣಾ ಸುಧಾರಣೆಗಳು ಹೀಗಿವೆ:– ಪ್ರತಿಯೊಂದು ರಾಜ್ಯದಲ್ಲಿ ಕಾರ್ಯಕ್ರಮದ ಸಮಗ್ರ ದರ್ಶನದ ವಿಕಾಸ ಏಕಮೇವ ಧ್ಯೇಯವೆಂಬ ನಿಲುವು ಮತ್ತು ಸಂಘದ ಮೂಲಕ ಪ್ರಾಯೋಜನೆಯ ಅನುಷ್ಠಾನ; ನಿರ್ವಹಣೆಗಾಗಿ ಮಾಹಿತಿ ಸೇವೆಯ ಅಭಿವೃದ್ಧಿ ಮತ್ತು ಬಲವರ್ಧನೆ; 'ವಿಶೇಷ ಗಮನ ಕೇಂದ್ರಿತ ರಾಜ್ಯಗಳು' ಎಂಬ ರೂಪದಲ್ಲಿ ಅನುಷ್ಠಾನದಲ್ಲಿ ಹಿನ್ನಡೆಯಾಗಿರುವ ರಾಜ್ಯಗಳ ಹತ್ತಿರದ ಮೇಲುಸ್ತುವಾರಿ ಮತ್ತು ಈ ರಾಜ್ಯಗಳಿಗೆ ಹೆಚ್ಚುವರಿ ಪ್ರವೇಶ್ಯಗಳ (Inputs) ಒದಗಣೆ, ಜಿಲ್ಲೆಗಳ ಪರ್ಯಾಯ ಶಾಲಾ ಶಿಕ್ಷಣ ಸಂಯೋಜಕರು ರಾಜ್ಯ ಪ್ರಾಯೋಜನಾ ಕಾರ್ಯಾಲಯದ ಅಧಿಕಾರಿಗಳು, ರಾಷ್ಟ್ರೀಯ ಸ್ತರದಲ್ಲಿನ (Ed. CIL) ತಾಂತ್ರಿಕ ನೆರವು ತಂಡದ ಪ್ರತಿನಿಧಿಗಳು, ಸಾರ್ವಜನಿಕವಾಗಿ ಅನಾನುಕೂಲಿತ ಮಕ್ಕಳ ಗುಂಪಿನೊಂದಿಗೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳ ಹಾಗೂ ಪ್ರಾಯೋಜನಾ ಕಾರ್ಯಾಲಯದ ಪ್ರತಿನಿಧಿಗಳು, ಶಿಕ್ಷಣ ತಜ್ಞರು, ಎಸ್‌ಸಿಇಆರ್‌ಟಿ (SCERT) ಸಂಸ್ಥೆಯ ಪ್ರತಿನಿಧಿಗಳು ಮುಂತಾದವರನ್ನು ಒಳಗೊಂಡ ಸಕ್ರಿಯ ರಾಜ್ಯ ಸಂಪನ್ಮೂಲ ತಂಡದ ರಚನೆ. ಅನುಭವದ ವಿಶಾಲ ಆಧಾರವುಳ್ಳ ಮತ್ತು ವಿಭಿನ್ನ ಪಾತ್ರ ಹಾಗೂ ಜವಾಬ್ದಾರಿಗಳನ್ನು ಹೊತ್ತ ಈ ತಂಡ ಸಮಗ್ರ ಯೋಜನೆಯನ್ನು ಸುಗಮಗೊಳಿಸಿದೆಯಲ್ಲದೆ ಸಂಪನ್ಮೂಲಗಳ ಏಕೀಕರಣವನ್ನು ಸುಲಭಗೊಳಿಸಿದೆ. ನಿಯಮಿತ ಕಾಲದಲ್ಲಿ ಕೈಗೊಂಡ ಪ್ರಯತ್ನಗಳ ಸಂಕುಲಿತ ಪುನರಾವಲೋಕನ ಇದಾಗಿದ್ದು ಕ್ಷೇತ್ರ ಸ್ತರದಿಂದ ಲಭ್ಯವಾದ ಪ್ರತಿಪುಷ್ಟಿಯ ಆಧಾರದ ಮೇಲೆ ಕಾರ್ಯಕ್ರಮದಲ್ಲಿ ಮಾರ್ಪಾಡುಗಳನ್ನು ತರಲು ಅನುವು ಮಾಡಿಕೊಡುತ್ತದೆ. ಯೋಗ್ಯ ಕಾರ್ಯತಂತ್ರಗಳ ವಿನ್ಯಾಸ ಆಯೋಜನೆ (Planning) ಕಾರ್ಯತಂತ್ರಗಳಿಗೆ ಶೈಕ್ಷಣಿಕ ಚೌಕಟ್ಟಿಗೆ ಪ್ರವೇಶ್ಯಗಳ ಒದಗಣೆ, ಮೇಲ್ವಿಚಾರಣೆ ಹಾಗೂ ಶೈಕ್ಷಣಿಕ ಬೆಂಬಲದ ವ್ಯವಸ್ಥೆಗಳ ವಿನ್ಯಾಸ, ಶಿಕ್ಷಕರ ಸಾಮರ್ಥ್ಯವರ್ಧನೆಯನನ್ನು ಕುರಿತ ಆಯೋಜನೆ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಈ ತಂಡವು

Digitised by Bharatavani, CIIL

ಮಾರ್ಗದರ್ಶನ ನೀಡುತ್ತಾ ಬಂದಿದೆ. ರಾಜ್ಯ ಸಂಪನ್ಮೂಲ ತಂಡವು ಕಾರ್ಯಕ್ರಮದಲ್ಲಿನ ಪ್ರಗತಿಯನ್ನು ಪರಿಶೀಲಿಸಿ ಜಿಲ್ಲೆ ಮತ್ತು ಕ್ಷೇತ್ರ ಮಟ್ಟದಲ್ಲಿ ಅಧಿಕಾರಿಗಳಿಗೆ ಒದಗಿಸಬೇಕಾದ ಅವಶ್ಯ ಆಡಳಿತಾತ್ಮಕ ನೆರವನ್ನು ಕುರಿತ ಸಲಹೆಯನ್ನು ಕೂಡ ನೀಡುತ್ತದೆ. ತಂಡದ ಸದಸ್ಯರು ಕ್ಷೇತ್ರ ಕಾರ್ಯಕ್ರಮಗಳಿಗೆ ಭೇಟಿ ನೀಡಿ ಕ್ಷೇತ್ರ ತಂಡಗಳಿಗೆ ಅಗತ್ಯ ನೆರವು ನೀಡುತ್ತಾರೆ. ಅಲ್ಲದೆ ರಾಜ್ಯ ಪ್ರಾಯೋಜನಾ ಕಾರ್ಯಾಲಯಕ್ಕೆ ಪ್ರತಿಪುಷ್ಠಿಯನ್ನು ಸಹ ಒದಗಿಸುತ್ತಾರೆ; ಹಾಗೂ ರಾಜ್ಯಗಳಲ್ಲಿ ಪರ್ಯಾಯ ಶಾಲಾ ಶಿಕ್ಷಣ ಅನುಷ್ಠಾನದ ಗಮನ ಕೇಂದ್ರಗಳಲ್ಲಿ ಯಾವಾಗಲೂ ಗುಣಾತ್ಮಕತೆಯ ನಿಯಂತ್ರಣ ಒಂದಾಗಿದೆ. ಗುಣಾತ್ಮಕತೆಯ ನಿಯಂತ್ರಣದ ಎರಡು ಪ್ರಮುಖ ಕ್ರಮಗಳು ಇಲ್ಲಿ ಉಲ್ಲೇಖಿಸಲು ಅರ್ಹವಾಗಿವೆ. ಅವು ಯಾವುವೆಂದರೆ:

ಶಾಲೆ ನಡೆಯುವ ಮತ್ತು ಕಾರ್ಯಕ್ರಮದ ಕಾಲಾವಧಿ: ಪರ್ಯಾಯ ಶಾಲಾ ಶಿಕ್ಷಣ ಕೇಂದ್ರದ ಚಟುವಟಿಕೆಗಳನ್ನು ದಿನನಿತ್ಯವೂ ಕನಿಷ್ಠ ನಾಲ್ಕು ಗಂಟೆಗಳ ಕಾಲ ಆಯೋಜಿಸಲಾಗುವುದು ಮತ್ತು ವರ್ಷದಲ್ಲಿ ಪ್ರತಿಯೊಂದು ಕೇಂದ್ರವೂ 300 ದಿನಗಳು ಕಾರ್ಯಪ್ರವೃತ್ತವಾಗುವುದು ಅತ್ಯಾವಶ್ಯಕ. ಸಂಪ್ರದಾಯರಹಿತ ಶಿಕ್ಷಣ ಕೇಂದ್ರಗಳಿಗೆ ವಿರುದ್ಧವಾಗಿ ಈ ಕೇಂದ್ರಗಳು ಹಗಲಿನ ವೇಳೆಯಲ್ಲಿ ಮಾತ್ರ ಕಾರ್ಯಪ್ರವೃತ್ತವಾಗಿರುವುದು. ಕಾರ್ಯಕ್ರಮದ ಅವಧಿಯನ್ನು ಮುಕ್ತವಾಗಿರಿಸಿದ್ದು ಕೇಂದ್ರಗಳು ಗ್ರಾಮದಲ್ಲಿ ಎಲ್ಲಾ ವಿದ್ಯಾರ್ಥಿಗಳು ಔಪಚಾರಿಕ ಶಾಲಾ ಪ್ರವಾಹಕ್ಕೆ ಸೇರುವವರೆಗೆ ಕಾರ್ಯವನ್ನು ಮುಂದುವರಿಸುವುವು.

**ಆಂತರಿಕ ದಕ್ಷತೆಯ ರೂಪದಲ್ಲಿ ವಿದ್ಯಾರ್ಥಿ ಸಾಧನೆ:** ಶಿಕ್ಷಣದ ಗುಣಾತ್ಮಕತೆ ಮತ್ತು ಪರ್ಯಾಯ ಶಾಲಾ ಶಿಕ್ಷಣ ವ್ಯವಸ್ಥೆಯ ಕಲಿಕೆಯ ಪರಿಣಾಮಗಳು ಪರ್ಯಾಯ ಶಾಲಾ ಶಿಕ್ಷಣ ವ್ಯವಸ್ಥೆಯ ಎರಡು ಬಹುಮುಖ್ಯ ಕಾಳಜಿಗಳಾಗಿವೆ. ಪ್ರಾರಂಭದಿಂದಲೂ ಪರ್ಯಾಯ ಶಾಲಾ ಶಿಕ್ಷಣ ವ್ಯವಸ್ಥೆಯು ಉತ್ತಮ ಸಹಭಾಗಿತ್ವ, ಉಳಿಸಿಕೊಳ್ಳುವಿಕೆ ಹಾಗೂ ವಿದ್ಯಾರ್ಥಿಗಳ ಸಾಧನೆಗಳನ್ನು ತನ್ನ ಗಮನಕೇಂದ್ರಗಳನ್ನಾಗಿಸಿಕೊಂಡು ಬಂದಿದೆ. ಈ ಕಾರಣದಿಂದಲೇ ಪರ್ಯಾಯ ಶಾಲಾ ಕೇಂದ್ರಗಳ ದೈನಂದಿನ ಕಾಲಾವಧಿಯನ್ನು ಕನಿಷ್ಠ ನಾಲ್ಕು ಘಂಟೆಗಳನ್ನಾಗಿ ಮಾಡಲಾಗಿದೆ. ನಿಮ್ನ ಶ್ರೇಣಿಯ (ಒಂದನೇ ತರಗತಿಗೆ ಸಮನಾದುದು) ಮಕ್ಕಳಲ್ಲಿ ಶೇ25 ರಷ್ಟು ಸುಧಾರಣೆಯಿದೆಯೆಂದು ವಿವಿಧ ರಾಜ್ಯಗಳ ಮೌಲ್ಯಮಾಪನ ವರದಿಯು ತಿಳಿಯಪಡಿಸುವುದು. ನಿಮ್ನ ಶ್ರೇಣಿಗಳಲ್ಲಿ ಅಂಕಿ ಅಂಶದ ದೃಷ್ಟಿಯಿಂದ ಮಹತ್ವಪೂರ್ಣವಾಗಿರುವ ಕಲಿಕೆಯ ಸಾಧನೆಯಲ್ಲಿನ ಸುಧಾರಣೆಯು ಉಚ್ಚಶ್ರೇಣಿಗಳಲ್ಲಿ ಕಡಿಮೆಯಾಗಿದೆ. ನಿಮ್ನ ಶ್ರೇಣಿಗಳ ಮಕ್ಕಳ ಕಲಿಕಾ ಸಾಧನೆಯು ಪರ್ಯಾಯ ಶಾಲೆ ಕಾರ್ಯಕ್ರಮದ ಅಂತರ್ಗತ ದಕ್ಷತೆಯ ಸೂಚಕವಾಗಿದೆ. ಬಾಲಕ ಮತ್ತು ಬಾಲಕಿಯರ ಸಾಧನೆಯ ನಡುವಣ ಅಂತರವನ್ನು ಶೇ 5 ಕ್ಕಿಂತಲೂ ಕಡಿಮೆಗೊಳಿಸಬೇಕು ಎಂಬ DPEP ಯ ಗುರಿಯನ್ನು ಬಹುತೇಕ ಜಿಲ್ಲೆಗಳಲ್ಲಿ ಸಾಧಿಸಲಾಗಿದೆ. ಆದರೆ ಸಾಮಾಜಿಕವಾಗಿ ಅನಾನುಕೂಲಿತ ವರ್ಗದ ಮಕ್ಕಳು ಹಾಗೂ ಇತರರ ನಡುವಣ ಕಲಿಕಾ ಅಂತರವನ್ನು ನಿವಾರಿಸುವಲ್ಲಿ ಪ್ರಗತಿಯು ಅಷ್ಟೇನೂ ತೃಪ್ತಿದಾಯಕವಾಗಿಲ್ಲ. ಪರ್ಯಾಯ ಶಾಲಾ ಶಿಕ್ಷಣದ ಆಶ್ವಾಸನೆ ಯೋಜನೆಗಳಡಿಯ ಮಕ್ಕಳ ಸಾಧನೆ ಔಪಚಾರಿಕ ಶಾಲೆಗಳ ಮಕ್ಕಳಿಗಿಂತ ಎಷ್ಟೋ ಪಾಲು ಉತ್ತಮವಾಗಿದೆ ಎಂಬ ಅಂಶವನ್ನು ಮಧ್ಯಪ್ರದೇಶದ ಪ.ಶಾ/ಶಿಕ್ಷಣದ ಆಶ್ವಾಸನೆ ಯೋಜನೆಗೆ ಸಂಬಂಧಿಸಿದಂತೆ IIM ನಡೆಸಿದ ಅಧ್ಯಯನವೊಂದು ಬೆಳಕಿಗೆ ತಂದಿದೆ. ಉತ್ತರ ಪ್ರದೇಶದ ಪರ್ಯಾಯ ಶಾಲಾ ಕಾರ್ಯಕ್ರಮದ (2002) ಮೌಲ್ಯಮಾಪನ ಅಧ್ಯಯನದಿಂದ ಔಪಚಾರಿಕ ಶಾಲೆಗಳ ಮತ್ತು ಪರ್ಯಾಯ ಶಾಲಾ ವ್ಯವಸ್ಥೆಯ ಮಕ್ಕಳ ನಡುವೆ ಕಲಿಕಾ ಸಾಧನೆಗಳಲ್ಲಿ ಮಹತ್ವಪೂರ್ಣ ವ್ಯತ್ಯಾಸವೇನಿಲ್ಲ ಎಂದು ತಿಳಿದುಬಂತು. DPEP ಕಾರ್ಯಕ್ರಮದ ಅಡಿಯಲ್ಲಿ ಪರ್ಯಾಯ ಶಾಲಾ ಶಿಕ್ಷಣದಲ್ಲಿ ಪ್ರಯೋಗಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. ಬಹಳಷ್ಟು ಸಂದರ್ಭಗಳಲ್ಲಿ ಪರ್ಯಾಯ ಶಾಲಾ ಕಾರ್ಯಕ್ರಮಗಳು ಔಪಚಾರಿಕ ಶಾಲಾ ಪಠ್ಯಕ್ರಮವನ್ನೇ ಅನುಸರಿಸುತ್ತವೆ. ಆದರೆ ಪರ್ಯಾಯ ಶಾಲಾ ಶಿಕ್ಷಣ ಪಠ್ಯಕ್ರಮವು ಕೆಲವು ಸ್ಥಳ ನಿರ್ದಿಷ್ಟ ಘಟಕಗಳಿಂದ ಶ್ರೀಮಂತಗೊಂಡಿದೆ. ಆದ್ದರಿಂದ ಔಪಚಾರಿಕ ಶಾಲಾ ಪಠ್ಯಕ್ರಮವನ್ನು ಅನುಸರಿಸುವ ಬದಲು ಪರ್ಯಾಯ ಶಾಲಾ ಶಿಕ್ಷಣಕ್ಕೆಂದೇ ವಿಶೇಷವಾಗಿ ವಿನ್ಯಾಸಗೊಳಿಸಿದ ಪಠ್ಯಕ್ರಮದ ಮೂಲಕ ಪರ್ಯಾಯ ಶಿಕ್ಷಣವನ್ನು ಒದಗಿಸುವತ್ತ ನಿರ್ದೇಶಿತಗೊಂಡ ನವೀನ ಪ್ರಯೋಗಗಳ ಅಗತ್ಯವಿದೆ. ಈ ವಿಧದ ಪ್ರಾಯೋಗಿಕ ವಿನ್ಯಾಸ ಕಲಿಕಾರ್ಥಿಗಳ ಸಾಧನೆಯ ಮಟ್ಟಕ್ಕೆ ಸಂಬಂಧಿಸಿದಂತೆ ಈ ಎರಡು ತೆರನ ಪಠ್ಯಕ್ರಮಗಳು ಬೀರುವ ಪ್ರಭಾವವನ್ನು ಖಚಿತಪಡಿಸುವುದೆಂದು ತಿಳಿಯಲಾಗಿದೆ.

**ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ವೆಚ್ಚ ಪರಿಣಾಮಕಾರಿತ್ವ:**

ವೆಚ್ಚ ಪರಿಣಾಮಕಾರಿತ್ವವು ಗುಣಮಟ್ಟದ ಕಾರ್ಯಕ್ರಮದ ಮುಖ್ಯ ಸೂಚಕವಾಗಿದೆ. ಪರ್ಯಾಯ ಶಾಲಾ ಕಾರ್ಯಕ್ರಮದಲ್ಲಿ ಪ್ರಾರಂಭದಿಂದಲೂ ಈ ಗುರಿಯನ್ನು ಮುಟ್ಟಲು ಶ್ರಮಿಸಲಾಯಿತು. ವೆಚ್ಚ ಪರಿಣಾಮಕಾರಿತ್ವವುಳ್ಳ ಪರಿಹಾರಗಳನ್ನು ಗುರುತಿಸುವ ರೀತಿಯಲ್ಲಿಯೇ ಕಾರ್ಯಕ್ರಮವನ್ನು ಯೋಜಿಸಲಾಯಿತು. ಸಮುದಾಯದೊಂದಿಗೆ ಹತ್ತಿರದ ಸಂಪರ್ಕ ಹೊಂದುವುದರಿಂದಲೂ ಮತ್ತು ಪರ್ಯಾಯ ಶಾಲಾ ಕಾರ್ಯಕ್ರಮವನ್ನು ಉಳಿಸಿ ಬೆಳೆಸುವ ಮುಖ್ಯ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿದ್ದರಿಂದಲೂ ಕಾರ್ಯಕ್ರಮವನ್ನು ವೆಚ್ಚ ಪರಿಣಾಮಕಾರಿವುಳ್ಳದ್ದಾಗಿ ಮಾಡಲು ಸಿದ್ಧವಾಯಿತು. ಇದಲ್ಲದೆ, ಈಗಾಗಲೇ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದ ಮೂಲಭೂತ ಸೌಕರ್ಯಗಳನ್ನು ಉಪಯೋಗಿಸಿದ್ದರಿಂದ ಒಟ್ಟು ವೆಚ್ಚವನ್ನು ಕಡಿತಗೊಳಿಸಲು ಸಹಾಯಕವಾಯಿತು. ಈ ಕೇಂದ್ರಗಳ ಘಟಕ ವೆಚ್ಚದಲ್ಲಿಯೇ ಉಚಿತ ಪಠ್ಯಪುಸ್ತಕಗಳ ವಿತರಣೆ ಮಾಡಲಾಯಿತು. ಸಂಪ್ರದಾಯ ರಹಿತ ಮತ್ತು ಔಪಚಾರಿಕ ಶಾಲೆಗಳ ಕಾರ್ಯತಂತ್ರಗಳಿಗೆ ವಿರುದ್ಧವಾಗಿ ಪರ್ಯಾಯ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಅಲ್ಪವೆಚ್ಚಕ್ಕೆ ಬದಲಾಗಿ ವೆಚ್ಚಪರಿಣಾಮಕಾರಿತ್ವಕ್ಕೆ ಒತ್ತು ನೀಡಲಾಗಿದೆ.

Digitised by Bharatavani, CIIL

**ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ವ್ಯಾಪ್ತಿ:**

1994ರಿಂದ 2002ನೇ ವರ್ಷಗಳ ಅವಧಿಯಲ್ಲಿ, ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮಗಳು ಆಳ ಅಗಲ ಎರಡರಲ್ಲಿಯೂ ಬೆಳೆದಿವೆ. 2001ರ DPEP ಪ್ರಗತಿ ಪಕ್ಷಿನೋಟದ ಪ್ರಕಾರ ವಿವಿಧ ರೀತಿಯ ಪರ್ಯಾಯ ಶಾಲೆಗಳ ಸಂಖ್ಯೆ 67000 ಕೇಂದ್ರಗಳಷ್ಟಿದ್ದು ಭಾರತದ 18 ಜಿಲ್ಲೆಗಳಲ್ಲಿ 2.5 ದಶಲಕ್ಷ ಮಕ್ಕಳಿಗೆ ಸೇವೆ ಒದಗಿಸುತ್ತಿದ್ದವು. ರಾಜ್ಯವಾರು ಅಂಕಿ ಅಂಶಗಳ ಪ್ರಕಾರ ಪಶ್ಚಿಮ ಬಂಗಾಳದಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳು ಅಧಿಕಗೊಳ್ಳುತ್ತಾ 4045ರಷ್ಟು ತಲುಪಿದವು. ನಂತರ ಉತ್ತರ ಪ್ರದೇಶದಲ್ಲಿ 3,275, ರಾಜಸ್ಥಾನದಲ್ಲಿ 2373, ಮಹಾರಾಷ್ಟ್ರದಲ್ಲಿ 1415, ಒರಿಸ್ಸಾದಲ್ಲಿ 1196 ಮತ್ತು ಮಧ್ಯಪ್ರದೇಶದಲ್ಲಿ 1195ರಷ್ಟಾಗಿವೆ. ಮಧ್ಯಪ್ರದೇಶದಲ್ಲಿ 1,02,029, ಪಶ್ಚಿಮ ಬಂಗಾಳದಲ್ಲಿ 98,336, ರಾಜಾಸ್ಥಾನದಲ್ಲಿ 95,750, ಉತ್ತರ ಪ್ರದೇಶದಲ್ಲಿ 62,208, ಒರಿಸ್ಸಾದಲ್ಲಿ 33,535, ಗುಜರಾತಿನಲ್ಲಿ 3363 ಮತ್ತು ಕೇರಳದಲ್ಲಿ 750 ಈ ಕ್ರಮದಲ್ಲಿ ದಾಖಲಾತಿ ಸಂಖ್ಯೆಯಲ್ಲಿನ ಹೆಚ್ಚಳವು ವರದಿಯಾಗಿದೆ. ಆಕಇಕ ದೇಶದ 'ಸ್ವಂತ ನೆಲದಲ್ಲಾದ ಅನುಭವವಾಗಿದೆ'. ದೇಶದ ಅತಿದೂರದ ಮೂಲೆಗಳಲ್ಲಿ ವಾಸಿಸುತ್ತಿರುವ ತಲುಪಲಾಗದವರನ್ನು ತಲುಪಲು ವಿಭಿನ್ನ ಪರ್ಯಾಯ ಶಾಲಾ ಶಿಕ್ಷಣ ವಿನ್ಯಾಸಗಳನ್ನು ವಿಕಸನಗೊಳಿಸುವುದರ ಮೂಲಕ ಹತ್ತು ಹಲವು ನವೀನ ಆಚರಣೆಗಳನ್ನು ಕೈಗೊಳ್ಳಲಾಗಿದೆ. ಪರ್ಯಾಯ ಶಾಲಾ ಕಾರ್ಯಕ್ರಮದ ಅಂತರ್ನಿಹಿತ ಶಕ್ತಿಯ ಬಗ್ಗೆ ಹಾಗೂ ಭಾರತದಲ್ಲಿ ಮೂಲಭೂತ ಶಿಕ್ಷಣ ಆಂದೋಲನವನ್ನು ಬಲಗೊಳಿಸಲೋಸುಗ ಅರ್ಥಪೂರ್ಣ ಮಧ್ಯಸ್ಥಿಕೆಗಳ ಯೋಜನೆಗಾಗಿ ಭವಿಷ್ಯದ ವಿಕಾಸ ಬಗ್ಗೆ ವಿವಿಧ ರಾಜ್ಯಗಳಲ್ಲಿ ಕೈಗೊಂಡ ಸಂಶೋಧನೆಗಳು ಮತ್ತು ರಾಷ್ಟ್ರಮಟ್ಟದ ವರದಿಗಳು ಉಪಯುಕ್ತ ಮಾಹಿತಿಯನ್ನು ನೀಡುತ್ತವೆ.

**ಪರ್ಯಾಯ ಶಾಲಾ ಶಿಕ್ಷಣದಲ್ಲಿನ ಕಾರ್ಯಕ್ರಮಗಳ ಸಂಶೋಧನೆ/ ಮೌಲ್ಯಮಾಪನೆ ಮತ್ತು ಪುನರಾವಲೋಕನ:**

ಇತ್ತೀಚೆಗೆ ಪೂರ್ಣಗೊಂಡ ಸಂಶೋಧನೆ/ಮೌಲ್ಯಮಾಪನಾ ವರದಿಗಳು ಮತ್ತು ಜಂಟಿ ಮೌಲ್ಯಮಾಪನ ಮಿಷನ್ನಿನ ವರದಿಗಳ ಅಧ್ಯಯನವು 1994 ರಿಂದ 1999ರ ಅವಧಿಯಲ್ಲಿ 200 ಸಂಶೋಧನಾ ಆಧ್ಯಯನಗಳನ್ನು ಮತ್ತು 400 ಕ್ರಿಯಾ ಸಂಶೋಧನಾ ಅಧ್ಯಯನಗಳನ್ನು NCERT, NUEPA ಮತ್ತು ಇತರ ಉಚ್ಚ ಸಂಶೋಧನಾ ಸಂಸ್ಥೆಗಳು, ರಾಜ್ಯ ಸರ್ಕಾರಿ ನಿಯೋಗಗಳು ಮತ್ತು ಪ್ರಸಿದ್ಧ ಸರ್ಕಾರೇತರ ಸಂಸ್ಥೆಗಳ ಸಹಕಾರದೊಂದಿಗೆ ಪೂರ್ಣಗೊಳಿಸಲಾಗಿದೆ ಎಂದು ತಿಳಿಸುತ್ತದೆ.

214 ಸಂಶೋಧನಾ ಅಧ್ಯಯನಗಳಲ್ಲಿ 44 ರಾಷ್ಟ್ರೀಯ ಮಟ್ಟದಾಗಿದ್ದು ಇತರ 170 ರಾಜ್ಯಮಟ್ಟದ ಸಂಶೋಧನೆಗಳಾಗಿವೆ. ಬಹುತೇಕ ಸಂಶೋಧನೆಗಳನ್ನು ಎನ್.ಜಿ.ಓ.ಗಳು ಮತ್ತು ಪ್ರಸಿದ್ಧ ಸಂಸ್ಥೆಗಳು ಕೈಗೊಂಡಿವೆ.

ಸಂಶೋಧನೆಯ ವಿಶಾಲ ಕ್ಷೇತ್ರದಲ್ಲಿ ಈ ಮುಂದಿನವು ಒಳಗೊಂಡಿವೆ.

i) ಪ್ರಾಥಮಿಕ ಶಿಕ್ಷಣದಲ್ಲಿ ಯೋಜನೆ ಮತ್ತು ನಿರ್ವಹಣೆ

ii) ಪ್ರಾಥಮಿಕ ಶಿಕ್ಷಣದಲ್ಲಿ ಸಮಾಜ, ಅರ್ಥಶಾಸ್ತ್ರ ಮತ್ತು ಶಿಕ್ಷಣ

iii) ಅಧ್ಯಾಪಕ ಶಿಕ್ಷಣ ಮತ್ತು ಪ್ರಶಿಕ್ಷಣ

iv) ಬೋಧನ ಶಾಸ್ತ್ರ ಪಠ್ಯಕ್ರಮ, ಪಠ್ಯಪುಸ್ತಕಗಳು ಮತ್ತು ಇತರ ಸಾಮಗ್ರಿಗಳು ಮತ್ತು

v) ಇತರೆ, ಅಂದರೆ ಕಟ್ಟಡ ನಿರ್ಮಾಣ ಕಾರ್ಯ, ಪರ್ಯಾಯ ಶಾಲಾ ಶಿಕ್ಷಣ, B.A.S/M.A.S

1994–99ರ ಅವಧಿಯಲ್ಲಿ ಮತ್ತು ನಂತರದಲ್ಲಿ ಕೈಗೊಂಡ ಅಧ್ಯಯನಗಳು ಔಪಚಾರಿಕ ಮತ್ತು ಪರ್ಯಾಯ ಶಾಲಾ ಶಿಕ್ಷಣ ಪೂರೈಕೆ ವ್ಯವಸ್ಥೆಯ ಮೂಲಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ನಡೆಸಿದ ಏಕೀಕೃತ ಪ್ರಯತ್ನಗಳನ್ನು ಬಲಪಡಿಸುವಲ್ಲಿ ಕೊಡುಗೆ ನೀಡಿದ ಸಕಾರಾತ್ಮಕ ಅಂಶಗಳನ್ನು ವಿಶ್ಲೇಷಿಸಿದವು. ಇದಲ್ಲದೆ, ಅಧ್ಯಯನಗಳು ಕಾಳಜಿ ವಹಿಸಬೇಕಾದ ಪ್ರಮುಖ ಕ್ಷೇತ್ರಗಳನ್ನು ಗುರುತಿಸಿದವು. ನಂತರದ ಶೈಕ್ಷಣಿಕ ಯೋಜನೆಗಳಲ್ಲಿ ಸಂಬಂಧಿತ ಜಿಲ್ಲೆಗಳು ಈ ಅಂಶಗಳಿಗೆ ತಕ್ಕಮಟ್ಟಿನ ಗಮನ ನೀಡಿದವು.

1999 ಮತ್ತು 2002ನೇ ವರ್ಷಗಳಲ್ಲಿ ಕೈಗೊಳ್ಳಲಾದ ಎರಡು ಮೌಲ್ಯಮಾಪನ ಅಧ್ಯಯನಗಳು ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮಕ್ಕೆ ನೇರವಾಗಿ ಸಂಬಂಧಿಸಿವೆ. ಅಸ್ಸಾಂನ ಮಕ್ತಬ್‌ಗಳ ಮೂಲಕ ಪರ್ಯಾಯ ಶಾಲಾ ಶಿಕ್ಷಣದ ಮೌಲ್ಯಮಾಪನೆಗೆ ಸಂಬಂಧಿಸಿದ ಅಧ್ಯಯನ ಮೊದಲನೆಯದು (NSDART, 1999). ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಸೇರಿದ ನಾಲ್ಕು ತಜ್ಞರ ಜಂಟಿ ತಂಡವು DPEP-II ಕ್ಕೆ ಸೇರಿದ ಉತ್ತರ ಪ್ರದೇಶದ ಜಿಲ್ಲೆಗಳಲ್ಲಿನ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಕೈಗೊಂಡ ಅಧ್ಯಯನವು (2002) ಎರಡನೆಯದಾಗಿತ್ತು. ಮುಸ್ಸೂರಿಯ ರಾಷ್ಟ್ರೀಯ ಅಭಿವೃದ್ಧಿ ಆಡಳಿತ, ಸಂಶೋಧನೆ ಮತ್ತು ಪ್ರಶಿಕ್ಷಣ ಪ್ರೋತ್ಸಾಹನ ಸಂಘ (National Society for Promotion of Development Administration, Research and Training – NSDART) ಅಸ್ಸಾಂನ ಮುಕ್ತಬ್ ಕಾರ್ಯಕ್ರಮದ ಸಂದರ್ಭದಲ್ಲಿ ಮಕ್ತಬ್ ಅಧ್ಯಯನವನ್ನು (1999) ಕೈಗೊಂಡಿತು. ಅಲ್ಪಸಂಖ್ಯಾತ ಸಮುದಾಯದ ಮಕ್ಕಳಿಗೆ ಸಂಬಂಧಿಸಿದಂತೆ ಪ್ರವೇಶ ಲಭ್ಯತೆ, ಉಳಿಸಿಕೊಳ್ಳುವಿಕೆ, ಸಹಭಾಗಿತ್ವ ಮತ್ತು ಸಾಧನೆ – ಈ ಕುರಿತಾಗಿ ಮಕ್ತಬ್/ಮದರಸಾ ಕಾರ್ಯಕ್ರಮದಲ್ಲಿ ಆಗಿರುವ ಪ್ರಗತಿಯನ್ನು ಕಂಡು ಹಿಡಿಯುವುದು ಈ ಅಧ್ಯಯನದ ಗುರಿಯಾಗಿತ್ತು. ಅಲ್ಪಸಂಖ್ಯಾತ ಸಮುದಾಯದ ಮಕ್ಕಳಿಗೆ ಸಂಬಂಧಿಸಿದಂತೆ ಪ್ರವೇಶ ಲಭ್ಯತೆ, ಉಳಿಸಿಕೊಳ್ಳುವಿಕೆ, ಸಹಭಾಗಿತ್ವ ಮತ್ತು ಸಾಧನೆಗಳಲ್ಲಿ ಮುಕ್ತಬ್/ ಮದರಸಾ ಕಾರ್ಯಕ್ರಮಗಳ ಕೆಲವು ಪ್ರಮುಖ ಅಂಶಗಳನ್ನು ಅಧ್ಯಯನದ ಮುಖ್ಯ ಫಲಿತಾಂಶಗಳು ಹೊರತಂದಿವೆ.

Digitised by Bharatavani, CIIL

ಉತ್ತರಪ್ರದೇಶದಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ಮೌಲ್ಯಮಾಪನೆಯನ್ನು ಕುರಿತ ಅಧ್ಯಯನವು ಉದ್ದೇಶಿತ ಮಟ್ಟದ ಸಾಧನೆಯೊಂದಿಗೆ ಮಕ್ಕಳ ದಾಖಲಾತಿ, ಉಳಿಸಿಕೊಳ್ಳುವಿಕೆ, ಸಹಭಾಗಿತ್ವ ಮತ್ತು ಓದಿನ ಪೂರೈಕೆಗಳ ಪ್ರೋತ್ಸಾಹನಕ್ಕಾಗಿ ಪರ್ಯಾಯ ಶಾಲಾ ಶಿಕ್ಷಣ ಕಾರ್ಯನೀತಿಗೆ ಸಂಬಂಧಿಸಿದ ಹತ್ತು ಹಲವು ಅಂಶಗಳತ್ತ ಕೈ ತೋರಿದೆ.

ಪರ್ಯಾಯ ಶಾಲಾ ಶಿಕ್ಷಣ ಕೇಂದ್ರವನ್ನು ಹೊಂದಿರುವ ಶಾಲಾ ಪೂರ್ವ ಕೇಂದ್ರದ ಮಾದರಿಯ ಬಾಲಶಾಲೆಯು ಹಿರಿಯ ಸಹೋದರ, ಸಹೋದರಿಯರು ಶಾಲೆಗೆ ಹಾಜರಾಗಲು ಅವಕಾಶ ನೀಡಿ ಅದೇ ಸಮಯದಲ್ಲಿ ಅವರ ಕಿರಿಯ ಸೋದರ ಸೋದರಿಯರನ್ನು ವಯಸ್ಕರೊಬ್ಬರು ನೋಡಿಕೊಳ್ಳುವ ಅವಕಾಶ ಒದಗಿಸುತ್ತದೆ. ವಸತಿ ಸಹಿತ ಕ್ಯಾಂಪ್‌ಗಳು ಕಲ್ಲಿನ ಗಣಿಯಲ್ಲಿ ಕೆಲಸ ಮಾಡುವ ಮಕ್ಕಳನ್ನು ಗುರಿಯಲ್ಲಿರಿಸಿ ಅದರಲ್ಲಿ ಸಫಲವಾದವು. ಕಾರ್ಯಕ್ರಮವು ಪೂರ್ಣಗೊಂಡಾಗ ಈ ಮಕ್ಕಳು ಔಪಚಾರಿಕ ಶಾಲೆಗೆ ಹಾಜರಾಗುವ ತವಕವನ್ನು ತೋರಿದರು. ಇದರಿಂದ ಕುಟುಂಬದ ಸದಸ್ಯರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಅಗತ್ಯವೆಷ್ಟು ಎಂಬುದರ ಬಗ್ಗೆ ಅರಿವು ಮೂಡಿತು. ಮೊರಾದಬಾದಿನ 'ಕಾರ್ಯನಿರತ ಮಕ್ಕಳ' ಮಾದರಿ ಕೆಲಸ ಮಾಡುವ ಮಕ್ಕಳು ಅವರ ಮನೆಬಾಗಿಲಿಗೆ ಒದಗಿಸಿದ ಶೈಕ್ಷಣಿಕ ಸೌಲಭ್ಯಗಳನ್ನು ಬಳಸಿಕೊಳ್ಳುವುದನ್ನು ಸಾಧ್ಯವಾಗಿಸಿತು. ಇದೇ ಈ ರೀತಿ, ವಯಸ್ಸಿನ ಮಿತಿಯಿಂದಾಗಿ ಪ್ರಾಥಮಿಕ ತರಗತಿಗೆ ಸೇರಲಾಗದ 9 ರಿಂದ 14 ವಯೋಮಾನದ ಮಕ್ಕಳು ಕಲಿಕಾ ಕೇಂದ್ರದ ಶಾಲಾ ಶಿಕ್ಷಣ ಸೌಲಭ್ಯಗಳನ್ನು ಪಡೆಯುವಲ್ಲಿ ಪ್ರಹರ್ ಪಾಠಶಾಲೆಗಳು ಸಮರ್ಥರನ್ನಾಗಿಸಿದವು. ಶೈಕ್ಷಣಿಕ ಪ್ರವಾಹದೊಂದಿಗೆ ಕುಶಲತೆಯ ವಿಷಯವೊಂದನ್ನು ಕಲಿಯುವ ಅವಕಾಶವು ಮಕ್ಕಳಿಗೆ ಹೆಚ್ಚಿನ ಅಭಿಪ್ರೇರಣೆಯಾಗಿ ಪರಿಣಮಿಸಿತು. ಋಷಿ ವ್ಯಾಲಿ ಮಾದರಿಯ (ಆಂಧ್ರದ) ಬೆಟ್ಟಗುಡ್ಡಗಳ ಪ್ರದೇಶದ ಪ್ರತ್ಯೇಕಿತ ಗ್ರಾಮಗಳಿಂದ ಬರುವ ಮಕ್ಕಳಿಗೆ ಅಷ್ಟೇ ಸೂಕ್ತವಾಗಿತ್ತು.

ಸರ್ಕಾರಿ ವಲಯದ ಕಾರ್ಯಕ್ರಮಗಳು ಮತ್ತು ಇತರ ವಿಭಿನ್ನ ಸಾಮಾಜಿಕ ಹಾಗೂ ಅಭಿವೃದ್ಧಿಪರ ವಲಯಗಳು ವಿಶೇಷವಾಗಿ ಕಾರ್ಮಿಕ, ಸಮಾಜ ಕಲ್ಯಾಣ, ಆರೋಗ್ಯ ಸೇವೆ ಇತ್ಯಾದಿ ವಿಭಾಗಗಳ ಕಾರ್ಯಕ್ರಮಗಳ ನಡುವಣ ಸಂಪರ್ಕವನ್ನು ಬಲಪಡಿಸುವಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನವು ಸಹಾಯಕವಾಯಿತು.

**ಪರ್ಯಾಯ ಶಾಲಾ ಶಿಕ್ಷಣದಿಂದ ಸರ್ವ ಶಿಕ್ಷಣ ಅಭಿಯಾನ ಮತ್ತು ಮುಕ್ತಶಾಲೆಯತ್ತ:**

2001ನೇ ಇಸವಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಕುರಿತ ಭಾರತ ಸರ್ಕಾರದ ನೀತಿ ಹೊಸ ತಿರುವು ಪಡೆಯಿತು. ಕಾಲಮಿತಿಯುಳ್ಳ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಇದರ ಪೂರೈಕೆ ವಿಧಾನಗಳಾದ ಔಪಚಾರಿಕ, ಸಂಪ್ರದಾಯ ರಹಿತ ಹಾಗೂ ಪರ್ಯಾಯ ಶಾಲಾ ಶಿಕ್ಷಣಗಳನ್ನು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ (ಎಲ್ಲರಿಗೂ ಶಿಕ್ಷಣವೆಂಬ ಆಂದೋಳನ) ಒಗ್ಗೂಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಮಗ್ರ ರೀತಿಯಲ್ಲಿ ತೊಡಗುವುದು ಸರ್ವ ಶಿಕ್ಷಣ ಅಭಿಯಾನದ ಪ್ರಮುಖ ಉಪಕ್ರಮವಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಸಾಧನೆಗಳಿಗೆ ಕಾಲಮಿತಿಯುಳ್ಳ ಲಕ್ಷ್ಯಗಳೆಂದರೆ

i) ಎಲ್ಲ ಮಕ್ಕಳು 2003ರ ವೇಳೆಗೆ ಶಿಕ್ಷಣ ಭರವಸೆ ಶಾಲೆ (EGS) / ಪರ್ಯಾಯ ಶಿಕ್ಷಣ ಶಾಲೆಯಲ್ಲಿರಬೇಕು ಇಲ್ಲವೆ "ಮರಳಿ ಶಾಲೆಗೆ' ಕ್ಯಾಂಪ್‌ನಲ್ಲಿರಬೇಕು.

ii) ಎಲ್ಲ ಮಕ್ಕಳು 2007ರ ವೇಳೆಗೆ ಪ್ರಾಥಮಿಕ ಮಟ್ಟದ ಶಿಕ್ಷಣವನ್ನು ಪೂರ್ಣಗೊಳಿಸಬೇಕು ಮತ್ತು

iii) ಎಲ್ಲಾ ಮಕ್ಕಳು 2010ರ ವೇಳೆಗೆ ಪ್ರಾಥಮಿಕ ಸ್ತರದ ಶಿಕ್ಷಣವನ್ನು ಪೂರ್ಣಗೊಳಿಸಬೇಕು.

ಭೌಗೋಳಿಕ ಘಟಕವೊಂದಕ್ಕೆ (ಜಿಲ್ಲೆ) ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಯೋಜನೆಯನ್ನು ಸಮಗ್ರ ರೀತಿಯಲ್ಲಿ ಕೈಗೊಳ್ಳಬೇಕಾಗಿತ್ತು. ಏಕೆಂದರೆ, ಶಾಲೆಗಳು ಅಥವಾ ಪರ್ಯಾಯ ವ್ಯವಸ್ಥೆಗಳಿಂದ ಎಲ್ಲ ಮಕ್ಕಳನ್ನು ವ್ಯಾಪ್ತಿಯಲ್ಲಿ ತರಬೇಕಾದ ಅಗತ್ಯವಿದ್ದಿತು.

ಸರ್ವ ಶಿಕ್ಷಣ ಅಭಿಯಾನದ ಸಂದರ್ಭದಲ್ಲಿ ಉದಯಿಸಿದ ಎರಡು ವಿಸ್ತೃತ ಕಾರ್ಯಕ್ರಮಗಳೆಂದರೆ

i) ಶಿಕ್ಷಣ ಭರವಸೆ ಯೋಜನೆ

ii) ಪರ್ಯಾಯ ಮತ್ತು ನಾವೀನ್ಯಯುತ ಶಿಕ್ಷಣ (EGS and AIE).

ಸಮುದಾಯವೊಂದರ ಕೋರಿಕೆಯ ಮೇರೆಗೆ ಕೋರಿಕೆಯ 90 ದಿನಗಳ ಒಳಗೆ ಶೈಕ್ಷಣಿಕ ಕೇಂದ್ರಗಳನ್ನು ತೆರೆಯಲು ಅವಕಾಶವೀಯುವ ಯೋಜನೆಯೇ ಶಿಕ್ಷಣ ಭರವಸೆ ಯೋಜನೆ.

ಸಮುದಾಯದಿಂದ ಒಂದು ಕಿಲೋಮೀಟರ್ ವ್ಯಾಸದಲ್ಲಿ ಯಾವುದೇ ಶಾಲೆಯನ್ನು ಹೊಂದದ, ಶಾಲೆಗೆ ಹಾಜರಾಗದ 6–11 ವಯೋವರ್ಗದ ಕನಿಷ್ಠ 40 ಮಕ್ಕಳನ್ನು (ಬುಡಕಟ್ಟು ಪ್ರದೇಶದಲ್ಲಿ 25 ಮಕ್ಕಳು) ಹೊಂದಿರುವ ಸಮುದಾಯಕ್ಕೆ ಶೈಕ್ಷಣಿಕ ಕೇಂದ್ರದ ಭರವಸೆ ಮಂಜೂರಾಗುತ್ತದೆ. ಶಿಕ್ಷಣ ಭರವಸೆ ಯೋಜನೆ ಸಂಬಂಧಿಸಿದ ಪ್ರಮುಖ ಅಂಶಗಳೆಂದರೆ ಸಮುದಾಯದ ಬೇಡಿಕೆ ಹಾಗೂ ಸರ್ಕಾರದ ಭರವಸೆ. ಸದ್ಯದಲ್ಲಿ ಮಧ್ಯಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳನ್ನು ಶಿಕ್ಷಣ ಭರವಸೆ ಯೋಜನೆಯ ಕೇಂದ್ರಗಳಾಗಿ ಪರಿವರ್ತಿಸಲಾಗಿದೆ. ಇದರ ಜೊತೆಗೆ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳು ಮತ್ತು ಸ್ವಯಂ ಸೇವಕ ಸಂಸ್ಥೆಗಳ ವಿನೂತನ ಪ್ರಯತ್ನಗಳು ಎಲ್ಲಾ ವರ್ಗದ ಶಾಲೆಯಿಂದ ಹೊರಗುಳಿದ ಮಕ್ಕಳು 'ತಲುಪಲಾಗದ ಮಕ್ಕಳು' ಮತ್ತು 'ಕಷ್ಟಕರ ಪರಿಸ್ಥಿತಿಯಲ್ಲಿರುವ ಮಕ್ಕಳು' – ಇವರುಗಳಿಗೆ ಶೈಕ್ಷಣಿಕ ಅವಕಾಶಗಳನ್ನು ಒದಗಿಸುತ್ತಿವೆ.

Digitised by Bharatavani, CIIL

**ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳಿಗಾಗಿ ಹೊಸ ಪೂರೈಕೆಯ ವಿಧಾನ:**

ಶಾಲೆಯಿಂದ ಹೊರಗುಳಿದ ಮಕ್ಕಳ ವಿಶಾಲ ವರ್ಗವನ್ನು, ತಲುಪಲಾಗದವರನ್ನು ತಲುಪುವ ನಿಟ್ಟಿನಲ್ಲಿ ಇತ್ತೀಚಿನ ಸಮಯದಲ್ಲಿನ ಮತ್ತೊಂದು ನವೀನ ಆಚರಣೆಯೆಂದರೆ ಭಾರತದಾದ್ಯಂತ ಮತ್ತು ಕೆಲವು ಹೊರದೇಶಗಳಲ್ಲಿ ರಾಷ್ಟ್ರೀಯ ಮುಕ್ತ ಶಾಲೆ (National Open School-NOS) ಮತ್ತು ಅದರ ಒಂಭತ್ತು ರಾಜ್ಯ ಮುಕ್ತ ಶಾಲೆಗಳು ಒದಗಿಸಿರುವ ಮುಕ್ತ ಶಾಲಾ ಶಿಕ್ಷಣ ಕಾರ್ಯಕ್ರಮ. ಮುಕ್ತ ಕಲಿಕಾ ಕಾರ್ಯಕ್ರಮದಲ್ಲಿ ಅಧ್ಯಯನ ಕೇಂದ್ರದಲ್ಲಿ ಸಾಂಪ್ರದಾಯಿಕ ಮುಖಾಮುಖಿ ಕಲಿಕಾ ಪ್ರಕ್ರಿಯೆಯೊಂದಿಗೆ ದೂರ ಶಿಕ್ಷಣ ವಿಧಾನವನ್ನು ಸಂಯೋಜಿಸಿ ಬಳಸಲಾಗುತ್ತದೆ. ಇದು ಅಂಚಿನಲ್ಲಿರುವ ಕಲಿಕಾ ಗುಂಪಿಗೆ ಅವರ ಮನೆಬಾಗಿಲಲ್ಲಿಯೇ ಶಿಕ್ಷಣವನ್ನು ಒದಗಿಸುವ ಪ್ರಯತ್ನವಾಗಿದೆ. ಈ ವಿಧದ ಪರ್ಯಾಯ ಶೈಕ್ಷಣಿಕ ವಿನ್ಯಾಸದಲ್ಲಿ ವಯೋಮಿತಿಯ ರಿಯಾಯಿತಿ, ವಿಷಯಗಳ ಸಂಯೋಜನೆಯ ಆಯ್ಕೆಯಲ್ಲಿ ಮತ್ತು ವಿದ್ಯಾರ್ಥಿಗೆ ಅನುಕೂಲವಾದ ದಿನಾಂಕಗಳಲ್ಲಿ ಪರೀಕ್ಷೆಯನ್ನು ಭಾಗಶಃ ತೆಗೆದುಕೊಳ್ಳುವಲ್ಲಿ ಸ್ವಾತಂತ್ರ್ಯ – ಇವುಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಮುಕ್ತತೆಯಿರುವುದು. ವಿದ್ಯಾರ್ಥಿಯು ಇಚ್ಛಿತ ದಕ್ಷತೆಯ ಮಟ್ಟವನ್ನು ತಲುಪಲು ಐದು ಬಾರಿ ಅವಕಾಶವನ್ನು ಹೊಂದಬಹುದು. ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅನ್ವೇಷಣೆಯನ್ನು ತಮ್ಮ ಅಧ್ಯಯನ ಕೇಂದ್ರಗಳಲ್ಲಿ ಮುಂದುವರಿಸಲು ಮುಕ್ತ ಶಾಲೆಗಳು ಅವರಲ್ಲಿ ಹೊಸ ಭರವಸೆಯನ್ನು ಮೂಡಿಸಿವೆ. ವಿದ್ಯಾರ್ಥಿಯು ಒಂದು ಹಂತದಿಂದ ಮುಂದಿನ ಹಂತಕ್ಕೆ ಮೇಲ್ಮುಖವಾಗಿ ಚಲಿಸುವುದನ್ನು ಖಚಿತಪಡಿಸಲು ಪರ್ಯಾಯ ಶಾಲಾ ಶಿಕ್ಷಣ ಮತ್ತು ಮುಕ್ತ ಶಾಲಾ ಶಿಕ್ಷಣಗಳ ನಡುವೆ ಸಂಪರ್ಕವನ್ನು ಕಲ್ಪಿಸಲು ಹೊಸದೊಂದು ಒಲವು ಉದಯವಾಗಿದೆ. ಹದಿನ್ನೆದನೇ ಜಂಟಿ ಪುನರಾವಲೋಕನ ಮಿಷನ್ (DPEP) ವರದಿಯ ಪ್ರಕಾರ ಹರಿಯಾಣ ಸರ್ಕಾರವು ವಲಸೆ ಹೋಗುವ ತಂದೆ ತಾಯಿಯುಳ್ಳ ಮಕ್ಕಳಿಗೆ, ಗಣಿಯಲ್ಲಿ ಕೆಲಸಕ್ಕಿರುವ ಮಕ್ಕಳಿಗೆ, ಢಾಭಾಗಳಲ್ಲಿ ಕೆಲಸ ಮಾಡುವ ಮಕ್ಕಳಿಗೆ ಹರಿಯಾಣ ಮುಕ್ತ ಶಾಲೆಗಳ 8ನೇ ತರಗತಿಯಿಂದ ಮುಂದಕ್ಕೆ ಅಳವಡಿಸುವಂತೆ ತಯಾರು ಮಾಡುವ ನಿರ್ಧಾರವನ್ನು ಕೈಗೊಂಡಿದೆ. ಇದಕ್ಕಾಗಿ ಅಂತಹ ಕೇಂದ್ರಗಳಲ್ಲಿ 6 ಮತ್ತು 8ನೇ ತರಗತಿಗಳ ಪಠ್ಯಕ್ರಮವನ್ನು ಬದಲಾಯಿಸಲಾಗುವುದು. ಜಿಲ್ಲೆಗಳು ಮಕ್ಕಳನ್ನು ಮುಖ್ಯ ಪ್ರವಾಹಕ್ಕೆ ತರುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವ ಈ ವಿಶೇಷ ವರ್ಗದ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವ ಸವಾಲನ್ನು ಪರಿಹರಿಸುವ ನಿಟ್ಟಿನಲ್ಲಿ ಇದೊಂದು ವಿನೂತನ ಆಚರಣೆಯಾಗುವುದು.

**ಪರ್ಯಾಯ ಶಾಲಾ ಶಿಕ್ಷಣಕ್ಕೆ ಅವಶ್ಯಕವಾದ ಮಧ್ಯಸ್ಥಿಕೆಗಳು**

1994 ರಿಂದ 2002ರ ಅವಧಿಯಲ್ಲಿ ವಿಭಿನ್ನ ಜನವಸತಿಗಳಿಗೆ ಸೇರಿದ ಶಾಲೆಯಿಂದ ಹೊರಗುಳಿದ ಮಕ್ಕಳ ಬಹುಪ್ರಕಾರದ ಅವಶ್ಯಕತೆಗಳನ್ನು ಪೂರೈಸಲು ವೈವಿಧ್ಯಮಯ ಶೈಕ್ಷಣಿಕ ವಿನ್ಯಾಸಗಳು ಹೊರಬಂದಿವೆ. ಕಾರ್ಯಕ್ರಮವು ಗಣನೀಯ ಮಟ್ಟದವರೆಗೆ ಪ್ರವೇಶ ಲಭ್ಯತೆಯ ಸಮಸ್ಯೆಯ ಬಗ್ಗೆ ಗಮನ ನೀಡಿದೆ. ಅವಿರ್ಭಾವಗೊಳ್ಳುತ್ತಿರುವ ಬೆಳವಣಿಗೆಯ ಹಿನ್ನೆಲೆಯಲ್ಲಿ ಹಲವಾರು ಮಧ್ಯಸ್ಥಿಕೆಗಳು ತುರ್ತಾಗಿ ಅವಶ್ಯಕವಿದೆ. ಅವು ಇಂತಿರಬಹುದು: ಗೃಹಮಟ್ಟದ ಸರ್ವೇಕ್ಷಣೆಯನ್ನು ಆಧರಿಸಿದ ವಸತಿ ಮಟ್ಟದ ಯೋಜನೆ; ಕಷ್ಟಕರ ಪರಿಸ್ಥಿತಿಯಲ್ಲಿರುವ ಮಕ್ಕಳು, ಅಂದರೆ ಬೀದಿ ಮಕ್ಕಳು, ವಲಸೆ ಹೋಗುವ ಪೋಷಕರ ಮಕ್ಕಳು, ನಗರದ ಕೊಳಚೆ ಪ್ರದೇಶದ ಮಕ್ಕಳು – ಇವರುಗಳನ್ನು ತಲುಪಲು ನಾವೀನ್ಯಯುತ ಕಾರ್ಯಕ್ರಮದ ಅಭಿವೃದ್ಧಿ; ಪರ್ಯಾಯ ಶಾಲಾ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ನಾವೀನ್ಯಯುತ ಪಠ್ಯಕ್ರಮದ ಬೆಳವಣಿಗೆ ಮತ್ತು ಪರ್ಯಾಯ ಶಾಲಾ ಮಕ್ಕಳ ಕಲಿಕಾ ಸಾಧನೆಯ ಮೇಲೆ ಇವರ ಪ್ರಭಾವ; ಔಪಚಾರಿಕ ಶಾಲೆಗೆ ಪ್ರತ್ಯೇಕ ಮಗುವನ್ನು ಮುಖ್ಯ ಪ್ರವಾಹದಿಂದ ಕರೆತರುವ ಬಗ್ಗೆ ನಿರ್ಧರಿಸುವ ನಿರ್ಣಾಯಕ ಅಂಶಗಳನ್ನು ನಿಶ್ಚಯಿಸುವುದು, ಪರಿಶಿಷ್ಟ ಜಾತಿ ಪಂಗಡದ ಕಲಿಕಾರ್ಥಿಗಳ ಸಾಧನೆಯ ಮಟ್ಟವನ್ನು ಹೆಚ್ಚಿಸುವುದು; ಔಪಚಾರಿಕ ಶಾಲೆಗೆ ಪರ್ಯಾಯ ಶಾಲಾ ಶಿಕ್ಷಣದ ಮಕ್ಕಳ ಸುಗಮ ಪ್ರವೇಶ ಹಾಗೂ ದಾಖಲಾದವರನ್ನು ಉಳಿಸಿಕೊಳ್ಳುವಿಕೆಗಳನ್ನು ನಿಶ್ಚಿತಪಡಿಸಲು ಆ ಶಾಲೆಯಲ್ಲಿ ಅವಶ್ಯಕ ಮಾರ್ಪಾಡುಗಳನ್ನು ತರುವುದು; ಸೂಕ್ತ ಬೋಧನ ಶಾಸ್ತ್ರವನ್ನು ಅನುಸರಿಸಿ ತರಗತಿಯ ಪ್ರಕ್ರಿಯೆಯ ಗುಣಾತ್ಮಕತೆಯನ್ನು ಉತ್ತಮಪಡಿಸುವುದು; ಗ್ರಾಮ ಶಿಕ್ಷಣ ಸಮಿತಿ, ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ಸಮುದಾಯದ ಸದಸ್ಯರ ನಡುವಣ ಸಂಪರ್ಕದ ಮೂಲಕ ವಿಕೇಂದ್ರೀಕೃತ ನಿರ್ಧಾರ ಕೈಗೊಳ್ಳುವಿಕೆ ಮತ್ತು ನಿರ್ವಹಣೆ; ಕಟ್ಟುನಿಟ್ಟಿನ ಉಸ್ತುವಾರಿ ಮತ್ತು ಬೆಂಬಲ ವ್ಯವಸ್ಥೆಯ ಸಹಾಯದಿಂದ ಸೂಕ್ತ ಸೂಕ್ಷ್ಮಸ್ತರೀಯ (Micro-level) ಮಧ್ಯಸ್ಥಿಕೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಗಳನ್ನು ತೀವ್ರಗೊಳಿಸುವುದು; ಒಂದು ನಿರ್ದಿಷ್ಟ ಸಾಮಾಜಿಕ–ಆರ್ಥಿಕ ಗುಂಪುಗಳಿಗೆ ಸೇರಿದ ಬಾಲಕಿಯರ ಶಿಕ್ಷಣಕ್ಕಿರುವ ಅಡೆತಡೆಗಳನ್ನು ಸಂಪೂರ್ಣವಾಗಿ ತೊಡೆದುಹಾಕಲು ಪ್ರಯತ್ನಗಳನ್ನು ಕೈಗೊಳ್ಳುವುದು; ದಾಖಲಾತಿಯಿಂದ ತರಗತಿಯ ಪ್ರಕ್ರಿಯೆಯ ಸುಧಾರಣೆಯತ್ತ ಬದಲಾವಣೆಗೆ ಗಮನ ಹರಿಸುವುದು; ವಿಕಲಚೇತನ ಮಕ್ಕಳ ಅವಶ್ಯಕತೆಗಳ ಕಡೆಗೆ ಗಮನವೀಯಲು ವಿಶೇಷ ಮಧ್ಯಸ್ಥಿಕೆಗಳು; ಪುನರಾವರ್ತನೆ ಹಾಗೂ ಶಾಲೆ ಬಿಟ್ಟು ಹೋಗುವ ವಿಷಯಗಳತ್ತ ರಾಜ್ಯಗಳು ಪುನಃ ಗಮನವೀಯುವಂತೆ ಅವುಗಳನ್ನು ಸಂವೇದಿಯಾಗಿಸುವುದು ಹಾಗೂ ಈ ಸವಾಲುಗಳನ್ನು ಗಣನೀಯವಾಗಿ ಕಡಿಮೆಯಾಗಿಸುವುದು. ನಿರ್ವಹಣೆಗಾಗಿ ಮಾಹಿತಿ ವ್ಯವಸ್ಥೆಯನ್ನು ಸುಧಾರಿಸುವುದು; ಆಕಇಕ–ಖಖ ಅಲ್ಪ ದಾಖಲಾತಿ ಜಿಲ್ಲೆಗಳಲ್ಲಿ ಸೂಕ್ಷ್ಮ ಅಧ್ಯಯನಗಳ ಮೂಲಕ ನಿಕಟ ಮೇಲುಸ್ತುವಾರಿ ಮತ್ತು ಪ್ರಯತ್ನಗಳನ್ನು ತ್ವರಿತಗೊಳಿಸುವಿಕೆ; ಔಪಚಾರಿಕ ಶಾಲೆಗಳ ಮುಖ್ಯ ಪ್ರವಾಹಕ್ಕೆ ತಂದ ನಂತರವೂ ಸಹ ಪರ್ಯಾಯ ಶಾಲಾ ಶಿಕ್ಷಣ ಕೇಂದ್ರಗಳ ಮಕ್ಕಳಿಗೆ ವಿಶೇಷತಃ ಬಾಲಕಿಯರು ಮತ್ತು ಖಅ/ಖಖ ವರ್ಗದ ಮಕ್ಕಳಿಗೆ ಸಹಾಯವನ್ನು ಮುಂದುವರಿಸುವುದು; ಹೆಚ್ಚುತ್ತಿರುವ ಬೇಡಿಕೆಗೆ ಸ್ಪಂದಿಸುತ್ತಾ ಪರ್ಯಾಯ ಶಾಲಾ

Digitised by Bharatavani, CIIL

ಶಿಕ್ಷಣ ಕಾರ್ಯಕ್ರಮವನ್ನು ಹಿರಿಯ ಪ್ರಾಥಮಿಕ ಸ್ತರದವರೆಗೆ ವಿಸ್ತರಿಸುವುದು, ರಾಷ್ಟ್ರೀಯ ಮುಕ್ತ ಶಾಲೆಯ ಮುಕ್ತ ಮೂಲ ಶಿಕ್ಷಣದೊಂದಿಗೆ ಪರ್ಯಾಯ ಶಾಲಾ ಕಾರ್ಯಕ್ರಮಗಳನ್ನು ಜೋಡಿಸುವುದು; ಶಿಕ್ಷಕರಿಗೆ ಮೇಲ್ವಿಚಾರಣೆಯ ಬದಲಾಗಿ ಹೊಸದಾಗಿ ಪರಿಚಯಿಸಲಾಗಿರುವ ಶೈಕ್ಷಣಿಕ ನೆರವಿನ ಮಾದರಿಯನ್ನು ಅಳವಡಿಸಿಕೊಳ್ಳಲು ರಾಜ್ಯಶಿಕ್ಷಣ ಸೂತ್ರಗಳ ಹಾಗೂ ಕೈಪಿಡಿಗಳ ಪರಿಷ್ಕರಣ, ಕೊರತೆಯುಳ್ಳ ಪ್ರದೇಶಗಳಿಗಾಗಿ ಉತ್ತರ ಪ್ರದೇಶದ 'ಮಾದರಿ ಕ್ಲಸ್ಟರ್ ಅಭಿವೃದ್ಧಿ ಉಪಕ್ರಮ' (Model Cluster Development Approach) ಮತ್ತು ಗುಜರಾತಿನ 'ವಿಶೇಷ ಗಮನ ಕೇಂದ್ರಿತ ಗ್ರಾಮಗಳು' (Special Focus Villages) – ಈ ಮಾದರಿಗಳಲ್ಲಿ ಸೂಕ್ಷ್ಮಸ್ತರೀಯ ಪ್ರಾರಂಭಿಕ ಪ್ರಯತ್ನಗಳು; ವಿಭಿನ್ನ ತೆರನ ಉದ್ದೇಶಿತ ಗುಂಪುಗಳಿಗೆ ವಿವಿಧ ಪರ್ಯಾಯ ಶಾಲಾ ಶಿಕ್ಷಣ ಮಾದರಿಗಳು ಅದೆಷ್ಟು ಸಮಂಜಸವೆಂದು ಕಂಡುಹಿಡಿಯಲು ಕ್ಷೇತ್ರ ಆಧಾರಿತ ಅಧ್ಯಯನಗಳು; ಮತ್ತು ಸಂಪರ್ಕ ಜಾಲ ಪ್ರಕ್ರಿಯೆಗಳ ವಿಸ್ತರಣೆ ಮತ್ತು ದೇಶದ ಒಳಹೊರಗೆ ವಿಶಾಲ ಸಂಶೋಧನಾ ಸಮುದಾಯಕ್ಕೆ ಸಂಶೋಧಣಾ ಫಲಿತಾಂಶಗಳ ಪ್ರಸಾರ.

ಒಟ್ಟಿನಲ್ಲಿ ಹೇಳುವುದಾದರೆ, ಇಂದಿಗೂ ಶಿಕ್ಷಣದಿಂದ ಹೊರಗುಳಿದ ಕಲಿಕಾರ್ಥಿಗಳ ಮನೆಬಾಗಿಲಿಗೆ ಶಿಕ್ಷಣವನ್ನು ಕೊಂಡೊಯ್ಯುವ ದೇಶದ ಸಂಕಲ್ಪಕ್ಕೆ ಸತತ ಶೈಕ್ಷಣಿಕ ನೆರವು ಮೇಲುಸ್ತುವಾರಿ ಕಾರ್ಯಕ್ರಮದಲ್ಲಿ ಸಮುದಾಯದ ಒಡೆತನ ಮತ್ತು ವಿವಿಧ ರೀತಿಯ ಮುಕ್ತ ಪೂರೈಕೆಯ ವಿಧಾನಗಳ ಅಳವಡಿಕೆ ಇತ್ಯಾದಿಗಳು ಅವಶ್ಯಕ. ಬದಲಾಗುತ್ತಿರುವ ಸಂದರ್ಭದ ಹಿನ್ನೆಲೆಯಲ್ಲಿ ಶೈಕ್ಷಣಿಕ ಸಂರಚನೆ, ಅಂತರ್ವಸ್ತು ಮತ್ತು ಪ್ರಕ್ರಿಯೆಗಳನ್ನು ಹೊಸ ದೃಷ್ಟಿಯಿಂದ ಕಂಡು ಪರಿಸ್ಥಿತಿಯ ಬೇಡಿಕೆಗಳಿಗೆ ಅನುಸಾರವಾಗಿ ಹೊಸ ವಿನ್ಯಾಸಗಳನ್ನು ವಿಕಸನಗೊಳಿಸಬೇಕಾಗಿದೆ. ಇದುವರೆಗೆ ವ್ಯಾಪ್ತಿಗೆ ತರದ ಮಕ್ಕಳ ಗುಂಪಿನ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಶೈಕ್ಷಣಿಕ ಕಾರ್ಯಕ್ರಮದ ಸೂತ್ರೀಕರಣಕ್ಕೆ ನಮ್ಯತೆ, ಕ್ರಿಯಾಶೀಲತೆ, ಸುಸಂಗತತೆ ಮತ್ತು ವೈವಿಧ್ಯತೆಗಳು ಮಾರ್ಗದರ್ಶಕ ತತ್ವಗಳಾಗಿರಬೇಕು.

**ಮೂಲ: ಪಿ. ದಾಸಗುಪ್ತ**
**ಅನು: ಚಂದ್ರಶೇಖರ್ ಬಿ.ಎಂ.**

## ಪೋಷಕ–ಬೋಧಕ ಸಂಘಗಳು

ಶಾಲೆ ಮತ್ತು ಮನೆ ಇವೆರಡೂ ಹತ್ತಿರವಾಗಬೇಕಾದರೆ ಪೋಷಕ–ಬೋಧಕ ಸಂಘಗಳು ಆತ್ಯವಶ್ಯಕ. ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳ ಪರಿಹಾರಕ್ಕೆ ಈ ಸಂಘಗಳು ಸಹಾಯಕ. ಇಂತಹ ಸಂಘಗಳು ಪ್ರತಿಯೊಂದು ಶಾಲೆಗೂ ಇರಬೇಕು. ಮಕ್ಕಳ ಯೋಗಕ್ಷೇಮ, ಕಲಿಕೆಯ ಪ್ರಗತಿ, ಶಿಸ್ತು ಹಾಗೂ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ತಂದೆತಾಯಿಗಳು ಜವಾಬ್ದಾರಿ ತೆಗೆದುಕೊಳ್ಳುವುದು ತೀರಾ ಅವಶ್ಯಕ. ತಮ್ಮ ಮಕ್ಕಳು ಶಾಲೆಗೆ ನಿಯಮಿತವಾಗಿ ಹೋಗುತ್ತಿದ್ದಾರೆಯೇ ಇಲ್ಲವೆ, ಶಾಲೆಯಲ್ಲಿ ಸಮರ್ಪಕವಾಗಿ ವರ್ತಿಸಿ ಶಿಸ್ತಿನಿಂದ ಇರುವರೇ ಇಲ್ಲವೆ ಹಾಗೂ ಕಲಿಯುವಿಕೆಯಲ್ಲಿ ಅವರ ಪ್ರಗತಿ ಏನು ಎಂಬ ಸಮಸ್ಯೆಗಳನ್ನು ಅರಿಯಲು ಪೋಷಕ–ಬೋಧಕ ಸಂಘಗಳು ಅತ್ಯಂತ ಸಹಕಾರಿಯಾಗಿವೆ.

ಪ್ರತಿಯೊಂದು ಶಾಲೆಯಲ್ಲಿ ಈ ರೀತಿಯ ಸಂಘಗಳಿದ್ದು, ಮುಖ್ಯೋಪಾಧ್ಯಾಯರು ಪ್ರತಿ ತಿಂಗಳಲ್ಲಿ ಒಂದು ಸಲ ಪೋಷಕರು ಶಾಲೆಗೆ ಬಂದು ಹೋಗುವಂತೆ ವ್ಯವಸ್ಥೆ ಮಾಡಬೇಕು. ಎಲ್ಲ ಶಾಲೆಗಳಲ್ಲಿಯೂ ಈ ವ್ಯವಸ್ಥೆ ಮಾಡಲು ಅಸಾಧ್ಯವಾಗಬಹುದು. ಸಾಧ್ಯವಾದ ಶಾಲೆಗಳಲ್ಲಿ ಮಾಡಬಹುದು. ಉಳಿದ ಕಡೆ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಪೋಷಕರ ದಿನ ಎಂದು ಆಚರಿಸಿ ಅವರನ್ನು ಶಾಲೆಗೆ ಬರುವಂತೆ ಮಾಡಬೇಕು. ಶಾಲೆಯಲ್ಲಿಯ ವಾತಾವರಣದ ಬಗ್ಗೆ ಪೋಷಕರು ಸಲಹೆ ನೀಡಲು ಅವಕಾಶ ಕಲ್ಪಿಸಬೇಕು. ಅವರ ಮಕ್ಕಳ ಪ್ರಗತಿ ಬಗ್ಗೆ ವಿಚಾರಿಸಿ ಸೂಕ್ತ ವ್ಯವಸ್ಥೆ ಕೈಗೊಳ್ಳುವಂತಾಗಬೇಕು.

ಪೋಷಕ–ಬೋಧಕ ಸಂಘವು ಒಂದು ಸಂವಿಧಾನಾತ್ಮಕ ಅಂಗವಾಗಿದ್ದು ಅದನ್ನು 'ಜನಶಿಕ್ಷಾ ಅಧಿನಿಯಮ 2002'ರ ಅಡಿಯಲ್ಲಿ ಶಾಲಾ ಆಡಳಿತ ನಿರ್ವಹಣೆಯ ಗುಣಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಸ್ಥಾಪಿಸಲಾಯಿತು. ಶಾಲೆಗಳಲ್ಲಿ ಮಕ್ಕಳ ದಾಖಲಾತಿಯೊಂದಿಗೆ ಅವರ ತಂದೆ ಹಾಗೂ ತಾಯಿಯ ಹೆಸರೂ ದಾಖಲಾಗಿರುತ್ತದೆ. ಅಂತೆಯೇ ಶಿಕ್ಷಕರು ಮಕ್ಕಳ ತಂದೆತಾಯಿಯರನ್ನು ಒಳಗೊಂಡ ಒಂದು ಸಂಘವೇ ಪೋಷಕ–ಬೋಧಕ ಸಂಘವೆನಿಸುತ್ತದೆ. 2003–2004ರಿಂದ ಈ ಪೋಷಕ–ಬೋಧಕ ಸಂಘವು ಅತಿ ಹೆಚ್ಚು ಕ್ರಿಯಾಶೀಲ ಸಂಘವಾಗಿ ಪರಿಣಮಿಸುತ್ತಿದೆ. ಈ ಸಂಘವು ಶಾಲೆಯ ಆಡಳಿತವನ್ನು ಮಾತ್ರ ಸುಧಾರಿಸುವ ಗುರಿ ಹೊಂದದೇ, ಶಾಲೆಯ ಶೈಕ್ಷಣಿಕ ಗುಣಾತ್ಮಕತೆಯನ್ನೂ ಹೆಚ್ಚಿಸುವ ಗುರಿ ಮತ್ತು ಉದ್ದೇಶವನ್ನು ಹೊಂದಿದೆ. ಅದರಂತೆ ಅದು ಈ ದಿಶೆಯಲ್ಲಿ ಒಂದು ಪರಿಣಾಮಕಾರಿ ಹಾಗೂ ಪೂರಕವಾದ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ.

ಪೋಷಕ–ಬೋಧಕ ಸಂಘದ ವ್ಯಾಪ್ತಿ: ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಅಡಗಿರುವ ಪ್ರಚ್ಛನ್ನ ಶಕ್ತಿಯನ್ನು ಗುರುತಿಸಿ ಅದನ್ನು ಬೆಳಕಿಗೆ ತರುವ ಪ್ರಮುಖವಾದ ಗುರಿಯನ್ನು ಈ ಸಂಘವು ಹೊಂದಿದೆ. ಅಂದರೆ ತಂದೆ–ತಾಯಿಯರನ್ನು ತಮ್ಮ ಮಕ್ಕಳ ಉತ್ತಮವಾದ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ನಡೆಯುವಂತೆ ಪ್ರೇರೇಪಿಸುತ್ತದೆ.

ಪೋಷಕ–ಬೋಧಕ ಸಂಘದ ಅಗತ್ಯ: ಪೋಷಕ–ಬೋಧಕ ಸಂಘಗಳ ಪ್ರಾಮುಖ್ಯವನ್ನು ತಿಳಿದುಕೊಂಡಮೇಲೆ ಸಾಮಾನ್ಯವಾಗಿ ಉದ್ಭವಿಸುವ ಒಂದು ಪ್ರಶ್ನೆ ನಮಗೆ ಈ ಸಂಘಗಳು ಅಗತ್ಯವಾಗಿವೆಯೇ ಎಂಬುದು. ಅದಕ್ಕೆ ಉತ್ತರ, ಈ ಸಂಘವು ಎರಡು ರೀತಿಯ ಪ್ರಕ್ರಿಯೆಗಳನ್ನು ಒಳಗೊಂಡ ಅಂಗವಾಗಿದೆ.

Digitised by Bharatavani, CIIL

ಪಾಲಕರು ತಮ್ಮ ಮಕ್ಕಳು ಓದುತ್ತಿರುವ ಶಾಲೆಯ ಆಡಳಿತ ನಿರ್ವಹಣೆಯ ಬಗ್ಗೆ, ಶಿಕ್ಷಕರ ಗುಣಾತ್ಮಕತೆಯ ಬಗ್ಗೆ, ಅವರ ಉದ್ಯೋಗದ ಬಗ್ಗೆ ಹಾಗೂ ಶಾಲೆಯ ಸಾಮಾಜಿಕ ಪರಿಸರದ ಬಗ್ಗೆ ತಿಳಿದುಕೊಳ್ಳುವುದು ಒಂದು ವಿಧದ ಪ್ರಕ್ರಿಯೆಯಾದರೆ, ಶಿಕ್ಷಕರು ಸಹ ವಿದ್ಯಾರ್ಥಿಗಳ ಆಸಕ್ತಿ, ಅವರ ಕೌಟುಂಬಿಕ ಹಿನ್ನೆಲೆ, ಆರ್ಥಿಕ ಸ್ಥಿತಿಗತಿಗಳು, ಕುಟುಂಬದ ಸಾಮಾಜಿಕ ಪರಿಸ್ಥಿತಿಗಳನ್ನು ಅಷ್ಟೇ ಕುತೂಹಲದಿಂದ ತಿಳಿದುಕೊಳ್ಳುವ ಆಸಕ್ತಿ ಹೊಂದಿರುತ್ತಾರೆ.

**ಪೋಷಕ–ಬೋಧಕ ಸಂಘಗಳ ಪ್ರಾಮುಖ್ಯ:**

- ಶಾಲೆ ಮತು ಮನೆ ಸಂಬಂಧವನ್ನು ಹೆಚ್ಚಿಸುವುದು
- ಪೋಷಕ ಮತ್ತು ಶಿಕ್ಷಕರ ನಡುವೆ ಮಧುರ ಬಾಂಧವ್ಯ ಬೆಳೆಸುವುದು
- ಪೋಷಕರಿಗೆ ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿ ಬಗ್ಗೆ ಮಾಹಿತಿ ಒದಗಿಸುವುದು
- ಮಕ್ಕಳಲ್ಲಿ ಬರುವ ಅಶಿಸ್ತು, ಅವಿಧೇಯತೆ, ಅನಿಯಮಿತತನ ಮುಂತಾದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಈ ಸಂಘಗಳು ಸಹಾಯಕ
- ಶಾಲಾ ಕಾರ್ಯಕ್ರಮಗಳಲ್ಲಿ ಪೋಷಕರು ಭಾಗವಹಿಸುವದರಿಂದ ತಮ್ಮ ಮಕ್ಕಳ ವಿವಿಧ ಕಲೆ ಹಾಗೂ ಸಾಮರ್ಥ್ಯದ ಬಗ್ಗೆ ಅರಿತು ಮಕ್ಕಳನ್ನು ಆ ದಿಸೆಯಲ್ಲಿ ಪ್ರಗತಿ ಹೊಂದಲು ಅವಕಾಶ ಕಲ್ಪಿಸುವುದು ಇತ್ಯಾದಿ.

**ಪೋಷಕ–ಬೋಧಕ ಸಂಘದ ಉದಾತ್ತವಾದ ಮೌಲ್ಯಗಳು**

ಅ) ಸಹಕಾರ ಮನೋಭಾವ: ಪೋಷಕ–ಬೋಧಕ ಸಂಘವು ತನ್ನ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವಲ್ಲಿ ಅನೇಕ ರಾಷ್ಟ್ರೀಯ ಸಂಘ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಹಾಗೆಯೇ ಸಂಘದ ಕೇಂದ್ರ ಬಿಂದುಗಳಾದ ಶಿಕ್ಷಕ, ಪಾಲಕರ ನಡುವೆಯೂ ಸಹಕಾರ ಮನೋಭಾವನೆಯನ್ನು ಬೆಳೆಸುತ್ತದೆ.

ಆ) ಗೌರವ ಮನೋಭಾವ: ಸಂಘವು ತನ್ನಲ್ಲಿರುವ ಎಲ್ಲ ವ್ಯಕ್ತಿಗಳಿಂದ ಪರಸ್ಪರ ಗೌರವಿಸುವ ಹಾಗೂ ಗೌರವವನ್ನು ಪಡೆದುಕೊಳ್ಳುವಂತಹ ಒಂದು ಉದಾತ್ತವಾದ ಮೌಲ್ಯವನ್ನು ಬೆಳೆಸುವಲ್ಲಿ ಸಹಾಯ ಮಾಡುತ್ತದೆ.

**ಪೋಷಕ–ಬೋಧಕ ಸಂಘದ ಐತಿಹಾಸಿಕ ಉದ್ದೇಶಗಳು**

1) ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವುದು 2) ಕೌಟುಂಬಿಕ ಸ್ಥಿತಿಗತಿಗಳನ್ನು ಸುಧಾರಿಸುವುದು ಮತ್ತು ಹೆಚ್ಚಿಸುವುದು 3) ಮಕ್ಕಳಿಗೆ ಸೂಕ್ತವಾದ ಕಾನೂನು ನಿಯಮಾವಳಿಗಳಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಭದ್ರತೆಯನ್ನು ಒದಗಿಸುವುದು 4) ಪಾಲಕರು ಹಾಗು ಶಿಕ್ಷಕರ ನಡುವೆ ಸಹಕಾರ ಮನೋಭಾವವನ್ನು ಬೆಳೆಸುವುದು 5) ಶಿಕ್ಷಕರು ಮತ್ತು ಸಾಮಾನ್ಯ ಜನವರ್ಗಗಳ ನಡುವೆ ಐಕ್ಯತೆಯನ್ನು ಉಂಟುಮಾಡಿ ಈ ಮೂಲಕ ಮಕ್ಕಳ ಭೌತಿಕ, ಮಾನಸಿಕ, ಸಾಮಾಜಿಕ ಹಾಗು ಆಧ್ಯಾತ್ಮಿಕ ಶಿಕ್ಷಣದ ಮೌಲ್ಯಗಳನ್ನು ಬೆಳೆಸುವುದು.

ಸ್ಥಳೀಯ ಸಂಘವು ರಾಜ್ಯ ಮತ್ತು ರಾಷ್ಟ್ರೀಯ ಸಂಸ್ಥೆಯಾಗಿ ಒಂದು ಸಮಗ್ರ ಜಾಲ ವ್ಯವಸ್ಥೆಯಂತೆ ಕಾರ್ಯ ನಿರ್ವಹಿಸುತ್ತದೆ. ಈ ಸಂಘವು ಇತರೆ ಸಂಘಗಳ ರೀತಿಗೆ ಹೋಲಿಸಿದರೆ ತುಂಬಾ ಪ್ರಯೋಜನಕಾರಿ. ಹೇಗೆಂದರೆ:

1) ಇದು ಸ್ಥಳೀಯ ಸಂಪನ್ಮೂಲಗಳನ್ನು ಗುರುತಿಸಿ ತನ್ಮೂಲಕ ಅವುಗಳನ್ನು ಸದ್ಬಳಕೆ ಮಾಡುತ್ತದೆ
2) ಸ್ಥಳೀಯವಾಗಿ ಅಲ್ಲಿನ ಮಕ್ಕಳ ಕುಟುಂಬ ಹಾಗೂ ಶಾಲೆಯಲ್ಲಿ ಉತ್ತಮವಾದ ಕಾರ್ಯಕ್ರಮಗಳನ್ನು ರೂಪಿಸಿ ಸ್ಥಳೀಯ ಅಭ್ಯುದಯವನ್ನು ಸಾಧಿಸುತ್ತದೆ.
3) ಸ್ಥಳೀಯ ಸಂಘವು ರಾಷ್ಟ್ರೀಯ ಕಾನೂನುಗಳನ್ನು ರೂಪಿಸುವಲ್ಲಿ ಸ್ಥಳೀಯ ಸಮಸ್ಯೆಗಳು ಹಾಗೂ ಇತರ ಮೌಲ್ಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಪೋಷಕ–ಬೋಧಕ ಸಂಘಗಳು ಪ್ರತ್ಯೇಕವಾಗಿಯೂ ಪರೋಕ್ಷವಾಗಿಯೂ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನವನ್ನು ಉತ್ತಮ ರೀತಿಯಲ್ಲಿ ರೂಪಿಸಲು ಸಹಕಾರಿಯಾಗಿವೆ. ಈ ಸಂಘಗಳ ಅಂತಿಮ ಗುರಿ ವಿದ್ಯಾರ್ಥಿಗಳನ್ನು ಸಮಾಜದ ಸತ್ಪ್ರಜೆಗಳನ್ನಾಗಿ ರೂಪಿಸಿ ತನ್ಮೂಲಕ ಸಾಮಾಜಿಕ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ವೃದ್ಧಿಸಿ ಮಾದರಿ ಸಮಾಜ ರೂಪಿಸುವುದಾಗಿದೆ.

**–ಡಾ. ಶೈಲಜಾ ಹೆಚ್.ಎಂ.**

## ಪೌಲೊ ಫ್ರೈಯರಿ

ಪೌಲೊ ಫ್ರೈಯರಿ ಎಂಬ ಹೆಸರಿನ ಪ್ರಸಿದ್ಧ ಶಿಕ್ಷಣತಜ್ಞ ಬ್ರೆಝಿಲ್ ದೇಶದ ಪ್ರಸಿದ್ಧ ಜನಪ್ರಿಯ ರಾಜನೀತಿಜ್ಞ ಕೂಡ. 1921, ಸೆಪ್ಟೆಂಬರ್ 19ರಂದು ಜನಿಸಿ 1997ರವರೆಗೆ ಸುಮಾರು 75 ವರ್ಷಗಳ ಕಾಲ ಬಾಳಿದ ಈತನ ಕೊಡುಗೆ ಶಿಕ್ಷಣಶಾಸ್ತ್ರ ಹಾಗೂ ರಾಜನೀತಿ ಎರಡೂ ಶಾಖೆಗಳಲ್ಲಿ ಮಹತ್ವವಾದುದು. ವಿಶ್ವದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಫ್ರೈಯರಿಯು ಬಾಲ್ಯದಲ್ಲಿ ಬಡತನವನ್ನು ಅನುಭವಿಸಿದ. ಹೀಗೆ ಬಡ ಗ್ರಾಮೀಣ ಜನರು ಕಾರ್ಮಿಕರ ನಡುವೆ ಜೀವಿಸಿದ್ದರಿಂದ ಅವರ ಜೀವನವನ್ನು ಫ್ರೈಯರಿ ಆಳವಾಗಿ ಅರಿತುಕೊಳ್ಳುವಂತಾಯಿತು. ಅಷ್ಟೆ ಅಲ್ಲದೆ, ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು ಶಿಕ್ಷಣದ ಮೇಲೆ ಯಾವ ತೆರನ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ತಿಳಿಯಲು ಈ ಅನುಭವಗಳು ಅವನಿಗೆ ಅನುವು ಮಾಡಿಕೊಟ್ಟವು.

ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಫ್ರೈಯರಿ ಚಿಕ್ಕಹುಡುಗರಿಗೆ ವ್ಯಾಕರಣವನ್ನು ಬೋಧಿಸುತ್ತಿದ್ದನು. ಆಗಲೇ, ಮುಂದೆ ಆತ ಪ್ರಚುರಪಡಿಸಿದ "ಸಂಭಾಷಣೆಯ ಮೂಲಕ ಶಿಕ್ಷಣ"ದ ಪರಿಕಲ್ಪನೆ

Digitised by Bharatavani, CIIL

ಆತನಿಗೆ ಹೊಳೆದಿತ್ತು. ಫ್ರೈಯರಿ ಸೋಷಿಯಲಿಸ್ಟ್ ಸರ್ವಿಸ್ ಇಂಡಸ್ಟ್ರಿ ಎಂಬ ಸರ್ಕಾರಿ ಅಂಗದ ನಿರ್ದೇಶಕನಾಗಿದ್ದಾಗ ಆತನ ಶೈಕ್ಷಣಿಕ ವಿಚಾರಧಾರೆ ಅಭಿವ್ಯಕ್ತವಾಯಿತು. ಈ ಸಂದರ್ಭದಲ್ಲೇ ಶ್ರೀಮಂತ ವರ್ಗದ ಜನರ ಶಿಕ್ಷಣವನ್ನು ಹಾಗೂ ಕಾರ್ಮಿಕ ವರ್ಗದ ನಿಜಜೀವನ ಹಾಗೂ ಶೈಕ್ಷಣಿಕ ಮಟ್ಟಕ್ಕೂ ಬಹಳ ಅಂತರವಿದೆಯೆಂದು ಫ್ರೈಯರಿಗೆ ಅರಿವಾಯಿತು. ಈ ಸಂಸ್ಥೆಯಲ್ಲಿ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ ಕಾಲದಲ್ಲಿ ಅವನದೇ ಪ್ರಜಾಪ್ರಭುತ್ವವನ್ನು ಬೆಂಬಲಿಸಿ ಭಾಷಣವನ್ನು ನೀಡುತ್ತಿದ್ದ. ಅಲ್ಲದೆ ಆತ "ಇಂದಿನ ಬ್ರೆಝಿಲ್‌ನ ಶಿಕ್ಷಣ" ಎಂಬ ಪಿ.ಹೆಚ್‌ಡಿ ಪ್ರಬಂಧದಲ್ಲಿಯೂ ಸಹ ಪ್ರಜಾಪ್ರಭುತ್ವಕ್ಕೆ ಒತ್ತನ್ನು ನೀಡಿದ್ದ. 1959ರಲ್ಲಿ ರಚಿಸಿದ ಈ ಪ್ರಬಂಧದಿಂದ ಹಾಗೂ ತನ್ನ ಬಾಷಣಗಳಲ್ಲಿ ಪ್ರಜಾಪ್ರಭುತ್ವಕ್ಕೆ ಬೆಂಬಲವನ್ನು ಸೂಚಿಸಿದ್ದರಿಂದ ಬ್ರೆಜಿಲ್ ಸರ್ಕಾರ ಇವನಿಗೆ "ರಾಜದ್ರೋಹಿ" ಎಂಬ ಪಟ್ಟಕಟ್ಟಿತು. 1964ರಲ್ಲಿ ನಡೆದ ದಂಗೆಯ ಪರಿಣಾಮವಾಗಿ ಅಧಿಕಾರಕ್ಕೆ ಬಂದ ಬ್ರೆಜಿಲ್ ಸರ್ಕಾರ ಪೌಲೊ ಫ್ರೈಯರಿಯನ್ನು ದೇಶದಿಂದ ಹೊರಹಾಕಿತು. ತತ್ಫಲವಾಗಿ ಆತ ಚಿಲಿ ದೇಶದಲ್ಲಿ ಆಶ್ರಯವನ್ನು ಪಡೆಯಬೇಕಾಯಿತು. 1967ರಲ್ಲಿ "ಎಜುಕೇಷನ್ ಆಸ್ ದ ಪ್ರಾಕ್ಟೀಸ್ ಆಫ್ ಫ್ರೀಡಂ" ಎಂಬ ಆತನ ಪ್ರಥಮ ಗ್ರಂಥ ಬೆಳಕು ಕಂಡಿತು. ಈ ಪುಸ್ತಕ ಫ್ರೈಯರಿಗೆ ಪ್ರಸಿದ್ಧಿಯ ಜೊತೆಗೆ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಗೌರವ ಪ್ರಾಧ್ಯಾಪಕ ಹುದ್ದೆಯನ್ನು ತಂದುಕೊಟ್ಟಿತು. ಫ್ರೈಯರಿಯ ಅತ್ಯಂತ ಪ್ರಸಿದ್ಧ ಗ್ರಂಥ "ಪೆಡಗಾಗಿ ಆಫ್ ದಿ ಅಪ್ರೆಸ್ಡ್" 1968ರಲ್ಲಿ ಪ್ರಕಟವಾಯಿತು. 1970ರಲ್ಲಿ "ವರ್ಲ್ಡ್ ಕಾಂಗ್ರೆಸ್ ಆಫ್ ಚರ್ಚ್ಸ್" ಗೆ ವಿಶೇಷ ಶೈಕ್ಷಣಿಕ ಸಲಹೆಗಾರನಾಗಿ ಫ್ರೈಯರಿ ಆಯ್ಕೆಗೊಂಡ.

ಫ್ರೈಯರಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲೂ ಸಂಶೋಧನೆಯನ್ನು ಕೈಗೊಂಡು ಉತ್ತಮ ಫಲಿತಾಂಶಗಳನ್ನು ಗುರುತಿಸಿದ. ಕೇವಲ 45 ದಿನಗಳಲ್ಲಿ 300 ಅನಕ್ಷರಸ್ಥ ಕೃಷಿಕರಿಗೆ ಓದು ಬರಹ ಕಲಿಸುವಲ್ಲಿ ಫ್ರೈಯರಿ ಸಫಲನಾದ. ಇದನ್ನು ಕಂಡ ಬ್ರೆಝಿಲ್ ಸರ್ಕಾರ ಫ್ರೈಯರಿಗೆ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಮತ್ತಷ್ಟು ಕಾರ್ಯಗಳನ್ನು ಸಾಧಿಸಲು ಅವಕಾಶಗಳನ್ನು ಮಾಡಿಕೊಟ್ಟಿತಾದರೂ 1964ರಲ್ಲಿ ನಡೆದ ದಂಗೆಯಿಂದ ಆ ಕಾರ್ಯವು ಸ್ಥಗಿತಗೊಂಡಿತು. ಈ ಘಟನೆಯ ನಂತರದ 16 ವರ್ಷಗಳ ಗಡಿಪಾರಿನ ಅವಧಿಯಲ್ಲಿ ಫ್ರೈಯರಿ ಶಿಕ್ಷಣಕ್ಷೇತ್ರದಲ್ಲಿ ಹೆಸರನ್ನು ಮಾಡಿ ಪುನಃ 1980ರಲ್ಲಿ ತನ್ನ ಸ್ವದೇಶಕ್ಕೆ ಮರಳಿದ. "ವರ್ಕರ್ಸ್ ಪಾರ್ಟಿ"ಯನ್ನು ಸೇರಿದ ಫ್ರೈಯರಿ 1980 ರಿಂದ 1986ರವರೆಗೆ ವಯಸ್ಕರ ಶಿಕ್ಷಣ ಯೋಜನೆಯ ಮೇಲ್ವಿಚಾರಣೆಯನ್ನು ವಹಿಸಿದ. 1988ರಲ್ಲಿ ವರ್ಕರ್ಸ್ ಪಾರ್ಟಿ ಅಧಿಕಾರಕ್ಕೆ ಬಂದಾಗ ಶಿಕ್ಷಣಮಂತ್ರಿಯ ಪದವಿ ಸ್ವೀಕಾರ ಮಾಡಿದ. 1991ರಲ್ಲಿ ಸೌಪಾಲೊ ನಗರದಲ್ಲಿ "ಪೌಲೊ ಫ್ರೈಯರಿ ಇನ್ಸ್‌ಟಿಟ್ಯೂಟ್" ಶಿಕ್ಷಣಕ್ಷೇತ್ರದಲ್ಲಿ ಸಂಶೋಧನೆ ನಡೆಸುವ ಉದ್ದೇಶವನ್ನು ಇಟ್ಟುಕೊಂಡು ಅಸ್ತಿತ್ವಕ್ಕೆ ಬಂದಿತು.

**ಪೌಲೊ ಫ್ರೈಯರಿಯ ಶೈಕ್ಷಣಿಕ ಪರಿಕಲ್ಪನೆಗಳು:**

ಫ್ರೈಯರಿಯ ಶೈಕ್ಷಣಿಕ ಪರಿಕಲ್ಪನೆಗಳಲ್ಲಿ 'ಸಂವಾದ' ಪ್ರಮುಖವಾದುದು ಒಂದಾಗಿದೆ. ಸಂವಾದದಲ್ಲಿ ತೊಡಗುವುದು ಎಂದರೆ ಅದರಲ್ಲಿ ಭಾಗವಹಿಸುವವರು ಸಮಾನಸ್ಕಂದರು ಎಂದು ಅರ್ಥ. ಸಂವಾದದಲ್ಲಿ ಒಬ್ಬ ಮತ್ತೊಬ್ಬನ ಮೇಲೆ ತನ್ನದೇ ಆದ ದೃಷ್ಟಿಕೋನವನ್ನು ಹೇರುವುದಿಲ್ಲ. ಅನೌಪಚಾರಿಕ ಶಿಕ್ಷಣಕ್ರಮದಲ್ಲಿ ಸಂವಾದದ ಮೂಲಕ ಬೋಧನಾಪ್ರಕ್ರಿಯೆ ನಡೆಯುತ್ತದಲ್ಲದೆ ಕಲಿಯುವವನು (ಕಲಿಕಾರ್ಥಿ) ಹಾಗೂ ಕಲಿಸುವವನ(ಬೋಧಕ) ನಡುವೆ ಪರಸ್ಪರ ಗೌರವಭಾವವಿರುತ್ತದೆ. ಸಾಂಪ್ರದಾಯಿಕ ಕಲಿಕಾ ಪ್ರಕ್ರಿಯೆಯಲ್ಲಿ ಜರುಗುವ ಪಠ್ಯಾಧಾರಿತ ಬೋಧನೆಯನ್ನು ಫ್ರೈಯರಿ ಒಪ್ಪುವುದಿಲ್ಲ. ಈ ಕಲಿಕಾ ಪ್ರಕ್ರಿಯೆಯನ್ನು ಆತ ಬ್ಯಾಂಕಿಂಗ್(Banking) ಶಿಕ್ಷಣವೆಂದು ಹೇಳಿದ್ದಾನೆ. ಏಕೆಂದರೆ ಇಲ್ಲಿ ಬೋಧಕನು ಪಠ್ಯದಲ್ಲಿರುವ ವಿಷಯವನ್ನು ವಿದ್ಯಾರ್ಥಿಯಲ್ಲಿ ತುಂಬುತ್ತಾ ಹೋಗುತ್ತಾನೆ. "ಎಲ್ಲವನ್ನೂ ತಿಳಿದಿರುವ ಬೋಧಕ ಏನೂ ತಿಳಿಯದ ವಿದ್ಯಾರ್ಥಿ"ಗೆ ಜ್ಞಾನವನ್ನು ಅನುಗ್ರಹಿಸುತ್ತಾನೆಂಬ ಸಾಂಪ್ರದಾಯಿಕ ಬೋಧನ-ಕಲಿಕಾ ಪ್ರಕ್ರಿಯೆಯ ನಿರೂಪಣೆಯನ್ನು ಫ್ರೈಯರಿ ಪುರಸ್ಕರಿಸುವುದಿಲ್ಲ. ಬದಲಾಗಿ ಬೋಧನೆ ಕಲಿಕಾ ಪ್ರಕ್ರಿಯೆ ಒಂದು ಪಾರಸ್ಪರಿಕ ಕ್ರಿಯೆಯ ಮೂಲಕ ಸಾಧ್ಯವಾಗುವಂತದ್ದು ಎಂಬುದು ಪೌಲೊ ಫ್ರೈಯರಿಯ ದೃಢನಿಲುವು. ಈ ಪರಿಕಲ್ಪನೆ ಪ್ಲೇಟೋವಿನ ತಾತ್ವಿಕ ಚಿಂತನೆಯಿಂದ ಪ್ರಭಾವಿತವಾಗಿರುವುದೆಂದು ತಿಳಿಯಬಹುದು. ಒಟ್ಟಿನಲ್ಲಿ ಹೇಳುವುದಾದರೆ, ಬೋಧಕನಾದವನು ವಿದ್ಯಾರ್ಥಿಗಳನ್ನು ಸಂವಾದದಲ್ಲಿ ತೊಡಗಿಸಿ ವಿಷಯಗಳನ್ನು ತಿಳಿಸುವುದಕ್ಕಿಂತ ಹೆಚ್ಚಾಗಿ "ಸಮಸ್ಯೆ"ಯನ್ನು ವಿದ್ಯಾರ್ಥಿಗಳೇ ಅರಿಯುವಂತೆ ಮಾಡಿ ತನ್ಮೂಲಕ ಅದಕ್ಕೆ ಉತ್ತರವನ್ನೂ ಸಹ ಕಂಡುಕೊಳ್ಳಲು ಸಹಾಯ ಮಾಡಬೇಕೆಂಬುದು ಇದರ ಸಾರ. ಫ್ರೈಯರಿಯ ಈ ಸಂವಾದ ಪರಿಕಲ್ಪನೆಯಲ್ಲಿ ಬೋಧನಾ ವಿಷಯ ವಿದ್ಯಾರ್ಥಿ ಸಮೂಹದಿಂದಲೇ ಉದ್ಭವಿಸುತ್ತದೆ. ಈ ಬೋಧನಾ ವಿಷಯ ಪುನಃ ಬೋಧಕನಿಂದ ಸಮೂಹಕ್ಕೆ ಹಿಂತಿರುಗಿಸಲ್ಪಡುತ್ತದೆಯಲ್ಲದೆ ಬೋಧಕನಿಂದ ಆ ಸಮಸ್ಯೆಗೆ ಉತ್ತರವನ್ನು ಕಂಡುಕೊಳ್ಳಲು ಸೂಕ್ತ ಮಾಹಿತಿಯು ಸಹ ದೊರಕುತ್ತದೆ.

ಮೌಲ್ಯವುಳ್ಳ ಹಾಗೂ ಸಾರಭೂತ ಆಚರಣೆಗೆ (Pranis-informed action and linked to certain values) ಫ್ರೈಯರಿ ಹೆಚ್ಚಿನ ಒತ್ತು ನೀಡಿದ್ದಾನೆ. ಸಂವಾದದಿಂದ ಅರಿವಿನ ಆಳವನ್ನು ತಲುಪುವುದು ಮಾತ್ರವಲ್ಲದೆ ಅದರಿಂದ ನಮ್ಮ ಸುತ್ತಮುತ್ತಲ ಪ್ರಪಂಚದಲ್ಲಿ ಬದಲಾವಣೆಯನ್ನು ತರಲು ಸಾಧ್ಯವಾಗುವಂತಿರಬೇಕು. ಸಂವಾದವೆಂದರೆ ಅದರಲ್ಲಿ ಬಾಗವಹಿಸುವವರ ನಡುವೆ ಗೌರವವಿರಬೇಕು. ಸಮುದಾಯದ ಮೌಲಿಕ ಸಂವೃದ್ಧಿಗೆ(Community enrichment) ಸಂವಾದ ಸಹಕಾರಿಯಾಗಿರಬೇಕಲ್ಲದೆ ಸಾಮಾಜಿಕ ಸಂಬಂಧ-ಸಹಕಾರಗಳನ್ನು ಪುಷ್ಟೀಕರಿಸುವಂತಿರಬೇಕು. ಸಾಮಾಜಿಕ ಉನ್ನತಿ ಹಾಗೂ

Digitised by Bharatavani, CIIL

ನ್ಯಾಯವನ್ನು ಕಾಪಾಡುವಂತೆ ಕಾರ್ಯೋನ್ಮುಖರಾಗಲು ಸಂವಾದ ಜನರನ್ನು ಪ್ರೇರೇಪಿಸುವಂತಿರಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ ಸಂವಾದವು ನಮ್ಮನ್ನು "ಶಿಕ್ಷಿತ ಚಟುವಟಿಕೆ"( informed action) ಯಲ್ಲಿ ತೊಡಗುವಂತೆ ಪ್ರೇರೇಪಿಸಬೇಕು.

ಫ್ರೈಯರಿಯ ಮತ್ತೊಂದು ಸಿದ್ಧಾಂತ "ಕಾನ್‌ಸೆನ್ಸಿಟೈಜೇಷನ್"(conscientization) ಅಂದರೆ "ಪ್ರಜ್ಞಾವಿಕಾಸ". ಈ ಸಿದ್ಧಾಂತ ಮಾರ್ಕ್ಸ್ ವಾದವನ್ನು ಆಧರಿಸಿದೆ. ದೀನದಲಿತ ಅಥವಾ ಶೋಷಿತ ವರ್ಗಕ್ಕೆ ಸೇರಿದವರ ಶಿಕ್ಷಣವು ಹೇಗಿರಬೇಕೆಂಬುದರ ಬಗ್ಗೆ ಸಾಕಷ್ಟು ಅಧ್ಯಯನವನ್ನು ಕೈಗೊಂಡ ಫ್ರೈಯರಿ "ಪ್ರಜ್ಞಾವಿಕಾಸ"ವೆಂಬ ಪರಿಕಲ್ಪನೆಯನ್ನು ರೂಪಿಸಿದನು. ಸುತ್ತಮುತ್ತಲಿನ ಜಗತ್ತಿನಲ್ಲಿ ಕಂಡುಬರುವ ಸಾಮಾಜಿಕ ಹಾಗೂ ರಾಜಕೀಯ ವಿರೋಧಾಭಾಸಗಳನ್ನು ಹೊರಗೆಡಹಲು ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುವ ವಿವೇಚನಾತ್ಮಕ ಅರಿವಿಗೆ ಪ್ರಜ್ಞಾವಿಕಾಸವೆಂದು ಹೆಸರು. ವಿವೇಚನಾತ್ಮಕ ಅರಿವು ಅನ್ಯಾಯವನ್ನೆಸಗುವ ಶಕ್ತಿಗಳ ವಿರುದ್ಧ ಸೂಕ್ತಕ್ರಮ ತೆಗೆದುಕೊಳ್ಳಬೇಕಾದ ಸಾಮರ್ಥ್ಯ, ವಿವೇಚನೆಗಳನ್ನು ಒಳಗೊಳ್ಳುತ್ತದೆ. ಪ್ರಜ್ಞಾವಿಕಾಸದಿಂದ ವ್ಯಕ್ತಿಯು ತನ್ನ ಸುತ್ತಮುತ್ತಲಿನ ಪ್ರಮುಖ ಸಾಮಾಜಿಕ ಹಾಗೂ ರಾಜಕೀಯ ಆಯಾಮಗಳನ್ನು ಕುರಿತ ಸ್ಪಷ್ಟ ಅರಿವನ್ನು ಮೂಡಿಸಿಕೊಳ್ಳುತ್ತಾನೆ. ಈ ಸ್ಪಷ್ಟ ಅರಿವಿನಿಂದ ವ್ಯಕ್ತಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದನ್ನು ರೂಪಾಂತರಿಸಲು ಸಾಧ್ಯವೆಂಬುದನ್ನು ತಿಳಿಯುತ್ತಾನೆ. ವ್ಯಕ್ತಿ ಸ್ವಾತಂತ್ರ್ಯದ ಅನುಷ್ಠಾನವೇ ಶಿಕ್ಷಣ ಎಂಬುದು ಫ್ರೈಯರಿಯ ಮತ.

ಶೈಕ್ಷಣಿಕ ಚಟುವಟಿಕೆ ಅದರಲ್ಲಿ ಭಾಗವಹಿಸುವವರ ನೈಜ ಅನುಭವದೊಡನೆ ಒಂದಾಗಿ ಸಾಗಬೇಕು ಎಂಬುದು ಫ್ರೈಯರಿಯ ಮತ್ತೊಂದು ವಾದ. ಅನೌಪಚಾರಿಕ ಶಿಕ್ಷಣ ವಿಧಾನವನ್ನು ಬೆಂಬಲಿಸುವ ಚಿಂತಕರಿಗೆ ಫ್ರೈಯರಿಯ ಈ ವಾದ ಸಾಕಷ್ಟು ಹೊಸ ದಾರಿಗಳನ್ನು ತೆರೆದಿದೆ. ಕಲಿಕಾ ಪ್ರಕ್ರಿಯೆ ಕಲಿಕಾರ್ಥಿಯ ಸ್ವಂತ ಅನುಭವದಿಂದ ಆರಂಭವಾಗುವುದರ ಜೊತೆಗೆ ಸಮೂಹದಲ್ಲಿ ಕೈಗೊಳ್ಳುವ ವಿವಿಧ ಚಟುವಟಿಕೆಗಳನ್ನು ಆಧರಿಸಿದೆ. ವ್ಯಕ್ತಿಗತ ಹಾಗೂ ರಾಜಕೀಯ ಮಟ್ಟದಲ್ಲಿ ಅರ್ಜಿಸಿದ ಜ್ಞಾನವನ್ನು ಆಧರಿಸಿದ ಕಾರ್ಯಗಳು ಜರುಗದಿದ್ದಲ್ಲಿ ಆ ಜ್ಞಾನವನ್ನು ನೀಡಿದ ಕಲಿಕಾ ಪ್ರಕ್ರಿಯೆ ಅಪೂರ್ಣ ಎಂದು ಫ್ರೈಯರಿ ಅಭಿಪ್ರಾಯಪಡುತ್ತಾನೆ. ಸ್ವಂತ ಅನುಭವದಿಂದ ಪಡೆದ ಜ್ಞಾನವನ್ನು ಆಧರಿಸಿ ಕಲಿಕೆಯಲ್ಲಿ ತೊಡಗುವಂತೆ ಕಲಿಕಾರ್ಥಿಯನ್ನು ಹುರಿದುಂಬಿಸಿದಾಗ ತಮಗೆ ನೇರವಾಗಿ ಸಂಬಂಧಿಸಿದ ಪರಿಸ್ಥಿತಿಯ ಬದಲಾವಣೆಗೆ ಮಾರ್ಗಗಳನ್ನು ಹುಡುಕಲು ಸಾಧ್ಯವಾಗುತ್ತದೆ.

ತನ್ನ ಮತ್ತೊಂದು ಶೈಕ್ಷಣಿಕ ವಿಚಾರವನ್ನು ತಿಳಿಸಲು ಫ್ರೈಯರಿ ಕ್ರೈಸ್ತಧರ್ಮದಲ್ಲಿ ಬರುವ "ಈಸ್ಟರ್ ಎಕ್ಸ್‌ಪೀರಿಯನ್ಸ್" ಅಂದರೆ "ಪುನರುತ್ಥಾನ ಅನುಭವ"ದ ಉಪಮೆಯನ್ನು ಬಳಸಿಕೊಂಡಿದ್ದಾನೆ. ಶಿಕ್ಷಕ ಮತ್ತು ವಿದ್ಯಾರ್ಥಿ ಇವರಿಬ್ಬರೂ ತಮ್ಮ ನಡುವೆ ಇರುವ ಭೇದವನ್ನು ಮೀರಿ ಹೋಗಬೇಕೆಂದೂ ಇದು ಶಿಕ್ಷಕನ ಮೂಲಕ ಸಾಧ್ಯವಾಗುವುದೆಂದೂ ಫ್ರೈಯರಿ ಹೇಳಿದ್ದಾನೆ. ಪುನರುತ್ಥಾನದ ಅನುಭವ ಆದಾಗ ಮಾತ್ರ ಇದು ಸಾಧ್ಯ. ಇವರ ವಿವರಣೆ ಹೀಗಿದೆ– ಶಿಕ್ಷಕ ತಾನು ಏಕ ಮುಖೀಯವಾಗಿ ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡುವವನು ಎಂಬ ಭಾವನೆಯನ್ನು ತ್ಯಜಿಸಿ ತಾನು ಶಿಕ್ಷಿತ–ಶಿಕ್ಷಕರ (Educator - Educatee) ಶಿಕ್ಷಕ–ಶಿಕ್ಷಿತ (Educatee - Educator) ಎಂಬ ಭಾವನೆಯನ್ನು ತಂದುಕೊಳ್ಳಬೇಕು. ಆದ್ದರಿಂದ ಕಲಿಕಾ ಅನುಭವ ಕೇವಲ ವಿದ್ಯಾರ್ಥಿಗಳ ಮೇಲೆ ಕೇಂದ್ರೀಕೃತವಾಗಿರದೆ, ಶಿಕ್ಷಕ–ವಿದ್ಯಾರ್ಥಿಗಳಿಬ್ಬರ ಮೇಲೂ ಕೇಂದ್ರೀಕೃತವಾಗಿರಬೇಕು. ಶಿಕ್ಷಕ ಹಾಗೂ ವಿದ್ಯಾರ್ಥಿ ಈರ್ವರೂ ಅನುಭವದಿಂದ ಪರಸ್ಪರ ಕಲಿಯಬೇಕು. ಆಳವಾದ ಅರಿವಿಗೆ ಇಬ್ಬರಿಂದಲೂ ಕೊಡುಗೆಯಿರಬೇಕು. ಹೀಗೆ ಇಬ್ಬರೂ ಶಿಕ್ಷಕ–ಶಿಕ್ಷಿತ ಪಾತ್ರವನ್ನು ವಹಿಸಬೇಕು. ಕ್ರಿಸ್ತನು ಮರಣಿಸಿ ಪುನರುತ್ಥಾನಗೊಂಡಂತೆ ಶಿಕ್ಷಿತರ ಶಿಕ್ಷಕನಲ್ಲಿನ ತಾನು ಏಕಮುಖೀಯ ಶಿಕ್ಷಕ (unilateral Educator)ನೆಂಬ ಭಾವವು "ಮರಣಿಸಿ" ತಾನು ಶಿಕ್ಷಿತ–ಶಿಕ್ಷಕ(Educator - Educatee) ಶಿಕ್ಷಕ–ಶಿಕ್ಷಿತ (Educatee - Educator) ಎಂಬ ಭಾವವು ಉದಯಿಸಬೇಕು.

ಮೇಲೆ ಹೇಳಿರುವ ಎಲ್ಲಾ ಪರಿಕಲ್ಪನೆಗಳನ್ನು ವಿಮರ್ಶಾತ್ಮಕವಾಗಿ ಅವಲೋಕಿಸಿದಾಗ ಕಂಡುಬರುವ ಅಂಶಗಳು ಹೀಗಿವೆ. ಇದು ಅಥವಾ ಅದು ಎಂಬ ಧಾಟಿಯಲ್ಲಿ ಫ್ರೈಯರಿಯ ವಿಚಾರಗಳು ಮಂಡಿತವಾಗಿದೆ. ಬೋಧಕನು ಶೋಷಿತರೊಡನೆ ಇದ್ದಾನೆ ಇಲ್ಲವೆ ಅವರ ವಿರುದ್ಧ ತನ್ನ ನಿಲುವನ್ನು ಹೊಂದಿದ್ದಾನೆ ಎಂಬ ಭಾವ ಫ್ರೈಯರಿಯ ಶೈಕ್ಷಣಿಕ ವಿಚಾರದಲ್ಲಿ ಹೊರಹೊಮ್ಮಿದೆ. ಇಂಥ ವಿಚಾರಧಾರೆ ಕೆಲವೊಮ್ಮೆ ಅತಿಸರಳ ರಾಜಕೀಯ ವಿಶ್ಲೇಷಣೆಯಂತೆ ಕಂಡುಬರುತ್ತದೆ. ದೈನಂದಿನ ಸನ್ನಿವೇಶದ ಪ್ರತೀ ಅಂಶವೂ ಶಿಕ್ಷಾಪ್ರದವೆಂಬ ಫ್ರೈಯರಿಯ ವಾದವನ್ನು ಕೆಲವರು ಒಪ್ಪುವುದಿಲ್ಲ. ಫ್ರೈಯರಿ ತನ್ನ ವಿಚಾರವನ್ನು ಅನೌಪಚಾರಿಕ ಶಿಕ್ಷಣವೆಂದು ಹೇಳಿದ್ದಾನಾದರೂ ಸಂವಾದ ಆಧಾರಿತವೆಂದು ಹೇಳಿರುವನಾದರೂ, ಪ್ರತಿಯೊಂದು ಪರಿಸ್ಥಿತಿಯನ್ನು ಶಿಕ್ಷಾಸ್ಪದವಾಗಿಸುವ (Pedagogical space) ಪ್ರಯತ್ನದಿಂದಾಗಿ ಬೋಧಕ ಸಹಜ ಸಂವಾದದಲ್ಲಿರುವ ನೈಜಶಕ್ತಿಯನ್ನು ಕಡೆಗಣಿಸುವ ಸಾಧ್ಯತೆಯಿದೆ. ಅಲ್ಲದೆ, ಪೂರ್ವನಿಶ್ಚಿತ ಉದ್ದೇಶಗಳ ಸಮೂಹವೆಂದು ಹೇಳಲ್ಪಡುವ ಪಠ್ಯಕ್ರಮದಂತೆಯೇ ಫ್ರೈಯರಿಯ ಈ ಪರಿಕಲ್ಪನೆ ಕಂಡುಬರುತ್ತದೆ. ಬೋಧಕನ ಮನಸ್ಸಿನಲ್ಲಿ ಪ್ರತಿಯೊಂದು ಪರಿಸ್ಥಿತಿಯನ್ನು 'ಶಿಕ್ಷಾಸ್ಪದ'ವಾಗಿಸುವ ಪೂರ್ವನಿಶ್ಚಿಯ ಇದಕ್ಕೆ ಕಾರಣವಾಗುತ್ತದೆ.

ಸಾಮಾಜಿಕ – ರಾಜಕೀಯ ಸ್ವಾತಂತ್ರ್ಯವನ್ನೀಯುವ ಶಿಕ್ಷಣ, ಸಹಭಾಗಿತ್ವವುಳ್ಳ ಸಂವಾದ, ಪ್ರಜ್ಞಾವಿಕಾಸ, ಪ್ರಜಾಸತ್ತಾತ್ಮಕತೆಯನ್ನಾಧರಿಸಿದ ಶಿಕ್ಷಣವಿಧಾನ (democratic approach to pedagogy). ಈ ಪರಿಕಲ್ಪನೆಗಳು ಫ್ರೈಯರಿಯ ಶೈಕ್ಷಣಿಕ ವಿಚಾರಧಾರೆಯ ಪ್ರಮುಖ ಅಂಶಗಳೆಂದು ಹೇಳಬಹುದಾಗಿದೆ.

– ಚಂದ್ರಶೇಖರ ಬಿ.ಎಂ.

Digitised by Bharatavani, CIIL

## ಪ್ರಜಾಪ್ರಭುತ್ವ ಮತ್ತು ಶಿಕ್ಷಣ

ಪ್ರಜಾಪ್ರಭುತ್ವದ ಪರಿಕಲ್ಪನೆಯು ಕಾಲ ಕಳೆದಂತೆಲ್ಲಾ ಗಮನಾರ್ಹ ಬದಲಾವಣೆಗೆ ಒಳಗಾಗುತ್ತಿದೆ. ಗ್ರೀಸ್ ದೇಶದಲ್ಲಿ ತನ್ನ ಉಗಮವನ್ನು ಹೊಂದಿರುವ ಪ್ರಜಾಪ್ರಭುತ್ವವು ಒಂದು ಪಾಶ್ಚಿಮಾತ್ಯ (ಯೂರೋಪ್, ಅಮೇರಿಕಾ) ಉತ್ಪನ್ನ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಕ್ರಿಸ್ತಪೂರ್ವ ಐದನೆಯ ಶತಮಾನದಲ್ಲಿ ಇದರ ಉಗಮವನ್ನು ಗುರುತಿಸಲಾಗಿದೆ. ಕ್ರಿಸ್ತಪೂರ್ವ ಐದನೆಯ ಶತಮಾನದಲ್ಲಿ ಅಥೆನ್ಸ್, ಸ್ಪಾರ್ಟಾ, ಮಿಲೆಟಸ್ ಮತ್ತು ಇಫೆಸಸ್ ವಿವಿಧ ರಾಷ್ಟ್ರಗಳಲ್ಲಿ ವಿವಿಧ ರೂಪದ ಸರ್ಕಾರಗಳನ್ನು ಪ್ರಾಯೋಗಿಕವಾಗಿ ನಡೆಸಿದ ನಂತರ ಕಡೆಗೆ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಳ್ಳಲಾಯಿತು. ಗ್ರೀಸ್‌ನಲ್ಲಿ ನಗರ ರಾಜ್ಯಗಳು (City States) ಬೆಳವಣಿಗೆಯಾಗುವ ಮುನ್ನವೇ ಆರ್ಯರಲ್ಲಿ ಕ್ರಿ.ಪೂ. 1500ರಿಂದ 2000ದಲ್ಲಿಯೇ ಪ್ರಚಲಿತವಾಗಿದ್ದವು ಎಂಬುದರಿಂದ ಪ್ರಜಾಪ್ರಭುತ್ವದ ಪರಿಕಲ್ಪನೆಯು ಭಾರತದಲ್ಲಿ ಉಗಮವಾಗಿದೆ ಎಂಬುದನ್ನು ಗುರುತಿಸಲಾಗಿದೆ. ವೇದಗಳ ತತ್ವಶಾಸ್ತ್ರದಲ್ಲಿ 'ಮನುಕುಲದ ಎಲ್ಲರ ಪ್ರೀತಿ'ಯೇ ಕೇಂದ್ರವಾಗಿತ್ತು. ವೈದಿಕ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಭಾರತೀಯ ಜೀವನ ಮೌಲ್ಯಗಳಾದ 'ವಸುಧೈವ ಕುಟುಂಬಕಮ್' 'ಸರ್ವೇಭವಂತು ಸುಖೀನೋ' ಇತ್ಯಾದಿ ಹೇಳಿಕೆಗಳು ಪ್ರಜಾಪ್ರಭುತ್ವದ ತಳಹದಿಯಾಗಿವೆ. ಭಾರತೀಯ ಸಂಪ್ರದಾಯಗಳು ಮತ್ತು ಪರಂಪರೆಗಳಲ್ಲಿ ಪ್ರಜಾಪ್ರಭುತ್ವವು ಸದೃಢವಾಗಿದೆ ಎಂಬ ನಂಬಿಕೆಯದೆ. ಕೆಲವು ಇತಿಹಾಸಜ್ಞರು ಈ ಮಹಾತ್ಮಕ ಸಿದ್ಧಾಂತವನ್ನು ಚೆನ್ನಾಗಿ ಟೊಳ್ಳುಗೊಳಿಸಿ ಪ್ರಾಚೀನ ಗ್ರಾಮಪಂಚಾಯಿತಿಗಳೂ ಲೋಕಸಭೆಯನ್ನು ಹೋಲುವುದಿಲ್ಲವಾದ್ದರಿಂದ ವೈದಿಕ ಸಮಾಜವು ಆಧುನಿಕ ಭಾರತೀಯ ಸಮಾಜದಂತೆ ಇರಲಿಲ್ಲ ಎಂದು ಸ್ಪಷ್ಟಪಡಿಸಿ ಹೇಳುತ್ತಾರೆ. ಭಾರತವು ಸಣ್ಣ ಬಂಧುಗಳು ಮತ್ತು ನೆರೆಹೊರೆಯವರು ಸೇರಿದಂತಹ ಸ್ವದೇಶಿ ಗುಂಪುಗಳಿಂದ ಕೂಡಿ ಸಮಗ್ರಾಭಿಪ್ರಾಯದ ತತ್ವವನ್ನು ಅಳವಡಿಸಿಕೊಂಡಿದೆ.

'ಡೆಮಾಕ್ರಸಿ' (ಪ್ರಜಾಪ್ರಭುತ್ವ) ಪದವು ಗ್ರೀಕ್‌ನ 'ಡೆಮೊಸ್' ಮತ್ತು 'ಕ್ರೆದಿಯಾ' ಎಂಬ ಎರಡು ಪದಗಳಿಂದ ನಿಷ್ಪತ್ತಿಯಾಗಿದ್ದು, ಮೊದಲನೆಯ ಪದ 'ಜನರು' ಮತ್ತು ನಂತರದ ಪದ 'ಅಧಿಕಾರ' ಎಂಬ ಅರ್ಥಗಳನ್ನು ಹೊಂದಿದೆ. ಪ್ರಜಾಪ್ರಭುತ್ವವೆಂದರೆ ಜನರದೇ ಅಧಿಕಾರ, ಪೆರಿಕ್ಲಿಸ್‌ನ ಅಥೆನ್ಸ್ ರಾಜ್ಯದಲ್ಲಿ ಪ್ರಜಾಪ್ರಭುತ್ವವು ಅತ್ಯಂತ ಶ್ರೇಷ್ಠ ಮಟ್ಟದಲ್ಲಿತ್ತು. ಅಥೆನ್ಸ್ ರಾಜ್ಯದ ಪ್ರಭುತ್ವವನ್ನೂ ಪ್ರಜಾಪ್ರಭುತ್ವವೆಂದು ಕರೆಯಲಾಗದು. ಏಕೆಂದರೆ ಅದು ಒಂದು ಪುಟ್ಟ ನಗರ ರಾಜ್ಯಕ್ಕೆ ಸೀಮಿತವಾಗಿತ್ತು. ಮತ್ತು ಅಧಿಕ ಸಂಖ್ಯೆಯ ಅಥೆನ್ಸ್ ವಾಸಿಗಳು ಪೌರತ್ವದಿಂದ ವಂಚಿತರಾಗಿದ್ದರು. ಗುಲಾಮಗಿರಿಯು ಅವರಿಂದ ಪ್ರಶಂಸಿಸಲ್ಪಡುತ್ತಿತ್ತು ಮತ್ತು ಕಾರ್ಯನಿರ್ವಹಿಸುತ್ತಿದ್ದ ಪ್ರಜಾಪ್ರಭುತ್ವ ಸಂಸ್ಥೆಗಳ ಬೆಳವಣಿಗೆಗೆ ಇದರಿಂದ ತೊಡಕುಂಟಾಗಲಿಲ್ಲ. ಗ್ರೀಕರ ನಗರ ರಾಜ್ಯಗಳಂತೆಯೇ ಭಾರತದಲ್ಲಿಯೂ ಸ್ವಂತ ಸರ್ಕಾರದ ತತ್ವಗಳನ್ನಾಧರಿಸಿದ ಪ್ರಜಾಪ್ರಭುತ್ವದ ಮಾರ್ಗದಲ್ಲಿ ಜೀವಿಸುತ್ತಿದ್ದ ಹಾಗೂ ಆಡಳಿತವನ್ನು ನಡೆಸುತ್ತಿದ್ದ ಜನಪದಗಳು ಅಥವಾ ಕುಲಗಳು ಇದ್ದವು ಆಗಾಗ್ಗೆ ಈ ಜನಪದಗಳು ಸಮಾಜದ ವಿವಿಧ ಸ್ತರಗಳ ಜನರು ರಾಷ್ಟ್ರದ ಸಂಗತಿಗಳನ್ನು ಚರ್ಚಿಸಲು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಲು ಹಾಜರಾಗುತ್ತಿದ್ದ ಸಮಿತಿಗಳು ಅಥವಾ ಸಭೆಗಳನ್ನು ನಡೆಸುತ್ತಿದ್ದವು. ಅವುಗಳಲ್ಲಿ ಬಹುಪಾಲು 'ಜನಪ್ರಿಯ ಇಚ್ಛೆ' – ಎಂಬಂತೆ ಸೀಮಿತವಾಗಿದ್ದ ಗಣತಂತ್ರ ಹಾಗೂ ಸಾರ್ವಭೌಮತ್ವದ ಆಡಳಿತಗಳೆರಡೂ ಇದ್ದವು.

ಆದರೂ ಪಾಶ್ಚಾತ್ಯರಲ್ಲಿ ಅದರಲ್ಲೂ ವಿಶೇಷವಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಹೋರಾಟಗಳು ಮತ್ತು ಕ್ರಾಂತಿಗಳಿಂದ ನವಜೀವನ ಮತ್ತು ಉತ್ಸಾಹಗಳಿಂದ ಪ್ರಜಾಪ್ರಭುತ್ವದ ವಾಹಿನಿಯು ನಿರಂತರವಾಗಿ ಪ್ರವಹಿಸುತ್ತಿತ್ತು. ಪೌರಾಡತ್ಯದಲ್ಲಿ ವಿಶೇಷವಾಗಿ ಭಾರತದಲ್ಲಿ ವಿದೇಶಿಗರ ಆಕ್ರಮಣಗಳಿಂದ ಮತ್ತು ಆಂತರಿಕ ಯುದ್ಧಗಳಿಂದ, ನಿಷ್ಕ್ರಿಯತೆ, ಸಂಪ್ರದಾಯ ನಿಷ್ಠೆಯಿಂದಾಗಿ ಅದರ ಸತ್ವವು ಬಹಳಷ್ಟು ಜಡವಾಗಿತ್ತು. ಮತ್ತು ಅಂಧ ಆಚರಣೆಗಳು, ಕುರುಡು ನಂಬಿಕೆಗಳು ಮತ್ತು ವಿದೇಶಿ ಆಡಳಿತಗಳಿಂದ ಭಾಗಶಃ ಅದು ತನ್ನತನದ ವಿಧಾನವನ್ನು ಕಳೆದುಕೊಂಡಿತ್ತು. ಶ್ರೇಷ್ಠನಾಗಿದ್ದ ಪ್ರಜಾಪ್ರಭುತ್ವದ ಬಗ್ಗೆ ಗೀಕರೂ ನಿರಾಶೆಗೊಳ್ಳುವ ಸ್ಥಿತಿ ತಲುಪಿದ್ದ ಕಾಲವೂ ಸಂಭವಿಸಿತ್ತು. ಪೆರಿಕ್ಲೀಸನ್ ತರುವಾಯ ಐವತ್ತು ವರ್ಷಗಳ ನಂತರ ಪ್ಲೇಟೊ ಪ್ರಜಾಪ್ರಭುತ್ವವನ್ನು ಕುರಿತು ಅದು ಜನಸಾಮಾನ್ಯರ ದುರಾಸೆಗಳನ್ನು ಕೆರಳಿಸುತ್ತದೆ ಎಂಬ ಕಾರಣದಿಂದ ಆಕ್ಷೇಪಿಸಿದನು. ಅರಿಸ್ಟಾಟಲ್ ಅದನ್ನು ವಕ್ರಬುದ್ಧಿ ರೂಪದ ಸರ್ಕಾರ ಎಂದು ಕರೆದನು.

ಪ್ರಜಾಪ್ರಭುತ್ವವು ಅನೇಕ ಮೂಲಗಳಿಂದ ಶ್ರೀಮಂತವಾದ ಪ್ರಾಚೀನ ಪರಂಪರೆ ಹೊಂದಿದೆ. ಪ್ರಾಚೀನ ಆರ್ಯಋಷಿಗಳು, ಹಳೆಯ ಹೀಬ್ರೂ ಪ್ರವಾದಿಗಳು, ಗ್ರೀಕ್ ತತ್ವಜ್ಞಾನಿಗಳು ರೋಮಿನ ನ್ಯಾಯಾಂಗ ಮತ್ತು ಆಡಳಿತಾಂಗದ ಪ್ರತಿಭೆಗಳು ಜಗತ್ತಿನ ಶ್ರೇಷ್ಠ ಧಾರ್ಮಿಕ ನಾಯಕರು ಮತ್ತು ಅಸಂಖ್ಯಾತ ಹುತಾತ್ಮರು ಸ್ವಾತಂತ್ರ್ಯ ಹಾಗೂ ನ್ಯಾಯದ ಪರವಾಗಿ ಯುಗಯುಗಗಳಿಂದಲೂ ಹೋರಾಟ ಮಾಡಿದ್ದಾರೆ. ವೇದದ ಶಾಸ್ತ್ರಗ್ರಂಥಗಳಲ್ಲಿ ಶ್ರೇಷ್ಠ ಆಧ್ಯಾತ್ಮ ಮತ್ತು ಕಾನೂನಿನ ದಾಖಲೆಗಳಲ್ಲಿ ಹಾಗೆಯೇ ಹಳೇ ಒಡಂಬಡಿಕೆಯಾ ದೈವಾಜ್ಞೆಗಳು ಮ್ಯಾಗ್ನಕಾರ್ಟ್, ಅಧಿಕಾರದ ಮಸೂದೆ ಮಾನವ ಹಕ್ಕುಗಳ ಫ್ರೆಂಚ್ ಘೋಷಣೆ, ಅಮೆರಿಕಾದ ಸ್ವಾತಂತ್ರ್ಯ ಘೋಷಣೆ, ಸಂಯುಕ್ತ ಸಂವಿಧಾನ, ಗೆಟ್ಟೀಸ್‌ಬರ್ಗ್ ಅಡ್ರೆಸ್, ಸತ್ಯಾಗ್ರಹ ಮತ್ತು 'ಭಾರತ ಬಿಟ್ಟು ತೊಲಗಿ' ಚಳುವಳಿಗಳು, ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ ಮುಂತಾದವುಗಳಲ್ಲಿ ಪ್ರಜಾಪ್ರಭುತ್ವ ಪರಂಪರೆಯು ದಾಖಲೆಯಾಗಿ ನಮೂದಿತವಾಗಿದೆ ಹಾಗೂ ಅದನ್ನು ಸಂರಕ್ಷಿಸಲಾಗಿದೆ. ಪ್ರಜಾಪ್ರಭುತ್ವವು ವಿವಿಧ ವಿಚಿತ್ರದರ್ಶಕದ (ಕೆಲೆಡೋಸ್ಕೋಪಿನ) ರೀವ್ ವಿವಿಧ ಬಣ್ಣಗಳಲ್ಲಿ ಬದಲಾವಣೆಗೆ ಒಳಗಾಗುತ್ತಾ ಹೊಗುತ್ತಿದೆ. ಆದರೆ ಅದರ ಅಂತಃಸತ್ವ ಹಾಗೆಯೇ ಉಳಿದಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳಿಗಾಗಿ ಮಾನವನ ಹೋರಾಟವಾಗಿದೆ.

Digitised by Bharatavani, CIIL

ಮಧ್ಯಯುಗದಲ್ಲಿ ರಾಜನು ಒಂದು ವೇಳೆ ವಚನಭಂಗ ಮಾಡಿದರೆ ತನ್ನ ಗುಲಾಮಗಿರಿಯ ಬಂಧನದಲ್ಲಿದ್ದ ಒತ್ತೆಯಾಳುಗಳನ್ನು ಬಿಡುಗಡೆಗೊಳಿಸುವ ಸಾಮಾಜಿಕ ಒಪ್ಪಂದ ಮಾಡಿಕೊಳ್ಳುತ್ತಿದ್ದ ಅಭಿಪ್ರಾಯವು ಕಂಡುಬಂದಿದೆ ಮತ್ತು ಬೃಹತ್ ಸಮುದಾಯಗಳಲ್ಲಿ ಪ್ರಜಾಪ್ರಭುತ್ವದ ಸರ್ಕಾರದ ಸಮಸ್ಯೆಗಳನ್ನು ಪರಿಹರಿಸಲು ಪ್ರಾತಿನಿಧ್ಯದ ಪರಿಕಲ್ಪನೆಯೂ ಕಂಡುಬಂದಿದೆ. ಸುಧಾರಣೆಗಳ ಧರ್ಮ ಮತ್ತು ಪುನರುಜ್ಜೀವನ (Reformation and Renaisance) ತರುವಾಯ ಪಾಶ್ಚಾತ್ಯ ಗ್ರೀಕ್ ಪರಂಪರೆಯಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆಗಳು ಅಥವಾ ತತ್ವಗಳು ಸೇರಿಕೊಂಡಿವೆ. ಕ್ರಮೇಣ ಕೈಗಾರಿಕಾ ಕ್ರಾಂತಿ, ಅಮೇರಿಕಾದ ಯುದ್ಧ ಪ್ರಕಟಣೆ, ಫ್ರೆಂಚ್ ಕ್ರಾಂತಿ, ಮಾರ್ಕ್ಸ್‌ವಾದ, ಸಮಾಜವಾದ ಮತ್ತು ಹಲವು ಇತರ ಘಟನೆಗಳು ಮತ್ತು ಪರಿಕಲ್ಪನೆಗಳು ಪ್ರಜಾಪ್ರಭುತ್ವದ ಪ್ರವೃತ್ತಿಯನ್ನು ಸದೃಢಗೊಳಿಸಿದವು. ಅಷ್ಟೇ ಅಲ್ಲದೆ ಪ್ರಜಾಪ್ರಭುತ್ವದ ಆಯಾಮಗಳನ್ನು ವಿಸ್ತರಿಸಿ ಸಮೃದ್ಧಗೊಳಿಸಿದವು.

ಪ್ರಜಾಪ್ರಭುತ್ವವು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳೆಂಬ ಫ್ರೆಂಚ್ ಪದಗಳಾದ ('Liaberte, egalite and fraternite' - liberty equality and feternity) ಮೂರು ಅಧಿದೇವತೆಗಳನ್ನು ಪ್ರತಿಷ್ಠಾಪಿಸಿತು. ಈ ಆದರ್ಶಗಳು ಇನ್ನೂ ಸಾಧನೆಯಾಗಬೇಕಿದೆ. ಇದರಲ್ಲಿ ಉದಾತ್ತ ಕನಸುಗಾರಿಕೆ ಮತ್ತು ಕಟುವಾಸ್ತವಗಳ ವಿಚಿತ್ರ ಮಿಶ್ರಣವಿದೆ. ಮಬ್ಬು ಕಳೆಯುವ ಹೊತ್ತಿನಲ್ಲಿ ಇವುಗಳು ದೂರದ ಮಾರ್ಗದರ್ಶಿ ದೀವಿಗೆಗಾಗಿ ಉಜ್ವಲ ಮತ್ತು ಉತ್ತಮ ದಿನಗಳೆಡೆಗೆ ಬೆಳಕು ತೋರಿಸುತ್ತವೆ. ಈ ತ್ರಿಮೂರ್ತಿತತ್ವಗಳಲ್ಲಿ ಅತಿ ಸ್ಫುಟವಾಗಿ ಸಾರ್ವತ್ರಿಕ ಭ್ರಾತೃತ್ವದ ಅಭಿವ್ಯಕ್ತಿಯಿದ್ದು ವಿಶ್ವ ರಾಷ್ಟ್ರಸಂಸ್ಥೆ ಯುಎನ್‌ಓ ಮೂಲಕ ಬಹು ಸಂಖ್ಯೆಯ ಯುದ್ಧರೂಪದ ದುರಂತಗಳನ್ನು ತಡೆದಿದೆ. ಕಾಲಕಾಲಕ್ಕೆ ಪ್ರಜಾಪ್ರಭುತ್ವದ ಪ್ರವೃತ್ತಿ ಹಾಗೂ ಅದರ ವಿರೋಧಿ ಬಲಗಳ ನಡುವೆ ಸಂಘರ್ಷಗಳೂ ನಡೆಯುತ್ತಿವೆ.

ಡಿಸೆಂಬರ್ 13, 1946ರ ಚುನಾಯಿತ ಪ್ರತಿನಿಧಿಗಳ ಸಭೆಯಲ್ಲಿ ಜವಾಹರಲಾಲ್ ನೆಹರೂ ಉದ್ದೇಶಿತ ನಿರ್ಣಯಗಳನ್ನು ಮಂಡಿಸುತ್ತಾ ಅತ್ಯಂತ ಸಂಕ್ಷೇಪವಾಗಿ "ನಾವು ಪ್ರಜಾಪ್ರಭುತ್ವದಲ್ಲಿ ನಿಂತಿದ್ದೇವೆ" ಎಂದು ಹೇಳಿದ್ದಾರೆ.

ಶ್ರೇಷ್ಠವೂ ಪ್ರಮುಖವೂ ಆದ ನಮ್ಮ ಸಂವಿಧಾನದ ದಾಖಲಾತಿಯನ್ನು ವಿವರವಾದ ಚರ್ಚೆಗಳ ಅನಂತರ ತೀವ್ರ ಪರಿಶೀಲನೆಯಿಂದ ಸಿದ್ಧಪಡಿಸಿದ್ದು, 1950ರ ಜನವರಿ 26ರಂದು ಅಳವಡಿಸಿಕೊಳ್ಳಲಾಗಿದೆ. ಸಂವಿಧಾನದ ಪ್ರಸ್ತಾವನೆಯು ದೇಶದ ಆದರ್ಶ ಅಂತಃಸತ್ವವನ್ನು ಈ ಕೆಳಗಿನ ಮಾತುಗಳಲ್ಲಿ ಘೋಷಣೆ ಮಾಡಲಾಗಿದೆ.

"ನಾವೂ ಭಾರತದ ಜನರು ಭಾರತವನ್ನು ಸರ್ವತಂತ್ರ ಪ್ರಜಾಪ್ರಭುತ್ವ ಗಣರಾಜ್ಯವನ್ನಾಗಿ ರಚಿಸಲು ಮತ್ತು ಎಲ್ಲಾ ಪ್ರಜೆಗಳಿಗೂ ಅದನ್ನು ಒದಗಿಸಿಕೊಡಲು ವಿಧಿಬದ್ಧವಾಗಿ ನಿರ್ಣಯಿಸಿದ್ದೇವೆ:

**ನ್ಯಾಯ: ಸಾಮಾಜಿಕ, ಆರ್ಥಿಕ, ರಾಜಕೀಯ**

**ಸ್ವಾತಂತ್ರ್ಯ:** ಚಿಂತನೆ, ಅಭಿವ್ಯಕ್ತಿ, ನಂಬಿಕೆ, ವಿಶ್ವಾಸ ಮತ್ತು ಆರಾಧನೆ.

**ಸಮಾನತೆ:** ಸ್ಥಾನ ಮತ್ತು ಅವಕಾಶ, ಮತ್ತು ಎಲ್ಲರಿಗೂ ಅದನ್ನು ಉತ್ತೇಜಿಸುವುದು ವಿಸ್ತರಿಸುವುದು.

**ಭ್ರಾತೃತ್ವ:** ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಐಕ್ಯತೆಯನ್ನು ಕಾಪಾಡುವುದು.

ನಮ್ಮ ಚುನಾಯಿತ ಸಭೆಯಲ್ಲಿ 1949ರ ನವೆಂಬರ್ 26ರಂದು ಈ ಮೂಲಕ ಅಳವಡಿಸಿ, ಜಾರಿಗೆ ತಂದು ಶಾಸನಮಾಡಿ ಮತ್ತು ನಮಗೆ ಈ ಸಂವಿಧಾನವನ್ನು ಪ್ರದಾನ ಮಾಡಿಕೊಂಡಿದ್ದೇವೆ"

ಈ ಐತಿಹಾಸಿಕ ಘೋಷಣೆಯು ಪ್ರಜಾಪ್ರಭುತ್ವದ ಭವ್ಯ ಕಟ್ಟಡದ ನಾಲ್ಕು ಸ್ತಂಭಗಳಾದ ನ್ಯಾಯ, ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವವನ್ನು ಆಧರಿಸಿದೆ. ಪವಿತ್ರವಾದ ಮೂಲಭೂತ ಹಕ್ಕುಗಳೆಂಬ ಪಾಠದ ಮೇಲೆ ಘನತೆ ಮತ್ತು ಜಯಘೋಷಗಳೊಂದಿಗೆ 'ವ್ಯಕ್ತಿ'ಯ ದೈವವನ್ನು ಅಧ್ಯಕ್ಷತೆಗೆ ಪ್ರತಿಷ್ಠಾಪಿಸಲಾಗಿದೆ. ಪ್ರಜಾಪ್ರಭುತ್ವವನ್ನು ಕೇವಲ ಸರ್ಕಾರದ ರೂಪದಲ್ಲಿ ಮಾತ್ರ ಅಂಗೀಕರಿಸದೆ ಜೀವನದ ಹಾದಿಯನ್ನಾಗಿ ಅಂಗೀಕರಿಸಿದೆ, ಸ್ವತಂತ್ರ ಭಾರತದಲ್ಲಿ ತಕ್ಕಷ್ಟು ಪ್ರಜಾಸತ್ತಾತ್ಮಕಗಳು ಮೌಲ್ಯಗಳು ಮತ್ತು ಸ್ಫೂರ್ತಿಗಳಿಂದ ಸಮಗ್ರ ಶಿಕ್ಷಣ ವ್ಯವಸ್ಥೆಯನ್ನು ಪುನರ್ ನವೀಕರಿಸಲು ಹಲವು ಪ್ರಯತ್ನಗಳು ನಡೆದಿವೆ. ಸಂವಿಧಾನದಲ್ಲಿ ದಿಗ್ದರ್ಶಿತವಾದ ಗುರಿಗಳನ್ನು ಅರಿತುಕೊಳ್ಳಲು ಸಂವಿಧಾನದ ಭಾಗ IIನ್ನು ಸಮಗ್ರವಾಗಿ 'ಪೌರತ್ವ'ಕ್ಕೆ ಮೀಸಲಿರಿಸಿದೆ. ಸಂವಿಧಾನದ ಆರಂಭದ ಈ ಅಧ್ಯಾಯದಲ್ಲಿ ಪೌರತ್ವವನ್ನು ಪಡೆಯಲು ನಿಬಂಧನೆಗಳು, ಪ್ರಜೆಗಳ ಕರ್ತವ್ಯಗಳನ್ನು ವಿವರಿಸಲಾಗಿದೆ.

**ಪ್ರಜಾಪ್ರಭುತ್ವದ ಆಚಾರಕಲ್ಪನೆಗಳು ಮತ್ತು ತತ್ವಗಳು:**

ಪ್ರಜಾಪ್ರಭುತ್ವ ಮಾರ್ಗದ ಜೀವನಕ್ಕೆ ಕೆಳಗಿನ ನಂಬಿಕೆಗಳು ತಳಹದಿಯಾಗಿವೆ ಎಂದು ಹಾಸ್‌ಕಿನ್ಸ್ (1941) ಪರಿಗಣಿಸಿದ್ದಾನೆ.

1. ಪ್ರತಿಯೊಬ್ಬ ವ್ಯಕ್ತಿಯೂ ವ್ಯಕ್ತಿಯಾಗಿ ತನ್ನದೆ ಘನತೆ ಹೊಂದಿದ್ದಾನೆ. ಮಾನವ ಘನತೆಯಲ್ಲಿ ಅವಶ್ಯ ನಂಬಿಕೆ ಮತ್ತು ಪ್ರತಿ ಮನುಷ್ಯನ ಸಾಮರ್ಥ್ಯಗಳಲ್ಲಿ ಭರವಸೆ ಎಂದು ಅರ್ಥ.
2. ತಮ್ಮ ಚಿಂತನೆಗಳ ಮೇಲೆ ಹೇಗೆ ಕಾರ್ಯಪ್ರವೃತ್ತನಾಗಬೇಕೆಂದು ಕಲಿಯುವ ಸಾಮರ್ಥ್ಯ ಪ್ರತಿಯೊಬ್ಬರಿಗೂ ಇದೆ. ಪ್ರತಿ ಮನುಷ್ಯನು ಇತರರೊಡನೆ ತನ್ನ ಜೀವನವನ್ನು ಹೇಗೆ ನಿಭಾಯಿಸಬೇಕೆಂಬ ಅವಶ್ಯ ಸಾಮರ್ಥ್ಯ ಪಡೆದಿರುತ್ತಾನೆ.
3. ವ್ಯಕ್ತಿಯು ಬಹುಮತದ ತೀರ್ಮಾನಗಳಿಗೆ ಬದ್ಧನಾಗಿರಬೇಕು ಮತ್ತು ಅದನ್ನು ನೆರವೇರಿಸಲು ಭಾಗಿಯಾಗಬೇಕು. ಹಾಗೂ ಆಡಳಿತವು ಸರ್ಕಾರದ ಒಪ್ಪಿಗೆಯ ಮೇಲೆ ಅವಲಂಬಿತವಾಗಿದೆ.

Digitised by Bharatavani, CIIL

4. ಪ್ರಜಾಪ್ರಭುತ್ವದ ಕಾರ್ಯಗಳು ನಿಯಂತ್ರಣ ಮತ್ತು ನಿರ್ದೇಶನವು ಪರಿಸ್ಥಿತಿಯನ್ನು ಅವಲಂಬಿಸಿದೆ. ಅದರಾಚೆಗೆ ಇರುವುದಿಲ್ಲ.
5. ಜೀವನ ವಿಧಾನದಲ್ಲಿ ಪರಸ್ಪರ ಒಬ್ಬರೊಡನೊಬ್ಬರು ಅನ್ಯೋನ್ಯಕ್ರಯಿಸಬೇಕು. ಒಪ್ಪಿತವಾದ ಗುರಿಗಾಗಿ ಪ್ರತಿ ವ್ಯಕ್ತಿಯೂ ಭಾಗಿಯಾಗಿ ಮತ್ತು ವ್ಯಕ್ತಿಗಳ ಅನುಭವಗಳನ್ನು ಮೌಲ್ಯಮಾಪನ ಮಾಡುತ್ತಾ ಇತರ ಪ್ರತಿ ವ್ಯಕ್ತಿಯೊಡನೆ ಕೆಲಸ ಮಾಡಬೇಕು.
6. ಅನಿಯಂತ್ರಿತ ಹಿಂಸೆಯ ವಿಧಾನಗಳಿಗಿಂತ ಉದಾತ್ತವಾದ ಸಾಮಾಜಿಕ ಕಾರ್ಯಗಳ ಮೂಲಕ ಸಾಂಸ್ಕೃತಿಕ ಪರಿವರ್ತನೆಯನ್ನು ಪೂರ್ಣಗೊಳಿಸಬೇಕು.

ಈ ಕೆಳಕಂಡ ತತ್ವಗಳು ಆಧುನಿಕ ಅರ್ಥದಲ್ಲಿ ಪ್ರಜಾಪ್ರಭುತ್ವದ ವೈಶಿಷ್ಟ್ಯಕ್ಕಾಗಿ ಹೊರಹೊಮ್ಮಿದೆ.

1. ಪ್ರಜಾಪ್ರಭುತ್ವವು ವ್ಯಕ್ತಿಯ ಘನತೆ ಮತ್ತು ಗೌರವವನ್ನು ದೃಢೀಕರಿಸುತ್ತದೆ. ಮತ್ತು ಪ್ರತಿಯೊಬ್ಬ ಮಾನವ ಜೀವಿಯನ್ನು ಒಂದು ಸಾಧನವೆಂದು ತಿಳಿಯದೆ ಒಂದು ಗುರಿ ಎಂದು ಗೌರವಿಸಬೇಕು ಎಂದು ಘೋಷಿಸುತ್ತದೆ.
2. 'ಬದುಕಿರುವ ವ್ಯಕ್ತಿಯು ಸ್ವತಂತ್ರ' ಎಂಬ ಅಂಶವು ಮಾನವ ವ್ಯಕ್ತಿಯನ್ನು ನೇರವಾಗಿ ಕುರಿತು ವ್ಯಕ್ತಿಯು ನ್ಯಾಯ ನಿರ್ಣಯದ ಮತ್ತು ಜವಾಬ್ದಾರಿಯುತ ಕ್ರಿಯೆಯ ಘಟಕ ಎಂದು ಹೇಳಿದೆ.
3. ಸಮಾನತೆ ಎಲ್ಲರಿಗೂ ಸಮಾನ ನ್ಯಾಯವೆಂಬುದು ಪ್ರಜಾಪ್ರಭುತ್ವದ ಕೇಂದ್ರ ಭಾಗವಾಗಿ ಪ್ರಜಾಪ್ರಭುತ್ವದ ಹೃದಯವೇ ಆಗಿದೆ.
4. ಪ್ರಜಾಪ್ರಭುತ್ವವು ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳನ್ನು ವ್ಯಕ್ತಿಯ ಘನತೆ ಮತ್ತು ಸಮಾನತೆಯ ಸುರಕ್ಷೆಗಾಗಿ ಅವಲಂಬಿತವೆಂದು ಪರಿಗಣಿಸಿದೆ.
5. ಪ್ರಜಾಪ್ರಭುತ್ವವು ಮೂಲಭೂತ ನೈತಿಕತೆಯ ಮೇಲೆ ಆಧರಿಸಿದೆ. ಮೂಲಭೂತ ಸದ್ಗುಣಗಳಿಲ್ಲದೆ ಪ್ರಜಾಪ್ರಭುತ್ವವನ್ನು ಪೂರ್ಣವಾಗಿ ಸಾಧಿಸಲಾಗುವುದಿಲ್ಲ.
6. ವ್ಯಕ್ತಿಯ ಅವಕಾಶಗಳು ಮತ್ತು ವ್ಯಕ್ತಿಯ ಬೇಜವಾಬ್ದಾರಿಗಳ ಮೇಲೆ ಪ್ರಜಾಪ್ರಭುತ್ವ ಆಧರಿತವಾಗಿದೆ.

ಅಂತಿಮವಾದ ವಿಶ್ಲೇಷಣೆಯಲ್ಲಿ, ಪ್ರಜಾಪ್ರಭುತ್ವವು ವ್ಯಕ್ತಿಯ ಘನತೆಯನ್ನು ಪ್ರತಿಯೊಬ್ಬ ಸಮಾಜದ ಸದಸ್ಯನೂ ಇತರ ಎಲ್ಲಾ ಸದಸ್ಯರೊಡನೆ ಸ್ವಯಂ ಹಂಚಿಕೊಂಡು ಭಾಗಿಯಾಗಬೇಕು ಎಂದು ಬಲವಾದ ನಂಬಿಕೆ ಹೊಂದಿದೆ.ಅಂದರೆ ಜೀವನದಲ್ಲಿ ಪರಿಪೂರ್ಣ ಭಾಗಿಯಾಗುತ್ತ ಮತ್ತು ಕಾರ್ಯ ಪ್ರವೃತ್ತನಾಗುವುದು ಎಂದರ್ಥ. ಸಹಕಾರಿ ಪ್ರಯತ್ನ ಮತ್ತು ಹಂಚಿಕೊಂಡ ಸಂತೃಪ್ತಿ ಈ ಎರಡು ಅಂಶಗಳ ಆಧಾರದ ಮೇಲೆ ಪ್ರಜಾಪ್ರಭುತ್ವವು ಸಮಾನ ಉದ್ದೇಶದಿಂದ ಒಂದಾಗುವುದಕ್ಕೆ ಈ ಮೂಲಾಂಶಗಳನ್ನು ಯಾವುದೇ ಬಲವು ಉತ್ತೇಜಿಸಬೇಕು ಮತ್ತು ಯಾವುದೇ ಅಡೆತಡೆಗಳು ಇದಕ್ಕೆ ವಿರೋಧಿಯಾಗುತ್ತವೆ.

**ಪ್ರಜಾಪ್ರಭುತ್ವ ಮತ್ತು ಶಿಕ್ಷಣ :**

ಜಾನ್ ಡ್ಯೂಯಿ (1946) ಹೀಗೆ ಹೇಳಿದ್ದಾನೆ."ಶಿಕ್ಷಣದ ಬಗ್ಗೆ ಪ್ರಜಾಪ್ರಭುತ್ವದ ನಿಷ್ಠೆ ಪರಿಚಿತ ವಿಷಯ" (ಪ.87) ಪ್ರಜಾಪ್ರಭುತ್ವವು ಶಿಕ್ಷಣವನ್ನು ತನ್ನ ದೊಡ್ಡ ಬೆಂಬಲ ಮತ್ತು ಸ್ಥಿರವಾದ ಸಂಗಾತಿ ಎಂದು ಪರಿಗಣಿಸಿದೆ. ಶಿಕ್ಷಣವಿಲ್ಲದೆ ಪ್ರಜಾಪ್ರಭುತ್ವವು ಹೆಳವ ನಿರ್ಜೀವ ಮತ್ತು ನಿಶ್ಯಕ್ತ; ಪ್ರಜಾಪ್ರಭುತ್ವವಿಲ್ಲದ ಶಿಕ್ಷಣ ಒಣ, ಉತ್ಸಾಹಶೂನ್ಯ ಮೃತಸಮಾನ ಆದ್ದರಿಂದ, ಡ್ಯೂಯಿ (ಪ. 16) ಪ್ರತಿಕ್ರಿಯಿಸುತ್ತಾ "ಪ್ರಜಾಪ್ರಭುತ್ವ ಮತ್ತು ಶಿಕ್ಷಣ – ಇವೆರಡರ ನಡುವಣ ಸಂಬಂಧ ಪರಸ್ಪರ ಪೂರಕ, ಪ್ರೇರಕವಾದದ್ದು ಮತ್ತು ಪ್ರಜಾಪ್ರಭುತ್ವವು ತನಗೆ ತಾನೆ ಶೈಕ್ಷಣಿಕ ತತ್ವವಾಗಿದೆ. ಆದರೆ ಪ್ರಜಾಪ್ರಭುತ್ವವು ಸರಿಯಾದ ದೃಕ್‌ಪಥವಿಲ್ಲದೆ ಶಿಕ್ಷಣವಿಲ್ಲದೆ ಅದರ ವಿನ್ಯಾಸಗೊಳ್ಳುವುದಿರಲಿ ಹೆಚ್ಚಾಗಲು ಉಳಿಯಲಾರದಾಗಿರುತ್ತದೆ.

ಶಿಕ್ಷಣವನ್ನು ಯಾವಾಗಲೂ ಒಂದು ವ್ಯವಸ್ಥಿತ ವಿಧಾನವಾಗಿ ಅಪೇಕ್ಷಿತ ಸಾಮಾಜಿಕ ಪರಿವರ್ತನೆಗಳನ್ನು ತರುವ ಪರಿಣಾಮಕಾರಿ ವಿಧಾನವಾಗಿ ಬಳಸಿಕೊಳ್ಳಲಾಗಿದೆ. ನಿಶ್ಚಿತವಾಗಿ ಹಲವು ಸಮಾಜಶಾಸ್ತ್ರಜ್ಞರ ಪ್ರಕಾರ ಶಿಕ್ಷಣವು ಒಂದು ವ್ಯವಸ್ಥಿತ ವಿಧಾನವಲ್ಲ. ಆದರೆ ಒಂದು ಪರಿಣಾಮ/ ಉತ್ಪನ್ನ. ಶಿಕ್ಷಣವು ಸಾಮಾನ್ಯವಾಗಿ ಮತ್ತು ಅಸಾಧಾರಣವಾಗಿ ಸಾಮಾಜಿಕವಾಗಿ ಪರಸ್ಪರ ಕಲೆತು ಪ್ರತಿಕ್ರಿಯಿಸುವುದು ಮತ್ತು ಸಾಮಾಜಿಕ ಬದಲಾವಣೆಗಳಿಂದ ಹೊರಹೊಮ್ಮಿಸುವುದು ಎಂದು ಅವರು ಅರ್ಥೈಸಿದ್ದಾರೆ. ಶಿಕ್ಷಣದ ಮೂಲಕ ಪ್ರಜಾಪ್ರಭುತ್ವವು ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವ ಮಾರ್ಗವನ್ನು ಹೊಂದಿದೆ ಎಂದು ಸ್ಪಷ್ಟೀಕರಿಸಿದೆ. ಪ್ರಜಾಪ್ರಭುತ್ವವು 'ಜೀವಿಸುತ್ತಿರುವ ಪ್ರಯೋಗ' ಮತ್ತು ಶಿಕ್ಷಣವು ಕೇವಲ 'ಜೀವಿಸಲೋಸುಗ ಸಿದ್ಧತೆ' ಎಂದು ವಿವರಿಸಲಾಗಿದೆ. ಆದರೆ ಅದು ತನಗೆತಾನೆ ಜೀವಂತವಾಗಿದೆ. ನಮಗೆ ಮಕ್ಕಳು ಪ್ರಜಾಪ್ರಭುತ್ವವಾದಿಯಾಗಿ ಬಾಳಲು ಕಲಿಯಬೇಕು. ನಮ್ಮ ಮನೆಗಳಲ್ಲಿ ಮತ್ತು ನಮ್ಮ ಶಾಲೆಗಳಲ್ಲಿ ಅಂತಹ ಬದುಕಿನ ಪ್ರಯೋಗಶಾಲೆಗಳಾಗುವಂತೆ ನಾವು ನೋಡಿಕೊಳ್ಳಬೇಕು.

ಒಂದು ಪ್ರಜಾಪ್ರಭುತ್ವಕ್ಕೆ ಶಿಕ್ಷಣದ ಮೂಲಭೂತ ಉದ್ದೇಶಗಳುಳ್ಳ ವ್ಯಕ್ತಿತ್ವದ ಅಭಿವೃದ್ಧಿ, ನಡೆವಳಿಕೆಯ ತರಬೇತಿ ಮತ್ತು ಪ್ರಜೆಗಳನ್ನಾಗಿ ರೂಪಿಸುವುದನ್ನು ಗುರಿಯಾಗಿ ಪರಿಗಣಿಸಲಾಗಿದೆ. ನಮ್ಮ ಶಾಲೆಗಳ ಜೀವನವನ್ನು ಆಯೋಜಿಸುವಲ್ಲಿ. ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವ ಮತ್ತು ಆಚರಣೆಗಳನ್ನು ರೂಪಿಸುವ, ಮೂಲಕ ಈ ಉದ್ದೇಶಗಳಿಗೆ ಸಾಕಷ್ಟು ಗಮನವನ್ನು ನೀಡಲಾಗಿದೆ. ವ್ಯಕ್ತಿಯ ಹಾಗೂ ವ್ಯಕ್ತಿತ್ವದ ಸಾಮಾಜಿಕ ವಿಷಯಗಳನ್ನು ಒಟ್ಟಾಗಿ ಐಕ್ಯಗೊಳಿಸಿ ಮತ್ತು ಸಂಯೋಜಿಸಬೇಕಾಗಿದೆ. ವಿದ್ಯಾರ್ಥಿಯು ತನ್ನ ವ್ಯಕ್ತಿತ್ವವನ್ನು ತನ್ನ ಉತ್ತಮ ಸಾಮರ್ಥ್ಯದಲ್ಲಿ ಬೆಳೆಸಿಕೊಳ್ಳಬೇಕು ಎಂದು ಹೇಳಲಾಗಿದೆ. ಪೌರತ್ವಕ್ಕಾಗಿ ಶಿಕ್ಷಣ ಸಂಘ (1947)ವು ಹೀಗೆ ಹೇಳಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು

Digitised by Bharatavani, CIIL

(a) ತನ್ನ ಸ್ವಂತ ಸಾಮರ್ಥ್ಯಗಳನ್ನು ತನ್ನನ್ನು ವಾಸ್ತವತೆಗಳಲ್ಲಿ ಬದುಕಿಸಿಕೊಳ್ಳುತ್ತಾ ಮತ್ತು ತನ್ನ ಸುತ್ತಲಿನ ಪ್ರಪಂಚದ ಸಾಧ್ಯತೆಗಳನ್ನು ಅಭ್ಯಾಸಿಸುತ್ತಾ ಅವನು ಅದನ್ನು ಅನುಭವಿಸಲು ಸಮರ್ಥನಾಗುವಂತೆ ಅವನ ವೈಯಕ್ತಿಕ ವ್ಯಕ್ತಿತ್ವವನ್ನು ತಾನೇ ಬೆಳೆಸಿಕೊಳ್ಳಲು ಪೂರ್ಣ ಅವಕಾಶವನ್ನು ಕೊಡಬೇಕು.

(b) ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ತನ್ನ ಸಮುದಾಯದಲ್ಲಿ ಸಕ್ರಿಯ ಸದಸ್ಯನಾಗಿ ತನ್ನ ಪಾತ್ರವನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ತಿಳಿಯಬೇಕು.

(c) ಅವನ ಆಸಕ್ತಿಗಳ ಮತ್ತು ಅಭಿರುಚಿಗಳ ಯೋಗ್ಯ ಉದ್ಯೋಗ ಕ್ಷೇತ್ರದಲ್ಲಿ ಕೊಡುಗೆ ನೀಡುವಂತೆ ಅನುಕೂಲಗಳನ್ನು ಒದಗಿಸಬೇಕು.

(d) ತನ್ನದೆ ಆದ ವಾಗ್ಮಿತೆ ಮತ್ತು ಸ್ವಂತ ಸೃಜನಾತ್ಮಕ ಸಾಮರ್ಥ್ಯದಿಂದ ತನ್ನ ಸಹಭಾಗಿ ಮಾನವರೊಡನೆ ಪರಿಣಾಮಕಾರಿಯಾಗಿ ಹೇಗೆ ಸಂವಹನಮಾಡಬೇಕು ಎಂಬುದನ್ನು ತಿಳಿಯಬೇಕು.

ಹೀಗೆ, ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣದ ನಾಲ್ಕು ಉದ್ದೇಶಗಳಲ್ಲಿ 1) ಸ್ವಅರಿವು 2) ನಾಗರಿಕ ಹೊಣೆಗಾರಿಕೆ 3) ಆರ್ಥಿಕ ದಕ್ಷತೆ 4) ಮಾನವ ಸಂಬಂಧಗಳು ಈ ನಾಲ್ಕನ್ನು ಪ್ರೋತ್ಸಾಹಿಸಬೇಕು.

**ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣ/ಪೌರತ್ವ ಶಿಕ್ಷಣ:**

ಪ್ರಜಾಪ್ರಭುತ್ವದಲ್ಲಿ ಶಿಕ್ಷಣವು ಕಠಿಣ ಪ್ರಯತ್ನಗಳ ಮತ್ತು ಸವಾಲಾಗುವಂತಹ ಹೊಣೆಗಾರಿಕೆಯನ್ನು ಹೊಂದಿದೆ. ಇಂದಿನ ವಿದ್ಯಾರ್ಥಿಗಳು ನಾಳಿನ ಪ್ರಜೆಗಳು ಆದ್ದರಿಂದ ಅವರಿಗೆ ಪೌರತ್ವದ ತರಬೇತಿ ನೀಡಬೇಕು ಮತ್ತು ಇದ್ದಕ್ಕಿದ್ದಂತೆ ಬೆಳೆಯದ ಹಾಗೂ ಅದು ಹಲವು ನೈತಿಕ, ಸಾಮಾಜಿಕ, ಮತ್ತು ಬೌದ್ಧಿಕ ಗುಣಗಳನ್ನು ಒಳಗೊಳ್ಳುತ್ತದೆ. ಯಾವುದೇ ವಿಧವಾದ ನಿರಂಕುಶವಾದ ಅಥವಾ ನಿಬಂಧಿತ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಯು ಸ್ವತಂತ್ರ ಚಿಂತನೆ ಅಥವಾ ತನ್ನದೇ ಆದ ಕ್ರಿಯೆಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಸಂಬಂಧವಾಗಿ ಸ್ಪಷ್ಟ ಚಿಂತನೆ ಮತ್ತು ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಪ್ರಥಮವಾಗಿ ಅಗತ್ಯವಾಗುತ್ತದೆ.

ಪ್ರಜಾಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಯ ಘನತೆ ಮತ್ತು ಗೌರವಗಳಲ್ಲಿ ನಂಬಿಕೆ ಹೊಂದಿದ್ದು ಪ್ರತಿ ವ್ಯಕ್ತಿಗಳ ವ್ಯಕ್ತಿತ್ವದ ಸಂಪೂರ್ಣ ಸರ್ವಾಂಗೀಣ ಅಭಿವೃದ್ಧಿಯ ಗುರಿ ಶಿಕ್ಷಣದ ಗುರಿಯಾಗಿರಬೇಕು. ಇದು ವ್ಯಕ್ತಿಯ ಎಲ್ಲಾ ಅವಶ್ಯಕತೆಗಳನ್ನೂ, ಮನಶಾಸ್ತ್ರೀಯಾವಾಗಿ, ಸಾಮಾಜಿಕವಾಗಿ, ಭಾವನಾತ್ಮಕವಾಗಿ ಮತ್ತು ಪ್ರಾಯೋಗಿಕವಾಗಿ ಮತ್ತು ಅದೆಲ್ಲಕ್ಕೂ ಅವಕಾಶ ಒದಗಿಸುವಂತಹ ಶಿಕ್ಷಣವನ್ನು ಪರಿಗಣಿಸಬೇಕು. ಅಂತಹ ಪ್ರಜಾಪ್ರಭುತ್ವದ ಶಿಕ್ಷಣವು ಮತ್ತು ಬದುಕಿಗಾಗಿ ಶಿಕ್ಷಣದ ವ್ಯವಸ್ಥಿತ ವಿಧಾನವನ್ನು ವಿಸ್ತರಿಸಿಕೊಳ್ಳಲು ನೇರವಾದ ವಿದ್ವತ್ತಿನ ಮಾರ್ಗವನ್ನು ವಿಷಯಾತೀತವಾಗಿಸಬೇಕು. ಅದೆಂದರೆ ಸಮುದಾಯದಲ್ಲಿ ಬದುಕುವ ಹಲವು ಪಾರ್ಶ್ವಗಳ ಕಲೆಯನ್ನು ವಿದ್ಯಾರ್ಥಿಗಳು ಕಲಿಯುವಂತೆ ಪ್ರೋತ್ಸಾಹಿಸಬೇಕು. ತನ್ನ ಸಂಪೂರ್ಣ ಅಭಿವೃದ್ಧಿ ಮತ್ತು ಸಮಾಜದ ಒಳಿತಿಗಾಗಿ ವ್ಯಕ್ತಿ ಇತರರೊಡನೆ ಬಾಳಲು ಕಲಿಯುವಂತಾಗುವುದು ಅವಶ್ಯ ಮತ್ತು ಪ್ರಾಯೋಗಿಕ ಅನುಭವಗಳು ಮತ್ತು ಇತರರ ವ್ಯಕ್ತಿತ್ವಗಳೊಡನೆ ಮುಕ್ತವಾದ ಅಂತರ ಸಂಬಂಧದಿಂದ ಸಹಕಾರದ ಮೌಲ್ಯವನ್ನು ಮೆಚ್ಚಿಕೊಳ್ಳುವುದು ಅತ್ಯವಶ್ಯವಾಗಿದೆ.

**ಒಂದು ಪ್ರಜಾಪ್ರಭುತ್ವದಲ್ಲಿ ಶಾಲೆ ಮತ್ತು ಮಕ್ಕಳು:**

ಶಾಲೆ ಜೀವನದ ವಾತಾವರಣ ಮತ್ತು ಮಾನವ ಸಂಬಂಧಗಳ ಪ್ರೇರಕ ಶಕ್ತಿಗಳು ಜೀವನಮಾರ್ಗವನ್ನು ವಿದ್ಯಾರ್ಥಿಗಳು ಕಲಿಯುವಲ್ಲಿ ಶಕ್ತಿಯುತ ಅಂಶಗಳಾಗಿವೆ. ಶಾಲೆಗಳಲ್ಲಿ ಪ್ರಜಾಪ್ರಭುತ್ವದ ಮಾನವ ಸಂಬಂಧಗಳನ್ನು ವಿಶದವಾಗಿ ಕಲಿಸಿದರೂ ಮಕ್ಕಳ ಪರಸ್ಪರ ಆಪ್ತ ಸಂಬಂಧಗಳನ್ನು ನಿರ್ದೇಶಿಸುವ ಮೌಲ್ಯಗಳು ಬಹುಶಃ ಅಧಿಕ ಶ್ರೇಷ್ಠ ವಿಷಯಗಳಾಗಿರುತ್ತವೆ. ಶಾಲೆಗಳಲ್ಲಿ ಕಲಿಯುವ ಅನುಭವಗಳು ಪ್ರಜಾಪ್ರಭುತ್ವದ ಮಾನವ ಸಂಬಂಧಗಳ ಬೆಳವಣಿಗೆಯನ್ನು ನಿರ್ಮಿಸಬಲ್ಲವು ಅಥವಾ ನಾಶಪಡಿಸಬಲ್ಲವು. ಮಕ್ಕಳು ಭವಿಷ್ಯದ ಪ್ರಜೆಗಳಾದ್ದರಿಂದ, ಪ್ರಜಾಪ್ರಭುತ್ವದ ಯಶಸ್ಸು ಅದರ ಸಾಮರ್ಥ್ಯವನ್ನು ಅವಲಂಬಿಸಿರುವುದರಿಂದ ಮಕ್ಕಳು ಮತ್ತು ಪ್ರಜಾಪ್ರಭುತ್ವ ಈ ಇಬ್ಬರಿಗೂ ಪರಸ್ಪರ ಸಂಬಂಧವಿದೆ ಮತ್ತು ಪರಸ್ಪರ ಅವಲಂಬಿಗಳೂ ಆಗಿರುತ್ತಾರೆ.

ಈಗಾಗಲೇ ಪ್ರಸ್ತಾಪಿಸಿರುವಂತೆ ಶಿಕ್ಷಣವು ಜೀವನಕ್ಕಾಗಿ ಸಿದ್ಧತೆಯಲ್ಲ, ಶಿಕ್ಷಣವೇ ಜೀವನವಾಗಿದೆ. ಮತ್ತು ಶಾಲೆಯು ಸಮಾಜದ ಪ್ರತಿಬಿಂಬವಲ್ಲ. ಶಾಲೆಯೇ ಸಮಾಜವಾಗಿದೆ. ಪ್ರಸ್ತುತದಲ್ಲಿ ನಮ್ಮ ಬಹಳಷ್ಟು ಶಾಲೆಗಳು ಸಮಾಜದಿಂದ ದೂರವಾಗಿವೆ ಮತ್ತು ಶಾಲೆಗಳಲ್ಲಿ ಇರುವ ಪರಿಸ್ಥಿತಿಯು ಪ್ರಜಾಪ್ರಭುತ್ವದ ಬೆಳವಣಿಗೆಗೆ ಮಾರಕವಾಗಿದೆ. ಜಾನ್ ಡ್ಯೂಯೀ ಇದಕ್ಕಾಗಿ "ಶಾಲೆಯನ್ನು ಕೇವಲ ಪಾಠಗಳನ್ನು ಬೋಧಿಸುವ ಸ್ಥಳವನ್ನಾಗಿಸದೆ ಅವುಗಳನ್ನು ಸಕ್ರಿಯವಾದ ಸಮಾಜ ಜೀವನದ ಅಪ್ಪಟ ರೂಪ"ವನ್ನಾಗಿ ಮಾಡಬೇಕು ಎನ್ನುತ್ತಾರೆ. ಅವನ ಪ್ರಕಾರ ಸಮಾಜವೆಂದರೆ ಅಸಂಖ್ಯ ಜನರು ಒಟ್ಟಾಗಿ ಇರುವುದು. ಏಕೆಂದರೆ ಅವರು ಸಾಮಾನ್ಯ ಗುರಿಗಳಿಂದ ಸಾಮಾನ್ಯ ಅಂತಃಸತ್ವದಿಂದ ಸಾಮಾನ್ಯ ಹಾದಿಯಲ್ಲಿ ಕೆಲಸಮಾಡುತ್ತಿರುತ್ತಾರೆ.

**ಪ್ರಜಾಪ್ರಭುತ್ವ ಶಿಕ್ಷಣದ ಸ್ಪಷ್ಟ ಲಕ್ಷಣಗಳು:**

ಪ್ರಜಾಪ್ರಭುತ್ವ ಶಿಕ್ಷಣದ ಸ್ಪಷ್ಟ ಲಕ್ಷಣಗಳನ್ನು ಅಮೆರಿಕಾದ ಶೈಕ್ಷಣಿಕ ನಿಯಮಗಳ ಆಯೋಗವು (1940) ಸ್ಪಷ್ಟಪಡಿಸಿದೆ.

1. ಪ್ರಜಾಪ್ರಭುತ್ವ ಶಿಕ್ಷಣ ಎಲ್ಲ ಜನರ ಸೌಖ್ಯದ ಉದ್ದೇಶವನ್ನು ಅದರ ಕೇಂದ್ರವಾಗಿ ಹೊಂದಿದೆ.

2. ಪ್ರತಿ ಮಗುವಿಗೂ ಅದು ನ್ಯಾಯವನ್ನು ಸಲ್ಲಿಸುತ್ತಾ ಬುದ್ಧಿವಂತಿಕೆ, ಜನಾಂಗ, ಮತ, ಸಾಮಾಜಿಕ ಸ್ಥಾನಮಾನ, ಆರ್ಥಿಕ ಪರಿಸ್ಥಿತಿ

Digitised by Bharatavani, CIIL

ಅಥವಾ ವೃತ್ತಿಪರ ಯೋಜನೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಶೈಕ್ಷಣಿಕ ಅವಕಾಶವನ್ನು ಎಲ್ಲರಿಗೂ ಒದಗಿಸುತ್ತದೆ.

3. ಅದು ಮೂಲಭೂತ ನಾಗರಿಕ ಸ್ವಾತಂತ್ರ್ಯಗಳನ್ನು ಆಚರಣೆಯಲ್ಲಿ ಮತ್ತು ಅಧ್ಯಯನದ ಮೂಲಕ ಅದರ ಅರ್ಥದ ವಿವರಣೆ ಕೊಡುವ ಮೂಲಕ ಗೌರವಿಸುತ್ತದೆ.

4. ಸ್ವಾತಂತ್ರ್ಯವನ್ನು ಅನುಭವಿಸಲು ಬೇಕಾದ ಅವಶ್ಯವಾದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗಳನ್ನು ನಿರ್ವಹಿಸುವುದಕ್ಕೇ ಅದು ಸಂಬಂಧಿಸಿದೆ.

5. ಅದು ತನ್ನ ಸಮುದಾಯದ ಎಲ್ಲಾ ಸದಸ್ಯರಿಗೂ ಶಿಕ್ಷಣದ ನೀತಿಗಳನ್ನು ಮತ್ತು ಉದ್ದೇಶಗಳನ್ನು ನಿರ್ಣಯಿಸುತ್ತ ಹಂಚಿಕೊಳ್ಳುವ ಹಕ್ಕನ್ನು ಖಚಿತಪಡಿಸುತ್ತದೆ.

6. ತರಗತಿಕೊಠಡಿಗಳಲ್ಲಿ, ಆಡಳಿತದಲ್ಲಿ ಮತ್ತು ವಿದ್ಯಾರ್ಥಿ ಚಟುವಟಿಕೆಗಳಲ್ಲಿ ಅದು ಪ್ರಜಾಪ್ರಭುತ್ವ ವಿಧಾನವನ್ನು ಬಳಸುತ್ತದೆ.

7. ಸಿಬ್ಬಂದಿಗಳ, ಬೋಧನೆಯ, ಆಡಳಿತಾತ್ಮಕ ಮತ್ತು ತಾಂತ್ರಿಕ ಬಳಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತದೆ.

8. ಪ್ರತಿಯೊಂದು ಹಕ್ಕು ಅದಕ್ಕನುಗುಣವಾಗಿ ಕರ್ತವ್ಯವನ್ನು ಬೇಡುತ್ತದೆ, ಪ್ರತಿ ಅಧಿಕಾರವು ಒಂದು ಹೊಣೆಗಾರಿಕೆ, ಪ್ರತಿ ಹೊಣೆಗಾರಿಕೆಯು ಒಂದು ಉತ್ತರದಾಯಿತ್ವವನ್ನು ಸಮೂಹಕ್ಕೆ ಅನುಭವದ ಮೂಲಕ ಕಲಿಸುತ್ತದೆ.

9. ಪ್ರಜಾಪ್ರಭುತ್ವ ಶಿಕ್ಷಣವು ಬಿಡುಗಡೆಗೊಳಿಸುತ್ತದೆ ಮತ್ತು ಎಲ್ಲರ ಬುದ್ಧಿವಂತಿಕೆಯನ್ನು ಉಪಯೋಗಿಸುತ್ತದೆ.

10. ಪ್ರಜಾಪ್ರಭುತ್ವದ ಸಾಮರ್ಥ್ಯಕ್ಕೆ ಅಗತ್ಯವಾದ ಜ್ಞಾನ ಸಾಮಗ್ರಿಗಳನ್ನು ಪ್ರಜೆಗಳಿಗೆ ಒದಗಿಸುತ್ತದೆ.

11. ಧನಾತ್ಮಕವಾದ ಅರಿವಿಗೆ ಒತ್ತು ನೀಡುತ್ತಾ ಮತ್ತು ಬಹು ದೊಡ್ಡ ಉದ್ದೇಶಕ್ಕಾಗಿ ಯುವಜನರನ್ನು ಸೇವೆಗೆ ಕರೆ ನೀಡುತ್ತಾ ಪ್ರಜಾಪ್ರಭುತ್ವಕ್ಕೆ ನಿಷ್ಠರಾಗಿರಲು ಪ್ರೋತ್ಸಾಹಿಸುತ್ತದೆ.

**ಪೌರತ್ವದ ಅರ್ಥ ಮತ್ತು ಸ್ವರೂಪ:**

ಶಿಕ್ಷಣ : ಅಭಿವೃದ್ಧಿ ಹೊಂದಿದ ಅಮೇರಿಕ ಯು.ಎಸ್.ಎ. ಇಂಗ್ಲೆಂಡ್ (ಯುನೈಟೆಡ್ ಕಿಂಗ್‌ಡಮ್), ಸ್ವಿಟ್ಜರ್ಲೆಂಡ್, ಫ್ರಾನ್ಸ್, ಕೆನಡಾ ಮುಂತಾದ ಅನೇಕ ದೇಶಗಳಲ್ಲಿ ಬಹಳ ಕಾಲದಿಂದಲೂ ಶಾಲೆಗಳ ಗುರಿ ವಿದ್ಯಾರ್ಥಿಗಳನ್ನು ಪ್ರಜಾಪ್ರಭುತ್ವಕ್ಕೆ ಸಿದ್ಧಪಡಿಸುವುದೇ ಆಗಿತ್ತು. ವ್ಯಕ್ತಿಗಳು ಸಮಾಜದ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿ ಹಿಡಿಯಲು ತರಬೇತುಗೊಳಿಸುವ ಮತ್ತು ಈ ಮೌಲ್ಯಗಳನ್ನು ಪೋಷಿಸಲು ಅಗತ್ಯವಾದ ಜ್ಞಾನ, ಅರಿವು ಕೌಶಲಗಳನ್ನು ಗಳಿಸಿಕೊಳ್ಳಲು ಆ ದೇಶಗಳು ಶಿಕ್ಷಣವನ್ನು ಒಂದು ಉಪಕರಣವಾಗಿ ಬಳಸಿಕೊಂಡಿವೆ. ಪ್ರಜಾಪ್ರಭುತ್ವ ಮತ್ತು ನಿರಂಕುಶ ಅಥವಾ ಕಮ್ಯುನಿಸ್ಟ್ ವಾದ ಮತ್ತು ಇತರ ದೊಡ್ಡ ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳಿಂದ ಉದ್ಭವವಾಗುವ ತಲ್ಲಣಗಳಿಂದ ಹಾಗೂ ಎರಡು ಮಹಾಯುದ್ಧಗಳಿಂದ ಪ್ರಚೋದಿತವಾದ ಈ ಪ್ರಕ್ರಿಯೆಯು ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣದ ಮುಖ್ಯ ಭಾಗವಾಗಿದೆ.

ನಾವು ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣ ಏಕೆ ಎಂದು ನಾವು ಕೇಳಬಹುದು. ಸಾಮಾನ್ಯವಾಗಿ ಒಪ್ಪಿಗೆಯಾಗುವ ಬಳಕೆಯ ಯಾವುದೇ ನಿಖರ ಉತ್ತರವೂ ಇದೂವರೆಗೂ ಹೊರಹೊಮ್ಮಲಾಗಲಿಲ್ಲ. ಒಂದು ದೃಷ್ಟಿಯಿಂದ ಪ್ರಜಾಪ್ರಭುತ್ವ ಸಮಾಜವೊಂದರಲ್ಲಿ ಪ್ರಜೆಗಳ ಹಕ್ಕುಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ್ದು ನಾವು ಇದನ್ನು ಪೌರತ್ವದ ಶಿಕ್ಷಣ ಎಂದು ಕರೆಯಬಹುದಾಗಿದೆ. ವಿಶಾಲಾರ್ಥದಲ್ಲಿ, ಜೀವನದ ನೈತಿಕ, ನೀತಿತತ್ವಗಳು, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿವೆ. ಪ್ರಜಾಪ್ರಭುತ್ವವು ನಿಧಾನಗತಿಯ ಬೆಳವಣಿಗೆಯದು ಮತ್ತು ಬಹಳ ದೀರ್ಘಕಾಲದಿಂದ ಅನೇಕ ವರ್ಷಗಳಿಂದ ಅನುಕೂಲಕರ ಮಣ್ಣಿನಲ್ಲಿ ಯೋಗ್ಯರೀತಿಯ ಗಾಳಿ ನೀರು ಮತ್ತು ಬೆಳಕುಗಳಿಂದ ಪೋಷಿಸಲ್ಪಟ್ಟು ಬೆಳೆಯುತ್ತಿರುವ ಜೀವಂತ ಸಸಿಯು ಮರವಾಗಿ ಬೆಳೆಯುವಂತೆ ಅಭಿವೃದ್ಧಿ ಆಗಬೇಕಾಗಿದೆ, ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣವು ಜ್ಞಾನವೊಂದನ್ನೇ ಒಳಗೊಳ್ಳುವುದಿಲ್ಲ. ಜತೆಗೆ ಆಳವಾದ ಅರಿವು, ಕೌಶಲಗಳು, ಮನೋಭಾವಗಳು ಮತ್ತು ಆಸಕ್ತಿಗಳನ್ನೂ ಒಳಗೊಂಡಿರುತ್ತದೆ. ಅದನ್ನು ಗಣಿತಶಾಸ್ತ್ರ ಅಥವಾ ಮರಗೆಲಸದ ರೀತಿ ಕಲಿಸಲಾಗದು. ಒಂದು ಜೀವನಮಾರ್ಗವಾಗಿ ಅದನ್ನು ಬೆಳೆಯುತ್ತಿರುವ ಮಗು ಆಚರಿಸುತ್ತಿರಬೇಕು. ಮತ್ತು ಅರಿಯುತ್ತಿರಬೇಕು, ಪೌರತ್ವದ ಶೈಕ್ಷಣಿಕ ಸಂಘವು (1939) ಪೌರತ್ವದ ಶಿಕ್ಷಣವನ್ನು "ಪ್ರತಿ ದಿನದ ಸಂಗತಿಗಳಲ್ಲಿ ನಿಖರ ಚಿಂತನೆಗೆಗಳಿಗೆ ಪ್ರೋತ್ಸಾಹ ಮತ್ತು ಆಧುನಿಕ ಜಗತ್ತಿನ ಜ್ಞಾನದ ಸಂಪಾದನೆ, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಅಗತ್ಯವಾದ ನೈತಿಕ ಗುಣಗಳ ತರಬೇತಿ" ಎಂದು ವ್ಯಾಖ್ಯಾನಿಸಿದೆ.

ಪ್ರಜೆಗಳನ್ನು ನಿರ್ಮಾಣಮಾಡಬೇಕು ಹುಟ್ಟಿನಿಂದಲೇ ಆಗುವುದಿಲ್ಲ. ಮೊದಲೇ ಸೂಚಿಸಿರುವಂತೆ ಪೌರತ್ವಕ್ಕಾಗಿ ಶಿಕ್ಷಣದ ಸಂಗತಿಯು ನಿರಂಕುಶ ರೀತಿಯ ದೇಶದಲ್ಲಿ ತೌಲನಿಕವಾಗಿ ಸುಲಭವಾದುದು. ಅಂಥ ರಾಷ್ಟ್ರಗಳಲ್ಲಿ ನಾಯಕರು ತಮ್ಮದೇ ಪರಿಕಲ್ಪನೆಗಳನ್ನು ಹೊಂದಿರುತ್ತಾರೆ. ಮತ್ತು ಅವರು ಅವುಗಳನ್ನು ವಾಸ್ತವಕ್ಕೆ ಪರಿವರ್ತಿಸುವ ಕ್ರಮಗಳನ್ನು ತಿಳಿದಿರುತ್ತಾರೆ. ವ್ಯಕ್ತಿಗಳನ್ನು ಒಂದು ಗುರಿಯಾಗಲ್ಲದೆ, ಒಂದು ಮಾರ್ಗವಾಗಿ ಭಾಗಗಳೆಂದೂ ರಾಷ್ಟ್ರದ ಸಾಧನಗಳೆಂದೂ ಭಾವಿಸುತ್ತಾರೆ.

**ಭಾರತ್ವದಲ್ಲಿ ಪೌರತ್ವದ ಶಿಕ್ಷಣ:**

ಭಾರತವು ಪ್ರಜಾಪ್ರಭುತ್ವದ ಜೀವನಮಾರ್ಗವನ್ನು ಅಳವಡಿಸಿಕೊಂಡಿರುವುದರಿಂದ ತನ್ನ ಪ್ರಜೆಗಳು ಪ್ರಜಾಪ್ರಭುತ್ವದ ಪ್ರಜೆಗಳಾಗಿ ಅಪೇಕ್ಷಿತ ಗುಣಗಳನ್ನು ಹೊಂದಲು ನಿರೀಕ್ಷಿಸುವಂತೆ, ಭಾಗವಹಿಸುವಿಕೆಯ ಮೂಲಕ ಅದು ತನ್ನ ಗುರಿಯನ್ನು ಸಾಧಿಸಬೇಕು. ಪ್ರೌಢ ಶಿಕ್ಷಣ ಆಯೋಗವು (1953) ಹೇಳುವಂತೆ ಪ್ರಜಾಪ್ರಭುತ್ವದಲ್ಲಿ ಪೌರತ್ವ ಪ್ರತಿಯೊಬ್ಬ ಪ್ರಜೆಯೂ

Digitised by Bharatavani, CIIL

ಗಮನವಿಟ್ಟು ತರಬೇತಿ ಪಡೆದು ಖಚಿತವಾದ ಮತ್ತು ಸವಾಲುಳ್ಳ ಹೊಣೆಗಾರಿಕೆಯಾಗಿದೆ; ಅದು ಅನೇಕ ಬೌದ್ಧಿಕ ಸಾಮಾಜಿಕ ಮತ್ತು ನೈತಿಕ ಗುಣಗಳನ್ನು ಒಳಗೊಂಡಿದ್ದು, ಇವು ತಮ್ಮಂತೆ ತಾವೇ ಬೆಳೆಯಲು ನಿರೀಕ್ಷಿಸುವಂತಿಲ್ಲ.

ಪ್ರಜಾಪ್ರಭುತ್ವವು ಮಾನವಜೀವಿಯಾಗಿ ಪ್ರತಿ ವ್ಯಕ್ತಿಯ ಘನತೆಯಲ್ಲಿ ನಂಬಿಕೆ ಮತ್ತು ಮೌಲಿಕತೆಯನ್ನು ಆಧರಿಸಿದೆ ಎಂದು ಪ್ರತಿಪಾದಿಸಲಾಗಿದೆ. ಎಲ್ಲಕ್ಕಿಂತ ಬಹು ವಿಶಿಷ್ಟವಾದುದು ಜನ್ಮದತ್ತವಾದ 'ಮೌಲ್ಯಪೂರ್ಣತೆ'ಯು ಎಂಬ ಊಹೆ ಮಾನವ ಎಲ್ಲಾ ಅಗತ್ಯಗಳನ್ನೂ ಮನೋವೈಜ್ಞಾನಿಕವಾಗಿ, ಸಾಮಾಜಿಕವಾಗಿ, ಸಂವೇಗಾತ್ಮಕವಾಗಿ ಮತ್ತು ವ್ಯಾವಹಾರಿಕವಾಗಿ ಅವುಗಳನ್ನು ಪೂರೈಸಲು ಶಿಕ್ಷಣ ಪರಿಗಣಿಸಬೇಕೆಂದು ಅಭಿಮತವಿದೆ. ಈ ಮೂಲಭೂತ ಪರಿಕಲ್ಪನೆಯಿಂದ ಹೊಮ್ಮುವ ಶಿಕ್ಷಣದ ದೃಷ್ಟಿಕೋನವು ಸಂಕುಚಿತ ಶೈಕ್ಷಣಿಕ ದೃಷ್ಟಿಕೋನವನ್ನು ಬದಲಿಸಿ, ಬದುಕಿಗಾಗಿ ಶಿಕ್ಷಣವೆಂದು ಅದನ್ನು ವಿಸ್ತಾರಗೊಳಿಸುತ್ತದೆ. ಅಂದರೆ ಒಂದು ಸಮುದಾಯದಲ್ಲಿ ಬದುಕುವ ಹಲವು ಕೌಶಲವಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಉತ್ತೇಜಿಸಬೇಕು.

ಪ್ರಜಾಪ್ರಭುತ್ವವು ಹಲವು ಜನಾಂಗಗಳು, ಮತಗಳು, ಜಾತಿಗಳು ಮತ್ತು ಸಮುದಾಯಗಳಿಗೆ ಆಶ್ರಯ ನೀಡಿದೆ. ಅಂತಹ ವಿಭಿನ್ನತೆಗಳಿಗಾಗಿ ಉದ್ಭವಿಸುವ ತೊಂದರೆಗಳನ್ನು ಮತ್ತು ವ್ಯತ್ಯಾಸ ಪ್ರಜಾಪ್ರಭುತ್ವ ಶಿಕ್ಷಣವು ಕಡಿಮೆಮಾಡುವುದು ಒಂದು ಆರೋಗ್ಯಕರ ಬೆಳವಣಿಗೆ, ಮೊದಲಿಯಾರ್ ಆಯೋಗವು (1953ರಲ್ಲಿ) ಸರಿಯಾಗಿಯೇ ಹೇಳುತ್ತದೆ.

"ವ್ಯಕ್ತಿಗಳಿಗೆ ಸಹಜೀವಿಗಳಲ್ಲಿ ಹಾರ್ದಿಕವಾಗಿ ಐಕ್ಯಮತದಿಂದ ಮತ್ತು ಸಮರ್ಥರಾಗಿ ಬಂದಿರುವುದಕ್ಕೆ ಬೇಕಾದ ಗುಣಗಳನ್ನು ಶಿಕ್ಷಣ ಕಲಿಸದಿದ್ದರೆ ಅದು ತನ್ನ ಬೆಲೆಯನ್ನು ಕಳೆದುಕೊಳ್ಳುತ್ತದೆ. ಶಿಸ್ತು, ಸಹಕಾರ, ಸಾಮಾಜಿಕ ಸಂವೇದನೆ ಮತ್ತು ಸಹಿಷ್ಣುತೆ ಮುಂತಾದ ಗುಣಗಳನ್ನು ಈ ಉದ್ದೇಶಕ್ಕಾಗಿ ಕಲಿಸಬೇಕಾಗಿದೆ. ವ್ಯಕ್ತಿತ್ವವನ್ನು ಮಾನವೀಯಗೊಳಿಸಲು ಮತ್ತು ಸಾಮಾಜೀಕೀಯಗೊಳಿಸಲು ಈ ಪ್ರತಿಯೊಂದು ಗುಣವೂ ತನ್ನದೇ ಆದ ವಿಶೇಷ ಪಾತ್ರವನ್ನು ನಿರ್ವಹಿಸುತ್ತದೆ" (ಪು.21)

ಈ ಗುಣಗಳು ಪ್ರಜಾಪ್ರಭುತ್ವ ಮೌಲ್ಯಗಳಾಗಿ ವಿದ್ಯಾರ್ಥಿಗಳು ಪ್ರಜಾಪ್ರಭುತ್ವವನ್ನು ಕೇವಲ ಒಂದು ಸರ್ಕಾರದ ರೂಪದಲ್ಲಿರುವುದಷ್ಟೇ ಅಲ್ಲದೆ ಒಂದು ಜೀವನ ವಿಧಾನವಾಗಿ ಸಹಾ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುತ್ತವೆ. ಈ ಜೀವನ ವಿಧಾನ ಹಾಸುಹೊಕ್ಕಾದ ನೇಯ್ಗೆಯಂತೆ ಬಹು ಶ್ರೀಮಂತವಾದ ಮತ್ತು ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಕೊಡುಗೆಯಾಗಿ ಭಾಷೆಗಳ ವ್ಯತ್ಯಾಸಗಳನ್ನೂ ಸಾಂಸ್ಕೃತಿಕ ನಮೂನೆಗಳನ್ನೂ ಮತ, ಇತ್ಯಾದಿಗಳನ್ನು ಪರಿವರ್ತಿಸಬಲ್ಲದು ಆದ್ದರಿಂದಲೇ ಕೊಠಾರಿ ಆಯೋಗವು (1966) ಜನರು ಒಬ್ಬರಿಂದ ಮತ್ತೊಬ್ಬರು ವ್ಯತ್ಯಾಸವಾಗುವಂತಹ ವಿಶಾಲಹೃದಯದ ಸಹಿಷ್ಣುತೆ, ಪರಸ್ಪರ ಕೊಳುಕೊಡುಗೆಗಳ ಮಾರ್ಗಗಳ ಮೆಚ್ಚುಗೆಯನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ ಎಂದು ಸಲಹೆ ಮಾಡಿದೆ. ಪ್ರಜಾಪ್ರಭುತ್ವ ಬದುಕಿನ ಬಹು ನಿಖರವಾದ ಪ್ರಯೋಗವಾಗಿದ್ದು ನಾವು ಘೋಷಿಸಿರುವಂತೆಯೇ ಶಿಕ್ಷಣ ಪಡೆದ ಮನಸ್ಸು ಪರಿಸ್ಥಿತಿಗಳನ್ನು ಬುದ್ಧಿಬಲದಿಂದ, ಕಲ್ಪನಾತ್ಮಕ ಪ್ರತಿಭೆಯಿಂದ ಪ್ರತಿಕ್ರಿಯಿಸಿದ್ದರೆ ಯಾವುದೇ ಶಿಕ್ಷಣವು ಮೌಲಿಕವೆನಿಸುವುದಿಲ್ಲ. ಸಂಗ್ರಹವಾಗಿ ಪ್ರಜಾಪ್ರಭುತ್ವ ಶಿಕ್ಷಣವು ತನ್ನದೇ ಆದ ರೀತಿಯಲ್ಲಿ ಜೀವಂತ ಪ್ರಯೋಗವಾಗಿದ್ದು ನಿಖರವಾಗಿರುವುದಷ್ಟೇ ಅಲ್ಲದೆ, ಸವಾಲಿನದೂ ಕೂಡಾ ಆಗಿದೆ.

**ಶಿಕ್ಷಣ ಮತ್ತು ಪ್ರಜಾಪ್ರಭುತ್ವದ ಅಂತರ್ ಸಂಬಂಧ:**

ಹಕ್ಸ್ಲೇ (1957) ಸರಿಯಾಗಿಯೇ ಪ್ರಸ್ತಾಪಿಸಿರುವಂತೆ "ಸಾರ್ವತ್ರಿಕ ಪ್ರಾಥಮಿಕ ಮತ್ತು ಸಾಧ್ಯವಾದರೆ ಪ್ರೌಢ ಶಿಕ್ಷಣವು ಪ್ರಪಂಚವನ್ನು ಅದರ ಬಂಧನದಿಂದ ಸ್ವತಂತ್ರಗೊಳಿಸುತ್ತದೆ ಮತ್ತು ಅದನ್ನು ಪ್ರಜಾಪ್ರಭುತ್ವಕ್ಕೆ ಸುರಕ್ಷಿತನನ್ನಾಗಿ ಮಾಡುತ್ತದೆ ಎಂದು ಪ್ರಾಚೀನ ಶೈಕ್ಷಣಿಕ ಸುಧಾರಕರು ನಂಬಿದ್ದರು. ನೀವು ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಾ ಯಾವುದೇ ಐತಿಹಾಸಿಕ ಉದ್ದೇಶವನ್ನು ತಲುಪಲಾರಿರಿ, ಒಂದು ವೇಳೆ ನಿಮ್ಮ ಗುರಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವಾಗಿದ್ದರೆ, ಆಗ ನೀವು ಜನರಿಗೆ ಸ್ವತಂತ್ರರಾಗಿ ತಮ್ಮನ್ನು ತಾವು ಆಳಿಕೊಳ್ಳುವುದನ್ನು ಕಲಿಸಬೇಕು. ಒಂದುವೇಳೆ ಅವರಿಗೆ ಹಿಂಸಿಸುವುದನ್ನು ಮತ್ತು ನಿರಾಶಾವಾದದ ವಿಧೇಯತೆಗಳನ್ನು ಕಲಿಸಿದರೆ ಆಗ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಗುರಿ ಹೊಂದಿರುವ ನೀವು ಅದನ್ನು ಸಾಧಿಸಲಾರಿರಿ."

ಪ್ರಜಾಪ್ರಭುತ್ವ ಬದುಕಿನಲ್ಲಿ ಒಂದು ಪ್ರಯೋಗ ಮತ್ತು ಶಿಕ್ಷಣ ಕೇವಲ ಬದುಕುವುದಕ್ಕಾಗಿ ಸಿದ್ಧತೆ ಮಾತ್ರವಲ್ಲ, ಆದರೆ ಅದನ್ನೇ ಬದುಕುವುದಾಗಿದೆ. ಒಂದುವೇಳೆ ಪ್ರಜಾಪ್ರಭುತ್ವ ರೀತಿ ಬದುಕಲು ಮಕ್ಕಳಿಗೆ ಕಲಿಸಬೇಕಾಗಿದ್ದರೆ, ನಮ್ಮ ಮನೆಗಳು ಮತ್ತು ಶಾಲೆಗಳು ಆ ಬಗೆಯ ಬದುಕಿನ ಪ್ರಯೋಗಶಾಲೆಗಳಾಗುವಂತೆ ನಾವು ನೋಡಿಕೊಳ್ಳಬೇಕು.

ಪ್ರಜಾಪ್ರಭುತ್ವವು ಜನರಿಗೆ ಸ್ವಾತಂತ್ರ್ಯವನ್ನು ಕೊಡುವುದನ್ನು ನಂಬುತ್ತದೆ. ಒಂದು ವೇಳೆ ಜನರು ಶಿಕ್ಷಿತರಾಗದಿದ್ದರೆ, ಸಾಮಾಜಿಕ ಒಳಿತಿನ ಶಿಸ್ತನ್ನು ಪಡೆಯದಿದ್ದರೆ, ಆಗ ಆ ಸ್ವಾತಂತ್ರ್ಯವು ದುಬಾರಿಯದಾಗುತ್ತದೆ. ಮತ್ತು ಅನಾಯಕತ್ವದ ರೂಪ ತಳೆಯುತ್ತದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಮಾಥುರ್ (1964, ಪ. 199) ಹಲವು ಪೂರ್ವಭಾವಿ ಅಂಶಗಳನ್ನು ಸೂಚಿಸಿದ್ದಾರೆ. ಅವುಗಳಲ್ಲಿ ಎರಡು ಯಾವುದೆಂದರೆ :

(i) ಪ್ರಜಾಪ್ರಭುತ್ವದಲ್ಲಿ ಜನರ ಆರ್ಥಿಕ ಏಳಿಗೆ ಇರಬೇಕು. ಜನರ ಹಸಿದ ಹೊಟ್ಟೆಗಳಿಗೆಪ್ರಜಾಪ್ರಭುತ್ವವನ್ನು ಸ್ಥಾಪಿಸಲಾಗುವುದಿಲ್ಲ. ಒಂದುವೇಳೆ ಸ್ವಾತಂತ್ರ್ಯವು ಅವರ ಅನ್ನದ ಸಮಸ್ಯೆಯನ್ನು ಪರಿಹರಿಸದಿದ್ದರೆ ಜನರು ತಮ್ಮ ರಾಜಕೀಯದಾದ್ಯಂತವನ್ನು ಪೂಜಿಸಲು ಸಿದ್ಧರಾಗಬಹುದು.

(ii) ಎರಡನೆಯ ಪೂರ್ವಭಾವಿ ಅಂಶವೆಂದರೆ ಶಿಕ್ಷಿತ

Digitised by Bharatavani, CIIL

ಮತದಾರರನ್ನು ರೂಪಿಸುವುದು, ಶಿಕ್ಷಿತ ಜನರಿದ್ದು, ಅವರು ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತರಾಗಿದ್ದರೆ ಪ್ರಜಾಪ್ರಭುತ್ವ ಸರಿಯಾಗಿ ಕೆಲಸ ಮಾಡುತ್ತದೆ. ಒಂದುವೇಳೆ ಜನರು ಅಶಿಕ್ಷಿತರಾಗಿದ್ದರೆ, ಪ್ರಜಾಪ್ರಭುತ್ವದ ವೇಷದಲ್ಲಿ ಅವರು ನಿರಂಕುಶ ಪ್ರಭುತ್ವ ಬೆಳೆಸಿಕೊಳ್ಳುವರು. ಕೆಲವೇ ಜನರು ರಾಷ್ಟ್ರದ ಸರ್ಕಾರದ

ಮೇಲೆ ನಿಯಂತ್ರಣ ಹೊಂದಿರುವ ಭರವಸೆ ಹೊಂದಿರುವರು ಮತ್ತು ಸಮಯವನ್ನು ಅವರು ಶೋಷಣೆ ಮಾಡಲು ತೊಡಗುವರು.

ಪ್ರೌಢ ಶಿಕ್ಷಣ ಆಯೋಗವು (1952–53) ಈ ಕೆಳಗಿನ ತಮ್ಮ ಹೇಳಿಕೆಗಳನ್ನು ಸರಿಯಾಗಿಯೇ ಎಚ್ಚರಿಕೆಯನ್ನು ನೀಡಿದೆ.

ಪರಿಣಾಮಕಾರಿಯಾಗಿರಬೇಕಾದರೆ, ಪ್ರಜಾಸತ್ತಾತ್ಮಕ ಪೌರ ಸುಳ್ಳುಗಾರಿಕೆಯಿಂದ ಸತ್ಯವನ್ನು ಬೇರ್ಪಡಿಸುವ, ಪ್ರಚಾರದಿಂದ ತಥ್ಯಾಂಶಗಳನ್ನು ಬೇರ್ಪಡಿಸುವ ಮತ್ತು ಅಪಾಯಕಾರಿಯಾದ ಸಾಂಪ್ರದಾಯಿಕತೆ ಹಾಗೂ ಪೂರ್ವಗ್ರಹದಿಂದ ಕೂಡಿದ ಮನವಿಗಳನ್ನು ತಿರಸ್ಕರಿಸುವ ಗ್ರಹಿಕೆಯನ್ನು ಮತ್ತು ಬೌದ್ಧಿಕ ಸಮಗ್ರತಾ ಸಾಮರ್ಥ್ಯವನ್ನು ಹೊಂದಿರಬೇಕು. ಪರಿಣಾಮಕಾರಿ ವಸ್ತುನಿಷ್ಠವಾಗಿ ಚಿಂತನೆ ಮಾಡುವ ವೈಜ್ಞಾನಿಕ ಮನೋಧರ್ಮವನ್ನು ಮತ್ತು ತನ್ನ ನಿರ್ಣಯಗಳನ್ನು ಪರೀಕ್ಷಿತ ಅಂಶಗಳ ಮೇಲೆ ಆಧರಿಸಬೇಕು, ಬೆಳೆಸಿಕೊಳ್ಳಬೇಕು. ಅವನು ತೆರೆದ ಮನಸ್ಸುಳ್ಳವನಾಗಿ ಹೊಸ ಆಲೋಚನೆಗಳನ್ನು ಸ್ವೀಕರಿಸುವಂತಹವನಾಗಿರಬೇಕು ಮತ್ತು ಕಂದಾಚಾರದ ಆಚರಣೆಗಳು ಸಂಪ್ರದಾಯಗಳು ಮತ್ತು ನಂಬಿಕೆಗಳ ಬಂಧನದ ಗೋಡೆಗಳ ಒಳಗೆ ಸೀಮಿತನಾಗದೆ ಇರಬೇಕು".

1939ರ ಏಪ್ರಿಲ್ 26ರಲ್ಲಿ ನಾಲ್ಕನೆಯ ವೈಟ್‌ಹೌಸ್ ಸಮಾವೇಶದಲ್ಲಿ ಅಧ್ಯಕ್ಷ ಎಫ್.ಡಿ. ರೂಸ್‌ವೆಲ್ಟ್ "ಒಂದು ಯಶಸ್ವಿ ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಸಮಗ್ರ ಭಾಗವಾಗಿರುವ ಮಕ್ಕಳ ನಡುವಣ ಸಂಬಂಧವನ್ನು ನಾವು ಪರಿಗಣಿಸಬೇಕಾಗಿದೆ. ಪ್ರಜಾಪ್ರಭುತ್ವವನ್ನು ಬಿಟ್ಟು ಎಂದಿಗೂ ನಾವು ಮಕ್ಕಳನ್ನು ರೂಪಿಸಲಾಗದು. ಮಕ್ಕಳು ಪ್ರಜಾಪ್ರಭುತ್ವದಲ್ಲಿ ಒಂದಾಗಿದ್ದಾರೆ. ಏಕೆಂದರೆ ಅವರು ಪ್ರಜಾಪ್ರಭುತ್ವವನ್ನು ಅವಲಂಬಿಸಿದ್ದಾರೆ ಮತ್ತು ಅವರ ಮೇಲೆ ಪ್ರಜಾಪ್ರಭುತ್ವವೂ ಅವಲಂಬಿತವಾಗಿದೆ ಮತ್ತು ಅವಲಂಬಿಸಿದೆ" ಎಂದಿದ್ದಾರೆ.

ಶೈಕ್ಷಣಿಕ ಸಂಶೋಧನಾ ವಿಶ್ವಕೋಶವು ಪೌರತ್ವದ ಶಿಕ್ಷಣ ಅಥವಾ ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣವನ್ನು ವ್ಯಾಖ್ಯಾನಿಸುವ ಪ್ರಯತ್ನದ ಎರಡು ಅಧ್ಯಯನಗಳನ್ನು ಪ್ರಸ್ತಾಪಿಸಿದೆ.

ಪ್ರಜಾಸತ್ತಾತ್ಮಕ ಶಿಕ್ಷಣದ ಮೂಲಭೂತ ಆಧಾರ ಕಲ್ಪನೆಗಳು (Postulates) :

**ಪ್ರಜಾಸತ್ತಾತ್ಮಕ ಶಿಕ್ಷಣದ ಮೂಲಭೂತ ಆಧಾರ ಕಲ್ಪನೆಗಳು ಮತ್ತು ಅದರ ಅಗತ್ಯ ಲಕ್ಷಣಗಳು ಈ ಕೆಳಗಿನಂತಿವೆ:**

1) ವ್ಯಕ್ತಿಯ ಘನತೆಯ ಬಗ್ಗೆ ಗೌರವ

2) ಸ್ವಾತಂತ್ರ್ಯ ಮತ್ತು ಶಿಸ್ತು

3) ಸಮಾನತೆ ಮತ್ತು ಸಮತೆ ಮತ್ತು

4) ಹಂಚಿಕೊಳ್ಳುವಿಕೆ ಮತ್ತು ಜವಾಬ್ದಾರಿ

ಇವುಗಳನ್ನು ಪ್ರಜಾಸತ್ತಾತ್ಮಕ ಶಿಕ್ಷಣದ ನಾಲ್ಕು ಸ್ತಂಭಗಳೆಂದು ಪರಿಗಣಿಸಲಾಗಿದೆ ಮತ್ತು ಅದರ ಶಕ್ತಿಯು ಈ ನಾಲ್ಕು ಪ್ರಮುಖ ವಿಚಾರಗಳ ಮೇಲೆ ಅವಲಂಬಿತವಾಗಿದೆ.

**1. ವ್ಯಕ್ತಿಯ ಘನತೆಯ ಬಗ್ಗೆ ಗೌರವ:**

ಮಾನವ ವ್ಯಕ್ತಿತ್ವದ ಅಸೀಮ ಹಾಗೂ ಮೌಲ್ಯದ ಪೂರ್ವಕಲ್ಪನೆಯ ಮೇಲೆ ಆಧರಿಸಿದ ವ್ಯಕ್ತಿಗಳೆಲ್ಲರಿಗೂ ಘನತೆಯು ಅವಶ್ಯವಾದುದು ಎಂದು ಪ್ರಜಾಪ್ರಭುತ್ವವು ನಂಬುತ್ತದೆ. ಅದು ಲಿಂಗ, ವರ್ಣ, ಜನಾಂಗ, ಮತ ಅಥವಾ ಆರ್ಥಿಕ ಪರಿಸ್ಥಿತಿಗಳಲ್ಲಿ ಯಾವುದೇ ತಾರತಮ್ಯವಿಲ್ಲದಂತೆ ಪ್ರತಿಯೊಬ್ಬರಿಗೂ ಒಳಿತನ್ನೇ ಎತ್ತಿ ಹಿಡಿಯುವುದು ಮತ್ತು ಅದನ್ನೇ ಗುರಿಯಾಗಿ ಸಹಾ ಪರಿಗಣಿಸಿದೆ. ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ಆದ್ದರಿಂದಲೇ ಬ್ರೂಬಷರ್ (1950) ಹೇಳುತ್ತಾನೆ "ವ್ಯಕ್ತಿಯ ವಿಶಿಷ್ಟ ಸಾಮರ್ಥ್ಯವನ್ನು ಅರಿಯುವಲ್ಲಿ ವಿಕಲತೆ ಉಂಟಾದರೆ ಅದು ವ್ಯಕ್ತಿಯನ್ನು ದಿವಾಳಿಯಾಗುಸುವುದಷ್ಟೇ ಅಲ್ಲದೆ ಅವನು ಸದಸ್ಯನಾಗಿರುವ ಸಮಾಜವನ್ನು ದಿವಾಳಿಯನ್ನಾಗಿಸುತ್ತದೆ".

ಪ್ರಜಾಪ್ರಭುತ್ವದಲ್ಲಿ ಶೈಕ್ಷಣಿಕ ಸಂಸ್ಥೆಗಳು ವೈಯಕ್ತಿಕ ಗುಣಗಳನ್ನು ಆರ್ಥಿಕ, ನಾಗರಿಕ ಮತ್ತು ಉತ್ತಮ ಜೀವನದ ಇತರ ವಿಧಗಳನ್ನು ಕಲಿಸುವ ಪ್ರಯತ್ನವನ್ನು ಮಾಡುತ್ತವೆ. ಶಿಕ್ಷಕರು ಕಠಿಣಶ್ರಮದ ಸದ್ಗುಣಗಳನ್ನು, ಉತ್ಸಾಹಶೀಲತೆ ಸಂಪನ್ಮೂಲಶೀಲತೆ, ಉತ್ಸಾಹ, ಸ್ವಾವಲಂಬಿ ಮತ್ತು ಗುರಿ ಹಿಡಿದು ಸಾಧಿಸುವುದನ್ನು ತಮ್ಮ ವಿದ್ಯಾರ್ಥಿಗಳಲ್ಲಿ ಪ್ರೋತ್ಸಾಹಿಸುತ್ತಾರೆ. ನಾಗರಿಕ ಹಕ್ಕುಗಳು ಮತ್ತು ಜವಾಬ್ದಾರಿಗಳು, ರಾಜಕೀಯ ಮತ್ತು ನಾಗರಿಕ ದಕ್ಷತೆಗಳಿಗೆ ಆಳವಾದ ಗೌರವವನ್ನು ಬೆಳೆಸಬೇಕು. ಮಾನವ ಘನತೆಗೆ ಪ್ರಜಾಪ್ರಭುತ್ವದ ಕಾಳಜಿಯು ಶ್ರೀಮಂತ ಜೀವನದ ಭದ್ರತೆ ನೀಡುತ್ತದೆ. ನೈತಿಕ ಮತ್ತು ಧಾರ್ಮಿಕ ತತ್ವಗಳು ವ್ಯಕ್ತಿಯ ಘನತೆಗೆ ದೈವದ ಪಿತೃತ್ವವನ್ನು ಪ್ರತಿಪಾದಿಸುತ್ತ ಎಲ್ಲಾ ಮನುಷ್ಯರು ಸೋದರರು; ಅವರೆಲ್ಲಾ ಅಪಾರ ಪ್ರೀತಿಯ ವ್ಯಕ್ತಿಗಳು. ದೇವರು ತನ್ನ ಮಕ್ಕಳಲ್ಲಿ ಸ್ವಪಕ್ಷಪಾತ ತೋರಿಸಿ ಆಟವಾಡಲು ಇಷ್ಟಪಡುವುದಿಲ್ಲ. ಅವರ ಮೌಲ್ಯ ಏನೇ ಇರಲಿ, ಅದು ಅವರ ಭಾವಕ್ಕೆ ಸಹಜವಾದುದು.

ಪ್ರೊ. ಕಿಲ್‌ಪ್ಯಾಟ್ರಿಕ್ (1957) ಪ್ರಕಾರ ವ್ಯಕ್ತಿತ್ವಕ್ಕೆ ಗೌರವವು ವಿಶೇಷ ಪ್ರಾಮುಖ್ಯತೆ ಮತ್ತು ಅತ್ಯಧಿಕ ಸಾರವನ್ನುಳ್ಳದ್ದು. ವ್ಯಕ್ತಿತ್ವ ಗೌರವವು ಮೊದಲಿಗೆ ಬಂದರೆ, ಯಾವುದೇ ವ್ಯಕ್ತಿತ್ವಕ್ಕೆ ನಿಜವಾದ ಗೌರವ ತರಲು ಸ್ವಾತಂತ್ರ್ಯವನ್ನು ಅನುಸರಿಸುವುದು ಅವಶ್ಯವಾಗಿದೆ. ಆದಾಗ್ಯೂ ಈ ಬಗ್ಗೆ ಸಿಂಗ್ ಅವರು ವಿರುದ್ಧಾರ್ಥದಲ್ಲಿ "ಸ್ವಾತಂತ್ರ್ಯವು ಮೊದಲ ಆದ್ಯತೆ ಮತ್ತು ಘನತೆಗೆ ಗೌರವವು ನಂತರದ್ದಾಗಿ

Digitised by Bharatavani, CIIL

ಬರುತ್ತದೆ," ಎಂದಿದ್ದಾರೆ. ರಾಷ್ಟ್ರಗಳ ಮತ್ತು ವ್ಯಕ್ತಿಗಳ ಸ್ವಾತಂತ್ರ್ಯವನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಸರ್ಕಾರಗಳ ದ್ವಿಗುಣಗೊಳ್ಳುತ್ತಿರುವ ನಿಯಂತ್ರಣದಿಂದ ಮೊಟಕುಗೊಳಿಸುತ್ತಿದೆ. ಸ್ವಾತಂತ್ರ್ಯ ಕೊಡುವ ಬದಲು, ಒಬ್ಬ ವ್ಯಕ್ತಿ ಅಥವಾ ಒಂದು ರಾಷ್ಟ್ರವು ತನಗೆ ತಾನೇ ಗೌರವವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತದೆ. ಸ್ವಾತಂತ್ರ್ಯವಿಲ್ಲದವರನ್ನು ಯಾರೂ ಗೌರವಿಸುವುದಿಲ್ಲ.

**2. ಸ್ವಾತಂತ್ರ್ಯ ಮತ್ತು ಶಿಸ್ತು:**

ನನ್ ಟಿ.ಪಿ. ಪ್ರಕಾರ (1945) ಪುರುಷರ ಮತ್ತು ಸ್ತ್ರೀಯರ ಸ್ವತಂತ್ರ ಚಟುವಟಿಕೆ ಮೂಲಕ ವಲ್ಲದೆ ಒಳ್ಳೆಯದಾವುದೂ ಮಾನವ ಜೀವನಕ್ಕೆ ಪ್ರವೇಶಿಸದು ಎಂದು ದೃಢಪಡಿಸಿದ್ದಾರೆ. ಮಾನವ ಚಟುವಟಿಕೆಗಳು ಎಲ್ಲಾ ಕ್ಷೇತ್ರಗಳಲ್ಲೂ ಉನ್ನತಿ ಮತ್ತು ಕಾರ್ಯಸಿದ್ಧಿಯನ್ನು ಸಾಧಿಸಲು ಸ್ವಾತಂತ್ರವು ಮೂಲಭೂತ ನಿಯಮ ಎಂದು ತಿಳಿಯಲಾಗಿದೆ. ಇದನ್ನೇ ವಿಶ್ವದ ಎಲ್ಲಾ ದೇಶಗಳಲ್ಲಿ ತತ್ವಶಾಸ್ತ್ರಜ್ಞರು ಮತ್ತು ಸಾಹಿತಿಗಳು ಯುಗಗಳಿಂದಲೂ ಮಹತ್ವದ್ದಾಗಿ ಹೇಳಿರುವರು. ಎಲ್ಲಾ ಸ್ವತಂತ್ರ ದೇಶಗಳಲ್ಲಿ ತತ್ವಶಾಸ್ತ್ರಜ್ಞರು ಮತ್ತು ಸಾಹಿತಿಗಳು ಯುಗಗಳಿಂದಲೂ ಮಹತ್ವದ್ದಾಗಿ ಹೇಳಿರುವರು. ಎಲ್ಲಾ ಸ್ವತಂತ್ರ ದೇಶಗಳಲ್ಲೂ ಅಸಂಖ್ಯ ಜನರು ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾಗಿದ್ದಾರೆ. ಸ್ವಾತಂತ್ರ್ಯ ಎಂದರೆ ಕೇವಲ ರಾಜಕೀಯ ಸ್ವಾತಂತ್ರವಷ್ಟೇ ಅಲ್ಲ; ಅದು ಸಾಮಾಜಿಕ, ಭೌತಿಕ, ಆರ್ಥಿಕ, ಧಾರ್ಮಿಕ ಮತ್ತು ಮನೋ ವೈಜ್ಞಾನಿಕವೂ ಆಗಿದೆ. ಆದ್ದರಿಂದ ಮಾನವ ನಾಗರಿಕ ಇತಿಹಾಸವು ಮೂಢನಂಬಿಕೆಗಳು, ಹಿಂಸಾಚಾರ, ಭ್ರಷ್ಟಾಚಾರ, ರೋಗಗಳು ಬಡತನ ಇತ್ಯಾದಿಗಳಿಂದ ಸ್ವಾತಂತ್ರ್ಯ ಪಡೆಯಲು ನಿರಂತರ ಹೋರಾಟವೇ ಆಗಿದೆ. ಆಧ್ಯಾತ್ಮಿಕ ಅಥವಾ ಧಾರ್ಮಿಕ ವಲಯದಲ್ಲಿ ಸ್ವಾತಂತ್ರ್ಯವೆಂದರೆ ಹುಟ್ಟು ಸಾವುಗಳಿಂದ ಬಿಡುಗಡೆ ಕ್ರಮವಾಗಿ ಸ್ವರ್ಗ ನರಕಗಳ ಪರಿಕಲ್ಪನೆಯ ಪ್ರಕಾರ ಆನಂದ ಮತ್ತು ಸಂಕಟದಾಯಕ ನರಳುವಿಕೆಯ ನಿರ್ಬಂಧದ ಸಂಕೇತವಾಗಿವೆ.

ರೂಸೋ ಸ್ವಾತಂತ್ರ್ಯಕ್ಕೆ ಇರುವ ತೊಡಕುಗಳ ಬಗ್ಗೆ ತನ್ನ ಚಿರಂತನ ಕೃತಿ 'ಎಮಿಲಿ'ಯಲ್ಲಿ ದೊಡ್ಡ ಧ್ವನಿ ತೆಗೆದು ಆಜ್ಞಾಪಿಸಿ ಹೀಗೆ ಸಮರ್ಥಿಸಿದ್ದಾನೆ. "ಮಾನವ ಹುಟ್ಟುವಾಗ ಸ್ವತಂತ್ರ ಆದರೆ ಎಲ್ಲೆಡೆ ಶೃಂಖಲೆಗಳಿಂದ ಬಂಧಿತ. ಈ ಸರಪಳಿಗಳು ಬಂಧನದ ಸಂಕೇತ ಮತ್ತು ಸ್ವಾತಂತ್ರ್ಯವನ್ನು ನಿಗ್ರಹಿಸುವಲ್ಲಿ ತೊಡಕುಗಳು, ಅದು ಎಲ್ಲಾ ಮಾನವ ಕೆಡಕು, ದುಃಖಗಳು ಬೇರು" ಎಂದಿದ್ದಾನೆ.

ಪ್ರಜಾಪ್ರಭುತ್ವ ಶಿಕ್ಷಣವು ಪೆಸ್ಟಾಲೋಜ್ಜೀಯ 'ಲಿಯೋನಾರ್ಡ್ ಮತ್ತು ಗರ್ಟ್ರೂಡ್' ದಲ್ಲಿ ಮನುಷ್ಯನನ್ನು ಸ್ವತಂತ್ರನನ್ನಾಗಿ ಮಾಡುವುದನ್ನು ಪ್ರತಿಪಾದಿಸಿದ್ದಾನೆ ಮತ್ತು ಸ್ವಾವಲಂಬಿಯಾಗಲು ಅವನನ್ನು ಬೆಳೆಸಲು ಪ್ರಚೋದನೆ ಮತ್ತು ಅವಕಾಶವನ್ನು ಒದಗಿಸಬೇಕು ಎಂಬುದು ಅದರಲ್ಲಿ ಕಂಡುಬರುತ್ತದೆ. 'ಸ್ವಾತಂತ್ರ್ಯದ ಮೂಲಕ ಶಿಕ್ಷಣ'ದ ಮೇಲೆ ಹೆಚ್ಚಿನ ಒತ್ತು ನೀಡಲಾಗಿದೆ. ಸ್ವ-ಅಭಿವ್ಯಕ್ತಿಯಲ್ಲಿ ಮಗುವಿಗೆ ತರಬೇತಿ ನೀಡುವ ಪ್ರಯತ್ನಗಳಾಗಬೇಕಾಗಿದೆ, ಸ್ವಾತಂತ್ರ್ಯ, ಜವಾಬ್ದಾರಿ, ಸಹಕಾರ ಮತ್ತು ಸಹಜೀವಿಗಳಿಗೆ ಸ್ಪಂದಿಸುವ ಬಗ್ಗೆ ಗಟ್ಟಿಯಾಗಿ ಪೋಷಿಸಿದರೂ ಪಿತೃಪ್ರಧಾನ ಸಂಪ್ರದಾಯದ ಹಿಡಿತ ಮತ್ತು ಅಧೀನತೆ ಇಂದಿಗೂ ಉಳಿದಿದೆ. ಮೇಲಿನ ಚರ್ಚೆಗಳಿಂದ ಸ್ವಾತಂತ್ರ್ಯವನ್ನು ಜೀವನದ ಎಲ್ಲಾ ಮಾರ್ಗಗಳಲ್ಲಿ ಶಿಸ್ತನ್ನು ಸಾಧಿಸುವ ಮಾರ್ಗವೆಂಬುದು ಸಾಬೀತಾಗಿದೆ. ಸ್ವಾತಂತ್ರ್ಯವು ಸ್ವಶಿಸ್ತಿನ ಆಕಾರವನ್ನು ತೆಗೆದುಕೊಳ್ಳುವುದು ಪ್ರಜಾಪ್ರಭುತ್ವ ಬದುಕಿಗೆ ಅವಶ್ಯವಾಗಿದೆ. ಆದ್ದರಿಂದ, ಶಿಕ್ಷಣವು, ಮಗುವಿಗೆ ಸ್ವಾತಂತ್ರ್ಯದ ಮೂಲಕ ಸ್ವ-ಶಿಸ್ತಿನ ತರಬೇತಿ ನೀಡುತ್ತದೆ.

**3. ಸಮಾನತೆ ಮತ್ತು ಸಮತೆ:**

ಎಲ್ಲಾ ಮನುಷ್ಯರೂ ಹುಟ್ಟುತ್ತಾ ಸಮಾನರು, ಆದರೆ ಹುಟ್ಟುವಾಗ ವಿಭಿನ್ನರು ಕೂಡಾ. ಈ ಪ್ರತಿಪಾದನೆಯ ಮೊದಲ ಭಾಗವು ಅವರೆಲ್ಲಾ ಮೂಲಭೂತ ಮಾನವ ಗುಣಗಳನ್ನು ಹಂಚಿಕೊಳ್ಳುತ್ತಾರೆ. ಅವರೆಲ್ಲಾ ಬೇರ್ಪಡಿಸಲಾಗದ ಜೀವನದ ಸ್ವಾತಂತ್ರ್ಯ ಮತ್ತು ಆಸ್ತಿಯ ಹಕ್ಕನ್ನು ಹೊಂದಿದ್ದಾರೆ. ಮತ್ತು ಮನುಕುಲದ ಸಾಮಾನ್ಯ ಗುರಿಯನ್ನು ಹಂಚಿಕೊಳ್ಳುತ್ತಾರೆ. ಈ ಪ್ರತಿಪಾದನೆಯ ಇನ್ನೊಂದು ಭಾಗವು ಮಾನವ ಜೀವಿಗಳಲ್ಲಿ ಮೂಲಭೂತ ವ್ಯತ್ಯಾಸವಿದೆ ಎಂಬರ್ಥವನ್ನು ಸೂಚಿಸುತ್ತದೆ ಈ ವ್ಯತ್ಯಾಸದ ಮೂಲವು ಅನುವಂಶಿಕ. ಎಂದರೆ ಜನ್ಮದಿಂದಲೆ ಬಂದಿರುವ ಶಾರೀರಿಕ ಮತ್ತು ಮಾನಸಿಕ ಲಕ್ಷಣಗಳಾಗಿದ್ದು, ಅವುಗಳ ಜೊತೆಗೆ ಪರಿಸರದ ಪರಿಸ್ಥಿತಿಗಳನ್ನು ಮತ್ತು ಅನುಭವಗಳ ಮೂಲಕ ಕಲಕ್ರಮೇಣ ಪಡೆದುಕೊಳ್ಳುವಂತಹವು ಸೇರಿದಂತೆ ಇವೆಲ್ಲ ಗುಣಗಳು ಸಮಾನತೆಯ ಸ್ವರ್ಗವನ್ನೋ ಅಥವಾ ವ್ಯತ್ಯಾಸಗಳ ನರಕವನ್ನೋ ಸೃಷ್ಟಿ ಮಾಡುತ್ತವೆ.

ಎಲ್ಲಾ ಮನುಷ್ಯರೂ ಆಂತರಿಕ ಮೌಲ್ಯವನ್ನೂ ಹೊಂದಿದ್ದು ಘನತೆಯನ್ನು ತನ್ನ ಹಕ್ಕೆಂದು ಒತ್ತಾಯಿಸುತ್ತಾರೆ. ಮಕ್ಕಳು ಮಾನಸಿಕ ಸಮಾನತೆಯ ಜೊತೆಗೆ ಹುಟ್ಟುತ್ತಾರೆ. ಒಬ್ಬರಿಂದ ಮತ್ತೊಬ್ಬರಿಗೆ ವ್ಯತ್ಯಾಸವಾಗುವ ಅಂತಃಸತ್ವದ ಅನುಭವಗಳ ಮೂಲಕ ಅವರು ಬೆಳೆಯುತ್ತಾ ಅಭಿವೃದ್ಧಿ ಹೊಂದುತ್ತಾರೆ. ರೂಸೋವಿನ ಪ್ರಕಾರ ವೈವಿಧ್ಯಮಯವಾದ ಸಂದರ್ಭಗಳಲ್ಲಿ ಮತ್ತು ಅವಕಾಶಗಳಲ್ಲಿ ಸಂದರ್ಭಗಳಲ್ಲಿ ಹಲವು ಮಕ್ಕಳು ಅದೃಷ್ಟವಂತರಾಗಿದ್ದು ಉತ್ಕೃಷ್ಟ ಮಟ್ಟದ ಶೈಕ್ಷಣಿಕ ಅನುಕೂಲಗಳನ್ನು ಅನುಭವಿಸುತ್ತಾರೆ. ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯು 'ಎಲ್ಲಾ ಮನುಷ್ಯರು ಸಮಾನರಾಗಿ ಸೃಷ್ಟಿಯಾಗಿದ್ದಾರೆ' ಎಂದು ಪ್ರತಿಪಾದಿಸಿದೆ ಮತ್ತು ಫ್ರೆಂಚ್ ಶಾಂತಿಯು 'ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತ್ವ'ಗಳನ್ನುಪ್ರಶಿ 'ಂಸಿಸಿದೆ. ಮನೋವೈಜ್ಞಾನಿಕ ಮತ್ತು ಸಂಶೋಧನಾ ಅಧ್ಯಯನಗಳು ಸಮಾನತಾವಾದವನ್ನು ವಾಸ್ತವವಾಗಿ ಅಸಾಧ್ಯವೆಂದು ನಿರ್ದಿಷ್ಟ ವ್ಯಕ್ತಿ ವ್ಯತ್ಯಾಸಗಳು ಪ್ರಮಾಣೀಕರಿಸಿವೆ. ವ್ಯಕ್ತಿಗತ ವ್ಯತ್ಯಾಸಗಳು ಕೇವಲ ದೈಹಿಕ ಲಕ್ಷಣಗಳೇ ಅಲ್ಲದೆ ಮಾನಸಿಕ ಕೊಡುಗೆಗಳಲ್ಲದೆ ಮಾನಸಿಕ ಲಕ್ಷಣಗಳಲ್ಲಿಯೂ ಇವೆ".

ಪ್ರಜಾಪ್ರಭುತ್ವದ ಪೋಷಕರು ವ್ಯಕ್ತಿಗತ ವ್ಯತ್ಯಾಸಗಳಲ್ಲಿ ನಂಬಿಕೆ ಹೊಂದಿದ್ದರೂ ಅವಕಾಶಗಳ ಕೊರತೆಯಿಂದ ಅವುಗಳು ಉಳಿಯಲು ಅಥವಾ ಹೆಚ್ಚಲು ಜನರು ಅವಕಾಶ ನೀಡುವುದಿಲ್ಲ. ಯೋಗ್ಯವಾದ

Digitised by Bharatavani, CIIL

ಶಿಕ್ಷಣವನ್ನು ಪಡೆಯಲು ಅವರು ಬಾಹ್ಯವಾಗಿ ಅಥವಾ ವಸ್ತುನಿಷ್ಠ ಸಂದರ್ಭಗಳಲ್ಲಿ ಸಮಾನೀಕರಿಸಲು ಪ್ರಯತ್ನಿಸುತ್ತಾರೆ. ಇಲ್ಲವಾದರೆ ವ್ಯಕ್ತಿಗಳಲ್ಲಿ ಅಸಮಾನತೆ ಮತ್ತು ತಾರತಮ್ಯ ಹೆಚ್ಚಾಗುತ್ತಾ ಮುಂದುವರಿಯುತ್ತದೆ ಮತ್ತು ಸಾಂಸ್ಕೃತಿಕ ಅಂತರ ಅಥವಾ ಹಿನ್ನಡೆಯನ್ನು ಬೆಸೆಯುವ ಬದಲು ಅದು ಆಳವಾಗುತ್ತಾ ಹೋಗುತ್ತದೆ. ಆದ್ದರಿಂದ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಕೊಠಾರಿ ಆಯೋಗವು ಹೇಳುವಂತೆ "ಶಿಕ್ಷಣವು ಪ್ರಮುಖ ಸಾಮಾಜಿಕ ಉದ್ದೇಶಗಳಲ್ಲಿ ಒಂದಾಗಿದ್ದು ಅದು ಸಮಾನತೆಯ ಅವಕಾಶಗಳನ್ನು ಒದಗಿಸಿ ಹಿಂದುಳಿದ ಅಥವಾ ಅನುಕೂಲ ವಂಚಿತರ ವರ್ಗಗಳ ಮತ್ತು ವ್ಯಕ್ತಿಗಳ ಪರಿಸ್ಥಿತಿಗಳನ್ನು ಉತ್ತಮಪಡಿಸಲು ಶಿಕ್ಷಣವನ್ನು ಒಂದು ಮೀಟುಗೋಲಾಗಿ ಉಪಯೋಗಿಸಬೇಕು" ಎಂದಿರುವುದು ಸರಿಯಾಗಿಯೇ ಇದೆ.

ಕೊಠಾರಿ ಆಯೋಗವು ಎರಡು ವಿಧವಾದ ಭಾರತೀಯ ಸಂದರ್ಭದಲ್ಲಿ ವಿಶಿಷ್ಟವಾಗಿರುವ ಶೈಕ್ಷಣಿಕ ಅಸಮಾನತೆಗಳನ್ನು ಪ್ರಸ್ತಾಪಸಿದೆ. "ಮೊದಲನೆಯದು ಶಿಕ್ಷಣದ ಎಲ್ಲಾ ಕ್ಷೇತ್ರಗಳಲ್ಲೂ ಮತ್ತು ಎಲ್ಲಾ ಹಂತಗಳಲ್ಲೂ ಬಾಲಕರ ಮತ್ತು ಬಾಲಕಿಯರ ಶಿಕ್ಷಣದ ನಡುವೆ ಅಪಾರ ತಾರತಮ್ಯವಿದೆ. ಎರಡನೆಯದು ಪ್ರಗತಿ ಹೊಂದಿದ ವರ್ಗಗಳು ಮತ್ತು ಹಿಂದುಳಿದವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಡುವೆ ಶೈಕಣಿಕ್ಷ ಅಭಿವೃದ್ಧಿಯಲ್ಲಿ ಅಪಾರ ತಾರತಮ್ಯವಿದೆ. ಸಾಮಾಜಿಕ ನ್ಯಾಯದ ಹಾಗೂ ಪ್ರಜಾಪ್ರಭುತ್ವದ ಮುನ್ನಡೆಗೆ ಉತ್ತೇಜನ ನೀಡಲು ಈ ಗುಂಪುಗಳ ನಡುವೆ ಶೈಕ್ಷಣಿಕ ಅವಕಾಶಗಳನ್ನು ಸಮಾನೀಕರಿಸಲು ವಿಶೇಷ ಪ್ರಯತ್ನಗಳ ಅಗತ್ಯವಿದೆ" ಎಂದು ಸರಿಯಾಗಿಯೇ ಗುರುತಿಸಿದ್ದಾರೆ.

**4. ಹಂಚಿಕೊಳ್ಳುವಿಕೆ ಮತ್ತು ಜವಾಬ್ದಾರಿ:**

ಸ್ವಾತಂತ್ರ್ಯದ ಸಹಜ ಫಲವಾಗಿ ಪ್ರತಿಯೊಬ್ಬರೂ ಪ್ರಜಾಪ್ರಭುತ್ವದಲ್ಲಿ ಕೆಲವು ಜವಾಬ್ದಾರಿಗಳನ್ನು ವಹಿಸಿಕಕೊಂಡು ಸಮುದಾಯ ಜೀವನವನ್ನು ಹಂಚಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಮತ್ತು ಜವಾಬ್ದಾರಿಗಳೆರಡೂ ಪೂರಕ ಪದಗಳು ಮತ್ತು ಒಂದು ಇಲ್ಲದಿದ್ದಲ್ಲಿ ಇನ್ನೊಂದು ಅರ್ಥಹೀನ. ನಮ್ಮ ಸಾಮಾಜಿಕ ಜೀವನದಿಂದ ಒಂದು ಉದಾಹರಣೆಯನ್ನು ಕೊಟ್ಟು ಡಾ. ಸಿಂಗ್ (1966, ಪು. 88) ಬೆಳೆಯುತ್ತಿರುವ ಭ್ರೂಣವು ಅದರ ಪೋಷಣೆಗಾಗಿ ತನ್ನ ತಾಯಿಯನ್ನು ಅವಲಂಬಿಸುತ್ತದೆ. ಮತ್ತು ಕ್ರಮೇಣವಾಗಿ ಅದರಿಂದ ಅಗಲಿದರೂ ಉಳಿಯುತ್ತದೆ" ಎಂದು ಹೇಳಿದ್ದಾರೆ ಪ್ರಸವೋತ್ತರ ಜೀವನದಲ್ಲಿ ಒಂದು ಮಗುವು ತನ್ನ ತಾಯಿಯನ್ನು ಅವಲಂಬಿಸುತ್ತದೆ. ಆದರೆ ಒಂದು ಶಿಶುವಿನ ಜನನವು ತಾಯಿಯ ಮೇಲೆ ಪೂರ್ಣವಾಗಿ ಅವಲಂಬಿಸಿದ್ದರೂ ಹೊರಬಂದಾಗ ಸ್ವಲ್ಪಮಟ್ಟಿನ ಸ್ವಾತಂತ್ರ್ಯವನ್ನು ಹೊಂದುತ್ತದೆ. ಇದನ್ನೇ ಮಗುವಿನ ದೃಷ್ಟಿಯಿಂದ ಅದು ತನ್ನದೇ ಉಸಿರಾಟದಿಂದ ಬದುಕುವ ಜವಾಬ್ದಾರಿಯನ್ನು ಪಡೆಯುತ್ತದೆ. ಅದೇ ರೀತಿ ಬೆಳೆಯುತ್ತಿರುವ ಮಗು ಇನ್ನೂ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆಯುತ್ತದೆ. ಅದು ಅಧಿಕ ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ. ಘಟನೆಯ ಬೆಳವಣಿಗೆಯ ಇನ್ನೂ ತಥ್ಯಾಂಶಗಳಿವೆ.

ಅಧಿಕಾರಶಾಹಿ ಆಡಳಿತದಲ್ಲಿ ಜನರು ಅತಿ ಕಡಿಮೆ ಅಥವಾ ಸ್ವಾತಂತ್ರ್ಯವೇ ಇಲ್ಲದೆ ಅದಕ್ಕೆ ಪೂರಕವಾಗಿ ಕಡಿಮೆ ಜವಾಬ್ದಾರಿಗಳನ್ನು ಹೊಂದಿರುತ್ತಾರೆ ಎಂಬುದು ಕಂಡುಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಜನರಿಗೆ ಹೆಚ್ಚು ಸ್ವಾತಂತ್ರ್ಯವಿರುವ ಹಾಗೆಯೇ ಜವಾಬ್ದಾರಿಯೂ ಹೆಚ್ಚು. ಹೀಗೆ ಸ್ವಾತಂತ್ರ್ಯವು ಜವಾಬ್ದಾರಿಯೊಡನೆ ಸಮ್ಮಿಳಿತವಾಗಿದೆ ಮತ್ತು ಒಂದಕ್ಕಿಂತ ಇನ್ನೊಂದು ಪ್ರಮಾಣದಲ್ಲಿ ಹೆಚ್ಚೂ ಕಡಿಮೆಯೂ ಇರುತ್ತದೆ. ನೈತಿಕ ಜವಾಬ್ದಾರಿಯ ಆದರ್ಶದಲ್ಲಿ ಬೇರುಬಿಟ್ಟಿದ್ದಾಗ ಮಾತ್ರ ಸ್ವಾತಂತ್ರ್ಯಕ್ಕೆ ಹೆಚ್ಚು ಅರ್ಥವೂ ಮಹತ್ವವೂ ಇರುತ್ತದೆ. ನೈತಿಕತೆಯ ಜವಾಬ್ದಾರಿಯಿಂದ ಹೊರತಾದ ಸ್ವಾತಂತ್ರ್ಯವು ಅರಾಜಕತ್ವದ ದುರಂತದಿಂದ ಅವನತಿ ಹೊಂದುತ್ತದೆ. ಮತ್ತೊಂದು ವಿಧದಲ್ಲಿ ಸ್ವಾತಂತ್ರ್ಯವಿಲ್ಲದ ಅದಕ್ಕೆ ಅನುಗುಣವಾದ ಜವಾಬ್ದಾರಿಯು ಅತಿಯಾದ ಅಸಹಾಯಕತೆ ಮತ್ತು ಪರಿಣಾಮಕರವಲ್ಲದ ಸ್ಥಿತಿಗೆ ದೂಡುತ್ತದೆ.

ಜವಾಬ್ದಾರಿಯು ಯಾವಾಗಲೂ ಸಮೂಹ ಚಟುವಟಿಕೆಗಳಲ್ಲಿ ಅಥವಾ ಸಮೂಹ ಜೀವನದಲ್ಲಿ ಭಾಗಿಯಾಗುವುದು ಅಥವಾ ಹಂಚಿಕೊಳ್ಳುವುದು ಎಂಬುದಕ್ಕೆ ಬಿಂಬಿಸುತ್ತದೆ. ಪ್ರಜಾಪ್ರಭುತ್ವವೊಂದರಲ್ಲಿ ವ್ಯಕ್ತಿಗಳು ಜವಾಬ್ದಾರಿಯನ್ನು ಹಂಚಿಕೊಳ್ಳದಿದ್ದರೆ ಮತ್ತು ತಮ್ಮನ್ನು ತೊಡಗಿಸಿಕೊಳ್ಳದಿದ್ದರೆ ಅವರು ತಮ್ಮ ಸ್ವಾತಂತ್ರ್ಯದ ಸಂತೋಷ ಪಡೆಯಲು ವಿಫಲರಾಗುವರಲ್ಲದೆ ಅವರು ತಮ್ಮ ಕರ್ತವ್ಯಗಳನ್ನೂ ನಿಜವಾದ ಪ್ರಜೆಗಳಾಗಿ ನಿರ್ವಹಿಸಲು ವಿಫಲರಾಗುತ್ತಾರೆ. ಡ್ಯೂಯೀ (1996) ಅವರ ಪ್ರಕಾರ ಪ್ರಜಾಪ್ರಭುತ್ವ ಸಮಾಜಕ್ಕೆ ಎರಡು ಆಯಾಮಗಳಿರುತ್ತವೆ. ಮೊದಲಿಗೆ ಒಬ್ಬರು ಇತರರು ಅಥವಾ ಇತರ ಗುಂಪುಗಳೊಡನೆ ಹಂಚಿಕೊಳ್ಳುವುದು ಮತ್ತು ಮತ್ತೊಂದು ಅಧಿಕ ಸಂಖ್ಯೆಯ ಮತ್ತು ತಮ್ಮ ಸದಸ್ಯರಲ್ಲೆ ವೈವಿಧ್ಯ ರೀತಿಯವರೊಡನೆ ಹಂಚಿಕೊಳ್ಳುವುದು. ಪ್ರಜಾಪ್ರಭುತ್ವವು ಪರಸ್ಪರ ವಿಮರ್ಶೆಯ ಬೆಳಕಿನಲ್ಲಿ ಅದರ ಸದಸ್ಯರು ಏನೇ ಮಾಡಿದರೂ ಮತ್ತು ತಮ್ಮ ಹಂಚಿಕೊಂಡ ಅವರ ಅನುಭವಗಳ ಪುನರ್ ರಚನೆಯಂತೆ ರೂಪಿತವಾಗಿರುತ್ತದೆ. ಏಕೆಂದರೆ ಅನುಭವದ ಮೇಲಿನ ಈ ಒತ್ತಿನಂದಾಗಿ ಸ್ವಾಭಾವಿಕವಾಗಿಯೇ ಸೂಕ್ತವಾದ ಅದು ಹಲವಾರು ಪ್ರಯೋಗಾತ್ಮಕತೆಯೇ ಶೈಕ್ಷಣಿಕ ತತ್ವಶಾಸ್ತ್ರವೆಂದು ಹಲವರು ಪ್ರತಿಪಾದಿಸುತ್ತಾರೆ. ಪ್ರಯೋಗಾತ್ಮಕ ವಿಧಾನ ಪ್ರಜಾಸತ್ತಾತ್ಮಕ ಹಂಚಿಕೊಳ್ಳುವಿಕೆ ಮತ್ತು ಭಾಗವಹಿಸುವಿಕೆಯ ಇಡೀ ಪರಿಕಲ್ಪನೆಗೆ ಬಹಳ ಮೂಲಭೂತವಾದುದೆಂದು ಅವರು ಪರಿಗಣಿಸುತ್ತಾರೆ.

ಪ್ರಜಾಪ್ರಭುತ್ವದ ನಾಲ್ಕು ಮೂಲಭೂತ ಅಂಶಗಳೆಂದರೆ ಮನುಷ್ಯನ ಘನತೆಯಲ್ಲಿ ಗೌರವ, ಸಮಾನತೆ, ಸ್ವಾತಂತ್ರ್ಯ ಮತ್ತು ಜವಾಬ್ದಾರಿಯನ್ನು ಹಂಚಿಕೊಳ್ಳುವುದು ಎಂದು ತೀರ್ಮಾನಿಸಬಹುದು. ಪ್ರಜಾಪ್ರಭುತ್ವ ಶಿಕ್ಷಣದಲ್ಲಿ ಪ್ರತಿಯೊಬ್ಬ ಸ್ನೇಹಿತನು ಈ ಅಂಶಗಳಲ್ಲಿ ಪ್ರತಿಯೊಂದನ್ನೂ ಸಂರಕ್ಷಿಸಲು ಇಚ್ಛಿಸುತ್ತಾನೆ. ಈ ನಾಲ್ಕರಲ್ಲಿ ಕೆಲವು ಒಂದರೊಡನೊಂದು ಹೊಂದಿಕೊಳ್ಳುವುದಿಲ್ಲ ಎಂಬುದು ಮಾತ್ರ ಇವುಗಳ ಸಮಸ್ಯೆಯಾಗಿದೆ.

Digitised by Bharatavani, CIIL

ಉದಾಹರಣೆಗೆ; ಸ್ವಾತಂತ್ರ್ಯ ಮತ್ತು ಸಮಾನತೆಗಳು ಒಂದಕ್ಕೊಂದು ಪೂರ್ಣವಾಗಿ ಹೊಂದಿಕೊಳುವುದಿಲ್ಲ.

**ಶಿಕ್ಷಣದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳ ಬೆಳವಣಿಗೆ:**

ರಾಷ್ಟ್ರಪಿತ ಮಹಾತ್ಮಗಾಂಧಿಯವರ ಸಮರ್ಥ ನಾಯಕತ್ವದಲ್ಲಿ ಭಾರತವು ಸತ್ಯ ಮತ್ತು ಅಹಿಂಸೆ ಎಂಬೆರಡರ ಆಧಾರದಿಂದ ದೇಶವನ್ನು ವಿದೇಶಿ ಸಂಕೋಲೆಯಿಂದ ಬಂಧಿತವಾಗಿರುವುದರ ವಿರುದ್ಧ ಹೋರಾಟ ನಡೆಸಿ ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಂಡಿದೆ. ಸ್ವಾತಂತ್ರ್ಯಪೂರ್ವದಲ್ಲಿ ಬಹು ಹಿಂದೆಯೇ ರಾಷ್ಟ್ರಗೀತೆಯಲ್ಲಿ ರವೀಂದ್ರನಾಥ ಠಾಕೂರರು ಭಾರತದ ಜನರನ್ನು ವಿಧಿಯ ವಾಸ್ತುಶಿಲ್ಪಿಗಳು ಅಥವಾ ಭಾಗ್ಯವಿಧಾತ ಎಂದು ಘೋಷಿಸಿದ್ದರು. ಸ್ವಾತಂತ್ರ್ಯದ ಮುನ್ನಾದಿನ ಜವಾಹರಲಾಲ್ ನೆಹರೂ ಅವರು ತಮ್ಮ ಐತಿಹಾಸಿಕ ಭಾಷಣದಲ್ಲಿ "ಬಹಳ ವರ್ಷಗಳ ಹಿಂದೆಯೆ ನಾವು ವಿಧಿಯೊಡನೆ ಪೂರ್ವನಿಶ್ಚಿತ ಒಪ್ಪಂದ ಮಾಡಿಕೊಂಡಿದ್ದೆವು. ಈಗ ನಮಗೆ ನಮ್ಮ ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳುವ ಕಾಲ ಬಂದಿದೆ ಅದು ಇಡಿಯಾಗಿ ಅಲ್ಲ ಅಥವಾ ಪೂರ್ಣಪ್ರಮಾಣದಲ್ಲಿ. ಆದರೆ ಬಹು ಮೂಲಭೂತವಾಗಿ ಮಧ್ಯರಾತ್ರಿ ಸಮಯ ಹೊಡೆದ ಕೂಡಲೇ ವಿಶ್ವವೇ ನಿದ್ರಿಸುತ್ತಿರುವಾಗ ಭಾರತವು ಜೀವನಕ್ಕಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ಜಾಗೃತವಾಗುತ್ತದೆ". ಈ ಹೇಳಿಕೆಯು ನಿರರ್ಗಳವಾಗಿ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಬದ್ಧತೆಯ ಬಗ್ಗೆ ಹೇಳುತ್ತದೆ.

ಸ್ವತಂತ್ರ ದೇಶಕ್ಕೆ ಒಂದು ಹೊಸ ಸಂವಿಧಾನವನ್ನು ರೂಪಿಸುವುದು ಎಲ್ಲಾ ರಾಷ್ಟ್ರೀಯ ನಾಯಕರು ಮತ್ತು ಎಲ್ಲಾ ರಾಜಕಾರಣಿಗಳಿಗೂ ಬಹುಮುಖ್ಯವಾದ ಪೂರ್ವಭಾವಿ ಕಾರ್ಯವಾಗಿತ್ತು. ಒಂದು ಸರ್ಕಾರಿ ಯಂತ್ರದ ಮೂಲಕ ರಾಷ್ಟ್ರದ ಆದರ್ಶಗಳನ್ನು ಅನುಸರಿಸಲು ಅದು ಶ್ರಮಿಸುತ್ತಿದೆ. ಅದೊಂದು ಸಂಕೀರ್ಣವಾದ ಕಾನೂನಿನ ತೊಡಕು ಮಾತ್ರ ಆಗದೆ ಅದರ ಜೊತೆಗೆ ಜನರ ಆಕಾಂಕ್ಷೆಯ ಈಡೇರಿಕೆಗೆ ಒಂದು ಸೂಕ್ಷ್ಮವಾದ ಉಪಕರಣವೂ ಆಗಿದೆ.

ಸಂವಿಧಾನದ ಭಾಗ III ಭಾರತದ ಪ್ರಜೆಗಳಿಗೆ ಸಂಪೂರ್ಣವಾಗಿ ಭರವಸೆ ನೀಡುವ ಮೂಲಭೂತ ಹಕ್ಕುಗಳ ಒಂದು ಅಧ್ಯಾಯವನ್ನು ಒಳಗೊಂಡಿದೆ. 'ಪ್ರತಿಯೊಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಹಕ್ಕುಗಳನ್ನು ಮೂಲಭೂತವಾದವುಗಳೆಂದೂ ಅವು ವ್ಯಕ್ತಿಯ ಕಲ್ಯಾಣದ ಗುರಿಯನ್ನು ಹೊಂದಿವೆ ಎಂದು ತಿಳಿಯಲಾಗುತ್ತದೆ. ಭಾರತ ಸಂವಿಧಾನದ ಭಾಗ IV ರಾಷ್ಟ್ರನೀತಿಯ ನಿರ್ದೇಶಿತ ತತ್ವಗಳನ್ನು ಕುರಿತದ್ದಾಗಿವೆ. ಈ ತತ್ವಗಳನ್ನು ರಾಷ್ಟ್ರವು ನಿರ್ದೇಶಿತವಾಗಬೇಕಾದ ಆಡಳಿತದೆಡೆಗಿನ ಆದರ್ಶವನ್ನು ರೂಪಿಸಿದೆ. ಡಾ. ಅಂಬೇಡ್ಕರ್ ಈ ಉದ್ದೇಶಗಳ ಹಿಂದಿನ ತತ್ವಗಳು ಎರಡು ಮುಖಗಳನ್ನು ಹೊಂದಿದೆ ಎಂದು ಸರಿಯಾಗಿಯೇ ಗುರುತಿಸಿದ್ದಾರೆ.

(i) ರಾಜಕೀಯ ಪ್ರಜಾಪ್ರಭುತ್ವದ ರೂಪವನ್ನು ಪ್ರತಿಪಾದಿಸುತ್ತವೆ.

(ii) ನಮ್ಮ ಆದರ್ಶವು ಆರ್ಥಿಕ ಪ್ರಜಾಪ್ರಭುತ್ವ ಮತ್ತು ಪ್ರತಿಯೊಂದು ಸರ್ಕಾರವು ಆರ್ಥಿಕ ಪ್ರಜಾಪ್ರಭುತ್ವವನ್ನು ತರಲು ಹೋರಾಡಬೇಕಾಗಿದೆ ಎಂದೂ ವಿಧಿಸಲಾಗಿದೆ.

ಮೂಲಭೂತ ಹಕ್ಕುಗಳ ಅಧ್ಯಾಯವು ಕ್ರಮೇಣ ಪ್ರಜೆಗಳಿಗಾಗಿ 1976ರ ಪರಿಷ್ಕೃತದ ಮೂಲಕ ಮೂಲಭೂತ ಕರ್ತವ್ಯಗಳ ಒಂದು ಮೂಲೆಯನ್ನೇ ಅಳವಡಿಸಿಕೊಂಡಿದೆ.

ರಾಷ್ಟ್ರದ ಅಭಿವೃದ್ಧಿಗಾಗಿ ಪ್ರಜಾಪ್ರಭುತ್ವ ಶಿಕ್ಷಣದ ಹೊಸ ನಿಲುವನ್ನು ಅಂಗೀಕರಿಸಲಾಯಿತು. ಆಯೋಗಗಳು ಮತ್ತು ಸಮಿತಿಗಳು ಶೈಕ್ಷಣಿಕ ವ್ಯವಸ್ಥೆಯನ್ನು ಉತ್ತಮಪಡಿಸಲು ರೂಪಿತವಾದುವು. ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ ಪ್ರೌಢ ಶಿಕ್ಷಣ ಆಯೋಗ (1953) ಮತ್ತು ರಾಷ್ಟ್ರೀಯ ಶೈಕ್ಷಣಿಕ ಆಯೋಗ 1964–66 ಮುಂತಾದವು ಅವುಗಳಲ್ಲಿ ಬಹು ಮುಖ್ಯವಾದವು. 1952ರಿಂದಲೂ ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಶಿಕ್ಷಣ ವ್ಯವಸ್ಥೆಯು ಪ್ರಜಾಪ್ರಭುತ್ವದ ಅಗತ್ಯಗಳಿಗೆ ವೇಗ ಹೆಚ್ಚಿಸುತ್ತದೆ ಮತ್ತು ಕೊಠಾರಿ ಆಯೋಗವು ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಕ್ರಾಂತಿಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವುದು ಮತ್ತು ಶಿಕ್ಷಣದ ಸೌಲಭ್ಯಗಳನ್ನು ವಿಸ್ತರಿಸುವುದು ಮತ್ತು ಶೈಕ್ಷಣಿಕ ಅವಕಾಶಗಳಲ್ಲಿ ಸಮಾನತೆಯನ್ನು ತರಲು ದೂರದರ್ಶಿತ್ವ ಹೊಂದಿತ್ತು. ಹಲವು ವರ್ಷಗಳಿಂದಲೂ ಶಿಕ್ಷಣದಲ್ಲಿ ಅವಕಾಶ ವಂಚಿತರಿಗೆ ದುರ್ಬಲ ವರ್ಗದವರಿಗೆ ವಿಶೇಷ ಗಮನ ನೀಡಲಾಗಿದೆ.

ಭಾರತವು ಒಂದು ಹೊಸ ಪುನರುಜ್ಜೀವನಕ್ಕಾಗಿ ಹೊರಹೊಮ್ಮಿದೆ ಮತ್ತು ರಾಷ್ಟ್ರದ ಮೇಲ್ಮೈಗಾಗಿ ಗೌರವ ಗಳಿಸಿದೆ. ಭಾರತವು ಬಾಹ್ಯವಾಗಿ ಸ್ವತಂತ್ರವಾಗಿದ್ದಾಗ್ಯೂ ಆಂತರಿಕವಾಗಿ ಅದು ಬಂಧನದಲ್ಲಿದೆ. ಬದಲಾವಣೆಗಳು ಅನೇಕ ರೀತಿಯವು. ಹೆಸರಿಸುವುದಾದರೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಮನೋವೈಜ್ಞಾನಿಕ ಬದಲಾವಣೆಗಳು ರಾಷ್ಟ್ರದ ಶಾಂತಿ ಐಕ್ಯತೆ ಮತ್ತು ಭದ್ರತೆಗಳಿಗೆ ಭೀತಿಯನ್ನುಂಟು ಮಾಡುತ್ತಿರುವ ರಾಷ್ಟ್ರದ ಹೊಸ ರೋಗಗಳಾದ ಪ್ರಾಂತೀಯತೆ, ಭಯೋತ್ಪಾದನೆ, ಜಾತೀಯತೆ ಮತ್ತು ಪ್ರತ್ಯೇಕತೆ ತಮ್ಮ ತಲೆಯನ್ನು ಎತ್ತಿವೆ. ಶಿಕ್ಷಕರು, ಮೇಲ್ವಿಚಾರಕರು ಮತ್ತು ಆಡಳಿತಗಾರರು ರಾಷ್ಟ್ರೀಯ ಗುರಿಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ ಮತ್ತು ವಿದ್ಯಾರ್ಥಿಗಳಿಗೆ ಅಪೇಕ್ಷಿತ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಜಾತ್ಯತೀತತೆಗಳ ಮೂಲಕ ಕಲಿಸಬೇಕಾಗಿದೆ. ಶಿಕ್ಷಣದ ರಾಷ್ಟ್ರೀಯ ನೀತಿಗಳು ಎಲ್ಲಾ ಹಂತಗಳಲ್ಲೂ ಪ್ರಜಾಪ್ರಭುತ್ವ ಮೌಲ್ಯಗಳ ಶಿಕ್ಷಣದ ಮೂಲಕ ಸಾಧನೆಯನ್ನು ನಿರೂಪಿಸಿ, ಅದನ್ನು ಸಂಯುಕ್ತ ರಾಷ್ಟ್ರ ಸಂಘ ಒಪ್ಪಿಕೊಂಡಿರುವ ಮೌಲ್ಯಗಳನ್ನು ಜಾಗತಿಕ ಮಾನವ ಹಕ್ಕುಗಳ ಘೋಷಣೆಯು ಪುನರ್ಬಲನಗೊಳಿಸಿವೆ. ಸ್ವಾತಂತ್ರ್ಯದ ಪ್ರಜಾಪ್ರಭುತ್ವದ ಮೌಲ್ಯಗಳಾದ ಜಾಗತಿಕ ಸಮಾನತೆ ಮತ್ತು ಭ್ರಾತೃತ್ವಗಳನ್ನು ಪ್ರಶಂಸಿಸುತ್ತದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಶಿಕ್ಷಣವು ಅವಶ್ಯವೆಂದು ಅಭಿಪ್ರಾಯವಿದೆ. ಅದು ವಿದ್ಯಾರ್ಥಿಗಳನ್ನು ಭವಿಷ್ಯದ ಪೌರತ್ವಕ್ಕೆ ಸಿದ್ಧಪಡಿಸುತ್ತದೆ. ಶಿಕ್ಷಣದ ಸಹಾಯದಿಂದ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು ಮತ್ತು ಅವುಗಳನ್ನು ಸಮಾಜದಲ್ಲಿ ಮುಂದುವರಿಸಬೇಕು. ಪ್ರಜಾಪ್ರಭುತ್ವದ ಆಚರಣೆಯು ಔಪಚಾರಿಕ ಪ್ರಜಾಪ್ರಭುತ್ವಕ್ಕಿಂತ ಅಧಿಕ ಪ್ರಮುಖವೆನಿಸಿದೆ. ಪ್ರಜಾಪ್ರಭುತ್ವವು

Digitised by Bharatavani, CIIL

ಜ್ಞಾನವನ್ನು ಮಾತ್ರವಲ್ಲದೆ ಅರಿವು, ಕೌಶಲಗಳು, ಧೋರಣೆಗಳು ಮತ್ತು ಆಸಕ್ತಿಗಳನ್ನೂ ಒಳಗೊಳ್ಳುತ್ತದೆ.

ಪ್ರಜೆಗಳಾಗುವುದು, ಮಾಡುವುದು ಹುಟ್ಟಿನಿಂದಲ್ಲ. ನಾಯಕತ್ವದ ಗುಣಗಳನ್ನು ಪೌರತ್ವದ ತರಬೇತಿಯ ಮೂಲಕ ಬೆಳೆಸುವುದು. ವ್ಯಕ್ತಿಗಳು ಮತ್ತು ಸಮಾಜ ಪರಸ್ಪರ ಒಬ್ಬರಿಗೊಬ್ಬರು ಹಿತೈಷಿಗಳು. ಪೌರತ್ವವು ಕೇವಲ ಶಾಲೆಗಳಲ್ಲಿ ಮಾತ್ರ ಆಚರಿಸುವುದಲ್ಲ. ಅದಕ್ಕೆ ಸಮುದಾಯಗಳಲ್ಲೂ ಮತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಆಚರಿಸಬೇಕಾದುದು. ಪ್ರಜಾಪ್ರಭುತ್ವದ ತಳಹದಿಯನ್ನು ಕುಟುಂಬದಲ್ಲಿಯೇ ಹಾಕಲಾಗಿದೆ. ಮಕ್ಕಳಿಗೆ ನಾವು ಪ್ರಜಾಪ್ರಭುತ್ವದ ಅನುಭವಗಳನ್ನು ಒದಗಿಸಬೇಕು. ಮತ್ತು ಅವುಗಳನ್ನು ಅವರ ಜೀವನದ ಎಲ್ಲಾ ಆಯಾಮಗಳಲ್ಲು ವಿಸ್ತರಿಸಬೇಕು. ಅವುಗಳಲ್ಲಿ ವ್ಯಕ್ತಿಯ ಅಗತ್ಯಗಳ ಮತ್ತು ಸಮಾಜದ ಅಗತ್ಯತೆಗಳ ನಡುವೆ ಹಿತಕರವಾದ ಸಮತೋಲನವಿರಬೇಕು.

ಪೌರತ್ವ ಇತರ ವಿಷಯಗಳಂತೆ ಶಾಲೆಯಲ್ಲಿ ಕಲಿಸಲಾಗುವುದಿಲ್ಲ. ಅದನ್ನು ಒಂದು ಜೀವಂತ ತತ್ವಶಾಸ್ತ್ರದಂತೆ ಎಲ್ಲಾ ವಿಷಯಗಳಿಗೂ ಮತ್ತು ಸಂಗತಿಗಳನ್ನೂ ಸಂವಹನಗೊಳಿಸಿ ಪಠ್ಯದ ಎಲ್ಲಾ ಗಡಿಗಳನ್ನು ದೂರಸರಿಸಿ ಆಚರಣೆಗೆ ತರಬೇಕು. ಪಠ್ಯಕ್ರಮ ಹಾಗೂ ಪಠ್ಯೇತರ ಕಾರ್ಯಕ್ರಮಗಳು ಪೌರತ್ವ ತರಬೇತಿಗೆ ಬಹಳಷ್ಟು ವ್ಯಾಪ್ತಿಯನ್ನು ಒದಗಿಸಿವೆ. ಪ್ರತಿಯೊಂದು ಶಾಲೆಯನ್ನು ಒಂದು ಪುಟ್ಟ ಸಮಾಜ ಎಂದು ಪರಿಗಣಿಸಿ ಅದನ್ನು ಪ್ರಜಾಪ್ರಭುತ್ವದ ತರಬೇತಿಯ ನೆಲೆ ಎಂದು ತಿಳಿಯಲಾಗಿದೆ. ಪ್ರೌಢ ಶಿಕ್ಷಣ ಆಯೋಗವು (1953) ಹೇಳುವಂತೆ ಪ್ರಜಾಪ್ರಭುತ್ವದಲ್ಲಿನ ಪೌರತ್ವವು ಬಹಳ ರೋಚಕವಾದುದು. ಮತ್ತು ಸವಾಲಿನದು. ಇದಕ್ಕಾಗಿ ಪ್ರತಿಯೊಬ್ಬ ಪೌರನಿಗೂ ಎಚ್ಚರದಿಂದ ತರಬೇತಿ ನೀಡಬೇಕು.

ಪ್ರಜಾಪ್ರಭುತ್ವವು ಒಂದು ಸರ್ಕಾರದ ರೂಪದಲ್ಲಿ ಮಾತ್ರ ಇರದೆ ಅದೊಂದು ಜೀವನವಿಧಾನವಾಗಿದೆ. ಪ್ರಜಾಪ್ರಭುತ್ವವನ್ನು ಅದರ ರೂಪದಲ್ಲಲ್ಲದೆ ಅಂತಃಸಾಕ್ಷಿಯಾಗಿ ಆಚರಿಸಬೇಕು. ರಾಜಕೀಯ ಪ್ರಭುತ್ವವು ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವದೆಡೆಗೆ ಮುನ್ನಡೆಸಿದೆ, ಆದ್ದರಿಂದಲೇ ಶಿಕ್ಷಣದ ಪ್ರಜಾಪ್ರಭುತ್ವೀಕರಣವು ಅವಶ್ಯವಾಗಿದೆ. ರಚನಾತ್ಮಕ ಪ್ರಜಾಪ್ರಭುತ್ವವು ಸಮಗ್ರ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವನ್ನು ಸದೃಢಗೊಳಿಸಲು ಸ್ಥಾಪನೆಯಾಗಬೇಕಾಗಿದೆ ಪರಿಮಾಣಾತ್ಮಕವಾಗಿ ಶಿಕ್ಷಣವನ್ನೂ ವಿಸ್ತರಿಸುವುದು ಪೂರ್ತಿಯಾಗಿದೆ ಶಿಕ್ಷಣದ ಪ್ರಜಾಪ್ರಭುತ್ವೀಕರಣವಲ್ಲ. ಶಿಕ್ಷಣವನ್ನು ನಿಜವಾಗಿಯೂ ಪ್ರಜಾಪ್ರಭುತ್ವವಾಗಿಸಬೇಕಾದರೆ ಅದು ಗುಣಾತ್ಮಕವಾಗಿರಬೇಕು. ವಿದ್ಯಾರ್ಥಿ–ಸರ್ಕಾರ, ಶೈಕ್ಷಣಿಕ ಅವಕಾಶಗಳಲ್ಲಿ ಸಮಾನತೆ, ಮೌಲ್ಯದ ಸಾಂಸ್ಥಿಕ ಯೋಜನೆಗಳ ಆಡಳಿತದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಪ್ರಜಾಪ್ರಭುತ್ವ ಮೌಲ್ಯದ ಶಿಕ್ಷಣದ ಹಲವು ಸೂಚಕಗಳಾಗಿವೆ.

**ಪ್ರಜಾಪ್ರಭುತ್ವದಲ್ಲಿ ಶಿಕ್ಷಣ: ಸಂರಚನೆ ಮತ್ತು ಕಾರ್ಯಗಳು:**

ಭಾರತದ ಸಂವಿಧಾನದಲ್ಲಿ ಮೊದಲು ಶಿಕ್ಷಣವು ಒಂದು ರಾಜ್ಯದ ವಿಷಯವಾಗಿತ್ತು. ಕೇಂದ್ರ ಸರ್ಕಾರವನ್ನು ಸಾಕಷ್ಟು ನಾಯಕತ್ವ ಮತ್ತು ಶಿಕ್ಷಣದ ಪ್ರಜಾಪ್ರಭುತ್ವೀಕರಣಕ್ಕೆ ಸಮರ್ಥವಾಗಿಸಲು ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಬೇಕು ಎಂಬ ಅಭಿಪ್ರಾಯವಿತ್ತು. ಎಂದು ಹೇಳಿತು. ಶಿಕ್ಷಣ ಆಯೋಗವು (1964–66)ಈ ಹೇಳಿಕೆಯನ್ನು ಪ್ರತಿಪಾದಿಸುತ್ತಾ ಶಿಕ್ಷಣವು ಚೂರು ಚೂರಾಗಿಸದೆ ಇಡಿಯಾಗಿ ಅದನ್ನು ಪರಿಗಣಿಸಬೇಕು ಎಂದು ಹೇಳಿತು. ಬಹಳಷ್ಟು ಸುದೀರ್ಘ ಚರ್ಚೆಗಳು ಮತ್ತು ವಾಗ್ವಾದಗಳ ನಂತರ ಸಂವಿಧಾನವನ್ನು ಪರಿಷ್ಕರಿಸಿ ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಇಂತಹ ಸಮವರ್ತನೆ ಪ್ರಜಾಪ್ರಭುತ್ವದಲ್ಲಿ ಅರ್ಥಪೂರ್ಣವಾಗಿರುವ ಮತ್ತು ಸವಾಲಿನದಾಗಿರುವ ಪಾಲುದಾರಿಕೆಯನ್ನು ಸೂಚಿಸುತ್ತದೆ. ಶಿಕ್ಷಣದಲ್ಲಿ ರಾಷ್ಟ್ರೀಯ ನೀತಿಗಳು ಮತ್ತು ಕ್ರಿಯಾಯೋಜನೆಯ ಕಾರ್ಯಕ್ರಮಗಳನ್ನು ಉತ್ತೇಜನ ನೀಡಿ ಪ್ರಜಾಪ್ರಭುತ್ವವನ್ನು ದೇಶದ ಎಲ್ಲಾ ಹಂತಗಳಲ್ಲೂ ಬಲಪಡಿಸಬೇಕು ಎಂದು ನಿರೀಕ್ಷಿಸಲಾಗಿದೆ.

'ಅಮೇರಿಕಾದಲ್ಲಿ (ಯು.ಎಸ್.ಎ.) ಡೆಟ್ರಾಯಿಟ್ ಪೌರತ್ವ ಶಿಕ್ಷಣ' ಎಂಬ ಹೆಸರಿನ ಅಧ್ಯಯನವು ಉತ್ತಮ ಪ್ರಜೆಗಳಲ್ಲಿನ ಐದು ಗುಣಗಳನ್ನು ಆಧರಿಸಿದೆ. ಇವುಗಳು ಒಬ್ಬ ಉತ್ತಮ ಪೌರನಿಗೆ ಈ ಮುಂದಿನ ಲಕ್ಷಣಗಳಿರಬೇಕೆಂದು ದೃಢಪಡಿಸುತ್ತವೆ.

(a) ಮೂಲಭೂತ ಮಾನವ ಅಗತ್ಯಗಳ ಪೂರೈಕೆಗೆ ಇರುವ ಮಹತ್ವದ ಅರಿವು ಹೊಂದಿರಬೇಕು ಮತ್ತು ವ್ಯಕ್ತಿಗೆ ಜೀವನದ ಅತ್ಯಾವಶ್ಯಕಗಳ ಪೂರೈಕೆ ಬಗ್ಗೆ ಕಾಳಜಿ ಹೊಂದಿರಬೇಕು.

(b) ಪ್ರಜಾಪ್ರಭುತ್ವದ ಆದರ್ಶಗಳಿಗೆ ವಿಧೇಯನಾಗಿರಬೇಕು.

(c) ಒಂದು ಪ್ರಜಾಪ್ರಭುತ್ವ ಸಮಾಜಕ್ಕೆ ಹೊಂದಿಕೊಳ್ಳುವ ಮಾನವ ಸಂಬಂಧಗಳ ವಿಧಗಳನ್ನು ಆಚರಿಸಬೇಕು.

(d) ಸಾಮಾಜಿಕ ಸಮಸ್ಯೆಗಳ ಪರಿಹಾರದಲ್ಲಿ ಸಹಾಯ ಮಾಡುವ ಪ್ರಯತ್ನವನ್ನು ಗುರ್ತಿಸಬೇಕು.

(e) ಪ್ರಜಾಪ್ರಭುತ್ವ ಜೀವನದ ವಿಧಾನವನ್ನು ಸುಗಮಗೊಗೊಳಿಸಬೇಕಾದ ಜ್ಞಾನ, ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಹೊಂದಿರಬೇಕು.

ಪೌರತ್ವ ಶಿಕ್ಷಣ ತಜ್ಞರು ಸಂಗ್ರಹಿಸಿದ ಒಬ್ಬ ಉತ್ತಮ ಪ್ರಜಾಸತ್ತಾತ್ಮಕ ಪೌರನ ಲಕ್ಷಣಗಳ ಸಹಾಯದಿಂದ ಉತ್ತಮ ಪ್ರಜಾಸತ್ತಾತ್ಮಕ ಪೌರನ ಪರಿಭಾಷೆಯನ್ನು ಸಿದ್ಧಪಡಿಸಲು ಸಮಾಜದ ಅಧ್ಯಯನಗಳ ರಾಷ್ಟ್ರೀಯ ಮಂಡಳಿಯು ರಕ್ಷಣಾ ಇಲಾಖೆಯ ಆರ್ಮ್ಡ್ ಫೋರ್ಸ್‌ನ್ ಇನ್‌ಫರ್‌ಮೇಶನ್ ಅಂಡ್ ಎಜುಕೇಷನ್ ಡಿವಿಷನ್‌ನ ಸಹಕಾರದೊಡನೆ ಅಧ್ಯಯನವನ್ನು ಕೈಗೊಂಡಿತು. ಪೌರತ್ವ ಶಿಕ್ಷಣದ ತಜ್ಞರು ನಡೆಸಿದ ಮತ್ತೊಂದು ಅಧ್ಯಯನ ವರದಿಯನ್ನು ಸಲ್ಲಿಸಿದೆ. ಪ್ರತಿ ಪ್ರಮುಖವಾದ ಅಂಶಕ್ಕೂ ಅಸಂಖ್ಯ ಉಪಾಧೀನ ಲಕ್ಷಣಗಳೊಡನೆ ಒಬ್ಬ ಒಳ್ಳೆಯ ಪ್ರಜೆಯ 24 ಅರ್ಹತೆಗಳನ್ನು ಒಳಗೊಂಡ ಸಂಕೀರ್ಣ ವ್ಯಾಖ್ಯೆಯನ್ನು ಇದು ರೂಪಿಸಿತು. ಅವುಗಳಲ್ಲಿ ಕೆಳಗಿನವು ಉದಾಹರಣೆಗಳಾಗಿವೆ. ಓರ್ವ

Digitised by Bharatavani, CIIL

ಉತ್ತಮ ಪೌರನಾದವನು.

(a)ಎಲ್ಲಾ ಜನರಿಗೂ ಸಮಾನತೆಯ ಅವಕಾಶದಲ್ಲಿ ನಂಬಿಕೆ ಹೊಂದಿರುತ್ತಾನೆ.

(b)ಸಂವಿಧಾನದಿಂದ ಖಚಿತವಾದ ಮಾನವ ಹಕ್ಕುಗಳು ಮತ್ತು ಸವಲತ್ತುಗಳನ್ನು ಗೌರವಿಸುತ್ತಾನೆ. ಬೆಲೆಕೊಡುತ್ತಾನೆ ಮತ್ತು ಅವಲಂಬಿಸುತ್ತಾನೆ.

(c)ದೇಶ ಮತ್ತು ಅದರ ನಿಯೋಗಿಗಳನ್ನು ಗೌರವಿಸುತ್ತಾನೆ.

(d)ದೀರ್ಘಾವಧಿಯಲ್ಲಿ ಸ್ವನೇಮಕಗೊಂಡ ಗುಂಪು ನಮ್ಮನ್ನು ಆಳುವುದಕ್ಕಿಂತ ಚೆನ್ನಾಗಿ ಜನರೇ ತಮ್ಮನ್ನು ಚೆನ್ನಾಗಿ ಆಳಿಕೊಳ್ಳುವರೆಂದು ಅರ್ಥ ಮಾಡಿಕೊಳ್ಳುತ್ತಾನೆ.

(e)ತೆರಿಗೆಗಳು ಸಮುದಾಯ ಸೇವೆಗಳಿಗೆ ಮಾಡುವ ಪಾವತಿ ಎಂದು ಗುರ್ತಿಸಿ ಅವುಗಳನ್ನು ತಪ್ಪದೆ ಪಾವತಿಸುತ್ತಾನೆ.

ಅವುಗಳನ್ನು ಸುಲಭವಾಗಿ ಆದೇಶಿಸಬಹುದು, ನಿರ್ದೇಶಿಸಬಹುದು ಮತ್ತು ಕಡೆಗೆ ನಿರಂಕುಶವಾಗಿ ಆಳುವವರೂ ಮತ್ತು ನಾಯಕರೂ ಜಾರಿಗೊಳಿಸಬಹುದು. ಪ್ರಜಾಪ್ರಭುತ್ವದಲ್ಲಿ ಕಾರ್ಯ ಹೆಚ್ಚು ಅಧಿಕ ಸಂಕೀರ್ಣ ಮತ್ತು ಎರಡು ಕಾರಣಗಳಿಂದ ಕಷ್ಟದ್ದಾಗಿದೆ. ಮೊದಲಿಗೆ, ವ್ಯಕ್ತಿಯನ್ನು ಸಮಾಜಕ್ಕಿಂತ ಮೇಲೆಂದು ಎತ್ತಿ ಹಿಡಿಯುವುದು, ರಾಷ್ಟ್ರ ಮತ್ತು ಸಮಾಜ ವ್ಯಕ್ತಿಗಾಗಿ ಅಸ್ತಿತ್ವದಲ್ಲಿದೆ ಮತ್ತು ಇದಕ್ಕೆ ವಿರುದ್ಧವಲ್ಲ. ಎರಡನೆಯದಾಗಿ, ವಿವಿಧ ಸಾಮಾಜಿಕ ಕರ್ತವ್ಯಗಳಿಂದಾಗಿ ವ್ಯಕ್ತಿಯನ್ನು ಸಾಮಾಜಿಕ ಜೀವಿಯನ್ನಾಗಿ ಪರಿಗಣಿಸಿದ್ದಾಗ್ಯೆಯೂ, ಅದು ಆದರ್ಶ ಪ್ರಜಾಪ್ರಭುತ್ವ ಸಮಾಜದ ನೀಲಿನಕ್ಷೆಯನ್ನು ರೂಪಿಸಿವುದು ಬಹುತೇಕ ಅಸಾಧ್ಯವಾದ ಕಾರ್ಯ.

ಪ್ರಜಾಪ್ರಭುತ್ವದಲ್ಲಿ ಶಿಕ್ಷಣವು ವ್ಯಕ್ತಿಯ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯಗಳನ್ನೆಲ್ಲಾ ಪೂರ್ಣವಾಗಿ ಬೆಳೆಸುವುದಲ್ಲದೆ, ಮತ್ತು ಅವನನ್ನು ಎಲ್ಲಾ ವಿಧವಾದ ಪೌರತ್ವಗಳಿಗೆ ಕುಟುಂಬದ ಪೌರತ್ವ, ಶಾಲೆಯ ಪೌರತ್ವ, ದೇಶದ ಪೌರತ್ವ, ವಿಶ್ವದ ಪೌರತ್ವಗಳಿಗೆ ಸಿದ್ಧಪಡಿಸಬೇಕಾಗಿದೆ. ಆದ್ದರಿಂದ ಪೌರತ್ವಕ್ಕಾಗಿ ಶಿಕ್ಷಣವು ಜೀವನದುದ್ದದ ವಿಧಾನವಾಗಿ ಕುಟುಂಬದಲ್ಲಿ ಪ್ರಾರಂಭವಾಗಿ ಶಾಲೆಗಳಲ್ಲಿ ಶಕ್ತಿತುಂಬಿಕೊಂಡು, ರಾಷ್ಟ್ರಮಟ್ಟಕ್ಕೆ ವ್ಯಾಪಕವಾಗಿ ವಿಶ್ವ ಪೌರತ್ವದ ಶಿಖರವನ್ನೇರಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಶಿಕ್ಷಣವು ಕುಟುಂಬದಲ್ಲಿಯೇ ಆರಂಭವಾಗುತ್ತದೆ. ಅದು ಮೊತ್ತಮೊದಲನೆಯ ಮತ್ತು ಉತ್ತಮ ನಾಗರಿಕರ ಸಹಿಷ್ಣುತೆಯ ಪೋಷಣ ಸ್ಥಾನ. ಪ್ರಜಾಪ್ರಭುತ್ವ ಮೌಲ್ಯಗಳಾದ ಪ್ರೀತಿ, ವಾತ್ಸಲ್ಯ, ಸಹಿಷ್ಣುತೆ, ಸ್ವಾರ್ಥ ತ್ಯಾಗ, ಸಹಜೀವಿಗಳಿಗೆ ಸ್ಪಂದನೆ, ಇತ್ಯಾದಿಗಳನ್ನು ಕುಟುಂಬದ ಚಿಕ್ಕಮಕ್ಕಳಿಗೆ ಕಲಿಸಲಾಗುತ್ತದೆ. ವ್ಯಕ್ತಿಯ ಅಗತ್ಯಗಳು ಮತ್ತು ಸಾಮಾಜಿಕ ಗುಂಪುಗಳ ಬೇಡಿಕೆಗಳು ಈ ಎರಡರ ನಡುವೆ ಪರಿಪೂರ್ಣ ಸಮತೋಲನವು ಹೊಡೆತಕ್ಕೊಳಗಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಸ್ವಂತ ವಿಶಿಷ್ಟ ಆಸಕ್ತಿಗಳನ್ನು ಕುಟುಂಬದ ಇತರ ಸದಸ್ಯರ ಅಗತ್ಯಗಳೊಡನೆ ಐಕ್ಯಗೊಳಿಸಿಕೊಂಡು ಹೊಂದಿಕೊಳ್ಳಲು ಕಲಿಯುತ್ತಾನೆ. ಕುಟುಂಬವು ಚಿಕ್ಕ ಸಾಮಾಜಿಕ ಘಟಕವಾಗಿದ್ದು ಚಿಕ್ಕ ಮಕ್ಕಳು ತಮ್ಮ ಸ್ಥಾನವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ ಮತ್ತು ತಮ್ಮ ಹಕ್ಕುಗಳನ್ನು ಮತ್ತು ಹೊಣೆಗಳನ್ನು ಸರಿಯಾದ ರೀತಿಯಲ್ಲಿ ಅರಿತುಕೊಳ್ಳುತ್ತಾರೆ. ಹೀಗೆ ಸರಳ ಪುಟ್ಟ ಸಮಾಜದಲ್ಲಿ ಕುಟುಂಬವು ಭವಿಷ್ಯದಲ್ಲಿ ಪ್ರಜಾಪ್ರಭುತ್ವದಲ್ಲಿ ಬಾಳಲು ಅಮೂಲ್ಯವಾದ ಕಲಿಕೆಯ ಅನುಭವಗಳನ್ನು ಒದಗಿಸುತ್ತದೆ.

ಕುಟುಂಬವು ನಿರ್ಮಿಸುವ ತಳಹದಿಯನ್ನು ಶಾಲೆಯಲ್ಲಿ ಸುದೃಢಗೊಳಿಸಬೇಕು ಶಾಲೆಯಲ್ಲಿ ಪ್ರಜಾಪ್ರಭುತ್ವದ ಅನುಭವಗಳನ್ನು ಆಳವಾಗಿಯೂ ಸಮೃದ್ಧವಾಗಿಯೂ ಮತ್ತು ಇತರ ವಲಯಗಳಿಗೆ ಸಮೃದ್ಧವಾಗಿಯೂ ವಿಸ್ತೃತಗೊಳಿಸಬೇಕು. ಸಂಕುಚಿತವಾದ ಕುಟುಂಬ ಜೀವನದ ನಿಷ್ಠೆಯು ಅಗಲಗೊಂಡು ವ್ಯಾಪಕ ನಿಷ್ಠೆಯಾಗಿ ದೊಡ್ಡದಾಗುತ್ತಾ ಅಧಿಕ ಸಂಕೀರ್ಣವೂ ವ್ಯಕ್ತಿಗೆ ಸಂಬಂಧಿಸಿದ ಅಧಿಕ ಸಮುದಾಯವಾಗಿ ವ್ಯಕ್ತಿಯ ಅಗತ್ಯಗಳಿಗೂ ಮತ್ತು ಸಮುದಾಯದ ಅಗತ್ಯಗಳಿಗೂ ನಡುವೆ ಹಿತಕರವಾದ ಸಮತೋಲನ ಸಾಧಿಸುವುದರಲ್ಲಿ ಅಗತ್ಯ ತೊಡಕುಗಳಿರಬಹುದು. ಆದರೆ ಮಗುವು ಇಲ್ಲಿ ಕೊಡುಕೊಳುವ ಮತ್ತು ಒಂದು ರೀತಿಯ ರಾಜಿಯಾಗುವ ಅಗತ್ಯ ಹೊಂದಾಣಿಕೆಗಳನ್ನು ಕಲಿಯುತ್ತದೆ. ಡಿಸೋಜಾ ಅವರು ಸರಿಯಾಗಿಯೇ ಗಮನಿಸಿದ್ದಾರೆ.

"ಪ್ರತಿಯೊಂದು ಶಾಲೆಯು ಎರಡು ವಿಧದ ಕಾರ್ಯಗಳನ್ನು ನಿರ್ವಹಿಸಬೇಕಿದೆ. ಶಾಲಾ ಸಮುದಾಯದಲ್ಲಿ ಮಗುವು ಉತ್ತಮ ಪ್ರಜೆಯಾಗುವಂತೆ ತರಬೇತಿ ನೀಡುವುದು ಮತ್ತು ಅವನನ್ನು ಎಷ್ಟು ಪೂರ್ಣವಾಗಲು ಸಾಧ್ಯವೋ ಅಷ್ಟೂ ಶಾಲೆಯಿಂದ ತೆರಳಿದಾಗ ಪ್ರವೇಶಿಸುವ ವಿಶಾಲವಾದ ಸಮಾಜಕ್ಕೆ ಒಬ್ಬ ಸದಸ್ಯನಾಗಿ ತಾನು ವಾಸಿಸುವ, ವ್ಯವಹರಿಸುವ ಮತ್ತು ತನ್ನ ಸಹಚರರನ್ನು ಹೊಂದಿರುವ ವಾತಾವರಣಕ್ಕೆ ಅಣಿಗೊಳಿಸಬೇಕಾಗಿದೆ. ಶಾಲೆಗಳು ಸಮುದಾಯ ಜೀವನದಿಂದ ಪ್ರತ್ಯೇಕವಾಗಿದ್ದು ದಂತಗೋಪುರದಲ್ಲಿರುವುದನ್ನು ನಿಲ್ಲಿಸಬೇಕು ಮತ್ತು ತಾವು ಸಮುದಾಯದ ಅವಿಭಾಜ್ಯ ಅಂಗವೆಂಬುದನ್ನು ಅವು ಅರಿತುಕೊಳ್ಳಬೇಕು"

ಪ್ರಜಾಪ್ರಭುತ್ವ ಶಿಕ್ಷಣವನ್ನು ಇತರ ವಿಷಯಗಳಂತೆ ಕಲಿಸಲಾಗುವುದಿಲ್ಲ ಎಂಬುದನ್ನು ಈಗಾಗಲೇ ತಿಳಿಸಲಾಗಿದೆ. ಅದು ಬೌದ್ಧಿಕ ವಲಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಜ್ಞಾನ ಮತ್ತು ಅರಿವುಗಳಷ್ಟೇ ಅಲ್ಲದೆ ಅದು ಅನೇಕ ಯೋಗ್ಯ ಕೌಶಲಗಳನ್ನೂ, ಧೋರಣೆಗಳನ್ನೂ ಮತ್ತು ಆಸಕ್ತಿಗಳ ಅರ್ಥವನ್ನೂ ಹೊಂದಿದೆ. ಆದ್ದರಿಂದ ಪ್ರಜಾಪ್ರಭುತ್ವ ಶಿಕ್ಷಣವನ್ನು ಒಂದು ಪೌರತ್ವದ ವಿಭಾಗವಾಗಿ ಮಾತ್ರ ಗುರುತಿಸಬಾರದು. ಸರ್ ರಿಚರ್ಡ್ ಲಿವಿಂಗ್‌ಸ್ಟನ್ (1943, ಪು. 4) ಅದನ್ನು ಸರಿಯಾಗಿಯೇ ಹೇಳಿದ್ದಾರೆ.

"ಪೌರತ್ವವು ಮಾಹಿತಿಯಲ್ಲ ಅಥವಾ ಬೌದ್ಧಿಕ ಮಾಹಿತಿಯೂ ಅಲ್ಲ, ಇವುಗಳು ಅದರ ಭಾಗವೆಂಬುದನ್ನು ಚಿಂತಿಸಿ, ಅದೊಂದು ಸಂಹಿತೆ, ಸಿದ್ಧಾಂತವಲ್ಲ. ಕ್ರಿಯೆಯೇ ಹೊರತು ಜ್ಞಾನವಲ್ಲ ಮತ್ತು

Digitised by Bharatavani, CIIL

ಒಬ್ಬ ಒಳ್ಳೆಯ ಪೌರನಾಗದಿದ್ದರೂ ಒಬ್ಬ ಮನುಷ್ಯ ಸಮಾಜ ವಿಜ್ಞಾನದ ಪುಸ್ತಕದ ವಸ್ತುವಿನ ಬಗ್ಗೆ ಪರಿಚಿತನಾಗಿರಬಹುದು" ಹೀಗೆ ಶಾಲೆಗಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುಚಟಿಕೆಗಳು ಮಗುವಿಗೆ ಪ್ರಜಾಪ್ರಭುತ್ವದಲ್ಲಿ ಬಾಳುತ್ತಿರುವ ನಿಜವಾದ ಅನುಭವಗಳನ್ನು ಒದಗಿಸುವಂತಹ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಪ್ರಜಾಪ್ರಭುತ್ವ ಬದುಕಿನ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಕಲಿಯುವ ಸಂತೋಷಗಳು ಮತ್ತು ದುಃಖಗಳನ್ನು ಅನುಭವಿಸುವ ಪ್ರತಿ ಅವಕಾಶವನ್ನು ಒದಗಿಸುವ ಮೂಲಕ ಮಕ್ಕಳಿಗೆ ಪೌರತ್ವದ ಶಿಕ್ಷಣವನ್ನು ಉತ್ತಮವಾಗಿ ನೀಡಬಹುದು. ಜಾನ್‌ಡ್ಯೂಯಿಯು ಶಾಲೆಯು ಎಷ್ಟು ಸಾಧ್ಯವೋ ಅಷ್ಟೂ ಪ್ರಜಾಪ್ರಭುತ್ವದ ಪುಟ್ಟ ರೂಪದ್ದಾಗಿದ್ದು ಮಕ್ಕಳಿಗೆ ಪೌರತ್ವದ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಕಲಿಯುವ ಅನುಭವಗಳನ್ನು ಒದಗಿಸುತ್ತಾ ತಮ್ಮ ಸ್ವಂತ ವಿಷಯಗಳನ್ನು ತಾವೇ ನಿರ್ವಹಿಸಿಕೊಳ್ಳಲು ಸಮರ್ಥರಾಗುವಂತೆ ಮಕ್ಕಳಿಗೆ ಶಾಲೆಯ ಆಡಳಿತದಲ್ಲಿ ಹೆಚ್ಚು ಪಾಲನ್ನು ವಹಿಸಬೇಕು. ಪ್ರಜಾಪ್ರಭುತ್ವ ಶಿಕ್ಷಣವು ಮಾತ್ರ ಪ್ರಜಾಪ್ರಭುತ್ವ ಪೌರತ್ವವನ್ನು ಖಂಡಿತವಾಗಿಯೂ ಉತ್ಪಾದಿಸುತ್ತದೆ.

ಭಾರತವು ಪ್ರಜಾಪ್ರಭುತ್ವ ಮಾದರಿಯ ಜೀವನವನ್ನು ಅಳವಡಿಸಿಕೊಂಡಿರುವುದರಿಂದ ಪ್ರಜಾಪ್ರಭುತ್ವದ ಪ್ರಜೆಯಾಗುವ ಅಪೇಕ್ಷಿತ ಗುಣಗಳನ್ನು ಹೊಂದಿರಲು ನಿರೀಕ್ಷಿಸಿ ತನ್ನ ಪ್ರಜೆಗಳೇ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಅದನ್ನು ಸಾಧಿಸಿಕೊಳ್ಳುತ್ತದೆ. ಪ್ರೌಢ ಶಿಕ್ಷಣ ಆಯೋಗದ (1950) ವರದಿಯ ಹೇಳಿಕೆಯಂತೆ "ಪ್ರತಿಯೊಬ್ಬ ಪ್ರಜೆಯನ್ನು ಜಾಗರೂಕತೆಯಿಂದ ತರಬೇತಿಗೊಳಿಸುವುದು ರೋಚಕವಾದ ಹಾಗೂ ಸವಾಲಿನ ಜವಾಬ್ದಾರಿಯಾಗಿದೆ. ಅದು ತನ್ನ ಇಚ್ಛೆಯಂತೆ ಬೆಳೆಯಲು ನಿರೀಕ್ಷಿಸಲಾಗದ ಅನೇಕ ಬೌದ್ಧಿಕ, ಸಾಮಾಜಿಕ ಮತ್ತು ನೈತಿಕ ಗುಣಗಳನ್ನು ಒಳಗೊಳ್ಳುತ್ತದೆ. ಒಂದು ಪ್ರಜಾಪ್ರಭುತ್ವವು ಘನತೆಯಲ್ಲಿ ಒಬ್ಬ ಮಾನವ ಜೀವಿಯಾಗಿ ಪ್ರತಿ ವ್ಯಕ್ತಿಯ ಘನತೆ ಮತ್ತು ಮೌಲ್ಯವನ್ನು ಆಧರಿಸಿದೆ ಎಂಬುದನ್ನು ಸರಿಯಾಗಿಯೇ ಪ್ರತಿಪಾದಿಸಲಾಗಿದೆ. ಪ್ರಜಾಪ್ರಭುತ್ವದ ತತ್ವಗಳನ್ನು ರಾಜಕೀಯ ವಲಯಕ್ಕೆ ಮಾತ್ರ ಅನ್ವಯಿಸಲಾಗದು ಎಂಬುದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಬೋಡ ಪ್ರಜಾಪ್ರಭುತ್ವವನ್ನು ಒಂದು ಜೀವನದಮಾರ್ಗವೆಂದೂ ಜೀವನ ಮಾರ್ಗವೆಂದರೆ ಪ್ರತಿ ಪ್ರಮುಖ ಜೀವನ ಕ್ಷೇತ್ರದ ಮೇಲೆ ನಿರ್ಧರಿತ ಪ್ರಭಾವ ಎಂದರ್ಥ ಎಂದೂ ಪರಿಗಣಿಸಿದ್ದಾನೆ.

**ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಶಿಕ್ಷಣ:**

ಭಾರತವು ತನ್ನನ್ನು ಸರ್ವತಂತ್ರ ಪ್ರಜಾಪ್ರಭುತ್ವ ಗಣರಾಜ್ಯ ಎಂದು ಘೋಷಿಸಿಕೊಂಡಿದೆ. ಮತ್ತು ಪ್ರಪಂಚದಲ್ಲೇ ಬಹುದೊಡ್ಡ ಪ್ರಜಾಪ್ರಭುತ್ವ ಎಂಬ ಹಿರಿಮೆಯ ಹೆಗ್ಗಳಿಕೆ ಪಡೆದಿದೆ. ಆದರೆ ಪ್ರಜಾಪ್ರಭುತ್ವವು ಕೇವಲ ಒಂದು ಸರ್ಕಾರದ ರೂಪದಲ್ಲಿ ಇರುವುದಿಲ್ಲ. ಅದು ಒಂದು ಜೀವನ ವಿಧಾನ. ಎಂದರೆ ಜನರಿಂದ, ಜನರಿಗಾಗಿ, ಜನರೊಡಗೂಡಿ ಜನರೇ ನಡೆಸುವ ಆಡಳಿತ 'ಜನರು ಹೇಗೋ ಹಾಗೆಯೇ ಸರ್ಕಾರ ಎಂಬ ಮಾತು ಇದೆ. ಅದು ಸತ್ಯವೂ ಹೌದು. ಅದರಂತೆ ಪ್ರಜಾಪ್ರಭುತ್ವವು ಬೇರೆ ಯಾವುದೇ ರೂಪದ ಸರ್ಕಾರಕ್ಕಿಂತ ಪ್ರಸ್ತುತವೂ ಆಗಿದೆ. ಆದರೆ ಜನರು ಎಲ್ಲಿಯವರೆಗೆ ವಿಚಕ್ಷಣರೂ, ತಮ್ಮ ಹಕ್ಕುಗಳ ಬಗ್ಗೆ ಜಾಗೃತರೂ ಆಗಿ ತಮ್ಮ ಜವಾಬ್ದಾರಿಗಳನ್ನು ಅರಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಪ್ರಜಾಪ್ರಭುತ್ವಕ್ಕೆ ಯಾವುದೇ ಅರ್ಥವಿರುವುದಿಲ್ಲ. ಮತ್ತು ಯಾವುದೇ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲಾಗದು. ಅದರ ಪರಿಣಾಮವಾಗಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಘನತೆಗೆ ಅಪಾಯ ಉಂಟಾಗಲಿದೆ ಮತ್ತು ದೇಶದಲ್ಲಿ ಭ್ರಷ್ಟಾಚಾರ, ಲಂಚ, ದಬ್ಬಾಳಿಕೆ ಮತ್ತು ಅಧಿಕಾರಶಾಹಿಗಳು ಪ್ರಬಲವಾಗಿ ವ್ಯಾಪಿಸುತ್ತವೆ.

ಶಿಕ್ಷಣವು ಅತ್ಯವಶ್ಯವಾಗಿ ಪೌರತ್ವದ ಜಾಗೃತಿ ಮತ್ತು ವ್ಯಕ್ತಿಗಳು ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ಮತ್ತು ಸಾಮರ್ಥ್ಯಪೂರ್ಣವಾಗಿ ನಿರ್ವಹಿಸಲು ಬೇಕೇಬೇಕು. ಆದ್ದರಿಂದ, ಸಾರ್ವತ್ರಿಕ ಶಿಕ್ಷಣವು ಸಾರ್ವತ್ರಿಕ ಚುನಾವಣೆಯ ಹಕ್ಕು ಎಂಬ ಮಾಹಿತಿ. 'ನಮ್ಮ ಆಳುಗರನ್ನು ಶಿಕ್ಷಿತರನ್ನಾಗಿಸಬೇಕಾಗಿದೆ' (ಮತದಾರರು) ಶಿಕ್ಷಿತ ಪೌರರಿಲ್ಲದಿದ್ದರೆ ಪ್ರಜಾಪ್ರಭುತ್ವವು ಯಶಸ್ವಿಯಾಗುವುದಿಲ್ಲ ಮತ್ತು ಅದರ ಶ್ರೀಮಂತ ಲಾಭಾಂಶವನ್ನು ನಮಗೆ ಕೊಡಲು ವಿಫಲವಾಗುವುದು.

ವಿವಿಧ ಹಂತಗಳಲ್ಲಿ ಶಿಕ್ಷಣದಲ್ಲಿ ಪ್ರಜಾಪ್ರಭುತ್ವವನ್ನು ಪರಿಚಯಿಸಲು ಕೊಠಾರಿ ಆಯೋಗ (1964–66) ರಾಷ್ಟ್ರೀಯ ಶಿಕ್ಷಣ ನೀತಿ (1968 ಮತ್ತು 1986) ಅನೇಕ ವಿಧಾನಗಳನ್ನು ಮತ್ತು ತಂತ್ರಗಳನ್ನು ಸಲಹೆಮಾಡಿವೆ. ಸದೃಢವಾದ ಬದ್ಧತೆ ಮತ್ತು ರಾಜಕೀಯ ಇಚ್ಛಾಶಕ್ತಿಯಿಂದ ಭಾರತ ಸರ್ಕಾರವು ಇದನ್ನು ಜಾರಿಗೆ ತಂದದ್ದು ಹೊಸ ಶಿಕ್ಷಣ ನೀತಿಯ ಮಹತ್ವವಾದ ಸಂಗತಿಯಾಗಿದೆ. ಇತರ ರಾಷ್ಟ್ರೀಯ ನೀತಿಗಳು ಮತ್ತು ಶಿಕ್ಷಣ ಆಯೋಗಗಳಂತಲ್ಲದೆ ಈ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಸುಭದ್ರ ಬೆಳವಣಿಗೆಯ ಕಾರ್ಯಯೋಜನೆಗಳು ಮತ್ತು ಜಾಗರೂಕವಾಗಿ ಯೋಜಿಸಿದ ಕಾರ್ಯವಿಧಾನಗಳನ್ನು ಹೊಸ ಶಿಕ್ಷಣನೀತಿ ಕೈಗೊಳ್ಳಲಾಯಿತು. ಕ್ರಿಯಾಯೋಜನೆಯ ಕಾರ್ಯಕ್ರಮಕ್ಕೆ ಅನುಗುಣವಾಗಿ ಒಂದು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ, ದೇಶಾದ್ಯಂತ ಅಳವಡಿಸಲಾಯಿತು. ರಾಷ್ಟ್ರೀಯ ಪಠ್ಯಕ್ರಮವನ್ನು ರೂಪಿಸಲಾಯಿತು. ಮತ್ತು ಅದನ್ನು ಸಾಮಾನ್ಯ ಸಾರವತ್ತಾದ ಮೌಲ್ಯಗಳೆನಿಸಿರುವ ಭಾರತೀಯ ಪರಂಪರೆ, ಸ್ವಾತಂತ್ರ್ಯ ಹೋರಾಟ, ಪ್ರಜಾಪ್ರಭುತ್ವ, ಸಮಾಜವಾದ ಜಾತ್ಯತೀತತೆ ಇತ್ಯಾದಿಗಳಿಗೆ ಒತ್ತು ನೀಡಿ ಜಾರಿಗೆ ತರಲಾಯಿತು. ಯೋಜನೆಯ ಕ್ರಮಗಳನ್ನು ವಿವಿಧ ಹಂತಗಳಲ್ಲಿ ಶಿಕ್ಷಣದ ಪ್ರಜಾಪ್ರಭುತ್ವೀಕರಣಕ್ಕೆ ಹೊಂದುವಂತೆ ಮತ್ತು ಅದನ್ನು ದ್ವಿಗುಣಗೊಳಿಸುವಂತೆ ಪುನರ್‌ನವೀಕರಣಗೊಳಿಸಲಾಯಿತು ಮತ್ತು ಪುನರ್ ನಿರ್ದೇಶಿಸಲಾಯಿತು.

Digitised by Bharatavani, CIIL

ಸಾಂಸ್ಥಿಕ ಕ್ರಿಯಾಯೋಜನೆಗಳು ಈ ಕೆಳಗಿನ ನಾಲ್ಕು ಸಮಸ್ಯೆಗಳಿಗೆ ವಿಶಿಷ್ಟ ಉತ್ತರವಾಗುತ್ತವೆ ಎಂದು ಜೆ.ಪಿ. ನಾಯಕ್ (1968) ಹೇಳಿದ್ದಾರೆ. ಹೆಸರಿಸುವುದಾದರೆ ಅವು:

(i) ಶಿಕ್ಷಕರಿಗೆ ಸ್ವಾತಂತ್ರ್ಯ ನೀಡುವುದು.

(ii) ಬೋಧನೆಯನ್ನು ಪರಿಣಾಮಕರಗೊಳಿಸುವುದು.

(iii) ಪ್ರತಿಯೊಬ್ಬ ಶಿಕ್ಷಕನನ್ನು ಯೋಜನೆಯ ರೂಪುರೇಷೆಗಳನ್ನು ರಚಿಸುವಲ್ಲಿ ಹಾಗೂ ಜಾರಿಗೆ ತರುವಲ್ಲಿ ತೊಡಗಿಸಿಕೊಳ್ಳುವುದು.

(iv) ಸಂಪನ್ಮೂಲಗಳ ಮೇಲ್ವಿಚಾರಣೆ ನಡೆಸಿ ಪರಿಣಾಮಕರ ಕೆಲಸ ಮಾಡಿಸುವುದು.

ಆಧುನಿಕ ಶಿಕ್ಷಣವು, ವಿಶೇಷವಾಗಿ ಉನ್ನತ ಶಿಕ್ಷಣವು ಮೂರು ಪ್ರಮುಖ ಸಮಸ್ಯೆಗಳಿಂದ ಸಂಕ್ಲಿಷ್ಟವಾಗಿದೆ. ಅವುಗಳೆಂದರೆ ಉನ್ನತಿ, ಸಮತೆ, ಮತ್ತು ವ್ಯವಸ್ಥೆಯಲ್ಲಿ ದಕ್ಷತೆ ಮೂರು ಪ್ರಮುಖ ಕಾಳಜಿಗಳೆಂದರೆ :

(i) ಗುಣಮಟ್ಟ ನಿರ್ವಹಣೆ

(ii) ಶೈಕ್ಷಣಿಕ ಅವಕಾಶದ ಸಮಾನೀಕರಣ, ಮತ್ತು

(iii) ಉನ್ನತ ಶಿಕ್ಷಣದಲ್ಲಿ ಸಾಮರ್ಥ್ಯದ ಮತ್ತು ಪರಿಣಾಮಕಾರಿ ಅಭಿವೃದ್ಧಿಪರ ವ್ಯವಸ್ಥೆಯನ್ನು ಉತ್ತಮಪಡಿಸುವುದು.

ಈ ಸಂಗತಿಗಳು ಪರಿಣಾಮಕಾರಿ ಮತ್ತು ದಕ್ಷತೆಯ ಆಡಳಿತಕ್ಕಾಗಿ, ವಿವಿಧ ಹಂತಗಳಲ್ಲಿ ರೂಢಿಯಲ್ಲಿರುವ ಅಸಮಾನತೆಯನ್ನು ನಿರ್ಮೂಲನಗೊಳಿಸಲು ಉನ್ನತ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು, ಸಾಮಾಜಿಕ ಏಣಿಯಲ್ಲಿ ಕೆಳಹಂತದಲ್ಲಿರುವ ಅಥವಾ ಅತ್ಯಂತ ಕೆಳಮಟ್ಟದಲ್ಲಿರುವ, ಸೌಲಭ್ಯ ವಂಚಿತರಿಗೆ ಮತ್ತು ಅನುಕೂಲ ವಂಚಿತರಿಗೆ ಸಾಮಾಜಿಕ ನ್ಯಾಯ ಒದಗಿಸುವುದು ಅತ್ಯವಶ್ಯಕವಾಗಿದೆ. ಪ್ರಜಾಪ್ರಭುತ್ವದ ಯಶಸ್ಸು ಕೇವಲ ರಚನೆಯಲ್ಲಿರದೆ, ಅಂತಃಸ್ಫೂರ್ತಿಯಾಗಿಯೂ ಇರಬೇಕಾದದ್ದು ಅವಶ್ಯಕ. ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವೀಕರಣವು ಕೇವಲ ಸಿದ್ಧಾಂತ ರೂಪಗಳಲ್ಲಿ ಇರದೆ, ಆಚರಣೆಯಲ್ಲಿರಬೇಕಾಗಿದೆ, ಬೋಧನೆಯಲ್ಲಲ್ಲದೆ ಆಚರಣೆಯಲ್ಲಿಯೂ ಇದನ್ನು ವಿವಿಧ ಹಂತಗಳಲ್ಲಿ ಉನ್ನತಗೊಳಿಸಬೇಕಾದ ಅವಶ್ಯಕತೆಯಿದೆ.

ಪ್ರಜಾಪ್ರಭುತ್ವವು ಉನ್ನತ ಶಿಕ್ಷಣದ ಮೇಲೆ ರಚನಾತ್ಮಕವಾಗಿ ಮತ್ತು ಕಾರ್ಯಾತ್ಮಕವಾಗಿ ಸಹಾ ತನ್ನ ಪ್ರಭಾವವನ್ನು ಬೀರುತ್ತದೆ. ಬೋಧನೆ ಮತ್ತು ಸಂಶೋಧನೆಗಳೇ ಅಲ್ಲದೆ ಉನ್ನತ ಶಿಕ್ಷಣದ ಸಂಸ್ಥೆಗಳು ಇತರ ಚಟುವಟಿಕೆಗಳನ್ನೂ ಹಮ್ಮಿಕೊಳ್ಳುತ್ತಿದೆ. ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಕಲಿಯುವ 'ದಂತಗೋಪುರ'ಗಳಾಗಿ ಉಳಿದಿಲ್ಲ. ಅವುಗಳು ಬಯಲಿಗೆ ಸಮುದಾಯದೊಡನೆ ಬರಬೇಕಾಗಿದೆ ಮತ್ತು ವೈವಿಧ್ಯಮಯವಾದ ಪಠ್ಯೇತರ ಚಟುವಟಿಕೆಗಳನ್ನೂ ಏರ್ಪಡಿಸುತ್ತಾ, ತಮ್ಮ ಕರ್ತವ್ಯಗಳೊಡನೆ ಅವಿಭಾಜ್ಯ ಅಂಶವಾಗಿ ಸಮಾಜ ಸೇವಾ ಚಟುವಟಿಕೆಗಳನ್ನೂ ವ್ಯವಸ್ಥಿತವಾಗಿ ಮಾಡುತ್ತಿವೆ. ಪ್ರಾಚೀನ ಮತ್ತು ಮಧ್ಯಯುಗದಲ್ಲಿ ಕೆಲಸ ಮಾಡುವವರು ಚಿಂತನೆ ಮಾಡಲಾರರು ಮತ್ತು ಚಿಂತನೆ ಮಾಡುವವರು ಕೆಲಸ ಮಾಡುವುದಿಲ್ಲ ಎಂಬ ಗ್ರಹಿಕೆಯಿತ್ತು. ಖಾಸಗಿ ಸಂಸ್ಥೆಗಳ ಕಾಲೇಜುಗಳ ಆಡಳಿತಾತ್ಮಕ ಮತ್ತು ಹಣಕಾಸಿನ ಆಡಳಿತ ನಿರ್ವಹಣೆಯನ್ನು ಶಿಕ್ಷಕರು, ಆಡಳಿತ ಮಂಡಳಿ ಮತ್ತು ಪ್ರಾಯೋಜಿತ ಸಂಸ್ಥೆಗಳು ಭಾಗವಹಿಸುವ ಮೂಲಕ ಸಮರ್ಥ ಪ್ರತಿನಿಧಿತ್ವಗಳಿಂದ ಸುಧಾರಣೆಗೊಳ್ಳುತ್ತಿದೆ.

ಶಿಕ್ಷಕರು ಮತ್ತು ಶಿಕ್ಷಕೇತರರು ತಮ್ಮ ಬೇಡಿಕೆಗಳಾದ ವೇತನ, ಇತರ ಸೌಲಭ್ಯಗಳು ಮತ್ತು ಸೇವಾ ಭದ್ರತೆಗಳನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತೆರೆದಿಡುತ್ತಿದ್ದಾರೆ. ರಾಜ್ಯಮಟ್ಟದಲ್ಲಿ ಉನ್ನತ ಶಿಕ್ಷಣದ ಯೋಜನೆ ಮತ್ತು ಸಂಯೋಜನೆಗಳ ಪರಿಣಾಮಕಾರಿ ತಾಂತ್ರಿಕತೆ ಇಲ್ಲದುದರಿಂದ ಎಲ್ಲಾ ರಾಜ್ಯಗಳಲ್ಲಿಯೂ ರಾಜ್ಯ ಉನ್ನತ ಶಿಕ್ಷಣ ಮಂಡಳಿಗಳನ್ನು ಸ್ಥಾಪಿಸುವುದು ಅವಶ್ಯವೆಂದು ಅಭಿಪ್ರಾಯಪಡಲಾಯಿತು. ಹೊಸ ಶಿಕ್ಷಣನೀತಿ (1986), ಮತ್ತು ಅದರ ಕಾರ್ಯಯೋಜನೆಯಲ್ಲಿ (1986) ಇದನ್ನು ಸಲಹೆ ಮಾಡಲಾಗಿದೆ. ಮತ್ತು ಕ್ರಮವಾಗಿ ಪುನಃ ಪ್ರತಿಪಾದಿಸಲಾಗಿದೆ. ಹಲವು ರಾಜ್ಯಗಳು ಈ ವಿಷಯದಲ್ಲಿ ಈಗಾಗಲೇ ಕ್ರಮಕೈಗೊಂಡಿವೆ. ಈ ಮಂಡಳಿಗಳು ಉನ್ನತ ಶಿಕ್ಷಣದ ಕಾರ್ಯಕ್ರಮಗಳನ್ನು ಸಂಯೋಜಿಸಿ ಸಿದ್ಧಪಡಿಸುತ್ತಿವೆ ಮತ್ತು ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳನ್ನು ಹೆಚ್ಚು ಪರಿಣಾಮಕಾರಿ ಹಾಗೂ ಹೆಚ್ಚು ಪ್ರಜಾಸತ್ತಾತ್ಮಕವಾದವುಗಳನ್ನಾಗಿ ಮಾಡುತ್ತಿವೆ. ಈ ಮಂಡಳಿಗಳು ಯು.ಜಿ.ಸಿ.ಗೆ ನೆರವನ್ನು ಒದಗಿಸುತ್ತಿವೆ ಮತ್ತು ಶಿಕ್ಷಣ ಮಟ್ಟವನ್ನು ಕಾಯ್ದಿರಿಸುವ ನಿರ್ವಹಣೆ ಸಂಬಂಧದಲ್ಲಿ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ನಿರ್ವಹಣೆಗೆ ಅನುದಾನವನ್ನು ನಿರ್ಧರಿಸುವಲ್ಲಿ ಸಲಹೆ ನೀಡುತ್ತವೆ. ಕಾರ್ಯಕ್ರಮಗಳ ಜಾರಿಗೆ ಬರುವಲ್ಲಿನ ಪ್ರಗತಿಯನ್ನು ಕುರಿತು ಮತ್ತು ಸಂಸ್ಥೆಗಳ ಕಾರ್ಯನಿರ್ವಹಣೆಯ ಮಾಪನವನ್ನು ಕುರಿತು ಇವು ಮೇಲ್ವಿಚಾರಣೆ ಮಾಡುತ್ತವೆ. ರಾಜ್ಯ ಸರ್ಕಾರಗಳಿಗೆ ರಾಜ್ಯದಲ್ಲಿ ಸ್ವಾಯತ್ತ ಕಾಲೇಜುಗಳನ್ನು ಒಳಗೊಂಡಂತೆ ಹೊಸ ಸಂಸ್ಥೆಗಳನ್ನು ಪ್ರಾರಂಭಿಸಲು ಸಲಹೆಯನ್ನು ಈ ಮಂಡಳಿಗಳು ನೀಡುತ್ತವೆ.

ರಾಷ್ಟ್ರೀಯ ಶಿಕ್ಷಣನೀತಿ (1986) ರಾಷ್ಟ್ರೀಯ ಅಪೇಕ್ಸ್ ಬಾಡಿಯ ಸ್ಥಾಪನೆಗಾಗಿ ಉನ್ನತ ಶಿಕ್ಷಣವನ್ನು ಸಾಮಾನ್ಯವಾಗಿ ಒಳಗೊಂಡಂತೆ ಕೃಷಿ, ವೈದ್ಯಕೀಯ, ತಾಂತ್ರಿಕ, ಕಾನೂನು ಮತ್ತು ಇತರ ವೃತ್ತಿಪರ ಕ್ಷೇತ್ರಗಳಲ್ಲಿ, ನೀತಿಯಲ್ಲಿ ಅಧಿಕ ಸಂಯೋಜನೆ ಮತ್ತು ಸ್ಥಿತಿಸ್ಥಾಪಕತ್ವದ ಆಸಕ್ತಿಯಿಂದ ಸೌಲಭ್ಯಗಳನ್ನು ಹಂಚಿಕೊಳ್ಳುವುದು ಮತ್ತು ಅಂತರ್‌ಶಕ್ತಿಯ ಸಂಶೋಧನೆಯನ್ನು ಅಭಿವೃದ್ಧಿಪಡಿಸುವುದು – ಮುಂತಾದವನ್ನು ಒಳಗೊಂಡಂತೆ ಒಂದು ರಾಷ್ಟ್ರೀಯ ಉನ್ನತ ಸಂಸ್ಥೆಯ ಸ್ಥಾಪನೆಗಾಗಿ ಅವಕಾಶ ನೀಡಿದೆ. ಈ ಅಂಗದಿಂದ ಕಾರ್ಯಕ್ರಮ ಯೋಜನೆ ನಿರ್ವಹಿಸಲ್ಪಡುವ ಕಾರ್ಯಗಳನ್ನು ನಿರೂಪಿಸಿದೆ. ಶಿಕ್ಷಣ ನೀತಿಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು ಇತರ ಅಂಗಗಳ ಚಟುವಟಿಕೆಗಳನ್ನು

Digitised by Bharatavani, CIIL

ಸಂಯೋಜಿಸುವುದು, ಅಂತರ್ ಶಿಸ್ತೀಯ ಸಂಶೋಧನೆ ಪ್ರೋತ್ಸಾಹಿಸುವುದು ಮತ್ತು ಸಂವಾದಗಳನ್ನು ವಿವಿಧ ಮಾಧ್ಯಮಗಳ ಪ್ರತಿನಿಧಿಗಳೊಡನೆ ಏರ್ಪಡಿಸುವುದು ಮತ್ತು ಸಂಸ್ಥೆಗಳನ್ನು ಮತ್ತು ಸಾಮಾನ್ಯ ಮೂಲಭೂತ ಅವಶ್ಯಕತೆಗಳನ್ನು ಸ್ಥಾಪಿಸುವುದು ಮತ್ತು ಸಂಪನ್ಮೂಲಗಳನ್ನು ವಿವಿಧ ಕ್ಷೇತ್ರಗಳಿಗೆ ಹಂಚಿಕೆ ಮಾಡುವುದು– ಮುಂತಾದವು ಪ್ರಮುಖ ಕಾರ್ಯಗಳಲ್ಲಿ ಸೇರಿವೆ.

ರಾಜ್ಯ ಸರ್ಕಾರಗಳು ಈ ವಿವರಗಳನ್ನೆಲ್ಲಾ ಕಾರ್ಯಗತಗೊಳಿಸಲು ಪರಿಶೀಲಿಸಬೇಕಾಗಿದೆ ಮತ್ತು ಬಹುಮಟ್ಟದ ಯೋಜನೆಗಳ ಮಾದರಿಗಳನ್ನು ಅಭಿವೃದ್ಧಿಪಡಿಸಲು ವಿಕೇಂದ್ರೀಕರಣ ಮತ್ತು ಪ್ರಜಾಪ್ರಭುತ್ವೀಕರಣಗೊಳಿಸಲು ಅಗತ್ಯ ಮಾರ್ಗದರ್ಶಿ ಸೂತ್ರಗಳನ್ನು ನೀಡಬೇಕಾಗಿದೆ ಕಾರ್ಯಕ್ರಮ ಯೋಜನೆ ಸರಿಯಾಗಿಯೇ ಗುರ್ತಿಸಿದೆ. ವಿವಿಧ ಹಂತಗಳಲ್ಲಿ ಸ್ಥಳೀಯ ಸಮುದಾಯಗಳನ್ನು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗೊಡನೆ ತೊಡಗಿಸಿಕೊಂಡು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ಪ್ರಜಾಪ್ರಭುತ್ವವನ್ನು ಭದ್ರಪಡಿಸಲು ಒತ್ತು ನೀಡಲಾಗಿದೆ. ಅಪೇಕ್ಷಿತ ಉದ್ದೇಶಗಳನ್ನು ಮತ್ತು ರಾಷ್ಟ್ರೀಯ ಗುರಿಗಳನ್ನು ಹೊಸ ಶಿಕ್ಷಣನೀತಿ (1986– ಮತ್ತು 1992) ಈಡೇರಿಸಲು ಅಳವಡಿಸಿಕೊಳ್ಳುವಂತೆ ಮಾಡಲು ವ್ಯಾಪಕವಾಗಿ ಜನರ ಪಾಲ್ಗೊಳ್ಳುವಿಕೆ ಮತ್ತು ಸ್ವಯಂಸೇವಾ ಸಂಸ್ಥೆಗಳ ತೊಡಗಿಸಿಕೊಳ್ಳುವಿಕೆಯನ್ನು ಸರಿಯಾಗಿ ಉತ್ತೇಜಿಸದ ಹೊರತು ಅಧಿಕ ಪ್ರಮಾಣದಲ್ಲಿ ಗುರಿಮುಟ್ಟಲು ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗೆ ಶಿಕ್ಷಣವನ್ನು ಕ್ರಮವಾಗಿ ಸುಧಾರಿಸುವುದಿಲ್ಲವೋ ಮತ್ತು ಪುನರ್‌ನಿವಾರಿಸುವುದಿಲ್ಲವೋ ಅಲ್ಲಿಯವರೆಗೂ ಪ್ರಜಾಪ್ರಭುತ್ವವು ತಳಮಟ್ಟದಿಂದ ರೂಪುಗೊಳ್ಳಲು ಮತ್ತು ಸ್ಫೂರ್ತಿ ಪಡೆಯಲು ಸಾಧ್ಯವಾಗದು.

ಮುಕ್ತಾಯ : ರಾಷ್ಟ್ರೀಯ ಶಿಕ್ಷಣನೀತಿ (1988) ಮತ್ತು ಪರಿಷ್ಕೃತ ಕಾರ್ಯಕ್ರಮ ಯೋಜನೆ (1992) ಸರಿಯಾಗಿ ಹೇಳುವಂತೆ ಭಾರತದ ರಾಜಕೀಯ ಮತ್ತು ಸಾಮಾಜಿಕ ಜೀವನವು ಸುದೀರ್ಘ ಕಾಲದಿಂದ ಮಾನ್ಯವಾದ ಮೌಲ್ಯಗಳು ಸ್ಫೋಟಗೊಳ್ಳುವ ಅಪಾಯಕ್ಕೆ ಈಡಾಗುವ ಹಂತದಲ್ಲಿ ಸಾಗುತ್ತಿವೆ. ಜಾತ್ಯತೀತತೆ, ಸಮಾಜವಾದ, ಪ್ರಜಾಪ್ರಭುತ್ವ ಮತ್ತು ವೃತ್ತಿಪರ ನೀತಿಗಳು ಈ ಗುರಿಗಳಲ್ಲಿ ವ್ಯಾಪಕವಾಗಿ ಆತಂಕಗಳು ಹೆಚ್ಚುತ್ತಿವೆ.” ಸಾಮಾನ್ಯ ಪೌರತ್ವ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಶಿಕ್ಷಣದಲ್ಲಿ ಅಳವಡಿಸಬೇಕೆಂದು ರಾಷ್ಟ್ರೀಯ ನೀತಿಗಳು ಒತ್ತು ನೀಡುತ್ತಿವೆ. ದೇಶದಲ್ಲೆಲ್ಲಾ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ ಮತ್ತು ಸಮರೂಪದ ಶಿಕ್ಷಣ ನಮೂನೆಯನ್ನು ಒದಗಿಸಿದರೆ ಶಿಕ್ಷಣದ ಮೂಲಕ ಪ್ರಜಾಪ್ರಭುತ್ವವನ್ನು ಉತ್ತೇಜಿಸಿ, ಸಂರಕ್ಷಿಸಿಕೊಳ್ಳಬಹುದು. ಭಾರತದ ಬಹುಮುಖೀ ಸಂಸ್ಕೃತಿಯು ಶಿಕ್ಷಣದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಪ್ರೋತ್ಸಾಹಿಸುತ್ತದೆ.

ಎಲ್ಲಾ ಹಂತಗಳಲ್ಲೂ ಶಿಕ್ಷಣದ ಪ್ರಜಾಪ್ರಭುತ್ವೀಕರಣವು ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಎರಡೂ ವಿಧದಲ್ಲೂ ಬೆಳವಣಿಗೆ ಹೆಚ್ಚಿಸಿದೆ ಮತ್ತು ಮೂಲಭೂತ ಸೌಕರ್ಯಗಳ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ, ಶಿಕ್ಷಣದ ವಿವಿಧ ಹಂತಗಳಲ್ಲಿ ಅಪೇಕ್ಷಿತ ರಚನಾತ್ಮಕ ಬದಲಾವಣೆಗಳನ್ನು ತರಲಾಗುತ್ತಿದೆ. ಆದ್ದರಿಂದ ರಾಷ್ಟ್ರೀಯ ಶಿಕ್ಷಣನೀತಿ (1986 ಮತ್ತು 1992) ಶಿಕ್ಷಣದ ಮೇಲಿನ ಬಂಡವಾಳ ಹೂಡಿಕೆಯನ್ನು ರಾಷ್ಟ್ರೀಯ ಆದಾಯದಲ್ಲಿ ಶೇಕಡ 6ರಷ್ಟು ಮಟ್ಟಕ್ಕೆ ತಲುಪುವಂತೆ ಎಷ್ಟು ಸಾಧ್ಯವೋ ಅಷ್ಟು ಬೇಗನೆ ವಿನಿಯೋಗಿಸಲು ಹೆಚ್ಚಿಸಬೇಕು ಎಂದು ಸಲಹೆ ನೀಡಿದೆ. ಆದರೆ ದುರದೃಷ್ಟವಶಾತ್ ಶಿಕ್ಷಣದ ಮೇಲೆ ಅಷ್ಟು ಬಂಡವಾಳ ಹೂಡಿಕೆಯು ಕಾರ್ಯಗತವಾಗಿಲ್ಲ. ಆದರೂ ಸರ್ಕಾರವು ಈ ಕುರಿತು ರಾಜ್ಯ ಮತ್ತು ರಾಷ್ಟ್ರ ಮಟ್ಟಗಳಲ್ಲಿ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಾದ ಯೂನಿಸೆಫ್, ಯುಎನ್‌ಡಿಪಿ, ವಿಶ್ವಬ್ಯಾಂಕ್ ಡಿ.ಎಫ್.ಐ.ಡಿ. ಇತ್ಯಾದಿಗಳ ಮೂಲಕ ಅನೇಕ ಪ್ರಯತ್ನಗಳನ್ನು ಮಾಡುತ್ತಲೇ ಇದೆ. ನಮ್ಮ ದೇಶದಲ್ಲಿ ಶಿಕ್ಷಣದ ಮೂಲಕ ಪ್ರಜಾಪ್ರಭುತ್ವವನ್ನು ಅರಿತುಕೊಳ್ಳುವಲ್ಲಿ ತಕ್ಷಣ ಶೀಘ್ರ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಹೇಳಿದೆ ಮತ್ತು ಸ್ಫೂರ್ತಿ ಈ ಎರಡು ರೀತಿಯಲ್ಲೂ ಅಪೇಕ್ಷಿತವಾಗಿದೆ ಎಂದು ಅಭಿಪ್ರಾಯಪಡಲಾಗಿದೆ.

**ಮೂಲ: ಜಗನ್ನಾಥ ಮೋಹಂತಿ**
**ಅನು: ಡಾ. ರತ್ನಮ್ಮ ಕೆ.ಎಸ್.**

## ಪ್ರತಿಭಾ ಪಲಾಯನ

**ಪೀಠಿಕೆ:**

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅವಕಾಶಗಳು ಅನೇಕ. ಪ್ರಪಂಚದೆಲ್ಲೆಡೆಯ ಪ್ರತಿಭಾವಂತರೂ ಸಾಹಸಿಗಳೂ ಆದ ಯುವಕರು ಈ ರಾಷ್ಟ್ರಗಳತ್ತ ಆಕರ್ಷಿತರಾಗುತ್ತಾರೆ. ಅಭಿವೃದ್ಧಿಶೀಲ ರಾಷ್ಟ್ರಗಳಿಂದ ವೈದ್ಯರು, ಇಂಜಿನಿಯರ್‌ಗಳು, ವಿಜ್ಞಾನಿಗಳು ಮತ್ತು ವಿದ್ವಾಂಸರನ್ನು ಒಳಗೊಂಡ ಮಾನವಶಕ್ತಿಯು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಡೆಗೆ ಹಿಂಡುಹಿಂಡಾಗಿ ಸಾಗುವುದನ್ನು ‘ಪ್ರತಿಭಾ ಪಲಾಯನ’ ಎನ್ನಲಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಕಾಲಾಂತರದಲ್ಲಿ ಇದು ‘ಪ್ರತಿಭಾ ಸಂಪಾದನೆ’ಯಾಗುತ್ತದೆ. ಇದನ್ನು ಮುಂದಿನ ಪರಿಶೀಲನೆಯಲ್ಲಿ ಕಾಣಬಹುದು. ಹೊರದೇಶಗಳಿಗೆ ಹೋಗುತ್ತಿರುವ ಮಾನವಶಕ್ತಿಯನ್ನು ‘ನಷ್ಟ’ ಎಂದು ಪರಿಭಾವಿಸಬಾರದು, ಬದಲಾಗಿ ಇದನ್ನು ಮುಂದಿನ ದಿನಗಳಲ್ಲಿ ಅಪೇಕ್ಷಿತ ಲಾಭ ತಂದುಕೊಡುವ ಒಂದು ಹೂಡಿಕೆಯನ್ನಾಗಿ ಬಾವಿಸಬೇಕು. ವಿದೇಶಗಳಿಗೆ ಹೋಗುವ ಯುವಜನತೆ ತಮ್ಮ ಮಾತೃಭೂಮಿಯಲ್ಲಿ ಸಂಪಾದಿಸಲು ಸಾಧ್ಯವಿಲ್ಲದ ಜ್ಞಾನ ಮತ್ತು ನೂತನ ತಂತ್ರಜ್ಞಾನಗಳನ್ನು ಪಡೆಯುತ್ತಾರೆ. ಸ್ವಲ್ಪ ಕಾಲಾನಂತರ ಉನ್ನತ ಪರಿಣತಿ ಪಡೆದಿರುವ ಇವರಲ್ಲಿ ಅನೇಕರು ತಮ್ಮ ಮಾತೃಭೂಮಿಗೆ ಹಿಂದಿರುಗುತ್ತಾರೆ ಮತ್ತು ಅತ್ಯುನ್ನತವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಅಪಾರವಾದ ಸಂಪತ್ತನ್ನು ಅತ್ಯಾಧುನಿಕವಾದ ಪ್ರಯೋಗಶಾಲೆಗಳು, ಸಂಶೋಧನೆ ಮತ್ತು ಅಭಿವೃದ್ಧಿ ಆಧಾರಿತ ಮಾಧ್ಯಮಗಳು, ಕೆಲವೊಮ್ಮೆ ಬಹುದೊಡ್ಡ ಸಂಘಟಿತ ಸಂಸ್ಥೆಗಳು

Digitised by Bharatavani, CIIL

ಇವುಗಳ ಮೂಲಕ ತಮ್ಮ ತಾಯ್ನಾಡಿಗೆ ತರುತ್ತಾರೆ. ಈ ಮೂಲಕ 'ಪ್ರತಿಭಾ ಸಂಪಾದನೆ'ಯಲ್ಲಿ ಪರ್ಯವಸಾನಗೊಳ್ಳುತ್ತದೆ. ಇವರಲ್ಲಿ ಹೆಚ್ಚಿನವರು ಹಿಂದಿರುಗಲು ಅಪೇಕ್ಷಿಸುತ್ತಾರೆ, ಆದರೆ ತಾಯ್ನಾಡಿನಲ್ಲಿ ತಮ್ಮ ಕೌಶಲಗಳನ್ನು ಉಪಯೋಗಿಸಲು ಸೂಕ್ತ ಸನ್ನಿವೇಶಗಳು ದೊರಕುವುದಿಲ್ಲ ಅಲ್ಲದೆ ಅತಿ ಅಲ್ಪವೇತನ ದೊರಕುತ್ತದೆ. ಪರಿಣಿತರಾದ ವ್ಯಕ್ತಿಗಳು ಹಿಂದಿರುಗಿದ ನಂತರ ಇಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ, ಸಂಶೋಧನಾ ಪ್ರಯೋಗಾಲಯಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಭದ್ರವಾಗಿ ಬೇರೂರುವವರ ಕಠಿಣವಾದ ಪ್ರತಿರೋಧವನ್ನು ಎದುರಿಸುವ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

**ಸಮಸ್ಯೆಯ ಮೂಲ:**

ವಿಜ್ಞಾನಿಗಳಿಗೆ ಮತ್ತು ತಂತ್ರಜ್ಞರಿಗೆ ಉತ್ತಮ ಸೇವಾ ಅವಕಾಶವನ್ನು ಗೌರವಾನ್ವಿತ ಸ್ಥಾನಗಳನ್ನು ನೀಡುವುದರಿಂದ ಪ್ರತಿಭಾ ಪಲಾಯನವನ್ನು ತಡೆಗಟ್ಟಬಹುದು. ಈ ಪ್ರತಿಭಾನ್ವಿತ ವಿಜ್ಞಾನಿಗಳನ್ನು ಮತ್ತು ತಾಂತ್ರಿಕ ವ್ಯಕ್ತಿಗಳನ್ನು ರಾಷ್ಟ್ರವು ಎದುರಿಸುತ್ತಿರುವ ಸವಾಲಿನ ಸಮಸ್ಯೆಗಳನ್ನು ಎದುರಿಸಲು ಬಳಸಿಕೊಳ್ಳಬಹುದು. ಶಾಶ್ವತವಾಗಿ ವಿದೇಶಗಳಲ್ಲಿ ನೆಲೆಸಿರುವವರನ್ನು ಸಲಹೆಗಾರರನ್ನಾಗಿ ಆಹ್ವಾನಿಸಬಹುದು. ಪ್ರಮುಖ ಕ್ಷೇತ್ರಗಳಲ್ಲಿನ ಸಮಸ್ಯೆಗಳಿಗೆ ನಾಡಿನ ಜನರಿಗೆ ನೂತನ ಯಾಂತ್ರಿಕ ಕಲಾಶಾಸ್ತ್ರಗಳನ್ನು ಮತ್ತು ಕಲಾಕೌಶಲಗಳನ್ನು ಹಾಗೂ ಪ್ರಾಯೋಗಿಕ ಜ್ಞಾನವನ್ನು ವಿವರಿಸಲು, ಅವುಗಳ ಮಹತ್ವವನ್ನು ತಿಳಿಸಲು ಅವರ ನೆರವನ್ನು ಪಡೆಯಬಹುದು. ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಈ ಬಗೆಯ ಮಾನವ ಶಕ್ತಿಯ ಸೂಕ್ತ ಬಳಕೆಗಳು ನಮ್ಮ ದೇಶದ ಅರ್ಥವ್ಯವಸ್ಥೆಯು ಬರಿದಾಗುವುದನ್ನು ಗಮನಾರ್ಹವಾಗಿ ತಡೆಗಟ್ಟುತ್ತವೆ. ನಮ್ಮ ದೇಶವು ಅಮೇರಿಕಾ ಸಂಯುಕ್ತ ಸಂಸ್ಥಾನಗಳು, ಸೋವಿಯಟ್ ರಷ್ಯಾದ ನಂತರ ಜಗತ್ತಿನಲ್ಲಿ ವಿಜ್ಞಾನಿಗಳ ತಂತ್ರಶಾಸ್ತ್ರಜ್ಞರ ಮತ್ತು ತಾಂತ್ರಿಕ ತರಬೇತಿಯನ್ನು ಹೊಂದಿದವರನ್ನು ಪಡೆದ ಮೂರನೆಯ ಅತಿ ದೊಡ್ಡ ರಾಷ್ಟ್ರವಾಗಿದೆ ಎಂದು ನಾವು ಹೆಮ್ಮೆ ಪಡುತ್ತೇವೆ. ಇಂತಹ ಅತಿ ಹೆಚ್ಚಿನ ಸಂಖ್ಯೆಯ ಜನರನ್ನು ಉತ್ಪಾದಿಸಿದರೆ ಸಾಲದು. ಪದವೀಧರರು, ಎಂ.ಫಿಲ್ ಹಾಗೂ ಪಿಹೆಚ್. ಡಿಗಳನ್ನು ಹೊಂದಿರುವವರಿಗೆ ಉಪಯುಕ್ತ ಉದ್ಯೋಗ ನೀಡಿ ಅವರನ್ನು ನಮ್ಮ ದೇಶದಲ್ಲಿಯೇ ಉಳಿಸಿಕೊಳ್ಳಲು ಆಗದಿದ್ದರೆ ಅವರನ್ನು ಅಧಿಕ ಸಂಖ್ಯೆಯಲ್ಲಿ ಏಕೆ ಉತ್ಪಾದಿಸಬೇಕು? ಎಂಬುದು ಚರ್ಚಾಸ್ಪದ ವಿಷಯವಾಗಿದೆ. ಪ್ರತಿಭಾ ಪಲಾಯನದ ಸಮಸ್ಯೆಯನ್ನು ಪ್ರತ್ಯೇಕವಾಗಿ ಪರಿಗಣಿಸಲಾಗದು. ದೇಶದಲ್ಲಿ ವಾಸ್ತವವಾಗಿ ಇರುವ ತಳಮಟ್ಟದ ಸತ್ಯಗಳ ದೃಷ್ಟಿಯಿಂದಲೂ ಪರಿಗಣಿಸಬೇಕು. ಅಗತ್ಯವಾಗಿ ಬೇಕಾಗಿರುವುದು ಮೌಲ್ಯವ್ಯವಸ್ಥೆಯಲ್ಲಿ ಬದಲಾವಣೆ, ಭ್ರಷ್ಟಾಚಾರ ಹಾಗೂ ಕುತಂತ್ರಗಳ ನಿರ್ಮೂಲನೆ, ಅವಕಾಶಗಳನ್ನು ಪಡೆಯಲು ಅರ್ಹತೆ ಮತ್ತು ನಿರ್ವಹಣೆ ಮಾತ್ರ ಮಾನದಂಡವಾಗಿರುವ ಸಮಾಜ ನಮಗೆ ಇಂದು ಬೇಕಾಗಿದೆ. ಶಿಕ್ಷಕರ, ವೈದ್ಯರ, ವಿಜ್ಞಾನಿಗಳ, ತಂತ್ರಶಾಸ್ತ್ರಜ್ಞರ, ತಂತ್ರಜ್ಞರ ಮತ್ತು ಇತರರ ಕೆಲಸ ನಿರ್ವಹಿಸುವ ಪರಿಸ್ಥಿತಿ ಸುಧಾರಿಸಬೇಕಾಗಿದೆ. ಸ್ವದೇಶದಲ್ಲಿನ ಪರಿಸ್ಥಿತಿಯು ನೆರವಾಗುವಂತಿಲ್ಲದಿದ್ದರೆ ವಿದೇಶಗಳಿಗೆ ತೆರಳುವ ಜನರನ್ನು ನಾವು ತಡೆಯಲಾರೆವು. ಮುನ್ನೆಚ್ಚರಿಕೆಯ ಹಾಗೂ ದೋಷ ಪರಿಹಾರಕ ಕ್ರಮಗಳನ್ನು ಕೈಗೊಳ್ಳುವುದರಿಂದ ಈ ಸಮಸ್ಯೆಯನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಬಹುದು. ಸ್ವದೇಶದಲ್ಲಿ ವಿಜ್ಞಾನಿಗಳಿಗೆ ದೊರಕಬೇಕಾಗಿರುವ ಮಾನ್ಯತೆಯೂ ದೊರಕಬೇಕು. ಅವರಿಗೆ ಉತ್ತಮ ಉತ್ತೇಜಕ ಸವಲತ್ತುಗಳನ್ನು ಹಾಗೂ ಸುಧಾರಿತ ಪರಿಸ್ಥಿತಿಯನ್ನು ಒದಗಿಸಬೇಕು ಎಂಬುದನ್ನು ಇದು ಸೂಚಿಸುತ್ತದೆ. ವಿದೇಶಗಳಲ್ಲಿರುವ ನಮ್ಮ ವಿಜ್ಞಾನಿಗಳೂ ಸಹ ಅವರಿಗೆ ಸೂಕ್ತವಾದ ಜೀವನ ಸನ್ನಿವೇಶಗಳು, ಅವರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ, ತೃಪ್ತಿಕರವಾದ ವಾಹನ ಸೌಲಭ್ಯ ಮೊದಲಾದವುಗಳನ್ನು ಒದಗಿಸುವ ಭರವಸೆ ನೀಡಿದರೆ ಸ್ವದೇಶಕ್ಕೆ ಮರಳುತ್ತಾರೆ. ಏನೇ ಆದರೂ ಇದರಿಂದ ಸ್ವದೇಶದಲ್ಲಿರುವ ವಿಜ್ಞಾನಿಗಳ ಮತ್ತು ತಂತ್ರಜ್ಞಾನ ವಿಶಾರದರ ಹಿತಕ್ಕೆ ಧಕ್ಕೆಯಾಗಬಾರದು. ಈ ಬಗೆಯ ಕ್ರಮಗಳನ್ನು ಕೈಕೊಳ್ಳುವುದರಿಂದ ಹೊರಗಡೆ ಇರುವ ವೃತ್ತಿಪರರನ್ನು ನಮ್ಮಲ್ಲಿಗೆ ವಾಪಸ್ಸು ಕರೆಸಿಕೊಳ್ಳಬಹುದು ಮತ್ತು ಅವರನ್ನು ಇಲ್ಲಿಯೇ ಉಳಿಸಿಕೊಳ್ಳಬಹುದು. ಸ್ವದೇಶದಲ್ಲಿರುವವರಿಗೆ ಉತ್ತಮ ಸೌಕರ್ಯಗಳನ್ನು ಒದಗಿಸುವ ಹಾಗೂ ವಿದೇಶಗಳಲ್ಲಿರುವವರಿಗೆ ವೃತ್ತಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುವ ಈ ಎರಡೂ ಕ್ರಮಗಳನ್ನು ಕೈಗೊಳ್ಳಬಹುದು. ಸಾರ್ವಜನಿಕ ಅರಿವು ಮತ್ತು ಮಾಧ್ಯಮಗಳು ಈ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಈ ಸಮಸ್ಯೆಯ ವಿವಿಧ ಮುಖಗಳನ್ನು ಜನತೆಯು ಅರಿಯುವಂತೆ ಪತ್ರಿಕೆಗಳು ಸೂಕ್ತವಾಗಿ ವಿಷಯಗಳನ್ನು ಪ್ರಕಟಿಸಬೇಕು ಮತ್ತು ಈಗಾಗಲೇ ತೆಗೆದುಕೊಂಡಿರುವ ಪರಿಹಾರಾತ್ಮಕ ಕ್ರಮಗಳಿಗೆ ಜನಸಾಮಾನ್ಯರ ಬೆಂಬಲ ಯಾಚಿಸಬೇಕು. ಒಟ್ಟಿನಲ್ಲಿ ಹೇಳುವುದಾದರೆ ಪ್ರತಿಭಾ ಪಲಾಯನವೆಂದರೆ ಯಾರ ಮೇಲೆ ಅಧಿಕ ಮೊತ್ತದ ಹಣ ವಿನಿಯೋಗವಾಗಿದೆಯೋ ಅವರ ಸೇವೆಯ ಲಾಭವು ಅವರ ದೇಶಕ್ಕೆ ಲಭ್ಯವಾಗಬೇಕು. ವರದಿಗಳು ತಿಳಿಸುವುದೇನೆಂದರೆ ಯುನೈಟೆಡ್ ಕಿಂಗ್‍ಡಂನ ಆರೋಗ್ಯ ಸೇವೆಯು ಇದೇ ಖಂಡದ ವೈದ್ಯರುಗಳಿಂದ ನಡೆಯುತ್ತಿದೆ. ಅವರ ಸಂಖ್ಯೆಯು ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಇನ್ನೂ ಅಧಿಕವಾಗಿದೆ. ಇಂಗ್ಲೆಂಡ್ ಸಹ ತನ್ನ ತರಬೇತಾದ ಮಾನವ ಶಕ್ತಿಯನ್ನು ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಂದ ಕಳೆದುಕೊಳ್ಳುತ್ತಿದೆ. ಆದಾಗ್ಯೂ, ಸಂದರ್ಭದಲ್ಲಿ ಇಲ್ಲಿನ ಬದಲಾವಣೆಯು ದ್ವಿಮುಖ ಸಂಚಾರಕ್ಕೆ ಎಡೆಮಾಡಿಕೊಟ್ಟಿದೆ. ಆದರೆ ನಮ್ಮ ದೇಶದ ವೈದ್ಯರು ವಿದೇಶಗಳಿಗೆ ತೆರಳಿದಾಗ ವೈದ್ಯರ ಕೊರತೆಯಿಂದ ನಮ್ಮ ಜನರು ಪ್ರಾಥಮಿಕ ಆರೋಗ್ಯ ರಕ್ಷಣೆಯೂ ದೊರಕದೆ ನರಳಿದರು. ಗ್ರಾಮೀಣ ಹಾಗೂ ಬಡಜನರು ಹೀಗಾಗಿ ನಕಲಿ ವೈದ್ಯರ ಅಥವಾ ಭಗವಂತನ ಕೃಪೆಯನ್ನು ಅವಲಂಬಿಸಬೇಕಾಯಿತು. ಅದೃಷ್ಟವಶಾತ್, ಈಗ ಪರಿಸ್ಥಿತಿಯು ಬಹುತೇಕ ಉತ್ತಮಗೊಂಡಿದೆ.

ಪ್ರಪಂಚದಲ್ಲಿ ಭಾರತವು ಎರಡನೆಯ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರ. ಇಲ್ಲಿನ ಕೈಗಾರಿಕಾ ಮತ್ತು ವೈಜ್ಞಾನಿಕ ವಲಯಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ಅತ್ಯಧಿಕ ಪ್ರಮಾಣದ

Digitised by Bharatavani, CIIL

ಭಾಗವೂ ಅತ್ಯಂತ ಉನ್ನತ ಮಟ್ಟದ ತರಬೇತಿಯನ್ನು ಹೊಂದಿದ ಬಹು ಕಡಿಮೆ ಪ್ರಮಾಣದ ಭಾಗವೂ ಇದ್ದು, ಅನೇಕ ವರ್ಷಗಳ ಕಾಲ ಇಲ್ಲಿನ ಪ್ರತಿಭಾವಂತ ಇಂಜಿನಿಯರುಗಳು ತಂತ್ರಶಾಸ್ತ್ರಜ್ಞರು ಹಾಗೂ ವೃತ್ತಿಪರರು ಹೆಚ್ಚಿನ ಸಂಬಳ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಆಯ್ಕೆಗಳ ಅವಕಾಶಗಳಿಂದ ಆಕರ್ಷಿತರಾಗಿ ಹೊರ ಹೋಗುತ್ತಿರುವುದನ್ನು ಅಸಹಾಯಕವಾಗಿ ವೀಕ್ಷಿಸಬೇಕಾಯಿತು. ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಯೊಂದರಲ್ಲೇ ಸುಮಾರು 750 ಕಂಪನಿಗಳು ಇಂಡಿಯನ್-ಅಮೇರಿಕನ್‌ರಿಂದಲೇ ಪ್ರಾರಂಭವಾದವೆಂದು ಒಂದು ಅಂದಾಜು ಇದೆ.

**ಶಿಕ್ಷಣದ ಮೇಲಿನ ಪ್ರತಿಕೂಲ ಪರಿಣಾಮ:**

ಐಐಟಿಗಳು ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳು, ಇಂತಹ ಪ್ರಸಿದ್ಧ ಸಂಸ್ಥೆಗಳಲ್ಲಿ ಪದವಿ ಪಡೆದವರೆಲ್ಲಾ ವಿದೇಶಕ್ಕೆ ಹೋಗಲು ಹಂಬಲಿಸುತ್ತಾರೆ. ಇದರಲ್ಲಿ ಅಯಶಸ್ವಿಯಾದವರು ಮೇನೇಜ್‌ಮೆಂಟ್ ಸಂಸ್ಥೆಗಳನ್ನು ಸೇರುತ್ತಾರೆ. ಇದೂ ಸಾಧ್ಯವಾಗದಿದ್ದವರು ಖಾಸಗಿ ಕ್ಷೇತ್ರದ ಕೈಗಾರಿಕೆಗಳಲ್ಲಿ ಸೇರಿಕೊಳ್ಳುತ್ತಾರೆ. ಮೇಲೆ ಕಾಣಿಸಿದ ಯಾವ ಆಯ್ಕೆಯೂ ಸಾಧ್ಯವಾಗದಿದ್ದಾಗ ಅವರು ಎಂ.ಟೆಕ್ ಕಾರ್ಯಕ್ರಮಕ್ಕೆ ಸೇರಿ ಮಾಸ್ಟರ್ ಪದವಿ ಮುಗಿಸಿದ ನಂತರ ಡಾಕ್ಟೊರೇಟ್ ಪದವಿಗೆ ಹೋಗುತ್ತಾರೆ. ಮತ್ತು ಬೋಧನೆಯನ್ನು ತಮ್ಮ ವೃತ್ತಿಯನ್ನಾಗಿ ಆರಿಸಿಕೊಳ್ಳುತ್ತಾರೆ. ನಿಸ್ಸಂಶಯವಾಗಿ ವಿಪತ್ತಿಗೆ ಒಳಗಾಗುವುದು ಶೈಕ್ಷಣಿಕ ವ್ಯವಸ್ಥೆ. ವಾಸ್ತವವಾಗಿ ಇದು ಅತ್ಯುತ್ತಮ ಬುದ್ಧಿವಂತರನ್ನು ಆಕರ್ಷಿಸಬೇಕಾಗಿತ್ತು. ಪ್ರತಿಭೆಗೆ ಹೆಚ್ಚಿನ ಚಲನಶೀಲತೆಯನ್ನು ಒದಗಿಸುವ ಮೂಲಕ ಈ ಪ್ರವೃತ್ತಿಯನ್ನು ಸರಿಪಡಿಸಬಹುದಾಗಿದೆ. ಈಗಾಗಲೇ ಯುಕೆ-ಯುಎಸ್‌ಎಗಳ ವಿನಿಮಯ ಸಂಬಂಧದಂತೆ ನಮ್ಮ ವ್ಯವಸ್ಥೆಯಲ್ಲಿ ಚಲನಶೀಲ ಹಾಗೂ ವಿನಿಮಯಗಳು ಬಹುತೇಕ ಇಲ್ಲವೇ ಇಲ್ಲ. ಬೋಧನಾ ವಿಭಾಗದವರು ಯಾವುದಾದರೊಂದು ಸಂಸ್ಥೆಗೆ ಬಿಗಿಯಾಗಿ ಅಂಟಿಕೊಂಡಿರುತ್ತಾರೆ. ಏಕೆಂದರೆ ಅಲ್ಲಿ ಲಭ್ಯವಿರುವ ಖಾಯಮಾತಿ ಹಾಗೂ ಸೇವೆಯಲ್ಲಿನ ದೃಢತೆ ಇದರಿಂದ ಹೆಚ್ಚಿನ ಅರ್ಹತೆಯನ್ನು ಗಳಿಸಲು ಅಲ್ಲಿಂದ ಬೇರೆಡೆಗೆ ಚಲಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಶಿಕ್ಷಕರು ವ್ಯವಸ್ಥೆಯಲ್ಲಿನ ಪರಿಣಾಮದ ಬಗೆಗಿನ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾದ ವಿಶಾಲದೃಷ್ಟಿಕೋನವನ್ನು ಹೊಂದಿರುವುದಕ್ಕೆ ಸಾಧ್ಯವಿಲ್ಲ. ವಿದೇಶಗಳಲ್ಲಿರುವ ಕೆಲವು ಪ್ರಮುಖ ಸಂಸ್ಥೆಗಳು, ಉದಾಹರಣೆಗೆ ಹಾರ್ವರ್ಡ್, ಎಂ.ಐ.ಟಿ., ಕೇಂಬ್ರಿಡ್ಜ್, ಸ್ಟಾನ್‌ಫರ್ಡ್ (ಯುಎಸ್‌ಎ), ಆಕ್ಸ್‌ಫರ್ಡ್ (ಯುಕೆ), ಇಂಪೀರಿಯಲ್ ಕಾಲೇಜ್ ಆಫ್ ಸೈನ್ಸ್ ಆಂಡ್ ಟೆಕ್ನಾಲಜಿ, ಲಂಡನ್ (ಯುಕೆ) ಮೊದಲಾದವು. ಅತಿ ಕಡಿಮೆ ಮೊತ್ತಕ್ಕೆ ಅಭಿವೃದ್ಧಿಶೀಲ ರಾಷ್ಟ್ರಗಳು ಹೀಗೆ ಈ ವೃತ್ತಿಪರರಿಂದ ಅತ್ಯಧಿಕ ಪ್ರಯೋಜನ ಪಡೆಯುತ್ತವೆ. ಆದರೆ ಪ್ರತಿಫಲವಾಗಿ ನೀಡುವುದು ಅತ್ಯಲ್ಪ. ಅರ್ಹತೆ ಇರುವ ತಂತ್ರಜ್ಞರೂ ಸಹ ಜರ್ಮನಿಯಂತಹ ರಾಷ್ಟ್ರಗಳಿಗೆ ವಲಸೆ ಹೋಗಿ ಅವರ ಕೈಗಾರಿಕೆಗಳಿಗೆ ಸಾಕಷ್ಟು ಪ್ರಚೋದನೆ ನೀಡುತ್ತಾರೆ. ಅವರು ಉತ್ತಮ ಭವಿಷ್ಯವನ್ನು ಅರಸಿಕೊಂಡು ಮಧ್ಯ ಪ್ರಾಚ್ಯಕ್ಕೂ ಸಾಗುತ್ತಾರೆ. ಹಣವು ಖಂಡಿತವಾಗಿಯೂ ಒಂದು ಪ್ರಧಾನ ಅಪೇಕ್ಷೆಯೇ ಹೌದು. ಏನೂ ಪರಿಣಾಮಕಾರಿಯಾದುದಲ್ಲ ಎಂದು ಅದನ್ನು ತೆಗೆದುಹಾಕುವಂತಿಲ್ಲ.

**ಈಚಿನ ಒಲವುಗಳು:**

ಅಧಿಕ ಸಂಖ್ಯೆಯ ಯುವ ವೃತ್ತಿನಿರತರು ಆಳವಾದ ದೇಶಾಭಿಮಾನದಿಂದ ತುಂಬಿ ತಮ್ಮ ದೇಶದಲ್ಲಿಯೇ ಉಳಿಯುತ್ತಾರೆ. ಅವರ ಏಕೈಕ ಬೇಡಿಕೆ ಎಂದರೆ ತಮ್ಮ ಸಂಪೂರ್ಣ ಅಂತಸ್ಸತ್ವವನ್ನು ಬೆಳಕಿಗೆ ತರಲು ಅಗತ್ಯವಾದ ಭಯರಹಿತವಾದ ವಾತಾವರಣದಿಂದ ಕೂಡಿದ ಕಾರ್ಯಕ್ಷೇತ್ರ. ಈ ಯುವ ಜನತೆಯ ವೃತ್ತಿಯಲ್ಲಿನ ಏಳಿಗೆ/ಪ್ರಗತಿಯ ಅವಕಾಶಗಳು ಲಂಚ ರುಷುವತ್ತುಗಳಿಂದ ಸಂಪೂರ್ಣ ಮುಕ್ತವಾಗಿ ಇರುತ್ತವೆ ಎಂದೂ ಇವುಗಳನ್ನು ಕೇವಲ ಸಾಮರ್ಥ್ಯದಿಂದ ಪಡೆಯಲು ಸಾಧ್ಯ ಎಂಬ ಭರವಸೆಯನ್ನು ನೀಡಿದಾಗ ಮಾತ್ರ ಇದು ಸಾಧ್ಯ. ಏನೇ ಆದರೂ, ಇಂದಿರುವ ಅಭಿಪ್ರಾಯವು 'ಪರಿಸ್ಥಿತಿ ಇಂತಿಲ್ಲ'. ಯುವ ಜನತೆಯನ್ನು ವಾಸ್ತವವಾಗಿ ದೇಶದಲ್ಲಿಯೇ ಉಳಿಸಿಕೊಳ್ಳಲು ಪ್ರತಿಭೆಯನ್ನು ಪೋಷಿಸುವ ವಾತಾವರಣದ ಸೃಷ್ಟಿ ಅತ್ಯಂತ ಅಗತ್ಯವಾಗಿ ಬೇಕಾಗಿದೆ. ನಮ್ಮಲಿನ ಅನೇಕ ಮಂದಿ ವೃತ್ತಿನಿರತರು ತಮ್ಮ ಉನ್ನತ ಮಟ್ಟದ ಪ್ರತಿಭೆಯಿಂದ ಸಿವಿಲ್ ಸರ್ವೀಸ್ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಸ್ಪರ್ಧಿಸುತ್ತಾರೆ. ಅವರಲ್ಲನೇಕರು ಎಂ.ಬಿ.ಎ ಪದವಿ ಪಡೆದನಂತರ ಬಟ್ಟೆಬರೆ ಮತ್ತು ಆಹಾರ ಸಾಮಗ್ರಿಗಳ ಮಾರಾಟದತ್ತ ಒಲವು ತೋರಿಸುತ್ತಾರೆ. ಹೀಗೆ ನಾವು ಅವರ ಪ್ರತಿಭೆಯ ಉತ್ತಮಾಂಶಗಳನ್ನು ಪಡೆದುಕೊಳ್ಳುವುದರಲ್ಲಿ ವಂಚಿತರಾಗುತ್ತೇವೆ. ಏನೇ ಆದರೂ ವಿಜ್ಞಾನಿಗಳು ಇತರ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡರೆ ಎಷ್ಟು ವೇತನ ಪಡೆಯುತ್ತಿದ್ದರೋ ಅದಕ್ಕಿಂತ ಮಿಗಿಲಾದ, ಉತ್ತಮವಾದ ವೇತನವನ್ನು ಪಡೆಯಬೇಕು. ಉದ್ಯೋಗಶೀಲತೆಯನ್ನು ಪ್ರೋತ್ಸಾಹಿಸದೇ ಇರುವ ರಾಷ್ಟ್ರವಾಗಿದೆ ನಮ್ಮದು. ಓರ್ವ ಯುವಕ ಈ ದಿಸೆಯಲ್ಲಿ ನಡೆಯಲು ಪ್ರಯತ್ನಿಸಿದರೆ ಯಾವುದೇ ಉದ್ಯಮವನ್ನು ಪ್ರಾರಂಭಿಸಲು ಅಗತ್ಯವಾದ ಯಾವುದೇ ಬಗೆಯ ಬೆಂಬಲವು ಅವನಿಗೆ ಲಭ್ಯವಾಗುವುದಿಲ್ಲ. ತರಬೇತಿ ಹೊಂದಿದ ವ್ಯಕ್ತಿಯು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಗುವಾಗ ಆತನ ವೈಮಾನಿಕ ಪ್ರಯಾಣದ ಮೇಲೆ ಅಂತರರಾಷ್ಟ್ರೀಯ ಕರವನ್ನು ಹೇರಬೇಕೆಂಬ ಸಲಹೆ ಒಂದಿದೆ. ಉದಾಹರಣೆಗೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳು ತಮ್ಮ ರಾಷ್ಟ್ರದಲ್ಲಿ ಉದ್ಯೋಗದಲ್ಲಿರುವ ಭಾರತೀಯರಿಂದ ಸುಂಕವನ್ನು ಕಡಿತ ಮಾಡಿ ಅದನ್ನು ಭಾರತಕ್ಕೆ ಪಾವತಿಸಬೇಕು. ಆದಾಗ್ಯೂ, ಈ ಸಲಹೆಗೆ ಎಲ್ಲ ರಾಷ್ಟ್ರಗಳ ಸಮಗ್ರ ಸಮ್ಮತಿ ದೊರಕಿಲ್ಲ. ಕೆಲವು ಸಂದರ್ಭಗಳಲ್ಲಿ ರಾಷ್ಟ್ರೀಯ ಪ್ರಾಮುಖ್ಯತೆ ಇರುವ ಸಂಸ್ಥೆಗಳಿಂದ ಪ್ರಾಜ್ಞರನ್ನು ಸಮುದಾಯದಿಂದಲೇ ಹೊರಹಾಕಿರುತ್ತಾರೆ. ಏಕೆಂದರೆ ರಾಷ್ಟ್ರದಲ್ಲಿ ಅವರ ಪ್ರತಿಭೆಯನ್ನು ಬಳಸಿಕೊಳ್ಳಲು ಅವಕಾಶಗಳೇ ಇರುವುದಿಲ್ಲ. ಆದ್ದರಿಂದ ಅವರು ಎಲ್ಲಿ ಉತ್ತಮವಾದ ಬಾಳನ್ನು ಬಾಳಲು ಸಾಧ್ಯವಾಗುತ್ತದೆಯೇ ಅಂತಹ ವಿದೇಶಗಳಲ್ಲಿ ಅವಕಾಶಗಳನ್ನು ಅರಸಿಕೊಂಡು ಹೋಗುತ್ತಾರೆ.

Digitised by Bharatavani, CIIL

**ನಗರ-ಗ್ರಾಮಾಂತರ ವಿಭಾಗ:**

ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಈ ಸಮಸ್ಯೆಯು ಸಮಾಜೋ-ಆರ್ಥಿಕ ಸಂದರ್ಭಗಳ ಮೇಲೆ ಪ್ರಭಾವ ಬೀರಿದೆ. ಸಾಮಾನ್ಯವಾಗಿ ಉನ್ನತ ಶಿಕ್ಷಣ, ಅದರಲ್ಲೂ ಮುಖ್ಯವಾಗಿ ತಾಂತ್ರಿಕ ಶಿಕ್ಷಣವು ಗ್ರಾಮೀಣ ಯುವಕರ ಆಶೋತ್ತರಗಳನ್ನು ಕಡೆಗಣಿಸಿ, ಸಮಾಜದ ಗಣ್ಯರನ್ನು ಉದ್ದೇಶಿಸಿದ್ದು ತನ್ಮೂಲಕ ಗ್ರಾಮೀಣ-ನಗರ ವಿಭಾಗಗಳನ್ನು ಉಂಟುಮಾಡಿದೆ. ಪ್ರಮುಖ ಸಂಸ್ಥೆಗಳಲ್ಲಿ ಪ್ರವೇಶ ಮಾನದಂಡವೂ ಸಹ ನಗರಗಳತ್ತಲೇ ಉದ್ದೇಶಿಸಿದ್ದು ಗ್ರಾಮೀಣ ಯುವಕರು ಅದರಲ್ಲೂ ಯಶಸ್ಸನ್ನು ಕಾಣುವುದು ಅಪರೂಪವೇ ಆಗಿದೆ. ಈ ದಿನಗಳಲ್ಲಿರುವ ಪ್ರವೃತ್ತಿಯೆಂದರೆ ನೀನು ಐಐಟಿಗೆ ಪ್ರವೇಶ ಪಡೆಯಬೇಕಾದರೆ ನೀನು ಯಾವುದಾದರೊಂದು ಉತ್ತಮವಾದ ಕೋಚಿಂಗ್ ಕೋರ್ಸ್‌ಗೆ ಸೇರಿಕೊಳ್ಳಲೇಬೇಕು. ಹೀಗಾಗಿ ಕೋಚಿಂಗ್ ಸಂಸ್ಥೆಗಳ ಒಂದು ಕೈಗಾರಿಕೆಯೇ ಬೆಳೆದಿದೆ. ಇದರ ಪರಿಣಾಮ ಅರಿಯಲು ತುಂಬಾ ದೂರ ಹೋಗಬೇಕಿಲ್ಲ. ಕೋಚಿಂಗ್ ಅಂಗಡಿಗಳಿಗೆ ಸೇರಿದವರು ಮಾತ್ರ ತೇರ್ಗಡೆಯಾಗುತ್ತಾರೆ. ಆದ ಕಾರಣ ಗ್ರಾಮೀಣ ಯುವಕರು ನಗರಗಳಿಗೆ ವಲಸೆ ಬರುತ್ತಾರೆ ಮತ್ತು ನಗರ ಪ್ರದೇಶಗಳ ಪ್ರತಿಭೆಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ವಲಸೆ ಹೋಗುತ್ತವೆ.

**ಪ್ರತಿಭಾ ಪಲಾಯನದ ಪ್ರಮುಖ ಅಂಶಗಳು:**

ಪ್ರತಿಭಾ ಪಲಾಯನದ ವಿವಿಧ ಅಂಶಗಳಿವೆ. ಅತಿ ಮುಖ್ಯವಾದವುಗಳಲ್ಲಿ ಕೆಲವು ಈ ಕೆಳಗಿನಂತಿವೆ (ಸುಖಾತ್ಮೆ, 1990);

ವೃತ್ತಿನಿರತರು ವಿದೇಶಗಳಿಗೆ ತೆರಳಲು ಪ್ರಭಾವ ಬೀರುವ ಕಾರಣಗಳು

1. ವಿದೇಶಗಳಲ್ಲಿನ ವಿಶಾಲವಾದ ಮತ್ತು ಉತ್ತಮವಾದ ಅವಕಾಶಗಳು
2. ಕುತೂಹಲ, ಸಾಹಸ ಮತ್ತು ಮುಕ್ತ ವಾತಾವರಣ
3. ಗೆಳೆಯರ/ಸಹಪಾಠಿಗಳ ಗುಂಪುಗಳು

ವೃತ್ತಿನಿರತರು ವಿದೇಶಗಳಿಗೆ ತೆರಳದಂತೆ ಪ್ರಭಾವ ಬೀರುವ ಅಂಶಗಳು

1. ಕುಟುಂಬದ ಜವಾಬ್ದಾರಿಗಳು
2. ರಾಷ್ಟ್ರೀಯ ಹೆಮ್ಮೆ
3. ಭಾರತದಲ್ಲಿ ಉತ್ತಮ ವೃತ್ತಿಪರ ಅವಕಾಶಗಳು

**ಹೊರದೇಶಗಳಲ್ಲಿಯೇ ನೆಲೆಸುವುದಕ್ಕೆ ಕಾರಣಗಳು:**

1. ಹೊರದೇಶಗಳಲ್ಲಿಯೇ ಉತ್ತಮವಾಗಿ ಹೊಂದಿಕೊಂಡಿರುವುದು
2. ಭಾರತದಲ್ಲಿನ ಕಡಿಮೆ ಹಾಗೂ ಸಾಕಾಗದ ವೇತನ
3. ಹೊರರಾಷ್ಟ್ರಗಳಲ್ಲಿ ಲಭ್ಯವಿರುವ ಶೈಕ್ಷಣಿಕ ಅನುಭವಗಳು

ಮಾತೃದೇಶಕ್ಕೆ ಹಿಂದಿರುಗಲು ತೀರ್ಮಾನಿಸುವುದಕ್ಕೆ ಕಾರಣಗಳು

1. ಕುಟುಂಬದ ನಂಟು
2. ಸಾಂಸ್ಕೃತಿಕ ಕಾರಣಗಳು
3. ಸ್ವದೇಶದಲ್ಲಿಯೇ ಲಭ್ಯವಿರುವ ಅವಕಾಶಗಳು

ಹೊರದೇಶಗಳಲ್ಲಿನ ಜೀವನದ ವಿವಿಧ ಅಂಶಗಳ ಮೇಲೆ ಯೋಗ್ಯತೆಯನ್ನು ನಿರ್ಣಯಿಸುವುದು

1. ಶೈಕ್ಷಣಿಕ ಮತ್ತು ವೃತ್ತಿಪರ ಬೆಳವಣಿಗೆಗೆ ಅವಕಾಶಗಳು
2. ಹಣಕಾಸಿನ ಅನುಕೂಲಗಳು
3. ಜ್ಞಾನ ಮತ್ತು ಕೌಶಲಗಳ ಉತ್ತಮ ಉಪಯೋಗಕ್ಕೆ ಇರುವ ಅವಕಾಶಗಳು

ವಿದೇಶಗಳಲ್ಲಿರುವ ವೃತ್ತಿನಿರತರು ನೀಡಲು ಅಪೇಕ್ಷಿಸುವ ಕಾಣಿಕೆಗಳ ವಿಧಗಳು

1. ಸಮಾಲೋಚನೆ
2. ಸವಾಲಾಗಿರುವ ಸಮಸ್ಯೆಗಳನ್ನು ಬಿಡಿಸುವುದು
3. ಶೈಕ್ಷಣಿಕ ಸಂಸ್ಥೆಗಳಿಗೆ ಕಿರು ಭೇಟಿ (ವಿನಿಮಯ, ಸಮಾಲೋಚನೆ ಇತ್ಯಾದಿ)

**ಪ್ರತಿಭಾ ಪಲಾಯನವನ್ನು ಪರಾಜಿತಗೊಳಿಸುವುದು**

ವಿಶ್ವದ ಆರ್ಥಿಕ ವ್ಯವಸ್ಥೆಯಲ್ಲಿ ನಮಗೆ ಪ್ರಮುಖ ಸ್ಥಾನ ನೀಡುವ ಎರಡು ಅಂಶಗಳಿವೆ. ಮೊದಲನೆಯದು, ಉತ್ತಮ ಖ್ಯಾತಿಯನ್ನು ಹೊಂದಿರುವ, ಸಮರ್ಥ ಇಂಜಿನಿಯರುಗಳನ್ನು ಹೊರತರುವ ಅನೇಕಾನೇಕ ತಾಂತ್ರಿಕ ಸಂಸ್ಥೆಗಳಿವೆ. ಎರಡನೆಯದು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಡನೆ ಉತ್ತಮ ಬಾಂಧವ್ಯವನ್ನು ಹೊಂದಲು ನಾವು ಅನೇಕ ವರ್ಷಗಳನ್ನು ಕಳೆದಿದ್ದೇವೆ. ಕಳೆದ ಹತ್ತು ವರ್ಷಗಳಿಂದ ಮುಂದುವರಿದ ರಾಷ್ಟ್ರಗಳಿಗೆ ಅದರಲ್ಲೂ ಮುಖ್ಯವಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಗೆ ಅಲ್ಲಿನ ಯೋಜನೆಗಳಿಗಾಗಿ ನಾವು ಕೇವಲ ಗುತ್ತಿಗೆ ಕೆಲಸಗಾರರನ್ನು ಒದಗಿಸುತ್ತಿದ್ದೇವೆ. ಯೂರೋಪ್ ಮತ್ತು ಜಪಾನ್‌ಗಳಿಗೆ ಇಷ್ಟೊಂದು ಮಂದಿಯನ್ನು ಒದಗಿಸುತ್ತಿಲ್ಲ. ವಿದೇಶಗಳ ಯೋಜನೆಗಳು ಸಂಪೂರ್ಣವಾಗಿ ಸಂಬಂಧಪಟ್ಟ ದೇಶಗಳ ಮೇಲ್ವಿಚಾರಕರಿಂದಲೇ ಮೇಲ್ವಿಚಾರಿಸಲ್ಪಡುತ್ತಿದ್ದವು. ಕೆಲವು ವರ್ಷಗಳಿಂದ ಈಚೆಗೆ ಈ ಕಂಪನಿಗಳು ಭಾರತೀಯ ಮೇಲ್ವಿಚಾರಕರ ಅಡಿಯಲ್ಲಿನ ಭಾರತೀಯ ಕಂಪನಿಗಳಲ್ಲಿ ಹೆಚ್ಚಿನ ನಂಬಿಕೆ, ವಿನ್ಯಾಸಗಳನ್ನು ವೃದ್ಧಿಪಡಿಸಿಕೊಂಡಿವೆ. ಭಾರತದಲ್ಲಿನ ಕಂಪನಿಗಳಲ್ಲಿ ಹೆಚ್ಚಿನ ಕೆಲಸ ನಡೆದಿದೆ ಎಂಬುದೇ ಇದಕ್ಕೆ ಕಾರಣ. ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್, ಮೋಟರೋಲಾ, ಮೈಕ್ರೊಸಾಫ್ಟ್, ಒರೆಕಲ್ ಮೊದಲಾದ ಅನೇಕ ಬೃಹತ್ತಾದ ಅಂತರರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ತಮ್ಮ ಮಳಿಗೆಗಳನ್ನು ಮುಖ್ಯವಾಗಿ ಬೆಂಗಳೂರು, ಮುಂಬೈ ಮತ್ತು ದೆಹಲಿಗಳಲ್ಲಿ ಹಾಗೂ ಹೈದರಾಬಾದ್, ಜೈಪುರ ಇತ್ಯಾದಿ ನಗರಗಳಲ್ಲಿಯೂ ಪ್ರಾರಂಭಿಸಿವೆ. ಬ್ರಿಟ್ಸ್ ಈ ಐ ಗ್ರೂಪ್ ಮತ್ತು ಲಾಜಿಕಾ ಮೊದಲಾದ ಕೆಲವು ಪಾಶ್ಚಿಮಾತ್ಯ ಕಂಪನಿಗಳು ಭಾರತೀಯ ಕಂಪನಿಗಳನ್ನು ಖರೀದಿಸುತ್ತಿವೆ. Cisco ಮತ್ತು 3 Com

Digitised by Bharatavani, CIIL

ನಂತಹ ಕೆಲವು ಕಂಪನಿಗಳು ನಮ್ಮ ದೇಶೀಯ ಕಂಪನಿಗಳೊಡನೆ ಉದಾಹರಣೆಗೆ Tata Consultancy Services, HCL, ವಿಪ್ರೋ, ಇನ್‌ಪೋಸಿಸ್‌ಗಳೊಡನೆ ಜಂಟಿ ಉದ್ಯಮವನ್ನು ನಡೆಸುತ್ತಿವೆ. ಸ್ವಿಸ್‌ಏರ್, ಯುನೈಟೆಡ್ ಏರ್‌ಲೈನ್ಸ್, ಸಿಂಗಪೂರ್ ಏರ್‌ಲೈನ್ಸ್, ಬ್ರಿಟಿಷ್ ಏರ್‌ವೇಸ್, ಅಮೇರಿಕನ್ ಎಕ್ಸ್‌ಪ್ರೆಸ್, ಸಿಟಿಕಾರ್ಪ್ ಮತ್ತು ಮರ್ಗನ್ ಸ್ಟ್ಯಾನ್‌ಲೇ, ಮೊದಲಾದ Non IT ಕಂಪನಿಗಳೂ ತಮ್ಮ ತಂತ್ರಾಂಶಗಳಿಗಾಗಿ ನಮ್ಮಲ್ಲಿಗೆ ಬರುತ್ತಿವೆ.

ನಮ್ಮಲ್ಲಿನ ಬಹುತೇಕ ತಂತ್ರಾಂಶ ತಜ್ಞರು ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಗೆ ಹೋಗುತ್ತಾರೆ. ನಮ್ಮಲ್ಲಿನ ಸುಮಾರು 60% ತಂತ್ರಾಂಶಗಳು (ಅಂದಾಜು ಬೆಲೆ 4.00 ಬಿಲಿಯನ್ ಅಮೆರಿಕನ್ ಡಾಲರುಗಳು) USAಗೆ ಹೋದರೆ ಸುಮಾರು ಶೇಕಡ 23 ಭಾಗ ಯೂರೋಪ್‌ಗೆ ಹೋಗುತ್ತಿದೆ. Siemens (Germany), ಬ್ರಿಟಿಷ್ ಟೆಲಿಕಾಂ, Dentsche ಬ್ಯಾಂಕ್ ಮೊದಲಾದ ಬಹುದೊಡ್ಡ ಉದ್ಯಮಗಳ ಸರಣಿಯೇ ಭಾರತೀಯ ಇಂಜಿನಿಯರ್‌ಗಳನ್ನು ಅವಲಂಬಿಸಿವೆ. ಜಪಾನ್ ದೇಶವು ನಮ್ಮ ರಫ್ತಿನ ಶೇಕಡ 4.00 ಭಾಗವನ್ನು ಆಮದು ಮಾಡಿಕೊಳ್ಳುತ್ತಿದೆ. ಸೋನಿ, ಓಇಅ ಮೊದಲಾದವು ತೋರುತ್ತಿರುವ ತೀವ್ರಾಸಕ್ತಿಯ ಫಲವಾಗಿ ಇದು ಅಧಿಕವಾಗುತ್ತಿದೆ. ನಮ್ಮ ಇಂಜಿನಿಯರಿಂಗ್ ಪದವೀಧರರಲ್ಲಿ ಅತಿ ಹೆಚ್ಚು ಮಂದಿ ಜಪಾನೀಸ್ ಭಾಷೆಯನ್ನು ಕಲಿಯಲಾರಂಭಿಸಿದ್ದಾರೆ. ನಾಸ್‌ಕಾಮ್ (Nass com) ಪ್ರಕಾರ ಭಾರತದಲ್ಲಿ 2,80,000 ತಂತ್ರಾಂಶ ಇಂಜಿನಿಯರ್‌ಗಳು ಇದ್ದಾರೆ. ಗಖಂನಲ್ಲಿ ತಂತ್ರಾಂಶ ಇಂಜಿನಿಯರ್‌ಗಳ ಕೊರತೆ ಹಾಗೂ ಇಂಟರ್‌ನೆಟ್ ಬೆಳವಣಿಗೆಗಳಿಂದಾಗಿ ನಮ್ಮ ಇಂಜಿನಿಯರ್‌ಗಳಿಗೆ ಬೇಡಿಕೆ ಹೆಚ್ಚುತ್ತಲೇ ಹೋಗುತ್ತದೆ ಎಂದು ಭಾವಿಸಬಹುದು. ತಂತ್ರಾಂಶದ ರಫ್ತು ಕಳೆದ 5 ವರ್ಷಗಳಲ್ಲಿ ಪ್ರತಿವರ್ಷ ಶೇಕಡ 55 ಕ್ಕಿಂತ ಅಧಿಕವಾಗಿದೆ ಎಂದು ನಾಸ್‌ಕಾಮ್ ತಿಳಿಸುತ್ತದೆ. ತಂತ್ರಾಂಶ ರಫ್ತು ಮಾಡುವ ಮೊದಲ 5 ಭಾರತೀಯ ಕಂಪನಿಗಳೆಂದರೆ ಟಾಟಾ ಕನ್‌ಸಲ್ಟೆನ್ಸಿ ಸರ್ವೀಸಸ್ (ಕಳೆದ ವರ್ಷ ರಫ್ತು ಮಾಡಿರುವ ತಂತ್ರಾಂಶದ ಮೌಲ್ಯ 150 ಲಕ್ಷ ರೂ.ಗಳು), ವಿಪ್ರೋ (63 ಲಕ್ಷ ರೂ), ಪೆನ್ಟಾಪೋರ್ ಸಾಫ್ಟ್‌ವೇರ್ ಅಂಡ್ ಎಕ್ಸ್‌ಪೋರ್ಟ್ಸ್(40 ಲಕ್ಷ ರೂ.), ಇನ್‌ಫೋಸಿಸ್ ಟೆಕ್ನಾಲಜೀಸ್ (50 ಲಕ್ಷ ರೂ) ಮತ್ತು ನಿಟ್ (NIIT) (40 ಲಕ್ಷ ರೂ). ಈ ಗುಂಪಿಗೆ ಸೇರುವ ಇನ್ನೂ ಅನೇಕ ಕಂಪನಿಗಳು ಇವೆ.

ಅನೇಕ ಭಾರತೀಯರು ತಂತ್ರಾಂಶ ಇಂಜಿನಿಯರಿಂಗ್ ಉದ್ಯಮಕ್ಕಾಗಿ ನಮ್ಮ ದೇಶದಿಂದ ಪರದೇಶಗಳಿಗೆ ತೆರಳುತ್ತಾರೆ. ಇದೂ ಕೂಡ ಧನಾತ್ಮಕವಾಗಬಹುದು. ಹೇಗೆಂದರೆ ಸಿಲಿಕಾನ್ ಕಣಿವೆ ಮತ್ತು ನಮ್ಮ ತಂತ್ರಾಂಶ ಪ್ರತಿಭೆಗೆ ಬಲವಾದ ಮಾರುಕಟ್ಟೆ ಬೇಡಿಕೆ ಇರುವ ಇತರ ಪ್ರದೇಶಗಳ ನಡುವೆ ಗಾಢವಾದ ಸಂಬಂಧ ಏರ್ಪಡುತ್ತಿದೆ. ಅನೇಕ ಮಂದಿ ನಮ್ಮ ದೇಶದಲ್ಲಿಯೇ ಉಳಿದು ಇಲ್ಲಿನ ಕೈಗಾರಿಕೆಗಳಲ್ಲಿಯೇ ಕೆಲಸ ಮಾಡುತ್ತಾರೆ. ಇದರಿಂದಲೇ ಬಾರತವು ವಿಶ್ವದ ತಂತ್ರಾಂಶ ರೂಪಿಸುವ ರಾಷ್ಟ್ರಗಳಲ್ಲಿ ಮೊದಲ ಸ್ಥಾನ ಪಡೆದಿದೆ. ನಮ್ಮಲ್ಲಿಗೆ ಅನೇಕ ಕಂಪನಿಗಳು ಇನ್‌ಪೋಸಿಸ್‌ನ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಾಸ್‌ಡಾಕ್ (Nasdaq) ಪಟ್ಟಿಯಲ್ಲಿ ತಮ್ಮ ಹೆಸರು ಇರುವಂತೆ ನೋಡಿಕೊಳ್ಳುತ್ತವೆ. ಈ ಕಂಪನಿಗಳು ತಮ್ಮ ಕಂಪನಿಯ ಷೇರುಗಳನ್ನು ನಮ್ಮ ಇಂಜಿನಿಯರ್‌ಗಳಿಗೆ ನೀಡುವ ಮೂಲಕ ಅವರನ್ನು ಕಂಪನಿಯಲ್ಲಿಯೇ ಉಳಿಸಿಕೊಳ್ಳುತ್ತವೆ. ಹೀಗಾಗಿ ಹೆಚ್ಚು ಹೆಚ್ಚು ಮಂದಿ ಇಲ್ಲಿಯೇ ಉಳಿಯುತ್ತಾರೆ. ಸಾಕಷ್ಟು ಹಣ ಸಂಪಾದನೆಯಾಗುವಂತಿದ್ದರೆ ಅನೇಕರು ಸ್ವದೇಶದಲ್ಲಿಯೇ ಉಳಿಯುತ್ತಾರೆ. ಏಕೆಂದರೆ ಅವರ ಕುಟುಂಬವರ್ಗ ಹಾಗೂ ಗೆಳೆಯರು ಇಲ್ಲಿಯೇ ಇದ್ದಾರೆ ಮತ್ತು ಇಲ್ಲಿಯ ಜೀವನವು ಅಮೇರಿಕಾದಲ್ಲಿ ಇರುವುದಕ್ಕಿಂತ ಸರಳವೂ, ಸುಲಭವೂ ಆಗಿರುತ್ತದೆ. ಅದರಲ್ಲೂ ಮುಖ್ಯವಾಗಿ ನಮ್ಮ ಸಮಾಜ ವ್ಯವಸ್ಥೆ ಹಾಗು ಸಂಸ್ಕೃತಿಗಳಿಂದಾಗಿ ಇದು ಸಾಧ್ಯ.

ಫಿಲಿಪೀನ್ಸ್, ಚೀನಾ ಮತ್ತು ಪೂರ್ವ ಯೂರೋಪ್‌ಗಳಿಂದ ಸ್ಪರ್ಧೆ ಇದೆ ಎಂದು ಸಾಕಷ್ಟು ಮಾತುಗಳು ಬಂದಿವೆ. ಆದರೆ ನಾಸ್‌ಕಾಂನ ಆರ್ಥಿಕ ನೆರವಿನ ಯೋಜನೆಯೊಂದರ ವರದಿಯು ಭಾರತವು ಇತರ ಎಲ್ಲ ಸ್ಪರ್ಧಿಗಳನ್ನು ನಮ್ಮ ತಾಂತ್ರಿಕ ಕುಶಲತೆ, ಕಾರ್ಯ ನಿರ್ವಹಿಸುವ ಸಾಮರ್ಥ್ಯ, ಕಡಿಮೆ ವೆಚ್ಚ ಮತ್ತು ಇಂಗ್ಲಿಷ್ ಭಾಷಾ ಕೌಶಲಗಳಿಂದ ಪರಾಭವಗೊಳಿಸುತ್ತದೆ ಎಂಬುದಾಗಿ ತಿಳಿಸುತ್ತದೆ. ಆದ್ದರಿಂದ ಇವುಗಳಲ್ಲಿ ಬಹುತೇಕ ಉದ್ಯೋಗಗಳು ಭಾರತದಲ್ಲಿಯೇ ಉಳಿಯುತ್ತವೆ ಮತ್ತು ಲಿಪ್ಯಂತರ (Transcription) ಮತ್ತು ದತ್ತಾಂಶಗಳನ್ನು ಅಭಿವೃದ್ಧಿಪಡಿಸುವ ಪಾತ್ರಗಳನ್ನು ವೃದ್ಧಿಪಡಿಸುತ್ತಲೇ ಸಾಗಬೇಕಾಗಿದೆ. ಈ ಮಟ್ಟವನ್ನು ಮುಟ್ಟಲು ಅನೇಕ ವರ್ಷಗಳೇ ಕಳೆದಿವೆ. ನಮ್ಮ ವ್ಯವಹಾರವನ್ನು ಮತ್ತು ಪ್ರಸಿದ್ಧಿಯನ್ನು ನಿರ್ಮಿಸಲು ನಮ್ಮಲ್ಲಿ ಒಂದು ಸೂತ್ರವಿದೆ. ಇದರಿಂದ ಭಾರತದಲ್ಲಿಯೇ ಉದ್ಯೋಗಗಳನ್ನು ಇಟ್ಟುಕೊಳ್ಳಬಹುದು ಮತ್ತು ಭವಿಷ್ಯದಲ್ಲಿ ನಮ್ಮ ಕಂಪನಿಗಳನ್ನು ವಿಸ್ತರಿಸಬಹುದು. 'ಪ್ರತಿಭಾ ಪಲಾಯನ'ವು ಕ್ಷೀಣಿಸುತ್ತಾ ಬರುತ್ತದೆ ಮತ್ತು ನಮ್ಮಲ್ಲಿ ಉಳಿಯುವುದರಿಂದ ನಮ್ಮ ವ್ಯವಹಾರ ಸಂಬಂಧಗಳ ನಂಟನ್ನು ಉಳಿಸಿಕೊಳ್ಳಲು ಸಹಾಯವಾಗುತ್ತದೆ. ಈ ಉತ್ಕರ್ಷವು ಒಂದು ವಿಶಾಲ ಗುಂಪಿನ ಜನರಿಗೆ ನೆರವಾಗುತ್ತದೆ. ವರದಿಗಳ ಪ್ರಕಾರ ವಿದೇಶ್ ಸಂಚಾರ್ ನಿಗಮ್ ಲಿಮಿಟೆಡ್ (ವಿಎಸ್‌ಎನ್‌ಎಲ್) ತನ್ನ ಇಂಟರ್‌ನೆಟ್ ಚಂದಾದಾರರ ನೆಲೆಯನ್ನು ಮಾರ್ಚ್ 2002ರಲ್ಲಿದ್ದ 3.5 ಲಕ್ಷವನ್ನು 2002ರ ಅಂತ್ಯದ ವೇಳೆಗೆ 4.5 ಲಕ್ಷಕ್ಕೆ ಏರಿಸಿದೆ. ಭಾರತದಂತಹ ರಾಷ್ಟ್ರಕ್ಕೆ ಇದು ಅತ್ಯಲ್ಪ. ಆದರೂ ಈ ಪ್ರವೃತ್ತಿಯು ಉತ್ತಮ ನಾಳೆಯ ಭರವಸೆಯನ್ನು ಸೂಚಿಸುತ್ತದೆ. ಈಗಲೂ ವಲಸಿಗರ ಪ್ರವಾಹವು ಅಮೇರಿಕಾದತ್ತಲೇ ಇದೆ. ಇವರಲ್ಲಿ ವ್ಯಾಪಕವಾಗಿ ಜ್ಞಾನದ ಕರ್ಮಚಾರಿಗಳೇ ಇದ್ದು ಅವರ ಉತ್ಪಾದನೆಯ ಮೇಲೆಯೇ ಇಂದಿನ ಆರ್ಥಿಕತೆ ನಿಂತಿದೆ.

ನಮ್ಮ ತಾಂತ್ರಿಕ ವ್ಯಕ್ತಿಗಳು ಸ್ವದೇಶಕ್ಕೆ ಮರಳದೇ ಇರುವುದಕ್ಕೆ ಅತಿ ಪ್ರಮುಖ ಕಾರಣವೆಂದರೆ ಅವರು ವಿದೇಶಗಳಲ್ಲಿ ಗಳಿಸಿರುವ ಅಪಾರವಾದ ಜ್ಞಾನದಿಂದ ಇಲ್ಲಿನ ಸಮಾಜದ ಅಡಿವ್ಯವಸ್ಥೆಗೆ

Digitised by Bharatavani, CIIL

ಅಪಾತ್ರರಾಗಿರುತ್ತಾರೆ. ಒಮ್ಮೆ ಟಾಲ್‌ಸ್ಟಾಯ್ ಅವರಿಗೆ ಒಂದು ಪ್ರಶ್ನೆ ಹಾಕಲಾಯಿತು: "ನೀವು ರಷ್ಯಾಕ್ರಾಂತಿಯ ಬಗ್ಗೆ ಒಂದು ಕಾದಂಬರಿಯನ್ನು ಏಕೆ ಬರೆದಿಲ್ಲ?" ಅದಕ್ಕೆ ಅವರ ಉತ್ತರ : "ಇದಕ್ಕೆ ಒಂದು ಸೂಕ್ತವಾದ ಚಾರಿತ್ರಿಕ ದೂರ ಇರಬೇಕು, ಆದರೆ ಅದು ಅಲ್ಲಿ ಇಲ್ಲ" ಅತ್ಯಾಧುನಿಕ ಜ್ಞಾನ ಹಾಗೂ ತಂತ್ರಗಳಿಗೆ ತೆರೆದುಕೊಂಡಿರುವಂತಹ ವ್ಯಕ್ತಿಗಳಿಗೆ ಅವರು ಹಿಂತಿರುಗಿ ಉತ್ಪನ್ನವಾಗಿರುವ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ಸೂಕ್ತ ಸಮಯ ನೀಡಬೇಕು. ಇದು ಶೀಘ್ರದಲ್ಲಿಯೇ ಸಂಭವಿಸುತ್ತದೆ. ಏಕೆಂದರೆ ಈ ಜ್ಞಾನದ ಕರ್ಮಚಾರಿಗಳಿಗೆ ಅಧಿಕಾರವನ್ನು ವರ್ಗಾಯಿಸಿ ರಾಜಕೀಯ ರಹಿತವಾಗಿಸುವ ಕ್ರಿಯೆಯು ಇಡೀ ಪ್ರಪಂಚವನ್ನು ತನ್ನೊಂದಿಗೆ ಸೆಳೆದುಕೊಂಡು ಹೋಗುತ್ತಿದೆ.

ಭಾರತೀಯ ಸಂಸ್ಕೃತಿ, ಭಾಷೆ ಮತ್ತು ಶಿಕ್ಷಣ ವ್ಯವಸ್ಥೆಗಳು ಗಣಿತ ಮತ್ತು ಕಂಪ್ಯೂಟರ್ ಕೋಡ್ ಬರವಣಿಗೆಯಲ್ಲಿ ಇತರರನ್ನು ಮೀರಿಸಬಲ್ಲ ವಿದ್ಯಾರ್ಥಿಗಳನ್ನು ತಯಾರಿಸುತ್ತದೆ. ಸಿಲಿಕಾನ್ ಕಣಿವೆಯ ವಾಣಿಜ್ಯೋದ್ಯಮ ಹಾಗೂ ಐಐಟಿಯ ಹಿರಿಯ ವಿದ್ಯಾರ್ಥಿಯೋರ್ವರು ಭಾರತೀಯ ಮನಸ್ಸು ತತ್ವಶಾಸ್ತ್ರ ನಿರತವಾಗಿರುವುದರಿಂದ ಅದು ಸ್ವತಂತ್ರ ಚಿಂತನೆಯನ್ನು ಉತ್ತೇಜಿಸುತ್ತದೆ. ಎಂದು ಹೇಳಿದ್ದಾರೆ. 'ಭಾರತೀಯರು ಗಣಿತಶಾಸ್ತ್ರಜ್ಞರು'. ಭಾರತದ ಗಣಿತ ಶಾಸ್ತ್ರದ ಬಗೆಗಿನ ಕೀರ್ತಿಯು ಇಂಗ್ಲಿಷ್ ಮಾತನಾಡುವ ಜನತೆಯ ಜೊತೆ ಸೇರಿಕೊಂಡು ಪಶ್ಚಿಮದ ಅನೇಕ ಕಂಪನಿಗಳು ಭಾರತದ ಅತ್ಯುತ್ತಮ ಮತ್ತು ಅತಿ ಪ್ರತಿಭಾವಂತರಲ್ಲಿ ಕೆಲವರನ್ನು ಸೆಳೆದುಕೊಳ್ಳಲು ಕಾರಣವಾಗಿದೆ. ಐಐಟಿಗಳು ತಮ್ಮ ಅನೇಕ ಹಳೆಯ ವಿದ್ಯಾರ್ಥಿಗಳು ಪಾಶ್ಚಿಮಾತ್ಯ ಸಂಸ್ಥೆಗಳ ಪ್ರಧಾನ ಕಾರ್ಯಕರ್ತರಾಗಿದ್ದಾರೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತವೆ. ಅದರಲ್ಲಿ ಗಖ ಏರ್‌ವೇಸ್‌ನ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿ (CEO) ಹಾಗೂ ಸನ್ ಮೈಕ್ರೋಸಿಸ್ಟಂನ ಸಹ–ಸ್ಥಾಪಕರು ಇದ್ದಾರೆ.

**ಪ್ರತಿಲೋಮ ಪ್ರಕ್ರಿಯೆ – ಪ್ರತಿಭಾ ಘಾಯಿದೆ.**

ಆದರೆ ಈಚೆಗೆ ಪ್ರತಿಭಾ ಪಲಾಯನವು ವ್ಯತಿರಿಕ್ತವಾಗುತ್ತಿರುವ ಸಂಕೇತಗಳು ಕಾಣುತ್ತಿವೆ. ಅನೇಕರು ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಸ್ಥಾಪನೆಗೊಂಡಿದ್ದು, ಸಂಪರ್ಕಗಳನ್ನು ವೃದ್ಧಿಗೊಂಡಿಸಿಕೊಂಡಿದ್ದು, ಅಪಾರ ಹಣವನ್ನು ಸಂಪಾದನೆ ಮಾಡಿದ್ದು ಈಗ ಸ್ವದೇಶದತ್ತ ದೃಷ್ಟಿ ಬೀರುತ್ತಿದ್ದಾರೆ. ಅವರು ಹಣವನ್ನು ಮತ್ತು ವ್ಯವಹಾರ ಸಂಪರ್ಕಗಳನ್ನು ಹಿಂದಕ್ಕೆ ತರುತ್ತಿದ್ದಾರೆ. ಇದೊಂದು ಸಂತಸದ ನಿರೀಕ್ಷೆಯಾಗಿದೆ.

ನೀವು ಭಾರತೀಯರನ್ನು ಭಾರತದಿಂದ ಯಾವುದೇ ಸ್ಥಳಕ್ಕೆ ಕರೆತರಬಹುದು. ಆದರೆ ನೀವು ಮಾಡಲು ಅಸಾಧ್ಯವಾದುದೆಂದರೆ ಭಾರತೀಯರಿಂದ ಭಾರತವನ್ನು ದೂರವಿಡಲಾರಿರಿ ಎಂದು ಭಾರತೀಯ ಮೂಲದ ಸಿಲಿಕಾನ್ ಕಣಿವೆಯ ವಾಣಿಜ್ಯೋದ್ಯಮಿಯೋರ್ವನ ಹೇಳಿಕೆ. "ನೀವು ಈಗಲೂ ಭಾರತಕ್ಕೆ ಸೇರಿರುವ ಮತ್ತು ಅದರ ಮೂಲಗಳಿಗೆ ಸಂಬಂಧಿಸಿರುವ ಭಾವನೆಯನ್ನು ಹೊಂದಿರುತ್ತೀರಿ." ಇಂಟರ್‌ನೆಟ್‌ನ ವೇಗ ಮತ್ತು ಸುಲಭ ಗಮ್ಯತೆಗಳು ವಾಣಿಜ್ಯೋದ್ಯಮಿಗಳಿಗೆ ಪಶ್ಚಿಮಕ್ಕೆ ಹೋಗದೆ ಭಾರತದಲ್ಲಿಯೇ ಅಭಿವೃದ್ಧಿ ಹೊಂದಲು ಸಾಧ್ಯ ಮಾಡಿವೆ.

ಭಾರತದಿಂದ ಅಮೇರಿಕಾಕ್ಕೆ ವಲಸೆಹೋಗಿ ತಂತ್ರಜ್ಞಾನವು ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ ತಾವೂ ಅತಿ ಉತ್ತಮ ಸ್ಥಿತಿಗೆ ಬಂದವರು ತಾವು ಬಹು ಹಿಂದೆ ವ್ಯಾಸಂಗ ಮಾಡಿದ ಸಂಸ್ಥೆಗಳಿಗೆ ತಮ್ಮ ಋಣವನ್ನು ತೀರಿಸಲು ಒಬ್ಬರಿಗೊಬ್ಬರು ಪೈಪೋಟಿ ನಡೆಸುತ್ತಿದ್ದಾರೆ. ಉದಾರವಾದ ಧನ ಸಹಾಯದ ವಾಗ್ದಾನ ಮಾಡಿದ್ದಾರೆ ಮತ್ತು ಅದನ್ನು ನಡೆಸಿಕೊಡುತ್ತಿದ್ದಾರೆ. ಸಿಲಿಕಾನ್ ಕಣಿವೆಯ ಹಿರಿಯರೊಬ್ಬರು ಭಾರತದಲ್ಲಿ ಮಾಹಿತಿ ತಂತ್ರಜ್ಞಾನ ಶಾಲೆಯೊಂದರ ನಿರ್ಮಾಣಕ್ಕೆ ಧನಸಹಾಯ ಮಾಡಿದ್ದಾರೆ. ವಿಶ್ವದರ್ಜೆಯ ಉನ್ನತ ಕಲಿಕಾ ಕೇಂದ್ರಗಳ ಸರಣಿಯೊಂದನ್ನು ತಮ್ಮ ಸ್ವದೇಶದಲ್ಲಿ ಸ್ಥಾಪಿಸಲು ತಂತ್ರಾಂಶ ಇಂಜಿನಿಯರುಗಳ ಒಂದು ಗುಂಪು ಒಂದು ಬಿಲಿಯನ್ ಡಾಲರ್‌ಗಳನ್ನು ಸಂಗ್ರಹಿಸಲು ಪ್ರಾರಂಭಿಸಿದ್ದಾರೆ. ಈ ವಲಸೆಗಾರರ ಆರಂಭದ ಹೆಜ್ಜೆಗಳನ್ನು ಎರಡೂ ರಾಷ್ಟ್ರಗಳ ರಾಜಕೀಯ ಮುಖಂಡರು ಸಂಪೂರ್ಣವಾಗಿ ಬೆಂಬಲಿಸುತ್ತಿದ್ದಾರೆ. ಈ ಎಲ್ಲ ಮೊದಲ ಹೆಜ್ಜೆಗಳು ಕಳೆದ ಕೆಲವು ದಶಕಗಳಲ್ಲಿ ಭಾರತದಿಂದ ಆದ ಬೃಹತ್ ಪ್ರಮಾಣದ ಪ್ರತಿಭಾ ಪಲಾಯನದ ಬಹುಕಾಲದಿಂದ ನಿರೀಕ್ಷಿಸಲ್ಪಟ್ಟ ಪ್ರತಿಫಲವೇ? ಕಳೆದ ವರ್ಷ ಮಾರ್ಚ್ 5 ರಂದು ಅನಿವಾಸಿ ಭಾರತೀಯರು ವಿಜ್ಞಾನ ಮತ್ತು ತಂತ್ರಜ್ಞಾನದ ವಿಶ್ವವ್ಯಾಪಕ ಸಂಸ್ಥೆಗಳು (GIST) ಎಂಬ ಹೆಸರಿನ ಖಾಸಗಿ ಸಂಶೋಧನಾ ಸಂಸ್ಥೆಗಳ ಸರಣಿಯನ್ನು ಪ್ರಾರಂಭಿಸಲು ಒಂದು ಬಿಲಿಯನ್ ಅಮೆರಿಕನ್ ಡಾಲರುಗಳನ್ನು ಸಂಗ್ರಹಿಸಲು ಯೋಜಿಸಿದ್ದಾರೆ. ಈ ಸಂಸ್ಥೆಗಳನ್ನು ಪ್ರಾರಂಭಿಸಬೇಕೆಂದಿರುವ ಸ್ಥಳಗಳನ್ನು ಇನ್ನು ಅಂತಿಮಗೊಳಿಸಬೇಕಾಗಿದೆ. ಇವು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್‌ಲೆಗೆ ಒಂದಲ್ಲಾ ಒಂದು ರೀತಿಯಲ್ಲಿ ತಳಕು ಹಾಕಿಕೊಂಡಿರುತ್ತವೆ.

ವಿಜ್ಞಾನ ಮತ್ತು ತಂತ್ರಜ್ಞಾನದ ವಿಶ್ವವ್ಯಾಪಕ ಸಂಸ್ಥೆಗಳ (GIST) ಪ್ರವರ್ತಕರು ವಿಶ್ವಮಟ್ಟದ ಶಿಕ್ಷಣ ಹಾಗೂ ಸಂಶೋಧನೆಯ ಉತ್ಕೃಷ್ಟ ಮಟ್ಟದ ಆರು ಕೇಂದ್ರಗಳನ್ನು ನಿರ್ಮಿಸಲು ಅಪೇಕ್ಷಿಸಿದ್ದಾರೆ. ಸಂಶೋಧನೆಯ ಕೇಂದ್ರವು ಜೀವ ವಿಜ್ಞಾನಗಳು, ಭೌತಿಕ ವಿಜ್ಞಾನಗಳು ಮತ್ತು ಇಂಟರ್‌ನೆಟ್ ಹಾಗೂ ಕಂಪ್ಯೂಟಿಂಗ್ ಮೊದಲಾದ 'ಸೂರ್ಯೋದಯ' ವಿದ್ಯಾವಿಭಾಗಗಳಾಗಿರುತ್ತವೆ. GIST ಒಂದು ಸಕ್ರಿಯ ಕಾವು ಪೆಟ್ಟಿಗೆಯಂತೆ ವರ್ತಿಸಲು ಸಾಧ್ಯವಾಗುತ್ತದೆ ಹಾಗೂ ಹೊಸ ಆರ್ಥಿಕ ಸ್ಥಿತಿಯಲ್ಲಿ ಹೊಸ ಕಂಪನಿಗಳ ಈ ಕಾವು ಪೆಟ್ಟಿಗೆಯ ಸುತ್ತ ನ್ಯೂಕ್ಲಿಯಸ್/ ಕೇಂದ್ರವಾಗಿ ಬೀಜೀಕರಿಸುತ್ತವೆ.

ಈ ಪ್ರಯೋಗವು ಯಶಸ್ವಿಯಾದರೆ ಈ ಪರಿಕಲ್ಪನೆಯನ್ನು ಗ್ರಾಮಾಂತರ ಕಾಲೇಜುಗಳಿಗೂ ಮತ್ತು ಶಾಲೆಗಳಿಗೂ ವಿಸ್ತರಿಸಿ ಶಿಕ್ಷಣದ ಗುಣಮಟ್ಟವನ್ನು ಉನ್ನತೀಕರಿಸಲಾಗುವುದು ಮತ್ತು ಉತ್ತಮ ಶಿಕ್ಷಕರು ತಂತ್ರಜ್ಞಾನವನ್ನು ಉಪಯೋಗಿಸುವುದರ ಮೂಲಕ

Digitised by Bharatavani, CIIL

ಅವರು ವಿಶಾಲವಾದ ವಿದ್ಯಾರ್ಥಿ ಸಮುದಾಯವನ್ನು ತಲುಪಲು ಸಾಧ್ಯವಾಗುವಂತೆ ಅವರನ್ನು ಉತ್ತಮವಾಗಿ ಬಳಸಿಕೊಳ್ಳಲಾಗುವುದು. ಧನಾಢ್ಯರಾದ ಅನಿವಾಸಿ ಭಾರತೀಯರು ಹಠಾತ್ತಾಗಿ ಈ ರೀತಿಯ ನೆರವು ನೀಡುವ ಪ್ರವೃತ್ತಿಯಲ್ಲಿ ಏಕಿದ್ದಾರೆ? ಸುಮಾರು 300 ಮಿಲಿಯನ್ ಅಮೆರಿಕನ್ ಡಾಲರ್ ಸಂಪನ್ಮೂಲವನ್ನು ಹೊಂದಿರುವ ಕಾವಲ್ ಎಸ್. ರೇಖಿಯವರು ಈಗಾಗಲೇ ಮುಂಬೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (I I T) ಗೆ 5 ಮಿಲಿಯನ್ ಡಾಲರ್‌ಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ತಾನು ವ್ಯಾಸಂಗ ಮಾಡಿದ ಹಿಂದಿನ ಶಾಲೆಯ ಋಣವನ್ನು ತೀರಿಸಲು ನೀಡಿರುವ ದೇಣಿಗೆಯನ್ನು ಒಂದು ಮಾಹಿತಿ ತಂತ್ರಜ್ಞಾನ ಶಾಲೆಯನ್ನು ಸ್ಥಾಪಿಸಲು ಉಪಯೋಗಿಸಲಾಗಿದೆ ಮತ್ತು ಈ ಶಾಲೆಗೆ ಅವರ ಹೆಸರನ್ನು ಸೂಕ್ತವಾಗಿಯೇ ಇಡಲಾಗಿದೆ. ಇತರ ಐಐಟಿಗಳಲ್ಲೂ ಇದೇ ಬಗೆಯ ಅನೇಕ ನಿದರ್ಶನಗಳು ಇವೆ. ವಾಸ್ತವವಾಗಿ ಇದೊಂದು ಬೃಹತ್ ಪ್ರತಿಭಾ ಲಾಭ.

**ಮೂಲ: ಡಿ.ಟಿ. ತಿವಾರಿ**

**ಅನು: ವೆಂಕಟರಮಣ ಶೆಟ್ಟಿ ಸಿ.ಜಿ.**

## ಪ್ರಶ್ನೆ ಕೋಠಿ

### ಪ್ರಶ್ನೆ ಕೋಠಿಯ ಅರ್ಥ:

ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕೇಳಿಬರುತ್ತಿರುವ ಪರಿಕಲ್ಪನೆಗಳಲ್ಲಿ ಪ್ರಶ್ನೆ ಕೋಠಿಯೂ ಒಂದಾಗಿದೆ. ಮೌಲ್ಯಮಾಪನ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ರೂಪಿತಗೊಂಡಿರುವ ಈ ಪರಿಕಲ್ಪನೆಯು ವಿದ್ಯಾರ್ಥಿ ಸ್ನೇಹಿಯಾದ ಕಲಿಕಾರ್ಥಿಗಳ ಮೌಲ್ಯಮಾಪನಕ್ಕೆ ಸಹಾಯಕವಾದ ಪರಿಕಲ್ಪನೆಯಾಗಿದೆ. ಪ್ರಶ್ನೆ ಕೋಠಿ (Question Bank) ಎಂದರೆ ಪ್ರಶ್ನೆಗಳ ಆಗರ ಎಂದರ್ಥ. ಇದನ್ನು ಪ್ರಶ್ನೆಗಳ ಭಂಡಾರವೆಂದೇ ಹೇಳಬಹುದು. ಒಂದು ತರಗತಿಯ ನಿರ್ದಿಷ್ಟ ವಿಷಯದಲ್ಲಿ ಕಂಡುಬರುವ ಎಲ್ಲಾ ಪಾಠಗಳಿಗೆ ಅನುಗುಣವಾಗಿ ರೂಪಿಸಬಹುದಾದ ಎಲ್ಲ ಬಗೆಯ ಪ್ರಶ್ನೆಗಳ ಸಂಗ್ರಹವೇ ಪ್ರಶ್ನೆ ಕೋಠಿ. 1971ರಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘವು ಕೆಲವು ನಿರ್ದಿಷ್ಟ ವಿಷಯಗಳ ಪ್ರಶ್ನೆ ಕೋಠಿಯನ್ನು ರಚಿಸುವ ಯೋಜನೆಯನ್ನು ಹಾಕಿಕೊಂಡಿತು. ಈಗಾಗಲೇ ರಾಷ್ಟ್ರೀಯ ಶೈಕ್ಷಣಿಕ ಮತ್ತು ಸಂಶೋಧನಾ ಪರಿಷತ್ತಿನ (NCERT) ಪ್ರಯತ್ನದಿಂದ ಅನೇಕ ವಿಷಯಗಳಲ್ಲಿ ಪ್ರಶ್ನೆ ಕೋಠಿಗಳು ಸಿದ್ಧವಾಗಿವೆ.

### ಪ್ರಶ್ನೆಕೋಠಿಯ ಮಹತ್ವ:

ಪ್ರಶ್ನೆಕೋಠಿಯನ್ನು ಮೌಲ್ಯಮಾಪನ ಕ್ಷೇತ್ರಕ್ಕೆ ಒಂದು ಮಹತ್ವಪೂರ್ಣ ಕೊಡುಗೆಯೆಂದೇ ಪರಿಗಣಿಸಬೇಕು. ಇದು ಶಿಕ್ಷಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಸಮಾನವಾದ ಉಪಯುಕ್ತತೆಯನ್ನು ಹೊಂದಿದೆ. ಶಿಕ್ಷಕರ ದೃಷ್ಟಿಯಿಂದ ಅವರು ನೀಲನಕ್ಷೆಗೆ ಅನುಗುಣವಾಗಿ ಪ್ರಶ್ನೆಪತ್ರಿಕೆ ರಚಿಸಲು ಅದು ನೆರವಾಗುವುದು. ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಹೆಚ್ಚು ನಿಖರವಾಗಿ ಮತ್ತು ವಸ್ತುನಿಷ್ಠವಾಗಿ ನಡೆಸಲು ಹಾಗೂ ಉತ್ತರ ಪತ್ರಿಕೆಗಳನ್ನು ವಸ್ತುನಿಷ್ಠವಾಗಿ ಅಂಕ ನಿರ್ಧಾರ ಮಾಡಲು ಸಾಧ್ಯವಾಗುತ್ತದೆ.

ಪ್ರಶ್ನೆಕೋಠಿಯ ಪ್ರಶ್ನೆಗಳನ್ನು ವಿಷಯ ತಜ್ಞರು ಹಾಗೂ ಅನುಭವಿ ಶಿಕ್ಷಕರು ರಚನೆ ಮಾಡುವುದರಿಂದ ಅವು ಹೆಚ್ಚಿನ ಗುಣಮಟ್ಟವನ್ನು ಹೊಂದಿರುತ್ತವೆ. ಆದ್ದರಿಂದ ಇವುಗಳನ್ನು ಆಧರಿಸಿ ನಡೆಸುವ ಪರೀಕ್ಷೆಗಳೂ ಉತ್ತಮ ಮಟ್ಟದವುಗಳಾಗಿರುತ್ತವೆ. ತರಗತಿಯಲ್ಲಿನ ಪುನರಾವರ್ತನೆಯ ಅಭ್ಯಾಸಗಳಿಗೆ ಮತ್ತು ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ದಿಶಾಬದ್ಧವಾಗಿಸಿಕೊಳ್ಳಲು ಈ ಪ್ರಶ್ನೆಗಳು ಸಹಾಯ ಮಾಡುತ್ತವೆ. ಶಿಕ್ಷಕರಿಗೆ ಪರೀಕ್ಷಾ ಪ್ರಶ್ನೆ ಪತ್ರಿಕೆಗಳನ್ನು ರಚಿಸುವ ಕಾರ್ಯವು ಸುಗಮವಾಗಿ ಮತ್ತು ನಿರಾಯಾಸವಾಗಿ ನೆರವೇರುವಂತಾಗುವುದು. ಇದು ಶಿಕ್ಷಕರು ತಮ್ಮ ಬೋಧನೆಯ ಪರಿಣಾಮವನ್ನು ತಿಳಿದುಕೊಳ್ಳಲು ಹಾಗೂ ವಿದ್ಯಾರ್ಥಿಗಳು ತಮ್ಮ ಕಲಿಕಾ ಮಟ್ಟವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಪ್ರಶ್ನೆಕೋಠಿಯು ಘಟಕ, ಮಾಸಿಕ, ತ್ರೈಮಾಸಿಕ, ಅರೆವಾರ್ಷಿಕ ಮತ್ತು ವಾರ್ಷಿಕ ಹೀಗೆ ಅನೇಕ ರೀತಿಯಲ್ಲಿ ಜರುಗುವ ಮೌಲ್ಯಮಾಪನಾ ಪ್ರಕ್ರಿಯೆಗೆ ಸಹಾಯ ಹಸ್ತವನ್ನು ನೀಡುವುದು. ಹಾಗೆಯೇ ಬೋಧಿಸಿದ ಪಠ್ಯವಸ್ತುವಿಗೆ ಅನುಗುಣವಾಗಿ ಪರೀಕ್ಷೆ ನಡೆಸಲು ಮತ್ತು ನಿರ್ದಿಷ್ಟ ಕಾಲದಲ್ಲಿ ಬೋಧನಾ ಉದ್ದೇಶಗಳ ಸಫಲತೆ ಮತ್ತು ವಿಫಲತೆಯನ್ನು ತಿಳಿದುಕೊಳ್ಳಲು ಇದು ನೆರವು ನೀಡುವುದು. ಇದರಿಂದಾಗಿ ಪ್ರಶ್ನೆ ಕೋಠಿಯ ಪಾತ್ರ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿಯೇ ಅತಿ ಮುಖ್ಯವಾಗಿದೆ

### ಪ್ರಶ್ನೆ ಕೋಠಿಯ ಸ್ವರೂಪ:

ಪ್ರಶ್ನೆಕೋಠಿಯೊಂದು ಲಿಖಿತ ರೂಪದಲ್ಲಿ ಪ್ರಶ್ನೆಗಳನ್ನು ಒಳಗೊಂಡಿರುವ ಒಂದು ಸಂಗ್ರಹ. ಪ್ರಶ್ನೆ ಕೋಠಿಯ ರಚನೆಯಲ್ಲಿ ಒಂದು ಕ್ರಮಬದ್ಧತೆಯನ್ನೂ ಒಂದು ವ್ಯವಸ್ಥೆಯನ್ನು ಕಾಣಬಹುದು. ಪ್ರಶ್ನೆ ಕೋಠಿಗೆ ಆಯ್ಕೆಯಾಗುವ ಪ್ರತಿಯೊಂದು ಪ್ರಶ್ನೆಯಲ್ಲಿ ಈ ಕೆಳಕಂಡ ಹನ್ನೆರಡು ಲಕ್ಷಣಗಳು ಇರಬೇಕಾಗುತ್ತದೆ.

1. ಪ್ರಶ್ನೆಯ ಸಂಖ್ಯೆ
2. ನಿರ್ದಿಷ್ಟ ತರಗತಿ
3. ನಿರ್ದಿಷ್ಟ ವಿಷಯ
4. ನಿರ್ದಿಷ್ಟ ಘಟಕ
5. ಪ್ರಶ್ನೆಯ ವರ್ಗ–ನಿಬಂಧ ಮಾದರಿ, ಲಘು ಉತ್ತರ ಮಾದರಿ, ವಸ್ತುನಿಷ್ಠ ಮಾದರಿ
6. ಉದ್ದೇಶ
7. ವಸ್ತುನಿಷ್ಠ ಮಾದರಿಯಲ್ಲಿನ ವಿಧ – ಪೂರ್ತಿಗೊಳಿಸುವುದು. ಬಹು ಅಂಶ ಆಯ್ಕೆ, ಹೊಂದಿಸುವಿಕೆ, ಸರಿ–ತಪ್ಪು ಇತ್ಯಾದಿ.
8. ಪರೀಕ್ಷಿಸುವ ಕಲಿಕೆಯ ಫಲಿತ – ಜ್ಞಾನಾಂಶ, ಕೌಶಲಗಳ,

Digitised by Bharatavani, CIIL

ಮನೋಭಾವ

9. ಕಠಿಣತೆಯ ಮಟ್ಟ

10. ಉತ್ತರಿಸಲು ತೆಗೆದುಕೊಳ್ಳಬಹುದಾದ ಸಮಯ

11. ನಿಗದಿಗೊಳಿಸಿದ ಅಂಕಗಳು

12. ಉತ್ತರವು ಒಳಗೊಂಡಿರಬೇಕಾದ ಅಂಶಗಳು ಮತ್ತು ಆ ಅಂಶಗಳಿಗೆ ಅನುಗುಣವಾಗಿ ಕೊಡಬೇಕಾದ ಅಂಕಗಳ ವಿವರ.

**ಪ್ರಶ್ನೆಕೋಠಿಯನ್ನು ತಯಾರಿಸುವ ವಿಧಾನ:**

ಪ್ರಶ್ನೆಕೋಠಿಯನ್ನು ಅತ್ಯಂತ ಜಾಗರೂಕತೆಯಿಂದ, ಕ್ರಮಬದ್ಧವಾಗಿ, ಹಂತ ಹಂತವಾಗಿ ರಚಿಸಲಾಗುವುದು. ಒಂದು ಪ್ರಶ್ನೆ ಕೋಠಿಯ ರಚನೆಯಲ್ಲಿ ಸಾಮಾನ್ಯವಾಗಿ ಆರು ಹಂತಗಳು ಕಂಡುಬರುತ್ತವೆ. ಈ ಆರು ಹಂತಗಳನ್ನು ಕೆಳಕಂಡಂತೆ ಕ್ರಮಬದ್ಧವಾಗಿ ಸೂಚಿಸಬಹುದಾಗಿದೆ.

**1. ತಜ್ಞ ಮಂಡಳಿಯ ನೇಮಕ:**
ಪ್ರಶ್ನೆಕೋಠಿಯನ್ನು ಒಂದು ಮಂಡಳಿಯು ರಚಿಸುತ್ತದೆ. ಈ ಮಂಡಳಿಯಲ್ಲಿ ವಿಷಯ ತಜ್ಞರ ಒಂದು ಗುಂಪು ಕಾರ್ಯನಿರತವಾಗಿರುತ್ತದೆ. ಇಂತಹ ಒಂದು ತಜ್ಞರ ಗುಂಪನ್ನು ಪರೀಕ್ಷಾ ಮಂಡಳಿಯು ನೇಮಕ ಮಾಡುವುದು. ಈ ಮಂಡಳಿಯ ಸದಸ್ಯರು ನಿಗದಿತ ಶೈಕ್ಷಣಿಕ ಹಂತ, ವಿಷಯ, ಉದ್ದೇಶ, ಪ್ರಶ್ನೆಪತ್ರಿಕೆಯ ಕಾಲಾವಧಿ, ಪ್ರಶ್ನೆ ಸಂಖ್ಯೆ ಇವೆಲ್ಲಕ್ಕೂ ಅನುಗುಣವಾಗಿ ನಿಗದಿತವಾಗುವ ಗರಿಷ್ಠ ಅಂಕಗಳು ಇನ್ನು ಮುಂತಾದ ಸಂಬಂಧ ಪಟ್ಟ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಶ್ನೆಗಳನ್ನು ರಚಿಸುತ್ತಾರೆ. ತರಗತಿಯ ಅನುಭವಿ ಶಿಕ್ಷಕರಿಂದಲೂ ಪ್ರಶ್ನೆಗಳನ್ನೂ ಪಡೆಯಬಹುದು. ಒಂದು ಆಯ್ದ ವಿಷಯದಲ್ಲಿ ಕಂಡುಬರುವ ಎಲ್ಲಾ ಘಟಕಗಳನ್ನೂ, ಪಠ್ಯಕ್ರಮ ಹಾಗೂ ಪಠ್ಯಪುಸ್ತಕದಲ್ಲಿನ ಅನುಕ್ರಮಣಿಕೆಗೆ ಹೊಂದಿಕೆಯಾಗುವಂತೆ ವಿವಿಧ ಉಪಘಟಕಗಳಾಗಿ ವಿಭಜಿಸಿಕೊಂಡು ಪ್ರತಿಯೊಂದು ಘಟಕಕ್ಕೂ ವಿವಿಧ ರೀತಿಯ ಪ್ರಶ್ನೆಗಳನ್ನು ರೂಪಿಸಿ ಪ್ರಶ್ನೆಗಳನ್ನು ಸಂಗ್ರಹಿಸಲಾಗುತ್ತದೆ.

**2. ವಿಷಯ ಶಿಕ್ಷಕರ ಕಾರ್ಯಾಗಾರ:**
ಆಯಾ ವಿಷಯಗಳ ಬೋಧನೆಯಲ್ಲಿ ನುರಿತ ಅನುಭವೀ ಶಿಕ್ಷಕರನ್ನು, ವಿಷಯ ತಜ್ಞರುಗಳನ್ನು ಪ್ರಶ್ನೆ ಕೋಠಿಯ ರಚನೆಗಾಗಿ ಆಹ್ವಾನಿಸಲಾಗುವುದು. ಮಂಡಳಿಯು ನಿಗದಿಪಡಿಸಿದ ಪೂರ್ವ ಯೋಜನೆಯನ್ವಯ, ತಜ್ಞರ ಗುಂಪು ಪ್ರಶ್ನೆಗಳನ್ನು ರಚಿಸುವುದು. ಅಂದರೆ, ಮುಂಚಿತವಾಗಿಯೇ, ಪ್ರಶ್ನೆಗಳ ತಂತ್ರಗಳು, ಉತ್ತಮ ಪ್ರಶ್ನೆಗಳ ಗುಣಲಕ್ಷಣಗಳು, ಪ್ರಶ್ನೆಗಳ ರಚನೆಯಲ್ಲಿನ ನಿಯಮಗಳು ಇನ್ನು ಮುಂತಾದವುಗಳು ನಿರ್ಧರಿತವಾಗಿರುತ್ತದೆ. ಇವುಗಳನ್ನು ವಿಷಯ ಶಿಕ್ಷಕರ ಕಾರ್ಯಾಗಾರದ ಮೊದಲ ಅವಧಿಯಲ್ಲಿ, ಭಾಗವಹಿಸುವ ಶಿಕ್ಷಕರ ಗುಂಪಿಗೆ ತಿಳಿಸಿಕೊಡಲಾಗುವುದು. ಕಾರ್ಯಾಗಾರದ ಮುಂದಿನ ಅವಧಿಯಲ್ಲಿ ಹೀಗೆ ಪ್ರಸ್ತುತ ಪಡಿಸಿದ ನಿಯಮಗಳಿಗೆ ಅನುಗುಣವಾಗಿ ಪ್ರಶ್ನೆಗಳು ತಯಾರಾಗುವುವು.

**3. ಪ್ರಶ್ನೆಗಳ ಪರಾಮರ್ಶೆ:**

ಒಟ್ಟಾರೆಯಾಗಿ ಸಂಗ್ರಹಗೊಂಡ ಎಲ್ಲಾ ಪ್ರಶ್ನೆಗಳನ್ನು ಸೂಕ್ಷ್ಮ ಪರಿಶೀಲನೆಗೆ, ಪರಾಮರ್ಶೆನೆಗೆ ಒಳಪಡಿಸಲಾಗುವುದು. ಅವುಗಳಲ್ಲಿ ಆಗಲೇಬೇಕಾದ ಸೂಕ್ತ ಬದಲಾವಣೆಗಳನ್ನು, ಮಾರ್ಪಾಡುಗಳನ್ನು ಮಾಡಲಾಗುವುದು. ಹಾಗೂ ಪ್ರಶ್ನೆಗಳನ್ನು ಅಂತಿಮ ರೂಪಕ್ಕೆ ತರಲಾಗುವುದು. ಇಲ್ಲಿ ಒಂದು ವಿಷಯದಲ್ಲಿನ ಎಲ್ಲಾ ಘಟಕಗಳಿಗೂ ಸಾಕಷ್ಟು ಸಂಖ್ಯೆಯ ಪ್ರಶ್ನೆಗಳಿರುವುದನ್ನು ಗಮನಿಸಲಾಗುವುದು. ಪ್ರಶ್ನೆಗಳ ಸಂಖ್ಯೆ ಹೇರಳವಾಗಿರುವುದಷ್ಟೇ ಅಲ್ಲದೆ, ವಿವಿಧ ರೀತಿಯ ಪ್ರಶ್ನೆಗಳಿರುವುದಕ್ಕೂ ಗಮನವೀಯಲಾಗುವುದು. ಇದಲ್ಲದೆ ತಪ್ಪಿಲ್ಲದ ಭಾಷೆ, ಅರ್ಥಪೂರ್ಣತೆ, ಸಮಂಜಸತೆ ಅಂಶಗಳನ್ನು ಸಹಾ ಪರಿಷ್ಕರಿಸಿ ಪ್ರಶ್ನೆಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುವುದು.

**4. ಪ್ರಶ್ನೆಗಳನ್ನು ಗುಂಪು ಮಾಡುವಿಕೆ:**

ಪ್ರಶ್ನೆಗಳನ್ನು ಹಲವಾರು ರೀತಿಯಲ್ಲಿ ಗುಂಪು ಮಾಡಲಾಗುವುದು. ಅಂದರೆ ಪಠ್ಯವಸ್ತುವಿನಲ್ಲಿ ಕ್ರಮಾನುಗತವಾಗಿ ಬರುವ ಘಟಕಗಳ ಅನುಕ್ರಮಣಿಕೆಗೆ ತಕ್ಕಂತೆ, ಅಂದರೆ ವಿವಿಧ ಘಟಕಗಳ ಅನುಸಾರವಾಗಿ ಪ್ರಶ್ನೆಗಳನ್ನು ಗುಂಪು ಮಾಡಲಾಗುವುದು. ಹಾಗೆಯೇ, ಕ್ಲಿಷ್ಟತೆಯ ಮಟ್ಟಕ್ಕೆ ಅನುಸಾರವಾಗಿಯೂ, ಅಂಕಗಳ ಮೊತ್ತಕ್ಕೆ ಅನುಗುಣವಾಗಿಯೂ ಪ್ರಶ್ನೆಗಳನ್ನು ವಿಭಾಗಿಸಿ ಗುಂಪು ಮಾಡಲಾಗುವುದು. ಈ ವರ್ಗೀಕರಣದ ಜೊತೆಗೆ ಪ್ರತಿಯೊಂದು ಪ್ರಶ್ನೆಗೂ, ಉತ್ತರಿಸಲು ಬೇಕಾಗಬಹುದಾದ ಸಮಯವನ್ನು ಮತ್ತು ಅಂಕವನ್ನು ನಿಗದಿಪಡಿಸಬಹುದು.

**5. ಪ್ರಶ್ನೆಕೋಠಿಯ ಪರಿಷ್ಕರಣ:**

ಪಠ್ಯವಸ್ತುವು ಹೇಗೆ ಕಾಲಾನುಕಾಲಕ್ಕೆ ಬದಲಾವಣೆಗೊಳ್ಳುತ್ತಾ, ಪರಿವರ್ತಿತವಾಗುವುದೋ, ಅದಕ್ಕೆ ತಕ್ಕಂತೆ ಪ್ರಶ್ನೆಕೋಠಿಯ ಪ್ರಶ್ನೆಗಳನ್ನು ಪರಿಷ್ಕರಣಕ್ಕೆ ಒಳಪಡಿಸಬೇಕಾಗುವುದು. ಹೀಗೆ ಮಾಡುವಾಗ ಕೆಲವು ಪ್ರಶ್ನೆಗಳನ್ನು ಕೈಬಿಡಬೇಕಾಗುವುದು, ಮತ್ತೆ ಕೆಲವನ್ನು ಹೊಸದಾಗಿ ಸೇರಿಸಬೇಕಾಗುವುದು. ಅಲ್ಲದೆ, ಒಮ್ಮೆ ಅದನ್ನು ಬಳಸಿಕೊಂಡಂತಹ ಶಿಕ್ಷಕ ಮತ್ತು ವಿದ್ಯಾರ್ಥಿಗಳು ಸೂಕ್ತ ಬದಲಾವಣೆಗೆ ಸೂಚನೆಗಳನ್ನು ಕೊಡಬಹುದು. ಈ ಸೂಚನೆಗಳನ್ನೂ ಇವುಗಳನ್ನೂ ಗಮನಿಸಿ ಪ್ರಶ್ನೆಕೋಠಿಯನ್ನು ಪರಿಷ್ಕರಿಸಬೇಕಾಗುತ್ತದೆ. ಆದುದರಿಂದ ಪ್ರಶ್ನೆ ಕೋಠಿಯ ಪರಿಷ್ಕರಣ ಒಂದು ನಿರಂತರ ಪ್ರಕ್ರಿಯೆಯಾಗಿ ಸಾಗುವುದು.

**6. ಪ್ರಶ್ನೆಗಳ ವಿಧಗಳು:**

ಸಾಮಾನ್ಯವಾಗಿ ಪ್ರಶ್ನೆಕೋಠಿಯಲ್ಲಿನ ಪ್ರಶ್ನೆಗಳು ಉದ್ದೇಶಗಳಿಗೆ ಅನುಗುಣವಾಗಿ, ಪ್ರತಿಯೊಂದು ಘಟಕಕ್ಕೂ ಇರುತ್ತದೆ. ಈ ರೀತಿ ಕಂಡುಬರುವ ಘಟಕಾಧಾರಿತ ಪ್ರಶ್ನೆಗಳಲ್ಲಿ, ಪ್ರಬಂಧ ಮಾದರಿ, ಸಂಕ್ಷಿಪ್ತ ಉತ್ತರದ ಮಾದರಿ, ವಸ್ತುನಿಷ್ಠ ಮಾದರಿ ಪ್ರಶ್ನೆಗಳು ಸಾಕಷ್ಟು ಪ್ರಮಾಣದಲ್ಲಿ ಇದ್ದು ಪ್ರಶ್ನೆ ಕೋಠಿಯಲ್ಲಿ ವೈವಿಧ್ಯತೆಯನ್ನು ತರುತ್ತವೆ.

Digitised by Bharatavani, CIIL

ಕೆಲವು ವೇಳೆ ಒಂದು ನಿರ್ದಿಷ್ಟ ಪರಿಕಲ್ಪನೆಯನ್ನು ಕಲಿಕಾರ್ಥಿಗಳು ಎಷ್ಟರ ಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿಯಲು ಅದನ್ನು ವಿವಿಧ ಮಾದರಿ ಪ್ರಶ್ನೆಗಳ ರೂಪದಲ್ಲಿ ಪರೀಕ್ಷಿಸಲಾಗುತ್ತದೆ. ಹೀಗೆ ವಿಷಯದ ಪುನರಾವರ್ತನೆ ಇದ್ದರೂ ಅಂತಿಮವಾಗಿ ಪ್ರಶ್ನೆಪತ್ರಿಕೆ ತಯಾರಿಕೆಗೆ ಪ್ರಶ್ನೆಗಳನ್ನು ಆರಿಸುವಾಗ ಯಾವುದೇ ಒಂದು ಪರಿಕಲ್ಪನೆಗೆ ಸಂಬಂಧಿಸಿದಂತಹ ಒಂದೇ ಬಗೆಯ ಉತ್ತರವನ್ನು ನಿರೀಕ್ಷಿಸುವ ಪ್ರಶ್ನೆಗಳು ಪುನರಾವರ್ತಿತವಾಗದ ಹಾಗೆ ಎಚ್ಚರಿಕೆ ವಹಿಸಬೇಕು.

ಹೀಗೆ ಪ್ರಶ್ನೆಕೋಠಿಯನ್ನು ಕ್ರಮಬದ್ಧವಾಗಿ ಆರು ಹಂತಗಳಲ್ಲಿ ರಚಿಸಲಾಗುತ್ತದೆ. ಆದರೆ ಒಂದು ಪ್ರದೇಶದಲ್ಲಿ ರಚಿಸಿದ ಪ್ರಶ್ನೆಕೋಠಿಯು ಎಲ್ಲಾ ಪ್ರದೇಶದ ವಿದ್ಯಾರ್ಥಿಗಳಿಗೂ ಉಪಯುಕ್ತವಾಗದಿರಬಹುದು. ಆದ್ದರಿಂದ ಬೇರೆ ಬೇರೆ ಪ್ರದೇಶದ ಪಠ್ಯವಸ್ತು ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಆಯಾ ಪ್ರದೇಶದ ಪರೀಕ್ಷಾ ಮಂಡಳಿಗಳು ಬೇರೆ ಬೇರೆ ಪ್ರಶ್ನೆಕೋಠಿಗಳನ್ನು ರಚಿಸಿಕೊಳ್ಳಬೇಕಾಗುವುದು. ಶಿಕ್ಷಕರು ಹಾಗೂ ವಿಷಯ ತಜ್ಞರು ತರಬೇತಿ, ಕಾರ್ಯಾಗಾರಗಳ ಮೂಲಕ ಪ್ರಶ್ನೆಕೋಠಿಯನ್ನು ರಚಿಸಿದ ನಂತರ ಅಗತ್ಯ ಉಂಟಾದಾಗ, ಪರೀಕ್ಷಾ ಮಂಡಳಿ ಪರೀಕ್ಷೆಗಳನ್ನು ನಡೆಸುವಾಗ, ಘಟಕ ಹಾಗೂ ಉದ್ದೇಶಗಳಿಗೆ ಅನುಗುಣವಾಗಿ ಪ್ರಶ್ನೆಕೋಠಿಯಿಂದ ಪ್ರಶ್ನೆಗಳನ್ನು ಆಯ್ದುಕೊಂಡು, ಪ್ರಶ್ನೆಪತ್ರಿಕೆಗಳನ್ನು ರಚಿಸಿ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗುತ್ತದೆ.

–ಡಾ. ಸುನೀತ ಸಿ. ಎನ್.

## ಪ್ರಸಾಮಾನ್ಯ ಸಂಭಾವ್ಯ ವಕ್ರ

ಪ್ರಸಾಮಾನ್ಯ ಸಂಭಾವ್ಯ ವಕ್ರದ ಬಗೆಗೆ ತಿಳಿಯುವ ಮೊದಲು ಇದಕ್ಕೆ ಆಧಾರಸ್ತಂಭವಾದ 'ಸಂಭವನೀಯತೆ ಸಿದ್ಧಾಂತ'ದ ಮೇಲೆ ನಿರೂಪಿತವಾದ 'ಸಾಮಾನ್ಯ ವಿತರಣೆ' ಬಗೆಗೆ ಸ್ಪಷ್ಟತೆ ಅಗತ್ಯ. ಸಾಮಾನ್ಯ ಅರ್ಥದಲ್ಲಿ, ಸಂಭವನೀಯತೆ ಎಂದರೆ ಒಂದು ಘಟನೆ ಜರುಗುವುದೇ ಇಲ್ಲವೇ ಎಂಬುವ ಅನಿರ್ದಿಷ್ಟತೆ. ಆದರೆ ಸಂಖ್ಯಾಶಾಸ್ತ್ರದಲ್ಲಿ 'ಸಂಭವನೀಯತೆ' ಎಂಬುವುದನ್ನು ಸೈದ್ಧಾಂತಿಕವಾಗಿ ನಿರೂಪಿಸಲಾಗುತ್ತದೆ. ಸುಮಾರು 17ನೆಯ ಶತಮಾನದಲ್ಲಿಯೇ 'ಸಂಭವನೀಯತೆ ಸಿದ್ಧಾಂತ'ದ ಬೀಜಾಂಕುರವಾಗಿದೆ ಎಂದು ತಿಳಿದು ಬಂದಿದೆ. ಅದೃಷ್ಟದ ಆಟ ಅಥವಾ ಯಾದೃಚ್ಛಿಕ ಆಟಗಳಾದ ನಾಣ್ಯ ಮಿಡಿಯುವಿಕೆ (Tossing a coin), ದಾಳ/ಪಗಡೆ ಬಿಡುವಿಕೆ (Throwing a dice) ಇತ್ಯಾದಿಗಳಲ್ಲಿ ಫಲಿತಾಂಶ ಅನಿರ್ದಿಷ್ಟಿತವಾಗಿರಬಹುದಾದರೂ ಘಟಿಸಬಹುದಾದ ಫಲಿತಾಂಶಗಳ ಸಂಭವ ಪ್ರಮಾಣವನ್ನು ದ್ವಿಪದೋಕ್ತಿಗಳ ವಿಸ್ತರಣದಲ್ಲಿ ಗಣಿತಾತ್ಮಕವಾಗಿ ನಿರೂಪಿಸಬಹುದಾಗಿದೆ. ಈ ಆಟಗಳಿಂದ ಪ್ರಾರಂಭವಾದ ಸಂಭವನೀಯತೆಯ ಪರಿಕಲ್ಪನೆ ಸಂಖ್ಯಾಶಾಸ್ತ್ರದ ಒಂದು ಮೂಲಾಧಾರವಾಗಿದೆ.

ಸಂಖ್ಯಾಶಾಸ್ತ್ರದಲ್ಲಿ 'ಸಂಭವನೀಯತೆ' ಎಂದರೆ ಯಾವುದೇ ಒಂದು ಘಟನೆ ಸಂಭವಿಸಿದಾಗ ಘಟಿಸಬಹುದಾದ ಪರಿಣಾಮಗಳ ನಿರೀಕ್ಷಿತ ಆವೃತ್ತಿಗಳು ಎಂದರ್ಥವಾಗುತ್ತದೆ. ಎನ್.ಎಸ್. ವೀರಪ್ಪನವರು ತಮ್ಮ ನಿಘಂಟಿನಲ್ಲಿ 'ಸಂಭವನೀಯತೆ' ಎಂದರೆ ಅನುಕೂಲ ಪರಿಣಾಮದ ಸಂಖ್ಯೆಗೂ ಒಟ್ಟು ಸಾಧ್ಯ ಸಂಖ್ಯೆಗೂ ಇರುವ ಅನುಪಾತದಿಂದ ಅಳೆದ ಒಂದು ಘಟನೆಯ ಸಂಭವ ಎಂದು ಅರ್ಥೈಸಿದ್ದಾರೆ. ಸಂಭವನೀಯತೆ ಸಿದ್ಧಾಂತವನ್ನು ನಾಣ್ಯ ಮಿಡಿಯುವ ಆಟದ ಮೂಲಕ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

ನಾಣ್ಯವು ತಲೆ(H) ಅಥವಾ ಅಡಿ(T) ಮೇಲಾಗಿ ಬೀಳುವ ಸಮಯೋಗ ಹೊಂದಿದೆ ಎಂದು ಭಾವಿಸಿಕೊಂಡು, ನಾಣ್ಯವೊಂದನ್ನು ಮಿಡಿದಾಗ ಘಟಿಸಬಹುದಾಗಿದ್ದ ಫಲಿತಗಳು ಎರಡಾಗಿದ್ದು, ಫಲಿತದ ಸಂಭವ ಪ್ರಮಾಣ 1/2 ಎಂದಾಗುತ್ತದೆ.

ನಾಣ್ಯವು ತಲೆಮೇಲಾಗಿ ಬೀಳುವ ಸಂಭವ(H) = 1/2

ನಾಣ್ಯವು ಅಡಿಮೇಲಾಗಿ ಬೀಳುವ ಸಂಭವ(T) = 1/2

ಹೀಗೆಯೇ ಎರಡು ನಾಣ್ಯಗಳನ್ನು ಮಿಡಿದಾಗ ನಾಲ್ಕು ಫಲಿತಗಳು ಸಾಧ್ಯವಿದ್ದು ಎರಡೂ ನಾಣ್ಯಗಳು ತಲೆಮೇಲಾಗಿ ಬೀಳುವ ($H^2$), ಒಂದು ತಲೆ ಮೇಲಾಗಿಯೂ ಮತ್ತೊಂದು ಅಡಿಮೇಲಾಗಿಯೂ ಬೀಳುವ (HT ಅಥವಾ TH) ಮತ್ತು ಎರಡೂ ನಾಣ್ಯಗಳು ಅಡಿಮೇಲಾಗಿ ಬೀಳುವ($T^2$) ಸಂಭವ ಪ್ರಮಾಣ 1:2:1 ಅಥವಾ 1:1:1:1:1 ಆಗಿರುತ್ತದೆ. ಹೀಗೆ 3,5,10 ಅಥವಾ n ಸಂಖ್ಯೆಯಲ್ಲಿ ನಾಣ್ಯಗಳನ್ನು ಮಿಡಿದಾಗ ಸಂಭವಿಸಬಹುದಾದ ಫಲಿತಗಳನ್ನು$(H+T)^3$, $(H+T)^5$, $(H+T)^{10}$ ಅಥವಾ $(H+T)^n$ ಎಂಬ ದ್ವಿಪದೋಕ್ತಿಗಳ ವಿಸ್ತರಣಾ ರೂಪದಲ್ಲಿ ಕ್ರಮವಾಗಿ ರೂಪಿಸಬಹುದಾಗಿದೆ. ಉದಾಹರಣೆಗೆ 10 ನಾಣ್ಯಗಳನ್ನು ಮಿಡಿದಾಗ ಒಟ್ಟು 1024 ಫಲಿತಗಳು ಉಂಟಾಗಲಿದ್ದು ಸಾಧ್ಯವಿರುವ ಸಂಭವ ಪ್ರಮಾಣವನ್ನು ಕೆಳಕಂಡಂತೆ ನಿರೂಪಿಸಬಹುದಾಗಿದೆ.

$$(H+T)^{10}=(H^{10}+10H^9T+45H^8T^2+120H^7T^3+210H^6T^4+252H^5T^5+210H^4T^6+120H^3T^7+45H^2T^8+10HT^9+T^{10}$$

ಈ ವಿಸ್ತರಣೆಯನ್ನು ಗಮನಿಸಿದಾಗ ನಿರೂಪಿತ ಆವೃತ್ತಿ ವಿತರಣೆಯಲ್ಲಿ ಅಂಕಗಳು ಕೇಂದ್ರಭಾಗದಲ್ಲಿ ಸಾಂದ್ರವಾಗಿದ್ದು ಉಳಿದ ಎರಡೂ (ಮೇಲ್ಭಾಗ ಮತ್ತು ಕೆಳಭಾಗ) ಕಡೆಗಳಲ್ಲಿ ಅಂಕಗಳು ಕ್ರಮೇಣ ಕಡಿಮೆಯಾಗುತ್ತಾ ಬಂದು ಎರಡೂ ತುದಿಗಳಲ್ಲಿ ಅತ್ಯಂತ ಕಡಿಮೆಯಾಗಿರುವುದು ಕಂಡು ಬರುತ್ತದೆ. ಈ ವಿವರಣೆಯನ್ನು 'ಪ್ರಸಾಮಾನ್ಯ ವಿತರಣೆ' ಅಥವಾ 'ಪ್ರಸಾಮಾನ್ಯ ಸಂಭಾವ್ಯ ವಿತರಣೆ' ಎನ್ನಲಾಗುತ್ತದೆ.

**ಸಾಮಾನ್ಯ ವಿತರಣೆ:–** ಸಂಭವನೀಯತೆ ಸಿದ್ಧಾಂತದ ಮೇಲೆ ನಿರೂಪಿತವಾಗಿರುವ ಅಂದರೆ ಸೈದ್ಧಾಂತಿಕ ಅಥವಾ ನಿರೀಕ್ಷಿತ ಅಂಕಿಅಂಶಗಳನ್ನಾಧರಿಸಿ ಗಣಿತ ವಾಕ್ಯಗಳಲ್ಲಿ ರೂಪಿಸಿರುವ ಸೈದ್ಧಾಂತಿಕ ವಿತರಣೆಯೇ 'ಪ್ರಸಾಮಾನ್ಯ ವಿತರಣೆ' ಸೈದ್ಧಾಂತಿಕ

Digitised by Bharatavani, CIIL

ವಿತರಣೆಯ ಹಲವಾರು ವಿಧಗಳಲ್ಲಿ ಪ್ರಸಾಮಾನ್ಯ ವಿತರಣೆಯೂ ಒಂದು. ಇದು ಅವಿಚ್ಛಿನ್ನ/ಸಂತತ ಚಲಕಗಳಿಗೆ ಸಂಬಂಧಿಸಿದ ಮತ್ತು ಅತ್ಯಂತ ಪ್ರಯೋಜನಕಾರಿಯಾದ ಸೈದ್ಧಾಂತಿಕ ಅಥವಾ ಸಂಭವನೀಯ ವಿತರಣೆ. ಇದು ನಿರೀಕ್ಷಿತ ಆವೃತ್ತಿ ವಿತರಣೆಯಾಗಿದ್ದು ನಿಖರತೆ ಹಾಗೂ ನಿಷ್ಕೃಷ್ಟತೆಯಿಂದ ಕೂಡಿರುತ್ತದೆ. ಆದರೆ ಇದು ವಾಸ್ತವ ಅಂಶಗಳ ವಿತರಣೆಯಾಗಿರುವುದಿಲ್ಲ. ಕೇವಲ ಸರಳತೆಗಾಗಿ, ಸೌಲಭ್ಯಕ್ಕಾಗಿ ಮತ್ತು ತಾರ್ಕಿಕತೆಗಾಗಿ ಕಲ್ಪಿಸಿಕೊಂಡಿರುವ ಆದರ್ಶ ಮಾದರಿ ಅಷ್ಟೇ. ಪಡೆದ ದತ್ತಾಂಶಗಳನ್ನು ಈ ಆದರ್ಶ ಹಾಗೂ ಸೈದ್ಧಾಂತಿಕ ಮಾದರಿಯೊಡನೆ ಹೋಲಿಸಿದಾಗ ಈ ಮಾದರಿಗೆ ಅತಿ ಸಮೀಪವರ್ತಿಯಾಗಿರಬಹುದು ಅಥವಾ ಅನತಿದೂರದಲ್ಲಿರಬಹುದಷ್ಟೆ ವಿನಾ ನಿಷ್ಕೃಷ್ಟವಾಗಿ ಪ್ರಸಾಮಾನ್ಯ ವಿತರಣೆಯಾಗಿರುವುದಿಲ್ಲ. ಈ ವಿತರಣೆ ಅನೇಕ ಪ್ರಾಯೋಗಿಕ ಸಮಸ್ಯೆಗಳನ್ನು ಅಧ್ಯಯನ ಮಾಡಲು, ವೀಕ್ಷಿತ ವಿತರಣೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲು, ಅಂಕಿಅಂಶಗಳನ್ನು ಆಧರಿಸಿ ಯಾವುದೇ ನಿರ್ಧಾರ ಕೈಗೊಳ್ಳಲು, ಭವಿಷ್ಯವನ್ನು ಊಹಿಸಲು ಸಹಾಯಕವಾಗುತ್ತದೆ. ಹಾಗಾಗಿ ಆಧುನಿಕ ಸಂಖ್ಯಾಶಾಸ್ತ್ರಕ್ಕೆ ಇದು ಮೂಲಾಧಾರವಾಗಿದೆ.

**ಪ್ರಸಾಮಾನ್ಯ ಸಂಭಾವ್ಯ ವಕ್ರ:–** 10 ನಾಣ್ಯಗಳನ್ನು 1024 ಬಾರಿ ಮಿಡಿದಾಗ ಸೈದ್ಧಾಂತಿಕವಾಗಿ ನಿರೀಕ್ಷಿಸಬಹುದಾದ ಫಲಿತಗಳ ವಿತರಣೆಯನ್ನು ಆಲೇಖ ರೂಪದಲ್ಲಿ ನಿರೂಪಿಸಿದಾಗ ದೊರೆಯುವ ಆವೃತ್ತಿ ಬಹುಭುಜಾಕೃತಿಯನ್ನು ಈ ಕೆಳಗಿನ ಚಿತ್ರದಲ್ಲಿ ಕೊಡಲಾಗಿದೆ. ಘ ಅಕ್ಷದ ಮೇಲೆ ಸಂಭವಿಸಬಹುದಾದ ಫಲಿತಗಳ ವಿವರವನ್ನು ಙ ಅಕ್ಷದ ಮೇಲೆ ಸಂಭವ ಪ್ರಮಾಣವನ್ನು ಗುರುತಿಸಲಾಗಿದೆ. ಈ ಚಿತ್ರ ಸಮಪಾರ್ಶ್ವ ಆವೃತ್ತಿ ಬಹುಭುಜಾಕೃತಿ ಆಗಿದೆ; ಈ ಆಲೇಖ ಆವೃತ್ತಿ ಬಹುಭುಜಾಕೃತಿಯ ಮಧ್ಯಬಿಂದುವಿನಲ್ಲಿ ಅಂಕಗಳ ಗರಿಷ್ಠ ಸಂಗ್ರಹಣೆಯನ್ನು ಮಧ್ಯಬಿಂದುವಿನಿಂದ ಕೆಳಭಾಗ ಹಾಗೂ ಮೇಲ್ಭಾಗಗಳಲ್ಲಿ ಕ್ರಮಾಗತವಾಗಿ ಅಂಕಗಳ ಇಳಿತವನ್ನು ಸ್ಪಷ್ಟಪಡಿಸುತ್ತದೆ.

೧೫೪ ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ

4. ಪ್ರಸಾಮಾನ್ಯ ಸಂಭಾವ್ಯ ವಕ್ರದ ಲಕ್ಷಣಗಳು (Characteristics or properties of a Normal Probability Curve- NPC)




ಚಿತ್ರ 1 : ಪ್ರಸಾಮಾನ್ಯ ಸಂಭಾವ್ಯ ವಕ್ರ

ಹೀಗೆ 'n' ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಗಿ ಟಿ ಅನಂತವಾದಾಗ ಪಡೆಯುವ ಆವೃತ್ತಿ ಬಹುಭುಜಾಕೃತಿಯನ್ನು ಸಮಗೊಳಿಸಿದಾಗ ದೊರೆಯುವ ಘಂಟಾಕೃತಿಯ ಸಮಪಾರ್ಶ್ವತೆ ಹೊಂದಿರುವ ಆವೃತ್ತಿ ವಕ್ರವನ್ನು 'ಪ್ರಸಾಮಾನ್ಯ ಸಂಭಾವ್ಯ ವಕ್ರ' (Normal Probability Curve) ಎನ್ನಲಾಗುತ್ತದೆ. ಅಂದರೆ ಪ್ರಸಾಮಾನ್ಯ ಆವೃತ್ತಿ ವಿತರಣೆಯನ್ನು X ಅಕ್ಷದಲ್ಲಿ ವರ್ಗಾಂತರಗಳೂ ಙ ಅಕ್ಷದಲ್ಲಿ ಆವೃತ್ತಿಗಳೂ ಇರುವಂತೆ ಆವೃತ್ತಿ ಬಹುಭುಜಾಕೃತಿ ಆಲೇಖ ರೂಪದಲ್ಲಿ ನಿರೂಪಿಸಿ ಸಮಗೊಳಿಸಿದಾಗ ದೊರೆಯುವ ಆವೃತ್ತಿ ವಕ್ರಕ್ಕೆ 'ಪ್ರಸಾಮಾನ್ಯ ವಕ್ರ' ಅಥವಾ 'ಪ್ರಸಾಮಾನ್ಯ ಸಂಭಾವ್ಯ ವಕ್ರ' ಎಂದು ಹೆಸರು. ಇದು ಒಂದು ಸೈದ್ಧಾಂತಿಕ ಕಲ್ಪನೆಯಷ್ಟೆ.

ಪ್ರಸಾಮಾನ್ಯ ಸಂಭಾವ್ಯ ವಕ್ರವನ್ನು ಕಂಡುಹಿಡಿದ ಕೀರ್ತಿ ಗಣಿತಜ್ಞರಿಗೆ ಸಲ್ಲಬೇಕು. ಮೊದಲಿಗೆ ಗಣಿತಜ್ಞನಾದ ಡಿ.ಮೋವಿಯರ್ (De Movire) ಪ್ರಸಾಮಾನ್ಯ ವಿತರಣೆ/ವಕ್ರದ ಸಮೀಕರಣವನ್ನು 1733ರಲ್ಲಿ ಕಂಡುಹಿಡಿದನು. ಅನಂತರ ಫ್ರಾನ್ಸ್‌ನ ಲೆಪ್ಲಾಸ್(Laplace 1749-1827) ಮತ್ತು ಬೆಲ್ಜಿಯಂನ ಕ್ವೆಟ್‌ಲೆಟ್ (Quetelet 1796-1874) ರವರು ಈ ಸಿದ್ಧಾಂತವನ್ನು ವಿಕಾಸಗೊಳಿಸಿದರು. ಜರ್ಮನಿಯ ಗಣಿತಜ್ಞನಾದ ಗಾಸ್ (Guass 1777-1855) ಈ ಸಿದ್ಧಾಂತದ ಎಲ್ಲಾ ಅಂಗ ಪ್ರತ್ಯಂಗಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಇದಕ್ಕೆ ಮೂರ್ತಸ್ವರೂಪವನ್ನು ಕೊಟ್ಟನು. ಅಲ್ಲದೆ ಆ ಸಿದ್ಧಾಂತದ ಉಪಯೋಗಗಳನ್ನು ಕಂಡುಕೊಂಡನು. ಆದ್ದರಿಂದ ಪ್ರಸಾಮಾನ್ಯ ವಕ್ರಕ್ಕೆ 'ಗಾಸನ ವಕ್ರ' (Guassian curve) ಎಂದೂ ಹೇಳಲಾಗುತ್ತದೆ. ಪುನಃ 1924 ರಲ್ಲಿ ಕಾರ್ಲ್ ಪಿಯರ್‌ಸನ್ ಎಂಬತನೂ ಈ ಬಗ್ಗೆ ಅಧ್ಯಯನ ನಡೆಸಿದ ವಿಷಯ ತಿಳಿದುಬಂದಿದೆ.

ಭೌತಿಕ ಹಾಗೂ ಬೌದ್ಧಿಕ ಅಳತೆಗಳಲ್ಲಿ, ಸಾಮಾಜಿಕ ಹಾಗೂ ಶೈಕ್ಷಣಿಕ ಅಳತೆಗಳಲ್ಲಿ ಬರುವ ವಿತರಣೆಗಳೆಲ್ಲವೂ ಪ್ರಸಾಮಾನ್ಯ ವಕ್ರರೂಪದಲ್ಲಿಯೇ ಇರುತ್ತವೆ ಎಂದು ಹೇಳಲು ಬರುವುದಿಲ್ಲ. ಮನೋವೈಜ್ಞಾನಿಕ ಅಳತೆಯಲ್ಲಂತೂ(ಉದಾ:ಸಂಗೀತ ಸಾಮರ್ಥ್ಯ, ಯಾಂತ್ರಿಕ ಕೌಶಲ್ಯ ಇತ್ಯಾದಿ) ಪ್ರಸಾಮಾನ್ಯ ಸಂಭಾವ್ಯ ವಕ್ರವನ್ನು ಪಡೆಯುವ ಕಲ್ಪನೆ ದೂರವೇ ಉಳಿಯಬಹುದು. ಆದರೂ ಮನೋವೈಜ್ಞಾನಿಕ ಪರೀಕ್ಷಣಗಳ ರಚನೆಗೆ, ಪರೀಕ್ಷಾ ಫಲಿತಾಂಶಗಳ ವಿಶ್ಲೇಷಣೆಗೆ ಪ್ರಸಾಮಾನ್ಯ ವಿತರಣೆಯ/ವಕ್ರದ ಪರಿಕಲ್ಪನೆಯನ್ನೇ ಆಧಾರವಾಗಿಟ್ಟುಕೊಳ್ಳಲಾಗುತ್ತದೆ. ಆದ್ದರಿಂದ ಪ್ರಸಾಮಾನ್ಯ ವಕ್ರದ ಸೈದ್ಧಾಂತಿಕ ಸಮರ್ಥನೆಯೇ ಬೇರೆ, ಪ್ರಾಯೋಗಿಕ ಉಪಯೋಗವೇ ಬೇರೆ ಎಂದು ಪರಿಗಣಿಸಲಾಗುತ್ತದೆ. ಆದರೂ ಇತ್ತೀಚೆಗೆ ಮನೋವಿಜ್ಞಾನ ಹಾಗೂ ಶಿಕ್ಷಣಶಾಸ್ತ್ರದ ಆಳವಾದ ಅಧ್ಯಯನ ಮತ್ತು ಸಂಶೋಧನೆ ಮಾಡುವಾಗ ಈ ವಕ್ರದ ಉಪಯೋಗ ಅನಿವಾರ್ಯ ಎನಿಸಿದೆ.

**ಪ್ರಸಾಮಾನ್ಯ ಸಂಭಾವ್ಯ ವಕ್ರದ ಲಕ್ಷಣಗಳು:**

ಪ್ರತಿಯೊಂದು ಸಂತತ ಚಲಕದ ಅಳತೆಗನುಗುಣವಾಗಿ ಮಧ್ಯಮಾಂಕ (M) ಮತ್ತು ಮಾನಕವಿಚಲನೆ(Q)ಗಳನ್ನಾಧರಿಸಿ

Digitised by Bharatavani, CIIL

ಪ್ರಸಾಮಾನ್ಯ ಸಂಭಾವ್ಯ ವಕ್ರವನ್ನು ಪಡೆಯಬಹುದಾಗಿದೆ. ಆದರೆ ಸಾರ್ವಜನಿಕವಾಗಿ ಯಾವುದೇ ಸಂತತ ಚಲಕದ ಅಳತೆಗೆ ಅಳವಡಿಸಿಕೊಳ್ಳಲು ಸಹಾಯಕವಾಗುವಂತೆ M=0, Q=1 ಮೂಲಮಾನ, N=1 ಮೂಲಮಾನ ಅಳತೆಗೆ ವಕ್ರವನ್ನು ರೂಪಿಸಿಕೊಂಡು, ಇದನ್ನು 'ಮಾನಕ ಅಥವಾ ಮೂಲಮಾನ ಪ್ರಸಾಮಾನ್ಯ ವಕ್ರ' (Standard of unit normal curve) ಎಂದು ಪರಿಗಣಿಸಲಾಗುತ್ತದೆ. ಯಾವುದೇ ಸಂದರ್ಭದಲ್ಲಿ ಪ್ರಸಾಮಾನ್ಯ ವಕ್ರದ ಪರಿಕಲ್ಪನೆ ಹಾಗೂ ಅದಕ್ಕೆ ಸಂಬಂಧಿಸಿದ ತಾಲಿಕೆಗಳನ್ನು ಉಪಯೋಗಿಸುವಾಗ ಗಣನೆಗೆ ತೆಗೆದುಕೊಳ್ಳುವುದು ನಿಖರವಾಗಿ ರೂಪಿತವಾಗಿರುವ ಈ ಮಾನಕ ಪ್ರಸಾಮಾನ್ಯ ವಕ್ರವನ್ನು ಎಂಬುದು ಗಮನಾರ್ಹ. ಈ ಪ್ರಸಾಮಾನ್ಯ ವಕ್ರದ ಲಕ್ಷಣಗಳನ್ನು ದೃಷ್ಟವಾಗಿ ಗುರುತಿಸಲಾಗಿದೆ. ಪ್ರಸಾಮಾನ್ಯ ಸಂಭಾವ್ಯ ವಕ್ರವು ಸಂತತ ಚಲಕಕ್ಕೆ ಸಂಬಂಧಿಸಿದ ಸೈದ್ಧಾಂತಿಕ ಪರಿಕಲ್ಪನೆಯಾಗಿದೆ. ವಕ್ರವು ಘಂಟಾಕೃತಿಯಲ್ಲಿದ್ದು ಸಮಪಾರ್ಶ್ವತೆಯನ್ನು ಹೊಂದಿದೆ. ಅಂದರೆ ಮಧ್ಯಮಾಂಕದಿಂದ ಬೇರ್ಪಟ್ಟ ವಕ್ರದ ಎರಡೂ ಭಾಗಗಳು ಒಂದೇ ಸಮನಾಗಿರುತ್ತವೆ. ಕೇಂದ್ರೀಯ ಪ್ರವೃತ್ತಿ ಅಳತೆಗಳಾದ ಮಧ್ಯಮಾಂಕ, ಅರ್ಧಕ ಮತ್ತು ಬಹುಲಾಂಕಗಳು ಒಂದೇ ಬಿಂದುವಿನಲ್ಲಿರುತ್ತವೆ. ಅದು ಕೇಂದ್ರ ಬಿಂದುವಾಗಿರುತ್ತದೆ. ವಿತರಣೆಯ ಮಧ್ಯಮಾಂಕವನ್ನು ಪ್ರತಿನಿಧಿಸುವ ಕೇಂದ್ರ ಬಿಂದುವಿನಲ್ಲಿ ವಕ್ರದ ಎತ್ತರ ಗರಿಷ್ಟವಾಗಿರುತ್ತದೆ. 1 ಮತ್ತು 3ನೇಯ ಚತುರ್ಥಕಗಳು ಅರ್ಧಕದಿಂದ ಸಮಾನಾಂತರದಲ್ಲಿರುತ್ತವೆ. ಒಂದೇ ಒಂದು ಪರಮಾವಧಿ(ಗರಿಷ್ಟ) ಬಿಂದುವಿದ್ದು ಏಕಬಹುಲಾಂಕ ವಕ್ರವಾಗಿರುತ್ತದೆ. ವಕ್ರದ ಎರಡೂ ತುದಿಗಳು X ಅಕ್ಷದವನ್ನು ಅನಂತದವರೆಗೂ ಸ್ಪರ್ಶಿಸುವುದಿಲ್ಲ–ಅನಂತ ಅಸ್ಪರ್ಶರೇಖೆಯಾಗಿರುತ್ತದೆ (asymptote). ವಕ್ರದ ಮಧ್ಯಭಾಗದಲ್ಲಿ ಬಹುತೇಕ ಅಂಕಗಳು ಕ್ರೋಢೀಕೃತವಾಗಿದ್ದು ಉಳಿದ ಎರಡು ತುದಿಗಳಲ್ಲಿಯೂ ಕೆಲವೇ ಅಂಕಗಳು ಇರುವುದರಿಂದ, ಮಧ್ಯಮಾಂಕದ ಎಡಕ್ಕೆ ಹಾಗೂ ಬಲಕ್ಕೆ ಹೋದಂತೆ ವಕ್ರದ ವಿಸ್ತಾರವು ಒಂದು ನಿಶ್ಚಿತ ಕ್ರಮಾನುಸಾರವಾಗಿ ಕಡಿಮೆ ಆಗುತ್ತಾ ಹೋಗುತ್ತದೆ. ಮೂಲ ಬಿಂದುವಿನಿಂದ +1ರ ಮತ್ತು –1ರ ದೂರದಲ್ಲಿರುವ ಬಿಂದುಗಳಲ್ಲಿ ವಕ್ರವು ದಿಕ್ಕನ್ನು ಬದಲಾಯಿಸಿ ಸಮಮಟ್ಟವಾಗಲು ಪ್ರಾರಂಭಿಸುತ್ತದೆ. ಈ ಎರಡೂ ಬಿಂದುಗಳನ್ನು 'ನತಿ ಪರಿವರ್ತನ ಬಿಂದುಗಳು' (points of imflexion) ಎಂದು ಕರೆಯಲಾಗುತ್ತದೆ. ವಕ್ರದ ಒಟ್ಟು ಕ್ಷೇತ್ರವನ್ನು 1 ಮೂಲಮಾನವೆಂದು ಅಥವಾ 10,000 ಭಾಗಗಳೆಂದು ಪರಿಗಣಿಸಲಾಗುತ್ತದೆ. ವಕ್ರವನ್ನು X ಅಕ್ಷದಲ್ಲಿ ಮಧ್ಯಮಾಂಕದಿಂದ ಧನಾತ್ಮಕ ಹಾಗೂ ಋಣಾತ್ಮಕ ದಿಸೆಯಲ್ಲಿ ರ ಅಂಕಗಳ (X/) ರೂಪದಲ್ಲಿ ವಿವಿಧ ಬಿಂದುಗಳಲ್ಲಿ ವಿಭಜಿಸಲಾಗಿದೆ. X ಅಕ್ಷದ ಮೇಲೆ ಒಂದು ನಿರ್ದಿಷ್ಟ ಬಿಂದುವಿನಿಂದ ವಕ್ರಕ್ಕೆ ಎಳೆಯುವ ಲಂಬರೇಖೆಯನ್ನು ordinate (Y) ಎಂದು ಕರೆಯಲಾಗುತ್ತದೆ. ಮಧ್ಯಮಾಂಕದಿಂದ ವಿವಿಧ ಬಿಂದುಗಳಲ್ಲಿರುವ ordinate ಗಳ ನಡುವೆ ಇರಬಹುದಾದ ವಿಸ್ತೀರ್ಣ ಭಾಗವನ್ನು ಪ್ರಸಾಮಾನ್ಯ ಸಂಭಾವ್ಯ ವಕ್ರದ ಸಮೀಕರಣದಿಂದ ಕಂಡುಹಿಡಿಯಬಹುದಾಗಿದೆ. ಪ್ರಸಾಮಾನ್ಯ ಸಂಭಾವ್ಯ ವಕ್ರದ ಸಮೀಕರಣ ಈ ಕೆಳಕಂಡಂತಿದೆ

$$Y = \frac{N \, \frac{-x^2}{2\sigma^2}}{\sigma\sqrt{2\pi}^{\,e}}$$

Y = X ಅಕ್ಷದ ಮೇಲಿನ ವಕ್ರದ ಎತ್ತರ

X = ಮಧ್ಯಮಾಂಕದಿಂದ ಹೊಂದಿದ ವಿಚಲನೆ (X-M)

N = ಒಟ್ಟು ಅಂಕಗಳ ಸಂಖ್ಯೆ

σ= ವಿತರಣೆಯ ಮಾನಕ ವಿಚಲನೆ

π= 3.1416

e = 2.7183 (ನೇಪಿರಿಯನ್‌ನ ಲಘುಗುಣಕ ಪದ್ಧತಿಯ ಆಧಾರ (base of the Napierian system of logarithms)

ಮಾನಕ ಪ್ರಸಾಮಾನ್ಯ ವಕ್ರವನ್ನು ಆಧಾರವಾಗಿಟ್ಟುಕೊಂಡು ವಕ್ರದ ಅಡಿಗೆರೆಯಲ್ಲಿ ಮಧ್ಯಮಾಂಕದಿಂದ ಕ್ರಮಾಗತ ಬಿಂದುಗಳ ನಡುವೆ ಗುರುತಿಸಬಹುದಾದ ವಿಸ್ತೀರ್ಣದ ಭಾಗಗಳನ್ನು ಈಗಾಗಲೇ –ಅಂಕ ಮೂಲಮಾನಗಳಲ್ಲಿ ಲೆಕ್ಕಾಚಾರ ಮಾಡಿ ತಾಲಿಕೆ ರೂಪದಲ್ಲಿ ಸಿದ್ಧಪಡಿಸಲಾಗಿದ್ದು ಅವು 'ಪ್ರಸಾಮಾನ್ಯ ವಕ್ರದ ತಾಲಿಕೆ' (ತಾಲಿಕೆ A) ಎಂಬ ಹೆಸರಿನಲ್ಲಿ ವ್ಯಾಪಕವಾಗಿ ಬಳಕೆಗೆ ಬಂದಿವೆ. ಯಾವುದೇ ವಿತರಣೆಯ ಓ,ಒ ಮತ್ತು σ ಬೆಲೆ ತಿಳಿದಿದ್ದರೆ, ಆ ವಿತರಣೆಯನ್ನು ಪ್ರಸಾಮಾನ್ಯ ವಿತರಣೆ ಎಂದು ಕಲ್ಪಿಸಿಕೊಂಡು, ಅಡಿಗೆರೆಯ ಯಾವುದೇ ಎರಡು ಬಿಂದುಗಳ ನಡುವಿರುವ ಅಂಕಗಳನ್ನು ತಾಲಿಕೆ ಬಳಸಿ ಕಂಡುಹಿಡಿಯಬಹುದಾಗಿದೆ. ಇದಕ್ಕಾಗಿ ಸಿದ್ಧಪಡಿಸಿದ ತಾಲಿಕೆಯನ್ನು ಓದಲು ಅರಿತಿರಬೇಕು.

ಮೇಲೆ ಹೇಳಿದ ತಾಲಿಕೆ ಬಳಸಿ ಗುರುತಿಸಲಾದ ವಕ್ರದ ಒಟ್ಟು ಕ್ಷೇತ್ರಫಲದಲ್ಲಿ ಮಧ್ಯಮಾಂಕ ಮತ್ತು ±1σ, ±2σ ಮತ್ತು ±3σ ನಡುವಿನ ಅಂತರದಲ್ಲಿರುವ ಆವೃತ್ತಿಗಳ ವಿವರವನ್ನು ಇಲ್ಲಿ ಕೊಡಲಾಗಿದೆ.

M±1σ=34.13% ; M±2σ=47.72% ; M±3σ=49.87% ;

M ಮತ್ತು ±1σ ನಡುವೆ =34.13% ; ±1σ ಮತ್ತು ±2σ ನಡುವೆ= 13.59% ;

±2σ ಮತ್ತು ±3σ ನಡುವೆ =2.15% ; ±3σ ಆಚೆಗೆ =0.13%

-1σ ಮತ್ತು +1σ ನಡುವೆ = 68.26%

-2σ ಮತ್ತು +2σ ನಡುವೆ = 95.44%

-3σ ಮತ್ತು +3σ ನಡುವೆ = 99.73%

ಪ್ರಸಾಮಾನ್ಯ ವಕ್ರದ ಎರಡೂ ತುದಿಗಳು ಅನಂತವಾಗಿ ಅಡಿಗೆರೆಯನ್ನು ಸ್ಪರ್ಶಿಸುವುದಿಲ್ಲವಾದುದರಿಂದ ಅಳತೆಗೆ ಕೊನೆಯೆಂಬುದಿರುವುದಿಲ್ಲ. ಆದರೂ ಪ್ರಾಯೋಗಿಕ ಸೌಲಭ್ಯಕ್ಕಾಗಿ

Digitised by Bharatavani, CIIL

ವಕ್ರದ ಅಡಿಗೆರೆಯ ವ್ಯಾಪ್ತಿಯನ್ನು ಮಧ್ಯಮಾಂಕದಿಂದ -3σ ಮತ್ತು +3σ ಅಂತರದವರೆಗೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ. ಈ ಸೀಮಾ ಬಿಂದುಗಳ ಅಂತರ 99.73% ಭಾಗದಷ್ಟು ಅಥವಾ 10,000ದಲ್ಲಿ 9973 ಅಂಕಗಳನ್ನು ಒಳಗೊಂಡಿದ್ದು ಕೇವಲ 0.27% ಅಥವಾ 27 ಅಂಕಗಳನ್ನು ಮಾತ್ರ ಗೌಣವಾಗಿಸುತ್ತದೆ.

ವಿಷಮತೆ ಗುಣಾಂಕ 'ಶೂನ್ಯ' ಹಾಗೂ ಶೃಂಗತೆ (kurtosis) ಪ್ರಮಾಣ 0.263 ಆಗಿರುತ್ತದೆ; ವಕ್ರವನ್ನು ಮಧ್ಯಮ ಶೃಂಗ ವಕ್ರ (mesokurtic curve) ಎಂದು ಕರೆಯಲಾಗುತ್ತದೆ.

ಪ್ರಸಾಮಾನ್ಯ ಸಂಭಾವ್ಯ ವಕ್ರದ ಉಪಯೋಗಗಳು: ಸಂತತ ಚಲಕದ ಯಾವುದೇ ಪ್ರಾಯೋಗಿಕ ವಿತರಣೆ ಕರಾರುವಕ್ಕಾಗಿ ಪ್ರಸಾಮಾನ್ಯ ವಿತರಣೆಯಾಗಿರುವುದಿಲ್ಲ. ಪ್ರತಿದರ್ಶ ಗಾತ್ರ ಅಂದರೆ ಓ ಸಂಖ್ಯೆ ಬಹಳಷ್ಟು ದೊಡ್ಡದಾದಂತೆ ಪ್ರಸಾಮಾನ್ಯತೆ ಎಡೆಗೆ ಹತ್ತಿರವಾಗುವ ಸಾಧ್ಯತೆ ಇದೆಯಷ್ಟೆ. ಆದರೆ ಈ ಪ್ರಾಯೋಗಿಕ ವಿತರಣೆಗಳಲ್ಲಿ ಪ್ರಸಾಮಾನ್ಯತೆ ಕಲ್ಪಿಸಿಕೊಂಡು ಕೆಳಗಿನ ಪ್ರಯೋಜನಗಳನ್ನು ಪಡೆಯಬಹುದು. ದತ್ತ ವಿತರಣೆಯಲ್ಲಿ ಗೊತ್ತುಪಡಿಸಿದ ಯಾವುದೇ ಎರಡು ಸೀಮಾಬಿಂದುಗಳ ನಡುವಿರುವ ಶೇ.ಅಂಕಗಳನ್ನು ಕಂಡುಹಿಡಿಯುವುದು. ಯಾವುದೇ ವಿತರಣೆಯಲ್ಲಿ ದತ್ತ ಶೇಕಡ ಅಂಕಗಳನ್ನು ಒಳಗೊಳ್ಳುವ ಸೀಮಬಿಂದುಗಳನ್ನು ನಿರ್ಧರಿಸುವುದು. ಒಂದರ ಮೇಲೊಂದು ಬರುವಂತಿರುವ ಯಾವುದೇ ಎರಡು ವಿತರಣೆಗಳನ್ನು ಹೋಲಿಸಿ ನೋಡುವುದು. ಯಾವುದಾದರೂ ಪರೀಕ್ಷಾ ಪ್ರಶ್ನೆಗಳ ಸಾಪೇಕ್ಷ ಕ್ಲಿಷ್ಟತೆ ಮಟ್ಟವನ್ನು ಕಂಡುಹಿಡಿಯುವುದು. ದತ್ತ ಗುಂಪೊಂದನ್ನು ಸಾಮರ್ಥ್ಯಕ್ಕನುಗುಣವಾಗಿ ವಿವಿಧ ವರ್ಗಗಳಲ್ಲಿ ವಿಂಗಡಿಸುವುದು.

ಜೊತೆಗೆ ಯಾವುದೇ ಆವೃತ್ತಿ ಸ್ತಂಭಾಕೃತಿಯನ್ನು (Histogram) ಅದೇ ವಿಸ್ತೀರ್ಣ, ಸರಾಸರಿ ಮತ್ತು ಮಾನಕ ವಿಚಲನೆಗಳನ್ನು ಹೊಂದಿರುವ ಪ್ರಸಾಮಾನ್ಯ ಸಂಭಾವ್ಯ ವಕ್ರದೊಂದಿಗೆ ಹೋಲಿಸಿ ನೋಡಬಹುದು. ಇಷ್ಟೆ ಅಲ್ಲದೆ, ಇದರ ಉಪಯೋಗ ಅನುಮಿತೀಯ ಸಂಖ್ಯಾಶಾಸ್ತ್ರದಲ್ಲಿ (inferential statistic) ಪ್ರತಿದರ್ಶಚಯನ ಸಿದ್ಧಾಂತದಲ್ಲಿ ಮಹತ್ತರವಾಗಿ ಕಂಡುಬರುತ್ತದೆ. ಇಲ್ಲಿ ಬಳಸುವ ಪರಾಮಿತೀಯ ಸಾಂಖ್ಯಿಕ (Parametric) ಕ್ರಮಗಳೆಲ್ಲವೂ ಯಾವುದೇ ಸಾಂಖ್ಯಿಕದ ಪ್ರತಿದರ್ಶಚಯನ ವಿತರಣೆ ಪ್ರಸಾಮಾನ್ಯವಾಗಿರುತ್ತದೆ ಎಂಬ ಕಲ್ಪನೆಯನ್ನು ಆಧರಿಸಿದೆ.

**ಪ್ರಸಾಮಾನ್ಯ ವಕ್ರತೆಯಿಂದ ವಿಚಲನೆ:** ಪ್ರಾಯೋಗಿಕವಾಗಿ ಪಡೆದ ಅನೇಕ ವಿತರಣೆಗಳು ಪ್ರಸಾಮಾನ್ಯ ಸಂಭಾವ್ಯ ವಕ್ರದ ಸೈದ್ಧಾಂತಿಕ ಕಲ್ಪನೆಯಿಂದ ದೂರವಾಗಿರುವ ಸಂಭವವುಂಟು ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಇಂತಹ ವಿತರಣೆಗಳು ಪ್ರಸಾಮಾನ್ಯ ಸಂಭಾವ್ಯ ವಕ್ರದಿಂದ 'ವಿಚಲನೆ' ಹೊಂದಿದೆ ಎಂದು ಹೇಳಲಾಗುತ್ತದೆ. ಈ ವಿಚಲನೆ ಎರಡು ರೀತಿಯಲ್ಲಿರಬಹುದು– ವಿಷಮತೆ ಮತ್ತು ಶೃಂಗತೆ.

**ವಿಷಮತೆ ಚಿತ್ರ–1 ಚಿತ್ರ–2**

ಪ್ರಸಾಮಾನ್ಯ ಸಂಭಾವ್ಯ ವಕ್ರದ ಪ್ರಮುಖ ಲಕ್ಷಣವಾದ ಘಂಟಾಕೃತಿ ಹಾಗೂ ಸಮಪಾರ್ಶ್ವತೆಗಳನ್ನು ಕಳೆದುಕೊಂಡಿರುವ ಗುಣಧರ್ಮಕ್ಕೆ 'ವಿಷಮತೆ' (Skewness) ಎನ್ನಲಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ವಕ್ರದಲ್ಲಿ ಸಮಪಾರ್ಶ್ವತೆ ಇಲ್ಲದಿರುವಿಕೆ ಅಥವಾ ಕೇಂದ್ರೀಯ ಪ್ರವೃತ್ತಿ ಅಳತೆಗಳು ಬೇರೆಬೇರೆ ಬಿಂದುಗಳಲ್ಲಿದ್ದು ವಕ್ರದ ಸಂತುಲತೆ ಎಡಕ್ಕೆ ಅಥವಾ ಬಲಕ್ಕೆ ವಾಲಿದ್ದರೆ ಅದನ್ನು 'ವಿಷಮತೆ' ಎಂದು ಹೇಳಲಾಗುತ್ತದೆ. ಇದರಲ್ಲಿ 2 ವಿಧಗಳಿವೆ–ಧನಾತ್ಮಕ ಹಾಗೂ ಋಣಾತ್ಮಕ ವಿಷಮತೆ.




ಚಿತ್ರ 2 : ಧನಾತ್ಮಕ ವಿಷಮತೆ (ಬಲಪಾರ್ಶ್ವಕ್ಕೆ )




ಚಿತ್ರ 1 : ಋಣಾತ್ಮಕ ವಿಷಮತೆ (ಎಡಪಾರ್ಶ್ವಕ್ಕೆ )

ಅಂಕಗಳು ವಿತರಣೆಯ ಕೆಳಭಾಗಕ್ಕೆ ಕೇಂದ್ರೀಕೃತವಾಗಿದ್ದು ಮೇಲ್ಭಾಗಕ್ಕೆ ಅತಿ ವಿರಳವಾಗಿ ಹರಡಿಕೊಂಡಿದ್ದರೆ, ಆ ವಿತರಣೆಯ ವಕ್ರವು ಬಲಭಾಗಕ್ಕೆ ಸಂಕುಚಿತಗೊಳ್ಳುತ್ತದೆ. ಈ ಬಲಪಾರ್ಶ್ವ ವಿಚಲನೆಯನ್ನು ಧನಾತ್ಮಕ ವಿಚಲನೆ ಎನ್ನಲಾಗುತ್ತದೆ. ಕೇಂದ್ರೀಯ ಪ್ರವೃತ್ತಿ ಅಳತೆಗಳು ಬೇರೆ ಬೇರೆ ಬಿಂದುಗಳಲ್ಲಿದ್ದು ಮಧ್ಯಮಾಂಕದ ಎಡಭಾಗಕ್ಕೆ ಅರ್ಧಕ ಹಾಗೂ ಬಹುಲಾಂಕಗಳಿರುತ್ತವೆ. ಮಾಪನಕ್ಕೆ ಬಳಸಿದ ಪರೀಕ್ಷಣದ ಕ್ಲಿಷ್ಟತೆ ಮಟ್ಟ ಹೆಚ್ಚಾಗಿದ್ದಾಗ ಈ ರೀತಿ ವಿಷಮತೆ ಕಂಡು ಬರುತ್ತದೆ. ಅಂಕಗಳು ವಿತರಣೆಯ ಮೇಲ್ಭಾಗಕ್ಕೆ ಸಂಚಯಗೊಂಡು ಕೆಳಭಾಗದಲ್ಲಿ ಅತಿ ವಿರಳವಾಗಿ

Digitised by Bharatavani, CIIL

ಹರಡಿಕೊಂಡಿದ್ದರೆ, ಆ ವಿತರಣೆಯ ವಕ್ರವು ಎಡಭಾಗಕ್ಕೆ ಸಂಕುಚಿತಗೊಳ್ಳುತ್ತದೆ. ಈ ಎಡಪಾರ್ಶ್ವ ವಿಚಲನೆಗೆ ಋಣಾತ್ಮಕ ವಿಚಲನೆ ಎನ್ನಲಾಗುತ್ತದೆ. ಇದರಲ್ಲಿ ಮಾಧ್ಯಮಾಂಕದ ಬಲಭಾಗಕ್ಕೆ ಅರ್ಧಕ ಬಹುಲಾಂಕಗಳಿರುತ್ತವೆ. ಪ್ರಯೋಗಿಸಿದ ಪರೀಕ್ಷಣ ಅತಿ ಸುಲಭವಾಗಿದ್ದಾಗ ಈ ರೀತಿ ವಿಚಲನೆ ಕಂಡುಬರುತ್ತದೆ.

ವಿಷಮತೆ ಪ್ರಮಾಣವನ್ನು ಅಳೆಯಲು ವಿವಿಧ ಅಂಶಗಳನ್ನು ಆಧರಿಸಿದ ವಿವಿಧ ಸೂತ್ರಗಳನ್ನು ಬಳಸಲಾಗುತ್ತದೆ. ಇದರ ಪ್ರಮಾಣ ಸೂಚಿಸುವ ಅಂಶಕ್ಕೆ ವಿಷಮತಾ ಗುಣಾಂಕ (coefficient of skewness) ಎನ್ನಲಾಗುತ್ತದೆ.

$$\text{ವಿಷಮತೆ ಗುಣಾಂಕ} = \frac{3(\text{ಮಧ್ಯಮಾಂಕ} - \text{ಅರ್ಧಕ})}{\sigma} \quad ---------(1)$$

$$= \frac{P_{90} + P_{10}}{2} - P_{50} \quad --------(2)$$

$$= \frac{D_9 + D_1}{2} - D_5 \quad ---------(3)$$

$$= \frac{Q_3 + Q_1 - 2Mdn}{Q_3 - Q_1} \quad --------(4)$$

ವಿಷಮತೆ ಗುಣಾಂಕ ಸೊನ್ನೆಯಾಗಿದ್ದರೆ ಪ್ರಸಾಮಾನ್ಯ ಸಂಭಾವ್ಯ ವಕ್ರವೆಂದೂ ಯಾವುದೇ ಪ್ರಮಾಣ ಹೊಂದಿದ್ದು ಧನಾತ್ಮಕವಾಗಿದ್ದರೆ ಧನಾತ್ಮಕ ವಿಷಮತೆಯುಳ್ಳ ವಕ್ರವೆಂದೂ, ಋಣಾತ್ಮಕವಾಗಿದ್ದರೆ ಋಣಾತ್ಮಕ ವಿಷಮತೆಯುಳ್ಳ ವಕ್ರವೆಂದೂ ಹೇಳಲಾಗುತ್ತದೆ.

**ಶೃಂಗತೆ**

ಆವೃತ್ತಿ ವಕ್ರವು ಸಮಪಾರ್ಶ್ವತೆಯನ್ನು ಹೊಂದಿದ್ದರೂ ಶೃಂಗ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದರೆ ಅಥವಾ ಪ್ರಸಾಮಾನ್ಯ ಸಂಭಾವ್ಯ ವಕ್ರದ ಶಿಖರತೆಯಿಂದ ವಿಚಲನೆ ಹೊಂದಿದ್ದರೆ, ಅದಕ್ಕೆ 'ಶೃಂಗತೆ' (ಏಣಾಡಿಣಖ) ಎನ್ನಲಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಯಾವುದೇ ಪ್ರಾಯೋಗಿಕ ಆವೃತ್ತಿ ವಕ್ರವನ್ನು ಪ್ರಸಾಮಾನ್ಯ ಸಂಭಾವ್ಯ ವಕ್ರದೊಡನೆ ಹೋಲಿಸಿ ನೋಡಿದಾಗ ಕಂಡುಬರುವ ಶಿಖರದ ನೀಳತೆಗೆ ಅಥವಾ ವಿಸ್ತೃತತೆಗೆ ಸಂಬಂಧಿಸಿದ ಗುಣಧರ್ಮಕ್ಕೆ 'ಶೃಂಗತೆ' ಎಂದು ಕರೆಯಲಾಗುತ್ತದೆ. ಶೃಂಗ ಪ್ರಮಾಣವನ್ನು ಈ ಕೆಳಗಿನ ಸೂತ್ರದಿಂದ ಲೆಕ್ಕಾಚಾರ ಮಾಡಲಾಗುತ್ತದೆ.

$$\text{ಶೃಂಗತೆ} = \quad = \frac{Q}{P_{90} - P_{10}}$$

ಪ್ರಸಾಮಾನ್ಯ ಸಂಭಾವ್ಯ ವಕ್ರದಲ್ಲಿ ಚತುರ್ಥಕ ವಿಚಲನೆಯು(ಕಿ) ಮಾನಕ ವಿಚಲನೆಯ (σ) 0.6745ರಷ್ಟು ಇರುತ್ತದೆ. $P_{90}$ ಮಧ್ಯಮಾಂಕದಿಂದ +1.28σ ಅಂತರದಲ್ಲಿಯೂ $P_{10}$ ಮಧ್ಯಮಾಂಕದಿಂದ-1.28σ ಅಂತರದಲ್ಲಿಯೂ ಇದೆ. (ಪ್ರಸಾಮಾನ್ಯ ವಕ್ರದ ತಾಲಿಕೆ ಪ್ರಕಾರ) ಈ ಬೆಲೆಗಳನ್ನು ಮೇಲಿನ ಸೂತ್ರದಲ್ಲಿ ಅಳವಡಿಸಿದಾಗ 0.263 ಆಗುತ್ತದೆ. ಅಂದರೆ ಪ್ರಸಾಮಾನ್ಯ ಸಂಭಾವ್ಯ ವಕ್ರದ ಶೃಂಗ ಪ್ರಮಾಣ 0.263 ಆಗಿರುತ್ತದೆ; ಅಂತೆಯೇ ಅದನ್ನು 'ಮಧ್ಯಮ ಶೃಂಗ ವಕ್ರ' (nesokurtic curve) ಎಂದು ಕರೆಯಲಾಗಿದೆ. ಇದರಿಂದ ವಿಚಲಿತವಾದ ವಕ್ರಗಳು 'ವಿಸ್ತೃತ ಶೃಂಗತೆ' (platykurtosis) ಅಥವಾ 'ನೀಳ ಶೃಂಗತೆ' (Leptokurtosis) ಯನ್ನು ಹೊಂದಿರಬಹುದಾಗಿದೆ.

ಶೃಂಗ ಪ್ರಮಾಣ 0.263ಕ್ಕಿಂತ ಹೆಚ್ಚಾಗಿದ್ದರೆ ಆ ವಕ್ರದ ಶೃಂಗವು ಚಪ್ಪಟೆಯಾಗಿರುತ್ತದೆ; ಅದಕ್ಕೆ 'ವಿಸ್ತೃತ ಶೃಂಗ ವಕ್ರ' (platykurtic curve) ಎನ್ನಲಾಗುತ್ತದೆ. ಇಂತಹ ವಿತರಣೆ/ವಕ್ರದಲ್ಲಿ ಅಂಕಗಳು ವಿಸ್ತೃತವಾಗಿ ಎರಡೂ ಕಡೆಗಳಿಗೂ ವ್ಯಾಪಕಗೊಂಡಿದ್ದು ಮಾಪನ ಮಾಡಿದ ಗುಂಪು 'ವಿಜಾತೀಯ ಗುಂಪು' (Heterogenous group) ಎಂದು ತಿಳಿದುಬರುತ್ತದೆ. ಶೃಂಗ ಪ್ರಮಾಣವು 0.263 ಕ್ಕಿಂತ ಕಡಿಮೆಯಾಗಿದ್ದರೆ ಆ ವಕ್ರದ ಶೃಂಗವು ಮೊನಚಾಗಿದ್ದು, ಅದನ್ನು 'ನೀಳ ಶೃಂಗ ವಕ್ರ'(Leptokurtic curve) ಎನ್ನಲಾಗುತ್ತದೆ. ಈ ವಿತರಣೆಯಲ್ಲಿ ಬಹುತೇಕ ಅಂಕಗಳು ಮಧ್ಯಮಾಂಕದ ಸುತ್ತಮುತ್ತಲೂ ಅಂದರೆ ±1σ ಪರಿಮಿತಿಯ ಅತಿ ಸಮೀಪದಲ್ಲಿಯೇ ಹರಡಿಕೊಂಡಿದ್ದು ಸೀಮಾಂತ ಕ್ಷೇತ್ರಗಳಲ್ಲಿ ವಿರಳವಾಗಿರುತ್ತದೆ; ಈ ಗುಂಪನ್ನು ಸ್ವಜಾತೀಯ ಗುಂಪು (Homogenous Group) ಎಂದು ಹೇಳಲಾಗುತ್ತದೆ. ವಕ್ರದ ಶೃಂಗ ಪ್ರಮಾಣದಿಂದ ಪ್ರತಿದರ್ಶದ ಸ್ವರೂಪವನ್ನು ತಿಳಿಯಲು ಸಾಧ್ಯವಾಗುತ್ತದೆ.

**ಆವೃತ್ತಿ ವಿತರಣೆಗಳು ಪ್ರಸಾಮಾನ್ಯತೆಯಿಂದ ವಿಚಲನೆ ಹೊಂದಲು ಕಾರಣಗಳು:**

ಅ) ಸಮಂಜಸವಲ್ಲದ ಪ್ರತಿದರ್ಶದ ಆಯ್ಕೆ: ದತ್ತಾಂಶವನ್ನು ಸಂಗ್ರಹಿಸಲು ಪರಿಗಣಿಸಬೇಕಾದ ಪ್ರತಿದರ್ಶದ ಆಯ್ಕೆ ಸಮಂಜಸವಾಗಿಲ್ಲದಿದ್ದರೆ ಅಂದರೆ ಉದ್ದೇಶಕ್ಕನುಗುಣವಾಗಿ ಯಾವುದೇ ಒಂದು ಸಾಮಾನ್ಯ ವರ್ಗವನ್ನು ಪ್ರತಿನಿಧಿಸದಿದ್ದಾಗ ಹಾಗೂ ಪ್ರತಿದರ್ಶದ ಗಾತ್ರ ಅತಿ ಚಿಕ್ಕದಾಗಿದ್ದಾಗ ದೊರೆಯುವ ಅಂಕಗಳ ವಿತರಣೆ ಪ್ರಸಾಮಾನ್ಯ ಸಂಭಾವ್ಯ ವಕ್ರವಾಗಿರುವುದಿಲ್ಲ. ಅದರಿಂದ ವಿಚಲನೆ ಹೊಂದಿದ್ದು ವಿಷಮತೆ ಅಥವಾ ಶೃಂಗತೆ ಕಂಡುಬರುತ್ತದೆ. ಉದಾಹರಣೆಗೆ ನಿರ್ದಿಷ್ಟ ಪರೀಕ್ಷಣವನ್ನು ಪ್ರಯೋಗಿಸಬೇಕಾದ ಗುಂಪಿನ ವಯೋಮಿತಿಗೆ ಮೀರಿದ (ಹೆಚ್ಚು ಅಥವಾ ಕಡಿಮೆ ವಯಸ್ಸಿನ) ಅಭ್ಯರ್ಥಿಗಳನ್ನು ಆಯ್ಕೆ ಮಾಡಿದಾಗ ದೊರೆಯುವ ವಿತರಣೆ ವಿಷಮತೆ ಹೊಂದಿರುತ್ತದೆ. ಹಾಗೆಯೇ ಆಯ್ಕೆಯಾದ ಪ್ರತಿದರ್ಶ ಅತಿ ಚಿಕ್ಕದಾಗಿದ್ದು ಸ್ವಜಾತೀಯ ಸಮೂಹವಾಗಿದ್ದಾಗ (ಕೇವಲ ಮೇಧಾವಿ ಅಥವಾ ಮಂದ ಸಾಮರ್ಥ್ಯದ ವಿದ್ಯಾರ್ಥಿಗಳೆ ಇರುವಂತೆ) ಶೃಂಗತೆ ಕಂಡುಬರುತ್ತದೆ.

ಆ) ಉಚಿತವಲ್ಲದ, ಸೂಕ್ತವಲ್ಲದ ಪರೀಕ್ಷಣಗಳ ಬಳಕೆ: ನಿರ್ದಿಷ್ಟ ಸಾಮರ್ಥ್ಯವನ್ನು ಸಮರ್ಪಕವಾಗಿ ಮಾಪನ ಮಾಡಲು

Digitised by Bharatavani, CIIL

ಉಪಯೋಗಿಸುವ ಪರೀಕ್ಷಣ ಪ್ರತಿದರ್ಶ ಒಳಗೊಳ್ಳುವ ಅಭ್ಯರ್ಥಿಗಳ ಸಾಮರ್ಥ್ಯದ ಮಟ್ಟಕ್ಕೆ ಅಥವ ತಿಳುವಳಿಕೆ ಮಟ್ಟಕ್ಕೆ ಅನುಗುಣವಾಗಿಲ್ಲದಿದ್ದರೆ, ದೊರೆಯುವ ವಿತರಣೆ ಪ್ರಸಾಮಾನ್ಯ ಸಂಭಾವ್ಯತೆಯಿಂದ ವಿಚಲತೆ ಹೊಂದಿರುತ್ತದೆ. ಉದಾಹರಣೆಗೆ 7ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಯೋಗಿಸುವ ಗಣಿತ ಪರೀಕ್ಷಣ 4ನೇ ತರಗತಿ ಅಥವಾ 9ನೇ ತರಗತಿ ಮಟ್ಟದ ವಿಷಯವನ್ನು ಒಳಗೊಂಡಿದ್ದಾಗ, ಹಾಗೆಯೇ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಅತಿ ಕ್ಲಿಷ್ಟವಾದ ಆಂಗ್ಲ ಭಾಷೆಯಲ್ಲಿ ಪರೀಕ್ಷಣ ಪ್ರಯೋಗಿಸಿದಾಗ ವಿತರಣೆ ಪ್ರಸಾಮಾನ್ಯತೆಯಿಂದ ವಿಚಲಿತವಾಗಿ ವಿಷಮತೆ ಹೊಂದಿರುತ್ತದೆ.

ಇ) ಪರೀಕ್ಷಣಗಳ ರಚನೆ ಹಾಗೂ ಪ್ರಯೋಗ ಕ್ರಮದಲ್ಲಿ ದೋಷಗಳು: ಪರೀಕ್ಷಣಗಳ ರಚನೆ ಹಾಗೂ ಪ್ರಯೋಗ ಕ್ರಮದಲ್ಲಿ ದೋಷಗಳು ಸಂಭವಿಸುವುದರಿಂದಲೂ ಅಂದರೆ ಪರೀಕ್ಷಣ ಒಳಗೊಂಡಿರುವ ವಿಷಯ ಘಟಕಗಳ ವ್ಯಾಪ್ತಿ ಸಮಂಜಸವಾಗಿಲ್ಲದಿದ್ದಾಗ, ಪ್ರಶ್ನೆಗಳ ರಚನೆ ದೋಷ ಪೂರಿತವಾಗಿದ್ದು ಸಂಖ್ಯೆಯಲ್ಲಿ ಬಹಳಷ್ಟು ಕಡಿಮೆಯಿದ್ದಾಗ, ಪರೀಕ್ಷಣ ಪ್ರಯೋಗಕ್ಕೆ ಅಗತ್ಯವಾದಷ್ಟು ಕಾಲಾವಧಿ ಹಾಗೂ ಸ್ಪಷ್ಟಸೂಚನೆಗಳು ಇಲ್ಲದಿದ್ದಾಗ, ಉತ್ತರಗಳನ್ನು ಉತ್ತರಸೂಚಿಗನುಗುಣವಾಗಿ ಕ್ರಮಬದ್ಧವಾಗಿ ಮೌಲ್ಯಮಾಪನ ಮಾಡದಿದ್ದಾಗ ದೊರೆಯುವ ವಿತರಣೆ ಪ್ರಸಾಮಾನ್ಯ ಸಂಭಾವ್ಯತೆಯಿಂದ ವಿಚಲನೆ ಹೊಂದುತ್ತದೆ.

ಈ) ಪ್ರಸಾಮಾನ್ಯತೆಯಿಲ್ಲದ ವಿತರಣೆಗಳು: ಮಾಪನ ಮಾಡುವ ಲಕ್ಷಣದಲ್ಲಿಯೇ ಸಹಜವಾಗಿ ಪ್ರಸಾಮಾನ್ಯ ಸಂಭಾವ್ಯತೆ ಇಲ್ಲದಿದ್ದಾಗ, ಅದರ ಮಾಪನದಿಂದ ಪಡೆದ ಅಂಕಗಳ ವಿತರಣೆ ಪ್ರಸಾಮಾನ್ಯ ವಿತರಣೆಯಾಗಿರುವುದಿಲ್ಲ; J ಆಕಾರ, U ಆಕಾರ ಇತ್ಯಾದಿ ಆಕಾರಗಳಲ್ಲಿರುತ್ತವೆ. ಇದನ್ನು 'ಪ್ರಸಾಮಾನ್ಯತೆಯಿಲ್ಲದ ವಿತರಣೆ' ಎನ್ನಲಾಗುತ್ತದೆ. ಉದಾಹರಣೆಗೆ (1) ಮಕ್ಕಳ ರೋಗದಿಂದ ಮರಣದ ಪ್ರಮಾಣ ಗುರುತಿಸಿದಾಗ ವಯಸ್ಸು ಹೆಚ್ಚಾದಂತೆ ಮರಣ ಪ್ರಮಾಣ ಕಡಿಮೆಯಾಗುತ್ತದೆ. ಹಾಗೆಯೇ ವೃದ್ಧಾಪ್ಯ ಹಾಗೂ ಪ್ರೌಢ ವಯಸ್ಸಿನಲ್ಲಿ ಹೆಚ್ಚಾಗಿ ಕಂಡುಬರುವ ರೋಗದಿಂದ ಮರಣದ ಪ್ರಮಾಣವನ್ನು ಗುರುತಿಸಿದಾಗ, ವಯಸ್ಸು ಕಡಿಮೆಯಾದಂತೆ ಮರಣ ಪ್ರಮಾಣ ಕಡಿಮೆಯಾಗುತ್ತದೆ. ಇದರಿಂದಾಗಿ ವಕ್ರ J ಆಕಾರವನ್ನು ಪಡೆಯುತ್ತದೆ. ಈ ರೀತಿ ವಕ್ರ ಬಹಳಷ್ಟು ಮಟ್ಟಿಗೆ ವೈದ್ಯಕೀಯ ಸಂಖ್ಯಾಶಾಸ್ತ್ರದಲ್ಲಿ ಕಂಡುಬರುತ್ತದೆ.(2) ಸಾಮಾನ್ಯ ವ್ಯಕ್ತಿಗಳು ಹಾಗೂ ಮಾನಸಿಕ ರೋಗಿಗಳು ಸರಿಸಮ ಪ್ರಮಾಣದಲ್ಲಿರುವ ಗುಂಪಿನಲ್ಲಿ ನರವ್ಯಾಧಿ ಅನುಸೂಚಿಯ ಮೇಲೆ ಸಾಮಾನ್ಯ ವ್ಯಕ್ತಿಗಳು ಕಡಿಮೆ ಅಂಕಗಳನ್ನು ಮಾನಸಿಕ ರೋಗಿಗಳು ಹೆಚ್ಚಿದ ಅಂಕಗಳನ್ನು ಪಡೆಯುವ ಸಾಧ್ಯತೆ ಇರುವುದರಿಂದ ವಿತರಣೆಯ ಮಧ್ಯಭಾಗದಲ್ಲಿ ಒಂದು ಹಳ್ಳವುಂಟಾಗಿ U ಆಕಾರದ ವಕ್ರ ಮೂಡುತ್ತದೆ.

**–ಡಾ. ಯಶೋಧರ ಕೆ.**

## ಪ್ರಾಕಲ್ಪನೆಗಳು

ಸಂಶೋಧನೆಗೆ ಒಂದು ಸಮಸ್ಯೆಯನ್ನಾರಿಸಿಕೊಂಡ ಸಂಶೋಧಕ ಈ ಸಮಸ್ಯೆಗೆ ಸಾಧ್ಯವಿರುವ ಒಂದು ಪರಿಹಾರವನ್ನು ಕಲ್ಪಿಸಿಕೊಳ್ಳುತ್ತಾನೆ. ಹೇಳಿಕೆಯ ರೂಪದ ಈ ಪರಿಹಾರ ಸಂಶೋಧನೆಗೆ ಆಧಾರಸ್ತಂಭವಾಗುತ್ತದೆ. ಇಂತಹ ಹೇಳಿಕೆಯನ್ನು ಪ್ರಾಕಲ್ಪನೆ (Hypothesis) ಎಂದು ಹೇಳಲಾಗುತ್ತದೆ. ಪ್ರಾಕಲ್ಪನೆ ಸಂಶೋಧನೆ ಮುಂದುವರೆಯಲು ಅತ್ಯಗತ್ಯ– ಸಂಶೋಧನೆಯ ಉದ್ದೇಶವೇ ಪ್ರಾಕಲ್ಪನೆಯನ್ನು ನಿರೂಪಿಸಿ ಅವುಗಳನ್ನು ಪರೀಕ್ಷಿಸುವುದು. ಈ ಪ್ರಾಕಲ್ಪನೆಗಳ ಆಧಾರದ ಮೇಲೆ ಸಂಶೋಧನೆಯ ವಿನ್ಯಾಸವನ್ನು ರೂಪಿಸಿಕೊಳ್ಳಬೇಕಾಗುತ್ತದೆ, ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ.

ಪ್ರಾಕಲ್ಪನೆ, ಎತ್ತಿಕೊಂಡಿರುವ ಸಮಸ್ಯೆಗೆ ಬರಬಹುದಾದ ಉತ್ತರವನ್ನು ಕಂಡುಕೊಳ್ಳುವ ಒಂದು ತಾತ್ಕಾಲಿಕ ಹೇಳಿಕೆ. ಅಂದ ಮಾತ್ರಕ್ಕೆ ಹೇಳಿಕೆಯಲ್ಲಿ ಸಂಶೋಧಕನಿಗೆ ವಿಶ್ವಾಸವಿದೆ, ಅದು ನಿಜವೆಂದು ನಂಬುತ್ತಾನೆ ಎಂದಲ್ಲ. ಈ ಹೇಳಿಕೆ ನಿಜವಾಗಿದ್ದರೆ ಏನನ್ನು ನಿರೀಕ್ಷಿಸಬಹುದು ಎನ್ನುವ ಆಧಾರದ ಮೇಲೆ ಅವನು ಕಾರ್ಯಾರಂಭ ಮಾಡುತ್ತಾನೆ. ಉದಾಹರಣೆಗೆ ಎರಡು ಗುಂಪಿನ ಮಕ್ಕಳ ನಡುವೆ ಬುದ್ಧಿವಂತಿಕೆಯಲ್ಲಿ ವ್ಯತ್ಯಾಸವಿದೆಯೇ ಎನ್ನುವುದು ಸಂಶೋಧನಾ ಸಮಸ್ಯೆಯಾಗಿರಬಹುದು. ಈ ಅಧ್ಯಯನದ ಆರಂಭದಲ್ಲಿ ಈ ಎರಡು ಗುಂಪಿನ ನಡುವೆ ವ್ಯತ್ಯಾಸವಿಲ್ಲ ಎನ್ನುವ ಪ್ರಾಕಲ್ಪನೆಯನ್ನು ಇಟ್ಟುಕೊಂಡು ಮಾಹಿತಿ ಸಂಗ್ರಹಿಸಲು ತೊಡಗಬಹುದು. ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆಯಿಂದ ಈ ಪ್ರಾಕಲ್ಪನೆ ನಿಜವೆಂದು ಸಾಧಿತವಾದರೆ ಅದು ಸಂಶೋಧನೆಯ ತೀರ್ಮಾನವೇ ಅದಾಗುತ್ತದೆ.

ಪ್ರಾಕಲ್ಪನೆಯೆಂದರೆ ಪರೀಕ್ಷಿಸಲು ಸಾಧ್ಯವಿರುವ ಒಂದು ಹೇಳಿಕೆ. ಇಂತಹ ಹೇಳಿಕೆ ಸಾಮಾನ್ಯ ಜ್ಞಾನಕ್ಕೆ ಸರಿಹೊಂದುತ್ತಿರಬಹುದು ಅಥವಾ ಅದಕ್ಕೆ ವಿರುದ್ಧವೆನಿಸಬಹುದು. ಇದು ಕೊನೆಯಲ್ಲಿ ನಿಜವೆನಿಸಬಹುದು ಅಥವಾ ಸುಳ್ಳಾಗಬಹುದು. ಏನಾದರೂ ಇದು ಒಂದು ಪರೀಕ್ಷೆಗೆ ದಾರಿ ಮಾಡಿಕೊಡುತ್ತದೆ. ನಿರ್ದಿಷ್ಟ ಉತ್ತರವನ್ನು ಬಯಸುವ ಸವಾಲು ಇದು. ವಿಜ್ಞಾನಕ್ಕೆ ಸಹಜವಾದ ಅನುಮಾನಕ್ಕೆ ಇದು ಸೂಚಕವಾಗುತ್ತದೆ. ಯಾವ ಹೇಳಿಕೆಯನ್ನು ಅನುಭವಜನ್ಯ ಸಾಕ್ಷ್ಯವಿಲ್ಲದೆ ಒಪ್ಪಿಕೊಳ್ಳುವ ಒಂದು ಮನಃಸ್ಥಿತಿಗೆ ನಿದರ್ಶನವಾಗುತ್ತದೆ.

**ಪ್ರಾಕಲ್ಪನೆಗಳ ಮಹತ್ವ:** ಯಾವುದೇ ಒಂದು ಸಂಶೋಧನೆ ಇಂತಹ ಪ್ರಾಕಲ್ಪನೆಯಿಲ್ಲದೆ ಆರಂಭವಾಗಲಾರದು. ಪ್ರಾಕಲ್ಪನೆ ಇಲ್ಲದ ಸಂಶೋಧನೆ ಉದ್ದೇಶರಹಿತ ಹುಡುಕಾಟವಾಗುತ್ತದೆ. ದಿಕ್ಸೂಚಿಯಿಲ್ಲದ ನೌಕೆಯಂತೆ, ಅದು ಎಲ್ಲಿ ಹೋಗುತ್ತದೆ ಎಂದು ತಿಳಿಯುವುದೇ ಕಷ್ಟವಾಗುತ್ತದೆ. ಯಾವುದೇ ಒಂದು ಸಂಗತಿಯ ಬಗೆಗೆ ಸಂಶೋಧನೆ ನಡೆಸುತ್ತಿರುವಾಗ ಅಸಂಖ್ಯಾತ ದತ್ತಾಂಶಗಳ

Digitised by Bharatavani, CIIL

ನಡುವೆ ದಾರಿ ಹುಡುಕಿಕೊಳ್ಳಬೇಕಾಗುತ್ತದೆ. ಇಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ, ಯಾವುದನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು ಎನ್ನುವ ನಿರ್ಧಾರ ತೆಗೆದುಕೊಳ್ಳುತ್ತಿರಬೇಕಾಗುತ್ತದೆ. ಇಂತಹ ನಿರ್ಧಾರ ತೆಗೆದುಕೊಳ್ಳಲು ಪ್ರಾಕಲ್ಪನೆ ಮಾರ್ಗದರ್ಶಿಯಾಗುತ್ತದೆ.

ಆದರೂ ಪ್ರಾಕಲ್ಪನೆಗಳನ್ನು ರೂಪಿಸುವುದು ಅವುಗಳನ್ನು ಕ್ರಮವಾಗಿ ಪರೀಕ್ಷಿಸುವುದು ಕಷ್ಟಕೆಲಸ ಎನ್ನುವುದು ನಿಜ. ಆದರೆ ವಿಜ್ಞಾನ ಬೆಳೆಯುವುದೇ ಈ ನಿಧಾನದ ಗತಿಯಲ್ಲಿ. ಅಪರೂಪಕ್ಕೊಮ್ಮೆ ನ್ಯೂಟನ್‌ನಂತಹ ವಿಜ್ಞಾನಿಗೆ ಮರದಿಂದ ಬಿದ್ದ ಸೇಬು ಇಲ್ಲಿಯವರೆಗೂ ಕಾಣಿಸದಿದ್ದ ವಿಶ್ವವನ್ನೇ ತೋರಿಸಬಹುದು. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಜ್ಞಾನ ಬೆಳೆಯುವುದು ಹನಿಹನಿಯನ್ನು ಶೇಖರಿಸಿ ಮಡಕೆ ತುಂಬಿಸುವ ರೀತಿಯಲ್ಲಿ. ಪ್ರಾಕಲ್ಪನೆಯ ಮಹತ್ವವು ಈ ಕೆಳಕಂಡಂತಿದೆ.

1. ಪ್ರಾಕಲ್ಪನೆಯು ಸಂಶೋಧಕನಿಗೆ ತಾತ್ಕಾಲಿಕವಾದ ಮಾರ್ಗದರ್ಶನವಾಗಿದ್ದು, ಅವನಿಗೆ ತನ್ನ ಗುರಿಯತ್ತ ಸಾಗಲು ದಾರಿದೀಪವಾಗಿದೆ.
2. ಪ್ರಾಕಲ್ಪನೆಗಳ ಸಿದ್ಧಾಂತವನ್ನು ರೂಪಿಸುವುದಕ್ಕೆ ಆಧಾರವಾಗುತ್ತವೆ.
3. ಪ್ರಾಯೋಗಿಕ ಅಧ್ಯಯನಗಳಲ್ಲಿ ಸಾರಾಂಶಗಳ ಪರಸ್ಪರ ಪ್ರಭಾವದ ಬಗ್ಗೆ ಊಹಿಸಿಕೊಳ್ಳಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಪ್ರಾಕಲ್ಪನೆಯ ಅವಶ್ಯಕತೆ ಕಂಡುಬರುತ್ತದೆ. ಪ್ರಾಯೋಗಿಕ ಸಂದರ್ಭಗಳಲ್ಲಿ ಪ್ರಯೋಗದ ಫಲಿತಾಂಶಗಳ ಬಗ್ಗೆ ಭವಿಷ್ಯಬೇಕಾಗುತ್ತದೆ.
4. ಸಂಶೋಧಕನಿಗೆ ಸಂಶೋಧನೆಯಲ್ಲಿ ಬಳಸಿದ ಚಲಕಗಳ ನಡುವಿನ ಸಂಬಂಧವನ್ನು ಪತ್ತೆ ಹಚ್ಚಲು ಪ್ರಾಕಲ್ಪನೆಗಳು ಮಾರ್ಗದರ್ಶನ ನೀಡುತ್ತವೆ.
5. ಸಂಶೋಧನೆಗೆ ಬೇಕಾದ ದತ್ತಾಂಶಗಳನ್ನು ಸಂಗ್ರಹಿಸಲು ಸಹಾಯಕವಾಗುತ್ತವೆ.
6. ಪ್ರಾಕಲ್ಪನೆಗಳು ಸಂಶೋಧಕ ತನ್ನ ಸಂಶೋಧನೆಯ ವ್ಯಾಪ್ತಿಯನ್ನು ವರ್ಗಾಯಿಸಿಕೊಳ್ಳಲು ಸಹಾಯಕವಾಗುತ್ತದೆ.

**ಉತ್ತಮ ಪ್ರಾಕಲ್ಪನೆಯ ಲಕ್ಷಣಗಳು:** ಸಂಶೋಧನೆಯ ದೃಷ್ಟಿಯಿಂದ ಉತ್ತಮವೆನಿಸುವ ಪ್ರಾಕಲ್ಪನೆಗಳಿಗೆ ಕೆಲವು ವಿಶಿಷ್ಟ ಲಕ್ಷಣಗಳಿವೆ. ಅತ್ಯಂತ ಮುಖ್ಯ ಲಕ್ಷಣ ಮುಂಚೆ ಹೇಳಿರುವಂತೆ ಈ ಪ್ರಾಕಲ್ಪನೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಸಾಧ್ಯವಿರಬೇಕು. ಅನುಭವ ಜನ್ಯ ಕ್ಷೇತ್ರದಿಂದ ಪರೀಕ್ಷಿಸಲು ಸಾಧ್ಯವಿಲ್ಲದ ಪ್ರಾಕಲ್ಪನೆ ಅನುಪಯುಕ್ತ.

ಅರ್ಥಸ್ಪಷ್ಟತೆಯಿಲ್ಲದ ಹೇಳಿಕೆಯನ್ನು ಪರೀಕ್ಷಿಸಲು ಸಾಧ್ಯವಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಅರ್ಥಸ್ಪಷ್ಟವಾಗಿರುವ ಜೊತೆಗೆ ಅದು ನಿಖರವಾಗಿಯೂ ಇರಬೇಕು. ಅಸ್ಪಷ್ಟವಾಗಿರುವ ಹೇಳಿಕೆಯನ್ನು ಪರೀಕ್ಷಿಸಲು ಸಾಧ್ಯವಿಲ್ಲ. ಪ್ರಾಕಲ್ಪನೆ ಒಂದು ಸೈದ್ಧಾಂತಿಕ ವಿಕಾಸದ ಒಂದು ಭಾಗವಾಗಿ ಬಂದರೆ ಅದಕ್ಕೆ ಹೆಚ್ಚಿನ ಮಹತ್ವವಿರುತ್ತದೆ. ಇಂತಹ ಪ್ರಾಕಲ್ಪನೆಗಳು ಜ್ಞಾನದ ವ್ಯವಸ್ಥಿತ ಬೆಳವಣಿಗೆಗೆ ಸಹಾಯವಾಗುತ್ತದೆ.

ಪ್ರಾಕಲ್ಪನೆ ಲಭ್ಯವಿರುವ ಸಂಖ್ಯಾಶಾಸ್ತ್ರೀಯ ತಂತ್ರಗಳಿಂದ ಪರೀಕ್ಷಿಸಲು ಸಾಧ್ಯವಿರಬೇಕು. ಈ ಲಕ್ಷಣಗಳ ಜೊತೆಗೆ ಪ್ರಾಕಲ್ಪನೆಗಳು ಸರಳವಾಗಿರಬೇಕು, ನೇರವಾಗಿರಬೇಕು, ಒಂದು ಘಟನೆ ಅಥವಾ ಸಂಗತಿಯನ್ನು ವಿವರಿಸಲು ಅಗತ್ಯವಾದಷ್ಟು ವಿವರಣೆ ಅದಕ್ಕೆ ಸಂಬಂಧಿಸಿದ ಪ್ರಾಕಲ್ಪನೆಯಲ್ಲಿ ಬರುವಂತಿರಬೇಕು. ಸಂಶೋಧಕ ಒಂದು ವಿಷಯದಲ್ಲಿ ಹೆಚ್ಚು ಹೆಚ್ಚು ತಿಳಿದಂತೆ, ಅದನ್ನು ಸರಳ ಪ್ರಾಕಲ್ಪನೆಗಳ ರೂಪದಲ್ಲಿ ನಿರೂಪಿಸಲು ಅವನಿಗೆ ಸಾಧ್ಯವಾಗುತ್ತದೆ.

ಪ್ರಾಕಲ್ಪನೆಯ ನಿರೂಪಣೆಯ ವಿಧಗಳು: ಪ್ರಾಕಲ್ಪನೆಗಳನ್ನು ಅನೇಕ ರೀತಿಗಳಲ್ಲಿ ನಿರೂಪಿಸಬಹುದು. ಪ್ರಾಕಲ್ಪನೆಗಳನ್ನು ನಿರೂಪಿಸುವ ರೀತಿ ಸಂಶೋಧನೆಯ ವಿಧ ಉದ್ದೇಶಗಳು ಮತ್ತು ವಿನ್ಯಾಸವನ್ನು ಅವಲಂಬಿಸಿರುತ್ತದೆ.

**1. ಸಂಶೋಧನಾ ಪ್ರಾಕಲ್ಪನೆ:** ಅನೇಕ ಆಧಾರಗಳನ್ನು ಹೊಂದಿರುವಂತಹ ಸಮಸ್ಯೆಗೆ ಅಥವಾ ಕಾರಣರೂಪದಲ್ಲಿರುವ ಋಣಾತ್ಮಕ ಅಥವಾ ಶೂನ್ಯ ಸಂಬಂಧವಿರುವ ಪ್ರಮುಖವಾದ ಸಾಮಾನ್ಯ ಪ್ರಾಕಲ್ಪನೆಗೆ ಸಂಶೋಧನಾ ಪ್ರಾಕಲ್ಪನೆ ಎನ್ನಬಹುದು. ಉದಾಹರಣೆಗೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಬುದ್ಧಶಕ್ತಿ ಮತ್ತು ಶಾಲಾಕಲಿಕೆಯ ಒಂದು ಸಹಜಸಂಬಂಧ ಅಧ್ಯಯನ ಎಂಬ ಸಂಶೋಧನೆಯಲ್ಲಿ ಪ್ರಾಕಲ್ಪನೆಯನ್ನು ಹೀಗೆ ನಿರೂಪಿಸಬಹುದು. ಪ್ರಾಥಮಿಕ ಶಾಲಾ ಮಕ್ಕಳ ಬುದ್ಧಿಶಕ್ತಿಗೂ ಮತ್ತು ಶಾಲಾಕಲಿಕೆಗೂ ನಿರ್ದಿಷ್ಟ ಸಂಬಂಧವಿದೆ. ಚಲಕಗಳ ನಡುವೆ ನಿರ್ದಿಷ್ಟ ಸಂಬಂಧವನ್ನು ಊಹಿಸಲು ಸಾಕಷ್ಟು ಆಧಾರಗಳು ಇಲ್ಲಿದ್ದರೆ ಈ ಪ್ರಾಕಲ್ಪನೆಯನ್ನು ಈ ರೀತಿ ನಿರೂಪಿಸಬೇಕಾಗುತ್ತದೆ.

**2. ಉಪ ಪ್ರಾಕಲ್ಪನೆ:** ಪ್ರಧಾನ ಪ್ರಾಕಲ್ಪನೆಯನ್ನು ಪರೀಕ್ಷಿಸಲು ಅನುಕೂಲವಾಗುವಂತೆ ಉಪ ಪ್ರಾಕಲ್ಪನೆಗಳಾಗಿ ನಿರೂಪಿಸಬಹುದು. ಸ್ಪಷ್ಟ ನಿರೂಪಣೆಗಾಗಿ ಒಂದು/ಒಂದಕ್ಕಿಂತ ಹೆಚ್ಚು ಪ್ರಧಾನ ಪ್ರಾಕಲ್ಪನೆಗಳನ್ನು ನಿರ್ದಿಷ್ಟ ಪ್ರಾಕಲ್ಪನೆಗಳಾಗಿ ನಿರೂಪಿಸಕೊಳ್ಳುವಂಥ ನಿರ್ದಿಷ್ಟ ಪ್ರಾಕಲ್ಪನೆಗಳನ್ನು "ಉಪ ಪ್ರಾಕಲ್ಪನೆ" (Sub/Miner Hypothesis) ಎನ್ನುತ್ತಾರೆ. ಉಪ ಪ್ರಾಕಲ್ಪನೆಗಳು ಗುರುತಿಸಿದ ಚಲಕಗಳ ಸಹಸಂಬಂಧವನ್ನು ಧನಾತ್ಮಕ, ಋಣಾತ್ಮಕ ಅಥವಾ ಶೂನ್ಯ ಸಂಬಂಧಗಳಾಗಿ ಸಹ ಸೂಚಿಸಬಹುದು.

**ಪ್ರಧಾನ ಪ್ರಾಕಲ್ಪನೆ:** ವಿದ್ಯಾರ್ಥಿಗಳ ಬುದ್ಧಿಶಕ್ತಿಗೂ ಶಾಲಾ ಸಾಧನೆಗೂ ಧನಾತ್ಮಕ ಸಂಬಂಧವಿದೆ.

**ಉಪ ಪ್ರಾಕಲ್ಪನೆಗಳು:** (i) ವಿದ್ಯಾರ್ಥಿಗಳ ಬುದ್ಧಿಶಕ್ತಿಗೂ ವಿಜ್ಞಾನ ವಿಷಯದಲ್ಲಿನ ಸಾಧನೆಗೂ ಧನಾತ್ಮಕ ಸಂಬಂಧವಿದೆ. (ii) ವಿದ್ಯಾರ್ಥಿಗಳ ಬುದ್ಧಿಶಕ್ತಿಗೂ ಭಾಷಾ ವಿಷಯದಲ್ಲಿನ ಸಾಧನೆಗೂ ಧನಾತ್ಮಕ ಸಂಬಂಧವಿದೆ. (iii) ವಿದ್ಯಾರ್ಥಿಗಳ ಬುದ್ಧಿಶಕ್ತಿಗೂ ಗಣಿತವಿಷಯದಲ್ಲಿನ ಸಾಧನೆಗೂ ಧನಾತ್ಮಕ ಸಂಬಂಧವಿದೆ.

Digitised by Bharatavani, CIIL

**3. ನಿರ್ದೇಶಿತ ಪ್ರಾಕಲ್ಪನೆ:** ಸಂಶೋಧಕನಿಗೆ ಅನುಭವಾತ್ಮಕ ಆಧಾರಗಳಿದ್ದರೆ ಯಾವುದೇ ಸಂಶೋಧನೆಯಲ್ಲಿ ಸಂಶೋಧಕನ ಅಥವಾ ಒಂದು ಸೈದ್ಧಾಂತಿಕ ಆಧಾರವಿದ್ದರೆ ಅಥವಾ ತಾರ್ಕಿಕ ಸಮರ್ಥನೆಯಿದ್ದರೆ ತಾನು ರೂಪಿಸುವ ಪ್ರಾಕಲ್ಪನೆಯನ್ನು ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ನಿರೂಪಿಸಿಕೊಳ್ಳಬಹುದು. ಅಂತಹ ಪ್ರಾಕಲ್ಪನೆಗೆ ನಿರ್ದೇಶಿತ ಪ್ರಾಕಲ್ಪನೆ (Directional Hypothesis) ಎಂದು ಹೆಸರು.

**ಉದಾ:** (i) ವಿದ್ಯಾರ್ಥಿಗಳ ವಯಸ್ಸು ಮತ್ತು ಇವರ ಬುದ್ಧಿಶಕ್ತಿ ಧನಾತ್ಮಕ ಸಹಸಂಬಂಧ ಹೊಂದಿರುತ್ತದೆ ಅಥವಾ ವಿದ್ಯಾರ್ಥಿಗಳ ವಯಸ್ಸು ಜಾಸ್ತಿಯಾದರೆ ಅವರ ಬುದ್ಧಿಶಕ್ತಿಯೂ ಜಾಸ್ತಿ ಇರುತ್ತದೆ (ಧನಾತ್ಮಕ ಸಂಬಂಧ) (ii) ವಯಸ್ಸು ಮುಂದುವರಿದಂತೆ ದೈಹಿಕ ಬೆಳವಣಿಗೆಯ ವೇಗ ನಿಧಾನವಾಗುತ್ತದೆ (ಋಣಾತ್ಮಕ ಸಂಬಂಧ)

**4. ಶೂನ್ಯ ಪ್ರಾಕಲ್ಪನೆ:** ನಿರ್ದೇಶಾತ್ಮಕ ಪ್ರಾಕಲ್ಪನೆಯನ್ನು ರೂಪಿಸುವಾಗ ಕೆಲವು ವೇಳೆ ತಪ್ಪುಗಳು ಆಗಬಹುದು. ಸಂಶೋಧಕ ವೈಯಕ್ತಿಕ ಒಲವಿಗೆ (Personal Bias) ಒಳಗಾಗಿ ಸಂಶೋಧನೆಯ ಫಲಿತಾಂಶಗಳನ್ನು ವಸ್ತುನಿಷ್ಠವಾಗಿ ವ್ಯಾಖ್ಯಾನಿಸದಿರಬಹುದು. ಆದ್ದರಿಂದ ಸಂಶೋಧಕ ಚಲಕಗಳ ನಡುವೆ ಯಾವ ನಿರ್ದಿಷ್ಟ ಸಂಬಂಧವನ್ನು ಊಹಿಸಿಕೊಳ್ಳದೆ ಸಂಬಂಧ ಶೂನ್ಯವಾಗಿ ಇರುತ್ತದೆ ಎಂದು ಪ್ರಾಕಲ್ಪಿಸಿಕೊಳ್ಳಬಹುದು. ಅಂತಹ ಪ್ರಾಕಲ್ಪನೆಯನ್ನು ಶೂನ್ಯ ಪ್ರಾಕಲ್ಪನೆ (Null Hypothesis) ಎನ್ನುತ್ತಾರೆ. ಅಧ್ಯಯನದ ಫಲಿತಾಂಶಗಳ ಆಧಾರದ ಮೇಲೆ ಚಲಕಗಳ ನಡುವೆ ಧನಾತ್ಮಕ ಅಥವಾ ಋಣಾತ್ಮಕ ಸಂಬಂಧವಿದೆಯೆಂದು ತೀರ್ಮಾನಿಸಲಾಗುತ್ತದೆ. ಕೆಲವು ವೇಳೆ ಶೂನ್ಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಉದಾ: (i) ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವೆ ಗಣಿತ ಕಲಿಕೆಯ ಮಟ್ಟಗಳ ನಡುವೆ ಮಹತ್ವಪೂರ್ಣ ವ್ಯತ್ಯಾಸಗಳಿಲ್ಲ. (ii) ಕಲಿಕೆಯ ಭಾಷಾ ಮಾಧ್ಯಮಕ್ಕೂ ಮಕ್ಕಳ ಭಾಷಾ ವಿಕಾಸಕ್ಕೂ ನಡುವೆ ಮಹತ್ವಪೂರ್ಣ ಸಂಬಂಧವಿಲ್ಲ.

**5. ಸಂಖ್ಯಾಶಾಸ್ತ್ರೀಯ ಪ್ರಾಕಲ್ಪನೆ:** ಯಾವುದೇ ಪ್ರಾಕಲ್ಪನೆಯನ್ನು ಸ್ವೀಕರಿಸಲು/ತಿರಸ್ಕರಿಸಲು ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯ ಮಹತ್ವಪೂರ್ಣ ಮಟ್ಟಗಳನ್ನು ಪ್ರಾಕಲ್ಪನಾ ರಚನೆಯ ಹಂತದಲ್ಲಿಯೇ ನಿರ್ಧರಿಸಿ ಅದಕ್ಕೆ ಅನುಗುಣವಾಗಿ 4 ಪ್ರಾಕಲ್ಪನೆಯಾಗಿ ನಿರೂಪಿಸಿಕೊಳ್ಳಬಹುದು. ಇಂಥ ಪ್ರಾಕಲ್ಪನೆಗಳನ್ನು ಸಂಖ್ಯಾಶಾಸ್ತ್ರೀಯ ಪ್ರಾಕಲ್ಪನೆಗಳು ಎನ್ನುತ್ತೇವೆ.

ಉದಾ: ವಿದ್ಯಾರ್ಥಿಗಳ ವೈಜ್ಞಾನಿಕ ಮನೋವೃತ್ತಿಗೂ ಅವರ ವಿಜ್ಞಾನ ಕಲಿಕೆಯ ಅಂಕಗಳಿಗೂ 0.01 ಮಟ್ಟದಲ್ಲಿ ಮಹತ್ವಪೂರ್ಣ ಧನಾತ್ಮಕ ಸಹಸಂಬಂಧವಿದೆ.

ಪ್ರಾಕಲ್ಪನೆಗಳನ್ನು ಸೂಕ್ತ ರೀತಿಯಲ್ಲಿ ನಿರೂಪಿಸುವುದರಲ್ಲಿ ಅವುಗಳನ್ನು ಸಮರ್ಪಕ ಸಂಖ್ಯಾಶಾಸ್ತ್ರೀಯ ತಂತ್ರಗಳ ಮೂಲಕ ಪರೀಕ್ಷಿಸಿ ಅದರಂತೆ ತೀರ್ಮಾನಗಳನ್ನು ಕೈಗೊಳ್ಳುವುದರಲ್ಲಿ ಸಂಶೋಧಕನ ಸಂಶೋಧನಾ ಕೌಶಲ್ಯಗಳು ವ್ಯಕ್ತವಾಗುತ್ತವೆ.

–ಡಾ. ಜಾನಕಿ. ಎಂ.

## ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು

### ಪ್ರಾರಂಭ ಮತ್ತು ಹಿನ್ನೆಲೆಯ ತಾತ್ವಿಕತೆ

ಸೆಕೆಂಡರಿ ಶಿಕ್ಷಣ ಆಯೋಗದ(ಎಸ್‌ಇಸಿ) 1953ರ ಸೂಚನೆಯ ಮೇರೆಗೆ ಸೆಕೆಂಡರಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಕಾರ್ಯಕ್ರಮದ ಭಾಗವಾಗಿ 1963–64ರಲ್ಲಿ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳನ್ನು(ಆರ್‌ಸಿಇ ಗಳು) ಸ್ಥಾಪಿಸಲಾಯಿತು. ಆಯೋಗದ ದೃಷ್ಟಿಯಲ್ಲಿ ಸೆಕೆಂಡರಿ ಶಿಕ್ಷಣವು, 'ಗ್ರಂಥಸ್ಥ ಮತ್ತು ಯಾಂತ್ರಿಕವಾಗಿದ್ದು ವಿದ್ಯಾರ್ಥಿಗಳ ವಿವಿಧ ಸಾಮರ್ಥ್ಯಗಳು, ಆಸಕ್ತಿಗಳು ಮತ್ತು ಅಭಿರುಚಿಗಳಿಗೆ ಹೊಂದುವ ರೀತಿಯದ್ದಾಗಿ ಇರಲಿಲ್ಲ.' ಆಯೋಗವು ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯಗಳ ಪೂರೈಕೆಗಾಗಿ ಪಠ್ಯಕ್ರಮದ ವ್ಯಾಪ್ತಿಯನ್ನು ವಿಸ್ತರಿಸುವಂತೆ ಶಿಫಾರಸು ಮಾಡಿತು. ಇದಕ್ಕಾಗಿ ಯಾವಾಗಲೂ ಹೆಚ್ಚುತ್ತಿರುವ ವಿದ್ಯಾರ್ಥಿ ಸಮುದಾಯದ ವಿವಿಧ ಸಾಮರ್ಥ್ಯಗಳು, ಆಸಕ್ತಿಗಳು ಮತ್ತು ಅಭಿರುಚಿಗಳಿಗೆ ಹೊಂದುವಂತಹ ವೈವಿಧ್ಯಪೂರ್ಣ ಕೋರ್ಸ್‌ಗಳಿರುವ ವಿವಿಧೋದ್ದೇಶ ಶಾಲೆ'ಗಳನ್ನು, ಸ್ಥಾಪಿಸುವಂತೆ ತಿಳಿಸಿತು.

1961ರಲ್ಲಿ, ಯೋಜನಾ ಆಯೋಗವು ಈಗಾಗಲೇ ಇರುವ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ 'ಮೂರನೆಯ ಯೋಜನೆ'(1961–66)ಯಲ್ಲಿ ವಿವಿಧೋದ್ದೇಶ ಕಾರ್ಯಯೋಜನೆಯನ್ನು ಸಂಯೋಜಿಸುವುದರತ್ತ ಗಮನ ಹರಿಸಬೇಕೆಂದು ಪ್ರಸ್ತಾಪಿಸಿದೆ. ಆಯೋಗದ ಶಿಫಾರಸುಗಳಲ್ಲಿ ಅತ್ಯಂತ ಮುಖ್ಯವಾಗಿರುವ ಅಂಶವೆಂದರೆ, 'ವಿವಿಧೋದ್ದೇಶ ಶಾಲೆಗಳಿಗೆ ಸಮಗ್ರ ಶಿಕ್ಷಕ ತರಬೇತಿ ಕಾರ್ಯಕ್ರಮ'ವನ್ನು ನಡೆಸುವುದು. ಇದನ್ನು ನಾಲ್ಕು ಪ್ರಾದೇಶಿಕ ತರಬೇತಿ ಮಹಾವಿದ್ಯಾಲಯಗಳಲ್ಲಿ ಕೈಗೊಳ್ಳಬೇಕು. ಈ ಮಹಾವಿದ್ಯಾಲಯಗಳಲ್ಲಿ ಸೇವೆಯಲ್ಲಿ ಇರುವಾಗ ಮತ್ತು ಸೇವಾ ಪೂರ್ವ ಕಾಲಾವಧಿಯ ತರಬೇತಿಯ ಮೂಲಕ ವಿವಿಧೋದ್ದೇಶ ಶಾಲೆಗಳಿಗಾಗಿ ಪ್ರಯೋಗ ಮತ್ತು ವಿಜ್ಞಾನ ವಿಷಯಗಳಲ್ಲಿ ಶಿಕ್ಷಕರನ್ನು ತಯಾರು ಮಾಡಬೇಕು.

ಆಯೋಗದ ಶಿಫಾರಸಿನ ಮೇರೆಗೆ ಭಾರತ ಸರಕಾರದ ಶಿಕ್ಷಣ ಮಂತ್ರಾಲಯವು(ಮಿನಿಸ್ಟ್ರಿ ಆಫ್ ಎಡ್ಯುಕೇಶನ್) ದೇಶದಲ್ಲಿ ಒಟ್ಟು ನಾಲ್ಕು ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳನ್ನು ಅಜ್ಮೀರ್, ಭೋಪಾಲ, ಭುವನೇಶ್ವರ ಮತ್ತು ಮೈಸೂರಿನಲ್ಲಿ ಸ್ಥಾಪಿಸುವ ನಿರ್ಧಾರವನ್ನು ಕೈಗೊಂಡಿತು. ಈ ಮಹಾವಿದ್ಯಾಲಯಗಳು ವಿವಿಧೋದ್ದೇಶ ಮತ್ತು ಸೆಕೆಂಡರಿ ಶಾಲೆಗಳಿಗೆ ಶಿಕ್ಷಕರನ್ನು ತರಬೇತಿಗೊಳಿಸಬೇಕು. ಈ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳ (Regional Institute of Education RIE) ಪಾತ್ರವನ್ನು ವಿಶ್ಲೇಷಿಸುತ್ತಾ ಜೆ.ಸಿ. ಅಗರವಾಲ್ 1999 ರಲ್ಲಿ ಹೇಳಿದ್ದೇನೆಂದರೆ, 'ಈ ಮಹಾವಿದ್ಯಾಲಯಗಳನ್ನು ವಿವಿಧೋದ್ದೇಶ ಶಾಲೆಗಳಲ್ಲಿ ಮಾತ್ರವಲ್ಲ, ವಿಜ್ಞಾನ, ತಂತ್ರಜ್ಞಾನ, ಕೈಗಾರಿಕಾ, ಕಲೆಗಳು, ವಾಣಿಜ್ಯ ಮತ್ತು ಕೃಷಿಯಂತಹ ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ಸಮರ್ಥ ಶಿಕ್ಷಕರನ್ನು ಮತ್ತು ಪ್ರಶಿಕ್ಷಕರಿಗೆ ತರಬೇತಿ ನೀಡುವ

Digitised by Bharatavani, CIIL

ಶಿಕ್ಷಕ ಶಿಕ್ಷಣದ ಹೊಸ ಉದ್ಯಮವನ್ನು ಪ್ರತಿನಿಧಿಸುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ'.

**ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳ ಹಿನ್ನೆಲೆಯಲ್ಲಿರುವ ಕಲ್ಪನೆಗಳು**

1963ರಲ್ಲಿ ಎನ್‌ಸಿಇಆರ್‌ಟಿ ಪ್ರಕಟಿಸಿದ 'ಯೋಜನೆ ಮತ್ತು ಕಾರ್ಯಕ್ರಮ' (ಪ್ಲಾನ್ ಆಂಡ್ ಪ್ರೊಗ್ರಾಮ್) ಶೀರ್ಷಿಕೆಯ ದಸ್ತಾವೇಜಿನಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮವನ್ನು ಆಧರಿಸಿದ ಐದು ಕಲ್ಪನೆಗಳನ್ನು ಔಚಿತ್ಯಪೂರ್ಣವಾಗಿ ವಿವರಿಸಲಾಗಿದೆ:

1. ಶಿಕ್ಷಕರಲ್ಲಿ ನಿರೀಕ್ಷಿಸಲಾಗುವ ವೃತ್ತಿಪರ ದಕ್ಷತೆಯನ್ನು ಕಲಿಕಾ ಅನುಭವದ ಸಂಘಟಿತ ಕಾರ್ಯಕ್ರಮದ ಮೂಲಕ ಸಾಧಿಸಲಾಗುತ್ತದೆ. ಅದು ಕೇವಲ ವ್ಯಕ್ತಿ ಹೆಚ್ಚು ಶಿಕ್ಷಣವನ್ನು ಪಡೆಯುವುದರ ಉಪ-ಉತ್ಪನ್ನವಾಗಿರುವುದಿಲ್ಲ.
2. ಸಾಮಾನ್ಯ ಶಿಕ್ಷಣದ ಅಡಿಪಾಯದ ಮೇಲೆ ಆಧಾರಿತವಾಗಿರುವ ಶಿಕ್ಷಕರ ಶಿಕ್ಷಣವು ವಿಷಯದ ವಸ್ತುವಿನ ಮೇಲೆ ಖಚಿತವಾದ ಪ್ರಭುತ್ವವನ್ನು ಒಳಗೊಂಡಿರಬೇಕು. ಇದರಿಂದ ಅವರಿಗೆ ಅದರ ರಚನೆ ಮತ್ತು ಅಂತರ್ – ಸಂಬಂಧಗಳು ಮತ್ತು ವೃತ್ತಿಪರ ಸಿದ್ಧತೆಯ ಕುರಿತು ಒಳನೋಟಗಳು ಲಭಿಸುತ್ತವೆ.
3. ಸಾಮಾನ್ಯ ಶಿಕ್ಷಣವು ವ್ಯಕ್ತಿಯ ಬೆಳವಣಿಗೆಗೆ ಕಾಣಿಕೆ ನೀಡುತ್ತದೆ, ವಿಶೇಷಜ್ಞತೆಯು ಕಲಿಸುವ ವಿಷಯದಲ್ಲಿ ಪಾಂಡಿತ್ಯಪೂರ್ಣ ಜ್ಞಾನವನ್ನು ಒದಗಿಸುತ್ತದೆ ಮತ್ತು ವೃತ್ತಿಪರ ಶಿಕ್ಷಣವು ವೃತ್ತಿಪರ ಕಾರ್ಯನಿರ್ವಹಣೆಯಲ್ಲಿ ತಿಳಿವಳಿಕೆ ಮತ್ತು ಕೌಶಲಕ್ಕೆ ಅವಕಾಶವನ್ನು ಒದಗಿಸುತ್ತದೆ. ಈ ಮೂರನ್ನೂ ಸಮಗ್ರ ಕಾರ್ಯಕ್ರಮವಾಗಿ ಸಂಯೋಜಿಸಬೇಕಾಗಿದೆ.
4. ಭವಿಷ್ಯದ ಶಿಕ್ಷಕರು ತಮ್ಮ ಸ್ವಂತ ಶಿಕ್ಷಣಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿದೆ.
5. ಸೆಕೆಂಡರಿ ಶಾಲಾ ಶಿಕ್ಷಕರ ವೃತ್ತಿಪರ ಸಿದ್ಧತೆಯಲ್ಲಿ ಹದಿಹರೆಯದ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡುವ ಅವಕಾಶವು ಅವಿಭಾಜ್ಯ ಅಂಗವಾಗಿರಬೇಕು.

ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ತರಬೇತಿ ಪಡೆದ ಶಿಕ್ಷಕರ ಕಾರ್ಯಕ್ಷಮತೆಗಳು

ಭವಿಷ್ಯದ ಶಿಕ್ಷಕರಲ್ಲಿ ಬೆಳೆಸಿಕೊಳ್ಳಬೇಕಾದ 14 ಕಾರ್ಯದಕ್ಷತೆಗಳನ್ನು 'ಯೋಜನೆ ಮತ್ತು ಕಾರ್ಯಕ್ರಮಗಳ' ದಸ್ತಾವೇಜಿನಲ್ಲಿ ಕಾಣಿಸಲಾಗಿದೆ. ಇವುಗಳಲ್ಲಿ ಕೆಲವನ್ನು ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಗುರುತಿಸಿಕೊಳ್ಳಲಾಗಿದೆ. ಓರ್ವ ಉತ್ತಮ ಶಿಕ್ಷಕನು ಹೀಗಿರಬೇಕು:

- ಪ್ರಜಾಸತ್ತೆಯ ಸಮಾಜದಲ್ಲಿ ಅಗತ್ಯವಿರುವ ಮೂಲ ಧೋರಣೆಗಳನ್ನು ಹೊಂದಿರಬೇಕು.
- ಶಿಕ್ಷಣ ವೃತ್ತಿಯನ್ನು ಮತ್ತು ಶಾಲೆಯಲ್ಲಿ ಅವನ ವಿಷಯಕ್ಕೆ ಸಂಬಂಧಿಸಿದ ಕ್ಷೇತ್ರ ಮತ್ತು ಸಮುದಾಯವನ್ನು ಪ್ರತಿನಿಧಿಸುವ ಸಾಮರ್ಥ್ಯವನ್ನು ಹೊಂದಿರಬೇಕು.
- ತನ್ನ ವಿಷಯಕ್ಕೆ ಸಂಬಂಧಿಸಿದ ಶಾಸ್ತ್ರ ಮತ್ತು ಪ್ರಯೋಗ ಜ್ಞಾನವನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.
- ವಿವಿಧ ಬೋಧನೆ-ಕಲಿಕೆಯ ಕಾರ್ಯವಿಧಾನಗಳನ್ನು ಮತ್ತು ದೃಶ್ಯ – ಶ್ರವ್ಯ ಉಪಕರಣಗಳನ್ನು ಬಳಸಲು ತಿಳಿದುಕೊಂಡಿರಬೇಕು.
- ಬೋಧನೆಯ ಉದ್ದೇಶಗಳಿಗಾಗಿ ವಿಷಯದ ಆಯ್ಕೆ ಮತ್ತು ಸಂಘಟನೆಯನ್ನು ಮಾಡಲು ಸಮರ್ಥನಾಗಿರಬೇಕು.
- ವಿದ್ಯಾರ್ಥಿಗಳ ಪ್ರಗತಿಯ ಮೌಲ್ಯಮಾಪನ ನಡೆಸಲು ವಿವಿಧ ವಿಧಾನಗಳನ್ನು ಬಳಸಲು ತಿಳಿದುಕೊಂಡಿರಬೇಕು.
- ಸಹ-ಪಠ್ಯ ಚಟುವಟಿಕೆಗಳನ್ನು ಸಂಘಟಿಸಲು, ಅದರ ಮೇಲ್ವಿಚಾರಣೆ ನಡೆಸಲು ಮತ್ತು ಅದರಲ್ಲಿ ಭಾಗವಹಿಸಲು ಸಮರ್ಥನಾಗಿರಬೇಕು.
- ವೃತ್ತಿಪರ ಸಂಘಗಳು, ಸಮುದಾಯ ಚಟುವಟಿಕೆಗಳು, ಸೇವಾನಿರತ ಶಿಕ್ಷಣ, ಸಂಶೋಧನೆ ಮತ್ತು

ಪ್ರಾಯೋಗಿಕೀಕರಣದ ಮೂಲಕ ನಿರಂತರ ಬೆಳವಣಿಗೆಯಲ್ಲಿ ಆಸಕ್ತಿಯನ್ನು ಹೊಂದಿರಬೇಕು.

**ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳ ಕುರಿತು ಹೆಚ್ಚುವರಿ ಮಾಹಿತಿ**

ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳ ಕಾರ್ಯಾಚರಣೆಯ ಕುರಿತು ಇತರ ಮಾಹಿತಿಯನ್ನು ಎರಡು ಉಪ-ವಿಭಾಗಗಳಲ್ಲಿ ನೀಡಲಾಗಿದೆ. 60ರ ದಶಕದ ಪ್ರಾರಂಭದಲ್ಲಿ ಸುಮಾರು ಎಂಟನೆಯ ಒಂದು ಭಾಗದಷ್ಟು, ಅಂದರೆ 2000ಕ್ಕೂ ಹೆಚ್ಚಿನ ಸೆಕೆಂಡರಿ ಶಾಲೆಗಳು ವಿನ್ಯಾಸದಲ್ಲಿ ಬಹು ಉದ್ದೇಶಿತವಾಗಿರುತ್ತವೆ ಮತ್ತು ಈ ಶಾಲೆಗಳಿಗೆ ಗುಣಮಟ್ಟದ ಶಿಕ್ಷಕರನ್ನು ಈ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು ಒದಗಿಸುತ್ತವೆ ಎಂದು ಅಂದಾಜು ಮಾಡಲಾಗಿದೆ.

ಪ್ರಾರಂಭಿಕ ಹಂತಗಳಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳ ಸ್ಥಾನಮಾನ

ಈ ಮಾಹಿತಿಯು ಶಿಕ್ಷಕರಿಂದ ನಿರೀಕ್ಷಿಸಲಾಗುವ ಕಾರ್ಯದಕ್ಷತೆಗೆ ಸಂಬಂಧಿಸಿದೆ; ಶಿಕ್ಷಕ ತರಬೇತಿ ಕಾರ್ಯಕ್ರಮಗಳ ಪ್ರಮುಖ ಉದ್ದೇಶಗಳು, ಜಮೀನು ಮತ್ತು ಕಟ್ಟಡಗಳು ಸೇರಿದಂತೆ ಭೌಗೋಳಿಕ ಪ್ರದೇಶಗಳು; ಕೆಲಸದ ದಿನಗಳನ್ನು/ಅವಧಿಗಳನ್ನು ಸೇರಿದ ಕಾಲೇಜಿನ ಕಾರ್ಯಯೋಜನೆ, ಸಿಬ್ಬಂದಿಗಳ ಬೋಧನಾ ಹೊರೆ; ಮತ್ತು 4 ವರ್ಷಗಳ ಪೂರ್ಣ ಅವಧಿವರೆಗೆ ವಿದ್ಯಾರ್ಥಿಗಳನ್ನು ಉಳಿಸಿಕೊಳ್ಳುವ ಕೋರ್ಸ್‌ಗಳನ್ನು ಒಳಗೊಂಡಿರುತ್ತದೆ. ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಸಮಯದಲ್ಲಿ ಆ ಇಡೀ ಕಾರ್ಯವಿಧಾನದ ಹಿನ್ನೆಲೆಯಲ್ಲಿದ್ದ ಯೋಜನೆಯ ಕುರಿತು ಸ್ಪಷ್ಟ ಕಲ್ಪನೆ ಬರುವ ಉದ್ದೇಶದಿಂದ ಈ ಎಲ್ಲಾ ಅಂಶಗಳನ್ನು ಸಂಗ್ರಹವಾಗಿ ನೀಡಲಾಗಿದೆ.

Digitised by Bharatavani, CIIL

**ಸ್ಥಳ/ವ್ಯಾಪ್ತಿ ಪ್ರದೇಶ**

ಎಂಒಇ ರೂಪಿಸಿದ ಸ್ಥಳ ಆಯ್ಕೆಯ ಸಮಿತಿಯು ಈ ಕೆಳಗಿನ ಪ್ರದೇಶಗಳಲ್ಲಿ ಮಹಾವಿದ್ಯಾಲಯಗಳನ್ನು ಹೊಂದಲು ನಿರ್ಧಾರ ಕೈಗೊಂಡಿತು:

1. ಅಜ್ಮೀರ್ – ಉತ್ತರ ಭಾಗಕ್ಕೆ. ಇದರ ವ್ಯಾಪ್ತಿಯಲ್ಲಿ 6 ರಾಜ್ಯಗಳಿವೆ(ಜಮ್ಮು ಮತ್ತು ಕಾಶ್ಮೀರ, ಪಂಜಾಬು, ರಾಜಸ್ಥಾನ, ಉತ್ತರ ಪ್ರದೇಶ, ದೆಹಲಿ ಮತ್ತು ಹಿಮಾಚಲ ಪ್ರದೇಶ);
2. ಭುವನೇಶ್ವರ – ಪೂರ್ವ ಭಾಗಕ್ಕೆ. ಇದರ ವ್ಯಾಪ್ತಿಯಲ್ಲಿ 8 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಇವೆ (ಅಸ್ಸಾಮ್, ಬಿಹಾರ, ಒರಿಸ್ಸ, ಪಶ್ಚಿಮ ಬಂಗಾಲ, ಮಣಿಪುರ, ತ್ರಿಪುರ, ಎನ್‌ಇಎಫ್‌ಎ ಮತ್ತು ಎನ್‌ಹೆಚ್‌ಟಿಎ)
3. ಭೋಪಾಲ– ಪಶ್ಚಿಮ ಭಾಗಕ್ಕೆ.(ಮಹಾರಾಷ್ಟ್ರ, ಮಧ್ಯ ಪ್ರದೇಶ, ಗುಜರಾತ್, ಗೋವಾ, ಡ್ಯೂ ಮತ್ತು ದಾಮನ್)
4. ಮೈಸೂರು– ದಕ್ಷಿಣ ಭಾಗಕ್ಕೆ. (ಆಂಧ್ರ ಪ್ರದೇಶ, ಕರ್ನಾಟಕ, ತಮಿಳು ನಾಡು ಮತ್ತು ಕೇರಳ).

ಈ ನಾಲ್ಕು ಮಹಾವಿದ್ಯಾಲಯಗಳಲ್ಲಿ ಪ್ರತಿಯೊಂದು ಮಹಾವಿದ್ಯಾಲಯವು ಸುಮಾರು 100 ಎಕರೆ ಜಾಗದಲ್ಲಿ ಇರುತ್ತದೆ. ಇದರಲ್ಲಿ 25 ಎಕರೆ ಕೃಷಿ ಭೂಮಿಯು ವೃತ್ತಿಪರ ಕೋರ್ಸ್‌ಗಳಿಗಾಗಿ ಇರುತ್ತದೆ. ಈ ಮಹಾವಿದ್ಯಾಲಯಗಳಲ್ಲಿ ಸಾಕಷ್ಟು ಕಟ್ಟಡಗಳು, ಪ್ರಯೋಗ ಶಾಲೆಗಳು, ಕಾರ್ಯಾಗಾರಗಳು, ಆಟದ ಬಯಲುಗಳು ಮತ್ತು ಸಿಬ್ಬಂದಿ ಮನೆಗಳು ಇರುತ್ತವೆ. ಪ್ರತಿಯೊಂದು ಮಹಾವಿದ್ಯಾಲಯದ ವತಿಯಿಂದ ಡೆಮಾನ್‌ಸ್ಟ್ರೇಷನ್ ಮಲ್ಟಿ ಪರ್ಪಸ್ ಶಾಲೆ ಸ್ಥಾಪನೆಯಾಗಿದೆ. ಈ ಶಾಲೆಯಲ್ಲಿ ತರಬೇತಿ ಪಡೆಯುತ್ತಿರುವ ಶಿಕ್ಷಕರಿಗೆ ಕಲಿಸಲು ಇರುತ್ತದೆ. ಪ್ರತಿ ವರ್ಷದಲ್ಲಿ ನಿರ್ಧಾರಿತವಾಗಿರುವ ಕಾರ್ಯನಿರತ ದಿನಗಳು 222.

ತರಗತಿಯ ಗಾತ್ರ, ಬೋಧನಾ ಹೊರೆ, ತರಗತಿ ಪಾಠದ ಅವಧಿ

ತರಗತಿಯ ಗಾತ್ರವು 20–35 ವಿದ್ಯಾರ್ಥಿಗಳನ್ನು ಹೊಂದಿರುವ ರೀತಿಯದ್ದಾಗಿ ಇರಬೇಕೆಂದು ನಿರೀಕ್ಷಿಸಲಾಗಿದೆ. ಒಂದು ಬೋಧನಾ ಅವಧಿಯು 50 ನಿಮಿಷಗಳಾಗಿದ್ದು, ಪ್ರಯೋಗ ಶಾಲೆಯ ಅವಧಿಯು (ಪಿರಿಯಡ್ಡುಗಳು) ಒಂದೂವರೆ ಗಂಟೆಯದ್ದಾಗಿ ಇರುತ್ತವೆ. ಪ್ರತಿಯೊಂದು ಮಹಾವಿದ್ಯಾಲಯದ ಬೋಧನಾ ಸಿಬ್ಬಂದಿಯು 16–18 ಪಿರಿಯಡ್ಡುಗಳವರೆಗೆ ಕಲಿಸಬೇಕಾಗುತ್ತದೆ. ಇದರೊಂದಿಗೆ ವಾರಕ್ಕೊಮ್ಮೆ ಸೆಮಿನಾರ್ ಪಿರಿಯಡ್ಡುಗಳು ಮತ್ತು ಆಡಳಿತಾತ್ಮಕ ಜವಾಬ್ದಾರಿಗಳು ಇರುತ್ತವೆ. ಇದರಲ್ಲಿ ಈ ಕೆಳಗಿನವು ಸೇರಿಕೊಂಡಿರುತ್ತವೆ: ಸಮಿತಿಯ ಕೆಲಸ, ಯೋಜನೆ ಮತ್ತು ಬೋಧನಾ ವಸ್ತುಗಳನ್ನು ಅಭಿವೃದ್ಧಿ ಪಡಿಸುವುದು, ಸಂಶೋಧನಾ ಅಧ್ಯಯನಗಳನ್ನು ನಡೆಸುವುದು ಮತ್ತು ಶಿಕ್ಷಕರ ವೃತ್ತಿಪರ ಕಾರ್ಯಗಳಿಗೆ ಸಂಬಂಧಿಸಿದ ಇತರ ಚಟುವಟಿಕೆಗಳು.

**ವಿದ್ಯಾರ್ಥಿಗಳ ದಾಖಲಾತಿ**

4 ವರ್ಷಗಳ ಕಾಲಾವಧಿಯ ವಿಜ್ಞಾನ ಮತ್ತು ತಂತ್ರಜ್ಞಾನ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಿಡಿದಿಡುವುದು 1 ರಿಂದ 4 ವರ್ಷಗಳ ಪ್ರತಿಯೊಂದು ತರಗತಿಯಲ್ಲಿ 60 ರಿಂದ 70 ಇರುತ್ತದೆ. ಇದೇ ರೀತಿ, 4 ವರ್ಷಗಳ ಇಂಗ್ಲಿಷ್ ಮತ್ತು ಕೃಷಿ ಕೋರ್ಸ್‌ನ್ನು ಕೂಡ ಕೆಲವು ಮಹಾವಿದ್ಯಾಲಯಗಳಲ್ಲಿ ಪ್ರಾರಂಭಿಸಲಾಗಿದ್ದು ಅದರಲ್ಲಿಯೂ ಹೆಚ್ಚು ಕಡಿಮೆ ಇದೇ ರೀತಿಯ ವಿದ್ಯಾರ್ಥಿಗಳ ದಾಖಲಾತಿ ಇರುತ್ತದೆ. ಒಂದು ವರ್ಷದ ಬಿ.ಎಡ್. ಕೋರ್ಸ್‌ಗೆ ದಾಖಲಾತಿಗೊಳ್ಳುವ ವಿದ್ಯಾರ್ಥಿಗಳು 80 (40 ಭೌತಿಕ ಮತ್ತು 40 ಜೀವಶಾಸ್ತ್ರೀಯ ವಿಜ್ಞಾನಗಳಿಗೆ.)

**ಬೋಧನಾ ಸಿಬ್ಬಂದಿಗಳಿಗೆ ಕಾರ್ಯನೀತಿ**

ಶೈಕ್ಷಣಿಕ ವಿಭಾಗಗಳಲ್ಲಿ ಎರಡು ವಿಧದ ಸಿಬ್ಬಂದಿಗಳು ಇರುತ್ತಾರೆ: ಒಂದು ವಿಷಯ ತಜ್ಞರ ವಿಭಾಗ ಮತ್ತು ಇನ್ನೊಂದು ಬೋಧನಾ ವಿಧಾನಕ್ರಮದ ತಜ್ಞರನ್ನು ಒಳಗೊಳ್ಳುವ ವಿಭಾಗ. ಶಿಕ್ಷಣ ವಿಭಾಗದ ಬೋಧನಾ ಸಿಬ್ಬಂದಿಗಳಿಂದ ಶಿಕ್ಷಣಶಾಸ್ತ್ರದ ವಿಧಾನಕ್ರಮವನ್ನು (ಕೋರ್ಸ್‌ಗಳನ್ನು) ಮತ್ತು ಸಾಮಾನ್ಯ ಶಿಕ್ಷಣ ಕೋರ್ಸ್‌ಗಳನ್ನು (ಇಂಗ್ಲಿಷ್, ಸಮಾಜ ವಿಜ್ಞಾನಗಳು) ಭಾಷೆ / ಸಮಾಜ ವಿಜ್ಞಾನ ಶಿಕ್ಷಕರಿಂದ ಕಲಿಸಲಾಗುತ್ತದೆ. ಈ ಮಹಾವಿದ್ಯಾಲಯಗಳು ತಮ್ಮ ನಾಲ್ಕು ಸಿಬ್ಬಂದಿಗಳನ್ನು ಪಠ್ಯಕ್ರಮದ ಅಭಿವೃದ್ಧಿ, ಕ್ಷೇತ್ರಾನುಭವಗಳು, ವಿದ್ಯಾರ್ಥಿ ವೈಯಕ್ತಿಕ ಸೇವೆಗಳು ಮತ್ತು ವಿಸ್ತರಣಾ ಸೇವೆಗಳ ಕೇಂದ್ರದ ಸ್ಥಾನ ನಿರ್ದೇಶಕರಾಗಿ ಪರಿಗಣಿಸಿವೆ. ಹಾಗಿದ್ದರೂ 1963ರಲ್ಲಿ ಮನಸ್ಸಿಗೆ ಕಾಣುವಂತೆ ಮಾಡಿರುವುದನ್ನು ಅನುಷ್ಠಾನಕ್ಕೆ ತರಲಾಗಿಲ್ಲ. ಉಪ–ಪ್ರಾಂಶುಪಾಲರ ಹುದ್ದೆಯನ್ನು ರದ್ದುಪಡಿಸಲಾಗಿದೆ. ಈಗ ಹಿರಿಯ ಪ್ರಾಧ್ಯಾಪಕರಲ್ಲಿ ಒಬ್ಬರು ಕಾಲೇಜ್ ಇನ್ಸ್‌ಸ್ಟ್ರಕ್ಟರ್‌ನ ಡೀನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಯುಎಸ್‌ಎಐಡಿ ಯೊಂದಿಗೆ ಸಹಯೋಗ**

ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯದ ಯೋಜನೆಯನ್ನು, ಉಪಕರಣ ಮತ್ತು ಸಿಬ್ಬಂದಿ ಅಭಿವೃದ್ಧಿಯಲ್ಲಿ ಯುಎಸ್‌ಎಐಡಿ ಏಜೆನ್ಸಿಯ ಸಹಯೋಗದೊಂದಿಗೆ ಪ್ರಾರಂಭಿಸಲಾಗಿತ್ತು. ಈ ಏಜೆನ್ಸಿಯು ಕೊಲಂಬಸಿನ ಓಹಿಯೊ ರಾಜ್ಯ ವಿಶ್ವವಿದ್ಯಾಲಯದ 'ಇಂಡಿಯಾ ಆಫೀಸ್'ನಲ್ಲಿ ಇದೆ. 1965–70ರ ಅವಧಿಯಲ್ಲಿ ಓಹಿಯೊ ರಾಜ್ಯ ವಿಶ್ವವಿದ್ಯಾಲಯದಲ್ಲಿ ನಾಲ್ಕು ಆರ್‌ಸಿಇ ಗಳಿಂದ ಅನೇಕ ಶಿಕ್ಷಕರಿಗೆ ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳಲ್ಲಿ ತರಬೇತಿಯನ್ನು ನೀಡಲಾಗಿದೆ. ಈ ತರಬೇತಿಯು ಆರ್‌ಸಿಇ ಬೋಧನಾ ಸಿಬ್ಬಂದಿಗಳಿಗೆ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ರೂಪಿಸಲು ಅವಕಾಶ ಒದಗಿಸಿದೆ.

**ಕಾರ್ಯಾಗಾರಗಳು ಮತ್ತು ಪ್ರಯೋಗಶಾಲೆಗಳು**

ಯುಎಸ್‌ಎಐಡಿಯ ಸಹಯೋಗ ಮತ್ತು ಆರ್ಥಿಕ ನೆರವಿನಿಂದ ಪ್ರಯೋಗಶಾಲೆಗಳು, ಕಾರ್ಯಾಗಾರಗಳು ಮತ್ತು ಕೃಷಿಕ್ಷೇತ್ರದ

Digitised by Bharatavani, CIIL

ಸಲಕರಣೆಗಳ ರೂಪದಲ್ಲಿ ದೊಡ್ಡ ಪ್ರಮಾಣದ ಮೂಲಭೂತ ಸೌಕರ್ಯಗಳನ್ನು ಹೊಂದುವುದು ಸಾಧ್ಯವಾಗಿದೆ. ಅನೇಕ ವರ್ಷಗಳಿಂದ ವಿಜ್ಞಾನದ ಪ್ರಯೋಗಶಾಲೆಗಳನ್ನು ಉತ್ತಮವಾಗಿ ಬಳಸಿಕೊಂಡು ಬರಲಾಗಿದೆ. ತಂತ್ರಜ್ಞಾನದ ನಾಲ್ಕು ವರ್ಷಗಳ ಕೋರ್ಸಿಗಾಗಿ ವಿದ್ಯಾರ್ಥಿಗಳ ಪ್ರವೇಶ ಇಲ್ಲದಿರುವಿಕೆಯಿಂದ ಬಿಡುಗಡೆ ಮಾಡಲ್ಪಟ್ಟ ಸೌಕರ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿಲ್ಲ.

**ಕಾರ್ಯಕ್ರಮಗಳ ಪ್ರಗತಿ**

ಮೊದಲು ಪ್ರಾದೇಶಿಕ ಮಹಾವಿದ್ಯಾಲಯಗಳ ಯೋಜನೆಯು ಕೇಂದ್ರ ಶಿಕ್ಷಣ ಮಂತ್ರಾಲಯದಲ್ಲಿ ಇತ್ತು. ಆಮೇಲೆ ಇದನ್ನು ಕೇಂದ್ರ ಶಿಕ್ಷಣ ಮಂತ್ರಾಲಯದಿಂದ ಎನ್‌ಸಿಇಆರ್‌ಟಿಇಗೆ ಸ್ಥಾನಾಂತರಿಸಲಾಯಿತು. ಎನ್‌ಸಿಇಆರ್‌ಟಿ ಯು ಸ್ವಾಯತ್ತ ಸಂಸ್ಥೆಯಾಗಿದ್ದು ಇದನ್ನು ಭಾರತ ಸರಕಾರದ ಕೇಂದ್ರ ಶಿಕ್ಷಣ ಮಂತ್ರಾಲಯವು ಸೆಪ್ಟೆಂಬರ್, 1961ರಲ್ಲಿ ಸ್ಥಾಪಿಸಿದೆ. 1968ರಲ್ಲಿ ಕೇಂದ್ರ ಶಿಕ್ಷಣ ಮಂತ್ರಾಲಯದಿಂದ ಎನ್‌ಸಿಇಆರ್‌ಟಿ ಯ ಕಾರ್ಯಗಳ ಮೌಲ್ಯಮಾಪನಕ್ಕಾಗಿ ಪರಿಶೀಲನಾ ಸಮಿತಿಯೊಂದನ್ನು ನೇಮಕಗೊಳಿಸಲಾಯಿತು. ಪರಿಶೀಲನಾ ಸಮಿತಿಯು ಎನ್‌ಸಿಇಆರ್‌ಟಿ ಯ 'ಭವಿಷ್ಯದ ಪ್ರಗತಿ'ಯ ಕುರಿತು, ನಾಲ್ಕು ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳು ಒಳಗೊಂಡಂತೆ ಸಮಾಲೋಚನೆಯನ್ನು ನಡೆಸಿತು. ಈ ನಿಟ್ಟಿನಲ್ಲಿ ನಡೆದ ಗಮನಾರ್ಹ ಬೆಳವಣಿಗೆಯ ಸಂಕ್ಷಿಪ್ತ ವಿವರಗಳನ್ನು 'ಪರಿಶೀಲನಾ ಸಮಿತಿಯ ವರದಿ'(1968) ಯನ್ನು ಆಧರಿಸಿ ಈ ಕೆಳಗೆ ನೀಡಲಾಗಿದೆ:

ವಿವಿಧೋದ್ದೇಶ ಶಾಲೆಗಳಿಗೆ ಗುಣಮಟ್ಟದ ಶಿಕ್ಷಕರನ್ನು ಒದಗಿಸುವ ಸಲುವಾಗಿ 1961ರ ಮಧ್ಯ ಭಾಗದಲ್ಲಿ ಶಿಕ್ಷಣ ಮಂತ್ರಾಲಯವು ನಾಲ್ಕು ಪ್ರಾದೇಶಿಕ ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಮತ್ತು ಹೊಂದಿಕೊಂಡಿರುವಂತಹ ನಾಲ್ಕು ಡೆಮಾನ್‌ಸ್ಟ್ರೇಷನ್ ಮಲ್ಟಿಪರ್ಪಸ್ ಶಾಲೆಗಳ ಸ್ಥಾಪನೆಯ ಕಾರ್ಯಯೋಜನೆಯನ್ನು ತಯಾರಿಸಿತು. ಸಮಗ್ರ ಕಾರ್ಯಕ್ರಮವನ್ನು ಜಾರಿಗೆ ತರುವುದನ್ನು ಕೂಡ ನಿರ್ಧರಿಸಲಾಯಿತು. ಗುಣಮಟ್ಟದ ಸುಧಾರಣೆ ಮತ್ತು ಇಡೀ ಕಾರ್ಯಕ್ರಮದ ಅಂಗವಾಗಿ ವಿಷಯದ ಕುರಿತಾದ ಕಾರ್ಯದಕ್ಷತೆ ಮತ್ತು ಶಿಕ್ಷಕರ ತರಬೇತಿಯನ್ನು ಈ ಕಾರ್ಯಕ್ರಮದಲ್ಲಿ ಒಳಗೊಳ್ಳಲಾಯಿತು. ಇದಕ್ಕೆ ನೆರವಾದವರು ಯು.ಎಸ್.ಎ.ಯ ಟೆಕ್ನಿಕಲ್ ಕೊ–ಓಪರೇಶನ್ ಮಿಶನ್. ನಾಲ್ಕು ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳ ಕಾರ್ಯಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ ಸಮಿತಿಗೆ ಒಪ್ಪಿಸಲಾಯಿತು. ಪ್ರಾದೇಶಿಕ ಮಹಾವಿದ್ಯಾಲಯಗಳ ಅಭಿವೃದ್ಧಿಯನ್ನು ಸಮಾಲೋಚಕರು ಮತ್ತು ಉಪಕರಣಗಳನ್ನು ಪೂರೈಸುವುದು, ಮತ್ತು ಯುಎಸ್‌ಎ ಯಲ್ಲಿ ಭಾರತೀಯ ಶಿಕ್ಷಕ ಶಿಕ್ಷಣತಜ್ಞರಿಗೆ ತರಬೇತಿಯನ್ನು ಒದಗಿಸುವ ಸಲುವಾಗಿ ಅಂತಾರಾಷ್ಟ್ರೀಯ ಅಭಿವೃದ್ಧಿಗಾಗಿ ಇರುವ ಯುನೈಟೆಡ್ ಸ್ಟೇಟ್ಸ್ ಏಜೆನ್ಸಿಯ ಮೂಲಕ ಓಹಿಯೊ ರಾಜ್ಯ ವಿಶ್ವವಿದ್ಯಾಲಯದೊಂದಿಗೆ ಸಲಹಾ ಸಮಿತಿಯು ಕರಾರಿಗೆ ಸಹಿಯನ್ನು ಹಾಕಿತು. ಇದಕ್ಕನುಗುಣವಾಗಿ, ಮೇಲೆ ಉಲ್ಲೇಖಿಸಿದಂತೆ ಸಮಿತಿಯು ದೇಶದ ಉತ್ತರ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಭಾಗಗಳಿಗಾಗಿ ನಾಲ್ಕು ಮಹಾವಿದ್ಯಾಲಯಗಳನ್ನು ಅನುಕ್ರಮವಾಗಿ ಅಜ್ಮೀರ್, ಭುವನೇಶ್ವರ, ಭೋಪಾಲ ಮತ್ತು ಮೈಸೂರಿನಲ್ಲಿ ಸ್ಥಾಪಿಸಿತು. ಇದರಲ್ಲಿ ಮೂರು ಮಹಾವಿದ್ಯಾಲಯಗಳು 1963–64ರಲ್ಲಿ ಕಾರ್ಯಾರಂಭ ಮಾಡಿದವು. ಭೋಪಾಲಿನ ಮಹಾವಿದ್ಯಾಲಯವು ಮರುವರ್ಷ ಕಾರ್ಯಾರಂಭ ಮಾಡಿತು.

1966ರಲ್ಲಿ ಸಲಹಾ ಸಮಿತಿಯ ಆಡಳಿತ ಸಂಸ್ಥೆಯ ಹನ್ನೊಂದನೆಯ ಸಭೆಯಲ್ಲಿ ತರಬೇತಿ ಪಡೆಯದೆ ಬಾಕಿ ಉಳಿದ ಶಿಕ್ಷಕರಿಗಾಗಿ ಪ್ರಾದೇಶಿಕ ಮಹಾವಿದ್ಯಾಲಯಗಳು ಬೇಸಿಗೆ–ಶಾಲೆ ಮತ್ತು ದೂರಶಿಕ್ಷಣ ಕೋರ್ಸ್‌ಗಳನ್ನು(ಎಸ್‌ಎಸ್‌ಸಿಸಿ) ಪ್ರಾರಂಭಿಸುವಂತೆ ನಿರ್ದೇಶನವನ್ನು ನೀಡಿತು. ಈ ನಿರ್ದೇಶನವನ್ನು ಅನುಸರಿಸಿ 1967ರಲ್ಲಿ ಪ್ರಾದೇಶಿಕ ಮಹಾವಿದ್ಯಾಲಯಗಳಲ್ಲಿ ಎಸ್‌ಎಸ್‌ಸಿಸಿ ಗಳನ್ನು ಪ್ರಾರಂಭಿಸಲಾಯಿತು. ಈ ಕೋರ್ಸ್‌ಗಳು 1985ರವರೆಗೆ ಮುಂದುವರಿದವು.

ಪ್ರಾರಂಭದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತನ್ನ ಕೋರ್ಸ್‌ಗಾಗಿ ಪ್ರಾದೇಶಿಕ ಮಹಾವಿದ್ಯಾಲಯಗಳಿಂದ ವಿದ್ಯಾರ್ಥಿ ವೇತನ ದೊರೆಯುತ್ತಿತ್ತು ಮತ್ತು ಅವರಿಂದ ಬೋಧನಾ ಶುಲ್ಕವನ್ನು ಪಡೆಯುತ್ತಿರಲಿಲ್ಲ. ವಿದ್ಯಾರ್ಥಿಗಳ ಪ್ರತಿಭೆಯನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲರಿಗೂ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿತ್ತು. ಈ ರೀತಿಯ ವಿದ್ಯಾರ್ಥಿ ವೇತನವನ್ನು ನೀಡದೇ ಇದ್ದರೆ ಶಿಕ್ಷಕ ವೃತ್ತಿಗೆ ನೈತಿಕ ಬಲವಿರುವ ವಿದ್ಯಾರ್ಥಿಗಳನ್ನು ಆಕರ್ಷಿಸುವುದು ಸಾಧ್ಯವಿಲ್ಲವೆಂಬ ಮಾತನ್ನು ಆಧರಿಸಿ ಇದನ್ನು ನೀಡಲಾಗುತ್ತಿತ್ತು. ಕ್ರಮೇಣ ವಿದ್ಯಾರ್ಥಿ ವೇತನಗಳ ಸಂಖ್ಯೆಯನ್ನು ತರಬೇತಿ ಪಡೆಯುವವರ ಅರ್ಧ ಪ್ರಮಾಣಕ್ಕೆ(ಶೇಕಡಾ 50) ಇಳಿಸಲಾಯಿತು. ಈಗ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿಲ್ಲ, ಬದಲಾಗಿ ವಿದ್ಯಾರ್ಥಿಗಳಿಂದ ಬೋಧನಾ ಶುಲ್ಕವನ್ನು ಪಡೆಯಲಾಗುತ್ತದೆ.

ಪ್ರಾದೇಶಿಕ ಮಹಾವಿದ್ಯಾಲಯಗಳಲ್ಲಿ ಪ್ರಾರಂಭಿಸಲಾದ ನಾಲ್ಕು ವರ್ಷಗಳ ಸಮಗ್ರ ಕೋರ್ಸ್ ದೇಶದ ಎಲ್ಲ ವಿವಿಧೋದ್ದೇಶ ಶಾಲೆಗಳಿಗೆ(ಎನ್=2000) ಶಿಕ್ಷಕರನ್ನು ತರಬೇತಿಗೊಳಿಸುವ ಭರವಸೆಯನ್ನು ಪರಿಶೀಲನಾ ಸಮಿತಿ ಪರಿಗಣಿಸಿದೆ. ಈ ಮಹಾವಿದ್ಯಾಲಯಗಳಲ್ಲಿ ಮೊದಲು ಉನ್ನತ ಸೆಕೆಂಡರಿ ಶಾಲೆಯನ್ನು ಮುಗಿಸಿದ(8+3) ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿತ್ತು. ಆಮೇಲೆ ಅದನ್ನು ಹಿರಿಯ ಸೆಕೆಂಡರಿಗೆ(10+2) ಬದಲಾಯಿಸಿಕೊಳ್ಳಲಾಯಿತು. ಇಲ್ಲಿ ನೀಡಲಾಗುವ ತರಬೇತಿಯು ಆ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಪದವಿ ಹಂತದ ಮೊದಲ ವರ್ಷಕ್ಕೆ ಮತ್ತು ಶಿಕ್ಷಣ ಶಾಸ್ತ್ರದ ಮೊದಲ ವರ್ಷದ ವೃತ್ತಿಪರ ತರಬೇತಿಗೆ ಸಮಾನವಾಗಿರುತ್ತದೆ. ಈ ಕೋರ್ಸ್‌ಗಳ ಕುರಿತಾದ ಹೆಚ್ಚಿನ ಉಪಯುಕ್ತತೆಗಳೆಂದರೆ ಇವುಗಳು ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಆಳವಾದ ತರಬೇತಿಯನ್ನು ಮತ್ತು ಉತ್ತಮ ವೃತ್ತಿಪರ ತರಬೇತಿಯನ್ನು ಒದಗಿಸಿವೆ ಎಂದು

Digitised by Bharatavani, CIIL

ಹೇಳಲಾಗುತ್ತದೆ. ಈ ಕಾರ್ಯಕ್ರಮಗಳು ಶಿಕ್ಷಾರ್ಥಿಗಳಲ್ಲಿ (ತರಬೇತಿ ಪಡೆಯುವವರಲ್ಲಿ) ಸೂಕ್ತ ವೃತ್ತಿಪರ ಧೋರಣೆಗಳು ಮತ್ತು ಮೌಲ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶವನ್ನು ನೀಡುತ್ತವೆ.

ನಾಲ್ಕು ವರ್ಷಗಳ ಕೋರ್ಸ್ ಮುಗಿಸಿ ಹೊರಬರುವ ವಿದ್ಯಾರ್ಥಿಗಳು, ಸಾಂಪ್ರದಾಯಿಕ ವಿಧಾನದಲ್ಲಿ ಮೊದಲು ಪದವಿ, ಆಮೇಲೆ ಅವರ ಮೊದಲ ವೃತ್ತಿಪರ ಪದವಿಯನ್ನು ಒಂದು ವರ್ಷದ ಬಿ.ಎಡ್ ಕೋರ್ಸ್‌ಗಾಗಿ ತರಬೇತಿ ಮಹಾವಿದ್ಯಾಲಯವನ್ನು ಸೇರುವವರಿಗಿಂತ ಉತ್ತಮ ಸಿದ್ಧತೆಯನ್ನು ಹೊಂದಿರುವವರಾಗಿರುತ್ತಾರೆ. ಆದರೆ ಇದನ್ನು ಒಪ್ಪಿಕೊಂಡರೂ, ನಾಲ್ಕು ವರ್ಷಗಳ ಕೋರ್ಸಿನ ವಿದ್ಯಾರ್ಥಿಗಳ ಉತ್ತಮ ಗುಣಮಟ್ಟವು ಕೋರ್ಸಿನ ಸಮಗ್ರ ಗುಣದಿಂದ ಉಂಟಾಗಿರುವುದೋ ಅಥವಾ ಶಿಕ್ಷಣದಲ್ಲಿ ಸೇರಿಕೊಳ್ಳಲಾಗಿರುವ ದೊಡ್ಡ ಪ್ರಮಾಣದ ಹೂಡಿಕೆಯಿಂದ ಉಂಟಾಗಿರುವುದೋ ಎಂಬುದರ ಕುರಿತು ಪರಿಶೀಲನಾ ಸಮಿತಿಗೆ ನಿಶ್ಚಿತವಾದ ಅಭಿಪ್ರಾಯಗಳಿಲ್ಲ. ಶಿಕ್ಷಣದ ಹೂಡಿಕೆಯು ಈ ರೀತಿಯದ್ದಾಗಿರುತ್ತದೆ: ಆಯ್ದ ಮತ್ತು ಉತ್ತಮ ಮಟ್ಟದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಿಕೆ; ಮಾಸಿಕ 75 ರೂಪಾಯಿಗಳ ವಿದ್ಯಾರ್ಥಿ ವೇತನದ ನೀಡಿಕೆ; ನಾಲ್ಕು ವರ್ಷಗಳ ಕಾಲ ವಸತಿ ಶಾಲೆಯಲ್ಲಿ ಇರುವಿಕೆ. ನಾಲ್ಕು ವರ್ಷಗಳ ಕೋರ್ಸ್‌ಗಳನ್ನು ವಿಶ್ವವಿದ್ಯಾಲಯಗಳಿಗೆ ಒಪ್ಪಿಸಬಹುದುದೆಂದು ಪರಿಶೀಲನಾ ಸಮಿತಿ ಸೂಚಿಸಿದೆ. ಆದರೆ ಒಂದಲ್ಲ ಒಂದು ಕಾರಣಕ್ಕಾಗಿ ಅದು ನಡೆದಿಲ್ಲ. ಗುಜರಾತ ರಾಜ್ಯದ ವಲ್ಲಭ ವಿದ್ಯಾಸಾಗರ ವಿಶ್ವವಿದ್ಯಾಲಯವು ಇಂಗ್ಲಿಷ್ ಭಾಷೆಯಲ್ಲಿ ನಾಲ್ಕು ವರ್ಷಗಳ ಬಿ.ಎ–ಬಿ.ಎಡ್ ಕೋರ್ಸನ್ನು ಪ್ರಾರಂಭಿಸಿತ್ತು. ಆದರೆ ಅದು ಮುಂದುವರಿಯಲಿಲ್ಲ. ಈಗ ಕೊಲ್ಲಾಪುರ ಮತ್ತು ದೆಹಲಿ ವಿಶ್ವವಿದ್ಯಾಲಯಗಳಲ್ಲಿ ನಾಲ್ಕು ವರ್ಷಗಳ ಕೋರ್ಸ್‌ಗಳು ಇವೆ. ಈ ಕೋರ್ಸ್‌ಗಳನ್ನು ಮುಂದುವರಿಸದಂತೆ ಪರಿಶೀಲನಾ ಸಮಿತಿ ಸೂಚಿಸಿದರೂ, ಆನಂತರದ ಪರಿಶೀಲನೆಯಲ್ಲಿ ಈ ಕೋರ್ಸ್‌ಗಳನ್ನು ಮೊದಲು ಬಿ.ಎಸ್‌ಸಿ(ಆನರ್ಸ್)–ಬಿ.ಎಡ್ ಕೋರ್ಸ್ ಆಗಿ ಮುಂದುವರಿಸಲಾಗಿದೆ. ಇಲ್ಲಿ ಶಿಕ್ಷಾರ್ಥಿಗಳು ಮೂರು ವರ್ಷ ಕಲಿತ ಮೇಲೆ ಮುಂದುವರಿಯಲು ಇಷ್ಟಪಡದಿದ್ದರೆ ಬಿಟ್ಟು ಹೋಗುವ ಅವಕಾಶವನ್ನು ಒದಗಿಸಲಾಗಿದೆ. ಕೆಲವು ಸಮಯದ ನಂತರ ಈ ಕೋರ್ಸ್‌ಗಳನ್ನು ಅದರ ಮೂಲ ಸ್ವರೂಪಕ್ಕೆ ತರಲಾಗಿದೆ.

**ಆರ್‌ಐಇ ಗಳು ನೀಡುವ ಸೇವಾ–ಪೂರ್ವ ಕಾರ್ಯಕ್ರಮಗಳು**

ಕಳೆದ ನಾಲ್ಕು ದಶಕಗಳಲ್ಲಿ ಪ್ರಾದೇಶಿಕ ಶಿಕ್ಷಣ ಮಹಾ ವಿದ್ಯಾಲಯಗಳಿಂದ (ಈಗ ಆರ್‌ಐಇ ಗಳು) ಕೋರ್ಸ್‌ಗಳನ್ನು ಹೊಸದಾಗಿ ಅಳವಡಿಸಿಕೊಳ್ಳುವುದು, ಕೈಬಿಡುವುದು ಇತ್ಯಾದಿ ಮುಂದುವರಿದಿದೆ. ನಾಲ್ಕು ಆರ್‌ಐಇ ಗಳಿಂದ ಒದಗಿಸಲಾಗುವ ಕಾರ್ಯಕ್ರಮಗಳ ವಿಶಾಲ ವಿಭಾಗಗಳನ್ನು ಈ ಕೆಳಗೆ ನೀಡಲಾಗಿದೆ. 1963ರಲ್ಲಿ ಎನ್‌ಸಿಇಆರ್‌ಟಿ ಯು ಈ ಕೆಳಗಿನ ಕಾರ್ಯಕ್ರಮಗಳನ್ನು ಆರ್‌ಸಿಇಗಳಲ್ಲಿ ಪ್ರಸ್ತಾಪಿಸಿದೆ:

1. ವಿಜ್ಞಾನದ ಶಿಕ್ಷಕರನ್ನು ತಯಾರಿಸಲು ನಾಲ್ಕು ವರ್ಷಗಳ ಕಾರ್ಯಕ್ರಮ.
2. ತಂತ್ರಜ್ಞಾನದ ಶಿಕ್ಷಕರನ್ನು ತಯಾರಿಸಲು ನಾಲ್ಕು ವರ್ಷಗಳ ಕಾರ್ಯಕ್ರಮ.
3. ಈ ಕೆಳಗಿನ ಪ್ರತಿಯೊಂದು ಕ್ಷೇತ್ರಕ್ಕಾಗಿ ಒಂದು ವರ್ಷದ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು: ಕೃಷಿ; ವಾಣಿಜ್ಯ; ಲಲಿತ ಕಲೆಗಳು (ಭೋಪಾಲ ಮತು ಭುವನೇಶ್ವರ ಮಾತ್ರ); ಗೃಹ ವಿಜ್ಞಾನ (ಆಜ್ಮೀರ ಮತ್ತು ಮೈಸೂರು ಮಾತ್ರ); ವಿಜ್ಞಾನ ಮತ್ತು ತಂತ್ರಜ್ಞಾನ.
4. ಸೇವಾನಿರತ ಶಿಕ್ಷಣದ ಕಾರ್ಯಕ್ರಮ.
5. ಹಸ್ತಕೌಶಲ್ಯ ಶಿಕ್ಷಕರಿಗೆ ಮೂರು ವಿಧದ ಕಾರ್ಯಕ್ರಮಗಳು: ಒಂದು ವರ್ಷದ ಡಿಪ್ಲೊಮಾ ಕಾರ್ಯಕ್ರಮ, ಎರಡು ವರ್ಷಗಳ ಡಿಪ್ಲೊಮಾ ಕಾರ್ಯಕ್ರಮ ಮತು ಎರಡು ವರ್ಷಗಳ ಪದವಿ ಕಾರ್ಯಕ್ರಮ. ಆಮೇಲೆ ನಾಲ್ಕು ವರ್ಷಗಳ ಇಂಗ್ಲಿಷ್ ಮತ್ತು ವಾಣಿಜ್ಯ ಕೋರ್ಸ್‌ಗಳನ್ನು ಇದಕ್ಕೆ ಸೇರಿಸಲಾಯಿತು.

ನಾಲ್ಕು ವರ್ಷಗಳ ಕೋರ್ಸ್‌ಅನ್ನು ಮೊದಲಿಯಾರ್ ಆಯೋಗದ ಶಿಫಾರಸಿನ ಮೇರೆಗೆ ವಿವಿಧೋದ್ದೇಶ ಶಾಲೆಗಳ ಅಗತ್ಯಗಳ ಪೂರೈಕೆಯನ್ನು ಆಧರಿಸಿದೆ. ಶಿಕ್ಷಣ ಆಯೋಗದ ವರದಿಯನ್ನು 1966ರಲ್ಲಿ ಮಂಡಿಸಲಾಯಿತು. ಈ ವರದಿಯ ಪ್ರಕಾರ, ವಿಜ್ಞಾನ ಮತ್ತು ಕಲಾ ಪ್ರಕಾರದ ಸಾಮಾನ್ಯ ಕೋರ್ಸ್‌ಗಳನ್ನು 10ನೇ ತರಗತಿಯವರೆಗೆ ಜಾರಿಗೆ ತರಬೇಕಾಗಿದೆ. ವಿಷಯಗಳ ನಾಲ್ಕು ವರ್ಷಗಳ ಕೋರ್ಸಿನ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಇಲ್ಲದಿರುವುದರಿಂದ ಕೋರ್ಸನ್ನು ಎರಡರಿಂದ ಮೂರು ವರ್ಷಗಳವರೆಗೆ ಮುಂದುವರಿಸಿ ಆಮೇಲೆ ನಿಲ್ಲಿಸಲಾಯಿತು.

ಮೇಲೆ ಉಲ್ಲೇಖಿಸಿದ ಕೋರ್ಸ್‘ಗಳಲ್ಲಿ ಮೂರು ವಿಭಾಗಗಳು ಇದ್ದವು. ಅವುಗಳೆಂದರೆ: 1. ಸಾಮಾನ್ಯ ಶಿಕ್ಷಣ; 2. ವಿಷಯ ವಿಶೇಷಜ್ಞತೆ; ಮತ್ತು 3. ವೃತ್ತಿಪರ ಶಿಕ್ಷಣ. ವೃತ್ತಿಪರ ಶಿಕ್ಷಣವನ್ನು ವ್ಯವಸ್ಥಿತ ಕೋರ್ಸ್‌ಗಳು ಮತ್ತು ಬೋಧನೆಯ ಇಂಟರ್ನ್‌ಶಿಪ್ ಮೂಲಕ ನೀಡಲಾಗುತ್ತದೆ. ಇದರಲ್ಲಿ ಪ್ರಶಿಕ್ಷಕರನ್ನು ಇಡೀ ದಿನ ಶಾಲೆಯಲ್ಲಿ ಉಳಿಸಿ ಎಂಟು ವಾರಗಳ ಅವಧಿಗೆ ಶಾಲೆಗಳ ವೃತ್ತಿಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಇಂಟರ್ನ್‌ಶಿಪ್‌ಅನ್ನು ಸಂಘಟಿಸಲಾಗುವ ಶಾಲೆಗಳನ್ನು ‘ಸಹಕರಿಸುವ ಶಾಲೆಗಳು’ ಎಂಬುದಾಗಿ ಗುರುತಿಸಲಾಗುತ್ತದೆ ಮತ್ತು ಶಿಕ್ಷಕ ಮೇಲ್ವಿಚಾರಕರನ್ನು ‘ಸಹಕರಿಸುವ ಶಿಕ್ಷಕರು’ ಎಂದು ಕರೆಯಲಾಗುತ್ತದೆ.

ಕಳೆದ 40 ವರ್ಷಗಳಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಾರ್ಯಕ್ರಮದಲ್ಲಿ ಪ್ರಮುಖ ಬದಲಾವಣೆಗಳು ಆಗಿವೆ ಎಂಬುದು ಈ ಕೆಳಗಿನ ಕೋರ್ಸ್‌ಗಳ ಸ್ವರೂಪ ಮತ್ತು ವ್ಯಾಪಿಯಿಂದ ತಿಳಿದುಬರುತ್ತದೆ:

Digitised by Bharatavani, CIIL

1. ನಾಲ್ಕು ವರ್ಷಗಳ ಪದವಿ ಕಾರ್ಯಕ್ರಮಗಳು : ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ ಮತ್ತು ಇಂಗ್ಲಿಷ್ ಭಾಷಾ ಕೋರ್ಸ್‌ಗಳಲ್ಲಿ, ಈಗ ವಿಜ್ಞಾನ ಕಾರ್ಯಕ್ರಮಗಳನ್ನು ಮಾತ್ರ ಸಲಹಾ ಸಮಿತಿಯು ಆಗಾಗ ನೀಡುವ ಸೂಚನೆಗಳ ಮೇರೆಗೆ ನಡೆಸಲಾಗುತ್ತಿದೆ.

ಆರ್‌ಸಿಇಗಳ ಶೈಕ್ಷಣಿಕ ಕಾರ್ಯಕ್ರಮಗಳ ಪರಿಶೀಲನೆಯನ್ನು ನಡೆಸಿದವರು: ಡಾ. ನಾಗ್ ಚೌಧುರಿ ಸಮಿತಿ, ಡಾ. ಜೆ.ಎನ್. ಕಪೂರ್ ಸಮಿತಿ, ಆಡಳಿತಾತ್ಮಕ ಸಿಬ್ಬಂದಿ ಮಹಾವಿದ್ಯಾಲಯ, ಡಾ. ರಯಿ ಅಹಮದ್ ಸಮಿತಿ, ಡಾ. ಆರ್.ಸಿ. ದಾಸ್ ಸಮಿತಿ(1987), ಡಾ. ವಿ.ಜಿ. ಕುಲಕರ್ಣಿ ಸಮಿತಿ ಮತ್ತು ಎಮ್‌ಹೆಚ್‌ಆರ್‌ಡಿ 1985ರಲ್ಲಿ ನೇಮಕಗೊಳಿಸಿದ ಎನ್‌ಸಿಆರ್‌ಟಿಇಯ ಸಂಕ್ಷಿಪ್ತ ಪರಿಶೀಲನಾ ಸಮಿತಿ. ಇದರಲ್ಲಿ ಬಹುಪಾಲು ಸಮಿತಿಗಳು ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಲ್ಲಿ ನಾಲ್ಕು ವರ್ಷಗಳ ಸಮಗ್ರ ಕೋರ್ಸ್‌ನ ಮುಂದುವರಿಕೆಯ ಪರವಾಗಿದ್ದವು. ಡಾ. ಆರ್. ಸಿ. ದಾಸ್ ಸಮಿತಿಯು(1986–87) ತನ್ನ ವರದಿಯಲ್ಲಿ 'ಪ್ರತಿಯೊಂದು ಪ್ರಾದೇಶಿಕ ಸಂಸ್ಥೆಯಲ್ಲಿ ವಿಜ್ಞಾನ ಮತ್ತು ಕಲಾ ವಿಭಾಗದ ಪ್ರತಿಯೊಂದು ಕೋರ್ಸ್‌ನಲ್ಲಿ 60 ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ನಾಲ್ಕು ವರ್ಷಗಳ ಸಮಗ್ರ ಕೋರ್ಸ್‌ಗಳನ್ನು ಮುಂದುವರಿಸಬಹುದು' ಎಂಬುದಾಗಿ ತಿಳಿಸಿದೆ. ಹಾಗಿದ್ದರೂ ಎನ್‌ಸಿಆರ್‌ಟಿಇಯ ಸಂಕ್ಷಿಪ್ತ ಪರಿಶೀಲನೆಯ ಅನ್ವಯ(1995) ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳನ್ನು ಹೊಸ ಪಾತ್ರ ಪರಿಕಲ್ಪನೆ ಮತ್ತು ಕಾರ್ಯಗಳೊಂದಿಗೆ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಾಗಿ ಮರುರಚಿಸಲಾಯಿತು. ನಾಲ್ಕು ವರ್ಷಗಳ ಬಿ.ಎ.–ಬಿ.ಎಡ್ ಕೋರ್ಸ್‌ಗೆ ಪ್ರವೇಶವನ್ನು ನಿಲ್ಲಿಸಲಾಯಿತು ಮತ್ತು ಅಂತಿಮವಾಗಿ 1998ರಲ್ಲಿ ಹಂತಹಂತವಾಗಿ ಇಲ್ಲವಾಗಿಸಲಾಯಿತು.

2. ಒಂದು ವರ್ಷದ ಬಿ.ಎಡ್ ಕಾರ್ಯಕ್ರಮಗಳು ಒಂದು ವರ್ಷದ ಕೋರ್ಸ್‌ನ್ನು ಕೃಷಿ, ವಾಣಿಜ್ಯ, ಲಲಿತಕಲೆಗಳು(2 ಕಾಲೇಜುಗಳಲ್ಲಿ ಒದಗಿಸಲಾಗುತ್ತಿತ್ತು), ವಿಜ್ಞಾನ ಮತ್ತು ಭಾಷೆಗಳಲ್ಲಿ ಪ್ರಾರಂಭಿಸಲಾಯಿತು. 1968ರ ಪರಿಶೀಲನಾ ಸಮಿತಿಯ ಶಿಫಾರಸಿನ ಮೇರೆಗೆ ಒಂದು ವರ್ಷದ ಬಿ.ಎಡ್ (ಪ್ರಾಥಮಿಕ ಶಿಕ್ಷಣ) ಕಾರ್ಯಕ್ರಮವನ್ನು ಕೂಡ ಜಾರಿಗೆ ತರಲಾಯಿತು. ಬಿ.ಎಡ್ ಕಾರ್ಯಕ್ರಮಗಳು ಡಿಐಇಟಿಗಳು/ಬಿಟಿಐಗಳ ಶಿಕ್ಷಕ–ಶಿಕ್ಷಣತಜ್ಞರಿಗೆ ತರಬೇತಿ ನೀಡುವ ಸಲುವಾಗಿ ಇದ್ದರೂ ಇದನ್ನು ಯಶಸ್ವಿಯಾಗಿ ಪೂರೈಸಿದವರನ್ನು ಪ್ರಾಥಮಿಕ ಶಾಲಾ ಹಂತದ ಬೋಧನೆಗೆ ಮಾತ್ರ ಸೇರಿಸಲಾಗುತ್ತಿತ್ತು. ಮತ್ತೊಮ್ಮೆ ಈ ಕಾರ್ಯಕ್ರಮವನ್ನು ತಡೆ ಹಿಡಿಯಬೇಕಾಗಿ ಬಂತು. ಏಕೆಂದರೆ ಕೋರ್ಸಿನ ಉದ್ದೇಶಗಳಲ್ಲಿ ಸೂಚಿಸಿದಂತೆ ಈ ಕಾರ್ಯಕ್ರಮದ ಫಲಾನುಭವಿಗಳನ್ನು ಶಿಕ್ಷಕ–ಶಿಕ್ಷಣತಜ್ಞರಾಗಿ ತೆಗೆದುಕೊಳ್ಳುವುದು ಸಾಧ್ಯವಾಗಲಿಲ್ಲ. ವಿಜ್ಞಾನ, ಭಾಷೆ ಮತ್ತು ವಾಣಿಜ್ಯದ ಒಂದು ವರ್ಷದ ಕೋರ್ಸ್ ಮಾತ್ರ ದೀರ್ಘಾವಧಿಯವರೆಗೆ ಮುಂದುವರಿಯಿತು. 1998ರ ಎನ್‌ಸಿಟಿಇಯ ಪಠ್ಯಕ್ರಮ ಚೌಕಟ್ಟಿಗೆ ಅನುಗುಣವಾಗಿ ಈ ಕೋರ್ಸಿನ(ಅಂದರೆ ವಿಜ್ಞಾನದ) ಅವಧಿಯನ್ನು ಈಗ ಎರಡು ವರ್ಷಗಳಿಗೆ ಹೆಚ್ಚಿಸಲಾಗಿದೆ. ಎರಡು ವರ್ಷಗಳ ಬಿ.ಎಡ್ ಕೋರ್ಸಿನಲ್ಲಿ ನಾಲ್ಕು ವಿಭಾಗಗಳು ಇವೆ. ಅವುಗಳೆಂದರೆ:

**1. ಶಿಕ್ಷಣ ಶಾಸ್ತ್ರ** (ಶೇಕಡ 35); 2. ಅಧ್ಯಯನ ಕ್ಷೇತ್ರದ ವಿಷಯ ಜ್ಞಾನ(ಶೇಕಡ 35); 3. ಇತರ ಚಟುವಟಿಕೆಗಳು(ಶೇಕಡ 5); ಮತ್ತು 5. ಶಾಲಾ ಅನುಭವ ಕಾರ್ಯಕ್ರಮ(ಶೇಕಡ 25).

**3. ಕೈಗಾರಿಕಾ ಕುಶಲಕಲೆಗಳ ಕೋರ್ಸ್‌ಗಳು:** ಇವುಗಳು ಒಂದು, ಎರಡು ಮತ್ತು ಮೂರು ವರ್ಷಗಳ ಅವಧಿಯವುಗಳು. ಎರಡು ವರ್ಷಗಳ ಬಿ.ಎಡ್ ಕೋರ್ಸ್(ಕೈಗಾರಿಕಾ ಕುಶಲಕಲೆಗಳ) ಕೆಲವು ಕಾಲ ಮುಂದುವರಿದಿದ್ದು, ಇದರಲ್ಲಿ ಶಿಕ್ಷಣ ಪಡೆದವರು ಕಾರ್ಯಾನುಭವ/ಎಸ್‌ಯುಪಿಡಬ್ಲ್ಯು ಕೋರ್ಸ್‌ಗಳನ್ನು ಕೇಂದ್ರೀಯ ವಿದ್ಯಾಲಯಗಳಲ್ಲಿ ಕಲಿಸುತ್ತಿದ್ದರು.

**4. ಬಿ.ಎಡ್. (ಬೇಸಿಗೆ ಶಾಲೆಗಳು–ಅಂಚೆತೆರಪಿನ ಕೋರ್ಸ್):** ಇದು 1967ರಲ್ಲಿ ಜಾರಿಗೆ ಬಂದಿರುವ 14 ತಿಂಗಳ ಅವಧಿಯ ಇನ್ನೊಂದು ಮುಖ್ಯ ಕಾರ್ಯಕ್ರಮವಾಗಿದೆ. ಇದನ್ನು ತರಬೇತಿಯಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಬಾಕಿ ಶಿಕ್ಷಕರಿಗಾಗಿ ಜಾರಿಗೊಳಿಸಲಾಗಿತ್ತು. ಮೇಲೆ ತಿಳಿಸಿದಂತೆ ಇದು 1985 ರವರೆಗೆ ಮುಂದುವರಿಯಿತು. ತರಬೇತಿಯಿಲ್ಲದ ಶಿಕ್ಷಕರು ಇನ್ನು ಬಾಕಿ ಉಳಿದಿಲ್ಲವೆಂಬುದು ಸ್ಪಷ್ಟವಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ದೇಶದ ಅನೇಕ ವಿಶ್ವವಿದ್ಯಾಲಯಗಳು ಶಿಕ್ಷಕರ ತರಬೇತಿಯ ಗುಣಮಟ್ಟಕ್ಕೆ ಗಮನವನ್ನು ನೀಡದೆ, ವಾಣಿಜ್ಯ ಆಧಾರದಲ್ಲಿ ಈ ಕೋರ್ಸನ್ನು ಪ್ರಾರಂಭಿಸಿದವು.

**5. ಎರಡು ವರ್ಷಗಳ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು:** ಇವುಗಳು ಎಮ್‌ಎಸ್ಸಿ–ಎಮ್‌ಇಡಿಗಳಿಗೆ ದಾರಿ ಮಾಡಿಕೊಡುವ ಭೌತಿಕ ಮತ್ತು ಜೀವಶಾಸ್ತ್ರೀಯ ಕೋರ್ಸ್‌ಗಳಾಗಿವೆ. ಇವುಗಳನ್ನು ಭುವನೇಶ್ವರ ಮತ್ತು ಮೈಸೂರಿನಲ್ಲಿ ಸಂಘಟಿಸಲಾಗಿತ್ತು. ಈ ಕೋರ್ಸ್‌ಗಳು ಹತ್ತು ವರ್ಷಗಳವರೆಗೆ ಕಾರ್ಯಾಚರಣೆಯಲ್ಲಿ ಇದ್ದವು.

**6. ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು:** ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ವಿಜ್ಞಾನ ಶಿಕ್ಷಣ, ಶಿಕ್ಷಕ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಮಾರ್ಗದರ್ಶನ ಮತು ಸಮಾಲೋಚನೆ, ಕೃಷಿ ಶಿಕ್ಷಣ, ಜನಸಂಖ್ಯಾ ಶಿಕ್ಷಣ ಇತ್ಯಾದಿ ಅನೇಕ ವಿಶೇಷಜ್ಞತೆಗಳ ಎಂ.ಎಡ್. ಕಾರ್ಯಕ್ರಮವನ್ನು 60ರ ದಶಕದ ಅಂತ್ಯದಲ್ಲಿ ಪ್ರಾರಂಭಿಸಲಾಯಿತು. ಈ ಕೋರ್ಸ್ ವಿಶೇಷಜ್ಞತೆಗಳನ್ನು ಶಿಕ್ಷಣಜ್ಞರಾಗಿ ರಾಜ್ಯ ಶಿಕ್ಷಣ ವಿಭಾಗಗಳಲ್ಲಿ ಹೆಗ್ಗಳಿಕೆಯೊಂದಿಗೆ ಸೇವೆ ಸಲ್ಲಿಸುವವರಿಗಾಗಿ ನಡೆಸಲಾಗಿದೆ.

**7. ಎಂ.ಎಡ್. (ಪ್ರಾಥಮಿಕ ಶಿಕ್ಷಣ) ಕಾರ್ಯಕ್ರಮ:** ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ(ಡಿಪಿಇಪಿ) ಜಾರಿಯೊಂದಿಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಗುಣಮಟ್ಟದ ಸ್ನಾತಕೋತ್ತರ ಮಟ್ಟದ ಕಾರ್ಯಕ್ರಮಗಳ ಅಗತ್ಯವನ್ನು ಕಂಡುಕೊಳ್ಳಲಾಯಿತು. ಈ ಕಾರ್ಯನೀತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು 1995ರಿಂದ ನಾಲ್ಕು ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಲ್ಲಿ ಎಂ.ಎಡ್. ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

Digitised by Bharatavani, CIIL

ಈ ಎಲ್ಲಾ ಸಂಸ್ಥೆಗಳಲ್ಲಿ ಪಠ್ಯಕ್ರಮವು ಒಂದೇ ರೀತಿಯದ್ದಾಗಿತ್ತು. ಕೋರ್ಸ್‌ಗಳನ್ನು ಸೆಮಿಸ್ಟರ್ ಆಧಾರದಲ್ಲಿ ನಡೆಸಲಾಗುತ್ತಿದೆ.

**8. ಡಿಪ್ಲೊಮ ಕಾರ್ಯಕ್ರಮಗಳು:** ಪ್ರಾದೇಶಿಕ ಶಿಕ್ಷಣ ಕೇಂದ್ರಗಳಿಂದ ಅಂಗವಿಕಲರ ಸಮಗ್ರ ಶಿಕ್ಷಣ ಯೋಜನೆಯಲ್ಲಿ(ಪಿಐಇಡಿ) ಅಲ್ಪಾವಧಿಯ ಬಹು–ವಿಭಾಗೀಯ ಶಿಕ್ಷಕರ ತರಬೇತಿ ಕೋರ್ಸುಗಳನ್ನು ಸಂಘಟಿಸಲಾಗಿತ್ತು. ಈ ಕಾರ್ಯಕ್ರಮವು ಕರ್ನಾಟಕದಲ್ಲಿ ಬಹಳ ಜನಪ್ರಿಯವಾಗಿತ್ತು. ಈಗ ಒಂದು ಎನ್‌ಜಿಒ (ಸಿಬಿಆರ್–ನೆಟ್‌ವರ್ಕ್–ಸೌತ್ ಏಶ್ಯಿಯಾ) ರಿಹ್ಯಾಬಿಲಿಟೇಶನ್ ಕೌನ್ಸಿಲ್ ಆಫ್ ಇಂಡಿಯಾ(ಆರ್‌ಸಿಐ)ದ ಸಹಯೋಗದೊಂದಿಗೆ ಒಂದು ವರ್ಷದ ಬಿ.ಎಡ್. ಬಹು–ವಿಭಾಗೀಯ ಕಾರ್ಯಕ್ರಮವನ್ನು ನಡೆಸುತ್ತಿದೆ. 2000 ಇಸವಿಯಲ್ಲಿ ಎನ್‌ಸಿಇಆರ್‌ಟಿ ಯು ಮಾರ್ಗದರ್ಶನ ಮತ್ತು ಸಮಾಲೋಚನೆಯ ಸ್ನಾತಕೋತ್ತರ ಡಿಪ್ಲೊಮಾ ಕಾರ್ಯಕ್ರಮವನ್ನು(ಪಿಜಿಡಿಜಿಸಿ) ನವದೆಹಲಿಯ ತನ್ನ ಕೇಂದ್ರ ಕಾರ್ಯಾಲಯದಿಂದ 2001ರ ನಂತರ ಮುಂದುವರಿಯುವಂತೆ ನಾಲ್ಕು ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ ಸ್ಥಾನಾಂತರಗೊಳಿಸಿತು. ಈಗ ತಜ್ಞರ ನೆರವಿನಿಂದ ಪಿಜಿಡಿಜಿಸಿ ಯನ್ನು ಸೆಕೆಂಡರಿ ಶಾಲೆಗಳಲ್ಲಿ ಉದ್ಭವವಾಗುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ಪರಿಷ್ಕರಿಸಲಾಗಿದೆ.

ನಾಲ್ಕು ವರ್ಷಗಳ ಬಿ.ಎಸ್‌ಸಿ–ಬಿ.ಎಡ್/ಬಿ.ಎ.–ಬಿ. ಎಡ್ ಏಕೀಕೃತ ಕೋರ್ಸ್‌ನ ಪುನರಾರಂಭ: ದೇವಲ್(1982) ಅವರು ನಾಲ್ಕು ವರ್ಷದ ಕೋರ್ಸ್‌ನ ಹಿನ್ನೆಲೆ ಮತ್ತು ಭವಿಷ್ಯದ ಪರಿಪ್ರೇಕ್ಷೆಗಳನ್ನು ನೀಡಿದ್ದಾರೆ. 'ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ, ಯೋಜನೆ ಮತ್ತು ಕಾರ್ಯಕ್ರಮಗಳು' ಹೆಸರಿನ ದಸ್ತಾವೇಜನ್ನು ಆಧರಿಸಿ ಅಜ್ಮೀರ್, ಭುವನೇಶ್ವರ, ಮತ್ತು ಮೈಸೂರಿನ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ 1963–64ರಿಂದ ಕಾರ್ಯಾರಂಭಗೊಂಡಿದ್ದರೆ, ಭೋಪಾಲದ ಮಹಾವಿದ್ಯಾಲಯದಲ್ಲಿ 1964–65ರಲ್ಲಿ ಕಾರ್ಯಾರಂಭವಾಗಿದೆ. ಪ್ರಾರಂಭದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ವಾಣಿಜ್ಯ ವಿಷಯಗಳಲ್ಲಿ ಗುಣಮಟ್ಟದ ಶಿಕ್ಷಕರನ್ನು ತಯಾರಿಗೊಳಿಸುವ ಸಲುವಾಗಿ, ಹಳೆಯ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ(ಈಗಿನ ಆರ್‌ಐಇ ಗಳಲ್ಲಿ) ದೇಶದಲ್ಲಿ ಶಿಕ್ಷಕರನ್ನು ತಯಾರಿಸುವ ಪರ್ಯಾಯ ಮಾದರಿಯಾಗಿ ಉನ್ನತ ಸೆಕೆಂಡರಿ ಶಿಕ್ಷಣದ ಬಳಿಕ ನಾಲ್ಕು ವರ್ಷಗಳ ನವೀನ ಸಮಗ್ರ ಕೋರ್ಸನ್ನು ವಿನ್ಯಾಸಗೊಳಿಸಲಾಯಿತು. ಇದರ ನಂತರ ಭೋಪಾಲ, ಭುವನೇಶ್ವರ ಮತ್ತು ಮೈಸೂರಿನ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ನಾಲ್ಕು ವರ್ಷಗಳ ಇಂಗ್ಲಿಷ್ ಕೋರ್ಸನ್ನು ಪ್ರಾರಂಭಿಸಲಾಯಿತು. ಭುವನೇಶ್ವರದಲ್ಲಿ ವಿಜ್ಞಾನ ವಿಷಯಗಳಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಬಿ.ಎಸ್‌ಸಿ–ಬಿ. ಎಡ್.(ಆನರ್ಸ್)/ಬಿ.ಎ.–ಬಿ.ಎಡ್.(ಆನರ್ಸ್) ಕೋರ್ಸ್‌ಗಳನ್ನು (ಸೆಕೆಂಡರಿ ಶಾಲೆಗಳಲ್ಲಿ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ಶಿಕ್ಷಕರ ಕೊರತೆಯನ್ನು ಪರಿಗಣಿಸಿ) ಪ್ರಾರಂಭಿಸಲಾಯಿತು. ಈ ಕೋರ್ಸ್‌ಗಳನ್ನು ಪ್ರಾರಂಭಿಸಿದ ಉದ್ದೇಶಗಳೇನೆಂದರೆ, ಪೂರ್ವದ ರಾಜ್ಯಗಳಲ್ಲಿ ನೇಮಕಾತಿ ನಡೆಯುವಾಗ ಪದವಿ ಉತ್ತೀರ್ಣರಿಗಿಂತ ಆನರ್ಸ್ ಪದವಿ ಇರುವ ಶಿಕ್ಷಕರಿಗೆ ಆದ್ಯತೆ ಇರುವುದು ಮತ್ತು ವಿದ್ಯಾರ್ಥಿಗಳು ಎಂ.ಎಸ್‌ಸಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವುದನ್ನು ಸುಗಮಗೊಳಿಸುವುದಾಗಿದೆ. ಅನಂತರ ನಾಲ್ಕು ವರ್ಷಗಳ ಇಂಗ್ಲಿಷ್ ಕೋರ್ಸನ್ನು ನಾಲ್ಕು ವರ್ಷಗಳ ಬಿ.ಎ.–ಬಿ. ಎಡ್ ಕೋರ್ಸ್‌ನಂತೆ ವಿನ್ಯಾಸಗೊಳಿಸಲಾಯಿತು. ಈ ರಾಜ್ಯಗಳಲ್ಲಿ ನಾಲ್ಕು ವರ್ಷಗಳ ಬಿ.ಎಸ್‌ಸಿ–ಬಿ.ಎಡ್. /ಬಿ.ಎ–ಬಿ.ಎಡ್(ಆನರ್ಸ್) ಕೋರ್ಸ್‌ಗಳು ಬಹಳ ಜನಪ್ರಿಯವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದವರನ್ನು ತಕ್ಷಣ ಉದ್ಯೋಗದಲ್ಲಿ ಭರ್ತಿಗೊಳಿಸಲಾಗುತ್ತಿತ್ತು. ಅನಂತರ ಭುವನೇಶ್ವರ ಆರ್‌ಐಇ ಯಿಂದ ಆನರ್ಸ್ ಕೋರ್ಸ್‌ಗಳನ್ನು ರದ್ದುಗೊಳಿಸಲಾಯಿತು ಮತ್ತು ಎಲ್ಲಾ ನಾಲ್ಕು ಆರ್‌ಐಇ ಗಳಲ್ಲಿ ಸಮಾನ ರೀತಿಯಿಂದ ಬಿ.ಎ.–ಬಿ.ಎಡ್./ಬಿ.ಎಸ್‌ಸಿ.–ಬಿ.ಎಡ್ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು.

**ಸಂಶೋಧನೆ/ಪ್ರಭಾವಿ ಅಧ್ಯಯನಗಳು:**

ಆರ್‌ಸಿಇ ಗಳ ಕಾರ್ಯಕ್ರಮಗಳ ಪ್ರಭಾವವನ್ನು ಅಧ್ಯಯನ ಮಾಡುವ ಎರಡು ಗಂಭೀರ ಪ್ರಯತ್ನಗಳನ್ನು ನಡೆಸಲಾಯಿತು. 1971ರಲ್ಲಿ ಭಾರತೀಯ ಮೂಲದ ಅಮೇರಿಕೆಯ ವಿದ್ವಾಂಸರೊಬ್ಬರು 'ಭಾರತದ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳು: ಒಂದು ವಿಮರ್ಶಾತ್ಮಕ ಗುಣಮಟ್ಟದ ಅಂದಾಜು' ('ಇಂಡಿಯಾಸ್ ರೀಜನಲ್ ಕಾಲೇಜಸ್ ಆಫ್ ಎಡ್ಯುಕೇಶನ್: ಎ ಕ್ರಿಟಿಕಲ್ ಅಪ್ರೇಸಲ್') ಎಂಬ ಶೀರ್ಷಿಕೆಯ ಅಧ್ಯಯನದಿಂದ ಶೋಧಿಸಿದ ವಿವರಗಳನ್ನು ನೀಡಿದ್ದಾರೆ. ಆ ವಿವರಗಳು ಹೀಗಿವೆ:

1. ಆರ್‌ಸಿಇ ಯ ಪಠ್ಯಕ್ರಮವು ಹೆಚ್ಚು ಅಭ್ಯಾಸ ಕೇಂದ್ರಿತ ಮತ್ತು ಬದುಕು ಕೇಂದ್ರಿತವಾಗಿದೆ;
2. ಸಿದ್ಧಾಂತ ಮತ್ತು ಪ್ರಾಯೋಗಿಕತೆಯ ನಡುವೆ ಸೂಕ್ತ ರೀತಿಯ ಸಮತೋಲನವಿದೆ;
3. ದೇಶದಾದ್ಯಂತ ಸೇವಾ–ನಿರತ ಕೋರ್ಸ್‌ಗಳನ್ನು ಸಂಘಟಿಸುವುದರಲ್ಲಿ ಮತ್ತು ನಿಭಾಯಿಸುವುದರಲ್ಲಿ

**ಆರ್‌ಸಿಇಗಳು ಕ್ರಿಯಾಶೀಲ ಪಾತ್ರವನ್ನು ನಿರ್ವಹಿಸಿವೆ;**

4. ಶಿಕ್ಷಕರು ವೃತ್ತಿಪರ ಗುಂಪಾಗಿ 'ಬದಲಾವಣೆ'ಯನ್ನು ದ್ವೇಷಿಸುತ್ತಾರೆ. ಇವರಲ್ಲಿ ಬಹುಪಾಲು ಮಂದಿ ಸಾಂಪ್ರದಾಯಿಕ ವಿಧಾನಗಳಿಗೆ ಅಂಟಿಕೊಳ್ಳುವುದನ್ನು ಇಷ್ಟಪಡುತ್ತಾರೆ.
5. ನಾಲ್ಕು ವರ್ಷಗಳ ಮತ್ತು ಒಂದು ವರ್ಷದ ಕಾರ್ಯಕ್ರಮಗಳು ಇವೆರಡನ್ನೂ ಎರಡು ವರ್ಷಗಳ ತರಬೇತಿ ಕಾರ್ಯಕ್ರಮಗಳಿಂದ ಸ್ಥಾನಾಂತರಗೊಳಿಸಬೇಕೆನ್ನುವುದು ಶಿಕ್ಷಕರ ಪ್ರಬಲ ಇಚ್ಛೆಯಾಗಿದೆ. ಈಗ ಎನ್‌ಸಿಟಿಇಯ ಒತ್ತಾಯ ಮತ್ತು ಶಿಫಾರಸಿನ ಅನ್ವಯ ಎರಡು ವರ್ಷಗಳ ಬಿ.ಎಡ್. ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ.

Digitised by Bharatavani, CIIL

**ಆರ್‌ಐಇಗಳ ಸಾಂಸ್ಥಿಕ ರಚನೆ:** ಕಾರ್ಯಪಡೆಯ ಶಿಫಾರಸುಗಳ ಅನುಷ್ಠಾನದ ಬಳಿಕ ವಿನ್ಯಾಸಗೊಳಿಸಲಾದ ರಚನೆಯನ್ನು ಈ ಕೆಳಗಿನ ಚಿತ್ರ 1 ರಲ್ಲಿ ಕಾಣಬಹುದಾಗಿದೆ.

ನಿರ್ದೇಶಕರು, ಎನ್‌ಸಿಇಆರ್‌ಟಿ

ಜಂಟಿ ನಿರ್ದೇಶಕರು, ಎನ್‌ಸಿಇಆರ್‌ಟಿ

ಅಧ್ಯಕ್ಷರು, ಆಡಳಿತ ಸಮಿತಿಯ ಸಂಸ್ಥೆಗಳು

ಪ್ರಾಂಶುಪಾಲರು

ಸಹ-ನಿರ್ದೇಶಕರು/ಆಡಳಿತಾಧಿಕಾರಿ
ಲೆಕ್ಕಪತ್ರ ಅಧಿಕಾರಿ

| ಡೀನ್, ಬೋಧನಾಂಗ | ವಿಭಾಗ ಮುಖ್ಯಸ್ಥರು |
|---|---|
| 1. ವಿಶ್ವವಿದ್ಯಾಲಯದ ಸಂಪರ್ಕಕ್ಕಾಗಿ ಶೈಕ್ಷಣಿಕ ವಿಭಾಗ<br>2. ವಿದ್ಯಾರ್ಥಿ ಚಟುವಟಿಕೆಗಳು/ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು: ವಿದ್ಯಾರ್ಥಿ ಪರಿಷತ್ತು, ಎನ್‌ಸಿಸಿ, ಎನ್‌ಎಸ್‌ಎಸ್<br>3. ಪ್ರಶಿಕ್ಷಕರ ಕ್ಷೇತ್ರ ಅನುಭವಗಳು: ಶಾಲಾ ಅನುಭವಗಳು, ಪ್ರಯೋಗಗಳು.<br>4. ರಾಜ್ಯ / ಕೇಂದ್ರೀಯ ಏಜೆನ್ಸಿಗಳಿಂದ ಪ್ರಾಯೋಜಿತಗೊಂಡ ಸೇವಾ-ಪೂರ್ವ ಮತ್ತು ಸೇವಾನಿರತ ಕಾರ್ಯಕ್ರಮಗಳು.<br>5. ಶೋಧನಾತ್ಮಕ ಪೂರ್ವ ಸಿದ್ಧತೆಗಳು, ಯೋಜನೆಗಳು, ಮತ್ತು ರಾಜ್ಯ ಏಜೆನ್ಸಿಗಳಿಗೆ ಬೆಂಬಲ | 1. ವಿಜ್ಞಾನ ಮತ್ತು ಗಣಿತಕ್ಕೆ ಶಿಕ್ಷಣ ವಿಭಾಗ (ತಂತ್ರಜ್ಞಾನ, ಗಣಕ ವಿಜ್ಞಾನ)<br>2. ಶಿಕ್ಷಣ ವಿಭಾಗ(ಶೈಕ್ಷಣಿಕ ತಂತ್ರಜ್ಞಾನ, ಪಿಜಿಡಿಸಿ ಸಂಘಟಿಸುವಿಕೆ)<br>3. ವಿಸ್ತರಣ ಶಿಕ್ಷಣದ ವಿಭಾಗ (ರಾಜ್ಯಗಳೊಂದಿಗೆ ಕೆಲಸ ಮಾಡಲು ನಿಯುಕ್ತರಾದ 04 ರಾಜ್ಯ ಸಮನ್ವಯಾಧಿಕಾರಿಗಳು)<br>4. ಪ್ರಾತ್ಯಕ್ಷಿಕ ವಿವಿಧೋದ್ದೇಶ ಶಾಲೆ. (ಪ್ರಾಥಮಿಕ, ನಡುವಿನ, ಸೆಕೆಂಡರಿ, ಹಿರಿಯ ಸೆಕೆಂಡರಿ ಶಾಲೆ) |

**ಜೋಡಣೆಗಳು:**

ಆರ್‌ಐಇ ಗಳಲ್ಲಿ ನಾಲ್ಕು ವಿಧಗಳ ಜೋಡಣೆಗಳು ಇವೆ. ಅದರಲ್ಲಿ ಒಂದು ಗುಂಪಿನ ಜೋಡಣೆಯು ಎನ್‌ಸಿಇಆರ್‌ಟಿ, ಎನ್‌ಸಿಟಿಇ, ಸಿಐಇಟಿ ಮತ್ತು ಸಿಐವಿಇ ಯೊಂದಿಗೆ ಇರುತ್ತದೆ. ಎರಡನೆಯ ಗುಂಪಿನ ಜೋಡಣೆಯು ಆ ಪ್ರದೇಶದ ಸೆಕೆಂಡರಿ ಶಿಕ್ಷಣ ಮಂಡಳಿಯೊಂದಿಗೆ ಇರುತ್ತದೆ. ರಾಜ್ಯಗಳು ಡಿಐಇಟಿಗಳ ಶಿಕ್ಷಕರ ತರಬೇತಿಯಲ್ಲಿ ಮತ್ತು ಪಠ್ಯಕ್ರಮ ರೂಪಿಸುವುದರಲ್ಲಿ ಆರ್‌ಐಇ ಗಳನ್ನು ತೊಡಗಿಸಿಕೊಳ್ಳಬೇಕಾಗುತ್ತದೆ. ಮೂರನೆಯ ಗುಂಪಿನ ಜೋಡಣೆಯು ರಾಜ್ಯದ ಅನೇಕ ವಿಭಾಗಗಳ ಜೊತೆಗೆ ಇರುತ್ತದೆ: ಅವೆಂದರೆ ಡಿಪಿಐ, ಎಸ್‌ಸಿಇಆರ್‌ಟಿ ಗಳು, ಎಸ್‌ಐಇಟಿಗಳು, ಇಟಿ ಸೆಲ್‌ಗಳು, ಡಿಐಇಟಿಗಳು/ಎಸ್‌ಸಿಟಿಇ ಗಳು/ಐಎಎಸ್‌ಇ ಗಳು. ನಾಲ್ಕನೆಯ ಗುಂಪಿನ ಜೋಡಣೆಯು ರಾಜ್ಯದ ಶಿಕ್ಷಣ ವಿಭಾಗಗಳು ಮತ್ತು ವಿಶ್ವವಿದ್ಯಾಲಯಗಳೊಂದಿಗೆ ಇರುತ್ತದೆ.

**ಆರ್‌ಐಇಗಳ ಸೇವಾನಿರತ ಶಿಕ್ಷಣ ಕಾರ್ಯಕ್ರಮಗಳು**

1962ರಲ್ಲಿ ಪ್ರಕಟಿಸಲಾದ ಆರ್‌ಸಿಇ ಗಳ ಯೋಜನೆ ಮತ್ತು ಕಾರ್ಯಕ್ರಮದ ದಸ್ತಾವೇಜಿನಲಿ ಹಿಂದಿನ ಭಾಗಗಳಲ್ಲಿ ಪಟ್ಟಿಮಾಡಲಾದ ಸೇವಾಪೂರ್ವ ಕಾರ್ಯಕ್ರಮಗಳೊಂದಿಗೆ 'ಸೇವಾನಿರತ ಶಿಕ್ಷಣದ ಕಾರ್ಯಕ್ರಮ'ವೊಂದನ್ನೂ ಪ್ರಸ್ತಾಪಿಸಲಾಗಿದೆ. ಈ ದಿಕ್ಕಿನಲ್ಲಿ ಕಾರ್ಯಾರಂಭ ಮಾಡಿದ ಎನ್‌ಸಿಇಆರ್‌ಟಿಯು 1965ರಲ್ಲಿ ನಾಲ್ಕು ಆರ್‌ಸಿಇ ಗಳಲ್ಲಿ ವಿಸ್ತರಣಾ ಸೇವಾ ಕೇಂದ್ರಗಳನ್ನು(ಇಎಸ್‌ಸಿ ಗಳು) ಸ್ಥಾಪಿಸಿದೆ. ಇಎಸ್‌ಸಿಗಳು ರಾಜ್ಯದ ಶಿಕ್ಷಣ ವಿಭಾಗಗಳ ಸಹಯೋಗದೊಂದಿಗೆ ಕಾರ್ಯಕ್ರಮಗಳ

Digitised by Bharatavani, CIIL

ಆಯೋಜನೆಯನ್ನು ಪ್ರಾರಂಭಿಸಿವೆ. ಆಮೇಲೆ ಎಸ್‌ಸಿಇಆರ್‌ಟಿ, ಎಸ್‌ಐಇ ಗಳ ಸ್ಥಾಪನೆಯ ನಂತರ, ಆರ್‌ಐಇ ಗಳು ಈ ಸಂಸ್ಥೆಗಳೊಂದಿಗೆ ಕೆಲಸವನ್ನು ಪ್ರಾರಂಭಿಸಿದವು. ಈಗ ಬಹುತೇಕ ಸೇವಾನಿರತ ಶೈಕ್ಷಣಿಕ ಚಟುವಟಿಕೆಗಳು ಡಿಐಇಟಿ ಗಳು/ಎಸ್‌ಸಿಟಿಇ ಗಳು/ಐಎಎಸ್‌ಇ ಗಳ ಸಹಯೋಗದೊಂದಿಗೆ ಜಾರಿಗೆ ಬರುತ್ತಿವೆ. ಸೇವಾನಿರತ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನೇಕ ಆದ್ಯತಾ ಕ್ಷೇತ್ರಗಳಲ್ಲಿ ನಡೆಸಲಾಗಿದೆ. ಈ ಕ್ಷೇತ್ರಗಳೆಂದರೆ:

1. ವಿಜ್ಞಾನ ಶಿಕ್ಷಣ; 2. ಶಿಕ್ಷಕ ಶಿಕ್ಷಣ; 3. ಅನೌಪಚಾರಿಕ ಶಿಕ್ಷಣ ಮತ್ತು ಪರ್ಯಾಯ ಶಿಕ್ಷಣ; 4. ವಯಸ್ಕ ಶಿಕ್ಷಣ; 5. ಪರಿಸರ ಶಿಕ್ಷಣ; 6. ಜನಸಂಖ್ಯಾ ಶಿಕ್ಷಣ; 7. ಮೌಲ್ಯ ಶಿಕ್ಷಣ.

ಗಮನಾರ್ಹ ಸೇವಾನಿರತ ಕಾರ್ಯಕ್ರಮಗಳನ್ನು ಆರ್‌ಐಇ ಗಳು ಕೈಗೊಂಡಿವೆ. ಪ್ರಾಥಮಿಕ ಮತ್ತು ಪೂರ್ವ–ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳಿಗಾಗಿ ಶಿಕ್ಷಕ–ಶಿಕ್ಷಣತಜ್ಞರನ್ನು ಸಿದ್ಧಗೊಳಿಸುವ ಸಲುವಾಗಿ ನಾಲ್ಕು ಆರ್‌ಸಿಇ ಗಳಿಗೆ ಪ್ರಾಯೋಗಿಕತೆಯನ್ನು ವಹಿಸಿಕೊಡುವಂತೆ ಡಾ. ಬಿ.ಡಿ. ನಾಗ್ ಚೌಧುರಿ ಸಮಿತಿಯು 1968ರಲ್ಲಿ ಸೂಚನೆಯನ್ನು ನೀಡಿದೆ. ಇದರ ಫಲವಾಗಿ, ಆರ್‌ಸಿಇಗಳು ರಾಜ್ಯ ಮತ್ತು ಕೇಂದ್ರ ಏಜೆನ್ಸಿಗಳ ಸಹಯೋಗದೊಂದಿಗೆ ಈ ಕೆಳಗಿನ ಕಾರ್ಯಕ್ರಮಗಳನ್ನು ಕೈಗೊಂಡಿವೆ:

**ಅಂಚೆ ತೆರಪಿನ ಮತ್ತು ಸಂಪರ್ಕ ಕಾರ್ಯಕ್ರಮಗಳು(1976)**

ವಿಜ್ಞಾನ ಮತ್ತು ಸಮಾಜ ವಿಜ್ಞಾನದಲ್ಲಿ ಸೆಕೆಂಡರಿ ಶಾಲಾ ಶಿಕ್ಷಕರು ಮತ್ತು ಶಿಕ್ಷಕ ಶಿಕ್ಷಣಜ್ಞರಿಗಾಗಿ ಸ್ವ–ಬೋಧನಾ ಸಾಮಗ್ರಿಗಳನ್ನು ಆರ್‌ಸಿಇ ಅಭಿವೃದ್ಧಿ ಪಡಿಸಿದೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರ ನೋಂದಣಿಯನ್ನು ಮಾಡಿಕೊಂಡಿದೆ. ಎಪ್ಪತ್ತರ ದಶಕದ ಕೊನೆಯ ಭಾಗದಲ್ಲಿ, ಹತ್ತು ವರ್ಷಗಳ ಶಾಲಾ ಪಠ್ಯಕ್ರಮದಲ್ಲಿ ಶಿಕ್ಷಣದ 10+2+3 ರ ವಿನ್ಯಾಸವನ್ನು ರೂಢಿಗೆ ತಂದಾಗ, ನಾಲ್ಕು ಆರ್‌ಸಿಇ ಗಳಲ್ಲಿ ಉದ್ಯೋಗದಲ್ಲಿರುವ ಶಿಕ್ಷಕರಿಗೆ ಅಂಚೆ ತೆರಪಿನ ಮತ್ತು ಸಂಪರ್ಕ ಕೋರ್ಸ್‌ಗಳನ್ನು ಒದಗಿಸಲಾಯಿತು. ಆದರೆ ಸಂಪರ್ಕ ಕಾರ್ಯಕ್ರಮಗಳಲ್ಲಿ ಕೆಲವೇ ಶಿಕ್ಷಕರು ಭಾಗವಹಿಸಿದ್ದರಿಂದ ಮತ್ತು ಬರೆವಣಿಗೆಯ ಕಾರ್ಯನಿಯೋಜನೆಗೆ ಪ್ರತಿಕ್ರಿಯೆ ಕಡಿಮೆ ಇದ್ದದ್ದರಿಂದ ಈ ಕಾರ್ಯಕ್ರಮಗಳನ್ನು ಮುಂದುವರಿಸುವುದು ಸಾಧ್ಯವಾಗಲಿಲ್ಲ.

ಮುಂದುವರಿಕೆ ಶಿಕ್ಷಣದ ಕೇಂದ್ರಗಳು ಸಂಘಟಿಸುವ ಸೇವಾನಿರತ ಕೋರ್ಸ್‌ಗಳು(ಸಿಸಿಇ ಗಳು)

ಐದನೆಯ ಪಂಚವಾರ್ಷಿಕ ಯೋಜನೆಯ(1975–80) ಸಂದರ್ಭದಲ್ಲಿ ದೇಶದ ಸ್ನಾತಕೋತ್ತರ ಮಹಾವಿದ್ಯಾಲಯಗಳ/ವಿಶ್ವ ವಿದ್ಯಾಲಯಗಳ ಬೋಧನಾ ವಿಭಾಗಗಳಲ್ಲಿ ಮುಂದುವರಿಕೆ ಶಿಕ್ಷಣದ ಸುಮಾರು ನೂರು ಕೇಂದ್ರಗಳನ್ನು(ಸಿಸಿಇ) ಎನ್‌ಸಿಇಆರ್‌ಟಿ ಯು ಸ್ಥಾಪಿಸಿತು. ಸೆಕೆಂಡರಿ ಶಾಲಾ ಶಿಕ್ಷಕರು ಮತ್ತು ಪ್ರಾಥಮಿಕ ಹಂತದ ಶಿಕ್ಷಕರ ಶಿಕ್ಷಣಜ್ಞರಿಗಾಗಿ ಸಿಸಿಇ ಗಳು ಅಲ್ಪಾವಧಿಯ ತರಬೇತಿ ಕೋರ್ಸ್‌ಗಳನ್ನು ನಡೆಸಿದವು. ಈ ಕೇಂದ್ರದ ಸಲಹಾ ಸಮಿತಿಯಲ್ಲಿ ನಾಲ್ಕು ಆರ್‌ಸಿಇ ಗಳ ಪ್ರಾಂಶುಪಾಲರು ಮತ್ತು ಬೋಧನಾ ಸದಸ್ಯರಿದ್ದು ಅವರು ಇದರ ಪ್ರಗತಿಯ ಅವಲೋಕನವನ್ನು ನಡೆಸಿದ್ದಾರೆ. ಈ ಕಾರ್ಯಕ್ರಮಗಳನ್ನು ಸಿಸಿಇ ಗಳು ವಾರಾಂತ್ಯಗಳಲ್ಲಿ ಅಥವಾ ರಜೆಯಲ್ಲಿ ನಡೆಸುತ್ತಿದ್ದವು. ಹಾಗಿದ್ದರೂ, ಕಾಲೇಜು / ವಿಶ್ವವಿದ್ಯಾನಿಲಯಗಳ ಶಿಕ್ಷಕರು ರಜಾದಿನಗಳಲ್ಲಿ ಕೆಲಸ ಮಾಡಲು ಒಪ್ಪದೇ ಇದ್ದುದರಿಂದ ಮತ್ತು ರಾಜ್ಯ ಸರಕಾರವು ಇವರ ಖರ್ಚುವೆಚ್ಚಗಳ ಪಾಲನ್ನು ನೀಡಲು ಅಸಮರ್ಥವಾಗಿದ್ದರಿಂದ ಈ ಪ್ರಯೋಗವು ಹೆಚ್ಚು ಸಮಯ ಮುಂದುವರಿಯಲಿಲ್ಲ.

ಶಿಕ್ಷಕರ ರಾಷ್ಟ್ರೀಯ ಆಯೋಗ ಸೂಚಿಸಿದ ಸೇವಾನಿರತ ಕೋರ್ಸ್‌ಗಳು, L(1983)

ಆರ್‌ಸಿಇ ಗಳು ವೃತ್ತಿಪ್ರಗತಿ ಕಾರ್ಯಯೋಜನೆಯ ಕೆಳಗೆ ಆಯ್ದ ಸರಕಾರಿ ಶಾಲೆಗಳು ಮತ್ತು ಕೇಂದ್ರೀಯ ವಿದ್ಯಾಲಯಗಳು/ನವೋದಯ ವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗಾಗಿ ಸೇವಾನಿರತ ಶಿಕ್ಷಣ ಮತ್ತು ತರಬೇತಿಯನ್ನು (INSET) ನಡೆಸುತ್ತಿವೆ. ಸಾರ್ವಜನಿಕ ಆಡಳಿತದ ಅನೇಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಕೂಡಾ ಆರ್‌ಸಿಇ ಬೋಧನಾ ಸಿಬ್ಬಂದಿಗಳು ತರಬೇತಿಯನ್ನು ನೀಡಿವೆ. ರಾಷ್ಟ್ರೀಯ ಆಯೋಗವು INSET ಗಾಗಿ ಆರು ಹಂತಗಳ ಮಾದರಿಯೊಂದನ್ನು ರೂಪಿಸಿದೆ. ಇದರಲ್ಲಿ ಆಯ್ದ ವಿಷಯ ಕ್ಷೇತ್ರ: ಕೋರ್ಸ್ ಸಿದ್ಧತೆಯಲ್ಲಿ ಇರುವುದು ಉದಾಹರಣೆಗೆ ಬೋಧನಾ ಸಾಮಗ್ರಿ; ಅಭಿವೃದ್ಧಿಪಡಿಸಬೇಕಾದ ತಿಳಿವಳಿಕೆ, ಕೌಶಲಗಳು ಮತ್ತು ಮನೋಭಾವಗಳನ್ನು ಗುರುತಿಸುವುದು, ಬೋಧನಾ ಸಿಬ್ಬಂದಿಯ ಆಯ್ಕೆ; ಕೋರ್ಸ್ ಅಭಿವೃದ್ಧಿ; ತರಬೇತಿ ಮತ್ತು ಮೌಲ್ಯಮಾಪನ. ಈ ವಿಧಾನವನ್ನು ಆರ್‌ಐಇಗಳು ವ್ಯಾಪಕ ನೆಲೆಯಿಂದ ಶಿಕ್ಷಕರ ಸೇವಾನಿರತ ತರಬೇತಿಯಲ್ಲಿ ಅನುಸರಿಸಿವೆ. ಈ ಕಾರ್ಯಕ್ರಮವು ಆರ್‌ಐಇಗಳಲ್ಲಿ ಇನ್ನೂ ಮುಂದುವರಿಯುತ್ತಿದೆ. 2002–03ರ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಶಿಕ್ಷಕರಿಗೆ ಆರ್‌ಐಇ ಗಳು ವಿಶೇಷ ಗಮನವನ್ನು ನೀಡಿವೆ.

**ಶಾಲಾ ಶಿಕ್ಷಕರ ಸಮೂಹ ಅಭಿಶಿಕ್ಷಣ ಕಾರ್ಯಕ್ರಮ:**

(ಪ್ರೊಗ್ರಾಮ್ ಆಫ್ ಮಾಸ್ ಒರಿಯೆಂಟೇಶನ್ ಆಫ್ ಸ್ಕೂಲ್ ಟೀಚರ್ಸ್: PMOST)

1986ರಲ್ಲಿ ಎನ್‌ಪಿಇ ಯನ್ನು ಅಳವಡಿಸಿಕೊಂಡ ತಕ್ಷಣವೇ, ಹೊಸ ಕಾರ್ಯಯೋಜನೆಯ ಪ್ರಮುಖ ಕ್ಷೇತ್ರಗಳನ್ನು ಶಿಕ್ಷಕರಿಗೆ ಪರಿಚಿತಗೊಳಿಸುವ ಉದ್ದೇಶದಿಂದ 1986–90ರಲ್ಲಿ ಪಿಎಮ್‌ಒಎಸ್‌ಟಿಯನ್ನು ಜಾರಿಗೆ ತರಲಾಯಿತು. ಸುಮಾರು 30 ಸ್ವ–ಬೋಧನಾ ಮಾಡ್ಯೂಲ್‌ಗಳ ನೆರವಿನಿಂದ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲಾ ಶಿಕ್ಷಕರಿಗಾಗಿ ಪಿಎಮ್‌ಒಎಸ್‌ಟಿ ತರಬೇತಿಯನ್ನು ನೀಡಲಾಯಿತು. ಆರ್‌ಸಿಇ ಯು ದೇಶದ ನಾಲ್ಕು ಪ್ರದೇಶಗಳಲ್ಲಿ ಶಿಕ್ಷಕ ಶಿಕ್ಷಣ ಸಂಸ್ಥೆಗಳ ಮುಖ್ಯ ವ್ಯಕ್ತಿಗಳಿಗೆ (ಇವರು ನಂತರ ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿ ಪಡೆಯುವವರು) ಅಭಿಶಿಕ್ಷಣವನ್ನು ನೀಡುವುದರ ಮೂಲಕ ನೋಡಲ್ ಕೇಂದ್ರವಾಗಿ ಕಾರ್ಯನಿರ್ವಹಿಸಿದೆ.

Digitised by Bharatavani, CIIL

ಸುಮಾರು ಹದಿನೇಳು ಲಕ್ಷದಷ್ಟು ಶಿಕ್ಷಕರು ತರಬೇತಿಯನ್ನು ಪಡೆದಿದ್ದಾರೆ. ಭೋಪಾಲದ ಆರ್‌ಸಿಇಯು ಪಿಎಮ್‌ಒಎಸ್‌ಟಿಯ ಪ್ರಭಾವದ ಮೌಲ್ಯಮಾಪನ ಅಧ್ಯಯನವನ್ನು ನಡೆಸಿದೆ. ಈ ಮೌಲ್ಯಮಾಪನದ ಅಧ್ಯಯನದಿಂದ ಪಿಎಮ್‌ಒಎಸ್‌ಟಿ ಯು ಸಂಬಂಧಪಟ್ಟ ಸಮಸ್ಯೆಗಳು ಮತ್ತು ಶಿಕ್ಷಣದ ಆದ್ಯತೆಗಳ ಕುರಿತು ಅರಿವನ್ನು ಮೂಡಿಸುವುದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯಶಸ್ಸನ್ನು ಹೊಂದಿರುವುದು ತಿಳಿದುಬಂದಿದೆ.

**ಶಿಕ್ಷಕರ ಶಿಕ್ಷಣ ಮತ್ತು ಸಿಬ್ಬಂದಿ ತರಬೇತಿಯ ಮರುರಚನೆ:**

1986ರಲ್ಲಿ ಎನ್‌ಪಿಇಯು ಅನೇಕ ಸಂಸ್ಥೆಗಳ ಸ್ಥಾಪನೆ ಮತ್ತು ಬಲಪಡಿಸುವುದರ ಕುರಿತು ಯೋಚಿಸಿತ್ತು. ಆ ಸಂಸ್ಥೆಗಳೆಂದರೆ:

1. ಪ್ರತಿಯೊಂದು ಜಿಲ್ಲೆಯಲ್ಲಿ ಡಿಐಇಟಿ;
2. 250 ಎಸ್‌ಸಿಟಿಇ ಗಳ ಉನ್ನತೀಕರಣ(ಶಿಕ್ಷಕ ಶಿಕ್ಷಣ ಸೆಕೆಂಡರಿ ಮಹಾವಿದ್ಯಾಲಯಗಳು);
3. 50 ಐಎಎಸ್‌ಇ ಗಳ (ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಇನ್ ಎಡ್ಯುಕೇಶನ್) ಸಿಬ್ಬಂದಿಗಳ ತರಬೇತಿ; ಮತ್ತು
4. ಎಸ್‌ಸಿಇಆರ್‌ಟಿ ಗಳು.

ಆರ್‌ಸಿಇ ಗಳು ಶಿಕ್ಷಕರ ವಿಷಯ ಕಾರ್ಯಕ್ಷಮತೆ ಮತ್ತು ಕೌಶಲಗಳ ಬೆಳವಣಿಗೆಯಲ್ಲಿ ಕ್ರಿಯಾಶೀಲ ಪಾತ್ರವನ್ನು ನಿರ್ವಹಿಸಿವೆ. ಅವುಗಳು ಇದನ್ನು ಸೇವಾನಿರತ ಕಾರ್ಯಕ್ರಮಗಳನ್ನು ನೇರವಾಗಿ ರೂಪಿಸುವುದರ ಮೂಲಕ ಅಥವಾ ಎನ್‌ಸಿಇಆರ್‌ಟಿಯ ಶಿಕ್ಷಕ ಶಿಕ್ಷಣ ಮತ್ತು ವಿಸ್ತರಣಾ ವಿಭಾಗದೊಂದಿಗೆ(ಡಿಟಿಇಇ) ಸೇರಿ ನಡೆಸಿವೆ.

**ಪ್ರಾಥಮಿಕ ಶಿಕ್ಷಕರ ವಿಶೇಷ ಅಭಿಶಿಕ್ಷಣ(SOPT):**

ಆರ್‌ಸಿಇಗಳ ಬೋಧನಾ ಸಿಬ್ಬಂದಿಯು 1995ರ ನಂತರ ಎಸ್‌ಒಪಿಟಿ ಎಂದು ಕರೆಯಲ್ಪಡುವ ಕೇಂದ್ರೀಯ ನೆರವನ್ನು ಪಡೆದಿರುವ ಕಾರ್ಯಯೋಜನೆಯಲ್ಲಿ ಕ್ರಿಯಾಶೀಲ ಪಾತ್ರವನ್ನು ನಿರ್ವಹಿಸಿದೆ. ಈ ಕಾರ್ಯಯೋಜನೆಯನ್ನು ವಿನ್ಯಾಸಗೊಳಿಸಿ ದೇಶದಾದ್ಯಂತ ಜಾರಿಗೆ ತರಲಾಯಿತು. ಆರ್‌ಸಿಇಗಳು ಡಿಟಿಇಇಗಳ ಸಹಯೋಗದೊಂದಿಗೆ ಡಿಐಇಟಿ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಿವೆ. ಈಗ ಡಿಐಇಟಿಗಳು ಎಸ್‌ಒಪಿಟಿಯ ಕೆಳಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಿವೆ. ಸೆಕೆಂಡರಿ ಶಾಲಾ ಶಿಕ್ಷಕರ ತರಬೇತಿ ಅಗತ್ಯಗಳನ್ನು ಪೂರೈಸುವ ಸಲುವಾಗಿ ಈ ಎಸ್‌ಒಪಿಟಿಯನ್ನು ಬಳಸಲಾಗುತ್ತಿದೆ.

**ಪ್ರಾತ್ಯಕ್ಷಿಕೆಯ ವಿವಿಧೋದ್ದೇಶ ಶಾಲೆ(ಡಿಎಮ್‌ಎಸ್):**

ಪ್ರಶಿಕ್ಷಕರಿಗೆ ಶಾಲಾ ಅನುಭವಗಳನ್ನು ನೀಡುವುದಕ್ಕಾಗಿ ಈ ಕೆಳಗಿನ ಸಿಬ್ಬಂದಿಯೊಂದಿಗೆ ಆರ್‌ಐಇಗಳು ಡಿಎಮ್‌ಎಸ್‌ನ್ನು ಜೋಡಿಸಿಕೊಂಡಿವೆ: ಪಿಜಿಟಿಗಳು (ಸ್ನಾತಕೋತ್ತರ) 12; ಸಮಾಲೋಚಕರು 1; ತರಬೇತಿ ಹೊಂದಿರುವ ಪದವಿ ಶಿಕ್ಷಕರು 13; ಡಬ್ಲ್ಯು ಇಟಿಗಳು 3; ಪ್ರಾಥಮಿಕ ಶಿಕ್ಷಕರು 08. ಡಿಎಮ್‌ಎಸ್ ಗಳನ್ನು ಆರ್‌ಸಿಇ ಯೋಜನೆಯ ಭಾಗವಾಗಿ ಪ್ರಾರಂಭಿಸಲಾಗಿತ್ತು. ಈ ಶಾಲೆಗಳನ್ನು ಪ್ರಾಯೋಗಿಕತೆಗೆ ಮತ್ತು ಯೋಜನಾ ಕಾರ್ಯಕ್ಕೆ ಬಳಸಿಕೊಳ್ಳಬೇಕೆಂದು ಆರ್‌ಸಿಇಯ ಸಿಬ್ಬಂದಿಗಳ ಸಮಯ ಮತ್ತು ಗಮನವನ್ನು ಇದಕ್ಕೆ ನೀಡಲಾಗಿದೆ. ಪ್ರತಿಯೊಂದು ಮಹಾವಿದ್ಯಾಲಯದಲ್ಲಿ ಇರತಕ್ಕಂತಹ ಡಿಎಮ್‌ಎಸ್‌ಗೆ ಎರಡು ಕಾರ್ಯಗಳು ಇರುತ್ತವೆ: 'ಮೊದಲನೆಯದಾಗಿ ಉತ್ತಮ ವಿವಿಧೋದ್ದೇಶ ಸೆಕೆಂಡರಿ ಶಾಲಾ ಕಾರ್ಯಕ್ರಮವನ್ನು ಪ್ರದರ್ಶಿಸತಕ್ಕಂತಹ ಅನುಕರಣೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು; ಎರಡನೆಯದಾಗಿ ಬೋಧನಾ ಕ್ರಮದಲ್ಲಿ ಹೊಸ ವಿಧಾನಗಳಿಗಾಗಿ ಪ್ರಯೋಗಶಾಲೆಗಳಾಗಿ ಕಾರ್ಯನಿರ್ವಹಿಸುವುದು.'

**ಆರ್‌ಐಇಗಳ ಭವಿಷ್ಯ: ಕೆಲವು ಗ್ರಹಿಕೆಗಳು:**

ಆರ್‌ಐಇಗಳು ಬಹುತೇಕವಾಗಿ ಶಿಕ್ಷಕರಿಗಾಗಿ ಸೇವಾನಿರತ ಕೋರ್ಸ್‌ಗಳನ್ನು ನಡೆಸುವುದರ ಮೂಲಕ ರಾಜ್ಯಮಟ್ಟದ ಸಂಸ್ಥೆಗಳೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಆರ್‌ಐಇಗಳು ಹೊಸ ಸವಾಲುಗಳಿಗೆ ಉತ್ತಮ ರೀತಿಯಲ್ಲಿ ಪ್ರತಿಕ್ರಿಯಿಸಿಲ್ಲ. ಆರ್‌ಐಇಗಳ ಹೊಸ ಪಾತ್ರಗಳನ್ನು ಈ ಕೆಳಗಿನಂತೆ ಕಲ್ಪಿಸಿಕೊಳ್ಳಲಾಗಿದೆ:

- ಆರ್‌ಐಇಗಳ ಸೇವಾನಿರತ ಕೋರ್ಸ್‌ಗಳು(ಇನ್–ಸರ್ವಿಸ್ ಕೋರ್ಸ್) ಪೂರ್ಣತೆಯ ಹಂತವನ್ನು ತಲುಪಿವೆ. ಈಗ ರಾಜ್ಯಗಳು ಶಿಕ್ಷಕರ ಮತ್ತು ಇತರ ಕಾರ್ಯನಿರ್ವಾಹಕರ ಸೇವಾನಿರತ ಅಗತ್ಯಗಳನ್ನು ನೋಡಿಕೊಳ್ಳಬಹುದು. ಆರ್‌ಐಇಗಳು ಹೊಸ ಕಾರ್ಯಕ್ಷೇತ್ರವನ್ನು ಕಂಡುಕೊಳ್ಳಬೇಕಾಗಿದೆ.

- ಶಿಕ್ಷಕ ಶಿಕ್ಷಣವು ಖಾಸಗೀಕರಣಗೊಳ್ಳುತ್ತಿದೆ. ಹೆಚ್ಚು ಹೆಚ್ಚು ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳು ಕಾಣಿಸಿಕೊಳ್ಳತೊಡಗಿವೆ. ಆರ್‌ಐಇಗಳು ಖಾಸಗಿ ಶಿಕ್ಷಕ ತರಬೇತಿ ಸಂಸ್ಥೆಗಳ ಸುಧಾರಣಾ ಕಾರ್ಯಗಳಿಂದ ಹಿಂದೆ ಸರಿಯಬಾರದು. ಅವು ಡಿಐಇಟಿ ಗಳು, ಎಸ್‌ಸಿಟಿಇ ಗಳು, ಐಎಎಸ್ ಗಳು ಇತ್ಯಾದಿಗಳೊಂದಿಗೆ ಸಾಕಷ್ಟು ಸಮಯದವರೆಗೆ ಕೆಲಸ ಮಾಡಿವೆ.

- ಆರ್‌ಐಇಗಳನ್ನು ಈಗ NIT ಗಳನ್ನಾಗಿ ಉನ್ನತೀಕರಿಸಿರುವ ಪ್ರಾದೇಶಿಕ ಇಂಜಿನಿಯರಿಂಗ್ ಮಹಾವಿದ್ಯಾಲಯಗಳಂತಹ ವ್ಯಾಪಕ ಮಹಾವಿದ್ಯಾಲಯಗಳಾಗಿ ರೂಪಿಸಬೇಕಾಗಿದೆ. ಈ ಉದ್ದೇಶಕ್ಕಾಗಿ ಕಾರ್ಯಪಡೆಯ ವರದಿಯು ಇನ್ನೂ ಸಂಗತವಾಗಿದೆ.

- ಡಾ. ಮಾಧುರಿ ಶಾಹ(ದಿವಂಗತ) ಅವರ ನೇತೃತ್ವದ ಕಾರ್ಯಪಡೆಯು 1982ರಲ್ಲಿ ಅನೇಕ ಕಾರ್ಯಕ್ಷೇತ್ರಗಳನ್ನು ಮತ್ತು ಪಾತ್ರಗಳನ್ನು ಗುರುತಿಸಿದೆ. ಅವುಗಳೆಂದರೆ, ಕಾರ್ಯನೀತಿ ಅಧ್ಯಯನಗಳು; ಕಾರ್ಯನೀತಿ ರೂಪಣೆಯಲ್ಲಿ ರಾಜ್ಯಕ್ಕೆ ನೆರವು ನೀಡುವಿಕೆ; ರಾಷ್ಟ್ರಮಟ್ಟದಲ್ಲಿ ಸ್ವೀಕೃತವಾಗಿರುವ ಕಾರ್ಯಕ್ರಮಗಳ ಪರಿವೀಕ್ಷಣೆ; ರಾಜ್ಯ ಮಟ್ಟದ ಸಂಸ್ಥೆಗಳಿಗೆ ಸಮಾಲೋಚನಾ ಸೇವೆಗಳು; ಶೈಕ್ಷಣಿಕ ಮಾಹಿತಿಯ ದಾಖಲೀಕರಣ ಮತ್ತು ಪ್ರಸಾರ; ಮತ್ತು ಇದೇ ರೀತಿಯ ಇತರ ಕಾರ್ಯಗಳು. ಈ ಕಾರ್ಯಕ್ಷೇತ್ರಗಳು

Digitised by Bharatavani, CIIL

ಇವತ್ತಿಗೂ ಪ್ರಸ್ತುತವಾಗಿದ್ದರೂ ಆರ್‌ಐಇ ಸಿಬ್ಬಂದಿ ವರ್ಗಕ್ಕೆ ಈ ಕ್ಷೇತ್ರಗಳಲ್ಲಿ ಯಾವುದೇ ಪರಿಣತಿ ಇಲ್ಲ. ಮೇಲೆ ಉಲ್ಲೇಖಿಸಿದ ಕ್ಷೇತ್ರಗಳ ಅಂತರಾಷ್ಟ್ರೀಯ ಮಟ್ಟದ ಐಐಇಪಿ ಗಳಂತಹ ಸಂಸ್ಥೆಗಳ ಅಧ್ಯಯನ ಮತ್ತು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಯಾವುದೇ ಅವಕಾಶಗಳನ್ನು ಅವರು ಹೊಂದಿರುವುದಿಲ್ಲ. ಆದರೆ ಇತರ ದೇಶಗಳ ಅನೇಕ ಶಿಕ್ಷಕ–ಶಿಕ್ಷಣತಜ್ಞರು ಈ ರೀತಿಯ ಕೋರ್ಸ್‌ಗಳಲ್ಲಿ ನಿಯಮಿತವಾಗಿ ಭಾಗವಹಿಸುತ್ತಿದ್ದಾರೆ.

**ಮೂಲ: ಗ್ರೆವಾಲ್ ಜೆ.ಎಸ್.**
**ಅನು: ಡಾ. ಗೀತಾ ಶೆಣೈ**

## ಪ್ರಾಯೋಗಿಕ ವಿಧಾನ

ಸ್ವತಂತ್ರ ಚಲಕ (ಚರಾಂಶ) (Independent Variable) ಒಂದನ್ನು ಬೇಕಾದ ರೀತಿಯಲ್ಲಿ ಅವಲಂಬಿತ ಚಲಕದ ಮೇಲೆ ಅದು ಬೀರುವ ಪ್ರಭಾವವನ್ನು ವೀಕ್ಷಿಸಿ, ಅಳತೆಮಾಡಿ ವ್ಯಾಖ್ಯಾನಿಸುವ ವಿಧಾನವೇ ಪ್ರಾಯೋಗಿಕ ವಿಧಾನವಾಗಿದೆ. ವೈಜ್ಞಾನಿಕ ವಿಧಾನದ ಮೂಲಕ ಅಧ್ಯಯನ ಮಾಡುವ ಎಲ್ಲಾ ಕ್ಷೇತ್ರಗಳಲ್ಲೂ ಪ್ರಾಯೋಗಿಕ ವಿಧಾನವನ್ನು ಉಪಯೋಗಿಸಲಾಗುತ್ತದೆ. ವಿಜ್ಞಾನ ವಿಷಯಗಳ ಸಂಶೋಧನೆಯಲ್ಲಿ ಪ್ರಾಯೋಗಿಕ ವಿಧಾನ ಅನಿವಾರ್ಯವೆನ್ನಿಸಿದೆ. ಸಾಮಾಜಿಕ ವಿಜ್ಞಾನಗಳಲ್ಲೂ ಪ್ರಾಯೋಗಿಕ ವಿಧಾನವನ್ನು ಅನುಸರಿಸಿ ಸಂಶೋಧನೆಗಳು ನಡೆಯುತ್ತವೆ. ಪ್ರಯೋಗಗಳನ್ನು ಪ್ರಯೋಗ ಶಾಲೆಗಳಲ್ಲಿ ಉಪಕರಣಗಳನ್ನು ಉಪಯೋಗಿಸಿ ನಡೆಸಬಹುದು. (ಉದಾಹರಣೆಗೆ:– ಭೌತಶಾಸ್ತ್ರ, ರಸಾಯನ ಶಾಸ್ತ್ರ ಇತ್ಯಾದಿ) ಪ್ರಯೋಗಗಳನ್ನು ಪ್ರಯೋಗ ಶಾಲೆಯಿಂದ ಹೊರಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ನಡೆಸಬಹುದು. ಇವು ಕ್ಷೇತ್ರ ಪ್ರಯೋಗಗಳೆನಿಸುತ್ತವೆ (ಉದಾಹರಣೆಗೆ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಸಾಮಾಜಿಕ ವಿಜ್ಞಾನಗಳು). ಈ ರೀತಿಯ ಪ್ರಯೋಗಗಳನ್ನು ಚರಾಂಶಗಳನ್ನು ಬೇರೆ ಬೇರೆ ಕ್ರಮಗಳಿಂದ ನಿಯಂತ್ರಿಸಲಾಗುತ್ತದೆ.

ಪ್ರಯೋಗ ವಿಧಾನದಲ್ಲಿ ಯಾವ ಚಲಕವನ್ನು ವ್ಯತ್ಯಾಸಗೊಳಿಸಿ, ಅದರ ಪ್ರಭಾವವನ್ನು ಬೇರೆ ಚಲಕಗಳ ಮೇಲೆ ಅಧ್ಯಯನ ಮಾಡುತ್ತೇವೆಯೋ ಅದನ್ನು ಸ್ವತಂತ್ರ ಚರಾಂಶ (ಚಲಕ) ಎನ್ನುತ್ತೇವೆ. ಸ್ವತಂತ್ರ ಚರಾಂಶದ ಪ್ರಭಾವ ಯಾವ ಚರಾಂಶದ ಮೇಲೆ ಉಂಟಾಗುತ್ತದೆಯೋ ಅದನ್ನು ಅವಲಂಬಿತ ಚರಾಂಶ (Dependent Variable- DV) ಎಂದು ಹೇಳಲಾಗುತ್ತದೆ. ಪ್ರಯೋಗವನ್ನು ನಡೆಸುವಾಗ ಪ್ರಯೋಗಕರ್ತ ನಿಯಂತ್ರಿಸುವ ಚಲಕಗಳನ್ನು ನಿಯಂತ್ರಿತ ಚಲಕಗಳು (Controlled Variables) ಎನ್ನುತ್ತಾರೆ. ಪ್ರಯೋಗಗಳ ವಿನ್ಯಾಸಗಳಿಗೆ ಅನುಗುಣವಾಗಿ ಇವುಗಳನ್ನು ನಿಯಂತ್ರಿಸಲಾಗುತ್ತದೆ. ವಯಸ್ಸು, ಲಿಂಗ, ಬುದ್ಧಿಶಕ್ತಿ ಮುಂತಾದ ಚರಾಂಶಗಳು ನಡೆಸುತ್ತಿರುವ ಅವಲಂಬಿತ ಚರಾಂಶದ ಮೇಲೆ (ಉದಾ: ಶೈಕ್ಷಣಿಕ ಸಾಧನೆ) ಪ್ರಭಾವ ಬೀರುವುದರಿಂದ ಅವುಗಳ ಪ್ರಭಾವವನ್ನು ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ. ಇಂಥ ಚರಾಂಶಗಳನ್ನು ಮಧ್ಯಸ್ಥಿಕೆ ಚರಾಂಶಗಳು (Moderator Variables) ಎಂದು ಹೇಳುತ್ತೇವೆ. ಇನ್ನು ಕೆಲವು ಚರಾಂಶಗಳನ್ನು ಪೂರ್ಣವಾಗಿ ನಿಯಂತ್ರಿಸಬೇಕು. ಪ್ರಯೋಗಕ್ಕೆ ಹೊರನೋಟಕ್ಕೆ ಸಂಬಂಧಪಡದ ಉಳಿದೆಲ್ಲಾ ಚರಾಂಶಗಳನ್ನು ನಿಯಂತ್ರಣ ಮಾಡಲಾಗುತ್ತದೆ. ಇಷ್ಟೆಲ್ಲಾ ಎಚ್ಚರಿಕೆಯಿಂದ ಚರಾಂಶಗಳನ್ನು ನಿಯಂತ್ರಿಸಿದರೂ ಕೆಲವು ಚರಾಂಶಗಳು ಪ್ರಯೋಗದ ಮಧ್ಯೆ ಪ್ರವೇಶಿಸಿ ತಮ್ಮ ಪ್ರಭಾವದಿಂದ ಪ್ರಯೋಗದ ಪ್ರಕ್ರಿಯೆಯನ್ನು ಕಲುಷಿತಗೊಳಿಸಬಹುದು. ಇವುಗಳನ್ನು ಮಧ್ಯವರ್ತಿ ಚರಾಂಶಗಳು (Intervening Variables) ಎನ್ನುತ್ತಾರೆ. ಇವುಗಳಲ್ಲಿ ಕೆಲವು ಚರಾಂಶಗಳು ಪ್ರಯೋಗ ಕರ್ತನ ಗಮನಕ್ಕೆ ಬಂದರೂ ಅವುಗಳನ್ನು ನಿಯಂತ್ರಿಸುವುದು ಕಷ್ಟವಾಗಬಹುದು. ಉದಾಹರಣೆಗೆ ಶೈಕ್ಷಣಿಕ ಪ್ರಯೋಗಗಳಲ್ಲಿ ವಿದ್ಯಾರ್ಥಿಗಳ ಹಿನ್ನೆಲೆ, ಪ್ರಯೋಗದಲ್ಲಿರುವ ಅವರ ಮನಃಸ್ಥಿತಿಯ ಬದಲಾವಣೆ, ಇನ್ನು ಕೆಲವು ಮಧ್ಯವರ್ತಿ ಚಲಕಗಳು ಪ್ರಯೋಗ ಕರ್ತನ ಗಮನಕ್ಕೆ ಬರದಿರಬಹುದು. ಇವುಗಳ ಪ್ರಭಾವವನ್ನು ಪ್ರಯೋಗದ ಫಲಿತಾಂಶದಲ್ಲಿ ದೋಷದ ಅಂಶಗಳು ಎಂದು ಪರಿಗಣಿಸಲಾಗುತ್ತದೆ. ಪ್ರಯೋಗ ಮಾಡುವಾಗ ಸಾಮಾನ್ಯವಾಗಿ ಬಂದ ಮುಖ್ಯ ಚರಾಂಶವನ್ನು ಸ್ವತಂತ್ರ ಚಲಕವಾಗಿ ಪರಿಗಣಿಸಲಾಗುತ್ತದೆ. ಆದರೂ ಒಂದಕ್ಕಿಂತ ಹೆಚ್ಚು ಸ್ವತಂತ್ರ ಚರಾಂಶಗಳನ್ನು ಏಕಕಾಲದಲ್ಲಿ ಉಪಯೋಗಿಸಲೂ ಸಾಧ್ಯವಿದೆ. ಸಂಖ್ಯಾಶಾಸ್ತ್ರೀಯ ತಂತ್ರಗಳ ಮೂಲಕ ಅವುಗಳ ಪ್ರಭಾವವನ್ನು ಪ್ರತ್ಯೇಕ ಪ್ರತ್ಯೇಕವಾಗಿ ನಿರ್ಣಯಿಸಬಹುದು. ಪ್ರಯೋಗ ನಡೆಸುವಾಗ ಮುಖ್ಯ ಸ್ವತಂತ್ರ ಚಲಕವಲ್ಲದೆ ಬೇರೆ ಯಾವುದಾದರೂ ಚರಾಂಶಗಳು ಅವಲಂಬಿತ ಚರಾಂಶದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದ್ದರೆ ಅವುಗಳನ್ನು ಪೂರ್ಣವಾಗಿ ನಿಯಂತ್ರಿಸಬಹುದು ಅಥವಾ ಪ್ರಯೋಗದ ವ್ಯಕ್ತಿಗಳ ಮೇಲೆ ಸಮಾನ ರೀತಿಯ ಪ್ರಭಾವ ಬೀರುವಂತೆ ನೋಡಿಕೊಳ್ಳಬಹುದು. ಹಾಗೆ ಮಾಡಿದಾಗ ಅಂಥ ಚರಾಂಶಗಳನ್ನು ಸ್ಥಿರ ಚರಾಂಶಗಳು (Constant Variable) ಎಂದು ಕರೆಯಲಾಗುತ್ತದೆ. ಕೆಲವು ಪ್ರಯೋಗಗಳಲ್ಲಿ (ವೈದ್ಯಕೀಯ, ಮನೋವೈಜ್ಞಾನಿಕ ಪ್ರಯೋಗಗಳಲ್ಲಿ) ಕೆಲವು ಚರಾಂಶಗಳನ್ನು ತೋರಿಕೆಗಾಗಿ ಸ್ವತಂತ್ರ ಚರಾಂಶಗಳಂತೆ ಉಪಯೋಗಿಸಲಾಗುತ್ತದೆ. ಇವು ವ್ಯಕ್ತಿಯಲ್ಲಿ ಗೊಂದಲವನ್ನುಂಟು ಮಾಡುತ್ತವೆ. ಇವುಗಳಿಗೆ ಗೊಂದಲಗೊಳಿಸುವ ಚರಾಂಶಗಳು (Confounding Variable) ಎನ್ನುತ್ತಾರೆ.

ಈಗ ಉದಾಹರಣೆಗೆ ಒಂದು ಸಮಸ್ಯೆಯನ್ನು ತೆಗೆದುಕೊಳ್ಳೋಣ – ಆಲ್ಕೋಹಾಲ್ (ಮದ್ಯಸಾರ) ಮಾನಸಿಕ ಸ್ಥಿತಿಯ ಮೇಲೆ ಉಂಟುಮಾಡುವ ಪ್ರಭಾವವನ್ನು ಕಂಡು ಹಿಡಿಯಬೇಕೆಂದು ಇಟ್ಟುಕೊಳ್ಳಿ. ಕೆಳಗಿನ ಈ ಪ್ರಯೋಗದಲ್ಲಿ ಆಲ್ಕೋಹಾಲ್ (ಒಂದು ನಿರ್ದಿಷ್ಟ ಬ್ರಾಂಡ್‌ನ ಮದ್ಯಸಾರ, ಉದಾ– ಬ್ರಾಂಡಿ) ಸ್ವತಂತ್ರ ಚಲಕವಾಗುತ್ತದೆ. ಇದು ವ್ಯಕ್ತಿಯಲ್ಲಿ ಉಂಟು ಮಾಡುವ

Digitised by Bharatavani, CIIL

ಬದಲಾವಣೆಗಳು ಅವಲಂಬಿತ ಚಲಕವಾಗುತ್ತದೆ. ಈ ಕೆಳಗಿನ ನಕ್ಷೆ ಈ ಪ್ರಯೋಗದಲ್ಲಿ ಪರಿಗಣಿಸಬೇಕಾದ ಚರಾಂಶಗಳನ್ನು ತೋರಿಸುತ್ತದೆ.




ಮೇಲೆ ತೋರಿಸಿರುವ ಸ್ವತಂತ್ರ ಚಲಕಗಳಲ್ಲಿ ನಾವು ಪರೀಕ್ಷಿಸಬೇಕಾದ ಒಂದೆರಡು ಚರಾಂಶಗಳನ್ನು ಉದಾ: ವಯಸ್ಸು, ಲಿಂಗ ಆಯ್ಕೆ ಮಾಡಿಕೊಂಡು ಅವುಗಳನ್ನು ಬೇಕಾದ ರೀತಿಯಲ್ಲಿ ವ್ಯತ್ಯಾಸಗೊಳಿಸಬಹುದು. ಉದಾಹರಣೆಗೆ ಬೇರೆ ಬೇರೆ ವಯೋಮಾನದ ಗುಂಪುಗಳನ್ನು, ಸ್ತ್ರೀ ಪುರುಷರ ಗುಂಪುಗಳನ್ನು ಆಯ್ಕೆ ಮಾಡಿಕೊಂಡು ಪ್ರಯೋಗಕ್ಕೆ ಉಪಯೋಗಿಸಿಕೊಳ್ಳಬಹುದು. ಉಳಿದ ಸ್ವತಂತ್ರ ಚಲಕಗಳನ್ನು ಒಂದೇ ಮಟ್ಟದಲ್ಲಿರುವಂತೆ ನಿಯಂತ್ರಿಸಿಕೊಳ್ಳಬಹುದು. ಇವು ಸ್ಥಿರ ಚಲಕಗಳಾಗುತ್ತವೆ. ಅವಲಂಬಿತ ಚಲಕಗಳನ್ನು ಗುರ್ತಿಸಿ ಅವುಗಳನ್ನು ಅಳತೆ ಮಾಡಿ ದಾಖಲಿಸಿಕೊಳ್ಳಬೇಕು.

ಪ್ರಯೋಗ ವಿಧಾನದಲ್ಲಿ ಅನೇಕ ಹಂತಗಳಿವೆ. ಮೊದಲಿಗೆ, ಪ್ರಯೋಗಕ್ಕೆ ಒಳಪಡಿಸಬೇಕಾದ ಸಮಸ್ಯೆಯನ್ನು ಗುರ್ತಿಸಿ ಸ್ಪಷ್ಟವಾಗಿ ನಿರೂಪಿಸಿಕೊಳ್ಳಬೇಕು. ನಂತರ ಸಮಸ್ಯೆಗೆ ಸಂಬಂಧಿಸಿದ ವಿವಿಧ ಚಲಕಗಳನ್ನು ಗುರ್ತಿಸಿ ಅವುಗಳನ್ನು ವ್ಯಾಖ್ಯಾನಿಸಿ ಅವುಗಳಲ್ಲಿ ಸ್ವತಂತ್ರ ಚಲಕಗಳಾವುವು ಅವಲಂಬಿತ ಚಲಕಗಳಾವುವು ಎಂಬುದನ್ನು ವರ್ಗೀಕರಿಸಿಕೊಳ್ಳಬೇಕು. ಸ್ವತಂತ್ರ ಚಲಕಗಳಲ್ಲಿ ಪ್ರಯೋಗಕ್ಕೆ ಒಳಪಡಿಸಬೇಕಾದ ಸ್ವತಂತ್ರ ಚಲಕಗಳನ್ನು ಆಯ್ಕೆ ಮಾಡಿಕೊಂಡು, ಉಳಿದವುಗಳನ್ನು ನಿಯಂತ್ರಿಸಬೇಕು. ಅವಲಂಬಿತ ಚಲಕಗಳನ್ನು ಅಳತೆ ಮಾಡಿ ದಾಖಲಿಸಿಕೊಳ್ಳುವ ಕ್ರಮಗಳನ್ನು ನಿರ್ಧಾರಮಾಡಿಕೊಳ್ಳಬೇಕು. ಮುಂದಿನ ಹಂತದಲ್ಲಿ ಆಯ್ಕೆ ಮಾಡಿಕೊಂಡ ಸ್ವತಂತ್ರ ಚಲಕ ಅವಲಂಬಿತ ಚಲಕಗಳ ಮೇಲೆ ಯಾವ ರೀತಿಯ ಪ್ರಭಾವಗಳನ್ನು ಬೀರಬಹುದು ಎನ್ನುವುದರ ಬಗ್ಗೆ ತಾರ್ಕಿಕ ಆಧಾರದ ಊಹೆಯನ್ನು ಮಾಡಿಕೊಳ್ಳಬೇಕು. ಹಿಂದಿನ ಸಂಶೋಧನೆಗಳು ಸಾಮಾನ್ಯವಾಗಿ ಅವಲೋಕಿಸಿದ ಘಟನೆಗಳು, ಅನುಭವ, ಈ ಊಹೆಗೆ ಸಹಾಯಕವಾಗುತ್ತದೆ. ಈ ಊಹೆಗೆ ಪ್ರಾಕಲ್ಪನೆ (Hypothesis) ಎಂದು ಹೆಸರು. ಪ್ರಯೋಗ ಮಾಡುವುದು ಈ ಪ್ರಾಕ್ಕಲ್ಪನೆಯನ್ನು ಒರೆಹಚ್ಚುವುದಕ್ಕಾಗಿ ಸಂಶೋಧನೆಯಲ್ಲಿ ಅದನ್ನು ಶೂನ್ಯ ಪ್ರಾಕ್ಕಲ್ಪನೆಯಾಗಿ (Null Hypothesis) ರೂಪಿಸಿಕೊಳ್ಳುವ ವಾಡಿಕೆ ಇದೆ. ಅಂದರೆ ಸ್ವತಂತ್ರ ಚಲಕ, ಅವಲಂಬಿತ ಚಲಕಗಳ ಮೇಲೆ ಯಾವುದೇ ರೀತಿಯ ಪ್ರಭಾವ ಬೀರುವುದಿಲ್ಲ ಎಂದು ಊಹಿಸಿಕೊಳ್ಳಲಾಗುತ್ತದೆ. ಸ್ವತಂತ್ರ ಚಲಕ ಅವಲಂಬಿತ ಚಲಕಗಳ ಧನಾತ್ಮಕ ಅಥವಾ ಋಣಾತ್ಮಕ ದಿಶೆಯಲ್ಲಿಯೂ ಪ್ರಾಕ್ಕಲ್ಪಿಸಿಕೊಳ್ಳಬಹುದು. ಇದಕ್ಕೆ ದಿಶಾತ್ಮಕ ಪ್ರಾಕ್ಕಲ್ಪನೆ (Directional Hypothesis) ಈ ರೀತಿಯಲ್ಲಿ ಊಹಿಸಿಕೊಳ್ಳುವುದು ಕೆಲವು ವೇಳೆ ಪ್ರಯೋಗಕರ್ತನಲ್ಲಿ ಪೂರ್ವಗ್ರಹವನ್ನು, ಪಕ್ಷಪಾತವನ್ನು ಉಂಟುಮಾಡುವ ಸಾಧ್ಯತೆಯಿರುವುದರಿಂದ ಮತ್ತು ತನ್ನ ಶೂನ್ಯ ಊಹೆಯಲ್ಲಿ ಈ ಸಾಧ್ಯತೆ ಇಲ್ಲದಿರುವುದರಿಂದ ಶೂನ್ಯ ಪ್ರಾಕ್ಕಲ್ಪನೆಯನ್ನು ರೂಪಿಸಿಕೊಳ್ಳುವುದು ಒಳ್ಳೆಯದು.

ಪ್ರಯೋಗದ ವಿನ್ಯಾಸ (Design) ವನ್ನು ನಿರ್ಧರಿಸಿಕೊಳ್ಳುವುದು ಮುಂದಿನ ಹಂತ. ಪ್ರಯೋಗ ವಿನ್ಯಾಸಗಳ (Experimental Design) ಬಗ್ಗೆ ಸಂಶೋಧನ ಕ್ಷೇತ್ರದಲ್ಲಿ ವಿಪುಲ ಸಾಹಿತ್ಯವಿದೆ. ಪ್ರಯೋಗಕ್ಕೆ ಒಂದೇ ಗುಂಪನ್ನು ಆಯ್ಕೆ ಮಾಡಿಕೊಳ್ಳಬಹುದು. ಇದರಲ್ಲಿ ಪೂರ್ವ–ಪರೀಕ್ಷೆ, ಉತ್ತರ–ಪರೀಕ್ಷೆ (Pre-test, Post-test) ವಿನ್ಯಾಸವಿದೆ. ಪ್ರಾಯೋಗಿಕ ಉಪಚಾರಕ್ಕೆ (Experimental Treatment) ಮೊದಲು ಮತ್ತು ಉಪಚಾರಕ್ಕೆ ನಂತರದಲ್ಲಿ ಗುಂಪಿನ ವರ್ತನೆಯನ್ನು (ಕಾರ್ಯಕ್ಷಮತೆಯನ್ನು) ಅಳತೆ ಮಾಡಬಹುದು. ಒಂದಕ್ಕಿಂತ ಹೆಚ್ಚು ಗುಂಪುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಎರಡು ಗುಂಪಿನ ವಿನ್ಯಾಸದಲ್ಲಿ ಒಂದು ಗುಂಪು ಪ್ರಾಯೋಗಿಕ ಉಪಚಾರ ಪಡೆಯುತ್ತದೆ. ಅದು ಪ್ರಾಯೋಗಿಕ ಗುಂಪು ಆಗುತ್ತದೆ. ಮತ್ತೊಂದು ಗುಂಪಿಗೆ ಯಾವುದೇ ರೀತಿಯ ಉಪಚಾರ ಮಾಡುವುದಿಲ್ಲ. ಇದು ನಿಯಂತ್ರಿತ ಗುಂಪಾಗುತ್ತದೆ ಎರಡೂ ಗುಂಪುಗಳ ವರ್ತನೆ/ಕಾರ್ಯಕ್ಷಮತೆಯ ನಡುವಣ ಮಹತ್ವಪೂರ್ಣ ವ್ಯತ್ಯಾಸ ರೂಪಿಸಿಕೊಂಡ ಪ್ರಾಕ್ಕಲ್ಪನೆಯನ್ನು ಒಪ್ಪಿಕೊಳ್ಳಲು, ತಿರಸ್ಕರಿಸಲು ಆಧಾರವಾಗುತ್ತದೆ. ಸ್ವತಂತ್ರ ಚಲಕಗಳ ವಿವಿಧ ಮಟ್ಟಗಳ ಪ್ರಭಾವವನ್ನು ಕಂಡು ಹಿಡಿಯಲು ಎರಡಕ್ಕಿಂತ ಹೆಚ್ಚು

Digitised by Bharatavani, CIIL

ಗುಂಪುಗಳನ್ನು ಆಯ್ಕೆಮಾಡಿಕೊಳ್ಳಬಹುದು. ಆಗ ಒಂದು ಗುಂಪು ನಿಯಂತ್ರಿತ ಗುಂಪಾಗುತ್ತದೆ. ಉಳಿದವು ಪ್ರಾಯೋಗಿಕ ಗುಂಪುಗಳಾಗಿ ಪ್ರಾಯೋಗಿಕ ಉಪಚಾರವನ್ನು ವಿವಿಧ ರೀತಿಗಳಲ್ಲಿ ವಿವಿಧ ಮಟ್ಟಗಳಲ್ಲಿ ಪಡೆಯುತ್ತವೆ. ಅವುಗಳ ಫಲಿತಾಂಶಗಳನ್ನು ವಿಶ್ಲೇಷಿಸಿ ಅವುಗಳ ತಾರತಮ್ಯಾತ್ಮಕ ಪ್ರಭಾವವನ್ನು ನಿರ್ಧರಿಸಲಾಗುತ್ತದೆ. ಕೃಷಿ ಸಂಶೋಧನೆಯಲ್ಲಿ (ವಿವಿಧ ತಳಿಯ ಬೀಜಗಳ ಬೆಳವಣಿಗೆ, ರಾಸಾಯನಿಕ ಗೊಬ್ಬರದ ಪರಿಣಾಮ ಇತ್ಯಾದಿ) ಉಪಯೋಗಿಸುವ ಲ್ಯಾಟಿನ್‌ಸ್ಕ್ವೇರ್ ವಿನ್ಯಾಸ ಬಹುಸಮೂಹ ವಿನ್ಯಾಸಕ್ಕೆ ಒಂದು ಉದಾಹರಣೆಯಾಗಿದೆ.

ಮುಂದಿನ ಹಂತದಲ್ಲಿ ಪ್ರಾಯೋಗಿಕ ಉಪಚಾರ ಮಾಡಲಾಗುತ್ತದೆ. ಇದು ಪ್ರಯೋಗದ ನಿಜವಾದ, ಮುಖ್ಯವಾದ ಹಂತ. ಅವಲಂಬಿತ ಚಲಕಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ಗಮನವಿಟ್ಟು ವೀಕ್ಷಿಸಿ, ಅಳತೆ ಮಾಡಿ, ದಾಖಲು ಮಾಡಿಕೊಳ್ಳಲಾಗುತ್ತದೆ.

ಕೊನೆಯ ಹಂತವೇ ಫಲಿತಾಂಶಗಳ ವಿಶ್ಲೇಷಣೆ ಹಾಗೂ ವ್ಯಾಖ್ಯಾನಿಸುವಿಕೆ. ಅವಲಂಬಿತ ಚರಾಂಶಗಳಲ್ಲಿ ಸ್ವತಂತ್ರ ಚಲಕ ಉಂಟುಮಾಡುವ ವ್ಯತ್ಯಾಸಗಳನ್ನು ಎರಡು ರೀತಿಗಳಲ್ಲಿ ಗಮನಿಸಲಾಗುತ್ತದೆ. ಪ್ರಯೋಗಕ್ಕೆ ಒಳಪಡುವ ವ್ಯಕ್ತಿಗಳಲ್ಲಿ ಉಂಟಾಗುವ ವ್ಯತ್ಯಾಸವನ್ನು ಗಮನಿಸುವುದು (ಒಂದೇ ಗುಂಪನ್ನು ಪದೇ ಪದೇ ಪರೀಕ್ಷಿಸಿದಾಗ ಅಥವಾ ಒಂದಕ್ಕೆ ಒಂದರಂತೆ ಗುಂಪುಗಳನ್ನು ಹೊಂದಿಸಿದಾಗ) ಗುಂಪುಗಳ ನಡುವೆ ಉಂಟಾಗುವ ವ್ಯತ್ಯಾಸಗಳನ್ನು (ಗುಂಪಿನ ಸರಾಸರಿಗಳ ನಡುವಣ ವ್ಯತ್ಯಾಸ, ಗುಣಾತ್ಮಕವಾದ ವ್ಯತ್ಯಾಸಗಳು) ಗಮನಿಸುವುದು. ಕೆಲವು ವೇಳೆ ವ್ಯಕ್ತಿಗಳಿಗೆ ಪ್ರಾಯೋಗಿಕ ಉಪಚಾರ ನೀಡಿದ ಸ್ಥಾನ ಕ್ರಮದ ಪ್ರಭಾವವನ್ನು (Order Effect) ಗಮನಿಸಬೇಕಾಗುತ್ತದೆ. ಪ್ರಯೋಗದ ಫಲಿತಾಂಶಗಳ ಆಧಾರದ ಮೇಲೆ ತೀರ್ಮಾನಗಳನ್ನು ರೂಪಿಸಿ ಅವುಗಳ ನಿಹಿತಾರ್ಥಗಳನ್ನು ವಿವರಿಸಲಾಗುತ್ತದೆ.

ಪ್ರಯೋಗ ವಿಧಾನವನ್ನು ಶುದ್ಧ ವಿಜ್ಞಾನ ಕ್ಷೇತ್ರಗಳಲ್ಲಿಯೇ ಅಲ್ಲದೆ ಸಾಮಾಜಿಕ ವಿಜ್ಞಾನಗಳಲ್ಲಿ ಮುಖ್ಯವಾಗಿ ಮನೋವಿಜ್ಞಾನ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಶಿಕ್ಷಣ, ಸಮಾಜ ಕಾರ್ಯ ಮುಂತಾದವುಗಳಲ್ಲಿಯೂ ಅನುಸರಿಸುವುದರಿಂದ ಈ ಎಲ್ಲಾ ಕ್ಷೇತ್ರಗಳಲ್ಲಿ ನಡೆಸುವ ಪ್ರಯೋಗಗಳ ನಿರ್ದಿಷ್ಟ ಕ್ರಮ/ತಂತ್ರಗಳು, ಉಪಯೋಗಿಸುವ ಸಾಮಗ್ರಿ, ಚರಾಂಶಗಳ ನಿಯಂತ್ರಣ ಮತ್ತು ಮುಖ್ಯವಾಗಿ ಅವುಗಳಿಂದ ಪಡೆಯುವ ಫಲಿತಾಂಶಗಳ ನಿಖರತೆಯಲ್ಲಿ ಇರುವ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗುತ್ತದೆ. ಶುದ್ಧವಿಜ್ಞಾನದಲ್ಲಿ ನಡೆಸುವ ಪ್ರಯೋಗಶಾಲಾ ಪ್ರಯೋಗಗಳಲ್ಲಿ ವಿವಿಧ ರೀತಿ ಮಾಪನ ಉಪಕರಣಗಳನ್ನು ಬಳಸುತ್ತಾರೆ. ಚರಾಂಶಗಳನ್ನು ಚೆನ್ನಾಗಿ ನಿಯಂತ್ರಿಸುತ್ತಾರೆ. ಫಲಿತಾಂಶಗಳು ನಿಖರವಾಗಿದ್ದು ಸಾಮಾನ್ಯೀಕರಣ ಮಾಡಬಹುದು. ಕೆಲವು ಸಂದರ್ಭಗಳಲ್ಲಿ ಪ್ರಯೋಗಗಳನ್ನು ಪ್ರಯೋಗ ಶಾಲೆಯಿಂದ ಹೊರಗೆ ಕ್ಷೇತ್ರಗಳಲ್ಲಿಯೇ ನಡೆಸಬೇಕಾಗುತ್ತವೆ. ಇವು ಕ್ಷೇತ್ರ ಪ್ರಯೋಗಗಳು. ಸಸ್ಯಶಾಸ್ತ್ರ, ಜೀವಶಾಸ್ತ್ರ, ಖಗೋಳವಿಜ್ಞಾನ, ಮನೋವಿಜ್ಞಾನ, ಸಮಾಜಶಾಸ್ತ್ರ ಮತ್ತು ಶಿಕ್ಷಣಶಾಸ್ತ್ರ ಈ ವಿಷಯಗಳಲ್ಲಿ ಕ್ಷೇತ್ರ ಪ್ರಯೋಗಗಳು ಸಾಮಾನ್ಯ ಇವುಗಳಲ್ಲಿ ಉಪಕರಣಗಳನ್ನು ಉಪಯೋಗಿಸಬಹುದು ಅಥವಾ ಉಪಯೋಗಿಸದಿರಬಹುದು. ಚರಾಂಶಗಳನ್ನು ಖಚಿತವಾಗಿ ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಪರಿಣಾಮವಾಗಿ ಇವುಗಳಿಂದ ಪಡೆಯುವ ಫಲಿತಾಂಶಗಳ ನಿಖರತೆ ಕಡಿಮೆಯಾಗಿರುತ್ತದೆ. ಕೆಲವು ಕ್ಷೇತ್ರ ಪ್ರಯೋಗಗಳಲ್ಲಿ ಸಾಧ್ಯವಾದಷ್ಟು ನಿಖರವಾಗಿ ಚರಾಂಶಗಳನ್ನು ನಿಯಂತ್ರಿಸಲಾಗುತ್ತವೆ. ಗುಣಾತ್ಮಕ ಸಂಶೋಧನೆಯಲ್ಲಿನ ಸಂದರ್ಭಗಳು ಈ ಬಗೆಯವು. ಅಂತಹ ಪ್ರಯೋಗಗಳನ್ನು ಭಾಗಶಃ – ಪ್ರಯೋಗಗಳು (Quasi Experiments) ಎನ್ನುತ್ತಾರೆ. ಇವುಗಳ ಫಲಿತಾಂಶಗಳು ಪೂರ್ಣತಃ ಕ್ಷೇತ್ರ ಪ್ರಯೋಗಗಳಿಗಿಂತ ಹೆಚ್ಚು ನಿಖರತೆಯನ್ನು ಹೊಂದಿರುತ್ತವೆ. ಕ್ಷೇತ್ರ ಪ್ರಯೋಗಗಳು ಪರಿಸರ ವೈಜ್ಞಾನಿಕ ಸಿಂಧುತ್ವವನ್ನು (Ecological Validity) ಹೊಂದಿರುತ್ತವೆ. ಈ ರೀತಿಯ ಸಿಂಧುತ್ವ ಪ್ರಯೋಗ ಶಾಲಾ ಪ್ರಯೋಗಗಳು ಹೊಂದಿರುವುದಿಲ್ಲವೆಂಬ ಟೀಕೆ ಇದೆ.

**ಅನುಕೂಲಗಳು:**

ಪ್ರಯೋಗ ವಿಧಾನದಲ್ಲಿ ಅನಾನುಕೂಲಗಳಿಗಿಂತ ಅನುಕೂಲಗಳು ಹೆಚ್ಚಾಗಿವೆ ಎಂಬುದು ನಿರ್ವಿವಾದವಾದ ಸಂಗತಿಯಾಗಿದೆ. ಅನುಕೂಲಗಳು ಹೀಗಿವೆ.

- ಈ ವಿಧಾನವು ವೈಜ್ಞಾನಿಕ ವಿಧಾನದ ಲಕ್ಷಣಗಳಿಗೆ ಅನುಗುಣವಾಗಿದೆ.
- ಕಾರಣ–ಕಾರ್ಯ ಸಂಬಂಧಗಳನ್ನು ನಿಖರವಾದ ರೀತಿಯಲ್ಲಿ ಸ್ಥಾಪಿಸುವುದು ಸಾಧ್ಯವಾಗುತ್ತದೆ.
- ಪ್ರಯೋಗದಲ್ಲಿನ ಚರಾಂಶಗಳನ್ನು (ಸ್ವತಂತ್ರ, ಅವಲಂಬಿತ) ನಿಖರವಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ.
- ಬೇರೆಯವರು ಒಂದು ಪ್ರಯೋಗವನ್ನು ಪುನರಾವರ್ತಿಸಿ ಪರೀಕ್ಷಿಸಬಹುದು. ಇದು ವಿಜ್ಞಾನ ಕ್ಷೇತ್ರಗಳಲ್ಲಿ ಬಹಳ ಮುಖ್ಯ.
- ಪ್ರಯೋಗ ವಿಧಾನದಿಂದ ಪರಿಮಾಣಾತ್ಮಕ ರೂಪದಲ್ಲಿ ಅಂದರೆ ಅಂಕಿ–ಅಂಶಗಳನ್ನು ಸಂಗ್ರಹಿಸಿ, ದಾಖಲಿಸುವುದು ಸಾಧ್ಯವಾಗುತ್ತದೆ.
- ಅವಲಂಬಿತ ಚರಾಂಶಗಳನ್ನು ವಸ್ತುನಿಷ್ಠವಾಗಿ, ನಿಖರವಾಗಿ ಅಳತೆ ಮಾಡಬಹುದು.
- ಗೊಂದಲ ಉಂಟುಮಾಡುವ ಚರಾಂಶಗಳನ್ನು (Confounding Variables) ನಿಯಂತ್ರಿಸಬಹುದು.
- ಕ್ಷೇತ್ರ ಪ್ರಯೋಗಗಳು, ಭಾಗಶಃ–ಪ್ರಯೋಗಗಳು (ಕ್ಷೇತ್ರಗಳಲ್ಲಿ ನಡೆಸುವ ಪ್ರಯೋಗಗಳು) ಪರಿಸರ ವೈಜ್ಞಾನಿಕ ಸಿಂಧುತ್ವವನ್ನು ಹೊಂದಿರುತ್ತವೆ.

Digitised by Bharatavani, CIIL

- ವೈಯಕ್ತಿಕ ನಿಲುವುಗಳ ಪ್ರಭಾವವಿರುವುದಿಲ್ಲ.

**ಪ್ರಯೋಗ ವಿಧಾನದ ಕೆಲವು ಮಿತಿಗಳು ಹೀಗಿವೆ:**

- ಸಾಮಾಜಿಕ ವಿಜ್ಞಾನಗಳಿಗೆ ಸಂಬಂಧಿಸಿದಂತೆ ನಡೆಸುವ ಪ್ರಯೋಗಗಳು ಕೃತ್ರಿಮವೆನಿಸುತ್ತವೆ.
- ನಿಯಂತ್ರಿತ ಸನ್ನಿವೇಶದಲ್ಲಿ ನಡೆಸುವ ಪ್ರಯೋಗಗಳಲ್ಲಿ ವ್ಯಕ್ತಿಗಳ ವರ್ತನೆಯು ಸೀಮಿತಗೊಳ್ಳುತ್ತದೆ.
- ಮನೋವಿಜ್ಞಾನ ಪ್ರಯೋಗಗಳಲ್ಲಿ ವ್ಯಕ್ತಿಗಳು ಪ್ರಯೋಗದ ಉದ್ದೇಶಗಳನ್ನು ಹೇಗೋ ತಿಳಿದುಕೊಂಡು ಅವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವರ್ತಿಸುತ್ತಾರೆ. ವ್ಯಕ್ತಿಗಳ ಈ ಲಕ್ಷಣಗಳನ್ನು ಕೋರಿಕೆ ಲಕ್ಷಣಗಳು (Demand Characteristics) ಎಂದು ಹೇಳುತ್ತಾರೆ. ಅಂದರೆ ಪ್ರಯೋಗಕ್ಕೆ ಒಳಪಡುವ ವ್ಯಕ್ತಿಗಳು ಸಹಜವಾಗಿ ವರ್ತಿಸದೆ/ಉತ್ತರಿಸದೆ ಸಂಶೋಧಕನ ಕೋರಿಕೆಯನ್ನು ಪೂರೈಸುವ ರೀತಿಯಲ್ಲಿ ವರ್ತಿಸುತ್ತಾರೆ/ಉತ್ತರಿಸುತ್ತಾರೆ. ಇದರಿಂದ ಫಲಿತಾಂಶ ಕಲುಷಿತಗೊಳ್ಳುತ್ತದೆ.
- ಪ್ರಯೋಗ ಕರ್ತ ಎಷ್ಟೇ ಎಚ್ಚರಿಕೆಯಿಂದ ಚರಾಂಶಗಳನ್ನು ನಿಯಂತ್ರಿಸಿದರೂ, ಅವನಿಗೆ ಅರಿವಿಲ್ಲದ, ಇನ್ನೂ ಅನೇಕ ಮಧ್ಯವರ್ತಿ ಚರಾಂಶಗಳಿರಬಹುದು. ಅವುಗಳನ್ನು ನಿಯಂತ್ರಿಸುವುದು ಸಾಧ್ಯವಾಗುವುದಿಲ್ಲ.

– **ಪ್ರೊ. ಮಂಜುನಾಥಯ್ಯ ಬಿ. ಎನ್.**

# ಬ

## ಬಹು ಮಾಧ್ಯಮ ಉಪಕ್ರಮ

ಔಪಚಾರಿಕ ಮತ್ತು ಅನೌಪಚಾರಿಕ ಶೈಕ್ಷಣಿಕ ಸನ್ನಿವೇಶಗಳಲ್ಲಿ ಯಾವುದಾದರೂ ವಿಷಯ, ಪರಿಕಲ್ಪನೆ, ತತ್ವ, ಅಭಿಪ್ರಾಯ ಮುಂತಾದವುಗಳನ್ನು ಇನ್ನೊಬ್ಬರಿಗೆ ಸಂವಹನ ಮಾಡಲು ಭಾಷೆ, ಚಿತ್ರ, ಸಂಕೇತ, ಉಪಕರಣಗಳು ಮುಂತಾದವುಗಳನ್ನು ಬಳಸುವ ಯಾವುದಾದರೊಂದು ಸಾಧನವೇ ಬೋಧನಾ ಮಾಧ್ಯಮ. ಕಲಿಕೆ ಅಥವಾ ಸಂವಹನದ ಯಶಸ್ಸು ನಾವು ಬಳಸುವ ಮಾಧ್ಯಮದ ಸಮರ್ಪಕತೆಯನ್ನು ಅವಲಂಬಿಸಿರುತ್ತದೆ. ಪಾರಂಪರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಮೌಖಿಕ ಬೋಧನೆಯೇ ಶಿಕ್ಷಣದ ಮಾಧ್ಯಮವಾಗಿತ್ತು. ಸಂವಹನ ಪ್ರಕ್ರಿಯೆಯಲ್ಲಿ ಭಾಷೆ ಅಪ್ರತಿಮ ಸ್ಥಾನ ಪಡೆದಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನಗಳ ಅದ್ವಿತೀಯ ಸಾಧನೆಗಳ ಪ್ರಭಾವ ಶಿಕ್ಷಣಕ್ಷೇತ್ರವನ್ನು ಆವರಿಸತೊಡಗಿದೆ. ಮಾಧ್ಯಮ ಕಲಿಕಾರ್ಥಿ ಮತ್ತು ಕಲಿಕಾರ್ಥಿ ಕಲಿಯುವ ವಿಷಯಗಳ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುತ್ತವೆ.

ಮುದ್ರಣವನ್ನು ಕಂಡುಹಿಡಿಯುವುದಕ್ಕೆ ಮೊದಲು ಸಾಂಪ್ರದಾಯಿಕ ಶಿಕ್ಷಣದಲ್ಲಿ ಶಿಕ್ಷಕನೇ ಕಲಿಸುವ ಮಾಧ್ಯಮವಾಗಿದ್ದನು. ಮುದ್ರಣಕಲೆಯ ಆವಿಷ್ಕಾರದೊಂದಿಗೆ ಪುಸ್ತಕಗಳು ಪ್ರಕಟಗೊಂಡು ಕಲಿಸುವಿಕೆ ಮತ್ತು ಕಲಿಯುವಿಕೆಯಲ್ಲಿ ಗ್ರಂಥಗಳು ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾದವು. ನಂತರ ಪ್ರವೇಶಿಸಿದ ವೃತ್ತಪತ್ರಿಕೆ, ರೇಡಿಯೋ, ದೂರದರ್ಶನ ಇತ್ಯಾದಿಗಳು ಸಮೂಹ ಸಂವಹನ ಮಾಧ್ಯಮಗಳಾದವು. ಇವು ಶಿಕ್ಷಣ ಕ್ಷೇತ್ರದಲ್ಲಿ ಬೋಧನೆಗೆ ಸಹಾಯಕವಾದವು. ಆರಂಭದಲ್ಲಿ ದೃಕ್‌ಶ್ರವಣ ಸಾಧನಗಳಾದ ಚಿತ್ರಪಟ, ಮಾದರಿಗಳು, ರೇಖಾಚಿತ್ರ, ಭೂಪಟ ಇತ್ಯಾದಿ ಬಳಸಲ್ಪಟ್ಟವು. ನಂತರ ಶೈಕ್ಷಣಿಕ ತಂತ್ರಜ್ಞಾನ ವಿಕಾಸಗೊಂಡುದರ ಪರಿಣಾಮವಾಗಿ ಯಾಂತ್ರಿಕ ಸಾಮಗ್ರಿಗಳಾದ (Hardware) ರೇಡಿಯೋ, ಟೇಪ್‌ರೆಕಾರ್ಡ್, ದೂರದರ್ಶನ, ವೀಡಿಯೋ ಹಾಗೂ ಕಂಪ್ಯೂಟರ್‌ಗಳು ಮತ್ತು ತಾಂತ್ರಿಕ ಸಾಮಗ್ರಿಗಳಾದ ಧ್ವನಿಸುರುಳಿಗಳು, ಕ್ಯಾಸೆಟ್ ಚಿಪ್ಸ್, ಸಿ.ಡಿ.ಗಳು, ಪೆನ್‌ಡ್ರೈವ್‌ಗಳು ಹಂತಗೊಳಿಸಿದ ಅಥವಾ ಯೋಜಿತ ಬೋಧನೆ ಮೊದಲಾದವು ಕಲಿಕೆಯ ಮಾಧ್ಯಮ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲುಗಳನ್ನು ಸೃಷ್ಟಿಸಿವೆ.

ಒಂದಕ್ಕಿಂತ ಹೆಚ್ಚು ಮಾಧ್ಯಮ ಸಲಕರಣೆಗಳನ್ನು ಒಟ್ಟಿಗೆ ಬಳಸಿಕೊಂಡು ಬೋಧನೆ ಮಾಡುವುದೇ ಬಹುಮಾಧ್ಯಮ ಉಪಕ್ರಮ (Multi media approach) ಎನ್ನಬಹುದು. ಪಠ್ಯ, ಗ್ರಾಫಿಕ್ಸ್, ಚಿತ್ರಗಳು, ಧ್ವನಿ, ಸಂಗೀತ, ಆನಿಮೇಷನ್, ಕಂಪ್ಯೂಟರ್, ವೀಡಿಯೋ, ಆಕೃತಿಗಳು ಇವೆಲ್ಲವನ್ನು ಒಟ್ಟಿಗೆ ಬಹುಮಾಧ್ಯಮ ಉಪಕ್ರಮದಲ್ಲಿ ಬಳಸಬಹುದು. ಇಂದು ಬಹು–ಮಾಧ್ಯಮ ಉಪಕ್ರಮ ಬೋಧನೆ ಮತ್ತು ಸಂವಹನ ಸನ್ನಿವೇಶಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

ಕಂಪ್ಯೂಟರ್‌ನ ಜೊತೆಗೆ ಧ್ವನಿವರ್ಧಕಗಳು, ಬಹುಮಾಧ್ಯಮ ಮತ್ತು ಕಂಪ್ಯೂಟರ್ ಡಿಸ್ಕ್‌ಗಳಿದ್ದರೆ ಬಹುಮಾಧ್ಯಮ ಕಂಪ್ಯೂಟರ್ ಸಂಗೀತ ವಾದ್ಯಗಳ ನಾದವನ್ನು ಪುನಃ ಸೃಷ್ಟಿ ಮಾಡುತ್ತದೆ; ಧ್ವನಿಮುದ್ರಿತ ಧ್ವನಿ ಮರಳಿ ಕೇಳಿಸುತ್ತದೆ; ಚಿತ್ರಗಳನ್ನು, ವೀಡಿಯೋ ಚಿತ್ರಗಳನ್ನು ತೋರಿಸುತ್ತದೆ; ಕಾಂಪ್ಯಾಕ್ಟ್ ಡಿಸ್ಕ್‌ನಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಬೇಕಾದಾಗ ಒದಗಿಸುವ ಮಾಹಿತಿ, ಶಿಕ್ಷಣ, ಬೋಧನೆ ಮತ್ತು ಮನೋರಂಜನೆ ನೀಡಲು ಬಹುಮಾಧ್ಯಮ ಉಪಕ್ರಮ ಉಪಯುಕ್ತ ಸಾಧನವಾಗಿದೆ.

ಶೈಕ್ಷಣಿಕ ತಂತ್ರಜ್ಞಾನದಲ್ಲಿನ ಆಧುನಿಕ ತಂತ್ರ ಬೋಧನಾ ಮಾಧ್ಯಮದ ವಿಧಾನಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು–

ಎ) ವಿದ್ಯುನ್ಮಾನ ಉಪಕರಣಗಳು

1. ದೃಕ್–ಶ್ರವಣ ಧ್ವನಿಸುರುಳಿಗಳು (Cassettes)
2. ರೇಡಿಯೋ ಶೈಕ್ಷಣಿಕ ಪ್ರಸಾರಗಳು
3. ದೂರದರ್ಶನದ ಶೈಕ್ಷಣಿಕ ಪ್ರಸಾರಗಳು

Digitised by Bharatavani, CIIL

4. ಕಂಪ್ಯೂಟರ್ ಸಹಾಯ ಬೋಧನೆಯ ಪ್ಯಾಕೇಜುಗಳು ಇತ್ಯಾದಿ

ಬಿ) ಯಂತ್ರಾಂಶ (Hardware)

1. ಪ್ರಯೋಗಾಲಯದ ಉಪಕರಣಗಳು–ಪ್ರೊಜೆಕ್ಟರ್

2. ಭಾಷಾ ಪ್ರಯೋಗಾಲಯ, ದೂರದರ್ಶನ, ವಿಸಿಆರ್, ವಿಸಿಡಿ, ರೇಡಿಯೋ, ಟೇಪ್ ರೆಕಾರ್ಡರ್, ಜನರೇಟ್ ಪ್ರೊಜೆಕ್ಟರ್, ಪ್ಲೆಂಟ್ ಪ್ರೊಜೆಕ್ಟರ್ ಇತ್ಯಾದಿ

3. ಕಂಪ್ಯೂಟರ್‌ಗಳು, ಭರಿತ ಮತ್ತು ಉತ್ಪಾದನೆ ಸಾಧನಗಳು (Computer with input and output device)

ಸಿ) ಇತ್ತೀಚೆಗೆ ವಿಕಾಸಗೊಂಡಿರುವ ತಾಂತ್ರಿಕತೆ ಸಾಧನಗಳು

1. ಕಾಂಪೆಕ್ಟ್ ಡಿಸ್ಕ್

2. ಇಂಟರ್‌ಆಕ್ಟಿವ್ ವೀಡಿಯೋ

3. ಮಲ್ಟಿಮೀಡಿಯಾ (ಬಹು–ಮಾಧ್ಯಮ)

4. ಹೈಪರ್ ಮೀಡಿಯಾ ಮುಂತಾವುಗಳು

**ಮಾಧ್ಯಮಗಳ ಮಹತ್ವ**

ಶಿಕ್ಷಣದಲ್ಲಿ ಮಾಧ್ಯಮಗಳ ಪಾತ್ರವು ಬಹಳ ಪ್ರಮುಖವಾಗಿದೆ. ಅವುಗಳು ಈ ಕೆಳಗಿನಂತಿವೆ–

- ವಿದ್ಯಾರ್ಥಿಗಳ ಕಲಿಕೆಯನ್ನು ಪ್ರಚೋದಿಸುತ್ತವೆ.
- ವಿದ್ಯಾರ್ಥಿಗಳಲ್ಲಿ ಅಸಕ್ತಿ ಮತ್ತು ಕುತೂಹಲವನ್ನುಂಟು ಮಾಡುತ್ತವೆ.
- ಅಮೂರ್ತ ಪರಿಕಲ್ಪನೆಗಳನ್ನು ಮೂರ್ತಗೊಳಿಸಿ ತಿಳಿಸಲು ಸಹಾಯಕವಾಗಿವೆ.
- ಬೋಧನೆ ಹಾಗೂ ತರಗತಿಯ ಕಾರ್ಯ ಚಟುವಟಿಕೆಗಳಲ್ಲಿ ವೈವಿಧ್ಯತೆಯನ್ನು ತರುತ್ತವೆ.
- ವಿಚಾರ, ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ತಿಳಿಸಲು ಸಹಾಯಕವಾಗುತ್ತವೆ.
- ವಿದ್ಯಾರ್ಥಿಗಳ ಕಲಿಕೆಯಲ್ಲಿ ಪುನರ್ಬಲನ ಒದಗಿಸುತ್ತವೆ.
- ಕಲಿತ ವಿಚಾರಗಳು ದೀರ್ಘಕಾಲ ನೆನಪಿನಲ್ಲಿ ಉಳಿಯಲು ಸಹಾಯ ಮಾಡುತ್ತವೆ.
- ಕಲಿಕೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ವೃದ್ಧಿಸುತ್ತವೆ.
- ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಮಯ ಹಾಗೂ ಶಕ್ತಿಯನ್ನು ಉಳಿತಾಯ ಮಾಡುತ್ತವೆ.
- ಬೋಧನೆಯಲ್ಲಿ ನೈಜತೆಯನ್ನು ತರಲು ನೆರವು ನೀಡುತ್ತವೆ.

ಬೋಧನೆಗಾಗಿ ಸೂಕ್ತಮಾಧ್ಯಮದ ಆಯ್ಕೆಯ ಮಾನದಂಡಗಳು

ಬೋಧನೆಯಲ್ಲಿ ಪ್ರಭಾವಿಕತೆಯನ್ನು ತರಲು ಮಾಧ್ಯಮಗಳನ್ನು ಬಳಸಲಾಗುತ್ತದೆ. ಅಂತಹ ಮಾಧ್ಯಮಗಳ ಆಯ್ಕೆಗೆ ಇರುವ ಮಾನದಂಡಗಳು ಈ ಕೆಳಗಿನಂತಿವೆ.

- ವಿದ್ಯಾರ್ಥಿಗಳ ಕಲಿಕಾ ಮಟ್ಟ
- ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ
- ತರಗತಿಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ
- ಬೋಧಿಸಲ್ಪಡುವ ವಿಷಯ ಅಥವಾ ಪರಿಕಲ್ಪನೆಗಳ ಕ್ಲಿಷ್ಟತೆ, ಸಂಕೀರ್ಣತೆ
- ಶಾಲೆಯಲ್ಲಿ ಮಾಧ್ಯಮಗಳ ಲಭ್ಯತೆ
- ನಿರ್ದೇಶಿಸುವ ಪರಿಣಿತ ಶಿಕ್ಷಕರ ಸಂಖ್ಯೆ
- ಮಾಧ್ಯಮ ಬಳಸಲು ಸೂಕ್ತವಾದ ಪರಿಸ್ಥಿತಿ

ಪಾರಂಪರಿಕ ಮೂಲಗಳಿಂದ ಬಂದ ಹಾಗೂ ಇತ್ತೀಚೆಗೆ ಅವಿಷ್ಕಾರ ಮತ್ತು ಅಭಿವೃದ್ಧಿ ಹೊಂದುತ್ತಿರುವ ವಿವಿಧ ಮಾಧ್ಯಮಗಳು ಬೋಧನೆಗೆ ಅತ್ಯಂತ ಮಹತ್ವದ ಕಾಣಿಕೆ ನೀಡಿವೆ. ಇವುಗಳ ವ್ಯಾಪ್ತಿ ತುಂಬಾ ವಿಶಾಲ. ಮೊದಲು ಸಾಂಪ್ರದಾಯಿಕ ಮಾಧ್ಯಮವಾದ ಭಾಷೆಯ ಮೂಲಕವೇ ಮಾಡಬೇಕಾಗುತ್ತಿತ್ತು. ಆದರೆ ಆಧುನಿಕ ವಿದ್ಯುನ್ಮಾನ ಮಾಧ್ಯಮ ವಿದ್ಯಾರ್ಥಿಯ ವಿವಿಧ ಜ್ಞಾನೇಂದ್ರಿಯಗಳ ಮೂಲಕ ಕಲಿಕೆ ಉಂಟಾಗುವಂತೆ ಮಾಡುತ್ತವೆ. ಆಧುನಿಕ ಮಾಧ್ಯಮಗಳ ಮನೋವೈಜ್ಞಾನಿಕ ಆಧಾರವನ್ನು ಅವು ಕಲಿಕೆಯನ್ನು ವರ್ಣರಂಜಿತ ಹಾಗೂ ಪರಿಣಾಮಕಾರಿಗೊಳಿಸುತ್ತವೆ. ನೇರ ಅನುಭವಗಳನ್ನು ಉಂಟುಮಾಡುತ್ತವೆ. ಅಂತೆಯೇ ಕಲಿಕೆ ದೀರ್ಘಕಾಲದವರೆಗೆ ಉಳಿಯಲು ನೆರವಾಗುತ್ತವೆ.

ಪಾಶ್ಚಿಮಾತ್ಯ ರಾಷ್ಟ್ರಗಳು ಆಧುನಿಕ ಮಾಧ್ಯಮಗಳ ಮೂಲಕ ಕಲಿಕೆಯ ಕ್ಷೇತ್ರದಲ್ಲಿ ಪರಿವರ್ತನೆ ಉಂಟುಮಾಡಿವೆ. ಇಂದಿನ ಬೋಧನೆಯಲ್ಲಿ ಶಿಕ್ಷಕನೊಬ್ಬನೇ ಪರಿಣಾಮಕಾರಿ ಬೋಧನೆ ಮಾಡುವುದು ಕಷ್ಟವಾದ ಕಾರ್ಯವಾಗಿದೆ. ಈ ಎಲ್ಲ ಮಾಧ್ಯಮಗಳು ಕಲಿಸುವ–ಕಲಿಯುವ ಪ್ರಕ್ರಿಯೆಯಲ್ಲಿ ಪಾತ್ರವಹಿಸತೊಡಗಿವೆ. ಬೋಧನಾ ಉದ್ದೇಶಗಳು, ಕಲಿಕೆಯ ಅನುಭವಗಳು, ಕಲಿಕೆಯ ಫಲಗಳು ಹಾಗೂ ಮೌಲ್ಯಮಾಪನ ಈ ಪ್ರತಿಯೊಂದು ಘಟ್ಟದಲ್ಲೂ ಆಧುನಿಕ ಮಾಧ್ಯಮಗಳು ವ್ಯಾಪಿಸಿವೆ. ಬೋಧನೆಯನ್ನು ವೈಜ್ಞಾನಿಕಗೊಳಿಸಿವೆ.

–ಡಾ. ಜಾನಕಿ ಎಂ.

Digitised by Bharatavani, CIIL

## ಬಾಲಭವನಗಳು

ರಾಷ್ಟ್ರೀಯ ಬಾಲಭವನವು 1956 ರಲ್ಲಿ ಟರ್ಕ್‌ಮನ್ ಗೇಟ್ ಬಳಿ ಇರುವ ತಗಡಿನ ಜೋಪಡಿಯಲ್ಲಿ ತನ್ನ ಸರಳ ಪ್ರಾರಂಭೋತ್ಸವ ಮಾಡಿ, ಪ್ರಸ್ತುತದಲ್ಲಿರುವ ಕೋಟ್ಲಾ ಮಾರ್ಗಕ್ಕೆ ಕ್ರಮೇಣವಾಗಿ ವರ್ಗಾಯಿಸಲ್ಪಟ್ಟಿತು. ಅದು ತೃಪ್ತಿಕರವಾದ ಪ್ರಗತಿ ಹೊಂದಿ, ರಾಷ್ಟ್ರೀಯ ಸ್ಥಾನವನ್ನು ಗಳಿಸಿದೆ. 42 ವರ್ಷಗಳ ಅಸ್ತಿತ್ವವಿರುವ ಇದು ಹೊಸದಾಗಿ ಗಳಿಸಿದ ರಾಷ್ಟ್ರೀಯ ಬಾಲಭವನದ ಸ್ಥಾನದೊಡನೆ ಇನ್ನೂ ಹಲವು ಸಾಧನೆಗಳನ್ನು ಹೊಂದಿದೆ. ಅಸಾಂಪ್ರದಾಯಿಕ ಶಿಕ್ಷಣದ ಕ್ಷೇತ್ರದಲ್ಲಿ ಇದರ ಪ್ರಯತ್ನಗಳು ನಿರ್ದಿಷ್ಟ ಮಟ್ಟದ ಸೃಜನಶೀಲ ಉತ್ಕೃಷ್ಟತೆಯ ಪರಿಣಾಮವನ್ನು ಬೀರಿದಂತೆ ಕಂಡುಬರುತ್ತದೆ.

ತಗಡಿನ ಜೋಪಡಿ ಮತ್ತು ಅತ್ಯಂತ ಪುಟ್ಟ ಕಛೇರಿ ಮತ್ತು ಸೀಮಿತ ಚಟುವಟಿಕೆಗಳ ಬಾಲಭವನದ ಕ್ಷೇತ್ರವು ಈಗ ಒಂದು ಸಂಪೂರ್ಣ ಚಟುವಟಿಕೆಯ ವಿಭಾಗವಾಗಿ ಪರಿವರ್ತನೆ ಹೊಂದಿದೆ. ಕೋಟ್ಲಾ ಮಾರ್ಗದಲ್ಲಿ ಎರಡು ಅಂತಸ್ತಿನ ಕಛೇರಿ ಭವನದಲ್ಲಿ ರಾಷ್ಟ್ರೀಯ ಮಕ್ಕಳ ಸಂಗ್ರಹಾಲಯ, ರಾಷ್ಟ್ರೀಯ ತರಬೇತಿ ಸಂಪನ್ಮೂಲ ಕೇಂದ್ರ ಕಟ್ಟಡ, ಗ್ರಂಥಾಲಯ ವಿಭಾಗ, ವಿಜ್ಞಾನ ಶಿಕ್ಷಣ ಕೇಂದ್ರ, ಏಳು ಮಲಗುವ ಕೋಣೆಗಳ ವಿದ್ಯಾರ್ಥಿ ನಿಲಯ ಮತ್ತು ವಿಶಾಲವಾದ ಭೋಜನಗೃಹ, ಸ್ಕೇಟಿಂಗ್‌ಗಾಗಿ ಬರ್ಫದಿಂದ ಕೂಡಿದ ಮೈದಾನ, ವ್ಯಾಯಾಮ ಶಾಲೆ ಮತ್ತು ಬಯಲು ರಂಗಭೂಮಿ ಮುಂತಾದ ಸೌಕರ್ಯಗಳಿವೆ.

ಬಾಲಭವನದ ಆಂದೋಲನವು ತೀವ್ರತೆ ಪಡೆದ ಕಾರಣ ಪ್ರಸ್ತುತ 52 ಬಾಲಭವನ ಕೇಂದ್ರಗಳು ಅತಿ ದೂರದ ಪ್ರದೇಶಗಳಲ್ಲೂ ಇವೆ. ಈ ಕೇಂದ್ರಗಳು ಕೊಳಚೆಗೇರಿ ಮಕ್ಕಳು, ಸುಧಾರಣ ಗೃಹದ ಮಕ್ಕಳು, ಪುನರ್ವಸತಿ ಕಾಲೋನಿಗಳು ಮತ್ತು ಎಂ. ಸಿ. ಖಿ./ಎನ್. ಡಿ. ಎಂ. ಸಿ. ಶಾಲೆಗಳ ಮಕ್ಕಳ ಅಗತ್ಯಗಳನ್ನು ಪೂರೈಸುತ್ತಿವೆ. ಇದರ ಜೊತೆಗೆ ಮಂಡಿ ಗ್ರಾಮದಲ್ಲಿ ಒಂದು ಗ್ರಾಮಾಂತರ ಘಟಕವು ಗ್ರಾಮಾಂತರ ಬಾಲಭವನದ ಮೊದಲ ಮಾದರಿಯಾಗಿ ಅಭಿವೃದ್ಧಿ ಹೊಂದುತ್ತಿದೆ. ಈ ಆಂದೋಲನವು ಕೇವಲ ಕೇಂದ್ರಕ್ಕೆ ಮಾತ್ರ ಸೀಮಿತವಾಗಿಲ್ಲ, ಆದರೆ ದೇಶದ ಉದ್ದಗಲಕ್ಕೂ ಚಾಚಿಕೊಳ್ಳುತ್ತಿದೆ. ಸುಮಾರು 70 ಬಾಲಭವನಗಳು ರಾಷ್ಟ್ರೀಯ ಘಟಕಕ್ಕೆ ಈಗ ಸಂಯೋಜಿತವಾಗಿದೆ. ಈ ಸಂಬಂಧ ಅತ್ಯುಚ್ಚ ಸಂಸ್ಥೆಯ ರಾಷ್ಟ್ರೀಯ ಬಾಲಭವನ ಮತ್ತು ರಾಜ್ಯ ಬಾಲಭವನಗಳ ಉತ್ತಮ ಆಲೋಚನೆಗಳ ಸಂವಹನ ಮತ್ತು ಸಂಯೋಜಿತ ಕಾರ್ಯಕ್ರಮಗಳ ನಡುವೆ ಸಮೀಪದ ಸಂಬಂಧವಿದೆ.

ಬಾಲಭವನದ ಉದ್ದೇಶಗಳು ಮಕ್ಕಳಲ್ಲಿರುವ ಸೃಜನಶೀಲ ಶಕ್ತಿಗಳನ್ನು ಬೆಳೆಸುವುದು ಮತ್ತು ಅವರಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಸವಾಲಿನ ಸ್ಫೂರ್ತಿ ಪ್ರಯೋಗ, ಶೋಧನೆ ಮತ್ತು ಸೃಷ್ಟಿಸುವ ಸಾಮರ್ಥ್ಯಗಳನ್ನು ಬೆಳೆಸಿ ಕೊಳ್ಳಲು ಮನಸ್ಸಿಗೆ ನಾಟುವಂತೆ ಬೋಧಿಸುವುದೇ ಆಗಿದೆ. ಈ ಉದ್ದೇಶಗಳು ನೆರವೇರಲು ವೈವಿಧ್ಯಮಯ ಚಟುವಟಿಕೆಗಳು ವಿಸ್ತೃತವಾದ ಪ್ರಭಾವಳಿಯನ್ನು ಬೀರುವ ವಿಜ್ಞಾನ, ಸೃಜನಶೀಲ ಕಲೆಗಳು, ಪ್ರದರ್ಶನ ಕಲೆಗಳು, ಛಾಯಾಗ್ರಹಣ, ಆಟಗಳು ಇತ್ಯಾದಿ ವಿಷಯಗಳು ಒಳಗಳ್ಳಬೇಕು. ಅವುಗಳಷ್ಟೇ ಅಲ್ಲದೆ ಬಾಲಭವನದ ಇತರ ಉದ್ದೇಶಗಳು ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುವುದು, ಮಕ್ಕಳ ಸೃಜನಶೀಲ ಶಕ್ತಿಯನ್ನು ವೃದ್ಧಿ ಗೊಳಿಸುವುದು, ಮಕ್ಕಳಲ್ಲಿ ಪರಿಣಾಮಕಾರಿ ಕಲಿಕೆಯನ್ನು ಭದ್ರಪಡಿಸುವುದು, ಊಟ, ವಿನೋದಗಳನ್ನು ಒದಗಿಸುವುದು; ಶೈಕ್ಷಣಿಕ ಸಂಸ್ಥೆಗಳಿಗೆ ಬೆಂಬಲ ಕೊಡುವಂತೆ ವರ್ತಿಸುವುದು, ಉಚಿತ ಅಭಿವ್ಯಕ್ತಿಗೆ ತಕ್ಕ ಉತ್ತೇಜಕ ವಾತಾವರಣ ಮತ್ತು ಅವಕಾಶಗಳನ್ನು ಒದಗಿಸುವುದು. ಬಾಲಭವನ ಆಂದೋಲನವನ್ನು ಪ್ರವಾಹದೋಪಾದಿ ನಡೆಸುವುದು, ತರಬೇತಿ ಪಡೆದ ಶಿಕ್ಷಕರು/ಶಿಕ್ಷಿತ ತರಬೇತಿದಾರರು ಮಕ್ಕಳಿಗೆ ದೊರೆಯುವಂತೆ ಮಾಡುವುದು ಮತ್ತು ಕ್ರಿಯಾ ಚಟುವಟಿಕೆಗಳ ಮೂಲಕ ಮಕ್ಕಳ ಕಲಿಕೆಯನ್ನು ಉತ್ತೇಜಿಸುವುದು.

**ಸಂವಿಧಾನಾತ್ಮಕ ವ್ಯವಸ್ಥೆ:** 1956 ರಲ್ಲಿ ಅದರ ಆರಂಭವಾದಾಗಿನಿಂದಲೂ ಬಾಲಭವನವು ಅದರ ವ್ಯಾಪ್ತಿ ಮತ್ತು ಚಟುವಟಿಕೆಗಳಲ್ಲಿ ನಿಗದಿತ ಮಿತಿಯೊಳಗೆ ಶೀಘ್ರ ಅಭಿವೃದ್ಧಿ ಹೊಂದಿತು. ಅದು ವಿಸ್ತೃತಗೊಂಡ ಸಂಸ್ಥೆಯಾಗಿ ಜೀವಂತಿಕೆ ಮತ್ತು ಚಟುವಟಿಕೆಗಳಲ್ಲಿ ಸ್ಫುರಣೆ ಪಡೆಯಿತು. ವರ್ಷದೊಳಗೆ ಬಾಲಭವನ ಆಂದೋಲನವು ದೇಶದಲ್ಲೆಲ್ಲಾ ಹರಡಿತು. ಬಾಲಭವನ ಆಂದೋಲನದ ಬೆಳೆಯುತ್ತಿದ್ದ ಜನಪ್ರಿಯತೆಗಳಿಂದಾಗಿ ನಡೆಯುತ್ತಿರುವ ಚಟುವಟಿಕೆಗಳನ್ನು ವಿಸ್ತರಿಸುವುದದು ತರ್ಕಸಮ್ಮತವಾಗಿತ್ತು ಮತ್ತು ಹೊಸ ಚಟುವಟಿಕೆಗಳನ್ನು ಪ್ರಾರಂಭಿಸುವುದರ ಪರಿಣಾಮದಿಂದ ವರ್ಷದೊಳಗೆ ಅದರ ಕಾರ್ಯಕ್ರಮಗಳು ವಿವಿಧ ಬಗೆಯಲ್ಲಿ ತೊಡಗಬೇಕಾಯಿತು. ಅದರ ಕಾರ್ಯಭಾರವು ಹೆಚ್ಚುತ್ತ ಬಂದಿತು ಮತ್ತು ಚಟುವಟಿಕೆಗಳಲ್ಲಿ ಗುಣಾತ್ಮಕವಾದ ಅಭಿವೃದ್ಧಿ ಸಹಾ ಆಯಿತು. ಮಕ್ಕಳ ಅಭಿವೃದ್ಧಿಯ ಬದಲಾಗುತ್ತಿರುವ ಪರಿಕಲ್ಪನೆಗಳು, ಬಾಲಭವನದ ಚಟುವಟಿಕೆಗಳು ಬದಲಾಗುತ್ತಾ ಬೆಳೆಯುತ್ತಿವೆ. ತನ್ಮೂಲಕ ಸಿಬ್ಬಂದಿಗಳಿಗೆ ಸವಾಲುಗಳನ್ನು ಒಡ್ಡುತ್ತಿದ್ದವು.

ರಾಷ್ಟ್ರೀಯ ಬಾಲಭವನಕ್ಕೆ ಒಬ್ಬ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಆಡಳಿತ ಮತ್ತು ಲೆಕ್ಕಪತ್ರ ಶಾಖೆಗಳೇ ಅಲ್ಲದೆ ಅದರಲ್ಲಿ ಹತ್ತು ಚಟುವಟಿಕಾ ಘಟಕಗಳಿದ್ದು ವಿಜ್ಞಾನ, ದೈಹಿಕ ಶಿಕ್ಷಣ, ಪ್ರದರ್ಶನ ಕಲೆ, ಸೃಜನ ಕಲೆ, ಛಾಯಾಗ್ರಹಣ ಇತ್ಯಾದಿಗಳನ್ನು ಒಳಗೊಂಡಿದೆ. ಅಲ್ಲಿ ಇತರ ಪ್ರಮುಖ ಘಟಕಗಳಿದ್ದು ರಾಷ್ಟ್ರೀಯ ತರಬೇತಿ ಸಂಪನ್ಮೂಲ ಕೇಂದ್ರ, ರಾಷ್ಟ್ರೀಯ ಮಕ್ಕಳ ಸಂಗ್ರಹಾಲಯ, ಮಿನಿ ರೈಲ್ವೆ ಗ್ರಂಥಾಲಯ, ಮಕ್ಕಳ ವಾಸದ ವಿದ್ಯಾನಿಲಯಗಳು, ವಿವಿಧೋದ್ದೇಶ ಕ್ರೀಡಾ ಸಂಕೀರ್ಣ, ಬಯಲು ರಂಗಭೂಮಿ, ಒಳಾಂಗಣ ರಂಗಭೂಮಿ (ಆಡಿಟೋರಿಯಂ), ಮತ್ಸ್ಯಗೃಹ (ಅಕ್ವೇರಿಯಂ) ಮತ್ತು ಮಿನಿ ಪಕ್ಷಿಗೃಹ (ಏವಿಯರಿ) ಒಳಗೊಳ್ಳುತ್ತದೆ.

Digitised by Bharatavani, CIIL

ಮಂಡಿ ಗ್ರಾಮದಲ್ಲಿರುವ ಬಾಲಭವನ ರಾಷ್ಟ್ರೀಯ ಬಾಲಭವನದಿಂದ ನಿರ್ವಹಿಸಲ್ಪಡುತ್ತದೆ. ಹಾಗೆಯೇ ದೆಹಲಿಯ ವಿವಿಧ ಭಾಗಗಳಲ್ಲಿ ಇರುವ 52 ಬಾಲಭವನ ಕೇಂದ್ರಗಳೂ ಅಲ್ಲಿಗೆ ಸೇರುತ್ತವೆ. ಈ ಕೇಂದ್ರಗಳು ಅರೆಕಾಲಿಕ ಕೇಂದ್ರಗಳು, ಬಹುಪಾಲು ಶಾಖೆಗಳು, ಸಮುದಾಯ ಕೇಂದ್ರಗಳು ಅಥವಾ ಮಕ್ಕಳ ಗೃಹಗಳಲ್ಲಿ ಇರುತ್ತವೆ. ಮಂಡಿಯಲ್ಲಿರುವ ಬಾಲಭವನವು ಜವಾಹರ ಬಾಲಭವನ ಎಂದೇ ಕರೆಯಲ್ಪಡುತ್ತ ಪೂರ್ಣಕಾಲಿಕ ಬಾಲಭವನವಾಗಿ 4.75 ಎಕರೆಯ ಪ್ರದೇಶದಲ್ಲಿದ್ದು ಮಂಡಿ ಗ್ರಾಮಕ್ಕೆ ಹತ್ತಿರದಲ್ಲಿದೆ.

ಬಾಲಭವನದ ತಾತ್ವಿಕ ನೆಲೆ: ಭಾರತದಲ್ಲಿ ಕೊಟ್ಯಾಂತರ ಮಕ್ಕಳಗೆ ಬಾಲಭವನವು ಕ್ರಿಯಾಶೀಲತೆಯ ಕೇಂದ್ರವಾಗಿ ಸ್ವಾತಂತ್ರ್ಯದ ವಾತಾವರಣ ಮತ್ತು ಆತ್ಮಸಂತೋಷದ ವಾತಾವರಣವನ್ನು ಒದಗಿಸುತ್ತಿದೆ. ಅದೊಂದು ಶಾಲೆಯಲ್ಲ ಆದರೆ ಒಂದು ಸಂಸ್ಥೆ. ಪ್ರತಿ ಮಗುವಿನ ವ್ಯಕ್ತಿತ್ವವನ್ನು ಗೌರವಿಸುತ್ತ ಮತ್ತು ಅವನ/ಅವಳ ಸಹಜವಾದ ಅಗತ್ಯವನ್ನು ಸ್ವತಂತ್ರವಾಗಿ ಹೇಳಿಕೊಳ್ಳಲು ಅಲ್ಲಿ ಆಸ್ಪದವಿರುತ್ತದೆ. ಪ್ರತಿ ಮಗುವೂ ಒಂದು ಸೃಜನಾತ್ಮಕ ಸಾಮರ್ಥ್ಯ ಪಡೆದಿರುತ್ತದೆ ಮತ್ತು ಅವಕಾಶ ನೀಡಿದರೆ, ಪ್ರೋತ್ಸಾಹಿಸಿದರೆ ಅವನ/ಅವಳ ಕ್ರಿಯಾಶೀಲ ಆಸಕ್ತಿಗಳು ಅರಳಬಲ್ಲವು ಎಂಬುದರಲ್ಲಿ ಅದಕ್ಕೆ ನಂಬಿಕೆಯಿದೆ. ಬಾಲಭವನದ ಮಾರ್ಗದಲ್ಲಿ ಕಲಿಯುವುದೆಂದರೆ ಸೀಮೆಸುಣ್ಣ ಮತ್ತು ಕಪ್ಪು ಹಲಗೆಗಳಿಂದ ಅಲ್ಲ. ಆದರೆ ಮಗುವಿನ ಜೀವನ ಮತ್ತು ಅವನ ವಾತಾವರಣಕ್ಕೆ ನೇರವಾಗಿ ಪರಿಚಯವಿರುವ ಜೀವನದ ಅನುಭವದಿಂದ ಕಲಿಯುವಂಥದ್ದು. ಹೀಗೆ ಬಾಲಭವನ ತಾತ್ವಿಕ ನೆಲೆ, ಕ್ರಿಯಾಶೀಲತೆ ಸ್ಫೂರ್ತವಾದ ಮತ್ತು ಅಸಾಂಪ್ರದಾಯಿಕ ಕಲಿಯುವ ಮಾರ್ಗದಿಂದ, ಅದರಲ್ಲೂ ಆಟಗಳ ಮೂಲಕ ಅಥವಾ ಮಾಡುವ ಮೂಲಕ ಕಲಿಯುವುದು ಎಂದು ನಂಬುತ್ತದೆ.

ಒಂದು ಮಗು ಹುಟ್ಟಿನಿಂದಲೇ ಕ್ರಿಯಾಶೀಲತೆ, ಕಲ್ಪನೆ, ಶೋಧನೆ ಮತ್ತು ಕುತೂಹಲವುಳ್ಳದ್ದಾಗಿರುತ್ತದೆ. ಒಂದು ವೇಳೆ ಮಗುವಿನ ಸ್ವ-ಅಭಿವೃದ್ಧಿಗೆ ಅವಕಾಶವಿತ್ತರೆ ಅದು ಅಪರಿಮಿತ ತೃಪ್ತಿಗಳನ್ನು ಪಡೆಯುತ್ತದೆ. ಈ ಅವಕಾಶಗಳು ಬಾಲಭವನ ಅನುಕರಿಸುವ ಪದ್ಧತಿಗಳ ತಳಹದಿಯಾಗಿ, ಒಂದು ಮಗುವಿನ ಸಮಗ್ರ ವ್ಯಕ್ತಿತ್ವದ ವಿಕಾಸವನ್ನು ರೂಪಿಸುತ್ತದೆ. ಒಂದು ಮಗುವಿಗೆ ಒದಗಿಸಿದ ನಿರ್ಬಂಧವಿಲ್ಲದ ವಾತಾವರಣವು ಹಿತಕರವಾಗಿದ್ದರೆ ಅದು ಮಗುವಿನ ವಯಸ್ಸು, ಸಾಮರ್ಥ್ಯ ಮತ್ತ ಆಸಕ್ತಿಗಳಿಗೆ ಅನುಗುಣವಾಗಿದ್ದು, ಆಯ್ಕೆಯ ಅವಕಾಶ ನೀಡಿದರೆ ಅದರ ಚಟುವಟಿಕೆಗಳು ಸಂಗೀತ, ನೃತ್ಯ, ನಾಟಕ, ವೈಜ್ಞಾನಿಕ ಶೋಧನೆ, ದೈಹಿಕ ಚಟುವಟಿಕೆಗಳು, ಬಣ್ಣ ಹಚ್ಚುವುದು, ಕರಕುಶಲ ಕಲೆ, ಅಡಿಗೆ, ಕವನ ರಚನೆ, ಪುಸ್ತಕ ಪ್ರಕಾಶನ, ದೃಶ್ಯ ಕಾರ್ಯಕ್ರಮಗಳನ್ನು ಮಾಡುವುದು ಅಥವಾ ಯಾವುದೇ ಶೋಧನಪರವಾದ ಚಟುವಟಿಕೆ ಅಥವಾ ಅಂಥಹುದೇ ವಿಧಗಳ ಅನೇಕ ವಿಧಗಳಲ್ಲಿ ಹೊರ ಹೊಮ್ಮುತ್ತವೆ. ತಲೆ, ಹೃದಯ ಮತ್ತು ಕೈಗಳ ಸಂಯೋಜನೆಗೆ ಒತ್ತು ನೀಡುವುದರಿಂದ ಒಂದು ಮಗುವು ಗ್ರಹಿಸುವ ಮತ್ತು ಕಲಿಯುವ ಅಪರೋಕ್ಷ ವಿಧಾನವೇ ಅಸಾಂಪ್ರದಾಯಿಕ ಮಾರ್ಗ.

ಮಕ್ಕಳ ಅಸಾಂಪ್ರದಾಯಿಕ ಚಟುವಟಿಕೆಗಳ ಅಗತ್ಯವನ್ನು ಯಾವಾಗಲೂ ಗಮನಿಸಿ ಒತ್ತಿ ಹೇಳಬೇಕಾಗಿದೆ. ಈ ಚಟುವಟಿಕೆಗಳು ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವುದಲ್ಲದೆ ಅವರ ಸಾಮಾಜಿಕ ಸೌಂದರ್ಯ ಮತ್ತು ಮಾನಸಿಕ ಅಗತ್ಯಗಳನ್ನು ಪೂರೈಸುತ್ತವೆ.

**ಬಾಲಭವನಗಳು ಒದಗಿಸುವ ಚಟುವಟಿಕೆಗಳು:** ಬಾಲಭವನಗಳು ಮಕ್ಕಳಿಗೆ ವರ್ಷಪೂರ್ತಿ ಹಲವು ಕ್ರಿಯಾತ್ಮಕವಾದ ಮತ್ತು ಶೋಧನಾತ್ಮಕವಾದ ಚಟುವಟಿಕೆಗಳನ್ನು ಒದಗಿಸುವುದಲ್ಲದೆ, ಅವುಗಳು ಶಾಲಾ ವ್ಯವಸ್ಥೆಗೆ ಪೂರಕವಾಗಿ ಮತ್ತು ಶಾಲಾ ಶಿಕ್ಷಣದ ಕೊರತೆಗಳನ್ನು ತುಂಬಿಕೊಡುತ್ತವೆ. ಅದರೊಡನೆ ಅವರಲ್ಲಿ ಮಾನವೀಯ ಮೌಲ್ಯಗಳು, ದೇಶಭಕ್ತಿಯ ಪ್ರಜ್ಞೆ ಮತ್ತು ನಮ್ಮ ಪರಿಸರದ ಬಗ್ಗೆ ಪ್ರೀತಿಯನ್ನು ಮನಸ್ಸಿಗೆ ನಾಟುವಂತೆ ಬೋಧಿಸುತ್ತವೆ. ಎಲ್ಲಾ ಚಟುವಟಿಕೆಗಳು ವ್ಯವಸ್ಥಿತವಾಗಿ ಯೋಜಿಸಲ್ಪಟ್ಟು ಮಕ್ಕಳ ವಿಚಾರಶೀಲತೆ ಮತ್ತು ಕುತೂಹಲಗಳ ಮನಶ್ಶಾಸ್ತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯರೂಪಕ್ಕೆ ಬರುತ್ತವೆ. ಇದರಿಂದ ಮಕ್ಕಳಿಗೆ ತಮ್ಮ ಸುತ್ತಲಿನ ವಿಷಯಗಳಲ್ಲಿ ಕುತೂಹಲ ಹೆಚ್ಚುವುದಲ್ಲದೆ ಅವರ ಅನ್ವೇಷಕ ಮನಸ್ಸು ಅದರತ್ತ ವಾಲುತ್ತ ಅವರೇನೇ ಮಾಡಿದರೂ ಮತ್ತು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದರೂ ತೃಪ್ತಿಕರವಾಗಿ ಮತ್ತು ಪೂರಕವಾಗಿ ನಿರ್ವಹಿಸುತ್ತಾರೆ. ವ್ಯಾಪಕ ಚಟುವಟಿಕೆಗಳ ಕ್ಷೇತ್ರಗಳೆಂದರೆ, ಗ್ರಂಥಾಲಯ ಮತ್ತು ಸಾಹಿತ್ಯಕ ಚಟುವಟಿಕೆಗಳು, ಗೃಹ ಕೃತ್ಯ ನಿರ್ವಹಣೆ, ವಿಶೇಷ ಕಾರ್ಯಾಗಾರಗಳು ಮತ್ತು ಶೋಧನಾತ್ಮಕ ಚಟುವಟಿಕೆಗಳು, ರಚನಾತ್ಮಕ ಚಟುವಟಿಕೆಗಳು, ಸಂಗ್ರಹಾಲಯದ ತಾಂತ್ರಿಕತೆ, ತರಬೇತಿ ಸಂಪನ್ಮೂಲ ಕೇಂದ್ರ, ಛಾಯಾಗ್ರಹಣ, ದೈಹಿಕ ಶಿಕ್ಷಣ, ಪ್ರದರ್ಶಕ ಕಲೆಗಳು ಮತ್ತು ಬಾಲಭವನ ಕೇಂದ್ರಗಳ ಮೂಲಕ ವಿಸ್ತೃತ ವಿವಿಧ ವರ್ಗಗಳ ಮಕ್ಕಳನ್ನು ತಲುಪುವುದು ಮತ್ತು ರಾಜ್ಯ ಬಾಲಭವನಗಳಿಗೆ ಬೆಸೆಯುವ ಪ್ರತಿನಿಧಿಯಾಗಿ ನಿರ್ವಹಿಸುವುದು.

**ಬಾಲಭವನ ಆಂದೋಲನ ಘಟ್ಟಗಳು:** ನಾವು ಬಾಲಭವನದ ಇತಿಹಾಸವನ್ನು ಇಣುಕಿ ನೋಡಿದರೆ, ಬಾಲಭವನ ಸ್ಥಾಪನೆಗೊಂಡ ಅವಧಿಯಲ್ಲಿ, ದೇಶಕ್ಕೆ ಆಗತಾನೇ ಸ್ವಾತಂತ್ರ ಲಭಿಸಿದ್ದು, ಅನೇಕ ರಾಜ್ಯ ವಿಷಯ ಸಂಬಂಧಿ ಮತ್ತು ದೇಶದ ಅಭಿವೃದ್ಧಿಯ ಪ್ರಗತಿಪರ ಕಾರ್ಯಕ್ರಮಗಳು ಯೋಜನೆಗೊಂಡು ಆರಂಭವಾಗಿದ್ದವು. ಮಕ್ಕಳ ಅಗತ್ಯಗಳಿಗೂ ಚೆನ್ನಾಗಿ ಸುಸ್ಪಷ್ಟವಾದ ರೀತಿಯಲ್ಲಿ ಗಮನ ಹರಿಸಲಾಯಿತು. ಮಗುವಿನ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಯನ್ನು ಉತ್ತೇಜಿಸಲು ಮತ್ತು ರಾಷ್ಟ್ರದ ಅಗತ್ಯಗಳನ್ನು ಪೂರೈಸಲು ಶಿಕ್ಷಣ ವ್ಯವಸ್ಥೆಯನ್ನು ಬದಲಾಯಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಡಲಾಯಿತು. ಎರಡನೆಯದನ್ನು ಸಾಧಿಸಲು ಶಾಲಾ ವಾತಾವರಣಕ್ಕಿಂತ ವಿಭಿನ್ನವೂ ಬೇರೆಯೂ ಆದ ಪರಿಸರವನ್ನು ಮಗುವಿನ ಯೋಗ್ಯ ಬೆಳವಣಿಗೆಗೆ ಒದಗಿಸಬೇಕೆನ್ನುವುದು ಬಾಲಭವನ ಸ್ಥಾಪನೆಯ ತಳಹದಿಯಾಯಿತು. ಮತ್ತು ಆರಂಭದಲ್ಲಿ ಇದನ್ನು ಒಂದು ಮನರಂಜನೆಯ ಸ್ಥಳವೆಂದೂ, ಚಟುವಟಿಕೆ ಕೇಂದ್ರಿತ ಸಂಸ್ಥೆಯಾಗಿ ಶಾಲಾ ವ್ಯವಸ್ಥೆಗೆ ಪೂರಕವೂ, ಅದರ

Digitised by Bharatavani, CIIL

ಕೊರತೆಗಳನ್ನು ತುಂಬುವಂತಹವೂ ಆಗಿ ಪರಿಗಣಿಸಲಾಯಿತು. ಇದು ಬಾಲಭವನದ ಯುಗ ಆರಂಭ. ಈ ಆಂದೋಲನವು ನಾಲ್ಕು ಹಂತಗಳಲ್ಲಿ ಸಾಗಿ ಬಂದಿದೆ.

ರಚನಾ ಅಥವಾ ನಿರ್ಮಾಣದ ಹಂತ 1956 ರಿಂದ 1967; ಪ್ರಯೋಗಾತ್ಮಕ ಹಂತ 1967 ರಿಂದ 1978; ಅಭಿವೃದ್ಧಿಪರ ಹಂತ 1978 ರಿಂದ 1989; ವ್ಯಾವಹಾರಿಕ ಹಂತ 1990ರ ನಂತರದಲ್ಲಿ.

ನಿರ್ಮಾಣದ ಹಂತದಲ್ಲಿ ಮೊದಲಿಗೆ ಬಾಲಭವನ ಮತ್ತು ರಾಷ್ಟ್ರೀಯ ಮಕ್ಕಳ ಮ್ಯೂಸಿಯಂ ತೆರೆಯಲು ಪ್ರಯತ್ನಿಸಲಾಯಿತು. ಇವುಗಳು ನಂತರ ಒಂದೇ ಆಗಿ ಸಂಯೋಜನೆಗೊಂಡವು. ಮ್ಯೂಸಿಯಂ ಅಥವಾ ಸಂಗ್ರಹಾಲಯಗಳ ಪಾತ್ರ ಅಸಾಂಪ್ರದಾಯಕ ಶಿಕ್ಷಣ ಕೇಂದ್ರದ ಮೂಲವಾಗಿ ಮಕ್ಕಳ ವಿಕಾಸಕ್ಕೆ ಕಲಾ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿತು. ಪ್ರಯೋಗಾತ್ಮಕ ಹಂತದಲ್ಲಿ ಬಾಲಭವನ ಚಟುವಟಿಕೆಗಳನ್ನು ಕುರಿತು ಜಾಗೃತಿ ಮೂಡಿಸಲು ಹೊಸ ಪ್ರಯೋಗಗಳನ್ನು ಪ್ರಯತ್ನಿಸಲಾಯಿತು. ಒಂದು ಭಂಡಾರ ನಿಧಿಯನ್ನೂ ವಿಶೇಷವಾಗಿ ರಚಿಸಲಾಯಿತು ಮತ್ತು ಮಕ್ಕಳಿಗಾಗಿ ವಯಸ್ಕರಿಂದ ಪ್ರದರ್ಶನಗಳನ್ನು ಏರ್ಪಡಿಸಲಾಯಿತು. ರಾಷ್ಟ್ರೀಯ ಬಾಲ ಭವನದ ಕಲಾ ಶಿಕ್ಷಣ ಕೇಂದ್ರದಲ್ಲಿ ಶಿಕ್ಷಕರ ತರಬೇತಿ ಕರ್ಯಕ್ರಮಗಳನ್ನು ಸಹಾ ಪ್ರಯೋಗ ಮಾಡಲಾಯಿತು. ಮಂಡಿ ಗ್ರಾಮದ ಜವಾಹರ ಬಾಲಭವನವು ಈ ಅವಧಿಯಲ್ಲಿನ ಬಾಲಭವನಗಳಲ್ಲಿ ಒಂದಾಗಿದ್ದು ಅದೇ ರೀತಿ ದೇಶದ ವಿವಿಧ ರಾಜ್ಯಗಳಲ್ಲಿಯೂ ಪ್ರಾರಂಭಿಸಲಾಯಿತು. ಅಭಿವೃದ್ಧಿ ಹಂತವು ಗರಿಷ್ಠ ಸಂಖ್ಯೆಯ ಮಕ್ಕಳನ್ನು ತಲುಪುವಂತೆ ಪ್ರಯತ್ನ ಮಾಡಿದ ಅವಧಿಯಾಗಿತ್ತು. ಬಾಲಭವನಗಳನ್ನು ತಲುಪಲಾಗದವರಿಗೆ ಬಾಲಭವನವೇ ತಲುಪುವಂತೆ ಮಾಡಲು ದೆಹಲಿಯಲ್ಲಿ ಆರಂಭಿಸಿದ ಬಾಲಕೇಂದ್ರದ ವಿವಿಧ ಕೇಂದ್ರಗಳನ್ನು ದೆಹಲಿಯಲ್ಲೇ ತೆರೆಯಲಾಯಿತು. ಈ ಅವಧಿಯಲ್ಲಿ ಶಿಕ್ಷಕರ ತರಬೇತಿ ವಿನ್ಯಾಸವು ವಿಸ್ತೃತಗೊಂಡಿತು ಮತ್ತು ಮಕ್ಕಳು ಶಿಕ್ಷಕರು, ಪೋಷಕರು ಮತ್ತು ವಯಸ್ಕರಿಗೆಂದೇ ಕಾರ್ಯಕ್ರಮಗಳನ್ನು ಉತ್ತೇಜಿಸಲಾಯಿತು. ವ್ಯಾವಹಾರಿಕ ಹಂತವು 1990ರ ನಂತರದ್ದು. ಈ ಅವಧಿಯಲ್ಲಿ ಮಕ್ಕಳು ಮತ್ತು ಶಿಕ್ಷಕರ ಕ್ರಿಯಾಶೀಲತೆ ಹೆಚ್ಚಿಸಲು ಒತ್ತು ನೀಡಲಾಯಿತು. ಅನೇಕ ಶೋಧನಾತ್ಮಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಅವು ಮುಂದುವರಿಯುತ್ತಿವೆ.

**ಮಾದರಿ ಗ್ರಾಮ ಬಾಲಭವನ (ಜವಾಹರ ಬಾಲಭವನ, ಮಂಡಿ):** ಜವಾಹರ ಬಾಲಭವನವು ಮಂಡಿ ಗ್ರಾಮದಲ್ಲಿ 1972 ರಲ್ಲಿ ಮಂಡಿ, ಜೋಹ್ನಾಪುರ, ಗೋವಿಂದಪುರ, ಗ್ವಾಲ ಹಿಲ್ಸ್ ಮತ್ತು ಮೆಹ್ರೋಲಿ ಪ್ರದೇಶಗಳ ಗ್ರಾಮಾಂತರ ಮಕ್ಕಳ ಅಗತ್ಯಗಳನ್ನು ಪೂರೈಸಲೋಸುಗ ಸ್ಥಾಪನೆಯಾಯಿತು. ಮಂಡಿಯ ಈ ಬಾಲಭವನದಲ್ಲಿ ವಿಶೇಷ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ನಡೆಸಲಾಯಿತು. ಗ್ರಾಮಾಂತರ ಮಕ್ಕಳ ಅವಶ್ಯಕತೆಗಳನ್ನು ದೃಷ್ಟಿ ಯಲ್ಲಿಟ್ಟುಕೊಂಡು ಮರಗೆಲಸ, ಹೊಲಿಗೆ, ಚಿತ್ರಕಲೆ, ಕರಕುಶಲಕಲೆ, ಜೇಡಿಮಣ್ಣಿನ ಮಾದರಿ ಆಕೃತಿಗಳು, ಛಾಯಾ ಗ್ರಹಣ, ಗ್ರಂಥಾಲಯ ಚಟುವಟಿಕೆಗಳು, ಕಂಪ್ಯೂಟರ್‌ಗಳು ಮತ್ತು ದೈಹಿಕ ಶಿಕ್ಷಣ ಮುಂತಾದ ಹಲವು ಚಟುವಟಿಕೆಗಳು ಮಂಡಿ ಬಾಲಭವನದಲ್ಲಿ ಏರ್ಪಟ್ಟವು. ವಿಶೇಷ ಸೃಜನಶೀಲತೆ ಮೇಳಗಳು ಮತ್ತು ಕಮ್ಮಟಗಳು, ನಾಟಕ ಕಾರ್ಯಾಗಾರ, ರೇಡಿಯೋ ಎಲೆಕ್ಟ್ರಾನಿಕ್ಸ್ ಕಮ್ಮಟ, ಸ್ಕ್ರೀನ್ ಪ್ರಿಂಟಿಂಗ್ ಹೆಸರಿಸಬಹುದಾಗಿದೆ. ಮಂಡಿಯ ಜವಾಹರ್ ಬಾಲಭವನವನ್ನು ಒಂದು ಮಾದರಿ ಗ್ರಾಮ ಬಾಲಭವನವಾಗಿ ಅಭಿವೃದ್ಧಿಪಡಿಸುವ ಯೋಜನೆ ಮಾಡಲಾಗಿತ್ತು.

**ಬಾಲಭವನದ ಕೇಂದ್ರಗಳು:** ಗರಿಷ್ಠ ಸಂಖ್ಯೆಯಲ್ಲಿ ಮಕ್ಕಳನ್ನು ತಲುಪುವಂತಹ ಉದ್ದೇಶದಿಂದ ದೆಹಲಿಯ ವಿವಿಧ ಸ್ಥಳ, ಬಡಾವಣೆಗಳಲ್ಲಿ ಬಾಲಭವನ ಕೇಂದ್ರಗಳನ್ನು ತೆರೆಯಲಾಯಿತು. ಈ ಕೇಂದ್ರಗಳು ಅನನುಕೂಲ ಮಕ್ಕಳು ಕೊಳಚೆಗೇರಿಯಲ್ಲಿ ವಾಸಿಸುವ ಮಕ್ಕಳು, ಗ್ರಾಮಾಂತರ ಮಕ್ಕಳು ಮತ್ತು ಪುನರ್ವಸತಿ ಕಾಲೋನಿಗಳ ಮಕ್ಕಳಿಗೆ ಅನುಕೂಲಗಳನ್ನು ಒದಗಿಸಿದವು. ಈ ಕೇಂದ್ರಗಳಲ್ಲಿ ಶಾಲೆಗೆ ಹೋಗುವ, ಶಾಲೆಗೆ ಹೋಗದ ಮತ್ತು ಶಾಲೆಯನ್ನು ಬಿಟ್ಟ ಮಕ್ಕಳು ಭಾಗವಹಿಸಿದರು. ಬಾಲಕೇಂದ್ರಗಳ ಯೋಜನೆಯು 1970 ರಲ್ಲಿ ಆರಂಭವಾಯಿತು ಮತ್ತು ಇದರ ಮೊದಲ ಬಾಲಭವನ ಕೇಂದ್ರವಾದ ನಾಬಿಕರೀಮ್ ಕೇಂದ್ರ ಆರಂಭವಾದಾಗಿನಿಂದ 52 ಕೇಂದ್ರಗಳಾಗಿ ಬೆಳೆದವು. ಹೆಚ್ಚು ಬಾಲಕೇಂದ್ರಗಳನ್ನು ತೆರೆಯಬೇಕೆಂಬ ಒತ್ತಾಯವಿದ್ದಿತು. ಈ ಕೇಂದ್ರಗಳ ಉಪಯುಕ್ತತೆ ನಾನಾ ವಿಧದಲ್ಲಿದೆ. ಸಾಮಾಜಿಕ ಅನುಕೂಲ ವಂಚಿತರೇ ಮುಖ್ಯ ಗುರಿಯಾಗುಳ್ಳ ಈ ಕೇಂದ್ರಗಳ ಮೌಲ್ಯ ಸಮಾಜೋ–ರಾಜಕೀಯವಾಗಿ ಪ್ರಯೋಜನಕಾರುಯಾಗಿದೆ ಎಂಬುದನ್ನು ನಿರಾಕರಿಸುವಂತಿಲ್ಲ.

**ಸಂಯೋಜಿತ ಬಾಲಭವನಗಳು:** ಸುಮಾರು 70 ಬಾಲಭವನಗಳು ರಾಷ್ಟ್ರೀಯ ಬಾಲಭವನಕ್ಕೆ ಸಂಯೋಜನೆ ಗೊಂಡಿವೆ. ಇದರಿಂದ ರಾಜ್ಯ ಬಾಲಭವನಗಳು ರಾಷ್ಟ್ರ ಮಟ್ಟದ ಚಟುವಟಿಕೆಗಳು/ಕಾರ್ಯಕ್ರಮಗಳನ್ನು ಸಂಯೋಜಿಸಿಕೊಳ್ಳುತ್ತಿವೆ. ಉತ್ತೇಜನ ನೀಡುವುದು, ತಾಂತ್ರಿಕ ಮತ್ತು ಸಿಬ್ಬಂದಿಗಳ ತರಬೇತಿಗಳನ್ನು ರಾಜ್ಯ ಬಾಲಭವನಗಳಿಗೆ ಒದಗಿಸುವುದು, ರಾಜ್ಯಗಳಿಗೆ ಹೊಸ ಚುವಟಿಕೆಗಳನ್ನು ಆರಂಭಿಸಲು ಸಹಾಯ ಮಾಡುವುದು, ಸಂಪನ್ಮೂಲ ವ್ಯಕ್ತಿಗಳನ್ನು ಕಳುಹಿಸುವುದು, ರಾಜ್ಯಗಳಿಗೆ ವಿಶೇಷ ವಸ್ತುಪ್ರದರ್ಶನಗಳನ್ನು ಅದರ ಅವಶ್ಯಕತೆಗಳಿಗೆ ತಕ್ಕಂತೆ ನೆರವು ನೀಡುವುದು ರಾಷ್ಟ್ರ ಬಾಲಭವನದ ಕಾರ್ಯಗಳಾಗಿವೆ.

ಬಾಲಭವನದಂತಹ ಸಂಸ್ಥೆಗಳನ್ನು ಸ್ಥಾಪಿಸುವುದರಿಂದ ಮಕ್ಕಳ ಸೃಜನಶೀಲ ಇಂಗಿತಗಳನ್ನು ತೃಪ್ತಿಪಡಿಸಲು ಸಹಾಯವಾಗುವುದರಿಂದ ಅವುಗಳ ಅಗತ್ಯ ಹೆಚ್ಚಾಗಿದೆ. ಅರಿವು, ಜ್ಞಾನ ಸಂಪಾದನೆ, ಉತ್ತಮ ಗುಣಗಳ ಅಭಿವೃದ್ಧಿಗೆ ಪೂರಕವಾದ ಹಿತಕರ ವಾತಾವರಣವಿರದ ಕಾರಣ ಕುಟುಂಬಗಳ ಮಕ್ಕಳಿಗೆ ಬಾಲಭವನಗಳ ಅವಶ್ಯಕತೆಯು ಅಧಿಕವಾಗಿದೆ.

**ಮೂಲ: ಮಧು ಪಂತ್**

**ಅನು: ಡಾ. ರತ್ನಮ್ಮ ಕೆ.ಎಸ್.**

Digitised by Bharatavani, CIIL

## ಬಾಲಾಪರಾಧಿಗಳ ನಿರ್ವಹಣೆ

ಇಂದು ಸಾರ್ವತ್ರಿವಾಗಿ ವ್ಯಾಪಕವಾಗಿ ಹಾಗೂ ಅಪಾಯಕಾರಿಯಾಗಿ ಬೆಳೆದಿರುವ ಔದ್ಯೋಗೀಕರಣ ಹಾಗೂ ನಗರೀಕರಣಗಳ ಫಲವಾಗಿ ಉದ್ಭವಿಸಿರುವ ಹಲವಾರು ಸಾಮಾಜಿಕ ಸಮಸ್ಯೆಗಳಲ್ಲಿ ಬಾಲಾಪರಾಧವು ಒಂದಾಗಿದೆ. ಇಂದಿನ ಅನೇಕ ಅಪ್ರಾಪ್ತ (18 ವರ್ಷಗಳಿಗಿಂತ ಕಡಿಮೆ ವಯಸ್ಸಿನ) ಮಕ್ಕಳು ನಗರೀಕರಣ ವ್ಯವಸ್ಥೆಯಿಂದಾಗಿ ಗ್ರಾಮೀಣ ಸಮುದಾಯಗಳಿಂದ ನಗರಗಳಿಗೆ ವಲಸೆ ಹೋಗುತ್ತಿದ್ದು, ಅಲ್ಲಿನ ಸಾಮಾಜಿಕ ವ್ಯವಸ್ಥೆಯಿಂದ ದೈಹಿಕ ಮತ್ತು ಮಾನಸಿಕ ತೊಳಲಾಟಗಳಿಗೆ ತುತ್ತಾಗಿ ಅನೈತಿಕ ಚಟುವಟಿಕೆಗಳಲ್ಲಿ, ಸಮಾಜಘಾತುಕ ಕೃತ್ಯಗಳಲ್ಲಿ ತೊಡಗುತ್ತಿದ್ದಾರೆ. ಇಂತಹವರನ್ನು ಬಾಲಾಪರಾಧಿಗಳು ಎಂದು ಪರಿಗಣಿಸಿ ಅವರನ್ನು ನೈತಿಕ ನಡವಳಿಕೆ ಮಾರ್ಗಕ್ಕೆ ತರಲು ವಿಶೇಷ ವ್ಯವಸ್ಥೆ ಮಾಡಬೇಕಾಗುತ್ತದೆ.

ಮಕ್ಕಳು ದೇಶದ ಭವಿಷ್ಯದ ಪ್ರಜೆಗಳಾಗಿದ್ದು ಅವರ ಲಾಲನೆ ಪಾಲನೆ–ಪೋಷಣೆ ಎಲ್ಲವೂ ಸಮಾಜದ ಹೊಣೆ. ಸಮಾಜವು ತನ್ನ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗದ ವೈಫಲ್ಯಕ್ಕೆ ಇಂದು ತೆರಬೇಕಾದ ಬೆಲೆಯೇ ಬಾಲಾಪರಾಧ. ಬಾಲಾಪರಾಧಿಗಳು ಮಾಡಬಹುದಾದ ಕೃತ್ಯಗಳ ಸ್ವರೂಪ ಏನೇ ಇದ್ದರೂ, ಆ ಕೃತ್ಯಗಳಿಗೆ ಪೋಷಕವಾದ ವಾತಾವರಣ ಯಾವುದೇ ಇದ್ದರೂ, ಅದಕ್ಕೆ ದಂಡನೆಯೊಂದೇ ಪರಿಹಾರವಾಗದು. ಬಾಲಾಪರಾಧಕ್ಕೆ ಪ್ರೇರಕವಾದ ಪರಿಸ್ಥಿತಿ–ಪರಿಸರಗಳ ನಿವಾರಣೆಯಾಗಬೇಕು. ಜೊತೆಗೆ ಬಾಲಾಪರಾಧಿ ಮಕ್ಕಳಿಗೆ ಪುನರ್ವಸತಿ ಕಲ್ಪಿಸಬೇಕು. ಇದು ಸಮಾಜದ ಭವಿಷ್ಯತ್ತಿನ ಸ್ವಚ್ಛತೆಗೆ ಅನಿವಾರ್ಯ ಕೂಡ.

### 'ಬಾಲಾಪರಾಧಿ'ಗಳ ಅರ್ಥ ಮತ್ತು ವ್ಯಾಖ್ಯೆಗಳು

ಹೆಸರೇ ಹೇಳುವಂತೆ ಬಾಲಾಪರಾಧ ಎಂದರೆ 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಅಪ್ರಾಪ್ತ ಬಾಲಕ ಅಥವಾ ಬಾಲಕಿ ಮಾಡುವ ಅಪರಾಧ. ಸಮಾಜದ ರೀತಿ–ನೀತಿಗಳನ್ನು ಉಲ್ಲಂಘಿಸುವಂಥ ತಪ್ಪು ಕೃತ್ಯಗಳಲ್ಲಿ ತೊಡಗುವ 18 ವರ್ಷ ವಯಸ್ಸಿನ ಒಳಗಿರುವ ಬಾಲಕ ಅಥವಾ ಬಾಲಕಿಯರನ್ನು ಬಾಲಾಪರಾಧಿಗಳೆನ್ನುವರು.

ವಾಲ್ವರ್ ರೆಕಲೆಸ್‌ರವರ ಪ್ರಕಾರ "ನೀತಿ ಸಂಹಿತೆಯ ಉಲ್ಲಂಘನೆಯನ್ನು ಅಥವಾ ಮಕ್ಕಳಿಗೆ ಹಾಗೂ ಹದಿಹರೆಯದವರಿಗೆ ತಕ್ಕದಲ್ಲದ ವರ್ತನಾ ಮಾದರಿಯನ್ನು ಅನುಸರಿಸುವುದನ್ನು ಬಾಲಾಪರಾಧ ಎನ್ನಬಹುದು."

ಸಿರಿಲ್ ಬರ್ಟ್‌ರವರ ಅಭಿಪ್ರಾಯದಲ್ಲಿ "ಬಾಲಕನ ಇಲ್ಲವೆ ಬಾಲಕಿಯ ಸಮಾಜಘಾತುಕ ಕೃತ್ಯಗಳು ಶಿಕ್ಷಾರ್ಹವಾಗುವಷ್ಟರ ಮಟ್ಟಿಗೆ ತೀವ್ರ ಸ್ವರೂಪದವುಗಳಾದಾಗ ಅವುಗಳನ್ನು ಬಾಲಾಪರಾಧ ಎನ್ನುತ್ತೇವೆ."

ಸಿ.ಬಿ.ಮೆಮೋರಿಯಾ ಪ್ರಕಾರ "ಸಾಮಾಜಿಕ ವ್ಯವಸ್ಥೆಯ ನಿಯಮಗಳು ಮತ್ತು ನಿರೀಕ್ಷೆಗಳನ್ನು ಉಲ್ಲಂಘಿಸುವ ಮಕ್ಕಳ ಯಾವುದೇ ಬಗೆಯ ನಡತೆಯ ವಿಧಾನಗಳನ್ನು ಬಾಲಾಪರಾಧವು ಒಳಗೊಂಡಿರುತ್ತದೆ. "

ಹೀಲರ್‌ರವರ ಪ್ರಕಾರ "ಸಾಮಾಜಿಕ ಪ್ರಮಾಣಗಳ ವರ್ತನೆಯಿಂದ ವಿಚಲಿತವಾದ ಮಗುವನ್ನು ಬಾಲಾಪರಾಧಿ ಎನ್ನಬಹುದು. "

ಬಾಲಾಪರಾಧಿಗಳ ವರ್ಗೀಕರಣ (Classification of Juvenile Delinquents):

ಬಾಲಾಪರಾಧಿಗಳನ್ನು ಅವರು ಮಾಡಿರಬಹುದಾದ ಅಪರಾಧಗಳ ಆಧಾರದ ಮೇಲೆ ಹಲವು ವಿದ್ವಾಂಸರುಗಳು ಹಲವು ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಹಿರ್ಷ ಎಂಬುವವರು ಅಪರಾಧಿಗಳ ಸ್ವರೂಪದ ಆಧಾರದ ಮೇಲೆ 6 ಬಗೆಯ ಬಾಲಾಪರಾಧಿಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ –

- ತಿದ್ದಲಾಗದ ನಡತೆಯವರು (Incorrigibles): ನಿರಂತರವಾದ ಅವಿಧೇಯತೆ, ಯಾವಾಗಲೂ ತಡವಾಗಿ ಮನೆಗೆ ಬರುವುದು, ಹಿರಿಯರ ಪ್ರತಿಯೊಂದು ಮಾತಿಗೂ ಅಸಭ್ಯವಾಗಿ ಪ್ರತ್ಯುತ್ತರ ನೀಡುವುದು ಇತ್ಯಾದಿ. ಇಂಥ ಮಕ್ಕಳನ್ನು ಸರಿಯಾದ ಮಾರ್ಗಕ್ಕೆ ತರುವುದು ಸ್ವಲ್ಪ ಕಷ್ಟದ ಕೆಲಸ.
- ಮೈಗಳ್ಳತನದಿಂದ ಅಂಡಲೆಯುವವರು (Habitual Truants): ಶಾಲೆಯನ್ನು, ಮನೆಯನ್ನು ಬಿಟ್ಟು, ಅಥವಾ ಎಲ್ಲಿಯಾದರೂ ಕೆಲಸ ಮಾಡುತ್ತಿದ್ದಲ್ಲಿ ಅದನ್ನು ಬಿಟ್ಟು, ಅಥವಾ ಅನಾಥಾಲಯ ಅಥವಾ ವಿದ್ಯಾರ್ಥಿನಿಲಯದಿಂದ ತಪ್ಪಿಸಿಕೊಂಡು, ಮೈಗಳ್ಳತನದಿಂದ ಅಥವಾ ಸೋಮಾರಿತನದಿಂದ ತಿರುಗಾಡಿಕೊಂಡಿರುವ ಮಕ್ಕಳು ಈ ಗುಂಪಿಗೆ ಸೇರುತ್ತಾರೆ.
- ಪರರ ವಸ್ತುವನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಕದಿಯುವವರು (Larceners): ರೇಡಿಯೋ, ಟೇಪ್‌ರಿಕಾರ್ಡರ್, ಬ್ಯಾಟರಿ, ಮೋಟಾರ್ ಸೈಕಲ್ ಮುಂತಾದ ಇತರರ ವಸ್ತುಗಳನ್ನು ಉಪಾಯದಿಂದ ಕದ್ದು, ಮತ್ತೆ ಕೆಲವೊಮ್ಮೆ ಬಲವಂತದಿಂದ ಕಿತ್ತುಕೊಂಡು ಉಪಯೋಗಿಸುವುದ ಇಂಥ ಮಕ್ಕಳ ವರ್ತನೆ.
- ಆಸ್ತಿ ಅಥವಾ ಸಂಪತ್ತನ್ನು ಹಾಳು ಮಾಡುವವರು (Destroyers of Property): ಕೋಪದಿಂದ ಪ್ರತೀಕಾರದ ಮನೋಭಾವದಿಂದ ಅಥವಾ ಮೋಜು ನಡೆಸುವ ದೃಷ್ಟಿಯಿಂದ ಹೊಣೆಗೇಡಿತನದಿಂದ ಸಾರ್ವಜನಿಕ ಸಂಪತ್ತನ್ನು/ ಖಾಸಗಿಯಾದ ಆಸ್ತಿಯನ್ನು ನಾಶಪಡಿಸುವ ಮಕ್ಕಳು ಈ ವರ್ಗಕ್ಕೆ ಸೇರುತ್ತಾರೆ.
- ಹಿಂಸಾಚಾರಿಗಳಾದ ಬಾಲಾಪರಾಧಿಗಳು (Violations Delinquents): ಸಮೂಹದ ಅಥವಾ ಸಮುದಾಯದ ವಿರುದ್ಧವಾಗಿ ಗುಂಪುಗೂಡಿ ಹಿಂಸಾಚಾರ ನಡೆಸುವುದು, ಆಸ್ತಿ–

Digitised by Bharatavani, CIIL

ಪಾಸ್ತಿ, ಜಾತಿ, ಜನಾಂಗೀಯತೆ ಮತ್ತು ಕುಲ ಸಂಬಂಧವಾಗಿ, ಸ್ತ್ರೀ ಸಂಬಂಧವಾಗಿ ಅಥವಾ ಇನ್ನಿತರ ಕಾರಣಗಳಿಂದಾಗಿ ನಡೆಯಬಹುದಾದ ಗಲಭೆಗಳಲ್ಲಿ ವಿನಾಶಕಾರಿ ಕೃತ್ಯ ಎಸಗುವುದು ಈ ಗುಂಪಿನ ಮಕ್ಕಳ ಲಕ್ಷಣ.

- ಲೈಂಗಿಕ ಅಪರಾಧಿಗಳು (Sex Offenders): ಬಲಾತ್ಕಾರವಾಗಿ ಸಲಿಂಗ ರತಿಯಲ್ಲಿ ತೊಡಗುವುದು, ಸ್ತ್ರೀಯರ ಮೇಲೆ ಲೈಂಗಿಕ ಅತ್ಯಾಚಾರವೆಸಗುವುದು, ಏಕಾಂತದಲ್ಲಿರುವ ಸ್ತ್ರೀ ಪುರುಷರನ್ನು ಕದ್ದು ನೋಡುವುದು, ಗೋಡೆ ಮೇಲೆ ಲೈಂಗಿಕ ವಿಷಯಕ್ಕೆ ಸಂಬಂಧಿಸಿದಂತೆ ಬರೆಯುವುದು ಇಂಥ ಮಕ್ಕಳ ವರ್ತನೆ.

ಈಟನ್ ಮತ್ತು ಪೋಲ್ಕ್ (Eaten and Polk ರವರು ಬಾಲಾಪರಾಧಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿದ್ದಾರೆ.

- ಕ್ಷುಲ್ಲಕ ಉಲ್ಲಂಘನೆಗಳು (Minor Violations): ಅಸಭ್ಯ ನಡವಳಿಕೆಯಿಂದ ಹಿಡಿದು ರಸ್ತೆಯ ನಿಯಮಗಳನ್ನು ಅಲಕ್ಷಿಸಿ ವರ್ತಿಸುವಂತಹ ರೀತಿಯ ಸಾಮಾನ್ಯ ಮಟ್ಟದ ನಿಯಮ ಉಲ್ಲಂಘನೆಗಳು ಇದರಲ್ಲಿ ಸೇರಿಕೊಳ್ಳುತ್ತವೆ.
- ಗಂಭೀರವಾದ ಉಲ್ಲಂಘನೆಗಳು (Major Violations): ಅಪಘಾತಗಳಿಗೆ ಕಾರಣವಾಗುವ ರೀತಿಯಲ್ಲಿ ರಸ್ತೆಯ ನಿಯಮ ಉಲ್ಲಂಘನೆ ಮಾಡುವಂತಹ ಅಪರಾಧದಿಂದ ಹಿಡಿದು ವಾಹನಗಳನ್ನು ಕದಿಯುವ ಪ್ರಕರಣಗಳು ಕೂಡಾ ಇದರಲ್ಲಿ ಒಳಗೊಂಡಿವೆ.
- ಆಸ್ತಿಯ ಕುರಿತಾದ ಉಲ್ಲಂಘನೆಗಳು (Violations Pertaining to Property): ಆಸ್ತಿಯನ್ನು ಹಾಳು ಮಾಡುವ, ಕದಿಯುವ ಪ್ರಕರಣಗಳು ಇದರಲ್ಲಿ ಅಡಕವಾಗಿವೆ.
- ಮದ್ಯ ಹಾಗೂ ಮಾದಕ ವಸ್ತು (ಡ್ರಗ್ಸ್)ಗಳ ಚಟ (Addictions): ಮದ್ಯಪಾನದ ಹವ್ಯಾಸ, ಡ್ರಗ್ಸ್ ಸೇವಿಸುವುದು, ಅವುಗಳಿಗೆ ಸಂಬಂಧಿಸಿದಂತೆ ಕಾನೂನು ಬಾಹಿರವಾದ ಚಟುವಟಿಕೆಗಳಲ್ಲಿ (ಡ್ರಗ್ಸ್ ಸಾಗಾಣಿಕೆ) ತೊಡಗುವುದು ಇತ್ಯಾದಿ ಇದರಲ್ಲಿ ಸೇರುತ್ತದೆ.
- ದೈಹಿಕ ಹಾನಿಯ ಪ್ರಸಂಗಗಳು (Instances of Bodily Harm): ಸ್ತ್ರೀಯರ ಮೇಲಿನ ಅತ್ಯಾಚಾರ ವನ್ನೊಳಗೊಂಡಂತೆ ಕೊಲೆ ಮಡುವ, ಹಿಂಸಾಚಾರ ನಡೆಸುವ ಪ್ರಕರಣಗಳು ಇಲ್ಲಿ ಸೇರಿಕೊಳ್ಳುತ್ತವೆ.

**ಬಾಲಾಪರಾಧಕ್ಕೆ ಕಾರಣಗಳು**

ಬಾಲಾಪರಾಧಕ್ಕೆ ಯಾವುದೋ ಒಂದು ಅಥವಾ ಎರಡು ಕಾರಣಗಳನ್ನು ಗುರುತಿಸಲಾಗದು. ಏಕೆಂದರೆ, ಬಾಲಾಪರಾಧ ಎನ್ನುವುದು ಪ್ರಗತಿಶೀಲ ಸಾಮಾಜಿಕ ಪ್ರಕ್ರಿಯೆಯಲ್ಲಿನ ವೈಯಕ್ತಿಕ ಹಾಗೂ ಸಾಮಾಜಿಕ ಲೋಪದೋಷಗಳ ಫಲವಾಗಿದೆ. ಬಾಲಾಪರಾಧಗಳಿಗೆ ಪ್ರಮುಖವಾಗಿ ಕೆಳಕಂಡ ಕಾರಣಗಳನ್ನು ಗುರುತಿಸಬಹುದು:

1. **ಅನುವಂಶೀಯ ಕಾರಣಗಳು:** ಕೆಲವು ಮಕ್ಕಳು ತಂದೆ–ತಾಯಿಗಳ ಮೂಲಕವೇ ನಕಾರಾತ್ಮಕ, ಅಪರಾಧ ಪ್ರೇರಕ ಗುಣಗಳನ್ನ ಹೊತ್ತು ಹುಟ್ಟುವ ಸಾಧ್ಯತೆಗಳಿವೆ. ಮಗುವಿನ ವ್ಯಕ್ತಿತ್ವ ರೂಪುಗೊಳ್ಳಲು ತಂದೆ–ತಾಯಿಗಳಿಂದ ಬಂದಿರುವ ಗುಣ ವಿಶೇಷಗಳೇ ಕಾರಣ ಎಂದು ಈ ಕುರಿತು ಸಂಶೋಧನೆ ಮಾಡಿದ ಹೆನ್ರಿ, ಮ್ಯಾಕ್ಸಲ್, ಮಡ್‌ಗೋಲ್ಡ್ ಮತ್ತು ಡೆಗ್‌ಡಾಲೆ ಮುಂತಾದವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕ್ಯಾಲಿಕ್ಯಾಕ್ ಜೂಕ್ ಮತ್ತು ಎಡ್ವರ್ಡ್ ವಂಶಗಳು ಹಲವು ತಲೆಮಾರುಗಳ ಮಕ್ಕಳ ಪ್ರವೃತ್ತಿಗಳನ್ನು ಅಧ್ಯಯನ ಮಾಡಿರುವ ತಜ್ಞರು ಬುದ್ಧಿಶಕ್ತಿ ಮತ್ತು ಅಪರಾಧಿ ಭಾವನೆಗಳು ವಂಶದಿಂದ ವಂಶಕ್ಕೆ ಹರಿದು ಬರುತ್ತವೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿರುವರು.

ಇಟಲಿಯ ಲೊಂಬ್ರೋಸೋ ಎಂಬುವನು ಹಲವಾರು ಅಪರಾಧಿಗಳ ಮತ್ತು ಅವರ ದೈಹಿಕ ಗುಣಲಕ್ಷಣಗಳನ್ನು ಕುರಿತು ಅಧ್ಯಯನ ಮಾಡಿ ಅಪರಾಧಿಗಳು ಹಲವು ಸಾಮಾನ್ಯ ದೈಹಿಕ ಗುಣಲಕ್ಷಣಗಳನ್ನು ಹೊಂದಿದ್ದು, ಅವು ಅನುವಂಶೀಯ ಫಲ ಎನ್ನುತ್ತಾನೆ. ಹಾಗೂ ಹಲವು ಮಕ್ಕಳಲ್ಲಿ ಕಠಿಣ ಹೃದಯತನ, ಕ್ರೂರತನ, ಸೌಜನ್ಯರಹಿತ ಪ್ರವೃತ್ತಿ, ಸ್ವಭಾವತಃ ಅನುವಂಶೀಯಕವಾಗಿ ಹರಿದು ಬಂದಿರುತ್ತವೆ ಎಂದಿದ್ದಾರೆ. ಆದರೆ ಈ ಅಧ್ಯಯನಗಳ ತೀರ್ಮಾನಗಳನ್ನು ಸಾಮಾನ್ಯೀಕರಣ ಮಾಡುವುದು ಕಷ್ಟ. ಏಕೆಂದರೆ ಅಪರಾಧಗಳಿಗೆ ಪರಿಸರವೂ ಕಾರಣವಾಗಿರಬಹುದು.

2. **ಪರಿಸರದ ಕಾರಣಗಳು:** ಮಗು ಪರಿಸರದ ಕೂಸು ಆಗಿರುವುದರಿಂದ ಬಾಲಾಪರಾಧಕ್ಕೆ ಪರಿಸರಾತ್ಮಕ ಅಂಶಗಳು ಪ್ರಮುಖ ಕಾರಣವಾಗಿವೆ. ಮಗು ತನ್ನ ಸುತ್ತಲಿನ ಪರಿಸರದ ಪ್ರಭಾವಕ್ಕೊಳಗಾಗುತ್ತಿರುತ್ತದೆ. ಉದಯಶಂಕರ ಎಂಬುವರು ಹೇಳುವಂತೆ ಮನುಷ್ಯನ ಸಮಾಜಬಾಹಿರ ಚಟುವಟಿಕೆಗಳು ಪರಿಸರದ ನೇರ ಪ್ರಭಾವಕ್ಕೆ ಒಳಗಾಗಿರುತ್ತವೆ. ಅಹಿತಕರ ಪರಿಸರದಿಂದ ದುರ್ವರ್ತನೆಗಳು ಮಕ್ಕಳಲ್ಲಿ ಕಂಡುಬರುತ್ತವೆ. ಸಮಾಜದಲ್ಲಿನ ಜನರ ಅಶಿಸ್ತಿನ ಜೀವನ, ಕೊಲೆ, ಸುಲಿಗೆ, ಭ್ರಷ್ಟಾಚಾರ, ಶೀಲವಿಲ್ಲದ ಶಿಕ್ಷಣ ಮುಂತಾದವು ಬಾಲಾಪರಾಧಕ್ಕೆ ಕಾರಣವಾಗಿರುತ್ತವೆ. ಪರಿಸರಕ್ಕೆ ಸಂಬಂಧಿಸಿದ ಮಾರ್ಗದರ್ಶನದ ಕೊರತೆ, ಜೊತೆಗೆ ಈ ಕೆಳಗಿನ ಅಂಶಗಳೂ ಬಾಲಾಪರಾಧಗಳಿಗೆ ಕಾರಣಗಳಾಗಬಹುದು –

1) ಒಡೆದಮನೆ, 2) ತಪ್ಪು ನಡತೆಯವರೊಡನೆ ಒಡನಾಟ, 3) ಪಾಲಕರ ಅಸಮರ್ಪಕ ನಿಯಂತ್ರಣ, 4) ಶಿಕ್ಷಕರು ನೀಡುವ ಅತಿಯಾದ ಶಿಕ್ಷೆ, 5) ಕುಟುಂಬದ ಬಡತನ, 6) ಮಲತಾಯಿಯ ಧೋರಣೆ, 7) ತಂದೆ–ತಾಯಿಗಳ ಅನೈತಿಕ ವ್ಯವಹಾರಗಳು, 8) ಮಕ್ಕಳನ್ನು ದುರುಪಯೋಗ ಪಡಿಸಿಕೊಳ್ಳುವವರ ಬಲಾತ್ಕಾರ, 9) ಅಶ್ಲೀಲ ಚಲನಚಿತ್ರಗಳು ಮತ್ತು ಸಾಹಿತ್ಯ, 10) ಸಮೂಹ ಮಾಧ್ಯಮಗಳಲ್ಲಿ ತಪ್ಪು ವರ್ತನೆಗಳಲ್ಲಿ ತೊಡಗುವ ಮಾದರಿಗಳು.

Digitised by Bharatavani, CIIL

**3. ವೈಯಕ್ತಿಕ ಕಾರಣಗಳು:** ಮಕ್ಕಳಲ್ಲಿರುವ ಬಾಲಾಪರಾಧಕ್ಕೆ ವೈಯಕ್ತಿಕ ಸಂಗತಿಗಳು ಕಾರಣವಾಗಬಹುದು. ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ನ್ಯೂನತೆ, ಕೀಳರಿಮೆ ಹಾಗೂ ಮೇಲರಿಮೆ ಭಾವನೆಗಳು, ವೈಯಕ್ತಿಕ ದ್ವೇಷ, ಅಸೂಯೆ ಹಾಗೂ ಸಂಶಯಾಸ್ಪದ ಭಾವನೆಗಳು, ಕುರೂಪ ವ್ಯಕ್ತಿತ್ವ, ದೈಹಿಕ ಅನಾರೋಗ್ಯ ಮುಂತಾದವುಗಳು ಸಹ ಬಾಲಾಪರಾಧಕ್ಕೆ ಪ್ರೇರಕಗಳಾಗಬಹುದು.

**4. ಸಾಮಾಜಿಕ ಕಾರಣಗಳು:** ಸಾಮಾಜಿಕ ಅಂಶಗಳಾದ ಕುಟುಂಬ, ಶಾಲೆ, ಸಮಾಜದ ಕೆಟ್ಟ ಪ್ರಭಾವ ಬಾಲಾಪರಾಧಕ್ಕೆ ಕಾರಣವಾಗಿವೆ. ಬಾಲಾಪರಾಧಕ್ಕೆ ಕಾರಣವಾಗುವ ಅಂಶಗಳನ್ನು ಈ ಕೆಳಗಿನಂತೆ ಗುರುತಿಸಬಹುದು –

ಕೆಲವು ಸಾಮಾಜಿಕ ಪದ್ಧತಿಗಳು, ಮೂಢನಂಬಿಕೆಗಳು, ಕಠಿಣವಾದ ಕಾನೂನಗಳು, ಜಾತಿವ್ಯವಸ್ಥೆ, ಬಡವ–ಶ್ರೀಮಂತ ಭೇದಭಾವಗಳು, ಸೌಲಭ್ಯಗಳು ಸರಿಯಾಗಿ ಹಂಚಿಕೆ ಆಗದೇ ಇರುವುದು, ಅವಿಭಕ್ತ ಕುಟುಂಬದಲ್ಲಿ ನಿಗಾವಣೆ ಕೊರತೆ, ಅತಿಯಾದ ಮುದ್ದು, ತಂದೆ–ತಾಯಿಗಳಲ್ಲಿ ಕಂಡು ಬರುವ ಮಾನಸಿಕ ದೌರ್ಬಲ್ಯ ಅಥವಾ ಮಾನಸಿಕ ಕಾಯಿಲೆಗಳು, ಹಿರಿಯರ ಅನೈತಿಕ ಸಂಬಂಧಗಳು ಹಾಗೂ ಮದ್ಯವ್ಯಸನ, ಕಾನೂನುಬಾಹಿರ ಚಟುವಟಿಕೆಗಳು ಇತ್ಯಾದಿ.

**5. ಮನೋವೈಜ್ಞಾನಿಕ ಕಾರಣಗಳು:** ಹಲವು ಮನೋವೈಜ್ಞಾನಿಕ ಅಂಶಗಳು ಬಾಲಾಪರಾಧಕ್ಕೆ ಕಾರಣವಾಗಿರುತ್ತವೆ. ಮುಖ್ಯವಾಗಿ – ಮಕ್ಕಳಲ್ಲಿ ಕಂಡುಬರುವ ಮಾನಸಿಕ ವೈಕಲ್ಯಗಳು, ಮಾನಸಿಕ ಕಾಯಿಲೆಗಳು ಹಾಗೂ ಮಾನಸಿಕ ದೌರ್ಬಲ್ಯಗಳು, ಮಾನಸಿಕ ಅಸ್ಥಿರತೆ ಹಾಗೂ ಅತೃಪ್ತಿ, ಸರಿಯಾದ ಲೈಂಗಿಕ ಜ್ಞಾನದ ಕೊರತೆ, ಮನಃಸ್ಥೈರ್ಯದ ಕೊರತೆ ಹಾಗೂ ಕೀಳರಿಮೆ ಭಾವನೆ, ಅಪರಾಧಿ ಮನೋಭಾವನೆಯ ಮನಸ್ಸು, ಸಂಶಯ ಸ್ವಭಾವ ಹಾಗೂ ವಿರೊಧ ಪ್ರವೃತ್ತಿ ಭಾವನೆಗಳು, ಅರೆ ಹುಚ್ಚುತನ, ಆಶಾಭಂಗ, ಮಾನಸಿಕ ಒತ್ತಡ.

**ಬಾಲಾಪರಾಧದಿಂದಾಗುವ ಅನನುಕೂಲಗಳು (Disadvantages of Juvenile Delinquency):** ಬಾಲಾಪರಾಧದಿಂದ ಕುಟುಂಬಕ್ಕೆ, ಸಮಾಜಕ್ಕೆ ಅನೇಕ ತೊಂದರೆಗಳಾಗುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ –

ಮಕ್ಕಳ ಸಮಾಜ ಜೀವನಕ್ಕೆ ಧಕ್ಕೆಯುಂಟಾಗುವುದು, ಅನಾರೋಗ್ಯದ ಪರಿಸರ ಸೃಷ್ಟಿಯುಂಟಾಗುವುದು, ಯುವಶಕ್ತಿಯು ಸರಿಯಾದ ಮಾರ್ಗದಲ್ಲಿ ಉಪಯೋಗವಾಗದೆ ತಪ್ಪು ದಾರಿ ಹಿಡಿಯುತ್ತದೆ, ಅಪರಾಧ ಕೃತ್ಯಗಳು ಹೆಚ್ಚಾಗಿ ರಾಷ್ಟ್ರದ ಪ್ರಗತಿಗೆ ಧಕ್ಕೆಯುಂಟಾಗುವುದು, ಸಾರ್ವಜನಿಕರಿಗೆ ಇಂಥ ಮಕ್ಕಳಿಂದ ಅನೇಕ ಸಮಸ್ಯೆಗಳುಂಟಾಗುತ್ತವೆ, ಇಂಥ ಮಕ್ಕಳು ಪ್ರಾಪ್ತ ವಯಸ್ಕರಾದಾಗ ಅವರ ವೈವಾಹಿಕ ಜೀವನಕ್ಕೆ ಧಕ್ಕೆಯುಂಟಾಗುತ್ತದೆ, ಸಮಾಜದ ನೈತಿಕತೆಯ ಮಟ್ಟ ಕುಸಿಯುತ್ತದೆ, ಸಮಾಜದಲ್ಲಿ ಕಳ್ಳತನ ಹಾಗೂ ಅನೇಕ ರೀತಿಯ ಮೋಸಕೃತ್ಯಗಳು ಹೆಚ್ಚಾಗುತ್ತವೆ.

**ಬಾಲಾಪರಾಧಗಳ ನಿವಾರಣೆಯ ಕ್ರಮಗಳು:**

ಬಾಲಾಪರಾಧಗಳನ್ನು ನಿವಾರಿಸಲು, ನಿಯಂತ್ರಿಸಲು ಮನೋವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಸಮಾಜ ಕಾರ್ಯ ತಜ್ಞರು ಮತ್ತು ಕಾನೂನು ತಜ್ಞರು ಸಂಶೋಧನೆ, ಅನುಭವಗಳ ಆಧಾರದಮೇಲೆ ಅನೇಕ ಕ್ರಮಗಳನ್ನು ವಿವರಿಸಿದ್ದಾರೆ.

ಮಕ್ಕಳು ಬಾಲಾಪರಾಧಿಗಳಾಗದಂತೆ ತಡೆಯಲು ಅವರನ್ನು ಸರಿಯಾದ ಮಾರ್ಗದರ್ಶನದಿಂದ ನೈತಿಕ ಮಾರ್ಗದಲ್ಲಿ ನಡೆಯುವಂತೆ ಬೆಳೆಸುವುದು ಅತ್ಯುತ್ತಮ ಮಾರ್ಗ. ಆದ್ದರಿಂದ ಪೋಷಕರು, ಸಮಾಜದ ಹಿರಿಯರು, ಅಧ್ಯಾಪಕರು ಮಕ್ಕಳಿಗೆ ಸರಿಯಾದ ಮರ್ಗದರ್ಶನ ನೀಡಿ, ತಪ್ಪುಗಳನ್ನು ತತ್‌ಕ್ಷಣವೇ ತಿದ್ದಿ ಸರಿಯಾದ ವರ್ತನೆಗಳನ್ನು ಬೆಳೆಸಿಕೊಳ್ಳುವಂತೆ ಮಾಡಬೇಕಾದುದು ಅತ್ಯಗತ್ಯ. ಈ ಕಾರ್ಯದಲ್ಲಿ ಸರಿಯಾದ ಶಿಕ್ಷಣ ನೀಡಬೇಕಾದುದು ಶಾಲೆಗಳ ಕರ್ತವ್ಯವಾಗಿದೆ. ಮಕ್ಕಳಿಗೆ ಸರಿಯಾದ ವರ್ತನ ಮಾದರಿಗಳನ್ನು, ಆದರ್ಶಗಳನ್ನು ಒದಗಿಸುವುದು ಮುಖ್ಯವಾಗುತ್ತದೆ.

ಪರಿಸರದ ಅನೇಕ ಅಂಶಗಳು ಮುಖ್ಯವಾಗಿ ಬಡತನ, ಮೂಢನಂಬಿಕೆಗಳು, ತಪ್ಪು ಆಚರಣೆಗಳು ಬಾಲಾಪರಾಧಕ್ಕೆ ಕಾರಣಗಳಾಗುವುದರಿಂದ ಪ್ರತಿ ಕುಟುಂಬದ, ಅಂತಿಮವಾಗಿ ಸಮಾಜದ ಸಾರ್ವತ್ರಿಕ, ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಸರ್ಕಾರಗಳು ಗಮನ ಕೊಡಬೇಕು. ಎಲ್ಲರಿಗೂ ಸರಿಯಾದ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಮಾಡುವುದು ಈ ದಿಶೆಯಲ್ಲಿ ಒಂದು ಮುಖ್ಯ ಹೆಜ್ಜೆಯಾಗುತ್ತದೆ.

ಬಾಲಾಪರಾಧಿಗಳನ್ನು ತಿದ್ದಲು ದೈಹಿಕ ದಂಡನೆ ಪ್ರಯೋಜನಕ್ಕೆ ಬರುವುದಿಲ್ಲವೆಂದು ಕಂಡುಬಂದಿದೆ. ಆದ್ದರಿಂದ ಅವರಿಗೆ ಅಪರಾಧದ, ತಪ್ಪಿನ ಪರಿಣಾಮಗಳನ್ನು ತಿಳಿಸಿ ನೈತಿಕ ವರ್ತನೆಯ ಮಹತ್ವದ ಬಗ್ಗೆ ಅರಿವು ಮೂಡಿಸಿ ಅವರನ್ನು ಸರಿಯಾದ ಮಾರ್ಗಕ್ಕೆ ತರಬೇಕಾಗುತ್ತದೆ. ಇದಕ್ಕಾಗಿ ಈ ಕೆಳಗಿನ ಕ್ರಮಗಳನ್ನು ಸೂಚಿಸಲಾಗುತ್ತದೆ:

- ಮಕ್ಕಳು ಕೆಟ್ಟ ಮಕ್ಕಳೊಂದಿಗೆ, ಅನೈತಿಕ ವ್ಯವಹಾರಗಳಲ್ಲಿ ತೊಡಗಿರುವವರೊಂದಿಗೆ ಸೇರದಂತೆ ನೋಡಿಕೊಳ್ಳುವುದು
- ಮಕ್ಕಳ ದೈಹಿಕ ಮತ್ತು ಮಾನಸಿಕ ತೊಂದರೆಗಳನ್ನು ಗುರ್ತಿಸಿ ಅವುಗಳನ್ನು ಪರಿಹರಿಸಿ, ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸ್ವಸ್ಥರಾಗಿರುವಂತೆ ಕ್ರಮ ತೆಗೆದುಕೊಳ್ಳುವುದು
- ಅಪರಾಧ ವರ್ತನೆಯ ಆರಂಭಿಕ ಹಂತದಲ್ಲಿಯೇ ಅದನ್ನು ಗುರ್ತಿಸಿ ಸಮಾಲೋಚನೆ (counselling) ಮೂಲಕ ಮಾರ್ಗದರ್ಶನ ನೀಡುವುದು
- ಅಪರಾಧ ಮಾಡಿ ಸಿಕ್ಕಿಕೊಂಡಾಗ ಅಂಥ ಮಕ್ಕಳನ್ನು ಬಾಲನ್ಯಾಯಾಲಯಕ್ಕೆ ಒಪ್ಪಿಸಿ ನಂತರ ಸುಧಾರಣಾ ಶಾಲೆಗಳಿಗೆ ಸೇರಿಸುವುದು

Digitised by Bharatavani, CIIL

- ಬಾಲಾಪರಾಧಿ ಮಕ್ಕಳ ಹಿನ್ನೆಲೆಯನ್ನು ವಿವರವಾಗಿ ಅಧ್ಯಯನ ಮಾಡಿ ಕೆಟ್ಟ ವರ್ತನೆಗೆ ಪ್ರೇರಕವಾಗಿರ ಬಹುದಾದ ಕಾರಣಗಳನ್ನು ಗುರ್ತಿಸಿ ಅವುಗಳನ್ನು ದೂರಮಾಡಲು ಪ್ರಯತ್ನಿಸುವುದು
- ಬಾಲಾಪರಾಧಿಗಳಿಗೆ ಉದ್ಯೋಗ ಒದಗಿಸಿ ಅವರನ್ನು ಪುನರ್ವಸತಿಗೊಳಿಸುವುದು
- ಬಾಲಾಪರಾಧಗಳು ಮತ್ತು ಬಾಲಾಪರಾಧಿಗಳ ಬಗ್ಗೆ ಸಾರ್ವಜನಿಕರಲ್ಲಿ ರೇಡಿಯೋ, ದೂರದರ್ಶನ, ಪತ್ರಿಕೆಗಳಂಥ ಸಮೂಹ ಮಾಧ್ಯಮಗಳ ಮೂಲಕ ಅರಿವು ಮೂಡಿಸುವುದು

ಭಾರತದಲ್ಲಿ ಬಾಲಾಪರಾಧ ಸಮಸ್ಯೆಗೆ ಪರಿಹಾರ ಕ್ರಮಗಳು (Juvenile Delinquency-Remedies)

ಬಾಲಾಪರಾಧಿಗಳ ಪುನರ್‌ವಸತೀಕರಣದ ಬಗ್ಗೆ, ಅವರನ್ನು ಸಹ ಸೂಕ್ತ ರೀತಿಯಲ್ಲಿ ತಿದ್ದಿ ರಾಷ್ಟ್ರದ ಸತ್ಪ್ರಜೆಗಳನ್ನಾಗಿ ಮಾಡುವ ಬಗ್ಗೆ ಸಾಕಷ್ಟು ಯಶಸ್ವಿ ಪ್ರಯತ್ನಗಳು ಭಾರತದಲ್ಲಿ ಸ್ವತಂತ್ರ ಪೂರ್ವದಿಂದಲೂ ನಡೆಯುತ್ತಿವೆ.

1. 1850 ರ ಉದ್ಯೋಗಾರ್ಥಿಗಳ ಕಾಯಿದೆ (Employment Act of 1850): ಇದು ಭಾರತದಲ್ಲಿ ಬಾಲಾಪರಾಧ ನಿವಾರಣೆಗೆ ಸಂಬಂಧಿಸಿದ ಪ್ರಥಮ ಕಾಯಿದೆಯಾಗಿದೆ. ಈ ಕಾಯಿದೆಯು ಮಕ್ಕಳಿಗೆ ಅದರಲ್ಲಿಯೂ ಬಡ ಹಾಗೂ ಅನಾಥ ಮಕ್ಕಳಿಗೆ ಆಶ್ರಯ ನೀಡುತ್ತದೆ. ತಪ್ಪು ಮಾಡಿದ ಮಕ್ಕಳಿಗೆ ಹೊಸ ವಾತಾವರಣದ ಮೂಲಕ ವ್ಯಾಪಾರ ಮುಂತಾದ ಕೆಸಲಗಳನ್ನು ಕಲಿಸಿ ಪ್ರಾಮಾಣಿಕ ಜೀವನ ನಡೆಸುವಂತೆ ಮಾಡುವುದು ಈ ಕಾಯಿದೆಯ ಮುಖ್ಯ ಉದ್ದೇಶವಾಗಿದೆ.

2. 1897ರ ಸುಧಾರಣಾ ಶಾಲೆಗಳ ಕಾಯಿದೆ (Reformation School Act-1987): ಈ ಕಾಯಿದೆಯು ಬಾಲಾಪರಾಧಿಗಳ ಪುನರ್ವಸತಿ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎನಿಸಿಕೊಂಡಿದೆ. ಈ ಕಾಯಿದೆಯು 15 ವರ್ಷ ವಯಸ್ಸಿನೊಳಗಿನ ಬಾಲಾಪರಾಧಿಗಳನ್ನು ತಿದ್ದಿ ಸುಧಾರಣೆ ಮಾಡುವ ಸದುದ್ದೇಶದಿಂದ ಸುಧಾರಣಾ ಶಾಲೆಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದೆ.

3. ಅಪರಾಧ ಕ್ರಿಯಾ ಸಂಹಿತೆ ಮತ್ತು ಭಾರತ ದಂಡ ಸಂಹಿತೆಗಳಲ್ಲಿರುವ ಪ್ರಾವಧಾನಗಳು (Provisions in Criminal Procedure Code and Indian Penal Code): ಅಪರಾಧ ಕ್ರಿಯಾ ಸಂಹಿತೆಯ 399ನೇ ವಿಧಿಯ ಪ್ರಕಾರ 15 ವರ್ಷಕ್ಕೂ ಕಡಿಮೆ ವಯಸ್ಸಿನ ಅಪರಾಧಿಗಳನ್ನು ರಾಜ್ಯವು ನಡೆಸುವ ಸುಧಾರಣಾ ಶಾಲೆಗಳಿಗೆ ಕಳಿಸಬಹುದು, ಆದರೆ ಸೆರೆಮನೆಗೆ ಕಳಿಸುವಂತಿಲ್ಲ. ಭಾರತ ದಂಡ ಸಂಹಿತೆಯ 82ನೇ ವಿಧಿಯ ಪ್ರಕಾರ 7 ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳನ್ನು ಅವರು ಮಾಡುವ ಅಪರಾಧ ಕೃತ್ಯಗಳಿಗೆ ಹೊಣೆಗಾರರನ್ನಾಗಿ ಮಾಡುವಂತಿಲ್ಲ.

4. ಮಕ್ಕಳ ಕಾಯಿದೆಗಳು (Children's Act): ಬಾಲಾಪರಾಧವನ್ನು ತಡೆಗಟ್ಟುವ ದೃಷ್ಟಿಯಿಂದ 1920ರಲ್ಲಿ ತಮಿಳುನಾಡು ಸರ್ಕಾರವು ಮಕ್ಕಳ ಕಾಯಿದೆಗಳನ್ನು ಜಾರಿಗೊಳಿಸುವ ದಿಟ್ಟ ಹೆಜ್ಜೆಯನ್ನಿಟ್ಟ ನಂತರ ಇತರ ರಾಜ್ಯಗಳೂ (ಬಂಗಾಳದಲ್ಲಿ 1922, ಬೊಂಬಾಯಿಯಲ್ಲಿ 1924) ಆ ಕಾಯಿದೆಗಳನ್ನು ಜಾರಿಗೆ ತಂದವು. ಈ ಕಾಯಿದೆಗಳು ಕಲ್ಪಿಸಿರುವ ಅವಕಾಶಗಳು ಈ ಕೆಳಗಿನಂತಿವೆ

- ಯಾವುದೇ ಕಾರಣಕ್ಕೂ 14 ವರ್ಷಕ್ಕಿಂತ ಚಿಕ್ಕವರನ್ನು ಸೆರೆಯಲ್ಲಿಡಕೂಡದು. ಆದರೆ 14–16 ವರ್ಷಗಳೊಳಗಿನವರನ್ನು ಮಾತ್ರ ಅವರು ತೀರಾ ಸರಿಪಡಿಸಲಾಗದವರೆಂದು ರುಜುವಾತಾದ ಮೇಲೆ ಸೆರೆಮರೆಗೆ ಕಳಿಸಬಹುದು.
- ತೀರಾ ಘೋರ ಅಪರಾಧವಲ್ಲದ ಸಾಮಾನ್ಯ ಆಪಾದನೆಯ ಮೇಲೆ 16ಕ್ಕೂ ಕಡಿಮೆ ವಯಸ್ಸಿನವರನ್ನು ಬಂಧಿಸಿದ್ದಲ್ಲಿ ಅಂತಹವರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಬಹುದೇ ವಿನಃ ಸೆರೆಮನೆಯಲ್ಲಿಡುವಂತಿಲ್ಲ.
- ಅಸಾಧಾರಣ ಸಂದರ್ಭಗಳ ಹೊರತಾಗಿ ಸಾಮಾನ್ಯ ಅಪರಾಧಗಳಿಗೆ ಸಂಬಂಧಿಸಿದಂತೆ ಯಾವ ಬಾಲಕ, ಬಾಲಕಿಗಾಗಲಿ ಕಾರಾಗೃಹದ ಅಥವಾ ಮರಣದಂಡನೆಯ ಶಿಕ್ಷೆಯನ್ನು ನೀಡುವಂತಿಲ್ಲ. 12 ವರ್ಷಕ್ಕೂ ಚಿಕ್ಕವರನ್ನು ಸರ್ಟಿಫೈಡ್ ಶಾಲೆಗೂ ಕಳುಹಿಸಬಹುದು.
- ಬಾಲಾಪರಾಧಿಗೆ ತಿಳುವಳಿಕೆ ನೀಡಿ ಆತನನ್ನು ಅವರ ಪೋಷಕರು, ನೆಂಟರು ಅಥವಾ ಇತರ ಸಂಬಂಧಿಗಳ ವಶಕ್ಕೆ ಒಪ್ಪಿಸಬಹುದು. ಅಪರಾಧಿಯನ್ನು ಇಟ್ಟುಕೊಳ್ಳುವವರು ಆತನ ಒಳ್ಳೆಯ ನಡತೆಯ ಬಗ್ಗೆ 12 ತಿಂಗಳುಗಳವರೆಗೆ ಜವಾಬ್ದಾರಿ ವಹಿಸಿಕೊಳ್ಳುತ್ತೇವೆಂದು ಬಾಂಡ್ ಬರೆದುಕೊಡಬೇಕಾಗುವುದು.

ಬಾಲಾಪರಾಧವನ್ನು ನಿಗ್ರಹಿಸಬಹುದಾದ ಕಾನೂನು ಕ್ರಮಗಳು (Preventive Legal Measures): ಮಕ್ಕಳಲ್ಲಿ ಕಾಣಬಹುದಾದ ನಿರ್ದಿಷ್ಟ ಬಗೆಯ ಸಮಾಜವಿರೋಧಿ ವರ್ತನೆಯನ್ನು ಹತ್ತಿಕ್ಕಲು ಅಥವಾ ನಿಗ್ರಹಿಸಲು ಭಾರತದಲ್ಲಿ ಕೆಲವು ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಅವುಗಳಲ್ಲಿ ಈ ಕೆಳಗಿನವುಗಳು ಉಲ್ಲೇಖನೀಯವಾಗಿವೆ–

ಅ) ಮಕ್ಕಳ ಧೂಮಪಾನ ಕಾಯಿದೆ (Juvenile Smoking Act): ಈ ಕಾಯಿದೆಯಂತೆ 16 ವರ್ಷಕ್ಕೂ ಕಡಿಮೆ ವಯಸ್ಸಿನವರು ಹೊಗೆಸೊಪ್ಪು ಮತ್ತು ಅದರಿಂದ ತಯಾರಿಸಿದ ವಸ್ತುಗಳನ್ನು ಬಳಸುವುದನ್ನು ಮಾರುವುದನ್ನು ನಿಷೇಧಿಸಲಾಗಿದೆ.

ಆ) ಅನೈತಿಕ ವ್ಯವಹಾರ ನಿಗ್ರಹ ಕಾಯಿದೆ (Suppression of Immoral Traffic Act): ಈ ಕಾಯಿದೆಯು ವೇಶ್ಯಾವಾಟಿಕೆಗೆ ಸಂಬಂಧಿಸಿರುವ ಸಾರ್ವಜನಿಕ ಸ್ಥಳಗಳಲ್ಲಿ ನಿಂತು ಅಶ್ಲೀಲವಾಗಿ ಆಕರ್ಷಿಸುವುದು, ವಸತಿ ಸ್ಥಳಗಳನ್ನು ವೇಶ್ಯಾವಾಟಿಕೆಗೆ ಬಳಸುವುದು, ಹರೆಯದ ಹೆಣ್ಣು ಮಕ್ಕಳನ್ನು ಈ ಉದ್ದೇಶಕ್ಕಾಗಿ ಅಪಹರಿಸುವುದು ಮತ್ತು ಒತ್ತಾಯಪೂರ್ವಕವಾಗಿ ವೇಶ್ಯಾಗೃಹಗಳಲ್ಲಿ ಬಂಧಿಸಿಡುವುದು ಮುಂತಾದ ಅನೈತಿಕ ಆಚರಣೆಗಳನ್ನು ನಿಶೇಧಿಸುತ್ತದೆ.

Digitised by Bharatavani, CIIL

ಇ) ಅಪರಾಧಿಗಳ ಪರೀಕ್ಷಾರ್ಥ ಬಂಧ ವಿಮೋಚನಾ ಕಾಯಿದೆ (Probation of Offenders Act): ಈ ಕಾಯಿದೆಯ ಮೇರೆಗೆ ಬಾಲ ನ್ಯಾಯಾಲಯಗಳು ಯುವ ಅಪರಾಧಿಗಳನ್ನು ಅವರ ಮೇಲ್ವಿಚಾರಕರ ಉಸ್ತುವಾರಿಗೆ ವಹಿಸಬಹುದು.

ಈ) ಕಿಶೋರರಿಗಾಗಿ ಬಾಲದೋಷಿ ಶಾಲೆಗಳ ಕಾಯಿದೆ (Borstal School Act for Adolescents): ಇಂಗ್ಲೆಂಡಿನ ಬೊರ್‌ಸ್ಟಲ್ (Borstal) ಎಂಬಲ್ಲಿ ಮೊದಲ ಬಾರಿಗೆ ಪ್ರಯೋಗ ನಡೆಸಿದ ಆಧಾರದ ಮೇಲೆ 1926ರಲ್ಲಿ ಮದ್ರಾಸಿನಲ್ಲಿ ಪ್ರಥಮವಾಗಿ ಬಾಲ ಕಾಯಿದೆಯಂತೆ 15 ರಿಂದ 21 ವರ್ಷ ವಯಸ್ಸಿನ ಯುವ ಅಪರಾಧಿಗಳನ್ನು ಅವರುಗಳ ಮೇಲೆ ಶಿಸ್ತಿನ ಹಾಗೂ ನೈತಿಕ ಪ್ರಭಾವವನ್ನು ಬೀರಲು ಸಾಧ್ಯವಾಗುವಂತೆ ಬಾಲದೋಷಿ ಶಾಲೆಗಳಲ್ಲಿ ವಿಶಿಷ್ಟ ರೀತಿಯಲ್ಲಿ ನೋಡಿಕೊಳ್ಳಲಾಗುವುದು.

1986ರ ಬಾಲ ನ್ಯಾಯ ಕಾಯಿದೆ (Juvenile Justice Act of 1986): 1986ರಲ್ಲಿ "ಬಾಲ ನ್ಯಾಯ ಕಾಯಿದೆ" ಯನ್ನು ಕೈಗೊಂಡಿದ್ದು, ಅದು ಅಕ್ಟೋಬರ್ 1987 ರಿಂದ ಅನುಷ್ಠಾನಕ್ಕೆ ಬಂದಿದೆ. ಈ ಕಾಯಿದೆಯ ಕೆಲವು ಲಕ್ಷಣಗಳು ಹೀಗಿವೆ–

- ಏಕರೂಪತೆ (Uniformity): 1986 ಕಾಯಿದೆಯು ಇಡೀ ದೇಶಕ್ಕೆ ಅನ್ವಯವಾಗುವಂತಹ ಏಕರೂಪಿಯಾದ ಬಾಲಕಾಯಿದೆಯನ್ನು ಜಾರಿಗೊಳಿಸುವುದು

- ಅಲಕ್ಷಿತ ಮಗು ಮತ್ತು ಅಪರಾಧಿ ಮಗು ಇವುಗಳ ನಡುವಿನ ವ್ಯತ್ಯಾಸ (Difference between neglected juvenile and delinquent juvenile): 1986ರ ಬಾಲ ಕಾಯಿದೆಯು ಅಲಕ್ಷಿತ ಮಗು ಮತ್ತು ಅಪರಾಧಿ ಮಗು ಇವುಗಳ ನಡುವಿನ ವ್ಯತ್ಯಾಸ ಗುರುತಿಸಿ ಅವರುಗಳನ್ನು ಬೇರೆ ಬೇರೆ ವಿಧಾನಗಳಿಂದ ಪುನರ್ವಸತೀಕರಿಸಬೇಕೆಂದು ಸೂಚಿಸಿತು.

- ಪುನರ್ವಸತೀಕರಣದ ವಿಶಿಷ್ಟ ವಿಧಾನಗಳು: ಅಲಕ್ಷಿತ ಮಕ್ಕಳನ್ನು ಯಾವುದೇ ಬಂದೀಖಾನೆಗೆ ಕಳಿಸದೆ, ಇತರ ಅಪರಾಧಿಗಳ ಜೊತೆಗೆ ಸೇರಿಸದೆ "ಮಕ್ಕಳ ಗೃಹಗಳು" ಅಥವಾ "ನಿರೀಕ್ಷಾ ಗೃಹ" (Children's homes or observation homes) ಗಳಿಗೆ ಸೇರಿಸಬೇಕೆಂದು ಕಾಯಿದೆಯು ಸೂಚಿಸುವುದು.

- ಅಪರಾಧಿ ಮಕ್ಕಳ ಪುನರ್ವಸತೀಕರಣಕ್ಕಾಗಿ ವಿಶೇಷ ಗೃಹಗಳು (Special Homes for the Rehabilitation of Juvenile Delinquents): ಬಾಲಾಪರಾಧಿ ಮಕ್ಕಳನ್ನು ಶಾಶ್ವತವಾಗಿ ನೆಲೆಗೊಳಿಸಲು ಅವರಿಗೆ ಶಿಕ್ಷಣ, ವೃತ್ತಿ ತರಬೇತಿ, ಮನೋರಂಜನೆ ಮುಂತಾದವುಗಳಿಗೆ ಅವಕಾಶವಿರುವಂತೆ ಕೆಲವು ವಿಶೇಷ ಗೃಹಗಳನ್ನು (ಉದಾ: ಸಹಾಯಕ ಗೃಹಗಳು, ಪೋಷಕ ಗೃಹಗಳು ಇತ್ಯಾದಿ) ಸ್ಥಾಪಿಸಲು ಈ ಕಾಯಿದೆಯು ಶಿಫಾರಸ್ಸು ಮಾಡುವುದು.

- ಬಾಲಾಪರಾಧಿಗಳನ್ನು ನೆಲೆಗೊಳಿಸಿ ನಿಧಿಯೊಂದನ್ನು ವ್ಯವಸ್ಥೆಗೊಳಿಸಲು ರಾಜ್ಯ ಸರ್ಕಾರಗಳಿಗೆ ಆದೇಶ: ಈ ಕಾಯಿದೆಯ ಪ್ರಕಾರ ರಾಜ್ಯ ಸರ್ಕಾರಗಳು ಅಪರಾಧಿ ಮಕ್ಕಳ ಕಲ್ಯಾಣ ಮತ್ತು ಪುನರ್ವಸತೀಕರಣದ ದೃಷ್ಟಿಯಿಂದ ವಿಶೇಷ ನಿಧಿಯೊಂದನ್ನು ಆಯೋಜಿಸಬೇಕಾಗುವುದು.

- ಸಲಹಾ ಮಂಡಳಿಗಳ ಸ್ಥಾಪನೆಗೆ ಶಿಫಾರಸ್ಸು (Recommendation to establsh Adivsory Boards): ಮಕ್ಕಳ ಪುನರ್ವಸತೀಕರಣದ ವಿಶೇಷ ಗೃಹಗಳನ್ನು ಸ್ಥಾಪಿಸಲು ಅವುಗಳ ಸಮರ್ಥ ಕಾರ್ಯನಿರ್ವಹಣೆಯನ್ನು ನೋಡಿಕೊಳ್ಳಲು ಮತ್ತು ಅವುಗಳಿಗೆ ಹಣದ ಪೂರೈಕೆ ಮಾಡಲು, ವಿಶೇಷ ಗೃಹಗಳಲ್ಲಿ ಉತ್ತಮ ಸೌಲಭ್ಯಗಳನ್ನು ಕಲ್ಪಿಸಲು ಈ ತೆರನಾದ ವಿಷಯಗಳ ಕುರಿತು ಸೂಕ್ತ ಸಲಹೆ ನೀಡಲು ಸಲಹಾ ಮಂಡಳಿಯೊಂದನ್ನು ಸ್ಥಾಪಿಸಲು 1986ರ ಬಾಲ ನ್ಯಾಯ ಕಾಯಿದೆಯು ಶಿಫಾರಸ್ಸು ಮಾಡಿತು.

ಬಾಲಾಪರಾಧಿಗಳ ಸುಧಾರಣೆಗಾಗಿ ಸಾಂಸ್ಥಿಕ ವ್ಯವಸ್ಥೆಗಳು (Institutional arrangements for the reformation of juvenile delinquents)

ಬಾಲಾಪರಾಧಿಗಳ ಸುಧಾರಣೆ ಅಥವಾ ಪುನರ್ವಸತೀಕರಣದ ದೃಷ್ಟಿಯಿಂದ ಕಾನೂನಿನ ಕ್ರಮಗಳ ಜೊತೆಗೆ ಹಲವು ಸಾಂಸ್ಥಿಕ ವ್ಯವಸ್ಥೆಗಳನ್ನು ಮಾಡಲಾಗಿದೆ. ಭಾರತದಲ್ಲಿ ಕೈಗೊಳ್ಳಲಾಗಿರುವ ಅಂತಹ ವ್ಯವಸ್ಥೆಗಳ ಸಾಮಾನ್ಯ ಪರಿಚಯವನ್ನು ಇಲ್ಲಿ ಮಾಡಲಾಗಿದೆ

- ಬಾಲ ನ್ಯಾಯಾಲಯಗಳ ಸ್ಥಾಪನೆ (Establishing Juvenile Court): ಬಾಲಾಪರಾಧಿಗಳ ವಿಚಾರಣೆಗಾಗಿ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ನ್ಯಾಯಾಲಯಗಳಿಗೆ ಬಾಲ ನ್ಯಾಯಾಲಯಗಳೆಂದು ಕರೆಯುತ್ತಾರೆ. ಬಾಲ ನ್ಯಾಯಾಲಯದಲ್ಲಿ ವಕೀಲರ ವಾದವಿಲ್ಲ. ಆರಕ್ಷಕರು ಸರಳ ಉಡುಪಿನಲ್ಲಿ ಬಾಲಾಪರಾಧಿಗಳನ್ನು ಬೇಡಿ ಹಾಕದೆ ವಾಹನದಲ್ಲಿ ಬಾಲ ನ್ಯಾಯಾಲಯಕ್ಕೆ ತರಬೇಕು. ಬಾಲ ನ್ಯಾಯಾಲಯದಲ್ಲಿ ನ್ಯಾಯಾಧೀಶರು, ಸಮಾಜ ಸೇವಕರು ಹಾಗೂ ಅಪರಾಧಿಯ ಮೇಲ್ವಿಚಾರಕರು ಇರುತ್ತಾರೆ. ಬಾಲಾಪರಾಧಿಗಳನ್ನು ಇಲ್ಲಿ ವಿಚಾರಿಸಿದ ನಂತರ ಅವರನ್ನು ಸರ್ಟಿಫೈಡ್ ಶಾಲೆಗಳಿಗೆ ಸೇರಿಸುತ್ತಾರೆ.

- ಸರ್ಟಿಫೈಡ್ ಶಾಲೆಗಳು (Certified Schools): ಸರ್ಟಿಫೈಡ್ ಶಾಲೆಗಳಲ್ಲಿ ಎರಡು ವಿಧಗಳಿವೆ. 12 ವರ್ಷದೊಳಗಿನ ಬಾಲಾಪರಾಧಿಗಳನ್ನು ಕಿರಿಯ ಸರ್ಟಿಫೈಡ್ ಶಾಲೆಗಳಿಗೆ ಸೇರಿಸಿದರೆ, 16 ವರ್ಷದೊಳಗಿನ ಮಕ್ಕಳನ್ನು ಹಿರಿಯ ಸರ್ಟಿಫೈಡ್ ಶಾಲೆಗಳಿಗೆ ಸೇರಿಸುತ್ತಾರೆ. ಈ ಶಾಲೆಗಳು ಅವರಿಗೆ ವೃತ್ತಿ ಶಿಕ್ಷಣ ನೀಡಿ ಉದ್ಯೋಗ ದೊರಕಿಸಿಕೊಡಲು ಪ್ರಯತ್ನಿಸುತ್ತವೆ. ಇವರ ಊಟ, ವಸತಿ ಮತ್ತು ಸಮವಸ್ತ್ರದ ಖರ್ಚು ವೆಚ್ಚ ಸರ್ಕಾರವೇ ನೋಡಿಕೊಳ್ಳುತ್ತದೆ.

- ಶ್ರೀನಿಕೇತನ (Shriniketan): ತಂದೆ–ತಾಯಿಗಳಿಲ್ಲದ ಅನಾಥ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳಿಗೆ ಆಶ್ರಯ ಹಾಗೂ ರಕ್ಷಣೆ

Digitised by Bharatavani, CIIL

ನೀಡಿ ಅವರಿಗೆ ಶಿಕ್ಷಣ ನೀಡುವ ಸಂಸ್ಥೆಯೇ ಶ್ರೀನಿಕೇತನವಾಗಿದೆ. ಬಾಲ ನ್ಯಾಯಾಲಯದಲ್ಲಿ ವಿಚಾರಣೆಗೊಳಗಾದ ಹೆಣ್ಣು ಮಕ್ಕಳಿಗೆ ಇಲ್ಲಿ ಜೀವನೋಪಯುಕ್ತವಾದ ವೃತ್ತಿಯಲ್ಲಿ ತರಬೇತಿ ನೀಡಿ ಪ್ರೌಢಾವಸ್ಥೆಗೆ ಬಂದ ನಂತರ ಅವರ ಇಚ್ಛಾನುಸಾರ ಮದುವೆ ಮಾಡಿಕೊಡುವರು ಇಲ್ಲವೇ ಉದ್ಯೋಗ ದೊರಕಿಸಿ ಕೊಡಲಾಗುವುದು.

- ಬಾಲದೋಷಿ ಶಾಲೆ (Baladoshi School): ಬಾಲ ನ್ಯಾಯಾಲಯಗಳಲ್ಲಿ ವಿಚಾರಣೆಗೊಳಗಾಗಿ ಬಾಲಾಪರಾಧಿಗಳೆಂದು ಸಾಬೀತಾದರೆ ಜಾಮೀನು ಕೊಡುವವರಿಲ್ಲದ ಅನಾಥ ಮಕ್ಕಳನ್ನು 118ನೇ ವಿಧಿಯಂತೆ ಬಾಲದೋಷಿ ಶಾಲೆಗಳಿಗೆ ಸೇರಿಸುತ್ತಾರೆ. ಇವರಿಗೆ ಬಾಲದೋಷಿ ಶಾಲೆಯಲ್ಲಿ 2 ರಿಂದ 5 ವರ್ಷಗಳವರೆಗೆ ಉಚಿತ ಶಿಕ್ಷಣ ಹಾಗೂ ವೃತ್ತಿ ತರಬೇತಿ ನೀಡುತ್ತಾರೆ. ಸಾಮಾನ್ಯ ಖೈದಿಗಳಿಂದ ದೂರವಿಡುವುದಕ್ಕಾಗಿ ಇವರನ್ನು 21ನೇ ವಯಸ್ಸಿನವರೆಗೂ ಬಾಲದೋಷಿ ಶಾಲೆಗಳಲ್ಲಿಯೇ ಇರಿಸಿಕೊಳ್ಳುತ್ತಾರೆ.

- ಸುಧಾರಣಾ ಶಾಲೆಗಳು (Reformatory Schools): ಸುಧಾರಣಾ ಶಾಲೆಗಳು ಸರ್ಟಿಫೈಡ್ ಶಾಲೆಗಳಂತೆಯೇ ಇದ್ದು, ಮಕ್ಕಳ ಕಾಯಿದೆಗಳು ಜಾರಿಯಲ್ಲಿಲ್ಲದ ರಾಜ್ಯಗಳಲ್ಲಿ ಸ್ಥಾಪಿತವಾಗಿದ್ದವು. ಆದರೆ 1986ರ ಏಕರೂಪಿಯಾದ ಬಾಲ ನ್ಯಾಯಾಲಯ ಕಾಯಿದೆ ಜಾರಿಗೆ ಬಂದ ಮೇಲೆ ಈ ಶಾಲೆಗಳು ಸರ್ಟಿಫೈಡ್ ಶಾಲೆಗಳಿಗೆ ಒಂದು ಪರ್ಯಾಯ ಹೆಸರಿನಂತಿದ್ದು, ಬಾಲ ದೋಷಿಗಳೆಂದು ಸಾಬೀತಾದ ಮಕ್ಕಳಿಗೆ ಶಿಕ್ಷಣ ಹಾಗೂ ವೃತ್ತಿ ತರಬೇತಿ ನೀಡುತ್ತವೆ.

- ಸಹಾಯಕ ಗೃಹಗಳು (Auxiliary Homes): ಇಲ್ಲಿ ಅಪರಾಧ ಸಾಬೀತಾದಮೇಲೆ ಬಾಲಾಪರಾಧಿಗಳನ್ನು ಕೆಲವು ಸಮಯದವರೆಗೆ ಪ್ರತಿಷ್ಠಿತ ಸಾಮಾಜಿಕ ಸೇವಾಕರ್ತರ ಮೇಲ್ವಿಚಾರಣೆಯಲ್ಲಿ ಇಡಲಾಗುವುದು. ನಂತರ ಅವರವರ ಶಕ್ತಿ ಸಾಮರ್ಥ್ಯ, ಸ್ವಭಾವ ಮತ್ತು ಅಭಿರುಚಿಯ ಮೇರೆಗೆ ರಾಜ್ಯ ಸರ್ಕಾರ ಮತ್ತು ಖಾಸಗೀ ಸಂಸ್ಥೆಗಳು ಈ ಗೃಹಗಳನ್ನು ನಡೆಸುತ್ತಿವೆ.

- ಪೋಷಕ ಗೃಹಗಳು (Foster Homes): ಇವುಗಳನ್ನು 10 ವರ್ಷಕ್ಕೂ ಕಡಿಮೆ ವಯಸ್ಸಿನ ಬಾಲಾಪರಾಧಿಗಳಿಗಾಗಿ ವಿಶೇಷವಾಗಿ ಸ್ಥಾಪಿಸಲಾಗಿದೆ. ಇಂತಹ ಮಕ್ಕಳನ್ನು ಇತರ ಸರ್ಟಿಫೈಡ್ ಶಾಲೆಗಳಿಗೆ ಕಳಿಸಲು ಸಾಧ್ಯವಿಲ್ಲ. ಇವುಗಳನ್ನು ಸೇವಾ ಸಂಘಗಳು ಸಹಾಯಧನ ಪಡೆದುಕೊಂಡು ನಡೆಸುತ್ತ ಬಂದಿವೆ.

- ಪರೀಕ್ಷಾರ್ಥ ಗೃಹಗಳು (Probation Homes/Hostels): ಅಪರಾಧಿಗಳ ಪರೀಕ್ಷಾ ಕಾಯಿದೆಯ (The Probation of Offenders Act) ಪ್ರಕಾರ ಅಪರಾಧಿಗಳನ್ನು ಪರೀಕ್ಷಕ ಅಧಿಕಾರಿಗಳ (Probation Officer) ಮೇಲುಸ್ತುವಾರಿಯಲ್ಲಿ ಪರೀಕ್ಷಕ ಗೃಹಗಳಿಗೆ ಸೇರಿಸಿ ಅವರನ್ನು ಸುಧಾರಣೆ ಮಾಡಿ ಕಳುಹಿಸುವ ಕ್ರಮವಿದೆ. ಇಲ್ಲಿನ ನಿವಾಸಿಗಳಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ನೀಡಲಾಗುತ್ತಿದ್ದು, ಮಾರುಕಟ್ಟೆಗೆ ಹೋಗಲು ಮತ್ತು ತಮಗೆ ಇಷ್ಟವಾದ ಉದ್ಯೋಗವನ್ನು ಆಯ್ದುಕೊಳ್ಳಲು ಅವಕಾಶವನ್ನು ಕೂಡ ಕಲ್ಪಿಸಲಾಗುವುದು.

- ಅರ್ಹ ವ್ಯಕ್ತಿಗಳ ಸಂಸ್ಥೆಗಳು ಮತ್ತು ನಿರ್ಲಕ್ಷಿತ ಮಕ್ಕಳ ಸಂಸ್ಥೆಗಳು (Fit Persons Institutions and Uncared Children's Institutions): ಈ ಎರಡು ಸಂಸ್ಥೆಗಳು ಖಾಸಗಿಯಾಗಿ ಬಾಲ ನ್ಯಾಯಾಲಯಗಳು. ಇವು ತಮ್ಮದೇ ಆದ ಪ್ರತ್ಯೇಕ ಕಟ್ಟಡ, ನ್ಯಾಯ ವೇದಿಕೆ, ವಿಚಾರಣಾ ಕ್ರಮ ಮುಂತಾದ ವ್ಯವಸ್ಥೆಗಳನ್ನು ಹೊಂದಿವೆ.

ಬಾಲಾಪರಾಧವನ್ನು ನಿಯಂತ್ರಿಸುವಲ್ಲಿ ಕುಟುಂಬ, ಶಾಲೆ ಮತ್ತು ಶಿಕ್ಷಕರ ಪಾತ್ರ (Role of Family, School and Teacher to control Juvenile Delinquency)

ಕುಟುಂಬದ ಪಾತ್ರ: ಬಾಲಾಪರಾಧವನ್ನು ನಿಯಂತ್ರಿಸುವಲ್ಲಿ ಕುಟುಂಬದ ಪಾತ್ರ ಬಹಳ ಪ್ರಮುಖವಾದುದು. ಮಗು ಪ್ರಾರಂಭದಲ್ಲಿ ಕುಟುಂಬದ ಜೊತೆಯಲ್ಲಿಯೆ ಬೆಳೆಯುವುದರಿಂದ ಕುಟುಂಬದ ವಾತಾವರಣವನ್ನು ಮಗುವಿಗೆ ಪೂರಕವಾಗುವಂತೆ ನಿರ್ಮಿಸುವುದು ಪಾಲಕರ ಕರ್ತವ್ಯವಾಗಿದೆ. ಪಾಲಕರು ಮಗುವಿನ ಮನಸ್ಥಿತಿಯನ್ನು ಅರಿತು ಕೆಟ್ಟ ಸಂಘಗಳಿಂದ ಮಗುವನ್ನು ದೂರವಿರಿಸಿ ಉತ್ತಮ ಹವ್ಯಾಸಗಳನ್ನು ಬೆಳೆಸುವ ಮೂಲಕ ಸತ್‌ಪ್ರಜೆಯನ್ನಾಗಿ ರೂಪಿಸಲು ಶ್ರಮಿಸಬೇಕು. ಮಗುವಿಗೆ ಕುಟುಂಬದಲ್ಲಿ ಪ್ರೀತಿ ವಿಶ್ವಾಸ ಸಿಗುವಂತೆ ಮಾಡುವುದಲ್ಲದೇ, ಮಗುವಿನ ಒಳ್ಳೆಯ ಕೆಲಸಗಳಿಗೆ ಪ್ರೋತ್ಸಾಹಿಸುವ ಮೂಲಕ ಅಭಿಪ್ರೇರಿಸಬೇಕು. ಸಮಾಜದ ಕೆಟ್ಟ ಘಟನೆಗಳನ್ನು ಮಗುವಿನಿಂದ ದೂವಿರುವಂತೆ ನೋಡಿಕೊಳ್ಳಬೇಕು.

ಶಾಲೆಯ ಪಾತ್ರ: ಕೌಟುಂಬಿಕ ಪರಿಸರದ ನಂತರ ಮಗು ಶಾಲಾ ಪರಿಸರವನ್ನು ಪ್ರವೇಶಿಸುತ್ತದೆ. ಶಾಲಾ ಪರಿಸರವು ಮಕ್ಕಳನ್ನು ಆಕರ್ಷಿಸುವಂತಿರಬೇಕು. ಮಕ್ಕಳ ಆಸಕ್ತಿಗನುಗುಣವಾಗಿ ಪರಿಣಾಮಕಾರಿ ಪಾಠಬೋಧನೆ ಹಾಗೂ ಪಠ್ಯೇತರ ಚಟುವಟಿಕೆಗಳಿರಬೇಕು. ತರಗತಿಯ ಭೌತಿಕ ವಾತಾವರಣವು ಮಗುವಿನ ಮೂಲಭೂತ ಸೌಕರ್ಯಗಳನ್ನು ನೀಗಿಸುವಂತಿರಬೇಕು. ಶಾಲೆಯ ವಾತಾವರಣವು ಮಗುವಿನ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರವುದರಿಂದ ಅವನ ಭಾವನೆಗಳ ಬಗ್ಗೆ ಕಾಳಜಿ ವಹಿಸಿ, ಅವನನ್ನು ಪ್ರೋತ್ಸಾಹಿಸಬೇಕಲ್ಲದೆ ಸಂಘ ಜೀವನ ಮತ್ತು ಸಹ ಜೀವನ ಮಹತ್ವಗಳನ್ನು ಬೆಳೆಸಿ ಅಪರಾಧದ ದುಷ್ಪರಿಣಾಮಗಳನ್ನು ತಿಳಿಸಿ ಮಗುವನ್ನು ಎಚ್ಚರಿಸಿ ಬಾಲಾಪರಾಧವನ್ನು ನಿಯಂತ್ರಿಸಬಹುದಾಗಿದೆ.

ಶಿಕ್ಷಕರ ಪಾತ್ರ: ಶಾಲೆಯಲ್ಲಿ ಶಿಕ್ಷಕರ ಬಗ್ಗೆ ಮಕ್ಕಳಿಗೆ ಪೂಜ್ಯಭಾವನೆ ಇರುವುದರಿಂದ ಶಿಕ್ಷಕರು ಮಕ್ಕಳಿಗೆ ಆದರ್ಶಪ್ರಾಯರಾಗಿ ಪ್ರಾಮಾಣಿಕರಾಗಿರಬೇಕು. ಮತ್ತು ಮಕ್ಕಳ ಭಾವನೆಗಳಿಗೆ ಸ್ಪಂದಿಸಿ

Digitised by Bharatavani, CIIL

ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸುವಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿಗಳನ್ನು, ಕೌಶಲ್ಯಯುತ ಶಿಕ್ಷಣವನ್ನು ನೀಡಬೇಕು. ಸಮಾಜದಲ್ಲಿ ಮಗುವಿನ ಜವಾಬ್ದಾರಿಯನ್ನು ತಿಳಿಸಬೇಕು.

ಬಾಲಾಪರಾಧದಂತಹ ಗಂಭೀರ ಸಾಮಾಜಿಕ ಸಮಸ್ಯೆಯನ್ನು ಕೇವಲ ಶಾಸನದ ಬಲ ಮತ್ತು ಸರ್ಕಾರಿ ಕಾರ್ಯಕ್ರಮಗಳಿಂದ ಎದುರಿಸಲು ಸಾಧ್ಯವಿಲ್ಲ. ಬಾಲಾಪರಾಧವನ್ನು ತಡೆಗಟ್ಟುವ ದೃಷ್ಟಿಯಿಂದ ಕೈಗೊಂಡ ಹಲವಾರು ಮಕ್ಕಳ ಕಾಯಿದೆಗಳು ಅನುಷ್ಠಾನದಲ್ಲಿಲ್ಲದೆ ನಿರರ್ಥಕವೆನಿಸಿವೆ. ಈ ಕಾನೂನುಗಳಲ್ಲಿಯೂ ಹಲವಾರು ದೋಷಗಳಿವೆ. ಕೆಲವು ರಾಜ್ಯಗಳಲ್ಲಿ ಅತಂಹ ಕಾನೂನುಗಳೂ ಅಸ್ತಿತ್ವದಲ್ಲಿಲ್ಲ. ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಸರ್ಕಾರಿ ಯಂತ್ರವೂ ಅಸಮರ್ಥವಾಗಿದೆ. ಖಾಸಗಿ ಸಂಘಸಂಸ್ಥೆಗಳು ನಿಸ್ವಾರ್ಥ ಸೇವಾಭಾವದಿಂದ ಸರ್ಕಾರಿ ಯಂತ್ರದೊಂದಿಗೆ ಜೊತೆಗೂಡಿ ಈ ನಿಟ್ಟಿನಲ್ಲಿ ದುಡಿಯುವುದು ಅವಶ್ಯಕವಾಗಿದೆ. ಬಾಲಾಪರಾಧಿಗಳ ಬಗ್ಗೆ ಈಗಾಗಲೇ ಮೂಡಿರುವ ದೃಷ್ಟಕೋನದಲ್ಲಿಯೂ ಸಾಕಷ್ಟು ಬದಲಾವಣೆ ಆಗಬೇಕಾಗಿದೆ. ಬಾಲಾಪರಾಧಿಗಳನ್ನು ಶಿಕ್ಷಿಸುವ ರೀತಿ ನೀತಿಗಳ ಬಗ್ಗೆ ಆಲೋಚಿಸುವುದಕ್ಕಿಂತ ಸ್ವಸ್ಥ ಜೀವನವನ್ನು ನಡೆಸಲು ಅವರಿಗೆ ಅನುಕೂಲಕರ ಸಾಮಾಜಿಕ ಪರಿಸರವನ್ನು ನಿರ್ಮಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಆಗ ಮಾತ್ರ ಬಾಲಾಪರಾಧಿಗಳ ನಿರ್ವಹಣೆ ಯಶಸ್ವಿಯಾಗಬಹುದು ಮತ್ತು ಅವರು ಉತ್ತಮ ಸಮಾಜ ಜೀವಿಗಳಾಗಿ ಬಾಳಬಹುದಾಗಿದೆ.

– ಡಾ. ಶಿವಕುಮಾರ್ ಕಬ್ಬೂರ್ ಮತ್ತು ಶಿವರಾಜ್ ಕೆ.ಸಿ

## ಬೀದಿ ಮಕ್ಕಳ ಶಿಕ್ಷಣ

ಸಂದರ್ಭ: ಪ್ರಪಂಚದಲ್ಲಿ ಬೀದಿಮಕ್ಕಳ ಸಂಖ್ಯೆ ಅತ್ಯಧಿಕವಾಗಿರುವುದು ಭಾರತದಲ್ಲಿ. ಭಾರತದಲ್ಲಿ ಇಂತಹ ಮಕ್ಕಳ ನಿಖರವಾದ ಸಂಖ್ಯೆಯನ್ನು ತಿಳಿಸಬಲ್ಲ ಪ್ರಚಲಿತ ಅಂಕೆ ಸಂಖ್ಯೆಗಳು ಲಭ್ಯವಿಲ್ಲ. 1991ರ ಜನಗಣತಿಯಲ್ಲಿ ಭಾರತದ ನಗರಪ್ರದೇಶಗಳಲ್ಲಿ ರಸ್ತೆಯಲ್ಲಿ ಬದುಕುವ ಅಥವಾ ಕೆಲಸಮಾಡುವ ಇಂತಹ ಮಕ್ಕಳ ಸಂಖ್ಯೆ ಸುಮಾರು 18 ದಶಲಕ್ಷ ಎಂಬುದಾಗಿ ತಿಳಿಯುತ್ತದೆ. ಪ್ರತಿ ವರ್ಷ ರಾಷ್ಟ್ರದ ಬಾಲಕರ ಸಂಖ್ಯೆಗೆ ಸುಮಾರು 13 ದಶಲಕ್ಷ ಸಂಖ್ಯೆ ಸೇರ್ಪಡೆಯಾಗುತ್ತಿದೆ. ಒಂದು ಮಿತವಾದ ಅಂದಾಜು ಮಾಡಿದರೂ ಇವರಲ್ಲಿ ಅರ್ಧದಷ್ಟು ಮಕ್ಕಳು ದುರ್ದೆಶೆಗೆ ಒಳಗಾದ ಮಕ್ಕಳ ಗುಂಪಿಗಾಗಲೀ ಅಥವಾ ಕಷ್ಟಕರವಾದ ಸನ್ನಿವೇಶದಲ್ಲಿರುವ ಮಕ್ಕಳ ಗುಂಪಿಗಾಗಲಿ ಸೇರಿದವರಾಗಿರುತ್ತಾರೆ. ಈ ಮಕ್ಕಳು ಒಂದಲ್ಲಾ ಒಂದು ಕೆಲಸದಲ್ಲಿ ತೊಡಗಿಕೊಂಡವರಾಗಿರುತ್ತಾರೆ. ಅವರು ಕೂಲಿಕೆಲಸದಲ್ಲಿ ಅಥವಾ ಸ್ವ ಉದ್ಯೋಗದಲ್ಲಿ ಅಥವಾ ಕುಟುಂಬದ ಉದ್ಯೋಗ ಭಾಗವಾಗಿ ಇರುತ್ತಾರೆ. ಹೀಗೆ ಇವರು ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಇವರ ಕೆಲಸದ ವರಮಾನವು ತುಂಬಾ ಕಡಿಮೆಯಾಗಿರುತ್ತದೆ. ಇವರು ಕೆಲಸ ಮಾಡುವ ಅವಧಿಗೆ ಇದು ಹೊಂದಿಕೊಂಡಿರುವುದಿಲ್ಲ. ಚೌಧರಿಯವರು (1996) ಕೈಗೊಂಡ 120 ಅಧ್ಯಯನದ ಪ್ರಕಾರ 74.6 ದಶಲಕ್ಷ ಮಕ್ಕಳು "ಎಲ್ಲಿಯೂ ಇಲ್ಲದ" ಮಕ್ಕಳ ಗುಂಪಿಗೆ ಸೇರಿರುತ್ತಾರೆ. ಈ ಮಕ್ಕಳು ಸಾಮಾನ್ಯವಾಗಿ ಜನಗಣತಿ ಅಂಕಿಸಂಖ್ಯೆಗಳಲ್ಲಿ ಸೇರದೆ ಇದ್ದು, ನಗರ ಪ್ರದೇಶಗಳಲ್ಲಿ ಅನಧಿಕೃತವಾಗಿ ವಾಸಿಸುವ ಕುಟುಂಬಗಳಿಗೆ ಸೇರಿದವರಾಗಿರುತ್ತಾರೆ.

ಭಾರತವು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಒಡಂಬಡಿಕೆಯನ್ನು ಒಪ್ಪಿಕೊಂಡಿದ್ದು ತನ್ನ ರಾಜ್ಯಾಂಗದ 24, 39(e) & (ಜಿ), 45 ಮುಂತಾದ ವಿಧಿಗಳ ಅನ್ವಯ ಮಕ್ಕಳ ಪಾಲನೆ, ನೆರವು ಹಾಗೂ ಅಭಿವೃದ್ಧಿಗಳನ್ನು ಬೆಂಬಲಿಸಿದೆ. ಸಮಾಜದ ಅಮುಖ್ಯವಾಗಿರುವ ಗುಂಪಿಗೆ ಸೇರಿರುವ ಮಕ್ಕಳಿಗೋಸ್ಕರ ಕಾನೂನುಗಳನ್ನು ಕಟ್ಟಳೆ ಮಾಡಿದೆ. ಇವುಗಳಲ್ಲಿ ಈ ಕಾನೂನುಗಳೂ ಸೇರಿವೆ: ಬಾಲಕಾರ್ಮಿಕ (ರಕ್ಷಣೆ ಮತ್ತು ನಿಯಂತ್ರಣ) ಕಾಯ್ದೆ, 1986, ಮತ್ತು ಕೌಮಾರ್ಯದ ನ್ಯಾಯ ಕಾಯ್ದೆ 1986. ಇತ್ತೀಚೆಗೆ ಕೌಮಾರ್ಯದ ನ್ಯಾಯ ಕಾಯ್ದೆಯನ್ನು ಪರಿಷ್ಕರಿಸಿ ನಿರ್ಲಕ್ಷಿಸಲ್ಪಟ್ಟ ಮತ್ತು ಬಾಲಾಪರಾಧಿಗಳಾದ ಮಕ್ಕಳ ಪಾಲನೆ ಮತ್ತು ರಕ್ಷಣೆಗೆ ಉತ್ತಮ ನಿಯಮಗಳನ್ನು ರೂಪಿಸಲು ಸಾಧ್ಯವಾಗುವಂತೆ ಮಾಡಿದೆ. ಈ ಮಕ್ಕಳಲ್ಲಿ ಅತಿ ಹೆಚ್ಚಿನ ಸಂಖ್ಯೆಯವರು ಬೀದಿಮಕ್ಕಳು. ಕಾನೂನನ್ನು ಜಾರಿಗೊಳಿಸುವಲ್ಲಿ ಅಪೇಕ್ಷಿಸುವಷ್ಟು ಕಾರ್ಯ ಆಗಿಲ್ಲ. ಬೀದಿಮಕ್ಕಳು ತಮ್ಮ ಮೂಲಭೂತ ಹಕ್ಕುಗಳಿಂದ ವಂಚಿತರಾಗಿರುವುದು ಮುಂದುವರೆದೇ ಇದೆ. ಶಾಲೆಗೆ ಹೋಗದಿರುವ ಮತ್ತು/ಅಥವಾ ಬಾಲಕಾರ್ಮಿಕರನ್ನು ಒಳಗೊಂಡು ವಿವಿಧ ವರ್ಗಗಳಿಗೆ ಸೇರಿದ ನಿರ್ಲಕ್ಷಿತ ಮಕ್ಕಳ ಸಂಖ್ಯೆ ನಮ್ಮ ದೇಶದಲ್ಲಿ 80 ರಿಂದ 100 ದಶಲಕ್ಷ ಇರಬಹುದು ಎಂದು ಹೇಳಲಾಗುತ್ತಿದೆ. ಇವರಲ್ಲಿ ಅತಿ ತೀವ್ರವಾದ, ಆದಾಗ್ಯೂ ಗಮನಕ್ಕೆ ಬಾರದ ತೊಂದರೆಗಳನ್ನು ಅನುಭವಿಸುತ್ತಿರುವವರು ಬೀದಿಮಕ್ಕಳು.

ಬೀದಿ ಮಕ್ಕಳ ಬಗ್ಗೆ ಯಾವುದೇ ಚರ್ಚೆಯನ್ನು ಪಾರಂಭಿಸುವಾಗ ಅವು ಈ ಕೆಲವು ಮೂಲಭೂತ ಪ್ರಶ್ನೆಗಳನ್ನು ಒಳಗೊಳ್ಳುತ್ತವೆ: ಈ ಮಕ್ಕಳು ಯಾರು? ಅವರು ಹೇಗೆ ಜೀವಿಸುತ್ತಾರೆ? ಏನನ್ನು ತಿನ್ನುತ್ತಾರೆ? ಅವರು ತಮ್ಮ ಸಮಯವನ್ನು ಹೇಗೆ ಕಳೆಯುತ್ತಾರೆ? ತಮ್ಮ ಬದುಕಿಗೋಸ್ಕರ ಎಷ್ಟು ಸಮಯ ಕೆಲಸ ಮಾಡುತ್ತಾರೆ? ಅವರು ತಮ್ಮ ರಾತ್ರಿಗಳನ್ನುಎಲ್ಲಿ ಕಳೆಯುತ್ತಾರೆ? ಇತ್ಯಾದಿ ಇತ್ಯಾದಿ. ಮತ್ತೊಂದು ಪ್ರಮುಖ ಪ್ರಶ್ನೆ ಅವರಿಗೆ ಕುಟುಂಬರೂಪದ ಯಾವುದಾದರೂ ಸಾಮಾಜಿಕ ಬಂಧವಿದೆಯೇ? ಇಂತಹ ವಿಚಾರಗಳನ್ನು ಹಾಗೂ ಅವರ ಶಿಕ್ಷಣಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ವಿಶ್ಲೇಷಿಸಲು ಮತ್ತು ಅರ್ಥ ಮಾಡಿಕೊಳ್ಳಲು ಈ ಮಕ್ಕಳ ಸಮಗ್ರ ಸ್ವರೂಪ ನಿರೂಪಿಸಬೇಕು ಮತ್ತು ಅವರ ಮೂಲಭೂತ ಲಕ್ಷಣಗಳನ್ನು ಹಾಗೂ ಅವರ ವಿಶಿಷ್ಟ ಗುಣಗಳನ್ನು ಅರಿತುಕೊಳ್ಳುವುದು ಅತಿ ಮುಖ್ಯವಾದುದು.

Digitised by Bharatavani, CIIL

ಗ್ರಾಮ ಮತ್ತು ನಗರಗಳಲ್ಲಿ ದುರ್ದೆಸೆಯಲ್ಲಿರುವ ಕುಟುಂಬಗಳು ಬಡತನದ ಹೊಡೆತಗಳನ್ನು ಏಕರೂಪದಲ್ಲಿ ಸಹಿಸಬೇಕು. ಬಹುತೇಕ ನಗರಗಳಲ್ಲಿ ಒಂದೇ ಸಮನಾಗಿ ಹೆಚ್ಚುತ್ತಿರುವ ದಾರಿದ್ರ್ಯ, ಗ್ರಾಮದಿಂದ ನಗರಕ್ಕೆ ವಲಸೆ ಹೋಗುತ್ತಿರುವಿಕೆ ಇವು ಬೀದಿಮಕ್ಕಳ ಸಂಖ್ಯೆಯನ್ನು ಅಧಿಕಗೊಳಿಸುತ್ತಿವೆ. ಇದರ ಸ್ಪಷ್ಟ ಸ್ಥಿತಿಯು ನೀತಿನಿಯಮಗಳಿಲ್ಲದಿರುವಿಕೆ, ಚೂರುಚೂರಾಗುವಿಕೆ ಹಾಗೂ ಸ್ವಚ್ಚಂದ ನಡವಳಿಕೆಗಳಲ್ಲಿ ಪರ್ಯವಸಾನಗೊಳ್ಳುತ್ತದೆ. ಈ ಕಾರಣಗಳಿಂದ ಇಂತಹ ಬಹುತೇಕ ಕುಟುಂಬಗಳು ತಮ್ಮ ಮಕ್ಕಳೊಂದಿಗೆ ಬಹುಮಿತವಾದ ಸಂಬಂಧ ಹೊಂದಿರುತ್ತವೆ. ಈ ಮಕ್ಕಳು ಬೀದಿಗಳಲ್ಲಿ ಬೆಳೆಯುತ್ತಾರೆ ಮತ್ತು ಬೀದಿ ಸಂಸ್ಕೃತಿಯನ್ನು ಇತರ ಎಲ್ಲಕ್ಕಿಂತ ಮಿಗಿಲೆಂದು ಭಾವಿಸುತ್ತಾರೆ. ಅವರ ಜೀವನವು ಬೀದಿಯಲ್ಲಿಯೇ ಪ್ರಾರಂಭವಾಗಿ ಅಲ್ಲಿಯೇ ಕೊನೆಗೊಳ್ಳುತ್ತದೆ.

ಬೀದಿ ಮಗುವಿನ ಕಲ್ಪನೆಯನ್ನು ರೂಪಿಸಿಕೊಳ್ಳುವುದು ಅಥವಾ ಅದನ್ನು ಒಂದು ನಿರ್ದಿಷ್ಟ ಪರಿಧಿಯಲ್ಲಿ ಕೂಡಿ ಇಡುವುದು ಬಲು ಕಷ್ಟ. ಇಂತಹ ಮಕ್ಕಳು ಪ್ರಪಂಚದ ವಿವಿಧ ಭಾಗಗಳಲ್ಲಿ ಹಲವಾರು ವಿಭಿನ್ನ ಹೆಸರುಗಳನ್ನು ಹೊಂದಿರುತ್ತಾರೆ. ಭಾರತದಲ್ಲಿ ಇವರಿಗೆ ಬಗೆಬಗೆಯ ಹೆಸರುಗಳಿವೆ (ಮೊಹಿಸಿನ್ 1994): ಇವರು ಅತ್ಯಂತ ಕಷ್ಟಕರ ಸನ್ನಿವೇಶಗಳಲ್ಲಿ ಇರುವವರು, ದುರ್ದೆಸೆಯಲ್ಲಿರುವ ಮಕ್ಕಳು, ಕನಿಷ್ಠ ಸೌಲಭ್ಯಗಳು ಅಗತ್ಯವಿರುವ ಮಕ್ಕಳು, ಅನನುಕೂಲವಿರುವ ಮಕ್ಕಳು, ಸೌಲಭ್ಯ ವಂಚಿತ ಮಕ್ಕಳು, ಅವ್ಯವಸ್ಥಿತ ಸನ್ನಿವೇಶಗಳಲ್ಲಿನ ನಿರ್ಲಕ್ಷಿತ ಮಕ್ಕಳು, ಬಾಲಾಪರಾಧಿಗಳು, ಸ್ಪ್ರಿಂಗ್‌ಬೀಗದ ಬೀಗದ ಕೈ (Latchkey) ಮಗು, (ರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ನೋಯಿಡಾ) ಬಾಲಕಾರ್ಮಿಕರು, ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟು ಹೋದ ಮಕ್ಕಳು, ಹೀಗೆ ನಾನಾ ಬಗೆಗಳು.

ಯೂನಿಸೆಫ್ (1998) ಪ್ರಕಾರ ಬೀದಿಮಕ್ಕಳ ಲಕ್ಷಣ ನಿರೂಪಣೆ ಹೀಗಿದೆ: ಅವರು ಅನೇಕ ಅಪಾಯಗಳಿಗೂ, ದುರುಪಯೋಗಗಳಿಗೂ ಈ ಕಾರಣಗಳಿಂದ ಒಳಪಡುತ್ತಾರೆ: ಹೆಚ್ಚಿನ ಮಕ್ಕಳು ತಮ್ಮ ಅಥವಾ ತಮ್ಮ ಕುಟುಂಬದ ಜೀವನ ನಿರ್ವಹಣೆಗಾಗಿ ಬೀದಿಗಳಲ್ಲಿಯೇ ಇರುತ್ತಾರೆ, ಅವರ ಆದಾಯವು ಎಷ್ಟೇ ಕಡಿಮೆಯಾದರೂ, ಬೀದಿಯೇ ಅವರ ಕೆಲಸದ ಸ್ಥಳ. ಅವರು ದಿನದ ಹೆಚ್ಚಿನ ಸಮಯವನ್ನು ರಸ್ತೆಯಲ್ಲಿಯೇ ಕಳೆದರೂ ಅವರ ಕಾರ್ಯಕ್ಕೆ ದೊರಕುವುದು ಅತಿ ಅಲ್ಪ ವರಮಾನ. ಅವರಲ್ಲಿ ಹೆಚ್ಚಿನವರು ಅಸಂಘಟಿತ, ಅನೌಪಚಾರಿಕ ವಿಭಾಗಗಳಲ್ಲಿ ಚಿಕ್ಕಮಟ್ಟ ಮಾರಾಟಗಾರರಾಗಿ, ಬೂಟು ಪಾಲಿಷ್ ಹುಡುಗರಾಗಿ, ಕಳಪೆಚೂರುಪಾರು, ಚಿಂದಿ ಮತ್ತು ಕಚ್ಚಾವಸ್ತುಗಳನ್ನು ಆಯುವವರಾಗಿ, ಕಳ್ಳಕಾಕರಾಗಿ ಅಥವಾ ರಸ್ತೆ ಬದಿಯ ಲೈಂಗಿಕ ಕೆಲಸಗಾರರಾಗಿ ಕೆಲಸ ಮಾಡುತ್ತಾರೆ. ತಮ್ಮ ಜೀವನ ಹಾಗೂ ಕಾರ್ಯದ ಸ್ವಭಾವದಿಂದಾಗಿ ಅವರು ಸಾಮಾನ್ಯವಾಗಿ ತಾವೇ ತಾವಾಗಿರುತ್ತಾರೆ. ಬಹುತೇಕ ಅವರು ವಯಸ್ಕರ ರಕ್ಷಣೆಯಿಂದ ಹೊರತಾಗಿರುತ್ತಾರೆ.

ಆಗ್ನಲ್ಲಿ (1986) ಪ್ರಕಾರ ಬೀದಿಮಗು ಅಥವಾ ಬೀದಿಯುವಕ ಒಬ್ಬ ಅಪ್ರಾಪ್ತ ವಯಸ್ಕ. ಅವನಿಗೆ ಬೀದಿ ಅಂದರೆ ವಿಶಾಲಾರ್ಥದಲ್ಲಿ ಯಾರೂ ವಾಸಿಸದೆ ಇರುವ ಕಟ್ಟಡಗಳು, ಪಾಳುಬಿದ್ದ ಪ್ರದೇಶಗಳು, ಇತ್ಯಾದಿಗಳು ಅವನ ರೂಢಿಯ ವಾಸಸ್ಥಾನಗಳು ಮತ್ತು ಅವನಿಗೆ ಸಾಕಷ್ಟು ರಕ್ಷಣೆಯೂ ಇರುವುದಿಲ್ಲ. UNICEF ಗಮನಿಸಿರುವಂತೆ ಇಂತಹ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ಸುಮಾರು ಶೇಕಡ 75 ಭಾಗ ತಮ್ಮ ಕುಟುಂಬದೊಂದಿಗೆ ಸಂಪರ್ಕ ಇಟ್ಟುಕೊಂಡಿರುತ್ತಾರೆ, ಶೇಕಡ 20ಭಾಗ ವಿವಿಧ ಕಾರಣಗಳಿಂದಾಗಿ ತಮ್ಮ ಮನೆಯಿಂದ ದೂರವಿರುತ್ತಾರೆ ಹಾಗೂ ಉಳಿದ ಶೇಕಡ 5 ಭಾಗಕ್ಕೆ ಕುಟುಂಬವೇ ಇರುವುದಿಲ್ಲ.

ಬೀದಿ ಮಕ್ಕಳ ಪರಿಕಲ್ಪನೆ ಮತ್ತು ಅವರು ತಮ್ಮ ಕುಟುಂಬಗಳೊಂದಿಗೆ ಹೊಂದಿರುವ ಸಂಬಂಧದ ಬಗೆಗಿನ ಸಂಖ್ಯೆಗಳನ್ನು ಚರ್ಚಿಸಿದರೂ ವಿಶ್ವಸಂಸ್ಥೆಯು ನೀಡಿರುವ/ಸಂಗ್ರಹಿಸುವ ಅಂಕಿಸಂಖ್ಯೆಗಳು ಸಾಮಾನ್ಯೀಕರಣವು, ಒಟ್ಟಾರೆ ಭಾರತವನ್ನು ಗಣನೆಗೆ ತೆಗೆದುಕೊಂಡರೆ ಸಂಪೂರ್ಣ ಸತ್ಯವಾಗುವುದಿಲ್ಲ. ವಾಸ್ತವಿಕವಾಗಿ, ಬೀದಿಮಕ್ಕಳು ಯಾರು ಎಂಬ ಬಗ್ಗೆ ಅತಿ ನಿರ್ದಿಷ್ಟವಾದ ನಿರೂಪಣೆ ಇಲ್ಲದೆ ಇರುವುದರಿಂದ ಅವರ ಗಣತಿಯನ್ನು ಮಾಡುವುದು ಬಲು ಕಷ್ಟ. ನಿರೂಪಣೆಯ ಅಂದಾಜು ಸ್ವರೂಪವನ್ನು ನೀಡಿರುವುದರಿಂದ ನಂಬಲರ್ಹವಲ್ಲದ ಅಂಕಿಅಂಶಗಳ ಲೆಕ್ಕಾಚಾರಕ್ಕೆ ವಸ್ತುನಿಷ್ಠ ಆಧಾರವೇ ಇರುವುದಿಲ್ಲ. ಎಂಬುದಾಗಿ ಅಗ್ನೆಲ್ಲ ಅಭಿಪ್ರಾಯ ಪಡುತ್ತಾರೆ. (ಅಗ್ನೆಲ್ಲ 1986). ಬೀದಿ ಮಕ್ಕಳನ್ನು ಯೂನಿಸೆಫ್ ಮೂರು ಗುಂಪುಗಳಾಗಿ ವರ್ಗೀಕರಿಸುತ್ತದೆ:

**ಬೀದಿ ಮೇಲಿರುವ ಮಕ್ಕಳು:** ಈ ಮಕ್ಕಳು ತಮ್ಮ ಕುಟುಂಬಗಳೊಡನೆ ಸ್ವಲ್ಪ ಹೆಚ್ಚುಕಡಿಮೆ ನಿರಂತರ ಸಂಬಂಧ ಹೊಂದಿರುತ್ತಾರೆ. ಅವರ ಜೀವನದ ಕೇಂದ್ರ ಬಿಂದು ಈಗಲೂ ಮನೆಯೇ ಆಗಿರುತ್ತದೆ. ಅವರಲ್ಲಿ ಹೆಚ್ಚಿನವರು ಪ್ರತಿ ಕೆಲಸದ ದಿನದ ಕೊನೆಯಲ್ಲಿ ತಮ್ಮ ಮನೆಗೆ ಹಿಂತಿರುಗುತ್ತಾರೆ. ತಮ್ಮ ಮನೆ ಇರುವ ಸ್ಥಳೀಯ ಸಮುದಾಯಕ್ಕೆ ಅವರು ಸೇರಿರುವ ಭಾವನೆಯನ್ನು ಹೊಂದಿರುತ್ತಾರೆ. ಇವರು ಬೀದಿಯ ಮೇಲಿರುವ ಮಕ್ಕಳು.

**ಬೀದಿಯ ಮಕ್ಕಳು:** ಈ ಗುಂಪು ಚಿಕ್ಕದು. ಆದರೆ ಬಲು ಸಂಕೀರಣವಾದುದು. ಈ ಗುಂಪಿಗೆ ಸೇರಿದ ಮಕ್ಕಳು ಬೀದಿಯನ್ನೇ ತಮ್ಮ ಮನೆಯನ್ನಾಗಿ ಕಾಣುತ್ತಾರೆ. ಅವರು ಇಲ್ಲಿಯೇ ಇರಲು ಆಶ್ರಯ ಮತ್ತು ಆಹಾರಗಳನ್ನು ಅರಸುತ್ತಾರೆ. ಮತ್ತು ತಮ್ಮ ಜೊತೆಯವರೊಂದಿಗೆ ಕುಟುಂಬದ ಅನುಭವ ಪಡೆಯುತ್ತಾರೆ. ಇವರಿಗೂ ಕುಟುಂಬದ ಸಂಬಂಧ ಇರುತ್ತದೆ. ಆದರೆ ಅದು ದೂರಸಂಬಂಧವಾಗಿರುತ್ತದೆ. ಇವರು ತಮ್ಮ ಮೊದಲಿನ ಮನೆಗೆ ಅಪರೂಪವಾಗಿ ಭೇಟಿ ನೀಡುತ್ತಾರೆ. ಇವರು ಬೀದಿಯ ಮಕ್ಕಳು.

**ಪರಿತ್ಯಕ್ತ ಮಕ್ಕಳು:** ಈ ಗುಂಪನ್ನು ಎರಡನೇ ಗುಂಪಿನ ಒಂದು ಭಾಗವಾಗಿ ಕಾಣಬಹುದು. ದಿನನಿತ್ಯದ ಚಟುವಟಿಕೆಗಳಲ್ಲಿ ಈ ಎರಡು ಗುಂಪುಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಆದರೂ ಜೈವಿಕ ಕುಟುಂಬದೊಡನೆ ಎಲ್ಲ ಸಂಬಂಧಗಳನ್ನು ಬೇರ್ಪಡಿಸಿಕೊಂಡಿದ್ದು ಅವರು ಸಂಪೂರ್ಣವಾಗಿ ತಮ್ಮನ್ನು ತಾವು

Digitised by Bharatavani, CIIL

ಅವಲಂಬಿಸಿಕೊಂಡಿರುತ್ತಾರೆ. ಇದು ಕೇವಲ ಇಂದ್ರಿಯಗ್ರಾಹ್ಯ ವಸ್ತುಗಳಿಗಾಗಿಯಲ್ಲ, ಮಾನಸಿಕ ಉಳಿವಿಗಾಗಿಯೂ ಸಹ. ಇವರೂ ಬೀದಿಯ ಮಕ್ಕಳೇ!

ಈ ವರ್ಗೀಕರಣವು ಇಂತಹ ಮಕ್ಕಳ ಪರಿಕಲ್ಪನೆ ಪಡೆಯಲು ಹೆಚ್ಚಿನ ಒಳನೋಟ ಒದಗಿಸುತ್ತದೆ. ಈ ಮೂರು ವರ್ಗದ ಮಕ್ಕಳು ವಾಸ್ತವಿಕವಾಗಿ ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅದರಲ್ಲೂ ಭಾರತವನ್ನು ಒಳಗೊಂಡಂತೆ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಕಾಣುತ್ತಾರೆ.

ಇಂತಹ ಮಕ್ಕಳು ತಮ್ಮ ಕುಟುಂಬಗಳೊಡನೆ ಹೊಂದಿರುವ ಸಂಬಂಧಗಳನ್ನು ಆಧಾರವಾಗಿ ಇಟ್ಟುಕೊಂಡು ಭಾರತದಲ್ಲಿ ಬೀದಿ ಮಕ್ಕಳನ್ನು ವಿವಿಧ ಗುಂಪಿಗಳನ್ನಾಗಿ ವರ್ಗೀಕರಿಸಲು ಒಂದು ಪ್ರಯತ್ನ ಮಾಡಲಾಗಿದೆ. ಮಕ್ಕಳು ಬೀದಿಯಲ್ಲಿ, ಕೊಳೆಗೇರಿಗಳಲ್ಲಿ ಅಥವಾ ಪಾಳುನೆಲದಲ್ಲಿ ಅಥವಾ ಪರಿತ್ಯಕ್ತ/ಪಾಳು ಬಿದ್ದಿರುವ ಕಟ್ಟಡಗಳಲ್ಲಿ ಇತ್ಯಾದಿ ಸ್ಥಳಗಳಲ್ಲಿ ತಮ್ಮ ಕುಟುಂಬಗಳೊಡನೆ ವಾಸಿಸುತ್ತಿದ್ದರು. ಹೆಚ್ಚು ಕಾಲ ಕೆಲಸ ಮಾಡುತ್ತಾ ಅಥವಾ ಬೀದಿ ಸುತ್ತುತ್ತಾ ಇರುವವರು; ಮಕ್ಕಳು ಬೀದಿಯಲ್ಲಿ ಕೆಲಸ ಮಾಡುತ್ತಾ ಅಥವಾ ಜೀವಿಸುತ್ತಾ ಇದ್ದರೂ ಬೇರೆ ನಗರಗಳಲ್ಲಿ ಅಥವಾ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವ ತಮ್ಮ ಕುಟುಂಬಗಳೊಡನೆ ಆಗಾಗ್ಗೆ ಸಂಪರ್ಕ ಇಟ್ಟುಕೊಂಡವರು. ಇಂತಹ ಮಕ್ಕಳು ಕೆಲವೊಮ್ಮೆ ತಮ್ಮ ಕುಟುಂಬಗಳಿಗೆ ಹಣ ಕಳಿಸುತ್ತಾರೆ. ಮತ್ತು; ಬೀದಿ(ಈ ಪದದ ವಿಶಾಲಾರ್ಥದಲ್ಲಿ)ಯಲ್ಲಿ ವಾಸಿಸುವ ಮತ್ತು ಕೆಲಸಮಾಡುವ ಯಾವುದೇ ಸಂಬಂಧಗಳನ್ನು ಇಟ್ಟುಕೊಳ್ಳದ ಮಕ್ಕಳು, ಹೇಗೋ ಅವರು ಅನಾಥರಾಗಿರಬಹುದು. ತಮ್ಮ ಕುಟುಂಬಗಳಿಂದ ತಿರಸ್ಕರಿಸಲ್ಪಟ್ಟವರಾಗಿರಬಹುದು, ಉಪೇಕ್ಷಿಸಲ್ಪಟ್ಟವರಾಗಿರಬಹುದು ಅಥವಾ ಸಂಬಂಧ ಕಡಿದುಕೊಂಡಿರುವವರು ಆಗಿರಬಹುದು.

ಭಾರತದಲ್ಲಿನ ಮಗು–ಕುಟುಂಬ ಸಂಬಂಧಗಳ ಆಧಾರದ ಮೇಲೆ ಇರುವ ಇತರ ವರ್ಗೀಕರಣದಂತೆಯೇ, ರೆಡ್ಡಿಯವರ ವರ್ಗೀಕರಣವು ಹೆಚ್ಚು ಕಡಿಮೆ ಯೂನಿಸೆಫ್‌ನ ವರ್ಗೀಕರಣಕ್ಕೆ ಹೊಂದಿಕೆಯಾಗುತ್ತದೆ. ಅವರ ಮೊದಲ ವರ್ಗವು ಕೊಳೆಗೇರಿ ಮಕ್ಕಳ ಬಹು ದೊಡ್ಡ ಭಾಗವನ್ನು ಸೇರಿಸಿಕೊಳ್ಳುತ್ತದೆ. ಇವರಲ್ಲಿನ ಹೆಚ್ಚಿನವರು ಹೆತ್ತವರ ಉದಾಸೀನ ಅಥವಾ ಅವರ ವಾಸಸ್ಥಳವೆಂದು ಕರೆಯಲ್ಪಡುವ ಜೀವಿಸುವ ಸ್ಥಳದ ಕೊರತೆಯ ಕಾರಣದಿಂದ ಬೀದಿಯಲ್ಲಿ ಇರುತ್ತಾರೆ. ಇಷ್ಟರ ಮಟ್ಟಿಗೆ ಇಲ್ಲಿ ಎರಡು ವಿಷಯಗಳು ಪರಸ್ಪರ ಅತಿ ವ್ಯಾಪಿಸಿವೆ. ಏಕೆಂದರೆ ಕೆಲವೊಮ್ಮೆ ಕೊಳೆಗೇರಿ ಮಕ್ಕಳನ್ನು ಬೀದಿ ಮಕ್ಕಳಿಂದ ಭಿನ್ನ ಎಂದು ಪರಿಗಣಿಸಲಾಗುತ್ತದೆ.

ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ವರ್ಗೀಕರಿಸುವ ಮೂಲ ಉದ್ದೇಶವೆಂದರೆ ಪ್ರತಿಯೊಂದು ಗುಂಪಿಗೂ ಶಿಕ್ಷಣದ ಅಗತ್ಯಗಳೂ ಸೇರಿದಂತೆ ನಿರ್ದಿಷ್ಟ ಅಗತ್ಯಗಳನ್ನು ತೀರ್ಮಾನಿಸುವುದು. ಸಾಮಾನ್ಯ ಲಕ್ಷಣಗಳನ್ನು, ಅಗತ್ಯಗಳನ್ನು, ಹೊಂದಿರುವ ಸಮುದಾಯ ಹಾಗೂ ಬೀದಿಮಕ್ಕಳ ಪ್ರತಿಯೊಂದು ಗುಂಪಿಗೂ ಕಾರ್ಯಕ್ರಮಗಳನ್ನು ರೂಪಿಸಲು ಇದು ನೆರವಾಗುವ ಸಾಧ್ಯತೆ ಇದೆ. ಮನೆ ಮತ್ತು ಕುಟುಂಬಗಳಿಂದ ಬೇರ್ಪಟ್ಟಿರುವ ಪ್ರಮಾಣಗಳಲ್ಲಿನ ವ್ಯತ್ಯಾಸವು ಅವರಿಗೆ ಒದಗಿಸಬೇಕಾದ ಸೇವೆಯ ವಿಧ ಮತ್ತು ಸ್ವರೂಪಗಳಲ್ಲಿನ ವ್ಯತ್ಯಾಸಗಳನ್ನು ಅವಲಂಭಿಸಿರುತ್ತದೆ. (ರೆಡ್ಡಿ 1993). ಕುಟುಂಬದ ಸಂಪರ್ಕ, ಆಸರೆ ಮತ್ತು ಕುಟುಂಬದ ಸ್ಥಾನಮಾನಗಳ ಮಟ್ಟಗಳಿಗೆ ಅನುಗುಣವಾಗಿ ಶಿಕ್ಷಣ ಕಾರ್ಯಕ್ರಮವೂ ಸೇರಿದಂತೆ ವಿವಿಧ ಸೇವೆಗಳನ್ನು ರೂಪಿಸಬಹುದು.

ಬೀದಿಮಕ್ಕಳ ಪರಿಕಲ್ಪನೆ ಮತ್ತು ವರ್ಗೀಕರಣದ ಚರ್ಚೆಯು ಇಂತಹ ಮಕ್ಕಳ ಕೆಲವು ನಿರ್ದಿಷ್ಟ ಗುಣಲಕ್ಷಣಗಳನ್ನು ಗುರುತಿಸಲು ನೆರವಾಗುತ್ತದೆ.(ಪಾಂಡೆ 1993). ಬಹುತೇಕ ಬೀದಿ ಮಕ್ಕಳಿಗೆ ಯಾರೂ ವಾಸಿಸದ ಖಾಲಿಕಟ್ಟಡಗಳು, ಪಾಳುಭೂಮಿ, ಸಾರ್ವಜನಿಕ ಸ್ಥಳಗಳು ಇತ್ಯಾದಿಗಳು ಅವರ 'ಮನೆ' ಆಗಿರುತ್ತದೆ. ಅಂತೆಯೇ ಹೆಚ್ಚಿನವರ ಕೆಲಸದ ಸನ್ನಿವೇಶಗಳು ಕೆಲಸದ ಸ್ವಭಾವ, ಸಮಯ ಹಾಗೂ ವರಮಾನಗಳ ದೃಷ್ಟಿಯಲ್ಲಿ ಶೋಷಣೆಗೆ ಒಳಪಟ್ಟವುಗಳಾಗಿರುತ್ತವೆ. ಅವು ಬಹುವಾಗಿ ಗಾಯಗೊಳಿಸಬಲ್ಲ ಮತ್ತು ನಗರೀಕರಣದ ಎಲ್ಲ ಖಾಯಿಲೆಗಳಿಗೆ ಸುಲಭವಾಗಿ ತುತ್ತಾಗಬಲ್ಲಂತೆ ಇರುತ್ತವೆ. ಕೆಲವು ಮಕ್ಕಳಿಗೆ ಕುಟುಂಬದ ಸಂಬಂಧವು ನಿರಂತರವಾಗಿ ಇದ್ದರೆ ಮತ್ತೆ ಕೆಲವರಿಗೆ ಕೇವಲ ಆಗೊಮ್ಮೆ ಈಗೊಮ್ಮೆ ಇರುತ್ತದೆ. ಅವರಲ್ಲಿ ಕೆಲವರಿಗೆ ಇದು ಸಂಪೂರ್ಣವಾಗಿ ಇಲ್ಲವಾಗಿರುತ್ತದೆ. ರಕ್ಷಣೆ ಮತ್ತು ಪೋಷಕತತ್ವಗಳಿಗೆ ಸಂಬಂಧಿಸಿದಂತೆ ಇದು ಬಹುತೇಕ ಇರುವುದಿಲ್ಲ. ಆದ್ದರಿಂದ ಇವರನ್ನು ಬೀದಿಮಕ್ಕಳು ಎಂದು ವರ್ಗೀಕರಿಸಲಾಗುತ್ತದೆ. ಈ ಲಕ್ಷಣಗಳ ಪಟ್ಟಿಗೆ ಮೊಹಸಿನ್ (1994) ಮತ್ತೆ ಕೆಲವನ್ನು ಸೇರಿಸಿದ್ದಾರೆ. ಅವರ ಪ್ರಕಾರ ಬೀದಿಮಕ್ಕಳ ಸ್ಥಾನಮಾನವನ್ನು ಯಾವಾಗಲೂ ಕೀಳುಮಟ್ಟದ್ದಾಗಿ ನೋಡಲಾಗುತ್ತದೆ. ಅವರಿಗೆ ತಮ್ಮತನದ ಬಗ್ಗೆ ಅರಿವು ಇರುವುದೇ ಇಲ್ಲ. ಮತ್ತು ಶೈಕ್ಷಣಿಕ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಅವರಲ್ಲಿ ಬಹುತೇಕರು ಅನಕ್ಷರಸ್ಥರು, ಅವರ ಮೌಲ್ಯದ ಅರಿವು ಬಹುತೇಕ ವ್ಯಕ್ತಿಗತವಾಗಿರುತ್ತದೆ. ಈ ವಿಶೇಷ ಲಕ್ಷಣಗಳು ತೃತೀಯ ಜಗತ್ತಿನ ಇಂತಹ ಮಕ್ಕಳ ಸಮಸ್ಯೆಗಳಿಗೆ ಸಂಬಂಧಿಸಿದ ಭವಿಷ್ಯದ ಅಧ್ಯಯನಗಳಿಗೆ ಬೇಕಾಗುವ ಪ್ರಮಾಣೀಕರಿಸಿದ ಲಕ್ಷಣಗಳನ್ನು ಗುರುತಿಸಲು ನೆರವಾಗಬಹುದು ಮತ್ತು ಅವರಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲು ಹಾಗೂ ಸೇವೆಗಳನ್ನು ಒದಗಿಸಲು ಸಹಾಯಮಾಡುತ್ತವೆ. ಬೀದಿಮಕ್ಕಳು ಅನೇಕ ದೃಷ್ಟಿಗಳಲ್ಲಿ ವಂಚಿತರಾಗಿದ್ದರೂ ಅವರು ಇರುವ ಪರಿಸರದ ಬೇಡಿಕೆಗಳನ್ನು ಪೂರೈಸಲು ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಂಡಿರುತ್ತಾರೆ. ಇದರಿಂದ ಅವರಿಗೆ ಸುರಕ್ಷತೆ ದೊರಕುತ್ತದೆ. ಮತ್ತು ಅವರಿಗೆ ಪ್ರತಿಕೂಲವಾದಂತಹ ಶಕ್ತಿಗಳಿಂದ ರಕ್ಷಣೆ ದೊರಕುತ್ತದೆ.

ಬೀದಿ ಮಕ್ಕಳ ಮತ್ತೊಂದು ಲಕ್ಷಣ ನಿರೂಪಣೆಯು ನಾಲ್ಕು ವಿಧಗಳ ಅನನುಕೂಲಗಳನ್ನು ಸಂಯೋಜಿಸುತ್ತದೆ (ಡಲ್ಲಾ ಪೆ 1989).

i) ಶಾಲೆಗಳಿಂದಲೂ, ಆಸ್ಪತ್ರೆಗಳಿಂದಲೂ ಮತ್ತು ಇತರ

Digitised by Bharatavani, CIIL

ಸೇವೆಗಳಿಂದಲೂ ಅವರನ್ನು ಭೌಗೋಳಿಕ ದೃಷ್ಟಿಯಲ್ಲಿ ಪ್ರತ್ಯೇಕಿಸಲಾಗುತ್ತದೆ. ಮತ್ತು ಜನತೆ ಅವರನ್ನು ಒಪ್ಪಿಕೊಳ್ಳದೆ ಇರುವುದರಿಂದ ಸಾಮಾಜಿಕವಾಗಿಯೂ ಪ್ರತ್ಯೇಕಿಸಲಾಗುತ್ತದೆ ಮತ್ತು ಅನೌಪಚಾರಿಕ ಆಸರೆಯ ಜಾಲದಿಂದಲೂ ಪ್ರತ್ಯೇಕಿಸಲಾಗುತ್ತದೆ.

ii) ರೋಗಗಳಿಗೆ ಅಥವಾ ಕಾಯಿಲೆಗಳಿಗೆ ತುತ್ತಾಗುವಿಕೆ.

iii) ಅವರಿಗೆ ಯಾವುದೇ ಬಗೆಯ ವರಮಾನ ಇಲ್ಲದಿರುವುದರಿಂದ ಬಡತನ.

iv) ಶಕ್ತಿಹೀನತೆ ಏಕೆಂದರೆ ಅವರು ರಾಜಕೀಯ ಶಕ್ತಿಯಿಂದ ಪ್ರತ್ಯೇಕಿಸಲ್ಪಟ್ಟ ಬಡ ಕುಟುಂಬಗಳಿಂದ ಬಂದವರು.

ಬೀದಿ ಮಕ್ಕಳ ವರ್ಗೀಕರಣವು ಏನೇ ಆಗಿದ್ದರೂ ಅವರೆಲ್ಲರಲ್ಲಿ ಕಾಣುವ ಸಾಮಾನ್ಯತೆ ಎಂದರೆ ಬಹುತೇಕ ಶಿಕ್ಷಣವಿಲ್ಲದೆ ಉದಾಸೀನಕ್ಕೆ ಒಳಗಾದವರು, ಆರೋಗ್ಯ ರಕ್ಷಣೆ, ಯೋಗ್ಯ ಆಹಾರ, ಮನೋರಂಜನೆಗಳು ಇಲ್ಲದೆ ಬಾಲ್ಯಾವಸ್ಥೆಯ ಹಕ್ಕುಗಳನ್ನು ಕಳೆದುಕೊಂಡವರು. ಅವರು ತಯಾರಾದ ಮತ್ತು ಬೆಳೆದ ಪರಿಸರವು ಅವರನ್ನು ಅಪರಾಧ ಪ್ರಪಂಚಕ್ಕೆ ಹೆಚ್ಚು ತುತ್ತಾಗುವಂತೆ ಮಾಡುತ್ತದೆ. ಅವರು ಮಾದಕದ್ರವ್ಯ, ಮದ್ಯ ಮೊದಲಾದ ಸಾಮಾಜಿಕವಾಗಿ ಒಪ್ಪಿತವಲ್ಲದ ಅಡ್ಡದಾರಿಯನ್ನು ತುಳಿಯಲು ಸುಲಭವಾಗಿ ಸಿಕ್ಕುತ್ತಾರೆ, ಇದರ ಪರಿಣಾಮವಾಗಿ ಅನೇಕ ಬಗೆಯ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ತಾವಾಗಿಯೇ ತಂದುಕೊಳ್ಳುತ್ತಾರೆ. ಜೇಬು ಕಳ್ಳತನ, ಸಣ್ಣಪುಟ್ಟ ಕಳ್ಳತನ ಹಾಗೂ ಇನ್ನೂ ಗಂಭೀರವಾದ ಅಪರಾಧಗಳನ್ನು ಮಾಡುತ್ತಾರೆ. ಅವರು ಬಾಲ್ಯಾವಸ್ಥೆಯವರೂ, ಚಿಕ್ಕವರೂ, ಬಡವರೂ, ತಮ್ಮ ಹಕ್ಕುಗಳ ಅರಿವಿಲ್ಲದವರೂ, ಅವರ ರಕ್ಷಣೆಗೆ ಕುಟುಂಬದ ಯಾವ ಸದಸ್ಯರೂ ಬರದೇ ಇರುವುದರಿಂದಲೂ ಅವರು ಎಲ್ಲ ಬಗೆಯ ದೈಹಿಕ, ಲೈಂಗಿಕ, ಆರ್ಥಿಕ/ವಾಣಿಜ್ಯದ, ರಾಜಕೀಯದ ಹಾಗೂ ಇತರ ಬಗೆಗಳ ಶೋಷಣೆಗೆ ಒಳಗಾಗುತ್ತಾರೆ.

ಈಚಿನ ವರ್ಷಗಳಲ್ಲಿ ಬೀದಿಮಕ್ಕಳ ವಿವಾದಾಂಶಗಳೂ, ಅಗತ್ಯಗಳೂ ಸ್ವಲ್ಪಮಟ್ಟಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಗಮನ ಮತ್ತು ಆಸಕ್ತಿಗಳನ್ನು ಸೆಳೆದಿದೆ. ಅತ್ಯಂತ ಪರಿಣಾಮಕಾರಿಯಾದ ಪ್ರತಿಕ್ರಿಯೆ ಎಂದರೆ ಕೆಲವು ಪ್ರತಿಬಂಧಕಾತ್ಮಕ ಕ್ರಮಗಳನ್ನು ಕೈಗೊಳ್ಳುವುದು. ಇದು ಬಡಕುಟುಂಬಗಳಿಗೆ ಸಾಮಾನ್ಯ ಆಸರೆ, ನೆರವು ನೀಡುವುದು. ತಂದೆತಾಯಿಗಳಲ್ಲಿ ಮತ್ತು ನಾಗರಿಕ ಸಮಾಜದಲ್ಲಿ ಅರಿವನ್ನು ಉಂಟುಮಾಡುವುದು, ಕುಟುಂಬಗಳು ಒಡೆದುಹೋಗಲು ಕಾರಣಗಳನ್ನು ತಿಳಿಸುವುದು, ಸೂಕ್ತ ಆಡಳಿತ ವ್ಯವಸ್ಥೆಗಾಗಿ ಯೋಗ್ಯವಾದ ಪರಿಸರವನ್ನು ಸೃಷ್ಟಿಸುವುದು ಮೊದಲಾದವು. ಬಡತನವನ್ನು ನಿರ್ಮೂಲನ ಮಾಡುವ ಸಲುವಾಗಿ ಸರ್ಕಾರ ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ಅಡಿಯಲ್ಲಿ ಕಾರ್ಯಗತಗೊಳಿಸಬೇಕಿರುವ ಹತ್ತಾರು ನೆರವಿನ ಚಟುವಟಿಕೆಗಳು ಮೊದಲಾದವು ಇವುಗಳಲ್ಲಿ ಸೇರಿವೆ. ಸರ್ಕಾರೇತರ ಸಂಘಟನೆಗಳೂ ಸಹ ಸಾಮಾಜಿಕ ಚಟುವಟಿಕೆಗಳ ಮೂಲಕ ಕ್ರಿಯಾಶೀಲರಾಗುವ ಅಗತ್ಯವಿದ್ದು ಈ ದಿಸೆಯಲ್ಲಿ ಗಮನಾರ್ಹ ಕೊಡುಗೆ ನೀಡಬಹುದು.

ಈಗಾಗಲೇ ಬೀದಿಗೆ ಬಿದ್ದಿರುವ ಮಕ್ಕಳ ರಕ್ಷಣೆಯನ್ನು ಅಲಕ್ಷ್ಯ ಮಾಡುವಂತಿಲ್ಲ. ಅವರ ಬಾಲ್ಯಾವಸ್ಥೆಯ ಅಗತ್ಯಗಳನ್ನು ಆದ್ಯತೆಯ ಮೇಲೆ ಪೂರೈಸಬೇಕು. ಅವರ ಉಳಿವಿಗೆ ಅವರಿಗೆ ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕ ಒತ್ತಾಸೆ ಬೇಕು. ಇತರೆಲ್ಲ ಮಕ್ಕಳಿಗೆ ಇರುವಂತೆ ಅವರಿಗೂ ಗೌರವದಿಂದ ಬದುಕುವ, ಆರೋಗ್ಯ ಮತ್ತು ಶಿಕ್ಷಣದ ಮತ್ತು ದುರುಪಯೋಗ, ಶೋಷಣೆ, ಹಿಂಸೆಗಳಿಂದ ರಕ್ಷಣೆ ಬೇಕು; ತಮ್ಮ ಭಾವನೆಗಳನ್ನು ನರಳುವಿಕೆಯನ್ನು ದನಿ ಎತ್ತಿ ಹೇಳಲು ಒಂದು ಅವಕಾಶವೂ ಬೇಕು. ಬೀದಿ ಮಕ್ಕಳ ಪುನರ್ವಸತಿಗೆ ತಂತ್ರಗಳನ್ನು ರೂಪಿಸುವಾಗ ಮಗುವಿನ ವ್ಯಕ್ತಿಚರಿತ್ರೆ ಅಂದರೆ ಆ ಮಗುವಿನ ಹಿನ್ನೆಲೆಯ ಸರಿಯಾದ ಅರಿವು ಮತ್ತು ಆ ಮಗುವು ಈಗ ಇರುವ ಸನ್ನಿವೇಶದ ಮೌಲ್ಯಮಾಪನಗಳೆಂದೂ ಮೂಲ ಅಗತ್ಯಗಳಾಗಿರುತ್ತವೆ. ಬೀದಿಯಲ್ಲಿ ಬೀಳುವುದಕ್ಕೆ ಕಾರಣಗಳು ಮಗುವಿನಿಂದ ಮಗುವಿಗೆ ಬೇರೆ ಬೇರೆಯಾಗಿರುತ್ತವೆ. ಪುನರ್ವಸತಿ ತಂತ್ರಗಳಲ್ಲಿ ಶಿಕ್ಷಣವು ಒಂದು ಪ್ರಧಾನ ಘಟಕವಾದ್ದರಿಂದ ವಿವಿಧ ವರ್ಗಗಳ ಮಕ್ಕಳಿಗೆ ಶಿಕ್ಷಣವನ್ನು ನೀಡುವಾಗ ಒಂದು ಪಠ್ಯಕ್ರಮವು ಎಲ್ಲ ಮಕ್ಕಳಿಗೆ ಒಂದೇ ಆಗಿರಬೇಕು. ಹಲವು ಸಂವತ್ಸರಗಳಿಂದ ವಿವಿಧ ಮಟ್ಟಗಳಲ್ಲಿ– ಅಂತಾರಾಷ್ಟ್ರೀಯ, ರಾಷ್ಟ್ರೀಯ, ಪ್ರಾದೇಶಿಕ ಮತ್ತು ಸ್ಥಳೀಯ–ಪ್ರಯತ್ನಗಳು ಪ್ರಾರಂಭವಾಗಿವೆ. ಈ ಪ್ರಯತ್ನಗಳು ಬೀದಿ ಮಕ್ಕಳ ಶಿಕ್ಷಣವೇ ಅಲ್ಲದೆ ಇತರ ಅನೇಕ ಅವರ ಸರ್ವಾಂಗೀಣ ಅಭಿವೃದ್ಧಿಗೆ ಸಂಬಂಧಿಸಿದ ಚಟುವಟಿಕೆಗಳಾಗಿವೆ.

ಅಂತಾರಾಷ್ಟ್ರೀಯ ಉಪಕ್ರಮಗಳು: ವಿಶ್ವಸಂಸ್ಥೆಯ ಹಲವಾರು ಅಂಗಸಂಸ್ಥೆಗಳು ಬೀದಿ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ತಮ್ಮ ಸದಸ್ಯ ರಾಷ್ಟ್ರಗಳಿಗೆ ಹಾಗೂ ಸರ್ಕಾರೇತರ ಸ್ವಯಂಸೇವಾ ಸಂಘಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ನೀಡುತ್ತವೆ. ಅಭಿವೃದ್ಧಿಯಲ್ಲಿ ಇಂತಹ ಮಕ್ಕಳ ಶಿಕ್ಷಣವೂ ಸೇರಿದೆ. ಬೀದಿ ಮಕ್ಕಳ ಶಿಕ್ಷಣದಲ್ಲಿ ಭಾರತದಲ್ಲಿ ತೊಡಗಿಕೊಂಡಿರುವ ವಿಶ್ವಸಂಸ್ಥೆಯ ಅಂಗಸಂಸ್ಥೆಗಳೆಂದರೆ ILO, UNESCO, UNICEF, UNDP ಹಾಗೂ ವಿಶ್ವಬ್ಯಾಂಕ್. ವಿಶ್ವಸಂಸ್ಥೆಯ ಈ ಅಂಗಸಂಸ್ಥೆಗಳೇ ಅಲ್ಲದೆ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ನಿರ್ದಿಷ್ಟ ಪ್ರದೇಶಗಳಲ್ಲಿ ನಡೆಯುತ್ತಿರುವ ಇಂತಹ ಕಾರ್ಯಕ್ರಮಗಳಿಗೆ ನೆರವು ನೀಡುತ್ತಿವೆ.

ಭಾರತದಲ್ಲಿ 'ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲ ಮಾಡುವ ಅಂತಾರಾಷ್ಟ್ರೀಯ ಕಾರ್ಯಕ್ರಮ (IPEC)' ಎಂಬ ನಾಮಾಂಕಿತದಲ್ಲಿ ILO ದ ಕಾರ್ಯಕ್ರಮವು 1992 ರಲ್ಲಿ ಪ್ರಾರಂಭಗೊಂಡಿತು. ಇದು ಶಿಕ್ಷಣವನ್ನು ತನ್ನ ಮುಖ್ಯ ಗುರಿಯನ್ನಾಗಿಸಿಕೊಂಡು ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯದ ರಾಷ್ಟ್ರೀಯ ಸಂಚಾಲಕ ಸಮಿತಿಯು ಗುರುತಿಸಿದ ವಿವಿಧ ಕಾರ್ಯಕ್ರಮಗಳ ಮೂಲಕ ಇದನ್ನು ಕಾರ್ಯಗತಗೊಳಿಸಿದೆ.

Digitised by Bharatavani, CIIL

ಕೆಲಸ ಮಾಡುತ್ತಿರುವ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳ ಸ್ಥಾಪನೆಯು ಇದರ ಯೋಜನೆಯ ಒಂದು ಮುಖ್ಯವಾದ ಅಂಶವಾಗಿದೆ. ಇವುಗಳ ಜೊತೆಯಲ್ಲಿ ಜೀವವನ್ನು ಸೂಕ್ತ ಆಹಾರದಿಂದ ಪೋಷಿಸುವುದು ಮೊದಲಾದ ಕ್ಷೇಮಾಭಿವೃದ್ಧಿ ಕಾರ್ಯಗಳು ಮತ್ತು ಆರೋಗ್ಯ ರಕ್ಷಣೆ, ಬಾಲಕಾರ್ಮಿಕ ಪದ್ಧತಿಯಂತಹ ಅಂಶಗಳ ಬಗ್ಗೆ ಮಕ್ಕಳಲ್ಲಿ, ಮಾತಾಪಿತರಲ್ಲಿ ಸಮುದಾಯದಲ್ಲಿ, ಉದ್ಯೋಗದಾತರಲ್ಲಿ ಹಾಗೂ ಇತರ ಸಾಮಾಜಿಕ ಗುಂಪುಗಳಲ್ಲಿ ಅರಿವನ್ನು ಮೂಡಿಸುವಂತಹ ಚಟುವಟಿಕೆಗಳು ನಡೆಯುತ್ತಿವೆ. ILO- IPEC ಕಾರ್ಯಕ್ರಮಗಳು 21 ಡಿಸೆಂಬರ್ 2001 ರವರೆಗೆ ನಡೆದವು. ಮತ್ತೊಂದು ILO ಕಾರ್ಯಕ್ರಮ CLASP ಅಂದರೆ Child Labour Action Support Plan ಇದು ಜರ್ಮನಿ ಸರಕಾರದಿಂದ ನೆರವು ಪಡೆದಿದೆ. ಇದರ ಮೂಲಕ ಪಡೆದ ಆರ್ಥಿಕ ನೆರವು ಬಾಲ ಕಾರ್ಮಿಕರ ರಾಷ್ಟ್ರೀಯ ಕಾರ್ಯಕ್ರಮದ ಅಡಿಯಲ್ಲಿ ನಡೆಯುತ್ತಿದ್ದ ಚಟುವಟಿಕೆಗಳಿಗಾಗಿ ಉಪಯೋಗಿಸಲ್ಪಟ್ಟಿತು.

ಭಾರತದಲ್ಲಿ ಬೀದಿಬದಿಯ ಹಾಗೂ ಕೆಲಸ ಮಾಡುತ್ತಿರುವ ಮಕ್ಕಳ ಶಿಕ್ಷಣವನ್ನು ಒಳಗೊಂಡು ಎಲ್ಲ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡುವ ಕಾರ್ಯದಲ್ಲಿ UNICEF ತನ್ನನ್ನು ತಾನು ತೊಡಗಿಸಿಕೊಂಡಿದೆ. ಭಾರತದಲ್ಲಿ ಮಗುವಿನ ಹಕ್ಕುಗಳ ಬಗ್ಗೆ ವಿದ್ಯುಕ್ತ ಸಭೆಯನ್ನು ಕರೆಯುವುದನ್ನು ಮತ್ತು ಇದರ ಅಗತ್ಯವನ್ನು ಸಮರ್ಥನೆಗಳನ್ನು, ಇವರ ಶೈಕ್ಷಣಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಲು ಸೆಮಿನಾರ್‌ಗಳನ್ನು, ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಮತ್ತು ಸಮ್ಮೇಳನಗಳನ್ನು ಸಂಘಟಿಸುತ್ತದೆ ಹಾಗೂ ಅವಕ್ಕೆ ಬೆಂಬಲ ನೀಡುತ್ತದೆ.

1990ರಲ್ಲಿ World conference on Education for All ಮತ್ತು World Declaration on Education for All ನಡೆದವು. ಅಂದಿನಿಂದ ವಿಶ್ವಸಂಸ್ಥೆಯ ಅಂಗಸಂಸ್ಥೆಗಳಲ್ಲಿ UNESCO ಭಾರತದಲ್ಲಿನ ಬೀದಿಬದಿಯ ಹಾಗೂ ಕೆಲಸ ಮಾಡುವ ಮಕ್ಕಳ ಶಿಕ್ಷಣಕ್ಷೇತ್ರದಲ್ಲಿ ಬಲು ಚಟುವಟಿಕೆಯಿಂದ ಕೆಲಸ ಮಾಡುತ್ತಿದೆ. 2000ದ ಏಪ್ರಿಲ್‌ನಲ್ಲಿ ಡಕಾರ್‌ನಲ್ಲಿ ನಡೆದ ವಿಶ್ವ ಶಿಕ್ಷಣ ವಾದರಂಗ (Fowm)ದಲ್ಲಿ ವಿಶ್ವಬ್ಯಾಂಕ್, UNFPA, UNDP ಮತ್ತು UNICEFಗಳು ಸರ್ವರಿಗೂ ಶಿಕ್ಷಣವನ್ನು ಬೆಂಬಲಿಸಲು ಮತ್ತು ದೃಢೀಕರಿಸಲು ಅಧಿಕೃತ ಆದೇಶದ ಮೂಲಕ ರಚಿಸಲಾಯಿತು. ಅಂದಿನಿಂದ ರಾಷ್ಟ್ರೀಯ, ಉಪವಿಭಾಗೀಯ ಮತ್ತು ವಿಭಾಗೀಯ ಹಂತಗಳಲ್ಲಿ ಎಲ್ಲ ಮಕ್ಕಳಿಗೂ 2015ರ ಒಳಗಾಗಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವ ಸಂಬಂಧದ ನೀತಿ ನಿರೂಪಣೆಯನ್ನು ಆಯೋಜಿಸುವ ಕಾರ್ಯದಲ್ಲಿ ಯುನೆಸ್ಕೊ ಅತಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಅದರ ಶೈಕ್ಷಣಿಕ ಕಾರ್ಯಕ್ರಮದ ಅಡಿಯಲ್ಲಿ ಸಂಕಷ್ಟದಲ್ಲಿರುವ ಮಕ್ಕಳಿಗೆ ಅವರ ಶೈಕ್ಷಣಿಕ ಚಟುವಟಿಕೆಗಳಿಗಾಗಿ ಧನಸಹಾಯ ಹಾಗೂ ತಾಂತ್ರಿಕ ನೆರವನ್ನು ನೀಡಲು ಯುನೆಸ್ಕೋ ಪ್ರಾರಂಭಿಸಿದೆ. ಈ ಸಂಸ್ಥೆಗಳನ್ನು ಆಯೋಜಿಸುತ್ತಿದೆ. ಈ ಸಭೆಗಳಲ್ಲಿ ತನ್ನ ದ್ವಿಪಕ್ಷೀಯ, ಬಹುಪಕ್ಷೀಯ ಪಾಲುದಾರರಾದ ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕ್‌ಗಳು, ಶಿಕ್ಷಣ ಮತ್ತು ಹಣಕಾಸು ಮಂತ್ರಾಲಯಗಳ ಪ್ರತಿನಿಧಿಗಳು, ಶಿಕ್ಷಕರ ಸಂಘಗಳು, ಖಾಸಗಿ ವಲಯ, ಸಿವಿಲ್ ಸೊಸೈಟಿ ಫೌಂಡೇಷನ್‌ಗಳು, ಮಾತಾಪಿತರು ಭಾಗವಹಿಸುತ್ತಾರೆ. ಇಲ್ಲಿ 'ಸರ್ವರಿಗೂ ಶಿಕ್ಷಣ' ಎಂಬ ವಿಶಾಲ ಗುರಿಗಳ ಪರಿಧಿಯಲ್ಲಿ ಮೂಲಶಿಕ್ಷಣ ಹಾಗೂ ಸಹಕಾರ ಹಗೂ ಆರ್ಥಿಕ ನೆರವು ನೀಡುವ ಬಗ್ಗೆ ಪ್ರಾದೇಶಿಕ ಅಗತ್ಯಗಳನ್ನು ಕುರಿತು ಚರ್ಚೆ ನಡೆಸಲಾಗುತ್ತದೆ. ಈ ಚೌಕಟ್ಟಿನಲ್ಲಿ ಈ ಏಜೆನ್ಸಿಯು 'ಸಿನಿಆಶಾ' ಮತ್ತು 'ಡಾನ್ ಬಾಸ್ಕೋ' 'ಆಶಾಲಯಮ್', ಕೊಲ್ಕತ್ತಾ ಮೂಲದ ಎರಡು ಸರಕಾರೇತರ ಸಂಸ್ಥೆಗಳಿಗೆ ಅವು ಕೈಗೊಂಡಿರುವ ಬೀದಿಯ ಹಾಗೂ ಕೆಲಸ ಮಾಡುತ್ತಿರುವ ಮಕ್ಕಳ ಮೂಲಭೂತ ಶೈಕ್ಷಣಿಕ ಅಗತ್ಯಗಳಿಗೆ ನೆರವಾಗುತ್ತಿದೆ. ಹಾಗೂ ಇತರ ಹಲವಾರು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಗೂ ನೆರವು ನೀಡುತ್ತದೆ. ಕೊಲ್ಕತ್ತಾದ ಬೀದಿ ಹಾಗೂ ಕೆಲಸ ಮಾಡುತ್ತಿರುವ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವಲ್ಲಿ ಯುನೆಸ್ಕೋ ಅತ್ಯಂತ ಕ್ರಿಯಾಶೀಲವಾದ ಬೆಂಬಲವನ್ನು ನೀಡಿದೆ ಎಂಬುದು ಇಲ್ಲಿ ಉಲ್ಲೇಖನಾರ್ಹವಾಗಿದೆ. ಈಚೆಗೆ ಏಜೆನ್ಸಿಯು ದೆಹಲಿ ಮೂಲದ ಒಂದು ಸರಕಾರೇತರ ಸಂಸ್ಥೆ 'ಪ್ರಯಾಸ್' ಜೊತೆಯಲ್ಲಿ ಒಂದು ಒಡಂಬಡಿಕೆ ಮಾಡಿಕೊಂಡಿದೆ. ಈ ಸಂಸ್ಥೆಯು ಬೀದಿಮಕ್ಕಳ ಹಾಗೂ ನಿರ್ಲಕ್ಷಿತ ಮಕ್ಕಳ ರಕ್ಷಣೆ, ಆರೈಕೆ, ಅಭಿವೃದ್ಧಿ ಮತ್ತು ಪುನರ್ವಸತಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಈ ಮಕ್ಕಳಿಂದ ನಗರ ಪ್ರದೇಶಗಳ ಬೀದಿ ಹಾಗೂ ಕೆಲಸ ಮಾಡುತ್ತಿರುವ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಹೊಸತನ ತರುವ ಶೈಕ್ಷಣಿಕ ಸಾಮಗ್ರಿಗಳನ್ನು ತಯಾರಿಸಿ ಅಭಿವೃದ್ಧಿ ಪಡಿಸಲು ಯತ್ನಿಸಲಾಗಿದೆ. ಯುನೆಸ್ಕೋವು ಬೀದಿಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಹಣಕಾಸಿನ ನೆರವು ಮತ್ತು ತಾಂತ್ರಿಕ ನೆರವುಗಳನ್ನು ಒದಗಿಸುವುದೇ ಅಲ್ಲದೆ ಚಾಲ್ತಿಯಲ್ಲಿರುವ ಶೈಕ್ಷಣಿಕ ಕಾರ್ಯಕ್ರಮಗಳ ಮೌಲ್ಯಮಾಪನವನ್ನೂ ಮಾಡುತ್ತದೆ.

ಬೀದಿ ಮಕ್ಕಳ ಶಿಕ್ಷಣಕ್ಕೆ ಸರಕಾರದ ತೊಡಗುವಿಕೆ: ಭಾರತದ ರಾಜ್ಯಾಂಗದ 39ನೇ ವಿಧಿಯಲ್ಲಿ ತಿಳಿಸಿರುವಂತೆ ರಾಜ್ಯದ ಕಾರ್ಯನೀತಿಯ ನಿರ್ದೇಶಕ ತತ್ವಗಳ ಅನುಸಾರ ರಾಜ್ಯವು ಮಕ್ಕಳತ್ತ ತನ್ನ ಧೋರಣೆಯನ್ನು ನಿರ್ದೇಶಿಸಬೇಕು. ಮಕ್ಕಳು ಆರೋಗ್ಯಕರ ವಾತಾವರಣದಲ್ಲಿ ಬೆಳೆದು ಸ್ವಾತಂತ್ರ್ಯ ಮತ್ತು ಘನತೆಗಳ ಸನ್ನಿವೇಶಗಳನ್ನು ಸೃಷ್ಟಿಸಲು ಮತ್ತು ಶೋಷಣೆಯಿಂದ ಮುಕ್ತಿಗೊಳ್ಳಲು ಅವಕಾಶಗಳನ್ನು, ಅನುಕೂಲಗಳನ್ನು ಒದಗಿಸುವ ಗುರಿಯನ್ನು ರಾಜ್ಯವು ಹೊಂದಿರಬೇಕು.

ವಿಶೇಷವಾಗಿ 1974ರಲ್ಲಿ ಮಕ್ಕಳ ರಾಷ್ಟ್ರೀಯ ಕಾರ್ಯನೀತಿಯು ರೂಪಿತವಾಗಿ ಘೋಷಿಸಲ್ಪಟ್ಟ ದಿನದಿಂದ ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು ಸರ್ಕಾರದ ರಾಷ್ಟ್ರೀಯ ಯೋಜನೆಗಳಲ್ಲಿ ಪ್ರಮುಖ ಸ್ಥಾನವನ್ನು ಅಲಂಕರಿಸಿವೆ. ಶಿಕ್ಷಣವೂ ಸೇರಿದಂತೆ ಮಕ್ಕಳ ಅಗತ್ಯಗಳನ್ನು ತಿಳಿಸಲು ಕಾರ್ಯನೀತಿಯು ಒಂದು ಚೌಕಟ್ಟನ್ನು ಒದಗಿಸಿದೆ. ಮಕ್ಕಳ ಉಳಿಯುವಿಕೆ, ರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿಶ್ವ ಘೋಷಣೆಗೆ ಭಾರತವೂ ಸಹಿ ಹಾಕಿದೆ.

Digitised by Bharatavani, CIIL

ಇದರಲ್ಲಿ ಬೀದಿಮಕ್ಕಳು ಸೇರಿದಂತೆ ಅನನುಕೂಲವಿರುವ ಮಕ್ಕಳ ಶಿಕ್ಷಣದ ಕಾರ್ಯಕ್ರಮಗಳನ್ನು ಗಮನಿಸಿಕೊಳ್ಳಲಾಗಿದೆ. ಭಾರತ ಸರ್ಕಾರದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಕ್ಕಳಿಗಾಗಿ ಒಂದು ರಾಷ್ಟ್ರೀಯ ಕ್ರಿಯಾಯೋಜನೆಯನ್ನು ರೂಪಿಸಿದೆ. ಈ ಕ್ರಿಯಾಯೋಜನೆಯ ಅಡಿಯಲ್ಲಿ ಆರೋಗ್ಯ, ಜೀವವನ್ನು ಸೂಕ್ತ ಆಹಾರದಿಂದ ಪೋಷಿಸುವುದು, ಶುಚಿತ್ವ, ನೀರು, ಪರಿಸರ ಇತ್ಯಾದಿ ಪ್ರಮುಖ ಅಂಶಗಳೊಡನೆ ಶಿಕ್ಷಣವೂ ಸೇರಿದೆ. ಸರ್ಕಾರದ ಸರ್ವರಿಗೂ ಶಿಕ್ಷಣ ಚಳುವಳಿಯು 6ರಿಂದ 14 ವರ್ಷ ವಯೋಮಾನದ 19ರಿಂದ 24 ದಶಲಕ್ಷ ಮಕ್ಕಳ ಶಿಕ್ಷಣದ ಅಗತ್ಯಗಳನ್ನು ಎತ್ತಿ ಹೇಳುತ್ತದೆ.

ಸರ್ಕಾರವೇ ಎಚ್ಚರವಹಿಸಿದ್ದರೂ ಬೀದಿಮಕ್ಕಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ದುರದೃಷ್ಟವಶಾತ್, 1993ರವರೆಗೆ 'ಬೀದಿಮಕ್ಕಳು' ಎಂಬ ಪದವು ಸ್ವಾತಂತ್ರ್ಯ ನಂತರ ಭಾರತದ ಯಾವುದೇ ಸರ್ಕಾರಿ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳಲೇ ಇಲ್ಲ. ಖಾಸಗಿ ಮತ್ತು ಅಂತಾರಾಷ್ಟ್ರಿಯ ಸರ್ಕಾರೇತರ ಸಂಸ್ಥೆಗಳ ವಿಶೇಷವಾದ ಒತ್ತಡದಿಂದ 1993ರಲ್ಲಿ ಕಲ್ಯಾಣ ಕಾರ್ಯಕ್ರಮಗಳ ಮಂತ್ರಾಲಯದ ಅಡಿಯಲ್ಲಿ ಭಾರತ ಸರ್ಕಾರವು ಬೀದಿ ಮಕ್ಕಳ ನೆರವಿಗಾಗಿ ಯೋಜನೆಯೊಂದನ್ನು ಪ್ರಾರಂಭಿಸಿತು. ಬೀದಿಮಕ್ಕಳಿಗೆ ಜವಾಬ್ದಾರಿಯಾಗಿರುವ ಸಾಮಾಜಿಕ ನ್ಯಾಯ ಮತ್ತು ಅಧಿಕೃತ ಸ್ಥಿತಿಯ ಮಂತ್ರಾಲಯವು ಸ್ವಯಂ ಸೇವಾಸಂಸ್ಥೆಗಳ ಉಪಯೋಗಕ್ಕಾಗಿ ಬೀದಿಮಕ್ಕಳಿಗೆ ಸಂಬಂಧಿಸಿದ ಒಂದು ಸಮಗ್ರವಾದ ಕಾರ್ಯಕ್ರಮವನ್ನು ತಯಾರಿಸಿದೆ. ಈ ಕಾರ್ಯಕ್ರಮದ ಮೂಲ ಉದ್ದೇಶಗಳು ಇಂತಿವೆ. ಬೀದಿಯ ಹಾಗೂ ಕೆಲಸ ಮಾಡುವ ಮಕ್ಕಳನ್ನು ಗುರುತಿಸುವುದು, ಅವರನ್ನು ವಿವಿಧ ಬಗೆಯ ದುರುಪಯೋಗ ಮತ್ತು ಶೋಷಣೆಗಳಿಂದ ರಕ್ಷಿಸುವುದು, ಅವರಿಗೆ ಅನೌಪಚಾರಿಕ ಶಿಕ್ಷಣ, ಜೀವನಕಲೆಗಳ ತರಬೇತಿ, ವೃತ್ತಿಪರಶಿಕ್ಷಣ ಹಾಗೂ ಇತರ ಅತಿ ಅಗತ್ಯವಾದ ಸೇವೆಗಳು ಮೊದಲಾದವುಗಳನ್ನು ಒದಗಿಸುವುದು. ಈ ಮಕ್ಕಳನ್ನು ಪ್ರತ್ಯಾವರ್ತನದ ಹಾಗೂ ಮತ್ತೆ ಸಮಾಜದ ಅಂಗವಾಗಿಸುವಿಕೆಯ ಮೂಲಕ ಪುನರ್ವಸತಿಗೊಳಿಸುವುದು. ಬೀದಿಮಕ್ಕಳ ಸಮಗ್ರ ಕಾರ್ಯಕ್ರಮದ ಅತಿ ಮುಖ್ಯ ಅಂಗಗಳಲ್ಲಿ ಆಶ್ರಯ ನೀಡುವಿಕೆ, ಪುಷ್ಟಿಕರ ಆಹಾರ, ಆರೋಗ್ಯ, ರಕ್ಷಣೆ, ಶುಚಿತ್ವ ಮತ್ತು ನೈರ್ಮಲ್ಯ, ಅಪಾಯರಹಿತ ಕುಡಿಯುವ ನೀರು, ಶಿಕ್ಷಣ, ಮನರಂಜನಾ ಸೌಲಭ್ಯಗಳು ಹಾಗೂ ದುರುಪಯೋಗ ಮತ್ತು ಶೋಷಣೆಗಳಿಂದ ರಕ್ಷಣೆ ಇತ್ಯಾದಿಗಳು ಸೇರಿವೆ. ಎಲ್ಲ ರಾಜ್ಯಗಳ ರಾಜಧಾನಿಗಳು ಮತ್ತು ಒಂದು ದಶಲಕ್ಷ ಅಥವಾ ಅದಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರಗಳು ಈ ಕಾರ್ಯಕ್ರಮದಲ್ಲಿ ಸೇರಿವೆ. ಸರ್ಕಾರದ ಈ ಯೋಜನೆಗಳು ಈಗಾಗಲೇ ರಾಷ್ಟ್ರದ 37 ನಗರಗಳಲ್ಲಿ ಜಾರಿಗೆ ಬಂದಿದೆ. ಸುಮಾರು 32, 451 ಮಕ್ಕಳು ಇದರ ವ್ಯಾಪ್ತಿಯಲ್ಲಿ ಬರುತ್ತಾರೆ. (MHRD 1999).

ಬೀದಿ ಮಕ್ಕಳ ಶೈಕ್ಷಣಿಕ ಪುನರ್ವಸತಿಗೆ ಸಂಬಂಧಿಸಿದಂತೆ ಸರ್ಕಾರದ ತೊಡಗುವಿಕೆಯಲ್ಲಿ ಅಕ್ಷರತೆ, ಸಂಖ್ಯಾಶಾಸ್ತ್ರ ಮತ್ತು ಜೀವನ ಶಿಕ್ಷಣ, ಸಾಂಪ್ರದಾಯಿಕ ಶಾಲೆಗಳಲ್ಲಿ ಈ ಮಕ್ಕಳನ್ನು ಸೇರಿಸುವುದು, ಹಾಗೂ ಧನಸಹಾಯ, ಶಿಕ್ಷಣ, ಪೋಷಣೆ, ಮನರಂಜನೆ ಇತ್ಯಾದಿಗಳು ಸೇರಿವೆ. ವೃತ್ತಿಪರ ಕೌಶಲಗಳನ್ನು ಒದಗಿಸಿ ಅಧಿಕವಾಗಿ ಅವರನ್ನು ಸ್ವತಂತ್ರರನ್ನಾಗಿ ಮಾಡುವ ಮೂಲಕ ಬೀದಿ ಮಕ್ಕಳನ್ನು ಮುಖ್ಯವಾಹಿನಿಗೆ ಗೌರವಯುತವಾಗಿ ಸೇರ್ಪಡೆಗೊಳಿಸುವುದೂ ಈ ಕಾರ್ಯಕ್ರಮದ ಗುರಿಯಾಗಿದೆ. ಬೀದಿಮಕ್ಕಳನ್ನು ಒಳಗೊಂಡ ಎಲ್ಲ ಸರ್ಕಾರಿ ಕಾರ್ಯಕ್ರಮಗಳೂ ಸ್ವಯಂ ಸೇವಾ ಗುಂಪುಗಳ ಸಹಕಾರದೊಂದಿಗೆ ಜಾರಿಗೆ ಬಂದಿವೆ.

ಮಾನವನ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (MHRD)ವೂ ಬೀದಿಮಕ್ಕಳ ಶಿಕ್ಷಣಕ್ಕೆ ಹಲವು ಕ್ರಮಗಳನ್ನು ಕೈಗೊಂಡಿದೆ. ಈಗಾಗಲೇ ಪ್ರಾರಂಭಗೊಂಡಿರುವ ಪರ್ಯಾಯ ಶಾಲಾ ವ್ಯವಸ್ಥೆಯು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ(DPEP)ದ ಅಡಿಯಲ್ಲಿ ಹಲವಾರು ರಾಜ್ಯಗಳಲ್ಲಿ ಜಾರಿಗೆ ಬಂದಿದೆ. ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟವರು, ಶಾಲೆಯೇ ಇರದ ವಾಸಸ್ಥಾನಗಳ ಮಕ್ಕಳು, ವಲಸೆ ಬಂದವರ ಮಕ್ಕಳು, ಬೀದಿ ಮಕ್ಕಳು, ತಂದೆತಾಯಿಯರಿಗೆ ಸಹಾಯ ಮಾಡಬೇಕಾಗಿರುವುದರಿಂದ ಶಾಲೆಗೆ ಹೋಗಲಾರದ ಮಕ್ಕಳು, ಸ್ಥಳಾಂತರಿತ ಕುಟುಂಬಗಳ ಮಕ್ಕಳು, ಗ್ಯಾರೇಜು, ಢಾಬಾಗಳು, ಕಾರ್ಖಾನೆ ಮೊದಲಾದವುಗಳಲ್ಲಿ ಕೆಲಸ ಮಡುವ ಮಕ್ಕಳು, ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಮಕ್ಕಳು, ಹದಿಹರೆಯದ ಹೆಣ್ಣು ಮಕ್ಕಳು, ಈ ಮೊದಲಾದ ವಿವಿಧ ವರ್ಗಗಳ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಗಮನಿಸಲಾಗಿದೆ. ನಿರ್ದಿಷ್ಟ ಕಾರ್ಯ ವಿಧಾನಗಳನ್ನು ರೂಪಿಸಲು ವಿವಿಧ ಕಾರ್ಯತಂತ್ರಗಳನ್ನು ಗುರುತಿಸಲು ಪ್ರಯತ್ನ ನಡೆದಿದೆ.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತು(NCERT) ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ(HRD) ಮಂತ್ರಾಲಯಗಳು ಅಂತರ್ಗತ(Inclusive) ಶಿಕ್ಷಣ ಎಂಬ ಒಂದು ಕಾರ್ಯಕ್ರಮವನ್ನು ರೂಪಿಸಿವೆ. ವಿಕಲಾಂಗರಿಗೆ ಸಾಮಾನ್ಯ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ಒದಗಿಸುವುದೇ ಇದರ ಉದ್ದೇಶ. ಈ ಕಾರ್ಯಕ್ರಮವು ದೃಷ್ಟಿದೋಷ ಇರುವ, ಆಲಿಸುವ ಮತ್ತು ಮಾತನಾಡುವ ಸಮಸ್ಯೆಗಳಿರುವ, ನಿಧಾನವಾಗಿ ಕಲಿಯುವ ಇತ್ಯಾದಿ ತೊಂದರೆಗಳಿಂದ ಕೂಡಿರುವ ಮಕ್ಕಳಿಗಾಗಿ ಇದೆ. ಇಂತಹ ವಿಕಲಾಂಗ ಮಕ್ಕಳು ತಮ್ಮ ಸಾಂದರ್ಭಿಕ ದೇಹ ದೌರ್ಬಲ್ಯಗಳಿಂದ ಬೀದಿಮಕ್ಕಳ ಗುಂಪಿನಲ್ಲಿ ದೊಡ್ಡ ಸಂಖ್ಯೆಯಲ್ಲಿ ಇರುತ್ತಾರೆ. NCERTಯು ದಶಕಕ್ಕಿಂತ ಹೆಚ್ಚುಕಾಲದಿಂದ ನೇರವಾಗಿ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ವಿಶೇಷವಾಗಿ ಅನೌಪಚಾರಿಕ ಶಿಕ್ಷಣಕ್ಷೇತ್ರ ಸೇರಿದಂತೆ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿದೆ. ಈ ಪ್ರಯತ್ನದಲ್ಲಿ ಪಠ್ಯಕ್ರಮ ಹಾಗೂ ಅಭ್ಯಾಸ ವಸ್ತುಗಳ ತಯಾರಿಕೆ ಸೇರಿದೆ.

ಬೀದಿ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಪ್ರಯತ್ನಗಳು: ಸರ್ಕಾರೇತರ ಸಂಸ್ಥೆಗಳು ಬೀದಿ ಮಕ್ಕಳ ಕಳೆದುಹೋದ ಬಾಲ್ಯವನ್ನು ತಮ್ಮದೇ ಆದ ನವೀನ ಕಾರ್ಯಕ್ರಮಗಳ

Digitised by Bharatavani, CIIL

ಮೂಲಕ ಮರಳಿ ತಂದು ಕೊಡುವ ಕಾರ್ಯದಲ್ಲಿ ಗಮನಾರ್ಹ ಪಾತ್ರವನ್ನು ನಿರ್ವಹಿಸುತ್ತಿದೆ. ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರ ಜೊತೆಯಲ್ಲಿ ಈ ಕಾರ್ಯವನ್ನು ಮಾಡುತ್ತಿವೆ. ಕಳೆದ ಎರಡು ದಶಕಗಳಿಂದ ಮೆಟ್ರೋಪಾಲಿಟನ್ ನಗರಗಳೂ ಸೇರಿದಂತೆ ಇತರ ನಗರ ಹಾಗೂ ಪಟ್ಟಣಗಳಲ್ಲಿರುವ ಈ ಅತ್ಯಂತ ಅವಕಾಶವಂಚಿತ ಮಕ್ಕಳಿಗೆ ನೆರವಾಗಲು ಒಂದು ಕಾರ್ಯಕ್ರಮದ ಮೂಲಕ ಮುಂಚೂಣಿಯಲ್ಲಿದ್ದಾರೆ. ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳಿಂದಲೂ, ಭಾರತ ಸರ್ಕಾರದಿಂದಲೂ ಪ್ರೋತ್ಸಾಹ ಹಾಗೂ ಆರ್ಥಿಕ ನೆರವನ್ನು ಪಡೆದು ಕೆಳಮಟ್ಟದಲ್ಲಿರುವ ಬೀದಿಮಕ್ಕಳ ಉದ್ಧಾರಕ್ಕೆ ಕ್ರಮಬದ್ಧವಾಗಿ ಕಾರ್ಯನಿರ್ವಹಿಸಿವೆ. ಇವುಗಳಲ್ಲಿ ಅನೇಕವು ಅನೌಪಚಾರಿಕ ಶಿಕ್ಷಣಕೇಂದ್ರಗಳನ್ನು ನಡೆಸುವುದೇ ಅಲ್ಲದೆ ಈ ಮಕ್ಕಳಿಗೆ ಆಶ್ರಯ, ಆರೋಗ್ಯ ಸೌಲಭ್ಯಗಳು, ಮನರಂಜನೆ ಮತ್ತಿತರ ಅಗತ್ಯಗಳನ್ನು ಒದಗಿಸುತ್ತಿವೆ. ಇವುಗಳಲ್ಲಿ ಕೆಲವು ಬೀದಿ ಮಕ್ಕಳ ಶಿಕ್ಷಣಕ್ಕಾಗಿ ಸ್ವತಂತ್ರವಾಗಿ ಅಥವಾ ಜಂಟಿಯಾಗಿ ಪಠ್ಯಕ್ರಮ ಮತ್ತು ವ್ಯಾಸಂಗ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿವೆ. ಈ ಮಕ್ಕಳು ಕ್ಷೇಮವಾಗಿರಲು ಶಿಕ್ಷಣವೇ ಮಹಾದ್ವಾರ ಎಂಬುದರ ಕಾರ್ಯಕಾರಿತ್ವವನ್ನು ಒಕ್ಕೊರಲಿನಿಂದ ಈ ಎಲ್ಲಾ ಸ್ವಯಂಪ್ರೇರಿತ ಪ್ರವರ್ತನ ಶಕ್ತಿಗಳು ನಂಬುತ್ತವೆ ಆದರೆ ಅವರ ಪ್ರಯತ್ನಗಳು ಚದುರಿಹೋಗಿವೆ. ಬೀದಿ ಮಕ್ಕಳಿಗೆ ಬಹುತೇಕ ಸರ್ಕಾರೇತರ ಸಂಸ್ಥೆಗಳು ನೀಡುತ್ತಿರುವ ಶಿಕ್ಷಣವನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಅನೌಪಚಾರಿಕ ಶಿಕ್ಷಣ ಮತ್ತು ವೃತ್ತಿಯಾಧಾರಿತ ಶಿಕ್ಷಣ.

ಅನೌಪಚಾರಿಕ ಶಿಕ್ಷಣ: ಪ್ರಾಥಮಿಕ ಶಿಕ್ಷಣದ ಅವಕಾಶವು ಗಮನಾರ್ಹವಾಗಿ ವಿಸ್ತಾರಗೊಂಡಿದ್ದರೂ ಅದು ಶಾಲೆಗೆ ಹೋಗುವ ವಯಸ್ಸಿನ ಎಲ್ಲ ಮಕ್ಕಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿಲ್ಲ. ಅಧಿಕ ಸಂಖ್ಯೆಯ ಮಕ್ಕಳು ದಾಖಲಾಗಲಿಲ್ಲ. ಅಥವಾ ದಾಖಲಾಗಲು ಅವರಿಗೆ ಸಾಧ್ಯವಾಗಲಿಲ್ಲ. ಅಧಿಕ ಸಂಖ್ಯೆಯ ಮಕ್ಕಳು ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸದೆ ಮಧ್ಯದಲ್ಲಿಯೇ ಬಿಟ್ಟು ಹೋಗಿದ್ದಾರೆ. ಪ್ರಸಕ್ತ ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಶಾಲಾ ಸಮಯವು ಅನಮ್ಯವಾಗಿದ್ದು ಈ ಮಕ್ಕಳ ಅಗತ್ಯಗಳಿಗೂ, ಅವಶ್ಯಕತೆಗಳಿಗೂ ಸೂಕ್ತವಾಗಿಲ್ಲದಿರುವುದನ್ನು ಕಾಣಬಹುದಾಗಿದೆ. ಅವರಿಗೆ ಕೇವಲ ಅಕ್ಷರಸ್ಥರನ್ನಾಗಿಸುವ ಪಠ್ಯಕ್ರಮಕ್ಕಿಂತ ಜೀವನಕೌಶಲಗಳತ್ತ ಹೆಚ್ಚು ಗಮನ ಕೇಂದ್ರೀಕರಿಸಿದ ವಿಶೇಷ ಪಠ್ಯಕ್ರಮದ ಅಗತ್ಯವಿದೆ. ಈ ಮಕ್ಕಳ ನಿರ್ದಿಷ್ಟ ಗುಂಪುಗಳ ವಿವಿಧ ಅಗತ್ಯಗಳು ಮತ್ತು ಸಮಸ್ಯೆಗಳಿಗೆ ಉತ್ತರವಾಗಿರುವಂತಹ, ನವ್ಯತೆ ಹಾಗೂ ಹೊಸತನ್ನು ಅಂಗೀಕರಿಸಲು ಅವಕಾಶವಿರುವ ಪಠ್ಯಕ್ರಮವನ್ನು ರೂಪಿಸಬೇಕೆಂಬ ಬಲವಾದ ಅಭಿಪ್ರಾಯ ಕೇಳಿಬಂದಿತು. ಭಾರತಸರ್ಕಾರವು ಶಾಲಾ ಸಮಯಗಳಲ್ಲಿ ನಮ್ಯತೆ ಇರುವ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮವನ್ನು ಜಾರಿಗೆ ತಂದಿತು. ಸರ್ಕಾರದ ನೆರವಿನಿಂದ ಸ್ಥಾಪಿಸಲ್ಪಟ್ಟ ಕೇಂದ್ರಗಳು ಲಕ್ಷಾಂತರ ಮಕ್ಕಳು ಶಿಕ್ಷಣದ ಜಾಲದ ಒಳನುಸುಳಲು ಅವಕಾಶ ಒದಗಿಸಿದವು. ನಗರ ಪ್ರದೇಶಗಳಲ್ಲಿ ಕೆಲಸಮಾಡುವ ಅನೇಕ ಸ್ವಯಂಪ್ರೇರಿತ ಗುಂಪುಗಳ ಸಂಪ್ರದಾಯಬದ್ಧವಲ್ಲದ ಈ ವಿಧಾನದಲ್ಲಿ ಶಿಕ್ಷಣವನ್ನು ನೀಡುವ ಸವಾಲನ್ನು ಎತ್ತಿಕೊಂಡವು.

ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ ಕಲಿಸುವ ಪಠ್ಯಕ್ರಮ ಹಾಗೂ ವಿಷಯಗಳು ಮೂಲ ಅಕ್ಷರ ಕಲಿಕಾ ಕೌಶಲಗಳಿಂದ ಹಿಡಿದು ಕಲಿಕೆಯ ಕನಿಷ್ಠಮಟ್ಟದವರೆಗೆ, ಜೀವನದ ಅರ್ಥಪೂರ್ಣ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅಗತ್ಯವಾದ ಜೀವನ ಕೌಶಲಗಳವರೆಗೆ ವೈವಿಧ್ಯಪೂರ್ಣವಾಗಿರುತ್ತವೆ. ಆಂಧ್ರಪ್ರದೇಶದ ಸರ್ಕಾರೇತರ ಸಂಸ್ಥೆಯಾದ ಎಂ.ವಿ. ಫೌಂಡೇಷನ್ ಒಂದು ಶಿಬಿರ ಮಾದರಿಯನ್ನು ರೂಪಿಸಿದೆ. ಇದರ ಮೂಲಕ 9 ರಿಂದ 14 ವರ್ಷ ವಯೋಮಿತಿಯ ಅನಕ್ಷರಸ್ಥ ಕೆಲಸ ಮಾಡುವ ಮಕ್ಕಳನ್ನು ಔಪಚಾರಿಕ ಶಿಕ್ಷಣಕ್ಕೂ ತಯಾರು ಮಡಲಾಗುತ್ತದೆ. ಶಿಕ್ಷಣ ಮಾದರಿಯ ಮುಖ್ಯ ಲಕ್ಷಣವೆಂದರೆ ಕೆಲಸಮಾಡುವ ಮಗುವು ಕ್ರಮೇಣ ಶಿಕ್ಷಣ ಪ್ರಪಂಚಕ್ಕೆ ತನ್ನನ್ನು ತಾನೇ ತೆರೆದುಕೊಳ್ಳುತ್ತದೆ. ಎಂ.ವಿ. ಫೌಂಡೇಷನ್ ಸಂಸ್ಥೆಯು ಮೊದಲು ನಗರ ಪ್ರದೇಶಗಳಲ್ಲಿ ಕೆಲಸಮಾಡುವ ಮಕ್ಕಳಿಗಾಗಿ ಅಭಿವೃದ್ಧಿಪಡಿಸಿದ ಶಿಬಿರ ಮಾದರಿ ವಿಧಾನವನ್ನು ಹೈದರಾಬಾದ್ ನಗರಕ್ಕೂ ವಿಸ್ತರಿಸಿದೆ. ಇನ್ನೊಂದು ಕಡೆ ಕೊಲ್ಕತ್ತಾದ CINI ಆಶಾ ಸಂಸ್ಥೆಯ ಸೇತುಬಂಧ ಕ್ರಮವು ನಗರ ಪ್ರದೇಶಗಳಿಗೆ ಸೂಕ್ತವಾಗಿದೆ. ಇದರ ಎದ್ದು ಕಾಣುವ ಲಕ್ಷಣವೆಂದರೆ ಇದು ಕೆಲಸಮಾಡುವ ಮಕ್ಕಳನ್ನು ಅವರು ಕಾಯಕ ಚಟುವಟಿಕೆಯೊಂದಿಗೆ ಶಿಕ್ಷಣವನ್ನು ಮುಂದುವರೆಸಲು ಉತ್ತೇಜಿಸುವುದು. ಸೇತುಬಂಧಕ್ರಮದ ಮೂಲ ಉದ್ದೇಶವೆಂದರೆ ಅವರಿಗೆ ಓದುವ, ಬರೆಯುವ ಮತ್ತು ಲೆಕ್ಕಾಚಾರ ಮಾಡುವ ಮೂಲ ಕಲಿಕಾ ಕೌಶಲಗಳನ್ನು ಕಲಿಸುವುದು, ತನ್ಮೂಲಕ ಮಕ್ಕಳು ತಮ್ಮ ದಿನನಿತ್ಯದ ಜೀವನದಲ್ಲಿ ಈ ಕೌಶಲಗಳನ್ನು ಅರ್ಥಪೂರ್ಣವಾಗಿ ಉಪಯೋಗಿಸಲು ಶಕ್ತರಾಗುವುದು. ಡೋರ್‌ಶಾಲೆಯು ಪ್ರಾರಂಭಿಸಿದ ಡೋರ್‌ಸ್ಟೆಪ್ ಮಾದರಿಯ ಸೇತುಬಂಧ ವಿಧಾನವು ಮುಂಬಯಿಯ ಬೀದಿಯಲ್ಲಿನ ಮಕ್ಕಳಿಗಾಗಿ ಇದೆ. ಓದುವ ಮತ್ತು ಬರೆಯುವ ಕೌಶಲಗಳನ್ನು ಸುಲಭ ಮಾಡುವ ಸರಳವಾದ ಕೆಲಸದ ಪಟ್ಟಿಯನ್ನು ತಯಾರಿಸುವುದು ಇದಕ್ಕೆ ಮುಖ್ಯವಾಗಿದೆ. ಈ ಕೆಲಸದ ಪಟ್ಟಿಗಳನ್ನು ಮುಂಬೈ ನಗರದ ಇತರ ಸರ್ಕಾರೇತರ ಸಂಸ್ಥೆಗಳೂ ಉಪಯೋಗಿಸುತ್ತಿವೆ. ತಿಲಕ್‌ನಗರದ ಮಕ್ಕಳ ಕೇಂದ್ರ (TNCC)ವು ಪ್ರಥಮ ಆದ್ಯತೆ ನೀಡಿದ ಮುಕ್ತ ತರಗತಿ ವಿಧಾನವು ಪರ್ಯಾಯ ಶಿಕ್ಷಣಕ್ರಮವಾಗಿದ್ದು, ಇದು ಇಂದಿನ ಮಗುವಿನ ಅಗತ್ಯವಾಗಿದೆ. (ಮಾರ್ಗರೆಟ್, ಚೆನ್ನೈ). ತಂದೆತಾಯಿಯರಿಗೆ ಗೌರವ ತೋರಿಸಿ ಅವರ ಮಕ್ಕಳ ಬಗ್ಗೆ ಅವರ ಆಲೋಚನೆಗಳನ್ನು, ಭಾವನೆಗಳನ್ನು ಆಲಿಸಿ ಮಕ್ಕಳ ಅಗತ್ಯಗಳನ್ನು ಗುರುತಿಸುವುದು ಈ ವಿಧಾನದ ಪ್ರಮುಖಾಂಶ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಸಮುದಾಯದ ಭಾಗವಹಿಸುವಿಕೆಯು ಇದರ ಒಂದು ಮುಖ್ಯ ಅಂಶವಾಗಿದೆ. ಅನೌಪಚಾರಿಕ ಶಿಕ್ಷಣಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಸರ್ಕಾರೇತರ ಸಂಸ್ಥೆಗಳು ಈಚಿನ ದಿನಗಳಲ್ಲಿ ಈ ವಿಷಯಕ್ಕೆ ಪ್ರಾಮುಖ್ಯತೆ ನೀಡುತ್ತಿವೆ. ನೈಜ ಶಿಕ್ಷಣವು ದೊರಕಬೇಕಾದರೆ ನಮ್ಮ ಶಿಕ್ಷಣ ವ್ಯವಸ್ಥೆಯು ಕಾರ್ಯವಿಧಾನವನ್ನು ಗುರಿಯಾಗಿಸಿಕೊಂಡಿರಬೇಕು. ಇಲ್ಲಿ ಬಾಹ್ಯ ಪ್ರಪಂಚದೊಂದಿಗೆ

Digitised by Bharatavani, CIIL

ಸಮರಸವಾಗಿ ಬಾಳಲು ಸಾಧ್ಯವಾಗುವಂತೆ ತಮ್ಮನ್ನು ತಾವೇ ಕಂಡುಕೊಳ್ಳಲು ನೆರವಾಗುವಂತೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶ ಇರಬೇಕು. ಇದು TNCCಯ ನಂಬಿಕೆ. TNCCಯು ತನ್ನ ಮುಕ್ತ ತರಗತಿಗಳಿಗಾಗಿ ಅಭಿವೃದ್ಧಿ ಪಡಿಸಿರುವ ಪಠ್ಯಕ್ರಮವು ಶಿಕ್ಷಣದ ಈ ಉದ್ದೇಶವನ್ನು ಸಾಧಿಸುವುದನ್ನು ಗುರಿಯಾಗಿಸಿಕೊಂಡಿದೆ.

ವಿವಿಧ ಸರ್ಕಾರೇತರ ಸಂಸ್ಥೆಗಳು ಒಪ್ಪಿಕೊಂಡು ಉಪಯೋಗಿಸುತ್ತಿರುವ ಅನೌಪಚಾರಿಕ ಶಿಕ್ಷಣ ಮಾದರಿಗಳು ಒಂದೋ ತಾವೇ ರೂಪಿಸಿದ ಪಠ್ಯಕ್ರಮವಾಗಿರುತ್ತದೆ ಅಥವಾ ರಾಜ್ಯ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮದ ಪ್ರತಿರೂಪವಾಗಿರುತ್ತದೆ. ಅನೇಕ ಸರ್ಕಾರೇತರ ಸಂಸ್ಥೆಗಳ ಸ್ವಯಂ ರೂಪಿಸಿದ ಪಠ್ಯ ವಿನ್ಯಾಸವು ಓದುವಿಕೆ, ಬರೆಯುವಿಕೆ ಮತ್ತು ಲೆಕ್ಕಾಚಾರ ಮಾಡುವಿಕೆಯನ್ನು ಕಲಿಸುವ ಮೂಲ ಕೌಶಲಗಳು ಸೇತುಬಂಧಕ್ರಮವನ್ನು ಆಧರಿಸಿವೆ. ಪ್ರಯಾಸ್, ರೀಪಾಲಯ, ಬಟರ್‌ಫ್ಲೈಸ್, ಅಂಕುರ್ ಮುಂತಾದ ಸರ್ಕಾರೇತರ ಸಂಸ್ಥೆಗಳು ಮಕ್ಕಳಿಗಾಗಿ ಸ್ವಯಂ ವಿವರಿಸುವ ಕೆಲಸದ ಪಟ್ಟಿಗಳನ್ನು ರೂಪಿಸಿವೆ. ಮಾಲಾಯೋಜನೆಯು NCERT ರೂಪಿಸಿರುವ ಪಠ್ಯಕ್ರಮ ಕಲಿಕೆಯ ಕನಿಷ್ಠ ಮಟ್ಟಗಳನ್ನು ಅನುಸರಿಸುತ್ತಿದೆ. ಪ್ರಯಾಸ್ ರೂಪಿಸಿರುವ ಅನೌಪಚಾರಿಕ ಶಿಕ್ಷಣದ ಮಾದರಿಯು ಮೊದಲು BRAC(Bangladesh Rural Advancement Committee) ಯ ಮತ್ತು NCERTಯ ಮಾದರಿಗಳನ್ನು ಆಧರಿಸಿದ್ದು ಇಂತಹ ಮಕ್ಕಳ ಅಗತ್ಯಗಳನ್ನು ಮತ್ತು ಆಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಸೂಕ್ತವಾಗಿ ಮಾರ್ಪಾಟು ಹೊಂದಿದೆ. ಪ್ರಯಾಸ್ ನಿರ್ಮಿಸಿರುವ ಕೆಲವು ಸಲಕರಣೆಗಳು ಬಾಲಕಸ್ನೇಹಿಯಗಿವೆ ಮತ್ತು ಅನೌಪಚಾರಿಕ ಶಿಕ್ಷಣದ ಪರಿಸರದಲ್ಲಿ ಒಂದು ಮಗುವೂ ಸಹ ಸಂಪನ್ಮೂಲ ವ್ಯಕ್ತಿಯಾಗಬಹುದು ಎಂಬ ಆಧಾರವಾಕ್ಯವನ್ನು ಆಧರಿಸಿ ತಯಾರಾಗಿವೆ. ಮಕ್ಕಳು ತಮ್ಮ ಕಲ್ಪನಾಶಕ್ತಿ, ಆಲೋಚನೆ, ಕೌಶಲ ಮೊದಲಾದವುಗಳನ್ನು ಹಲವಾರು ರೀತಿಗಳಲ್ಲಿ ವ್ಯಕ್ತಪಡಿಸಲು ಪ್ರಯಾಸ್ ಅವಕಾಶವನ್ನು ಒದಗಿಸುತ್ತದೆ. ಮಗುವಿನ ಕುಟುಂಬದ ಸದಸ್ಯರೊಂದಿಗೆ ಶಿಕ್ಷಕರು ವೈಯಕ್ತಿಕ ಸಂಬಂಧ ಹೊಂದಿರಬೇಕು ಎಂಬುದನ್ನು ಸಂಸ್ಥೆಯು ಒತ್ತಿ ಹೇಳುತ್ತದೆ. ಪ್ರಯಾಸ್‌ನ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮವು ಸಮುದಾಯದೊಂದಿಗೆ ಸದಾ ನಡೆಯುವ ಅಂತರಕ್ರಿಯೆ ಎಂಬುದು ಒಂದು ಮುಖ್ಯವಾದ ಅಂಶವಾಗಿದೆ. ಇದು ಮಕ್ಕಳೊಂದಿಗೆ ಪರಸ್ಪರ ಕಾರ್ಯ ನಡೆಸುವುದು ಮಾತ್ರವಲ್ಲದೆ ಮಾತಾಪಿತರು, ಮಕ್ಕಳು, ಸಮುದಾಯದ ಮುಖಂಡರು ಮತ್ತು ಅನೌಪಚಾರಿಕ ಶಿಕ್ಷಣ ಶಿಕ್ಷಕರನ್ನು ಒಳಗೊಂಡ ಪ್ರಯಾಸ್ ಸಮುದಾಯ ಸಮಿತಿ(PSS)ಯನ್ನು ತನ್ನ ವಿವಿಧ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳುತ್ತದೆ. ಈ ಸಮಿತಿಯು ಕೊಳೆಗೇರಿಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವಲ್ಲಿ ಮತ್ತು ಮಕ್ಕಳ ಪ್ರಗತಿಯನ್ನು ಗಮನಿಸುವಲ್ಲಿ ಪ್ರಯಾಸ್‌ನ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮಕ್ಕೆ ಬೆಂಬಲವನ್ನು ಒದಗಿಸುತ್ತದೆ. ಮಧ್ಯದಲ್ಲಿಯೇ ಶಾಲೆಬಿಟ್ಟ, ಸಾಮಾಜಿಕ ಪರಿಸರದೊಂದಿಗೆ ಹೊಂದಿಕೊಳ್ಳಲಾಗದ ದುರುಪಯೋಗಕ್ಕೆ ಒಳಗಾದ ಮಕ್ಕಳಿಗೆ ಆಪ್ತ ಸಮಾಲೋಚನೆಯನ್ನು ಈ ಸಮಿತಿಯು ಒದಗಿಸುತ್ತದೆ. ಇಂತಹ ಸಮುದಾಯ ಆಧಾರಿತ ಸಂಸ್ಥೆಗಳನ್ನು ಇತರ ಅನೇಕ ಸರ್ಕಾರೇತರ ಸಂಘಗಳು ದೇಶದ ವಿವಿಧ ಭಾಗಗಳಲ್ಲಿ ಸಮುದಾಯದ ಹಾಗೂ ಮಕ್ಕಳ ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ಸ್ಥಾಪಿಸಿವೆ.

ದೆಹಲಿಯಲ್ಲಿ 1987 ಆಗಸ್ಟ್‌ನಲ್ಲಿ ಬೀದಿಯ ಮತ್ತು ಕೆಲಸ ಮಾಡುವ ಮಕ್ಕಳಿಗೂ ಒಂದು ಸರ್ಕಾರೇತರ ಸಂಸ್ಥೆಗಳ ಸಾರ್ವಜನಿಕ ಸಭಾಸ್ಥಾನ(Forum) ಸ್ಥಾಪನೆಯಾಯಿತು. ಇದು ಅನೌಪಚಾರಿಕ ಶಿಕ್ಷಣ ಕೇಂದ್ರಗಳ ಗುರಿಗಳು, ಉದ್ದೇಶಗಳು, ವಿಧಾನಗಳು ಮತ್ತು ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಅನೇಕ ಕಾರ್ಯಾಗಾರಗಳನ್ನು ಏರ್ಪಡಿಸುವ ಮೂಲಕ ಹಲವಾರು ಕ್ರಮಗಳನ್ನು ಕೈಗೊಂಡಿತು (Butterflies 1998). ಇದು ರಾಷ್ಟ್ರಮಟ್ಟದಲ್ಲಿ ಇದೇ ಬಗೆಯ ಉದ್ದೇಶಗಳನ್ನು ಇಟ್ಟುಕೊಂಡಿರುವ ಮತ್ತು ಇಂತಹ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಒತ್ತಿ ಹೇಳುವ ರಾಷ್ಟ್ರೀಯ ಸರ್ಕಾರೇತರ ಸಂಘಗಳ ಘೋರಂನ ಸದಸ್ಯಸ್ಥಾನ ಪಡೆದಿದೆ. ರಾಷ್ಟ್ರದ ವಿವಿಧ ಭಾಗಗಳಲ್ಲಿ ಬೀದಿಮಕ್ಕಳ ಹಿತಾಸಕ್ತಿಯನ್ನು ರಕ್ಷಿಸಲು ಇತರ ಅನೇಕ ಜನರ ತಂಡಗಳ ಜಾಲಗಳು ಹುಟ್ಟಿಕೊಂಡಿವೆ. ಇವುಗಳ ಜೊತೆಗೆ ಬೀದಿ ಮಕ್ಕಳಿಗಾಗಿ ಇತರ ಅನೇಕ ಚಟುವಟಿಕೆಗಳು ನಡೆಯುತ್ತಿವೆ. ಪಠ್ಯಕ್ರಮವನ್ನು ರೂಪಿಸುವುದು, ವಿಷಯವನ್ನು ಆರಿಸುವುದು, ಆ ಮಕ್ಕಳ ಔಪಚಾರಿಕ ಶಾಲೆಗಳಲ್ಲಿ ಪ್ರವೇಶ ಪಡೆಯುವುದು ಅಥವಾ ರಾಷ್ಟ್ರೀಯ ಮುಕ್ತಶಾಲೆಯ ಸೌಕರ್ಯಗಳನ್ನು ಅವರಿಗೆ ಒದಗಿಸುವುದು ಈ ಮುಂತಾದ ಹಲವು ವಿಧಗಳಲ್ಲಿ ಇಂತಹ ಮಕ್ಕಳಿಗೆ ಶಿಕ್ಷಣವನ್ನು ನೀಡುವುದು ಈ ಎಲ್ಲಾ ತಂಡಗಳ ಪ್ರಮುಖವಾದ ಉದ್ದೇಶವಾಗಿದೆ.

ಅನೌಪಚಾರಿಕ ಶಿಕ್ಷಣದ ಪಠ್ಯಕ್ರಮವು ಸ್ಥೂಲವಾಗಿ ಮೂರು ಹಂತಗಳನ್ನು ಹೊಂದಿದೆ: ಸಿದ್ಧತೆಯ ಹಂತ, ಪ್ರಾಥಮಿಕ ಹಂತ ಮತ್ತು ಮುಂದುವರಿದ ಹಂತ. ಬೋಧನೆ-ಕಲಿಕೆಯ ಸಂಗತಿಗಳ ವಿಷಯಗಳಲ್ಲಿ ಭಾಷಾಭಿವೃದ್ಧಿ (ಮೌಖಿಕ ಸಂವಹನ, ಬರವಣಿಗೆಯ ಕೌಶಲ, ವಾಸ್ತವಿಕ ಬರವಣಿಗೆ, ಕ್ರಿಯಾತ್ಮಕ ಬರವಣಿಗೆ, ಪಠ್ಯ ಅಥವಾ ಮುದ್ರಿತ ಸಮಾಚಾರವನ್ನು ಅರಿಯುವ ಸಾಮರ್ಥ್ಯ), ಗಣಿತ (ಗಣಿತದ ಮೂಲಸೂತ್ರಗಳನ್ನು ತಿಳಿದುಕೊಳ್ಳುವುದು-ಓದುವುದು, ಸಂಖ್ಯೆಗಳ ಮೌಲ್ಯವನ್ನು ಅರಿತುಕೊಳ್ಳುವುದು), ಕ್ರಿಯೆಗಳು (ಸಂಕಲನ, ವ್ಯವಕಲನ, ಗುಣಾಕಾರ, ಭಾಗಕಾರ ಇತ್ಯಾದಿಗಳು), ಮೂಲ ರೇಖಾಗಣಿತ (ಎರಡು/ಮೂರು ಆಯಾಮಗಳ ಆಕೃತಿಗಳ ಆಕಾರಗಳನ್ನು ಗುರುತಿಸುವುದು, ಕೋನಗಳ ಅಳತೆ ಇತ್ಯಾದಿ), ವಿಜ್ಞಾನ (ಆರೋಗ್ಯ, ನೈರ್ಮಲ್ಯಶಾಸ್ತ್ರ ಇತ್ಯಾದಿ) ಮತ್ತು ಸಮಾಜ ವಿಜ್ಞಾನ (ಭೂಗೋಳ, ಚರಿತ್ರೆ) ಮತ್ತು ಸಮುದಾಯ ಜೀವನ (ಕಲೆ, ಕರ ಕೌಶಲ, ಸಂಗೀತ ಇತ್ಯಾದಿ)ಗಳು ಸಾಮಾನ್ಯವಾಗಿ ಒಳಗೊಂಡಿರುತ್ತವೆ. ಆದಾಗ್ಯೂ, ಬೋಧನೆಯ ಮಟ್ಟ ಮತ್ತು ವಿಧಾನಗಳು ಮಗುವಿನ ವಯಸ್ಸು ಹಾಗೂ ಕಲಿಕೆಯ ಸಾಮರ್ಥ್ಯಕ್ಕೆ ಅನುಗುಣವಾಗಿ ಬದಲಾಗುತ್ತವೆ.

Digitised by Bharatavani, CIIL

ಈಚೆಗೆ ಪ್ರಕಟವಾದ ಸಂಶೋಧನಾ ಅಧ್ಯಯನದಲ್ಲಿ (Zootshi, 2000), ರಾಷ್ಟ್ರದ ಅನೇಕ ಭಾಗಗಳಲ್ಲಿನ ಸರ್ಕಾರೇತರ ಸಂಸ್ಥೆಗಳು ಅನೌಪಚಾರಿಕ ವಿಧಾನದಲ್ಲಿ ಶಿಕ್ಷಣವನ್ನು ನೀಡುತ್ತಿರುವುದು ಸಾಕಷ್ಟು ಅರ್ಥಪೂರ್ಣವಾಗಿಯೂ, ಪರಿಣಾಮಕಾರಿಯಾಗಿಯೂ ಇದೆ ಎಂಬುದಾಗಿ ವರದಿಮಾಡಲಾಗಿದೆ. ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಉಂಟುಮಾಡುವಲ್ಲಿ ಪ್ರಚೋದನೆಯು ಒಂದು ಶಕ್ತಿಶಾಲಿ ಸಾಧನ. ಈ ವಿಷಯವನ್ನು ಅರ್ಥಮಾಡಿಕೊಂಡ ಅನೇಕ ಸರ್ಕಾರೇತರ ಸಂಸ್ಥೆಗಳು ಬೋಧನೆ–ಕಲಿಕೆಯ ಪ್ರಕ್ರಿಯೆಯನ್ನು ಮಗುವಿನ ಸ್ಥಳೀಯ ಜೀವನ ಸ್ಥಿತಿಗತಿಗಳಿಗೂ ಮಗುವಿನ ಸುತ್ತಾಮುತ್ತಾ ಇರುವ ವಿಷಯಗಳಿಗೂ ಸಂಪರ್ಕ ಕಲ್ಪಿಸುತ್ತವೆ. ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮವು ಯಶಸ್ವಿಯಾಗಬೇಕಾದರೆ ಎರಡು ಮುಖ್ಯ ಅಂಶಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು ಎಂಬುದು ಕಂಡು ಬಂದಿದೆ. ಆ ಅಂಶಗಳೆಂದರೆ ಬೋಧನೋಪಕರಣಗಳು ಮತ್ತು ಶಿಕ್ಷಕರ/ಬೋಧಕರ ಬದ್ಧತೆ ಹಾಗೂ ಸಾಮರ್ಥ್ಯ. ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮದ ಯಶಸ್ಸನ್ನು ಅಥವಾ ಅಪಯಶಸ್ಸನ್ನು ಈ ಕೆಳಕಂಡ ನಾಲ್ಕು ಸೂಚಕಗಳಿಂದ ಮೌಲ್ಯಮಾಪನ ಮಾಡಬಹುದು:

1. ಮಕ್ಕಳು ಗಳಿಸಿದ ಕೌಶಲಗಳು.
2. ವಿದ್ಯಾರ್ಥಿ–ಶಿಕ್ಷಕರ ನಿಷ್ಪತ್ತಿ.
3. ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟು ಹೋದವರ ಪ್ರಮಾಣ.
4. ಔಪಚಾರಿಕ ಶಾಲಾವ್ಯವಸ್ಥೆಯಲ್ಲಿ ಮುಖ್ಯವಾಹಿನಿಯಲ್ಲಿಯೇ ಉಳಿದ ಮಕ್ಕಳು.

ಮತ್ತು ಅಪಾಯಕಾರಿಯಾದ ಕೆಲಸಗಳಿಂದ ಮಕ್ಕಳನ್ನು ರಕ್ಷಿಸುವುದು ಮತ್ತು ಅರ್ಥಪೂರ್ಣ ವೃತ್ತಿಗಳಿಗೆ ಅವರಿಗೆ ಮಾರ್ಗದರ್ಶನ ಮಾಡುವುದು.

ಜುಟ್ಷಿಯವರ ಈಚಿನ (2000) ಅಧ್ಯಯನವು ಭಾರತದಲ್ಲಿ ಬೀದಿಮಕ್ಕಳ ಶೈಕ್ಷಣಿಕ ಕಾರ್ಯಕ್ರಮವು ಅತ್ಯಂತ ನಿರಾಶಾದಾಯಕವಾಗಿರುವ ಚಿತ್ರವನ್ನು ಸಾದರಪಡಿಸುತ್ತದೆ. ಈ ಕಾರ್ಯಕ್ರಮಗಳ ಅಪಯಶಸ್ಸಿಗೆ ಹಲವಾರು ಕಾರಣಗಳನ್ನು ಈ ವರದಿಯು ಹೊಣೆಯಾಗಿಸುತ್ತದೆ. ಕಳಪೆಯಾದ ಮೂಲಭೂತ ಸೌಲಭ್ಯಗಳು, ಸೂಕ್ತವಾದ ಬೋಧನೋಪಕರಣಗಳ ಕೊರತೆ, ಶಿಕ್ಷಕರ ತರಬೇತಿ ಕೊರತೆ, ಸೂಕ್ತ ಪಠ್ಯಕ್ರಮವನ್ನು ಅನ್ವಯಿಸಿಕೊಳ್ಳದೆ ಇರುವುದು ಮತ್ತು ಇಂತಹ ಹಲವಾರು ಇತರ ಕಾರಣಗಳು.

**ವೃತ್ತಿಪರ ತರಬೇತಿ:** ಬೀದಿ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಗಳೊಂದಿಗೆ ಸರ್ಕಾರೇತರ ಸಂಸ್ಥೆಗಳು ಹೊಂದಿರುವ ಅನುಭವವು ಸೂಚಿಸುವ ವಿಷಯವೇನೆಂದರೆ ಅನೇಕ ಮಕ್ಕಳಿಗೆ ತಾವು ಕಲಿತ ಕೌಶಲಗಳಿಂದ ತಮ್ಮ ಜೀವನಕ್ಕೆ ಬೇಕಾಗುವ ಆದಾಯವನ್ನು ತಕ್ಷಣವೇ ಪಡೆಯಲು ಸಾಧ್ಯವಾಗುವಂತಹ ಕೌಶಲಗಳಲ್ಲಿ ಆಸಕ್ತಿ ಇದೆ. ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಅನೇಕ ಸರ್ಕಾರೇತರ ಸಂಸ್ಥೆಗಳು ತಮ್ಮ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮದಲ್ಲಿ ವೃತ್ತಿಪರ ತರಬೇತಿಯನ್ನು ಒಂದು ಪ್ರಮುಖ ಅಂಗವಾಗಿ ಜಾರಿಗೆ ತಂದಿವೆ. ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮದ ಜೊತೆಯಲ್ಲಿ ವೃತ್ತಿ ಶಿಕ್ಷಣವನ್ನು ನೀಡುವುದನ್ನು ಮತ್ತು ಮೂಲ ಶಿಕ್ಷಣವನ್ನು ವೃತ್ತಿಶಿಕ್ಷಣದೊಂದಿಗೆ ಬೆಸೆಯುವ ಪ್ರಯೋಗವು ರಾಷ್ಟ್ರದ ವಿವಿಧ ಭಾಗಗಳಲ್ಲಿನ ಅನೇಕ ಸರ್ಕಾರೇತರ ಸಂಸ್ಥೆಗಳಿಂದ ನಡೆದಿದೆ. ವೃತ್ತಿ ತರಬೇತಿಯನ್ನು ನೀಡುತ್ತಿರುವ ಹಲವಾರು ಸಂಸ್ಥೆಗಳಲ್ಲಿ ಇವು ಪ್ರಮುಖವಾಗಿವೆ. ಅಖಂಡ ಜ್ಯೋತಿ ಫೌಂಡೇಷನ್, ಸರ್‌ಜನ್(ಇವೆರಡೂ ಅಹಮದಾಬಾದ್‌ನವು) ಸಂಜೀವಿನಿ ವೆಲ್‌ಫೇರ್ ಮತ್ತು ಕೇರ್ ಸೊಸೈಟಿ(ಅಲಹಾಬಾದ್), ಸಲಾಮ್ ಬ್ಯಾಂಕ್‌ಟ್ರಸ್ಟ್, ಪ್ರಯಾಸ್, ಬಟರ್‌ಫ್ಲೈಸ್, ವಾತ್ಸಲ್ಯ(ನವದೆಹಲಿ), ಜನಕಲ್ಯಾಣಸಮಿತಿ(ಬಡೋಹಿ), APSA, ಮಾಯಾ, REDS, SPURD, YMCA(ಬೆಂಗಳೂರು), ರುಚಿರಾ(ಭುವನೇಶ್ವರ್), FADUC, ಟುಮಾರೋಸ್ ಫೌಂಡೇಷನ್, ಬೆಂಗಾಲ್‌ಮಾಸ್ ಎಜುಕೇಷನ್ ಸೊಸೈಟಿ(ಕೊಲ್ಕತ್ತಾ), DON BOSCO, ICCW, ಜೀವ ಜ್ಯೋತಿ(ಚೆನ್ನೈ), SAHARA, URDES (ಹೈದರಾಬಾದ್).

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಈಗ ವೃತ್ತಿ ಶಿಕ್ಷಣವನ್ನು ರಾಷ್ಟ್ರೀಯ ಸಾಕ್ಷರತಾ ನಿಯೋಗದ ಕಾರ್ಯಕ್ರಮದ ಒಂದು ಪ್ರಮುಖ ಅಂಗವನ್ನಾಗಿ ಪರಿಗಣಿಸಿದೆ. ಈ ಕಾರಣದಿಂದ ಮಂತ್ರಾಲಯವು ಹಿಂದೆ ಇದ್ದ ಶ್ರಮಿಕ ವಿದ್ಯಾಪೀಠಗಳನ್ನು ಕೆಲವು ಪ್ರಮುಖ ಸರ್ಕಾರೇತರ ಸಂಸ್ಥೆಗಳಿಗೆ ಬಿಟ್ಟುಕೊಟ್ಟಿದೆ. ಈ ಶ್ರಮಿಕ ವಿದ್ಯಾಪೀಠಗಳು, ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಅತಿ ಹಳೆಯ ಅತಿ ಪ್ರತಿಷ್ಠಿತವಾದ ರಾಷ್ಟ್ರಮಟ್ಟದ ಯೋಜನೆಗಳಾಗಿದ್ದವು. ಈಗ ಇಡೀ ಕಾರ್ಯಕ್ರಮವು ಜನ ಶಿಕ್ಷಣ ಸಂಸ್ಥಾನ (JSS) ಎಂಬುದಾಗಿ ಮರುನಾಮಕರಣಗೊಂಡಿದೆ. ಮಂತ್ರಾಲಯವು ನವಸಾಕ್ಷರರಿಗೆ, ಸಮಾಜದ ದುರ್ಬಲವರ್ಗಗಳಿಗೆ ಸೇರಿದ ಮಹಿಳೆಯರಿಗೆ, ಬೀದಿ ಹಾಗೂ ಕೆಲಸ ಮಾಡುತ್ತಿರುವ ಮಕ್ಕಳು ಮೊದಲಾದವರಿಗೆ ವೃತ್ತಿ ಶಿಕ್ಷಣವನ್ನು ನೀಡಲು ರಾಷ್ಟ್ರದಲ್ಲಿನ ಇಪ್ಪತ್ತು ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಿದೆ. ಮಹಿಳೆಯರ ಮತ್ತು ಮಕ್ಕಳನ್ನು ಒಳಗೊಂಡ ಅನನುಕೂಲಸ್ಥಿತಿಯಲ್ಲಿರುವವರ ಗುಂಪಿಗೆ ಅನೌಪಚಾರಿಕ, ವಯಸ್ಕ ಹಾಗೂ ಮುಂದುವರಿಕೆ ಶಿಕ್ಷಣವನ್ನು ಒದಗಿಸಲು ಮತ್ತು ರಾಷ್ಟ್ರೀಯ ಸಾಕ್ಷರತಾ ನಿಯೋಗ ಕಾರ್ಯಕ್ರಮಕ್ಕೆ ಶೈಕ್ಷಣಿಕ ಹಾಗೂ ತಾಂತ್ರಿಕ ಸಂಪನ್ಮೂಲ ಬೆಂಬಲವನ್ನು ಕೊಡಲು ಒಂದು ಸಾಂಸ್ಥಿಕ ಚೌಕಟ್ಟನ್ನು ನೀಡುವುದನ್ನು ಜನಶಿಕ್ಷಣ ಸಂಸ್ಥಾನವು ಪ್ರತಿನಿಧಿಸುತ್ತದೆ. ಈ ಕಾರ್ಯಕ್ರಮಗಳು ಶಿಕ್ಷಣಕ್ಕೆ ಎರಡಕ್ಕಿಂತ ಅಧಿಕ ಅಥವಾ ಮೂರಕ್ಕಿಂತ ಅಧಿಕ ಆಯಾಮಗಳ ವಿಧಾನಗಳನ್ನು ಅನ್ವಯಿಸುತ್ತವೆ. JSSನ ಉದ್ದೇಶಗಳು ಇಂತಿವೆ: ನವಸಾಕ್ಷರರ ವೃತ್ತಿಪರ ಕೌಶಲಗಳನ್ನೂ, ತಾಂತ್ರಿಕ ಜ್ಞಾನವನ್ನೂ ಉತ್ತಮ ಪಡಿಸುವುದು; ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿನ ನವಸಾಕ್ಷರರಿಗೆ ವೃತ್ತಿಪರ ಹಾಗೂ ಕೌಶಲಗಳ ಅಭಿವೃದ್ಧಿಗೆ ಜಿಲ್ಲಾ ಸಹಕಾರ ಸಮಿತಿಗಳು ಕೈಗೊಳ್ಳುವ ಕಾರ್ಯಕ್ರಮಗಳಿಗೆ ಶೈಕ್ಷಣಿಕ ಮತ್ತು ತಾಂತ್ರಿಕ ಸಂಪನ್ಮೂಲಗಳ ನೆರವನ್ನು ನೀಡಲು ಬೇಕಾದ ಅವರ ಸಾಮರ್ಥ್ಯವನ್ನು ಎತ್ತರಿಸುವುದು ಮತ್ತು ಅವರ ಉತ್ಪಾದನೆಯನ್ನು

Digitised by Bharatavani, CIIL

ಹೆಚ್ಚಿಸುವುದು; ಆಯಕಟ್ಟಿನ ಮುಂದುವರಿಕೆ ಶಿಕ್ಷಣಕೇಂದ್ರವಾಗಿ ಕಾರ್ಯನಿರ್ವಹಿಸುವುದು ಮತ್ತು 10-15 ಮುಂದುವರಿಕೆ ಶಿಕ್ಷಣ ಕೇಂದ್ರಗಳ ಸಮನ್ವಯ, ಮೇಲ್ವಿಚಾರಿಕೆ ಮತ್ತು ನಿಯಂತ್ರಣಗಳನ್ನು ನಡೆಸುವುದು ಮುಖ್ಯ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಪ್ರಮುಖ ತರಬೇತುದಾರರಿಗೆ ಕೌಶಲಗಳನ್ನು ಅಭಿವೃದ್ಧಿಪಡಿಸುವ ಹಾಗೂ ಅವನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ತರಬೇತಿ ಮತ್ತು ಪುನರ್ಮನನ ಶಿಬಿರಗಳನ್ನು ಏರ್ಪಡಿಸುವುದು; ಮುಕ್ತ ಕಲಿಕಾ ವ್ಯವಸ್ಥೆಯ ಮೂಲಕ ಸಮಾನ ಗುಣದ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವುದು; ಪರಿಸರದಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳ ಬಗ್ಗೆ ವಿಮರ್ಶಾತ್ಮಕ ಅರಿವನ್ನು ಪಡೆಯಲು ಜ್ಞಾನದ ಹಾಗೂ ಅರಿವಿನ ಅಂತರವನ್ನು ವಿಸ್ತಾರಗೊಳಿಸುವುದು; ಜಾತ್ಯಾತೀತತೆ, ರಾಷ್ಟ್ರೀಯ ಸಮನ್ವಯತೆ, ಜನಸಂಖ್ಯೆ ಮತ್ತು ಅಭಿವೃದ್ಧಿ, ಸ್ತ್ರೀಸಮಾನತೆ, ಪರಿಸರ ರಕ್ಷಣೆ ಮತ್ತು ಕಾಪಾಡುವಿಕೆ ಮೊದಲಾದ ರಾಷ್ಟ್ರೀಯ ಗುರಿಗಳಿಗೆ ಪ್ರೋತ್ಸಾಹ ಮಾಡುವುದು.

ಉಪಸಂಹಾರ: ಎಲ್ಲ ಬೀದಿಮಕ್ಕಳಿಗೂ ಶಿಕ್ಷಣವನ್ನು ನೀಡುವ ಕಾರ್ಯವು ಒಂದು ಬೃಹತ್ತರ ಸವಾಲಾಗಿದೆ. ಬಹುತೇಕ ಕೆಲಸ ಮಾಡುತ್ತಿರುವ ಇಂತಹ ಮಕ್ಕಳ ಸಂಖ್ಯೆ ಅತಿವೇಗವಾಗಿ ಹೆಚ್ಚಾಗುತ್ತಿದೆ. ಕಾರ್ಯಕ್ರಮಗಳನ್ನು ರೂಪಿಸಲು ಈ ಮಕ್ಕಳನ್ನು ಗುರುತಿಸಿ ಅವರ ಸ್ಥಾನಮಾನಗಳನ್ನು ನಿರ್ಧರಿಸುವುದು ಅಗತ್ಯವಾಗಿದೆ. ಬೀದಿ ಮಕ್ಕಳ ಜೀವನವು ಅತ್ಯಂತ ಅಪಾಯಕಾರಿಯಾಗಿದ್ದರೂ ಸರ್ಕಾರ ಮತ್ತು ಸರ್ಕಾರೇತರ ವಿಭಾಗಗಳಿಗೂ ಅವರು ಬಾಲಕಾರ್ಮಿಕರು ಎಂಬುದೂ ಸಹ ಗಮನಕ್ಕೆ ಬರುತ್ತಿಲ್ಲ. ಏನೇ ಆದರೂ ಸರ್ಕಾರಿ ಅಂಗಗಳಿಂದ ಈ ಸಮಸ್ಯೆಯನ್ನು ಪೂರ್ಣವಾಗಿ ಎದುರಿಸಲಾಗುವುದಿಲ್ಲ. ಇಂತಹ ಮಕ್ಕಳ ಸ್ವಭಾವ ಹಾಗೂ ಸಾಮರ್ಥ್ಯಗಳನ್ನು ಮತ್ತು ಅವರ ಆರ್ಥಿಕ ಒತ್ತಡವನ್ನು ಗಮನಿಸಿದಾಗ ಪರ್ಯಾಯ ಶಾಲಾ ಶಿಕ್ಷಣವು ಇದಕ್ಕೆ ಉತ್ತರವೆಂದು ಕಾಣುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಷ್ಟ್ರೀಯ ಮುಕ್ತ ಶಾಲೆ ಒಟ್ಟುಗೂಡಿ ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಸಾಕ್ಷರತಾ ಹಾಗೂ ವೃತ್ತಿಪರ ಕಾರ್ಯಕ್ರಮಗಳನ್ನು ನಡೆಸಲು, ಬೀದಿ ಮಕ್ಕಳಿಗಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಧೀರ್ಯೋತ್ಸಾಹ ತುಂಬಿದ ವ್ಯಕ್ತಿಗಳನ್ನು ಮತ್ತು ಸ್ವಯಂಸೇವಾ ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕು. ಈ ಕಾರ್ಯವು ಬೃಹದಾಕಾರದ್ದು. ಆದರೆ ಅಂತಾರಾಷ್ಟ್ರೀಯ ಸಂಸ್ಥೆಗಳು, ಆರ್ಥಿಕ ನೆರವು ನೀಡುವ ಏಜೆನ್ಸಿಗಳು, ಸರ್ಕಾರಿ ಏಜೆನ್ಸಿಗಳು ಮತ್ತು ಸ್ವಯಂಸೇವಾ ವಿಭಾಗ ಮತ್ತು ಪ್ರಬಲವಾದ ರಾಜಕೀಯ ಇಚ್ಛಾಶಕ್ತಿ ಇವುಗಳಿಂದ ನಿರ್ಲಕ್ಷಿತ ಬೀದಿ ಹಾಗೂ ಕೆಲಸ ಮಾಡುತ್ತಿರುವ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಸಾಧಿಸಬಹುದು.

**ಮೂಲ: ಅಮೋಡ್ ಕೆ. ಕಾಂತ್**
**ಅನು: ಪ್ರೊ. ವೆಂಕಟರಮಣ ಶೆಟ್ಟಿ ಸಿ.ಜಿ.**

# ಬುದ್ಧಿ/ಬುದ್ಧಿ ಶಕ್ತಿ

ಮೊಟ್ಟ ಮೊದಲಿಗೆ ಬುದ್ಧಿಶಕ್ತಿಯ ಸಿದ್ಧಾಂತಗಳನ್ನು ಕುರಿತಂತೆ ಪಾಶ್ಚಾತ್ಯ ಹಾಗೂ ಭಾರತೀಯರ ಮೂಲಭೂತ ವ್ಯತ್ಯಾಸಗಳ ಬಗ್ಗೆ ನಾವು ಸ್ಪಷ್ಟವಾಗಿ ತಿಳಿಯೋಣ. ಮೊದಲನೆಯದಾಗಿ, ಪಾಶ್ಚಾತ್ಯರು ಬುದ್ಧಿಶಕ್ತಿಯ ಸ್ವರೂಪವನ್ನು ವ್ಯಾಖ್ಯಾನಿಸುವುದರಲ್ಲಿ ಭಿನ್ನರಾಗಿದ್ದಾರೆ. ಪಾಶ್ಚಿಮಾತ್ಯರು ಬುದ್ಧಶಕ್ತಿಯನ್ನು ಪರೀಕ್ಷೆಗೆ ಒಳಪಡಿಸಬಹುದು ಎನ್ನುತ್ತಾರೆ. ಆದರೆ ಭಾರತೀಯ ಸಾಂಪ್ರದಾಯಿಕ ಸಿದ್ಧಾಂತಗಳು ಬುದ್ಧಿಶಕ್ತಿಯ ಸಾರ್ವತ್ರಿಕ ಸ್ವಭಾವದ ಸುತ್ತ ಕೇಂದ್ರೀಕೃತವಾಗಿವೆ. ಬುದ್ಧಿಶಕ್ತಿಯನ್ನು ಕುರಿತ ಭಾರತೀಯ ಸಿದ್ಧಾಂತವು ತಾತ್ವಿಕ ಮತ್ತು ಊಹನಾತ್ಮಕ ಆಲೋಚನೆಯ ಮೇಲಿದ್ದು, ಬಹುತೇಕ ಸೈದ್ಧಾಂತಿಕ ಸ್ವರೂಪದ್ದಾಗಿದೆ. ಆದಾಗ್ಯೂ ವ್ಯಾವಹಾರಿಕ ಹಾಗೂ ಪ್ರಾಯೋಗಿಕ ತಳಹದಿಯನ್ನು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಏಕೆಂದರೆ ಅದಕ್ಕೆ ಸಮರ್ಥವಾದ ಪುರಾವೆ ಬೇಕು. ಯಾವುದೇ ಸಿದ್ಧಾಂತ ಅಥವಾ ಸಾಮಾನ್ಯೀಕರಣವನ್ನು ಪ್ರಾಯೋಗಿಕ ತಳಹದಿ ಇಲ್ಲದೆ ರೂಪಿಸಲಾಗುವುದಿಲ್ಲ.

ಭಾರತೀಯ ಜ್ಞಾನದ ಶಾಖೆಗಳು ಬುದ್ಧಿಶಕ್ತಿಯನ್ನು ಬೇರೆ ಬೇರೆ ರೂಪಗಳಲ್ಲಿ ನಿರೂಪಿಸುತ್ತವೆ. ಯಾವುದೇ ಮೂಲ ವ್ಯತ್ಯಾಸಗಳು ಇಲ್ಲದೇ ಇದ್ದರೂ ಬುದ್ಧಿಶಕ್ತಿಯ ಸ್ವರೂಪದ ಬಗ್ಗೆ ವ್ಯತ್ಯಾಸಗಳು ಇವೆ. ಪಾಶ್ಚಾತ್ಯರು Intelligence ಎಂದು ಉಪಯೋಗಿಸುವ ಪದಕ್ಕೆ, ಭಾರತೀಯ ಸಂಪ್ರದಾಯದ "ಬುದ್ಧಿ" ಎಂಬ ಪದವು ಸಾಕಷ್ಟು ಮಟ್ಟಿಗೆ ನಿಖರವಾದ ಸಮಾನ ಪದವಲ್ಲ. ಏಕೆಂದರೆ ಭಾರತದ ಪ್ರಾಚೀನ ಪ್ರಕರಣ ಗ್ರಂಥಗಳಲ್ಲಿ "ಬುದ್ಧಿ" ಎಂಬುದನ್ನು ಸರಿಸುಮಾರಾಗಿ Intelligence ಎಂದು ಭಾಷಾಂತರಿಸಬಹುದಾದರೂ ವಾಸ್ತವವಾಗಿ ಅದು Intelligence ಎಂಬ ಪದಕ್ಕಿಂತ ಮಿಗಿಲಾದುದು ಮತ್ತು ಅದರಲ್ಲಿ ಪ್ರತ್ಯಕ್ಷಾನುಭವ (Cognition) ಸೇರಿರುತ್ತದೆ.

ಬುದ್ಧಿಗೆ ಸಂಬಂಧಿಸಿದಂತೆ ಭಾರತೀಯರ ಪ್ರಸ್ತಾಪಿಸುವಿಕೆಯೇ ಬೇರೆಯಾಗಿದೆ. ಈ ಪರಿಕಲ್ಪನೆಯನ್ನು ಮೂರು ರೀತಿಗಳಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ. ಆಂತರಿಕ ಲಕ್ಷಣಗಳೇ ಬಾಹ್ಯಕ್ರಿಯೆಗಳ ಮೇಲೆ ಪ್ರಭಾವ ಬೀರಲು ಕಾರಣವಾಗಿವೆ. ಅಂದರೆ ಬುದ್ಧಿಶಕ್ತಿಯು ವರ್ತನಾ ವ್ಯತ್ಯಾಸಗಳನ್ನು ಉಂಟುಮಾಡುತ್ತದೆ. ಈ ಆಂತರಿಕ ಲಕ್ಷಣವನ್ನು ಸಾಮಾನ್ಯವಾಗಿ ಮೂರು ಭಾಗಗಳನ್ನಾಗಿ ವಿಂಗಡಿಸಲಾಗುತ್ತದೆ. ಅವು ಗ್ರಹಿಕೆ, ಭಾವನೆ ಮತ್ತು ಸಂಕಲ್ಪದಲ್ಲಿನ ಬದಲಾವಣೆಗಳಿಗೆ ಸಂಬಂಧಪಟ್ಟ ಲಕ್ಷಣಗಳಾಗಿರುತ್ತವೆ. ಲಕ್ಷಣಗಳು ಆಂತರಿಕ ಮತ್ತು ಗ್ರಹಿಕೆಗೆ ಸಂಬಂಧಪಟ್ಟಿದ್ದು ಇದೇ ಇತರ ಎಲ್ಲ ಲಕ್ಷಣಗಳಿಗೆ ಮೂಲವಾಗಿರುವುದರಿಂದ, ಭಾರತೀಯ ಜ್ಞಾನದಲ್ಲಿ ಈ ಪದಗಳನ್ನು ವ್ಯಾಪಕವಾಗಿ ವ್ಯಾಖ್ಯಾನಿಸಲಾಗಿದೆ. ಇದಲ್ಲದೆ, ಬುದ್ಧಿಶಕ್ತಿಯ ಭಾರತೀಯ ಸಿದ್ಧಾಂತಗಳು ಬುದ್ಧಿಶಕ್ತಿಯ ವಿಷಯವನ್ನು ಚರ್ಚಿಸುವಾಗ ಅದು ಸ್ವಾಭಾವಿಕವಾಗಿಯೇ ಮನಸ್ಸಿನ

Digitised by Bharatavani, CIIL

(Mind) ಸ್ವರೂಪದ ಅರಿವನ್ನು ಹೊಂದಿರುವ ಪದಗಳಲ್ಲಿಯೇ ನಿರೂಪಿಸಲ್ಪಡುತ್ತದೆ. ಆದ್ದರಿಂದ ಭಾರತೀಯ ಪರಂಪರೆಯ ಜ್ಞಾನದ ಶಾಖೆಗಳಾದ 'ದರ್ಶನ'ಗಳು ಬುದ್ಧಿಶಕ್ತಿಯನ್ನು ಎರಡು ವಿಧಗಳಲ್ಲಿ ವ್ಯಾಖ್ಯಾನಿಸುತ್ತವೆ. ಒಂದು ಗುಂಪು ಇದನ್ನು ಬುದ್ಧಶಕ್ತಿಯ ರೂಪದ ಮನಸ್ಸಿನ ಲಕ್ಷಣವನ್ನಾಗಿ ಭಾವಿಸಿದರೆ ಮತ್ತೊಂದು ಗುಂಪು, ಇದನ್ನು ಬುದ್ಧಿಶಕ್ತಿಯ ಒಂದು ರೂಪವಾಗಿರುವ ಆತ್ಮದ ಒಂದು ಲಕ್ಷಣ ಎಂದು ಭಾವಿಸುತ್ತದೆ.

ಭಾರತೀಯ ತರ್ಕಶಾಸ್ತ್ರದಲ್ಲಿನ 'ನ್ಯಾಯ'ದ ದೃಷ್ಟಿಯಲ್ಲಿ ಪ್ರತಿಯೊಂದು ಆತ್ಮದಲ್ಲಿಯೂ ಮನಸ್ಸು ಇರುತ್ತದೆ ಹಾಗೂ ಇದು ಚಿರಂತನವಾದುದು ಮತ್ತು ಅಣು ಮಾತ್ರ ಸ್ವರೂಪ ಹೊಂದಿದೆ. ಮನಸ್ಸು ಅಜ್ಞಾತ ಕಾರಣಗಳಿಂದ ಅಥವಾ ಅದರ ಸ್ವಭಾವದಿಂದ ಆತ್ಮದೊಂದಿಗೆ ಮಿಳಿತವಾಗಿದೆ ಮತ್ತು ಅಗೋಚರ ಕಾರಣಗಳಿಂದಾಗಿ ಬುದ್ಧಿಯು ವಸ್ತುಗಳನ್ನು ಗ್ರಹಿಸಬಲ್ಲ ಜ್ಞಾನೇಂದ್ರಿಯಗಳೊಂದಿಗೆ ಸೇರಿಕೊಂಡಿರುತ್ತದೆ. ಇದೇ ರೀತಿಯಲ್ಲಿ ಅರಿಯುವಿಕೆ ಅಥವಾ ಸಮಂಜಸವಾದ ಗ್ರಹಿಸುವಿಕೆ ಉಂಟಾಗುತ್ತದೆ ಮತ್ತು ಆತ್ಮವು ವಸ್ತುಗಳೊಂದಿಗೆ ಸಂಬಂಧ ಹೊಂದುತ್ತದೆ ಅಂದರೆ ವಸ್ತುವು ತನ್ನದೇ ಎಂದು ಭಾವಿಸುತ್ತದೆ. ಗ್ರಹಿಕೆಯು ಸಮಂಜಸವಾಗಿರಬಹುದು ಅಥವಾ ಅಸಮಂಜಸಿಕೆಯು ಜ್ಞಾನೇಂದ್ರಿಯಗಳ ಅಸಾಮರ್ಥ್ಯ, ಬುದ್ಧಿಯ ಏಕಾಗ್ರತೆ ಇಲ್ಲದ ಪ್ರಯತ್ನ ಮತ್ತು ವಸ್ತುಗಳ ದುರ್ಬಲತೆ ಮೊದಲಾದ ಅನೇಕ ಅಂಶಗಳು ಅದನ್ನು ಗ್ರಹಿಸುವುದಕ್ಕೆ ಸಾಧ್ಯವಿಲ್ಲದಂತೆ ಮಾಡಿರಬಹುದು. ಗ್ರಹಿಕೆಯ ಈ ಸಾಮಾನ್ಯ ಪ್ರಕ್ರಿಯೆಯು ಕೆಲವು ಮಾರ್ಪಾಡುಗಳೊಂದಿಗೆ ಅಂದರೆ ಕೆಲವನ್ನು ಬಿಟ್ಟು ಬಿಡುವುದರೊಂದಿಗೆ ಕೆಲವನ್ನು ಸೇರಿಸಿಕೊಳ್ಳುವುದರೊಂದಿಗೆ ಭಾರತೀಯ ಪರಂಪರೆಯ ಎಲ್ಲ ದಾರ್ಶನಿಕರಿಂದ (ತತ್ವಜ್ಞಾನಿಗಳಿಂದ) ಒಪ್ಪಲ್ಪಟ್ಟಿದೆ. ಭಾಟಾ ಹಾಗೂ ಪ್ರಾಭಾಕರಾಗಳು ಮೀಮಾಂಸೆ ದರ್ಶನದ ಎರಡು ಪ್ರಮುಖ ಶಾಖೆಗಳು ಇವು ವಿಶೇಷವಾಗಿ ವಾಕ್ಯರಚನೆಯ ಸೂತ್ರಗಳು ಮತ್ತು ಪದಗ್ರಹಿಕೆಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ.

ನ್ಯಾಯಸೂತ್ರವು ಬುದ್ಧಿ (ಬುದ್ಧಿಶಕ್ತಿ), ಗ್ರಹಿಕೆ ಮತ್ತು ಸಾಧನೆಗಳನ್ನು ಒಂದೇ ಎಂದು ಭಾವಿಸುತ್ತದೆ. ಹೀಗೆ ಪ್ರಾಣದಿಂದ ಕೂಡಿರುವ ವಸ್ತುವು ಏನನ್ನು ಸಾಧಿಸುತ್ತದೆಯೋ, ಗ್ರಹಿಸುತ್ತದೆಯೋ ಅಥವಾ ಪಡೆಯುತ್ತದೆಯೋ ಅದೇ ಬುದ್ಧಿಶಕ್ತಿ. ಹೀಗೆಯೇ ಪ್ರಸಾಸ್ತವಾದ ಭಾಷ್ಯದಲ್ಲಿಯೂ ಬುದ್ಧಿಶಕ್ತಿ, ಗ್ರಹಿಕೆ, ಸಾಧನೆ ಮತ್ತು ಪ್ರತ್ಯಕ್ಷಾನುಭವಗಳು ಒಂದೆ ಎಂಬುದಾಗಿ ಖಾತ್ರಿಪಡಿಸಲಾಗಿದೆ. ಆದ್ದರಿಂದ ಬುದ್ಧಿಶಕ್ತಿಯು ಆತ್ಮದ ಅವಲಂಬಿ ಚಲಕವಾಗಿದೆ ಮತ್ತು ವಸ್ತುಗಳನ್ನು ಅಥವಾ ಪರಿಕಲ್ಪನೆಗಳನ್ನು ತಿಳಿಯಪಡಿಸುತ್ತದೆ. ನ್ಯಾಯದ ಪರ್ಯಾಯ ಪಂಥವಾದ ವೈಶೇಷಿಕವು ಬುದ್ಧಿ ಎಂಬುದು ವಸ್ತುಗಳನ್ನು ತಿಳಿಯಪಡಿಸುವುದಲ್ಲದೆ ಬೇರೇನೂ ಅಲ್ಲ ಎಂದು ಅಭಿಪ್ರಾಯ ಪಡುತ್ತದೆ. ಆದಾಗ್ಯೂ ಆಧುನಿಕ 'ನ್ಯಾಯ' ಸಿದ್ಧಾಂತವು ಇದನ್ನು ಮತ್ತೊಂದು ರೂಪದಲ್ಲಿ ತಿಳಿಸುತ್ತದೆ. ಇದರ ಪ್ರಕಾರ ಬುದ್ಧಿಯು ಎಲ್ಲ ವರ್ತನೆಗಳ ಮತ್ತು ಅಸ್ತಿತ್ವದ ಕಾರಣಗಳ ಲಕ್ಷಣ. ಆದ್ದರಿಂಲೇ ತಿನ್ನುವುದು. ಸಂಭಾಷಣೆ, ಸಂತೋಷಕರ ಪ್ರವಾಸಕ್ಕೆ ಹೋಗುವುದು ಮೊದಲಾದ ಎಲ್ಲ ಕ್ರಿಯೆಗಳ ಪರಿಣಾಮಗಳು ಬುದ್ಧಿಯಿಂದಲೇ ಆಗುತ್ತವೆ. ನೈಯಾಯಿಕರ ಈ ಗ್ರಹಿಸುವಿಕೆ ಅಥವಾ ಬುದ್ಧಿಶಕ್ತಿಯು ಕೇವಲ ತಾತ್ಕಾಲಿಕ ಮತ್ತು ಎರಡು ಘಳಿಗೆಗಳವರೆಗೆ ಮಾತ್ರ ಇರುತ್ತದೆ. ಏಕೆಂದರೆ ವೈಯಕ್ತಿಕ ಆತ್ಮದ ಎಲ್ಲ ಲಕ್ಷಣಗಳೂ ಇತರ ಗ್ರಹಿಕೆಗಳನ್ನು ಪಡೆದ ಕೂಡಲೇ ಮಾಯವಾಗುತ್ತವೆ. ಆತ್ಮವು ಶಾಶ್ವತವಾದರೂ ಅದು ಅಶಾಶ್ವತ ಎಂಬುದನ್ನು ಅವಲಂಬಿಸಿಯೇ ಗ್ರಹಿಕೆಯು ಉಂಟಾಗುವುದರಿಂದ ಅವು ಮಾಯವಾಗುತ್ತವೆ. ನೆನಪು (ಜ್ಞಾನದ ಗುರುತು) ಅರಿವನ್ನು ಅವಲಂಬಿಸಿರುತ್ತದೆ ಎಂದು ಅವರು ಭಾವಿಸುತ್ತಾರೆ. ಏಕೆಂದರೆ ಅದು ಸಮಂಜಸ ಅಥವಾ ಅಸಮಂಜಸ ಗ್ರಹಿಕೆಯ ಗುರುತಾಗಿರುತ್ತದೆಯೋ ವಿನಃ ಅದು ಗ್ರಹಿಕೆಯಂತೆ ಸರ್ವೋನ್ನತ ಅಸ್ತಿತ್ವ ಹೊಂದಿರುವುದಿಲ್ಲ.

ದರ್ಶನಗಳಾದ ಸಾಂಖ್ಯ, ಯೋಗ ಮತ್ತು ಅದ್ವೈತ ಪಂಥಗಳು ವಿವಿಧ ದೃಷ್ಟಿಗಳನ್ನು ಹೊಂದಿದೆ. ಬುದ್ಧಿಯು ಅಂತಃಕರಣ (ಆಂತರಿಕ ವಿನ್ಯಾಸ)ದ ಅಂದರೆ ಮನಸ್ಸಿನ ಅವಲಂಬಿತ ಚಲಕ. ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಇದೇ ಆಂತರಿಕ ವಿನ್ಯಾಸ (ಅಂತಃಕರಣ)ವು ಸಂದರ್ಭಕ್ಕೆ ಅನುಗುಣವಾಗಿ ವಿವಿಧ ಆಕಾರಗಳನ್ನು ಪಡೆಯುತ್ತದೆ. ಜ್ಞಾನೇಂದ್ರೀಯಗಳು ವಸ್ತುಗಳೊಡನೆ ಮುಖಾಮುಖಿಯಾದಾಗ ಕೇವಲ ಯಾಂತ್ರಿಕವಾಗಿ ಅಂತಃಕರಣಕ್ಕೆ ಜೋಡಿಸುತ್ತದೆ. ಈ ಅಂತಃಕರಣವು ಆತ್ಮವನ್ನು ಅವಲಂಬಿಸಿರುವುದರಿಂದ ಬುದ್ಧಿಯ ರೂಪವನ್ನು ಪಡೆಯುತ್ತದೆ ಮತ್ತು ವಸ್ತುಗಳನ್ನು ಹೇಗಿವೆಯೋ ಹಾಗೆಯೇ ಗ್ರಹಿಸುತ್ತವೆ. ಅಂತಃಕರಣವು ಗ್ರಹಿಕೆ ಅಥವಾ ಜ್ಞಾನ ಎಂಬುದಾಗಿ ಪರಿಚಿತವಾಗಿರುತ್ತದೆ. ಮತ್ತು ಇದು ಬುದ್ಧಿಯ ಫಲಿತ ಅಂಶವಾಗಿರುತ್ತದೆಯೇ ವಿನಃ ಬೇರೇನೂ ಅಲ್ಲ. ಈ 'ಬುದ್ಧಿ'ಯು ಬೌದ್ಧರು ಭಾವಿಸುವಂತೆ ಅತ್ಯಗತ್ಯವಾಗಿ ಅಶಾಶ್ವತವೂ ಅಲ್ಲ ಅಥವಾ ನೈಯಾಯಿಕರು ನಿರೂಪಿಸುವಂತೆ ಕ್ಷಣಿಕವೂ ಅಲ್ಲ. ಅಂದರೆ 'ಬುದ್ಧಿ'ಯು ಒಂದು ನಿರ್ದಿಷ್ಟ ವಸ್ತುವಿನ ಗ್ರಹಿಕೆಯು ಇರುವವರೆಗೂ ಶಾಶ್ವತವಾದುದು. ಎಲ್ಲ ಜ್ಞಾನಾತ್ಮಕ ಮಾರ್ಪಾಡುಗಳು ವರ್ತನೆಯ ಪರಿವೆಯ ಗ್ರಹಿಕೆಗೆ ಒಳಪಡುತ್ತವೆ.

ಅದ್ವೈತ ಪಂಥವು 'ಬುದ್ಧಿ'ಯು ಅರಿವು ಅಥವಾ ಆತ್ಮದ ಪ್ರಕಾಶವಲ್ಲದೆ ಬೇರೇನೂ ಅಲ್ಲ ಎಂದು ಭಾವಿಸುತ್ತದೆ. ಮುಂದುವರೆದು, ಮನೋಭಾವಗಳು ಮತ್ತು ವರ್ತನೆಯಲ್ಲಿ ಮಾರ್ಪಾಡುಗಳು ಕೇವಲ ಅರಿವಿನ ಪರಿಣಾಮಗಳೆಂದೂ ಮತ್ತು ಇವು ಸಮಂಜಸ ಅಥವಾ ಅಸಮಂಜಸ ಜ್ಞಾನದ ಮೇಲೆ ಬೆಳಕನ್ನು ಬೀರುತ್ತವೆ ಎಂದೂ ಭಾವಿಸುತ್ತದೆ. 'ಬುದ್ಧಿ'ಯು ಅರಿವಿನ ಸಾಂದರ್ಭಿಕ ಮಾರ್ಪಾಡುಗಳ ಸ್ವಭಾವವಾಗಿರುತ್ತದೆ. ಅಂತಃಕರಣವು 'ಬುದ್ಧಿ'ಯ ಸ್ವರೂಪವನ್ನು ಹೊಂದಿ ವಸ್ತುಗಳನ್ನು ಗ್ರಹಿಸುತ್ತದೆ. ರಾಮಾನುಜ ಪಂಥದ ತತ್ವಶಾಸ್ತ್ರವು 'ಬುದ್ಧಿ'ಯನ್ನು ಸ್ವ–ಜ್ಞಾನ ಗ್ರಹಣದ ಅರಿವಿನ ಲಕ್ಷಣ ('ಧರ್ಮಭೂತ')ವನ್ನಾಗಿ ಭಾವಿಸುತ್ತದೆ. ಆತ್ಮವು ವಸ್ತುವಿನ ರೂಪಕ್ಕೆ ಪರಿವರ್ತನೆ ಹೊಂದಿ ಆ ವಸ್ತುವನ್ನು ಗ್ರಹಿಸುತ್ತದೆ. ಅದು ಬೇರೆ ಯಾವುದೇ ರೀತಿಯ

Digitised by Bharatavani, CIIL

ಅರಿವಾಗಿರದೆ ಅಂತಃಪ್ರೇರಣೆಯ ಮೂಲಕ ಪ್ರಕಾಶಗೊಳ್ಳುತ್ತದೆ. ಆದ್ದರಿಂದ ವಸ್ತುಗಳ ಇರುವಿಕೆಯನ್ನು ತಿಳಿಸುವಿಕೆಯ ಲಕ್ಷಣವೇ ಬುದ್ಧಿ ಎಂದು ಭಾವಿಸುತ್ತಾರೆ. ಏನೇ ಆದರೂ ಬುದ್ಧಿಯ ಲಕ್ಷಣವನ್ನು ಹೇಳುವ ನಿರೂಪಣೆಯು ವಾಸ್ತವವಾಗಿ ಅವರ ಭಾವನೆಯೇ ವಿನಃ ವಾಸ್ತವವಾಗಿ ಅದು ನಿಜವಲ್ಲ. ಈ ವಿಶೇಷವಾದ ವಸ್ತುವಿಗೆ ಕಾಲ ಹಾಗೂ ಪರಿಸ್ಥಿತಿಗೆ ತಕ್ಕ ಹಾಗೆ ಕುಗ್ಗುವ ಮತ್ತು ಹಿಗ್ಗುವ ಸಾಮರ್ಥ್ಯ ಇರುತ್ತದೆ. ಇದನ್ನು ಆತ್ಮದ ಲಕ್ಷಣ ಎಂದು ನಿರೂಪಿಸಿದ ಮೇಲೆ ಎಲ್ಲ ಅರಿವುಗಳನ್ನೂ ಸಮಂಜಸವೆಂದು ಭಾವಿಸುವುದು ಅಗತ್ಯ. ಪ್ರತಿ ವಸ್ತುವಿನಲ್ಲೂ ಐದು ಭೌತಶಕ್ತಿ (ಪಂಚಭೂತಗಳಲ್ಲಿ) ಯಾವುದಾದರೊಂದರ ಸ್ವಲ್ಪ ಅಂಶವಾದರೂ ಇರುವುದರಿಂದ ಗ್ರಹಿಕೆಗಳೆಲ್ಲವೂ ಸಮಂಜಸ ಎಂದು ಅವರು ಭಾವಿಸುತ್ತಾರೆ. ಆದ್ದರಿಂದ ಬೇರೆ ರೀತಿಯಲ್ಲಿ ಉಂಟಾಗುವ ಗ್ರಹಿಕೆಯು ಆ ನಿರ್ದಿಷ್ಟ ವಸ್ತುವಿನಲ್ಲಿ ಪಂಚಭೂತಗಳಲ್ಲಿನ ಯಾವುದಾದರೊಂದರ ಅಲ್ಪ ಪ್ರಮಾಣದ ಅಂಶವು ಸೇರಿದ್ದಾಗ ಅದನ್ನು ಅಸಮಂಜಸ ಗ್ರಹಿಕೆ ಎಂದು ವ್ಯಾಪಕವಾಗಿ ತಿಳಿಸಲ್ಪಡುತ್ತದೆ. ಆದರೆ ವಾಸ್ತವವಾಗಿ ಅದು ಅಸಮಂಜಸ ಗ್ರಹಿಕೆಯಲ್ಲ. ವಸ್ತುವಿನಲ್ಲಿ ನಿರ್ದಿಷ್ಟ ಸ್ವಭಾವದ ಕೆಲವು ಪರಮಾಣು ಕಣಗಳು ಮಿಶ್ರವಾಗಿರುವುದನ್ನು ಇಂದ್ರಿಯವು ಗ್ರಹಿಸುತ್ತದೆ.

ಪ್ರಭಾಕರ ಪಂಥವು 'ಬುದ್ಧಿ'ಯನ್ನು ಕೇವಲ 'ಅನುಭವ' ಎಂದು ಭಾವಿಸುತ್ತದೆ. ಎಲ್ಲ ಗ್ರಹಿಕೆಗಳು ಸಮಂಜಸ. ಏನನ್ನಾದರೂ ಗ್ರಹಿಸಿದರೆ ಅದು ಯಾವುದೂ ಅಸಮಂಜಸವಲ್ಲ ಎಂದು ಭಾವಿಸಲಾಗುತ್ತದೆ. 'ಬುದ್ಧಿ'ಯು ಸ್ವಪ್ರಕಟಿತವಾದುದು. ಇದು ಮತ್ತು ಆತ್ಮವು ತಮಗೆ ತಾವೇ ಪ್ರಕಟಗೊಳ್ಳುತ್ತವೆ. ತತ್ವಶಾಸ್ತ್ರದ ಭಾಟ್ಟಾ ಪಂಥವು ಇದಕ್ಕಿಂತ ಸ್ವಲ್ಪ ಭಿನ್ನವಾದ ದೃಷ್ಟಿ ಹೊಂದಿದೆ. 'ಬುದ್ಧಿ'ಯು ಆತ್ಮದ ಒಂದು ಲಕ್ಷಣವೇ ಹೌದು, ಆದರೆ ಇದು ನ್ಯಾಯಪಂಥದ ಪಾರ್ಶ್ವ ಪ್ರತ್ಯಕ್ಷಾನುಭವಕ್ಕೆ ಅಧೀನವಾಗಿರುತ್ತದೆ. ಆದ್ದರಿಂದ ಇದು ಪ್ರಭಾಕರಾ ಪಂಥದಲ್ಲಿರುವಂತೆ ಸ್ವ ಪ್ರಕಟವಾಗುವುದಿಲ್ಲ. ವಸ್ತುಗಳ ಆಧಾರದ ಮೇಲೆ ಉಂಟಾಗುವ 'ತಿಳಿಯುವಿಕೆ' ಅಥವಾ 'ತೆರೆದಿಡುವಿಕೆ'ಯ ಮೂಲಕ 'ಬುದ್ಧಿ'ಯು ನಿರ್ಣಯಿಸಲ್ಪಡುತ್ತದೆ. ತಿಳಿವಳಿಕೆಯು ವಸ್ತುಗಳನ್ನು ತೆರೆದಿಟ್ಟಾಗ ಒಂದು ಬಗೆಯ ತೆರೆದಿರುವಿಕೆ (ಜ್ಞಾತತಾ ಅಥವಾ ಪ್ರಾಕಾತ್ಯಾ) ಇರಬೇಕು. ಇದರಿಂದ ತಿಳಿವಳಿಕೆಯು ನಿರ್ಣಯಿಸಲ್ಪಡುತ್ತದೆ. ಈ ತರ್ಕದಿಂದ ಭಾಟ್ಟಾ ಪಂಥವು ಸಂಪೂರ್ಣ ನವೀನವಾಗಿರುವ 'ತೆರೆದಿಡುವಿಕೆ'ಯ ಅಸ್ತಿತ್ವವನ್ನು ಒಪ್ಪುತ್ತದೆ ಮತ್ತು ಇದರ ಮೂಲಕ ಬುದ್ಧಿಶಕ್ತಿಯನ್ನು ನಿರ್ಣಯಿಸುತ್ತದೆ.

'ಬೌದ್ಧ ದರ್ಶನವು' ಮತ್ತೊಂದು ಬಗೆಯ ದೃಷ್ಟಿಯನ್ನು ಹೊಂದಿದೆ. ಬುದ್ಧಿಶಕ್ತಿ ಅಥವಾ ಅರಿವು ಪ್ರತ್ಯೇಕ ಲಕ್ಷಣವುಳ್ಳ ವಸ್ತು ಅಥವಾ ಪರಿಕಲ್ಪನೆಗಳ ವಿಷಯದಲ್ಲಿನ ಒಂದು ಮಾನಸಿಕ ಸಾಧನೆ (ಗ್ರಹಿಸುವಿಕೆ). ಬುದ್ಧಿಶಕ್ತಿಯು ವಸ್ತುಗಳನ್ನು ಅಥವಾ ಪರಿಕಲ್ಪನೆಗಳನ್ನು ಪ್ರತ್ಯೇಕವಾಗಿ ತಿಳಿದುಕೊಳ್ಳುವ ಪ್ರಯತ್ನಗಳ ಫಲಿತ ಅಂಶವಾಗಿರುವ ಅರಿವು. ನಿಸ್ಸಂಶಯವಾಗಿ ಇದು ಪ್ರತ್ಯಕ್ಷಾನುಭವಗಳಿಗೆ ಒಳಪಡಿಸಲ್ಪಟ್ಟ ವಸ್ತುಗಳ ಪ್ರಕಟಣೆಯಲ್ಲದೆ ಬೇರೇನೂ ಅಲ್ಲ. ಈ ಬುದ್ಧಿಶಕ್ತಿಯು ಪ್ರಕಟಣ ಪ್ರಕ್ರಿಯೆಯ ಮೂಲಕ ವ್ಯಕ್ತಿಯನ್ನು ಒಂದು ತೀರ್ಮಾನಿತ ರೀತಿಯಲ್ಲಿ ವರ್ತಿಸುವಂತೆ ಮಾಡುತ್ತದೆ. ಈ ಬುದ್ಧಿಶಕ್ತಿಯು ಬೌದ್ಧಮತೀಯರ ಯೋಗಾಚಾರ ಪಂಥದ (ಬೌದ್ಧ ದರ್ಶನದ ನಾಲ್ಕು ಪಂಥಗಳಲ್ಲಿ ಒಂದು) ಎರಡು ವಿಧಗಳಲ್ಲಿ ಇರುತ್ತದೆ. ಇವುಗಳಲ್ಲಿ ಒಂದು 'ಆಲಯ ವಿಜ್ಞಾನಮ್'. ಇದು ಸ್ಥಿರವಾಗಿದ್ದು ಮತ್ತೊಂದರ ಮೇಲೆ ಪ್ರಭಾವ ಬೀರುತ್ತದೆ. ಎರಡನೆಯದು 'ಪ್ರವೃತ್ತಿ ವಿಜ್ಞಾನಮ್'. ಇದು ವಾಸ್ತವವಾಗಿ ವಸ್ತುಗಳನ್ನು ನೋಡಿ ತಿಳಿಯುವಂತೆ ಮಾಡುತ್ತದೆ. 'ಬೌದ್ಧದರ್ಶನ'ವು ಈ ಬಗೆಯ ಅರಿವನ್ನು ಅಶಾಶ್ವತ ಮತ್ತು ಕ್ಷಣಭಂಗುರ ಎಂದು ಭಾವಿಸುತ್ತದೆ.

ಜೈನದರ್ಶನವು ಬುದ್ಧಿಶಕ್ತಿಯನ್ನು ಮುಕ್ತಿಯನ್ನು ಸಂಪಾದಿಸಲು ಅತಿ ಅಗತ್ಯವಾದ ಜ್ಞಾನವಲ್ಲದೆ ಬೇರೇನೂ ಅಲ್ಲ ಎಂದು ಭಾವಿಸುತ್ತದೆ. ಮತ್ತು ವಸ್ತುಗಳು ಹೇಗಿವೆಯೋ ಹಾಗೆಯೇ ಅವನ್ನು ತಿಳಿಯಲು ನೆರವಾಗುತ್ತವೆ ಮತ್ತು ಇದರ ಮೂಲಕ ಮುಕ್ತಿಯನ್ನು ಪಡೆಯಲು ಅಂತಃಕರಣವು ತನ್ನ ಪ್ರಯತ್ನವನ್ನು ಮಾಡುತ್ತದೆ. ಆದ್ದರಿಂದ ಅಂತಃಕರಣವು ಒಂದು ಜೀವಿ ಮತ್ತು ಅದು ಜ್ಞಾನಗ್ರಹಣದ ಲಕ್ಷಣವನ್ನು ಹೊಂದಿರುತ್ತದೆ. ಇದು ಬುದ್ಧಿಶಕ್ತಿಯಲ್ಲದೆ ಬೇರೇನೂ ಅಲ್ಲ ಎಂದು ಅವರು ಭಾವಿಸುತ್ತಾರೆ. ಇದರ ಪರಿಣಾಮವಾಗಿ ಜೈನದರ್ಶನವೂ ಸಹ ಬುದ್ಧಿಶಕ್ತಿಯನ್ನು ಜ್ಞಾನಗ್ರಹಣದ ಅಥವಾ ಅಂತರಾತ್ಮದ ಅಥವಾ ಅಂತಃಕರಣದ ಒಂದು ಲಕ್ಷಣ ಎಂದು ಭಾವಿಸುತ್ತದೆ. ಈ ಅರಿವು ಎರಡು ಬಗೆಯದು. ಅಂದರೆ ಗ್ರಹಣಶಕ್ತಿಯುಳ್ಳದ್ದು ಮತ್ತು ಗ್ರಹಣಶಕ್ತಿ ಇಲ್ಲದ್ದು. ಆದರೂ ಬುದ್ಧಿಶಕ್ತಿ ಮತ್ತು ಜ್ಞಾನಗಳು ಮನಸ್ಸಿಗೆ ಸಮಾನಾರ್ಥಕ ಪದಗಳು ಎಂದು ಭಾವಿಸುತ್ತಾರೆ. ಅದು ಯಾವಾಗ ಅನುಭವವೊಂದನ್ನು ನೆನಪಿಸಿಕೊಂಡು ಯೋಚಿಸುತ್ತದೆಯೋ ಅದು 'ಜ್ಞಾನ' ('ಮತಿ') ಎಂದು ಕರೆಯಲ್ಪಡುತ್ತದೆ. ಶಾಬ್ದಿಕ ಋಜುವಾತಿನ ಅರಿವನ್ನು 'ಶ್ರವಣ' ('ಶೃತಿ') ಎಂದು ಕರೆಯಲ್ಪಡುತ್ತದೆ ಮತ್ತು ಒಂದು ನಿರ್ದಿಷ್ಟ ಸನ್ನಿವೇಶ ಅಥವಾ ಅವಧಿಯನ್ನು 'ನಿಯಮಿತ ಜ್ಞಾನ' (ಅವಧಿ) ಎಂದೂ ಕರೆಯಲಾಗುತ್ತದೆ. ಇತರರ 'ಭಾವನೆಗಳನ್ನು ಮತ್ತು ವರ್ತನೆಗಳನ್ನು' ತಿಳಿಯುವ ಮತ್ತು ಅರಿತುಕೊಳ್ಳುವ ಪರಿಣಾಮವನ್ನು ಉಂಟುಮಾಡುವ ಗ್ರಹಣಶಕ್ತಿಯೇ 'ಮನಸ್ಸು' (ಮನಸ್) ಮತ್ತು ಅಂತಿಮ ಸತ್ಯದ ಬಗ್ಗೆ ಏಕಮಾತ್ರವಾಗಿ ಯೋಚಿಸುವುದೇ 'ಏಕೈಕ ಅರಿಯುವಿಕೆ' (ಕೇವಲಮ್).

ಶಾಕ್ತರು (ಶಕ್ತಿ ದೇವತೆಯ ಉಪಾಸನೆಯನ್ನು ಆಧರಿಸಿದ ದರ್ಶನದ ಪಂಥ) ಹೊಂದಿರುವ ಅಭಿಪ್ರಾಯ ಹೀಗಿದೆ. ಯಾವಾಗಲೂ ಶುದ್ಧ ಜಾಗ್ರತಾವಸ್ಥೆಯ ರೂಪದಲ್ಲಿರುವ ಆತ್ಮವು ಚಲನಶೀಲತೆಯನ್ನು ಹೊಂದಿರುತ್ತದೆ. ಆದ್ದರಿಂದ ಅದನ್ನು 'ಮನಸ್ಸು' (Mind) ಎಂದು ಕರೆಯಲಾಗುತ್ತದೆ. ಈ ಗ್ರಹಿಕೆಯು ಎರಡು ಬಗೆಗಳಾಗಿ ಇದೆ– ಅವೇ ಮಧ್ಯಂತರ ಗ್ರಹಿಕೆ ಮತ್ತು ನಿರ್ದಿಷ್ಟ ಗ್ರಹಿಕೆ. ಮಧ್ಯಂತರ ಗ್ರಹಿಕೆಯು ಒಂದು ವಸ್ತುವನ್ನು ಅದರ ಪೂರ್ಣತೆಯಲ್ಲಿ ಗ್ರಹಿಸುತ್ತದೆ. ಮತ್ತೊಂದು ಒಂದು ವಸ್ತುವಿನ

Digitised by Bharatavani, CIIL

ಅದರ ಎಲ್ಲ ಸಾಧ್ಯವಾದ ಭಾಗಾಂಶಗಳೊಂದಿಗಿನ ನಿರ್ಧಾರಿತ ಗ್ರಹಿಕೆಯಾಗಿರುತ್ತದೆ.

ಬುದ್ಧಿಶಕ್ತಿಯ ಪರಿಕಲ್ಪನೆಯನ್ನು ಚರ್ಚಿಸಿದ ನಂತರ, ಬುದ್ಧಿಶಕ್ತಿಯ ವಿಧಗಳೊಂದಿಗೆ ವ್ಯವಹರಿಸಬೇಕಾದುದು ಅನಿವಾರ್ಯವಾಗುತ್ತದೆ. ಬುದ್ಧಿಶಕ್ತಿಯಲ್ಲಿ ಎರಡು ವಿಧಗಳಿವೆ; ಎಲ್ಲ ದಾರ್ಶನಿಕರೂ ಇವುಗಳನ್ನು ಸಾಮಾನ್ಯವಾಗಿ ಒಪ್ಪಿರುತ್ತಾರೆ. ಅನುಭವ ಮತ್ತು ನೆನಪುಗಳು ಬುದ್ಧಿಶಕ್ತಿಯ ಎರಡು ಬಗೆಗಳು. ಅನುಭವವು ನೇರವಾಗಿ ಬಂದ ಜ್ಞಾನ ಮತ್ತು ನೆನಪು ಎಂಬುದು ಪೂರ್ವ ಅನುಭವದ ಫಲಿತ ಅಂಶವಾದ ಜ್ಞಾನ. ಇದನ್ನು ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಜ್ಞಾನೇಂದ್ರಿಯಗಳು ಮತ್ತು ಮನಸ್ಸಿನ ನಡುವೆ ನೇರವಾಗಿ ನಡೆಯುವ ಅಂತರ ಕ್ರಿಯೆಯಿಂದ ಉಂಟಾಗುವುದೇ ಅನುಭವ. ಆದರೆ ನೆನಪು ಜ್ಞಾನೇಂದ್ರಿಯಗಳ ಗ್ರಹಿಕೆಯ ನೇರ ಪರಿಣಾಮವಲ್ಲ. ಆದರೆ ಅದು ಹಿಂದಿನ ಗ್ರಹಿಕೆಗಳಿಂದ ಉಂಟಾದ ಛಾಪು (ಗುರುತು). ಯಾರಾದರೊಬ್ಬರು ಏನನ್ನಾದರೂ ಗ್ರಹಿಸಿದಾಗ ಮತ್ತು ಅಲ್ಲಿನ ಎಲ್ಲರೂ ಸ್ಥಿರಸ್ವರೂಪದ ಬುದ್ಧಿವಂತರೇ ಆಗಿದ್ದಾಗ ಆ ವ್ಯಕ್ತಿಯು ವಿವಿಧ ಕಾರಣಗಳಿಂದಾಗಿ ಸಮಂಜಸ ಅಥವಾ ಅಸಮಂಜಸ ಸಂವೇದನೆ/ಗ್ರಹಿಕೆಗಳನ್ನು ಪಡೆಯಬಹುದು. ಅವನ ಅನುಭವವು ಎರಡು ಬಗೆಯಾಗಿರುತ್ತದೆ, ಅವೇ ಸಮಂಜಸ ಮತ್ತು ಅಸಮಂಜಸ. ಸಮಂಜಸ ಅನುಭವು ಸಮಂಜಸ ಗ್ರಹಿಕೆ (Pramaa ಪ್ರಾಮಾ) ಎಂಬುದಾಗಿಯೂ ಅಸಮಂಜಸವಾದುದು ಅಸಮಂಜಸ ಗ್ರಹಿಕೆ (Apramaa ಅಪ್ರಾಮಾ) ಎಂಬುದಾಗಿಯೂ ಕರೆಯಲ್ಪಡುತ್ತವೆ. 'ವಸ್ತು'ವಿನಲ್ಲಿ 'ವಸ್ತುವಿಕೆ'ಯನ್ನು, 'ಕಲ್ಲಿ'ನಲ್ಲಿ 'ಕಲ್ಲ'ನ್ನು ಗ್ರಹಿಸುವುದು ಸಮಂಜಸ ಗ್ರಹಿಕೆ. ಆದರೆ 'ಕಲ್ಲ'ನ್ನು 'ತೆಂಗಿನಕಾಯಿ' ಎಂದು ಗ್ರಹಿಸಿದರೆ ಅದು ಅಸಮಂಜಸ ಗ್ರಹಿಕೆ. ಇದನ್ನು ಬಹುತೇಕ ಎಲ್ಲ 'ದಾರ್ಶನಿಕ'ರೂ ಒಪ್ಪುತ್ತಾರೆ. 'ಗೊತ್ತಿಲ್ಲ'ದಿರುವುದನ್ನು ಅದರ ಸತ್ಯತೆಯಲ್ಲಿ 'ಗೊತ್ತು' ಮಾಡಿಕೊಳ್ಳುವುದು ಸಮಂಜಸ ಗ್ರಹಿಕೆ ಎಂಬುದಾಗಿ 'ಸಾಂಖ್ಯ'ರು ಅಭಿಪ್ರಾಯ ಪಡುತ್ತಾರೆ. ಚರ್ಚೆಗೆ ಅತೀತವಾಗಿರುವ ಗ್ರಹಿಕೆಯು ಸಮಂಜಸ ಎಂಬುದಾಗಿ ಬೌದ್ಧರು ಅಭಿಪ್ರಾಯ ಪಡುತ್ತಾರೆ. ಜೈನರೂ ಸಹ ಗೊತ್ತಿಲ್ಲದಿರುವುದನ್ನು ಅದರ ಸತ್ಯತೆಯಲ್ಲಿ ಅನುಭವಿಸುವುದು ಸಮಂಜಸ ಎಂದು ಹೇಳುತ್ತಾರೆ.

ಒಂದು ವಸ್ತುವಿನ ಖಂಡಿಸಲು ಸಾಧ್ಯವಾಗದ, ಸಂಶಯ ರಹಿತವಾದ ಅನುಭವರಾಹಿತ್ಯವಾದ ಗ್ರಹಿಕೆಯೇ ಸಮಂಜಸ ಗ್ರಹಿಕೆ ಎಂಬುದಾಗಿ 'ಮೀಮಾಂಸಕ'ರು ಅಭಿಪ್ರಾಯ ಪಡುತ್ತಾರೆ. ಜೈನರು ನೆನಪಿಗೆ ಸ್ವತಂತ್ರವಾದ ಸಮಂಜಸತೆಯನ್ನು ನೀಡಿದರೂ ಅವರೂ ಸಹ ಇತರರಂತೆ ಅನುಭವ ಮತ್ತು ನೆನಪುಗಳ ನಡುವೆ ಒಂದು ಬಗೆಯ ವ್ಯತ್ಯಾಸವಿರುವುದನ್ನು ಒಪ್ಪುತ್ತಾರೆ.

ಬಹುತೇಕ ಭಾರತೀಯ ತತ್ವಶಾಸ್ತ್ರದ ಪಂಥಗಳೆಲ್ಲವೂ ಬುದ್ಧಿಶಕ್ತಿಯನ್ನು ತೀರ್ಮಾನ ಕೈಗೊಳ್ಳುವ ಒಂದು ಸಾಮರ್ಥ್ಯವೆಂದು ವ್ಯಾಖ್ಯಾನಿಸುತ್ತಾರೆ. ಆದ್ದರಿಂದ ಬುದ್ಧಿಶಕ್ತಿಯನ್ನು ದೈಹಿಕ ಮತ್ತು ಶಾಬ್ದಿಕ ಕ್ರಿಯೆಗಳಲ್ಲಿ ಹಾಗೂ ಈ ಎರಡನ್ನೂ ಆರಂಭ ಮಾಡುವ ಮಾನಸಿಕ ಕ್ರಿಯೆಗಳಲ್ಲಿ ತೀರ್ಮಾನ ಕೈಗೊಳ್ಳುವಿಕೆ ಎಂದು ನಿರೂಪಿಸಲಾಗುತ್ತದೆ.

ಬುದ್ಧಿಶಕ್ತಿಯ ಬಗೆಗಿನ ಭಾರತೀಯ ಕಲ್ಪನೆಗಳ ಹಂದರವನ್ನು ಚರ್ಚಿಸಿದ ನಂತರ ಭಾರತೀಯ ಸೈದ್ಧಾಂತಿಕ ಹಂದರವನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ನಾವು ಈಗ ನಮ್ಮ ಚರ್ಚೆಯನ್ನು ಪಾಶ್ಚಿಮಾತ್ಯ ಪ್ರಸ್ತಾಪದ ಕಡೆ ತಿರುಗಿಸೋಣ. ಈ ಮುಂಚೆಯೇ ನಾವು ಗಮನಿಸಿದಂತೆ ಇದರ ಪರೀಕ್ಷಣೀಯತೆಗೆ ಸಂಬಂಧಿಸಿದಂತೆ ಈ ಪರಿಕಲ್ಪನೆಯೊಂದಿಗೆ ವ್ಯವಹರಿಸಿದ್ದೇವೆ. ಬುದ್ಧಿಶಕ್ತಿಯನ್ನು ನೋಡಲು ಅಥವಾ ತೋರಿಸಲು ಸಾಧ್ಯವಿಲ್ಲ; ಭಾರತೀಯ ತತ್ವ ಸಿದ್ಧಾಂತಗಳಂತೆ ಅದನ್ನು ವಸ್ತುವನ್ನಾಗಿ ಅಥವಾ ಲಕ್ಷಣವನ್ನಾಗಿಯೂ ಒಪ್ಪಿಕೊಂಡಿಲ್ಲ. ಆದ್ದರಿಂದ ಒಂದು ಕಾಲ್ಪನಿಕ ಪರಿಕಲ್ಪನೆಯನ್ನು ರೂಪಿಸಬೇಕಾದ ಅಗತ್ಯವಿದೆ. ಹೀಗಾಗಿ ಮನಃಶಾಸ್ತ್ರಜ್ಞರು ಈ ಪರಿಕಲ್ಪನೆಯನ್ನು ಅದರ ಚಿರಂತನ ಸತ್ಯತೆಯೊಂದಿಗೆ ವ್ಯವಹರಿಸಲಿಲ್ಲ. ಇದರ ಬದಲಾಗಿ ಸದರ ಅಳೆಯುವಿಕೆಯನ್ನು ನಿರೂಪಿಸಲು ಮತ್ತು ರೂಪಿಸಲು ತಮ್ಮ ಪ್ರಯತ್ನವನ್ನು ನಡೆಸಿದ್ದಾರೆಯೋ ವಿನಃ ಭಾರತೀಯ ಸಂಪ್ರದಾಯದಲ್ಲಿರುವಂತೆ ಅದನ್ನು ಸಮರ್ಥಿಸಲಾಗದ ವಿವರಣೆಗಳೊಂದಿಗೆ ಕಟ್ಟಿ ಹಾಕಿಲ್ಲ.

ಬುದ್ಧಿಶಕ್ತಿಯನ್ನು ವ್ಯಕ್ತಿಯೋರ್ವನ ಬೌದ್ಧಿಕ ಮತ್ತು ಶಾಬ್ದಿಕ ಕ್ರಿಯೆಗಳ ಮೂಲಕ ಮಾತ್ರ ನಿರ್ಣಯಿಸಬಹುದು. ಹೀಗಾಗಿ ಒಂದು 'ಹಸು' ಅಥವಾ 'ನಾಯಿ'ಗಳ ವಿಷಯದಲ್ಲಿ ನಾವು ಮಾಡುವಂತೆ ಅದನ್ನು ಕರಾರುವಾಕ್ಕಾದ ಪದಗಳಲ್ಲಿ ನಿರೂಪಿಸಲು ಆಗುವುದಿಲ್ಲ. ಆದ್ದರಿಂದ ಅವರು ಈ ಪರಿಕಲ್ಪನೆಯನ್ನು ವಿವರಣಾತ್ಮಕ/ ವರ್ಣನಾತ್ಮಕ ನಿರೂಪಣೆಯಿಂದ ವಿವರಿಸಲು ಪ್ರಯತ್ನಿಸಿದ್ದಾರೆ.

ಪಿಯಾಜೆ (Piaget)ಯು ಸಾಮಾಜಿಕ ಶ್ರೇಣಿ ವ್ಯವಸ್ಥೆಯನ್ನು ಆಧರಿಸಿ ಬುದ್ಧಿಶಕ್ತಿಯ ಸಿದ್ಧಾಂತಕ್ಕಿಂತ ಬೌದ್ಧಿಕ ಬೆಳವಣಿಗೆಯ ಬಗ್ಗೆ ಅತ್ಯಂತ ಸಂಕೀರ್ಣವಾದ ಹಾಗೂ ವಿವರವಾದ ಸಿದ್ಧಾಂತವನ್ನು ನೀಡಿದ್ದಾನೆ. ಬೌದ್ಧಿಕ ಕ್ರಿಯೆಗಿಂತ ಭಿನ್ನವಾದ ಬೌದ್ಧಿಕ ರಚನೆಯ ಸೈದ್ಧಾಂತಿಕವಾದ ಹಾಗೂ ಗುಣಾತ್ಮಕವಾದ ಬೆಳವಣಿಗೆಯ ಮೇಲ ಅವನು ಕೇಂದ್ರೀಕರಿಸಿದ್ದಾನೆ. ಅವನು ಜಾತಿ ವಿಶಿಷ್ಟವಾದ ಮತ್ತು ಆಧ್ಯಾತ್ಮಿಕ ಅಸ್ತಿತ್ವದ ಬುದ್ಧಿಶಕ್ತಿಯ ನಡುವಿನ ವ್ಯತ್ಯಾಸಗಳನ್ನು ಗುರುತಿಸುತ್ತಾನೆ. ಕ್ರಿಯೆಯು ಅಸ್ತಿತ್ವ ಬುದ್ಧಿಶಕ್ತಿಯನ್ನು ನಿರೂಪಿಸುವ ಜಾತಿ ವಿಶಿಷ್ಟವಾದ ಬುದ್ಧಿಶಕ್ತಿಗೆ ಸಂಬಂಧಿಸಿದರೆ ರಚನೆಯು ವಯಸ್ಸಿನೊಂದಿಗೆ ಮಾರ್ಪಾಡಾಗುವ ಬೆಳವಣಿಗೆಯ ಪ್ರಮಾಣಕ್ಕೆ ಸಂಬಂಧಿಸಿದ ಕ್ರಮಾಗತ ಅಂಶಗಳಿಗೆ ಸಂಬಂಧಿಸಿರುತ್ತದೆ. ಪಿಯಾಜೆಯು ಭೌತ ದೇಹದಲ್ಲಿ ನಡೆಯುವ ಈ ಬೆಳವಣಿಗೆಗಳಲ್ಲಿನ ಬದಲಾವಣೆಗಳ ಮೇಲೆ ಮುಖ್ಯವಾಗಿ ತನ್ನ ಗಮನವನ್ನು ಕೇಂದ್ರೀಕರಿಸಿದನು. ಒಂದು ವೇಳೆ ನಾವು ಕಾರ್ಯಾಚರಣೆಗೆ ಮಾತ್ರ ಸಂಬಂಧಪಟ್ಟ ಅಪರಿವರ್ತನೀಯತೆಯನ್ನು ಗಣನೆಗೆ

Digitised by Bharatavani, CIIL

ತೆಗೆದುಕೊಂಡಾಗ, ರಚನೆ ಮತ್ತು ಕ್ರಿಯೆಗಳ ನಡುವಿನ ವ್ಯತ್ಯಾಸ ಸ್ಪಷ್ಟವಾಗುತ್ತದೆ. ತನ್ನ ಆಸಕ್ತಿಯ ಅಧ್ಯಯನಕ್ಕೆ ಸರಿಹೊಂದುವಂತೆ ಆತನು ಬುದ್ಧಿಶಕ್ತಿಯ ಬೆಳವಣಿಗೆಯ ಪ್ರಕ್ರಿಯೆಯನ್ನು ಹಲವು ಹಂತಗಳಾಗಿ ವಿಂಗಡಿಸಿದನು. ಮತ್ತು ಪ್ರತಿ ಹಂತವೂ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮತ್ತೊಂದು ಹಂತದಿಂದ ಸ್ಪಷ್ಟವಾಗಿ ಪ್ರತ್ಯೇಕವಾಗಿರುವಂತೆ ಪ್ರತಿ ಹಂತವನ್ನೂ ಅಭ್ಯಸಿಸಿದನು. ಈ ಹಂತಗಳನ್ನು ಕ್ರಮಾಗತವಾಗಿ ಜೋಡಿಸಿದರೆ ಆಗ ಅವು ಬುದ್ಧಿವಂತಿಕೆಯ ರಚನೆಯ ಶ್ರೇಣಿಯಾಗಿ ರೂಪುಗೊಳ್ಳುತ್ತವೆ. ಈ ಶ್ರೇಣಿಯ ಹಂತಗಳಿಂದ ಮೊದಲಿನ ಹಾಗೂ ಮುಂಬರುವ ಬುದ್ಧಿಶಕ್ತಿಯ ಬೆಳವಣಿಗೆಯ ಹಂತಗಳನ್ನು ನಿರೂಪಿಸಬಹುದು. ಈ ಹಂತಗಳು ಯಾವಾಗಲೂ ಒಂದು ಸುವ್ಯವಸ್ಥಿತವಾದ ಮತ್ತು ನಿರ್ದಿಷ್ಟವಾದ ಕ್ರಮದಲ್ಲಿಯೇ ಉಂಟಾಗುತ್ತವೆ. ಹೀಗೆ ಪಿಯಾಜೆಯು ಬುದ್ಧಿಶಕ್ತಿಯ ಬೆಳವಣಿಗೆ ನಡೆಯುತ್ತಲಿದ್ದರೂ ಬುದ್ಧಿಶಕ್ತಿಯ ಕಾರ್ಯಸಮರ್ಥತೆಯು ಬದಲಾಗದೇ ಸ್ಥಿರವಾಗಿರುತ್ತವೆ ಎಂಬ ಅಭಿಪ್ರಾಯ ಪಡುತ್ತಾನೆ. ಬುದ್ಧಿಶಕ್ತಿಯ ರಚನೆಗಳು ಬುದ್ಧಿಶಕ್ತಿಯ ಕಾರ್ಯಗಳಿಂದ ಹೊರಹೊಮ್ಮುವ ಅಂಶಗಳು. ಇದನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳಬೇಕೆಂದರೆ ಬುದ್ಧಿಶಕ್ತಿಯ ಕೆಲಸಗಳು ಪರಿಸರದೊಂದಿಗೆ ವ್ಯವಹರಿಸುವ ನಿರ್ದಿಷ್ಟ ವಿಧಾನಗಳು. ಪಿಯಾಜೆಯು, ಅನಂತರ ಕಾರ್ಯಾಚರಣೆಯ ಎರಡು ಬದಲಾಯಿಸದೇ ಇರುವಂತಹವುಗಳ ಬಗ್ಗೆ ಹೇಳುತ್ತಾನೆ. ಅವುಗಳೇ ವ್ಯವಸ್ಥೆ ಮತ್ತು ಮತ್ತು ಹೊಂದಾಣಿಕೆ. ವ್ಯವಸ್ಥೆಯು ಬುದ್ಧಿಶಕ್ತಿಯ ಪ್ರತ್ಯೇಕಿಸಲಾಗದ ಸ್ವಭಾವವನ್ನು ನಿರೂಪಿಸುತ್ತದೆ. ಮತ್ತು ಹೊಂದಾಣಿಕೆಯು ಬಾಹ್ಯ ಅಂಶಗಳ ಬಗ್ಗೆ ತಿಳಿಸುತ್ತದೆ. ಆದ್ದರಿಂದ ವ್ಯವಸ್ಥೆಯು ಹೊಂದಾಣಿಕೆಯ ಅವಿಚ್ಛಿನ್ನ ರೂಪ.

ಹೊಂದಾಣಿಕೆಯು ವ್ಯಕ್ತಿಯೋರ್ವನು ವಿವಿಧ ಬಗೆಗಳ ಅಗತ್ಯಗಳಿಗೆ ಅಥವಾ ಬೇಡಿಕೆಗಳಿಗೆ ಹೊಂದಿಕೊಂಡು ಹೋಗುವ ಪ್ರಕ್ರಿಯೆ. ಇದನ್ನು ವಸ್ತುಗಳ ಪ್ರಪಂಚವು ಅವನ ಮೇಲೆ ಹೇರುತ್ತದೆ. ಅತ್ಯಂತ ಮೂಲಭೂತವಾದ ವಿಧದ ಯೋಚನೆಯ ನೈಜತೆಯ ಹಿಡಿತಕ್ಕೆ ಬರಬೇಕು ಮತ್ತು ಈ ನೈಜತೆಯು ಎಲ್ಲೆಯಿಲ್ಲದ ಹೊಂದಿಕೊಳ್ಳುವಿಕೆಯಲ್ಲ. ಇದು ಪಿಯಾಜೆಯ ವ್ಯವಸ್ಥೆ ಮತ್ತು ಸೈದ್ಧಾಂತಿಕ ಚೌಕಟ್ಟಿನ ಸಂಕ್ಷಿಪ್ತ ನಿರೂಪಣೆ.

ಪಿಯಾಜೆಯ ಬುದ್ಧಿಶಕ್ತಿಯ ಬೆಳವಣಿಗೆಯ ವ್ಯವಸ್ಥೆಯನ್ನು ಚರ್ಚಿಸಿದ ನಂತರ ಡೊನಾಲ್ಡ್ ಹಬ್ (1940)ನ ಬುದ್ಧಿಶಕ್ತಿಯ ಸಿದ್ಧಾಂತವನ್ನು ಪರಿಗಣಿಸಬೇಕಾದ ಅಗತ್ಯವಿದೆ. ಇಲ್ಲಿ ಈತನು ಎರಡು ಬಗೆಗಳ ಬುದ್ಧಿಶಕ್ತಿಯ ಬಗ್ಗೆ ಹೇಳುತ್ತಾನೆ. ಇದನ್ನು ವ್ಯವಹಾರ್ಯ ಉದ್ದೇಶಗಳಿಗಾಗಿಯೇ ಮಾಡಲಾಗಿದೆ. ಏಕೆಂದರೆ ವಾಸ್ತವವಾಗಿ ಇದು ಇದೆ ಮತ್ತು ಸಾಧ್ಯವಿಲ್ಲ ಎಂಬಂತಹ ವರ್ಗೀಕರಣ ಇರಲಾಗುವುದಿಲ್ಲ. ಬುದ್ಧಿಶಕ್ತಿ 'ಎ' ಮತ್ತು ಬುದ್ಧಿಶಕ್ತಿ 'ಬಿ' ಎಂಬುವು ಎರಡು ಬಗೆಗಳು ಎಂದೂ 'ಎ' ಎಂಬುದು ಜನ್ಮಸಿದ್ಧ ಸಾಮರ್ಥ್ಯ ಮತ್ತು ಬುದ್ಧಿಶಕ್ತಿಯು ಬೆಳೆಯಲು ನೆರವಾಗುವ ಇದು ಪ್ರತಿ ವ್ಯಕ್ತಿಯಲ್ಲಿಯೂ ಇರುತ್ತದೆ. ಇದು ಜನ್ಮಸಿದ್ಧವಾದುದರಿಂದ ಇದಕ್ಕೆ ಶ್ರೇಣಿ ವ್ಯವಸ್ಥೆಯ ಸ್ವಭಾವ ಇರುತ್ತದೆ. ಇದು ಪರಿಸರಕ್ಕೆ ಹೊಂದಿಕೊಂಡ ವ್ಯಕ್ತಿಯು ತನ್ನ ಸಾಮರ್ಥ್ಯಗಳನ್ನು ವ್ಯವಸ್ಥಿತಗೊಳಿಸಲು ಮತ್ತು ಹೊಂದಾಣಿಕೆ ಮಾಡಿಕೊಳ್ಳಲು ನೆರವಾಗುತ್ತದೆ. ಬುದ್ಧಿಶಕ್ತಿ 'ಬಿ'ಯು ವ್ಯಕ್ತಿಯೋರ್ವನ ನಿರ್ವಹಣೆಯ ಮಟ್ಟ. ನಿಷ್ಕೃಷ್ಟವಾಗಿ ಹೇಳಬೇಕೆಂದರೆ 'ಎ' ಮತ್ತು 'ಬಿ'ಗಳೆರಡೂ ಗ್ರಹಿಸಬಹುದಾದವುಗಳಲ್ಲ. ಆದರೂ 'ಬಿ' ಯನ್ನು 'ಎ' ಗಿಂತ ಅಳತೆ ಮಾಡಲು ಸಾಧ್ಯ. 'ಬಿ'ಯ ಅಳೆಯಬಹುದಾಗಿರುವಿಕೆಯು 'ಎ'ಗಿಂತ ಅಧಿಕವಾಗಿದೆ. ಈ ಎರಡು ಸಂದರ್ಭಗಳಲ್ಲಿಯೂ ಬುದ್ಧಿಶಕ್ತಿಯನ್ನು ನಿರ್ಣಯಿಸಲು ಮಾತ್ರ ಸಾಧ್ಯ. ಇದನ್ನು ಜ್ಞಾನೇಂದ್ರಿಯಗಳಿಂದ ನೋಡಲಾಗಲೀ, ಗ್ರಹಿಸಲಾಗಲೀ ಸಾಧ್ಯವಿಲ್ಲ. ಯಾವುದೇ ಸಂದರ್ಭದಲ್ಲಿಯಾದರೂ 'ಎ' ಯು 'ಬಿ'ಯ ನಿರ್ಧಾರಕವಾಗಿರುತ್ತದೆ. ಇದರಿಂದ ಬುದ್ಧಿಶಕ್ತಿಯು ಅನುವಂಶೀಯತೆಯಿಂದ ನಿಯಂತ್ರಿಸಲ್ಪಡುತ್ತದೆ ಎಂದು ಹೇಳಿದಂತೆ ಆಗುತ್ತದೆ. ಆದಾಗ್ಯೂ 'ಬಿ'ಯು 'ಎ'ಯಿಂದ ವ್ಯವಸ್ಥೆ ಮತ್ತು ಮಾರ್ಪಾಡುಗಳ ಸಂದರ್ಭದಲ್ಲಿ ಇತರ ಅಂಶಗಳಿಂದ ನಿಯಂತ್ರಿಸಲ್ಪಟ್ಟರೂ ಇದು ಬುದ್ಧಿಶಕ್ತಿಯ ಬೆಳವಣಿಗೆಗೆ ಒಳಪಟ್ಟಿರುತ್ತದೆ. ಇದರಿಂದ ವ್ಯಕ್ತಿಯು ವರ್ತನೆಯಲ್ಲಿನ ಮಾರ್ಪಾಡುಗಳನ್ನು ಅನುಭವಿಸುತ್ತಾನೆ.

ಮೇಲಿನ ಪ್ರಸ್ತಾವನೆಯನ್ನು ಗಮನದಲ್ಲಿಟ್ಟುಕೊಂಡು ಬುದ್ಧಿಶಕ್ತಿಯ ಈ ಕೆಳಗಿನ ನಿರೂಪಣೆಯನ್ನು ಗಮನಿಸಿ: ಬುದ್ಧಿಶಕ್ತಿಯು ವ್ಯಕ್ತಿಯು ಹೊಸ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯ (stern, 1914). ಅಮೂರ್ತವಾಗಿ ಚಿಂತಿಸುವ ಸಾಮರ್ಥ್ಯವೇ ಬುದ್ಧಿಶಕ್ತಿ (Terman, 1921). ವ್ಯಕ್ತಿಯು ತನ್ನ ಪರಿಸರದೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸುವುದು, ವಿವೇಚನಾಶೀಲನಾಗಿ ಆಲೋಚಿಸುವುದು, ಉದ್ದೇಶಪೂರ್ವಕವಾಗಿ ಕಾರ್ಯ ನಿರ್ವಹಿಸುವುದು ಇವುಗಳ ಸಮಗ್ರವಾದ ಅಥವಾ ಸಂಪೂರ್ಣವಾದ ಸಾಮರ್ಥ್ಯವೇ ಬುದ್ಧಿಶಕ್ತಿ (Wechsler, 1944). ಅರಿವಿನ ಅಗತ್ಯವಿರುವ ಸಮಸ್ಯೆಗಳನ್ನು ಬಿಡಿಸಲು ಅಗತ್ಯವಾದ ಸಾಮರ್ಥ್ಯಗಳು ಮತ್ತು ಚಿಹ್ನೆಗಳನ್ನು ಉಪಯೋಗಿಸುವುದು (Garrett, 1946). ಕಲಿಯುವಿಕೆ ಮತ್ತು ಅದನ್ನು ಉಳಿಸಿಕೊಳ್ಳುವಿಕೆಯೇ ಬುದ್ಧಶಕ್ತಿ (Heber, 1975).

ಈ ನಿರೂಪಣೆಗಳನ್ನು ಮತ್ತು ಇತರವುಗಳನ್ನು ವಿಶ್ಲೇಷಿಸಿದರೆ, ಎಲ್ಲ ನಿರೂಪಣೆಗಳು ಪ್ರಯತ್ನಗಳು ಪರೀಕ್ಷಿಸಲ್ಪಡಬಹುದಾದ ಬುದ್ಧವಂತಿಕೆಯ ದಿಕ್ಕಿನಲ್ಲಿಯೇ ಇರುವುದು ಸ್ಪಷ್ಟವಾಗುತ್ತದೆ. ಈ ನಿರೂಪಣೆಗಳು ಬುದ್ಧಿವಂತಿಕೆಯ ಗುಣಲಕ್ಷಣಗಳನ್ನು ಒತ್ತಿ ಹೇಳುತ್ತವೆ. ಸರಿಹೊಂದಿಸಿಕೊಳ್ಳುವಿಕೆ, ಯಾವುದೇ ಉದ್ದೇಶಕ್ಕೆ ತಕ್ಕಂತೆ ಪರಿವರ್ತನೆ ಮಾಡಿಕೊಳ್ಳುವಿಕೆ, ಕಲಿಸಬಲ್ಲಿಕೆ ಮತ್ತು ವ್ಯಕ್ತಿಯ ಶಾಬ್ದಿಕ ಹಾಗೂ ಇತರ ನಿರ್ದಿಷ್ಟ ಗ್ರಹಿಕೆಗಳು ಇದರ ಪ್ರಮುಖ ಗುಣಲಕ್ಷಣಗಳು. ಆದ್ದರಿಂದ ಪರೀಕ್ಷೆಗೆ ಒಳಪಡುವ ಸ್ವಭಾವದ ಬುದ್ಧಿಶಕ್ತಿಯ ಪರಿಕಲ್ಪನೆಯ ಬುದ್ಧಿಶಕ್ತಿಯ ಬಹುತೇಕ ಎಲ್ಲ ನಿರೂಪಣೆಗಳು ಪಶ್ಚಿಮದಲ್ಲಿ ಹರಡಿಕೊಂಡವು. ಅದು ಆರ್. ಬೀನೆಯ ಏಕಘಟಕ, ಸಿ. ಸ್ಪಿಯರ್‌ಮನ್‌ನ ದ್ವಿಘಟಕ (1904, 1927), ಥಾಂಪ್ಸನ್‌ನ ಬಹು ಅಂಶ, ಮಾದರಿ (1947), ಎಲ್.

Digitised by Bharatavani, CIIL

ಎಲ್. ಥರ್ಸ್‌ಟನ್‌ನ ಗುಂಪು ಅಂಶ (1935) ಸಿದ್ಧಾಂತಗಳು ಅಥವಾ ಪಿ.ಇ. ವೆರ್ನನ್‌ನ ಶ್ರೇಣಿ ವ್ಯವಸ್ಥೆ (1961) ಮತ್ತು ಕೆ.ಬಿ. ಕೆಟ್ಟೆಲ್‌ನ ದ್ರವ–ಸ್ಫಟಿಕೀಕರಣ (1966) ಸಿದ್ಧಾಂತಗಳು ಪರೀಕ್ಷಾಯೋಗ್ಯವಾದ ಬುದ್ಧಿಶಕ್ತಿಯನ್ನು ಬೊಟ್ಟು ಮಾಡುತ್ತವೆಯೇ ವಿನಃ ಸಾಮಾನ್ಯ ಬುದ್ಧಿಶಕ್ತಿಯನ್ನಲ್ಲ. ಜೆ.ಪಿ. ಗಿಲ್‌ಫರ್ಡ್ (1959) ಬುದ್ಧಿಶಕ್ತಿಯ ಬಹು ಅಂಶ ಸಿದ್ಧಾಂತವನ್ನು ರೂಪಿಸಿದ್ದಾನೆ. ಇದು 120 ಘಟಕಗಳಾಗಿ ವಿಭಾಗಿಸಲ್ಪಟ್ಟ ರಚನಾ ವಿಧಾನ (Structural approach) ಎಂಬುದಾಗಿ ಪರಿಚಿತವಾಗಿದೆ. ಇವುಗಳಲ್ಲಿ ಕನಿಷ್ಠ 50 ಘಟಕಗಳನ್ನು ಗುರುತಿಸಿರುವುದಾಗಿ ಆತನು ಸಮರ್ಥಿಸಿಕೊಳ್ಳುತ್ತಾನೆ. ಗಿಲ್‌ಫರ್ಡ್ ಹೇಳುವುದು ಹೀಗೆ; ನಾವು ಬುದ್ಧಿವಂತರಾಗಲು ಕನಿಷ್ಠ 50 ವಿಧಗಳಿವೆ ಎಂದು ಹೇಳಬಹುದು. ದುರದೃಷ್ಟವಶಾತ್, ನಾವು ಮೂರ್ಖರಾಗಲು ಇನ್ನೂ ಅನೇಕ ಹೆಚ್ಚಿನ ವಿಧಾನಗಳಿವೆ ಎಂದು ಕಾಣುತ್ತದೆ ಎಂಬುದಾಗಿ ತಮಾಷೆಯಾಗಿ ಹೇಳಲಾಗುತ್ತದೆ. (Guilford, 1959).

ಬುದ್ಧಿಶಕ್ತಿಯ ಸಿದ್ಧಾಂತಗಳನ್ನು ಗಮನಿಸಿದರೆ ಇಷ್ಟು ಅಂಶ ಸ್ಪಷ್ಟವಾಗುತ್ತದೆ. ಪರೀಕ್ಷೆಗೆ ಒಳಪಡಬಹುದಾದ ಬುದ್ಧಿಶಕ್ತಿಯ ಆಧಾರದ ಮೇಲೆ ಹರಡಿಕೊಂಡ ಇವು ಪ್ರಮುಖವಾಗಿ ಈಗಾಗಲೇ ನಾವು ಚರ್ಚಿಸಿದ 'ಬಿ' ಅಂಶದೊಂದಿಗೆ ಸಂಬಂಧ ಹೊಂದಿದೆ. ಆದರೆ ಪಿಯಾಜೆಯು ಈ ಎರಡನ್ನು ಒಟ್ಟುಗೂಡಿಸಲು ತನ್ನ ಕೈಲಾದಷ್ಟು ಸಮರ್ಥವಾಗಿ ಪ್ರಯತ್ನಿಸಿದ್ದಾನೆ ಮತ್ತು ಪರೀಕ್ಷಾ ಸಿದ್ಧಾಂತಗಳ ಹಾಗೂ ಜನ್ಮಸಿದ್ಧ ಸಾಮರ್ಥ್ಯ 'ಎ'ಗಳ ನಡುವಿನ ಸಂಬಂಧವನ್ನು ನಿರೂಪಿಸಿದ್ದಾನೆ. ಪಶ್ಚಿಮದಲ್ಲಿ ಮುಂಚಿನ ದಿನಗಳಲ್ಲಿ ಈ ಸಂಶ್ಲೇಷಣೆಯ ಕೊರತೆ ಕಾಣುತ್ತಿತ್ತು. ಇಲ್ಲಿ ನಡೆದ ಸಂಪೂರ್ಣ ಚರ್ಚೆಯು 'ಬಿ' ಅಂಶಕ್ಕೆ ಸಂಬಂಧಪಟ್ಟಿದ್ದು ಇದನ್ನು ಪರೀಕ್ಷೆಗೆ ಒಳಪಡಿಸಬಹುದಾಗಿದೆ. ಇದೇ ಬುದ್ಧಿಶಕ್ತಿಯ ವಿಶ್ಲೇಷಣೆಯ ಪ್ರಮುಖ ಗುರಿಯಾಗಿದೆ.

ಇದರ ಸಾರವೆಂದರೆ ಪರೀಕ್ಷಾತ್ಮಕ ಸಿದ್ಧಾಂತ ಮತ್ತು ಪಿಯಾಜೆಯ ಸಿದ್ಧಾಂತಗಳು ಸ್ವಭಾವದಲ್ಲಿ ಪರಸ್ಪರ ಪೂರಕವಾಗಿವೆ. ಪರೀಕ್ಷಾ ಸಿದ್ಧಾಂತವು ಬುದ್ಧಿಶಕ್ತಿಯ ಸುಧಾರಿತ ದೃಷ್ಟಿಕೋನ ಮತ್ತು ಬುದ್ಧಿಶಕ್ತಿಯ ಪ್ರಕ್ರಿಯೆಗಳನ್ನು ರೂಪಿಸುವುದರಲ್ಲಿ ಸೋತಿದೆ. ಇದನ್ನು ಪಿಯಾಜೆಯು ಸುಮಾರಾಗಿ ಒದಗಿಸಿದ್ದಾನೆ. ವಾಸ್ತವವಾಗಿ ಸಾಮಾನ್ಯ ಬುದ್ಧಿಶಕ್ತಿಯನ್ನು ಅದರ ಪೂರ್ಣತೆಯಲ್ಲಿ ನಿರೂಪಿಸುವುದು ಊಹಾತ್ಮಕ ತಾತ್ವಿಕ ವಿಧಾನವನ್ನು ಅಳವಡಿಸಿಕೊಳ್ಳದೆ ಸಾಧ್ಯವಿಲ್ಲ. ಇಲ್ಲಿ ಪಿಯಾಜೆಯು ಸಾಮಾಜಿಕ ವಿಷಯಗಳ ಬಗ್ಗೆ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದ್ದಾನೆ. ಆದ್ದರಿಂದ ಅನೇಕ ಸಂಶೋಧಕರು ಸಂಪೂರ್ಣವಾಗಿ ಸಮಸ್ಯಾ ನಿವಾರಣೆಯ ಬಗ್ಗೆ ತಮ್ಮ ಗಮನ ಕೇಂದ್ರೀಕರಿಸಿದ ಬುದ್ಧಿಶಕ್ತಿಯ ನಿರೂಪಣೆಯ ಬಗ್ಗೆ ಅಸಂತುಷ್ಟರಾಗಿದ್ದಾರೆ. ಗ್ರಹಿಕೆ ಮತ್ತು ಆಲೋಚನೆಗಳ ಪ್ರಕ್ರಿಯೆಯ ಬಗ್ಗೆ ಇನ್ನು ಹೆಚ್ಚಿನ, ಪೂರ್ಣವಾದ, ಅರಿವನ್ನು ಪಡೆಯಬೇಕೆಂಬ ಅಗತ್ಯವನ್ನು ಅವರು ಕಾಣುತ್ತಾರೆ. ಬುದ್ಧಿಶಕ್ತಿಯನ್ನು ಸಾಮರ್ಥ್ಯಗಳ ಪಟ್ಟಿಯನ್ನಾಗಿ ಅಥವಾ ಅಂಶಗಳನ್ನಾಗಿ ಅಲ್ಲದೆ ಜೀವನದ ಅನುಭವಗಳನ್ನು ಮತ್ತು ಸಂದೇಶಗಳನ್ನು ಭೇದಿಸುವ ಮತ್ತು ಆಜ್ಞಾಪಿಸುವ ಸಕ್ರಿಯವಾದ ಮಾಹಿತಿಯನ್ನು ಸಂಸ್ಕರಿಸುವ ವ್ಯವಸ್ಥೆಯನ್ನಾಗಿ ಬುದ್ಧಿಶಕ್ತಿಯನ್ನು ನೋಡಬೇಕು ಎಂದು ಹೇಳುವುದು ಸಂದರ್ಭೋಚಿತವಲ್ಲದ ವಿಷಯವಾಗುವುದಿಲ್ಲ. (ಸಿ.ಜಿ. ಮಾರಿಸ್ 1979). ಈ ಅವಲೋಕನವು ಖಂಡಿತವಾಗಿಯೂ ಬುದ್ಧಿಶಕ್ತಿಯ ಭಾರತೀಯ ಸೈದ್ಧಾಂತಿಕ ಚೌಕಟ್ಟಿನ ಮತ್ತು ಅವರ ಜ್ಞಾನಗ್ರಹಣದ ವಿಧಾನವನ್ನು ಅರಿಯದೇ ಇರುವುದರ ಫಲವಾಗಿದೆ. ಸಮಸ್ಯೆಗಳ ನಿವಾರಣೆಗೆ ಪೃಥಕ್ಕರಣಗಳ ಒಂದು ಬಗೆಯ ಸಂಬಂಧವೇ ಬುದ್ಧಿಶಕ್ತಿಯ ಭಾರತೀಯ ಸಿದ್ಧಾಂತಗಳ ಪರಸ್ಪರ ಸಂಬಂಧಗಳಾಗಿವೆ. ಆದ್ದರಿಂದ ಮಾರಿಸ್ ಅಕೃತ್ರಿಮವಾಗಿ ಗಮನಿಸಿದ ಹಾಗೆ ಭಾರತೀಯ ತತ್ವಶಾಸ್ತ್ರ ಪಂಥಗಳು ಬಹುಕಾಲದ ಹಿಂದೆಯೇ ಚರ್ಚಿಸಿದ ಅಂಶಗಳೇ ಅಪೇಕ್ಷಿತವುಗಳಾಗಿವೆ ಎಂದು ಮುಕ್ತಾಯಗೊಳಿಸೋಣ. ಆದಾಗ್ಯೂ ಇದು ಇನ್ನೂ ಹೆಚ್ಚಿನ ತೌಲನಿಕ ಮತ್ತು ಜ್ಞಾನಗ್ರಹಣದ ವಿಶ್ಲೇಷಣೆಗೆ ಒಳಪಡಬೇಕಾದ ಅಗತ್ಯವಿದೆ.

**ಮೂಲ: ಆರ್. ದೇವನಾಥನ್**

**ಅನು: ಪ್ರೊ. ವೆಂಕಟರಮಣ ಶೆಟ್ಟಿ ಸಿ.ಜಿ.**

## ಬೋಧನಾ ಅಭಿಸಾಮರ್ಥ್ಯ

ಬೋಧನೆಯಲ್ಲಿ ಪರಿಣತಿಯನ್ನು ಹೊಂದುವ ವ್ಯಕ್ತಿಯೋರ್ವನ ಸಾಮರ್ಥ್ಯ ಮತ್ತು ಬೋಧನೆಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳು ಹಾಗೂ ಕಾರ್ಯಗಳನ್ನು ಕೈಗೊಳ್ಳುವುದರಲ್ಲಿ ಈ ಸಾಮರ್ಥ್ಯವನ್ನು ಪ್ರಯೋಗಿಸುವ ಆಸಕ್ತಿಯನ್ನು ಬೆಳೆಸಿಕೊಳ್ಳುವ ಇಚ್ಛೆ ವ್ಯಕ್ತಿಯೊಬ್ಬನಲ್ಲಿ ಕಾಣಿಸಿಕೊಂಡಾಗ ಆ ಸ್ಥಿತಿಯನ್ನು ಬೋಧನಾ ಅಭಿಸಾಮರ್ಥ್ಯ (Teaching Aptitude) ಎಂದು ಹೇಳಬಹುದು. ಇಲ್ಲಿ 'ಸಾಮರ್ಥ್ಯ'ವೆಂದರೆ ಕೆಲವು ನಿರ್ದೇಶಿಸಲಾದ ಕಾರ್ಯಗಳನ್ನು ಕೈಗೊಳ್ಳುವ 'ಶಕ್ತಿ' ಅಥವಾ 'ಯೋಗ್ಯತೆ'. ಈ ಶಕ್ತಿ ಅಥವಾ ಯೋಗ್ಯತೆ ಅಂತಸ್ಸತ್ವವೆ ಅಥವಾ ವಾಸ್ತವವೇ, ಸ್ವಾಭಾವಿಕವೇ ಅಥವಾ ಗಳಿಸಿದುದೇ ಎಂಬುದನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. 'ಪರಿಣತಿ' ಎಂದರೆ ಅವಶ್ಯಕ ತರಬೇತಿ ಮತ್ತು ಅನುಭವದ ಮುಖಾಂತರ ಬೋಧನೆಯಲ್ಲಿ ಪರಿಶ್ರಮ ಗಳಿಸಿಕೊಳ್ಳುವ ಸಾಮರ್ಥ್ಯ. ಹೀಗೆ ಬೋಧನಾ ಅಭಿಸಾಮರ್ಥ್ಯ ಮತ್ತು ಅದರ ಮಾಪನವನ್ನು ಅರ್ಥಮಾಡಿಕೊಳ್ಳಲು ಬೋಧನೆಯ ಸ್ವರೂಪವೇನು ಮತ್ತು ಪ್ರಭಾವಶಾಲಿ ಮತ್ತು ಸಫಲ ಶಿಕ್ಷಕನ ಅಗತ್ಯ ಗುಣಲಕ್ಷಣಗಳೇನು ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ.

**ಬೋಧನೆಯ ಪರಿಕಲ್ಪನೆ:**

ವಿದ್ಯಾರ್ಥಿಗೆ ಜ್ಞಾನ, ಮಾಹಿತಿ ಅಥವಾ ಕೌಶಲಗಳನ್ನು, ವಿಶೇಷವಾಗಿ ವ್ಯವಸ್ಥಿತ ವಿಧಾನದಲ್ಲಿ ತಿಳಿಸಿಕೊಡುವ ಪ್ರಕ್ರಿಯೆಯೇ ಬೋಧನೆ. 'ಪಾಠಗಳ ಮೂಲಕ ಜ್ಞಾನ ನೀಡು', ಜ್ಞಾನ ಸಂವಹನ

Digitised by Bharatavani, CIIL

ಮಾಡು', 'ಸತ್ಯವನ್ನು ಅಥವಾ ಮಾಹಿತಿಯನ್ನು ಮನಸ್ಸಿನೊಳಗೆ ತುಂಬು ಅಥವಾ ಮನದಟ್ಟು ಮಾಡು', 'ತಿಳಿಯುವಂತೆ ಅಥವಾ ಅರ್ಥವಾಗುವಂತೆ ಮಾಡು', 'ಏನನ್ನು ನಂಬಬೇಕೆಂದು ಅಥವಾ ಹೇಗೆ ಮಾಡಬೇಕೆಂದು ಹೇಳು'– ಈ ಪದಗುಚ್ಛಗಳನ್ನು ಬೋಧನೆಯ ಅರ್ಥವನ್ನು ವಿಸ್ತರಿಸಲು ಬಳಸಲಾಗುತ್ತದೆ. (ಹ್ಯಾರಿಸ್, 1960, ಪು 710) ಉದ್ದೇಶಪೂರ್ವಕ ಚಟುವಟಿಕೆಯ ರೂಪದಲ್ಲಿ ಬೋಧನೆ (i) ಸುನಿಶ್ಚಿತ ಉದ್ದೇಶ ಅಥವಾ ಯೋಜನೆ (ಪಠ್ಯಕ್ರಮ) ವನ್ನು ಹೊಂದಿದೆ. (ii)ಹಲವಾರು ಮಾರ್ಗಗಳನ್ನು ಅಥವಾ ಕಾರ್ಯಗಳನ್ನು (ಸೂಚನೆಗಳನ್ನು) ಉಪಯೋಗಿಸುತ್ತದೆ ಮತ್ತು (iii) ಪರಿಣಾಮಗಳು ಅಥವಾ ಪ್ರಭಾವಗಳ ಬಗ್ಗೆ ತಿಳಿಯಲು ವಿವಿಧ ಪಾತ್ರಗಳನ್ನು ಅಳವಡಿಸಿಕೊಳ್ಳುತ್ತದೆ (ಮೌಲ್ಯಮಾಪನ), ಬಿಗ್ ಮತ್ತು ಹಂಟ್ (1968) ರವರ ಪ್ರಕಾರ 'ಬೋಧಿಸು' ಸಕರ್ಮಕ ಕ್ರಿಯಾಪದ; ವ್ಯಕ್ತಿಯೊಬ್ಬನಿಗೆ ಬೋಧಿಸುವುದು ಎಂದರೆ ಆ ವ್ಯಕ್ತಿಗೆ ಏನನ್ನಾದರೂ ಮಾಡುವುದು. ಬೋಧನೆಯು ಕಲಿಕಾರ್ಥಿಗಳ ವರ್ತನೆಯಲ್ಲಿ ಅಳೆಯಬಲ್ಲ ಕೆಲವು ಬದಲಾವಣೆಗಳಿಗೆ ಎಡೆಮಾಡಿಕೊಡುತ್ತದೆ. ಇದು ಈ ಕೆಳಗಿನ ವಿವಿಧ ಅಂಶಗಳಿಂದ ಪ್ರಭಾವಿತವಾಗುತ್ತದೆ– (i) ಬೋಧನೆ ನಡೆಯುವ ಸಾಮಾಜಿಕ ಸಂರಚನೆಯ ಹಿನ್ನೆಲೆ (ii) ಶಿಕ್ಷಣದ ನಿರ್ದಿಷ್ಟ ಗುರಿಗಳು (iii) ಬೋಧಿಸುವವರು ಹೊಂದಿರುವ ಮನೋವೈಜ್ಞಾನಿಕ ತತ್ವಗಳು (ಕಲಿಕೆ, ಅಭಿಪ್ರೇರಣೆ ಇತ್ಯಾದಿ) (iv) ವಿದ್ಯಾರ್ಥಿಗಳ ಪ್ರಬುದ್ಧತೆಯ ಮಟ್ಟ.

ಬೋಧನೆಯನ್ನು ಕುರಿತಂತೆ ಕಮ್ಯುನಿಸಂ ಹಾಗೂ ಪ್ರಜಾಸತ್ತೆಯಂಥ ವಿರುದ್ಧ ಸಾಮಾಜಿಕ ಸಂರಚನೆಗಳ ಪ್ರಭಾವವನ್ನು ಪರಿಗಣಿಸಿದಾಗ ನಿರಂಕುಶ ರಾಷ್ಟ್ರದಲ್ಲಿ ಬೋಧನೆಯು ಅನುವರ್ತನೆ, ಬೌದ್ಧಿಕವಾಗಿ ಒಪ್ಪಿಕೊಳ್ಳುವಿಕೆ, ಶಿಸ್ತಿನಿಂದ ಹೇರಲಾದ ಅನುಬಂಧಿತ ಅನುಕ್ರಿಯೆ ಮತ್ತು ರಾಜ್ಯದ ಮೌಲ್ಯ ವ್ಯವಸ್ಥೆಗೆ ವಿಚಾರರಹಿತ ಸಮರ್ಪಣೆ ಇವುಗಳತ್ತ ಗಮನವನ್ನು ಕೇಂದ್ರೀಕರಿಸುತ್ತದೆ (ಕೌಂಟ್ಸ್ ಮತ್ತು ಲಾಡ್ಜ್ 1947) ಮತ್ತೊಂದೆಡೆ, ಪ್ರಜಾಸತ್ತಾತ್ಮಕ ರಾಷ್ಟ್ರದ ಶಾಲೆಗಳಲ್ಲಿ ನಡೆಸಲಾಗುವ ಬೋಧನೆಯು ವಿಚಾರ ಸ್ವಾತಂತ್ರ್ಯ, ಸ್ವಯಂ–ನಿರ್ದೇಶನ, ಸ್ವಯಂಶಿಸ್ತು ಮತ್ತು ಸಹಕಾರಾತ್ಮಕ ಮಾನವೀಯ ಸಂಬಂಧಗಳನ್ನು ಬೆಳೆಸಲು ವಿದ್ಯಾರ್ಥಿಗಳ ನಡುವಿನ ಹಾಗೂ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಣ ಮಾನವೀಯ ಸಂಬಂಧಗಳಿಗೆ ಒತ್ತು ನೀಡುತ್ತದೆ. (ಸ್ಟೈಲ್ಸ್ ಮತ್ತು ಡೋರ್ಸಿ 1950).

ಒಂದು ನಿಶ್ಚಿತ ಕಾಲದಲ್ಲಿ ಶಿಕ್ಷಣದ ನಿರ್ದಿಷ್ಟ ಗುರಿಗಳು ಬೋಧನೆಯ ಕ್ರಮ ಮತ್ತು ಕಾರ್ಯತಂತ್ರಗಳನ್ನು ಪ್ರಭಾವಿಸುತ್ತವೆ. ಉದಾಹರಣೆಗೆ, 'ದ್ಯುತಿ ಸಂಶ್ಲೇಷಣೆ' (Photo synthesis) ಯ ಬಗ್ಗೆ ಅರಿಯುವುದು ನಿರ್ದಿಷ್ಟ ಉದ್ದೇಶವಾದರೆ, 'ಪ್ರಯೋಗ'ವು ಬೋಧನಾ ತಂತ್ರವಾದರೆ, ಪ್ರಮುಖ ವಾಸ್ತವಾಂಶಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳಲು ಮೇಲ್ವಿಚಾರಣೆಯೊಂದಿಗಿನ ಅಭ್ಯಾಸವನ್ನು ಅಳವಡಿಸಿಕೊಳ್ಳಬೇಕಾಗುವುದು.

ಕಲಿಕಾ ಪ್ರಕ್ರಿಯೆಯನ್ನು ಸಮರ್ಪಕವಾಗಿ ವಿವರಿಸುವ ಯಾವುದೇ ಸಿದ್ಧಾಂತಗಳು ಇದುವರೆಗೆ ಕಂಡುಬಂದಿಲ್ಲವಾದಾಗ್ಯೂ ಕೆಲವು ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಬೋಧನಾ ವಿಧಾನದ ಆಯ್ಕೆ ಹಾಗೂ ಬೋಧನಾ ತಂತ್ರಗಳ ಪರಿಣಾಮಕಾರಿತ್ವಗಳನ್ನು ಶಿಕ್ಷಕನು ಅನುಸರಿಸುವ ನಿರ್ದಿಷ್ಟ ಸಿದ್ಧಾಂತ ಅಥವಾ ಸಿದ್ಧಾಂತಗಳಿಂದ ಪ್ರಭಾವಿತಗೊಳಿಸುವುದು ಎಂಬ ಅಂಶವು ಗಮನಕ್ಕೆ ಬಂದಿದೆ. (ಹಿಲ್‌ಗಾರ್ಡ್ 1948), ಗೊತ್ತಾದ ಸಮಯದಲ್ಲಿ ಬಾಹ್ಯ ಪ್ರಚೋದನೆಗಳು (Stimuli) ಒಂದಕ್ಕಿಂತ ಹೆಚ್ಚು ಅಂಶಗಳಿಂದ ರೂಪುಗೊಳ್ಳುತ್ತವೆ ಎಂದು ಬಲವಾಗಿ ನಂಬುವ ಶಿಕ್ಷಕನು ಪ್ರಯೋಗಶಾಲೆಯ ಅಥವಾ ಪ್ರಾಯೋಜನೆಯ ವಿಧಾನವನ್ನು ಆಯ್ಕೆ ಮಾಡಿ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿ ಚಟುವಟಿಕೆಗಳಿಗೆ ಅವಕಾಶ ನೀಡಿ ವೈಯಕ್ತಿಕ ಪ್ರಯತ್ನ ಮತ್ತು ವಿದ್ಯಾರ್ಥಿಗಳ ಸಹಭಾಗಿತ್ವಕ್ಕೆ ಹೆಚ್ಚು ಒತ್ತನ್ನು ನೀಡಬಹುದು.

ವಿದ್ಯಾರ್ಥಿಗಳ ಪ್ರಬುದ್ಧತೆಯ ಮಟ್ಟವೂ ಸಹ ಶಿಕ್ಷಕರ ಬೋಧನಾ ವಿಧಾನಗಳ ಆಯ್ಕೆಯನ್ನು ಪ್ರಭಾವಿಸುತ್ತದೆ. ಸಮಸ್ಯೆ ಪರಿಹಾರ ಉಪಕ್ರಮವನ್ನು (Problem solving approach) ಪ್ರಾಥಮಿಕ ಮಟ್ಟದ ವಿದ್ಯಾರ್ಥಿಗಳಿಗೆ ಪ್ರಯೋಗಿಸುವುದಕ್ಕಿಂತ ಹಿರಿಯ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಬಳಸುವುದು ಹೆಚ್ಚು ಪರಿಣಾಮಕಾರಿ ಎಂದು ಶಿಕ್ಷಕರು ತಿಳಿಯುತ್ತಾರೆ. ಹಿರಿಯ ವಿದ್ಯಾರ್ಥಿಗಳ ಪ್ರಬುದ್ಧತೆಯ ಮಟ್ಟವು ಶಿಕ್ಷಕನು ಮಾರ್ಗದರ್ಶಿಯಾಗಿಯೂ, ಸಂಪನ್ಮೂಲ ವ್ಯಕ್ತಿಯಾಗಿಯೂ ಇದ್ದುಕೊಂಡು ವೈಯಕ್ತಿಕ ಹಾಗೂ ಸಮೂಹ ಯೋಜನೆ, ಕಾರ್ಯಾನ್ವಯ ಮತ್ತು ಮೌಲ್ಯಮಾಪನಗಳನ್ನು ಕುರಿತಂತೆ ಬೋಧನಾ ವಿಧಾನದಲ್ಲಿ ಆಯ್ಕೆಗೆ ಅನುವು ಮಾಡಿಕೊಡುತ್ತದೆ.

ನಿರ್ದಿಷ್ಟ ಕಲಿಕಾರ್ಥಿಯು (ಅಥವಾ ವಿದ್ಯಾರ್ಥಿಗಳ ಸಮೂಹ) ನಿರ್ದಿಷ್ಟ ರೀತಿಯಲ್ಲಿ ವರ್ತಿಸಲು; ಕಾರ್ಯೋನ್ಮುಖರಾಗಲು ಅಥವಾ ಕೆಲವು ಇಚ್ಛಿತ ಗುರಿಗಳನ್ನು ತಲುಪಲು ಸಮರ್ಥನಾಗುವಂತೆ ಪರಿಸ್ಥಿತಿಗಳನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸುವ (ಆಯೋಜಿತ ವಾತಾವರಣ) ಪ್ರಕ್ರಿಯೆಯೇ ಬೋಧನೆ ಎಂದು ಕುಲಕರ್ಣಿಯವರು ವ್ಯಾಖ್ಯಾನಿಸುತ್ತಾರೆ (1986). ಈ ವ್ಯಾಖ್ಯಾನದ ಪ್ರಕಾರ ಬೋಧನೆಯು ಈ ಕೆಳಗಿನವುಗಳನ್ನು ಒಳಗೊಳ್ಳುತ್ತದೆ:

(i) ಕೆಲವು ಗುಣಲಕ್ಷಣಗಳುಳ್ಳ ಕಲಿಕಾರ್ಥಿ ಅಥವಾ ಕಲಿಕಾರ್ಥಿಗಳ ಗುಂಪು ಹಾಗೂ ಹಿಂದಿನ ಅನುಭವಗಳು (ಪ್ರವೇಶ ಕಾಲದ ವರ್ತನೆ);

(ii) ಕಲಿಕಾರ್ಥಿಗಳು ಸಾಧಿಸಬೇಕಾದ ಇಚ್ಛಿತ ಉದ್ದೇಶಗಳ/ಗುರಿಗಳ ಸಮೂಹ.

(iii) ಇಚ್ಛಿತ ಗುರಿಗಳನ್ನು ಸಾಧಿಸಲು ಕಲಿಕಾರ್ಥಿಗಳಿಗೆ ಸಹಾಯ ನೀಡಲು ಉದ್ದೇಶಪೂರ್ವಕವಾಗಿ ಆಯೋಜಿಸಿ ಕಾರ್ಯಾನ್ವಯನಗೊಳಿಸಿದ ಪರಿಸ್ಥಿತಿಗಳು ಅಥವಾ ಸಂದರ್ಭಗಳು; ಮತ್ತು

Digitised by Bharatavani, CIIL

(iv) ಬೋಧನೆಯೆಂಬ ನಾಟಕದ ನಿರ್ವಾಹಕನಾಗಿ ಶಿಕ್ಷಕ.

ಹೀಗೆ ಬೋಧನೆಯ ಅಂತಿಮ ಗುರಿಯೆಂದರೆ ವಿದ್ಯಾರ್ಥಿಗಳಿಗೆ ಕಲಿಯಲು ನೆರವಾಗುವುದು. ಕಲಿಕೆಯನ್ನು ಸುಗಮಗೊಳಿಸುವ ಪರಿಸ್ಥಿತಿಗಳ ಕ್ರಮಬದ್ಧತೆಯನ್ನು ಇದು ಒಳಗೊಳ್ಳುತ್ತದೆ.

**ಬೋಧನಾ ಪರಿಣಾಮಕಾರಿತ್ವ:**

ಬೋಧನಾ ಪರಿಣಾಮಕಾರಿತ್ವದ ಮಾನದಂಡಗಳ ಕುರಿತಂತೆ ಒಮ್ಮತವಿಲ್ಲವೆಂದು ತೋರುವುದು. ಶಿಕ್ಷಕರ ಪರಿಣಾಮಕಾರಿತ್ವದ ಸಾಮಾನ್ಯವಾಗಿ ಒಪ್ಪಿಕೊಂಡಿರುವ ಮಾನದಂಡವು ಅಸ್ತಿತ್ವದಲ್ಲಿಲ್ಲ (ಹ್ಯಾರಿಸ್, 1960, ಪು. 1481). ಶಿಕ್ಷಕರ ಸೇವಾಪೂರ್ವ ಆಯ್ಕೆಗೆ ಎಲ್ಲರೂ ಒಪ್ಪುವ ಮಾನದಂಡವಿಲ್ಲದಿರುವುದು ವಿಷಾದಕರವೆಂದು ಸ್ಟ್ಯಾನ್‌ಪೋರ್ಡ್ ಮತ್ತು ಟ್ರಂಪ್ (1950) ಅಭಿಪ್ರಾಯಪಡುತ್ತಾರೆ. ಆದರೂ ಸಹ, ಶಿಕ್ಷಕರ ಸಫಲತೆ ಅಥವಾ ಪರಿಣಾಮಕಾರಿತ್ವದ ಮಾನದಂಡಗಳನ್ನು ಕುರಿತಂತೆ ನಡೆದ ಅಧ್ಯಯನಗಳ ಫಲಿತಾಂಶಗಳು ಪ್ರಭಾವಿ ಶಿಕ್ಷಕರು ಕೆಲವು ವಿಶಿಷ್ಠ ಗುಣಲಕ್ಷಣಗಳನ್ನು ಹೊಂದಿರುತ್ತಾರೆ ಎಂದು ಸೂಚಿಸುತ್ತವೆ.

**ಹೊರದೇಶಗಳಲ್ಲಿನ ಅಧ್ಯಯನಗಳು:**

ಸಾಮಾನ್ಯವಾಗಿ 'ವಿದ್ಯಾರ್ಥಿಗಳ ಜೊತೆ ಶ್ರೇಷ್ಠ ಅನ್ಯೋನ್ಯ ಕ್ರಿಯೆಯನ್ನು ಹೊಂದಿರುವ ಶಿಕ್ಷಕರನ್ನು ವಿದ್ಯಾರ್ಥಿಗಳು ಹೆಚ್ಚು ಇಷ್ಟಪಡುತ್ತಾರೆ ಹಾಗೂ ಅವರಿಗೆ ಬೋಧನೆಯಲ್ಲಿ ಹೆಚ್ಚಿನ ಸಫಲತೆಯ ಸಾಧ್ಯತೆಗಳಿವೆ' ಎಂದು ಊಹಿಸುವುದು ಸಾಧುವಾದುದೆಂದು ತೋರಿಬರುತ್ತದೆ. (ಅಲೆಕ್ಸಾಂಡರ್ ಮತ್ತು ಹಾಲ್‌ವರ್‌ಸನ್ 1957). ವಿದ್ಯಾರ್ಥಿಗಳು ಅತ್ಯಂತ ಹೆಚ್ಚು ಇಷ್ಟಪಟ್ಟ ಶಿಕ್ಷಕರೇ ಅವರ ಅತ್ಯಂತ ಹೆಚ್ಚು ಪ್ರಭಾವಿ ಶಿಕ್ಷಕರಾಗಿದ್ದರು ಎಂಬ ಅಂಶವನ್ನು ತನ್ನ ಆಸಕ್ತಿಕರ ದತ್ತಾಂಶಗಳಲ್ಲಿ ಒಂದಾಗಿ ನೀಡುವ ಹಾರ್ಟ್ (1934)ರವರ ಅಧ್ಯಯನ ಈ ಊಹೆಯನ್ನು ಸಮರ್ಥಿಸುತ್ತದೆ. ಜೆರ್‌ಸ್ಲಿಡ್ (1940) ತನ್ನ ಅಧ್ಯಯನದಲ್ಲಿ ಹೀಗೆ ವರದಿ ಮಾಡಿದ್ದಾನೆ; (i) ಮಾನವೀಯ ಗುಣಗಳು (ನ್ಯಾಯ, ಕರುಣೆ ಮತ್ತು ಪರಿಗಣನೆ); (ii) ಶಿಸ್ತಿನ ಗುಣಗಳು (ನ್ಯಾಯ, ಸಮಂಜಸತೆ, ಮತ್ತು ತೆಗಳದಿರುವುದು) ಮತ್ತು (iii) ಶಿಕ್ಷಕನಾಗಿ ಕಾರ್ಯನಿರ್ವಹಣೆ– ಇವು ಹೆಚ್ಚು ಜನಪ್ರಿಯ ಶಿಕ್ಷಕರ ಗುಣಲಕ್ಷಣಗಳು. ಇಂಥದೇ ಫಲಿತಾಂಶಗಳು ಹಾಪ್‌ಕಿನ್ಸ್ (1940) ಮತ್ತು ಕ್ರೊ ಮತ್ತು ಕ್ರೋ (1948) ಇವರುಗಳ ಮೊದಲಿನ ಅಧ್ಯಯನಗಳಿಂದ ಹೊರಬಂದಿವೆ. ಬಹಳಷ್ಟು ಸಫಲ ಶಿಕ್ಷಕರು ಹೆಚ್ಚಿನ ಸಾಮಾಜಿಕ ಸೇವಾ ಮನೋಭಾವ ಮತ್ತು ಬೌದ್ಧಿಕ ಆಸಕ್ತಿಗಳನ್ನು ಹೊಂದಿರುವರೆಂದು ಪುಲ್ಟ್ಸ್ ಮತ್ತು ಓಲ್‌ಸೆನ್ (1955) ಕಂಡುಕೊಂಡಿದ್ದಾರೆ. ಹೇಸ್ (1963) ತನ್ನ ಅಧ್ಯಯನದಲ್ಲಿ ಪ್ರಭಾವಶಾಲಿ ಅಥವಾ ಒಳ್ಳೆಯ ಶಿಕ್ಷಕರ ಗುಣಲಕ್ಷಣಗಳನ್ನು ಹೀಗೆ ಪಟ್ಟಿಮಾಡಿದ್ದಾನೆ. (i) ಬೋಧನಾ ವಿಧಾನಗಳನ್ನು ಪ್ರಭಾವಕಾರಿಯಾಗಿ ಬಳಸುತ್ತಾನೆ. (ii) ಆತ ಪ್ರಾರಂಭಿಸಿದಾಗ ಗುರಿಗಳನ್ನು ಸ್ಪಷ್ಟಪಡಿಸುವುದಲ್ಲದೆ ಸತತವೂ ಆಸಕ್ತಿಯನ್ನು ಕಾಯ್ದುಕೊಂಡಿರುತ್ತಾನೆ. (iii) ವಿಷಯ ವಸ್ತುವನ್ನು ವ್ಯವಸ್ಥಿತವಾಗಿ ಆಯೋಜಿಸುತ್ತಾನೆ. (iv) ಸೂಚನೆಗಳು ಅತ್ಯಂತ ವಾಸ್ತವವೂ, ಸಾಹಸಪೂರ್ಣವೂ ಆಗಿರುತ್ತವೆ; ಮತ್ತು (v) ವಿದ್ಯಾರ್ಥಿಗಳ ಆಸಕ್ತಿ ಅವಶ್ಯಕತೆ ಮತ್ತು ಅನುಭವದ ಮಟ್ಟಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಾನೆ.

ಒಳ್ಳೆಯ ಶಿಕ್ಷಕನ ಗುಣಲಕ್ಷಣಗಳನ್ನು ಕುರಿತ ವೃತ್ತಿಪರವಾದ ಬಗೆಗಿನ ಕೆಟ್ಟೆಲ್‌ನ ಸರ್ವೇಕ್ಷಣೆ ವರ್ಗೀಕರಣದಲ್ಲಿ ಸ್ವಲ್ಪಮಟ್ಟಿನ ಪುನರ್ರಚನೆಯನ್ನು ತೋರಿಸುತ್ತದೆಯಾದರೂ ಮೂಲತಃ ಅವೆಲ್ಲವೂ ಈ ಹಿಂದೆ ಉಲ್ಲೇಖಿಸಿದ ಅಧ್ಯಯನಗಳಂತೆಯೇ ಇವೆ (ಅಲೆನ್, 1963). ಕೆಟ್ಟೆಲ್ ಗುಣಲಕ್ಷಣಗಳನ್ನು ಹೀಗೆ ವಿಂಗಡಿಸಿದನು; (i) ಸ್ವಾಭಾವಿಕ ಕೊಡುಗೆ (ಬುದ್ಧಿಶಕ್ತಿ, ಶಾರೀರಿಕ ಆರೋಗ್ಯ, ನಿರಂತರ ಸಾಧನೆ ಇತ್ಯಾದಿ) (ii) ಚಾರಿತ್ರ್ಯ ಮತ್ತು ಮನೋಭಾವ (ಸ್ವಯಂನಿಗ್ರಹ, ವ್ಯಕ್ತಿತ್ವ ಮತ್ತು ಇಚ್ಛಾಶಕ್ತಿ, ಹಾಸ್ಯಪ್ರವೃತ್ತಿ, ಇತ್ಯಾದಿ) (iii) ಮನೋಭಾವನೆಗಳ ಸಾಮಾನ್ಯ ದಿಶೆ (ಆದರ್ಶವಾದ, ತಜ್ಞತೆ, ಜಾಗೃತೆ ಇತ್ಯಾದಿ); ಮತ್ತು (iv) ಶಿಕ್ಷಣ ಮತ್ತು ಗಳಿಸಿದ ಕೌಶಲಗಳ ವಿಷಯಗಳು (ವಿಷಯಗಳ ಜ್ಞಾನ; ತರಗತಿಯ ತಂತ್ರಗಳು, ಮನೋದೃಷ್ಟಿ, ಇತ್ಯಾದಿ)

ವಿಸ್ತೃತ ಸ್ವರೂಪವುಳ್ಳ ರೈಯಾನ್ಸ್ (1960)ರವರ ಅಧ್ಯಯನವು ಪ್ರಭಾವಶಾಲಿ ಶಿಕ್ಷಕರು ಬೌದ್ಧಿಕ ಸಾಮರ್ಥ್ಯ, ವ್ಯಕ್ತಿತ್ವ ಹೊಂದಾಣಿಕೆ, ಸಾಮಾಜಿಕ ಆಸಕ್ತಿ ಮತ್ತು ಪರಿಣಾಮಕಾರಿತ್ವಗಳಿಗೆ ಸಂಬಂಧಿಸಿದಂತೆ ಅಪ್ರತಿಮರಾಗಿರುತ್ತಾರೆ ಎಂಬುದನ್ನು ಸೂಚಿಸಿತು. ಇವರಿಗೆ ಮಕ್ಕಳನ್ನು ಕಂಡರೆ ಹೆಚ್ಚು ಪ್ರೀತಿ ಮತ್ತು ಸ್ನೇಹ, ಅಂಗೀಕಾರ ಮತ್ತು ನ್ಯಾಯ ಇತ್ಯಾದಿ ಮಾನವೀಯ ಗುಣಗಳ ಬಗ್ಗೆ ವೈಯಕ್ತಿಕ ಆದರ ಇರುತ್ತವೆ. ಪರಿಣಾಮಕಾರಿತ್ವದಲ್ಲಿ ಅಲ್ಪ ಶ್ರೇಣಿ ಪಡೆದ ಶಿಕ್ಷಕರಲ್ಲಿ ಇತರರ ಬಗ್ಗೆ ವಿಮರ್ಶಾತ್ಮಕ ಮನೋದೃಷ್ಟಿ, ಸಾಮಾಜಿಕ ಸಂಬಂಧಗಳಲ್ಲಿ ಅಲ್ಪ ಆಸಕ್ತಿ ಮತ್ತು ವಿದ್ಯಾರ್ಥಿಗಳ ಬಗ್ಗೆ ಕಡಿಮೆ ಅನುಕೂಲಕರ ಮನೋಭಾವಗಳು ಕಂಡುಬಂದಿದೆ. ಶೈಕ್ಷಣಿಕ ಮತ್ತು ವೃತ್ತಿಪರ ಸಂಬಂಧ, ಶಾರೀರಿಕ ಮತ್ತು ಸಂವೇದಾತ್ಮಕ ಬಲ, ಸಂವೇದಾತ್ಮಕ ಸ್ಥಿರತೆ, ಅಭಿಪ್ರೇರಣೆ, ನಮ್ಯತೆ ಮತ್ತು ಒಡೆತನ ಮುಂತಾದ ಗುಣಗಳನ್ನು ಕುರಿತಂತೆ ಉತ್ತಮ ಮತ್ತು ಕಳಪೆ ಶಿಕ್ಷಕರ ನಡುವೆ ಅಳೆಯಬಹುದಾದ ವ್ಯತ್ಯಾಸಗಳನ್ನು ಪೆರೊಂಟೊ (1961) ಎಂಬುವವರು ಗಮನಿಸಿದರು.

ಕೆಟ್ಟೆಲ್‌ನ 16Pಈ ಪರೀಕ್ಷೆಯ ಕೆಲವು ಅಂಶಗಳು ಉದಾಹರಣೆಗೆ ಆತ್ಮಸಾಕ್ಷಿ (G+), ಮೃದುಸ್ವಭಾವ (I+), ಮತ್ತು ನಿಯಂತ್ರಣ (Q+) ಇವುಗಳು ಬೋಧನಾ ಪರಿಣಾಮಕಾರಿತ್ವದೊಂದಿಗೆ ಮಹತ್ವಪೂರ್ಣ ಸಂಬಂಧವನ್ನು ವ್ಯಕ್ತಪಡಿಸುತ್ತವೆ ಎಂದು ಇತರ ಸಂಶೋಧಕರುಗಳಾದ ವಾರ್‌ಬರ್ಟನ್ ಮತ್ತು ಇತರರು (1963), ಬಾರ್ ಮತ್ತು ಇತರರು (1961) ಮತ್ತು ಡೇವಿಸ್ ಮತ್ತು ಸಾಟರ್ಲಿ (1963) ಅಭಿಪ್ರಾಯಪಟ್ಟಿದ್ದಾರೆ. ವಿದೇಶಿ ಸಂದರ್ಭದಲ್ಲಿ ಬೋಧನಾ ಪರಿಣಾಮಕಾರಿತ್ವದ ಮೇಲೆ ಶಿಕ್ಷಕರ ವ್ಯಕ್ತಿತ್ವದ ಪರಿಣಾಮಗಳನ್ನು ಕುರಿತ ಸಾಕ್ಷಿಗಳ ಸಮಗ್ರ ಸಾರಾಂಶವನ್ನು ನೀಡಿರುವ ಗೆಟ್ಸೆಲ್ಸ್

Digitised by Bharatavani, CIIL

ಮತ್ತು ಜಾಕ್‌ಸನ್ (1963)ರವರ ಪ್ರಕಾರ ಸಮಸ್ಯೆಯು ಅತಿ ಪ್ರಮುಖವಾಗಿದ್ದರೂ ಮತ್ತು ಅರ್ಧ ಶತಮಾನದ ಮೇಧಾಪೂರ್ಣ ಸಂಶೋಧನಾ ಪ್ರಯತ್ನಗಳಿದ್ದರೂ ಶಿಕ್ಷಕರ ವ್ಯಕ್ತಿತ್ವ ಮತ್ತು ಬೋಧನಾ ಪರಿಣಾಮಕಾರಿತ್ವಗಳ ಸ್ವಭಾವ ಮತ್ತು ಮಾಪನಗಳ ಬಗ್ಗೆ ಖಚಿತವಾಗಿ ತಿಳಿದಿರುವುದು ಅತ್ಯಲ್ಪ. ಆದರೂ ಸಹ, ಪ್ರಭಾವಕಾರಿ ಶಿಕ್ಷಕರು ಸ್ನೇಹಪೂರ್ಣರು, ಸಂತುಷ್ಟರೂ, ಕರುಣಾಳುಗಳು ಮತ್ತು ನೈತಿಕ ಗುಣಗಳುಳ್ಳವರೂ ಆಗಿರುವರೇ ವಿನಃ ಕ್ರೂರಿಗಳೂ, ವಿಷಾದಪೂರ್ಣರೂ, ನಿರ್ದಯಿಗಳು ಮತ್ತು ನೈತಿಕವಾಗಿ ಭ್ರಷ್ಟರೂ ಆಗಿರುವುದಿಲ್ಲವೆಂದು ಮಾತ್ರ ಒಮ್ಮತವಿದೆ ಎಂದು ಹೇಳಬಹುದು.

**ಭಾರತದಲ್ಲಿನ ಅಧ್ಯಯನಗಳು:**

ಪುರಾತನ ಭಾರತದಲ್ಲಿ, ಶಿಕ್ಷಕನ ಸಫಲತೆ ಅವನ ವಿದ್ಯಾರ್ಥಿಗಳ ಸಾಧನೆಯಲ್ಲಿ ಪ್ರತಿಫಲವಾಗುತ್ತಿತ್ತು. ಜ್ಞಾನ ಕೌಶಲಗಳ ಪ್ರಭುತ್ವವನ್ನು ತೋರಿಸಲು ಶಿಕ್ಷಕನೊಬ್ಬನು ಅಸಫಲನಾದರೆ ಅದು ಶಿಕ್ಷಕನ ಅಸಫಲತೆ ಎಂದಾಗುತ್ತಿತ್ತು. ಶಿಕ್ಷಕನ ಪರಿಣಾಮಕಾರಿತ್ವವನ್ನು ಅಳೆಯುವುದು ಶಿಷ್ಯನ ಸಫಲತೆಯ ಮಾನದಂಡ ಎನ್ನುವುದಕ್ಕೆ ಅರ್ಜುನ–ಏಕಲವ್ಯನ ಶತ್ರುತ್ವದ ಕಥಾನಕವು ಒಂದು ಒಳ್ಳೆಯ ಉದಾಹರಣೆ. ಭಾರತೀಯ ಸಂಗೀತ ಮತ್ತು ನೃತ್ಯಗಳ ಕ್ಷೇತ್ರಗಳಲ್ಲಿ ಇಂದಿಗೂ ಇಂತಹ ಸಂಪ್ರದಾಯದ ಕುರುಹನ್ನು ಕಾಣಬಹುದಾಗಿದೆ. ಶಿಕ್ಷಕನ (ಬೋಧನೆಯ) ಪರಿಣಾಮಕಾರಿತ್ವವನ್ನು ಶಿಕ್ಷಕನು ಏನು ಮಾಡುವನು ಎನ್ನುವುದಕ್ಕಿಂತ ಕಲಿಕಾರ್ಥಿಗೆ (ವಿದ್ಯಾರ್ಥಿ) ಏನಾಗುತ್ತದೆ ಎಂಬ ದೃಷ್ಟಿಯಿಂದ ಕಾಣಲಾಗುವುದು ಎನ್ನುವುದಕ್ಕೆ ಪೌರಾಣಿಕ ಅಥವಾ ಐತಿಹಾಸಿಕ ಸಾಕ್ಷಿಗಳು ಸಾಕಷ್ಟಿವೆ. ಶಿಕ್ಷಕನ ಕಾರ್ಯ ಅಥವಾ ವರ್ತನೆಗಿಂತ ಶಿಷ್ಯನ ಕಾರ್ಯ ಅಥವಾ ವರ್ತನೆ ಹೆಚ್ಚು ನಿರ್ಣಾಯಕವಾಗಿದೆ. (ದವೆ, 1987).

'ಶಿಕ್ಷಕರಿಗೆ ಸಂಬಂಧಿಸಿದ ಅಂಶಗಳು', 'ಶಿಕ್ಷಕರ ವರ್ತನೆ', 'ಬೋಧನಾ ಕಾರ್ಯತಂತ್ರಗಳು', ಮತ್ತು 'ವಿದ್ಯಾರ್ಥಿ ಫಲಿತಾಂಶ' – ಇವುಗಳ ನಡುವಣ ಸಂಬಂಧದ ಹಿಂದಿನ ಊಹೆಯನ್ನು ಪ್ರಮಾಣೀಕರಿಸಲು ಕೆಲವು ಅಧ್ಯಯನಗಳನ್ನು ವಿಭಿನ್ನ ವಿದ್ಯಾರ್ಥಿ ಫಲಿತಾಂಶಗಳ ನಿರ್ಣಾಯಕ ಅಂಶವನ್ನು ಬಳಸಿ ಕೈಗೊಳ್ಳಲಾಗಿದೆ. ಅಡವಾರ್ (1968) ತಮ್ಮ ಅಧ್ಯಯನದ ಆಧಾರದ ಮೇಲೆ ಸಫಲ ಶಿಕ್ಷಕನಿಗೆ ಅವಶ್ಯಕವಾದ ಗುಣಲಕ್ಷಣಗಳನ್ನು ಹೀಗೆ ವಿವರಿಸಿದ್ದಾರೆ. – ಸಾಮಾನ್ಯ ಆರೋಗ್ಯ ಮತ್ತು ದೈಹಿಕ ಸ್ವಾಸ್ಥ್ಯ, ಆರೋಗ್ಯಕರ ಮತ್ತು ಸಮತೋಲನದ ತಾತ್ವಿಕ ಮತ್ತು ಸಾಂಸ್ಕೃತಿಕ ಮನೋದೃಷ್ಟಿ, ಸಾಮಾನ್ಯ ಜ್ಞಾನ, ದೈನಂದಿನ ಜೀವನದಲ್ಲಿ ಒಳ್ಳೆಯ ಹವ್ಯಾಸಗಳು, ಸುವಿಕಸಿತ ನೈತಿಕ ಜೀವನ, ಸಾಮಾಜಿಕತೆ, ಸಂವೇಗಾತ್ಮಕ ಪ್ರಬುದ್ಧತೆ, ಸ್ಥಿರತೆ, ವಿಷಯ ವಸ್ತುವಿನ ಜ್ಞಾನ, ಜ್ಞಾನ ಸಂವಹನದ ಸಾಮರ್ಥ್ಯ, ಮಕ್ಕಳನ್ನು ಅರ್ಥಮಾಡಿಕೊಂಡು ಅವರಿಗಾಗಿ ಪ್ರೀತಿ ಹಾಗೂ ನೇತೃತ್ವ. ಪರಿಣಾಮಕಾರಿ ಶಿಕ್ಷಕರು ತಮ್ಮ ಬೌದ್ಧಿಕ ದಕ್ಷತೆ, ಬೌದ್ಧಿಕ ಕಾರ್ಯ, ವಿಶ್ಲೇಷಣಾತ್ಮಕ ಹಾಗೂ ಸಂಯೋಜಾತ್ಮಕ ಕಾರ್ಯ ಮತ್ತು ಸೃಜನಾತ್ಮಕ ಶಕ್ತಿ – ಇವುಗಳಲ್ಲಿ ಶ್ರೇಷ್ಠರಾಗಿರುವರೆಂದು ಭಾಗೋಲಿವಾಲರವರು (1982) ಕಂಡುಕೊಂಡಿದ್ದಾರೆ. ಕಾರಕಾಂಶ ವಿಶ್ಲೇಷಣೆಯನ್ನು (Factor Analysis) ಬಳಸಿ ಕೌಲ್‌ರವರು (1974) ವಿದ್ಯಾರ್ಥಿಗಳ ನಡುವೆ ಜನಪ್ರಿಯರಾಗಿರುವ ಶಿಕ್ಷಕರು ಪ್ರಭಾವಶಾಲಿಗಳಾಗಿರುವರು ಎಂದು ಕಂಡುಕೊಂಡಿದ್ದಾರೆ. ಪ್ರಭಾವಶಾಲಿ ಶಿಕ್ಷಕರು ಸಾಹಸಪ್ರವೃತ್ತಿಯುಳ್ಳವರು ಹಾಗೂ ಯತ್ನಶೀಲರು, ಶಾಂತರೂ ಹಾಗೂ ಕ್ಷೋಭೆಯಿಲ್ಲದವರು, ಆತ್ಮವಿಶ್ವಾಸ ಹಾಗೂ ದೃಢಮನಸ್ಸುಳ್ಳವರೂ, ಬುದ್ಧಿವಂತರೂ ಹಾಗೂ ಆತ್ಮಸಾಕ್ಷಿಯುಳ್ಳವರೂ (ಕೌಲ್ 1974a) ಮತ್ತು ಅಧಿಕ ತಾತ್ವಕರೂ ಹಾಗೂ ನೈತಿಕ ಮೌಲ್ಯವುಳ್ಳವರೂ ಆಗಿರುವರೆಂದು ಕಂಡುಬಂದಿದೆ. (ಕೌಲ್ 1974b; ಮುಥ 1980). ವಿಷಯವಸ್ತುವಿನ ಮೇಲೆ ಪ್ರಭುತ್ವ ಮತ್ತು ಬೌದ್ಧಿಕ ಉತ್ತೇಜನೆ, ಸಂವೇದನ ಶೀಲತೆ, ಪ್ರಾಮಾಣಿಕತೆ ಮತ್ತು ಸಂವಹನ ಸಾಮರ್ಥ್ಯ ಬೋಧನೆಗೆ ಕಟಿಬದ್ಧತೆ, ಅಭಿಪ್ರೇರಕತೆ, ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಕಾಳಜಿ ಹಾಗೂ ಅನೌಪಚಾರಿಕ ಶೈಕ್ಷಣಿಕ ನೆರವು – ಈ ಎಲ್ಲ ಅಂಶಗಳು ಬೋಧನೆಯ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದವುಗಳು ಎಂದು ಬಾಲಚಂದ್ರನ್‌ರವರು (1981) ಗುರುತಿಸಿದ್ದಾರೆ.

ಬೋಧಿಸಬೇಕಾದ ವಿಷಯದಲ್ಲಿ ಮಾನಸಿಕ ಸಾಮರ್ಥ್ಯ ಮತ್ತು ದಕ್ಷತೆಗಳು ಸಫಲ ಬೋಧನೆಗೆ ಅವಶ್ಯಕವಾದ ವ್ಯಕ್ತಿಗತ ಲಕ್ಷಣಗಳು. ಪರಿಣಾಮಕಾರಿ ಬೋಧನೆಗೆ ಅಗತ್ಯವಾದ ಗುಣಲಕ್ಷಣಗಳು ವ್ಯಕ್ತಿಯೋರ್ವನಲ್ಲಿ ಸಾಕಷ್ಟು ಪ್ರಮಾಣದಲ್ಲಿದ್ದಲ್ಲಿ ಆತನು ಬೋಧನಾ ಅಭಿಸಾಮರ್ಥ್ಯವನ್ನು ಹೊಂದಿದ್ದಾನೆಂದು ಹೇಳಬಹುದು. ಅಂತಹ ಗುಣ ಅಥವಾ ವಿಶಿಷ್ಟ ಲಕ್ಷಣಗಳ ವಿಸ್ತೃತ ವಿವರಣೆಯನ್ನು ಈಗಾಗಲೇ ಕೊಡಲಾಗಿದೆ. ಅಂತಹ ಗುಣಗಳು ಒಬ್ಬರಿಂದ ಮತ್ತೊಬ್ಬರಿಗೆ ಪರಿಮಾಣದಲ್ಲಿ ವ್ಯತ್ಯಸ್ತವಾಗಿರಬಹುದು ಅಥವಾ ಪ್ರತ್ಯೇಕ ವ್ಯಕ್ತಿಯು ಹೊಂದಿರುವ ಗುಣಗಳ ಸಂಖ್ಯೆಯು ಸಹ ವ್ಯತ್ಯಸ್ತವಾಗಿರಬಹುದು. ಬೋಧನೆಯಲ್ಲಿ ಸಫಲವಾಗಲು ಬೇಕಾದ ಹಲವಾರು ಗುಣಗಳು ಒಟ್ಟುಗೂಡಿ ಬೋಧನಾ ಅಭಿಸಾಮರ್ಥ್ಯ ಎಂದಾಗುವುದು. ಹೀಗೆ ಬೋಧನಾ ಅಭಿಸಾಮರ್ಥ್ಯ ವ್ಯಕ್ತಿಯು ಹೊಂದಿರುವ ಗುಣಗಳ ಸಂಖ್ಯೆಯನ್ನು ಅನುಸರಿಸಿರುತ್ತದೆ. ಭಾರತೀಯ ಸಂದರ್ಭದಲ್ಲಿ, ಸಂಶೋಧಕರ ನಡುವೆ ಸಫಲ ಬೋಧನೆಗೆ ಸಂಬಂಧಪಟ್ಟಿರುವ ಈ ಕೆಳಗಿನ ಗುಣಲಕ್ಷಣಗಳನ್ನು ಕುರಿತಂತೆ ಒಮ್ಮತವಿರುವಂತೆ ತೋರುತ್ತದೆ. (ಅಡವಾಲ್ 1968; ಷಾ, 1965; ಕೌಲ್, 1974ಬಿ; ಪಾಂಡೆ, 1980) ಹಾಗೂ ಈ ಗುಣಲಕ್ಷಣಗಳು ಬೋಧನಾ ಅಭಿಸಾಮರ್ಥ್ಯದ ಆಧಾರಸ್ತಂಭಗಳಂತಿವೆ.

i) **ದೈಹಿಕ ಲಕ್ಷಣಗಳು:** ಒಳ್ಳೆಯ ದೈಹಿಕ ಆರೋಗ್ಯ, ಪ್ರಭಾವಕಾರಿ ಧ್ವನಿ ಮತ್ತು ಶ್ರಮಪೂರಿತ ಕಾರ್ಯ ಕೈಗೊಳ್ಳುವ ಸಾಮರ್ಥ್ಯ.

ii) **ಬೌದ್ಧಿಕ ಲಕ್ಷಣಗಳು:** ಬುದ್ಧಿವಂತಿಕೆ, ಶೀಘ್ರ ಕಲಿಕೆ, ಸೃಜನಾತ್ಮಕತೆ, ಸ್ವಾತಂತ್ರವಾಗಿ ಚಿಂತಿಸುವ ಸಾಮರ್ಥ್ಯ, ವೀಕ್ಷಣೆ ಮತ್ತು ಕಲ್ಪನಾ ಶಕ್ತಿ, ಚಿಂತನಶೀಲತೆ.

iii) **ಸಾಮಾಜಿಕ ಲಕ್ಷಣಗಳು:** ಸಾಮಾಜಿಕ ಜಾಗೃತಿ, ಸಹಕಾರ, ಪ್ರಜಾಸತ್ತಾತ್ಮಕ ನಿಲುವು ಮತ್ತು ಸಹೃದಯತೆ.

Digitised by Bharatavani, CIIL

iv) **ಸಂವೇಗಾತ್ಮಕ ಲಕ್ಷಣಗಳು:** ಆತ್ಮವಿಶ್ವಾಸ, ಸಂವೇಗಾತ್ಮಕ ಸ್ಥಿರತೆ, ಶಾಂತತೆ ಮತ್ತು ಉದ್ವೇಗರಾಹಿತ್ಯ.

v) **ಶೈಕ್ಷಣಿಕ ಲಕ್ಷಣಗಳು:** ಸಾಮಾನ್ಯ ಜ್ಞಾನ, ಶೈಕ್ಷಣಿಕ ಸಾಧನೆ, ವಿಷಯ ವಸ್ತುವಿನ ಇತ್ತೀಚಿನ ಜ್ಞಾನ, ಪ್ರಯೋಗಶೀಲತೆ ಮತ್ತು ನಾವೀನ್ಯತೆ, ವಿಷಯ ವಸ್ತುವಿನ ಜ್ಞಾನ.

vi) **ಆಸಕ್ತಿ:** ವೃತ್ತಿಯಲ್ಲಿ ಆಸಕ್ತಿ, ವಿದ್ಯಾರ್ಥಿ ಹಾಗೂ ಸಮುದಾಯಗಳ ಕಲ್ಯಾಣದಲ್ಲಿ ಆಸಕ್ತಿ.

viii) **ಮನೋದೃಷ್ಟಿ:** ಜೀವನದಲ್ಲಿ ಸಕಾರಾತ್ಮಕ ಮನೋದೃಷ್ಟಿ, ವಿದ್ಯಾರ್ಥಿಗಳು ವೃತ್ತಿ (ಬೋಧನೆ) ಮತ್ತು ಸಮುದಾಯಗಳನ್ನು ಕುರಿತ ಅನುಕೂಲಕರ ಮನೋಭಾವ.

ಬೋಧನಾ ಅಭಿಸಾಮರ್ಥ್ಯದ ಮಾಪನೆ: ಭಾರತೀಯ ಸಂದರ್ಭದಲ್ಲಿ –

ಅಭಿಸಾಮರ್ಥ್ಯದ ಮಾಪನೆಯು ಮುಖ್ಯವಾಗಿ ವ್ಯತ್ಯಸ್ತ ಮನೋವಿಜ್ಞಾನದ (differential Psychology) ತತ್ವಗಳನ್ನು ಅವಲಂಬಿಸಿದೆ. ಕೆಲವು ನಿರ್ದಿಷ್ಟ ಉದ್ಯೋಗಗಳನ್ನು ಕರಗತವಾಗಿಸಿಕೊಳ್ಳಲು ಅಥವಾ ನಿರ್ದಿಷ್ಟ ಕೌಶಲ್ಯವೊಂದನ್ನು ಗಳಿಸಿಕೊಳ್ಳಲು ಓರ್ವ ವ್ಯಕ್ತಿ ಯಾವ ಮಟ್ಟದ ಅಂತರ್ಗತ ಶಕ್ತಿಯನ್ನು ಹೊಂದಿರುವನು ಎಂದು ಕಂಡುಹಿಡಿಯುವ ಅಳತೆಗೋಲನ್ನು ಅಭಿಸಾಮರ್ಥ್ಯ ಪರೀಕ್ಷೆ ಎನ್ನುವರು. ಅಭಿಸಾಮರ್ಥ್ಯ ಪರೀಕ್ಷೆಗಳು, ಬಿಂಗ್‌ಹ್ಯಾಮ್‌ರವರ ಪ್ರಕಾರ (1942), "ವ್ಯಕ್ತಿಯೊಬ್ಬನು ಕೆಲವು ಪ್ರಮಾಣೀಕರಿಸಿದ ಪರಿಸ್ಥಿತಿಗಳಲ್ಲಿ ವಾಸ್ತವವಾಗಿ ಏನು ಮಾಡುವನೆಂದು ನಿಶ್ಚಯಿಸುತ್ತವೆ ಹಾಗೂ ಈ ಮಾಪನೆಗಳಿಂದ ಭವಿಷ್ಯದ ಸಾಧನೆಗಾಗಿ ವ್ಯಕ್ತಿಯ ಸಾಮರ್ಥ್ಯದ ಅಂದಾಜು – ಅಂಕಿಅಂಶಗಳ ಸಾಧ್ಯಾಸಾಧ್ಯತೆಗಳು – ಮಾಡಲಾಗುವುದು. ಅಲ್ಲದೆ, ಪರೀಕ್ಷೆಗಳು ವರ್ತನೆಯ ಸಕಲ ಪ್ರಮುಖ ಮುಖಗಳ ಚಯನ ಮಾಡಲಾರವು, ಅಂತಯೇ ಔದ್ಯೋಗಿಕ ಉದ್ದೇಶದ ಆಳವನ್ನೂ ಕಂಡುಹಿಡಿಯಲಾರವು. ಸಂಪೂರ್ಣ ದತ್ತಾಂಶಗಳು ಬಳಿಯಲ್ಲಿದ್ದಾಗ್ಯೂ ಆತನ ಅಭಿಸಾಮರ್ಥ್ಯವನ್ನು ಕುರಿತ ಪ್ರಶ್ನಿಗನೊಬ್ಬನ ಪ್ರಶ್ನೆಗಳಿಗೆ ಖಚಿತವಾಗಿ ಮತ್ತು ಸಕಾರಾತ್ಮಕ ಆಶ್ವಾಸನೆಯೊಂದಿಗೆ ಉತ್ತರಿಸಲಾರವು.

ಪರೀಕ್ಷೆಯ ಸಮಯದಲ್ಲಿ ವ್ಯಕ್ತಿಯೊಬ್ಬನು ಹೊಂದಿರುವ ಕೆಲವು ಸಾಮರ್ಥ್ಯಗಳು ಮತ್ತು ಗುಣಲಕ್ಷಣಗಳನ್ನು ಈ ಪರೀಕ್ಷೆಗಳು ಚಯನಿಸುವುವು ಎಂದು ಅಭಿಸಾಮರ್ಥ್ಯ ಪರೀಕ್ಷೆಗಳ ವಿಕಾಸದ ಚರಿತ್ರೆಯು ಸೂಚಿಸುವುದು. ನಿರ್ದಿಷ್ಟಗೊಳಿಸಿದ ಪರಿಸರದಲ್ಲಿ ಗೊತ್ತುಪಡಿಸಿದ ವಿಧದಲ್ಲಿ ಅಭಿಪ್ರೇರೇಪಿಸಿದಾಗ ಆತನು ನೀಡಿದ ಪ್ರತಿಕ್ರಿಯೆಗಳನ್ನು ನಿಶ್ಚಯಿಸಲಾಗುವುದು. ಆತನ ನಿಷ್ಪಾದನೆಯ ಮಾದರಿಗಳನ್ನು ಪಡೆಯಲಾಗುವುದು. ಇಂಥ ಮಾರ್ಗದಲ್ಲಿ, ವ್ಯಕ್ತಿಯು ಪರೀಕ್ಷೆಯು ವಿಧಿಸುವ ಪರಿಸ್ಥಿತಿಗಳಲ್ಲಿ ವಾಸ್ತವವಾಗಿ ಏನು ಮಾಡುವನು ಎಂಬುದರ ಬಗ್ಗೆ ದತ್ತಾಂಶಗಳನ್ನು ಪಡೆಯಲಾಗುವುದು. ಅಭಿಸಾಮರ್ಥ್ಯದ ಮಾಪನೆ ಮತ್ತು ಅಭಿಸಾಮರ್ಥ್ಯದ ಪರೀಕ್ಷೆಗಳ ಬೆಳವಣಿಗೆಗಳಲ್ಲಿ ಭಾರತೀಯ ಸಂಶೋಧಕರು ಇದೇ ವಿಧಾನವನ್ನು ಅನುಸರಿಸುವರು.

ಹಲವಾರು ವಿಭಿನ್ನ ದೃಷ್ಟಿಕೋನಗಳನ್ನು ಅವಲಂಬಿಸಿ ಅಭಿಸಾಮರ್ಥ್ಯ ಪರೀಕ್ಷೆಗಳನ್ನು ಪರ್ಯಾಯ ಗುಂಪುಗಳನ್ನಾಗಿ ವರ್ಗೀಕರಿಸಬಹುದು. ಆದಾಗ್ಯೂ, ಭಾರತದಲ್ಲಿ ಏಕಮೇವ ಪರೀಕ್ಷಾ ಘಟಕವುಳ್ಳ ಅಭಿಸಾಮರ್ಥ್ಯ ಪರೀಕ್ಷೆ ಬಳಕೆಯಲ್ಲಿಲ್ಲ (ಪಾ, 1965, ಪು. 23). ಆದ್ದರಿಂದ, ಪರೀಕ್ಷಾ ಸಮೂಹಗಳ (Test Batteries) ಸಾರ್ವತ್ರಿಕ ರೂಪದ ಅಭಿಸಾಮರ್ಥ್ಯ ಪರೀಕ್ಷೆಗಳಾಗಿ ಪರಿಣಮಿಸಿವೆ.

ಐ.ಎಸ್.ವಿ. ಕಲ್ಕತ್ತ (1970), ರಾಯ್ (1982), ಸ್ವೈನ್ (1986), ವೈದ್ಯ, (1983) ಮತ್ತು ಶರ್ಮ (1991) ಮುಂತಾದವರು ಸಿದ್ಧಪಡಿಸಿರುವ ಪರೀಕ್ಷೆಗಳು ಭಾರತದಲ್ಲಿ ಅಭಿಸಾಮರ್ಥ್ಯವನ್ನು ಅಳೆಯುವ ಪರೀಕ್ಷಾ ಸಮೂಹಗಳಿಗೆ (Test Batteries) ಉತ್ತಮ ಉದಾಹರಣೆಗಳಾಗಿವೆ. ಐ.ಐ.ಎಮ್ (Indian Institute of Management) ಕಲ್ಕತ್ತದಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಪರೀಕ್ಷಾ ಸಮೂಹದಲ್ಲಿ ಚಟರ್ಜಿ ಮತ್ತು ಮುಖರ್ಜಿ (1970) ಇವರುಗಳು ಶೈಕ್ಷಣಿಕ ಅರ್ಹತೆಗಳು, ವೈಯಕ್ತಿಕ ಅಂಶಗಳು, ಸಂದರ್ಶನದ ಮೌಲ್ಯಮಾಪನ ಮತ್ತು ಆಯ್ಕೆಯ ಪರೀಕ್ಷೆಗಳನ್ನು ಉಪಯೋಗಿಸಿದರು. ವ್ಯತ್ಯಸ್ತ ಅಭಿಸಾಮರ್ಥ್ಯ ಪರೀಕ್ಷಾ ಸಮೂಹ (Differential Aptitude Test Battery – DATB)ಯಲ್ಲಿ ಇದರ ಕರ್ತೃಗಳು (ಚಟರ್ಜಿ ಮತ್ತು ಮುಖರ್ಜಿ, 1969) ಏಳು ವಿವಿಧ ಮಾಪಕಗಳನ್ನು ಬಳಸಿರುವರು: ಇಂಗ್ಲಿಷ್ ಭಾಷಾ ಜ್ಞಾನ ಮತ್ತು ಗ್ರಹಿಕೆ, ಲೇಖನ ಅಭಿಸಾಮರ್ಥ್ಯ (Clerical Aptitude) ಅಮೂರ್ತ ತರ್ಕ, ಶಾಬ್ದಿಕ ತರ್ಕ, ಗಣಿತದ ಜ್ಞಾನ ಮತ್ತು ಯಾಂತ್ರಿಕ ಗ್ರಹಿಕೆ. ಒರಿಯಾ ಭಾಷೆಯಲ್ಲಿ ಹತ್ತನೇ ಶ್ರೇಣಿಗಾಗಿ ಸ್ವೆನ್ (1986) ಯಾಂತ್ರಿಕ ಅಭಿಸಾಮರ್ಥ್ಯ ಪರೀಕ್ಷಾ ಸಮೂಹವನ್ನು ಸಿದ್ಧಪಡಿಸಿದರು. ಇದು ಐದು ಘಟಕಗಳನ್ನು ಒಳಗೊಳ್ಳುತ್ತದೆ. ಸಾಮಾನ್ಯ ಬುದ್ಧಿಶಕ್ತಿ, ಅವಕಾಶೀಯ ಸಾಮರ್ಥ್ಯ (Spatial Ability) ಪ್ರತ್ಯಕ್ಷಾನುಭವ ಸಾಮರ್ಥ್ಯ (Perceptual Ability), ಯಾಂತ್ರಿಕ ಗ್ರಹಿಕೆ ಮತ್ತು ಯಾಂತ್ರಿಕ ಮಾಹಿತಿ.

ಸಾಮಾನ್ಯ ಅಭಿಸಾಮರ್ಥ್ಯ ಪರೀಕ್ಷೆ (General Aptitude Test – GAT)ಯನ್ನು ವಿಕಸಿಸುವಲ್ಲಿ ರಾಯ್‌ರವರು (1982) ಗುಮಾಸ್ತ ಹಾಗೂ ತಾಂತ್ರಿಕ ಸಿಬ್ಬಂದಿಗಳಿಗಾಗಿ ಪ್ರತ್ಯೇಕವಾಗಿ ಹತ್ತು ವಿಷಯಗಳನ್ನು ಒಳಗೊಂಡ ಎರಡು ಲಘು ನಿಷ್ಪಾದನಾ ಮಾನದಂಡ ಸೂಚಿಯನ್ನು ಉಪಯೋಗಿಸಿದರು. ಶರ್ಮಾರವರು (1991) ಸಿದ್ಧಪಡಿಸಿದ ವೈಜ್ಞಾನಿಕ ಅಭಿಸಾಮರ್ಥ್ಯ ಪರೀಕ್ಷಾ ಸರಣಿಯು ಏಳು ಪರೀಕ್ಷಣೆಗಳನ್ನು ಒಳಗೊಂಡಿದೆ: ವೈಜ್ಞಾನಿಕ ಜ್ಞಾನ, ಸಾಂಖ್ಯಿಕ ಸಾಮರ್ಥ್ಯ, ಪ್ರತ್ಯಾಕ್ಷಾನುಭವ ಸಾಮರ್ಥ್ಯ, ಯಾಂತ್ರಿಕ ಗ್ರಹಿಕೆ, ತಾರ್ಕಿಕ ಸಾಮರ್ಥ್ಯ, ಅವಕಾಶೀಯ ಸಾಮರ್ಥ್ಯ ಮತ್ತು ಆಕೃತಿ ಚಳಕ. (Figure Dexterity)

Digitised by Bharatavani, CIIL

ಬೋಧನಾ ಅಭಿಸಾಮರ್ಥ್ಯದ ಮಾಪನೆಯ ಹಿನ್ನಲೆಯಲ್ಲಿ ಮಾಧ್ಯಮಿಕ ಶಾಲಾಶಿಕ್ಷಕರ ಬೋಧನಾ ಅಭಿಸಾಮರ್ಥ್ಯವನ್ನು ಅಳೆಯುವ ಪರೀಕ್ಷೆಯ ವಿಕಾಸ ಮತ್ತು ಪ್ರಮಾಣೀಕರಣದ ಸಮಸ್ಯೆಯನ್ನೂ ಕುರಿತಂತೆ ಅಧ್ಯಯನ ಕೈಗೊಂಡ ಷಾರವರನ್ನು (1965) ಇಲ್ಲಿ ಉಲ್ಲೇಖಿಸಬಹುದು. ಈ ಸರಣಿಯು ಐದು ಪರೀಕ್ಷೆಗಳನ್ನು ಒಳಗೊಳ್ಳುತ್ತದೆ: ಪರಿಕ್ಷೆ –1 (ಮಕ್ಕಳನ್ನು ಕುರಿತಂತೆ ಮನೋದೃಷ್ಟಿ); ಪರೀಕ್ಷೆ–2 (ಮಾನಸಿಕ ಸಾಮರ್ಥ್ಯ), ಪರೀಕ್ಷೆ–3 (ವೃತ್ತಿಯಲ್ಲಿ ಆಸಕ್ತಿ); ಪರೀಕ್ಷೆ–4 (ಹೊಂದಾಣಿಕೆ)' ಮತ್ತು ಪರೀಕ್ಷೆ–5 (ವೃತ್ತಿಪರವಾದ ಮಾಹಿತಿ) ಇವುಗಳನ್ನು

(i) ತರಬೇತಿಗಾಗಿ ಅರ್ಹ ಶಿಕ್ಷಕರ ಆಯ್ಕೆ

(ii) ಶಾಲೆಗಳಲ್ಲಿ ತರಬೇತಿರಹಿತ ಶಿಕ್ಷಕರ ನೇಮಕ

(iii) ಔದ್ಯೋಗಿಕ ಪ್ರಶಿಕ್ಷಣಗಳಿಗಾಗಿ ಬಳಸಲಾಗುವುದು.

ಈ ಪರೀಕ್ಷಾ ಸಮೂಹಕ್ಕೆ ಅಂದಾಜು ಮಾಡಿ ಹೇಳುವ ಸಾಮರ್ಥ್ಯ ಶೇಕಡಾ 16ರಷ್ಟು ಇರುವುದರಂದ ಪರೀಕ್ಷಾ ಸಮೂಹವು ಬೋಧನಾ ಅಭಿಸಾಮರ್ಥ್ಯದ ಬಗ್ಗೆ ಎಲ್ಲವನ್ನೂ ತಿಳಿಸಿಕೊಡಲಾರದು ಎಂದು ಕರ್ತೃ ಷಾರವರು (1965) ಅಭಿಪ್ರಾಯಪಡುತ್ತಾರೆ. ಅರ್ಹ ಶಿಕ್ಷಕನ ಬೋಧನಾ ಅಭಿಸಾಮರ್ಥ್ಯದ ಬಗ್ಗೆ ಹೆಚ್ಚು ತಿಳಿಯಬೇಕಾದರೆ ಆತನ ಅಭಿಸಾಮರ್ಥ್ಯ ಪರೀಕ್ಷಾ ಅಂಕಗಳ ಜೊತೆಗೆ ಬೋಧನಾ ವಿಷಯದಲ್ಲಿ ಆತನ ಜ್ಞಾನ, ಆತನ ಆರೋಗ್ಯ ಮತ್ತು ಪ್ರಾಮಾಣಿಕತೆ ಹಾಗೂ ಉದ್ಯೋಗಶೀಲತೆಗಳ ಬಗ್ಗೆ ಇನ್ನೂ ಅಧಿಕ ಮಾಹಿತಿಯನ್ನು ಸೂಕ್ತ ತಂತ್ರಗಳ ಮೂಲಕ ಸಂಗ್ರಹಿಸಬೇಕು. ಅರ್ಹ ಶಿಕ್ಷಕನನ್ನು ಕುರಿತ ಎಲ್ಲಾ ಮಾಹಿತಿಗಳನ್ನು ಒಟ್ಟಾರೆ ಕೂಡಿಸಿದಾಗ ಅಭಿಸಾಮರ್ಥ್ಯ ಪರೀಕ್ಷೆಯನ್ನು ಬಳಸುವವರಿಗೆ ಅರ್ಹ ಶಿಕ್ಷಕನ ಬೋಧನೆಯ ಸಫಲತೆಯನ್ನು ಹೆಚ್ಚಿನ ವಿಶ್ವಾಸದೊಂದಿಗೆ ನಿಶ್ಚಯಿಸಲು ಸಾಧ್ಯವಾಗುತ್ತದೆ.

ಬೋಧನೆ–ಕಲಿಕೆಯ ಪ್ರಕ್ರಿಯೆಗಳೊಂದಿಗೆ ಹಾಗೂ ಪರಿಸ್ಥಿತಿಗಳೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸುವ ವ್ಯಕ್ತಿಯ ಆಂತರಿಕ ಸಾಮರ್ಥ್ಯವೇ "ಬೋಧನಾ ಅಭಿಸಾಮರ್ಥ್ಯ' ಎಂಬ ಪರಿಭಾಷೆಯನ್ನು ಪಾಂಡೆಯವರ (1969) ಬೋಧನಾ ಅಭಿಸಾಮರ್ಥ್ಯ ಪರೀಕ್ಷೆ ಅವಲಂಬಿಸಿದೆ. ಶಾಲೆ ಮತ್ತು ತರಗತಿ, ಶಾಲಾ ವಿಷಯಗಳ ಅಂತರ್ವಸ್ತು ಮತ್ತು ಮೊದಲೇ ತಿಳಿದಿರುವ ಸಮಸ್ಯೆಯ ಪರಿಸ್ಥಿತಿಯಿಂದ ನಿಷ್ಕರ್ಷೆಗೆ ತಲುಪುವ ಕೌಶಲ್ಯ, ತರ್ಕ ಮತ್ತು ಬೋಧೆ ಇತ್ಯಾದಿಗಳಿಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ನೀತಿಗಳ ಜ್ಞಾನ ಮುಂತಾದವುಗಳನ್ನು ಒಳಗೊಳ್ಳುವ ವರ್ತನಾತ್ಮಕ ಪರಿಸ್ಥಿತಿಗಳು ಪ್ರಸ್ತುತ ಸಂದರ್ಭದಲ್ಲಿ ಈ ನಿರ್ದಿಷ್ಟ ಸಾಮರ್ಥ್ಯದ ಪರಿಧಿಯಲ್ಲಿ ಬರುತ್ತವೆ. ಸಫಲ ಶಿಕ್ಷಕರ 'ಬೋಧನೆ'ಯ 'ವೃತ್ತಿ–ವಿಶ್ಲೇಷಣೆ'ಯ ಮುಖಾಂತರ ಗುರುತಿಸಲಾದ ಲಕ್ಷಣಾತ್ಮಕ ವರ್ತನೆಯ ನಮೂನೆಗಳು ಪರೀಕ್ಷಾ ಸರಣಿಯ ಆಧಾರ ಶಿಲೆಗಳಾದವು (ಪಾಂಡೆ, 1980). ಈ ಪರೀಕ್ಷಾ ಸಮೂಹದ ಎಂಟು ಭಾಗಗಳೆಂದರೆ:–

(i) ವೃತ್ತಿಪರವಾದ ಜ್ಞಾನ

(ii) ಶಬ್ದ ಭಂಡಾರ

(iii) ಅನುಮಾನವನ್ನು ಆಧರಿಸಿದ ತರ್ಕ

(iv) ಸಂಖ್ಯಾ ಸರಣಿ

(v) ಸಂಖ್ಯಾತ್ಮಕ ತರ್ಕ

(vi) ತರ್ಕಬದ್ಧ ಆಯ್ಕೆ

(vii) ಸಾಮಾನ್ಯ ಮಾಹಿತಿ ಮತ್ತು

(viii) ಶೀರ್ಷಿಕೆಗಳ ಗ್ರಹಿಕೆ

ಪ್ರಾಥಮಿಕ ಸ್ತರದಲ್ಲಿ ಬೋಧನಾ ಅಭಿಸಾಮರ್ಥ್ಯವನ್ನು ಅಳೆಯಲು ಪಟ್ನಾಯಕ್ (1990)ರವರು ಸಿದ್ಧಪಡಿಸಿರುವ ಪಾರಿಸ್ಥಿತಿಕ ಪರೀಕ್ಷೆಯು ಈ ಕೆಳಗಿನವುಗಳನ್ನು ಒಳಗೊಳ್ಳುತ್ತದೆ. (i)ಶಿಕ್ಷಕರ ದಕ್ಷತೆ (ii) ಸಾಮಾನ್ಯ ಬೋಧನಾ ವಿಧಾನ (iii) ಬೋಧನಾ ಕೌಶಲಗಳು (iv) ಶಿಕ್ಷಕರ ವರ್ತನೆ ಮತ್ತು ಅಭಿಪ್ರೇರಣೆ (v) ಪರಿಹಾರಾತ್ಮಕ ಬೋಧನೆ ಮತ್ತು ಮೌಲ್ಯಮಾಪನೆ, (vi) ಗೃಹ, ತಂದೆ, ತಾಯಿ ಮತ್ತು ಪೋಷಕರೊಂದಿಗಿನ ಸಂಬಂಧ (vii) ಮನೋಪ್ರವೃತ್ತಿಯ ಲಕ್ಷಣಗಳು ಮತ್ತು ವ್ಯಕ್ತಿತ್ವ (viii) ದೈಹಿಕ ಮತ್ತು ಸಂಘಟನಾತ್ಮಕ ಸಾಮರ್ಥ್ಯ.

ಮುನ್ನುಡಿಯುವ ಸಾಮರ್ಥ್ಯ ಪರೀಕ್ಷೆಗೆ ಇಲ್ಲದಿದ್ದಲ್ಲಿ ಇದು ಬೋಧನಾ ಅಭಿಸಾಮರ್ಥ್ಯವಲ್ಲದಿದ್ದರೂ ಬೋಧನೆಯಲ್ಲಿನ ವೃತ್ತಿಪರ ಜ್ಞಾನವನ್ನು ಮೌಲ್ಯಮಾಪನ ಮಾಡಲು ಸಹಾಯಕವಾಗುತ್ತದೆ. ಆದಾಗ್ಯೂ, ಭಾರತೀಯ ಸಂದರ್ಭದಲ್ಲಿ ಪರೀಕ್ಷಾ ಕರ್ತನ ಪಾರಿಸ್ಥಿತಿಕ ಪರೀಕ್ಷೆಯನ್ನು ವಿಕಾಸಗೊಳಿಸುವ ದಿಶೆಯಲ್ಲಿನ ಪ್ರಯತ್ನ ಪ್ರಶಂಸನೀಯ. (ಮುಖರ್ಜಿ, 1997)

ಬೋಧನಾ ಅಭಿಸಾಮರ್ಥ್ಯ ಪರೀಕ್ಷೆಗಳ ಸಹಾಯದಿಂದ ಬೋಧನಾ ಅಭಿಸಾಮರ್ಥ್ಯದ ಮಾಪನದ ತೀವ್ರತರ ಮಿತಿಯೆಂದರೆ ಪರೀಕ್ಷೆಗಳ ಮುನ್ನುಡಿಯುವ ವಿಶ್ವಸನೀಯತೆಯನ್ನು ಪ್ರಮಾಣೀಕರಿಸಿ ನೋಡಲು ಬೇಕಾದ ತೃಪ್ತಿಕರ ಮಾನದಂಡದ ಹಾಗೂ ಉದ್ದೇಶದ ಆಯ್ಕೆ ಮತ್ತು ಲಭ್ಯತೆ. ವಿಶ್ವಾಸಾರ್ಹವೂ, ಪ್ರಮಾಣಿತ ಮಾನದಂಡದ ಆಯ್ಕೆ ಸುಲಭದ ಕಾರ್ಯವಲ್ಲ. ಅತಿ ಮೂಲಭೂತವೂ, ಕಷ್ಟಕರವೂ ಆದ ಸಮಸ್ಯೆಯೆಂದರೆ ಬೋಧನಾ ವೃತ್ತಿಗೆ ಸಂಬಂಧಿಸಿದ ತೃಪ್ತಿಕರ ನಿಷ್ಪಾದನಾ ಮಾಪನ ಮಾನದಂಡಗಳನ್ನು ಪಡೆಯುವುದು. ಬೋಧನಾ ಪರಿಣಾಮಕಾರಿತ್ವ ಮತ್ತು ಸಫಲತೆ ಶಿಕ್ಷಕನ ಹಲವು ಗುಣಲಕ್ಷಣಗಳು ಮತ್ತು ಸಾಧನೆಗಳಿಗೆ ಅಧೀನವಾಗಿರುವುದರಿಂದ, ಮಾನದಂಡವನ್ನು ಗುರುತಿಸುವುದು ಸಂಕೀರ್ಣತೆಯಿಂದ ಒಡಗೂಡಿರುವುದು. ದಸ್ತಾವೇಜುಗಳಿಂದ ಶಿಕ್ಷಣದ ರಾಷ್ಟ್ರೀಯ ನೀತಿ (NPE-1986) ಮತ್ತು ಕ್ರಿಯಾ ಕಾರ್ಯಕ್ರಮ (Programme of Action, POA-1992), ಗುಣಾತ್ಮಕ ಅಧ್ಯಾಪಕ ಶಿಕ್ಷಣದ ಪಠ್ಯಕ್ರಮ ಚೌಕಟ್ಟು (NCTE-1998) ಮತ್ತು ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCERT-2000) ಇತ್ಯಾದಿಗಳು ಶಿಕ್ಷಕರು ಬೋಧನಾ ವೃತ್ತಿಯಲ್ಲಿ ಸಫಲರಾಗಲು ಶಿಕ್ಷಕರಿಂದ ಕೆಲವು ದಕ್ಷತೆಗಳು, ಬದ್ಧತೆಗಳು ಮತ್ತು ನಿಷ್ಪಾದನೆಗಳನ್ನು ಅಪೇಕ್ಷಿಸುತ್ತವೆ. ಭಾರತೀಯ

Digitised by Bharatavani, CIIL

ಸಂದರ್ಭದಲ್ಲಿ, ಇತರ ಶೈಕ್ಷಣಿಕ ಚಟುಟಿಕೆಗಳಿಗೆ ಸಂಬಂಧಿಸಿದ ಶಿಕ್ಷಕರ ದಕ್ಷತೆಯ ಕ್ಷೇತ್ರಗಳಾದ ಸಾಂದರ್ಭಿಕ, ಪರಿಕಲ್ಪನಾತ್ಮಕ, ಅಂತರ್ವಸ್ತು ಸಂಬಂಧಿತ, ವ್ಯಾವಹಾರಿಕ ದಕ್ಷತೆಗಳು, ಬೋಧನೆ ಮತ್ತು ಕಲಿಕೆಯ ಸಾಮಗ್ರಿಗಳ ಸಿದ್ಧತೆ, ಮೌಲ್ಯಮಾಪನ, ನಿರ್ವಹಣೆ, ತಂದೆತಾಯಿಯರೊಡನೆ, ಸಮುದಾಯ ಹಾಗೂ ನಿಯೋಗಗಳೊಡನೆ ಕಾರ್ಯನಿರತರಾಗುವುದು. (ii) ವಿದ್ಯಾರ್ಥಿಗಳು, ಸಮಾಜ, ವೃತ್ತಿ, ವೃತ್ತಿಪರ ಕಾರ್ಯಗಳಲ್ಲಿ ಶ್ರೇಷ್ಠತೆಯ ಸಾಧನೆ, ಮೂಲಭೂತ ಮೌಲ್ಯಗಳು – ಈ ಕ್ಷೇತ್ರಗಳಲ್ಲಿ ಶಿಕ್ಷಕರ ಬದ್ಧತೆ ಹಾಗೂ (iii) ತರಗತಿಯಲ್ಲಿನ ನಿಷ್ಪಾದನೆ, ಶಾಲಾ ಸ್ತರದ ನಿಷ್ಪಾದನೆ, ಶಾಲೆಗೆ ಬಾಹ್ಯ ಶೈಕ್ಷಣಿಕ ಚಟುವಟಿಕೆಗಳಲ್ಲಿನ ನಿಷ್ಪಾದನೆ, ಪೋಷಕರಿಗೆ ಸಂಬಂಧಿಸಿದ ನಿಷ್ಪಾದನೆ, ಮತ್ತು ಸಮುದಾಯ ಸಂಬಂಧಿತ ನಿಷ್ಪಾದನೆ, ಈ ಎಲ್ಲ ಶಿಕ್ಷಕ ನಿಷ್ಪಾದನಾ ಕ್ಷೇತ್ರಗಳ ವಿಶ್ಲೇಷಣೆ ಅವಶ್ಯಕ. ಏಕೆಂದರೆ, ಬೋಧನಾ ಅಭಿಸಾಮರ್ಥ್ಯ ಆಧಾರಸ್ತಂಭಗಳಾಗಿ ಹಾಗೂ ಮುನ್ನುಡಿಯುವ ಸಾಮರ್ಥ್ಯ ಮಾನದಂಡಗಳ ಪಟ್ಟಿಯಲ್ಲಿ ಸೇರಿಸಲು ಮಹತ್ವಪೂರ್ಣ ಬೋಧನಾ ಸಫಲತೆಯ ಘಟಕಗಳನ್ನು ಗುರುತಿಸಲು ಇದರಿಂದ ಸಾಧ್ಯವಾಗುವುದು.

**ಮೂಲ: ಲೋಕೇಶ್ ಕೌಲ್**
**ಅನು: ಚಂದ್ರಶೇಖರ್ ಬಿ.ಎಂ.**

## ಬೋಧನಾ ಕೌಶಲಗಳು

ಶಿಕ್ಷಕನು ತನ್ನ ತರಗತಿಯಲ್ಲಿ ಉಪಯೋಗಿಸುವ ನಿರ್ದಿಷ್ಟ ಶೈಕ್ಷಣಿಕ ಚಟುವಟಿಕೆಗಳು ಮತ್ತು ಕಾರ್ಯವಿಧಾನಗಳೇ ಬೋಧನಾ ಕೌಶಲಗಳು. ಇವು ಬೋಧನೆಯ ವಿವಿಧ ಹಂತಗಳಿಗೆ ಅಥವಾ ಶಿಕ್ಷಕನ ಕಾರ್ಯ ನಿರ್ವಹಣೆಯ ನಿರಂತರ ಹರಿವಿಗೆ ಸಂಬಂಧಿಸಿರುತ್ತದೆ (ಗೇಜ್ 1978). ಪರಿಣಾಮಕಾರಿಯಾಗಿರುವುದು ಎಂದು ನಿರೂಪಿಸಲಾಗಿರುತ್ತದೆ. ಈ ಬೋಧನಾ ಕೌಶಲವನ್ನು ಬೋಧನಾ ವರ್ತನೆಗಳ ಒಂದು ಗುಂಪು, ಅದರಲ್ಲೂ ಪ್ರಶಿಕ್ಷಣಾರ್ಥಿಗಳಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ತರುವುದರಲ್ಲಿ ವಿಶೇಷವಾಗಿ ವರ್ತನೆಗಳ ಸ್ವರೂಪವನ್ನು ಸ್ಪಷ್ಟವಾಗಿ ನಿರೂಪಿಸಬಹುದು, ಇವುಗಳನ್ನು ವೀಕ್ಷಿಸಬಹುದು, ಅಳೆಯಬಹುದು ಮತ್ತು ಇವು ತರಬೇತಿಗೆ ಒಳಗಾಗಬಹುದು (ಪಾಸ್ಸಿ, 1981).

ಬೋಧನೆಯ ಕೌಶಲಗಳು ಹೀಗೆ ಬೋಧನಾ ವರ್ತನೆಗಳ ನಿರ್ದಿಷ್ಟ ಅಂಶಗಳು, ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ಕಲಿಕೆಯನ್ನು ತರುವಲ್ಲಿ ಇವು ಮುಖ್ಯವಾಗಿ ಪರಿಣಾಮಕಾರಿ ಎಂದು ಭಾವಿಸಲಾಗಿದೆ. ನಿರ್ದಿಷ್ಟ ಬೋಧನಾ ಕೌಶಲದ ಪರಿಕಲ್ಪನೆಯು ಮೊಟ್ಟ ಮೊದಲಿಗೆ 1960ರ ಪ್ರಾರಂಭದ ಕಾಲದಲ್ಲಿ ಸ್ಟಾನ್‌ಫರ್ಡ್ ವಿಶ್ವವಿದ್ಯಾನಿಲಯದ ಅಣುಬೋಧನಾ ಕಾರ್ಯಕ್ರಮದ ಶಿಕ್ಷಕ ಶಿಕ್ಷಣದಲ್ಲಿ ಕಾರ್ಯರೂಪಕ್ಕೆ ಬಂದಿತು. ಶಿಕ್ಷಕರ ತರಬೇತಿಯ ಒಂದು ತಂತ್ರವಾಗಿ ಅಣುಬೋಧನೆಯು ವ್ಯಾಪಕವಾಗಿ ಒಪ್ಪಿಗೆ ಪಡೆದಾಗ ಬೋಧನಾ ಕೌಶಲಗಳ ಪರಿಕಲ್ಪನೆಯು ಸುಪರಿಚಿತವಾಯಿತು. ಸ್ವಲ್ಪ ಕಾಲದಲ್ಲಿಯೇ ಈ ಪರಿಕಲ್ಪನೆಯು ಸಾಮರ್ಥ್ಯಾಧಾರಿತ ಶಿಕ್ಷಕ ಶಿಕ್ಷಣದ ಒಂದು ಮುಖ್ಯ ಅಂಗವಾಯಿತು (ಕೋಕರ್ ಮತ್ತು ಇತರರು 1980).

ಅಣುಬೋಧನೆಯು ಕೌಶಲ್ಯಾಧಾರಿತ ತರಬೇತಿಯಾಗಿದ್ದು ಯೋಗ್ಯವಾದ ಬೋಧನಾ ಕೌಶಲಗಳನ್ನು ಗುರುತಿಸಬೇಕು ಹಾಗೂ ಆಯ್ಕೆ ಮಾಡಿಕೊಳ್ಳಬೇಕು. ಹೀಗೆ ಬೋಧನಾ ಕೌಶಲಗಳ ಮೂಲಗಳು ಪರಿಣಾಮಕಾರಿ ಬೋಧನಾ ವರ್ತನೆಗಳಿಂದ ಹೊರಹೊಮ್ಮುತ್ತವೆ. ಇವು ಬೋಧನೆಯ ಪರಿಣಾಮಕಾರಿತ್ವದ ಮೇಲಿನ ಸಂಶೋಧನೆ, ಬೋಧನಾಕಾರ್ಯದ ವಿಶ್ಲೇಷಣೆ, ಬೋಧನೆಯ ವೀಕ್ಷಣೆ ಮತ್ತು ಕಲಿಕೆಯ ಹಾಗೂ ಶಿಕ್ಷಣದ ಮನಶಾಸ್ತ್ರಗಳಿಂದ ಹೊರಹೊಮ್ಮುತ್ತವೆ. ಶಿಕ್ಷಕ ಪರಿಣಾಮಕಾರಿತ್ವದ, ಬೋಧನೆಯ ವಿಶ್ಲೇಷಣೆಯ, ಕಲಿಕೆಯ ಹಾಗೂ ಶಿಕ್ಷಣದ ಮೇಲಿನ ಸಂಶೋಧನೆಯನ್ನು ಆಧರಿಸಿ ಬೋಧನಾ ಕೌಶಲಗಳ ಉಪಾಂಗಗಳ ಅಥವಾ ಘಟಕಗಳ ಹಲವಾರು ಸಮೂಹಗಳನ್ನು ವಿವಿಧ ರಾಷ್ಟ್ರಗಳಲ್ಲಿನ ವಿವಿಧ ಸಂಸ್ಥೆಗಳು ಮತ್ತು ವಿವಿಧ ವೈಯಕ್ತಿಕ ಸಂಶೋಧನಕಾರರು ಗುರುತಿಸಿದ್ದಾರೆ. ಇಂತಹ ಸಾಕಷ್ಟು ಕೌಶಲಗಳು ಸಾಮಾನ್ಯವಾಗಿದ್ದು ಈ ಕೌಶಲಗಳು ಒಳಗೊಂಡಿರುವ ಬೋಧನಾ ವರ್ತನೆಗಳಲ್ಲಿ ಅಲ್ಪ ವ್ಯತ್ಯಾಸವಿದ್ದು ಬೇರೆ ಬೇರೆ ಪರಿಭಾಷೆಗಳಲ್ಲಿ ಹೇಳಲ್ಪಟ್ಟಿದೆ.

"ಪಾಠವನ್ನು ಹೇಗೆ ಪ್ರಾರಂಭಿಸುವುದು" ಎಂಬುದು ಸ್ಟಾನ್‌ಫರ್ಡ್ ವಿಶ್ವವಿದ್ಯಾನಿಲಯದ ಅಣುಬೋಧನಾ ಪ್ರಾಯೋಗಿಕ ಶಿಕ್ಷಣ ವಿಭಾಗದಲ್ಲಿ ಉಪಯೋಗಿಸಲ್ಪಟ್ಟ ಮೊಟ್ಟಮೊದಲ ಬೋಧನಾ ಕೌಶಲ (ಅಲೆನ್ ಮತ್ತು ರಯನ್ 1969). ಅನಂತರ "ಸಮಾಪ್ತಿಯನ್ನು ಸಾಧಿಸುವುದು", "ಪರಾಮರ್ಶನ ವಿಷಯಗಳ ಚೌಕಟ್ಟನ್ನು ಒದಗಿಸುವುದು" ಮತ್ತು "ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಒಳಹೊಕ್ಕು ನೋಡುವುದು", ಮೊದಲಾದ ಬೋಧನಾ ಕೌಶಲಗಳನ್ನು ಸೇರಿಸಲಾಯಿತು. ಕಾಲಕಳೆದಂತೆ ಈ ಕೆಳಗಿನ ಇತರ ಕೌಶಲಗಳನ್ನು ಸೇರಿಸಲಾಯಿತು.

ಪ್ರಚೋದನೆಯಲ್ಲಿನ ಏರಿಳಿತ (ಬದಲಾವಣೆ) (Stimulus Variation): ಪ್ರಚೋದನೆ ಉಂಟುಮಾಡುವ ವಸ್ತುಗಳನ್ನು ಉಪಯೋಗಿಸುವುದು ಮತ್ತು ಬೇಜಾರು ಹಾಗೂ ಅಲಕ್ಷ್ಯವನ್ನು ಕಡಿಮೆ ಮಾಡಲು ಚಲನೆ, ಅಂಗಭಂಗಿಗಳು, ಅಂತರಕ್ರಿಯಾ ತಂತ್ರಗಳು ಮತ್ತು ಸಂವೇದನಾ ವಾಹಕಗಳು–ಇವುಗಳನ್ನು ಉಪಯೋಗಿಸುವುದು.

ಅನುಗಮನವನ್ನು ಅಣಿಗೊಳಿಸುವುದು (Set Induction): ಸಾದೃಶ್ಯಗಳನ್ನು ಪ್ರಾತ್ಯಕ್ಷಿಕೆಗಳನ್ನು ಮತ್ತು ಪ್ರಚೋದಕ ಸಮಸ್ಯೆಗಳನ್ನು ಒಳಗೊಂಡ ಕೌಶಲಗಳಿಗೂ ಮತ್ತು ವಿದ್ಯಾರ್ಥಿಗಳ ಪೂರ್ವಜ್ಞಾನಕ್ಕೂ ಸಂಬಂಧಿಸಿದ ಗುರಿಗಳನ್ನು ವಿಷದೀಕರಿಸಿ ವಿದ್ಯಾರ್ಥಿಗಳನ್ನು ಪಾಠಕ್ಕೆ ತಯಾರುಮಾಡುವುದು.

ಸಮಾಪ್ತಿಗೊಳಿಸುವುದು (Closure): ವಿದ್ಯಾರ್ಥಿಗಳು ನವೀನ ಹಾಗೂ ಹಳೆಯ ಜ್ಞಾನವನ್ನು ಪರಿಚಿತ ಹಾಗೂ ಹೊಸ ಉದಾಹರಣೆಗಳು, ದೃಷ್ಟಾಂತಗಳು ಮತ್ತು ಸನ್ನಿವೇಶಗಳಿಗೆ

Digitised by Bharatavani, CIIL

ಅನ್ವಯಗೊಳಿಸುವುದು ಮತ್ತು ಪುನಃ ಪರಿಶೀಲನೆ ಮಾಡುವುದು.

ನೀರವತೆ/ನಿಶ್ಯಬ್ದ ಹಾಗೂ ಅಶಾಬ್ದಿಕ ಸೂಚನೆಗಳು (Silence and Non-verbal cues): ಶಿಕ್ಷಕರ ಮಾತುಗಾರಿಕೆಯನ್ನು ಅವಲಂಬಿಸುವುದನ್ನು ಕಡಿಮೆ ಮಾಡಲು ತಾತ್ಕಾಲಿಕ ವಿರಾಮ ನೀಡುವಿಕೆಯ ಅತಿ ಸೂಕ್ತ ಉಪಯೋಗ ಮಾಡಿಕೊಳ್ಳುವುದರಲ್ಲಿ ಮತ್ತು ಮುಖದಲ್ಲಿನ ಭಾವನೆಗಳನ್ನು, ದೇಹದ ಚಲನೆಗಳನ್ನು ಶಿರದ ಚಲನೆಗಳನ್ನು ಹಾಗೂ ಅಂಗಸನ್ನೆಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ಶಿಕ್ಷಕರನ್ನು ಪ್ರೋತ್ಸಾಹಿಸುವುದು.

ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಬಲಪಡಿಸುವುದು (Reinforcing Students' Participation): ಹೊಗಳಿಕೆ ಮತ್ತು ಒಪ್ಪಿಕೊಳ್ಳುವಿಕೆ ಹಾಗೂ ತಲೆಆಡಿಸಿ ಒಪ್ಪಿಗೆ ಸೂಚಿಸುವಿಕೆ ಮತ್ತು ಮುಗುಳ್ನಗೆಯಂತಹ ಅಶಾಬ್ದಿಕ ಸೂಚನೆಗಳನ್ನು ಉಪಯೋಗಿಸುವ ಮೂಲಕ ಪ್ರತಿಕ್ರಿಯಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

ಪ್ರಶ್ನೆಗಳನ್ನು ಕೇಳುವಲ್ಲಿನ ನಿರರ್ಗಳತೆ (Fluency Asking Questions): ಅನಗತ್ಯವಾಗಿ ಹಿಂದು ಮುಂದು ನೋಡುತ್ತಿರುವುದು ಮತ್ತು ಪ್ರಶ್ನೆಗಳನ್ನು ಪುನರಾವರ್ತಿಸುವುದನ್ನು ಬಿಟ್ಟುಬಿಡುವುದು.

ಶೋಧಕ ಪ್ರಶ್ನೆಗಳು (Probing Questions): ವಿದ್ಯಾರ್ಥಿಗಳು ವಿಶದೀಪಡಿಸಲು ಅಥವಾ ತಮ್ಮ ಪ್ರತಿಕ್ರಿಯೆಗಳ ಮಟ್ಟವನ್ನು ಎತ್ತರಕ್ಕೇರಿಸಲು ನೆರವಾಗುವ ಪ್ರಶ್ನೆಗಳನ್ನು ರೂಪಿಸುವ ಕೌಶಲ.

ಉನ್ನತ ಮಟ್ಟದ ಪ್ರಶ್ನೆಗಳು (Higher Order Questions): ಕೇವಲ ವಿಷಯ ನಿರೂಪಣೆ ಅಥವಾ ವರ್ತನೆಗಳನ್ನು ಒಳಗೊಂಡ ಪ್ರತಿಕ್ರಿಯೆಗಳಿಗಿಂತ ಉನ್ನತ ಬೌದ್ಧಿಕ ಮಟ್ಟದ ಅಗತ್ಯವಿರುವ ಪ್ರತಿಕ್ರಿಯೆಗಳನ್ನು ವಿದ್ಯಾರ್ಥಿಗಳಿಂದ ಹೊರಹೊಮ್ಮಿಸಬಲ್ಲವು.

**ವಿವಿಧ ಪರಿಹಾರದ ಪ್ರಶ್ನೆಗಳು (Divergent Questions):**

ಅಸಾಂಪ್ರದಾಯಿಕವಾದ, ಕಲ್ಪನಾತ್ಮಕವಾದ ಮತ್ತು ಸರಿ ಅಥವಾ ತಪ್ಪು ಎಂಬುದಾಗಿ ಸರಳವಾಗಿ ತೀರ್ಮಾನಿಸಲಾಗದ ಪ್ರತಿಕ್ರಿಯೆಗಳನ್ನು ವಿದ್ಯಾರ್ಥಿಗಳಿಂದ ಪಡೆಯಬಹುದಾದ ಪ್ರಶ್ನೆಗಳು.

ಸ್ಟಾನ್‌ಫರ್ಡ್ ಪಟ್ಟಿಯಲ್ಲಿ ಸೇರಿಸಬೇಕಾದ ಇತರ ಕೌಶಲಗಳು: "ಸಂಗಡ ಇರುವ ವರ್ತನೆಯನ್ನು ಅಂಗೀಕರಿಸುವುದು", 'ಉದಾಹರಣೆಗಳನ್ನು ವಿಶದಗೊಳಿಸುವುದು ಮತ್ತು ಉಪಯೋಗಿಸುವುದು", 'ಉಪನ್ಯಾಸ ಮಾಡುವುದು', 'ಯೋಜಿತ ಪುನರಾವರ್ತನೆ', ಮತ್ತು 'ಸಂವಹನದ ಪರಿಪೂರ್ಣತೆ' (ಅಲೆನ್ ಮತ್ತು ರಯ್, 1969).

ಟರ್ನೆ ಮತ್ತು ಇತರರು (1973 a) ಬೋಧನಾಕೌಶಲಗಳನ್ನು ವರ್ಗೀಕರಿಸಲು ರೂಪಿಸಿದ ಪದ್ಧತಿಯಲ್ಲಿ ಏಳುವರ್ಗಗಳು ಮೂಡಿಬಂದಿವೆ.

**1. ಪ್ರೇರಕ ಕೌಶಲಗಳು (Motivational Skills):**

ಇವುಗಳಲ್ಲಿ 'ವಿದ್ಯಾರ್ಥಿಗಳ ವರ್ತನೆಯನ್ನು ಬಲಪಡಿಸುವುದು', 'ಪ್ರಚೋದನೆಯಲ್ಲಿನ ಬದಲಾವಣೆ', 'ಅನುಗಮನವನ್ನು ಅಣಿಗೊಳಿಸುವುದು', 'ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು', 'ಸೌಹಾರ್ದತೆ ಮತ್ತು ಉತ್ಸಾಹವನ್ನು ಪ್ರದರ್ಶಿಸುವುದು', ಮತ್ತು 'ವಿದ್ಯಾರ್ಥಿಗಳ ಅಗತ್ಯಗಳನ್ನು ಗುರುತಿಸುವುದು ಹಾಗೂ ಅವುಗಳನ್ನು ಪೂರೈಸುವುದು' ಸೇರಿವೆ.

**2. ಪ್ರದರ್ಶನ ಮತ್ತು ಸಂವಹನ ಕೌಶಲಗಳು (Presentation and Communication Skills):**

ಇವು 'ವಿವರಣೆ', 'ನಾಟಕೀಕರಣ', 'ವಾಚನ', 'ಶ್ರವಣ', 'ದೃಶ್ಯ' ಉಪಕರಣಗಳನ್ನು ಉಪಯೋಗಿಸುವುದು, 'ಸಮಾಪ್ತಿಗೊಳಿಸುವುದು', 'ನೀರವತೆಯನ್ನು ನಿಶ್ಯಬ್ಧವನ್ನು ಉಪಯೋಗಿಸುವುದು', 'ವಿದ್ಯಾರ್ಥಿಗಳ ಪ್ರತ್ಯಾದಾನವನ್ನು ಉತ್ತೇಜಿಸುವುದು', 'ಸ್ಪಷ್ಟನೆ', 'ಅಭಿವ್ಯಕ್ತೀಕರಣ', 'ಗುಂಪಾಗಿ ಕಟ್ಟುವುದು', ಮತ್ತು 'ಯೋಜಿತ ಪುನರಾವರ್ತನ'ಗಳನ್ನು ಒಳಗೊಂಡಿವೆ.

**3. ಪ್ರಶ್ನಿಸುವ ಕೌಶಲಗಳು (Questioning Skills):**

ಇವುಗಳಲ್ಲಿ 'ಪುನರ್‌ಕೇಂದ್ರೀಕರಿಸುವಿಕೆ ಮತ್ತು ಪುನರ್ ನಿರ್ದೇಶಿಸುವಿಕೆ', 'ಶೋಧಿಸುವಿಕೆ', 'ಉನ್ನತ ಮಟ್ಟದ ಪ್ರಶ್ನೆಗಳು', 'ಒಮ್ಮುಖವಾಗಿರುವ ಮತ್ತು ಬೇರೆ ದಿಕ್ಕಿಗೆ ಎರುಗುವ ಪ್ರಶ್ನೆಗಳು', 'ವಿದ್ಯಾರ್ಥಿಗಳ ಪ್ರವರ್ತನ ಶಕ್ತಿಯನ್ನು ಉತ್ತೇಜಿಸುವುದು' ಸೇರಿವೆ.

**4. ಸಣ್ಣ ಗುಂಪು ಮತ್ತು ವೈಯಕ್ತಿಕ ಸೂಚನೆಗಳ ಕೌಶಲಗಳು (Skills of Small Group and individual Instructions):**

'ಸಣ್ಣ ಗುಂಪು ಕಾರ್ಯವನ್ನು ವ್ಯವಸ್ಥೆ ಮಾಡುವುದು', 'ಸ್ವತಂತ್ರ ಕಲಿಕೆಯನ್ನು ಬೆಳೆಸುವುದು', 'ಸಮಾಲೋಚನೆ', 'ಸಹಕಾರಿ ಚಟುವಟಿಕೆಯನ್ನು ಉತ್ತೇಜಿಸುವುದು', ಮತ್ತು 'ವಿದ್ಯಾರ್ಥಿ ವಿದ್ಯಾರ್ಥಿಯ ಪರಸ್ಪರ ಕ್ರಿಯೆ'.

**5. ವಿದ್ಯಾರ್ಥಿ ಆಲೋಚನೆಯನ್ನು ಬೆಳೆಸುವುದು (Developing Student Thinking):**

'ವಿಚಾರಣಾ ಕಲಿಕೆಯನ್ನು ಪೋಷಿಸುವುದು', 'ಅನಾವರಣವನ್ನು ನಿರ್ದೇಶಿಸುವುದು', 'ವಿದ್ಯಾರ್ಥಿಗಳ ಸಮಸ್ಯಾ ಪರಿಹಾರದ ಕೌಶಲಗಳನ್ನು ಬೆಳೆಸುವುದು', 'ಮೌಲ್ಯಮಾಪನ ಮಾಡಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು' ಮತ್ತು 'ವಿಮರ್ಶಾತ್ಮಕ ಆಲೋಚನೆಯನ್ನು ಬೆಳೆಸುವುದು'.

**6. ಮೌಲ್ಯಮಾಪಕ ಕೌಶಲಗಳು (Evaluative Skills):**

'ವಿದ್ಯಾರ್ಥಿಯ ಪ್ರಗತಿಯನ್ನು ಗುರುತಿಸುವುದು ಮತ್ತು ಅಳೆಯುವುದು', 'ಕಲಿಕೆಯಲ್ಲಿನ ತೊಂದರೆಗಳನ್ನು ಗುರುತಿಸುವುದು (ಪತ್ತೆ ಹಚ್ಚುವುದು)', 'ಪರಿಹಾರ ತಂತ್ರಗಳನ್ನು ಒದಗಿಸುವುದು', 'ಸ್ವಮೌಲ್ಯ ಮಾಪನವನ್ನು ಉತ್ತೇಜಿಸುವುದು', ಮತ್ತು 'ಮೌಲ್ಯಮಾಪಕ ಚರ್ಚೆಗಳನ್ನು ನಿಭಾಯಿಸುವುದು'.

**7. ತರಗತಿ ಕೋಣೆಯ ಆಡಳಿತ ಮತ್ತು ಶಿಸ್ತು (Classroom**

Digitised by Bharatavani, CIIL

**Management and Discipline):**

'ಜೊತೆಯಾಗಿ ಇರುವಾಗಿನ ಮತ್ತು ಜೊತೆಗಿಲ್ಲದಿರುವಾಗಿನ ವರ್ತನೆಗಳನ್ನು ಗುರುತಿಸುವುದು', 'ತರಗತಿಯ ಗುಂಪು ಕೆಲಸದ ಮೇಲ್ವಿಚಾರಣೆ ಮಾಡುವುದು', 'ಕಾರ್ಯಾಧಾರಿತ ವರ್ತನೆಗಳನ್ನು ಉತ್ತೇಜಿಸುವುದು', 'ನಿರ್ದೇಶನ ನೀಡುವುದು ಮತ್ತು ಬಹ್ವಂಶಗಳ ವಿಷಯಗಳನ್ನು ನಿಭಾಯಿಸುವುದು.'

ಹೀಗೆ ಟರ್ನೆಯು ಪ್ರತಿಯೊಂದು ವಿಶಾಲವರ್ಗಕ್ಕೆ ಸೂಕ್ತವಾದ ಉಪಯುಕ್ತವಾದ ಕೌಶಲಗಳ ಪಟ್ಟಿಯನ್ನು ಒದಗಿಸಿದ್ದಾನೆ. ಆದಾಗ್ಯೂ, ಕೆಲವು ನಿರ್ದಿಷ್ಟ ಕೌಶಲಗಳನ್ನು ಎದುರಿಸುವಲ್ಲಿನ ಸಮಂಜಸತೆಗಾಗಿ ಆಧಾರಗಳನ್ನು ದಾಖಲೆಪಡಿಸುವಲ್ಲಿ ಕೆಲವು ತೊಂದರೆಗಳು ಇದ್ದವು ಎಂಬುದಾಗಿ ಸೂಚಿಸಿದ್ದಾನೆ. ಬೋಧನಾಕೌಶಲಗಳ ಈ ಪ್ರಸ್ತಾಪವು ಪರಿಕಲ್ಪನಾತ್ಮಕ ಮತ್ತು ಸೈದ್ಧಾಂತಿಕ ನೆಲೆಗಳೆರಡನ್ನು ಹಾಗೂ ಪ್ರಶಿಕ್ಷಕರ ವರ್ತನಾ ಬೆಳವಣಿಗೆಯನ್ನು ಒಳಗೊಂಡಿವೆ. ಆದರೂ ಎರಡನೆಯ ವಿಷಯಕ್ಕೆ ಹೆಚ್ಚಿನ ಒತ್ತನ್ನು ಕೊಡಲಾಗಿದೆ. ಇತರ ದೃಷ್ಟಾಂತಗಳಲ್ಲಿ ಆಚರಣೆಗೆ ಸಂಬಂಧಿಸಿದ ಅಂಶಗಳಿಗಿಂತ ಜ್ಞಾನಗ್ರಹಣಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಮತ್ತು ಪರಿಕಲ್ಪನೆಗಳನ್ನು ರೂಪಿಸಿಕೊಳ್ಳುವ, ವಿಶ್ಲೇಷಿಸುವ ಮತ್ತು ಆಧಾರ ಕಲ್ಪನೆಯಾಗಿ ಪರಿಗ್ರಹಿಸುವ ಕೌಶಲಗಳಿಗೆ ಒತ್ತನ್ನು ಕೊಡಲಾಗಿದೆ. ಬೋಧನೆಯನ್ನು ನಿರ್ದಿಷ್ಟ ಕೌಶಲಗಳನ್ನಾಗಿ ಅಥವಾ ಸಾಮರ್ಥ್ಯಗಳನ್ನಾಗಿ ವಿಭಜಿಸಬಹುದಾದರೆ ಅಂತಹ ಕೌಶಲಗಳು ಅಥವಾ ಸಾಮರ್ಥ್ಯಗಳು ತರಬೇತಿ ಕಾರ್ಯಕ್ರಮಗಳಿಗೆ ಆಧಾರವಾಗಿ ಆಗಬಹುದು. ಅಲ್ಲದೆ ಬೋಧನೆಯ ಪರಿಣಾಮಕತ್ವವನ್ನು ಮೌಲ್ಯಮಾಪನ ಮಾಡಬಹುದಾದ ಪ್ರಯತ್ನವೂ ಆಗುತ್ತದೆ. ಜಾರ್ಜಿಯಾದಲ್ಲಿ ಶಿಕ್ಷಕರಿಗೆ ಅವರು ಶಿಕ್ಷಕರು ಎಂಬ ಪ್ರಮಾಣಪತ್ರ ಪಡೆಯುವ ಮುನ್ನ ಅವರು ನಿರ್ದಿಷ್ಟವಾಗಿ ನಿರೂಪಿತವಾದ ಬೋಧನಾ ಕೌಶಲಗಳನ್ನು ಪಡೆದಿರುವುದನ್ನು ಮನವರಿಕೆ ಮಾಡಿಕೊಡಬೇಕು. ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಬೋಧನಾ ಪರಿಣಾಮಕತ್ವದ ಸಾಮರ್ಥ್ಯಾಧಾರಿತ ಕಲ್ಪನೆಯು ಶಿಕ್ಷಕರನ್ನು ಬಾಡಿಗೆಗೆ ತೆಗೆದುಕೊಳ್ಳುವ, ಅವರಿಗೆ ಒಡೆತನವನ್ನು ಪ್ರದಾನ ಮಾಡುವ, ಅವರಿಗೆ ಬಡ್ತಿ ನೀಡುವ ಅಥವಾ ಅವರನ್ನು ಕೆಲಸದಿಂದ ವಜಾ ಮಾಡುವ ಕಾರ್ಯಗಳಿಗೆ ಆಧಾರವಾಗಿದೆ.

ಭಾರತದಲ್ಲಿ ರೇ (1978); ಜಾಂಗೀರಾ ಮತ್ತು ಮಟ್ಟೂ (1980); ಹಾಗೂ ಜಾಂಗೀರಾ, ಸಿಂಗ್ ಮತ್ತು ಮಟ್ಟೂ (1981) ಇವರು ಬೋಧನಾ ಕೌಶಲಗಳ ತರಬೇತಿಯ ಪರಿಣಾಮವಾಗಿ ಶಿಕ್ಷಕರು ಸಾಮಾನ್ಯ ಬೋಧನಾ ಸಾಮರ್ಥ್ಯಗಳಲ್ಲಿ ಗಣನೀಯವಾದ ಗಳಿಕೆಯನ್ನು ಸಂಪಾದಿಸಿದರು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಅಣುಬೋಧನೆಯ ತರಬೇತಿಯಲ್ಲಿ ಬೋಧನಾ ಕೌಶಲಗಳ ಸಂಘಟನೆಗಳ ವಿವಿಧ ತಂತ್ರಗಳ ಹಸ್ತಕ್ಷೇಪದ ಪ್ರಭಾವವನ್ನು ಪಟೇಲ್ (1976); ಶರ್ಮ ಮತ್ತು ಭಟ್ಟಾಚಾರ್‌ಜೀ (1980); ಲಲಿತ (1981); ರಾಸ್, ಪಾಸ್ಸಿ ಮತ್ತು ಜಾಂಗೀರಾ (1982); ಶರ್ಮ ಮತ್ತು ಭಟ್ಟಾಚಾರ್‌ಜೀ (1982); ಬಾವಾ (1984); ಭಾಟಿಯಾ (1984); ದವೆ (1987); ಮತ್ತೂ ಏಕ್‌ಬೋಟೆ (1987) ಯವರು ಅಭ್ಯಾಸಮಾಡಿದರು. ಕೌಶಲಗಳ ಸಂಘಟನೆಯು ಪರಿಣಾಮಕಾರಿ ಬೋಧನೆಯ ಫಲವನ್ನು ನೀಡಿದರೂ ಬಾವಾ (1984); ಭಾಟಿಯಾ (1984); ಲಲಿತ (1981); ಇವರುಗಳು ಕೃತಕವಾದ ಸನ್ನಿವೇಶಗಳಲ್ಲಿ ಧನಾತ್ಮಕ ಫಲಿತಾಂಶವನ್ನು ಕಾಣಲಿಲ್ಲ. ಶೇತ್ (1984) ಅವರು ಸೆಕೆಂಡರಿ ಶಾಲಾ ಶಿಕ್ಷಕರಲ್ಲಿ ಬೋಧನಾಕೌಶಲಗಳನ್ನು ಬೆಳೆಸುವ ತಂತ್ರ ಒಂದನ್ನು ಬಹು ಮಾಧ್ಯಮ ಪ್ಯಾಕೇಜ್ ಮೂಲಕ ನಿರೂಪಿಸಿದರು.

ಬರೋಡದಲ್ಲಿರುವ ಸೆಂಟರ್ ಆಫ್ ಅಡ್ವಾನ್ಸ್ ಸ್ಟಡೀಸ್ ಇನ್ ಎಜುಕೇಷನ್ (CASE) ರವರು ಬೋಧನಾ ಪೂರ್ವ, ಬೋಧನೆಯ ಹಾಗೂ ಬೋಧನೋತ್ತರ ಕೌಶಲಗಳನ್ನು ಒಳಗೊಂಡ ಇಪ್ಪತ್ತೊಂದು ಕೌಶಲಗಳನ್ನು 1975ರಲ್ಲಿ ಗುರುತಿಸಿ ಪಟ್ಟಿಮಾಡಿದ್ದಾರೆ.

1. ಬೋಧನಾಪೂರ್ವ ಕೌಶಲಗಳು: ಗುರಿಗಳನ್ನು ಬರೆಯುವ ಕೌಶಲ; ಸಾದರ ಪಡಿಸಬೇಕಾದ ಜ್ಞಾನವನ್ನು ಕ್ರಮಬದ್ಧಗೊಳಿಸುವುದು ಮತ್ತು ಸಂಘಟಿಸುವ ಕೌಶಲ; ಕಲಿಕೆಯ ಘಟಕವು ಅನ್ವಯವಾಗುವ ಸನ್ನಿವೇಶಗಳನ್ನು ಪತ್ತೆ ಹಚ್ಚುವ ಕೌಶಲ; ವಿದ್ಯಾರ್ಥಿಗಳಿಗೆ ವಹಿಸುವ ವಿವಿಧ ನಿಗದಿತಕಾರ್ಯಗಳನ್ನು ಯೋಜಿಸುವ ಕೌಶಲ.
2. ಬೋಧನಾ ಕೌಶಲಗಳು: ಪಾಠವನ್ನು ಪ್ರಾರಂಭಿಸುವ ಕೌಶಲ; ಪ್ರಶ್ನೆಗಳನ್ನು ನಿರರ್ಗಳವಾಗಿ ಕೇಳುವ ಕೌಶಲ; ವಿಮರ್ಶಾತ್ಮಕ ಅರಿವನ್ನು ಉಂಟುಮಾಡುವ ಕೌಶಲ; ವಿವರಿಸುವ ಕೌಶಲ; ದೃಷ್ಟಾ ಂತಗಳನ್ನು ಹಾಗೂ ಇತರ ಮಾಧ್ಯಮಗಳನ್ನು ಉಪಯೋಗಿಸುವ ಕೌಶಲ; ವಿದ್ಯಾರ್ಥಿಗಳ ಗಮನ ಸೆಳೆಯುವ ಕೌಶಲ; ವಿದ್ಯಾರ್ಥಿಗಳಿಂದ ಪ್ರತ್ಯಾದಾನ (Feed back) ಪಡೆಯುವ ಕೌಶಲ; ವಿದ್ಯಾರ್ಥಿಗಳ ತೊಂದರೆಗಳ ಕಾರಣವನ್ನು ತರ್ಕಿಸಿ ಕಂಡು ಹಿಡಿಯುವ ಕೌಶಲ; ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಅಧಿಕಗೊಳಿಸುವ ಕೌಶಲ; ವಿದ್ಯಾರ್ಥಿಯ ಉತ್ತರ ಹಾಗೂ ಉಪಕ್ರಮ (Initiation) ಗಳಿಗೆ ಪ್ರತಿಕ್ರಿಯಿಸುವ ಕೌಶಲ; ಇತ್ಯಾದಿ.
3. ಬೋಧನೋತ್ತರ ಕೌಶಲಗಳು: ಸೂಕ್ತ ಪರೀಕ್ಷೆ (Test) ಯ ವಿಷಯವನ್ನು ತಯಾರಿಸುವ ಕೌಶಲ; ಪತ್ತೆಹಚ್ಚಲಾದ ತೊಂದರೆಗಳಿಗೆ ಪರಿಹಾರ ಕ್ರಮಗಳನ್ನು ಯೋಜಿಸುವ ಕೌಶಲ; ಸೂಕ್ತ ನಿಗದಿತ ಕಾರ್ಯಗಳನ್ನು ನೀಡುವ ಕೌಶಲ; ವರ್ತನೆಯನ್ನು ಗುರುತಿಸುವ, ಗಮನ ನೀಡುವ/ಗಮನ ನೀಡದಿರುವ ಕೌಶಲ; ತರಗತಿಯಲ್ಲಿ ಶಿಸ್ತನ್ನು ಕಾಪಾಡುವ ಕೌಶಲ.

ಬೋಧನಾ ವರ್ತನೆಯನ್ನು ಮಾರ್ಪಡಿಸಲು ಹಾಗೂ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಪಾಸ್ಸಿ (1980)ಯವರು ಹತ್ತೊಂಬತ್ತು ಬೋಧನಾ ಕೌಶಲಗಳನ್ನು ಗುರುತಿಸಿದ್ದಾರೆ. ಭಾರತೀಯ ಸನ್ನಿವೇಶಕ್ಕೆ ಸರಿಹೊಂದುವಂತೆ ಇವುಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ: ಬೋಧನಾ ಗುರಿಗಳನ್ನು ಬರೆಯುವ, ಪಾಠವನ್ನು ಪಾರಂಭಿಸುವ, ಪ್ರಶ್ನೆಗಳನ್ನು

Digitised by Bharatavani, CIIL

ನಿರರ್ಗಳವಾಗಿ ಕೇಳುವ, ವಿವರಿಸುವ, ಉದಾಹರಣೆಗಳೊಂದಿಗೆ ವಿವರಿಸುವ, ಪ್ರಚೋದನೆಯಲ್ಲಿನ ಬದಲಾವಣೆಯ, ನೀರವ ಮತ್ತು ಅಶಾಬ್ದಿಕ ಸೂಚನೆಗಳ, ಶೋಧಕ ಪ್ರಶ್ನೆಗಳ, ಜೊತೆಯ ವರ್ತನೆಯನ್ನು ಗುರುತಿಸುವ, ಪಠ್ಯ ವಿಷಯವನ್ನು ಆರಿಸುವ ಹಾಗೂ ವ್ಯವಸ್ಥೆಗೊಳಿಸುವ, ನಿಗದಿತ ಕಾರ್ಯಗಳನ್ನು ನೀಡುವ, ವಿದ್ಯಾರ್ಥಿಯ ಪ್ರತ್ಯಾದಾನವನ್ನು ಉತ್ತೇಜಿಸುವ, ನೈದಾನಿಕ ಹಾಗೂ ಪರಿಹಾರ ಕ್ರಮಗಳನ್ನು ಕೈಗೊಳ್ಳುವ, ದೃಕ್-ಶ್ರವಣ ಸಹಾಯಕ ಸಾಮಗ್ರಿಗಳನ್ನು ಆರಿಸುವ ಮತ್ತು ಮೌಲ್ಯಮಾಪನದ ಕೌಶಲಗಳು.

ತರಗತಿಯ ಪರಸ್ಪರ ಕ್ರಿಯೆಯ ತನ್ನ ಶಾಬ್ದಿಕ ಮಾದರಿಯ ಆಧಾರದ ಮೇಲೆ ಬೋಧನಾ ಕೌಶಲಗಳನ್ನು ಪ್ಲಾಂಡರ್ಸ್ (1973) ಕಲ್ಪನಾತ್ಮಕಗೊಳಿಸಿದ್ದಾನೆ. (ಚಿತ್ರ 1)

ಚಿತ್ರ. 1




Digitised by Bharatavani, CIIL

ಬೋಧನೆಯು ಮೂರು ಅಂಶಗಳಾದ ಯೋಜನೆ, ನಿರ್ವಹಣೆ ಮತ್ತು ಗ್ರಹಣಶಕ್ತಿ (Perception) ಗಳ ಆಧಾರದ ಮೇಲೆ ಬ್ರೌನ್ (1975) ಬೋಧನಾ ಕೌಶಲಗಳನ್ನು ಗುರುತಿಸಿದ್ದಾನೆ. (ಚಿತ್ರ 2)

ಚಿತ್ರ 2

ಶಿಕ್ಷಕರ ತರಬೇತಿ ನಿರ್ವಹಣೆ

- ಅ. ಯೋಜನೆ (Planning)
  1. ಪ್ರಕರಣವನ್ನು ಅಂಗಭಾಗಗಳನ್ನಾಗಿ ವಿಶ್ಲೇಷಿಸುವ ಕೌಶಲ
  2. ಗುರಿಗಳನ್ನು ಸ್ಪಷ್ಟವಾಗಿ ನಮೂದಿಸುವ ಕೌಶಲ
  3. ಸೂಕ್ತ ಬೋಧನಾ ವಿಧಾನಗಳನ್ನು ಆರಿಸಿಕೊಳ್ಳುವ ಕೌಶಲ
- ಆ. ನಿರ್ವಹಣೆ (Performance)
  1. ಶಾಬ್ದಿಕ ಬೋಧನಾ ಚಲನೆಗಳ ಕೌಶಲ
  2. ಅಶಾಬ್ದಿಕ ಬೋಧನಾ ಚಲನೆಗಳ ಕೌಶಲ
- ಇ. ಗ್ರಹಣಶಕ್ತಿ (Perception)
  1. ತನ್ನ ವೈಯಕ್ತಿಕ ಬೋಧನಾ ವರ್ತನೆಯನ್ನು ಮೌಲ್ಯಮಾಪನ ಮಾಡಿಕೊಳ್ಳುವ ಕೌಶಲ
  2. ವಿದ್ಯಾರ್ಥಿಗಳ ಮೇಲೆ ಇವುಗಳ ಪರಿಣಾಮವನ್ನು ಮೌಲ್ಯಮಾಪನ ಮಾಡುವ ಕೌಶಲ
  3. ವಿದ್ಯಾರ್ಥಿ ವರ್ತನೆಯಲ್ಲಿ ಆಗುವ ಬದಲಾವಣೆಯನ್ನು ಮೌಲ್ಯಮಾಪನ ಮಾಡಬಲ್ಲ ಕೌಶಲ

Digitised by Bharatavani, CIIL

ಶೈಕ್ಷಣಿಕ ಗುರಿಗಳ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ದ ಏಷಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೀಚರ್ ಎಜುಕೇಷನ್ (1972) ಬೋಧನಾ ಕೌಶಲಗಳನ್ನು ಗುರುತಿಸಿದೆ. (ಚಿತ್ರ 3)

**ಚಿತ್ರ 3**

ಮಗುವಿನ ಸರ್ವಾಂಗೀಣ ಬೆಳವಣಿಗೆಯ ಕೌಶಲಗಳು

- ಅ. ಸಾಮಾಜಿಕ ಬೆಳವಣಿಗೆ
  1. ಸಾಮಾಜಿಕ ಕ್ರಿಯೆ–ಪ್ರತಿಕ್ರಿಯೆಗಳಲ್ಲಿನ ಕೌಶಲ
  2. ಸಾಮಾಜಿಕ ಮೌಲ್ಯವನ್ನು ಒಳಗೊಳ್ಳುವಿಕೆಯ ಕೌಶಲ
  3. ಗುಂಪು ಚಟುವಟಿಕೆಗಳನ್ನು ವ್ಯವಸ್ಥೆ ಮಾಡುವಲ್ಲಿನ ಕೌಶಲ
- ಆ. ಭಾವನಾತ್ಮಕ ಬೆಳವಣಿಗೆ
  1. ಅಪೇಕ್ಷಿತ ಮನೋಧರ್ಮಗಳನ್ನು ಮತ್ತು ಮೌಲ್ಯಗಳನ್ನು ಬೆಳೆಸುವ ಕೌಶಲ
  2. ಶಾಲೆಗಳಿಗೆ ಹೊಂದಿಕೊಳ್ಳುವುದನ್ನು ಒಳಗೊಂಡಿರುವ ಕೌಶಲ
- ಇ. ಬೌದ್ಧಿಕ ಬೆಳವಣಿಗೆ
  1. ಜ್ಞಾನವನ್ನು ಒತ್ತಿ ಹೇಳುವ ಕೌಶಲ
  2. ಬೌದ್ಧಿಕ ಸಾಮರ್ಥ್ಯಗಳನ್ನು ಬೆಳೆಸುವ ಕೌಶಲ
- ಈ. ಸೌಂದರ್ಯ ಪ್ರಜ್ಞೆಯ ಬೆಳವಣಿಗೆ
  1. ಸೌಂದರ್ಯ, ಲಯ, ಸಮತೋಲನಗಳ ಭಾವವನ್ನು ಬೆಳೆಸುವ ಕೌಶಲ
  2. ಲಲಿತಕಲೆಗಳನ್ನು ಮೆಚ್ಚುವ ಕೌಶಲ
- ಉ. ಮಾನಸ ಚಾಲನೆಯ ಮತ್ತು ಆರೋಗ್ಯದ ಬೆಳವಣಿಗೆ
  1. ಆರೋಗ್ಯಕರ ಜೀವನವನ್ನು ಉತ್ತೇಜಿಸುವ ಕೌಶಲ
  2. ಸಂಗೀತದ ಸುಸಂಘಟನೆಯ ಕೌಶಲ

Digitised by Bharatavani, CIIL

ಕೋಷ್ಟಕ 1

ಬೋಧನಾ ಕೌಶಲಗಳು ಮತ್ತು ಅವುಗಳ ಅಂಶಗಳು

| | ಬೋಧನಾ ಕೌಶಲ | ಅಂಶ(ಅಂಗ)ಗಳು |
|---|---|---|
| 1 | ಬೋಧನಾ ಗುರಿಗಳನ್ನು ಬರೆಯುವುದು | ಸ್ಪಷ್ಟತೆ, ವಿಷಯಕ್ಕೆ ಪ್ರಸ್ತುತವಾಗಿರುವುದು, ಗುರಿಗಳ ಮಟ್ಟ ಹಾಗೂ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾಕಾದಷ್ಟು, ವಿದ್ಯಾರ್ಥಿಯ ಮೇಲಾಗುವ ಪರಿಣಾಮಗಳಿಗೆ ಸಂಬಂಧಿಸಿದಂತೆ ಸಾಧಿಸಬಹುದಾಗಿರುವಿಕೆ. |
| 2 | ವಿಷಯವನ್ನು ಕ್ರಮಬದ್ಧವಾಗಿರುವಂತೆ ಮಾಡುವುದು. | ವಿಷಯಕ್ಕೆ ಅನುಗುಣವಾಗಿ ತರ್ಕಬದ್ಧವಾಗಿ ಸಂಯೋಜಿಸುವುದು ಮತ್ತು ವಿದ್ಯಾರ್ಥಿಗಳ ಅಗತ್ಯಗಳಿಗೆ ಸಂಬಂಧಿಸಿದ ಹಾಗೆ ಮನೋವೈಜ್ಞಾನಿಕವಾಗಿ ಸಂಯೋಜಿಸುವುದು. |
| 3 | ಪಾಠ ಪ್ರಾರಂಭಕ್ಕೆ ಸಿದ್ಧತೆಯನ್ನು ರೂಪಿಸು (ರಚಿಸು) ವುದು | ಶುಭ ಹಾರೈಕೆ, ಹಾರೈಕೆಯನ್ನು ಒಪ್ಪಿಕೊಳ್ಳುವುದು, ಗಮನವನ್ನು ಸೆಳೆದುಕೊಳ್ಳುವುದು ಮತ್ತು ಸೂಚನೆಗಳನ್ನು ನೀಡುವುದು, ಪರಸ್ಪರ ವಿಶ್ವಾಸವನ್ನು ಸ್ಥಾಪಿಸುವುದು. ಸೀಮೆಸುಣ್ಣ, ಧೂಳನ್ನು ಒರೆಸುವ ಬಟ್ಟೆ, ಸಹಾಯಕ ಸಾಮಗ್ರಿಗಳು, ಉಪಕರಣಗಳು, ಇತ್ಯಾದಿಗಳ ನೆರವನ್ನು ಖಚಿತಪಡಿಸಿಕೊಳ್ಳುವುದು. |
| 4 | ಪಾಠವನ್ನು ಪ್ರಾರಂಭಿಸುವುದು | ಪೂರ್ವ ಅನುಭವಗಳೊಂದಿಗೆ ಸಂಪರ್ಕ ಕಲ್ಪಿಸುವುದು, ಪೀಠಿಕೆ ಮತ್ತು ಮುಖ್ಯ ವಿಷಯಗಳೊಂದಿಗೆ ಸಂಪರ್ಕ, ಪ್ರಶ್ನೆಗಳು, ಉದಾಹರಣೆಗಳು, ಪ್ರದರ್ಶನ ವಸ್ತುಗಳು ಇತ್ಯಾದಿ ಸೂಕ್ತ ಸಾಧನ/ತಂತ್ರಗಳ ಉಪಯೋಗ. |
| 5 | ತರಗತಿ ಪ್ರಶ್ನೆಗಳನ್ನು ರಚಿಸುವುದು | ವ್ಯಾಕರಣಬದ್ಧವಾಗಿ ಸರಿಯಾಗಿರುವ, ನಿಖರವಾಗಿರುವ ಮತ್ತು ವಿಷಯಕ್ಕೆ ಸಂಗತವಾದ ಪ್ರಶ್ನೆಗಳನ್ನು ವಿವಿಧ ಹಂತಗಳಲ್ಲಿ ರಚಿಸುವುದು. |
| 6 | ಪ್ರಶ್ನೆಗಳ ಶೈಲಿ ಮತ್ತು ಹಂಚಿಕೆ | ಪ್ರಶ್ನೆಗಳನ್ನು ಸೂಕ್ತ ವೇಗದಲ್ಲಿ, ಸರಿಯಾದ ಧ್ವನಿಯ ಏರಿಳಿತ ಹಾಗೂ ಸ್ವರದ ತೀವ್ರತೆಯ ಮಟ್ಟಗಳೊಂದಿಗೆ, ಯೋಚನೆ ಮಾಡಲು ಕಾಲಾವಕಾಶ ನೀಡುವಂತೆ ಕೇಳುವ ಶೈಲಿ ಮತ್ತೂ ಸ್ವಯಂ ಮುಂದೆ ಬಾರದಿರುವವರನ್ನೂ ಒಳಗೊಂಡಂತೆ ಇರುವ ಹಾಗೂ ಉತ್ತಮವಾಗಿ ಹರಡಿಕೊಂಡಿರುವ ಪ್ರಶ್ನೆಗಳು. |
| 7 | ಪ್ರತಿಕ್ರಿಯೆಯ ನಿರ್ವಹಣೆ | ವಿದ್ಯಾರ್ಥಿಯ ಪ್ರತಿಕ್ರಿಯೆಗಳನ್ನು ಉತ್ತೇಜಿಸುವಿಕೆ, ಹೆಚ್ಚಿನ ಮಾಹಿತಿ ಪಡೆಯುವುದು, ಕೇಂದ್ರೀಕರಿಸುವುದನ್ನು ಸರಿಪಡಿಸುವಿಕೆ, ಮತ್ತು ವಿಮರ್ಶಾತ್ಮಕ ಅರಿವಿನ ಪ್ರಶ್ನೆಗಳನ್ನು ಕೇಳಿ ಅವುಗಳನ್ನು ಒಪ್ಪುವ, ತಿರಸ್ಕರಿಸುವ ಹಾಗೂ ಪುನರ್ ನಿರ್ದೇಶಿಸುವ ತಂತ್ರಗಳನ್ನು ಉಪಯೋಗಿಸಿ ನಿರ್ವಹಿಸುವುದು. |
| 8 | ವಿವರಿಸುವುದು | ಸ್ಪಷ್ಟತೆ, ಅವಿಚ್ಛಿನ್ನತೆ, ವಿಷಯಕ್ಕೆ ಸಂಬಂಧಪಟ್ಟಿರುವುದು, ಪ್ರಾರಂಭಿಕ ಹಾಗೂ ಸಮಾಪ್ತಿಯ ಹೇಳಿಕೆಗಳನ್ನು ಉಪಯೋಗಿಸುವುದು, ಅತಿ ಮುಖ್ಯ ಅಂಶಗಳನ್ನು ಒಳಗೊಳ್ಳುವುದು. |
| 9 | ಉದಾಹರಣೆಗಳೊಂದಿಗೆ ವಿವರಿಸುವುದು | ಸರಳ, ಆಸಕ್ತಿದಾಯಕ ಹಾಗೂ ವಿವರಿಸಬೇಕಾದ ಅಂಶಕ್ಕೆ ಸಂಬಂಧಪಟ್ಟಿರುವುದು |

Digitised by Bharatavani, CIIL

| | | |
|---|---|---|
| 10 | ಬೋಧನೋಪಕರಣಗಳನ್ನು ಉಪಯೋಗಿಸುವುದು | ವಿಷಯಕ್ಕೆ ಸಂಬಂಧಪಟ್ಟಿರುವುದು, ವಿದ್ಯಾರ್ಥಿಯ ಮಟ್ಟಕ್ಕೆ ಸೂಕ್ತವಾಗಿರುವುದು, ಸರಿಯಾಗಿ ಪ್ರದರ್ಶಿಸುವುದು ಹಾಗೂ ಸೂಕ್ತವಾಗಿ ಉಪಯೋಗಿಸುವುದು. |
| 11 | ಪ್ರಚೋದನೆಯಲ್ಲಿನ ಬದಲಾವಣೆ | ದೈಹಿಕ ಚಲನೆಗಳು, ಭಂಗಿಗಳು, ಧ್ವನಿಯ ಏರಿಳಿತ ಹಾಗೂ ಸ್ವರದ ತೀವ್ರತೆಯ ಮಟ್ಟದಲ್ಲಿ ಬದಲಾವಣೆ, ಪರಸ್ಪರ ಕ್ರಿಯೆಯ ವಿನ್ಯಾಸದಲ್ಲಿ ಬದಲಾವಣೆ ಮತ್ತು ಮಾತನಾಡುವಾಗ ಅಲ್ಲಲ್ಲಿ ನಿಲ್ಲಿಸುವುದು. |
| 12 | ಬಲಪಡಿಸುವಿಕೆ | ಹೊಗಳುವ ಪದಗಳ ಹಾಗೂ ಹೇಳಿಕೆಗಳ ಉಪಯೋಗ, ವಿದ್ಯಾರ್ಥಿಯ ಅಭಿಪ್ರಾಯವನ್ನು ಒಪ್ಪುವ ಹಾಗೂ ಅದನ್ನು ಉಪಯೋಗಿಸುವ, ವಿದ್ಯಾರ್ಥಿಯ ಅಭಿಪ್ರಾಯವನ್ನು ಪುನರುಚ್ಚರಿಸುವ ಹಾಗೂ ಅದನ್ನು ಬೇರೆ ಮಾತುಗಳಲ್ಲಿ ಹೇಳುವಿಕೆ. ಹಿತಕರ ಹಾಗೂ ಒಪ್ಪಿಗೆ ಸೂಚಿಸುವ ಭಂಗಿಗಳು ಮತ್ತು ಮುಖಭಾವ, ವಿದ್ಯಾರ್ಥಿಯ ಉತ್ತರಗಳನ್ನು ಕಪ್ಪು ಹಲಗೆ ಮೇಲೆ ಬರೆಯುವುದು. |
| 13 | ಪಾಠವನ್ನು ನಡೆಸುವುದು | ಪಾಠದ ವೇಗವನ್ನು ವಿದ್ಯಾರ್ಥಿಗಳ ಮಟ್ಟಕ್ಕೆ ಮತ್ತು ವಿಷಯದ ಕಠಿಣತೆಯ ಮಟ್ಟಕ್ಕೆ ಹೊಂದಿಸುವುದು. |
| 14 | ವಿದ್ಯಾರ್ಥಿಯ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು | ಪ್ರಶ್ನೆಗಳನ್ನು ಕೇಳುವ ಮೂಲಕ ವಿದ್ಯಾರ್ಥಿಯ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಅವಕಾಶ ಒದಗಿಸುವುದು, ಭಾಗವಹಿಸುವಿಕೆಯ ವಾತಾವರಣವನ್ನು ಸೃಷ್ಟಿಸುವುದು,ವಿದ್ಯಾರ್ಥಿಯ ದೈಹಿಕ ಭಾಗವಹಿಸುವಿಕೆಯನ್ನು ಉಂಟುಮಾಡಲು ನೀರವ ಹಾಗೂ ಅಶಾಬ್ದಿಕ ಸೂಚನೆಗಳನ್ನು ಉಪಯೋಗಿಸುವುದು. |
| 15 | ಕಪ್ಪು ಹಲಗೆಯ ಉಪಯೋಗ | ಸ್ಪಷ್ಟತೆ, ಅಚ್ಚುಕಟ್ಟು, ಪೂರ್ಣ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು |
| 16 | ಪಾಠದ ಸಮಾಪ್ತಿಯನ್ನು ಸಾಧಿಸುವುದು | ಸಂಕ್ಷೇಪಣ, ಪ್ರಸಕ್ತ ಕಲಿಕೆಯೊಂದಿಗೆ ಪೂರ್ವ ಹಾಗೂ ಮುಂದಿನ ಕಲಿಕೆಗಳ ಸಂಪರ್ಕ ಸ್ಥಾಪನೆ, ವಿದ್ಯಾರ್ಥಿಗಳಲ್ಲಿ ಸಾಧನೆಯ ಭಾವವನ್ನು ಉಂಟು ಮಾಡುವುದು. |
| 17 | ನಿಗದಿತಕಾರ್ಯ ನೀಡುವಿಕೆ | ವಿದ್ಯಾರ್ಥಿಗಳ ಮಟ್ಟ ಮತ್ತು ವಿಷಯಕ್ಕೆ ಸಂಬಂಧಿಸಿದಂತೆ ಇರುವುದು. |
| 18 | ವಿದ್ಯಾರ್ಥಿಗಳ ಪ್ರಗತಿಯ ಮೌಲ್ಯಮಾಪನ ಮಾಡುವುದು | ಬೋಧನಾ ಗುರಿಗಳಿಗೆ ಸಂಬಂಧಪಟ್ಟಿರುವುದು, ಸೂಕ್ತ ಪ್ರಶ್ನೆಗಳ ಮತ್ತು ವೀಕ್ಷಣೆಗಳ ಉಪಯೋಗ. |
| 19 | ವಿದ್ಯಾರ್ಥಿಗಳ ಕಲಿಕೆಯ ಸಮಸ್ಯೆಯ ಮೂಲವನ್ನು ವೈಜ್ಞಾನಿಕ ಪರಿಶೀಲನೆಯಿಂದ ಶೋಧಿಸುವುದು | ಕಲಿಕೆಯಲ್ಲಿನ ತೊಂದರೆಗಳನ್ನು ಅವುಗಳ ಕಾರಣಗಳೊಂದಿಗೆ ಗುರುತಿಸುವುದು, ವಿದ್ಯಾರ್ಥಿಗಳ ಮಟ್ಟ ಹಾಗೂ ಕಲಿಕೆಯಲ್ಲಿನ ತೊಂದರೆಗಳ ಬಗೆಗಳಿಗೆ ಸೂಕ್ತವಾಗಿ ಹೊಂದಾಣಿಕೆಯಾಗುವ ಪರಿಹಾರ ಕ್ರಮಗಳನ್ನು ಗುರುತಿಸುವುದು. |
| 20 | ತರಗತಿ ನಿರ್ವಹಣೆ | ಗಮನವೀವ ವರ್ತನೆಯ ದೃಢೀಕರಣ ಮತ್ತು ಗಮನವೀಯದ ವರ್ತನೆಯನ್ನು ತೆಗೆದುಹಾಕಲು ಸೂಚನೆಗಳನ್ನು ನೀಡುವುದು, ಸೂಚನೆಗಳ ಸ್ಪಷ್ಟತೆ, ವಿದ್ಯಾರ್ಥಿಗಳ ಅಡ್ಡಿಪಡಿಸುವ ವರ್ತನೆಯನ್ನು ಸೂಕ್ತವಾಗಿ ನಿಭಾಯಿಸುವುದು. |

Digitised by Bharatavani, CIIL

ಮೂಲ: ಕೋರ್ ಟೀಚಿಂಗ್ ಸ್ಕಿಲ್ಸ್, ಎನ್.ಸಿ.ಇ.ಆರ್.ಟಿ. 1982

ಬೋಧಿಸುವಾಗ/ಪಾಠ ಮಾಡುವಾಗಿನ ಅಥವಾ ಉಪನ್ಯಾಸವನ್ನು ನೀಡುವಾಗಿನ ವಿವಿಧ ಹಂತಗಳಲ್ಲಿ ಉಪಯೋಗಿಸಲ್ಪಡುವ ಅಥವಾ ಸೇರಿಕೊಂಡಿರುವ ಕೆಲವು ಅಂಗಭೂತ ಬೋಧನಾ ಕೌಶಲಗಳನ್ನು ಕೋಷ್ಟಕ 2ರಲ್ಲಿ ಕೊಡಲಾಗಿದೆ.

**ಕೋಷ್ಟಕ 2**

ಪಾಠದ ವಿವಿಧ ಹಂತಗಳಿಗೆ ಜೊತೆಯಾಗಿರುವ ಅಂಗಭೂತ ಬೋಧನಾ ಕೌಶಲಗಳು

| ಪಾಠದ ಹಂತ/ಘಟ್ಟ | ಅಂಗಭೂತ ಬೋಧನಾ ಕೌಶಲಗಳು |
|---|---|
| I. ಯೋಜನಾ ಘಟ್ಟ | 1. ವಿಷಯದ ಆಯ್ಕೆ<br>2. ಕಲಿಕೆಯ ಗುರಿಗಳನ್ನು ಬರೆಯುವುದು<br>3. ದೃಕ್–ಶ್ರವ್ಯ ಸಾಧನಗಳ ಆಯ್ಕೆ<br>4. ನಿರ್ಣಾಯಕ ಕಿರುಪರೀಕ್ಷೆಯನ್ನು ರೂಪಿಸುವುದು<br>5. ವಿಷಯವನ್ನು ವ್ಯವಸ್ಥೆಗೊಳಿಸುವುದು |
| II. ಪೂರ್ವಭಾವಿ ಹಂತ (ಅನುಗಮನವನ್ನು ಅಣಿಗೊಳಿಸುವುದು) | 6. ಪಾಠವನ್ನು ಪ್ರಾರಂಭಿಸಲು ಸಿದ್ಧತೆಯನ್ನು ರೂಪಿಸುವುದು.<br>7. ಪಾಠವನ್ನು ಪ್ರಾರಂಭಿಸುವುದು. |
| III. ನಿರೂಪಣೆಯ ಹಂತ<br>ಅ. ಪ್ರಶ್ನಿಸುವ ಕೌಶಲಗಳು | 8. ತರಗತಿ ಕೊಠಡಿಯ ಪ್ರಶ್ನೆಗಳನ್ನು ರಚಿಸುವುದು<br>9. ಪ್ರಶ್ನೆಗಳ ನಿರರ್ಗಳತೆ<br>10. ವಿವಿಧ ರೀತಿಯ ಪ್ರಶ್ನೆಗಳು<br>11. ಉನ್ನತಮಟ್ಟದ ಪ್ರಶ್ನೆಗಳನ್ನು ಉಪಯೋಗಿಸುವುದು<br>12. ವಿವಿಧ ಪರಿಹಾರದ ಪ್ರಶ್ನೆಗಳು<br>13. ಪ್ರಶ್ನೆಗಳ ಹಂಚಿಕೆ<br>14. ಪ್ರತಿಕ್ರಿಯೆಗಳ ನಿರ್ವಹಣೆ |
| ಆ. ನಿರೂಪಣಾ ಕೌಶಲಗಳು | 15. ಪಾಠವನ್ನು ನಡೆಸಿಕೊಂಡು ಹೋಗುವುದು<br>16. ಉಪನ್ಯಾಸ ನೀಡಿಕೆ / ನಿರೂಪಣೆ<br>17. ವಿವರಿಸುವಿಕೆ<br>18. ಪ್ರದರ್ಶನ ನೀಡುವಿಕೆ<br>19. ಚರ್ಚಿಸುವುದು<br>20 ಉದಾಹರಣೆಗಳೊಂದಿಗೆ ವರ್ಣಿಸುವುದು |

Digitised by Bharatavani, CIIL

| | |
|---|---|
| ಇ. ದೃಕ್–ಶ್ರವಣ ಸಲಕರಣೆಗಳನ್ನು ಉಪಯೋಗಿಸುವ ಕೌಶಲಗಳು | 21. ಸಲಕರಣೆಗಳನ್ನು ಉಪಯೋಗಿಸುವುದು (ದೃಕ್–ಶ್ರವಣ)<br>22. ಕಪ್ಪುಹಲಗೆಯನ್ನು ಉಪಯೋಗಿಸುವುದು<br>23. ಪ್ರಚೋದನೆಯಲ್ಲಿನ ಬದಲಾವಣೆ<br>24. ನೀರವ ಮತ್ತು ಅಶಾಬ್ದಿಕ ಸೂಚನೆಗಳು<br>25. ಬಲಪಡಿಸುವುದು/ ಗಟ್ಟಿಗೊಳಿಸುವುದು |
| ಈ. ನಿರ್ವಹಣಾ ಕೌಶಲಗಳು | 26. ವಿದ್ಯಾರ್ಥಿ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು<br>27. ಗಮನನೀಡುವ ವರ್ತನೆಯನ್ನು ಗುರುತಿಸುವುದು<br>28. ತರಗತಿಯನ್ನು ನಿರ್ವಹಿಸುವುದು |
| IV. ಮುಕ್ತಾಯದ ಹಂತ | 29. ಮುಕ್ತಾಯವನ್ನು ಸಾಧಿಸುವುದು<br>30. ಯೋಜಿತ ಪುನರಾವರ್ತನ<br>31. ನಿಗದಿತ ಕಾರ್ಯ ನೀಡುವಿಕೆ<br>32. ವಿದ್ಯಾರ್ಥಿಯ ಪ್ರಗತಿಯ ಮೌಲ್ಯಮಾಪನ ಮಾಡುವುದು<br>33. ವಿದ್ಯಾರ್ಥಿಯ ಕಲಿಕಾ ತೊಂದರೆಗಳನ್ನು ವೈಜ್ಞಾನಿಕವಾಗಿ ಪತ್ತೆ ಹಚ್ಚುವುದು ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು. |

NCTE (1987) ಯು ಬೋಧನೆಯ ಪ್ರಾಯೋಗಿಕ ಕಾರ್ಯದಲ್ಲಿ ಮೂರು ಕ್ಷೇತ್ರಗಳಲ್ಲಿ ಕೌಶಲಗಳನ್ನು ಗುರುತಿಸಿದೆ. ಅವೆಂದರೆ (i) ಬೌದ್ಧಿಕ ಕೌಶಲಗಳು, ವಿಷಯ ಹಾಗೂ ವಿಧಾನಕ್ಕೆ ಸಂಬಂಧಿಸಿದವು; (ii) ಬೋಧನೆಯ ಮಾನಸ ಚಾಲನೆ ಕೌಶಲಗಳು; (iii) ತರಗತಿಯಲ್ಲಿ ಸಾಮಾಜಿಕ ವಾತಾವರಣವನ್ನು ಕಾಪಾಡಿಕೊಂಡು ಬರಲು ನೆರವಾಗುವ ಮಾನವೀಯ ಸಂಬಂಧಗಳಿಗೆ ಸೂಕ್ತವಾದ ಕೌಶಲಗಳು.

ಬೌದ್ಧಿಕ ಕೌಶಲಗಳಲ್ಲಿ ಸೇರಿರುವಂತಹವು: (ಅ) ಒಂದು ನಿರ್ದಿಷ್ಟ ತರಗತಿಗೆ ಸೂಕ್ತವಾದ ವಿಷಯವನ್ನು ಗುರುತಿಸುವುದು ಮತ್ತು ಆಯ್ಕೆ ಮಾಡಿಕೊಳ್ಳುವುದು (ಆ) ವಿಷಯವನ್ನು ವಾಸ್ತವಿಕ, ಕಲ್ಪನೆಗಳ, ಅನ್ವಯಗಳ ಮತ್ತು ಸೈದ್ಧಾಂತಿಕ ಕಲಿಕೆಗೆ ಸಂಬಂಧಪಟ್ಟಂತೆ ಭಾಗಗಳನ್ನಾಗಿ ವಿಶ್ಲೇಷಿಸುವುದು (ಇ) ಹೀಗೆ ವರ್ಗೀಕರಿಸಿದ ವಿಷಯವನ್ನು ಅರಿವಿಗೆ ಸಂಬಂಧಿಸಿದ, ಮಾನಸ ಚಾಲನೆಯ ಮತ್ತು ಭಾವಾತ್ಮಕ ಕ್ಷೇತ್ರಗಳಿಗೆ ಸಂಬಂಧಿಸಿದ ವರ್ತನಾ ಗುರಿಗಳನ್ನಾಗಿ ಮತ್ತೆ ವಿಶ್ಲೇಷಿಸುವುದು (ಈ) ಇವುಗಳನ್ನು ಬೋಧನಾ ಸಮಸ್ಯೆಗಳನ್ನಾಗಿ ಭಾಷಾಂತರಿಸುವುದು (ಉ) ಈ ಸಮಸ್ಯೆಗಳಲ್ಲಿ ಅಂತರ್ಗತವಾಗಿರುವ ಮಾನಸಿಕ ಪ್ರಗತಿಯನ್ನು ಗುರುತಿಸುವುದು (ಊ) ಪರಿಕಲ್ಪನೆಗಳು, ವರ್ತನಾ ಗುರಿಗಳು ಮತ್ತು ಮಾನಸಿಕ ಪ್ರಕ್ರಿಯೆಗಳನ್ನು ನಿರೂಪಿಸುವುದು (ಋ) ಇವುಗಳನ್ನು ಶೈಕ್ಷಣಿಕ ತತ್ವಗಳಿಗೆ ಪರಸ್ಪರ ಸಂಬಂಧ ಉಂಟುಮಾಡುವುದು (ಎ) ನಿರೂಪಿಸಲ್ಪಟ್ಟ ಗುರಿಗಳನ್ನು ಸಾಧಿಸಲು ಸೂಕ್ತವಾದ ಕಲಿಕೆಯ ಅನುಭವಗಳನ್ನು ಗುರುತಿಸುವುದು, ಆರಿಸುವುದು, ರಚಿಸುವುದು, ಪ್ರಾರಂಭಿಸುವುದು ಮತ್ತು ಪುಷ್ಟೀಕರಿಸುವುದು (ಏ) ವಿಭಿನ್ನವಾದ ಸಂಕೀರ್ಣತೆಯನ್ನು ಮತ್ತು ಕಠಿಣತೆಯನ್ನು ಹೊಂದಿರುವ ಬೋಧನಾ ಪ್ರಶ್ನೆಗಳನ್ನು ರೂಪಿಸುವುದು (ಐ) ನಿರೂಪಿಸಲ್ಪಟ್ಟ ಗುರಿಗಳಿಗೆ ಸಂಬಂಧಿಸಿದಂತೆ ವಿವಿಧ ಬಗೆಗಳ ಪ್ರಶ್ನೆಗಳಲ್ಲಿ ಯೋಗ್ಯವಾದ ಆಯ್ಕೆ ಮಾಡುವುದು (ಒ) ಹೆಚ್ಚಿನಮಟ್ಟದ ಮಾನಸಿಕ ಪ್ರಕ್ರಿಯೆಗಳನ್ನು, ಆಸಕ್ತಿಗಳನ್ನು ಮನೋಭಾವಗಳನ್ನು ಮತ್ತು ಮೌಲ್ಯಗಳನ್ನು ಮಾಪನಮಾಡಲು ಅಪರಿಚಿತ ಆದರೆ ವಿಶ್ವಾಸನೀಯ ಮತ್ತು ಸಮಂಜಸವಾದ ಪರೀಕ್ಷಾ ಸನ್ನಿವೇಶಗಳನ್ನು ಗುರುತಿಸುವುದು, ಆರಿಸುವುದು, ರೂಪಿಸುವುದು ಮತ್ತು ಸೃಷ್ಟಿಸುವುದು, (ಓ) ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಸೇರಿಸಿದ ಪಾಠಯೋಜನೆ ಮತ್ತು ಮೌಲ್ಯಮಾಪನ ಸಾಧನಗಳನ್ನು ವಿಕಾಸಗೊಳಿಸುವುದು.

ಮಾನಸ ಚಾಲನಾ ಕೌಶಲಗಳೆಂದರೆ :– (ಅ) ಸ್ಥಾನ/ಭಂಗಿಯ/ ಚಲನಸಂಬಂಧದ ಅಶಾಬ್ದಿಕ ಕೌಶಲಗಳು; ಕಪ್ಪು ಹಲಗೆಯ ಮೇಲೆ ಬರವಣಿಗೆ; ಪ್ರದರ್ಶನ/ಪ್ರಯೋಗಗಳನ್ನು ಮಾಡುವುದು; ಪಟಗಳು, ಪ್ರೊಜೆಕ್ಟರುಗಳು, ಓವರ್‌ಹೆಡ್ ಪ್ರೊಜೆಕ್ಟರುಗಳು, ಸೂಕ್ಷ್ಮದರ್ಶಕ ಇತ್ಯಾದಿ ದೃಕ್–ಶ್ರವಣ ಸಾಧನಗಳನ್ನು ಉಪಯೋಗಿಸುವುದು ಮತ್ತು ಪ್ರದರ್ಶಿಸುವುದು; (ಆ) ಆಲಿಸುವಿಕೆ, ಓದುವಿಕೆ, ಬರೆಯುವಿಕೆ,

Digitised by Bharatavani, CIIL

ನಿರೂಪಿಸುವಿಕೆ, ವಿವರಿಸುವಿಕೆ, ನಟಿಸುವಿಕೆ, ಪ್ರಶ್ನೆ ಮಾಡುವಿಕೆ, ಸ್ಪಷ್ಟವಾಗಿ ಉಚ್ಚರಿಸುವುದು, ಅಭಿವ್ಯಕ್ತಿಸುವುದು, ಸರಿಹೊಂದಿಸುವುದು ಇತ್ಯಾದಿ.

ಮಾನವ ಸಂಬಂಧಗಳಿಗೆ ನೆರವಾಗುವ ಕೌಶಲಗಳೆಂದರೆ:– (ಅ) ಚಾಲ್ತಿಯಲ್ಲಿ ಇರುವ ಕಲಿಕೆಯಲ್ಲಿ ವಿದ್ಯಾರ್ಥಿಯು ತೊಡಗಿಸಿಕೊಂಡಿರುವಿಕೆ ಮತ್ತು ಭಾಗವಹಿಸುವಿಕೆಯನ್ನು ಭದ್ರಪಡಿಸುವುದು. (ಆ) ವಿದ್ಯಾರ್ಥಿಯ ಅರಿವಿನ, ಮಾನಸ ಚಾಲನೆಯ ಮತ್ತು ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಶಾಬ್ದಿಕ ಮತ್ತು ಅಶಾಬ್ದಿಕ ಪ್ರತ್ಯಾದಾನ (ಈಜಜಜ ಥಚಿಛಿಇ) ದ ಮೂಲಕ ಅವರೊಂದಿಗೆ ಸೌಹಾರ್ದ ಸಂಬಂಧವನ್ನು ಬೆಳೆಸುವುದು (ಇ) ತರಗತಿಯಲ್ಲಿ ಅನಿರ್ಬಂಧಿತ ಆದರೂ ಗುರಿಗಳನ್ನು ಉದ್ದೇಶಿಸಿದ ಬೋಧನೆಯನ್ನು ರೂಪಿಸುವುದು (ಈ) ತರಗತಿಯಲ್ಲಿ ಉದ್ಭವವಾಗುವ ಸಮಸ್ಯಾತ್ಮಕ ಹಾಗೂ ಸಂಕೋಚವನ್ನು ಉಂಟುಮಾಡುವ ಸಾಮಾಜಿಕ ಸನ್ನಿವೇಶಗಳನ್ನು ಸಹಾನುಭೂತಿಯಿಂದ ಆದರೆ ದೃಢವಾಗಿ ನಿಭಾಯಿಸುವುದು.

ವಿವಿಧ ಶಿಕ್ಷಣ ತಜ್ಞರಿಂದ ಗುರುತಿಸಲ್ಪಟ್ಟ ಬೋಧನಾ ಕೌಶಲಗಳ ಒಂದು ತೌಲನಿಕ ಪಟ್ಟಿಯನ್ನು ಸಹ ಕೋಷ್ಟಕ 3ರಲ್ಲಿ ಕೊಡಲಾಗಿದೆ.

ಕೋಷ್ಟಕ 3

ಬೋಧನಾ ಕೌಶಲಗಳ ತುಲನಾತ್ಮಕ ಪಟ್ಟಿ

| ಅಲೆನ್ (1969) | ಬೋರ್ಗ್ (1970) | ಟರ್ನೆ (1977) | ಪಾಸ್ಸಿ (1976) | ಜಂಗೀರಾ ಮತ್ತು ಸಂಗಡಿಗರು (1979) |
|---|---|---|---|---|
| 1 | 2 | 3 | 4 | 5 |
| ಪ್ರಚೋದನೆಯಲ್ಲಿನ ಬದಲಾವಣೆ | ಪ್ರಚೋದನಾ ಸನ್ನಿವೇಶವನ್ನು ಬದಲಾಯಿಸುವುದು | ಬದಲಾಗುತ್ತಿರುವ ಪ್ರಚೋದನೆ | ಪ್ರಚೋದನೆಯಲ್ಲಿನ ಬದಲಾವಣೆ | ಪ್ರಚೋದನೆಗೆ ಲಕ್ಷ್ಯಕೊಡುವುದು (Stimulus Cariation) |
| ಅನುಗಮನವನ್ನು ಅಣಿಗೊಳಿಸುವುದು | ವೇದಿಕೆ ಸ್ಥಾಪಿಸುವುದು | ಅನುಗಮನವನ್ನು ಅಣಿಗೊಳಿಸುವುದು | ಪಾಠವನ್ನು ಪ್ರಾರಂಭಿಸುವುದು | ಪಾಠವನ್ನು ಪ್ರಾರಂಭಿಸಲು ವೇದಿಕೆಯನ್ನು ರಚಿಸುವುದು |
| ಪ್ರಶ್ನಿಸುವಲ್ಲಿ ನಿರರ್ಗಳತೆ | ಪ್ರಶ್ನೆಗಳನ್ನು ಕೇಳುವುದು | ಪರಿಣಾಮಕಾರಿಯಾಗಿ ಪ್ರಶ್ನಿಸುವ ಮೂಲಭೂತ ನಿರರ್ಗಳತೆಯನ್ನು ಉಪಯೋಗಿಸುವುದು | ಪ್ರಶ್ನಿಸುವಲ್ಲಿ ನಿರರ್ಗಳತೆ | ಬೇರೆಬೇರೆ ಹಂತಗಳಲ್ಲಿ ಪ್ರಶ್ನೆಗಳನ್ನು ರಚಿಸುವಿಕೆ. ಪ್ರಶ್ನಿಸುವ ಶೈಲಿ ಮತ್ತು ಹಂಚಿಕೆ. |
| ಶೋಧಕ ಪ್ರಶ್ನೆ | ಶೋಧಕ ಪ್ರಶ್ನೆಗಳ ಉಪಯೋಗ | ಶೋಧಕ ಪ್ರಶ್ನೆಗಳನ್ನು ಉಪಯೋಗಿಸುವುದು | ಶೋಧಕ ಪ್ರಶ್ನೆ | ಪ್ರತಿಕ್ರಿಯೆಯ ನಿರ್ವಹಣೆ |
| ಉನ್ನತ ಮಟ್ಟದ ಪ್ರಶ್ನೆಗಳ ಉಪಯೋಗ | ಶೋಧಕ ವರ್ಗದ ಪ್ರಶ್ನೆಯ ಉಪಯೋಗ | – | – | – |
| ವಿವಿಧ ಪರಿಹಾರದ ಪ್ರಶ್ನೆಗಳು | – | ಅಭಿಗಾಮಿ/ಒಂದೇ ಕಡೆ ಸರಿಯುವ ಪ್ರಶ್ನೆಗಳ ಉಪಯೋಗ | – | – |
| ಉಪನ್ಯಾಸ | ಉಪನ್ಯಾಸ ನೀಡುವಿಕೆ | ಉಪನ್ಯಾಸ ನೀಡುವಿಕೆ | ವಿವರಿಸುವುದು | ವಿವರಿಸುವುದು |
| ಯೋಜಿತ ಪುನರಾವರ್ತನೆ | – | ಯೋಜಿತ ಪುನರಾವರ್ತನವನ್ನು ಉಪಯೋಗಿಸುವುದು | – | – |

Digitised by Bharatavani, CIIL

| | | | | |
|---|---|---|---|---|
| ಸಂವಹನದ ಪೂರ್ಣತೆ | ಸಂವಹನದ ಪೂರ್ಣತೆ | ಸಂವಹನದ ಪೂರ್ಣತೆಯನ್ನು ಖಾತ್ರಿಪಡಿಸಿಕೊಳ್ಳುವುದು | – | – |
| ಉದಾಹರಣೆಗಳೊಂದಿಗೆ ವಿಶದಗೊಳಿಸುವುದು | ಉದಾಹರಣೆಗಳ ಉಪಯೋಗ ಮತ್ತು ವಿಶದೀಕರಣ | ಉದಾಹರಣೆಗಳನ್ನು ಉಪಯೋಗಿಸುವುದು | ಉದಾಹರಣೆಗಳೊಂದಿಗೆ ವಿಶದಗೊಳಿಸುವುದು | ಉದಾಹರಣೆಗಳೊಂದಿಗೆ ವಿಶದಗೊಳಿಸುವುದು |
| ಗುರುತು ಹಿಡಿಯುವುದು ಮತ್ತು ಗಮನವೀವ ವರ್ತನೆ | ಗುರುತು ಹಿಡಿಯುವುದು ಮತ್ತು ಗಮನವೀವ ವರ್ತನೆಯನ್ನು ಸಂಪಾದಿಸುವುದು | – | ಗಮನವೀವ ವರ್ತನೆಯನ್ನು ಗುರುತು ಹಿಡಿಯುವುದು | – |
| ವಿದ್ಯಾರ್ಥಿ ಭಾಗವಹಿಸುವಿಕೆಯನ್ನು ಬಲಪಡಿಸುವುದು | ಬಹುಮಾನಗಳನ್ನು ಮತ್ತು ಶಿಕ್ಷೆಯನ್ನು ಬಳಸುವುದು | ವಿದ್ಯಾರ್ಥಿ ವರ್ತನೆಯನ್ನು ಬಲವರ್ಧನೆ ಮಾಡುವುದು | ಬಲವರ್ಧನೆ | ಬಲವರ್ಧನೆ |
| ಶಿಕ್ಷಕರ ನೀರವ ಮತ್ತು ಅಶಾಬ್ದಿಕ ಸೂಚನೆಗಳು | ಈ ಶಿಕ್ಷಕರ ನೀರವ ಮತ್ತು ಅಶಾಬ್ದಿಕ ಸೂಚನೆಗಳು | ನೀರವತೆಯನ್ನು ಉಪಯೋಗಿಸುವುದು, ಅಶಾಬ್ದಿಕ ಸಂವಹನವನ್ನು ಉಪಯೋಗಿಸುವುದು | ನೀರವತೆ ಮತ್ತು ಅಶಾಬ್ದಿಕ ಸೂಚನೆಗಳು | – |
| ಮುಕ್ತಾಯ | ಮುಕ್ತಾಯವನ್ನು ಸಾಧಿಸುವುದು | – | ಮುಕ್ತಾಯವನ್ನು ಸಾಧಿಸುವುದು | ಮುಕ್ತಾಯವನ್ನು ಸಾಧಿಸುವುದು |
| – | ಸೂಕ್ತವಾದ ಉಲ್ಲೇಖದ ದಾಖಲೆಯ ಚೌಕಟ್ಟನ್ನು ಸ್ಥಾಪಿಸುವುದು | – | – | – |
| – | ಪ್ರತ್ಯಾದಾನವನ್ನು ಒದಗಿಸುವುದು | ವಿದ್ಯಾರ್ಥಿ ಪ್ರತ್ಯಾದಾನವನ್ನು ಉತ್ತೇಜಿಸುವುದು | – | – |
| – | ವಿದ್ಯಾರ್ಥಿ ಭಾಗವಹಿಸುವಿಕೆಯ ನಿಯಂತ್ರಣ | – | – | – |
| – | ಅವಶ್ಯಕತೆಗಿಂತ ಹೆಚ್ಚಾಗಿರುವಿಕೆ ಮತ್ತು ಪುನರಾವರ್ತನ | – | –– | – |
| – | ವಿದ್ಯಾರ್ಥಿ ಆರಂಭಿಸಿದ ಪ್ರಶ್ನೆಗಳು | –– | – | – |
| | ಪ್ರಿಕ್ಯೂಇಂಗ್ (Precuing) ಸುಳಿವು ಪಡೆಯುವುದಕ್ಕೂ ಮುನ್ನ | ವಿದ್ಯಾರ್ಥಿ ತೊಡಗಿಸಿಕೊಂಡಿರುವಿಕೆ ಮತ್ತು ಭಾಗವಹಿಸುವಿಕೆ | ವಿದ್ಯಾರ್ಥಿ ಭಾಗವಹಿಸುವಿಕೆಯನ್ನು ಹೆಚ್ಚು ಮಾಡುವುದು | ವಿದ್ಯಾರ್ಥಿ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು. |

Digitised by Bharatavani, CIIL

| | | | | |
|---|---|---|---|---|
| – | – | ದೃಕ್–ಶ್ರವಣ ಸಾಧನಗಳನ್ನು ಉಪಯೋಗಿಸುವುದು | – | ದೃಕ್–ಶ್ರವಣ ಸಾಧನಗಳನ್ನು ಉಪಯೋಗಿಸುವುದು |
| – | – | ನಿರೂಪಣೆಯನ್ನು ಆಗಾಗ ಬಿಟ್ಟು ಬಿಟ್ಟು ಮಾಡುವುದು | | ಪಾಠದ ವೇಗವನ್ನು ನಿಯಂತ್ರಿಸುವುದು |
| – | – | ತೊಂದರೆಗಳನ್ನು ಪತ್ತೆ ಹಚ್ಚುವುದು | – | – |
| – | – | ಪರಿಹಾರ ಕ್ರಮಗಳನ್ನು ಒದಗಿಸುವುದು | ಪರಿಹಾರ ಕ್ರಮಗಳು | ತೊಂದರೆಗಳನ್ನು ಪತ್ತೆ ಹಚ್ಚುವುದು ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು |
| – | – | – | ಬೋಧನಾ ಗುರಿಗಳನ್ನು ಬರೆಯುವುದು | ಸೂಕ್ತವಾದ ಬೋದನಾ ಗುರಿಗಳನ್ನು ಉಪಯೋಗಿಸುವುದು |
| – | – | – | ಕಪ್ಪು ಹಲಗೆಯನ್ನು ಉಪಯೋಗಿಸುವುದು | ಕಪ್ಪು ಹಲಗೆಯನ್ನು ಉಪಯೋಗಿಸುವುದು |
| – | – | – | ವಿಷಯವನ್ನು ಆಯ್ಕೆ ಮಾಡಿಕೊಳ್ಳುವುದು | – |
| – | – | – | ವಿಷಯವನ್ನು ವ್ಯವಸ್ಥೆಗೊಳಿಸುವುದು | ವಿಷಯವನ್ನು ವ್ಯವಸ್ಥೆಗೊಳಿಸುವುದು |
| – | – | – | ದೃಕ್–ಶ್ರವಣ ಸಾಧನಗಳನ್ನು ಆಯ್ಕೆ ಮಾಡಿಕೊಳ್ಳುವುದು | – |
| – | – | ನಿಗದಿತ ಕಾರ್ಯಗಳನ್ನು ನೀಡುವುದು | ಮೌಲ್ಯಮಾಪನ | ವಿದ್ಯಾರ್ಥಿಯ ಪ್ರಗತಿಯ ಮೌಲ್ಯಮಾಪನ, ತರಗತಿ ಕೋಣೆಯ ನಿರ್ವಹಣೆ |

**ಮೂಲ:** ಕೋರ್ ಟೀಚಿಂಗ್ ಸ್ಕಿಲ್ಸ್, ಎನ್.ಸಿ.ಇ.ಆರ್.ಟಿ (1982)

ಬೋಧನೆಯ ಸಂಕೀರ್ಣ ಕಾರ್ಯವನ್ನು ಕಲಿಸಲು ಸಾಧ್ಯವಾದ, ಅಭ್ಯಾಸಮಾಡಬಹುದಾದ, ಭವಿಷ್ಯ ನುಡಿಯಬಹುದಾದ ಮತ್ತು ನಿಯಂತ್ರಿಸಬಹುದಾದ ಬಲು ಸ್ಪಷ್ಟವಾಗಿ ನಿರೂಪಿಸಲ್ಪಡಬಹುದಾದ ಬೋಧನಾ ಕೌಶಲಗಳು ಎಂದು ಕರೆಯಲ್ಪಡುವ ಅಂಗಾಂಶಗಳನ್ನಾಗಿ ವಿಶ್ಲೇಷಿಸಬಹುದು ಎಂಬುದನ್ನು ಈ ಎಲ್ಲಾ ಸಂಶೋಧನೆಗಳು ಮತ್ತು ಅಧ್ಯಯನಗಳು ತೋರಿಸುತ್ತವೆ. ಪರಿಣಾಮಕಾರಿ ಬೋಧನಾ–ಕಲಿಕಾ ಪ್ರಕ್ರಿಯೆಗಾಗಿ ಅಪೇಕ್ಷಿತ ಬೋಧನೆಯನ್ನು ಉಂಟುಮಾಡುವಲ್ಲಿ ಇವು ಉಪಯುಕ್ತವಾಗಿವೆ.

**ಬೋಧನಾ ಕೌಶಲಗಳ ಅಂಗೀಕಾರಾರ್ಹತೆ:**

ಬೋಧನಾ ಕೌಶಲಗಳ ಅಂಗೀಕಾರಾರ್ಹತೆಯನ್ನು ತೀರ್ಮಾನಿಸಲು ಎರಡು ಬಗೆಗಳ ಮಾನದಂಡಗಳನ್ನು ಉಪಯೋಗಿಸಬೇಕೆಂದು ಡಂಕಿನ್ (1976) ಭಾವಿಸಿದ್ದಾನೆ. (i) ಬೋಧನಾ ವರ್ತನೆಯ ಯಾವ ನಿರ್ದಿಷ್ಟ ಅಂಶವು ಬೋಧನೆಯ ಇತರ ಅಂಶಗಳಿಗಿಂತ ಎಷ್ಟರ ಮಟ್ಟಿಗೆ ಪ್ರತ್ಯೇಕವಾಗಿದೆ ಎಂಬುದು. ವೀಕ್ಷಕರು ಕೌಶಲ ಸ್ವರೂಪವು ಹೇಗೆ, ಯಾವುದರಿಂದ ರಚಿತವಾಗಿದೆ/ರೂಪುಗೊಂಡಿದೆ ಎಂಬುದನ್ನು ಒಪ್ಪಿಕೊಳ್ಳಲು ಮತ್ತು ಅದು ಸಂಭವಿಸಿದಾಗ ಅದನ್ನು ಗುರುತಿಸಲು ಶಕ್ತರಾಗಿರಬೇಕು.

(ii)ಕೌಶಲಗಳು ವಿದ್ಯಾರ್ಥಿಕಲಿಕೆಯನ್ನು ಎಷ್ಟರ ಮಟ್ಟಿಗೆ ಉತ್ತಮಪಡಿಸಿವೆ ಎಂಬುದನ್ನು ತೋರಿಸುವುದು.

ಡಂಕಿನ್ (1976)ನು ಬೋಧನಾ ಕೌಶಲಗಳ ಒಂದು ದೀರ್ಘವಾದ ಪಟ್ಟಿಯನ್ನು ಪುನರ್‌ವಿಮರ್ಶೆ ಮಾಡಿ ನಿರ್ದಿಷ್ಟ ಬೋಧನಾ ವರ್ತನೆಗಳನ್ನು ತರಬೇತಾದ ವೀಕ್ಷಕರಿಂದ

Digitised by Bharatavani, CIIL

ವಿಶ್ವಾಸಾರ್ಹವಾಗಿ ಪ್ರತ್ಯೇಕಿಸಲು ಸಾಧ್ಯವೆಂಬುದನ್ನು ಕಂಡುಕೊಂಡನು. ವಿಭಿನ್ನಮಟ್ಟದ ನಿರ್ದಿಷ್ಟತೆಗಳಿಂದಾಗಿ ಬೋಧನಾ ಕೌಶಲಗಳ ಲಕ್ಷಣಗಳನ್ನು ನಿರೂಪಿಸುವಲ್ಲಿ ಪರಿಕಲ್ಪನಾತ್ಮಕ ಸಮಸ್ಯೆಗಳು ಇರಬಹುದು. ಉದಾಹರಣೆಗೆ 'ವಿದ್ಯಾರ್ಥಿ ವರ್ತನೆಗೆ ಪುನರ್ಬಲ ನೀಡುವುದು" ಎಂಬುದು 'ವಿದ್ಯಾರ್ಥಿ ಕಲಿಕೆಗಳ ಮಾರ್ಗದರ್ಶನ ನೀಡುವುದು' ಎಂಬುದಕ್ಕಿಂತಲೂ ಮತ್ತು 'ಶೋಧಕ ಪ್ರಶ್ನೆಗಳನ್ನು ಉಪಯೋಗಿಸುವುದು' ಎಂಬುದು 'ಬೋಧನೆಯನ್ನು ವೈಯಕ್ತೀಕರಣಗೊಳಿಸುವುದು' ಎಂಬುದಕ್ಕಿಂತಲೂ ಹೆಚ್ಚು ನಿರ್ದಿಷ್ಟವಾಗಿರುತ್ತದೆ.

ಈಚಿನ ವಿಮರ್ಶಕರು ಬೋಧನಾ ಕೌಶಲಗಳನ್ನು ಗುರುತಿಸುವಲ್ಲಿ ಅತಿ ಶೀಘ್ರ ಪ್ರಗತಿಯನ್ನು ಸಾಧಿಸಿರುವುದಾಗಿ ಹೇಳುತ್ತಾರೆ. ಏಕೆಂದರೆ ಪ್ರಯೋಗ ಸಿದ್ಧ ಸಂಶೋಧನೆಯಿಂದ ಕ್ರಮಬದ್ಧವಾಗಿ ಪಡೆದ ಸಾಕ್ಷಾಧಾರಕ್ಕಿಂತಲೂ ವೃತ್ತಿಪರ ಅನುಭವದಿಂದ ಪಡೆದ ಒಟ್ಟು ಪರಿಣಾಮವನ್ನು ಮಾತ್ರ ನಿರೂಪಿಸುವ ಪದ್ಧತಿಯನ್ನು ಅವರು ಅವಲಂಬಿಸಿರುತ್ತಾರೆ. ಬೋಧನೆಯನ್ನು ಶಿಕ್ಷಕ ವರ್ತನೆಯ ಮಾತುಗಳಲ್ಲಿ ಕನಿಷ್ಠ ಮೂರು ಹಂತಗಳಲ್ಲಿ ವಿಶ್ಲೇಷಿಸಬಹುದು. (i) ಬೋಧನಾ ಕೌಶಲದ ಅಂಗಾಂಶ (ii)ಕೌಶಲದ ಅಂಗಾಂಶವನ್ನು ಒಳಗೊಂಡಂತೆ ಬೋಧನಾ ವರ್ತನೆಗಳ ಅಂಗಾಂಶ ಮತ್ತು (iii) ಅಸಂಘಟಿತ ಬೋಧನಾ ವರ್ತನೆಗಳು (ಜಂಗೀರಾ ಮತ್ತು ಅಜಿತ್ ಸಿಂಗ್ 1982). ಆದ್ದರಿಂದ ಬೋಧನೆಯನ್ನು ಮೊದಲ ಹಂತದಲ್ಲಿ ಬೋಧನಾ ಕೌಶಲಗಳ ಅಂಗಾಂಶಗಳನ್ನಾಗಿ ವಿಶ್ಲೇಷಿಸಬಹುದು ಮತ್ತು ಬೋಧನೆಯನ್ನು ಕಲಿಕಾ ಗುರಿಗಳ ಒಂದು ನಿರ್ದಿಷ್ಟ ಗುಂಪನ್ನು ಸಾಧಿಸಲು ಬೇಕಾಗುವ ಕೌಶಲಗಳ ಅಂಗಾಂಶಗಳ ಒಂದು ನಿರ್ದಿಷ್ಟ ಗುಂಪು ಎಂದು ನಿರೂಪಿಸಬಹುದು. ಈ ಬೋಧನಾ ಕೌಶಲಗಳ ಅಂಗಾಂಶಗಳನ್ನು, ಮುಂದುವರೆದು, ಎರಡನೇ ಹಂತದ ಸಂಬಂಧಪಟ್ಟ ಬೋಧನಾ ವರ್ತನೆಯ ಅಂಗಾಂಶಗಳನ್ನಾಗಿ ವಿಶ್ಲೇಷಿಸಬಹುದು. ಹೀಗೆ ಒಂದು ಕೌಶಲದ ಬೋಧನಾವರ್ತನೆಯ ಅಂಗಾಂಶಗಳನ್ನು ಮತ್ತು ಇವು ಬೋಧನೆಯ ಅಂಗಾಂಶದಿಂದ ಸಾಧಿಸಲ್ಪಡುವ ಉದ್ದೇಶ ಹೊಂದಿರುವ ಶೈಕ್ಷಣಿಕ ಗುರಿಯ ಒಂದು ಅಥವಾ ಕೆಲವು ಅಂಶಗಳನ್ನು ಸಾಧಿಸಲು ನೆರವಾಗುವ ಪರಸ್ಪರ ಸಂಬಂಧ ಹೊಂದಿರುವ ಅಣುಘಟಿತ ಬೋಧನಾ ವರ್ತನೆಗಳ ಒಂದು ಗುಂಪು ಎಂದು ನಿರೂಪಿಸಬಹುದು.

(ಪಾನ್ಸಿ ಮತ್ತು ಷಾ 1974; ಜಾಂಗೀರಾ 1979)

**ಬೋಧನಾ ಕೌಶಲಗಳ ಗುಣದೋಷ ವಿವೇಚನೆಗಳು:**

ಬಹುಶಃ ಅತಿ ಪ್ರಮುಖವಾದ ಟೀಕೆ ಎಂದರೆ ಬೋಧನಾ ಕೌಶಲಗಳ ಮಾರ್ಗವು (ವಿಧಾನವು) ಬೋಧನೆ-ಕಲಿಕೆಯ ಪ್ರಕ್ರಿಯೆಯನ್ನು ಯಾಂತ್ರೀಕರಣದತ್ತ ಸಾಗಿಸುತ್ತದೆ. ಇದರಿಂದ ಶಿಕ್ಷಕರು ಅತ್ಯಂತ ಸರಳೀಕರಿಸಿದ ಲಿಖಿತ ಸೂಚಿ ಅಥವಾ ಯೋಜನೆಯನ್ನು ಅನುಸರಿಸಲು ಶಿಕ್ಷಕರನ್ನು ಉತ್ತೇಜಿಸಿದಂತೆ ಆಗುತ್ತದೆ. ಇವು ಸಂದರ್ಭಗಳ ಹಾಗೂ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ವೈಯಕ್ತಿಕ ವ್ಯತ್ಯಾಸಗಳ ಪರಿಣಿತಗಳನ್ನು ನಿರ್ಲಕ್ಷಿಸುತ್ತದೆ. ಉದಾಹರಣೆಗೆ ಪ್ರಶಿಕ್ಷಕರ ತರಬೇತಿಯ ಕೆಲವು ವಿಧಾನಗಳು ಉನ್ನತ ಮಟ್ಟದ ಪ್ರಶ್ನೆಗಳನ್ನು ಕೇಳುವ ಕೌಶಲಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಪಯೋಗಿಸುವುದರಿಂದ ತರಗತಿಯಲ್ಲಿ ವಾಸ್ತವಿಕ ಮತ್ತು ವರ್ಣನಾತ್ಮಕ ಮಾಹಿತಿಯನ್ನು ಪಡೆಯುವ ಬೇಡಿಕೆಯನ್ನು ವರ್ಜಿಸುವುದರಿಂದ ಪ್ರತಿಕೂಲ ಫಲಿತಾಂಶ ಉಂಟಾಗುತ್ತದೆ. ಕೆಲವು ಬೋಧನಾ ಕೌಶಲಗಳ ಸಂಪೂರ್ಣ ವಿಶ್ವಾಸಾರ್ಹತೆಯ ಬಗ್ಗೆ ಇರುವ ಇಂತಹ ಕೆಲವು ಕಲ್ಪನೆಗಳು ಈ ವಿಧಾನಗಳ ಬೆಂಬಲಿಗರು ಹಾಗೂ ಇವುಗಳನ್ನು ಉಪಯೋಗಿಸುವವರಿಂದ ಬಹುತೇಕ ನಿರ್ಲಕ್ಷಿಸಲ್ಪಟ್ಟಿವೆ.

ಸಂಬಂಧಪಟ್ಟ ಮತ್ತೊಂದು ಟೀಕೆ ಎಂದರೆ ಬೋಧನಾ ಕೌಶಲಗಳು ವರ್ತನಾ ವಿಷಯಗಳಿಗೆ ಬೌದ್ಧಿಕ, ಕ್ರಿಯಾತ್ಮಕ ಅಂಶಗಳಿಗಿಂತಲೂ ಹೆಚ್ಚಿನ ಒತ್ತನ್ನು ನೀಡುತ್ತವೆ ಎಂಬುದಾಗಿಯೂ ಮತ್ತು ತರಬೇತಿ ಪಡೆಯುತ್ತಿರುವ ಶಿಕ್ಷಕರು ನಿರ್ದಿಷ್ಟ ವರ್ಗದ ಬೋಧನಾ ವರ್ತನೆಯನ್ನು ನಿರ್ವಹಿಸುತ್ತಿರುವಾಗ ಪರಿಕಲ್ಪನಾತ್ಮಕ, ತಾತ್ವಿಕ ಮತ್ತು ತೀರ್ಮಾನ ಕೈಗೊಳ್ಳುವ ತಮ್ಮ ಪಾತ್ರಗಳತ್ತ ಗಮನವೀಯದೆ ಕಲ್ಪನಾತ್ಮಕ ಕ್ಷೇತ್ರವನ್ನು ನಿರ್ಲಕ್ಷಿಸುತ್ತಾರೆ. ಇದರಿಂದ ಸಹಜ ಪ್ರತಿಭೆ/ಹೆಚ್ಚು ಪ್ರತಿಭಾವಂತ ಶಿಕ್ಷಕರನ್ನು ಸಾಮಾನ್ಯ ಶಿಕ್ಷಕರಿಂದ ಪ್ರತ್ಯೇಕಿಸಿದಂತೆ ಆಗುತ್ತದೆ ಎಂದು ಅನೇಕ ವೇಳೆ ಭಾವಿಸಲಾಗುತ್ತದೆ.

ಈ ವಿಧಾನದ ಸಮರ್ಥಕರ ವಾದ ಇಂತಿದೆ: ಬೋಧನಾ ಕೌಶಲಗಳನ್ನು ಶಿಕ್ಷಕ ತರಬೇತಿ ಕಾರ್ಯಕ್ರಮಗಳಲ್ಲಿ ಕ್ರಿಯೆಗಾಗಿ ಕೇವಲ ಒಂದು ಯೋಜನೆಯನ್ನಾಗಿ ಅಲ್ಲದೆ ವರ್ತನೆಯ ಸಿದ್ಧಕೃತಿ ಸಂಚಯವನ್ನಾಗಿ ಅತ್ಯಂತ ಉತ್ತಮವಾಗಿ ಸೇರಿಸಬಹುದು; ಮತ್ತು ಇವು ಬೋಧನೆಯ ತಂತ್ರಗಳನ್ನು ಆರಿಸುವಲ್ಲಿ ಹಾಗೂ ಕಾರ್ಯರೂಪಕ್ಕೆ ತರುವಲ್ಲಿ ಶಿಕ್ಷಕರ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಹಾಗೂ ಅವರು ತಮ್ಮ ಸೈದ್ಧಾಂತಿಕ ತರಬೇತಿ ಹಾಗೂ ಕಲ್ಪನಾ ಜನಿತ ವಿನ್ಯಾಸಗಳ ಆಧಾರದ ಮೇಲೆ ಇವುಗಳನ್ನು ಆರಿಸಬಹುದು. ನಿರ್ದಿಷ್ಟ ಷರತ್ತುಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳ ಅಪೇಕ್ಷಿತ ವರ್ತನೆಗಳ ವರ್ಗವನ್ನು ಪಡೆಯಬಹುದೆಂದು ಶಿಕ್ಷಕರು ವಿವೇಚನೆಯಿಂದ ತೀರ್ಮಾನಿಸಲು ಸಾಧ್ಯವಾದರೆ ಆಗ ಶಿಕ್ಷಕರು ಬೋಧನಾ ಕೌಶಲಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳುವುದು ಅತಿ ಅಗತ್ಯವೆಂದು ವಾದಿಸಲಾಗುತ್ತದೆ.

**ಉಪಸಂಹಾರ**

ಇತ್ತೀಚಿನ ವರ್ಷಗಳಲ್ಲಿ ಬೋಧನಾ ಕೌಶಲಗಳಲ್ಲಿ ನಿಖರವಾಗಿ ದೃಷ್ಟಿಗೋಚರವಾಗುವ ವರ್ತನೆಗಳಿಗಿಂತ ನೈದಾನಿಕ, ವಿಶ್ಲೇಷಕ ಮತ್ತು ಊಹನ ಕೌಶಲಗಳನ್ನು ಸೇರಿಸಿಕೊಳ್ಳಲು ವಿಸ್ತರಿಸಲಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಅಳೆಯುವ ಮಾನದಂಡಗಳನ್ನು ರೂಪಿಸುವಲ್ಲಿ ತರಬೇತಿ ಪಡೆಯುವುದು, ತಮ್ಮ ಬೋಧನಾ ವರ್ತನೆಗಳನ್ನು ತಾವೇ ಮೇಲ್ವಿಚಾರಿಸಿಕೊಳ್ಳುವುದು, ವಸ್ತು ವಿಷಯ ಮತ್ತು ಶೈಕ್ಷಣಿಕ ಗುರಿಗಳ ಅಗತ್ಯಗಳನ್ನು ವಿಶ್ಲೇಷಿಸುವಲ್ಲಿ ಮತ್ತು ಇವುಗಳನ್ನು ಪಡೆಯುವ ಪರ್ಯಾಯ ವಿಧಗಳನ್ನು ಗುರುತಿಸುವಲ್ಲಿ ಶಿಕ್ಷಕರಿಗೆ ತರಬೇತಿ ನೀಡುವ ಅಗತ್ಯವಿದೆ ಎಂದು ವಾದಿಸಲಾಗುತ್ತದೆ. ಬಿಡಿಬಿಡಿಯಾದ ಬೋಧನಾ ವರ್ತನೆಗಳನ್ನು

Digitised by Bharatavani, CIIL

ಬೋಧನಾ ಕೌಶಲಗಳು ಎಂದು ಅವುಗಳನ್ನು ಸಂಪಾದಿಸುವ ಮತ್ತು ಅವನ್ನು ನಿರ್ವಹಿಸುವುದಕ್ಕಿಂತ ಪರಿಕಲ್ಪನೆಯ ರೂಪದಲ್ಲಿ ನೋಡುವ, ಊಹಿಸುವ ಮತ್ತು ಸಂಶ್ಲೇಷಿಸುವ ಶಿಕ್ಷಕರ ಶಕ್ತಿಯ ಕಡೆಗೆ ಇಂದು ಹೆಚ್ಚಿನ ಒತ್ತನ್ನು ನೀಡುವತ್ತ ಆಲೋಚನೆ ಸಾಗಿದೆ.

ಬೋಧನಾ ಕೌಶಲಗಳ ಪರಿಕಲ್ಪನೆಯು ಬೋಧನಾ ಪರಿಣಾಮಕಾರಿತ್ವಕ್ಕೆ ಒಂದು ವಿಶ್ಲೇಷಕ ವಿಧಾನವನ್ನು ಅನ್ವಯಿಸುವಂತೆ ಶಿಕ್ಷಕರನ್ನು ಮತ್ತು ಶಿಕ್ಷಕ ಶಿಕ್ಷಕರನ್ನು ಉತ್ತೇಜಿಸುತ್ತದೆ. ಅದು ಶಿಕ್ಷಕರ ವೃತ್ತಿ ಪರತೆಯ ಅರಿವಿನ, ಪರಿಕಲ್ಪನಾತ್ಮಕವಾದ ಅತ್ಯಾಧುನಿಕ ಮತ್ತು ಸಂಕೀರ್ಣವಾದ ವರ್ತನೆಯಲ್ಲಿ ನಿಯತವಾಗಿ ಬಳಸುವ ತಂತ್ರಗಳ ವಿಸ್ತರಣೆಯನ್ನು ಉತ್ತೇಜಿಸುತ್ತದೆ.

**ಮೂಲ: ಎನ್.ಎಸ್. ಮಾವಿ ಮತ್ತು ಶೀಲಾ ಮಂಗಳಾ**
**ಅನು: ಪ್ರೊ. ವೆಂಕಟರಮಣ ಶೆಟ್ಟಿ ಸಿ.ಜಿ.**

## ಬೋಧನಾ ಶೈಲಿಗಳು

### ಬೋಧನಾ ಶೈಲಿಗಳ ಪರಿಕಲ್ಪನೆ

ಮತ್ತೊಬ್ಬರಿಗೆ ಜ್ಞಾನ ಅಥವಾ ಕೌಶಲಗಳ ಸಂವಹನ ಮಾಡುವುದು ಅಥವಾ ಕಲಿಕೆಯನ್ನು ಸುಗಮಗೊಳಿಸುವುದು ಅಥವಾ ಮತ್ತೊಬ್ಬರು ಕೌಶಲವನ್ನು ಕಾರ್ಯರೂಪಕ್ಕೆ ತಂದು ಅಭ್ಯಸಿಸುವಂತೆ ಮಾಡುವುದು – ಇವುಗಳು 'ಬೋಧಿಸು' ಎಂಬ ಪದದ ಪದಶಃ ಅರ್ಥಗಳಾಗಿವೆ. ಅಗತ್ಯಗಳಿಗೆ ಅನುಸಾರವಾಗಿ ಮತ್ತೊಬ್ಬರಿಗೆ ಜ್ಞಾನ ಅಥವಾ ಕೌಶಲ್ಯವನ್ನು ನೀಡುವವನು, ಆತ/ಆಕೆಗೆ ನಿರ್ದಿಷ್ಟವಾದ ಉಪಕ್ರಮವನ್ನು ಆಯ್ಕೆ ಮಾಡುವನು. ಸಂಬಂಧಿತ ವ್ಯಕ್ತಿಗಳಿಗೆ ವಿಶಿಷ್ಟವಾದ, ಶಿಕ್ಷಕನ ಕಾರ್ಯಾತ್ಮಕ ವರ್ತನೆ ಮತ್ತು ವಿದ್ಯಾರ್ಥಿಯ ವಿಭಿನ್ನ ಬಗೆಯ ಸ್ವೀಕರಿಸುವ/ಪ್ರತಿಕ್ರಿಯಿಸುವ ವರ್ತನೆಗಳ ನಡುವಣ ಅನ್ಯೋನ್ಯ ಕ್ರಿಯೆಯನ್ನು ಒಳಗೊಳ್ಳುವ 'ಉಪಕ್ರಮ'ಕ್ಕೆ ಆತನ/ಆಕೆಯ 'ಬೋಧನಾ ಶೈಲಿ' ಎಂದು ಕರೆಯುವರು.

ಎಲ್ಲಾ ಬೋಧನೆಯ ಪರಿಸ್ಥಿತಿಗಳಲ್ಲಿ ಎಲ್ಲ ಶಿಕ್ಷಕರಿಗೂ ಅನ್ವಯಿಸುವ ಪರಿಣಾಮಕಾರಿ ಬೋಧನೆಯ ಶೈಲಿಯಿಲ್ಲವೆಂಬ ಅಂಶವನ್ನು ಗಮನಿಸಬೇಕಾದ್ದು ಮುಖ್ಯ, ಇದಕ್ಕೆ ವಿರುದ್ಧವಾಗಿ ಶಿಕ್ಷಕ ಮತ್ತು ವಿದ್ಯಾರ್ಥಿಯ ಗುಣಲಕ್ಷಣಗಳು, ಅಧ್ಯಯನದ ಅಂತರ್ವಸ್ತು ಮತ್ತು ಇತರ ಸ್ಥಳೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಅಂಶಗಳನ್ನು ಅವಲಂಬಿಸಿ ದತ್ತ ಶಿಕ್ಷಕ ವರ್ತನೆಯ ಶೈಲಿ ಅಥವಾ ಶಿಕ್ಷಕ ಗುಣಲಕ್ಷಣಗಳು ವಿವಿಧ ವಿದ್ಯಾರ್ಥಿಗಳಿಗೆ ವಿವಿಧ ತೆರನಾದ ಫಲಿತಾಂಶಗಳನ್ನು ನೀಡುವುದು ಖಚಿತ. ಕೆಲವು ಬೋಧನಾ ಶೈಲಿಗಳು ಹೀಗಿವೆ.

- **ಶಿಕ್ಷಕ ಕೇಂದ್ರಿತ ಶೈಲಿಗಳು:** ಇಲ್ಲಿ ಶಿಕ್ಷಕ ಸಂಪೂರ್ಣ ಬೋಧನೆ–ಕಲಿಕೆಯ ಪರಿಸ್ಥಿತಿಯ ಕಾರ್ಯಾಚರಣೆಯ ಮೇಲೆ ಪ್ರಭುತ್ವವನ್ನು ಪಡೆದು ನಿಯಂತ್ರಿಸುವನು.

- **ಚಿಂತನಾತ್ಮಕ ಶೈಲಿ:** ಇಲ್ಲಿ ಶಿಕ್ಷಕ ಹೊಸ ಸಂಬಂಧಗಳನ್ನು ಅರಸುವ ಹಾಗೂ ಪರಿಗಣಿಸುವ ಉದ್ದೇಶದೊಂದಿಗೆ ತನ್ನ ಅನುಭವಗಳ ಬಗ್ಗೆ ಚಿಂತಿಸುವನು.

- **ಪ್ರೇರಣಾತ್ಮಕ ಶೈಲಿ:** ಇಲ್ಲಿ ಸಂಬಂಧಿತ ಅಂಶಗಳನ್ನು ತಕ್ಕಮಟ್ಟಿಗೆ ಗಮನಕ್ಕೆ ತೆಗೆದುಕೊಳ್ಳದೆ ಕಾರ್ಯವೊಂದನ್ನು ಪ್ರಾರಂಭಿಸಿಬಿಡುವ ಒಲವು ಶಿಕ್ಷಕನದಾಗಿರುವುದು.

- **ವ್ಯಕ್ತಿಗತವಲ್ಲದ ಶೈಲಿ:** ಇಲ್ಲಿ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು ಇಷ್ಟಪಡುವನಾದರೂ ತನ್ನನ್ನು ಕಾರ್ಯನಿರ್ದೇಶಕನಾಗಿ ಗುರುತಿಸಿಕೊಳ್ಳುವುದಲ್ಲದೆ ತರಗತಿಯನ್ನು ಸಾಮಾಜಿಕ ಅನ್ಯೋನ್ಯ ಕ್ರಿಯೆಯ ಸ್ಥಳದಂತೆ ಕಾಣದೆ ಒಂದು ಪ್ರಯೋಗ ಶಾಲೆಯಂತೆ ಪರಿಗಣಿಸುವನು. ಅವನು ತರಗತಿಯನ್ನು ಬಹಳ ದಕ್ಷತೆಯಿಂದ ನಡೆಸುವನಾದರೂ ಕೆಲವೊಮ್ಮೆ ಅದರ ವಾತಾವರಣ ವಿಮರ್ಶಾ ಮನೋಭಾವಕ್ಕೆ ಇಳಿದು ಒಬ್ಬರನ್ನೊಬ್ಬರು ಪರಸ್ಪರ ಅರಿಯದ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ಸಂಘರ್ಷವುಂಟಾಗುವುದು.

- **ಸಮರ್ಥನಾತ್ಮಕ ಶೈಲಿ:** ಇಲ್ಲಿ ಶಿಕ್ಷಕನಿಗೆ ಮಕ್ಕಳಲ್ಲಿ ಆಸಕ್ತಿಯಿದ್ದು ಆಗಾಗ್ಗೆ ನಿಷ್ಠೆ, ಪ್ರೇಮ ಮತ್ತು ವಿಶ್ವಾಸಗಳ ಅವಶ್ಯಕತೆಯಿರುವುದು. ಆತ ಮಕ್ಕಳಿಗೆ ಅಗತ್ಯಕ್ಕಿಂತಲೂ ಅಧಿಕವಾಗಿ ನೆರವು ನೀಡುವನು. ಶಿಕ್ಷಕ ಅವರು ಕಲಿಯಲೆಂದು ಬಯಸುವನಲ್ಲದೆ ತನ್ನಿಂದ ಅವರು ಕಲಿಯುವುದನ್ನು ಕಂಡು ಆನಂದಪಡುವನು. ಅವನು ತನ್ನ ವಿದ್ಯಾರ್ಥಿಗಳನ್ನು ಇಷ್ಟಪಡುವನು ಹಾಗೂ ಅವರು ಇವನನ್ನು ಇಷ್ಟಪಡುವರಾದ್ದರಿಂದ ಮಕ್ಕಳ ಮನೋಭಾವಗಳ ಬೆಳವಣಿಗೆಯ ಮೇಲೆ ಶಿಕ್ಷಕನು ಪ್ರಬಲವಾದ ಪ್ರಭಾವ ಬೀರಬಲ್ಲನು. ತರಗತಿಯ ವಾತಾವರಣ ಸುಸಂಗತವೂ, ಸ್ನೇಹಶೀಲವೂ ಹಾಗೂ ವಿಶೇಷವಾಗಿ ಮಾರ್ಗದರ್ಶನದ ಅಧಿಕ ಅಗತ್ಯವಿರುವ ಮಗುವಿಗೆ ಸೂಕ್ತವೂ ಆಗಿರುವುದು. ಆದರೆ, ಸಾಧನಶೀಲ ಮಗುವಿಗೆ ಇದು ಅಷ್ಟೇನೂ ಸಂತಸಕರವಾಗಿರಲಾರದು.

ಮೇಲೆ ಹೇಳಿದ ಅಂಶಗಳ ಜೊತೆಗೆ ರೈಯಾನ್ಸ್ (1960) ಶಿಕ್ಷಕರ ಮೂರು ಆಧಾರಭೂತ ತರಗತಿಯ ವರ್ತನಾ ಶೈಲಿಗಳನ್ನು ಗುರುತಿಸಿದನು. ಅವು ಯಾವುವೆಂದರೆ:

1. ದೂರ ಸರಿಯುವ, ಸ್ವಾರ್ಥ ಹಾಗೂ ಪ್ರತಿಬಂಧಕ ಗುಣಗಳಿಗೆ ವಿರುದ್ಧವಾಗಿ ಸ್ನೇಹಮಯ ಹಾಗೂ ಅರ್ಥಮಾಡಿಕೊಳ್ಳುವ ಗುಣ.

2. ನುಣುಚಿಕೊಳ್ಳುವ ಸ್ವಭಾವ, ಯೋಜನಾರಾಹಿತ್ಯ ಮತ್ತು ಬೇಜವಾಬ್ದಾರಿಗಳಿಗೆ ವಿರುದ್ಧವಾಗಿ ಜವಾಬ್ದಾರಿ, ವ್ಯಾವಹಾರಿಕ ಹಾಗೂ ವ್ಯವಸ್ಥಿತವಾಗಿರುವ ಗುಣ.

3. ನಿರುತ್ಸಾಹ, ನಿತ್ಯಕ್ರಮಕ್ಕೆ ಅಂಟಿಕೊಳ್ಳುವುದಕ್ಕೆ ವಿರುದ್ಧವಾಗಿ ಪ್ರಚೋದನಾತ್ಮಕ ಮತ್ತು ಕಲ್ಪನಾಶಕ್ತಿಯ ಗುಣ..

ಇದೇ ರೀತಿ ಹೀಲ್ ಮತ್ತು ಇತರರು (1960) ವ್ಯವಸ್ಥಿತ ಶಿಕ್ಷಕರು ಹಾಗೂ ಸಹಜ ಶಿಕ್ಷಕರುಗಳನ್ನು ಉಲ್ಲೇಖಿಸುವರು.

Digitised by Bharatavani, CIIL

**ಬೋಧನ ವಿಧಾನದ ಪರಿಕಲ್ಪನೆ:**

'ತರಗತಿಯಲ್ಲಿ ಮತ್ತೆ ಮತ್ತೆ ಉಂಟಾಗುವ ಅಭ್ಯಾಸದ ನಮೂನೆ'ಯೇ ಬೋಧನ ವಿಧಾನ. ಅಲ್ಲದೆ ಅದು ತರಗತಿಯ ಕೊಠಡಿಯ ಒಳ ಹೊರಗೆ ಬೋಧನ–ಕಲಿಕಾ ಪ್ರಕ್ರಿಯೆಯ ವಿನ್ಯಾಸ ಹಾಗೂ ಕಾರ್ಯಾನ್ವಯನವೂ ಆಗಿದೆ.

'ಬೋಧಿಸು' ಮತ್ತು 'ವಿಧಾನ' ಇವೆರಡೂ ಪದಗಳು ಈ ಮೂಲಭೂತ ಸೂಚ್ಯಾರ್ಥವನ್ನು ಹೊಂದಿವೆ. 'ಬೋಧಿಸು' ಪದ ಮತ್ತೊಬ್ಬರಿಗೆ ಏನೊಂದನ್ನಾದರೂ ಮಾಡಲು ಸಮರ್ಥರನ್ನಾಗಿಸಲು ಹೇಗೆ ಮಾಡುವುದು ಎನ್ನುವುದನ್ನು ತೋರಿಸಿಕೊಡುವುದು ಮತ್ತು 'ವಿಧಾನ' ಎಂದರೆ ಏನೊಂದನ್ನಾದರೂ ಮಾಡುವ ಮಾರ್ಗವನ್ನು ತೋರಿಸುವುದು.

ಈ ವಿಧಾನಗಳು ಪ್ರತ್ಯಕ್ಷ ಅಥವಾ ಉಪದೇಶಾತ್ಮಕ ಉಪಕ್ರಮ ಹಾಗೂ ಅಪರೋಕ್ಷ ಅಥವಾ ವಿಚಾರದ ಉಪಕ್ರಮಗಳನ್ನು ಮತ್ತು ಸ್ವಯಂ–ನಿರ್ದೇಶಿತ ಅಥವಾ ಸ್ವಯಂ–ನಿಯಂತ್ರಿತ ಉಪಕ್ರಮಗಳನ್ನು ಒಳಗೊಳ್ಳುವುವು. ಈ ಎಲ್ಲಾ ಸಾಮಾನ್ಯ ವಿಧಾನಗಳು ಅಂತಿಮವಾಗಿ ಶಿಕ್ಷಕನ ವರ್ತನೆಯಾಗಿ ಪರಿಣಮಿಸಿ ಶೈಲಿಗಳಾಗಿ ವ್ಯಕ್ತಗೊಳ್ಳುವ ಕೆಲವು ನಿರ್ದಿಷ್ಟ ಬೋಧನಾ ಕೌಶಲಗಳನ್ನು ಒಳಗೊಳ್ಳುವುವು. ಸಾಧಿಸಬೇಕಾದ ಗುರಿಯನ್ನು ಅವಲಂಬಿಸಿ ಈ ಪ್ರತಿಯೊಂದನ್ನು ಬಳಸಲಾಗುವುದು. ವಾಸ್ತವಾಂಶಗಳು (ಉದಾ: ಸ್ವಾತಂತ್ರ ಚಳವಳಿಯಲ್ಲಿನ ಹೆಸರುಗಳು ಮತ್ತು ಪ್ರಮುಖ ತಾರೀಖುಗಳು ಮುಖ್ಯ ಘಟನೆಗಳು ಇತ್ಯಾದಿ.) ಅಥವಾ ಕ್ರಿಯಾ ಸರಣಿಗಳು (ಗಾತ್ರ ವಿಶ್ಲೇಷಣೆ/ಪ್ರಮಾಣ ಮಾಪನೆ (Titration)ಯನ್ನು ಕೈಗೊಳ್ಳುವಾಗ ಅಥವಾ ಮಾದರಿಯೊಂದರ ಭಾಗವನ್ನು ಜೋಡಿಸುವಾಗ) ಇತ್ಯಾದಿಗಳನ್ನು ವಿದ್ಯಾರ್ಥಿಗಳು ಕಲಿಯುವಾಗ ಪ್ರಶ್ನೆ, ಸ್ಪಷ್ಟನೆ ಮತ್ತು ವಿವರಣೆಗಳನ್ನು ಬಳಸಿ 'ನೇರ ಬೋಧನೆ'ಯನ್ನು ಉಪಯೋಗಿಸಲಾಗುವುದು.

'ಮೊಳಕೆ, ಗ್ಲೋಬಲ್ ವಾರ್ಮಿಂಗ್' ಇತ್ಯಾದಿ ಪರಿಕಲ್ಪನೆಗಳು ಅಥವಾ 'ಪೌರ ಜವಾಬ್ದಾರಿ, ಧಾರ್ಮಿಕ ಸಹಿಷ್ಣುತೆ ಇತ್ಯಾದಿ' ಅಮೂರ್ತ ಕಲ್ಪನೆಗಳನ್ನು ಸಂರಚನಾತ್ಮಕ ಬೋಧನಾ ಉಪಕ್ರಮಗಳ ಸಹಾಯದಿಂದ 'ಪರೋಕ್ಷ ವಿಧಾನ'ದಿಂದ ಬೋಧಿಸಬಹುದು. 'ವಿದ್ಯಾರ್ಥಿಯು ವ್ಯವಸ್ಥಿತ, ಕ್ರಮಾನುಗತ ಮಾರ್ಗಗಳಲ್ಲೇ ಕಲಿಯಬೇಕೆಂದಿಲ್ಲ. ಬದಲಾಗಿ ತಮ್ಮದೇ ಆದ ಅರ್ಥಗಳನ್ನು ಸಂರಚಿಸಿಕೊಳ್ಳಲು ಏಕಕಾಲದಲ್ಲಿ ಮಾಹಿತಿ ಮೂಲಗಳನ್ನು ಬಳಸಿಕೊಳ್ಳಬಹುದು ಎಂಬ ಅಂಶವನ್ನು ಅಂಗೀಕರಿಸುವ ಪರ್ಯಾಯ ವಿತರಿತ ಪ್ರಕ್ರಿಯಾ ಮಾದರಿ ಇಂಥ ಒಂದು ಉಪಕ್ರಮವಾಗಿದೆ. ಉದಾಹರಣೆಗೆ ಮತ್ತೆ ಮತ್ತೆ ಬಳಸಬಹುದಾದ ಸಮೀಕರಣಗಳನ್ನು ಬಿಡಿಸಲು ಒಂದು ಮಾದರಿಯನ್ನು ಕಲಿಯಲು ಬೋಧನಾ ತಂತ್ರಗಳನ್ನು ಬೋಧಿಸುವುದು ಉದ್ದೇಶವಾಗಿದ್ದಲ್ಲಿ, ಪರಾ ಸಂಜ್ಞಾನದ ಕೌಶಲಗಳು (Meta-cognition; ಚಿಂತಿಸುವುದರ ಬಗ್ಗೆ ಚಿಂತಿಸುವುದು), ಉಪ–ವಾಚಿಕ ಅಭ್ಯಾಸ (sub-vocal Rehearsal;) ಮಾರ್ಗದರ್ಶಿತ ಅಭ್ಯಾಸ ಮತ್ತು ಸ್ವಯಂ ಮೌಲ್ಯಮಾಪನ' ಇವುಗಳು ಸೂಕ್ತವಾದವುಗಳು.

'ಆಶ್ಚರ್ಯವೆಂದರೆ, ಮೇಲೆ ಚರ್ಚಿಸಲಾದ ಶೈಲಿಗಳು ಮತ್ತು ವಿಧಾನಗಳನ್ನು ಪುರಾತನ ಭಾರತದಲ್ಲಿ ಬಳಸಲಾಗುತ್ತಿದ್ದ ಉಪಕ್ರಮಗಳಲ್ಲಿ ಸೇರಿಸಿಕೊಳ್ಳಲಾಗಿದೆ. 'ಗುರುಕುಲ ವ್ಯವಸ್ಥೆ'ಯಲ್ಲಿ ಮಕ್ಕಳ ಶಿಕ್ಷಣದ ಒಂದಲ್ಲ ಒಂದು ಹಂತದಲ್ಲಿ ಇವುಗಳನ್ನು ಯಾವುದಾದರೊಂದು ರೂಪದಲ್ಲಿ ಬಳಸಲಾಗುತ್ತಿತ್ತು. ಅವರಿಗೆ ಶಿಕ್ಷಣವೇ ಜೀವನ ಮತ್ತು ಜೀವನವೇ ಶಿಕ್ಷಣವಾಗಿತ್ತು. ಶಿಕ್ಷಣದ ಮುಖ್ಯ ಗುರಿ ಪಾರಲೌಕಿಕ ವಿಷಯಗಳತ್ತ ಕೇಂದ್ರೀಕೃತವಾಗಿದ್ದು 'ಚಿತ್ತ ವೃತ್ತಿ ನಿರೋಧ' ದಿಂದ (ಪ್ರಾಪಂಚಿಕ ವಸ್ತುಗಳಿಗೆ ಸಂಬಂಧಿಸಿದ ಎಲ್ಲ ಮಾನಸಿಕ ವ್ಯಾಪಾರಗಳಿಂದ ನಿವೃತ್ತಿ) ಪ್ರಾರಂಭವಾಗುತ್ತಿತ್ತು. ಮೇಲಿನ ಅಲೆಗಳಿಂದ ವಿಚಲಿತವಾಗದಂತೆ ಮನಸ್ಸನ್ನು ಅದರ ಅತ್ಯಂತ ಆಳದ ಪದರಗಳಿಗೆ ಇಳಿಯುವಂತೆ ಅದಕ್ಕೆ ಶಿಸ್ತನ್ನು ನೀಡಿ ಜ್ಞಾನದ ಸಂಪೂರ್ಣ ಅರಿವನ್ನು ಒದಗಿಸುವುದು ಶಿಕ್ಷಣದ ಕಾರ್ಯ. ಇದು ಪೂರ್ಣತಃ ವೈಯಕ್ತಿಕವಾದುದು. ಏಕೆಂದರೆ ಲೌಕಿಕ ಪ್ರಪಂಚದ ಭಯಗಳಿಂದ ಬಿಡುಗಡೆಗಾಗಿ ಮತ್ತು ಸ್ವಯಂ–ಪ್ರೇರಣೆಗಾಗಿ ಮುಕ್ತಿಯನ್ನು ಪಡೆಯುವುದು ಶಿಕ್ಷಣದ ಅಂತಿಮ ಗುರಿ. ಋಗ್ವೇದದ ಪ್ರಕಾರ, 'ತಪಶ್ಚರ್ಯ' ಕಲಿಕೆಯ ಒಂದು ವಿಧಾನ. ತಪಸ್ವಿಗಳ ತಪಶ್ಚರ್ಯೆ ಮತ್ತು ಏಕಾಗ್ರ ಧ್ಯಾನ. ಇವುಗಳನ್ನು ಆಧರಿಸಿದ ಉಚ್ಚತಮ ಸತ್ಯಾನ್ವೇಷಣೆಯನ್ನು ಇದು ಅವಲಂಬಿಸಿದೆ. ದಿನನಿತ್ಯವೂ ಗ್ರಂಥಗಳ ವೈಯಕ್ತಿಕ ಪಠಣ ಕಡ್ಡಾಯವಾಗಿತ್ತು. ಶಿಕ್ಷಕನು ಪಠಣ, ಶ್ರವಣ, ಮನನ ಮತ್ತು ನಿಧಿಧ್ಯಾಸನ'ಗಳನ್ನು ವಿದ್ಯಾರ್ಥಿಗಳು ಅಭ್ಯಸಿಸುವಂತೆ ಮಾಡುತ್ತಿದ್ದ ಶೈಲಿಯು ಆ ಕಾಲದ ಬೋಧನಾ ಶೈಲಿಗಳಲ್ಲಿ ಒಂದಾಗಿತ್ತು. ಈ ನುಡಿಗಟ್ಟುಗಳು ಕೆಳಗಿನ ಸಂಕ್ಷಿಪ್ತ ಅರ್ಥವನ್ನು ಹೊಂದಿವೆ.

ಪಠಣ: ಪ್ರಾತಃಕಾಲದಲ್ಲಿ ಪಕ್ಷಿಗಳ ಕಲರವ ಪ್ರಾರಂಭಗೊಳ್ಳುವುದಕ್ಕೆ ಮುಂಚೆ ಇದು ಶುರುವಾಗುತ್ತದೆ. (ತೈತ್ತಿರೀಯ ಉಪನಿಷದ್, ೧೫.4.3.1, ಪು.225) ಮತ್ತು ಮೂರು ಬಗೆಯ ಪಠಣಗಳನ್ನು ಅಭ್ಯಾಸ ಮಾಡಲಾಗುತ್ತಿತ್ತು.

**ಅ) ಒಂದೊಂದೇ ಪದಗಳನ್ನು ತೆಗೆದುಕೊಳ್ಳುವುದು**

**ಆ) ಪದಗಳನ್ನು ಜೋಡಿಯಾಗಿ ಪಠಿಸುವುದು**

**ಇ) ಪದಗಳನ್ನು ಸತತವಾಗಿ ಪಠಿಸುವುದು**

ಶ್ರವಣ: ವಿದ್ಯಾರ್ಥಿಗಳು 'ಕೇಳುವಂತೆ' ಮಾಡುವುದು ಇದರ ಶೈಲಿ. ಶಿಕ್ಷಕರ ಉಚ್ಚಾರಣೆ ಅತ್ಯಂತ ಮುಖ್ಯವಾಗಿತ್ತು. 'ಸ್ವರ'ವನ್ನು ಅಭ್ಯಸಿಸಬೇಕಾಗಿತ್ತಲ್ಲದೆ ಅದಕ್ಕೆ ಅತ್ಯಂತ ಮಹತ್ವ ಕೊಡಲಾಗುತ್ತಿತ್ತು.

ಮನನ: ಮಕ್ಕಳನ್ನು ಒಂದು ಬೋಧಿಸಿದ ವಿಷಯದ ಬಗ್ಗೆ ಚರ್ಚಿಸುವಂತೆ, ಚಿಂತನಶೀಲರಾಗುವಂತೆ ಮಾಡುವುದು ಇದರ ಶೈಲಿ. 'ಬೌದ್ಧಿಕ ಗ್ರಹಿಕೆ'ಯ ಬೆಳವಣಿಗೆಗೆ ಈ ಶೈಲಿ ಕೊಡುಗೆ ನೀಡಿತು.

Digitised by Bharatavani, CIIL

**ನಿಧಿಧ್ಯಾಸನ:** ವಿದ್ಯಾರ್ಥಿಗಳಿಗೆ 'ಧ್ಯಾನ'ವನ್ನು ಪರಿಚಯಿಸಲು ಈ ಶೈಲಿಯನ್ನು ಬಳಸಲಾಗುತ್ತಿತ್ತು. ಇಲ್ಲಿ ಮುಂದುವರೆಯಲು ಧ್ಯಾನದ ಅಭ್ಯಾಸವನ್ನು ಹೇಳಿಕೊಡಲಾಗುತ್ತಿದ್ದು ಮುಂದೊಂದು ಕಾಲಘಟ್ಟದಲ್ಲಿ ಇವುಗಳನ್ನು ಉಪಾಸನೆ ಎಂದು ಕರೆಯಲಾಗುತ್ತಿತ್ತು.

ವಿದ್ಯಾರ್ಥಿಗಳ ದೃಷ್ಟಿಯಿಂದ ಸ್ಮರಣಶಕ್ತಿ ಅತ್ಯಂತ ಉಪಯುಕ್ತವಾಗಿತ್ತು. ಸಂಕ್ಷಿಪ್ತವಾಗಿ, ಪುರಾತನ ಭಾರತದಲ್ಲಿ ಬಳಸಲಾಗುತ್ತಿದ್ದ ವಿವಿಧ ವಿಧಾನಗಳು ಮತ್ತು ಶೈಲಿಗಳು ಈ ಕೆಳಗಿನಂತಿವೆ.

1. **ನಿಗೂಢಾತ್ಮಕ ವಿಧಾನ**
2. **ಸೂತ್ರಾತ್ಮಕ ವಿಧಾನ**
3. **ವ್ಯುತ್ಪತ್ತಿ ವಿಷಯಕ ವಿಧಾನ**
4. **ಕಾಲ್ಪನಿಕ ಕಥನ ವಿಧಾನ**
5. **ಸಾದೃಶ್ಯಕ ವಿಧಾನ**
6. **ತಾತ್ವಿಕ ವಿಧಾನ**
7. **ಸಂಯೋಜನಾತ್ಮಕ ವಿಧಾನ**
8. **ಸ್ವ (ಆತ್ಮ) ಕಥನ ವಿಧಾನ**
9. **ತತ್ಪೂರ್ತ ಅಥವಾ ತಾತ್ಕಾಲಿಕ ವಿಧಾನ**
10. **ಪ್ರಗತಿಶೀಲ ವಿಧಾನ**

(ಆರ್. ಡಿ. ರಾನಡೆ, ಕನ್ಸ್‌ಟ್ರಕ್ಟಿವ್ ಸರ್ವೆ ಆಫ್ ಉಪನಿಷದಿಕ್ ಫಿಲಾಸಫಿ)

ಹಿಂದೆ ಬಳಸಲಾದ ಇತರ ಬೋಧನಾ ಶೈಲಿಗಳು ಇಂತಿವೆ.

1. ಉಪನ್ಯಾಸ ವಿಧಾನ
2. ಸಂಭಾಷಣಾ ವಿಧಾನ (ಒಬ್ಬೊಬ್ಬರಾಗಿ ಶಿಕ್ಷಕರೊಡನೆ ಸಂಭಾಷಿಸುವುದು)
3. ವಾದ ವಿವಾದ
4. ಚರ್ಚೆ
5. ಪ್ರಶ್ನೋತ್ತರಿ
6. ಪ್ರೇಕ್ಷಣೆ (ಕ್ಷೇತ್ರ ಪ್ರವಾಸ)
7. ನಿಗಮನ ಮತ್ತು ಆಗಮನ (ತಾರ್ಕಿಕ ರೀತಿಯಿಂದ ತೀರ್ಮಾನಿಸುವುದು ಮತ್ತು ಒರೆ ಹಚ್ಚುವುದು)
8. ಲಕ್ಷಣಾರ್ಥ ವಿಧಾನ
9. ಸಿದ್ಧಾಂತ (ಸಿದ್ಧಾಂತೀಕರಣ): ವಿಶೇಷಜ್ಞರು (ತರ್ಕದಿಂದ) ಪರೀಕ್ಷಣೆಯಿಂದ ಸ್ಥಾಪಿಸಿರುವ ಸತ್ಯ
10. ಸಮಸ್ಯೆ (ಸಮಸ್ಯಾ ಪರಿಹಾರ): ಸಂಶಯಿಸುವಿಕೆ ಅಥವಾ ಅನಿಶ್ಚಿತತೆ
11. ಪ್ರಯೋಜನ (ಉದ್ದೇಶ ನಿರೂಪಣೆ): ಒಂದು ಕಾರ್ಯವನ್ನು ಪ್ರಾರಂಭಿಸಿ ಅದರಿಂದ ಸಾಧಿಸಲು ಒಂದು ಉದ್ದೇಶ.
12. ಜಿಜ್ಞಾಸೆ (ಆವಿಷ್ಕಾರ): ತನಿಖೆ/ಸಂಶೋಧನೆ
13. ವ್ಯವಸಾಯ: ದೃಢ ನಿಶ್ಚಯ
14. ವಾಕ್ಯದೋಷ: ವಾಕ್ಕಿನಲ್ಲಿ ದೋಷ
15. ಅರ್ಥಾಪತ್ತಿ: ಪೂರ್ವಭಾವಿಯಾಗಿ ಊಹಿಸುವುದು – ಒಂದು ವಿಷಯದ ಘೋಷಣೆಯಿಂದ ಸೂಚಿತವಾಗುವುದರ ಕುರಿತ ಜ್ಞಾನಾರ್ಜನೆ.
16. ಚೌಚಲ: ವಿತಂಡ
17. ಅಹೇತು: ಕುತರ್ಕ
18. ಅತಿಲಾಭ: ಸಮಯೋಚಿತವಲ್ಲದ
19. ಉಪಲಾಭ: ಮುಂದಿಟ್ಟ ಕಾರಣದಲ್ಲಿ ದೋಷವನ್ನು ಕಾಣು
20. ಹೇತ್ವಂತರ: ಕಾರಣವನ್ನು ವರ್ಗಾಯಿಸುವುದು
21. ಅರ್ಥಾಂತರ: ವಿಷಯವನ್ನು ವರ್ಗಾಯಿಸುವುದು (ಒಂದಕ್ಕಿಂತ ಹೆಚ್ಚು ಅರ್ಥಗಳು)
22. ಪ್ರತಿಜ್ಞಾ ಹಾನಿ: ಪ್ರಮೇಯದ ತ್ಯಾಗ

(ಜೆ.ಪಿ. ಅವಸ್ಥಿ ಮತ್ತು ಮಣಿಶರ್ಮ, ಕ್ಲಾಸಿಕಲ್ ಇಂಡಿಯನ್ ಫಿಲಾಸಫಿಸ್ ಅಂಡ್ ದೇರ್ ಪ್ರಾಕ್ಟಿಸ್ ಇನ್ ಎಜುಕೇಷನ್)

ಬಹುತೇಕ ಆಧುನಿಕ ಶೈಲಿಗಳು ವೇದಕಾಲಗಳಲ್ಲಿ ಉಪಯೋಗಿಸಲಾಗುತ್ತಿದ್ದ ಉಪಕ್ರಮಗಳಲ್ಲಿ ಹುದುಗಿರುವುದನ್ನು ಕಾಣಬಹುದು. ಆದಾಗ್ಯೂ, ಪ್ರಚಲಿತದಲ್ಲಿರುವ ಬೋಧನಾ ಶೈಲಿಗಳ ಅರ್ಥವನ್ನು ಹೆಚ್ಚಿನ ಗ್ರಹಿಕೆಯ ಸಲುವಾಗಿ ಮತ್ತೊಮ್ಮೆ ಪುನರಾವಲೋಕಿಸಬಹುದು. ಶಿಕ್ಷಕನ ಕಾರ್ಯಾತ್ಮಕ ಮತ್ತು ವಿದ್ಯಾರ್ಥಿಯ ಕಾರ್ಯಾತ್ಮಕ ಶೈಲಿಗಳ ಅನ್ಯೋನ್ಯ ಕ್ರಿಯೆಯ ಶೈಲಿಯನ್ನು ಬೋಧನಾ ಶೈಲಿಯೆಂದು ಕರೆಯುವೆವು. ಪ್ರತಿಯೊಂದು ತರಗತಿ ಅಥವಾ ಮಕ್ಕಳ ಗುಂಪು ಹಲವು ಸಂಜ್ಞಾನಾತ್ಮಕ ಶೈಲಿಗಳನ್ನು ಹೊಂದಿರುವುದರಿಂದ (ಪ್ರತಿಯೊಬ್ಬರಿಗೂ ಅವರದೇ ಆದ ಶೈಲಿ) ಶಿಕ್ಷಕನು ಪ್ರತಿಯೊಂದು ಮಗುವಿನೊಡನೆ ತನ್ನದೇ ಆದ ಶೈಲಿಯಲ್ಲಿ ವ್ಯವಹರಿಸುವುದಕ್ಕೆ ಒಂದು ಮಿತಿಯಿದೆ. ವಿಶೇಷವಾಗಿ ಪರಿಮಿತವಾದ, ವ್ಯಕ್ತಿ ವೈಲಕ್ಷಣ್ಯಯುಳ್ಳ ಕಲಿಕಾ ಶೈಲಿಯೊಡನೆ ವ್ಯವಹರಿಸುವಾಗ ವಿವಿಧ ಶೈಕ್ಷಣಿಕ ಅನುಭವಗಳಿಂದ ಶಿಕ್ಷಕನು ಪ್ರಯೋಜನ ಹೊಂದುವ ಸಾಮರ್ಥ್ಯವು ಕುಂಠಿತವಾಗುತ್ತದೆ.

ಎಲ್ಲಾ ಪರಿಸ್ಥಿತಿಗಳಲ್ಲಿ ಎಲ್ಲ ಶಿಕ್ಷಕರಿಗೂ ಅನ್ವಯವಾಗುವ ಪರಿಣಾಮಕಾರಿ ಬೋಧನಾ ಶೈಲಿಯಿಲ್ಲ. ವಿಶೇಷಜ್ಞರು ಬಳಸುವ ಕೆಲವು ವಿಧಾನಗಳನ್ನು ತಜ್ಞರು ಮಾತ್ರ ಉಪಯೋಗಿಸಬಹುದು. ಕಾರಣ ಆ ವಿಧಾನವನ್ನು ಬಳಸಲು ತಜ್ಞರೇ ಆಗಿರಬೇಕು. ಶಿಕ್ಷಕನ ವ್ಯಕ್ತಿತ್ವಕ್ಕೆ ಸೂಕ್ತವಾದ ಆತನ ಹಿನ್ನೆಲೆಗೆ ಮತ್ತು ವಿದ್ಯಾರ್ಥಿಗಳಿಗೆ ಸರಿಯಾದ ಶೈಲಿಯನ್ನು ಕಂಡುಹಿಡಿಯಲು ಶಿಕ್ಷಕ ಪರೀಕ್ಷಣೆಯನ್ನು ಶಮ್ಸ್‌ಕಿ ಸೂಚಿಸಿದ್ದಾನೆ.

ಸಧ್ಯದಲ್ಲಿ ಪ್ರಚಲಿತದಲ್ಲಿರುವ ಆಧುನಿಕ ಬೋಧನಾ ಶೈಲಿಗಳು ಹೀಗಿವೆ:

Digitised by Bharatavani, CIIL

**ಉಪನ್ಯಾಸ:** ಈ ಶೈಲಿಯಲ್ಲಿ ಶಿಕ್ಷಕನು ಸಕ್ರಿಯವಾಗಿದ್ದು ಕಲಿಕಾರ್ಥಿಗಳು ನಿಷ್ಕ್ರಿಯರಾಗಿರುವರು ಹಾಗೂ ಇದು ಏಕಮುಖ ಸಂಭಾಷಣೆಯಾಗಿರುವುದು.

**ಉಪನ್ಯಾಸ–ಪ್ರಾತ್ಯಕ್ಷಿಕೆ:** ಇಲ್ಲಿ ಶಿಕ್ಷಕನು ಮುಖ್ಯವಾಗಿ ಕ್ರಿಯಾಶೀಲನಾಗಿದ್ದು ಮೂರ್ತದಿಂದ ಅಮೂರ್ತಕ್ಕೆ ಎನ್ನುವ ತತ್ವವನ್ನು ಅನ್ವಯಿಸಲಾಗುವುದು.

**ಐತಿಹಾಸಿಕ ವಿಧಾನ:** ಪ್ರಾರಂಭದಿಂದಲೇ ವಿಷಯವನ್ನು ವಿಕಸಿತಗೊಳಿಸಿ ವಿಭಿನ್ನ ವಿಕಸನ ಹಂತಗಳ ಮೂಲಕ ಕೊಂಡೊಯ್ಯಲಾಗುವುದು.

**ಸ್ವಯಂ ಅನ್ವೇಷಣ (ಹ್ಯೂರಿಸ್ಟಿಕ್) ವಿಧಾನ:** ಪ್ರೊ॥ ಆರ್ಮಸ್ಟ್ರಾಂಗ್ ಎಚ್.ಇ. ಇವರು ಪ್ರಾರಂಭಿಸಿದ ವಿಧಾನ. ವಿದ್ಯಾರ್ಥಿ ತನ್ನ ಸ್ವಂತ ವೀಕ್ಷಣೆಗಳಿಂದಲೂ ಮತ್ತು ಪ್ರಯೋಗಗಳಿಂದಲೂ ತಾನೇ ಕಲಿಯುವುದರಿಂದ ಸಮಸ್ತವನ್ನೂ ಅನ್ವೇಷಿಸಿಕೊಳ್ಳಬೇಕು ಎಂಬ ವಿಚಾರವನ್ನು ಒಳಗೊಳ್ಳುವುದು.

**ನಿಯೋಜಿತ ಕಾರ್ಯವಿಧಾನ:–** ವಿದ್ಯಾರ್ಥಿಗಳಿಗೆ ಪ್ರಶ್ನೆಗಳು, ಪರಾಮರ್ಶೆಗಳು ಇತ್ಯಾದಿಗಳನ್ನ ಒಳಗೊಳ್ಳುವ ಸೂಚನೆಗಳುಳ್ಳ ಹಾಳೆಯೊಂದಿಗೆ ಗೃಹ ಮತ್ತು ಶಾಲಾ ಕಾರ್ಯವನ್ನು ವಹಿಸಲಾಗುವುದು. ಇತರ ತರಗತಿ/ಶಾಲೆಯ ಸದಸ್ಯರೊಂದಿಗೆ ವಿದ್ಯಾರ್ಥಿಯ ಸ್ಥಾನವನ್ನು ತಿಳಿಯಲು 'ಪ್ರಗತಿ ಪತ್ರ'ದಲ್ಲಿ ಇವುಗಳಿಂದ ಪಡೆದ ಫಲಿತಾಂಶಗಳನ್ನು ದಾಖಲಿಸಲಾಗುವುದು.

**ಪ್ರಾಯೋಜನಾ ವಿಧಾನ:–** ಶಾಲೆಯಲ್ಲಿ ಅಥವಾ ಬಾಹ್ಯದಲ್ಲಿ ವಿದ್ಯಾರ್ಥಿಯು ಕೈಗೊಳ್ಳಬಹುದಾದ ಚಟುವಟಿಕೆಯೊಂದಕ್ಕೆ ಸಂಬಂಧಿಸಿದಂತೆ ಸಮಗ್ರವಾದ ಘಟಕವೊಂದನ್ನು ನಿರ್ಮಿಸುವುದು. ಇಲ್ಲಿ 'ಮಾಡುವುದರಿಂದ ಕಲಿಯುವುದು' ಮತ್ತು 'ಬದುಕುವುದರಿಂದ ಕಲಿಯುವುದು' ಎಂಬ ಎರಡು ಮೂಲಭೂತ ತತ್ವಗಳು ಅಡಕಗೊಂಡಿವೆ. ಈ ವಿಧಾನವನ್ನು ಸ್ಟೀವನ್‌ಸನ್. ಜೆ.ಎ. – ಇವರು ಪ್ರಸ್ತುತಪಡಿಸಿದರು.

**ಚರ್ಚಾ ವಿಧಾನ:–** ಚರ್ಚೆಯು ಸಂಕ್ಷಿಪ್ತ ಪರಿಚಯದಿಂದ ಶಿಕ್ಷಕನಿಂದ ಪ್ರಾರಂಭಿಸಲ್ಪಡುವುದು ಇಲ್ಲವೇ ವಿದ್ಯಾರ್ಥಿಗಳು ಗುಂಪುಗಳಲ್ಲಿ ಕೂಡಿ ಶಿಕ್ಷಕನು ನೀಡಿದ ಸಂಕ್ಷಿಪ್ತ ಪರಿಚಯದ ಆಧಾರದ ಮೇಲೆ ಸೂಚಿಸಲಾದ ಗುರಿ ತಲುಪಲು ಚರ್ಚೆಯನ್ನು ಮುಂದುವರೆಸುವರು.

ಪರಾ–ಸಂಜ್ಞಾನಾತ್ಮಕ ಉಪಕ್ರಮಗಳು (Meta Cognitive Approaches)

ಆಲೋಚಿಸುವ ಬಗ್ಗೆಯೇ ಆಲೋಚಿಸುವ ವಿಧಾನಗಳನ್ನು ಪ್ರಸ್ತುತಪಡಿಸಲಾಗುತ್ತದೆ. ಮೂಲಭೂತ ಪುನರಾವೃತ್ತಿ ತಂತ್ರಗಳು, ಪ್ರಚೋದನೆ, ಸ್ವಯಂ–ಮೌಲ್ಯಮಾಪನೆ, ಮೌಲ್ಯಮಾಪನೆಯ ಫಲಿತಾಂಶಗಳ ಬಗ್ಗೆ ಹಿನ್ನುಣಿಕೆ, ಗ್ರಹಿಕೆಯ ಮೇಲ್ವಿಚಾರಣಾ ಕಾರ್ಯತಂತ್ರದ ಸ್ಥಾನಾಂತರಣ ಇವೇ ಮುಂತಾದ ಕಾರ್ಯತಂತ್ರಗಳು ಈ ಉಪಕ್ರಮಗಳಲ್ಲಿ ಒಳಗೊಂಡಿದೆ.

ಇವು ಮತ್ತು ಇದಕ್ಕೆ ಸಮಾನವಾದವುಗಳನ್ನು 'ಬೋಧನಾ ಶೈಲಿ'ಗಳೆಂದು ಕರೆಯುವರು.

ಮೂಲ: ಪ್ರೊ. ಎಸ್. ರಾಮಮೂರ್ತಿ
ಅನು: ಚಂದ್ರಶೇಖರ ಬಿ.ಎಂ.

## ಬೋಧನಾ ಸಂಚಯಗಳು

ಬೋಧನಾ ಸಂಚಯವು (Teaching Modules) ಪಠ್ಯ ವಿಷಯ ಮತ್ತು ಬೋಧನಾ ತಂತ್ರವನ್ನು ಹೊಂದಿರುವ ಒಂದು ಘಟಕ. ಸಾಮಾನ್ಯವಾಗಿ ಅನೇಕ ದೇಶಗಳಲ್ಲಿ ಇಂತಹ ಸಂಚಯಗಳನ್ನು ಭಾಷಾ ಪಠ್ಯವನ್ನು ವ್ಯವಸ್ಥೆಗೊಳಿಸಿ ಬೋಧನೆಗೆ ಸಿದ್ಧಪಡಿಸುವ ಪರಿಪಾಠವಿದೆ. ಇದರಿಂದಾಗಿ ಅನೇಕ ಕೋರ್ಸ್ ಪುಸ್ತಕಗಳನ್ನೂ ಘಟಕ ಮಾದರಿಗೆ ಬದಲಾಗಿ ಸಂಚಯ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗುತ್ತಿದೆ.

ಸಂಚಯ ಅಥವ ಮಾಡ್ಯೂಲ್ ಎಂದರೇನು? ಇದು ನೇರವಾಗಿ ಭಾಷಾ ಕಲಿಕೆಗೆ ಮತ್ತು ಇತರ ಕಲಿಕೆಗೆ ಸಂಬಂಧಪಟ್ಟಿದೆ ಎನ್ನಬಹುದು. ಬೇರೆ ಬೋಧನಾ ವಿಷಯಗಳಿಗೂ ಬೋಧನಾ ಸಂಚಯಗಳನ್ನು ರೂಪಿಸುತ್ತಾರೆ. ಇದು ಸಾಮಾನ್ಯವಾಗಿ ಬದಲಾಯಿಸಿಕೊಳ್ಳಲು ಸಾಧ್ಯವಾಗುವ ರೀತಿಯ ಪಠ್ಯ ಎಂಬ ಆಲೋಚನೆಯೊಂದಿಗೆ ಸಂಬಂಧವನ್ನು ಹೊಂದಿದೆ. ಶಿಕ್ಷಣದ ಬಗ್ಗೆ ಕಾಳಜಿ ಹೊಂದಿರುವ ಎಲ್ಲರಿಗೂ ಇದರ ಅವಶ್ಯಕತೆ ಇದೆ. ಪ್ರಾಥಮಿಕವಾಗಿ ಕಲಿಯುವವರು, ಶಿಕ್ಷಕರು, ಅಲ್ಲದೆ ಪೋಷಕರು ಮತ್ತು ಆಡಳಿತಗಾರರು, ಒಟ್ಟಿನಲ್ಲಿ ಸಂಪೂರ್ಣ ಸಮಾಜಕ್ಕೇ ಇದರ ಅವಶ್ಯಕತೆ ಇದೆ. ಇಂತಹ ಸಂಚಯಗಳು ಕಲಿಕೆಯ ನೈಜ ಉದ್ದೇಶಗಳನ್ನು ಪ್ರಸ್ತುತಪಡಿಸುವ ಒಂದು ಚೌಕಟ್ಟನ್ನು ಹೊಂದಿರುತ್ತವೆ.

ಮೂಲತಃ ಬೋಧನಾ ಸಂಚಯಗಳನ್ನು ಬೋಧಕರು ತಾವು ಬೋಧಿಸಬೇಕಾದ ಕೋರ್ಸ್‌ಗಳಿಗೆ ಅಗತ್ಯವಾದ ರೀತಿಯಲ್ಲಿ ರೂಪಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ಸಂಚಯಗಳಲ್ಲಿ ವಸ್ತುವಿಷಯ, ಅಳವಡಿಸಿಕೊಳ್ಳಬೇಕಾದ ಚಟುವಟಿಕೆಗಳು, ಮತ್ತು ಆಕರ ಗ್ರಂಥಗಳ ಪರಿಚಯಗಳಿದ್ದು, ಇವುಗಳನ್ನು ಉಪಯೋಗಿಸುವುದಲ್ಲದೆ, ಇನ್ನೂ ಹೆಚ್ಚಿಗೆ ವಿಷಯ ಸಂಗ್ರಹಿಸುವವರಿಗೆ ಮಾರ್ಗದರ್ಶನವನ್ನು ನೀಡುತ್ತವೆ. ಹೀಗೆ ಒಂದು ಬೋಧನಾ ಸಂಚಯವು ಜ್ಞಾನ, ತಾಂತ್ರಿಕತೆ ಮತ್ತು ವಸ್ತು ವಿಷಯಗಳನ್ನೊಳಗೊಂಡಿರುತ್ತದೆ. ಒಂದು ಸಂಚಯವನ್ನು ಒಂದೇ ತರಗತಿಯಲ್ಲಿ ಮುಗಿಸಬೇಕೆಂಬುದೇನೂ ಇಲ್ಲ. ಶಿಕ್ಷಕರು ಅದರ ವಸ್ತವಿಷಯ ಮತ್ತು ಪ್ರಮಾಣಕ್ಕನುಗುಣವಾಗಿ ತಮ್ಮ ಬೋಧನಾ ತರಗತಿಗಳ ಸಂಖ್ಯೆಯನ್ನು ನಿರ್ಧರಿಸಿಕೊಳ್ಳಬಹುದು.

ಸಂಚಯದ ಪಠ್ಯ ವಿಷಯವು ಇಷ್ಟೇ ಇರಬೇಕು ಎಂದು

Digitised by Bharatavani, CIIL

ಗೊತ್ತುಪಡಿಸಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ವಿಷಯದ ಹಲವು ಮಜಲುಗಳನ್ನು ಕಾಲ ಕಾಲಕ್ಕೆ, ಮಕ್ಕಳ ವಯಸ್ಸಿಗೆ ತಕ್ಕ ರೀತಿಯಲ್ಲಿ ಮತ್ತು ಶಾಲೆಯ ಮಟ್ಟಕ್ಕನುಗುಣವಾಗಿ ಬದಲಾಯಿಸುತ್ತಾ ಹೋಗಬೇಕಾಗುತ್ತದೆ. ಇದು ಭಾಷಾಬೋಧನೆಯ ಉದ್ದೇಶದ ವಿವರಣೆಯನ್ನು ಕೊಟ್ಟು ಅದು ಮಾನ್ಯತೆ ಪಡೆಯುವಂತೆಯೂ, ವಿವಿಧ ಶಿಕ್ಷಣ ವಿಧಾನಗಳೊಂದಿಗೆ ಹೋಲಿಸುವಂತೆಯೂ, ಮತ್ತು ಅವುಗಳ ಮೌಲ್ಯಮಾಪನವನ್ನು ಮಾಡಲು ಅನುಕೂಲರವಾಗಿಯೂ ಇರುತ್ತದೆ.

- ಇಂತಹ ಪಠ್ಯ ವಿಷಯದ ಒಂದು ಭಾಗವೇ 'ಸಂಚಯ'.
- ಇದೊಂದು ಸ್ವತಂತ್ರ ವಿಷಯ ವಿಭಾಗ. ಇದರ ಉದ್ದೇಶಗಳು ಒಂದು ಮಿತಿಗೆ ಒಳಪಟ್ಟಿರುವುದರಿಂದ ಮತ್ತು ಅವುಗಳ ಈಡೇರಿಕೆಯು ಕಲಿಯುವವರಿಗೆ ಸಂಬಂಧಪಟ್ಟಿರುವುದರಿಂದ, ಇದನ್ನು ಶಾಲೆಯು ಮೌಲ್ಯಮಾಪನಕ್ಕೆ ಒಳಪಡಿಸಿ ನಂತರ ಪ್ರಮಾಣಪತ್ರವನ್ನು ಕೊಡಬೇಕಾಗುತ್ತದೆ. ಇಂತಹ ಪ್ರಮಾಣ ಪತ್ರವನ್ನು ಘಟಕ ಅಂಕ ವ್ಯವಸ್ಥೆಗೆ (ಯೂನಿಟ್–ಕ್ರೆಡಿಟ್ ಸಿಸ್ಟಂ) ಉಪಯೋಗಿಸಬಹುದು. ಇದಾದ ನಂತರ ಕಲಿತ ವಿದ್ಯಾರ್ಥಿಯು ತಾನು ಗಳಿಸಿದ ಭಾಷಾ ಯೋಗ್ಯತೆಯನ್ನು ಪ್ರದರ್ಶಿಸಬಹುದು.
- ಸಂಚಯಗಳು ಬೋಧನಾ ವಿಧಾನಗಳಿಗೆ ಹೋಲಿಸಿದರೆ ಅವು ಸ್ವತಂತ್ರವಾದವುಗಳು. ಏಕೆಂದರೆ, ಸಂಚಯಗಳಲ್ಲಿ ಕಲಿಕೆಯ ಪ್ರಾರಂಭದಲ್ಲಿ ಕಲಿಕೆಯ ಹಂತಗಳ ಒಂದು ಕ್ರಮಾನುಗತಿಯ ಕಲ್ಪನೆ ಮತ್ತು ಅದಕ್ಕೆ ಬೇಕಾದ ಪುನರ್ಕಲಿಕೆಗಳು, ಕಲಿಕೆಯ ವಿಧಾನಗಳು ಇರುತ್ತವೆ. ಆದ್ದರಿಂದ ಮೂಲ, ಮಧ್ಯಮ ಮತ್ತು ಮುಂದುವರೆದ ಸಂಚಯಗಳ 'ಸಮಗ್ರತೆ'ಯ ಬಗ್ಗೆ ಮಾತನಾಡುವುದು ನ್ಯಾಯಸಮ್ಮತವಾದುದು. ಸಂಚಯದ ಮೂಲ ಆಲೋಚನೆ ಎಂದರೆ ಬೋಧನೆಯ ಸನ್ನಿವೇಶಕ್ಕೆ ಅನುಗುಣವಾಗಿ ಎಲ್ಲಾ ಹಂತಗಳಲ್ಲೂ ವಿವಿಧ ರೀತಿಯ ಆಯ್ಕೆಗೆ ಮತ್ತು ಅವುಗಳನ್ನು ಏಕೀಭವಿಸುವುದಕ್ಕೆ ಅವಕಾಶಗಳಿರಬೇಕು ಎಂಬುದು.
- ಸಂಚಯಗಳು ಪಠ್ಯದ ತಿರುಳು ಭಾಗಕ್ಕೆ ಸೀಮಿತವಾಗಿವೆ. ಅದನ್ನು ಮನದಟ್ಟು ಮಾಡಿಕೊಳ್ಳಲು ಹಾಗೂ ಉಪಯೋಗಿಸಲು ಸಾಧ್ಯ. ಬೋಧನಾ ಸಂಚಯಗಳಲ್ಲಿ ಹಲವು ವಿಧಗಳಿವೆ. ಉದಾಹರಣೆಗೆ: ಅಡ್ಡ ಪಠ್ಯದ ಸಂಚಯ (ಕ್ರಾಸ್–ಕರಿಕ್ಯುಲರ್ ಮಾಡ್ಯೂಲ್ಸ್), ಶಾಲೆಯ ಅನೇಕ ವಿಷಯಗಳನ್ನೊಳಗೊಂಡಂತೆ, ಯೋಜನಾ ಸಂಚಯ (ಪ್ರಾಜೆಕ್ಟ್ ಮಾಡ್ಯೂಲ್ಸ್), ಒಂದು ಗೊತ್ತಾದ ಯೋಜನೆಯನ್ನು ಗುರಿಯಾಗಿಟ್ಟುಕೊಂಡು ಹಾಗೂ ಪರಿಹಾರ ಅಥವ ಅಭಿವೃದ್ಧಿ ಸಂಚಯಗಳು (ರೆಮಿಡಿಯಲ್ ಅಥವ ಡೆವಲಪ್ ಮೆಂಟ್).

**ಸಂಚಯಗಳಿಗೂ ಘಟಕಗಳಿಗೂ ಇರುವ ವ್ಯತ್ಯಾಸವೇನು?**

- ಸಂಚಯವು ಪಠ್ಯದ ಒಂದು ಗೊತ್ತಾದ ಭಾಗದಲ್ಲಿ ವಿದ್ಯಾರ್ಥಿಗಳ ಯೋಗ್ಯತೆಯನ್ನು ವರ್ಧಿಸುವ ಗುರಿಯನ್ನು ಹೊಂದಿರುತ್ತದೆ.
- ಈ ಯೋಗ್ಯತೆಯನ್ನು ಒಂದು ಸ್ಪಷ್ಟವಾದ ಮತ್ತು ನಿರ್ಧಾರಿತ ಕಾಲದಲ್ಲಿ ಗಳಿಸುವ ಗುರಿಯನ್ನು ಸಂಚಯವು ಹೊಂದಿರುತ್ತದೆ. (ಒಂದು ಸಂಚಯವು 20 ರಿಂದ 30 ಗಂಟೆಯ ಅವಧಿಯನ್ನು ಹೊಂದಿರುತ್ತದೆ). ಈ ಸಮಯ ಮಿತಿಯು ಸಂಚಯದ ವ್ಯವಸ್ಥೆಯ ಒಂದು ಮುಖ್ಯವಾದ ಲಕ್ಷಣ. ಏಕೆಂದರೆ ಸಮಯ, ಮಾನವ ಮತ್ತು ಭೌತಿಕ ಸಂಪನ್ಮೂಲಗಳನ್ನು ಪರಿಗಣಿಸಿ, ನಿರೀಕ್ಷಿತ ಫಲಿತಾಂಶಕ್ಕಾಗಿ ಸಂಪೂರ್ಣ ಪಠ್ಯ ವಿಷಯದ ಅದರ ಸುತ್ತಲೂ ರಚಿಸಲಾಗಿರುತ್ತದೆ. ಇದು ಸ್ವಾಭಾವಿಕವಾಗಿ ಸ್ವಲ್ಪ ಗಡಸಾಗಿರಬಹುದು. ಆದ್ದರಿಂದಲೇ ಸಂಚಯದ ವ್ಯವಸ್ಥೆಯಲ್ಲಿ ಸತತವಾದ ಅವಲೋಕನ ಮತ್ತು ಮಾರ್ಗದರ್ಶನಗಳು ಕಲಿಕೆಯು ಚನ್ನಾಗಿ ಮುಂದುವರೆಯಲು ಅಗತ್ಯ.

ಘಟಕವು ಒಂದು ನಿರ್ದಿಷ್ಟ ಉದ್ದೇಶದ ಆಧಾರವನ್ನು ಹೊಂದಿರುತ್ತದೆ (ಅದು ವ್ಯಾಕರಣ, ಶಬ್ದ ಭಂಡಾರದ ಬೆಳವಣಿಗೆ, ಕೌಶಲ ಮುಂತಾದವುಗಳ ಅಭಿವೃದ್ಧಿಯ ಗುಣಗಳನ್ನು ಹೊಂದಿರಬಹುದು). ಸಂಚಯಗಳು ಇನ್ನೂ ಉನ್ನತ ಗುರಿಗಳನ್ನು ಹೊಂದಿರುತ್ತವೆ. ಅವು ಕೇವಲ ವ್ಯಾಕರಣ, ಶಬ್ದ ಭಂಡಾರದ ಬೆಳವಣಿಗೆ, ಕೌಶಲ ಮುಂತಾದವುಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಘಟಕಗಳು ಸಾಮಾನ್ಯವಾಗಿ ಸಂಚಯದ ಒಂದು ಭಾಗವಾಗಿರುತ್ತವೆ.

**ಸಂಚಯಗಳು ಯಾವುದನ್ನು ಗುರಿಯಾಗಿಸಿಕೊಳ್ಳಬೇಕು?**

- ಅನುಭವಗಳ ವೃತ್ತ: ಕುಟುಂಬ...ಕೆಲಸ ಶಾಲಾ ಜೀವನ..
- ಸಮಗ್ರಕೆಲಸಗಳು: ವಿವರಿಸುವುದು ವಿವರಿಸಿ ಹೇಳುವುದು .. ಚರ್ಚಿಸುವುದು ..
- ಸಂವಹನ ಚಟುವಟಿಕೆ: ಓದುವುದು, ಮೌಖಿಕ ಸಂವಾದ .. ಮಧ್ಯಪ್ರವೇಶಮಾಡಿ ಮಾತನಾಡುವುದು (ವಿವರಣೆ ಕೊಡುವುದು, ಭಾಷಾಂತರಗೊಳಿಸುವುದು )
- ವಿಷಯಗಳು: ಜನಾಂಗವಾದ; ಜಾಹಿರಾತು ಕೊಡುವುದು, ಹೊಸ ತಂತ್ರಜ್ಞಾನ.
- ವೃತ್ತಿ ಯೋಗ್ಯತೆ: ಸೂಚನೆಗಳನ್ನು ಕೊಡುವುದು ಟೆಲಿಫೋನಿನಲ್ಲಿ ಮಾತನಾಡುವುದು, ಇಂಟರ್ ನೆಟ್ ಉಪಯೋಗಿಸುವುದು.
- ಪಠ್ಯ ಪುಸ್ತಕ ವಿಧಗಳು: ಕಾದಂಬರಿಗಳು, ನಾಟಕಗಳು, ಕವನಗಳು.
- ಭಾಷಾ ಸಂಶೋಧನೆ: ಪದಗಳು, ಶಬ್ದಕೋಶ, ವಾಕ್ಯ ರಚನೆ.
- ಮೇಲಿನ ವಿಷಯಗಳ ಯಾವುದಾದರೂ ಸಂಯೋಗವೂ ಆಗಬಹುದು.

Digitised by Bharatavani, CIIL

### ಸಂಚಯದ ಮೌಲ್ಯಮಾಪನ ಹೇಗೆ?

ಈ ಹಂತದಲ್ಲೇ ಸಂಚಯಕ್ಕೂ ಘಟಕಕ್ಕೂ ಇರುವ ಮುಖ್ಯ ಲಕ್ಷಣಗಳ ಅನುಭವವಾಗುವುದು. ಒಂದು ಸಂಚಯದಲ್ಲಿ ಘಟಕದ ಕೊನೆಯಲ್ಲಿ ಕಲಿಯುವವರ ಕಲಿಕೆಯ ಮಟ್ಟವನ್ನು ಪರೀಕ್ಷಿಸಲಾಗುತ್ತದೆ. ಸಂಚಯದ ಕೊನೆಯಲ್ಲಿ ವಿದ್ಯಾರ್ಥಿಗಳು ಕಲಿಕೆಗೆ ಸಂಬಂಧಪಟ್ಟಂತೆ ಮತ್ತು ಸಂಚಯದ ಉದ್ದೇಶಗಳಿಗನುಗುಣವಾಗಿ ತಮ್ಮ ಒಟ್ಟಾರೆ ಯೋಗ್ಯತೆಯನ್ನು ತೋರಿಸಬೇಕಾಗುತ್ತದೆ.

### ಉಪಯೋಗಗಳು:

ಒಂದು ವಿಷಯದಲ್ಲಿ ವಿದ್ಯಾರ್ಥಿಯು ಪ್ರಾವೀಣ್ಯತೆಯನ್ನು ಗಳಿಸಿಕೊಳ್ಳಲು ಬೋಧನಾ ಸಂಚಯಗಳು ಅವಕಾಶವನ್ನು ಮಾಡಿಕೊಡುತ್ತವೆ. ಮನೆಯನ್ನು ಹಂತ ಹಂತವಾಗಿ ನಿರ್ಮಾಣ ಮಾಡುವ ರೀತಿಯಲ್ಲಿ ಒಂದು ಸರಿಯಾಗಿ ಯೋಜಿತವಾದ ಸಂಚಯವು ತಾರ್ಕಿಕ ರೀತಿಯಲ್ಲಿ ನಿರ್ಮಾಣವಾಗಿರುತ್ತದೆ. ಅವು ವಿದ್ಯಾರ್ಥಿಗಳಲ್ಲಿ ಹಲವು ಗೊತ್ತಾದ ಕೌಶಲಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಅವಕಾಶಗಳನ್ನೂ ಮತ್ತು ಅವುಗಳನ್ನು ಮುಂದುವರೆಸಿಕೊಂಡುಹೋಗಿ ಸುಧಾರಣೆ ಮಾಡಿಕೊಳ್ಳುವುದಕ್ಕೂ ಸಹಾಯ ಮಾಡುತ್ತವೆ.

### ಪ್ರಾಮುಖ್ಯತೆ

ಶೈಕ್ಷಣಿಕ ಸಂಚಯಗಳ ಉಪಯೋಗವು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಕಾರಾತ್ಮಕವಾಗಿದೆ. ಅಂತಹುದೇ ಸಂಚಯಗಳು ವಿವಿಧ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ಒದಗಿಸುತ್ತವೆ ಮತ್ತು ವಿಷಯವನ್ನು ಚನ್ನಾಗಿ ತಿಳಿದುಕೊಳ್ಳಲು ಸಹಾಯಕವಾಗಿವೆ. ಶಿಕ್ಷಕರು ಪ್ರಾಮಾಣಿತ ಪರೀಕ್ಷೆಗಳಿಗೆ ಒತ್ತು ಕೊಡುವುದಕ್ಕೆ ಬದಲು ಸಂಚಯಗಳನ್ನು ಉಪಯೋಗಿಸುವುದರ ಮೂಲಕ ಮತ್ತು ಸೃಜನಾತ್ಮಕವಾಗಿ ತಮ್ಮ ಪಾಠ ಯೋಜನೆಯನ್ನು ಮಾಡಿಕೊಳ್ಳುವುದರ ಮೂಲಕ ಮೌಲ್ಯಮಾಪನವನ್ನು ಕೈಗೊಳ್ಳಬಹುದು. ಅದೂ ಅಲ್ಲದೆ ಸಂಚಯಗಳ ಉಪಯೋಗದಿಂದ ಎಲ್ಲಾ ವಿದ್ಯಾರ್ಥಿಗಳೂ ಒಂದು ಸರಿಯಾದ ಪ್ರಾಮಾಣಿತ ಹಂತವನ್ನು ತಲಪಿದ್ದಾರೆ ಎಂದು ತಿಳಿದುಕೊಳ್ಳಬಹುದು.

### ಪಾಠ ಯೋಜನೆ:

ಸಂಚಯಕ್ಕೆ ತಕ್ಕಂತೆ ಪಾಠ ಯೋಜನೆಯನ್ನು ಸಿದ್ಧಪಡಿಸುವುದು ಸುಲಭ ಕೆಲಸವಲ್ಲ. ಮೇಲೆ ಹೇಳಿದ ಎಲ್ಲಾ ಅಂಶಗಳನ್ನೂ ಪಾಠ ಯೋಜನೆ ಒಳಗೊಂಡಂತೆ ಮಾಡುವುದರ ಜೊತೆಗೆ, ಶಿಕ್ಷಕರು ಕೈಬರಹ, ವ್ಯಾಕರಣ, ಕಾಗುಣಿತ, ಕಂಪ್ಯೂಟರ್ ಉಪಯೋಗ, ಓದುವುದು, ಮಾತನಾಡುವುದು ಮತ್ತು ಕೇಳಿಸಿಕೊಳ್ಳುವುದನ್ನೂ ಪರಿಗಣಿಸಬೇಕಾಗುತ್ತದೆ.

**–ಡಾ. ರಾಘವೇಂದ್ರರಾವ್ ಎಚ್.ಎಸ್.**

## ಬೌದ್ಧ ಶಿಕ್ಷಣ ಪದ್ಧತಿ

ಭಾರತದಲ್ಲಿ ಕ್ರಿಸ್ತನ ಜನ್ಮಕ್ಕೆ ಸುಮಾರು ಆರು ಶತಮಾನಗಳ ಹಿಂದೆ ಸಮಾಜದ ವಿವಿಧ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವೇದ ವೇದಾಂಗ, ಆಯುರ್ವೇದ ವಿಜ್ಞಾನ, ಅಗತ್ಯವಾದ ಕಲೆ ಮತ್ತು ಕರಕೌಶಲಗಳನ್ನು ಹೇಳಿಕೊಡುತ್ತಿದ್ದ ವೈದಿಕ ಶಾಲೆಗಳ ಜಾಲವೇ ಅಸ್ತಿತ್ವದಲ್ಲಿತ್ತು. ಈ ವೈದಿಕ ಶಾಲೆಗಳನ್ನು ನಿರ್ವಹಿಸುತ್ತಿದ್ದವರು ಪುರೋಹಿತ ವರ್ಗಕ್ಕೆ ಸೇರಿದ ಬ್ರಾಹ್ಮಣರು. ವಿದ್ಯಾರ್ಥಿಗಳಿಗೆ ಬೋಧಿಸುವದಷ್ಟೇ ಅಲ್ಲದೆ ಸಮಾಜದ ವಿವಿಧ ವರ್ಗಗಳಿಗೆ ವೇದ ಧರ್ಮದ ವ್ಯಾಖ್ಯಾನವನ್ನು ನೀಡುತ್ತಿದ್ದರು. ರಾಜನಿಗೆ ತನ್ನ ರಾಜ್ಯದ ಆಡಳಿತದಲ್ಲಿ ಸಲಹೆಯನ್ನು ಕೊಡಲು ಪುರೋಹಿತನ ಅಗತ್ಯವಿದ್ದಂತೆ ಪ್ರಜೆಗಳಿಗೂ ತಾವು ಆಚರಿಸಬಯಸುವ ಯಾವುದೇ ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭಗಳಿಗೆ ಆತನ ಅಗತ್ಯವಿತ್ತು. ಬೃಹತ್ತಾದ ಬ್ರಾಹ್ಮಣಗಳಲ್ಲಿ ಪ್ರತಿಬಿಂಬಿತವಾಗಿರುವ ಪುರೋಹಿತ ವರ್ಗದ ಪ್ರಧಾನ್ಯಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಅರಣ್ಯಗಳು ಮತ್ತು ಉಪನಿಷತ್ತುಗಳಿಗೆ ಕಾರಣವಾಯಿತು. ಆದರೆ, ಈ ಪ್ರತಿಕ್ರಿಯೆ ಬಾಹ್ಮಣ ವರ್ಗದೊಳಗಿಂದಲೆ ಉದ್ಭವಿಸಿತ್ತು. ಶೀಘ್ರದಲ್ಲೇ ಪ್ರಾಣಿ ಬಲಿಯನ್ನೊಳಗೊಂಡಂತೆ ವಿಸ್ತಾರವಾದ ಯಜ್ಞ ಸಂಬಂಧಿ ಮತಾಚರಣೆಯ ವಿರುದ್ಧ ಆರ್ಯರ ಸಮಾಜದಲ್ಲಿ ಪ್ರಧಾನತೆಯಲ್ಲಿ ಬ್ರಾಹ್ಮಣರಿಗೆ ನಂತರ ಬರುವ ಕ್ಷತ್ರಿಯ ವರ್ಗದಿಂದ ಪ್ರತಿಕ್ರಿಯೆ ಉಂಟಾಯಿತು. ಮಹಾವೀರ ಹಾಗೂ ಗೌತಮ ಬುದ್ಧರ ನೇತೃತ್ವದಲ್ಲಿ ಪ್ರಾರಂಭವಾದ ಪ್ರತಿಭಟನೆಯು ಎರಡು ವಿರೋಧಿ ಪಂಥಗಳ ಜೈನ ಹಾಗೂ ಬೌದ್ಧ ಉಗಮಕ್ಕೆ ದಾರಿಮಾಡಿಕೊಟ್ಟಿತು. ನಂತರದಲ್ಲಿ ಜೈನಧರ್ಮಕ್ಕಿಂತಲೂ ಬೌದ್ಧಧರ್ಮವು ಭಾರತದಲ್ಲಿ ಬ್ರಾಹ್ಮಣವಾದದ ಆಧಾರಸ್ತಂಭಗಳನ್ನೇ ಅಲುಗಾಡಿಸಿತ್ತು.

ಕ್ರಿಸ್ತಪೂರ್ವ 566ರಲ್ಲಿ ರಾಜಕುಟುಂಬದಲ್ಲಿ ಜನಿಸಿ ಬುದ್ಧನು ಹಿಂದಿನ ಋಷಿಮುನಿಗಳು ಆಚರಿಸಿದ ತಪಸ್ಸು ಧ್ಯಾನಗಳ ವಿಧಾನವನ್ನೇ ಅನುಸರಿಸಿ ಬಿಹಾರದ ಬೋಧಗಯಾ ಎಂಬಲ್ಲಿ ಕ್ರಿ.ಪೂ. 531ರಲ್ಲಿ ಜ್ಞಾನೋದಯವನ್ನು ಹೊಂದಿದನು. ಪುರಾತನ ಕಾಲದ ಋಷಿಮುನಿಗಳು ತಮ್ಮ ಪರಮೋಚ್ಛ ಜ್ಞಾನವನ್ನು ಬ್ರಹ್ಮ (ಚತುರ್ಮುಖ ಬ್ರಹ್ಮನಿಲ್ಲ) ಅಥವಾ ವಿಶ್ವಕರ್ತನ ಸಾಕ್ಷಾತ್ಕಾರಕ್ಕಾಗಿ ಉಪಯೋಗಿಸಿಕೊಂಡರೆ ಬುದ್ಧನು ಅಂಥ ಜ್ಞಾನವನ್ನು ಜೀವದ ಪುನರ್ಜನ್ಮದಿಂದ ಮುಕ್ತಿ ಪಡೆಯುವುದರ ಜೊತೆಗೆ ತನ್ನ ಸಹಜೀವಿಗಳ ದುಃಖ ಸಂಕಟಗಳನ್ನು ಕೊನೆಗಾಣಿಸಲು ಉಪಯೋಗಿಸಿದ. ಅವನು ಅದನ್ನು ನಿರ್ವಾಣವೆಂದು ಕರೆದ. ಈ ನಿರ್ವಾಣವನ್ನು ಇಂದ್ರಿಯ ಸುಖದಿಂದಾಗಲಿ ಅಥವಾ ಸ್ವಯಂಪೀಡನೆಯಿಂದಾಗಲಿ ಹೊಂದಲು ಸಾಧ್ಯವಾಗದೆ 'ಕಣ್ತರೆಸುವ, ಅರಿವನ್ನು ನೀಡುವ, ಮನಃಶಾಂತಿ ಹಾಗೂ ಉನ್ನತ ಜ್ಞಾನವನ್ನು ಕೊಡುವ, ಪೂರ್ಣಜ್ಞಾನೋದಯವನ್ನು ತಂದುಕೊಡುವ, ನಿರ್ವಾಣವನ್ನು ಪ್ರದಾನ ಮಾಡುವ ಶ್ರೇಷ್ಠ ಅಷ್ಠಾಂಗ ಋಜುಮಾರ್ಗದಿಂದ ಮಾತ್ರ ಪಡೆಯಲು ಸಾಧ್ಯವಾಗುವುದು.

Digitised by Bharatavani, CIIL

ಬುದ್ಧನ ಉಪದೇಶಗಳು ಅವನು ನಿರ್ವಾಣವನ್ನು ಹೊಂದಿದ ನಂತರ ಆತನು ತನ್ನ ಜೀವಿತಕಾಲದಲ್ಲಿ ಸ್ಥಾಪಿಸಿದ ಸಂನ್ಯಾಸ ಸಂಪ್ರದಾಯದ ಆಧಾರಸ್ತಂಭವಾದವು. ಉತ್ತರಪ್ರದೇಶದ ಕುಶಿನಗರದಲ್ಲಿ ಭಗವಾನ್ ಬುದ್ಧನು ಕ್ರಿ.ಪೂ. 486ರಲ್ಲಿ ತನ್ನ 80ನೆಯ ವಯಸ್ಸಿನಲ್ಲಿ ದೇಹವನ್ನು ತ್ಯಜಿಸಿದನು. ಈ ಸಂನ್ಯಾಸ ಸಂಪ್ರದಾಯಕ್ಕೆ ಪ್ರಪಂಚವನ್ನು ತ್ಯಜಿಸಿದ ನಾಲ್ಕು ವರ್ಣದವರಿಗೂ ಮಹಿಳೆಯರೂ ಸೇರಿದಂತೆ, ಸ್ವಾಗತವಿತ್ತು. ಈ ಪಂಥಕ್ಕೆ ಸೇರಿದೊಡನೆ ವ್ಯಕ್ತಿಯು ತನ್ನ ಹಿಂದಿನ ಜಾತಿ ಮತ್ತು ವಿಶಿಷ್ಟತೆಯನ್ನು ಕಳೆದುಕೊಳ್ಳುತ್ತಿದ್ದನು. ಅಲ್ಲದೆ, ಆತನು ಸಮಾನತೆ ಮತ್ತು ಭ್ರಾತೃತ್ವವೇ ಗುಣಲಕ್ಷಣಗಳಾಗಿರುವ ಸಂಘದ ಸದಸ್ಯನಾಗುತ್ತಿದ್ದನು. ಎಂಟು ವರ್ಷಕ್ಕೆ ಮೇಲ್ಪಟ್ಟ ಮಕ್ಕಳಿಗೆ ಪ್ರಥಮ ಹಂತದ ಪ್ರವೇಶಕ್ಕೆ ಪ್ರಬ್ರಾಜ್ಯ ಅಥವಾ ಪಬಜ್ಜ ಎಂದು ಕರೆಯುತ್ತಿದ್ದರು. ಸಂಘದ ಮೂರು ಹಳದಿ ಅಥವಾ ಕಿತ್ತಳೆ ಬಣ್ಣದ ವಸ್ತ್ರಗಳ ಧಾರಣೆ, ವಿಧಿಯುಕ್ತವಾಗಿ ಕೇಶಮುಂಡನ, ಹತ್ತು ಉಪದೇಶಗಳ ಅಥವಾ ಧರ್ಮಾದೇಶಗಳ ಅಂಗೀಕಾರ ಮತ್ತು ಮೂರು ರತ್ನಗಳಂತಿರುವ "ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ" (ನಾನು ಬುದ್ಧನಲ್ಲಿ ಶರಣು ಹೋಗುವೆನು, ನಾನು (ಧರ್ಮಕ್ಕೆ ಶರಣು ಹೋಗುವೆನು, ನಾನು ಸಂಘಕ್ಕೆ ಶರಣು ಹೋಗುವೆನು) ಎಂಬುದನ್ನು ಉಚ್ಚಾರಣೆ–ಇವುಗಳನ್ನು ಹಂತವು ಒಳಗೊಳ್ಳುತ್ತದೆ. ಪ್ರಾರಂಭಿಕ ದೀಕ್ಷಾ ಪ್ರದಾನದ ತರುವಾಯ ಶ್ರಮಣರೆಂದು ಕರೆಯಲ್ಪಡುವ ಮಕ್ಕಳು ಸಂಘದ ಪೂರ್ಣಸದಸ್ಯತ್ವಕ್ಕೆ ಅರ್ಹರಾಗುವರು. ದೀರ್ಘಕಾಲೀನ ಅಧ್ಯಯನದ ತರುವಾಯ ಕನಿಷ್ಠಪಕ್ಷ 20 ವರ್ಷದ ವಯಸ್ಸಿನಲ್ಲಿ ಶ್ರಮಣರು ಕನಿಷ್ಠ ಹತ್ತು ವರ್ಷಗಳು ಸಂನ್ಯಾಸಿಗಳಾಗಿರುವವರ ಬಹುಮತದ ಒಪ್ಪಿಗೆಯಿಂದ "ಉಪಸಂಪದ" ಎಂಬ ಕಾರ್ಯಕ್ರಮದಲ್ಲಿ ಮಠದ ಸರ್ವ ಸಂನ್ಯಾಸಿಗಳ ಸಮ್ಮುಖದಲ್ಲಿ ಭಿಕ್ಷುಗಳಾಗಿ ಪರಿವರ್ತಿತರಾಗುತ್ತಿದ್ದರು.

ಸುತ್ತಂತ, ಧಮ್ಮ ಮತ್ತು ಸುತ್ತಗಳ ಜೊತೆಗೆ ವಿನಯ ಮತ್ತು ಸುತ್ತ ವಿಭಂಗಗಳನ್ನು ಮುಖ್ಯವಾಗಿ ಬಾಯಿಪಾಠದ ಮೂಲಕ ಹೇಳಿಕೊಡುತ್ತಿದ್ದದು ಬೌದ್ಧ ಸಂನ್ಯಾಸಿಗಳ ಶಿಕ್ಷಣದ ಪಠ್ಯಕ್ರಮವಾಗಿತ್ತು. ದೇಶದ ವಿಭಿನ್ನ ಪ್ರದೇಶಗಳಿಂದ, ವಿಭಿನ್ನ ಭಾಷೆಯನ್ನಾಡುತ್ತಿದ್ದ ಭಿಕ್ಷುಗಳು ದೇಶದ ವಿಭಿನ್ನ ಪ್ರದೇಶಗಳಿಂದ ಬರುತ್ತಿದ್ದರಿಂದ ಸಂಸ್ಕೃತವನ್ನೇ ಸಾಮಾನ್ಯ ಮಾಧ್ಯಮವಾಗಿಸಿಕೊಳ್ಳಬೇಕೆಂದು ಬುದ್ಧನ ಜೀವಿತಕಾಲದಲ್ಲೇ ಇಬ್ಬರು ಬಹಳ ಬುದ್ಧಿವಂತ ಬ್ರಾಹ್ಮಣ ಭಿಕ್ಷುಗಳು ಸಲಹೆ ನೀಡಿದರು. ಆದರೆ ಬುದ್ಧ ಈ ಸಲಹೆಯನ್ನು ಒಪ್ಪದೆ ಭಿಕ್ಷುಗಳು ತಮ್ಮ ತಮ್ಮ ಭಾಷೆಯಲ್ಲೇ ತನ್ನ ಉಪದೇಶಗಳನ್ನು ಅಭ್ಯಾಸಿಸಲೆಂದು ಆದೇಶಿಸಿದ. ಪ್ರಾರಂಭದಲ್ಲಿ ಸಂನ್ಯಾಸಿಗಳನ್ನು ವೈದಿಕ ಶಾಲೆಗಳಲ್ಲಿ ಹೇಳಿಕೊಡುತ್ತಿದ್ದ ಕಾರ್ಯಕ್ರಮಗಳನ್ನು ಅಧ್ಯಯನ ಮಾಡಲು ಅನುಮತಿಸುತ್ತಿರಲಿಲ್ಲವಾದರೂ ತಮ್ಮ ವಸ್ತ್ರವನ್ನು ನೇಯುವುದು ತಾವೆ ಸಿದ್ಧಪಡಿಸಿಕೊಳ್ಳಲು ಕರಕುಶಲ ಕಲೆಗಳಾದ ನೂಲುವುದು, ಹೊಲಿಯುವುದು ಮುಂತಾದ ಕರಕುಶಲಕಲೆಗಳನ್ನು ಕಲಿಯಲು ಅವಕಾಶವಿತ್ತು. ಭಿಕ್ಷುಗಳು ವಿದ್ಯಾರ್ಥಿಗಳಾಗಿ ಸೂತ್ರಾಂಶಗಳನ್ನು ಪುನರುಚ್ಚರಿಸುವ ಕೆಳಗಿನ ಸ್ತರದಿಂದ ಪ್ರಾರಂಭಿಸಿ 'ವಿನಯ' ಪಠ್ಯಪುಸ್ತಕಗಳ ಚರ್ಚೆಯ ಮೂಲಕ ಧರ್ಮದ ಉಪದೇಶಕರಾಗಿ ಪರಿವರ್ತಿತರಾಗುತ್ತುದ್ದರು. ಹಿಂದೂ ಹಾಗೂ ಜೈನಧರ್ಮಗಳಿಂದ ಮತಾಂತರಗೊಳಿಸುವಲ್ಲಿ ವಿಜಯಿಗಳಾಗುವ ಮೂಲಕ ಬೌದ್ಧಧರ್ಮವನ್ನು ಎಲ್ಲೆಡೆಯೂ ಹರಡಲು ಅವಶ್ಯವಾದ ತರಬೇತಿ ಭಿಕ್ಷುಗಳಿಗೆ ದೊರಕಿಸುವ ಉದ್ದೇಶದಿಂದ ಬೌದ್ಧಧರ್ಮದ ಶಿಕ್ಷಣ ಪದ್ಧತಿಯಲ್ಲಿ ಚರ್ಚೆ, ವಾದಗಳಿಗೆ ಹೆಚ್ಚು ಒತ್ತನ್ನು ಕೊಡಲಾಗುತ್ತಿತ್ತು.

ಬ್ರಾಹ್ಮಣಪದ್ಧತಿಯಂತೆ ಬೌದ್ಧ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಗೆ ಶಿಕ್ಷಣದ ಅಂಗವಾಗಿ ತನ್ನ ಗುರುಗಳ ಸೇವೆಯ ಕರ್ತವ್ಯವನ್ನು ವಿಧಿಸಿತ್ತು. ಪ್ರತಿಯಾಗಿ ಗುರು 'ಬೋಧನೆಯಿಂದ, ಪ್ರಶ್ನಿಸುವುದರ ಮೂಲಕ, ಪ್ರೇರೇಪಿಸುವುದರ ಮೂಲಕ ಹಾಗೂ ಸೂಚನೆಗಳ ಮೂಲಕ ತನ್ನ ಅಧೀನದಲ್ಲಿರುವ ವಿದ್ಯಾರ್ಥಿಗೆ ಸಾಧ್ಯವಿರುವ ಎಲ್ಲಾ ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಹಾಯ ಮತ್ತು ಮಾರ್ಗದರ್ಶನಗಳನ್ನು ಅನುಗ್ರಹಿಸುತ್ತಿದ್ದನು. ವಿದ್ಯಾರ್ಥಿಯ ಬಳಿ ಇಲ್ಲದೆ ಹೋದಲ್ಲಿ ಅಗತ್ಯವಾದ ಭಿಕ್ಷಾಪಾತ್ರೆ ಅಥವಾ ವಸ್ತ್ರ ಮುಂತಾದವುಗಳನ್ನು ತಾನೇ ಒದಗಿಸುತ್ತಿದ್ದನಲ್ಲದೆ ವಿದ್ಯಾರ್ಥಿ ರೋಗಕ್ಕೆ ತುತ್ತಾದ ಪಕ್ಷದಲ್ಲಿ ಸ್ವತಃ ಶುಶ್ರೂಷೆ ಮಾಡುತ್ತಿದ್ದನು. ಹೀಗೆ ವಿದ್ಯಾರ್ಥಿಗಳ ಆರೋಗ್ಯ, ಅಧ್ಯಯನ, ನಡೆವಳಿಕೆ, ನೈತಿಕತೆ ಮತ್ತು ಆಧ್ಯಾತ್ಮಿಕ ಪ್ರಗತಿಗಳಿಗೆ ವೈಯಕ್ತಿಕವಾಗಿ ಹೊಣೆಗಾರನಾದ 'ಉಪಜ್ಜಯ' ಅಥವಾ 'ಆಚಾರಿಯ' ಎಂದು ಕರೆಯಲ್ಪಡುವ ಸಾಮಾನ್ಯ ಪೋಷಕರ ಅಡಿಯಲ್ಲಿ ವಾಸಿಸುತ್ತಿದ್ದ ಯುವ ಭಿಕ್ಷುಗಳ ಅಥವಾ ಸಂನ್ಯಾಸಿಗಳ ಗುಂಪು ಬೌದ್ಧ ಶಿಕ್ಷಣ ಪದ್ಧತಿಯ ಘಟಕವಾಗಿತ್ತು ಎಂಬುದನ್ನು ನಾವು ಕಾಣಬಹುದು. ಬ್ರಾಹ್ಮಣ ಪದ್ಧತಿಗಿಂತ ಭಿನ್ನವಾಗಿ, ಈ ಗುಂಪುಗಳು ಪ್ರತ್ಯೇಕ ಅಥವಾ ಸ್ವತಂತ್ರ ಘಟಕಗಳಾಗಿರದೆ ತಮ್ಮನ್ನು ತಾವು ವಿಹಾರ ಅಥವಾ ಮಠವೆನ್ನಲಾಗುವ ದೊಡ್ಡ ಘಟಕಗಳಾಗಿ ಸಂಘಟಿತರಾಗಿರುತ್ತಿದ್ದರು.

ಪ್ರಾರಂಭದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪಕ್ಕಪಕ್ಕವಿರುತ್ತಿದ್ದ ಒಬ್ಬ ಭಿಕ್ಷುವಿನ ಸ್ವಂತ ಕೊಠಡಿಗೆ ವಿಹಾರವೆಂಬ ಹೆಸರಿತ್ತು. ನಂತರ ಎಲ್ಲಾ ರೀತಿಯ ಕೊಠಡಿಗಳು, ಸಭಾಂಗಣಗಳು, ಊಟದ ಮನೆಗಳು, ಬಿಸಿನೀರಿನ ಸ್ನಾನಕ್ಕಾಗಿ ಹಾಗೂ ಪ್ರಾತಃರ್ವಿಧಿಗಳಿಗಾಗಿ ರಚನೆಗಳು, ಮಂಡಲಿಯ ಸಭಾಮಂದಿರಗಳು ಹಾಗೂ ಸ್ವಾಸ್ಥ್ಯ ಮತ್ತು ಜೀವನದ ಪ್ರತಿಯೊಂದು ಅಗತ್ಯವನ್ನು ಪೂರೈಸುವ ವಿವಿಧ ರೀತಿಯ ಪೀಠೋಪಕರಣಗಳು ಇವೆಲ್ಲದರಿಂದ ವಿಸ್ತಾರವಾಗಿ ಸಜ್ಜಾಗಿರುವ ಬಹುಮಂದಿ ಸಂನ್ಯಾಸಿಗಳ ಕೊಠಡಿಗಳನ್ನು ಹೊಂದಿರುವ ಬೃಹತ್ ಕಟ್ಟಡವನ್ನು ಸೂಚಿಸಲು 'ವಿಹಾರ' ಎಂಬ ಪದವನ್ನು ಬಳಸಲಾಯಿತು. ಅನೇಕ ಸಂನ್ಯಾಸಿಗಳು ಒಟ್ಟಿಗೆ ವಾಸಿಸುತ್ತಿದ್ದ ವಿಸ್ತೃತವಾಗಿ ಸಜ್ಜಾಗಿದ್ದ ಈ ಸಂಸ್ಥೆಗಳ ವ್ಯವಸ್ಥಾಪನೆಗೆ ಸಹಜವಾಗಿಯೇ ನಿರ್ದಿಷ್ಟ ಕಾರ್ಯಭಾರವನ್ನು ವಿವಿಧ ಅಧಿಕಾರಿ ಸಿಬ್ಬಂದಿಯ ಅವಶ್ಯಕತೆಯುಂಟಾಯಿತು. ಇದು ಸಂನ್ಯಾಸಿಗಳು ಕೇವಲ ಧಾರ್ಮಿಕ ಅಥವಾ ಆಧ್ಯಾತ್ಮಿಕ ಅಭ್ಯಾಸಗಳಲ್ಲಿಯೇ ಮುಳುಗಿ ಹೋಗದಂತಾಗದೆ ವಿವಿಧ ಉಪಯೋಗಕರ ಹಾಗೂ

Digitised by Bharatavani, CIIL

ವ್ಯಾವಹಾರಿಕ ಕಾರ್ಯಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳಲು ವಿಸ್ತೃತ ಅವಕಾಶಗಳನ್ನು ಒದಗಿಸಿತ್ತು. ಆದರೆ ಭಿಕ್ಷುಗಳೇ ಅಧಿಕಾರಿಗಳಾಗಿದ್ದರೂ ಸ್ವಂತವಾಗಿ ವಿಹಾರದ ವ್ಯವಸ್ಥಾಪನೆಯ ವಿಷಯದಲ್ಲಿ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಕಾರಣ, ನಿರ್ಧಾರಗಳು ಹಿರಿಯ ಸಂನ್ಯಾಸಿಗಳ ಕೈಯಲ್ಲಿರುತ್ತಿತ್ತು. ಸದಸ್ಯರನ್ನು ಸೇರಿಸಿಕೊಳ್ಳುವ ಅಥವಾ ಹೊರಹಾಕುವಂಥ ಮುಖ್ಯ ನಿರ್ಣಯಗಳನ್ನು ಸಮಿತಿಯು ಮಾತ್ರ ಕೈಗೊಳ್ಳಬಹುದಾಗಿತ್ತಲ್ಲದೆ ಸಂನ್ಯಾಸಿ ನಿವಾಸದ ಸರ್ವಸಂನ್ಯಾಸಿಗಳ ಅಭಿಮತದಿಂದ ನಿಯುಕ್ತನಾದ ಅಧಿಕಾರಿಯು ನಿರ್ಣಯವನ್ನು ಕೈಗೊಳ್ಳುವಂತಿರಲಿಲ್ಲ. ಹೀಗೆ ಸ್ವತಃ ಬುದ್ಧನಿಂದಲೇ ರಚಿತವಾದ ನಿರ್ಣಯವನ್ನು ಕೈಗೊಳ್ಳುವಂತಿರಲಿಲ್ಲ. ಹೀಗೆ ಸ್ವತಃ ಬುದ್ಧನಿಂದಲೇ ರಚಿತವಾದ ವಿಹಾರದ ಸಂಘಟನೆ ಪ್ರಜಾಪ್ರಭುತ್ವದ ಅಂಶಗಳನ್ನು ಹೊಂದಿತ್ತು. ಈ ಸಂಘಟನೆ ಆ ಕಾಲದಲ್ಲಿ ಉತ್ತರ ಬಿಹಾರದಲ್ಲಿ ಹಿಮಾಲಯದ ತಪ್ಪಲು ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಸ್ವತಃ ಬುದ್ಧನ ವಂಶದವನಾಗಿದ್ದ ಗಣತಂತ್ರಾತ್ಮಕ ಪಂಗಡವಾಗಿದ್ದ ಶಾಕ್ಯರು ಅನುಸರಿಸುತ್ತಿದ್ದ ಮಾದರಿಯನ್ನು ವಿಹಾರಗಳು ಅಳವಡಿಸಿಕೊಂಡಿರಬಹುದು.

ಆದರೆ ಅಧಿಕ ಸಂಖ್ಯೆಯಲ್ಲಿ ನವಶಿಷ್ಯರನ್ನು ಆಕರ್ಷಿಸುತ್ತಿದ್ದುದು ವೈದಿಕಶಾಲೆಗಳೋ ಅಥವಾ ಗುರುಕುಲಗಳೋ ಆಗಿರದೆ ಬೌದ್ಧ ವಿಹಾರಗಳಾಗಿದ್ದವು. ಜೀವನದಲ್ಲಿ ದುಃಖ ಸಂಕಷ್ಟಗಳನ್ನು ಅನುಭವಿಸದ ಮಾನವರಿರಲಿಲ್ಲ. ಇಂಥ ಸಂಕಷ್ಟದಲ್ಲಿರುವವರಿಗೆ ಬೌದ್ಧಧರ್ಮ ಸಮಾಧಾನ ನೀಡಿತು. ಇದರ ಜೊತೆಗೆ ತಮ್ಮ ಭಾಷೆಯ ಮೂಲಕವೇ ಬೌದ್ಧಧರ್ಮವು ಲಭ್ಯವಿದ್ದುದರಿಂದ ಬೌದ್ಧಧರ್ಮ ಮತ್ತು ವಿಹಾರಗಳ ಹರಡುವಿಕೆಗೆ ಇವು ಸಹಕಾರಿಗಳಾದವು. ಸರ್ವ ಜಾತಿ, ಪಂಥದವರಿಗೂ ಬೌದ್ಧ ವಿಹಾರಗಳ ಬಾಗಿಲುಗಳು ತೆರೆದಿದ್ದವು. ಸಂಘದೊಳಗೆ ಸೇರಿದ್ದವರಿಗೆ ಜನಸಾಮಾನ್ಯರ ದಾನ ಅಥವಾ ಭ್ರಾತೃತ್ವವನ್ನು ಬೆಂಬಲಿಸುವುದು ಧಾರ್ಮಿಕ ಕರ್ತವ್ಯವೆಂದು ಭಾವಿಸಿದ್ದ ಉಪಾಸಕರು ಮತ್ತು ಉಪಾಸಿಕರ ನೆರವು ಇವುಗಳಿಂದಾಗಿ ಜೀವನಕ್ಕಾಗಿ ಕಷ್ಟಪಡಬೇಕಾದ ಅನಿವಾರ್ಯತೆಯಿರಲಿಲ್ಲ. ವಾಸ್ತವವಾಗಿ, ಸಂಘದ ಸುಖಪೂರ್ಣ ಜೀವನ ಹಲವರನ್ನು ಆಕರ್ಷಿಸಿತು. 'ವಿನಯ' ಗ್ರಂಥಗಳು ಜೀವನವೇ ಸಮಸ್ಯೆಯಾಗಿ ಅದನ್ನು ಪರಿಹರಿಸಿಕೊಳ್ಳಲು ಸಂಘವನ್ನು ಸೇರಿದ ವ್ಯಕ್ತಿಗಳ ಹಲವು ಕಥೆಗಳನ್ನು ಹೇಳುತ್ತವೆ.

ಆದಾಗ್ಯೂ, ಕೆಲವು ಸಹಾನುಭೂತಿಯುಳ್ಳ ಜನಸಾಮಾನ್ಯರ ಬೆಂಬಲದಿಂದ ಮಾತ್ರವಲ್ಲದೆ ಬುದ್ಧನಂತೆಯೇ ಸ್ವತಃ ಕ್ಷತ್ರಿಯರಾಗಿದ್ದ ರಾಜರು, ಚಕ್ರವರ್ತಿಗಳ ಆಶ್ರಯದಿಂದ ಬೌದ್ಧಧರ್ಮ ಮತ್ತು ಬೌದ್ಧ ಶಿಕ್ಷಣ ಕೇಂದ್ರಗಳು ಅಸಾಧಾರಣ ರೀತಿಯಲ್ಲಿ ಭಾರತದ ವಿವಿಧ ಸ್ಥಳಗಳಲ್ಲಿ ಹಾಗೂ ಹೊರದೇಶಗಳಲ್ಲಿ ಬೆಳೆಯಲು, ಪ್ರಚಾರಗೊಳ್ಳಲು ಸಾಧ್ಯವಾಯಿತು. ಸ್ವತಃ ಬುದ್ಧನೇ ಮಗಧರಾಜ ಬಿಂಬಿಸಾರನ ಸಹಾನುಭೂತಿಯ ಬೆಂಬಲವನ್ನು ಗಳಿಸಿಕೊಂಡನು. ಗೌತಮಬುದ್ಧನ ನಿರ್ವಾಣದ 200 ವರ್ಷಗಳ ಬಳಿಕ ಕಾಬೂಲಿನಿಂದ ಕರ್ನಾಟಕದವರೆಗೆ, ಗುಜರಾತಿನಿಂದ ಅಸ್ಸಾಮಿನವರೆಗೆ ಸಾಮ್ರಾಜ್ಯವನ್ನು ವಿಸ್ತರಿಸಿದ ಚಂದ್ರಗುಪ್ತಮೌರ್ಯನ ಮೊಮ್ಮಗನಾದ ಅಶೋಕನ ನೇತೃತ್ವದಲ್ಲಿ ಬೌದ್ಧಧರ್ಮ ನಾಲ್ಕು ದಿಕ್ಕುಗಳಿಗೆ ಹರಡಿತು. ಕ್ಷತ್ರಿಯ ಕುಲದಲ್ಲಿ ಜನಿಸಿ ಬ್ರಾಹ್ಮಣಧರ್ಮದಲ್ಲಿ ವಿಶ್ವಾಸವಿಟ್ಟಿದ್ದ ಅಶೋಕ ತನ್ನ ತಂದೆ ಬಿಂದುಸಾರನ ನಂತರ ಕ್ರಿ.ಪೂ. 269ರಲ್ಲಿ ಸಿಂಹಾಸನಾರೋಹಣ ಮಾಡಿದನು. ಕಳಿಂಗಯುದ್ಧದ ನಂತರ ಅವನಲ್ಲಿ ಸಂಪೂರ್ಣ ಹೃದಯ ಪರಿವರ್ತನೆಯಾಗಿ ಬೌದ್ಧಧರ್ಮದ ಅನುಯಾಯಿಯಾದನು. ಪಾಳಿಭಾಷೆಯಲ್ಲಿ ಧರ್ಮಗ್ರಂಥವನ್ನು ಅಂತಿಮವಾಗಿ ಸುವ್ಯವಸ್ಥಿತಗೊಳಿಸಿದ ಪಾಟಲೀಪುತ್ರದಲ್ಲಿ ನಡೆದ ಬೌದ್ಧ ಸಂನ್ಯಾಸಿಗಳ ಸಮಿತಿಯ ಸಭೆಯ ನಂತರ ಭಾರತದ ಉದ್ದಗಲಕ್ಕೂ ಹಾಗೂ ಹೊರದೇಶಗಳಿಗೂ ಬೌದ್ಧ ನಿಯೋಗಗಳನ್ನು ಕಳಿಸಿದನಲ್ಲದೆ ಧರ್ಮ ಮಹಾಮಂತ್ರರೆಂಬುವರನ್ನು ನಿಯುಕ್ತಗೊಳಿಸುವುದರ ಮೂಲಕ ತನ್ನ ಆಡಳಿತದಲ್ಲಿ ಬುದ್ಧನ ಉಪದೇಶಗಳನ್ನು ಕಾರ್ಯರೂಪಕ್ಕೆ ತಂದನು. ಹೀಗೆ ಅಶೋಕನ ಆಳ್ವಿಕೆಯ ಕಾಲದಲ್ಲಿ ಬೌದ್ಧಧರ್ಮ ಕೇವಲ ಭಾರತದ ಸರಳ ಪಂಥವಾಗಿ ಉಳಿಯದೆ ಪ್ರಗತಿಯನ್ನು ಹೊಂದುತ್ತಾ ವಿಶ್ವಧರ್ಮವಾಗಲಾರಂಭಿಸಿತು.

ಅಶೋಕನ ಕಾಲದಿಂದ ಬೌದ್ಧಧರ್ಮದ ಜೊತೆಗೆ ಬೌದ್ಧ ಶಿಕ್ಷಣ ಪದ್ಧತಿಯು ತನ್ನ ಯಶಸ್ವೀ ದಿನಗಳನ್ನು ಕಾಣಲಾರಂಭಿಸಿ ಸಹಜವಾದ ಏಳುಬೀಳುಗಳೊಂದಿಗೆ ಹಲವಾರು ಶತಮಾನಗಳು ಮುಂದುವರೆಯಿತು. ಅಶೋಕನ ನಿರ್ಬಲ ಉತ್ತರಾಧಿಕಾರಿಯ ಸ್ಥಾನವನ್ನು ದುರಾಕ್ರಮಣಮಾಡಿ ಗಳಿಸಿಕೊಂಡ ಬ್ರಾಹ್ಮಣಧರ್ಮೀಯನಾದ ಪುಷ್ಯಮಿತ್ರಶುಂಗನ ಪ್ರತಿಕ್ರಿಯೆಯಿಂದಾಗಿ ಬೌದ್ಧಧರ್ಮ ಅವನತಿಯ ಹಾದಿ ಹಿಡಿಯುತ್ತಲಿತ್ತು; ಕ್ರಿ.ಪೂ. 232ರಲ್ಲಿ ಅಶೋಕನ ಮರಣಾನಂತರ ಮೌರ್ಯಸಾಮಾಜ್ರ ಒಡೆದುಹೋದ ನಂತರ ಭಾರತವನ್ನು ಆಳಿದ ವಿದೇಶಿ ರಾಜವಂಶಗಳಲ್ಲಿ ಒಂದಾದ ಕುಶಾನ ರಾಜನಾದ ಕನಿಷ್ಕನ ಶಾಸನಕಾಲದಲ್ಲಿ ಪುನಃ ಬೌದ್ಧಧರ್ಮ ಉನ್ನತಿಯ ಹಾದಿಹಿಡಿಯಿತು. ಕ್ರಿ.ಪೂ. 320ರಲ್ಲಿ ಅಧಿಕಾರಕ್ಕೆ ಬಂದ ಗುಪ್ತರು ಪರಂಪರಾಗತವಾಗಿ ಬ್ರಾಹ್ಮಣಧರ್ಮದಲ್ಲಿ ನಂಬಿಕೆಯಿಟ್ಟಿದ್ದವರು. ಇವರು ಮೌರ್ಯ ಸಾಮ್ರಾಜ್ಯಕ್ಕೆ ಹೋಲಿಸಬಹುದಾದ ಸಾಮ್ರಾಜ್ಯವನ್ನು ಕಟ್ಟಿದರು. ಆದರೆ; ಇವರು ವಿರೋಧಿ ಧಾರ್ಮಿಕ ಪೀಡಕರಾಗಿರಲಿಲ್ಲ. ಇವರ ಕಾಲದಲ್ಲಿ ಕೆಲವು ಬೌದ್ಧ ವಿಹಾರಗಳು ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದವಲ್ಲದೆ ನಿಕಟವರ್ತಿ ದೇಶಗಳಿಂದ ಅದರಲ್ಲೂ ಚೈನಾದಿಂದ, ಪಂಡಿತರನ್ನು ಆಕರ್ಷಿಸಿತು. ಕ್ರಿ.ಪೂ. 399–414ರ ಅವಧಿಯಲ್ಲಿ ವಾಯುವ್ಯದಲ್ಲಿರುವ ಉದ್ಯಾನದಿಂದ ಪೂರ್ವದ ತಾಮ್ರಲಿಪ್ತಿಯವರೆಗೆ ಯಾತ್ರೆ ಕೈಗೊಂಡ ಫಾ.ಹಿಯಾನ್ ಈ ಅಂಶವನ್ನು ಪ್ರಮಾಣೀಕರಿಸಿದ್ದಾನೆ. ದೇಶದಲ್ಲಿ ತಮ್ಮ ನಿಯಂತ್ರಣ ವನ್ನಿಟ್ಟುಕೊಳ್ಳುವುದಷ್ಟೇ ಅಲ್ಲದೆ ವಿವಿಧ ಭಾಗಗಳಿಗೆ ಬೌದ್ಧಧರ್ಮದ ಪ್ರಚಾರಮಾಡಲು ಸಹಕಾರಿಯಾದ ಬೌದ್ಧಧರ್ಮದ ಪ್ರಬಲ ಕೇಂದ್ರಗಳು ಹಾಗೂ ಬೌದ್ಧ ಸಂಸ್ಕೃತಿಯ ಪ್ರಚಾರ ಕೇಂದ್ರಗಳಾದ ಬೌದ್ಧ ವಿಹಾರಗಳು ವಿಪುಲವಾಗಿದ್ದ ಅಂಶವನ್ನು ಫಾ.–ಹಿ–ಯಾನ್ ಗಮನಿಸಿದನು. ನಾವು ಕಂಡಂತೆ, ಫಾ–ಹಿ–ಯಾನ್

Digitised by Bharatavani, CIIL

5ನೇ ಶತಮಾನದ ಆದಿಯಲ್ಲಿ ಆಗಮಿಸಿದನು. ಈ ಶತಮಾನದ ಎರಡನೆಯ ಭಾಗದಲ್ಲಿ ಇದುವರೆಗೂ ಬ್ಯಾಕ್ಟ್ರಿಯಾ ಪ್ರದೇಶವನ್ನು ಆಕ್ರಮಿಸಿದ್ದ ಹೂಣರು ಹಿಂದಿನ ಗ್ರೀಕರು, ಶಕರು ಹಾಗೂ ಕುಶಾನರಂತೆ ಪರ್ವತಗಳನ್ನು ದಾಟಿ ಭಾರತದ ಬಯಲು ಸೀಮೆಯ ಮೇಲೆ ಆಕ್ರಮಣ ಮಾಡಿದರು. ಗುಪ್ತರ ಅವನತಿಯ ನಂತರ ಕ್ರಿ.ಪೂ. 500ರಿಂದ ಪ್ರಾರಂಭಗೊಂಡು ಸುಮಾರು 30 ವರ್ಷಗಳ ಕಾಲ ಪಶ್ಚಿಮ ಭಾರತವು ಹೂಣ ರಾಜರ ಅಧೀನದಲ್ಲಿತ್ತು. ಹೂಣರು ಬೌದ್ಧಧರ್ಮದ ಉಗ್ರಪೀಡಿಕರಾಗಿದ್ದರಿಂದ ಬೌದ್ಧಶಿಕ್ಷಣ ಇವರ ಶಾಸನಕಾಲದಲ್ಲಿ ತೀವ್ರ ಸಂಕಟಕ್ಕೊಳಗಾಯಿತು. ಆದರ ಕ್ರಿ.ಶ. 606 ರಲ್ಲಿ 16ನೆಯ ವಯಸ್ಸಿನಲ್ಲಿ ಸಿಂಹಾಸನಾರೋಹಣ ಮಾಡಿದ ರಾಜ ಹರ್ಷವರ್ಧನನ ಕಾಲದಲ್ಲಿ ಕನೂಜ್ ಉತ್ತರಭಾರತದ ಸಾಂಸ್ಕೃತಿಕ ಕೇಂದ್ರವಾಗಿ ಬೌದ್ಧಧರ್ಮ – ತನ್ನ ಮೊದಲಿನ ಮಹತ್ವವನ್ನು ಪುನರ್ ಪ್ರತಿಷ್ಠಾಪಿಸಿಕೊಂಡಿತು. ಕಾಥೇವಾಡದಿಂದ ಬಂಗಾಳದವರೆಗಿನ ಉತ್ತರಭಾರತದ ಅಧಿಕತರ ಭಾಗಗಳ ನಿಯಂತ್ರಣವನ್ನು ಪಡೆದು 41 ಸಂವತ್ಸರಗಳ ಕಾಲ ಆಳಿದನು. ಹರ್ಷನ ಆಳ್ವಿಕೆಯ ಉತ್ತರಾರ್ಧದಲ್ಲಿ ಗೌತಮಬುದ್ಧನನ್ನು ಕುರಿತ ದಾಖಲೆಗಳ ಅನ್ವೇಷಣೆಯ ಸಲುವಾಗಿ ಚೈನಾ ಯಾತ್ರಿಕ ಹುಯೆನ್–ತ್ಸಾಂಗ್ ಭಾರತಕ್ಕೆ ಬಂದನು. ಕಾಶ್ಮೀರದಿಂದ ಕಾಂಚೀಪುರದವರೆಗೆ, ಸೂರತ್‌ನಿಂದ ತಾಮ್ರಲಿಪ್ತಿಯವರೆಗೆ ಆತ ಯಾತ್ರೆ ಕೈಗೊಂಡು ಅನೇಕ ಶಾಖೆಗಳಿಂದ ಪ್ರತಿನಿಧಿಸಲ್ಪಟ್ಟ ಬೌದ್ಧ ವಿಚಾರಧಾರೆಗಳನ್ನು ಕಂಡನು. ಪ್ರತಿಯೊಂದು ಶಾಲೆಯನ್ನು ಬೌದ್ಧ ಮಠಗಳು ತಮ್ಮದೆಂದು ಹೇಳಿಕೊಳ್ಳುತ್ತಿದ್ದವಲ್ಲದೆ ಆ ಶಾಖೆಯ ಸಿದ್ಧಾಂತ ಹಾಗೂ ಆಚರಣೆಗಳು ತಜ್ಞತೆಯನ್ನು ಪಡೆಯಲು ಶ್ರಮಿಸುತ್ತಿದ್ದವು. ಕಾರ್ಯಸ್ಥಿತಿಯಲ್ಲಿದ್ದು ಸಂನ್ಯಾಸಿಗಳು ವಾಸಮಾಡುತ್ತಿದ್ದ ಮಠಗಳ ಸಂಖ್ಯೆ ಸುಮಾರು 5000ವಿದ್ದು ಒಟ್ಟು ಸಂನ್ಯಾಸಿಗಳ ಸಂಖ್ಯೆ 2,12,130ರಷ್ಟಿತ್ತೆಂದು ಇದರಲ್ಲಿ 107930 ಹೀನಾಯಾನಕ್ಕೆ ಸೇರಿದ್ದರೆ ಉಳಿದವರು ಮಹಾಯಾನ ಪಂಥಕ್ಕೆ ಸೇರಿದ್ದವರೆಂದು ಹ್ಯುಯೆನ್‌ತ್ಸಾಂಗ್ ಅಂದಾಜು ಮಾಡಿದ್ದಾನೆ. ತಮ್ಮ ಬೋಧಕರಿಂದ ಅಥವಾ ತಮ್ಮ ಗ್ರಂಥಾಲಯ ಹಾಗೂ ದುರ್ಲಭ ಗ್ರಂಥಗಳಿಂದ ಖ್ಯಾತಿಗೊಂಡಿದ್ದ ವಿದ್ಯಾಪೀಠಗಳಾಗಿದ್ದ ಬೌದ್ಧಮಠಗಳಲ್ಲಿ ಉಳಿದುಕೊಳ್ಳಲು ಹ್ಯುಯೆನ್‌ತ್ಸಾಂಗ್ ತನ್ನ ಯಾತ್ರೆಯಲ್ಲಿ ಮಧ್ಯೆ ಮಧ್ಯೆ ನಿಲ್ಲುತ್ತಿದ್ದ.

ಭಾರತದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ಚೈನಾ, ಜಪಾನ್, ಕೊರಿಯಾ, ಟಿಬೆಟ್, ಸುಮಾತ್ರ, ಜಾವಾ ಹಾಗೂ ಶ್ರೀಲಂಕಾ ದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರೂ ನಳಂದದ ಮಠವು ಹ್ಯುಯೆನ್–ತ್ಸಾಂಗ್ ಉಚ್ಚಶಿಕ್ಷಣಕ್ಕಾಗಿ ಉಳಿದುಕೊಂಡಿದ್ದ ಮಠವಾಗಿತ್ತು. ಮತ್ತೊಬ್ಬ ಚೀನೀ ಯಾತ್ರಿಕ ಇ–ತ್ಸಿಂಗ್, ಹುಯೆನ್–ತ್ಸಾಂಗ್ ಹಿಂದಿರುಗಿದ 27 ವರ್ಷಗಳ ಬಳಿಕ ಭಾರತಕ್ಕೆ ಬಂದು 10 ವರ್ಷಗಳ ಕಾಲ ನಳಂದದಲ್ಲಿ ಉಳಿದುಕೊಂಡಿದ್ದನು. ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ವಸತಿಯನ್ನು ಒದಗಿಸಬಲ್ಲ ನಳಂದದ ವಿಸ್ತಾರವಾದ ಪ್ರದೇಶದಲ್ಲಿ ವಿದೇಶಿ ವಿದ್ಯಾರ್ಥಿಗಳು ಇದ್ದುದಕ್ಕೆ ಇ–ತ್ಸಿಂಗ್ ಸಾಕ್ಷಿಯಾದನು.

ಹರ್ಷನ ಕಾಲದಲ್ಲಿ ಬೌದ್ಧಶಿಕ್ಷಣ ಪದ್ಧತಿ ತನ್ನ ಉಚ್ಛ್ರಾಯ ಸ್ಥಿತಿಗೆ ಏರಿತು. ನಾವು ಈಗಾಗಲೇ ನೋಡಿರುವಂತೆ ಬೌದ್ಧ ವಿಹಾರಗಳು ಎಲ್ಲಾ ವರ್ಗದವರಿಗೂ ತೆರೆದಿದ್ದು ಸಾಮಾನ್ಯ ಜನರ ಆಶ್ರಯವನ್ನು ಆಧರಿಸಿದ್ದವು. ಜನಸಾಮಾನ್ಯರ ಬೆಂಬಲದ ಕೊರತೆ ಮತ್ತು ಬ್ರಾಹ್ಮಣಧರ್ಮದ ಅನುಯಾಯಿಗಳಾಗಿದ್ದ ಹಾಗೂ ಬೌದ್ಧಧರ್ಮದ ಬಗ್ಗೆ ಸಹಾನುಭೂತಿಯಿಂದ ರಾಜರುಗಳು ಶಿಕ್ಷಣ ಮತ್ತು ವಿದ್ಯೆಯ ಕೇಂದ್ರಗಳಾಗಿದ್ದ ವಿಹಾರಗಳ ಅವನತಿಗೆ ಕಾರಣವಾದರು. ಬ್ರಾಹ್ಮಣ ಧರ್ಮದ ಅನುಯಾಯಿಗಳಾಗಿದ್ದ ಗುಪ್ತರ ಮುನ್ನೂರು ವರ್ಷಗಳ ಆಳ್ವಿಕೆ, ನಂತರ ಪಶ್ಚಿಮಭಾರತದಲ್ಲಿ ಹೂಣ ರಾಜರಿಂದ ಬೌದ್ಧರ ಪೀಡನೆಗಳಿಂದಾಗಿ ಒಂದನೆಯ ಶತಮಾನದಲ್ಲಿ ಹೀನಯಾನ ಮತ್ತು ಮಹಾಯಾನವೆಂಬ ವಿಭಾಗಗಳಾಗಿ ಒಡೆದ ಕಾಲದಿಂದಲೂ ತನ್ನಲ್ಲಿಯೇ ಹೋರಾಟ ನಡೆಸುತ್ತಿದ್ದ ಬೌದ್ಧಧರ್ಮದ ತೇಜಸ್ಸು ಕುಂದಿತು. ಕಾಲಕ್ರಮೇಣ ಮನು ಮುಂತಾದ ಸೂತ್ರಕಾರರ ವಿವಿಧ ಕೃತಿಗಳ ಮುಖಾಂತರ ಬ್ರಾಹ್ಮಣ ಧರ್ಮ ಹಾಗೂ ಬ್ರಾಹ್ಮಣ ಶಿಕ್ಷಣ ಪದ್ಧತಿ ಬೌದ್ಧಧರ್ಮವನ್ನು ಕ್ರಮೇಣ ನಷ್ಟಗೊಳಿಸಿತು. ಬ್ರಾಹ್ಮಣಧರ್ಮಕ್ಕೆ ಅನುಸಾರವಾಗಿದ್ದ ಸುವ್ಯವಸ್ಥಿತ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ನೇತೃತ್ವದಲ್ಲಿ ಬೌದ್ಧ ಶಿಕ್ಷಣ ಪದ್ಧತಿಯು ಪ್ರಚಲಿತದಲ್ಲಿದ್ದು ಖಗೋಳಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ತತ್ವಶಾಸ್ತ್ರ, ಪುರಾಣ ಮತ್ತು ವೈದ್ಯಕೀಯ ವಿಜ್ಞಾನ ಇತ್ಯಾದಿಗಳನ್ನು ಸಂಸ್ಕೃತ ಮಾಧ್ಯಮದಲ್ಲಿ ಉಚ್ಚಮಟ್ಟದಲ್ಲಿ ಬೋಧಿಸಲಾಗುತ್ತಿತ್ತು. ಪ್ರತಿಯೊಬ್ಬ ಸಂನ್ಯಾಸಿ ತನ್ನದೇ ಭಾಷೆಯಲ್ಲಿ ಕಲಿಯುವ ಸೌಲಭ್ಯವನ್ನು ಒದಗಿಸಿದ್ದ ಬುದ್ಧನ ಅಭಿಪ್ರಾಯಕ್ಕೆ ಇದು ತದ್ವಿರುದ್ಧವಾಗಿತ್ತು. 800 ವರ್ಷಗಳ ಕಾಲ ಪ್ರಖ್ಯಾತವಾಗಿದ್ದ ಬಿಹಾರಿನ ನಳಂದ ಮತ್ತು ಹನ್ನೆರಡನೆ ಶತಮಾನದ ಬಂಗಾಳದ ವಿಕ್ರಮಶಿಲಾ ಇವುಗಳೂ ಸೇರಿದಂತೆ ಮಧ್ಯ ಏಷ್ಯಾದಿಂದ ಬಂದ ಮುಸ್ಲಿಮರು ಬಹುತೇಕ ಎಲ್ಲಾ ಮಠಗಳನ್ನು ನಾಶಮಾಡಿ, ಲೂಟಿಹೊಡೆದು ಭಾರತದಲ್ಲಿ ಬೌದ್ಧಧರ್ಮವನ್ನು ಸಂಪೂರ್ಣವಾಗಿ ನಾಶಮಾಡಿದರು.

**ಸುರೇಶ್. ಸಿ. ಘೋಷ್ ಮತ್ತು ಮೋನಾ ಸಿದ್ವಾಲ್**
**ಅನು: ಚಂದ್ರಶೇಖರ್ ಬಿ.ಎಂ.**

## ಬೌದ್ಧಿಕ ಸವಾಲುಳ್ಳ ಮಕ್ಕಳು

ಬುದ್ಧಿಮಾಂದ್ಯತೆ ಪದವು 'ಕಲಿಕೆಯ ನಿರ್ಬಲತೆ' 'ಕಲಿಕೆಯ ತೊಂದರೆ' ಎಂದೂ ಸೂಚಿಸಲ್ಪಡುತ್ತದೆ ಅಥವಾ ಬುದ್ಧಿಮಾಂದ್ಯ ವ್ಯಕ್ತಿಯು ಬೌದ್ಧಿಕ ವಿಕಾಸದಲ್ಲಿ ಇನ್ನೂ ಯುವಕ ಎಂದೂ ವಿವರಿಸಲ್ಪಡುತ್ತಾನೆ. "ದ ಅಮೇರಿಕನ್ ಅಸೋಸಿಯೇಷನ್ ಆಫ್ ಮೆಂಟಲೀ ಡೆಫಿಶಿಯೆನ್ಸಿ" ನೀಡಿರುವ ಬುದ್ಧಿಮಾಂದ್ಯತೆಯ ವ್ಯಾಖ್ಯೆಯನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ.

Digitised by Bharatavani, CIIL

ಅದರ ಪ್ರಕಾರ 'ಬುದ್ಧಿಮಾಂದ್ಯತೆ ಎಂದರೆ, "ಹೊಂದಿಕೊಳ್ಳುವ ವರ್ತನೆಯಲ್ಲಿನ ಕೊರತೆಯೊಂದಿಗೆ ಉದ್ಭವವಾಗುವ ಮಹತ್ವದ ಕಡಿಮೆ ಸರಾಸರಿ ಸಾಮಾನ್ಯ ಬೌದ್ಧಿಕ ಕಾರ್ಯ ಚಟುವಟಿಕೆ, ಹಾಗೂ ಇದು ವಿಕಾಸದ ಅವಧಿಗಳಲ್ಲಿ ಸುವ್ಯಕ್ತವಾಗುತ್ತದೆ."

ಒಬ್ಬ ವ್ಯಕ್ತಿಯ ಬೌದ್ಧಿಕ ಕಾರ್ಯಚಟುವಟಿಕೆ ಮತ್ತು ಹೊಂದಿಕೊಳ್ಳುವ ವರ್ತನೆ, ಎರಡರಲ್ಲಿ ಕೊರತೆ ಕಂಡುಬಂದಾಗ ಮಾತ್ರ ಆ ವ್ಯಕ್ತಿಯಲ್ಲಿ ಬುದ್ಧಿಮಾಂದ್ಯತೆ ಇದೆ ಎಂದು ಕಂಡುಹಿಡಿಯಬಹುದು. ಒಬ್ಬ ವ್ಯಕ್ತಿಯು ಸಾಂಸ್ಕೃತಿಕ ಗುಂಪು ಮತ್ತು ತನ್ನ ವಯಸ್ಸಿಗನುಗುಣವಾದ ಸಾಮಾಜಿಕ ಜವಾಬ್ದಾರಿ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳಿಗನುಗುಣವಾಗಿ ವರ್ತಿಸುವುದನ್ನು, ಹೊಂದಿಕೊಳ್ಳುವ ವರ್ತನೆ ಎನ್ನಲಾಗುತ್ತದೆ.

**ವರ್ಗೀಕರಣ:**

ಬುದ್ಧಿಶಕ್ತಿ ಭಾಗಲಬ್ಧ (IQ) ಆಧಾರದ ಮೇಲೆ, ಬುದ್ಧಿಮಾಂದ್ಯತೆಯನ್ನು 3 ವಿಧಗಳಾಗಿ ಮಾಡಲಾಗಿದೆ. ಅವುಗಳೆಂದರೆ

- ಅಲ್ಪ ಬುದ್ಧಿಮಾಂದ್ಯರು
- ಸಾಧಾರಣ ಬುದ್ಧಿಮಾಂದ್ಯರು
- ತೀವ್ರ ಮತ್ತು ಅತಿ ತೀವ್ರ ಬುದ್ಧಿಮಾಂದ್ಯರು

ಈ ಮೇಲಿನ ವರ್ಗೀಕರಣವನ್ನು ಶಿಕ್ಷಣ ನೀಡಬಲ್ಲ ಮತ್ತು ತರಬೇತಿ ನೀಡಬಲ್ಲ ಆಧಾರದ ಮೇಲೆ ವರ್ಗೀಕರಿಸಲಾಗಿದೆ.

**ಅಲ್ಪ ಬುದ್ಧಿಮಾಂದ್ಯರು:**

ಯಾವ ಮಕ್ಕಳಿಗೆ ಸ್ವತಂತ್ರವಾಗಿ ಬದುಕಲು ಮತ್ತು ಕಾರ್ಯನಿರ್ವಹಿಸಲು, ಶಿಕ್ಷಣ ಪಡೆಯಲು ಸಾಧ್ಯವೋ ಅವರನ್ನು ಅಲ್ಪ ಬುದ್ಧಿಮಾಂದ್ಯರು' ಎನ್ನಲಾಗುತ್ತದೆ. ಈ ಗುಂಪಿನ ವ್ಯಕ್ತಿಗಳಿಗೆ ನೀಡುವ ಪ್ರಮುಖ ಕಾರ್ಯಚಟುವಟಿಕೆಗಳೆಂದರೆ ಬರೆಯುವ ಮತ್ತು ಓದುವ ಕೌಶಲಗಳನ್ನು ಕಲಿಸುವುದು, ತಮ್ಮ ಪರಿಸರದೊಂದಿಗೆ ಹೊಂದಿಕೊಳ್ಳಲು ಸಾಧ್ಯವಾಗುವ ಸಾಮಾಜಿಕ ಕೌಶಲಗಳನ್ನು ಕಲಿಸುವುದು, ಹಾಗೂ ತಮ್ಮ ದಿನನಿತ್ಯದ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಚಟುವಟಿಕೆಗಳನ್ನು ಹೇಳಿಕೊಡುವುದು.

**ಈ ಗುಂಪಿನ ಬುದ್ಧಿಮಾಂದ್ಯರಲ್ಲಿ ಕಂಡು ಬರುವ ತೊಂದರೆಗಳು:**

- ಯಾವುದೇ ಒಂದು ವಿಷಯ ಅಥವಾ ಚಟುವಟಿಕೆಗೆ, ಹೆಚ್ಚಿನ ಸಮಯದವರೆಗೆ ಗಮನ ಕೊಡುವುದರಲ್ಲಿ ತೊಂದರೆಗಳು.
- ತಾವು ಕೇಳಿದ ಅಥವಾ ನೋಡಿದುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ತೊಂದರೆಗಳು.
- ಯಾವುದೇ ಒಂದು ಸಮಸ್ಯೆಯನ್ನು ಅಮೂರ್ತ ರೀತಿಯಲ್ಲಿ ಬಗೆಹರಿಸಲು ಯೋಚಿಸುವ ಅಥವಾ ಕಾರ್ಯನಿರ್ವಹಿಸುವ ಸಾಮರ್ಥ್ಯದಲ್ಲಿ ತೊಂದರೆ.
- ಕಲಿತ ಕೌಶಲಗಳನ್ನು ಸಂದರ್ಭಾನುಸಾರವಾಗಿ ಬಳಸಿಕೊಳ್ಳುವುದರಲ್ಲಿನ ತೊಂದರೆ.
- ಇತರರೊಂದಿಗೆ ತಾನೇ ಮುಂದೆ ನಿಂತು ಮಾತನಾಡುವುದು ಅಥವಾ ಮಾತುಕತೆಯನ್ನು ಹೆಚ್ಚಿನ ಸಮಯದವರೆಗೆ ಮುಂದುವರೆಸಲು ಸಾಧ್ಯವಿಲ್ಲದಿರುವಿಕೆ.
- ಪರಿಸರದಲ್ಲಿನ ಸಂದರ್ಭ ಅಥವಾ ವ್ಯಕ್ತಿಯ ಮನಸ್ಥಿತಿಯನ್ನು ಅರಿತು, ಅದಕ್ಕೆ ತಕ್ಕಂತೆ ವರ್ತಿಸಲು ಸಾಧ್ಯವಾಗದಂತಹ ತೊಂದರೆ.
- ಸಮವಯಸ್ಕರಿಗೆ ಹೋಲಿಸಿದಾಗ, ಕಡಿಮೆ ಮಟ್ಟದ ಶೈಕ್ಷಣಿಕ ಸಾಧನೆ.
- ಸಮವಯಸ್ಕರೊಂದಿಗೆ, ಸ್ನೇಹ ಬೆಳೆಸಲು ತೊಂದರೆಗಳು.

ಇವರಲ್ಲಿ ಕೆಲವು ಅನುಕೂಲಕರ ಲಕ್ಷಣಗಳೂ ಕಂಡುಬರುತ್ತವೆ.

- ಔದ್ಯೋಗಿಕ ಕೌಶಲಗಳನ್ನು ಚೆನ್ನಾಗಿ ಕಲಿಯಲು ಶಕ್ತರು.
- ದಿನನಿತ್ಯದ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಸಹಾಯಕವಾಗುವ, ಸಾಮಾನ್ಯ ಮಟ್ಟದಲ್ಲಿ ಓದುವ, ಬರೆಯುವ, ಸಾಂಖ್ಯಿಕ ಕೌಶಲಗಳನ್ನು ಕಲಿಯಲು ಶಕ್ತರು.
- ಸ್ವತಂತ್ರವಾಗಿ ಬದುಕಲು ಕಲಿಯಲು ಶಕ್ತರು.
- ಕೌಟುಂಬಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಮತ್ತು ಸ್ವಲ್ಪ ಮಟ್ಟಿನ ಕೊಡುಗೆ ನೀಡಲು ಶಕ್ತರು.

**ಸಾಧಾರಣ ಬುದ್ಧಿಮಾಂದ್ಯರು:**

ಸಾಧಾರಣ ಬುದ್ಧಿಮಾಂದ್ಯತೆಯುಳ್ಳ ವ್ಯಕ್ತಿಗಳು, ತಮ್ಮನ್ನು ತಾವು ನೋಡಿಕೊಳ್ಳಲು ಶಕ್ತರು. ಆದರೆ ಸ್ವಲ್ಪಮಟ್ಟಿನ ಮೇಲ್ವಿಚಾರಣೆಯ ಅಗತ್ಯವಿರುತ್ತದೆ. ಇವರುಗಳು ಚೆನ್ನಾಗಿ ಅಭ್ಯಾಸ ಮಾಡಿಸಿದ ಕೆಲಸಗಳನ್ನು ನಿಭಾಯಿಸಲು ಶಕ್ತರು ಹಾಗೂ ಸಾಮಾಜಿಕ ಕೌಶಲಗಳನ್ನು ಕಲಿಸಿದಾಗ ಚೆನ್ನಾಗಿ ಕಲಿಯುತ್ತಾರೆ. ಆದುದರಿಂದ ಇವರಿಗೆ ದಿನನಿತ್ಯದ ಚಟುವಟಿಕೆಗಳು, ಸಾಮಾಜಿಕ ಹಾಗೂ ವ್ಯಾವಹಾರಿಕ ಕೌಶಲಗಳ ತರಬೇತಿಯನ್ನು ನೀಡಲು ಸಾಧ್ಯವಾಗುತ್ತದೆ.

**ಇವರಲ್ಲಿ ಕಂಡು ಬರುವ ತೊಂದರೆಗಳು ಹೀಗಿವೆ:**

- ಸಾಮಾನ್ಯ ಬುದ್ಧಿಶಕ್ತಿಯು ಮಕ್ಕಳಿಗಿಂತ ತಡವಾಗಿ ಕುಳಿತುಕೊಳ್ಳಲು, ನಿಲ್ಲಲು ಮತ್ತು ನಡೆಯಲು ಕಲಿಯುತ್ತಾರೆ.
- ಇವರಲ್ಲಿ ಮಾತು ನಿಧಾನವಾಗಿ ವಿಕಾಸವಾಗುತ್ತದೆ ಹಾಗೂ ಕಡಿಮೆ ವ್ಯಾವಹಾರಿಕ ಜ್ಞಾನವನ್ನು ಹೊಂದಿರುತ್ತಾರೆ.
- ಸರಿಯಾಗಿ ಹೊಂದಾಣಿಕೆ ಮಾಡಿಕೊಳ್ಳುವ, ಸಾಮಾಜಿಕ ಅರಿವು ಕಡಿಮೆ ಇರುತ್ತದೆ.

Digitised by Bharatavani, CIIL

- ದೈನಂದಿನ ಚಟುವಟಿಕೆಗಳಿಗೆ ಮೇಲ್ವಿಚಾರಣೆಯ ಅವಶ್ಯಕತೆ ಇರುತ್ತದೆ.
- ಓದು, ಬರಹ ಮತ್ತು ಸಂಖ್ಯೆಗಳ ಮೂಲಭೂತ ಕೌಶಲವನ್ನು ಬೆಳೆಸಿಕೊಳ್ಳಲು ಸಾಧ್ಯವಿರುತ್ತದೆ.
- ಚಟುವಟಿಕೆಗಳನ್ನು ಮಾಡುತ್ತಿರುವಾಗ, ಅವರ ಧ್ಯಾನದ ಅವಧಿಯು ಕಡಿಮೆ ಇರುತ್ತದೆ.
- ಯಾವುದೇ ಕೌಶಲವನ್ನು ಕಲಿಯಲು ಅಥವಾ ಉಳಿಸಿಕೊಳ್ಳಲು ಪದೇಪದೇ ಅಭ್ಯಾಸ ಮಾಡುವ ಅವಶ್ಯಕತೆ ಇರುತ್ತದೆ.

**ಇವರಲ್ಲಿ ಇರುವ ಧನಾತ್ಮಕ ಅಂಶಗಳೆಂದರೆ:**

- ಮೇಲ್ವಿಚಾರಣೆಯೊಂದಿಗೆ, ತಮ್ಮ ಬಗ್ಗೆ ತಾವೇ ಆಸಕ್ತಿ ವಹಿಸಲು ಶಕ್ತರು.
- ಅತಿ ಹೆಚ್ಚಿನ ಕೌಶಲದ ಅವಶ್ಯಕತೆ ಇಲ್ಲದ ಉದ್ಯೋಗಗಳನ್ನು ಕಲಿಯಲು ಸಾಧ್ಯವಾಗುತ್ತದೆ.
- ಮೇಲ್ವಿಚಾರಣೆಯೊಂದಿಗೆ, ಸಾಮಾಜಿಕ ಸಮೂಹದಲ್ಲಿ ಬೆರೆಯಲು ಸಾಧ್ಯವಿದೆ.

**ತೀವ್ರ ಮತ್ತು ಅತಿತೀವ್ರ ಬುದ್ಧಿಮಾಂದ್ಯತೆ:**

ತೀವ್ರ ಮತ್ತು ಅತಿತೀವ್ರ ಕಲಿಕೆಯ ತೊಂದರೆಗಳನ್ನು ಹೊಂದಿದ ವ್ಯಕ್ತಿಗಳಿಗೆ ಸ್ವತಂತ್ರವಾಗಿ ಬದುಕಲು ಅಸಾಧ್ಯ ಮತ್ತು ಜೀವನ ಪೂರ್ತಿ ಅವರಿಗೆ 'ಆರೈಕೆಯ' ಅವಶ್ಯಕತೆ ಇರುತ್ತದೆ. ಈ ವ್ಯಕ್ತಿಗಳಿಗೆ ದೈನಂದಿನ ಚಟುವಟಿಕೆಗಳಲ್ಲಿ ಸಹಕರಿಸುವ ಬೋಧನೆ, ಮೂಲಭೂತ ವ್ಯಾವಹಾರಿಕ, ಸಾಮಾಜಿಕ ಕೌಶಲಗಳ ಅರಿವು ಮೂಡಿಸುವಿಕೆ ಹಾಗೂ ಸಂವೇದನಾತ್ಮಕ ಪ್ರಚೋದನೆಯ ಮೂಲಕ ಅರಿವನ್ನು ಮೂಡಿಸಬೇಕಾಗುತ್ತದೆ.

**ಇವರಲ್ಲಿ ಕಂಡುಬರುವ ತೊಂದರೆಗಳೆಂದರೆ:**

- ಸಂಜ್ಞಾನಾತ್ಮಕ, ದೈಹಿಕ, ಬೌದ್ಧಿಕ ಹಾಗೂ ಭಾಷಾ ಕ್ಷೇತ್ರಗಳಲ್ಲಿ ವಿಕಾಸ ಬಹಳ ಮಂದಗತಿಯಲ್ಲಿರುತ್ತದೆ.
- ತಮ್ಮ ದೈನಂದಿನ ಚಟುವಟಿಕೆಗಳನ್ನು ತಾವೇ ಮಾಡಿಕೊಳ್ಳಲು ಇವರಿಗೆ ಸಾಧ್ಯವಾಗುವುದಿಲ್ಲ.
- ವ್ಯಾವಹಾರಿಕ ಜ್ಞಾನದಲ್ಲಿನ ಕೊರತೆಯು, ಇತರರೊಂದಿಗೆ ವ್ಯವಹರಿಸಲು ತೊಂದರೆ ಮತ್ತು ವರ್ತನಾ ತೊಂದರೆಗಳನ್ನು ಉಂಟುಮಾಡುತ್ತದೆ.
- ಇವರಿಗೆ ನಿರಂತರವಾದ ಮತ್ತು ಜೀವನಪೂರ್ತಿಯ ಆರೈಕೆಯ ಅವಶ್ಯಕತೆ ಇದೆ.

**ಇವರಲ್ಲಿ ಕಂಡುಬರುವ ಕೆಲವು ಧನಾತ್ಮಕ ಅಂಶಗಳು ಹೀಗಿವೆ:**

- ಅಭ್ಯಾಸ ಮಾಡಿಸುವುದರ ಮೂಲಕ, ದೈನಂದಿನ ಚಟುವಟಿಕೆಗಳಲ್ಲಿ ಸಹಕಾರಿಗಳಾಗಿರಲು ಕಲಿಯಬಲ್ಲರು.
- ಸಂಜ್ಞೆಗಳು, ದೇಹಭಾಷೆ ಮತ್ತು ಸೀಮಿತವಾದ ಮಾತುಗಳ ಮೂಲಕ ತಮ್ಮ ಮೂಲಭೂತ ಅವಶ್ಯಕತೆಗಳನ್ನು ವ್ಯವಹರಿಸಲು ಕಲಿಯಬಲ್ಲರು.
- ಅಭ್ಯಾಸ ಮಾಡಿಸಿದರೆ ಪರಿಚಿತ ದಿನಚರಿಯಲ್ಲಿ ಸಾಮಾಜಿಕವಾಗಿ ಸರಿಯಾದ ರೀತಿಯಲ್ಲಿ ವರ್ತಿಸಲು ಕಲಿಯಬಲ್ಲರು.

**ಬುದ್ಧಿಮಾಂದ್ಯತೆಯ ಕಾರಣಗಳು:**

ಬುದ್ಧಿಮಾಂದ್ಯತೆಯ ಎರಡು ಪ್ರಮುಖ ಕಾರಣಗಳೆಂದರೆ, ಜೈವಿಕ ಹಾಗೂ ಮನೋಸಾಮಾಜಿಕ ಅಂಶಗಳು. ತೀವ್ರ ಮತ್ತು ಅತಿತೀವ್ರ ಬುದ್ಧಿಮಾಂದ್ಯತೆಯು ಸಾಮಾನ್ಯವಾಗಿ ಜೈವಿಕ ಕಾರಣಗಳಿಂದ ಉಂಟಾಗುತ್ತದೆ. ಅಲ್ಪ ಬುದ್ಧಿಮಾಂದ್ಯತೆಯು ಮನೋಸಾಮಾಜಿಕ ಕಾರಣಗಳಿಂದ ಸಾಮಾನ್ಯವಾಗಿ ಉಂಟಾಗುತ್ತದೆ.

**ಜೈವಿಕ ಕಾರಣಗಳು:**

**ಗರ್ಭಧಾರಣೆಗಿಂತ ಮುಂಚಿನ ಕಾರಣಗಳು:**

- **ತಾಯಿಯ ಆರೋಗ್ಯ:** ಆರೋಗ್ಯಯುತವಾದ ತಾಯಿಗೆ ಆರೋಗ್ಯವಂತ ಮಗುವು ಜನಿಸುತ್ತದೆ. ತಾಯಿ ಗರ್ಭಧರಿಸಿದಾಗ ಕನಿಷ್ಠ ಪಕ್ಷ 18 ವರ್ಷದವಳಾಗಿರಬೇಕು. ಗರ್ಭಧಾರಣೆಯ ಸಂದರ್ಭದಲ್ಲಿ ಹೆಚ್ಚಿನ ಪೌಷ್ಠಿಕಾಂಶಯುಕ್ತ ಆಹಾರವನ್ನು ಸೇವಿಸಬೇಕು. ಗರ್ಭವತಿ ಮಹಿಳೆಯು ತೊಂದರೆಯಾಗುವ ರೀತಿಯಲ್ಲಿ ಬೀಳದ ಹಾಗೆ ಎಚ್ಚರ ವಹಿಸಬೇಕು. ಏಕೆಂದರೆ ಇದು ಗರ್ಭಕ್ಕೆ ತೊಂದರೆ ಮಾಡಬಲ್ಲದು.
- **ಔಷಧ ಸೇವನೆ :-** ವೈದ್ಯರ ಸಲಹೆಯನ್ನು ತೆಗೆದುಕೊಳ್ಳದೇ, ಯಾವುದೇ ರೀತಿಯ ಔಷಧಿಗಳನ್ನು ಗರ್ಭವತಿ ಮಹಿಳೆಯು ತೆಗೆದುಕೊಳ್ಳಬಾರದು. ಹಾಗೆಯೇ ಆಕೆಯು ಮದ್ಯಸೇವನೆ ಅಥವಾ ಧೂಮಪಾನವನ್ನು ಮಾಡಬಾರದು ಇದು ಗರ್ಭಕ್ಕೆ ತೊಂದರೆ ಮಾಡಬಲ್ಲದು.
- **ವರ್ಣತಂತುಗಳಲ್ಲಿನ ಅವ್ಯವಸ್ಥೆ:-** ವರ್ಣತಂತುಗಳಲ್ಲಿನ (ಕ್ರೋಮೋಸೋಂಗಳು) ಅವ್ಯವಸ್ಥೆಗೆ ನಿರ್ದಿಷ್ಟ ಕಾರಣಗಳು ತಿಳಿದುಬಂದಿಲ್ಲ. ಈ ತೊಂದರೆಗಳು ಬಸಿರಿನ ಸಂದರ್ಭದಲ್ಲಿ ಉಂಟಾಗುತ್ತದೆ.

**ಗರ್ಭಧಾರಣೆಯ ಅವಧಿಯಲ್ಲಿನ ಕಾರಣಗಳು:**

- **ತಾಯಿಗೆ ಬರುವ ಕಾಯಿಲೆಗಳು:** ಗರ್ಭಿಣಿ ತಾಯಂದಿರು ರಕ್ತಹೀನತೆ, ಅಪಸ್ಮಾರದಂತಹ ಕಾಯಿಲೆಗಳಿಂದ ಬಳಲಿದಾಗ, ಅವರಿಗೆ ಹುಟ್ಟುವ ಮಗುವು ಬುದ್ಧಿಮಾಂದ್ಯತೆ ಹೊಂದುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.
- **ಸೋಂಕುಗಳು:** ಗರ್ಭಿಣಿ ತಾಯಿಯು ಜಾಂಡೀಸ್, ಜರ್ಮನ್ ಮಿಸೆಲ್ಸ್‌ನಂತಹ ಸೋಂಕು ಅಥವಾ ಕಾಯಿಲೆಗೊಳಗಾದಾಗಲೂ, ಹುಟ್ಟುವ ಮಗುವಿಗೆ ಬುದ್ಧಿಮಾಂದ್ಯತೆಯಾಗುವ ಸಾಧ್ಯತೆ ಇರುತ್ತದೆ.

Digitised by Bharatavani, CIIL

**ಪ್ರಸವ ಕಾಲದ ಕಾರಣಗಳು:**

➢ ಜನನ ಕಾಲದ ಆಘಾತ: ಹಲವಾರು ಸಂದರ್ಭಗಳಲ್ಲಿ ಅಸಮರ್ಪಕವಾದ ಪ್ರಸವ ವೇದನೆ, ಹೊಕ್ಕುಳ ಬಳ್ಳಿ ಶಿಶುವಿನ ಕತ್ತಿನ ಸುತ್ತ ಸುತ್ತಿಕೊಳ್ಳುವುದು, ತೊಂದರೆಗೆ ಕಾರಣವಾಗುತ್ತದೆ. ಇದರಿಂದಾಗಿ ಮಿದುಳಿನಲ್ಲಿ ಆಮ್ಲಜನಕದ ಕೊರೆತೆಯುಂಟಾಗಿ ಬುದ್ಧಿಮಾಂದ್ಯತೆಗೆ ಕಾರಣವಾಗಬಹುದು.

**ಶೈಶವ ಅವಧಿಯ ಕಾರಣಗಳು:**

➢ ಪೂರ್ಣಾವಧಿ ತುಂಬದೆ ಹುಟ್ಟುವ ಮಕ್ಕಳು 34 ವಾರಗಳಿಗಿಂತ ಮುಂಚೆ ಹುಟ್ಟಿದ ಮಕ್ಕಳು ಅಥವಾ ಹುಟ್ಟುವಾಗ 1.8 ಕೆ.ಜಿ.ಗಿಂತ ಕಡಿಮೆ ತೂಕಹೊಂದಿದ ಮಕ್ಕಳ ಮಿದುಳಿನ ಬೆಳವಣಿಗೆ ಕುಂಠಿತಗೊಂಡಾಗ ಬುದ್ಧಿಮಾಂದ್ಯತೆಗೆ ಕಾರಣವಾಗಬಹುದು.

**ಬುದ್ಧಿಮಾಂದ್ಯತೆಯುಳ್ಳ ವ್ಯಕ್ತಿಗಳಿಗೆ ನೀಡುವ ಶಿಕ್ಷಣ ಕ್ಷೇತ್ರಗಳು**

| ಕಾರ್ಯಕ್ಷೇತ್ರ | ಕೌಶಲಗಳು |
|---|---|
| ದೈಹಿಕ ನಿರ್ವಹಣೆ | ತಲೆಯನ್ನು ನೆಟ್ಟಗೆ ನಿಲ್ಲಿಸುವುದು,<br>ಆಧಾರವಿಲ್ಲದೆ ಕುಳಿತುಕೊಳ್ಳುವುದು<br>ಆಧಾರವಿಲ್ಲದೆ ನಿಂತುಕೊಳ್ಳುವುದು<br>ಸ್ವತಂತ್ರವಾಗಿ ನಡೆಯುವುದು<br>ಓಡುವುದು, ಕುಣಿಯುವುದು, ಜಂಪ್ ಮಾಡುವುದು, ಕೈಯನ್ನು ಊಟ ಮಾಡಲು, ಬರೆಯಲು ಮತ್ತು ಇತರ ದೈನಂದಿನ ಚಟುವಟಿಕೆಗಳನ್ನು ಮಾಡಲು ಬಳಸುವುದು. |
| ಸಂಜ್ಞಾನಾತ್ಮಕ ಕಲಿಕೆ | ಸುತ್ತಮುತ್ತಲಿನ ಪರಿಸರಕ್ಕೆ ಸ್ಪಂದಿಸುವುದು. ಜನರು, ವಸ್ತುಗಳು ಮತ್ತು ಚಿತ್ರಗಳನ್ನು ಕಂಡುಹಿಡಿಯುವುದು, ಓದುವುದು, ಬರೆಯುವುದು, ಅಂಕಿಗಳನ್ನು ಲೆಕ್ಕ ಮಾಡುವುದು, ವಯಸ್ಸಿಗನುಗುಣವಾಗಿ ವಸ್ತು ವಿಷಯಗಳ ಅರ್ಥಗ್ರಹಿಸುವುದು. |
| ಭಾಷೆ ಮತ್ತು ವ್ಯಾವಹಾರಿಕತೆಯ ವಿಕಾಸ | ತಮ್ಮ ಜೀವನಕ್ಕೆ ಸಂಬಂಧಪಟ್ಟ ಮತ್ತು ಸಮಂಜಸವಾದ ಭಾಷೆಯನ್ನು ಅರ್ಥಮಾಡಿಕೊಳ್ಳುವುದು. ತಮ್ಮ ಭಾವನೆ, ಬಯಕೆಗಳು ಮತ್ತು ಅವಶ್ಯಕತೆಗಳನ್ನು ಸೂಚಿಸುವುದು, ಪ್ರಶ್ನೆಗಳಿಗೆ ಉತ್ತರಿಸುವುದು. |
| ಸ್ವಯಂ–ಆರೈಕೆಯ ಕೌಶಲಗಳ ವಿಕಾಸ | ಊಟಮಾಡುವುದು ಮತ್ತು ಕುಡಿಯುವುದು. ಬಟ್ಟೆ ಹಾಕಿಕೊಳ್ಳುವುದು ಮತ್ತು ಬಿಚ್ಚುವುದು. ಸಾಮಾಜಿಕ ಅಂಗೀಕಾರದ ರೀತಿಯಲ್ಲಿ ಶೌಚಾಲಯವನ್ನು ಉಪಯೋಗಿಸುವುದು, ಕಸ ಗುಡಿಸುವುದು.<br>ಅಡಿಗೆ ಮಾಡುವುದು ಮತ್ತು ಸ್ವಚ್ಛತೆ ಮಾಡುವುದು, ತಮಗೆ ಸಹಾಯಕವಾದ ಸಾಧನಗಳನ್ನು ಹುಷಾರಾಗಿ ನೋಡಿಕೊಳ್ಳುವುದು. |
| ಜೀವನ ಕೌಶಲದ ಶಿಕ್ಷಣ | ವೃತ್ತಿ ತರಬೇತಿಗಾಗಿ ದುಡಿಮೆಯ ವರ್ತನೆಯನ್ನು ಬೆಳೆಸಿಕೊಳ್ಳುವುದು,<br>ಪರಿಸರದಲ್ಲಿರುವ ಸೌಕರ್ಯಗಳನ್ನು ಬಳಸಿಕೊಳ್ಳಲು ಕಲಿಯುವುದು,<br>ಅಂಚೆ ಕಾರ್ಯಾಲಯ, ಬ್ಯಾಂಕ್, ಆಸ್ಪತ್ರೆ, ತನ್ನ ಸಮಯದ ಸದುಪಯೋಗಕ್ಕಾಗಿ ವಿರಾಮಕಾಲದ ಕೌಶಲಗಳನ್ನು ಕಲಿಯುವುದು.<br>ಪರಿಸರದ, ದೇಶದ, ರಾಜ್ಯದ, ನಗರದ ಸಾಮಾನ್ಯ ವರದಿಗಳನ್ನು ತಿಳಿದುಕೊಳ್ಳುವುದು. ಎಲ್ಲಾ ಸಂದರ್ಭಗಳಿಗೂ ತಕ್ಕಂತಹ, ಯೋಗ್ಯವಾದ ಸಾಮಾಜಿಕ ಕೌಶಲಗಳನ್ನು ಕಲಿಯುವುದು. |

Digitised by Bharatavani, CIIL

**ಬೌದ್ಧಿಕ ಸವಾಲುಗಳುಳ್ಳ ಮಕ್ಕಳ ನಿರ್ವಹಣೆ:**

ಇವರುಗಳನ್ನು ಆರೈಕಾ ಗುಂಪಿಗೆ ಸೇರಿಸಬಹುದಾಗಿದೆ. ಈ ಗುಂಪಿನಲ್ಲಿ ಬಹಳ ಕಡಿಮೆ ಮಟ್ಟದ ಸಾಮರ್ಥ್ಯವಿರುವ ಮಕ್ಕಳಿರುತ್ತಾರೆ.

ಅರ್ಥಗರ್ಭಿತವಾದ ಚಲನೆ ಮತ್ತು ಭಾಷಾ ಸಂಪರ್ಕಗಳಲ್ಲಿ ಇವರಿಗೆ ಸ್ವಲ್ಪ ಮಟ್ಟಿಗಾದರೂ ಕಾರ್ಯ ನಿರ್ವಹಣೆ ಮಾಡಲು ತರಬೇತಿ ಕೊಡಬೇಕಾಗುತ್ತದೆ.

ದೈಹಿಕವಾಗಿ ಹಾಗೂ ಮಾನಸಿಕವಾಗಿ ದುರ್ಬಲರಾಗಿರುವ ಮಕ್ಕಳಿಗೆ ಶಿಕ್ಷಣ ನೀಡುವುದು. ಶಿಕ್ಷಣ ಕಾರ್ಯಗಳಲ್ಲಿ ಒಂದಾಗಿದೆ. ಇಂತಹ ಮಕ್ಕಳು ದೃಷ್ಟಿದೋಷ, ಶ್ರವಣ ದೋಷ, ವಾಕ್‌ದೋಷ, ಮೂಳೆಲೂನಕೆ, ಕಲಿಕಾ ನ್ಯೂನತೆಯಿಂದ ನರಳುತ್ತಿರಬಹುದು. ಇಂತಹ ಬೌದ್ಧಿಕ ಮತ್ತು ದೈಹಿಕ ಸವಾಲುಗಳನ್ನೆದುರಿಸುತ್ತಿರುವ ಮಕ್ಕಳಿಗೆ ವಿಶೇಷ ರೀತಿಯ ಶೈಕ್ಷಣಿಕ ಅಗತ್ಯಗಳು ಬೇಕಾಗಿವೆ. ಇಂತಹ ಮಕ್ಕಳನ್ನು ಶಿಕ್ಷಕರು ಇಲ್ಲವೆ ಪಾಲಕರು ಗುರುತಿಸಬೇಕು. ಇಂತಹ ದುರ್ಬಲತೆಗಳನ್ನು ಗುರ್ತಿಸುವಲ್ಲಿ ಶಿಕ್ಷಕರು ಹಾಗೂ ಪಾಲಕರು ಬೇಜವಾಬ್ದಾರಿ ತೋರಿಸಿದಲ್ಲಿ ಅಗೋಚರವಾಗಿರುವ ಊನಶಕ್ಷಕತೆಗಳು ತೀವ್ರ ಸ್ವರೂಪವನ್ನು ತಾಳಿ ಕಾಲಕ್ರಮೇಣ ಜಟಿಲ ಸಮಸ್ಯೆಗಳಿಗೆ ಆಸ್ಪದವಾಗಬಹುದು. ಇದರಿಂದ ಬೌದ್ಧಿಕ ಮತ್ತು ದೈಹಿಕವಾಗಿ ದುರ್ಬಲತೆಯುಂಟಾಗಿ ಮಕ್ಕಳ ವಿಕಾಸಕ್ಕೆ ತೊಂದರೆಯಾಗುತ್ತದೆ.

ಬೌದ್ಧಿಕ ಮತ್ತು ಮಾನಸಿಕ ದುರ್ಬಲರನ್ನು ಗುರ್ತಿಸುವ ಕಾರ್ಯವನ್ನು ಸುಲಭಗೊಳಿಸುವುದಕ್ಕಾಗಿ ಮನೋವಿಜ್ಞಾನಿಗಳು ವರ್ತನೆಯ ತಪಾಸಣಾ ಪಟ್ಟಿಗಳನ್ನು ತಯಾರಿಸಿರುವುದು ಶಿಕ್ಷಕರಿಗೆ ಅನುಕೂಲವಾಗಿದೆ. ದುರ್ಬಲತೆ ಇರುವ ಮಕ್ಕಳ ವರ್ತನೆಯ ಮಾದರಿ ಸ್ಪಷ್ಟ ತಿಳುವಳಿಕೆಯನ್ನು ಪ್ರತಿಯೊಬ್ಬ ಶಿಕ್ಷಕ ಹೊಂದಿರಬೇಕು.

**ಅರ್ಥ:** ಯಾವ ಮಕ್ಕಳು ಸಾಧಾರಣ ಮಕ್ಕಳಿಗಿಂತ ಬೌದ್ಧಿಕವಾಗಿ, ಭೌತಿಕವಾಗಿ ಭಿನ್ನವಾಗಿದ್ದು ಅವರಿಗೆ ಶಿಕ್ಷಣದಿಂದ ಅನುಕೂಲವಾಗಬೇಕಾದರೆ, ಇವರಿಗಾಗಿಯೇ ವಿಶೇಷ ವ್ಯವಸ್ಥೆ ಮಾಡಬೇಕಾಗುತ್ತದೋ ಅವರನ್ನು ಬೌದ್ಧಿಕ ಸವಾಲುಗಳನ್ನೇದುರಿಸುವ ಮಕ್ಕಳು ಎನ್ನುವರು.

ಸಮಗ್ರಗೊಳಿಸಿದ ಸಮುದಾಯದ ಪರಿಸರದಲ್ಲಿ ತಮ್ಮ ಪ್ರಾಮುಖ್ಯವಾದ ಜೀವನ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಮತ್ತು ಸ್ವಲ್ಪವೇ ಅಂಗವಿಕಲತೆ ಹೊಂದಿರುವ ಅಥವಾ ಅಂಗವಿಕಲತೆಯೇ ಇಲ್ಲದಿರುವ ಜನರುಗಳಿಗೆ ಲಭ್ಯವಿರುವಂತಹ ಗುಣಮಟ್ಟವುಳ್ಳ ಜೀವನವನ್ನು ಆನಂದಿಸುವುದಕ್ಕಾಗಿ ಒಂದಕ್ಕಿಂತ ಹೆಚ್ಚು ಜೀವನ ಚಟುವಟಿಕೆಗಳಲ್ಲಿ ವ್ಯಾಪಕವಾದ ಬೆಂಬಲವನ್ನು ನೀಡಬೇಕಾದ ಅವಶ್ಯಕತೆಯಿರುತ್ತದೆ.

ಇಂದ್ರಿಯ ಕೌಶಲಗಳಲ್ಲಿ ತೊಂದರೆ ಇದ್ದು ಸ್ಪರ್ಶ, ಶ್ರವಣ, ದೃಷ್ಟಿ, ವಾಸನೆ, ರುಚಿಗಳಲ್ಲಿ ಕಾರ್ಯನಿರ್ವಹಣೆಯ ತೊಂದರೆ.

**ಅವರಲ್ಲಿ ಈ ನ್ಯೂನತೆಗಳಿರುತ್ತವೆ :–**

ಮೇಲಿನ ಮಾನವ ಅವಶ್ಯಕತೆಗಳ ಪೂರೈಕೆಗಳಲ್ಲಿ ತೊಂದರೆ. ಇವುಗಳ ಸಮ್ಮಿಶ್ರಣದಿಂದಾಗಿ ಹೆಚ್ಚುವರಿ ಅಂಗವಿಕಲತೆಗಳು. ಜೀವನದ ಅನೇಕ ಕ್ಷೇತ್ರಗಳಲ್ಲಿ ಬೆಂಬಲ ಬೇಕಾಗುತ್ತದೆ. ಮಲ–ಮೂತ್ರಗಳನ್ನು ಮಾಡುವುದು, ತಿನ್ನುವುದು ಇತ್ಯಾದಿ ಚಟುವಟಿಕೆಗಳಲ್ಲಿ ಇವರುಗಳು ಯಾವಾಗಲೂ ಸ್ವತಂತ್ರರಾಗಿರುವುದಿಲ್ಲ. ಇತರರೊಂದಿಗೆ ಸಂಪರ್ಕ–ಸಂದೇಹಗಳನ್ನು ಹೊಂದುವುದು ಮತ್ತು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸುವುದು, ಕಲಿಯುವುದು, ಜೀವಿಸುವುದು. ಇವುಗಳಿಗೆ ಸಾಕಷ್ಟು ಬೆಂಬಲಗಳು ಬೇಕಾಗುತ್ತವೆ.

ಇವರಲ್ಲಿ ಕೆಲವರು ಬೇಕಾದ ಸಮಯದಲ್ಲಿ ಒಂದು ಚಟುವಟಿಕೆಯತ್ತ ಗಮನ ಹರಿಸುವಲ್ಲಿ ವಿಫಲರಾಗಿರುತ್ತಾರೆ. ಇವರು ಸಾಮಾನ್ಯ ಅಥವಾ ಸರಾಸರಿ ಮಕ್ಕಳಿಗಿಂತ ಭಿನ್ನವಾಗಿರುತ್ತಾರೆ, ಅಥವಾ ವಯಸ್ಸಿಗನುಗುಣವಾಗಿ ಸಾಮಾನ್ಯ ಮಕ್ಕಳಿಗಿಂತ ಭಿನ್ನವಾದ ರೀತಿಯಲ್ಲಿ ವರ್ತಿಸುತ್ತಾರೆ. ಇವರನ್ನು ಅಸಾಮಾನ್ಯ ಮಕ್ಕಳೆಂದೂ ಕರೆಯಲಾಗಿದೆ. ಈ ಅಸಾಧಾರಣ ಮಕ್ಕಳ ಗುಂಪಿನಲ್ಲಿ

ಪ್ರತಿಭಾವಂತರು (Gifted Children)

ಬುದ್ಧಿಮಾಂದ್ಯರು (Mentally Retarded)

ಕುರುಡರು (Visually Impaired)

ಕಿವುಡರು (Hearing Impaired)

ಕೈ ಕಾಲು ಊನವಾಗಿರುವವರು (Cvippled)

ಮೂರ್ಛೇರೋಗಿಗಳು (Epileptics)

ಹೃದ್ರೋಗಿಗಳು, ಸೂಕ್ಷ್ಮ ಪ್ರಕೃತಿಯುಳ್ಳವರು (Sensitives)

ಇವರ ಜೊತೆಗೆ ವಾಕ್‌ದೋಷಗಳನ್ನುಳ್ಳವರು (Speech Defectives)

ಭಾವೋದ್ವೇಗಕ್ಕೊಳಗಾಗಿರುವವರು (Emotionally Disturbed)

ಬಾಲಾಪರಾಧಿಗಳು ಮತ್ತು (Juvenile Delinquents)

ಮಾನಸಿಕ ಅಸ್ವಸ್ಥರು (Mentally ill) ಸೇರಿರುತ್ತಾರೆ.

ಈ ಅಸಾಧಾರಣ ಮಕ್ಕಳಿಗೆ ಶಾಲೆಗಳಲ್ಲಿ ಏನು ಕಲಿಸಬೇಕೆಂಬುದು ಬಹಳ ಕ್ಲಿಷ್ಟವಾದ ಸಮಸ್ಯೆ. ಇಂತಹ ಮಕ್ಕಳಲ್ಲಿ ಪರಾವಲಂಬನೆ ತಪ್ಪಿಸಿ, ಸ್ವಾವಲಂಬಿಗಳಾಗಿ ಮಾಡಿಸುವುದು ಕಷ್ಟದ ಕೆಲಸವೆ.

Digitised by Bharatavani, CIIL

ಈ ಮಕ್ಕಳಿಗೆ ಏನನ್ನಾದರೂ ಕಲಿಸಬೇಕಾದರೆ ಆ ಶಿಕ್ಷಕರಿಗೆ ವಿಶೇಷಕರವಾದ ತರಬೇತಿ ಕೊಟ್ಟಿರಬೇಕು. ಮುಖ್ಯವಾಗಿ ಇವರಲ್ಲಿ ತಾಳ್ಮೆ, ಆತ್ಮಸಂಯಮ, ತಮ್ಮ ಕಾರ್ಯದಲ್ಲಿ ಅತಿಯಾದ ವಿಶ್ವಾಸ, ಸತತವಾದ ಪ್ರಯತ್ನ, ಕಾರ್ಯಕುಶಲತೆ. ಇವೆಲ್ಲಕ್ಕಿಂತ ಮಿಗಿಲಾಗಿ ಇವರು ಶಾರೀರಕವಾಗಿ ಮತ್ತು ಮಾನಸಿಕವಾಗಿ ಸ್ವಸ್ಥರಿರಬೇಕು. ಇಂದು ಈ ಅಸಾಧಾರಣ ಮಕ್ಕಳ ಪೈಕಿ ಕೆಲವರಿಗೆ ಮಾತ್ರ ವಿಶೇಷ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ಯೋಜನೆಯಲ್ಲಿ ಎಲ್ಲಾ ಮಕ್ಕಳಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಶೈಕ್ಷಣಿಕ ಅವಕಾಶಗಳನ್ನು ಒದಗಿಸಲಾಗಿದೆ.

–ಕಲ್ಪನ ಎಸ್. ಪ್ರಕಾಶ್

## ಬ್ರಿಟಿಷರ ಅವಧಿಯಲ್ಲಿ ದೇಶೀಯ ಶಿಕ್ಷಣ ವ್ಯವಸ್ಥೆ

ಬ್ರಿಟಿಷರು ಭಾರತಕ್ಕೆ ಬಂದಾಗ ಇಲ್ಲಿ ಎರಡು ರೀತಿಯ ಶೈಕ್ಷಣಿಕ ವ್ಯವಸ್ಥೆ ಇರುವುದನ್ನು ಕಂಡರು. ಇವುಗಳನ್ನು ಅವರು ಶಾಸ್ತ್ರೀಯ ಮತ್ತು ಧಾರ್ಮಿಕ ಶಿಕ್ಷಣ ವ್ಯವಸ್ಥೆ ಎಂದು ಹೆಸರಿಸಿದರು. ಒಂದು ಪೂರ್ವಭಾರತದಲ್ಲಿ ಪ್ರಚಲಿತರಾಗಿದ್ದ ಬ್ರಾಹ್ಮಣೀಯ ಶಿಕ್ಷಣ ವ್ಯವಸ್ಥೆಯಾಗಿದ್ದರೆ, ಇನ್ನೊಂದು ಮಕ್ತಾಬ್ ಮತ್ತು ಮದ್ರಸ್‌ಗಳನ್ನು ಒಳಗೊಂಡ ಇಸ್ಲಾಮಿಕ್ ಶಿಕ್ಷಣ ವ್ಯವಸ್ಥೆ. ಪ್ರಾರಂಭದಲ್ಲಿ ಬ್ರಿಟಿಷರಿಗೆ ಗ್ರಾಮಗಳ ಹಾಗೂ ಅಲ್ಲಿನ ಆಡಳಿತ ಪದ್ಧತಿಗಳ ಬಗ್ಗೆ ಅತ್ಯಲ್ಪ ಸಂಪರ್ಕ ಇದ್ದುದರಿಂದ ಪ್ರಾಚೀನಕಾಲದಿಂದ ರೂಢಿಯಲ್ಲಿದ್ದ ಗ್ರಾಮಗಳ ಹಾಗೂ ಅಲ್ಲಿನ ರೈತಾಪಿ ಜನರ ಕುಲಕಸುಬುದಾರರ, ಕುಶಲ ಕರ್ಮಿಗಳ ಮಕ್ಕಳಿಗೆ ಅವರ ಜೀವನೋಪಾಯಕ್ಕೆ ಅಗತ್ಯವಾದ ಮೂಲಾಂಕನದ ಶಿಕ್ಷಣವನ್ನು ನೀಡುತ್ತಿದ್ದುದು ಅವರ ಅರಿವಿಗೆ ಬಂದಿರಲಿಲ್ಲ. ಅಲ್ಲದೆ, ಬುದ್ಧನ ಮರಣಾನಂತರ ಅಸ್ತಿತ್ವಕ್ಕೆ ಬಂದ, ಬುದ್ಧ ಪ್ರತಿಪಾದಿಸಿದ "ಜ್ಞಾನೋದಯ" ಅಥವಾ 'ನಿರ್ವಾಣ'ದ ಕುರಿತು ಶಿಕ್ಷಣ ನೀಡುವ ಬೌದ್ಧ ವಿಹಾರದ ಕುರಿತು ಯಾವುದೇ ವಿವರಗಳು ನಳಂದ ಹಾಗೂ ಇನ್ನಿತರ ಬೌದ್ಧ ವಿಹಾರಗಳ ಉತ್ಖನನದವರೆಗೂ ತಿಳಿದಿರಲಿಲ್ಲ. ಮಧ್ಯಕಾಲೀನ ಅವಧಿಯಲ್ಲಿ ಮುಸ್ಲಿಂ ದಾಳಿಕೋರರಿಂದ ಈ ಬೌದ್ಧ ವಿಹಾರಗಳು ನಾಶಗೊಂಡಿದ್ದವು ಬೌದ್ಧ ವಿಹಾರಗಳು ವ್ಯವಸ್ಥಿತವಾದ ಶಿಕ್ಷಣ ಸಂಸ್ಥೆಗಳಾಗಿದ್ದು ನಿರ್ಮಿಸಲ್ಪಟ್ಟ ಕಟ್ಟಡಗಳಲ್ಲಿ ನಡೆಯುತ್ತಿದ್ದು ಇಲ್ಲಿ ಶಿಕ್ಷಕರೂ ಮತ್ತು ವಿದ್ಯಾರ್ಥಿಗಳು ಪ್ರಾಪಂಚಿಕ ಆಸೆ ಆಕಾಂಕ್ಷೆಗಳನ್ನು ತೊರೆದು "ನಿರ್ವಾಣ" ಪಡೆಯುವ ಉದ್ದೇಶದಿಂದ, ಶಿಕ್ಷಣ ಪಡೆಯುತ್ತಿದ್ದರು. ಇವುಗಳನ್ನು ಮುಸ್ಲಿಂ ದಾಳಿಕೋರರು ಸುಲಭದಲ್ಲಿ ನಾಶಗೊಳಿಸಲು ಶಕ್ತರಾಗಿದ್ದರು. ಆದರೆ ವೇದ ಶಾಲೆಗಳು ಹಾಗಲ್ಲ. ಇವು ಭಾರತದ ಉತ್ತರ ಭಾಗದಲ್ಲಿ ಹಾಗೂ ದಕ್ಷಿಣದ ವಿಂಧ್ಯ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟಿದ್ದವು ಮತ್ತು ಹಿಂದೂ ರಾಜರ ಕೃಪಾಶ್ರಯದ ಮೂಲಕ ಮುಸ್ಲಿಂ ದಾಳಿಕೋರರಿಂದ ರಕ್ಷಿಸಲ್ಪಟ್ಟಿದ್ದವು. ಇಲ್ಲಿ ಗುರು–ಶಿಷ್ಯ ಪರಂಪರೆಯ ಮೂಲಕ ಶಿಕ್ಷಣ ಜಾರಿಯಲ್ಲಿತ್ತು.

ಭಾರತದ ಮೇಲೆ ದಾಳಿ ಮಾಡಿ, ಇಲ್ಲಿನ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡು, ಅಲ್ಲಿಯ ನಿವಾಸಿಗಳನ್ನುಬಲವಂತವಾಗಿ ಮಾತಾಂತರಗೊಳಸಿದ ಮುಸ್ಲಿಂ ರಾಜರು ಮುಸ್ಲಿಂ ಆಡಳಿತದ ಅನುಕೂಲದ ದೃಷ್ಟಿಯಿಂದ ಭಾರತದಲ್ಲಿ ಇಸ್ಲಾಂ ಶಿಕ್ಷಣ ವ್ಯವಸ್ಥೆಗೆ ನಾಂದಿ ಹಾಡಿದರು. ಇಸ್ಲಾಂ ಶಿಕ್ಷಣವನ್ನು ಮಕ್ತಾಬ್ ಮತ್ತು ಮದರಸಗಳಲ್ಲಿ ನೀಡಲಾಗುತ್ತಿತ್ತು. ಮಕ್ತಾಬ್‌ಗಳನ್ನು ಹೆಚ್ಚಾಗಿ ಗ್ರಾಮಾಂತರ ಪ್ರದೇಶದ ಮಸೀದಿಗಳ ಬಳಿ ನಿರ್ಮಿಸಲಾಗುತ್ತಿತ್ತು. ಹೊಸದಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ವ್ಯಕ್ತಿಗಳಿಗೆ ಅರೇಬಿಕ್ ಭಾಷೆಯನ್ನು ಕಲಿಯಲು, ಹಾಗೂ ಆ ಮೂಲಕ ಕುರಾನ್ ಪಠಿಸಲು ಅನುಕೂಲ ಕಲ್ಪಿಸಲು ಮುಕ್ತಾಬ್‌ಗಳು ನೆರವಾಗುತ್ತಿದ್ದವು. ನಗರ ಪ್ರದೇಶದಲ್ಲಿ ಸ್ಥಾಪಿತವಾಗಿದ್ದ ಮದ್ರಸ್‌ಗಳಲ್ಲಿ ಪರ್ಷಿಯನ್ ಭಾಷೆಯಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಇದರಿಂದ ಪರ್ಷಿಯನ್ ಸಂಸ್ಕೃತಿ ಮತ್ತು ಸಂಪ್ರದಾಯಗಳು ಭಾರತದ ಮುಸ್ಲಿಂ ಕೋರ್ಟ್‌ಗಳಲ್ಲಿ ಪ್ರಚಾರಕ್ಕೆ ಬರುವಂತಾಯಿತು. ಇಂತಹ ಇಸ್ಲಾಮಿಕ್ ಸಂಸ್ಥೆಗಳಲ್ಲಿ ನೀಡಲಾಗುತ್ತಿದ್ದ ಶಿಕ್ಷಣವು, ಇಲ್ಲಿರುವ ಅಗತ್ಯಗಳಿಗೆ, ಆಸೆ–ಆಕಾಂಕ್ಷೆಗಳಿಗೆ ಜನರಿಗೆ ಅಪ್ರಸ್ತುತವಾಗಿದ್ದವು. 16ನೇ ಶತಮಾನದ ಅಂತ್ಯಭಾಗದಲ್ಲಿ ಅಕ್ಬರನು ಈ ಪದ್ಧತಿಯಲ್ಲಿ ಸುಧಾರಣೆ ತರುವ ಪ್ರಯತ್ನ ಮಾಡಿದರೂ ಇದು ಹಾಗೆಯೇ ಮುಂದುವರಿಯಿತು. ಬರ್ನಿಯರ್ ಮಾತುಗಳನ್ನು ನಂಬುವುದಾದರೆ 'ಒಂದು ದೇಶದ ಜನರ, ಅದರ ಭೌಗೋಳಿಕ ಲಕ್ಷಣ, ಇತಿಹಾಸ, ಕಲೆ ಮುಂತಾದವುಗಳ ಕುರಿತು ಮಾಹಿತಿ ನೀಡದ ಶಿಕ್ಷಣ ಪದ್ಧತಿಯ ಔಚಿತ್ಯವನ್ನು ಪ್ರಶ್ನಿಸಿದ ಮೊದಲ ಮುಸ್ಲಿಂ ಚಕ್ರವರ್ತಿ ಎಂದರೆ ಔರಂಗಜೇಬ್' ವಾಸ್ತವವಾಗಿ ಇಸ್ಲಾಮಿಕ್ ಶಿಕ್ಷಣ ವ್ಯವಸ್ಥೆಯು ಬ್ರಿಟಿಷರು ಭಾರತದಲ್ಲಿ ಪರಿಚಯಿಸಿದ ಪಾಶ್ಚಿಮಾತ್ಯ ಶಿಕ್ಷಣ ವ್ಯವಸ್ಥೆಯನ್ನು ಹೋಲುತ್ತದೆ. ವಿಫುಲ ಸಂಖ್ಯೆಯಲ್ಲಿದ್ದ ಹಿಂದೂಗಳು 16ನೇ ಶತಮಾನದ ಬಳಿಕ, ಮು0ಸಲ್ಮಾನ್ ಅಳ್ವಿಕೆಯಡಿ ಪರ್ಶಿಯನ್ ಭಾಷೆಯನ್ನು ಕಲಿಯಬೇಕಾದ ಅನಿವಾರ್ಯತೆಗೆ ಸಿಲುಕಿದರು. ಮದ್ರಸ್‌ಗಳಲ್ಲಿ ತರಬೇತಿ ಹೊಂದಿದ ಮುಸ್ಲಿಂ ಅಧಿಕಾರಿಗಳು ಭಾರತದಲ್ಲಿನ ಮುಸ್ಲಿಂ ಚಕ್ರಾಧಿಪತ್ಯದ ಅಗೋಚರ ಸ್ತಂಭಗಳಾಗಿದ್ದರು.

'ವೇದಪಾಠ ಶಾಲೆ' ಎಂಬುದು ಒಂದು ಸಣ್ಣದಾದ ಸ್ಥಳೀಯ ಶಾಲೆಯಾಗಿತ್ತು. ಇಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ಜೊತೆ ಕೆಲಕಾಲ ಇರುತ್ತಿದ್ದರು ಮತ್ತು ಋತ್, ಸಾಮ, ಯಜುರ್ ಹಾಗೂ ಅಥರ್ವ ಎಂಬ ನಾಲ್ಕು ವೇದಗಳನ್ನು ಹಾಗೂ ಆರು ವೇದಾಂಗಗಳಾದ ಶಿಕ್ಷ ಜ್ಯೋತಿಷ್ಯ, ಕಲ್ಪ, ನಿರುಕ್ತ ಛಂದೊ, ಮತ್ತು ವ್ಯಾಕರಣಗಳಲ್ಲಿ ಅಂತೆಯೇ ವಿವಿಧ ಶಾಸ್ತ್ರಗಳನ್ನು ಒಳಗೊಂಡ ವಿವಿಧ ಹಾಗೂ ಆಯುರ್ವೇದ ಕಲೆ ಮತ್ತು ಕೌಶಲ್ಯಗಳನ್ನು ಇಲ್ಲಿ ಕಲಿಸಲಾಗುತ್ತಿತ್ತು.

Digitised by Bharatavani, CIIL

ವೇದಶಾಲೆಗಳಲ್ಲಿ ವಿದ್ಯಾರ್ಥಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯಿತ್ತು. ಇದರ ಬದಲು ಅವರು ತಮ್ಮ ಗುರುಗಳ ಕೆಲವು ಸೇವೆಗಳನ್ನು ಮಾಡಬೇಕಿತ್ತು. ಇವರಲ್ಲಿ ಹೆಚ್ಚಿನ ಮಂದಿ ಪುರೋಹಿತ ವರ್ಗದವರು ವಿದ್ಯಾರ್ಥಿಗಳಾಗಿರುತ್ತಿದ್ದರು. ಶಾಲೆಗಳಲ್ಲಿ ವೇದಗಳ ಅಧ್ಯಯನವು ಪುರೋಹಿತ ವರ್ಗದವರು ಅಥವಾ ಬ್ರಾಹ್ಮಣರದ್ದೆ ಆಗಿದ್ದರೂ ಇನ್ನುಳಿದ ಮೂರು ವರ್ಗದವರು ಅಂದರೆ ಕ್ಷತ್ರಿಯರು, ವೈಶ್ಯರು ಹಾಗೂ ಶೂದ್ರರು ಯುದ್ಧ ವಿಜ್ಞಾನ, ಆಯುರ್ವೇದ ಹಾಗೂ ಇನ್ನಿತರ ಕುಶಲ ಕಲೆಗಳನ್ನು ಅಭ್ಯಾಸಿಸುತ್ತಿದ್ದರು ಮತ್ತು ಈ ಮೂಲಕ ಪ್ರಾಚೀನ ಭಾರತದಲ್ಲಿ ಒಂದು ಸಮೃದ್ಧ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾಗಿದ್ದರು. ಆರಂಭದಲ್ಲಿ ವೇದಪಾಠಶಾಲೆಗಳು ಸೃಜನಾತ್ಮಕ ಕಲಿಕೆಯ ಕೇಂದ್ರವಾಗಿದ್ದವು. ಆದರೆ ಬ್ರಾಹ್ಮಣ ಧರ್ಮಕ್ಕೆ ಬೌದ್ಧಧರ್ಮದಿಂದ ಎದುರಾದ ಸವಾಲನ್ನು ಎದುರಿಸುವ ನಿಟ್ಟಿನಲ್ಲಿ ವೇದ ಶಿಕ್ಷಣವನ್ನು ಹಲವು 'ಸೂತ್ರ'ಗಳ ರೂಪದಲ್ಲಿ ಸರಳೀಕರಿಸಲಾಯಿತು. ವೇದಪಾಠಶಾಲೆಯಲ್ಲಿ ಅಧ್ಯಯನ ಮುಗಿಸಿ ತೆರಳುವ ವಿದ್ಯಾರ್ಥಿಗಳು ತಮ್ಮ ತಮ್ಮ ಊರಿನಲ್ಲಿ ಸ್ವಂತವಾಗಿ ವೇದ ಪಾಠಶಾಲೆ ಆರಂಭಿಸಬಹುದಾಗಿತ್ತು. ಮುಸ್ಲಿಂ ಆಡಳಿತಗಾರರು ಸಂಸ್ಕೃತದ ಸ್ಥಾನದಲ್ಲಿ ಪರ್ಶಿಯನ್ ಭಾಷೆಯನ್ನು ರಾಜಭಾಷೆಯಾಗಿ ಅಂಗೀಕರಿಸಿದಾಗ ವೇದಭಾಷೆಗೆ ರಾಜಾಶ್ರಯ ತಪ್ಪಿತು ಆದರೆ ಪುರೋಹಿತವರ್ಗದವರಿಂದಾಗಿ ವೇದಭಾಷೆ ಉಳಿದುಕೊಂಡಿತು. ವ್ಯಾಪಾರಿ ಸಂಸ್ಥೆಯಾಗಿದ್ದ ಈಸ್ಟ್ ಇಂಡಿಯಾ ಕಂಪನಿಯು 18ನೇ ಶತಮಾನದ ಅಂತ್ಯಭಾಗ ಹಾಗೂ 19ನೇ ಶತಮಾನದ ಆದಿಭಾಗದಲ್ಲಿ ಆಡಳಿತಗಾರರಾಗಿ ಪರಿವರ್ತನೆಗೊಂಡಾಗ ಸಂಸ್ಕೃತ ಭಾಷೆಗೆ ಉತ್ತೇಜನ ದೊರಕಿತು. 1779ರಲ್ಲಿ ಚಾರ್ಲ್ಸ್ ವಿಲ್ಕಿನ್ಸ್‌ನು ಸಂಸ್ಕೃತ ವ್ಯಾಕರಣ ಪುಸ್ತಕ ಪ್ರಕಟಿಸಿದ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶನಾಗಿದ್ದ ವಿಲಿಯಂ ಜೋನ್ಸ್ 1784ರಲ್ಲಿ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಆರಂಭಿಸಿದ ಮತ್ತು ಸಂಸ್ಕೃತ ಕಲಿಯುವ ಬಗ್ಗೆ ಹೆಚ್ಚಿನ ಒಲವು ತೋರಿಸಿದ. 1792ರಲ್ಲಿ ಬನಾರಸ್ ರೆಸಿಡೆಂಟ್ ಆಗಿದ್ದ ಜೊನಾಥನ್ ಡಂಕನ್ ಎಂಬಾತ ಹಿಂದೂಗಳ ಸಾಹಿತ್ಯ, ಧರ್ಮ ಗ್ರಂಥಗಳು, ಕಾನೂನು ಹಾಗೂ ಆಚರಣೆಗಳನ್ನು ಕಾಪಿಡುವ ಉದ್ದೇಶದಿಂದ ಬನಾರಸ್‌ನಲ್ಲಿ ಸಂಸ್ಕೃತ ಕಾಲೇಜು ಒಂದನ್ನು ಆರಂಭಿಸಿದ. ಇದೇ ರೀತಿ, 1781ರಲ್ಲಿ ವಾರನ್ ಹೇಸ್ಟಿಂಗ್ಸ್ ಕಲ್ಕತ್ತಾ ಮದ್ರಸಾವನ್ನು ಆರಂಭಿಸಿದ. ಮುಸ್ಲಿಂ ಕಾನೂನು ಮತ್ತು ನ್ಯಾಯಶಾಸ್ತ್ರದ ಬೋಧನೆ ಇದರ ಗುರಿಯಾಗಿತ್ತು ಈ ಕಾರಣಕ್ಕಾಗಿ ಆರಂಭದಲ್ಲಿ ಅವನು ತನ್ನ ಹಣವನ್ನು ವಿನಿಯೋಗಿಸಿದ. ಇದರಿಂದ ಇಸ್ಲಾಮಿಕ್ ಶಿಕ್ಷಣಕ್ಕೆ ಉತ್ತೇಜನ ದೊರಕಿದಂತಾಯ್ತು. ಬ್ರಿಟಿಷ್ ಆಳ್ವಿಕೆಯಲ್ಲಿದ್ದ ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯ ಜವಾಬ್ದಾರಿಯನ್ನು ಈಸ್ಟ್ ಇಂಡಿಯಾ ಕಂಪೆನಿ ವಹಿಸಿಕೊಂಡಿತ್ತು ಮತ್ತು ಈ ಉದ್ದೇಶಕ್ಕಾಗಿ 1 ಲಕ್ಷ ರೂಪಾಯಿ ಮೊಬಲಗನ್ನು ಮಂಜೂರು ಮಾಡಿತು. 1823ರಲ್ಲಿ ಬಿಡುಗಡೆಯಾದ ಈ ನಿಧಿಯನ್ನು ಸಂಸ್ಕೃತ ಗ್ರಂಥಗಳ, ಮುದ್ರಣ, ಸಂಸ್ಕೃತ ಪಂಡಿತರಿಗೆ ನೆರವು, ಕಲ್ಕತ್ತಾದಲ್ಲಿ ಹಾಗೂ ಪುಣೆಯಲ್ಲಿ (1821) ಸಂಸ್ಕೃತ ಕಾಲೇಜಿನ ಸ್ಥಾಪನೆ ಮುಂತಾದ ಕಾರ್ಯಗಳಿಗೆ ವಿನಿಯೋಗಿಸಲಾಯಿತು. ಆದರೆ, 1835ರಲ್ಲಿ ಪರ್ಶಿಯನ್‌ಗೆ ಬದಲಾಗಿ ಇಂಗ್ಲಿಷ್ ಭಾಷೆ ಅಧಿಕೃತ ರಾಜಭಾಷೆಯಾಗಿ ಬಳಕೆಗೆ ಬಂದಾಗ ಸಂಸ್ಕೃತ ಅಭ್ಯಾಸಕ್ಕೆ ನೀಡಲಾಗುತ್ತಿದ್ದ ಸಹಾಯಧನದ ಹರಿವು ಬತ್ತಿ ಹೋಯಿತು. ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಸಂಸ್ಕೃತವು ಮತ್ತೊಮ್ಮೆ ಪುರೋಹಿತ ವರ್ಗದವರ ಆಶ್ರಯದಡಿ ಬಂದಿತು. ಬ್ರಿಟಿಷರು ಹಳ್ಳಿಗಳಲ್ಲಿ ಆರಂಭಿಸಿದ ಶಾಲೆಗಳಲ್ಲಿ ಮಾತೃಭಾಷೆಯ ಶಿಕ್ಷಣ ಮಾಧ್ಯಮವಾಗಿ ಬಳಕೆಗೆ ಬಂದಾಗ ಮತ್ತು ಹೆಚ್ಚಿನ ಸಂಖ್ಯೆಯಲ್ಲಿದ್ದ ಮಧ್ಯಮವರ್ಗದವರು ನೂತನ ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚಿನ ಉದ್ಯೋಗಾವಕಾಶದವರು ನೂತನ ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚಿನ ಉದ್ಯೋಗಾವಕಾಶ ಇರುವುದನ್ನು ಮನಗಂಡಾಗ, ಸಂಸ್ಕೃತದತ್ತ ಜನರ ಒಲವು ಕ್ಷೀಣವಾಗುತ್ತಾ ಹೋಯಿತು. ಪ್ರಾಚೀನ ಭಾರತ ಕಾಲದಲ್ಲಿ ಬುಡಕಟ್ಟು ಜನಾಂಗದವರ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಗ್ರಾಮೀಣ ಶಾಲೆಗಳು ಅಥವಾ ಪಾಠಶಾಲೆಗಳ ಅವಸ್ಥೆಯೂ ಇದೇ ರೀತಿಯಾಗಿತ್ತು. ಗ್ರಾಮಗಳಲ್ಲಿ ಪುರೋಹಿತವರ್ಗದವರನ್ನು ಹೊರತುಪಡಿಸಿ ಇತರರ ಶಿಕ್ಷಣ ವ್ಯವಸ್ಥೆಯು ಹಳ್ಳಿಯ ಶಾಲೆಗಳಲ್ಲಿ ನಡೆಯುತ್ತಿತ್ತು. ಈ ಶಾಲೆಗಳ ಶಿಕ್ಷಕರನ್ನು ಗ್ರಾಮ ಸಭೆಯಲ್ಲಿ ನೇಮಿಸಲಾಗುತ್ತಿತ್ತು. ಕೃಷಿಕರು ವ್ಯಾಪಾರಿಗಳು, ಸಣ್ಣ ವ್ಯಾಪಾರಸ್ಥರು ಕುಶಲಕರ್ಮಿಗಳು ಇವರ ಮಕ್ಕಳೇ ಹೆಚ್ಚಾಗಿ ಇಲ್ಲಿಯ ವಿದ್ಯಾರ್ಥಿಗಳಾಗಿದ್ದರು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ 3ಆರ್‌ಗಳನ್ನು ಕಲಿಸುತ್ತಿದ್ದರು. ಇವರಿಗೆ ಸ್ಥಳೀಯ ಪ್ರಾಕೃತ ಭಾಷೆಯಲ್ಲಿ ಬೋಧನೆ ಆಗುತ್ತಿತ್ತು ಶಿಕ್ಷಕರಿಗೆ ವಸ್ತುಗಳ ರೂಪದಲ್ಲಿ ಶುಲ್ಕ ನೀಡಲಾಗುತ್ತಿತ್ತು. ಈ ಶಾಲೆ ವರ್ಷದ ಎಲ್ಲಾ ದಿನಗಳಲ್ಲೂ ತೆರೆದಿರುತ್ತಿತ್ತು. ವಿದ್ಯಾರ್ಥಿಗಳು ತಮಗೆ ಅನುಕೂಲವಾದ ದಿನದಂದು ಶಾಲೆಗೆ ಸೇರಬಹುದಿತ್ತು. ಪ್ರಾಥಮಿಕ ಜ್ಞಾನ ಪಡೆದ ಬಳಿಕ ಅವರು ಶಾಲೆ ಬಿಟ್ಟು ತಮ್ಮದೇ ಆದ ಸ್ವಂತ ಉದ್ಯೋಗ ಆರಂಭಿಸಬಹುದಿತ್ತು ಅಥವಾ ತಮ್ಮ ಕುಲಕಸುಬನ್ನು ಮುಂದುವರಿಸಬಹುದಿತ್ತು. ಮಧ್ಯಯುಗದ ಭಾರತದಲ್ಲಿನ ಮುಸ್ಲಿಂ ಆಡಳಿತಕಾಲದಲ್ಲಿ ವಿಶಾಲವಾದ ಭೂಪ್ರದೇಶಗಳು ಹಳೆಯ ಹಿಂದೂ ಪಾಳೆಯಗಾರರ ಕೈಯಲ್ಲೇ ಉಳಿಯಬೇಕಾದ ಅನಿವಾರ್ಯತೆ ಇತ್ತು. ಈ ರಾಜರು ತಮ್ಮ ಪಿತ್ರಾರ್ಜಿತ ಪ್ರದೇಶದ ಗಡಿಭಾಗಗಳನ್ನು ರಕ್ಷಿಸಿಕೊಂಡರೆ ಸಾಕಾಗಿತ್ತು. ಮತ್ತು ಈ ಪಾಳೆಯಗಾರರು ತಮ್ಮ ಕಪ್ಪ ಕಾಣಿಕೆಗಳನ್ನು ದೆಹಲಿ ಮತ್ತು ಆಗ್ರಾಗಳಿಗೆ ಸಲ್ಲಿಸುವವರೆಗೆ ಅವರಿಗೆ ಯಾವ ಯೋಚನೆಯೂ ಇರಲಿಲ್ಲ. ಆದ್ದರಿಂದ ಗ್ರಾಮ ಸಮಿತಿಗಳು ಮತ್ತು ಗ್ರಾಮಶಾಲೆಗಳು ಯಾವುದೇ ಬದಲಾವಣೆ ಇಲ್ಲದೆ ಹಾಗೆಯೇ ಉಳಿದವು.

ವ್ಯಾಪಾರಿ ಸಂಸ್ಥೆಯಾಗಿದ್ದ ಈಸ್ಟ್ ಇಂಡಿಯಾ ಕಂಪೆನಿ ಆಡಳಿತ ಸಂಸ್ಥೆಯಾಗಿ ರೂಪಾಂತರಗೊಂಡ ಸಮಯದಲ್ಲಿ, ಈ ಗ್ರಾಮ ಶಾಲೆಗಳ ಸ್ವರೂಪ ಲಕ್ಷಣ ಮತ್ತು ವ್ಯಾಪ್ತಿ ಹೇಗಿತ್ತು ಎಂಬ ಪ್ರಶ್ನೆ ಮಾಡುವುದು ಸಹಜ. ದುರದೃಷ್ಟವೆಂದರೆ, ಈ ಪ್ರಶ್ನೆಗೆ ನಿಖರವಾಗಿ ಉತ್ತರಿಸಲು ನಮ್ಮಲ್ಲಿ ಸಾಕಷ್ಟು ಆಧಾರಗಳಿಲ್ಲ ಆದಾಗ್ಯೂ. 1822ರಿಂದ

Digitised by Bharatavani, CIIL

1832ರ ಅವಧಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳು ನಡೆಸಿದ್ದ ಹಲವಾರು ಸರ್ವೆಗಳಲ್ಲಿ, ಬ್ರಿಟಿಷ್ ಇಂಡಿಯಾದ ಸಮಯದಲ್ಲಿ ಗ್ರಾಮ ಶಾಲೆಗಳು ಸಾಕಷ್ಟು ಜನಪ್ರಿಯವಾಗಿದ್ದವು ಎಂದು ಊಹಿಸಬಹುದಾಗಿದೆ ಮದ್ರಾಸ್ ಪ್ರೆಸಿಡೆನ್ಸಿಯ ಗವರ್ನರ್ ಆಗಿದ್ದ ಥಾಮಸ್ ಮನ್ರೋ 1826ರ ಮಾರ್ಚ್ 10ರಂದು ಬರೆದಿದ್ದ ಟಿಪ್ಪಣಿ ಪ್ರಕಾರ, ಆಗ ಮದ್ರಾಸ್ ಪ್ರಾಂತ್ಯದ ಜನಸಂಖ್ಯೆ 1,25,50,941 ಆಗಿದ್ದು, ಒಟ್ಟು 12,498 ಶಾಲೆಗಳು ಮತ್ತು ಈ ಶಾಲೆಗಳಲ್ಲಿ 1,88,650 ವಿದ್ಯಾರ್ಥಿಗಳಿದ್ದರೂ ಬಾಂಬೆ ಪ್ರೆಸಿಡೆನ್ಸಿಯ ಗವರ್ನರ್ ಮೌಂಟ್ ಸ್ಟುವರ್ಟ್ ಎಲ್ಫಿನ್‌ಸ್ಟೋನ್‌ನ ಆದೇಶದ ಪ್ರಕಾರ 1829ರಲ್ಲಿ ನಡೆಸಲಾದ ಸರ್ವೆ ಪ್ರಕಾರ ಬಾಂಬೆ ಪ್ರಾಂತ್ಯದಲ್ಲಿ 1,705 ಶಾಲೆ, 35,153 ವಿದ್ಯಾರ್ಥಿಗಳಿದ್ದು ಒಟ್ಟು ಜನಸಂಖ್ಯೆ 46,81,735 ಆಗಿತ್ತು. ಬಂಗಾಳ ಪ್ರೆಸಿಡೆನ್ಸಿಯ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಕ್ ಸರ್ವೆ ಕಾರ್ಯದ ಉಸ್ತುವಾರಿಯನ್ನು 1835ರಲ್ಲಿ ವಿಲಿಯಂ ಎಂಬ ಮಿಶನರಿಗೆ ವಹಿಸಿಕೊಟ್ಟ. ಆ್ಯಡಂ 1835ರಿಂದ 1838ರ ಅವಧಿಯಲ್ಲಿ ಮೂರು ವರದಿಗಳನ್ನು ಸಲ್ಲಿಸಿದ. 19ನೇ ಶತಮಾನದ ಆದಿಭಾಗದಲ್ಲಿ ಬಂಗಾಲ ಮತ್ತು ಬಿಹಾರಗಳಲ್ಲಿ ಒಟ್ಟು 1 ಲಕ್ಷ ಶಾಲೆಗಳು, ಅಂದರೆ ಪ್ರತಿ 3 ಗ್ರಾಮಗಳಿಗೆ 2 ಶಾಲೆಗಳಿದ್ದವು ಎಂದು ಆತ ವರದಿ ಮಾಡಿದ. ಈ ಎರಡು ಪ್ರಂತ್ಯಗಳ ಬಿಟ್ಟು ಜನಸಂಖ್ಯೆ 4 ಕೋಟಿ ಎಂದು ಅಂದಾಜಿಸಿದೆ. ಪ್ರತೀ 400 ಜನರಿಗೆ ಒಂದು ಶಾಲೆ ಇತ್ತು. ಬಿಟ್ಟು ಜನಸಂಖ್ಯೆಯಲ್ಲಿ, ಶಾಲೆಗೆ ಹೋಗುವ ವಯೋಮಾನದವರಲ್ಲಿ ಅರ್ಧದಷ್ಟು ಹುಡುಗಿಯರಾಗಿದ್ದರೂ ಹುಡುಗಿಯರಿಗೆಂದೇ ಪ್ರತ್ಯೇಕ ಶಾಲೆಯ ವ್ಯವಸ್ಥೆ ಇರಲಿಲ್ಲ. ಪ್ರತಿ 32 ಹುಡುಗರಿಗೆ ಒಂದು ಶಾಲೆ ಇತ್ತು ಎಂದು ಆತ ತೀರ್ಮಾನಿಸಿದ. ಆ್ಯಡಂ ಮತ್ತು ಮನ್ರೋ ನಡೆಸಿದ ಸರ್ವೆಗಳಲ್ಲಿ ಸ್ಥಳೀಯ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿತ್ತು. ಆದ್ದರಿಂದ ಈ ಸರ್ವೆಗಳನ್ನು ಕಾಲ್ಪನಿಕ ಎನ್ನಲಾಗದು. ಇತರ ಸರ್ವೆಗಳಲ್ಲೂ ಪ್ರತಿ ಗ್ರಾಮದಲ್ಲೂ ಒಂದು ಶಾಲೆ ಇದ್ದ ಬಗ್ಗೆ ತಿಳಿಸಲಾಗಿತ್ತು. ಕಲ್ಕತ್ತಾದ ಬಳಿಯಿರುವ ಸೆರಾಂಪೋರ್‌ನಲ್ಲಿ ನೆಲೆಸಿದ್ದ ಬ್ಯಾಪ್ಟಿಸ್ಟ್ ಪಾದ್ರಿ ವಿಲಿಯಂ ವಾರ್ಡ್ ಎಂಬುವನು ತನ್ನ A view of the History of the Religion and Mythology of the Hindus' ಎಂಬ ಪುಸ್ತಕದಲ್ಲಿ ಓದು, ಬರೆಹ ಮತ್ತು ಪ್ರಾಥಮಿಕ ಗಣಿತ ಜ್ಞಾನ ಬೆಳೆಸಿಕೊಳ್ಳಲು ಬಹುತೇಕ ಎಲ್ಲಾ ಗ್ರಾಮಗಳಲ್ಲೂ ಒಂದೊಂದು ಶಾಲೆಯಿತ್ತು ಎಂದು ಬರೆದಿದ್ದಾನೆ 'ಮಧ್ಯಭಾರತದ ನೆನಪುಗಳು' ಎಂಬ ತನ್ನ ಕೃತಿಯಲ್ಲಿ ಮೊಲ್ಕಂ ಸುಮಾರು 100 ಮನೆಗಳಿರುವ ಪ್ರತೀ ಗ್ರಾಮಕ್ಕೂ ಓರ್ವ ಶಾಲಾ ಶಿಕ್ಷಕರಿದ್ದರು ಮತ್ತು ಈ ಶಿಕ್ಷಕ ಬನಿಯಾ ಅಥವಾ ವ್ಯಾಪಾರಿಯ ಮಕ್ಕಳಿಗೆ ಅಥವಾ ಕೃಷಿಕರ ಮಕ್ಕಳಿಗೆ ಕಲಿಸುತ್ತಿದ್ದರು.

ಈ ಮೊದಲೇ ತಿಳಿಸಿದಂತೆ ಬ್ರಿಟಿಷ್ ಇಂಡಿಯಾದಲ್ಲಿ ಗ್ರಾಮೀಣ ಶಾಲೆಗಳು ಗ್ರಾಮದ ಜನರ ಚಿಕ್ಕಪುಟ್ಟ ಜಮೀನ್‌ದಾರ್, ಬನಿಯಾಗಳ ಹಾಗೂ ಹಣವಂತ ರೈತರ ಅವಶ್ಯಕತೆ ಮತ್ತು ಅಗತ್ಯಗಳನ್ನು ಈಡೇರಿಸುತ್ತಿದ್ದವು. ಓದು, ಬರಹ, ಲೆಕ್ಕ ಇಲ್ಲಿ ಪಠ್ಯ ವಿಷಯವಾಗಿತ್ತು. ಹಾಗೂ ಮೌಖಿಕ ಮತ್ತು ಲಿಖಿತವಾಗಿ ಪಾಠ ನಡೆಯುತ್ತಿತ್ತು. ಹೆಚ್ಚಾಗಿ ಮುದ್ರಿತ ಪುಸ್ತಕಗಳಿಲ್ಲದೆ ಪಾಠ ಸಾಗುತ್ತಿತ್ತು. ಸ್ಥಳೀಯವಾಗಿ ತಯಾರಿಸಿದ ಸ್ಲೇಟ್ ಮತ್ತು ಬಳಪಗಳನ್ನು ವಿದ್ಯಾರ್ಥಿಗಳು ಬಳಸುತ್ತಿದ್ದರು. ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಶಾಲೆಯ ಬೋಧನೆಯ ಅವಧಿ ಹಾಗೂ ಕೆಲಸದ ದಿನಗಳನ್ನು ರೂಪಿಸಲಾಗುತ್ತಿತ್ತು. ವಿದ್ಯಾರ್ಥಿಗಳಿಗೆ ಶಾಲೆಗೆ ಸೇರ್ಪಡೆಯಾಗಲು ನಿರ್ದಿಷ್ಟ ಅವಧಿ ಎಂದೇನೂ ಇರಲಿಲ್ಲ. ಓರ್ವ ವಿದ್ಯಾರ್ಥಿ ತನಗಿಷ್ಟ ಬಂದಾಗ ಶಾಲೆಗೆ ಸೇರಬಹುದಿತ್ತು ಮತ್ತು ತಾನು ಕಲಿತದ್ದು ಸಾಕು, ಅಗತ್ಯವಿರುವಷ್ಟು ಜ್ಞಾನ ಸಂಪಾದಿಸಿದೆ ಎಂದುಕೊಂಡಾಗ ಶಾಲೆ ಬಿಟ್ಟು ಹೋಗಬಹುದಿತ್ತು. ಬಹುತೇಕ ಸಂದರ್ಭ ಪ್ರತ್ಯೇಕ ಕಟ್ಟಡ ಹೊಂದಿದ ಇಂತಹ ಶಾಲೆಗಳು ಯಾರಾದರೊಬ್ಬ ಪೋಷಕನ ಮನೆಯಲ್ಲಿ ಅಥವಾ ಶಿಕ್ಷಕರ ಮನೆಯಲ್ಲಿ ನಡೆಯುತ್ತಿದ್ದವು. ಕೆಲವೊಮ್ಮೆ ಧಾರ್ಮಿಕ ಕೇಂದ್ರಗಳಲ್ಲಿ, ಒಮ್ಮೊಮ್ಮೆ ಮರದ ನೆರಳಿನಲ್ಲಿಯೂ ಶಾಲೆ ನಡೆಯುತ್ತಿತ್ತು. ಇಲ್ಲಿ ಒಂದರಿಂದ 20ರವರೆಗೆ ವಿದ್ಯಾರ್ಥಿಗಳಿರುತ್ತಿದ್ದರು. ಕೆಲವೊಮ್ಮೆ ದೊಡ್ಡ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕಿರಿಯರಿಗೆ ಪಾಠ ಹೇಳುತ್ತಿದ್ದರು. ಮದ್ರಾಸ್‌ನಲ್ಲಿ ಪಾದ್ರಿಯಾಗಿದ್ದ ಡಾ॥ ಎ.ಬೆಲ್ ಅವರು ಈ ಶಿಕ್ಷಣ ವ್ಯವಸ್ಥೆಯಿಂದ ಆಕರ್ಷಿತರಾಗಿದ್ದರು ಮತ್ತು ಇಂಗ್ಲೆಂಡಿನಲ್ಲಿ ಹಿರೇಮಣಿಯ ಅಥವಾ ಮದ್ರಾಸ್ ಶಿಕ್ಷಣ ವ್ಯವಸ್ಥೆ ಎಂಬ ಹೆಸರಿನಡಿ ಬಡವರಿಗೆ ಸಮರ್ಥ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಅವರು ಆರಂಭಿಸಿದರು. ಆ್ಯಡಮ್‌ನ ಜಾತಿ ವಿಶ್ಲೇಷಣೆಯ ಪ್ರಕಾರ ಈ ಶಾಲೆಗಳಿಗೆ ಶಿಕ್ಷಕರು ಅಲ್ಲಿನ ವಿದ್ಯಾರ್ಥಿಗಳಂತೆಯೇ ದಲಿತರಾದಿಯಾಗಿ ಎಲ್ಲ ವರ್ಗಗಳಿಗೂ ಸೇರಿದವರಾಗಿರುತ್ತಿದ್ದರು. ವಿದ್ಯಾರ್ಥಿಗಳು ಹೆತ್ತವರ ಆರ್ಥಿಕ ಸಾಮರ್ಥ್ಯದ ಆಧಾರದಲ್ಲಿ ಶಿಕ್ಷಕರಿಗೆ ಸಂಬಳವು ಹಣದ ರೂಪದಲ್ಲೂ ಕೆಲವೊಮ್ಮೆ ವಸ್ತುಗಳ ರೂಪದಲ್ಲೂ ನೀಡಲಾಗುತ್ತಿತ್ತು.

ಆದಾಗ್ಯೂ ಸ್ಥಳೀಯ ಪರಿಸರಕ್ಕೆ ಪೂರಕವಾಗಿದ್ದುಕೊಂಡು, ವಿವಿಧ ಆರ್ಥಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳ ನಡುವೆಯೂ, ಶತಮಾನದವರೆಗೆ ಬೆಳೆದುಕೊಂಡು ಬಂದಿದ್ದ ಈ ಗ್ರಾಮೀಣ ಶಾಲೆಗಳು ಬ್ರಿಟಿಷ್‌ರಾಜ್ ಆರಂಭವಾದೊಡನೆ ಅವನತಿಯ ಹಾದಿಯಲ್ಲಿ ಸಾಗಿದವು. ಗ್ರಾಮೀಣ ಕುಶಲಕಲೆ ಸೇರಿದಂತೆ ಗ್ರಾಮದ ಆರ್ಥಿಕ ಸಂಪನ್ಮೂಲ ವಿನಾಶದ ಅಂಚಿಗೆ ಸಾಗಿದಂತೆ, ಬೃಹತ್ ಸಂಖ್ಯೆಯಲ್ಲಿ ಜನರು ಗ್ರಾಮದ ಬದುಕಿಗೆ ವಿದಾಯ ಹೇಳಿ ಜೀವನೋಪಾಯದ ದಾರಿ ಹುಡುಕುತ್ತಾ ಪಟ್ಟಣಗಳತ್ತ ತೆರಳಿದರು. ಇದರಿಂದ ಗ್ರಾಮೀಣ ಪ್ರದೇಶಗಳ ಸ್ಥಿತಿ, ಅಂತೆಯೇ ಗ್ರಾಮೀಣ ಶಾಲೆಗಳ ಅದೃಷ್ಟವೂ ಇಳಿಮುಖವಾಗುತ್ತಾ ಸಾಗಿತು.

ಮೂಲ: ಕೃಷ್ಣಮೂರ್ತಿ

ಅನು: ಡಾ. ಗೀತಾ ಶೆಣೈ

Digitised by Bharatavani, CIIL

# ಭ

## ಭಾರತದ ನ್ಯಾಷನಲ್ ಬುಕ್ ಟ್ರಸ್ಟ್

ಭಾರತ ಸರ್ಕಾರವು 1957 ರಲ್ಲಿ ಪುಸ್ತಕಗಳನ್ನು ಮತ್ತು ಓದುವ ಹವ್ಯಾಸವನ್ನು ಉತ್ತೇಜಿಸಲು ಎನ್ ಬಿ ಟಿ ಎಂದೇ ಪ್ರಸಿದ್ಧವಾದ ಭಾರತದ ನ್ಯಾಷನಲ್ ಬುಕ್ ಟ್ರಸ್ಟನ್ನು ಸ್ಥಾಪಿಸಿತು. 1860ರ ಘಿಘಿಐ ರ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ ಅಡಿಯಲ್ಲಿ ಅದು ನೋಂದಾಯಿಸಲ್ಪಟ್ಟು, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಉನ್ನತ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇದು ಸರ್ಕಾರದಿಂದ ನೀಡಲ್ಪಟ್ಟ ನಿಧಿಯಿಂದ ಪೂರ್ಣವಾಗಿ ಬೆಂಬಲಿಸಲ್ಪಟ್ಟಿದೆ. ಅಧ್ಯಕ್ಷರನ್ನು ಹೊರತುಪಡಿಸಿ ಹದಿನೆಂಟು ಸದಸ್ಯರಿಂದ ಕೂಡಿದ ಧರ್ಮದರ್ಶಿಗಳ ಮಂಡಳಿಯಿಂದ ಈ ಸಂಸ್ಥೆ ಮಾರ್ಗದರ್ಶನ ಮತ್ತು ನಿಯಂತ್ರಣ ಪಡೆಯುತ್ತಿದೆ. ಭಾರತ ಸರ್ಕಾರದಿಂದ ಇದರ ಅಧ್ಯಕ್ಷರು ಮತ್ತು ಇತರ ಧರ್ಮದರ್ಶಿಗಳು ಮೂರು ವರ್ಷಗಳ ಅವಧಿಗೆ ನಾಮಕರಣ ಗೊಂಡಿರುತ್ತಾರೆ. ಟ್ರಸ್ಟಿನ ಆಡಳಿತಗಳು, ನಿರ್ದೇಶನ ಮತ್ತು ವಿಷಯಗಳನ್ನು ನಿರ್ವಹಿಸುವ ಕಾರ್ಯಕಾರಿ ಸಮಿತಿಯು ಅಧ್ಯಕ್ಷರನ್ನು ಹೊರತುಪಡಿಸಿ ಆರು ಮಂದಿ ಆಯ್ಕೆಗೊಂಡ ಸದಸ್ಯರಿಂದ ಕೂಡಿದ್ದು, ಸರ್ಕಾರದಿಂದ ನೇಮಕಗೊಂಡ ಕಾರ್ಯಕಾರಿ ಸಮಿತಿಯಾಗಿರುತ್ತದೆ. ಅಧ್ಯಕ್ಷರು ಮುಖ್ಯ ನಿರ್ವಹಣಾಧಿಕಾರಿಯಾಗಿ ಧರ್ಮದರ್ಶಿ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿಯ ಸಭೆಗಳ ಅಧ್ಯಕ್ಷತೆಯನ್ನು ವಹಿಸುತ್ತಾರೆ. ನಿರ್ದೇಶಕರು, ಅಧ್ಯಕ್ಷರ ಸಾಮಾನ್ಯ ಮಾರ್ಗ ದರ್ಶನದ ಮೇರೆಗೆ ಟ್ರಸ್ಟಿನ ಪ್ರಮುಖ ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುವರು.

**ಒಡಂಬಡಿಕೆಯ ಮನವಿ (MOU) ಯಲ್ಲಿ ಸೂಚಿಸಲಾಗಿರುವ ಟ್ರಸ್ಟ್‌ನ ಪ್ರಮುಖ ಉದ್ದೇಶಗಳು ಹೀಗಿವೆ:**

1. ಒಳ್ಳೆಯ ಸಾಹಿತ್ಯವನ್ನು ನಿರ್ಮಿಸುವುದು ಮತ್ತು ಅಂಥ ಸಾಹಿತ್ಯ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು ಮತ್ತು ಸಾರ್ವಜನಿಕರಿಗೆ ಅಂತಹ ಸಾಹಿತ್ಯವನ್ನು ಅನುಕೂಲ ಸೂಕ್ತ ಬೆಲೆಗಳಲ್ಲಿ ದೊರಕುವಂತೆ ಮಾಡುವುದು.

2. ಮೇಲಿನ ಉದ್ದೇಶಗಳಿಗೆ ಒಳಪಟ್ಟಂತೆ ಭಾರತ ಸಂವಿಧಾನವು ಮಾನ್ಯತೆ ಮಾಡಿರುವ ಇಂಗ್ಲೀಷ್, ಹಿಂದಿ ಮತ್ತು ಇತರ ಭಾಷೆಗಳಲ್ಲಿ ವಿವಿಧ ಪುಸ್ತಕಗಳನ್ನು ವಿಶೇಷವಾಗಿ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಕಟಿಸುವುದು –

(ಅ) ಭಾರತದ ಶಾಸ್ತ್ರೀಯ ಸಾಹಿತ್ಯ, (ಆ) ಭಾರತೀಯ ಭಾಷೆಗಳಲ್ಲಿ ಭಾರತೀಯ ಲೇಖಕರ ಪ್ರಮುಖ ಕೃತಿಗಳು ಮತ್ತು ಭಾರತದ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅವುಗಳ ಅನುವಾದ, (ಇ) ವಿದೇಶಿ ಭಾಷೆಗಳಿಂದ ಪ್ರಮುಖ ಪುಸ್ತಕಗಳ ಅನುವಾದ, (ಈ) ಆಧುನಿಕ ವಿಜ್ಞಾನದ ಪ್ರಮುಖ ಕೃತಿಗಳ ಜನಪ್ರಿಯ ಆವೃತ್ತಿ.

3. ಪುಸ್ತಕಗಳ ಪಟ್ಟಿ ಪ್ರಕಟಣೆ, ಪುಸ್ತಕ ಪ್ರದರ್ಶನಗಳ ಏರ್ಪಾಟು ಮತ್ತು ಜನರು ಪುಸ್ತಕಪ್ರಿಯರಾಗುವತ್ತ ಅಗತ್ಯ ಕ್ರಮಗಳು.

4. ದೇಶದ ವಿವಿಧ ಭಾಗಗಳಲ್ಲಿ ಟ್ರಸ್ಟಿನ ಉದ್ದೇಶಗಳಿಗೆ ಹೊಂದುವಂತೆ ಪ್ರಾಂತೀಯ ಬುಕ್ ಟ್ರಸ್ಟ್‌ಗಳ ರಚನೆಗಳನ್ನು ಉತ್ತೇಜಿಸುವುದು ಅಥವಾ ಸ್ಥಾಪಿಸುವುದು.

ಈ ಉದ್ದೇಶಗಳಿಂದ ಟ್ರಸ್ಟಿನ ಸ್ಥಾಪಕರು ವಿಸ್ತೃತ ಶ್ರೇಣಿಯ ಉದ್ದೇಶಗಳಿಗೆ ಒತ್ತು ನೀಡುವುದು ಮತ್ತು ಪ್ರಮುಖವಾಗಿ ಅಧಿಕ ಗುಣಾತ್ಮಕವಾದ ಪುಸ್ತಕಗಳನ್ನು ಕೈಗೆಟುಕುವ ದರಗಳಲ್ಲಿ ದೊರಕುವಂತೆ ಎಲ್ಲಾ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಭಾರತೀಯರಲ್ಲಿ ಓದುವ ಹವ್ಯಾಸವನ್ನು ಉತ್ತೇಜಿಸುವುದಕ್ಕಾಗಿ ಸಂಸ್ಥೆಗೆ ಹೆಚ್ಚಿನ ಮಟ್ಟದ ಸ್ವಾಯತ್ತತೆ ಒದಗಿಸಿರುವುದು ಸ್ಪಷ್ಟವಾಗುತ್ತದೆ.

ಅನೇಕ ವರ್ಷಗಳಿಂದ ನ್ಯಾಷನಲ್ ಬುಕ್ ಟ್ರಸ್ಟ್ ಈ ಉದ್ದೇಶಗಳನ್ನು ಪೂರ್ಣಗೊಳಿಸುವ ದೃಷ್ಟಿಯಿಂದ ಹಲವು ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಪ್ರಾಯೋಜನೆಗಳನ್ನು ಕೈಗೊಂಡಿದೆ ಮತ್ತು ಹಲವು ಕ್ಷೇತ್ರಗಳಲ್ಲಿ ಪ್ರಶಂಸನೀಯ ಯಶಸ್ಸನ್ನು ಸಾಧಿಸಿದ್ದರೂ ಸಂಸ್ಥೆಯಲ್ಲಿ ರೂಪಿತವಾಗಿರುವ ಕಾರ್ಯೋನ್ಮುಖ ವ್ಯವಸ್ಥೆಗಳು ಮತ್ತು ಅವುಗಳನ್ನು ಅನಷ್ಠಾನಗೊಳಿಸುವಲ್ಲಿನ ಆಚರಣೆಗಳು ಟ್ರಸ್ಟ್ ಸ್ಥಾಪಕರಿಂದಲೇ ರೂಪಿತವಾದ ಕೆಲವು ಉದ್ದೇಶ ಗಳು ಕಡೆಗಣಿಸಲ್ಪಟ್ಟಿವೆ.

ಈ ಅಂಶವನ್ನು ಒಂದು ನಿದರ್ಶನದ ಮೂಲಕ ವಿಶದಗೊಳಿಸಬಹುದು. ಮೇಲಿನ ಉದ್ದೇಶಗಳಲ್ಲಿ ನಾಲ್ಕನೆಯದು ಪ್ರಾಂತೀಯ ಬುಕ್ ಟ್ರಸ್ಟ್‌ನ ಸ್ಥಾಪನೆ/ಉತ್ತೇಜನ ಕುರಿತದ್ದಾಗಿದೆ. ಈ ಉದ್ದೇಶದಲ್ಲಿ ದೇಶದ ವಿವಿಧ ಭಾಗಗಳಲ್ಲಿ ವಿವಿಧ ಭಾಷೆಗಳಲ್ಲಿ ಪುಸ್ತಕಗಳ ಪ್ರಕಟಣೆ ಮತ್ತು ಉತ್ತೇಜನಗಳ ಕೇಂದ್ರೀಕೃತ ಕಾರ್ಯವ್ಯವಸ್ಥೆಯ ಕ್ಲಿಷ್ಟತೆಗಳನ್ನು ಟ್ರಸ್ಟಿನ ಸ್ಥಾಪಕರು ಸ್ಪಷ್ಟವಾಗಿ ಮನಗಂಡಿರುವುದು ಕಂಡುಬರುತ್ತದೆ. ನಲವತ್ತು ವರ್ಷಗಳ ನಿರಂತರ ಅಸ್ತಿತ್ವದಲ್ಲಿ, ಟ್ರಸ್ಟ್ ಅಧಿಕವಾಗಿ ಕೇಂದ್ರೀಕೃತಗೊಂಡಿದ್ದರೂ ಈ ದಿಸೆಯಲ್ಲಿ ಏನೂ ಆಗಿಲ್ಲ. ಪ್ರಾಂತೀಯ ಕಛೇರಿಗಳ ಹೆಸರಿನಲ್ಲಿ ಮೂರು ಮಾರಾಟಗಳ/ವಿತರಣೆಯ ಘಟಕಗಳು ಮಾತ್ರ ಸ್ಥಾಪಿತವಾಗಿವೆ.

**ಪ್ರಕಾಶನ:** ಆದಾಗ್ಯೂ ಟ್ರಸ್ಟಿನ ಸಾಧನೆಗಳಿಂದ ಈ ಕೊರತೆಗಳು ಹೆಚ್ಚು ಕಂಡುಬರುವುದಿಲ್ಲ. ಮೇಲ್ಕಂಡ ಆಶಯಗಳ ದೃಷ್ಟಿಯಿಂದ

Digitised by Bharatavani, CIIL

ಸಮಾಜದ ಎಲ್ಲಾ ವರ್ಗಗಳಿಗೆ, ಎಲ್ಲಾ ವಯೋಮಾನದವರ ಸಾಮಾನ್ಯ ಓದಿಗೆ ಅಗತ್ಯ ಸಾಮಗ್ರಿಯನ್ನು ನ್ಯಾಷನಲ್ ಬುಕ್ ಟ್ರಸ್ಟ್ ಹೊರತಂದಿದೆ ಮತ್ತು ಇದರಲ್ಲಿ ಮಕ್ಕಳ ಹಾಗೂ ನವ ಸಾಕ್ಷರರ ಸಾಹಿತ್ಯ ಸಾಮತ್ರಿಗಳ ಒಳಗೊಂಡಿವೆ. ರಿಯಾಯತಿ ಬೆಲೆಯಲ್ಲಿ ಪುಸ್ತಕಗಳು, ಕಥನ ಮತ್ತು ಕಥನೇತರ ಕೃತಿಗಳನ್ನು ಇಂಗ್ಲಿಷ್, ಹಿಂದಿ ಮತ್ತು ಸಂವಿಧಾನದ ಮಾನ್ಯತೆ ಪಡೆದ 16 ಪ್ರಮುಖ ಭಾರತೀಯ ಭಾಷೆಗಳಲ್ಲಿ ವಿವಿಧ ಉತ್ತಮ ಶೀರ್ಷಿಕೆಯ ಮಾಲಿಕೆಗಳಲ್ಲಿ ಪ್ರಕಟಿಸಲಾಗಿದೆ. ಅವುಗಳೆಂದರೆ, ಯಂಗ್ ಇಂಡಿಯಾ ಲೈಬ್ರರಿ, ಇಂಡಿಯಾ ದಿ ಲ್ಯಾಂಡ್ ಅಂಡ ದಿ ಪೀಪಲ್, ಪಾಪ್ಯುಲರ್ ಸೈನ್ಸ್, ಜಾನಪದ, ನ್ಯಾಷನಲ್ ಬಯೋಗ್ರಾಫಿ, ನೆಹರೂ ಬಾಲ ಪುಸ್ತಕಾಲಯ (ಮಕ್ಕಳ ಸಾಹಿತ್ಯ ಮಾಲಿಕೆಗಳು) ಮತ್ತು ಅದಾನ್ ಪ್ರದಾನ್ (ಸಮಕಾಲೀನ ಪ್ರಸಿದ್ಧ ಸಾಹಿತ್ಯ ಕೃತಿಗಳನ್ನು ಭಾರತದ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದಗೊಳಿಸಿರುವುದು). ಅಸ್ಸಾಮಿಯಾ, ಬಾಂಗ್ಲಾ, ಗುಜರಾತಿ, ಕನ್ನಡ, ಕಾಶ್ಮೀರಿ, ಕೊಂಕಣಿ, ಮಲೆಯಾಳಂ, ಮಣಿಪುರಿ, ಮರಾಠಿ, ನೇಪಾಳಿ, ಒರಿಯಾ, ಪಂಜಾಬಿ, ಸಿಂಧಿ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳ ಪಸ್ತಕಗಳು ಈ ಮಾಲಿಕೆಗಳಲ್ಲಿ ಒಳಗೊಂಡಿವೆ. ಇದರ ಜೊತೆಗೆ ಬುಡಕಟ್ಟು ಭಾಷೆಗಳಾದ ಭಿಲಿ, ಗೊಂಡಿ, ಸಾಥಾಲಿ ಮತ್ತು ಕೆಲವು ಉತ್ತರ–ದಕ್ಷಿಣ ವಲಯದ (ಈಶಾನ್ಯ) ಭಾಷೆಗಳಾದ ಆವೊ–ನಾಗ, ಭೂತಿಯಾ, ಬೋಡೊ, ಗಾರೊ, ಖಾನ, ಕೊಕ್‌ಬೊರೊಕ್, ಲೆಪ್ಚಾ, ಲಿಂಬೂ, ಮಿಸಿಂಗ್, ಮಿಜೋ ಮತ್ತು ನೇವಾರಿ ಇತ್ಯಾದಿ ಆಯ್ದ ಬುಡಕಟ್ಟು ಭಾಷೆಗಳಲ್ಲಿಯೂ ಪ್ರಯೋಗಾತ್ಮಕವಾಗಿ ಕಾಲಕಾಲಕ್ಕೆ ಮಕ್ಕಳಿಗಾಗಿ ಆಯ್ದ ಶೀರ್ಷಿಕೆಗಳನ್ನು ಪ್ರಕಟಗೊಳಿಸಲಾಗಿದೆ. ಮಾರ್ಚ್ 2001 ರವರೆಗೆ ಮೂಲ ಕೃತಿಗಳು, ಅನುವಾದಗಳು ಮತ್ತು ಮರು ಮುದ್ರಣಗಳು ಸೇರಿದಂತೆ 11,259 ಪುಸ್ತಕಗಳನ್ನು ಪ್ರಕಟಪಡಿಸಲಾಗಿದೆ.

ಪ್ರಕಟಣೆಯಲ್ಲಿ ಪ್ರಮುಖ ಕ್ಷೇತ್ರಗಳ ಕಡೆಗೆ ಟ್ರಸ್ಟ್ ವಿಶೇಷ ಗಮನ ಹರಿಸಿ ಸಾಮನ್ಯ ಓದುಗರಿಗಾಗಿ ದೇಶದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಹಾಗೂ ಅದುವರೆವಿಗೂ ಹೆಚ್ಚು ಗಮನ ಹರಿಸದ ಜನಪ್ರಿಯ ವಿಜ್ಞಾನ ಮತ್ತು ಇತರ ಮಾಹಿತಿ ಸಾಮಗ್ರಿಗಳನ್ನು ಪ್ರಕಟಣ ವ್ಯಾಪ್ತಿಗೆ ಅಳವಡಿಸಿಕೊಂಡಿದೆ. ನ್ಯಾಷನಲ್ ಬುಕ್ ಟ್ರಸ್ಟ್ ನವ ಸಾಕ್ಷರರಿಗಾಗಿ ಹಾಗೂ ಸೃಜನಾತ್ಮಕ ಕಲಿಕೆಗೆ ಸಂಬಂಧಿಸಿದಂತೆ ಪುಸ್ತಕಗಳನ್ನು ಸಿದ್ಧಪಡಿಸಿರುವುದು ಅದರ ಗಮನಾರ್ಹ ಕೊಡುಗೆಗಳಲ್ಲಿ ಒಂದಾಗಿದೆ. ನವ ಸಾಕ್ಷರರಿಗೆ ಸಂಬಂಧಿಸಿದಂತೆ ಶಿಕ್ಷಣದ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಮಟ್ಟಗಳಲ್ಲಿ ಉತ್ಸಾಹದಿಂದ ಅನುಷ್ಠಾನಕ್ಕೆ ತರುವಂತಹ ನೂತನ ಶಿಕ್ಷಣ ಪರಿಕಲ್ಪನೆಗಳು ಮತ್ತು ಸಾಮಗ್ರಿಗಳನ್ನು ಈ ಪುಸ್ತಕಗಳು ಒಳಗೊಂಡಿವೆ. ಪ್ರತಿಯೊಂದು ಭಾಷೆಯಲ್ಲಿಯೂ ಅದರ ಮೂಲ ಶೀರ್ಷಿಕೆಗಳ ನಿರ್ಮಾಣದಲ್ಲಿ, ಅನುವಾದಗಳಲ್ಲಿ ಮತ್ತು ಪುನರ್‌ಮುದ್ರಣ ಪ್ರಕಟಣೆಗಳಲ್ಲಿ ಸಮತೋಲಿತ ರೀತಿಯಲ್ಲಿ ಪುಸ್ತಕಗಳನ್ನು ಪ್ರಕಟಿಸುವಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ ಪ್ರಯತ್ನ ಗಮನಾರ್ಹ ಮಟ್ಟದಲ್ಲಿ ಸಫಲತೆಯನ್ನು ಸಾಧಿಸಿದೆ.

ಪುಸ್ತಕಗಳಿಗೆ ಉತ್ತೇಜನ ಮತ್ತು ಓದುವ ಹವ್ಯಾಸ: ಪ್ರಕಾಶನವಷ್ಟೇ ಅಲ್ಲದೆ ಉತ್ತಮ ಪುಸ್ತಕಗಳಿಗೆ ಉತ್ತೇಜನ ನೀಡಿ ಓದುವ ಹವ್ಯಾಸವನ್ನು ಬೆಳೆಸುವುದು ಪ್ರಮುಖ ಕಾಳಜಿಯಾಗಿದೆ. ಈ ಗುರಿಯನ್ನು ತಲುಪಲು ನ್ಯಾಷನಲ್ ಬುಕ್ ಟ್ರಸ್ಟ್ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ:

ಪುಸ್ತಕ ಮೇಳ ಮತ್ತು ಪ್ರದರ್ಶನಗಳು: ಪುಸ್ತಕಗಳಿಗೆ ಉತ್ತೇಜನ ನೀಡಲು ನ್ಯಾಷನಲ್ ಬುಕ್ ಟ್ರಸ್ಟ್ ಪ್ರಮುಖ ಪಾತ್ರ ವಹಿಸಿ ದೇಶದಾದ್ಯಂತ ಪುಸ್ತಕ ಮೇಳಗಳನ್ನು ಮತ್ತು ಪ್ರದರ್ಶನಗಳನ್ನು ಓದುಗರಿಗಾಗಿ ವ್ಯವಸ್ಥೆ ಮಾಡುತ್ತಿದೆ.

ಪ್ರಾಂತೀಯ ಮತ್ತು ಗ್ರಾಮಾಂತರ ಹಂತಗಳಲ್ಲಿ ಪುಸ್ತಕ ಮೇಳಗಳನ್ನು ಏರ್ಪಡಿಸುವುದಲ್ಲದೆ ಯಾವುದಾದರೂ ಒಂದು ರಾಜ್ಯದಲ್ಲಿ ಪ್ರತಿ ವರ್ಷವೂ ರಾಷ್ಟ್ರೀಯ ಪುಸ್ತಕ ಮೇಳವನ್ನು ಏರ್ಪಡಿಸುತ್ತಿದೆ. 2000ದ ಇಸವಿಯವರೆಗೂ ಪ್ರಾಂತೀಯ ಮೇಳಗಳಲ್ಲಿ ಮತ್ತು ಪುಸ್ತಕೋತ್ಸವಗಳನ್ನಷ್ಟೇ ಅಲ್ಲದೆ, ಅಹಮದಾಬಾದ್ (ಎರಡು ಬಾರಿ), ಇಂದೊರ್, ಜೈಪುರ, ಕಲ್ಕತ್ತ (ಮೂರು ಬಾರಿ), ಲಕ್ನೋ, ಮುಂಬೈ (ನಾಲ್ಕು ಬಾರಿ), ನಾಗಪುರ, ನ್ಯೂಡೆಲ್ಲಿ, ಪಾಟ್ನಾ (ಎರಡು ಬಾರಿ), ತಿರುವನಂತಪುರಂ ಮುಂತಾದ ಮೂವತ್ತು ನಗರಗಳಲ್ಲಿ 41 ಮಕ್ಕಳ ಪುಸ್ತಕ ಮೇಳಗಳು ಸಹಾ ನಡೆದಿವೆ. ಪುಸ್ತಕಗಳ ಅಭಿವೃದ್ಧಿ, ನಿರ್ಮಾಣ ಮತ್ತು ಮಾರಾಟ ಕ್ಷೇತ್ರದಲ್ಲಿ ತೊಡಗಿರುವವರಿಗೆ ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ನಡೆಸಿದೆ. ಈ ಮೇಳಗಳಲ್ಲಿ ಲೇಖಕರ ಸಮ್ಮೇಳನ ಹಾಗೂ ಇತರ ಸಾಹಿತ್ಯಕ ಚಟುವಟಿಕೆಗಳನ್ನು ಏರ್ಪಡಿಸಿರುವುದು ಎದ್ದು ಕಾಣುವ ಸಂಗತಿಯಾಗಿದೆ.

1972 ರಿಂದಲೂ ನ್ಯಾಷನಲ್ ಬುಕ್ ಟ್ರಸ್ಟ್ ಪ್ರತಿ ಎರಡು ವರ್ಷಗಳಿಗೊಮ್ಮೆ ನ್ಯೂಡೆಲ್ಲಿ ವರ್ಲ್ಡ್ ಬುಕ್ ಫೇರನ್ನು ಏರ್ಪಡಿಸುತ್ತಿದೆ. ಇದು ದೇಶದಲ್ಲಿಯೇ ದ್ವೈವಾರ್ಷಿಕ ಪುಸ್ತಕ ಮೇಳಗಳಲ್ಲಿ ಬಹು ದೊಡ್ಡದು ಹಾಗೂ ಇದು ಏಷ್ಯಾ ಮತ್ತು ಆಫ್ರಿಕಾಗಳಲ್ಲಿಯೇ ಬೃಹತ್ ಪುಸ್ತಕ ಮೇಳವೆಂದು ಹೇಳಲಾಗುತ್ತದೆ. ನ್ಯೂಡೆಲ್ಲಿಯ ಪ್ರಗತಿ ಮೈದಾನದಲ್ಲಿ 20,000 ಚದರ ಮೀಟರ್ ಮುಚ್ಚಿದ ಸ್ಥಳದಲ್ಲಿ ನಡೆಯುವ ಈ ಮೇಳ ವಿವಿಧ ವಿಭಾಗಗಳಲ್ಲಿ ಭಾರತೀಯ ಮತ್ತು ವಿದೇಶದ ಸಾವಿರಕ್ಕೆ ಮೀರಿದ ಪ್ರದರ್ಶಕರನ್ನು ಆಕರ್ಷಿಸುತ್ತಿದೆ.

ನ್ಯಾಷನಲ್ ಬುಕ್ ಟ್ರಸ್ಟ್ ಪ್ರತಿಯೊಂದು ಭಾಷೆಯ ಮತ್ತು ಪ್ರತಿ ಪ್ರಕಾರದ ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳು ಪ್ರಕಟಿಸಿದ ಸುಲಭ ಬೆಲೆಯ ಆಯ್ದ ಪುಸ್ತಕಗಳ ಪ್ರದರ್ಶನಗಳನ್ನೂ ಏರ್ಪಡಿಸುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಈ ಪ್ರದರ್ಶನಗಳು ನವ ಸಾಕ್ಷರರ ಓದು ಸಾಮಗ್ರಿಗಳನ್ನೂ ಒಳಗೊಂಡಿರುತ್ತವೆ.

ವಿದೇಶಗಳಲ್ಲಿ ಭಾರತೀಯ ಪುಸ್ತಕಗಳಿಗೆ ಉತ್ತೇಜನ: ಭಾರತೀಯ ಪ್ರಕಾಶಕರುಗಳ ಆಯ್ದ ಶೀರ್ಷಿಕೆಗಳ ಪ್ರಮುಖ ಅಂತಾರಾಷ್ಟ್ರೀಯ ಪುಸ್ತಕ ಮೇಳಗಳಲ್ಲಿ ಟ್ರಸ್ಟ್ ಭಾಗವಹಿಸುವ ಮೂಲಕ ಭಾರತೀಯ ಪ್ರಕಾಶಕರ ಪ್ರಕಟಣೆಗಳಿಗೆ ವಿದೇಶದಲ್ಲಿ

Digitised by Bharatavani, CIIL

ಉತ್ತೇಜನ ನೀಡುತ್ತಿದೆ. 1970 ರಿಂದ ಇದುವರೆಗೆ ನ್ಯಾಷನಲ್ ಬುಕ್ ಟ್ರಸ್ಟ್ 300ಕ್ಕೂ ಅಧಿಕ ಅಂತಾರಾಷ್ಟ್ರೀಯ ಪುಸ್ತಕ ಮೇಳಗಳಲ್ಲಿ ಭಾಗವಹಿಸಿದೆ. ಫ್ರಾಂಕ್‌ಫರ್ಟ್ ಬುಕ್ ಫೇರ್, ಬೊಲೊಗ್ನಾ ಚಿಲ್ಡ್ರನ್ ಬುಕ್ ಫೇರ್ ಮತ್ತು ಜಿಂಬಾಬ್ವೆ ಅಂತಾರಾಷ್ಟ್ರೀಯ ಪುಸ್ತಕ ಮೇಳಗಳಲ್ಲಿ ನಿಯಮಿತವಾಗಿ ಟ್ರಸ್ಟ್ ಭಾಗ ವಹಿಸುತ್ತಿರುವ ಪ್ರಮುಖ ಮೇಳಗಳಾಗಿವೆ. ಟ್ರಸ್ಟ್ ಕಾಲಕಾಲಕ್ಕೆ ಭಾಗವಹಿಸುತ್ತಿರುವ ಇತರ ಮೇಳಗಳೆಂದರೆ ಬೀಜಿಂಗ್‌ನ ಅಂತಾರಾಷ್ಟ್ರೀಯ ಪುಸ್ತಕ ಮೇಳ, ಶ್ರೀಲಂಕಾ ಬುಕ್ ಫೇರ್, ಢಾಕಾ ಬುಕ್ ಫೇರ್ ಮತ್ತು ಆಸ್ಟ್ರೇಲಿಯಾ ಬುಕ್ ಫೇರ್. ಈ ಮೇಳಗಳಲ್ಲಿ ಭಾಗವಹಿಸಿ ಟ್ರಸ್ಟ್ ಭಾರತೀಯ ಪುಸ್ತಕೋದ್ಯಮದ ಉತ್ತಮ ಪರಿಚಯವನ್ನು ಅಂತಾ ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸಶಕ್ತವಾಗಿ ನಿರೂಪಿಸಿದೆ. ಭಾರತೀಯ ಪುಸ್ತಕಗಳ ಹಕ್ಕುಗಳನ್ನು ಭಾರತೀಯ ಮತ್ತು ವಿದೇಶೀ ಪ್ರಕಾಶಕರು ಸಹ ಪ್ರಕಾಶಕರಾಗಿ ಮಾಡುವ ಮತ್ತು ಕೊಳ್ಳುವ ರಫ್ತು ವ್ಯವಹಾರವನ್ನು ವೃದ್ಧಿಸುವಲ್ಲಿ ಈ ಕಾರ್ಯ ಸಹಾಯಕವಾಗಿದೆ.

**ಸಂಚಾರಿ ಪುಸ್ತಕಗಳು:** ದೂರದ ಪ್ರದೇಶಗಳಲ್ಲಿರುವ ಜನರ ಮನೆಬಾಗಿಲುಗಳಿಗೆ ಪುಸ್ತಕಗಳನ್ನು ಒದಗಿಸುವ ವ್ಯವಸ್ಥೆಗಾಗಿ ನ್ಯಾಷನಲ್ ಬುಕ್ ಟ್ರಸ್ಟ್ 1992 ರಲ್ಲಿ ಸಂಚಾರೀ ಪುಸ್ತಕ ಪ್ರದರ್ಶನಗಳನ್ನು ಮೊತ್ತಮೊದಲಿಗೆ ಪರಿಚಯಿಸಿದೆ. ಈಗ 2000 ಕ್ಕೂ ಹೆಚ್ಚು ಸಂಚಾರಿ ಪುಸ್ತಕ ಪ್ರದರ್ಶನಗಳನ್ನು ಆಂಧ್ರಪ್ರದೇಶ, ಅಸ್ಸಾಂ, ಬಿಹಾರ್, ಡೆಲ್ಲಿ, ಗೋವಾ, ಗುಜರಾತ್, ಹರಿಯಾಣಾ, ಹಿಮಾಚಲ್ ಪ್ರದೇಶ್, ಜಾರ್ಖಂಡ್, ಕೇರಳ, ಮಧ್ಯ ಪ್ರದೇಶ್. ಮಹಾರಾಷ್ಟ್ರ, ಒರಿಸ್ಸಾ, ಪಂಜಾಬ್, ರಾಜಸ್ಥಾನ್, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪೂರ್ವ ಬಂಗಾಳ ರಾಜ್ಯಗಳಲ್ಲಿ ಏರ್ಪಡಿಸಿದೆ. 2000–01ರ ಅವಧಿಯಲ್ಲಿ ಟ್ರಸ್ಟ್ ಸಂಚಾರಿ ಪುಸ್ತಕಗಳ ಪ್ರಾಯೋಜನೆ ಮೂಲಕ ಗ್ರಾಮಾಂತರ ಪ್ರದೇಶಗಳಿಗೂ ವ್ಯಾಪಕವಾಗಿ ತಲುಪುವಂತೆ ಮಾಡಲು ಹೊಸ ಸಂಚಾರಿ ಪ್ರದರ್ಶನ ವಾಹನಗಳ ಪಡೆಯನ್ನು ಪಡೆದುಕೊಂಡು ಈ ಕಾರ್ಯಕ್ರಮವನ್ನು ಚಾಲನೆಗೊಳಿಸಿದೆ.

**ಎನ್.ಬಿ.ಟಿ ಬುಕ್ ಕ್ಲಬ್:** ನ್ಯಾಷನಲ್ ಬುಕ್ ಟ್ರಸ್ಟ್ ಓದುವ ಹವ್ಯಾಸವನ್ನು ಉತ್ತೇಜಿಸಲು ತನ್ನದೇ ಆದ ಬುಕ್ ಕ್ಲಬ್‌ಗಳನ್ನು ಸ್ಥಾಪಿಸಿದೆ. ಈ ಕ್ಲಬ್‌ನ ಸದಸ್ಯರಿಗೆ ಅದರ ಎಲ್ಲಾ ಪ್ರಕಟಣೆಗಳೂ ವಿಶೇಷ ರಿಯಾಯಿತಿಯಲ್ಲಿ ದೊರೆಯುವ ಸೌಲಭ್ಯ ಒದಗಿಸಿದೆಯಷ್ಟೇ ಅಲ್ಲದೆ ವಿ.ಪಿ.ಪಿ ಮೂಲಕ ಆದೇಶ ನೀಡುವವರಿಗೆ ಅನುಕೂಲ ವಾಗುವಂತೆ ವಿಶೇಷ ಅಂಚೆ ವೆಚ್ಚ ರಿಯಾಯಿತಿ ವ್ಯವಸ್ಥೆ ಮಾಡಿದೆ. ಅದರ ಆಜೀವ ಸದಸ್ಯತ್ವ ಶುಲ್ಕ ಕೇವಲ ರೂ.50. ಅದರ ಸದಸ್ಯರಿಗೆ ಮಾಸಿಕ ಸುದ್ದಿ ಪತ್ರಗಳು ಮತ್ತು ಇತರ ಪ್ರಚಾರ ಸಾಮಗ್ರಿಗಳು, ಎನ್.ಬಿ.ಟಿಯ ಚಟುವಟಿಕೆಗಳನ್ನು ಕುರಿತು ಅಗತ್ಯ ಮಾಹಿತಿಗಳನ್ನು ತಿಳಿಸುತ್ತವೆ. ಇದುವರೆಗೂ ಸುಮಾರು 20,000ಕ್ಕೂ ಹೆಚ್ಚು ಸದಸ್ಯರನ್ನು ಈ ಕ್ಲಬ್‌ಗೆ ನೋಂದಾಯಿಸಿಕೊಳ್ಳಲಾಗಿದೆ.

**ಪ್ರಕಾಶನದ ಸಿಬ್ಬಂದಿಗೆ ತರಬೇತಿ ಕೋರ್ಸ್:** ಯುವ ಪ್ರತಿಭೆಗಳಿಗೆ ಹಾಗೂ ಪ್ರಕಾಶನ ಸಿಬ್ಬಂದಿಗೆ ಎನ್.ಬಿ.ಟಿಯು ತರಬೇತಿ ಮತ್ತು ಪುನರ್ನವೀಕರಣ ತರಗತಿಗಳನ್ನು ನಡೆಸುತ್ತಿದೆ. ಒಂದು ತಿಂಗಳ ಅವಧಿಗೂ ಮೀರಿದ ಈ ವಾರ್ಷಿಕ ಕೋರ್ಸ್ ಇಂಗ್ಲಿಷಿನಲ್ಲದ್ದು ದೆಹಲಿಯಲ್ಲಿ ಏರ್ಪಡಾಗುತ್ತಿದೆ. ಕೋರ್ಸ್‌ನ ವಿವರಗಳನ್ನು ಅಂದರೆ ಸಂಪಾದಕೀಯದ ಮಾದರಿಗಳು, ನಿರ್ಮಾಣ, ಮಾರುಕಟ್ಟೆ, ಮಾರಾಟ ಮತ್ತು ಪ್ರಕಾಶನಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ಪುಸ್ತಕೋದ್ಯಮ ತಜ್ಞರು ವಿನ್ಯಾಸಗೊಳಿಸಿ ಉದ್ಯಮದ ಉತ್ತಮ ವೃತ್ತಿಪರರನ್ನು ವಿಭಾಗದ ಸದಸ್ಯರನ್ನಾಗಿ ಆರಿಸಲಾಗುತ್ತದೆ. ಈ ಕೋರ್ಸ್ ಹೆಚ್ಚಿನ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿದೆ. ಪ್ರಾದೇಶೀಕ ಭಾಷೆಗಳಲ್ಲಿ ಟ್ರಸ್ಟ್ ಅಂತಹ ಕೋರ್ಸ್‌ಗಳನ್ನು ಪ್ರಯೋಗ ರೂಪದಲ್ಲಿ ನಡೆಸಿದೆ ಮತ್ತು ಹಿಂದಿ, ಮರಾಠಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲಿ ಅಂತಹ ಕೋರ್ಸ್ ನಡೆದಿದೆ.

**ಲೇಖಕರು ಮತ್ತು ಪ್ರಕಾಶಕರಿಗೆ ಆರ್ಥಿಕ ನೆರವು: ಸಬ್ಸಿಡಿ (ಸಹಾಯಧನ) ವ್ಯವಸ್ಥೆ:** ಈ ಯೋಜನೆಯಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಮತ್ತು ತಾಂತ್ರಿಕ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ ಸುಲಭ ಬೆಲೆಯಲ್ಲಿ ಸ್ವೀಕಾರಾರ್ಹ ಗುಣಮಟ್ಟದ ಪುಸ್ತಕಗಳನ್ನು ಸಿದ್ಧಪಡಿಸಲು ಲೇಖಕರುಗಳಿಗೆ ಮತ್ತು ಪ್ರಕಾಶಕರುಗಳಿಗೆ ಆರ್ಥಿಕ ನೆರವನ್ನು ನ್ಯಾಷನಲ್ ಬುಕ್ ಟ್ರಸ್ಟ್ ಒದಗಿಸುತ್ತಿದೆ. ಈ ಪಠ್ಯಪುಸ್ತಕಗಳು ನಿರ್ದಿಷ್ಟ ವಿಷಯ ಸಂಬಂಧಿತವಾದ ಪೂರಕ ಓದುವ ಸಾಮಗ್ರಿ ಅಥವಾ ಪರಾಮರ್ಶನ ಪುಸ್ತಕಗಳಾಗಿದ್ದು ಮಾನ್ಯತೆ ಪಡೆದ ಭಾರತೀಯ ಭಾಷೆಯ ಅಥವಾ ಆಂಗ್ಲ ಅಥವಾ ಹಿಂದಿ ಭಾಷೆಯಲ್ಲಿ ಬರೆದಿರುವಂಥವುಗಳಾಗಿವೆ. ನಿರ್ದಿಷ್ಟ ಅಗತ್ಯವನ್ನು ಪೂರೈಸುವ ಮತ್ತು ಭಾರತೀಯ ಲೇಖಕರು ಬರೆದ ವಿಷಯ ಕ್ಷೇತ್ರಗಳಲ್ಲಿ ಸುಲಭವಾಗಿ ದೊರೆಯುವ ಪುಸ್ತಕಗಳಿಗೆ ಮಾತ್ರ ಈ ಯೋಜನೆಯಲ್ಲಿ ಸಹಾಯಕ ದ್ರವ್ಯ ನೀಡಬಹುದಾಗಿದೆ. ರಫ್ತಾಗುವ ಪುಸ್ತಕಗಳು, ಅಧಿಕ ಬೆಲೆಯುಳ್ಳವಾಗಿದ್ದು, ಭಾರತೀಯ ಸಾಮಾನ್ಯ ವಿದ್ಯಾರ್ಥಿಯೊಬ್ಬನಿಗೆ ಎಟುಕಿಸಲಾಗದ ಸಂದರ್ಭಗಳಲ್ಲಿ ಸಹಾ ಈ ಸಹಾಯ ಧನ ಒದಗುತ್ತದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿರ್ದಿಷ್ಟ ನಿಯಮಗಳಿಗೆ ಅನುಗುಣವಾಗಿದ್ದು, ಪುಸ್ತಕವು ಸಾಧಾರಣವಾದ ಬೆಲೆ ಹೊಂದಿರಬೇಕೆಂಬ ಷರತ್ತುಗಳಿಗೆ ಒಳಪಟ್ಟಿದ್ದರೆ, ನ್ಯಾಷನಲ್ ಬುಕ್ ಟ್ರಸ್ಟ್ ಪೂರ್ಣ ಗೌರವ ಧನವನ್ನು ಲೇಖಕರಿಗೂ ಮತ್ತು ಪುಸ್ತಕ ನಿರ್ಮಾಣದ ಅರ್ಧ ದರವನ್ನು ಪ್ರಕಾಶಕರಿಗೂ ಸಾಮಾನ್ಯವಾಗಿ ಸಹಾಯಧನವಾಗಿ ನೀಡುತ್ತದೆ. 2001ರ ಮಾರ್ಚ್ 31ರವರೆಗೆ ಟ್ರಸ್ಟ್ 920 ಅಂತಹ ಪ್ರಕಟಣೆಗಳಿಗೆ ಸಹಾಯಧನ ನೀಡಿದೆ.

ಮಕ್ಕಳ ಸಾಹಿತ್ಯದ ರಾಷ್ಟ್ರೀಯ ಕೇಂದ್ರ: ನ್ಯಾಷನಲ್ ಬುಕ್ ಟ್ರಸ್ಟ್ ಭಾರತದ ವಿವಿಧ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯದ ಪ್ರಕಾಶನಕ್ಕೆ ಸಹಾಯ ನೀಡಲು ಮತ್ತು ಮೇಲುಸ್ತುವಾರಿ ನೋಡಿಕೊಳ್ಳಲು, ಸಂಯೋಜಿಸುವ ಪ್ರಾಯೋಜನೆಗಾಗಿ 1993 ರಲ್ಲಿ ರಾಷ್ಟ್ರೀಯ ಮಕ್ಕಳ ಸಾಹಿತ್ಯ ಕೇಂದ್ರವನ್ನು ತನ್ನ ಅಧೀನದಲ್ಲಿ ಸ್ಥಾಪಿಸಿತು. ಈ ಕೇಂದ್ರವು ಮಕ್ಕಳ ಸಾಹಿತ್ಯದ ಗ್ರಂಥಾಲಯ ದಾಖಲೀಕರಣ ಕೇಂದ್ರವಾಗಿ ಬೆಳೆಯಿತು ಮತ್ತು ಕಾರ್ಯಾಗಾರಗಳನ್ನು, ವಿಚಾರ ಸಂಕಿರಣಗಳನ್ನು ಮತ್ತು ಪ್ರದರ್ಶನಗಳನ್ನು ಹಮ್ಮಿಕೊಂಡಿತು. ಶಾಲೆಗಳ ಮಟ್ಟದಲ್ಲಿ ಓದುಗರ

Digitised by Bharatavani, CIIL

ಕ್ಲಬ್‌ನ್ನು ರಚಿಸಿ ಓದುಗರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಅದು ಉತ್ತೇಜನ ನೀಡಿದೆ. ಗ್ರಾಮಾಂತರ ಶಾಲೆಗಳಲ್ಲಿ ಗಮನಾರ್ಹ ರೀತಿಯಲ್ಲಿ ಒಳದಾರಿಗಳನ್ನು ಮಾಡಿರುವ ಈ ಕೇಂದ್ರವು ಓದುಗರ ಕ್ಲಬ್‌ನ ಸದಸ್ಯರಾಗಿ ದೇಶದ ವಿವಿಧ ಭಾಗಗಳಲ್ಲಿ ಸಮಾರು 40,000 ಪ್ರಾಥಮಿಕ ಶಾಲೆಗಳಲ್ಲಿ ಓದುಗರನ್ನು ಪ್ರಚೋದಿಸಿದೆ. ಕೇಂದ್ರವು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಮೀಕ್ಷೆಯನ್ನು ನಡೆಸಿ ಸಂಶೋಧನಾ ಕಾರ್ಯವನ್ನು ಕೈಗೊಂಡಿದೆ.

ಬದಲಾವಣೆ ಪ್ರವೃತ್ತಿ– ಶಕ್ತಿಗಳು ಮತ್ತು ದೌರ್ಬಲ್ಯಗಳು: ನ್ಯಾಷನಲ್ ಬುಕ್ ಟ್ರಸ್ಟ್‌ನ ಅತ್ಯಧಿಕ ಶಕ್ತಿಯು ಭಾರತದ ಜನರು, ಇತಿಹಾಸ, ಸಂಸ್ಕೃತಿ, ಸಾಮಾಜಿಕ ಮತ್ತು ರಾಜಕೀಯ ಭೂ ಪ್ರದೇಶಗಳನ್ನು ಅರ್ಥಮಾಡಿ ಕೊಂಡಿರುವುದರಲ್ಲಿ ಅಡಕವಾಗಿದೆ. ನ್ಯಾಷನಲ್ ಬುಕ್ ಟ್ರಸ್ಟ್‌ನ ಮೇಲೆ ಸೂಚಿಸಿದ ಕ್ಷೇತ್ರಗಳ ಪರಿಜ್ಞಾನವು ಕಷ್ಟ ಸಾಧ್ಯವೂ ಆಗಿದ್ದು, ಸಂಸ್ಥೆಯು ವಿವಿಧ ವಿಭಾಗಗಳಲ್ಲಿನ ಸಾಮರ್ಥ್ಯಗಳನ್ನು ಆಗಲೇ ಲಭ್ಯವಿರುವ ಪ್ರಕಟಣೆಗಳ ಮೂಲಕ ಪ್ರದರ್ಶಿತವಾಗಿಸುವಲ್ಲಿ ಅದರ ವಿಶ್ವಾಸಾರ್ಹತೆಯಿದೆ. ಈ ಲಕ್ಷಣಗಳು ವಿಶೇಷವಾದ ಪ್ರಶಂಸೆಗೆ ಯೋಗ್ಯ ವಾಗಿದೆ. ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿರುವ ಪ್ರತಿ ಪ್ರಮುಖ ಭಾಷೆಗಳಿಗೆ ಸಂಪಾದಕ ಮಂಡಳಿಯಿದ್ದು ಅದು ರಾಜ್ಯ/ ಪ್ರಾಂತ್ಯಗಳಿಗೆ ಸಂಬಂಧಿಸಿದ ಭಾಷೆಗೆ ಮಾಹಿತಿಯ ಉಗಮಸ್ಥಾನವಾಗಿದೆ.

ನ್ಯಾಷನಲ್ ಬುಕ್ ಟ್ರಸ್ಟನ್ನು ನೆನಪಿಸಿಕೊಳ್ಳುವ ಓದುಗರ ಪ್ರಮಾಣ ಅಷ್ಟೇನೂ ಹೆಚ್ಚಾಗಿಲ್ಲದಿರಬಹುದು. ಆದರೆ ಅದು ಪ್ರಕಾಶನ ಉದ್ಯಮದ ಮಾನ್ಯತೆ ಪಡೆದ ಬಹು ಪ್ರಮುಖ ಸದಸ್ಯವೆಂದು ಮಾನ್ಯತೆ ಪಡೆದಿದೆ. ನ್ಯಾಷನಲ್ ಬುಕ್ ಟ್ರಸ್ಟ್ ಸಹಾ ಒಂದು ಪ್ರಕಾಶಕ ಸಂಸ್ಥೆಯಾಗಿರುವುದಲ್ಲದೆ, ಮಾರುಕಟ್ಟೆಯ ಇತರ ಪ್ರಕಾಶಕರುಗಳೊಡನೆ ಸ್ಪರ್ಧಿಸುತ್ತಿದೆ. ನಗರ ಕ್ಷೇತ್ರದ ತೀವ್ರ ಪ್ರತಿಸ್ಪರ್ಧಿಯಾಗಿರುವುದಕ್ಕಿಂತ ಅದು ವಿಶೇಷವಾಗಿ ನವ ಸಾಕ್ಷರರು ಮತ್ತು ಗ್ರಾಮಾಂತರ ಓದುಗರನ್ನು ಒಳಗೊಂಡ ಗ್ರಾಹಕ ವರ್ಗದ ಅಗತ್ಯಗಳನ್ನು ಪೂರೈಸುವ ಸರ್ಕಾರಿ ಸ್ಥಾನದ ಪ್ರಕಾಶನ ಸಂಸ್ಥೆಯಾಗಿದೆ. ನ್ಯಾಷನಲ್ ಬುಕ್ ಟ್ರಸ್ಟ್ ಸರ್ಕಾರದ ವಿಸ್ತೃತ ಇಲಾಖೆಯಾಗಿ ಕಾರ್ಯ ನಿರ್ವಹಿಸುವ ಸಾರ್ವಜನಿಕ ಉದ್ಯಮ. ಹೆಚ್ಚಿನ ಗತಿಶೀಲತೆ ಮತ್ತು ಪ್ರೇರಣೆಯಿಂದ ಉತ್ತೇಜನಗಳ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಬಹುದು.

ಆದಾಗ್ಯೂ, ಪರಂಪರೆಯ ಕಾರ್ಯ ವಿಧಾನವನ್ನು ಪರಿಶೀಲಿಸಿದರೆ ನ್ಯಾಷನಲ್ ಬುಕ್ ಟ್ರಸ್ಟ್ ಅದರ ಆರಂಭ ದಿಂದಲೂ ಭಾರತ ಸರ್ಕಾರದೊಡನೆ ಸಹಯೋಗ ಹೊಂದಿ, ಆರ್ಥಿಕ ಭದ್ರತೆ ಮತ್ತು ಕಾರ್ಯ ನಿರ್ವಹಣೆಯ ನಿಯಂತ್ರಣದಿಂದ ಸಂಸ್ಥೆಯು ಹಲವು ದೌರ್ಬಲ್ಯಗಳನ್ನು ಯಾರಾದರೂ ಗುರುತಿಸ ಬಹುದಾಗಿದೆ. ಸೃಷ್ಟಿ ಯಾಗುತ್ತಿರುವ ಹೊಸ ವಾತಾವರಣದಲ್ಲಿ ಸ್ಪರ್ಧಾತ್ಮಕವಾಗಿ ಕೆಲಸ ಮಾಡುವ ಅದರ ಸಾಮರ್ಥ್ಯವನ್ನು ಕುಂದಿಸಿರುವುದನ್ನು ಗುರುತಿಸಬಹುದಾಗಿದೆ. ಆ ಸಂಸ್ಥೆಯ ಗಮನಾರ್ಹ ಮತ್ತು ವ್ಯಾಪಕವಾಗಿ ಗುರುತಿಸಬಹುದಾದ ದೌರ್ಬಲ್ಯವೆಂದರೆ ಕೈಯಲ್ಲಿನ ವಿಷಯಕ್ಕಿಂತ ಅದರ ಕಾರ್ಯವಿಧಾನಗಳಿಗೆ ಒತ್ತು ನೀಡುವುದು. ಇದು ಸಂಸ್ಥೆಯ ಸಂಸ್ಕೃತಿ ಮತ್ತು ಸಿಬ್ಬಂದಿ ನೈತಿಕತೆ ಮತ್ತು ಅಭಿಪ್ರೇರಣೆ ಮೇಲೆ ಪ್ರಭಾವ ಬೀರಿದೆ. ಪ್ರಕಾಶನ ಉದ್ಯಮವು ವಿಕಾಸ ಗೊಳ್ಳುತ್ತಿರುವ ಸ್ಥಿತಿಯಲ್ಲಿ ಸ್ಪಷ್ಟವಾದ ವ್ಯಾಪಕ ದೃಷ್ಟಿಕೋನದ ಕೊರತೆಯಿದ್ದು, ನ್ಯಾಷನಲ್ ಬುಕ್ ಟ್ರಸ್ಟ್‌ನ ಪಾತ್ರ ಮತ್ತು ಜವಾಬ್ದಾರಿಗಳ ಮೇಲೆ ಅದರ ಪ್ರಭಾವವಿದೆ. ನ್ಯಾಷನಲ್ ಬುಕ್ ಟ್ರಸ್ಟ್ ಅತ್ಯಂತ ಕಡಿಮೆ ಮಟ್ಟದ ತಂತ್ರ ಜ್ಞಾನ ಮತ್ತು ಪುಸ್ತಕ ಉದ್ಯಮದ ಮೂಲಭೂತ ಆಧಾರಗಳನ್ನು ಹೈಟೆಕ್ (ಉನ್ನತ ತಂತ್ರಜ್ಞಾನ) ಕ್ಷೇತ್ರದಲ್ಲಿ ಬದಲಾವಣೆಗಳು ಅಲುಗಾಡಿಸುತ್ತಿರುವ ಕೈಗಾರಿಕಾ ವಾತಾವರಣದಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್‌ನ್ನು ದುರ್ಬಲಗೊಳಿಸುತ್ತಿವೆ.

ಪ್ರಪಂಚದ ಸುತ್ತಲ ತಂತ್ರಜ್ಞಾನದ ಕ್ರಾಂತಿಯ ಜಗನ್ನಾಥ ರಥ ಸಾಂಪ್ರದಾಯಿಕ ಕೈಗಾರಿಕೆಗಳನ್ನು ತೀಕ್ಷ್ಣವಾದ ಬಿರುಗಾಳಿಯೆಬ್ಬಿಸಿ ಅವುಗಳನ್ನು ಬಲಿ ಕೊಡುತ್ತಿರುವುದರಲ್ಲಿ ತೊಡಗಿರುವ ವೇಳೆಯಲ್ಲಿ ಪುಸ್ತಕ ಪ್ರಕಾಶನದ ವ್ಯವಹಾರದ ಮೇಲೂ ಆಳವಾದ ಘಾಸಿಯನ್ನು ಮಾಡುತ್ತಿದೆ. ಈ ವ್ಯವಹಾರಕ್ಕೆ ಸಾಮರ್ಥ್ಯ ಹಾಗೂ ಸಂಕೀರ್ಣತೆಗಳನ್ನು ಸೇರಿಸುವಲ್ಲಿ ಪುಸ್ತಕ ನಿರ್ಮಾಣದಿಂದ ಸಂಪಾದನೆ ಮೊದಲ್ಗೊಂಡು, ಅದರ ಉನ್ನತಿ, ಮಾರಾಟಗಳು ಮತ್ತು ಪುಸ್ತಕಗಳ ವಿತರಣೆಗೆ ಸಂಬಂಧಿಸಿದ ತಂತ್ರಜ್ಞಾನಗಳು ಸಹಾಯಕವಾಗಿವೆ. ಈ ಕ್ಷೇತ್ರದಲ್ಲಿ ಎಲೆಕ್ಟ್ರಾನಿಕ್ ವಾಣಿಜ್ಯವು ಬಹು ತಾರ್ಕಿಕವಾದ ಯೋಜನೆಯಾಗಿವೆ. ಪ್ರಕಾಶನ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ನಡುವೆ ಸ್ಪರ್ಧೆ ಇರುವುದಾದರೂ ಅದು ಒಂದು ನಿರ್ದಿಷ್ಟ ಮಿತಿಯನ್ನು ಮೀರದಂತೆ ನಡೆಯುತ್ತಿರುವುದನ್ನು ಸೂಚಿಸುತ್ತಿರುವಲ್ಲಿ ಹೊಸ ತಂತ್ರಜ್ಞಾನವು ಅದರ ಪ್ರಾಮುಖ್ಯದ ತುತ್ತತುದಿಯಲ್ಲಿ ಈ ಮಾಧ್ಯಮದ ತಿರುಳಿನೊಡನೆ ಸಂಪ್ರದಾಯಿಕ ಪ್ರಕಾಶನ ಉದ್ಯಮ ಅವಿಭಾಜ್ಯವಾಗಿ ಮತ್ತು ಬಿರುಕಿಲ್ಲದಂತೆ ಹೊಂದಿಕೊಳ್ಳುವಂತೆ ಮಾಡಿದೆ.

ಪ್ರಪಂಚದಾದ್ಯಂತ ಅಸಂಖ್ಯ ಉದ್ಯಮಿಗಳು ಮತ್ತು ವಿಶ್ವ ದೈತ್ಯರು ಭಾರತವನ್ನು ಪ್ರವೇಶಿಸುತ್ತಿರುವಾಗ ಪ್ರಕಾಶನ ಉದ್ಯಮಕ್ಕೆ ಸಹಾ ಇಲ್ಲಿನ ವಾತಾವರಣವೂ ಹೆಚ್ಚು ಹೆಚ್ಚು ಸಂಕೀರ್ಣವೂ ಸ್ಪರ್ಧಾತ್ಮಕವೂ ಆಗಿದೆ. ಪ್ರಪಂಚದಾದ್ಯಂತ ಹೆಚ್ಚು ವ್ಯಾಪ್ತಿಯುಳ್ಳ ಬಿಡಿ ಬಿಡಿ ವಾಹಿನಿಗಳು ಮತ್ತು ವಿವಿಧ ರಾಷ್ಟ್ರಗಳ ಉದ್ಯಮಿಗಳು ಪುಸ್ತಕ ವಿತರಣೆಯ ಮೇಲೆ ತಮ್ಮ 'ಬ್ರಾಂಡ್' ಹೆಸರುಗಳನ್ನು ಪ್ರಚಾರ ಮಾಡುತ್ತಿರುವುದರಿಂದ ಅಧಿಕ ಪ್ರಭಾವವಾಗಲಿದೆ. ಭಾರತದ ಪ್ರಪಂಚದ ಇತರ ಪ್ರಕಾಶಕರು ತಮ್ಮ ವಿಸ್ತೃತ ಮಾರಾಟ ಮಳಿಗೆ ಜಾಲದ ಸಹಾಯದಿಂದ ನ್ಯಾಷನಲ್ ಬುಕ್ ಟ್ರಸ್ಟ್ ಉತ್ಪತ್ತಿ ಮಾಡುತ್ತಿವುದಕ್ಕಿಂತ ಹೆಚ್ಚಿನ ಸಂಖ್ಯೆಯ ವೈವಿಧ್ಯತೆಯ ಉತ್ಪನ್ನಗಳು ಮತ್ತು ಅಧಿಕ ವ್ಯಾಪಾರವನ್ನು ಒದಗಿಸುತ್ತಿರುವುದರಿಂದ ಉದ್ಭವಿಸುತ್ತಿರುವ ವ್ಯಾಪಾರದ ಸಮಸ್ಯೆಯನ್ನು ಊಹಿಸಿಕೊಳ್ಳುವುದು ಕಷ್ಟವೇನಲ್ಲ.

ಭಾರತ ಸರ್ಕಾರದಿಂದ ಬಹುಪಾಲು ಪುಸ್ತಕ ಪ್ರಕಾಶನ

Digitised by Bharatavani, CIIL

ವ್ಯವಹಾರದಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ ಇದುವರೆಗೂ ನ್ಯಾಯಯುತವಾಗಿ ಸ್ಥಿರವಾದ ವಾತಾವರಣದಲ್ಲಿ ಸರ್ಕಾರದ ಬೆಂಬಲದೊಡನೆ ತನ್ನ ಪಾತ್ರವನ್ನು ಇಲ್ಲಿಯವರೆಗೂ ನಿರ್ವಹಿಸಿಕೊಂಡು ಬಂದಿದೆ. ಪ್ರತಿ ವರ್ಷವೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಬಜೆಟ್ ಬೆಂಬಲದೊಡನೆ ಸರಾಸರಿ ಸುಮಾರು 100 ಮಿಲಿಯನ್ ರೂಗಳ (ಸುಮಾರು ಒಂದು ಕೋಟಿ) ಮೊಬಲಗನ್ನು ಪಡೆಯುತ್ತಿದೆ. ಆದಾಗ್ಯೂ ದೇಶದಲ್ಲಿ ಸಾರ್ವಜನಿಕ ಕ್ಷೇತ್ರದ ಮೇಲೆ ಬೀಸುತ್ತಿರುವ ಬದಲಾವಣೆಯ ಗಾಳಿಯು ಈ ಪ್ರಕಾಶನ ಸಂಸ್ಥೆಯನ್ನು ಅದರ ಅಭಿವೃದ್ಧಿಪರ ಮತ್ತು ಉತ್ತೇಜನಕರ ಸ್ವರೂಪದ ಚಟುವಟಿಕೆಗಳನ್ನು ಪ್ರಭಾವ ಗೊಳಿಸದೆ ಬಿಡಲಾರದು. ಭಾರತ ಸರ್ಕಾರ ತನ್ನ ಬಜೆಟ್ ಬೆಂಬಲ ಸಾಮರ್ಥ್ಯದ ಇಳಿಮುಖತೆ ಎದುರಿಸುತ್ತಿದ್ದು ನ್ಯಾಷನಲ್ ಬುಕ್ ಟ್ರಸ್ಟನ್ನೂ ಕೂಡ ಸ್ವಸಾಮ್ಯದೆಡೆಗೆ ತನ್ನದೇ ಆದಾಯವನ್ನು ಸೃಷ್ಟಿಸಿಕೊಂಡು ತನ್ನ ಕಾರ್ಯ ನಡೆಸುವಂತೆ ಕೇಳಬಹುದಾಗಿದೆ. ಇದು ನ್ಯಾಷನಲ್ ಬುಕ್ ಟ್ರಸ್ಟ್‌ನ ಬೆಳವಣಿಗೆ ಮತ್ತು ಭವಿಷ್ಯದಲ್ಲಿ ವಹಿಸಲಿರುವ ಪ್ರಮುಖ ಸ್ಥಾನಕ್ಕೆ ಅಧಿಕ ಸವಾಲುಗಳನ್ನು ಒಡ್ಡುತ್ತಿದೆ. ನ್ಯಾಷನಲ್ ಬುಕ್ ಟ್ರಸ್ಟ್ ಅದರ ಸಾಮಾಜಿಕ ಉದ್ದೇಶಗಳನ್ನು ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಸರಿದೂಗಿಸಲು ಸಾಧನವಾಗಿ ಈ ಸವಾಲು ಏಕೈಕ ಪ್ರಮುಖ ವಿಷಯವಾಗಿ ಅದರ ಯೋಜನೆಗಳನ್ನು ನಿರ್ಧರಿಸುತ್ತದೆ.

**ಮೂಲ: ನಿರ್ಮಲ್ ಕಾಂತಿ ಭಟ್ಟಾಚಾರ್ಜಿ**

**ಅನು: ಡಾ. ರತ್ನಮ್ಮ ಕೆ.ಎಸ್**

## ಭಾರತದ ಪುನರ್ವಸತಿ ಪರಿಷತ್ತು

**ಹಿನ್ನೆಲೆ:** ಭಾರತದಲ್ಲಿ ನಿರ್ದಿಷ್ಟವಾಗಿ ದೃಷ್ಟಿದೋಷವಿರುವ ಮತ್ತು ಶ್ರವಣ ಶಕ್ತಿ ಕುಂದಿದ ಮಕ್ಕಳಿಗೆ ವಿಶೇಷ ಶಿಕ್ಷಣವನ್ನು ನೀಡುವ ಸಲುವಾಗಿ 1880ರಲ್ಲಿ ವಿಶೇಷ ಶಾಲೆಗಳನ್ನು ಸ್ಥಾಪಿಸಲಾಯಿತು. ಪ್ರಾರಂಭದಲ್ಲಿ ವಿದೇಶದಿಂದ ಬಂದ ಕ್ರೈಸ್ತ ಮಿಶನರಿಗಳು ಕಲಿಸತೊಡಗಿದರು. ಆನಂತರ ಅನೇಕ ಭಾರತೀಯ ಸ್ವಯಂಸೇವಾ ಸಂಸ್ಥೆಗಳು ಶಿಕ್ಷಕರಿಗೆ ತರಬೇತಿ ನೀಡುವ ಕಾರ್ಯವನ್ನು ಕೈಗೊಂಡವು. ಈ ಕಾರ್ಯವಿಧಾನವು 1940ರ ದಶಕದ ಆದಿಯಲ್ಲಿ ಪ್ರಾರಂಭವಾಯಿತು.

ಮಾನಸಿಕ ಅಸ್ವಸ್ಥರಿಗೆ, ಶ್ರವಣ ಶಕ್ತಿ ಮತ್ತು ದೃಷ್ಟಿ ಕುಂದಿದವರ ಶಿಕ್ಷಕರಿಗೆ ಪ್ರತ್ಯೇಕ ಜಾಗಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದ್ದರೂ ಅವರ ಪಠ್ಯವಸ್ತುವಿನಲ್ಲಿ ಅಥವಾ ಬೋಧನಾ ವಿಧಾನದಲ್ಲಿ ಏಕರೂಪತೆ ಇರಲಿಲ್ಲ. ಅರವತ್ತರ ದಶಕದ ಪ್ರಾರಂಭದಲ್ಲಿ ಶಿಕ್ಷಣ ಮಂತ್ರಾಲಯವು ಸಾಮಾನ್ಯ ಪಠ್ಯವಸ್ತುವನ್ನು ಅಳವಡಿಸಿಕೊಳ್ಳುವಂತೆ ಅನೇಕ ಪ್ರಮುಖ ಸಂಸ್ಥೆಗಳ ಮನವೊಲಿಸುವ ಕೆಲವು ಪ್ರಯತ್ನಗಳನ್ನು ನಡೆಸಿತು. ಆದರೆ ಸೂಕ್ತ ಕಾನೂನಿನ ಅಧಿಕಾರದ ಅನುಪಸ್ಥಿತಿಯಲ್ಲಿ ಈ ಪ್ರಯತ್ನವು ಹೆಚ್ಚಿನ ಯಶಸ್ಸನ್ನು ಪಡೆಯಲಿಲ್ಲ.

ಇದೇ ಸಮಯದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು ತರಬೇತಿ ಕೋರ್ಸುಗಳನ್ನು ನಡೆಸುತ್ತಿದ್ದ ಸರಕಾರೇತರ ಸಂಸ್ಥೆಗಳಿಗೆ(ಎನ್‌ಜಿಒ) ನೆರವು ನೀಡಲಾರಂಭಿಸಿತು. ಎಂಬತ್ತರ ದಶಕದಲ್ಲಿ, ಅದರಲ್ಲಿಯೂ 1981 ಅಂಗವಿಕಲ ವ್ಯಕ್ತಿಗಳ ಅಂತಾರಾಷ್ಟ್ರೀಯ ವರ್ಷವೆಂದು ಘೋಷಣೆಯಾದ ಬಳಿಕ ಪುನರ್ವಸತಿ ಕ್ಷೇತ್ರದಲ್ಲಿ ಅಗತ್ಯವಿರುವ ಶಿಕ್ಷಕರು ಮತ್ತು ಇತರ ವೃತ್ತಿಪರರಿಗೆ ನೀಡುವ ತರಬೇತಿಯಲ್ಲಿ ಏಕರೂಪತೆಯ ಪ್ರಾಮುಖ್ಯತೆಯ ಅರಿವು ಮಂತ್ರಾಲಯಕ್ಕೆ ಉಂಟಾಯಿತು.

**ಉದ್ದೇಶ:** 1986ನೇ ಇಸವಿಯಲ್ಲಿ ಭಾರತದ ಪುನರ್ವಸತಿ ಪರಿಷತ್ತನ್ನು ನೊಂದಾಯಿತ ಸಂಘವಾಗಿ ಸ್ಥಾಪಿಸಲಾಯಿತು. ದುರಾದೃಷ್ಟವಶಾತ್ ಅರವತ್ತರ ದಶಕದ ಪ್ರಾರಂಭದಲ್ಲಿ ಕಾನೂನುಬದ್ಧ ಅಧಿಕಾರದ ಅನುಪಸ್ಥಿತಿಯ ಕಾರಣದಿಂದ ಶಿಕ್ಷಣ ಮಂತ್ರಾಲಯವು ಎದುರಿಸಿದ ತೊಂದರೆಗಳನ್ನೇ ಈ ಪರಿಷತ್ತು ಕೂಡ ಎದುರಿಸಿತು. ಆದುದರಿಂದ 1992ರಲ್ಲಿ ಸಂಸತ್ತು ಪುನರ್ವಸತಿ ಅಧಿನಿಯಮವನ್ನು ಜಾರಿಗೆ ತಂದು, ಪುನರ್ವಸತಿ ಕ್ಷೇತ್ರದಲ್ಲಿ ಅಗತ್ಯವಿರುವ 16 ವಿಭಾಗಗಳ ವೃತ್ತಿಪರರಿಗೆ ಪಠ್ಯಕ್ರಮದ ಪ್ರಮಾಣೀಕರಣ, ತರಬೇತಿಯ ನಿಯಂತ್ರಣ ಕೋರ್ಸುಗಳನ್ನು ನಡೆಸುವ ಸಂಸ್ಥೆಗಳಿಗೆ ಮಾನ್ಯತೆ ನೀಡುವಿಕೆ, ಮತ್ತು ಅಂಗವಿಕಲರಿಗೆ ಸೇವೆಗಳನ್ನು ನೀಡುತ್ತಿರುವ ಅನರ್ಹ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಜರುಗಿಸುವಿಕೆ ಇತ್ಯಾದಿ ಅಧಿಕಾರವನ್ನು ಪರಿಷತ್ತಿಗೆ ಒದಗಿಸಿತು.

ಈ ಅಧಿನಿಯಮವು ಜೂನ್, 1993ರಲ್ಲಿ ಜಾರಿಗೆ ಬಂತು. ಈ ಕೆಳಗಿನ 16 ವೃತ್ತಿಪರ ವಿಭಾಗಗಳ ತರಬೇತಿಯ ಪ್ರಮಾಣೀಕರಣದ(ನಿಗದಿತ ಮಟ್ಟಕ್ಕೆ ತರುವ) ಜವಾಬ್ದಾರಿಯನ್ನು ಪರಿಷತ್ತಿಗೆ ವಹಿಸಿಕೊಡಲಾಯಿತು. ಈ ವಿಭಾಗಗಳೆಂದರೆ: ಶ್ರವಣತಜ್ಞರು ಮತ್ತು ವಾಕ್‌ಚಿಕಿತ್ಸಕರು; ಪ್ರಾಯೋಗಿಕ ಮನಃಶಾಸ್ತ್ರಜ್ಞರು; ಶ್ರವ್ಯ ಉಪಕರಣ ಮತ್ತು ಕಿವಿಯ ಅಚ್ಚೊತ್ತಿನ ತಂತ್ರಜ್ಞರು; ಪುನರ್ವಸತಿ ಇಂಜಿನಿಯರುಗಳು ಮತ್ತು ತಂತ್ರಜ್ಞರು; ಅಂಗವಿಕಲರಿಗೆ ಕಲಿಸುವ ಮತ್ತು ತರಬೇತಿ ನೀಡುವ ವಿಶೇಷ ಶಿಕ್ಷಕರು: ವೃತ್ತಿಪರ ಸಮಾಲೋಚಕರು, ಅಂಗವಿಕಲರೊಂದಿಗೆ ವ್ಯವಹರಿಸುವ ಉದ್ಯೋಗಾಧಿಕಾರಿಗಳು ಮತ್ತು ನೇಮಕಾಧಿಕಾರಿಗಳು, ಬಹು ಉದ್ದೇಶಿತ ಪುನರ್ವಸತಿ ಚಿಕಿತ್ಸಕರು, ತಂತ್ರಜ್ಞರು; ವಾಕ್ ರೋಗ ಶಾಸ್ತ್ರಜ್ಞರು; ಪುನರ್ವಸತಿ ಮನಃಶಾಸ್ತ್ರಜ್ಞರು; ಪುನರ್ವಸತಿ ಸಾಮಾಜಿಕ ಕಾರ್ಯಕರ್ತರು; ಮಾನಸಿಕ ಅಸ್ವಸ್ಥತೆಯ ಪುನರ್ವಸತಿ ತಪಾಸಣೆಗಾರರು; ಅನುಗೊಳಿಸುವಿಕೆ ಮತ್ತು ಚಲನೆಯ ವಿಶೇಷಜ್ಞರು; ಸಮುದಾಯ–ಆಧಾರಿತ ಪುನರ್ವಸತಿ ವೃತ್ತಿಪರರು; ಪುನರ್ವಸತಿ ಸಮಾಲೋಚಕರು/ಆಡಳಿತಗಾರರು; ಕೃತಕ ಅವಯವಗಳ ತಜ್ಞರು ಮತ್ತು ಆರ್ಥೋಟಿಸ್ಟ್‌ಗಳು; ಪುನರ್ವಸತಿ ಕಾರ್ಯಾಗಾರದ ಕಾರ್ಯನಿರ್ವಾಹಕರು; ಮತ್ತು ಕೇಂದ್ರ ಸರಕಾರ ಪರಿಷತ್ತಿನೊಂದಿಗೆ ಸಮಾಲೋಚನೆ ನಡೆಸಿ ಕಾಲಾನುಕ್ರಮದಲ್ಲಿ ಅಧಿಸೂಚಿಸುವ ಇದೇ ರೀತಿಯ ಇತರ ವೃತ್ತಿಪರರು.

Digitised by Bharatavani, CIIL

**ಸಾಧನೆಗಳು:** ದೃಷ್ಟಿ ದೋಷವಿರುವ, ಶ್ರವಣ ಶಕ್ತಿ ದೋಷವಿರುವ, ಮಾನಸಿಕವಾಗಿ ಅಸ್ವಸ್ಥರಾಗಿರುವ ಮತ್ತು ಕೆಲವು ವಿಧದ ಚಲನಾ ಶಕ್ತಿಯನ್ನು ಕಳೆದುಕೊಂಡಿರುವ ಮಕ್ಕಳ ಶಿಕ್ಷಕರ ತರಬೇತಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಲಾಗಿದೆ. ದೇಶದಾದ್ಯಂತ ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾಗಳನ್ನು ಅಥವಾ ಪದವಿಗಳನ್ನು ನೀಡುವ 133 ಸಂಸ್ಥೆಗಳಿಗೆ ಪರಿಷತ್ತು ಮಾನ್ಯತೆ ನೀಡಿದೆ. ವಿಶ್ವವಿದ್ಯಾಲಯಗಳು ನಡೆಸಲಿರುವ ಕೆಲವು ಕೋರ್ಸ್‌ಗಳಿಗೆ, ಉದಾಹರಣೆಗೆ ಪ್ರಯೋಗ ಶಿಕ್ಷಣದ ಮನಃಶಾಸ್ತ್ರ, ಶ್ರವಣ ಶಾಸ್ತ್ರ ಮತ್ತು ವಾಕ್ ರೋಗಲಕ್ಷಣ ಶಾಸ್ತ್ರ ಇತ್ಯಾದಿಗಳಿಗೆ ಪರಿಷತ್ತಿನಿಂದ ಮಂಜೂರಾತಿಯನ್ನು ನಿರೀಕ್ಷಿಸಲಾಗುತ್ತದೆ.

ಪರಿಷತ್ತು ತಾನು ಅಭಿವೃದ್ಧಿಪಡಿಸಿದ ಅನೇಕ ಕೋರ್ಸ್‌ಗಳಿಗೆ ತರಬೇತಿ ಹೊಂದಿದ ವೃತ್ತಿಪರರ ಮತ್ತು ಉದ್ಯೋಗಿಗಳ ಕೇಂದ್ರೀಯ ಪುನರ್ವಸತಿ ನೋಂದಣಿಯ ದಾಖಲೆ ಪುಸ್ತಕವನ್ನು ಕಾಪಾಡಿಕೊಂಡು ಬಂದಿದೆ. ಭಾರತದ ಪುನರ್ವಸತಿ ಪರಿಷತ್ತಿನ ಕೇಂದ್ರೀಯ ಪುನರ್ವಸತಿ ನೋಂದಣಿ ಪುಸ್ತಕದಲ್ಲಿ(ರಿಜಿಸ್ಟರ್) 30 ಸೆಪ್ಟೆಂಬರ್, 2000ದ ಹೊತ್ತಿಗೆ, 4006 ವೃತ್ತಿಪರರು ಮತ್ತು 4,188 ಉದ್ಯೋಗಿಗಳು ನೋಂದಣಿ ಮಾಡಿಸಿಕೊಂಡಿರುವುದು ಕಂಡುಬರುತ್ತದೆ. ಕನಿಷ್ಠ ಪದವಿ ಮತ್ತು ವಿಶೇಷ ಶಿಕ್ಷಣದಲ್ಲಿ ಮಾನ್ಯತೆ ಪಡೆದ ಡಿಪ್ಲೊಮಾ ಅಥವಾ ಪದವಿ ಅಥವಾ ಮೇಲೆ ಉಲ್ಲೇಖಿಸಿದ 16 ಕ್ಷೇತ್ರಗಳಲ್ಲಿ ಯಾವುದಾದರೂ ಒಂದರಲ್ಲಿ ತರಬೇತಿ ಹೊಂದಿರುವವರನ್ನು ನಿಯಮದ ಪ್ರಕಾರ ವೃತ್ತಿಪರರಾಗಿ ನೋಂದಣಿ ಮಾಡಿಕೊಳ್ಳಲಾಗುತ್ತದೆ. ಹಾಗಿದ್ದರೂ ಪದವಿ ಪೂರ್ವ ಶಿಕ್ಷಣ ಪಡೆದು ಡಿಪ್ಲೊಮಾ ಹೊಂದಿರುವವರಿಗೆ ಉದ್ಯೋಗಿಯಾಗಿ ನೋಂದಣಿ ಮಾಡಲಾಗುತ್ತದೆ.

1993ರಲ್ಲಿ ಅಧಿನಿಯಮ ಜಾರಿಗೆ ಬರುವುದಕ್ಕಿಂತ ಮೊದಲು ಅನೇಕ ಮಂದಿ ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿದ್ದುದನ್ನು ಭಾರತ ಸರಕಾರದ ಗಮನಕ್ಕೆ ತರಲಾಗಿದೆ. ಅವರಲ್ಲಿ ಅನುಭವ ಇತ್ತು, ಆದರೆ ಮಾನ್ಯತೆಯ ಅರ್ಹತೆ ಇರಲಿಲ್ಲ. ಅವರಿಗಿದ್ದ ಕಾನೂನು ತೊಡಕನ್ನು ನಿವಾರಿಸುವುದಕ್ಕಾಗಿ ಭಾರತದ ಪುನರ್ವಸತಿ ಪರಿಷತ್ತು ಒಂದು ತಿಂಗಳ ಕಾಲಾವಧಿಯ ಸೇತುಬಂಧ ಕೋರ್ಸನ್ನು (ಬ್ರಿಡ್ಜ್ ಕೋರ್ಸ್) ಒದಗಿಸುವ ರಾಷ್ಟ್ರೀಯ ಕಾರ್ಯಕ್ರಮವನ್ನು ಕೈಗೊಂಡಿತು. ಸೇತುಬಂಧ ಕೋರ್ಸ್‌ಗಳನ್ನು ಮುಗಿಸಿದವರಿಗೆ ಪುನರ್ವಸತಿ ಉದ್ಯೋಗಿಗಳೆಂದು ನೋಂದಣಿ ಮಾಡಲಾಯಿತು. 30 ಸೆಪ್ಟೆಂಬರ್, 2000ದ ಒಳಗೆ 6,641 ಮಂದಿ ಸೇತುಬಂಧ ಕೋರ್ಸ್‌ಗಳನ್ನು ಮುಗಿಸಿ ಪರಿಷತ್ತಿನಲ್ಲಿ ನೋಂದಣಿಯಾದರು.

ದೇಶದ ಮೂಲೆ ಮೂಲೆಯಲ್ಲಿರುವ ದೂರದ ಪ್ರದೇಶಗಳಿಗೆ ತಲುಪಿಸಲು ವೃತ್ತಿಪರ ಕಾರ್ಯಕ್ಷಮತೆಯನ್ನು ಹುಟ್ಟಿಸುವ ಕಾರ್ಯವನ್ನು ಕೈಗೊಳ್ಳಲು ಪರಿಷತ್ತು ಅಲ್ಪಾವಧಿಯ ತರಬೇತಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ. ಸೆಪ್ಟೆಂಬರ್ 2000ದ ಹೊತ್ತಿಗೆ ಅಂಗವಿಕಲ ನಿರ್ವಹಣೆಗೆ 2132 ವೈದ್ಯರನ್ನು ಅನುಗೊಳಿಸಲಾಗಿದೆ. ಪರಿಷತ್ತು ಅಂಗವಿಕಲತೆಗಳನ್ನು ಹೊಂದಿರುವ ಎಲ್ಲಾ ಜನರಿಗೆ ಪುನರ್ವಸತಿಯನ್ನು ಕಲ್ಪಿಸುವ ಪ್ರಯತ್ನವನ್ನು ನಡೆಸುತ್ತಿದೆ. ಈ ದಿಕ್ಕಿನಲ್ಲಿ ಕ್ರಮಿಸುವ ದ್ಯೋತಕವಾಗಿ 'ಭಾರತದಲ್ಲಿ ಅಂಗವಿಕಲತೆಯ ಸ್ಥಾನಮಾನ, 2000' (ಸ್ಟೇಟಸ್ ಆಫ್ ಡಿಸ್ಯಾಬಿಲಿಟಿ ಇನ್ ಇಂಡಿಯಾ, 2000) ಎಂಬ ಗ್ರಂಥವನ್ನು ಪ್ರಕಟಿಸಿದೆ. ಈ ಗ್ರಂಥವು ದೃಷ್ಟಿ ಹಾನಿ, ಶ್ರವಣ ಶಕ್ತಿಯ ಹಾನಿ, ಮಾನಸಿಕ ಅಸ್ವಸ್ಥತೆ, ಮತ್ತು ಚಲನಾ ಶಕ್ತಿಯ ಹಾನಿಯ ಕುರಿತಾದ ಪ್ರಸಕ್ತ ಮಾಹಿತಿ ನೀಡುವ ವ್ಯಾಪಕ ವಿವರಗಳನ್ನು ಒಳಗೊಂಡಿದೆ.

**ಭವಿಷ್ಯ:** ಭಾರತದೇಶದಲ್ಲಿ ವಿಶೇಷ ಅಗತ್ಯಗಳನ್ನು ಹೊಂದಿರುವಂತಹ 30 ಮಿಲಿಯ ಮಕ್ಕಳು ಇರಬಹುದು ಎಂಬ ಅಂದಾಜನ್ನು ಮಾಡಲಾಗಿದೆ. ಇಂತಹ ಪ್ರತಿಯೊಬ್ಬ ಮಗುವನ್ನು ತಲುಪಬೇಕಾದರೆ ಕನಿಷ್ಠ 1 ಮಿಲಿಯ ವಿಶೇಷ ಶಿಕ್ಷಕರು ಬೇಕಾಗಬಹುದು. ಈ ಶಿಕ್ಷಕರಿಗೆ ವಿಶೇಷ ಅಗತ್ಯಗಳ ಶಿಕ್ಷಣದ ಎಲ್ಲಾ ವಿಧಗಳಲ್ಲಿ, ಉದಾಹರಣೆಗೆ ಸಮಗ್ರ ಶಿಕ್ಷಣ, ವ್ಯಾಪಕ ಶಿಕ್ಷಣ, ಅನೌಪಚಾರಿಕ ಶಿಕ್ಷಣ, ದೂರ ಶಿಕ್ಷಣ ಇತ್ಯಾದಿಗಳಲ್ಲಿ ತರಬೇತಿ ನೀಡಬೇಕಾಗುತ್ತದೆ. ಈ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಕೆಲವು ಹೊಸಕ್ರಮಗಳನ್ನು ಪರಿಷತ್ತು ಅಭಿವೃದ್ಧಿಪಡಿಸಿದೆ. ದೂರಶಿಕ್ಷಣದ ಮೂಲಕ ಬಿ.ಎಡ್ ವಿಶೇಷ ಶಿಕ್ಷಣ ಕೋರ್ಸನ್ನು ಪ್ರಾರಂಭಿಸಲು ಮಧ್ಯಪ್ರದೇಶದ ಭೋಜ್ ಮುಕ್ತ ವಿಶ್ವವಿದ್ಯಾಲಯದೊಂದಿಗೆ ಎಮ್‌ಒಯು (ಒಡಂಬಡಿಕೆ ಪತ್ರ)ಗೆ ಸಹಿ ಹಾಕಿದೆ. ಕೆಲವು ಸಂಪರ್ಕ ಕಾರ್ಯಕ್ರಮಗಳ ವ್ಯವಸ್ಥೆ ಕೂಡ ಮಾಡಲಾಗುವುದು. ಇದೇ ರೀತಿ, ಹೆತ್ತವರು ಮತ್ತು ತಳಮಟ್ಟದ ಕಾರ್ಯಕರ್ತರಿಗಾಗಿ ಸರ್ಟಿಫಿಕೇಟ್ ಕೋರ್ಸನ್ನು ಪ್ರಾರಂಭಿಸಲು ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದೊಂದಿಗೂ ಎಮ್‌ಒಯುಗೆ ಸಹಿ ಹಾಕಲಾಗಿದೆ.

ಕಳೆದ ಶತಮಾನದಲ್ಲಿ ಪುನರ್ವಸತೀಕರಣವು ಹೆಚ್ಚಾಗಿ ನಗರಪ್ರದೇಶಗಳಿಗೆ ಸೀಮಿತವಾಗಿದೆ. ಗ್ರಾಮೀಣ ಪ್ರದೇಶಗಳಿಗೆ ಅಗತ್ಯವಿರುವ ಪ್ರಮಾಣದಲ್ಲಿ ಅದು ಒದಗಿ ಬಂದಿಲ್ಲ. ಆದುದರಿಂದ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯವು ತಳ ಹಂತ (ಮೂಲಮಟ್ಟ)ವನ್ನು ತಲುಪುವ ಪ್ರಯತ್ನವನ್ನು ನಡೆಸುತ್ತಿದೆ.

ಪುನರ್ವಸತೀಕರಣಕ್ಕೆ ಭಾವನಾತ್ಮಕ ತಡೆಗಳು ಅತ್ಯಂತ ಕ್ಲಿಷ್ಟಕರವಾದ ವಿಘ್ನಗಳಾಗಿವೆ. ಆದುದರಿಂದ ಅಂಗವಿಕಲತೆಗಳನ್ನು ಹೊಂದಿರುವ ವಿದ್ಯಾರ್ಥಿಗಳ ಬದುಕಿನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಹೆತ್ತವರೊಂದಿಗಿನ ಸಮಾಲೋಚನೆ ಮತ್ತು ಶಿಕ್ಷಣದ ದೂರದ ಹಾದಿಯನ್ನು ಕ್ರಮಿಸಬೇಕಾಗಿದೆ.

ಮಾನವ ಸಂಪನ್ಮೂಲ ವಿಭಾಗದ ಮಂತ್ರಾಲಯವು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಬಹುಶಃ ಇದು ಜಗತ್ತಿನಲ್ಲಿಯೇ ಪ್ರಾಥಮಿಕ ಶಿಕ್ಷಣದ ಅತ್ಯಂತ ದೊಡ್ಡ ಕಾರ್ಯಕ್ರಮವಾಗಿದೆ. ಇದಕ್ಕೆ ಜಾಗತಿಕ ಬ್ಯಾಂಕ್ ಮತ್ತು ಇತರ ದಾನಿ ಸಂಸ್ಥೆಗಳು ಹಣಕಾಸನ್ನು ಒದಗಿಸಿವೆ. ಈ ಕಾರ್ಯಕ್ರಮವನ್ನು 1994ರಲ್ಲಿಯೇ ಜಾರಿಗೆ ತರಲಾಗಿತ್ತಾದರೂ ಅಂಗವಿಕಲರ ಸಮಗ್ರ ಶಿಕ್ಷಣ ಪ್ರಾರಂಭಗೊಂಡದ್ದು 1998ರಲ್ಲಿ. ಆದರೂ ಸದ್ಯದಲ್ಲಿ ವಿಶೇಷ

Digitised by Bharatavani, CIIL

ಅಗತ್ಯಗಳನ್ನು ಹೊಂದಿರುವ ಮಕ್ಕಳಿಗೆ ಶೈಕ್ಷಣಿಕ ಸೇವೆಗಳನ್ನು ನೀಡುವುದಕ್ಕಾಗಿ ಸಾಮಾನ್ಯ ಶಿಕ್ಷಕರಲ್ಲಿ ಸಂವೇದನೆಯನ್ನು ಮೂಡಿಸುವ ಸಲುವಾಗಿ ಕಡಿಮೆ ಅವಧಿಯ ಕೋರ್ಸ್‌ಗಳನ್ನು ಒದಗಿಸುವ ತಾತ್ಪೂರ್ತಿಕ (ಎಡ್ ಹಾಕ್) ವ್ಯವಸ್ಥೆಗಳನ್ನು ಮಾಡಲಾಗಿದೆ. ಇದು ನ್ಯಾಯಬಾಹಿರವಾಗಿದೆ ಜೊತೆಗೆ ಹೆಚ್ಚು ಪ್ರಭಾವಶಾಲಿಯಾಗಿಲ್ಲ. ಆದುದರಿಂದ ಭಾರತದ ಪುನರ್ವಸತಿ ಪರಿಷತ್ತು 45 ದಿನಗಳ ತಳಹದಿ ಕೋರ್ಸ್(ಫೌಂಡೇಶನ್ ಕೋರ್ಸ್)ನ್ನು ಪ್ರಾರಂಭಿಸಿದೆ. ಇದಕ್ಕೆ ಮಾನವ ಸಂಪನ್ಮೂಲ ವಿಭಾಗದ ಮಂತ್ರಾಲಯದ ಸ್ವೀಕೃತಿ ದೊರೆತಿದೆ. ಐಇಡಿ ಶಿಕ್ಷಕರು 45 ದಿನಗಳ ಕೋರ್ಸನ್ನು ತೆಗೆದುಕೊಳ್ಳಬಹುದು ಮತ್ತು ಬೋಧನೆಯನ್ನು ಪ್ರಾರಂಭಿಸಬಹುದು. ಆದರೆ ಅವರು ಪೂರ್ಣ ಪ್ರಮಾಣದ ಸಂಪನ್ಮೂಲ ಶಿಕ್ಷಕರಾಗುವ ಮೊದಲು ದೂರಶಿಕ್ಷಣದ ಮೂಲಕ ಅಥವಾ ಸಾಂಪ್ರದಾಯಿಕ ವ್ಯವಸ್ಥೆಯ ಮಾನ್ಯತೆ ಪಡೆದ ಡಿಪ್ಲೊಮಾ ಅಥವಾ ಪದವಿಯನ್ನು ಪಡೆಯುವ ಅಗತ್ಯವಿದೆ.

2000–2010ನ್ನು ಅಭಿವೃದ್ಧಿ ದಶಕವೆಂದು ಘೋಷಿಸಲಾಗಿದೆ. ಈ ಅಭಿವೃದ್ಧಿ ದಶಕವು ಕೊನೆಗೊಳ್ಳುವುದರೊಳಗೆ ಅಂಗವಿಕಲತೆ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ತಲುಪುವ ವಿಶೇಷ ಪ್ರಯತ್ನಗಳನ್ನು ನಡೆಸುವ ಇಚ್ಛೆ ಪರಿಷತ್ತಿಗೆ ಇದೆ.

ದೀರ್ಘಾಯುಷ್ಯವು ನಿಧಾನವಾಗಿ ಹೆಚ್ಚುತ್ತಿದೆ. ಇದರೊಂದಿಗೆ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಆದುದರಿಂದ ಜೀವನದುದ್ದಕ್ಕೂ ಅಗತ್ಯವಾಗಿ ಬೇಕಾಗುವ ಶಿಕ್ಷಕರು ಮತ್ತು ಇತರ ವೃತ್ತಿಪರರ ತರಬೇತಿಯನ್ನು ಕೈಗೊಳ್ಳುವುದರೊಂದಿಗೆ ಪರಿಷತ್ತು ಹಿರಿಯ ಅಂಗವಿಕಲರ ಕುರಿತಾಗಿ ಉದ್ಭವಿಸುತ್ತಿರುವ ಸಮಸ್ಯೆಗಳಿಗೂ ವಿಶೇಷ ಗಮನವನ್ನು ನೀಡುತ್ತಿದೆ. ಇನ್ನು ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಗಳಿಗೆ ಹೋಗಲಾಗದ ಹೆಣ್ಣುಮಕ್ಕಳು ಮತ್ತು ಬೇರೆ ವಿದ್ಯಾರ್ಥಿಗಳಿಗೆ ವಿಶೇಷ ಗಮನ ನೀಡುವ ಅಗತ್ಯವಿರುತ್ತದೆ. ನಿವೃತ್ತ ಯೋಧರು, ಕಂದಾಯ ಅಧಿಕಾರಿಗಳು, ಶಿಕ್ಷಕರು, ಸುಶಿಕ್ಷಿತ ನಿರುದ್ಯೋಗಿ ಯುವಜನತೆ ಮತ್ತು ಇತರರಿಗೆ ಅಭಿಶಿಕ್ಷಣವನ್ನು ನೀಡುವ ಪ್ರಸ್ತಾಪವಿದೆ. ಇದರಿಂದ ತಮ್ಮ ಮನೆಗಳಿಂದ ಹೊರಗೆ ಬರಲು ಸಾಧ್ಯವಿಲ್ಲದ ಮಕ್ಕಳಿಗೆ ಇವರು ಮನೆ ಶಿಕ್ಷಣವನ್ನು ನೀಡಬಹುದು.

ಮುಂದಿನ ದಶಕದಲ್ಲಿ ಬಾಲ್ಯಕಾಲದ ಶಿಕ್ಷಣದಿಂದ ಹಿಡಿದು ಹಿರಿಯ ಅಂಗವಿಕಲರ ಕಾಳಜಿಯವರೆಗೆ ನಿರಂತರ ಪುನರ್ವಸತಿ ಸೇವೆಗಳನ್ನು ಒದಗಿಸಲು ಸಾಕಷ್ಟು ಮಾನವಶಕ್ತಿಯನ್ನು ಸಿದ್ಧಗೊಳಿಸುವುದು ಪರಿಷತ್ತು ನಡೆಸಬೇಕೆಂದುಕೊಂಡಿರುವ ಪ್ರಯತ್ನವಾಗಿದೆ.

**ಮೂಲ: ಠಾಕೂರ್ ವಿ. ಹರಿಪ್ರಸಾದ್**
**ಅನು: ಡಾ. ಗೀತಾ ಶೆಣೈ**

## ಭಾರತದಲ್ಲಿ ವಿವಿಧ ಪ್ರಕಾರದ ವಿಶ್ವವಿದ್ಯಾನಿಲಯಗಳು

ವಿಶ್ವವಿದ್ಯಾನಿಲಯ ಎಂಬುದಕ್ಕೆ ಸಮಾನವಾದ ಇಂಗ್ಲೀಷಿನ ಯುನಿವರ್ಸಿಟಿ ಎಂಬ ಶಬ್ದ ಯುನಿವರ್ಸಿಟಾಸ್ (ವ್ಯಕ್ತಿಗಳ ಸಂಘಟಿತ ಅಂಗ) ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಮಾನವ ಜೀವನದ ಹಾಗೂ ಚಟುವಟಿಕೆಗಳ ಎಲ್ಲಾ ಆಯಾಮಗಳನ್ನು ಸಮಗ್ರವಾಗಿ ಪರೀಕ್ಷಿಸುತ್ತಿರುವ ಶ್ರೇಷ್ಠ ಬುದ್ಧಿಜೀವಿಗಳ ಸಮೂಹವನ್ನು ವಿಶ್ವವಿದ್ಯಾನಿಲಯವು ಒಳಗೊಂಡಿದೆ ಎಂಬುದು ಸಾಮಾನ್ಯವಾದ ತಿಳುವಳಿಕೆ. ಈ ಚಟುವಟಿಕೆಯಲ್ಲಿ ಮುಖ್ಯ ಪಾತ್ರಧಾರಿಗಳು ಬೋಧಕ ಹಾಗೂ ವಿದ್ಯಾರ್ಥಿ. ಇವರಿಬ್ಬರೂ ಸೇರಿ ನಡೆಸುವ ಚರ್ಚೆ, ವಾದಗಳಿಂದ ಸಮಗ್ರ ಪರೀಕ್ಷಣೆ ಸಾಧ್ಯ. ವಿಶ್ವವಿದ್ಯಾನಿಲಯದ ಬಗೆಗಿನ ಈ ವ್ಯಾಖ್ಯಾನ ಸಾಧುವಾದಲ್ಲಿ ಭಾರತವು ಈ ಗುಣಲಕ್ಷಣಗಳನ್ನು ಹೊಂದಿರುವಂಥ ವಿಶ್ವವಿದ್ಯಾನಿಲಯಗಳ ಮಾದರಿಯಂತಿರುವ ಸಂಸ್ಥೆಗಳಿಗೆ ಪುರಾತನ ಕಾಲದಿಂದಲೂ ತವರು ಮನೆಯಾಗಿದೆ ಯೆಂದು ಹೇಳಬಹುದು.

**ಪ್ರಾಚೀನ ಭಾರತದಲ್ಲಿ ವಿಶ್ವವಿದ್ಯಾನಿಲಯಗಳು:**

ವೇದಪಾರಂಗತರಾದ ಹಾಗೂ ಧರ್ಮಸೂತ್ರಗಳಲ್ಲಿ ಪರಿಣಿತರಾದ ಬ್ರಾಹ್ಮಣರ ಸಂಘ ಅಥವಾ ಪರಿಷತ್ತುಗಳು ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಶ್ವೇತಕೇತುವಿನಂಥ ಜ್ಞಾನ ಪಿಪಾಸುಗಳನ್ನು ಆಕರ್ಷಿಸುತ್ತಿದ್ದವು. ಇಂಥ ಪರಿಷತ್ತುಗಳು ಬಹಳ ಹಿಂದಿನ ಕಾಲದಿಂದಲೂ ಭಾರತದಲ್ಲಿ ಇದ್ದವು. ನಂತರ ತಕ್ಷಶಿಲೆ ಹಾಗೂ ನಳಂದದಂಥ ಶ್ರೇಷ್ಠ ವಿದ್ಯಾ ಕೇಂದ್ರಗಳು ಹುಟ್ಟಿಕೊಂಡವು. ತಕ್ಷಶಿಲೆಯಲ್ಲಿ ವೇದ ವೇದಾಂಗಗಳಲ್ಲದೆ ಇನ್ನಿತರ ಹದಿನೆಂಟು ಜ್ಞಾನ ಶಾಖೆಗಳನ್ನು ಹೇಳಿಕೊಡಲಾಗುತ್ತಿತ್ತು. ನಳಂದ ವಿದ್ಯಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ವೇದೋಪನಿಷತ್ತುಗಳನ್ನು ಹನ್ನೆರಡು ವರ್ಷಗಳ ಕಾಲ ಅಧ್ಯಯನ ಮಾಡುತ್ತಿದ್ದರು. ಇದಲ್ಲದೆ, ಮಹಾಯಾನ ಬೌದ್ಧಧರ್ಮ ಹಾಗೂ ಜೈನಧರ್ಮ, ತರ್ಕ, ವಿವಿಧ ತತ್ವಶಾಸ್ತ್ರಗಳ ಶಾಖೆಗಳನ್ನು ಸಹ ಅಭ್ಯಾಸಿಸುತ್ತಿದ್ದರು. ತಕ್ಷಶಿಲೆ ಕ್ರಿ.ಶ.5 ರವರೆಗೂ ಅಸ್ತಿತ್ವದಲ್ಲಿದ್ದರೆ ನಳಂದ 12ನೇ ಶತಮಾನದ ಅಂತ್ಯದಲ್ಲಿ ಅವನತಿಯನ್ನು ಹೊಂದಿತು. ಕಾಥೇವಾಡದಲ್ಲಿ ವಲ್ಲಭಿ, ದಕ್ಷಿಣದಲ್ಲಿ ಕಾಂಚಿ – ಇವುಗಳು ನಳಂದ ವಿಶ್ವವಿದ್ಯಾಲಯದ ಸಮಕಾಲೀನ ವಿದ್ಯಾ ಕೇಂದ್ರಗಳು. ಬಿಹಾರದ ವಿಕ್ರಮಶಿಲ ಹಾಗೂ ಓದಂತಪುರಿಗಳ ಬಗ್ಗೆ ನಮಗೆ ಹೆಚ್ಚೇನೂ ತಿಳಿದಿಲ್ಲವಾದರೂ ಬಂಗಾಳದ ನಾಡಿಯ ಇಂದಿಗೂ ತನ್ನ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದೆ.

**ಮಧ್ಯಯುಗದ ವಿಶ್ವವಿದ್ಯಾನಿಲಯಗಳು:** ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವು (1948) ಒಂದೆಡೆ ಹೀಗೆ ಹೇಳಿದೆ: “ಪೂರ್ವ ಹಾಗೂ ದಕ್ಷಿಣ ಭಾರತದ ವಿದ್ಯಾ ಕೇಂದ್ರಗಳ ಜೊತೆಗೆ ಮಧ್ಯಯುಗದಲ್ಲಿ ಮುಸ್ಲಿಮರು ಲಾಹೋರ್ (ಈಗ ಪಾಕಿಸ್ತಾನದಲ್ಲಿದೆ), ದೆಹಲಿ,

Digitised by Bharatavani, CIIL

ರಾಮಪುರ, ಲಕ್ನೊ, ಅಲಹಾಬಾದ್, ಜಾನ್‌ಪುರ್, ಅಜ್‌ಮೀರ್ ಹಾಗೂ ಬೀದರ್‌ಗಳಲ್ಲಿ ಮದರಸಾಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿದರು. ಆಂಗ್ಲ ಆಳ್ವಿಕೆ ಆರಂಭವಾದಾಗ ಬ್ರಿಟಿಷರು ಕೊಲ್ಕತ್ತಾದಲ್ಲಿ ಒಂದು ಮದರಸಾವನ್ನು, ವಾರಣಾಸಿಯಲ್ಲಿ ಸಂಸ್ಕೃತ ಕಾಲೇಜೊಂದನ್ನು ಪ್ರಾರಂಭಿಸಿದರು. ಇವುಗಳಲ್ಲದೆ, ಕ್ರೈಸ್ತ ಮಿಷನರಿಗಳು ಮುಂಬೈ, ಚೆನ್ನೈ, ಮಚಲಿಪಟ್ಟಣಂ, ನಾಗಪುರ, ಆಗ್ರ ಮುಂತಾದೆಡೆಗಳಲ್ಲಿ ಕಾಲೇಜುಗಳನ್ನು ತೆರೆದರು".

**ಆಂಗ್ಲ ಯುಗ:** 1854ರ 'ವುಡ್ಸ್ ಡಿಸ್‌ಪ್ಯಾಚ್'ನಲ್ಲಿ ಸರ್ ಚಾರ್ಲ್ಸ್ ವುಡ್ ಭಾರತದ ಗವರ್ನರ್ ಜನರಲ್‌ಗೆ ನೀಡಿದ ಕೆಳಗಿನ ನಿರ್ದೇಶಕ್ಕನುಸಾರವಾಗಿ ಇಂದಿನ ಆಧುನಿಕ ವಿಶ್ವವಿದ್ಯಾನಿಲಯ ಪದ್ಧತಿ ಭಾರತದಲ್ಲಿ ಆರಂಭಗೊಂಡಿತು:

"ಸುಧಾರಿತ ಕಲೆ, ವಿಜ್ಞಾನ, ತತ್ವಶಾಸ್ತ್ರ ಮತ್ತು ಯೂರೋಪಿನ ಸಾಹಿತ್ಯ ಚುಟುಕಾಗಿ ಹೇಳುವುದಾದರೆ ಐರೋಪ್ಯ ಜ್ಞಾನವನ್ನು ಹರಡುವ ಶಿಕ್ಷಣ ಭಾರತದಲ್ಲಿ ವ್ಯಾಪಕಗೊಳ್ಳಬೇಕಾಗಿದೆ ಎಂದು ನಾವು ಘಂಟಾಘೋಷವಾಗಿ ಹೇಳಬೇಕಾಗಿದೆ".

ಲಂಡನ್ನಿನ ವಿಶ್ವವಿದ್ಯಾನಿಲಯದ ರಚನೆ ಆಡಳಿತ ಮತ್ತು ಕಾರ್ಯಗಳನ್ನೇ ಭಾರತದಲ್ಲೂ ಅನುಸರಿಸಬೇಕೆಂದು ವುಡ್ಸ್ ಹೇಳಿದ. 1857 ರಲ್ಲಿ ಕಲ್ಕತ್ತ (ಈಗಿನ ಕೊಲ್ಕೊತ್ತಾ), ಬಾಂಬೆ (ಈಗಿನ ಮುಂಬೈ) ಹಾಗೂ ಮದ್ರಾಸ್ (ಈಗಿನ ಚೆನ್ನೈ) ವಿಶ್ವವಿದ್ಯಾನಿಲಯಗಳ ಕಾನೂನುಗಳು ಲಂಡನ್ನಿನ ಮಾದರಿಯಲ್ಲಿದ್ದು ಅಂಗ ಕಾಲೇಜುಗಳಲ್ಲಿ ಅವುಗಳ ಕಾರ್ಯಾವಲೋಕನಕ್ಕೆಂದು ಈ ಕಾನೂನುಗಳನ್ನು ರಚಿಸಲಾಯಿತು. ಆರಂಭದಲ್ಲಿ ಈ ಮೂರು ವಿಶ್ವವಿದ್ಯಾನಿಲಯಗಳು ಕಲೆ, ಕಾನೂನು, ವೈದ್ಯ ಮತ್ತು ತಂತ್ರಜ್ಞಾನ ವಿಭಾಗಗಳನ್ನು ಹೊಂದಿದ್ದು ತರುವಾಯ ವಿಜ್ಞಾನ ವಿಭಾಗವನ್ನು ಸೇರಿಸಲಾಯಿತು. ಅಧ್ಯಯನ ವಿಷಯಗಳನ್ನು ನಿರ್ಧರಿಸುವುದು ಹಾಗೂ ಪಠ್ಯಕ್ರಮವನ್ನು ಸಿದ್ಧಪಡಿಸುವುದು, ಪರೀಕ್ಷೆಗಳನ್ನು ನಡೆಸುವುದು ಹಾಗೂ ಪದವಿ ಪ್ರದಾನ ಮಾಡುವುದು – ಇವಿಷ್ಟು ಈ ವಿಶ್ವವಿದ್ಯಾನಿಲಯಗಳ ಪ್ರಮುಖ ಕರ್ತವ್ಯಗಳಾಗಿದ್ದವು. ಬೋಧನಾ ಮಾಧ್ಯಮ ಆಂಗ್ಲ ಭಾಷೆಯಲ್ಲಿದ್ದು ಶಿಕ್ಷಣ ವ್ಯವಸ್ಥೆ ಆಂಗ್ಲ ಭಾಷೆಯ ಮೇಲಣ ಪ್ರಭುತ್ವಕ್ಕೆ ಹೆಚ್ಚು ಒತ್ತನ್ನು ನೀಡಿತ್ತು. 150 ವರ್ಷಕ್ಕೆ ಹೆಚ್ಚು ಕಾಲದಿಂದ ಈ ವಿಶ್ವವಿದ್ಯಾನಿಲಯ ವ್ಯವಸ್ಥೆ ಭಾರತದಲ್ಲಿ ಅಸ್ತಿತ್ವದಲ್ಲಿದ್ದು ಇಂದು ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯ ಉಸಿರಾಗಿ ಪರಿಣಮಿಸಿದೆ.

ವಿಶ್ವವಿದ್ಯಾನಿಲಯಗಳ ಅಭಿವೃದ್ಧಿ 1857 ರಿಂದ 1882ರ ಅವಧಿಯಲ್ಲಿ ಆಯಿತಾದರೂ 1882 ರಿಂದ 1902ರ ಅವಧಿಯಲ್ಲಿ ವಿಶ್ವವಿದ್ಯಾನಿಲಯಗಳು ಸಾಕಷ್ಟು ವಿಕಾಸಗೊಂಡವು. 1902 ರಲ್ಲಿ ಪ್ರಥಮ ಬಾರಿಗೆ ವಿಶ್ವವಿದ್ಯಾನಿಲಯ ಆಯೋಗವು ರಚಿತವಾಯಿತಲ್ಲದೆ ಅದರ ಸಲಹೆಗಳನ್ನು 1904ರ ವಿಶ್ವವಿದ್ಯಾನಿಲಯ ಕಾನೂನಿನ ಅನ್ವಯ ಜಾರಿಗೊಳಿಸಲಾಯಿತು. ಅದಲ್ಲದೆ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದು ಕೇಂದ್ರೀಯ ಸಲಹಾ ಮಂಡಳಿಯನ್ನು ರಚಿಸಲಾಯಿತು. ಹೀಗೆ ಭಾರತದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆ ಚಾರಿತ್ರಕ ಹಿನ್ನೆಲೆಯನ್ನಿಟ್ಟುಕೊಂಡು ಕ್ರಮೇಣ ವಿಕಾಸಗೊಂಡು ಸ್ವಾತಂತ್ರ್ಯದ ಸಮಯದ ಹೊತ್ತಿಗೆ ಉನ್ನತ ಶಿಕ್ಷಣ ಪದ್ಧತಿಯನ್ನು ತನ್ನದಾಗಿಸಿಕೊಂಡಿತ್ತು.

**ಸ್ವಾತಂತ್ರ್ಯಾ ನಂತರದ ಯುಗ:** 1948ರ ರಾಧಾಕೃಷ್ಣನ್ ಆಯೋಗ (ನೋಡಿ, ರಾಧಾಕೃಷ್ಣನ್ ಆಯೋಗ) ಎಲ್ಲಾ ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಅಂಗಗಳಾಗಬೇಕೆಂದು ಅಭಿಪ್ರಾಯಪಟ್ಟಿತು. ಈ ಆಯೋಗದ ವರದಿ ಪ್ರಕಟವಾದ ನಂತರ ಭಾರತ ಸರ್ಕಾರ ವಿಶ್ವವಿದ್ಯಾನಿಲಯಗಳ ಗುಣಮಟ್ಟ ನಿರ್ಧರಿಸುವಲ್ಲಿ ಹಾಗೂ ಸಂಘಟನೆಯಲ್ಲಿ ಹೆಚ್ಚು ಗಮನವನ್ನು ನೀಡಿತು. ಅಂತೆಯೇ 1956 ರಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು (ಯು.ಜಿ.ಸಿ) ಸ್ಥಾಪಿತವಾಯಿತು. ಬೋಧನೆ, ಪರೀಕ್ಷೆ ಹಾಗೂ ಸಂಶೋಧನೆಗಳ ಗುಣಮಟ್ಟವನ್ನು ಉತ್ತಮಗೊಳಿಸುವುದು ಈ ಆಯೋಗದ ಮುಖ್ಯ ಉದ್ದೇಶ. ಈ ಆಯೋಗ ಭಾರತದ ಉನ್ನತ ಶಿಕ್ಷಣಕ್ಕೆಂದೇ ಇರುವ ಶೃಂಗ ಸಂಸ್ಥೆ (Apex Body). ಶಿಕ್ಷಣಕ್ಕೆ ಸಂಬಂಧಿಸಿದಂತೆ ನೀತಿ ನಿಯಮಗಳು, ಯೋಜನೆಗಳು, ಕಾರ್ಯಕ್ರಮಗಳು ಹಾಗೂ ಅಧಿನಿಯಮಗಳನ್ನು ರಚಿಸುವ ಅಧಿಕಾರವನ್ನು ಈ ಆಯೋಗವು ಹೊಂದಿದೆ.

ವಿಶ್ವವಿದ್ಯಾನಿಲಯ ವ್ಯವಸ್ಥೆ – ಇದರ ಆಯಾಮಗಳು ಮತ್ತು ಗುಣಲಕ್ಷಣಗಳು: ಸ್ವಾತಂತ್ರ್ಯಾನಂತರ ಭಾರತದಲ್ಲಿ ಉನ್ನತ ಶಿಕ್ಷಣದ ಬೇಡಿಕೆ ಹೆಚ್ಚಾಗಿದ್ದ ಪರಿಣಾಮವಾಗಿ ವಿಶ್ವವಿದ್ಯಾನಿಲಯಗಳ ಹಾಗೂ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಅಧಿಕಗೊಂಡಿತು. ಇಂದು ಭಾರತದಲ್ಲಿ 504ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯ ಮಟ್ಟದ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿ 335 ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು, 130 ಪರಿಗಣಿತ ವಿಶ್ವವಿದ್ಯಾನಿಲಯಗಳು ಹಾಗೂ ಹಲವು ತಾಂತ್ರಿಕ ಹಾಗೂ ವೃತ್ತಿಪರ ವಿಶ್ವವಿದ್ಯಾನಿಲಯಗಳು ಸೇರಿವೆ. ತಾಂತ್ರಿಕ ಹಾಗೂ ವೃತ್ತಿಪರ ವಿಶ್ವವಿದ್ಯಾನಿಲಯಗಳಲ್ಲಿ ಕೆಲವು ಕೃಷಿಗೆ ಸಂಬಂಧಿಸಿದ್ದರೆ ಕೆಲವು ವೈದ್ಯಕೀಯ ಹಾಗೂ ತಂತ್ರಜ್ಞಾನಕ್ಕೆ ಸಂಬಂಧಿಸಿವೆ. ಅಂತೆಯೇ, 14 ಮುಕ್ತ ವಿಶ್ವವಿದ್ಯಾನಿಲಯಗಳು ಸಹ ಸೇರಿವೆ. ವಿಶೇಷ ಸಂಸ್ಥೆಗಳು ಹೀಗಿವೆ: ಸಂಸ್ಕೃತ ವಿಶ್ವವಿದ್ಯಾನಿಲಯಗಳು, ಮಹಿಳಾ ವಿಶ್ವವಿದ್ಯಾನಿಲಯಗಳು, ಜನಗಣನಾ ವಿಜ್ಞಾನ ವಿಶ್ವವಿದ್ಯಾನಿಲಯ, ಪ್ರಾಂತೀಯ ಭಾಷಾ ವಿಶ್ವವಿದ್ಯಾನಿಲಯ, ಕಾನೂನು ವಿಶ್ವವಿದ್ಯಾನಿಲಯ, ಸಂಗೀತ ಮತ್ತು ಲಲಿತಕಲಾ ವಿಶ್ವವಿದ್ಯಾನಿಲಯ, ಸಂಖ್ಯಾ ಪರಿಶೀಲನ ಶಾಸ್ತ್ರ (Statistics) ವಿಶ್ವವಿದ್ಯಾನಿಲಯ ಹಾಗೂ ಪತ್ರಿಕೋದ್ಯಮ ವಿಶ್ವವಿದ್ಯಾನಿಲಯಗಳೂ ಸೇರಿವೆ.

ಇಂದು ಭಾರತದ ವೈಜ್ಞಾನಿಕ ಹಾಗೂ ತಾಂತ್ರಿಕ ಮಾನವ ಸಂಪನ್ಮೂಲದ ಗಾತ್ರದ ಪರಿಗಣನೆಯಲ್ಲಿ ವಿಶ್ವದಲ್ಲೇ 3ನೆಯ ಸ್ಥಾನದಲ್ಲಿದೆ. ಅರ್ಧ ಶತಮಾನ ಹಿಂದಿದ್ದ ಉನ್ನತ ಶಿಕ್ಷಣದ ಕ್ಷೀಣ

Digitised by Bharatavani, CIIL

ಪರಿಸ್ಥಿತಿ ಇಂದು ಅಗಾಧವಾಗಿ ಅಧಿಕಗೊಂಡು ಉತ್ತಮ ಸ್ಥಿತಿಯಲ್ಲಿ ನಡೆದುಕೊಂಡು ಹೋಗುತ್ತಿರುವುದಕ್ಕೆ ಕಾರಣ ಉನ್ನತ ಶಿಕ್ಷಣಕ್ಕೆ ಸರ್ಕಾರದಿಂದ ಒದಗಿಬಂದದ್ದು.

ವಿಶ್ವವಿದ್ಯಾನಿಲಯಗಳ ಪ್ರಕಾರಗಳು: ವಿವಿದ ಪ್ರಕಾರದ ವಿಶ್ವವಿದ್ಯಾನಿಲಯಗಳು ಭಾರತದಲ್ಲಿವೆ

1. ಒಂದೇ ಜ್ಞಾನಶಾಖೆ (single faculty) ಅಥವಾ ಬಹು ಜ್ಞಾನ ಶಾಖೆಯುಳ್ಳವು
2. ಬೋಧನಾ ಅಥವಾ ಅಂಗೀಯ ಅಥವಾ ಬೋಧನಾ–ಅಂಗೀಯ
3. ಒಂದೇ ಪ್ರಾಂಗಣ (campus)/ಒಂದಕ್ಕಿಂತ ಹೆಚ್ಚು ಪ್ರದೇಶದಲ್ಲಿ ಸ್ಥಿತಗೊಂಡಿರುವಂಥವು
4. ಸಂಸ್ಕೃತ ವಿಶ್ವವಿದ್ಯಾನಿಲಯಗಳು
5. ತಾಂತ್ರಿಕ ವಿಶ್ವವಿದ್ಯಾನಿಲಯಗಳು
6. ಕೃಷಿ ವಿಶ್ವವಿದ್ಯಾನಿಲಯಗಳು
7. ವೈದ್ಯ ವಿಜ್ಞಾನ ವಿಶ್ವವಿದ್ಯಾನಿಲಯಗಳು
8. ಮಹಿಳಾ ವಿಶ್ವವಿದ್ಯಾನಿಲಯಗಳು
9. ವೈದ್ಯ ವಿಜ್ಞಾನ, ತಂತ್ರಜ್ಞಾನ, ವಿಜ್ಞಾನ, ನಿರ್ವಹಣೆ (ಮ್ಯಾನೇಜ್‌ಮೆಂಟ್) ಹಾಗೂ ಸಮಾಜ ಕಾರ್ಯ ಇತ್ಯಾದಿ ಕ್ಷೇತ್ರಗಳಿಗೆ ಮೀಸಲಾದ ವಿಶೇಷ ಸಂಸ್ಥೆಗಳು.

ಇದುವರೆಗೆ ಸಂಪೂರ್ಣ ಖಾಸಗಿ ವಿಶ್ವವಿದ್ಯಾನಿಲಯಗಳು ಇರಲಿಲ್ಲವಾದರೂ ಇತ್ತೀಚೆಗೆ ವಿಪ್ರೋ ಸಂಸ್ಥೆಯ ಅಧ್ಯಕ್ಷರಾದ ಅಜ್ಹೀಮ್ ಪ್ರೇಮ್‌ಜಿಯವರು ಸ್ಥಾಪಿಸಬೇಕೆಂದಿರುವ ಖಾಸಗಿ ವಿಶ್ವವಿದ್ಯಾನಿಲಯವೊಂದಕ್ಕೆ ಕರ್ನಾಟಕ ಸರ್ಕಾರದ ಅನುಮತಿ ದೊರೆತಿದೆ.

ಸಂಯೋಜನ ನಿಯೋಗಗಳು (co-ordinating agencies): ಹಲವು ಸಂಯೋಜನ ನಿಯೋಗಗಳು ಭಾರತದ ಉನ್ನತ ಶಿಕ್ಷಣವನ್ನು ಸಂಘಟಿಸುವ ಚಟುವಟಿಕೆಯಲ್ಲಿ ತೊಡಗಿವೆ. ಬಹಳಷ್ಟು ಉನ್ನತ ಶಿಕ್ಷಣ ಯು.ಜಿ.ಸಿಯ ವ್ಯಾಪ್ತಿಯಲ್ಲಿ ಬರುವುದು. ಇದಲ್ಲದೆ, ಅಖಿಲಭಾರತ ತಾಂತ್ರಿಕ ಶಿಕ್ಷಣ ಸಮಿತಿ (ಎಐಸಿಟಿಇ), ಭಾರತೀಯ ವೈದ್ಯಕೀಯ ವಿಜ್ಞಾನ ಪರಿಷತ್ತು (ಎಮ್‌ಸಿಐ), ಭಾರತೀಯ ಪ್ರಾಣವಿಜ್ಞಾನ ಪರಿಷತ್ತು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು (ಐಸಿಎಎಫ್), ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ (ಎನ್‌ಸಿಟಿಇ) ಇತ್ಯಾದಿ. ಮತ್ತೊಂದು ವಿಧದ ನಿಯೋಗವೆಂದರೆ ಭಾರತೀಯ ವಿಶ್ವವಿದ್ಯಾನಿಲಯಗಳ ಒಕ್ಕೂಟ (Assciation of Indian Universities). ಮೊದಲು ಇದು ಅಂತರ್ ವಿಶ್ವವಿದ್ಯಾನಿಲಯ ಸಮಿತಿ (Inter University Board) ಎಂಬ ಹೆಸರಿನಿಂದ ಪರಿಚಿತವಾಗಿತ್ತು. ಈ ಒಕ್ಕೂಟಕ್ಕೆ ಎಲ್ಲಾ ಸಾಮಾನ್ಯ ವಿಶ್ವವಿದ್ಯಾನಿಲಯಗಳು, ಪರಿಗಣಿತ ವಿಶ್ವವಿದ್ಯಾನಿಲಯಗಳು, ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳು ಸದಸ್ಯ ಸಂಸ್ಥೆಗಳಾಗಿರುತ್ತವೆ. ಭಾರತೀಯ ಹಾಗೂ ಹೊರ ದೇಶಗಳ ವಿಶ್ವವಿದ್ಯಾನಿಲಯಗಳು ನೀಡುವ ಪದವಿಯ ಸಮಾನತೆಯನ್ನು ಸ್ಥಾಪಿಸುವುದು, ಮಾಹಿತಿಗಳನ್ನು ವಿತರಿಸುವುದು, ವಿಶ್ವವಿದ್ಯಾನಿಲಯಗಳ ಅಭಿವೃದ್ಧಿ ಕುರಿತಂತೆ ಸಂಶೋಧನೆ ಕೈಗೊಳ್ಳುವುದು – ಇವು ಭಾರತೀಯ ವಿಶ್ವವಿದ್ಯಾನಿಲಯಗಳ ಒಕ್ಕೂಟದ ಕೆಲವು ಪ್ರಮುಖ ಕಾರ್ಯಗಳಾಗಿವೆ.

**ಕೇಂದ್ರೀಯ ವಿಶ್ವವಿದ್ಯಾನಿಲಯಗಳು:** ನಮ್ಮ ಭಾರತ ವೈವಿಧ್ಯಮಯ ಸಂಪ್ರದಾಯ, ಧರ್ಮ, ಭಾಷೆ, ಸಂಸ್ಕೃತಿ ಇತ್ಯಾದಿಗಳನ್ನು ಹೊಂದಿದ್ದು ಈ ವಿವಿಧತೆಗೆ ಸ್ಪಂದಿಸಬೇಕೆಂಬ ಗುರಿಯನ್ನು ಹೊಂದಿರುವ ವಿಶ್ವವಿದ್ಯಾನಿಲಯಗಳೇ ಕೇಂದ್ರೀಯ ವಿಶ್ವವಿದ್ಯಾನಿಲಯಗಳು. ಉದಾ: ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ, ಅಲೀಗಢ್ ಮುಸ್ಲಿಂ ವಿಶ್ವವಿದ್ಯಾನಿಲಯಗಳು, ವಿವಿಧ ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಮೂಲಾಧಾರಗಳನ್ನು ಹೊಂದಿದ್ದು ದೇಶದ ರಾಷ್ಟ್ರೀಯ ಆಶೋತ್ತರಗಳ ಬೇರೆ ಬೇರೆ ಹಂತಗಳ ಪ್ರತಿನಿಧಿಗಳಾಗಿವೆ. ರಾಜಧಾನಿ ನವದೆಹಲಿಯಲ್ಲಿರುವ ದೆಹಲಿ ವಿಶ್ವವಿದ್ಯಾನಿಲಯ ನಗರದ ಬಹು ನಾಗರಿಕ (cosmopolitan) ಲಕ್ಷಣಕ್ಕೆ ಸ್ಪಂದಿಸುವಂತಿದ್ದರೆ, ಭಾರತದ ಆಗ್ನೇಯ ಭಾಗದಲ್ಲಿರುವ ನಾರ್ತ್ ಈಸ್ಟರ್ನ್ ಹಿಲ್ ಯುನಿವರ್ಸಿಟಿ ಆ ಭಾಗದ ಜನರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಅಧಿಕ ಗಮನವನ್ನೀಯುತ್ತಿದೆ. ಅಂತೆಯೇ, ಪಾಂಡಿಚೆರಿ ವಿಶ್ವವಿದ್ಯಾನಿಲಯ ಆ ಪ್ರಾಂತ್ಯದ ಬೌದ್ಧಿಕ ಹಾಗೂ ಸಾಂಸ್ಕೃತಿಕ ವಿಕಾಸವನ್ನು ಗಮನದಲ್ಲಿಟ್ಟಕೊಂಡು ಕೆಲಸ ಮಾಡುತ್ತಿದೆಯಲ್ಲದೆ ಫ್ರೆಂಚ್ ಭಾಷೆ ಹಾಗೂ ಸಂಸ್ಕೃತಿಯನ್ನು ಗಮನದಲ್ಲಿಟ್ಟುಕೊಂಡಿದೆ.

ಎಲ್ಲಾ ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಶ್ರೇಷ್ಠತೆಯ ಕೇಂದ್ರಗಳಾಗಿದ್ದು ರಾಷ್ಟ್ರೀಯ ಏಕತೆಯನ್ನು ತರುವಲ್ಲಿ ಆಸಕ್ತವಾಗಿವೆ. ಅಲ್ಲದೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಆಯ್ಕೆಯಲ್ಲಿಯೂ ವೈವಿಧ್ಯತೆಯನ್ನು ತೋರಿಸಿ ಭಾರತದ ಎಲ್ಲೆಡೆಗಳಿಂದಲೂ ಸಿಬ್ಬಂದಿಯನ್ನು ಮತ್ತು ವಿದ್ಯಾರ್ಥಿಗಳನ್ನು ಅಯ್ಕೆ ಮಾಡಿಕೊಳ್ಳಲಾಗುತ್ತದೆ.

ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ಗುಣಲಕ್ಷಣಗಳು ಸಂಪ್ರದಾಯ, ಸಾಮಾಜಿಕ ಸನ್ನಿವೇಶ ಮತ್ತು ಅದರ ಧ್ಯೇಯೋದ್ದೇಶಗಳನ್ನು ಅವಲಂಬಿಸುತ್ತವೆ. ಉನ್ನತ ವಿದ್ಯಾಸಂಸ್ಥೆಗಳನ್ನು ಈ ಕೆಳಗಿನ ಮೂರು ವಿಶಾಲ ಪ್ರಕಾರಗಳಲ್ಲಿ ವಿಂಗಡಿಸಬಹುದು:

1. ರಾಜ್ಯ ವಿಧಾನ ಸಭೆ ಅಥವಾ ಸಂಸತ್ತಿನ ಕಾಯ್ದೆ ಅನ್ವಯ ಅಸ್ತಿತ್ವಕ್ಕೆ ಬರುವಂಥ ವಿಶ್ವವಿದ್ಯಾನಿಲಯಗಳು. ಇವುಗಳ ಕಾರ್ಯಭಾರ ಅಧಿಕಾರಿಗಳಿಂದ ನಡೆಸಲ್ಪಡುತ್ತದೆಯಲ್ಲದೆ ಇವುಗಳಿಗೆ ಅನುದಾನವನ್ನು ರಾಜ್ಯದ ಬೊಕ್ಕಸದಿಂದ ತೆಗೆದು

Digitised by Bharatavani, CIIL

ನೀಡಲಾಗುತ್ತದೆ. ಇವುಗಳು ಏಕಾತ್ಮಕ ಅಥವಾ ಅಂಗೀಯ ವಿಶ್ವವಿದ್ಯಾನಿಲಯಗಳಾಗಿರುತ್ತವೆ.

2. ಭಾರತ ಸರ್ಕಾರವು ಸಂಸತ್ತಿನಲ್ಲಿ ಜಾರಿಕೊಳಿಸಿದ ಕಾಯ್ದೆ ಅನ್ವಯ ಅಸ್ತಿತ್ವಕ್ಕೆ ಬಂದಿರುವ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ)ಗಳಂಥ ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳು. ಇವುಗಳು ಪದವಿ ಪ್ರದಾನ ಮಾಡುವ ಸಾಮರ್ಥ್ಯವನ್ನು ಹೊಂದಿವೆ.

3. **ಪರಿಗಣಿತ ವಿಶ್ವವಿದ್ಯಾನಿಲಯಗಳು:** (Deemed to be Universities) ಉತ್ತಮ ಮಟ್ಟದ ಬೋಧನೆ ಹಾಗೂ ನಿರ್ದಿಷ್ಟ ಸ್ಥಾನ ಕ್ಷೇತ್ರದಲ್ಲಿ ವಿಶೇಷ ಮಹತ್ವವನ್ನು ದೀರ್ಘಕಾಲದ ಪರಿಶ್ರಮದಿಂದ ಗಳಿಸಿಕೊಂಡಿರುವ ಸಂಸ್ಥೆಗಳಿಗೆ ಒಂದು ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನೇ ಕೊಡಲಾಗುತ್ತದೆ. ಯು.ಜಿ.ಸಿ ಶಿಕ್ಷಣ ವಿಭಾಗ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಗಳು ಸೇರಿ ಈ "ಪರಿಗಣಿತ" ಸ್ಥಾನಮಾನವನ್ನು ಒಂದು ಸಂಸ್ಥೆಗೆ ನೀಡುವ ನಿರ್ಧಾರವನ್ನು ತೆಗೆದುಕೊಳ್ಳುತ್ತವೆ.

ಏಕಾತ್ಮಕ (unitary) ವಿಶ್ವವಿದ್ಯಾನಿಲಯಗಳು ಒಂದೇ ಪ್ರಾಂಗಣಕ್ಕೆ ಸೀಮಿತವಾಗಿದ್ದು ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಮತ್ತು ಸಂಶೋಧನಾ ಪದವಿಗಳನ್ನು ನೀಡಲು ಶಕ್ತವಾಗಿವೆ. ಉದಾ: ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಇತ್ಯಾದಿ. ನಗರ ವಿಶ್ವವಿದ್ಯಾನಿಲಯವೆಂಬುದು ಏಕಾತ್ಮಕ ವಿಶ್ವವಿದ್ಯಾನಿಲಯದ ಮತ್ತೊಂದು ವಿಧ. ಈ ವಿಶ್ವವಿದ್ಯಾನಿಲಯ ಹಲವು ಅಂಗ ಶಿಕ್ಷಣ ಸಂಸ್ಥೆಗಳನ್ನು ತನ್ನ ವ್ಯಾಪ್ತಿಯಲ್ಲಿ ಇಟ್ಟುಕೊಂಡಿರುತ್ತದೆ ಮತ್ತು ಒಂದು ನಗರದ ವ್ಯಾಪ್ತಿಗೆ ಸೀಮಿತವಾಗಿರುತ್ತದೆ. ಉದಾ: ದೆಹಲಿ ವಿಶ್ವವಿದ್ಯಾನಿಲಯ, ಅಲಹಾಬಾದ್ ವಿಶ್ವವಿದ್ಯಾನಿಲಯ ಇತ್ಯಾದಿ.

ಸಂಯೋಜಿತ (Affiliating) ವಿಶ್ವವಿದ್ಯಾನಿಲಯಗಳು ಸಾಧಾರಣವಾಗಿ ಒಂದು ಕೇಂದ್ರ ಪ್ರಾಂಗಣ (campus) ವನ್ನು ಹೊಂದಿದ್ದು ಸ್ನಾತಕೋತ್ತರ ಹಾಗೂ ಸಂಶೋಧನಾ ಕಾರ್ಯಕ್ರಮಗಳನ್ನು ನಡೆಸುವ ವಿಭಾಗಗಳನ್ನು ಹೊಂದಿರುತ್ತದೆ. ವಿವಿಧ ಜಿಲ್ಲೆಗಳಲ್ಲಿರುವ ಶಿಕ್ಷಣ ಸಂಸ್ಥೆಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಭಾರತದ ಬಹಳಷ್ಟು ವಿಶ್ವವಿದ್ಯಾನಿಲಯಗಳು ಈ ವಿಧದವುಗಳಾಗಿವೆ.

ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳು ಪದವಿಯನ್ನು ತಾವೇ ಪ್ರದಾನ ಮಾಡುತ್ತವೆ. ಇವುಗಳು ಸಂಸತ್ತಿನ ಕಾಯ್ದೆ ಅನ್ವಯ ಅಸ್ತಿತ್ವಕ್ಕೆ ಬರುವಂಥ ಸಂಸ್ಥೆಗಳಾಗಿವೆ. ಉದಾ: ಐ.ಐ.ಟಿಗಳು, ಚೆನ್ನೈನಲ್ಲಿರುವ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ, ಬೆಂಗಳೂರಿನಲ್ಲಿರುವ ಸಾಮಾನ್ಯ ರೀತಿಯ ವಿಶ್ವವಿದ್ಯಾನಿಲಯಗಳಲ್ಲದೆ ವಿಶೇಷ ವಿಶ್ವವಿದ್ಯಾನಿಲಯಗಳಾದ ಕೃಷಿ ವಿಶ್ವವಿದ್ಯಾನಿಲಯಗಳು ಸ್ವಲ್ಪ ವಿಶಿಷ್ಟ ರೀತಿಯ ಆಡಳಿತಾತ್ಮಕ ರಚನೆಯನ್ನು ಹೊಂದಿದ್ದು ಆಯಾ ರಾಜ್ಯ ಸರ್ಕಾರಗಳ ಪ್ರತಿನಿಧಿತ್ವವನ್ನು ಅಧಿಕಾವಾಗಿಯೇ ಹೊಂದಿರುತ್ತವೆ. ಇವಲ್ಲದೆ ವೃತ್ತಿಪರ ಶಾಖೆಗಳಾದ ತಂತ್ರಜ್ಞಾನ, ವೈದ್ಯವಿಜ್ಞಾನ ಮತ್ತು ಆಯುರ್ವೇದ ಶಾಖೆಗಳು ತಮ್ಮದೇ ಆದ ವಿಶ್ವವಿದ್ಯಾನಿಲಯಗಳನ್ನು ಹೊಂದಿವೆ.

40 ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ಕೆಲವು ವಿಶ್ವವಿದ್ಯಾನಿಲಯಗಳಿಗೆ ಅಭಿವೃದ್ಧಿ ಅನುದಾನವನ್ನು ನೀಡಲಾಗುತ್ತಿದೆ. ಇನ್ನು ಕೆಲವು ವಿಶ್ವವಿದ್ಯಾನಿಲಯಗಳಿಗೆ ಅಭಿವೃದ್ಧಿ ಅನುದಾನದ ಜೊತೆಗೆ ಪೋಷಣಾ ಅನುದಾನ (maintenance grant)ವನ್ನು ಸಹ ಕೊಡಲಾಗುತ್ತದೆ.

**ರಾಜ್ಯ ವಿಶ್ವವಿದ್ಯಾನಿಲಯಗಳು:** ಭಾರತದ ವಿವಿಧ ರಾಜ್ಯಗಳ ಶಾಸನ ಸಭೆಗಳು ಕಾಯ್ದೆಯನ್ನು ಜಾರಿಮಾಡಿ ಹಲವಾರು (243ಕ್ಕೂ ಹೆಚ್ಚು) ರಾಜ್ಯ ವಿಶ್ವವಿದ್ಯಾನಿಲಯಗಳನ್ನು ಅಸ್ತಿತ್ವಕ್ಕೆ ತಂದಿವೆ. ವಿಶ್ವವಿದ್ಯಾನಿಲಯ ಅನುದಾನ ಆಯೋಗ ಕಾಯ್ದೆಯ 12ಃ ಸೆಕ್ಷನ್ನಿನ ಅನ್ವಯ ಜೂನ್ 17, 1972ರ ನಂತರ ಅಸ್ತಿತ್ವಕ್ಕೆ ಬಂದ ರಾಜ್ಯ ವಿಶ್ವವಿದ್ಯಾನಿಲಯಗಳು ಕೇಂದ್ರ ಸರ್ಕಾರದಿಂದಾಗಲಿ ಅಥವಾ ಮತ್ತಾವುದೇ ಸಂಸ್ಥೆಯಿಂದಾಗಲಿ ಅನುದಾನ ಪಡೆಯಲು ಅರ್ಹವಾಗುವುದಿಲ್ಲ. ಆದರೆ ಆಯೋಗವು ವಿಶ್ವವಿದ್ಯಾನಿಲಯವೊಂದು ಅರ್ಹತೆಯನ್ನು ಪಡೆದಿದೆಯೆಂದು ಅಭಿಪ್ರಾಯಪಟ್ಟರೆ ಮಾತ್ರ ಕೇಂದ್ರ ಸರ್ಕಾರದಿಂದ ಅನುದಾನವನ್ನು ಪಡೆಯಬಹುದು.

**ಪರಿಗಣಿತ ವಿಶ್ವವಿದ್ಯಾನಿಲಯಗಳು:** ವಿಶ್ವವಿದ್ಯಾನಿಲಯ ಆಯೋಗ, 1956ರ ಕಾಯ್ದೆಯ ಸೆಕ್ಷನ್ 3ರ ಅನ್ವಯ ಕೇಂದ್ರ ಸರ್ಕಾರ ಆಯೋಗದ ಸಲಹೆಯ ಮೇರೆಗೆ ಯಾವುದೇ ಉನ್ನತ ಶಿಕ್ಷಣ ಸಂಸ್ಥೆಗೆ ಸಂವೈಧಾನಿಕ ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ನೀಡಬಹುದು. ಅಂಥ ಸಂಸ್ಥೆ ಆಯೋಗವು ನೀಡುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆಯಲು ಅರ್ಹತೆಯನ್ನು ಪಡೆಯುತ್ತದೆ. ಅಲ್ಲದೆ, ಸ್ನಾತಕ ಪದವಿ ಪ್ರದಾನ ಮಾಡುವ ಹಾಗೂ ತನ್ನದೇ ಆದ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವ ಅರ್ಹತೆಯನ್ನೂ ಸಂಸ್ಥೆಯು ಪಡೆಯುತ್ತದೆ. ಇಂಥ ಸಂಸ್ಥೆಗಳನ್ನು ಪರಿಗಣಿತ ವಿಶ್ವವಿದ್ಯಾನಿಲಯಗಳೆಂದು ಕರೆಯುತ್ತಾರೆ.

ಪರಿಗಣಿತ ವಿಶ್ವವಿದ್ಯಾನಿಲಯಗಳು ಒಂದಕ್ಕೊಂದು ಭಿನ್ನವಾಗಿದ್ದು ಅವುಗಳ ವಿಶಿಷ್ಟತೆಯ ಕಾರಣದಿಂದಾಗಿ ಅವುಗಳನ್ನು ಒಂದನ್ನೊಂದು ಹೋಲಿಸಿ ನೋಡಲಾಗುವುದಿಲ್ಲ. ವಾಸ್ತವವಾಗಿ ಈ ವಿಶಿಷ್ಟತೆಯೇ ಪ್ರತಿಯೊಂದು ಪರಿಗಣಿತ ವಿಶ್ವವಿದ್ಯಾನಿಲಯದ ಶಕ್ತಿಸ್ರೋತವಾಗಿದೆ. ಈ ವಿಶಿಷ್ಟತೆಗೆ ಅನುಗುಣವಾಗಿ ನಿರ್ದಿಷ್ಟ ಶೈಕ್ಷಣಿಕ ಕಾರ್ಯಕ್ರಮ ಗಳನ್ನು ಹಾಗೂ ಚಟುವಟಿಕೆಗಳನ್ನು ಈ ವಿಶ್ವವಿದ್ಯಾನಿಲಯಗಳು ಹಮ್ಮಿಕೊಳ್ಳುತ್ತವೆ.

ಪರಿಗಣಿತ ವಿಶ್ವವಿದ್ಯಾನಿಲಯಗಳ ಅನುದಾನ ಪ್ರಮುಖವಾಗಿ ಯು.ಜಿ.ಸಿಯಿಂದ ದೊರಕುತ್ತದೆ. ಅನುದಾನದ ವಿಷಯದಲ್ಲಿ ಎಲ್ಲಾ ಪರಿಗಣಿತ ವಿಶ್ವವಿದ್ಯಾನಿಲಯಗಳು ಸಮಾನತೆಯನ್ನು ಹೊಂದಿಲ್ಲ.

Digitised by Bharatavani, CIIL

**ಪ್ರಸ್ತುತದಲ್ಲಿರುವ ಅಧಿಕಾರಿಗಳು:** ಭಾರತೀಯ ವಿಶ್ವವಿದ್ಯಾನಿಲಯಗಳ ಅಧಿಕಾರ ವ್ಯಾಪ್ತಿ ಅವುಗಳನ್ನು ಅಸ್ತಿತ್ವಕ್ಕೆ ತಂದ ಕಾಯ್ದೆಗೆ ಅನುಸಾರವಾಗಿ ಇರುತ್ತದೆ. ಸಮಯವು ಕಳೆದಂತೆ ಅವುಗಳ ಅಧಿಕಾರ ವ್ಯಾಪ್ತಿ ಉದ್ದೇಶ ಹಾಗೂ ಕಾರ್ಯಗಳಲ್ಲೂ ಸ್ವಲ್ಪ ಬದಲಾವಣೆಗಳಾಗಿವೆ. ಇತ್ತೀಚೆಗೆ ವಿಶೇಷ ವಿಶ್ವವಿದ್ಯಾನಿಲಯಗಳ ವಿಲಯನ ಪ್ರಕ್ರಿಯೆ (mergence) ಯಿಂದಾಗಿ ಅಂಥ ವಿಶ್ವವಿದ್ಯಾನಿಲಯಗಳ ವ್ಯಾಪ್ತಿ ಮತ್ತು ಉದ್ದೇಶಗಳು ಸಂಕುಚಿತಗೊಂಡು ಒಂದು ನಿರ್ದಿಷ್ಟ ಉದ್ದೇಶದೆಡೆ ಕೇಂದ್ರೀಕೃತಗೊಂಡಿವೆ. ಉದಾ: ಭಾಷಾ ವಿಶ್ವವಿದ್ಯಾನಿಲಯಗಳು (ಕನ್ನಡ ವಿಶ್ವವಿದ್ಯಾನಿಲಯ, ತಮಿಳು ವಿಶ್ವವಿದ್ಯಾನಿಲಯ), ಮಹಿಳಾ ವಿಶ್ವವಿದ್ಯಾನಿಲಯ, ವೈದ್ಯವಿಜ್ಞಾನ/ತಾಂತ್ರಿಕ/ಕೃಷಿ/ಗ್ರಾಮೀಣ ವಿಶ್ವವಿದ್ಯಾ ನಿಲಯಗಳು. ಇವೆಲ್ಲವೂ ವಿಶೇಷ ಉದ್ದೇಶವನ್ನಿಟ್ಟುಕೊಂಡು ಕಾರ್ಯೋನ್ಮುಖವಾಗಿವೆ. ಅಂತೆಯೇ ಪರಿಗಣಿತ ವಿಶ್ವವಿದ್ಯಾನಿಲಯಗಳ ಉದ್ದೇಶವು ಸಹ ಅಲ್ಪವ್ಯಾಪ್ತಿ ಉಳ್ಳದ್ದಾಗಿದೆ.

ಸಂಯೋಜಿತ (Affiliating) ವಿಶ್ವವಿದ್ಯಾನಿಲಯಗಳು ತಮ್ಮ ತಮ್ಮ ಪ್ರಾಂಗಣ (campus)ದಲ್ಲಿರುವ ವಿಭಾಗಗಳಲ್ಲಿನ ಬೋಧನೆ ಹಾಗೂ ಸಂಶೋಧನೆಗಳ ಆಡಳಿತ ಮತ್ತು ಅಂಗೀಕೃತ ಶಿಕ್ಷಣ ಸಂಸ್ಥೆಗಳ ಮೇಲ್ವಿಚಾರಣೆ– ಈ ಎರಡು ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿದೆ.

ಏಕಾತ್ಮಕ (unitary) ವಿಶ್ವವಿದ್ಯಾನಿಲಯಗಳು ತಮ್ಮ ಪ್ರದೇಶದಲ್ಲಿರುವ ವಿಭಾಗಗಳ ಬೋಧನೆ ಮತ್ತು ಸಂಶೋಧನೆಗಳನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಹೊಂದಿದ್ದು ತಮ್ಮ ಪ್ರದೇಶದ ವ್ಯಾಪ್ತಿಯಿಂದ ಹೊರಗಿರುವ ಶಿಕ್ಷಣ ಸಂಸ್ಥೆಗಳ ಬಗ್ಗೆ ಗಮನ ಹರಿಸಬೇಕಾದ್ದಿಲ್ಲ.

ದೊಡ್ಡ ಸಂಯೋಜಿತ ವಿಶ್ವವಿದ್ಯಾನಿಲಯಗಳು ಕೆಲವು ವೇಳೆ ಶೇ.60ರಿಂದ 70ರಷ್ಟು ರಾಜ್ಯದ ವಿಸ್ತಾರದಲ್ಲಿ ತಮ್ಮ ವ್ಯಾಪ್ತಿಯನ್ನು ಹೊಂದಿರುವುದರಿಂದ ಇಂಥ ವಿಶ್ವವಿದ್ಯಾನಿಲಯಗಳ ಅಧಿಕಾರವ್ಯಾಪ್ತಿಯು ಭೌಗೋಳಿಕವಾಗಿಯೂ, ಕಾರ್ಯಾತ್ಮಕ ವಾಗಿಯೂ ಅಧಿಕವಾಗಿರುತ್ತದೆ.

**ವಿಶ್ವವಿದ್ಯಾನಿಲಯಗಳ ಆಡಳಿತ:** ಪ್ರತಿಯೊಂದು ವಿಶ್ವವಿದ್ಯಾ ನಿಲಯವು ಸಂವಿಧಾನಬದ್ಧ ಅಂಗಗಳಾಗಿರುವ ಶೈಕ್ಷಣಿಕ ಸಮಿತಿ (Academic Council), ಆಡಳಿತ ಮಂಡಳಿ (Senate) ಮತ್ತು ಕಾರ್ಯಕಾರಿ ಸಮಿತಿ (Executive Council/Syndicate)ಗಳಿಂದ ನಡೆಸಲ್ಪಡುತ್ತದೆ. ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುವ ಸದಸ್ಯರ ಪಾತ್ರವಿರುತ್ತದೆ. ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಆಯಾ ರಾಜ್ಯದ ರಾಜ್ಯಪಾಲರು ಆಯಾ ವಿಶ್ವವಿದ್ಯಾನಿಲಯಗಳ ಕುಲಾಧಿಪತಿ (Chancellor) ಗಳಾಗಿರುತ್ತಾರೆ. ರಾಜ್ಯ ಹಾಗೂ ಕೇಂದ್ರ– ಇವೆರಡೂ ತೆರನ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಗಳು ಶೈಕ್ಷಣಿಕ ಹಾಗೂ ಕಾರ್ಯ ನಿರ್ವಹಣೆಯ ವಿಷಯಗಳಲ್ಲಿ ಅಧಿಕಾರವನ್ನು ಹೊಂದಿರುತ್ತಾರೆ. ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳಲ್ಲೂ ಹೆಚ್ಚ ಕಡಿಮೆ ಇದೇ ರೀತಿಯ ಆಡಳಿತಾತ್ಮಕ ರಚನೆಯನ್ನು ಕಾಣಬಹುದು.

ರಾಜ್ಯಪಾಲರು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳಾಗಿದ್ದು ಆಡಳಿತ ಮಂಡಳಿ (Senate)ಯ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಆದರೆ ರಾಜ್ಯಪಾಲರು ಸೆನೇಟ್ ಸಭೆಗೆ ಬರಲೇಬೇಕೆಂಬ ಕಡ್ಡಾಯವಿಲ್ಲ. ಕುಲಪತಿಗಳನ್ನು ಅನ್ವೇಷಣಾ ಸಮಿತಿಯ ಹಾಗೂ ಸರ್ಕಾರದ ಸಲಹೆಯ ಮೇರೆಗೆ ಇವರೇ ಆಯ್ಕೆ ಮಾಡುತ್ತಾರೆ. ಕುಲಪತಿಗಳು ಕಾರ್ಯಕಾರಿ ಸಮಿತಿ (Executive Council/Syndicate) ಮತ್ತು ಶೈಕ್ಷಣಿಕ ಸಮಿತಿ (Academic Council)ಗಳ ಅಧ್ಯಕ್ಷತೆಯನ್ನು ವಹಿಸುತ್ತಾರೆ. ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ನೀತಿ ನಿಯಮಗಳು, ಕಾಯ್ದೆಗಳು ಇತ್ಯಾದಿಗಳಿಗೆ ಅನುಸಾರವಾಗಿ ವಿಶ್ವವಿದ್ಯಾನಿಲಯದ ಚಟುವಟಿಕೆಗಳು ನಡೆಯುತ್ತಿವೆಯೆ ಎಂಬುದರ ಮೇಲ್ವಿಚಾರಣೆ ಕುಲಪತಿಗಳ ಕರ್ತವ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಕುಲಪತಿಗಳನ್ನು ಆಯ್ಕೆ ಮಾಡುತ್ತಾರೆ. ಕುಲಪತಿಗಳ ಅಧಿಕಾರಾವಧಿ 3 ರಿಂದ 5 ವರ್ಷಗಳಾಗಿದ್ದು ಒಂದೇ ವಿಶ್ವವಿದ್ಯಾನಿಲಯದಲ್ಲಿ ಎರಡಕ್ಕಿಂತ ಹೆಚ್ಚು ಬಾರಿ ಕುಲಪತಿಗಳಾಗಲು ಅವಕಾಶವಿಲ್ಲ. ಕರ್ನಾಟಕದಲ್ಲಿ ಕುಲಪತಿಗಳ ಅಧಿಕಾರಾವಧಿ 4 ವರ್ಷಗಳಾಗಿದ್ದು, ಒಂದು ಸಲ ಮಾತ್ರ ಕುಲಪತಿಗಳಾಗುವ ಅವಕಾಶವಿದೆ. ಇತ್ತೀಚೆಗೆ ಕುಲಪತಿಗಳಾಗಲು ಇದ್ದ 65 ವರ್ಷದ ಗರಿಷ್ಠ ಮಿತಿಯನ್ನು 67ಕ್ಕೆ ಏರಿಸಲಾಗಿದೆ.

ಆಡಳಿತ ಮಂಡಳಿ (Senate) ವರ್ಷಕ್ಕೊಮ್ಮೆ ಸಭೆ ಸೇರುತ್ತದೆ. ಸರ್ಕಾರಿ ಅಧಿಕಾರಿಗಳು, ಚುನಾಯಿತ ನೋಂದಾಯಿತ ಸ್ನಾತಕ ಪದವೀಧರರು, ಶಾಸಕರು, ಸ್ಥಳೀಯ ಆಡಳಿತ ಅಂಗದ ಪ್ರತಿನಿಧಿಗಳು, ವಿಶ್ವವಿದ್ಯಾನಿಲಯಗಳ ಅಧ್ಯಾಪಕರು, ಪ್ರಾಂಶುಪಾಲರು– ಇವರೆಲ್ಲರೂ ಆಡಳಿತ ಮಂಡಳಿಯ ಸದಸ್ಯರಾಗಿರುತ್ತಾರೆ. ಸಮಾಜದ ಹಿತದೃಷ್ಟಿಯನ್ನಿಟ್ಟುಕೊಂಡು ಕಾರ್ಯ ಪ್ರವೃತ್ತವಾಗುವ ಈ ಅಂಗವು ವಿಶ್ವವಿದ್ಯಾನಿಲಯದ ಹಣಕಾಸು ವಿಷಯಗಳಲ್ಲೂ ಸಮನಾದ ನಿಯಂತ್ರಣವನ್ನು ಹೊಂದಿದೆ. ಕುಲಾಧಿಪತಿಗಳ ಸಮ್ಮತಿಗೆ ಒಳಪಟ್ಟಂತೆ ಕಾಯ್ದೆಗಳನ್ನು ರೂಪಿಸುವ, ಮಾರ್ಪಡಿಸುವ ಮತ್ತು ಹಿಂತೆಗೆದುಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿ ಹೊಂದಿದೆ. ಪದವಿ ಪ್ರದಾನ ಮಾಡುವ ಜವಾಬ್ದಾರಿಯು ಆಡಳಿತ ಮಂಡಳಿಗಿದೆ.

ಕಾರ್ಯಕಾರಿ ಸಮಿತಿ (Executive Council/Syndicate) ಯು ವರ್ಷಕ್ಕೆ ಹಲವು ಸಲ ಸಭೆ ಸೇರುವ ಪ್ರಮುಖ ಆಡಳಿತಾತ್ಮಕ ಅಂಗವಾಗಿದೆ. ಶಿಕ್ಷಣ ಹಾಗೂ ಹಣಕಾಸಿಗೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು, ಶಾಸನ ಸಭೆಯ ಪ್ರತಿನಿಧಿಗಳು, ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ಶಿಕ್ಷಣತಜ್ಞರು– ಹೀಗೆ ಒಟ್ಟು 15ರಿಂದ 20

Digitised by Bharatavani, CIIL

ಸದಸ್ಯರು ಈ ಸಮಿತಿಯಲ್ಲಿರುತ್ತಾರೆ. ಕಾರ್ಯಕಾರಿ ಸಮಿತಿ ವಿಶ್ವವಿದ್ಯಾನಿಲಯದ ಕಾರ್ಯಗಳ ಮೇಲ್ವಿಚಾರಣೆ ಹಾಗೂ ಬೋಧಕ ಸಿಬ್ಬಂದಿಯ ಆಯ್ಕೆ– ಈ ಎರಡು ಜವಾಬ್ದಾರಿಗಳನ್ನು ಹೊಂದಿದೆ. ಘಟಕ ಕಾಲೇಜುಗಳ ನೋಂದಣಿಯನ್ನು ಹಿಂತೆಗೆದುಕೊಳ್ಳುವಂತೆ ಅಥವಾ ಸ್ಥಗಿತಗೊಳಿಸುವಂತೆ ಸಲಹೆಯನ್ನು ನೀಡುವ ಅಧಿಕಾರ ಕಾರ್ಯಕಾರಿ ಸಮಿತಿಯ ಅಧಿಕಾರವ್ಯಾಪ್ತಿಯಲ್ಲಿದೆ.

ಶೈಕ್ಷಣಿಕ ಸಮಿತಿಯಲ್ಲಿ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ಘಟಕ ಕಾಲೇಜುಗಳ ಪ್ರಾಂಶುಪಾಲರು, ಉನ್ನತ ಶಿಕ್ಷಣದ ನಿರ್ದೇಶಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಪ್ರತಿನಿಧಿಗಳು– ಇವರೆಲ್ಲರೂ ಸದಸ್ಯರಾಗಿರುತ್ತಾರೆ. ಪಠ್ಯ ವಿಷಯಗಳ ಆಯ್ಕೆ, ಹೊಸ ತರಗತಿಗಳನ್ನು ಆರಂಭಿಸಲು ಸಲಹೆ, ಪರೀಕ್ಷೆ, ದಾಖಲಾತಿ ಹಾಗೂ ಶೈಕ್ಷಣಿಕ ವಿಷಯಗಳ ಮೇಲಿನ ನಿಯಂತ್ರಣ– ಇವೆಲ್ಲವೂ ಶೈಕ್ಷಣಿಕ ಸಮಿತಿಯ ಕಾರ್ಯಕ್ಕೆ ಸಂಬಂಧಿಸಿದ ಕ್ಷೇತ್ರಗಳಾಗಿವೆ.

ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಯು.ಜಿ.ಸಿಯಿಂದ ಅಭಿವೃದ್ಧಿ ಅನುದಾನ ಮತ್ತು ಪೋಷಣಾ ಅನುದಾನಗಳನ್ನು ಪಡೆಯುತ್ತವೆ. ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳು ಮಾನವ ಸಂಪನ್ಮೂಲ ಹಾಗೂ ಅಭಿವೃದ್ಧಿ ಖಾತೆಯಿಂದ ನೇರವಾಗಿ ಧನಸಹಾಯವನ್ನು ಪಡೆಯುತ್ತವೆ. ರಾಜ್ಯ ವಿಶ್ವವಿದ್ಯಾನಿಲಯಗಳು ರಾಜ್ಯ ಸರ್ಕಾರದಿಂದ ಧನಸಹಾಯವನ್ನು ಪಡೆಯುತ್ತವೆ. ನಿರ್ದೇಶಿತ ಸೂತ್ರದ ಪ್ರಕಾರ ರಾಜ್ಯ ಸರ್ಕಾರ ಧನಸಹಾಯವನ್ನು ನೀಡಿದಲ್ಲಿ ಯು.ಜಿ.ಸಿ ಸಹ ತನ್ನ ಕಡೆಯಿಂದ ಅಭಿವೃದ್ಧಿ ಅನುದಾನವನ್ನು ಕೊಡುತ್ತದೆ. ಇದಲ್ಲದೆ, ರಾಜ್ಯ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಂದ ನಿಗದಿತ ಶುಲ್ಕವನ್ನು ಪಡೆಯುತ್ತವೆ. ಇನ್ನಿತರ ಸಂಘ ಸಂಸ್ಥೆಗಳಿಂದ, ದಾನಿಗಳಿಂದಲೂ ರಾಜ್ಯ ವಿಶ್ವವಿದ್ಯಾನಿಲಯಗಳು ಧನಸಹಾಯವನ್ನು ಪಡೆಯಬಹುದು. ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳು ಆಯಾ ರಾಜ್ಯ ಸರ್ಕಾರಗಳಿಂದ ಗ್ರಾಂಟ್–ಇನ್–ಏಡ್ ರೂಪದಲ್ಲಿ ಅಭಿವೃದ್ಧಿ ಹಾಗೂ ಪೋಷಣಾ ಧನಸಹಾಯವನ್ನು ಸ್ವೀಕರಿಸುತ್ತವೆ. ಪ್ರತಿವರ್ಷದ ಅನುದಾನದ ಮೊತ್ತ ಹಿಂದಿನ ವರ್ಷದ ಅನುದಾನದ ಮೊತ್ತದ ನಿಗದಿತ ಶೇಕಡಾವಾರು ಮೊತ್ತದಷ್ಟು ಹೆಚ್ಚಾಗಿರುತ್ತದೆ. ಈ ಲೆಕ್ಕಾಚಾರದಲ್ಲಿ ಸಂಶೋಧನಾ ಅಗತ್ಯಗಳು, ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ, ಬೆಲೆ ಏರಿಕೆ– ಈ ಯಾವ ಅಂಶಗಳನ್ನು ಪರಿಗಣಿಸಲಾಗುವುದಿಲ್ಲವಾದ್ದರಿಂದ ಬಹಳಷ್ಟು ವಿಶ್ವವಿದ್ಯಾನಿಲಯಗಳು ಸ್ವಲ್ಪ ಹಣಕಾಸಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೇ ಕಾರ್ಯ ನಿರ್ವಹಿಬೇಕಾಗುತ್ತದೆ. ಸರ್ಕಾರೇತರ ಧನಮೂಲಗಳು ವಿಶ್ವವಿದ್ಯಾನಿಲಯಗಳಿಗೆ ಲಭಿಸುವುದು ಕೊಂಚ ಕಠಿಣವೇ ಆಗಿದೆ. ಆದಾಗ್ಯೂ, ವಿಶ್ವವಿದ್ಯಾನಿಲಯಗಳು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಪ್ರಯತ್ನಿಸುತ್ತವೆ.

**ಮೂಲ: ವಹೋರಾ ಎ.ಎಲ್.**

**ಅನು: ಚಂದ್ರಶೇಖರ್ ಬಿ.ಎಮ್.**



## ಭಾರತದ ಶಿಕ್ಷಣ ಪ್ರಚಾರದಲ್ಲಿಧಾರ್ಮಿಕ ಸಂಘ–ಸಂಸ್ಥೆಗಳ ಪಾತ್ರ

ಧಾರ್ಮಿಕ ಸಂಸ್ಥೆಗಳು ಅಥವಾ ಮತಪೀಠಗಳು ಬಹುಕಾಲದಿಂದ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಾ ಬಂದಿವೆ. ಒಳ್ಳೆಯದು ಕೆಟ್ಟದ್ದು ಎಂಬ ತಾರತಮ್ಯ ಜ್ಞಾನವನ್ನು ಮಾನವನಿಗೆ ಲಭಿಸುವಂತೆ ಮಾಡುವುದೇ ಮತಪೀಠಗಳು. ಸಮಾಜದಲ್ಲಿ ಜನರು ಉತ್ತಮ ಸದ್ಗುಣಗಳನ್ನು ಬೆಳೆಸಿಕೊಂಡು ಸನ್ಮಾರ್ಗದಲ್ಲಿ ವರ್ತಿಸುವಂತೆ ಮಾಡುವುದೇ ಧಾರ್ಮಿಕ ಶಿಕ್ಷಣ ಸಂಸ್ಥೆಗಳ ಹಿರಿದಾದ ಆಶಯವಾಗಿದೆ. ನೈತಿಕ ಭಾವನೆಗಳು ಜನಸಾಮಾನ್ಯರಲ್ಲೆಲ್ಲಾ ಮೂಡುವಂತೆ ಮಾಡಲು ಪ್ರಯತ್ನಿಸಿವೆ. ಅರ್ನಾಲ್ಡ್ ಜಾನ್ ಬೀರ್‌ರವರು ಹೇಳುವಂತೆ "ಧರ್ಮವು ಮಾನವನಿಗೆ ಗಾಳಿ, ನೀರಿನಷ್ಟೆ ಅವಶ್ಯಕ" ವೆಂದಿದ್ದಾರೆ. "ದೃಧಾರಯತಿ ಇತಿ ಧರ್ಮಃ". ಮಾನವ ಕಲ್ಯಾಣ ಮಾಡುವುದೇ ಧರ್ಮವೆಂದು ಹೇಳಬಹುದು. ಆದಿಮಾನವನ ಜೀವನವನ್ನು ರೂಪಿಸಿದ ಪ್ರಬಲವಾದ ಶಕ್ತಿಗಳಲ್ಲಿ ಧರ್ಮವು ಒಂದಾಗಿದೆ.

ಭಾರತವು ತನ್ನ ಆಧ್ಯಾತ್ಮಿಕ ಪರಂಪರೆಗೆ ಪ್ರಸಿದ್ಧವಾದುದು. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮ ಶತ ಶತಮಾನಗಳಿಂದಲೂ ತನ್ನ ರೂಪವನ್ನು ಉಳಿಸಿಕೊಂಡು ಬಂದಿವೆ. ನಾವು ಧರ್ಮದಲ್ಲಿ ನಂಬಿಕೆಯುಳ್ಳವರು, ನಮ್ಮ ಧರ್ಮ ಮತ್ತು ಶಿಕ್ಷಣವು ಒಂದೇ ಉದ್ದೇಶದಿಂದ ಸೇರಿಕೊಂಡ ಅಂಶಗಳಾಗಿವೆ. ಧರ್ಮವು ಮಾನವನಲ್ಲಿ ತಾಳ್ಮೆ, ಸಹನೆ, ಮಾನವೀಯತೆಯನ್ನು ಬೋಧಿಸುತ್ತದೆ.

ಬಹು ಹಿಂದಿನ ಕಾಲದಿಂದಲೂ ನೈತಿಕ ಹಾಗೂ ಧಾರ್ಮಿಕ ಶಿಕ್ಷಣವನ್ನು ನೀಡುವ ಅಪರೂಪದ ಕಾರ್ಯನಿರ್ವಹಣೆಯು ಮತ ಪೀಠಗಳು, ದೇವಾಲಯಗಳು, ಮಸೀದಿಗಳಿಗೆ ಅನ್ವಯಿಸಿದ ಕರ್ತವ್ಯವೆನಿಸುತ್ತದೆ. ಸರ್ವ ಸಮನ್ವಯವಾದ ಜೀವನ ತತ್ವಗಳು, ನೀತಿ ನಡವಳಿಕೆಗಳು, ಧಾರ್ಮಿಕ ಆಚಾರ–ವಿಚಾರಗಳು ಜನತೆಯನ್ನು ಒಂದುಗೂಡಿಸುವಲ್ಲಿ ನೆರವಾದವು.

**ಶಿಕ್ಷಣದ ಪ್ರಚಾರದಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ:** ಅನಾದಿಕಾಲದಿಂದಲೂ ಧಾರ್ಮಿಕ ಸಂಸ್ಥೆಗಳು ಎಲ್ಲಾ ದೇಶಗಳಲ್ಲಿಯೂ ಶಿಕ್ಷಣದ ಪ್ರಭಾವಶಾಲಿಯಾದ ಅಂಗಗಳಾಗಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಇವು ಆಧ್ಯಾತ್ಮಿಕ ತತ್ವಗಳನ್ನು ಪರಿಷ್ಕರಿಸಿ ಮಾನವನ ತತ್ವ ಚಿಂತನೆಗೆ ಅವಕಾಶ ಮಾಡಿಕೊಟ್ಟಿವೆ. ಸಾಹಿತ್ಯ, ಸಂಸ್ಕೃತಿ, ಸಂಗೀತ, ಚಿತ್ರಕಲೆ ಮುಂತಾದ ಕ್ಷೇತ್ರಗಳಲ್ಲಿ ಸ್ಫೂರ್ತಿ ನೀಡುತ್ತಿವೆ. ಪರಿಶುದ್ಧ ಮನೋಭಾವವನ್ನು, ನೈತಿಕತೆಯ ಪ್ರಸಾರ ಮಾಡಿ ಉತ್ತಮ ಸಮಾಜದ ರಚನೆಗೆ ನೆರವಾಗುತ್ತಿವೆ. ಇಂದು ಈ ಸಂಸ್ಥೆಗಳು ಪ್ರಾರಂಭಿಸಿ ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಗಳು ಜನತೆಯ ಮಾನಸಿಕ, ನೈತಿಕ ಮತ್ತು ಸಾಮಾಜಿಕ ಜೀವನದ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ.

ಸರ್ಕಾರ ಜನತೆಯ ಶಿಕ್ಷಣದ ಕಾರ್ಯಭಾರವನ್ನು ಪರಿಹರಿಸಿಕೊಳ್ಳುವುದಕ್ಕೆ ಮೊದಲು ಎಲ್ಲಾ ದೇಶಗಳಲ್ಲಿ ಸಾರ್ವತ್ರಿಕ

Digitised by Bharatavani, CIIL

ಶಿಕ್ಷಣಕ್ಕೆಂದು ಏರ್ಪಟ್ಟಿದ್ದ ಸಂಸ್ಥೆಗಳನ್ನು ಮತಪೀಠಗಳೇ ಆರಂಭಿಸಿ ನಡೆಸಿಕೊಂಡು ಬರುತ್ತಿದ್ದವು. ಭಾರತದಲ್ಲಿ ಜನತೆಯ ಶಿಕ್ಷಣಕ್ಕಾಗಿ ಅನೇಕ ಕಡೆಗಳಲ್ಲಿ ಬೌದ್ಧಮಠಗಳು ಸಾರ್ವಜನಿಕ ಶಾಲೆಗಳನ್ನು ಸ್ಥಾಪಿಸಿದ್ದವು. ನಲಂದ, ತಕ್ಷಶಿಲೆಗಳಂತಹ ವಿಶ್ವವಿಖ್ಯಾತ ವಿಶ್ವವಿದ್ಯಾನಿಲಯಗಳನ್ನು ಮತಪೀಠಗಳೇ ನಡೆಸುತ್ತಿದ್ದವು.

**ತಕ್ಷಶಿಲೆ:** ಕ್ರಿ.ಪೂರ್ವ 7ನೇ ಶತಮಾನದಲ್ಲಿ ಇದು ಪ್ರಮುಖ ಉನ್ನತ ಶಿಕ್ಷಣ ಕೇಂದ್ರವಾಗಿ ಖ್ಯಾತಿಗೊಂಡಿತ್ತು. ಮಿಥಿಲಾ, ಕಾಶಿ, ರಾಜಗೃಹ ಮುಂತಾದ ಪ್ರದೇಶಗಳಿಂದ ವಿದ್ವಜ್ಜನರು ಅಲ್ಲಿಗೆ ಬಂದು ನೆಲೆಸಿದ್ದರು. ಅಲ್ಲಿ ಅನೇಕ ತತ್ವ ಚಿಂತಕರು, ಪಂಡಿತರು ಇದ್ದರು. ಒಬ್ಬೊಬ್ಬರೂ ಅನೇಕ ವಿದ್ಯಾರ್ಥಿಗಳಿಗೆ ಶಿಕ್ಷಣವೀಯುತ್ತಿದ್ದರು. ಆದರೆ ಅವರು ಒಂದು ನಿರ್ದಿಷ್ಟ ಸಂಸ್ಥೆಗೆ ಸೇರಿದ್ದು ಅದರ ನಿರ್ದೇಶನದಂತೆ ಬೋಧಿಸುತ್ತಿರಲಿಲ್ಲ. ಅವರು ಪಠ್ಯಕ್ರಮವನ್ನು ಅನುಸರಿಸುತ್ತಿರಲಿಲ್ಲ. ಒಬ್ಬೊಬ್ಬರು ತಮಗೆ ಇಷ್ಟಬಂದ ವಿದ್ಯಾರ್ಥಿಗಳನ್ನು ಇಷ್ಟಬಂದ ಸಂಖ್ಯೆಯಲ್ಲಿ ಸೇರಿಸಿಕೊಂಡು ಆಯಾ ವಿದ್ಯಾರ್ಥಿಗಳ ಆಸಕ್ತಿಯುಳ್ಳ ಕ್ಷೇತ್ರದಲ್ಲಿ ಬೋಧಿಸುತ್ತಿದ್ದರು. ವಿದ್ಯಾರ್ಥಿಗಳು ತಮಗೆ ಸಾಧ್ಯವಾಗುವತನಕ ಅಭ್ಯಾಸ ಮಾಡುತ್ತಿದ್ದರು. ಪರೀಕ್ಷೆಗಳಾಗಲಿ, ಪದವಿ ನೀಡುವ ವ್ಯವಸ್ಥೆಯಾಗಲಿ ಇರಲಿಲ್ಲ. ತಕ್ಷಶಿಲೆಯಲ್ಲಿ ಮೂರು ವೇದಗಳನ್ನು, ಹದಿನೆಂಟು ಶಾಸ್ತ್ರಗಳನ್ನು, ವೃತ್ತಿ ಕಲೆಗಳನ್ನು ಬೋಧಿಸುತ್ತಿದ್ದರು. ವೃತ್ತಿ ಕಲೆಗಳಲ್ಲಿ ವೈದ್ಯ, ಶಸ್ತ್ರ ಚಿಕಿತ್ಸೆ, ಬಿಲ್ಲು ವಿದ್ಯೆ, ಯುದ್ಧ, ಕಾರ್ಯಾಚರಣೆ, ಖಗೋಳಶಾಸ್ತ್ರ, ಜ್ಯೋತಿಷ್ಯ, ವಾಣಿಜ್ಯ, ವ್ಯವಸಾಯ, ದೇವತಾಶಾಸ್ತ್ರ, ಸರ್ಪವಿದ್ಯೆ, ಮಂತ್ರಗಾರಿಕೆ ಇವು ಮುಖ್ಯವಾದವುಗಳು. ತತ್ವ ಶಾಸ್ತ್ರಗಳಿಗೆ ಅದು ಆದಿಯಿಂದಲೂ ಪ್ರಖ್ಯಾತ ಶಿಕ್ಷಣ ಕೇಂದ್ರವೆನಿಸಿತ್ತು. ವೇದಗಳ ಜೊತೆಗೆ ವೇದಾಂತವನ್ನೂ ಬೋಧಿಸಲಾಗುತ್ತಿತ್ತು. ಅಶ್ವಘೋಷ, ಪಾಣಿನಿ ಮತ್ತು ಜೀವಿತ ಈ ಮೂವರು ತಕ್ಷಶಿಲೆಯ ಪ್ರಮುಖ ವಿದ್ಯಾರ್ಥಿಗಳು.

**ವಾರಣಾಸಿ:** ಇದು ತತ್ವಜ್ಞಾನಿಗಳ ಮತ್ತು ಧರ್ಮಗುರುಗಳ ತವರೆಂದು ಖ್ಯಾತವಾಗಿತ್ತು. ಎರಡು ಸಾವಿರ ವರ್ಷಗಳ ಹಿಂದಿನಿಂದಲೂ ಭಾರತೀಯ ಧರ್ಮ, ಜೊತೆಗೆ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ಹೆಸರಾದ ವಾರಣಾಸಿ ಪ್ರಾಚೀನ ಕಾಲದಲ್ಲಿ ವಿದ್ಯಾ ಕೇಂದ್ರವಾಗಿತ್ತು. ಅದು ಕ್ರಿ.ಶ. 11ನೇ ಶತಮಾನದ ವೇಳೆಗೆ ಬಹಳ ಖ್ಯಾತಿಯನ್ನು ಪಡೆದಿತ್ತು. ಅಲ್ಲಿ ಧರ್ಮ, ವ್ಯಾಕರಣ, ಛಂದಸ್ಸು, ನ್ಯಾಯ ಶಾಸ್ತ್ರ ಹಾಗೂ ತತ್ವಜ್ಞಾನ ಮೊದಲಾದವುಗಳನ್ನು ಬೋಧಿಸಲಾಗುತ್ತಿತ್ತು. ಇಲ್ಲಿ ಆಧುನಿಕ ವಿಜ್ಞಾನವನ್ನು ಬೋಧಿಸಲಾಗುತ್ತಿದೆ. ಜೊತೆಗೆ ಸಂಸ್ಕೃತ ಭಾಷೆ, ಕಲೆ, ಸಂಗೀತ, ಸಾಹಿತ್ಯವನ್ನು ಅಧ್ಯಯನ ನಡೆಸಲಾಗುತ್ತಿದೆ. ಇಲ್ಲಿ ಹಿಂದೂ ಸಂಸ್ಕೃತ ವಿದ್ಯಾಪೀಠವಿದೆ. ಮೈಸೂರಿನ ಪ್ರಭುವಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಇದರ ಕುಲಪತಿಗಳಾಗಿದ್ದರು. ಇದು ಆರ್ಯುವೇದ, ವೈದ್ಯ ಪದ್ಧತಿಯ ಕೇಂದ್ರವೂ ಆಗಿದೆ.

ನಾದಿಯಾ: ನವದ್ವೀಪ ಎಂಬ ಪರ್ಯಾಯ ನಾಮವನ್ನು ತಳೆದಿದ್ದ ಈ ವಿದ್ಯಾಕೇಂದ್ರವು 11ನೇ ಶತಮಾನದಲ್ಲಿ ಬಂಗಾಳದ ಸೇನ ರಾಜರಿಂದ ಸ್ಥಾಪಿಸಲ್ಪಟ್ಟಿತ್ತು. ಇದು ಜಲಂಗ ನದಿ ಮತ್ತು ಭಗೀರಥಿ ನದಿಗಳ ಸಂಗಮ ಸ್ಥಾನದಲ್ಲಿತ್ತು. ಗೀತ ಗೋವಿಂದದಂಥ ಲಲಿತಕಾವ್ಯದ ಕರ್ತೃ ಜಯದೇವ ಕವಿ ಮೊದಲಾದ ಅನೇಕ ಖ್ಯಾತ ಸಾಹಿತಿಗಳಿಗೆ ಇದು ನೆಲೆವೀಡಾಗಿತ್ತು. ಉಮಾಪತಿ ಕವಿತೆಗಳು, ಸಾಲವಾನಿಯ ಸ್ಮೃತಿ ವಿಶೇಷವೆಂಬ ಕೃತಿಗಳು ಇಲ್ಲಿ ರಚನೆಯಾದುವು. ಇಲ್ಲಿ ನ್ಯಾಯ, ತರ್ಕ, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ವ್ಯಾಕರಣ ಬೋಧಿಸಲಾಗುತ್ತಿತ್ತು. ನಳಂದಾ ವಿಕ್ರಮ ಶಿಲೆಗಳು ಹಾಳಾದ ಮೇಲೆ ನಾದಿಯಾ ಜ್ಞಾನ ಸಂಸ್ಕೃತಿಗಳ ಮಹಾಕೇಂದ್ರವಾಯಿತು. ಇಂದಿಗೂ ಅಲ್ಲಿ ಶಿಕ್ಷಣ ನೀಡುತ್ತಿರುವ ಅನೇಕ ಪಾಠಶಾಲೆಗಳಿವೆ.

**ಬೌದ್ಧಕಾಲದ ಪ್ರಸಿದ್ಧ ವಿದ್ಯಾಕೇಂದ್ರಗಳು**

**ನಳಂದಾ:** ಕ್ರಿ.ಶ. 5ನೇ ಶತಮಾನದಲ್ಲಿ ನಳಂದಾ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದಿತ್ತು. ಅದರ ಸಮೀಪದಲ್ಲಿದ್ದ ಸರೋವರವೊಂದನ್ನು ಅಲ್ಲಿಯ ನಾಗಗಳ ಒಡೆಯನಾದ ನಾಗನಂದನಿಗೆ ಅರ್ಪಿಸಿದ್ದರಿಂದ ಆ ಸ್ಥಳಕ್ಕೆ ನಲಂದ (ನಳಂದಾ) ಎಂಬ ಹೆಸರು ಬಂದಿತ್ತು. ಆ ಕ್ಷೇತ್ರವನ್ನು ವರ್ತಕ ಮಂಡಲಿಯೊಂದು ಖರೀದಿಸಿ, ಗೌತಮ ಬುದ್ಧನಿಗೆ ಅರ್ಪಿಸಿದವು. ಭಗವಾನ್ ಬುದ್ಧನು ಮೂರು ತಿಂಗಳು ನ್ಯಾಯಶಾಸ್ತ್ರವನ್ನು ಅಲ್ಲಿ ಬೋಧಿಸಿದನೆಂದು ಹೇಳಲಾಗಿದೆ. ಆ ಕ್ಷೇತ್ರವನ್ನು ಚೀನಿ ಯಾತ್ರಿಕ ಹ್ಯೂಯೆನ್‌ತ್ಸಾಂಗನು ಸಂದರ್ಶಿಸಿದನು. ಅಲ್ಲಿ (ಮೂರು ಸಾವಿರ) ಬೌದ್ಧ ಭಿಕ್ಷುಗಳು (ಶಿಕ್ಷಕರು), ಹತ್ತು ಸಾವಿರ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರಲ್ಲದೆ, ಅವರೆಲ್ಲರಿಗೂ ವಾಸದ ಕೊಠಡಿಗಳನ್ನು ಒದಗಿಸಿದ್ದರು. ಪಂಡಿತರು ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆ ನಡೆಸುತ್ತಿದ್ದರು. ಈ ಪ್ರವೇಶ ಪರೀಕ್ಷೆಯಲ್ಲಿ ಶ್ರೇಣಿಯಂತೆ 10ರಲ್ಲಿ 3 ಜನರಿಗೆ ಮಾತ್ರ ಪ್ರವೇಶ ಕೊಡುತ್ತಿದ್ದರು. ಇಲ್ಲಿಯ ಪಠ್ಯಕ್ರಮವು ವಿಸ್ತಾರವಾಗಿತ್ತು. ಬೌದ್ಧಧರ್ಮ, ಸಂಸ್ಕೃತಿ, ಸಾಹಿತ್ಯದಂತೆ ಹಿಂದೂ ಧರ್ಮದ ವೇದ ಹಾಗೂ ಇನ್ನಿತರ ಧಾರ್ಮಿಕ ಗ್ರಂಥಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ವೇದಶಾಸ್ತ್ರ, ವ್ಯಾಕರಣ, ತತ್ವಶಾಸ್ತ್ರ, ವಾಣಿಜ್ಯಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಖಗೋಳಶಾಸ್ತ್ರ, ನ್ಯಾಯಶಾಸ್ತ್ರ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಅಲ್ಲಿ "ಧರ್ಮಗಂಜಿ" ಎಂಬ ಹೆಸರಿನ ದೊಡ್ಡ ಗ್ರಂಥಾಲಯವಿತ್ತು. ಅದು ರತ್ನಸಾಗರ, ರತ್ನೋದಧಿ, ರತ್ನರಂಜಿತ ಎಂಬ ಮೂರು ವಿಭಾಗಗಳನ್ನು ಹೊಂದಿತ್ತು. ಇಲ್ಲಿ ಚೀನಾ, ಟಿಬೆಟ್, ಕೊರಿಯಾ, ತೆಹರಾನ್ ಮುಂತಾದ ದೇಶಗಳಿಂದ ವಿದ್ಯಾರ್ಥಿಗಳು ಅಭ್ಯಾಸಿಸಲು ಬರುತ್ತಿದ್ದರು. ಹ್ಯುಯೆನತ್ಸಾಂಗ್‌ನು ಈ ಕೇಂದ್ರದಲ್ಲಿ ಅಭ್ಯಾಸ ಮಾಡಿದ ಪ್ರಸಿದ್ಧ ವ್ಯಕ್ತಿಯಾಗಿದ್ದಾನೆ. ಇದು ಮಹಾಯಾನ ಪಂಥದ ವಿದ್ಯಾಕೇಂದ್ರವಾಗಿತ್ತು.

**ವಲ್ಲಭಿ:** ಕ್ರಿ.ಶ. 7ನೇ ಶತಮಾನದಲ್ಲಿ ವಲ್ಲಭಿ ವಿಶ್ವವಿದ್ಯಾನಿಲಯವು ಅಸ್ತಿತ್ವಕ್ಕೆ ಬಂದು ಖ್ಯಾತಿಯನ್ನು ಪಡೆದಿತ್ತು. ಇಲ್ಲಿ 100 ಬೌದ್ಧ ವಿಹಾರಗಳಿದ್ದವು. ಅವುಗಳಲ್ಲಿ ಕೆಲವು ಕ್ರಮವಾಗಿ ಉನ್ನತ ಶಿಕ್ಷಣದ ತರಗತಿಗಳಿಗೆ ಮೀಸಲಾಗಿದ್ದವು. ಎರಡು ಮೂರು ವರ್ಷಗಳ ಕಾಲ ಅಲ್ಲಿದ್ದುಕೊಂಡು ವಿದ್ಯಾರ್ಥಿಗಳು ತಮ್ಮ ಅಧ್ಯಯನ ಮುಗಿಸುತ್ತಿದ್ದರು. ವಲ್ಲಭಿಯಲ್ಲಿ ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ತರ್ಕಶಾಸ್ತ್ರ

Digitised by Bharatavani, CIIL

ಇತ್ಯಾದಿ ವಿಷಯಗಳಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿತ್ತು.

**ವಿಕ್ರಮಶಿಲಾ:** ಕ್ರಿ.ಶ. 8ನೇ ಶತಮಾನದಲ್ಲಿ ಬಂಗಾಳದ ಪಾಲ ಅರಸು ಮನೆತನದ ಧರ್ಮಪಾಲನೆಂಬ ಅರಸನು ಇದನ್ನು ಸ್ಥಾಪಿಸಿದನು. ಇದು ಮಹಾಯಾನ ಪಂಥದ ವಿದ್ಯಾಕೇಂದ್ರ. ಇದೊಂದು ವಸತಿನಿಲಯವಾಗಿದ್ದು, ಇಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಆಶ್ರಯ ನೀಡುತ್ತ, ಭಾಗಲಪುರದ ಹತ್ತಿರ ಸುಲ್ತಾನ್ ಗಂಜ್‌ನ ಬಳಿಯ ಗುಡ್ಡವೊಂದರ ಮೇಲಿದ್ದ ಈ ವಿದ್ಯಾಕೇಂದ್ರ ನೂರೆಂಟು ಭವನಗಳನ್ನು ಹೊಂದಿತ್ತು. ಅದರ ಅಧೀನದಲ್ಲಿ 4 ಮಹಾ ವಿದ್ಯಾಲಯಗಳಿದ್ದವು. ಇಲ್ಲಿ ಉಚಿತ ಊಟದ ವ್ಯವಸ್ಥೆ ಇದ್ದಿತು. ಇದರಲ್ಲಿ ಟಿಬೆಟಿನಿಂದ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಬರುತ್ತಿದ್ದರು. ಇದು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿತ್ತು. ಇಲ್ಲಿ ವ್ಯಾಕರಣ, ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ತತ್ವಶಾಸ್ತ್ರ, ಮೊದಲಾದ ವಿಷಯಗಳ ಅಧ್ಯಯನಕ್ಕೆ ಅವಕಾಶವಿದ್ದಿತು. ಹೀಗೆ ಬೌದ್ಧಧರ್ಮದ ಮತ ಪ್ರಚಾರದೊಂದಿಗೆ ಜನತೆಗೆ ಉತ್ತಮ ಶಿಕ್ಷಣ ನೀಡುತ್ತಾ ಸನ್ಮಾರ್ಗದಲ್ಲಿ ನಡೆಸುತ್ತಾ ಬಂದಿದೆ.

## ಕ್ರೈಸ್ತಧರ್ಮದ ಶೈಕ್ಷಣಿಕ ಕೊಡುಗೆಗಳು

ಯೂರೋಪಿನ ನಾನಾ ರಾಷ್ಟ್ರಗಳಲ್ಲಿ ಕ್ರೈಸ್ತಮತ ಶಿಕ್ಷಣ ಸಂಸ್ಥೆಗಳು, ಪೀಠಗಳು ಸ್ಥಾಪಿಸಿ ಶಿಕ್ಷಣವನ್ನು ಒದಗಿಸುತ್ತಾ ಬಂದಿದೆ. ಕ್ರೈಸ್ತ ಮತವು ಬಹಳ ಪ್ರಭಾವಯುತವಾದ ಶಕ್ತಿಯನ್ನು ಹೊಂದಿದೆ. ಇಪ್ಪತ್ತನೆಯ ಶತಮಾನದಲ್ಲಿ ಪಾಶ್ಚಾತ್ಯ ಸಂಸ್ಕೃತಿ ಮತ್ತು ನಾಗರಿಕತೆಯ ಮೇಲೆ ಹಿಡಿತವನ್ನು ಹೊಂದಿತು. ಶಿಕ್ಷಣದ ಮೇಲೆ ಇದರ ಪ್ರಭಾವವು ಅವ್ಯಾಹತವಾಗಿ ಮುಂದುವರೆದೇ ಇದೆ.

ಕ್ರೈಸ್ತ ಧರ್ಮವು ದೇವರನ್ನು ತಂದೆ ಎಂದೂ ಇತರ ಮನುಷ್ಯರನ್ನು ಸಹೋದರರೆಂಬ ನಂಬಿಕೆಯನ್ನು ಹೊಂದಿದೆ. ನಂಬಿಕೆ, ಆಶಾವಾದ ಮತ್ತು ಪ್ರೀತಿ ಇವು ಕ್ರೈಸ್ತ ಧರ್ಮದ ನಡವಳಿಕೆಯ ಈ ಒಂದು ಚೌಕಟ್ಟಿನಲ್ಲಿ ಕ್ರೈಸ್ತಧರ್ಮದ ಮಾರ್ಗವು ನಂಬಿಕೆಯೊಂದಿಗೆ, ಪ್ರಾರ್ಥನೆಯೊಂದಿಗೆ ಕೂಡಿದುದಾಗಿತ್ತು. ಭ್ರಾತೃತ್ವ ಪ್ರೇಮ, ಕರುಣೆ, ಕ್ರಮಬದ್ಧ ಬದುಕು, ವಿನಯ ಮತ್ತು ಮಾನವೀಯತೆ ಮುಂತಾದ ತತ್ವಗಳಿಂದ ಜನರ ಮನಸ್ಸನ್ನು ಸೆಳೆಯಿತು. ಬಡವರು ದೇವರ ಅನುಗ್ರಹಕ್ಕೆ ಒಳಪಟ್ಟವರು, ಅವರಿಗಾಗಿ ಸ್ವರ್ಗದಲ್ಲಿ ಅವಕಾಶವಿದೆ, ದುಃಖಿಗಳಿಗೆ ದೇವರ ಅನುಗ್ರಹವಿದೆ ಎಂಬ ವಾಕ್ಯಗಳು ಜನರ ಮನಸ್ಸಿನ ಮೇಲೆ ಪ್ರಭಾವ ಬೀರಿದ್ದವು. ಹೀಗೆ ಕ್ರೈಸ್ತ ಮತದ ತತ್ವಜ್ಞಾನಿಗಳು ಪ್ರಪಂಚಕ್ಕೆ ಹೊಸದಾದ ಆಯಾಮವನ್ನು ನೀಡಿ ಮನುಷ್ಯರಲ್ಲಿರುವ ಶಕ್ತಿಯನ್ನು ಉತ್ತಮ ಗುರಿಯತ್ತ ನಿರ್ದೇಶಿಸಲು ಸಹಾಯಕಾರಿಯಾದವು. ಧರ್ಮ ಪ್ರಚಾರದ ಜೊತೆಗೆ ಉತ್ತಮ ಶಿಕ್ಷಣವನ್ನು ಎಲ್ಲರಿಗೂ ದೊರಕಿಸಿ ವ್ಯವಸ್ಥಿತವಾದ ಸಮಾಜವನ್ನು ನಿರ್ಮಿಸಲು ಸಹಾಯಕಾರಿಯಾಯಿತು.

ಶಿಕ್ಷಣವು ವಿದ್ಯಾರ್ಥಿಗಳು ಮೌಲ್ಯಗಳನ್ನು ರೂಢಿಸಿಕೊಳ್ಳುವಲ್ಲಿ ಅವಶ್ಯಕವಾದ ಪ್ರಯತ್ನವನ್ನು ಹಾಗೂ ವಿದ್ಯಾರ್ಥಿಗಳನ್ನು ಔದ್ಯೋಗಿಕ ಜೀವನಕ್ಕೆ ತಯಾರು ಮಾಡುವುದು, ವಿವಿಧ ಗುಣಧರ್ಮವುಳ್ಳ ವಿದ್ಯಾರ್ಥಿಗಳ ನಡುವೆ ಸ್ನೇಹ ಮನೋಭಾವನೆಯನ್ನು ಹಾಗೂ ಸ್ವಾಭಾವಿಕ ತಿಳುವಳಿಕೆಯನ್ನು ಪಡೆಯಲು ಸಹಕರಿಸುವುದಾಗಿತ್ತು.

ಕ್ರೈಸ್ತ ಧರ್ಮದ ಮುಖ್ಯ ಕೊಡುಗೆಯೆಂದರೆ ಶೈಕ್ಷಣಿಕ ಸಂಘ ಸಂಸ್ಥೆಗಳನ್ನು ಒಟ್ಟುಗೂಡಿಸುವುದಾಗಿದೆ. ಕ್ರೈಸ್ತ ದೇವಾಲಯಗಳು ಅನೇಕ ಪ್ರಾಂತ್ಯಗಳನ್ನು ಒಳಗೊಂಡಿದೆ. ಪ್ರತಿ ಪ್ರಾಂತ್ಯವು ಶಾಲೆ ಹಾಗೂ ಕಾಲೇಜುಗಳನ್ನು ಒಳಗೊಂಡಿದೆ. ಇದರಲ್ಲಿ ಕ್ಯಾಥೋಲಿಕ್ ಧರ್ಮಾಲಯಗಳ ಕೊಡುಗೆ ಮಹತ್ತರವಾದುದು. ಕ್ರೈಸ್ತ ಸಂಘ-ಸಂಸ್ಥೆಗಳು ಭಾರತೀಯರನ್ನು ಮೇಲಕ್ಕೆತ್ತುವಲ್ಲಿ ಹಾಗೂ ಭಾರತೀಯರ ಜೀವನ ಶೈಲಿಯನ್ನು ಉತ್ತಮವಾಗಿ ರೂಪುಗೊಳಿಸುವಲ್ಲಿ ವಹಿಸಿದ ಪಾತ್ರವು ಮಹತ್ತರವಾದುದು. ಅನೇಕ ಶಾಲೆಗಳು, ಕಾಲೇಜುಗಳು ಪ್ರಾರಂಭವಾಗಿ, ಅಂಗವಿಕಲರಿಗೆ, ಕಿವುಡರಿಗೆ, ಮೂಕರಿಗೆ ಮುಂತಾದ ಜನರಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಪ್ರಪಂಚದಾದ್ಯಂತ ಗಮನ ಸೆಳೆದಿದ್ದಾರೆ. ಕ್ಯಾಥೋಲಿಕ್ ಸಂಘ-ಸಂಸ್ಥೆಗಳು ಸಮಾನತೆಯ ಅಂಶಗಳಾದ ಜಾತಿ-ಜನಾಂಗ ಎಂಬ ಭೇದವಿಲ್ಲದೆ ಎಲ್ಲರೂ ಒಂದೇ ಎಂಬ ಭಾವನೆಯನ್ನು ಹೊಂದಿದೆ. ಇಲ್ಲಿ ಹಿಂದೂಗಳು, ಮುಸ್ಲಿಮರು, ಸಿಖ್ಖರು, ಪಾರ್ಸಿಗಳು, ಕ್ರೈಸ್ತ ಧರ್ಮದ ಪಾದ್ರಿಗಳು ಎಲ್ಲರೂ ಈ ಸಂಸ್ಥೆಯಿಂದ ಶಿಕ್ಷಣ ಪಡೆದು ವಿದ್ಯಾವಂತರಾಗಿದ್ದಾರೆ. ರಾಷ್ಟ್ರೀಯ ನೀತಿ ನಿಯಮಗಳಿಗನುಸಾರವಾಗಿ ಶಾಲಾ-ಕಾಲೇಜುಗಳು ಅತ್ಯುನ್ನತ ಸೇವೆ ಸಲ್ಲಿಸುತ್ತಾ ಬಂದಿವೆ.

ಎರಡು ಶತಮಾನಗಳಿಗಿಂತಲೂ ಹೆಚ್ಚುಕಾಲ ಈ ದೇಶದ ಭಾಷೆ ಮತ್ತು ಸಾಹಿತ್ಯಕ್ಕೆ ಕ್ರೈಸ್ತ ಮಿಷನರಿ ಸೇವೆ ಸಲ್ಲಿಸಿದೆ. ತಮಿಳು, ತೆಲುಗು, ಕನ್ನಡ ಮತ್ತು ಮಲೆಯಾಳಂ ಭಾಷೆಗಳಿಗೆ ಬೈಬಲಿನಲ್ಲಿನ ಭಾಷಾಂತರ ಮತ್ತು ಇತರ ಕ್ರೈಸ್ತ ಸಾಹಿತ್ಯ ರಚನೆಯು ಭಾಷೆಗಳು ವಿವಿಧ ದೆಸೆಯಲ್ಲಿ ಬೆಳೆಯಲು ಕಾರಣವಾದವು.

ಕಾವ್ಯ, ವ್ಯಾಕರಣ ಮತ್ತು ನಿಘಂಟು ರಚನೆ ಮುಂತಾದ ಕ್ಷೇತ್ರಗಳಲ್ಲಿ ಈ ಮಿಷನರಿಗಳು ಅದ್ಭುತ ಸೇವೆ ಸಲ್ಲಿಸಿದ್ದಾರೆ. ಉದಾ: ಮುದ್ರಣ ಕಲೆಯ ಅಭಿವೃದ್ಧಿ, ಭಾಷೆ ಸಾಹಿತ್ಯವನ್ನು ಶ್ರದ್ಧೆಯಿಂದ ಅಧ್ಯಯನ ಮಾಡುವ ವಿಧಾನ, ರೆವರೆಂಡ್ ಎಫ್.ಕಿಟೆಲ್‌ರವರು ಕನ್ನಡ-ಇಂಗ್ಲೀಷ್ ನಿಘಂಟು, ಕಿಟೆಲ್‌ರವರೇ ಸಂವಾದಿಸಿದ 'ಛಂದೋಂಬುದಿ' ಮತ್ತು 'ಶಬ್ದವಾಣಿ ದರ್ಪಣ' ಮುಂತಾದವುಗಳನ್ನು ಬರೆದು ಸೇವೆ ಸಲ್ಲಿಸಿದ್ದಾರೆ. 1835ರ ಸುಮಾರಿಗೆ ಪಾಶ್ಚಾತ್ಯ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದ ನಂತರ ಮಿಷನರಿಗಳು, ರೋಮನ್ ಕ್ಯಾಥೋಲಿಕರು ಮತ್ತು ಪ್ರಾಟೆಸ್ಟೆಂಟರು ಇಂಗ್ಲೀಷು ಶಿಕ್ಷಣಕ್ಕೆ ಪ್ರಚಾರ ಕೊಟ್ಟರು. ಅಲ್ಲದೆ ಭಾಸೆಲ್ ಮಿಷನ್, ವೆಸ್ಲಿ ಮಿಷನ್, ಅಂಜಲಿಕನ್, ಮಾರ್ಥೋಮೋ ಸಿರಿಯನ್, ಎಪಿಸ್ಕೊಪಲ್, ಮೆಥಾಡಿಸ್ಟ್ ಪೆಂಟಕೋಸ್ಟ ಎಂಬ ಪ್ರತ್ಯೇಕ ಹೆಸರುಗಳೊಡನೆ ಮತ ಪ್ರಚಾರದೊಂದಿಗೆ ಶಿಕ್ಷಣಪ್ರಚಾರವನ್ನೂ ಮಾಡಿದವು. ಅದರಲ್ಲಿ ವಿಶೇಷವಾಗಿ ಶಿಕ್ಷಣ ನೀಡುವಲ್ಲಿ ಹೆಚ್ಚು ಶ್ರಮವಹಿಸುತ್ತಿರುವ ಶಿಕ್ಷಣ ಸಂಘ-ಸಂಸ್ಥೆಗಳೆಂದರೆ: ಬಾಸೆಲ್ ಮಿಷನ್, ಸೇಂಟ್ ಜೋಸೆಫ್ ಶಿಕ್ಷಣ ಸಂಸ್ಥೆ, ಸೇಂಟ್ ಮೇರಿ ಸಂಸ್ಥೆ, ಸೇಂಟ್ ಆಂಥೋನಿ ಶಿಕ್ಷಣ ಸಂಸ್ಥೆ, ಬೆನ್‌ಸ್ಮಿಥ್, ಸೇಂಟ್ ಜೇವಿಯಾ, ಸೇಂಟ್ ಪೀಠರ್,

Digitised by Bharatavani, CIIL

ಸೇಂಟ್ ಜಾನ್, ಸೇಂಟ್ ಫಿಲೋಮಿನಾ ಮುಂತಾದವು ಆಂಗ್ಲ ಮತ್ತು ಕನ್ನಡ, ಇತರೆ ಭಾಷೆಗಳಲ್ಲಿ ದೇಶದಾದ್ಯಂತ ಶಿಕ್ಷಣವನ್ನು ವ್ಯವಸ್ಥಿತವಾಗಿ ನೀಡುತ್ತ, ಪ್ರಸಿದ್ಧಿಯನ್ನು ಪಡೆದು ತಮ್ಮದೇ ಆದ ವಿಶಿಷ್ಟವಾದ ಕೊಡುಗೆಗಳನ್ನು ನೀಡುತ್ತ ಬಂದಿವೆ.

ಕ್ರೈಸ್ತ ಧರ್ಮದ ಜನರು ಅಂದರೆ ಪ್ರವಾದಿಗಳು ಬೈಬಲ್ಲಿನ ವಾಕ್ಯಗಳನ್ನು ಜನರಿಗೆ ತಿಳಿಸುತ್ತ, ಸಮಾಜ ದಲ್ಲಿರುವ ಮೂಢನಂಬಿಕೆ, ಅನಾಚಾರ, ಅಂಧಕಾರ, ಅಜ್ಞಾನ, ಅನಿಷ್ಟ ಪದ್ಧತಿಗಳು, ಕಳ್ಳತನ, ದುಷ್ಚಟಗಳು, ದುರಭ್ಯಾಸ ಮುಂತಾದವುಗಳನ್ನು ತೊಲಗಿಸಲು ಕ್ರೈಸ್ತಧರ್ಮದ ಪಾತ್ರ ಹಿರಿದಾದುದು. ಜನರು ಮಾಡುವ ಪಾಪದ ಕಾರ್ಯಗಳನ್ನು ಮತ್ತು ಮನಸ್ಸಿನ ವಿಚಿತ್ರ ಆಸೆ-ಆಕಾಂಕ್ಷೆಗಳನ್ನು ತೊಲಗಿಸಿ, ಸನ್ಮಾರ್ಗದಲ್ಲಿ ಅಂದರೆ ದೇವರ ಮಾರ್ಗದಲ್ಲಿ ನಡೆದು, ಸಕಲ ದುಃಖ, ಚಿಂತೆ, ಬಾಧೆಗಳನ್ನು ತೊಲಗಿಸಲು ಯೇಸುವಿನ ಅನುಗ್ರಹ ಬೇಕಾದರೆ ಆತನ ಬೋಧನೆಗಳನ್ನು ಅನುಸರಿಸಿದರೆ ದೇವರ ರಾಜ್ಯದಲ್ಲಿ ನೀವು ಭಾಗಸ್ಥರಾಗುವಿರಿ ಎಂಬ ಅನೇಕ ತತ್ವ ಸಿದ್ಧಾಂತಗಳನ್ನು ತಿಳಿಸುತ್ತ, ಜನರ ತನು-ಮನಗಳಲ್ಲಿ ಪಾವಿತ್ರ್ಯತೆಯನ್ನು ತುಂಬಲು ಪ್ರಯತ್ನಿಸಿದ್ದಾರೆ.

### ಮುಸ್ಲಿಂರ ಕಾಲದ ಪ್ರಸಿದ್ಧ ಶಿಕ್ಷಣ ಕೇಂದ್ರಗಳು

ಕ್ರಿ.ಶ. 8ನೇ ಶತಮಾನದಲ್ಲಿ ಮಹಮದೀಯರ ಆಳ್ವಿಕೆ ಪ್ರಾರಂಭವಾದರೂ, ಕ್ರಿ.ಶ. 12ನೇ ಶತಮಾನಾ ನಂತರ ಮುಸ್ಲಿಂರ ಶಿಕ್ಷಣ ವ್ಯವಸ್ಥೆಗೆ ಭದ್ರ ತಳಪಾಯ ದೊರೆಯಿತು. ಭಾರತದಲ್ಲಿ ಘೋರಿ ಮಹಮ್ಮದನು ಮೊಟ್ಟಮೊದಲು ಮಹಮದೀಯ ಆಡಳಿತವನ್ನು ಆರಂಭಿಸಿದನು. ಅಂದಿನಿಂದ ಭಾರತದಲ್ಲಿ ಶಿಕ್ಷಣ ಪದ್ಧತಿಯಲ್ಲಿ ಹೊಸದೊಂದು ಶಿಕ್ಷಣ ಪದ್ಧತಿಯು ಜಾರಿಗೆ ಬಂದಿತು. ಈ ಧರ್ಮ ಸಂಸ್ಥಾಪಕರಾದ ಮಹಮದ್ ಪೈಗಂಬರನ ಉಪದೇಶದಂತೆ ಮೋಕ್ಷಸಾಧನೆಗೆ ಅದು ಅಗತ್ಯವೆನಿಸಿತು. ಜೊತೆಗೆ ತಮ್ಮ ಮತ ಪ್ರಚಾರ ಮಾಡುವುದು, ಮತ್ತು ಮತ ಪ್ರಚಾರದೊಡನೆ ಶಿಕ್ಷಣ ಪ್ರಸಾರ ಕಾರ್ಯವನ್ನೂ ಸೇರಿಸಿಕೊಳ್ಳಲಾಗಿತ್ತು. ಮಹಮದೀಯರಿಗಾಗಿ ಮಸೀದಿಗಳನ್ನೂ ಅದಕ್ಕೆ ಸೇರಿದಂತೆ "ಮಕ್ತಾಬ" ಮತ್ತು ಮದರಸಾಗಳು ಸ್ಥಾಪಿತವಾದವು.

ಮಕ್ತಾಬ್: ಮಕ್ತಾಬ್ ಎನ್ನುವುದು ಅರೇಬಿಕ್ ಪದವಾದ "ಕುತುಬ್" ನಿಂದ ಬಂದಿದೆ. ಕುತುಬ್ ಎಂದರೆ ಬರೆಯುವುದನ್ನು ಹೇಳಿಕೊಡುವ ಸ್ಥಳವಾಗಿದೆ. ಸಾಮಾನ್ಯ ಜನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಮಕ್ತಾಬ್‌ಗಳಲ್ಲಿ ಕೊಡುತ್ತಿದ್ದರು. ಅವರಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಓದುವುದು, ಬರೆಯುವುದು ಮತ್ತು ಅಂಕಗಣಿತಗಳನ್ನು ಬೋಧಿಸುತ್ತಿದ್ದರು. ಆದರೆ ಶ್ರೀಮಂತ ಜನರು ತಮ್ಮ ಮಕ್ಕಳನ್ನು ಸಾಮಾನ್ಯವಾಗಿ ಮಕ್ತಾಬ್‌ಗಳಲ್ಲಿ ಸೇರಿಸುತ್ತಿರಲಿಲ್ಲ. ಅವರು ತಮ್ಮ ಮಕ್ಕಳಿಗೆ ತಮ್ಮ ಮನೆಗಳಲ್ಲಿಯೇ ಖಾಸಗಿ ವ್ಯವಸ್ಥೆಯ ಮುಖಾಂತರ ಶಿಕ್ಷಣವನ್ನು ನೀಡುತ್ತಿದ್ದರು.

ಮಕ್ತಾಬ್‌ಗಳಲ್ಲಿ ಕುರಾನಿನ ಕೆಲವು ಅಧ್ಯಾಯಗಳನ್ನು ಹೇಳಿಕೊಡುತ್ತಿದ್ದರು. ಇದು ವಿದ್ಯಾರ್ಥಿಗಳಿಗೆ ಕಂಠಪಾಠ ಮಾಡಲು ಸಾಕಾಗುತ್ತಿತ್ತು. ಅವರು ಪರ್ಷಿಯನ್ ಲಿಪಿಗೆ ಹೊಂದಿಕೊಂಡ ನಂತರ ಅವರಿಗೆ ಅದರ ವ್ಯಾಕರಣವನ್ನು ಬೋಧಿಸಲಾಗುತ್ತಿತ್ತು. ನಂತರ ಅವನಿಗೆ ಪ್ರಣಯ ಸಾಹಿತ್ಯ, ಉದಾ: ಲೈಲಾ-ಮಜನೂ, ಯೂಸುಫ್-ಜುಲೇಖಾ ಮುಂತಾದವನ್ನು ಬೋಧಿಸುತ್ತಿದ್ದರು. ಮಕ್ತಾಬ್‌ಗಳಲ್ಲಿ ಸಾಮಾನ್ಯ ಪ್ರಾಯೋಗಿಕ ಶಿಕ್ಷಣವನ್ನು ನೀಡಲಾಗುತ್ತಿತ್ತು. ಅವರಿಗೆ ಪತ್ರಲೇಖನ, ಅರ್ಜಿ ಬರಹ ಮತ್ತು ಲೆಕ್ಕಶಾಸ್ತ್ರ ಕಲಿಸುತ್ತಿದ್ದರು.

ಮದರಸಾಗಳು: ಮಕ್ತಾಬದಲ್ಲಿಯ ಶಿಕ್ಷಣ ಮುಗಿಸಿದ ನಂತರ ವಿದ್ಯಾರ್ಥಿ ಉಚ್ಚ ಶಿಕ್ಷಣಕ್ಕಾಗಿ ಮದರಸಾಗೆ ಬರಬೇಕಾಗುತ್ತಿತ್ತು. ಮುಸ್ಲಿಂ ಅವಧಿಯಲ್ಲಿ ಮದರಸಾಗಳು ಉಚ್ಚ ಶಿಕ್ಷಣದ ಕೇಂದ್ರಗಳಾಗಿದ್ದವು. ಮದರಸಾಗಳನ್ನು ರಕ್ಷಿಸಿ ಪೋಷಿಸಿಕೊಂಡು ಬರಲು ರಾಜರು ಜಹಗೀರುಗಳನ್ನು (ಭೂಮಿ ಮತ್ತು ಹಳ್ಳಿಗಳನ್ನು) ಕೊಡುತ್ತಿದ್ದರು. ಮದರಸಾಗಳ ಆಡಳಿತವನ್ನು ನೋಡಿಕೊಳ್ಳಲಿಕ್ಕೆ ಒಬ್ಬ ಪಂಡಿತನನ್ನು ನೇಮಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ವಸತಿ ನಿಲಯಗಳನ್ನೂ ಕಲ್ಪಿಸಲಾಗಿತ್ತು. ಮದರಸಾಗಳಲ್ಲಿ ಮುಸ್ಲಿಂ ಧರ್ಮವನ್ನು ಕಡ್ಡಾಯವಾಗಿ ಬೋಧಿಸಲಾಗುತ್ತಿತ್ತು. ವೈದ್ಯಕೀಯ ಶಾಸ್ತ್ರ, ಇತಿಹಾಸ, ಭೂಗೋಳ, ಅರ್ಥಶಾಸ್ತ್ರ, ಖಗೋಳಶಾಸ್ತ್ರ, ಕಾನೂನು, ತತ್ವಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ರಾಜನೀತಿಶಾಸ್ತ್ರ ಮತ್ತು ಸಂಗೀತವನ್ನು ಬೋಧಿಸಲಾಗುತ್ತಿತ್ತು. ಅಕ್ಬರನ ಕಾಲದಲ್ಲಿ ಹಿಂದೂಗಳು ಮದರಸಾಗಳನ್ನು ಸೇರುವುದರ ಪ್ರಮಾಣ ಕ್ರಮೇಣ ಹೆಚ್ಚಾಗಿದ್ದು ಕಂಡುಬರುತ್ತದೆ.

### ಮಕ್ತಾಬ್ ಮತ್ತು ಮದರಸಾಗಳಲ್ಲಿಯ ಬೋಧನಾ ಪದ್ಧತಿಗಳು:

ಮೌಖಿಕ ಪದ್ಧತಿ, ಕಂಠಪಾಠ ಮಾಡುವ ಪದ್ಧತಿ, ಅಕ್ಬರನು ಜಾರಿಗೆ ತಂದ ವೈಜ್ಞಾನಿಕ ರೀತಿಯ ಪದ್ಧತಿ, ವಿಶ್ಲೇಷಣ ಮತ್ತು ಅನುಗಮನ ಪದ್ಧತಿ, ಸ್ವಯಂ ಅಧ್ಯಯನ ಪದ್ಧತಿ ಹಿರೇಮಣಿ ಪದ್ಧತಿ, ವರ್ಣಮಾಲಾ, ಪದಮಾಲಾ ಮತ್ತು ವಾಕ್ಯಮಾಲಾ ಪದ್ಧತಿ.

ಮುಂತಾದ ಪದ್ಧತಿಗಳ ಮೂಲಕ ಶಿಕ್ಷಣವನ್ನು ನೀಡುತ್ತಿದ್ದರು. ಆದರೆ ಸ್ತ್ರೀ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು ಕೊಡದೇ ಅವರು ಮನೆಯಲ್ಲಿ ವಿದ್ಯಾಭ್ಯಾಸ ಮಾಡಲು ಅನುಕೂಲ ಮಾಡುತ್ತಿದ್ದರು. ಮುಸ್ಲಿಂ ಪದ್ಧತಿಯಲ್ಲಿ ಮೊದಲು ಅರೇಬಿಕ್ ನಂತರ ಪರ್ಶಿಯನ್ ಭಾಷೆಗಳು ಶಿಕ್ಷಣ ಮಾಧ್ಯಮವಾಗಿದ್ದವು. ಅರಬ್ಬರ ಭಾಷೆಯಾದ ಪರ್ಶಿಯನ್ ಎಲ್ಲರೂ ಕಲಿಯುತ್ತಿದ್ದರು. ಕುರಾನ್ ಭಾಷೆಯಾದ ಅರೇಬಿಕ್ ಎಲ್ಲ ಮುಸಲ್ಮಾನರಿಗೂ ಕಡ್ಡಾಯವಾಗಿತ್ತು. ಬರವಣಿಗೆಗಾಗಿ ಅಲಗನ್ನು ಉಪಯೋಗಿಸುತ್ತಿದ್ದರು. ಮುಂದೆ ಕಾಲಕ್ರಮೇಣ ಮುಸ್ಲಿಂ ಶಿಕ್ಷಣ ಪದ್ಧತಿಯಲ್ಲಿ ಉರ್ದು ಪ್ರವೇಶಿಸಿತು.

### ವೀರಶೈವ ಮಠಗಳು ನೀಡಿದ ಶೈಕ್ಷಣಿಕ ಕೊಡುಗೆಗಳು

ಕಲ್ಯಾಣದ ಅನುಭವ ಮಂಟಪದಲ್ಲಿ ಬಸವಣ್ಣ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ, ಚೆನ್ನಬಸವಣ್ಣ ಮೊದಲಾದ ಶಿವಶರಣ-ಶರಣೆಯರು ತಮ್ಮ ಆಧ್ಯಾತ್ಮಿಕ ಅನುಭವದ ಪರಾಕಾಷ್ಠೆಯನ್ನು ಮುಟ್ಟಿ ಜ್ಞಾನದ ಹೊನಲನ್ನು ಸುತ್ತಮುತ್ತಲೂ

Digitised by Bharatavani, CIIL

ಹರಡುತ್ತಿದ್ದರು. ಕಲ್ಯಾಣ ಕ್ರಾಂತಿಯ ಫಲವಾಗಿ ಎಲ್ಲ ಶಿವಶರಣರು ಅಲ್ಲಿಂದ ಬೇರೆ ಬೇರೆ ಕಡೆಗೆ ಹೊರಟುಹೋದರು. ಅವರು ಹೋಗಿ ನೆಲೆಯೂರಿದ ಕ್ಷೇತ್ರಗಳು ಅನೇಕ ಮಠಗಳು, ಸಂಸ್ಥೆಗಳಾಗಿ ಮಾರ್ಪಾಡು ಹೊಂದಿದವು. ಹೀಗೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಕೇರಳ, ತಮಿಳುನಾಡು ಮುಂತಾದವುಗಳಲ್ಲಿ ವೀರಶೈವ ಮಠಗಳು ಉದಯವಾದವು.

ವೀರಶೈವ ಮಠಗಳಲ್ಲಿ ಸಾಮಾನ್ಯವಾಗಿ ಪ್ರಾಂಗಣಗಳು ಇದ್ದು, ಭಕ್ತರಿಗೆ, ಶರಣರಿಗೆ ತಂಗಲು ಉತ್ತಮ ವ್ಯವಸ್ಥೆ, ಪ್ರಸಾದ ವ್ಯವಸ್ಥೆ, ಧ್ಯಾನ ಮಂದಿರ ಮತ್ತು ಪ್ರಾರ್ಥನಾ ಮಂದಿರ, ಪೂಜಾ ಸ್ಥಳಗಳು ಇರುತ್ತವೆ. ಈ ಎಲ್ಲ ಮಠಗಳ ಪ್ರಮುಖವಾದ ವೈಶಿಷ್ಟ್ಯವೆಂದರೆ ಶಿಕ್ಷಣದ ಪ್ರಸಾರ. ಮಠಗಳು ಭಾರತದಲ್ಲಿ 6ನೇ ಶತಮಾನದಿಂದಲೂ ಇದ್ದರೂ 10ನೆಯ ಶತಮಾನದಿಂದ 13ನೇ ಶತಮಾನಗಳ ಮಧ್ಯಕಾಲದಲ್ಲಿ ಅತ್ಯಂತ ಪ್ರಚಲಿತ ರೂಪದಲ್ಲಿದ್ದವು. ಶೈವ ಮಠಗಳಲ್ಲಿ ಎರಡು ಪ್ರಕಾರದ ಮಠಗಳಿದ್ದವು. ಲಕುಲೇಶ ಪಶುಪಥ ಮತ್ತು ಕಾಲಮುಖ ಎಂಬುವುಗಳು ಕರ್ನಾಟಕದಲ್ಲಿದ್ದವು. ಇವುಗಳೇ ಬಿಜಾಪುರ, ಧಾರವಾಡ, ಶಿವಮೊಗ್ಗ, ತುಮಕೂರು ಮುಂತಾದ ಜಿಲ್ಲೆಗಳಲ್ಲಿದ್ದವು. 13ನೇ ಶತಮಾನದಲ್ಲಿ ಕರ್ನಾಟಕದಲ್ಲಾದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿ ವಿದ್ಯಾಭ್ಯಾಸದ ಮೇಲೂ ತನ್ನ ಪರಿಣಾಮವನ್ನು ಬೀರಿತು. ಚರ್ತುವರ್ಣವನ್ನು ಹುಟ್ಟಿನ ಆಧಾರದ ಮೇಲೆಯೇ ನಿರ್ಧರಿಸುವ ಕ್ರಮವನ್ನು ಖಂಡಿಸಿ ಯೋಗ್ಯತೆಯಿಂದ ಜನರನ್ನು ಅಳೆಯಲು ಬಯಸಿದ ಬಸವಾದಿ ಶರಣರ ಕಾರ್ಯಕ್ಷೇತ್ರ, ಧರ್ಮವನ್ನು ಮನೆ-ಮನೆಗೆ ಕೊಂಡೊಯ್ದಂತೆ, ವಿದ್ಯಾಭ್ಯಾಸದ ಅನುಕೂಲವನ್ನು ಎಲ್ಲರಿಗೂ ಕಲ್ಪಿಸಿಕೊಟ್ಟಿತು. ವಿದ್ಯಾಭ್ಯಾಸವನ್ನು ಸಾರ್ವತ್ರಿಕಗೊಳಿಸುವ ಶರಣರ ಪ್ರಯತ್ನವನ್ನು ಆ ಧರ್ಮದ ಅನುಯಾಯಿಗಳು ಮುಂದುವರೆಸಿಕೊಂಡು ಬಂದರು. ಇತ್ತೀಚಿನವರೆಗೂ ಹಳ್ಳಿಗಳಲ್ಲಿ ವೀರಶೈವ ಮಠಗಳು ನಡೆಸುತ್ತಿದ್ದ ಶಾಲೆಗಳು ಅಯ್ಯನವರ ಶಾಲೆಗಳು ಎಂದು ಪ್ರಸಿದ್ಧವಾಗಿ ವಿದ್ಯಾಪ್ರಸಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು. ವಿಜಯನಗರ ಕಾಲದಲ್ಲಿ ವಿದ್ಯಾಭ್ಯಾಸ ಬಹಳ ಪ್ರಮುಖವಾದ ಸ್ಥಾನವನ್ನು ಪಡೆದಿತ್ತು. ವೀರಶೈವರ ಮಠಗಳೂ ಪ್ರಮುಖ ವಿದ್ಯಾಕೇಂದ್ರಗಳಾಗಿ ಮುಂದುವರಿಯುತ್ತಿದ್ದವು. ಈ ವೇಳೆಗೆ ವಿದ್ಯಾಭ್ಯಾಸದ ಕ್ರಮ ಮತ್ತು ಪಠ್ಯ ವಿಷಯಗಳಲ್ಲಿಯೂ ಬೆಳವಣಿಗೆಯಾಗಿತ್ತು. ಶಾಸ್ತ್ರಗಳು ವಿಪುಲವಾಗಿ ಬೆಳೆದಿದ್ದವು. ಅವುಗಳ ವ್ಯಾಸಂಗಕ್ಕೆ ಅನುಕೂಲವಾಗುವಂತಹ ವ್ಯಾಪಕತೆಯನ್ನು ಅಳವಡಿಸಿಕೊಳ್ಳುವ ವಿದ್ಯಾಭ್ಯಾಸಕ್ರಮ ಏರ್ಪಟ್ಟಿತ್ತೆನ್ನಬಹುದು. ಮಠಗಳಲ್ಲಿ ಅನೇಕ ಪ್ರಕಾರಗಳಿದ್ದವು. ಅವು ಇಂತಿವೆ:

1. **ಸಾಲಿ ಮಠಗಳು:** ಹೆಸರೇ ಸೂಚಿಸುವಂತೆ ಇಂಥ ಮಠಗಳು ವೃತ್ತಿಶಿಕ್ಷಣ ನೀಡುವ ಕೇಂದ್ರಗಳಾಗಿದ್ದವು. ಇಂಥ ಮಠಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲಕಸುಬಿನ ಶಿಕ್ಷಣ ಕೊಡುತ್ತಿದ್ದರು. ಮುಖ್ಯವಾಗಿ ಕೃಷಿ ಮತ್ತು ಕೃಷಿ ಆಧಾರಿತ ಕಸಬುಗಳನ್ನು ಬೋಧಿಸಲಾಗುತ್ತಿತ್ತು. ವಿಶಾಲವಾದ ಪ್ರದೇಶಗಳಲ್ಲಿ ಇದ್ದ ಈ ಮಠಗಳಲ್ಲಿ ಉತ್ತಮ ಶಿಕ್ಷಕರು ಮತ್ತು ಸಲಕರಣೆಗಳು ಇರುತ್ತಿದ್ದವು. ಈ ಮಠಗಳಿಗೆ ದಾನಿಗಳು ತಮ್ಮ ಉದಾರವಾದ ಕಾಣಿಕೆಗಳನ್ನು ನೀಡುತ್ತಿದ್ದರು. ಮಠದ ಮಹಾಸ್ವಾಮಿಗಳು ಎಲ್ಲ ರೀತಿಯ ಜವಾಬ್ದಾರಿಯನ್ನು ಹೊತ್ತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು.

2. **ಓದಿಸುವ ಮಠಗಳು:** ಈ ಮಠಗಳಲ್ಲಿ ಓದುಗಾರಿಕೆ ಮತ್ತು ಬರಹಗಾರಿಕೆಗಳನ್ನು ನಿರಂತರವಾಗಿ ನಡೆಯುತ್ತಿದ್ದವು. ಇಲ್ಲಿ ಕಸುಬುಗಳನ್ನು ಕಲಿಸುತ್ತಿರಲಿಲ್ಲ. ಈ ಮಠಗಳಲ್ಲಿ ಆಧ್ಯಾತ್ಮಿಕ ವಿಷಯಗಳು, ಸಾಮಾನ್ಯ ವಿಷಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಬೋಧಿಸುತ್ತಿದ್ದರು. ಇಂಥ ಮಠಗಳಲ್ಲಿ ಸಾಮಾನ್ಯ ಜನರ ಮಕ್ಕಳಿಗೆ ಮುಕ್ತ ಪ್ರವೇಶವಿತ್ತು. ಸಂಸ್ಕೃತ, ಹಳಗನ್ನಡ ಮೊದಲಾದ ಭಾಷೆಗಳನ್ನೂ, ತತ್ವಜ್ಞಾನ, ಮಹಾ ಪುರುಷರ ಜೀವನ ಮತ್ತು ಅವರ ಸಾಧನೆಗಳನ್ನು ಕೂಲಂಕಶವಾಗಿ ಅಭ್ಯಾಸ ಮಾಡಿಸಲಾಗುತ್ತಿತ್ತು. 19ನೇ ಶತಮಾನದಿಂದೀಚೆಗೆ ಇವುಗಳಿಗೆ ಉದಾಸಿ ಮಠಗಳೆಂದು ಕರೆಯುತ್ತಿದ್ದರು. ಇಂದು ಅನೇಕ ಹಿರೇಮಠಗಳು ವಿವಿಧ ಗ್ರಾಮಗಳಲ್ಲಿ ಈ ಕೆಲಸವನ್ನು ಮಾಡುತ್ತಲಿವೆ. ಜನರಲ್ಲಿರುವ ಅಂಧಕಾರವನ್ನು ಹೋಗಲಾಡಿಸಲು ಪ್ರಯತ್ನಿಸುತ್ತಿವೆ.

3. **ವಿರಕ್ತ ಮಠ:** ಈ ಮಠಗಳಲ್ಲಿ ಆಧ್ಯಾತ್ಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದ್ದಿತು. ವಿದ್ಯಾರ್ಥಿಗಳು ಆಳವಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಅಭ್ಯಾಸವನ್ನು ಮಾಡುತ್ತಿದ್ದರು. ಇಲ್ಲಿ ಅಭ್ಯಾಸಿಸಿದವರು ಸಾಹಿತಿಗಳು, ಪಂಡಿತರು ಮತ್ತು ಮೇಧಾವಿಗಳು ಆಗಿದ್ದಾರೆ. ಇಲ್ಲಿ ಕಾಯಕ ಸಿದ್ಧಾಂತವನ್ನೂ ತಿಳಿದುಕೊಳ್ಳುತ್ತಿದ್ದರು. ಅಲ್ಲದೆ ವಚನ ಸಾಹಿತ್ಯವನ್ನು ಆಸಕ್ತಿಯಿಂದ ಅಭ್ಯಾಸಿಸುತ್ತಿದ್ದರು. ಈ ಮಠಗಳು ಮಾನವಸೇವಾ ಮನೋಭಾವವನ್ನು ಹೊಂದಿದ್ದವು.

**ಕರ್ನಾಟಕದಲ್ಲಿ ಪ್ರಚಲಿತ ಪ್ರಸಿದ್ಧ ಮಠಗಳು**

1. **ಮೈಸೂರಿನ ಸುತ್ತೂರ ಮಠ:** ಶಿಕ್ಷಣ ಪ್ರಸಾರಕ್ಕೆ ಆದ್ಯತೆಯನ್ನು ನೀಡಿರುವ ಈ ಬೃಹನ್ ಮಠವು ಮೈಸೂರಿನಲ್ಲಿ ಸ್ಥಾಪಿತವಾಗಿದೆ. ಸುತ್ತೂರ ಮಠದ ಶ್ರೀಗಳವರು ಸ್ವತಃ ಪ್ರಕಾಂಡ ಪಂಡಿತರಿದ್ದು, ವಿದ್ಯಾರ್ಜನೆಗಾಗಿ ಬರುವ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹ ನೀಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಶ್ರೀಮಠದ ಆಶ್ರಯದಲ್ಲಿ ನಡೆಯುತ್ತಿರುವ ಹಾಗೂ ಭಾರತದಲ್ಲಿಯೇ ಪ್ರಸಿದ್ಧವಾಗಿರುವ ಜೆ.ಎಸ್.ಎಸ್. ತಾಂತ್ರಿಕ ಮಹಾ ವಿದ್ಯಾಲಯವು ಅತ್ಯಾಧುನಿಕ ತಂತ್ರಜ್ಞಾನ, ಕಂಪ್ಯುಟರುಗಳನ್ನು ಹೊಂದಿದೆ. ಅದರಂತೆ ಸುತ್ತೂರ ಮಠವು ವೈದ್ಯಕೀಯ ಮಹಾವಿದ್ಯಾಲಯವನ್ನೂ ಹೊಂದಿದೆ. ಈ ಕಾಲೇಜಿನ ಆಸ್ಪತ್ರೆಯಲ್ಲಿ ಆಧುನಿಕ ಸಲಕರಣೆಗಳಿದ್ದು, ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಶ್ರೀಮಠವು ಉತ್ತಮವಾದ ವಸತಿಗೃಹಗಳನ್ನು ಸ್ಥಾಪಿಸಿದ್ದು, ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಉಚಿತವಾಗಿ ಅನ್ನದಾಸೋಹ ನಡೆಸುತ್ತದೆ. ವಿದ್ಯಾರ್ಥಿಗಳಿಗೆ ಪುರಸ್ಕಾರಗಳನ್ನು ನೀಡುತ್ತದೆ. ಶ್ರೀಮಠದ ಆಶ್ರಯದಲ್ಲಿ ಅನೇಕ ಕಲಾ, ವಾಣಿಜ್ಯ, ವಿಜ್ಞಾನ, ಶಿಕ್ಷಣ ಮಹಾವಿದ್ಯಾಲಯಗಳು, ಶಾಲೆಗಳು ಮತ್ತು ಆಧ್ಯಾತ್ಮಿಕ

Digitised by Bharatavani, CIIL

ಕೇಂದ್ರಗಳು ನಡೆಯುತ್ತಿವೆ. ಜನಜಾಗೃತಿಗಾಗಿ ಶ್ರೀಮಠವು ಅನೇಕ ನಿಯತಕಾಲಿಕಗಳನ್ನು ಹೊರಡಿಸುತ್ತಿರುವುದು.

2. **ಶ್ರೀ ತರಳುಬಾಳು ಮಠ:** ಈ ಬೃಹನ್ ಮಠವು ಚಿತ್ರದುರ್ಗ ಜಿಲ್ಲೆಯ ತರಳುಬಾಳುವಿನಲ್ಲಿ ಸ್ಥಾಪಿತವಾಗಿದೆ. ಈ ಮಠದ ಶ್ರೀಗಳವರು ಅದರ ಸರ್ವತೋಮುಖ ಅಭಿವೃದ್ಧಿಯನ್ನು ಮಾಡಿದ್ದಾರೆ. ಈ ಮಠದ ಜಗದ್ಗುರುಗಳು ಪ್ರಗತಿಪರ ವಿಚಾರವಾದಿಗಳಾಗಿದ್ದಾರೆ. ಈ ಮಠದ ಆಶ್ರಯದಲ್ಲಿ ತಾಂತ್ರಿಕ, ವೈದ್ಯಕೀಯ, ಔಷಧಶಾಸ್ತ್ರ, ಕಲಾ, ವಾಣಿಜ್ಯ ಮತ್ತು ವಿಜ್ಞಾನ ಶಿಕ್ಷಣ ಮಹಾವಿದ್ಯಾಲಯಗಳು, ಶಾಲೆಗಳು ಕರ್ನಾಟಕದ ತುಂಬೆಲ್ಲ ತಲೆಎತ್ತಿ ನಿಂತಿವೆ. ಈ ಮಠವು ಕೇವಲ ಕರ್ನಾಟಕದಲ್ಲಷ್ಟೇ ವಿದ್ಯಾಕೇಂದ್ರಗಳನ್ನು ಸ್ಥಾಪಿಸದೇ ಹೊರ ರಾಜ್ಯಗಳಲ್ಲಿಯೂ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದೆ.

3. **ಹುಬ್ಬಳ್ಳಿಯ ಮೂರುಸಾವಿರ ಮಠ ಮತ್ತು ಸಿದ್ಧಾರೂಢ ಮಠ:** ಮೂರುಸಾವಿರ ಮಠವೂ ಒಂದು ಬೃಹನ್ ಮಠವಾಗಿದ್ದು, ಅನೇಕ ಶಾಲೆಗಳನ್ನು ಹೊಂದಿದೆ. ಜಗದ್ಗುರುಗಳ ಆಶೀರ್ವಾದದಿಂದ ಮಹಿಳಾ ಕಾಲೇಜು ಮತ್ತು ತಾಂತ್ರಿಕ ವಿದ್ಯಾಲಯಗಳು, ಶಾಲೆಗಳು, ಆಧ್ಯಾತ್ಮಿಕ ಕೇಂದ್ರಗಳು ಕೆಲಸ ಮಾಡುತ್ತಿವೆ. ಜಗದ್ಗುರುಗಳು ಭವ್ಯವಾದ ಗ್ರಂಥಾಲಯ ಮತ್ತು ವಸತಿ ನಿಲಯಗಳನ್ನು ಸ್ಥಾಪಿಸಿ ಹುಬ್ಬಳ್ಳಿಯ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪ್ರಯತ್ನಿಸುತ್ತಿದ್ದಾರೆ.

ಹುಬ್ಬಳ್ಳಿಯ ಮತ್ತೊಂದು ಪವಿತ್ರವಾದ ಮಠವೆಂದರೆ ಸಿದ್ಧಾರೂಢರ ಮಠ. ಇದು ಅಸಹಾಯಕ ಮಕ್ಕಳಿಗೆ ಸಹಾಯವನ್ನು ಮಾಡುತ್ತದೆ. ಮಠದ ಆಶ್ರಯದಲ್ಲಿ ಅಂಧರ ಶಾಲೆ, ಪ್ರಾಥಮಿಕ ಮತ್ತು ಪ್ರೌಢಶಾಲೆ ಇದೆ. ಪೂಜ್ಯ ಶ್ರೀ ಸಿದ್ಧಾರೂಢರು ಅವತಾರೀ ಪುರುಷರೆನ್ನಿಸಿಕೊಂಡವರು. ತಮ್ಮ ಅನುಪಮ ಪಾಂಡಿತ್ಯದಿಂದ ಶಿವ ಸಾಯುಜ್ಯವನ್ನು ಪಡೆದರು. ಅಪಾರ ಜನಸ್ತೋಮಕ್ಕೆ ಆದರ್ಶಪ್ರಾಯರಾಗಿ ಪವಾಡ ಪುರುಷರೆನ್ನಿಸಿಕೊಂಡವರು. ಕಾಯಕ ತತ್ವದಿಂದ ಮತ್ತು ವಿವಿಧ ಲೀಲೆಗಳಿಂದ ಅಪಾರ ಭಕ್ತರನ್ನು ಹೊಂದಿದವರು.

4. **ಗದುಗಿನ ಶ್ರೀ ತೋಂಟದಾರ್ಯ ಮಠ:** ಶ್ರೀ ತೋಂಟದಾರ್ಯ ಮಠವು ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆಯನ್ನು ಸಲ್ಲಿಸುತ್ತಿದೆ. ಶಾಲಾ-ಕಾಲೇಜುಗಳನ್ನು ಸ್ಥಾಪಿಸಿ ಊಟ ಮತ್ತು ವಸತಿ ಸೌಕರ್ಯವನ್ನು ದಯಪಾಲಿಸಿದೆ. ಸ್ವತಃ ಸ್ವಾಮೀಜಿಯವರು ಅಪಾರ ಪಾಂಡಿತ್ಯವನ್ನು ಹೊಂದಿದ್ದು, ವೈಚಾರಿಕತೆಯನ್ನು ಮೈಗೂಡಿಸಿಕೊಂಡವರಾಗಿದ್ದಾರೆ. ನಾಡಿನಾದ್ಯಂತ ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಅನುಭವಾಮೃತವನ್ನು ಜನರಿಗೆ ಉಣಬಡಿಸುತ್ತಿದ್ದಾರೆ. ಅಲ್ಲದೆ ಅನೇಕ ಶಾಲೆಗಳು, ವಾಣಿಜ್ಯ, ಕಲಾ, ವಿಜ್ಞಾನ, ತಾಂತ್ರಿಕ, ವೈದ್ಯಕೀಯ ಕಾಲೇಜುಗಳನ್ನು ನಡೆಸುತ್ತ ಜನರ ಸೇವೆಯನ್ನು ಮಾಡುತ್ತ ಬಂದಿದ್ದಾರೆ.

5. **ತುಮಕೂರಿನ ಸಿದ್ಧಗಂಗಾ ಮಠ:** ಈ ಮಠವು ಶಿಕ್ಷಣ ಪ್ರಚಾರಕ್ಕೆ ಪ್ರಥಮ ಪ್ರಾಸಸ್ತ್ಯವನ್ನು ನೀಡಿದೆ. ಶಿಕ್ಷಣ ಮತ್ತು ತಾಂತ್ರಿಕ ವಿದ್ಯಾಲಯ ಅನೇಕ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದೆ. ಬೃಹನ್ ಮಠವು ಜ್ಞಾನದಾಸೋಹದ ಜೊತೆಗೆ ಅವ್ಯಾಹತವಾಗಿ ಅನ್ನ ದಾಸೋಹವನ್ನೂ ನಡೆಸುತ್ತ ಬಂದಿದೆ. ದೇಶದ ನಾನಾ ಮೂಲೆಗಳಿಂದ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಇಲ್ಲಿಗೆ ಧಾವಿಸಿ ಬರುತ್ತಾರೆ.

6. **ಗುಲ್ಬರ್ಗಾದ ಶ್ರೀ ಶರಣ ಬಸವೇಶ್ವರ ಮಠ:** ಇದು ಕರ್ನಾಟಕದಲ್ಲಿ ಪ್ರಾಚೀನ ಮಠಗಳಲ್ಲೊಂದು. ಈ ಮಠವು ಶಿಕ್ಷಣ ಪ್ರಸಾರವನ್ನು ಉತ್ತರ ಕರ್ನಾಟಕದಲ್ಲಿ ಮಾಡುತ್ತದೆ. ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದೆ. ಶ್ರೀ ಶರಣಬಸವಪ್ಪ ಅಪ್ಪಗಳವರು ತ್ರಿವಿಧ ದಾಸೋಹ ಹಾಗೂ ನಿರಂತರವಾದ ಆಧ್ಯಾತ್ಮಿಕ ವಿಚಾರಗಳಿಂದ ಸಕಲ ಮಾನವ ಕುಲಕ್ಕೆ ಆದರ್ಶಪ್ರಾಯರಾಗಿದ್ದಾರೆ. ಜನರಲ್ಲಿಯ ಅಂಧಕಾರ, ಮೂಢನಂಬಿಕೆ, ಅನಕ್ಷರತೆಯನ್ನು ಹೋಗಲಾಡಿಸಲು ಅವಿರತವಾಗಿ ಪ್ರಯತ್ನಿಸುತ್ತಿದ್ದಾರೆ. ಈ ಬೃಹನ್ ಮಠವು ತನ್ನದೇ ಆದ ದಾಸೋಹ ಕಾರ್ಯದಲ್ಲಿ ನಿರತವಾಗಿರುತ್ತದೆ.

7. **ಇಳಕಲ್‌ನ ಶ್ರೀ ಮಹಾಂತಸ್ವಾಮಿಗಳ ಮಠ:** ಈ ಮಠವು ಸಹ ಎಲ್ಲ ಮಠಗಳಂತೆ ಶಿಕ್ಷಣ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿದೆ. ಈ ಮಠವು ತನ್ನ ಆಶ್ರಯದಲ್ಲಿ ಅನೇಕ ಮಹಾವಿದ್ಯಾಲಯಗಳು, ಶಿಕ್ಷಣ ಮಹಾವಿದ್ಯಾಲಯ, ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ನಡೆಸುತ್ತಿವೆ. ತಾಂತ್ರಿಕ ವಿದ್ಯಾಲಯವು ಸಹ ಕಾರ್ಯನಿರ್ವಹಿಸುತ್ತಿದೆ. ಮಠವು ಸಂಪದ್ಭರಿತವಾಗಿದೆ. ಮಠದಲ್ಲಿ ನಿತ್ಯವೂ ತ್ರಿವಿಧ ದಾಸೋಹವು ನಡೆಯುತ್ತದೆ.

8. **ಶ್ರೀ ಆದಿಚುಂಚನಗಿರಿ ಮಠ**

ಅಪಾರ ಶಿಷ್ಯಕೋಟಿಯನ್ನೂ ಭಕ್ತ ವೃಂದವನ್ನೂ ಹೊಂದಿರುವ ಶ್ರೀ ಆದಿಚುಂಚನಗಿರಿ ಕ್ಷೇತ್ರವು ಕನ್ನಡ ನಾಡಿನಲ್ಲಷ್ಟೇ ಅಲ್ಲದೆ ದೇಶ ವಿದೇಶಗಳಲ್ಲಿಯೂ ಅಪಾರ ಭಕ್ತವೃಂದವನ್ನು ಹೊಂದಿದೆ. ಪೂಜ್ಯ ಗುರುಗಳು ಶಿಶುವಿಹಾರಗಳಿಂದ ಪ್ರಾರಂಭಿಸಿ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳವರೆಗೆ ಸುಮಾರು 450ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರಕ್ಕೆ ಅಪರಿಮಿತ ಕೊಡುಗೆ ನೀಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬೃಹತ್ತಾದ, ಸುಸಜ್ಜಿತವಾದ ಆಸ್ಪತ್ರೆಗಳನ್ನು ತೆರೆದು ಬಡಜನರ ಆರೋಗ್ಯ ಸಂರಕ್ಷಣೆಗೆ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಇವಲ್ಲದೆ ಅಂಧಮಕ್ಕಳ ವಸತಿ ಶಾಲೆ, ಅನಾಥಾಲಯ, ವೃದ್ಧಾಶ್ರಮ, ಮಹಿಳಾ ಸೇವಾಶ್ರಮಗಳನ್ನು ಸ್ಥಾಪಿಸಿ ನಿರ್ಗತಿಕರ ಬಗ್ಗೆ ವಿಶೇಷ ಮಮತೆಯನ್ನು ತೋರಿದ್ದಾರೆ.

ಮಠವು 20ನೆಯ ಶತಮಾನದ ಅಂತ್ಯದಲ್ಲಿ ಆಯೋಜಿಸಿದ್ದ ಜನಜಾಗೃತಿ ತರಬೇತಿ ಶಿಬಿರಗಳ ಗುರಿಯು ದೊಡ್ಡ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯಾಗಿದ್ದು ಜನತೆಯ ಆಚಾರ-ವಿಚಾರಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿ ಜನಜೀವನಕ್ಕೆ ಹೊಸ ತಿರುವನ್ನು ಕೊಡುತ್ತಿದೆ. ಈಗಾಗಲೇ ಈ ಕ್ರಾಂತಿಯು ಕರ್ನಾಟಕದ ಹಲವಾರು ಜಿಲ್ಲೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಜನತೆಯಲ್ಲಿರುವ

Digitised by Bharatavani, CIIL

ಅನಕ್ಷರತೆ, ಮೂಢನಂಬಿಕೆಗಳನ್ನು ಹೋಗಲಾಡಿಸದೆ ಅವರ ಉದ್ಧಾರವಾಗದೆಂದು ನಿರ್ಧರಿಸಿ ಗುರೂಜಿಯವರು ಪ್ರಾರಂಭಿಸಿದ ಈ ಶಿಬಿರಗಳು ಧರ್ಮ, ಸಂಸ್ಕೃತಿ, ಸದಾಚಾರ ಸಚ್ಚಿಂತನ, ನೀತಿಸಂಹಿತೆ-ಮೊದಲಾದುವುಗಳನ್ನು ಮಕ್ಕಳಲ್ಲಿ ಮೈಗೂಡಿಸಿ ಗುರೂಜಿಯವರ ಸದಾಶಯವನ್ನು ಸಾಕಾರಗೊಳಿಸುತ್ತಿದೆ. ಪ್ರತಿವರ್ಷ ಜಾತಿ ಮತ ಭೇದವಿಲ್ಲದೆ ಆಯ್ಕೆಯಾದ ಎಲ್ಲಾ ವರ್ಗದ ಯುವಕ-ಯುವತಿಯರಿಗೂ ಮೂವತ್ತು ದಿನಗಳ ಕಾಲ ತರಬೇತಿಯನ್ನು ನೀಡಲಾಗುತ್ತಿದೆ.

ಶಿಕ್ಷಣ, ಕೌಶಲ್ಯ ಹಾಗೂ ಆರೋಗ್ಯ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಶ್ರೀ ಮಠವು ಸ್ತ್ರೀಶಕ್ತಿ ಮಹಿಳೆಯರಿಗೆ ಹೊಲಿಗೆಯಂತ್ರಗಳನ್ನು, ಸಂಘ ಸಂಸ್ಥೆಗಳಿಗೆ ಕಂಪ್ಯೂಟರ್‌ಗಳನ್ನು, ಚಮ್ಮಾರ, ಬಡಿಗ, ವ್ಯವಸಾಯಗಾರ, ಕುಂಬಾರ, ದೋಬಿ, ಗಾರೆಕೆಲಸದವ, ತರಕಾರಿ ಮಾರುವವ, ಎಲೆಕ್ಟ್ರಿಕಲ್ ಕೆಲಸಗಾರರು ಮುಂತಾದ ಕುಲಕಸುಬುದಾರರಿಗೆ ಸುಮಾರು ಹದಿನೈದು ಲಕ್ಷ ರೂಪಾಯಿ ವೆಚ್ಚದ ವಿವಿಧ ರೀತಿಯ ಸಾಮಗ್ರಿ ಪರಿಕರಗಳನ್ನು ಪ್ರತಿವರ್ಷ ಒಂದು ಸಾವಿರ ಮಂದಿಗೆ ವಿತರಿಸಲಾಗುತ್ತಿದೆ. ಸಾಮಾಜಿಕ, ಶೈಕ್ಷಣಿಕ, ಆಧ್ಯಾತ್ಮಿಕ, ನೈಸರ್ಗಿಕ....ಹೀಗೆ ಹಲವು ಹತ್ತು ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಸಾಕಾರಗೊಳಿಸಲಾಗಿದೆ.

ಇದರಂತೆ ಹರಪನಹಳ್ಳಿ ತೆಗ್ಗಿನ ಮಠ, ಬೆಳಗಾವಿಯ ಶ್ರೀ ನಾಗನೂರು ಮಹಾಸ್ವಾಮಿಗಳ ಮಠ, ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಠ, ಹಾಲಕೆರೆಯ ಶ್ರೀ ಅನ್ನದಾನೇಶ್ವರ ಮಠ, ಮುಂಡರಗಿಯ ಶ್ರೀ ಅನ್ನಧಾನೇಶ್ವರ ಮಠ, ಧಾರವಾಡದ ಶ್ರೀ ಮುರುಗರಾಜೇಂದ್ರ ಮಠ, ಚಿತ್ರದುರ್ಗದ ಶ್ರೀ ಮುರುಗರಾಜೇಂದ್ರ ಮಠ, ಮೊದಲಾದವುಗಳು ಶಿಕ್ಷಣ ಪ್ರಸಾರ ಮತ್ತು ಅನ್ನ ದಾಸೋಹ, ಆಧ್ಯಾತ್ಮಿಕ ವಿದ್ಯೆಯನ್ನು ನೀಡುತ್ತ ಜನಪ್ರಿಯತೆಯನ್ನು ಹಾಗೂ ಅಪಾರ ಭಕ್ತ ಸಮೂಹವನ್ನು ಹೊಂದಿ, ಕರ್ನಾಟಕ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ, ಶೈಕ್ಷಣಿಕ ರಂಗಗಳಲ್ಲಿ ಮಹತ್ತರ ಪಾತ್ರ ವಹಿಸುತ್ತಿವೆ.

**ಅನುಭವ ಮಂಟಪ ಮತ್ತು ಶಿಕ್ಷಣ**

ಬಿಜ್ಜಳ ಮಹಾರಾಜನ ಆಸ್ಥಾನದಲ್ಲಿ ಭಕ್ತ ಭಂಡಾರಿ ಬಸವಣ್ಣನವರು ಮಹಾ ಮಂತ್ರಿಯಾಗಿದ್ದರು. ಬಸವಣ್ಣನವರು ತಮ್ಮ ಮಹಾಮನೆಯನ್ನು ಆಧ್ಯಾತ್ಮಿಕ ಸುವಿಚಾರಗಳ ಬಿತ್ತನೆ ಹಾಗೂ ಸಾಮಾಜಿಕ ಮತ್ತು ಧಾರ್ಮಿಕ ಅಂಧಶ್ರದ್ಧೆಗಳ ಕುರಿತಾದ ಚಿಂತನೆಗೆ "ಅನುಭವ ಮಂಟಪ" ವನ್ನಾಗಿ ಮಾಡಿದ್ದರು. ಅನುಭವ ಮತ್ತು ಅನುಭಾವಿಗಳ ಆಗರವಾದ ಅನುಭವ ಮಂಟಪದಲ್ಲಿ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳು, ಚರ್ಚಾಗೋಷ್ಠಿಗಳು, ಚರ್ಚಾಕೂಟಗಳು ಮೇಲಿಂದ ಮೇಲೆ ಜರುಗಿ ಶಿವಶರಣರ, ವಿಭೂತಿ ಪುರುಷರ ಪವಿತ್ರ ನುಡಿ, ವಚನಗಳಿಂದ ಸರ್ವಸ್ವವೂ ಪರಮ ಪಾವನತೆಯನ್ನು ಹೊಂದಿದ್ದವು. ಅಲ್ಲಮ ಪ್ರಭುದೇವರು ಅನುಭವ ಮಂಟಪದ ಅಧ್ಯಕ್ಷರಾಗಿ ಶೂನ್ಯ ಸಿಂಹಾಸನಾರೂಢರಾಗಿದ್ದರು. ಅವರು ಸಕಲ ಶರಣರು, ಅನುಭಾವಿಗಳ ಕಣ್ಮಣಿಗಳಾಗಿದ್ದರು. ಶೂನ್ಯ ಸಿಂಹಾಸನವು ಅನುಭವ-ಅನಭಾವದ ಪ್ರತೀಕವಾಗಿದ್ದು, ಸಕಲವೂ ಪರಮಾತ್ಮನ ಅಂಶವಾದದ್ದು, "ಎಲ್ಲವೂ ಇದ್ದರೂ ಇಲ್ಲದಂತೆ" ಹಾಗೂ ಇಲ್ಲದಿದ್ದರೂ ಇರುವಂತೆ ಕಾಣುವದಾಗಿತ್ತು. ಸರ್ವಸ್ವವನ್ನೂ ಬ್ರಹ್ಮಾಂಡ ರೂಪಿಯಾದ ಪರಮಾತ್ಮನಲ್ಲಿ ಅರ್ಪಿಸಿ ಮುಕ್ತಿ ಸಾಧನೆ ಮಾಡುವುದು ಒಂದು ಉದ್ದೇಶವಾದರೆ ಸಮಾಜದಲ್ಲಿ ಆಳವಾಗಿ ಬೇರೂರಿದ್ದಂತಹ ಅಸಮಾನತೆ, ಅಸ್ಪೃಶ್ಯತೆ, ಮೇಲು-ಕೀಳು ಎಂಬ ಭಾವನೆ ಮುಂತಾದವುಗಳನ್ನು ಅಳಿಸಿ ಸರ್ವರಿಗೂ ಅನ್ವಯಿಸುವ ಸಾಮಾನ್ಯ ಶಿಕ್ಷಣ, ಸಾರ್ವತ್ರಿಕ ಶಿಕ್ಷಣವನ್ನು ಕೊಟ್ಟು ಸಮಾಜದ ತುಳಿತಕ್ಕೆ ಒಳಗಾದವರನ್ನು ಎತ್ತಿ ಹಿಡಿದು ಸಾಮಾಜಿಕ ನ್ಯಾಯ ದೊರಕಿಸಿಕೊಡುವುದಾಗಿತ್ತು. ಇಲ್ಲಿ ಅನೇಕ ಶಿವ ಶರಣ-ಶರಣೆಯರು ಆಧ್ಯಾತ್ಮಿಕ ವಾದವನ್ನು ಮಂಡಿಸುತ್ತಾ ಚಿಂತನ-ಮಂಥನಗೈಯುತ್ತಾ ಶಿವಾನುಭವ ಮತ್ತು ಶಿವಯೋಗಗಳಲ್ಲಿ ತಮ್ಮ ಆಧ್ಯಾತ್ಮಿಕ ಜೀವನವನ್ನು ಕಳೆಯುತ್ತಿದ್ದರು. ಅನುಭವ ಮಂಟಪದಲ್ಲಿ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಇರುತ್ತಿದ್ದರು. ಸಮಾಜದ ವಿವಿಧ ವರ್ಗಗಳಿಂದ ಬಂದ ಮಕ್ಕಳಿರುತ್ತಿದ್ದರು.

ಅವರು ಓದುವುದು, ಬರೆಯುವುದು, ಗಣಿತದ ಜೊತೆಗೆ ಪ್ರಾರ್ಥನೆ ಮತ್ತು ಧಾರ್ಮಿಕ, ಆಧ್ಯಾತ್ಮಿಕ ಚಟುವಟಿಕೆಗಳಲ್ಲಿಯೂ ತರಬೇತಿ ಪಡೆಯುತ್ತಿದ್ದರು. ಅಲ್ಲಿ ಚಾರಿತ್ರ್ಯ ಸಂವರ್ಧನೆ, ವ್ಯಕ್ತಿತ್ವ ವಿಕಾಸ ಮತ್ತು ಸಾಮಾಜಿಕ ಶಿಸ್ತನ್ನು ಬೆಳೆಸಕೊಳ್ಳುತ್ತಿದ್ದರು. ಅವರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಗಳಿದ್ದವು. ವೇದಕಾಲದ ಶಿಕ್ಷಣ ಪದ್ಧತಿಯಂತೆ ಇಲ್ಲಿಯೂ ಗುರುಗಳು ಹಾಗೂ ಶಿಷ್ಯಂದಿರು ಒಂದೆಡೆ ಸೇರಿಕೊಂಡು ಚಿತ್ತ-ವೃತ್ತಿ ನಿರೋಧಗಳಿಂದ, ಶ್ರವಣ-ಮನನ, ನಿಧಿವ್ಯಸನಗಳಿಂದ ತಮ್ಮ ಅಧ್ಯಯನದ ಅಧ್ಯಾಪನಗಳನ್ನು ಮುಂದುವರೆಸುತ್ತಿದ್ದರು. ಅಲ್ಲದೆ ಬ್ರಹ್ಮಚರ್ಯ ವ್ರತವನ್ನು ಪಾಲನೆ ಮಾಡುತ್ತಿದ್ದರು.

"ಮಾಡುತ್ತ ಕಲಿ, ಅನುಭವಿಸುತ್ತ ಪರಮಾನಂದ ಹೊಂದು" ಸತ್ಯ, ಧರ್ಮ, ನ್ಯಾಯ, ನೀತಿಪರ ತತ್ವಗಳನ್ನು ಅರಿತು ನಡೆದುಕೊಂಡು ಸಾಕ್ಷಾತ್ಕಾರವನ್ನು ಹೊಂದು ಎಂಬ ತತ್ವವನ್ನು ಪರಿಪಾಲಿಸುವಂತೆ ಆದೇಶವೀಯಲಾಗಿತ್ತು. ಸ್ವಾವಲಂಬನ ಮತ್ತು ಕಾಯಕದ ಮಹತ್ವಗಳ ಉತ್ತಮ ನಾಗರಿಕತೆಗೆ ದಾರಿದೀವಿಗೆಯಾಗಿದ್ದವು.

ಹೀಗೆ ಹಿಂದೂ, ಬೌದ್ಧ, ಇಸ್ಲಾಂ ಮುಂತಾದ ಧರ್ಮದ ಶಿಕ್ಷಣ ಸಂಘ-ಸಂಸ್ಥೆಗಳು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿ ಶಿಕ್ಷಣ ಪ್ರಸಾರವನ್ನು ನೀಡಿದವು. ಈಗಿನ ಕಾಲದಲ್ಲಿ ರಾಷ್ಟ್ರವೇ ಜನತೆಯ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಂಡರೂ, ಅನೇಕ ಶಾಲೆಗಳು ಮತಪೀಠಗಳ ಆಶ್ರಯದಲ್ಲಿ ನಡೆಯುತ್ತಿವೆ. ಮತಾಚರಣೆಯ ಅಂಗವಾಗಿ ನಡೆಯುವ ಉತ್ತಮ ಸಮಾಜದ ರಚನೆಗೆ ಅವಕಾಶವಾಗುತ್ತಿತ್ತು. ಕೆಲವು ವೇಳೆ ಮತಪೀಠಗಳು ಕೈಗೊಳ್ಳಬಹುದಾದ ಸ್ವ ಮತ ಪ್ರಚಾರದಿಂದ ಸಮಾಜದಲ್ಲಿ ಭಿನ್ನತೆ ಮೂಡಿ ಅನರ್ಥವುಂಟಾಗುತ್ತದೆ. ಇಂತಹ ಅಂಶಗಳಿಗೆ ಅವಕಾಶ ಕೊಡುವ ಗೌಣ ವಿಚಾರಗಳಿಂದ ಅವುಗಳ ಶಿಕ್ಷಣ ಪ್ರಭಾವ ಕುಂಠಿತವಾಗುವುದು. ಆದ್ದರಿಂದ ಮತಪೀಠಗಳು ತಮ್ಮ

Digitised by Bharatavani, CIIL

ಪ್ರಭಾವವನ್ನು ತಗ್ಗಿಸಿಕೊಳ್ಳುವಂತಾದರೂ, ಅವುಗಳು ನೈತಿಕ ಜೀವನ ಹಾಗೂ ಸಾಮಾಜಿಕ ಭದ್ರತೆಗಾಗಿ ಮತ್ತು ಸುಖಶಾಂತಿಗಾಗಿ ಶ್ರಮಿಸಿ ವ್ಯಕ್ತಿಯ ಸ್ಥಾನಮಾನವನ್ನು ಕಾಪಾಡಲು ಮಾಡಿದ ಯತ್ನಗಳು ಸರ್ವಜನಾದರಣೀಯ ವೆನ್ನಬಹುದು.

ಆಧುನಿಕ ಯುಗದಲ್ಲಿ ಮುಂದುವರೆದ ಜೀವನ ವ್ಯೂಹದೊಡನೆ ಈ ಧಾರ್ಮಿಕ ಸಂಸ್ಥೆಗಳು ಸಮನಾಗಿ ಹೆಜ್ಜೆ ಹಾಕದೆ ಹಿಂದೆ ಬಿದ್ದವು. ವಿಜ್ಞಾನ ಮುಂದುವರೆದಂತೆಲ್ಲ ಮತಪೀಠಗಳು ಕುಂಠಿತವಾಗುವುದನ್ನು ಕಾಣಬಹುದು. ಸರ್ಕಾರ ನಡೆಸುವ ಎಲ್ಲ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ನಿಲ್ಲಿಸಲಾಗಿದೆ. ಈ ಸ್ಥಳವನ್ನು ಇಂದಿನ ವೈಜ್ಞಾನಿಕ-ತಾಂತ್ರಿಕ ಅಂಶಗಳು ಆಕ್ರಮಿಸಿವೆ. ಸಾಮಾಜಿಕ, ನೈತಿಕ ಮೌಲ್ಯಗಳನ್ನು ಇಂದು ಶಾಲೆ, ಚಲನ ಚಿತ್ರಗಳು, ರೇಡಿಯೋ, ಎನ್.ಸಿ.ಸಿ. ಮುಂತಾದವುಗಳ ಮೂಲಕ ಕೊಡಲಾಗುತ್ತದೆ. ಇಂಥ ಅನೇಕ ಬದಲಾವಣೆಗಳಾದರೂ ಅನೇಕ ಮತಪೀಠಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ಲೌಕಿಕತೆಗೆ ಪ್ರಾಧಾನ್ಯವಿರುವ ಈ ಕಾಲದಲ್ಲಿ ಜನತೆಯ ಪ್ರಭಾವವನ್ನು ವಿಮುಕ್ತಿಗೊಳಿಸಿ ಅವರಲ್ಲಿ ತಲೆದೋರಿರುವ ಮೂಢನಂಬಿಕೆ, ಸಂಕುಚಿತ ದೃಷ್ಟಿಗಳನ್ನು ಕೊನೆಗೊಳಿಸುವುದು ಅಗತ್ಯವೆಂದು ಕೆಲವರು ಭಾವಿಸಿದುದುಂಟು. ಇದನ್ನು ಎಲ್ಲರೂ ಒಪ್ಪಬಹುದಾದರೂ ಉತ್ತಮ ಸಮಾಜ ನಿರ್ಮಾಣಕ್ಕೆ ಮತಪೀಠಗಳು ನೀಡಬಹುದಾದ ಶಿಕ್ಷಣ ಪ್ರಸಾರವನ್ನು ಕಡೆಗಣಿಸುವಂತಿಲ್ಲ.

-ಪ್ರೊ. ಚಕ್ರವರ್ತಿ ಎಸ್.ವೈ.

## ಭಾರತದ ಸಂವಿಧಾನ ಮತ್ತು ಶಿಕ್ಷಣ

ಒಂದು ದೇಶದ ಸಂವಿಧಾನವು ಆ ರಾಷ್ಟ್ರದ ಶಾಸನದ ಮೂಲ ದಾಖಲೆ ಎನ್ನಬಹುದು. ಅದು ತನ್ನದೇ ಆದ ತತ್ವಗಳನ್ನು ಹೊಂದಿರುತ್ತದೆ. ಆ ರಾಷ್ಟ್ರದ ಜನತೆಯ ಆಶೆ ಆಕಾಂಕ್ಷೆಗಳನ್ನು, ಧ್ಯೇಯ ಧೋರಣೆಗಳನ್ನು, ಅವುಗಳ ಈಡೇರುವಿಕೆಗೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಸ್ಪಷ್ಟಪಡಿಸುತ್ತದೆ. ಸ್ವತಂತ್ರ ಭಾರತದಲ್ಲಿ ಉದಯವಾದ ಸಂವಿಧಾನವು ಸ್ವಾತಂತ್ರ್ಯದ ಕ್ರಾಂತಿಯ ಪರಿಣಾಮ ಎನ್ನುವುದಕ್ಕಿಂತ ಹೆಚ್ಚಾಗಿ ಮೇಧಾವಿಗಳು ರೂಪಿಸಿದ ವಿಧಾನವೆನ್ನಬಹುದು. ಎಲ್ಲ ದೇಶಗಳ ಸಂವಿಧಾನಗಳನ್ನು ಅಭ್ಯಾಸ ಮಾಡಿ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬಂದ ನಂತರ 26 ನವಂಬರ್, 1949 ರಲ್ಲಿ ಈ ಸಂವಿಧಾನವನ್ನು ಒಪ್ಪಿಕೊಳ್ಳಲಾಯಿತು. 26 ಜನವರಿ, 1950 ರಿಂದ ಸಂವಿಧಾನವನ್ನು ಕಾರ್ಯಾಚರಣೆಯಲ್ಲಿ ತರಲಾಯಿತು. ಭಾರತ ಸಂವಿಧಾನದ ನಿರ್ಮಾತೃಗಳಾದ ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಕೆ.ಎಂ. ಮುನ್ಷಿ ಮುಂತಾದ ಪ್ರತಿಭಾವಂತರು ರೂಪಿಸಿದ ನಮ್ಮ ಸಂವಿಧಾನವು ಸಮೃದ್ಧ ಹಾಗೂ ಬಲಿಷ್ಠ ರಾಷ್ಟ್ರವನ್ನು ನಿರ್ಮಾಣ ಮಾಡಬಯಸುತ್ತದೆ. ಈ ಸಂವಿಧಾನವು ಎಲ್ಲ ನಾಗರಿಕರಿಗೂ ನ್ಯಾಯ, ಸ್ವಾತಂತ್ರ, ಸಮಾನತೆ ಮತ್ತು ಭ್ರಾತೃತ್ವದ ಭರವಸೆ ನೀಡುವ ಉದ್ದೇಶದಿಂದ ಪ್ರಜಾಪ್ರಭುತ್ವ ಗಣರಾಜ್ಯದ ಅಡಿಪಾಯವನ್ನು ಅಂಗೀಕರಿಸಿದೆ.

**ಭಾರತದ ಸಂವಿಧಾನದ ಸ್ವರೂಪ:**

ನಮ್ಮ ಭಾರತದ ಸಂವಿಧಾನವು ಹಲವಾರು ಅಂಶಗಳನ್ನು ಒಳಗೊಂಡಿದೆ. ಭಾರತದ ಸಂವಿಧಾನ ಪ್ರಸ್ತಾವನೆಯಲ್ಲಿ ನಾಲ್ಕು ಮುಖ್ಯ ಲಕ್ಷಣಗಳನ್ನು ವಿವರಿಸಲಾಗಿದೆ. ಅವು ಯಾವುವೆಂದರೆ: 1) ನ್ಯಾಯ, 2) ಸ್ವಾತಂತ್ರ್ಯ, 3) ಸಮಾನತೆ, 4) ಭ್ರಾತೃತ್ವ, ಸಂವಿಧಾನದ ಹಲವು ಸೌಲಭ್ಯ ಹಾಗೂ ಸವಲತ್ತುಗಳು ನೇರವಾಗಿ, ಇಲ್ಲವೆ ಪರೋಕ್ಷವಾಗಿ ಮೂಲ ಮೌಲ್ಯಗಳಿಗೆ ಸಂಬಂಧಿಸಿವೆ. ಇವು ಸಾಮಾಜಿಕ ವ್ಯವಸ್ಥೆಗೆ ಮೂಲವಾಗಿವೆ ಎಂದು 14ನೇ ವಿಧಿ ಪ್ರತಿಪಾದಿಸುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ಅವುಗಳಿಗೆ ಸಮಯಕ್ಕೆ ತಕ್ಕಂತೆ ವ್ಯವಸ್ಥೆಯಿಂದ ಶಾಸನಗಳನ್ನು ಮಾಡಿಕೊಳ್ಳುವ ಅವಕಾಶವನ್ನು ಸಂವಿಧಾನ ನೀಡಿದೆ. ಕೆಲವು ವಿಷಯಗಳ ಅಧಿಕಾರ ಕೇಂದ್ರಕ್ಕೆ ಸೇರಿದರೆ ಕೆಲವು ವಿಷಯಗಳ ಅಧಿಕಾರ ರಾಜ್ಯಕ್ಕೆ ಸೇರಿವೆ. ಕೆಲವು ವಿಷಯಗಳ ಬಗ್ಗೆ ಕಾನೂನು ಮಾಡುವ ಅಧಿಕಾರವನ್ನು ಕೆಂದ್ರ, ರಾಜ್ಯ ಸರ್ಕಾರಗಳು ಹೊಂದಿವೆ. ಉದಾಹರಣೆಗೆ, ಪರಿಸರ, ಕೆಲವು ರೀತಿಯ ತೆರಿಗೆಗಳು, ಸಮಾಜ ಕಲ್ಯಾಣ, ಆರೋಗ್ಯ ಇತ್ಯಾದಿ. ಇಂಥ ವಿಷಯಗಳನ್ನು ಮೂರನೆ ಪಟ್ಟಿಯಲ್ಲಿ ನಮೂದಿಸಿದ್ದು, ಆ ಪಟ್ಟಿಯನ್ನು ಸಮವರ್ತಿ ಪಟ್ಟಿ ಎಂದು ಕರೆಯಲಾಗಿದೆ. ಇವುಗಳಲ್ಲಿ ಪ್ರಮುಖವಾದುದು ಶಿಕ್ಷಣ. ಶಿಕ್ಷಣವು ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆ ತಂದು ಸಾಮಾಜಿಕ, ಆರ್ಥಿಕ ಪ್ರಗತಿಯನ್ನು ನಿರೀಕ್ಷಿಸಿದಂತೆ ಸಂವಿಧಾನವು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ನೀಡುವುದರ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಭದ್ರತೆ ನೀಡುವುದು. ಶಿಕ್ಷಣ ಕೆಳಗಿನ ಗುರಿ ಮುಟ್ಟಿದೆ: ಸಂವಿಧಾನ ಮೇಲಿನಿಂದ ಕೆಳಮುಖವಾಗಿ ಅಂತಿಮ ಮಟ್ಟದ ವ್ಯಕ್ತಿಯವರೆಗೂ ಶಿಕ್ಷಣ ತಲುಪುವಂತೆ ನೋಡಿಕೊಳ್ಳುತ್ತದೆ. ಕೇಂದ್ರ ಸರ್ಕಾರ ಪರಾಮರ್ಶೆ, ಚರ್ಚೆ, ಸಲಹೆಗಳು ಮತ್ತು ತಾನು ಆಗಾಗ್ಗೆ ನೇಮಿಸುವ ಶಿಕ್ಷಣ ಆಯೋಗಗಳ ಶಿಫಾರ್ಸುಗಳ ಆಧಾರದ ಮೇಲೆ ಶಿಕ್ಷಣದ ಬಗ್ಗೆ ರಾಜ್ಯಗಳಿಗೆ ಸಲಹೆ ನೀಡುವುದು. ಆದರೆ ಯಾವ ಸಲಹೆಯನ್ನೂ ಒತ್ತಾಯಿಸುವಂತಿಲ್ಲ.

1974 ಜೂನ್‌ನಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಯಾದ್ದರಿಂದ ನಮ್ಮ ಸಂವಿಧಾನಾತ್ಮಕ ಹಕ್ಕು ಬಾಧ್ಯತೆಗಳಿಗೆ ತೊಂದರೆಯುಂಟಾದರೂ ತುರ್ತುಪರಿಸ್ಥಿತಿ ವಿರುದ್ಧ ನಡೆದ ಆಂದೋಲನದ ಫಲವಾಗಿ ಸಂವೈಧಾನಿಕ ಹಕ್ಕುಗಳನ್ನು ಪುನಃ ಪಡೆದೆವು. ಶಿಕ್ಷಣವು ಮೊದಲು ರಾಜ್ಯಗಳ ಮಟ್ಟದಲ್ಲಿನ ವಿಷಯವಾಗಿದ್ದುದನ್ನು ಅನಂತರ ಸಂವಿಧಾನದ ತಿದ್ದುಪಡಿ ಮೂಲಕ ಸಮವರ್ತಿ ಪಟ್ಟಿಗೆ ಸೇರಿಸಲಾಯಿತು. ಸಂವಿಧಾನದಲ್ಲಿ ಸುಮಾರು 395 ಕಲಮುಗಳು,

Digitised by Bharatavani, CIIL

9 ಪರಿಶಿಷ್ಟಗಳು ಪ್ರಾರಂಭದಲ್ಲಿದ್ದವೆಂದು ತಿಳಿದು ಬರುತ್ತದೆ. ಸಂವಿಧಾನದ 368ನೆ ಕಲಮಿನ ಮೇರೆಗೆ ತಿದ್ದುಪಡಿ ಮಾಡಲು ಅವಕಾಶವಿರುವುದರಿಂದ ಇದುವರೆಗೆ ಹಲವಾರುಬಾರಿ ತಿದ್ದಪಡಿ ಮಾಡಲಾಗಿದೆ. ಸಂವಿಧಾನದ ನಿರ್ಮಾತೃಗಳು ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಕೊಡುವುದರೊಂದಿಗೆ ಶಿಕ್ಷಣಕ್ಕೂ ಮಹತ್ವದ ಸ್ಥಾನವನ್ನು ಕಲ್ಪಿಸಿದ್ದಾರೆ. ರಾಷ್ಟ್ರ, ರಾಜ್ಯಗಳ ಧೋರಣೆ, ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಅತ್ಯಂತ ಉಪಯುಕ್ತ ಅವಕಾಶಗಳು ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೂಡಿ ಬಂದಿವೆ. ಈ ಅವಕಾಶಗಳು ನಮ್ಮ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಮಸ್ಕೃತಿಕ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಜನರ ಆಕಾಂಕ್ಷೆಗಳನ್ನು ಶಿಕ್ಷಣ ಮಾಧ್ಯಮದ ಮೂಲಕ ತುಂಬಿಕೊಡುವ ಆಶಯವನ್ನು ಹೊಂದಿವೆ.

**ಮೂಲಭೂತ ಹಕ್ಕುಗಳು:**

ಸಮಾನತೆಯ ಹಕ್ಕು (ಕಲಮು 14–18) – ಇದು ಐದು ಹಕ್ಕುಗಳನ್ನೊಳಗೊಂಡಿದೆ. ಕಾನೂನಿನ ಮುಂದೆ ಸಮಾನತೆ, ಭಿನ್ನತೆಯ ನಿಷೇಧ, ಅವಕಾಶಗಳ ಸಮಾನತೆ, ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು, ಬಿರುದುಗಳ ನಿಷೇಧ.

ಸ್ವಾತಂತ್ರ್ಯದ ಹಕ್ಕು (ಕಲಮು 19–22) – ಇದರಲ್ಲಿ ವಾಕ್ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ ಹಾಗೂ ಜೀವ, ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ ಮೊದಲಾದವುಗಳನ್ನು ಒಳಗೊಂಡಿರುತ್ತವೆ.

ಶೋಷಣೆಗಳ ವಿರೋಧ ಹಕ್ಕು (23–24)

ಧಾರ್ಮಿಕ ಸ್ವಾತಂತ್ರ್ಯದ ಹಕ್ಕು (25–28)

ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು (29–30)

ಸಂವಿಧಾನಾತ್ಮಕ ಪರಿಹಾರದ ಹಕ್ಕು (32)

**ಮೂಲಭೂತ ಕರ್ತವ್ಯಗಳು :** ಪ್ರತಿಯೊಬ್ಬ ನಾಗರಿಕನು ಈ ಕೆಳಗಿನ ಕರ್ತವ್ಯಗಳನ್ನು ಪಾಲಿಸಬೇಕೆಂದು ಸಂವಿಧಾನ ನಿರ್ದೇಶಿಸುತ್ತದೆ –

1) ಸಂವಿಧಾನವನ್ನು ಅನುಸರಿಸುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರ ಧ್ವಜ ಹಾಗೂ ರಾಷ್ಟ್ರ ಗೀತೆಯನ್ನು ಗೌರವಿಸುವುದು.

2) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

3) ಭಾರತದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

4) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆಬಂದಾಗ ಭಾಗವಹಿಸುವುದು.

5) ಧಾರ್ಮಿಕ, ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಯಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು, ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು.

6) ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಗಳನ್ನು ಬಿಟ್ಟುಬಿಡುವುದು.

7) ನಮ್ಮ ಸಂಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

8) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

9) ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣೆ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು.

10) ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

11) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಉನ್ನತಮಟ್ಟಗಳಿಗೆ ಏರುವುದಕ್ಕಾಗಿ ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಶ್ರೇಷ್ಠತೆಗಾಗಿ ಶ್ರಮಿಸುವುದು.

**ಸಂವಿಧಾನದಲ್ಲಿ ಶಿಕ್ಷಣದ ಬಗ್ಗೆ ಇರುವ ಕಲಮುಗಳು:**

ಸಂವಿಧಾನವು ಶಿಕ್ಷಣಕ್ಕೆ ಹಲವಾರು ಅವಕಾಶಗಳನ್ನು ನೀಡಿದೆ. ಅವುಗಳೆಂದರೆ:

1. ದೇಶದಲ್ಲಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ
2. ಅಲ್ಪಸಂಖ್ಯಾತ ವರ್ಗದವರ ಶಿಕ್ಷಣ
3. ಧಾರ್ಮಿಕ ಶಿಕ್ಷಣ
4. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರ ಶಿಕ್ಷಣ
5. ಮಹಿಳಾ ಶಿಕ್ಷಣ
6. ಆಂಗ್ಲೋ–ಇಂಡಿಯನ್‌ರ ಶಿಕ್ಷಣ
7. ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾತ್ರ

ಶಾಸನಾಧಿಕಾರವನ್ನು ವಿತರಣೆ ಮಾಡುವಾಗ ಸಂವಿಧಾನವು ಮೂರು ಪಟ್ಟಿಗಳನ್ನು ಮಾಡಿದೆ. ಕೇಂದ್ರ–ರಾಜ್ಯ ಸರ್ಕಾರಗಳು ಪ್ರತ್ಯೇಕ ರಾಜ್ಯ ಕ್ಷೇತ್ರಗಳಿಂದಾಗಿ ಈ ಪಟ್ಟಿಗಳ ರಚನೆಯಾಗಿದೆ (246ನೇ ಕಲಮು). ಮೊದಲನೆಯ ಪಟ್ಟಿ ಕೇಂದ್ರ ಶಾಸನಾಧಿಕಾರಕ್ಕೆ

Digitised by Bharatavani, CIIL

ಸಂಬಂಧಿಸಿದುದು. ಕಾನೂನುಗಳನ್ನು ಮಾಡಲು ಸಂಸತ್ತಿಗೆ ಪೂರ್ಣಾಧಿಕಾರವಿರುತ್ತದೆ. ಈ ಪಟ್ಟಿಯಲ್ಲಿ 96 ಕಲಮುಗಳಿವೆ. ರಾಜ್ಯ ಪಟ್ಟಿಯಲ್ಲಿ ವಿಶದೀಕರಿಸಲಾದ ವಿಷಯಗಳ ಬಗ್ಗೆ ಕಾನೂನುಗಳನ್ನು ಮಾಡುವ ಅಧಿಕಾರವು ರಾಜ್ಯ ಶಾಸಕಾಂಗಗಳಿಗೆ ಸಂಪೂರ್ಣವಾಗಿದೆ. ಈ ಪಟ್ಟಿಯಲ್ಲಿ ಒಟ್ಟು 67 ಕಲಮುಗಳಿವೆ. ಮೂರನೆಯದಾದ ಸಮವರ್ತಿ (ಸಮಾನಾಧಿಕಾರ) ಪಟ್ಟಿಯಲ್ಲಿ ವಿವರಿಸಿದ ವಿಚಾರಗಳ ವಿಷಯದಲ್ಲಿ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳೆರಡೂ ಕಾನೂನುಗಳನ್ನು ಮಾಡುವ ಅಧಿಕಾರವನ್ನು ಪಡೆದಿರುತ್ತವೆ. ಈ ಮೂರು ಪಟ್ಟಿಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ತೆಗೆದುಕೊಳ್ಳೋಣ.

**ಕೇಂದ್ರ ಪಟ್ಟಿ:** (ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರಗಳ ಪಾತ್ರ)

**ಕಲಮು 63:** ರಾಜ್ಯಾಂಗದ ಆರಂಭದ ಸಮಯದಲ್ಲಿದ್ದ ಕಾಶಿ ಹಿಂದೂ ವಿಶ್ವವಿದ್ಯಾಲಯ, ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ ಹಾಗೂ ಸಂಸತ್ತಿನ ಕಾನೂನು ಮೂಲಕ ಘೋಷಿತವಾದ ರಾಷ್ಟ್ರೀಯ ಪ್ರಾಮುಖ್ಯದ ಸಂಸ್ಥೆಗಳನ್ನು ನೇರವಾಗಿ, ಅನಂತರ ಶಾಂತಿನಿಕೇತನ ಮತ್ತು ಜವಾಹರಲಾಲ ನೆಹರು ವಿಶ್ವವಿದ್ಯಾಲಯಗಳನ್ನು ಕೇಂದ್ರಾಡಳಿತ ವ್ಯಾಪ್ತಿಗೆ ಸೇರಿಸಲಾಯಿತು.

**ಕಲಮು 64:** ಪೂರ್ಣವಾಗಿ ಇಲ್ಲವೆ ಭಾಗಶಃ ಭಾರತ ಸರ್ಕಾರದಿಂದ ಧನಸಹಾಯ ಪಡೆದ ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಹಾಗೂ ಸಂಸತ್ತಿನಿಂದ ಕಾಯಿದೆ ಮೂಲಕ ಘೋಷಿತವಾದ ರಾಷ್ಟ್ರೀಯ ಪ್ರಮುಖ ಸಂಸ್ಥೆಗಳು.

**ಕಲಮು 65:** 1) ಪೋಲೀಸ್ ಅಧಿಕಾರಿಗಳ ತರಬೇತಿಯನ್ನೂ ಒಳಗೊಂಡಂತೆ ಉದ್ಯೋಗಪರ, ವೃತ್ತಿಪರ ಅಥವಾ (2) ಸಂಶೋಧನಾಭಿವೃದ್ಧಿಯ ಸಂಸ್ಥೆಗಳು ಅಥವಾ (3) ಅಪರಾಧ ಪತ್ತೆ ಅಥವಾ ತನಿಖೆಯಲ್ಲಿ ವೈಜ್ಞಾನಿಕ ಇಲ್ಲವೆ ತಾಂತ್ರಿಕ ಸಹಾಯ ಇವೂ ಸಹ ಕೇಂದ್ರ ವ್ಯಾಪ್ತಿಗೆ ಸೇರಿವೆ.

**ಕಲಮು 66:** ಉನ್ನತ ಶಿಕ್ಷಣ ಅಥವಾ ಸಂಶೋಧನಾ ಸಂಸ್ಥೆಗಳಲ್ಲಿ ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ ಗುಣಮಟ್ಟಗಳ ಸಮನ್ವಯ ಇವುಗಳು ಸಹ ಕೇಂದ್ರ ವ್ಯಾಪ್ತಿಗೆ ಒಳಪಟ್ಟಿವೆ.

ಕೇಂದ್ರ ಪಟ್ಟಿಯಲ್ಲಿರುವ ಈ ದಾಖಲೆಗಳಷ್ಟೇ ಅಲ್ಲದೆ ಸಂವಿಧಾನದ 239ನೇ ಕಲಮು ಕೇಂದ್ರಾಡಳಿತ ಪ್ರದೇಶಗಳ ಆಡಳಿತವನ್ನು ಶಿಕ್ಷಣವನ್ನೊಳಗೊಂಡಂತೆ ಕೇಂದ್ರಕ್ಕೆ ಅಧಿಕಾರ ನೀಡುತ್ತದೆ.

**ರಾಜ್ಯ ಪಟ್ಟಿ:** (ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯ ಸರ್ಕಾರಗಳ ಪಾತ್ರ)

**ಕಲಮು 11:** ಅನುಸೂಚಿ–7, ಪಟ್ಟಿ–2: ಕೇಂದ್ರ ಪಟ್ಟಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ದಾಖಲುಗಳು ಮತ್ತು ಸಮಾಧಾನಕರ ಪಟ್ಟಿಯಲ್ಲಿನ ದಾಖಲುಗಳು 25ನೇ ಕಲಮಿನ ಸೌಲಭ್ಯಗಳಿಗೆ ಅನುಗುಣವಾಗಿರುತ್ತವೆ.

ಕೇಂದ್ರ ಪಟ್ಟಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ದಾಖಲುಗಳನ್ನು ಹೊರತುಪಡಿಸಿ ಸಮಾನಾಧಿಕಾರ ಪಟ್ಟಿಯಲ್ಲಿ ಬರುವ ದಾಖಲುಗಳನ್ನೊಳಗೊಂಡು ಕಾಯ್ದೆಗಳನ್ನು ರೂಪಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆ.

**ಕಲಮು 12:** ರಾಜ್ಯದಿಂದ ನಿಯಂತ್ರಿತವಾದ ಅಥವಾ ಧನಸಹಾಯ ಪಡೆಯುವ ಸಂಗ್ರಹಾಲಯಗಳು, ಗ್ರಂಥಾಲಯಗಳು ಮತ್ತು ಅದೇ ಮಾದರಿಯ ಇತರ ಸಂಸ್ಥೆಗಳು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳವೆಂದು–ಸಂಸತ್ತಿನಿಂದ ಕಾನೂನಾಗಿ ಘೋಷಿತವಾಗದೇ ಇರುವ–ಇತರ ಪುರಾತನ ಹಾಗೂ ಐತಿಹಾಸಿಕ ಸ್ಮಾರಕಗಳು ಮತ್ತು ದಾಖಲೆಗಳು ಶಿಕ್ಷಣಕ್ಕೆ ಸಂಬಂದಿಸಿದವುಗಳಾಗಿದ್ದು ರಾಜ್ಯ ಸರ್ಕಾರಗಳ ವ್ಯಾಪ್ತಿಯೊಳಕ್ಕೆ ಬರುತ್ತವೆ.

**ಸಮವರ್ತಿ ಪಟ್ಟಿ:**

ಕಲಮು 20: ಆರ್ಥಿಕ, ಸಾಮಾಜಿಕ ಯೋಜನೆ – ಈ ವಿಶಾಲ ವ್ಯಾಪ್ತಿಯ ಅಧಿಕಾರದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆಗಳು – ಸೇರಿಕೊಳ್ಳುವುದು ಅನಿವಾರ್ಯವಾಗಿ ಕೇಂದ್ರ ಹಾಗೂ ರಾಜ್ಯಗಳೆರಡಕ್ಕೂ ಈ ವಿಷಯದಲ್ಲಿ ಕಾಯಿದೆಯನ್ನು ಮಾಡುವ ಅಧಿಕಾರವಿದೆ.

**ಕಲಮು 25:** ವೃತ್ತಿಪರ ಮತ್ತು ತಾಂತ್ರಿಕ ತರಬೇತಿ ಕಲಮು 20ರಲ್ಲಿ ಹೇಳಿದಂತೆ ಇದರ ಉಲ್ಲೇಖವಿದೆ.

1. ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ

ಕಲಮು 45: ಈ ಕುರಿತು ಹೀಗೆ ಹೇಳುತ್ತದೆ: "ಸರಕಾರವು ರಾಷ್ಟ್ರದೊಳಗಿನ ಎಲ್ಲಾ ಮಕ್ಕಳಿಗೂ ಸಂವಿಧಾನ ಜಾರಿಗೆ ಬಂದ ಹತ್ತು ವರ್ಷದೊಳಗಾಗಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಲು ಪ್ರಯತ್ನಿಸಬೇಕು."

ಈ ಮೂಲಕ ಪ್ರಾಥಮಿಕ ಶಿಕ್ಷಣದ ಅವಕಾಶ ಎಲ್ಲರಿಗೂ ದೊರೆಯಬೇಕೆಂಬ ಸದುದ್ದೇಶ ಈ 45ನೆ ಕಲಮಿನಲ್ಲಿ ಕಂಡುಬರುತ್ತದೆ. ಇಲ್ಲಿ ಸರ್ಕಾರ ಎನ್ನುವ ಪದ ಗೊಂದಲಕ್ಕೀಡು ಮಾಡಬಾರದೆಂಬ ಕಾರಣದಿಂದ 12ನೇ ಕಲಮಿನಲ್ಲಿ ಇದಕ್ಕೆ ಅರ್ಥವಿವರಣೆಯನ್ನು ನೀಡಲಾಗಿದೆ. ಇಲ್ಲಿ ಸರ್ಕಾರ ಎಂದರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಮಂಡಳಿಗಳು ಮತ್ತು ಖಾಸಗಿ ಸಂಸ್ಥೆಗಳು, ಇವೆಲ್ಲವುಗಳು ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸುವಲ್ಲಿ ಜವಾಬ್ದಾರರೆಂಬುದು ಸ್ಪಷ್ಟವಾಗುತ್ತದೆ.

ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕುರಿತು ರಾಜ್ಯ ಸರ್ಕಾರಗಳು ಕೈಗೊಂಡ ಕ್ರಮಗಳು

1. ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಪೂರ್ಣ ಶಿಕ್ಷಣ ಉಚಿತವಾಗಿರುತ್ತದೆ.

Digitised by Bharatavani, CIIL

2. ಪಂಜಾಬ ಸರ್ಕಾರ, ಪಂಜಾಬ ಕಡ್ಡಾಯ ಶಿಕ್ಷಣ ಕಾಯಿದೆ 1960 ಜಾರಿಗೆ ತಂದಿದೆ. ಇಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವಾಗಿದೆ. ಹಾಗೂ ಹರಿಯಾಣ ಮತ್ತು ಮಧ್ಯಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವಾಗಿದೆ.

3. ಮಹಾರಾಷ್ಟ್ರ ಮತ್ತು ಒರಿಸ್ಸಾದಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವಾಗಿದೆ.

4. ಸಾಮಾನ್ಯವಾಗಿ ಎಲ್ಲಾ ಗಡಿ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವಾಗಿದೆ.

5. ಅಸ್ಸಾಂನಲ್ಲಿ ಹುಡುಗಿಯರಿಗಾಗಿ ಏಳನೇ ತರಗತಿಯವರೆಗೆ ಹಾಗೂ ಹುಡುಗರಿಗಾಗಿ ಐದನೇ ತರಗತಿಯ ವರೆಗೆ ಉಚಿತ ಶಿಕ್ಷಣವನ್ನು ಒದಗಿಸಲಾಗುತ್ತದೆ.

6. ರಾಜಾಸ್ಥಾನದಲ್ಲಿ ಹುಡುಗಿಯರ ಶಿಕ್ಷಣ ಎಲ್ಲ ಹಂತದಲ್ಲಿ ಉಚಿತವಾಗಿದೆ, ಮತ್ತು ಹುಡುಗರ ಶಿಕ್ಷಣ ಪ್ರಾಥಮಿಕ ಶಿಕ್ಷಣದವರೆಗೆ ಉಚಿತವಾಗಿರುತ್ತದೆ.

7. ಆಂಧ್ರಪ್ರದೇಶ, ಕರ್ನಾಟಕ ಮತ್ತು ಕೇರಳಗಳಲ್ಲಿ ಶಿಕ್ಷಣ ಮಾಧ್ಯಮಿಕ ಹಂತದವರೆಗೆ ಉಚಿತ.

8. ಉತ್ತರಪ್ರದೇಶದಲ್ಲಿ 6ನೇ ತರಗತಿಯವರೆಗೆ ಹುಡುಗರ ಶಿಕ್ಷಣ ಉಚಿತ ಹಾಗೂ ಹುಡುಗಿಯರ ಶಿಕ್ಷಣ 10ನೇ ತರಗತಿಯವರೆಗೆ ಉಚಿತ. ಸಾಮಾನ್ಯವಾಗಿ ಎಲ್ಲಾ ರಾಜ್ಯಗಳೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿವೆ. ಇದರ ಜೊತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೆಲವು ಕ್ರಮಗಳನ್ನು ತೆಗೆದುಕೊಂಡಿವೆ–

ಅ) ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಇದಕ್ಕೆ ಉದಾರ ಹಣಕಾಸನ್ನು ಹಂಚಲಾಗಿದೆ.

ಬ) ಪ್ರಾಥಮಿಕ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಹಾಗೂ ಸುಧಾರಿಸಲು ಖಾಸಗಿ ಸಂಸ್ಥೆಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಲಾಗಿದೆ.

ಕ) ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಪ್ರತಿಯೊಂದು ರಾಜ್ಯದ ರಾಜಧಾನಿಯಲ್ಲಿ ರಾಜ್ಯ

ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯನ್ನು (ಡಿ.ಎಸ್.ಇ.ಆರ್.ಟಿ) ಸ್ಥಾಪಿಸಲಾಗಿದೆ.

ಡ) ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ. ಇಷ್ಟೆಲ್ಲಾ ಪ್ರಯತ್ನಗಳನ್ನು ಕೇಂದ್ರ

ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಮಾಡಿದರೂ ಇನ್ನೂ ಸಫಲತೆಯನ್ನು ಪಡೆದಿಲ್ಲ.

2. ಅಲ್ಪಸಂಖ್ಯಾತ ವರ್ಗದವರ ಶಿಕ್ಷಣ

ಸಂವಿಧಾನದ 29 ಮತ್ತು 30ನೇ ಕಲಮುಗಳು ಅಲ್ಪಸಂಖ್ಯಾತರ ಶೈಕ್ಷಣಿಕ ಹಿತಾಸಕ್ತಿಯನ್ನು ಎತ್ತಿ ಹಿಡಿಯುವುದರ ಜೊತೆಗೆ ಅವರ ಸಾಂಸ್ಕೃತಿಕ ಹಿರಿಮೆಯನ್ನು ಉಳಿಸಿ ಬೆಳೆಸಿಕೊಳ್ಳಲು ಅನುಕೂಲ ಮಾಡಿಕೊಟ್ಟಿವೆ.

ಕಲಮು 29 (1): “ಭಾರತದ ಯಾವುದೇ ಪ್ರದೇಶದಲ್ಲಿ ನೆಲೆಸಿರುವ ಯಾವುದೇ ಗುಂಪಿನ ಜನಾಂಗಕ್ಕೆ ತಾವು ಹೊಂದಿರುವ ಭಿನ್ನ ಭಾಷೆ, ಲಿಪಿ ಅಥವಾ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಪಟ್ಟಿದ್ದಾನೆಂಬ ಮಾತ್ರಕ್ಕೆ ಪ್ರವೇಶವನ್ನು ನಿರಾಕರಿಸುವಂತಿಲ್ಲ.”

ಕಲಮು 29 (2): “ಸರ್ಕಾರದ ಧನ ಸಹಾಯ ಪಡೆಯುವ ಯಾವುದೇ ಶಾಲೆ ಕಾಲೇಜುಗಳು ವ್ಯಕ್ತಿ ಇಂಥದೇ ಧರ್ಮ, ಜಾತಿ ಮತ್ತು ಭಾಷೆ ಅಥವಾ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಪಟ್ಟಿದ್ದಾನೆಂಬ ಮಾತ್ರಕ್ಕೆ ಪ್ರವೇಶವನ್ನು ನಿರಾಕರಿಸುವಂತಿಲ್ಲ.”

ಕಲಮು 30 (1): “ಯಾವುದೇ ಭಾಷೆ ಇಲ್ಲವೇ ಧರ್ಮೀಯ ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತವನ್ನು ನಡೆಸುವ ಹಕ್ಕನ್ನು ಹೊಂದಿದ್ದಾರೆ.”

ಕಲಮು 30 (2): “ಶಿಕ್ಷಣ ಸಂಸ್ಥೆಯೊಂದು ಅಲ್ಪಸಂಖ್ಯಾತ ಗುಂಪಿನ ಆಡಳಿತ ಅಥವಾ ಉಸ್ತುವಾರಿಗೆ ಒಳಪಟ್ಟಿದೆ ಎಂಬ ಕಾರಣಕ್ಕಾಗಿ ಆ ಸಂಸ್ಥೆಗೆ ನೀಡುವ ಧನಸಹಾಯದಲ್ಲಿ ತಾರತಮ್ಯ ನೀತಿಯನ್ನು ಅನುಸರಿಸಕೂಡದು.”

ಕಲಮು 350 (ಎ): “ಭಾಷಾ ಅಲ್ಪಸಂಖ್ಯಾತ ವರ್ಗಗಳವರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಅವರದೇ ಆದ ಮಾತೃಭಾಷೆಗಳಲ್ಲಿ ಸಿಗುವಂತೆ ರಾಜ್ಯ ಸರ್ಕಾರಗಳು ಸಮರ್ಪಕ ಏರ್ಪಾಡು ಮಾಡಬೇಕು. ಹಾಗೂ ಅಗತ್ಯ ಕಂಡುಬಂದಲ್ಲಿ ರಾಷ್ಟ್ರಪತಿಯು ಈ ಕುರಿತು ಯಾವುದೇ ರಾಜ್ಯಕ್ಕೆ ನಿರ್ದೇಶನವನ್ನು ಅಥವಾ ಸೂಚನೆಯನ್ನು ಕೊಟ್ಟು ಈ ಸೌಕರ್ಯ ಒದಗಿಸುವಂತೆ ಸಂಬಂಧಿತ ಸರ್ಕಾರವನ್ನು ಎಚ್ಚರಿಸಬಹುದು.”

ಸಂವಿಧಾನ ಕೊಡಮಾಡಿರುವ ಅವಕಾಶದಿಂದ ನಮ್ಮ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಭಾಷಾ ಅಲ್ಪಸಂಖ್ಯಾತ ಮಕ್ಕಳಿಗೆ ಅವರದೇ ಆದ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿಕೊಡುತ್ತಿವೆ. ಕರ್ನಾಟಕ ಪ್ರದೇಶದಲ್ಲಿ ಉರ್ದು, ಮರಾಠಿ, ತೆಲುಗು, ತಮಿಳು ಪ್ರಾಥಮಿಕ ಶಾಲೆಗಳು ತಲೆಎತ್ತಿರುದುದನ್ನು ನಾವು ಕಾಣಬಹುದು. ಯಾವುದೇ ರಾಜ್ಯ ಸರ್ಕಾರ ಅಲ್ಪಸಂಖ್ಯಾತರ ಶಿಕ್ಷಣವನ್ನು ನಿರ್ಲಕ್ಷಿಸಿದರೆ ಅಲ್ಪಸಂಖ್ಯಾತರಿಂದ ಈ ಬಗ್ಗೆ ಯಾವುದೇ ರಾಜ್ಯದ ಬಗೆಗೆ ದೂರು ಬಂದಾಗ ರಾಷ್ಟ್ರಪತಿಗಳು ಸಂಬಂಧಿತ ರಾಜ್ಯಗಳಿಗೆ ಎಚ್ಚರಿಸುವ ಹಾಗೂ ಈ ಕುರಿತು ರಾಜ್ಯ

Digitised by Bharatavani, CIIL

ಸರ್ಕಾರದ ಕಣ್ಣು ತೆರಸುವ ಅಧಿಕಾರವನ್ನು ಹೊಂದಿರುವರು.

**ಧಾರ್ಮಿಕ ಶಿಕ್ಷಣ:**

ಜಾತ್ಯತೀತ ಧೋರಣೆಯನ್ನು ಪ್ರತಿಪಾದಿಸುವ ನಮ್ಮ ಸಂವಿಧಾನವು ಸರ್ವಧರ್ಮಗಳನ್ನು ಸಮಾನವಾಗಿ ಕಂಡಿದೆ. ಯಾವುದೇ ಧರ್ಮದವನಿದ್ದರೂ ಭೇದಭಾವ ನೀತಿಯನ್ನು ಅನುಸರಿಸಲಾಗದು. ಇದನ್ನು ಗಮನದಲ್ಲಿರಿಸಿಕೊಂಡು ಸಂವಿಧಾನದ ಈ ಕೆಳಗಿನ ಕಲಮುಗಳಲ್ಲಿ ಧಾರ್ಮಿಕ ಶಿಕ್ಷಣ ನಿಷೇಧಿಸಲಾಗಿದೆ. ಅವುಗಳೆಂದರೆ:

**ಕಲಮು 28 (1):** "ಸಂಪೂರ್ಣವಾಗಿ ಸರ್ಕಾರ ಧನ ಸಹಾಯದಿಂದ ನಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆಯನ್ನು ನಿಷೇಧಿಸಲಾಗಿದೆ."

ಸರ್ಕಾರದಿಂದ ನಡೆಯುವ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಧಾರ್ಮಿಕ ಬೋಧನೆಯನ್ನು ನಿಷೇಧಿಸಲಾಗಿದೆ.

**ಕಲಮು 28 (2):** "28ನೇ ಕಲಮಿನ ಮೊದಲ ಭಾಗದಲ್ಲಿ ಹೇಳಿರುವ ಅಂಶಗಳು ದತ್ತಿದಾನಗಳಿಂದ ನಡೆಯುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಅಂಥವುಗಳಲ್ಲಿ ಧಾರ್ಮಿಕ ಬೋಧನೆ ಮಾಡಬಹುದು."

**ಕಲಮು 28 (3):** "ಸರ್ಕಾರದಿಂದ ಅಂಗೀಕಾರ ಪಡೆದ ಮತ್ತು ಧನಸಹಾಯ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವಂಥ ವ್ಯಕ್ತಿಗಳು ಆ ಸಂಸ್ಥೆಯಲ್ಲಿ ಧಾರ್ಮಿಕ ಬೋಧನೆ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಹಾಜರಾಗಲೇ ಬೇಕೆಂಬ ಕಡ್ಡಾಯ ನಿಯಮವಿಲ್ಲ."

3. ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದವರ ಶಿಕ್ಷಣ:

**ಕಲಮು 46:** ಸಮಾಜದ ದುರ್ಬಲ ವರ್ಗ ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ವಿಶೇಷ ಕಾಳಜಿಯ ಮೂಲಕ ಸರ್ಕಾರವು ಅಭಿವೃದ್ಧಿಪಡಿಸಬೇಕು ಮತ್ತು ಈ ವರ್ಗಗಳನ್ನು ಸಾಮಾಜಿಕ ಅನ್ಯಾಯ ಹಾಗೂ ಇತರೆಲ್ಲ ಶೋಷಣೆಗಳಿಂದ ಮುಕ್ತರನ್ನಾಗಿಸಬೇಕು. ಈ ಕಲಮಿನನ್ವಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಿವೆ:

1. ವಿಶೇಷ ಅನುದಾನ ನೀಡುವದರೊಂದಿಗೆ ಖಾಸಗಿ ಎಸ್.ಸಿ ಹಾಗೂ ಎಸ್.ಟಿ ಸಂಸ್ಥೆಗಳನ್ನು ತೆರೆಯಲು ಅವಕಾಶ ನೀಡಿದೆ.
2. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ಗೃಹಗಳ ಸೌಲಭ್ಯ.
3. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ಸ್ಕಾಲರ್‌ಶಿಪ್ ಸೌಲಭ್ಯ.
4. ಇವರಿಗೆ ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯ ಮುಂತಾದವುಗಳು.

ತುಳಿತಕ್ಕೆ ತುತ್ತಾಗಿರುವ ಇವರನ್ನು ರಕ್ಷಿಸದೇ ಹೋದಲ್ಲಿ ಅವರನ್ನು ಸುಧಾರಿಸಲಾಗದು. ಸಂವಿಧಾನದ ಈ ಪ್ರಯೋಜನವು ಆರೋಗ್ಯಯುತ ಹಾಗೂ ಪ್ರಜಸತ್ತಾತ್ಮಕವೂ ಆಗಿದೆ. ಬೇರೆ ಬೇರೆ ಸೌಲಭ್ಯಗಳನ್ನು ಒದಗಿಸುವ ಮೂಲಕ ರಾಜ್ಯ ಸರ್ಕಾರಗಳು ಹಿಂದುಳಿದವರನ್ನು ಮೇಲಕ್ಕೆತ್ತಲು ಪ್ರಯತ್ನಿಸುತ್ತಿವೆ. ಇದನ್ನು ಕುರಿತು 1964–66ರ ಭಾರತೀಯ ಶಿಕ್ಷಣ ಆಯೋಗವು ಸಹಿತ ಒತ್ತು ನೀಡಿದೆ. ಅಲ್ಲದೆ ವಿವಿಧ ರಾಜಕೀಯ ಪಕ್ಷಗಳು ಒತ್ತು ಕೊಡುತ್ತಿವೆ.

4. ಮಹಿಳಾ ಶಿಕ್ಷಣ: ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಶೈಕ್ಷಣಿಕ ಹಿನ್ನಡೆಯನ್ನು ಹೋಗಲಾಡಿಸಲು ಸಂವಿಧಾನ ಈ ಕೆಳಗಿನ ಅವಕಾಶವನ್ನು ನೀಡಿದೆ:

ಕಲಮು 15 (1): "ಕೇವಲ ಲಿಂಗಗಳ ಆಧಾರದ ಮೇಲೆ ಸರ್ಕಾರವು ಸೌಲಭ್ಯಗಳನ್ನು ನೀಡುವಲ್ಲಿ ಯಾವುದೇ ತಾರತಮ್ಯವನ್ನು ಮಾಡಬಾರದು."

ಕಲಮು 15 (2): "ಮಹಿಳೆಯರ ಏಳ್ಗೆಗಾಗಿ ರಾಜ್ಯ ಸರ್ಕಾರಗಳು ಯಾವುದೇ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿವೆ."

ಈ ಕಲಮಿನನ್ವಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹಿಳೆಯರ ಶಿಕ್ಷಣಕ್ಕೆ ಹಾಗೂ ಅವರಿಗೆ ಉದ್ಯೋಗ ಕಲ್ಪಿಸುವಲ್ಲಿ ಶ್ರಮಿಸುತ್ತಿವೆ.

**5. ಆಂಗ್ಲೋ–ಇಂಡಿಯನ್ ಶಿಕ್ಷಣ:**

ಕಲಮು 337: "ಆಂಗ್ಲೊ–ಇಂಡಿಯನ್" ಸಮುದಾಯದ ಕಲ್ಯಾಣಕ್ಕಾಗಿ ವಿಶೇಷ ಶೈಕ್ಷಣಿಕ ಧನ ಸಹಾಯವನ್ನು ಒದಗಿಸಬೇಕಲ್ಲದೆ, ಈ ರೀತಿ ಸರ್ಕಾರಿ ಅನುದಾನ ಪಡೆಯುವಂತಹ ಶಾಲೆ ಕಾಲೇಜುಗಳಲ್ಲಿ ಕನಿಷ್ಠ ಪ್ರತಿಶತ 40ರಷ್ಟು ಪ್ರವೇಶಾವಕಾಶಗಳು "ಆಂಗ್ಲೊ–ಇಂಡಿಯನ್" ಸಮುದಾಯ ಬಿಟ್ಟು ಇತರ ಸಮುದಾಯಗಳ ಸದಸ್ಯರಿಗೆ ಕೊಡಲ್ಪಡಲೇಬೇಕು.

ಶೈಕ್ಷಣಿಕ ನಿಹಿತಾರ್ಥಗಳು : ಶಿಕ್ಷಣವು ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆ ತಂದು ಸಾಮಾಜಿಕ ಆರ್ಥಿಕ ಪ್ರಗತಿಯನ್ನು ನಿರೀಕ್ಷಿಸಿದಂತೆ ಸಂವಿಧಾನವು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ನೀಡುವುದರ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಭದ್ರತೆ ನೀಡುವುದು. ಶಿಕ್ಷಣವು ಕೆಳಗಿನಿಂದ ಮೇಲೆ ಗುರಿ ಮುಟ್ಟಿದರೆ, ಸಂವಿಧಾನ ಮೇಲಿನಿಂದ ಬಂದು ಕೆಳಗಿನ ವ್ಯಕ್ತಿಯವರೆಗೂ ತಲುಪಲು ಹೋಗುವುದು. ಶಿಕ್ಷಣವು ರಾಷ್ಟ್ರೀಯ

Digitised by Bharatavani, CIIL

ಧೋರಣೆಯನ್ನು ಪ್ರತಿಬಿಂಬಿಸುವ ಅಂಶ, ಆದ್ದರಿಂದ ಶಿಕ್ಷಣವನ್ನು ಕೇಂದ್ರ ವಹಿಸಿಕೊಳ್ಳಬೇಕು. ಇಲ್ಲದಿದ್ದರೆ ಪ್ರತಿಯೊಂದು ರಾಜ್ಯ ತನಗೆ ಇಷ್ಟಬಂದಂತೆ ಶಿಕ್ಷಣವನ್ನು ನೀಡುತ್ತಾ ಹೋದರೆ ರಾಷ್ಟ್ರೀಯ ತತ್ವಕ್ಕೆ ಹಾಗೂ ಐಕ್ಯತೆಗೆ ಧಕ್ಕೆಯಾಗುವುದು. ಇಂದು ರಾಷ್ಟ್ರೀಯ ಶಿಕ್ಷಣ ಕಾರ್ಯಕ್ರಮಗಳನ್ನು ಅಳವಡಿಸಲು ಅಗತ್ಯವಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಯೋಜನೆಯಲ್ಲಿ ಶಿಕ್ಷಣ ಬರುವುದರಿಂದ ಕೇಂದ್ರ ಹಾಗೂ ರಾಜ್ಯಗಳೆರಡೂ ಸೇರಿಕೊಳ್ಳಬೇಕು.

ಒಂದು ದೇಶದ ಪ್ರಗತಿ ಹಾಗೂ ಸುಧಾರಣೆ ಆ ದೇಶದ ವಿದ್ಯಾವಂತ, ವಿಚಾರಶೀಲ ಹಾಗೂ ಕ್ರಿಯಾಶೀಲ ವ್ಯಕ್ತಿಗಳನ್ನು ಅವಲಂಬಿಸಿದೆ. ಆದ್ದರಿಂದ ಭಾರತ ಸರ್ಕಾರವು 1961ರಲ್ಲಿ ಸಂವಿಧಾನದ 45ನೇ ಕಲಮಿನ ಪ್ರಕಾರ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿತು. ಈ ತತ್ವವನ್ನು ಎಲ್ಲ ರಾಜ್ಯಗಳೂ ಸರ್ವಾನುಮತದಿಂದ ನಡೆಸಿಕೊಂಡು ಬರಬೇಕು. ದೇಶದ ತುಂಬೆಲ್ಲ ಏಕರೀತಿಯ ಶಿಕ್ಷಣ ಪದ್ಧತಿ ಹಾಗೂ ಪಠ್ಯಕ್ರಮವನ್ನು ಅಳವಡಿಸಿಕೊಂಡು ಬರಬೇಕು. ಎಲ್ಲ ಮತದವರಿಗೂ, ಜನಾಂಗದವರಿಗೂ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದವರಿಗೂ ಒಂದೇ ರೀತಿಯ ಶಿಕ್ಷಣವನ್ನು ನೀಡಬೇಕು.

**–ಮಹೇಶ ಎಸ್.ಜಿ.**

## ಭಾರತದಲ್ಲಿ ಕೃಷಿ ಮತ್ತು ಪಶು ಸಂಗೋಪನಾ ಶಿಕ್ಷಣದ ಬೆಳವಣಿಗೆ

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಗೆ ಸಮತೋಲನ ಆಹಾರ, ಜಾನುವಾರುಗಳಿಗೆ ಮೇವು ಹಾಗೂ ಜೀವನೋಪಾಯಕ್ಕೆ ಬೇಕಾಗುವ ಇತರೆ ಅತ್ಯವಶ್ಯಕ ವಸ್ತುಗಳ ಬೇಡಿಕೆ ಪೂರೈಸಬೇಕಾದಲ್ಲಿ ನಮ್ಮ ಯುವ ಪೀಳಿಗೆಗೆ ಕೃಷಿ ಹಾಗೂ ಪಶು ಸಂಗೋಪನಾ ವಿಷಯದಲ್ಲಿ ಪರಿಪೂರ್ಣವಾದ ಶಿಕ್ಷಣ ಕೊಡುವುದು ಪ್ರಸ್ತುತ ಸಂದರ್ಭದಲ್ಲಿ ಅನಿವಾರ್ಯವಾಗಿದೆ.

ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿಯಿಂದ ಶೇ. 60 ರಷ್ಟು ಜನ ಅವಲಂಬಿತರಾಗಿದ್ದಾರೆ. ಅಲ್ಲದೆ, ದೇಶದ ಉತ್ಪನ್ನದ ಶೇ. 40 ಹಾಗೂ ಶೇ. 25 ರಷ್ಟು ರಫ್ತು ಕೂಡ ಇದರಿಂದಾಗಿದೆ. 328.8 ಮಿಲಿಯನ್ ಹೆಕ್ಟೇರ್ ಭೌಗೋಳಿಕ ಪ್ರದೇಶದಲ್ಲಿ 35 ಮಿಲಿಯನ್ ಹೆಕ್ಟೇರ್ ಬೇಸಾಯದ ಭೂಮಿಯಾಗಿದೆ. ಶೇ. 40 ರಷ್ಟು ಭೂಮಿ ನೀರಾವರಿ ಸೌಲಭ್ಯ ಹೊಂದಿದ್ದು, 126 ಕೃಷಿ ವಲಯಗಳನ್ನು ಹಾಗೂ 15 ಸಂಪನ್ಮೂಲ ಅಭಿವೃದ್ಧಿ ಪ್ರದೇಶಗಳನ್ನು ಒಳಗೊಂಡಿದೆ. ಅಂಕಿ ಅಂಶಗಳ ಪ್ರಕಾರ 50 ಮಿಲಿಯನ್ ಟನ್ (1950–51) ರಿಂದ 125 ಮಿಲಿಯನ್ ಟನ್ ಕೃಷಿ ಉತ್ಪನ್ನ ಹೆಚ್ಚಳವಾಗಿದ್ದು ಕೃಷಿಯಲ್ಲಿನ ಶಿಕ್ಷಣವೇ ಕಾರಣ.

**ಕೃಷಿ ಶಿಕ್ಷಣದ ಬೆಳವಣಿಗೆ:** 1905ರಲ್ಲಿ ಕೃಷಿ ಸಂಶೋಧನಾ ಸಂಸ್ಥೆಯು ಬಿಹಾರದಲ್ಲಿನ ಪುಸಾದಲ್ಲಿ ಪ್ರಾರಂಭವಾಯಿತು. ಆದರೆ 1936ರಲ್ಲಿ ಆದ ಭೂಕಂಪದ ತೀವ್ರತೆಯಿಂದ ಈ ಸಂಸ್ಥೆಯು ದೆಹಲಿಗೆ ಸ್ಥಳಾಂತರಗೊಂಡು **ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ** ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಧ್ಯೇಯೋದ್ದೇಶಗಳು:**

- ಬೋಧನಾ ಹಾಗೂ ಸಂಶೋಧನಾ ವಿಭಾಗಗಳಲ್ಲಿ ಸಮಾನತೆ ಹಾಗೂ ಅದರ ಉಪಯೋಗಗಳನ್ನು ಕೃಷಿ, ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಗೃಹ ವಿಜ್ಞಾನ ಹಾಗೂ ಇನ್ನಿತರ ವಿಜ್ಞಾನದ ವಿಭಾಗಗಳಲ್ಲಿ ಅಳವಡಿಸಿಕೊಳ್ಳುವುದು.
- ವಿವಿಧ ವಿಸ್ತರಣಾ ಚಟುವಟಿಕೆಗಳ ಮುಖಾಂತರ ಕೃಷಿ, ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಗೃಹ ವಿಜ್ಞಾನ ಹಾಗೂ ಇನ್ನಿತರ ವಿಜ್ಞಾನಗಳ ಬಗ್ಗೆ ಪ್ರಚಾರ ಮಾಡುವುದು ಹಾಗೂ ಪ್ರಯೋಗ ಶಾಲೆಯಲ್ಲಾದ ತಂತ್ರಜ್ಞಾನವನ್ನು ರೈತರಿಗೆ ಮುಟ್ಟಿಸುವುದು.
- ಕೃಷಿ, ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಗೃಹ ವಿಜ್ಞಾನ ಹಾಗೂ ಇನ್ನಿತರ ವಿಜ್ಞಾನಗಳ ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ವಿಭಾಗಗಳಿಗೆ ಹೆಚ್ಚಿನ ಒತ್ತು ನೀಡುವುದು.
- ಗ್ರಾಮಗಳಲ್ಲಿ ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಈ ಸಂಸ್ಥೆಯು ಇನ್ನಿತರ ಸಂಸ್ಥೆಗಳಾದ ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು, ಬಾಬಾ ಅಣು ಸಂಶೋಧನಾ ಕೇಂದ್ರ ಹಾಗೂ ವಿಶ್ವವಿದ್ಯಾಲಯಗಳ ಜೊತೆಯಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು.
- ಸಮಾಜಕ್ಕೆ ಒಳಿತಾಗುವ ಕಾರ್ಯಗಳನ್ನು ಕೈಗೊಳ್ಳುವುದು.

**ಭಾರತೀಯ ಕೃಷಿ ಸಂಶೋಧನ ಶಿಕ್ಷಣ:** ಈ ಶಿಕ್ಷಣ ಕೇಂದ್ರವು ನವೆಂಬರ್ 1951ರಲ್ಲಿ ಪ್ರಾರಂಭಗೊಂಡಿತು. ಇದರ ಧ್ಯೇಯೋದ್ದೇಶಗಳು ಈ ಕೆಳಕಂಡಂತಿವೆ.

1. ಕೃಷಿ ಹಾಗೂ ಕೃಷಿಗೆ ಸಂಬಂಧಪಟ್ಟಂತಹ (ಪಶು ಸಂಗೋಪನೆ, ತೋಟಗಾರಿಕೆ, ಗೃಹ ವಿಜ್ಞಾನ, ಅರಣ್ಯ, ರೇಷ್ಮೆ, ಇತ್ಯಾದಿ) ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು.
2. ಕಾಲ–ಕಾಲಕ್ಕೆ ವಿದ್ಯಾರ್ಥಿಗಳಿಗನುಗುಣವಾಗಿ ಪಠ್ಯಕ್ರಮದ ಬದಲಾವಣೆ ಮಾಡುವುದು.
3. ಶಿಕ್ಷಣದ ಜೊತೆಗೆ ತರಬೇತಿ ನೀಡುವುದು.

Digitised by Bharatavani, CIIL

4. ಕೃಷಿ ಶಿಕ್ಷಣವನ್ನು ಕೃಷಿಗೆ ಸಂಬಂಧಿಸಿದ ಶಿಕ್ಷಣದೊಂದಿಗೆ (ಪಶು ಸಂಗೋಪನೆ) ವಿಲೀನಗೊಳಿಸುವುದು.

1952ರಿಂದ ತಾಂತ್ರಿಕ ಸಹಕಾರ ಮಿಷನ್ ಸಹಯೋಗದೊಂದಿಗೆ ನಮ್ಮ ದೇಶವು ಅಮೇರಿಕ ದೇಶದ ಜೊತೆಗೆ ಶಿಕ್ಷಣ ಮಟ್ಟವನ್ನು ಸುಧಾರಿಸಲು ಒಡಂಬಡಿಕೆ ಮಾಡಿಕೊಂಡಿತು.

**ಈ ಸಹಕಾರದಿಂದ ಆಗಿರುವ ಬದಲಾವಣೆಗಳು:**

1. ಭಾರತದಲ್ಲಿರುವ ಸಂಸ್ಥೆಗಳ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ನುರಿತ ಅಮೇರಿಕನ್ ತಜ್ಞರಿಂದ ಸುಧಾರಿತ ತರಬೇತಿ. 2. ತರಬೇತಿ ಪರಿಕರಗಳು, ಗ್ರಂಥಾಲಯ ಹಾಗೂ ಪ್ರಯೋಗ ಶಾಲೆಗಳ ಅಭಿವೃದ್ಧಿ.

1ನೇ ಎಪ್ರೀಲ್ 1966 ರಂದು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ತನ್ನ ನಿಯಂತ್ರಣದಲ್ಲಿ 9 ಸಂಶೋಧನಾ ಕೇಂದ್ರಗಳನ್ನು ತೆಗೆದುಕೊಂಡಿತು. ನಂತರದ ಕೆಲವೇ ವರ್ಷಗಳಲ್ಲಿ ದೇಶದಲ್ಲಿರುವ ಬೇರೆ ಸಂಶೋಧನಾ ಕೇಂದ್ರಗಳನ್ನು ಕೂಡಾ ತನ್ನ ನಿಯಂತ್ರಣದಲ್ಲಿ ತೆಗೆದುಕೊಂಡಿತು.

1972ರಲ್ಲಿ **ಡಾ॥ ಗಜೇಂದ್ರ ಗಡಕರ್** ಕಮಿಟಿ ಪ್ರಕಾರ, ಕೃಷಿ ಸಂಶೋಧನಾ ಹಾಗೂ ಶಿಕ್ಷಣ ವಿಭಾಗ (Directorate of Agricultural Research and Education -DARE) 1973ರಲ್ಲಿ ಕೃಷಿ ಮಂತ್ರಾಲಯ, ಭಾರತ ಸರ್ಕಾರದ ಅಧೀನದಲ್ಲಿ ಪ್ರಾರಂಭವಾಯಿತು. ಈ ಕಮಿಟಿಯ ಪ್ರಕಾರ ಈ ಸಂಸ್ಥೆ ಭಾ.ಕೃ.ಅ.ಪರಿಷತ್ತು, ಕೇಂದ್ರ ಹಾಗೂ ರಾಜ್ಯ ಸರಕಾರದ ಅಧೀನದಲ್ಲಿ ಬರುವಂಥ ಸಂಸ್ಥೆಗಳೊಂದಿಗೆ ಚಟುವಟಿಕೆಗಳನ್ನು ಕೈಗೊಳ್ಳುವುದು ಒಂದೆಡೆಯಾದರೆ, ಅಂತರ್‌ರಾಷ್ಟ್ರೀಯ ಸಂಸ್ಥೆಗಳು ಇನ್ನೊಂದೆಡೆ ಕಾರ್ಯಪ್ರವೃತ್ತವಾಗಬೇಕು. ಕೃಷಿ ವಿಜ್ಞಾನಿಗಳ ನೇಮಕ ಮಾಡಿಕೊಳ್ಳುವ ಸಂಸ್ಥೆಯು ಪ್ರಾರಂಭಗೊಂಡು, ಸ್ವತಂತ್ರವಾಗಿ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಕೂಡಾ ಹೊಂದಿತು. 1987ರಲ್ಲಿ **ಡಾ॥ ಜಿ.ವಿ.ಕೆ. ರಾವ್** ಅವರ ನೇತೃತ್ವದಲ್ಲಿ ಭಾ.ಕೃ.ಅ.ಪರಿಷತ್ತಿನಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಕಮಿಟಿಯನ್ನು ರಚಿಸಲಾಯಿತು. ಈ ಕಮಿಟಿಯ ಪ್ರಕಾರ, ಭಾ.ಕೃ.ಅ.ಪರಿಷತ್ತು ಸ್ವಯಂ ಪ್ರೇರಿತವಾಗಿ ಸಂಶೋಧನೆಯಲ್ಲಿ ತೊಡಗಿ, ದೇಶದ ಕೃಷಿ ಉತ್ಪನ್ನವನ್ನು ಹೆಚ್ಚು ಮಾಡುವುದು. ಹಾಗೆಯೇ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಯಾವ ಸಂಶೋಧನಾ ಕ್ಷೇತ್ರದಲ್ಲಿ ಅಶಕ್ತರಾಗಿದ್ದಾರೋ ಅದನ್ನು ಸರಿಪಡಿಸಿ ಆ ರಾಜ್ಯದಲ್ಲಿನ ಕೃಷಿಯನ್ನು ಅಭಿವೃದ್ಧಿ ಪಡಿಸುವುದು.

ಅಗಸ್ಟ್ 2004ರಲ್ಲಿ **ಡಾ॥ ಆರ್.ಎ. ಮಾಶ್ಯಾಳಕರ್,** ಕಾರ್ಯದರ್ಶಿ, ವಿಜ್ಞಾನ ಹಾಗೂ ಕೈಗಾರಿಕೆ ಸಂಶೋಧನಾ ವಿಭಾಗ, ವಿಜ್ಞಾನ ಮತ್ತು ತಾಂತ್ರಿಕತೆ ಸಚಿವರು, ಭಾರತ ಸರ್ಕಾರ ಇವರ ಪ್ರಕಾರ ಭಾ.ಕೃ.ಅ.ಪರಿಷತ್ತಿನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜ್ಞಾನಿಗಳಿಗೆ ಸ್ವಾತಂತ್ರವನ್ನು ನೀಡುವುದು, ವಿಜ್ಞಾನಿಗಳು ಯಾವ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವ ಆಸಕ್ತಿ ಹೊಂದಿರುತ್ತಾರೊ ಆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವುದಕ್ಕೆ ಅನುವು ಮಾಡಿಕೊಡುವುದು.

ಅಕ್ಟೋಬರ್ 2004ರಲ್ಲಿ **ಡಾ॥ ಎಂ.ಎಸ್. ಸ್ವಾಮಿನಾಥನ್** ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕೃಷಿ ಸಂಶೋಧನಾ ಪದ್ಧತಿಯಲ್ಲಿ ಬದಲಾವಣೆ ತರುವುದಕ್ಕೋಸ್ಕರ ಕಮಿಟಿ ರಚಿಸಲಾಯಿತು. ಇವರ ಪ್ರಕಾರ ಮೂಲ ಹಾಗೂ ಯುಕ್ತಿಯ ಸಂಶೋಧನೆಗಳು ಕೃಷಿ ಕ್ಷೇತ್ರದಲ್ಲಿ ಆಗಬೇಕು. ಹಾಗೆಯೇ ಭಾರತ ಸರ್ಕಾರವು, ಮೂಲ ಕೃಷಿಗೆ ವಿಶೇಷ ಅನುದಾನ ನೀಡಿ ಈ ಅನುದಾನದಲ್ಲಿ ಸಂಶೋಧನೆ ತೆಗೆದುಕೊಳ್ಳಲು ಆದೇಶ ನೀಡಿತು.

ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಅನೇಕ ಸಂಸ್ಥೆಗಳನ್ನು ಒಳಗೊಂಡಿದ್ದು, ಇದರಲ್ಲಿ ಕೇಂದ್ರ ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಸಂಶೋಧನಾ ಕೇಂದ್ರ, ಯೋಜನಾ ನಿರ್ದೇಶನಾಲಯ, ರಾಷ್ಟ್ರೀಯ ಕಛೇರಿ, ಭಾರತದ ಸಮಗ್ರ ಸಂಶೋಧನಾ ಯೋಜನೆ, ರಾಜ್ಯ ಹಾಗೂ ಕೇಂದ್ರ ಕೃಷಿ ವಿಶ್ವವಿದ್ಯಾಲಯಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳು ಒಳಗೊಂಡಿದೆ. ಇದಲ್ಲದೆ, ದೇಶದಲ್ಲಿ 567 ಕೃಷಿ ವಿಜ್ಞಾನ ಕೇಂದ್ರಗಳು ಈ ಪರಿಷತ್ತಿನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

**ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು:**

1949ರಲ್ಲಿ **ಡಾ॥ ಎಸ್. ರಾಧಾಕೃಷ್ಣನ್ ರವರ** ನೇತೃತ್ವದಲ್ಲಿ ಮೊದಲ ಶಿಕ್ಷಣ ಸಮಿತಿ ಹಾಗೂ ಮೊದಲನೆ ಮತ್ತು ಎರಡನೆ ಇಂಡೋ–ಅಮೇರಿಕನ್ ಟೀಮ್ ಪ್ರಕಾರ ಕೃಷಿ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಬೇಕೆಂದು ಸೂಚಿಸಿದವು. ಈ ನಿಟ್ಟಿನಲ್ಲಿ, ದೇಶದಲ್ಲಿ ಮೊಟ್ಟ ಮೊದಲ ಕೃಷಿ ವಿಶ್ವವಿದ್ಯಾಲಯವು ಉತ್ತರಪ್ರದೇಶ (ಈಗಿನ ಉತ್ತರಾಖಂಡ) ರಾಜ್ಯದ ಪಂತನಗರದಲ್ಲಿ 1960ರಲ್ಲಿ ಪ್ರಾರಂಭವಾಯಿತು. ಇದರ ಮುಖ್ಯ ಉದ್ದೇಶವು ಕೃಷಿ ಶಿಕ್ಷಣವನ್ನು–ಬಿ.ಎಸ್‌ಸಿ. (ಕೃಷಿ) ಬ್ಯಾಚುಲರ್ ಪದವಿ ಹಾಗೂ ಸ್ನಾತಕೋತರ ಪದವಿ ನೀಡುವುದು. 1966ರಲ್ಲಿ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಪುನರ್‌ರಚನೆಯಾಗಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಶಿಕ್ಷಣ ಸಮಿತಿ (1952), ಸ್ಟ್ಯಾಂಡಿಂಗ್ ಕಮಿಟಿ (1965) ಹಾಗೂ ನಾರ್ಮ್ಸ್ ಮತ್ತು ಅಕ್ರಿಡಿಯಷನ್ ಕಮಿಟಿ (1974) ರಚಿಸಲಾಯಿತು. ಸದ್ಯ ದೇಶದಲ್ಲಿ 45 ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಒಂದು ಕೇಂದ್ರ ಕೃಷಿ ವಿಶ್ವವಿದ್ಯಾಲಯ (ಇಂಪಾಲ್) ಇವುಗಳ ಅಡಿಯಲ್ಲಿ 210 ಕೃಷಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ಭಾರತೀಯ ಪಶು ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ, ಕೇಂದ್ರ ಒಳನಾಡು ಮೀನುಗಾರಿಕೆ ಶಿಕ್ಷಣ ಸಂಸ್ಥೆ ಹಾಗೂ ಅಲಹಾಬಾದ ಕೃಷಿ ಸಂಸ್ಥೆಗಳು ಡೀಮ್ಡ್ ವಿಶ್ವವಿದ್ಯಾಲಯಗಳಾಗಿ ಕಾರ್ಯನಿರ್ವಹಿಸುತ್ತಿವೆ. ಭಾರತೀಯ

Digitised by Bharatavani, CIIL

ತಾಂತ್ರಿಕತೆ ಸಂಸ್ಥೆ, ಕಾರಕಪೂರ ಹಾಗೂ 100ಕ್ಕೂ ಹೆಚ್ಚು ಖಾಸಗಿ ಕಾಲೇಜುಗಳು ಕೃಷಿ ಹಾಗೂ ಕೃಷಿಗೆ ಸಂಬಂಧಪಟ್ಟ ಶಿಕ್ಷಣವನ್ನು ನೀಡುತ್ತಿವೆ.

ಕೃಷಿ ವಿಸ್ತರಣೆ ಗಣನೆಗೆ ತೆಗೆದುಕೊಂಡಾಗ, ವಿಶ್ವವಿದ್ಯಾಲಯದ ಸಂಶೋಧನಾ ತಂತ್ರಜ್ಞಾನಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವುದು. **ಡಾ॥ ಮೋಹನಸಿಂಗ ಮೆಹತಾ** ಕಮಿಟಿ (1974) ಅವರ ಶಿಫಾರಸ್ಸಿನ ಪ್ರಕಾರ ಪ್ರತಿ ಜಿಲ್ಲೆಗೆ ಒಂದರಂತೆ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವುದು. ಇದರ ಮುಖ್ಯ ಉದ್ದೇಶವು ರೈತರ ಹೊಲದಲ್ಲಿ ಸಂಶೋಧನೆ, ಮೊದಲ ಸಾಲಿನ ಪ್ರಾತ್ಯಕ್ಷಿಕೆ ಮತ್ತು ರೈತ, ರೈತ ಮಹಿಳೆ ಹಾಗೂ ಗ್ರಾಮೀಣ ಯುವಕರಿಗೆ ತರಬೇತಿ ನೀಡುವುದು. ವೃತ್ತಿಪರ ತರಬೇತಿಗಳನ್ನು ಹಮ್ಮಿಕೊಂಡು ವಿಶ್ವವಿದ್ಯಾಲಯದ ತಾಂತ್ರಿಕತೆಗಳನ್ನು ಗ್ರಾಮೀಣ ಭಾಗಕ್ಕೆ ತಲುಪಿಸುವುದು. ಈ ನಿಟ್ಟಿನಲ್ಲಿ, 1974ರಲ್ಲಿ ಮೊದಲ ಕೃಷಿ ವಿಜ್ಞಾನ ಕೇಂದ್ರ, ಪುದುಚೇರಿಯಲ್ಲಿ ಪ್ರಾರಂಭಗೊಂಡಿತು. ಈಗ ದೇಶದಲ್ಲಿ 567 ಕೃಷಿ ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 2008ರಲ್ಲಿ ಸರಕಾರವು ದೊಡ್ಡ ಜಿಲ್ಲೆಗಳಿಗೆ 50 ಹೆಚ್ಚಿನ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಆದೇಶಿಸಿತು.

**ಪಶು ಸಂಗೋಪನಾ ಶಿಕ್ಷಣದ ಬೆಳವಣಿಗೆ:** ಪಶು ಸಂಗೋಪನಾ ಶಿಕ್ಷಣದಲ್ಲಿ ಪಶು ವೈದ್ಯಕೀಯ, ಹೈನುಗಾರಿಕೆ ಮತ್ತು ಮೀನುಗಾರಿಕೆ ಒಳಗೊಂಡಿರುತ್ತದೆ. ಕ್ರಿ.ಪೂ. 1500 ರಿಂದ 500ರಲ್ಲಿ ಹೈನುಗಾರಿಕೆ ಬಗ್ಗೆ ದಾಖಲೆಗಳಿರುವ ಉದಾಹರಣೆಗಳಿವೆ. ಸ್ವಾತಂತ್ರ್ಯ ಸಿಗುವ ಪೂರ್ವದಿಂದ 18ನೇ ಶತಮಾನದವರೆಗೆ ಪಶು ಸಂಗೋಪನಾ ಶಿಕ್ಷಣಕ್ಕೆ ಅಷ್ಟೊಂದು ಮಹತ್ವ ದೊರೆಯಲಿಲ್ಲ. ಸೇನೆಯಲ್ಲಿರುವ ಪಶು ಸಂಗೋಪನಾ ಇಲಾಖೆಯ ಸಿಬ್ಬಂದಿಯವರಿಗೆ ತರಬೇತಿ ನೀಡುವ ಉದ್ದೇಶದಿಂದ 1862ರಲ್ಲಿ ಪಶು ಶಾಲೆ, ಪೂನಾದಲ್ಲಿ ಪ್ರಾರಂಭಗೊಂಡಿತು. ಇದಲ್ಲದೆ, ದೇಶದಲ್ಲಿರುವ ಜಾನುವಾರುಗಳಿಗೆ ರೋಗ ಬರುವುದನ್ನು ತಡೆಗಟ್ಟಲು ಹಪೂರ್ (1879), ಅಜ್ಮೀರ್ (1881), ಬಾಂಬೆ (1886) ಮತ್ತು ಶಿಮ್ಲಾ (1888) ದಲ್ಲಿ ಪಶು ಸಂಗೋಪನ ಶಾಲೆಗಳು ಪ್ರಾರಂಭಗೊಂಡವು. ಅಜ್ಮೀರ್ ಪಶು ಶಾಲೆಯು ಲಾಹೋರ ಪಶು ಶಾಲೆಯ ಜೊತೆಗೆ ಕೂಡಿಕೊಂಡು, ಲಾಹೋರ ಪಶು ವೈದ್ಯಕೀಯ ಕಾಲೇಜು 1902 ರಲ್ಲಿ ಪ್ರಾರಂಭಗೊಂಡಿತು. ಜಾನುವಾರುಗಳಿಗೆ ಬರುವ ರೋಗಗಳನ್ನು ನಿಯಂತ್ರಿಸಲು 1890ರಲ್ಲಿ ಕೇಂದ್ರ ಸೂಕ್ಷ್ಮ ಜೀವಿಗಳ ಪ್ರಯೋಗ ಶಾಲೆ ಪ್ರಾರಂಭಗೊಂಡಿತು. ನಂತರ ಈ ಪ್ರಯೋಗ ಶಾಲೆ ಮುಕ್ತೇಶ್ವರಕ್ಕೆ ಸ್ಥಳಾಂತರಗೊಂಡಿತು. ತದನಂತರ, ಸದ್ಯದಲ್ಲಿ ಭಾರತೀಯ ಪಶು ಸಂಶೋಧನೆ ಸಂಸ್ಥೆಯಾಗಿ ಇಜತ್ ನಗರ (ಉತ್ತರಪ್ರದೇಶ)ದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪಶು ವೈದ್ಯಕೀಯ ಕಾಲೇಜು ಬಂಗಾಳ (1892) ಮದ್ರಾಸ ಪಶು ವೈದ್ಯಕೀಯ ಕಾಲೇಜು (1902), ಪಶು ವೈದ್ಯಕೀಯ ಕಾಲೇಜು, ಪಾಟ್ನಾ (1930) ರಲ್ಲಿ ಪ್ರಾರಂಭಗೊಂಡವು. 1930–31ರಲ್ಲಿ ಮದ್ರಾಸ ಪಶು ವೈದ್ಯಕೀಯ ಕಾಲೇಜು ಪಠ್ಯಕ್ರಮವನ್ನು ತಿದ್ದುಪಡಿಮಾಡಿ 3 ವರ್ಷದ ಬಿ.ವ್ಹಿ. ಎಸ್‌ಸಿ. ಪದವಿಯನ್ನು ನಾಲ್ಕು ವರ್ಷಕ್ಕೆ ಏರಿಸಲಾಯಿತು. ಪಶು ಸಂಗೋಪನಾ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಲು 3 ವರ್ಷ ಡಿಪ್ಲೋಮಾ ಪದವಿಯನ್ನು 4 ವರ್ಷಕ್ಕೆ ಮಾಡಲಾಯಿತು. 1946–47ರಲ್ಲಿ ಡಿಪ್ಲೊಮಾ ಪದವಿಯನ್ನು ಹಿಂದಕ್ಕೆ ತೆಗೆದುಕೊಂಡು ಬಿ.ವ್ಹಿ. ಎಸ್.ಸಿ ಪದವಿಯನ್ನು ಮಾತ್ರ ಉಳಿಸಲಾಯಿತು. ಇದಲ್ಲದೆ, ಪಶು ವೈದ್ಯಕೀಯ ಕಾಲೇಜು, ಪಂಜಾಬ (1942), ಪಶು ವೈದ್ಯಕೀಯ ಕಾಲೇಜು, ಹೈದ್ರಾಬಾದ (1946) ಮತ್ತು ಪಶು ವೈದ್ಯಕೀಯ ಕಾಲೇಜು, ಮಥುರಾ (1947) ರಲ್ಲಿ ಪ್ರಾರಂಭಗೊಂಡವು. 1947ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ ಬಂದಾಗ 6 ಪಶು ವೈದ್ಯಕೀಯ ಕಾಲೇಜುಗಳು ಇದ್ದು ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶವು ಒಟ್ಟು 300ಕ್ಕೆ ಸೀಮಿತವಾಗಿತ್ತು. ದೇಶ ವಿಭಜನೆಗೊಂಡ ನಂತರ ಲಾಹೋರ ಪಶು ವೈದ್ಯಕೀಯ ಕಾಲೇಜು ಪಾಕಿಸ್ತಾನಕ್ಕೆ ಹೋಗಿದ್ದರಿಂದ ಪಂಜಾಬ ಸರ್ಕಾರ ಹಿಸಾರನಲ್ಲಿ ಹೊಸ ಪಶು ವೈದ್ಯಕೀಯ ಕಾಲೇಜನ್ನು 1948 ರಲ್ಲಿ ಪ್ರಾರಂಭ ಮಾಡಿತು.

ದೇಶದಲ್ಲಿ ಆಹಾರ ಉತ್ಪನ್ನ ಹೆಚ್ಚಳವನ್ನು ಮಾಡಬೇಕಾದರೆ, ವೈಜ್ಞಾನಿಕ ತಿಳುವಳಿಕೆಯನ್ನು ರೈತರಿಗೆ ಮುಟ್ಟಿಸುವುದು ಅತ್ಯವಶ್ಯಕ. ಈ ನಿಟ್ಟಿನಲ್ಲಿ ಆಸ್ಸಾಂ ಹಾಗೂ ಜಬಲಪೂರ (1948), ಬಿಕಾನರ್ (1954), ತ್ರಿಚೂರ, ತಿರುಪತಿ ಹಾಗೂ ಭುವನೇಶ್ವರ (1955)ಗಳಲ್ಲಿ ಹೊಸ ಪಶು ವೈದ್ಯಕೀಯ ಕಾಲೇಜುಗಳು ಪ್ರಾರಂಭಗೊಂಡವು. ಇದರಿಂದ ಪ್ರತಿ ವರ್ಷ ವಿದ್ಯಾರ್ಥಿಗಳ ಒಳಪ್ರವೇಶವು 1300ಕ್ಕೆ ಏರಿತು. 1955–56ರಲ್ಲಿ 14 ಪಶು ವೈದ್ಯಕೀಯ ಕಾಲೇಜುಗಳು ಇದ್ದು ತದನಂತರ 1960ರ ಆಸುಪಾಸಿನಲ್ಲಿ ಈ ಸಂಖ್ಯೆಯು 17ಕ್ಕೇರಿತು. (ಉದಾ : ಪಶು ವೈದ್ಯಕೀಯ ಕಾಲೇಜು, ಪಂಥ ನಗರ). ಪಠ್ಯಕ್ರಮದ ಅಳವಡಿಕೆ ಹಾಗೂ ಕಾಲಕ್ಕೆ ತಕ್ಕಂತೆ ಪಠ್ಯಕ್ರಮದ ಬದಲಾವಣೆಯು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಕೃಷಿ ಸಂಶೋಧನ ಶಿಕ್ಷಣದ ಪ್ರಕಾರ ಇರುತ್ತದೆ.

1964ರಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳಿದ್ದು ತರಬೇತಿ ಪಠ್ಯಕ್ರಮ, ಪರೀಕ್ಷಾ ಪದ್ಧತಿ ಒಂದಕ್ಕೊಂದು ಬೇರೆಯಾಗಿದ್ದವು. ಈ ನಿಟ್ಟಿನಲ್ಲಿ, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏಕರೂಪತೆಯನ್ನು ತರಲು ಮೇ 1964ರಲ್ಲಿ **ಎನ್.ಕೆ. ಅನಂತರಾವ,** ಡೀನ್, ಉತ್ತರ ಪ್ರದೇಶ ಕೃಷಿ ವಿಶ್ವವಿದ್ಯಾಲಯ ಇವರ ಅಧೀನದಲ್ಲಿ ಒಂದು ಕಮಿಟಿ ಮಾಡಿತು. ಈ ಕಮಿಟಿಯು 1965ರಲ್ಲಿ ಬಿ.ವ್ಹಿ.ಎಸ್‌ಸಿ. ಪದವಿಯನ್ನು 5 ವರ್ಷಕ್ಕೆ ಏರಿಸಿ 250 ಕಲಿಕಾ ಅವಧಿ ಒಳಗೊಂಡಿರಬೇಕೆಂದು ತಿಳಿಸಿತು. ಈ ಕಲಿಕಾ ಅವಧಿಗಳಲ್ಲಿ ಪ್ರಾಣಿಗಳ ಚಿಕಿತ್ಸೆ, ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು, ಮಾಂಸವನ್ನು ಪರೀಕ್ಷಿಸುವುದು, ಕೊಟ್ಟಿಗೆಯಲ್ಲಿ ಆಕಳುಗಳ ಸಾಕಾಣಿಕೆಯನ್ನು ನಿರ್ವಹಿಸುವುದು, ತಳಿ ಸಂಕರಣ ಹಾಗೂ ಅಭಿವೃದ್ಧಿ ಮತ್ತು ಆಹಾರ ಪದ್ದತಿ ಇರಬೇಕೆಂದು ತಿಳಿಸಿತು.

Digitised by Bharatavani, CIIL

ಅಗಸ್ಟ್ 1976ರಲ್ಲಿ, **ಡಾ॥ ಎಂ.ಎಸ್. ರಾಂಡವಾ** ಅವರ ನೇತೃತ್ವದಲ್ಲಿ ರಾಂಡವಾ ಕಮಿಟಿ ಶಿಫಾರಸ್ಸಿನ ಪ್ರಕಾರ 5 ವರ್ಷದ ಬಿ.ವಿ.ಎಸ್‌ಸಿ. ಪದವಿಯಲ್ಲಿ 6 ತಿಂಗಳು ಕಾಲ ವೃತ್ತಿ ತರಬೇತಿ ಕಾರ್ಯಕ್ರಮ ಕಡ್ಡಾಯ ಎಂದು ತಿಳಿಸಿತು. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ಸಹಾಯಧನ ಕೂಡಾ ನೀಡಬೇಕು ಎಂದು ತಿಳಿಸಿತು.

**ಭಾರತೀಯ ಪಶು ವೈದ್ಯಕೀಯ ಪರಿಷತ್ತು:** ಇದರ ಜವಾಬ್ದಾರಿ ದೇಶದಲ್ಲಿ ಪಶು ವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಕಾಪಾಡುವುದು ಹಾಗೂ ಕಾಲಕ್ಕೆ ತಕ್ಕಂತೆ ಪಠ್ಯಕ್ರಮವನ್ನು ಬದಲಾಯಿಸುವುದು. 1991ರಲ್ಲಿ ಭಾರತೀಯ ಪಶು ವೈದ್ಯಕೀಯ ಪರಿಷತ್ತು 3ನೇ ಡೀನ ಕಮಿಟಿ ಮಾಡಿ ಅದರ ಅಧ್ಯಕ್ಷರನ್ನಾಗಿ **ಡಾ॥ ಕೀರ್ತಿಸಿಂಗ್,** ಕುಲಪತಿಗಳು, ಹಿಮಾಚಲಪ್ರದೇಶ ಕೃಷಿ ವಿಶ್ವವಿದ್ಯಾನಿಲಯ ರವರನ್ನು ಮಾಡಿತು. ಈ ಕಮಿಟಿಯು ಬಿ.ವಿ.ಎಸ್‌ಸಿ. ಪದವಿ (5 ವರ್ಷ, 200 ಕಲಿಕಾ ಅವಧಿ), ಹೈನು ತಾಂತ್ರಿಕತೆ ಪದವಿ (4 ವರ್ಷ, 160 ಕಲಿಕಾ ಅವಧಿ), ಮೀನುಗಾರಿಕೆ ಪದವಿ (4 ವರ್ಷ ಕಲಿಕಾ ಅವಧಿ) ಇರಬೇಕು ಎಂದು ತಿಳಿಸಿತು. ಎಲ್ಲಾ ಪದವಿಗಳಲ್ಲೂ 6 ತಿಂಗಳುಗಳ ಕಾಲ ವೃತ್ತಿ ತರಬೇತಿ ಕಾರ್ಯಕ್ರಮ ಇರಬೇಕೆಂದು ತಿಳಿಸಿತು. ಇದರ ಜೊತೆಗೆ ಬೋಧನೆಯ ಗುಣಮಟ್ಟವನ್ನು ಸುಧಾರಿಸಲು, ಶೇಕಡಾ 50 ಅಂಕಗಳಿಗೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಬಾಹ್ಯ ಪರೀಕ್ಷೆಯನ್ನು ಬರೆಯಬೇಕೆಂದು ಶಿಫಾರಸ್ಸು ಮಾಡಿತು.

ನಮ್ಮ ಭಾರತ ದೇಶದಲ್ಲಿ ಸದ್ಯಕ್ಕೆ 10 ಹೈನುಗಾರಿಕೆ ತಾಂತ್ರಿಕ ಕಾಲೇಜುಗಳಿದ್ದು ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶವು 300 ಇದೆ. ಹಾಗೆಯೇ, 9 ಮೀನುಗಾರಿಕೆ ಕಾಲೇಜುಗಳಿದ್ದು, ಪ್ರತಿವರ್ಷ ವಿದ್ಯಾರ್ಥಿಗಳ ಒಳಪ್ರವೇಶವು 350 ಇದೆ.

**ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಒಳಗೊಂಡಿರುವ ಸಂಶೋಧನಾ ಸಂಸ್ಥೆಗಳು: (2010–11)**

| ಸಂಸ್ಥೆಗಳು | ರಾಷ್ಟ್ರೀಯ ಸಂಸ್ಥೆ | ಕೇಂದ್ರ ಕಛೇರಿ | ರಾಷ್ಟ್ರೀಯ ಸಂಶೋಧನಾ ಕೇಂದ್ರಗಳು | ಯೋಜನಾ ನಿರ್ದೇಶನಾಲಯ | ರಾಷ್ಟ್ರೀಯ | ಅಖಿಲ ಭಾರತೀಯ ಸಂಯೋಜಿತ ಸಂಶೋಧನಾ ಯೋಜನೆ | ಒಟ್ಟು |
|---|---|---|---|---|---|---|---|
| ಬೆಳೆ ವಿಜ್ಞಾನ | 1 | 9 | 2 | 9 | 3 | 26 | 50 |
| ತೋಟಗಾರಿಕೆ | – | 10 | 07 | 6 | – | 11 | 34 |
| ರಾಷ್ಟ್ರೀಯ ಸಂಪನ್ಮೂಲ ನಿರ್ವಹಣೆ | 1 | 8 | 1 | 3 | 1 | 11 | 25 |
| ಕೃಷಿ ತಾಂತ್ರಿಕತೆ | – | 6 | – | – | – | 6 | 12 |
| ಪಶು ವಿಜ್ಞಾನ | 2 | 5 | 7 | 4 | 1 | 7 | 26 |
| ಮೀನುಗಾರಿಕೆ | 1 | 5 | – | 1 | 1 | – | 8 |
| ಕೃಷಿ ವಿಸ್ತರಣೆ | – | – | – | 2 | – | 1 | 3 |
| ಕೃಷಿ ಶಿಕ್ಷಣ | 1 | – | – | – | – | – | 1 |
| ಸಂಪರ್ಕ ಜಾಲ ಯೋಜನೆಗಳು | – | – | – | – | – | 18 | 18 |
| ಇತರೆ ಯೋಜನೆಗಳು | – | – | – | – | – | 8 | 8 |
| ಒಟ್ಟು | 6 | 43 | 17 | 25 | 6 | 88 | 185 |

Digitised by Bharatavani, CIIL

ದೇಶದಲ್ಲಿರುವ ಕೃಷಿ ಹಾಗೂ ಪಶು ಸಂಗೋಪನೆ ವಿಶ್ವವಿದ್ಯಾನಿಲಯಗಳು : (2010–11)

| ಕ್ರ.ಸಂ. | ರಾಜ್ಯ / ಕೇಂದ್ರ ಕೃಷಿ ಹಾಗೂ ಪಶು ಸಂಗೋಪನೆ ವಿಶ್ವವಿದ್ಯಾಲಯಗಳು |
|---|---|
| 01 | ಆಚಾರ್ಯ ಎನ್.ಜಿ. ರಂಗ ಕೃಷಿ ವಿಶ್ವವಿದ್ಯಾಲಯ, ರಾಜೇಂದ್ರ ನಗರ, ಹೈದ್ರಾಬಾದ, ಆಂಧ್ರಪ್ರದೇಶ |
| 02 | ಆನಂದ್ ಕೃಷಿ ವಿಶ್ವವಿದ್ಯಾಲಯ, ಆನಂದ್, ಗುಜರಾತ |
| 03 | ಅಸ್ಸಾಂ ಕೃಷಿ ವಿಶ್ವವಿದ್ಯಾಲಯ, ಜೋರ್ಹಾಟ್, ಅಸ್ಸಾಂ. |
| 04 | ಬಿದಾನ ಚಂದ್ರ ಕೃಷಿ ವಿಶ್ವವಿದ್ಯಾಲಯ, ಮೋಹನಪುರ, ನಡಿಯಾ, ಪಶ್ಚಿಮ ಬಂಗಾಳ |
| 05 | ಬಿರ್ಸಾ ಕೃಷಿ ವಿಶ್ವವಿದ್ಯಾಲಯ, ಕನ್ಕೆ, ರಾಂಚಿ, ಜಾರ್ಖಂಡ |
| 06 | ಕೇಂದ್ರ ಕೃಷಿ ವಿಶ್ವವಿದ್ಯಾಲಯ, ಇಂಫಾಲ್, ಮಣಿಪುರ |
| 07 | ಚಂದ್ರಶೇಖರ ಆಜಾದ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಕಾನಪುರ, ಉತ್ತರಪ್ರದೇಶ. |
| 08 | ಚೌಧರಿ ಚರಣಸಿಂಗ ಹರಿಯಾಣ ಕೃಷಿ ವಿಶ್ವವಿದ್ಯಾಲಯ, ಹಿಸ್ಸಾರ, ಹರಿಯಾಣ |
| 09 | ಚೌಧರಿ ಸರ್ವನಕುಮಾರ ಹಿಮಾಚಲಪ್ರದೇಶ ಕೃಷಿ ವಿಶ್ವವಿದ್ಯಾಲಯ, ಪಾಲಂಪುರ, ಕಾಂಗ್ರಾ, ಹಿಮಾಚಲಪ್ರದೇಶ |
| 10 | ಡಾ॥ ಬಾಳಾ ಸಾಹೇಬ ಸಾವಂತ್ ಕೊಂಕಣ ಕೃಷಿ ವಿದ್ಯಾಪೀಠ, ದಾಪೋಲಿ, ರತ್ನಗಿರಿ, ಮಹಾರಾಷ್ಟ್ರ |
| 11 | ಡಾ॥ ಪಂಜಾಬರಾವ ದೇಶಮುಖ ಕೃಷಿ ವಿದ್ಯಾಪೀಠ, ಕೃಷಿ ನಗರ, ಅಕೋಲಾ, ಮಹಾರಾಷ್ಟ್ರ |
| 12 | ಡಾ॥ ಯಶ್ವಂತಸಿಂಗ ಪರಮಾರ್ ತೋಟಗಾರಿಕೆ ಮತ್ತು ಅರಣ್ಯ ಕೃಷಿ ವಿಶ್ವವಿದ್ಯಾಲಯ, ಸೊಲನ್, ನವನಿ, ಹಿಮಾಚಲಪ್ರದೇಶ |
| 13 | ಗೋವಿಂದ ಬಲ್ಲಬ ಪಂತ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಪಂತನಗರ, ಉತ್ತರಾಖಂಡ |
| 14 | ಗುರು ಅಂಗದ ದೇವ ಪಶು ವಿಶ್ವವಿದ್ಯಾಲಯ, ಲುದಿಯಾನಾ, ಪಂಜಾಬ್ |
| 15 | ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾಲಯ, ರಾಯಪುರ, ಛತ್ತಿಸಗಡ |
| 16 | ಜವಾಹರಲಾಲ್ ನೆಹರೂ ಕೃಷಿ ವಿಶ್ವವಿದ್ಯಾಲಯ, ಜಬಲ್‌ಪೂರ, ಮಧ್ಯಪ್ರದೇಶ |
| 17 | ಜುಂಗದ ಕೃಷಿ ವಿಶ್ವವಿದ್ಯಾಲಯ, ಮೋತಿಬೌಗ ಜುಂಗದ, ಗುಜರಾತ |
| 18 | ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ, ಕರ್ನಾಟಕ |
| 19 | ಕೇರಳ ಕೃಷಿ ವಿಶ್ವವಿದ್ಯಾಲಯ, ವೆಲ್ಲನಿಕ್ಕರ್, ತ್ರಿಶೂರ್, ಕೇರಳ |
| 20 | ಮಾಹಾರಾಣ ಪ್ರತಾಪ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಉದಯಪುರ, ರಾಜಸ್ತಾನ |
| 21 | ಮಹಾರಾಷ್ಟ್ರ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಾಗಪೂರ, ಮಹಾರಾಷ್ಟ್ರ |
| 22 | ಮಹಾತ್ಮ ಪುಲೆ ಕೃಷಿ ವಿದ್ಯಾಪೀಠ, ರಾಹುರಿ, ಮಹಾರಾಷ್ಟ್ರ |
| 23 | ಮರಾಠವಾಡಾ ಕೃಷಿ ವಿಶ್ವವಿದ್ಯಾಲಯ, ಪರಬಾನಿ, ಮಹಾರಾಷ್ಟ್ರ |
| 24 | ನರೇಂದ್ರದೇವ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಫೈಜಾಬಾದ, ಉತ್ತರಪ್ರದೇಶ |
| 25 | ವೆಂಕಟೇಶ್ವರ ಪಶು ವೈದ್ಯಕೀಯ ವಿಶ್ವವಿದ್ಯಾಲಯ, ತಿರುಪತಿ, ಆಂದ್ರಪ್ರದೇಶ |

Digitised by Bharatavani, CIIL

| | |
|---|---|
| 26 | ತಮಿಳುನಾಡು ಪಶು ವೈದ್ಯಕೀಯ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು. |
| 27 | ಪಶ್ಚಿಮ ಬಂಗಾಳ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಕೊಲ್ಕತಾ, ಪಶ್ಚಿಮ ಬಂಗಾಳ |
| 28 | ರಾಜೀವಗಾಂಧಿ ಪಶು ವಿಶ್ವವಿದ್ಯಾಲಯ, ಪುದುಚೇರಿ, ಪುದುಚೇರಿ. |
| 29 | ಶೇರ–ಇ–ಕಾಶ್ಮಿರ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಶ್ರೀನಗರ, ಕಾಶ್ಮಿರ |
| 30 | ಶೇರ–ಇ–ಕಾಶ್ಮಿರ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಕ್ಯಾಂಪ ಕಛೇರಿ, ಜಮ್ಮು, ಜಮ್ಮು & ಕಾಶ್ಮಿರ |
| 31 | ಓರಿಸ್ಸಾ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಭುವನೇಶ್ವರ, ಓರಿಸ್ಸಾ. |
| 32 | ಪಂಜಾಬ ಕೃಷಿ ವಿಶ್ವವಿದ್ಯಾಲಯ, ಲುದಿಯನಾ, ಪಂಜಾಬ. |
| 33 | ರಾಜಸ್ತಾನ ಕೃಷಿ ವಿಶ್ವವಿದ್ಯಾಲಯ, ಬಿಕಾನರ್, ರಾಜಸ್ತಾನ. |
| 34 | ರಾಜೇಂದ್ರ ಕೃಷಿ ವಿಶ್ವವಿದ್ಯಾಲಯ, ಪುಸಾ, ಸಮಸ್ತಿಪುರ, ಬಿಹಾರ |
| 35 | ತಮಿಳುನಾಡು ಕೃಷಿ ವಿಶ್ವವಿದ್ಯಾಲಯ, ಕೊಯಮತ್ತೂರ, ತಮಿಳುನಾಡು |
| 36 | ಕೇರಳ ಪಶು ವಿಶ್ವವಿದ್ಯಾಲಯ, ಪೂಕೂಟ್, ವಾಯನಾಡ್, ಕೇರಳ. |

ಪ್ರತಿ ವರ್ಷ ಕೃಷಿ ಭೂಮಿ ಹಾಗೂ ಜಾನುವಾರುಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ, ವೈಜ್ಞಾನಿಕ ಪಶು ಸಂಗೋಪನೆ ಮುಖಾಂತರ ಇದ್ದ ಭೂಮಿಯಲ್ಲಿಯೇ ಕೃಷಿ ಉತ್ಪನ್ನವನ್ನು ಹೆಚ್ಚಿಸಬೇಕಾದರೆ, ವಿಶ್ವವಿದ್ಯಾಲಯದ ತಾಂತ್ರಿಕತೆಗಳು ಬರೀ ಪುಸ್ತಕದಲ್ಲಿರದೇ ರೈತರ ಮನೆ ಬಾಗಿಲಿಗೆ ತಲುಪಿಸಬೇಕಾಗಿರುವುದು ಅನಿವಾರ್ಯ. ಈ ನಿಟ್ಟಿನಲ್ಲಿ, ಭಾರತ ಸರ್ಕಾರವು ಕೃಷಿ ಹಾಗೂ ಪಶು ವಿಶ್ವವಿದ್ಯಾಲಯಗಳಿಗೆ ಇನ್ನೂ ಹೆಚ್ಚಿನ ಆರ್ಥಿಕ ಅನುದಾನದ ಮುಖಾಂತರ ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳಿಗೆ ಒತ್ತು ನೀಡಿದಲ್ಲಿ ಕೃಷಿ ಹಾಗೂ ಪಶು ಸಂಗೋಪನೆಯ ಶಿಕ್ಷಣದ ಗುಣಮಟ್ಟ ಸುಧಾರಿಸುವಲ್ಲಿ ಯಾವುದೇ ಸಂದೇಹವಿಲ್ಲ.

**–ಡಾ. ಮಂಜುನಾಥ ಪಾಟೀಲ್**

## ಭಾರತದಲ್ಲಿ ಕೃಷಿ ವಿಶ್ವವಿದ್ಯಾಲಯಗಳು

ಕೃಷಿಯು ಭಾರತ ದೇಶದ ಅತಿ ದೊಡ್ಡ ಉದ್ದಿಮೆಯಾಗಿದ್ದು, ದೇಶದ 10 ಕೋಟಿಗಿಂತ ಹೆಚ್ಚಿನ ಜನಸಂಖ್ಯೆ ಕೃಷಿ ಅವಲಂಬಿತರಾಗಿದ್ದಾರೆ. ಭಾರತದ ಆರ್ಥಿಕತೆಯಲ್ಲಿ, ಕೃಷಿಯು ಶೇ. 17 ಪಾಲುದಾರಿಕೆ ಹೊಂದಿದ್ದು, ಒಟ್ಟು ಜನಸಂಖ್ಯೆಯ 2/3 ರಷ್ಟು ಜನರ ಜೀವನೋಪಾಯವಾಗಿದೆ. ಉದ್ಯೋಗವಕಾಶದ ಶೇ. 52 ರಷ್ಟು ಕೆಲಸವು ಕೃಷಿಯ ಮೇಲೆ ಅವಲಂಬಿತವಾಗಿರುವುದರಿಂದ, ಕೃಷಿಯು ನಮ್ಮ ದೇಶದ ಬೆನ್ನೆಲುಬಾಗಿದೆ.

1960 ರಲ್ಲಿ, ನಮ್ಮ ದೇಶದ ಕೃಷಿ ಉತ್ಪನ್ನದ ಆಮದು 8–10 ಮಿಲಿಯನ್ ಟನ್ ಇದ್ದಾಗ, ಕಚ್ಚಾಡಿ ತಿನ್ನುವ ಪರಿಸ್ಥಿತಿಯಲ್ಲಿತ್ತು. ಆದರೆ, 1950 ಹಾಗೂ ಈಗಿನ ಕೃಷಿ ಉತ್ಪನ್ನವನ್ನು ಹೋಲಿಸಿದಾಗ ಆಹಾರ ಉತ್ಪಾದನೆಯು 3.5 ಪಟ್ಟು, ಹಣ್ಣುಗಳು 1.6 ಪಟ್ಟು, ತರಕಾರಿ 2.1 ಪಟ್ಟು, ಮೀನುಗಾರಿಕೆ 5 ಪಟ್ಟು, ಹಾಲಿನ ಉತ್ಪಾದನೆ 1.8 ಪಟ್ಟು ಹಾಗೂ 4.8 ಪಟ್ಟು ಮೊಟ್ಟೆಯ ಉತ್ಪಾದನೆಯಲ್ಲಿ ಹೆಚ್ಚಳ ಕಂಡಿತು. ಇದಕ್ಕೆ ಕಾರಣ, ದೇಶದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳು, ವಿಶ್ವವಿದ್ಯಾಲಯದ ತಾಂತ್ರಿಕತೆಗಳು ಹಾಗೂ ಆಧುನಿಕ ಆವಿಷ್ಕಾರಗಳು ರೈತನ ಮನೆ ಬಾಗಿಲಿಗೆ ತಲುಪಿರುವುದು. ಈ ನಿಟ್ಟಿನಲ್ಲಿ ಆಹಾರ ಹಾಗೂ ಇತರೆ ಉತ್ಪನ್ನಗಳನ್ನು ಹೆಚ್ಚಿಸುವಲ್ಲಿ, ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ಪಾತ್ರ ಮಹತ್ವದ್ದಾಗಿದೆ.

ಕೃಷಿ ಅಭಿವೃದ್ಧಿಗೋಸ್ಕರ ನಮ್ಮ ದೇಶದ ಮೊಟ್ಟಮೊದಲ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರು ಅವರು ಹೇಳಿದ ಹಾಗೆ **"ಎಲ್ಲವೂ ನಿಲ್ಲುತ್ತೆ, ಆದರೆ ಕೃಷಿಯು ನಿಲ್ಲೊಲ್ಲಾ"**. ಹಾಗೆಯೇ, ಪಂಜಾಬ ಹಾಗೂ ಹರಿಯಾಣ ಕೃಷಿಯಲ್ಲಾದ 'ಹಸಿರು ಕ್ರಾಂತಿ', ಗುಜರಾತದ ಹಾಲಿನಲ್ಲಾದ 'ಬಿಳಿ ಕ್ರಾಂತಿ', ಮೀನಿನಲ್ಲಾದ 'ನೀಲಿ ಕ್ರಾಂತಿ'ಯು, ಇಂದಿನ 230 ಮಿಲಿಯನ್ ಟನ್ ಆಹಾರದಲ್ಲಿ, 63 ಮಿ. ಟನ್, ಹಣ್ಣು ಹಾಗೂ ತರಕಾರಿಯಲ್ಲಿ ಉತ್ಪಾದನ ಹೆಚ್ಚಳಕ್ಕೆ ಕಾರಣವಾಗಿವೆ 125 ಮಿ. ಟನ್ ತರಕಾರಿ ಅಲ್ಲದೆ, ಪ್ರಪಂಚದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪಾದನೆ ಮಾಡುವ ದೇಶ (100 ಮಿ. ಟನ್) ಭಾರತ ದೇಶವಾಗಿದೆ.

Digitised by Bharatavani, CIIL

1950–51ರಲ್ಲಿ ಒಬ್ಬ ಮನುಷ್ಯನಿಗೆ ಪ್ರತಿ ದಿನಕ್ಕೆ 124 ಗ್ರಾಂ. ಹಾಲು ದೊರೆಯುತ್ತಿತ್ತು. ಆದರೆ 2011–12ರಲ್ಲಿ ಪ್ರತಿ ದಿನಕ್ಕೆ 245 ಗ್ರಾಂ. ದೊರೆಯುತ್ತಿದೆ. ಅದೇ ರೀತಿ ಒಬ್ಬ ಮನುಷ್ಯನಿಗೆ ಪ್ರತಿ ದಿನಕ್ಕೆ 5 ಮೊಟ್ಟೆ ದೊರೆತರೆ, ಸದ್ಯದಲ್ಲಿ 42 ಮೊಟ್ಟೆ ದೊರೆಯುತ್ತಿವೆ. 1950ಕ್ಕೆ ಹೋಲಿಕೆ ಮಾಡಿದಾಗ, ಮೀನುಗಾರಿಕೆಯಲ್ಲಿ ಶೇಕಡಾ 4.5 ರಷ್ಟು ಏರಿಕೆಯಾಗಿದೆ. ಈ ಎಲ್ಲಾ ಉತ್ಪನ್ನಗಳ ಹೆಚ್ಚಳದಲ್ಲಿ, ಕೃಷಿ ವಿಶ್ವವಿದ್ಯಾಲಯ ವಿಜ್ಞಾನಿಗಳ ಶ್ರಮ ಅಡಗಿದೆ.

ನಮ್ಮ ಭಾರತ ದೇಶವು 45 ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು (ಪಶು ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ಒಳಗೊಂಡು) ಹಾಗೂ ಒಂದು ಕೇಂದ್ರ ಕೃಷಿ ವಿಶ್ವವಿದ್ಯಾಲಯ (ಮಣಿಪಾಲ) ಇದ್ದು, 210 ಮಹಾವಿದ್ಯಾಲಯಗಳನ್ನು ಹೊಂದಿರುತ್ತದೆ. ಇದಲ್ಲದೆ, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ನವದೆಹಲಿ, ಭಾರತೀಯ ಪಶು ಸಂಗೋಪನಾ ಸಂಸ್ಥೆ, ಈಜತ್ ನಗರ (ಉತ್ತರ ಪ್ರದೇಶ), ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ, ಕರ್ನಾಲ್ (ಹರಿಯಾಣ), ಕೇಂದ್ರ ಮೀನುಗಾರಿಕೆ ಬೋಧನಾ ಸಂಸ್ಥೆ, ಮುಂಬಯಿ, ಕೃಷಿ ಸಂಸ್ಥೆ, ಅಲಹಬಾದ್ ಹಾಗೂ ನಾರ್ಮ್ ಸಂಸ್ಥೆ ಹೈದ್ರಾಬಾದ್ ಇವೆಲ್ಲವೂ ಪರಿಗಣಿತ ವಿಶ್ವವಿದ್ಯಾಲಯಗಳಾಗಿದ್ದು, ಇವು ಕೂಡಾ ಕೃಷಿ ಹಾಗೂ ಅದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ನೀಡುತ್ತವೆ. ಭಾರತ ತಾಂತ್ರಿಕತೆ ಸಂಸ್ಥೆ, ಖರಗಪೂರ ಹಾಗೂ 100ಕ್ಕೂ ಹೆಚ್ಚು ಖಾಸಗಿ ಕೃಷಿ ಮಹಾವಿದ್ಯಾಲಯಗಳು ಕೃಷಿಯ ಬಗ್ಗೆ ಬೋಧನೆ, ಸಂಶೋಧನೆ ಹಾಗೂ ವಿಸ್ತರಣೆ ಚಟುವಟಿಕೆಗಳಲ್ಲಿ ಪಾಲ್ಗೊಂಡಿವೆ.

ಕೃಷಿ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಕಾರ್ಯಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ನವದೆಹಲಿ ಶಿಫಾರಸ್ಸಿನ ಪ್ರಕಾರ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಆಡಳಿತಾತ್ಮಕ ಕಾರ್ಯ ಸೂಚಿಗಳನ್ನು ಕೈಗೊಂಡಲ್ಲಿ, ಆರ್ಥಿಕ ಸಂಪನ್ಮೂಲವನ್ನು ರಾಜ್ಯ ಸರ್ಕಾರ ಭರಿಸುವುದು.

## ಕೃಷಿ ವಿಶ್ವವಿದ್ಯಾಲಯದ ಆಡಾಳಿತಾತ್ಮಕ ವಿವರ

<table>
<tr><th colspan="6">ಕೃಷಿ ವಿಶ್ವವಿದ್ಯಾಲಯ</th></tr>
<tr><th colspan="6">ಕುಲಾಧಿಪತಿಗಳು</th></tr>
<tr><th colspan="6">ರಾಜ್ಯ ಕೃಷಿ ಸಚಿವರು, ಕರ್ನಾಟಕ ಸರಕಾರ</th></tr>
<tr><th colspan="6">ಕುಲಪತಿಗಳು</th></tr>
<tr><td>ಕುಲಸಚಿವರು</td><td>ಶಿಕ್ಷಣ ನಿರ್ದೇಶಕರು</td><td>ಸಂಶೋಧನಾ ನಿರ್ದೇಶಕರು</td><td>ವಿಸ್ತರಣಾ ನಿರ್ದೇಶಕರು</td><td>ಸ್ನಾತಕೋತ್ತರ ನಿರ್ದೇಶಕರು</td><td>ಹಣಕಾಸು ನಿಯಂತ್ರಣಾಧಿಕಾರಿಗಳು</td></tr>
<tr><td rowspan="5">ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳುವುದು, ವಿಶ್ವವಿದ್ಯಾಲಯದ ಆಡಳಿತಾತ್ಮಕ ಸಮಸ್ಯೆಗಳಿಗೆ ಸ್ಪಂದಿಸುವುದು</td><td>ಡೀನ್, ಕೃಷಿ ಮಹಾವಿದ್ಯಾಲಯ</td><td>ಯೋಜನಾ ನಿರ್ದೇಶಕರು</td><td>ಕಾರ್ಯಕ್ರಮ ಸಂಯೋಜ–ಕರು</td><td rowspan="5">ಸ್ನಾತಕೋತ್ತರ ಹಾಗೂ ಪಿ.ಎಚ್.ಡಿ. ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು, ಪದವಿ ನೀಡುವುದು</td><td rowspan="5">ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರ ಪ್ರತಿ ಮಾಹೆಯ ಸಂಬಳ ಕಾರ್ಯನಿರ್ವಹಿಸುವುದು, ಕೃವಿವಿಯ ಹಣಕಾಸಿನ ಸಂಬಂಧಪಟ್ಟ ವಿವರಗಳನ್ನು ನೋಡಿಕೊಳ್ಳುವುದು</td></tr>
<tr><td>ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥ</td><td>ಕ್ಷೇತ್ರ ಅಧೀಕ್ಷಕರು</td><td rowspan="4">ವಿಷಯ ತಜ್ಞರುಗಳು</td></tr>
<tr><td>ಪ್ರಾಧ್ಯಾಪಕರು</td><td>ಹಿರಿಯ ವಿಜ್ಞಾನಿ</td></tr>
<tr><td>ಸಹ ಪ್ರಾಧ್ಯಾಪಕರು</td><td rowspan="2">ಕಿರಿಯ ವಿಜ್ಞಾನಿ</td></tr>
<tr><td>ಸಹಾಯಕ ಪ್ರಾಧ್ಯಾಪಕರು</td></tr>
</table>

ಇದಲ್ಲದೆ ಕೃಷಿ ವಿಶ್ವವಿದ್ಯಾಲಯವು ಆಡಳಿತ ಮಂಡಳಿಯ ಸದಸ್ಯರನ್ನು ಒಳಗೊಂಡಿದ್ದು, ವಿಶ್ವವಿದ್ಯಾಲಯದ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಆಡಳಿತ ಮಂಡಳಿಯ ಸದಸ್ಯರ ಅನುಮೋದನೆ ಬೇಕಾಗಿರುತ್ತದೆ.

**ಕೃಷಿ/ಕೃಷಿ ತಾಂತ್ರಿಕತೆ ಪದವಿ ಪಡೆಯಲು ಅರ್ಹತೆ:** ಕೃಷಿ ಪದವಿಗೆ ಅರ್ಹತೆ ಪಡೆಯಲು ವಿದ್ಯಾರ್ಥಿಯು ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ ಕಡ್ಡಾಯವಾಗಿ ಭೌತಶಾಸ್ತ್ರ, ರಸಾಯನ ಶಾಸ್ತ್ರ ಹಾಗೂ ಜೀವಶಾಸ್ತ್ರ ವಿಷಯಗಳನ್ನು ಆಯ್ಕೆ ಮಾಡಿಕೊಂಡು ತೇರ್ಗಡೆ ಹೊಂದಿರಬೇಕು. ಕ್ರೀಡಾಪಟುಗಳು/ ಎನ್.ಎಸ್.ಎಸ್./ಎನ್.ಸಿ.ಸಿ./ ಮಾಜಿ ಸೈನಿಕರ ಮಕ್ಕಳು/ಆಂಗ್ಲೋ ಇಂಡಿಯಾ/ ಸ್ಕೌಟ್ಸ್ ಆಂಡ್ ಗೈಡ್ಸ್ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಪ್ರವೇಶ ಪ್ರಕ್ರಿಯೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ರೈತನ (ಸ್ವಯಂ

Digitised by Bharatavani, CIIL

ಉಳುಮೆದಾರರು) ಪುತ್ರ ಅಥವಾ ಪುತ್ರಿಯಾಗಿದಲ್ಲಿ 10 ರಷ್ಟು ಅಂಕಗಳು ಪರಿಗಣಿಸಲಾಗುವುದು. ಗ್ರಾಮೀಣ ಪ್ರದೇಶದಲ್ಲಿ 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮ ವಿದ್ಯಾಭ್ಯಾಸ ಕೈಗೊಂಡಲ್ಲಿ ಆದ್ಯತೆ ನೀಡಲಾಗುವುದು. ಹಾಗೆಯೇ, **ಕೃಷಿ ತಾಂತ್ರಿಕತೆ/ಕೋರ್ಸ್‌ಗೆ** ಪ್ರವೇಶ ಪಡೆಯಲು ವಿದ್ಯಾರ್ಥಿಗಳು ದ್ವಿತಿಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ ಹಾಗೂ ಗಣಿತ ಶಾಸ್ತ್ರ ವಿಷಯಗಳನ್ನು ಕಡ್ಡಾಯವಾಗಿ ತೆಗೆದುಕೊಂಡು ತೇರ್ಗಡೆ ಹೊಂದಿರಬೇಕು. ಪ್ರವೇಶಕ್ಕೆ ಮೆರಿಟ್ ಪ್ರಕಾರ ಆಯ್ಕೆ ಮಾಡಿಕೊಳ್ಳಲಾಗುವುದು.

**ಬಿ.ಎಸ್‌ಸಿ (ಕೃಷಿ)/ಕೃಷಿ ತಾಂತ್ರಿಕತೆ ಪದವಿ ವಿವರ** : ಒಬ್ಬ ವಿದ್ಯಾರ್ಥಿಯು ಬಿ.ಎಸ್‌ಸಿ (ಕೃಷಿ) ಪದವಿಯಲ್ಲಿ 11 ವಿವಿಧ ಕೋರ್ಸುಗಳ ಬಗ್ಗೆ, ಸ್ನಾತಕೋತ್ತರ ಪದವಿಯಲ್ಲಿ 95 ವಿಷಯಗಳು ಹಾಗೂ ಪಿ.ಎಚ್.ಡಿ ಪದವಿಯಲ್ಲಿ 80 ವಿಷಯಗಳನ್ನು ಮುಗಿಸಬೇಕಾಗಿರುತ್ತದೆ. 4 ವರ್ಷದ ಬಿ.ಎಸ್‌ಸಿ (ಕೃಷಿ) ಪದವಿ, 2 ವರ್ಷ ಸ್ನಾತಕೋತ್ತರ ಪದವಿ ಹಾಗೂ 3 ವರ್ಷ ಪಿ.ಎಚ್.ಡಿ ಪದವಿ ಇರುತ್ತದೆ.

ಈ ಪದವಿಗಳು 8 ಸೆಮಿಸ್ಟರ್ ಒಳಗೊಂಡ ನಾಲ್ಕು ವರ್ಷದ ಪದವಿಯಾಗಿರುತ್ತದೆ. ಒಬ್ಬ ವಿದ್ಯಾರ್ಥಿಯು ಒಂದು ವರ್ಷದಲ್ಲಿ ಎರಡು ಸೆಮಿಸ್ಟರ್‌ಗಳನ್ನು ಪೂರ್ಣಗೊಳಿಸಿ ಉತ್ತೀರ್ಣರಾದಲ್ಲಿ ಆ ಶೈಕ್ಷಣಿಕ ವರ್ಷದ ವಿದ್ಯಾಭ್ಯಾಸ ಮುಗಿಸಿದಂತಾಗುತ್ತದೆ. **ಸೆಮಿಸ್ಟರ್:** 21 ವಾರಗಳ ಅವಧಿ ಒಳಗೊಂಡು 105 ದಿವಸಗಳ ಹಾಜರಾತಿ ಕಡ್ಡಾಯವಾಗಿರಬೇಕು. **ಶ್ರೇಣಿ** : 1 ಸೆಮಿಸ್ಟರಿನ ಕಲಿಕಾವಧಿಯಲ್ಲಿ ಪೂರ್ಣಗೊಳಿಸಬೇಕಾದ ವಿಷಯವನ್ನು ಶ್ರೇಣಿ ಎನ್ನುತ್ತಾರೆ. **ಶ್ರೇಣಿ ಕ್ರೇಡಿಟ್:** ಶ್ರೇಣಿ ಕ್ರೇಡಿಟ್ ವಿದ್ಯಾರ್ಥಿಯ ಆ ಶ್ರೇಣಿಯಲ್ಲಿ ಕೈಗೊಂಡ ವಿದ್ಯಾಭ್ಯಾಸವನ್ನು ಸೂಚಿಸುತ್ತದೆ. ವಾರಕ್ಕೆ ಒಂದು ಗಂಟೆ ಶಿಕ್ಷಕನು ವಿದ್ಯಾರ್ಥಿಗೆ ಬೋಧಿಸಿದಲ್ಲಿ ಅದನ್ನು ಒಂದು ಕ್ರೇಡಿಟ್ ಗಂಟೆ ಎನ್ನುತ್ತಾರೆ. ವಾರಕ್ಕೆ ಎರಡು ಗಂಟೆ ಅವಧಿಯ ಒಂದು ಪ್ರಯೋಗಾಲಯದ ಅಭ್ಯಾಸವಿರುತ್ತದೆ.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಧನವನ್ನು ರಿಯಾಯಿತಿ ರೂಪದಲ್ಲಿ ಸಂಬಂಧಪಟ್ಟ ಡೀನ್, ಕೃಷಿ ಮಹಾವಿದ್ಯಾಲಯ ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಂದ ವಿದ್ಯಾರ್ಥಿಗಳಿಗೆ ವಾಪಸ್ಸು ಮಾಡಲಾಗುವುದು. ಕೆಟಗರಿ–1ರ ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರ ಒದಗಿಸಿದಲ್ಲಿ ಪ.ಜಾ/ಪ.ಪಂ ವಿದ್ಯಾರ್ಥಿಗಳಂತೆ ಪ್ರವೇಶ ಧನವನ್ನು ರಿಯಾಯಿತಿ ರೂಪದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಮುಖಾಂತರ ಪ್ರತಿ ವರ್ಷ ಮಾರ್ಚ 31ರ ಒಳಗಾಗಿ ವಾಪಸ್ಸು ಮಾಡಲಾಗುವುದು. ಇತರೆ ವಿದ್ಯಾರ್ಥಿಗಳು ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಒದಗಿಸಿದಲ್ಲಿ ಸಂಬಂಧಪಟ್ಟ ಡೀನ್, ಕೃಷಿ ಮಹಾವಿದ್ಯಾಲಯ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಅಧಿಕಾರಿಗಳ ಮುಖಾಂತರ ಟ್ಯೂಷನ್ ಹಾಗೂ ಪರೀಕ್ಷಾ ಶುಲ್ಕವನ್ನು ವಾಪಸ್ಸು ಮಾಡಲಾಗುವುದು.

ಕೃಷಿ ಪದವಿ ಪೂರ್ಣಗೊಳಿಸಲು ಪ್ರತಿಯೊಬ್ಬ ವಿದ್ಯಾರ್ಥಿಯು 10 ಗ್ರೇಡ ಪಾಯಿಂಟ್ ಶ್ರೇಣಿ ಪದ್ಧತಿಯಲ್ಲಿ 6ಕ್ಕಿಂತ ಹೆಚ್ಚಿನ ಅಂಕವನ್ನು ಪಡೆದು, 145+19* ಕ್ರೇಡಿಟ ಅವಧಿ ಪೂರ್ಣಗೊಳಿಸಬೇಕು. ಅದೇ ರೀತಿ ಕೃಷಿ ತಾಂತ್ರಿಕ ಪದವಿ ಪೂರ್ಣಗೊಳಿಸಲು ಪ್ರತಿಯೊಬ್ಬ ವಿದ್ಯಾರ್ಥಿಯು 10 ಗ್ರೇಡ ಪಾಯಿಂಟ್ ಶ್ರೇಣಿ ಪದ್ಧತಿಯಲ್ಲಿ 6ಕ್ಕಿಂತ ಹೆಚ್ಚಿನ ಅಂಕವನ್ನು ಪಡೆದು, 162+19* ಕ್ರೇಡಿಟ್ ಅವಧಿ ಪೂರ್ಣಗೊಳಿಸಬೇಕು.

**ಭಾರತ ದೇಶದಲ್ಲಿರುವ ಕೃಷಿ,ತೋಟಗಾರಿಕೆ ಹಾಗೂ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳು**

| ಕ್ರ. ಸಂ. | ರಾಜ್ಯ | ವಿಶ್ವವಿದ್ಯಾಲಯ | ಮಹಾವಿದ್ಯಾಲಯಗಳು |
|---|---|---|---|
| 01 | ಆಂಧ್ರಪ್ರದೇಶ | ಆಚಾರ್ಯ ಎನ್.ಜಿ. ರಂಗ ಕೃಷಿ ವಿವಿ, ಹೈದ್ರಾಬಾದ | ಕೃಷಿ & ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಬಾಪಟ್ಲಾ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಮಡಕಶಿರಾ |
| | | | ಕೃಷಿ ಮಹಾವಿದ್ಯಾಲಯ, ರಾಜೇಂದ್ರ ನಗರ, ತಿರುಪತಿ, ಅಸ್ವರಪೇಟೆ, ನೈರಾ, ಮಹಾನಂದಿ, ಜಗಟೀಲಾ, ರಾಜಮಂಡ್ರಿ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಹೈದ್ರಾಬಾದ |
| | | | ಆಹಾರ ವಿಜ್ಞಾನ ಮತ್ತು ತಾಂತ್ರಿಕತೆ ಮಹಾವಿದ್ಯಾಲಯ, ಪುಲಿವೆಂದಲಾ, ಬಾಪಟ್ಲಾ |
| | | ಡಾ. ವೈ.ಎಸ್.ಆರ್. ತೋಟಗಾರಿಕೆ ವಿವಿ, ಪಶ್ಚಿಮ ಗೋದಾವರಿ | ತೋಟಗಾರಿಕೆ ಮಹಾವಿದ್ಯಾಲಯ, ಅನಂತರಾಜಪೇಟ (ಕಡಪಾ), ಮೊಜಿರಿಲಾ (ಮಹಿಬೂಬನಗರ), ರಾಜೇಂದ್ರ ನಗರ (ಹೈದ್ರಾಬಾದ), ವೆಂಕಟರಾಮನ ಗುಡೆಮ್ (ಪಶ್ಚಿಮ ಗೋದಾವರಿ). |
| | | ಶ್ರೀ ವೆಂಕಟೇಶ್ವರ ಪಶು ವೈದ್ಯಕೀಯ ವಿವಿ, ತಿರುಪತಿ | ಪಶು ವೈದ್ಯಕೀಯ ಮಹಾವಿದ್ಯಾಲಯ, ಹೈದ್ರಾಬಾದ, ತಿರುಪತಿ, ಗನ್ನವರಾಂ, ಪೊಡತೂರ, ಕೊರುತಲ, ಮುತುಕುರ್ |

Digitised by Bharatavani, CIIL

| | | | |
|---|---|---|---|
| 02 | ಗುಜರಾತ | ಆನಂದ ಕೃವಿವಿ, ಆನಂದ | ಪಶು ವೈದ್ಯಕೀಯ ಮಹಾವಿದ್ಯಾಲಯ, ಆನಂದ. |
| | | | ಹೈನುಗಾರಿಕೆ ಮಹಾವಿದ್ಯಾಲಯ, ಆನಂದ. |
| | | | ಕೃಷಿ ಹಾಗೂ ಕೃಷಿ ತಾಂತ್ರಿಕತೆ ಮಹಾವಿದ್ಯಾಲಯ, ಆನಂದ. |
| | | ಜುನಗಾಡಾ ಕೃವಿವಿ, ಜುನಗಾಡಾ | ಕೃಷಿ ಹಾಗೂ ಕೃಷಿ ತಾಂತ್ರಿಕತೆ ಮಹಾವಿದ್ಯಾಲಯ, ಜುನಗಾಡಾ. |
| | | | ಮೀನುಗಾರಿಕೆ ಮಹಾವಿದ್ಯಾಲಯ, ಜುನಗಾಡಾ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಜುನಗಾಡಾ. |
| | | ನವಸಾರಿ ಕೃವಿವಿ, ನವಸಾರಿ | ಕೃಷಿ ಮಹಾವಿದ್ಯಾಲಯ, ನವಸಾರಿ |
| | | | ತೋಟಗಾರಿಕೆ ಹಾಗೂ ಅರಣ್ಯ ಮಹಾವಿದ್ಯಾಲಯ, ನವಸಾರಿ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ನವಸಾರಿ |
| | | ಸರಡಾ ಕೃಷಿ ನಗರ ದಾಂತಿವಾಡ ಕೃವಿವಿ, ದಾಂತಿವಾಡ | ಕೃಷಿ ಮಹಾವಿದ್ಯಾಲಯ, ದಾಂತಿವಾಡ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ದಾಂತಿವಾಡ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ದಾಂತಿವಾಡ |
| | | | ತೋಟಗಾರಿಕೆ ಮಹಾವಿದ್ಯಾಲಯ, ದಾಂತಿವಾಡ |
| 03 | ಮಹಾರಾಷ್ಟ್ರ | ಮರಾಠವಾಡ ಕೃವಿವಿ, ಪರಬಾನಿ | ಪಶು ವೈದ್ಯಕೀಯ ಮಹಾವಿದ್ಯಾಲಯ, ಪರಬಾನಿ |
| | | | ಕೃಷಿ ಮಹಾವಿದ್ಯಾಲಯ, ಪರಬಾನಿ, ಲಾತೂರ, ಅಂಬಜೋಗೈ, ಬದ್ನಾಪೂರ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಪರಭಣಿ |
| | | | ತೋಟಗಾರಿಕೆ ಮಹಾವಿದ್ಯಾಲಯ, ಪರಭಣಿ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಪರಭಣಿ |
| | | ಬಾಲಾಸಾಹೇಬ ಸಾವಂತ ಕೊಂಕಣ ಕೃಷಿ ವಿದ್ಯಾಪೀಠ, ದಾಪೋಲಿ, ರತ್ನಗಿರಿ | ಕೃಷಿ ಮಹಾವಿದ್ಯಾಲಯ, ದಾಪೋಲಿ. |
| | | | ಮೀನುಗಾರಿಕೆ ಮಹಾವಿದ್ಯಾಲಯ, ದಾಪೋಲಿ |
| | | | ಕೃಷಿ ತಾಂತ್ರಿಕತೆ ಮಹಾವಿದ್ಯಾಲಯ, ದಾಪೋಲಿ |
| | | ಪಂಜಾಬರಾವ ದೇಶಮುಖ ಕೃಷಿ ವಿದ್ಯಾಪೀಠ, ಅಕೋಲಾ | ಕೃಷಿ ಮಹಾವಿದ್ಯಾಲಯ, ಅಕೋಲಾ, ನಾಗಪೂರ, ಸೊನಾಪುರ. |
| | | | ತೋಟಗಾರಿಕೆ ಮಹಾವಿದ್ಯಾಲಯ, ಅಕೋಲಾ |
| | | | ಅರಣ್ಯ ಮಹಾವಿದ್ಯಾಲಯ, ಅಕೋಲಾ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಅಕೋಲಾ |
| | | ಮಹಾತ್ಮ ಫುಲೆ ಕೃಷಿ ವಿದ್ಯಾಪೀಠ, ರಾಹುರಿ | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಹುರಿ |
| | | | ಕೃಷಿ ಮಹಾವಿದ್ಯಾಲಯ, ಪುಣೆ, ಕೊಲ್ಹಾಪುರ, ದುಲೆ. |
| | | | ತೋಟಗಾರಿಕೆ ಮಹಾವಿದ್ಯಾಲಯ, ಪುಣೆ. |
| | | ಮಹಾರಾಷ್ಟ್ರ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿ, ನಾಗಪೂರ | ಪಶು ವೈದ್ಯಕೀಯ ಮಹಾವಿದ್ಯಾಲಯ, ನಾಗಪೂರ, ಮುಂಬಯಿ, ಪರಬಾನಿ, ಉದಗೀರ, ಶಿರವಾಳ. |
| | | | ಹೈನುಗಾರಿಕೆ ಮಹಾವಿದ್ಯಾಲಯ, ಉದಗೀರ, ವರುದ್. |
| | | | ಮೀನುಗಾರಿಕೆ ಮಹಾವಿದ್ಯಾಲಯ, ನಾಗಪೂರ, ಉದಗೀರ್ |
| | | | ಸ್ನಾತಕೋತ್ತರ ಪಶು ಸಂಗೋಪನೆ ಹಾಗೂ ವೈದ್ಯಕೀಯ ಸಂಸ್ಥೆ, ಅಕೋಲಾ. |

Digitised by Bharatavani, CIIL

| | | | |
|---|---|---|---|
| 04 | ಪಂಜಾಬ | ಪಂಜಾಬ ಕೃವಿವಿ, ಲುದಿಯಾನಾ | ಕೃಷಿ ಮಹಾವಿದ್ಯಾಲಯ, ಲುಧಿಯಾನಾ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಲುಧಿಯಾನಾ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಲುಧಿಯಾನಾ |
| | | ಗುರು ಅಂಗದ ದೇವ ಪಶು ವೈದ್ಯಕೀಯ ವಿವಿ, ಲುದಿಯಾನಾ | ಪಶು ವೈದ್ಯಕೀಯ ಮಹಾವಿದ್ಯಾಲಯ, ಲುಧಿಯಾನಾ. |
| | | | ಹೈನುಗಾರಿಕೆ ಮಹಾವಿದ್ಯಾಲಯ, ಲುಧಿಯಾನಾ. |
| | | | ಮೀನುಗಾರಿಕೆ ಮಹಾವಿದ್ಯಾಲಯ, ಲುಧಿಯಾನಾ. |
| | | | ಪಶು ಜೈವಿಕ ತಂತ್ರಜ್ಞಾನ ಶಾಲೆ, ಲುಧಿಯಾನಾ. |
| 05 | ರಾಜಸ್ತಾನ | ಮಹಾರಾಣ ಪ್ರತಾಪ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಉದಯಪುರ | ರಾಜಸ್ತಾನ ಕೃಷಿ ಮಹಾವಿದ್ಯಾಲಯ, ಉದಯಪುರ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಉದಯಪುರ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಉದಯಪುರ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಉದಯಪುರ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಉದಯಪುರ |
| | | | ತೋಟಗಾರಿಕೆ & ಅರಣ್ಯ ಮಹಾವಿದ್ಯಾಲಯ, ಜಲವಾರ್ |
| | | ರಾಜಸ್ತಾನ ಕೃವಿವಿ, ಬಿಕಾನರ್ | ಕೃಷಿ ಮಹಾವಿದ್ಯಾಲಯ, ಬಿಕಾನರ್, ದೌಸಾ, ಜಾಬನರ್ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಬಿಕಾನರ್ |
| 06 | ತಮಿಳುನಾಡು | ತಮಿಳುನಾಡು ಕೃವಿವಿ, ಕೊಯಮತೂರ. | ಕೃಷಿ ಮಹಾವಿದ್ಯಾಲಯ, ಕೊಯಮತೂರ, ಮಧುರೈ, ನವಲ್ಲೂರ, ಕುಟ್ಟಾಪಟ್ಟು, ತಿರುಚಿರಾಪಲ್ಲಿ, ಕಿಲ್ಲಿಕುಲಂ, ವಲ್ಲನಾಡು, ತುತಕುಡಿ, ವೆಲ್ಲೂರ, ಕರೈಕಲ್. |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಮದುರೈ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಕೊಯಮತೂರ, ತಿರುಚಿರಾಪಲ್ಲಿ, ಪಲ್ಲಪುರಂ, ಕುಮಲೂರ, ತೇಣಿ |
| | | | ಅರಣ್ಯ ಮಹಾವಿದ್ಯಾಲಯ, ಮೆಟ್ಟುಪಲ್ಯಂ |
| | | ತಮಿಳುನಾಡು ಪಶು ವಿವಿ, ಚೆನ್ನೈ | ಪಶು ವೈದ್ಯಕೀಯ ಮಹಾವಿದ್ಯಾಲಯ, ಚೆನ್ನೈ, ನಮಕ್ಕಲ್, ತಿರುನೆಲೆವೆಲಿ. |
| | | | ಮೀನುಗಾರಿಕೆ ಮಹಾವಿದ್ಯಾಲಯ, ತುತಕುಡಿ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಕೊಡುವಲ್ಲಿ. |
| 07 | ಜಮ್ಮು & ಕಾಶ್ಮೀರ | ಶೇರ್–ಇ–ಕಾಶ್ಮೀರ ಕೃಷಿ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯ, ಕಾಶ್ಮೀರ. | ಕೃಷಿ ಮಹಾವಿದ್ಯಾಲಯ, ವದ್‌ವಾರ. |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಶ್ರೀನಗರ. |
| | | | ಮೀನುಗಾರಿಕೆ ಮಹಾವಿದ್ಯಾಲಯ, ರಂಗೀಲ್ |
| | | | ಅರಣ್ಯ ಮಹಾವಿದ್ಯಾಲಯ, ಗಂಧರಬಾಲ್ |
| | | | ತೋಟಗಾರಿಕೆ ಮಹಾವಿದ್ಯಾಲಯ, ವದ್‌ವಾರ್ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ವದ್‌ವಾರ್ |
| | | | ರೇಷ್ಮೆ ಮಹಾವಿದ್ಯಾಲಯ, ಮಿರ್‌ಗುಂದ್ |

Digitised by Bharatavani, CIIL

| | | | |
|---|---|---|---|
| 08 | ಕರ್ನಾಟಕ | ಕೃವಿವಿ, ಬೆಂಗಳೂರು | ಕೃಷಿ ಮಹಾವಿದ್ಯಾಲಯ, ಬೆಂಗಳೂರು, ಶಿವಮೊಗ್ಗ, ಮಂಡ್ಯ, ಹಾಸನ. |
| | | | ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಕೊಡಗು |
| | | | ರೇಷ್ಮೆ ಮಹಾವಿದ್ಯಾಲಯ, ಚಿಂತಾಮಣಿ, ಕೋಲಾರ. |
| | | ಕೃವಿವಿ, ಧಾರವಾಡ | ಕೃಷಿ ಮಹಾವಿದ್ಯಾಲಯ, ಧಾರವಾಡ, ಬಿಜಾಪುರ, ಹನುಮನಮಟ್ಟಿ (ಹಾವೇರಿ ಜಿಲ್ಲಾ) |
| | | | ಅರಣ್ಯ ಮಹಾವಿದ್ಯಾಲಯ, ಶಿರಸಿ, ಉತ್ತರ ಕನ್ನಡ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ |
| | | ಕೃವಿವಿ, ರಾಯಚೂರು | ಕೃಷಿ ಮಹಾವಿದ್ಯಾಲಯ, ರಾಯಚೂರು, ಗುಲಬರ್ಗ, ಭೀಮರಾಯನಗುಡಿ (ಯಾದಗಿರಿ ಜಿಲ್ಲಾ). |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು. |
| | | ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ. | ಪಶು ವೈದ್ಯಕೀಯ ಮಹಾವಿದ್ಯಾಲಯ, ಬೀದರ, ಬೆಂಗಳೂರು, ಹಾಸನ, ಶಿವಮೊಗ್ಗ. |
| | | | ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರು, ಗುಲಬರ್ಗಾ. |
| | | | ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು. |
| | | ತೋಟಗಾರಿಕೆವಿಶ್ವವಿದ್ಯಾಲಯ, ಬಾಗಲಕೋಟ | ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆ, ಬೀದರ, ಹಾರಬಾವಿ, ಮುಡಿಗೇರೆ, ಕೋಲಾರ, ಶಿರಸಿ, ಕೊಪ್ಪಳ, ಹಿರಿಯೂರ, ಮೈಸೂರ, ಬೆಂಗಳೂರು. |
| 09 | ಅಸ್ಸಾಂ | ಅಸ್ಸಾಂ ಕೃಷಿ ವಿಶ್ವವಿದ್ಯಾಲಯ, ಜೊರ್ಹ್ವಾಟ್ | ಕೃಷಿ ಮಹಾವಿದ್ಯಾಲಯ, ಜೊರ್ಹ್ವಾಟ್, ಬಿಸ್ವಂತ, ದುಬ್ರಿ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಜೊರ್ಹ್ವಾಟ್ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಕನಪರ, ಲಕ್ಷ್ಮೀಪುರ |
| | | | ಮೀನುಗಾರಿಕೆ ಮಹಾವಿದ್ಯಾಲಯ, ರೋಹ |
| 10 | ಜಾರ್ಖಂಡ | ಬಿರ್ಸಾ ಕೃವಿವಿ, ರಾಂಚಿ | ಕೃಷಿ ಮಹಾವಿದ್ಯಾಲಯ, ರಾಂಚಿ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ರಾಂಚಿ |
| | | | ಅರಣ್ಯ ಮಹಾವಿದ್ಯಾಲಯ, ರಾಂಚಿ |
| 11 | ಉತ್ತರಪ್ರದೇಶ | ಚಂದ್ರಶೇಖರ ಅಜಾದ್ ಕೃಷಿ ಹಾಗೂ ತಾಂತ್ರಿಕ ವಿವಿ, ಖಾನಪುರ. | ಕೃಷಿ ಮಹಾವಿದ್ಯಾಲಯ, ಖಾನಪುರ. |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಖಾನಪುರ. |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಎಟ್ವಾ |
| | | ನರೇಂದ್ರದೇವ ಕೃಷಿ ಹಾಗೂ ತಾಂತ್ರಿಕ ವಿವಿ, ಫೈಜಾಬಾದ | ಕೃಷಿ ಮಹಾವಿದ್ಯಾಲಯ, ಫೈಜಾಬಾದ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಫೈಜಾಬಾದ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಫೈಜಾಬಾದ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಫೈಜಾಬಾದ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಫೈಜಾಬಾದ |
| | | | ಅರಣ್ಯ ಮಹಾವಿದ್ಯಾಲಯ, ಫೈಜಾಬಾದ |
| | | | ತೋಟಗಾರಿಕೆ ಮಹಾವಿದ್ಯಾಲಯ, ಫೈಜಾಬಾದ |
| | | ಸರ್ದಾರ ವಲ್ಲಭಬಾಯಿ ಪಟೇಲ್ ಕೃಷಿ ಹಾಗೂ ತಾಂತ್ರಿಕ ವಿವಿ, ಮೀರತ್ | ಕೃಷಿ ಮಹಾವಿದ್ಯಾಲಯ, ಮಿರತ್ |
| | | | ಜೈವಿಕ ತಾಂತ್ರಿಕ ಮಹಾವಿದ್ಯಾಲಯ, ಮಿರತ್ |
| | | ಉತ್ತರಪ್ರದೇಶ ಪಂಡಿತ ದೀನ್ ದಯಾಳ್ ಉಪಾಧ್ಯ ಪಶು ಚಿಕಿತ್ಸಾ ವಿವಿ, ಮತುರಾ | ಪಶು ವೈದ್ಯಕೀಯ ಮಹಾವಿದ್ಯಾಲಯ, ಮಥುರಾ, |
| | | | ಮೀನುಗಾರಿಕೆ ಮಹಾವಿದ್ಯಾಲಯ, ಮಥುರಾ |

Digitised by Bharatavani, CIIL

| | | | |
|---|---|---|---|
| 12 | ಪಶ್ಚಿಮ ಬಂಗಾಳ | ಬಿದಾನ ಚಂದ್ರ ಕೃವಿವಿ, ನಡಿಯಾ | ಕೃಷಿ ಮಹಾವಿದ್ಯಾಲಯ, ನಡಿಯಾ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ನಡಿಯಾ |
| | | | ತೋಟಗಾರಿಕೆ ಮಹಾವಿದ್ಯಾಲಯ, ನಡಿಯಾ |
| | | ಉತ್ತರಬಂಗ ಕೃವಿವಿ, ಬೆಹಾರ | ಕೃಷಿ ಮಹಾವಿದ್ಯಾಲಯ, ಬೆಹಾರ. |
| | | ಪಶ್ಚಿಮ ಬಂಗಾಳ, ಪಶು ವೈದ್ಯಕೀಯ ವಿವಿ, ಕೊಲ್ಕತಾ | ಪಶು ವೈದ್ಯಕೀಯ ಮಹಾವಿದ್ಯಾಲಯ, ಕೊಲ್ಕತಾ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಕೊಲ್ಕತಾ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಕೊಲ್ಕತಾ |
| 13 | ಬಿಹಾರ | ರಾಜೇಂದ್ರ ಕೃವಿವಿ, ಪುಸಾ, ಪಟ್ನಾ. | ಕೃಷಿ ಮಹಾವಿದ್ಯಾಲಯ, ಪಟ್ನಾ. |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಪಟ್ನಾ. |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಪಟ್ನಾ. |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಪಟ್ನಾ. |
| 14 | ಓರಿಸ್ಸಾ | ಓರಿಸ್ಸಾ ಕೃಷಿ ಹಾಗೂ ತಾಂತ್ರಿಕತೆ ವಿವಿ, ಭುವನೇಶ್ವರ | ಕೃಷಿ ಮಹಾವಿದ್ಯಾಲಯ, ಭುವನೇಶ್ವರ |
| | | | ಅರಣ್ಯ ಮಹಾವಿದ್ಯಾಲಯ, ಭುವನೇಶ್ವರ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಭುವನೇಶ್ವರ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಭುವನೇಶ್ವರ |
| 15 | ಕೇರಳ | ಕೇರಳ ಕೃವಿವಿ, ತ್ರಿಷೂರ್ | ಕೃಷಿ ಮಹಾವಿದ್ಯಾಲಯ, ತ್ರಿಷೂರ್ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ತ್ರಿಷೂರ್ |
| | | | ತೋಟಗಾರಿಕೆ ಮಹಾವಿದ್ಯಾಲಯ, ತ್ರಿಷೂರ್ |
| | | | ಮೀನುಗಾರಿಕೆ ಮಹಾವಿದ್ಯಾಲಯ, ತ್ರಿಷೂರ್ |
| | | | ಅರಣ್ಯ ಮಹಾವಿದ್ಯಾಲಯ, ತ್ರಿಷೂರ್ |
| | | ಕೇರಳ ಪಶು ವೈದ್ಯಕೀಯ ವಿವಿ, ಪೂಕುಟ್, ವಾಯಿನಾಡ್ | ಪಶು ವೈದ್ಯಕೀಯ ಮಹಾವಿದ್ಯಾಲಯ, ಪೂಕುಟ್, ಮನ್ನುತಿ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಮನ್ನುತಿ |
| 16 | ಹಿಮಾಚಲ ಪ್ರದೇಶ | ಡಾ. ವೈ.ಎಸ್. ಪರಮಾರ ತೋಟಗಾರಿಕೆ ಹಾಗೂ ಅರಣ್ಯ ವಿವಿ, ಸೋಲನ್ | ತೋಟಗಾರಿಕೆ ಮಹಾವಿದ್ಯಾಲಯ, ಸೋಲನ್ |
| | | ಚೌಧರಿ ಸರವನ್‌ಕುಮಾರ ಹಿಮಾಚಲಪ್ರದೇಶ ಕೃವಿವಿ, ಪಾಲಂಪುರ. | ಕೃಷಿ ಮಹಾವಿದ್ಯಾಲಯ, ಪಾಲಂಪುರ. |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಪಾಲಂಪುರ. |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಪಾಲಂಪುರ. |
| | | | ಅರಣ್ಯ ಮಹಾವಿದ್ಯಾಲಯ, ಸೋಲನ್ |

Digitised by Bharatavani, CIIL

| | | | |
|---|---|---|---|
| 17 | ಮಧ್ಯಪ್ರದೇಶ | ಜವಾಹರಲಾಲ ನೆಹರು ಕೃವಿವಿ, ಜಬಲ್‌ಪೂರ್ | ಕೃಷಿ ಮಹಾವಿದ್ಯಾಲಯ, ಜಬಲ್‌ಪೂರ್ |
| | | | ಅರಣ್ಯ ಮಹಾವಿದ್ಯಾಲಯ, ಜಬಲ್‌ಪೂರ್ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಜಬಲ್‌ಪೂರ್ |
| | | ರಾಜಮಾತಾ ವಿಆರ್‌ಎಸ್ ಕೃವಿವಿ, ಗ್ವಾಲಿಯಾರ್ | ಕೃಷಿ ಮಹಾವಿದ್ಯಾಲಯ, ಗ್ವಾಲಿಯಾರ್ |
| | | | ತೋಟಗಾರಿಕೆ ಮಹಾವಿದ್ಯಾಲಯ, ಗ್ವಾಲಿಯಾರ್ |
| 18 | ಛತ್ತಿಸಗಡ | ಇಂದಿರಾಗಾಂಧಿ ಕೃವಿವಿ, ರಾಯಪೂರ. | ಕೃಷಿ ಮಹಾವಿದ್ಯಾಲಯ, ರಾಯಪೂರ. |
| | | | ಹೈನುಗಾರಿಕೆ ಮಹಾವಿದ್ಯಾಲಯ, ರಾಯಪೂರ. |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಮುಂಗೆಲಿ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಅಂಜೋರಾ, ದುರ್ಗ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಕವರ್ದ (ಕಬೀರದಾಮ) |
| 19 | ಉತ್ತರಖಂಡ | ಜಿ.ಬಿ.ಪಂತ ಕೃಷಿ ಹಾಗೂ ತಾಂತ್ರಿಕ ವಿವಿ, ಪಂತ ನಗರ | ಕೃಷಿ ಮಹಾವಿದ್ಯಾಲಯ, ಪಂತ ನಗರ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಪಂತ ನಗರ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಪಂತ ನಗರ |
| 20 | ಮಣಿಪುರ | ಕೇಂದ್ರಿಯ ಕೃಷಿ ವಿಶ್ವವಿದ್ಯಾಲಯ, ಮಣಿಪುರ | ಕೃಷಿ ಮಹಾವಿದ್ಯಾಲಯ, ಇಂಪಾಲ್ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಐಜ್ವಾಲ್ |
| | | | ಮೀನುಗಾರಿಕೆ ಮಹಾವಿದ್ಯಾಲಯ, ತ್ರಿಪೂರ್ |
| | | | ತೋಟಗಾರಿಕೆ ಹಾಗೂ ಅರಣ್ಯ ಮಹಾವಿದ್ಯಾಲಯ, ತ್ರಿಪೂರ್ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಮೇಘಾಲಯ |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಗ್ಯಾಂಗಟಾಕ್ |
| 21 | ಹರಿಯಾಣ | ಚೌಧರಿ ಚರಣಸಿಂಗ ಹರಿಯಾಣ ಕೃವಿವಿ, ಹಿಸ್ಸಾರ | ಕೃಷಿ ಮಹಾವಿದ್ಯಾಲಯ, ಹಿಸ್ಸಾರ, ಕೌಲ್, ಬೌಲ್. |
| | | | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಹಿಸ್ಸಾರ |
| | | | ಪಶು ವೈದ್ಯಕೀಯ ಮಹಾವಿದ್ಯಾಲಯ, ಹಿಸ್ಸಾರ |
| | | | ಗೃಹ ವಿಜ್ಞಾನ ಮಹಾವಿದ್ಯಾಲಯ, ಹಿಸ್ಸಾರ |

ಇಷ್ಟೆಲ್ಲಾ ಕೃಷಿ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣಾ ಸಂಪನ್ಮೂಲಗಳನ್ನು ಹೊಂದಿದ ನಮ್ಮ ಭಾರತ ದೇಶವು ಆಹಾರ ಹಾಗೂ ಇತರೆ ಉತ್ಪನ್ನಗಳ ಉತ್ಪಾದನೆಯಲ್ಲಿ ದಿನದಿಂದ ದಿನಕ್ಕೆ ದಾಪುಗಾಲು ಹಾಕುತ್ತಿರುವುದು ಹೆಮ್ಮೆಯ ವಿಷಯ.

–ಡಾ. ಮಂಜುನಾಥ ಪಾಟೀಲ್.

## ಭಾರತದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಬೆಳವಣಿಗೆ

ಗ್ರಂಥಾಲಯ ವಿಜ್ಞಾನವು ಒಂದು ಅಂತರ್‌ಶಾಸ್ತ್ರೀಯ ಅಧ್ಯಯನ ಕ್ಷೇತ್ರವಾಗಿದ್ದು, ಇದರಲ್ಲಿ ನಿರ್ವಹಣಾ ಶಾಸ್ತ್ರ, ಮಾಹಿತಿ ತಂತ್ರಜ್ಞಾನ, ಶಿಕ್ಷಣಶಾಸ್ತ್ರದ ಸಿದ್ಧಾಂತಗಳು, ಆಚರಣೆ ಹಾಗೂ ಸಾಧನಗಳ ಬಳಕೆ ಮತ್ತು ಮಾಹಿತಿ ಸಂಪನ್ಮೂಲಗಳ ಸಂಗ್ರಹ, ಸಂಯೋಜನೆ, ರಕ್ಷಣೆ ಹಾಗೂ ಪ್ರಸರಣದಂತಹ ಗ್ರಂಥಾಲಯ ವಿಷಯಗಳನ್ನು ಒಟ್ಟಾರೆಯಾಗಿ ಅಭ್ಯಾಸಮಾಡಬಹುದಾಗಿದೆ. ಸಂಕ್ಷಿಪ್ತವಾಗಿ ಹೇಳಬಹುದಾದರೆ, ಜ್ಞಾನ ಮತ್ತು ಮಾಹಿತಿಯ ವಿಸ್ತಾರವಾದ ತಿಳುವಳಿಕೆಯನ್ನು ನೀಡಿ, ಜ್ಞಾನ ಹಾಗೂ ಮಾಹಿತಿಯನ್ನು ಸಮಾಜದ ಒಳಿತಿಗಾಗಿ ಬಳಸುವ ಹಾಗೂ ಪರಿಷ್ಕರಿಸುವ ಉದ್ದೇಶವನ್ನು ಗ್ರಂಥಾಲಯ ಮತ್ತು ಮಾಹಿತಿ ಶಿಕ್ಷಣವು ಒಳಗೊಂಡಿದೆ. ಸಂಯುಕ್ತ ಅಮೆರಿಕಾ ಸಂಸ್ಥಾನದಲ್ಲಿ ಗ್ರಂಥಾಲಯ ಶಿಕ್ಷಣದ ಹರಿಕಾರನೆನಿಸಿದ ಮೆಲ್ವಿಲ್ ಡ್ಯೂಯಿಯು ಅಭಿಪ್ರಾಯಪಟ್ಟಿರುವಂತೆ 'ಗ್ರಂಥಾಲಯ ಚಟುವಟಿಕೆಗಳಿಗೆ ಸಂಬಂಧಿಸಿದ ವಿಧಾನ, ಸಾಧನ ಹಾಗೂ ತಂತ್ರಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವ ಮೂಲಕ ಜ್ಞಾನದ ಆಗರಗಳನ್ನು ವ್ಯವಸ್ಥಿತವಾಗಿ ಜೋಡಣೆಗೊಳಿಸುವ ಕ್ಷೇತ್ರವೇ 'ಗ್ರಂಥಾಲಯ ಶಿಕ್ಷಣ'. ಗ್ರಂಥಾಲಯ ಶಿಕ್ಷಣವನ್ನು ಪಡೆಯುವ ಶಿಕ್ಷಣಾರ್ಥಿಗಳು – ಸಮಾಜದ ಸಂಪರ್ಕ ಪ್ರಕ್ರಿಯೆಯಲ್ಲಿ ಗ್ರಂಥಾಲಯದ ಪಾತ್ರ; ಗ್ರಂಥಾಲಯದ ಸಂಗ್ರಹಗಳನ್ನು

Digitised by Bharatavani, CIIL

ಸಂಯೋಜಿಸುವ ಹಾಗೂ ಪ್ರಚುರಪಡಿಸುವ ಮೂಲತತ್ವಗಳ ಅರಿವು; ಗ್ರಂಥಾಲಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅಗತ್ಯವಾದ ಪ್ರಾಯೋಗಿಕ ಜ್ಞಾನ – ಇವುಗಳನ್ನು ಅಮೂಲಾಗ್ರವಾಗಿ ತಿಳಿಯಬಹುದು.

**ಗ್ರಂಥಾಲಯ ಮತ್ತು ಮಾಹಿತಿ ಶಿಕ್ಷಣದ ಇತಹಾಸ ಮತ್ತು ಬೆಳವಣಿಗೆ:**

ಈ ಅಧ್ಯಯನ ಕ್ಷೇತ್ರದ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ತರಬೇತಿ ಶಿಕ್ಷಣ, ಉದ್ಯೋಗಾಧಾರಿತ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣ ಎಂಬ ಮೂರು ಪ್ರಮುಖ ಹಂತಗಳಲ್ಲಿ ಕಾಣಬಹುದಾಗಿದೆ. ಇವುಗಳನ್ನು ನಿಯಮಿತವಾದ, ದೈನಂದಿನ ತರಗತಿಗಳನ್ನು ಸಂಘಟಿಸುವುದು ಹಾಗೂ ತರಬೇತುಗೊಳಿಸುವುದರ ಮೂಲಕ ಪೂರೈಸಬಹುದಾಗಿದೆ. ಈ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯನ್ನು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾ ನಂತರದ ಅವಧಿಯೆಂದು ನಿಖರವಾಗಿ ಗುರುತಿಸಬಹುದಾಗಿದೆ.

**ಸ್ವಾತಂತ್ರ್ಯಪೂರ್ವದ ಅವಧಿ:** ಗ್ರಂಥಾಲಯ ವಿಜ್ಞಾನ ಶಿಕ್ಷಣ ಸಂಸ್ಥೆಯನ್ನು ಮೆಲ್ವಿಲ್ ಡ್ಯೂಯಿಯು 1887ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಪ್ರಾರಂಭಿಸುವ ಮೂಲಕ ಮೊದಲ ಶಿಕ್ಷಣ ಕೇಂದ್ರದ ಸಂಸ್ಥಾಪಕನೆಂಬ ಕೀರ್ತಿಗೆ ಪಾತ್ರನಾಗಿದ್ದಾರೆ. 1910 ರಲ್ಲಿ ಮೆಲ್ವಿಲ್ ಡ್ಯೂಯಿಯ ಶಿಷ್ಯರಾಗಿದ್ದ ಡಬ್ಲ್ಯು.ಎ.ಬೋರ್ಡನ್‌ರು ಬರೋಡದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡ III ರವರ ಆಹ್ವಾನದ ಮೇರೆಗೆ ಭಾರತಕ್ಕೆ ಬಂದು ವೃತ್ತಿನಿರತ ಗ್ರಂಥಪಾಲಕರಿಗೆ ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿದರು. ಅನಂತರ 1914 ರಲ್ಲಿ ಸ್ಥಾಪನೆಯಾದ ಆಂಧ್ರಪ್ರದೇಶ ಗ್ರಂಥಾಲಯ ಸಂಘವು, 1920ರಲ್ಲಿ ವಿಜಯವಾಡದಲ್ಲಿ ಗ್ರಂಥಾಲಯ ನೌಕರರಿಗೆ ತರಬೇತಿ ತರಗತಿಗಳನ್ನು ಸಂಘಟಿಸಿ ಈ ಕಾರ್ಯದಲ್ಲಿ ಮುನ್ನಡಿಯಿಟ್ಟಿತು. ಅದೇ ಅವಧಿಯಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ಬೆಂಗಳೂರು ನಗರದಲ್ಲಿ 'ಗ್ರಂಥಾಲಯ ಅಭಿವೃದ್ಧಿ ಕಾರ್ಯಕ್ರಮ' ಎಂಬ ಶೀರ್ಷಿಕೆಯಡಿಯಲ್ಲಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಗ್ರಂಥಪಾಲಕರಿಗೆ ತರಬೇತಿ ತರಗತಿಗಳನ್ನು ಸಂಯೋಜಿಸಲಾಯಿತು.

1929ರಲ್ಲಿ ಮದ್ರಾಸ್ ಗ್ರಂಥಾಲಯ ಸಂಘವು ಮೊದಲ ಗ್ರಂಥಾಲಯ ವಿಜ್ಞಾನ ಸರ್ಟಿಫಿಕೇಟ್ ಶಿಕ್ಷಣದ ನಿಯಮಿತ – ದೈನಂದಿನ ತರಗತಿಗಳನ್ನು ಆರಂಭಿಸಿತು. ಇದಕ್ಕೆ ಮೊದಲು 1928 ರಲ್ಲಿ ಮದ್ರಾಸ್‌ನ ಕಾರ್ಯನಿರತ ಗ್ರಂಥಪಾಲಕರ ತರಬೇತಿಯ ಸಲುವಾಗಿ 'ಬೇಸಿಗೆ ಶಾಲೆ' ಯನ್ನು ಪ್ರಾರಂಭಿಸಿ, 1930 ರಲ್ಲಿಯೂ ಇದೇ ರೀತಿಯ ತರಗತಿಗಳನ್ನು ಮುಂದುವರೆಸಲಾಯಿತು. ಅನಂತರ ಮದ್ರಾಸ್ ವಿಶ್ವವಿದ್ಯಾನಿಲಯವು ಮದ್ರಾಸ್ ಗ್ರಂಥಾಲಯ ಸಂಘವು ಸಂಘಟಿಸುತ್ತಿದ್ದ ತರಬೇತಿ ಶಿಕ್ಷಣವನ್ನು 1931 ರಲ್ಲಿ ತನ್ನದಾಗಿಸಿಕೊಂಡು, ಅಲ್ಲಿಯೇ ಗ್ರಂಥಾಲಯ ಶಿಕ್ಷಣ ತರಗತಿಗಳನ್ನು ನಿಯಮಿತವಾಗಿ ಪ್ರಾರಂಭಿಸಲಾಯಿತು.

1935ರಲ್ಲಿ ಆಂಧ್ರ ವಿಶ್ವವಿದ್ಯಾನಿಲಯವು ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿ, ಸ್ವಲ್ಪದಿನಗಳಲ್ಲಿಯೇ ಅದನ್ನು ಮೊಟಕುಗೊಳಿಸಿತು. 1934 ರಲ್ಲಿಯೇ ಕಲ್ಕತ್ತಾದ ಇಂಪೀರಿಯಲ್ ಗ್ರಂಥಾಲಯವು ತನ್ನ ಗ್ರಂಥಪಾಲಕರಾಗಿದ್ದ ಕೆ.ಎಂ. ಅಸಾದುಮಲ್ಲರವರ ನೇತೃತ್ವದಲ್ಲಿ ಗ್ರಂಥಾಲಯ ತರಬೇತಿಯನ್ನು ಪ್ರಾರಂಭಿಸಿತು. ಈ ಶಿಕ್ಷಣವು ಗ್ರಂಥಪಾಲಕತ್ವದ ಡಿಪ್ಲೋಮಾ ಶಿಕ್ಷಣವಾಗಿದ್ದು, ಪೂರ್ಣಾವಧಿ ತರಗತಿಗಳಾಗಿದ್ದವು. ಇದು 1946 ರವರೆಗೆ ನಿರಂತರವಾಗಿ ನಡೆಯಿತು. 'ಗ್ರಂಥಾಲಯ ತರಬೇತಿ ಶಿಬಿರ'ವನ್ನು ಆಯೋಜಿಸಿತು.

ಈ ಹಿಂದೆ ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿದ ಅನುಭವದ ಆಧಾರದ ಮೇಲೆ 1935ರಲ್ಲಿ ಎಸ್.ಆರ್.ರಂಗನಾಥ್‌ರವರು ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಗ್ರಂಥಾಲಯ ಶಿಕ್ಷಣದಲ್ಲಿ ಸ್ನಾತಕೋತ್ತರ ಡಿಪ್ಲೋಮಾವನ್ನು ಆರಂಭಿಸಲು ಸೂಚಿಸಿದರು. 1937 ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯವು ಗ್ರಂಥಾಲಯ ಶಿಕ್ಷಣದಲ್ಲಿ ಒಂದು ವರ್ಷ ಅವಧಿಯ ಸ್ನಾತಕೋತ್ತರ ಡಿಪ್ಲೊಮಾ ತರಗತಿಯನ್ನು ಪ್ರಾರಂಭಿಸಿತು. ಹಾಗೆಯೇ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಹಾಗೂ ಬಾಂಬೆ ವಿಶ್ವವಿದ್ಯಾನಿಲಯಗಳಲ್ಲಿ ಈ ಶಿಕ್ಷಣವನ್ನು ಕ್ರಮವಾಗಿ 1942 ಮತ್ತು 1943ರಲ್ಲಿ ಆರಂಭಿಸಿದವು.

**ಸ್ವಾತಂತ್ರ್ಯಾನಂತರದ ಅವಧಿ:** 1947ರಲ್ಲಿ ಎಸ್.ಆರ್.ರಂಗನಾಥ್‌ರವರು ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಡಿಪ್ಲೊಮಾವನ್ನು ಆರಂಭಿಸುವ ಸಲುವಾಗಿ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಗ್ರಂಥಾಲಯ ವಿಜ್ಞಾನ ವಿಭಾಗವನ್ನು ತೆರೆದರು. ದೆಹಲಿ ವಿಶ್ವವಿದ್ಯಾನಿಲಯವು 1948 ರಲ್ಲಿ ಮೊದಲ ಸ್ನಾತಕೋತ್ತರ ಡಿಪ್ಲೊಮಾ ಶಿಕ್ಷಣ ಕೇಂದ್ರವನ್ನು ಆರಂಭಿಸಿತು. 1949 ರಲ್ಲಿ ಇದು ಮಾರ್ಪಾಡುಗೊಂಡು, ಎರಡು ವರ್ಷ ಅವಧಿಯ ಗ್ರಂಥಾಲಯ ವಿಜ್ಞಾನ ಸಂಯೋಜಿತ ಶಿಕ್ಷಣವನ್ನು ಪ್ರಾರಂಭಿಸಿತು.

**ಭಾರತ ಸರ್ಕಾರದ ಸೇವಾನಿರತ ಗ್ರಂಥಪಾಲಕರ ತರಬೇತಿ ತರಗತಿಗಳು:** ಭಾರತ ಸರ್ಕಾರದ ಸೇವಾನಿರತ ಗ್ರಂಥಪಾಲಕರ ಸಂಸ್ಥೆಯು ತರಬೇತಿ ಪಡೆದ ಗ್ರಂಥಪಾಲಕರ ಕೊರತೆಯನ್ನು ನೀಗಿಸುವ ಸಲುವಾಗಿ ಹಲವಾರು ಸರ್ಕಾರಿ ಸ್ವಾಮ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗ್ರಂಥಪಾಲಕರಿಗೆ ಸೇವಾನಿರತ ತರಬೇತಿಗಳನ್ನು ನಡೆಸಲು ನಿರ್ಧರಿಸಲಾಯಿತು. ಇದರಿಂದಾಗಿ 1953 ರಲ್ಲಿ ಇಂತಹ ತರಗತಿಗಳು ಪ್ರಾರಂಭವಾಗಿದ್ದವು ಹಾಗೂ ಇವು ಡಿಪ್ಲೊಮಾ ಶಿಕ್ಷಣಕ್ಕೆ ಸರಿಸಮಾನವಾದದ್ದೆಂದು ಘೋಷಿಸಲಾಯಿತು.

**ಡಿಪ್ಲೊಮಾ ಶಿಕ್ಷಣದಿಂದ ಪದವಿ ಶಿಕ್ಷಣದ ಮಾರ್ಪಾಡು:** ಒಂದು ವರ್ಷ ಅವಧಿಯ ಪೂರ್ಣಾವಧಿ ಡಿಪ್ಲೊಮಾ ಶಿಕ್ಷಣವನ್ನು 1960 ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯವು ಬಿ.ಲಿಬ್.ಎಸ್ಸಿ ಶಿಕ್ಷಣವಾಗಿ ಮಾರ್ಪಡಿಸಿತು. 1960ರ ದಶಕದ ಮಧ್ಯಭಾಗದಲ್ಲಿ ಯುಜಿಸಿಯ ವಿಮರ್ಶಾ ಸಮಿತಿಯ ವರದಿಯನ್ನಾಧರಿಸಿ (1959) ಮದ್ರಾಸ್ ವಿಶ್ವವಿದ್ಯಾನಿಲಯದಂತೆಯೇ ಇತರ ವಿಶ್ವವಿದ್ಯಾನಿಲಯಗಳೂ ಬಿ.ಲಿಬ್.ಎಸ್ಸಿ ಪದವಿಯ ಶಿಕ್ಷಣವನ್ನು ಪ್ರಾರಂಭಿಸಿದವು. ಇದರಲ್ಲಿ

Digitised by Bharatavani, CIIL

ಅಲಿಘಡ್ ಮುಸ್ಲಿಂ ವಿಶ್ವವಿದ್ಯಾನಿಲಯ ಪ್ರಮುಖವಾದುದು.

**ಪಾಲಿಟೆಕ್ನಿಕ್ ಡಿಪ್ಲೊಮಾ ಶಿಕ್ಷಣ:** 1960ರ ದಶಕದಲ್ಲಿಯೇ ಅಂಬಾಲಾ, ಬೆಂಗಳೂರು, ಚಂಡೀಘಡ, ದೆಹಲಿ, ಜಲಂಧರ್ ಹಾಗೂ ರೂರ್ಕೆಲಾಗಳ ಮಹಿಳಾ ಸರಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮೂರು ವರ್ಷ ಅವಧಿಯ ಡಿಪ್ಲೊಮಾ ಶಿಕ್ಷಣವು ಆರಂಭವಾದವು.

**ಪ್ರಲೇಖನ ಸಂಶೋಧನಾ ಮತ್ತು ತರಬೇತಿ ಕೇಂದ್ರ, ಬೆಂಗಳೂರು:** 1962 ರಲ್ಲಿ ಡಾ॥ ರಂಗನಾಥನ್‌ರವರು ಬೆಂಗಳೂರಿನಲ್ಲಿ ಪ್ರಲೇಖನ ಸಂಶೋಧನೆ ಹಾಗೂ ತರಬೇತಿ ಕೇಂದ್ರವನ್ನು ಸ್ಥಾಪಿಸಿ, ಅಲ್ಲಿ ಎರಡು ವರ್ಷ ಅವಧಿಯ ಅಸೋಸಿಯೇಟ್‌ಷಿಪ್ ಇನ್ ಲೈಬ್ರರಿ ಸೈನ್ಸ್‌ನ್ನು ಪ್ರಾರಂಭಿಸಿದರು. 1963ರಲ್ಲಿ ನವದೆಹಲಿಯ ಭಾರತೀಯ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರದಲ್ಲಿ ಗ್ರಂಥಾಲಯ ವಿಜ್ಞಾನದಲ್ಲಿ ಅಲ್ಪಾವಧಿ ತರಗತಿಯನ್ನು ಪ್ರಾರಂಭಿಸಲಾಯಿತು. 196ರಲ್ಲಿ ಪ್ರಲೇಖನ ಸೇವೆಯಲ್ಲಿ ಒಂದು ವರ್ಷ ಅವಧಿಯ ಸ್ನಾತಕೋತ್ತರ ಶಿಕ್ಷಣವನ್ನು ಆರಂಭಿಸಲಾಯಿತು. ಈಗ ಇದನ್ನು ಎರಡು ವರ್ಷ ಅವಧಿಯ 'ಮಾಹಿತು ವಿಜ್ಞಾನ ಶಿಕ್ಷಣ' ಎಂದು ಕರೆಯಲಾಗುತ್ತಿದೆ.

1951ರಲ್ಲಿ ದೆಹಲಿ ವಿಶ್ವವಿದ್ಯಾನಿಲಯವು ಪಿ.ಹೆಚ್.ಡಿ ಸಂಶೋಧನಾ ಪದವಿಗೆ ಅನುವು ಮಾಡಿಕೊಟ್ಟಿತು. ಹಾಗೆಯೇ 1977ರಲ್ಲಿ ಎಂ.ಫಿಲ್ ಪದವಿ ಶಿಕ್ಷಣವನ್ನು ಪ್ರಾರಂಭಿಸಿ, ಭಾತರದ ಇತರ ವಿಶ್ವವಿದ್ಯಾನಿಲಯಗಳು ಇದನ್ನು ಅನುಸರಿಸುವಂತೆ ಮಾಡಿತು.

1937ರಲ್ಲಿ ಮೊಟ್ಟಮೊದಲಿಗೆ ಎಸ್.ಆರ್.ರಂಗನಾಥನ್‌ರವರ ಪರಿಶ್ರಮದಿಂದಾಗಿ ಮದ್ರಾಸ್ ವಿಶ್ವವಿದ್ಯಾನಿಲಯದ ಒಂದು ವರ್ಷದ ಸ್ನಾತಕೋತ್ತರ ಗ್ರಂಥಾಲಯ ವಿಜ್ಞಾನ ಡಿಪ್ಲೊಮಾವನ್ನು ಆರಂಭಿಸಿದಾಗ, ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯ ನಂತರ 1950 ರವರೆಗೆ ಭಾರತದ ಇತರ ರಾಜ್ಯಗಳಲ್ಲಿ ಅಧಿಕವಾದ ಬೇಡಿಕೆಯನ್ನು ಮನಗಂಡು ಶಿಕ್ಷಣ ತರಬೇತಿ ಶಾಲೆಗಳನ್ನು ಆರಂಭದ ಬುನಾದಿಯಾಗಿ ಪರಿಣಮಿಸಿತು. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಕೇವಲ ಐದು ವಿಶ್ವವಿದ್ಯಾನಿಲಯಗಳಲ್ಲಿ ಈ ವಿಷಯದ ಶಿಕ್ಷಣವನ್ನು ನೀಡಲಾಗುತ್ತಿತ್ತು ಎಂದು ಅಂದಾಜಿಸಲಾಗಿದೆ. ಮುಂದೆ 1970ರ ಸುಮಾರಿಗೆ ಇದು 42 ಸಂಸ್ಥೆಗಳಿಗೆ ವಿಸ್ತರಿಸಲ್ಪಟ್ಟು, ಇದೀಗ 167 ವಿಶ್ವವಿದ್ಯಾನಿಲಯಗಳು ಹಾಗೂ ಸಂಯೋಜಿತ ಸಂಸ್ಥೆಗಳಲ್ಲಿ ಈ ಶಿಕ್ಷಣವನ್ನು ಪ್ರದಾನ ಮಾಡಲಾಗುತ್ತಿದೆ.

**ಶಿಕ್ಷಣದ ಹಂತಗಳು:** ಗ್ರಂಥಾಲಯ ವಿಜ್ಞಾನದಲ್ಲಿ ಸರ್ಟಿಫಿಕೇಟ್, ಡಿಪ್ಲೊಮಾ, ಆನರ್ಸ್ ಪದವಿ, ಒಂದು ವರ್ಷ ಅವಧಿಯ ಬಿ.ಎಲ್‌ಐ.ಎಸ್ಸಿ, ಎಂ.ಎಲ್‌ಐ.ಎಸ್ಸಿ ಶಿಕ್ಷಣ, ಎರಡು ವರ್ಷ ಅವಧಿಯ ಸಂಯೋಜಿತ ಎಂ.ಎಲ್‌ಐ.ಎಸ್ಸಿ (ಎಂ.ಎಸ್ಸಿ), ಎಂ.ಫಿಲ್ ಹಾಗೂ ಪಿ.ಹೆಚ್.ಡಿ ಶಿಕ್ಷಣ, ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಬಳಕೆಯಲ್ಲಿ ಸರ್ಟಿಫಿಕೇಟ್ ಶಿಕ್ಷಣ ಹಾಗೂ ಗ್ರಂಥಾಲಯ ಗಣಕೀಕರಣ ಹಾಗೂ ಜಾಲವಿನ್ಯಾಸದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಹೀಗೆ ಹತ್ತು ಹಲವಾರು ಬಗೆಯ ಶಿಕ್ಷಣವನ್ನು ಈ ಅಧ್ಯಯನ ಕ್ಷೇತ್ರದಲ್ಲಿ ಪಡೆಯಬಹುದಾಗಿದೆ. ಪ್ರಸ್ತುತ ಸುಮಾರು 87 ವಿಶ್ವವಿದ್ಯಾನಿಲಯಗಳು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಪದವಿ ಶಿಕ್ಷಣ, 89 ಶಿಕ್ಷಣ ಸಂಸ್ಥೆಗಳು ಸ್ನಾತಕೋತ್ತರ ಶಿಕ್ಷಣ, 52 ವಿಶ್ವವಿದ್ಯಾನಿಲಯಗಳು ಪಿ.ಹೆಚ್.ಡಿ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದ್ದು, 8 ವಿಶ್ವವಿದ್ಯಾನಿಲಯಗಳು ಹಾಗೂ 12 ಸಂಯೋಜಿತ ಸಂಸ್ಥೆಗಳು ಈ ವಿಷಯದಲ್ಲಿ ಸರ್ಟಿಫಿಕೇಟ್ ಶಿಕ್ಷಣವನ್ನು, 6 ವಿಶ್ವವಿದ್ಯಾನಿಲಯಗಳು ಹಾಗೂ 6 ಸಂಯೋಜಿತ ಶಿಕ್ಷಣ ಸಂಸ್ಥೆಗಳು ಡಿಪ್ಲೊಮಾ ಶಿಕ್ಷಣವನ್ನು ನೀಡುತ್ತಿವೆ. ಅಲ್ಲದೇ ಇವುಗಳಲ್ಲಿ ಹಲವಾರು ಸಂಸ್ಥೆಗಳು ಎಂ.ಫಿಲ್ ಶಿಕ್ಷಣವನ್ನು ಸಹಾ ನೀಡುತ್ತಿವೆ. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನವನ್ನು ದೂರಶಿಕ್ಷಣ ಹಾಗೂ ನಿಯಮಿತ ವ್ಯವಸ್ಥೆಯ ಮೂಲಕವಾಗಿಯೂ ಕೈಗೊಳ್ಳಬಹುದಾಗಿದೆ. ಈ ಅಧ್ಯಯನ ಸಂಸ್ಥೆಗಳು ಭಾರತದ ಎಲ್ಲ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಇವೆ. ಇದರಿಂದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಕ್ಷೇತ್ರವು ಈ ನೂರು ವರ್ಷಗಳಲ್ಲಿ (1910, ಬರೋಡಾ) ಭಾರತದ ಉದ್ದಗಲಕ್ಕೂ ಹರಡಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ರೀತಿಯ ಶಿಕ್ಷಣವಲ್ಲದೇ, ಮುಂದುವರಿಕೆ ಶಿಕ್ಷಣದ ಮೂಲಕವಾಗಿಯೂ ಹಲವಾರು ಬಗೆಯ ಅಲ್ಪಾವಧಿ ಶಿಕ್ಷಣವನ್ನು ನವದೆಹಲಿಯಲ್ಲಿರುವ NISCAIR, SAARC, DOC. CENTRE, NASDOC, DELNET ಸಂಸ್ಥೆಗಳು, ಅಹಮದಾಬಾದ್‌ನ INFLIBNET, ಲಕ್ನೋದ IIM, ಹೈದರಾಬಾದ್‌ನ SENDOC, ಇವೇ ಮೊದಲಾದ ಸಂಸ್ಥೆಗಳಲ್ಲಿ ಸಂಘಟಿಸಲಾಗುತ್ತದೆ.

**ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಪಠ್ಯಕ್ರಮವನ್ನು ರಚಿಸಲು ಕೈಗೊಂಡ ಪರಿಶ್ರಮಗಳು:**

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಪಠ್ಯಕ್ರಮದ ಬದಲಾವಣೆ ಆಗಿಂದಾಗ್ಗೆ ನಡೆಸಲ್ಪಡುವ ನಿರಂತರ ಪ್ರಕ್ರಿಯೆಯಾಗಿದೆ. ಸ್ವಾತಂತ್ರ್ಯಾನಂತರ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಅವಶ್ಯಕತೆಗಳನ್ನು ಗಮನದಲ್ಲಿರಿಸಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಪಠ್ಯಕ್ರಮದ ಮಾರ್ಪಾಡಿಗೆ ಬಹಳಷ್ಟು ಒತ್ತು ನೀಡಿರುವುದನ್ನು ಕಾಣಬಹುದಾಗಿದೆ. ಯುಜಿಸಿ ಸಂಸ್ಥೆಯ ಎಸ್.ಆರ್.ರಂಗನಾಥನ್‌ರವರ ನೇತೃತ್ವದಲ್ಲಿ 'ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯ ವಿಜ್ಞಾನ, 1965' ಎಂಬ ಸಮಿತಿಯನ್ನು ರಚಿಸಿತು. ಮುಂದೆ ಈ ಸಮಿತಿಯ ವರದಿಯನ್ನಾಧರಿಸಿ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯ ವಿಜ್ಞಾನವನ್ನು ಅಧ್ಯಯನ ಕ್ಷೇತ್ರವನ್ನಾಗಿ ಅಳವಡಿಸಲಾಯಿತು. ನಂತರ 1980ರ ದಶಕದಲ್ಲಿ ಗ್ರಂಥಾಲಯ ಕ್ಷೇತ್ರಕ್ಕೆ ಮಾಹಿತಿ ವಿಜ್ಞಾನ ಹಾಗೂ ತಂತ್ರಜ್ಞಾನದ ಬಳಕೆಯನ್ನು ಮನಗಂಡಿತು. ಇದರ ಫಲವಾಗಿ 1990ರ ದಶಕದಲ್ಲಿ ಯುಜಿಸಿ ಸಂಸ್ಥೆಯು ಪಿ.ಎನ್. ಕೌಲ್ ನೇತೃತ್ವದಲ್ಲಿ 'ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಪಠ್ಯಕ್ರಮ ಅಭಿವೃದ್ಧಿ ಸಮಿತಿ, 1993'ನ್ನು ರಚಸಿ, ಈ ಸಮಿತಿಯು ಸಮರ್ಪಿಸಿದ ವರದಿಯನ್ನು ಆಧರಿಸಿ, ಗ್ರಂಥಾಲಯ ಕ್ಷೇತ್ರಕ್ಕೆ

Digitised by Bharatavani, CIIL

ಅನುಕೂಲವಾಗುವಂತೆ ಗ್ರಂಥಾಲಯ ವಿಜ್ಞಾನ ಪಠ್ಯವಿಷಯವನ್ನು ಮಾರ್ಪಡಿಸಲು ಅವಕಾಶ ನೀಡಿತು.

ಇದಾದ ಕೆಲವೇ ವರ್ಷಗಳಲ್ಲಿ, ಮಾಹಿತಿ ಸಂಪರ್ಕ ತಂತ್ರಜ್ಞಾನ ಕ್ಷೇತ್ರದಲ್ಲಿ ನಡೆದ ಆವಿಷ್ಕಾರಗಳಿಂದಾಗಿ, ಅವುಗಳನ್ನು ಗ್ರಂಥಾಲಯ ಕ್ಷೇತ್ರದಲ್ಲಿ ಬಳಸುವ ಕಾರ್ಯವೂ ಅನಿವಾರ್ಯವಾದ ಸಂದರ್ಭದಲ್ಲಿ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ತನ್ನ ಹಿಂದಿನ ವರದಿಯ ಕೂಲಂಕಷ ಅಧ್ಯಯನವನ್ನು ಕೈಗೊಂಡು, ಅದನ್ನು ಅಮೂಲಾಗ್ರವಾಗಿ ಅಳವಡಿಸುವ ನಿಟ್ಟಿನಲ್ಲಿ ಯೋಜನೆಯನ್ನು ಕೈಗೊಂಡು, ಇಂದಿನ ಸ್ಥಿತಿಗತಿಗಳಿಗೆ ಅದರ ಬಳಕೆ ಹಾಗೂ ಫಲಸ್ವರೂಪವನ್ನು ಅರಿಯುವ ಸಲುವಾಗಿ ಪ್ರೊ. ಸಿ.ಆರ್. ಕರಿಸಿದ್ದಪ್ಪನವರ (2001) ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ 'ಯುಜಿಸಿ ಮಾದರಿ ಪಠ್ಯಕ್ರಮ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ' ಎಂಬ ವರದಿಯನ್ನು ಪ್ರಕಟಿಸಿತು.

ಇಂದಿನ ಜಾಲ ಸಂಪರ್ಕ ಕ್ಷೇತ್ರದಲ್ಲಿನ ಬದಲಾವಣೆ, ಅಧುನಿಕ ರೀತಿಯ ಗ್ರಂಥಾಲಯಗಳ ಬದಲಾದ ಉದ್ದೇಶಗಳು, ಮಾಹಿತಿ ಸಂಗ್ರಹ ಹಾಗೂ ಹಿಂಪಡೆಯುವಿಕೆ ವಿಧಾನಗಳಲ್ಲಿ ಆಗಿರುವ ಮಾರ್ಪಾಡುಗಳು, ಇವುಗಳಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯಗಳಲ್ಲಿ ನೀಡುತ್ತಿರುವ ಶಿಕ್ಷಣ ಕ್ರಮದಲ್ಲಿನ ಪಠ್ಯವಿಷಯಗಳಲ್ಲಿ ಬದಲಾವಣೆ ತರಬೇಕೆಂಬುದರ ಅವಶ್ಯಕತೆಯನ್ನು ಈ ವರದಿಯು ಎತ್ತಿ ಹಿಡಿಯಿತು. ಅಲ್ಲದೇ, ಈ ವರದಿಯು ಎರಡು ವರ್ಷದ ಅವಧಿಯ ಸಂಯೋಜಿತ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಪದವಿಯ ಪರಿಷ್ಕೃತ ಹಾಗೂ ಅಧುನಿಕ ಪಠ್ಯವಿಷಯವನ್ನು ಪ್ರಕಟಿಸಿತು. ಇದನ್ನು ಪರಿಶೀಲಿಸಿ ಭಾರತದ ಎಲ್ಲ ವಿಶ್ವವಿದ್ಯಾನಿಲಯಗಳೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಏಕರೂಪದ ಪಠ್ಯಕ್ರಮವನ್ನು ಅಳವಡಿಸುವ ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದೆ.

**ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಕ್ಷೇತ್ರದಲ್ಲಿ ಪಠ್ಯಕ್ರಮದಲ್ಲಿ ಆಗಿಂದಾಗ್ಗೆ ಉಂಟಾದ ಬದಲಾವಣೆಗಳು:** ಈ ಅಧ್ಯಯನ ಕ್ಷೇತ್ರದಲ್ಲಿ ಅಂದಿನ ಅವಶ್ಯಕತೆಗಳಿಗೆ ತಕ್ಕಂತೆ ಆಗಿಂದಾಗ್ಗೆ ಬದಲಾವಣೆಗಳು ಉಂಟಾಗುತ್ತಿರುತ್ತವೆ. ಈ ಕ್ಷೇತ್ರದಲ್ಲಿ 1950 ರಿಂದಲೂ ಪಠ್ಯವಿಷಯದಲ್ಲಿ ಉಂಟಾಗಿರುವ ಮಾರ್ಪಾಡುಗಳನ್ನು ನಿಖರವಾಗಿ ಗುರ್ತಿಸಬಹುದಾಗಿದೆ. 1950ರ ಪೂರ್ವದಲ್ಲಿ ಗ್ರಂಥಾಲಯ ವಿಜ್ಞಾನದ ಅಧ್ಯಯನದಲ್ಲಿ ಸಂಘಟನೆಗಳು, ಮೇಲ್ವಿಚಾರಣೆ, ವರ್ಗೀಕರಣ, ಸೂಚೀಕರಣ, ಗ್ರಂಥಸೂಚಿ, ಪರಾಮರ್ಶನ ಸೇವೆ, ಗ್ರಂಥ ಆಯ್ಕೆ ಪ್ರಕ್ರಿಯೆ ಇವೇ ಮೊದಲಾದ ಮೂಲಾಂಶಗಳನ್ನು ತಿಳಿಸಿಕೊಡುವ ವಿಷಯಗಳು ಒಳಗೊಂಡಿದ್ದವು. ಈ ಮೂಲ ವಿಷಯಗಳನ್ನು ಡಾ॥ ಎಸ್.ಆರ್.ರಂಗನಾಥನ್‌ರವರು 1930ರ ದಶಕದಲ್ಲಿ ಸಿದ್ಧಪಡಿಸಿದ ಪಠ್ಯವಿಷಯದ ದಿನಗಳಿಂದ ಹಿಡಿದು ಇಂದಿನವರೆಗೂ ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಬೋಧಿಸಲಾಗುತ್ತಿದೆ.

**1950ರ ಕಾಲಘಟ್ಟ:** 1950 ರಲ್ಲಿ ಭಾರತದಲ್ಲಿ ಐಎಐಆಜಔಅ ಸ್ಥಾಪನೆಯಿಂದಾಗಿ ಪ್ರಲೇಖನ ತಂತ್ರಗಳ ಪರಿಚಯವುಂಟಾಯಿತು. ಕೆಲವು ವಿಶೇಷ ಗ್ರಂಥಾಲಯಗಳಲ್ಲಿ ವ್ಯವಸ್ಥಿತವಾದ ಪ್ರಲೇಖನ ಸೇವೆಗಳು ಆರಂಭವಾದವು. ಇದೇ ಸಮಯದಲ್ಲಿ ಸಾಹಿತ್ಯಗಳ ವರ್ಗೀಕರಣಕ್ಕಾಗಿ ಹಲವಾರು ವರ್ಗೀಕರಣ ಸಿದ್ಧಾಂತಗಳು ರಚಿಸಲ್ಪಟ್ಟವು. ಈ ಸಿದ್ಧಾಂತಗಳನ್ನು ವಿವಿಧ ಗ್ರಂಥಾಲಯ ತರಬೇತಿ ಶಾಲೆಗಳಲ್ಲಿ ಬೋಧಿಸಲು ತೊಡಗಲಾಯಿತು.

**1960ರ ಕಾಲಘಟ್ಟ:** ಈ ದಶಕದಲ್ಲಿ ಆಖಖಿಅ ಸಂಸ್ಥೆಯ ಸ್ಥಾಪನೆ, INSDOCನಲ್ಲಿ ಗ್ರಂಥಾಲಯ ವಿಜ್ಞಾನದಲ್ಲಿ ಅಸೋಸಿಏಟ್ ಶಿಕ್ಷಣ ಹಾಗೂ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಶಿಕ್ಷಣದ (MLISc) ಬೋಧನೆಯು ಆರಂಭವಾದವು. ಹಾಗೆಯೇ ಈ ವಿಷಯದಲ್ಲಿ ಸೂಚೀಕರಣ, ಸಾರಾಂಶಸೂಚಿ/ಸಂಕ್ಷೇಪಕರಣ, ಪ್ರಲೇಖನ ಸೇವೆ, ಗ್ರಂಥಸೂಚಿ ಇವೇ ಮೊದಲಾದ ವಿಷಯಗಳು ಪಠ್ಯವಿಷಯದಲ್ಲಿ ಸೇರ್ಪಡೆಗೊಂಡವು.

**1970ರ ಕಾಲಘಟ್ಟ:** ನವೀನ ನಿರ್ವಹಣಾ ನಿಯಮಗಳು ಹಾಗೂ ತಂತ್ರಗಳು, ಗ್ರಂಥಾಲಯ ಮತ್ತು ಮಾಹಿತಿ ವ್ಯವಸ್ಥೆ, ಸಾಂಖ್ಯಿಕ ವಿಧಾನಗಳು, ಓದುಗ/ಬಳಕೆದಾರರ ಶಿಕ್ಷಣ, ಥೆಸಾರಸ್‌ಗಳ ರಚನೆ ಹಾಗೂ ಬಳಕೆ ಇವೇ ಮೊದಲಾದ ವಿಷಯಗಳು ಈ ಅವಧಿಯಲ್ಲಿ ಪಠ್ಯವಿಷಯದಲ್ಲಿ ಸೇರ್ಪಡೆಗೊಂಡವು.

**1980ರ ಕಾಲಘಟ್ಟ:** 1980ರ ದಶಕದಲ್ಲಿ 'ನವೀನ ತಂತ್ರಜ್ಞಾನ'ದ ಅನ್ವಯಿಕತೆಯು ಮೂಲ ಮಂತ್ರವಾಯಿತು. ಸಂಪರ್ಕ ತಂತ್ರಜ್ಞಾನ, ಗ್ರಂಥಸೂಚಿ, ದತ್ತಾಂಶಸೂಚಿಗಳು, ನೇರ ಮಾಹಿತಿ, ಹಿಂಪಡೆಯುವಿಕೆ, ಮಾಹಿತಿ ಮಾರುಕಟ್ಟೆ ಇವೇ ಮೊದಲಾದ ಹೊಸ ವಿಷಯಗಳು ಪಠ್ಯದಲ್ಲಿ ಸ್ಥಾನಪಡೆದವು.

**1990ರ ಕಾಲಘಟ್ಟ:** ಈ ಅವಧಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪಠ್ಯವಿಷಯದಲ್ಲಿ ಮಹತ್ತರ ಬದಲಾವಣೆಗಳುಂಟಾದವು. ಬಿ.ಎಲ್.ಐ.ಎಸ್ಸಿ ಮಟ್ಟದಲ್ಲಿ ಗಣಕಯಂತ್ರ ಅನ್ವಯಿಕತೆಯನ್ನು ಮುಖ್ಯ ಪತ್ರಿಕೆಯಾಗಿ ಪರಿಚಯಿಸಲಾಯಿತು. ಹಾಗೆಯೇ ಎಂ.ಎಲ್.ಐ.ಎಸ್ಸಿ ಮಟ್ಟದಲ್ಲಿ ಮಾಹಿತಿ ಸಂಗ್ರಹ, ಹಿಂಪಡೆಯುವಿಕೆ ಹಾಗೂ ಮಾಹಿತಿ ಸಂಪರ್ಕ ತಂತ್ರಜ್ಞಾನ ವಿಷಯಗಳನ್ನು ಪರಿಚಯಿಸಲಾಯಿತು.

**2000ರ ಕಾಲಘಟ್ಟ:** ಈ ಅವಧಿಯಲ್ಲಿ ಗ್ರಂಥಾಲಯ ಕ್ಷೇತ್ರಕ್ಕೆಂದೇ ಮೀಸಲಾದ, ಬಹೂಪಯೋಗಿ ಗಣಕ ತಂತ್ರಾಂಶಗಳ ರಚನೆ, ವಿನ್ಯಾಸ ಹಾಗೂ ಪರಿಣಾಮಕಾರಿ ಬಳಕೆಯು ಸಾಮಾನ್ಯವಾಯಿತು. ಇದರಿಂದಾಗಿ ಅಂತರ್ಜಾಲ ಸಂಪರ್ಕ ಹಾಗೂ ತಂತ್ರಜ್ಞಾನದ ಬಳಕೆಯು ಗ್ರಂಥಾಲಯಗಳಲ್ಲಿ ಕಂಡುಬಂದಿತು. ಮಾಹಿತಿ ಪರಿಷ್ಕರಣೆಗಾಗಿ ಮಾಹಿತಿ ತಂತ್ರಜ್ಞಾನದ ಅನ್ವಯಿಕತೆಯ ಪಠ್ಯವಿಷಯದಲ್ಲಿ ಸೇರ್ಪಡೆಗೊಂಡು, ಇಂದು ಇನ್ನೂ ಆಧುನೀಕರಣಗೊಂಡಿದೆ.

**ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ರಾಷ್ಟ್ರೀಯ ನೀತಿ:** ಯುಜಿಸಿ ಸಂಸ್ಥೆಯ ಸಹಯೋಗದೊಂದಿಗೆ ಭಾರತೀಯ

Digitised by Bharatavani, CIIL

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಾಪಕರ ಸಂಘವು (IATLIS), ನಾಗ್ಪುರದಲ್ಲಿ 1983ರ ಸೆಪ್ಟೆಂಬರ್ 23-26 ರವರೆಗೆ ನಡೆದ 'National Policy for Library and Information Science Education' ಎಂಬ ಅಖಿಲ ಭಾರತ ವಿಚಾರಗೋಷ್ಠಿಯಲ್ಲಿ ಚರ್ಚಿಸಿದ ವಿಚಾರಗಳನ್ನು ಆಧರಿಸಿ 1985 ರಲ್ಲಿ 'ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ' ಹಾಗೂ ಭಾರತೀಯ ಗ್ರಂಥಾಲಯ ಸಂಘಗಳು 'ರಾಷ್ಟ್ರೀಯ ಮಾಹಿತಿ ನೀತಿ' ಯನ್ನು ರಚಿಸಿದವು.

ಹಾಗೆಯೇ ಮತ್ತೊಂದು ಪ್ರಯತ್ನವು 1985ರ ಅಕ್ಟೋಬರ್ ತಿಂಗಳಲ್ಲಿ ಪ್ರೊ.ಡಿ.ಪಿ.ಚಟೋಪಾಧ್ಯಾಯ ನೇತೃತ್ವದಲ್ಲಿ ರಚಿಸಿದ್ದ ಗ್ರಂಥಾಲಯ ಮತ್ತು ಮಾಹಿತಿ ವ್ಯವಸ್ಥೆಯ ರಾಷ್ಟ್ರೀಯ ನೀತಿ ಸಮಿತಿಯ 1988ರ ಮಾರ್ಚ್‌ನಲ್ಲಿ ಸರ್ವೇಕ್ಷಣ ವರದಿಯನ್ನು ಸಲ್ಲಿಸುವುದರ ಮೂಲಕ ಕಂಡುಬಂದಿತು. ಇದನ್ನು ಆಧರಿಸಿ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಗುಣಮಟ್ಟ ಹಾಗೂ ಮಾನದಂಡಗಳನ್ನು ಕಾಯ್ದುಕೊಳ್ಳುವಿಕೆ, ವೃತ್ತಿಪರತೆಯ ಸ್ಥಾನಮಾನಗಳು, ಹಾಗೂ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ಹಾಗೂ ಉನ್ನತ ಶಿಕ್ಷಣನ್ನು ವಿಸ್ತರಿಸಲು ಅನುಕೂಲವಾಗುವಂತೆ ರಾಷ್ಟ್ರೀಯ ಸಂಸ್ಥೆಯ ಸ್ಥಾಪನೆ ಇವೇ ಮೊದಲಾದ ಅಂಶಗಳ ಮೇಲೆ ಹೆಚ್ಚಿನ ಗಮನ ಹರಿಸಲಾಯಿತು.

**ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣ ಮತ್ತು ದೂರಶಿಕ್ಷಣ ಪದ್ಧತಿ:** ಈ ಹಿಂದೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣವನ್ನು ಕೇವಲ ನಿಯಮಿತ ವ್ಯವಸ್ಥೆಯಲ್ಲಿ ಮಾತ್ರ ನೀಡಲಾಗುತ್ತಿತ್ತು. ಆದರೆ ಇಂದು ಈ ಶಿಕ್ಷಣ ತರಬೇತಿಯನ್ನು ಅಸಾಂಪ್ರದಾಯಿಕ ವಿಧಾನಗಳಾದ ದೂರಶಿಕ್ಷಣ ಹಾಗೂ ಅಂಚೆ ತೆರಪಿನ ಶಿಕ್ಷಣ ವ್ಯವಸ್ಥೆಯ ಮೂಲಕ ಅಷ್ಟೇ ಪರಿಣಾಮಕಾರಿಯಾಗಿ ಕಲಿಸಲಾಗುತ್ತಿದೆ. ಭಾರತದಲ್ಲಿ ಗ್ರಂಥಾಲಯದ ಶಿಕ್ಷಣದ ಇತಿಹಾಸವು ಸುಮಾರು 100 ವರ್ಷಗಳಷ್ಟು ಹಳೆಯದು. ಈ ಅವಧಿಯಲ್ಲಿ ಈ ಶಿಕ್ಷಣ ಪದ್ಧತಿಯು ಸೇವಾವಧಿಯಲ್ಲಿ ನೀಡುವ ತರಬೇತಿ, ಕೆಲವು ವೃತ್ತಿಪರ ಸಂಘಟನೆಗಳು ನೀಡುವ ಅಲ್ಪಾವಧಿ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣ ಹಾಗೂ ಕಲಿಕಾ ಸಂಸ್ಥೆಗಳಿಂದ ನೀಡಲ್ಪಡುವ ಸ್ನಾತಕ, ಸ್ನಾತಕೋತ್ತರ, ಸಂಶೋಧನಾ ಪದವಿಯವರೆಗೆ ಅಭಿವೃದ್ಧಿ ಹೊಂದಿದೆ.

ಭಾರತದಲ್ಲಿ ಮೊಟ್ಟಮೊದಲಿಗೆ ಆಂಧ್ರಪ್ರದೇಶ ಮುಕ್ತ ವಿಶ್ವವಿದ್ಯಾಲಯವು 1985 ರಲ್ಲಿ ಗ್ರಂಥಾಲಯ ವಿಜ್ಞಾನ ಸ್ನಾತಕ ಪದವಿಯ ಶಿಕ್ಷಣವನ್ನು ನೀಡಲು ಆರಂಭಿಸಿತು. ನಂತರ 1986 ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯವು ಅಂಚೆ ತೆರಪಿನ ಶಿಕ್ಷಣ ವ್ಯವಸ್ಥೆಯ ಮೂಲಕ ಬಿ.ಎಲ್.ಐ.ಎಸ್ಸಿ ಶಿಕ್ಷಣವನ್ನು ಪ್ರಾರಂಭಿಸಿತು.

1989 ರಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು ಃಐಖಖಿ ಶಿಕ್ಷಣವನ್ನು, 1990 ರಲ್ಲಿ ಕಾಕತೀಯ ವಿಶ್ವವಿದ್ಯಾಲಯ, ವಾರಂಗಲ್, ಮಧುರೈ ಕಾಮರಾಜ್ ವಿಶ್ವವಿದ್ಯಾಲಯ, ಮದುರೈ ಹಾಗೂ ಅಣ್ಣಾಮಲೈ ವಿಶ್ವವಿದ್ಯಾಲಯ ಈ ಶಿಕ್ಷಣವನ್ನು ದೂರಶಿಕ್ಷಣದ ಮುಖಾಂತರ ಕೊಡಮಾಡಿದವು. ಇದೀಗ ಸುಮಾರು 15 ಮುಕ್ತ ವಿಶ್ವವಿದ್ಯಾಲಯಗಳು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಸ್ನಾತಕ, ಸ್ನಾತಕೋತ್ತರ, ಎಂ.ಫಿಲ್ ಹಾಗೂ ಪಿ.ಹೆಚ್.ಡಿ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟಿವೆ.

ಮದ್ರಾಸ್ ವಿಶ್ವವಿದ್ಯಾಲಯವು ವೃತ್ತಿನಿರತ ಗ್ರಂಥಪಾಲಕರ ಒತ್ತಾಯದ ಮೇರೆಗೆ 1989 ರಲ್ಲಿ ತನ್ನ ಅಂಚೆ ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ MLISc ಶಿಕ್ಷಣವನ್ನು ಪ್ರಾರಂಭಿಸಿತು. 1991 ರಲ್ಲಿ ಅಣ್ಣಾಮಲೈ ವಿಶ್ವ ವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು MLISc ಶಿಕ್ಷಣವನ್ನು ನೀಡಲು ಆರಂಭಿಸಿತು. 1994 ರಲ್ಲಿ ಇಗ್ನೋ ಹಾಗೂ 1998 ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯವು MLISc ಶಿಕ್ಷಣವನ್ನು ಆರಂಭಿಸಿತು. ನಂತರ 2007 ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು MLISc ಪದವಿ ಶಿಕ್ಷಣವನ್ನು ದೂರಶಿಕ್ಷಣದ ಮೂಲಕ ನೀಡುವಲ್ಲಿ ಸಫಲವಾಗಿದೆ.

**ಬದಲಾದ ಸನ್ನಿವೇಶದಲ್ಲಿ ಭಾರತದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ದೃಷ್ಟಿಕೋನ:**

ಇಂದಿನ ಗಣಕೀಕೃತ ಪರಿಸರದಲ್ಲಿ ಭಾರತದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ದೃಷ್ಟಿಕೋನವೂ ಬದಲಾಗಿದೆ. ಅದರಂತೆ–

- ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದಲ್ಲಿ ವಿದ್ಯುನ್ಮಾನ ಶಿಕ್ಷಣ ವಿಧಾನವನ್ನು ಪರಿಚಯಿಸುವುದು ಹಾಗೂ ವಿದ್ಯುನ್ಮಾನ ಕಲಿಕಾ ಸಾಧನಗಳನ್ನು ರೂಪಿಸುವುದು
- ಮಾಹಿತಿ ಬಳಕೆದಾರರಿಗೆ ಉಂಟಾಗುವ ಸಮಸ್ಯೆಗಳನ್ನು ಕುರಿತಂತೆ ಸಂಶೋಧನೆಗಳನ್ನು ಕೈಗೊಂಡು, ಪರಿಹಾರವನ್ನು ಒದಗಿಸುವುದು ಹಾಗೂ ನವೀನ ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನು ಅಳವಡಿಸುವುದು.
- ವಿವಿಧ ರೀತಿಯ ಹಿನ್ನೆಲೆಯುಳ್ಳ ಬಳಕೆದಾರರು ಹಾಗೂ ಗ್ರಂಥಾಲಯಗಳಿಗೆ ಅನುಗುಣವಾಗಿ ವಿಷಯಗಳನ್ನು ಆಧರಿಸಿ ತರಬೇತಿ ನೀಡುವುದು
- ಕೈಗಾರಿಕೆ–ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರಿಗೆ ತರಬೇತಿ ನೀಡುವುದು ಹಾಗೂ ನವೀನ ತಂತ್ರಜ್ಞಾನದ ಮೂಲಕ ಆವಿಷ್ಕೃತವಾದ ಸಾಧನಗಳ ಬಳಕೆ ಹಾಗೂ ಅನ್ವಯಿಕತೆಗೆ ಅನುವು ಮಾಡಿಕೊಡುವುದು.

**–ಗೋಪಾಲಸ್ವಾಮಿ ಎಂ.**
**–ಕುಮಾರ್ ಎಸ್.ಎನ್.**

Digitised by Bharatavani, CIIL

## ಭಾರತದಲ್ಲಿ ದೂರಶಿಕ್ಷಣದ ಬೆಳವಣಿಗೆ

ದೂರಶಿಕ್ಷಣ ವ್ಯವಸ್ಥೆಯು ವಿಶ್ವದಾದ್ಯಂತ ಚಾಲ್ತಿಯಲ್ಲಿದ್ದು, ಇದು ಶಿಕ್ಷಣಾರ್ಥಿಗಳಿಗೆ ಅತಿ ಕಡಿಮೆ ವೆಚ್ಚದಲ್ಲಿ ವೃತ್ತಿಪರ ಶಿಕ್ಷಣವನ್ನೊಳಗೊಂಡಂತೆ ಅವರ ಶೈಕ್ಷಣಿಕ ಬೇಡಿಕೆಗಳನ್ನು ಈಡೇರಿಸುವಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ದೂರಶಿಕ್ಷಣ ವ್ಯವಸ್ಥೆ ಬಹುಮಾಧ್ಯಮ (Multimedia) ವಿಧಾನಗಳ ಮುಖಾಂತರ ಮುದ್ರಿತ ಹಾಗೂ ವಿದ್ಯುನ್ಮಾನ ಮಾಧ್ಯಮದಲ್ಲಿ ದೊರೆಯುವ ಪಠ್ಯವಿಷಯಾಧಾರಿತ ಅಧ್ಯಯನ ಸಾಮಗ್ರಿಗಳ ಮೂಲಕ ಸ್ವಾಯತ್ತ ಕಲಿಕಾ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸುವ, ಅಭಿವೃದ್ಧಿಪಡಿಸುವ ಹಾಗೂ ಕಾರ್ಯೋನ್ಮುಖಗೊಳಿಸುವ ಪ್ರಮುಖ ಕಾರ್ಯದಲ್ಲಿ ನಿರತವಾಗಿದೆ. ದೂರಶಿಕ್ಷಣ ವ್ಯವಸ್ಥೆ ಶಿಕ್ಷಣಾರ್ಥಿಗಳಿಗೆ ಸ್ವ-ಕಲಿಕಾ ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುತ್ತದೆ. ಈ ವ್ಯವಸ್ಥೆಯಲ್ಲಿ ಪಠ್ಯವಿಷಯಾಧಾರಿತ ಕಲಿಕಾ ಸಾಮಗ್ರಿಗಳನ್ನು ಕಲಿಕಾರ್ಥಿಗಳಿಗೆ ತಲುಪಿಸಲು ಮುದ್ರಿತ ಸಿದ್ಧಪಾಠಗಳು, ದೃಶ್ಯ ಮತ್ತು ಶ್ರವಣ ಸಾಧನಗಳು, ರೇಡಿಯೋ ಹಾಗೂ ದೂರದರ್ಶನ ಕಾರ್ಯಕ್ರಮಗಳು, ಉಪನ್ಯಾಸ ಮತ್ತು ಆಪ್ತಸಲಹೆ, ಕ್ಷೇತ್ರ ಅಧ್ಯಯನ/ಕಾರ್ಯಾಚರಣೆ, ಪ್ರಾಯೋಗಿಕ ತರಗತಿಗಳು, ಸಂಪರ್ಕ ಕಾರ್ಯಕ್ರಮಗಳು ಹಾಗೂ ಟೆಲಿ ಕಾನ್ಫರೆನ್ಸಿಂಗ್ ಇವೇ ಮೊದಲಾದ ಪರಿಣಾಮಕಾರಿ ಸಾಧನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆ.

ದೂರಶಿಕ್ಷಣ: ದೂರಶಿಕ್ಷಣ ಅಥವಾ ದೂರಶಿಕ್ಷಣ ಕಲಿಕೆಯೆಂದರೆ ಪರಂಪರಾಗತವಾಗಿ ಬಂದ ಶಿಕ್ಷಣ ವಿಧಾನವನ್ನು ನವೀನ ತಂತ್ರಜ್ಞಾನ ಹಾಗೂ ಸಿದ್ಧಪಡಿಸಿದ ಪಠ್ಯವಸ್ತುವಿನೊಡನೆ ಭೌತಿಕವಾಗಿ ವಿಶ್ವವಿದ್ಯಾನಿಲಯದ ಆವರಣದಿಂದ ದೂರವಿರುವ ವಿದ್ಯಾರ್ಥಿಗಳಿಗೆ ತಲುಪಿಸುವ ಶಿಕ್ಷಣ ವ್ಯವಸ್ಥೆ ಎಂದು ವ್ಯಾಖ್ಯಾನಿಸಬಹುದು.

ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ತರಗತಿಯ ಸೀಮಿತ ಚೌಕಟ್ಟಿಗೆ ಒಳಗಾಗದೆ, ದೂರಶಿಕ್ಷಣದ ಸಂಸ್ಥೆಯ ಆವರಣದಿಂದ ದೂರವಿದ್ದು, ಸಂಸ್ಥೆಯು ಒದಗಿಸುವ ಪಠ್ಯವಿಷಯ, ಸಿದ್ಧಪಾಠಗಳು, ದೃಕ್‌ಶ್ರವಣ ಸಾಧನಗಳು ಹಾಗೂ ಸಂಪರ್ಕ ತರಗತಿಗಳ ಮೂಲಕ ಶಿಕ್ಷಣವನ್ನು ಮುಂದುವರೆಸಬಹುದಾಗಿದೆ. ಅಲ್ಲದೆ, ಈ ವ್ಯವಸ್ಥೆಯು ಶಿಕ್ಷಣಾರ್ಥಿಗಳು ತಾವು ಹಿಂದೆ ಕಲಿಯುತ್ತಿದ್ದ ಔಪಚಾರಿಕ ಶಿಕ್ಷಣ ವಿಧಾನವನ್ನು ಮೊಟಕುಗೊಳಿಸಿದ್ದಲ್ಲಿ ಈ ವಿಧಾನದ ಮೂಲಕ ವಿದ್ಯಾಭ್ಯಾಸವನ್ನು ಮುಂದುವರೆಸಲು ಕಲ್ಪಿಸಿರುವುದರಿಂದಾಗಿ ಇದನ್ನು ಮುಂದುವರಿಕೆ ಶಿಕ್ಷಣ ಎಂದೂ ಕರೆಯಬಹುದಾಗಿದೆ.

ದೂರಶಿಕ್ಷಣ ವ್ಯವಸ್ಥೆಯ ವಿಧಗಳು

ಅಸಾಂಪ್ರದಾಯಿಕ ವಿಧಾನದಲ್ಲಿ ಮುಂದುವರೆಸಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುವ ದೂರಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ವಿಧಗಳಿವೆ. ಪ್ರಮುಖವಾದವುಗಳೆಂದರೆ,

- ಅಂಚೆ ತೆರಪಿನ ಹಾಗೂ ಮುಂದುವರಿಕೆ ಶಿಕ್ಷಣ ವ್ಯವಸ್ಥೆ
- ಅಂತರ್ಜಾಲಾಧಾರಿತ ನೇರ ಸಂಪರ್ಕ (On-line)ಶಿಕ್ಷಣ ವ್ಯವಸ್ಥೆ
- ರೇಡಿಯೋ ಅಥವಾ ದೂರದರ್ಶನದ ಮೂಲಕ ನಡೆಸುವ ಟೆಲಿಕೋರ್ಸ್/ಬ್ರಾಡ್ ಕೋರ್ಸ್ ಶಿಕ್ಷಣ ವ್ಯವಸ್ಥೆ
- ಸಿಡಿರೋಮ್‌ನಲ್ಲಿ (CD-ROME) ಸಂಗ್ರಹಿಸಲಾಗಿರುವ ದತ್ತಾಂಶಾಧಾರಿತ ಶಿಕ್ಷಣ ವ್ಯವಸ್ಥೆ
- ಚರ ದೂರವಾಣಿಯಾಧಾರಿತ (Mobile)ಶಿಕ್ಷಣ ವ್ಯವಸ್ಥೆ

ದೂರಶಿಕ್ಷಣದ ದಾಖಲಾತಿ ಕ್ರಮಗಳು

ದೂರಶಿಕ್ಷಣ ವ್ಯವಸ್ಥೆಯ ದಾಖಲಾತಿಯಲ್ಲಿ ಎರಡು ಕ್ರಮಗಳಿವೆ. ಅವುಗಳೆಂದರೆ–

1. ನಿಯಮಿತ ಶಿಕ್ಷಣ ವಿಧಾನ
2. ಮುಕ್ತ ಶಿಕ್ಷಣ ವಿಧಾನ

ಇದರಲ್ಲಿ ಮೊದಲನೆಯದಾದ ನಿಯಮಿತ ಶಿಕ್ಷಣ ವಿಧಾನದ ಮೂಲಕ ದಾಖಲಾಗಲು ಶಿಕ್ಷಣಾರ್ಥಿಗಳು ಇತರ ಸಾಮಾನ್ಯ ವಿಶ್ವವಿದ್ಯಾನಿಲಯ ಕ್ರಮದಲ್ಲಿ ದಾಖಲಾಗಲು ಅವಶ್ಯಕವಾದ ಪೂರಕ ಮೂಲಶಿಕ್ಷಣವನ್ನು ಪಡೆದಿರಬೇಕಾದದ್ದು ಅನಿವಾರ್ಯವಾಗಿದೆ.

ಹಾಗೆಯೇ, ಮುಕ್ತ ಶಿಕ್ಷಣ ವಿಧಾನದ ಮೂಲಕ ದಾಖಲಾಗಲು ಬಯಸುವ ವಿದ್ಯಾರ್ಥಿಗಳು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ, ಅವಶ್ಯಕವಾದ ಮೂಲಶಿಕ್ಷಣವನ್ನು ಹೊಂದಿಲ್ಲದಿದ್ದರೂ ದಾಖಲಾಗುವ ಹಾಗೂ ಶಿಕ್ಷಣವನ್ನು ಮುಂದುವರೆಸುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಈ ರೀತಿಯ ದಾಖಲಾತಿಗಳು ಕೇವಲ ಸರ್ಟಿಫಿಕೇಟ್ ಹಾಗೂ ಡಿಪ್ಲೋಮ ತರಗತಿಗಳಿಗೆ ಸೀಮಿತವಾಗಿವೆ. ಮುಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಕೊಡಲಾಗುವ ಕೆಲವು ವೃತ್ತಿಪರ ವಿಷಯಗಳ ಶಿಕ್ಷಣಕ್ಕೆ ದಾಖಲಾಗಲು ಶಿಕ್ಷಣಾರ್ಥಿಗಳು ಸಂಬಂಧಿತ ಕ್ಷೇತ್ರದಲ್ಲಿ ನಿರ್ದಿಷ್ಟ ಅವಧಿಯ ಕಾರ್ಯಾನುಭವ, ಪೂರಕ ಮೂಲಶಿಕ್ಷಣದಲ್ಲಿ ಉತ್ತಮ ಅಂಕಗಳು ಹಾಗೂ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವ ಅವಶ್ಯಕತೆಯಿರುತ್ತದೆ. ಹಾಗೆಯೇ ದಾಖಲಾತಿಗಾಗಿ ಪೈಪೋಟಿಯು ಹೆಚ್ಚಾಗಿದ್ದಾಗ ಸೀಮಿತ ಅನುಪಾತದಡಿಯಲ್ಲಿ ಸಂದರ್ಶನ ನಡೆಸಿಯೂ ಸದರಿ ವ್ಯವಸ್ಥೆಗೆ ದಾಖಲಾತಿಯನ್ನು ನೀಡಲಾಗುತ್ತದೆ.

ದೂರಶಿಕ್ಷಣವನ್ನು ನೀಡುವ ವಿವಿಧ ಸಂಸ್ಥೆಗಳು

ಇದರಲ್ಲಿ ಮೂರು ವಿಧವಾದ ಸಂಸ್ಥೆಗಳನ್ನು ಮುಖ್ಯವಾಗಿ ಗುರ್ತಿಸಬಹುದು.

- ವಿಶ್ವವಿದ್ಯಾನಿಲಯಗಳಲ್ಲಿರುವ ಅಂಚೆ ತೆರಪಿನ ಶಿಕ್ಷಣದ ವಿಭಾಗಗಳು ಹಾಗೂ ಕೆಲವು ಸ್ವಾಯತ್ತ ಶಿಕ್ಷಣ ಸಂಸ್ಥೆಗಳು
- ಮುಕ್ತ ವಿಶ್ವವಿದ್ಯಾನಿಲಯಗಳು
- ವೃತ್ತಿಪರ ಶಿಕ್ಷಣವನ್ನು ನೀಡುವ ಹಲವಾರು ಶಿಕ್ಷಣ ಸಂಸ್ಥೆಗಳು

Digitised by Bharatavani, CIIL

**ದೂರಶಿಕ್ಷಣ ಕಲಿಕೆಯ ಸ್ವರೂಪ**

ದೂರಶಿಕ್ಷಣ ಸಂಸ್ಥೆಗಳು ಸಾಮಾನ್ಯವಾಗಿ ಸಾಂಪ್ರದಾಯಿಕ ಶಿಕ್ಷಣ ಸಂಸ್ಥೆಗಳು ನೀಡುವ ಎಲ್ಲ ಬಗೆಯ ಶಿಕ್ಷಣವನ್ನು ನೀಡುತ್ತಿವೆ. ಅಂದರೆ ಅವು ಸ್ನಾತಕ ಪದವಿ, ಡಿಪ್ಲೋಮ ಹಾಗೂ ಸ್ನಾತಕೋತ್ತರ ಡಿಪ್ಲೋಮ,

**ಬ್ರಿಟಿಷ್ ಮುಕ್ತ ವಿಶ್ವವಿದ್ಯಾನಿಲಯ**

ಮುಕ್ತ ವಿಶ್ವವಿದ್ಯಾನಿಲಯಗಳ ಇತಿಹಾಸ ಇಪ್ಪತ್ತನೇ ಶತಮಾನದ ಆರಂಭದವರೆಗೂ ಹೋಗುತ್ತದೆ. 1926ರಲ್ಲಿ ಇಂಗ್ಲೆಂಡ್‌ನಲ್ಲಿ ಆಗತಾನೇ ಆರಂಭವಾಗಿದ್ದ BBC ರೇಡಿಯೋ ಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದ ಶಿಕ್ಷಣತಜ್ಞ ಮತ್ತು ಇತಿಹಾಸಕಾರ J.Cಸ್ಟೋಬಾರ್ಟ್ ವೈರ್‌ಲೆಸ್ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕಾಗಿದೆ ಎಂದು ಪ್ರತಿಪಾದಿಸಿದರು. ಆದರೆ 1960ರವರೆಗೂ ಈ ಸಲಹೆ ಸುಪ್ತವಾಗಿದ್ದು, ಕಾರ್ಯರೂಪಕ್ಕೆ ಬರಲಿಲ್ಲ. ಆದರೆ ಇದರ ಬಗ್ಗೆ ಅನೇಕ ಪ್ರಸ್ತಾವನೆಗಳೂ ಬಂದರೂ ಫಲಕಾರಿಯಾಗಲಿಲ್ಲ.

1962ರಲ್ಲಿ ಮೈಖೇಲ್ ಯಂಗ್ ಎಂಬುವನು ಒಂದು ಪತ್ರಿಕೆಯಲ್ಲಿ ಲಂಡನ್ ವಿಶ್ವವಿದ್ಯಾನಿಲಯದ ಹೊರಗಿನಿಂದ ಪದವಿ ಪಡೆಯಲು ಅಧ್ಯಯನ ಮಾಡುತ್ತಿದ್ದವರಿಗಾಗಿ ಒಂದು ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬ ಪ್ರಸ್ತಾಪವನ್ನು ಮಾಡಿದರು. ಇಷ್ಟು ಹೊತ್ತಿಗಾಗಲೇ ಬಿ.ಬಿ.ಸಿ ಮತ್ತು ಇಂಗ್ಲೆಂಡ್ ಸರ್ಕಾರದ ಶಿಕ್ಷಣ ಇಲಾಖೆ 'ಗಾಳಿಯ ವಿಶ್ವವಿದ್ಯಾನಿಲಯ'ದ (University of Air) ಬಗ್ಗೆ ಚರ್ಚೆ ನಡೆಸುತ್ತಿದ್ದರು. 1963ರಲ್ಲಿ ಈ ಬಗ್ಗೆ ಒಂದು ವರದಿಯನ್ನು ಪ್ರಕಟಿಸಲಾಯಿತು. 1966ರಲ್ಲಿ ಲೇಬರ್ ಪಾರ್ಟಿ ತನ್ನ ಪ್ರಣಾಳಿಕೆಯಲ್ಲಿ ಮುಕ್ತ ವಿಶ್ವವಿದ್ಯಾನಿಲಯ ಬಗ್ಗೆ ಪ್ರಸ್ತಾಪಿಸಿತು. ಈ ಎಲ್ಲಾ ಬೆಳವಣಿಗೆಗಳ ಫಲವಾಗಿ 1971ರಲ್ಲಿ ಬ್ರಿಟಿಷ್ ಮುಕ್ತವಿಶ್ವವಿದ್ಯಾನಿಲಯ ವಿಶ್ವದಲ್ಲೇ ಪ್ರಪ್ರಥಮವಾಗಿ ಕಾರ್ಯಾರಂಭ ಮಾಡಿತು. ಪ್ರೊ॥ವಾಲ್ಟರ್ ಪೆರ್ರಿ ಈ ವಿಶ್ವವಿದ್ಯಾನಿಲಯದ ಮೊದಲ ಕುಲಪತಿಯಾದರು. ಆರಂಭದ ವರ್ಷದಲ್ಲಿಯೇ 25,000 ವಿದ್ಯಾರ್ಥಿಗಳು ಈ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆದರು. ಪ್ರವೇಶಕ್ಕೆ ಯಾವುದೇ ರೀತಿಯ ಔಪಚಾರಿಕ ಶಿಕ್ಷಣದ ಪದವಿಗಳ ಅಗತ್ಯವಿರಲಿಲ್ಲ. ಮೊದಲಿಗೆ ಈ ವಿಶ್ವವಿದ್ಯಾನಿಲಯದಲ್ಲಿ ಮಾನವಿಕಗಳು, ಸಾಮಾಜಿಕ ವಿಜ್ಞಾನಗಳು, ವಿಜ್ಞಾನಗಳು ಮತ್ತು ಗಣಿತದಲ್ಲಿ ಪದವಿ ಕೋರ್ಸ್‌ಗಳನ್ನು ಆರಂಭಿಸಲಾಯಿತು. ಈ ವಿಶ್ವವಿದ್ಯಾನಿಲಯ ನಂತರದಲ್ಲಿ ಸ್ಥಾಪನೆಯಾದ ಇತರ ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಮಾದರಿಯಾಯಿತು. ಭಾರತದಲ್ಲಿ ಸ್ಥಾಪನೆಯಾದ ಇಂದಿರಾಗಾಂಧಿ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಈ ವಿಶ್ವವಿದ್ಯಾನಿಲಯ ಸ್ಫೂರ್ತಿ ನೀಡಿತು.

ಯೂನಿವರ್ಸಿಟಿ ವಿಥೌಟ್ ವಾಲ್ಸ್ (ಮೆಸಾಚುಸೆಟ್ಸ್ ವಿಶ್ವವಿದ್ಯಾನಿಲಯ, ಅಮ್ಹರಸ್ಟ್ –1971)

ಅಮೇರಿಕಾದ ಮೆಸಚುಸೆಟ್ಸ್ ವಿಶ್ವವಿದ್ಯಾನಿಲಯವು ಸಾಂಪ್ರದಾಯಿಕ ಶಿಕ್ಷಣ ಕ್ರಮದಲ್ಲಿ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದಿರುವ ವಯಸ್ಕ ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣವನ್ನು ಪೂರೈಸಿಕೊಳ್ಳಲು ಸಹಾಯಕವಾಗುವಂತೆ ಯೂನಿವರ್ಸಿಟಿ ವಿಥೌಟ್ ವಾಲ್ಸ್(ಭಿತ್ತಿರಹಿತ ವಿಶ್ವವಿದ್ಯಾನಿಲಯ) ಎಂಬ ನೇರ ಸಂಪರ್ಕ ಸೇವೆಯ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿತು. 1971ರಲ್ಲಿ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳ ದಾಖಲಾತಿಯ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಆಯೋಜಿಸಿದ್ದ ರಾಷ್ಟ್ರೀಯ ಭಿತ್ತಿರಹಿತ ವಿಶ್ವವಿದ್ಯಾನಿಲಯ ಚಳುವಳಿಯ ಅಂಗವಾಗಿ ಈ ಸಂಸ್ಥೆಯನ್ನು ಆರಂಭಿಸಲಾಯಿತು. ಮೆಸಚುಸೆಟ್ಸ್ ವಿಶ್ವವಿದ್ಯಾನಿಲಯದಿಂದ ಪ್ರಾರಂಭಿಸಲ್ಪಟ್ಟ ಈ ಬಗೆಯ 'ಭಿತ್ತಿರಹಿತ ವಿಶ್ವವಿದ್ಯಾನಿಲಯ'ದ ಕಲ್ಪನೆಯು ಅಮೇರಿಕಾದಲ್ಲಿ ಅಲ್ಲದೇ ಜಗತ್ತಿನಲ್ಲಿಯೇ ಜಾರಿಗೆ ಬಂದ ವಿನೂತನ ವಿಧಾನವಾಗಿದ್ದು, ಇದು ವಯಸ್ಕ ಶಿಕ್ಷಣಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರೆಸಲು ಸಹಾಯಕಾರಿಯಾಗಿದೆ.

**ದೂರಶಿಕ್ಷಣ ಮಂಡಳಿ**

ರಾಷ್ಟ್ರದಲ್ಲಿನ ಶಿಕ್ಷಣ ವ್ಯವಸ್ಥೆಯಡಿಯಲ್ಲಿರುವ ಮುಕ್ತ ವಿಶ್ವವಿದ್ಯಾನಿಲಯಗಳು ಹಾಗೂ ದೂರಶಿಕ್ಷಣ ಸಂಸ್ಥೆಗಳನ್ನು ಸಂಘಟಿಸುವ ಹಾಗೂ ಅವು ಒದಗಿಸುವ ಬೋಧನೆ, ಮೌಲ್ಯಮಾಪನ ಮತ್ತು ಸಂಶೋಧನೆಗಳಲ್ಲಿ ಗುಣಮಟ್ಟ ಮತ್ತು ಮಾನದಂಡಗಳನ್ನು ರೂಪಿಸುವ ಸಲುವಾಗಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತವಿಶ್ವವಿದ್ಯಾನಿಲಯದಡಿಯಲ್ಲಿ ದೂರಶಿಕ್ಷಣ ಮಂಡಳಿಯನ್ನು (Distance Education Council-DEC) ವಿಧಿವತ್ತಾಗಿ ಸ್ಥಾಪಿಸಲಾಗಿದೆ. ಈ ಮಂಡಳಿಯು ದೂರಶಿಕ್ಷಣ ಸಂಸ್ಥೆಗಳ ಉತ್ಕೃಷ್ಟತೆಯನ್ನು ಕಾಪಾಡಲು ಶೈಕ್ಷಣಿಕ ಮಾರ್ಗದರ್ಶನವನ್ನು ನಿರಂತರವಾಗಿ ನೀಡುತ್ತದೆ. ಅಲ್ಲದೇ ಅವಿಷ್ಕಾರಕ ತಂತ್ರಜ್ಞಾನಗಳ ಬಳಕೆಯನ್ನು ಪ್ರೋತ್ಸಾಹಿಸಲು, ಕೌಶಲಯುಕ್ತಿ ಯುವಜನರನ್ನು ನಿರ್ಮಿಸಲು ಉತ್ತಮ ಶೈಕ್ಷಣಿಕ ವಿಧಾನವನ್ನು ಜಾರಿಗೆ ತರಲು ಅನುಕೂಲವಾಗುವಂತೆ ಉತ್ತಮ ರೂಪುರೇಷೆಗಳನ್ನು ತಯಾರಿಸುವ ನಿಟ್ಟಿನಲ್ಲಿ ಮಂಡಳಿಯು ಅವಿರತವಾಗಿ ಶ್ರಮಿಸುತ್ತಿದೆ.

ಕಲಿಕಾ–ಕೇಂದ್ರಿತವಾದ ಮುಕ್ತ ಹಾಗೂ ದೂರಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ, ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಹಾಗೂ ಶಿಕ್ಷಣ ವಂಚಿತರನ್ನು ತಲುಪುವ ನಿಟ್ಟಿನಲ್ಲಿ ಸಂಘಟಿತ ಪ್ರಯತ್ನವನ್ನು ಮಾಡುವ ಸಲುವಾಗಿ ದೂರಶಿಕ್ಷಣ ಮಂಡಳಿಯು ಕಾರ್ಯನಿರತವಾಗಿದೆ. ಇದಕ್ಕಾಗಿ ಮಂಡಳಿಯು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳೆಂದರೆ,

- ವಿವಿಧ ರಾಜ್ಯಸರ್ಕಾರಗಳು ಸ್ಥಾಪಿಸಿರುವ ಹಾಗೂ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾನಿಲಯಗಳು ತಮ್ಮಲ್ಲಿ ದೂರಶಿಕ್ಷಣ ನಿರ್ದೇಶನಾಲಯಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುವುದು ಹಾಗೂ ಅವುಗಳ ನಡುವೆ ಮಾಹಿತಿ ಜಾಲವನ್ನು ಸ್ಥಾಪಿಸುವುದು.
- ಮುಕ್ತ ಹಾಗೂ ದೂರಶಿಕ್ಷಣ ಸಂಸ್ಥೆಗಳಿಗೆ ಆರ್ಥಿಕ ಅನುದಾನವನ್ನು ನೀಡುವುದು.

Digitised by Bharatavani, CIIL

- ವಿದ್ಯಾರ್ಥಿಗಳ ದಾಖಲಾತಿ, ಮೌಲ್ಯಮಾಪನ ಹಾಗೂ ಗುಣಮಟ್ಟಗಳಿಗೆ ಸಂಬಂಧಿಸಿದಂತೆ ಏಕರೀತಿಯ ನಿಯಮಾವಳಿ ಹಾಗೂ ಮಾರ್ಗಸೂಚಿಗಳನ್ನು ರೂಪಿಸುವುದು.
- ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡುವ ಸಲುವಾಗಿ ಮುಕ್ತ ಹಾಗೂ ದೂರಶಿಕ್ಷಣ ಸಂಸ್ಥೆಗಳನ್ನು ಮೌಲ್ಯಂಕನ ಮತ್ತು ಮಾನ್ಯತೆಗೆ ಒಳಪಡಿಸುವುದು.
- ವಿವಿಧ ವಿಶ್ವವಿದ್ಯಾನಿಲಯಗಳ ನಡುವೆ ಅಂತರ ಪಾಲುದಾರಿಕೆ ಹಾಗೂ ಅಂತರ್ವಿನಿಮಯ ಯೋಜನೆಗಳ ಮೂಲಕ ಸಂಸ್ಥೆಗಳಲ್ಲಿ ತಂತ್ರಜ್ಞಾನಾಧಾರಿತ ಸಂಪನ್ಮೂಲಗಳ ವಿನಿಮಯಕ್ಕೆ ಅವಕಾಶ ನೀಡುವುದು.
- ವಿವಿಧ ಮುಕ್ತ ವಿಶ್ವವಿದ್ಯಾನಿಲಯಗಳು ಹಾಗೂ ಅಂಚೆ ತೆರಪಿನ ಶಿಕ್ಷಣ ಸಂಸ್ಥೆಗಳ ನಡುವೆ ರೂಪಿಸಿರುವ ವಿದ್ಯಾರ್ಥಿ ಬೆಂಬಲ ಸೇವೆಗಳನ್ನು ಆಧುನಿಕ ತಂತ್ರಜ್ಞಾನಗಳ ನೆರವಿನಿಂದ ಇನ್ನಷ್ಟು ಉತ್ತಮ ಪಡಿಸುವುದು.
- ಸಂಸ್ಥೆಗಳಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲು ನೆರವಾಗುವುದು.
- ಮುಕ್ತ ಹಾಗೂ ದೂರಶಿಕ್ಷಣ ಸಂಸ್ಥೆಗಳ ಬಗ್ಗೆ ದತ್ತಾಂಶ ಸೂಚಿಯನ್ನು ತಯಾರಿಸುವುದು.

1969ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಅಂಚೆ ತೆರಪಿನ (ICC & CE) ಹಾಗೂ ಮುಂದುವರಿಕೆ ಶಿಕ್ಷಣ ಸಂಸ್ಥೆಯನ್ನು ಮೈಸೂರಿನಲ್ಲಿ ಸ್ಥಾಪಿಸಿತು. ಈ ವಿಶ್ವವಿದ್ಯಾನಿಲಯವು ಕರ್ನಾಟಕದಾದ್ಯಂತ ತಾನು ನಡೆಸುತ್ತಿದ್ದ ಸಂಪರ್ಕ ಕಾರ್ಯಕ್ರಮಗಳು ಹಾಗೂ ಶಿಫಾರಸ್ಸುಗಳಿಂದಾಗಿ ಜನರ ಗಮನವನ್ನು ತನ್ನಡೆಗೆ ಸೆಳೆದು, ಪ್ರತಿವರ್ಷ ಲಕ್ಷಾಂತರ ಜನರು ಪದವಿ ಶಿಕ್ಷಣಕ್ಕೆ ದಾಖಲಾಗುವಂತೆ ಮಾಡಿತು. ಮೈಸೂರು ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆಯು 1996 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವಾಗಿ ಮಾರ್ಪಟ್ಟು, ತಾನು ಹಿಂದೆ ನಡೆಸುತ್ತಿದ್ದ ಕಾರ್ಯಕ್ರಮಗಳೊಡನೆ ಇನ್ನಷ್ಟು ಉತ್ಕೃಷ್ಟಮಟ್ಟದ ಕಾರ್ಯಕ್ರಮಗಳನ್ನು ಪ್ರಾರಂಭಿಸಿ, ದೇಶ–ವಿದೇಶಗಳಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ, ಇಂದಿಗೂ ಮುನ್ನಡೆದಿದೆ.

ಭಾರತದಲ್ಲಿ ಅಸಾಂಪ್ರದಾಯಿಕ ಶಿಕ್ಷಣ ಕ್ರಮಕ್ಕೆ ಜನರಿಂದ ಬಂದ ಉತ್ತಮ ಪ್ರತಿಕ್ರಿಯೆಯನ್ನು ಕಂಡು ಇದುವರೆವಿಗೂ 14 ಮುಕ್ತ ವಿಶ್ವವಿದ್ಯಾನಿಲಯಗಳು ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. 2000ನೇ ಇಸವಿಯಿಂದ ಈಚೆಗೆ ತಮಿಳುನಾಡು ಮುಕ್ತ ವಿಶ್ವವಿದ್ಯಾನಿಲಯ, ಚೆನ್ನೈ (2002), ಪಂಡಿತ್ ಸುಂದರಲಾಲ್ ಶರ್ಮ ಮುಕ್ತವಿಶ್ವವಿದ್ಯಾನಿಲಯ, ಬಿಲಾಸ್‌ಪುರ್, ಛತ್ತೀಸ್‌ಗಢ (2005), ಉತ್ತರಾಂಚಲ ಮುಕ್ತವಿಶ್ವವಿದ್ಯಾನಿಲಯ ಹಾಗೂ ಕೆ.ಕೆ. ಹಂಡೀಕ್ ರಾಜ್ಯ ಮುಕ್ತವಿಶ್ವವಿದ್ಯಾನಿಲಯಗಳು ಸ್ಥಾಪಿಸಲ್ಪಟ್ಟು ಕಾರ್ಯರಂಭ ಮಾಡಿವೆ.

ಸರ್ಟಿಫಿಕೇಟ್ ಹಾಗೂ ಸಂಶೋಧನಾ ಪದವಿಗಳಾದ ಎಂ.ಫಿಲ್ ಮತ್ತು ಪಿ.ಹೆಚ್.ಡಿ.ಗಳನ್ನು ಹಲವಾರು ವಿಷಯಕ್ಷೇತ್ರದಲ್ಲಿ ನೀಡುತ್ತಿವೆ. ಆದರೆ ಇಂತಹ ಸಂಸ್ಥೆಗಳು ಸಾಮಾನ್ಯವಾಗಿ ಕಲೆ, ವಾಣಿಜ್ಯ ಮತ್ತು ನಿರ್ವಹಣೆ ವಿಷಯಕ್ಷೇತ್ರಗಳ ಅಧ್ಯಯನಕ್ಕೆ ಅವಕಾಶ ನೀಡುತ್ತಿದ್ದವಾದರೂ, ಇಂದು ಪ್ರಯೋಗಾಧಾರಿತ ವಿಜ್ಞಾನ ವಿಷಯಕ್ಷೇತ್ರಗಳಲ್ಲೂ ಅಧ್ಯಯನಕ್ಕೆ ಅವಕಾಶ ಕಲ್ಪಿಸಿವೆ. ಹಾಗೆಯೇ ಕೆಲವು ವೃತ್ತಿಪರ ಶಿಕ್ಷಣಗಳಾದ ಶಿಕ್ಷಕ ತರಬೇತಿ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ/ಸಂವಹನ ಮಾಧ್ಯಮ, ಶುಶ್ರೂಷಾಶಾಸ್ತ್ರ, ಗಣಕ ಮತ್ತು ಮಾಹಿತಿ ತಂತ್ರಜ್ಞಾನ ವಿಷಯಗಳಲ್ಲಿಯೂ ಶಿಕ್ಷಣ ನೀಡುವಲ್ಲಿ ಸಫಲವಾಗಿವೆ.

ದೂರಶಿಕ್ಷಣ ವ್ಯವಸ್ಥೆಯ ಬೆಳವಣಿಗೆಯ ಹಿನ್ನೆಲೆ (British Open University)

ಭಾರತದಲ್ಲಿ ದೂರಶಿಕ್ಷಣ ವ್ಯವಸ್ಥೆಯ ಇತಿಹಾಸವು ತೀರಾ ಹಳೆಯದಲ್ಲ ಹಾಗೂ ಇದು ಸ್ವಾತಂತ್ರ್ಯೋತ್ತರ ಭಾರತದ ಬೆಳವಣಿಗೆಯೆಂದೇ ಹೇಳಬಹುದಾಗಿದೆ. ಸ್ವಾತಂತ್ರ್ಯಾನಂತರ, ಅಸ್ತಿತ್ವಕ್ಕೆ ಬಂದ ಭಾರತ ಸರ್ಕಾರವು ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಹೆಚ್ಚು ಒತ್ತು ನೀಡಿತ್ತು. ಹಾಗೆಯೇ ಅಂದು ಅಸ್ತಿತ್ವದಲ್ಲಿದ್ದ ಪಾರಂಪರಿಕ ಶಿಕ್ಷಣ ವ್ಯವಸ್ಥೆಯು ಬಹಳ ಸಂಕೀರ್ಣವೂ, ಸೀಮಿತವೂ ಆಗಿದ್ದುದರಿಂದ ಬಹಳಷ್ಟು ಜನರನ್ನು ತಲುಪಲು ತನ್ನದೇ ಆದ ಇತಿಮಿತಿಗಳನ್ನು ಹೊಂದಿತ್ತು. ಆದ್ದರಿಂದ ಭಾರತದ ಸಂವಿಧಾನದಲ್ಲಿ ರೂಪಿಸಿದ್ದ ಶಿಕ್ಷಣದ ಉದ್ದೇಶಗಳನ್ನು ಸಾಮಾನ್ಯ ಸಮುದಾಯಗಳಿಗೆ ತಲುಪಿಸುವಲ್ಲಿ ಅತ್ಯಂತ ಕಷ್ಟಸಾಧ್ಯವೆಂದು ಅರಿತ ಭಾರತ ಸರ್ಕಾರವು (1961) ಒಂದು ಶಿಕ್ಷಣ ಸಮಿತಿಯನ್ನು ರಚಿಸಿ, 'ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಸಾಂವಿಧಾನಿಕ ಹಾಗೂ ಸಾಮಾಜಿಕ ಯುಗದಲ್ಲಿ ಕಂಡುಬರುತ್ತಿರುವ ಜ್ಞಾನಸ್ಫೋಟ ಹಾಗೂ ನವೀನ ಕೌಶಲಗಳ ವೃದ್ಧಿಗೆ ಸಹಾಯಕಾರಿಯಾಗಿ ಈ ವ್ಯವಸ್ಥೆಯನ್ನು ಹೇಗೆ ಬೆಳೆಸಬೇಕು' ಎಂಬುದನ್ನು ಮನಗಂಡಿತು. ಇಂತಹ ಪರಿಸ್ಥಿತಿಯಲ್ಲಿ ಅನೌಪಚಾರಿಕ, ಅಂಚೆ ತೆರಪಿನ/ದೂರಶಿಕ್ಷಣ ಅಥವಾ ಮುಕ್ತ ಕಲಿಕಾ ವ್ಯವಸ್ಥೆಯೇ ಇದಕ್ಕೆ ಪರ್ಯಾಯವೆಂದು ಪರಿಗಣಿಸಿತು. ದೆಹಲಿ ವಿಶ್ವವಿದ್ಯಾನಿಲಯವು ತನ್ನಲ್ಲಿ ಈಗಾಗಲೇ ಚಾಲ್ತಿಯಲ್ಲಿದ್ದ ಸಾಂಪ್ರದಾಯಿಕ/ಔಪಚಾರಿಕ ಶಿಕ್ಷಣ ವ್ಯವಸ್ಥೆಯೊಡನೆ ಅಂಚೆ ತೆರಪಿನ ಶಿಕ್ಷಣ ವ್ಯವಸ್ಥೆಯನ್ನು ಪ್ರಯೋಗಾರ್ಥವಾಗಿ ಜಾರಿಗೆ ತಂದಿತು. ಹೀಗಾಗಿ, ದೆಹಲಿ ವಿಶ್ವವಿದ್ಯಾನಿಲಯವು (1962) ದೇಶದಲ್ಲಿ ಅಂಚೆ ತೆರಪಿನ ಹಾಗೂ ಮುಂದುವರಿಕೆ ಶಿಕ್ಷಣ ವ್ಯವಸ್ಥೆಯನ್ನು ಮೊದಲು ಆರಂಭಿಸಿದ ಹೆಗ್ಗಳಿಕೆಗೆ ಪಾತ್ರವಾಯಿತು. ಇಂತಹ ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯು ಆ ಪ್ರದೇಶದ ಎಲ್ಲ ಜನರ ಆಶೋತ್ತರಗಳಿಗೆ ಸ್ಪಂದಿಸಿದ ರೀತಿ ಹಾಗೂ ಜನಸಾಮಾನ್ಯರಿಂದ ದೊರೆತ ಪ್ರೋತ್ಸಾಹವನ್ನು ಮನಗಂಡು ಡಿ.ಎಸ್.ಕೊಠಾರಿಯವರ ಅಧ್ಯಕ್ಷತೆಯಲ್ಲಿದ್ದ ಶಿಕ್ಷಣ ಆಯೋಗವು (1964–66) ಇಂತಹ ಅಂಚೆ

Digitised by Bharatavani, CIIL

ತೆರಪಿನ ಶಿಕ್ಷಣ ವ್ಯವಸ್ಥೆಯನ್ನು ಸ್ಥಳೀಯ ಬೇಡಿಕೆಯನ್ನನುಸರಿಸಿ ದೇಶದಾದ್ಯಂತ ಸ್ಥಾಪಿಸಲು ಹಾಗೂ ವಿಸ್ತರಿಸಲು ಸಲಹೆ ನೀಡಿತು ಹಾಗೂ ಈ ಸಲಹೆ ಈ ಶಿಕ್ಷಣದ ಜನಪ್ರಿಯತೆಗೆ ಮುನ್ನುಡಿ ಬರೆಯಿತು.

**ಭಾರತದಲ್ಲಿ ದೂರಶಿಕ್ಷಣದ ವ್ಯವಸ್ಥೆಯ ಬೆಳವಣಿಗೆ**

1964–66ರ ಡಾ. ಡಿ.ಎಸ್.ಕೊಥಾರಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ ಶಿಕ್ಷಣ ಆಯೋಗದ ಶಿಫಾರಸ್ಸನ್ನು ಅನುಸರಿಸಿ, ವಿಶ್ವವಿದ್ಯಾನಿಲಯವು ಧನಸಹಾಯ ಆಯೋಗವು (ಯು.ಜಿ.ಸಿ) ದೇಶದಲ್ಲಿ ದೂರಶಿಕ್ಷಣ ಸಂಸ್ಥೆಯ ಸ್ಥಾಪನೆಗೆ ಪೂರಕವಾದ ಮಾರ್ಗದರ್ಶೀಸೂತ್ರಗಳನ್ನು ರಚಿಸಿ, ಅದನ್ನು ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಸುತ್ತೋಲೆಯ ಮೂಲಕ ರವಾನಿಸಲಾಯಿತು.

ಇದನ್ನು ಅನುಸರಿಸಿ ಪಾಟಿಯಾಲದ ಪಂಜಾಬಿ ವಿಶ್ವವಿದ್ಯಾನಿಲಯವು 1967ರಲ್ಲಿ ಸ್ವತಂತ್ರವಾದ ದೂರಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಿತು. ಇದರಿಂದ, ಈ ಮೊದಲೇ 1962ರಲ್ಲಿ ದೆಹಲಿ ವಿಶ್ವವಿದ್ಯಾನಿಲಯವು ಆರಂಭಿಸಿದ್ದ ದೂರಶಿಕ್ಷಣ ನಿರ್ದೇಶನಾಲಯದ ನಂತರ ಭಾರತದಲ್ಲಿ ಸ್ಥಾಪಿಸಿದ ಎರಡನೇ ವಿಶ್ವವಿದ್ಯಾನಿಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಲ್ಲದೇ ಪಂಜಾಬಿ ವಿಶ್ವವಿದ್ಯಾನಿಲಯವು ತನ್ನ ದೈನಂದಿನ ತರಗತಿಗಳನ್ನು ಇಂಗ್ಲೀಷ್ ಮಾಧ್ಯಮದೊಡನೆ, ಪ್ರಾದೇಶಿಕ ಭಾಷೆಯಾದ ಪಂಜಾಬಿಯಲ್ಲಿಯೂ ಬೋಧಿಸಲು ಯುಜಿಸಿಯು ಅನುಮತಿ ನೀಡಿತು.

ಇದಾದ ನಂತರ ಭಾರತದ ಹಲವಾರು ವಿಶ್ವವಿದ್ಯಾನಿಲಯಗಳು ಪ್ರತ್ಯೇಕವಾಗಿ ದೂರಶಿಕ್ಷಣ ನಿರ್ದೇಶನಾಲಯಗಳನ್ನು ಸ್ಥಾಪಿಸಿದವು. ಭಾರತದಲ್ಲಿ ಸುಮಾರು 248 ಅಂಗೀಕೃತ ವಿಶ್ವವಿದ್ಯಾನಿಲಯಗಳಿದ್ದು, ಅವುಗಳಲ್ಲಿ ಸುಮಾರು 65 ವಿಶ್ವವಿದ್ಯಾನಿಲಯಗಳು ತಮ್ಮ ನಿಯಮಿತ ವಿಷಯ ಕ್ಷೇತ್ರಗಳ ಬೋಧನೆಯೊಡನೆ, ದೂರಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿವೆ. ಇದರಲ್ಲಿ ಕೆಲವು ಕೇಂದ್ರಗಳ ವ್ಯಾಪ್ತಿಯು ಇಡೀ ರಾಷ್ಟ್ರಕ್ಕೆ ಸಂಬಂಧಿಸಿದ್ದರೆ, ಕೆಲವು ಕೇಂದ್ರಗಳು ಸೀಮಿತ ರಾಜ್ಯದ ವ್ಯಾಪ್ತಿಗೊಳಪಟ್ಟಿದೆ.

ಈ ದೂರಶಿಕ್ಷಣ ಕಲಿಕಾ ಕೇಂದ್ರಗಳು ರಾಷ್ಟ್ರದ ಜನತೆಯಲ್ಲಿ ಶಿಕ್ಷಣದ ಅರಿವು ಮೂಡಿಸುವ ಹಾಗೂ ಜನತೆಯ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುವ ಮತ್ತು ಶಿಕ್ಷಣಾರ್ಥಿಗಳ ಉನ್ನತ ಶಿಕ್ಷಣವನ್ನು ಪಡೆಯುವ ಹಂಬಲವನ್ನು ಪೂರೈಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

1962–72ರ ಕಾಲಘಟ್ಟದಲ್ಲಿ ದೂರಶಿಕ್ಷಣ ವ್ಯವಸ್ಥೆಯ ಮೂಲಕ ಸ್ನಾತಕ ಪದವಿಯ ಶಿಕ್ಷಣವನ್ನು ನೀಡುವ ಕೆಲವು ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಹೆಚ್ಚಿನ ಆಸ್ಥೆ ವಹಿಸಿತು. ಈ ಸಮಯದಲ್ಲಿ ಸಾಂಪ್ರದಾಯಿಕ ಶಿಕ್ಷಣಕ್ಕೆ ಪರ್ಯಾಯವಾಗಿ ದೂರಶಿಕ್ಷಣವನ್ನು ಬೆಳೆಸುವ ಪ್ರಯತ್ನಕ್ಕೆ ಮುಂದಡಿಯಿರಿಸಲಾಯಿತು.

1972–82ರ ಕಾಲಘಟ್ಟದಲ್ಲಿ ಸ್ನಾತಕೋತ್ತರ ಪದವಿಯ ಶಿಕ್ಷಣವನ್ನು ಈ ಕೇಂದ್ರಗಳಲ್ಲಿ ವಿಸ್ತರಿಸುವ ಮೂಲಕ ದೂರಶಿಕ್ಷಣ ಉನ್ನತೀಕರಣಕ್ಕೆ ಅವಕಾಶ ಕಲ್ಪಿಸಲಾಯಿತು. ಇದು ಹೀಗೆಯೇ ಮುಂದುವರೆದು 1980ರ ದಶಕದಲ್ಲಿ ಹಲವಾರು ದೂರಶಿಕ್ಷಣ ಕೇಂದ್ರಗಳು ಹಾಗೂ ಕೆಲವು ಮುಕ್ತ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾದವು.

ದೂರಶಿಕ್ಷಣ ವ್ಯವಸ್ಥೆಯಲ್ಲಿ ಮೊದಲ ಕ್ರಾಂತಿಯುಂಟಾದದ್ದು, 1982ರಲ್ಲಿ ಆಂಧ್ರಪ್ರದೇಶದ ಹೈದರಾಬಾದ್‌ನಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಸ್ಥಾಪನೆಯಿಂದಾಗಿ, ಇದಕ್ಕೆ ಮುಂದೆ ಡಾ.ಬಿ.ಆರ್.ಅಂಬೇಡ್ಕರ್ ಮುಕ್ತವಿಶ್ವವಿದ್ಯಾನಿಲಯ ಎಂದು ಪುರ್ನನಾಮಕರಣ ಮಾಡಲಾಯಿತು.

ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ, ನವದೆಹಲಿ (1986)

ಭಾರತದ ಯುವಜನತೆಯನ್ನು ಒಳಗೊಂಡ ಮಾಹಿತಿ ಹಾಗೂ ಜ್ಞಾನ ಸಮಾಜವನ್ನು ನಿರ್ಮಾಣ ಮಾಡುವ ಮಹದಾಸೆಯಿಂದ ಭಾರತ ಸರ್ಕಾರವು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯವನ್ನು (Indira Gandhi National Open University-IGNOU) 1986ರಲ್ಲಿ ಸ್ಥಾಪಿಸಿತು. ಈ ವಿಶ್ವವಿದ್ಯಾನಿಲಯವು ಅಖಂಡ ಭಾರತವಲ್ಲದೇ ಇತರ 36 ದೇಶಗಳ ಕಲಿಕಾರ್ಥಿಗಳಿಗೆ ಶಿಕ್ಷಣ ನೀಡುವುದರೊಂದಿಗೆ 'ಮುಕ್ತ ಹಾಗೂ ದೂರಶಿಕ್ಷಣ ಕಲಿಕೆಯ ರಾಷ್ಟ್ರೀಯ ಸಂಪನ್ಮೂಲ ಕೇಂದ್ರ'ವೆಂದು ಗುರ್ತಿಸಲ್ಪಟ್ಟಿದೆ. ಈ ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣ, ಸಮುದಾಯ ಶಿಕ್ಷಣ ಹಾಗೂ ಮುಂದುವರಿದ ವೃತ್ತಿಪರ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ಉನ್ನತ ಮಟ್ಟದ ಕಾರ್ಯಕ್ರಮಗಳನ್ನು ರೂಪಿಸಿ, ಆಚರಣೆಗೆ ತಂದಿದೆ. ಈ ವಿಶ್ವವಿದ್ಯಾನಿಲಯದ ಪ್ರಮುಖ ಉದ್ದೇಶಗಳು ಹೀಗಿವೆ.

- ಶಿಕ್ಷಣಾರ್ಥಿಗಳಿಗೆ ಉತ್ತಮಮಟ್ಟದ, ಆವಿಷ್ಕಾರ ಪೂರಕ ಕಾರ್ಯಕ್ರಮಗಳು ಬೇಡಿಕೆ ಆಧಾರಿತ ಕಾರ್ಯಕ್ರಮಗಳು ಹಾಗೂ ತರಬೇತಿಯನ್ನು ಸಂಘಟಿಸುವುದು.
- ಅತಿ ಕಡಿಮೆ ವೆಚ್ಚದಲ್ಲಿ ದೇಶದ ಮತ್ತು ವಿದೇಶದ ಮೂಲೆ ಮೂಲೆಯಲ್ಲಿರುವ ಕಲಿಕಾರ್ಥಿಗಳ ಅಗತ್ಯಕ್ಕೆ ಹಾಗೂ ಹಿನ್ನೆಲೆಗೆ ತಕ್ಕಂತಹ ಶಿಕ್ಷಣವನ್ನು ನೀಡುವುದು.
- ಶೈಕ್ಷಣಿಕ ಮಾನದಂಡಗಳನ್ನು ರೂಪಿಸುವುದು.

ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತವಿಶ್ವವಿದ್ಯಾನಿಲಯವು ತನ್ನ ಸಂಘಟಿತ ಕಾರ್ಯನಿರ್ವಹಣೆ ಹಾಗೂ ದೂರಶಿಕ್ಷಣ ಜಗತ್ತಿನಲ್ಲಿ ತಾನು ಕಾಯ್ದುಕೊಂಡಿರುವ ಗುಣಮಟ್ಟದಿಂದಾಗಿ ಕೆನಡಾದ ಕಾಮನ್‌ವೆಲ್ತ್ ಆಫ್ ಲರ್ನಿಂಗ್ ಸಂಸ್ಥೆಯಿಂದ 'ಉತ್ತಮ ವಿಶ್ವವಿದ್ಯಾನಿಲಯ' ಪ್ರಶಸ್ತಿಯನ್ನು ಪಡೆದುಕೊಂಡಿದೆ. ಅಲ್ಲದೇ 2010ರ ಸಮೀಕ್ಷೆಯಲ್ಲಿ ಭಾರತದ ವಿಶ್ವವಿದ್ಯಾನಿಲಯಗಳ ಶ್ರೇಣೀಕೃತ ಪಟ್ಟಿಯಲ್ಲಿ 12ನೇ ಸ್ಥಾನವನ್ನು ಪಡೆದು ಜನಪ್ರಿಯವಾಗಿದೆ.

Digitised by Bharatavani, CIIL

ಇಲ್ಲಿಂದ ಮುಂದೆ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ(1985), ಕೋಟಾ ಮುಕ್ತ ವಿಶ್ವವಿದ್ಯಾನಿಲಯ, ರಾಜಸ್ಥಾನ(1987), ನಳಂದ ಮುಕ್ತ ವಿಶ್ವವಿದ್ಯಾನಿಲಯ ಬಿಹಾರ(1987), ವೈ.ಸಿ.ಎಂ. ಮುಕ್ತ ವಿಶ್ವವಿದ್ಯಾನಿಲಯ, ಮಹಾರಾಷ್ಟ್ರ(1989), ಎಂ.ಪಿ.ಬೋಜ್ ಮುಕ್ತ ವಿಶ್ವವಿದ್ಯಾನಿಲಯ ಮಧ್ಯಪ್ರದೇಶ(1991), ಡಾ.ಬಿ.ಎ. ಮುಕ್ತ ವಿಶ್ವವಿದ್ಯಾನಿಲಯ, ಗುಜರಾತ್(1994), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು, ಕರ್ನಾಟಕ(1996), ನೇತಾಜಿ ಸುಭಾಷ್ ಮುಕ್ತ ವಿಶ್ವವಿದ್ಯಾನಿಲಯ ಪಶ್ಚಿಮ ಬಂಗಾಳ(1997), ಹಾಗೂ ರಾಜರ್ಷಿ ಠಂಡನ್ ಮುಕ್ತ ವಿಶ್ವವಿದ್ಯಾನಿಲಯ ಉತ್ತರಪ್ರದೇಶ(1999) ಇವುಗಳ ಸ್ಥಾಪನೆಯಿಂದಾಗಿ ದೇಶದಲ್ಲಿ ದೂರಶಿಕ್ಷಣ ಹಾಗೂ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯು ಮತ್ತಷ್ಟು ಬಲಗೊಂಡಿತು.

ಇವುಗಳ ಸ್ಥಾಪನೆಯಿಂದಾಗಿ, ಭಾರತೀಯ ಶೈಕ್ಷಣಿಕ ಕ್ಷೇತ್ರದಲ್ಲಿ ಇನ್ನಷ್ಟು ಭದ್ರವಾಗಿ ದೂರಶಿಕ್ಷಣ ವ್ಯವಸ್ಥೆಯು ನೆಲೆಯೂರಿತು. ಹೀಗಾಗಿ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳ ಹಾಗೂ ದೂರಶಿಕ್ಷಣ ಕೇಂದ್ರಗಳ ಪಾಲು ಶೇ. 25%ರಷ್ಟಾಗಿರುವುದು. ಅವುಗಳ ಜನಪ್ರಿಯತೆಗೆ ಸಾಕ್ಷಿ. ಈ ಎಲ್ಲ ಕೇಂದ್ರಗಳಲ್ಲಿ ನೀಡುವ ಪದವಿಗಳು ದೂರಶಿಕ್ಷಣ ನಿರ್ದೇಶನಾಲಯದಿಂದ ಅಂಗೀಕೃತವಾಗಿರುವುದರಿಂದ ಇವುಗಳಿಗೆ ದೇಶ ವಿದೇಶಗಳಲ್ಲಿ ಮಾನ್ಯತೆಯಿದೆ.

**ದೂರಶಿಕ್ಷಣ ವ್ಯವಸ್ಥೆಯ ಗುಣಗಳು**

- ಇದು ಉತ್ತಮವಾದ ಗುಣಮಟ್ಟದ, ಲಿಖಿತ ಹಾಗೂ ವಿದ್ಯುನ್ಮಾನ ಮಾಧ್ಯಮದಲ್ಲಿ ಒದಗಿಸುವ ಉತ್ತಮವಾಗಿ ರಚಿಸಲ್ಪಟ್ಟಿರುವ ಅಧ್ಯಯನ ಸಾಮಗ್ರಿಗಳನ್ನು ಒಳಗೊಂಡಿರುತ್ತದೆ.
- ಇದು ನವೀನ ರೀತಿಯ ಸಂಪರ್ಕ ಹಾಗೂ ಮಾಹಿತಿ ತಂತ್ರಜ್ಞಾನಾಧಾರಿತ ದೂರಶಿಕ್ಷಣ ಕಲಿಕಾ ವಿಭಾಗಗಳನ್ನು ಹೊಂದಿರುತ್ತದೆ.
- ಇಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ, ಸಂಪರ್ಕ ತರಗತಿಗಳು, ಆಪ್ತ ಸಲಹೆಯನ್ನು ನೀಡಲಾಗುತ್ತದೆ.

**ದೂರಶಿಕ್ಷಣ ವ್ಯವಸ್ಥೆಯ ಅನುಕೂಲಗಳು**

- ಈ ವ್ಯವಸ್ಥೆಯು ಅತ್ಯಂತ ಮಿತವ್ಯಯಕಾರಿಯಾಗಿದೆ.
- ಈ ವ್ಯವಸ್ಥೆಯ ಮೂಲಕ ಮುಂದುವರೆಸುವ ಶಿಕ್ಷಣವು ಉದ್ಯೋಗ ಬಡ್ತಿಗೆ ಅವಕಾಶ ನೀಡುತ್ತದೆ.
- ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಅರ್ಧಕ್ಕೆ ಮೊಟಕುಗೊಳಿಸಿರುವ ಶಿಕ್ಷಣವನ್ನು ಮುಂದುವರೆಸಲು ಅವಕಾಶವನ್ನೀಯುತ್ತದೆ.
- ಗೃಹಿಣಿಯರಿಗೆ ತಮ್ಮ ವಿರಾಮದ ವೇಳೆಯನ್ನು ಸದುಪಯೋಗಪಡಿಸಿಕೊಂಡು ತಮ್ಮ ವಿದ್ಯಾರ್ಹತೆಯನ್ನು ಉತ್ತಮಪಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.
- ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಸ್ಥರಾಗಿರುವವರಿಗೆ ಉತ್ತಮ ಶಿಕ್ಷಣವನ್ನು ಪಡೆಯಲು ಸಹಾಯಕಾರಿಯಾಗಿದೆ.
- ಇದು ಸಹಾಯ ಧನದೊಂದಿಗೆ ಸಂಶೋಧನಾ ಕಾರ್ಯಕ್ಕೂ ಪ್ರೇರಣೆ ನೀಡುತ್ತದೆ.

**–ಗೋಪಾಲಸ್ವಾಮಿ ಎಂ.**
**–ಕುಮಾರ್ ಎಸ್.ಎನ್.**

## ಭಾರತದಲ್ಲಿ ಪಶು ಸಂಗೋಪನ ವಿಶ್ವವಿದ್ಯಾನಿಲಯಗಳು

ಭಾರತ ದೇಶದಲ್ಲಿ 218 ಮಿಲಿಯನ್ ಆಕಳು, 94 ಮಿಲಿಯನ್ ಎಮ್ಮೆ, 58 ಮಿಲಿಯನ್ ಕುರಿ, 123 ಮಿಲಿಯನ್ ಆಡು, 16 ಮಿಲಿಯನ್ ಹಂದಿ ಹಾಗೂ 402 ಮಿಲಿಯನ್ ಕೋಳಿ ಇವೆ ಎಂಬುದು ಒಂದು ಅಂದಾಜು. ಇಡೀ ಪ್ರಪಂಚದಲ್ಲಿಯೇ, ಅತಿ ಹೆಚ್ಚಿನ ಆಕಳುಗಳ ಸಂಖ್ಯೆ ಹೊಂದಿದ ನಮ್ಮ ಭಾರತ ದೇಶ ಹಾಲಿನ ಉತ್ಪಾದನೆಯಲ್ಲಿ ಮೊದಲನೆ ಸ್ಥಾನದಲ್ಲಿದೆ. ವೈಜ್ಞಾನಿಕ ಪದ್ಧತಿಯಲ್ಲಿ ಹೈನುಗಾರಿಕೆ, ಕುರಿ, ಆಡು, ಹಂದಿ, ಕುದುರೆ, ಕತ್ತೆ ಹಾಗೂ ನಾಯಿ ಸಾಕಣಿಕೆ ಮಾಡಿದಾಗ ಮಾತ್ರ ನಮ್ಮ ದೇಶದ ಜನಸಂಖ್ಯೆಗೆ ಪಶು ಸಂಗೋಪನಾ ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಹಾಗೂ ಸೆಗಣಿ ಒದಗಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪಶು ಸಂಗೋಪನ ವಿಶ್ವವಿದ್ಯಾನಿಲಯಗಳ ಪಾತ್ರ ಮಹತ್ವದ್ದಾಗುತ್ತದೆ.

ನಮ್ಮ ದೇಶದಲ್ಲಿ ಪಶು ಸಂಗೋಪನ ವಿಶ್ವವಿದ್ಯಾನಿಲಯಗಳು ಮೂರು ಮುಖ್ಯ ಕಾರ್ಯಗಳನ್ನು ಮಾಡುತ್ತವೆ. **1. ಬೋಧನೆ, 2. ಸಂಶೋಧನೆ, 3. ವಿಸ್ತರಣೆ, ಬೋಧನೆ**ಯಲ್ಲಿ ಬಿ.ವಿ.ಎಸ್‌ಸಿ ಮತ್ತು ಎ.ಎಚ್, ಎಂ.ವಿ.ಎಸ್‌ಸಿ ಹಾಗೂ ಪಿ.ಎಚ್‌ಡಿ ಪದವಿಗಳನ್ನು ನೀಡಲಾಗುತ್ತದೆ. **ಸಂಶೋಧನೆ**ಯಲ್ಲಿ ನಮ್ಮ ದೇಶದ ಹವಾಮಾನಕ್ಕೆ ಹೊಂದಿಕೊಳ್ಳುವಂತಹ ತಳಿಗಳು, ಹಾಲು ಹಾಗೂ ಕೃಷಿ ಕಾರ್ಯಕ್ಕೆ ಯೋಗ್ಯವಾದ ತಳಿಗಳ ಅಭಿವೃದ್ಧಿ, ಜಾನುವಾರುಗಳಿಗೆ ಬರುವ ರೋಗಗಳನ್ನು ಲಸಿಕೆ ಮುಖಾಂತರ ನಿಯಂತ್ರಿಸುವುದು, ಹಾರ್ಮೋನುಗಳ ಬಳಕೆ ಮಾಡಿ ಸಂತಾನೋತ್ಪತ್ತಿಯ ತೊಂದರೆಗಳನ್ನು ನಿವಾರಿಸುವುದು. ವಿಸ್ತರಣೆಗೆ ಸಂಬಂಧಪಟ್ಟಂತೆ, ವಿಶ್ವವಿದ್ಯಾನಿಲಯಗಳಲ್ಲಿ ಆದ ಸಂಶೋಧನೆಗಳನ್ನು ವಿಸ್ತರಣಾ ಚಟುವಟಿಕೆಗಳ ಮುಖಾಂತರ ರೈತಾಪಿ ವರ್ಗದವರಿಗೆ ಮುಟ್ಟಿಸುವುದು. ಇದರಿಂದ ನಮ್ಮ ದೇಶದ ಪಶು ಸಂಗೋಪನಾ ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಹಾಗೂ ಇತರೆ ಉತ್ಪಾದನೆ ಹೆಚ್ಚಾಗಿರುವುದರಿಂದ ಆರ್ಥಿಕವಾಗಿ ರೈತರ ಸಬಲೀಕರಣದೊಂದಿಗೆ ದೇಶವು ಅಭಿವೃದ್ಧಿ ಹೊಂದುತ್ತದೆ. ಹಾಗೆಯೇ, ವಿಸ್ತರಣಾ

Digitised by Bharatavani, CIIL

ಚಟುವಟಿಕೆಗಳಲ್ಲಿ ಪಶು ಆರೋಗ್ಯ ಶಿಬಿರ ಹಾಗೂ ಬಂಜೆತನ ನಿವಾರಣೆ ಶಿಬಿರದ ಮುಖಾಂತರ ಜಾನುವಾರುಗಳ ರೋಗಗಳನ್ನು ತಡೆಗಟ್ಟುವುದು ಮತ್ತು ಸಂತಾನೋತ್ಪತ್ತಿ ತೊಂದರೆಗಳನ್ನು ನಿವಾರಿಸುವುದರಿಂದ ಪ್ರಾಣಿಗಳ ಸಂಖ್ಯೆ ಹೆಚ್ಚುವುದಲ್ಲದೆ, ಹಾಲು ಹಾಗೂ ಇತರೆ ಉತ್ಪನ್ನಗಳು ಹೆಚ್ಚಾಗುತ್ತವೆ.

**ಪಶು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ವಿವರ**

<table>
<tr><td colspan="6">ಪಶು ವಿಶ್ವವಿದ್ಯಾನಿಲಯ</td></tr>
<tr><td colspan="6">ಕುಲಾಧಿಪತಿಗಳು (ರಾಜ್ಯಪಾಲರು, ಕರ್ನಾಟಕ ಸರ್ಕಾರ)</td></tr>
<tr><td colspan="6">ರಾಜ್ಯ ಪಶು ಸಂಗೋಪನಾ ಸಚಿವರು, ಕರ್ನಾಟಕ ಸರಕಾರ</td></tr>
<tr><td colspan="6">ಕುಲಪತಿಗಳು</td></tr>
<tr><td>ಕುಲಸಚಿವರು</td><td>ಶಿಕ್ಷಣ ನಿರ್ದೇಶಕರು</td><td>ಸಂಶೋಧನಾ ನಿರ್ದೇಶಕರು</td><td>ವಿಸ್ತರಣಾ ನಿರ್ದೇಶಕರು</td><td>ಸ್ನಾತಕೋತ್ತರ ನಿರ್ದೇಶಕರು</td><td>ಹಣಕಾಸು ನಿಯಂತ್ರಣಾಧಿಕಾರಿಗಳು</td></tr>
<tr><td rowspan="5">ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳುವುದು, ವಿಶ್ವವಿದ್ಯಾಲಯದ ಆಡಳಿತಾತ್ಮಕ ಸಮಸ್ಯೆಗಳಿಗೆ ಸ್ಪಂದಿಸುವುದು</td><td>ಡೀನ್, ಪಶು ಮಹಾ ವಿದ್ಯಾಲಯ</td><td>ಯೋಜನಾ ನಿರ್ದೇಶಕರು, ಪಶು ಸಂಶೋಧನಾ ಕೇಂದ್ರಗಳು</td><td>ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರಗಳು</td><td rowspan="5">ಸ್ನಾತಕೋತ್ತರ ಹಾಗೂ ಪಿ.ಎಚ್.ಡಿ. ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು, ಪದವಿ ನೀಡುವುದು</td><td rowspan="5">ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರ ಪ್ರತಿ ಮಾಹೆಯ ಸಂಬಳವನ್ನು ನೀಡುವುದು, ಪವಿವಿಯ ಹಣಕಾಸಿನ ಸಂಬಂಧಪಟ್ಟ ವಿವರಗಳನ್ನು ನೋಡಿಕೊಳ್ಳುವುದು</td></tr>
<tr><td>ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು</td><td>ಕ್ಷೇತ್ರ ಅಧೀಕ್ಷಕರು</td><td rowspan="4">ವಿಷಯ ತಜ್ಞರುಗಳು</td></tr>
<tr><td>ಪ್ರಾಧ್ಯಾಪಕರು</td><td>ಹಿರಿಯ ವಿಜ್ಞಾನಿ</td></tr>
<tr><td>ಸಹ ಪ್ರಾಧ್ಯಾಪಕರು</td><td rowspan="2">ಕಿರಿಯ ವಿಜ್ಞಾನಿ</td></tr>
<tr><td>ಸಹಾಯಕ ಪ್ರಾಧ್ಯಾಪಕರು</td></tr>
</table>

ಇದಲ್ಲದೆ ಪಶು ವಿಶ್ವವಿದ್ಯಾನಿಲಯವು ಆಡಳಿತ ಮಂಡಳಿಯ ಸದಸ್ಯರನ್ನು ಒಳಗೊಂಡಿದ್ದು, ವಿಶ್ವವಿದ್ಯಾನಿಲಯದ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಆಡಳಿತ ಮಂಡಳಿಯ ಸದಸ್ಯರ ಅನುಮೋದನೆ ಬೇಕಾಗಿರುತ್ತದೆ.

**ಭಾರತ ದೇಶದಲ್ಲಿರುವ ಪಶು ವೈದ್ಯಕೀಯ, ಹೈನುಗಾರಿಕೆ ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯಗಳು**

<table>
<tr><th>ಕ್ರ. ಸಂ.</th><th>ರಾಜ್ಯ</th><th>ವಿಶ್ವವಿದ್ಯಾಲಯ</th><th>ಮಹಾವಿದ್ಯಾಲಯಗಳು</th></tr>
<tr><td rowspan="2">1</td><td rowspan="2">ಆಂಧ್ರಪ್ರದೇಶ</td><td rowspan="2">ಶ್ರೀ ವೆಂಕಟೇಶ್ವರ ಪಶು ವೈದ್ಯಕೀಯ ವಿವಿ, ತಿರುಪತಿ</td><td>ಪಶುವೈದ್ಯಕೀಯ ಮಹಾವಿದ್ಯಾಲಯ, ಹೈದ್ರಾಬಾದ, ತಿರುಪತಿ, ಗನ್ನವರಾಂ, ಪೊಡತ್ತೂರ, ಕೊರುತಲ ಮತ್ತು ಮುತುಕುರ್.</td></tr>
<tr><td>ಮೀನುಗಾರಿಕೆ ಮಹಾವಿದ್ಯಾಲಯ, ಇಪೂರ್ ನೆಲ್ಲೂರು</td></tr>
<tr><td rowspan="5">2</td><td rowspan="5">ಮಹಾರಾಷ್ಟ್ರ</td><td rowspan="4">ಮಹಾರಾಷ್ಟ್ರ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿ, ನಾಗಪೂರ</td><td>ಪಶುವೈದ್ಯಕೀಯ ಮಹಾವಿದ್ಯಾಲಯ, ನಾಗಪೂರ, ಮುಂಬಯಿ, ಪರಬಾನಿ, ಉದಗೀರ, ಶಿರವಾಳ.</td></tr>
<tr><td>ಹೈನುಗಾರಿಕೆ ಮಹಾವಿದ್ಯಾಲಯ, ಉದಗೀರ, ವರುದ್</td></tr>
<tr><td>ಮೀನುಗಾರಿಕೆ ಮಹಾವಿದ್ಯಾಲಯ, ನಾಗಪೂರ, ಉದಗೀರ್, ದಾಪೋಲಿ.</td></tr>
<tr><td>ಸ್ನಾತಕೋತ್ತರ ಪಶು ಸಂಗೋಪನೆ ಹಾಗೂ ಪಶು ವೈದ್ಯಕೀಯ ಸಂಸ್ಥೆ, ಅಕೋಲಾ.</td></tr>
<tr><td>ಡೀಮ್ಡ್ ಮೀನುಗಾರಿಕೆ ವಿವಿ, ಮುಂಬಯಿ</td><td>ಕೇಂದ್ರ ಮೀನುಗಾರಿಕೆ ಬೋಧನಾ ಸಂಸ್ಥೆ, ಮುಂಬಯಿ</td></tr>
</table>

Digitised by Bharatavani, CIIL

| | | | |
|---|---|---|---|
| 3 | ಪಂಜಾಬ | ಗುರು ಅಂಗದ ದೇವ ಪಶು ವೈದ್ಯಕೀಯ ವಿವಿ, ಲುಧಿಯಾನಾ | ಪಶುವೈದ್ಯಕೀಯ ಮಹಾವಿದ್ಯಾಲಯ, ಲುಧಿಯಾನಾ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಲುಧಿಯಾನಾ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಲುಧಿಯಾನಾ |
| | | | ಪಶು ಜೈವಿಕ ತಂತ್ರಜ್ಞಾನ ಶಾಲೆ, ಲುಧಿಯಾನಾ |
| 4 | ತಮಿಳುನಾಡು | ತಮಿಳುನಾಡು ಪಶು ವಿವಿ, ಚೆನ್ನೈ | ಪಶುವೈದ್ಯಕೀಯ ಮಹಾವಿದ್ಯಾಲಯ, ಚೆನ್ನೈ, ನಮಕ್ಕಲ್, ತಿರುನೆಲೆವೆಲಿ. |
| | | | ಮೀನುಗಾರಿಕೆ ಮಹಾವಿದ್ಯಾಲಯ, ತುತಕುಡಿ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಕೊಡುವಲ್ಲಿ |
| 5 | ಕರ್ನಾಟಕ | ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ | ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ, ಬೆಂಗಳೂರು, ಹಾಸನ, ಶಿವಮೊಗ್ಗ. |
| | | | ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರು, ಗುಲಬರ್ಗಾ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು. |
| 6 | ಉತ್ತರಪ್ರದೇಶ | ಉತ್ತರಪ್ರದೇಶ ಪಂಡಿತ ದೀನ್ ದಯಾಳ್ ಉಪಾಧ್ಯ ಪಶು ಚಿಕಿತ್ಸಾ ವಿವಿ, ಮತುರಾ | ಪಶುವೈದ್ಯಕೀಯ ಮಹಾವಿದ್ಯಾಲಯ, ಮತುರಾ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಮತುರಾ |
| | | ಡೀಮ್ಡ್ ಪಶು ವೈದ್ಯಕೀಯ ವಿವಿ, ಈಜತನಗರ | ಭಾರತೀಯ ಪಶು ವೈದ್ಯಕೀಯ ಸಂಶೋದನಾ ಸಂಸ್ಥೆ, ಇಜತನಗರ, ಬರೇಲಿ ಜಿಲ್ಲಾ |
| 7 | ಪಶ್ಚಿಮ ಬಂಗಾಳ | ಪಶ್ಚಿಮ ಬಂಗಾಳ ಪಶು ವೈದ್ಯಕೀಯ ವಿವಿ, ಕೊಲ್ಕತಾ | ಪಶುವೈದ್ಯಕೀಯ ಮಹಾವಿದ್ಯಾಲಯ, ಕೊಲ್ಕಾತಾ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಕೊಲ್ಕತಾ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಕೊಲ್ಕತಾ |
| 8 | ಕೇರಳ | ಕೇರಳ ಪಶು ವೈದ್ಯಕೀಯ ವಿವಿ, ಪೂಕುಟ್, ವಾಯಿನಾಡ್ | ಪಶುವೈದ್ಯಕೀಯ ಮಹಾವಿದ್ಯಾಲಯ, ಪೂಕುಟ್, ಮನ್ನುತಿ |
| | | | ಹೈನುಗಾರಿಕೆ ಮಹಾವಿದ್ಯಾಲಯ, ಮನ್ನುತಿ |
| 9 | ಪಾಂಡಿಚೇರಿ | ಡೀಮ್ಡ್ ಪಶು ವೈದ್ಯಕೀಯ ವಿವಿ, ಪಾಂಡಿಚೇರಿ | ರಾಜೀವಗಾಂಧಿ ಪಶು ವೈದ್ಯಕೀಯ ಮಹಾವಿದ್ಯಾಲಯ, ಪಾಂಡಿಚೇರಿ |
| 10 | ಮಧ್ಯಪ್ರದೇಶ | ಮಧ್ಯಪ್ರದೇಶ ಪಶು ಚಿಕಿತ್ಸಾ ವಿಜ್ಞಾನ ವಿವಿ, ಜಬಲ್‌ಪೂರ | ಪಶುವೈದ್ಯಕೀಯ ಮಹಾವಿದ್ಯಾಲಯ, ಜಬಲ್‌ಪೂರ, ರೇವಾ, ಮಾಹೊ |
| 11 | ಹರಿಯಾಣ | ಲಾಲಾ ಲಜಪತರಾಯ ಪಶು ವೈದ್ಯಕೀಯ ವಿವಿ, ಹಿಸ್ಸಾರ್ | ಪಶುವೈದ್ಯಕೀಯ ಮಹಾವಿದ್ಯಾಲಯ, ಹಿಸ್ಸಾರ |
| | | ಡೀಮ್ಡ್ ಹೈನುಗಾರಿಕೆ ವಿವಿ, ಕರ್ನಲ್ | ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ, ಕರ್ನಾಲ್ |
| 12 | ರಾಜಸ್ಥಾನ | ರಾಜಸ್ಥಾನ ಪಶು ವೈದ್ಯಕೀಯ ವಿವಿ, ಬಿಕಾನರ್ | ಪಶುವೈದ್ಯಕೀಯ ಮಹಾವಿದ್ಯಾಲಯ, ಬಿಕಾನರ್, ಉದಯಪುರ |
| | | ಮಾನಾಪ್ರತಾಪ ಕೃಷಿ ಹಾಗೂ ತಾಂತ್ರಿಕ ವಿವಿ, ಉದಯಪುರ | ಹೈನುಗಾರಿಕೆ ಮಹಾವಿದ್ಯಾಲಯ, ಉದಯಪುರ |
| | | | ಮೀನುಗಾರಿಕೆ ಮಹಾವಿದ್ಯಾಲಯ, ಉದಯಪುರ |

Digitised by Bharatavani, CIIL

**ಬಿ.ವಿ.ಎಸ್‌ಸಿ ಮತ್ತು ಎ.ಎಚ್. ಪದವಿ ವಿವರ:** ಬಿ.ವಿ.ಎಸ್‌ಸಿ ಮತ್ತು ಎ.ಎಚ್. ಎಂದರೆ ಪಶು ವಿಜ್ಞಾನ ಹಾಗೂ ಪಶು ಸಂಗೋಪನಾ ಪದವಿ. ಈ ಪದವಿಯು 5 ಶೈಕ್ಷಣಿಕ ವರ್ಷಗಳನ್ನು ಒಳಗೊಂಡಿದ್ದು, ಇದರಲ್ಲಿ 9 ಸೆಮಿಸ್ಟರ್‌ಗಳಿದ್ದು, ಕೊನೆಯ 6 ತಿಂಗಳು ವಿದ್ಯಾರ್ಥಿಗಳು ಕಡ್ಡಾಯವಾಗಿ ಇಂಟರ್ನಶಿಪ್ ಹಾಜರಾಗಬೇಕಾಗುತ್ತದೆ. ಇದಲ್ಲದೆ, ಕಡ್ಡಾಯವಾದ, ಶ್ರೇಣಿಯಲ್ಲದ ವಿಷಯಗಳಾದ ಕ್ರೀಡಾ ಶಿಕ್ಷಣ, ರಾಷ್ಟ್ರೀಯ ಸೇವಾ ಯೋಜನೆ, ಕಲಿಕಾ ವೃತ್ತ, ಉದ್ದಿಮೆ ತರಬೇತಿ ಹಾಗೂ ಸ್ಪರ್ಧಾತ್ಮಕ ಪಶು ವೈದ್ಯಕೀಯ ಕೌಶಲ್ಯಗಳನ್ನು ಒಳಗೊಂಡಿರುತ್ತದೆ.

**ಪ್ರವೇಶ ಪಡೆಯಲು ಅರ್ಹತೆಗಳು:**

1. ಪ್ರವೇಶ ಪಡೆಯುವ ಶೈಕ್ಷಣಿಕ ವರ್ಷದ 31ನೇ ಡಿಸೆಂಬರ್‌ದಂದು ವಿದ್ಯಾರ್ಥಿಯು 17 ವರ್ಷ ವಯಸ್ಸನ್ನು ಪೂರ್ಣಗೊಳಿಸಿದಬೇಕು.

2. ವಿದ್ಯಾರ್ಥಿಯು 2ನೇ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ಹಾಗೂ ಆಂಗ್ಲ ಭಾಷೆಯಲ್ಲಿ ಶೇಕಡಾ 50 ಅಂಕಗಳನ್ನು ಹೊಂದಿರಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ವಿದ್ಯಾರ್ಥಿಗಳು ಶೇಕಡಾ 40 ಅಂಕಗಳನ್ನು ಹೊಂದಿದ್ದರೆ ಸಾಕು.

3. ಕರ್ನಾಟಕ ಸರಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಬರೆದಿರಬೇಕು. ಭಾರತೀಯ ವೈದ್ಯಕೀಯ ಪರಿಷತ್ತು ಕೋಟಾ/ಕಾಶ್ಮೀರಿ ವಲಸೆಗಾರರಿಗೆ/ಆಂಗ್ಲೋ ಇಂಡಿಯನ್ ಪ್ರಜೆಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯುವ ಅವಶ್ಯಕತೆ ಇರುವುದಿಲ್ಲ.

4. ವಿದ್ಯಾರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕ ಸರ್ಕಾರ ಹೊರಡಿಸುವ ಆದೇಶಗಳಿಗೆ ಬದ್ಧನಾಗಿರಬೇಕು.

5. ರೈತ (ಸ್ವಯಂ ಉಳುಮೆದಾರ) ರ ಪುತ್ರ, ಗ್ರಾಮೀಣ ಕೃಪಾಂಕ, ಕನ್ನಡ ಮಾಧ್ಯಮ, ಕ್ರೀಡಾ ಪಟುಗಳು, ಎನ್.ಎಸ್.ಎಸ್./ಎನ್.ಸಿ.ಸಿ./ಮಾಜಿ ಸೈನಿಕರ ಮಕ್ಕಳು/ಆಂಗ್ಲೋ ಇಂಡಿಯನ್ ಪ್ರಜೆ/ಸ್ಕೌಟ್ಸ್ & ಗೈಡ್ಸ್/ಅಂಗವಿಕಲರಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಪ್ರವೇಶ ಪ್ರಕ್ರಿಯೆಯಲ್ಲಿ ಸೀಟನ್ನು ಕಾಯ್ದಿರಿಸಲಾಗುತ್ತದೆ.

6. ಕರ್ನಾಟಕ ರಾಜ್ಯದಲ್ಲಿ, ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ್‌ನಲ್ಲಿ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಬೇರೆ ರಾಜ್ಯದ ವಿದ್ಯಾರ್ಥಿಗಳು ನಮ್ಮ ರಾಜ್ಯದಲ್ಲಿ ಪ್ರವೇಶ ಪಡೆಯಬೇಕಾದರೆ ಭಾರತೀಯ ಪಶು ವೈದ್ಯಕೀಯ ಪರಿಷತ್ತು ನಡೆಸುವ ಪ್ರವೇಶ ಪರೀಕ್ಷೆಯನ್ನು ಬರೆದು, ಸೀಟನ್ನು ಪಡೆದುಕೊಳ್ಳಬೇಕು. ಈ ಕುರಿತು ಹೆಚ್ಚಿನ ಮಾಹಿತಿಗಾಗಿ, **ಉಪಕಾರ್ಯದರ್ಶಿಗಳು, ಭಾರತೀಯ ಪಶು ವೈದ್ಯಕೀಯ ಪರಿಷತ್ತು, ಅಗಸ್ಟ ಕ್ರಾಂತಿ ಭವನ, 'ಎ' ವಿಂಗ್, ರೂ. ನಂ: 288, 2ನೇ ಮಹಡಿ, ಪ್ಲಾಟ್ ನಂ: 25, ಬಿಕಾಜಿ ಕಾಮ ಪ್ಲೇಸ್, ನವದೆಹಲಿ–110 066** ಇವರನ್ನು ಸಂಪರ್ಕಿಸಬಹುದು.

7. ಅನಿವಾಸಿ ಭಾರತೀಯ/ಅನಿವಾಸಿ ಭಾರತೀಯರ ಮಕ್ಕಳಿಗೆ ಪ್ರವೇಶ ಪ್ರಕ್ರಿಯೆಯಲ್ಲಿ ಶೇಕಡಾ 5 ರಷ್ಟು ಸೀಟನ್ನು ವಿಶೇಷ ಕೋಟಾ ಅಡಿಯಲ್ಲಿ ಕಾಯ್ದಿರಿಸಲಾಗುವುದು. ಅಂತಹ ವಿದ್ಯಾರ್ಥಿಗಳು ನೇರವಾಗಿ ವಿದ್ಯಾಭ್ಯಾಸ ಪದವಿ ಪತ್ರ, ಅನಿವಾಸಿ ಭಾರತೀಯ ಪತ್ರ, ಇತ್ತೀಚಿನ ಪಾಸ್‌ಪೋರ್ಟ ಅಳತೆಯ ಭಾವಚಿತ್ರ ಹಾಗೂ ಇನ್ನಿತರ ದಾಖಲಾತಿಗಳನ್ನು **ಕುಲಸಚಿವರ ಕಛೇರಿ, ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ನಂದಿ ನಗರ, ಅಂಚೆ ಪೆಟ್ಟಿಗೆ ಸಂಖ್ಯೆ – 06, ಬೀದರ–585 401** ವಿಳಾಸಕ್ಕೆ ಕಳುಹಿಸಿ ಕೊಡಬಹುದು.

8. ಆಂಗ್ಲೋ ಇಂಡಿಯನ್ನರು ತಮ್ಮ ದಾಖಲಾತಿಗಳನ್ನು **ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ** ಅವರು ನಿರ್ದೇಶನ ಮಾಡಿದಂತಹ ರಾಯಭಾರಿ ಕಛೇರಿ ಮುಖಾಂತರ ಅರ್ಜಿ ಸಲ್ಲಿಸಬೇಕಾಗುವುದು.

9. **ಕರ್ನಾಟಕ ಸರ್ಕಾರದ ಆದೇಶದ ಸಂಖ್ಯೆ: ಎಎಚ್‌ಡಿ 63 ಎಯುಎಂ 03, ಬೆಂಗಳೂರು, ದಿನಾಂಕ: 10.07.2003** ರಂತೆ ಪ್ರತಿ ಪದವಿಗೆ ಅರ್ಹತೆಯುಳ್ಳ ಒಬ್ಬ ವಲಸೆಗಾರ ಕಾಶ್ಮೀರಿ ವಿದ್ಯಾರ್ಥಿ ಪ್ರವೇಶಕ್ಕೆ ಅನುವು ಮಾಡಿಕೊಡುವುದು. ಅಂತಹ ವಿದ್ಯಾರ್ಥಿಗಳು ತಮ್ಮ ದಾಖಲಾತಿ ಹಾಗೂ ಪಾಸಪೋರ್ಟ ಅಳತೆಯ ಭಾವಚಿತ್ರದೊಂದಿಗೆ ಅರ್ಜಿಯನ್ನು ನೇರವಾಗಿ ಕುಲಸಚಿವರ ಕಛೇರಿ, ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ನಂದಿ ನಗರ, ಅಂಚೆ ಪೆಟ್ಟಿಗೆ ಸಂಖ್ಯೆ – 06, ಬೀದರ–585 401 ಗೆ ಕಳುಹಿಸಬೇಕು.

**ಬಿ.ವಿ. ಎಸ್‌ಸಿ ಪ್ರವೇಶಕ್ಕಾಗಿ ಪ್ರಕ್ರಿಯೆ:**

1. **ಸಾಮಾನ್ಯ ಹಾಗೂ ಮೀಸಲಾತಿ ಕೋಟಾ:** ದ್ವಿತೀಯ ಪಿಯುಸಿ ಅಂಕಪಟ್ಟಿಯ ಆಧಾರದ ಮೇಲೆ ವಿದ್ಯಾರ್ಥಿಗಳ ಮೆರಿಟ್ ಲಿಸ್ಟನ್ನು ಮಾಡಲಾಗುವುದು. ಮೆರಿಟ್ ಪ್ರಕಾರವೇ ಸೀಟನ್ನು ನೀಡಲಾಗುವುದು.

2. **ಕೃಷಿ ಕೋಟಾದಡಿಯಲ್ಲಿ:** ಇದಕ್ಕೆ ಸಂಬಂಧಿಸಿದಂತೆ ರೈತನ ಮಗನಾಗಿದ್ದು, ಆ ರೈತನು ಭೂಮಿಯನ್ನು ಹೊಂದಿರಬೇಕು. ರೈತನ ವಾರ್ಷಿಕ ಆದಾಯವು ಕೃಷಿ/ಪಶು ಸಂಗೋಪನೆ/ಮೀನುಗಾರಿಕೆಯ ಮೂಲ ಉದ್ದಿಮೆಯಾಗಿರಬೇಕು. ಇಂತಹ ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಪರೀಕ್ಷೆ ಮುಖಾಂತರ ಆಯ್ಕೆ ಮಾಡಲಾಗುವುದು.

Digitised by Bharatavani, CIIL

**ಸಲಹೆ ಹಾಗೂ ಪ್ರವೇಶ ಪ್ರಕ್ರಿಯೆ:**

ವಿಶ್ವವಿದ್ಯಾನಿಲಯವು ಪ್ರವೇಶ ಕಮಿಟಿಯನ್ನು ರಚಿಸುತ್ತದೆ. ಈ ಕಮಿಟಿಯು ಅರ್ಜಿ ಸಲ್ಲಿಸಿದಂತಹ ವಿದ್ಯಾರ್ಥಿಗಳನ್ನು ಪರಿಗಣನೆಗೆ ತೆಗೆದುಕೊಂಡು, ಒಳಪ್ರವೇಶಕ್ಕೆ ಅನುಗುಣವಾಗಿ ಮೆರಿಟ್ ಪ್ರಕಾರ ಕಿರುಪಟ್ಟಿ ತಯಾರಿಸಿ, ನಂತರ ಸಲಹೆ ಹಾಗೂ ಪ್ರವೇಶ ಪ್ರಕ್ರಿಯೆಗೆ ಕರೆಯಲಾಗುವುದು.

**ಪಶು ಸಂಗೋಪನಾ ಪದವಿಯ ಪಠ್ಯಕ್ರಮವನ್ನು ಮೂಲವಾಗಿ 6 ಭಾಗಗಳಾಗಿ ವಿಂಗಡಿಸಲಾಗಿದೆ.**

1. ಮೂಲ ಪಶು ವೈದ್ಯಕೀಯ ವಿಷಯಗಳು (177 ಕ್ರೆಡಿಟ್‌ಗಳು)
2. ಟ್ರ್ಯಾಕಿಂಗ್ ಕಾರ್ಯಕ್ರಮಗಳು (ಪ್ರತಿ ಎರಡು ಕ್ರೆಡಿಟ್ ಗಂಟೆಗಳುಳ್ಳ ಎರಡು ವಿಷಯಗಳು)
3. ಕಲಿಕೆ ವೃತ್ತ (2 ಚಟುವಟಿಕೆಗಳು)
4. ಉದ್ದಿಮೆಯ ತರಬೇತಿಗಳು (1 ಚಟುವಟಿಕೆ)
5. ಇಂಟರ್ನ್‌ಶಿಪ್ (6 ತಿಂಗಳು)
6. ಸ್ಪರ್ಧಾತ್ಮಕ ಪಶು ಕೌಶಲ್ಯಗಳು

ಅ). ಪ್ರತಿ ಸೆಮಿಸ್ಟರ್‌ಗೆ ಅನುಗುಣವಾಗಿ ಲಿಖಿತ ಹಾಗೂ ಪ್ರಾಯೋಗಿಕ ವಿಷಯಗಳ ಕ್ರೆಡಿಟ್ ಗಂಟೆಗಳ ವಿವರ ಈ ಕೆಳಗಿನಂತಿದೆ.

| ವರ್ಷ | ಸೆಮಿಸ್ಟರ್ | ಲಿಖಿತ ವಿಷಯ | ಪ್ರಾಯೋಗಿಕ ವಿಷಯ | ಒಟ್ಟು |
|---|---|---|---|---|
| ಮೊದಲನೆಯ | I | 11 | 7 | 18 |
| | II | 12 | 8 | 20 |
| ಎರಡನೆಯ | III | 12 | 9 | 21* |
| | IV | 12 | 9 | 21* |
| ಮೂರನೆಯ | V | 12 | 7 | 19 |
| | VI | 13 | 8 | 21 |
| ನಾಲ್ಕನೆಯ | VII | 10 | 10 | 20 |
| | VIII | 10 | 8 | 18** |
| ಐದನೆಯ | IX | 09 | 10 | 19 |
| ಒಟ್ಟು | - | **101** | **76** | **177** |

**ಟ್ರ್ಯಾಕಿಂಗ್ ಕಾರ್ಯಕ್ರಮಗಳು:**

ಈ ಕಾರ್ಯಕ್ರಮವು, ವಿದ್ಯಾರ್ಥಿಗಳಲ್ಲಿ ಪಶು ವೈದ್ಯಕೀಯ ವೃತ್ತಿಯ ಬಗ್ಗೆ ಹೆಚ್ಚಿನ ಜ್ಞಾನ ಸಂಪಾದಿಸುವುದಕ್ಕೆ ಸ್ವ-ಕಲಿಕೆ ಹಾಗೂ ಅಂತರ್ಜಾಲದ ಮುಖಾಂತರ ಕಲಿಯುವುದರ ಬಗ್ಗೆ ತಿಳಿಸಿಕೊಡುವುದು. ಈ ದಿಸೆಯಲ್ಲಿ, ಎರಡನೇ ಶೈಕ್ಷಣಿಕ ವರ್ಷದಿಂದ ಐದನೇ ಶೈಕ್ಷಣಿಕ ವರ್ಷದವರೆಗೆ ಡೀನ್, ಪಶು ವೈದ್ಯಕೀಯ ಕಾಲೇಜು ಅವರ ಆದೇಶದಂತೆ ಶಿಕ್ಷಕರ ಅಧೀನದಲ್ಲಿ ವಿದ್ಯಾರ್ಥಿಗಳು ಕಲಿಕೆ ಮಾಡಬೇಕಾಗುವುದು. ಕಡ್ಡಾಯವಾಗಿ ಎರಡು ಕ್ರೆಡಿಟ್‌ಗಳು ಒಂದು ಸೆಮಿಸ್ಟರ್‌ನಲ್ಲಿ ಹಾಗೂ ಇನ್ನೂ ಎರಡು ಕ್ರೆಡಿಟ್‌ಗಳನ್ನು ಇನ್ನೊಂದು ಸೆಮಿಸ್ಟರ್‌ನಲ್ಲಿ ತೆಗೆದುಕೊಳ್ಳಬೇಕಾಗುವುದು. ವಿದ್ಯಾರ್ಥಿಗಳ ಮೌಲ್ಯ ಮಾಪನವನ್ನು ಗ್ರೇಡಿಂಗ್ ಆಧಾರದ ಮೇಲೆ ಮಾಡಲಾಗುವುದು.

**ಕಲಿಕಾ ವೃತ್ತ:** ಒಬ್ಬ ವಿದ್ಯಾರ್ಥಿಯು ಬಿ.ವಿ.ಎಸ್‌ಸಿ ಮತ್ತು ಎ.ಎಚ್ ಪದವಿಯಲ್ಲಿ ತನ್ನ ಕಲಿಕೆಯನ್ನು ಎರಡು ಕಲಿಕಾ ವೃತ್ತದಲ್ಲಿ ದಾಖಲಿಸಬೇಕಾಗುವುದು.

**ಉದ್ದಿಮೆಯ ತರಬೇತಿಗಳು:** ವಿದ್ಯಾರ್ಥಿಯು ತಮ್ಮ ಬಿ.ವಿ.ಎಸ್‌ಸಿ ಮತ್ತು ಎ.ಎಚ್ ಪದವಿಯಲ್ಲಿ ಕಾಲೇಜಿನಲ್ಲಿ ಸೂಚಿತವಾಗಿರುವ ಯಾವುದಾದರೊಂದು ಉದ್ದಿಮೆಯ ತರಬೇತಿಗಳನ್ನು ಕಡ್ಡಾಯವಾಗಿ ಮುಗಿಸಬೇಕು.

ಕುರಿ ಸಾಕಾಣಿಕೆ ಹಾಗೂ ಉತ್ಪಾದನೆ, ಆಡು ಸಾಕಾಣಿಕೆ ಹಾಗೂ ಉತ್ಪಾದನೆ, ಹಂದಿ ಸಾಕಾಣಿಕೆ ಹಾಗೂ ಉತ್ಪಾದನೆ, ಮೊಟ್ಟೆ ಹಾಗೂ ಮಾಂಸ ಕೋಳಿ ಸಾಕಾಣಿಕೆ ಹಾಗೂ ಉತ್ಪಾದನೆ, ಮೀನು ಸಾಕಾಣಿಕೆ ಹಾಗೂ ಉತ್ಪಾದನೆ, ವೈಜ್ಞಾನಿಕ ಹೈನುಗಾರಿಕೆ, ಲಸಿಕೆ ಉತ್ಪಾದನೆ, ಹಾಲಿನ ಉತ್ಪನ್ನಗಳ ತಯಾರಿಕೆ, ಆಹಾರ ಹಾಗೂ ಹಾಲಿನಲ್ಲಿ ಕಲಬೆರಕೆಯನ್ನು ಪರಿವೀಕ್ಷಿಸುವುದು, ಪಶು ಆಹಾರ ಉತ್ಪಾದನೆ ಹಾಗೂ ಮಿನರಲ್ ಮಿಶ್ರಣ ತಯಾರಿಕೆ, ಚಿಕಿತ್ಸಾ ಶೋಧನಾ

Digitised by Bharatavani, CIIL

ಪ್ರಯೋಗಾಲಯ, ಔಷಧ ಶಾಸ್ತ್ರದಲ್ಲಿ ವಿವಿಧ ಔಷಧಗಳನ್ನು ತಯಾರು ಮಾಡುವುದು, ಮಾಂಸ ತಯಾರಿಕೆ ಹಾಗೂ ಸಂಸ್ಕರಣೆ ಮತ್ತು ಸಾಕು ಪ್ರಾಣಿಗಳ ಸಾಕಾಣಿಕೆ ಹಾಗೂ ಉತ್ಪಾದನೆ.

**ಇಂಟರ್ನ್‌ಶಿಪ್:** ಭಾರತೀಯ ಪಶು ವೈದ್ಯಕೀಯ ನಿಯಮಗಳ ಪ್ರಕಾರ ವಿದ್ಯಾರ್ಥಿಯ ಐದನೆಯ ಶೈಕ್ಷಣಿಕ ವರ್ಷದ ವಾರ್ಷಿಕ ಪರೀಕ್ಷೆ ಮುಗಿಸಿದ ಮೇಲೆ ಪದವಿ ಪಡೆಯುವುದಕ್ಕೆ ಕಡ್ಡಾಯವಾಗಿ ಆರು ತಿಂಗಳು ಕಾಲ ಇಂಟರ್ನಶಿಪ್ ಮಾಡಬೇಕಾಗುತ್ತದೆ.

ಈ ಅವಧಿಯಲ್ಲಿ ವಿದ್ಯಾರ್ಥಿಗಳು ಈ ಕೆಳಕಂಡಂತೆ ಕಾರ್ಯನಿರ್ವಹಿಸಬೇಕಾಗುವುದು. 3 **ತಿಂಗಳುಗಳ ಕಾಲ** ಚಿಕಿತ್ಸೆಯ ತರಬೇತಿಯ ವಿಷಯಗಳಿಗೆ ಸಂಬಂಧಪಟ್ಟಂತೆ ಪಶು ಔಷಧ, ಶಸ್ತ್ರ ಚಿಕಿತ್ಸೆ ಹಾಗೂ ಕ್ಷ-ಕಿರಣ, ಸಂತಾನೋತ್ಪತ್ತಿ ಹಾಗೂ ಪ್ರಸೂತಿ, ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ, ಆಸ್ಪತ್ರೆ ಹಾಗೂ ದಾಖಲಾತಿಗಳ ನಿರ್ವಹಣೆ. **ಒಂದು ತಿಂಗಳು ಕಾಲ** ಆಕಳು, ಎಮ್ಮೆ, ಕುರಿ, ಆಡು, ಹಂದಿ, ಕುದುರೆ, ಒಂಟೆ ಹಾಗೂ ಮೊಲ ಸಾಕಾಣಿಕೆ ಘಟಕಗಳಲ್ಲಿ ಕಾರ್ಯನಿರ್ವಹಿಸುವುದು. **ಒಂದು ತಿಂಗಳು ಕಾಲ** ಮೊಟ್ಟೆ ಹಾಗೂ ಮಾಂಸ, ಕೋಳಿ ಸಾಕಾಣಿಕೆ, ಬಾತುಕೋಳಿ, ಟರ್ಕಿ, ಎಮು, ಕೌಜುಗ ಮತ್ತು ಮೀನು ಸಾಕಾಣಿಕೆ ಘಟಕಗಳಲ್ಲಿ ಕಾರ್ಯನಿರ್ವಹಿಸುವುದು. **ಒಂದು ತಿಂಗಳು** ಕಾಲ ಮೃಗಾಲಯ, ಜೈವಿಕ ಉದ್ಯಾನವನ, ಲಸಿಕಾ ಉತ್ಪಾದನೆ, ಹಾಲು ಹಾಗೂ ಮಾಂಸ ಉತ್ಪಾದನೆ ಮತ್ತು ರೋಗ ಪತ್ತೆ ಹಾಗೂ ನಿಯಂತ್ರಣ ಮಾಡುವ ಕೇಂದ್ರಗಳಲ್ಲಿ ತರಬೇತಿ ಪಡೆಯುವುದು.

**ಸ್ಪರ್ಧಾತ್ಮಕ ಪಶುವೈದ್ಯಕೀಯ ಕೌಶಲ್ಯಗಳು:** ಮಹಾ ವಿದ್ಯಾಲಯವು ಸೂಚಿರುವ ನಿರ್ದಿಷ್ಟ ಪಶುವೈದ್ಯಕೀಯ ಕೌಶಲ್ಯಗಳನ್ನು ಬಿ.ವಿ.ಎಸ್‌ಸಿ ಹಾಗೂ ಎ.ಎಚ್ ಪದವಿಯಲ್ಲಿ ವಿದ್ಯಾರ್ಥಿಗಳು ನಿರ್ವಹಿಸಬೇಕಾಗುವುದು.

**ಪರೀಕ್ಷೆ ಹಾಗೂ ಮೌಲ್ಯ ಮಾಪನ:** ಶಿಕ್ಷಕರು ಸೆಮಿಸ್ಟರ್ ಪ್ರಾರಂಭವಾಗುವುದಕ್ಕಿಂತ ಮುಂಚೆ ಲಿಖಿತ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವರು.

**–ಡಾ. ಮಂಜುನಾಥ ಪಾಟೀಲ್**

## ಭಾರತದಲ್ಲಿ ಪ್ರಾಥಮಿಕ ಶಿಕ್ಷಣ

**ಹಿನ್ನೆಲೆ:** 6ರಿಂದ 14 ವರ್ಷದ ವಯೋಮಿತಿಯ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡುವುದು ಭಾರತದ ರಾಷ್ಟ್ರೀಯ ದೃಷ್ಟಿಕೋನದಲ್ಲಿ ಎಲ್ಲರಿಗೂ ಅನ್ವಯಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಭೌತಿಕ ಹಾಗೂ ಆಧ್ಯಾತ್ಮಿಕ ಮಟ್ಟದಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಪ್ರಾಥಮಿಕ ಶಿಕ್ಷಣವೇ ತಳಹದಿಯಾಗಿರುತ್ತದೆ. ಅದು ಸ್ವಸಂಸ್ಕೃತೀಕರಣಗೊಳಿಸುವ ಪಾತ್ರವನ್ನು ಹೊಂದಿದೆ. ಅದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸಂವೇದನಾಶೀಲತೆಯನ್ನು ಮತ್ತು ಗ್ರಹಿಕೆಗಳನ್ನು ವರ್ಧಿಸುವ ಮತ್ತು ಮಾರ್ಜನಗೊಳಿಸುವ ಮತ್ತು ರಾಷ್ಟ್ರೀಯ ಸುಸಂಬದ್ಧತೆಗೆ ಕೊಡುಗೆ ನೀಡುತ್ತದೆ. ಉತ್ತಮ ಕೌಟುಂಬಿಕ ಆರೋಗ್ಯ ಮತ್ತು ಮಂದಗತಿಯ ಜನಸಂಖ್ಯಾ ಬೆಳವಣಿಗೆಗೆ ಪ್ರಾಥಮಿಕ ಶಿಕ್ಷಣ ಉತ್ತಮ ತಳಹದಿಯನ್ನು ಒದಗಿಸುತ್ತದೆ. ತಂತ್ರಜ್ಞಾನ ಬದಲಾವಣೆಯ ಉಪಯೋಗ ಪಡೆದು ಸ್ವತಃ ಜ್ಞಾನಾಭಿವೃದ್ಧಿಗೆ ಶ್ರಮಿಸುವ ಮನೋಧರ್ಮವನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಮೂಡಿಸುವ ಮೂಲಕ, ಹೆಚ್ಚಿನ ಉತ್ಪಾದಕತೆಗೆ ಹಾಗೂ ಆರ್ಥಿಕ ಪ್ರಯೋಜನಗಳನ್ನು ಪಡೆಯಲು ವ್ಯಕ್ತಿಗಳಿಗೆ ಪ್ರಾಥಮಿಕ ಶಿಕ್ಷಣ ನೆರವಾಗುತ್ತದೆ. ದುಡಿಯುವ ವರ್ಗಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸರಾಸರಿ ಒಂದು ವರ್ಷದ ಮಟ್ಟಿಗೆ ಹೆಚ್ಚಿಸಿದರೂ ಸಹ ಉತ್ಪಾದಕತೆಯನ್ನು ಹೆಚ್ಚಿಸಬಹುದೆಂದು ಸಂಶೋಧನೆಗಳು ತೋರಿಸಿವೆ (ಭಾರತದಲ್ಲಿ ಪ್ರಾಥಮಿಕ ಶಿಕ್ಷಣ – ವಿಶ್ವಬ್ಯಾಂಕ್) ಸ್ಥೂಲ ಮಟ್ಟದಲ್ಲಿ ನೋಡಿದರೂ ಪ್ರಾಥಮಿಕ ಶಿಕ್ಷಣವು ಸಾಮಾಜಿಕವಾಗಿ ಹೆಚ್ಚು ಪ್ರಯೋಜನಕಾರಿಯಾಗಿರುವುದು ಕಂಡುಬರುತ್ತದೆ. ಸುಶಿಕ್ಷಿತ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಪೀಳಿಗೆಯಿಂದ ಪೀಳಿಗೆಗೆ ಪ್ರಾಥಮಿಕ ಶಿಕ್ಷಣವು ಪ್ರಯೋಜನಕಾರಿಯಾಗಿ ಪರಿಣಮಿಸುತ್ತದೆ.

ಭಾರತದ ನಾಗರಿಕತೆಯ ಇತಿಹಾಸವನ್ನು ನೋಡಿದಾಗ ಪ್ರಾಚೀನ ಕಾಲದಿಂದಲೂ ಭಾರತ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ತನ್ನದೇ ಆದ ಕಾಳಜಿ ವಹಿಸಿದ್ದು ಪ್ರಸ್ತುತ ಸಂದರ್ಭದಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ವ್ಯಕ್ತವಾಗುತ್ತಿರುವ ಕಾಳಜಿಯಲ್ಲಿ ಪ್ರತಿಧ್ವನಿತವಾಗುತ್ತಿದೆ. ಮಕ್ಕಳಿಗೆ ಕನಿಷ್ಠ ಮಟ್ಟದ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವ ನೀತಿಯನ್ನು ಪ್ರಾಚೀನ ಭಾರತೀಯ ಇತಿಹಾಸದುದ್ದಕ್ಕೂ ಕಾಣಬಹುದು. ಮಕ್ಕಳಿಗೆ ಎಂಟು ವರ್ಷಗಳ ಕಡ್ಡಾಯ ಶಿಕ್ಷಣ ನೀಡುವ ನೀತಿಯನ್ನು ಇಲ್ಲಿ ಉಲ್ಲೇಖಿಸಬಹುದು. ಆಧುನಿಕ ಪ್ರಾಥಮಿಕ ಶಿಕ್ಷಣದ ಕ್ರಮಬದ್ಧವಾದ ಸ್ವರೂಪ ಅನೇಕ ವರ್ಷಗಳಿಂದಲೇ ಬೆಳೆದು ಬಂದಿದ್ದು ಇತಿಹಾಸದ ಅನುಭವಗಳ ಹಿನ್ನೆಲೆಯಲ್ಲೇ ರೂಪುಗೊಂಡಿದೆ. ಸ್ಥಳೀಯ (ಆಂತರಿಕ ಜನತೆ) ಜನಸಂಸ್ಕೃತಿಗಳ ಅನುಭವಗಳು, ಆಂತರ್ವರ್ಧಕ ಅನುಭವಗಳು (ಆಂತರಿಕವಾಗಿ ವಿಸ್ತೃತಗೊಂಡು ಬೆಳೆಯುವ) ಹಾಗೂ ಬಹಿರ್ಜಾತ ಅನುಭವಗಳ (ಬಾಹ್ಯ ಅನುಭವಗಳಿಂದ ವೃದ್ಧಿಸುವ) ಸಂಯೋಜನೆಯಿಂದ ಅನುಭವಗಳ ಸಮೃದ್ಧತೆಯನ್ನು ಪಡೆದಿದೆ. ತತ್ಪರಿಣಾಮವಾಗಿ ಸಮಾನತಾ ದೃಷ್ಟಿಕೋನದ, ಪ್ರಜಾಸತ್ತಾತ್ಮಕ, ಸಾಮಾಜಿಕ ನ್ಯಾಯ ಪ್ರತಿಪಾದಿಸುವ ಆಧುನಿಕ ಪ್ರಾಥಮಿಕ ಶಿಕ್ಷಣ ಪದ್ಧತಿ ರೂಪುಗೊಂಡಿದೆ. ಭಾರತದ ಆಧುನಿಕ ಪ್ರಾಥಮಿಕ ಶಿಕ್ಷಣದ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸಿರುವ ಪ್ರಮುಖ ವಿದ್ಯಮಾನಗಳೆಂದರೆ 1968 ಮತ್ತು 1986ರ ರಾಷ್ಟ್ರೀಯ ಶಿಕ್ಷಣನೀತಿಗಳು (ಎನ್‌ಪಿಇ). 1968ರ ಎನ್‌ಪಿಇ ರಾಷ್ಟ್ರೀಯ ಶಿಕ್ಷಣ ಮಾದರಿಯಾಗಿರುವ 10+2+3 ವಿನ್ಯಾಸಕ್ಕೆ ಚಾಲನೆ ನೀಡಿತ್ತು. 1986ರ ಎನ್‌ಪಿಇ ಈ ನಿಟ್ಟಿನಲ್ಲಿ ಹೆಚ್ಚು ಸ್ಪಷ್ಟತೆಯನ್ನು ಒದಗಿಸುವ ಮೂಲಕ ಪ್ರಾಥಮಿಕ ಶಿಕ್ಷಣದ ರಚನೆಯಲ್ಲಿ 5 ವರ್ಷಗಳ ಪ್ರಾಥಮಿಕ ಶಿಕ್ಷಣ ಮತ್ತು 3 ವರ್ಷಗಳ ಉನ್ನತ ಪ್ರಾಥಮಿಕ ಶಿಕ್ಷಣ ನೀತಿಗೆ ಚಾಲನೆ ನೀಡಿತ್ತು.

**ಶಾಲಾ ಹಂತದಲ್ಲಿ ಶೈಕ್ಷಣಿಕ ಸಂರಚನೆ:**

ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಭಾರತದ ಶೈಕ್ಷಣಿಕ ಮಾದರಿ ಈ ರೀತಿ ಇದೆ (ಚಿತ್ರ 1):

Digitised by Bharatavani, CIIL

**ಚಿತ್ರ 1 : ರಾಷ್ಟ್ರೀಯ ಶಿಕ್ಷಣ ವಿನ್ಯಾಸ**

| ಪೂರ್ವ ಪ್ರಾಥಮಿಕ | ಪ್ರಾಥಮಿಕ ಹಂತ 1–5 | ಉನ್ನತ ಪ್ರಾಥಮಿಕ ಹಂತ 6–8 | ಮಾಧ್ಯಮಿಕ ಹಂತ 9–10 | ಹಿರಿಯ ಮಾಧ್ಯಮಿಕ ಹಂತ 11–12 |
|---|---|---|---|---|
| ವಯೋಮಿತಿ 4–6 | 6–11 | 12–14 | 15–16 | 17–18 |

ಪ್ರಾಥಮಿಕ ಶಿಕ್ಷಣ ರಚನೆಯನ್ನು ರೂಪಿಸುವಲ್ಲಿ ವಿವಿಧ ರಾಜ್ಯಗಳಲ್ಲಿ ವಿವಿಧ ಸ್ವರೂಪಗಳು ಕಂಡುಬರುತ್ತವೆ. ಕೆಲವು ರಾಜ್ಯಗಳಲ್ಲಿ ಐದು ವರ್ಷಗಳ ಪ್ರಾಥಮಿಕ ಶಿಕ್ಷಣ, 3 ವರ್ಷಗಳ ಉನ್ನತ ಪ್ರಾಥಮಿಕ ಶಿಕ್ಷಣ ಇದ್ದರೆ ಇನ್ನು ಕೆಲವು ರಾಜ್ಯಗಳಲ್ಲಿ 4 ವರ್ಷಗಳ ಪ್ರಾಥಮಿಕ ಮತ್ತು 3 ವರ್ಷಗಳ ಪ್ರಾಥಮಿಕ ಶಿಕ್ಷಣ ಪದ್ಧತಿ ಇದೆ. ಇನ್ನು ಕೆಲವು ರಾಜ್ಯಗಳಲ್ಲಿ 5 ವರ್ಷಗಳ ಪ್ರಾಥಮಿಕ ಮತ್ತು 2 ವರ್ಷಗಳ ಉನ್ನತ ಪ್ರಾಥಮಿಕ ಪದ್ಧತಿ ಇದೆ.

ಪ್ರಾಥಮಿಕ ಶಿಕ್ಷಣದ ಚಾರಿತ್ರಿಕ ಮೂಲಗಳನ್ನು ಅರಸುತ್ತಾ ಹೋದಂತೆ ಲೌಕಿಕ ಮಿತಿಗಳನ್ನು ಮೀರಿದ ಸಾರ್ವತ್ರಿಕತೆ ಕಂಡುಬರುತ್ತದೆ. ಅಲ್ಲದೆ ಹಸ್ತಕ್ಷೇಪದ ಅಗತ್ಯತೆ ಇರುವ ಕ್ಷೇತ್ರಗಳೂ ಸಹ ನಿದರ್ಶನಾತ್ಮಕ ಮಾದರಿಗಳನ್ನು ಹೊರಸೂಸುತ್ತವೆ. ಪ್ರಾಥಮಿಕ ಶಿಕ್ಷಣ ವ್ಯವಸ್ಥೆಗೆ ಮೂಲಭೂತವಾಗಿ ಅಗತ್ಯವಾದ ಕೆಲವು ಅಂಶಗಳನ್ನು ಈ ಕೆಳಗಿನ ಚಿತ್ರದಲ್ಲಿ ನಿರೂಪಿಸಲಾಗಿದೆ.

ಚಿತ್ರ 2 : ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾದ ಮೂಲಭೂತ ವಿಚಾರಗಳು




ಕಾಲಕ್ರಮೇಣ ಬೆಳೆದುಬಂದಿರುವ ಪ್ರಾಥಮಿಕ ಶಿಕ್ಷಣವನ್ನು ಕುರಿತ ವಿಚಾರಗಳು ಮತ್ತು ಕಾಳಜಿಗಳು ಭಾರತದ ಶೈಕ್ಷಣಿಕ ಇತಿಹಾಸದ ಅನೇಕ ಘಟನೆಗಳ ಮೂಲಕ ಬೆಳೆದುಬಂದಿವೆ. ಪ್ರಾಥಮಿಕ ಶಿಕ್ಷಣವನ್ನು ಎಲ್ಲಾ ಮಜಲುಗಳಿಂದಲೂ ಕೂಲಂಕಷವಾಗಿ ವಿಶ್ಲೇಷಿಸಿ ಗ್ರಹಿಸುವ ನಿಟ್ಟಿನಲ್ಲಿ ಪ್ರಾಥಮಿಕ ಶಿಕ್ಷಣದ ಚಾರಿತ್ರಿಕ ಆಯಾಮಗಳನ್ನು ಗ್ರಹಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಲೇಖನವು ಮೂರು ವಿಭಾಗಗಳಲ್ಲಿ ಚರ್ಚಿತವಾಗಿದೆ.

1. **ಹಿನ್ನೆಲೆ:**
2. **ಐತಿಹಾಸಿಕ ಸಿಂಹಾವಲೋಕನ**
   - ಅ) ಪ್ರಾಚೀನ ಅವಧಿ.
   - ಆ) ಮಧ್ಯಕಾಲೀನ ಅವಧಿ.
   - ಇ) ಸ್ವಾತಂತ್ರ್ಯಪೂರ್ವ ಅವಧಿ
   - ಈ) ಸ್ವಾತಂತ್ರ್ಯೋತ್ತರ ಅವಧಿ (1986ರವರೆಗೆ)
3. **ಪ್ರಸ್ತುತ ಸನ್ನಿವೇಶ (1986ರ ನಂತರ)**
   - ಅ) ಪ್ರವೇಶಾವಕಾಶ
   - ಆ) ಸಮಾನತೆ
   - ಇ) ಗುಣಮಟ್ಟ
   - ಈ) ಆಡಳಿತ ಸಂರಚನೆಗಳು ಮತ್ತು ಸಾಂಸ್ಥಿಕ ಸಾಮರ್ಥ್ಯವೃದ್ಧಿ
   - ಉ) ಆಡಳಿತ ಮಾಹಿತಿ ವ್ಯವಸ್ಥೆ (ಎಂಐಎಸ್)
   - ಊ) ಪ್ರಾಥಮಿಕ ಶಿಕ್ಷಣದಲ್ಲಿ ಸಾಮುದಾಯಿಕ ಭಾಗವಹಿಸುವಿಕೆ
4. **ಭವಿಷ್ಯದ ಹೆಜ್ಜೆಗಳು.**

**ಐತಿಹಾಸಿಕ ಸಿಂಹಾವಲೋಕನ**

**ಪ್ರಾಚೀನ ಕಾಲಾವಧಿ:** ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ಒದಗಿಸುವ ಪರಿಕಲ್ಪನೆಯನ್ನು ಭಾರತದ ನಾಗರಿಕತೆಯ ಆರಂಭದ ಹಂತದಲ್ಲೇ ಕಾಣಬಹುದು. ವೈದಿಕ ಆರ್ಯರ ಕಾಲದಲ್ಲಿ ಶಿಕ್ಷಣವನ್ನು ಪ್ರಭುತ್ವ ಒದಗಿಸುತ್ತಿರಲಿಲ್ಲವಾಗಿ ಧಾರ್ಮಿಕ ಆಚರಣೆಯ ರೂಪದಲ್ಲಿ ಅದನ್ನು ಒದಗಿಸಲಾಗುತ್ತಿತ್ತು. ಉಪನಯನದ ಆಚರಣೆಯೊಂದಿಗೆ ಶಿಕ್ಷಣಾರ್ಥಿಗಳನ್ನು ಗುರುಗಳ ಬಳಿಗೆ ಕರೆದೊಯ್ಯುವ

Digitised by Bharatavani, CIIL

ಕ್ರಮದಿಂದಲೇ ಶಿಕ್ಷಣವೂ ಆರಂಭವಾಗುತ್ತಿತ್ತು. ಈ ವ್ಯವಸ್ಥೆಯಲ್ಲಿನ ಪಠ್ಯಕ್ರಮಗಳು ಬಹುತೇಕವಾಗಿ ಧಾರ್ಮಿಕ ಗ್ರಂಥಗಳನ್ನೇ ಆಧರಿಸಿದ್ದು ಶಿಕ್ಷಣ ನೀಡುವ ಗುರುವನ್ನು ಜ್ಞಾನ ಮತ್ತು ಬುದ್ಧಿವಂತಿಕೆಯ ಮೂಲ ಎಂದೇ ಪರಿಗಣಿಸಲಾಗುತ್ತಿತ್ತು. ಆದರೆ ಕಾಲಕ್ರಮೇಣ ಈ ಶಿಕ್ಷಣ ಪದ್ಧತಿ ಕೇವಲ ಮೇಲ್ಜಾತಿಯವರಿಗೆ ಮಾತ್ರ ಮೀಸಲಾದ ಪರಿಣಾಮವಾಗಿ ಬಾಲಕಿಯರು ಶಿಕ್ಷಣ ವ್ಯವಸ್ಥೆಯಿಂದ ಹೊರಗುಳಿದು, ಇತರ ಜನಸಮುದಾಯಗಳು ವಂಚಿತರಾದರು. ತತ್ಪರಿಣಾಮವಾಗಿ ಈ ಪದ್ಧತಿಯು ಪ್ರತ್ಯೇಕತಾ ಭಾವನೆಗಳನ್ನೂ ಸೃಷ್ಟಿಸತೊಡಗಿತು. ಸಾಮಾನ್ಯ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಪಠ್ಯಕ್ರಮಗಳು ಬಹುಪಾಲು ಮಕ್ಕಳು ಭವಿಷ್ಯದಲ್ಲಿ ಅನುಸರಿಸಬಹುದಾದ ವೃತ್ತಿಗಳನ್ನಾಧರಿಸಿ ರೂಪುಗೊಳ್ಳಲಾರಂಭಿಸಿದವು. ಜಾತಿ ಮತ್ತು ವರ್ಗಗಳನ್ನಾಧರಿಸಿದ ವೃತ್ತಿಪರ ಧೋರಣೆಗಳಿಗನುಸಾರವಾಗಿ ಕೌಶಲ್ಯ ಮತ್ತು ಜ್ಞಾನಾಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿತ್ತು. ಹಾಗಾಗಿ ಪ್ರಾಥಮಿಕ ಶಿಕ್ಷಣವು ನಿರ್ದಿಷ್ಟ ಚೌಕಟ್ಟಿಗೆ ಒಳಪಟ್ಟು ಗಣ್ಯ ಮೇಲ್ವರ್ಗದ ಪರವಾಗಿ ಪರಿಣಮಿಸಿತ್ತು.

ವೇದಕಾಲದ ಆಚರಣಾಬದ್ಧ ಮತ್ತು ವ್ಯಾಪಕವಾದ ಧಾರ್ಮಿಕ ಪಂಥಾಧಾರಿತ ಶಿಕ್ಷಣ ವ್ಯವಸ್ಥೆಯು ಜೈನ ಮತ್ತು ಬೌದ್ಧ ಧರ್ಮಗಳ ಉಗಮದೊಂದಿಗೆ ಪರಿವರ್ತನೆಗೊಳಗಾಯಿತು. ಬ್ರಾಹ್ಮಣಶಾಹಿ ಔಪಚಾರಿಕ ವ್ಯವಸ್ಥೆಯ ಹಾಗೂ ಪ್ರತ್ಯೇಕತಾ ಧೋರಣೆಯ ಶಿಕ್ಷಣ ವ್ಯವಸ್ಥೆ ಕ್ರಮೇಣ ಬೌದ್ಧ ಧರ್ಮದ ಶಿಕ್ಷಣ ಮಾದರಿಗೆ ಪರಿವರ್ತಿತವಾಗತೊಡಗಿತು. ಈ ಮಠೀಯ ಶಿಕ್ಷಣ ವ್ಯವಸ್ಥೆಯಲ್ಲಿ ಜನತೆಯ ಸಾಮಾನ್ಯ ಭಾಷೆಯಲ್ಲೇ ಶಿಕ್ಷಣ ನೀಡಲಾಗುತ್ತಿತ್ತು. ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಶೈಕ್ಷಣಿಕ ರಂಗದಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಉಂಟಾದವು. ಪ್ರಾಥಮಿಕ ಶಿಕ್ಷಣವನ್ನು ಸಮಾಜದ ಎಲ್ಲ ವರ್ಗಗಳ ಜನತೆಗೆ ಮುಕ್ತವಾಗಿಸಲಾಯಿತು. ಎಲ್ಲರಿಗೂ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶ ದೊರೆಯುತ್ತಿತ್ತು. ಎಲ್ಲ ಗ್ರಾಮ, ಪಟ್ಟಣ ಮತ್ತು ನಗರಗಳಲ್ಲಿ ಶಾಲೆಗಳನ್ನು ತೆರೆಯಲಾಯಿತು. ಸಾಮಾನ್ಯ ಜನತೆಗೂ ಶಿಕ್ಷಣ ಲಭ್ಯವಾಗುತ್ತಿತ್ತು. ಈ ಕಾಲಾವಧಿಯಲ್ಲಿ, ಹತ್ತನೆಯ ಶತಮಾನಕ್ಕೂ ಮುನ್ನ, ಪ್ರತಿಯೊಂದು ಗ್ರಾಮದಲ್ಲೂ ಸಮುದಾಯ ಬೆಂಬಲಿತ ಶಿಕ್ಷಕರನ್ನು ನೇಮಿಸಲಾಗುತ್ತಿತ್ತು. ಬಂಗಾಲದಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಪಾಠಶಾಲೆ ಮತ್ತು ಟೋಲ್‌ಗಳನ್ನು ಆರಂಭಿಸಲಾಯಿತು.

**ಮಧ್ಯಕಾಲೀನ ಅವಧಿ:** ಮುಸ್ಲಿಮ್ ರಾಜರ ಆಡಳಿತಾವಧಿಯಲ್ಲಿ ಇಸ್ಲಾಮಿಕ್ ಮಾದರಿಯ ಶಿಕ್ಷಣ ಜಾರಿಗೆ ಬಂದಿತು. ಮುಸ್ಲಿಂ ಶಿಕ್ಷಣ ವ್ಯವಸ್ಥೆಯಲ್ಲಿ ಎರಡು ಪ್ರಮುಖ ರೀತಿಯ ಶೈಕ್ಷಣಿಕ ಸಂಸ್ಥೆಗಳು ಸ್ಥಾಪನೆಗೊಂಡವು. ಮೊದಲನೆಯದು ಹಿಂದೂ ಪಾಠಶಾಲೆ ಅಥವಾ ಟೋಲ್‌ಗಳಿಗೆ ಹೋಲುವ ಮಕ್‌ತಾಬ್ ಸಂಸ್ಥೆಗಳು. ಇವು ಬಹುಪಾಲು ಮಸೀದಿಗಳಿಗೆ ಸೇರಿರುತ್ತಿದ್ದವು. ಈ ಸಂಸ್ಥೆಗಳಲ್ಲಿ ಬಾಲಕ ಬಾಲಕಿಯರಿಗೆ ಓದು ಬರಹಗಳನ್ನು ಬೋಧಿಸಲಾಗುತ್ತಿತ್ತು. ಪವಿತ್ರ ಖುರಾನ್ ಪಠಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿತ್ತು. ಎರಡನೆಯದಾಗಿ ವಿಶೇಷ ಕಲಿಕಾ ಶಾಲೆಗಳಾಗಿ ಮದರಸಾಗಳು ಸ್ಥಾಪಿತಗೊಂಡವು. ಈ ಮದರಸಾಗಳಲ್ಲಿ ಮಕ್ಕಳನ್ನು ಪುರೋಹಿತ, ವೈದ್ಯ, ನ್ಯಾಯಾಧೀಶ ಮುಂತಾದ ವೃತ್ತಿಪರ ಹುದ್ದೆಗಳಿಗೆ ತಯಾರು ಮಾಡುವ ನಿಟ್ಟಿನಲ್ಲಿ ಶಿಕ್ಷಣ ನೀಡಲಾಗುತ್ತಿತ್ತು.

**ಸ್ವಾತಂತ್ರ್ಯಪೂರ್ವ ಅವಧಿ:** ಹತ್ತೊಂಬತ್ತನೆಯ ಶತಮಾನದ ಆರಂಭದಿಂದಲೇ ಭಾರತದ ಪ್ರಾಥಮಿಕ ಶಿಕ್ಷಣದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಡಳಿತ ಮಹತ್ವದ ಪಾತ್ರ ವಹಿಸಿತ್ತು. ಸ್ಥಳೀಯ ದೇಶಿ ಪ್ರಾಥಮಿಕ ಶಾಲೆಗಳು ಕೇವಲ ಪುರೋಹಿತಶಾಹಿಗಳಿಗೆ, ಜಮೀನ್ದಾರರಿಗೆ, ವ್ಯಾಪಾರಸ್ಥರಿಗೆ ಹಾಗೂ ಶ್ರೀಮಂತ ರೈತರಿಗೆ ಮಾತ್ರ ಶಿಕ್ಷಣ ನೀಡುತ್ತಿದ್ದರೂ ಈ ಶಾಲೆಗಳಲ್ಲಿ ಪ್ರಧಾನವಾಗಿ ಪ್ರಾಯೋಗಿಕ ಶಿಕ್ಷಣವನ್ನೇ ನೀಡಲಾಗುತ್ತಿದ್ದು ಓದು, ಬರಹ ಮತ್ತು ಅಂಕಗಣಿತವನ್ನು ಬೋಧಿಸಲಾಗುತ್ತಿತ್ತು. ಆದರೆ ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದ ಈ ಶಾಲೆಗಳು ಅಭಿವೃದ್ಧಿ ಹೊಂದಲಿಲ್ಲ.

ಬ್ರಿಟಿಷ್ ಆಡಳಿತವು ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಆರಂಭದಿಂದಲೇ ರೂಪಿಸಲಾರಂಭಿಸಿತು. ಬ್ರಿಟಿಷ್ ಆಡಳಿತ ವ್ಯವಸ್ಥೆಗೆ ಅಗತ್ಯವಾದ ರೀತಿಯಲ್ಲಿ ಸ್ಥಳೀಯರಿಗೆ ಪಾಶ್ಚಿಮಾತ್ಯ ಕಲ್ಪನೆಗಳು ಮತ್ತು ಚಿಂತನೆಗಳನ್ನು ಬೋಧಿಸಲಾರಂಭಿಸಿದರು. ಬ್ರಿಟೀಷರು ಅನುಸರಿಸಿದ ಆಶಾದಾಯಕವಾದ ಪಠ್ಯಕ್ರಮದಲ್ಲಿ ಓದು, ಬರಹ ಮತ್ತು ಅಂಕಗಣಿತಗಳೊಂದಿಗೆ ಇಂಗ್ಲೆಂಡಿನ ಇತಿಹಾಸ, ಭೂಗೋಳಶಾಸ್ತ್ರ, ಖಗೋಳ ಶಾಸ್ತ್ರ, ವಿಜ್ಞಾನ, ರೇಖಾಗಣಿತ ಮತ್ತು ಯೂಕ್ಲಿಡ್ ನಿಯಮಗಳನ್ನು ಬೋಧಿಸಲಾಗುತ್ತಿತ್ತು ಈ ಪಠ್ಯಕ್ರಮವು ಸಂಪೂರ್ಣವಾಗಿ ಭಾರತೀಯ ಸಾಮಾಜಿಕ-ಸಾಂಸ್ಕೃತಿಕ ಧೋರಣೆ ಮತ್ತು ಅಗತ್ಯತೆಗಳಿಗೆ ಹೊರತಾಗಿತ್ತು. 1882ರ ಪ್ರಥಮ ಭಾರತೀಯ ಶಿಕ್ಷಣ ಸಮಿತಿಯು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದೇ ಅಲ್ಲದೆ ಪ್ರಾಥಮಿಕ ಶಿಕ್ಷಣದ ನಿರ್ವಹಣೆ ಮತ್ತು ಹೊಣೆಗಾರಿಕೆಯನ್ನು ಪ್ರಥಮ ಬಾರಿಗೆ ಸ್ಥಳೀಯ ಸಮುದಾಯಗಳಿಗೆ ವರ್ಗಾಯಿಸಿತು.

ತದನಂತರ ಸ್ವಾತಂತ್ರ್ಯ ಚಳುವಳಿಯ ಕಾವು ಹೆಚ್ಚುತ್ತಿದ್ದಂತೆ ಜನತೆಯಲ್ಲಿ ಹೆಚ್ಚಿನ ಜಾಗೃತಿ ಮೂಡುತ್ತಿದ್ದುದರಿಂದ ಜನಸಾಮಾನ್ಯರೇ ಉತ್ತಮ ಶಿಕ್ಷಣಕ್ಕಾಗಿ ಆಗ್ರಹಿಸತೊಡಗಿದ್ದರು. ಶಾಲೆಗಳಲ್ಲಿ ದಾಖಲಾತಿ ಹೆಚ್ಚಾಗತೊಡಗಿತು. ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಆಗ್ರಹಿಸಿ 1910 ರಲ್ಲಿ ಸಂಸತ್ತಿನಲ್ಲಿ ಗೋಪಾಲಕೃಷ್ಣ ಗೋಖಲೆ ಮಂಡಿಸಿದ ನಿರ್ಣಯ ದುರದೃಷ್ಟವಶಾತ್ ವಿಫಲವಾಗಿತ್ತು. ಆದಾಗ್ಯೂ ಮೂಲಭೂತ ಸೌಕರ್ಯಗಳ ಪೂರೈಕೆ ಪಠ್ಯಕ್ರಮದ ಸುಧಾರಣೆ ಶಿಕ್ಷಕರ ಅಭಿವೃದ್ಧಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ, ಬಾಲಕಿಯರಿಗೆ ಶಿಕ್ಷಣದಲ್ಲಿ ಸಮಾನ ಸ್ಥಾನ ಪ್ರಾಪ್ತಿ ಮುಂತಾದ ಗುಣಾತ್ಮಕ ಸುಧಾರಣೆಗಳು ಆದವು.

ದ್ವಿಮುಖ ನೀತಿಯ ಅನುಸಾರ (1921–37) ಪ್ರಾಥಮಿಕ ಶಿಕ್ಷಣದ ಹೊಣೆಗಾರಿಕೆಯನ್ನು ಭಾರತದ ನಿಯಂತ್ರಣಕ್ಕೆ ಒಪ್ಪಿಸಿದ ತರುವಾಯ ಶಿಕ್ಷಣದಲ್ಲಿ ಅಭೂತಪೂರ್ವ ಪ್ರಗತಿ ಕಂಡುಬಂದಿತು. ಶಿಕ್ಷಣದಲ್ಲಿ ಸರ್ವರಿಗೂ ಸಾರ್ವತ್ರಿಕವಾಗಿ ಪಾಲ್ಗೊಳ್ಳುವ ಅವಕಾಶ ಲಭ್ಯವಾಯಿತು. ಮೌಲ್ಯಾಧಾರಿತ ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿತು. ಶಿಕ್ಷಣ ಕ್ಷೇತ್ರದ ವೆಚ್ಚವೂ ಗಣನೀಯವಾಗಿ ಹೆಚ್ಚಾಗತೊಡಗಿತು.

Digitised by Bharatavani, CIIL

ಹಾರ್ಟಾಗ್ ಸಮಿತಿಯ ಶಿಫಾರಸ್ಸಿನ ಮೇರೆಗೆ ವ್ಯಾಪಕ ವಿಸ್ತರಣೆಯ ಬದಲು ಶಿಕ್ಷಣದ ವ್ಯವಸ್ಥೆಯ ಕ್ರೋಢೀಕರಣದತ್ತ ಹೆಚ್ಚಿನ ಗಮನ ನೀಡಲಾಯಿತು. ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು, ಜಡತ್ವ ನಿವಾರಿಸಿ ನಷ್ಟವನ್ನು ಕಡಿಮೆ ಮಾಡುವುದು, ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟವನ್ನು ಹೆಚ್ಚಿಸುವುದು ಮುಂತಾದ ಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಶಿಕ್ಷಣದ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸುವುದರ ಮೂಲಕ ಪ್ರಾಥಮಿಕ ಶಿಕ್ಷಣದಲ್ಲಿ ಸ್ಥಳೀಯ ಸಮುದಾಯಗಳು ಪಾಲ್ಗೊಳ್ಳಲು ಅನುಕೂಲವಾಯಿತು.

**ಸ್ವಾತಂತ್ರ್ಯೋತ್ತರ ಅವಧಿ:** ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಉಚಿತ, ಕಡ್ಡಾಯ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ ಜನರಿಂದಲೇ ಬೇಡಿಕೆ ಹೆಚ್ಚಾಗತೊಡಗಿತ್ತು. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ನೀತಿಯನ್ನು ಪರಾಮರ್ಶಿಸಲು ನೇಮಿಸಲಾದ ಖೇರ್ ಸಮಿತಿ ತನ್ನ ಅಂತಿಮ ವರದಿಯಲ್ಲಿ ಸರ್ಕಾರ ಈ ಗುರಿ ಮುಟ್ಟಲು 16 ತಿಂಗಳುಗಳ ಗಡುವು ನೀಡಿತ್ತು. ಆದರೆ ಈ ತೀರ್ಮಾನ ತೃಪ್ತಿಕರವಾಗಿರಲಿಲ್ಲ. ತತ್ಪರಿಣಾಮವಾಗಿ ಸಂವಿಧಾನ ಕರ್ತೃಗಳು 1950ರಲ್ಲಿ ಪ್ರಭುತ್ವ ನೀತಿಯ ನಿರ್ದೇಶಕ ತತ್ವಗಳನ್ನು ಜಾರಿಗೊಳಿಸಿದರು. ಈ ತತ್ವಗಳಡಿಯಲ್ಲಿ ಸಂವಿಧಾನ ಪರಿಚ್ಛೇದ 45ರ ಅನ್ವಯ "ಸಂವಿಧಾನ ಅನುಷ್ಠಾನವಾದ ಹತ್ತು ವರ್ಷಗಳೊಳಗಾಗಿ ದೇಶದ ಸಮಸ್ತ ಮಕ್ಕಳಿಗೆ 14 ವರ್ಷ ಪೂರ್ತಿಯಾಗುವವರೆಗೂ, ಉಚಿತ, ಕಡ್ಡಾಯ ಶಿಕ್ಷಣವನ್ನು ಪ್ರಭುತ್ವ ಒದಗಿಸಬೇಕಾಗುತ್ತದೆ".

ಪಂಚವಾರ್ಷಿಕ ಯೋಜನೆಗಳು ಜಾರಿಗೊಂಡನಂತರ ಪ್ರಾಥಮಿಕ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಹಣಕಾಸನ್ನು ಒದಗಿಸಲಾಯಿತು. ಇದರ ಪರಿಣಾಮವಾಗಿ ಶಾಲೆಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಒದಗಿಸುವುದು, ಪಠ್ಯಪುಸ್ತಕ ಮತ್ತು ಸಮವಸ್ತ್ರ ನೀಡುವುದು ಮುಂತಾದ ಕಾರ್ಯಕ್ರಮಗಳು ಜಾರಿಗೊಂಡವು. ಪಠ್ಯಪುಸ್ತಕಗಳಿಗೆ ಸರ್ಕಾರದ ಸಹಾಯಧನ ನೀಡುವುದೇ ಅಲ್ಲದೆ ಗುಣಮಟ್ಟವನ್ನು ಹೆಚ್ಚಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು.

ಗಾಂಧೀಜಿಯವರ ಮೂಲಭೂತ ಶೈಕ್ಷಣಿಕ ಕಾರ್ಯಕ್ರಮ ಅಥವಾ ವಾರ್ಧ ಶಿಕ್ಷಣ ವ್ಯವಸ್ಥೆಯನ್ನು ಉಲ್ಲೇಖಿಸದೆ ಹೋದಲ್ಲಿ ಈ ಕಾಲಾವಧಿಯ ಇತಿಹಾಸ ಅಪೂರ್ಣವಾಗಿಯೇ ಉಳಿಯುತ್ತದೆ. ಈ ಶಿಕ್ಷಣನೀತಿ ಚಿಂತನಾಕ್ರಮದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದು ಈ ಯೋಜನೆಯ ಮೂಲ ಉದ್ದೇಶವಾಗಿತ್ತು. ಗತಕಾಲದ ನೀತಿಗಳಿಂದ ಭಿನ್ನವಾಗಿ ಶಿಶು ಕೇಂದ್ರಿತ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಾಗಿತ್ತು. ಶಿಕ್ಷಣವನ್ನು ಕಾರ್ಯ ಪ್ರೇರಿತವನ್ನಾಗಿ ಮಾಡುವ ಮೂಲಕ ಜೀವನ್ಮುಖಿಯಾಗಿ ಪರಿವರ್ತಿಸಲಾಯಿತು. ಅದೇ ವೇಳೆ ಬೋಧನಾ ಕ್ರಮಗಳಲ್ಲೂ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಲಾಯಿತು.

**ಗಾಂಧೀಜಿಯವರ ಮೂಲ ಶಿಕ್ಷಣ ವ್ಯವಸ್ಥೆ**

ಗಾಂಧೀಜಿಯವರ ಮೂಲ ಶಿಕ್ಷಣ ವ್ಯವಸ್ಥೆಯು ಸ್ವಯಂ ಬೆಂಬಲಿತ ಪ್ರಾಥಮಿಕ ಶಿಕ್ಷಣ ತತ್ವವನ್ನು ಅನುಸರಿಸಿತ್ತು. ಈ ತತ್ವದ ಅನುಸಾರ ಸಾಮಾನ್ಯ ಜ್ಞಾನ ಬೋದನೆಯೊಂದಿಗೆ ಆದಾಯ ಗಳಿಸುವ ಕೆಲಸವನ್ನೂ ಕೈಗೊಂಡು, ಭಾರತದ ಗ್ರಾಮೀಣ ಬಡಜನತೆಯನ್ನು ಕಾಡುತ್ತಿರುವ ಭೌತಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ಗ್ರಹಿಸುವುದು ಮಹತ್ತರ ಅಂಶವಾಗುತ್ತದೆ. ಈ ಮೂಲ ಶಿಕ್ಷಣ ವ್ಯವಸ್ಥೆ ಕೆಲವು ತತ್ವಗಳನ್ನು ಆಧರಿಸಿದೆ:

* ಉತ್ಪಾದಕೀಯ, ಕ್ರಿಯಾಶೀಲ ಮತ್ತು ಸಾಮಾಜಿಕವಾಗಿ ಉಪಯುಕ್ತವಾದ ಕೆಲಸದ ಮೂಲಕ ಜೀವನ ಪರ್ಯಂತ ಶಿಕ್ಷಣ ಗಳಿಸುವುದು.
* ಉತ್ಪಾದಕೀಯ ಕ್ರಿಯೆಗೆ ಪೂರಕವಾದ ಕೌಶಲ್ಯವನ್ನು ಬೋಧಿಸುವುದು.
* ಈ ಕುಶಲ ತರಬೇತಿಯು ಬೌದ್ಧಿಕ ವಿಷಯಕ್ಕೆ ಸಂಬಂಧಿಸಿರಬೇಕು.
* ಬೋಧನ–ಕಲಿಕಾ ಪ್ರಕ್ರಿಯೆ ಶಿಶುಕೇಂದ್ರ ಮತ್ತು ಚಟುವಟಿಕೆ ಕೇಂದ್ರಿತವಾಗಿರಬೇಕು.
* ಶಾಲೆ ಮತ್ತು ಸಮುದಾಯಗಳ ನಡುವೆ ನಿಕಟ ಸಂಪರ್ಕ ಇರಬೇಕು.
* ಈ ತತ್ವಗಳು ಗ್ರಾಮೀಣ ಶಾಲೆಗಳಿಗೆ ಮಾತ್ರವಲ್ಲದೆ ನಗರಗಳಲ್ಲಿನ ಶಾಲೆಗಳಿಗೂ ಅನ್ವಯಿಸಬೇಕು.

ಸ್ವಾತಂತ್ರ್ಯ ಗಳಿಸಿದ ನಂತರದಲ್ಲಿ ಗಾಂಧೀಜಿಯ ಮೂಲಭೂತ ಶೈಕ್ಷಣಿಕ ವ್ಯವಸ್ಥೆಯನ್ನೇ ರಾಷ್ಟ್ರೀಯ ಪ್ರಾಥಮಿಕ ಶಿಕ್ಷಣಕ್ಕೆ ಮಾದರಿಯಾಗಿ ಪರಿಗಣಿಸಲಾಯಿತು. ದುರದೃಷ್ಟವಶಾತ್ ಈ ಯೋಜನೆಗೆ ಸೂಕ್ತ ಪ್ರೋತ್ಸಾಹ ದೊರೆಯಲಿಲ್ಲ. ಶಾಲೆಗಳಲ್ಲಿ ಸೂಕ್ತ ಸೌಲಭ್ಯಗಳು, ಬೋಧಕ ತರಬೇತಿಯಲ್ಲಿ ಅಗತ್ಯವಾಗಿದ್ದ ಬದಲಾವಣೆಗಳು, ಶಿಕ್ಷಣದ ಮಹತ್ವ ಮತ್ತು ಪ್ರಸ್ತುತತೆಯ ಬಗ್ಗೆ ಸಮುದಾಯಗಳಲ್ಲಿ ಪ್ರಜ್ಞೆ ಮೂಡಿಸುವುದು ಮುಂತಾದ ವಿಷಯಗಳಲ್ಲಿ ಸರ್ಕಾರ ವಿಫಲವಾಗಿತ್ತು. ಶಿಕ್ಷಣ ಕ್ಷೇತ್ರದ ಕಾಳಜಿ ಕ್ರಮೇಣ ನಿರ್ದಿಷ್ಟ ವರ್ಗಗಳಿಗೆ ಶಿಕ್ಷಣ ಒದಗಿಸುವ ನೀತಿಯನ್ನು ತೊರೆದು ಜನಸಮೂಹಗಳಿಗೆ ಒದಗಿಸುವತ್ತ ಸಾಗಿತ್ತು. ಈ ನಿಟ್ಟಿನಲ್ಲೇ 1952–53ರ ಮಾಧ್ಯಮಿಕ ಶಿಕ್ಷಣ ಆಯೋಗ ಮತ್ತು 1964–65ರ ಕೊಠಾರಿ ಶಿಕ್ಷಣ ಆಯೋಗ ಶಾಲಾ ಶಿಕ್ಷಣವನ್ನು ಅಭಿವೃದ್ಧಿಪಡಿಸಲು ಅನೇಕ ಶಿಫಾರಸ್ಸುಗಳನ್ನು ಮಾಡಿದ್ದವು. 1952–53ರ ಮಾಧ್ಯಮಿಕ ಶಿಕ್ಷಣ ಆಯೋಗವು ಮಾಧ್ಯಮಿಕ ಹಂತದ ಶಿಕ್ಷಣವನ್ನೇ ಕೇಂದ್ರೀಕರಿಸಿ ಬಹುಪಯೋಗಿ ಶಾಲೆಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿ, 11 ವರ್ಷಗಳ ಶಾಲಾ ಅವಧಿಯನ್ನು ನಿಗದಿ ಪಡಿಸಿತ್ತು. 1964–65ರ ಶಿಕ್ಷಣ ಆಯೋಗ ಇನ್ನೂ ಸಮಗ್ರ ಅಧ್ಯಯನ ಮಾಡುವ ಮೂಲಕ ಇಡೀ ಶಿಕ್ಷಣ ಕ್ಷೇತ್ರವನ್ನು ರಾಷ್ಟ್ರೀಯ ಅಭಿವೃದ್ಧಿಯ ದೃಷ್ಟಿಕೋನದಿಂದ ಸಮಗ್ರವಾಗಿ ಪರಿಶೀಲಿಸಿತ್ತು. 10+2+3 ಮಾದರಿ ಶಿಕ್ಷಣವನ್ನು ಶಿಫಾರಸ್ಸು ಮಾಡಿದ ಈ ಆಯೋಗದ ಅಭಿಪ್ರಾಯವನ್ನು ಅನುಮೋದಿಸಿದ ಸಂಸತ್ತು 1968ರಲ್ಲಿ ಪ್ರಪ್ರಥಮ ರಾಷ್ಟ್ರೀಯ ಶಿಕ್ಷಣನೀತಿಯನ್ನು ಜಾರಿಗೊಳಿಸಿತ್ತು. (ಕೋಷ್ಟಕ –1)

Digitised by Bharatavani, CIIL

ಕೋಷ್ಟಕ – 1
ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಮಹತ್ವದ ಹೆಜೆಗಳು

| ಸ್ವಾತಂತ್ರ್ಯಪೂರ್ವ ಅವಧಿ | ಸ್ವಾತಂತ್ರ್ಯೋತ್ತರ ಅವಧಿ |
|---|---|
| 1870 – ಕಡ್ಡಾಯ ಶಿಕ್ಷಣ ಬ್ರಿಟನ್ನಿನಲ್ಲಿ ಜಾರಿಗೊಳಿಸಿದ ಕಾಯ್ದೆ | 1950–ಸಂವಿಧಾನ ಅನುಚ್ಛೇದ 45 ನಿರ್ದೇಶಕ ತತ್ವಗಳು ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ |
| 1882–ಭಾರತೀಯ ಶಿಕ್ಷಣ ಸಮಿತಿ– ಕಡ್ಡಾಯ ಶಿಕ್ಷಣಕ್ಕಾಗಿ ಭಾರತದ ನಾಯಕರ ಆಗ್ರಹ | 1990–ರಾಮಮೂರ್ತಿ ಸಮಿತಿ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಬಲವಾದ ಶಿಫಾರಸು |
| 1893–ಇಂಪೀರಿಯಲ್ ಶಾಸನ ಸಭೆಯಲ್ಲಿ ಜಿ.ಕೆ. ಗೋಖಲೆಯವರು ಕಡ್ಡಾಯ ಶಿಕ್ಷಣಕ್ಕಾಗಿ ಆಗ್ರಹಿಸುತ್ತಾರೆ. | 1992 – ಭಾರತ ಸಂಯುಕ್ತ ರಾಷ್ಟ್ರದ ಮಕ್ಕಳ ಹಕ್ಕುಗಳ ಒಡಂಬಡಿಕೆಗಳ ಸಹಿ ಹಾಕುವ ಮೂಲಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡಲು ಬದ್ಧತೆ ಪ್ರದರ್ಶಿಸುತ್ತದೆ. |
| 1906 –ಇಂಪೀರಿಯಲ್ ಶಾಸನ ಸಭೆಯಲ್ಲಿ ಜಿ.ಕೆ. ಗೋಖಲೆಯವರು ಕಡ್ಡಾಯ ಶಿಕ್ಷಣಕ್ಕಾಗಿ ಆಗ್ರಹಿಸುತ್ತಾರೆ. | 1995 ಉನ್ನಿ ಕೃಷ್ಣನ್ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಮಾನ್ಯ ಮಾಡುತ್ತದೆ. |
| 1911 – ಗೋಖಲೆ ಅವರ ಮಸೂದೆ ವಿಫಲವಾಗುತ್ತದೆ. | 1997 – ಸೈಕಿಯಾ ಸಮಿತಿ ಸಂವಿಧಾನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸುವಂತೆ ಶಿಫಾರಸ್ಸು ಮಾಡುತ್ತದೆ. |
| 1917–ವಲ್ಲಭಾಯಿ ಪಟೇಲ್ ಮಸೂದೆಯನ್ನು ಅಂಗೀಕರಿಸುವುದರಲ್ಲಿ ಸಫಲರಾಗುತ್ತಾರೆ. | 2001– ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸುವ ನಿಟ್ಟಿನಲ್ಲಿ ಸಂವಿಧಾನದ 93ನೆಯ ತಿದ್ದುಪಡಿ ಅನುಮೋದನೆ. |
| 1918 –30 ಭಾರತದಲ್ಲಿನ ಪ್ರತಿಯೊಂದು ಪ್ರಾಂತ್ಯವೂ ಆಡಳಿತಾತ್ಮಕವಾಗಿ ಕಡ್ಡಾಯ ಶಿಕ್ಷಣ ಕಾಯ್ದೆಯನ್ನು ಜಾರಿಗೊಳಿಸುತ್ತವೆ. | 2002–93ನೆಯ ತಿದ್ದುಪಡಿ ಅಂಗೀಕಾರ. ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕು ಎಂದು ಮಾನ್ಯತೆ |
| 1947– ಖೇರ್ ಸಮಿತಿ ಸ್ಥಾಪನೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣನೀತಿಯ ರಚನೆಗೆ ಆಗ್ರಹ. | |

**ಪ್ರಸ್ತುತ ಸ್ಥಿತಿ (1986ರ ನಂತರ)**

1986ರಲ್ಲಿ ರೂಪಿಸಲಾದ ರಾಷ್ಟ್ರೀಯ ಶಿಕ್ಷಣನೀತಿಯು 1968ರ ಶಿಕ್ಷಣನೀತಿಯ ಶಿಫಾರಸ್ಸುಗಳನ್ನೇ ಮತ್ತಷ್ಟು ದೃಢಗೊಳಿಸಿತ್ತು.1986ರ ಶಿಕ್ಷಣನೀತಿಯನ್ನು 1992ರಲ್ಲಿ ಕಾರ್ಯಯೋಜನೆಯ ಮೂಲಕ ಪರಾಮರ್ಶಿಸಲಾಯಿತು. ರಾಷ್ಟ್ರೀಯ ಮತ್ತು ರಾಜ್ಯಗಳ ಪ್ರತಿನಿಧಿಗಳ ಸಲಹೆ ಮತ್ತು ಅಭಿಪ್ರಾಯಗಳನ್ನಾಧರಿಸಿ ಈ ಕಾರ್ಯಯೋಜನೆಯನ್ನು ರೂಪಿಸಲಾಗಿತ್ತು. ಈ ಶಿಫಾರಸ್ಸುಗಳನ್ನು ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ ಅನುಮೋದಿಸಿತ್ತು. ರಾಷ್ಟ್ರೀಯ ಶಿಕ್ಷಣನೀತಿ ಮತ್ತು ಕಾರ್ಯಯೋಜನೆಗಳು ಶೈಕ್ಷಣಿಕ ನೀತಿಗಳ ಅನುಷ್ಠಾನದಲ್ಲಿ ಮಹತ್ವದ ಮಾರ್ಗದರ್ಶನವನ್ನು ಒದಗಿಸಿವೆ.

ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರ ಎದುರಿಸುತ್ತಿರುವ ಪ್ರಮುಖ ಕಾಳಜಿಗಳಿಗೆ ಪೂರಕವಾಗಿ ಪ್ರತಿಕ್ರಿಯಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕಾರ್ಯಯೋಜನೆಗಳು ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ನೆರವಾಗಿವೆ. ಮೊದಲನೆಯದಾಗಿ ವಿದ್ಯಾರ್ಥಿಗಳ ದಾಖಲಾತಿಗಿಂತಲೂ ಅವರನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಲಾಯಿತು. ಎರಡನೆಯದಾಗಿ ಸಾಮುದಾಯಿಕ ಪಾಲ್ಗೊಳ್ಳುವಿಕೆ ಇರುವಂತಹ ವಿಕೇಂದ್ರೀಕೃತ ಭಾಗವಹಿಸುವಿಕೆಯ ಯೋಜನೆ ಮೂಲಕ ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಯತ್ನಿಸಲಾಯಿತು. ಮೂರನೆಯದಾಗಿ ಶಾಲಾ ಪರಿಸರದ ಅಭಿವೃದ್ಧಿ, ಉತ್ತಮ ಶಾಲಾ ಕಟ್ಟಡ ವ್ಯವಸ್ಥೆ, ಉತ್ತಮ ಗುಣಮಟ್ಟದ ಕಲಿಕಾ ಬೋಧನ ಸಲಕರಣೆಗಳ ಲಭ್ಯತೆ ಮುಂತಾದ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಮಹತ್ವ ನೀಡಲಾಯಿತು. ನಾಲ್ಕನೆಯದಾಗಿ ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ, ಬೋಧನ–ಕಲಿಕಾ ಪ್ರಕ್ರಿಯೆಗಳ ಮೂಲಕ ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟವನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಯಿತು. ಐದನೆಯದಾಗಿ ಶಿಕ್ಷಕರಿಗೆ ಸೇವೆಗೆ ಸೇರುವ ಮುನ್ನ ಹಾಗೂ ನೌಕರಿಯ ಕಾಲಾವಧಿಯಲ್ಲಿ ಸೂಕ್ತ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಯಿತು. ಕೊನೆಯದಾಗಿ ದಾಖಲಾತಿಯಲ್ಲಿ ಸಮಾನತೆಯನ್ನು ಸಾಧಿಸುವುದು ಹಾಗೂ ಗುಣಮಟ್ಟದ ಶಿಕ್ಷಣ ನೀಡುವುದನ್ನು ಪ್ರಧಾನ ಕಾಳಜಿಯಾಗಿ ಪರಿಗಣಿಸಲಾಯಿತು. ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕಾರ್ಯಯೋಜನೆ ನೀತಿಗಳು ಅವಕಾಶವಂಚಿತ, ಉಪೇಕ್ಷಿತ ಹಾಗೂ ತಲುಪಲಾಗದ ಜನಸಮುದಾಯಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಹೆಚ್ಚಿನ

Digitised by Bharatavani, CIIL

ಆದ್ಯತೆ ನೀಡಲಾಯಿತು. ಈ ಎಲ್ಲಾ ಗುರಿಗಳನ್ನು ನಮ್ಯತೆಯಿಂದ ಮಾಡಿದ ಸೂಕ್ತ ತಂತ್ರಗಳ ಮೂಲಕ ಸಾಧಿಸಬೇಕಾಯಿತು.

ರಾಷ್ಟ್ರೀಯ ಮಹತ್ವದ ಬೆಳವಣಿಗೆಗಳನ್ನು ಹೊರತುಪಡಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಭವಿಸಿದ ಕೆಲವು ಘಟನೆಗಳು ಭಾರತದ ಶೈಕ್ಷಣಿಕ ಕ್ಷೇತ್ರಕ್ಕೆ ವ್ಯಾಪಕವಾದ ದೃಷ್ಟಿಕೋನವನ್ನು ನೀಡುವುದರಲ್ಲಿ ಯಶಸ್ವಿಯಾಗಿದ್ದವು. ಭಾರತದ ಶೈಕ್ಷಣಿಕ ನೀತಿಗಳ ಮೇಲೆ ಪ್ರಭಾವ ಬೀರಿರುವ ಅಂತಾರಾಷ್ಟ್ರೀಯ ಪ್ರಯತ್ನಗಳೆಂದರೆ, ವಿಶ್ವದ ಎಲ್ಲ ಮಕ್ಕಳಿಗೂ ಶಿಕ್ಷಣ ಒದಗಿಸಲು ರೂಪಿಸಲಾದ 'ಸರ್ವರಿಗೂ ಶಿಕ್ಷಣ' ನೀತಿ. ಈ ನಿಟ್ಟಿನಲ್ಲಿ ಕೆಲವು ಪ್ರಯತ್ನಗಳನ್ನು ಉಲ್ಲೇಖಿಸುವುದು ಸೂಕ್ತ :

'ಸರ್ವರಿಗೂ ಶಿಕ್ಷಣ'ಕ್ಕಾಗಿ ಜಾಗತಿಕ ಸಮ್ಮೇಳನ (ಜೊಂಟಿಯನ್)

'ಸರ್ವರಿಗೂ ಶಿಕ್ಷಣ'ಕ್ಕಾಗಿ ಜಾಗತಿಕ ಸಮ್ಮೇಳನವನ್ನು ಥಾಯಿಲೆಂಡಿನ ಜೊಂಟಿಯನ್‌ನಲ್ಲಿ 1990ರಲ್ಲಿ ಯೂನಿಸೆಫ್, ಯುಎನ್‌ಡಿಪಿ ಮತ್ತು ವಿಶ್ವಬ್ಯಾಂಕುಗಳ ಜಂಟಿ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಈ ಸಮಾವೇಶದಲ್ಲಿ ಭಾರತವನ್ನೂ ಸೇರಿಸಿದಂತೆ 155 ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದವು. ಈ ಸಮ್ಮೇಳನ 2000ದ ವೇಳೆಗೆ ಸರ್ವರಿಗೂ ಮೂಲಭೂತ ಶಿಕ್ಷಣ ಒದಗಿಸುವ ಸಮಗ್ರ ಕಲ್ಪನೆಯನ್ನು ಸಲಹೆ ಮಾಡಿತು. ಆದರೆ ನಿಗದಿತ ವೇಳೆಯಲ್ಲಿ ಸರ್ವರಿಗೂ ಶಿಕ್ಷಣದ ಗುರಿಯನ್ನು ಸಾಧನೆ ಮಾಡಲಾಗದಿದ್ದರೂ ಜೊಂಟಿಯನ್ ಘೋಷಣೆಯ ಪರಿಣಾಮವಾಗಿ ಪ್ರಾಥಮಿಕ ಶಿಕ್ಷಣವನ್ನು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎನ್ನುವ ಧೋರಣೆಗೆ ಪ್ರಧಾನ ಆದ್ಯತೆ ನೀಡುವುದರಲ್ಲಿ ಸಫಲವಾಗಿತ್ತು.

ಕಲಿಕೆ–ಆಂತರಿಕ ಸಂಪತ್ತು ('ಇಪ್ಪತ್ತೊಂದನೆಯ ಶತಮಾನಕ್ಕೆ ಶಿಕ್ಷಣ' ಈ ಕುರಿತು ಯುನೆಸ್ಕೋಗೆ ನೀಡಿದ ವರದಿ)

ಶಿಕ್ಷಣದ ಎಲ್ಲ ಮಜಲುಗಳ ಮತ್ತು ಕ್ಷೇತ್ರಗಳ ಮೇಲೆ ಅಗಾಧ ಪ್ರಭಾವ ಬೀರಿದ ವರದಿ ಎಂದರೆ ಡೀಲರ್ಸ್ ಆಯೋಗದ ವರದಿ. ಶಿಕ್ಷಣಕ್ಕೆ ಜಾಗತಿಕ ಮತ್ತು ಸಾರ್ವತ್ರಿಕ ದೃಷ್ಟಿಕೋನವನ್ನು ನೀಡಿರುವ ಈ ವರದಿಯು ಶೈಕ್ಷಣಿಕ ಪುನರ್ನಿರ್ಮಾಣದಲ್ಲಿ ಸಾಮುದಾಯಿಕ ಪಾಲ್ಗೊಳ್ಳುವಿಕೆಯನ್ನು ಗಣನೀಯವಾಗಿ ಹೆಚ್ಚಿಸಲು ಪ್ರಯತ್ನಿಸಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಿಸಲು ಆದ್ಯತೆ ನೀಡುವ ಮೂಲಕ ಈ ವರದಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಮೇಲೆ ಗಾಢವಾದ ಪ್ರಭಾವ ಬೀರಿದೆ. ಋಣಾತ್ಮಕ ಹಾಗೂ ಜ್ಞಾನಾಧಾರಿತ ಶಿಕ್ಷಣದಿಂದ ಕೌಶಲ್ಯಾಭಿವೃದ್ಧಿ ಶಿಕ್ಷಣದತ್ತ ಮುನ್ನಡೆಯುವಲ್ಲಿ ಈ ಬದಲಾವಣೆ ಸಾಕಷ್ಟು ಪ್ರಭಾವ ಬೀರಿದೆ. ತಮ್ಮ ದಿನನಿತ್ಯ ಜೀವನದ ಸವಾಲುಗಳನ್ನು ಎದುರಿಸಲು ವ್ಯಕ್ತಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಈ ವರದಿ ನಾಲ್ಕು ಆಧಾರ ಸ್ತಂಭಗಳನ್ನು ಸೂಚಿಸಿದೆ. ಅವುಗಳೆಂದರೆ : (i) ಜ್ಞಾನಕ್ಕಾಗಿ ಕಲಿಕೆ, (ii) ಕಾರ್ಯಗತಗೊಳಿಸಲು ಕಲಿಕೆ, (iii) ಸಹಜೀವನ ನಡೆಸಲು ಕಲಿಕೆ ಮತ್ತು (iv) ಜೀವಿಸಲು ಕಲಿಕೆ.

**ಸರ್ವರಿಗೂ ಶಿಕ್ಷಣ:** ಕಾರ್ಯಾಚರಣೆಗಾಗಿ ದಕರ್ ಸೂತ್ರಗಳು

ಸರ್ವರಿಗೂ ಶಿಕ್ಷಣಕ್ಕಾಗಿ ವಿಶ್ವ ಶಿಕ್ಷಣ ವೇದಿಕೆ ಏಪ್ರಿಲ್ 26–28, 2008ರಂದು ಸೆನೆಗಲ್‌ನ ಡಾಕರ್‌ನಲ್ಲಿ ಸಮಾವೇಶಗೊಂಡಿತ್ತು. ಈ ಸಮಾವೇಶದಲ್ಲಿ ಪ್ರತಿಯೊಂದು ದೇಶವೂ ಸರ್ವರಿಗೂ ಶಿಕ್ಷಣದ ಧ್ಯೇಯವನ್ನು ಸಾಧಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮಕೈಗೊಳ್ಳಲು ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಿತ್ತು. ಸರ್ವರಿಗೂ ಶಿಕ್ಷಣ ಸಾಧಿಸಲು ಡಾಕರ್ ವರದಿ ಆರು ಸೂತ್ರಗಳನ್ನು ಶಿಫಾರಸು ಮಾಡಿತ್ತು:

1. ಆರಂಭಿಕ ಸಂರಕ್ಷಣೆಗೆ ಮತ್ತು ಶಿಕ್ಷಣವನ್ನು ವಿಶೇಷವಾಗಿ ಅವಕಾಶವಂಚಿತ ಮತ್ತು ದುರ್ಬಲ ವರ್ಗಗಳಿಗೆ ವಿಸ್ತರಿಸಿ ಸುಧಾರಣೆಗೊಳಪಡಿಸುವುದು.
2. 2015ರ ವೇಳೆಗೆ ಎಲ್ಲ ಮಕ್ಕಳಿಗೂ, ವಿಶೇಷವಾಗಿ ಹೆಣ್ಣು ಮಕ್ಕಳು, ಕಠಿಣ ಸನ್ನಿವೇಶ ಎದುರಿಸುತ್ತಿರುವವರು ಹಾಗೂ ಜನಾಂಗೀಯ ಅಲ್ಪಸಂಖ್ಯಾತರಿಗೆ ಶಿಕ್ಷಣ ಕ್ಷೇತ್ರದಲ್ಲಿ ಮುಕ್ತ ಹಾಗೂ ಸಂಪೂರ್ಣ ಪ್ರವೇಶಾವಕಾಶ ನೀಡುವುದು. ಉತ್ತಮ ಗುಣಮಟ್ಟದ ಉಚಿತ ಕಡ್ಡಾಯ ಶಿಕ್ಷಣ ಒದಗಿಸುವುದು.
3. ಎಲ್ಲಾ ಯುವ ಹಾಗೂ ವಯಸ್ಕ ಶಿಕ್ಷಣಾರ್ಥಿಗಳಿಗೆ ಸೂಕ್ತ ಕೌಶಲ್ಯಾಭಿವೃದ್ಧಿ ಹಾಗೂ ಸಮಾನ ಪ್ರವೇಶಾವಕಾಶಗಳನ್ನು ಒದಗಿಸುವ ಮೂಲಕ ಎಲ್ಲ ರೀತಿಯ ಕಲಿಕಾ ಪರಿಕರಗಳನ್ನು ಒದಗಿಸುವುದು.
4. 2015ರ ವೇಳೆಗೆ ವಯಸ್ಕ ಶಿಕ್ಷಣದಲ್ಲಿ, ವಿಶೇಷವಾಗಿ ಮಹಿಳೆಯರಲ್ಲಿ ಶೇ. 50ರಷ್ಟು ಪ್ರಗತಿ ಸಾಧಿಸುವುದು. ಮೂಲಭೂತ ನಿರಂತರ ಶಿಕ್ಷಣದಲ್ಲಿ ವಯಸ್ಕರೆಲ್ಲರಿಗೂ ಸಮಾನ ಪ್ರವೇಶಾವಕಾಶ ಒದಗಿಸುವುದು.
5. 2005ರ ವೇಳೆಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕ್ಷೇತ್ರದಲ್ಲಿ ಲಿಂಗ ತಾರತಮ್ಯಗಳನ್ನು ಹೋಗಲಾಡಿಸುವುದು. 2015ರ ವೇಳೆಗೆ ಶಿಕ್ಷಣದಲ್ಲಿ ಲಿಂಗ ಸಮಾನತೆ ಸಾಧಿಸುವುದು. ಉತ್ತಮ ಗುಣಮಟ್ಟದ ಮೂಲಭೂತ ಶಿಕ್ಷಣದಲ್ಲಿ ಬಾಲಕಿಯರಿಗೆ ಮುಕ್ತ, ಸಂಪೂರ್ಣ ಪ್ರವೇಶಾವಕಾಶ ಒದಗಿಸುವುದು.
6. ಶಿಕ್ಷಣದ ಎಲ್ಲಾ ಮುಖಗಳಲ್ಲಿಯೂ ಗುಣಮಟ್ಟ ಸುಧಾರಿಸುವುದು ಉತ್ತಮ ಪ್ರಮಾಣದ ಶಿಕ್ಷಣ ನೀಡುವ ಮೂಲಕ ಸಾಕ್ಷರತೆ, ಜೀವನ ಕೌಶಲ್ಯಗಳಲ್ಲಿ ಗುರ್ತಿಸಬಹುದಾದ ಮತ್ತು ಅಳತೆ ಮಾಡಬಹುದಾದ ಕಲಿಕಾ ಫಲಿತಗಳನ್ನು ಎಲ್ಲರೂ ಸಾಧಿಸುವಂತೆ ಮಾಡುವ ಮೂಲಕ ಎಲ್ಲರಲ್ಲೂ ಪ್ರಾವೀಣ್ಯತೆಯನ್ನು ಖಚಿತಗೊಳಿಸುವುದು.

ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಯನ್ನು ಸಮಗ್ರವಾಗಿ ಗ್ರಹಿಸಲು ಪ್ರಾಥಮಿಕ ಶಿಕ್ಷಣದ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸುವ ಮೂಲಭೂತ ಸೂಚಕಗಳನ್ನು ವಿಶ್ಲೇಷಿಸುವುದು ಅತ್ಯಗತ್ಯ.

Digitised by Bharatavani, CIIL

**ಪ್ರವೇಶಾವಕಾಶ:** ಎಲ್ಲ ಮಕ್ಕಳಿಗೂ ಶಾಲಾ ಪ್ರವೇಶಾತಿಗೆ ಅನುಕೂಲಕರವಾದ ಸನ್ನಿವೇಶ ಸೃಷ್ಟಿಸುವುದು ಮತ್ತು ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಪೂರೈಸಲು ನೆರವಾಗುವುದು ಭಾರತದ ಶೈಕ್ಷಣಿಕ ನೀತಿಯ ಪ್ರಮುಖ ಧ್ಯೇಯವಾಗಿದೆ. ಆದರೆ ಈ ನೀತಿಯ ಅನುಷ್ಠಾನ ಎಷ್ಟು ಶೀಘ್ರವಾಗಿ ನೆರವೇರುತ್ತದೆ ಎಂಬುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾಥಮಿಕ ಶಿಕ್ಷಣದ ಅಗತ್ಯ ಪರಿಕರಗಳನ್ನು ಎಷ್ಟು ತ್ವರಿತಗತಿಯಲ್ಲಿ ಪೂರೈಸುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ಶೈಕ್ಷಣಿಕ ರಂಗದ ಬೇಡಿಕೆ ಮತ್ತು ಸರಬರಾಜುಗಳನ್ನು ಸುಧಾರಿಸುವ ಬಗೆಯನ್ನು ಚಿತ್ರ 3ರಲ್ಲಿ ತೋರಿಸಲಾಗಿದೆ.

ಶಾಲಾ ಸೌಲಭ್ಯಗಳ ಲಭ್ಯತೆಯೇ ಸುಧಾರಿತ ಶಾಲಾ ಪ್ರವೇಶಾತಿಯ ಮಾಪಕವಾಗಿರುತ್ತದೆ. ನಿಯಮಗಳನುಸಾರ ಕುಟುಂಬಗಳ ಒಂದು ಸಮೂಹ ಅಥವಾ ಒಂದು ನಿರ್ದಿಷ್ಟ ಕಾಲೋನಿಯ ಜನಸಂಖ್ಯೆ 300ಕ್ಕೂ ಹೆಚ್ಚಾಗಿದ್ದಲ್ಲಿ ಅಲ್ಲಿ ಒಂದು ಕಿಲೋಮೀಟರ್ ದೂರದೊಳಗೆ ಒಂದು ಪ್ರಾಥಮಿಕ ಶಾಲೆ ಇರಬೇಕು ಎಂಬ ನಿಯಮವಿದೆ. ಉನ್ನತ ಪ್ರಾಥಮಿಕ ಶಾಲೆಗೆ ಈ 500 ಜನ ಮತ್ತು 3 ಕಿಲೋಮೀಟರ್ ಅಂತರವನ್ನು ನಿಗದಿಪಡಿಸಲಾಗಿದೆ. ಭಾರತದಲ್ಲಿ 1999–2000ದಲ್ಲಿ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಅಂಕಿ ಅಂಶಗಳನ್ನು ಕೋಷ್ಟಕ 2ರಲ್ಲಿ ನೀಡಲಾಗಿದೆ:

**ಕೋಷ್ಟಕ 2**

ಭಾರತದಲ್ಲಿರುವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ

| ವರ್ಷ | ಪ್ರಾಥಮಿಕ ಶಾಲೆಗಳು | ಹಿರಿಯ ಪ್ರಾಥಮಿಕ ಶಾಲೆಗಳು | ಪ್ರಾಥಮಿಕ–ಹಿರಿಯ ಪ್ರಾಥಮಿಕ ಶಾಲೆಗಳ ಅನುಪಾತ |
|---|---|---|---|
| 1950–51 | 2,09,670 | 13,596 | 15.4 |
| 1960–61 | 3,30,399 | 49,663 | 6.7 |
| 1970–71 | 4,08,378 | 90,621 | 4.5 |
| 1980–81 | 4,94,503 | 1,18,555 | 4.2 |
| 1990–91 | 5,60,935 | 1,51,456 | 3.7 |
| 1995–96 | 5,90,421 | 1,71,216 | 3.4 |
| 1998–99* | 6,26,777 | 1,90,166 | 3.3 |
| 1999–2000 | 6,41,695 | 1,98,004 | 3.2 |

* ಆಧಾರ ಆಯ್ದ ಶೈಕ್ಷಣಿಕ ಅಂಕಿ ಅಂಶಗಳು 1999–2000 ಎಂ.ಹೆಚ್.ಆರ್.ಡಿ. ಭಾರತ ಸರ್ಕಾರ 2001.

ಭಾರತ ಸರ್ಕಾರ ಕಪ್ಪು ಹಲಗೆ ಕಾರ್ಯಕ್ರಮ (Operation Black Board) ಎಂಬ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯನ್ವಯ ಶಾಲಾ ಕಟ್ಟಡಗಳು, ಕ್ಲಾಸ್ ರೂಮುಗಳು, ಅಧಿಕ ಶಿಕ್ಷಕರು, ಕಲಿಕಾ ಪರಿಕರಗಳು ಮುಂತಾದ ಭೌತಿಕ ಮೂಲಭೂತ ಸೌಕರ್ಯಗಳನ್ನು ಶಾಲೆಗಳಿಗೆ ಒದಗಿಸುವುದು ಮುಖ್ಯ ಧ್ಯೇಯವಾಗಿರುತ್ತದೆ. ಈ ಯೋಜನೆಯ ಮೂರು ಪ್ರಮುಖ ಅಂಶಗಳೆಂದರೆ:–

1. ಪ್ರತಿಯೊಂದು ಶಾಲೆಗಳಿಗೆ ವಿಶಾಲವಾದ, ಗಾಳಿ ಬೆಳಕು ಸರಾಗವಾಗಿ ಬರುವ ಎರಡು ಕೊಠಡಿಗಳಿರಬೇಕು. ಒಂದು ಪಡಸಾಲೆ ಮತ್ತು ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಇರಬೇಕು.
2. ಕನಿಷ್ಠ ಇಬ್ಬರು ಶಿಕ್ಷಕರು ಇರಬೇಕು. ಅವರಲ್ಲಿ ಒಬ್ಬ ಮಹಿಳಾ ಶಿಕ್ಷಕಿ ಇರಬೇಕು.
3. ಅಗತ್ಯ ಕಲಿಕಾ ಪರಿಕರಗಳಾದ ಕಲಿಕಾ ಸಾಮಗ್ರಿಗಳು, ಕಪ್ಪು ಹಲಗೆ, ಭೂಪಟಗಳು, ಚಾರ್ಟುಗಳು, ಆಟಿಕೆಗಳು ಮತ್ತು ಕಾರ್ಯ ಕುಶಲತೆಯನ್ನು ಹೆಚ್ಚಿಸುವ ಸಾಮಗ್ರಿಗಳನ್ನು ಶಾಲೆಗಳಿಗೆ ಒದಗಿಸಬೇಕು.

1987ರಲ್ಲಿ ಅಸ್ತವ್ಯಸ್ಥವಾಗಿ ಜಾರಿಗೊಳಿಸಲ್ಪಟ್ಟರೂ ಕಪ್ಪುಹಲಗೆ ಕಾರ್ಯಕ್ರಮ ಯೋಜನೆಯ ಪರಿಣಾಮವಾಗಿ 1,03,364 ಶಿಕ್ಷಕರನ್ನು ನೇಮಿಸಲಾಗಿದೆ. ಇವರಲ್ಲಿ ಶೇ. 48ರಷ್ಟು ಮಹಿಳಾ ಶಿಕ್ಷಕಿಯರು. ಇದೇ ಯೋಜನೆಯಡಿಯಲ್ಲಿ 1,15,091 ಅಧಿಕ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿತ್ತು. ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿತ್ತು. ಶಾಲಾ ಪ್ರವೇಶಾತಿಯಲ್ಲೂ ಗಣನೀಯ ಏರಿಕೆ ಕಂಡುಬಂದಿತ್ತು.

ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಒಟ್ಟು ದಾಖಲಾತಿ ಅನುಪಾತವು 1950–51 ರಿಂದ 1999–2000ದ ಅವಧಿಯಲ್ಲಿ ಗಣನೀಯ ಏರಿಕೆ ಕಂಡಿದೆ. ಬಾಲಕ ಮತ್ತು ಬಾಲಕಿಯರ ದಾಖಲಾತಿಯಲ್ಲಿದ್ದ ವ್ಯತ್ಯಾಸವೂ ಗಣನೀಯವಾಗಿ ಕಡಿಮೆಯಾಗಿದೆ. ಕೋಷ್ಟಕ 3ರಲ್ಲಿ ಈ ಮಾಹಿತಿ ನೀಡಲಾಗಿದೆ.

Digitised by Bharatavani, CIIL

**ಕೋಷ್ಟಕ 3**

ಒಟ್ಟು ದಾಖಲಾತಿ ಅನುಪಾತ–ಅಖಿಲ ಭಾರತ ಮಟ್ಟದಲ್ಲಿ 1950–51ರಿಂದ 1999–2000

| ವರ್ಷ | ಪ್ರಾಥಮಿಕ ಹಂತ | | | ಹಿರಿಯ ಪ್ರಾಥಮಿಕ ಹಂತ | | |
|---|---|---|---|---|---|---|
| | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| 1950–51 | 60.6 | 24.8 | 42.6 | 20.6 | 4.6 | 12.7 |
| 1960–61 | 82.6 | 41.4 | 62.4 | 33.2 | 11.3 | 22.5 |
| 1970–71 | 95.5 | 60.5 | 78.6 | 46.5 | 20.8 | 33.4 |
| 1980–81 | 95.8 | 64.1 | 78.6 | 54.3 | 28.6 | 41.9 |
| 1990–91* | 98.1 | 75.9 | 80.5 | 79.8 | 54.6 | 62.4 |
| 1999–2000** | 104.1 | 85.2 | 94.9 | 67.2 | 49.7 | 58.8 |

* ಪ್ರಸ್ತುತ ಮಕ್ಕಳ ಜನಸಂಖ್ಯೆಯನ್ನು ಆಧರಿಸಿ ಮಾಹಿತಿ

* ತಾತ್ಕಾಲಿಕ

* ಆಧಾರ ಸರ್ವರಿಗಾಗಿ ಶಿಕ್ಷಣ ಡಾಕರ್ ಸಮಿತಿಯ ನಂತರದ ಬೆಳವಣಿಗೆಗಳು ಇಂಡಿಯ ದೇಶದ ವರದಿ 2001 ಎಂಹೆಚ್ಆರ್‌ಡಿ ಭಾರತ ಸರ್ಕಾರ

1 ರಿಂದ 5 ಮತ್ತು 5 ರಿಂದ 7ನೆಯ ತರಗತಿಯವರೆಗಿನ ದಾಖಲಾತಿಯಲ್ಲಿ ಕಡಿಮೆ ವಯೋಮಿತಿ ಮತ್ತು ವಯೋಮಿತಿ ಮೀರಿದ ಮಕ್ಕಳನ್ನು ಪರಿಗಣಿಸಿದೆ ದಾಖಲಾಗಿರುವ ನಿವ್ವಳ ದಾಖಲಾತಿ ಅನುಪಾತವು ಒಟ್ಟು ದಾಖಲಾತಿ ಅನುಪಾತಕ್ಕಿಂತಲೂ ಕಡಿಮೆ ಇದೆ. 1997–78 ರಲ್ಲಿ ಪ್ರಾಥಮಿಕ ಹಂತದಲ್ಲಿ ಬಾಲಕರ ನಿವ್ವಳ ದಾಖಲಾತಿ ಅನುಪಾತ ಶೇ. 78ರಷ್ಟಿದ್ದರೆ ಬಾಲಕಿಯರ ಅನುಪಾತ ಶೇ. 64ರಷ್ಟಿತ್ತು. ಒಟ್ಟಾರೆ ನಿವ್ವಳ ಅನುಪಾತ ಶೇ. 71ರಷ್ಟಿತ್ತು. ಅಂದರೆ 6ರಿಂದ 11 ವಯೋಮಿತಿಯಲ್ಲಿನ ಶೇ. 29ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದರು. ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯಗಳಲ್ಲಿ ನಿವ್ವಳ ದಾಖಲಾತಿ ಅನುಪಾತದ ಪ್ರಮಾಣ ಶೇ. 71ಕ್ಕಿಂತಲೂ ಕಡಿಮೆ ಇದೆ.

1994ರಲ್ಲಿ ಆಯ್ದ ಕೆಲವು ರಾಜ್ಯಗಳಲ್ಲಿ ವ್ಯಾಪಕವಾದ ಪ್ರಮುಖ ಯೋಜನೆಯೊಂದನ್ನು ಜಾರಿಗೊಳಿಸಲಾಯಿತು. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (District Primary Education Programme DPEP)ಯಡಿಯಲ್ಲಿ ವಿಕೇಂದ್ರೀಕರಣದ ಮೂಲಕ ಶಿಕ್ಷಣ ಕ್ಷೇತ್ರವನ್ನು ಪುನರ್ನಿರ್ಮಾಣ ಮಾಡುವ ಯೋಜನಾ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು. ಪ್ರತ್ಯೇಕ ಜಿಲ್ಲಾವಾರು ಯೋಜನೆಗಳಿಗೆ ಬದಲು ಸಮಗ್ರ ಯೋಜನೆಯನ್ನೊಳಗೊಂಡ ಧೋರಣೆಯನ್ನು ಈ ಯೋಜನೆ ಅನುಸರಿಸಿತ್ತು. (ಸರ್ವರಿಗೂ ಶಿಕ್ಷಣ ಭಾರತದ ಸನ್ನಿವೇಶ 1993)

ಡಿಪಿಇಪಿ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣದ ಗುಣಮಟ್ಟದ ಹೆಚ್ಚಳ, ಹೆಚ್ಚಿನ ದಾಖಲಾತಿ ಮತ್ತು ಪ್ರವೇಶಾವಕಾಶಗಳನ್ನು ಗುರಿಯಾಗಿಟ್ಟುಕೊಂಡಿತ್ತು. ಈ ಯೋಜನೆಯಲ್ಲಿ ಜಿಲ್ಲೆಯನ್ನು ಒಂದು ನಿರ್ದಿಷ್ಟ ಘಟಕವನ್ನಾಗಿ ಪರಿಗಣಿಸಲಾಗಿತ್ತು. ಆಯ್ಕೆ ಮಾಡಲಾದ ಜಿಲ್ಲೆಗಳೆಂದರೆ :

1. ಮಹಿಳಾ ಸಾಕ್ಷರತೆಯಲ್ಲಿ ರಾಷ್ಟ್ರೀಯ ಸರಾಸರಿಗಿಂತಲೂ ಕೆಳಗಿರುವ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳು.

2. ಸಂಪೂರ್ಣ ಸಾಕ್ಷರತಾ ಆಂದೋಲನ ಯಶಸ್ವಿಯಾಗಿರುವ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಬೇಡಿಕೆ ಇರುವ ಜಿಲ್ಲೆಗಳು (ಡಿಪಿಇಪಿ ಮಾರ್ಗದರ್ಶಕ, ಭಾರತ ಸರ್ಕಾರ 1995)

ಡಿಪಿಇಪಿ ಕಾರ್ಯಕ್ರಮದಡಿಯಲ್ಲಿ ಸ್ಥಳೀಯ ಪ್ರಾದೇಶಿಕ ಯೋಜನೆಗಳಿಗೆ ಹೆಚ್ಚು ಮಹತ್ವ ನೀಡಲಾಗಿದ್ದು ಜಿಲ್ಲಾಮಟ್ಟದ ಯೋಜನೆಗಳನ್ನು ರೂಪಿಸುವಾಗ ರಾಜ್ಯ ಪ್ರಾಯೋಜನೆಯ ದಾಖಲೆಯನ್ನು ಅವಲಂಬಿಸದೆ ಸ್ವತಂತ್ರವಾಗಿ ರೂಪಿಸಲಾಗಿತ್ತು. ಅಲ್ಲದೆ ಯೋಜನೆ ಮತ್ತು ಮೌಲ್ಯಮಾಪನದ ಹಂತದಲ್ಲಿ ಹೆಚ್ಚು ಗಂಭೀರವಾದ ಹಾಗೂ ವೃತ್ತಿಪರವಾದ ಪರಿಕರಗಳನ್ನೂ ಒದಗಿಸಲಾಗುತ್ತಿತ್ತು. ಈ ಯೋಜನೆಯ ಪ್ರಮುಖ ಧ್ಯೇಯಗಳೆಂದರೆ :

1. ಶಾಲಾ ದಾಖಲಾತಿಯಲ್ಲಿ ಇರುವ ವ್ಯತ್ಯಯಗಳನ್ನು ಹಾಗೂ ಶಾಲೆ ತ್ಯಜಿಸುವ ಪ್ರಮಾಣವನ್ನು ತಗ್ಗಿಸುವುದು ಮತ್ತು ಲಿಂಗ–ಸಾಮಾಜಿಕ ಗುಂಪುಗಳಲ್ಲಿನ ಕಲಿಕಾ ಸಾಧನೆಗಳಲ್ಲಿರುವ ವ್ಯತ್ಯಯಗಳನ್ನು ಶೇ. 5ಕ್ಕಿಂತಲೂ ಕಡಿಮೆ ಮಾಡುವುದು.
2. ಶಾಲೆಯನ್ನು ತ್ಯಜಿಸುವವರ ಸಂಖ್ಯೆಯನ್ನು ಶೇ. 10ಕ್ಕಿಂತಲೂ ಕಡಿಮೆ ಮಾಡುವುದು.

Digitised by Bharatavani, CIIL

3. ಮೂಲ ಸಾಧನ ಮಟ್ಟವನ್ನು ಶೇ. 25ರಷ್ಟು ಹೆಚ್ಚಿಸುವುದು.

4. ಔಪಚಾರಿಕ ಮತ್ತು ಪರ್ಯಾಯ ಶಿಕ್ಷಣ ವ್ಯವಸ್ಥೆಗಳ ಮೂಲಕ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶಾತಿ ದೊರೆಯುವಂತೆ ಮಾಡುವುದು (ಡಿಪಿಇಪಿ ಮಾರ್ಗದರ್ಶನಗಳು, ಭಾರತ ಸರ್ಕಾರ 1995)

ಡಿಪಿಇಪಿ ಯೋಜನೆಯು ಶಾಲಾ ಪ್ರವೇಶಾತಿಯ ಮೇಲೆ ಅಗಾಧವಾದ ಪರಿಣಾಮ ಬೀರಿದ್ದು ಸಾಮಾಜಿಕ ನ್ಯಾಯ ಮತ್ತು ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಯಶಸ್ವಿಯಾಗಿರುವುದು ವರದಿಯಾಗಿದೆ. ಒಟ್ಟು ದಾಖಲಾತಿ ಅನುಪಾತವು 1995–96ರಲ್ಲಿ ಶೇ. 84ರಷ್ಟಿದ್ದುದು 1999–2000ದ ವೇಳೆಗೆ ಶೇ. 102ರಷ್ಟಾಗಿರುವುದು ವರದಿಯಾಗಿದೆ. (ಪಾಂಡೆ 2000) ಮೂಲ ಸಾಧನೆ ಮಟ್ಟಕ್ಕೆ ಹೋಲಿಸಿದರೆ ವಿದ್ಯಾರ್ಥಿಗಳ ಕಲಿಕಾ ಸಾಧನೆಯ ಮಟ್ಟವೂ ಅಭಿವೃದ್ಧಿ ಹೊಂದಿರುವುದು ಕಂಡುಬರುತ್ತದೆ. ಆದರೆ ಯೋಜನೆಯ ಧ್ಯೇಯದ ಅನುಸಾರ ಶೇ. 25ರಷ್ಟು ಅಭಿವೃದ್ಧಿ ಕಾಣಲಾಗಿಲ್ಲ. ಆದಾಗ್ಯೂ ಶಾಲಾ ಪ್ರವೇಶಾತಿಯಲ್ಲಿನ ಹೆಚ್ಚಳ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಮತ್ತು ಬಾಲಕಿಯರಿಗೆ ಉಚಿತ ಪುಸ್ತಕ ನೀಡುವುದರ ಮೂಲಕ ದಾಖಲಾತಿ ಹೆಚ್ಚಿಸುವುದರ ಬಗ್ಗೆ ಯೋಜನೆ ಯಶಸ್ವಿಯಾಗಿದೆ ಎಂದು ಹೆಮ್ಮೆಯಿಂದ ಹೇಳಬಹುದು. ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಸೂಕ್ಷ್ಮ (Micro) ಯೋಜನೆಗಳ ಮೂಲಕ ಸ್ಥಳೀಯ ಸಮುದಾಯಗಳನ್ನು ಒಳಗೊಳ್ಳುವುದರ ಮೂಲಕ ಮಕ್ಕಳು ಶಾಲೆಗೆ ಸತತವಾಗಿ ಬರುವಂತೆ ಮಾಡಲಾಯಿತು. ಶಾಲೆಯನ್ನು ತ್ಯಜಿಸುವವರ ಸಂಖ್ಯೆ ವ್ಯರ್ಥ ವೆಚ್ಚಗಳು ಹಾಗೂ ಸ್ಥಗಿತತೆಯನ್ನು ನಿವಾರಿಸಲಾಯಿತು.

ಚಟುಚಟಿಕೆ ಆಧಾರಿತ ಮತ್ತು ಶಿಶು ಕೇಂದ್ರಿತ ತರಗತಿ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಶಾಲಾ ದಾಖಲಾತಿಯಲ್ಲಿ ಹೆಚ್ಚಳ ಕಂಡುಬಂದಿದ್ದು, ಶಾಲೆಯನ್ನು ತ್ಯಜಿಸುವವರ ಸಂಖ್ಯೆಯೂ ಇಳಿಮುಖವಾಯಿತು. ಪೂರ್ವಪ್ರಾಥಮಿಕ ಶಿಕ್ಷಣದೊಡನೆ ಸಂಪರ್ಕ ಸಾಧಿಸುವ ಮೂಲಕ ಬಾಲಕಿಯರನ್ನು ಸಣ್ಣ ಶಾಲೆಗೆ ಹೋದುವಂಥ ಮಕ್ಕಳ ಪೋಷಣೆಯ ಹೊಣೆಗಾರಿಕೆಯಿಂದ ತಪ್ಪಿಸಿ ಶಾಲೆಗಳಿಗೆ ಕರೆತರಲಾಯಿತು. ಈ ಪ್ರಯತ್ನಗಳನ್ನು ಮತ್ತು ಮಕ್ಕಳ ಅಭಿವೃದ್ಧಿ ವಿಭಾಗ ನಿರ್ವಹಿಸುವ ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆಯೊಂದಿಗೆ ಒಮ್ಮುಖಗೊಳಿಸಲು ಪ್ರಯತ್ನಿಸಲಾಯಿತು. ಸೂಕ್ತ ಸಾಮರ್ಥ್ಯ ಹೆಚ್ಚಳ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಪೂರಕವಾದ ಕಲಿಕಾ–ಬೋಧನ ಪರಿಕರಗಳನ್ನು ಒದಗಿಸುವ ಮೂಲಕ ಇದನ್ನು ಸಾಧಿಸಲು ಸಾಧ್ಯವಾಯಿತು.

ಶಿಕ್ಷಣ ಕ್ಷೇತ್ರದ ಬೇಡಿಕೆಗಳನ್ನು ಕುರಿತು ಹೇಳುವುದಾದರೆ ಸರ್ಕಾರದ ಬಿಸಿ ಊಟ ಕಾರ್ಯಕ್ರಮವು ಸರ್ಕಾರದ ವತಿಯಿಂದ ಉತ್ತಮ ಪ್ರತಿಕ್ರಿಯೆಯಾಗಿತ್ತು. 1995ರ ಆಗಸ್ಟ್‌ನಲ್ಲಿ ಜಾರಿಗೊಳಿಸಲಾದ ರಾಷ್ಟ್ರೀಯ ಪೌಷ್ಟಿಕ ಆಹಾರ ಪೂರೈಕೆ ಯೋಜನೆಯು ಶಾಲಾ ದಾಖಲಾತಿ ಮತ್ತು ಉಳಿಯುವಿಕೆಯನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ಶಾಲಾ ದಾಖಲಾತಿಯನ್ನು ಹೆಚ್ಚಿಸುವುದು, ಶಾಲೆ ತ್ಯಜಿಸುವವರ ಪ್ರಮಾಣವನ್ನು ಕಡಿಮೆ ಮಾಡುವುದು, ಶಾಲಾ ಹಾಜರಾತಿ ಹೆಚ್ಚಿಸುವುದು ಮಾತ್ರವಲ್ಲದೆ ವಿದ್ಯಾರ್ಥಿಗಳ ಆಹಾರದ ಪೌಷ್ಟಿಕ ಮಟ್ಟವನ್ನುಹೆಚ್ಚಿಸುವುದೂ ಈ ಯೋಜನೆಯ ಧ್ಯೇಯವಾಗಿದೆ. ಈ ಯೋಜನೆಯನ್ನು ಪಂಚಾಯತ್ ಮತ್ತು ನಗರಪಾಲಿಕೆಗಳ ಮೂಲಕ ಜಾರಿಗೊಳಿಸಲಾಗುತ್ತಿದೆ. ಶಾಲಾ ಅವಧಿಯಲ್ಲೇ ಮಕ್ಕಳಿಗೆ ಆಹಾರ ಧಾನ್ಯಗಳು ಮತ್ತು ಭೋಜನವನ್ನು ಒದಗಿಸಲಾಗುತ್ತಿದೆ. ಈ ಯೋಜನೆಯು ದಾಖಲಾತಿಯನ್ನು ಹೆಚ್ಚಿಸುವುದೇ ಅಲ್ಲದೆ ಹಾಜರಾತಿಯನ್ನು ಹೆಚ್ಚಿಸಲೂ ನೆರವಾಗುತ್ತದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಪ್ರಮುಖ ಯೋಜನೆಯೊಂದನ್ನು ಜಾರಿಗೊಳಿಸಿದ್ದು 1998ರಲ್ಲಿ ನಡೆದ ಶಿಕ್ಷಣ ಮಂತ್ರಿಗಳ ಸಮಾವೇಶದ ಶಿಫಾರಸ್ಸುಗಳನ್ನು ಆಧರಿಸಿ. ಈ ಸಮಾವೇಶವು ಸಮಗ್ರವಾದ ಮತ್ತು ಎಲ್ಲವನ್ನೂ ಒಳಗೊಂಡಂತಹ ಧೋರಣೆಯನ್ನು ಅನುಸರಿಸುವ ಮೂಲಕ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಧ್ಯೇಯವನ್ನು ನಿರ್ದಿಷ್ಟ ಕಾಲಾವಧಿಯೊಳಗೆ ಸಾಧಿಸಲು ಕರೆ ನೀಡಿತು. ತತ್ಪರಿಣಾಮವಾಗಿ ಸಾರ್ವತ್ರಿಕ ಪ್ರಾಥಮಿಕ ಸಾಧನೆಗಾಗಿಯೇ ಸರ್ವ ಶಿಕ್ಷಣ ಅಭಿಯಾನವನ್ನೂ ಆರಂಭಿಸಲಾಯಿತು.

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಮಾರ್ಗದಲ್ಲಿ ಸರ್ವ ಶಿಕ್ಷಣ ಅಭಿಯಾನ ಪ್ರಪ್ರಥಮ ರಾಷ್ಟ್ರೀಯ ಯೋಜನೆಯಾಗಿದೆ. ಒಂದು ಕ್ರಮಬದ್ಧ ನಿಯೋಗದ ಮಾದರಿಯಲ್ಲಿ ಸಾಮುದಾಯಿಕ ಒಡೆತನಕ್ಕೆ ಒಳಪಟ್ಟು ಗುಣಮಟ್ಟದ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಮೂಲಕ ಮಕ್ಕಳ ಮಾನವ ಸಹಜ ಸಾಮರ್ಥ್ಯವನ್ನು ವೃದ್ಧಿಸುವುದು ಈ ಯೋಜನೆಯ ಮೂಲ ಧ್ಯೇಯವಾಗಿದೆ. ಈವರೆಗೆ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಜಾರಿಗೊಳಿಸಲಾಗಿರುವ ಎಲ್ಲಾ ಯೋಜನೆಗಳನ್ನೂ ಅಂತರ್ಗತಮಾಡಿಕೊಳ್ಳುವ ಸರ್ವ ಶಿಕ್ಷಣ ಅಭಿಯಾನ ಯೋಜನೆ (ಸರ್ವ ಶಿಕ್ಷಣ ಅಭಿಯಾನ ಜಾರಿಗೊಳಿಸಲು ರೂಪಿಸಲಾದ ಚೌಕಟ್ಟು 2001) ನಿರ್ದಿಷ್ಟ ಕಾಲಾವಧಿಯ ಧ್ಯೇಯಗಳನ್ನು ಹೊಂದಿದ್ದು ಶಾಲಾ ಪ್ರವೇಶಾತಿ ಮತ್ತು ಧಾರಣ ಶಕ್ತಿಯನ್ನು ಹೆಚ್ಚಿಸುವ ಉದ್ದೇಶ ಹೊಂದಿರುತ್ತದೆ. ಈ ಯೋಜನೆ 6ರಿಂದ 14 ವರ್ಷದವರೆಗಿನ ಎಲ್ಲ ಮಕ್ಕಳಿಗೂ 2010ರ ವೇಳೆಗೆ ಹೆಚ್ಚು ಉಪಯುಕ್ತ ಮತ್ತು ಪ್ರಸ್ತುತತೆಯುಳ್ಳ ಪ್ರಾಥಮಿಕ ಶಿಕ್ಷಣ ನೀಡುವ ಉದ್ದೇಶ ಹೊಂದಿರುತ್ತದೆ.

ಒಂದು ಧರ್ಮನಿಯೋಗದ (ಮಿಷನರಿ) ಮಾದರಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಾರ್ವತ್ರಿಕ ಪ್ರವೇಶಾತಿಯನ್ನು ಕಲ್ಪಿಸುವ ಉದ್ದೇಶ ಹೊಂದಿರುವ ಸರ್ವ ಶಿಕ್ಷಣ ಅಭಯಾನದಡಿಯಲ್ಲಿ ಸರ್ಕಾರದ ವತಿಯಿಂದ ಅಗತ್ಯವಿರುವ ಪೂರೈಕೆಯ ಅವಶ್ಯಕತೆಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. 300ಕ್ಕೂ ಹೆಚ್ಚು ಜನಸಂಖ್ಯೆ ಇರುವ ಪ್ರತಿಯೊಂದು ಪ್ರದೇಶಕ್ಕೂ ಒಂದು ಪ್ರಾಥಮಿಕ ಶಾಲೆ ಒದಗಿಸಲಾಗಿದೆ. ಎರಡು ಪ್ರಾಥಮಿಕ ಶಾಲೆ ಇದ್ದೆಡೆಯೆಲ್ಲಾ ಹಿರಿಯ ಪ್ರಾಥಮಿಕ ಶಾಲೆಯನ್ನು 1:2 ಅನುಪಾತದಲ್ಲಿ ಒದಗಿಸಲಾಗಿದೆ. ಹಾಲಿ ಇರುವ ಶಾಲೆಗಳ ದುರಸ್ತಿ ಮಾಡಲು ಸೂಕ್ತ ಹಣಕಾಸು ಒದಗಿಸಲಾಗಿದೆ. ಅಗತ್ಯ ಇದ್ದಲ್ಲಿ ಹೆಚ್ಚುವರಿ ಕ್ಲಾಸ್ ರೂಮುಗಳನ್ನೂ ಒದಗಿಸಲಾಗುತ್ತದೆ.

Digitised by Bharatavani, CIIL

1:2 ಅನುಪಾತದಲ್ಲಿ ಶಾಲಾ ಶ್ರೇಣಿ ವ್ಯವಸ್ಥೆಯನ್ನು ನಿರ್ವಹಿಸುವ ನಿಟ್ಟಿನಲ್ಲಿ ಹಾಲಿ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಪರಿವರ್ತಿಸುವ ಅವಕಾಶವನ್ನೂ ಒದಗಿಸಲಾಗಿದೆ. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅಗತ್ಯ ಪರಿಕರಗಳ ಪೂರೈಕೆಯ ವಿಷಯದ ಬಗ್ಗೆ ಹೇಳುವುದಾದರೆ ಅವಶ್ಯಕತೆ ಇದ್ದಲ್ಲಿ ಹೆಚ್ಚುವರಿ ಶಿಕ್ಷಕರನ್ನು ನೇಮಿಸುವುದು ಅಥವಾ ಹಾಲಿ ಶಿಕ್ಷಕರಿಗೇ ತರಬೇತಿ ನೀಡಿ ತಯಾರುಮಾಡುವುದು ಒಂದು ಪ್ರಮುಖ ಧ್ಯೇಯವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಶಿಕ್ಷಕ–ವಿದ್ಯಾರ್ಥಿ ಅನುಪಾತವನ್ನು 1:40ರ ಪ್ರಮಾಣದಲ್ಲಿ ನಿರ್ಧರಿಸಲಾಗುತ್ತದೆ. ಪ್ರತಿ 40 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು ಒದಗಿಸಲಾಗುತ್ತದೆ. ಹಾಲಿ ಶಾಲೆಗಳಲ್ಲಿ ಒಟ್ಟೊಟ್ಟಿಗೇ ಎರಡು ಮೂರು ತರಗತಿಗಳಿಗೆ ಪಾಠ ಮಾಡುವ ವ್ಯವಸ್ಥೆ ಇರುವುದರ ಹಿನ್ನೆಲೆಯಲ್ಲಿ ಪ್ರತಿಯೊಂದು ಪ್ರಾಥಮಿಕ ಶಾಲೆಯಲ್ಲೂ ಇಬ್ಬರು ಶಿಕ್ಷಕರನ್ನು ನೇಮಿಸಲಾಗುತ್ತದೆ.

ಶೈಕ್ಷಣಿಕ ವ್ಯವಸ್ಥೆಯ ಬೇಡಿಕೆಗಳ ನಿಟ್ಟಿನಲ್ಲಿ ಸರ್ವ ಶಿಕ್ಷಣ ಅಭಿಯಾನವು ಚಾರಿತ್ರಿಕ ಧೋರಣೆಯನ್ನೇ ಅನುಸರಿಸುತ್ತದೆ. ಜೀವನಕ್ಕೆ ಹೆಚ್ಚು ಪ್ರಸ್ತುತವೆನಿಸುವ ಗುಣಮಟ್ಟದ ಶಿಕ್ಷಣ ನೀಡಲು ಯೋಜನೆ ಹೆಚ್ಚು ಪ್ರಾಮುಖ್ಯ ನೀಡುತ್ತದೆ. ಕಲಿಯುವವರನ್ನೇ ಕೇಂದ್ರೀಕರಿಸಿದ ಬೋಧನ ಶಾಸ್ತ್ರವನ್ನಾಧರಿಸಿದ ಕಾರ್ಯಚಟುವಟಿಕೆಗಳನ್ನು ಅವಲಂಬಿಸಿದ ಕಲಿಕಾ–ಬೋಧನ ಮಾರ್ಗವನ್ನು ಅನುಸರಿಸಲಾಗುತ್ತದೆ. ಇಲ್ಲಿ ಶಿಕ್ಷಕರಾದವರು ಕಲಿಕೆಗೆ ಸಹಾಯಕರಾಗಿರುತ್ತಾರೆಯೇ ಹೊರತು ಮಾರ್ಗದರ್ಶಕರಾಗಿರುವುದಿಲ್ಲ. ಮಕ್ಕಳು ಶಾಲೆಯನ್ನು ತ್ಯಜಿಸದೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗುವಂತೆ ಸಂದರ್ಭೋಚಿತ ಹಾಗೂ ಸ್ಥಳೀಯವಾಗಿ ಹೆಚ್ಚು ಪ್ರಸ್ತುತ ಎನಿಸುವ ಕಲಿಕಾ–ಬೋಧನಾ ಪರಿಕರಗಳನ್ನು ಉಪಯೋಗಿಸಲಾಗುತ್ತದೆ. ಇದರಿಂದ ಶಾಲಾ ಹಾಜರಾತಿ ನಿರಂತರವಾಗಿಯೂ, ಕ್ರಮಬದ್ಧವಾಗಿಯೂ ಇರುತ್ತದೆ. ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಶಾಲಾ ಹೆಣ್ಣು ಮಕ್ಕಳಿಗೆ ಉಚಿತ ಪಠ್ಯ ಪುಸ್ತಕವನ್ನು ಒದಗಿಸುವುದು. ಪಂಚಾಯತ್ ರಾಜ್ ಸಂಸ್ಥೆ ಮತ್ತು ಗ್ರಾಮ ಶಿಕ್ಷಣ ಸಮಿತಿಗಳು, ಔಪಚಾರಿಕ ಮತ್ತು ಅನೌಪಚಾರಿಕ ಪರ್ಯಾಯ ಮಾರ್ಗಗಳ ಮೂಲಕ, ಎಲ್ಲ ಮಕ್ಕಳಿಗೂ ಶಾಲಾ ಪ್ರವೇಶಾತಿ ದೊರೆಯುವ ನಿಟ್ಟಿನಲ್ಲಿ ಸಮುದಾಯಗಳೊಡನೆ ಸ್ಪಂದಿಸುತ್ತಿರುತ್ತವೆ. ಕುಟುಂಬ ಆಧಾರಿತ ಸಮೀಕ್ಷೆ ನಡೆಸುವ ಮೂಲಕ ಶಾಲೆಯಿಂದ ಹೊರಗುಳಿದ ಮತ್ತು ನೌಕರಿಯಲ್ಲಿ ತೊಡಗಿರುವ ಮಕ್ಕಳನ್ನು ಹಾಗೂ ವಿಶೇಷ ಶಿಕ್ಷಣದ ಅಗತ್ಯವಿರುವ ಮಕ್ಕಳನ್ನು ಮತ್ತು ಅವಕಾಶವಂಚಿತ ಉಪೇಕ್ಷಿತ ಮಕ್ಕಳನ್ನು ಗುರುತಿಸಿ ಈ ಕಾರ್ಯ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ.

**ಸಮಾನತೆ:** ಕಳೆದ ಹಲವು ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಆದರೂ ಬಹುಸಂಖ್ಯೆ ಮಕ್ಕಳು ಇನ್ನೂ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಈ ಅಂಶವೇ ಶಿಕ್ಷಣ ಕ್ಷೇತ್ರದಲ್ಲಿ ಸಮಾನತೆಯನ್ನು ಕುರಿತ ಕಳಕಳಿಗೆ ಕಾರಣವಾಗಿದೆ. ಇಂದು ಪ್ರಾಥಮಿಕ ಶಿಕ್ಷಣ ಕ್ಷೇತ್ರ ಎದುರಿಸುತ್ತಿರುವ ಪ್ರಮುಖ ಸವಾಲೆಂದರೆ ಶಾಲಾ ಪ್ರವೇಶಾತಿಯಲ್ಲಿ ಇರುವ ಅಂತರ ಮತ್ತು ಕೆಲವು ನಿರ್ದಿಷ್ಟ ಜನಸಮುದಾಯಗಳು ಹಾಗೂ ನಿರ್ದಿಷ್ಟ ಪ್ರದೇಶದ ಜನರು ಶಿಕ್ಷಣದಲ್ಲಿ ಪಾಲ್ಗೊಳ್ಳದಿರುವುದು. ಪ್ರಾಥಮಿಕ ಶಿಕ್ಷಣದಲ್ಲಿ ಸರ್ಕಾರ ಕೈಗೊಂಡಿರುವ ಸರ್ವಪ್ರಯತ್ನಗಳ ಉಪಯೋಗವನ್ನು ಪಡೆಯುವುದರಲ್ಲಿ ಈ ವರ್ಗಗಳು ವಿಫಲವಾಗಿವೆ. ಶೈಕ್ಷಣಿಕ ನೀತಿಯನ್ನು ರೂಪಿಸುವ ನಿಟ್ಟಿನಲ್ಲಿ ಚಾರಿತ್ರಿಕವಾಗಿ ಸಂಭವಿಸಿರುವ ಪ್ರಮಾದಗಳನ್ನು ಮತ್ತು ತಪ್ಪುಗಳನ್ನು ಸರಿಪಡಿಸಿ ಅವುಗಳ ಪರಿಹಾರಕ್ಕಾಗಿ ಶ್ರಮಿಸುವುದು ಅತ್ಯಗತ್ಯ. ಶೈಕ್ಷಣಿಕ ವ್ಯವಸ್ಥೆಯ ಮುಖ್ಯವಾಹಿನಿಯಿಂದ ವಂಚಿತರಾಗಿರುವ ಕೆಲವು ನಿರ್ದಿಷ್ಟ ಜನಸಮುದಾಯಗಳನ್ನು ಈ ರೀತಿಯಾಗಿ ವಿಂಗಡಿಸಬಹುದು:

1. ಪರಿಶಿಷ್ಟ ಜಾತಿ ಮತ್ತು ಪಂಗಡಗಳು
2. ಬಾಲಕಿಯರು
3. ದುಡಿಯುವ ಮಕ್ಕಳು
4. ಕಲಿಕಾ ನ್ಯೂನತೆಯುಳ್ಳ ಮಕ್ಕಳು
5. ಅಲ್ಪಸಂಖ್ಯಾತ ಸಮುದಾಯದ ಮಕ್ಕಳು
6. ನಗರ ಪ್ರದೇಶದ ಅವಕಾಶವಂಚಿತ ಮಕ್ಕಳು.

ಕೆಲವು ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಈ ಮಕ್ಕಳನ್ನು ಶಿಕ್ಷಣ ವ್ಯವಸ್ಥೆಯಿಂದ ಹೊರಗಿರಿಸಲಾಗಿದೆ. ಈ ಅಂಶವನ್ನು ಸರಿಪಡಿಸಿ ಸಮಾನತೆಯನ್ನು ಸಾಧಿಸಲು ಸರ್ಕಾರದ ವತಿಯಿಂದ ಬೇಡಿಕೆ–ಪೂರೈಕೆಯಲ್ಲಿ ಸೂಕ್ತ ಕ್ರಮಗಳನ್ನು ಅಪೇಕ್ಷಿಸಲಾಗುತ್ತದೆ. ಬೇಡಿಕೆಗಳನ್ನು ಕುರಿತು ಹೇಳುವುದಾದರೆ ಪರಿಣಾಮಕಾರಿಯಾದ ಜಾಗೃತಿ ಮೂಡಿಸುವುದು, ಶಿಕ್ಷಣದ ಪಾಲುದಾರರು ಮತ್ತು ಈ ಸಮುದಾಯದ ಪ್ರಮುಖರಲ್ಲಿ ಪ್ರಚಾರಾಂದೋಲನ ನಡೆಸುವುದು ಪ್ರಮುಖ ಕಾರ್ಯಕ್ರಮವಾಗಿವೆ.

ಪೂರೈಕೆಯ ನಿಟ್ಟಿನಲ್ಲಿ, ತರಗತಿಗಳು ಮತ್ತು ಶಾಲೆಗಳ ಸಂಖ್ಯೆಯನ್ನು ಹಾಗೂ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವುದು, ಪರ್ಯಾಯ ಕಲಿಕಾ ಮಾದರಿಗಳನ್ನು ರೂಪಿಸುವುದು, ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಶಾಲೆಗೆ ಆಕರ್ಷಿಸಲು ಸಮಯೋಚಿತ ತಂತ್ರಗಳನ್ನು ರೂಪಿಸುವುದು, ಹೆಚ್ಚಿನ ಮಹಿಳಾ ಶಿಕ್ಷಕರನ್ನು ನೇಮಿಸುವುದು ಮುಂತಾದವು ಪ್ರಮುಖ ಕ್ರಮಗಳಾಗಿವೆ. ಈ ಕ್ರಮಗಳ ಮೂಲಕ ಶಾಲಾ ದಾಖಲಾತಿ, ಹಾಜರಾತಿ ಮತ್ತು ಧಾರಣಾ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯವಾಗಿದೆ. ಬಾಲಕಿಯರು ಶಾಲೆಯಿಂದ ಹೊರಗುಳಿಯಲು ಮುಖ್ಯ ಕಾರಣವೆಂದರೆ ಶೌಚಾಲಯಗಳು ಇಲ್ಲದಿರುವುದು. ಪೂರೈಕೆಯ ನಿಟ್ಟಿನಲ್ಲಿ ಶಾಲೆಗಳಲ್ಲಿ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸುವುದರ ಮೂಲಕ ಶಾಲೆಗಳಲ್ಲಿ ಹೆಚ್ಚು ಬಾಲಕಿಯರ ದಾಖಲಾತಿ ಮತ್ತು ಧಾರಣಾ ಪ್ರಮಾಣವನ್ನು ಕಾಣಬಹುದಾಗಿದೆ.

ಪರಿಶಿಷ್ಟ ಪಂಗಡಗಳ ಮಕ್ಕಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಶಿಕ್ಷಣದಲ್ಲಿ ಹೆಚ್ಚಿನ ಮಕ್ಕಳು ಪಾಲ್ಗೊಳ್ಳದಿರಲು ಕಾರಣವೆಂದರೆ ಸಾಂಸ್ಕೃತಿಕ ಭಿನ್ನತೆ ಮತ್ತು ಶಾಲೆಗಳಲ್ಲಿ

Digitised by Bharatavani, CIIL

ಬಳಸಲಾಗುವ ಭಾಷೆ. ಈ ಮಕ್ಕಳನ್ನು ಶಾಲೆಗೆ ಕರೆತರಲು ವಿಶಿಷ್ಟ ಸ್ಥಳೀಯ ಪ್ರಯತ್ನಗಳ ಅಗತ್ಯತೆಯಿದೆ. ಪರಿಶಿಷ್ಟ ಜನಸಮುದಾಯಗಳಿರುವ ಪ್ರದೇಶದಲ್ಲಿನ ಶಿಕ್ಷಕರು ಪರಿವರ್ತನೆಯ ಹರಿಕಾರರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಜನರಲ್ಲಿ ಜಾಗೃತಿ ಮೂಡಿಸುವುದು, ಸಾಮುದಾಯಿಕ ಪ್ರೋತ್ಸಾಹ ಬೆಳೆಸುವುದು, ಮಕ್ಕಳ ವಿಶ್ವಾಸ ಗಳಿಸುವುದು, ಸ್ಥಳೀಯ ಭಾಷೆಗಳಲ್ಲೇ ಕಲಿಕಾ ಸಾಮಗ್ರಿಗಳನ್ನು ರೂಪಿಸುವುದು, ಆದಿವಾಸಿ ಭಾಷೆಗಳನ್ನೇ ಭಾಷಾ ಮಾಧ್ಯಮವನ್ನಾಗಿ ಉಪಯೋಗಿಸುವುದು ಇವೇ ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ಕ್ರಮಗಳನ್ನು ಡಿಪಿಇಪಿ ಕಾರ್ಯಕ್ರಮದಡಿಯಲ್ಲಿ ಜಾರಿಗೊಳಿಸಲಾಗಿದೆ. ಆದಿವಾಸಿ ಸಂಸ್ಕೃತಿ ಪೂರಕವಾದ ಸಂರಚನೆಗಳನ್ನು ರೂಪಿಸಿ ಶಾಲಾ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಪರಿಣಾಮವಾಗಿ ಶಾಲಾ ಪ್ರವೇಶಾತಿಯಲ್ಲಿ ಪ್ರಗತಿ ಸಾಧಿಸಲಾಗಿದೆ.

**ಸಂಪ್ರದಾಯ ರಹಿತ ಶಿಕ್ಷಣ:**

ಶಿಕ್ಷಣದ ಮುಖ್ಯವಾಹಿನಿಯಿಂದ ವಂಚಿತರಾದ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯವಾದ ಪರ್ಯಾಯ ಕ್ರಮಗಳನ್ನು ಗುರುತಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಎರಡು ದಶಕಗಳ ಹಿಂದೆ ಸಂಪ್ರದಾಯ ರಹಿತ (Non formal) ಶಿಕ್ಷಣ ನೀತಿಯನ್ನು ರೂಪಿಸಿತ್ತು. ಈ ಯೋಜನೆಯು ಹಲವಾರು ಕಾರಣಗಳಿಗಾಗಿ ಔಪಚಾರಿಕ ಶಿಕ್ಷಣ ವ್ಯವಸ್ಥೆಯಿಂದ ಹೊರಗುಳಿದಿರುವ 6ರಿಂದ 14 ವರ್ಷದವರೆಗಿನ ಮಕ್ಕಳ ಕಲಿಕಾ ಅಗತ್ಯತೆಗಳಿಗೆ ಸ್ಪಂದಿಸಲು ಯತ್ನಿಸುತ್ತದೆ. ಮೂಲ ಉದ್ದೇಶದ ಪ್ರಕಾರ ಈ ಯೋಜನೆಯನ್ನು ಶೈಕ್ಷಣಿಕವಾಗಿ ಹಿಂದುಳಿದಿರುವ ಹತ್ತು ರಾಜ್ಯಗಳಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ನಂತರ ಈ ಯೋಜನೆಯನ್ನು ನಗರ ಪ್ರದೇಶಗಳ ಕೊಳೆಗೇರಿಗಳು, ಗುಡ್ಡಗಾಡು ಪ್ರದೇಶಗಳು, ಆದಿವಾಸಿ ಪ್ರದೇಶಗಳು, ಮರಳುಗಾಡು ಪ್ರದೇಶಗಳು, ದುಡಿಯುವ ಮಕ್ಕಳು ಹೀಗೆ ಹಲವು ಕ್ಷೇತ್ರಗಳಿಗೆ ವಿಸ್ತರಿಸಲಾಯಿತು. ಈ ಯೋಜನೆಯ ಪ್ರಮುಖ ಅಂಶಗಳು ಇಂತಿವೆ:

* 2 ವರ್ಷಗಳ ಕಿರಿಯ ಪ್ರಾಥಮಿಕ ಶಿಕ್ಷಣ ಮತ್ತು 3 ವರ್ಷಗಳ ಹಿರಿಯ ಪ್ರಾಥಮಿಕ ಶಿಕ್ಷಣ ಒದಗಿಸುವುದು.
* ಕಲಿಕಾ ಅಭ್ಯರ್ಥಿಗಳ ಸಣ್ಣ ಗುಂಪುಗಳಿಗೆ ಸೂಕ್ತ ಸಮಯ ಮತ್ತು ಜಾಗದಲ್ಲಿ ಅರೆಕಾಲಿಕ ಬೋಧನೆ ನೀಡುವುದು.
* ಅನೌಪಚಾರಿಕ ಶಿಕ್ಷಣ ಯೋಜನೆಯನ್ನು ಜಾರಿಗೊಳಿಸಲು ಗ್ರಾಮೀಣ ಸಮುದಾಯಗಳು ಸ್ಥಳಾವಕಾಶ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
* ಸ್ಥಳೀಯವಾಗಿ ತರಬೇತಿ ಪಡೆದು ನೇಮಕಗೊಂಡ ಅರೆಕಾಲಿಕ ಬೋಧಕರನ್ನು / ಮೇಲ್ವಿಚಾರಕರನ್ನು ನೇಮಿಸುವುದು.
* ಆಡಳಿತದ ವಿಕೇಂದ್ರೀಕರಣ ಮತ್ತು ಸಂದರ್ಭೋಚಿತವಾಗಿ ಬದಲಾಯಿಸಬಲ್ಲ ನೀತಿಯನ್ನು ಅನುಸರಿಸುವುದು.

**ಮಧ್ಯಪ್ರದೇಶದ ಶಿಕ್ಷಣ ಖಾತರಿ ವ್ಯವಸ್ಥೆ (Education Guarantee Scheme EGS)**

**ಇದರ ಮುಖ್ಯ ಲಕ್ಷಣಗಳು ಹೀಗಿವೆ:**

* ಸಮುದಾಯದ ಬೇಡಿಕೆಯ 90 ದಿನಗಳೊಳಗಾಗಿ ಇಜಿಎಸ್ ಕೇಂದ್ರಗಳನ್ನು ಸ್ಥಾಪಿಸಿವುದು.
* ಶಾಲೆ ಒಂದು ಕಿಲೋಮೀಟರ್ ವಿಸ್ತೀರ್ಣದ ಒಳಗಿದ್ದಲ್ಲಿ 6ರಿಂದ 14 ವರ್ಷದೊಳಗಿನ ಕನಿಷ್ಠ 40 ಮಕ್ಕಳಿಗೆ ಇಜಿಎಸ್ ಕೇಂದ್ರವನ್ನು ತೆರೆಯುವುದು. (ಆದಿವಾಸಿ ಪ್ರದೇಶಗಳಲ್ಲಿ ಮಕ್ಕಳ ಸಂಖ್ಯೆ 25 ಆಗಿರಬಹುದು)
* ಸಮುದಾಯವೇ ಶಿಕ್ಷಕರನ್ನು (ಗುರೂಜಿ) ಗುರುತಿಸಿ, ನೇಮಿಸುವುದು ಮತ್ತು ಶಾಲೆಗೆ ಸ್ಥಳಾವಕಾಶ ಒದಗಿಸುವುದು.
* ಶಾಲೆಗಳು ದಿನಕ್ಕೆ 5 ಗಂಟೆಯಂತೆ ವರ್ಷದಲ್ಲಿ 200–225 ದಿನಗಳು ಕಾರ್ಯನಿರ್ವಹಿಸುವುದು.
* ಮಕ್ಕಳು ಐದನೆಯ ತರಗತಿಯವರೆಗೂ ವ್ಯಾಸಂಗ ಮಾಡುವುದು.

ಭಾರತದಲ್ಲಿ ಸಂಪ್ರದಾಯ–ರಹಿತ ಶಿಕ್ಷಣ ಕೇಂದ್ರಗಳು ಮತ್ತು ಅಲ್ಲಿನ ದಾಖಲಾತಿಗಳನ್ನು ಕುರಿತ ಮಾಹಿತಿಯನ್ನು ಕೋಷ್ಟಕ 4ರಲ್ಲಿ ನೀಡಲಾಗಿದೆ. (ಆರನೆಯ ಶೈಕ್ಷಣಿಕ ಸಮೀಕ್ಷೆ ಎನ್‌ಸಿಇಆರ್‌ಟಿ)

ಕಾಲಕ್ರಮೇಣ ಸಂಪ್ರದಾಯರಹಿತ ಶಿಕ್ಷಣ ವ್ಯವಸ್ಥೆಯು ಸರ್ಕಾರೇತರ ಸಂಸ್ಥೆಗಳು ಮತ್ತಿತರ ಸಂಘಟನೆಗಳ ಮೂಲಕ ಅನೇಕ ನವೀನ ಪ್ರಯೋಗಗಳಿಗೂ ದಾರಿಮಾಡಿಕೊಟ್ಟಿದೆ.

**ಕೋಷ್ಟಕ 4**

**ರಾಷ್ಟ್ರೀಯ ಔಪಚಾರಿಕ ಶಿಕ್ಷಣ ಕೇಂದ್ರಗಳು ಮತ್ತು ದಾಖಲಾತಿ**

| | ಗ್ರಾಮೀಣ ಕೇಂದ್ರಗಳು | | | ದಾಖಲಾತಿ | | ನಗರ ಕೇಂದ್ರಗಳು | | | ದಾಖಲಾತಿ | |
|---|---|---|---|---|---|---|---|---|---|---|
| | ಪ್ರಾಥಮಿಕ ಹಂತ | ಹಿರಿಯ ಪ್ರಾಥಮಿಕ ಹಂತ | ಎರಡೂ ಹಂತಗಳು | ಒಟ್ಟು | ಬಾಲಕಿಯರು | ಪ್ರಾಥಮಿಕ ಹಂತ | ಹಿರಿಯ ಪ್ರಾಥಮಿಕ ಹಂತ | ಎರಡೂ ಹಂತಗಳು | ಒಟ್ಟು | ಬಾಲಕಿಯರು |
| ಭಾರತ | 1,06,294 | 5,020 | 2,628 | 30,72,412 | 14,03,757 | 5671 | 653 | 278 | 2,07,598 | 1,07,317 |

Digitised by Bharatavani, CIIL

ಇವುಗಳಲ್ಲಿ ರಾಜಸ್ಥಾನದ ಲೋಕ್ ಜಂಬಿಶ್ ಮತ್ತು ಶಿಕ್ಷಾ ಕರ್ಮಿ, ಮಧ್ಯಪ್ರದೇಶದ ಡಿಪಿಇಪಿ ಕಾರ್ಯದಡಿ ಆಯೋಜಿಸಿದ ಪರ್ಯಾಯ ಕಲಿಕಾ ಮಾದರಿಗಳು, ಆಂಧ್ರಪ್ರದೇಶದ ಎಂವಿ ಫೌಂಡೇಷನ್ ಪ್ರಯತ್ನಗಳು, ಹಲವು ರಾಜ್ಯಗಳಲ್ಲಿನ ಮಹಿಳಾ ಸಮಾಖ್ಯ, ರಾಜಸ್ಥಾನದ ರಾಜೀವ್ ಗಾಂಧಿ ಸ್ವರ್ಣ ಜಯಂತಿ ಪ್ರತಿಷ್ಠಾನ ಮೊದಲಾದವು ಉಲ್ಲೇಖನಾರ್ಹ.

ಆಂಧ್ರಪ್ರದೇಶದ ಎನ್. ವೆಂಕಟರಂಗಯ್ಯ ಫೌಂಡೇಷನ್ (ಎಂವಿಎಫ್) ದುಡಿಯುವ ಮಕ್ಕಳಿಗೆ ಶಿಕ್ಷಣ ಸೌಕರ್ಯ ಒದಗಿಸುವುದರಲ್ಲಿ ಎಂವಿಎಫ್ ಫೌಂಡೇಷನ್ ಮಹತ್ತರವಾದ ಕೊಡುಗೆ ನೀಡಿದೆ. 6ರಿಂದ 14 ವರ್ಷದ ರಾಷ್ಟ್ರೀಯ ಔಪಚಾರಿಕ ಶಿಕ್ಷಣದ ಮೂಲಕ ಔಪಚಾರಿಕ ಶಿಕ್ಷಣ ನೀಡುವುದನ್ನು ಎಂವಿಎಫ್ ಫೌಂಡೇಷನ್ ಒತ್ತಿ ಹೇಳುತ್ತದೆ. ಪೋಷಕರಿಗೆ ಸೂಕ್ತ ಸಲಹೆ ನೀಡುವ ಮೂಲಕ ಮಕ್ಕಳನ್ನು ದುಡಿತದಿಂದ ವಿಮುಕ್ತಗೊಳಿಸಿ ಶಾಲೆಗೆ ಕಳುಹಿಸಲು ಪ್ರೋತ್ಸಾಹ ನೀಡುವುದು ಈ ಸಂಸ್ಥೆಯ ಉದ್ದೇಶಗಳಲ್ಲೊಂದು. ಈ ಮಕ್ಕಳ ಕಲಿಕಾ ಮಟ್ಟ ಮತ್ತು ಇತರ ಶಾಲಾ ಮಕ್ಕಳ ಕಲಿಕಾ ಮಟ್ಟದ ನಡುವಿನ ಅಂತರವನ್ನು ಕಡಿಮೆ ಮಾಡಲು ಫೌಂಡೇಷನ್ ಬೇಸಿಗೆ ಶಿಬಿರಗಳನ್ನು ನಡೆಸುತ್ತದೆ. ಇದರಿಂದ ಎಂವಿಎಫ್ ಫೌಂಡೇಷನ್ ಈ ಕ್ರಮಗಳ ಮೂಲಕ ಬಾಲಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡಿರುವುದೇ ಅಲ್ಲದೆ ಸಮುದಾಯದಲ್ಲೂ ಬದಲಾವಣೆ ತಂದಿದೆ. ಸಾಮಾಜಿಕ ಪರಿವರ್ತನೆಗಾಗಿ ಶಿಕ್ಷಣವನ್ನು ಉಪಯೋಗಿಸುವ ಮೂಲಕ ಸಂಸ್ಥೆಯು ಸಾಮುದಾಯಿಕ ಬೆಂಬಲವನ್ನೂ ಗಳಿಸಿದೆ.

ರಾಷ್ಟ್ರೀಯ ಕಾರ್ಯಕ್ರಮವಾದ ಸರ್ವ ಶಿಕ್ಷಣ ಅಭಿಯಾನದ ಜಾರಿಯೊಂದಿಗೆ ಸಂಪ್ರದಾಯರಹಿತ ಶಿಕ್ಷಣ ಯೋಜನೆಯನ್ನೂ ಅಭಿಯಾನದಲ್ಲೇ ಅಂತರ್ಗತಗೊಳಿಸಲಾಯಿತು. ಯೋಜನಾ ಆಯೋಗದ ತನಿಖಾ ವರದಿಯಲ್ಲಿ ಸಂಪ್ರದಾಯರಹಿತ ಶಿಕ್ಷಣ ಯೋಜನೆಯ ಬಗ್ಗೆ ಕೆಲವು ಟೀಕೆಗಳನ್ನು ಮಂಡಿಸಲಾಗಿತ್ತು. ಪ್ರಮುಖವಾದ ಆರೋಪಗಳೆಂದರೆ ಈ ಯೋಜನೆ ಸಮುದಾಯಗಳನ್ನು ಒಳಗೊಳ್ಳದಿರುವುದು, ಔಪಚಾರಿಕ ವ್ಯವಸ್ಥೆಯೊಡನೆ ಒಡನಾಟ ಇಲ್ಲದಿರುವುದು, ಬದಲಾವಣೆಗಳಿಗೆ ಒಗ್ಗದಿರುವುದು ಹಾಗೂ ಪರಿವರ್ತನೆಯ ಪ್ರಮಾಣ ಕ್ಷೀಣಿಸಿರುವುದು. ಈ ಆರೋಪಗಳನ್ನಾಧರಿಸಿ ಯೋಜನೆಯನ್ನೇ ರದ್ದುಪಡಿಸಿ ಹೊಸದಾಗಿ ಜಾರಿಗೊಳಿಸಲಾದ ಪರ್ಯಾಯ ಪ್ರಯೋಗಾತ್ಮಕ ಶಿಕ್ಷಣಕ್ಕಾಗಿ ಖಾತರಿ ಶೈಕ್ಷಣಿಕ ನೀತಿ (Education Guarantee Scheme and Alternative Innovative Education EGS-AIE) ಎಂಬ ಯೋಜನೆಯಲ್ಲಿ ಸಮ್ಮಿಳಿತಗೊಳಿಸಲಾಯಿತು. ರಾಷ್ಟ್ರೀಯ ಸಂಪ್ರದಾಯರಹಿತ ಶಿಕ್ಷಣದ ನ್ಯೂನತೆಗಳನ್ನು ಸರಿಪಡಿಸುವುದು ಈ ಹೊಸ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಲೋಕ್ ಜಂಬಿಶ್, ಡಿಪಿಇಪಿ ಮತ್ತು ಇತರ ಪರ್ಯಾಯ ಯೋಜನೆಗಳ ಗಾಢವಾದ ಅನುಭವವನ್ನು ಈ ಕೆಳಕಂಡ ಧ್ಯೇಯಗಳಿಗಾಗಿ ಉಪಯೋಗಿಸಿಕೊಳ್ಳುವುದು ಈ ಯೋಜನೆಯ ಧ್ಯೇಯವಾಗಿದೆ:

* ಸಮುದಾಯ ಆಧಾರಿತ ಸೂಕ್ಷ್ಮ ಯೋಜನೆ.
* ನಮ್ಯತೆಯಿಂದ ಕೂಡಿದ ತಂತ್ರಗಳ ಪರಿಚಯ.
* ಗುಣಾತ್ಮಕ ಮುಖಗಳ ಸುಧಾರಣೆ
* ಬಹುಹಂತದ ಬೋಧನೆ–ಕಲಿಕಾ ವ್ಯವಸ್ಥೆ.
* ಔಪಚಾರಿಕ ಶಾಲೆಗಳೊಡನೆ ಸಂಪರ್ಕ ಸ್ಥಾಪಿಸಿ ಮುಖ್ಯವಾಹಿನಿಗೆ ಸೇರಿಸುವ ಉದ್ದೇಶಕ್ಕೆ ಒತ್ತು.

**ಈ ಯೋಜನೆಯ ಪ್ರಮುಖ ಅಂಶಗಳೆಂದರೆ:**

* 6ರಿಂದ 14 ವರ್ಷದವರೆಗಿನ ಮಕ್ಕಳು ಮತ್ತು ಭಿನ್ನ ಸಾಮರ್ಥ್ಯದ 18 ವರ್ಷದವರೆಗಿನ ಮಕ್ಕಳನ್ನು ಒಳಗೊಳ್ಳುವುದು.
* ಭೌತಿಕ ಲಭ್ಯತೆ, ಶಿಕ್ಷಣ ಖಾತರಿ ಯೋಜನೆಗಳ ಆರಂಭ, ಪರ್ಯಾಯ ಶಾಲೆಗಳ ಸ್ಥಾಪನೆ ಮತ್ತು 'ಮರಳಿ ಶಾಲೆಗೆ' ಪ್ರಚಾರಾಂದೋಲನ.
* ಪರ್ಯಾಯ ಶಾಲೆ ಮತ್ತು ಪರ್ಯಾಯ ತಂತ್ರಗಳಿಗೆ ಪ್ರೋತ್ಸಾಹ ನೀಡುವುದು ಹಾಗೂ ಸ್ವಯಂಸೇವಕ ಸಂಘಟನೆಗಳ ಮೂಲಕ ಪ್ರಯೋಗಾತ್ಮಕವಾದ ನವೀನ ತಂತ್ರಗಳ ಅನುಷ್ಠಾನ.
* ಔಪಚಾರಿಕ ಶಿಕ್ಷಣಕ್ಕೆ 'ಸಮಾಂತರ ಮಾರ್ಗ'ದ ಉಪಕ್ರಮವನ್ನು ಅನುಸರಿಸದೆ ಔಪಚಾರಿಕ ಶಿಕ್ಷಣದೊಂದಿಗೆ ಸಂಪರ್ಕ ಕಲ್ಪಿಸಿ ಸಮಗ್ರ ಯೋಜನೆ ಅನುಸರಿಸುವುದು.
* ವಸತಿ ಶಿಕ್ಷಣ ಮತ್ತು ಸೇತುಬಂಧ ಶಿಕ್ಷಣದ ಮೂಲಕ 9ರಿಂದ 11ರವರೆಗಿನ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಗೆ ತರುವುದು.
* ಬೀದಿ ಮಕ್ಕಳು, ವಲಸೆ ಬರುವ ಸಮುದಾಯಗಳು, ಜೀತಕ್ಕಿರುವ ಬಾಲಕಾರ್ಮಿಕರು, ಲೈಂಗಿಕ ಕಾರ್ಯಕರ್ತೆಯರ ಮಕ್ಕಳು ಈ ವಿಭಿನ್ನ ಗುಂಪುಗಳಿಗೆ ಗಮನ ನೀಡುವುದು.
* ಸರ್ವ ಶಿಕ್ಷಣ ಅಭಿಯಾನದ ಅಂಗವಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಅಂಗವಾಗಿ ಕಾರ್ಯನಿರ್ವಹಿಸುವುದು.
* ಬೋಧನಾ ಅವಧಿಯನ್ನು ಹೆಚ್ಚಿಸುವ ಮೂಲಕ(4 ಗಂಟೆಗಳು) ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು, ಅರೆಕಾಲಿಕ ಶಿಕ್ಷಕರು ಮತ್ತು ಸ್ವಯಂಸೇವಕರಿಗೆ ನಿರಂತರ ತರಬೇತಿ ನೀಡುವುದು, ನಿರಂತರವಾದ ಶೈಕ್ಷಣಿಕ ಪ್ರೋತ್ಸಾಹ ನೀಡುವುದು, ಎಸ್‌ಸಿಇಆರ್‌ಟಿ, ಡಯೆಟ್, ಬಿಆರ್‌ಸಿ ಮತ್ತು ಸಿಆರ್‌ಸಿ ಯೋಜನೆಗಳ ಮುಖಾಂತರ ತರಬೇತಿ ನೀಡುವುದು. ಈ ಯೋಜನೆಯಲ್ಲಿ ಕಂಡುಬರುವ ಪ್ರಮುಖ ವ್ಯತ್ಯಾಸವೆಂದರೆ ಸೂಕ್ತ ಪಠ್ಯಕ್ರಮಗಳೊಂದಿಗೆ ಔಪಚಾರಿಕ ಶಿಕ್ಷಣ ವ್ಯವಸ್ಥೆಯನ್ನು ಬಳಸಿಕೊಳ್ಳುವುದು.
* ಸಮುದಾಯ ಗುಂಪುಗಳು ಮತ್ತು ಪೋಷಕ ಸಂಘಟನೆಗಳಿಂದ

Digitised by Bharatavani, CIIL

ಆಯ್ಕೆ ಮಾಡಲ್ಪಟ್ಟ ಸ್ವಯಂ ಸೇವಕರು ಮತ್ತು ಅರೆಕಾಲಿಕ ಶಿಕ್ಷಕರಿಂದ ಶಿಕ್ಷಣ ನಿರ್ವಹಣೆ ಮಾಡುವುದು. ಗ್ರಾಮ ಶಿಕ್ಷಣ ಸಮಿತಿ–ಪಂಚಾಯತಿಗಳು ಈ ಸ್ವಯಂ ಸೇವಕರನ್ನು ನೇಮಕ ಮಾಡುವುದು.

**ಮಕ್ತಬ್ ಮತ್ತು ಮದರಸಾಗಳಲ್ಲಿ ಶಿಕ್ಷಣ**

ಮದರಸಾ ಮತ್ತು ಮಕ್ತಬ್‌ಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಶಿಕ್ಷಣವನ್ನು ಬಲಪಡಿಸಲು ಈ ಕ್ರಮಗಳನ್ನು ಕೈಗೊಳ್ಳಲಾಗಿದೆ :

* ಔಪಚಾರಿಕ ಶಾಲೆಗಳೊಡನೆ ಸಂಪರ್ಕ.
* ಮಕ್ತಬ್ ಮತ್ತು ಮದರಸಾಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮುಖ್ಯವಾಹಿನಿ ಪಠ್ಯಕ್ರಮವನ್ನು ಬೋಧಿಸಲು ಹೆಚ್ಚುವರಿ ಶಿಕ್ಷಕರ ನೇಮಕ.
* ಸಮುದಾಯದ ಜನತೆ ಆಗ್ರಹಿಸಿದಲ್ಲಿ ಭಾಷಾ ಮಾಧ್ಯಮವನ್ನು ಬದಲಾಯಿಸಿ ಅಲ್ಪಸಂಖ್ಯಾತರ ಭಾಷೆಯನ್ನೇ ಅಳವಡಿಸುವುದು.
* ದಾಖಲಾತಿಯಾಗದ ಮತ್ತು ಶಾಲೆಯನ್ನು ತ್ಯಜಿಸಿರುವ ಅಲ್ಪಸಂಖ್ಯಾತ ಸಮುದಾಯದ ಮಕ್ಕಳೊಡನೆ ಸಂಪರ್ಕ ಬೆಳೆಸುವುದು.

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ವಿಶೇಷ ಗುಂಪುಗಳ ಮಕ್ಕಳ ಯೋಜನೆಯ ಕಾರ್ಯಕ್ರಮದಲ್ಲಿ ವಿಶೇಷ ಅಗತ್ಯತೆಗಳಿರುವ ಮಕ್ಕಳು ಹೆಚ್ಚಿನ ಮಹತ್ವ ಪಡೆಯುತ್ತಾರೆ. ಪ್ರತಿಯೊಬ್ಬ ಮಗುವಿಗೂ ಪ್ರಾಥಮಿಕ ಶಿಕ್ಷಣ ನೀಡುವುದು ಅಗತ್ಯವಾದ್ದರಿಂದ ವಿಶೇಷ ಅಗತ್ಯತೆ ಇರುವ ಮಕ್ಕಳಿಗೂ ಹೆಚ್ಚಿನ ಗಮನ ನೀಡುವುದು ಅನಿವಾರ್ಯ. ಎಲ್ಲ ಮಕ್ಕಳನ್ನೂ ಒಳಗೊಳ್ಳುವಂತಹ ಸಮಗ್ರ ಶಿಕ್ಷಣ ಒದಗಿಸುವ ಅವಶ್ಯಕತೆ ಇದೆ. ಡಿಪಿಇಪಿ ಕಾರ್ಯಕ್ರಮ ಇದೇ ನೀತಿಯನ್ನು ಆಧರಿಸಿದ್ದು ಸರ್ವ ಶಿಕ್ಷಣ ಅಭಿಯಾನವು ಎಲ್ಲರಿಗೂ ಶಿಕ್ಷಣ ನೀಡಲು ಹೆಚ್ಚು ಪ್ರಾಮುಖ್ಯ ನೀಡುತ್ತದೆ. ಮಕ್ಕಳ ಸಾಮರ್ಥ್ಯ, ಅಸಾಮರ್ಥ್ಯ ಅಥವಾ ವರ್ಗಗಳನ್ನು ಮೀರಿ ಶಿಕ್ಷಣ ನೀಡಲು ಆಸಕ್ತಿ ವಹಿಸುತ್ತದೆ. ಆರಂಭಿಕ ಶಿಶು ಸಂರಕ್ಷಣೆ ಮತ್ತು ಶಿಕ್ಷಣ (Early child care and Education ECCE) ಮತ್ತು ಸಮಗ್ರ ಶಿಶು ವಿಕಾಸ ಯೋಜನೆ (Integrated child Development Scheme ICDS) ಯೋಜನೆಗಳೊಡನೆ ಇತರ ಯೋಜನೆಗಳನ್ನು ಸಮ್ಮಿಳಿತಗೊಳಿಸುವ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ ಮಂತ್ರಾಲಯಕ್ಕೆ ಮಕ್ಕಳಲ್ಲಿನ ಕಲಿಕಾ ನ್ಯೂನತೆಗಳನ್ನು ಶೀಘ್ರವಾಗಿ ಗುರುತಿಸಲು ಅನುಕೂಲ ಮಾಡಿಕೊಡಬಹುದು. ಅಷ್ಟೇ ಅಲ್ಲದೆ, ಕೆಳ ಹಂತದ ವ್ಯವಸ್ಥೆಯಲ್ಲಿ ಸಮುದಾಯದ ಭಾಗಿತ್ವವನ್ನು ಖಾತರಿಗೊಳಿಸಿಕೊಂಡು ಸಮುದಾಯಗಳು ಮತ್ತು ಪೋಷಕರು ವಿಶೇಷ ಅಗತ್ಯತೆಗಳುಳ್ಳ ಮಕ್ಕಳನ್ನು ಗುರುತಿಸಲು ಅನುಕೂಲ ಮಾಡಿಕೊಡಬೇಕಾಗುತ್ತದೆ. ನ್ಯೂನತೆಯುಳ್ಳ ಮಕ್ಕಳ ಸಮಗ್ರ ಶಿಶುವಿಕಾಸ ಯೋಜನೆ (ಐಇಡಿಸಿ) ಮತ್ತು ಡಿಪಿಇಪಿ ಯೋಜನೆಯಡಿಯಲ್ಲಿ ಅನೇಕ ರೀತಿಯಲ್ಲಿ ಶೈಕ್ಷಣಿಕ ಸಾಮಗ್ರಿಗಳು ಮತ್ತು ಬೆಂಬಲಪೂರ್ವಕ ಪರಿಕರಗಳನ್ನು ಒದಗಿಸಲಾಗುತ್ತದೆ. ವಿಶೇಷ ಅಗತ್ಯತೆಗಳುಳ್ಳ ಮಕ್ಕಳಿಗೆ ಸೂಕ್ತ ರೀತಿಯಲ್ಲಿ ಬೋಧಿಸಲು ಮತ್ತು ತರಗತಿಗಳನ್ನು ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಶಿಕ್ಷಕರಲ್ಲಿ ಹೆಚ್ಚಿನ ಸಂವೇದನೆ ಮೂಡಿಸಲು ತೀವ್ರತೆರನಾದ ತರಬೇತಿ ನೀಡಲಾಗುತ್ತಿದೆ. ಪೋಷಕರಿಗೆ ತರಬೇತಿ, ಸಾಮುದಾಯಿಕ ಸಂಚಲನೆ, ವಿಶೇಷ ಶಾಲೆಗಳ ಅಭಿವೃದ್ಧಿ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಡಿಪಿಇಪಿ ಯೋಜನೆಯಡಿಯಲ್ಲಿ ಶಾಲೆಗಳಲ್ಲಿನ ಕಟ್ಟಡವಿನ್ಯಾಸಗಳನ್ನು ಸೂಕ್ತವಾಗಿ ಬದಲಾಯಿಸಿ, ನ್ಯೂನತೆಯುಳ್ಳ ಮಕ್ಕಳಿಗೂ ಸ್ನೇಹಪರವಾದ ವಾತಾವರಣ ನಿರ್ಮಿಸಲಾಗಿದೆ. ವಿಶೇಷ ಅಗತ್ಯತೆಗಳುಳ್ಳ ಮಕ್ಕಳನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸದಂತಹ ನೀತಿಯನ್ನು ಸರ್ವ ಶಿಕ್ಷಣ ಅಭಿಯಾನ ಅನುಸರಿಸುತ್ತದೆ. ವಿಶೇಷ ಗುಂಪುಗಳ ಮಕ್ಕಳಿಗಾಗಿ ಅಗತ್ಯವಾದ ಹಣಕಾಸು ಸಹಾಯವನ್ನು ಒದಗಿಸಲು ಯೋಜನೆಯಲ್ಲೇ ಅನೇಕ ರೀತಿಯ ಮಾರ್ಗೋಪಾಯಗಳನ್ನು ಕಂಡುಹಿಡಿಯಲಾಗಿದೆ.

ಸಂವಿಧಾನದ 93ನೆಯ ತಿದ್ದುಪಡಿಯನ್ನು ಅಂಗೀಕರಿಸುವ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು ಸರ್ಕಾರದ ಬದ್ಧತೆಯಾಗಿರುತ್ತದೆ. ಹಾಗಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆ ಅವಿಭಾಜ್ಯ ಅಂಗವಾಗಿದೆ. ದುಡಿಯುವ ಮಕ್ಕಳಿರಲಿ, ನಗರದಲ್ಲಿನ ಅವಕಾಶವಂಚಿತ ಮಕ್ಕಳಿರಲಿ ಅಥವಾ ಭಿನ್ನ ಸಾಮರ್ಥ್ಯದ ಮಕ್ಕಳಿರಲಿ ಭಾರತದಲ್ಲಿ ಎಲ್ಲರಿಗೂ ಈ ನೀತಿ ಅನ್ವಯಿಸುತ್ತದೆ.

**ಗುಣಮಟ್ಟ:** ಪ್ರಾಥಮಿಕ ಶಿಕ್ಷಣವಾಗಲಿ ಇತರ ಯಾವುದೇ ಶೈಕ್ಷಣಿಕ ಯೋಜನೆಯಾಗಲಿ ಒಂದು ಪೂರ್ವ ನಿರ್ಧಾರಿತ ಚೌಕಟ್ಟಿನೊಳಗೆ ಸೀಮಿತಗೊಳಿಸಿ ಅದರ ಗುಣಮಟ್ಟವನ್ನು ನಿರ್ಧರಿಸಲಾಗುವುದಿಲ್ಲ. ಶೈಕ್ಷಣಿಕ ಗುಣಮಟ್ಟ ಇಡೀ ಯೋಜನೆಯ ಧ್ಯೇಯಗಳನ್ನೇ ಆಧರಿಸಿರುತ್ತದೆ. ಪದದ ಉತ್ಪತ್ತಿಯ ಪ್ರಕಾರ 'ಗುಣಮಟ್ಟ' ಎಂದರೆ ಉನ್ನತ ಮಟ್ಟದ ಮೌಲ್ಯ ಅಥವಾ ಮೌಲ್ಯವುಳ್ಳದ್ದು ಎಂದರ್ಥ. ಹಾಗಾಗಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ನೇರವಾಗಿ ಕಲಿಕಾ ಅಭ್ಯರ್ಥಿಯ ಜೀವನಕ್ಕೆ ಸಂಬಂಧಿಸಿರುತ್ತದೆ. ಆದ್ದರಿಂದ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಒದಗಿಸಲಾಗುವ ಶಿಕ್ಷಣವು ವಿದ್ಯಾರ್ಥಿಯ ಜೀವನಕ್ಕೆ ಪೂರಕವಾಗಿ ಸ್ಪಂದಿಸುವಂತಿರಬೇಕೇ ಹೊರತು ವಾಸ್ತವತೆಗಳಿಂದ ದೂರವಾದ ಅಥವಾ ಅವರ ಸುತ್ತಲಿನ ಪರಿಸರದಲ್ಲಿನ ಸಮಸ್ಯೆಗಳಿಂದ ಪ್ರಮುಖವಾಗಿರುವ ಆಚರಣೆಯಾಗಿರುವುದು ತರವಲ್ಲ. ಗುಣಮಟ್ಟವನ್ನು ಅಳೆಯುವಾಗ ಶಿಕ್ಷಣದಲ್ಲಿ ಯಾವ ರೀತಿಯ ಬೋಧನೆ ಇರಬೇಕು, ಯಾರಿಗೆ

Digitised by Bharatavani, CIIL

ಬೋಧಿಸಬೇಕು, ಹೇಗೆ ಬೋಧಿಸಬೇಕು ಮತ್ತು ಯಾವ ಉದ್ದೇಶಕ್ಕಾಗಿ ಬೋಧಿಸಬೇಕು ಎಂದು ಸ್ಪಷ್ಟವಾಗಿ ಕಾರ್ಯಾಚರಣೆಯ ಮೂಲಕ ಗ್ರಹಿಸಿದಾಗ ಮಾತ್ರ ಪ್ರಸ್ತುತತೆಯ ಬಗ್ಗೆ ಇರುವ ಕಾಳಜಿ ಮತ್ತು ಗುಣಮಟ್ಟದ ಬಗ್ಗೆ ಇರುವ ಕಾಳಜಿ ಪರಸ್ಪರ ಸ್ಪಂದಿಸಲು ಸಾಧ್ಯ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಪುನರ್ ವ್ಯಾಖ್ಯಾನಿಸಲಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಹಾಜರಾತಿ ಮತ್ತು ದಾಖಲಾತಿಗಳನ್ನೂ ಮೀರಿ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ನೀಡುವುದಕ್ಕೆ ಹೆಚ್ಚು ಪ್ರಾಧಾನ್ಯ ನೀಡಲಾಗಿದೆ. ಪ್ರಾಥಮಿಕ ಶಿಕ್ಷಣದ ಗುಣಮಟ್ಟದಲ್ಲಿನ ನ್ಯೂನತೆಯನ್ನು ಸರಿಪಡಿಸಲು ಯಾವುದೇ ಒಂದು ನಿರ್ದಿಷ್ಟ ಪರಿಹಾರೋಪಾಯವನ್ನು ಸೂಚಿಸಲಾಗುವುದಿಲ್ಲ. ಆದಾಗ್ಯೂ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಸಾಕಾರಗೊಳಿಸುವ ಕೆಲವು **ನಿರ್ದೇಶಕ ಸೂತ್ರಗಳನ್ನು ಉಲ್ಲೇಖಿಸಬಹುದು. ಈ ಸೂತ್ರಗಳು ಇಂತಿವೆ:**

1. ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾದ ಸೂಕ್ತ ಪ್ರಮಾಣದ ಮಾನವ ಸಂಪನ್ಮೂಲ ಮತ್ತು ಮೂಲಭೂತ ರಚನೆಗಳನ್ನು ಒದಗಿಸುವುದು.
2. ಸುಧಾರಿತ ಪಠ್ಯಕ್ರಮ ಮತ್ತು ಸುಧಾರಿತ ಕಲಿಕಾ–ಬೋಧನಾ ಸಾಮಗ್ರಿಗಳನ್ನು ಒದಗಿಸುವುದು.
3. ಶಿಶು ಕೇಂದ್ರಿತ ಬೋಧನಶಾಸ್ತ್ರವನ್ನು ಅನುಸರಿಸುವುದರ ಮೂಲಕ ಸುಧಾರಿತ ಗುಣಮಟ್ಟದ ಬೋಧನೆ–ಕಲಿಕಾ ಪ್ರಕ್ರಿಯೆಯನ್ನು ಅಳವಡಿಸುವುದು.
4. ಶಿಕ್ಷಕರ ಅಭಿವೃದ್ಧಿಗಾಗಿ ಹೆಚ್ಚಿನ ಗಮನ ನೀಡುವುದು.
5. ಕಲಿಕಾ ಅಭ್ಯರ್ಥಿಗಳ ಸಾಧನಾ ಮಟ್ಟವನ್ನು ನಿರ್ಧರಿಸುವ ವಿಧಾನಗಳನ್ನು ಗುರುತಿಸಲು ಹೆಚ್ಚಿನ ಗಮನ ನೀಡುವುದು. ಅಂದರೆ ಮೌಲ್ಯಮಾಪನದ ವಿನ್ಯಾಸಗಳಿಗೆ ಗಮನ ನೀಡಿಕೆ.

ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಲು ಪ್ರವೇಶ ಸಾಧನ–ಪ್ರಕ್ರಿಯೆ–ಫಲಿತಾಂಶದ ಪರಿಕಲ್ಪನಾ ಚೌಕಟ್ಟನ್ನು (Paradiam) ಅನುಸರಿಸಲಾಗುತ್ತದೆ. ಇದನ್ನು ಹೀಗೆ ನಿರೂಪಿಸಬಹುದು.

**ಸುಧಾರಿತ ಅಧೋರಚನೆಗಳು ಹಾಗೂ ಮಾನವ ಸಂಪನ್ಮೂಲಗಳು**

ಈಗಾಗಲೇ ಹೇಳಿರುವಂತೆ ಭಾರತ ಸರ್ಕಾರವು 1990ರಲ್ಲಿ ಆಪರೇಷನ್ ಕಪ್ಪುಹಲಗೆ ಯೋಜನೆಯನ್ನು ಜಾರಿಗೊಳಿಸಿದ್ದು ಪ್ರತಿಯೊಂದು

| | |
|---|---|
| **ಪ್ರವೇಶ ಸಾಧನ** | → ಮೂಲಭೂತ ಸೌಕರ್ಯಗಳು ಭೌತಿಕ ಮಾನವ ಸಂಪನ್ಮೂಲಗಳ ಪೂರೈಕೆ<br>→ ಸುಧಾರಿತ ಪಠ್ಯಕ್ರಮ ಮತ್ತು ಕಲಿಕಾ–ಬೋಧನಾ ಪರಿಕರಗಳ ಪೂರೈಕೆ |
| **ಪ್ರವೇಶ ಸಾಧನ** | → ಸುಧಾರಿತ ಕಲಿಕಾ–ಬೋಧನಾ ಪ್ರಕ್ರಿಯೆ<br>→ ಕಲಿಕೆಗೆ ಬೋಧನೆಗೆ ಸೂಕ್ತ ಸಮಯಾವಕಾಶ<br>→ ಶಿಕ್ಷಕರ ಅಭಿವೃದ್ಧಿ |
| **ಪ್ರವೇಶ ಸಾಧನ** | → ಕಲಿಕಾ ಅಭ್ಯರ್ಥಿಗಳ ಸಾಧನಾ ಮಟ್ಟ<br>→ ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟದ ಸುಧಾರಣೆ |

ಶಾಲೆಗೂ ಮೂಲ ಅಧೋರಚನೆಗಳನ್ನು ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸಲು ಆಯೋಜಿಸಿತ್ತು. ಪ್ರತಿಯೊಂದು ಶಾಲೆಗೂ ಎರಡು ಕ್ಲಾಸ್ ರೂಮುಗಳು ಮತ್ತು ಇಬ್ಬರು ಶಿಕ್ಷಕರು ಹಾಗೂ ಕನಿಷ್ಠ ಕಲಿಕಾ–ಬೋಧನಾ ಸಾಮಗ್ರಿಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿತ್ತು. ಪ್ರಾಥಮಿಕ ಶಿಕ್ಷಣದಲ್ಲಿ ಮೂಲಭೂತ ಸೌಕರ್ಯಗಳನ್ನು ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸಲು ಡಿಪಿಇಪಿ ಯೋಜನೆಯಡಿಯಲ್ಲೂ ಉದ್ದೇಶಿಸಲಾಗಿತ್ತು. ಈ ಯೋಜನೆಯಲ್ಲಿ ಉತ್ತಮ ಗುಣಮಟ್ಟದ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚು ಪ್ರಾಧಾನ್ಯ ನೀಡಲಾಗಿತ್ತು. ಈ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಚಿಸಲಾದ ಗ್ರಾಮ ಶಿಕ್ಷಣ ಸಮಿತಿ ಯೋಜನೆಯ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಶೈಕ್ಷಣಿಕ ಸೌಕರ್ಯಗಳು ಹೆಚ್ಚಾದಂತೆಲ್ಲಾ ಕ್ರಮೇಣ ಶಿಕ್ಷಕರ ಸಂಖ್ಯೆಯೂ ಹೆಚ್ಚಾಗತೊಡಗಿತು. ಪ್ರತಿಯೊಂದು ಶಾಲೆಗೂ ಇಬ್ಬರು ಶಿಕ್ಷಕರನ್ನು ಒದಗಿಸುವುದು ಸರ್ಕಾರದ ಧ್ಯೇಯವಾಗಿರುತ್ತದೆ.

Digitised by Bharatavani, CIIL

ಸರ್ವ ಶಿಕ್ಷಣ ಅಭಿಯಾನದ ಅನುಷ್ಠಾನದೊಂದಿಗೆ 300ಕ್ಕೂ ಹೆಚ್ಚು ಜನಸಂಖ್ಯೆ ಇರುವ ಪ್ರತಿಯೊಂದು ಗ್ರಾಮಕ್ಕೂ ಕಡ್ಡಾಯವಾಗಿ ಒಂದು ಪ್ರಾಥಮಿಕ ಶಾಲೆಯನ್ನು ತೆರೆಯಲಾಯಿತು. ಒಂದುವೇಳೆ ಪ್ರಾಥಮಿಕ ಶಾಲೆಯು ಶಿಥಿಲಾವಸ್ಥೆಯಲ್ಲಿದ್ದ ಪಕ್ಷದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲೇ ಕಟ್ಟಡಗಳ ದುರಸ್ತಿ ಕಾರ್ಯವನ್ನೂ ಕೈಗೊಳ್ಳಬಹುದು. ಪ್ರತಿ ಎರಡು ಪ್ರಾಥಮಿಕ ಶಾಲೆಗಳಿಗೆ ಒಂದು ಹಿರಿಯ ಪ್ರಾಥಮಿಕ ಶಾಲೆ ಹೊಂದಿರುವುದು ಈ ಯೋಜನೆಯ ಧ್ಯೇಯವಾಗಿರುತ್ತದೆ. ಶಿಕ್ಷಕರನ್ನು ಕುರಿತು ಹೇಳುವುದಾದರೆ ಪ್ರತಿಯೊಂದು ಶಾಲೆಗೂ ಇಬ್ಬರು ಶಿಕ್ಷಕರು ಅಥವಾ 40 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು ನೇಮಿಸಲಾಗುತ್ತದೆ. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪಠ್ಯಕ್ರಮದ ಆಧಾರದ ಮೇಲೆ ಮತ್ತು ಬೋಧನೆಯ ಹೊರೆಯನ್ನು ಪರಿಗಣಿಸಿ ಶಿಕ್ಷಕರನ್ನು ಒದಗಿಸಲಾಗುತ್ತದೆ. ಮೂಲಭೂತ ಸೌಕರ್ಯಗಳ ಸುಧಾರಣೆ ಮತ್ತು ಉತ್ತಮ ಗುಣಮಟ್ಟದ ಕಲಿಕಾ-ಬೋಧನಾ ಸಾಮಗ್ರಿಗಳನ್ನು ಒದಗಿಸುವುದರ ಮೂಲಕ ಬೋಧನೆಯ ಕಲಿಕೆ ವಾತಾವರಣವನ್ನು ಉತ್ತಮಗೊಳಿಸಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದ ಮೇಲೆ ಇತ್ಯಾತ್ಮಕ ಪರಿಣಾಮ ಬೀರುವ ಪ್ರಕ್ರಿಯೆಯನ್ನು ಸಂಶೋಕರು ಗುರುತಿಸಿದ್ದಾರೆ. (ಗೋವಿಂದ-ವರ್ಗಿಸ್ 1993).

### ಸುಧಾರಿತ ಪಠ್ಯಕ್ರಮಕ್ಕೆ ಹಾಗೂ ಬೋಧನಾ ಕಲಿಕಾ ಸಾಮಗ್ರಿಗಳು ಪೂರೈಕೆ

ಪಠ್ಯಕ್ರಮ ಸುಧಾರಣೆ ನಿರಂತರ ಪ್ರಕ್ರಿಯೆಯಾಗಿದ್ದು ಪ್ರಾಥಮಿಕ ಹಂತದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶಿಕ್ಷಣ ಶಾಸ್ತ್ರೀಯ ಧೋರಣೆಗಳಿಗೆ ಪೂರಕವಾಗಿ ಸಂವೇದನಾಶೀಲತೆ ಮತ್ತು ಉತ್ತರದಾಯಿತ್ವವನ್ನು ಹೊಂದಿರಬೇಕಾದ್ದು ಅತ್ಯವಶ್ಯಕ. ರಾಷ್ಟ್ರೀಯ ಧ್ಯೇಯಗಳನ್ನು ಶೈಕ್ಷಣಿಕ ಅನುಭವಗಳಿಗೆ ಬಳಸಿಕೊಳ್ಳುವ ಸಾಧನವಾಗಿಯೇ ಪಠ್ಯಕ್ರಮವನ್ನು ಪರಿಗಣಿಸಬೇಕಾಗುತ್ತದೆ. 1986ರ ರಾಷ್ಟ್ರೀಯ ಶಿಕ್ಷಣನೀತಿಯು ರಾಷ್ಟ್ರೀಯ ಪಠ್ಯಕ್ರಮ ಸಂರಚನೆಯನ್ನಾಧರಿಸಿ ಪಠ್ಯಕ್ರಮವನ್ನು ಸೂಚಿಸಿದ್ದು ದೇಶಾದ್ಯಂತ ಸಮಾನ ಪಠ್ಯಕ್ರಮವನ್ನು ಅನುಸರಿಸಲು ಉದ್ದೇಶಿಸಿತ್ತು. ರಾಷ್ಟ್ರೀಯ ಶಿಕ್ಷಣ ನೀತಿ ಅದರ ಮತ್ತು ಕಾರ್ಯಯೋಜನಾ ಕ್ರಿಯೆಯನ್ನು ಅನುಸರಿಸುವ ನಿಟ್ಟಿನಲ್ಲಿ ಎನ್‌ಸಿಇಆರ್‌ಟಿ ಸಂಸ್ಥೆಯನ್ನು ರಾಷ್ಟ್ರಮಟ್ಟದ ಕೇಂದ್ರ ಪ್ರತಿನಿಧಿತ್ವ ಸಂಸ್ಥೆಯೆಂದು ಗುರುತಿಸಲಾಗಿದ್ದು ಪಠ್ಯ ಪುಸ್ತಕ ಮತ್ತು ಬೋಧನಾ ಸಾಮಗ್ರಿಗಳನ್ನು ಮುದ್ರಿಸಲು, ದಾಖಲಿಸುವ ಹೊಣೆಗಾರಿಕೆಯನ್ನು ಈ ಸಂಸ್ಥೆಗೆ ನೀಡಲಾಗಿತ್ತು. ರಾಜ್ಯಗಳು ಪಠ್ಯಕ್ರಮಗಳನ್ನು ಅನುಸರಿಸುವ ನಿಟ್ಟಿನಲ್ಲಿ ಈ ಸಾಮಗ್ರಿಗಳು ಸಂರಚನೆಯನ್ನು ಹಾಗೂ ಮಾದರಿಯನ್ನು ಒದಗಿಸುತ್ತವೆ. ಈ ಪಠ್ಯ ಸಾಮಗ್ರಿಗಳನ್ನು ರಾಜ್ಯ ಮಟ್ಟದ ಪ್ರಾಧಿಕಾರಗಳೇ ನಿರ್ಧರಿಸುತ್ತವೆ. ತನ್ಮೂಲಕ ಈ ಪ್ರಾಧಿಕಾರಗಳು ತಮ್ಮದೇ ಆದ ಕಲಿಕಾ-ಬೋಧನಾ ಪಠ್ಯಗಳನ್ನು ರೂಪಿಸುತ್ತವೆ. 1979ರಲ್ಲಿ ಒಂದು ಪಠ್ಯಕ್ರಮವನ್ನು ಜಾರಿಗೊಳಿಸಿದ ಎನ್‌ಸಿಇಆರ್‌ಟಿ, 1986ರಲ್ಲಿ ರಾಷ್ಟ್ರೀಯ ಶಿಕ್ಷಣನೀತಿ ಯೋಜನಾ ಕ್ರಮವನ್ನು ಜಾರಿಗೊಳಿಸಿದ ನಂತರ 1988ರಲ್ಲಿ ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ರೂಪಿಸಿತ್ತು. ಈ ಪರಿಷ್ಕೃತ ಪಠ್ಯಕ್ರಮವು (1988) ಆಧುನಿಕತೆ ಮತ್ತು ಪ್ರಸ್ತುತತೆಯ ದೃಷ್ಟಿಯಿಂದ ಪಠ್ಯಕ್ರಮದ ಪ್ರಮಾಣವನು ಕಡಿಮೆ ಮಾಡಿತ್ತು.

ರಾಷ್ಟ್ರೀಯ ಶಿಕ್ಷಣನೀತಿ 1986 ಕಾರ್ಯಯೋಜನೆಯು ಕಲಿಕೆಯ ಕನಿಷ್ಠ ಮಟ್ಟಗಳನ್ನು ಶಾಲಾ ಶಿಕ್ಷಣದ ಪ್ರತಿ ಹಂತದಲ್ಲೂ ನಿರ್ಧರಿಸಿತ್ತು. ಗುಣಮಟ್ಟವನ್ನು ಹೆಚ್ಚಿಸುವ ಮೂಲಕ ಸಮಾನತೆಯನ್ನೂ ಕಾಪಾಡುವುದು ಕಲಿಕೆಯ ಕನಿಷ್ಠಮಟ್ಟಗಳ ಉದ್ದೇಶವಾಗಿತ್ತು. ಈ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣದ ಪ್ರತಿ ಹಂತದಲ್ಲೂ ಕಲಿಕೆಯ ಪರಿಣಾಮವನ್ನು ಸ್ಪರ್ಧಾತ್ಮಕತೆ ಅಥವಾ ಕಲಿಕಾ ಹಂತದ ಮೂಲಕ ನಿರ್ಧರಿಸಲಾಗುತ್ತದೆ. ಪ್ರಾಥಮಿಕ ಹಂತದ ಕಲಿಕೆಯ ಕನಿಷ್ಠ ಮಟ್ಟವನ್ನು ಎನ್‌ಸಿಇಆರ್‌ಟಿ 1991ರಲ್ಲಿ ಸಿದ್ಧಪಡಿಸಿತ್ತು. ಪ್ರಾಥಮಿಕ ಶಿಕ್ಷಣದಲ್ಲಿ ಮಹತ್ತರ ಹೆಜ್ಜೆಯಾಗಿರುವ ಈ ನೀತಿಯ ಫಲವಾಗಿ ದೇಶದ ಬಹುತೇಕ ರಾಜ್ಯಗಳಲ್ಲಿ ಬೋಧನಾ ಪಠ್ಯಗಳನ್ನು ಸಿದ್ಧಪಡಿಸುವುದು ಸಾಧ್ಯವಾಗಿದೆ.

ಎನ್‌ಸಿಇಆರ್‌ಟಿ 2000ದ ಇಸವಿಯಲ್ಲಿ ಶಾಲಾ ಶಿಕ್ಷಣಕ್ಕಾಗಿ ಸಿದ್ಧಪಡಿಸಿದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸ್ವಾತಂತ್ರ್ಯೋತ್ತರ ಭಾರತದಲ್ಲಿ ತೃತೀಯ ಪ್ರಯತ್ನವಾಗಿದೆ. ದೇಶಾದ್ಯಂತ ದೀರ್ಘಕಾಲಿಕ ಸಂವಾದ ಮತ್ತು ಪಾಲ್ಗೊಳ್ಳುವಿಕೆಯ ಮೂಲಕ ವೃತ್ತಿಪರವಾಗಿ ರೂಪಿಸಲಾದ ಪಠ್ಯಕ್ರಮ ಇದಾಗಿದೆ. ಪೂರ್ವ ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತದವರೆಗೆ ಎಲ್ಲಾ ಹಂತಗಳಿಗೂ ಪೂರಕವಾಗಿರುವ ಈ ಪಠ್ಯಕ್ರಮದ ಚೌಕಟ್ಟಿನಲ್ಲಿ ದೇಶದಾದ್ಯಂತ ವ್ಯಕ್ತವಾದ ಸರ್ವ ಸಮ್ಮತಿಯೂ ಬಿಂಬಿತವಾಗಿರುತ್ತದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸಮಾನತೆ, ಪ್ರಸ್ತುತತೆ ಮತ್ತು ಉತ್ಕೃಷ್ಟತೆಯನ್ನು ತನ್ನ ಆಧಾರ ಸ್ತಂಭಗಳಾಗಿ ಪರಿಗಣಿಸುತ್ತದೆ. ಪಠ್ಯಕ್ರಮದ ಅತಿಯಾದ ಹೊರೆಯನ್ನು ನೀಗಿಸಲು ಅಮೂಲ್ಯ ಸಲಹೆಗಳನ್ನು ಒದಗಿಸುವ ಈ ಚೌಕಟ್ಟು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕಲಿಕೆಯ ಕನಿಷ್ಠ ಮಟ್ಟಗಳನ್ನು ಅನುಸರಿಸುತ್ತದೆ. ಮಕ್ಕಳು ತಮ್ಮ ಜೀವನದ ಸವಾಲುಗಳನ್ನು ಧೈರ್ಯವಾಗಿ ಎದುರಿಸಲು ನೆರವಾಗುವಂತೆ ಸೂಕ್ತ ಕೌಶಲ್ಯಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಶಿಶು ಕೇಂದ್ರಿತ ಬೋಧನ ಶಾಸ್ತ್ರವನ್ನು ಅನುಸರಿಸಲು ಈ ಯೋಜನೆ ಉದ್ದೇಶಿಸುತ್ತದೆ.

### ಬೋಧನೆ ಕಲಿಕೆ ಸುಧಾರಿತ ಗುಣಮಟ್ಟ:

ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಇಡೀ ಶಿಕ್ಷಣ ಕ್ಷೇತ್ರದ ಬೋಧನ ಶಾಸ್ತ್ರದ ನಿಲುವು (Vision) ಪ್ರಮುಖ ಪಾತ್ರ ವಹಿಸುತ್ತದೆ. ಇದರಲ್ಲಿ ಬೋಧನೆ ಕಲಿಕೆಯ ಪ್ರಕ್ರಿಯೆಯೂ ಮಹತ್ವದ್ದಾಗಿದೆ. ಬೋಧನೆಯ ಧ್ಯೇಯಗಳನ್ನು ಪ್ರಮಾಣೀಕರಿಸಬಹುದಾದ ಕಲಿಕಾ ಪರಿಣಾಮಗಳಾಗಿ ಪರಿವರ್ತಿಸುವುದು ಕ್ಲಾಸ್ ತರಗತಿಗಳಲ್ಲಿ ನಡೆಯುವ ಪ್ರಕ್ರಿಯೆಯೇ

Digitised by Bharatavani, CIIL

**ಕೋಷ್ಟಕ 5**

**ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2000**

| ಪ್ರಾಥಮಿಕ ಪಠ್ಯಕ್ರಮದ ಮುಖ್ಯ ಲಕ್ಷಣಗಳು | ಪ್ರಾಥಮಿಕ ಶಿಕ್ಷಣ (8 ವರ್ಷ)<br>ಪ್ರಾಥಮಿಕ ಹಂತ (5 ವರ್ಷ) | ಹಿರಿಯ ಪ್ರಾಥಮಿಕ (3 ವರ್ಷ) |
|---|---|---|
| * ಪಠ್ಯಕ್ರಮದ ಹೊರೆ ಇಳಿತ<br>* ನವೀನ ಆರೋಗ್ಯಪೂರ್ಣ ಉತ್ಪಾದನೆಯ ಜೀವನ ಕ್ರಮದ ಪರಿಚಯ<br>* ಪರಿಸರ ವಿಜ್ಞಾನ (Environment Science EVS) ಒಂದು ಸಮಗ್ರ ವ್ಯವಸ್ಥೆಯಾಗಿ ಜಾರಿ.<br>* ಮೌಖಿಕ ಶಿಕ್ಷಣದ ಮೂಲಕ ಭಾಷಾ ಕಲಿಕೆಯನ್ನು ಸುಧಾರಿಸುವ ನೀತಿ.<br>* ಕೌಶಲ್ಯ ಆಧಾರಿತ, ಸ್ವಯಂಪ್ರೇರಿತ ಬೋಧನಾ ಕಲಿಕಾ ಪ್ರಕ್ರಿಯೆಗೆ ಹೆಚ್ಚಿನ ಮಹತ್ವ.<br>* ಕಲಿಕಾ ಅಭ್ಯರ್ಥಿ ಕೇಂದ್ರಿತ ಕಾರ್ಯಶೀಲ ಕಲಿಕಾ ಸಾಮಗ್ರಿಗಳು.<br>* ಮಕ್ಕಳ ಸುತ್ತಲಿನ ಪರಿಸರಕ್ಕೆ ಪೂರಕವಾದಂತಹ ಶಿಕ್ಷಣ ನೀಡುವ ಮೂಲಕ ಕಲಿಕೆಯನ್ನು ಅರ್ಥಪೂರ್ಣವಾಗಿಸುವುದು<br>* ಮೌಲ್ಯಮಾಪನವನ್ನು ಶಿಶುಸ್ನೇಹಿಯನ್ನಾಗಿ ಮಾಡುವುದು, ಒತ್ತಡರಹಿತವಾಗಿ ಮಾಡುವುದು.<br>* ಕಲಿಕೆಗೆ ಸ್ಥಳೀಯ ಸನ್ನಿವೇಶವನ್ನು ಆಧರಿಸುವುದು.<br>* ಕಲಿಕೆ–ಬೋಧನಾ ಸಾಮಗ್ರಿಗಳಲ್ಲಿ ಸೂಕ್ತ ಮೌಲ್ಯಗಳನ್ನು ಅಂತರ್ಗತಗೊಳಿಸುವುದು. | ಒಂದು ಮತ್ತು ಎರಡನೆಯ ತರಗತಿಗೆ ಪಠ್ಯಕ್ರಮ<br>* ಒಂದೇ ಭಾಷೆ (ಮಾತೃಭಾಷೆ ಅಥವಾ ಸ್ಥಳೀಯ ಭಾಷೆ)<br>* ಗಣಿತ<br>* ನವೀನ ಆರೋಗ್ಯಪೂರ್ಣ ಉತ್ಪಾದನೀಯ ಜೀವನ ಕ್ರಮದ ಪರಿಚಯ (Art of Health and Productive living AHPL)<br>3ರಿಂದ 5ನೆಯ ತರಗತಿಯವರೆಗೆ<br>* ಒಂದು ಭಾಷೆ (ಮಾತ್ರಭಾಷೆ ಅಥವಾ ಸ್ಥಳೀಯ ಭಾಷೆ)<br>* ಗಣಿತ<br>* ನವೀನ ಆರೋಗ್ಯಪೂರ್ಣ ಉತ್ಪಾದನೀಯ ಜೀವನಕ್ರಮದ ಪರಿಚಯ (Art of Health and Productive living AHPL)<br>* ಪರಿಸರ ಅಧ್ಯಯನ<br>* ಸೌಕರ್ಯಗಳು ಲಭ್ಯವಿದ್ದೆಡೆ ಆಂಗ್ಲ ಭಾಷೆಯನ್ನು ದ್ವಿತೀಯ ಭಾಷಾ ಪಠ್ಯವಾಗಿ ಅಳವಡಿಸಬಹುದು. | * ಮೂರು ಭಾಷೆಗಳು– ಮಾತ್ರಭಾಷೆ – ಸ್ಥಳೀಯ ಭಾಷೆ ಆಧುನಿಕ ಭಾರತೀಯ ಭಾಷೆ –ಆಂಗ್ಲ ಭಾಷೆ.<br>* ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನ<br>* ಸಾಮಾಜಿಕ ವಿಜ್ಞಾನ<br>* ಶಿಕ್ಷಣ<br>* ಕಲಾ ಶಿಕ್ಷಣ (ಲಲಿತಕಲೆ, ದೃಶ್ಯ ಮತ್ತು ಶ್ರವ್ಯ)<br>* ಆರೋಗ್ಯ ಮತ್ತು ದೈಹಿಕ ಶಿಕ್ಷಣ (ಕ್ರೀಡೆಗಳು, ಆಟಗಳು, ಯೋಗ, ಎನ್‌ಸಿಸಿ ಮತ್ತು ಸ್ಕೌಟ್ ಗೈಡ್ಸ್) |

Digitised by Bharatavani, CIIL

ಆಗಿರುತ್ತದೆ. ಸುಧಾರಿತ ಬೋಧನಾ ಕಲಿಕಾ ಪ್ರಕ್ರಿಯೆಯು ಪ್ರಧಾನವಾಗಿ ಪಾಠ ಮಾಡುವ ಸಂದರ್ಭಗಳಲ್ಲಿನ ಶಿಕ್ಷಕರ ಸಿದ್ಧತೆಗಳನ್ನು, ಬೋಧನಾ ಯೋಜನೆಗಳ ಸಿದ್ಧತೆಗಳನ್ನು ಹಾಗೂ ಕ್ಷೇತ್ರಾಧಾರಿತ ಬೋಧನಾ ಕಲಿಕಾ ಸಾಮಗ್ರಿಗಳನ್ನು ಅವಲಂಬಿಸಿರುತ್ತದೆ. ತರಗತಿಗಳ ಚಟುವಟಿಕೆ ತರಗತಿಗಳು ಸಂದರ್ಭದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರಲ್ಲಿ ಶಿಶು ಕೇಂದ್ರಿತ, ಆಧಾರಿತ, ವ್ಯಕ್ತಿಗಳ ಬೋಧನಾ ಮಾದರಿಗಳು ಮಹತ್ತರ ಪಾತ್ರವಹಿಸುತ್ತದೆ. ದೇಶದಲ್ಲಿ ಬಹುತೇಕ ತರಗತಿಗಳು ಬಹು ಹಂತದ ಸನ್ನಿವೇಶವನ್ನು ಎದುರಿಸುತ್ತಿವೆ. ತರಗತಿಗಳಲ್ಲಿ ವಿಭಿನ್ನ ವಯೋಮಿತಿಯ, ವಿಭಿನ್ನ ಸಾಮರ್ಥ್ಯದ, ವಿಭಿನ್ನ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆಯ ಮಕ್ಕಳನ್ನು ಕಾಣಬಹುದು. ಇಂತಹ ಮಕ್ಕಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸೂಕ್ತ ತರಬೇತಿ ನೀಡುವುದು ಅಗತ್ಯವಾಗಿರುತ್ತದೆ. ಸಾಮರ್ಥ್ಯ ವೃದ್ಧಿಯ ನಿಟ್ಟಿನಲ್ಲಿ ಡಿಪಿಇಪಿ ಮುಂತದ ಯೋಜನೆಗಳು ವ್ಯಾಪಕ ಕ್ರಮಗಳನ್ನು ಕೈಗೊಂಡಿದ್ದು ಬೋಧನಾ ಕಲಿಕಾ ಬೋಧನಾ ಶಾಸ್ತ್ರವನ್ನು ಅನುಸರಿಸುವ ಮೂಲಕ ಈ ನೀತಿಯನ್ನು ತರಗತಿಗಳಲ್ಲೂ ಅಳವಡಿಸುವ ಪ್ರಯತ್ನ ಮಾಡಲಾಗಿದೆ.

ತರಗತಿಗಳನ್ನು ಸುಸಂಗತವಾಗಿ ನಡೆಸುವುದರಲ್ಲಿ ತೊಡಕಾಗುವ ಅಂಶವೆಂದರೆ ಬಹು ಹಂತದ ವಿದ್ಯಾರ್ಥಿಗಳಿರುವ ಸನ್ನಿವೇಶ. ಭಾರತದ ಶೇ, 84ರಷ್ಟು ಪ್ರಾಥಮಿಕ ಶಾಲೆಗಳ ತರಗತಿಗಳಲ್ಲಿ ಈ ಸನ್ನಿವೇಶ ಇದ್ದು ಒಬ್ಬರೇ ಶಿಕ್ಷಕರು ಒಂದಕ್ಕೂ ಹೆಚ್ಚು ತರಗತಿಗಳಿಗೆ ಮತ್ತು ಕೆಲವೊಮ್ಮೆ ಒಂದಕ್ಕೂ ಹೆಚ್ಚು ಪಠ್ಯವನ್ನು ಏಕಕಾಲಕ್ಕೆ ಪಾಠ ಮಾಡಬೇಕಾಗುತ್ತದೆ. ಈ ಸನ್ನಿವೇಶವನ್ನು ನಿಭಾಯಿಸಲು ಕೈಗೊಳ್ಳಲಾದ ಅನೇಕ ಯೋಜನೆಗಳು, ಉದಾಹರಣೆಗೆ, ಮಧ್ಯಪ್ರದೇಶದ ಶಿಕ್ಷಕ್ ಸಮಾಖ್ಯ, ಮಹಾರಾಷ್ಟ್ರದ ಆನಂದದಾಯಿ ಶಿಕ್ಷಣ್, ರಾಜಸ್ಥಾನದ ಗುರುಮಿತ್ರ ಯಜ್ಞ ಇಲ್ಲಿ ಉಲ್ಲೇಖನಾರ್ಹ. ಮೇಲಾಗಿ ಋಷಿ ವ್ಯಾಲಿ ಶಿಕ್ಷಣ ಟ್ರಸ್ಟ್ ಆಂಧ್ರಪ್ರದೇಶದ ಒಂದು ಸಣ್ಣ ಬ್ಲಾಕ್ ಮಟ್ಟದಲ್ಲಿ ಸುಧಾರಿತ ಬೋಧನಾ-ಕಲಿಕಾ ಪ್ರಕ್ರಿಯೆಗೆ ಆಸಕ್ತಿಕರ ಮಾದರಿಗಳನ್ನು ಮತ್ತು ಬಹು ವರ್ಗೀಯ ಸನ್ನಿವೇಶವನ್ನು ನಿರ್ವಹಿಸುವುದಕ್ಕಾಗಿ ವಿಕಾಸಗೊಳಿಸಿದೆ.

**ಶಿಕ್ಷಕ ಅಭಿವೃದ್ಧಿಯತ್ತ ಗಮನ:**

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವವುಳ್ಳದ್ದಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಕಠಿಣ ಪರಿಸ್ಥಿತಿಗಳಲ್ಲಿ ತಮ್ಮ ಕರ್ತವ್ಯ ನಿರ್ವಹಿಸುವ ಶಿಕ್ಷಕರಿಗೆ ಅನೇಕ ಸಂದರ್ಭಗಳಲ್ಲಿ ಉತ್ತೇಜನಕಾರಿ ಪ್ರೇರಣೆ ದೊರೆಯುವುದೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರಿಂದ ಉತ್ತಮ ಸಾಧನೆಗಳನ್ನು ನಿರೀಕ್ಷಿಸುವುದು ಕಷ್ಟವಾಗುತ್ತದೆ. ಶಿಕ್ಷಕರ ಸಾಮರ್ಥ್ಯ ವೃದ್ಧಿಗೆ ಅಗತ್ಯವಾಗಿ ನೀಡಬೇಕಾದ ತಾಂತ್ರಿಕ ನೀತಿಯಲ್ಲಿ ಶಿಫಾರಸ್ಸು ಮಾಡಲಾಗಿದೆ. ಈ ನೀತಿಯನ್ನು ಕೇಂದ್ರ ಸರ್ಕಾರದ ಪ್ರಾಯೋಜಿತ ಶಿಕ್ಷಕರ ತರಬೇತಿ ಯೋಜನೆಯ ಮೂಲಕ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿಯಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಅವಶ್ಯವಾದ ಪರಿಕರಗಳನ್ನು ಪೂರೈಸಲು, ವಿಶೇಷವಾಗಿ ಜಿಲ್ಲಾ ಮಟ್ಟದಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರ ಅಗತ್ಯತೆಗಳನ್ನು ಪೂರೈಸಲು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ (District Institutes of Education and Training DIET) ಆರಂಭಿಸಲಾಯಿತು. ಪ್ರಸ್ತುತ ಈ ಯೋಜನೆಯನ್ನು 424 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿದ್ದು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟದ ಸುಧಾರಣೆಯ ನಿಟ್ಟಿನಲ್ಲಿ ಒಂದು ಮಹತ್ತರವಾದ ದಿಟ್ಟ ಹೆಜ್ಜೆಯಾಗಿದೆ. ಡಯೆಟ್‌ಗಳಿಗೆ ರಾಜ್ಯಮಟ್ಟದಲ್ಲಿ ಎಸ್‌ಸಿಇಆರ್‌ಟಿ ಮತ್ತು ರಾಷ್ಟ್ರಮಟ್ಟದಲ್ಲಿ ಎನ್‌ಸಿಇಆರ್‌ಟಿ ಸಂಸ್ಥೆಗಳು ಸೂಕ್ತ ನೆರವನ್ನು ಒದಗಿಸುತ್ತವೆ.

ವಿಕೇಂದ್ರೀಕರಣ ನೀತಿಯನ್ನು ಇನ್ನೂ ಹಲವು ಯೋಜನೆಗಳ ಮುಖಾಂತರ ವಿಸ್ತರಿಸಲಾಗಿದ್ದು ಬ್ಲಾಕ್ ಸಂಪನ್ಮೂಲ ಕೇಂದ್ರಗಳು, (Block Resources Centre BRC) ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳನ್ನು (Cluster Resource Centre -CRC) ಆರಂಭಿಸಲಾಗಿದೆ. ಉಪ ಜಿಲ್ಲಾ ಮಟ್ಟದ ಈ ಯೋಜನೆಗಳ ಮುಖ್ಯ ಕಾರ್ಯಗಳೆಂದರೆ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿಯೇ ಆಗಿದೆ. ಈ ನಿಟ್ಟಿನಲ್ಲಿ ಅನೇಕ ಎನ್‌ಜಿಒಗಳೊಡನೆ ಅರ್ಥಪೂರ್ಣ ಸಂಪರ್ಕವನ್ನು ಸಾಧಿಸಲಾಗಿದ್ದು ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ, ಜಾಗೃತಿ ಮೂಡಿಸುವುದು ಮತ್ತು ಶಿಕ್ಷಕರಿಗೆ ಹೆಚ್ಚಿನ ಪ್ರೇರಣೆ ನೀಡುವುದು ಸಾಧ್ಯವಾಗಿದೆ.

ವ್ಯಾಪಕವಾದ ಸಾಂಸ್ಥಿಕ ಜಾಲವನ್ನು ರೂಪಿಸಲಾಗಿದ್ದರೂ ಸಹ ಶಿಕ್ಷಕರ ನಿರಂತರ ಜ್ಞಾನಾಭಿವೃದ್ಧಿ ಮತ್ತು ಪ್ರೇರಣೆಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸುವುದು ಕಷ್ಟಕರ ಎಂದು ಸಾಬೀತಾಗಿದೆ. ಶಾಲೆಗಳು ಮತ್ತು ಶಿಕ್ಷಕರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿರುವುದೂ ಇದಕ್ಕೆ ಕಾರಣವಾಗಿದೆ. ಈ ದೃಷ್ಟಿಯಿಂದಲೇ 1980ರಲ್ಲಿ ಮಹತ್ತರವಾದ ಒಂದು ಕ್ರಮ ಕೈಗೊಳ್ಳಲಾಯಿತು. ಈ ಯೋಜನೆಯ ಪ್ರಕಾರ ಶಾಲಾ ಶಿಕ್ಷಕರನ್ನು ಸುಲಭವಾಗಿ ತಲುಪಲು ದೂರ ಶಿಕ್ಷಣ ವ್ಯವಸ್ಥೆ ಮತ್ತು ಆಧುನಿಕ ತಂತ್ರಜ್ಞಾನವನ್ನು ಬಳಸಲಾರಂಭಿಸಲಾಯಿತು. ಪ್ರಾರಂಭಿಕವಾಗಿ ಈ ಯೋಜನೆಯನ್ನು ಎನ್‌ಸಿಇಆರ್‌ಟಿ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಪ್ರಾಥಮಿಕ ಶಿಕ್ಷಕರ ವಿಶೇಷ ಪ್ರೇರಣಾ ಯೋಜನೆಯ ಮೂಲಕ ಪ್ರಾಯೋಗಿಕವಾಗಿ ಅನುಸರಿಸಲಾಯಿತು. ನಂತರ ಎನ್‌ಸಿಇಆರ್‌ಟಿ – ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಮತ್ತು ಡಿಪಿಇಪಿ ಕಾರ್ಯಕ್ರಮಗಳ ಸಂಯುಕ್ತ ಕಾರ್ಯಾಚರಣೆಯ ಮೂಲಕ ಈ ಯೋಜನೆಯನ್ನು ಧೃವೀಕರಣಗೊಳಿಸಲಾಯಿತು. ಇದರ ಅನ್ವಯ ದೂರ ಶಿಕ್ಷಣ ತಂತ್ರಜ್ಞಾನದ ಮೂಲಕ ಅನೇಕ ಶಿಕ್ಷಕರಿಗೆ ಪರಿಣಾಮಕಾರಿಯಾದ ತರಬೇತಿ ನೀಡಲಾಯಿತು. ಆಧುನಿಕ ತಂತ್ರಜ್ಞಾನದ ಟೆಲಿ ಕಾನ್‌ಫರೆನ್ಸ್ ಮೂಲಕ ಪರಸ್ಪರ ಚರ್ಚೆ ನಡೆಸುವುದೂ ಮತ್ತು ಆಡಿಯೋ-ವಿಡಿಯೋ ತಂತ್ರಜ್ಞಾನಗಳನ್ನು ಶಿಕ್ಷಕರ ಪ್ರಗತಿಗೆ ಪೂರಕವಾಗಿ ಬಳಸಿಕೊಳ್ಳಲಾಯಿತು.

ಬಹು ಹಂತದ ಬೋಧನಾ ಕ್ರಮ "ರಿಷಿ ವ್ಯಾಲಿ ಪ್ರಯೋಗ"ದ

Digitised by Bharatavani, CIIL

ಪರಿಚಯ ರಿಷಿ ವ್ಯಾಲಿ ಶೈಕ್ಷಣಿಕ ಕೇಂದ್ರ ಏಕ ಶಿಕ್ಷಕ ಉಪ ಕೇಂದ್ರಗಳ ಪ್ರಯೋಗವೊಂದನ್ನು ಹಮ್ಮಿಕೊಂಡಿದ್ದು ಸಮಾಜದ ಅವಕಾಶ ವಂಚಿತ ಸಮುದಾಯಗಳ ಅಗತ್ಯತೆಗಳಿಗೆ ಸ್ಪಂದಿಸುತ್ತದೆ. ಈ ಶಾಲೆಗಳಲ್ಲಿ ಏಕ ಶಿಕ್ಷಕ ಶಾಲೆಗಳಲ್ಲಿ ಬೋಧಿಸುವ ಕಲಿಸುವ ಆಧುನಿಕ ವಿಧಾನಗಳನ್ನು ಅಳವಡಿಸಲಾಗಿದ್ದು ಈ ಪದ್ಧತಿಯ ಮುಖ್ಯ ಲಕ್ಷಣಗಳು ಹೀಗಿವೆ.

1. ಕಲಿಕಾ ಸಾಮಗ್ರಿಗಳ ಪ್ರದರ್ಶನ ಮತ್ತು ಶಿಕ್ಷಕರ ಪರಿವೀಕ್ಷಣೆಗೆ ಅನುಕೂಲವಾಗುವಂತಹ ಏಕ ತರಬೇತಿ ಕಟ್ಟಡದ ನಿರ್ಮಾಣ. ಗೋಡೆಗೆ ಕಪ್ಪುಬಣ್ಣ ಬಳಿಯುವ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಎತ್ತರದ, ತಗ್ಗಿನ ಕಪ್ಪುಹಲಗೆಗಳನ್ನು ಒದಗಿಸುವುದು. ಶಾಲೆಯನ್ನು ಸಮುದಾಯವೇ ನಡೆಸುವುದು
2. ಸ್ವಯಂ ಕಲಿಕೆ, ಕಾರ್ಯಚಟುವಟಿಕೆ ಆಧಾರಿತ, ಸಮೂಹ ಕಲಿಕೆಯ ಬೋಧನೆಯ ಮೂಲಕ ಸ್ಥಳೀಯ ಕಲಿಕಾ ಸಾಮಗ್ರಿಗಳನ್ನು ಬಳಸುವುದು.
3. ಸ್ಥಳೀಯವಾಗಿ ಲಭ್ಯವಿರುವ ಸಾಮಗ್ರಿಗಳ ಮೂಲಕ ಬೋಧನೆ ಮಾಡುವುದು ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು.
4. ಮಕ್ಕಳೇ ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳುವುದು.
5. ಬಹು ಹಂತದ ಸ್ವಯಂ-ಪ್ರೇರಿತ ಕಲಿಕೆಯನ್ನು ಪ್ರೋತ್ಸಾಹಿಸುವುದು.
6. ಸಾಮುದಾಯಿಕ ಭಾಗವಹಿಸುವಿಕೆ ಮೂಲಕ ಮೂಲಭೂತ ಸೌಕರ್ಯಗಳ ವೆಚ್ಚಗಳನ್ನು ತಗ್ಗಿಸುವುದು.
7. ಶಿಕ್ಷಕರ ವೇತನವನ್ನು ಸಮುದಾಯಗಳೇ ಭರಿಸುವುದು.
8. ಶಿಕ್ಷಕರಿಗೆ ತರಬೇತಿಯನ್ನು ರಿಷಿ ವ್ಯಾಲಿ ಕೇಂದ್ರವೇ ಒದಗಿಸುವುದು. ಪ್ರಾಥಮಿಕ ಶಿಕ್ಷಣ, ತರಗತಿ ನಿರ್ವಹಣೆ, ಪಠ್ಯಕ್ರಮ ನಿರ್ವಹಣೆ, ಬಹುಹಂತದ ಕಲಿಕೆ-ಬೋಧನೆಗೆ ಸಿದ್ಧತೆ ನಡೆಸುವುದು ತರಬೇತಿಯ ವಿಷಯಗಳು.

ಸರ್ವ ಶಿಕ್ಷಣ ಅಭಿಯಾನದಲ್ಲಿ ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಹೆಚ್ಚು ಪ್ರಾಮುಖ್ಯ ನೀಡಲಾಗಿದೆ. ಪ್ರಾಥಮಿಕ ಶಿಕ್ಷಕರಿಗೆ ಆರಂಭದಲ್ಲಿ 60 ದಿನಗಳ ಪರಿಚಯಾತ್ಮಕ ತರಬೇತಿ, ನಂತರದಲ್ಲಿ 20 ದಿನಗಳ ನಿರಂತರ ತರಬೇತಿಗಳನ್ನು ಒದಗಿಸಲು ಈ ಯೋಜನೆ ಹೆಚ್ಚು ಒತ್ತು ನೀಡುತ್ತದೆ. ಸಂಸತ್ತಿನ ಸಂವೈಧಾನಿಕ ಸಮಿತಿಯೊಂದರ ಅನುಮೋದನೆ ಪಡೆದ ನಂತರ ಶಿಕ್ಷಕರ ತರಬೇತಿಗಾಗಿ ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ (National Council for Teacher Education - NCTE) ಸ್ಥಾಪಿಸುವುದರ ಮೂಲಕ ಭಾರತದ ಶಿಕ್ಷಕರ ಗುಣಮಟ್ಟ ಮತ್ತು ಬೋಧನಾ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಿರುವುದನ್ನು ಕಾಣಬಹುದು.

**ಪ್ರಾಥಮಿಕ ಶಿಕ್ಷಕ ವಿಶೇಷ ದಿಶಾ ನಿರ್ದೇಶನ (Special Orientation for Primary Teachers SOPT) :** ಡಯೆಟ್ ಮತ್ತು ಆಪರೇಷನ್ ಕಪ್ಪುಹಲಗೆ ಕಾರ್ಯಕ್ರಮಗಳನ್ನು ರೂಪಿಸಿದ ಉದ್ದೇಶವೆಂದರೆ ಸೇವಾವಧಿಯಲ್ಲೇ ಶಿಕ್ಷಕರಿಗೆ ತರಬೇತಿ ನೀಡುವುದು ಮತ್ತು ಶಾಲೆಗಳಲ್ಲಿ ದೈಹಿಕ, ಮಾನವ ಸಂಪನ್ಮೂಲಗಳನ್ನು ವೃದ್ಧಿಸುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಸಮೂಹ ದೃಷ್ಟಿಕೋನದ ಪ್ರಾಥಮಿಕ ಶಿಕ್ಷಕ ನೀತಿಯನ್ನು ಜಾರಿಗೊಳಿಸಲಾಯಿತು. ಎನ್‌ಸಿಇಆರ್‌ಟಿ ಸಂಪನ್ಮೂಲ ಒದಗಿಸಿತ್ತು. ಶಿಕ್ಷಕರ ತರಬೇತಿಯ ವ್ಯಾಪಕ ಅಗತ್ಯತೆಗಳನ್ನು ಪೂರೈಸಲು 1993-94ರಲ್ಲಿ ಈ ಯೋಜನೆಯನ್ನು ಕೈಗೊಳ್ಳಲಾಯಿತು. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಗುಣಮಟ್ಟವನ್ನು ವೃದ್ಧಿಸಲು ಈ ಯೋಜನೆ ಸಹಾಯಕವಾಗಿತ್ತು. ಈ ಯೋಜನೆಯ ಮೂಲ ಧ್ಯೇಯ ಕನಿಷ್ಠ ಕಲಿಕಾ ಹಂತವನ್ನು ಸಾಧಿಸುವುದು ಮತ್ತು ಆಪರೇಷನ್ ಬ್ಲಾಕ್ ಬೋರ್ಡ್ ಯೋಜನೆಯನ್ನು ಸಾಕಾರಗೊಳಿಸುವುದೇ ಆಗಿತ್ತು. ಎನ್‌ಸಿಇಆರ್‌ಟಿ ಪ್ರಾಯೋಜಿಸಿ ನಿರ್ವಹಿಸಿದ ಈ ಯೋಜನೆ ರಾಜ್ಯ ಸರ್ಕಾರಗಳ ಸಹಾಯದೊಂದಿಗೆ ಬಹುಪಾಲು ಪ್ರಾಥಮಿಕ ಶಿಕ್ಷಕರಿಗೆ ತರಬೇತಿ ಒದಗಿಸಿತ್ತು. ಎನ್‌ಸಿಇಆರ್‌ಟಿ ಸ್ವ-ಬೋಧನಾ ತರಬೇತು ಸಾಮಗ್ರಿಗಳನ್ನು ಸಿದ್ಧಪಡಿಸಿತ್ತು. ಎಸ್‌ಒಪಿಟಿ ಯೋಜನೆಗೆ ಸಾಮಗ್ರಿ ಒದಗಿಸಲು ಟೆಲಿವಿಷನ್ ಸೌಲಭ್ಯ ಒದಗಿಸಲಾಯಿತು. ಸಾಂದರ್ಭಿಕ ವಿಷಯಗಳಲ್ಲಿ ಶಿಕ್ಷಕರನ್ನು ಸಂವೇದನಾಶೀಲರನ್ನಾಗಿ ಮಾಡುವ ಮೂಲಕ ಶಿಕ್ಷಕರಲ್ಲಿ ಅಭಿವೃದ್ಧಿ ಪೂರಕ ವಿಷಯಗಳಲ್ಲಿ ಅರಿವು ಮೂಡಿಸುವ ಮೂಲಕ ಕಲಿಕೆ-ಬೋಧನೆಯಲ್ಲಿ ಸ್ಪರ್ಧಾತ್ಮಕತೆಯನ್ನು ಮೂಡಿಸುವುದು ಯೋಜನೆಯ ಮೂಲ ಉದ್ದೇಶವಾಗಿತ್ತು.

**ಕಲಿಕಾ ಅಭ್ಯರ್ಥಿಗಳ ಸಾಧನೆಯ ಮತ್ತು ಮೌಲ್ಯಮಾಪನ ಮಟ್ಟಗಳ ನಿರ್ದಿಷ್ಟೀಕರಣ ಮತ್ತು ಕ್ರಮಗಳಿಗೆ ಹೆಚ್ಚಿನ ಗಮನ**

ರಾಷ್ಟ್ರೀಯ ಮಟ್ಟದಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳನ್ನು ನಮೂದಿಸಿದ (MLL) ನಂತರದಲ್ಲಿ ಕಲಿಕಾ ಹಂತದಲ್ಲಿನ ಸಾಧನೆಗಳ ಮೌಲ್ಯಮಾಪನದ ಬಗ್ಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಎನ್‌ಸಿಇಆರ್‌ಟಿ ಮತ್ತು ಎಸ್‌ಸಿಇಆರ್‌ಟಿ ಸಂಸ್ಥೆಗಳಿಂದ ಮಾರ್ಗದರ್ಶನ ಪಡೆಯುವ ಬಹುಪಾಲು ರಾಜ್ಯ ಸರ್ಕಾರಗಳು ತಮ್ಮ ಪಠ್ಯಕ್ರಮಗಳನ್ನು ಮತ್ತು ಪಠ್ಯ ಪುಸ್ತಕಗಳನ್ನು ಪರಿಷ್ಕರಿಸುತ್ತವೆ. ಹಾಗೆಯೇ ಕಲಿಕಾ ಅಭ್ಯರ್ಥಿಗಳ ಸಾಧನೆಗಳನ್ನು ಕಾಲಕಾಲಕ್ಕೆ ಮೌಲ್ಯಮಾಪನ ಮಾಡಲು ಹೊಸ ಕಾರ್ಯ ಯೋಜನೆಗಳನ್ನು ಸರ್ಕಾರಗಳು ಎದುರುನೋಡುತ್ತಿರುತ್ತವೆ. ಈ ಪ್ರಕ್ರಿಯೆಯನ್ನು ಅಧ್ಯಯನ ಮಾಡಿ ಮುಖ್ಯವಾಹಿನಿಗೆ ಅಳವಡಿಸಲು ಕೇಂದ್ರ ಸರ್ಕಾರವು 16 ಬೃಹತ್ ಪ್ರಮಾಣದ ಯೋಜನೆಗಳನ್ನು ಹಮ್ಮಿಕೊಂಡು ಎಲ್ಲ ಮಕ್ಕಳೂ ನಿಗದಿತ ಕೌಶಲ್ಯಗಳನ್ನು ಸಾಧಿಸುವ ನಿಟ್ಟಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಇವು ಮುಂದಾಗಿದವು.

ಈ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಕಾಣಬಹುದಾದ ಮತ್ತೊಂದು ಪ್ರಮುಖ ಕ್ರಮವೆಂದರೆ ಪ್ರಾಥಮಿಕ ಹಂತದಲ್ಲಿ ಕಲಿಕಾ ಅಭ್ಯರ್ಥಿಗಳ ಸಾಧನೆಗಳನ್ನು ಮೌಲ್ಯಮಾಪನದ ತಳಮಟ್ಟದ

Digitised by Bharatavani, CIIL

ಅಧ್ಯಯನವನ್ನು ಕೈಗೊಂಡಿರುವುದು. ಈ ಯೋಜನಾ ಅವಧಿಯಲ್ಲಿ ಕನಿಷ್ಠ ಶೇ. 25ರಷ್ಟು ಗುರಿ ಸಾಧಿಸಲು ಡಿಪಿಇಪಿ ನಿರ್ಧರಿಸಿತ್ತು. ಈ ಯೋಜನೆಯನ್ನು ನಿರ್ವಹಿಸಲು ಮತ್ತು ಮಕ್ಕಳ ಕಲಿಕಾ ಸಾಧನೆಯ ನಿಟ್ಟಿನಲ್ಲಿ ಯೋಜನೆಯ ಕೊಡುಗೆಯನ್ನು ಅಳೆಯಲು ಕಾಲಕಾಲಕ್ಕೆ ಸಮೀಕ್ಷೆಗಳನ್ನು ನಡೆಸಲಾಗುತ್ತದೆ. ಡಿಪಿಇಪಿ ಯೋಜನೆಯ ಅನುಷ್ಠಾನಕ್ಕೆ ಮುನ್ನ ಮಕ್ಕಳ ತಳಮಟ್ಟದ ಸಾಧನೆಗಳನ್ನು ಅಳೆಯಲು ಎನ್‌ಸಿಇಆರ್‌ಟಿ ಸಂಸ್ಥೆಯು ಒಂದು ತಳಮಟ್ಟದ ಸಾಧನಾ ಸಮೀಕ್ಷೆಯನ್ನು ಕೈಗೊಂಡಿತ್ತು. ಮೂರು ವರ್ಷಗಳ ನಂತರ 43 ಜಿಲ್ಲೆಗಳಲ್ಲಿ ಪ್ರಥಮ ಹಂತದ ಡಿಪಿಇಪಿ ಜಿಲ್ಲೆಗಳಲ್ಲಿ 1997ರಲ್ಲಿ, ಮಧ್ಯಕಾಲೀನ ಸಮೀಕ್ಷೆಯನ್ನು ಕೈಗೊಂಡಿತ್ತು. ಈ ಎರಡೂ ಸಮೀಕ್ಷೆಗಳ ತುಲನಾತ್ಮಕ ಅಧ್ಯಯನದಲ್ಲಿ ಕಲಿಕಾ ಸಾಧನೆಯಲ್ಲಿ ಪ್ರಗತಿ ಸಾಧಿಸಿರುವುದು ವ್ಯಕ್ತವಾಗಿತ್ತು. ಆದರೆ ಪ್ರಮಾಣಿತ ತಳಮಟ್ಟದ ಮಟ್ಟಕ್ಕಾಗಲೀ, ಶೇ. 25 ರಷ್ಟು ಸುಧಾರಣೆಯನ್ನಾಗಲೀ ಸಾಧಿಸಲಾಗಿರಲಿಲ್ಲ. 2002ರಲ್ಲಿ ಎನ್‌ಸಿಇಆರ್‌ಟಿ ಅಂತಿಮ ಹಂತದ ನಿರ್ಧಾರಣಾ ಸಮೀಕ್ಷೆಯನ್ನು ಡಿಪಿಇಪಿ ಯೋಜನೆಯ ಪ್ರಥಮ ಹಂತದ ಜಿಲ್ಲೆಗಳಲ್ಲಿ ಕೈಗೊಂಡಿತ್ತು. ಈ ಸಮೀಕ್ಷೆಯಲ್ಲಿ ಕೆಲವು ನಿರ್ದಿಷ್ಟ ಜಿಲ್ಲೆಗಳಲ್ಲಿ ಮಾತ್ರ ಶೇ. 25ರ ಗುರಿಯನ್ನು ಸಾಧಿಸಿರುವುದು ಕಂಡುಬಂದಿತ್ತು. ಯೋಜನೆಗೆ ಒಳಪಟ್ಟಿದ್ದ ಎಲ್ಲಾ ಜಿಲ್ಲೆಗಳಲ್ಲೂ ಈ ಗುರಿಯನ್ನು ಸಾಧಿಸಲಾಗಿರಲಿಲ್ಲ.

ಸರ್ವ ಶಿಕ್ಷಣ ಅಭಿಯಾನದ ಅನುಷ್ಠಾನದೊಂದಿಗೆ ತಳಮಟ್ಟದ ಸಾಧನಾ ಸಮೀಕ್ಷೆಯನ್ನು ರಾಷ್ಟ್ರಮಟ್ಟದಲ್ಲಿ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಪ್ರಾಥಮಿಕ ಹಂತದಲ್ಲೂ ಒಂದು ಮಾದರಿ ತಳಮಟ್ಟದ ಸಾಧನಾ ಸಮೀಕ್ಷೆಯ ವಿಧಾನವನ್ನು ರೂಪಿಸಲು ಎನ್‌ಸಿಇಆರ್‌ಟಿ ಶ್ರಮಿಸುತ್ತದೆ.

**ಆಡಳಿತ ಸಂರಚನೆಗಳು ಮತ್ತು ಸಾಂಸ್ಥಿಕ ಸಾಮರ್ಥ್ಯ ನಿರ್ಮಾಣ**

1986ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕಾರ್ಯ ಯೋಜನಾ ನೀತಿಯ ಅನುಸಾರ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿ ಸಾಧನೆಯ ನಿಟ್ಟಿನಲ್ಲಿ ರಾಷ್ಟ್ರಮಟ್ಟದ ಪ್ರಚಾರಾಂದೋಲನವನ್ನು ಹಮ್ಮಿಕೊಳ್ಳಲಾಗಿತ್ತು. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಕಾರಗೊಳಿಸುವಲ್ಲಿ ಮಾನವ ಸಂಪನ್ಮೂಲ, ಹಣಕಾಸು ಮತ್ತು ಸಾಂಸ್ಥಿಕ ಸಂಪನ್ಮೂಲಗಳ ಕ್ರೋಢೀಕರಣ ಈ ಯೋಜನೆಯ ಮೂಲ ಧ್ಯೇಯವಾಗಿರುತ್ತವೆ. 1993–94ರಲ್ಲಿ ಕಾರ್ಯಗತಗೊಳಿಸಲಾದ ಎಲ್ಲಾ ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳು, ಉದಾಹರಣೆಗೆ ಮೈಕ್ರೋ ಯೋಜನೆ, ಆಪರೇಷನ್ ಕಪ್ಪುಹಲಗೆ, ರಾಷ್ಟ್ರೀಯ ಸಂಪ್ರದಾಯರಹಿತ ಶಿಕ್ಷಣ, ಕಲಿಕೆಯ ಕನಿಷ್ಠ ಮಟ್ಟಗಳು ಇತ್ಯಾದಿ, ಎಲ್ಲವನ್ನೂ ಈ ಆಂದೋಲನದ ಪರಿಧಿಗೆ ಒಳಪಡಿಸಲಾಯಿತು. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಬ್ಲಾಕ್, ಗ್ರಾಮ, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಅನುಷ್ಠಾನಗೊಳಿಸುವ ದೃಷ್ಟಿಯಿಂದ ಈ ನೀತಿಯನ್ನು ಅನುಸರಿಸಲಾಯಿತು. ಸರ್ವ ಶಿಕ್ಷಣ ಅಭಿಯಾನದ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿನ ಎಲ್ಲಾ ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳನ್ನು ಈ ಅಭಿಯಾನದ ಪರಿಧಿಗೆ ಒಳಪಡಿಸಲಾಗಿದೆ. ಭಾರತ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯದ ಆಶ್ರಯದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗವೊಂದನ್ನು ಸ್ಥಾಪಿಸಲಾಗಿದ್ದು ಈ ವಿಭಾಗದ ಮೂಲಕ ರಾಷ್ಟ್ರೀಯ ಪ್ರಾಥಮಿಕ ಶಿಕ್ಷಣ ಮಿಷನ್ ಸ್ಥಾಪಿಸಲಾಗಿದೆ. ಈ ಮಿಷನ್ ಮೂಲಕ ಸರ್ವ ಶಿಕ್ಷಣ ಅಭಿಯಾನದ ಅನುಷ್ಠಾನವನ್ನು ಪರಿಶೀಲಿಸಲಾಗುತ್ತದೆ. ಈ ಮಿಷನ್ನಿನ ಆಡಳಿತ ಮಂಡಳಿಗೆ ಪ್ರಧಾನ ಮಂತ್ರಿಗಳು ಗೌರವಾಧ್ಯಕ್ಷರಾಗಿದ್ದು ಮಾನವ ಸಂಪನ್ಮೂಲ ಮಂತ್ರಿಗಳು ಉಪಾಧ್ಯಕ್ಷರಾಗಿರುತ್ತಾರೆ.

ಡಿಪಿಇಪಿ ಯೋಜನೆ ಜಾರಿಗೊಂಡ ನಂತರ ಮತ್ತು ಸರ್ವ ಶಿಕ್ಷಣ ಅಭಿಯಾನದ ಅನುಷ್ಠಾನದ ನಂತರದಲ್ಲಿ ಸಾಂಸ್ಥಿಕ ಸಾಮರ್ಥ್ಯಾಭಿವೃದ್ಧಿ ಹೆಚ್ಚಿನ ಮಹತ್ವ ಪಡೆದಿದೆ. ರಾಷ್ಟ್ರ, ರಾಜ್ಯ ಜಿಲ್ಲಾ ಮತ್ತು ಉಪಜಿಲ್ಲಾ ಮಟ್ಟದಲ್ಲಿ ವ್ಯಾಪಕವಾದ ಸಾಮರ್ಥ್ಯಾಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಂಪನ್ಮೂಲ ಸಂಸ್ಥೆಗಳ ಮೂಲಕ ಸುಸ್ಥಿರ ಬೆಂಬಲ ಮತ್ತು ಪ್ರೋತ್ಸಾಹ ನೀಡುವ ಮೂಲಕ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ನೀತಿಯ ಮಹತ್ತರ ಹೆಜ್ಜೆಯಾಗಿದೆ. ಈ ಸಂಸ್ಥೆಗಳು ಯೋಜನೆ, ಆಡಳಿತ, ಸಾಮರ್ಥ್ಯಾಭಿವೃದ್ಧಿ ಪಠ್ಯಕ್ರಮ ನಿರ್ವಹಣೆ, ಮೂಲಭೂತ ಸೌಕರ್ಯಗಳ ಪೂರೈಕೆ, ಬೋಧನಾ ಸಾಮಗ್ರಿಗಳ ಅಭಿವೃದ್ಧಿ, ಶಿಕ್ಷಣನೀತಿಯ ನಿರ್ವಹಣೆ ಮತ್ತು ಪರಾಮರ್ಶೆ, ಸಂಶೋಧನಾ ಪ್ರಯತ್ನಗಳು ಇವೇ ಮುಂತಾದ ಜವಾಬ್ದಾರಿಯುತ ಕಾರ್ಯಗಳನ್ನು ನಿರ್ವಹಿಸುತ್ತವೆ. ವಿವಿಧ ಹಂತಗಳಲ್ಲಿನ ಸಂಪನ್ಮೂಲ ಸಂಸ್ಥೆಗಳು ಈ ರೀತಿ ಇವೆ:–

ರಾಷ್ಟ್ರಮಟ್ಟ : ಎನ್‌ಸಿಇಆರ್‌ಟಿ ಮತ್ತು ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಗಾಗಿ ರಾಷ್ಟ್ರೀಯ ಸಂಸ್ಥೆ (ಎನ್‌ಐಇಪಿಎ)

ರಾಜ್ಯಮಟ್ಟ : ಎಸ್‌ಸಿಇಆರ್‌ಟಿ ಮತ್ತು ಶೈಕ್ಷಣಿಕ ಆಡಳಿತ ಮತ್ತು ತರಬೇತಿ ರಾಜ್ಯ ಸಂಸ್ಥೆ (ಎಸ್‌ಐಇಎಮ್‌ಎಟಿ)

ಜಿಲ್ಲಾಮಟ್ಟ : ಡಯೆಟ್ ಮತ್ತು ಜಿಲ್ಲಾ ಸಂಪನ್ಮೂಲ ಸಮೂಹ

ಬ್ಲಾಕ್‌ಮಟ್ಟ : ಬ್ಲಾಕ್ ಸಂಪನ್ಮೂಲ ಕೇಂದ್ರ ಮತ್ತು ಕೇಂದ್ರ ಸಂಪನ್ಮೂಲ ಸಮೂಹ

ಕ್ಲಸ್ಟರ್ ಮಟ್ಟ : ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು.

ಈ ಮುಖ್ಯವಾಹಿನಿಯ ಸಂಸ್ಥೆಗಳನ್ನು ಬಲಪಡಿಸುವದಕ್ಕೆ ಹೆಚ್ಚಿನ ಪ್ರಧಾನ್ಯ ನೀಡಲಾಗುತ್ತಿದ್ದು ತನ್ಮೂಲಕ ಒಂದು ಸುಸ್ಥಿರವಾದ ನೀತಿಯನ್ನು ಜಾರಿಗೊಳಿಸಲು ಮತ್ತು ಎಲ್ಲಾ ಪ್ರಯತ್ನಗಳನ್ನೂ ಕ್ರೋಢೀಕರಿಸಿ ಮುನ್ನಡೆಸುವ ಯೋಜನೆ ಸರ್ಕಾರದ್ದಾಗಿದೆ.

**ನಿರ್ವಹಣಾ ಮಾಹಿತಿ ವ್ಯವಸ್ಥೆ :**

ನಿರ್ವಹಣಾ ಮಾಹಿತಿ ವ್ಯವಸ್ಥೆಗಳು (Management Information Systen MIS) ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಯೋಜನೆಯ ಒಂದು ಅವಿಭಾಜ್ಯ ಅಂಗವಾಗಿದೆ. ಡಿಪಿಇಪಿ

Digitised by Bharatavani, CIIL

ಕಾರ್ಯಕ್ರಮದ ಅಂಶಿಕ ಭಾಗವಾಗಿದ್ದ ಈ ವ್ಯವಸ್ಥೆಯನ್ನು ಸರ್ವಶಿಕ್ಷಣ ಅಭಿಯಾನಕ್ಕೂ ಅಳವಡಿಸಲಾಗಿದೆ. ಡಿಪಿಇಪಿ ಕಾರ್ಯಕ್ರಮವಲ್ಲಿ ಕ್ಷೇತ್ರ ಪರಿಶೀಲನೆಯ ಮೂಲಕ ಅಳವಡಿಸಲಾದ ಎರಡು ವ್ಯವಸ್ಥೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಮೊದಲನೆಯದು ಶೈಕ್ಷಣಿಕ ನಿರ್ವಹಣಾ ಮಾಹಿತಿ ವ್ಯವಸ್ಥೆ ಮತ್ತು ಎರಡನೆಯದು ಯೋಜನಾ ನಿರ್ವಹಣಾ ಮಾಹಿತಿ ವ್ಯವಸ್ಥೆ. ಮೊದಲನೆಯದು ಮಾಹಿತಿ ವ್ಯವಸ್ಥೆ ಮತ್ತು ಎರಡನೆಯದು ಯೋಜನಾ ನಿರ್ವಹಣಾ ಮಾಹಿತಿ ವ್ಯವಸ್ಥೆ. ಮೊದಲನೆಯದು ವಾರ್ಷಿಕ ವ್ಯವಸ್ಥೆಯಾಗಿದ್ದು ಶಾಲೆ ಮತ್ತು ಪ್ರತಿಯೊಂದು ಮಗುವನ್ನು ಕುರಿತು ಮಕ್ಕಳ ದಾಖಲಾತಿ, ಶಾಲೆ ತ್ಯಜಿಸಲು ಕಾರಣ ಇತ್ಯಾದಿ ಸಂಪೂರ್ಣ ವಿವರಗಳನ್ನು ಒದಗಿಸುತ್ತದೆ. ಎರಡನೆಯ ವ್ಯವಸ್ಥೆಯಲ್ಲಿ ಯೋಜನೆಯ ಕಾರ್ಯಾಚರಣೆಯ ಬಗ್ಗೆ ತ್ರೈಮಾಸಿಕ ಪ್ರಗತಿಯನ್ನು ಪರಿಶೀಲಿಸಲಾಗುತ್ತದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಯೋಜನೆಗಳ ಮಾಹಿತಿ ಸಂಗ್ರಹಣೆಯನ್ನು ಬಲಪಡಿಸಲು ಈ ಎರಡೂ ವ್ಯವಸ್ಥೆಗಳನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುತ್ತದೆ. ಹಾಗೆಯೇ ಶಿಕ್ಷಣದ ವಿಸ್ತರಣೆ ಮತ್ತು ಗುಣಮಟ್ಟದ ಸುಧಾರಣೆಗೆ ಇವುಗಳನ್ನು ಸಾಧನಗಳನ್ನಾಗಿ ಬಳಸಿಕೊಳ್ಳಲಾಗುತ್ತದೆ.

**ಪ್ರಾಥಮಿಕ ಶಿಕ್ಷಣದಲ್ಲಿ ಸಮುದಾಯ ಭಾಗವಹಿಸುವಿಕೆ:**

1882ರ ಪ್ರಪ್ರಥಮ ಭಾರತೀಯ ಶಿಕ್ಷಣ ಸಮಿತಿಯು ತನ್ನ ವರದಿಯಲ್ಲಿ ಪ್ರಾಥಮಿಕ ಶಿಕ್ಷಣದ ನಿರ್ವಹಣೆ, ನಿಯಂತ್ರಣ, ಆಡಳಿತ ಮತ್ತು ಹೊಣೆಗಾರಿಕೆಯನ್ನು ಸ್ಥಳೀಯ ಸಂಸ್ಥೆಗಳಿಗೆ, ಜಿಲ್ಲಾ ಮಂಡಲಿಗಳಿಗೆ ಗ್ರಾಮೀಣ ಸಮಿತಿಗಳಿಗೆ ಮತ್ತು ಪಟ್ಟಣ ಪ್ರದೇಶಗಳ ಪುರಸಭೆಗಳಿಗೆ ವಹಿಸಿಕೊಡಬೇಕೆಂದು ಶಿಫಾರಸ್ಸು ಮಾಡಿತ್ತು. ಈ ಸಂದರ್ಭದಲ್ಲಿ ಪ್ರಪ್ರಥಮ ಬಾರಿಗೆ ಪ್ರಾಥಮಿಕ ಶಿಕ್ಷಣವು ಸ್ಥಳೀಯ ಸಂಸ್ಥೆಗಳ ನಿರ್ವಹಣೆಗೊಳಪಟ್ಟಿತು. ಸ್ಥಳೀಯ ಸಂಸ್ಥೆಗಳಿಗೆ ಮಾನ್ಯತೆ ನೀಡಿ, ಅವುಗಳಿಗೆ ವ್ಯಾಪಕವಾದ ವಿಶೇಷ ಹಕ್ಕುಗಳನ್ನೂ ನೀಡಿದ ಮಾಂಟೆಗೊ–ಚೆಮ್ಸ್‌ಫೊರ್ಡ್ ವರದಿಯ ಅನುಷ್ಠಾನದ ನಂತರ ಈ ಪ್ರಯತ್ನವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿತ್ತು. ಶಾಲೆ ಮತ್ತು ಸ್ಥಳೀಯ ಸಮುದಾಯಗಳ ನಡುವೆ ನಿಕಟ ಸಂಪರ್ಕ ಸಾಧಿಸುವ ನಿಟ್ಟಿನಲ್ಲಿ ಕೈಗೊಳ್ಳಲಾದ ಮತ್ತೊಂದು ಮಹತ್ತರ ಹೆಜ್ಜೆಯೆಂದರೆ 1958ರಲ್ಲಿ ಮದ್ರಾಸ್ ರಾಜ್ಯ ಸರ್ಕಾರವು ಶಾಲೆಗಳ ಮೂಲಭೂತ ಸೌಕರ್ಯಗಳು ಮತ್ತು ಗುಣಮಟ್ಟ ಸುಧಾರಣೆಗೆ ಸ್ಥಳೀಯ ಸಮುದಾಯಗಳ ಬೆಂಬಲವನ್ನು ಆಗ್ರಹಿಸಿತ್ತು.

**ಶಿಕ್ಷಣದಲ್ಲಿ ಸಾಮುದಾಯಿಕ ಭಾಗವಹಿಸುವಿಕೆ ಲೋಕ್ ಜಂಬಿಷ್ ಪ್ರಯೋಗ**

ಪ್ರಾಥಮಿಕ ಶಿಕ್ಷಣದ ಸುಧಾರಣೆಗಾಗಿ ಜನತೆಯನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಲೋಕ್ ಜಂಬಿಷ್ ಪ್ರಯೋಗ ಮಹತ್ತರ ಕೊಡುಗೆ ನೀಡಿದ ಲೋಕ್ ಜಂಬಿಷ್‌ನ ಕಾರ್ಯಕರ್ತರು ಸ್ಥಳೀಯ ಸಮುದಾಯದ ಸಕ್ರಿಯ ಸದಸ್ಯರೊಡನೆ ನಿಕಟ ಸಂಪರ್ಕ ಬೆಳೆಸುತ್ತಾರೆ. ಈ ಕಾರ್ಯಕರ್ತರನ್ನು ಪ್ರೇರಕ ದಳ ಎಂದು ಕರೆಯಲಾಗುತ್ತದೆ. ಜನರಲ್ಲಿ ಪ್ರೇರಣೆ ಮೂಡಿಸುವುದೇ ಇವರ ಮೂಲ ಧ್ಯೇಯವಾಗಿರುತ್ತದೆ. ನಂತರ ಸಮುದಾಯಗಳಿಗೆ ಶಾಲಾ ಪರಿಶೀಲನೆಯ ಬಗ್ಗೆ ತರಬೇತಿ ನೀಡಲಾಗುತ್ತದೆ. ಈ ತರಬೇತಿಯಲ್ಲಿ ಗ್ರಾಮದ ಪ್ರತಿಯೊಬ್ಬರನ್ನೂ ಸಾಧಾರಣವಾದ ದೃಶ್ಯ ಮಾಧ್ಯಮದ ನಕ್ಷೆಗಳ ಮೂಲಕ ಬಿಂಬಿಸಲಾಗುತ್ತದೆ. 6ರಿಂದ 14 ವರ್ಷದವರೆಗಿನ ಮಕ್ಕಳನ್ನು ತೋರಿಸಲು ಸಂಕೇತಗಳನ್ನು ಬಳಸಲಾಗುತ್ತದೆ. ಈ ನಕ್ಷೆಗಳು ದಾಖಲಾತಿ, ಶಾಲೆ ತ್ಯಜಿಸುವುದು, ಕಲಿಕಾ ನ್ಯೂನತೆ ಎಲ್ಲವನ್ನೂ ಒಳಗೊಂಡಿರುತ್ತವೆ. ಈ ನಕ್ಷೆಗಳನ್ನಾಧರಿಸಿ ಹೊಸ ಶಾಲೆಗಳ ಅವಶ್ಯಕತೆ, ಪರ್ಯಾಯ ಶಾಲೆಗಳ ಅಗತ್ಯತೆ, ಹಾಲಿ ಶಾಲೆಗಳ ಸುಧಾರಣೆ ಮುಂತಾದ ವಿಷಯಗಳನ್ನು ನಿರ್ಧರಿಸಲಾಗುತ್ತದೆ. ಬಾಲಿಕಾ ಶಿಕ್ಷಣವನ್ನು ಪ್ರೋತ್ಸಾಹಿಸಿ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರಿಗೆ ಉತ್ತೇಜನ ನೀಡಲಾಗುತ್ತದೆ. ಹರೆಯದ ಹುಡುಗಿಯರಿಗೆ ಸೂಕ್ತ ಜೀವನ ಕೌಶಲ್ಯಗಳನ್ನು ಬೋಧಿಸಲಾಗುತ್ತದೆ. ಪ್ರಾಥಮಿಕ ಶಿಕ್ಷಣದಲ್ಲಿ ಸಾಮಾಜಿಕ ಸಂರಚನೆಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಸಮುದಾಯಗಳಲ್ಲಿ ಸಾಕ್ಷರತೆಯನ್ನು ಹೆಚ್ಚಿಸಿ ಅರೆ ಅಕ್ಷರಸ್ತರನ್ನು ಅಕ್ಷರಸ್ತರನ್ನಾಗಿ ಮಾಡುವುದರಲ್ಲಿ ಈ ಯೋಜನೆ ಸಫಲವಾಗಿದೆ.

ತದನಂತರ ಪ್ರಾಥಮಿಕ ಶಿಕ್ಷಣದ ಅನೇಕ ನೀತಿಗಳು ಪ್ರಾಥಮಿಕ ಶಿಕ್ಷಣದಲ್ಲಿ ಸಮುದಾಯಗಳ ಭಾಗವಹಿಸುವಿಕೆಗೆ ಹೆಚ್ಚಿನ ಪ್ರಾಮುಖ್ಯ ನೀಡಲಾರಂಭಿಸಿದವು. ಸಂವಿಧಾನದ ಅನುಚ್ಛೇದ 72 ಮತ್ತು 74ರ ತಿದ್ದುಪಡಿ ಮಸೂದೆ (ಪಂಚಾಯತಿ ರಾಜ್ ಕಾಯ್ದೆ 1972) ಜಾರಿಯಾದ ನಂತರದಲ್ಲಿ ಮುನಿಸಿಪಾಲಿಟಿ, ಪಂಚಾಯತ್, ಉಪಜಿಲ್ಲೆ ಮತ್ತು ಜಿಲ್ಲಾ ಮಟ್ಟದಲ್ಲಿನ ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸಂಸ್ಥೆಗಳನ್ನು ಕೇಂದ್ರೀಕರಿಸಲಾಗುತ್ತಿದೆ. ಈ ಸಂಸ್ಥೆಗಳು ಮಹಿಳೆ, ಪೋಷಕರು, ಅಲ್ಪಸಂಖ್ಯಾತರು, ಶಿಕ್ಷಣತಜ್ಞರು, ಸೂಕ್ತ ಶಿಕ್ಷಣ ಸಂಸ್ಥೆಗಳು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪ್ರತಿನಿಧಿತ್ವವನ್ನು ಹೊಂದಿರುವುದರಿಂದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗುತ್ತದೆ. ಈ ಸಂಸ್ಥೆಗಳು ಶಿಕ್ಷಣಕ್ಕೆ ಪೂರಕ ವಿಷಯಗಳಾದ ಆರೋಗ್ಯ, ಸಮಾಜಕಲ್ಯಾಣ, ಮಹಿಳೆ ಮತ್ತು ಶಿಶು ಅಭಿವೃದ್ಧಿ ಮುಂತಾದ ವಿಷಯಗಳ ಬಗ್ಗೆ ಪರಿಶೀಲನೆ ನಡೆಸುತ್ತವೆ. ರಾಜ್ಯ ಮಟ್ಟದಲ್ಲಿ ರಾಜ್ಯ ಸರ್ಕಾರಗಳು ವಿಕೇಂದ್ರೀಕೃತ ಯೋಜನೆ ಮತ್ತು ನಿರ್ವಹಣೆಯ ಸಂರಚನೆಗಳನ್ನು ರೂಪಿಸುತ್ತವೆ. ಕೆಲವು ರಾಜ್ಯಗಳು ಶಿಕ್ಷಣದಲ್ಲಿ ಪಂಚಾಯತ್ ರಾಜ್ ಸಮಿತಿಗಳಿಗೆ ನಿರ್ಣಾಯಕ ಪಾತ್ರ ನೀಡಲು ಕಾಯ್ದೆಗಳನ್ನೂ ರೂಪಿಸಿದವು.

ಪಂಚಾಯತ್ ರಾಜ್ ಕಾಯ್ದೆಯ ವ್ಯಾಪ್ತಿಯಲ್ಲಿ ಸಮುದಾಯಗಳಿಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸುಧಾರಿಸಲು ಸೂಕ್ತ ತಂತ್ರಗಳನ್ನು ಮತ್ತು ಕ್ರಮಗಳನ್ನು ಸೂಚಿಸುವ

Digitised by Bharatavani, CIIL

ಅಧಿಕಾರ ನೀಡಲಾಗಿದೆ. ಜಿಲ್ಲಾಮಟ್ಟದ ಸಂಸ್ಥೆಗಳಿಗೆ ನೀಡಿರುವ ಹೊಣೆಗಾರಿಕೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ಯೋಜನೆ, ಆಡಳಿತಾತ್ಮಕ ಮತ್ತು ಹಣಕಾಸು ನಿಯಂತ್ರಣ, ಸಿಬ್ಬಂದಿ ಯೋಜನೆ ಮುಂತಾದವುಗಳು ಸೇರಿವೆ. ಜಿಲ್ಲಾಮಟ್ಟದ ಮಂಡಳಿಗಳು ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿ, ಪರಿಶೀಲಿಸಿ, ನಿರ್ವಹಿಸುವ ಹಕ್ಕು ಹೊಂದಿರುತ್ತವೆ. ಪರ್ಯಾಯ ಶಿಕ್ಷಣ ವ್ಯವಸ್ಥೆಗೂ ಇದೇ ನೀತಿಯನ್ನು ಜಾರಿಗೊಳಿಸಲಾಗಿದೆ. ಈ ನಿಟ್ಟಿನಲ್ಲಿ ಡಯೆಟ್ ಮತ್ತು ಇತರ ಸಂಸ್ಥೆಗಳ ಅನುಭವಗಳನ್ನು ಬಳಸಿಕೊಂಡು ಪ್ರಾಥಮಿಕ ಶಿಕ್ಷಣದಲ್ಲಿ ಬೋಧನ ಶಾಸ್ತ್ರದ ಪ್ರಕಾರ ಪಠ್ಯಕ್ರಮವನ್ನು ಅಳವಡಿಸಲು ಯೋಜಿಸಲಾಗಿದೆ. ವಿಕೇಂದ್ರೀಕರಣ ಪ್ರಕ್ರಿಯೆಯು ಜಿಲ್ಲಾಮಟ್ಟದಿಂದ ಕ್ರಮೇಣ ಗ್ರಾಮ ಮಟ್ಟಕ್ಕೆ ವ್ಯಾಪಿಸುತ್ತಿದೆ.

ಪ್ರತಿಯೊಂದು ಪಂಚಾಯತಿಯೂ ಒಂದು ಗ್ರಾಮ ಶಿಕ್ಷಣ ಸಮಿತಿಯನ್ನು (Village Education Committee VEC) ರಚಿಸಲು ಅಪೇಕ್ಷಿಸಲಾಗುತ್ತದೆ. ಈ ಸಮಿತಿಗಳು ಗ್ರಾಮ ಮಟ್ಟದಲ್ಲಿ ಶಿಕ್ಷಣ ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾಗುತ್ತದೆ. ಗ್ರಾಮ ಶಿಕ್ಷಣ ಸಮಿತಿಗಳ ಪ್ರಮುಖ ಜವಾಬ್ದಾರಿ ಎಂದರೆ ಕೆಳಹಂತದ ಕಾರ್ಯಕ್ರಮಗಳ ಆಚರಣೆಯನ್ನು ನಿರ್ವಹಿಸುವುದು ಮತ್ತು ಮನೆಮನೆಯ ಸಮೀಕ್ಷೆ ನಡೆಸುವ ಮೂಲಕ ಶಾಲೆಗಳನ್ನು ಪರಿಶೀಲಿಸಿ ಪೋಷಕರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಶಾಲಾ ಸಂಬಂಧಿತ ಸುಧಾರಣೆಗಳನ್ನು ಪರಿಶೀಲಿಸುವುದ ಡಿಪಿಇಪಿ ಯೋಜನೆಯು ಗ್ರಾಮ ಶಿಕ್ಷಣ ಸಮಿತಿಯನ್ನು ಸೂಕ್ತವಾಗಿ ಬಳಸಿಕೊಂಡಿದ್ದು ಶಾಲೆಗಳಲ್ಲಿನ ದಾಖಲಾತಿ ಮತ್ತು ಧಾರಣಾ ಸಾಮರ್ಥ್ಯವನ್ನು ಹೆಚ್ಚಿಸುವುದರಲ್ಲಿ ಸಫಲವಾಗಿದೆ. ಸರ್ವ ಶಿಕ್ಷಣ ಅಭಿಯಾನದಲ್ಲೂ ಸಮುದಾಯ ಆಧಾರಿತ ನಿರ್ವಹಣ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಈ ಪ್ರಯತ್ನಗಳ ಮೂಲಕ ಸಮುದಾಯ ಯೋಜನೆ, ಸಮುದಾಯ ಭಾಗವಹಿಸುವಿಕೆ, ಸಮುದಾಯ ನಿಯಂತ್ರಣ ಮತ್ತು ಸಾಮಾಜಿಕ ಬಾಧ್ಯತೆ ಮುಂತಾದ ನೀತಿಗಳನ್ನು ಅನುಸರಿಸಲಾಗಿದೆ. ಯೋಜನೆಗಳಲ್ಲಿ ಕೈಗೊಳ್ಳಲಾಗಿರುವ ಈ ಪ್ರಯತ್ನಗಳು ಶಾಲೆಗಳನ್ನು ಆಧರಿಸಿದ ಸಾಮುದಾಯಿಕ ಒಡೆತನವನ್ನು ಪ್ರೋತ್ಸಾಹಿಸುವುದೇ ಅಲ್ಲದೆ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಬಲಪಡಿಸಲೂ ಸಹಾಯಕವಾಗಿದೆ.

**ಭವಿಷ್ಯದ ಹೆಜ್ಜೆಗಳು :** ಇಂದು ಪ್ರಾಥಮಿಕ ಶಿಕ್ಷಣವು ಒಂದು ನಿರ್ದಿಷ್ಟ ಧ್ಯೇಯವನ್ನಾಧರಿಸಿದ ಯೋಜನೆಯ ರೂಪದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವತ್ತ ಮುನ್ನಡೆದಿದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಮುಂದಿನ ಹೆಜ್ಜೆ ಎಂದರೆ ಗುಣಮಟ್ಟದ ಸುಧಾರಣೆಗಾಗಿ ಕೆಲವು ನಿರ್ದಿಷ್ಟ ಯೋಜನೆಗಳನ್ನು ಅನುಷ್ಠಾನಗೊಳಿಸಿ ನಿರ್ವಹಿಸುವುದೇ ಆಗಿದೆ. ಪ್ರಸ್ತುತ ಸಂದರ್ಭದಲ್ಲಿ ದಾಖಲಾತಿ ಹೆಚ್ಚಳ ಮತ್ತು ಶಾಲೆಯನ್ನು ತ್ಯಜಿಸುವವರ ಪ್ರಮಾಣವನ್ನು ತಗ್ಗಿಸುವುದಕ್ಕಿಂತಲೂ ಹೆಚ್ಚಾಗಿ ಸಮಾನತೆ ಮತ್ತು ಉತ್ಕೃಷ್ಟತೆಯನ್ನು ಸಾಧಿಸುವುದು ಮುಖ್ಯವಾಗಿದೆ. ಹಾಗಾಗಿ ಈಗ ಶಿಕ್ಷಣದಿಂದ ವಂಚಿತರಾಗಿರುವ, ಶಿಕ್ಷಣ ವ್ಯವಸ್ಥೆ ತಲುಪಲಾಗದ, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಅಲಭ್ಯವಾಗಿರುವ ಸಮಾಜದ ಅಂಚಿನಲ್ಲಿರುವ ಜನಸಮುದಾಯಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಒಳಗೊಳ್ಳುವುದು ಆದ್ಯತೆಯಾಗಿದೆ.

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸಿರುವ ಶ್ರೀಲಂಕ, ಕೊರಿಯ, ಮಲೇಷಿಯ, ಬೋಸ್ಟ್ವಾನ, ಮಾರಿಷಿಯಸ್, ಕೋಸ್ಟರಿಕ, ಬಾರ್ಬಡಾಸ್ ಮತ್ತು ಕ್ಯೂಬಾ ರಾಷ್ಟ್ರಗಳಲ್ಲಿ ನಡೆಸಿರುವ ಸಮೀಕ್ಷೆಗಳ ಅನುಸಾರ ಉತ್ಕೃಷ್ಟ ಸಾಧನೆಗೆ ಕೆಲವು ಸಮಾನ ಅಂಶಗಳು ಮತ್ತು ಸಾಮಾಜಿಕ–ಶೈಕ್ಷಣಿಕ ನೀತಿಗಳ ಅಗತ್ಯತೆ ಕಂಡುಬರುತ್ತವೆ. (ಮೆಹ್ರೋತ್ರ 1998 ಯೂನಿಸೆಫ್ ಅಮೆರಿಕ) ಈ ಅಧ್ಯಯನಗಳು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಯಶಸ್ಸಿಗೆ ಅಗತ್ಯವಾದ ಬೇಡಿಕೆ ಮತ್ತು ಪೂರೈಕೆಯ ಅಂಶಗಳನ್ನು ನಿರೂಪಿಸುತ್ತವೆ. ಅವುಗಳೆಂದರೆ :

* ಪ್ರಾಥಮಿಕ ಶಿಕ್ಷಣ ಪ್ರಭುತ್ವದ ಹೊಣೆಗಾರಿಕೆ.
* ತೃತೀಯ ಶ್ರೇಣಿಯ ಶಿಕ್ಷಣಕ್ಕಿಂತಲೂ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಸಾರ್ವಜನಿಕ ವೆಚ್ಚದ ಅವಶ್ಯಕತೆ ಇದೆ.
* ಯೋಜನಾ ಘಟಕದ ವೆಚ್ಚಗಳನ್ನು ಕಡಿಮೆ ಮಾಡಿ ದಕ್ಷತೆಯನ್ನು ಹೆಚ್ಚಿಸುವ ಅಗತ್ಯತೆ.
* ಸೂಕ್ತ ಸೌಕರ್ಯಗಳನ್ನು ನೀಡುವ ಮೂಲಕ ಪೋಷಕರ ವೆಚ್ಚವನ್ನು ತಗ್ಗಿಸುವುದು.
* ಮಾತೃಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಪರಿಗಣಿಸುವುದು.
* ಸೂಕ್ತ ಕ್ರಮಗಳೊಂದಿಗೆ ಬಾಲಿಕಾ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡುವುದು.

ವಿಶ್ವಬ್ಯಾಂಕಿನ ಜಾಗತಿಕ ಅಭಿವೃದ್ಧಿ ಸೂಚ್ಯಂಕ 2002ರ ಪ್ರಕಾರ ಕೆಲವು ಶತಮಾನದ ಧ್ಯೇಯಗಳನ್ನು ಮತ್ತು ಸೂಚಕಗಳನ್ನು ಗುರುತಿಸಸಲಾಗಿದೆ. ಮುಖ್ಯ ಧ್ಯೇಯ ಎಂದರೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸುವುದು. 2015ರ ವೇಳೆಗೆ ವಿಶ್ವದಾದ್ಯಂತ ಎಲ್ಲ ಮಕ್ಕಳಿಗೂ, ಬಾಲಕ ಮತ್ತು ಬಾಲಕಿಯರು ಸೇರಿದಂತೆ, ಸಂಪೂರ್ಣ ಪ್ರಾಥಮಿಕ ಶಿಕ್ಷಣ ಒದಗುವಂತೆ ಮಾಡುವುದು. ಈ ಯೋಜನೆಯ ಸೂಚಕಗಳು ಹೀಗಿವೆ :

Digitised by Bharatavani, CIIL

| ಧ್ಯೇಯಗಳು | ಸೂಚಕಗಳು |
|---|---|
| ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸಾಧನೆ 2015ರ ವೇಳೆಗೆ ಬಾಲಕ, ಬಾಲಕಿಯರನ್ನು ಸೇರಿದಂತೆ ವಿಶ್ವದ ಎಲ್ಲ ಮಕ್ಕಳೂ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದು. | * ಪ್ರಾಥಮಿಕ ಶಿಕ್ಷಣದಲ್ಲಿ ನಿವ್ವಳ ದಾಖಲಾತಿ<br>* ಒಂದನೇ ತರಗತಿಯನ್ನು ತಲುಪುವ ವಿದ್ಯಾರ್ಥಿಗಳ ಐದನೆ ತರಗತಿಯನ್ನು ತಲುಪುವಂತೆ ಮಾಡುವುದು<br>* 15ರಿಂದ 24 ವರ್ಷದವರೆಗೆ ಸಾಕ್ಷರತೆ ಬೆಳೆಸುವುದು. |

(ಮಾಹಿತಿ ವಿಶ್ವಬ್ಯಾಂಕ್ ಅಭಿವೃದ್ಧಿ ಸೂಚಕಗಳು 2002)

ಭಾರತದಲ್ಲಿ ಅಭಿವೃದ್ಧಿ ಧ್ಯೇಯಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ದಕ್ಷತೆಯ ಸೂಚಕಗಳು ಮತ್ತು ಅಂಶಗಳನ್ನು ಇತರ ದೇಶಗಳೊಡನೆ ತುಲನಾತ್ಮಕವಾಗಿ ಹೋಲಿಸಿರುವುದನ್ನು ಕೋಷ್ಟಕ 6ರಲ್ಲಿ ನೀಡಲಾಗಿದೆ.

**ಕೋಷ್ಟಕ 6**

**ಅಭಿವೃದ್ಧಿ ಧ್ಯೇಯಗಳ ಸಾಧನೆ – ಭಾರತ ಮತ್ತು ನೆರೆ ರಾಷ್ಟ್ರಗಳು**

| ದೇಶಗಳು | 1ನೇ ತರಗತಿಯಲ್ಲಿ ನಿವ್ವಳ ಪ್ರವೇಶಾತಿ ಶೇಕಡಾ | | 5ನೆ ಹಂತವನ್ನು ತಲುಪುವ 1ನೆ ಹಂತದ ಪ್ರಮಾಣ | | | | ಪ್ರಾಥಮಿಕ ಸ್ಪರ್ಧಾ ಪ್ರಮಾಣ | | | ಯುವ ಸಾಕ್ಷರತಾ ಪ್ರಮಾಣ | |
|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | | ಹೆಣ್ಣು | | ಪ್ರಾಥಮಿಕ ಹಂತ ಪೂರೈಸುವ ಮಕ್ಕಳ ಪ್ರಮಾಣ | | | ಗಂಡು | ಹೆಣ್ಣು |
| | | | 1980 | 1997 | 1980 | 1977 | ಗಂಡು 1992–2000 | ಹೆಣ್ಣು 1992–2000 | ಒಟ್ಟು 1992–2000 | 15–24 1990–2000 | 15–24 1990–2000 |
| ಆಫ್ಘಾನಿಸ್ತಾನ | - | - | 62 | - | 61 | - | 8 | 15 | 0 | - - | - - |
| ಬಾಂಗ್ಲಾದೇಶ | 95 | 91 | 18 | - | 26 | - | 70 | 68 | 72 | 45 39 | 68 60 |
| ಚೀನ | - | - | - | 93 | - | 94 | 108 | 111 | 106 | 3 1 | 8 4 |
| ಭಾರತ | - | - | - | - | - | - | 76 | 88 | 63 | 27 30 | 46 35 |
| ಇಂಡೋನೇಷಿಯ | - | - | - | 88 | - | 89 | 91 | 90 | 92 | 3 2 | 7 3 |
| ಪಾಕಿಸ್ತಾನ | 1 | 4 | - | - | - | - | - | - | - | 37 29 | 69 58 |

* ವಿಶ್ವ ಅಭಿವೃದ್ಧಿ ಸೂಚಕ 2002 ವಿಶ್ವಬ್ಯಾಂಕ್

ಭಾರತದ ಸಂದರ್ಭದಲ್ಲಿ ಎದುರಿಸಬೇಕಾದ ಪ್ರಮುಖ ಸವಾಲೆಂದರೆ, ಭವಿಷ್ಯದ ಕಾಲಘಟ್ಟದ ರಾಜಕೀಯ ಬದಲಾವಣೆ, ಸಾಮಾಜಿಕ ಪರಿವರ್ತನೆಗಳನ್ನು ಸಹಿಸಿಕೊಂಡು ನಿಲ್ಲಬಲ್ಲ ಒಂದು ಸುಸ್ಥಿರ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ನಿರೂಪಿಸುವುದೇ ಆಗಿದೆ. ಅದೇ ವೇಳೆ ಈ ವ್ಯವಸ್ಥೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗುವ ರೀತಿಯಲ್ಲಿ ಚಲನಶೀಲವಾಗಿರುವುದೂ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಾರ್ವತ್ರೀಕರಣಕ್ಕೆ ಪೂರಕವಾಗಿರುವ ರೀತಿಯಲ್ಲಿ ಚಲನಶೀಲವಾಗಿರುವುದೂ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸಾಧನೆಗಾಗಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉದಾಹರಣೆಗೆ ಸಾರ್ವತ್ರಿಕ ಸಾರ್ವಜನಿಕ ಶಿಕ್ಷಣ, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಔಪಚಾರಿಕ ಶಿಕ್ಷಣ ಇತ್ಯಾದಿ. ಆದರೆ ಈವರೆಗೂ ಸಾಧಿಸಲಾಗದ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಎಲ್ಲ ಪ್ರಯತ್ನಗಳನ್ನೂ ಒಗ್ಗೂಡಿಸುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಪನ್ಮೂಲ ಹಂಚಿಕೆಯನ್ನು ಪುನರ್ ಪರಿಶೀಲಿಸುವುದು ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹಣಕಾಸು ಪೂರೈಕೆಯಲ್ಲಿ ಸುಸ್ಥಿರತೆಯನ್ನು ಸಾಧಿಸಲು ರಾಜ್ಯ ಸರ್ಕಾರದ ಪಾಲನ್ನು ಹೆಚ್ಚಿಸಿ, ಕೇಂದ್ರ ಸರ್ಕಾರದ ಪಾಲನ್ನು ಕಡಿಮೆ ಮಾಡುವುದು ದಿಟ್ಟ ಹೆಜ್ಜೆಯಾಗಬಹುದು. ಒಟ್ಟು ಜಿಡಿಪಿಯ ಶೇ. 4ರಷ್ಟಿರುವ ಶಿಕ್ಷಣದ ವೆಚ್ಚವನ್ನು ಶೇ. 6ಕ್ಕೆ ಹೆಚ್ಚಿಸಿ ರಾಜ್ಯ ಸರ್ಕಾರಗಳು ಹೆಚ್ಚಿನ ಹಣಕಾಸು ಒದಗಿಸುವುದೂ ಈ ನಿಟ್ಟಿನಲ್ಲಿ ಮಹತ್ತರ ಹೆಜ್ಜೆಯಾಗುತ್ತದೆ.

ಶೈಕ್ಷಣಿಕ ಸಂಸ್ಥೆಗಳ ನಿರ್ವಹಣೆ ಮತ್ತು ಅವುಗಳ ಸಾಮರ್ಥ್ಯಾಭಿವೃದ್ಧಿಯ ಕ್ರಮಗಳು ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ಒಂದು ಚಲನಶೀಲ, ಕ್ರಿಯಾಶೀಲ ವ್ಯವಸ್ಥೆಯನ್ನು ನಿರ್ಮಿಸಲು ಸಾಧ್ಯವಿದೆ. ಮಕ್ಕಳ ಕೌಶಲ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ಒದಗಿಸುವ ಮೂಲಕ ಮಕ್ಕಳಲ್ಲಿನ ಉತ್ಪಾದಕೀಯತೆಯನ್ನು

Digitised by Bharatavani, CIIL

ಹೆಚ್ಚಿಸಲು ಸಾಧ್ಯವಿದೆ. ಇದರಿಂದ ಪ್ರಾಥಮಿಕ ಶಾಲಾ ಮಕ್ಕಳು ಭವಿಷ್ಯದಲ್ಲಿ ತಮ್ಮ ಪ್ರಜಾ ಹಕ್ಕುಗಳನ್ನು ಚಲಾಯಿಸಲು ಮತ್ತು ಉನ್ನತ ಮೌಲ್ಯ, ಸಂಸ್ಕೃತಿ ಹಾಗೂ ಸನ್ನಡತೆಯಿಂದ ಹೊಣೆಗಾರಿಕೆಯನ್ನು ನಿಭಾಯಿಸಲು ಅನುಕೂಲವಾಗುತ್ತದೆ. ಸಮಾಜದ ಅಂಚಿನಲ್ಲಿರುವ ಮತ್ತು ಅವಕಾಶವಂಚಿತ ಸಮುದಾಯಗಳನ್ನು ಶಿಕ್ಷಣದ ಮುಖ್ಯವಾಹಿನಿಯಲ್ಲಿ ಸೇರಿಸುವ ನಿಟ್ಟಿನಲ್ಲಿ ಸೂಕ್ತ ಸವಲತ್ತುಗಳನ್ನು, ಪ್ರೋತ್ಸಾಹವನ್ನು ನೀಡುವುದು ಅಗತ್ಯ. ಬಾಲಿಕಾ ಶಿಕ್ಷಣಕ್ಕೆ ಪ್ರಾಮುಖ್ಯ ನೀಡಿ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಭದ್ರತೆ ಒದಗಿಸುವ ತಂತ್ರಗಳನ್ನು ಅನುಸರಿಸಬೇಕಾಗುತ್ತದೆ. ಮಹಿಳಾ ಶಿಕ್ಷಕಿಯರ ನೇಮಕಾತಿ, ಮಹಿಳಾ ಭದ್ರತಾ ಸಿಬ್ಬಂದಿಯ ನೇಮಕ, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಇವೆಲ್ಲವೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಮೇಲೆ ಮಹತ್ವದ ಪರಿಣಾಮ ಬೀರುತ್ತವೆ.

ಸಾಮಾಜಿಕ ಕ್ಷೇತ್ರದ ಕಾರ್ಯಕ್ರಮದಲ್ಲಿ ಯಶಸ್ಸಿನ ಸೂಚಕವಾಗಿರುವ ಮಹತ್ತರವಾದ ಸಂಗತಿ ಎಂದರೆ ಸಮುದಾಯದ ಪಾಲ್ಗೊಳ್ಳುವಿಕೆಯೇ ಆಗಿದೆ. ಶೈಕ್ಷಣಿಕ ಆಡಳಿತ, ಹಣಕಾಸು ಪೂರೈಕೆ ಮತ್ತು ನಿರ್ವಹಣೆಯಲ್ಲಿ ಒಂದು ಸಶಕ್ತ ಸಮುದಾಯವು ಅತ್ಯಂತ ಇತ್ಯಾತ್ಮಕ ಪಾತ್ರವಹಿಸುವುದನ್ನು ಕಾಣಬಹುದು. ಸರ್ಕಾರೇತರ ಸಂಸ್ಥೆಗಳ ಹೆಚ್ಚಿನ ಭಾಗವಹಿಸುವಿಕೆಯೂ ಪ್ರಾಥಮಿಕ ಶಿಕ್ಷಣವನ್ನು ಎಲ್ಲರಿಗೂ ತಲುಪಿಸುವಲ್ಲಿ ಮತ್ತು ಪ್ರಾಥಮಿಕ ಶಾಲಾ ಹಂತದ ವಿದ್ಯಾರ್ಥಿಗೆ ತನ್ನ ಜೀವನದ ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ಬೆಳೆಸುವ ನಿಟ್ಟಿನಲ್ಲಿ ಮಹತ್ವದ ಭೂಮಿಕೆ ಬಹಿಸುತ್ತದೆ.

**ಮೂಲ: ಶಬನಮ್ ಸಿನ್ಹಾ**
**ಅನು: ಡಾ. ವಿಶಾಲಾಕ್ಷಿ ಕೆ.**

## ಭಾರತದಲ್ಲಿ ಬಾಲಕಾರ್ಮಿಕರು

ಮಗು ಮಾನವ ಸಂಪತ್ತಿನ ಅತ್ಯುತ್ತಮ ಪ್ರತಿನಿಧಿ. ಮಗುವಿನ ಜನನ ಒಂದು ಅಪೂರ್ವ ಕ್ಷಣದ ಉದಯವನ್ನೂ, ತನ್ಮೂಲಕ ಜೀವಿಯ ಪ್ರತಿರೂಪದ ಪ್ರಾಮುಖ್ಯವನ್ನೂ ಎತ್ತಿ ಹಿಡಿಯುತ್ತದೆ. ಅಲ್ಲದೆ ಆ ಕ್ಷಣ ಪೋಷಕರು, ನೆರೆಹೊರೆಯವರು, ಬಂಧುಗಳೂ ಸೇರಿದಂತೆ ಒಟ್ಟಾರೆ ಇಡೀ ಸಮಾಜಕ್ಕೆ ಸಂಭ್ರಮ ಮತ್ತು ಸಂತಸದ ಕ್ಷಣವಾಗಿರುತ್ತದೆ.

ಈ ಸಂಭ್ರಮ ಮತ್ತು ಸಂತಸವು ಅಲ್ಪಾವಧಿಯದು. ಮಗು ಹುಟ್ಟುವ ಮೊದಲೇ ಲಿಂಗ ನಿರ್ಧಾರ ಪರೀಕ್ಷೆ ಅಥವಾ ಭ್ರೂಣ ಪರೀಕ್ಷೆಯ ಮೂಲಕ ಅತ್ಯಂತ ಹೇಯವಾದ ಪ್ರಕ್ರಿಯೆಗೆ ಒಳಗಾಗಿರುತ್ತದೆ. ಅನಾದಿ ಕಾಲ ದಿಂದಲೂ ರೂಢಮೂಲವಾಗಿರುವ ಗಂಡು ಮಗುವನ್ನೇ ಪಡೆಯಬೇಕೆಂಬ ಪೋಷಕರ ಆದ್ಯತೆಯ ಕಾರಣದಿಂದಲೂ, ಮಗು ಜನನವಾದ ನಂತರವೂ ತಾರತಮ್ಯಕ್ಕೆ ಒಳಗಾಗುತ್ತದೆ. ಮಗು ಬೆಳೆದಂತೆಲ್ಲಾ ತಾರತಮ್ಯವು ಗಹನವಾಗುತ್ತಾ ಹೋಗುತ್ತದೆ. ಇದರ ಜೊತೆಗೆ ಅದರ ವಿಕೃತ ರೂಪಗಳಾದ ಹೆಣ್ಣು ಭ್ರೂಣ ಹತ್ಯೆ, ಬಾಲ್ಯವಿವಾಹ ಮತ್ತು ವಿದ್ಯಾಭ್ಯಾಸದ ಆಯ್ಕೆ ನಿರಾಕರಣೆ, ಆಸ್ತಿ ಹಕ್ಕುಗಳ ನಿರಾಕರಣೆ ಇತ್ಯಾದಿಗಳ ಜೊತೆಗೆ ಗಂಡು ಸಂತಾನವನ್ನು ವಿಶೇಷವಾಗಿ ಪರಿಗಣಿಸುವ ತಾರತಮ್ಯ ಪ್ರದರ್ಶನಗೊಳ್ಳುತ್ತದೆ.

ಮಗು ಬೆಳೆದಂತೆಲ್ಲಾ ವಿಶೇಷವಾಗಿ 5 ರಿಂದ 14 ವರ್ಷಗಳ ವಯೋಮಾನದ ಮಕ್ಕಳಿಗೆ ಸತ್ವಭರಿತ ಆಹಾರ ಮತ್ತು ಪೋಷಣೆಯ ಹಕ್ಕು, ಬದುಕುವ ಹಕ್ಕು, ರಕ್ಷಣೆಯ ಹಕ್ಕು, ಬೆಳವಣಿಗೆಯ ಹಕ್ಕುಗಳ ಜೊತೆಗೆ ಶೈಕ್ಷಣಿಕ ಹಕ್ಕೂ ಸಹಜವಾಗಿ ಬಂದಿರುತ್ತದೆ. ಈ ಎಲ್ಲಾ ಹಕ್ಕುಗಳು ಮಗುವಿನ ಜನ್ಮ ಸಿದ್ಧ ಹಕ್ಕುಗಳೆಂದು ಸಂಯುಕ್ತ ರಾಷ್ಟ್ರಗಳ 1989ರ ನವೆಂಬರ್ 20 ರಲ್ಲಿ ನಡೆದ ಸಮಾವೇಶವು ಘೋಷಿಸಿದೆ. ಸಂವಹನದ ಮಾಧ್ಯಮ ಮುದ್ರಣದ ಮೂಲಕ ಮಾಹಿತಿ ಪ್ರಪಂಚಕ್ಕೆ ಪ್ರವೇಶಿಸಲು ಶಿಕ್ಷಣ ಅವಕಾಶ ನೀಡಿದೆ. ಶಿಕ್ಷಣವು ಮಾತ್ರ ಮಗುವನ್ನು ಸಾಮಾಜಿಕೀಕರಣ ಅಥವಾ ಸಮಾಜದೊಡನೆ ಬೆರೆಯುವ ಜಗತ್ತಿಗೆ ಪ್ರವೇಸಿಸಲು ಎಡೆ ನೀಡುತ್ತದೆ. ಶಿಕ್ಷಣವು ಹೊರ ಪ್ರಪಂಚದ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಕ್ಷೇತ್ರಕ್ಕೆ ಮಕ್ಕಳನ್ನು ತರಬಲ್ಲುದು. ಶಿಕ್ಷಣವು ಮಾತ್ರ ಅತ್ಯಭಿಮಾನದ ಗೀಳು, ನಿಷಿದ್ಧಗಳು, ಕಂದಾಚಾರಗಳು, ಪ್ರಗತಿ ವಿರೋಧಿ ಆಲೋಚನೆಗಳು ಮುಂತಾದವುಗಳ ಆಚರಣೆಗಳನ್ನು ನಿವಾರಿಸುತ್ತದೆ. ಶಿಕ್ಷಣವು ಅಜ್ಞಾನದ ಪರದೆಯನ್ನು ಸರಿಸಿ ಹೊಸ ಅರಿವು ಮತ್ತು ಹೊಸ ಜಾಗೃತಿಯ ಎಲ್ಲೆ ಗಡಿಗಳನ್ನು ತೆರೆಯುತ್ತದೆ. ಮಕ್ಕಳ ಮನೋವಲಯದಲ್ಲಿ ಒಂದು ವೈಚಾರಿಕ, ಜಾತ್ಯತೀತ ಮತ್ತು ವೈಜ್ಞಾನಿಕ ಮನೋಧರ್ಮದೊಡನೆ ಅವರಲ್ಲಿ ಹೆಚ್ಚಿನ ಸಹನೆ, ತಾಳ್ಮೆಯನ್ನುಳ್ಳವರನ್ನಾಗಿ ಮಾಡಿ ಪರಮತ ಸಹಿಷ್ಣುತೆಯ ಉದಾರವಾದ ವಿಶಾಲ ಮನೋಭಾವಗಳನ್ನು ರೂಪಿಸುತ್ತದೆ.

ಆದರೆ ಶಿಕ್ಷಣವು ಹೆಚ್ಚು ಅಗತ್ಯವಿರುವ ವಯಸ್ಸಿನಲ್ಲಿ ಒಂದು ಮಗುವು ಅದರದೇ ಆಯ್ಕೆ ಮತ್ತು ತೀರ್ಮಾನ ಗಳಿಂದ ಶಿಕ್ಷಣ ಪ್ರಪಂಚಕ್ಕೆ ಪ್ರವೇಶಿಸುವುದು ಉಚಿತವೇ? ಉತ್ತರ ಹೌದು ಎಂದಾದರೆ ವಾಸ್ತವಿಕ ಆಚರಣೆಯಲ್ಲಿ ಅದು ನಕಾರಾತ್ಮಕವಾಗಿರುತ್ತದೆ. ಮಕ್ಕಳು ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವಷ್ಟು ಸಶಕ್ತರಲ್ಲ ಎನ್ನುವುದು ಇದರ ಅರ್ಥವಲ್ಲ. ಅವರ ಆಯ್ಕೆಗೆ ಬಿಟ್ಟರೆ ಮಕ್ಕಳು ಶಿಕ್ಷಣ ಜಗತ್ತನ್ನು ಪ್ರವೇಶಿಸಿ ಶಿಕ್ಷಣದ ಸಂತಸ ಮತ್ತು ಸಂಭ್ರಮಗಳನ್ನು ಅನುಭವಿಸಲು ಇಚ್ಛಿಸುತ್ತಾರೆಯೇ ಹೊರತು ಕಾರ್ಮಿಕರಾಗಿ ಕೆಲಸ ಮಾಡಲು ಇಚ್ಛಿಸುವುದಿಲ್ಲ. ಆದರೆ ಬಹಳಷ್ಟು ಮಕ್ಕಳು ಎಂದರೆ ಶೇಕಡ 90 ರಷ್ಟು ಹಳ್ಳಿಗಾಡಿನ ಪ್ರದೇಶಗಳಲ್ಲಿ ದುರದೃಷ್ಟವಶಾತ್ ಅವರ ಪೋಷಕರು ಹಾಗೂ ಕಡೆಗೆ ನಾಗರಿಕ ಸಮಾಜದಿಂದಲೇ ಶಿಕ್ಷಣ ಜಗತ್ತಿಗೆ ಮಕ್ಕಳು ಪ್ರವೇಶಿಸಲು ಪ್ರೋತ್ಸಾಹ ಮತ್ತು ಅನುಕೂಲಗಳು ಸಿಗುತ್ತಿಲ್ಲ. ಇಂತಹ ಮಕ್ಕಳ ಪೋಷಕರು ಸ್ವತಃ ಅನಕ್ಷರಸ್ಥರಾಗಿದ್ದು ಶಿಕ್ಷಣದ ಬೆಲೆ ಮತ್ತು ಪ್ರಾಮುಖ್ಯವನ್ನು ತಿಳಿಯದಷ್ಟು ಅಜ್ಞಾನಿಗಳು ಆಗಿರುವುದರಿಂದ ಶಿಕ್ಷಣದ ಮಹತ್ವವನ್ನು ಸ್ವಾಭಾವಿಕವಾಗಿ ಅರಿಯಲಾಗದೆ ಇರುವುದು ಸಹಜವೇ. ಈ ನಮ್ಮ ದೇಶದಲ್ಲಿ ಬಹಳಷ್ಟು ತಂದೆ ತಾಯಿಗಳು ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರೋತ್ಸಾಹಿಸುವುದಿಲ್ಲ. ಏಕೆಂದರೆ ಕಿತ್ತು ತಿನ್ನುವ ಬಡತನ, ನಿರುದ್ಯೋಗ ಮತ್ತು ಕೆಲಸವಿಲ್ಲದೇ ಹೋಗುವ ಪರಿಸ್ಥಿತಿಗಳಿಂದಾಗಿ

Digitised by Bharatavani, CIIL

ಮಕ್ಕಳನ್ನು ಶಾಲೆಗೆ ಕಳುಹಿಸಲು ಆಗುವುದಿಲ್ಲ. ಅವರಿಗೆ ಶಿಕ್ಷಣ ಶುಲ್ಕ, ಪಠ್ಯಪುಸ್ತಕಗಳ ವೆಚ್ಚ, ಸಮವಸ್ತ್ರಗಳ ವೆಚ್ಚ ಮತ್ತು ಪುಸ್ತಕಗಳನ್ನು ಒಯ್ಯುವ ಶಾಲಾಚೀಲಗಳ ವೆಚ್ಚವನ್ನು ಭರಿಸಲಾಗದಷ್ಟು ಕನಿಷ್ಠ ಸಂಪನ್ಮೂಲಗಳ ಕೊರತೆಯಿರುತ್ತದೆ. ಮತ್ತೊಂದೆಡೆ ಹೆಚ್ಚು ಸಂಖ್ಯೆಯ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಶಕ್ಯರಾಗಿದ್ದು ಅಗತ್ಯ ಸೌಲಭ್ಯಗಳನ್ನು ಹೊಂದಿರುತ್ತಾರೆ. ಆದರೂ ಶಾಲೆಗಳಲ್ಲಿರುವ ನೀರಸ ಮತ್ತು ನಿರುತ್ಸಾಹದ, ಪ್ರೋತ್ಸಾಹವಿಲ್ಲದ, ಅತೃಪ್ತಿಕರವಾದ, ಅನಗತ್ಯವಾದುದನ್ನು ಕಲಿಸುವ-ಕಲಿಯುವ ವಾತಾವರಣದಿಂದಾಗಿ ಶಾಲೆಗಳಿಗೆ ಕಳುಹಿಸಲು ಹಿಂಜರಿಯುತ್ತಾರೆ.

ನಮ್ಮ ಭಾರತದಲ್ಲಿರುವ 6 ಲಕ್ಷ ಹಳ್ಳಿಗಳಲ್ಲಿ, 593 ಜಿಲ್ಲೆಗಳಲ್ಲಿ, 600ರಕ್ಕೆ ಮೇಲ್ಪಟ್ಟು ಸಮುದಾಯ ಅಭಿವೃದ್ಧಿ ವಿಭಾಗಗಳಿವೆ. ಆದರೆ ನಮ್ಮಲ್ಲಿ ಪ್ರತಿ ಹಳ್ಳಿಗೂ ಒಂದು ಪ್ರಾಥಮಿಕ ಶಾಲೆಯೂ ಇರುವುದಿಲ್ಲ. ಪ್ರಾಥಮಿಕ ಶಾಲೆ ಇದ್ದ ಹಳ್ಳಿಗಳಲ್ಲಿ ನಿರ್ವಹಣೆ ತೃಪ್ತಿಕರವಾಗಿಲ್ಲದಿರುವುದು ವಿಷಾದದ ಸಂಗತಿ. ಭೌತಿಕವಾಗಿ ಅಥವಾ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಣ ಸಂಸ್ಥೆಯೂ ಸೇರಿದಂತೆ ಶಾಲೆಯ ಇಡೀ ಆಡಳಿತ ಮಂಡಳಿಯ ನಡುವೆ ಹೊಂದಾಣಿಕೆಯಾಗಲೀ ಇರುವುದಿಲ್ಲ, ತೊಡಗಿಸಿಕೊಳ್ಳುವುದಾಗಲಿ ಇರುವುದಿಲ್ಲ. ಬಹಳಷ್ಟು ಪ್ರಾಥಮಿಕ ಶಾಲೆಗಳಲ್ಲಿ ಪಠ್ಯವನ್ನು ಅಳವಡಿಸುವ ವಿಧಾನದ ಪ್ರಕ್ರಿಯೆಯಲ್ಲಿ ವೈವಿಧ್ಯತೆ ಇಲ್ಲದ, ಯಾಂತ್ರಿಕವಾದ ರೀತಿಯಲ್ಲಿರುತ್ತದೆ. ಇದು ಕಲಿಯುವಿಕೆಯನ್ನು ಬಹಳ ನೀರಸ ಮತ್ತು ಅನಾಕರ್ಷಕಗೊಳಿಸಿ ಅನಾಸಕ್ತದಾಯಕವಾದ ಅಭ್ಯಾಸವನ್ನಾಗಿ ಮಾಡುತ್ತದೆ. ಇದರ ನೇರ ಪರಿಣಾಮವೆಂದರೆ ಮಕ್ಕಳು ಹೊರ ಪ್ರಪಂಚದೊಡನೆ ಸಂಬಂಧವಿಲ್ಲದಂತೆ ದೂರವೇ ಉಳಿಯುತ್ತಾರೆ. ಮತ್ತು ಸಾಮಾಜೀಕರಣದ ಪ್ರಕ್ರಿಯೆಗಳು ಅಪೂರ್ಣವಾಗಿಯೇ ಉಳಿಯುತ್ತವೆ. ಈ ಸಾಮಾಜಿಕ ಸಮಸ್ಯೆಗಳು ಮಕ್ಕಳನ್ನು ಬಾಲ ಕಾರ್ಮಿಕರಾಗಲು ಎಡೆ ನೀಡುತ್ತದೆ.

ತಳಮಟ್ಟದ ಕಾರ್ಯ: ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲಗೊಳಿಸಲು ಭಾರತ ಸಂವಿಧಾನದ 24, 39 ಮತ್ತು 45ನೆಯ ಪರಿಚ್ಛೇದಗಳಲ್ಲಿ ಬಾಲ್ಯದ ಸಂರಕ್ಷಣೆ, ಮತ್ತು ಉಚಿತವೂ, ಕಡ್ಡಾಯವೂ ಆದ ಮತ್ತು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ನಾಲ್ಕು ಅನುಕೂಲಗಳನ್ನು ನೀಡಿದೆ. ಅಂತಾರಾಷ್ಟ್ರೀಯ ಬಾಲ ಕಾರ್ಮಿಕ ಸಂಘಟನೆಯ ಬಾಲ ಶ್ರಮ ನಿರ್ಮೂಲನ ಸಮಾವೇಶಗಳಲ್ಲಿ ಭಾರತವು ಸಹಿ ಹಾಕಿದೆ. ಮತ್ತು 1989ರ ನವೆಂಬರ್ 20ರ ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯ ಮಕ್ಕಳ ಹಕ್ಕುಗಳ ಕುರಿತಾದ ಒಡಂಬಡಿಕೆಯಲ್ಲಿ ಭಾರತ ಒಂದಾಗಿ ಭಾಗಿಯಾಗಿದೆ. ಅದೂ ಅಲ್ಲದೆ ಬಾಲ ಕಾರ್ಮಿಕ ಪದ್ಧತಿಯ ಕರಾಳ ರೂಪಗಳನ್ನು ನಿರ್ಮೂಲನಗೊಳಿಸಲು 182ನೇ ಸಮಾವೇಶವು ಕಾರ್ಯಾಚರಣೆ ಕೈಗೊಂಡಿದೆ.

**ಮೂಲ: ಎಲ್. ಮಿಶ್ರಾ**
**ಅನು: ಡಾ. ರತ್ನಮ್ಮ ಕೆ.ಎಸ್.**

## ಭಾರತದಲ್ಲಿ ವಿದೇಶಿ ವಿದ್ಯಾರ್ಥಿಗಳು

ಶತಮಾನಗಳಿಂದ ಭಾರತವು ಪಾಂಡಿತ್ಯ ಹಾಗೂ ಜ್ಞಾನೋದಯದ ನಾಡಾಗಿದೆ. ಕ್ರಿ.ಪೂ. 3ನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಗ್ರೀಕ್ ಪ್ರವಾಸಿ ಮೆಗಾಸ್ತನೀಸ್ ಆಗಿನ ಕಾಲದಲ್ಲಿದ್ದ ತಕ್ಷಶಿಲಾ ಮೊದಲಾದ ಅನೇಕ ಪ್ರಸಿದ್ಧ ವಿಶ್ವವಿದ್ಯಾನಿಲಯಗಳನ್ನೂ ಜಗತ್ತಿನ ವಿವಿಧ ದೇಶಗಳಿಂದ ಜ್ಞಾನಪಿಪಾಸುಗಳಾಗಿ ಅಲ್ಲಿಗೆ ಗುಂಪುಗುಂಪಾಗಿ ಬರುತ್ತಿದ್ದ ವಿದ್ಯಾರ್ಥಿಗಳನ್ನೂ ನೋಡಿ ಆಶ್ಚರ್ಯಚಕಿತನಾಗಿದ್ದನು. ಇಲ್ಲಿಂದ ಮುಂದೆ ಸುಮಾರು ಒಂದು ಸಾವಿರ ವರ್ಷಗಳ ನಂತರ ಅಂದರೆ ಸುಮಾರು ಕ್ರಿ.ಶ. 7ನೇ ಶತಮಾನದಲ್ಲಿ ಚೀನಾದೇಶದ ಪ್ರವಾಸಿ ಯೂನ್ ಚ್ವಾಂಗ್ ಭಾರತಕ್ಕೆ ಬಂದನು. ಇಲ್ಲಿನ ನಳಂದ ಮತ್ತು ಇತರ ವಿಶ್ವವಿದ್ಯಾನಿಲಯಗಳಲ್ಲಿ ಹೊರನಾಡಿನ ಮತ್ತು ಭಾರತೀಯ ಸಂಶೋಧಕರು ವಿಜ್ಞಾನ, ಗಣಿತ, ಧರ್ಮ, ಖಗೋಳಶಾಸ್ತ್ರ ಮೊದಲಾದ ವಿಷಯಗಳನ್ನು ಕುರಿತ ಜ್ಞಾನಸೃಷ್ಟಿ ಮತ್ತು ಕಲಿಕೆಗಳಲ್ಲಿ ಪ್ರಾಮಾಣಿಕವಾದ ಶ್ರದ್ಧೆಯಿಂದ ತೊಡಗಿಸಿಕೊಂಡಿರುವುದನ್ನು ಕಣ್ಣಾರೆ ಕಂಡನು. ಆಗಿನ ಕಾಲದಲ್ಲಿ ವಿದೇಶೀ ವಿದ್ವಾಂಸರಿಗೆ ವಿಶೇಷವಾದ ಆದರಾತಿಥ್ಯದ ಜೊತೆಗೆ ಅಧ್ಯಯನಕ್ಕೆ ಅನುಕೂಲಕರವಾದ ವಾತಾವರಣವೂ ಇಲ್ಲಿ ನೆಲೆಸಿತ್ತು. ಇಂತಹ ವಾತಾವರಣ ಇಲ್ಲಿ ರೂಪುಗೊಳ್ಳಲು ಸಾಧ್ಯವಾದುದು, ಭಾರತವು ಹಿಂದಿನಿಂದಲೂ ಬೆಳೆಸಿಕೊಂಡು ಬಂದ ವಿಶಾಲಮನೋಭಾವದ ಸಹಿಷ್ಣುತಾ ಸಂಸ್ಕೃತಿ, ಜೊತೆಗೆ ಸತ್ಯ ಮತ್ತು ಜ್ಞಾನದ ಆವಿಷ್ಕಾರಕ್ಕೆ ಸಂಬಂಧಿಸಿದಂತೆ ರೂಢಿಸಿಕೊಂಡಿದ್ದ ಮುಕ್ತವೂ ಗೌರವಪೂರ್ವಕವೂ ಆದ ಉಪಕ್ರಮ. ಈ ಉನ್ನತ ಪರಂಪರೆ ಮಧ್ಯಯುಗದ ದೆಹಲಿ ಸುಲ್ತಾನರ ಮತ್ತು ಮೊಗಲರ ಕಾಲದವರೆಗೂ ಮುಂದುವರಿಯಿತು. ಈ ಕಾಲದಲ್ಲ ಧರ್ಮ, ಇಸ್ಲಾಂ ಸಿದ್ಧಾಂತ ಮತ್ತು ವಿಜ್ಞಾನದ ವಿವಿಧ ಕ್ಷೇತ್ರಗಳನ್ನು ಕುರಿತ ಜ್ಞಾನದ ಅನ್ವೇಷಣೆಯ ಉದ್ದೇಶದಿಂದ ವಿದೇಶದ ಆಸಕ್ತ ವಿದ್ಯಾರ್ಥಿಗಳೂ ಪ್ರಸಿದ್ಧ ವಿದ್ವಾಂಸರೂ ಭಾರತಕ್ಕೆ ಬರುತ್ತಿದ್ದರು. ಅದೇ ಪರಂಪರೆಯನ್ನು ಉಜ್ವಲವಾಗಿ ಉಳಿಸಿ ಬೆಳೆಸಲು ಸ್ವತಂತ್ರ ಭಾರತದಲ್ಲಿಯೂ ಪ್ರಯತ್ನಿಸಲಾಗಿದೆ. (ಭಾರದ್ವಾಜ್, ಪುಟ 187–88)

ಪಾರಂಪರಿಕವಾಗಿ ಭಾರತವು ಶಿಕ್ಷಣಕ್ಷೇತ್ರಕ್ಕೆ ವಿದೇಶೀ ವಿದ್ವಾಂಸರನ್ನು ಹಾಗೂ ವಿದ್ಯಾರ್ಥಿಗಳನ್ನು ಸ್ವಾಗತಿಸುವುದಾದರೂ ಇಂತಹವರನ್ನು ಕುರಿತ ಒಳಹರಿವಿಗೆ ಸಂಬಂಧಿಸಿದಂತೆ ನಿಖರವಾದ ಯಾವುದೇ ನಿಯಮಗಳನ್ನು ರೂಪಿಸಿಕೊಂಡಿಲ್ಲ. ಭಾರತ ಸರ್ಕಾರವು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿ (Indian council for cultural relations) ಯ ಅಡಿಯಲ್ಲಿ ವಿದ್ಯಾರ್ಥಿವೇತನಗಳನ್ನು ನೀಡುವುದರ ಮೂಲಕ ಭಾರತದಲ್ಲಿ ವಿದೇಶೀ ವಿದ್ಯಾರ್ಥಿಗಳ ಶಿಕ್ಷಣವನ್ನು ಪ್ರೋತ್ಸಾಹಿಸುತ್ತಿದೆ. ಸ್ವಾರ್ಥಿಕ ಅವಲಂಬನದ ವಿದ್ಯಾರ್ಥಿಗಳು (Self financing students) ಇಲ್ಲಿ ಉದಾರಕಲೆಗಳ ಶಿಕ್ಷಣಕ್ಕೆ ಸುಲಭವಾಗಿ ಪ್ರವೇಶಪಡೆಯಬಹುದಾದರೂ ವೃತ್ತಿಪರ ಕೋರ್ಸುಗಳಿಗೆ ನಿಯಮಿತವಾದ ರೀತಿಯಲ್ಲಿ ಮಾತ್ರ ಪ್ರವೇಶ ಪಡೆಯಲು ಸಾಧ್ಯ.

Digitised by Bharatavani, CIIL

**ಭಾರತಕ್ಕೆ ವಿದೇಶಿ ವಿದ್ಯಾರ್ಥಿಗಳ ಬದಲಾದ ಹರಿವು:**

ಸ್ವತಂತ್ರಭಾರತದಲ್ಲಿ ಉನ್ನತಶಿಕ್ಷಣದ ತೀವ್ರಗತಿಯ ವಿಸ್ತರಣೆ, ರಾಷ್ಟ್ರೀಯ ಪ್ರಾಮುಖ್ಯತೆಯ ಹಲವಾರು ಸಂಸ್ಥೆಗಳ ಹಾಗೂ ಉತ್ಕೃಷ್ಟತಾ ಕೇಂದ್ರಗಳ ಸ್ಥಾಪನೆ ಮೊದಲಾದ ಅಂಶಗಳು ಭಾರತಕ್ಕೆ ವಿದೇಶೀ ವಿದ್ಯಾರ್ಥಿಗಳನ್ನು ಗಣನೀಯ ಪ್ರಮಾಣದಲ್ಲಿ ಆಕರ್ಷಿಸಿತು. 1965–74ರ ವರ್ಷಗಳಲ್ಲಿ ಭಾರತಕ್ಕೆ ಬಂದ ವಿದೇಶೀ ವಿದ್ಯಾರ್ಥಿಗಳ ಸರಾಸರಿ ಸಂಖ್ಯೆ ವರ್ಷಕ್ಕೆ ಸುಮಾರು 8,400ರವರೆಗೆ ಇತ್ತು. ಇದರಲ್ಲಿ ಸುಮಾರು 2/5 ರಷ್ಟು ವಿದ್ಯಾರ್ಥಿಗಳು (ಆಫ್ರಿಕಾದ ರಾಷ್ಟ್ರಗಳಿಂದಲೂ ಮೂರರಷ್ಟು ನೆರೆಕೆರೆಯ ರಾಷ್ಟ್ರಗಳಿಂದಲೂ 1/9 ರಷ್ಟು ಪೂರ್ವ ಏಷ್ಯಾ (ಪ್ರಮುಖವಾಗಿ ಥೈಲ್ಯಾಂಡ್, ಫಿಜಿ) ದ ರಾಷ್ಟ್ರಗಳಿಂದಲೂ 12ರಲ್ಲಿ ಒಂದು ಭಾಗ ಉತ್ತರ ಏಷ್ಯಾದಿಂದಲೂ ಬಂದಿದ್ದರು. ಅಮೆರಿಕಾ, ಆಸ್ಟ್ರೇಲಿಯಾ ಮತ್ತು ಯೂರೋಪ್ ದೇಶಗಳಿಂದ ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಹದಿನಾಲ್ಕರಲ್ಲಿ ಒಂದಕ್ಕಿಂತ ಕಡಿಮೆಯಾಗಿತ್ತು.

1965–74ರಲ್ಲಿ ಆಫ್ರಿಕಾ ದೇಶದಿಂದ ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಶೇ. 40ರಷ್ಟು ಇದ್ದುದು 1989–90ರ ವೇಳೆಗೆ ಶೇ. 47ರಷ್ಟಕ್ಕೆ ಹೆಚ್ಚಾಯಿತು. ಆದರೆ 1999–2000ದ ವರ್ಷದಲ್ಲಿ ಸುಮಾರು ಶೇ. 37ರಷ್ಟು ಇಳಿಯಿತು. 1965–74ರಲ್ಲಿ ಶೇ. 51ರಷ್ಟು ಬರುತ್ತಿದ್ದ ಏಷ್ಯಾದ ವಿದ್ಯಾರ್ಥಿಗಳ ಸಂಖ್ಯೆ ಇಂದು ಶೇ. 50ರಷ್ಟಾಗಿದೆ. ನೆರಹೊರೆಯ ನೇಪಾಳ, ಭೂತಾನ್, ಪಾಕಿಸ್ತಾನ, ಬಾಂಗ್ಲಾದೇಶದಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ 1965–74ರಲ್ಲಿ 1,300 ಇದ್ದುದು 1989–90ರಲ್ಲಿ 1,850 ಹಾಗೂ 1999–2000ದಲ್ಲಿ 1950 ಆಗಿ ಏರಿಕೆಯನ್ನು ಕಂಡಿದೆ.

ಈ ದತ್ತಾಂಶಗಳ ವಿವರವಾದ ವಿಶ್ಲೇಷಣೆಯಿಂದ ದೇಶವಾರು ವಿದ್ಯಾರ್ಥಿಗಳ ಒಳಹರಿವಿನ ಇಳಿಮುಖತೆಯಾಗಿರುವುದು ತಿಳಿದುಬರುತ್ತದೆ. ಕೆನ್ಯಾದೇಶದ ವಿದ್ಯಾರ್ಥಿಗಳ ಸಂಖ್ಯೆ 1993–94ರಲ್ಲಿ 4,26 ಇದ್ದುದು 1999–2000ದಲ್ಲಿ 868 ಆದದ್ದು, ಸೂಡನ್ ವಿದ್ಯಾರ್ಥಿಗಳ ಸಂಖ್ಯೆ 1988–89ರಲ್ಲಿ 1682 ಇದ್ದುದು 299 ಆದದ್ದು, ಜೋರ್ಡನ್ನಿನ ಸಂಖ್ಯೆ 1599ರಿಂದ 111ಕ್ಕೆ ಇಳಿದುದು, ಇರಾನಿನ ವಿದ್ಯಾರ್ಥಿಗಳ ಸಂಖ್ಯೆ 553ರಿಂದ 151ಕ್ಕೆ ಬಂದದ್ದು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಹೊರಹೋಗುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ದೇಶಗಳು ಇವು ಎಂಬ ವಿಷಯ ಗಮನಾರ್ಹ.

ಹೊರಹೋಗುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದರೂ ಅವರಲ್ಲಿ ಭಾರತಕ್ಕೆ ಬರುವವರ ಸಂಖ್ಯೆಯಲ್ಲಿ ಇಳಿಮುಖವಾದ ರಾಷ್ಟ್ರ ಎಂದರೆ ಮಲೇಶಿಯಾ. ಇಲ್ಲಿಂದ 1993–94ರಲ್ಲಿ 1421 ವಿದ್ಯಾರ್ಥಿಗಳು ಬರುತ್ತಿದ್ದು ಅವರ ಸಂಖ್ಯೆ 1999–2000ದಲ್ಲಿ 168ಕ್ಕೆ ಇಳಿಯಿತು. ಆಸ್ಟ್ರೇಲಿಯಾದ ಅವರ ಆದ್ಯತೆಯನ್ನು ಬಿಟ್ಟರೆ, 1997ರಲ್ಲಿ ಮೇಲಕಾದಲ್ಲಿ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಸಂಕೀರ್ಣ ಪ್ರಾರಂಭವಾದುದು. ಈ ಇಳಿಮುಖತೆಗೆ ಮತ್ತೊಂದು ಕಾರಣ, ಈ ಸಂಕೀರ್ಣ ಮೊದಲ ವರ್ಷದಲ್ಲಿ 150 ವೈದ್ಯಕೀಯ ವಿದ್ಯಾರ್ಥಿಗಳನ್ನ ಒಳಗೊಂಡಿತ್ತು.

**ಅಂತಾರಾಷ್ಟ್ರೀಯ ಸನ್ನಿವೇಶದಲ್ಲಿ ಭಾರತದಲ್ಲಿ ವಿದೇಶಿ ವಿದ್ಯಾರ್ಥಿಗಳು:**

1993–94ರ ನಂತರ ಭಾರತದಲ್ಲಿ ವಿದೇಶೀವಿದ್ಯಾರ್ಥಿಗಳ ಸಂಖ್ಯೆಯಲ್ಲಿ ತೀವ್ರತರವಾದ ಇಳಿಕೆ ಕಂಡುಬಂದಿದೆ. ಸುಮಾರು 14,000 ಇದ್ದ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ 4 ವರ್ಷಗಳಲ್ಲಿ ಸುಮಾರು ಅರ್ಧದಷ್ಟು ಕಡಿಮೆಯಾಗಿದೆ. ಈ ಇಳಿಮುಖ ಕಂಡುಬಂದಿರುವುದು ಪ್ರಮುಖವಾಗಿ ಸಂಯುಕ್ತ ಗಣರಾಜ್ಯ, ಆಸ್ಟ್ರೇಲಿಯಾ, ಜರ್ಮನಿ, ಫ್ರಾನ್ಸ್ ಹಾಗೂ ಚೀನಾ ಸೇರಿದಂತೆ ಹಲವಾರು ರಾಷ್ಟ್ರಗಳು ವಿದೇಶೀ ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ವಿಶೇಷವಾದ ಪ್ರಗತಿಯನ್ನು ಸಾಧಿಸಿದ ಕಾಲದಲ್ಲಿ. ಉದಾಹರಣೆಗೆ, 1990ರಲ್ಲಿ 80,000 ವಿದ್ಯಾರ್ಥಿಗಳು ಬರುತ್ತಿದ್ದ ಯುನೈಟೆಡ್ ಕಿಂಗ್‌ಡಂನಲ್ಲಿ ಕೇವಲ ಐದು ವರ್ಷಗಳಲ್ಲಿ, ಅಂದರೆ 1995ರಲ್ಲಿ ಈ ಸಂಖ್ಯೆ 19,7000 ಆಗಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಸುಮಾರು ಒಂದು ಲಕ್ಷದಷ್ಟು ಹೆಚ್ಚಳ ಆಗಿದೆ. ಜರ್ಮನಿಯಲ್ಲಿ 1990ರಲ್ಲಿ 107,000 ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ 1995ರ ವೇಳೆಗೆ 160,000 ಆಗಿ ಸುಮಾರು 50,000ದಷ್ಟು ಹೆಚ್ಚಳ ಕಂಡುಬಂದಿದೆ. ಆಸ್ಟ್ರೇಲಿಯಾದಲ್ಲಿ 1990ರಲ್ಲಿ 29,000ದಿಂದ 1995ರ ವೇಳೆಗೆ 87,000 ದಷ್ಟು ಹೆಚ್ಚಳ ಕಂಡುಬಂದಿದ್ದು ಎರಡುಪಟ್ಟು ಏರಿಕೆಯನ್ನು ಅದು ನಿರ್ವಹಿಸಿದೆ.

ಜಪಾನ್ ದೇಶದಲ್ಲಿ ಈ ಬೆಳವಣಿಗೆ ಕಡಿಮೆ ಎಂದೇ ಹೇಳಬಹುದು. ಇಲ್ಲಿ ವಾರ್ಷಿಕ ಸರಾಸರಿ 2,000ದಷ್ಟು ಮಾತ್ರ ಏರಿಕೆಯಾಗಿದ್ದು, ಯುನೈಟೆಡ್ ಕಿಂಗ್‌ಡಂನ ಒಟ್ಟು 23,000, ಜರ್ಮನಿ ಮತ್ತು ಆಸ್ಟ್ರೇಲಿಯಾದ 11,000ದಷ್ಟು ಏರಿಕೆಯ ಮುಂದೆ ಏನೂ ವಿಶೇಷವೆನಿಸದು. ಚೀನಾವು 4,700ರಷ್ಟು ಸರಾಸರಿ ವಾರ್ಷಿಕ ಹೆಚ್ಚಳವನ್ನು ದಾಖಲಿಸಿದೆ. 1990ರಲ್ಲಿ ಚೀನಾಕ್ಕೆ ಬರುತ್ತಿದ್ದ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ ಭಾರತದ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಾಗಿತ್ತು. 1993ರಲ್ಲಿ ಚೀನಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆಯು ಭಾರತಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆಯ ಮೂರನೆ ಎರಡು ಭಾಗಕ್ಕಿಂತ ಅಧಿಕವಾಗಿದೆ. ಪ್ರಗತಿಪರ ದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಪ್ರಗತಿಹೊಂದಿದ ರಾಷ್ಟ್ರಗಳು ಮಾಡುತ್ತಿರುವ ಆಕ್ರಮಣಕಾರಿ ಪ್ರಯತ್ನಗಳ ಪರಿಣಾಮದಿಂದಾಗಿ ಭಾರತ ಹಾಗೂ ಇತರ ಕೆಲವು ರಾಷ್ಟ್ರಗಳಲ್ಲಿ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ವಿದೇಶದಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣವಾಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಭಾರತವು ಈಜಿಪ್ಟ್, ಲೆಬೆನಾನ್, ಸೌದಿ ಅರೇಬಿಯಾ ಮೊದಲಾದ ಪ್ರಗತಿ ಹೊಂದುತ್ತಿರುವ ರಾಷ್ಟ್ರಗಳ ಸಾಲಿಗೆ ಸೇರುತ್ತದೆ.

Digitised by Bharatavani, CIIL

**ಭಾರತದಲ್ಲಿ ವಿದೇಶಿ ವಿದ್ಯಾರ್ಥಿಗಳು – ಪ್ರಸ್ತುತ ಸ್ಥಿತಿ:**

ಪ್ರಸ್ತುತ ಭಾರತದಲ್ಲಿ ಸುಮಾರು ನೂರು ರಾಷ್ಟ್ರಗಳ ವಿದ್ಯಾಥಿಗಳು ವಿವಿಧ ಪದವಿಪೂರ್ವ, ಸ್ನಾತಕ ಮತ್ತು ಸಂಶೋಧನಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರನ್ನು ಭಾರತ ಸರ್ಕಾರದ ನೆರವು ಪಡೆದ ವಿದ್ಯಾರ್ಥಿಗಳು, ಸ್ವ ಆರ್ಥಿಕಾವಲಂಬಿ ವಿದ್ಯಾರ್ಥಿಗಳು, ವಿದೇಶದ ಸರ್ಕಾರಗಳು ಪ್ರಾಯೋಜಿಸಿದ ವಿದ್ಯಾರ್ಥಿಗಳು, ಮತ್ತು/ಅಥವಾ ವರ್ಲ್ಡ್ ಬ್ಯಾಂಕ್, ಏಷ್ಯನ್ ಡೆವಲೆಪ್‌ಮೆಂಟಲ್ ಬ್ಯಾಂಕ್, ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟಲ್ ಬ್ಯಾಂಕ್, ಆಫ್ರಿಕನ್ ಡೆವಲಪ್‌ಮೆಂಟಲ್ ಬ್ಯಾಂಕ್ ಮುಂತಾದವುಗಳಿಂದ ಆರ್ಥಿಕ ಧನಸಹಾಯ ಪಡೆದು ಅಭ್ಯಾಸಮಾಡುವ ವಿದ್ಯಾರ್ಥಿಗಳು, ಸಾಂದರ್ಭಿಕವಾಗಿ ಬರುವ ವಿದ್ಯಾರ್ಥಿಗಳು, ಅಂತರ್ ವಿಶ್ವವಿದ್ಯಾನಿಲಯದ ಪರಸ್ಪರ ಒಪ್ಪಂದದ ಮೇರೆಗೆ ಬಂದ ವಿದ್ಯಾರ್ಥಿಗಳು, ಅನಿವಾಸಿ ಭಾರತೀಯರ ಮತ್ತು ವಲಸೆಹೋದ ಭಾರತೀಯರ ಮಕ್ಕಳು ಎಂದು ವರ್ಗೀಕರಿಸಬಹುದು.

1999–2000ದಲ್ಲಿ ಭಾರತದಲ್ಲಿ ನೂರು ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳ 14 ವಿವಿಧ ರಾಷ್ಟ್ರಗಳಿಂದ ಬಂದವರಾಗಿದ್ದರು. ಇವುಗಳ ವಿವರ ಹೀಗಿದೆ:

**ಕಡಿಮೆ ಆದಾಯದ ರಾಷ್ಟ್ರಗಳಿಂದ ಬಂದ ವಿದ್ಯಾರ್ಥಿಗಳ ವಿವರ :** ಕೆನ್ಯಾ (868), ನೇಪಾಳ (772), ಬಾಂಗ್ಲಾದೇಶ (520), ಈಥಿಯೋಪಿಯಾ (369), ಸೂಡನ್ (299), ಉಗಾಂಡ(199), ಭೂತಾನ್ (181) ಮತ್ತು ಯಮನ್(125).

**ಕೆಳಮಧ್ಯಮ ಆದಾಯದ ರಾಷ್ಟ್ರಗಳಿಂದ ಬಂದ ವಿದ್ಯಾರ್ಥಿಗಳ ವಿವರ :** ಶ್ರೀಲಂಕಾ (485), ಥೈಲ್ಯಾಂಡ್ (179), ಇರಾನ್ (151), ಮತ್ತು ಜೋರ್ಡಾನ್ (111).

**ಉನ್ನತ ಮಧ್ಯಮ ಆದಾಯದ ರಾಷ್ಟ್ರಗಳಿಂದ ಬಂದ ವಿದ್ಯಾರ್ಥಿಗಳ ವಿವರ :** ಮಾರಿಶಸ್ (304). ಉನ್ನತ ಆದಾಯದ ರಾಷ್ಟ್ರಗಳಿಂದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಭಾರತೀಯ ಅಧ್ಯಯನ ಮತ್ತು ಪ್ರದರ್ಶನ ಕಲೆಗಳ ಕಾರ್ಯಕ್ರಮಗಳಿಗಾಗಿ ಭಾರತಕ್ಕೆ ಬರುತ್ತಾರೆ. ಏನೇ ಆದರೂ ಇಂತಹ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಳಿತವಿರುತ್ತದೆ. ಇವರು ಭಾರತಸರ್ಕಾರ ಪ್ರಾಯೋಜಿಸಿದ ವಿದ್ವಾಂಸರಾಗಲೀ ಇಲ್ಲವೇ ಸ್ವಆರ್ಥಿಕಾವಲಂಬಿ ವಿದ್ಯಾರ್ಥಿಗಳಾಗಲೀ ಆಗಿರುತ್ತಾರೆ. ಅಮೇರಿಕಾ ಸಂಯುಕ್ತ ಸಂಸ್ಥಾನ, ಕೆನಡ, ಸಂಯುಕ್ತ ಗಣರಾಜ್ಯಗಳಲ್ಲಿನ ಅನಿವಾಸಿ ಭಾರತೀಯರುಗಳು ಹಾಗೂ ವಲಸೆಗಾರರು ಸಾಮಾನ್ಯವಾಗಿ ಭಾರತದ ಖಾಸಗಿ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಸ್ವಾಆರ್ಥಿಕಾವಲಂಬಿ ವಿದ್ಯಾರ್ಥಿಗಳಾಗಿ ಬರುತ್ತಾರೆ. ಇದಕ್ಕೆ ಕಾರಣ ಅವರು ವಾಸಿಸುವ ದೇಶಗಳಿಗಿಂತ ಈ ಕೋರ್ಸ್‌ಗಳಿಗೆ ತಗಲುವ ವೆಚ್ಚ ಭಾರತದಲ್ಲಿ ಕಡಿಮೆ. ಅಲ್ಲದೆ ಭಾರತದಲ್ಲಿ ಈ ಕೋರ್ಸ್‌ಗಳಿಗೆ ಪ್ರತ್ಯೇಕವಾದ ಅನಿವಾಸಿ ಭಾರತೀಯರಿಗಾಗಿ ಮೀಸಲಾತಿ ಇದೆ. ಹೀಗಾಗಿ ಇಲ್ಲಿ ಇವರುಗಳಿಗೆ ಪ್ರವೇಶ ಸಿಗುವುದು ಸುಲಭ.

**ವಿದೇಶಿ ವಿದ್ಯಾರ್ಥಿಗಳಿಂದ ಪ್ರಸ್ತುತ ವಿಶ್ವಾಸಗಳಿಸಿರುವ ವಿಶ್ವವಿದ್ಯಾನಿಲಯಗಳು:**

ಪ್ರಸ್ತುತ ಡೆಲ್ಲಿ ವಿಶ್ವವಿದ್ಯಾನಿಲಯವು 1191 ವಿದ್ಯಾರ್ಥಿಗಳನ್ನು ಪಡೆದು ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಉಚ್ಚಸ್ಥಾನದಲ್ಲಿದೆ. 1999–2000 ದಲ್ಲಿ 200ಕ್ಕಿಂತ ಹೆಚ್ಚು ವಿದೇಶೀ ವಿದ್ಯಾರ್ಥಿಗಳನ್ನು ಪಡೆದ ಇತರ ವಿಶ್ವವಿದ್ಯಾನಿಲಯಗಳೆಂದರೆ, ಮೈಸೂರು ವಿಶ್ವವಿದ್ಯಾನಿಲಯ, (455), ಅಲಿಗರ್ ಮುಸ್ಲಿಂ ವಿಶ್ವವಿದ್ಯಾನಿಲಯ (332), ಉಸ್ಮಾನಿಯಾ ವಿಶ್ವವಿದ್ಯಾನಿಲಯ (307), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮರಾಠವಾಡ ವಿಶ್ವವಿದ್ಯಾನಿಲಯ (294), ಚಂಡೀಗರ್ ವಿಶ್ವವಿದ್ಯಾನಿಲಯ (220), ಪಾಟಿಯಾಲ ವಿಶ್ವವಿದ್ಯಾನಿಲಯ ಮತ್ತು ಮುಂಬಯಿ ವಿಶ್ವವಿದ್ಯಾನಿಲಯ (402), ಪುಣೆ ವಿಶ್ವವಿದ್ಯಾನಿಲಯದಲ್ಲಿ 1998–99ರಲ್ಲಿ 402 ವಿದೇಶೀ ವಿದ್ಯಾರ್ಥಿಗಳಿದ್ದು 1999–2000ದ ಪಟ್ಟಿಯಲ್ಲಿ ಮಾಹಿತಿ ಇಲ್ಲ.

1965–74ರ ನಡುವಿನ ವರ್ಷಗಳಲ್ಲಿ ಬೊಂಬಾಯಿ, ಬರೋಡ, ಡೆಲ್ಲಿ, ಪಂಜಾಬ್, ಆಲಿಗರ್, ಮೈಸೂರು, ಸರದಾರ್‌ಪಟೇಲ್, ಪೂನಾ ಮದರಾಸು ಮತ್ತು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಗಳು ಕ್ರಮವಾಗಿ ಪ್ರಸಿದ್ಧವಾಗಿದ್ದವು. ಇವುಗಳಲ್ಲಿ 1999–2000ದ ವರ್ಷದಲ್ಲಿ ಬರೋಡ ಮತ್ತು ಸರದಾರ್ ಪಟೇಲ್ ಹಾಗೂ ಮದರಾಸು ವಿಶ್ವವಿದ್ಯಾನಿಲಯಗಳಲ್ಲಿ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ ನೂರಕ್ಕೂ ಕಡಿಮೆ ಇತ್ತು. ಇದೇ ವರ್ಷದಲ್ಲಿ ಚನ್ನೈನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಮಾತ್ರ 149 ವಿದೇಶೀ ವಿದ್ಯಾರ್ಥಿಗಳಿದ್ದು 1999–2000ದಲ್ಲಿ 50 ಅಥವಾ ಅದಕ್ಕೂ ಅಧಿಕ ಸಂಖ್ಯೆಯ ವಿದೇಶೀ ವಿದ್ಯಾರ್ಥಿಗಳನ್ನು ಹೊಂದಿದ್ದ ಏಕೈಕ ಸಂಸ್ಥೆಯಾಗಿತ್ತು.

**ಜನಪ್ರಿಯ ಅಧ್ಯಯನ ವಿಷಯಗಳು:**

ಪ್ರಗತಿಪರ ದೇಶಗಳಿಂದ ಉನ್ನತ ಶಿಕ್ಷಣಕ್ಕಾಗಿ ಇಲ್ಲಿಗೆ ಬರುವ ವಿದ್ಯಾರ್ಥಿಗಳು ಇಲ್ಲಿ ಉಪಲಬ್ಧವಿರುವ ವಿವಿಧ ವಿಷಯಗಳಲ್ಲಿ ಮಾನವಿಕ, ಸಮಾಜ ವಿಜ್ಞಾನ, ಕಾನೂನು ಶಿಕ್ಷಣ, ವಾಣಿಜ್ಯ ಶಿಕ್ಷಣ ಮತ್ತು ವಿಜ್ಞಾನದಿಂದ ಇಂಜಿನಿಯರಿಂಗ್ ಶಿಕ್ಷಣ, ವೈದ್ಯಕೀಯ ಶಿಕ್ಷಣ, ತಂತ್ರಜ್ಞಾನ, ಆಡಳಿತ ಹಾಗೂ ವ್ಯವಸಾಯ–ಅಧ್ಯಯನ ಮಾಡಲು ಬಯಸಿ ಬರುತ್ತಾರೆ. ಇವರಲ್ಲಿ ಶೇ. 95ರಷ್ಟು ವಿದ್ಯಾರ್ಥಿಗಳು ಪ್ರಗತಿಪರ ದೇಶಗಳಿಂದ ಉನ್ನತ ಶಿಕ್ಷಣಕ್ಕಾಗಿ ಬಂದವರಾಗಿರುತ್ತಾರೆ.

60 ಮತ್ತು 70ರ ದಶಕಗಳಲ್ಲಿ ಭಾರತಕ್ಕೆ ಬಂದ ವಿದೇಶೀ ವಿದ್ಯಾರ್ಥಿಗಳಲ್ಲಿ ವಿಜ್ಞಾನ, ಮಾನವಿಕ ಮತ್ತು ವಾಣಿಜ್ಯಗಳಲ್ಲಿ ಕ್ರಮವಾಗಿ ಶೇ. 25, ಶೇ. 25 ಮತ್ತು ಶೇ. 10ರಷ್ಟು ವಿದ್ಯಾರ್ಥಿಗಳಿದ್ದರು. ಇಂಜಿನಿಯರಿಂಗ್ ಶಿಕ್ಷಣದಲ್ಲಿ ಶೇ. 9 ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಶೇ. 16ಕ್ಕಿಂತ ಸ್ವಲ್ಪ ಹೆಚ್ಚು ವಿದ್ಯಾರ್ಥಿಗಳಿದ್ದರು. ಶಿಕ್ಷಣ ಮತ್ತು

Digitised by Bharatavani, CIIL

ಕಾನೂನು ಶಿಕ್ಷಣ ಶೇ. 1ಕ್ಕಿಂತ ಕಡಿಮೆ ಮಟ್ಟದಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸಿತ್ತು. ಒಟ್ಟಾರೆ, ಸುಮಾರು ಶೇ. 56 ರಷ್ಟು ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ, ಸುಮಾರು ಶೇ. 44ರಷ್ಟು ವಿದ್ಯಾರ್ಥಿಗಳು ಕಲೆ ಮತ್ತು ಮಾನವಿಕ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿದ್ದರು.

1996–97ರ ವೇಳೆಗೆ ವಿವಿಧ ವಿಷಯಗಳನ್ನು ಕುರಿತ ವಿದೇಶೀ ವಿದ್ಯಾರ್ಥಿಗಳ ಬೇಡಿಕೆಯ ವಿನ್ಯಾಸ ಬದಲಾಯಿತು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳು ಕೇವಲ 35ರಷ್ಟು ವಿದ್ಯಾರ್ಥಿಗಳನ್ನು ಮಾತ್ರ ಆಕರ್ಷಿಸಿತು. ವಾಣಿಜ್ಯ ಮತ್ತು ನಿರ್ವಹಣಾ ಕ್ಷೇತ್ರಗಳು ಶೇ. 10 ಭಾಗಕ್ಕೆ ಹೋಲಿಸಿದರೆ ಸುಮಾರು ಕಾಲುಭಾಗದಷ್ಟು ವಿದ್ಯಾರ್ಥಿಗಳನ್ನು ಆಕರ್ಷಿಸಿತು. ಕಾನೂನು ಶಿಕ್ಷಣ ಹಿಂದಿನ ಶೇ. 1/2ಕ್ಕಿಂತ ಕಡಿಮೆ ಪ್ರಮಾಣಕ್ಕೆ ಹೋಲಿಸುವಾಗ, 1996–97ರಲ್ಲಿ ಶೇ. 10ರಷ್ಟು ವಿದ್ಯಾರ್ಥಿಗಳನ್ನು ಆಕರ್ಷಿಸಿತು. ವೈದ್ಯಕೀಯ ಶಿಕ್ಷಣದಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಹಿಂದಿನ ಶೇ. 16ಕ್ಕೆ ಹೋಲಿಸಿದರೆ ಶೇ. 8ಕ್ಕೆ ಇಳಿಸಿತು.

ನೇಪಾಳದ ಪೊಖಾರಾ ಮತ್ತು ಮಲೇಶಿಯಾದ ಮೇಲಕಾಗಳಲ್ಲಿ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಸಂಸ್ಥೆಯು ಪ್ರಾರಂಭಿಸಿದ ಎರಡು ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಕಾರಣದಿಂದಾಗಿ ವೈದ್ಯಕೀಯ ಶಿಕ್ಷಣಕ್ಕಾಗಿ ಭಾರತಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಯಿತು. ಇದೇ ಸಂಸ್ಥೆ ಸದ್ಯದಲ್ಲೇ ಇದೇ ರೀತಿಯ ಮೂರು ಸಂಸ್ಥೆಗಳನ್ನು ದುಬಾಯ್, ಶ್ರೀಲಂಕಾ ಮತು ಉಗಾಂಡಾದಲ್ಲಿ ಸ್ಥಾಪಿಸುವ ಯೋಜನೆಯನ್ನು ಹೊಂದಿದೆ. ಹೀಗೆಯೇ BITS ಪಿಲಾವಿಯವರು UAE ಮತ್ತು BIT ಮೆಸ್ರಾ ಅವರು ಸ್ಥಾಪಿಸುವ ಕ್ಯಾಂಪಸ್‌ಗಳು ಇಂಜಿನಿಯರಿಂಗ್, ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ವಿದೇಶೀ ವಿದ್ಯಾರ್ಥಿಗಳ ಒಳಹರಿವಿನ ಮೇಲೆ ಪರಿಣಾಮ ಬೀರಿದೆ.

**ಪ್ರಗತಿಹೊಂದಿದ ದೇಶಗಳಿಂದ ಭಾರತಕ್ಕೆ ವಿದೇಶೀ ವಿದ್ಯಾರ್ಥಿಗಳು:**

1983ರಲ್ಲಿ ಭಾರತದಲ್ಲಿ ಸುಮಾರು 11,000 ಕ್ಕಿಂತ ಅಧಿಕ ವಿದೇಶೀ ವಿದ್ಯಾರ್ಥಿಗಳಿದ್ದರು. ಇದು ಜಪಾನಿನಲ್ಲಿದ್ದ 9500 ವಿದೇಶೀ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಾಗಿತ್ತಲ್ಲದೆ, ಚೀನಾದಲ್ಲಿದ್ದ (2066)ಕ್ಕಿಂತ ಐದು ಪಟ್ಟಾಗಿತ್ತು. ಯೂರೋಪ್ ಅಮೆರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳಿಂದ ಭಾರತಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 475 ಆಗಿದ್ದು ಜಪಾನಿನ 1702, ಚೀನಾದ 566 ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದರೆ ಭಾರತಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಕೇವಲ ಐದನೆ ಒಂದು ಭಾಗದಷ್ಟಿತ್ತು.

1993–94ರಲ್ಲಿ ಇಂಗ್ಲೀಷ್ ಮಾತನಾಡುತ್ತಿದ್ದ ದೇಶಗಳಲ್ಲಿ ಮುಂಚೂಣಿಯಲ್ಲಿದ್ದ ಅಮೇರಿಕಾ ಸಂಯುಕ್ತ ಸಂಸ್ಥಾನ, ಯುನೈಟೆಡ್ ಕಿಂಗ್‌ಡಮ್ ಮತ್ತು ಕೆನಡಾ ದೇಶ 75,000 ವಿದ್ಯಾರ್ಥಿಗಳು ವಿದೇಶಗಳಲ್ಲಿ ಅಧ್ಯಯನ ಮಾಡುತ್ತಿದ್ದರು. ಭಾರತದಲ್ಲಿ ಇವರ ಸಂಖ್ಯ ಕೇವಲ 309 ಆಗಿತ್ತು.

ಭಾರತ, ಜಪಾನ್ ಮತ್ತು ಚೀನಾಗಳಿಗೆ ಬರುತ್ತಿದ್ದ ಯೂರೋಪಿಯನ್ ದೇಶಗಳ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ವ್ಯತ್ಯಾಸ ಇದಕ್ಕೂ ಹೆಚ್ಚಿನದಾಗಿತ್ತು. 90ರ ದಶಕದ ಮಧ್ಯಭಾಗದಲ್ಲಿ ಜರ್ಮನಿ, ಫ್ರಾನ್ಸ್, ಇಟಲಿ ಮತ್ತು ಸ್ಪೈನ್ ದೇಶಗಳಿಂದ ವಿದೇಶದಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 1,55,000 ಆಗಿದ್ದರೂ ಭಾರತದಲ್ಲಿ ಇವರ ಸಂಖ್ಯೆ ಇದ್ದುದು ಕೇವಲ 64 ಮಾತ್ರ. ಅತಿ ಹೆಚ್ಚಿನ ಆದಾಯವಿದ್ದ ಜಪಾನಿನಲ್ಲಿ 8,526 ವಿದ್ಯಾರ್ಥಿಗಳು ವಿದೇಶಗಳಲ್ಲಿ ಅಧ್ಯಯನ ಮಾಡುತ್ತಿದ್ದರೂ ಭಾರತದಲ್ಲಿ ಇವರ ಸಂಖ್ಯೆ 34 ಮಾತ್ರವಾಗಿತ್ತು. ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಂದ ಅಧ್ಯಯನಕ್ಕಾಗಿ ಹೊರಹೋಗುತ್ತಿದ್ದ ವಿದ್ಯಾರ್ಥಿಗಳಲ್ಲಿ ಭಾರತಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 1,000ಕ್ಕೆ 3 ಮಾತ್ರ. ಹಾಗೂ ಕೆನಡಾ ಮತ್ತು ಯುನೈಟೆಡ್ ಕಿಂಗ್‌ಡಮ್‌ನಿಂದ ಬರುತ್ತಿದ್ದವು ಸಾವಿರಕ್ಕೆ ಒಬ್ಬರು ಮಾತ್ರ.

ಸಂಸ್ಕೃತಿ ವಿನಿಮಯದ ವಿವಿಧ ಕಾರ್ಯಕ್ರಮಗಳಲ್ಲಿ ಭಾರತ ಸರಕಾರವು ವಿದೇಶದ ವಿದ್ಯಾರ್ಥಿಗಳಿಗೆ ಅನೇಕ ಅವಕಾಶಗಳನ್ನು, ಸ್ಥಾನಮಾನವನ್ನು ಕೊಡಮಾಡಿದೆ. 1998–99ರಲ್ಲಿ ಈ ಕಾರ್ಯಕ್ರಮದ ಪ್ರಯೋಜನ ಪಡೆದ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ: ಜರ್ಮನಿ (8), ಫ್ರಾನ್ಸ್ (14), ಇಟಲಿ (4), ಮತ್ತು ಸ್ಪೈನ್ (2). ಈ ಮಟ್ಟಿನ ಆದ್ಯತೆಯು 1997–2000ದ ಅವಧಿಯಲ್ಲಿ ಕೊಟ್ಟ ಒಟ್ಟು ಆದ್ಯತೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಾಗಿದೆ.

1994–95ರಲ್ಲಿ ಭಾರತದ ಐದು IIT ಗಳಲ್ಲಿದ್ದ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ ಕೇವಲ 269. ಇದರಲ್ಲಿ 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಮಾತ್ರ ಹೆಚ್ಚಿನ ಆರ್ಥಿಕ ವರಮಾನವಿರುವ ದೇಶಗಳಿಂದ ಬಂದವರು. ಒಟ್ಟು 27 ದೇಶಗಳಲ್ಲಿ ಕೇವಲ ಬಾಂಗ್ಲಾದೇಶ (91), ಶ್ರೀಲಂಕಾ (41) ಮತ್ತು ನೇಪಾಳ(23)ಗಳಲ್ಲಿನ ಎಲ್ಲ IIT ಗಳಲ್ಲಿದ್ದ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ 20 ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಿನದಾಗಿತ್ತು.

ಪ್ರತಿವರ್ಷ ICCR ಸಂಸ್ಥೆಯು ಮೂರರಿಂದ ಐದು ವರ್ಷ ಅವಧಿಯ ಸುಮಾರು 2,000 ವಿದ್ಯಾರ್ಥಿವೇತನಗಳನ್ನು ಕೊಡುತ್ತದೆ. 1989–99 ವರ್ಷಗಳಲ್ಲಿ ಅಧಿಕ ವರಮಾನದ ದೇಶಗಳಿಂದ ಬಂದ ಅಂತಾರಾಷ್ಟ್ರೀಯ ವಿದ್ವಾಂಸರಲ್ಲಿ 185 ಜನರನ್ನು ಈ ಕಾರ್ಯಕ್ರಮದ ಅಡಿಯಲ್ಲಿ ಪ್ರಾಯೋಜಿಸಲಾಗಿತ್ತು. ಇದೇ ಕಾರ್ಯಕ್ರಮದಲ್ಲಿ 20ಕ್ಕಿಂತ ಹೆಚ್ಚು ಜನಬಂದುದು ಕೇವಲ ಜಪಾನ್ (38), ಕೆನಡಾ(30) ಮತ್ತು ಯುನೈಟೆಡ್ ಕಿಂಗ್‌ಡಮ್ (26)ಗಳಿಂದ 12 ಉನ್ನತ ಮಧ್ಯಮ ವರಮಾನದ ದೇಶಗಳಲ್ಲಿ – ಪ್ರಮುಖವಾಗಿ ಮಾರಿಶನ್ ಮತ್ತು ಮಲೇಶಿಯಾಗಳಿಂದ–ಇದರಲ್ಲಿ ಪಾಲ್ಗೊಂಡ ವಿದೇಶೀ ವಿದ್ಯಾರ್ಥಿಗಳ ಸಂಖ್ಯೆ ಕ್ರಮವಾಗಿ 398 ಮತ್ತು 37 ಆಗಿತ್ತು.

Digitised by Bharatavani, CIIL

ICCR ಸಂಸ್ಥೆಯೇ ಅಲ್ಲದೆ ವಿದೇಶೀ ವಿದ್ಯಾರ್ಥಿಗಳಿಗೆ ಧನಸಹಾಯ ನೀಡುವ ಇತರ ಸಂಸ್ಥೆಗಳಿವೆ. ಇವುಗಳಲ್ಲಿ ವಿದೇಶಾಂಗ ವ್ಯವಹಾರ ಖಾತೆ (MEA) ಯ ``The Special Common wealth African Assistance Programmes' (SCAAP), `The Indian Technical and Economic Cooperation (ITEC), ಹಾಗೂ ಇದೇ ITEC ಯ ಆಶ್ರಯದಲ್ಲಿ ನಡೆಯುವ ಇತರ ಅಲ್ಪಾವಧಿ ಮತ್ತು ದೀರ್ಘಾವಧಿ ಕೋರ್ಸ್‌ಗಳಿಗೆ ದೇಶದಾದ್ಯಂತ ಅನೇಕ ಪರಿಣತ ಸಂಸ್ಥೆಗಳಲ್ಲಿ ವಿದೇಶೀ ವಿದ್ಯಾರ್ಥಿಗಳಿಗೆ ಪ್ರಾಯೋಜನೆ ಸಿಗುತ್ತಿದೆ.

**ಹೊರನಾಡಿನ ವಿದ್ಯಾರ್ಥಿಗಳ ಸಲಹೆಗಾರರು:**

ಭಾರತ ಸರ್ಕಾರದ ಪರವಾಗಿ ಸುಮಾರು 2000 ವಿದ್ಯಾರ್ಥಿವೇತನಗಳನ್ನು ವಿದೇಶೀ ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವ ICCR ವಿದ್ಯಾರ್ಥಿವೇತನ ಪಡೆಯುತ್ತಿರುವವರ ಹಾಗೂ ಸ್ವಂತ ಖರ್ಚಿನಿಂದ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದೇಶೀವಿದ್ಯಾರ್ಥಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಹೊಣೆ ಹೊತ್ತಿದೆ. ವಿದೇಶೀವಿದ್ಯಾರ್ಥಿಗಳ ಸಾಂದ್ರತೆ ಹೆಚ್ಚಾಗಿರುವ ಪ್ರದೇಶಗಳಲ್ಲಿ, ಪ್ರಮುಖವಾಗಿ ವಿಶ್ವವಿದ್ಯಾನಿಲಯಗಳು ಮತ್ತು ಶಿಕ್ಷಣಸಂಸ್ಥೆಗಳಲ್ಲಿ 60 ಅನುಭವಿ ಶಿಕ್ಷಕರನ್ನು ಅಂತಾರಾಷ್ಟ್ರೀಯ ವಿದ್ಯಾರ್ಥಿಸಲಹೆಗಾರರಾಗಿ ICCR ನೇಮಕ ಮಾಡಿದೆ. ವಿದೇಶೀವಿದ್ಯಾರ್ಥಿಗಳು ಶೈಕ್ಷಣಿಕ ಹಾಗೂ ಸಾಮಾಜಿಕ ಜೀವನಕ್ಕೆ ಹೊಂದಿಕೊಳ್ಳಲು ಸಹಾಯಮಾಡುವುದು, ವಿಶ್ವವಿದ್ಯಾನಿಲಯಗಳಲ್ಲಿ ವಾಸ್ತವ್ಯ ಮಾಡುವ ವ್ಯವಸ್ಥೆ ಮಾಡುವುದು ಹಾಗೂ ಶೈಕ್ಷಣಿಕ ಬೆಳವಣಿಗೆಯನ್ನು ನಿರ್ವಹಿಸುವುದು ಈ ಸಲಹೆಗಾರರ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ವಿದೇಶೀ ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾನಿಲಯ ಆಡಳಿತ ಹಾಗೂ ಇತರ ನಿಯೋಗಗಳ ನಡುವೆ ಸಂಪರ್ಕ ಬೆಸೆಯುವ ಪಾತ್ರವನ್ನೂ ಈ ಸಲಹೆಗಾರರೂ ನಿರ್ವಹಿಸುತ್ತಾರೆ.

**ಶುಲ್ಕ ವ್ಯವಸ್ಥೆ:**

ಭಾರತದಲ್ಲಿ ಉನ್ನತ ಶಿಕ್ಷಣ ಬಹಳಮಟ್ಟಿಗೆ ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು ಸರಕಾರದಿಂದ ಹೆಚ್ಚು ಪೋಷಿತವಾದುದು. ಹಾಗಾಗಿ ವಿದ್ಯಾಭ್ಯಾಸಕ್ಕಾಗಿ ಭಾರತೀಯ ವಿದ್ಯಾರ್ಥಿಗಳು ತೆರಬೇಕಾದ ಹಣಕ್ಕಿಂತ ವಿದೇಶೀವಿದ್ಯಾರ್ಥಿಗಳು ತೆರಬೇಕಾದ ಹಣ ಅಧಿಕ ಮೊತ್ತದ್ದಾಗಿರುತ್ತದೆ. ಈ ಮೊತ್ತ ಮುಂದುವರಿದ ದೇಶಗಳಲ್ಲಿ ಜನಪ್ರಿಯವಾದ ವಿಶ್ವವಿದ್ಯಾನಿಲಯಗಳ ಶುಲ್ಕಕ್ಕೆ ಹೆಚ್ಚು ಕಡಿಮೆ ಸಮವಾಗಿರುತ್ತದೆ. ಚೀನಾದಲ್ಲಿ ವಿಶ್ವವಿದ್ಯಾನಿಲಯಗಳು ಸ್ನಾತಕಶಿಕ್ಷಣಕ್ಕೆ $ 2,500ಗಳಿಂದ $ 2800 ಗಳನ್ನೂ ಸ್ನಾತಕೋತ್ತರ ಶಿಕ್ಷಣಕ್ಕೆ $ 3,000ದಿಂದ $ 4,000ಗಳನ್ನೂ ಡಾಕ್ಟರೇಟ್ ಶಿಕ್ಷಣಕ್ಕೆ $ 5,000 ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ವಿಧಿಸುತ್ತವೆ. ವಿದೇಶೀ ವಿದ್ಯಾರ್ಥಿಗಳಿಗೆ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್ $ 3,100 ರಿಂದ $ 3,400ಗಳನ್ನೂ, ರೂರ್‌ಕಿ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಶಿಕ್ಷಣಕ್ಕೆ ವಾರ್ಷಿಕ $ 6,000 ನಿಗದಿಪಡಿಸಿದೆ. ಅತ್ಯುನ್ನತ ಮಟ್ಟದ ಇಂಜಿನಿಯರಿಂಗ್ ಶಿಕ್ಷಣಕ್ಕೆ ಹೆಸರಾಗಿದ್ದು, ಇತ್ತೀಚೆಗೆ IIT ಆಗಿ ನಾಮಕರಣಗೊಂಡ ರೂರ್‌ಕಿ ವಿಶ್ವವಿದ್ಯಾನಿಲಯ ಈ ಶಿಕ್ಷಣಕ್ಕೆ ಅತಿ ಹೆಚ್ಚಿನ ವಿದೇಶೀ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದು, 1998–99ರಲ್ಲಿ ಈ ವಿದ್ಯಾರ್ಥಿಗಳ ಸಂಖ್ಯೆ 200ರಷ್ಟು ಇದ್ದಿತ್ತು. IAMR ನ ವಾರ್ಷಿಕ ಶುಲ್ಕ $ 7,900. ಆಸ್ಟ್ರೇಲಿಯನ್ ವಿಶ್ವವಿದ್ಯಾನಿಲಯಗಳು ಕಲಾಶಿಕ್ಷಣ ಮತ್ತು ಕಾನೂನುಶಿಕ್ಷಣಗಳಿಗೆ ವಾರ್ಷಿಕ $A 7000ದಿಂದ 10,000ದವರೆಗೆ ಹಾಗೂ ಪ್ರಯೋಗಾಲಯ ಆಧಾರಿತ ವಿಜ್ಞಾನ, ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕೋರ್ಸುಗಳಿಗೆ ವಾರ್ಷಿಕ $A 11,000ದಿಂದ 20,000 ದವರೆಗೆ ಶುಲ್ಕ ನಿಗದಿಪಡಿಸಿದೆ. ಮಣಿಪಾಲದಲ್ಲಿ ವಿದೇಶೀ ಮತ್ತು ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ BDS ಕೋರ್ಸಿಗೆ $ 12,000 MDS ಮತ್ತು MD/MS ಶಿಕ್ಷಣಕ್ಕೆ ಹಾಗೂ MBBS ಶಿಕ್ಷಣಕ್ಕ $ 18,000 ವಾರ್ಷಿಕ ಶುಲ್ಕ ನಿಗದಿಪಡಿಸಿದೆ. ಮಂಗಳೂರಿನಲ್ಲಿ BDS ಮತ್ತು MBBS ಕೋರ್ಸ್‌ಗಳಿಗೆ ಶುಲ್ಕ $ 2,000 ಕಡಿಮೆ ತೆಗೆದುಕೊಳ್ಳಲಾಗುತ್ತದೆ. ಈ ವಾರ್ಷಿಕ ಶುಲ್ಕಗಳು ಅಮೆರಿಕಾ ಸಂಯುಕ್ತ ಸಂಸ್ಥಾನದ ಸರಾಸರಿ ವಾರ್ಷಿಕ ಶುಲ್ಕಕ್ಕಿಂತ ಕಡಿಮೆ ಎಂಬುದನ್ನು ಗಮನಿಸಬೇಕು. ಉಳಿದ ಬಹಳಷ್ಟು ಕೋರ್ಸುಗಳಿಗೆ ವಿದೇಶೀ ಮತ್ತು ಅನಿವಾಸಿ ವಿದ್ಯಾರ್ಥಿಗಳಿಗೆ $ 4,000 ದಿಂದ $ 5,000ದವರೆಗೆ ಶುಲ್ಕ ನಿಗದಿಪಡಿಸಲಾಗಿದೆ. ಸಾಮಾನ್ಯ ವರ್ಗದ (ವಿಶೇಷ ವರ್ಗಗಳಿಗೆ ಸೇರದ) ವಿದ್ಯಾರ್ಥಿಗಳಿಗೆ ಈ ಶುಲ್ಕ ರೂ. 40,000ದಿಂದ 50,000ದಷ್ಟಾಗಿರುತ್ತದೆ. ಮಾಹೆಯ ವಿದೇಶೀ ವಿನಿಮಯ ವರಮಾನ ಸುಮಾರು ವಾರ್ಷಿಕ $ 12 ಮಿಲಿಯನ್, ಸುಪ್ರೀಂಕೋರ್ಟ್ ಅನಿವಾಸಿ ಭಾರತೀಯರಿಗೆ ಹಾಗೂ ವಿದೇಶೀ ವಿದ್ಯಾರ್ಥಿಗಳಿಗೆ ಶೇ. 15ರಷ್ಟು ಮೀಸಲಾತಿ ನಿಗದಿಪಡಿಸಿದೆ ಹಾಗೂ ಪೂರ್ಣಕೋರ್ಸಿಗೆ 10,000 ಅಮೆರಿಕನ್ ಡಾಲರ್‌ಗಳನ್ನೂ ವರ್ಷಕ್ಕೆ 4,80,000 ರೂ.ಗಳನ್ನು ನಿಗದಿಪಡಿಸಿದೆ.

ಪ್ರಸ್ತುತ ICCR ನ ಅಡಿಯಲ್ಲಿ ಬರುವ ಸುಮಾರು 1800 ವಿದೇಶೀ ವಿದ್ಯಾರ್ಥಿಗಳಿಗೆ ಭಾರತವು ಸರಾಸರಿ ಸುಮಾರು ತಲಾ ರೂ. 50.000 ವೆಚ್ಚ ಮಾಡುತ್ತಿದೆ. ಕೆಲವು ಪ್ರಸಿದ್ಧ ವಿಶ್ವವಿದ್ಯಾನಿಲಯಗಳು ICCR ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳನ್ನು ಸಾಮಾನ್ಯ ಶುಲ್ಕದ ಮಿತಿಯಲ್ಲಿ ಒಪ್ಪಿಕೊಳ್ಳಲು ಹಿಂಜರಿಯುತ್ತಿವೆ.

**ಪ್ರಸ್ತುತ ಒಳಹರಿವು:**

ಪ್ರಮುಖವಾದ 36 ರಾಷ್ಟ್ರಗಳಲ್ಲಿನ 10,000 ಕ್ಕೂ ಹೆಚ್ಚಿನಷ್ಟು ವಿದ್ಯಾರ್ಥಿಗಳು ವಿದೇಶಗಳಲ್ಲಿ ಅಧ್ಯಯನ ಮಾಡುತ್ತಿದ್ದು, ಥೈಲ್ಯಾಂಡ್‌ನಿಂದ ಮಾತ್ರ ಕಡೆಯ ಪಕ್ಷ ಶೇ. 1ರಷ್ಟು ವಿದ್ಯಾರ್ಥಿಗಳು ಭಾರತಕ್ಕೆ ಬಂದಿದ್ದರು. ಇವುಗಳಲ್ಲಿ ಬಹಳಷ್ಟು ದೇಶಗಳ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಸಂಖ್ಯೆ ಭಾರತದ ಸಾರ್ವಜನಿಕ ವೆಚ್ಚದಲ್ಲಿ ಕಳೆದ ಮೂರು ವರ್ಷಗಳಲ್ಲಿ ಒದಗಿಸಿದ ವಿದ್ಯಾರ್ಥಿವೇತನಗಳ ಸಂಖ್ಯೆಗಿಂತ ಕಡಿಮೆ. 1998–99ರಲ್ಲಿ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ನೂರು ಅಥವಾ

Digitised by Bharatavani, CIIL

ಅದಕ್ಕಿಂತ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಬಂದು ಸೇರಿದ ವರದಿಯಾಗಿರುವುದು ಕೇವಲ 14 ದೇಶಗಳಿಂದ ಮಾತ್ರ ಅವುಗಳಲ್ಲಿ 8 ಕಡಿಮೆ ವರಮಾನದ ರಾಷ್ಟ್ರಗಳು, 4 ಕಡಿಮೆ ಮಧ್ಯಮ ವರಮಾನದ ರಾಷ್ಟ್ರಗಳು, 1 ಉನ್ನತ ಮಧ್ಯಮ ವರಮಾನದ ರಾಷ್ಟ್ರ ಮತ್ತು ಕೇವಲ 1 ಉನ್ನತ ವರಮಾನದ ರಾಷ್ಟ್ರ. ಇವುಗಳಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಭಾರತದಲ್ಲಿ ನೆಲೆಸಿದವರು ಅಥವಾ ಹತ್ತಿರದ ನೆರೆಕೆರೆಯವರು. ಇತ್ತೀಚಿನ ವರ್ಷಗಳಲ್ಲಿ ಈ ಬಹಳಷ್ಟು ದೇಶಗಳಿಂದ ಭಾರತಕ್ಕೆ ಅಧ್ಯಯನದ ಕಾರಣ ಬರುವ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸಿದೆ. ಭಾರತವು 36 ರಾಷ್ಟ್ರಗಳಲ್ಲಿ 24 ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕಾಗಿ ಹಣದ ನೆರವನ್ನು ನೀಡುತ್ತಿದೆ. ಬಹಳಷ್ಟು ಸಂದರ್ಭಗಳಲ್ಲಿ ವಿದೇಶದಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ ಕಳೆದ ಮೂರು ವರ್ಷಗಳಲ್ಲಿ ಭಾರತ ಪ್ರಾಯೋಜಿಸಿದ ವಿದ್ಯಾರ್ಥಿಗಳ ಸಂಖ್ಯೆಗಿಂತ ಕಡಿಮೆಯಾಗಿದೆ.

**ಭವಿಷ್ಯದ ನಿರೀಕ್ಷೆಗಳು/ಭರವಸೆಗಳು:**

ವಿದೇಶೀ ವಿದ್ಯಾರ್ಥಿಗಳಿಗೆ ಉನ್ನತಶಿಕ್ಷಣಕ್ಕೆ ಸಮರ್ಪಕ ಶೈಕ್ಷಣಿಕ ಅವಕಾಶವನ್ನು ನೀಡಲು ಸೂಕ್ತ ಕ್ರಮಗಳನ್ನು ತರುವಲ್ಲಿ, ಆ ಮೂಲಕ ಉನ್ನತ ಶಿಕ್ಷಣಕ್ಕೆ ಸಂಪನ್ಮೂಲವನ್ನು ಕಲೆಹಾಕುವಲ್ಲಿ ಯುಜಿಸಿಯು ವಿಶೇಷವಾಗಿ ಆಲೋಚನೆ ಮಾಡುತ್ತಿದೆ. ವಿಶೇಷ ತಂಡದ ವರದಿಯ ಪ್ರಕಾರ ಯುಜಿಸಿಯು ವಿಶ್ವವಿದ್ಯಾನಿಲಯದ ಎಲ್ಲ ಕೋರ್ಸುಗಳಲ್ಲಿ ಅದು ತಂತ್ರಜ್ಞಾನ, ವೃತ್ತಿಪರ ಆಗಿರಲಿ, ಇಲ್ಲದಿರಲಿ– ಆಯಾ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಅನುಕೂಲಗಳನ್ನು ಪೂರೈಸಿದಲ್ಲಿ ಸಾಮಾನ್ಯವಾಗಿ ಇರಬೇಕಾದುದಕ್ಕಿಂತ ಹೆಚ್ಚು, ಅಂದರೆ ಶೇ. 20 ರಷ್ಟು ಹೆಚ್ಚುವರಿ ಸೀಟುಗಳನ್ನು ವಿದೇಶಗಳಲ್ಲಿ ಪಾಸ್‌ಪೋರ್ಟ್ ಇರುವವರಿಗೆ ಮೀಸಲಿಡಬೇಕೆಂದು ನಿರ್ಧರಿಸಿದೆ.

ಪ್ರಮುಖವಾಗಿ ಮಧ್ಯಮ ಮತ್ತು ಉನ್ನತ ವರಮಾನವಿರುವ ರಾಷ್ಟ್ರಗಳಿಂದ ಸಾಕಷ್ಟು ಸಂಖ್ಯೆಯ ವಿದ್ಯಾರ್ಥಿಗಳನ್ನು ಭಾರತಕ್ಕೆ ಆಕರ್ಷಿಸಬೇಕಾದರೆ, ವ್ಯಾಪಕವಾದ ಮಾಹಿತಿ ಪ್ರಸಾರ, ಜಾಹಿರಾತು ಮತ್ತು ಅಭಿಯಾನಗಳನ್ನೇ ಪ್ರಾರಂಭಿಸಬೇಕಾಗುತ್ತದೆ. ಮುಂಚೂಣಿಯಲ್ಲಿರುವ ನಮ್ಮ ವಿಶ್ವವಿದ್ಯಾನಿಲಯಗಳು ಉನ್ನತ ವರಮಾನವಿರುವ ಪ್ರಗತಿಪರ ರಾಷ್ಟ್ರಗಳಲ್ಲಿ ಸಂಕೀರ್ಣಗಳನ್ನು ತೆರೆಯುವುದು, ವಿದೇಶೀ ವಿದ್ಯಾರ್ಥಿಗಳಿಗೆ ಕೋರ್ಸುಗಳನ್ನು ಪ್ರಾರಂಭಿಸುವುದು, ಪ್ರಮುಖವಾಗಿ ಅನಿವಾಸಿಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು, ಭಾರತ ಮತ್ತು ವಿದೇಶಗಳಲ್ಲಿ ಶಿಕ್ಷಣಕ್ಕೆ ಅತ್ಯುನ್ನತ ಸೌಕರ್ಯಗಳನ್ನು ಒದಗಿಸುವುದು ಮುಂತಾದವು ಈ ದಿಶೆಯಲ್ಲಿ ಅತ್ಯಂತ ಅನುಕರಣಯೋಗ್ಯವಾದ ಕಾರ್ಯಕ್ರಮಗಳು ಎನಿಸುತ್ತದೆ.

2001ರ ಫೆಬ್ರವರಿ ತಿಂಗಳಿನಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘವು ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಭಾರತೀಯ ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣ' ವನ್ನು ಕುರಿತ ಒಂದು ದುಂಡು ಮೇಜಿನ ಸಭೆಯನ್ನು ಆಯೋಜಿಸಿತ್ತು. ಅಲ್ಲಿ ಮೂಡಿಬಂದ ಭವಿಷ್ಯಯೋಜನೆಯನ್ನು ಕುರಿತ, ಕೆಲವು ಯೋಜನೆಗಳು ಇಲ್ಲಿ ಉಲ್ಲೇಖಾರ್ಹವಾಗಿವೆ. ಅವೆಂದರೆ, ನೋಂದಣಿ, 'ನಿರಪೇಕ್ಷಣಾ ಪತ್ರ', ವೀಸಾ ಕೊಡುವಿಕೆ ಮತ್ತು ಮುಂದುವರಿಸುವಿಕೆ ಮುಂತಾದವುಗಳಿಗೆ ಸಂಬಂಧಿಸಿದ ಕ್ರಮಗಳನ್ನು ಸರಳಗೊಳಿಸಬಹುದು. ಪರದೇಶಗಳಲ್ಲಿರುವ ಭಾರತೀಯ ರಾಯಭಾರಿ ಕಚೇರಿಗಳು ಮತ್ತು ಹೈಕಮೀಷನ್‌ಗಳು ಭಾರತದಲ್ಲಿ ಉನ್ನತ ಶಿಕ್ಷಣಕ್ಕಾಗಿ ಇರುವ ಅನುಕೂಲಗಳ ಬಗ್ಗೆ ಮಾಹಿತಿ ನೀಡುವಲ್ಲಿ ಪೂರ್ವಭಾವಿಯಾಗಿ ಸ್ಪಂದಿಸಲು, ವಿವಿಧ ವೃತ್ತಿಪರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳಲು ಏಕ ಗವಾಕ್ಷಿ ತೆರಪಿನ ತಂತ್ರವನ್ನು (Single Window clearance Mechanism) ಅನುಸರಿಸುವುದು, ಅಂತರರಾಷ್ಟ್ರೀಯ ವಿದ್ಯಾರ್ಥಿಗಳು ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳಲು ಸುಲಭವಾಗುವಂತೆ ಸಾಮಾಜಿಕ ಒತ್ತಾಸೆಯನ್ನು ಬಲಪಡಿಸುವುದು, 'ಗೃಹವಾಸ' (Homestay) ಸಾಂಸ್ಕೃತಿಕ ಹಬ್ಬಗಳು, ವಿವಿಧ ದೇಶಗಳಲ್ಲಿನ ರಾಷ್ಟ್ರೀಯ ದಿನಗಳ ಆಚರಣೆ ಮೊದಲಾದವುಗಳನ್ನು ನಿಯಮಿತವಾಗಿ ಆಚರಿಸುವುದು, ಮೊದಲಾದವು ಸಾಂಸ್ಕೃತಿಕ ವಿನಿಮಯ ಮತ್ತು ಸಾಂಸ್ಕೃತಿಕ ತಿಳಿವಳಿಕೆಗೆ ಸಹಾಯ ಮಾಡುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ, ಶೈಕ್ಷಣಿಕ ಸಂಸ್ಥೆಗಳು ಅವುಗಳ ಪಠ್ಯಕ್ರಮವನ್ನು ಉನ್ನತೀಕರಿಸಲು ಮತ್ತು ಅಂತಾರಾಷ್ಟ್ರೀಕರಣಗೊಳಿಸಲು ಅತಿ ಹೆಚ್ಚಿನ ಆದ್ಯತೆ ಕೊಡುವುದು ಪ್ರಮುಖವಾಗುತ್ತದೆ.

**ಮಾರುಕಟ್ಟೆ ಮಾರ್ಗೋಪಾಯಗಳು:**

ವಿದೇಶೀ ವಿದ್ಯಾರ್ಥಿಗಳನ್ನು ಭಾರತಕ್ಕೆ ಆಕರ್ಷಿಸಲು ವ್ಯವಸ್ಥಿತ ಪ್ರಯತ್ನ ಮಾಡಿದ ಸಂಸ್ಥೆ ಎಂದರೆ, ಭಾರತ ಸರ್ಕಾರದ ಅಡಿಯಲ್ಲಿ ಬರುವ 'ಎಜುಕೇಷನಲ್ ಕನ್ಸಲ್ಟೆಂಟ್ಸ್ ಇಂಡಿಯಾ ಲಿಮಿಟೆಡ್' ಸಂಸ್ಥೆ. ಇದು 2001ರಲ್ಲಿ ಆಫ್ರಿಕಾ ಮತ್ತು ಏಷ್ಯಾದ ಹಲವಾರು ಪ್ರಮುಖ ರಾಷ್ಟ್ರಗಳಲ್ಲಿ ಅದರಲ್ಲೂ ಮುಖ್ಯವಾಗಿ ಮಧ್ಯ ಪ್ರಾಚ್ಯರಾಷ್ಟ್ರಗಳಲ್ಲಿ 'ಎಜುಕೇಷನಲ್ ಇಂಡಿಯಾ 2001' ಎಂಬ ಮೇಳವನ್ನು ಸಂಘಟಿಸಿತ್ತು. ದೇಶದ ಎಲ್ಲೆಡೆಗಳಿಂದ ಸುಮಾರು 30ರಿಂದ 40 ಸಂಸ್ಥೆಗಳು IIT ಮತ್ತು IIM ಗಳನ್ನು ಒಳಗೊಂಡಂತೆ – ಇದರಲ್ಲಿ ಪಾಲ್ಗೊಂಡಿದ್ದವು. ಆದರೆ ಜರ್ಮನಿ, ಯುನೈಟೆಡ್ ಕಿಂಗ್‌ಡಮ್ ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೆಂಡ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನ ಅನುಸರಿಸುವಂತೆ ಸಮಗ್ರವಾದ ಯಾವುದೇ ನಿರ್ದಿಷ್ಟ ಉಪಕ್ರಮ ಭಾರತೀಯ ಶಿಕ್ಷಣದ ಮಾರುಕಟ್ಟೆಯಲ್ಲಿ ಮೂಡಿಬಂದಿಲ್ಲ. ಭಾರತವು ಪ್ರಗತಿಹೊಂದಿದ ದೇಶಗಳಿಂದ ಮುಖ್ಯವಾಗಿ ಭಾರತೀಯ ಮೂಲದ ವಿದ್ಯಾರ್ಥಿಗಳನ್ನು ಆಕರ್ಷಿಸಲು ಹೆಚ್ಚು ಗಮನಕೊಡಬೇಕು. ಏಕೆಂದರೆ ಭಾರತದಲ್ಲಿನ ಅವರ ಜೊತೆಗಾರರ ಸಹಪಾಠಿಗಳ ಜೊತೆಗಿನ ಅವರ ನಿರಂತರ ಸಹವಾಸ, ಭವಿಷ್ಯದ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿಯಾದದ್ದು. ವಿದೇಶದಲ್ಲಿ ಭಾರತದ ಆರ್ಥಿಕ ಹಾಗೂ ವಿದೇಶಗಳಲ್ಲೂ ಚದರಿ ಹೋಗುವ ಭಾರತೀಯ ಜನಾಂಗದವರ ಒಗ್ಗೂಡಿಸುವಿಕೆ, ಭಾರತದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಶೈಕ್ಷಣಿಕ ಉತ್ಕೃಷ್ಟತೆಯ ಕೇಂದ್ರಗಳನ್ನು ಸ್ಥಾಪಿಸಲು ಆ

Digitised by Bharatavani, CIIL

ಮೂಲಕ ಹೆಚ್ಚು ಸಂಖ್ಯೆಯ ವಿದೇಶಿ ವಿದ್ಯಾರ್ಥಿಗಳನ್ನು ಭಾರತಕ್ಕೆ ಆಕರ್ಷಿಸಲು ಸಹಕಾರಿಯಾಗುತ್ತದೆ.

ಭಾರತೀಯ ವಿಶ್ವವಿದ್ಯಾನಿಲಯಗಳು ಸಹಯೋಗದ ಕಾರ್ಯಕ್ರಮಗಳನ್ನು ನಡೆಸುವಲ್ಲಿ, ಈ ದಿಶೆಯಲ್ಲಿ ಮುನ್ನುಗ್ಗುವಂತೆ ಪ್ರೋತ್ಸಾಹಿಸುವಲ್ಲಿ, ಸಂಸ್ಥೆಗಳ ನಡುವೆ ಕ್ರೆಡಿಟ್‌ಗಳನ್ನು ವಿನಿಮಯ ಮಾಡಿಕೊಳ್ಳುವಲ್ಲಿ, ನೇರ ಹಾಗೂ ದೂರಶಿಕ್ಷಣದ ಸಹಯೋಗವನ್ನು ಸಾಧಿಸುವಲ್ಲಿ, ಭವಿಷ್ಯದೃಷ್ಟಿಯ ಮಾರ್ಗೋಪಾಯಗಳನ್ನು ಘೋಷಿಸಿಕೊಳ್ಳುವುದು ಅತ್ಯಂತ ಸಹಕಾರಿಯಾಗುತ್ತದೆ. ಅಂತರ್ಜಾಲ ಡಿಪ್ಲೊಮಾ ಕೋರ್ಸುಗಳನ್ನು

**ಮೂಲ: ಬಾಲಕೃಷ್ಣ ಕೆ. ನಾಯರ್**
**ಅನು: ಡಾ. ಶಶಿಕಲ ಎ.**

## ಭಾರತದಲ್ಲಿ ಶಿಕ್ಷಣದಲ್ಲಿನ ಅಪವ್ಯಯ

ಆಧುನಿಕ ಭಾರತೀಯ ಶಿಕ್ಷಣ ಇತಿಹಾಸದಲ್ಲಿ ಮೊದಲ ಬಾರಿಗೆ, ಲಾರ್ಡ್ ಮಕಾಲೆ ತನ್ನ 1835ರ ಟಿಪ್ಪಣಿಯಲ್ಲಿ ಸಾರ್ವಜನಿಕ ಶಿಕ್ಷಣದಲ್ಲಿನ ಅಪವ್ಯಯದ ವಿಷಯವನ್ನೆತ್ತಿದನು. ಅದರ ಅಪವ್ಯಯದ ಪರಿಕಲ್ಪನೆಯ ವ್ಯಾಖ್ಯಾನವು ಅಂದಿನದಕ್ಕಿಂತ ಇಂದು ಭಿನ್ನವಾಗಿದೆ. ದೇಶೀಯ ಕಲಿಕೆ–ಸಂಸ್ಕೃತ ಮತ್ತು ಉರ್ದು ಅಧ್ಯಯನಿಗರಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಮೇಲೆ ಮತ್ತು ಪುಸ್ತಕಗಳ ಪ್ರಕಟಣೆಗೆ ಸಂಬಂಧಿಸಿದಂತೆ ಮಾಡುತ್ತಿದ್ದ ಸಾರ್ವಜನಿಕ ವೆಚ್ಚವನ್ನು ಅಪವ್ಯಯ ಎಂದು ಮಕಾಲೆ ಪರಿಗಣಿಸಿದ್ದನು. ನಂತರ ಭಾರತದ ಬ್ರಿಟಿಷ್ ವೈಸರಾಯ್ ಹುದ್ದೆಯನ್ನು ಸ್ವೀಕರಿಸಿದ ಲಾರ್ಡ್ ವಿಲಿಯಂ ಬೆಂಟಿಂಕ್ ಮತ್ತು ವುಡ್ ವರದಿ ಹಾಗೂ ಈಸ್ಟ್ ಇಂಡಿಯಾ ಕಂಪನಿಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಸರ್.ಚಾರ್ಲಸ್ ವುಡ್‌ರವರು 1854 ರಲ್ಲಿ ಬ್ರಿಟಿಷ್ ಸರ್ಕಾರದ ವತಿಯಿಂದ ಭಾರತದಲ್ಲಿ ಆಧುನಿಕ ಶಿಕ್ಷಣ ಪ್ರಾರಂಭಿಸಿದರು. ಇಂಗ್ಲಿಷ್ ಸಾಹಿತ್ಯವನ್ನು ಉತ್ತೇಜಿಸಲು ಮತ್ತು ವಿಜ್ಞಾನ ಶಿಕ್ಷಣವನ್ನು ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಸೂಚಿಸಿದರು. ಅಂದಿನಿಂದ ಭಾರತದಲ್ಲಿ ಆಧುನಿಕ ಶಿಕ್ಷಣ ಆರಂಭಗೊಂಡಿತು. 1882 ರಲ್ಲಿ ಸರ್.ವಿಲಿಯಂ ಹಂಟರ್‌ರವರು ಶಿಕ್ಷಣ ಆಯೋಗದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ರಾಜ್ಯದ ಮುಖಾಂತರ ಸಮೂಹ ಶಿಕ್ಷಣ (mass education) ನೀಡಬೇಕೆಂದು ಬಲವಾಗಿ ಪ್ರತಿಪಾದಿಸಿದರು. ದಾದಾಬಾಯಿ ನವರೋಜಿ ಮತ್ತು ಗೋಪಾಲ ಕೃಷ್ಣ ಗೋಖಲೆಯವರಿಬ್ಬರೂ ಪ್ರಾಥಮಿಕ ಶಾಲಾ ಶಿಕ್ಷಣವನ್ನು ದೇಶೀಯ ಸರ್ಕಾರವು ಉತ್ತೇಜಿಸ ಬೇಕೆಂದು ನಿರಂತರವಾಗಿ ಪ್ರಯತ್ನಿಸುವುದರ ಜೊತೆಗೆ ಸರ್ಕಾರದ ಮೇಲೆ ಒತ್ತಡ ತಂದರು. ಶಾಲಾ ಶಿಕ್ಷಣದ ವಿಸ್ತರಣೆಯ ಫಲವಾಗಿ ಎಂದು ನಾವು ತಿಳಿದುಕೊಂಡಿರುವಂತೆ ಶಿಕ್ಷಣದಲ್ಲಿ ಅಪವ್ಯಯ ನಂತರದ ದಶಕಗಳಲ್ಲಿ ಮುನ್ನಡೆದುಕೊಂಡು ಬಂದಿದೆ. ಫಿಲಿಪ್ ಹಾರ್ಟಾಗ್‌ರವರ ನೇತೃತ್ವದಲ್ಲಿ ಬ್ರಿಟಿಷ್ ಸರ್ಕಾರವು ಭಾರತದ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ಪ್ರಗತಿಯನ್ನು ಕುರಿತು ಶೋಧನೆ ಮಾಡಿ ವರದಿಯನ್ನು ಸಲ್ಲಿಸಲು ಆಶಿಸಿತು. 1929 ರಲ್ಲಿ ಹಾರ್ಟಾಗ್ ಕಮಿಟಿಯು ಈ ರೀತಿಯಾಗಿ ಅವಲೋಕಿಸಿತು "ನಾವು ತೀರ್ಮಾನಿಸಿದಂತೆ ಪ್ರಾಥಮಿಕ ಶಾಲೆಗಳಲ್ಲಿಯ ಅತ್ಯಂತ ಹೆಚ್ಚಿನ ಸಂಖ್ಯೆಯ ಬೆಳವಣಿಗೆಯು ಸಾಕ್ಷರತೆಯನ್ನು ಹೆಚ್ಚಿಸಿಲ್ಲ. ಕೇವಲ ಕಡಿಮೆ ಸಂಖ್ಯೆಯಲ್ಲಿ ಪ್ರಾಥಮಿಕ ಹಂತದ ನಾಲ್ಕನೆಯ ತರಗತಿಯವರೆಗೆ ವಿದ್ಯಾರ್ಥಿಗಳು ತಲುಪುತ್ತಾರೆ. ನಿರೀಕ್ಷಿತ ಸಾಕ್ಷರತೆಯ ಮಟ್ಟವನ್ನು ಸಾಧಿಸಲಾಗಿಲ್ಲ. ಬಾಲಕಿಯರ ಅಧ್ಯಯನವು ಬಾಲಕರ ಅಪವ್ಯಯಕ್ಕಿಂತ ಹೆಚ್ಚಿನ ಗಂಭೀರತೆಯನ್ನು ಹೊಂದಿದೆ." 1930ಕ್ಕೆ ಹೋಲಿಸಿದಾಗ ಪ್ರಸ್ತುತ ಕಿರಿಯ ಪ್ರಾಥಮಿಕ ಹಂತದಲ್ಲಿ ಪರಿಸ್ಥಿತಿ ಸಾಕಷ್ಟು ಉತ್ತಮ ವಾಗಿರುವುದು ಕಂಡುಬರುತ್ತದೆ. ಆದಾಗ್ಯೂ ಹಿರಿಯ ಪ್ರಾಥಮಿಕ ಹಂತದಲ್ಲಿ ಈ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ.

ಮಾನವ ಸಂಪನ್ಮೂಲ ಮಂತ್ರಾಲಯದಿಂದ ವರದಿಯಾಗಿರುವ ಅಂಕಿ ಅಂಶಗಳು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಅಪವ್ಯಯ (ದರವು) ಪ್ರಮಾಣವು ಇಳಿಮುಖವಾಗಿರುವುದನ್ನು ಸೂಚಿಸುತ್ತದೆ. ಈ ಅಪವ್ಯಯ ಪ್ರಮಾಣವನ್ನು 1 ಮತ್ತು 4ನೇ ವರ್ಗಗಳಿಗೆ ದಾಖಲಾತಿ ಹಾಗೂ 5 ಮತ್ತು 7ನೇ ವರ್ಗಗಳ ದಾಖಲಾತಿಗಳ ಹೋಲಿಕೆಯಿಂದ ಮಾಡಲಾಗುತ್ತಿದೆ. ಈ ವಿಧಾನವು ಅಷ್ಟು ವೈಜ್ಞಾನಿಕವಲ್ಲದಿದ್ದರೂ ಇದು ಅಪವ್ಯಯ ಪ್ರಮಾಣದ ಬಗ್ಗೆ ಇರುವ ಸಾಮಾನ್ಯ ಬದಲಾವಣೆಗಳ ಬಗ್ಗೆ ಮತ್ತು ವ್ಯವಸ್ಥೆಯ ಕಾರ್ಯದ ಬಗ್ಗೆ ಮಾಹಿತಿ ಒದಗಿಸುತ್ತದೆ.

ಈ ತಂಡ ಹೋಲಿಕಾ ತಂತ್ರದ (Cohort Technique) ಮುಖ್ಯ ನ್ಯೂನತೆಗಳೆಂದರೆ ಈ ವಿಧಾನವು 1 ಮತ್ತು 11 ನೇ ತರಗತಿಯ ದಾಖಲಾತಿಯಲ್ಲಿ ಆಗುತ್ತಿರುವ ಕೃತಕ ಹಾಗೂ ಪುನರಾವರ್ತನೆಗಳನ್ನು, ವರ್ಷವಿಡೀ ಆಗುತ್ತಿರುವ ದಾಖಲಾತಿಗಳನ್ನು ಗಣನೆಯಲ್ಲಿ ತೆಗೆದುಕೊಳ್ಳುತ್ತಿಲ್ಲ.

70ರ ದಶಕದ ಕೊನೆಯಲ್ಲಿ ಎನ್‌ಸಿಇಆರ್‌ಟಿ ಯವರು 18 ಜಿಲ್ಲೆಗಳಲ್ಲಿ ಕೈಗೊಂಡ ಅಧ್ಯಯನವು ಶಾಲೆ ಬಿಡುವವರ ಸಮಸ್ಯೆಗಿಂತ ಉಳಿಕೆ ಅಥವಾ ಸ್ಥಗಿತತರ ಸಮಸ್ಯೆ ಹೆಚ್ಚಾಗಿರುವುದನ್ನು ತೋರಿಸುತ್ತದೆ.

ಶಾಲೆ ಬಿಡುವವರ ಸಂಖ್ಯೆಯ ದರ ಸಾಕಷ್ಟು ಹೆಚ್ಚು ಎಂದು ಕಂಡುಬಂದರೂ ಕೇರಳ, ಪಂಜಾಬ, ಹರಿಯಾಣ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರದಂತಹ ದೊಡ್ಡ ರಾಜ್ಯಗಳಲ್ಲಿ ಇಲ್ಲವೆಂದೇ ಹೇಳಬಹುದು. ಮಿಜೋರಾಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್‌ಗಳಂತಹ ಈಶಾನ್ಯ ರಾಜ್ಯಗಳಲ್ಲಿಯ ಶಾಲೆಯಲ್ಲಿ ಉಳಿಯುವವರ ಸಂಖ್ಯೆ ಹೆಚ್ಚಿರುವುದು ಕಂಡುಬಂದಿದೆ. ಆದರೆ ಬಿಹಾರ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ರಾಜಾಸ್ಥಾನ, ಜಾರ್‌ಖಂಡ, ಛತ್ತೀಸ್‌ಘಡ್, ಒಡಿಸಾ ಮತ್ತು ಪಶ್ಚಿಮ ಬಂಗಾಳ

Digitised by Bharatavani, CIIL

ರಾಜ್ಯಗಳಲ್ಲಿ ಶಾಲೆ ಬಿಡುವವರ ಸಮಸ್ಯೆ ಅತ್ಯಂತ ದೊಡ್ಡದಾಗಿದೆ.

1950–60ರಲ್ಲಿ ದಾಖಲಾತಿ ಸಂಖ್ಯೆ ಕಡಿಮೆ ಹಾಗೂ ಶಾಲೆ ಬಿಡುವವರ ಸಂಖ್ಯೆ ಅತಿ ಹೆಚ್ಚು ಇದ್ದದ್ದು ಕಂಡುಬರುತ್ತದೆ. ಕಳೆದ ಎರಡು ದಶಕಗಳಲ್ಲಿ ಶಾಲೆ ಬಿಡುವವರ ಸಂಖ್ಯೆ ಕಡಿಮೆಯಾಗಲು ಈ ಕೆಳಗಿನ ಕೆಲವು ಪ್ರಮುಖ ಬೆಳವಣಿಗೆಗಳು ಕಾರಣವೆಂದು ಹೇಳಬಹುದು:

1. 1986 ರಲ್ಲಿ ಹೊಸ ಶಿಕ್ಷಣ ನೀತಿ (N.P.E) ಅಳವಡಿಸಿ ಸರ್ವರಿಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯ ಗೊಳಿಸಲಾಯಿತು
2. ಅಖಿಲಭಾರತ ಶೈಕ್ಷಣಿಕ ಸಮೀಕ್ಷೆ 1988ರ ಪ್ರಕಾರ 1–5 ಕಿ.ಮೀ ಒಳಗಿನ ಎಲ್ಲರಿಗೂ ಶಿಕ್ಷಣ ದೊರೆಯುವಂತೆ ಮಾಡಲಾಯಿತು
3. 4 ರಿಂದ 6 ವರ್ಷದ ಪ್ರತಿಕೂಲ ಕುಟುಂಬದ ಮಕ್ಕಳಿಗೆ 'ಶಾಲಾ ಸಿದ್ಧತೆ'ಯ ಬೆಳವಣಿಗೆಯನ್ನು ಒಂದು ಉದ್ದೇಶವನ್ನಾಗಿ ಹೊಂದಿದ ಸಮಗ್ರ ಶಿಶು ವಿಕಾಸ ಸೇವೆ (Integrated Child Development Services-ICDS) ಎಂಬ ರಾಷ್ಟ್ರವ್ಯಾಪಿ ಕಾರ್ಯಕ್ರಮ
4. ಆಪರೇಷನ್ ಬ್ಲ್ಯಾಕ್ ಬೋರ್ಡ್ ಎಂಬ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ರಾಷ್ಟ್ರೀಯ ಕಾರ್ಯಕ್ರಮ
5. ಥಾಯ್‌ಲ್ಯಾಂಡಿನ ಜಮಟಿಯಾಗ್‌ನಲ್ಲಿ 150 ದೇಶಗಳ ಜೊತೆಗೆ 1990 ರಲ್ಲಿ ಕ್ರಿ.ಶ.2000 ವೇಳೆಗೆ ಎಲ್ಲರಿಗೂ ಶಿಕ್ಷಣ ಒದಗಿಸುವ ಬಗ್ಗೆ ಘೋಷಣೆ
6. 1988 ರಲ್ಲಿ ಆಂದೋಲನದ ರೀತಿಯಲ್ಲಿ ಪ್ರಾರಂಭಿಸಿದ ಸಾಕ್ಷರತೆ ಚಳುವಳಿಯ ಪ್ರಭಾವದಿಂದ ಜನತೆಯಲ್ಲಿ ಸಾಕ್ಷರತೆ ಮತ್ತು ಶಿಕ್ಷಣದ ಬಗ್ಗೆ ಜಾಗೃತಿ ಉಂಟುಮಾಡಿದ ರಾಷ್ಟ್ರೀಯ ಕಾರ್ಯಕ್ರಮ
7. 1991 ರಲ್ಲಿ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಿದುದು
8. 1995 ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಗಳ (PEP) ಮೂಲಕ ಪ್ರಾಥಮಿಕ ಶಿಕ್ಷಣಕ್ಕೆ ಹೊರಗಿನ ಧನ ಸಹಾಯವನ್ನು ಹೆಚ್ಚು ಪ್ರಮಾಣದಲ್ಲಿ ಒದಗಿಸಿದುದು
9. ಜಿಲ್ಲಾ ಶೈಕ್ಷಣಿಕ ತರಬೇತಿ ಸಂಸ್ಥೆ (DTET)ಗಳ ಮುಖಾಂತರ ಪ್ರಾಥಮಿಕ ಶಿಕ್ಷಕರ ಸಾಮರ್ಥ್ಯ ನಿರ್ಮಾಣದ ಪ್ರಯತ್ನ
10. ಕ್ರಿ.ಶ. 2000 ದಲ್ಲಿ ಎಲ್ಲರಗೂ ಶಿಕ್ಷಣ (Education for All-EFA) ಗುರಿಗಳನ್ನು ಪುನರಾವಲೋಕನ ಮಾಡಿದ್ದು
11. ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಕೈಗೊಂಡ ಚಳವಳಿರೂಪದ ಕಾರ್ಯಕ್ರಮಗಳು

ಈ ಎಲ್ಲ ಪ್ರಯತ್ನಗಳಿಂದಾಗಿ ಸತತವಾಗಿ ಅಪವ್ಯಯ ದರ ದೇಶದ ಎಲ್ಲ ಭಾಗಗಳಲ್ಲೂ ಇಳಿಮುಖವಾಗಿದ್ದು ಕಿರಿಯ ಪ್ರಾಥಮಿಕ ಶಿಕ್ಷಣದ ಮೇಲೆ ಒಟ್ಟಾರೆಯಾಗಿ ಪ್ರಭಾವವುಂಟಾಗಿದೆ. ಆದಾಗ್ಯೂ ಹಿರಿಯ ಪ್ರಾಥಮಿಕ ಹಂತದಲ್ಲಿ ಅಪವ್ಯಯವು ಇನ್ನೂ ಕಳವಳಕಾರಿಯಾಗಿದೆ.

ಅಪವ್ಯಯದ ಪರಿಕಲ್ಪನೆ (Concept of Wastage): ಸಾಮಾನ್ಯವಾಗಿ, ಮಕ್ಕಳು ಶಿಕ್ಷಣದ ಒಂದು ನಿರ್ದಿಷ್ಟ ಹಂತವನ್ನು ಪೂರ್ತಿಗೊಳಿಸುವುದಕ್ಕಿಂತ ಮುಂಚಿತವಾಗಿ ಶಾಲೆಯಿಂದ ಹೊರಗುಳಿಯುವ ಕ್ರಿಯೆಯನ್ನು ಅಪವ್ಯಯ ಎನ್ನುವರು.

ಶೈಕ್ಷಣಿಕ ಸಾಹಿತ್ಯದಲ್ಲಿ ಅಪವ್ಯಯದ ಬಗ್ಗೆ ಇತರ ಪರಿಕಲ್ಪನೆಗಳು ಇವೆ. ಒಂದೇ ವರ್ಗದಲ್ಲಿ ಉಳಿಯುವುದು ಸಹ ಒಂದು ರೀತಿಯ ಅಪವ್ಯಯವಾಗಿದೆ.

1 ರಿಂದ 5ನೇ ವರ್ಗದ ವರೆಗೆ ಪೂರ್ತಿಗೊಳಿಸಲು ಒಂದು ಮಗು 6 ವರ್ಷಗಳನ್ನು ತೆಗೆದುಕೊಂಡರೆ 1 ವರ್ಷದ ಅಪವ್ಯಯವಾಗುತ್ತದೆ. ಒಂದು ವಾದದ ಪ್ರಕಾರ ಪಠ್ಯಕ್ರಮವು ಮಗುವಿನ/ಸಮಾಜದ ಅವಶ್ಯಕತೆಯ ಆಕಾಂಕ್ಷೆ ಮತ್ತು ಜೀವನಾವಧಿಗೆ ಅನುಗುಣವಾಗಿಲ್ಲ. ಇದೂ ಸಹ ಮಕ್ಕಳು ಶಾಲೆ ಬಿಡಲು/ಪಾಲಕರು ಮಕ್ಕಳನ್ನು ಶಾಲೆ ಬಿಡಿಸಲು ಪ್ರಮುಖ ಕಾರಣವಾಗಿದೆ. ಶಾಲೆಗೆ ಕಳಿಸುವುದು ಸಮಯದ ದುರುಪಯೋಗ (waste) ಅಥವಾ ಮಗು ಹೊಲದಲ್ಲಿ ಕೆಲಸ ಮಾಡುವುದು, ಶಾಲೆಗೆ ಹೋಗುವುದಕ್ಕಿಂತ ಹೆಚ್ಚು ಉತ್ಪಾದಕ ಕ್ರಿಯೆಯೆಂದು ಪಾಲಕರು ತಿಳಿದುಕೊಂಡಿದ್ದಾರೆ. (1966 ಕೊಠಾರಿ ಕಮಿಷನ್ ವರದಿ). ಶಾಲಾ ಜೀವನದ ಚಟುವಟಿಕೆಗಳು ಆಕರ್ಷಕ ವಾಗಿಲ್ಲದಿರುವುದು ಶಾಲೆ ಬಿಡಲು ಕಾರಣವಾಗಿದೆ. ಕೆಲವು ವಿಮರ್ಶಕರ ಪ್ರಕಾರ ಕಿರಿಯ ಪ್ರಾಥಮಿಕ ಶಾಲೆಗಳ ಪ್ರಾರಂಭದ 1 ಮತ್ತು 2ನೇ ವರ್ಗಗಳಲ್ಲಿ ಶಾಲೆ ಬಿಡುವ ಪ್ರವೃತ್ತಿ ಹೆಚ್ಚಾಗಿದ್ದು ಮೇಲಿನ ವರ್ಗಗಳಿಗೆ ಹೋದಂತೆ ಅದು ಕಡಿಮೆಯಾಗುತ್ತಾ ಹೋಗುತ್ತದೆ. ಇಲ್ಲಿ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಮೊದಲಿನ 2 ವರ್ಷ ಗಳಲ್ಲಿ ಅಂದರೆ ಸುಮಾರು 400 ದಿನಗಳಲ್ಲಿ ಶಾಲೆಯಲ್ಲಿ ಏನನ್ನೂ ಕಲಿಯುವುದಿಲ್ಲ. ಹೀಗಾಗಿ ಮುಂದೆ ಕಲಿಕೆ ಮುಂದುವರೆಸುವ ಆಸಕ್ತಿಯನ್ನು ಮಗು ಕಳೆದುಕೊಳ್ಳುತ್ತದೆ.

ಕಲಿಕೆಯ ಹಂತಗಳನ್ನು ಮುಟ್ಟುವ ರೀತಿಯಲ್ಲಿಯೂ ಅಪವ್ಯಯವನ್ನು ಹೇಳಲಾಗುತ್ತದೆ. ಅಂತಿಮ ಪರೀಕ್ಷೆಗಳಲ್ಲಿ (ವಾರ್ಷಿಕ) ವಿಫಲರಾಗುವುದೂ ಅಪವ್ಯಯದ ಬಗ್ಗೆ ಹೇಳುತ್ತದೆ (ಸೂಚಿಸುತ್ತದೆ).

ಅಪವ್ಯಯದ ಅಳತೆ: ಶಾಲೆ ಬಿಡುವ ಪ್ರಮಾಣ ಮತ್ತು ಒಂದೇ ವರ್ಗದಲ್ಲಿ ಉಳಿಯುವುದು ಈ ಎರಡೂ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಪವ್ಯಯವನ್ನು ಅಳೆಯಲಾಗುತ್ತದೆ. ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 5 ವರ್ಷಗಳಲ್ಲಿ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8 ವರ್ಷಗಳವರೆಗೆ ಮಗುವಿನ ಹೆಸರನ್ನು ತೆಗೆದುಹಾಕಲಾಗುವುದಿಲ್ಲ. ಕೆಲವು ಸಂಶೋಧಕರ ಪ್ರಕಾರ ಶಾಲೆ ಬಿಟ್ಟವರು (dropouts) ಎಂದರೆ ಶೈಕ್ಷಣಿಕ ವರ್ಷದ ಮಧ್ಯದಲ್ಲಿ

Digitised by Bharatavani, CIIL

ಶಾಲೆಯನ್ನು ಬಿಟ್ಟು ಮುಂದಿನ ವರ್ಷಗಳಲ್ಲಿ ಶಾಲೆಗೆ ಪುನಃ ಬರದೇ ಇದ್ದವರಾಗಿದ್ದಾರೆ. ಈ ವ್ಯಾಖ್ಯೆಯನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಹಲವರು ಈ ವಾದವನ್ನು ವಿರೋಧೀಸುವವರೂ ಇದ್ದಾರೆ. ಒಂದು ಮಗು 2, 3 ಅಥವಾ 4 ವರ್ಷಗಳ ವರೆಗೆ ಶಾಲೆಯಲ್ಲಿ ಕಳೆದ ನಂತರ ಬಹುಶಃ ಸ್ವಲ್ಪವಾದರೂ ಕಲಿತಿರಬೇಕು. ಹಾಗೂ ಸಮಯದೊಂದಿಗೆ ಕಲಿಯುವಿಕೆಯ ಮಟ್ಟವೂ ಹೆಚ್ಚಾಗಿರಬೇಕು ಎಂದು ನಂಬಲಾಗಿರುತ್ತದೆ. 4 ರಿಂದ 5 ವರ್ಷ ಶಾಲೆಯಲ್ಲಿ ಕಳೆದಾಗ ಒಂದು ಮಗು ಓದುವ, ಬರೆಯುವ ಹಾಗೂ ಸಂಖ್ಯೆಗಳ ಕೌಶಲವನ್ನು ಕಲಿತಿರಬೇಕೆಂದು ನಂಬಲಾಗಿದೆ. ಶೈಕ್ಷಣಿಕ ಸಾಹಿತ್ಯದಲ್ಲಿ ಇದನ್ನು ಸಮರ್ಥಿಸುವ ಅಥವಾ ವಿರೋಧಿಸುವ ಸಂಶೋಧನೆಗಳು ಲಭ್ಯವಿರುವುದಿಲ್ಲ.

ಪ್ರತಿ 10 ವರ್ಷಗಳಿಗೊಮ್ಮೆ ನಡೆಯುವ ಜನಗಣತಿಯಲ್ಲಿ ಭಾರತದ ಜನಸಂಖ್ಯೆಯಲ್ಲಿ ಶಾಲೆಯ ಶಿಕ್ಷಣವಿಲ್ಲದೆ ಓದಲು ಮತ್ತು ಬರೆಯಲು ಬರುವ ವ್ಯಕ್ತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಮಕ್ಕಳ ಶಿಕ್ಷಣಕ್ಕಾಗಿ ಮಾಡಲಾಗುವ ಆರ್ಥಿಕ ಹೂಡಿಕೆಯ ಅಪವ್ಯಯದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಈ ಅಪವ್ಯಯವು ಪಬ್ಲಿಕ್ ಪರೀಕ್ಷೆ ಅನುತ್ತೀರ್ಣ ವಾದಾಗ ನಿರ್ದಿಷ್ಠ ಪಡಿಸಿದ್ದಕ್ಕಿಂತ ಹೆಚ್ಚಿನ ಅವಧಿಯನ್ನು ವಿವಿಧ ವರ್ಗಗಳಲ್ಲಿ ತೇರ್ಗಡೆಯಾಗಲು ತೆಗೆದುಕೊಂಡಾಗ ಉಂಟಾಗುತ್ತದೆ.

**ಭಾರತ ಶಿಕ್ಷಣದಲ್ಲಿ ಅಪವ್ಯಯದ ಬಗ್ಗೆ ಪ್ರಾಯೋಗಿಕ ಒಳನೋಟ:** ಮೊದಲಿಗೆ ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್‌ನ ಸಂಶೋಧಕ ತಂಡದಿಂದ ಸ್ವತಂತ್ರ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಅಪವ್ಯಯದ ಬಗ್ಗೆ ಸಂಶೋಧನೆಗಳನ್ನು ಮಾಡಲಾಯಿತು.

ಸಾಕಷ್ಟು ಮಕ್ಕಳ ಮೇಲೆ, ಅವರ ದಾಖಲಾತಿ ಮತ್ತು ಶಾಲೆಯಿಂದ ಹೊರಗುಳಿಯುವ ವಿಷಯದ ಬಗ್ಗೆ ಸಾಕಷ್ಟು ಅಧ್ಯಯನಗಳನ್ನು ನಡೆಸಲಾಯಿತು. ಸತಾರಾ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಅಪವ್ಯಯದ ಬಗ್ಗೆ ಪ್ರೊ.ವಿ.ಎಮ್.ದಾಂಡೇಕರ್ ಅವರು ಸಂಶೋಧನೆ ಮಾಡಿದರು. ಪ್ರೊ.ಗಾಡಗಿಲ್ ಮತ್ತು ಹಲಡೇಕರ್ ಅವರಿಂದ ಅಧ್ಯಯನವನ್ನು ಮುಂದುವರೆಸಲಾಯಿತು. ಕೆಲವು ಹೆಸರಾಂತ ಎನ್‌ಸಿಇಆರ್‌ಟಿ ಸಂಶೋಧಕರು ಸಹ ಪ್ರಾಥಮಿಕ ಹಂತದಲ್ಲಿ ಅಪವ್ಯಯದ ಬಗ್ಗೆ ಆಸಕ್ತಿ ತೋರಿದರು. ಗ್ರಾಮೀಣ ಪ್ರಾಥಮಿಕ ಶಿಕ್ಷಣದ ಬಗ್ಗೆ 'ಹೆಚ್ಚುತ್ತಾ ಹೋಗುವ ಲಾಭ'ದ (incremental gain) ಪರಿಕಲ್ಪನೆ ಬಗ್ಗೆ ಸಾಕಷ್ಟು ಕೆಲಸವನ್ನು ಯು.ಚಿಕೆಶ್ಮಿನೆ ಮಾಡಿದರು. ಉತ್ತಮ ಗುಣಮಟ್ಟದ ಅರ್ಥ ಪೂರ್ಣ ಪ್ರಾಥಮಿಕ ಶಿಕ್ಷಣವನ್ನು ನೀಡಿದಾಗ 2 ವರ್ಷಗಳಲ್ಲಿ ಮಗು ಓದುವುದನ್ನು ಮತ್ತು ಬರೆಯುವುದನ್ನು ಕಲಿಯುತ್ತದೆ. ಡಾ॥ಚಿಕ್ಕರಮನೆ ಅವರ ಪ್ರಕಾರ 3 ವರ್ಷಗಳ ನಂತರ ಶಾಲೆಯಿಂದ ಹೊರಗಿದ್ದರೆ ಶಾಲೆ ಬಿಟ್ಟ ಪ್ರಶ್ನೆ ಉದ್ಭನಿಸುವುದಿಲ್ಲ. ಸಾಮಾನ್ಯವಾಗಿ ಒಂದು ಮಗುವಿನ ದಾಖಲಾತಿಯನ್ನು 7 ವರ್ಷಗಳವರೆಗೆ ತೆಗೆಯಲಾಗುವುದಿಲ್ಲ. ಯಾವುದೇ ಮಗು 1 ರಿಂದ 4ನೇ ವರ್ಷಗಳ ನಡುವೆ ದಾಖಲಾತಿ ಹೊಂದಿದ ತಕ್ಷಣ/ಅದರ ನಂತರ ಯಾವುದೇ ಸಮಯದಲ್ಲಿ ವರ್ಷದ ಉಳಿದ ದಿನಗಳಲ್ಲಿ ಗೈರು ಹಾಜರಾಗಿ ನಂತರದ ವರ್ಷಗಳಲ್ಲಿ ಶಾಲೆಗೆ ಪುನಃ ಬರದೇ ಇದ್ದರೆ ಆ ಮಗುವನ್ನು 'ಶಾಲೆಯಿಂದ ಹೊರಗುಳಿದವ' (dropout) ಎಂದು ಪರಿಗಣಿಸಬಹುದು ಹಾಗೂ ಇಂತಹ ವಿದ್ಯಾರ್ಥಿಗಳ ಮತ್ತು ಆ ವರ್ಗದಲ್ಲಿ ಒಟ್ಟು ಮಕ್ಕಳ ಪ್ರಮಾಣವನ್ನು ಅಪವ್ಯಯ ಎನ್ನುವರು. ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಪ್ರಾಥಮಿಕ ಶಾಲೆಯಲ್ಲಿ ಕಂಡುಬರುವ ನಮೂದಿಸಿದ, ದಾಖಲಾತಿಯಾಗದ ಮತ್ತು ಶಾಲೆಯಿಂದ ಹೊರಗುಳಿದವರ ಬಗ್ಗೆ ನಯನತಾರಾ ಅವರು ಅಧ್ಯಯನ ಮಾಡಿದರು.

NSSO ಸಂಸ್ಥೆಯು ದೇಶಾದ್ಯಂತ ಜುಲೈ 1986 ರಿಂದ ಜೂನ್ 1987 ರ ಅವಧಿಯಲ್ಲಿ ಭಾರತದ 8 ಪ್ರಮುಖ ರಾಜ್ಯಗಳಲ್ಲಿ ಪ್ರಾಥಮಿಕ ಶಾಲೆಗಳ ಬಗ್ಗೆ ಸಮೀಕ್ಷೆಯನ್ನು ನಡೆಸಿತು. NSSO ಸಂಸ್ಥೆಯು ಆರ್ಥಿಕ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆ ಹಾಗೂ ಅವರ ಶಾಲಾ ಹಾಜರಾತಿಯ ಬಗ್ಗೆ ಅಂಕಿ-ಅಂಶಗಳನ್ನು 42, 50 ಮತ್ತು 52ನೇ ಸುತ್ತುಗಳಲ್ಲಿ ಸಮೀಕ್ಷೆ ನಡೆಸಿತು. ಈ ಸಮೀಕ್ಷೆಯಲ್ಲಿ ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯುವ ಮಕ್ಕಳ ಮತ್ತು ವ್ಯವಸ್ಥಾಪಕ ಮಂಡಳಿಯ ವೆಚ್ಚ ಮತ್ತು ಉದ್ದೇಶಗಳ ಮಾಹಿತಿ ದೊರೆಯುತ್ತದೆ. ಭಾರತದ 14 ಪ್ರಮುಖ ರಾಜ್ಯಗಳಲ್ಲಿ ಉಳಿಸಿಕೊಳ್ಳುವಿಕೆ ದರವನ್ನು (retention rate) ಅರುಣ್ ಮೆಹತರವರು ಲೆಕ್ಕ ಹಾಕಿದರು. ಅವರ ಪ್ರಕಾರ ಉಳಿಸಿಕೊಳ್ಳುವಿಕೆಯ ದರವು ಕೇರಳದಲ್ಲಿ ಅತಿ ಹೆಚ್ಚು ಅಂದರೆ 99.3% ಹಾಗೂ ರಾಜಸ್ಥಾನದಲ್ಲಿ ಅತಿ ಕಡಿಮೆ ಅಂದರೆ 23.20% ಇರುವುದು ಕಂಡುಬಂದಿದೆ.

ಭಾರತದ ಶಿಕ್ಷಣದಲ್ಲಿ ಅಪವ್ಯಯ – ಸಿದ್ಧಾಂತ ಮತ್ತು ನೀತಿ: ಸ್ವಾತಂತ್ರ್ಯಾನಂತರ ಭಾರತದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಶಾಲಾ ದಾಖಲಾತಿ ಪ್ರಮಾಣ ಕಂಡುಬಂದಿತು. ಹಾಗೂ ಇದು ಅತಿ ಹೆಚ್ಚಿನ ಹೊರಗುಳಿಯುವಿಕೆ ಮತ್ತು ಅದೇ ವರ್ಗದಲ್ಲಿ ಉಳಿಯುವಿಕೆ ಸಹ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿತು. ಪಳಗಿದ ಆಡಳಿತಗಾರರು, ಸಾಮಾಜಿಕ ಕಾರ್ಯಕರ್ತರು, ಗ್ರಾಮೀಣ ಬೆಳವಣಿಗೆಯ ವಿಶ್ಲೇಷಣಾಕಾರರು ಮತ್ತು ಇತರರು ಮಾಡಿದ ಸಂಶೋಧಕ ಅಧ್ಯಯನಗಳಿಂದ ಶಿಕ್ಷಣದಲ್ಲಿ ಅಪವ್ಯಯದ ಸ್ಥಾನವನ್ನು 2 ರೀತಿಯಲ್ಲಿ ವಿಂಗಡಿಸಬಹುದು –1. ಬೇಡಿಕೆಯ ಸಿದ್ಧಾಂತ, 2. ಪೂರೈಕೆಯ ಸಿದ್ಧಾಂತ. ಮಕ್ಕಳ ಪರಿಣಾಮಕಾರಿ ಭಾಗವಹಿಸುವಿಕೆಯಲ್ಲಿ ಬಡತನವನ್ನು ಒಂದು ಪ್ರಮುಖ ಅಂಶವಾಗಿ ಪರಿಗಣಿಸಲಾಗಿದೆ. ಸಂಶೋಧನಾ ಅಧ್ಯಯನಗಳು ಗ್ರಾಮೀಣ ಭಾಗದಲ್ಲಿ ಶೇ.20 ರಷ್ಟು ಮಕ್ಕಳು ಮತ್ತು ನಗರ ಭಾಗಗಳಲ್ಲಿ ಶೇ.25 ರಷ್ಟು ಶಾಲೆಯಿಂದ ಹೊರಗುಳಿಯುವ ಮಕ್ಕಳು ಕೆಲಸವನ್ನು ಸೇರುತ್ತಾರೆ. ಮಕ್ಕಳು ಶಾಲೆಗೆ ಹೀಗುವುದರಿಂದ ಪಾಲಕರಿಗೆ ಉಂಟಾಗುವ ವೇತನದ ಕೊರತೆಯನ್ನು ತುಂಬಿಕೊಡಲು ಭಾರತದಲ್ಲಿಯ ಶೈಕ್ಷಣಿಕ ನೀತಿಯು ಅನೇಕ ಉಪಾಯ ಕ್ರಮಗಳನ್ನು ಕೈಗೊಂಡಿದೆ. ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳು, ಮಧ್ಯಾಹ್ನದ ಊಟ, ಹಾಜರಾತಿ ಸಂಬಂಧಿತ ಶಿಷ್ಯ ವೇತನ/ಉಚಿತ ಸಮವಸ್ತ್ರಗಳು, ಬೋಧನಾ ಶುಲ್ಕದಿಂದ

Digitised by Bharatavani, CIIL

ಪೂರ್ಣ ವಿನಾಯ್ತಿ, ಶಾಲಾ ಚೀಲಗಳ ಉಚಿತ ಪೂರೈಕೆ ಮುಂತಾದ ಕ್ರಮಗಳು ಮಕ್ಕಳನ್ನು ಶಾಲೆಗೆ ಹೋಗಲು/ಕಳುಹಿಸಲು ಉತ್ತೇಜಿಸುವುವು.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ನಿರ್ಲಕ್ಷ್ಯ, ಋತುಮತಿಯಾಗುವ ಸಂದರ್ಭದಲ್ಲಿ ಹೆಣ್ಣು ಮಕ್ಕಳನ್ನು ಶಾಲೆಯಿಂದ ಬಿಡಿಸುವುದು ಅಶಿಕ್ಷಿತ ಜನಸಮುದಾಯದಲ್ಲಿ ಶಾಲಾ ಶಿಕ್ಷಣದ ಮೌಲ್ಯಗಳ ಬಗ್ಗೆ, ಮಹತ್ವದ ಬಗ್ಗೆ ತಿಳುವಳಿಕೆ ಇಲ್ಲದಿರುವುದು, ಮದ್ಯವ್ಯಸನಿ ಪಾಲಕರು, ಶಿಕ್ಷಣ ಹೊಂದಿದ ಮಕ್ಕಳು ಹೊಲಗಳಲ್ಲಿ ಕೆಲಸ ಮಾಡಲಾರರು ಎಂಬ ಹುಸಿ ಭಯ, ಈ ಕೆಲವೊಂದು ಅಂಶಗಳು ಶಿಕ್ಷಣದಲ್ಲಿ ಅಪವ್ಯಯಕ್ಕೆ ಪ್ರಮುಖ ಕಾರಣಗಳಾಗಿವೆ. ಸೂಕ್ಷ್ಮ ಮಟ್ಟದ ಯೋಜನೆಯ ಕ್ರಮಗಳು ಉತ್ತಮ ಪರಿಸರ ನಿರ್ಮಾಣ, ಮರಳಿಬಾ ಶಾಲೆಗೆ ಚಳುವಳಿ ಮುಂತಾದ ಕ್ರಮಗಳು ಶಿಕ್ಷಣದಲ್ಲಿ ಅಪವ್ಯಯವನ್ನು ಕಡಿಮೆ ಮಾಡಲು ಮದ್ಯವರ್ತಿಗಳಾಗಿ ಪಾತ್ರ ವಹಿಸುತ್ತವೆ.

**ಭಾರತದಲ್ಲಿ ಶಿಕ್ಷಣದಲ್ಲಿ ಅಪವ್ಯಯ:** ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಮೇಲೆ ಅಂತರ ರಾಷ್ಟ್ರೀಯ ಅನುಭವದ ಪ್ರಕಾರ ಶಾಲೆಯ ಯಶಸ್ಸು ಕನಿಷ್ಠ ಶೇ.40 ಸಾಕ್ಷರತೆಯನ್ನು ಹೊಂದುವುದಾಗಿದೆ. ಸಾಕ್ಷರತೆ ಮತ್ತು ಶಾಲೆಗಳ ವಿಸ್ತಾರ ಸಮಾಜಕ್ಕೆ ಅಪವ್ಯಯದ ವಿರುದ್ಧ ಅಸ್ತ್ರವಾಗಿದೆ. ಎಲ್ಲರಿಗೂ ಶಿಕ್ಷಣದ ಗುರಿಗಳು ಊಹಿಸಿದಂತೆ 2007 ರಿಂದ 2010 ರಲ್ಲಿ ದೇಶದಲ್ಲಿ ಹೆಚ್ಚಿನ ಭಾಗಗಳಲ್ಲಿ ತಲುಪಲಾಗುತ್ತದೆ. ಆದ್ದರಿಂದ ಕನಿಷ್ಠ 5 ವರ್ಷಗಳ ಶಾಲಾ ಶಿಕ್ಷಣ ಅಪವ್ಯಯ ವಾಗದಂತಿರುವುದು ಸಮಸ್ಯೆಯಾಗಕೂಡದು. 2010ರವರೆಗೆ ಭಾರತದ ಹೆಚ್ಚಿನ ಭಾಗಗಳಲ್ಲಿ ಶಾಲೆಯಿಂದ ಹೊರಗೆ ಉಳಿಯುವವರ ಸಂಖ್ಯೆ ಕಡಿಮೆಯಾಗುವುದು. ಆದಾಗ್ಯೂ ಶಾಲೆಯ ಮೇಲಿನ ಹಂತಗಳಲ್ಲಿ ಅಪವ್ಯಯವು ಭಾರತದ ಯೋಜನೆಗಾರರಿಗೆ ಸವಾಲನ್ನು ಒಡ್ಡುತ್ತದೆ. ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವುದರ, ಮಾಧ್ಯಮಿಕ ಶಾಲಾ ಹಂತದಲ್ಲಿ ಅನುತ್ತೀರ್ಣತೆಯ ದರ, ಎಲ್ಲಾ ಹಂತಗಳಲ್ಲಿ ಕಡಿಮೆ ಸಾಧನಾ ಮಟ್ಟಗಳು ಭವಿಷ್ಯದಲ್ಲಿ ಸಮಸ್ಯೆಗಳನ್ನು ಒಡ್ಡುತ್ತವೆ ಎಂದು ರಾಷ್ಟ್ರೀಯ ಸಾಧನಾ ಸಮೀಕ್ಷೆ (ಓಂಖ)ಯಿಂದ ತಿಳಿದುಬರುತ್ತದೆ.

ಮೂಲ: ಎ.ಎಸ್. ಸೀತಾರಾಮು

ಅನು: ಡಾ. ಕೊಂಗವಾಡ ಎನ್.ಬಿ.

## ಭಾರತದಲ್ಲಿ ಶೈಕ್ಷಣಿಕ ಸಂಶೋಧನೆ

ಭಾರತದಲ್ಲಿ ಶೈಕ್ಷಣಿಕ ಸಂಶೋಧನೆ ಸಾಪೇಕ್ಷವಾಗಿ ಸ್ವಾತಂತ್ರ್ಯೋತ್ತರ ಕಾಲದ ಸಂಗತಿ. 1917ರಲ್ಲೇ ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಮೊದಲಿಗೆ ಶಿಕ್ಷಣದಲ್ಲಿ ಸ್ನಾತಕೋತ್ತರ ವಿಭಾಗ ಪ್ರಾರಂಭವಾಯಿತು. ಆದಾಗ್ಯೂ ಶಿಕ್ಷಣ ವಿಭಾಗದಲ್ಲಿ, ಪ್ರೌಢಪ್ರಬಂಧವನ್ನೇ ಮುಖ್ಯವಾಗಿ ಆಧರಿಸಿದ ಸ್ನಾತಕೋತ್ತದ ಪದವಿ ನೀಡಲಾದುದು 1936ರಲ್ಲಿ ಆಗಿನ ಬೊಂಬಾಯಿ ವಿಶ್ವವಿದ್ಯಾಲಯದಿಂದ. ಇದೇ ವಿಶ್ವವಿದ್ಯಾಲಯದಿಂದ 1943ರಲ್ಲಿ ಮೊದಲೇ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಲಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು ಕೇವಲ ಕೆಲವೇ ವಿಶ್ವವಿದ್ಯಾಲಯಗಳಿಗೆ ಸೀಮಿತವಾಗಿತ್ತು. 1950ರ ವೇಳೆಗೆ ಇಡೀ ದೇಶದಲ್ಲಿ ಕೇವಲ ಹತ್ತು ಪಿ.ಹೆಚ್.ಡಿ.ಗಳನ್ನು ಮಾತ್ರ ಕೊಡಲಾಗಿತ್ತು. ಸ್ವಾತಂತ್ರ್ಯಾನಂತರದಲ್ಲಿ ಬಹಳಷ್ಟು ವಿಶ್ವವಿದ್ಯಾನಿಲಯಗಳು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಕಾರ್ಯಾಕ್ರಮವನ್ನು ಪ್ರಾರಂಭಿಸಿದವು ಮತ್ತು ಪಿಹೆಚ್‌ಡಿ ಪದವೀಧರರ ಸಂಖ್ಯೆ ಬಹುಪಟ್ಟು ಏರಿತು (ಬೂಚ್ 1987).

ಭಾರತದಲ್ಲಿ ಶೈಕ್ಷಣಿಕ ಸಂಶೋಧನೆ ಗತಿಯನ್ನು ಗುರುತಿಸುವ ಮೊದಲ ಪ್ರಯತ್ನ ಎನ್‌ಸಿಇಆರ್‌ಟಿ ಸಂಸ್ಥೆಯಿಂದ ನಡೆಯಿತು. ಶೈಕ್ಷಣಿಕ ಸಂಶೋಧನೆಯ ವಿಮರ್ಶೆಗಳನ್ನು ಮುಖ್ಯ ಗುರಿಯನ್ನಾಗಿಸಿಕೊಂಡ ಶಿಕ್ಷಣದ ಮೂರನೇ ವಾರ್ಷಿಕ ಹೊತ್ತಿಗೆ (Third Year book of Education) 1968ರಲ್ಲಿ ಹೊರಬಂದಿತು. ವಿಮರ್ಶಿಸಲ್ಪಟ್ಟ ಬಹುತೇಕ ಅಧ್ಯಯನಗಳು ಅಲ್ಲಿಯವರೆಗೆ ವಿವಿಧ ವಿಶ್ವವಿದ್ಯಾನಿಲಯಗಳ ಶಿಕ್ಷಣ ವಿಭಾಗದಲ್ಲಿ ಸ್ನಾತಕೋತ್ತರ ಪದವಿಗೆ ಸಲ್ಲಿಸಿದ ಪ್ರೌಢ ಪ್ರಬಂಧಗಳ ವಿಮರ್ಶೆಗಳಾಗಿದ್ದವು. ಮುಂದೆ ಯುಜಿಸಿ ಸಂಸ್ಥೆಯು ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಯ ಸರ್ವೇಕ್ಷಣಾ ಕಾರ್ಯಕ್ಕೆ ಪ್ರಾಯೋಜನೆ ನೀಡಿತು. ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾನಿಲಯದ ಶಿಕ್ಷಣದ ಮುಂದುವರಿದ ಅಧ್ಯಯನ ಕೇಂದ್ರ (Centre for Advance Studies of Education) ದಲ್ಲಿ ಬೂಚ್ ಅವರು ಈ ಕೆಲಸದ ಸಂಪಾದಕತ್ವವನ್ನು ವಹಿಸಿ ನಿರ್ವಹಿಸಿದರು. ಈ ಅಧ್ಯಯನವು ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಯ ಇತಿಹಾಸವನ್ನು ಗುರುತಿಸಿತು 1972ರವರೆಗೆ ಡಾಕ್ಟರೇಟ್ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧಗಳು ಹಾಗೂ ಸಾಂಸ್ಕೃತಿಕವಾಗಿ ಕೈಗೊಂಡ ಸಂಶೋಧನೆಗಳ ಆಧಾರದ ಮೇಲೆ ಶೈಕ್ಷಣಿಕ ಸಂಶೋಧನೆಗಳ ಒಲವುಗಳನ್ನು ಗುರುತಿಸುವ ಕೆಲಸವನ್ನೂ ಇದು ಮಾಡಿತು (ಬೂಚ್ 1974). ವಿವಿಧ ಕ್ಷೇತ್ರಗಳಲ್ಲಿನ ಒಲವುಗಳ ವರದಿಗೆ ಆಧಾರವಾದ ಸಂಶೋಧನಾ ಅಧ್ಯಯನಗಳ ಸಾರಲೇಖಗಳನ್ನೂ ಈ ಸರ್ವೇಕ್ಷಣೆ ಮೊತ್ತ ಮೊದಲ ಬಾರಿಗೆ ಪ್ರಕಟಿಸಿತು. ಶಿಕ್ಷಣಕ್ಷೇತ್ರದಲ್ಲಿ ಹಿಂದಿನ ಸಂಶೋಧನೆಗಳ ಆಧಾರದ ಮೇಲೆ ಮುಂದುವರಿಯಲು ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧಕರಿಗೆ ಈ ಬೆಳವಣಿಗೆ ಉತ್ತಮ ಅವಕಾಶವನ್ನು ಕಲ್ಪಿಸಿಕೊಟ್ಟಿತು.. ನಾವೆಲ್ಲರೂ ಆಭಾರಿಗಳಾಗಿರುವ ಬೂಚ್ ಅವರ ವಿಶೇಷ ಕ್ರಿಯಾಶೀಲತೆಯ ಫಲವಾಗಿ ಸರ್ವೇಕ್ಷಣೆಯ ವರದಿ ಹಲವಾರು ಸಂಪುಟಗಳಲ್ಲಿ ಪ್ರಕಟವಾಯಿತು. ಎರಡನೇ ಸರ್ವೇಕ್ಷಣವು 1972ರಿಂದ 1978ರವರೆಗಿನ ಸಂಶೋಧನೆಗಳನ್ನು ಗಣನೆಗೆ ತೆಗೆದುಕೊಂಡಿತು. ಬೂಚ್ ಸಂ. 1979). ಮೂರನೇ ಸರ್ವೇಕ್ಷಣವು 1978ರಿಂದ 1983ರವರೆಗಿನ ಸಂಶೋಧನೆಗಳನ್ನು ವಿಮರ್ಶಿಸಿದರೆ, ನಾಲ್ಕನೇ ಸರ್ವೇಕ್ಷಣೆಯು 1983ರಿಂದ 1988ರ ಅವಧಿಯಲ್ಲಿ ಪೂರ್ಣಗೊಂಡ ಸಂಶೋಧನೆಗಳನ್ನು ಗಣನೆಗೆ ತೆಗೆದುಕೊಂಡಿತು. ಈ ಎರಡೂ ಸಂಪುಟಗಳು ಬೂಚ್ ಅವರಿಂದ

Digitised by Bharatavani, CIIL

ಸಂಪಾದಿತವಾಗಿ ಎನ್‌ಸಿಇಆರ್‌ಟಿ ಸಂಸ್ಥೆಯಿಂದ ಕ್ರಮವಾಗಿ 1987 ಮತ್ತು 1991ರಲ್ಲಿ ಪ್ರಕಟವಾಯಿತು. ಮುಂದೆ ಕಾಲಕಾಲಕ್ಕೆ ಸಂಶೋಧನೆಯ ಸರ್ವೇಕ್ಷಣಾ ಕೆಲಸವನ್ನು ಎನ್‌ಸಿಇಆರ್‌ಟಿ ಸಾಂಸ್ಥಿಕರಿಸಿಕೊಂಡು ಐದನೇ ಸರ್ವೇಕ್ಷಣೆ 1988ರಿಂದ 1993ರವರೆಗಿನ ಸಂಶೋಧನೆಗಳ ವಿಮರ್ಶೆಯನ್ನು ಹೊರತಂದಿದೆ. ಆರನೇ ಸರ್ವೇಕ್ಷಣೆ 1993ರಿಂದ 2000ದವರೆಗಿನ ಸಂಶೋಧನೆಗಳನ್ನು ಒಳಗೊಂಡಿದೆ.

ಕಾಲಕ್ರಮದಲ್ಲಿ ಪಿಎಚ್‌ಡಿ ಪದವಿ ಕಾರ್ಯಕ್ರಮವು ಭಾರತದ 200ಕ್ಕಿಂತಲೂ ಹೆಚ್ಚು ವಿಶ್ವವಿದ್ಯಾನಿಲಯಗಳಲ್ಲಿ ಜಾರಿಗೆ ಬಂದು ಅದರ ಸಂಖ್ಯೆ ಏರುತ್ತಾ ಹೋದುದರಿಂದ ಪ್ರತಿಯೊಂದು ಸಂಶೋಧನೆಯನ್ನೂ ನಮೂದಿಸಲು ಕಷ್ಟಕರವಾಯಿತು. ಹೀಗೆ ಸಂತಾನೋತ್ಪತ್ತಿ ರೂಪದಲ್ಲಿ ಬೆಳೆಯುತ್ತಿರುವ ಪಿಹೆಚ್‌ಡಿ ಅಧ್ಯಯನಗಳು, ವೈಯಕ್ತಿಕವಾಗಿ ಕೈಗೊಳ್ಳುವ ಸಂಶೋಧನೆಗಳು ಮತ್ತು ಪ್ರಕಟಣೆಗಳನ್ನು ಗಮನಿಸಿ ಎನ್‌ಸಿಇಆರ್‌ಟಿಯು ಸಂಶೋಧನಾ ಸಾರಲೇಖಗಳನ್ನು ಆಗಿಂದಾಗ್ಗೆ ಪ್ರಕಟಿಸುವ ನಿರ್ಧಾರ ಕೈಗೊಂಡಿತು. ಹೀಗಾಗಿ 1995ರಲ್ಲಿ ಸಾರಲೇಕೀಕರಣ ಸೇವೆ ಪ್ರಾರಂಭಗೊಂಡಿತು. ಭಾರತೀಯ ಶೈಕ್ಷಣಿಕ ಸಾರಲೇಖಗಳು (Indian Educational Abstracts) ಎಂಬ ಹೆಸರಿನಲ್ಲಿ ಇದು ವರ್ಷಕ್ಕೆ ಎರಡು ಬಾರಿ ಪ್ರಕಟವಾಯಿತು. 1995ರಿಂದ 2000ದ ವೇಳೆಗೆ ಅಂತಹ 8 ಸಾರಲೇಖಾ ಸಂಪುಟಗಳು ಪ್ರಕಟವಾದವು. ಇದೇ ಪ್ರಕಟಣೆ ಇದೇ ಹೆಸರಿನಲ್ಲಿ ಅರ್ಧ ವಾರ್ಷಿಕ ಪತ್ರಿಕೆಯಾಗಿ ಪರಿವರ್ತಿತವಾಯಿತು. 2001ರಲ್ಲಿ ಮೊದಲ ನಿಯತಕಾಲಿಕೆ ಹೊರಬಂದಿತು. ಹೀಗೆ ಎನ್‌ಸಿಇಆರ್‌ಟಿಯು ತೊಂಬತ್ತರ ದಶಕದಲ್ಲಿ ಶಿಕ್ಷಣದಲ್ಲಿ ಕೆಲಸಮಾಡುವ ಸಂಶೋಧಕರಿಗಾಗಿ ಸಾರಲೇಖೀಕರಣ ಸೇವೆಯನ್ನು ಪ್ರಾರಂಭಿಸಿತು. ಆ ಮೂಲಕ ಪರಾಮರ್ಶನ ಉದ್ದೇಶಗಳಿಗಾಗಿ ಹೊಸ ಅಧ್ಯಯನಗಳ ಫಲಿತಾಂಶಗಳನ್ನು ಪಡೆಯುವಲ್ಲಿ ಆಗುವ ಕಾಲವಿಳಂಬವನ್ನು ಕಡಿಮೆಮಾಡಲು ಪ್ರಯತ್ನಿಸಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಕಾಲಕಾಲಕ್ಕೆ ನಡೆದಿರುವ ಸಂಶೋಧನಾ ಸರ್ವೇಕ್ಷಣಗಳು ಮತ್ತು 1995ರ ನಂತರ ಎನ್‌ಸಿಇಆರ್‌ಟಿ ಪ್ರಕಟಿಸಿದ ಸಾರಲೇಖಗಳ ಸಂಗ್ರಹದ ಆಧಾರದ ಮೇಲೆ ಕಲೆಹಾಕಿದ ಸಾರಲೇಖಗಳ ಸಂಖ್ಯೆಯನ್ನು ಕೋಷ್ಟಕ 1ರಲ್ಲಿ ಕೊಡಲಾಗಿದೆ. 1995ರ ನಂತರ ಎನ್‌ಸಿಇಆರ್‌ಟಿಯು ಭಾರತೀಯ ಶಿಕ್ಷಣ ಸಾರಲೇಖದಲ್ಲಿ (Indian Educational Abstract) ಪ್ರಕಟಿಸಿದ ಪದವಿ ಆಧಾರಿತ ಅಧ್ಯಯನಗಳ ಸಮಗ್ರತೆಯ ಅಂಶ ಕಡಿಮೆ ಎಂಬುದನ್ನೂ ಇಲ್ಲಿ ಗಮನಿಸಬೇಕು.

ಕೋಷ್ಟಕ 1

ವಿವಿಧ ಕಾಲಘಟ್ಟಗಳಲ್ಲಿ ಸರ್ವೇಕ್ಷಣೆಗಳು ಮತ್ತು ಸಾರಲೇಖಗಳ ನಿಯತಕಾಲಿಕ ಪ್ರಕಟನೆಗಳ ಮೂಲಕ ಪ್ರಕಟವಾದ ಸಾರಲೇಖಗಳ ಸಂಖ್ಯೆ

| ಕ್ರ. ಸಂ. | ಸರ್ವೇಕ್ಷಣೆಗಳು | ಅವಧಿ | ಪ್ರಕಟಣೆಯ ವರ್ಷ | ದಾಖಲಾದ ಅಧ್ಯಯನಗಳ ಸಂಖ್ಯೆ | ಅಧ್ಯಯನಗಳ ಸಂಖ್ಯೆಯ ಒಟ್ಟುಗೂಡಿದ ಮೊತ್ತ |
|---|---|---|---|---|---|
| 1 | ಒಂದನೇ ಸರ್ವೇಕ್ಷಣೆ | 1975ರವರೆಗಿನ ಅಧ್ಯಯನಗಳು | 1974 | 731 | 731 |
| 2 | ಎರಡನೇ ಸರ್ವೇಕ್ಷಣೆ | 1972–1978 | 1979 | 839 | 1570 |
| 3 | ಮೂರನೇ ಸರ್ವೇಕ್ಷಣೆ | 1978–1983 | 1987 | 1481 | 3051 |
| 4 | ನಾಲ್ಕನೇ ಸರ್ವೇಕ್ಷಣೆ | 1983–1988 | 1991 | 1674 | 4725 |
| 5 | ಐದನೇ ಸರ್ವೇಕ್ಷಣೆ | 1988–1992 | 1997 | 1831 | 6556 |
| 6 | ಭಾರತೀಯ ಶೈಕ್ಷಣಿಕ ಸಾರಲೇಖಗಳು** | 1992–2001 | ಪ್ರತಿ 6 ತಿಂಗಳಿಗೊಮ್ಮೆ | 1633 | 8189 |

* ಇವು ಭಾರತೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಸಾರಲೇಖಗಳ ಜೊತೆಗೆ ಪ್ರಕಾಶಕರ ವಿನಂತಿಯ ಮೇರೆಗೆ ಸಂಶೋಧಕರಿಂದ ಮಾಡಲಾದ ಪಿಹೆಚ್‌ಡಿ ಮಹಾಪ್ರಬಂಧಗಳ ಸಾರಲೇಖಗಳನ್ನು ಒಳಗೊಂಡಿದೆ. ಪಿಹೆಚ್‌ಡಿ ಪ್ರಬಂಧಗಳ ಸಾರಲೇಖಗಳ ಸಮಗ್ರತೆ ಸರ್ವೇಕ್ಷಣೆಗಳ ಸಮಗ್ರತೆಯಷ್ಟು ವ್ಯಾಪಕವಾಗಿಲ್ಲ.

ಹಿಂದಿನ ಸರ್ವೇಕ್ಷಣೆಗಳಿಗೆ ಹೋಲಿಸಿದರೆ ಭಾರತೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿರುವ ಸಂಶೋಧನಾ ಲೇಖನಗಳ ಸಾರಲೇಖಗಳ ಸಂಖ್ಯೆ ಹೆಚ್ಚು. ಸಮಗ್ರ ಸಂಪನ್ಮೂಲಗಳ ಆಧಾರದ ಮೇಲೆ ಮಾನವ ಪ್ರಯತ್ನದ ಮೂಲಕ ಈಗಾಗಿರುವ ಸಂಶೋಧನಾ ಪ್ರಯತ್ನಗಳನ್ನು ಸಮಗ್ರವಾಗಿ ಹಿಡಿದಿಡುವ ಕೆಲಸವನ್ನು ಸಾಂಸ್ಥಿಕವಾಗಿ ಇನ್ನೂ ಕೈಗೊಳ್ಳಬೇಕಾಗಿದೆ.

ಪ್ರಕಟವಾಗಿರುವ ಐದು ಸರ್ವೇಕ್ಷಣಗಳೂ ಶಿಕ್ಷಣದಲ್ಲಿ ಒಟ್ಟಾರೆ ಆಗಿರುವ ಸಂಶೋಧನೆಗಳ ಪರಿಮಾಣಾತ್ಮಕ ಬೆಳವಣಿಗೆಯನ್ನು ಮತ್ತು ಸಂಶೋಧನೆಯ ವಿವಿಧ ಒಲವುಗಳ ಅಡಿಯಲ್ಲಿ ಶಿಕ್ಷಣದ ಶಿಕ್ಷಣ ಕ್ಷೇತ್ರಗಳಲ್ಲಿ ಆಗಿರುವ ಸಂಶೋಧನೆಗಳನ್ನೂ ವಿವರವಾಗಿ ಚರ್ಚಿಸಿವೆ. ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಗಳ ಪರಿಮಾಣಾತ್ಮಕ ಬೆಳವಣಿಗೆ ಅತಿಶಯವಾದುದಾದರೂ ಗುಣಾತ್ಮಕ ಮತ್ತು ಸಮರ್ಪಕತೆಯ ವಿಷಯ ಸಂಶಯಾಸ್ಪದವಾಗಿಯೇ ಇದೆ.

Digitised by Bharatavani, CIIL

ಕಾಲಕಾಲಕ್ಕೆ ಸಂಶೋಧನಾ ಒಲವುಗಳ ವರದಿಯಾಗಿರುವುದು ಸಮಗ್ರ ಮೌಲ್ಯಮಾಪನ ಕಾರ್ಯವನ್ನು ಸಾಧ್ಯವಾಗಿಸಿದೆ. ಜ್ಞಾನ ಪರಿಕಲ್ಪನೆಯ ಸಮಾಜಶಾಸ್ತ್ರೀಯ ನೋಟದ ಹಿನ್ನಲೆಯಲ್ಲಿ ಶೈಕ್ಷಣಿಕ ಸಂಶೋಧನೆಯ ಉದ್ಯಮವನ್ನು ಅಧ್ಯಯನ ಮಾಡುವ ಅನೇಕ ಪ್ರಯತ್ನಗಳು ನಡೆದಿವೆ. ಮೊದಲ ಸರ್ವೇಕ್ಷಣೆ ಒಳಗೊಂಡ 769 ಸಾರಲೇಖಗಳ ಆಧಾರದ ಮೇಲೆ ಪಸ್ಸಿ ಮತ್ತು ರಮ (1977) ಇವರು ಗೋವಿನ್ (1972) ಸೂಚಿಸಿರುವ ಆರು ಮಾನದಂಡಗಳ ಆಧಾರದ ಮೇಲೆ ವರದಿಯಾಗಿರುವ ಸಾರಲೇಖಗಳನ್ನು ಪರಿಶೀಲಿಸಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ಕಾಳಜಿಗಳಿಗೆ ಶೈಕ್ಷಣಿಕ ಸಂಶೋಧನೆಯ ಪ್ರತಿಕ್ರಿಯೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದ್ದು, ಈ ವಿಶ್ಲೇಷಣೆಯು ಮೊದಲ ಮೂರು ಸರ್ವೇಕ್ಷಣೆಗಳ ಸಾರಲೇಖಗಳನ್ನು ಹಾಗೂ 1969ರಿಂದ 1984ರವರೆಗೆ ಭಾರತೀಯ ಶೈಕ್ಷಣಿಕ ವಿಮರ್ಶೆ (Indian Educational Review) ಯಲ್ಲಿ ಪ್ರಕಟವಾದ ಸಂಶೋಧನಾ ಲೇಖನಗಳನ್ನೂ ಆಧಾರವಾಗಿ ಇಟ್ಟುಕೊಂಡಿದೆ (ನಾಗರಾಜು, 1989). ಮತ್ತೆ ಒಂದೆರಡು ಪ್ರಯತ್ನಗಳು ವಿಶ್ಲೇಷಣಾತ್ಮಕ ಅಧ್ಯಯನಗಳಾಗಿದ್ದು ಇವು ಭಾರತೀಯ ಶೈಕ್ಷಣಿಕ ವಿಮರ್ಶೆ (Indian Educational Review) ಯಲ್ಲಿ ಪ್ರಕಟವಾದ ಲೇಖನಗಳನ್ನು ಆಧಾರವಾಗಿಟ್ಟುಕೊಂಡಿರುವುದಲ್ಲದೆ ಅಧ್ಯಯನದ ವಿಷಯಗಳ ವರ್ಗೀಕರಣ, ಸಾಂಸ್ಥಿಕ ಮೂಲಾಧಾರ ಮತ್ತು ಸಂಶೋಧಕನ ಹಿನ್ನೆಲೆ ಮೊದಲಾದ ಅಂಶಗಳನ್ನು ವಿಶ್ಲೇಷಿಸಿವೆ. (ರೈನ ಮತ್ತು ಸೇನ್‌ಗುಪ್ತ 1979, ರೈನ, ಪ್ರಸಾದ್ ಮತ್ತು ಕುಮಾರ್ 1993).

ಭಾರತೀಯ ಶೈಕ್ಷಣಿಕ ಸಂಶೋಧನಾ ಸರ್ವೇಕ್ಷಣೆಗಳು ಹಾಗೂ ಶೈಕ್ಷಣಿಕ ಸಂಶೋಧನಾ ಸಂಸ್ಥೆಗಳ ಇತರ ವಿಶ್ಲೇಷಣೆಗಳು ಶೈಕ್ಷಣಿಕ ಸಂಶೋಧನೆ ಏನನ್ನು ಒಳಗೊಳ್ಳುತ್ತದೆ ಅಥವಾ ಶೈಕ್ಷಣಿಕ ಸಂಶೋಧನೆ ಎಂದರೇನು ಎಂಬ ಪ್ರಶ್ನೆಯನ್ನು ಮತ್ತೆ ಮತ್ತೆ ಎತ್ತಿ ವಿಚಾರ ಮಾಡಿವೆ.

**ಶೈಕ್ಷಣಿಕ ಸಂಶೋಧನೆಯ ಸ್ವರೂಪ:**

ಮುಂದುವರಿದ ರಾಷ್ಟ್ರಗಳಲ್ಲಿ ಈಚಿನ ದಶಕಗಳಲ್ಲಿ ಶೈಕ್ಷಣಿಕ ಸಂಶೋಧನೆಯ ಅನನ್ಯತೆಯ ಅಂಶ ದತ್ತ ಗಮನ ಕೇಂದ್ರೀಕರಿಸಲಾಗಿದೆ. (ಥಾಮಸ್ ಸಂ. 1972: ಡಾಕ್ರೆಲ್ ಮತ್ತು ಹ್ಯಾಮಿಲ್‌ಟನ್ ಸಂ. 1980 ಬರ್ಗೆನ್ ಸಂ. 1985) ಯಾವುದೇ ಸಂಶೋಧನೆಯು ಶೈಕ್ಷಣಿಕ ಸಂಶೋಧನೆ ಹೌದೇ ಅಲ್ಲವೇ ಎಂದು ಗುರುತಿಸಲು ಆರು ಮಾನದಂಡಗಳನ್ನು ಸೂಚಿಸಲಾಗಿದೆ (ಗೋವಿನ್ 1972). ಸಾಮಾಜಿಕ ಸಜ್ಜಿಕೆ, ಶಿಕ್ಷಣದ ಪರಿಕಲ್ಪನೆ, ಶಿಕ್ಷಣದ ಪ್ರಕ್ರಿಯೆ, ಬೋಧನೆಯ ವಿಷಯ, ಶೋಧನೆಯ ಸನ್ನಿವೇಶ (Context of enquiry) ಎಂಬ ಮಾನದಂಡವು ಶಿಕ್ಷಣ ಕ್ಷೇತ್ರದ ಹೊರಗೆ ಕೈಗೊಂಡ ಸಂಶೋಧನೆಗಳು ಶೈಕ್ಷಣಿಕವಾಗಿ ಸಮರ್ಪಕ ಹೌದೇ ಅಲ್ಲವೇ ಎಂಬುದಾಗಿ ವರ್ಗೀಕರಿಸಲು ಸಹಕಾರಿಯಾಗುತ್ತದೆ. ಪ್ರಸ್ತುತ ಭಾರತೀಯ ಶೈಕ್ಷಣಿಕ ಸನ್ನಿವೇಶದಲ್ಲಿ ಸಮಂಜಸವೆನಿಸುವ ಅಧ್ಯಯನಗಳು ಹಾಗೂ ಸಮಾಜದಲ್ಲಿ ಸಾಮಾಜಿಕ ಅಥವಾ ಮನೋವೈಜ್ಞಾನಿಕ ರೂಪಣದಲ್ಲಿ ಒಂದು ಭಾಗವಾದ ಶಿಕ್ಷಣವನ್ನು ಒಂದು ಚಲಕವಾಗಿ ಪರಿಗಣಿಸುವ ಅಧ್ಯಯನಗಳು ಇವುಗಳ ನಡುವಿನ ವ್ಯತ್ಯಾಸ ಸ್ಪಷ್ಟವಿಲ್ಲದಿರುವುದು ಸಂಶೋಧನಾ ಸರ್ವೇಕ್ಷಣೆಗಳಲ್ಲಿ ಉದ್ಭವಿಸುವ ಪ್ರಮುಖ ಸಮಸ್ಯೆಯಾಗಿದೆ.

ಎರಡನೆಯ ವರ್ಗದ ಅಧ್ಯಯನಗಳ ಲಕ್ಷಣವು ಒಂದು ಉದಾಹರಣೆಯೊಂದಿಗೆ ಕೆಲವು ವಿವರಗಳನ್ನೂ ನಿರೀಕ್ಷಿಸುತ್ತದೆ. ಶೈಕ್ಷಣಿಕ ಸಂಶೋಧನೆಯ ಮೂರನೆಯ ಸರ್ವೇಕ್ಷಣೆಯ ಸಂಪುಟದಲ್ಲಿನ 'ಕಲಿಕೆ, ಅಭಿಪ್ರೇರಣೆ ಮತ್ತು ವ್ಯಕ್ತಿತ್ವ' ಎಂಬ ಶೀರ್ಷಿಕೆಯ ಅಡಿಯಲ್ಲಿ ವರದಿಮಾಡಿರುವ ಒಂದು ಅಧ್ಯಯನವು ಗೋರಕ್‌ಪುರ್ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪದವಿಗೆ ಸಲ್ಲಿಸಿದ ಮಹಾಪ್ರಬಂಧ. 'ಉತ್ತರಪ್ರದೇಶದ ಪೌರ್ವಾತ್ಯ ಶಾಲಾ ತರುಣ ತರುಣಿಯರ ಮೌಲ್ಯವಿನ್ಯಾಸ ಮತ್ತು ವ್ಯಕ್ತಿತ್ವ ಪ್ರಭೇದಗಳಲ್ಲಿನ ವ್ಯಕ್ತಿಭಿನ್ನತೆ' ಎಂಬುದು ಈ ಅಧ್ಯಯನದ ಶೀರ್ಷಿಕೆ (ಬೂಚ್ ಸಂ: 1987, ಪು. 356) ಈ ಅಧ್ಯಯನವನ್ನು ಗಮನಿಸಿದಾಗ, ಸೆಕೆಂಡರಿ ಶಾಲೆಗಳಿಂದ ಪ್ರತಿಚಯನವನ್ನು ಆಯ್ಕೆ ಮಾಡಿಕೊಂಡಿರುವುದನ್ನು ಬಿಟ್ಟರೆ ಉಳಿದ ಯಾವುದೇ ವಿಷಯವೂ ಉತ್ತರಪ್ರದೇಶದ ಸೆಕೆಂಡರಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ ಸಮಂಜಸವಾಗಿಲ್ಲ ಎಂಬುದು ತಿಳಿದುಬರುತ್ತದೆ. ಕ್ರಮವಾಗಿ ಜೋಶಿ ಅಥವಾ ಶೆಲ್ಡನ್ ಅವರ ಬುದ್ಧಿಮಾಪನ ಪರೀಕ್ಷೆ ಮತ್ತು ವ್ಯಕ್ತಿತ್ವ ಪ್ರಭೇದ ಪರೀಕ್ಷೆಯ ಮೂಲಕ ಮಾಡಿರುವ ಸಾಮಾನ್ಯ ಬುದ್ಧಿಮಾಪನದ ಅಥವಾ ವ್ಯಕ್ತಿಪ್ರಭೇದಗಳು ಉತ್ತರ ಪ್ರದೇಶದ ಸೆಕೆಂಡರಿ ಶಿಕ್ಷಣವನ್ನು ಪ್ರಭಾವಿಸುವುದು ಎಂದಾಗಲೀ ಅಥವಾ ಅದರಿಂದ ಪ್ರಭಾವಿತವಾಗಿದೆ ಎಂದಾಗಲೀ ತಿಳಿದುಕೊಳ್ಳುವ ಯಾವುದೇ ಕಾರಣವಿಲ್ಲ. ಇದು ಕೇವಲ ಹೆಣ್ಣು ಮತ್ತು ಗಂಡುಮಕ್ಕಳ, ಗ್ರಾಮೀಣ ಮತ್ತು ನಗರಪ್ರದೇಶದ ಶಾಲಾಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನು ಮತ್ತು ವ್ಯಕ್ತಿತ್ವ ಪ್ರಭೇದವನ್ನು ಹೋಲಿಕೆ ಮಾಡುತ್ತದೆಯಷ್ಟೆ. ಈ ಅಧ್ಯಯನವು ಯಾವ ರೀತಿಯಲ್ಲಿ ಶಿಕ್ಷಣಕ್ಷೇತ್ರಕ್ಕೆ ಉಪಯುಕ್ತವಾದ ಜ್ಞಾನವನ್ನು ಕೊಡುಗೆಯಾಗಿ ನೀಡಿದೆ ಎಂಬುದು ಸ್ಪಷ್ಟವಾಗುವುದಿಲ್ಲ. ಆದರೆ ಈ ಅಧ್ಯಯನವನ್ನು ಮಾರ್ಗದರ್ಶನ ಮಾಡಿದ ಮತ್ತು ಮೌಲ್ಯಮಾಪನ ಮಾಡಿದ ತಜ್ಞರು ಇದನ್ನು ಶಿಕ್ಷಣ ವಿಭಾಗದ ಅಡಿಯಲ್ಲಿ ಪಿಎಚ್‌ಡಿ ಪದವಿಗೆ ಸ್ವೀಕರಿಸಿದ್ದಾರೆ.

ವಿಮರ್ಶಕರು ಕಾಲಕಾಲಕ್ಕೆ ಶೈಕ್ಷಣಿಕ ಅಧ್ಯಯನದ ಅನನ್ಯತೆಯ ಬಿಕ್ಕಟ್ಟನ್ನು ಪ್ರಸ್ತಾಪಿಸುತ್ತಲೇ ಬಂದಿದ್ದಾರೆ. (ಬೂಚ್ ಮತ್ತು ಗೋವಿಂದ, 1987, ಬೂಚ್ 1991). ಶೈಕ್ಷಣಿಕ ಸಂಶೋಧನೆಯನ್ನು ಇತರ ಸಮಾಜ ವಿಜ್ಞಾನದ ಸಂಶೋಧನೆಗಳಿಂದ ಬೇರ್ಪಡಿಸಿ ನೋಡುವ ದೃಷ್ಟಿಯಲ್ಲಿ ಸ್ಪಷ್ಟತೆ ಇಲ್ಲದಿರುವುದೇ ಶೈಕ್ಷಣಿಕ ಸಂಶೋಧನೆಯ ಪರಿಕಲ್ಪನೆ ಮಸುಕಾಗಿರಲು ಕಾರಣ. 'ಶಿಕ್ಷಣ ಎಂಬುದು ಇತರ ಶಿಸ್ತುಗಳಂತಲ್ಲ ಇದು ಸ್ವಾಭಾವಿಕ ಸನ್ನಿವೇಶಗಳನ್ನಲ್ಲದೆ ಸಾಮಾಜಿಕವಾಗಿ ನಿರ್ವಹಿಸಲಾಗುವ ಸನ್ನಿವೇಶಗಳನ್ನೂ ಗಮನಕ್ಕೆ ತೆಗೆದುಕೊಳ್ಳುತ್ತದೆ. ಸಾಮಾಜಿಕವಾಗಿ ನಿರ್ವಹಿಸಲಾಗುವ ಈ ಶೈಕ್ಷಣಿಕ ಸನ್ನಿವೇಶದಲ್ಲಿ ಪರಿಸರ ಸಜ್ಜಿಕೆ ಮಾನವ ನಿರ್ಮಿತ ಹಾಗೂ ಭೌತಿಕತೆಯನ್ನು

Digitised by Bharatavani, CIIL

ಸಮರ್ಪಕ ರೀತಿಯಲ್ಲಿ ಅಂದರೆ ವ್ಯಕ್ತಿಗಳ ಸ್ಥಾನಮಾನದಲ್ಲಿ ಅಪೇಕ್ಷಣೀಯ ಬದಲಾವಣೆಗಳನ್ನು ಉಂಟುಮಾಡುವ ದೃಷ್ಟಿಯಿಂದ ಕೌಶಲಪೂರ್ವಕವಾಗಿ ನಿರ್ವಹಿಸಲಾಗುತ್ತದೆ' ಎಂಬುದಾಗಿ ಬೂಚ್ ಮತ್ತು ಗೋವಿಂದ ಅವರು ಗುರುತಿಸುತ್ತಾರೆ (ಬೂಚ್ ಮತ್ತು ಗೋವಿಂದ 1979 ಬೂಚ್ ಸಂ: ಪು. 22). ಅಂದರೆ ಶೈಕ್ಷಣಿಕ ಸಂಶೋಧನೆಗಳು ಭಾರತೀಯ ಸನ್ನಿವೇಶದಲ್ಲಿ, ಮೂಲಭೂತವಾಗಿ ಶಿಕ್ಷಣದ ಪರಿಸ್ಥಿತಿಯನ್ನು, ಸನ್ನಿವೇಶವನ್ನು ಊಹಿಸುವ, ಅರ್ಥಮಾಡಿಕೊಳ್ಳುವ ಅಥವಾ ಅಗತ್ಯವಾದ ಹಸ್ತಕ್ಷೇಪ ಮಾಡುವ ಉದ್ದೇಶದಿಂದ ಸಮಾಜವಿಜ್ಞಾನದ ತತ್ವಗಳನ್ನು ಮತ್ತು ವಿಧಾನಗಳನ್ನು ಅನ್ವಯಿಸಿಕೊಳ್ಳುತ್ತವೆ. ಉದಾಹರಣೆಗೆ, ಮನೋವಿಜ್ಞಾನೀಯ ಶಿಸ್ತಿನ ಅಡಿಯಲ್ಲಿ ಕಲಿಕೆಯನ್ನು ಕುರಿತು ಮಾಡುವ ಅಧ್ಯಯನವನ್ನು ಶಾಲಾಕಲಿಕೆಯ ಅಧ್ಯಯನಗಳಿಗಿಂತ ಭಿನ್ನವಾಗಿ ಗುರುತಿಸಬಹುದು. ಮನೋವಿಜ್ಞಾನದಲ್ಲಿ 'ಕಲಿಕೆ'ಯ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳು ಕಲಿಕೆಯನ್ನು ಕುರಿತಂತೆ ನಿರ್ದಿಷ್ಟ ನಿಯಮಗಳನ್ನು ಹಾಗೂ ತತ್ವಗಳನ್ನು ಮುಂದಿಟ್ಟಿವೆ. ಕಲಿಕಾ ಮನೋವಿಜ್ಞಾನ ಎಂಬ ವಿಶೇಷ ವಿಷಯಕ್ಕೆ ಇದು ಅವಕಾಶ ಮಾಡಿಕೊಟ್ಟಿದೆ. ಆದರೆ ಮನೋವಿಜ್ಞಾನ ಕ್ಷೇತ್ರದಲ್ಲಿ ಬೋಧನೆಯ ಮನೋವಿಜ್ಞಾನ ಎಂಬುದೇನೂ ಇಲ್ಲ. ಆದರೆ ಶಿಕ್ಷಣವು ವ್ಯಕ್ತಿಗಳಲ್ಲಿ ಅಪೇಕ್ಷಣೀಯ ವರ್ತನೆಯ ಬದಲಾವಣೆಗಳನ್ನು ತರಲು ಕಲಿಕೆಯ ತತ್ವಗಳನ್ನು ಬಳಸಿಕೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ಅಧ್ಯಾಪಕ ಪ್ರಮುಖ ಪಾತ್ರ ವಹಿಸುತ್ತಾನೆ. ಹಾಗಾಗಿ, ಶಿಕ್ಷಣವು ಬೋಧನೆಗೆ ಸಂಬಂಧಿಸಿದ ಒಂದು ವಿಶಿಷ್ಟ ಶಿಸ್ತಾಗಿ ಆವಿರ್ಭವಿಸಲು ಕಾರಣವಾಗಿದೆ. ಇದನ್ನೇ ಬೋಧನಾಶಾಸ್ತ್ರ ಅಥವಾ 'ಪೆಡಗಾಜಿ' ಎಂದು ಕರೆಯಲಾಗುತ್ತದೆ. ಹೀಗಾಗಿ ಶೈಕ್ಷಣಿಕ ಸಂಶೋಧನೆಯು ಶೈಕ್ಷಣಿಕ ಒಳಹರಿವುಗಳಾದ ಅಧ್ಯಾಪಕ, ಪಠ್ಯವಸ್ತು, ತರಗತಿ, ಅನ್ಯೋನ್ಯ ಕ್ರಿಯೆ ಮುಂತಾದ ಸಾಧನ ಮೌಲ್ಯಗಳಿಗೆ ಸಂಬಂಧಿಸಿದ ಜ್ಞಾನದ ಕಟ್ಟುವಿಕೆಯನ್ನು ಕುರಿತು ಹೇಳುತ್ತದೆ. ಇದರ ಅಪೇಕ್ಷಿತ ಫಲಿತಾಂಶವೆಂದರೆ ವ್ಯಕ್ತಿಗಳಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ಉಂಟುಮಾಡುವುದು.

ಶೈಕ್ಷಣಿಕ ಸರ್ವೇಕ್ಷಣಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ವರದಿಮಾಡಿರುವ ಲೇಖಕರ ದೃಷ್ಟಿಯತ್ತ ಗಮನಹರಿಸಿದರೆ, ಇವರು ವರದಿಮಾಡಿರುವ ಬಹಳಷ್ಟು ಸಂಶೋಧನೆಗಳ ಮೂಲ ನೋಟ ಶಿಕ್ಷಣದ ಕಡೆಗಿಂತ ಇತರ 'ಮೂಲಶಿಸ್ತು'ಗಳ ಕಡೆಗೆ ವಾಲಿಕೊಂಡಿರುವುದು ಕಾಣಬರುತ್ತದೆ. ಉದಾಹರಣೆಗೆ ಶಿಕ್ಷಣದ ವಿವಿಧ ಒಲವುಗಳನ್ನು ದಾಖಲಿಸುವಾಗ 'ಕಲಿಕೆ, ಅಭಿಪ್ರೇರಣೆ ಮತ್ತು ವ್ಯಕ್ತಿತ್ವ' ಎಂಬ ಭಾಗದಲ್ಲಿ ಶಿಕ್ಷಣದ ಒಲವುಗಳನ್ನು ಸಂಘಟಿಸಿರುವ ಮಾದರಿಯನ್ನು 'ಶಿಕ್ಷಣದ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಕ್ಷೇತ್ರಗಳು' ಎಂದು ಕರೆಯಲಾಗಿದೆ. ಈ ಕ್ಷೇತ್ರದಲ್ಲಿ ಗುರುತಿಸಲಾದ ಅನೇಕ ಅಧ್ಯಯನಗಳ ಸಮಾನವಾದ ಒಂದು ಅಂಶವೆಂದರೆ, ಈ ಎಲ್ಲ ಅಧ್ಯಯನಗಳೂ ಮಾದರಿಯನ್ನು ವಿದ್ಯಾರ್ಥಿಸಮುದಾಯದಿಂದಲೇ ಆಯ್ಕೆಮಾಡಿಕೊಂಡಿವೆ. ಇದರಿಂದಾಗಿ ಶೈಕ್ಷಣಿಕ ಸಂಶೋಧನೆ ಎಂದು ಕರೆಸಿಕೊಂಡಿವೆ. 226 ಸಾರಲೇಖಗಳಲ್ಲಿ ಸುಮಾರು ಅರ್ಧಕ್ಕೂ ಹೆಚ್ಚು ಅಧ್ಯಯನಗಳು ಮನೋವಿಜ್ಞಾನದ ವಿಭಾಗದ ಅಡಿಯಲ್ಲಿ, ಕೇವಲ ಕೆಲವು ಅಧ್ಯಯನಗಳು ಗೃಹವಿಜ್ಞಾನ ಮತ್ತು ಸಮಾಜವಿಜ್ಞಾನದ ಅಡಿಯಲ್ಲಿ ಕೈಗೊಂಡವುಗಳಾಗಿವೆ. ಸಂಪಾದಕರ ತೀರ್ಮಾನಗಳು ಅವುಗಳನ್ನು ಶೈಕ್ಷಣಿಕ ಸಂಶೋಧನೆಗಳನ್ನಾಗಿ ಮಾಡಿವೆ. ಅದನ್ನು ಶೈಕ್ಷಣಿಕ ಸಂಶೋಧನೆಯ ಅಡಿಯಲ್ಲಿ ಪರಿಗಣಿಸಿರುವುದು ಅವರ ತಪ್ಪಲ್ಲ. ಹಾಗಾಗಿ ಸರ್ವೇಕ್ಷಣೆಗಳ ಸಂಖ್ಯೆ ಏರಿದೆ. ಶೈಕ್ಷಣಿಕ ಸಂಶೋಧನೆಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸ್ಪಷ್ಟವಾದ ಮಾನದಂಡಗಳನ್ನು ಅನುಸರಿಸದಿರುವುದೇ ಇದಕ್ಕೆ ಕಾರಣ. ಆದಾಗ್ಯೂ ಇದರಲ್ಲಿನ ಬಹಳಷ್ಟು ಪ್ರಬಂಧಗಳು ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಧ್ಯಯನಗಳಾಗಿದ್ದು ವಿವಿಧ ವಿಶ್ವವಿದ್ಯಾಲಯಗಳ ಶಿಕ್ಷಣ ವಿಭಾಗದಿಂದ ಪದವಿಗಳನ್ನೂ ನೀಡಲಾಗಿದೆ. ಶಿಕ್ಷಣ ವಿಭಾಗದಲ್ಲಿ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಚಲಕಗಳ ಆಧಾರದ ಮೇಲೆ ಮಾಡಿದ ಅಧ್ಯಯನಗಳನ್ನು ಸಮಾಜಶಾಸ್ತ್ರ ಅಥವಾ ಮನೋವಿಜ್ಞಾನದ ಮೂಲ ಅಧ್ಯಯನಗಳ ಅಡಿ ನಮೂದಿಸುವುದಿಲ್ಲ. ಈ ಅಧ್ಯಯನಗಳನ್ನು ಕೈಗೊಂಡವರಿಗೆ ಆಯಾ ವಿಷಯಗಳಲ್ಲಿ ಸೂಕ್ತ ಅರ್ಹತೆ ಇಲ್ಲ ಎಂಬುದೇ ಇದಕ್ಕೆ ಕಾರಣ. ಜೊತೆಗೆ ಈ ಅಧ್ಯಯನಗಳು ಭಾರತದ ಸನ್ನಿವೇಶಗಳಲ್ಲಿ ಶಿಕ್ಷಣದ ಜ್ಞಾನಕ್ಕೆ ಯಾವುದೇ ಕಾಣಿಕೆಯನ್ನೂ ಕೊಡುವುದಿಲ್ಲ. ಏಕೆಂದರೆ ಇವು ಶೈಕ್ಷಣಿಕ ಪ್ರಭಾವಲಯವನ್ನು ಮೈಗೂಡಿಸಿಕೊಂಡಿರುವುದಿಲ್ಲ. ಮೇಲಿನ ಚರ್ಚೆಯಿಂದ ಕೆಳಗಿನ ಅಂಶಗಳನ್ನು ಗುರುತಿಸಬಹುದು.

* ಭಾರತದ ವಿಶ್ವವಿದ್ಯಾನಿಲಯಗಳ ಶಿಕ್ಷಣ ವಿಭಾಗದಲ್ಲಿ ಕೈಗೊಂಡಿರುವ ಹಲವಾರು ಸಂಶೋಧನೆಗಳಿಗೆ ಶೈಕ್ಷಣಿಕ ಪ್ರಭಾವಲಯದ ಕೊರತೆ ಇದೆ.

* ಶೈಕ್ಷಣಿಕ ಸಂಶೋಧನೆಯನ್ನು ಕುರಿತ ಸರ್ವೇಕ್ಷಣೆಗಳು ಶೈಕ್ಷಣಿಕ ಸಂಶೋಧನೆಯ ಅಡಿಯಲ್ಲಿ, ಮೂಲಭೂತವಾಗಿ ಶೈಕ್ಷಣಿಕ ವಿಚಾರಗಳಿಗೆ ಸಂಬಂಧಿಸಿಲ್ಲದ, ಮೂಲಶಿಸ್ತುಗಳ ಕ್ಷೇತ್ರಗಳನ್ನು ಹಾಗೂ ಕಾಳಜಿಗಳನ್ನು ಕುರಿತು ಮಾಡಿದ ಅಧ್ಯಯನಗಳನ್ನು ಸೇರಿಸಿಕೊಂಡಿವೆ.

ಈ ಮೇಲಿನ ಚರ್ಚೆಯು ಶೈಕ್ಷಣಿಕ ಸಂಶೋಧನೆ ಎಂದರೇನು, ಯಾವ ರೀತಿಯ ಸಂಶೋಧನೆ ಶೈಕ್ಷಣಿಕ ಸಂಶೋಧನೆ ಎಂದು ಕರೆಸಿಕೊಳ್ಳುತ್ತದೆ ಯಾವ ರೀತಿಯ ಸಂಶೋಧನೆ ಶೈಕ್ಷಣಿಕ ಸಂಶೋಧನೆಯಲ್ಲ ಎಂಬ ಚರ್ಚೆಗೆ ದಾರಿಮಾಡಿಕೊಡುತ್ತದೆ. ಶೈಕ್ಷಣಿಕ ಸಂಶೋಧನೆಯ ಸ್ಪಷ್ಟವಾದ ಮುಖಗಳನ್ನು ಮರುಪರಿಚಯಿಸಿಕೊಳ್ಳೋಣ.

ಮೊದಲಿಗೆ, ಇಂದಿನ ಆಧುನಿಕ ಸಂಕೀರ್ಣ ಸಮಾಜದ ಸನ್ನಿವೇಶದಲ್ಲಿ ಎಲ್ಲ ಶೈಕ್ಷಣಿಕ ಸಂಶೋಧನೆಗಳೂ ಆನ್ವಯಿಕ ಸ್ವರೂಪವುಳ್ಳವು. ವ್ಯಕ್ತಿಯಲ್ಲಿ ಅಪೇಕ್ಷಣೀಯ ಬದಲಾವಣೆಗಳನ್ನು ತರಲು ಮಾಡುವ ಹಸ್ತಕ್ಷೇಪ ಅಥವಾ ಒಳಹರಿವಿನ ನಿರ್ವಹಣೆ ಇದು. ಈ ಸಂದರ್ಭದಲ್ಲಿ ಶೈಕ್ಷಣಿಕ ಸಂಶೋಧನೆ ಮಾನವನ ಸಾಮಾಜಿಕ, ಮನೋವೈಜ್ಞಾನಿಕ ಹಾಗೂ ಆರ್ಥಿಕ ಸ್ವಭಾವವನ್ನು

Digitised by Bharatavani, CIIL

ದುಡಿಸಿಕೊಳ್ಳುತ್ತದೆ. ಇದಕ್ಕೆ ಅನುಗುಣವಾಗಿ ಎಲ್ಲ ಮಾನವ ಸಮೂಹಗಳಲ್ಲಿ ಗುರುತಿಸಲಾಗಿರುವ ಸಮಾಜಶಾಸ್ತ್ರೀಯ ಪ್ರಕ್ರಿಯೆ ಎಂದರೆ ಸಾಮಾಜೀಕರಣ. ಹಾಗೆಯೇ ಮನೋವಿಜ್ಞಾನಿಗಳು ಕಲಿಕೆಯನ್ನು, ಕಲಿಯುವವನಿಗೆ ಒತ್ತುಕೊಟ್ಟು ನೋಡುತ್ತಾರೆ. ಇದರಲ್ಲಿ ಕಲಿಕೆಯ ಉದ್ದೇಶ ನಿಮಿತ್ತವಾಗಿರುತ್ತದೆ. ಶೈಕ್ಷಣಿಕ ಸಂಶೋಧಕ ಶಾಲಾ ಕಲಿಕೆ ಅಥವಾ ಶಿಕ್ಷಣದಲ್ಲಿ ಕಲಿಕೆಯ ಉದ್ದೇಶಗಳನ್ನು ಪ್ರಧಾನವಾಗಿ ಗಮನಿಸುತ್ತಾನೆ. ಕಲಿಕೆಯ ಉದ್ದೇಶಗಳನ್ನು ಸಾಧಿಸಲು ಕಲಿಕೆಯ ನಿಯಮಗಳು ಇಲ್ಲಿ ಸಾಧನಗಳಾಗುತ್ತವೆ. ಹಾಗಾಗಿ ಶಿಕ್ಷಣವು ನಿರ್ದಿಷ್ಟ ಸಂದರ್ಭಗಳಲ್ಲಿ ತನ್ನದೇ ಗುರಿಗಳನ್ನು ಸಾಧಿಸಲು ಮೂಲ ತತ್ವಗಳನ್ನು ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನದ ಶಿಸ್ತುಗಳಿಂದ ಪಡೆದುಕೊಳ್ಳುತ್ತದೆ. ಆದ್ದರಿಂದ, ಶೈಕ್ಷಣಿಕ ಸಂಶೋಧನೆಗೆ ಕಾಲದೇಶಗಳ ಮಿತಿ ಇದೆ. ಹುಟ್ಟಿಕೊಂಡ ಹೊಸ ಅರಿವು ಅಥವಾ ಜ್ಞಾನ ಒಂದು ನಿರ್ದಿಷ್ಟ ಐತಿಹಾಸಿಕ ಸನ್ನಿವೇಶ ಮತ್ತು ಸ್ಥಳದ ಹಿನ್ನೆಲೆಯಲ್ಲಿ ಶಿಕ್ಷಣವನ್ನು ಬೆಳಗಿಸುತ್ತದೆ. ಇದು ಸಾರ್ವತ್ರಿಕವಲ್ಲ. ಇತರ ಶಿಸ್ತುಗಳನ್ನು ಅನ್ವಯಿಸಿಕೊಂಡು ಪಡೆದ ಶಿಕ್ಷಣದ ಫಲಗಳು ಸರ್ವಕಾಲಿಕವಲ್ಲ. ಒಂದು ನಿರ್ದಿಷ್ಟ ಸಾಮಾನ್ಯ ಸನ್ನಿವೇಶದಲ್ಲಿ ಪಡೆದ ಅಧ್ಯಯನದ ಫಲಗಳು ಮತ್ತೊಂದು ಸನ್ನಿವೇಶದಲ್ಲಿ ಫಲಿಸುತ್ತವೆ ಅಥವಾ ಅನ್ವಯವಾಗುತ್ತವೆ ಎಂದು ಹೇಳಲಾಗದು. ಐತಿಹಾಸಿಕ ಹಾಗೂ ತೌಲನಿಕ ಅಧ್ಯಯನಗಳೂ ದತ್ತಕಾಲದೇಶಗಳ ಪರಿಧಿಯಲ್ಲಿ ವಿಕಾಸಗೊಂಡ ಜ್ಞಾನವು ಶಿಕ್ಷಣವನ್ನು ಉಳಿಸಿಕೊಳ್ಳಲು ಉಪಯುಕ್ತವೆನಿಸಿದಾಗ ಮಾತ್ರ ಅರ್ಥವನ್ನು ಪಡೆದುಕೊಳ್ಳುತ್ತವೆ.

ಎರಡನೆಯದಾಗಿ, ಶೈಕ್ಷಣಿಕ ಸಂಶೋಧನೆಯ ಸಾಧನಗಳು ಸನ್ನಿವೇಶಗಳಿಗೆ ನಿರ್ದಿಷ್ಟವಾಗಿರಬೇಕು. ಉದಾಹರಣೆಗೆ, ಎಪ್ಪತ್ತರ ದಶಕದಲ್ಲಿ ಭಾರತೀಯ ತರಗತಿಗಳ ವೀಕ್ಷಣೆಗೆ ಹೆಚ್ಚಿನ ಅಧ್ಯಯನಗಳು ಫ್ಲಾಂಡರನ ಅಂತರ್ ಕ್ರಿಯಾ ವಿಶ್ಲೇಷಣೆಯ ಬಗೆಗಳನ್ನು ಅನುಸರಿಸಿತು. ತರಗತಿಗಳಲ್ಲಿ ಪ್ರಜಾಸತ್ತಾತ್ಮಕ ವಾತಾವರಣ ಒಳ್ಳೆಯದು ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಇದು ಅಗತ್ಯ ಕೂಡ ಎಂಬುದು ಈ ತಂತ್ರದ ಮೂಲ ಗ್ರಹಿಕೆ. ಆದರೆ ಪ್ರಜಾಸತ್ತಾತ್ಮಕ ಅನುಭವ ಪ್ರಕಟವಾಗುವ ವರ್ತನೆಗಳ ರೀತಿ ಒಂದೊಂದು ಸಂಸ್ಕೃತಿಯಲ್ಲಿ ಒಂದೊಂದು ರೀತಿ ಇರುತ್ತದೆ. ಹಾಗಾಗಿ ಅಂತರ್ ಕ್ರಿಯೆಯ ಏಕರೂಪದ ವರ್ಗೀಕರಣವು ಸಾಮಾಜಿಕ ಸನ್ನಿವೇಶದಿಂದ ಮುಕ್ತವಾಗಿರಬೇಕಾಗಿದ್ದು, ಇದರ ಸಮಂಜಸತೆ ಸಂದೇಹಾಸ್ಪದವಾಗುತ್ತದೆ. ಅಲ್ಲದೆ ಭಾರತದಲ್ಲಿನ ಅಧ್ಯಯನಗಳ ಫಲಿತಾಂಶವನ್ನು ಇತರೆಡೆಗಳಲ್ಲಿ, ಉದಾಹರಣೆಗೆ, ಅಮೆರಿಕಾ ದೇಶದಲ್ಲಿ ಪರೀಕ್ಷೆಗೆ ಒಳಪಡಿಸಿದರೆ ಸಂಶೋಧನೆಯ ಕಾರ್ಯವೇ ಅಸಮಂಜಸವಾಗುತ್ತದೆ. ಸಾಧನಗಳನ್ನು ರೂಪಿಸುವ ತತ್ವಗಳು ಒಂದೇ ಆದರೂ ಪ್ರತಿ ಶಾಲೆಯ ಸಾಂಸ್ಕೃತಿಕ ಸನ್ನಿವೇಶದ ಸಂದರ್ಭದಲ್ಲಿ ಸಾಧನಗಳ ವಿಷಯಾತ್ಮಕ ಮತ್ತು ರಾಚನಿಕ ಆಯಾಮಗಳಿಗೆ ಸಂಬಂಧಿಸಿದ ಸಮಂಜಸತೆಯನ್ನು ದೃಢೀಕರಿಸಿಕೊಳ್ಳಬೇಕು. ಬೌದ್ಧಿಕ ಸಾಮರ್ಥ್ಯಗಳ ಪರೀಕ್ಷೆಯ ಸಂದರ್ಭದಲ್ಲಿಯೂ ಕೂಡ ಪರೀಕ್ಷೆಗಳ ಸಾಂಸ್ಕೃತಿಕ ಅಸಂಬಂಧ್ಧತೆಯ ಅಂಶವನ್ನು ಗಮನಿಸಿಕೊಳ್ಳಲಾಗಿದೆ. ಹಾಗಾಗಿ ಪರೀಕ್ಷೆಗಳನ್ನು 'ಸಂಸ್ಕೃತಿ ಸೂಕ್ತ' ಅಥವಾ 'ಸಂಸ್ಕೃತಿ ಮುಕ್ತ'ವಾಗಿ ಮಾಡಲು ಪ್ರಯತ್ನಗಳು ನಡೆದಿವೆ. ಹೀಗೆಯೇ ವ್ಯಕ್ತಿತ್ವ ಹೊಂದಾಣಿಕೆಯನ್ನು ಅಳೆಯುವ ಸಾಧನಗಳು ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ವರ್ಗವಾಗುವಾಗ ಫಲಿತಾಂಶಗಳು ಸತ್ಯಬಾಹಿರವಾಗುತ್ತವೆ. ಹೀಗಾಗಿ ಸಂಶೋಧನಾ ಸಾಧನಗಳ ಸಮಂಜಸತೆಯು ಸಂಶೋಧನೆಗೆ ಶೈಕ್ಷಣಿಕ ಸ್ವರೂಪವನ್ನು ಕೊಡುವ ನಿಟ್ಟಿನಲ್ಲಿ 'ಸ್ಥಳ ನಿರ್ದಿಷ್ಟ'ವಾಗಿರಬೇಕಾಗುತ್ತದೆ.

**ಶೈಕ್ಷಣಿಕ ಸಂಶೋಧನೆಯ ಕ್ಷೇತ್ರಗಳು:**

ಪ್ರತಿ ಸಮಾಜವಿಜ್ಞಾನ ಶಿಸ್ತಿಗೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ದಾಖಲಾತಿ ಪಡೆದ ಸಂಸ್ಥೆಗಳ ರೂಪದಲ್ಲಿ ಸಂಘಟನೆಗಳು ಕೆಲಸಮಾಡುತ್ತವೆ. ಇಂತಹ ಸಂಸ್ಥೆಗಳು ತಮ್ಮದೇ ಜಾಲವನ್ನು ನಿರ್ಮಿಸಿಕೊಂಡು ಅಂತರರಾಷ್ಟ್ರೀಯ ಸಂಘಟನೆಗಳನ್ನು ರೂಪಿಸುತ್ತವೆ. ಈ ಸಂಘಟನೆಗಳು ರಾಷ್ಟ್ರೀಯ ಮಟ್ಟದ ಸಮ್ಮೇಳನಗಳನ್ನು ಏರ್ಪಡಿಸಿ ಆ ಮೂಲಕ ಶೈಕ್ಷಣಿಕ ಪತ್ರಿಕೆಗಳನ್ನು ಪ್ರಕಟಿಸುತ್ತವೆ. ಇವು ವೃತ್ತಿಪರರು ತಮ್ಮ ಕೆಲಸಗಳನ್ನು ಪ್ರಕಟಿಸಿ ವೃತ್ತಿಬಾಂಧವರೊಂದಿಗೆ ಹಂಚಿಕೊಳ್ಳಲು ವೇದಿಕೆಯನ್ನು ಒದಗಿಸುತ್ತವೆ. ಆ ಮೂಲಕ ಔದ್ಯೋಗಿಕ ಚರ್ಚೆಗೆ ಅನುವು ಮಾಡಿಕೊಡುತ್ತವೆ. ಇಂತಹ ಸಂದರ್ಭಗಳಲ್ಲಿ ಆಯಾ ಶಿಸ್ತುಗಳ ಪರಿಧಿಯನ್ನು ನಿರ್ಧರಿಸುವುದು ಮಾತ್ರವಲ್ಲದೆ ಶಿಸ್ತುಗಳ ಮೂಲ ರಚನೆಯ ಚೌಕಟ್ಟಿನಲ್ಲಿ ಹೊಸದಾಗಿ ಸೃಷ್ಟಿಸಿದ ಅರಿವನ್ನು ಸಮನ್ವಯಗೊಳಿಸುತ್ತವೆ. ಆದರೆ ಅಂತಹ ಹೇಳಿಕೊಳ್ಳುವಂತಹ ಸಂಸ್ಥೆಗಳು ಭಾರತದ ಶೈಕ್ಷಣಿಕ ಸಂಶೋಧನಾ ಕ್ಷೇತ್ರದಲ್ಲಿ ಇಲ್ಲದಿರುವುದು ಎದ್ದುಕಾಣುತ್ತದೆ. ನೋಂದಣಿಯಾಗಿರುವ ಕೆಲವು ಸಂಘಸಂಸ್ಥೆಗಳು ಇರುವುವಾದರೂ ಅವು ವೈಯಕ್ತಿಕ ಪ್ರಯತ್ನಗಳಾಗಿ ಹುಟ್ಟಿಕೊಂಡಿದ್ದು ಸ್ಥಳೀಯ ಹಂತದಲ್ಲಿ ಕೆಲಸಮಾಡುವಂತಹವುಗಳಾಗಿವೆ. ಆಯಾ ವ್ಯಕ್ತಿಯ ಪ್ರಯತ್ನ ಜೀವಂತವಾಗಿರುವವರೆಗೆ ಅವು ಉಳಿದಿರುತ್ತವೆ. ಈ ರೀತಿ ಚರ್ಚೆಯನ್ನು ಸಂಘಟಿಸಿ ಆ ಮೂಲಕ ಶಿಕ್ಷಣದ ಎಲ್ಲೆಯನ್ನು ಗುರುತಿಸಲು, ರಾಷ್ಟ್ರಮಟ್ಟದಲ್ಲಿ ವೃತ್ತಿಪರ ಸಂಸ್ಥೆಗಳು ಅಸ್ತಿತ್ವದಲ್ಲಿಲ್ಲದಿರುವುದರಿಂದ, ಯಾರೇ ಆದರೂ ಶೈಕ್ಷಣಿಕ ಸಂಶೋಧನೆಯಲ್ಲಿ ಆಗಾಗ ಮೂಡಿಬರುವ ಶೈಕ್ಷಣಿಕ ರಚನಾ ಎಲ್ಲೆಗಳನ್ನೇ ಆಧಾರವಾಗಿಟ್ಟುಕೊಳ್ಳಬೇಕಾಗುತ್ತದೆ. ಮೊದಲಿಗೆ ಇಂತಹ ಪ್ರಯತ್ನವನ್ನು ನಾವು ಕಾಣುವುದು ಭಾರತೀಯ ಶಿಕ್ಷಣದ ಮೂರನೆಯ ವಾರ್ಷಿಕ ಹೊತ್ತಿಗೆಯಲ್ಲಿ (Third Indian Year book of Education) ಇದು 1960ರವರೆಗೆ ಶಿಕ್ಷಣ ಕ್ಷೇತ್ರದಲ್ಲಿ ನಡೆದ ಸಂಶೋಧನೆಗಳನ್ನು ವಿಮರ್ಶೆ ಮಾಡಿತು. (ಅದಾವಲ್ 1968). ಮೂರನೆ ವಾರ್ಷಿಕ ಪತ್ರಿಕೆಯು ಸಂಶೋಧನೆಗಳ ಸಾರಲೇಖವನ್ನು ಒಳಗೊಂಡಿಲ್ಲವಾದ ಕಾರಣ, ಆ ಸಂಶೋಧನೆಗಳ ಶೈಕ್ಷಣಿಕ ಸ್ವರೂಪವನ್ನು ಕುರಿತು ವಿಮರ್ಶಿಸಲು ಸಾಧ್ಯವಿಲ್ಲ. ಆದರೆ ಶಿಕ್ಷಣದ 'ವಲಯ'ವನ್ನು ಅಥವಾ ಎಲ್ಲೆಯನ್ನು ಕುರಿತ ಗೊಂದಲ ಆ ಕಾರ್ಯದ ಪ್ರಾರಂಭದಲ್ಲೇ ಇದ್ದಿತು ಎಂಬುದು ಸಂಶೋಧನೆಗಳ ವಿವಿಧ ವರ್ಗಗಳಿಗೆ ಸಂಬಂಧಿಸಿದಂತೆ ಗುರುತಿಸಿರುವ ಶೀರ್ಷಿಕೆಗಳಿಂದಲೇ ವ್ಯಕ್ತವಾಗುತ್ತದೆ. ಉದಾಹರಣೆಗೆ, 'ಕಲಿಕೆಯ

Digitised by Bharatavani, CIIL

ಮನೋವಿಜ್ಞಾನ', 'ಮಗು ಮತ್ತು ತಾರುಣ್ಯಾವಸ್ಥೆಯ ಬೆಳವಣಿಗೆ', 'ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ' ಮುಂತಾದ ಶೀರ್ಷಿಕೆಗಳು ಶೈಕ್ಷಣಿಕ ಸಂಶೋಧನೆಯ ಸ್ವರೂಪವನ್ನು ಕುರಿತು ಗೊಂದವನ್ನು ಎತ್ತಿ ತೋರಿಸುತ್ತದೆ. ಇದರಿಂದಾಗಿ, ಶಿಕ್ಷಣದಲ್ಲಿನ ಸಂಶೋಧನಾ ಸರ್ವೇಕ್ಷಣೆಯು ಶೈಕ್ಷಣಿಕ ಸಂಶೋಧನೆಯನ್ನು ಉಪವರ್ಗಗಳಾಗಿ ಸಂಘಟಿಸಿ, ಸಂಶೋಧನೆಯ ಸಾರಲೇಖಗಳೊಂದಿಗೆ ಶೈಕ್ಷಣಿಕ ಪ್ರವೃತ್ತಿಗಳ ವರದಿಯನ್ನು ಪ್ರಸ್ತುತಪಡಿಸಿದೆ. ಈ ಹೊತ್ತಿಗೆಯ ಪೀಠಿಕೆಯಲ್ಲಿಯೇ ಅಧ್ಯಯನಗಳನ್ನು ನಿರ್ದಿಷ್ಟ ಕ್ಷೇತ್ರಗಳ ಅಡಿಯಲ್ಲಿ ಸಂಘಟಿಸಿರುವುದನ್ನು ಕುರಿತಂತೆ ವಿವರಣೆ ಇದೆ. (ಬೂಚ್ 1974 ಪು. 4) ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಪ್ರದಾಯದ ಜಾಡಿನಲ್ಲಿ ಈ ಸಂಘಟನೆ ಇದೆ ಎಂಬುದು ಇಲ್ಲಿ ಕೊಡಲಾಗಿರುವ ಸಮರ್ಥನೆ, ಸಂಪಾದಕರು ಶಿಕ್ಷಣ ಮನೋವಿಜ್ಞಾನ ಕ್ಷೇತ್ರವನ್ನು ಮೂರು ಉಪವರ್ಗಗಳಾಗಿ ಪುನರ್ ವಿಂಗಡಿಸಲಾಗಿದೆ ಎಂದು ಹೇಳುತ್ತಾರೆಯೇ ಹೊರತು ಹಾಗೇಕೆ ಮಾಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ.

ಕಾಲಕ್ರಮದಲ್ಲಿ ಶಿಕ್ಷಣದ ಒಲವುಗಳ ವರದಿಗಳಿಗೆ ಮೂಲವಾದ ವಸ್ತು ವಿಷಯಗಳ ಸಂಖ್ಯೆ ಹೆಚ್ಚಿದೆ. ಈ ಸರ್ವೇಕ್ಷಣೆ ಮಾಲೆಯ ಮುಂದಿನ ಯಾವುದೇ ಸಂಪುಟವೂ ಸಂಶೋಧನಾ ಅಧ್ಯಯನಗಳನ್ನು ವಿಶೇಷ ಕ್ಷೇತ್ರಗಳ ಅಡಿಯಲ್ಲಿ ವರ್ಗೀಕರಿಸಿಕೊಂಡಿರುವುದಕ್ಕೆ ಕಾರಣವನ್ನು ಕೊಡುವ ಅಥವಾ ಸಮರ್ಥಿಸುವ ಕೆಲಸವನ್ನು ಮಾಡಿಲ್ಲ. ಕೋಷ್ಟಕ 2ರಲ್ಲಿ 1997ರವರೆಗೆ ಐದು ಸರ್ವೇಕ್ಷಣಾ ಸಂಪುಟಗಳಲ್ಲಿ ಪ್ರಕಟವಾಗಿರುವಂತೆ ಶೈಕ್ಷಣಿಕ ಸಂಶೋಧನೆಯ ವಿವಿಧ ಕ್ಷೇತ್ರಗಳ ಅಧ್ಯಯನದ ಶೀರ್ಷಿಕೆಗಳನ್ನು ಕೊಡಲಾಗಿದೆ. ಇಲ್ಲಿಯ ವಿಷಯ ವಿನ್ಯಾಸದಲ್ಲಿ ಅಡಗಿರುವ ಬದಲಾವಣೆಯ ಆಧಾರದ ಮೇಲೆ ಎರಡು ಅಂಶಗಳನ್ನು ಗಮನಿಸಬಹುದಾಗಿದೆ.

**ಕೋಷ್ಟಕ 2**

**ಶೈಕ್ಷಣಿಕ ಸಂಶೋಧನೆಯ ವಿವಿಧ ಸರ್ವೇಕ್ಷಣೆಗಳ ಕಾಲದಲ್ಲಿ ಸಂಶೋಧನಾ ವಿಷಯಕ್ಷೇತ್ರಗಳಲ್ಲಿ ಆದ ಹೆಚ್ಚಳ**

| | 1974 | 1979 | 1987 | 1991 | 1997 |
|---|---|---|---|---|---|
| 1 | ಶಿಕ್ಷಣ ತತ್ವಶಾಸ್ತ್ರ | ಶಿಕ್ಷಣ ತತ್ವಶಾಸ್ತ್ರ | ಶಿಕ್ಷಣ ತತ್ವಶಾಸ್ತ್ರ | ಶಿಕ್ಷಣ ತತ್ವಶಾಸ್ತ್ರ | ಶಿಕ್ಷಣ ತತ್ವಶಾಸ್ತ್ರ |
| 2 | ಶಿಕ್ಷಣದ ಇತಿಹಾಸ | ಶಿಕ್ಷಣದ ಇತಿಹಾಸ | ಶಿಕ್ಷಣದ ಇತಿಹಾಸ | ಶಿಕ್ಷಣದ ಇತಿಹಾಸ | ಶಿಕ್ಷಣದ ಇತಿಹಾಸ |
| 3 | ಶಿಕ್ಷಣದ ಸಮಾಜಶಾಸ್ತ್ರ | ಶಿಕ್ಷಣದ ಸಮಾಜಶಾಸ್ತ್ರ | ಶಿಕ್ಷಣದ ಸಮಾಜಶಾಸ್ತ್ರ | ಶಿಕ್ಷಣದ ಸಮಾಜಶಾಸ್ತ್ರ | ಶಿಕ್ಷಣದ ಸಮಾಜಶಾಸ್ತ್ರ |
| 4 | ವ್ಯಕ್ತಿತ್ವ, ಕಲಿಕೆ ಮತ್ತು ಅಭಿಪ್ರೇರಣೆ | ತೌಲನಿಕ ಶಿಕ್ಷಣ | ತೌಲನಿಕ ಶಿಕ್ಷಣ | ತೌಲನಿಕ ಶಿಕ್ಷಣ | ತೌಲನಿಕ ಆರ್ಥಿಕತೆ |
| 5 | ಶಿಕ್ಷಣದ ಅರ್ಥಿಕತೆ | ಶಿಕ್ಷಣದ ಅರ್ಥಿಕತೆ | ಶಿಕ್ಷಣದ ಅರ್ಥಿಕತೆ | ಶಿಕ್ಷಣದ ಅರ್ಥಿಕತೆ | ಶಿಕ್ಷಣದ ಅರ್ಥಿಕತೆ |
| 6 | ಮಾರ್ಗರ್ಶನ ಮತ್ತು ಆಪ್ತ ಸಮಾಲೋಚನೆ | ವ್ಯಕ್ತಿತ್ವ ಕಲಿಕೆ ಮತ್ತು ಅಭಿಪ್ರೇರಣೆ | ಕಲಿಕೆ, ಅಭಿಪ್ರೇರಣೆ ಮತ್ತು ವ್ಯಕ್ತಿತ್ವ | ಶಿಕ್ಷಣ ಮನೋವಿಜ್ಞಾನ | ಮಾನಸಿಕ ಸ್ವಾಸ್ಥ್ಯ |
| 7 | ಪರೀಕ್ಷೆಗಳು ಮತ್ತು ಅಳತೆ | ಮಾರ್ಗದರ್ಶನ ಮತ್ತು ಆಪ್ತ ಸಮಾಲೋಚನೆ | ಮಾರ್ಗದರ್ಶನ ಮತ್ತು ಆಪ್ತ ಸಮಾಲೋಚನೆ | ಸೃಜನಶೀಲ ಕ್ರಿಯಾತ್ಮಕತೆ | ಜ್ಞಾನಾತ್ಮಕ ಪ್ರಕ್ರಿಯೆಗಳು |
| 8 | ಪಠ್ಯಕ್ರಮ ವಿಧಾನಗಳು ಮತ್ತು ಪಠ್ಯಪುಸ್ತಕಗಳು | ಪರೀಕ್ಷಣಗಳು ಮತ್ತು ಅಳತೆ | ಪರೀಕ್ಷಣಗಳು ಮತ್ತು ಅಳತೆ | ಮಾರ್ಗದರ್ಶನ ಮತ್ತು ಆಪ್ತ ಸಮಾಲೋಚನೆ | ಸಾಮಾಜಿಕ ಪ್ರಕ್ರಿಯೆಗಳು |
| 9 | ಕಾರ್ಯಕ್ರಮಾನುಗತ ಕಲಿಕೆ | ಪಠ್ಯಕ್ರಮ, ವಿಧಾನಗಳು ಮತ್ತು ಪಠ್ಯಪುಸ್ತಕಗಳು | ಪಠ್ಯಕ್ರಮ, ವಿಧಾನಳು ಮತ್ತು ಪಠ್ಯಪುಸ್ತಕಗಳು | ಪರೀಕ್ಷಣಗಳು ಮತ್ತು ಅಳತೆ | ಅಭಿಪ್ರೇರಣೆ |
| 10 | ಸಾಧನೆಯ ಸಂಬಂಧಗಳು | ಶೈಕ್ಷಣಿಕ ತಂತ್ರಜ್ಞಾನ | ಭಾಷಾ ಶಿಕ್ಷಣ | ಪಠ್ಯಕ್ರಮ | ಸೃಜನಶೀಲ ಮತ್ತು ಹೊಸ ಶೋಧಗಳು |
| 11 | ಶೈಕ್ಷಣಿಕ ಮೌಲ್ಯಮಾಪನ ಮತ್ತು ಪರೀಕ್ಷೆಗಳು | ಸಾಧನೆಯ ಸಂಬಂಧಗಳು | ಶೈಕ್ಷಣಿಕ ತಂತ್ರಜ್ಞಾನ | ಭಾಷಾ ಶಿಕ್ಷಣ | ಮಾರ್ಗದರ್ಶನ ಮತ್ತು ಸಮಾಲೋಚನೆ |
| 12 | ಬೋಧನೆ ಮತ್ತು ಬೋಧಕನ ವರ್ತನೆಗಳು | ಶೈಕ್ಷಣಿಕ ಮೌಲ್ಯಮಾಪನ ಮತ್ತು ಪರೀಕ್ಷೆಗಳು | ಸಾಧನೆಯ ಸಂಬಂಧಗಳು | ಸಮಾಜ ವಿಜ್ಞಾನ ಶಿಕ್ಷಣ | ಪಠ್ಯಕ್ರಮ ಅಭಿವೃದ್ಧಿ |
| 13 | ಅಧ್ಯಾಪಕ ಶಿಕ್ಷಣ (ಪ್ರಶಿಕ್ಷಣ) | ಬೋಧನೆ ಮತ್ತು ಬೋಧಕನ ವರ್ತನೆಗಳು | ಶೈಕ್ಷಣಿಕ ಮೌಲ್ಯಮಾಪನ ಮತ್ತು ಪರೀಕ್ಷೆಗಳು | ಗಣಿತ ಶಿಕ್ಷಣ | ಪೂರ್ವ ಪ್ರಾಥಮಿಕ ಶಿಕ್ಷಣ |
| 14 | ಶೈಕ್ಷಣ ಆಡಳಿತ | ಧ್ಯಾಪಕ ಶಿಕ್ಷಣ (ಪ್ರಶಿಕ್ಷಣ) | ಬೋಧನೆ ಮತ್ತು ಬೋಧಕನ ವರ್ತನೆಗಳು | ವಿಜ್ಞಾನ ಶಿಕ್ಷಣ | ಪ್ರಾಥಮಿಕ ಶಿಕ್ಷಣ |

Digitised by Bharatavani, CIIL

| | | | | | |
|---|---|---|---|---|---|
| 15 | ಶೈಕ್ಷಣ ಆರ್ಥಿಕತೆ | ಶೈಕ್ಷಣಿ ಆಡಳಿತ | ಅಧ್ಯಾಪಕ ಶಿಕ್ಷಣ (ಪ್ರಶಿಕ್ಷಣ) | ಶೈಕ್ಷಣಿಕ ತಂತ್ರಜ್ಞಾನ | ಸೆಕೆಂಡರಿ ಶಿಕ್ಷಣ/ ಮಾಧ್ಯಮಿಕ ಶಿಕ್ಷಣ |
| 16 | ಸಾಮಾಜಿಕ ಮತ್ತು ವಯಸ್ಕ ಶಿಕ್ಷಣ | ಉನ್ನತ ಶಿಕ್ಷಣ | ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆ | ಸಾಧನೆಯ ಸಂಬಂಧಗಳು | ಉನ್ನತ ಶಿಕ್ಷಣ |
| 17 | ಶೈಕ್ಷಣಿಕ ಸರ್ವೇಕ್ಷಣಗಳು | ಅನೌಪಚಾರಿಕ ಶಿಕ್ಷಣ | ಅನೌಪಚಾರಿಕ ಶಿಕ್ಷಣ | ಶೈಕ್ಷಣಿಕ ಮೌಲ್ಯಮಾಪನ ಮತ್ತು ಪರೀಕ್ಷೆಗಳು | ಸಮಾಜ ವಿಜ್ಞಾನ ಶಿಕ್ಷಣ |
| 18 | | | | ಅಧ್ಯಾಪಕ ಶಿಕ್ಷಣ (ಪ್ರಶಿಕ್ಷಣ) | ಗಣಿತ ಶಿಕ್ಷಣ |
| 19 | | | | ಬೋಧನೆ | ವಿಜ್ಞಾನ ಶಿಕ್ಷಣ |
| 20 | | | | ಶೈಕ್ಷಣಿಕ ನಿರ್ವಹಣೆ | ದೈಹಿಕ ಮತ್ತು ಆರೋಗ್ಯ ಶಿಕ್ಷಣ |
| 21 | | | | ಅನೌಪಚಾರಿಕ ಶಿಕ್ಷಣ | ನೀತಿ, ಕಲೆ ಮತ್ತು ಸೌಂದರ್ಯ ಶಿಕ್ಷಣ |
| 22 | | | | ವಯಸ್ಕ ಶಿಕ್ಷಣ | ಶೈಕ್ಷಣಿಕ ತಂತ್ರಜ್ಞಾನ |
| 23 | | | | ಪೂರ್ವ ಬಾಲ್ಯ ಶಿಕ್ಷಣ | ಬೋಧನಾ ಮಾರ್ಗೋಪಾಯಗಳು |
| 24 | | | | ಪ್ರಾಥಮಿಕ ಶಿಕ್ಷಣ | ಸೇವಾಪೂರ್ವ ಮತ್ತು ಸೇವಾಂತರ್ಗತ ಅಧ್ಯಾಪಕ ಶಿಕ್ಷಣ |
| 25 | | | | ಔದ್ಯೋಗಿಕ ಮತ್ತು ತಾಂತ್ರಿಕ ಶಿಕ್ಷಣ | ಔದ್ಯೋಗಿಕ ಮತ್ತು ತಾಂತ್ರಿಕ ಶಿಕ್ಷಣ |
| 26 | | | | ವಿಶೇಷ ಶಿಕ್ಷಣ | ವಿಶೇಷ ಶಿಕ್ಷಣ |
| 27 | | | | ಉನ್ನತ ಶಿಕ್ಷಣ | ಮುಕ್ತ ಮತ್ತು ದೂರ ಶಿಕ್ಷಣ |
| 28 | | | | ಮಹಿಳಾ ಶಿಕ್ಷಣ | ವಯಸ್ಕ, ನಿರಂತರ ಮತ್ತು ಅನೌಪಚಾರಿಕ ಶಿಕ್ಷಣ |
| 29 | | | | ಅನನುಕೂಲ ಸ್ಥಿತಿಯಲ್ಲಿರುವವರ ಶಿಕ್ಷಣ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ಶಿಕ್ಷಣ |
| 30 | | | | | ಹೆಣ್ಣುಮಕ್ಕಳ ಮತ್ತು ಮಹಿಳೆಯರ ಶಿಕ್ಷಣ |
| 31 | | | | | ಶಿಕ್ಷಣದಲ್ಲಿ ಜನಸಂಖ್ಯಾ ಅಧ್ಯಯನ ಮತ್ತು ಜನಸಂಖ್ಯಾ ಶಿಕ್ಷಣ |
| 32 | | | | | ತುಲನಾತ್ಮಕ ಶಿಕ್ಷಣ |
| 33 | | | | | ಶಿಕ್ಷಣದಲ್ಲಿ ಪರಿಸರ ವಿಜ್ಞಾನ ಹಾಗೂ ಪರಿಸರ ಅಧ್ಯಯನ |
| 34 | | | | | ಶೈಕ್ಷಣಿಕ ಮಾಪನ ಮತ್ತು ಮೌಲ್ಯಮಾಪನ |
| 35 | | | | | ಶೈಕ್ಷಣಿಕ ಯೋಜನೆ ಮತ್ತು ನೀತಿನಿಯಮಗಳ ಸಂಶೋಧನೆ |
| 36 | | | | | ಶಿಕ್ಷಣದ ಸಂಘಟನೆ, ಆಡಳಿತ ಮತ್ತು ನಿರ್ವಹಣೆ |
| 37 | | | | | ಸಾಧನೆಯ ಸಂಬಂಧಕಗಳು |

Digitised by Bharatavani, CIIL

ಮೊದಲನೆಯದಾಗಿ. ಕಾಲಕಳೆದಂತೆ ಶೈಕ್ಷಣಿಕ ಒಲವುಗಳ ಸಂಘಟನೆಗೆ ಮೂಲವಾದ ಉಪವಿಷಯಗಳ ಸಂಖ್ಯೆ ಹೆಚ್ಚಿರುವುದು ಗಮನಕ್ಕೆ ಬರುವುದಾದರೂ ಈ ಹೆಚ್ಚಳ ಶೈಕ್ಷಣಿಕ ಸಂಶೋಧನೆಯಲ್ಲಿ ಹುಟ್ಟಿಕೊಂಡ ಹೊಸ ಕ್ಷೇತ್ರಗಳ ಕಾರಣದಿಂದಾಗಿ ಎಂದು ಹೇಳಬರುವುದಿಲ್ಲ. ಇಲ್ಲಿಯ ಶೀರ್ಷಿಕೆಗಳನ್ನು ಗಮನಿಸಿದರೆ ಕೆಲವು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ್ದರೆ ಮತ್ತೆ ಕೆಲವು ಶಿಕ್ಷಣ ಕ್ಷೇತ್ರಕ್ಕೆ ನೇರವಾಗಿ ಸಂಬಂಧಪಟ್ಟಿರುವುದಿಲ್ಲ. ಶಿಕ್ಷಣದ ಪರಿಧಿಯನ್ನು ಕುರಿತ ವ್ಯಾಖ್ಯೆ ಇಲ್ಲದಿರುವ ಕಾರಣ ಈ ಎಲ್ಲ ಸಂಶೋಧನೆಗಳೂ ಅವು ಸಮಾಜವಿಜ್ಞಾನ ಕ್ಷೇತ್ರವಾಗಿರಲಿ, ಪ್ರಾಕೃತಿಕ ವಿಜ್ಞಾನವಾಗಿರಲಿ, ಅಪ್ರತ್ಯಕ್ಷವಾಗಿ ಶಿಕ್ಷಣಕ್ಕೆ ಸಂಬಂಧಪಟ್ಟವುಗಳಾಗಿರುತ್ತವೆ. ಹುಟ್ಟಿಕೊಂಡ ಎಲ್ಲ ಹೊಸ ಜ್ಞಾನವೂ ಅದು ಯಾವುದೇ ಕ್ಷೇತ್ರದ್ದಾದೂ ಪಠ್ಯಕ್ರಮ ವಿಷಯದ ಚರ್ಚೆಯಾಗಿರುತ್ತದೆ ಇಲ್ಲವೇ ಅವು ಶಾಲಾವ್ಯವಸ್ಥೆಗಳನ್ನು ಒಳಗೊಂಡ ವ್ಯಕ್ತಿ ಮತ್ತು ಮಾನವ ಸಂಘಟನೆಗಳನ್ನು ಕುರಿತು ಚಿಂತಿಸುವಂತಹವುಗಳಾಗಿರುತ್ತವೆ.

ಎರಡನೆಯದಾಗಿ, ನಿರ್ದಿಷ್ಟ ಕಾರಣಗಳಿಲ್ಲದೆ ಹೊಸ ಕ್ಷೇತ್ರಗಳನ್ನು ಇಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ ಕೆಲವು ವಿಷಯಗಳು ಶಿಕ್ಷಣದ ಮೂಲ ಕ್ಷೇತ್ರಕ್ಕೆ ಸಂಬಂಧಿಸಿದವುಗಳಾಗಿವೆ. ಮತ್ತೆ ಕೆಲವು ಶಿಕ್ಷಣದ ವಿವಿಧ ಹಂತಗಳಿಗೆ ಸಂಬಂಧಿಸಿದವುಗಳಾಗಿವೆ. ಮತ್ತೆ ಕೆಲವು ಪಠ್ಯಕ್ರಮಕ್ಕೆಸಂಬಂಧಿಸಿದ ವಿಷಯಗಳಾಗಿವೆ. ವಿವಿಧ ಅಧ್ಯಾಯಗಳಲ್ಲಿನ ಸಾರಲೇಖಗಳ ಸಂಬಂಧ ಸೂಚಿಸಲು ಪ್ರಕರಣಾಂತ ಸೂಚನೆ (Cross reference)ಯನ್ನು ಬಳಸಿಕೊಳ್ಳಲಾಗಿದೆ. ಆದರೆ ಒಂದಕ್ಕಿಂತ ಹೆಚ್ಚು ಕಡೆಗಳಲ್ಲೂ ಸ್ಥಾನ ಪಡೆಯಬಹುದಾದ ವ್ಯಾಪಕತೆಯುಳ್ಳ ಲಕ್ಷಣ ಕೆಲವು ಅಧ್ಯಯನಗಳಿಗೆ ಇವೆ ಎಂಬುದನ್ನು ಲೇಖಕರು ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ಸರ್ವೇಕ್ಷಣೆಯ ಕೆಲವು ವಿಷಯಗಳು ಪ್ರಾಯೋಗಿಕ ಹಿನ್ನೆಲೆಯಲ್ಲಿ ಭಾರತದಲ್ಲಿನ ಶಿಕ್ಷಣಕ್ಕೆ ನೇರವಾಗಿ ಸಂಬಂಧಿಸಿದವುಗಳಲ್ಲ. ಕೆಲವು ವಿಷಯಗಳನ್ನು (themese) ಕೃತಕವಾಗಿ ಗುರುತಿಸಲಾಗಿದೆ. ಉದಾಹರಣೆಗೆ, ಸಾಮಾಜಿಕ ಪ್ರಕ್ರಿಯೆಗಳು, ಜ್ಞಾನಾತ್ಮಕ ಪ್ರಕ್ರಿಯೆಗಳು, ಬೋಧನಾ ಮಾರ್ಗೋಪಾಯಗಳು ಮತ್ತು ಸಾಧನೆಯ ಸಂಬಂಧಗಳು ಮುಂತಾದ ವಿಷಯಗಳನ್ನು ಐದನೇ ಶಿಕ್ಷಣದ ಸಮೀಕ್ಷೆಯಲ್ಲಿ ಅವುಗಳ ಮೂಲ ವಿಷಯಗಳಾದ ಶಿಕ್ಷಣ ಸಮಾಜಶಾಸ್ತ್ರ, ಶೈಕ್ಷಣಿಕ ಮನೋವಿಜ್ಞಾನ ಮತ್ತು ಅಧ್ಯಾಪಕ ವರ್ತನೆಗಳು ಇವುಗಳಿಗಿಂತ ಬೇರೆಯಾಗಿಯೇ ಪ್ರವೃತ್ತಿಗಳ ವರದಿಯಲ್ಲಿ ಗುರುತಿಸಲಾಗಿದೆ. ಶಿಕ್ಷಣದ ಒಲವುಗಳನ್ನು ಕುರಿತು ಹೇಳುವ ಕೆಲವು ವರದಿಗಳು ಶಿಕ್ಷಣದ ನಿರ್ದಿಷ್ಟ ನೋಟವನ್ನು ಬಿಂಬಿಸುವುದೇ ಇಲ್ಲ ಉದಾಹರಣೆಗೆ, 'ಸಾಮಾಜಿಕ ಪ್ರಕ್ರಿಯೆಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಕೊಡಲಾಗಿರುವ ಕೆಲವು ಅಧ್ಯಯನಗಳು ಒಟ್ಟು ಶೈಕ್ಷಣಿಕ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅಧ್ಯಯನಗಳ ಸಂಘಟನೆಗೆ ಒಂದು ರೀತಿಯ ರಚನೆಯನ್ನು ಒದಗಿಸುತ್ತದೆಯೇ ವಿನಹ (ಎನ್‌ಸಿಇಆರ್‌ಟಿ 1997–ಮೋಹನ್) ನಿರ್ದಿಷ್ಟ ಶಿಸ್ತಿನ ಹಿನ್ನೆಲೆಯಲ್ಲಿ ಶಿಕ್ಷಣದ ಪರಿಕಲ್ಪನೆಯಲ್ಲಿ ಅಲ್ಲ.

**ಶೈಕ್ಷಣಿಕ ಸಂಶೋಧಕನ ಚಿತ್ರಣ:**

ಇಲ್ಲಿಯವರೆಗೆ ಪ್ರಕಟವಾಗಿರುವ ಶೈಕ್ಷಣಿಕ ಸಂಶೋಧನೆಗಳ ಐದು ಸಂಪುಟಗಳನ್ನು ಗಮನಿಸಿದರೆ, ಯಾರನ್ನು ಶೈಕ್ಷಣಿಕ ಸಂಶೋಧಕರು ಎಂದು ಕರೆಯಬಹುದು, ಯಾರನ್ನು ಹಾಗೆ ಕರೆಯಲಾಗದು ಎಂಬುದರ ಬಗ್ಗೆ ಗೊಂದಲವಾಗುತ್ತದೆ. ಏಕೆಂದರೆ ಈ ಸರ್ವೇಕ್ಷಣೆಗಳಲ್ಲಿ ವರದಿಯಾಗಿರುವ ಬಹುಪಾಲು ಅಧ್ಯಯನಗಳ ಅಡಿಯಲ್ಲಿ ನಡೆದಿರುವ ಸಂಶೋಧನೆಗಳು ಪದವಿ ಪಡೆಯುವ ಹಿನ್ನೆಲೆಯಲ್ಲಿ ಮಾಡಿದ ಅಧ್ಯಯನಗಳಾಗಿವೆ. ಈ ಸಂಶೋಧನೆಗಳನ್ನು ಕೈಗೊಂಡ ಸಂಶೋಧಕರು ತಮ್ಮನ್ನು ತಾವು ಶೈಕ್ಷಣಿಕ ಸಂಶೋಧಕರೆಂದು ಕರೆದುಕೊಳ್ಳಲಾರರು. ಏಕೆಂದರೆ ಅಂತಹ ಅಧ್ಯಯನಗಳಿಗೆ ಸಮಾಜವಿಜ್ಞಾನದ ಶಿಸ್ತುಗಳ ಅಡಿಯಲ್ಲೂ ಪದವಿ ನೀಡಲಾಗುತ್ತದೆ. ಸಂಕೀರ್ಣವಾದ ಮಾನದಂಡಗಳ ಆಧಾರದ ಮೇಲೆ ಅವು ಶಿಕ್ಷಣಕ್ಕೆ ಸಮರ್ಪಕವೆಂದು ಗುರುತಿಸಿರುವುದರಿಂದ ಅವು ಶೈಕ್ಷಣಿಕ ಸಂಶೋಧನೆಗಳಾಗಿವೆ. ಇಂತಹ ಅಧ್ಯಯನಗಳನ್ನು ಹೊರತುಪಡಿಸಿ, ವಿವಿಧ ವಿಶ್ವವಿದ್ಯಾನಿಲಯಗಳ ಶಿಕ್ಷಣ ವಿಭಾಗದಲ್ಲಿ, ಕೇಂದ್ರಗಳಲ್ಲಿ ಶಾಲೆಗಳಲ್ಲಿ ಕೈಗೊಂಡ ಅಧ್ಯಯನಗಳನ್ನು ಗಮನಿಸಬೇಕು. ಭಾರತದ ಬಹಳಷ್ಟು ವಿಶ್ವವಿದ್ಯಾನಿಲಯಗಳಲ್ಲಿ, ಶಿಕ್ಷಣದಲ್ಲಿ ಡಾಕ್ಟರೇಟ್ ಪದವಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುತ್ತಾನೆ. ಸ್ನಾತಕೋತ್ತರ ಪದವಿ ಪಡೆಯಲು ಶಿಕ್ಷಣದಲ್ಲಿ ಸ್ನಾತಕ ಪದವಿ ಪಡೆದಿರಬೇಕು. ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಸೆಕೆಂಡರಿ ಹಂತದ ಶಿಕ್ಷಕರನ್ನು ತಯಾರಿಸುವ ವೃತ್ತಿಪರ ಕಾರ್ಯಕ್ರಮವಾಗಿ ಶಿಕ್ಷಣ ಸ್ನಾತಕ ಪದವಿ ಕಾರ್ಯಕ್ರಮವನ್ನು ಪರಿಗಣಿಸಲಾಗುತ್ತದೆ. ಸ್ನಾತಕೋತ್ತರ ಪದವಿಯನ್ನು ಸೆಕೆಂಡರಿ ಶಿಕ್ಷಕರನ್ನು ತರಬೇತಿಗೊಳಿಸುವ ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ ಎಂದು ಪರಿಗಣಿಸಲಾಗುತ್ತದೆ. ಇದರ ನಂತರ ವಿದ್ಯಾರ್ಥಿ ಪ್ರವೇಶಿಸುವ ಡಾಕ್ಟರೇಟ್ ಹಂತದಲ್ಲಿ ಅಪೇಕ್ಷೆಯು ಬದಲಾಗಿ ಶಿಕ್ಷಣವನ್ನು, ಅಮೂರ್ತ ಪದಗಳ ರೂಪದಲ್ಲಿ ಶೈಕ್ಷಣಿಕ ಪ್ರಕರಣ ಹಾಗೂ ವಿವಾದಾಂಶಗಳನ್ನು ನೋಡುವ ಒಂದು ಶೈಕ್ಷಣಿಕ ಶಿಸ್ತಾಗಿ ನೋಡಲಾಗುತ್ತದೆ. ಆದ್ದರಿಂದ ಶೈಕ್ಷಣಿಕ ಸಂಶೋಧನೆಯನ್ನು ಕೈಗೊಳ್ಳುವ ವಿದ್ಯಾರ್ಥಿ ಈವರೆಗಿನ ವೃತಿಪರ ನೋಟವನ್ನು ಬದಲಿಸಿ ಶೈಕ್ಷಣಿಕ ನೋಟವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಕೆಲವು ಕೇಂದ್ರೀಯ ವಿಶ್ವವಿದ್ಯಾನಿಲಯಗಳನ್ನು ಬಿಟ್ಟರೆ, ಪಿಹೆಚ್‌ಡಿ ಕಾರ್ಯಕ್ರಮವು ಸಂಪೂರ್ಣವಾಗಿ ಆಡಳಿತಾತ್ಮಕ ಸ್ವರೂಪದ್ದು. ವಿಶ್ವವಿದ್ಯಾನಿಲಯ ಕಾರ್ಯಕ್ರಮಗಳ ಶೈಕ್ಷಣಿಕ ಸತ್ವ ಇಲ್ಲಿ ಕಾಣುವುದಿಲ್ಲ. ಒಂದು ಹಂತದಲ್ಲಿ ಸೆಕೆಂಡರಿ ಹಂತವನ್ನು ಕುರಿತು ಸೂಕ್ಷ್ಮದರ್ಶಕಾತ್ಮಕವಾದ ಪರಿಕಲ್ಪನೆಯಲ್ಲಿ ಬೋಧನೆ ಪಡೆದು ಮತ್ತೊಂದು ಹಂತದಲ್ಲಿ ದೂರದರ್ಶಕಾತ್ಮಕವಾದ ಪರಿಕಲ್ಪನೆಯಲ್ಲಿ ಕೆಲಸಮಾಡುವ ಸಂಶೋಧಕರಿಂದ ಹೆಚ್ಚಿನ ಗುಣಾತ್ಮಕವಾದ ಸಂಶೋಧನೆಯನ್ನು ಅಪೇಕ್ಷಿಸುವುದು ಸಾಧ್ಯವಿಲ್ಲ. ಮೂಲಶಿಸ್ತುಗಳ ಸಂಶೋಧನೆಯಲ್ಲಿ ಸಂಶೋಧಕರು ಶಿಕ್ಷಣದ ಪ್ರಾಯೋಗಿಕ ಪ್ರಪಂಚಕ್ಕೆ ತೆರೆದುಕೊಂಡಿರುವುದಿಲ್ಲ. ಅವರಿಗೆ

Digitised by Bharatavani, CIIL

ಶಿಕ್ಷಣ ಎಂದರೆ ಒಂದು ಅಧ್ಯಯನದ ವಿಷಯವಷ್ಟೇ ಈ ಶೈಕ್ಷಣಿಕ ಜ್ಞಾನವನ್ನು ಕಟ್ಟುವ ಅವರ ಉದ್ದೇಶವೆಂದರೆ ಮೂಲಶಿಸ್ತಿಗೆ ಹೊಸಜ್ಞಾನವನ್ನು ಸಮನ್ವಯಿಸಿ ಅದನ್ನು ಬೆಳೆಸುವುದಷ್ಟೆ. ಅವು ಪ್ರಸ್ತುತ ಸನ್ನಿವೇಶದಲ್ಲಿ ಭಾರತದ ಯಾವುದೇ ಶೈಕ್ಷಣಿಕ ಸಮಸ್ಯೆಯನ್ನು ಉದ್ದೇಶಿಸಿರಬೇಕಾಗಿಲ್ಲ.

**ಶೈಕ್ಷಣಿಕ ಸಂಶೋಧನಾ ಅಧ್ಯಯನದ ವಿಷಯದ ಆಯ್ಕೆಯ ಪ್ರಕ್ರಿಯೆ:**

ಶೈಕ್ಷಣಿಕ ಸಂಶೋಧನೆಯ ನಾಲ್ಕನೇ ಸರ್ವೇಕ್ಷಣೆಯಲ್ಲಿ ವಿವರಿಸಿರುವಂತೆ (ಬೂಚ್‌ನಲ್ಲಿ ಬೂಚ್ 1991) ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗಗಳು ಬರೋಡದ ಶಿಕ್ಷಣದಲ್ಲಿ ಮುಂದುವರಿದ ಅಧ್ಯಯನ ವಿಭಾಗದ ಮಾದರಿಯಲ್ಲಿ ಅಲ್ಪಕಾಲಿಕ ಅಥವಾ ದೀರ್ಘಕಾಲಿಕ ಸಂಶೋಧನಾ ಪ್ರಣಾಳಿಕೆಗಳಿಗೆ ಬದ್ಧವಾಗಿ ಕೆಲಸ ಮಾಡುವುದೇ ಇಲ್ಲ. ಪ್ರತಿ ಸಂಶೋಧನಾ ವಿದ್ಯಾರ್ಥಿಯು ಆರಿಸಿಕೊಳ್ಳುವ ವಿಷಯ ಅವರವರಿಗೆ ಸೂಕ್ತವೆನಿಸುವ ವಿಚಾರಗಳ ಪರಿಗಣನೆಯ ಮೇಲೆ ಆಧರಿಸಿತವಾಗಿರುತ್ತದೆ. ಸಾರ್ವಜನಿಕ ಆರೋಗ್ಯ ಅಥವಾ ಸಾಮಾಜಿಕ ಕಾರ್ಯದ ರೀತಿಯಲ್ಲಿ ಶಿಕ್ಷಣವನ್ನು ಒಂದು ಒಕ್ಕಟ್ಟಾದ ಅಂತರ್ ಶಿಸ್ತೀಯ ಸಮಾಜವಿಜ್ಞಾನವಾಗಿ ಬೆಳೆಸಲು ಈ ಉಪಕ್ರಮ ಪೂರಕವಾಗಿರುವುದಿಲ್ಲ. ಪ್ರಾಧ್ಯಾಪಕರು ಕೂಡ ವಿಶಿಷ್ಟವಾದ ಪ್ರಾಜೆಕ್ಟ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಅಥವಾ ಶಿಕ್ಷಣ ವಿಶಿಷ್ಟವಾದ ಸಮಸ್ಯೆಯನ್ನು ವೈಶಿಷ್ಟ್ಯ ಪೂರ್ಣವಾದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು, ಇವುಗಳ ಮೂಲಕ ಶೈಕ್ಷಣಿಕ ಸಂಶೋಧನೆಗೆ ವಿಶೇಷ ಮಹತ್ವ ಕೊಡುವ ಕೆಲಸಗಳನ್ನು ಮಾಡುವುದೇ ಇಲ್ಲ. ಈ ನಿಟ್ಟಿನಲ್ಲಿ ಬೂಚ್ ಅವರು (1991) ಒಂದು ವಿಶ್ವವಿದ್ಯಾನಿಲಯದ ಸಂಶೋಧನಾವಿಲಾಸಿ ಪ್ರಾಧ್ಯಾಪಕನ ಸಂಶೋಧನಾ ರೀತಿಯನ್ನು ಉದಾಹರಿಸುತ್ತಾರೆ. ಆತ ಭಗವದ್ಗೀತೆಯ ತತ್ವಶಾಸ್ತ್ರೀಯ ಅಧ್ಯಯನದಿಂಧ ಮೊದಲುಮಾಡಿ, ತುಲನಾತ್ಮಕ ಶಿಕ್ಷಣದ ಸಂಶೋಧನೆಗೆ ಜಿಗಿದ. ಮುಂದೆ ಶೈಕ್ಷಣಿಕ ಸಮಾಜಶಾಸ್ತ್ರ, ಬುಡಕಟ್ಟು ಶಿಕ್ಷಣ, ಅಧ್ಯಾಪಕ ವರ್ತನೆ, ವೃತ್ತಿಪರ ಶಿಕ್ಷಣ, ಮೊದಲಾದ ಕ್ಷೇತ್ರಗಳಲ್ಲಿ ಕೆಲಸಮಾಡುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾ ಸಾಗಿದ. ಇಂತಹ ಸನ್ನಿವೇಶಗಳು ಭಾರತದ ಬಹಳಷ್ಟು ವಿಶ್ವವಿದ್ಯಾನಿಲಯಗಳ ಶಿಕ್ಷಣ ಇಲಾಖೆಗಳಲ್ಲಿ ಸಾಮಾನ್ಯ. ಒಟ್ಟಿನಲ್ಲಿ ಪ್ರಸ್ತುತ ಶೈಕ್ಷಣಿಕ ಸಂಶೋಧನೆಯಲ್ಲಿ ಸಮಸ್ಯೆಯ ಆಯ್ಕೆಯು ಕೆಳಗೆ ಸೂಚಿಸಿರುವ ಎಲ್ಲ ಅಥವಾ ಇವುಗಳಲ್ಲಿ ಕೆಲವು ರೀತಿಯ ಪ್ರಭಾವಗಳನ್ನಾದರೂ ಒಳಗೊಂಡಿರುತ್ತದೆ.

ಮೊದಲಿಗೆ ಪಿಹೆಚ್‌ಡಿ ವಿದ್ಯಾರ್ಥಿಗಳು ಅವರ ಸಂಶೋಧನಾ ಅಧ್ಯಯನದ ಸಮಸ್ಯೆಯನ್ನು ಅವರ ಮಾರ್ಗದರ್ಶಕರೊಂದಿಗೆ ಅಥವಾ ಮೇಲ್ವಿಚಾರಕರೊಂದಿಗೆ ಚರ್ಚಿಸಿ ನಿರ್ಧರಿಸುತ್ತಾರೆ. ಈ ಮಾರ್ಗದರ್ಶಕರು ಶೈಕ್ಷಣಿಕ ವಿದ್ವಾಂಸರಾಗಿದ್ದು ಭಾರತದ ಅಥವಾ ಹೊರದೇಶದ ವಿಶ್ವವಿದ್ಯಾನಿಲಯಗಳ ಅವರ ವೃತ್ತಿಬಾಂಧವರ ಜೊತೆಗಿನ ಚರ್ಚೆಯಲ್ಲಿ ಪ್ರಮುಖವಾಗಿ ಕಾಣುವ ವಿಷಯಗಳಿಂದ ಪ್ರಭಾವಿತರಾಗಿರುತ್ತಾರೆ.

ಎರಡನೆಯದಾಗಿ, ಶಿಕ್ಷಣದ ಪದವಿ ಕಾಲೇಜುಗಳು ಮೂಲತಃ ತರಬೇತಿ ಸಂಸ್ಥೆಗಳಾಗಿದ್ದು ಸೆಕೆಂಡರಿ ಶಾಲೆಗಳಿಗೆ ಅಧ್ಯಾಪಕರನ್ನು ತಯಾರಿಸುವ ಜವಾಬ್ದಾರಿ ಹೊಂದಿರುತ್ತವೆ. ಬಹಳಷ್ಟು ಸಮರ್ಥ ಸಂಶೋಧಕರು ಪದವಿ ಕಾಲೇಜುಗಳಲ್ಲಿ ತರಬೇತಿ ಪಡೆದವರಾಗಿದ್ದು ಸ್ನಾತಕೋತ್ತರ ಶಿಕ್ಷಣದಲ್ಲಿ ಮುಂದುವರೆದವರು. ಸ್ನಾತಕೋತ್ತರ ಶಿಕ್ಷಣದ ಬಹುಪಾಲು ಶಿಕ್ಷಕರು ಇದೇ ಹಿನ್ನೆಲೆಯವರು. ಹೀಗಾಗಿ ಇವರ ಪ್ರಭಾವದಿಂದ ಸಂಶೋಧನಾ ವಿದ್ಯಾರ್ಥಿಗಳು ವಿದ್ಯಾರ್ಥಿಗಳು ಸೆಕೆಂಡರಿ ಶಿಕ್ಷಣಕ್ಕೆ ಸಂಬಂಧಿಸಿದ ಸಂಶೋಧನೆಯ ಕಡೆಗೆ ವಾಲುವುದೇ ಹೆಚ್ಚು.

ಮೂರನೆಯದಾಗಿ, ಸೆಕೆಂಡರಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸುಭಗತೆಯ ಕಾರಣವಿದೆ. ಇಲ್ಲಿ ಏಕೆಂದರೆ ದತ್ತಾಂಶ ಸಂಗ್ರಹಣೆಗೆ ಸ್ವನಿರ್ವಹಣಾತ್ಮಕವಾದ ಸಾಧನಗಳನ್ನು ಪರೀಕ್ಷಣಗಳನ್ನು ಬಳಸಬಹುದಾಗಿದೆ.

ಕೊನೆಯದಾಗಿ, ಶಿಕ್ಷಣ ಕ್ಷೇತ್ರವನ್ನು ವೃತ್ತಿ ಎಂಬುದಕ್ಕಿಂತ ಇದೊಂದು ಶೈಕ್ಷಣಿಕ ಶಿಸ್ತು ಎಂದು ಪರಿಗಣಿಸಲಾಗಿದೆ. ಹೀಗಾಗಿ ಸೃಷ್ಟಿಸಲ್ಪಟ್ಟ ಜ್ಞಾನವು ನಿರ್ದಿಷ್ಟ ಕಾಲದೇಶಗಳ ಸಂದರ್ಭಗಳಲ್ಲಿ ಅನ್ವಯದ ಸಮರ್ಪಕತೆಯನ್ನು ಹೊಂದಿಲ್ಲದಿದ್ದರೂ ಅದನ್ನು ಮುಂದುವರಿಸುವಂತಾಗಿದೆ.

**ಶೈಕ್ಷಣಿಕ ಸಂಶೋಧನೆಯ ಭವಿಷ್ಯ ಸ್ಥಿತಿ:**

ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಯನ್ನು ಸಶಕ್ತಗೊಳಿಸಲು ಅನೇಕ ತಜ್ಞರು ಈ ಹಿಂದೆ ಅನೇಕ ಸಲಹೆಗಳನ್ನು ನೀಡಿದ್ದಾರೆ (ಅದವಾಲ್ 1968, ಬೂಚ್ ಮತ್ತು ಗೋವಿಂದ 1987; ಬೂಚ್ 1991). ಆದರೆ ಸನ್ನಿವೇಶ ಬದಲಾಗಿಲ್ಲ. ಏಕೆಂದರೆ ಅವಶ್ಯಕತೆ ಇರುವ ಕ್ಷೇತ್ರದಲ್ಲಿ ಸಂಬಂಧಪಟ್ಟವರಿಗೆ ಅಪೇಕ್ಷೆ ಅಥವಾ ಪ್ರಚೋದನೆ ಇಲ್ಲ. ಆದಾಗ್ಯೂ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶೀಘ್ರಗತಿಯಲ್ಲಿ ಬದಲಾವಣೆಗಳಾಗುತ್ತಿವೆ. ಇದರಿಂದಾಗಿ ಮುಂಬರುವ ದಶಕಗಳಲ್ಲಿ ವ್ಯಕ್ತಿ ಮತ್ತು ರಾಷ್ಟ್ರಗಳ ಉಳಿವಿಗಾಗಿ ಅಗತ್ಯವಾದ ಗುಣಾತ್ಮಕ ಶಿಕ್ಷಣಕ್ಕೆ ಪುನಶ್ಚೇತನವುಂಟಾಗಲಿದೆ. ಗುಣಾತ್ಮಕ ಶಿಕ್ಷಣವು ಹೆಚ್ಚು ಸಮಸ್ಯಾ ಪ್ರಧಾನವಾದ ಅನ್ವಯಿಕ ವಿಮರ್ಶೆಗೆ ಕರೆಕೊಡುತ್ತದೆ. ಇದು ನ್ಯಾಯಬದ್ಧವಾಗಿ ಇತರ ಸಮಾಜವಿಜ್ಞಾನೀಯ ಶಿಸ್ತುಗಳ ಅಡಿಯಲ್ಲಿ ಸಾಗಬೇಕಾದ ಸಂಶೋಧನೆಯ ಅನುಕರಣೆಯನ್ನು ತಪ್ಪಿಸುವುದಲ್ಲದೆ ಸಂಬಂಧಿತ ಶಿಸ್ತುಗಳ ತಾತ್ವಿಕ ಪರಿಕಲ್ಪನಾತ್ಮಕ ಬೆಳವಣಿಗೆಯನ್ನು ಶಿಕ್ಷಣಕ್ಕೆ ಸಂಬಂಧಿಸಿದ ಸಂಶೋಧನೆಯಲ್ಲಿ ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಈ ದಿಕ್ಕಿನಲ್ಲಿ ಶೈಕ್ಷಣಿಕ ಸಂಶೋಧನೆಗೆ ಬಹುಕವಲಿನ ಉಪಕ್ರಮದ ಅಗತ್ಯವಿದೆ. ಈ ಉಪಕ್ರಮವು ಅನೇಕ ಅಂಶಗಳನ್ನು ಒಳಗೊಳ್ಳುತ್ತದೆ.

ಶಿಕ್ಷಣದ ವ್ಯಾಪ್ತಿ ಅಥವಾ ಎಲ್ಲೆಯನ್ನು ಗುರುತಿಸುವ ಉದ್ದೇಶದಿಂದ ಚರ್ಚೆಯನ್ನು ಹುಟ್ಟುಹಾಕಲು ರಾಷ್ಟ್ರಮಟ್ಟದ ವೇದಿಕೆಗಳ ರಚನೆಯಾಗಬೇಕು. ಎಂಬತ್ತನೇ ದಶಕದಲ್ಲಿ ಬರೋಡ ವಿಶ್ವವಿದ್ಯಾನಿಲಯದ ಶಿಕ್ಷಣದ ಮುಂದುವರಿದ ಅಧ್ಯಯನ

Digitised by Bharatavani, CIIL

ಕೇಂದ್ರವು ಶೈಕ್ಷಣಿಕ ಸಂಶೋಧನೆಯನ್ನು ಕುರಿತ ಒಂದು ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಅಂತಹ ಪ್ರಯತ್ನಗಳು ಮತ್ತೂ ವ್ಯಾಪಕವಾಗಿ ವಿಜ್ಞಾನ ಕಾಂಗ್ರೆಸ್ ಅಥವಾ ಸಮಾಜವಿಜ್ಞಾನ ಕಾಂಗ್ರೆಸ್‌ಗಳ ಮಾದರಿಯಲ್ಲಿ ನಡೆಯಬೇಕು. ಇದರಿಂದಾಗಿ ವಿಶ್ವವಿದ್ಯಾನಿಲಯಗಳಿಂದ ಹಾಗೂ ಶಿಕ್ಷಣಸಂಸ್ಥೆಗಳಿಂದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ವ್ಯವಸ್ಥಿತವಾಗಿ ಒಂದೆಡೆ ಒಟ್ಟಾಗಬಹುದು. ವೃತ್ತಿಬಾಂಧವರೊಡನೆ ಚಿಂತನ ಮಂಥನ ನಡೆಸಿ ವೃತ್ತಿಪರ ಐಕ್ಯಮತ್ಯದಿಂದ ಸಂಶೋಧನೆಯಲ್ಲಿ ಹೆಚ್ಚು ಪ್ರಾವೀಣ್ಯ ಗಳಿಸಬಹುದು. ಇಂತಹ ಪ್ರಯತ್ನಗಳು ವೃತ್ತಿಪರರ ಬಾಂಧವ್ಯದಿಂದಾಗಿಯೇ ಮೂಡಿಬರಬೇಕು. ಹಾಗೂ ಅವರ ಸ್ವಾಯತ್ತತೆ ಮತ್ತು ವೃತ್ತಿಪರ ಸ್ವಾತಂತ್ರ್ಯ ಉಳಿಯುವಂತಾಗಬೇಕು. ಅಂತಹ ವೇದಿಕೆಗಳನ್ನು ಹುಟ್ಟುಹಾಕಲು ಶೈಕ್ಷಣಿಕ ಸಂಶೋಧನೆಯನ್ನು ಮುನ್ನಡೆಸುವ ಎನ್‌ಸಿಇಆರ್‌ಟಿ, ಐಸಿಎಸ್‌ಎಸ್‌ಆರ್ ಮುಂತಾದ ರಾಷ್ಟ್ರೀಯ ಸಂಸ್ಥೆಗಳು ನಾಂದಿ ಹಾಡಬೇಕು.

ಪದವಿ ಉದ್ದೇಶಿತ ಸಂಶೋಧನೆ ಮತ್ತು ಸಂಶೋಧನಾ ಪ್ರಾಜೆಕ್ಟ್‌ಗಳನ್ನು ಬೆಳೆಸುವ ಹೆಚ್ಚಿನ ಸಂಖ್ಯೆಯ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗಗಳು ಮತ್ತು ಸಂಶೋಧನಾ ಸಂಸ್ಥೆಗಳ ಕಾರಣದಿಂದಾಗಿ ಶೈಕ್ಷಣಿಕ ಸಂಶೋಧನೆ ಪರಿಮಾಣಾತ್ಮಕವಾಗಿ ಅಗಾಧವಾಗಿ ಬೆಳೆದಿದೆ. ಇದೀಗ ಗ್ರಂಥಾಲಯಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಮತ್ತು ಮುಂದೆ ಶೈಕ್ಷಣಿಕ ಸಂಶೋಧನೆಗೆ ಸೇರಲಿರುವ ವರದಿಗಳನ್ನು ಮತ್ತು ದಾಖಲೆಗಳನ್ನು ಒಂದೆಡೆ ಸಂಗ್ರಹಿಸಲು ಸಾಂಸ್ಥಿಕವಾದ ಸಿದ್ಧತೆಗಳು ನಡೆಯಬೇಕು. ಇಂತಹ ಸಂಗ್ರಹಗಳನ್ನು ಒಮ್ಮೆ ಸಾಧ್ಯವಾಗಿಸಿದರೆ, ಸಂಶೋಧನೆಯ ಫಲಿತಾಂಶಗಳನ್ನು ಒಟ್ಟುಗೂಡಿಸಿ ಅವನ್ನು ಶಿಕ್ಷಣದ ಒಟ್ಟು ಜ್ಞಾನದ ಸಂಘಟಿತ ಭಾಗವಾಗಿ ಮಾಡಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಸದ್ಯದ ಪ್ರಯತ್ನಗಳು, ಈ ಲೇಖನವನ್ನೂ ಒಳಗೊಂಡಂತೆ, ಸಂಶೋಧನಾ ಸಾರಲೇಖಗಳ ರೂಪದಲ್ಲಿ ಉಪಲಬ್ಧವಿರುವ ಮಿತವಾದ ಮಾಹಿತಿಯ ಮೇಲೆ ಆಧರಿತವಾಗಿರುತ್ತವೆ. ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಗಳನ್ನು ಉತ್ತೇಜಿಸಿರುವ ಜವಾಬ್ದಾರಿಯನ್ನು ಹೊಂದಿರುವ ರಾಷ್ಟ್ರೀಯ ಅಪೆಕ್ಸ್ ಸಂಸ್ಥೆಗಳ ಜೊತೆಗೆ ಯುಜಿಸಿ ಮತ್ತು ಇತರ ರಾಷ್ಟ್ರಮಟ್ಟದ ಸೂಕ್ತ ಸಂಸ್ಥೆಗಳು ಸಂಯೋಜಿತವಾಗಿ ಇಂತಹ ಸಂಗ್ರಹಗಳನ್ನು ಸಂಘಟಿಸಬಹುದು.

ದೇಶದ ವಿವಿಧ ಭಾಗಗಳಲ್ಲಿ ಇಂದು ಸಂಶೋಧನೆಯ ಪ್ರಸಾರ ಉತ್ತಮವಾಗುತ್ತಾ ಬಂದಿದೆ. ಇದು ಸಂಶೋಧನೆಯಲ್ಲಿ ಕಾಣುವ ಒಲವುಗಳನ್ನು ಕುರಿತ ದಾಖಲೆಗಳು ಮತ್ತು ಸಂಶೋಧನಾ ಸಾರಲೇಖಗಳ ಪ್ರಕಟನೆಯ ಮೂಲಕ ಸಾಧ್ಯವಾಗುತ್ತಿದೆ. ಆದಾಗ್ಯೂ, ಉತ್ತಮ ಯೋಜನೆ ಮತ್ತು ಪ್ರಾಯೋಗಿಕ ಉದ್ದೇಶಗಳಿಗೆ ಬೇಕಾದ ಜ್ಞಾನ ಇಂದೂ ಲಭ್ಯವಿಲ್ಲ. ಈಗ ಪ್ರಕಟವಾಗುತ್ತಿರುವ ಶೈಕ್ಷಣಿಕ ಹಾಗೂ ಅತಿ ಸಂಕೀರ್ಣ ಸ್ವರೂಪದ ಶೈಕ್ಷಣಿಕ ಸಂಶೋಧೆಗಳು ಈ ನ್ಯೂನತೆಗೆ ಭಾಗಶಃ ಕಾರಣವಾದರೆ, ಶಾಲೆಗಳಲ್ಲಿ ಅಸ್ತಿತ್ವದಲ್ಲಿರುವ ಪರೀಕ್ಷಾ ವ್ಯವಸ್ಥೆಗಳಿಂದ ಆಜ್ಞಾಪಿಸಲ್ಪಟ್ಟ ಪ್ರಮಾಣೀಕೃತ ಶೈಕ್ಷಣಿಕ ಪ್ರಕ್ರಿಯೆಗಳು ಮತ್ತೊಂದು ಕಾರಣ. ಈ ಸಂದರ್ಭದಲ್ಲಿ ಶಿಕ್ಷಣವೃತ್ತಿಯಲ್ಲಿ ವಿಶೇಷ ಸವಾಲುಗಳನ್ನು ಎದುರಿಸುವವರಿಂದ ಹೊಸ ಜ್ಞಾನವನ್ನು ರೂಪಿಸುವ ಒತ್ತಾಯ, ಬೇಡಿಕೆ, ಆಪೇಕ್ಷೆಗಳು ಮೂಡಿ ಬರಬೇಕು. ಯಾವ ಸಾಮಾಜಿಕ ಸನ್ನಿವೇಶದಲ್ಲಿ ಶೈಕ್ಷಣಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅತಿ ಹೆಚ್ಚಿನ ಸ್ವಾಯತ್ತತೆಯನ್ನು ಶಾಲೆಗಳು ಪಡೆದಿವೆಯೋ ಮತ್ತು ಈ ಶಾಲೆಗಳು ಹೊರಹರಿವಿಗೆ ಬದ್ಧವಾಗಿವೆಯೇ ಅಂತಹ ಸನ್ನಿವೇಶದಲ್ಲಿ ಕೇವಲ ಸಾಮಾಜಿಕ ಸನ್ನಿವೇಶದಿಂದ ಪಡೆದ ಜ್ಞಾನವು ನಮ್ಮ ಸಂಶೋಧಕರಿಗೆ ಮಾಹಿತಿ ಕೊಡುವುದಲ್ಲದೆ ಶಿಕ್ಷಣ ತರಬೇತಿ ಕಾರ್ಯಕ್ರಮಕ್ಕೆ ಆಧಾರವಾಗಿರುತ್ತವೆ ಎಂಬುದು ವ್ಯಂಗ್ಯವಾದ ಸಂಗತಿಯಾಗಿದೆ. ಆದರೆ ಭಾರತದಲ್ಲಿ ಶಿಕ್ಷಣದ ಪ್ರಾಯೋಗಿಕ ಪ್ರಪಂಚವು ಆಧ್ಯಾಪಕರನ್ನು ವೇತನಕ್ಕಾಗಿ ದುಡಿಯುವ ಕಾರ್ಮಿಕರೆಂದೂ ಅವರು ಈಗಾಗಲೇ ನಿಗದಿಪಡಿಸಿದ ಸೂಚನೆಗೆ ಅನುಗುಣವಾಗಿ ಕೆಲಸಮಾಡಬೇಕೆಂದೂ ನಿರೀಕ್ಷಿಸುತ್ತದೆ. ಭಾರತೀಯ ಸನ್ನಿವೇಶಗಳಲ್ಲಿ ಆಧ್ಯಾಪಕರಿಗಾಗಲೀ ಶಾಲೆಗಳಿಗಾಗಲೀ ಸ್ವಾಯತ್ತತೆ ಎಂಬುದಿಲ್ಲ. ಆದಾಗ್ಯೂ, ಎಲ್ಲ ರಂಗಗಳಲ್ಲಿನ ಇತ್ತೀಚಿನ ಪುನರಚನೆಗಳು, ಶಿಕ್ಷಣವನ್ನೂ ಒಳಗೊಂಡಂತೆ, ಉತ್ತಮ ಪರಿಣಾಮವನ್ನು ಪ್ರದರ್ಶಿಸಲು ಶಾಲೆಗಳ ಮೇಲೆ ಒತ್ತಾಯ ತರಬಹುದು. ಸೂಕ್ತ ನೀತಿಸಂಹಿತೆಯನ್ನು ಘೋಷಿಸಿಕೊಂಡು ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಉದ್ದೇಶದ ಹಿನ್ನೆಲೆಯಲ್ಲಿ ಶಿಕ್ಷಣದ ಒಂದು ಸಂಪನ್ಮೂಲ ಜಾಲವನ್ನು ಬೆಳೆಯಿಸಲು ಪ್ರಯತ್ನಗಳು ಈ ನಿಟ್ಟಿನಲ್ಲಿ ಅಗತ್ಯ. ಜೊತೆಗೆ ಭಾರತದಲ್ಲಿ ನಡೆಯುವ ಸಂಶೋಧನೆಗಳ ಆಧಾರದ ಮೇಲೆ ಸಮರ್ಪಕ ಹಾಗೂ ಪ್ರಮುಖ ವಿಷಯಗಳನ್ನೊಳಗೊಂಡ ಸುವ್ಯವಸ್ಥಿತ ಸಾರಸಂಗ್ರಹಗಳು ಸಂಬಂಧಪಟ್ಟವರೆಲ್ಲರಿಗೂ ದೊರೆಯುವಂತಾಗಬೇಕು.

ಕೊನೆಯದಾಗಿ, ಭಾರತದಲ್ಲಿ ಶಿಕ್ಷಣದ ಒಟ್ಟು ಬಂಡವಾಳಕ್ಕೆ ಹೋಲಿಸಿದರೆ ಶೈಕ್ಷಣಿಕ ಸಂಶೋಧನೆಗೆ ಹೂಡುವ ಬಂಡವಾಳ ನಗಣ್ಯವೆಂದೇ ಹೇಳಬಹುದು. ಐದೂ ಸರ್ವೇಕ್ಷಣೆಗಳಲ್ಲಿ ವರದಿಯಾಗಿರುವ ಅಧ್ಯಯನಗಳು ಬಹಳಮಟ್ಟಿಗೆ ಪದವಿ ಪಡೆಯಲು ವ್ಯಕ್ತಿಗಳು ಸಲ್ಲಿಸಿದ ಅಧ್ಯಯನಗಳು. ಸಾರ್ವಜನಿಕ ಸಂಸ್ಥೆಗಳಿಂದ, ಆರ್ಥಿಕ ಸಹಾಯಪಡೆದು ಮಾಡಿದ ದೊಡ್ಡಗಾತ್ರದ ಅಧ್ಯಯನಗಳು ಅತಿ ಕಡಿಮೆ. ಸಂಶೋಧನೆಯನ್ನು ಆಧರಿಸಿದ ಜ್ಞಾನಕ್ಕೆ ಬೇಡಿಕೆ ಕಡಿಮೆ ಎಂಬುದನ್ನು ಈ ಪರಿಸ್ಥಿತಿ ತೋರಿಸಿಕೊಡುತ್ತದೆ. ಇದರ ಅಗತ್ಯ ಅನುಭವಕ್ಕೆ ಬಂದಾಗ ಮಾತ್ರ ಶೈಕ್ಷಣಿಕ ಸಂಶೋಧನೆಗೆ ಬೇಡಿಕೆ ಬರುತ್ತದೆ. ಈಗಾಗಲೇ ಹೇಳಿದಂತೆ, ಶಿಕ್ಷಣ ಎಂಬುದು, ಹಿಂದೆ ಮತ್ತು ಇಂದು ಕೂಡ, ಅಗತ್ಯವಾದ ಸರಕು ರವಾನೆ ಮಾಡುವ ಪ್ರಭುತ್ವ ಕೇಂದ್ರಿತ ಉದ್ಯಮ. ಹೀಗಾಗಿ ಏಕರೂಪತೆ, ಪ್ರಮಾಣೀಕರಣ ಇನ್ನೂ ಉಳಿದಿದೆ. ಹೊಸದನ್ನು ಹುಡುಕುವ, ಶೋಧಿಸುವ ತುಡಿತವನ್ನು ನಿಯಂತ್ರಿಸುತ್ತಿದೆ. ಆದರೆ ಶಿಕ್ಷಣ ವಿಭಾಗದ ಸುಧಾರಣೆಗಳು ಈಗಾಗಲೇ ಸೂಚಿತವಾಗಿದ್ದು, ಹೊಸ ವ್ಯವಸ್ಥೆಯ ಅಡಿಯಲ್ಲಿ, ಬರುವ ವರ್ಷಗಳಲಿ, ನಿಯಮ ಮತ್ತು ಕಾರ್ಯಕ್ರಮಗಳನ್ನು ರೂಪಿಸುವ, ಅವುಗಳನ್ನು ಅನ್ವಯಕ್ಕೆ ತರುವ ಹಂತಗಳಲ್ಲಿ ಶೈಕ್ಷಣಿಕ ಸಂಶೋಧನೆಗೆ ಹೆಚ್ಚಿನ ಕರೆ ಕೊಡಬಹುದು.

Digitised by Bharatavani, CIIL

ಇಂದು ವಿಕೇಂದ್ರೀಕೃತ ಶೈಕ್ಷಣಿಕ ನಿರ್ವಹಣೆಯ ಹೊಸ ಕ್ಷೇತ್ರಗಳು ಮತ್ತು ಶಾಲಾಸ್ವಾಯತ್ತತೆ ಇವು ಪ್ರಯೋಗಾಧಾರಿತ ಸತ್ಯಗಳಾಗಿ ಕಂಡುಬಂದಿವೆ. ಆದರೆ, ವಿಕೇಂದ್ರೀಕೃತ ಶೈಕ್ಷಣಿಕ ನಿರ್ವಹಣೆಯ ಪ್ರೇರಕಾಂಶಗಳನ್ನು ಕುರಿತಂತ ನಂಬಲರ್ಹವಾದ ಮಾಹಿತಿ ಇಲ್ಲ. ಅಂದ ಹಾಗೆಯೇ ಶಾಲಾ ಶಿಕ್ಷಣಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸುವ ಜವಾಬ್ದಾರಿ ರಾಜ್ಯ ಮತ್ತು ಕೇಂದ್ರ ಸರಕಾರಗಳ ಮೇಲಿದೆ. ಉನ್ನತ ಮಟ್ಟದಲ್ಲಿ ಸರ್ಕಾರದ ರಚನೆಗಳ ಬದಲಾದ ಪಾತ್ರದಿಂದಾಗಿ ದೊಡ್ಡ ಪ್ರಮಾಣದ, ರಾಷ್ಟ್ರಮಟ್ಟದ ದತ್ತಾಂಶ ಮಾಹಿತಿ ಮತ್ತು ವಿಶ್ಲೇಷಣೆಯ ಅಗತ್ಯವಿದೆ. ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಅಧ್ಯಯನಗಳನ್ನು ಮಾಡಲು ರಾಷ್ಟ್ರ ಮತ್ತು ರಾಜ್ಯಮಟ್ಟದ ಸಂಸ್ಥೆಗಳು ಹಾಗೂ ಸಂಶೋಧನಾ ಸಂಸ್ಥೆಗಳು ಸಂಬಂಧಪಟ್ಟ ಇತರ ಸಂಸ್ಥೆಗಳ ಜೊತೆಯಲ್ಲಿ ಕೂಡಿಕೊಂಡು, ಹಾಗೂ ತಾವೇ ಸ್ವತಃ ಕೆಲಸ ಮಾಡಬೇಕಾಗಿದೆ. ಹೀಗಾಗಿ, ಶಿಕ್ಷಣ ಕ್ಷೇತ್ರದಲ್ಲಿ ಮೂಡಿಬರುತ್ತಿರುವ ಬದಲಾವಣೆಗಳಿಗೆ ಸ್ಪಂದಿಸಲು ಅನುಗುಣವಾದ ಶೈಕ್ಷಣಿಕ ಸಂಶೋಧನೆಗಳನ್ನು ಕೈಗೊಳ್ಳಲು ಹೆಚ್ಚಿನ ಹಣವನ್ನು ನಿಗದಿ ಮಾಡಬೇಕಾದ ಅಗತ್ಯವಿದೆ.

**ಮೂಲ: ಸಿ.ಎಸ್. ನಾಗರಾಜು**

**ಅನು: ಶಶಿಕಲ ಎ.**

## ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಯ ಸ್ಥಿತಿಗತಿ

ಭಾರತದಲ್ಲಿ ಶೈಕ್ಷಣಿಕ ಸಂಶೋಧನೆಯು ಅತ್ಯಂತ ವೇಗವಾಗಿ ನಡೆಯುತ್ತಿರುವ ಚಟುವಟಿಕೆಯಾಗಿದೆ. ಆದರೆ ಈ ಸಂಶೋಧನೆಗಳ ಫಲಿತಾಂಶಗಳು ಸರಿಯಾಗಿ ಸಾಕಷ್ಟು ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರದೆ ಇರುವುದು ಒಂದು ಸಮಸ್ಯೆಯಾಗಿದೆ. ಪ್ರಚಲಿತ ಸಮಸ್ಯೆಗಳನ್ನು ಪರಿಹರಿಸಲು ಹಲವಾರು ಸಂಶೋಧನೆಗಳು ನಡೆದಿದ್ದರೂ ಅವುಗಳ ಅನುಷ್ಠಾನವಾಗದೇ ಇರುವುದು ಹಲವಾರು ಸಮಸ್ಯೆಗಳಿಗೆ ಕಾರಣವಾಗಿದೆ.

- ಹಲವಾರು ಸಮಸ್ಯೆಗಳನ್ನು ಪ್ರಾರಂಭದಲ್ಲಿಯೇ ಸರಿಪಡಿಸದೆ, ಅವುಗಳು ದೀರ್ಘಸ್ವರೂಪ ತಾಳುವವರೆಗೆ ಬಿಡುವುದು, ಕೆಲವು ಸಲ ಅವುಗಳ ಕಡೆ ಗಮನ ಹರಿಸಿದರೂ ಆ ಸಮಸ್ಯೆಗಳ ಬಗ್ಗೆ ಅಷ್ಟೇನೂ ಆಳವಾದ ಅಧ್ಯಯನ ನಡೆಯುವುದಿಲ್ಲ.
- ಸಂಶೋಧನೆಯಲ್ಲಿ ಹೊಸ ತಂತ್ರಗಳನ್ನು ಬಳಸದೆ ಇನ್ನೂ ಹಳೆಯ ಸಂಪ್ರದಾಯಬದ್ಧ ವಿಧಾನಗಳನ್ನು ಬಳಲಾಗುತ್ತಿದೆ.

ಕಳೆದ ಸುಮಾರು ದಶಕಗಳಿಂದ ಶೈಕ್ಷಣಿಕ ಸಂಶೋಧನೆಗೆ ಸಾಕಷ್ಟು ಧನಸಹಾಯವನ್ನು ಒದಗಿಸಿ ಅವುಗಳನ್ನು ಬೆಳೆಸುವ ಪ್ರಯತ್ನ ನಡೆದಿದೆ. ಆದ್ಯತೆ ಮೇಲೆ ಆಯ್ಕೆ ಮಾಡಿದ ಕೆಲವೊಂದು ವಿಷಯಗಳ ಮೇಲೆ ತುಲನಾತ್ಮಕ ಸಂಶೋಧನೆಗಳು ನಡೆದಿವೆ. ಅನೇಕ ಯೋಜನೆಗಳ ಮುಖಾಂತರ ಮತ್ತು ಸಂಶೋಧನೆಗಳ ಮುಖಾಂತರ ಸಾಕಷ್ಟು ಪ್ರಮಾಣದಲ್ಲಿ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಆದರೆ ಇವುಗಳಿಂದ ಎಷ್ಟು ಪ್ರಯೋಜನವಾಗಿದೆ ಎಂಬುದನ್ನು ಸರಿಯಾಗಿ ನಿರ್ಣಯಿಸುವ ಪ್ರಯತ್ನವಾಗಿಲ್ಲ. ಅನೇಕ ಸಂಶೋಧನಾ/ಪ್ರಾಯೋಜನೆಗಳು ಕಳಪೆದರ್ಜೆಯಲ್ಲಿವೆ. ಇನ್ನೂ ಕೆಲವು ಸರಿಯಾಗಿ ಕೈಗೊಳ್ಳದೆ ಇರುವಂಥವುಗಳಾಗಿವೆ. ಮತ್ತೆ ಇನ್ನೂ ಕೆಲವು ಸಂಶೋಧಕರ ಅಸಮರ್ಪಕತೆಯಿಂದ ಸೊರಗಿಹೋಗಿವೆ. ಹೀಗಾಗಲು ಪ್ರಮುಖ ಕಾರಣಗಳೆಂದರೆ, ಈ ಪ್ರಾಯೋಜನೆಗಳನ್ನು ಸಿದ್ಧಪಡಿಸುತ್ತಿರುವ ಯೋಜನಾ ನಿರ್ದೇಶಕರ ಕಾರ್ಯವೈಫಲ್ಯ ಅಥವಾ ಅವರ ಅನುಭವದ ಕೊರತೆ, ತರಬೇತಿ ಇಲ್ಲದೇ ಕಾರ್ಯಗಳನ್ನು ನಿರ್ವಹಿಸುವುದು.

ಭಾರತ ಸರ್ಕಾರವು ಅನೇಕ ಪ್ರಾಯೋಜನೆಗಳನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ಧಿಪಡಿಸುವಲ್ಲಿ ಹೆಚ್ಚಿನ ಪಾಲುಗಾರಿಕೆಯನ್ನು ಹೊಂದಿದೆ. ಸರ್ಕಾರದ ಕೆಲವೊಂದು ಪ್ರಾಯೋಜನೆಗಳನ್ನು ಶೈಕ್ಷಣಿಕ ಪ್ರಾಯೋಜನೆಗಳನ್ನಾಗಿಯೇ ರೂಪಿಸಲಾಗಿದೆ. ಇವುಗಳಿಂದ ಅನೇಕ ಸಂಶೋಧನಾ ಸಂಸ್ಥೆಗಳು ಬೇರೆ ಬೇರೆ ರೀತಿಗಳಲ್ಲಿ ಪ್ರಾಯೋಜನೆ ಪಡೆಯುತ್ತಲಿವೆ. ಅದು ಶಿಷ್ಯವೇತನವಾಗಿರಬಹುದು, ವೇತನವಾಗಿರಬಹುದು, ಗೌರವಧನವಾಗಿರಬಹುದು, ಇತರ ಮಾದರಿಯ ಯಾವುದೇ ಸಹಾಯವಾಗಿರಬಹುದು, ಪಠ್ಯಕ್ರಮ ಅಭಿವೃದ್ಧಿಯಾಗಿರಬಹುದು, ಬೋಧನಾ ಮಾದರಿಗಳಾಗಿರಬಹುದು ಇವುಗಳು ಪ್ರತಿವರ್ಷ ನಿರಂತರವಾಗಿ ನಡೆಯುತ್ತಿರುವುದರಿಂದ ಸಂಶೋಧನೆಗಳು ಯಾಂತ್ರಿಕವಾಗಿ ನಡೆಯುತ್ತಿವೆ ಆದರೂ ಘನ ಉದ್ದೇಶವನ್ನು ಹೊಂದಿದ ಭಾರತ ಸರ್ಕಾರ ಒಂದಿಲ್ಲೊಂದು ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವ ಯೋಜನೆಯಲ್ಲಿ ತೊಡಗಿದೆ. ಇದರಿಂದ ಕೆಲವೊಂದು ಸಮಸ್ಯೆಗಳಿಗಾದರೂ ನಾವು ಪರಿಹಾರವನ್ನು ಕಂಡಿದ್ದೇವೆ.

ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ನಡೆಯುತ್ತಿರುವ ಸಂಶೋಧನೆಗಳು ಪದವಿಗಾಗಿ– ಎಂ.ಫಿಲ್., ಪಿ.ಹೆಚ್‌ಡಿ ಕೈಗೊಳ್ಳುವ ಸಂಶೋಧನೆಗಳಾಗಿವೆ. ಆದ್ದರಿಂದ ವಿಷಯಗಳ ಆಯ್ಕೆಯಲ್ಲಿ ನಿಜವಾಗಿ ಶಿಕ್ಷಣ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಅಥವಾ ನಿಜವಾದ ಹೊಸ ಜ್ಞಾನವನ್ನು ಕಂಡುಹಿಡಿಯುವ ಉನ್ನತ ಉದ್ದೇಶಗಳಿರುವುದಿಲ್ಲ. ಅವುಗಳ ತತ್‌ಕ್ಷಣದ ಉದ್ದೇಶ ಪದವಿ ಪಡೆಯುವುದಾಗಿರುವುದರಿಂದ ಸಂಶೋಧನೆಯ ಎಲ್ಲಾ ವಿಷಯಗಳಲ್ಲಿಯೂ–ಸಂಶೋಧನೆಯ ಸಮಸ್ಯೆಯ ಆಯ್ಕೆಯಿಂದ ವರದಿ ಬರೆಯುವವರೆಗೂ–ಸುಲಭತೆಯ ಕಡೆಗೆ ಗಮನವಿರುತ್ತದೆ. ಎಷ್ಟೆ ಸಂಶೋಧನೆಗಳಲ್ಲಿ ಯಾವ ಹುರುಳೂ ಇರುವುದಿಲ್ಲ. ಯಾವ ಉಪಯುಕ್ತ ಅನ್ವಯಿಕತೆಯೂ ಇರುವುದಿಲ್ಲ. ಅಂಥ ಪ್ರಬಂಧಗಳು ಕೇವಲ ಗ್ರಂಥಾಲಯದ ವಸ್ತುಗಳಾಗುತ್ತವೆ.

ಬಹಳಷ್ಟು ಸಂಶೋಧನೆಗಳ ಮತ್ತೊಂದು ಮಿತಿ ಎಂದರೆ ಸಂಶೋಧನೆಗೆ ನಿಖರವಾದ ವೈಜ್ಞಾನಿಕ ವಿಧಾನವನ್ನು ಉಪಯೋಗಿಸದೆ ಇರುವುದು. ಉದ್ದೇಶಗಳ ನಿರೂಪಣೆಯಲ್ಲಿ ಪ್ರತಿದರ್ಶದ ಆಯ್ಕೆಯಲ್ಲಿ, ದತ್ತಾಂಶ ಸಂಗ್ರಹಣೆ ಸಾಧನಗಳ/ತಂತ್ರಗಳ ಆಯ್ಕೆಯಲ್ಲಿ ದತ್ತಾಂಶಗಳ ಸಂಗ್ರಹಣೆಯಲ್ಲಿ,

Digitised by Bharatavani, CIIL

ದತ್ತಾಂಶಗಳನ್ನು ವಿಶ್ಲೇಷಿಸುವ ಸಂಖ್ಯಾಶಾಸ್ತ್ರೀಯ ತಂತ್ರಗಳಲ್ಲಿ ಮತ್ತು ದತ್ತಾಂಶಗಳನ್ನು ವ್ಯಾಖ್ಯಾನಿಸುವುದರಲ್ಲಿ ರಾಜಿ ಮಾಡಿಕೊಳ್ಳುವುದು, ಖಚಿತತೆ ಇಲ್ಲದಿರುವುದು ಇತ್ತೀಚಿನ ಸಂಶೋಧನಾ ಪ್ರಬಂಧಗಳಲ್ಲಿ ಕಂಡು ಬರುತ್ತಿದೆ. ಇದರಿಂದ ಶೈಕ್ಷಣಿಕ ಸಂಶೋಧನಾ ಅಧ್ಯಯನಗಳ ಮಟ್ಟ ಇಳಿಮುಖವಾಗಲು ಕಾರಣವಾಗುತ್ತದೆ. ಆರ್ಥಿಕ ನೆರವು ಪಡೆದು ಕೈಗೊಳ್ಳುವ ಪ್ರಾಯೋಜನೆಗಳಿಗೂ ಈ ಮಿತಿಗಳನ್ನು ಅನ್ವಯಿಸಬಹುದು.

ವಿಶ್ವವಿದ್ಯಾನಿಲಯಗಳಿಗೆ ಸಲ್ಲಿಸುವ ಸಂಶೋಧನ ಪ್ರಬಂಧಗಳನ್ನು / ಪ್ರಾಯೋಜನಾ ವರದಿಗಳನ್ನು ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಸಂಸ್ಥೆಗಳು / ಇಲಾಖೆಗಳು ನಿಜವಾಗಿಯೂ ಕಾಳಜಿ ವಹಿಸಿ ಅವುಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿ ಸೂಚಿತವಾಗಿರಬಹುದಾದ ಸಲಹೆ, ಸೂಚನೆಗಳನ್ನು, ಸಮಸ್ಯೆ ಪರಿಹಾರ ಮಾರ್ಗಗಳನ್ನು ಅನುಷ್ಠಾನಕ್ಕೆ ತರುತ್ತಲಿವೆಯೇ ಎನ್ನುವುದು ಪ್ರಶ್ನಾರ್ಹ ಸಂಗತಿಯಾಗಿದೆ. ಕೆಲವು ಸಂಸ್ಥೆಗಳು (ಎನ್‌ಸಿಇಆರ್‌ಟಿ, ಡಿಎಸ್‌ಇಆರ್‌ಟಿ ಮುಂತಾದವು) ಈ ದಿಶೆಯಲ್ಲಿ ಪ್ರಯತ್ನಿಸುತ್ತಿರಬಹುದು ಆದರೆ ಈ ಕೆಲಸ ಇನ್ನೂ ವ್ಯಾಪಕವಾಗಿ ನಡೆಯಬೇಕಾಗಿದೆ.

ಸದ್ಯದಲ್ಲಿ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಎಂ.ಫಿಲ್ ಮತ್ತು ಪಿಹೆಚ್‌ಡಿ ಸ್ತರದಲ್ಲಿ ಆಗುತ್ತಿರುವ ಸಂಶೋಧನಾಧ್ಯಯನಗಳಲ್ಲಿ ಬಹಳಷ್ಟು ಸಂಶೋಧನ ಸಮಸ್ಯೆಗಳು ಸಮೀಕ್ಷಾರೂಪದವೋ ಅಥವಾ ಕಾರಣ ಕಾರ್ಯ ಸಹ ಸಂಬಂಧಾತ್ಮಕ ರೂಪದವೋ ಆಗಿರುತ್ತವೆ. ಕೆಲವು ಸ್ವತಂತ್ರ್ಯ ಚಲಕಗಳನ್ನು ಆಯ್ಕೆ ಮಾಡಿಕೊಂಡು ಮತ್ತೊಂದು ಪರತಂತ್ರ ಚಲಕದ ಮೇಲೆ ಅವುಗಳ ಪ್ರಭಾವವನ್ನು ಅಥವಾ ಸಹಸಂಬಂಧವನ್ನು ಕಂಡುಹಿಡಿಯುವುದರಲ್ಲಿ ಸಂಶೋಧನೆ ಪರ್ಯಾವಸಾನವಾಗುತ್ತದೆ ಇಂಥ ಅಧ್ಯಯನಗಳಲ್ಲಿ ಹೆಚ್ಚಿನ ಪ್ರಾಯೋಗಿಕ/ವ್ಯವಹಾರಿಕ ನಿಹಿತಾರ್ಥಗಳಾಗಲಿ, ಅನ್ವಯಿಕತೆಗಾಗಲಿ ಇರುವುದಿಲ್ಲ. ನಿಜವಾದ ಪ್ರಾಯೋಗಿಕ ಅಧ್ಯಯನಗಳ, ದೀರ್ಘಕಾಲೀನ ವಿಕಾಸಾತ್ಮಕ ಅಧ್ಯಯನಗಳ(Longitudinal Studied), ವ್ಯಕ್ತಿ/ಘಟಕ ಅಧ್ಯಯನಗಳ ಅಥವಾ ಸೀಮಿತ ಪ್ರತಿದರ್ಶಗಳನ್ನು ವ್ಯವಸ್ಥಿತ ರೀತಿಯಲ್ಲಿ ಆಯ್ಕೆ ಮಾಡಿಕೊಂಡು ಅವುಗಳನ್ನು ಗಹನವಾದ ರೀತಿಯಲ್ಲಿ ಅಧ್ಯಯನ ಮಾಡುವ ಗುಣಾತ್ಮಕ ಸಂಶೋಧನ ಅಧ್ಯಯನಗಳ (Qualitative Research Studies) ಸಂಖ್ಯೆ ಕಡಿಮೆ ಎಂದೇ ಹೇಳಬೇಕು. ಈ ರೀತಿಯ ಅನೇಕ ಅಧ್ಯಯನಗಳಿಗೆ ಉದಾಹರಣೆಗೆ ಅಂತರ ಸಂಸ್ಕೃತಿ ಅಧ್ಯಯನಗಳು, ಕುಲಸಂಬಂಧಿತ ಅಧ್ಯಯನಗಳು (Ethinic Studies) ಸಣ್ಣ ಸಮೂಹಗಳ ಗುಣಾತ್ಮಕ ಅಧ್ಯಯನಗಳು ಇತ್ಯಾದಿ ಇತ್ತೀಚಿಗೆ ಹೊರದೇಶಗಳಲ್ಲಿ ಹೆಚ್ಚಾಗಿ ನಡೆಯುತ್ತಿವೆ ಭಾರತದಂಥ ಬಹು-ಸಾಂಸ್ಕೃತಿಕ, ಬಹುಧರ್ಮೀಯ, ಬಹುಭಾಷಾ ದೇಶದಲ್ಲಿ ಇಂಥ ಅಧ್ಯಯನಗಳಿಗೆ ಬಹಳಷ್ಟು ಅವಕಾಶಗಳಿಗೆ ಇಂಥ ಅಧ್ಯಯನಗಳಿಗೆ ಗಮನ ಕೊಡುವುದು ಸೂಕ್ತವೆನಿಸುತ್ತದೆ. ಹಾಗೆಯೇ ತಾತ್ವಿಕ, ಐತಿಹಾಸಿಕ, ತುಲನಾತ್ಮಕ ಸ್ವರೂಪದ ಅಧ್ಯಯನಗಳ ಕಡೆಗೂ ಗಮನ ಹರಿಸಬೇಕಾಗಿದೆ.

ಮತ್ತೊಂದು ಸಂಗತಿಯೆಂದರೆ, ಇತ್ತಿತ್ತಲಾಗಿ ಸರ್ಕಾರಿ ಕ್ಷೇತ್ರದಲ್ಲಿ ಅನೇಕ ಸಂಶೋಧನಾ ಸಂಘ-ಸಂಸ್ಥೆಗಳು ಪರಸ್ಪರ ಸಹಕರಿಸುತ್ತಿವೆ ಮತ್ತು ಇವುಗಳ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನ ಭರದಿಂದ ನಡೆದಿದೆ. ಅವುಗಳನ್ನು ರಾಷ್ಟ್ರದ ವಿದ್ವತ್ ಸಂಸ್ಥೆಗಳೊಂದಿಗೆ ಸಹಕರಿಸಲು ಆಕರ್ಷಿಸುವ ಅವಿರತ ಪ್ರಯತ್ನ ಸಾಗಿದೆ.

ಭಾರತದಲ್ಲಿರುವ ಬಹುತೇಕ ವಿಶ್ವವಿದ್ಯಾಲಯಗಳು ಮತ್ತು ಅನೇಕ ಸಂಶೋಧನಾ ಸಂಸ್ಥೆಗಳು ಸಾಕಷ್ಟು ಹಣವನ್ನು ಸಂಶೋಧನೆಗಳಿಗಾಗಿ ಹೊಂದಿರುವುದಿಲ್ಲ. ಅದನ್ನರಿತ ಯುಜಿಸಿಯು ವಿಶ್ವವಿದ್ಯಾಲಯಗಳಿಗೆ ಸಾಕಷ್ಟು ಧನಸಹಾಯವನ್ನು ಕಲ್ಪಿಸಿಕೊಡುತ್ತಲಿವೆ. ಪ್ರತಿ ವರ್ಷವೂ ಶಿಷ್ಯವೇತನ ಪಡೆಯುವವರ ಮತ್ತು ರಾಷ್ಟ್ರೀಯ ಫೆಲೋಗಳ ಸಂಖ್ಯೆಯನ್ನು ಅದು ಹೆಚ್ಚಿಸುತ್ತಲಿದೆ. ಅದಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿ ಪರೀಕ್ಷೆಗಳನ್ನು ನಡೆಸುತ್ತಿದೆ. ಇದೊಂದು ಪ್ರಗತಿಯ ಸಂಕೇತವೇ ಸರಿ. ಆದರೆ ವಿದ್ಯಾರ್ಥಿಗಳಿಗೆ ಮೊದಲೇ ಯಾವುದೇ ತರಬೇತಿ ಇರುವುದಿಲ್ಲ. ಇದ್ದರೂ ಸಮರ್ಪಕವಾಗಿರುವುದಿಲ್ಲ. ಇದನ್ನರಿತ ಮುಖ್ಯಸ್ಥರುಗಳು ಸರಿಯಾದ ಮಾರ್ಗದರ್ಶನವನ್ನು ನೀಡಬೇಕು ಮತ್ತು ಸಂಶೋಧನಾರ್ಥಿಗಳಿಗೆ ಆಸಕ್ತಿ ಇರುವ ವಿಷಯವನ್ನು ಕೊಡಬೇಕು. ಶಿಕ್ಷಣ ಕ್ಷೇತ್ರಕ್ಕೆ ಅದು ಹೊಸ ಜ್ಞಾನವನ್ನು ನೀಡುವಂತಿರಬೇಕು.

**-ಡಾ. ಶೈಲಜ ಹೆಚ್.ಎಂ.**

## ಭಾರತದಲ್ಲಿ ಸಂಸ್ಕೃತ ಶಿಕ್ಷಣದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳು

ಭಾರತದಲ್ಲಿ ಸಂಸ್ಕೃತ ಶಿಕ್ಷಣದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳನ್ನು ಅಧ್ಯಯನ ಮಾಡುವಾಗ ಪ್ರಾಚೀನ ಭಾರತೀಯ ಶಿಕ್ಷಣವಾದ ವೇದಕಾಲದ ಶಿಕ್ಷಣದಿಂದಲೇ ಅಧ್ಯಯನ ಮಾಡಬೇಕಾಗುತ್ತದೆ. ಜ್ಞಾನ, ಸಂಪಾದನೆ, ಮೋಕ್ಷಪ್ರಾಪ್ತಿಗಾಗಿ ಆತ್ಮಸಾಕ್ಷಾತ್ಕಾರ, ಧರ್ಮಾಚರಣೆಯ ಮೂಲಕ ಆತ್ಮೋದ್ಧಾರ, ವ್ಯಕ್ತಿತ್ವ ವಿಕಸನ, ವೃತ್ತಿ ತರಬೇತಿ, ಸಾಮಾಜಿಕ ಹೊಣೆಗಾರಿಕೆಯ ತರಬೇತಿ, ಸಾಮಾಜಿಕ ಮೌಲ್ಯಗಳ ಬೆಳವಣಿಗೆ, ಭಾರತೀಯ ಸಂಸ್ಕೃತಿಯ ಸಂರಕ್ಷಣೆ ಮತ್ತು ಸಂವರ್ಧನೆ ಈ ಮುಂತಾದ ಶ್ರೇಷ್ಠ ಗುರಿಗಳ ಸಾಧನೆಗೆ ಅನುಕೂಲವಾಗುವಂತೆ ವೇದ-ವೇದೋತ್ತರ ಕಾಲಗಳ ಪಠ್ಯಕ್ರಮವು ವ್ಯಾಪಕವಾಗಿತ್ತು ಹಾಗೂ ಈ ಪಠ್ಯಕ್ರಮ ಸಾಧನೆಗೆ ಅನುಕೂಲವಾಗುವಂತೆ ಬೋಧನಾ ವಿಧಾನಗಳಿದ್ದವು.

**ವೇದಕಾಲದ ಸಂಸ್ಕೃತ ಶಿಕ್ಷಣದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳು:**

**ಪಠ್ಯಕ್ರಮ:** ವೇದಕಾಲದ ಪಠ್ಯಕ್ರಮವನ್ನು ಕುರಿತು ವಿಶ್ಲೇಷಿಸುವಾಗ ಪ್ರಾರಂಭಿಕ ಋಗ್ವೇದಕಾಲ, ಇತರ ವೇದಗಳ ಕಾಲ, ಬ್ರಾಹ್ಮಣಗಳ ಕಾಲ, ಆರಣ್ಯಕಗಳ ಕಾಲ ಹಾಗೂ ಉಪನಿಷತ್ತುಗಳ ಕಾಲಗಳನ್ನು

Digitised by Bharatavani, CIIL

ಪರಿಗಣಿಸಬೇಕಾಗುತ್ತದೆ. ವಿದ್ವಾಂಸರ ಪ್ರಕಾರ ಈ ಐದೂ ಕಾಲಗಳ ನಡುವೆ ಸಹಸ್ರಮಾನಗಳ ಅಂತರವಿದೆ. ಆದರೆ ವೇದ ಸಂಹಿತೆಗಳ ಪ್ರಾರಂಭ ಋಗ್ವೇದದಿಂದ ಆದರೆ ಅದರ ಕೊನೆ ಉಪನಿಷತ್ತುಗಳಾಗಿವೆ. ವೇದದ ಅಂತ್ಯ ಭಾಗಗಳಾಗಿದ್ದರಿಂದಲೇ ಉಪನಿಷತ್ತುಗಳು 'ವೇದಾಂತ' ಗಳೆಂದು ಕರೆಯಲ್ಪಟ್ಟಿವೆ. ವೇದ ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳು ಸೇರಿ ಶ್ರುತಿಗಳೆಂದು ಕರೆಯಲ್ಪಟ್ಟಿವೆ.

ಋಕ್, ಸಾಮ, ಯಜು, ಅಥರ್ವ ಇವು ನಾಲ್ಕೂ ವೇದ ಸಂಹಿತೆಗಳೆಂದು ಕರೆಯಲ್ಪಟ್ಟಿವೆ. ಸಂಹಿತೆಗಳಲ್ಲೆಲ್ಲಾ ಅತಿ ಮುಖ್ಯವಾದುದೂ, ಅತಿ ಪ್ರಾಚೀನವಾದುದು ಋಗ್ವೇದ ಸಂಹಿತೆ. 'ಋಕ್' ಎಂದರೆ 'ಪದ್ಯ', 'ಸಂಹಿತೆ' ಎಂದರೆ ಸಂಗ್ರಹಿಸಿದ್ದು, ಮಂತ್ರದ್ರಷ್ಟಾರರಾದ ಬೇರೆ ಬೇರೆ ಋಷಿಗಳಿಂದ ಬೇರೆ ಬೇರೆ ಕಾಲಗಳಲ್ಲಿ ದ್ರಷ್ಟವಾದ ಅನೇಕಾನೇಕ ಸೂಕ್ತಗಳ ಸಮೂಹವೇ ಋಗ್ವೇದ ಸಂಹಿತೆಯಾಗಿದೆ.

ಋಗ್ವೇದ ಸಂಹಿತೆಯ ಇಡೀ ಸಂಗ್ರಹದಲ್ಲಿ 1,017 ಸೂಕ್ತಗಳಿವೆ; ಪ್ರಕ್ಷಿಪ್ತವೆನ್ನಲಾದ 11 ವಾಲಖಿಲ್ಯ ಸೂಕ್ತಗಳನ್ನು ಹಿಡಿದರೆ 1,028. ಎಲ್ಲ ಸೂಕ್ತಗಳಲ್ಲಿ ಬರುವ ಋಕ್ಕುಗಳ ಸಂಖ್ಯೆ ಸುಮಾರು 10,600, ಋಕ್ಕುಗಳು 1,53,826 ಶಬ್ದಗಳುಳ್ಳ 70,000 ಸಾಲುಗಳನ್ನು ಹೊಂದಿವೆ ಇವುಗಳಲ್ಲಿ 5,000 ಸಾಲುಗಳು ಪುನರಪಿ ಬಂದಿವೆ. ಒಂದು ಸೂಕ್ತಕ್ಕೆ ಸರಾಸರಿ ಹತ್ತು ಋಕ್ಕುಗಳು ಎನ್ನಬಹುದು. ಎಲ್ಲಕ್ಕಿಂತ ಚಿಕ್ಕ ಸೂಕ್ತದಲ್ಲಿ ಒಂದೇ ಋಕ್ಕಿದ್ದರೆ, ಎಲ್ಲಕ್ಕಿಂತ ದೊಡ್ಡ ಸೂಕ್ತದಲ್ಲಿ 58 ಋಕ್ಕುಗಳಿವೆ. ಋಗ್ವೇದ ಕಾಲದ ಶಿಕ್ಷಣ ಪದ್ಧತಿಯಲ್ಲಿ ಈ ಋಕ್ಕುಗಳು ಅಂದರೆ ಸ್ತೋತ್ರಗೀತೆಗಳೇ ಅಧ್ಯಯನ ವಿಷಯಗಳಾಗಿದ್ದವು. ವಿವಿಧ ದೇವತೆಗಳನ್ನು ಕುರಿತು ಮಾಡುವ ಯಜ್ಞಗಳಿಗೆ ಇವುಗಳೇ ಮಂತ್ರಗಳಾಗಿದ್ದವು. ಋಗ್ವೇದ ಸಂಹಿತೆಯ ಸೂಕ್ತಗಳಲ್ಲಿ ಬರುವ ಮಂತ್ರಗಳು ಪ್ರಕೃತಿಯ ಶಕ್ತಿಗಳನ್ನೇ ದೇವತೆಗಳೆಂದು ಸ್ತುತಿಸುತ್ತವೆ. ಋಗ್ವೇದೀಯ ಆರ್ಯ ಋಷಿಗಳು ಪ್ರಕೃತಿಯ ಅದ್ಭುತಗಳ ಹಿಂದೆ ಪ್ರಚ್ಛನ್ನ ಶಕ್ತಿಯೊಂದಿದೆ ಎಂದು ಅರಿತು ಇಂಥ ಪ್ರಾಕೃತಿಕ ಶಕ್ತಿಗಳ ಅಭಿಮಾನಿ ದೇವತೆಗಳನ್ನು ಕೃತಜ್ಞತೆಯಿಂದ ಸ್ತುತಿಸಿದ್ದಾರೆ.

ಋಗ್ವೇದ ಸಂಹಿತೆಯಲ್ಲಿ ಸಹಸ್ರಾರು ಸೂಕ್ತಗಳು ವೇದಕಾಲದ ಪ್ರಾರಂಭದಲ್ಲಿ ಋಷಿಗಳಿಂದ ದ್ರಷ್ಟವಾಗಿ ವಾಗ್ವ್ಯವಹಾರದಲ್ಲಿ ಪ್ರಚಾರದಲ್ಲಿದ್ದವು. ಬಳಿಕ ಇವುಗಳ ರಕ್ಷಣೆಗಾಗಿ ಋಷಿಗಳು ಕೆಲ ಉಪಾಯಗಳನ್ನು ಕಂಡುಕೊಂಡು ಇವುಗಳ ಸುವ್ಯವಸ್ಥಿತತೆಯ ಕುರಿತು ಗಮನ ಹರಿಸಿದರು.

ಮಂತ್ರಗಳು ಪ್ರಕೃತದಲ್ಲಿ ಉಪಲಬ್ಧವಾಗಿರುವ ಮೂಲಪಾಠಕ್ಕೆ 'ಸಂಹಿತಾಪಾಠ' ಎಂದು ಹೆಸರು. ಈ ಪಾಠವನ್ನು ಪದ ವಿಭಾಗ ಮಾಡಿ ಒಂದೊಂದು ಪದವನ್ನು ಬಿಡಿಸಿ ಬಿಡಿಸಿ ಹೇಳುವ ಪಾಠಕ್ಕೆ 'ಪದಪಾಠ' ಎಂದು ಕರೆಯಲಾಗಿದೆ. ಇದರಲ್ಲಿ ಸಮಸ್ತ ಪದಗಳೂ ಬಿಡಿರೂಪಗಳಲ್ಲಿ ನಮೂದಿತವಾಗಿವೆ. ಇದನ್ನು ಮತ್ತಷ್ಟು ಖಚಿತಗೊಳಿಸುವುದರ ಸಲುವಾಗಿ 'ಕ್ರಮಪಾಠ' ಎಂಬ ವಿಧಾನವನ್ನು ತರಲಾಯಿತು. ವೇದ ಪಾಠದ ಪೂರ್ಣ ಯೋಜನೆಯ ಮೂಲವೇದಗಳ ಪಾವಿತ್ರ್ಯವನ್ನು ಸಂರಕ್ಷಿಸುವುದಕ್ಕಾಗಿ ಅನೇಕ ಮಾದರಿಗಳನ್ನೂ ಅಭಿವೃದ್ಧಿಪಡಿಸಲಾಯಿತು. ಸಂಹಿತಾಪಾಠ, ಪದಪಾಠ, ಕ್ರಮಪಾಠಗಳನ್ನು 'ಪ್ರಕೃತಿ' ಎಂಬ ವರ್ಗದಲ್ಲಿ ಸೇರಿಸಲಾಯಿತು. ಅದೇ ರೀತಿಯಲ್ಲಿ ವೇದಗಳ ಪದಗಳು ಕ್ರಮ ಮತ್ತು ವಿಲೋಮ ಉಚ್ಚಾರಣೆಯಲ್ಲಿ ಅನೇಕಬಾರಿ ಆವೃತ್ತವಾಗಿ ಅವುಗಳ ರೂಪ ಮತ್ತು ಜ್ಞಾನದಲ್ಲಿ ಯಾವರೀತಿಯ ವ್ಯತ್ಯಯವೂ ಉಂಟಾಗದೇ ಶುದ್ಧವಾಗಿ ಉಳಿಸಲು ಎಂಟು ಪಾಠಗಳನ್ನು ರೂಪಿಸಿ 'ವಿಕೃತಿ' ಎಂಬ ವರ್ಗದಲ್ಲಿ ಸೇರಿಸಲಾಯಿತು.

ಜಟಾ, ಮಾಲಾ, ಶಿಖಾ, ರೇಖಾ, ಧ್ವಜ, ದಂಡ, ರಥ ಮತ್ತು ಘನ ಎಂಬುವು ಎಂಟು ವಿಕೃತಿಗಳು. ಇವುಗಳಲ್ಲಿ ಐದು ಪ್ರಥಮ ನಿಬಂಧಗಳು 'ಶಿಕ್ಷಾ' ಎಂದು ಹೆಸರಾದ ಭಾಷಾ ಶಾಸ್ತ್ರಕ್ಕೆ ತಳಹದಿ ಹಾಕಿತು. ಇದು ಋಗ್ವೇದದ ಷಡಂಗ ವಿಜ್ಞಾನಗಳಲ್ಲಿ ಒಂದು ವಿಜ್ಞಾನವಾಗಿದೆ.

ನಾಲ್ಕೂ ವೇದಗಳ ಪೌರೋಹಿತ್ಯವಾದ ಹೋತ್ರಿ (ಋಗ್ವೇದ); ಉದ್ಗಾತ್ರಿ (ಸಾಮವೇದ); ಅಧ್ವರ್ಯು (ಯಜುರ್ವೇದ); ಬ್ರಹ್ಮನ್ (ಅಥರ್ವವೇದ) ಇವರನ್ನು ಬಿಟ್ಟು ವೇದಗಳ ಪೌರೋಹಿತ್ಯವು ಹದಿನಾರು ಋಷಿಗಳನ್ನು ಹೊಂದಿತ್ತು. ಇವರಿಗೆ ಋತ್ವಿಜರು ಎಂಬ ಸಾಮಾನ್ಯ ಹೆಸರಿತ್ತು. ಇಡೀ ಯಜ್ಞದ ಮೇಲ್ವಿಚಾರಣೆ ಮಾಡುವ 'ಋತ್ವಿಜ'ನು ಹದಿನೇಳನೆಯವನು. ಋಗ್ವೇದ (ಋಋ, 1, 2)ವು ಈ ಹದಿನೇಳು ಜನ ಋತ್ವಿಜರನ್ನು ಹೆಸರಿಸುತ್ತದೆ.

ಇತರ ವೇದಗಳಾದ ಯಜುರ್ವೇದ, ಸಾಮವೇದ, ಅಥರ್ವವೇದಗಳು ಧಾರ್ಮಿಕ ವಿಚಾರಗಳಿಂದ ಪ್ರಭಾವಿತವಾದ ಅಧ್ಯಯನದ ಓಘವನ್ನು, ಮುಂದಿನ ಶೈಕ್ಷಣಿಕ ಬೆಳವಣಿಗೆಯನ್ನು ಸೂಚಿಸುತ್ತವೆ. ಋಗ್ವೇದ ಕಾಲದಲ್ಲಿ ಆರಂಭವಾದ ಪೌರೋಹಿತ್ಯ ಸಂಪ್ರದಾಯವು ಈ ಇತರ ವೇದಗಳ ಕಾಲದಲ್ಲಿ ವ್ಯವಸ್ಥಿತವಾಗಿ ಬೆಳವಣಿಗೆ ಹೊಂದಿತು.

ಯಜುರ್ವೇದ ಮುಖ್ಯವಾಗಿ ಎರಡು ರೂಪಗಳಲ್ಲಿದೆ. ಕಣ್ವಾ ಮಾಧ್ಯಂವಿನ ಶಾಖೆಗಳಿಂದ ಕೂಡಿದ ಶುಕ್ಲಯಜುರ್ವೇದ, ಕಠ–ಕಪಿಷ್ಠಲ–ಮೈತ್ರಾಯಣೀ (ಕಾಲಾಪ)–ತೈತ್ತರೀಯ ಎಂಬ ನಾಲ್ಕು ಸಂಹಿತೆಗಳಿಂದ ಕೂಡಿದ ಕೃಷ್ಣಯಜುರ್ವೇದ.

ಸಾಮವೇದದಲ್ಲಿ ಪೂರ್ವಾರ್ಚಿಕಾ ಮತ್ತು ಉತ್ತರಾರ್ಚಿಕಾ ಎಂಬ ಎರಡು ಭಾಗಗಳಿವೆ. 'ಅರ್ಚಿಕಾ' ಎಂದರೆ ಸೂಕ್ತಗಳ ಸಮೂಹ ಎಂದರ್ಥ. ಸಾಮವೇದ ಸಾವಿರ ಶಾಖೆಗಳನ್ನು ಹೊಂದಿದೆ. ಎಂಟು ಸಾವಿರ ಸಾಮಗಳೂ 14820 ಸಾಮಗಾಯಿಗಳೂ ಇದ್ದವೆಂದು ಚರಣವ್ಯೂಹ ಸೂಚಿಸುತ್ತದೆ.

ಅಥರ್ವವೇದ ಋಗ್ಯಜುಸ್ಸಾಮವೇದಗಳಿಗಿಂತ ಭಿನ್ನವಾಗಿದೆ. ಮೊದಲಿನ ಮೂರು ಸಂಹಿತೆಗಳು ಆಮುಷ್ಮಿಕ ಫಲಗಳನ್ನು ಕೊಡುವುದಾದರೆ ಅಥರ್ವವೇದವು ಐಹಿಕ ಫಲಗಳಿಗೆ ಸಂಬಂಧಿಸಿದುದಾಗಿದೆ. ಇದು ಐಹಿಕ ಜೀವನವನ್ನು ಸುಖಮಯವನ್ನಾಗಿಯೂ,

Digitised by Bharatavani, CIIL

ದುಃಖರಹಿತವನ್ನಾಗಿಯೂ ಮಾಡಿಕೊಳ್ಳಲು ಅನುಸರಿಸಬೇಕಾದ ಸಾಧನಾನುಷ್ಠಾನಗಳ ವಿಚಾರವನ್ನೊಳಗೊಂಡಿದೆ.

ಈ ವೇದ 'ಬ್ರಹ್ಮವೇದ'ವೆಂದು ಕರೆಯಲ್ಪಟ್ಟಿದೆ. ಇದು 'ಬ್ರಹ್ಮಾ' ಎಂಬ ಋತ್ವಕ್ಕಿಗೆ ಸಾಕ್ಷಾತ್ತಾಗಿ ಸಂಬಂಧಿಸಿದೆ. ಇದು ಬ್ರಹ್ಮಚರ್ಯಾಶ್ರಮದ ಮೂಲಭೂತ ಪದ್ಧತಿಗಳನ್ನೂ, ಸಂಪ್ರದಾಯಗಳನ್ನೂ ವಿವರಿಸುವ ಏಕಮೇವ ವೇದವಾಗಿದೆ.

ಮಂತ್ರ, ತಂತ್ರ, ವಶೀಕರಣ ಮತ್ತು ಯಕ್ಷಿಣಿವಿದ್ಯೆಗಳಿಗೆ ಸಂಬಂಧಿಸಿದ ಮಂತ್ರಗಳನ್ನು ಈ ವೇದವು ಒಳಗೊಂಡಿದೆ.

ಸರ್ಪವೇದ, ಪಿಶಾಚವೇದ, ಆಯುರ್ವೇದ, ಅಸುರವೇದ, ಇತಿಹಾಸವೇದ, ಧನುರ್ವೇದ ಮತ್ತು ಪುರಾಣವೇದ ಇವು ಅಥರ್ವವೇದದ ಉಪವೇದಗಳಾಗಿವೆ ಹಾಗೂ ಪಿಪ್ಪಲಾದ ಶಾಖೆ, ಶೌನಕ ಶಾಖೆ ಎಂಬ ಎರಡು ಶಾಖೆಗಳನ್ನು ಹೊಂದಿದೆ.

ಅಂದಿನ ಕಾಲದಲ್ಲಿ ಅಥರ್ವವೇದದ ಜ್ಞಾನ ಪುರೋಹಿತನಿಗೆ ಅತ್ಯವಶ್ಯಕವಾಗಿದ್ದಿತ್ತು. ರಾಜರುಗಳಿಗೆ ಅಪೇಕ್ಷಿತವಾದ ಶಾಂತಿಕ ಪೌಷ್ಟಿಕ ಕರ್ಮಗಳನ್ನು, ರಾಜಾಭಿಷೇಕಾದಿಗಳನ್ನು ಅರ್ಥವೇದೋಕ್ತವಾದ ರೀತಿಯಲ್ಲಿಯೇ ಪುರೋಹಿತರು ನಡೆಸುತ್ತಿದ್ದರು.

ಆಯಾವೇದಗಳ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಇವು ಪಠ್ಯಕ್ರಮಗಳಾಗಿದ್ದವು.

ಇದಕ್ಕೆ ತಕ್ಕಂತೆ ವಿದ್ಯಾರ್ಥಿಗಳಿಗೆ ಪ್ರಾರಂಭಿಕವಾಗಿ ನಾಲ್ಕೂ ವೇದಗಳ ಜ್ಞಾನ ನೀಡಿ ಉಚ್ಚಶಿಕ್ಷಣದಲ್ಲಿ ಐಚ್ಛಿಕವಾಗಿ ಪೌರೋಹಿತ್ಯಕ್ಕೆ ಹೊಂದಿಕೊಂಡಂತೆ ಇರುವ ವೇದ ಶಿಕ್ಷಣ ಕೊಡಲಾಗುತ್ತಿತ್ತು.

ಈ ನಾಲ್ಕು ವೇದಗಳ ಶಿಕ್ಷಣದಲ್ಲಿ ವೇದಗಳನ್ನು ಅರ್ಥೈಸಿಕೊಳ್ಳಲು ಸಹಾಯಕವಾಗುವಂತೆ ಬೋಧನೆಯ ಪ್ರಾರಂಭದಲ್ಲಿ ವೇದಾಂತಗಳನ್ನು ಬೋಧಿಸಲಾಗುತ್ತಿತ್ತು. ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಹಾಗೂ ಜ್ಯೋತಿಷ್ಯ ಈ 6 ವೇದಾಂಗಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡಿಸಲಾಗಿತ್ತು.

**ಬೋಧನಾ ವಿಧಾನಗಳು:**

ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವವೇದ ಈ ನಾಲ್ಕೂ ವೇದಗಳ ಶಿಕ್ಷಣ ಪೌರೋಹಿತ್ಯದ ಬೆಳವಣಿಗೆ ಮತ್ತು ಸಂಸ್ಕಾರ ಸಮ್ಮತವಾದ ಧರ್ಮದ ಬೇಕುಬೇಡಿಕೆಗಳಿಗೆ ಸಂಬಂಧಿಸಿರುವುದನ್ನು ಕಾಣುತ್ತೇವೆ. ಮೇಲಿನ ನಾಲ್ಕೂ ವೇದಗಳ ವಿಷಯಗಳಲ್ಲಿ ವೈವಿಧ್ಯತೆಗಳನ್ನು ಕಾಣುತ್ತೇವೆ. ಈ ವೈವಿಧ್ಯತೆಗಳಿಗನುಗುಣವಾಗಿ ಬೋಧನಾ ವಿಧಾನಗಳಲ್ಲಿಯೂ ವೈವಿಧ್ಯತೆಗಳಿರಬಹುದಾದರೂ ಮೂಲಭೂತವಾಗಿ ಋಗ್ವೇದಜ್ಞಾನ ಹಾಗೂ ವೇದಾಂಗಗಳ ಬೋಧನೆ ಅವಶ್ಯವಾಗಿತ್ತು. 'ಶಿಕ್ಷಾ' ಶಾಸ್ತ್ರದ ಶಾಸ್ತ್ರೀಯವಾದ ಬೆಳವಣಿಗೆಯನ್ನು ಯಜುರ್ವೇದ ಕಾಲದಲ್ಲಿಯೂ ಕಾಣುತ್ತೇವೆ.

ಸಾಮವೇದದ ಅಭ್ಯಾಸದಲ್ಲಿಯೂ ವಿದ್ಯಾರ್ಥಿಯು 'ಉದ್ಗಾತ್ರಿ' ಯಾಗಲು ಪೌರೋಹಿತ್ಯದ ತರಬೇತಿ ಹೊಂದಬೇಕಾಗಿದ್ದುದರಿಂದ ಅದರ ಪ್ರಾಯೋಗಿಕ ಜ್ಞಾನಕ್ಕೆ ವೇದಾಂಗಗಳ ಅಧ್ಯಯನ ಅವಶ್ಯವೇ ಆಗಿತ್ತು. ಸಾಮವೇದದ ಅಭ್ಯಾಸದಲ್ಲಿ ಸ್ವರವಿನ್ಯಾಸ ಕಲಿಕೆಗೆ ವಿಶೇಷವಾದ ಮಹತ್ವ ನೀಡಲಾಗಿತ್ತು. ಸಾಮಗಾನದ ಸಂಪೂರ್ಣ ಜ್ಞಾನದೊಂದಿಗೆ ಸಾಮವೇದ ಕಲಿಸಲಾಗುತ್ತಿತ್ತು.

ಯಜುರ್ವೇದ ಯಜ್ಞಯಾಗಗಳ ಶಾಸ್ತ್ರೀಯವಾದ ಪ್ರಾಯೋಗಿಕತೆಗೆ ಮಹತ್ವ ನೀಡಿದಂತೆ ಹೊಸ ವಿಷಯಗಳ ಧಾರ್ಮಿಕ ಮತ್ತು ಜಾತ್ಯತೀತ ಅಭ್ಯುದಯಕ್ಕೆ ಪ್ರೇರಣೆ ಕೊಟ್ಟಿತೆಂದು ಅದರಲ್ಲಿನ ವಿಷಯದ ಆಧಾರದ ಮೇಲೆ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಯಜುರ್ವೇದ ಅಧ್ಯಯನದೊಂದಿಗೆ ಬೆಳೆದು ಬಂದ 'ಶಿಕ್ಷಾ' ಎಂಬ ವಿಜ್ಞಾನದ ಶಾಸ್ತ್ರೀಯ ಬೆಳವಣಿಗೆ 'ಛಂದಸ್ಸು' ಮತ್ತು ಸುದೀರ್ಘವಾದ ಪ್ರಾತಿಶಾಖ್ಯ ಸಾಹಿತ್ಯ ವಿಷಯಗಳಿಗೆ ನಾಂದಿ ಹಾಡಿತು.

ಯಜ್ಞಕ್ಕೆ ಸಂಬಂಧಪಟ್ಟ ಮಂತ್ರಗಳ ಬೋಧನೆಯೊಂದಿಗೆ ಯಜ್ಞದ ಭೌತಿಕ ಆಚರಣೆಯ ಸಂಬಂಧದಲ್ಲಿ 'ಅದ್ವೈರ್ಯು' ಮಾಡಬೇಕಾದ ಕರ್ತವ್ಯಗಳ ಪ್ರಾತ್ಯಕ್ಷಿಕೆಗಳೂ, ಪ್ರಯೋಗಗಳೂ ಬೋಧನೆಯ ಅಂಗವಾಗಿದ್ದವು. ಅದ್ವೈರ್ಯುವಿನ ಈ ಕರ್ತವ್ಯಗಳು ಸರ್ವಮಾನ್ಯ ವಿಜ್ಞಾನಿಗಳ ಹಾಗೂ ವ್ಯಾವಹಾರಿಕ ಕಲೆಗಳ ಅಭಿವೃದ್ಧಿಗೆ ಕಾರಣವಾದವು. ಯಜ್ಞದ ಸಲುವಾಗಿ ಭೂಮಿಯನ್ನು ಅಳೆಯುವುದು; ಮೊದಲೇ ನಿರ್ಣಯಿಸಿದಂತೆ ಕ್ಷೇತ್ರ ಮತ್ತು ಗಾತ್ರಕ್ಕನುಸರಿಸಿ ಯಜ್ಞವೇದಿಕೆಯನ್ನು, ಸಭಾವೇದಿಕೆಯನ್ನು ರಚಿಸುವುದು; ಯಜ್ಞಗಳನ್ನು ಪ್ರತ್ಯಕ್ಷವಾಗಿ ಸಾಂಗಗೊಳಿಸುವುದರ ಸಲುವಾಗಿ ಯೋಗ್ಯ ಋತುಗಳನ್ನು, ಕಾಲಗಳನ್ನು ಗುರುತಿಸುವುದು ಇವೆಲ್ಲವುಗಳ ಜ್ಞಾನಕ್ಕಾಗಿ ಜ್ಯೋತಿಷ್ಯ (ಭೂಮಿತಿ, ಖಗೋಲ) ವೇದಾಂಗದ ಜ್ಞಾನ ನೀಡಲಾಗುತ್ತಿತ್ತು. ಅದ್ವೈರ್ಯುಗಳಲ್ಲಿ ಕೆಲವರು ಸಹಾಯಕ ಬ್ರಾಹ್ಮಣ ರಚನಾ ಭಾಗಗಳ ಜ್ಞಾನವನ್ನು ಪಡೆಯಬೇಕಾಗುತ್ತಿತ್ತು. ಹೀಗೆ ಅಂಗರಚನಾ ಶಾಸ್ತ್ರ (ವಿಶೇಷವಾಗಿ ಅಸ್ತಿರಚನಾಶಾಸ್ತ್ರ), ಶರೀರ ವಿಜ್ಞಾನ ಮತ್ತು ವೈದ್ಯಕೀಯ ಅಭ್ಯಾಸಕ್ಕೂ ಅವಕಾಶ ಕಲ್ಪಿಸಲಾಗಿತ್ತು.

ಅಥರ್ವವೇದದ ಬೋಧನೆ ಅವುಗಳ ಉಪವೇದಗಳಿಗನುಗುಣವಾಗಿ ಲೌಕಿಕ ಜ್ಞಾನ ನೀಡುವುದರೊಂದಿಗೆ ನಡೆಯುತ್ತಿತ್ತು. ಈ ವೇದ ಅಧ್ಯಾತ್ಮಿಕ ಜೀವನಕ್ಕೂ ಸಂಬಂಧಪಟ್ಟ ವಿಷಯಗಳನ್ನು ಹೊಂದಿದ್ದುದರಿಂದ ಅವುಗಳ ಜೊತೆಯಲ್ಲಿ ಔದ್ಯೋಗಿಕ ಜ್ಞಾನವನ್ನು ಶಾಸ್ತ್ರೀಯವಾಗಿ ನೀಡಲಾಗುತ್ತಿತ್ತು. ವೈದ್ಯಕೀಯ ಚಿಂತನೆಗಳಿಗಂತೂ ವಿಶೇಷ ಮಹತ್ವವೀಯಲಾಗುತ್ತಿತ್ತು. (ವಿಷಯಕ್ಕನುಗುಣವಾಗಿ) ಆಯುರ್ವೇದ ಇಲ್ಲಿ ಶಾಸ್ತ್ರೀಯವಾಗಿ ಬೆಳೆದು ಬರಲು ಸಹಾಯಕವಾಗುವ ಸಂಪೂರ್ಣ ಶಿಕ್ಷಣ ನೀಡಲಾಗುತ್ತಿತ್ತು. ಹೀಗೆಯೇ ಮೇಲೆ ಪಠ್ಯಕ್ರಮದಲ್ಲಿ ವಿವರಿಸಿದ ಎಲ್ಲ ಲೌಕಿಕ ವಿಷಯಗಳ ಜ್ಞಾನಕ್ಕೂ ಶಾಸ್ತ್ರೀಯ ಹಿನ್ನೆಲೆಯಲ್ಲಿ ಬೋಧನೆ ಮಾಡಲಾಗುತ್ತಿತ್ತು. ಈ ಬೋಧನೆಗೆ ಮೌಖಿಕ ವಿಧಾನ, ಪ್ರಶ್ನೋತ್ತರ ವಿಧಾನ, ಕಂಠಪಾಠ ಕ್ರಮ, ಚರ್ಚಾವಿಧಾನಗಳನ್ನು ಮುಖ್ಯವಾಗಿ ಬಳಸಲಾಗುತ್ತಿತ್ತು. ವೇದಗಳ ಜ್ಞಾನ ಬರವಣಿಗೆಯ ರೂಪದಲ್ಲಿ

Digitised by Bharatavani, CIIL

ಇರಲಿಲ್ಲ. ಗುರುವಿನಲ್ಲಿ ಕಂಠಸ್ಥವಾಗಿ ಮುಖೋದ್ಗತವಾದ ಜ್ಞಾನ ಶಿಷ್ಯರಿಗೆ ವರ್ಗಾವಣೆಯಾಗುತ್ತಿತ್ತು.

ಆ ಕಾಲದಲ್ಲಿ ಮುಂದುವರಿಯುತ್ತಿರುವ ಸಮಾಜದ ಅವಶ್ಯಕತೆಗಳಿಗನುಸರಿಸಿ ಧಾರ್ಮಿಕ ಸಾಹಿತ್ಯವನ್ನು ವಿಸ್ತ್ರತಗೊಳಿಸಿದ್ದಲ್ಲದೇ ಅನೇಕ ಪ್ರಕಾರದ ತರ್ಕ–ವಿತರ್ಕಗಳಿಗೆ ಇವು ಚಾಲನೆಯನ್ನು ಕೊಟ್ಟವು. ಲೌಕಿಕವಾಗಿ ಪ್ರಯೋಗಾತ್ಮಕವಾದ ಶಿಕ್ಷಣಕ್ಕೆ ವಿಶೇಷ ಮಹತ್ವವಾದ ಸ್ಥಾನಮಾನ ನೀಡಲಾಗಿತ್ತು. ಇದರ ಪರಿಣಾಮವಾಗಿ ಸರ್ವಮಾನ್ಯ ಶಾಸ್ತ್ರಗಳು ಮತ್ತು ಕಲೆಗಳು ಧಾರ್ಮಿಕ ಗುರಿಗಳಿಗೆ ಸಾಧಕವಾಗುವಂತೆ ಬೆಳೆದುಬಂದವು.

**ಬ್ರಾಹ್ಮಣಗಳ ಕಾಲದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳು:**

**ಪಠ್ಯಕ್ರಮ:** ಸಮಾಜ ಮುಂದುವರಿದಂತೆ ಧರ್ಮ ಹೆಚ್ಚು ಹೆಚ್ಚಾಗಿ ವಿಧಿ–ವಿಧಾನಗಳಲ್ಲಿಯೂ ಯಜ್ಞ–ಯಾಗಾದಿಗಳಲ್ಲಿಯೂ ಕೇಂದ್ರೀಕೃತವಾಯಿತು. ಇವುಗಳ ವಿವರಗಳೂ ವಿಸ್ತ್ರತಗೊಂಡವು, ಸಹಜವಾಗಿ ತರ್ಕ–ವಿತರ್ಕಗಳಿಂದ ನಿರ್ಣಯಿಸಲ್ಪಟ್ಟ ಈ ವಿವರಗಳನ್ನು ನಿಯತಗೊಳಿಸುವ, ನಿರ್ಧರಿಸುವ ಮತ್ತು ನಿತ್ಯನೂತನವಾಗಿಸುವಂತಹ ಯೋಗ್ಯ ಪಠ್ಯಗಳ ಅವಶ್ಯಕತೆಯುಂಟಾಯಿತು. ಇದು 'ಬ್ರಾಹ್ಮಣ'ಗಳೆಂಬ ಹೊಸ ಸಾಹಿತ್ಯದ ಉದಯಕ್ಕೆ ಅನುವು ಮಾಡಿಕೊಟ್ಟಿತು.

ಬ್ರಾಹ್ಮಣಗಳು ಸಾಹಿತ್ಯ ಪ್ರಪಂಚದಲ್ಲಿ ಅದ್ವಿತೀಯವೆನಿಸಿವೆ. ಇವು ಪುರೋಹಿತ್ಯದ ಸಾಹಿತ್ಯವಾಗಿದ್ದು ಸಂಕುಚಿತ ಪ್ರಾರ್ಥನೆಯಿಂದ ಕೂಡಿವೆ. ಈ ಬ್ರಾಹ್ಮಣ ಕೃತಿಗಳಲ್ಲಿ ವಿಧಿ–ವಿಧಾನಗಳ ಕರ್ಮಕಾಂಡವು ದ್ವಂದ್ವರೂಪದಲ್ಲಿ ಹಾಸುಹೊಕ್ಕಾಗಿದೆ. ಇವುಗಳ ನಿರ್ಮಾಣಕಾಲದ ಕುರಿತು ಆಧಾರ ದೊರಕಿಲ್ಲ.

ಬ್ರಾಹ್ಮಣಗಳೆಂದರೆ 'ಬ್ರಹ್ಮ' ಇಲ್ಲವೇ 'ಶ್ರದ್ಧೆ' ಹಾಗೂ ಪ್ರಾರ್ಥನೆಯ ಕುರಿತು ಉಲ್ಲೇಖಿಸುವ ಕೃತಿಗಳು. ಇವು ವೇದ ಮಂತ್ರಗಳ ವಿವರಣೆಯನ್ನು ಕೊಡುವುದರ ಜೊತೆಗೆ ವೈದಿಕ ಯಾಗಗಳ ವೈಜ್ಞಾನಿಕ, ಆದಿಭೌತಿಕ ಮತ್ತು ಆಧ್ಯಾತ್ಮಿಕ ಮೀಮಾಂಸೆಯನ್ನು ಕೊಡುತ್ತವೆ.

ಯಜ್ಞ ಒಂದು ವಿಶಿಷ್ಟವಾದ ವಿಜ್ಞಾನವಾಗಿದೆ. ಬ್ರಾಹ್ಮಣಗಳು ಈ 'ಯಜ್ಞವಿಜ್ಞಾನ'ದ ಬಗೆಗೆ ಇರುವ ಆಚಾರಗಳನ್ನು ಇಲ್ಲವೇ ಪ್ರಬಂಧಗಳನ್ನು ಒಳಗೊಂಡ ಪಠ್ಯಪುಸ್ತಕ ಸ್ವರೂಪಗಳಾಗಿವೆ. ಆಧ್ಯಾತ್ಮಿಕ ಮಹತ್ವವನ್ನು ಮನಗಂಡವನಿಗೆ ಯಜ್ಞದ ಧಾರ್ಮಿಕ ಮೌಲ್ಯ ಅಪಾರವಾದುದು. ಯಜ್ಞವು ತ್ಯಾಗದ ಒಂದು ವಿಜ್ಞಾನವಾಗಿದೆ. (Winternitz, 1987. p, 175)

ಬ್ರಾಹ್ಮಣಗಳು ಸಂಹಿತೆಗಳಿಗಿಂತ ಸ್ವರೂಪದಲ್ಲಿಯೂ ವಿಷಯ ವಿವೇಚನೆಯಲ್ಲಿಯೂ ವಿಶಿಷ್ಟವಾಗಿವೆ. ಸಂಹಿತೆಗಳು ಬಹುತೇಕವಾಗಿ ಛಂದೋಬದ್ಧವಾಗಿವೆ. ಬ್ರಾಹ್ಮಣಗಳು ಗದ್ಯಾತ್ಮಕ ಸಂಗ್ರಹವಾಗಿವೆ. ವೇದ ಪಾಠ್ಯಗಳು ಮತ್ತು ಅವುಗಳಿಗೆ ಸಂಬಂಧಿಸಿದ ವಿಧಿ–ವಿಧಾನಗಳಲ್ಲಿ ಇರುವ ಸಂಬಂಧವನ್ನು ವಿವರಿಸುವುದು ಹಾಗೂ ಪ್ರತಿಯೊಂದರ ಸಾಂಕೇತಿಕ ಅರ್ಥವನ್ನು ತಿಳಿಸುವುದು ಬ್ರಾಹ್ಮಣಗಳ ಮುಖ್ಯ ಉದ್ದೇಶವಾಗಿದೆ.

ಬ್ರಾಹ್ಮಣ ಪಾಠ್ಯಗಳು ಎರಡು ವಿಧದ ವಿಷಯ ವಸ್ತುವಿನಿಂದ ಕೂಡಿವೆ. ಅವುಗಳೆಂದರೆ

1) ವಿಧಿ

2) ಅರ್ಥವಾದ. 'ವಿಧಿ'ಯನ್ನು ಹೇತು, ನಿರುಕ್ತಿ, ಸ್ತುತಿ ಮತ್ತು ಆಖ್ಯಾನಗಳು ವಿಶದಪಡಿಸಿ ಪೋಷಿಸುತ್ತವೆ. ಇವು ವೇದದ ಕರ್ಮಕಾಂಡದಲ್ಲಿ ನಿರೂಪಿಸಿದ ವ್ರತಗಳಿಗೆ ಸಂಬಂಧಿಸಿವೆ. 'ವಿಧಿ' ವಿಭಾಗವು ಒಟ್ಟಾರೆ ಯಜ್ಞ ಮಾಡುವದಕ್ಕೆ ಸಂಬಂಧಿಸಿದ ಪ್ರಾಯೋಗಿಕ ನಿರ್ದೇಶನಗಳನ್ನು ಒಳಗೊಂಡಿದೆ. 'ಅರ್ಥವಾದ'ವು ವಿಧಿವಚನಗಳನ್ನು ಪುಷ್ಟೀಕರಿಸುವ ವಿಭಾಗವಾಗಿದೆ. ಈ ವಿಭಾಗವು ಕರ್ಮಪದ್ಧತಿಯ ತಾಂತ್ರಿಕ–ಕಟ್ಟುಪಾಡುಗಳ ಬಂಧನದಿಂದ ಮುಕ್ತವಾಗಿದ್ದು ಪೌರಾಣಿಕ ಕಥೆಗಳು, ಮಾನವ ಕುಲ ಸಂಬಂಧವಾದ ಬೋಧನೆಗಳು, ತತ್ವಜ್ಞಾನದ ಚರ್ಚೆಗಳು, ಐತಿಹಾಸಿಕ ಘಟನೆಗಳು, ವ್ಯಾಕರಣ ಭಾಗಗಳು ಇವು ಮುಂತಾದವುಗಳ ಮೂಲಕ ಅರ್ಥವಿವರಣೆ ನೀಡಿ ಬ್ರಾಹ್ಮಣ ಸಾಹಿತ್ಯದ ಮೌಲ್ಯ, ಗಾತ್ರ ಹಾಗೂ ವಿವಿಧತೆಗಳಿಗೆ ಪೂರಕವಾಗುವ ವಿಶಾಲವಾದ ಬೌದ್ಧಿಕ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ನಾಲ್ಕು ವೇದಗಳು ಒಟ್ಟೂ ಹತ್ತು ಬ್ರಾಹ್ಮಣಗಳನ್ನು ಒಳಗೊಂಡಿವೆ.

**i) ಋಗ್ವೇದ :** ಅ) ಐತರೇಯ ಬ್ರಾಹ್ಮಣ, ಬ) ಶಾಂಖಾಯನ ಬ್ರಾಹ್ಮಣ

**ii) ಸಾಮವೇದ:** ಅ) ತಾಂಡ್ಯಬ್ರಾಹ್ಮಣ, ಬ) ಷಡಂಗ ಬ್ರಾಹ್ಮಣ, ಕ) ಅದ್ಭೂತ ಬ್ರಾಹ್ಮಣ, ಡ) ಛಾಂದೋಗ್ಯ ಬ್ರಾಹ್ಮಣ,

ಇ) ತಲ್ವಕಾರ ಬ್ರಾಹ್ಮಣ

iii) **ಯಜುರ್ವೇದ:** ಅ) ತೈತ್ತಿರೀಯ ಬ್ರಾಹ್ಮಣ, ಬ) ಶತಪಥ ಬ್ರಾಹ್ಮಣ

iv) **ಅಥರ್ವವೇದ:** ಅ) ಗೋಪಥ ಬ್ರಾಹ್ಮಣ

ಈ ಎಲ್ಲಾ ಬ್ರಾಹ್ಮಣಗಳು ಯಜ್ಞವಿಜ್ಞಾನವನ್ನು ವಿವರಿಸುತ್ತವೆ ಎಂಬುದು ಸತ್ಯ. ಆದರೆ ಕೇವಲ ಯಜ್ಞಸಂಬಂಧವಾದ ವಿಚಾರವನ್ನೇ ಮಾಡುತ್ತಿವೆಯೆಂದರೂ ತಪ್ಪಾಗಬಹುದು. ಪರಮಸತ್ಯವನ್ನು ಅನ್ವೇಷಿಸುವ ಒಂದು ಅಂತರಂಗ ದೃಷ್ಟಿ ಅಲ್ಲಿದೆ; ಶ್ರದ್ಧಾಮಯವಾದ ಅನುಶೀಲನೆ ಇದೆ; ಭಗವಂತನನ್ನು ಒಲಿಸಿಕೊಳ್ಳುವ ಅನೇಕಾನೇಕ ವಿಧಾನಗಳು ಇಲ್ಲಿ ಹಾಸುಹೊಕ್ಕಾಗಿವೆ.

**ಬೋಧನಾ ವಿಧಾನಗಳು**

ಈಗಾಗಲೇ ಪ್ರತಿಪಾದಿಸಿದಂತೆ ಬ್ರಾಹ್ಮಣಗಳು ವೇದಗಳ ಮುಂದುವರಿದ ವಿಧಿವತ್ತಾದ ಭಾಗಗಳಾಗಿವೆ. ಆದ್ದರಿಂದ ಬ್ರಾಹ್ಮಣಗಳ ಅಧ್ಯಯನಕ್ಕೆ ಮೂಲಭೂತವಾಗಿ ವೇದಗಳ ಜ್ಞಾನವಿರಬೇಕಾದುದು ಅವಶ್ಯವಾಗಿತ್ತು. ಹೀಗಾಗಿ ಋಗ್ಯಜುಸ್ಸಾಮಾಥರ್ವವೇದಗಳ

Digitised by Bharatavani, CIIL

ಮೂಲಭೂತ ಜ್ಞಾನ ಕೊಡುವುದರಿಂದ ಬೋಧನೆ ಪ್ರಾರಂಭವಾಗುತ್ತಿತ್ತೆನ್ನಬಹುದು. ಜೊತೆ ಜೊತೆಯಲ್ಲಿ ವೇದಾರ್ಥ ವಿವೇಚನೆ ಮಾಡುವ ಬ್ರಾಹ್ಮಣಗಳ ಅಧ್ಯಯನವು ವಿಶಾಲವಾಗಿ ಸಾಗುತ್ತಿತ್ತು.

ಪ್ರಾತ್ಯಕ್ಷಿಕವಾಗಿ ಯಜ್ಞಗಳ ವಿಧಿವತ್ತಾದ ಆಚರಣೆಗಳೊಂದಿಗೆ ಬೋಧನೆ ಸಾಗುತ್ತಿತ್ತು. ಗುರುಗಳೊಂದಿಗೇ ಗುರುಕುಲಗಳಲ್ಲಿ ವಾಸಿಸುತ್ತಿದ್ದ ವಿದ್ಯಾರ್ಥಿಗಳು ಗುರು ಆಚರಿಸುತ್ತಿದ್ದ ಯಜ್ಞಕಾರ್ಯಕ್ಕೆ ಸಂಪೂರ್ಣ ಸಹಾಯಕರಾಗಿ ಕಾರ್ಯನಿರ್ವಹಿಸುತ್ತ ಕ್ರಮೇಣವಾಗಿ ಸ್ವತಂತ್ರವಾಗಿ ವಿಧಿವತ್ತಾಗಿ ಯಜ್ಞ-ಯಾಗಾದಿಗಳನ್ನು ಅರ್ಥಪೂರ್ಣವಾಗಿ ಆಚರಿಸುವ ಯೋಗ್ಯತೆ ಗಳಿಸಿಕೊಳ್ಳುತ್ತಿದ್ದರು. ಸ್ತ್ರೀಯರಿಗೆ ಮನೆಗಳಲ್ಲಿಯೇ ವೇದಾಭ್ಯಾಸ ಮಾಡಿದ ಹಿರಿಯರು ಮಾಡುವ ಯಜ್ಞಯಾಗಾದಿಗಳಿಂದ ಈ ಜ್ಞಾನವು ದೊರಕುತಿತ್ತು. ಈ ರೀತಿಯಲ್ಲಿ ನೈಜವಾಗಿ ಯಜ್ಞ ನೆರವೇರಿಸುವ ಸ್ಥಳಗಳೇ ಪ್ರಾತ್ಯಕ್ಷಿಕ ಶಿಕ್ಷಣದ ಅಧ್ಯಯನ ಸ್ಥಳಗಳಾಗಿದ್ದವು. ಮುಂದೆ ತಮ್ಮ ಜೀವನದಲ್ಲಿ ವ್ಯಾವಹಾರಿಕವಾಗಿ ಪೌರೋಹಿತ್ಯವನ್ನು ಯೋಗ್ಯವಾಗಿ, ಅರ್ಥಪೂರ್ಣವಾಗಿ ಆಚರಿಸಲು ಯೋಗ್ಯವಾದ ಶಿಕ್ಷಣ ಕೊಡಲಾಗುತ್ತಿತ್ತು. ಕಟ್ಟುನಿಟ್ಟಾದ ಬ್ರಹ್ಮಚರ್ಯಪಾಲನೆ ಕಡ್ಡಾಯವಾಗಿತ್ತು. ಯಾವುದೇ ಕಾರಣಕ್ಕಾಗಿ ವಿದ್ಯಾರ್ಥಿ ಇದನ್ನು ತಪ್ಪುವಂತಿರಲಿಲ್ಲ.

ಉಚ್ಚಮಟ್ಟದ ಶಿಕ್ಷಣದಲ್ಲಿ ನಾಲ್ಕೂ ವೇದಗಳಿಗೆ ಸಂಬಂಧಪಟ್ಟ ಬ್ರಾಹ್ಮಣಗಳಲ್ಲಿ ಐಚ್ಛಿಕವಾಗಿ ಪೌರೋಹಿತ್ಯದ ಆಧಾರದ ಮೇಲೆ ಆಸಕ್ತಿಯಿರುವ ಬ್ರಾಹ್ಮಣಗಳ ಶಿಕ್ಷಣವನ್ನು ವಿದ್ಯಾರ್ಥಿ ಆರಿಸಿಕೊಳ್ಳಬಹುದಾಗಿತ್ತು. ಇಲ್ಲಿಯೂ ಪ್ರಾಯೋಗಿಕ ಜ್ಞಾನಕ್ಕೆ ಮಹತ್ವ ಕೊಡಲಾಗುತ್ತಿತ್ತು.

ತನ್ನ ವಿದ್ಯಾರ್ಥಿ ತಾನು ಕಲಿಯಬೇಕಾದ ಶಿಕ್ಷಣದಲ್ಲಿ ಪರಿಪೂರ್ಣನಾಗಿದ್ದಾನೆ ಎಂಬುದಾಗಿ ನಿರಂತರ ಮೌಲ್ಯಮಾಪನದ ಮೂಲಕ ಅರಿತುಕೊಂಡು ಕೆಲವು ಪರೀಕ್ಷೆಗಳನ್ನು ನೀಡಿ ತನಗೆ ಸಮಾಧಾನವಾದಾಗ ಗುರು 'ಸಮಾವರ್ತನ' ಸಮಾರಂಭದ ಮೂಲಕ ವಿದ್ಯಾರ್ಥಿಯನ್ನು ಬೀಳ್ಕೊಡುತ್ತಿದ್ದನು.

**ಆರಣ್ಯಕಗಳ ಕಾಲದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳು:**

ಪಠ್ಯಕ್ರಮ: ಆರಣ್ಯಕಗಳು ಬ್ರಾಹ್ಮಣಗಳ ಪರಿಶಿಷ್ಟ ಭಾಗಗಳಾಗಿವೆ. ಅರಣ್ಯದಲ್ಲಿ ಬೋಧಿಸುತ್ತಿದ್ದುದರಿಂದ ಹಾಗೂ ಅಧ್ಯಯನ ಮಾಡುತ್ತಿದ್ದುದರಿಂದ ಇವುಗಳಿಗೆ 'ಆರಣ್ಯಕ'ಗಳೆಂದು ಹೆಸರು ಬಂದಿತೆಂಬುದಾಗಿ ಆರಣ್ಯಕ ಗ್ರಂಥವಾದ ತೈತ್ತರೀಯ ಆರಣ್ಯಕದಲ್ಲಿ ಉಲ್ಲೇಖ ದೊರಕುತ್ತದೆ.

ಗೃಹಸ್ಥ ಜೀವನವನ್ನು ಸ್ವೀಕರಿಸದೇ ಜ್ಞಾನೋಪಾಸನೆಯಲ್ಲಿ ತೊಡಗಿದ ಬ್ರಹ್ಮಚಾರಿಗಳಿಗೆ 'ಅರಣ'ರು ಅಥವಾ 'ಅರಣ ಮಾನಸರು' ಎಂದು ಕರೆಯುತ್ತಿದ್ದರು. ಇವರು ಜನನಿಬಿಡ ಪ್ರದೇಶಗಳಿಂದ ದೂರದ ಅಡವಿಯಲ್ಲಿ ವಾಸಿಸುತ್ತಿದ್ದರು. ಈ ಅಡವಿಗಳಿಗೆ 'ಅರಣ್ಯ' ಎಂದು ಕರೆಯುತ್ತಿದ್ದರು. ಈ ವಿದ್ವಾಂಸ ಸಾಧುಗಳು ಬ್ರಹ್ಮ, ಸೃಷ್ಟಿ, ಆತ್ಮ ಇಲ್ಲವೇ ಅಮರತ್ವ (ಮುಕ್ತಿ) ಮೊದಲಾದ ವಿಚಾರಗಳ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತಿದ್ದರು. ಈ ಬ್ರಹ್ಮಜ್ಞಾನಿಗಳಾದ ಋಷಿಗಳ ತತ್ತ್ವಜ್ಞಾನಪೂರಿತ ಚಿಂತನೆಗಳ ಸಂಗ್ರಹಗಳು ಈ ಆರಣ್ಯಕಗಳು.

ಬ್ರಾಹ್ಮಣಗಳ ಮುಖ್ಯ ವಿಷಯ ಯಜ್ಞಗಳಾದರೆ ಆರಣ್ಯಕಗಳ ಮುಖ್ಯ ವಿಷಯ ಯಜ್ಞಾಂತರ್ಗತವಾದ ಆಧ್ಯಾತ್ಮಿಕ ತತ್ತ್ವವಿಚಾರ. ಆಧ್ಯಾತ್ಮಿಕ ಪರಿಪೂರ್ಣತೆಯ ಸಾಧನೆಯೊಂದಿಗೆ ಆತ್ಮಸಾಕ್ಷಾತ್ಕಾರದ ಗುರಿ ಹೊಂದಿದ್ದ ಶಿಕ್ಷಣ ವ್ಯವಸ್ಥೆ ಕರ್ಮಕಾಂಡದಿಂದ ಜ್ಞಾನಕಾಂಡದತ್ತ ಒಲವು ತೋರಿತು. ಆರಣ್ಯಕಗಳು ಆಧ್ಯಾತ್ಮಶಾಸ್ತ್ರದ ಮತ್ತು ಗೂಢಾರ್ಥ ಸತ್ಯಗಳ ವಾಹಕಗಳಾಗಿದ್ದು ಜ್ಞಾನಕಾಂಡಗಳೆನಿಸಿವೆ.

ಋಗ್ವೇದ ಹಾಗೂ ಯಜುರ್ವೇದದ ಪ್ರತಿಯೊಂದು ಬ್ರಾಹ್ಮಣವೂ ಒಂದೊಂದು ಆರಣ್ಯಕಗಳನ್ನು ಒಳಗೊಂಡಿದೆ.

**ಋಗ್ವೇದ:** i) ಐತರೇಯ ಬ್ರಾಹ್ಮಣ: ಐತರೇಯ ಆರಣ್ಯಕ: ಐತರೇಯ ಆರಣ್ಯಕವು ಐದು ಉಪ ಅರಣ್ಯಗಳನ್ನು ಹೊಂದಿದ್ದು ಇವು ಒಟ್ಟು ಹದಿನೆಂಟು ಅಧ್ಯಾಯಗಳನ್ನು ಒಳಗೊಂಡಿವೆ. ಇವುಗಳೆಲ್ಲಾ ಗದ್ಯಮಯವಾಗಿವೆ. ಈ ಒಂದೊಂದು ಅಧ್ಯಾಯವೂ ಅನೇಕಾನೇಕ ಖಂಡಗಳನ್ನು ಹೊಂದಿವೆ. ಈ ಎಲ್ಲ ಆಧ್ಯಾಯ, ಖಂಡಗಳೂ ವೇದಪುರುಷನ ವರ್ಣನೆಯನ್ನು ಮುಖ್ಯ ವಿಷಯವಾಗಿ ಒಳಗೊಂಡಿವೆ.

**ii) ಶಾಂಖಾಯನ ಬ್ರಾಹ್ಮಣ:** ಶಾಂಖಾಯನ ಆರಣ್ಯಕ/ ಕೌಷೀತಕಿ ಆರಣ್ಯಕ: ಇದರಲ್ಲಿ 15 ಅಧ್ಯಾಯಗಳಿವೆ, 137 ಖಂಡಗಳಿವೆ. ಇವುಗಳಲ್ಲಿ 3, 4, 5, 6 ನೇ ಅಧ್ಯಾಯಗಳು ಕೌಶೀತಕಿ ಉಪನಿಷತ್ತುಗಳೆಂದು ಪ್ರಸಿದ್ಧವಾಗಿವೆ. ಇದು ವಿಷಯ ವಿವೇಚನೆಯಲ್ಲಿ ಐತರೇಯ ಆರಣ್ಯಕವನ್ನೇ ಅನುಸರಿಸುತ್ತದೆ.

**ಯಜುರ್ವೇದ:** i) ತೈತ್ತಿರೀಯ ಬ್ರಾಹ್ಮಣ-ತೈತ್ತಿರೀಯ ಆರಣ್ಯಕ: ಇದು ಅತ್ಯಂತ ಪ್ರಾಚೀನವಾದ ಆರಣ್ಯಕವಾಗಿದೆ. ಉಳಿದ ಆರಣ್ಯಗಳ ವಿಕಸನಕ್ಕೆ ಮಾದರಿಯಾಗಿದೆ. ಇದರಲ್ಲಿ ಹತ್ತು ಪ್ರಪಾಠಕಗಳಿವೆ. ಈ ಪ್ರಪಾಠಕಗಳನ್ನು ಅನುವಾಕಗಳನ್ನಾಗಿ ವಿಭಾಗಿಸಲಾಗಿದೆ. ಇದು ಕೇವಲ ಒಂದೇ ವಿಚಾರಕ್ಕೆ ಸೀಮಿತವಾಗಿರದೇ ಬ್ರಹ್ಮಜ್ಞಾನಕ್ಕೆ ಸಂಬಂಧಪಟ್ಟ ಅನೇಕ ವಿಶಿಷ್ಟ ವಿಚಾರಗಳ ಸಂಗ್ರಹವಾಗಿದೆ.

ii) ಶತಪಥ ಬ್ರಾಹ್ಮಣ-ಬ್ರಾಹ್ಮಣದ ಕೊನೆಯ ಗ್ರಂಥವೇ ಅರಣ್ಯಕವಾಗಿದೆ

ಶುಕ್ಲಯಜುರ್ವೇದ ಮತ್ತು ಕೃಷ್ಣ ಯಜುರ್ವೇದಗಳು ಕ್ರಮವಾಗಿ ಬೃಹದಾರಣ್ಯಕ ಅರಣ್ಯಕ ಮತ್ತು ಮೈತ್ರಾಯಣೀಯ ಆರಣ್ಯಕಗಳನ್ನು ಹೊಂದಿದ್ದರೂ ಇವು ಉಪನಿಷತ್ತುಗಳೆನಿಸಿ ಉಪನಿಷತ್ತುಗಳಲ್ಲಿ ಸೇರ್ಪಡೆಯಾಗಿವೆ.

**ಬೋಧನಾ ವಿಧಾನಗಳು**

ಈಗಾಗಲೇ ಪ್ರತಿಪಾದಿಸಿದಂತೆ ಆರಣ್ಯಕಗಳ ಶಿಕ್ಷಣ ಅರಣ್ಯ ಪ್ರದೇಶದ ಪ್ರಶಾಂತವಾದ ವಾತಾವರಣದಲ್ಲಿ ಬ್ರಹ್ಮಜ್ಞಾನಿಗಳಾದ

Digitised by Bharatavani, CIIL

ಋಷಿಗಳಿಂದ ಕೊಡಲ್ಪಡುತ್ತಿತ್ತು. ಆರಣ್ಯಕಗಳು ವೇದ, ಬ್ರಾಹ್ಮಣಗಳಿಗೆ ಸಂಬಂಧಪಟ್ಟ ಪರಿಶಿಷ್ಟ ವಿಭಾಗಗಳಾಗಿರುವುದರಿಂದ ವೇದ ಬ್ರಾಹ್ಮಣಗಳ ಮೂಲಭೂತ ಅಧ್ಯಯನ ಕಡ್ಡಾಯವಾಗಿತ್ತು. ಆರಣ್ಯಕಗಳು ಆಧ್ಯಾತ್ಮಿಕ ತತ್ತ್ವವಿಚಾರಗಳಂತಹ ದಾರ್ಶನಿಕ ವಿಚಾರಗಳನ್ನು ಒಳಗೊಂಡಿರುವುದರಿಂದ ವಿದ್ಯಾರ್ಥಿಗೆ ಉಚ್ಚಮಟ್ಟದ ಶಿಕ್ಷಣದ ಹಂತದಲ್ಲಿಯೇ ಇವು ಬೋಧಿಸಲ್ಪಡುತ್ತಿದ್ದವು.

'ಅರಣ'ರೆನಿಸಿದ ಋಷಿಗಳೊಂದಿಗೇ ಅರಣ್ಯಗಳಲ್ಲಿ ಅವರ ಗುರುಕುಲಗಳೆನಿಸಿದ ಆಶ್ರಮಗಳಲ್ಲಿ ವಾಸಿಸಿದ ವಿದ್ಯಾರ್ಥಿಗಳಿಗೆ ಸರ್ವಶ್ರೇಷ್ಠಜ್ಞಾನ ಬೋಧಿಸಲಾಗುತ್ತಿತ್ತು. ಬೋಧಿಸಲಾಗುವ ವಿಷಯ–ವಸ್ತುಗಳು ಗೂಢಾರ್ಥ ವಿಷಯಗಳಾಗಿರುವುದರಿಂದ ವಾನಪ್ರಸ್ಥ ಪ್ರತಿಜ್ಞೆ ತೊಟ್ಟ ಬ್ರಹ್ಮಜ್ಞಾನಾಕಾಂಕ್ಷಿಯಾಗಿ ಆಗಮಿಸಿದ ವಿದ್ಯಾರ್ಥಿಗಳಿಗೆ ಅರಣ್ಯ ಪ್ರದೇಶದಲ್ಲಿ ರಹಸ್ಯಮಯವಾಗಿಯೇ ಅವುಗಳ ಬೋಧನೆ ಸಾಗುತ್ತಿತ್ತು. ಆರಣ್ಯಕಗಳನ್ನು ವಾನಪ್ರಸ್ಥರಿಗೆ ಮಾತ್ರ ಬೋಧಿಸಲಾಗುತ್ತಿತ್ತೆಂಬುದಾಗಿ ಮ್ಯಾಕ್ಸ್‌ಮುಲರನು ಅಭಿಪ್ರಾಯ ಪಡುತ್ತಾನೆ. (Mookerji, 1989. p, 150) ಆಧ್ಯಾತ್ಮಿಕ ತತ್ತ್ವಜ್ಞಾನ ಚಿಂತನ ಮಾಡುತ್ತಾ ಪರಮಾತ್ಮನ ಧ್ಯಾನದಲ್ಲಿ ಮುಕ್ತಿಮಾರ್ಗ ಕಂಡುಕೊಳ್ಳಲು ಅಪೇಕ್ಷಿಸಿ ಸನ್ಯಾಸ ಸ್ವೀಕರಿಸಿ ತಮ್ಮ ಜೀವನವೆಲ್ಲ ಧ್ಯಾನ, ಚಿಂತನಗಳಲ್ಲೇ ಕಳೆಯುವವರು ವಾನಪ್ರಸ್ಥರು. ಆರಣ್ಯಕಗಳ ಆಧ್ಯಾತ್ಮಿಕ ವಿಚಾರಗಳನ್ನು ನೇರವಾಗಿ ಬೋಧಿಸದೇ ಚರ್ಚೆ–ವಿಚರ್ಚೆಗಳೊಂದಿಗೆ ಬೋಧನೆ ಸಾಗುತ್ತಿತ್ತು. ಚರ್ಚಾವಿಧಾನವನ್ನು ವಿಶೇಷವಾಗಿ ಬಳಸಲಾಗುತ್ತಿತ್ತು. 'ಬ್ರಹ್ಮ'ನ ಕುರಿತಾಗಿರುವ ರಹಸ್ಯಮಯ ವಿಚಾರಗಳನ್ನು ಗುರುಗಳು ರಹಸ್ಯಮಯವಾಗಿಯೇ ಕಟ್ಟುನಿಟ್ಟಾದ ಸನ್ಯಾಸಾಶ್ರಮದ ಆಚರಣೆಗಳನ್ನು ವಿಧಿಸಿ ಶಿಷ್ಯನಿಗೆ ವರ್ಗಾವಣೆ ಮಾಡುತ್ತಿದ್ದರು. ಈ ರೀತಿಯಲ್ಲಿ ಆರಣ್ಯಕಗಳ ಗೂಢಾರ್ಥಗಳು ಗೂಢವಾಗಿ ಅದಕ್ಕನುಗುಣವಾದ ಬೋಧನಾ ಕ್ರಮದ ಮೂಲಕ ಕಲಿಸಲ್ಪಡುತ್ತಿದ್ದವು.

**ಉಪನಿಷತ್ಕಾಲದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳು:**

**ಪಠ್ಯಕ್ರಮ:** ಉಪನಿಷತ್ತುಗಳು ಅರಣ್ಯಕಗಳ ಮುಂದುವರಿದ ಜ್ಞಾನದ ವಿಶಿಷ್ಟವಾದ ಭಾಗಗಳೇ ಆಗಿವೆ. ವೇದಗಳ ಅಂತಿಮ ಭಾಗಗಳೂ ಆಗಿ ಅವುಗಳ ಸಾರತಮವಾದ ಸಿದ್ಧಾಂತಗಳನ್ನು ಪ್ರತಿಪಾದಿಸುವ ಜ್ಞಾನವಾಹಿನಿಗಳಾಗಿ ವೇದಾಂತಗಳೆಂದು ವಿಖ್ಯಾತವಾಗಿವೆ. 'ವೇದಾಂತ'ವೆಂದರೆ ವೇದಗಳ ಕಟ್ಟಕಡೆಯ ನಿರ್ಣಯ, ವೇದಗಳ ಪರಮಲಕ್ಷ್ಯ ಅಥವಾ ವೇದ ವಿಹಿತವಾದ ಮಾನವ ಜೀವಿತದ ಪರಮ ಲಕ್ಷ್ಯವನ್ನು ಬೋಧಿಸುವ ಶಾಸ್ತ್ರ. ಈ ಶಾಸ್ತ್ರ ಭಾರತೀಯ ತತ್ವಜ್ಞಾನದ ಹಾಗೂ ಧರ್ಮಸಿದ್ಧಾಂತಗಳ ಮೂಲಗಳಾಗಿದೆ. ತತ್ವದೃಷ್ಟಿ ಹಾಗೂ ಸಾಹಿತ್ಯದೃಷ್ಟಿಯಿಂದಲೂ ಉಪನಿಷತ್ತುಗಳು ಮೇರುಕೃತಿಗಳೆನಿಸಿವೆ.

ಬ್ರಾಹ್ಮಣಗಳ ಕಾಲದಲ್ಲಿ 'ಯಜ್ಞವಿಜ್ಞಾನ'ವು ಪ್ರಧಾನವಾಗಿ ಬೆಳೆದು ಬಂದಿದ್ದನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಇಲ್ಲಿ ನಡೆಯುತ್ತಿದ್ದ ಯಾಗಗಳಲ್ಲಿ ಪಶುಗಳ ಬಲಿಯೂ ಭಗವಂತನನ್ನು ಸಂಪ್ರೀತಗೊಳಿಸುವ ಕಾರ್ಯದ ಒಂದು ಭಾಗವಾಗಿತ್ತು. ಸಮಾಜ ಮುಂದುವರಿದಂತೆ ಆರಣ್ಯಕಗಳ ಕಾಲದಲ್ಲಿ ಆಧ್ಯಾತ್ಮಿಕ ಚಿಂತನೆಯ ಓಘ ಬೇರೆ ದಿಕ್ಕಿನಲ್ಲಿ ಪ್ರವಹಿಸತೊಡಗಿತು. ಇದರ ಪರಿಣಾಮವಾಗಿ ಪಶುಮಾರಣಗಳಿಲ್ಲದೇ ಮಾನವರು ಪರಮ ಪುರುಷಾರ್ಥವನ್ನು ಸಾಧಿಸಬಹುದೆಂಬ ವಿಚಾರದಲ್ಲಿ ಮೀಮಾಂಸೆ ಬೆಳೆಯಿತು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಋಗ್ವೇದದಲ್ಲಿ ಅಲ್ಲಲ್ಲಿ ಪ್ರತಿಪಾದಿತವಾದರೂ ಅದರ ಸಮಗ್ರ ಸ್ವರೂಪ ಉಪನಿಷತ್ತುಗಳಲ್ಲಿ ಕಂಡುಬರುತ್ತದೆ. ಬಹಳ ಸರಳವೂ ಮಾರ್ಮಿಕವೂ ಆದ ಶೈಲಿಯಲ್ಲಿ ಪ್ರಕೃತಿ–ಪುರುಷ ಹಾಗೂ ಭಗವಂತನ ಸ್ವರೂಪ ಸಂಬಂಧಗಳನ್ನು ಇದಕ್ಕೆ ಮೀರಿದ ಪರಮಾತ್ಮ ತತ್ತ್ವವನ್ನೂ ವಿವೇಚಿಸುವ ಉನ್ನತವಾದ ದಾರ್ಶನಿಕ ವಿಚಾರಧಾರೆಯನ್ನು ಸಮಗ್ರವಾಗಿ ಪ್ರತಿಪಾದಿಸುವುದು ಉಪನಿಷತ್ತುಗಳ ವೈಶಿಷ್ಟ್ಯವಾಗಿದೆ.

ಈ ಉಪನಿಷತ್ತುಗಳು ಪ್ರತಿಪಾದಿಸುವ ತತ್ತ್ವದರ್ಶನ ಮಾನವ ಕೋಟಿಯು ಮುಟ್ಟಬಹುದಾದ ಅತ್ಯುನ್ನತ ಮಟ್ಟವನ್ನು ಪ್ರತಿಬಿಂಬಿಸುತ್ತವೆ. ಇಲ್ಲಿಯೂ ವಿಚಾರಧಾರೆ ಅನೇಕ ದೇವತೋಪಾಸನೆಯಿಂದ ಏಕ ದೇವತೋಪಾಸನೆಯತ್ತ ಸಾಗಿದೆ. ಉಪನಿಷತ್ತುಗಳು ಗದ್ಯಮಯವಾಗಿದ್ದು ಸಂಸ್ಕೃತ ಭಾಷೆಯನ್ನು ಎಷ್ಟು ವಿಷಯವತ್ತರವಾಗಿ ಗದ್ಯದಲ್ಲಿ ಬಳಸಬಹುದೆಂಬುದಕ್ಕೆ ನಿದರ್ಶನಗಳಂತಿವೆ. ಕೇವಲ ವೈದಿಕವಾಙ್ಮಯದಲ್ಲಿ ಮಾತ್ರವಲ್ಲ ವಿಶ್ವವಾಙ್ಮಯದಲ್ಲಿಯೇ ಇವು ಅತ್ಯುನ್ನತ ಸ್ಥಾನವನ್ನು ಪಡೆದಿವೆ. ಉಪನಿಷತ್ತುಗಳ ಸಂಖ್ಯೆಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಅನೇಕ ವಿದ್ವಾಂಸರು 108 ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಕೆಲವೆಡೆ ಉಪನಿಷತ್ತುಗಳ ಸಂಖ್ಯೆ ಋಷಿಗಳ ಹೆಸರಿನಲ್ಲಿ ಬೆಳೆಯುತ್ತ ಹೋಗಿ ಈಗ ಇನ್ನೂರಿಪ್ಪತ್ತು ಇವೆ ಎಂಬುದಾಗಿ ಉಲ್ಲೇಖಗಳು ದೊರಕುತ್ತವೆ. ಇವುಗಳಲ್ಲಿ ಪ್ರಾಚೀನವಾದವು ಹಾಗೂ ಮಹತ್ವಪೂರ್ಣವಾದವು ಎಂಬುದಾಗಿ ವಿದ್ವಾಂಸರ ಸರ್ವಸಮ್ಮತಿಯಿಂದ ಸ್ವೀಕರಿಸಲ್ಪಟ್ಟವು ದಶೋಪನಿಷತ್ತುಗಳು. ನಾಲ್ಕು ವೇದ ಸಂಹಿತೆಗಳಿಗೆ ಸಂಬಂಧಪಟ್ಟಂತೆ ಅವು ಈ ಕೆಳಗಿನಂತಿವೆ.

**i) ಋಗ್ವೇದ:** ಅ) ಐತರೇಯ ಉಪನಿಷತ್

**ii) ಸಾಮವೇದ:** ಅ) ಛಾಂದೋಗ್ಯ ಉಪನಿಷತ್, ಬ) ಕೇನೋಪನಿಷತ್

**iii) ಯಜುರ್ವೇದ :** ಅ) ತೈತ್ತಿರೀಯ ಉಪನಿಷತ್, ಬ) ಕಠೋಪನಿಷತ್ (ಕಾಠಕ), ಕ) ಬೃಹದಾರಣ್ಯಕ ಉಪನಿಷತ್, ಡ) ಈಶಾವಾಸ್ಯೋಪನಿಷತ್

**iv) ಅಥರ್ವವೇದ :** ಅ) ಮುಂಡಕೋಪನಿಷತ್, ಬ) ಪ್ರಶ್ನೋಪನಿಷತ್, ಕ) ಮಾಂಡುಕ್ಯೋಪನಿಷತ್

ಈ ದಶೋಪನಿಷತ್ತುಗಳ ಹೊರತಾಗಿ ಯಜುರ್ವೇದ ಸಂಹಿತೆಗೆ ಸಂಬಂಧಪಟ್ಟ ಮೈತ್ರಾಯಿಣೀಯ ಉಪನಿಷತ್ ಹಾಗೂ ಶ್ವೇತಾಶ್ವತರ ಉಪನಿಷತ್ತುಗಳು ಪ್ರಾಚೀನವಾದವುಗಳೆಂಬುದಾಗಿ ವಿದ್ವಾಂಸರು ಮಾನ್ಯ ಮಾಡಿದ್ದಾರೆ.

Digitised by Bharatavani, CIIL

ಆಯಾ ವೇದ ಸಂಹಿತೆಗೆ ಸಂಬಂಧಪಟ್ಟ ಉಪನಿಷತ್ತುಗಳು ಮೂಲಸಂಹಿತೆಯಲ್ಲಿರುವ ಅತಿ ರಹಸ್ಯಮಯ ಬ್ರಹ್ಮವಿದ್ಯೆಯನ್ನೇ ವಿಶ್ವಮೋಹಕ ಭಾಷೆಯಲ್ಲಿ ಸಾರುತ್ತವೆ. ಕೆಲವು ಉಪನಿಷತ್ತುಗಳು ಮನಮೋಹಕ ಕಾವ್ಯಭಾಷೆಯಲ್ಲಿದ್ದರೆ, ಕೆಲವು ಸತ್ವಪೂರ್ಣ ಗದ್ಯಭಾಷೆಯಲ್ಲಿವೆ. ಈ ಎಲ್ಲ ಉಪನಿಷತ್ತುಗಳ ಸಾರವನ್ನು ಸ್ವತಂತ್ರ ರೀತಿಯಿಂದ ಮಾರ್ಮಿಕವಾಗಿ ಅಭ್ಯಾಸಿಸಿದಾಗ ಮೇಲಿಂದ ಮೇಲೆ ಕಂಡು ಬರುವ ವಿಚಾರಗಳೆಂದರೆ ಭಗವತ್ತತ್ತ್ವಮೀಮಾಂಸೆ ಮತ್ತು ಅಹಂತತ್ತ್ವಮೀಮಾಂಸೆ. ಇವೆರಡೂ ಒಂದಕ್ಕೊಂದು ಅಂಟಿಕೊಂಡಿವೆ. ಉಪನಿಷತ್ತುಗಳು ಭಗವತ್ತತ್ವ (ಪರಮಾತ್ಮ ತತ್ತ್ವ) ವನ್ನು 'ಬ್ರಹ್ಮ'ವೆಂದೂ 'ಆತ್ಮ'ವೆಂದೂ, ಸತ್ಯವೆಂದೂ ಕರೆಯುತ್ತವೆ; ಅಹಂ ತತ್ವ ಮೀಮಾಂಸೆಯು 'ನಾನೆಂದರೇನು?' ಎಂಬ ಆತ್ಮತತ್ತ್ವದ ಮೀಮಾಂಸೆಯಾಗಿದೆ. ಜನ್ಮ-ಮೃತ್ಯುಗಳು, ಬಂಧ-ಮೋಕ್ಷಗಳು, ಪುಣ್ಯ-ಪಾಪಗಳು, ಸುಖ-ದುಃಖಗಳು, ಶ್ರೇಯ ಪ್ರೇಯಗಳು, ಅಲ್ಲದೇ ಜೀವಿತದ ಎಲ್ಲಾ ವ್ಯವಹಾರಗಳೂ ಅಹಂ ತತ್ತ್ವದ ಮೀಮಾಂಸೆಯಲ್ಲಿಯೇ ಅಡಗಿರುವವೆಂಬುದು ಉಪನಿಷತ್ಕಾರರ ಅಭಿಮತ. ಈ ಚೇತನಮಯ ಜಗತ್ತಿನಲ್ಲಿ ಪ್ರತಿಕ್ಷಣದಲ್ಲಿಯೂ ಅನುಭವದಲ್ಲಿರುವುದು ಈ ಅಹಂತತ್ವದ ನಿಶ್ಚಿತ ಸ್ವರೂಪವೇ? ಇದು ಜಡ ಪದಾರ್ಥಗಳ ಸಂಯೋಗದಿಂದ ಉತ್ಪನ್ನವಾದ ಅನಿತ್ಯ ಪದಾರ್ಥವೇ ಅಥವಾ ಸ್ವಯಂ ಸಿದ್ಧ ನಿತ್ಯ ಪದಾರ್ಥವೇ, ಈ ಎಲ್ಲ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಡಲು ಕಪಿಲ, ಕಣಾದ, ಗೌತಮ ಮೊದಲಾದ ಮಹಾನ್ ಪ್ರವಕ್ತೃ ಋಷಿಗಳು ಆತ್ಮಸಾಕ್ಷಿಯಾಗಿ ಪ್ರಯತ್ನಿಸಿದ್ದಾರೆ. ಉಪನಿಷತ್ತುಗಳಲ್ಲಿ ಈ ಋಷಿಗಳು ಬ್ರಹ್ಮತತ್ತ್ವವನ್ನು ಸೂಕ್ಷ್ಮವಾಗಿ ಪ್ರತಿಪಾದಿಸಿ ವೇದಾಂತದರ್ಶನಕ್ಕೆ ತಳಪಾಯ ಹಾಕಿದ್ದಾರೆ. ಪ್ರಪಂಚಕ್ಕೂ ಬ್ರಹ್ಮಕ್ಕೂ ಇರುವ ಸಂಬಂಧವನ್ನು ಬಗೆಬಗೆಯಾಗಿ ಈ ದಾರ್ಶನಿಕರು ವಿವರಿಸಿದ್ದಾರೆ. 'ಬ್ರಹ್ಮ'ಮಾನವ ಜೀವಿತದ ಪರಮ ಲಕ್ಷ್ಯವೆಂಬುದು ಇವರ ಅಭಿಪ್ರಾಯ. ಬ್ರಹ್ಮತತ್ತ್ವ ಪ್ರಧಾನವಾಗಿರುವ ಉಪನಿಷತ್ತುಗಳು ಬ್ರಹ್ಮವಿದ್ಯೆಯೆಂಬುದಾಗಿ ಪ್ರಸಿದ್ಧವಾಗಿವೆ.

ಬೋಧನಾ ವಿಧಾನಗಳು: 'ಉಪನಿಷದ್' ಎಂಬ ಹೆಸರೇ ವಿಶಿಷ್ಟವಾದ ಬೋಧನಾ ವಿಧಾನವನ್ನು ಸೂಚಿಸುತ್ತದೆ. ಉಪ-ಸಮೀಪದಲ್ಲಿ; ನಿ-ನಿಷ್ಠೆಯಿಂದ; ಸದ್-ಕುಳಿತುಕೊಳ್ಳುವುದು. ಇದು ಗುರುವಿನ ಸನಿಹದಲ್ಲಿ ಶಿಷ್ಯನು ಕುಳಿತುಕೊಳ್ಳುವುದನ್ನು ಸೂಚಿಸುತ್ತದೆ. ಆದರೆ ಇದರ ಅವಯವಾರ್ಥ ಬಿಡಿಸುವುದಕ್ಕಿಂತ ಸ್ಥೂಲವಾಗಿ "ಮಾನವನನ್ನು ಭಗವಂತನ ಬಳಿಗೆ ಕರೆದುಕೊಂಡು ಹೋಗುವ ಜ್ಞಾನ ಅಥವಾ ಮಾನವನಿಗೂ ಭಗವಂತನಿಗೂ ಇರುವ ಸಾಮೀಪ್ಯವನ್ನು ತೋರಿಸುವ ಜ್ಞಾನ" ಎಂಬುದಾಗಿ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ. ಇಂತಹ ರಹಸ್ಯಮಯವಾದ ಬ್ರಹ್ಮಜ್ಞಾನವನ್ನು ಗುರುವು ರಹಸ್ಯವಾಗಿ ಗುಪ್ತಾಧಿವೇಶನಗಳಲ್ಲಿ ಶಿಷ್ಯನಿಗೆ ಚರ್ಚೆ-ವಿಚರ್ಚೆಗಳ ವಿಧಾನವಾದ 'ವಾಕೋವಾಕ್ಯಮ್' ಎಂಬ ಪದ್ಧತಿಯ ಮೂಲಕ ತಿಳಿಯಪಡಿಸುತ್ತಿದ್ದನು.

ಈ ಚರ್ಚಾವಿಧಾನ ಪ್ರಶ್ನೋತ್ತರ ಸ್ವರೂಪದಲ್ಲಿರುತ್ತಿತ್ತು. ಗುರುವು ಜಾಣತನದ ಹಾಗೂ ಕ್ರಮಬದ್ಧವಾದ ಪ್ರಶ್ನೋತ್ತರಗಳಿಂದ ವಿಷಯವನ್ನು ವಿವರಿಸುತ್ತಿದ್ದನು. ಇಲ್ಲಿ ಶಿಷ್ಯರು ಪ್ರಶ್ನೆಗಳನ್ನು ಕೇಳಬೇಕಾಗಿತ್ತು. ಬಳಿಕ ತನಗೆ ಕೇಳಿದ ಪ್ರಶ್ನೆಗಳ ಮೇಲೆ ಗುರುವು ಶಿಷ್ಯರ ಸಂದೇಹಗಳು ನಿವಾರಣೆಯಾಗುವ ರೀತಿಯಲ್ಲಿ ಉತ್ತರಿಸುತ್ತಿದ್ದನು. ಈ ಉತ್ತರಗಳು ಸುದೀರ್ಘವಾಗಿರುತ್ತಿದ್ದವು. ಶಿಷ್ಯನ ವಿಷಯಕ್ಕೆ ಸಂಬಂಧಪಟ್ಟ ಬುದ್ಧಿವಂತಿಕೆಯ ಪ್ರಶ್ನೆಗಳನ್ನು ಗುರುವು ಸದಾ ಸ್ವಾಗತಿಸುತ್ತಿದ್ದನು. ಗುರು-ಶಿಷ್ಯರ ಸಂವಾದಗಳಲ್ಲಿ ಯೋಗ್ಯ ಉದಾಹರಣೆಗಳು, ಉಪಮೆಗಳು ಮೊದಲಾದ ಮೌಖಿಕ ವಿಧಾನದ ಎಲ್ಲಾ ತಂತ್ರಗಳೂ ಬಳಸಲ್ಪಡುತ್ತಿದ್ದವು.

ಇಂತಹ ಪ್ರಶ್ನೋತ್ತರ ವಿಧಾನದ ಮೂಲಕ ಅಹಂತತ್ವ ಮೀಮಾಂಸೆಯನ್ನೊಳಗೊಂಡ ಬ್ರಹ್ಮಜ್ಞಾನ ಪ್ರಾಪ್ತಿಯ ಶಿಕ್ಷಣ ಪಡೆಯುವ ವಿದ್ಯಾರ್ಥಿಯ ಮನಸ್ಸೂ ಅಷ್ಟೇ ಪರಿಪಕ್ವವಾಗಿರಬೇಕಾದುದು ಅವಶ್ಯಕವಾಗಿತ್ತು. ಆದ್ದರಿಂದಲೇ ಇಲ್ಲಿ ಪ್ರಾರಂಭಿಕವಾಗಿ ವಿದ್ಯಾರ್ಥಿಗೆ ವೇದ-ವೇದಾಂಗಗಳು, ಅದಕ್ಕೆ ಸಂಬಂಧಿಸಿದ ಶಾಖೆಗಳು, ಇತರ ಲೌಕಿಕ ಶಾಸ್ತ್ರಗಳಾದ ತರ್ಕಶಾಸ್ತ್ರ, ಜ್ಯೋತಿಷ್ಯ, ನೀತಿಶಾಸ್ತ್ರ, ಧನುರ್ವಿದ್ಯೆ, ಗಣಿತಶಾಸ್ತ್ರ ಮುಂತಾದವುಗಳನ್ನು ಬೋಧಿಸಲಾಗುತ್ತಿತ್ತು. ಬಳಿಕ ಉನ್ನತ ಶಿಕ್ಷಣದ ಹಂತದಲ್ಲಿ ಬ್ರಹ್ಮಜ್ಞಾನ ಪ್ರಾಪ್ತಿ (ಆತ್ಮಸಾಕ್ಷಾತ್ಕಾರ)ಯ ವಿದ್ಯೆಗಾಗಿ ಹಂಬಲಿಸುವ ಆಯ್ದ ವಿದ್ಯಾರ್ಥಿಗಳಿಗೆ ಮಾತ್ರ ಬ್ರಹ್ಮವಿದ್ಯೆಯು ರಹಸ್ಯವಾಗಿ ಕೊಡಲ್ಪಡುತ್ತಿತ್ತು.

ಇಲ್ಲಿ ವೇದಾಧ್ಯಯನ ಹಾಗೂ ಪ್ರಾರಂಭಿಕ ಶಾಸ್ತ್ರಗಳ ಅಧ್ಯಯನದ ಶಿಕ್ಷಣವನ್ನು 'ಅಪರಾ ವಿದ್ಯೆ'ಯೆಂದು ಕರೆಯಲಾಗಿದೆ. ಇದು ಜ್ಞಾನಪ್ರಾಪ್ತಿಯ ಮೊದಲ ಹಂತವಾಗಿದೆ. ಈ 'ಅಪರಾವಿದ್ಯೆ'ಗೆ ಸಂಬಂಧಪಟ್ಟಂತೆ ಉಪನಿಷತ್ಕಾಲಗಳಲ್ಲಿ ಯಾವ ಯಾವ ಪಠ್ಯವಿಷಯಗಳಿದ್ದವು ಎಂಬ ಕುರಿತಾಗಿ ಛಾಂದೋಗ್ಯ ಉಪನಿಷತ್ತಿನಲ್ಲಿ ಉಲ್ಲೇಖ ದೊರಕುತ್ತದೆ. ಪ್ರಾರಂಭಿಕ ಹಂತದ 'ಅಪರಾವಿದ್ಯೆ'ಯ ಶಿಕ್ಷಣ ಮುಗಿಸಿದ ತರುವಾಯ ಮಹರ್ಷಿ ನಾರದನು ಸನತ್ಕುಮಾರನ ಬಳಿಗೆ ಬರುತ್ತಾನೆ.

-ಭಗವಂತನೇ, ಋಗ್ವೇದವನ್ನು ಅರಿತಿರುತ್ತೇನೆ. ಯಜುರ್ವೇದ, ಸಾಮವೇದ, ನಾಲ್ಕನೇಯದಾದ ಅಥರ್ವವೇದ, ಐದನೇಯದಾದ ಇತಿಹಾಸ ಪುರಾಣಗಳು, ವೇದಗಳ ವೇದ (ವ್ಯಾಕರಣ), ಪಿತ್ರ್ಯ (ಶ್ರಾದ್ಧಕಲ್ಪ), ಗಣಿತ, ದೈವ (ಉತ್ಪಾತವೇ ಮೊದಲಾದವುಗಳ ಜ್ಞಾನ), ನಿಧಿಶಾಸ್ತ್ರ ತರ್ಕಶಾಸ್ತ್ರ, ನೀತಿಶಾಸ್ತ್ರ, ನಿರುಕ್ತ, ಬ್ರಹ್ಮವಿದ್ಯೆ (ಶೀಕ್ಷಾ, ಕಲ್ಪ, ಛಂದಸ್ಸು ಮೊದಲಾದವುಗಳು), ಭೂತವಿದ್ಯೆ, ಧನುರ್ವೇದ, ಜ್ಯೋತಿಷ್ಯ, ದೇವಜನ ವಿದ್ಯೆ (ಪರಿಮಳ ದ್ರವ್ಯಗಳ ತಯಾರಿಕೆ, ನೃತ್ಯ, ಗೀತ, ವಾದ್ಯ, ಶಿಲ್ಪ ಇವುಗಳ ಜ್ಞಾನ) ಇವುಗಳೆಲ್ಲ, ಭಗವಂತನೇ, ಅರಿತಿರುತ್ತೇನೆ.

ಈ ಮುಂತಾದ ವಿಷಯಗಳು 'ಅಪರಾವಿದ್ಯೆ'. ಪ್ರಾರಂಭಿಕ ಹಂತದಲ್ಲಿ ಕ್ರಮಬದ್ಧವಾಗಿ ಕಲಿಸಲ್ಪಡುತ್ತಿದ್ದವು ಎಂದು ಹೇಳಲಾಗುವುದಿಲ್ಲ. ವೇದ-ವೇದಾಂಗಗಳು, ಇತಿಹಾಸ ಪುರಾಣಗಳ

Digitised by Bharatavani, CIIL

ಅಭ್ಯಾಸ ಕಡ್ಡಾಯವಾಗಿದ್ದು ಮುಂದೆ ಐಚ್ಛಿಕ ವಿಷಯಗಳಾಗಿ ಉಳಿದ ವಿಷಯಗಳು ಬೋಧಿಸಲ್ಪಡುತ್ತಿದ್ದಿರಬೇಕು. ಆದರೆ ಇದರ ಕುರಿತಾಗಿ ಸಮರ್ಪಕ ಉಲ್ಲೇಖ ದೊರಕುವುದಿಲ್ಲ. ನಾರದರ ಮಾತುಗಳನ್ನು ಪರಿಗಣಿಸಿದ್ದಲ್ಲಿ ಎಲ್ಲ ವಿಷಯಗಳೂ ಕಲಿಸಲ್ಪಡುತ್ತಿದ್ದುವಾಗಿ ಊಹಿಸಬೇಕಾಗುತ್ತದೆ. ಅಪರಾವಿದ್ಯೆಯ ಶಿಕ್ಷಣವು ಹನ್ನೆರಡು ವರ್ಷಗಳ ಶಿಕ್ಷಣವಾಗಿತ್ತೆಂದು ತಿಳಿದು ಬರುತ್ತದೆ. (ಛಾಂದ,ಉ.VI, 1–6).

ಮುಂದಿನ ಉಚ್ಚಮಟ್ಟದ ಶಿಕ್ಷಣ ಆಧ್ಯಾತ್ಮಿಕ ಜ್ಞಾನದ ಪರಿಪೂರ್ಣತೆಗೆ ಸಂಬಂಧಪಟ್ಟ ಬ್ರಹ್ಮಜ್ಞಾನ ಪ್ರಾಪ್ತಿಯ ಶಿಕ್ಷಣವಾಗಿದೆ. ಇದು 'ಪರಾವಿದ್ಯೆ'ಯೆಂದು ಕರೆಯಲ್ಪಟ್ಟಿದೆ.

'ಪರಾವಿದ್ಯೆ'ಯ ಸಾಧನೆಯ ಬೋಧನೆಯಲ್ಲಿ ಮೂರು ಹಂತಗಳಲ್ಲಿ ಜ್ಞಾನ ಕೊಡಲ್ಪಡುತ್ತಿತ್ತು. ಅವುಗಳೆಂದರೆ 'ಶ್ರವಣ' 'ಮನನ' ಮತ್ತು 'ನಿದಿಧ್ಯಾಸನ' (ಬೃಹದ್, ಋಋ, 4.5). 'ಶ್ರವಣ' ಎಂದರೆ ಗುರುವು ಉಚ್ಚರಿಸಿದ ಶಬ್ದಗಳನ್ನು, ಕೃತಿಗಳನ್ನು ಗಮನವಿಟ್ಟು ಕೇಳುವುದು. ಈಗಾಗಲೇ ಹೇಳಿದಂತೆ ವೇದಕಾಲದಲ್ಲಿ ಶ್ರುತಿಪದ್ಧತಿಯನ್ನು ಅನುಸರಿಸಿ ವಿದ್ಯಾರ್ಥಿಗೆ ಜ್ಞಾನದಾನ ಮಾಡಲಾಗುತ್ತಿತ್ತು. ಈ ರೀತಿ ಗುರುವಿನಿಂದ ಕೇಳಿ ಗ್ರಹಿಸಿದ ಜ್ಞಾನವನ್ನು ಮೈಗೂಡಿಸಿಕೊಳ್ಳಲು ಹೇಳಿಕೊಟ್ಟ ಪಾಠವನ್ನು ಕುರಿತು ಆಲೋಚಿಸಿ, ಚಿಂತಿಸಿ, ಅರ್ಥ ಮಾಡಿಕೊಳ್ಳುವುದು 'ಮನನ'. ಈ ಪದ್ಧತಿಯಲ್ಲಿ ಗುರುವು ಹೇಳಿಕೊಡುವ ಗ್ರಂಥಭಾಗದ ಅರ್ಥವನ್ನು ಬೌದ್ಧಿಕವಾಗಿ ಗ್ರಹಿಸಲಾಗುತ್ತಿತ್ತು. ಆದರೆ ಜ್ಞಾನಾರ್ಜನೆ ಪೂರ್ಣವಾಗಲು ಬೌದ್ಧಿಕವಾಗಿ ಗ್ರಹಿಸಿದ ಸತ್ಯವನ್ನು ಸಾಕ್ಷಾತ್ಕಾರದ ನೆಲೆಯಲ್ಲಿ ಕಂಡುಕೊಳ್ಳಬೇಕಾಗಿತ್ತು. ಇದನ್ನು 'ನಿದಿಧ್ಯಾಸನ' ಎಂದು ಕರೆಯಲಾಗಿದೆ. 'ನಿದಿಧ್ಯಾಸನ'ವು ಚಿಂತನದ ಅತ್ಯುಚ್ಚ ನೆಲೆಯನ್ನು ಸೂಚಿಸುತ್ತದೆ. 'ಬ್ರಹ್ಮ' ಅಥವಾ 'ಸತ್ಯ'ಕ್ಕೆ ಸಂಬಂಧಪಟ್ಟಂತೆ 'ನಿದಿಧ್ಯಾಸನ'ವನ್ನು ಈ ರೀತಿ ವರ್ಣಿಸಲಾಗಿದೆ.

ಅನೇಕತ್ವದ ಅಥವಾ ಶರೀರದಂತಹ ಯಾವುದೇ ಭೌತಿಕ ವಸ್ತುವಿನ ಸೂಕ್ಷ್ಮಾತಿಸೂಕ್ಷ್ಮ ಪ್ರಜ್ಞೆಯಿಂದಾಗಲೀ ಅಲ್ಲೋಲ ಕಲ್ಲೋಲವಾಗದ ಏಕೈಕ ಸತ್ಯ ಪ್ರಜ್ಞೆಯ ಅವಿರತ ಪ್ರವಾಹ.

ಚಿಂತನದ ಈ ಕೊನೆಯ ಹಂತವನ್ನು ತಲಪಲು ವಿದ್ಯಾರ್ಥಿ ಪುಸ್ತಕೀಯವಾದ ಶಬ್ದಜ್ಞಾನಕ್ಕೆ ಮಹತ್ವವೀಯದೇ ನಿಷ್ಠಾವಂತನಾಗಿ, ನೀತಿವಂತನಾಗಿ ಆತ್ಮಜ್ಞಾನಕ್ಕೆ ಮಹತ್ವ ಕೊಡಬೇಕಾಗಿತ್ತು. ಗುರುವಿನ ದೃಷ್ಟಿಯಲ್ಲಿ ಪರಮಜ್ಞಾನ ಬೋಧನೆಗೆ ಅನರ್ಹನಾದ ವಿದ್ಯಾರ್ಥಿ 'ಪರಾವಿದ್ಯೆ' ಗಳಿಸಲು ಅನರ್ಹನಾಗುತ್ತಿದ್ದನು. ಹನ್ನೆರಡು ವರ್ಷಗಳ 'ಅಪರಾ ವಿದ್ಯೆ' ಗಳಿಸಿದ ಬ್ರಹ್ಮಚಾರಿ ಸರ್ವೋಚ್ಚಜ್ಞಾನ ಅಂದರೆ ಬ್ರಹ್ಮಜ್ಞಾನಗಳಿಸುವಲ್ಲಿ ಯಾವ ಅರ್ಹತೆಗಳನ್ನು ಗಳಿಸಿರಬೇಕು ಎಂಬುದಾಗಿ ಉಪನಿಷತ್ತುಗಳು ಪ್ರತಿಪಾದಿಸಿವೆ. (ಕಠ, ಋಋ, 24; ಮುಂಡಕ ಋ, 2.13) ಅವನು ಶಾಂತಸ್ವಭಾವದವನೂ, ಸ್ವಾಸ್ಥ್ಯಚಿತ್ತನೂ, ಸಮಾಹಿತ (ಏಕಾಗ್ರಚಿತ್ತ)ನೂ, ಸ್ವಭಾವಶುದ್ಧನೂ ಆಗಿರಬೇಕಾಗಿತ್ತು. ಗುರು ವಿಧಿಸುವ ಎಲ್ಲ ಕಠಿಣತರವಾದ ಷರತ್ತುಗಳನ್ನು ಪಾಲಿಸಬೇಕಾಗಿತ್ತು. ಹೀಗೆ ಷರತ್ತುಗಳ ಪಾಲನೆಯೊಂದಿಗೆ ಸರ್ವಶ್ರೇಷ್ಠಜ್ಞಾನ ಪ್ರಾಪ್ತಿಸಿಕೊಳ್ಳಬೇಕಾದರೆ ಅವನ ಇಡೀ ಆಯುಷ್ಯವೇ ಮೀಸಲಾಗಬೇಕಾಗುತ್ತಿತ್ತು. ಸಾಮಾನ್ಯವಾಗಿ ಇವನು ಸನ್ಯಾಸಾಶ್ರಮ ಸ್ವೀಕರಿಸುತ್ತಿದ್ದನು. ಸನ್ಯಾಸತ್ವ, ಮನೋನಿಗ್ರಹ ಮತ್ತು ತ್ಯಾಗಗಳು ಬ್ರಹ್ಮನನ್ನು ಪ್ರಕಟಿಸುವ ಗೂಢತತ್ತ್ವವನ್ನು ತಲುಪುವ ಪೂರ್ವಭಾವೀ ಸ್ಥಿತಿಗತಿಗಳೆಂದು ಉಪನಿಷತ್ತುಗಳು ವರ್ಣಿಸಿವೆ. ಈ ರೀತಿಯಲ್ಲಿ ಬ್ರಹ್ಮಜ್ಞಾನ ಪ್ರಾಪ್ತಿಯ ಶಿಕ್ಷಣದಲ್ಲಿ ಗುರುವಿನ ಬೋಧನೆಯಷ್ಟೇ ಸ್ವಪ್ರಯತ್ನವೂ ಮಹತ್ವದ್ದಾಗಿತ್ತು. ವಿದ್ಯಾರ್ಥಿ ಸ್ವಯಂ ಪ್ರಯಾಸದಿಂದ ಸ್ವಾರ್ಥತ್ಯಾಗದ ಸನ್ಯಾಸವನ್ನು ಜ್ಞಾನಸಂಪಾದನೆಗೆ ಅವಶ್ಯವಾದ ಆತ್ಮನಿಗ್ರಹ ಶಕ್ತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕಾಗಿತ್ತು. ಇದು ಶಿಕ್ಷಣದ ಒಂದು ಭಾಗವಾಗಿತ್ತು. ಪ್ರಾರಂಭಿಕ ಶಿಕ್ಷಣದ ಹಂತದಿಂದಲೇ ಇದಕ್ಕೆ ಮಹತ್ವ ಕೊಡಲಾಗುತ್ತಿತ್ತು.

ಈ ರೀತಿಯಲ್ಲಿ 'ಅಪರಾ ವಿದ್ಯೆ' ಹಾಗೂ 'ಪರಾವಿದ್ಯೆ'ಗಳ ಸ್ವರೂಪಕ್ಕನುಗುಣವಾಗಿ ಬೋಧನೆ ನಡೆಯುತ್ತಿತ್ತು.

ಒಟ್ಟಾರೆಯಾಗಿ ಋಗ್ವೇದ, ಇತರ ವೇದಗಳು, ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳನ್ನು ಪರಿಶೀಲಿಸಿದಾಗ ಇವು ಒಂದಕ್ಕೊಂದು ಪೂರಕವಾದ ಜ್ಞಾನಭಾಗಗಳಾಗಿ ಕಾಲದಿಂದ ಕಾಲಕ್ಕೆ ನಿಷ್ಕೃಷ್ಟತೆಯನ್ನೂ, ವೈಶಾಲ್ಯತೆಯನ್ನೂ, ಆಳವಾದ ಜ್ಞಾನವನ್ನು ಪೇರಿಸಿಕೊಳ್ಳುತ್ತ ಉಪನಿಷತ್ಕಾಲದ ಉಪನಿಷತ್ತುಗಳ ರೂಪದಲ್ಲಿ ಭಾರತೀಯ ಸಂಸ್ಕೃತಿಯ ಪ್ರಕಾಶ ಸ್ತಂಭಗಳಾಗಿ ಜಗತ್ತಿನ ಸಾಹಿತ್ಯಕ್ಷೇತ್ರದಲ್ಲಿಯೇ ಉತ್ಕೃಷ್ಟ ತತ್ತ್ವದರ್ಶನಗಳಾಗಿ ಮೂಡಿವೆ.

ಇಡೀ ವೈದಿಕ ಶಿಕ್ಷಣದಲ್ಲಿ ಶಿಸ್ತುಬದ್ಧವಾದ ಜೀವನ ಶಿಕ್ಷಣಕ್ಕೆ ಮಹತ್ವ ನೀಡಿರುವುದು ಕಂಡುಬರುತ್ತದೆ. ಗುರುವಿನೊಂದಿಗೆ ವಾಸಿಸಿ ಶಿಕ್ಷಣ ಪಡೆಯುತ್ತಿದ್ದ ಋಗ್ವೇದ ಕಾಲದ ಪರಂಪರೆಯು ಉಪನಿಷತ್ಕಾಲದವರೆಗೂ ಬೆಳೆದು ಬಂದಿದ್ದನ್ನು ಕಾಣುತ್ತೇವೆ. ಈ ಶಿಕ್ಷಣ ಕಾಲಮರ್ಯಾದಿತ ಮೌಖಿಕ ಪರಂಪರೆಯ ಮೇಲೆಯೇ ನೆಲೆ ನಿಂತಿದ್ದಾಗಿ ತಿಳಿದು ಬರುತ್ತದೆ. ಬ್ರಹ್ಮವರ್ಚಸ್ಸನ್ನು ಅಥವಾ ಪವಿತ್ರ ಜ್ಞಾನವಾದ ಆತ್ಮಸಾಕ್ಷಾತ್ಕಾರ ಪಡೆಯುವುದೇ ಪ್ರತಿಯೊಂದು ಕಾಲದ ಶಿಕ್ಷಣದ ಅಂತಿಮ ಧ್ಯೇಯವಾಗಿತ್ತು. ಆಧ್ಯಾತ್ಮಿಕ ಬೆಳವಣಿಗೆಯ ಈ ಗುರಿಗೆ ವಿಶಿಷ್ಟ ವಿಧಿಗಳನ್ವಯ ಯಜ್ಞ ಮಾಡುವುದೇ ಸಾಧನವಾಗಿತ್ತು. ಆದ್ದರಿಂದ ಪವಿತ್ರ ವೇದ ಪಾಠ್ಯಗಳ ಅಭ್ಯಾಸಕ್ಕೆ ಮಹತ್ವವೀಯಲಾಗಿದೆ. ಈ ಅಭ್ಯಾಸಕ್ಕೆ 'ಸ್ವಾಧ್ಯಾಯ' ಎಂಬ ತಾಂತ್ರಿಕ ಹೆಸರನ್ನು ನೀಡಲಾಗಿದೆ. ವೇದಕಾಲದ ಶಿಕ್ಷಣದಲ್ಲಿ ಗುರುವಿನ ಬೋಧನೆಯಷ್ಟೇ ಶಿಷ್ಯನ ಸ್ವ–ಅಧ್ಯಯನಕ್ಕೂ ಮಹತ್ವ ನೀಡಲಾಗಿತ್ತು. ವೇದಕಾಲದ ಪ್ರತಿಯೊಂದು ಹಂತದ ಶಿಕ್ಷಣದಲ್ಲಿಯೂ ಪ್ರಾರಂಭಿಕವಾಗಿ ವೇದಾಧ್ಯಯನ ಕಡ್ಡಾಯವಾಗಿತ್ತು.

ಮೌಖಿಕ ಪರಂಪರೆಯ ಮೇಲೆ ನೆಲೆನಿಂತ ಇಡೀ ವೈದಿಕ ಸಾಹಿತ್ಯದ ಪಾಲನೆ ಪೋಷಣೆಯ ಜವಾಬ್ದಾರಿ ವೈದಿಕ ಸಂಘಟನೆಗಳದ್ದಾಗಿತ್ತು. ಇಂತಹ ಸಂಘಟನೆಗಳೆಂದರೆ ಶಾಖೆಗಳು,

Digitised by Bharatavani, CIIL

ಚರಣಗಳು, ಪರಿಷತ್ತುಗಳು, ಕುಲಗಳು, ಗೋತ್ರಗಳು ಇತ್ಯಾದಿ. ಈ ಸಂಘಟನೆಗಳು ವೇದಾಧ್ಯಯನವನ್ನು ಸಂರಕ್ಷಿಸುತ್ತಿದ್ದವು, ಚರ್ಚಿಸುತ್ತಿದ್ದವು, ಮುಂದಿನ ಜನಾಂಗಕ್ಕೆ ವರ್ಗಾಯಿಸುತ್ತಿದ್ದವು. ಹೀಗೆ ವೇದ ಕಾಲದ ಶಿಕ್ಷಣದ ಪಠ್ಯಕ್ರಮದ ಕೃತಿಗಳು ಸಂರಕ್ಷಿಸಲ್ಪಟ್ಟವು ಮತ್ತು ಪರಿಷ್ಕರಿಸಲ್ಪಟ್ಟವು. ಆದರೆ ಸ್ಪರ್ಧಾತ್ಮಕ ಸಂಗ್ರಹ ಕೃತಿಗಳಲ್ಲಿ ಅಸ್ತಿತ್ವದ ಸಲುವಾಗಿ ಹೋರಾಟವೂ ನಡೆದಿತ್ತು. ಆಂತರಿಕ ಮೌಲ್ಯವನ್ನು ತಿಳಿಸುವಲ್ಲಿ ಇಲ್ಲವೇ ಪ್ರಚಲಿತದಲ್ಲಿದ್ದ ಧಾರ್ಮಿಕ ಓಘಗಳನ್ನು ಹೃದಯಂಗಮವಾಗಿ ತಿಳಿಸುವಲ್ಲಿ ಆ ಸಂಗ್ರಹಗಳ ಅಳಿವುಳಿವು ನಿಶ್ಚಿತವಾಗುತ್ತಿತ್ತು. ಯೋಗ್ಯತಾಸಂಪನ್ನವಾದವು ಮಾತ್ರ ಉಳಿಯುವಂತಾಯಿತು. ಭಿನ್ನಾಭಿಪ್ರಾಯವನ್ನು ಪ್ರತಿನಿಧಿಸುವ ಕೃತಿಗಳು ಮಾಯವಾಗಿ ವಿಜಯಶಾಲಿಗಳಾದ ಕೃತಿಗಳು ಪಠ್ಯಕ್ರಮದಲ್ಲಿ ಉಳಿದು ಬೆಳೆದು ಬಂದವು.

**ವೇದೋತ್ತರ ಕಾಲದ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳು:**

ಪಠ್ಯಕ್ರಮ: ವೇದೋತ್ತರಕಾಲದಲ್ಲಿ ಈ ಮೇಲೆ ವಿವೇಚಿಸಿದಂತಹ ವೇದಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳು ಈ ಮುಂತಾದ ಮೌಲ್ಯಯುತ ಸಾಹಿತ್ಯಗಳ ಮೂಲ ತಿರುಳಿನ ಸುತ್ತಲೂ ವಿಶಾಲವಾದ ವೈವಿಧ್ಯಮಯವಾದ ಭಾಷ್ಯಗಳ ಸಾಹಿತ್ಯ ಬೆಳೆಯಿತು. ಈ ಸಾಹಿತ್ಯಗಳು ಕ್ಲಿಷ್ಟಕರವಾದವುಗಳಾಗಿದ್ದು ಇವುಗಳ ಅರ್ಥ ಪಂಡಿತರಾದವರಿಗೆ ಮಾತ್ರ ಹೊಳೆಯುತ್ತಿತ್ತು. ಆ ಕಾಲದಲ್ಲಿಯೇ ತೊಡಕಿನ ವೇದಾಂತ ಹಾಗೂ ಕರ್ಮ ಕಾಂಡಗಳೂ ಬೆಳೆದವು ಆದರೆ ಇವುಗಳ ಜ್ಞಾನ ಹೆಚ್ಚುಹೆಚ್ಚಾಗಿ ವಿಶಿಷ್ಟ ಮನೆತನಗಳ(ಪುರೋಹಿತರ) ಆಸ್ತಿಯಾಯಿತು. ಈ ಮನೆತನಗಳಲ್ಲಿ ಅದು ಆನುವಂಶಿಕವಾಯಿತು.

ವಿಷಯಸಂಗ್ರಹ ಬಹುವಿಶಾಲವಾಗಿ ಸಾಗಿತು. ಆದರೆ ವಿಶಿಷ್ಟ ದಿಕ್ಕುಗಳಲ್ಲಿ ಸಾಗುತ್ತಿದ್ದ ಸಾಹಿತ್ಯದ ಈ ವಿಪುಲತೆಗೆ ಸ್ವಾಭಾವಿಕವಾದ ಮೇರೆಯೂ ಇತ್ತು. ವಿವರಗಳಲ್ಲಿ ಧರ್ಮದ ತಿರುಳು, ಇಡಿಯಾದುದರ ಅರ್ಥ ಹಾಗೂ ಮನನ ಇವು ಮರೆಯಾಗುವ ಸ್ಥಿತಿ ಒದಗಿ ಇದು ಸಮಾಜದ ಧಾರ್ಮಿಕ ನೆಲೆಗಟ್ಟನ್ನು ಸಡಲಿಸಬಹುದೆನ್ನುವ ಹೆದರಿಕೆಯುಂಟಾಯಿತು. ಆಗ ಈ ವಿವರವಾದ ವೇದಾಂತಗಳ ವಿಸ್ತೃತವಾದ ಚರ್ಚೆಯ ಬದಲು ಸಂಕ್ಷಿಪ್ತವಾಗಿ, ಅರ್ಥಬದ್ಧವಾಗಿ ಕ್ರೋಢೀಕರಿಸಲ್ಪಟ್ಟ ಸಾಹಿತ್ಯದ ಉದಯವಾಯಿತು. ಭೌತಿಕವಾಗಿ ಸಮಾಜದ ಉದ್ಧಾರದತ್ತ ಲಕ್ಷ್ಯವಹಿಸಿ ವ್ಯಾವಹಾರಿಕ ಉದ್ದೇಶದಿಂದ ನಿರ್ಮಿತವಾದ ಈ ಸಾಹಿತ್ಯವೇ 'ಸೂತ್ರ' ಸಾಹಿತ್ಯ (ಸೂತ್ರಗಳು). ಇವುಗಳಲ್ಲಿ ಪ್ರಮುಖವಾದವುಗಳು ಶ್ರೌತಸೂತ್ರಗಳು, ಗೃಹ್ಯ ಸೂತ್ರಗಳು, ಧರ್ಮಸೂತ್ರಗಳು, ಶೂಲ್ವಸೂತ್ರಗಳು ಮತ್ತು ವ್ಯಾಕರಣ ಸೂತ್ರಗಳು.

ಇವುಗಳಲ್ಲಿ ಗೃಹ್ಯಸೂತ್ರಗಳು ಮುಂದೆ ಧರ್ಮಶಾಸ್ತ್ರಗಳಾಗಿ 'ಸ್ಮೃತಿ'ಗಳೆನಿಸಿದವು. ಸ್ಮೃತಿಗಳು ಮನುಷ್ಯ ಜೀವನದ ಶಾಸನಗಳನ್ನು ಪ್ರತಿಪಾದಿಸುತ್ತವೆ. ಇವು ಕೇವಲ ಶಾಸನಗ್ರಂಥಗಳು ಮಾತ್ರವಲ್ಲ. ಚತುರ್ವಿಧ ಪುರುಷಾರ್ಥ ಸಾಧನೆಯ ತತ್ತ್ವ ನಿರೂಪಣಾ ಮತ್ತು ಅವುಗಳ ಸಾಧನೆಗೆ ಮಾರ್ಗದರ್ಶಕ ಗ್ರಂಥವಾಗಿವೆ. ಲೌಕಿಕ ವ್ಯವಹಾರ ಮತ್ತು ದಂಡನೀತಿಯ ನಿಯಮಗಳು; ಉತ್ತರಾಧಿಕಾರದ ನಿಯಮಗಳು; ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳು; ಸಾಮಾಜಿಕ ಕರ್ತವ್ಯಗಳು; ಧಾರ್ಮಿಕ ಕ್ರಿಯಾಕಲಾಪಗಳು; ನಿತ್ಯನೈಮಿತ್ತಿಕ ಕಾಯಕಗಳು ಮತ್ತು ವಿವಿಧ ವರ್ಣಾಶ್ರಮಗಳಿಗೆ ಸಂಬಂಧಿಸಿದ ಕರ್ತವ್ಯಗಳು; ಸಾಮಾಜಿಕ ವ್ಯವಸ್ಥೆಗಳು; ಔಪಚಾರಿಕ ಹಾಗೂ ಅನೌಪಚಾರಿಕ ಸಾಮಾಜಿಕ ಸಂಸ್ಥೆಗಳ ವಿಚಾರ; ದೇವತಾರಾಧನೆ; ಮರಣಾನಂತರ ಕರ್ಮಗಳು; ಮೈಲಿಗೆಗಳು; ಪ್ರಾಯಶ್ಚಿತ್ತ ಕರ್ಮಗಳು, ಯಜ್ಞಯಾಗಗಳು; ದೈನಂದಿನ ಜೀವನದಲ್ಲಿ ಮತ್ತು ವ್ಯವಹಾರಗಳಲ್ಲಿ ಅನುಸರಿಸಬೇಕಾದ ಪದ್ಧತಿಗಳು, ರೀತಿನೀತಿಗಳು ಒಟ್ಟನಲ್ಲಿ ಸಮಾಜದ ವ್ಯವಹಾರಗಳಿಗೆ ಸಂಬಂಧಿಸಿರುವಂತಹ ಸರ್ವವನ್ನೂ ಒಳಗೊಂಡ ಸ್ಮೃತಿಗಳು ಧಾರ್ಮಿಕ ವಿಧಿಗಳನ್ನು ವಿಧಿಸುತ್ತವೆ. ಇವು ಶ್ಲೋಕರೂಪದ ಗ್ರಂಥಗಳಾಗಿವೆ. ಇವೆಲ್ಲ ಕಾಲಾನುಕ್ರಮದಲ್ಲಿ ಪಠ್ಯಕ್ರಮದಲ್ಲಿ ವೇದಾಭ್ಯಾಸದ ಜೊತೆಯಲ್ಲಿ ಅಧ್ಯಯನ ವಿಷಯಗಳಾದವು.

ಸೂತ್ರಗಳ ಶೈಲಿಯಲ್ಲಿ ರಚಿತವಾದ ವೈದಿಕ ಕೃತಿಗಳ ಸಾಹಿತ್ಯವಾದ ವೇದಾಂಗ (ಶಿಕ್ಷಾ, ಛಂದಸ್ಸು, ವ್ಯಾಕರಣ, ನಿರುಕ್ತ, ಕಲ್ಪ, ಜ್ಯೋತಿಷ್ಯ) ಗಳು ಪಾಣಿನಿಯರಂತಹ ವ್ಯಾಕರಣಕಾರರಿಂದ ಹಿಂದಿನ ಕುಂದುಕೊರತೆಗಳನ್ನು ನೀಗಿಸಿಕೊಂಡು ಪರಿಪೂರ್ಣತೆಯನ್ನು ಪಡೆದವು. ಹಾಗೂ ಇವುಗಳ ಸಶಾಸ್ತ್ರೀಯ ಅಭ್ಯಾಸಕ್ಕೆ ಚಾಲನೆ ದೊರಕಿತು. ಕ್ರಮೇಣ ಸೂತ್ರಗಳಿಗೆ ಇದ್ದಂತಹ ಪರಿಶಿಷ್ಟಗಳೆಂಬ ಪೂರಕಗಳಿಂದ ವಿಸ್ತೃತವಾದ ಸಾಹಿತ್ಯ ರಚಿಸಲ್ಪಟ್ಟಿತು. ಇವು ಪ್ರಯೋಗ ಗ್ರಂಥಗಳು.

ಈ ಕಾಲದಲ್ಲಿಯೇ ಆಧ್ಯಾತ್ಮಿಕತೆಯ ಸಾರಸ್ವತಗಳಾದಂತಹ ದರ್ಶನ ಸಾಹಿತ್ಯ ಬೆಳವಣಿಗೆ ಕಂಡಿತು. ಒಟ್ಟು ಆರು ದರ್ಶನಗಳಿವೆ. ಅವುಗಳೆಂದರೆ ವೈಶೇಷಿಕ, ನ್ಯಾಯ, ಯೋಗ, ಸಾಂಖ್ಯ, ಪೂರ್ವಮೀಮಾಂಸೆ, ಉತ್ತರ ಮೀಮಾಂಸೆ. ಈ ದಾರ್ಶನಿಕ ಷಡ್ದರ್ಶನಗಳ ಸೂತ್ರಗಳು ಇಲ್ಲವೇ ವ್ಯಾಖ್ಯೆಗಳು ತತ್ವಜ್ಞಾನದ ಸುಪ್ರಸಿದ್ಧ ದರ್ಶನಗಳನ್ನು ನಿವೇದಿಸುತ್ತವೆ. ಹಿಂದೂ ವಿಚಾರ ಪ್ರಣಾಲಿಯ ಇತಿಹಾಸದಲ್ಲಿ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ಈ ದಾರ್ಶನಿಕ ಸಂಬಂಧ ಸೂತ್ರಗಳು ವೈಶಿಷ್ಟ್ಯಪೂರ್ಣವಾಗಿ ಮೌಲ್ಯವನ್ನು ಹೊಂದಿವೆ.

ಅದೇ ರೀತಿಯಲ್ಲಿ ಲೌಕಿಕ ವಿಷಯಕ್ಕೆ ಸಂಬಂಧಪಟ್ಟಂತಹ ಉಪವೇದಗಳು; ಪುಣ್ಯಕಥೆಗಳಾದಂತಹ ಪುರಾಣಗಳು; ಭಾರತೀಯ ಸಂಸ್ಕೃತಿಯ ಜ್ಯೋತಿಸ್ತಂಭಗಳಾದಂತಹ ಆರ್ಷ ಮಹಾಕಾವ್ಯಗಳು ಮತ್ತು ಕಾವ್ಯಗಳ ಉದಯವೂ ಕಾಲಾಂತರಗಳಲ್ಲಿ ಆಯಿತು. ಈ ಎಲ್ಲ ಸಾಹಿತ್ಯಗಳ ನಿರ್ಮಾಣ ಆದಂತೆ ಕಾಲಮಾನಗಳ ಸ್ಥಿತ್ಯಂತರಗಳಿಗೆ ಅನುಗುಣವಾಗಿ ಇವು ಪಠ್ಯಕ್ರಮದಲ್ಲಿ ಅಭ್ಯಾಸ ವಿಷಯಗಳಾಗಿ ಸೇರ್ಪಡೆಯಾದವು.

Digitised by Bharatavani, CIIL

**ಬೋಧನಾ ವಿಧಾನಗಳು:**

ಈಗಾಗಲೇ ಪ್ರತಿಪಾದಿಸಿದಂತೆ ವೇದೋತ್ತರ ಕಾಲದಲ್ಲಿಯೂ ಶಾಸ್ತ್ರಬದ್ಧವಾದ ವೇದಾಭ್ಯಾಸ ಕಡ್ಡಾಯವಾಗಿತ್ತು. ವೇದಾಂಗಗಳ ಅಭ್ಯಾಸವೂ ಇತ್ತು. ವೇದಾಧ್ಯಯನದಲ್ಲಿ ಚತುರ್ವೇದಗಳಲ್ಲಿ ಒಂದು ವೇದದಲ್ಲಿ ಪರಿಣಿತಿಹೊಂದುವ ಪದ್ಧತಿ ಇತ್ತು. ವಿದ್ಯಾರ್ಥಿ ಇಚ್ಛಿಸಿದ್ದಲ್ಲಿ ಬೇರೆಬೇರೆ ಶಾಖೆಗಳನ್ನು ಅಭ್ಯಾಸ ಮಾಡಬಹುದು. ಇದಕ್ಕಾಗಿ ಬೇರೆ ಬೇರೆ ಗುರುಗಳ ಬಳಿ ಹೋಗಬೇಕಾಗುತ್ತಿತ್ತು. ಯಾವುದೇ ವೇದಾಂಗ ಅಭ್ಯಾಸಿಸುತ್ತಿದ್ದರೂ ಮೊಟ್ಟಮೊದಲು ಶಿಷ್ಯರಿಗೆ ಋಗ್ವೇದದ ಸ್ತುತಿಗೀತೆಗಳಲ್ಲಿಯ ಮುಖ್ಯಭಾಗಗಳನ್ನು ಕಲಿಸಲಾಗುತಿತ್ತು. ಇದು ಎಲ್ಲ ವರ್ಗದವರಿಗೂ ಕಡ್ಡಾಯವಾಗಿತ್ತು. ಪ್ರತಿಯೊಂದು ಸ್ತುತಿಗೀತೆಯ ಒಂದು ಶ್ಲೋಕವನ್ನು ಒಂದು ದಿವಸದ ಅಭ್ಯಾಸವಾಗಿ ಕಲಿಸಲಾಗುತಿತ್ತು. ಮುಂದೆ ಶಿಷ್ಯನು ಕಲಿಯಬೇಕಾದ ನಿರ್ದಿಷ್ಟ ವೇದದ ಅಧ್ಯಯನ ಸಾಗುತ್ತಿತ್ತು. ಈ ವೇದಾಧ್ಯಯನದಲ್ಲಿ ವೇದಕಾಲದಂತೆ ಮೌಖಿಕ ಕ್ರಮವನ್ನು ಅನುಸರಿಸಲಾಗಿತ್ತು. ಶ್ರವಣ, ಮನನ, ನಿದಿಧ್ಯಾಸನಗಳಿಗೂ ಪ್ರಾಧಾನ್ಯವಿತ್ತು. ಸೂತ್ರ, ಸ್ಮೃತಿಗಳೂ ಮೌಖಿಕ ಬೋಧನಾ ವಿಧಾನದ ಪರಂಪರೆಯನ್ನೇ ಅವಲಂಬಿಸಿದವು.

ಪ್ರಶ್ನೋತ್ತರ ವಿಧಾನ ಹಾಗೂ ಉಪನ್ಯಾಸ ವಿಧಾನ ಜಾರಿಯಲ್ಲಿತ್ತು. ಗುರು ಉಪನ್ಯಾಸದಿಂದ ವಿಷಯದ ಕುರಿತು ಜ್ಞಾನ ನೀಡುತ್ತಿದ್ದನು. ಬಳಿಕ ಗುರು–ಶಿಷ್ಯರು ಒಟ್ಟಿಗೆ ಪಠಿಸುವುದು, ಶಿಷ್ಯರ ಕಂಠಪಾಠ, ಅರ್ಥಗ್ರಹಿಕೆ, ಸ್ವಯಂಅಭ್ಯಾಸದೊಂದಿಗೆ ಕಲಿಕೆ ಸಾಗುತ್ತಿತ್ತು. ವೇದಕಾಲದಂತೆ ವೇದೋತ್ತರ ಕಾಲದಲ್ಲಿಯೂ ಕಲಿಸುವ ಕ್ರಮ ವೈಯಕ್ತಿಕವಾಗಿತ್ತು. ವೈಯಕ್ತಿಕ ಬೋಧನೆಯಿಂದ ಉತ್ತಮ ಶಿಕ್ಷಣ ಕೊಡಬಹುದೆಂಬ ಭಾವನೆಯಿಂದ ಈ ಬೋಧನೆಗನುಗುಣವಾಗಿ ಶಿಷ್ಯರ ಸಂಖ್ಯೆಯನ್ನು ಮಿತಗೊಳಿಸಲಾಗುತ್ತಿತ್ತು. ಗುರು ವೈಯಕ್ತಿಕ ಬೋಧನೆಗೆ ಅನುಗುಣವಾಗಿ ಶಿಷ್ಯರನ್ನು ಸ್ವೀಕರಿಸುತ್ತಿದ್ದನು.

ವೇದೋತ್ತರ ಕಾಲದ ಪಠ್ಯಕ್ರಮ ವಿಕಾಸದಲ್ಲಿ ಗಮನಿಸಬೇಕಾದ ಅಂಶವೆಂದರೆ ಇಲ್ಲಿ ವೇದಾಭ್ಯಾಸ ಕಡ್ಡಾಯವಾಗಿತ್ತು. ಜೊತೆಯಲ್ಲಿ ಶಾಸ್ತ್ರಗಳ ವಿಕಾಸವಾದಂತೆ ಕಾಲಮಾನಕ್ಕನುಗುಣವಾಗಿ ಅವುಗಳ ಅಧ್ಯಯನಕ್ಕೂ ಅವಕಾಶ ಕಲ್ಪಿಸಲಾಯಿತು.

ಇಂತಹ ಭಾರತೀಯ ಸಂಸ್ಕೃತ ಶಿಕ್ಷಣ ವ್ಯವಸ್ಥೆ ಎಷ್ಟು ಬಲವಾಗಿತ್ತೆಂದರೆ ಮಧ್ಯಯುಗದಲ್ಲಿ ಮಹಮ್ಮದೀಯರು ಭಾರತದ ಮೇಲೆ ಮೊದಲು ದಂಡಯಾತ್ರೆ ಆರಂಭಿಸಿ ಸತತವಾಗಿ ಮಹಮ್ಮದೀಯ ಅರಸರ ದಾಳಿ ಮತ್ತು ವಿಧ್ವಂಸಕ ಕಾರ್ಯಗಳು ನಡೆದರೂ ಈ ಶಿಕ್ಷಣವ್ಯವಸ್ಥೆ ಅಭಿವೃದ್ಧಿ ಸ್ಥಿತಿಯಲ್ಲೇ ಇತ್ತು. ಅಂತಹ ದೃಢವಾದ ತಳಹದಿಯ ಮೇಲೆ ಈ ಶಿಕ್ಷಣ ವ್ಯವಸ್ಥೆ ರೂಪುಗೊಂಡಿತ್ತು. ಈ ಸಂಧರ್ಭದಲ್ಲಿ ಮಹಮ್ಮದೀಯರಿಂದ ರಾಷ್ಟ್ರದ ಪ್ರಮುಖ ಶಿಕ್ಷಣ ಕೇಂದ್ರಗಳು ನಾಶವಾದಾಗ ಭಾರತೀಯ ಸಂಸ್ಕೃತ ಶಿಕ್ಷಣದ ಸಂಘಟಿತ ಸ್ವರೂಪಕ್ಕೆ ಕುಂದು ಬಂದರೂ ವಿಕೇಂದ್ರಿಕರಣವಾಗಿ ವೈಯಕ್ತಿಕವಾಗಿ ಶಿಕ್ಷಣ ನಡೆದುಕೊಂಡುಬಂದಿತ್ತು. ಆದರೆ ಗುರುಕುಲಗಳಲ್ಲಿ ಹಿಂದೆ ಇದ್ದಷ್ಟು ನಿರ್ಬಂಧಗಳು ಇರದೇ ಅವು ಸಡಿಲವಾದವು. ಕ್ರಿ.ಶ. 1200 ರಿಂದ 1800 ರವರೆಗಿನ ಕಾಲದಲ್ಲಿ ಅಲ್ಲಲ್ಲಿ ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಹೀಗೂ ಉಳಿದುಕೊಂಡು ಬಂದವು. ಅವುಗಳಲ್ಲಿ ಮಧುರ, ಮಾರ್ವಾರ್, ಪಾಟ್ನಾ, ನದಿಯ, ಕಾಶಿ, ಉಜ್ಜಯನಿ, ಧಾರ್, ವಿಜಯನಗರ, ಶೃಂಗೇರಿ, ಪಾಂಡಿಚೇರಿ ಇವು ಪ್ರಮುಖವಾದವುಗಳು. ಹೀಗೆ ಇಸ್ಲಾಂ ಧರ್ಮ ಭಾರತೀಯ ಶಿಕ್ಷಣ, ಧರ್ಮ, ಸಂಸ್ಕೃತಿಗಳನ್ನು ತುಳಿದು ತಮ್ಮ ವರ್ಚಸ್ಸನ್ನು ಬೀರಲು ಯತ್ನಿಸಿದರೂ ಇಲ್ಲಿನ ಧರ್ಮ, ಸಂಸ್ಕೃತಿ ಮತ್ತು ಶಿಕ್ಷಣಗಳು ನಾಶವಾಗಲಿಲ್ಲ. ತಮ್ಮ ವರ್ಚಸ್ಸನ್ನು ಉಳಿಸಿಕೊಂಡು ಬಂದುದಲ್ಲದೇ ಸಾಧ್ಯವಾದಷ್ಟು ಪ್ರಗತಿಯನ್ನು ಸಾಧಿಸಿದವು. ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾದೇಶಿಕ ಭಾಷೆಗಳು ಅಭಿವೃದ್ಧಿಹೊಂದಿ ಸಂಸ್ಕೃತದ ಜೊತೆಯಲ್ಲಿ ಶಿಕ್ಷಣ ಮಾಧ್ಯಮವಾದವು. ಈ ಕಾಲದಲ್ಲಿ ಲೌಕಿಕ ವಿದ್ಯೆಗೂ ಲಲಿತ ಕಲೆಗಳಿಗೂ ಶಿಕ್ಷಣದಲ್ಲಿ ಸ್ಥಾನ ಲಭ್ಯವಾಯಿತು.

ಬಳಿಕ 19ನೇ ಶತಮಾನದ ಪ್ರಾರಂಭದಲ್ಲಿ ಆರಂಭವಾದ ಇಂಗ್ಲೀಷರ ಪ್ರಭುತ್ವದಲ್ಲಿ ಆಂಗ್ಲಭಾಷೆಗೆ ದೊರೆತ ರಾಜಕೀಯಪಟ್ಟದಿಂದ ಹಾಗೂ ಅಂದಿನ ಸಾಮಾಜಿಕ ಸ್ಥಿತಿಗತಿಯಲ್ಲಿ ಜನತೆಯ ಜೀವನೋಪಾಯದ ವಾಸ್ತವಿಕ ಪ್ರಯತ್ನದ ಅರಸುವಿಕೆಯ ಫಲವಾಗಿ ಸಹಸ್ರವರ್ಷಗಳಿಂದ ಬೆಳೆದುಬಂದಿದ್ದ ಭಾರತೀಯ ಸಂಸ್ಕೃತ ಶಿಕ್ಷಣ ಮುಂದೆ ಮೊಟಕಾಯಿತು. ಆದರೂ ಸಂಸ್ಕೃತ ಶಿಕ್ಷಣ ಕೇಂದ್ರಗಳು ತಮ್ಮ ಶಿಕ್ಷಣವನ್ನು ಮುಂದುವರೆಸಿಕೊಂಡು ಬಂದವು. ಸ್ವಾತಂತ್ರ್ಯಾನಂತರ ಸಂಸ್ಕೃತ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು ಹಾಗೂ ಭಾರತೀಯ ಸಾಮಾನ್ಯ ಶಿಕ್ಷಣ ವ್ಯವಸ್ಥೆಯಲ್ಲಿ ತ್ರಿಭಾಷಾ ಸೂತ್ರದ ನಡುವೆ ಸಂಸ್ಕೃತಕ್ಕೆ ಪ್ರಥಮಭಾಷೆಯಾಗಿ ಹಾಗೂ ತೃತೀಯ ಭಾಷೆಯಾಗಿ ಸ್ಥಾನಮಾನ ನೀಡಲಾಯಿತು. ಇದು ಈಗಲೂ ಭಾರತೀಯ ಶಿಕ್ಷಣವ್ಯವಸ್ಥೆಯಲ್ಲಿ ಮುಂದುವರೆದುಕೊಂಡು ಬಂದಿದೆ.

–ಡಾ. ಪ್ರೀತಿ ಪಿ. ಭಂಡಾಕರ್

## ಭಾರತದಲ್ಲಿ ಸಂಸ್ಕೃತ ಶಿಕ್ಷಣದ ಬೆಳವಣಿಗೆ

ಪ್ರಾಚೀನ ಭಾರತೀಯ ಶಿಕ್ಷಣ ಪರಂಪರೆ ವೇದಕಾಲದ ಶಿಕ್ಷಣಪದ್ಧತಿಯಿಂದ ಪ್ರಾರಂಭವಾಗುವುದು. ಬಳಿಕ ವೇದೋತ್ತರಕಾಲ, ಬೌದ್ಧ ಹಾಗೂ ಜೈನಕಾಲ, ಮುಸ್ಲಿಂಕಾಲ ಮುಂದುವರಿದು ಆಧುನಿಕ ಭಾರತದಲ್ಲಿ ಬ್ರಿಟಿಷರ ಆಡಳಿತಕಾಲ ಮತ್ತು ಸ್ವತಂತ್ರಭಾರತದಲ್ಲಿ ಶಿಕ್ಷಣ ಈ ರೀತಿಯಲ್ಲಿ ಇಡೀ ಭಾರತದ ಅಂದಿನಿಂದ ಇಂದಿನವರೆಗಿನ ಸಂಸ್ಕೃತ ಶಿಕ್ಷಣದ ಬೆಳವಣಿಗೆಯ ಏಳು ಬೀಳುಗಳನ್ನು ಅಧ್ಯಯನ ಮಾಡಬಹುದು.

**ವೇದಕಾಲದಲ್ಲಿ ಸಂಸ್ಕೃತ ಶಿಕ್ಷಣದ ಬೆಳವಣಿಗೆ:**

ಪ್ರಾಚೀನ ಭಾರತೀಯ ಸಂಸ್ಕೃತ ಶಿಕ್ಷಣ ಆಗ ಭಾರತೀಯರು

Digitised by Bharatavani, CIIL

ಜೀವನವನ್ನು ನೋಡುವ ಸಾರ್ಥಕತೆಯ ದೃಷ್ಟಿ ಹಾಗೂ ಜೀವನದ ಅನಂತತೆ, ಪರಿಪೂರ್ಣತೆ, ಪೂರ್ಣಜ್ಞಾನ ಹಾಗೂ ಸಚ್ಚಿದಾನಂದಗಳ ಅರಿವನ್ನು ನೀಡುವುದರ ಪರಿಣಾಮವಾಗಿತ್ತು ಆದ್ದರಿಂದ ಜ್ಞಾನ ಸಂಪಾದನೆ, ಆಧ್ಯಾತ್ಮಿಕ ಪರಿಪೂರ್ಣತೆಯ ಸಾಧನೆ ಅಥವಾ ಬ್ರಹ್ಮಜ್ಞಾನ ಪ್ರಾಪ್ತಿ, ಧರ್ಮಾಚರಣೆಯ ಮೂಲಕ ಆತ್ಮೋದ್ಧಾರ, ಧರ್ಮ, ಅರ್ಥ, ಕಾಮ, ಮೋಕ್ಷ ಈ ಪುರುಷಾರ್ಥಗಳ ಸಾಧನೆ ಮತ್ತು ಅವುಗಳ ಸತ್ಪಾಲನೆ, ಸಚ್ಚಾರಿತ್ರ್ಯ ನಿರ್ಮಾಣ, ಪರಿಪೂರ್ಣ ವ್ಯಕ್ತಿತ್ವವಿಕಸನ, ಸಾಮಾಜಿಕ ಹಾಗೂ ನಾಗರಿಕ ಹೊಣೆಗಾರಿಕೆಯ ತರಬೇತಿ, ವೃತ್ತಿ ತರಬೇತಿ, ಸಮಾಜವಿಕಾಸ ಹಾಗೂ ಪ್ರಾಚೀನ ಭಾರತೀಯ ಸಂಸ್ಕೃತಿ ಪರಂಪರೆಗಳ ಸಂರಕ್ಷಣೆ ಮತ್ತು ಸಂವರ್ಧನೆ ಈ ಮುಂತಾದವುಗಳು ಶಿಕ್ಷಣದ ಗುರಿಗಳಾಗಿದ್ದವು. ಅಂದಿನ ಶಿಕ್ಷಣದ ವಿಶಾಲ ದೃಷ್ಟಿಕೋನ ಕೇವಲ ಈ ಜಗತ್ತಿಗಷ್ಟೇ ಸೀಮಿತವಾಗಿರಲಿಲ್ಲ, ಮರಣಾನಂತರದ ಶಾಶ್ವತ ಜಗತ್ತನ್ನು ಒಳಗೊಂಡಿತ್ತು ಆದ್ದರಿಂದ ಮಾನವ ಜೀವನವನ್ನು ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುವ ಆಧ್ಯಾತ್ಮಿಕ ಜ್ಞಾನ ಸಂಪಾದನೆಯ ಮೂಲಕ ಬ್ರಹ್ಮಜ್ಞಾನಗಳಿಸಿಕೊಂಡು ಆತ್ಮಸಾಕ್ಷಾತ್ಕಾರದೊಂದಿಗೆ ಜೀವನದ ಪರಮಗುರಿಯಾದ ಮೋಕ್ಷಪ್ರಾಪ್ತಿ ಮಾಡಿಕೊಳ್ಳುವುದು ಅಂದಿನ ಸಂಸ್ಕೃತ ಶಿಕ್ಷಣದ ಮೂಲಗುರಿಯಾಗಿತ್ತು, ಆದರೆ ಭೌತಿಕ ಸುಖವೂ ನಿರ್ಲಕ್ಷಿಸಲ್ಪಟ್ಟಿರಲಿಲ್ಲ. ಧರ್ಮಕ್ಕೆ ವಿರೋಧವಿಲ್ಲದೆ ಭೌತಿಕ ಸುಖಗಳನ್ನು ಅನುಭವಿಸುತ್ತ ಮೋಕ್ಷ ಪ್ರಾಪ್ತಿ ಮಾಡಿಕೊಳ್ಳುವ ಮಾರ್ಗತೋರುವ ಗುರಿಯನ್ನು ಅಂದಿನ ಶಿಕ್ಷಣ ಹೊಂದಿತ್ತು.

ಇಂತಹ ವೇದಕಾಲದ ಸಂಸ್ಕೃತ ಶಿಕ್ಷಣ ಋಗ್ವೇದ ಕಾಲದಿಂದ ಪ್ರಾರಂಭವಾಗುತ್ತದೆ. ಋಗ್ವೇದ ಕಾಲದ ಶಿಕ್ಷಣ ಪದ್ಧತಿಯಲ್ಲಿ 1028 ಸೂಕ್ತಗಳಿಂದ ಹತ್ತು ಮಂಡಲದಿಂದ ಕೂಡಿದ ಋಗ್ವೇದ ಸಂಹಿತೆಯ 'ಋಕ್ಕು'ಗಳು ಅಂದರೆ ಸ್ತೋತ್ರಗೀತೆಗಳೇ ಅಧ್ಯಯನ ವಿಷಯಗಳಾಗಿದ್ದವು. ವಿವಿಧ ದೇವತೆಗಳನ್ನು ಕುರಿತು ಮಾಡುವ ಯಜ್ಞ ಯಾಗಾದಿಗಳಿಗೆ ಇವುಗಳೇ ಮಂತ್ರಗಳಾಗಿದ್ದವು.

ಋಗ್ವೇದ ಶಿಕ್ಷಣದಿಂದ ಪ್ರಾರಂಭವಾದ ಸಂಸ್ಕೃತ ಶಿಕ್ಷಣ ಇತರ ವೇದಗಳ ಶಿಕ್ಷಣದ ಮೂಲಕ ಮುಂದುವರಿಯುತ್ತದೆ. ಇತರ ವೇದಗಳಾದ ಸಾಮವೇದ, ಯಜುರ್ವೇದ, ಅಥರ್ವವೇದಗಳು ಧಾರ್ಮಿಕ ವಿಚಾರಗಳಿಂದ ಪ್ರಭಾವಿತವಾದ ಅಧ್ಯಯನದ ಓಘವನ್ನು, ಶೈಕ್ಷಣಿಕ ಬೆಳವಣಿಗೆಯನ್ನು ಸೂಚಿಸುತ್ತವೆ.

ಈ ನಾಲ್ಕು ವೇದ ಸಂಹಿತೆಗಳ ರಚನಾ ಕ್ರಿಯೆಯ ತತ್ತ್ವವು ಋಗ್ವೇದ ಸಂಹಿತೆಗಿಂತ ಬೇರೆ ತೆರನಾಗಿದೆ. ಋಗ್ವೇದ ಸಂಹಿತೆಯ ಸೂಕ್ತಗಳು ಎಲ್ಲವೂ ಒಂದೇ ಉದ್ದೇಶವನ್ನು ಇಟ್ಟುಕೊಂಡು ಸಂಗ್ರಹಿತವಾದವುಗಳಲ್ಲ. ಋಗ್ವೇದ ಸೂಕ್ತಗಳು ಯಾವುದೇ ವಾಸ್ತವಿಕ ಉದ್ದೇಶ ಇಲ್ಲವೇ ಧಾರ್ಮಿಕವಿಧಿಗೆ ಸಂಬಂಧಿಸಿಲ್ಲ. ಯಜ್ಞಗಳನ್ನು ನೆರವೇರಿಸುವ ವೈದಿಕ ಕವಿಗಳಾದ ಋಷಿಗಳು ವ್ಯಾವಹಾರಿಕ ರೀತಿಯಿಂದ ಹೊಂದಿಸಿ ಯಜ್ಞಗೀತಗಳಂತೆ ಪ್ರಾರ್ಥನಾ ಮಾಲೆಗಳಂತೆ ಈ ಗೀತೆಗಳನ್ನು ಪಠಿಸುತ್ತಿದ್ದರು. ಸ್ತುತಿಗೀತೆಗಳ ವ್ಯವಸ್ಥೆಗೂ, ಯಜ್ಞಗಳ ವ್ಯವಸ್ಥೆಗೂ ಸಂಬಂಧವಿರಲಿಲ್ಲ. ಆದ್ದರಿಂದ ಯಜ್ಞಗಳು ಮತ್ತು ಆಹುತಿಗಳಿಂದ ವೈಯಕ್ತಿಕ ದೇವತೆಗಳ ಬಾಹ್ಯ ಪೂಜೆಯಲ್ಲಿ ಅಭಿವ್ಯಕ್ತವಾಗುವ ಅಂಗವಾದ 'ಕರ್ಮಕಾಂಡ'ದ ಸೂಕ್ತ ಅಭಿವೃದ್ಧಿಗಾಗಿ ಪೌರೋಹಿತ್ಯದ ಬೆಳವಣಿಗೆ ಮತ್ತು ಅದಕ್ಕೆ ಅಗತ್ಯವಿರುವ ಪಠ್ಯಗಳ ಸಲುವಾಗಿ ಇತರ ವೇದಗಳ ರಚನೆಯಾಯಿತು. ಈ ಇತರ ವೇದಗಳು ಯಜ್ಞಗಳ ನಿರ್ದಿಷ್ಟ ವ್ಯವಸ್ಥೆಯನ್ನು ಸೂಚಿಸುವ, ಸ್ಥಿರೀಕೃತ ಸಂಪ್ರದಾಯವನ್ನು ಅನುಸರಿಸುತ್ತವೆ. ಆದರೆ ಇವುಗಳ ಬೆಳವಣಿಗೆಗೆ ಮೂಲ ಋಗ್ವೇದವೇ ಆಗಿದೆಯೆಂಬುದನ್ನು ಮರೆಯುವಂತಿಲ್ಲ. ಋಗ್ವೇದ ಕಾಲದಲ್ಲಿ ಆರಂಭವಾದ ಪೌರೋಹಿತ್ಯ ಸಂಪ್ರದಾಯ ಈ ಇತರ ವೇದಗಳ ಕಾಲದಲ್ಲಿ ವ್ಯವಸ್ಥಿತವಾಗಿ ಬೆಳವಣಿಗೆ ಹೊಂದಿತು.

ಆ ಕಾಲದ ಶಿಕ್ಷಣ ಇಂತಹ ಪೌರೋಹಿತ್ಯದ ಮತ್ತು ಸಂಸ್ಕಾರ ಸಮ್ಮತವಾದ ಧರ್ಮದ ಬೇಕು ಬೇಡಿಕೆಗಳಿಗೆ ಸಂಬಂಧಿಸಿದ್ದಾಗಿದ್ದು ಇದಕ್ಕೆ ತಕ್ಕಂತೆ ವಿದ್ಯಾರ್ಥಿಗಳಿಗೆ ಪ್ರಾರಂಭಿಕವಾಗಿ ನಾಲ್ಕೂ ವೇದಗಳ ಜ್ಞಾನ ನೀಡಿ ಉಚ್ಚಶಿಕ್ಷಣದಲ್ಲಿ ಐಚ್ಛಿಕವಾಗಿ ಪೌರೋಹಿತ್ಯಕ್ಕೆ ಹೊಂದಿಕೊಂಡಂತೆ ಇರುವ ವೇದಶಿಕ್ಷಣ ಕೊಡಲಾಗುತ್ತಿತ್ತು.

ಮುಂದೆ ಸಮಾಜವು ಮುಂದುವರಿದಂತೆ ಧರ್ಮವು ಹೆಚ್ಚು ಹೆಚ್ಚಾಗಿ ವಿಧಿ–ವಿಧಾನಗಳಲ್ಲಿಯೂ ಯಜ್ಞ–ಯಾಗಾದಿಗಳಲ್ಲಿಯೂ ಕೇಂದ್ರೀಕೃತವಾಯಿತು. ಇವುಗಳ ವಿವರಗಳೂ ವಿಸ್ತೃತಗೊಂಡವು ಸಹಜವಾಗಿ ತರ್ಕ–ವಿತರ್ಕಗಳಿಂದ ನಿರ್ಣಯಿಸಲ್ಪಟ್ಟ ಈ ವಿವರಗಳನ್ನು ನಿಯತಗೊಳಿಸುವ, ನಿರ್ಧರಿಸುವ ಮತ್ತು ನಿತ್ಯನೂತನವಾಗಿಸುವಂತಹ ಯೋಗ್ಯ ಪಠ್ಯಗಳ ಅವಶ್ಯಕತೆಯುಂಟಾಯಿತು. ಇದು 'ಬ್ರಾಹ್ಮಣ'ಗಳೆಂಬ ಹೊಸ ಸಾಹಿತ್ಯದ ಉದಯಕ್ಕೆ ಅನುವು ಮಾಡಿಕೊಟ್ಟಿತು. ಪ್ರತಿಯೊಂದು ವೇದಕ್ಕೂ ಬ್ರಾಹ್ಮಣಗ್ರಂಥಗಳು ನಿರ್ಮಾಣವಾದವು. ವೇದಾಧ್ಯಯನದೊಂದಿಗೆ ಬ್ರಾಹ್ಮಣಗಳ ಅಧ್ಯಯನ ಪಠ್ಯಕ್ರಮದಲ್ಲಿ ಸೇರ್ಪಡೆಯಾಯಿತು. ನಾಲ್ಕು ವೇದಗಳು ಒಟ್ಟು 10 ಬ್ರಾಹ್ಮಣಗಳನ್ನು ಒಳಗೊಂಡಿವೆ.

ಮುಂದೆ ಸಂಸ್ಕೃತ ಶಿಕ್ಷಣವು ಅರಣ್ಯಕಗಳ ಅಧ್ಯಯನದೊಂದಿಗೆ ಮುಂದುವರಿದಿರುವುದು ಕಂಡು ಬರುತ್ತದೆ. ಆರಣ್ಯಕಗಳು ಬ್ರಾಹ್ಮಣಗಳ ಪರಿಶಿಷ್ಟ ಭಾಗಗಳಾಗಿವೆ. ಅರಣ್ಯದಲ್ಲಿ ಬೋಧಿಸುತ್ತಿದ್ದುದರಿಂದ ಹಾಗೂ ಅಧ್ಯಯನ ಮಾಡುತ್ತಿತ್ತಾದ್ದರಿಂದ ಇವುಗಳಿಗೆ 'ಆರಣ್ಯಕ' ಗಳೆಂದು ಹೆಸರು ಬಂದಿತು.

ಗೃಹಸ್ಥ ಜೀವನವನ್ನು ಸ್ವೀಕರಿಸದೇ ಜ್ಞಾನೋಪಾಸನೆಯಲ್ಲಿ ತೊಡಗಿದ ಬ್ರಹ್ಮಚಾರಿಗಳಿಗೆ 'ಅರಣ'ರು ಅಥವಾ 'ಅರಣ ಮಾನಸರು' ಎಂದು ಕರೆಯುತ್ತಿದ್ದರು. ಇವರು ಜನನಿಬಿಡ ಪ್ರದೇಶಗಳಿಂದ ದೂರದ ಅಡವಿಯಲ್ಲಿ ವಾಸಿಸುತ್ತಿದ್ದರು. ಈ ಅಡವಿಗಳಿಗೆ 'ಅರಣ್ಯ' ಎಂದು ಕರೆಯುತ್ತಿದ್ದರು. ಈ ವಿದ್ವಾಂಸ ಸಾಧುಗಳು ಬ್ರಹ್ಮ, ಸೃಷ್ಟಿ, ಆತ್ಮ ಇಲ್ಲವೇ ಅಮರತ್ವ (ಮುಕ್ತಿ) ಮೊದಲಾದ ವಿಚಾರಗಳ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತಿದ್ದರು. ಈ ಬ್ರಹ್ಮಜ್ಞಾನಿಗಳಾದ ಋಷಿಗಳ ತತ್ತ್ವಜ್ಞಾನಪೂರಿತ ಚಿಂತನೆಗಳ ಸಂಗ್ರಹಗಳು ಈ ಆರಣ್ಯಕಗಳು.

Digitised by Bharatavani, CIIL

ಬ್ರಾಹ್ಮಣಗಳ ಮುಖ್ಯ ವಿಷಯ ಯಜ್ಞಗಳಾದರೆ ಅರಣ್ಯಕಗಳ ಮುಖ್ಯ ವಿಷಯ ಯಜ್ಞಾಂತರ್ಗತವಾದ ಆಧ್ಯಾತ್ಮಿಕ ತತ್ತ್ವವಿಚಾರ. ಆಧ್ಯಾತ್ಮಿಕ ಪರಿಪೂರ್ಣತೆಯ ಸಾಧನೆಯೊಂದಿಗೆ ಆತ್ಮಸಾಕ್ಷಾತ್ಕಾರದ ಗುರಿ ಹೊಂದಿದ್ದ ಶಿಕ್ಷಣ ಪದ್ಧತಿಯು ಕರ್ಮಕಾಂಡದಿಂದ ಜ್ಞಾನಕಾಂಡದತ್ತ ಒಲವು ತೋರಿತು. ಆರಣ್ಯಕಗಳು ಆಧ್ಯಾತ್ಮಶಾಸ್ತ್ರದ ಮತ್ತು ಗೂಢಾರ್ಥ ಸತ್ಯಗಳ ವಾಹಕಗಳಾಗಿದ್ದು ಜ್ಞಾನಕಾಂಡಗಳೆನಿಸಿವೆ.

ಉಪನಿಷತ್ತುಗಳ ಶಿಕ್ಷಣ ಬ್ರಾಹ್ಮಣಗಳ ಕಾಲದಲ್ಲಿ 'ಯಜ್ಞ ವಿಜ್ಞಾನ'ವು ಪ್ರಧಾನವಾಗಿ ಬೆಳೆದು ಬಂದಿದ್ದನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಇಲ್ಲಿ ನಡೆಯುತ್ತಿದ್ದ ಯಾಗಗಳಲ್ಲಿ ಪಶುಗಳ ಬಲಿಯೂ ಭಗವಂತನನ್ನು ಸಂಪ್ರೀತಗೊಳಿಸುವ ಕಾರ್ಯದ ಒಂದು ಭಾಗವಾಗಿತ್ತು. ಸಮಾಜ ಮುಂದುವರಿದಂತೆ ಆರಣ್ಯಕಗಳ ಕಾಲದಲ್ಲಿ ಆಧ್ಯಾತ್ಮಿಕ ಚಿಂತನೆಯ ಓಘ ಬೇರೆ ದಿಕ್ಕಿನಲ್ಲಿ ಪ್ರವಹಿಸತೊಡಗಿತು. ಇದರ ಪರಿಣಾಮವಾಗಿ ಪಶುಮಾರಣಗಳಿಲ್ಲದೇ ಮಾನವರು ಪರಮ ಪುರುಷಾರ್ಥವನ್ನು ಸಾಧಿಸಬಹುದೆಂಬ ವಿಚಾರದಲ್ಲಿ ಮೀಮಾಂಸೆ ಬೆಳೆಯಿತು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಋಗ್ವೇದದಲ್ಲಿ ಅಲ್ಲಲ್ಲಿ ಪ್ರತಿಪಾದಿತವಾದರೂ ಅದರ ಸಮಗ್ರ ಸ್ವರೂಪ ಉಪನಿಷತ್ತುಗಳಲ್ಲಿ ಕಂಡುಬರುತ್ತದೆ. ಬಹಳ ಸರಳವೂ ಮಾರ್ಮಿಕವೂ ಆದ ಶೈಲಿಯಲ್ಲಿ ಪ್ರಕೃತಿ–ಪುರುಷ ಹಾಗೂ ಭಗವಂತನ ಸ್ವರೂಪ ಸಂಬಂಧಗಳನ್ನು ಇದಕ್ಕೆ ಮೀರಿದ ಪರಮಾತ್ಮ ತತ್ತ್ವವನ್ನೂ ವಿವೇಚಿಸುವ ಉನ್ನತವಾದ ದಾರ್ಶನಿಕ ವಿಚಾರಧಾರೆಯನ್ನು ಸಮಗ್ರವಾಗಿ ಪ್ರತಿಪಾದಿಸುವುದು ಉಪನಿಷತ್ತುಗಳ ವೈಶಿಷ್ಟ್ಯವಾಗಿದೆ. ಉಪನಿಷತ್ತುಗಳು ಗದ್ಯಮಯವಾಗಿದ್ದು ಸಂಸ್ಕೃತ ಭಾಷೆಯನ್ನು ಎಷ್ಟು ವಿಷಯವತ್ತರವಾಗಿ ಗದ್ಯದಲ್ಲಿ ಬಳಸಬಹುದೆಂಬುದಕ್ಕೆ ನಿದರ್ಶನಗಳಂತಿವೆ. ಕೇವಲ ವೈದಿಕ ವಾಙ್ಮಯದಲ್ಲಿ ಮಾತ್ರವಲ್ಲ ವಿಶ್ವ ವಾಙ್ಮಯದಲ್ಲಿಯೇ ಇವು ಅತ್ಯುನ್ನತ ಸ್ಥಾನವನ್ನು ಪಡೆದಿವೆ.

ಪ್ರತಿಯೊಂದು ವೇದ ಸಂಹಿತೆಗೆ ಸಂಬಂಧಪಟ್ಟ ಉಪನಿಷತ್ತುಗಳು ಮೂಲ ಸಂಹಿತೆಯಲ್ಲಿರುವ ಅತಿ ರಹಸ್ಯಮಯ ಬ್ರಹ್ಮವಿದ್ಯೆಯನ್ನೇ ವಿಶ್ವ ಮೋಹಕ ಭಾಷೆಯಲ್ಲಿ ಸಾರುತ್ತವೆ. ಕೆಲವು ಉಪನಿಷತ್ತುಗಳು ಮನಮೋಹಕ ಕಾವ್ಯಭಾಷೆಯಲ್ಲಿದ್ದರೆ, ಕೆಲವು ಸತ್ವಪೂರ್ಣ ಗದ್ಯಭಾಷೆಯಲ್ಲಿದೆ. ಉಪನಿಷತ್ಕಾಲದ ಶಿಕ್ಷಣದಲ್ಲಿ ಇವೇ ಪಠ್ಯಕ್ರಮಗಳಾಗಿದ್ದವು.

ಈ ರೀತಿಯ ವೇದಕಾಲದ ಶಿಕ್ಷಣಪದ್ಧತಿ ಬಳಿಕ ವೇದೋತ್ತರಕಾಲದಲ್ಲಿ ಅಂದರೆ ಸೂತ್ರ, ಸ್ಮೃತಿ, ಆರ್ಷಮಹಾಕಾವ್ಯ ಹಾಗೂ ಕಾವ್ಯಗಳ ಕಾಲದಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ.

ಋಗ್ವೇದಕಾಲದಿಂದ ಉಪನಿಷತ್ ಕಾಲದವರೆಗಿನ ವೇದಕಾಲದ ಸಂಸ್ಕೃತ ಶಿಕ್ಷಣ ಪರಂಪರೆಯಲ್ಲಿ ಕಾಲಮಾನದ ವಿಚಾರದಲ್ಲಿ ವಿದ್ವಾಂಸರ ಅಭಿಪ್ರಾಯದಲ್ಲಿ ಒಮ್ಮತವಿಲ್ಲ ಹಾಗೂ ಸಹಸ್ರಮಾನಗಳ ಅಂತರವಿದೆ ಮುಂದೆ ಉಪನಿಷತ್‌ಕಾಲ ಮತ್ತು ವೇದೋತ್ತರಕಾಲಗಳ ನಡುವೆಯೂ ಸಹಸ್ರಮಾನಗಳ ಅಂತರವಿದೆಯೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

**ವೇದೋತ್ತರ ಕಾಲದಲ್ಲಿ ಸಂಸ್ಕೃತ ಶಿಕ್ಷಣದ ಬೆಳವಣಿಗೆ:**

ವೇದಕಾಲದ ಉದಾತ್ತ ಧ್ಯೇಯೋದ್ದೇಶವುಳ್ಳ ಶಿಕ್ಷಣಪದ್ಧತಿ ವೇದೋತ್ತರಕಾಲದಲ್ಲಿ ಸಂಪೂರ್ಣವಾಗಿ ಬದಲಾಗದಿರುವುದು ಕಂಡುಬರುತ್ತದೆ. ಪ್ರಾಚೀನ ಸಂಸ್ಕೃತಿಯ ಸಂರಕ್ಷಣೆ ಹಾಗೂ ಸಂವರ್ಧನೆಯ ದೃಷ್ಟಿಕೋನವುಳ್ಳ ವೇದೋತ್ತರಕಾಲದ ಶಿಕ್ಷಣವು ವೇದಕಾಲದ ಶಿಕ್ಷಣದ ಶಾಶ್ವತಮೌಲ್ಯಗಳನ್ನು ಎತ್ತಿಕೊಂಡು ಅಂದಿನ ತನ್ನ ಆಧ್ಯಾತ್ಮಿಕತೆಯೊಂದಿಗೆ ವೈಜ್ಞಾನಿಕತೆಯನ್ನು ಬಯಸಿದ ಹೊಸ ಸಾಮಾಜಿಕ ಬೇಡಿಕೆಗಳಿಗನುಗುಣವಾಗಿ ಶಿಕ್ಷಣದ ಧ್ಯೇಯೋದ್ದೇಶಗಳನ್ನು ಬದಲಾಯಿಸಿಕೊಂಡಿತು. ವೇದಕಾಲದ ಗುರಿಗಳೊಂದಿಗೆ, ಧರ್ಮಾಚರಣೆಯೊಂದಿಗೆ ಭೌತಿಕ ಬೆಳವಣಿಗೆ, ಗೃಹಸ್ಥ ಧರ್ಮಪಾಲನೆ ಹಾಗೂ ಸಾಧನೆಗಾಗಿ ಶಿಕ್ಷಣ ಈ ಮುಂತಾದವುಗಳು ಸೇರ್ಪಡೆಯಾದವು.

ಈ ಕಾಲದಲ್ಲಿ ವೇದೋಪನಿಷತ್ತುಗಳಂತಹ ಮೌಲ್ಯಯುತವಾದ ಸಾಹಿತ್ಯಗಳ ಮೂಲ ತಿರುಳಿನ ಸುತ್ತಲೂ ವಿಶಾಲವಾದ ವೈವಿಧ್ಯಮಯ ಭಾಷ್ಯಗಳ ಸಾಹಿತ್ಯ ಬೆಳೆಯಿತು. ಈ ಸಾಹಿತ್ಯ ಕ್ಲಿಷ್ಟಕರವಾಗಿ ಪಂಡಿತರಿಗೆ ಮಾತ್ರ ಅರ್ಥವಾಗುತ್ತಿತ್ತು. ವಿಷಯ ಸಂಗ್ರಹವು ಬಹುವಿಶಾಲವಾಗಿ ಸಾಗಿತು. ಆದರೆ ವಿಶಿಷ್ಟ ದಿಕ್ಕುಗಳಲ್ಲಿ ಸಾಗುತ್ತಿದ್ದ ಸಾಹಿತ್ಯದ ಈ ವಿಪುಲತೆಗೆ ಸ್ವಾಭಾವಿಕವಾದ ಮೇರೆಯೂ ಇತ್ತು. ವಿವರಗಳಲ್ಲಿ ಧರ್ಮದ ತಿರುಳು, ಇಡಿಯಾದುದರ ಅರ್ಥ ಹಾಗೂ ಮನನ ಇವು ಮರೆಯಾಗುವ ಸ್ಥಿತಿ ಒದಗಿ ಇದು ಸಮಾಜದ ಧಾರ್ಮಿಕ ನೆಲೆಗಟ್ಟನ್ನು ಸಡಲಿಸಬಹುದೆನ್ನುವ ಹೆದರಿಕೆಯುಂಟಾಯಿತು. ಆಗ ಈ ವಿವರವಾದ ವೇದಾಂತಗಳ ವಿಸ್ತೃತವಾದ ಚರ್ಚೆಯ ಬದಲು ಸಂಕ್ಷಿಪ್ತವಾಗಿ, ಅರ್ಥಬದ್ಧವಾಗಿ ಕ್ರೋಢೀಕರಿಸಲ್ಪಟ್ಟ ಸಾಹಿತ್ಯದ ಉದಯವಾಯಿತು. ಭೌತಿಕವಾಗಿ ಸಮಾಜದ ಉದ್ಧಾರದತ್ತ ಲಕ್ಷ್ಯವಹಿಸಿ ವ್ಯಾವಹಾರಿಕ ಉದ್ದೇಶದಿಂದ ನಿರ್ಮಿತವಾದ ಈ ಸಾಹಿತ್ಯವೇ 'ಸೂತ್ರಸಾಹಿತ್ಯ'. ಈ ಸೂತ್ರಗಳ ಒಂದು ಭಾಗವಾದ ಗೃಹ್ಯಸೂತ್ರಗಳು ಮುಂದೆ ಧರ್ಮಶಾಸ್ತ್ರಗಳಾಗಿ 'ಸ್ಮೃತಿ'ಗಳೆನಿಸಿದವು. ಇವೆಲ್ಲ ಕಾಲಾನುಕ್ರಮದಲ್ಲಿ ಪಠ್ಯಕ್ರಮದಲ್ಲಿ ವೇದಾಭ್ಯಾಸದ ಜೊತೆಯಲ್ಲಿ ಅಧ್ಯಯನ ವಿಷಯಗಳಾದವು.

ಸೂತ್ರಗಳ ಶೈಲಿಯಲ್ಲಿ ರಚಿತವಾದ ವೈದಿಕ ಕೃತಿಗಳ ಸಾಹಿತ್ಯವಾದ ವೇದಾಂಗ (ಶಿಕ್ಷಾ, ಛಂದಸ್ಸು, ವ್ಯಾಕರಣ, ನಿರುಕ್ತ, ಕಲ್ಪ, ಜ್ಯೋತಿಷ್ಯ) ಗಳು ಪಾಣಿನಿಯರಂತಹ ವ್ಯಾಕರಣಕಾರರಿಂದ ಹಿಂದಿನ ಕುಂದುಕೊರತೆಗಳನ್ನು ನೀಗಿಸಿಕೊಂಡು ಪರಿಪೂರ್ಣತೆಯನ್ನು ಪಡೆದವು. ಹಾಗೂ ಇವುಗಳ ಸಶಾಸ್ತ್ರೀಯ ಅಭ್ಯಾಸಕ್ಕೆ ಚಾಲನೆ ದೊರಕಿತು.

ಕ್ರಮೇಣ ಸೂತ್ರಗಳಿಗೆ ಇದ್ದಂತಹ ಪರಿಶಿಷ್ಟಗಳೆಂಬ ಪೂರಕಗಳಿಂದ ವಿಸ್ತೃತವಾದ ಸಾಹಿತ್ಯ ರಚಿಸಲ್ಪಟ್ಟಿತು. ಇವು ಪ್ರಯೋಗಗಳು ಇಲ್ಲವೇ ಗ್ರಂಥಗಳು.

Digitised by Bharatavani, CIIL

ಈ ಕಾಲದಲ್ಲಿಯೇ ಆಧ್ಯಾತ್ಮಿಕತೆಯೇ ಸಾರಸ್ವತಗಳಾದಂತಹ ದರ್ಶನ ಸಾಹಿತ್ಯ ಬೆಳವಣಿಗೆ ಕಂಡಿತು. ವಿದ್ವನ್ಮಣಿಗಳಾದ ಋಷಿಗಳಿಂದ ಷಡ್ದರ್ಶನಗಳು ರಚನೆಯಾದವು.

ಈ ದರ್ಶನಗಳು ಬ್ರಾಹ್ಮಣಗಳಲ್ಲಿ ಮತ್ತು ಉಳಿದ ಉಪ ನಿಷತ್ತುಗಳಲ್ಲಿ ವಿಪುಲವಾಗಿ ಬೆಳೆದು ಪ್ರಕಟವಾದ ತರ್ಕವಿತರ್ಕಗಳನ್ನು ಸಂಘಟಿಸುತ್ತವೆ. ಷಡ್ದರ್ಶನಗಳು ಇಂತಿವೆ. ವೈಶೇಷಿಕ ದರ್ಶನ, ನ್ಯಾಯ ದರ್ಶನ, ಯೋಗ ದರ್ಶನ, ಸಾಂಖ್ಯ ದರ್ಶನ, ಪೂರ್ವಮೀಮಾಂಸೆ ಮತ್ತು ಉತ್ತರ ಮೀಮಾಂಸೆ.

ವೇದೋತ್ತರ ಕಾಲದಲ್ಲಿ ಭಾರತದಲ್ಲಿ ಅರಸರ ಆಡಳಿತವಿತ್ತು. ಈ ಕಾಲದಲ್ಲಿ ಬಹುತೇಕ ಅರಸರು ಸಂಸ್ಕೃತ ಕವಿಗಳಿಗೆ ರಾಜಾಶ್ರಯ ನೀಡಿ ಸಂಸ್ಕೃತ ಸಾಹಿತ್ಯ ಬೆಳವಣಿಗೆಗೆ ಪ್ರೋತ್ಸಾಹವಿತ್ತರು. ಆದ್ದರಿಂದ ಸಂಸ್ಕೃತ ಸಾಹಿತ್ಯ ಕ್ಷೇತ್ರ ವಿಸ್ತಾರವಾಯಿತು ಹಾಗೂ ಈ ಸಾಹಿತ್ಯ ಸಂಸ್ಕೃತ ಶಿಕ್ಷಣದ ಪಠ್ಯಕ್ರಮದಲ್ಲಿ ಅಳವಡಿಕೆಯಾಯಾಯಿತು.

ಭಾರತದಲ್ಲಿ ಏಳಿಗೆಗೆ ಬಂದ ಸಾಮ್ರಾಜ್ಯಗಳಲ್ಲಿ ಮೌರ್ಯಸಾಮ್ರಾಜ್ಯ ಮೊಟ್ಟ ಮೊದಲನೆಯದು. (ಕ್ರಿ.ಪೂ. 323) ಮೌರ್ಯಸಂತತಿಯ ಸ್ಥಾಪಕ ಚಂದ್ರಗುಪ್ತಮೌರ್ಯ. ಇವನ ಆಡಳಿತದ ಕಾಲದಲ್ಲಿ ಈತನ ಪ್ರಧಾನಮಂತ್ರಿಯಾದ ಕೌಟಿಲ್ಯ(ಚಾಣಕ್ಯ)ನು ಸಂಸ್ಕೃತ ಸಾಹಿತ್ಯದಲ್ಲಿಯೇ ಅದ್ವಿತೀಯವಾದ ಜಗತ್ಪ್ರಸಿದ್ಧ ಗ್ರಂಥವಾದ 'ಅರ್ಥಶಾಸ್ತ್ರ'ವನ್ನು ರಚಿಸಿದನು. ಈತನ ಕಾಲದಲ್ಲಿಯೇ ವಿಶಾಖದತ್ತನ 'ಮುದ್ರಾರಾಕ್ಷಸ' ರಚನೆಯಾಗಿದ್ದೆಂದು ಇತಿಹಾಸದಿಂದ ತಿಳಿದು ಬರುತ್ತದೆ.

ಮುಂದೆ ಮೌರ್ಯರ ಉತ್ತರಾಧಿಕಾರಿಗಳಾದ ಶುಂಗರು, ಕಣ್ವರು, ಶಾತವಾಹನರು, ಕಳಿಂಗದ ಖಾರವೇಲರ ಕಾಲದಲ್ಲಿಯೂ ಸಂಸ್ಕೃತ ಸಾಹಿತ್ಯ ಹಾಗೂ ಶಿಕ್ಷಣಕ್ಕೆ ಪ್ರೋತ್ಸಾಹ ಸಿಕ್ಕಿರುವುದು ತಿಳಿದು ಬರುತ್ತದೆ. ಪುಷ್ಯಮಿತ್ರಶುಂಗನು ವೈದಿಕ ಮತಾವಲಂಬಿಯಾಗಿದ್ದು ಇವನ ಕಾಲದಲ್ಲಿ ಅಶೋಕನಿಂದ ಬೌದ್ಧಧರ್ಮ ಉತ್ತುಂಗಕ್ಕೇರಿ ಚೈತನ್ಯ ಕಳೆದುಕೊಂಡಿದ್ದ ವೈದಿಕ ಧರ್ಮವು ಪುನಶ್ಚೇತನಗೊಂಡು ಬೆಳೆಯಲಾರಂಭಿಸಿತು. ಸಂಸ್ಕೃತ ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿತು.

ಕ್ರಿ.ಶ. 4ನೇ ಶತಮಾನದಲ್ಲಿ ಗುಪ್ತರು ಸಂಸ್ಕೃತವನ್ನೇ ಆಡಳಿತಭಾಷೆಯನ್ನಾಗಿ ಮಾಡಿಕೊಂಡರು. ಈ ಕಾಲದಲ್ಲಿ ಪಾಣಿನಿ ಹಾಗೂ ಪತಂಜಲಿಯವರು ಸಂಸ್ಕೃತವನ್ನು ವ್ಯವಸ್ಥಿತ ವ್ಯಾಕರಣದಿಂದ ಸುಸಂಬದ್ಧಗೊಳಿಸಿದರು. ಆದ್ದರಿಂದ ಗುಪ್ತರು ಶಾಸನಗಳು ಹಾಗೂ ನಾಣ್ಯಗಳ ಮೇಲೂ ಸಂಸ್ಕೃತ ಭಾಷೆಯನ್ನೇ ಉಪಯೋಗಿಸಿದರು. ಈ ಕಾಲದಲ್ಲಿ ಸಂಸ್ಕೃತ ಭಾಷೆಯು ಜ್ಞಾನದ, ನಾಗರಿಕತೆಯ ಪ್ರತೀಕದಂತೆ ಗುರುತಿಸಲ್ಪಟ್ಟಿತು. ಸುಶಿಕ್ಷಿತರು ಸಂಸ್ಕೃತದಲ್ಲೇ ಮಾತನಾಡಲಾರಂಭಿಸಿದರು. ಹೀಗೆ ಸಂಸ್ಕೃತ ಭಾಷೆಯು ಉತ್ತರ ಭಾರತದ ಭಾಷೆಯಾಗಿ ಬೆಳವಣಿಗೆಗೊಂಡಿತು. ಬ್ರಹ್ಮಲಿಪಿಯಿಂದ ದೇವನಾಗರಿಲಿಪಿಯು ವಿಕಸಿತಗೊಂಡು ಅಭಿವೃದ್ಧಿಯಾಯಿತು.

ಭಾರತದ ಸಂಸ್ಕೃತ ಸಾಹಿತ್ಯ ಅಭಿವೃದ್ಧಿಯಲ್ಲಿ ಈ ಕಾಲವನ್ನು ಸುವರ್ಣಯುಗವೆಂದು ಕರೆಯಲು ಕಾರಣವೆಂದರೆ ಈ ಕಾಲದಲ್ಲಿ ಶ್ರೇಷ್ಠ ಕವಿಗಳಿಂದ, ತತ್ವಜ್ಞಾನಿಗಳಿಂದ, ವಿಜ್ಞಾನಿಗಳಿಂದ ವಿವಿಧಪ್ರಕಾರದ ಜಗತ್ಪ್ರಸಿದ್ಧ ಸಾಹಿತ್ಯ ರಚನೆಯಾಯಿತು. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ ಕಾಳಿದಾಸನಿಂದ ಅಭಿಜ್ಞಾನಶಾಕುಂತಲ, ಮಾಳವಿಕಾಗ್ನಿಮಿತ್ರ ಹಾಗೂ ವಿಕ್ರಮೋರ್ವಶೀಯ ನಾಟಕಗಳು ಅಂತೆಯೇ ರಘುವಂಶ ಮತ್ತು ಕುಮಾರಸಂಭವ ಮಹಾಕಾವ್ಯಗಳು, ಋತುಸಂಹಾರ ಹಾಗೂ ಮೇಘದೂತ ಕಾವ್ಯಗಳು ರಚನೆಯಾದವು.

ಶ್ರೇಷ್ಠಕವಿ ಹಾಗೂ ನಾಟಕಕಾರನಾದ ವಿಶಾಖದತ್ತನಿಂದ 'ಮುದ್ರಾರಾಕ್ಷಸ' ಹಾಗೂ 'ದೇವೀಚಂದ್ರಗುಪ್ತಂ' ನಾಟಕಗಳು ರಚಿಸಲ್ಪಟ್ಟವು. ಶೂದ್ರಕನಿಂದ ಶ್ರೇಷ್ಠ ನಾಟಕವಾದ 'ಮೃಚ್ಛಕಟಿಕ' ರಚಿಸಲ್ಪಟ್ಟಿತು, ಭಾರವಿಯಿಂದ್ ಮಹಾಕಾವ್ಯವಾದ ಕಿರಾತಾರ್ಜುನೀಯ ರಚನೆಯಾಯಿತು, ಹರಿಸೇನ ಕವಿಯಿಂದ ರಚಿತವಾದ ಅಲಹಾಬಾದ ಸ್ತಂಭಶಾಸನ ಬೃಹತ್‌ವಾಕ್ಯವು ಸಂಸ್ಕೃತ ಸಾಹಿತ್ಯದ ಮೇರುಕೃತಿಯೆನಿಸಿದೆ. ಅದರಂತೆ ಕವಿ ಹಾಗೂ ಗದ್ಯಕಾರನಾದ ದಂಡಿಯಿಂದ 'ಕಾವ್ಯಾದರ್ಶ' ಹಾಗೂ 'ದಶಕುಮಾರಚರಿತೆ' ರಚಿಸಲ್ಪಟ್ಟವು. ಸುಬಂಧುವಿನಿಂದ 'ವಾಸವದತ್ತಾ' ಗದ್ಯಕೃತಿ ರಚನೆಯಾಯಿತು. ವಿಷ್ಣುಶರ್ಮನಿಂದ ಜಗತ್ಪ್ರಸಿದ್ಧ (ಜಗತ್ತಿನ 150 ಭಾಷೆಗಳಿಗೆ ಅನುವಾದಗೊಂಡಿದೆ). 'ಪಂಚತಂತ್ರ' ಕಥಾಸಂಗ್ರಹ ರಚನೆಯಾಯಿತು.

ಇಷ್ಟೇ ಅಲ್ಲದೇ ಹಿಂದಿನ ಕಾಲದಲ್ಲಿ ರಚನೆಯಾದ ಧರ್ಮಶಾಸ್ತ್ರಗಳು, ಪುರಾಣಗಳು ಮತ್ತಿತರ ಪ್ರಮುಖ ಕೃತಿಗಳು ಈ ಕಾಲದಲ್ಲಿ ಅಂತಿಮವಾಗಿ ರೂಪರೇಷ ಪಡೆದವು. ಅಲ್ಲದೇ ಈ ಕಾಲದಲ್ಲಿ ವಾಯುಪುರಾಣ, ಮತ್ಸ್ಯಪುರಾಣ, ವಿಷ್ಣುಪುರಾಣಗಳು ರಚನೆಯಾದವು. ನಾರದಸ್ಮೃತಿ, ಬ್ರಹ್ಮಸ್ಪತಿಸ್ಮೃತಿಗಳು ರಚನೆಯಾದವು. ಮನುಮಹರ್ಷಿಯ 'ಧರ್ಮಶಾಸ್ತ್ರ' ರಚಿಸಲ್ಪಟ್ಟಿತು.

ವಸುಕ್ರನು ಕಂಠಸ್ಥವಾಗಿರುವ ವೇದಗಳನ್ನು 'ನಾಲ್ಕು ವೇದಸಂಹಿತ'ಗಳೆಂದು ತಾಳೆಗರಿಯಲ್ಲಿ ಸಂಪಾದಿಸಿ ಬರೆದಿಟ್ಟನು. ಮಹಾಭಾರತ, ರಾಮಾಯಣಗಳು ಪರಿಷ್ಕೃತಗೊಂಡವು. ಜೈಮುನಿಯಿಂದ ಪೂರ್ವಮೀಮಾಂಸ ಸೂತ್ರದ ಮೇಲೆ ಭಾಷೆ ಬರೆಯಲ್ಪಟ್ಟಿತು.ಈಶ್ವರಕೃಷ್ಣನಿಂದ ಪಂಡಿತ್ಯಪೂರ್ಣ ಕೃತಿಯೆಂದು ವಿಮರ್ಶಕರಿಂದ ಮನ್ನಿಸಲ್ಪಟ್ಟ 'ಸಾಂಖ್ಯಕಾರಿಕ' ರಚನೆಯಾಯಿತು. ವಾತ್ಸಾಯನ (ಕಾಮಸೂತ್ರ ಕತೃವಲ್ಲ)ನಿಂದ ನ್ಯಾಯಶಾಸ್ತ್ರ ರಚಿಸಲ್ಪಟ್ಟಿತು. ವ್ಯಾಸನೆಂಬ ಕವಿಯಿಂದ 'ಯೋಗಭಾಷ್ಯ ಕೃತಿ ರಚಿಸಲ್ಪಟ್ಟಿತು. ಈ ಕಾವ್ಯ ನಾಟಕ ಧರ್ಮಶಾಸ್ತ್ರಗಳ ಹೊರತಾಗಿ ಈ ಕಾಲದಲ್ಲಿ ವೈಜ್ಞಾನಿಕ ಸಾಹಿತ್ಯವೂ ರಚಿಸಲ್ಪಟ್ಟಿತು.

ಗುಪ್ತರ ಕಾಲದಲ್ಲಿ ಅನೇಕ ವಿದ್ವಾಂಸರು ಖಗೋಳಶಾಸ್ತ್ರ, ವೈದ್ಯಕೀಯ, ವ್ಯಾಕರಣ, ಲೋಹಶಾಸ್ತ್ರ, ಗಣಿತಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿ ಜ್ಞಾನದ ಹೊಳೆಯನ್ನು ಹರಿಸಿದ್ದನ್ನು ಕಾಣಬಹುದಾಗಿದೆ. ಈ ಕಾಲದ ಪ್ರಮುಖ ವಿಜ್ಞಾನಿಗಳೆಂದರೆ:– ಶ್ರೇಷ್ಠ ಖಗೋಳ ವಿಜ್ಞಾನಿ ಹಾಗೂ ಗಣಿತಜ್ಞನಾದ ಆರ್ಯಭಟ, ಇವನು ತನ್ನ ಗ್ರಂಥಗಳಾದ

Digitised by Bharatavani, CIIL

'ಆರ್ಯಭಟೀಯಂ' ಮತ್ತು ಸೂರ್ಯಸಿದ್ಧಾಂತ'ಗಳಲ್ಲಿ ಬೀಜಗಣಿತ, ರೇಖಾಗಣಿತ ಹಾಗೂ ಖಗೋಳಶಾಸ್ತ್ರದ ಬಗ್ಗೆ ವಿವರಿಸಿದ್ದಾನೆ. ಬ್ರಹ್ಮಗುಪ್ತನ ಬ್ರಹತ್ ಖಗೋಳಗ್ರಂಥವಾದ 'ಬ್ರಹ್ಮಸ್ಫುಟ ಸಿದ್ಧಾಂತ' ಮತ್ತು 'ಖಂಡಖಾದ್ಯಕ'ಗಳೂ ಈ ಕಾಲದ ಬಹುಜನಪ್ರಿಯ ಗ್ರಂಥಗಳಾಗಿವೆ.

ವಾಗ್ಭಟನ ಆಯುರ್ವೇದ ವೈದ್ಯಕೀಯದ 'ಅಷ್ಟಾಂಗಸಂಗ್ರಹ' ಈ ಕಾಲದಲ್ಲಿ ರಚಿಸಲ್ಪಟ್ಟ ಗ್ರಂಥವಾಗಿದೆ. ಧನ್ವಂತರಿಯ 'ಆಯುರ್ವೇದ ನಿಘಂಟು' ಕೂಡ ಈ ಕಾಲದ ಗಮನೀಯ ಕೃತಿಯಾಗಿದೆ. ಕಾಮಶಾಸ್ತ್ರದ ವೈಜ್ಞಾನಿಕ ಕೃತಿಯಾದ ವಾತ್ಸಾಯನ ಕಾಮಸೂತ್ರ ಈ ಕಾಲದ ರಚನೆಯಾಗಿದೆ.

ಈ ರೀತಿಯಲ್ಲಿ ಗುಪ್ತರ ಕಾಲ ಸಂಸ್ಕೃತ ಸಾಹಿತ್ಯ ರಚನೆಯಲ್ಲಿ ಅದ್ವಿತೀಯ ಸಾಧನೆಗೈದಿರುವುದು ಇತಿಹಾಸ ಮುಖೇನ ತಿಳಿದುಬರುತ್ತದೆ. ಗುಪ್ತರ ಕಾಲದಲ್ಲಿ ಸಂಸ್ಕೃತ ಸಾಹಿತ್ಯ ಅಭಿವೃದ್ಧಿಯಂತೆಯೇ ಸಂಸ್ಕೃತ ಶಿಕ್ಷಣವೂ ವ್ಯವಸ್ಥಿತವಾಗಿ ಅಭಿವೃದ್ಧಿ ಕಂಡಿತು. ಗುರುಕುಲಗಳಲ್ಲಿ ಕಠಿಣ ನಿಯಮ ಹಾಗೂ ಸರಳ ಜೀವನದ ಮೂಲಕ ವಿದ್ಯಾಭ್ಯಾಸ ನೀಡಲ್ಪಡುತ್ತಿತ್ತು. ತಾತ್ವಿಕವಾಗಿ ಉನ್ನತ ಶಿಕ್ಷಣ 12 ರಿಂದ 37 ವರ್ಷಗಳವರೆಗಿತ್ತು. ಆದರೆ ಶಿಷ್ಯರ ಅಪೇಕ್ಷೆಯ ಮೇರೆಗೆ ಹಾಗೂ ಅವರ ಜ್ಞಾನಗಳಿಕೆಯ ಆಧಾರದ ಮೇಲೆ ಶಿಕ್ಷಣದ ಅವಧಿ ನಿರ್ಭರವಾಗಿರುತ್ತಿತ್ತು. ಅಗ್ರಹಾರಗಳಲ್ಲಿಯೂ ಶಿಕ್ಷಣ ಕೊಡಲ್ಪಡುತ್ತಿತ್ತು.

ಈ ರೀತಿಯಲ್ಲಿ ಸುಮಾರು 250 ವರ್ಷಗಳ ಕಾಲ ಭಾರತದ ಇತಿಹಾಸದಲ್ಲಿ ಭಾರತದ ಏಳಿಗೆಯಲ್ಲಿ ಅಮೋಘ ಕೊಡುಗೆಯಿತ್ತ ಗುಪ್ತಸಾಮ್ರಾಜ್ಯ ಸಮುದ್ರಗುಪ್ತ ಮತ್ತು ಚಂದ್ರಗುಪ್ತ ಮಿಕ್ರಮಾದಿತ್ಯರ ಕಾಲದಲ್ಲಿ ಉತ್ತುಂಗ ಶಿಖರಕ್ಕೇರಿ ಒಂದನೇ ಕುಮಾರಗುಪ್ತನ ಕಾಲದಿಂದ ಅವನತಿಯ ಹಾದಿ ಹಿಡಿಯಿತು. ಆಗ ಉಂಟಾದ ರಾಜಕೀಯ ಅನೈಕ್ಯತೆಯ ಸ್ಥಿತಿಯಲ್ಲಿ ಈ ಕಾಲದಲ್ಲಿ ಸಾಮಂತರಾಗಿದ್ದ ಅನೇಕ ಚಿಕ್ಕಪುಟ್ಟ ರಾಜ್ಯಗಳು ಏಳಿಗೆಗೆ ಬರುವಂತೆ ಮಾಡಿದವು. ಇವುಗಳಲ್ಲಿ ಪ್ರಮುಖರು ಥಾಣೇಶ್ವರದ ವರ್ಧನರು, ವಲ್ಲಭಿಯರು, ಮೈತ್ರಕರು, ಮಾಳವದ ಯಶೋಧರ್ಮನ್, ಕನೌಜಿನ ಮೌಖರಿಗಳು ಪ್ರಮುಖರು.

ಥಾಣೇಶ್ವರದ ವರ್ಧನ ವಂಶದ ಪ್ರಸಿದ್ಧ ದೊರೆಯಾದ ಹರ್ಷವರ್ಧನ ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹ ನೀಡಿದ್ದನಾಗಿ ತಿಳಿದುಬರುತ್ತದೆ. ಈತನ ಆಸ್ಥಾನದಲ್ಲಿ ಅನೇಕ ಹೆಸರಾಂತ ಕವಿಗಳು, ವಿದ್ವಾಂಸರು ಆಶ್ರಯ ಪಡೆದಿದ್ದರು. ಹರ್ಷವರ್ಧನನೇ ಸ್ವತಃ ವಿದ್ವಾಂಸನಾಗಿದ್ದು ಈತನು ರತ್ನಾವಳಿ, ಪ್ರಿಯದರ್ಶಿಕಾ ಮತ್ತು ನಾಗಾನಂದ ಎಂಬ ಮೂರು ಸಂಸ್ಕೃತ ನಾಟಕಗಳನ್ನು ರಚಿಸಿದ್ದಾನೆ. ಈತನ ಆಸ್ಥಾನ ಕವಿಯಾದ ಬಾಣನು ಹರ್ಷನ ಚರಿತ್ರೆಯನ್ನೊಳಗೊಂಡ ಪ್ರಸಿದ್ಧ ಐತಿಹಾಸಿಕ ಕೃತಿಯಾದ 'ಹರ್ಷಚರಿತ'ವನ್ನು ರಚಿಸಿದನು. ಅಂತೆಯೇ ಪ್ರಥಮ ಸಂಸ್ಕೃತ ಗದ್ಯಕೃತಿಯಾದ 'ಕಾದಂಬರಿ'ಯನ್ನು ಅಲ್ಲದೇ 'ಪಾರ್ವತಿಪರಿಣಯ 'ಚಂಡೀಶತಕ' ಕೃತಿಗಳನ್ನು ರಚಿಸಿದನು. ಮಯೂರ ಎಂಬ ಕವಿಯು ಶೃಂಗಾರ ಕೃತಿಯಾದ 'ಅಷ್ಟಕ' ಮತ್ತು 'ಸೂರ್ಯ ಶತಕ'ವನ್ನು ರಚಿಸಿದನು. ಉತ್ತರದಲ್ಲಿ ಗುಪ್ತರ ಆಳ್ವಿಕೆಯಿದ್ದಾಗ ದಕ್ಷಿಣಭಾರತದಲ್ಲಿ ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿಯ ಚಾಲುಕ್ಯರು ರಾಜ್ಯವಾಳಿದ್ದರಾಗಿ ತಿಳಿದುಬರುತ್ತದೆ.

ವೇದೋತ್ತರ ಕಾಲವು ವೇದಕಾಲಕ್ಕೆ ಭಿನ್ನವಾಗಿ ವೈಜ್ಞಾನಿಕ ಅಭ್ಯಾಸದ ಮತ್ತು ವಿಶೇಷ ತಜ್ಞತೆಯ ಕಾಲವಾಗಿತ್ತೆಂಬುದು ಉಲ್ಲೇಖಾರ್ಹ. ಪ್ರಾರಂಭದಲ್ಲಿ ವೇದಕಾಲದಂತೆ ವೇದಾಭ್ಯಾಸವು ಕಟ್ಟುನಿಟ್ಟಾಗಿ ಸಾಗಿ ಬಂದರೂ ವೇದಾಂಗಗಳೆಲ್ಲ ಅಭಿವೃದ್ಧಿ ಹೊಂದಿದ ಮೇಲೆ ವೇದಾಭ್ಯಾಸಕ್ಕೆ ಸಂಬಂಧಿಸಿದ ಕಟ್ಟುಪಾಡುಗಳು ಸಡಿಲಗೊಂಡವು. ಯಜ್ಞದ ವಿಧಿ–ವಿಧಾನಗಳ ಬೆಳವಣಿಗೆಯು ಕೆಲವು ವಿಜ್ಞಾನಗಳ ಬೆಳವಣಿಗೆಗೆ ಕಾರಣವಾಯಿತು. ಯಜ್ಞವೇದಿಕೆಯ ಶಾಸ್ತ್ರಬದ್ಧ ವಿಸ್ತೃತವಾದ ರಚನಾ ನಿಯಮಗಳಿಂದ ಭೂಮಿತಿ, ಬೀಜಗಣಿತಗಳು ಬೆಳೆದು ಬಂದವು; ಯಜ್ಞಗಳು ಹಾಗೂ ಇತರ ಕಾರ್ಯಗಳ ಸಲುವಾಗಿ ಸರಿಯಾದ ವೇಳೆ, ಋತುಗಳನ್ನು ಗೊತ್ತುಮಾಡುವ ಅವಶ್ಯಕತೆಯಿಂದ ಖಗೋಳಶಾಸ್ತ್ರ, ಜ್ಯೋತಿಷ್ಯಶಾಸ್ತ್ರಗಳು ವೃದ್ಧಿ ಹೊಂದಿದವು; ಯಜ್ಞಪಶುಗಳನ್ನು ಬಲಿಗೊಳಿಸುವಲ್ಲಿ ಶರೀರವಿಜ್ಞಾನದ ತಳಹದಿ ಹಾಕಲ್ಪಟ್ಟಿತು; ಪವಿತ್ರ ಗ್ರಂಥಗಳನ್ನು ಅಪಭ್ರಂಶಗೊಳಿಸದೆ ಪರಿಶುದ್ಧವಾಗಿ ರಕ್ಷಿಸಬೇಕೆಂಬ ಸದುದ್ದೇಶದಿಂದ ವ್ಯಾಕರಣ ಮತ್ತು ಭಾಷಾ ಶಾಸ್ತ್ರಗಳು ರಚನೆಗೊಂಡವು. ಹೀಗೆ ವೇದದ ಪ್ರತಿಯೊಂದು ಅಂಗವೂ ತನ್ನ ವಿಶಿಷ್ಟ ಮತ್ತು ವೈಜ್ಞಾನಿಕ ಅಭ್ಯಾಸದ ಮುಖಾಂತರ ಸಾದೃಶ್ಯ ವಿಜ್ಞಾನಗಳಿಗೆ ಜನ್ಮನೀಡಿತು. ಇವು ರಚನೆಯಾದಂತೆ ಶಿಕ್ಷಣದಲ್ಲಿ ಇವುಗಳ ಸೇರ್ಪಡೆಯಾಗಿ ಇವು ಅಧ್ಯಯನ ವಿಷಯಗಳಾದವು.

ಆದರೆ ಈ ಕಾಲದಲ್ಲಿ ವೇದಗಳಲ್ಲಿ ವಿವರಿಸಿದ ಧರ್ಮದ ನೆಲೆಗಟ್ಟಾದ ಯಜ್ಞಯಾಗಗಳು ಕಾಲಕ್ರಮೇಣ ತಮ್ಮ ಮೂಲ ಉದ್ದೇಶವನ್ನು ಕಳೆದುಕೊಂಡವು. ತತ್ವಬದ್ಧವಾದ ಧರ್ಮ ಹಿಂದೆ ಬಿದ್ದು ಸಂಪ್ರದಾಯಬದ್ಧವಾದ ಯಜ್ಞಯಾಗಗಳು ಆಡಂಬರಕ್ಕೆ ಒಳಗಾದವು. ಕರ್ಮಕಾಂಡ ಅತ್ಯಂತ ಸಂಕೀರ್ಣ ರೂಪ ಪಡೆಯಿತು. ವೇದ ಕಾಲದಲ್ಲಿ ಅತ್ಯಂತ ಕಠಿಣವಾದ ಮೋಕ್ಷಪ್ರಾಪ್ತಿಯ ಪದ್ಧತಿ, ಬ್ರಾಹ್ಮಣರಿಗೆ ಅತ್ಯಂತ ಶ್ರೇಷ್ಠ ಸ್ಥಾನಮಾನ ಹಾಗೂ ಸ್ತ್ರೀಯರು ಹಾಗೂ ಶೂದ್ರರಿಗೆ ಸೂತ್ರಸ್ಮೃತಿಗಳು ವಿಧಿಸಿದ ನಿರ್ಬಂಧಗಳು, ಇವೆಲ್ಲವುಗಳ ಅನರ್ಥದಿಂದ ಹುಟ್ಟಿಕೊಂಡ ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಉದ್ಭವಗೊಂಡ ಅಂಧಶ್ರದ್ಧೆ, ಅನೀತಿಗಳಿಂದ ಜನಸಾಮಾನ್ಯರಿಗೆ ಏನು ತೋಚದಾಯಿತು. ಯಜ್ಞಯಾಗಗಳ ಹೆಸರಿನಲ್ಲಿ ಪ್ರಾಣಿ ಹಿಂಸೆ ಪ್ರಾರಂಭವಾಯಿತು. ಪೂಜೆ ಪುನಸ್ಕಾರಗಳ ಹೆಸರಿನಲ್ಲಿ ಸಾಮಾನ್ಯರ ಶೋಷಣೆ ಆರಂಭವಾಯಿತು. ಮೋಕ್ಷಪ್ರಾಪ್ತಿ, ಪಾಪ–ಪುಣ್ಯ, ಸ್ವರ್ಗ–ನರಕ ಮುಂತಾದ ಪರಿಕಲ್ಪನೆಗಳಿಗೆ ವಿಪರೀತ ಅರ್ಥ ಕಲ್ಪಿಸಲಾಯಿತು. ಇದರಿಂದ ಜನರು ಯಾವುದು ಸರಿ? ಯಾವುದು ತಪ್ಪು? ಎಂಬುದು ನಿರ್ಣಯಿಸಲಾಗದೆ ಗೊಂದಲಕ್ಕೊಳಗಾದರು. ಈ ಸಂದರ್ಭದಲ್ಲಿ ಜನಸಾಮಾನ್ಯರಿಗೆ

Digitised by Bharatavani, CIIL

ಹೊಸಜೀವನದ ಆಸೆಯನ್ನು ಪ್ರೇರೇಪಿಸುವಂತೆ ಬುದ್ಧನು ಬೌದ್ಧ ಧರ್ಮ ಬೋಧಿಸಿದನು.

ಜೈನ ಹಾಗೂ ಬೌದ್ಧ ಕಾಲದಲ್ಲಿ ಸಂಸ್ಕೃತ ಶಿಕ್ಷಣದ ಬೆಳವಣಿಗೆ

ವೈದಿಕ ಧರ್ಮದ ಅನರ್ಥಗಳ ವಿರುದ್ಧ ಪ್ರತಿಭಟಿಸಿದ ಮೂಲ ಧರ್ಮ ಜೈನಧರ್ಮ. ಇದು ಬೌದ್ಧಧರ್ಮಕ್ಕಿಂತಲೂ ಹಿಂದೆ ಉದ್ಭವಿಸಿದ ಧರ್ಮ. ಆದರೆ ಜೈನಧರ್ಮದ ಪ್ರಮುಖ ಪ್ರವಾದಿ ಮಹಾವೀರನು ಗೌತಮಬುದ್ಧನ ಹಿರಿಯ ಸಮಕಾಲೀನನಾದನು. ಆದ್ದರಿಂದ ವೇದೋತ್ತರ ಕಾಲದಲ್ಲಿ ಸಂಸ್ಕೃತ ಶಿಕ್ಷಣದ ಬೆಳವಣಿಗೆಯ ಮೇಲೆ ಈ ಎರಡೂ ಧರ್ಮಗಳು ಪ್ರಭಾವ ಬೀರಿದವು.

ಜೈನ ಹಾಗೂ ಬೌದ್ಧಧರ್ಮಗಳಿಗೆ ರಾಜಾಶ್ರಯವೂ ದೊರಕಿತು. ಜೈನ ಪಂಥಗಳಾದ ಶ್ವೇತಾಂಬರ ಮತ್ತು ದಿಗಂಬರರು ಮಾಗಧಿ, ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿದರು. ಇವು ಮುಖ್ಯವಾಗಿ ಜೈನ ತೀರ್ಥಂಕರರ ಮತ್ತು ಮಹಾವೀರನ ಬೋಧನೆಗಳನ್ನೇ ಆಧರಿಸಿದ್ದವು. ಇವು ಜೈನ ಶಿಕ್ಷಣದಲ್ಲಿ ಪಠ್ಯವಿಷಯಗಳಾಗಿದ್ದವು.

ಬೌದ್ಧಧರ್ಮಕ್ಕೆ ಪ್ರಸಿದ್ಧ ರಾಜರುಗಳಾದ ಅಶೋಕ, ಕಾನಿಷ್ಕ, ಹರ್ಷವರ್ಧನ, ಖಾರವೇಲ ಮುಂತಾದ ಅರಸರ ರಾಜಾಶ್ರಯ ಹಾಗೂ ಧನಾತ್ಮಕ ಪ್ರೋತ್ಸಾಹದಿಂದ ದೇಶ–ವಿದೇಶಗಳಲ್ಲಿ ಬೌದ್ಧಧರ್ಮ ಪ್ರಸಾರಗೊಂಡು ಜನಪ್ರಿಯವಾಯಿತು. ಇದಕ್ಕೆ ಇನ್ನೊಂದು ಕಾರಣ ಬೌದ್ಧಧರ್ಮದ ಶಿಕ್ಷಣಕ್ಕಾಗಿಯೇ ಸ್ಥಾಪಿಸಲ್ಪಟ್ಟ ನಾಳಂದ, ವಿಕ್ರಮಶೀಲ, ಉದಂತಪುರಿ ಮುಂತಾದ ವಿಶ್ವವಿದ್ಯಾನಿಲಯಗಳು ತಮ್ಮ ಗುರಿಯನ್ನು ಪರಿಣಾಮಕಾರಿಯಾಗಿ ಸಾಧಿಸಿ ವಿದೇಶಿಗರನ್ನು ಆಕರ್ಷಿಸಿದವು. ಆದರೆ ಜೈನ ಹಾಗೂ ಬೌದ್ಧಧರ್ಮ ಉತ್ತುಂಗದ ಸ್ಥಿತಿಯಲ್ಲಿರುವಾಗಲೇ ಒಂದು ಜಗತ್ಪ್ರಸಿದ್ಧವಾದ ಸಂಸ್ಕೃತ ಸಾಹಿತ್ಯದ ಮಹಾನ್‌ಕೃತಿಯೊಂದು ನಿರ್ಮಾಣವಾಗಿ ಸಂಸ್ಕೃತ ಶಿಕ್ಷಣದಲ್ಲಿ ಪಠ್ಯಕ್ರಮಾಂಕಿತವಾಯಿತು. ಅದೇಂದರೆ ಮೌರ್ಯಸಾಮ್ರಾಜ್ಯದ ಸ್ಥಾಪಕನಾದ ಚಂದ್ರಗುಪ್ತಮೌರ್ಯನ ಆಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿದ್ದ ಕೌಟಿಲ್ಯನು ಬರೆದ 'ಅರ್ಥಶಾಸ್ತ್ರ' ಗ್ರಂಥ.

ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಬೌದ್ಧ ಶಿಕ್ಷಣ ಪದ್ಧತಿಯು ಬ್ರಾಹ್ಮಣ ಶಿಕ್ಷಣ ಪದ್ಧತಿಯ ಮತ್ತೊಂದು ರೂಪವೇ ಆಗಿತ್ತು. ಅದು ಬ್ರಾಹ್ಮಣ ಶಿಕ್ಷಣ ಪದ್ಧತಿಯ ಧ್ಯೇಯೋದ್ದೇಶಗಳು ಹಾಗೂ ರೂಪರೇಶಗಳನ್ನು ಮುಂದುವರೆಸಿಕೊಂಡು ಬಂದಿತು. ಸ್ವತಃ ಬುದ್ಧನು ಸಂಸ್ಕೃತ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣ ಪಡೆದಿದ್ದನು. ಅಲ್ಲದೇ ಬೌದ್ಧಧರ್ಮದ ಎರಡು ಪಂಥಗಳಾದ ಹೀನಾಯಾನ ಮತ್ತು ಮಹಾಯಾನಗಳಲ್ಲಿ ಮಹಾಯಾನದ ಬೋಧನಾ ಮಾಧ್ಯಮ ಸಂಸ್ಕೃತವೇ ಆಗಿತ್ತು.

ಮಹಾಯಾನಪಂಥವು ಬುದ್ಧನ ಬೋಧನೆಗಳಿಗೆ ವಿರುದ್ಧವಾಗಿ ದೇವರ ಅಸ್ಥಿತ್ವವನ್ನು ಅಂಗೀಕರಿಸಿ ಪೂಜಿಸಲಾರಂಭಿಸಿತು. ಇದರಿಂದ ಅನೇಕ ವೈದಿಕ ಆಚಾರ–ವಿಚಾರಗಳು, ನಂಬಿಕೆಗಳು ಸಹಜವಾಗಿ ಇದರಲ್ಲಿ ಹಾಸುಹೊಕ್ಕಾದವು.

ಕ್ರಿ.ಶ. 7–8ನೇ ಶತಮಾನದಲ್ಲಿ ಭಾರತದ ಮೇಲಿನ ಮುಸ್ಲಿಂರ ಅಕ್ರಮಣ ಬೌದ್ಧಧರ್ಮದ ಅಳಿವಿಗೆ ಇನ್ನೊಂದು ಕಾರಣವಾಯಿತು. ಕ್ರಿ.ಶ. 8ನೇ ಶತಮಾನದಲ್ಲಿ ಭಾರತದಲ್ಲಿ ರಾಜಕೀಯ ಪ್ರತಿಷ್ಠೆಗಳಿಸಿದ ಟರ್ಕರು ಇಸ್ಲಾಂ ಧರ್ಮಕ್ಕೆ ಪರಿವರ್ತಿತರಾಗಿ, ಬೌದ್ಧ ಸಂಘಗಳನ್ನು ನಾಶಮಾಡಿ ಬೌದ್ಧ ಭಿಕ್ಷುಗಳ ಸಾಮೂಹಿಕ ಕಗ್ಗೊಲೆ ನಡೆಸಿದರು. ಬೌದ್ಧಧರ್ಮವು ಒಂದು ಸಂಘಧರ್ಮವಾಗಿ ಭಾರತದಿಂದ ಕಣ್ಮರೆಯಾದುದಕ್ಕೆ ಇದು ಮುಖ್ಯವಾದ ತತ್‌ಕ್ಷಣದ ಕಾರಣವಾಗಿತ್ತು.

ಈ ಸ್ಥಿತಿಯಲ್ಲಿ ವೈದಿಕ ಸಂಸ್ಕೃತಿಯ ಉಪದೇಶ ಕುಮಾರಿಲಭಟ್ಟನಿಂದ ಉದ್ಘಾಟಿತವಾಗಿ, ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಉಪದೇಶ ಚಟುವಟಿಕೆಗಳಿಂದ ತ್ವರಿತಗೊಂಡು ಬೌದ್ಧಧರ್ಮಕ್ಕೆ ಮಾರುಹೋದ ಬೌದ್ಧಿಕ ವರ್ಗ ವೈದಿಕಧರ್ಮಕ್ಕೆ ವಾಪಸ್ಸಾಯಿತು. ಭಾರತೀಯ ರಾಜಕಾರಣ ತಮ್ಮ ಧಾರ್ಮಿಕ ನಿಷ್ಠೆ ಹಾಗೂ ಬೆಂಬಲವನ್ನು ವೈದಿಕಧರ್ಮಕ್ಕೆ ಬದಲಾಯಿಸಿದರು. ಈ ರೀತಿಯಲ್ಲಿ ಉಪನಿಷತ್‌ದರ್ಶನದ ಪ್ರಭಾವದಲ್ಲೇ ಬೋಧಿತವಾದ ಬೌದ್ಧಧರ್ಮದ ಅಳಿವಿನ ಹಿಂದೆಯೇ ವೈದಿಕ ಸಂಸ್ಕೃತಿ ಪುನರುತ್ಥಾನವಾಯಿತು.

ಇದೇ ತೆರನಾಗಿ ಮಹಾವೀರನ ಮರಣಾನಂತರ ಜೈನಧರ್ಮವು ಶ್ವೇತಾಂಬರ ಮತ್ತು ದಿಗಂಬರ ಪಂಥಗಳಲ್ಲಿನ ಭಿನ್ನಾಭಿಪ್ರಾಯಗಳಿಂದ ಕ್ರಮೇಣವಾಗಿ ಭಾರತದಲ್ಲಿ ತನ್ನ ಪ್ರಭಾವ ಕಳೆದುಕೊಂಡಿತು.

**ಮಧ್ಯಯುಗದಲ್ಲಿ ಸಂಸ್ಕೃತ ಶಿಕ್ಷಣದ ಬೆಳವಣಿಗೆ:**

ಮಧ್ಯಯುಗದಲ್ಲಿ ಭಾರತದ ಆಡಳಿತ ರಾಜಮಹಾರಾಜರ ಅಂಕಿತದಲ್ಲಿತ್ತು, ಉತ್ತರಭಾರತದಲ್ಲಿ ಮೌರ್ಯರು, ಶುಂಗ ಹಾಗೂ ಕಣ್ವರು, ಶಾತವಾಹನರು, ಗುಪ್ತರು, ಅದೇ ರೀತಿಯಲ್ಲಿ ದಕ್ಷಿಣಭಾರತದಲ್ಲಿ ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರು, ಕಂಚಿಯ ಪಲ್ಲವರು, ಮಾನ್ಯಖೇಟದ ರಾಷ್ಟ್ರಕೂಟರು ಪಾಂಡ್ಯರು, ಕಲ್ಯಾಣದ ಚಾಲುಕ್ಯರು, ವಾರಂಗಲ್ಲಿನ ಕಾಕತೀಯರು, ವೇದೋತ್ತರ ಕಾಲದ ಅಂತ್ಯದಲ್ಲಿ ಉತ್ತರ ಭಾರತದಲ್ಲಿ ರಜಪೂತರು ಭಾರತವನ್ನಾಳಿದರು.

ಈ ಎಲ್ಲ ರಾಜರುಗಳು ತಮ್ಮ ರಾಜ್ಯ ವಿಸ್ತಾರದ ಜೊತೆಯಲ್ಲಿ ಧಾರ್ಮಿಕ ಬೆಳವಣಿಗೆ, ಶೈಕ್ಷಣಿಕ ಬೆಳವಣಿಗೆ, ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಗಳ ಬೆಳವಣಿಗೆಯಲ್ಲಿ ತಮ್ಮದೇ ಆದ ಕೊಡುಗೆ ಕೊಟ್ಟು ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದರು. ಇದರಿಂದ ಭಾರತವು ಎಲ್ಲ ದೃಷ್ಟಿಗಳಿಂದಲೂ ಸಂಪದ್ಭರಿತವಾಯಿತು.

ಕ್ರಿ.ಶ ಏಳನೆಯ ಶತಮಾನದವರೆಗೂ ಭಾರತ ಬಹುತೇಕ ಹಿಂದೂ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಉತ್ತರದಲ್ಲಿ ಹರ್ಷವರ್ಧನ ಮತ್ತು ದಕ್ಷಿಣದಲ್ಲಿ ಪುಲಿಕೇಶಿ ಏಳಿಗೆಯಲ್ಲಿದ್ದರು. ಆಗ ಪ್ರಧಾನ ಧರ್ಮ

Digitised by Bharatavani, CIIL

ಹಿಂದೂಧರ್ಮ, ಪ್ರಧಾನ ಸಂಸ್ಕೃತಿ ಹಿಂದೂ ಸಂಸ್ಕೃತಿಯಾಗಿತ್ತು. ಹರ್ಷವರ್ಧನನ ನಂತರ ರಾಜಕೀಯದಲ್ಲಿ ಅನೈಕ್ಯ, ಅನಾಯಕತ್ವ ಉಂಟಾಯಿತು. ಯಾದವೀ ಕಲಹಗಳು ಮತ್ತು ವಿವಿಧ ರಾಜ್ಯಗಳ ಪರಸ್ಪರ ವೈರತ್ವ ವಿಪರೀತವಾಗಿ ಬೆಳೆದಿತ್ತು. ಇದಕ್ಕೆಲ್ಲ ಒಂದು ಪ್ರಬಲವಾದ ಚಕ್ರಾಧಿಪತ್ಯ ಇಲ್ಲದುದೇ ಪ್ರಮುಖ ಕಾರಣವಾಗಿತ್ತು. ಹರ್ಷನ ನಂತರ ಅವನ ಸಾಮ್ರಾಜ್ಯ ವಿವಿಧ ರಾಜ್ಯಗಳಲ್ಲಿ ಹರಿದು ಹಂಚಿಹೋಗಿತ್ತು. ಇದು ಪರಕೀಯರ ದಾಳಿಗೆ ಆಸ್ಪದ ಮಾಡಿಕೊಟ್ಟಿತು.

ಮೊದಲು ಗ್ರೀಕರು, ಸಿಥಿಯನ್ನರು, ಹೂಣರು ಮುಂತಾದವರು ಅಕ್ರಮಣ ಮಾಡಿದರು. ಆದರೆ ಇವರು ಭಾರತದಲ್ಲಿದ್ದಷ್ಟು ಕಾಲ ಇಲ್ಲಿನ ಸಂಸ್ಕೃತಿಗೆ ಹೊಂದಿಕೊಂಡೇ ಇದ್ದರು. ಆದ್ದರಿಂದ ಅವರ ದಾಳಿ ಭಾರತೀಯ ಇತಿಹಾಸ ಪುಟಗಳಲ್ಲಿ ದಪ್ಪಕ್ಷರಗಳಲ್ಲಿ ಬರೆದಿಡುವಂತಹ ದಾಳಿಯಾಗಲಿಲ್ಲ.

ಆದರೆ ಕ್ರಿ.ಶ. 712 ರಲ್ಲಿ ಭಾರತದ ಮೇಲೆ ಅಕ್ರಮಣ ಮಾಡಿದ ಅರಬರ ದಾಳಿ ಪ್ರತ್ಯೇಕ ಸಾಮಾಜಿಕ ವ್ಯವಸ್ಥೆಯೇ ರೂಪುಗೊಳ್ಳಲು ನಾಂದಿ ಹಾಡಿತು. ಭಾರತದ ಮೇಲೆ ದಾಳಿ ಎಸಗಿದ ಮುಸ್ಲಿಮರಲ್ಲಿ ಅರಬರೇ ಮೊದಲಿಗರು. ಇವರ ದಾಳಿ ಪ್ರಾರಂಭವಾದಂತೆ ಮಧ್ಯಕಾಲದ ಭಾರತದ ಇತಿಹಾಸವೂ ಪ್ರಾರಂಭವಾಯಿತೆನ್ನಬಹುದು. ಹಿಂದಿನ ಆಕ್ರಮಣಕಾರರ ಆಕ್ರಮಣಗಳಿಗೂ ಅರಬರ ಆಕ್ರಮಣಗಳಿಗೂ ಬಹಳ ವ್ಯತ್ಯಾಸವಿತ್ತು. ಇವರು ಎಂದಿಗೂ ಇಲ್ಲಿನ ಸಂಸ್ಕೃತಿ ವ್ಯವಸ್ಥೆಗೆ ಹೊಂದಿಕೊಳ್ಳಲಿಲ್ಲ. ಇದರಿಂದ ಹೊಸ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಗಳು ರೂಪುಗೊಳ್ಳುವಂತಾಯಿತು. ಈ ಅವಧಿಯಲ್ಲಿ ಹಿಂದೂ ಸಂಸ್ಕೃತಿ ಏರುಪೇರುಗಳನ್ನು ಅನುಭವಿಸಬೇಕಾಯಿತು.

ಕ್ರಿ.ಶ 8ನೇ ಶತಮಾನದಿಂದ ಭಾರತದ ಮೇಲಿನ ಅರಬ್ಬರ ಧಾಳಿ 10ನೇ ಶತಮಾನದ ಹೊತ್ತಿಗೆ ಅದಾಗಲೇ ಅರಬ್ಬರು ಇಸ್ಲಾಂ ಧರ್ಮವನ್ನು ಅಂಗೀಕರಿಸಿದ್ದರಿಂದ ಭಾರತದಲ್ಲಿ ಇಸ್ಲಾಂ ಆಳ್ವಿಕೆಗೆ ನಾಂದಿಯಾಯಿತು. ಮೊದಲಿಗೆ ಘಸ್ನಿ ಮಹಮ್ಮದ್ ಭಾರತದ ಮೇಲೆ ಧಾಳಿ ನಡೆಸಿ ಇಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆದು ತನ್ನ ದೇಶಕ್ಕೆ ಹಿಂದಿರುಗಿದ ನಂತರ ಆಕ್ರಮಣ ಮಾಡಿದ ಘೋರಿ ಮಹಮ್ಮದ್ ಭಾರತದಲ್ಲಿ ಇಸ್ಲಾಂ ಆಳ್ವಿಕೆ ಆರಂಭಕ್ಕೆ ಕಾರಣನಾದ. ಹೀಗೆ ಆರಂಭವಾದ ಇಸ್ಲಾಂ ಆಳ್ವಿಕೆ 18ನೇ ಶತಮಾನದ ಅಂತ್ಯದವರೆವಿಗೂ ಭಾರತದಲ್ಲಿ ಮುಂದುವರಿಯಿತು.

ಇಸ್ಲಾಂ ಆಳ್ವಿಕೆಯಲ್ಲಿ ಭಾರತದಲ್ಲಿ ಸಂಸ್ಕೃತ ಭಾಷೆಯ ಬೋಧನೆ ಮತ್ತು ಕಲಿಕೆಗೆ ಹಿನ್ನಡೆ ಉಂಟಾಯಿತು. ಸಾಮಾನ್ಯವಾಗಿ ಮುಸ್ಲಿಂ ಅರಸರು ಇಸ್ಲಾಂ ಧರ್ಮದ ಬಗ್ಗೆ ಹೆಚ್ಚಿನ ಆಸ್ಥೆಯುಳ್ಳವರೂ, ಹಿಂದು ಧರ್ಮದ ವಿರೋಧಿಗಳೂ ಆಗಿದ್ದುದರಿಂದ ಸಂಸ್ಕೃತ ಭಾಷೆಯ ಕಲಿಕೆಗೆ ಪ್ರೋತ್ಸಾಹ ನೀಡಲಿಲ್ಲ. ಅಷ್ಟು ಹೊತ್ತಿಗಾಗಲೇ ಸಂಸ್ಕೃತ ಬೋಧನೆ–ಕಲಿಕೆಗೆ ಪಾರಂಪರಿಕವಾಗಿ ನಡೆದುಕೊಂಡು ಬಂದಿದ್ದ ಗುರುಕುಲ ವ್ಯವಸ್ಥೆ ಸಡಿಲಗೊಂಡಿತ್ತು. ಹೆಚ್ಚಿನ ರಾಜಾಶ್ರಯವೂ ದೊರೆಯುತ್ತಿರಲಿಲ್ಲ. ಇದರಿಂದಾಗಿ ಸಂಸ್ಕೃತ ಶಿಕ್ಷಣ ತನ್ನ ಮೊದಲಿನ ಮಹತ್ವವನ್ನು ಕಳೆದುಕೊಂಡುದರಲ್ಲಿ ಆಶ್ಚರ್ಯವೇನಿಲ್ಲ.

ಆದಾಗ್ಯೂ ಭಾರತದಲ್ಲಿ ಸಂಸ್ಕೃತ ಶಿಕ್ಷಣ ಸಂಪೂರ್ಣವಾಗಿ ಕಣ್ಮರೆಯಾಗಲಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಸಂಸ್ಕೃತ ಬೋಧನೆ ಮತ್ತು ಕಲಿಕೆ ಮುಂದುವರಿದುಕೊಂಡು ಬಂತು. ಕೆಲವು ಹಿಂದೂ ರಾಜರು ಸಂಸ್ಕೃತ ಶಿಕ್ಷಣಕ್ಕೆ ಬೆಂಬಲ ನೀಡಿದರು. ಮಥುರ, ಉಜ್ಜಯಿನಿ, ಮಧುರೆ, ಶೃಂಗೇರಿ, ಕಂಚಿ, ವಾರಣಾಸಿ, ಕಾಶಿ ಮುಂತಾದ ಪ್ರಸಿದ್ಧ ಸ್ಥಳಗಳಲ್ಲಿ ಧಾರ್ಮಿಕ ಮಠಗಳು, ಕೆಲವು ಸಂಸ್ಕೃತಾಸಕ್ತ ಖಾಸಗಿ ಸ್ವೇಚ್ಛಿಕ ಸಂಸ್ಥೆಗಳು, ತಿರುಪತಿ, ಮುಂತಾದೆಡೆಯ ದೇವಾಲಯ ಆಡಳಿತ ಸಂಸ್ಥೆಗಳು ಸಂಸ್ಕೃತ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದ್ದವು. ಮೊದಲಿನಿಂದಲೂ ಸಂಸ್ಕೃತಕ್ಕೆ ಶಿಕ್ಷಣವನ್ನು ನಡೆಸಿಕೊಂಡು ಬರುತ್ತಿದ್ದ ಆಶ್ರಮ ರೂಪದ ಸಂಸ್ಥೆಗಳಲ್ಲಿ ಸಂಸ್ಕೃತ ಶಿಕ್ಷಣ ಮುಂದುವರಿಯಿತು. ಇದಕ್ಕಿಂತ ಮಿಗಿಲಾಗಿ ಅನೇಕ ಸಂಸ್ಕೃತ ಪಂಡಿತರು ಸಂಸ್ಕೃತದ ಮೇಲಿನ ತಮ್ಮ ಪ್ರೀತಿ, ಗೌರವಗಳಿಂದ ಪ್ರೇರಿತರಾಗಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸಂಸ್ಕೃತ ಕಲಿಯಲು ಬರುತ್ತಿದ್ದ ವಿದ್ಯಾರ್ಥಿಗಳಿಗೆ ತಮ್ಮ ಮನೆಗಳಲ್ಲಿಯೇ ಸಂಸ್ಕೃತ ಕಲಿಸುತ್ತಿದ್ದರು.

ಇದೇ ಪರಿಸ್ಥಿತಿ ಬ್ರಿಟಿಷರ ಕಾಲದವರೆಗೂ ಮುಂದುವರಿಯಿತು. ಬ್ರಿಟಿಷ್ ಆಳ್ವಿಕೆಯಲ್ಲಿ ಅನೇಕ ಕಡೆಗಳಲ್ಲಿ ವಿಶ್ವವಿದ್ಯಾನಿಲಯಗಳು ಸ್ಥಾಪನೆ ಆದ ನಂತರ ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಪಠ್ಯಕ್ರಮದ ಒಂದು ವಿಷಯವಾಗಿ ಸಂಸ್ಕೃತ ಬೋಧನೆ–ಕಲಿಕೆ ವ್ಯವಸ್ಥಿತವಾಗಿ ಆರಂಭವಾಯಿತು.

**–ಡಾ. ಪ್ರೀತಿ ಪಿ. ಭಂಡಾರ್‌ಕರ್**

## ಭಾರತದಲ್ಲಿ ಸಮುದಾಯ ಶಿಕ್ಷಣ

**ಉತ್ಪತ್ತಿ:** ಭಾರತೀಯ ನಾಗರಿಕತೆ ಮೊಟ್ಟ ಮೊದಲಿಗೆ ಪ್ರಾರಂಭವಾದಂದಿನಿಂದ ಶಿಕ್ಷಣವನ್ನು ಜೀವಿತಾವಧಿಯುದ್ದಕ್ಕೂ ಬದುಕಿನ ಮಟ್ಟವನ್ನು ಎತ್ತರಕ್ಕೇರಿಸುವ ಕಾರ್ಯವಿಧಾನವನ್ನಾಗಿ ಕಲ್ಪಿಸಿಕೊಳ್ಳಲಾಗಿದೆ. ಶಿಕ್ಷಣವು ಬದುಕಿನಿಂದ ಪ್ರತ್ಯೇಕವಾಗಿ ಇರುತ್ತಿರಲಿಲ್ಲ. ಆದುದರಿಂದ ಗುರುವಿನೊಂದಿಗೆ ವಿದ್ಯಾರ್ಥಿಗಳು ಕೂಡಾ ವಾಸಮಾಡುವ ರೂಢಿ ಇತ್ತು. ಗುರುವು ಗಮನಾರ್ಹ ತಿಳಿವಳಿಕೆ ಇರುವ, ಅತ್ಯುನ್ನತ ನಡತೆ ಮತ್ತು ನೈತಿಕ ಬಲವನ್ನು ಹೊಂದಿರುವ, ತನ್ನ ವಿದ್ಯಾರ್ಥಿಗಳ ಕಲ್ಯಾಣಕ್ಕೆ ಬದ್ಧನಾಗಿರುವ ವ್ಯಕ್ತಿಯಾಗಿರುತ್ತಿದ್ದನು. ಗುರು ತನ್ನ ಆಶ್ರಮದಲ್ಲಿ ಅತ್ಯಂತ ಕಡಿಮೆ ವಿದ್ಯಾರ್ಥಿಗಳನ್ನು ಸ್ವೀಕರಿಸುತ್ತಿದ್ದನು. ಆಶ್ರಮವು ಔಪಚಾರಿಕ ಶಿಕ್ಷಣ ಸಂಸ್ಥೆಯಾಗಿರುವುದಕ್ಕಿಂತ ಸಂಯೋಜಿತ ಸಮುದಾಯ ಕೇಂದ್ರದ ಹಾಗೆ ಇರುತ್ತಿತ್ತು. ಹೀಗೆ ಪ್ರಾರಂಭದಿಂದಲೂ ಶಿಕ್ಷಣವು ಸಮುದಾಯದ ಒಂದು ಭಾಗವಾಗಿರುವುದು ಇದರ ಕಾರ್ಯವಿಧಾನದ ಒಂದು

Digitised by Bharatavani, CIIL

ಅಂಶವೇ ಆಗಿತ್ತು. ಬೌದ್ಧರ ಕಾಲದಲ್ಲಿ ಸಂಘಂ ಶರಣಂ ಗಚ್ಛಾಮಿ (ನಾನು ನನ್ನ ಸಮುದಾಯಕ್ಕೆ ಅರ್ಪಿಸಿಕೊಳ್ಳುತ್ತಿದ್ದೇನೆ) ಜನಪ್ರಿಯ ಚಳವಳಿಯಾಗಿ ರೂಪುಗೊಂಡು, ಶಿಕ್ಷಣ ಮತ್ತು ಸಂಘ (ಸಮುದಾಯ) ಒಂದರಿಂದ ಇನ್ನೊಂದನ್ನು ಬೇರ್ಪಡಿಸಲು ಸಾಧ್ಯವಾಗದ ಹಾಗಾಯಿತು. ಸಮುದಾಯದ ಸದಸ್ಯರಾಗಿ ವಿಹಾರಗಳಲ್ಲಿ ವಾಸಿಸುತ್ತಿದ್ದ ಗುರುಗಳ ಮತ್ತು ವಿದ್ಯಾರ್ಥಿಗಳ ನಿಷ್ಠೆಯು ಜ್ಞಾನ ಮತ್ತು ಕುಶಲತೆಯ ತಿಳಿವಳಿಕೆ ಹಾಗೂ ಅಧ್ಯಾತ್ಮಿಕ ಮುಕ್ತಿಯ ಗುರಿಯನ್ನು ಹೊಂದಿರುತ್ತಿತ್ತು. ಆನಂತರ, ಮಧ್ಯಕಾಲೀನ ಯುಗದಲ್ಲಿ ಬೃಹತ್ ಪ್ರಯಾಣದ ಮತ್ತು ಚಲನಶೀಲ ಸ್ವರೂಪದ ಸಾರ್ವಜನಿಕ ಶಿಕ್ಷಣ ಕಾರ್ಯಕ್ರಮವು ದೇವಾಲಯಗಳು ಮತ್ತು ಮಾನವಹಿತಕಾರಿಗಳಿಂದ ನಡೆಸಲ್ಪಡುತ್ತಿದ್ದ ಪಾಠಶಾಲೆಗಳು ಮತ್ತು ಮದರಸಗಳ ರೂಪದಲ್ಲಿ ಅಸ್ತಿತ್ವಕ್ಕೆ ಬಂತು. ಬ್ರಿಟಿಷರ ಆಗಮನದೊಂದಿಗೆ, ಔಪಚಾರಿಕ ವಿದ್ಯಾಭ್ಯಾಸದ ಪಾಶ್ಚಾತ್ಯ ಪರಿಕಲ್ಪನೆ ಮೂಡಿಬಂದು, ಶಿಕ್ಷಣವು ಬರೀ ಭೌತಿಕತೆಯ ಉಪಕರಣವಾಗಿ ಪರಿಣಮಿಸಿತು ಇಡೀ ಕಲಿಕಾ ಕಾರ್ಯವಿಧಾನವನ್ನು ಈ ರೀತಿ ಸಂಕುಚಿಸುವುದರ ವಿರುದ್ಧ ಬಂಡಾಯ ವ್ಯಕ್ತಪಡಿಸಿದ ಮಹಾತ್ಮಾ ಗಾಂಧೀಜಿಯವರು ಆಶ್ರಮ ಶಿಕ್ಷಣದ ಮಾದರಿಗಳನ್ನು ಅಭಿವೃದ್ಧಿಪಡಿಸಿದರು. ಇದು 1936ರಲ್ಲಿ ವಾರ್ಧಾ ಕಾರ್ಯಯೋಜನೆಗಾಗಿ ಜನಪ್ರಿಯವಾಯಿತು. ಆಮೇಲೆ ಶಿಕ್ಷಣದ ಎಲ್ಲ ಹಂತಗಳಲ್ಲಿ ಶಿರ, ಹೃದಯ ಮತ್ತು ಕೈಯ (ಹಸ್ತದ) ಸಾಮರಸ್ಯವನ್ನು ಪ್ರತಿಪಾದಿಸುವ 'ನಯಿ ತಾಲಿಮ್' ಹೆಸರಿನಿಂದ ಪ್ರಗತಿ ಹೊಂದಿತು. 1966ರಲ್ಲಿ ಕೊಠಾರಿ ಆಯೋಗವು ಎಲ್ಲ ವಿಷಯಗಳ ಪಠ್ಯಕ್ರಮದ ಅಗತ್ಯದ ಭಾಗವಾಗಿ ಎಸ್‌ಯುಪಿಡಬ್ಲ್ಯುವಿನ ಮೂರು ನಿಯಮಗಳನ್ನು, ಸಮುದಾಯ ಬದುಕು ಮತ್ತು ಸಮುದಾಯ ಸೇವೆಯನ್ನು ಶಿಫಾರಸ್ಸು ಮಾಡಿತು. ಶಿಕ್ಷಣದ ಮೂಲಕ ವ್ಯಕ್ತಿಯನ್ನು ಒಟ್ಟು ಕಟ್ಟಿಕೊಡುವುದಕ್ಕೆ ಇದು ಅತ್ಯಂತ ಉಚಿತ ಪ್ರಸ್ತಾಪವಾಗಿದೆ. ರಾಷ್ಟ್ರೀಯ ವಯಸ್ಕ ಶಿಕ್ಷಣ ಕಾರ್ಯಕ್ರಮವನ್ನು (ಎನ್‌ಎಇಪಿ) 1978ರಲ್ಲಿ ಪ್ರಾರಂಭಿಸಲಾಯಿತು.

ಸ್ವತಂತ್ರ ರಾಷ್ಟ್ರವಾಗಿ ನಮಗೆ ಅಭಿವೃದ್ಧಿ ಹೊಂದುವುದು ಬೇಕಾಗಿದೆ. ಮತ್ತು ಮಾನವ ಬದುಕಿನ ಮೂಲಭೂತ ಉಪಾಂಗವಾಗಿರುವ ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಾಣಬೇಕಾಗಿದೆ. ಸಾಕ್ಷರತೆಯನ್ನು ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನ ವಿಧಾಯಕ ವಿದ್ಯಮಾನವಾಗಿ ಪರಿಗಣಿಸಬೇಕಾಗಿದೆ. ಸಾರ್ವಜನಿಕ ಶಿಕ್ಷಣವಿಲ್ಲದೆ ಮೂಲ ಮಟ್ಟದ ಜನರ ಸರ್ವಸಮತೆ ಮತ್ತು ಸಶಕ್ತೀಕರಣವನ್ನು ಆಧರಿಸಿದ ಹೊಸ ಸಮಾಜದತ್ತ ನಾವು ಸಾಗುವುದು ಸಾಧ್ಯವಿಲ್ಲ. ಸಾಕ್ಷರತೆಯ ಮೂರು 'ಆರ್'ಗಳಿಗಾಗಿ ಇರುವ ಚಳವಳಿ ಮಾತ್ರವಲ್ಲ, ಅದು ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿಯ ಅತ್ಯಂತ ಪ್ರಬಲವಾದ ಮತ್ತು ನುಣುಚಿಕೊಳ್ಳಲು ಸಾಧ್ಯವಾಗದಂತಹ ಉಪಕರಣವಾಗಿದೆ.

ಎಲ್ಲಕ್ಕಿಂತ ಹೆಚ್ಚಾಗಿ, ಸಂದೇಹಾತೀತವಾಗಿ ಪ್ರಮಾಣೀಕರಿಸಲಾದ ಸಂಗತಿಯೇನೆಂದರೆ ಶಾಲಾಭ್ಯಾಸದ ಸಾಂಪ್ರದಾಯಿಕ ಪದ್ಧತಿಯ ಮೂಲಕ ಪಡೆಯತಕ್ಕಂತಹ ಔಪಚಾರಿಕ ಶಿಕ್ಷಣವು ಪ್ರವೇಶಾವಕಾಶದ ವಿಚಾರದಲ್ಲಿ ಅಸಮರ್ಪಕವೆಂದು ಸಾಬೀತಾಗಿರುವುದಷ್ಟೇ ಅಲ್ಲದೆ ಬದುಕು ಮತ್ತು ಸಮುದಾಯದ ಅಗತ್ಯಗಳ ಪೂರೈಕೆ ವಿಚಾರದಲ್ಲಿ ಕೂಡಾ ಸಾಕಾಗುವಷ್ಟಿಲ್ಲ. ಇದರ ಪರಿಣಾಮವೇನೆಂದರೆ ಶಿಕ್ಷಣವು ಬದುಕು ಮತ್ತು ಸಮಾಜದಿಂದ ದೂರಸರಿಯುತ್ತಿದೆ.

ಇವತ್ತಿನ ದಿನಗಳಲ್ಲಿ ಸಮಗ್ರ ಔಪಚಾರಿಕ ವ್ಯವಸ್ಥೆಯನ್ನು ಶಾಲೆಗಳಿಂದ ಹೊರತುಪಡಿಸುವುದು ಉಚಿತವಲ್ಲ. ಈಗ ಇದು ಆಳವಾಗಿ ಬೇರೂರಿದೆಯಾದ್ದರಿಂದ ಇದನ್ನು ಕಿತ್ತೊಗೆಯುವುದು ಅಷ್ಟು ಸುಲಭವಲ್ಲ. ಆದುದರಿಂದ ಈಗ ಅವಾಸ್ತವಿಕವೆಂದು ಗೋಚರಿಸುತ್ತಿರುವ ಔಪಚಾರಿಕ ಶಿಕ್ಷಣದ ಸಾಂಸ್ಥಿಕ ಚೌಕಟ್ಟಿನ ಬಳಕೆಯನ್ನು ಮುಂದುವರಿಸುವುದು ಅನಿವಾರ್ಯ. ಇದನ್ನು ಬದುಕಿಗೆ ಮತ್ತು ಸಮುದಾಯಕ್ಕೆ, ಜೊತೆಗೆ ವ್ಯಾಪಕ ರೀತಿಯಿಂದ ಸಮಾಜಕ್ಕೆ ಸಂಬಂಧಿಸುವ ರೀತಿಯಲ್ಲಿ ಪರಿವರ್ತನೆಗೊಳಿಸುವುದಕ್ಕಾಗಿ ಕಾರ್ಯ ನಡೆಸಬೇಕಾಗಿದೆ.

ಶಿಕ್ಷಣ ವ್ಯವಸ್ಥೆಯ ಕುರಿತಾದ ಸ್ಪಷ್ಟ ಅತೃಪ್ತಿಯಿಂದ ಅನೌಪಚಾರಿಕ ಶಿಕ್ಷಣವೆಂದು ಕರೆಯಲ್ಪಡುವ ಹೊಸ ಕಲಿಕಾ ವರ್ಗೀಕರಣವೊಂದು ಕಾಣಿಸಿಕೊಂಡಿದೆ. ಮತ್ತು ಜ್ಞಾನದ ಆಸ್ಫೋಟವೇ ಒಂದು ಸವಾಲಾಗಿ ಪರಿಣಮಿಸಿ, ಇದನ್ನು ಔಪಚಾರಿಕ ಮತ್ತು ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳ ಒಟ್ಟಾರೆಯ ಪ್ರಯತ್ನದ ಮೂಲಕ ಮಾತ್ರವೇ ಎದುರಿಸಬೇಕಾದ ಪರಿಸ್ಥಿತಿ ಒದಗಿದೆ. ಸಮಕಾಲೀನ ಸಮಾಜದ ಬಹು ಆಯಾಮದ ಅಗತ್ಯಗಳ ಪೂರೈಕೆಗೆ ಅತ್ಯಗತ್ಯವೆನಿಸಿರುವ ಸಮುದಾಯದ ಕುರಿತಾದ ಪರಸ್ಪರ ಪ್ರತಿಕ್ರಿಯೆ ಮತ್ತು ವ್ಯಾಪಕತೆಗೆ ಸಂಬಂಧಿಸಿದಂತೆ ಔಪಚಾರಿಕ ಶಿಕ್ಷಣದ ಕೆಲವು ಮೂಲಭೂತ ನ್ಯೂನತೆಗಳಿಂದ ಅನೌಪಚಾರಿಕ ಶಿಕ್ಷಣ ಕೂಡಾ ಬೆಳೆಯುತ್ತಿದೆ. ಶಿಕ್ಷಣವನ್ನು ವಯಸ್ಸಿನ ಹಂತಗಳಿಗೆ ಸೀಮಿತಗೊಳಿಸುವುದು ಇನ್ನು ಮುಂದೆ ಸಾಧ್ಯವಾಗದು. ಬೇರೆಬೇರೆ ದೇಶಗಳಲ್ಲಿ ಮತ್ತು ದೇಶಗಳ ಒಳಗೆ ಮಾನವ ಸಮಾಜದ ಏಕರೂಪವಿಲ್ಲದ ಬೆಳವಣಿಗೆಯ ಕಾರಣವಾಗಿ ವಯಸ್ಸಿನ ಎಲ್ಲಾ ಹಂತಗಳಲ್ಲಿ ಅದನ್ನು ಪಡೆಯುವ ಮತ್ತು ಅದರಲ್ಲಿ ಭಾಗವಹಿಸುವ ಅಗತ್ಯವಿದೆ. ಜೊತೆಗೆ, ತಿಳಿವಳಿಕೆ ಮತ್ತು ತಂತ್ರಜ್ಞಾನಗಳಲ್ಲಿ ಪ್ರಗತಿ ಹೆಚ್ಚುತ್ತಿರುವುದು ಕೂಡಾ ಸಮುದಾಯಗಳಲ್ಲಿನ ವ್ಯಕ್ತಿಗಳು ಕಲಿಕೆಯನ್ನು ಮುಂದುವರಿಸುವುದನ್ನು ಮತ್ತು ಹೊಸ ಬೆಳವಣಿಗೆಯೊಂದಿಗೆ ಜೊತೆಗೂಡಿಗೊಳ್ಳುವುದನ್ನು ಕಡ್ಡಾಯವಾಗಿಸಿದೆ. ಶಿಕ್ಷಣವು ಯಾವುದೇ ಹಂತದಲ್ಲಿ ಜೀವನಾವಧಿಯ (ಗಾಂಧೀಜಿಯವರ ಪ್ರಕಾರ ಗರ್ಭದಿಂದ ಗೋರಿಯವರೆಗೆ) ಮತ್ತು ಜೀವನ–ಕೇಂದ್ರಿತ ಕಾರ್ಯವಿಧಾನವಾಗಿರುತ್ತದೆ. ಮತ್ತು ಇದನ್ನು ಹೆಚ್ಚುಹೆಚ್ಚು ಮಾನ್ಯಮಾಡಲಾಗುತ್ತಿದೆ. ಮೇಲಿನ ವಿದ್ಯಮಾನಕ್ಕೆ ಮುಖ್ಯ ಪ್ರತಿಕ್ರಿಯೆಯಾಗಿ ಸಮುದಾಯ ಶಿಕ್ಷಣ ಚಳವಳಿಯು ಮೂಡಿಬಂದಿದೆ.

**ಸಮುದಾಯ ಶಿಕ್ಷಣ ಎಂದರೇನು?** ಇಲ್ಲಿ 'ಸಮುದಾಯ' ಪದವಿ ಮನಸ್ಸಿನ ಗುಣಮಟ್ಟ ಮತ್ತು ವಿಭಿನ್ನ ಆಸಕ್ತಿಯುಳ್ಳ ಜನರ ಪಾಲುಗಾರಿಕೆಯನ್ನು ಸೂಚಿಸುತ್ತದೆ. ನಾವು 'ಸಮುದಾಯ' ಪದವನ್ನು ಅಸಂದಿಗ್ಧವಾಗಿ ನಿರೂಪಿಸುವುದು ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಂದು ದೇಶದ ಮಾನವ ವಸಾಹತುಗಳಲ್ಲಿ

Digitised by Bharatavani, CIIL

ಬದುಕಿನ ವಿಭಿನ್ನ ರೀತಿಗಳು ಮತ್ತು ವಿಭಿನ್ನ ಜೀವನ ಶೈಲಿಗಳು ಇರುತ್ತವೆ. ಗ್ರಾಮೀಣ ಸಮಾಜಕ್ಕೆ ಹೋಲಿಸಿದರೆ ನಗರ ಸಮಾಜದಲ್ಲಿ 'ಸಮುದಾಯ' ಪದವು ವಿಭಿನ್ನ ಅರ್ಥವನ್ನು ಮತ್ತು ಪಾತ್ರವನ್ನು ಹೊಂದಿರಬಹುದಾಗಿದೆ. ನಗರದ ಸಂಕೀರ್ಣತೆಯಲ್ಲಿ (ಕಲಸುಮೇಲೋಗರದಲ್ಲಿ) ಸಮುದಾಯ ಶಿಕ್ಷಣಕ್ಕೆ ದೊರೆಯುವ ಪರಿಸರ ಬೆಂಬಲವು ಅಗಾಧ ಪ್ರಮಾಣದ್ದಾಗಿರಬಹುದು. ಔಪಚಾರಿಕ ವಿದ್ಯಾಭ್ಯಾಸವೊಂದರಿಂದಲೇ ಗುರುತಿಸಲ್ಪಡುವ ಕಾರಣಕ್ಕಾಗಿ 'ಶಿಕ್ಷಣ' ಪದದ ನಿರೂಪಣೆ ಕೂಡಾ ತೊಡಕುಗಳನ್ನೇ ಸೃಷ್ಟಿಸುತ್ತದೆ. ಆದರೆ, ಶಾಲಾವ್ಯವಸ್ಥೆಯನ್ನು ಮೀರಿ ಶಿಕ್ಷಣದ ದಾರಿಗಳನ್ನು ತೆರೆಯುವ ಮತ್ತು ಮುಂದುವರಿಸುವ ಕಾರ್ಯವಿಧಾನವಾಗಿ ವಯಸ್ಕ ಮತ್ತು ಮುಂದುವರಿಯುವ ಶಿಕ್ಷಣವನ್ನು ಒಪ್ಪಿಕೊಂಡ ಬಳಿಕ, ಶಾಲೆಯ ಹೊರಗಿನ ಕಾರ್ಯವಿಧಾನವನ್ನು ವ್ಯಾಪಕವಾಗಿ ಮತ್ತು ಸ್ವಯಂಪ್ರೇರಿತ ರೀತಿಯಲ್ಲಿ ಪೋಷಿಸುವ ಕಾರ್ಯಕ್ಕಾಗಿ ಸಾರ್ವತ್ರಿಕ ಹಾಗೂ ಕಾರ್ಯಕಾರಿ ಚೌಕಟ್ಟೊಂದನ್ನು ಹುಡುಕಿಕೊಳ್ಳುವ ಅಗತ್ಯ ಉಂಟಾಗಿದೆ ಎನ್ನುವುದಂತೂ ಖಚಿತ.

ಹೀಗೆ ಸಮುದಾಯ ಶಿಕ್ಷಣವು ವಯಸ್ಕ ಶಿಕ್ಷಣ ಮತ್ತು ಮುಂದುವರಿಯುವ ಶಿಕ್ಷಣದ ಕಾರ್ಯಕ್ರಮ ಮಾತ್ರವಾಗಿರದೆ, ಅದೊಂದು ಚೌಕಟ್ಟು ಮತ್ತು ಕಾರ್ಯವಿಧಾನವಾಗಿದ್ದು, ವಯಸ್ಕರ ಮುಂದುವರಿಯುವ ಶಿಕ್ಷಣಕ್ಕಾಗಿ ಔಪಚಾರಿಕ ಮತ್ತು ಅನೌಪಚಾರಿಕ ಕಲಿಕಾ ಕಾರ್ಯವಿಧಾನವನ್ನು ಅದು ಜೋಡಿಸುತ್ತದೆ. ಹೀಗೆ ಔಪಚಾರಿಕ ಶಾಲಾವ್ಯವಸ್ಥೆ ಮತ್ತು ವಯಸ್ಕರ ಶಿಕ್ಷಣ, ಹಾಗೂ ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಹೊರಗೆ ನಿರ್ವಹಿಸಲಾದ ಮುಂದುವರಿಯುವ ಶಿಕ್ಷಣ ಕೇಂದ್ರಗಳು ಹೆಚ್ಚುವರಿ–ಪ್ರಚಾರ ಮತ್ತು ಸಹ ಪಠ್ಯಚಟುವಟಿಕೆಗಳ ಮೂಲಕ ಮಾಡಿರುವಂತಹ ಕೆಲಸವನ್ನು ಕ್ರೋಢೀಕರಿಸುವ ವಿಶೇಷ ಪಾತ್ರ ಕೂಡಾ ಇದಕ್ಕೆ ಇರುತ್ತದೆ. ಈ ರೀತಿ ಶಿಕ್ಷಣವು ಬೋಧಕರಿಂದ ಕಲಿಸ್ಪಡುವ ಕಾರ್ಯವಿಧಾನವಾಗಿ ಈ ಚೌಕಟ್ಟಿನಲ್ಲಿ ಉಳಿಯುವುದಿಲ್ಲ. ಆದರೆ ವಿವಿಧ ವಾಹಿನಿಗಳಿಂದ ಕಲಿಕೆಯ ಸಂಪನ್ಮೂಲಗಳನ್ನು ಬಳಸುವ ವ್ಯಾಪಕ ಕಲಿಕಾ ಕಾರ್ಯವಿಧಾನವಾಗಿರುತ್ತದೆ. ಸಮುದಾಯ ಶಿಕ್ಷಣದಲ್ಲಿ ಶಾಲೆಗಳಾಗಲಿ ಅಥವಾ ಶಿಕ್ಷಕರಾಗಲಿ ಏಕಸ್ವಾಮ್ಯ ಹೊಂದಿರುವುದಿಲ್ಲ.

ಸಮುದಾಯ ಶಿಕ್ಷಣವು ಬದುಕಿಗೆ ಪ್ರಸ್ತುತವೆನಿಸದ ಸಿದ್ಧಕಟ್ಟುಗಳಿಂದ ಮಾತ್ರವಲ್ಲ, ಮಾನವ, ಭೌತಿಕ, ಅಧ್ಯಾತ್ಮಿಕಗಳಂತಹ ಸ್ಥಳೀಯ ಸಂಪನ್ಮೂಲಗಳಿಂದ ಕಲಿಯುವುದನ್ನೂ, ಸಾಂಪ್ರದಾಯಿಕ ವ್ಯವಸ್ಥೆಯ ನಿಷ್ಠುರತೆಯು ಈ ರೀತಿಯ ಕ್ರಿಯಾಶೀಲವಿಧಾನವನ್ನು ಸುಗಮಗೊಳಿಸಲಾರದು. ಆದರೆ ಮಾನವ ಬದುಕಿನ ಸ್ಪಂದನಾತ್ಮಕ ಮತ್ತು ಸಜೀವ ಕಾರ್ಯವಿಧಾನಗಳೊಂದಿಗೆ ತನ್ನ ಸಂಪರ್ಕಗಳನ್ನು ಮುನ್ನಡೆಸುತ್ತಿರುವ ಸಮುದಾಯ ಶಿಕ್ಷಣದ ಕಾರ್ಯಗತಿಯಿಂದ ಅಂತಿಮವಾಗಿ ಇದು ಪ್ರಭಾವಿತಗೊಳ್ಳುವ ಸಾಧ್ಯತೆಗಳಿವೆ.

ಹೀಗೆ ಇಲ್ಲಿಯ ರೀತಿಯು 'ಸಮುದಾಯ ಶಿಕ್ಷಣ'ವನ್ನು ಹೆಚ್ಚುವರಿ ಕಾರ್ಯಕ್ರಮವನ್ನಾಗಿ ಮಾಡುವುದಿಲ್ಲ ಸಮಾಜವನ್ನು ಅತಿಸೂಕ್ಷ್ಮ ಹಂತದಲ್ಲಿ (ಅಣುಹಂತ) ಅಭಿವೃದ್ಧಿಪಡಿಸುವ ಕಾರ್ಯವಿಧಾನದಲ್ಲಿ ತೊಡಗಿಸಿಕೊಳ್ಳಲು ಮತ್ತು ಭಾಗವಹಿಸಲು ಸಮುದಾಯವನ್ನು ಸಮರ್ಥಗೊಳಿಸುವ ಮಟ್ಟ ಮತ್ತು ಕಾರ್ಯವಿಧಾನ ಇದಾಗಿದೆ. ಸಮುದಾಯ ಶಿಕ್ಷಣದ ಮೂಲಕ ಸುವ್ಯಕ್ತಗೊಂಡ ಸಮುದಾಯ ಅನುಸಂಧಾನ ಸ್ವರೂಪವು ಬಹಳ ಸಂಗತವಾಗಿರುತ್ತದೆ. ಅದರಲ್ಲಿಯೂ ವಿಶೇಷವಾಗಿ ಸಮಾಜದ ದುರ್ಬಲ ವರ್ಗಗಳ ಬದುಕು ವೃತ್ತಿಪರ ಗುಂಪುಗಳಾಗಿ ವಿಂಗಡಿಸಿಕೊಂಡಿರದೆ, ಭೇದಿಸಲಾಗದ ಮತ್ತು ಸಂಯೋಜಿತ ಸಾಮಾಜಿಕ ಕಾರ್ಯಗತಿಯಾಗಿದ್ದಾಗ, ಎಲ್ಲಾ ವಯೋಗುಂಪುಗಳಿಗೆ ಮತ್ತು ಆಸಕ್ತಿ ಹೊಂದಿರುವ ಎಲ್ಲರಿಗೂ, ಕೆಲವೊಮ್ಮೆ ಏಕಕಾಲದಲ್ಲಿ ಕಲಿಯುವಿಕೆಯನ್ನು ಸುಗಮಗೊಳಿಸಿ ಸಮಾಜದ ದುರ್ಬಲ ವರ್ಗಗಳನ್ನು ಮೇಲಕ್ಕೆತ್ತುವುದರಲ್ಲಿ ಇದು ಸಹಕಾರಿಯಾಗುತ್ತದೆ. ಭೌತಿಕ ಸೌಕರ್ಯಗಳನ್ನು ಮುಂದುವರಿಸುವುದಷ್ಟೇ ಪ್ರಶ್ನೆ ಅಲ್ಲ. ಚಲನಶೀಲ ಮತ್ತು ಪರ್ಯಟನಶೀಲ ಕಲಿಕಾ ಕಾರ್ಯಕ್ರಮಗಳ ಮೂಲಕ ಪ್ರತಿಯೊಂದು ಮನೆ ಮತ್ತು ಕುಟುಂಬಕ್ಕೆ ಶಾಲೆಯನ್ನು ಕೊಂಡೊಯ್ಯುವುದಾಗಿದೆ. ಇದು ಭಾರತದಲ್ಲಿ ಸಮುದಾಯ ಶಿಕ್ಷಣದ ವಿಶಿಷ್ಟ ಲಕ್ಷಣವಾಗಿದೆ.

ಅಹಮದಾಬಾದ್ ಘೋಷಣೆಯಲ್ಲಿ ಭಾರತದಲ್ಲಿನ ಸಮುದಾಯ ಶಿಕ್ಷಣದ ಕಾರ್ಯಗಳನ್ನು ಈ ಕೆಳಗಿನ ಪದಗಳಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ:

ಜ್ಞಾನದ ಮಹತ್ತರವಾದ ಬೆಳವಣಿಗೆ, ತೀವ್ರಸ್ವರೂಪದ ಬದಲಾವಣೆಗಳು, ಜನಸಂಖ್ಯಾ ಸ್ಫೋಟ, ವಾತಾವರಣದ ಹದಗೆಡುವಿಕೆ ಮತ್ತು ಪರಿಸರದಲ್ಲಿನ ತೀವ್ರ ಬದಲಾವಣೆಗಳಿಂದಾಗಿ ಜಗತ್ತು ಇಂದು ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಈ ಅಗಾಧ ಸವಾಲುಗಳನ್ನು ಎದುರಿಸಲು ಸಾಂಪ್ರದಾಯಿಕ ಶೈಕ್ಷಣಿಕ ರಚನೆಗಳು ಅಸಮರ್ಪಕವೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಆದುದರಿಂದ ಕಲಿತ ಸಮಾಜದ ಸೃಷ್ಟಿಗಾಗಿ ಔಪಚಾರಿಕ ಶಿಕ್ಷಣಕ್ಕೆ ಪರ್ಯಾಯ ನೀತಿಗಳನ್ನು ಹುಡುಕಿಕೊಳ್ಳುವ ಅಗತ್ಯವಿದೆ.

ಬದುಕಿನುದ್ದಕ್ಕೂ ಶಿಕ್ಷಣ ಇರಬೇಕಾದುದಲ್ಲದೆ ಅದು ಅಗತ್ಯವಾಗಿ ಬದುಕು–ಕೇಂದ್ರಿತವಾಗಿರಲೂ ಬೇಕು ಎಂದು ಘೋಷಣೆ ದೃಢಪಡಿಸುತ್ತದೆ ಇದು ಸೂಚಿಸುವುದೇನೆಂದರೆ:

1. ಶಿಕ್ಷಣ – ಔಪಚಾರಿಕ ಮತ್ತು ಅನೌಪಚಾರಿಕ ಇವೆರಡೂ ಸಮುದಾಯ ಅಗತ್ಯಗಳಿಗೆ ಅನುಗುಣವಾದ ಮತ್ತು ಸುತ್ತಲಿನ ವಾತಾವರಣದ ಅಗತ್ಯಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಸಜ್ಜುಗೊಂಡಿರಬೇಕು. ಮತ್ತು ಬಹುಪ್ರದೇಶದ ಮತ್ತು ಬಹುನಿರ್ಗಮನದ ಬಿಂದುಗಳ ಮೂಲಕ ಒಬ್ಬ ವ್ಯಕ್ತಿಯ ಸ್ವಂತ ಗತಿಯಲ್ಲಿ ಅದು ಸಿಗುವ ಹಾಗಿರಬೇಕು.

2. ಸಮುದಾಯ ಬದುಕಿನ ಅನುಕಲನ, ಸಮುದಾಯ ಸೇವೆ ಮತ್ತು ಸಾಮಾಜಿಕವಾಗಿ ಉಪಯುಕ್ತವಿರುವ ಉತ್ಪಾದನಾ ಕಾರ್ಯಕ್ಕೆ ಭರವಸೆದಾಯಕವಾಗಿ ಶಿಕ್ಷಣವಿರಬೇಕು. ಮಹಾತ್ಮಾ

Digitised by Bharatavani, CIIL

ಗಾಂಧೀಜಿಯವರ ಮೂಲ ಶಿಕ್ಷಣದ ಕಲ್ಪನೆಯನ್ನು ಆಧರಿಸಿದ ಕಲಿಕೆಯು ಯಾವುದೇ ಕಸುಬಿನ ಪ್ರಧಾನ ಘಟಕ ಆಗಿರಬೇಕು.

3. ಶಿಕ್ಷಣದ ಕಾರ್ಯವಿಧಾನವು ಸಂವೇದನಾಶೀಲ, ಪರಿಣಾಮಕಾರಿ ಮತ್ತು ಕಾರ್ಯಸಂಕಲ್ಪಕತೆಯ ಅಖಂಡ ರೂಪವಾಗಿದ್ದು, ಸಾಮಾಜಿಕ ಸಂಬದ್ಧತೆಯನ್ನು ನೀಡುವ ಸಲುವಾಗಿ ಅದು ಮೂರು ಪ್ರಮುಖ ವ್ಯವಸ್ಥೆಗಳನ್ನು ಉದಾಹರಣೆಗೆ ಮನೆ, ಶಾಲೆ ಮತ್ತು ಸಮುದಾಯವನ್ನು ಅನ್ಯೋನ್ಯ ರೀತಿಯಿಂದ ಬೆಸೆಯುತ್ತದೆ.

4. ಸಾಮಾಜಿಕ ಸಂಸ್ಥೆಯಾಗಿ ಕುಟುಂಬವು ಕಲಿಕೆಯ ಮೂಲಭೂತ ಸಂಪನ್ಮೂಲವಾಗುತ್ತದೆ.

ಸಮುದಾಯ ಶಿಕ್ಷಣದ ಸಮಗ್ರತಾ ದೃಷ್ಟಿಯ ವ್ಯಾಪಕ, ಗುಣಾತ್ಮಕ ಮತ್ತು ರಚನಾತ್ಮಕ ಅನುಸಂಧಾನವನ್ನು ಮತಪಂಥಗಳಿಂದ ಹೊರತಾದ ಮತ್ತು ಸಂಘಟನಾತ್ಮಕವಾದ ತತ್ವ ಮತ್ತು ಸಮುದಾಯ ಶಿಕ್ಷಣದ ಕಾರ್ಯಕ್ರಮಗಳು ವ್ಯಕ್ತಪಡಿಸುತ್ತವೆ. ಭಾರತೀಯ ಸಾಂಸ್ಕೃತಿಕ ಸನ್ನಿವೇಶದಲ್ಲಿ ಈ ವಿಧದ ಶಿಕ್ಷಣ ನೀತಿಯು ಶಿಕ್ಷಣದ ಆಂತರಿಕ ಮತ್ತು ಬಾಹ್ಯ ತಡೆರಹಿತ ಕಾರ್ಯವಿಧಾನಗಳ ಭರವಸೆಯನ್ನು ನೀಡುತ್ತವೆ.

ಇಲ್ಲಿ ಕಲ್ಪಿಸಲಾದ ಸಮುದಾಯವು ಹೊಸ ಸಮಾಜಕ್ಕಾಗಿ ಸಮಾನತಾವಾದದ ಧ್ಯೇಯಗಳನ್ನು ಮನಗಾಣಲು ಸಮಮಟ್ಟದ ಮನದಟ್ಟು ಮಾಡಿಕೊಡುತ್ತದೆ.

**ಧ್ಯೇಯಗಳು:** ಭಾರತದ ಸಂದರ್ಭದಲ್ಲಿ ಸಮುದಾಯ ಶಿಕ್ಷಣಕ್ಕೆ ಅದರದೇ ಆದ ಧ್ಯೇಯಗಳಿವೆ. ಅವು ಈ ಕೆಳಗಿನವುಗಳನ್ನು ಒಳಗೊಂಡಿವೆ :

* ಸಾಕ್ಷರತೆ ಮತ್ತು ಪ್ರಾಥಮಿಕ ಶಿಕ್ಷಣದ ಕನಿಷ್ಠ ಅಗತ್ಯಗಳನ್ನಷ್ಟೇ ಅಲ್ಲ, ಬದುಕಿನುದ್ದಕ್ಕೂ ಮುಂದುವರಿಯುವ ಶಿಕ್ಷಣದ ಸ್ವಯಂ ಮುಂದಕ್ಕೆ ನೂಕಬಲ್ಲ ಕಾರ್ಯವಿಧಾನವನ್ನು ಕಂಡುಹಿಡಿಯುವುದು.

* ಜನಸಮೂಹದ ಮನೆಬಾಗಿಲಿನಲ್ಲಿ ಅವರ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಸ್ವ-ಸಾಮರ್ಥ್ಯದ ವ್ಯವಸ್ಥೆಯನ್ನು ನಿರ್ಮಿಸುವುದು.

  ಕ್ಷೇತ್ರ ಆಧಾರಿತ ನೆರೆಹೊರೆಯ ಸಮುದಾಯಗಳ ಸಹಸ್ರಾರು ಜನರು ತಮ್ಮದೇ ಆದ ಶೈಕ್ಷಣಿಕ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳಲು ಹಾಗೂ ಛಿದ್ರಗೊಳಿಸಬಲ್ಲ ಯಾವುದೇ ವಿಧಾನದಿಂದ ದೂರವಿದ್ದು ಅದು ಬಲವಾದ ಸಾಮಾಜಿಕ ಅಖಂಡತೆಯಲ್ಲ ಪರ್ಯವಸಾನಗೊಳ್ಳುವಂತೆ ಮಾಡುವುದು.

* ಶಾಲೆ ಒಳಗೆ ಅಥವಾ ಶಾಲೆಯ ಹೊರಗೆ ಜೀವನಪರ್ಯಂತ, ಜೀವನಕೇಂದ್ರಿತ ಕಲಿಕಾ ವಿಧಾನಗಳನ್ನು ಅನುಸರಿಸಲು ಪ್ರೋತ್ಸಾಹಿಸುವುದು.

* ಶಾಲೆಯ ಒಳಗಿನ ಮತ್ತು ಶಾಲೆಯ ಹೊರಗಿನ ಶಿಕ್ಷಣದ ನಡುವೆ ಕೊಂಡಿಯಾಗಿಯೂ ಹಾಗೂ ಸೇತುವೆಯಾಗಿಯೂ ಕಾರ್ಯನಿರ್ವಹಿಸುವುದು.

* ಹೋಳು ಹೋಳಾಗಿರದ ಸಾಮುದಾಯಿಕ ಬದುಕಿನ ಶೈಲಿಯನ್ನು ಅಳವಡಿಸಿಕೊಳ್ಳಲು ಎಲ್ಲಾ ಶಕ್ತಿಗಳನ್ನು ಆ ದಿಕ್ಕಿಗೆ ನಿರ್ದೇಶಿಸುವುದು.

* ಶಿಕ್ಷಣವನ್ನು ಸ್ವೀಕರಿಸುವ ಹಾಗೂ ವಿವರಿಸುವ ಕಾರ್ಯಗಳೆರಡರಲ್ಲೂ ಸಮುದಾಯದ ಎಲ್ಲ ವಿಭಾಗಗಳನ್ನು ತೊಡಗಿಸಿಕೊಳ್ಳಲು ಅದನ್ನು ಕಲಿಕೆಯ ವಿಧಾನವನ್ನಾಗಿ ಮಾಡುವುದು.

* ಪಠ್ಯಕ್ರಮದಲ್ಲಿನ ಉನ್ನತ ಮಟ್ಟದ ಅನುಭವಗಳ ಮೂಲಕ ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಸಮುದಾಯಗಳು ಒಂದು ಸಾಮಾನ್ಯ ಉದ್ದೇಶಕ್ಕಾಗಿ ಒಟ್ಟುಗೂಡಿ ಔಪಚಾರಿಕ ಶಿಕ್ಷಣವನ್ನು ಸಹ ಸೂಕ್ತವಾಗಿ ರೂಪಿಸುವುದು.

* ಆರೋಗ್ಯ ಸಂರಕ್ಷಣೆ, ಪರಿಸರ ರಕ್ಷಣೆ, ಸ್ವಯಂ ನಿರ್ವಹಿಸುವ ಸಾರ್ವಜನಿಕ ನೈರ್ಮಲ್ಯ, ಮೂಲಭೂತವಾದ ವೈಜ್ಞಾನಿಕ ಮತ್ತು ತಂತ್ರಜ್ಞಾನಗಳ ಪ್ರಗತಿಗಳು ಇತ್ಯಾದಿ ರಕ್ಷಣಾತ್ಮಕ ಕ್ರಮಗಳ ತಿಳಿವಳಿಕೆಯನ್ನು ಜನರಿಗೆ ಮನೆಬಾಗಿಲಲ್ಲಿ ತಲುಪಿಸುವುದು.

* ಜನರು ತಮ್ಮ ಸಮೀಪದಲ್ಲಿಯೇ ತಾವೇ ತಿಳಿದುಕೊಳ್ಳಬಹುದಾದ ಸ್ಥಳೀಯ ಕಾರ್ಯಕ್ರಮಗಳನ್ನು ರೂಪಿಸುವುದು.

**ಸ್ವರೂಪ ಮತ್ತು ವ್ಯಾಪ್ತಿ:** ಸಮುದಾಯ ಶಿಕ್ಷಣದ ಭಾರತೀಯ ಸ್ವರೂಪವು ಮುಖ್ಯವಾಗಿ ಗ್ರಾಮೀಣ ಸಮಾಜದ ಅಗತ್ಯಗಳನ್ನು ಮತ್ತು ಅಕಾಂಕ್ಷೆಗಳನ್ನು ಆಧರಿಸಿ ಇರುತ್ತದೆ. ಈ ಕೆಳಗಿನವು ಅದರ ಘಟಕಗಳಾಗಿರುತ್ತವೆ; ನವ್ಯ-ಸಾಕ್ಷರತೆ; ಮುಂದುವರಿಕೆಯ ಶಿಕ್ಷಣ; ಕೌಶಲ್ಯ ತರಬೇತಿ; ಸಾಮಾಜಿಕ ಅಭಿವೃದ್ಧಿ; ಆಜೀವ ಶಿಕ್ಷಣ; ಮಾನವ ಸಂಪನ್ಮೂಲ ಅಭಿವೃದ್ಧಿ; ಜನಸಂಖ್ಯಾ ಶಿಕ್ಷಣ; ಪರಿಸರ ಶಿಕ್ಷಣ ಆರೋಗ್ಯ ಶಿಕ್ಷಣ; ಸ್ಥಳೀಯ ಚಿತ್ರಣಗಳ ನಕ್ಷೆ ತಯಾರಿಸುವುದು ಮತ್ತು ಅಭಿವೃದ್ಧಿಗೊಳಿಸುವುದು ವೃತ್ತಿಪರ ಕುಶಲತೆಗಳ ಉನ್ನತೀಕರಣ; ಮತ್ತು ಪ್ರತಿನಿತ್ಯದ ಬಳಕೆಯ ಪ್ರಸಕ್ತ ವಿಜ್ಞಾನದ ಪ್ರಸಾರ.

**ಪರಿಪಾಲನೆ (ಅನುಷ್ಠಾನ):** ಭಾರತೀಯ ಸಂಪ್ರದಾಯದಲ್ಲಿ ಸಮುದಾಯ ಶಿಕ್ಷಣದ ಪರಿಕಲ್ಪನೆಯ 'ಲೋಕ ಶಿಕ್ಷಣ' (ದಾಖಲಾಗಿರುವ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಎಲ್ಲರಿಗಾಗಿ ಶಿಕ್ಷಣ) ದ ರೂಪದಲ್ಲಿ ಅಂತರ್ಗತವಾಗಿ ಇತ್ತು. ಆಧುನಿಕ ಮಾಧ್ಯಮಗಳಾದ ರೇಡಿಯೋ ಮತ್ತು ಟೆಲಿವಿಶನ್‌ನ ಆವಿಷ್ಕಾರವಾಗುವುಕ್ಕಿಂತ ಮೊದಲು ಭಾರತೀಯ ಸಮಾಜವನ್ನು ಜ್ಞಾನದ ಬೆಳಕಿನಲ್ಲಿಟ್ಟ ಶಕ್ತಿಯುತ ಮೂಲಧಾತು ಇದು. ಹೀಗೆ ಲೋಕಶಿಕ್ಷಣವು ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಭಾಗವಾಗಿದೆ.

Digitised by Bharatavani, CIIL

ಸ್ವಯಂಸೇವಾ ಸಂಸ್ಥೆಗಳನ್ನು ಅಭಿವೃದ್ಧಿಯ ಪಾಲುದಾರರಾಗಿ ಸ್ವೀಕರಿಸಲಾಗುತ್ತದೆ. ಜನರ ಅಂತರ್ಗತ ಪ್ರತಿಭೆಯನ್ನು ತಳಮಟ್ಟ ಸಜ್ಜುಗೊಳಿಸಲು ವ್ಯವಸ್ಥಿತವಾದ ಪ್ರದೇಶಾಧಾರಿತ ಸಮುದಾಯತ್ವದ ವ್ಯವಸ್ಥೆಯನ್ನು ಈ ಸಂಸ್ಥೆಗಳು ಅಭಿವೃದ್ಧಿಪಡಿಸಿದರೆ ತಮ್ಮ ಪಾತ್ರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಲು ಇವು ಸಮರ್ಥವಾಗಿರುತ್ತದೆ.

ಸಮುದಾಯವನ್ನು ಸಮೀಪಿಸಲು ವಿಶೇಷ ರೀತಿಯ ಹೊಸ ಬೋಧನ ಕಲೆಯ ಅಗತ್ಯವಿದೆ. ಉದಾಹರಣೆಗೆ ಜಾನಪದ ಮಾಧ್ಯಮವಾದ ಗೊಂಬೆಯಾಟ, ಬೀದಿ ನಾಟಕಗಳು, ಭಾವಯಿ ಇತ್ಯಾದಿಗಳ ಬಳಕೆ, ಸ್ಥಳೀಯ ಭಾಷೆಗಳ ಪರಿಣಾಮಕಾರಿ ಉಪಯೋಗ, ಸಾಧ್ಯವಿರುವೆಡೆಗಳಲೆಲ್ಲಾ ಟಿವಿ ಮತ್ತು ರೇಡಿಯೋ ಸಂಪರ್ಕ, ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿಯೊಂದು ರಸ್ತೆ ಮೂಲೆಯಲ್ಲಿ ಭಿತ್ತಿಪತ್ರಗಳ ವ್ಯಾಪಕ ಬಳಕೆ.

ಸ್ಥಳೀಯ ಸಮುದಾಯಗಳನ್ನು ಅತ್ಯಂತ ವ್ಯಾಪಕ ರೀತಿಯಿಂದ ತೊಡಗಿಸಿಕೊಳ್ಳುವ ಕ್ರಿಯಾತ್ಮಕ ಸಾಕ್ಷರತೆಗಾಗಿ ಇರುವ ಸಮೂಹ ಕಾರ್ಯಕ್ರಮಗಳು ಸಾಕ್ಷರತೆಯ ಪ್ರಚಾರದ ಅತ್ಯಂತ ದೊಡ್ಡ ಕಾರ್ಯಕ್ರಮಗಳಲ್ಲಿ ಒಂದಾಗಿದೆ.

ಮುಖ್ಯವಾಗಿ ಗ್ರಾಮೀಣ ಹಂತದ ನೌಕರನ ಮೂಲಕ ನಡೆಸತಕ್ಕಂತಹ ಕೃಷಿ ವಿಸ್ತರಣಾ ಸೇವಾ ಪ್ರದೇಶದೊಂದಿಗೆ ಸಮುದಾಯ ಶಿಕ್ಷಣಕ್ಕೆ ಸಂಬಂಧವಿದೆ. ಇದು ಪ್ರತಿಯೊಂದು ಮನೆಗೆ ಜ್ಞಾನವನ್ನು ಕೊಂಡೊಯ್ಯುವ ಗ್ರಾಮೀಣ ನೆಲೆಯ ತಳಮಟ್ಟದ ಸಮುದಾಯ ಶಿಕ್ಷಣ ಕಾರ್ಯಕ್ರಮವಾಗಿದೆ.

ಸಮುದಾಯ ಆರೋಗ್ಯ ಕಾರ್ಯಕ್ರಮದಲ್ಲಿ ಇದೇ ಬಗೆಯ ಕಾರ್ಯಕ್ರಮವು ಚಾಲ್ತಿಯಲಿದೆ. ಸಮುದಾಯ ಆರೋಗ್ಯ ಸಂಘಟಕರನ್ನು ಸ್ಥಳೀಯ ಸಮುದಾಯವೇ ಆಯ್ಕೆ ಮಾಡುತ್ತದೆ. ಆನಂತರ ಅವನ/ಅವಳನ್ನು ಸರಕಾರ ನೇಮಿಸುತ್ತದೆ.

ಸಮುದಾಯ ಪಾಲಿಟೆಕ್ನಿಕ್ ಎಂಬ ಹೆಸರಿನಲ್ಲಿ ತಾಂತ್ರಿಕ ಶಿಕ್ಷಣದ ಮಾರ್ಪಾಟಾದ ಹೊಸ ಶಾಖೆಯೊಂದೂ ಸಹ ಜಾರಿಗೆ ಬಂದಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಮಹಾವಿದ್ಯಾಲಯಗಳ ಮೂಲಕ ಮಾನವಿಕ ಮತ್ತು ವೃತ್ತಿಪರ ಪಠ್ಯಕ್ರಮಗಳನ್ನು ಕೂಡಾ ಪ್ರಾರಂಭಿಸಲಾಗಿದೆ. ಗ್ರಾಮ ವಿದ್ಯಾಪೀಠಗಳೆಂದು ಕರೆಯಲಾಗುವ ಸುಮಾರು 20 ಗ್ರಾಮೀಣ ಉನ್ನತ ಶಿಕ್ಷಣ ಸಂಸ್ಥೆಗಳು ಇವೆ. ಇವು ಮಹಾತ್ಮಾ ಗಾಂಧೀಯವರ ನವ ಶಿಕ್ಷಣದ ಕಲ್ಪನೆಗಳಾದ "ಬದುಕಿನ ಮೂಲಕ, ಬದುಕಿಗಾಗಿ, ಬದುಕಿನ ಪರ್ಯಂತ" ಮಾದರಿಯಲ್ಲಿ ರೂಪಿತವಾಗಿರುವ ಗ್ರಾಮೀಣ ಸಮುದಾಯ ಮಹಾವಿದ್ಯಾಲಯಗಳಾಗಿವೆ.

"ದ ಇಂಡಿಯನ್ ಸೊಸೈಟಿ ಫಾರ್ ಕಮ್ಯುನಿಟಿ ಎಜುಕೇಶನ್" ಸಂಸ್ಥೆಯು ಸಮುದಾಯ ಶಿಕ್ಷಣದ ಮೂಲಕ ಕಲಿಯುವ ಸಮಾಜವನ್ನು ಪೋಷಿಸುವ ಕಾರ್ಯವಿಧಾನವನ್ನು ಉತ್ತೇಜಿಸಲು ಕಾರ್ಯವಿಧಾನವಾಗಿದೆ.

**ಗುಜರಾತಿನಲ್ಲಿ ಸಮುದಾಯ ಶಿಕ್ಷಣ ಯೋಜನೆ:**

(ಅ) ಬಯಾದ್ ತಾಲ್ಲೂಕಿನ 161 ಗ್ರಾಮಗಳಲ್ಲಿ ಹಸಿವನ್ನು ಕೊನೆಗೊಳಿಸುವ ಸಲುವಾಗಿ ಸಮುದಾಯ ಶಿಕ್ಷಣ ಮತ್ತು ಸಮುದಾಯ ಅಭಿವೃದ್ಧಿ ಕಾರ್ಯಕ್ರಮವನ್ನು ಐಎಸ್‌ಸಿಇ ಪ್ರಾರಂಭಿಸಿದೆ. ಇದರಲ್ಲಿ ನ್ಯೂಯಾರ್ಕ್‌ನಲ್ಲಿರುವ ಹಂಗರ್ ಪ್ರಾಜೆಕ್ಟ್ ಇಂಟರ್‌ನ್ಯಾಶನಲ್ ಸೆಕ್ರೆಟರೇಟ್‌ನೊಂದಿಗಿನ ಸಹಯೋಗದೊಂದಿಗೆ ಐಎಸ್‌ಸಿಇಯ ಒಂದು ಮಿಲಿಯ ರೂಪಾಯಿಗಳ ದೇಣಿಗೆಗೆ ಸಂವಾದಿಯಾಗಿ ಸ್ಥಳೀಯ ಗ್ರಾಮಗಳ ಸ್ವಯಂಪ್ರೇರಿತ ದೇಣಿಗೆಯಾಗಿ ಒಂದು ಮಿಲಿಯ ಮಾನವ ಗಂಟೆಗಳ ಕ್ರಿಯಾ ಬ್ಯಾಂಕ್ ಇರುತ್ತದೆ. ಇದರೊಂದಿಗೆ ಸಂಘಟಕರು ಕಾಲ ನಿರ್ಬಂಧಿತ ಕಾರ್ಯಕ್ರಮಗಳಲ್ಲಿ ಕೂಡ ಕೆಲಸ ಮಾಡುತ್ತಾರೆ. ಅವುಗಳೆಂದರೆ ಈ 161 ಗ್ರಾಮಗಳಲ್ಲಿ ಶೇಕಡಾ 100ರಷ್ಟು ಮಹಿಳಾ ಸಾಕ್ಷರತೆಯನ್ನು ಸಾಧಿಸುವುದು, ಕುಡಿಯುವ ನೀರಿನ ಸೌಕರ್ಯ, ಬಳಕೆದಾರರ ಸ್ವಯಂ ಪ್ರೇರಿತ ದುಡಿಮೆಯಿಂದ ನಿರ್ಮಿಸಲಾಗುವ 1000 ಶೌಚಾಲಯಗಳ ಮೂಲಕ ಸುಧಾರಿತ ನೈರ್ಮಲ್ಯ, ವೃತ್ತಿಪರ ತರಬೇತಿಯ ಮೂಲಕ ಸ್ವಯಂಉದ್ಯೋಗ ಮತ್ತು ಸಾವಿರಕ್ಕೆ 120 ಇರುವ ಐಎಮ್‌ಆರ್‌ನ್ನು ಸಾವಿರಕ್ಕೆ 50ರಂತೆ ಇಳಿಸುವುದು ಇತ್ಯಾದಿ.

(ಆ) **ಹತ್ತು ಜನಶಿಕ್ಷಣ ನಿಲಯಂಗಳು (ಜೆಎಸ್‌ಎನ್):** ಅಹಮದಾಬಾದ್ ಜಿಲ್ಲೆಯ ಸನಂದ್ ತಾಲ್ಲೂಕಾದ ಒಳನಾಡು ಗ್ರಾಮಗಳಲ್ಲಿ ಐಎಸ್‌ಸಿಇ ಯಿಂದ ಕಾರ್ಯಗತವಾಗಿರುವುದು.

(ಇ) **ಸಮುದಾಯ ಶಿಕ್ಷಣ ಕೇಂದ್ರಗಳು:** ಗುಜರಾತ್ ವಿದ್ಯಾಪೀಠದ ಸಮಾಜ ಕಾರ್ಯ ಇಲಾಖೆ ಮತ್ತು ಬರೋಡಾದ ಎಮ್. ಎಸ್. ವಿಶ್ವವಿದ್ಯಾಲಯಗಳಿಂದ ನಡೆಯುತ್ತಿರುವುದು.

(ಈ) **ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆ (ಐಸಿಡಿಎಸ್):** ಮಕ್ಕಳ ಅಭಿವೃದ್ಧಿ ಕಾರ್ಯಕ್ಕಾಗಿ.

**(ಉ) ನೆಹರೂ ಯುವಕ ಕೇಂದ್ರಗಳು:** ಕ್ರೀಡೆ ಮತ್ತು ಮನರಂಜನಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಇರುವ ಕೇಂದ್ರಗಳು.

(ಊ) **ಮಹಿಳಾ ಮಂಡಳಿಗಳು:** ಮಹಿಳೆಯರ ಪಾತ್ರವನ್ನು ಹೆಚ್ಚುಮಾಡುವ ಸಲುವಾಗಿ ಗ್ರಾಮಗಳಲ್ಲಿರುವ ಮಹಿಳಾ ಕ್ಲಬ್‌ಗಳು.

**ಮೂಲ: ಯಶೋಮತಿ ಪಟೇಲ್**

**ಅನು: ಡಾ. ಗೀತಾ ಶೆಣೈ**

Digitised by Bharatavani, CIIL

## ಭಾರತದಲ್ಲಿ ಸಾಕ್ಷರತಾ ಆಂದೋಲನ

**ಹಿನ್ನೆಲೆ:** ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಅನಕ್ಷರತೆ ನಿವಾರಣೆಗಾಗಿ ಹಮ್ಮಿಕೊಂಡ ಕಾರ್ಯಕ್ರಮವೇ ಸಂಪೂರ್ಣ ಸಾಕ್ಷರತಾ ಆಂದೋಲನ. ನಿರ್ದಿಷ್ಟ ಕ್ಷೇತ್ರ (ಒಂದು ಜಿಲ್ಲೆ), ನಿಗದಿತ ಕಾಲ (18 ತಿಂಗಳು), ನಿರ್ದಿಷ್ಟ ವಯೋಮಾನದ ಗುಂಪು (15–35 ವರ್ಷದ ಅನಕ್ಷರಸ್ಥರು), ಕಡಿಮೆ ವೆಚ್ಚ (ಪ್ರತಿಯೊಬ್ಬ ಕಲಿಯುವವರಿಗೆ ರೂ.90 ರಿಂದ 180), ಕಡಿಮೆ ಅವಧಿಯಲ್ಲಿ ಹೆಚ್ಚು ಫಲಿತಾಂಶ, ಸ್ವಯಂ ಸೇವಾ ನೇರ ಆಧಾರಿತ ಆಂದೋಲನ, ಹೊಸ ಕಲಿಕಾ ವಾತಾವರಣ ನಿರ್ಮಾಣ (200 ಗಂಟೆಗಳ ಅವಧಿ), ಪದಪದ್ಧತಿಯಲ್ಲಿ ಕಲಿಕೆ, ಕಲಿಕಾ ವಾತಾವರಣ ನಿರ್ಮಾಣ, ಎಲ್ಲ ಜನರ ಪಾಲ್ಗೊಳ್ಳುವಿಕೆ, ಸಾಕ್ಷರತಾ ಆಂದೋಲನದ ಪ್ರಮುಖ ಲಕ್ಷಣಗಳಾಗಿದ್ದವು. ಸಂಪೂರ್ಣ ಸಾಕ್ಷರತಾ ಆಂದೋಲನವು ಈ ಕೆಳಗಿನ ಮೂರು ಹಂತದಲ್ಲಿ ನಡೆದಿದೆ:

| ಕ್ರ.ಸಂ. | ವಿವರ | ಕಾಲಾವಧಿ | ಚಟುವಟಿಕೆಯ ವೆಚ್ಚ |
|---|---|---|---|
| 1 | ಸಂಪೂರ್ಣ ಸಾಕ್ಷರತಾ ಆಂದೋಲನ | 18 ತಿಂಗಳು | ರೂ.180 (ಪ್ರತಿ ಕಲಿಕಾರ್ಥಿಗೆ) |
| 2 | ಸಾಕ್ಷರೋತ್ತರ ಕಾರ್ಯಕ್ರಮ | 12 ತಿಂಗಳು | ರೂ.130 (ಪ್ರತಿ ಕಲಿಕಾರ್ಥಿಗೆ) |
| 3 | ಮುಂದುವರಿಕೆ ಶಿಕ್ಷಣ | 5 ವರ್ಷಗಳು | ರೂ.45,000 (ವಾರ್ಷಿಕ ಪ್ರತಿ ಕೇಂದ್ರಕ್ಕೆ) |

**ಆರಂಭದ ಪ್ರಯತ್ನಗಳು:** ಸಾಕ್ಷರತಾ ಕಾರ್ಯಕ್ಷೇತ್ರದಲ್ಲಿ ತ್ವರಿತಗತಿಯ ಪ್ರಗತಿ ಸಾಧಿಸಲು ರಾಷ್ಟ್ರೀಯ ಸಾಕ್ಷರತಾ ಮಿಷನ್ ಅನ್ನು 1988ರ ಮೇ 5 ರಂದು ಸ್ಥಾಪಿಸಲಾಯಿತು. ಭಾರತ ದೇಶದ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು, ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ ಗುರಿಯಾಗಿದೆ. ಇದಕ್ಕಾಗಿ 15 ರಿಂದ 35 ವರ್ಷ ವಯೋಮಾನದ ಎಲ್ಲ ಅನಕ್ಷರಸ್ಥರಿಗೆ ಕ್ರಿಯಾತ್ಮಕ ಸಾಕ್ಷರತೆ ನೀಡುವ ಉದ್ದೇಶವನ್ನು ಹೊಂದಿದೆ. ಭಾರತದಂತಹ ಸಾಮಾಜಿಕ ಹಾಗೂ ಆರ್ಥಿಕ ವೈವಿಧ್ಯತೆಯನ್ನು ಹೊಂದಿದ ವಿಶಾಲ ದೇಶದಲ್ಲಿ ಅನಕ್ಷರತೆ ನಿವಾರಣೆ ಮಾಡುವುದು ಸಾಮಾನ್ಯ ವಿಷಯವಲ್ಲ. ಅದಕ್ಕಾಗಿ 1990 ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಕೇರಳದ ಎರ್ನಾಕುಳಂ ಜಿಲ್ಲೆ ಹಾಗೂ ಕೊಟ್ಟಾಯಂ ಪಟ್ಟಣ ಮತ್ತು ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ಒಂದು ನಿಶ್ಚಿತ ಕಾಲಾವಧಿಯಲ್ಲಿ ಸ್ವಯಂ ಸೇವಾ ನೆಲೆಯಲ್ಲಿ ಜನಾಂದೋಲನ ರೂಪದಲ್ಲಿ ಕರ್ಯಾಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಯಿತು. ಇದರಿಂದ ಪ್ರಚೋದಿತಗೊಂಡ ಮಿಷನ್ ಸಾಕ್ಷರತಾ ಆಂದೋಲನವು ಅನಕ್ಷರತೆಯನ್ನು ಹೋಗಲಾಡಿಸಲು ಒಂದು ಪ್ರಮುಖ ಅಸ್ತ್ರವೆಂದು ತೀರ್ಮಾನಿಸಿತು.

ಸಂಪೂರ್ಣ ಸಾಕ್ಷರತಾ ಆಂದೋಲನ (1990 ರಿಂದ 1999ರ ವರೆಗೆ): ಸ್ವಯಂ ಸೇವಾ ನೆಲೆಯಲ್ಲಿ ಜನಾಂದೋಲನವಾಗಿ ಜಾರಿಯಾದ ಸಾಕ್ಷರತಾ ಅಂದೋಲನ ನಿರ್ದಿಷ್ಟ ಕಾಲಾವಧಿಯಲ್ಲಿ, ನಿಗದಿತ ಪ್ರದೇಶದಲ್ಲಿ (ಜಿಲ್ಲೆ), ನಿರ್ದಿಷ್ಟ ಗುಂಪಿಗೆ (15 ರಿಂದ 35 ವಯೋಮಿತಿ) ಕ್ರಿಯಾತ್ಮಕ ಸಾಕ್ಷರತೆ ನೀಡುವ ಪ್ರಯತ್ನವಾಗಿತ್ತು. ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಎಲ್ಲಾ ರಾಜ್ಯಗಳಲ್ಲಿ ಅತ್ಯುತ್ಸಾಹದ ಪ್ರತಿಕ್ರಿಯೆ ವ್ಯಕ್ತವಾಯಿತು. ಎಲ್ಲ ವರ್ಗದ ಪಾಲ್ಗೊಳ್ಳುವಿಕೆಯಿಂದ ನಿಜವಾದ ಜನಾಂದೋಲನ ಜಾರಿಯಾಯಿತು. 1990 ರಿಂದ 1999ರ ವರೆಗಿನ ವಿವಿಧ ಹಂತಗಳಲ್ಲಿ 23 ಯೋಜನೆಗಳಲ್ಲಿ ಸ್ವಯಂ ಸೇವೆ ನೆಲೆಯಲ್ಲಿ ಜಾರಿಯಾಯಿತು.

1991ರ ಜನಗಣತಿಯ ಪ್ರಕಾರ 52.21% ಸಾಕ್ಷರತಾ ಪ್ರಮಾಣವನ್ನು ಹೊಂದಿದ್ದ ಭಾರತ ದೇಶದಲ್ಲಿ 328 ಲಕ್ಷ 15 ರಿಂದ 35 ವಯೋಮಾನದ ಅನಕ್ಷರಸ್ಥರನ್ನು ಗುರುತಿಸಿ ಕ್ರಿಯಾತ್ಮಕ ಸಾಕ್ಷರತೆಯನ್ನು ನೀಡುವ ಉದ್ದೇಶವನ್ನು ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಹೊಂದಲಾಗಿತ್ತು. ಸಾಕ್ಷರತಾ ಆಂದೋಲನದ ಪರಿಣಾಮವಾಗಿ 1991 ರಲ್ಲಿ ಅನಕ್ಷರಸ್ಥರ ಸಂಖ್ಯೆಯು 2001 ರ ಜನಗಣತಿಯ ಪ್ರಕಾರ 328 ದಶ ಲಕ್ಷದಿಂದ 304 ದಶ ಲಕ್ಷಕ್ಕೆ ಇಳಿಯಿತು. ಅಂದರೆ ಸಾಕ್ಷರತಾ ಪ್ರಮಾಣ 2001 ಜನಗಣತಿಯ ಪ್ರಕಾರ ಶೇ> 12.63 ರಷ್ಟು ಹೆಚ್ಚಳವಾಗಿ ದಾಖಲಾಯಿತು.

ಸಾಕ್ಷರೋತ್ತರ ಕಾರ್ಯಕ್ರಮ (Post Literacy Programme): ಸಂಪೂರ್ಣ ಸಾಕ್ಷರತಾ ಆಂದೋಲನದ ಅನಂತರ ಅಕ್ಷರಸ್ಥರಾದ ನವಸಾಕ್ಷರರ ಸಾಕ್ಷರತಾ ಕೌಶಲಗಳನ್ನು ಗಟ್ಟಿಗೊಳಿಸಲು, ಹೆಚ್ಚಿಸಲು, ಜೀವನ ಪರ್ಯಂತ ಮುಂದುವರೆಸಿಕೊಂಡು ಹೋಗಲು ಅನುವಾಗುವಂತೆ ಸ್ಥಿರೀಕರಣಗೊಳಿಸಲು ಸಾಕ್ಷರೋತ್ತರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಅನಕ್ಷರತೆಯ ಪುನರಾವರ್ತನೆಯಾದಂತೆ ಸಾಕ್ಷರತಾ ಕೌಶಲಗಳ ಕ್ರೂಢೀಕರಣ (Consolidation), ದಾಕಲಾಗಿ ಮಧ್ಯದಲ್ಲಿ ಕಲಿಕೆ ಬಿಟ್ಟವರು ಹಾಗೂ ಕಲಿಯದವರಿಗೆ ಸಾಕ್ಷರತಾ ಕೌಶಲ ನೀಡುವ ಪರಿಹಾರೋಪಾಯ (Remediation), ಸ್ವಾವಲಂಬಿ ಸಾಕ್ಷರತೆಗೆ ಬೇಕಾದ ಕಲಿಕೆಯ ಮುಂದುವರಿಕೆ (Continuation), ಪಡೆದ ಸಾಕ್ಷರತಾ ಕೌಶಲಗಳನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವಿಕೆ ಅಥವಾ ಅನ್ವಯಿಸುವಿಕೆ (Application), ಕಲಿಯುವವರ ಆರ್ಥಿಕ ಸ್ವಾವಲಂಬನೆಗೆ ಅಗತ್ಯವಾದ ಕೌಶಲಾಭಿವೃದ್ಧಿ (Skill development), ನವಸಾಕ್ಷರರು, ಮಧ್ಯದಲ್ಲೇ ಶಾಲೆ ಬಿಟ್ಟವರು, ಅನೌಪಚಾರಿಕ ಶಿಕ್ಷಣದಲ್ಲಿ ಕಲಿತವರು, ಸಾಕ್ಷರತಾ ಆಂದೋಲನದಲ್ಲಿ ದಾಖಲಾಗಿ ಮಧ್ಯದಲ್ಲಿ ಬಿಟ್ಟವರು ಹಾಗೂ ಕಲಿಯದೇ ಉಳಿದವರು ಇವರು ಫಲಾನುಭವಿಗಳು. 12 ತಿಂಗಳ ಅವಧಿಯಲ್ಲಿ ಈ ಕಾರ್ಯಕ್ರಮದಲ್ಲಿ

Digitised by Bharatavani, CIIL

ಸಾಕ್ಷರ ಕೌಶಲ ಸ್ಥಿರೀಕರಣಕ್ಕಾಗಿ ಸಾಕ್ಷರೋತ್ತರ ಪಠ್ಯ ಪುಸ್ತಕ (PL-1)ವನ್ನು ಬಳಸಲಾಯಿತು.

**ಮುಂದುವರಿಕೆಯ ಶಿಕ್ಷಣ ಕಾರ್ಯಕ್ರಮ:** ಅನಕ್ಷರಸ್ಥ ಯುವಜನರಿಗೆ ಮೂಲ ಸಾಕ್ಷರತೆಯನ್ನು ಪಡೆಯಲು ಅವಕಾಶ ಕಲ್ಪಿಸುವುದರ ಜೊತೆಗೆ ಇಡೀ ಸಮುದಾಯದ ಸಮಗ್ರ ಅಭಿವೃದ್ಧಿಯನ್ನು, ಸಾಕ್ಷರತೆಯನ್ನು ಸಾಧಿಸುವ ಆಶಯದಿಂದ 'ಮುಂದುವರಿಕೆ ಕಾರ್ಯಕ್ರಮ' ಜಾರಿಯಾಯಿತು. ಈ ಕಾರ್ಯಕ್ರಮದ ಉದ್ದೇಶಗಳು ಈ ಕೆಳಗಿನಂತೆ ಇರುತ್ತವೆ:

ಅ) ಅನಕ್ಷರಸ್ಥರು ಮೂಲ ಸಾಕ್ಷರತೆಯನ್ನು ಪಡೆಯಲು ಅವಕಾಶ ಕಲ್ಪಿಸುವುದು

ಆ) ನವಸಾಕ್ಷರಸ್ಥರು ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟವರು ಸಾಕ್ಷರ ಕೌಶಲವನ್ನು ಬಳಸಿ, ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸುವುದು

ಇ) ಮಕ್ಕಳನ್ನು ಶಾಲೆಗೆ ಕಳುಹಿಸಲು ಪಾಲಕರನ್ನು ಪ್ರೇರೇಪಿಸುವುದು

ಈ) ಓದುವ ಹವ್ಯಾಸವನ್ನು ಉತ್ತೇಜಿಸುವುದು

ಉ) ಸಮುದಾಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಿ ಸಂಘಟನಾ ಕೌಶಲಗಳನ್ನು ಒದಗಿಸುವುದು

ಊ) ವೃತ್ತಿಕೌಶಲವನ್ನು ಅಭಿವೃದ್ಧಿಪಡಿಸಲು ತರಬೇತಿ ಕಾರ್ಯಕ್ರಮಗಳನ್ನು ಸಂಯೋಜಿಸುವುದು

ಋ) ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳನ್ನು ಫಲಾನುಭವಿಗಳಿಗೆ ಪರಿಚಯಿಸುವುದು

ಎ) ಶ್ರಮದಾನ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಒತ್ತಾಸೆ ನೀಡುವುದು

**ಚಟುವಟಿಕೆಗಳು – ಮುಂದುವರಿದ ಶಿಕ್ಷಣ ಕೇಂದ್ರ:** ವಿವಿದ ಸಾಕ್ಷರತಾ ಕಾರ್ಯಕ್ರಮಗಳ ಮುಂದುವರಿದ ಸಾಂಸ್ಥಿಕ ರೂಪವೇ ಮುಂದುವರಿಕೆ ಶಿಕ್ಷಣ ಕೇಂದ್ರ. ಪ್ರತಿ 2,000 ದಿಂದ 2,500 ಜನಸಂಖ್ಯೆಗೆ ಒಂದು ಮುಂದುವರಿಕೆ ಶಿಕ್ಷಣ ಕೇಂದ್ರ ಇರುತ್ತದೆ. ಈ ಕೇಂದ್ರದ ನಿರ್ವಹಣಾ ಜವಾಬ್ದಾರಿ ಅಲ್ಲಿನ ಪ್ರೇರಕ ಮತ್ತು ಸಹ ಪ್ರೇರಕರದ್ದಾಗಿರುತ್ತದೆ. ಇವರು ಗೌರವಧನದ ಮೇಲೆ ಕಾರ್ಯನಿರ್ವಹಿಸುತ್ತಾರೆ. ಪ್ರತಿ ವರ್ಷ ಪ್ರತಿ ಮುಂದುವರಿಕೆ ಶಿಕ್ಷಣ ಕೇಂದ್ರಕ್ಕೆ ರೂ.25,000/– ಆವರ್ತಕ ಅನುದಾನ ನೀಡಲಾಗುತ್ತದೆ. ಪ್ರತಿ ಮುಂದುವರಿಕೆ ಶಿಕ್ಷಣ ಕೇಂದ್ರವು ಕಲಿಕಾ ಕೇಂದ್ರವಾಗಿ, ಗ್ರಂಥಾಲಯವಾಗಿ, ವಾಚನಾಲಯವಾಗಿ, ಚರ್ಚಾ ಮಂಡಳಿಯಾಗಿ, ಮಾಹಿತಿ ಕೇಂದ್ರವಾಗಿ, ತರಬೇತಿ ಕೇಂದ್ರವಾಗಿ, ಅಭಿವೃದ್ಧಿ ಕೇಂದ್ರವಾಗಿ, ಸಾಂಸ್ಕೃತಿಕ ಮತ್ತು ಮನೋರಂಜನಾ ಕೇಂದ್ರವಾಗಿ, ಕ್ರೀಡಾ ಮತ್ತು ಸಾಹಸ ಚಟುವಟಿಕೆಗಳ ಕೇಂದ್ರವಾಗಿ ಹಾಗೂ ಸಮುದಾಯ ಸೇವಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ.

**ಕಲಿಕಾ ಕೇಂದ್ರ:** ಅನಕ್ಷರಸ್ಥರಿಗೆ ಮತ್ತು ಅರೆಸಾಕ್ಷರಸ್ಥರಿಗೆ ಮೂಲ ಸಾಕ್ಷರತೆ ಪಡೆಯುವ ಅವಕಾಶ ಕಲ್ಪಿಸುವ ಸ್ಥಳಕ್ಕೆ ಕಲಿಕಾ ಕೇಂದ್ರ ಎನ್ನಲಾಗಿದೆ. ಇದು ಮುಂದುವರಿದ ಶಿಕ್ಷಣ ಕೇಂದ್ರದ ಚಟುವಟಿಕೆಗಳಲ್ಲಿ ಒಂದಾಗಿದೆ. ನವಸಾಕ್ಷರರಿಗೆ ಕಲಿಕೆ ಮುಂದುವರಿಕೆಗೆ ಸಹಕರಿಸುವುದು ಸಹ ಕಲಿಕಾ ಕೇಂದ್ರದ ಕಾರ್ಯವಾಗಿರುತ್ತದೆ.

**ಸ್ವ–ಸಹಾಯ ಸಂಘಗಳು:** ಮುಂದುವರಿಕೆ ಶಿಕ್ಷಣ ಕೇಂದ್ರದಲ್ಲಿ ಕಲಿಕಾರ್ಥಿಗಳನ್ನು ಮತ್ತು ನವಸಾಕ್ಷರರನ್ನು ಸಂಘಟಿಸಿ ಸ್ವ–ಸಹಾಯ ಸಂಘಗಳನ್ನು ರಚಿಸುವುದು ಒಂದು ಪ್ರಮುಖ ಚಟುವಟಿಕೆ. ಪ್ರೇರಕರೇ ರಚಿಸಿದ ಇಂತಹ ಹಲವಾರು ಸ್ವ–ಸಹಾಯ ಸಂಘಗಳಿಗೆ ಸುತ್ತು ನಿಧಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಸದಸ್ಯರಿಗೆ ವೃತ್ತಿ ತರಬೇತಿ ನೀಡಿ ಸಾಮೂಹಿಕವಾಗಿ ಅಥವಾ ವೈಯಕ್ತಿಕವಾಗಿ ಉತ್ಪಾದನೆ ಘಟಕ ಪ್ರಾರಂಭಿಸಲು ಪ್ರೋತ್ಸಾಹ ನೀಡಲಾಗುತ್ತದೆ.

**ಶಿಕ್ಷಣ ಸಂಸ್ಥೆಗಳ/ಖಾಸಗಿ ಸಂಸ್ಥೆಗಳ ಪಾಲ್ಗೊಳ್ಳುವಿಕೆ–ಸಾರ್ವಜನಿಕ ಸಹಭಾಗಿತ್ವ:** ಈ ಮಿಷನ್ ಕಾರ್ಯಕ್ರಮ ಮತ್ತು ಚಟುವಟಿಕೆಗಳೊಂದಿಗೆ ಶಿಕ್ಷಣ, ಪರಿಹಾರ, ಕೃಷಿ, ಪಂಚಾಯತ್ ರಾಜ್ ಮತ್ತು ಸಾಮಾಜಿಕ ಕಲ್ಯಾಣ ವಲಯಗಳ ಇತರೆ ಅಭಿವೃದ್ಧಿ ಕಾರ್ಯತಂತ್ರ ಒಗ್ಗೂಡಿಸುವಿಕೆ ಸಕ್ರಿಯವಾಗಿ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಓಐಂಂ ಮತ್ತು ಖಐಂಂ ಪ್ರಯತ್ನಿಸುತ್ತಿವೆ. ಈ ಮಿಷನ್ ಸಾಕ್ಷರತೆ ಹಾಗೂ ಉನ್ನತ ಶಿಕ್ಷಣ ಮತ್ತು ಶಾಲಾ ಶಿಕ್ಷಣ ವಿಭಾಗಗಳಿಗೆ ಒಟ್ಟಾರೆ ಶಕ್ತಿಯನ್ನು ಹಳ್ಳಿಯ ಮಟ್ಟದವರೆಗೂ ತಲುಪಿಸಲು ಪ್ರಯತ್ನಿಸುತ್ತದೆ. ತಮ್ಮ ವಿದಾರ್ಥಿಗಳ ಅನಕ್ಷರಸ್ಥ ಪೋಷಕರು ಕಲಿಕಾರ್ಥಿಗಳಾಗಿ ಶಾಲೆಗೆ ಸೇರಿಕೊಳ್ಳಲು ಪ್ರೇರೇಪಿಸುವಂತೆ ಪ್ರೋತ್ಸಾಹಿಸಬೇಕು.

**ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ:** ಅನಕ್ಷರತೆ ನಿವಾರಣೆಗೆ ವಿದ್ಯಾರ್ಥಿ ಯುವಜನರಲ್ಲಿರುವ ಸೇವಾ ಮನೋಭಾವವನ್ನು ಬಳಸಿಕೊಳ್ಳುವ ಪ್ರಯತ್ನ ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳಲ್ಲಿ 2005–06 ನೇ ಸಾಲಿನಿಂದ ನಡೆಯುತ್ತಿದೆ. ಈ ಮಹತ್ವದ ಸಾಕ್ಷರತಾ ಕಾರ್ಯಕ್ರಮವೇ "ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ." ವಿದ್ಯಾರ್ಥಿಗಳಿಂದ ಈ ಸಾಕ್ಷರತಾ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ವಿದ್ಯಾರ್ಥಿ ಸ್ವಯಂಸೇವಕರ ಮೂಲಕ 15–25 ವಯೋಮಿತಿಯ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡುವುದು. ವಿದ್ಯಾರ್ಥಿಗಳು ಕಲಿಯುತ್ತಾ ಕಲಿಸುವ ಕೌಶಲವನ್ನು ಪಡೆಯುವಂತೆ ಮಾಡುವುದು. ವಿದ್ಯಾರ್ಥಿಗಳ ಮನೆ ಮತ್ತು ನೆರೆಹೊರೆಯವರಲ್ಲಿ ಕಲಿಕೆ ವಾತಾವರಣ ನಿರ್ಮಾಣ ಮಾಡುವುದು – ಈ ಸಾಕ್ಷರತಾ ಕಾರ್ಯಕ್ರಮದ ಉದ್ದೇಶ. ಎಂಟು, ಒಂಬತ್ತು ಮತ್ತು ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳನ್ನು ಇದರಲ್ಲಿ ತೊಡಗಿಸಿಕೊಳ್ಳಲಾಗಿತ್ತು.

**ರಾಜ್ಯ ಸಂಪನ್ಮೂಲ ಕೇಂದ್ರ:** ಪ್ರತಿ ರಾಜ್ಯದಲ್ಲಿ ನಡೆಯುವ ಸಾಕ್ಷರತಾ ಕಾರ್ಯಕ್ರಮಗಳಿಗೆ ಅಗತ್ಯವಾದ ಶೈಕ್ಷಣಿಕ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಸ್ಥಾಪಿಸಿರುವ ಸಂಸ್ಥೆ ರಾಜ್ಯ ಸಂಪನ್ಮೂಲ ಕೇಂದ್ರ. ದೇಶದಲ್ಲಿ ಒಟ್ಟು 26 ರಾಜ್ಯ ಸಂಪನ್ಮೂಲ ಕೇಂದ್ರಗಳಿದ್ದು, ಕರ್ನಾಟಕದಲ್ಲಿ ಇದು 1979 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದ

Digitised by Bharatavani, CIIL

ಸಾಕ್ಷರತೆ ಕರ್ಯಕ್ರಮಕ್ಕೆ ಅಗತ್ಯವಾದ ಸಾಹಿತ್ಯ ಸಾಮಗ್ರಿಗ್ರಳ ರಚನೆ, ಸಾಕ್ಷರತಾ ಕಾರ್ಯಕರ್ತರ ತರಬೇತಿ, ಸಾಕ್ಷರತಾ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ದಾಖಲೀಕರಣ ಕೈಗೊಳ್ಳುವುದು ಇದರ ಪ್ರಮುಖ ಚಟುವಟಿಕೆಗಳಾಗಿವೆ. 1997 ರಲ್ಲಿ ಸಾಕ್ಷರತಾ ಆಂದೋಲನ ತರಬೇತಿ ಅಧ್ಯಯನ ಎಂಬ ಸಂಶೋಧನೆಗೆ ರಾಷ್ಟ್ರೀಯ ಸಾಕ್ಷರತಾ ಮಿಷನ್ನಿನ ಪುರಸ್ಕಾರ ದೊರಕಿದೆ. 2001 ರಲ್ಲಿ ಸಾಕ್ಷರತಾ ಕ್ಷೇತ್ರದಲ್ಲಿ ಇದರ ಗುರುತರ ಸೇವೆಗಾಗಿ 'NLM-UNESCO' ಪ್ರಶಸ್ತಿ ಬಂದಿದೆ.

**ಮೌಲ್ಯಮಾಪನ:** ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಮೌಲ್ಯಮಾಪನ ಒಂದು ಪ್ರಧಾನ ಪ್ರಕಿಯೆ. ಇಲ್ಲಿನ ಕಲಿಕಾ ಪ್ರಗತಿಯನ್ನು ಗುರುತಿಸಲು ಮತ್ತು ಕಾರ್ಯಕ್ರಮಗಳನ್ನು ಕಂಡುಕೊಳ್ಳಲು ಮೌಲ್ಯಮಾಪನ ಕೈಗೊಳ್ಳಲಾಗುತ್ತಿದೆ. ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಪ್ರಸ್ತುತ ನಾಲ್ಕು ಮೌಲ್ಯಮಾಪನ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿದೆ.

1) **ಸ್ವ-ಮೌಲ್ಯಮಾಪನ:** ಇದನು ಕಲಿಯುವವರು ತಮ್ಮ ಕಲಿಕಾ ಪ್ರಗತಿಯನ್ನು ಅಂದಾಜು ಮಾಡಲು, ಕಲಿಸುವವರು ತಾವು ಎಷ್ಟು ಕಲಿಸಿದ್ದೇವೆ ಎಂಬುದನ್ನು ಅರಿಯಲು ಅಳವಡಿಸಲಾಗಿತ್ತು. ಸ್ವ-ಮೌಲ್ಯ ಮಾಪನಕ್ಕಾಗಿ ಸಾಕ್ಷರತಾ ಪಠ್ಯಪುಸ್ತಕಗಳಲ್ಲಿ ಕಿರು ಪರೀಕ್ಷೆಗಳನ್ನು ಅಳವಡಿಸಲಾಗುತ್ತಿತ್ತು.

2) **ಆಂತರಿಕ ಮೌಲ್ಯಮಾಪನ:** ಸಾಕ್ಷರತಾ ಕಾರ್ಯಕ್ರಮ ಅನುಷ್ಠಾನಗೊಳಿಸಿರುವವರೇ ತಮ್ಮ ಪ್ರಗತಿ ಕಂಡುಕೊಳ್ಳುವ ಮೌಲ್ಯಮಾಪನ ವಿಧಾನ.

3) **ಬಾಹ್ಯ ಮೌಲ್ಯಮಾಪನ:** ಹೊರಗಿನ ಸಾಮಾಜಿಕ ವಿಜ್ಞಾನ ಸಂಶೋಧನೆ ಸಂಸ್ಥೆಯೊಂದು ಸಾಕ್ಷರತಾ ಸಾಧನೆ ಮತ್ತು ಪರಿಣಾಮ ಗುರುತಿಸಲು ಕೈಗೊಳ್ಳುವ ಮೌಲ್ಯಮಾಪನ.

4) **ಸಹಗಾಮಿ ಮೌಲ್ಯಮಾಪನ:** ಕಾರ್ಯಕ್ರಮದ ಅವಧಿಯಲ್ಲೆ ಪ್ರಗತಿಯನ್ನು ಪರಿಣಾಮಕಾರಿಗೊಳಿಸಲು, ಸಾಮರ್ಥ್ಯ ಮತ್ತು ಕೊರತೆಗಳನ್ನು ಗುರುತಿಸಿ ಪರಿಹಾರ ಸೂಚಿಸಲು ಬಾಹ್ಯ ಸಂಸ್ಥೆಯೊಂದು ಕೈಗೊಳ್ಳುವ ಮೌಲ್ಯಮಾಪನ.

**ಸಾಕ್ಷರತಾ ಪಠ್ಯಪುಸ್ತಕಗಳು:** ವಯಸ್ಕರಿಗಾಗಿ ಅವರ ಮನೋಭಾವಕ್ಕೆ ಅನುಗುಣವಾಗಿ ಕಡಿಮೆ ಅವಧಿಯಲ್ಲಿ ಹೆಚ್ಚು ವಿಷಯ ಕಲಿಯಲು ಸಹಾಯಕವಾಗಲು ರೂಪಿಸಿರುವ ಪಠ್ಯಪುಸ್ತಕಗಳೇ ಸಾಕ್ಷರತಾ ಪಠ್ಯಪುಸ್ತಕಗಳು. ಸಾಕ್ಷರತಾ ಅಂದೋಲನದ ಅವಧಿಯಲ್ಲಿ ಪ್ರತಿ ಜಿಲ್ಲೆಗೂ ಸ್ಥಳೀಯ ಭಾಷೆ, ಸಂಸ್ಕೃತಿಗೆ ಅನುಗುಣವಾದ ಪ್ರತ್ಯೇಕವಾದ ತಲಾ ಮೂರು ಪುಸ್ತಕಗಳನ್ನು ಸಿದ್ಧಪಡಿಸಿ ಬಳಸಲಾಯಿತು. ಆರು ತಿಂಗಳಲ್ಲಿ ಇನ್ನೂರು ಗಂಟೆಗಳ ಅವಧಿ ಸಾಕ್ಷರತಾ ಕೌಶಲ ನೀಡುವುದು ಈ ಪಠ್ಯಪುಸ್ತಕದ ಉದ್ದೇಶವಾಗಿತ್ತು.

**ಜನಶಿಕ್ಷಣ ನಿಲಯ:** ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪನೆಯಾದ ಮೇಲೆ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಜಾರಿಯಾದ ಕಡೆಗಳಲ್ಲಿ ಸಾಕ್ಷರರ ನಿರಂತರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಅಸ್ತಿತ್ವಕ್ಕೆ ಬಂದ ಸಾಂಸ್ಥಿಕ ವ್ಯವಸ್ಥೆಯೇ 'ಜನಶಿಕ್ಷಣ ನಿಲಯಗಳು'. ಪ್ರತಿ 5,000 ಜನಸಂಖ್ಯೆಗೆ ಒಂದರಂತೆ ಜನಶಿಕ್ಷಣ ನಿಲಯಗಳು ಅಸ್ತಿತ್ವಕ್ಕೆ ಬಂದವು. ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ ಜಾರಿಯಲ್ಲಿರುವ ಕಡೆ ಕೇಂದ್ರ ಸರ್ಕಾರದ ಧನ ಸಹಾಯದಲ್ಲಿ, ರಾಜ್ಯ ಸರ್ಕಾರದ ಧನಸಹಾಯದ ವಯಸ್ಕರ ಶಿಕ್ಷಣ ಯೋಜನೆಗಳು, ಯೋಜನೇತರ ಯೋಜನೆ, ಅಕ್ಷರ ದೀಪ ಕಾರ್ಯಕ್ರಮ ಅನುಷ್ಠಾನವಿರುವ ಕಡೆ ರಾಜ್ಯ ಸರ್ಕಾರದ ಧನ ಸಹಾಯದಲ್ಲಿ ಜನಶಿಕ್ಷಣ ನಿಲಯಗಳು ಅಸ್ತಿತ್ವಕ್ಕೆ ಬಂದವು. ವಯಸ್ಕರ ಶಿಕ್ಷಣ ಕಲಿಕಾ ಕೇಂದ್ರಗಳಲ್ಲಿ ಗಳಿಸಿದ ಸಾಕ್ಷರತಾ ಕೌಶಲಗಳನ್ನು ಉಳಿಸುವುದು, ಜೀವನ ಪರ್ಯಂತ ಮುಂದುವರೆಸುವುದು ಹಾಗೂ ಅಭಿವೃದ್ಧಿ ಪ್ರಕ್ರಯೆಯಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವುದು, ರಾಷ್ಟ್ರೀಯ ಮೌಲ್ಯಗಳ ಮನವರಿಕೆ, ಜೀವನ ಗುಣಮಟ್ಟ ಸುಧಾರಣೆ ಮತ್ತು ಮನೋರಂಜನೆ ಚಟುವಟಿಕೆ ನಡೆಸುವುದು ಜನಶಿಕ್ಷಣ ನಿಲಯಗಳ ಉದ್ದೇಶವಾಗಿತ್ತು. ಇದಕ್ಕಾಗಿ ಗ್ರಂಥಾಲಯ, ವಾಚನಾಲಯ, ಚರ್ಚಾಮಂಡಳಿ, ಅಲ್ಪಾವಧಿ ತರಬೇತಿ, ಕ್ರೀಡೆ, ಸಾಹಸ ಚಟುವಟಿಕೆ, ಸಾಂಸ್ಕೃತಿಕ ಹಾಗೂ ಮನೋರಂಜನಾ ಚಟುವಟಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು.

**ಜನಶಿಕ್ಷಣ ಸಂಸ್ಥಾನ:** ಅನೌಪಚಾರಿಕವಾಗಿ ವೃತ್ತಿ ಕೌಶಲ ತರಬೇತಿ ನೀಡುವ ಜಿಲ್ಲಾ ಮಟ್ಟದ ಸಂಸ್ಥೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಜನಶಿಕ್ಷಣ ಸಂಸ್ಥಾನ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದೆ. ಆರಂಭದಲ್ಲಿ ಜನಶಿಕ್ಷಣ ಸಂಸ್ಥಾನಗಳನ್ನು ಶ್ರಮಿಕ ವಿದ್ಯಾಪೀಠ ಎಂದು ಕರೆಯಲಾಗುತ್ತಿತ್ತು. ಮುಂದುವರಿಕೆ ಶಿಕ್ಷಣ ಜಾರಿಗೆ ಶೈಕ್ಷಣಿಕ ಮತ್ತು ತಾಂತ್ರಿಕ ಸಂಪನ್ಮೂಲ ಬೆಂಬಲವನ್ನು ನೀಡುವುದು. ನವಸಾಕ್ಷರರು ಮತ್ತು ಕಲಿಕಾರ್ಥಿಗಳ ವೃತ್ತಿ ಕೌಶಲ ಹೆಚ್ಚಿಸುವುದು ಇದರ ಜವಾಬ್ದಾರಿಯಾಗಿದೆ. 225ಕ್ಕೂ ಹೆಚ್ಚಿನ ವೃತ್ತಿ ಕೌಶಲ ಅಭಿವೃದ್ಧಿ ಕೋರ್ಸುಗಳು ಇಲ್ಲಿ ಅನುಷ್ಠಾನಗೊಳ್ಳುತ್ತಿವೆ.

**ಪಠ್ಯಪುಸ್ತಕ:** ರಾಷ್ಟ್ರೀಯ ಸಾಕ್ಷರತಾ ಮಿಷನ್ ಮಾನದಂಡದಂತೆ ನವಸಾಕ್ಷರರೆನಿಸಿಕೊಳ್ಳಬೇಕಾದರೆ ಮುಂದೆ ಕೌಶಲಗಳನ್ನು ಗಳಿಸಿರಬೇಕಾಗುತ್ತದೆ.

**ಓದುವುದು:** ಅ) ಕಲಿಯುವವನು ಅವನ ಆಸಕ್ತಿಗೆ ಸಂಬಂಧಿಸಿದ ವಿಷಯಗಳ ಕುರಿತ ಸರಳಗದ್ಯ ಭಾಗವನ್ನು ನಿಮಿಷಕ್ಕೆ 30 ಪದಗಳ ವೇಗದಲ್ಲಿ ಓದುವುದು. (ಆ) ನಿಮಿಷಕ್ಕೆ 35 ಪದಗಳ ವೇಗದಲ್ಲಿ ಸರಳ ಭಾಷೆಯ ಸಣ್ಣ ಗದ್ಯಭಾಗಗಳನ್ನು ಮೌನವಾಗಿ ಓದುವುದು. (ಇ) ರಸ್ತೆಯ ಸೂಚನಾ ಫಲಕಗಳನ್ನು, ಪೋಸ್ಟರ್‌ಗಳನ್ನು, ಸರಳ ಸೂಚನೆಗಳನ್ನು, ನವಸಾಕ್ಷರರಿಗಾಗಿ ತರುವ ವಾರ್ತ ಪತ್ರಿಕೆಗಳನ್ನು ಓದುವುದು, ಗ್ರಹಿಸುವುದು. (ಈ) ಅವರು ಕೆಲಸ ಮಾಡುವ ಮತ್ತು ವಾಸಿಸುವ ಪರಿಸರವನ್ನು ಕುರಿತಂತೆ ಇರುವ ಲಿಖಿತ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ.

**ಬರೆಯುವುದು:** ಅ) ನಿಮಿಷಕ್ಕೆ 7 ಪದಗಳ ವೇಗದಲ್ಲಿ

Digitised by Bharatavani, CIIL

ಅರ್ಥಮಾಡಿಕೊಂಡು ನೋಡಿ ಬರೆಯುವುದು. (ಆ) ನಿಮಿಷಕ್ಕೆ 5 ಪದಗಳ ವೇಗದಲ್ಲಿ ಅರ್ಥಮಾಡಿಕೊಂಡು ನೋಡಿ ಬರೆಯುವುದು. (ಇ) ಪದ ಮತ್ತು ವಾಕ್ಯಗಳನ್ನು ಕ್ರಮಬದ್ಧವಾಗಿ ಬರೆಯುವುದು (ಪದ ಮತ್ತು ಸಾಲುಗಳ ನಡುವಿನ ಅಂತರವನ್ನು ತಿಳಿಯುವುದು). (ಈ) ಕಲಿಕಾರ್ಥಿಯು ತನ್ನ ದಿನ ಬಳಕೆಗೆ ಸಂಬಂಧಿಸಿದ ಸಣ್ಣ ಪತ್ರಗಳನ್ನು ಮತ್ತು ಅರ್ಜಿ ನಮೂನೆಗಳನ್ನು ಸ್ವತಂತ್ರವಾಗಿ ಬರೆಯುವುದು.

**ಸರಳ ಲೆಕ್ಕ ಮಾಡುವುದು:** ಅ) 1 ರಿಂದ 100 ರವರೆಗೆ ಅಂಕಿಗಳನ್ನು ಓದುವುದು ಮತ್ತು ಬರೆಯುವುದು. (ಆ) ಭಿನ್ನರಾಶಿಗಳಿಲ್ಲದ ಮೂರು ಅಂಕಿಗಳ ಕೂಡುವ, ಕಳೆಯುವ ಲೆಕ್ಕಗಳು, ಎರಡು ಅಂಕಿಗಳ ಗುಣಿಸುವ ಲೆಕ್ಕಗಳು, ಭಾಗಿಸುವ ಲೆಕ್ಕಗಳನ್ನು ಮತ್ತು ಸರಳ ಲೆಕ್ಕಾಚಾರವನ್ನು ಮಾಡುವುದು. (ಇ) ತೂಕ, ಅಳತೆ ಮತ್ತು ದೂರ, ವಿಸ್ತೀರ್ಣ, ವೇಳೆಯ ಲೆಕ್ಕಾಚಾರದ ಜ್ಞಾನ. (ಈ) ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಬರುವ ಸರಳ ಅನುಪಾತ ಮತ್ತು ಬಡ್ಡಿಯ ಲೆಕ್ಕಗಳ ಬಗ್ಗೆ ಒಂದು ಸ್ಥೂಲ ಅರಿವು.

ಮೇಲಿನ ಅಂಶಗಳನ್ನು ಗಮನಿಸಲಾಗಿ, ನಮ್ಮ ದೇಶದಲ್ಲಿ ಸಾಕ್ಷರತಾ ಆಂದೋಲನವು 1991 ರಿಂದ ಇಂದಿನ ವರೆಗೆ ಅಕ್ಷರ ಕ್ರಾಂತಿಯನ್ನೆ ಮಾಡಿತು ಎನ್ನಬಹುದು. ಶಿಕ್ಷಣ ಬಹುಮುಖ ಪ್ರಕ್ರಿಯೆ ದೇಶದ ಪ್ರಗತಿ ಆಯಾ ದೇಶದ ಪ್ರಜೆಗಳ ಸಾಕ್ಷರತೆಯ ಮೇಲೆ ಅವಲಂಬಿತವಾಗಿದೆ. ಇಂತಹ ಮಹಾನ್ ಆಂದೋಲನಕ್ಕೆ ರಾಷ್ಟ್ರದ ಉದ್ದಗಲಕ್ಕೂ ನಿಜಕ್ಕೂ ಶ್ಲಾಘನೀಯ ಪ್ರತಿಕ್ರಿಯೆ ಲಭಿಸಿದೆ ಎನ್ನುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

–ಡಾ. ಸವಿತಾ ಬಡಿಗೇರ

## ಭಾರತೀಯ ತಾಂತ್ರಿಕ ಸಂಸ್ಥೆಗಳು (ಐಐಟಿ)

**ಪ್ರಸ್ತಾವನೆ :** ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯಲು, ವೈಜ್ಞಾನಿಕ, ಇಂಜಿನಿಯರಿಂಗ್ ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯ ನಡೆಸುವ ಕೇಂದ್ರವಾಗಿ ಭಾರತೀಯ ತಾಂತ್ರಿಕ ಸಂಸ್ಥೆಗಳನ್ನು(ಐಐಟಿ) ಭಾರತೀಯ ತಾಂತ್ರಿಕ ಸಂಸ್ಥೆಗಳ ಕಾಯ್ದೆ 1961ರ ಅಡಿ ಸ್ಥಾಪಿಸಲಾಗಿದೆ. ನಮ್ಮ ದೇಶದ ವಿವಿಧ ವಲಯ\ಪ್ರದೇಶಗಳ ಅವಶ್ಯಕತೆಗೆ ಅನುಗುಣವಾಗಿ ಖರಗ್‌ಪುರ (1951), ಬಾಂಬೆ (1958), ಮದ್ರಾಸ್ (1959, ಕಾನ್‌ಪುರ (1960), ದಿಲ್ಲಿ (1963), ಗುವಾಹಟಿ (1994) ಮತ್ತು ರೂರ್ಕಿ (2001) ಈ ಏಳು ಕಡೆ ಐಐಟಿಗಳನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದು ಐಐಟಿಯೂ ಪರಿಗಣಿತ ವಿಶ್ವವಿದ್ಯಾಲಯ (ಡೀಮ್ಡ್ ಯುನಿವರ್ಸಿಟಿ) ಎಂಬ ಮಾನ್ಯತೆ ಪಡೆದಿದ್ದು, ತಮ್ಮದೇ ಆದ ಪರೀಕ್ಷೆ ನಡೆಸಲು ಹಾಗೂ ತಮ್ಮದೇ ಆದ ಪದವಿ ಪ್ರದಾನ ಮಾಡುವ ನಿಟ್ಟಿನಲ್ಲಿ ತಮ್ಮದೇ ಶೈಕ್ಷಣಿಕ ನೀತಿಯನ್ನು ಹೊಂದುವ ಅಧಿಕಾರ ಪಡೆದಿದೆ.

ಈ ಏಳೂ ಐಐಟಿಗಳ ಕಾರ್ಯನಿರ್ವಹಣೆಯನ್ನು ಸಂಯೋಜಿಸುವ ಕಾರ್ಯವನ್ನು ಕೇಂದ್ರದ ಐಐಟಿ ಸಮಿತಿಯು ನಡೆಸುತ್ತಿದ್ದು ಮಾನವ ಸಂಪನ್ಮೂಲಾಭಿವೃದ್ಧಿ ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ. ಪ್ರತಿ ಐಐಟಿ ಸಂಸ್ಥೆಯೂ ಅದರದ್ದೇ ಆದ ಆಡಳಿತ ಮಂಡಳಿಯನ್ನು ಹೊಂದಿದ್ದು ಸಂಸ್ಥೆಯ ಸಾರ್ವತ್ರಿಕ ಮೇಲ್ವಿಚಾರಣೆ, ನಿರ್ದೇಶನ ನೀಡುವಿಕೆ ಮತ್ತು ನಿಯಂತ್ರಿಸುವಿಕೆ ಹಾಗೂ ಸಂಸ್ಥೆಯ ಆಡಳಿತ ನಿರ್ವಹಣೆ ಮತ್ತು ಕಾರ್ಯನಿರ್ವಹಣೆಯ ನಿಟ್ಟಿನಲ್ಲಿ ಅಗತ್ಯವಿರುವ ನಿರ್ಧಾರ ಕೈಗೊಳ್ಳುವ ಅಧಿಕಾರ ಈ ಆಡಳಿತ ಮಂಡಳಿಗಿದೆ. ಈ ಆಡಳಿತ ಮಂಡಳಿಗೆ ಸಹಾಯಕವಾಗಿ ಸೆನೆಟ್, ಆರ್ಥಿಕ ಸಮಿತಿ ಹಾಗೂ ನಿರ್ಮಾಣ ಮತ್ತು ಕಾರ್ಯ ಸಮಿತಿ ಇರುತ್ತದೆ. ಭಾರತದ ರಾಷ್ಟ್ರಪತಿಗಳು ಪ್ರತಿ ಸಂಸ್ಥೆಯ ಸಂದರ್ಶಕರಾಗಿರುತ್ತಾರೆ. ಸಂದರ್ಶಕರ ಅನುಮೋದನೆ ಪಡೆದು, ಐಐಟಿ ಸಮಿತಿಯು ಪ್ರತಿ ಸಂಸ್ಥೆಗೂ ಒಬ್ಬೊಬ್ಬ ನಿರ್ದೇಶಕನನ್ನು ನೇಮಕ ಮಾಡುತ್ತದೆ. ನಿರ್ದೇಶಕರು ಸಂಸ್ಥೆಯ ಮುಖ್ಯಸ್ಥರಾಗಿದ್ದು ಶೈಕ್ಷಣಿಕ ಮತ್ತು ಕಾರ್ಯನಿರ್ವಾಹಕ ಅಧಿಕಾರವನ್ನು ಹೊಂದಿರುತ್ತಾರೆ.

**ಐಐಟಿಗಳ ಆಧ್ಯಾದೇಶ:**

ಐಐಟಿಗಳ ಆಧ್ಯಾದೇಶವು ಸಾಕಷ್ಟು ವಿಸ್ತಾರವಾಗಿದ್ದು, ಆನ್ವಯಿಕ ವಿಜ್ಞಾನ ಮತ್ತು ಇಂಜಿನಿಯರಿಂಗ್‌ನಲ್ಲಿ ವಿಶ್ವದರ್ಜೆಯ ಶಿಕ್ಷಣವನ್ನು ನೀಡುವುದು, ಅರ್ಹ ಸಂಶೋಧನಾ ಕಾರ್ಯಕರ್ತರಿಗೆ ಮತ್ತು ಶಿಕ್ಷಕರಿಗೆ ಇರುವ ಬೇಡಿಕೆಯನ್ನು ಗಮನಿಸಿ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನಾ ಕಾರ್ಯ ನಿರ್ವಹಿಸಲು ಇಲ್ಲಿ ಸೂಕ್ತ ವ್ಯವಸ್ಥೆ ಮಾಡುವುದು, ಪಠ್ಯಕ್ರಮವನ್ನು ನಿರೂಪಿಸುವ ನಿಟ್ಟಿನಲ್ಲಿ ನಾಯಕತ್ವ, ಲ್ಯಾಬೋರೇಟರಿ ಅಭಿವೃದ್ಧಿ ಮತ್ತು ಪರೀಕ್ಷಾ ವ್ಯವಸ್ಥೆ, ತಮ್ಮ ಸಂಸ್ಥೆಯ ಹಾಗೂ ಇತರ ಇಂಜಿನಿಯರಿಂಗ್ ಸಂಸ್ಥೆಗಳ ಬೋಧನಾಂಗದ ಅಭಿವೃದ್ಧಿಯ ನಿಟ್ಟಿನಲ್ಲಿ ಕಾರ್ಯಕ್ರಮಗಳು, ಮಾನವ ಸಂಪನ್ಮೂಲದ ವಿನಿಮಯ ಅಥವಾ ಸಮಾಲೋಚನಾ ಪ್ರಾಜೆಕ್ಟ್‌ಗಳ ವಿನಿಮಯದ ಮೂಲಕ ಉದ್ದಿಮೆಗಳೊಂದಿಗೆ ನಿಕಟ ಬಾಂಧವ್ಯ ಬೆಳೆಸಿಕೊಳ್ಳುವುದು, ದೇಶದ ಮತ್ತು ಪರದೇಶದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ ಜೊತೆಗೆ ಸಂಪರ್ಕ ಬೆಳೆಸಿಕೊಳ್ಳುವ ಬಗ್ಗೆ ಯೋಜನೆ ಸಿದ್ಧಪಡಿಸಿಕೊಳ್ಳುವುದು, ಉದ್ಯೋಗದಲ್ಲಿರುವ ಇಂಜಿನಿಯರ್‌ಗಳ ಅನುಕೂಲಕ್ಕಾಗಿ ಕ್ಯಾಂಪಸ್ ಅಥವಾ ದೂರಶಿಕ್ಷಣ ಯೋಜನೆ ರೂಪಿಸುವುದು, ಸಾಂಪ್ರದಾಯಿಕ ಹಾಗೂ ಶ್ರವ್ಯ–ದೃಶ್ಯ ಶಿಕ್ಷಣದ ವ್ಯವಸ್ಥೆ, ವೀಡಿಯೋ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣ, ವೈಜ್ಞಾನಿಕ ಚಿಂತನೆ ಹಾಗೂ ಪ್ರಯತ್ನವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸಾಂಪ್ರದಾಯಿಕ ಸಂವಹನ ಪ್ರಕ್ರಿಯೆಗಳು, ಒಂದು ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಮತ್ತು ಅಸಂಘಟಿತ ವಲಯದಲ್ಲಿ ಹಾಗೂ ಸ್ವಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಮಾನವ ಸಂಪನ್ಮೂಲದ ತೊಡಗಿಸಿಕೊಳ್ಳುವಿಕೆಯ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸುವುದು.

Digitised by Bharatavani, CIIL

**ಕೋರ್ಸ್‌ಗಳು, ಅವುಗಳ ವಿನ್ಯಾಸ ಮತ್ತು ಅವಧಿ:**

ಪ್ರತಿ ಶೈಕ್ಷಣಿಕ ವರ್ಷವು ಎರಡು ಸೆಮಿಸ್ಟರ್ ಹಾಗೂ ಒಂದು ಬೇಸಿಗೆ ಅವಧಿಯನ್ನು ಒಳಗೊಂಡಿರುತ್ತದೆ. ಕ್ರೆಡಿಟ್ ಆಧಾರದಲ್ಲಿ ಸಂಸ್ಥೆಯು ಕಾರ್ಯನಿರ್ವಹಿಸುತ್ತದೆ. ಇದರಲ್ಲಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯವನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲು ಅವಕಾಶವಿರುತ್ತದೆ. ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಗರಿಷ್ಠವಾಗಿ ಒರೆಗೆ ಹಚ್ಚಲು ಇಲ್ಲಿ ಅವಕಾಶವಿರುತ್ತದೆ. ಪದವಿ ಪಡೆಯಲು ಅರ್ಹತೆ ಗಳಿಸಿಕೊಳ್ಳಬೇಕಾದರೆ ಆ ವಿದ್ಯಾರ್ಥಿಯು ಒಂದು ನಿಗದಿತ ಪ್ರಮಾಣದ 'ಕ್ರೆಡಿಟ್ಸ್ ಆಂಡ್ ಕ್ಯುಮುಲೇಟಿವ್ ಗ್ರೇಡ್ಸ್ ಪಾಯಿಂಟ್ಸ್' (ಸಿಜಿಪಿಎ) ಪಡೆಯಲು ಅಗತ್ಯವಾಗಿರುತ್ತದೆ. ಶಿಕ್ಷಣ ಮಾಧ್ಯಮ ಇಂಗ್ಲೀಷ್ ಆಗಿರುತ್ತದೆ.

**ಲಭ್ಯ ಕಾರ್ಯಕ್ರಮಗಳು:**

ತಮ್ಮ ಧ್ಯೇಯಕ್ಕನುಗುಣವಾಗಿ, ಪ್ರತಿಯೊಂದು ಐಐಟಿಯೂ ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ವೈವಿಧ್ಯಮಯವಾದ ಶೈಕ್ಷಣಿಕ ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ನೀಡುತ್ತದೆ. ಭಾರತ ಸರಕಾರವು ನಿಗದಿಪಡಿಸಿದ ರೀತಿಯಲ್ಲಿ ಪರಿಶಿಷ್ಟ ಜಾತಿ /ಪಂಗಡದ ಅಭ್ಯರ್ಥಿಗಳಿಗೆ, ಅಲ್ಪಸಂಖ್ಯಾತ ವರ್ಗದವರಿಗೆ ಹಾಗೂ ಅಂಗವೈಕಲ್ಯ ಹೊಂದಿದ ಅಭ್ಯರ್ಥಿಗಳಿಗೆ ಸೀಟುಗಳನ್ನು ಕಾಯ್ದಿರಿಸಲಾಗುತ್ತದೆ.

**ಬಿ.ಟೆಕ್, ಸಮಗ್ರ ಎಂಟೆಕ್ ಹಾಗೂ ಅವಳಿ ಪದವಿ ಕಾರ್ಯಕ್ರಮಗಳು:**

ಪದವಿ ಹಂತದಲ್ಲಿ ಪ್ರತಿ ಐಐಟಿಯು ಬ್ಯಾಚುಲರ್ ಆಫ್ ಟೆಕ್ನಾಲಜಿ ಇನ್ ಕೆಮಿಕಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ಹಾಗೂ ಇನ್ನಿತರ ಕೆಲವು ಕ್ಷೇತ್ರದ ನಾಲ್ಕು ವರ್ಷಾವಧಿಯ ಹಲವಾರು ಪದವಿ ಕಾರ್ಯಕ್ರಮಗಳನ್ನು ಒದಗಿಸುತ್ತದೆ. ಪ್ರತಿ ಐಐಟಿಯು ಎಂಟೆಕ್ ಪದವಿ ಪಡೆಯಲು ಅನುಕೂಲವಾಗುವಂತೆ ಐದು ವರ್ಷಗಳ ಸಮಗ್ರ ಪದವಿ ಕೋರ್ಸ್ ಹಾಗೂ ಐದು ವರ್ಷಗಳ ಬಿಟೆಕ್ ಮತು ಎಂಟೆಕ್ ಪದವಿಯ ಅವಳಿ ಕೋರ್ಸ್‌ಗಳನ್ನು ಒದಗಿಸುತ್ತದೆ. ಯಾವುದೇ ಐಐಟಿಯು ಈ ಪದವಿಗಳಿಗೆ ಪ್ರವೇಶ ಪಡೆಯಲು ಜಾಯಿಂಟ್ ಎಂಟ್ರೆನ್ಸ್ ಎಕ್ಸಾಮಿನೇಷನ್ (ಜೆಇಇ) ಪರೀಕ್ಷೆ ಬರೆಯುವುದು ಕಡ್ಡಾಯವಾಗಿರುತ್ತದೆ. ವಾರಣಾಸಿಯಲ್ಲಿರುವ ಬಿಎಚ್‌ಯು ತಾಂತ್ರಿಕ ಶಿಕ್ಷಣ ಸಂಸ್ಥೆ (ಬಿಎಚ್‌ಯು ಐಐಟಿ), ಧನಬಾದ್‌ನಲ್ಲಿರುವ ಸ್ಕೂಲ್ ಆಫ್ ಮೈನ್ಸ್ ಸಂಸ್ಥೆಗಳೂ ವಿದ್ಯಾರ್ಥಿಗಳನ್ನು ಜೆಇಇ ಪರೀಕ್ಷೆಯ ಮೂಲಕವೇ ಸೇರ್ಪಡೆಗೊಳಿಸಿಕೊಳ್ಳುತ್ತವೆ.

ಸ್ನಾತಕಪೂರ್ವ ಹಂತದ ತರಗತಿಗಳ ಶಿಕ್ಷಣವು ಸೆನೆಟ್‌ನ ಪರವಾಗಿ ಸ್ನಾತಕಪೂರ್ವ ಶಿಕ್ಷಣ ಮಂಡಳಿ (ಬೋರ್ಡ್ ಆಫ್ ಅಂಡರ್‌ಗ್ರಾಜುವೇಟ್ ಸ್ಟಡೀಸ್-ಸಂವಹನ ಸಮಿತಿಯು ಸ್ನಾತಕಪೂರ್ವ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಕುರಿತಂತೆ ಬಿಎಚ್‌ಯುಗೆ ಮರುಮಾಹಿತಿ (ಫೀಡ್‌ಬ್ಯಾಕ್) ಒದಗಿಸುತ್ತದೆ.

**ಸ್ನಾತಕೋತ್ತರ ಕಾರ್ಯಕ್ರಮಗಳು:**

ಸ್ನಾತಕೋತ್ತರ ಹಂತದಲ್ಲಿ ಐಐಟಿಗಳು ಸುಮಾರು 30ರಿಂದ 50ರಷ್ಟು ವಿಷಯಗಳನ್ನು ಪ್ರಸ್ತುತಪಡಿಸುತ್ತವೆ. ಇಂಜಿನಿಯರಿಂಗ್, ವಿಜ್ಞಾನ ಮತ್ತು ನಿರ್ವಹಣ ವಿಷಯಗಳಲ್ಲಿ (ಮ್ಯಾನೇಜ್‌ಮೆಂಟ್) ಎಂಟೆಕ್ ಪದವಿ ನೀಡುವ ಈ ಪ್ರತಿಯೊಂದು ಕೋರ್ಸ್ ಕೂಡಾ 4 ಸೆಮಿಸ್ಟರ್‌ಗಳನ್ನು ಹೊಂದಿದ್ದು 24 ತಿಂಗಳ ಕೋರ್ಸ್ ಇದಾಗಿರುತ್ತದೆ. ಇವುಗಳಲ್ಲಿ ಹಲವಾರು ಅಂತರಶ್ರೇಣಿಯ ಎಂಟೆಕ್ ಕಾರ್ಯಕ್ರಮಗಳೂ ಸೇರಿವೆ. ಅಖಿಲ ಭಾರತ ಮಟ್ಟದಲ್ಲಿ ನಡೆಯುವ ಗ್ರಾಜುವೇಟ್ ಆಪ್ಟಿಟ್ಯೂಡ್ ಟೆಸ್ಟ್ ಇನ್ ಇಂಜಿನಿಯರಿಂಗ್ (ಗೇಟ್) ಪರೀಕ್ಷೆಯಲ್ಲಿ ವಿದ್ಯಾರ್ಥಿಯ ಸಾಧನೆ ಹಾಗೂ ಆಯಾ ಸಂಸ್ಥೆಗಳಲ್ಲಿ ನಡೆಸಲಾಗುವ ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ಈ ವಿಷಯಗಳಿಗೆ ಸೇರ್ಪಡೆ ಪ್ರಕ್ರಿಯೆ ನಡೆಯುತ್ತದೆ. ಎಲ್ಲ ಸಂಸ್ಥೆಗಳೂ ಎಂಎಸ್ (ರಿಸರ್ಚ್-ಸಂಶೋಧನೆ) ಸ್ನಾತಕೋತ್ತರ ಪದವಿಗೆ ಅರ್ಹಗೊಳಿಸುವ ಕೆಲವು ಸ್ನಾತಕೋತ್ತರ ಕೋರ್ಸ್‌ಗಳನ್ನು ಹೊಂದಿವೆ. ಎಂಎಸ್(ರಿಸರ್ಚ್) ಪದವಿಯು ಎಂಟೆಕ್ ಪದವಿಗೆ ಸಮವಾಗಿರುತ್ತದೆ. ಜೊತೆಗೆ, ಮಾಸ್ಟರ್ ಆಫ್ ಡಿಸೈನ್, ಭೌತ್ ವಿಜ್ಞಾನ, ರಸಾಯನ ವಿಜ್ಞಾನ ಹಾಗೂ ಗಣಿತಶಾಸ್ತ್ರದಲ್ಲಿ ಎಂಎಸ್ಸಿ ಪದವಿಯನ್ನು ನೀಡಲಾಗುತ್ತಿದೆ. ಪ್ರವೇಶ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಎಂಎಸ್ಸಿ ಕೋರ್ಸ್ ಪ್ರವೇಶಕ್ಕೆ ಆಯ್ಕೆ ಮಾಡಲಾಗುತ್ತದೆ. ಬಹುತೇಕ ಎಲ್ಲಾ ಐಐಟಿಗಳು ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಎಂಬಿಎ) ಪದವಿಗೆ ಅರ್ಹಗೊಳಿಸುವ ಆಡಳಿತಾತ್ಮಕ ಶಿಕ್ಷಣವನ್ನು ಪೂರ್ಣಾವಧಿಯ 2 ವರ್ಷದ ಕೋರ್ಸ್ ಅಥವಾ ಅರೆಕಾಲಿಕ (ಪಾರ್ಟ್ ಟೈಮ್) 2 ವರ್ಷದ ಕೋರ್ಸ್ ಮೂಲಕ ನೀಡುತ್ತವೆ. ಕಾಮನ್ ಜಾಯಿಂಟ್ ಮ್ಯಾನೇಜ್‌ಮೆಂಟ್ ಎಂಟ್ರೆನ್ಸ್ ಟೆಸ್ಟ್ (ಜಿಎಂಇಟಿ) ಪರೀಕ್ಷೆ, ಗುಂಪು ಚರ್ಚೆ ಹಾಗೂ ಸಂದರ್ಶನದ ಆಧಾರದಲ್ಲಿ ಎಂಬಿಎ ಪದವಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ.

**ಪಿಎಚ್‌ಡಿ ಕಾರ್ಯಕ್ರಮಗಳು:**

ಸಂಸ್ಥೆಗಳ ಎಲ್ಲಾ ವಿಭಾಗಗಳೂ ಡಾಕ್ಟರೇಟ್ ಪದವಿಗಾಗಿ ಸಂಶೋಧನೆ ನಡೆಸಲು ಅಗತ್ಯ ವ್ಯವಸ್ಥೆಗಳನ್ನು ಒದಗಿಸುತ್ತದೆ. ಸೃಜನಾತ್ಮಕ ಮತ್ತು ಫಲದಾಯಕ ಶೋಧನೆಗಳು ಸಂಶೋಧನಾ ಕಾರ್ಯಕ್ರಮದ ಮೂಲ ಪರಿಕಲ್ಪನೆಗಳಾಗಿರುತ್ತವೆ. ಮೂಲ ತರಬೇತಿಯಲ್ಲಿ ಏನಾದರೂ ಕೊರತೆ ಇದ್ದರೆ ಅವನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ವಿಶೇಷ ಪೂರ್ವಭಾವಿ ಕೋರ್ಸ್‌ಗಳನ್ನು ಸಂಸ್ಥೆಗಳ ಪ್ರತಿ ವಿಭಾಗ/ಕೇಂದ್ರಗಳು ಸೂಚಿಸುತ್ತವೆ. ತಾಂತ್ರಿಕ, ವೈಜ್ಞಾನಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ನಿಟ್ಟಿನಲ್ಲಿ ವೈಜ್ಞಾನಿಕ ಮಾಹಿತಿಯ ಆಧಾರದಲ್ಲಿ ಸ್ವತಂತ್ರವಾಗಿ ನಡೆಸಿದ ಸಂಶೋಧನಾ ಕಾರ್ಯಕ್ಕೆ ಹಾಗೂ ವೈಜ್ಞಾನಿಕ ಜ್ಞಾನದ ಅನ್ವಯಕ್ಕೆ ಪಿ.ಎಚ್.ಡಿ. ಪದವಿಯನ್ನು ನೀಡಲಾಗುತ್ತದೆ.

Digitised by Bharatavani, CIIL

**ಕೈಗಾರಿಕಾ ಸಂಶೋಧನೆ ಹಾಗೂ ಅಭಿವೃದ್ಧಿ:**

ಡಾಕ್ಟರೇಟ್ ಪದವಿಗೆ ಅರ್ಹಗೊಳಿಸುವ ತರಬೇತಿ ಮತ್ತು ಶೈಕ್ಷಣಿಕ ಸಂಶೋಧನಾ ಕಾರ್ಯದ ಜೊತೆಗೇ ಹೊರಗಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಏಜೆನ್ಸಿಗಳು ಹಾಗೂ ಬಳಕೆದಾರ ಸಂಸ್ಥೆಗಳು ಪ್ರಾಯೋಜಿಸಿದ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳಿಗೂ ಐಐಟಿಗಳು ಅತ್ಯಧಿಕ ಪ್ರಾಮುಖ್ಯವನ್ನು ನೀಡುತ್ತವೆ. ಕೈಗಾರಿಕೆಗಳೊಂದಿಗಿನ ಸಮಾಲೋಚನೆ ಐಐಟಿಯ ಮತ್ತೊಂದು ಪ್ರಧಾನ ಕಾರ್ಯಕ್ಷೇತ್ರವಾಗಿದೆ. ಹೊರಗಿನವರೊಂದಿಗೆ ಪರಿಣಾಮಕಾರಿಯಾಗಿ ಸಂವಹನ ನಡೆಸಲು ಅನುಕೂಲವಾಗುವ ನಿಟ್ಟಿನಲ್ಲಿ ಸಂಸ್ಥೆಯು ಪ್ರತ್ಯೇಕ ರಿಸರ್ಚ್ ಆಂಡ್ ಡೆವಲಪ್‌ಮೆಂಟ್ (ಸಂಶೋಧನೆ ಮತ್ತು ಅಭಿವೃದ್ಧಿ ಆರ್ ಆಂಡ್ ಡಿ) ಘಟಕಗಳನ್ನು ರೂಪಿಸಿದೆ.

ಆರ್ ಆಂಡ್ ಡಿ ಘಟಕಗಳು ಪ್ರಾಯೋಜಿತ ಸಂಶೋಧನಾ ಕಾರ್ಯ, ಸಮಾಲೋಚನೆ ಹಾಗೂ ಇನ್ನಿತರ ಸಂಬಂಧಪಟ್ಟ ಕಾರ್ಯ ಚಟುವಟಿಕೆಗಳಿಗೆ ತಜ್ಞ ಆಡಳಿತಾತ್ಮಕ ಸಹಕಾರ ನೀಡುತ್ತವೆ. ದೇಶದ ಅವಶ್ಯಕತೆಗಳಿಗೆ ನೇರವಾಗಿ ಸಂಬಂಧಿಸಿದ ಕೈಗಾರಿಕಾ ಸಮಸ್ಯೆಗಳ ಕುರಿತು ಶೋಧನೆ ಮಾಡುವುದಷ್ಟೇ ಅಲ್ಲ, ಬಯೋ–ಇನ್‌ಫಾರ್ಮೆಟಿಕ್ಸ್, ಪರಿಸರ ವಿಜ್ಞಾನ ಮತ್ತು ಇಂಜಿನಿಯರಿಂಗ್, ನ್ಯಾನೋ ಸೈನ್ಸ್ ಮತ್ತು ನ್ಯಾನೋ ಟೆಕ್ನಾಲಜಿ, ಗ್ರಾಮೀಣ ಕೈಗಾರಿಕೀಕರಣ, ಪರಿಸರ ವಿಜ್ಞಾನ, ಲೇಸರ್ ಅಪ್ಲಿಕೇಶನ್ಸ್, ಇಂಡಸ್ಟ್ರಿಯಲ್ ಟೆಕ್ಸ್‌ಟೈಲ್ಸ್, ಬಯೋ ಟೆಕ್ನಾಲಜಿ, ಆಪ್ಟಿಕಲ್ ಕಮ್ಯುನಿಕೇಶನ್, ಸಿಗ್ನಲ್ ಪ್ರೊಸೆಸಿಂಗ್, ಕಂಪ್ಯೂಟರ್ ಆಧಾರಿತ ಡಿಸೈನಿಂಗ್ ಮತ್ತು ಉತ್ಪಾದನೆ, ಕೃತಕ ಬುದ್ಧಿಶಕ್ತಿ ಮತ್ತು ರೋಬೋಟಿಕ್ಸ್ ಮುಂತಾದ ವಿಷಯಗಳ ಬಗ್ಗೆ ಆದ್ಯತೆ ನೀಡುತ್ತದೆ.

**ಶೈಕ್ಷಣಿಕ ವಿಭಾಗಗಳು ಮತ್ತು ಕೇಂದ್ರಗಳು:**

ಸಂಸ್ಥೆಯಲ್ಲಿ ನಡೆಯುವ ಸಕಲ ಬೋಧನೆ ಹಾಗೂ ಸಂಶೋಧನಾ ಕಾರ್ಯಕ್ರಮಗಳು ಹಲವಾರು ಶಾಸನೋಕ್ತ ಇಲಾಖೆಗಳು ಹಾಗೂ ಸಂಶೋಧನಾ ಕೇಂದ್ರಗಳ ಮೂಲಕ ನಡೆಯುತ್ತವೆ. ವಿವಿಧ ಸ್ನಾತಕಪೂರ್ವ ಕೋರ್ಸ್‌ಗಳು, ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಹಾಗೂ ಡಾಕ್ಟರೇಟ್ ಅಧ್ಯಯನ ಕೋರ್ಸ್‌ಗಳಂತೆಯೇ ಇವುಗಳ ನಿರ್ವಹಣೆಯ ವಿಷಯದಲ್ಲಿಯೂ ಈ ಸಂಸ್ಥೆಗಳು ಸ್ವಾಯತ್ತ ಅಧಿಕಾರವನ್ನು ಹೊಂದಿರುತ್ತವೆ.

**ವಾಚನಾಲಯ:**

ಪ್ರತಿಯೊಂದು ಐಐಟಿ ಕೂಡಾ ನೂರಾರು ರಾಷ್ಟ್ರೀಯ, ಅಂತಾರಾಷ್ಟ್ರೀಯ ನಿಯತಕಾಲಿಕ ಪತ್ರಿಕೆಗಳು, ಹಲವು ಲಕ್ಷದಷ್ಟು ಪುಸ್ತಕಗಳುಳ್ಳ ಒಂದು ಸುಸಜ್ಜಿತ ಗ್ರಂಥಾಲಯವನ್ನು ಹೊಂದಿರುತ್ತವೆ. ವಾಚನಾಲಯಗಳು ತಮ್ಮ ಬಳಕೆದಾರರ ಮಾಹಿತಿ ಅಗತ್ಯಗಳನ್ನು ಪೂರೈಸಲು ಹಲವಾರು ನೂತನ ಉತ್ಪನ್ನಗಳನ್ನು ಒದಗಿಸಲು ಕ್ರಮಕೈಗೊಂಡಿದೆ. ಇಲ್ಲಿರುವ ವೈವಿಧ್ಯಮಯ ಪುಸ್ತಕಗಳು ಓದುಗರಿಗೆ ಜ್ಞಾನದ ಭಂಡಾರವಾಗಿದೆ. ಡಿಜಿಟಲ್ ಮೀಡಿಯಾ, ಸಿಡಿ–ರ್‍ಯಾಮ್ ಹಾಗೂ ಆಯಸ್ಕಾಂತೀಯ ಮುಂತಾದ ಆಧುನಿಕ ತಂತ್ರಜ್ಞಾನದ ಮಾಧ್ಯಮ ಸಂಪತ್ತೂ ಇಲ್ಲಿದೆ. ಇ–ನಿಯತಕಾಲಿಕೆ (ವೆಬ್‌ಸೈಟ್ ಪತ್ರಿಕೆ)ಗಳ ಮಾಹಿತಿ ಓದುಗರಿಗೆ ತಲುಪುವ ಉದ್ದೇಶದಿಂದ ಹಲವು ಪ್ರಕಾಶಕರೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಸಂಸ್ಥೆಗಳು ಚಂದಾದಾರರಾಗಿರುವ ನಿಯತಕಾಲಿಕೆಗಳ ಪಟ್ಟಿಯನ್ನು ಅಂತರ್ ಜಾಲದ ಬಳಕೆದಾರರ ಅನುಕೂಲಕ್ಕಾಗಿ ವೆಬ್‌ಸೈಟ್‌ನಲ್ಲಿ ನೀಡಲಾಗುತ್ತದೆ. ಪಿಎಚ್‌ಡಿ ಮಹಾಪ್ರಬಂಧಗಳನ್ನು ಪರಿಶೀಲಿಸುವ ಕಾರ್ಯವೂ ಈಗ ಗ್ರಂಥಾಲಯದಲ್ಲಿ ನಡೆಯುತ್ತಿದೆ. ಅಲ್ಲದೆ ಸಂಸ್ಥೆಯ ಕುಟುಂಬವರ್ಗದವರ ಉಪಯೋಗಕ್ಕಾಗಿ ಈ ಸಂಸ್ಥೆಗಳು ಒಂದು ಸಮಗ್ರ ವೆಬ್‌ಸೈಟ್ ಹೊಂದಿವೆ.

**ಅಂತಾರಾಷ್ಟ್ರೀಯ ಸಹಭಾಗಿತ್ವ:**

ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಮುಂಚೂಣಿಯಲ್ಲಿ ಕಾಣಿಸಿಕೊಳ್ಳುವ ತನ್ನ ಧ್ಯೇಯಕ್ಕನುಗುಣವಾಗಿ ಮತ್ತು ಅನುಭವ ಹಾಗೂ ಜ್ಞಾನವನ್ನು ಹಂಚಿಕೊಳ್ಳುವ ಉದ್ದೇಶದಿಂದ ಐಐಟಿಗಳು ಯುನೈಟೆಡ್ ಕಿಂಗ್‌ಡಂ (ಯುಕೆ), ಫ್ರಾನ್ಸ್, ಯುಎಸ್‌ಎ, ನಾರ್ವೆ ಜಪಾನ್, ಜರ್ಮನಿ, ಹಂಗರಿ ಮತ್ತು ರಷ್ಯಾ ದೇಶಗಳ ಸಂಸ್ಥೆಗಳ ಜೊತೆ ಸಹಭಾಗಿತ್ವದ ಯೋಜನೆಯೊಂದಿಗೆ ಹಲವಾರು ಸಂಶೋಧನಾ ಪ್ರಾಜೆಕ್ಟ್‌ಗಳನ್ನು ನಿರ್ವಹಿಸಲಾಗುತ್ತಿದೆ.

**ಐಐಟಿಗಳ ಪ್ರಭಾವ ಮತ್ತು ಕೊಡುಗೆ:**

ಬಿಟೆಕ್ ಪದವಿಯು ಸಾಮಾನ್ಯವಾಗಿ ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಪೂರಕವಾಗಿದೆ ಎಂಬುದು ನಮ್ಮ ದೇಶದಲ್ಲಿ ಇಂಜಿನಿಯರಿಂಗ್ ಪದವೀಧರರಿಗೆ ಉದ್ಯೋಗ ನೀಡುವ ಸಂಸ್ಥೆಗಳ ಒಡೆಯರ ಅಭಿಪ್ರಾಯವಾಗಿದೆ. ಉನ್ನತ ವ್ಯಾಸಂಗಕ್ಕಾಗಿ ಹಾಗೂ / ಅಥವಾ ಉದ್ಯೋಗಕ್ಕಾಗಿ ವಿದೇಶಗಳಿಗಾಗಿ ತೆರಳಿರುವ ವಿದ್ಯಾರ್ಥಿಗಳು ತುಂಬಾ ಉತ್ತಮವಾದ ಕಾರ್ಯ ಮಾಡುತ್ತಿದ್ದಾರೆಂದು ವರದಿಗಳು ತಿಳಿಸುತ್ತವೆ. ಐಐಟಿ ಪದವೀಧರರ ವಿಶ್ಲೇಷಣಾತ್ಮಕ ಸಾಮರ್ಥ್ಯದ ಬಗ್ಗೆ ವಿದೇಶದ ಪರಿಣತರಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ. ಐಐಟಿಯಲ್ಲಿ ತಾವು ಪಡೆದ ಶಿಕ್ಷಣ ಮತ್ತು ಅನುಭವ ಇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವಾಗ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ತಮಗೆ ನೆರವಾಗಿವೆ ಎಂದು ಐಐಟಿಯ ಹಳೆ ವಿದ್ಯಾರ್ಥಿಗಳು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ತತ್ಪರಿಣಾಮವಾಗಿ ಐಐಟಿಗಳು ದೇಶದಲ್ಲಿ ಮಾತ್ರವಲ್ಲ, ವಿದೇಶದಲ್ಲೂ ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹೆಸರು ಪಡೆದಿದೆ.

ದೇಶದ ಹಲವಾರು ತಾಂತ್ರಿಕ ಸಂಸ್ಥೆಗಳ ಅಧ್ಯಾಪಕ ವರ್ಗದವರು ಐಐಟಿಗಳ ಮೂಲಕ ಅತ್ಯಾಧುನಿಕ ತಂತ್ರಜ್ಞಾನದ ಬೋಧನಾ ಕ್ರಮದ ಬಗ್ಗೆ ತರಬೇತಿ ಪಡೆದಿದ್ದಾರೆ. ಇವರಲ್ಲಿ ಕೆಲವರು ಪಿಎಚ್‌ಡಿ ಅಧ್ಯಯನ ನಡೆಸಿದರೆ, ಇನ್ನು ಕೆಲವರು ಲ್ಯಾಬೊರೇಟರಿ ಯೋಜನೆ ಮತ್ತು ಅಭಿವೃದ್ಧಿಯ ಕುರಿತು ತರಬೇತಿ ಪಡೆದಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳನ್ನೂ ಐಐಟಿಯು ತನ್ನ ಸ್ವಂತ ಸಂಪನ್ಮೂಲ ಬಳಸಿ ನಿರ್ವಹಿಸುತ್ತಿದೆ.

Digitised by Bharatavani, CIIL

1970ರಿಂದ ಐಐಟಿಗಳು, ಇನ್‌ಸ್ಟಿಟ್ಯೂನಲ್ ನೆಟ್‌ವರ್ಕ್ ಸ್ಕೀಂ ಮೂಲಕ ಆಯ್ದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಯೋಗಾಲಯ ಯೋಜನೆಗೆ ನೆರವು ನೀಡುತ್ತಿದೆ. ಅರ್ಹ ಪ್ರಯೋಗಾಲಯ ಸಿಬ್ಬಂದಿಗಳನ್ನು ಹೊಂದಲು, ಸುಧಾರಿತ ಪ್ರಯೋಗಗಳನ್ನು ನಡೆಸಲು ನೆರವಾಗುತ್ತಿದೆ. ಈ ಪ್ರಯತ್ನಗಳು ದೇಶದಲ್ಲಿ ಇಂಜಿನಿಯರಿಂಗ್ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಲು ನೆರವಾಗಿವೆ. ತಮ್ಮ ಪಠ್ಯಕ್ರಮ ಹಾಗೂ ಅಧ್ಯಾಪಕ ವೃಂದದ ಅಭಿವೃದ್ಧಿಯ ನಿಟ್ಟಿನಲ್ಲಿ ಐಐಟಿಗಳು ಇತರ ತಾಂತ್ರಿಕ ಸಂಸ್ಥೆಗಳ ಜೊತೆ ಸಂವಹನ ಸಾಧಿಸಿವೆ.

ಐಐಟಿಗಳಲ್ಲಿ ಸಂಶೋಧನಾ ಚಟುವಟಿಕೆಗಳು ಈಗ ಹಲವು ಪಟ್ಟು ಹೆಚ್ಚಾಗಿ ನಡೆಯುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಉದ್ದೇಶದಿಂದ ಹಲವಾರು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸ್ವಾವಲಂಬನೆ ಒತ್ತಾಸೆ ಕೊಡುವಲ್ಲಿ ಈ ಕೇಂದ್ರಗಳು ನೆರವಾಗಿವೆ. ಕಳೆದ ಕೆಲ ವರ್ಷಗಳಿಂದ ಐಐಟಿಗಳು ಸಾಧಿಸಿದ ಮಹತ್ತರ ಸಾಧನೆಗಳಲ್ಲಿ ಇದು ಒಂದಾಗಿದೆ. ಹಲವಾರು ಉದ್ದಿಮೆಗಳು ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಐಐಟಿಯ ನೆರವನ್ನು ಎದುರು ನೋಡುತ್ತಿವೆ. ಹಲವು ಮಹತ್ವದ ಸಂಶೋಧನಾ ಕಾರ್ಯಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳೂ ಐಐಟಿಗಳಿಗೆ ವಹಿಸಿಕೊಡುತ್ತವೆ.

**ಐಐಟಿಗಳ ಭವಿಷ್ಯದ ದರ್ಶನ:**

ವೈಜ್ಞಾನಿಕ ಮತ್ತು ತಂತ್ರಜ್ಞಾನ ಶಿಕ್ಷಣದಲ್ಲಿ ಹಾಗೂ ಸಂಶೋಧನಾ ಕಾರ್ಯದಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವ ಮೂಲಕ ದೇಶಕ್ಕೆ ವಿದೇಶಗಳಿಗೆ ಅಮೂಲ್ಯ ಕೊಡುಗೆ ನೀಡುವುದು, ಕೈಗಾರಿಕೆಗೆ, ಸಮಾಜಕ್ಕೆ ಮಾಹಿತಿ ಸಂಪನ್ಮೂಲವಾಗಿ ಸೇವೆಸಲ್ಲಿಸುವುದು.

ಶಿಕ್ಷಣ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸಂಸ್ಥೆಯ ಶೈಕ್ಷಣಿಕ ಕಾರ್ಯಕ್ರಮಗಳನ್ನು ಇನ್ನಷ್ಟು ಸಶಕ್ತಗೊಳಿಸಲು ನಿರ್ಧರಿಸಲಾಗಿದೆ. ಶಿಕ್ಷಣ ಕ್ರಮವನ್ನು ಹೆಚ್ಚು ಕ್ರಿಯಾತ್ಮಕಗೊಳಿಸುವುದರ ಜೊತೆ, ಅಂತರಶಿಸ್ತಿಗೆ ಒಳಪಡಿಸುವುದು, ನಮನೀಯತೆ (Flxibility) ಗೆ ಹೆಚ್ಚು ಒತ್ತು ಕೊಡುವ ಮೂಲಕ ವಿದ್ಯಾರ್ಥಿಗಳಿಗೆ ಆಕರ್ಷಣೀಯವಾಗಿಸಲಾಗುತ್ತದೆ. ದೂರಶಿಕ್ಷಣ ಮತ್ತು ಮುಂದುವರಿಕಾ ಶಿಕ್ಷಣ ಕ್ಷೇತ್ರಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸಲಾಗುತ್ತದೆ. ರಾಷ್ಟ್ರಕ್ಕೆ ಜಾಗತಿಕ ಮೇಲಾಟದಲ್ಲಿ ಹೊಸದಾದ ಹಾಗೂ ನವೀನವಾಗಿ ಹೊರಹೊಮ್ಮುತ್ತಿರುವ ತಂತ್ರಜ್ಞಾನ ಒದಗಿಸಲು ಸ್ನಾತಕೋತ್ತರ ಹಾಗೂ ಸಂಶೋಧನ ಕಾರ್ಯಕ್ರಮಗಳತ್ತ ವಿಶೇಷ ಗಮನ ನೀಡಬೇಕೆಂಬುದು ಐಐಟಿಗಳ ಯೋಜನೆಯಾಗಿದೆ.

ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳಿಗೂ ಸೂಕ್ತ ಪ್ರವೇಶಾವಕಾಶ ದೊರೆಯುವ ರೀತಿಯಲ್ಲಿ ಪ್ರವೇಶ ಪರೀಕ್ಷೆ (JEE) ಯನ್ನು ರೂಪಿಸಲಾಗಿದೆ.

ಐಐಟಿಗಳಲ್ಲಿ ನಡೆಸಲಾಗುವ ಸಂಶೋಧನಾ ಕಾರ್ಯಗಳು ಭಾರತ ಕೇಂದ್ರೀಕೃತವಾಗಿದ್ದ ದೇಶದ ನಿರ್ದಿಷ್ಟ ಅವಶ್ಯಕತೆಗಳತ್ತ ಹೆಚ್ಚು ಗಮನ ನೀಡಲಾಗುತ್ತದೆ. ಅಗತ್ಯವಿದ್ದರೆ, ನಿರ್ದಿಷ್ಟ ತಂತ್ರಜ್ಞಾನದ ಅಧ್ಯಯನ ನಡೆಸುವಂತೆ ಸಂಶೋಧನಾ ಕಾರ್ಯಕ್ರಮಗಳನ್ನು ಮರು ರೂಪಿಸಲಾಗುತ್ತದೆ.

ಐಐಟಿಗಳು ದೇಶದಲ್ಲಿರುವ ಇತರ ಪ್ರಮುಖ ಸಂಶೋಧನಾ ಮತ್ತು ತಂತ್ರಜ್ಞಾನ ಸಂಸ್ಥೆಗಳು, ಅಂತೆಯೇ ದೇಶದ ಉದ್ದಿಮೆಗಳ ಜೊತೆ ಸಂಪರ್ಕ ಸಾಧಿಸಿ ಕೆಲಸ ಮಾಡುವುದಕ್ಕೆ ಇನ್ನಷ್ಟು ಒತ್ತು ನೀಡಲಾಗುವುದು. ಐಐಟಿಗಳ ಹಳೆ ವಿದ್ಯಾರ್ಥಿಗಳು ಸಂಸ್ಥೆಯ ಜೊತೆ ಇನ್ನಷ್ಟು ರಚನಾತ್ಮಕವಾಗಿ ಒಳಗೊಳ್ಳುವಂತೆ ವ್ಯವಸ್ಥೆಗೊಳಿಸಲಾಗುವುದು. ದೇಶದ ಅಗತ್ಯಕ್ಕೆ ಸೂಕ್ತವಾದ ಸಂಶೋಧನಾ ಕಾರ್ಯಗಳನ್ನು ಹಾಗೂ ಜಂಟಿ ಸಂಶೋಧನಾ ಕಾರ್ಯಕ್ರಮಗಳನ್ನು ಕೈಗೊಳ್ಳಲು IIT ಹಾಗೂ CSIR ಪ್ರಯೋಗಾಲಯಗಳ ಒಟ್ಟಾರೆಯ ಪರಿಣಾಮವನ್ನು ಉಪಯೋಗಿಸಿಕೊಳ್ಳಲಾಗುವುದು. ಮತ್ತು ಸಂಪನ್ಮೂಲಗಳ ಗರಿಷ್ಠ ಉಪಯೋಗವನ್ನು ಮಾಡಿಕೊಳ್ಳಲು ಸೌಲಭ್ಯಗಳನ್ನು ರೂಪಿಸಲಾಗುವುದು.

**ಮೂಲ: ಆರ್.ಎಸ್. ಸಿರೋಹಿ**
**ಅನು: ಕೃಷ್ಣಮೂರ್ತಿ ಭಟ್ ಬಿ.**

## ಭಾರತೀಯ ಮಹಿಳಾ ವಿಶ್ವವಿದ್ಯಾನಿಲಯಗಳು

### 1. ಎಸ್.ಎನ್.ಡಿ.ಟಿ ಮಹಿಳಾ ವಿಶ್ವವಿದ್ಯಾನಿಲಯ – ಮುಂಬಯಿ (ಮಹಾರಾಷ್ಟ್ರ):

ಎಸ್.ಎನ್.ಡಿ.ಟಿ ಮಹಿಳಾ ವಿಶ್ವವಿದ್ಯಾಲಯವು ಕ್ರಿ.ಶ. 1896 ರಲ್ಲಿ ಸ್ಥಾಪಿತವಾಗಿದೆ. ಪೂರ್ಣ ಹೆಸರು ಶ್ರೀಮತಿ ನಾಥಿಬಾಯಿ ದಾಮೋದರ ಠಾಕರ್ಸೆ ಮಹಿಳಾ ವಿಶ್ವವಿದ್ಯಾಲಯ (SNDT). ಇದು ಮುಂಬಯಿ ನಗರದಲ್ಲಿದೆ. ಇದರ ಪ್ರಧಾನ ಕಛೇರಿ ದಕ್ಷಿಣ ಚರ್ಚಗೇಟ್, ಮುಂಬಯಿಯಲ್ಲಿದೆ. ಮುಖ್ಯ ಆವರಣ ಸಾಂತಾಕ್ರೂಜ್ ಜುಹು ಪ್ರದೇಶದಲ್ಲಿದೆ. ಮೂರು ಆವರಣಗಳನ್ನು ಹೊಂದಿದ್ದು ಎರಡು ಮುಂಬಯಿನಲ್ಲಿವೆ. ಒಂದ ಕರ್ವೆ ರೋಡ್, ಪುಣೆಯಲ್ಲಿದೆ. ಇದರ ಸಂಯೋಜನೆ ಅಡಿಯಲ್ಲಿ ಮಹಾರಾಷ್ಟ್ರ, ಗುಜರಾತ್, ಅಸ್ಸಾಂ ಮತ್ತು ಗೋವಾದಲ್ಲಿ ಹಲವಾರು ಮಹಾವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಕ್ರಿ.ಶ. 1896 ರಲ್ಲಿ ದೊಂಡೋ ಕೇಶವ ಕರ್ವೆಯವರು ವಿಧವೆ ಮತ್ತು ಅಸಹಾಯಕ ಹೆಣ್ಣುಮಕ್ಕಳಿಗೆ ಪುಣೆ ಹತ್ತಿರ ಹಿಂಗಣೆಯಲ್ಲಿ ಆಶ್ರಮ ಸ್ಥಾಪಿಸಿದರು. ಹೆಣ್ಣುಮಕ್ಕಳಿಗೆ ಸ್ವಾವಲಂಬನೆ, ಸ್ವತೃಪ್ತಿ, ಆತ್ಮಸ್ಥೈರ್ಯ ತುಂಬಲು ಆಶ್ರಮದಲ್ಲಿಯೇ ಶಾಲೆ ಪ್ರಾರಂಭಿಸಿದರು. ನಂತರ ಹುಡುಗಿಯರಿಗೂ ಮತ್ತು ಮಹಿಳೆಯರಿಗೂ ದೈನಂದಿನ ವರ್ಗಗಳು ಪ್ರಾರಂಭವಾದವು. ಕರ್ವೆಯವರು ಗೆಳೆಯನ ಸಹಾಯದಿಂದ ಟೋಕಿಯೊದಿಂದ ಮಹಿಳಾ ವಿಶ್ವವಿದ್ಯಾಲಯದ ಬುಕ್‌ಲೆಟನ್ನು ತರಿಸಿದರು. ಕ್ರಿ.ಶ. 1915 ರಲ್ಲಿ 'ಕರ್ವೆಯವರು

Digitised by Bharatavani, CIIL

ರಾಷ್ಟ್ರೀಯ ಸಾಮಾಜಿಕ ಸುಧಾರಣೆ ಕಾಂಗ್ರೆಸ್' ಸಭೆ ಮುಂಬಯಿಯಲ್ಲಿ ಅಧ್ಯಕ್ಷ ಸ್ಥಾನದಿಂದ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆ ಕುರಿತು ಹೇಳಿದರು. ಕ್ರಿ.ಶ. 1916 ರಲ್ಲಿ ಐದು ವಿದ್ಯಾರ್ಥಿನಿಯರಿಂದ ಮಹಾವಿದ್ಯಾನಿಲಯವನ್ನು ಪ್ರಾರಂಭಿಸಿದರು. ಆದರೆ, ಸರ್ಕಾರದ ಯಾವುದೇ ಅನುದಾನ ಬಯಸದೇ ಕರ್ವೆಯವರ ದೃಷ್ಟಿ ಮತ್ತು ಸರ್ ವಿಠಲದಾಸ್ ಠಾಕರ್ಸೆ ಅವರ ದೂರ ದೃಷ್ಟಿಯಿಂದ ಭಾರತದಲ್ಲಯೇ ಪ್ರಥಮ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸಿದರು. ವಿಠಲದಾಸ್ ಠಾಕರ್ಸೆಯವರು ಅವರ ತಾಯಿ ನಾಥಿಬಾಯಿ ಹೆಸರಿನಿಂದ 15 ಲಕ್ಷ ರೂಪಾಯಿ ನೀಡಿದರು. ಅದಕ್ಕಾಗಿ ಈ ವಿಶ್ವವಿದ್ಯಾಲಯಕ್ಕೆ ಶ್ರೀಮತಿ ನಾಥಿಬಾಯಿ ದಾಮೋದರ ಠಾಕರ್ಸೆ ಎಂದು ಹೆಸರಿಸಲಾಯಿತು. ಕ್ರಿ.ಶ. 1936ರಲ್ಲಿ ಪ್ರಧಾನ ಕಛೇರಿಯನ್ನು ಮುಂಬಯಿಗೆ ಸ್ಥಳಾಂತರಿಸಿದರು. ಸ್ವಾತಂತ್ರ್ಯ ನಂತರದಲ್ಲಿ ಮಹಿಳೆಯರ ಹಾಜರಾತಿ ಸಂಖ್ಯೆ ಹೆಚ್ಚುತ್ತಾ ಹೋದಂತೆ ಶಿಕ್ಷಣದ ಪ್ರಗತಿಯೂ ದಾಪುಗಾಲು ಇಟ್ಟಿತು. ಇಂದು ಎಸ್.ಎನ್.ಡಿ.ಟಿ ಎಂಬ ಹೆಸರಿನ ಮೂಲಕ ಉನ್ನತ ಶಿಕ್ಷಣವನ್ನು ಅತ್ಯುತ್ಕೃಷ್ಟತೆಯಿಂದ ನೀಡುತ್ತಿದೆ.

**ವಿಶ್ವವಿದ್ಯಾನಿಲಯದ ಪಾರ್ಶ್ವಚಿತ್ರ:**

ಇದಕ್ಕೆ ಮುಖ್ಯ 4 ಆವರಣಗಳಿವೆ. ಚರ್ಚಗೇಟ್, ಸಾಂತಾಕ್ರೂಜ್ ಜುಹು, ಪುಣೆ ಮತ್ತು ಪಲ್ಘಾರ. ಇದರಲ್ಲಿ 26 ಕಾಲೇಜುಗಳು, 38 ವಿಶ್ವವಿದ್ಯಾಲಯದ ವಿಭಾಗಗಳು, 11 ನಿಖಾಯಗಳು, 11 ಪದವಿ ಕಾಲೇಜುಗಳು, 38 ಸ್ನಾತಕೋತ್ತರ ವಿಭಾಗಗಳು ಇರುತ್ತವೆ. ಇದಲ್ಲದೆ ಈ ವಿಶ್ವವಿದ್ಯಾಲಯವು 3 ಬಾಲಕಿಯರ ಪ್ರೌಢಶಾಲೆಗಳನ್ನು ಹೊಂದಿದೆ. ವಿಶ್ವವಿದ್ಯಾಲಯ ಬೋಧನೆ, ಸಂಶೋಧನೆ ಮತ್ತು ಮುಂದುವರಿಕೆ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ಅದರಂತೆ ನ್ಯಾಕ್‌ಗೆ ಒಳಪಟ್ಟರುವ ಪಂಚ ತಾರೆಗಳನ್ನು (*****) ಹೊಂದಿರುವುದು ಮಹಾರಾಷ್ಟ್ರದಲ್ಲಿಯೇ ಪ್ರಥಮವಾಗಿದೆ.

**ಕೊಲ್ಯಾಬರೇಶನ್:** ಈ ವಿಶ್ವವಿದ್ಯಾಲಯವು ರಾಜ್ಯ ಮತ್ತು ಕೇಂದ್ರ ಸರ್ಕಾರದೊಂದಿಗೆ ಸೇರಿಕೊಂಡು ಕಾರ್ಯನಿರ್ವಹಿಸುತ್ತದೆ. ರಾಷ್ಟ್ರೀಯ, ಅಂತರಾಷ್ಟ್ರೀಯ ಸಂಘಟನೆಗಳ ಮೂಲಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಅದರಂತೆ ಸಂಶೋಧನೆ ಮತ್ತು ಸಮುದಾಯದೊಂದಿಗೆ ಕಾರ್ಯನಿರ್ವಹಿಸುವುದಾಗಿದೆ. ಇದರೊಂದಿಗೆ ಮಹಾರಾಷ್ಟ್ರ ಸರ್ಕಾರ, ಭಾರತ ಸರ್ಕಾರದ ವಿವಿಧ ಸಚಿವರು, ವಿಶ್ವವಿದ್ಯಾಲಯ ಧನಸಹಾಯ ಆಯೋಗ, ಯುನಿಸೆಫ್, ಬ್ರಿಟಿಷ್ ಕೌನ್ಸಿಲ್, ವಿಶ್ವವಿದ್ಯಾಲಯ ಸಂಘಗಳು ಮತ್ತು ಸ್ವೀಡಿಷ್ ಅಂತರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ಮುಂತಾದವುಗಳ ಸಹಾಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ.

**ವಿದ್ಯಾರ್ಥಿ ವೇತನ:** ಶುಲ್ಕ ವೇತನ ಮತ್ತು ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಅವಶ್ಯಕತೆ ಮತ್ತು ಅರ್ಹತೆ ಆಧಾರದಿಂದ ಒದಗಿಸಲಾಗುವುದು.

**ವಸತಿ:** ವಿದ್ಯಾರ್ಥಿನಿಯರಿಗಾಗಿ ಮೂರು ಕ್ಯಾಂಪಸ್‌ಗಳಲ್ಲಿ ವಸತಿ ಸೌಲಭ್ಯವಿದೆ. ಅವಶ್ಯಕತೆ ಮತ್ತು ಅರ್ಹತೆ ಮೇಲೆ ಅವಕಾಶ ಕಲ್ಪಿಸುವುದು.

**ವಿಶ್ವವಿದ್ಯಾನಿಲಯ/ಮಹಾವಿದ್ಯಾಲಯಗಳ ವಿಭಾಗಗಳು**

- ಉಷಾ ಮಿತ್ತಲ್ ತಾಂತ್ರಿಕ ಸಂಸ್ಥೆ.
- ಜಾನಕಿದೇವಿ ಬಜಾಜ್ ನಿರ್ವಹಣಾ ಸಂಸ್ಥೆ.
- ಸ್ನಾತಕೋತ್ತರ ಗೃಹವಿಜ್ಞಾನ ಅಧ್ಯಯನ ಮತ್ತು ಸಂಶೋಧನೆ.
- ಸ್ನಾತಕೋತ್ತರ ವಾಣಿಜ್ಯ ವಿಭಾಗಕ್ಕೆ ಎಂ.ಕಾಂ ಮತ್ತು ಪಿ.ಎಚ್.ಡಿ ಮಾಡಲು ಅವಕಾಶ. ಹೀಗೆ ಹಲವಾರು ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಪದವಿಗಳು, ಪ್ರಮಾಣ ಪತ್ರಗಳು ಮತ್ತು ಡಿಪ್ಲೊಮಾಗಳು ದೊರೆಯುವ ಅವಕಾಶಗಳಿವೆ. ಎಲ್ಲ ಸ್ನಾತಕೋತ್ತರ ವಿಭಾಗಗಳಿಗೆ ಎಂ.ಫಿಲ್/ಪಿ.ಎಚ್.ಡಿ ಪಡೆಯಲು ಅವಕಾಶವಿದೆ.
- ಮಕ್ಕಳಿಗಾಗಿ ಸಂವಹನ ಮಾಧ್ಯಮ-ಸ್ನಾತಕೋತ್ತರ ಪದವಿ (ಪುಣೆ).

**ಗಮನಾರ್ಹವಾಧ ಹಳೆ ವಿದ್ಯಾರ್ಥಿಗಳ ಸಂಘ:**

- ಚಿತ್ರಾ ಮುದಗಲ್ – ಪ್ರಖ್ಯಾತ ಹಿಂದಿ ಲೇಖಕರು.
- ಶ್ರುತಿ ಸಾದೋಲಿಕರ್ – ಭಾರತೀಯ ಕ್ಲಾಸಿಕಲ್ ಸಂಗೀತ ಗಾಯಕಿ.
- ಡಾ॥ ಭಾರತಿ ವೈಶಂಪಾಯನ – ಭಾರತೀಯ ಕ್ಲಾಸಿಕಲ್ ಸಂಗೀತ ಗಾಯಕಿ.

**1. ಬನಸ್ಥಳಿ ವಿದ್ಯಾಪೀಠ – ರಾಜಸ್ಥಾನ:**

ಬನಸ್ಥಳಿ ವಿದ್ಯಾಪೀಠ ಎಂಬ ಮಹಿಳಾ ವಿಶ್ವವಿದ್ಯಾಲಯವು ರಾಜಸ್ಥಾನ ರಾಜ್ಯದ ಟೊಂಕ ಜಿಲ್ಲೆಯಲ್ಲಿ ಸ್ಥಾಪಿತವಾಯಿತು. ಇದು ಜಯಪುರದಿಂದ 72 ಕಿ.ಮೀ. ದೂರದಲ್ಲಿದೆ. ಸುಮಾರು 80 ವರ್ಷಗಳಿಂದ ಬನಸ್ಥಳಿ ವಿಶ್ವವಿದ್ಯಾನಿಲಯವು ಮಹಿಳಾ ಶಿಕ್ಷಣಕ್ಕೆ ರಾಷ್ಟ್ರೀಯ ಕೇಂದ್ರವಾಗಿದೆ. ಭಾರತದ ಪ್ರಮುಖ 5 ಮಹಿಳಾ ವಿಶ್ವವಿದ್ಯಾಲಯಗಳಲ್ಲಿ ಇದು ಒಂದಾಗಿದೆ. ಈ ಬನಸ್ಥಳಿ ವಿದ್ಯಾಪೀಠವು ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರದವರೆಗೆ ನಡೆಸುತ್ತದೆ. ಅಕ್ಟೋಬರ್ 6, 1935 ರಂದು ರತನಶಾಸ್ತ್ರೀ ಮತ್ತು ಪಂಡಿತ ಹೀರಾಲಾಲಶಾಸ್ತ್ರೀ ಅವರ ಮಗಳು ಶಾಂತಾಬಾಯಿ ಸ್ಮರಣಾರ್ಥವಾಗಿ "ಶ್ರೀಮತಿ ಶಾಂತಾಬಾಯಿ ಶಿಕ್ಷಾ ಕುಟೀರ" ಎಂದು ಕೇವಲ ಅರ್ಧ ಡಜನ್ ವಿದ್ಯಾರ್ಥಿನಿಯರಿಂದ ಪ್ರಾರಂಭಿಸಲಾಯಿತು. ಎಲ್ಲ ವಸತಿಗಳು ಶ್ರೀ ಶಾಂತಾಭವನ, ಶ್ರೀ ಶಾಂತಾನಿವಾಸ ಮತ್ತು ಶಾಂತಾಕುಟೀರ ಎಂದು ನಾಮಕರಣಗೊಂಡಿವೆ.

**ಉದ್ದೇಶಗಳು:**

- ಅಧುನಿಕ ಶಿಕ್ಷಣದ ಮೂಲಕ ಭಾರತದ ಮೂಲ ಸಾಂಸ್ಕೃತಿಕ

Digitised by Bharatavani, CIIL

ಮತ್ತು ಸಂಪ್ರದಾಯ ಮೌಲ್ಯಗಳನ್ನು ಒಂದು ಗೂಡಿಸುವುದು.

- ಪೌರಾತ್ಯ ಮತ್ತು ಪಾಶ್ಚಿಮಾತ್ಯದ ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ಮೌಲ್ಯಗಳನ್ನು ಸಂಶ್ಲೇಷಿಸುವುದು.
- ಸರ್ವಾಂಗೀಣ ವಿಕಾಸವನ್ನುಂಟುಮಾಡಿ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವುದು.
- ಪಂಚಮುಖಿ ಶಿಕ್ಷಾ ಕಾರ್ಯಕ್ರಮ ಅನುಷ್ಠಾನಗೊಳಿಸುವುದು ಭೌತಿಕ, 2) ಪ್ರಾಯೋಗಿಕ, 3) ಸೌಂದರ್ಯಕ, 4) ನೈತಿಕ, 5) ಬೌದ್ಧಿಕ

**ಸ್ನಾತಕೋತ್ತರ ಕೋರ್ಸುಗಳು:**

ಎಂ.ಎ: ಶಿಕ್ಷಣ, ಅರ್ಥಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ, ಸಂಸ್ಕೃತ, ಹಿಂದಿ, ಇಂಗ್ಲೀಷ್, ಚಿತ್ರಕಲೆ ಮತ್ತು ದೃಶ್ಯಕಲೆ, ಸಂಗೀತ (ಇನ್‌ಸ್ಟ್ರುಮೆಂಟಲ್/ವೋಕಲ್), ವಸ್ತ್ರ ವಿನ್ಯಾಸ (ಹೊಲಿಗೆ ಪ್ರಕಟಣೆ)

ಎಂ.ಎ.ಸಿ.: ಭೌತಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್ ವಿಜ್ಞಾನ, ಗಣಿತ ವಿಜ್ಞಾನ, ಜೀವವಿಜ್ಞಾನ, ಜೀವತಂತ್ರಜ್ಞಾನ, ಇಲೆಕ್ಟ್ರಾನಿಕ್ಸ್, ಬಯೋಇನ್‌ಫಾರ್ಮೆಟಿಕ್ಸ್, ಪ್ಯಾರಾ ಮೆಡಿಕಲ್, ರಸಾಯನಶಾಸ್ತ್ರ, ಆನ್ವಯಿಕ ಸೂಕ್ಷ್ಮ ಜೀವಶಾಸ್ತ್ರ ಮತ್ತು ಗೃಹವಿಜ್ಞಾನ

ಎಂ.ಬಿ.ಎ, ಎಂ.ಸಿ.ಎ, ಎಂ.ಟೆಕ್, ಎಂ.ಇಡಿ ಮುಂತಾದವುಗಳು

ಎಂ.ಫಿಲ್: ಸಾಮಾಜಿಕ ವಿಜ್ಞಾನಗಳು ಮತ್ತು ಆಂಗ್ಲಭಾಷಾ ಬೋಧನೆ, ಹಿಂದಿ, ಸಂಗೀತ, ಗಣಿತ, ವಿಜ್ಞಾನಗಳು

ಪಿ.ಎಚ್.ಡಿ: ಸಂಸ್ಕೃತ, ಹಿಂದಿ, ಇಂಗ್ಲೀಷ್, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ರಾಜನೀತಿಶಾಸ್ತ್ರ, ಸಾರ್ವಜನಿಕ ಆಡಳಿತ, ಸಂಗೀತ, ಚಿತ್ರಕಲೆ ಮತ್ತು ದೃಶ್ಯಕಲೆ, ಕಂಪ್ಯೂಟರ್ ವಿಜ್ಞಾನ, ಇಲೆಕ್ಟ್ರಾನಿಕ್ಸ್, ಗಣಿತ, ಸಂಖ್ಯಾಶಾಸ್ತ್ರ, ಭೌತಶಾಸ್ತ್ರ, ಜೀವವಿಜ್ಞಾನ, ಜೀವತಂತ್ರಜ್ಞಾನ, ಗೃಹವಿಜ್ಞಾನ, ಮಾನವ ವಿಕಾಸ, ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ, ಹೊಲಿಗೆ ಮತ್ತು ಜವಳಿ ಶಿಕ್ಷಣ ನಿರ್ವಹಣೆ

**ಮಹಿಳಾ ಶಿಕ್ಷಣ ರಾಷ್ಟ್ರೀಯ ಸಂಸ್ಥೆ:**

1983 ರಲ್ಲಿ ಭಾರತ ಸರ್ಕಾರ ಮತ್ತು ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ಸಲಹೆ ಮೇರೆಗೆ ವಿದ್ಯಾಪೀಠದ ಬದಲು ಡೀಮ್ಡ್ ವಿಶ್ವವಿದ್ಯಾಲಯ ಎಂದು ಪ್ರಕಟಿಸಿತು. ವಿಶ್ವವಿದ್ಯಾಲಯದ ಸ್ಥಾನಮಾನ ದೊರಕಿದ ಮೇಲೆ ಪದವಿ ಹಾಗೂ ಸ್ನಾತಕೊತ್ತರ ಹಂತದಲ್ಲಿ ಹಲವಾರು ವಿಷಯದಲ್ಲಿ ಪುನರ್‌ರಚನೆಯನ್ನು ಮಾಡಲಾಯಿತು. ಸಧ್ಯ ಬನಸ್ಥಳಿ ವಿಶ್ವವಿದ್ಯಾಲಯವೆಂದು ಕರೆಸಿಕೊಂಡು ಹೊಸದಾಗಿ ಕೆಲವು ಸ್ನಾತಕೋತ್ತರ ಪದವಿಗಳನ್ನು ಪ್ರಸ್ತಾಪಿಸಿತು

- ಕಂಪ್ಯೂಟರ್ ವಿಜ್ಞಾನ (ಸಿದ್ಧಾಂತ ಮತ್ತು ಅನ್ವಯಿಕ ಅಂಶಗಳು)
- ಕ್ರಿಯಾ ಸಂಶೋಧನೆ – ಎಲೆಕ್ಟ್ರಾನಿಕ್ ಮತ್ತು ಜೀವತಂತ್ರಜ್ಞಾನ
- ಪ್ರಶಿಕ್ಷಣ ಮತ್ತು ನಿರ್ವಹಣೆ (10–15 ವರ್ಷಗಳ ಹಿಂದೆ)
- ಬಯೋ ಇನ್‌ಫಾರ್ಮೆಟಿಕ್ಸ್, ಪ್ಯಾರಾಟಿಕಲ್ ರಸಾಯನಶಾಸ್ತ್ರ, ಆನ್ವಯಿಕ ಸೂಕ್ಷ್ಮಜೀವಶಾಸ್ತ್ರ

ಇಲ್ಲಿ ಎಲ್ಲವೂ ಸೆಮಿಸ್ಟರ್ ಮೂಲಕವಾಗಿ ನಡೆಯುವುದರಿಂದ ಮತ್ತು ಹೆಚ್ಚಿನ ವಿಷಯಗಳು ಇರುವುದರಿಂದ ವಿದ್ಯಾರ್ಥಿಗಳು ತಮ್ಮ ವಿಷಯ ಆಯ್ಕೆ ಮಾಡುವಲ್ಲಿ ಸ್ವತಂತ್ರರು.

**ಸಾಮಗ್ರಿಗಳು ಮತ್ತು ಕಲಿಕಾ ಸಾಮರ್ಥ್ಯಗಳು:**

1) **ವಸತಿ ಮತ್ತು ವಿಭಾಗಗಳು:** ಇದು ವಸತಿ ವಿಶ್ವವಿದ್ಯಾಲಯವಾಗಿದ್ದು, ಒಟ್ಟು 850 ಎಕರೆ ಹೊಂದಿದೆ. ಇಲ್ಲಿ ವಿವಿಧ ವಿಭಾಗಗಳನ್ನು ಹೊಂದಿದ 18 ಶೈಕ್ಷಣಿಕ ಬ್ಲಾಕ್, ಕೇಂದ್ರ ಗ್ರಂಥಾಲಯ, ಸಭಾಂಗಣ, ವಿದ್ಯಾರ್ಥಿ ಮತ್ತು ಸಿಬ್ಬಂದಿವರ್ಗಕ್ಕೆ ವಸತಿ ಸೌಲಭ್ಯ, 20 ವಿದ್ಯಾರ್ಥಿಗಳ ವಸತಿ ಗೃಹ, 220 ಸಿಬ್ಬಂದಿ ವಸತಿ ಗೃಹ, 72 ಜನ ಕೆಲಸಮಾಡುವ ಮಹಿಳೆಯರಿಗೆ ವಸತಿ ಗೃಹ

2) **ಕ್ರೀಡೆ ಮತ್ತು ಆಟಗಳು:** ಲಕ್ಷ್ಮಿಬಾಯಿ ಮೈದಾನವು 26,960 ಚ.ಮೀ. ಹೊಂದಿದ್ದು ಅದನ್ನು ವಿಶ್ವವಿದ್ಯಾಲಯ ವಾರ್ಷಿಕ ಹಬ್ಬಗಳಿಗಾಗಿ ಮತ್ತು ಪರೇಡುಗಳಿಗಾಗಿ ಉಪಯೋಗಿಸಲಾಗುವುದು. ಅದರಂತೆ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಚಿತ್ರ ತೋರಿಸಲು ಪ್ರೊಜೆಕ್ಷನ್ ಕೋಣೆ ಇದೆ. ಶಾಲಾ ಮೈದಾನ 41,950 ಚ.ಮೀ. ಇದ್ದು ಅಲ್ಲಿ ಆಟಗಳು ನಡೆಯುತ್ತವೆ. ಉದಾ: ಹಾಕಿ, ವಾಲಿಬಾಲ್, ಬಾಸ್ಕೆಟ್‌ಬಾಲ್ ಮತ್ತು ಟೆನಿಸ್, ಯೋಗಾ, ಸಮರೋಚಿತ ಕಲೆ ಹಾಗೂ ಸಮೂಹ ಶಾರೀರಿಕ ಚಟುವಟಿಕೆ. ಇದರೊಂದಿಗೆ ಒಳಾಂಗಣ ಆಟಗಳು – ಬ್ಯಾಡ್‌ಮಿಂಟನ್, ಟೇಬಲ್‌ಟೆನಿಸ್, ಈಜುಕೊಳ ಮತ್ತು ಆಕಾಶ ವಿಮಾನಯಾನವೂ ಕೂಡ ಇದೆ.

3) **ಗ್ರಂಥಾಲಯ:** ಕೇಂದ್ರ ಗ್ರಂಥಾಲಯವು $1^1/_2$ ಲಕ್ಷ ಪುಸ್ತಕಗಳನ್ನು ಹೊಂದಿದೆ. ಗ್ರಂಥಾಲಯವು UGC (INFLIBNET) ಕಾರ್ಯಕ್ರಮಕ್ಕೆ ಜೋಡಿಸಿದೆ. ಆವರಣದಲ್ಲಿ ಮತ್ತು ವಿವಿಧ ವಿಭಾಗಗಳಲ್ಲಿ ಅಂತರ್‌ಜಾಲವನ್ನು ಹಾಗೂ ವಸತಿಗಳಲ್ಲಿ ಪ್ರತಿಯೊಂದು ಕೋಣೆಗೆ ಕೂಡಾ ಈ ಸೌಲಭ್ಯವನ್ನು ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಬಳಕೆಗೆ ಅಮಿತವಾದ ಅವಕಾಶ ಉಂಟು.

4) **ಇನ್ನಿತರ ಸೌಲಭ್ಯಗಳು:** ಇತ್ತೀಚೆಗೆ 2005 ರಲ್ಲಿ ಕಮ್ಯುನಿಟಿ ಎಫ್. ಎಂ (FM) ರೇಡಿಯೋ ಸ್ಟೇಷನ್‌ನನ್ನು ಉದ್ಘಾಟಿಸಲಾಯಿತು. 30 ಕಿ.ಮೀ. ಒಳಗಡೆ ಇದು ತನ್ನ ಪ್ರಸಾರ ಕಾರ್ಯವನ್ನು ಮಾಡುತ್ತದೆ.

ಇದು ತನ್ನದೇ ಆದ ಆಸ್ಪತ್ರೆಯನ್ನು ಹೊಂದಿದೆ. ಅದರ ಹೆಸರು ಅಪಾಜಿ ಆರೋಗ್ಯ ಮಂದಿರ. 60 ಹಾಸಿಗೆಗಳನ್ನು ಹೊಂದಿದ್ದು

Digitised by Bharatavani, CIIL

ಹಗಲು–ರಾತ್ರಿ ವೈದ್ಯರು ಸೇವೆಯನ್ನು ಮಾಡುತ್ತಾರೆ. ಅತಿಥಿಗೃಹದಲ್ಲಿ ಪಾಲಕರಿಗೆ, ಅತಿಥಿಗಳಿಗೆ ಇರುವ ವ್ಯವಸ್ಥೆ ಮಾಡಿದೆ.

ಆವರಣದಲ್ಲಿ ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸ್ ಇದೆ. ಬ್ಯಾಂಕ್ ಎಸ್.ಬಿ.ಐ ಎ.ಟಿ.ಎಂ (ATM), ಪುಟ್ಟ ಮಾರುಕಟ್ಟೆ, ಪುಸ್ತಕ ಮತ್ತು ಸ್ಟೇಷನರಿ ಮಳಿಗೆ ಹಾಗೂ ಔಷದ ಅಂಗಡಿಗಳು ಇವೆ.

2001 ರಲ್ಲಿ ಜಯಪುರ ಕ್ಯಾಂಪಸ್‌ನಲ್ಲಿ ಬಿ.ಬಿ.ಎ, ಎಂ.ಬಿ.ಎ ಮತ್ತು ಐ.ಟಿ, ಬಿ.ಸಿ.ಎ, ಎಂ.ಸಿ.ಎ, ಎಂ.ಟೆಕ್ ಕೋರ್ಸುಗಳನ್ನು ಪ್ರಾರಂಭಿಸಿದ್ದು ಅಲ್ಲಿಯೂ ಪ್ರಯೋಗಾಲಯ, ಗ್ರಂಥಾಲಯ, ಉಪನ್ಯಾಸ ಕೋಣೆ ಮತ್ತು ಅಂತರ್ಜಾಲದ ವ್ಯವಸ್ಥೆ ಇರುತ್ತದೆ.

**3. ಶ್ರೀ ಪದ್ಮಾವತಿ ಮಹಿಳಾ ವಿಶ್ವವಿದ್ಯಾನಿಲಯ, ತಿರುಪತಿ (ಆಂಧ್ರಪ್ರದೇಶ):**

ಆಂಧ್ರಪ್ರದೇಶದ ರಾಜ್ಯ ಸರಕಾರವು ಕ್ರಿ.ಶ.1983 ರಲ್ಲಿ ಎನ್.ಟಿ.ರಾಮರಾವ್ ಅವರ ನೇತೃತ್ವದಲ್ಲಿ ಶಾಸನ ಬದ್ಧವಾಗಿ ಈ ವಿಶ್ವವಿದ್ಯಾನಿಲಯವು ಸ್ಥಾಪಿತವಾಯಿತು. ನಂತರ ಪದ್ಮಾವತಿ ದೇವತೆ ಹೆಸರಿಡಲಾಯಿತು.

ಪದ್ಮಾವತಿ ಮಹಿಳಾ ವಿಶ್ವವಿದ್ಯಾನಿಲಯವು 138 ಎಕರೆ ಕ್ಷೇತ್ರ ಹೊಂದಿದ್ದು, ಮಧ್ಯಮ ನಗರ ಪ್ರದೇಶದ ಪವಿತ್ರ ತಿರುಮಲ ಬೆಟ್ಟದ ಪಾದದಡಿಯಲ್ಲಿದೆ. ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹಣಕಾಸಿನ ಸಹಾಯ ಒದಗಿಸುತ್ತದೆ. ಇದು ಮೂರು ಪ್ರದೇಶಗಳಿಂದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕಾಗಿ ಆಕರ್ಷಿಸುತ್ತದೆ. ಅವುಗಳೆಂದರೆ, ರಾಯಲಸೀಮಾ, ತೆಲಂಗಾಣ ಮತ್ತು ಕರಾವಳಿ ಆಂಧ್ರ.

**ಉದ್ದೇಶಗಳು:**

1. ಮಹಿಳೆಯರಿಗೆ ವೃತ್ತಿ ಶಿಕ್ಷಣವನ್ನು ನೀಡಿ ಬಡ್ತಿ ನೀಡುವುದರೊಂದಿಗೆ ಸ್ವಾವಲಂಬನೆ ಮತ್ತು ಭಾರತದ ಸಮರ್ಥ ನಾಗರಿಕರನ್ನು ತಯಾರಿಸುವುದು.
2. ಉತ್ಸಾಹಿ ಅಪೇಕ್ಷಿತ ಮಹಿಳಾ ವಿದ್ಯಾರ್ಥಿಗಳಿಗೆ ರಾಷ್ಟ್ರ ಕಟ್ಟುವ ಮತ್ತು ಬದುಕಿನಲ್ಲಿ ನಾಯಕರ ಕೌಶಲಗಳನ್ನು ಅಳವಡಿಸುವಂತೆ ಮಾಡುವುದು.
3. ದೇಶದ ಬದಲಾಗುತ್ತಿರುವ ಸಮಯಕ್ಕನುಗುಣವಾಗಿ ಸಂಸ್ಕೃತಿ, ಸಂಪ್ರದಾಯವನ್ನು, ಉದ್ಯೋಗದ ಅವಕಾಶವನ್ನು, ಗುಣಮಟ್ಟದ ಶಿಕ್ಷಣ ಬೋಧನೆ ಮತ್ತು ಸಂಶೋಧನೆಯನ್ನು ಕಾರ್ಯಗತಗೊಳಿಸುವುದು.
4. ಸಾಮಾನ್ಯ ಮತ್ತು ವೃತ್ತಿಗೆ ಅನುಗುಣವಾಗಿ ಎಲ್ಲ ವಯಸ್ಸಿನ ಮಹಿಳೆಯರಿಗೆ ವಿಶೇಷವಾಗಿ ಆಂಧ್ರದ ಮಹಿಳೆಯರಿಗೆ ಜೀವನೋಪಾಯ ಮಾರ್ಗ ರೂಪಿಸುವಂತೆ ಶೈಕ್ಷಣಿಕ ಸೇವೆಯನ್ನು ಅರ್ಪಿಸುವಂತೆ ಮಾಡುವುದು.
5. ಸಂಶೋಧನೆ ಮತ್ತು ವಿದ್ವತ್‌ಪೂರ್ಣವಾದ ಚಟುವಟಿಕೆಗಳಿಂದ ಜ್ಞಾನವನ್ನು ಪಡೆಯುವುದು.
6. ಮಹಾನ್ ಬುದ್ಧಿವಂತ ಸಿಬ್ಬಂದಿ ವರ್ಗವನ್ನು ಮತ್ತು ವಿದ್ಯಾರ್ಥಿಗಳನ್ನು ಆಕರ್ಶಿಸುವುದು.
7. ಮಹಿಳೆಯರೆಲ್ಲರೂ ಅಭಿರುಚಿಯಿಂದ ಕೂಡಿಕೊಂಡು ಸಂಪನ್ಮೂಲಗಳನ್ನು ನಿರ್ವಹಿಸುವುದು ಮತ್ತು ಸ್ಥಿರ ವಾಗಿರುವಂತೆ ಮಾಡುವುದು.
8. ಪಡೆದುಕೊಂಡ ಜ್ಞಾನವನ್ನು ಲಾಭದಾಯಕವಾಗಿ ಮತ್ತು ಸೇವೆಗಾಗಿ ಆಂಧ್ರಪ್ರದೇಶ, ರಾಷ್ಟ್ರ, ಅಂತರಾಷ್ಟ್ರೀಯ ಸಮುದಾಯದೊಂದಿಗೆ ಹಂಚಿಕೊಳ್ಳುವುದು.

**ವಿಭಾಗಗಳು:** ಇದೊಂದು ಒಕ್ಕೂಟ ವಿಶ್ವವಿದ್ಯಾಲಯವಾಗಿದ್ದು, ಒಟ್ಟು 16 ವಿಭಾಗಗಳಲ್ಲಿ 52 ಐಚ್ಛಿಕ ಕಾರ್ಯಕ್ರಮಗಳು, 5 ಡಿಪ್ಲೊಮಾ ಸ್ನಾತಕೋತ್ತರ ಪದವಿ, ಪದವಿಗಳು, 16 ಸ್ನಾತಕೋತ್ತರ ಪದವಿಗಳು, 14 ಎಂ.ಫಿಲ್ ಮತ್ತು 14 ಪಿ.ಎಚ್.ಡಿ ಪದವಿಗಳು.

**ಸ್ನಾತಕೋತ್ತರ ಕೋರ್ಸುಗಳು (ರೆಗ್ಯುಲರ್):**

ಎಂ.ಎಸ್.ಸಿ: ಆನ್ವಯಿಕ ಗಣಿತ, ಆಹಾರ ಮತ್ತು ಪೌಷ್ಠಿಕಾಂಶ ವಿಜ್ಞಾನಗಳು, ಇದರಲ್ಲಿಯೇ ಮೂರು ಭಾಗಗಳಿವೆ. ಅದರಂತೆ ಮಾನವ ವಿಕಾಸ ಮತು ಮಹಿಳಾ ಅಧ್ಯಯನ, ರೇಷ್ಮೆ ಜೀವ ತಂತ್ರಜ್ಞಾನ.

ಎಂ.ಎ: ಆಂಗ್ಲ ಭಾಷೆ ಮತ್ತು ಸಾಹಿತ್ಯ, ತೆಲುಗು ಭಾಷೆ ಮತ್ತು ಸಾಹಿತ್ಯ, ಹಿಂದಿ ಭಾಷೆ ಮತ್ತು ಸಾಹಿತ್ಯ

ನಿರಂತರ ಶಿಕ್ಷಣ ನಿರ್ವಹಣೆ ಮತ್ತು ವಿಕಾಸ: ಸಂಗೀತ (ವೀಣೆ ಮತ್ತು ವೋಕಲ್), ಭರತನಾಟ್ಯಂ, ಮಹಿಳಾ ಅಧ್ಯಯನ.

ಇವುಗಳಲ್ಲದೆ ಎಂ.ಸಿ.ಎ, ಎಂ.ಇಡಿ, ಎಂ.ಸಿ.ಜೆ, ಎಂ.ಎಸ್. ಡಬ್ಲ್ಯೂ ಮುಂತಾದವುಗಳು.

**ಪದವಿ ಕೋರ್ಸುಗಳು:**

ಬಿ.ಫಾರ್ಮ, ಬಿ.ಇಡಿ, ಬಿ.ಇಡಿ (ಸ್ಪೆಷಲ್ ಎಜಯುಕೇಷನ್), ಎಲ್.ಎಲ್.ಬಿ–3 ವರ್ಷ ಮತ್ತು 5 ವರ್ಷ.

ಸರ್ಟಿಫಿಕೇಟ್ ಕೋರ್ಸುಗಳು:

3 ತಿಂಗಳ ಆ್ಯಡ್ ಆನ್ (ಸಂಜೆ) ಅಣು ಹಣಕಾಸು, ಇಂಗ್ಲೀಷ್ ಸಂವಹನ ಮತ್ತು ಮೃದು ಕೌಶಲ್ಯ ವಿಕಾಸ.

ಸ್ವ–ಹಣಕಾಸು ಕೋರ್ಸುಗಳು: (ಸ್ನಾತಕೋತ್ತರ ಸೆಲ್ಫ ಫೈನಾನ್ಸ್)

ಎಂ.ಎಸ್‌ಸಿ: ಬಯೋ ಇನ್‌ಫಾರ್ಮೆಟಿಕ್ಸ್, ಆನ್ವಯಿಕ ಜೀವ ವಿಜ್ಞಾನ, ಜೈವಿಕ ತಂತ್ರಜ್ಞಾನ (5 ವರ್ಷ ಸಮನ್ವಯ ಕೋರ್ಸು), ಸಸ್ಯ ಶಾಸ್ತ್ರ, ಪ್ರಾಣಿ ಶಾಸ್ತ್ರ, ಭೌತಶಾಸ್ತ್ರ, ಮನಃಶಾಸ್ತ್ರ, ಜೈವಿಕ ರಸಾಯನಶಾಸ್ತ್ರ, ಎಲೆಕ್ಟ್ರಾನಿಕ್ಸ್

Digitised by Bharatavani, CIIL

ಎಂ.ಬಿ.ಎ, ಎಂ.ಫಾರ್ಮಾ, ಎಂ.ಇಡಿ (ವಿಶೇಷ ಶಿಕ್ಷಣ ಕಿವುಡರಿಗೆ)

ಎಂ.ಎ: ಆನ್ವಯಿಕ ಅರ್ಥಶಾಸ್ತ್ರ, ಆನ್ವಯಿಕ ಸಮಾಜಶಾಸ್ತ್ರ, ಎಲ್.ಎಲ್.ಎಂ

ಪದವಿ: ಬಿ.ಪಿ.ಇಡಿ, ಬಿ.ಲಿಬ್ ಸಾಯನ್ಸ್, ಜೈವಿಕ ತಂತ್ರಜ್ಞಾನ

ಪಿ.ಜಿ.ಡಿಪ್ಲೊಮಾ ಕೋರ್ಸ್: ಕುಟುಂಬ ಆರೋಗ್ಯ ಮತ್ತು ಎಚ್.ಐ.ವಿ.ಏಡ್ಸ್, ಜಾಣ್ಮೆಯ ಆಸ್ತಿ ಹಕ್ಕುಗಳು ಮತ್ತು ಕೈಗಾರಿಕಾ ಸಂಬಂಧಗಳು ಮತ್ತು ವ್ಯಕ್ತಿಗತ ಸಂಬಂಧಗಳು

ಸರ್ಟಿಫಿಕೇಟ್ ಕೋರ್ಸುಗಳು (ಸಂಜೆ): ಕಂದಾಯ ಕಾನೂನುಗಳು, ಸಂಗೀತ (ವೀಣೆ, ವೋಕಲ್ ಮತ್ತು ಗೀತೆ), ಭರತನಾಟ್ಯಂ, ಶಿಸ್ತು ಕಾಳಜಿ ಮತ್ತು ನಿರ್ವಹಣೆ.

ಕೆಲವೊಂದು ವಿಷಯಗಳಲ್ಲಿ ಪ್ರವೇಶಾವಕಾಶಕ್ಕಾಗಿ ಪ್ರವೇಶ ಪರೀಕ್ಷೆ ಇರುವುದು.

ವಿಶ್ವವಿದ್ಯಾಲಯವು ಅಂತರಾಷ್ಟ್ರೀಯ ವಿಶ್ವವಿದ್ಯಾಲಯದೊಂದಿಗೆ ಮತ್ತು ರಾಷ್ಟ್ರೀಯ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದೆ. ಅವುಗಳಲ್ಲಿ ಮುಖ್ಯವಾಗಿ:

ಸಿಬ್ಬಂದಿ ಅಭಿವೃದ್ಧಿ ಕಾರ್ಯಕ್ರಮಗಳು ವಿಶ್ವವಿದ್ಯಾಲಯ (ವಿದೇಶಿ)

ಶಿಕ್ಷಣ ವಿಭಾಗ ಲಾಗ್ ಬರೋಜ್ (ಯು.ಕೆ)

ಮಹಿಳಾ ಸಾಹಸೋದ್ಯಮಿತ್ವ ಅಭಿವೃದ್ಧಿ ಮಂಟ್ರಿಯಲ್ (ಕೆನಡಾ) ರೇಷ್ಮೆಕೈಗಾರಿಕೆಯಲ್ಲಿ ಸಂಶೋಧನೆ ಚೀನಾ ಸರಕಾರ

ಹೆಣ್ಣು ಮಕ್ಕಳಿಗೆ ತಮ್ಮ ವೃತ್ತಿಯನ್ನು ಬೆಳೆಸುವುದಕ್ಕಾಗಿ ತರಬೇತಿಯನ್ನು ನೀಡುವುದು, ಮಂದ ಕಲಿಕಾ ಮಹಿಳೆಯರಿಗೆ ಪರಿಹಾರ ಬೋಧನೆ ನೀಡುವುದು, ಹಿಂದುಳಿದ ಮತ್ತು ಪರಿಶಿಷ್ಟ ಮಹಿಳೆಯರಿಗೆ ಪೂರ್ವ ಪರೀಕ್ಷೆ ತೆಗೆದುಕೊಂಡು ಉಳಿದವರೊಂದಿಗೆ ಸಮವಾಗಿರುವಂತೆ ಬಡ್ತಿ ನೀಡುವುದು ಮತ್ತು ಭೇದ-ಭಾವ ಅಳಿಯುವಂತೆ ಮಾಡುವುದು.

**4. ಮದರ್ ಥೆರೆಸಾ ಮಹಿಳಾ ವಿಶ್ವವಿದ್ಯಾನಿಲಯ, ಕೊಡೈಕೆನಾಲ್ (ತಮಿಳುನಾಡು):**

ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ ಎನ್ನುವ ತತ್ವವನ್ನಾಧರಿಸಿ ಕ್ರಿ.ಶ. 1984 ರಲ್ಲಿ ಈ ವಿಶ್ವವಿದ್ಯಾಲಯವು ಸ್ಥಾಪಿತವಾಯಿತು. ಇದು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿತವಾಗಿದ್ದು ಯು.ಜಿ.ಸಿ ಯಿಂದ ಸಂಯೋಜನೆಗೆ ಒಳಪಟ್ಟಿದೆ. ಮಹಿಳೆಯರಿಗೆ ವಿಶೇಷವಾದ ಕಾಳಜಿ ವಹಿಸಿ ಉನ್ನತ ಶಿಕ್ಷಣವನ್ನು ನೀಡಿ ಸಮರ್ಥರನ್ನಾಗಿಸುವ ಉದ್ದೇಶ ಹೊಂದಿರುವುದು. ತಮಿಳುನಾಡು ಆಕ್ಟ್ 15ರ ಪ್ರಕಾರ ಪ್ರತಿಪಾದನೆಗೊಂಡಿದೆ. ಮಹಿಳಾ ಅಧ್ಯಯನದ ಉಸ್ತುವಾರಿ ಜವಾಬ್ದಾರಿ, ಸೇವಾರ್ಪಣೆ ಮೂಲಕ ಸೇವೆ ಮತ್ತು ಸಂಶೋಧನಾ ಕಾರ್ಯವನ್ನು ಮಾಡುವುದು. ಇಷ್ಟೇ ಅಲ್ಲದೆ ಬದಲಾಗುತ್ತಿರುವ ಶೈಕ್ಷಣಿಕ ಬೇಡಿಕೆಗಳಿಗನುಗುಣವಾಗಿ ವಿವಿಧ ಕೋರ್ಸುಗಳನ್ನು ತೆರೆದು ದೂರ ಶಿಕ್ಷಣದ ಮೂಲಕ ಪೂರೈಸುವುದಾಗಿದೆ. ಕ್ರಿ.ಶ.1988 ರಲ್ಲಿ ಮದರ್ ಥೆರೆಸಾ ದೂರ ಶಿಕ್ಷಣ ಶಾಲೆ ಎಂಬುದು ಸ್ಥಾಪಿತಗೊಂಡಿತು.

**ಉದ್ದೇಶಗಳು:**

- ಎಲ್ಲ ಸಮುದಾಯದ ಮಹಿಳೆಯರಿಗೆ ಇದರ ಸೇವೆಯನ್ನು ವಿಸ್ತರಿಸುವುದು.
- ಶೈಕ್ಷಣಿಕ ಉತ್ಕೃಷ್ಠತೆ ಮತ್ತು ವ್ಯಕ್ತಿತ್ವ ವಿಕಾಸವನ್ನು ಹೊಂದುವಂತೆ ಹೋರಾಡುವುದು.
- ತರುಣ ಮಹಿಳೆಯರಿಗೆ ಸಮಾನ ಅವಕಾಶದ ಮಹತ್ವವನ್ನು ನೀಡಿ ಉದ್ಯೋಗದಲ್ಲಿ ದೂರದೃಷ್ಟಿಯನ್ನು ಹೊಂದಿ ಪದೋನ್ನತಿ ನೀಡುವುದು ಮಹಿಳೆಯರ ಹಿತಾಸಕ್ತಿಯನ್ನು ಬಯಸಿ ಉನ್ನತ ಮಟ್ಟದ ಶಿಕ್ಷಣವನ್ನು ಪೂರೈಸುವುದು.

**ಕೆಳಗಿನ ಕೋರ್ಸುಗಳನ್ನು ಮಹಿಳೆಯರಿಗೆ ನೀಡುವುದು**

1) ಎರಡು ವರ್ಷದ ಎಂ.ಫಿಲ್ ಕೋರ್ಸು: ಗಣಕಯಂತ್ರ, ಅರ್ಥಶಾಸ್ತ್ರ, ಶಿಕ್ಷಣ, ಆಂಗ್ಲಭಾಷೆ, ಐತಿಹಾಸಿಕ ಅಧ್ಯಯನ, ತಮಿಳು, ಸಮಾಜಶಾಸ್ತ್ರ, ಕೌಟುಂಬಿಕ ಜೀವನ ನಿರ್ವಹಣೆ, ಮಹಿಳಾ ಅಧ್ಯಯನ ಮುಂತಾದವು

2) ಎರಡು ವರ್ಷದ ಎಂ.ಎ ಕೋರ್ಸು: ಮಹಿಳಾ ಅಧ್ಯಯನ, ಮಾರ್ಗದರ್ಶನ ಮತ್ತು ಸಲಹೆ

3) ಮೂರು ವರ್ಷದ ಸ್ನಾತಕೋತ್ತರ ಪದವಿ: ಕಂಪ್ಯೂಟರ್ ಅಪ್ಲಿಕೇಶನ್

4) ಸ್ನಾತಕೋತ್ತರ ಡಿಪ್ಲೊಮಾ (ಒಂದು ವರ್ಷ): ಕಂಪ್ಯೂಟರ್ ಅಪ್ಲಿಕೇಶನ್, ಸಮೂಹ ಸಂವಹನ, ಭಾಷಾಂತರ, ಮಾನವ ಹಕ್ಕುಗಳು, ವನಸ್ಪತಿ (ವೈದ್ಯಕೀಯ) ಔಷಧ ಅಧ್ಯಯನಕ್ಕಾಗಿ ವಿವಿಧ ವಿಭಾಗಗಳಿವೆ.

5) ಪಿ.ಎಚ್.ಡಿ ಗೂ ಅವಕಾಶ: ವಿವಿಧ ವಿಭಾಗಗಳಲ್ಲಿ ಸಂಶೋಧನಾ ಕಾರ್ಯವಿದ್ದು ಪಿ.ಎಚ್.ಡಿ ಮಾಡುವ ಅವಕಾಶ ಕಲ್ಪಿಸಲಾಗಿದೆ.

**ಈ ವಿಶ್ವವಿದ್ಯಾನಿಲಯದ ಕೆಳಗೆ**

- ಎಂ.ಟಿ.ಡಬ್ಲ್ಯು.ಯು ಮಹಾವಿದ್ಯಾಲಯ, ಕೊಡೈಕೆನಾಲ್
- ಎಂ.ವಿ.ಮುತ್ತಯ್ಯ ವಲ್ಲಾಯಿ ಕಲಾ ಮಹಿಳಾ ಕಾಲೇಜು, ದಿಂಡಿಗಲ್
- ಸರಕಾರಿ ಮಹಿಳಾ ಕಲಾ ಕಾಲೇಜು, ನೀಲಕೊಟ್ಟಾಯಿ

Digitised by Bharatavani, CIIL

**5. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಾಪುರ:**

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು ಕ್ರಿ.ಶ.2003 ರಲ್ಲಿ ವಿಜಾಪುರದಲ್ಲಿ ಸ್ಥಾಪಿತವಾಯಿತು. ಮಹಿಳಾ ಶಿಕ್ಷಣ ಅಭಿವೃದ್ಧಿಗೋಸ್ಕರವಾಗಿ, ಅದರಂತೆ ಪರಿಣಾಮಕಾರಿಯಾಗಿ ಮತ್ತು ರಚನಾತ್ಮಕವಾಗಿ ಸಮಾಜದಲ್ಲಿ ಅವರ ಪಾತ್ರವನ್ನು ಹೆಚ್ಚಿಸುವುದಾಗಿದೆ.

**ಶೈಕ್ಷಣಿಕ ಕಾರ್ಯಕ್ರಮಗಳು**

1) ಮಾನವಿಕ ನಿಖಾಯ: ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ವಿಭಾಗಗಳನ್ನು ಹೊಂದಿದ್ದು, ಪಿ.ಜಿ.ಡಿಪ್ಲೊಮಾದಲ್ಲಿ ಭಾಷಾಂತರ, ಆಂಗ್ಲ ಭಾಷೆಯ ಪ್ರಭುತ್ವ ಹೊಂದಲು ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ.

2) ಸಾಮಾಜಿಕ ವಿಜ್ಞಾನ ನಿಖಾಯ: ಅರ್ಥಶಾಸ್ತ್ರ, ಸಾಮಾಜಿಕ ಕಾರ್ಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಸಮಾಜಸಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಹಾಗೂ ಮಹಿಳಾ ಅಧ್ಯಯನ ಇವುಗಳೆಲ್ಲವೂ ಸ್ನಾತಕೋತ್ತರ ಪದವಿಗಳಾಗಿವೆ. ಅದರಂತೆ ಪಿ.ಜಿ. ಡಿಪ್ಲೊಮಾದಲ್ಲಿ ಮಹಿಳೆ ಮತ್ತು ಸವಬಲೀಕರಣ, ಎಂ.ಎಲ್.ಐ.ಎಸ್.ಸಿ ಮತ್ತು ಎಂ.ಎಸ್. ಡಬ್ಲ್ಯೂ, ಗ್ರಂಥಾಲಯ ವಿಜ್ಞಾನ ಹಾಗೂ ಪಂಚಾಯತ ರಾಜ್ಯ ಸಂಸ್ಥೆಗಳು ಎಂಬ ವಿಷಯಗಳ ಮೇಲೆ ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಿದ್ದಾರೆ.

3) ವಿಜ್ಞಾನ ತಂತ್ರಜ್ಞಾನ ನಿಖಾಯ: ಬಯೋ ಇನ್‌ಫಾರ್ಮೆಟಿಕ್ಸ್, ಬಯೋ ಟೆಕ್ನಾಲಜಿ, ಕಂಪ್ಯೂಟರ್ ಸಾಯಿನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಫಾರ್ಮಾಸ್ಯುಟಿಕಲ್ ಕೆಮಿಸ್ಟ್ರಿ ಇವುಗಳಲ್ಲಿ (ಎಂ. ಎಸ್.ಸಿ) ಸ್ನಾತಕೋತ್ತರ ಪದವಿಯನ್ನು ಪಡೆಯಬಹುದು. ಪಿ.ಜಿ.ಡಿಪ್ಲೊಮಾದಲ್ಲಿ ಕಂಪ್ಯೂಟರ್ ಅಪ್ಲಿಕೇಷನ್ಸ್ ಅದರಂತೆ ಆಫೀಸ್ ಆಟೋಮೇಷನ್‌ದಲ್ಲಿ ಮತ್ತು ವಿಜ್ಯುಯಲ್ ಪ್ರೊಗ್ರಾಂಗಳಲ್ಲಿ ಸರ್ಟಿಫಿಕೇಟ್ ಕೋರ್ಸುಗಳನ್ನು ನೀಡಲಾಗುತ್ತದೆ.

4) ಶಿಕ್ಷಣ ನಿಖಾಯ: ಈ ವಿಭಾಗದಲ್ಲಿ ಬಿ.ಇಡಿ, ಬಿ.ಪಿ.ಇಡಿ ಮತು ಎಂ.ಇಡಿ, ಎಂ.ಪಿ.ಇಡಿ ದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆಯಬಹುದು.

5) ವಾಣಿಜ್ಯ ಮತ್ತು ಆಡಳಿತ ಅಭ್ಯಾಸ ನಿಖಾಯ: ಈ ವಿಭಾಗವು ನಿರ್ವಹಣಾ ಅಧ್ಯಯನ ಹೊಂದಿದ್ದು ಅದರ ಕೆಳಗೆ ವ್ಯವಹಾರ ಆಡಳಿತಕ್ಕೆ ಸಂಬಂಧಿಸಿದಂತೆ ವಿಶೇಷತೆಗಳಿವೆ. ಅದರಲ್ಲಿ ಹಣಕಾಸು, ಮಾರುಕಟ್ಟೆ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ವ್ಯವಸ್ಥೆ ಇವುಗಳ ಬಗ್ಗೆ ನಿಖಾಯವು ಕೋರ್ಸುಗಳನ್ನು ಪ್ರಾರಂಭಿಸಿರುತ್ತವೆ. ಅಲ್ಲದೆ ವಿವಿಧ ನಿಖಾಯಗಳು ಕೂಡ ಸಂಶೋಧನಾ ಕಾರ್ಯವನ್ನು ಎತ್ತಿಕೊಂಡಿವೆ.

**ಸಂಶೋಧನೆ ಕುರಿತು ಕೆಳಗಿನ ಕ್ಷೇತ್ರಗಳಿಗೆ ಒತ್ತು ನೀಡಿದೆ**

**ಮಹಿಳೆ ಮತ್ತು ಪೌಷ್ಠಿಕತೆ:** ರಾಬ ಆಫ್ ಎಸ್.ಎಚ್.ಜಿ, ಮಹಿಳಾ ಸಬಲೀಕರಣದಲ್ಲಿ ಎನ್.ಜಿ.ಓ, ಮಹಿಳಾ ಸಾಕ್ಷರತೆ ಕಾರ್ಯಕ್ರಮ, ಧಾರ್ಮಿಕವಾಗಿ ಹಿಂದುಳಿದವರಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು, ಎನ್.ಜಿ.ಓ ನಿರ್ವಹಣೆ, ಮಹಿಳೆಯ ಪೂರ್ವ ಸದಸ್ಯತ್ವದ ಮುಂಬಡ್ತಿ, ಮಾಧ್ಯಮ ಮತ್ತು ಮಹಿಳೆ, ಗ್ರಂಥಾಲಯದಲ್ಲಿ ಮಾಹಿತಿ ತಂತ್ರಜ್ಞಾನದ ಮತ್ತು ಉಪಯೋಗ ಅಧ್ಯಯನದ ಅನ್ವಯಿಸುವಿಕೆ, ಬಯೋ ಪೆಸ್ಟಿಸೈಡ್ ಡ್ರಗ್ ಡಿಜಾಯಿನಿಂಗ್, ಪ್ಲಾಂಟ್ ಜೀನೋಮಿಕ್ಸ್ ಮತ್ತು ಶಾರೀರಿಕ ತರಬೇತಿ.

**ಇನ್ನಿತರ ಅಂಶಗಳು**

ವಿಶಾಲವಾದ ಮತ್ತು ಆರೋಗ್ಯಯುತವಾದ ಮುಕ್ತ ವಾತಾವರಣ ಹೊಂದಿದ್ದು, ಸಂಕೀರ್ಣತೆಯಿಂದ ಕೂಡಿದ ಉತ್ತಮ ಆವರಣವಿದೆ. ಗ್ರಂಥಾಲಯದಲ್ಲಿ 45,000 ಪುಸ್ತಕಗಳಿವೆ. ಇದಲ್ಲದೇ ಸಂಚಿಕೆಗಳು, ಇ–ಜರ್ನಲ್, ದಿನಪತ್ರಿಕೆಗಳು, ಇ–ಬಾಕ್ಸ್, ಇ–ಡೈರೆಕ್ಟರಿಜ್, ಬ್ಯಾಕ್ ವಾಲ್ಯುಮ್ಸ್ ಮುಂತಾದವುಗಳಿವೆ.

ಸದ್ಯ ಈ ವಿಶ್ವವಿದ್ಯಾಲಯದ ಕೆಳಗೆ ಸುಮಾರು 45 ಮಹಿಳಾ ಮಹಾವಿದ್ಯಾಲಯಗಳು ತಾತ್ಪೂರ್ತಿಕ ಮತ್ತು ಶಾಶ್ವತ ಸಂಯೋಜನೆಗೆ ಒಳಪಟ್ಟಿರುತ್ತವೆ.

**–ಡಾ. ಐಹೋಳ್ಳಿ ವಿ.ಡಿ.**

## ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ (INSA)

**ಪ್ರಸ್ತಾವನೆ:** ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ (INSA) ಯು ಭಾರತದ ವಿಜ್ಞಾನಿಗಳ ಒಂದು ಶಿಖರ ಸಂಸ್ಥೆಯಾಗಿದ್ದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಎಲ್ಲಾ ವಿಭಾಗಗಳನ್ನು ಪ್ರತಿನಿಧಿಸುತ್ತದೆ. ಭಾರತದಲ್ಲಿ ವಿಜ್ಞಾನದ ಅಭಿವೃದ್ಧಿಯನ್ನು ಸಾಧಿಸುವುದು ಈ ಸಂಸ್ಥೆಯ ಪ್ರಮುಖ ಉದ್ದೇಶ. ಇದರಲ್ಲಿ ರಾಷ್ಟ್ರದ ಅಭಿವೃದ್ಧಿ, ವಿಜ್ಞಾನಿಗಳ ಹಿತಾಸಕ್ತಿಯ ರಕ್ಷಣೆ, ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಹಯೋಗವನ್ನು ಪ್ರೋತ್ಸಾಹಿಸಲು ಹಾಗೂ ಸಂಪರ್ಕವನ್ನು ಸಾಧಿಸಲು, ರಾಷ್ಟ್ರೀಯ ಸಮಸ್ಯೆಗಳ ಮೇಲೆ ಅಮೂಲ್ಯವಾದ ಅಭಿಪ್ರಾಯಗಳನ್ನು ನೀಡುವುದು ಇವು ಈ ಉದ್ದೇಶಗಳಲ್ಲಿ ಸೇರಿವೆ.

1935ರ ಜನವರಿ 7ರಂದು ಕಲ್ಕತ್ತಾದಲ್ಲಿ ಭಾರತದ ರಾಷ್ಟ್ರೀಯ ವಿಜ್ಞಾನ ಸಂಸ್ಥೆ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್ ಆಫ್ ಇಂಡಿಯಾ) ಎಂಬ ಹೆಸರಿಲ್ಲಿ ಈ ಸಂಸ್ಥೆ, ಏಶಿಯಾಟಿಕ್ ಸೊಸೈಟಿಯ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿತು. ಸರ್ ಲಿವಿಸ್ ಆರ್. ಫ್ರೆಮರ್ ಇದರ ಸ್ಥಾಪಕಾಧ್ಯಕ್ಷರು (1935–36) ಪ್ರೊ. ಮೇಘನಾದ ಸಹಾರವರು ಇದರ ಪ್ರಪ್ರಥಮ ಚುನಾಯಿತ ಭಾರತೀಯ ಅಧ್ಯಕ್ಷರು

Digitised by Bharatavani, CIIL

(1937)–38) 1945ರ ಅಕ್ಟೋಬರ್ 1ರಂದು, ಅಂದಿನ ಭಾರತ ಸರಕಾರವು, ಈ ಸಂಸ್ಥೆಯನ್ನು ವಿಜ್ಞಾನದ ಎಲ್ಲಾ ವಿಭಾಗಗಳನ್ನು ಪ್ರತಿನಿಧಿಸುವ ಭಾರತದ ಪ್ರಧಾನ ವಿಜ್ಞಾನ ಸಂಸ್ಥೆ ಎಂದು ಮನ್ನಿಸಿತು. 1946ರಲ್ಲಿ ದಿಲ್ಲಿ ವಿಶ್ವವಿದ್ಯಾಲಯದ ಆವರಣಕ್ಕೆ ಈ ಸಂಸ್ಥೆಯ ಕೇಂದ್ರ ಕಚೇರಿಯನ್ನು ಸ್ಥಳಾಂತರಿಸಲಾಯಿತು. ದೇಶಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ, ಈಗ ಬಹಾದುರ್ ಜಾಫರ್ ರಸ್ತೆಯಲ್ಲಿರುವ ಸಂಸ್ಥೆಯ ನಿವೇಶನವನ್ನು ಗುರುತಿಸಲಾಯಿತು ಮತ್ತು ದೇಶದ ಪ್ರಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರು 1948ರ ಏಪ್ರಿಲ್ 19ರಂದು ನೂತನ ಕಟ್ಟಡದ ಶಿಲಾನ್ಯಾಸ ನೆರವೇರಿಸಿದರು. 1951ರಲ್ಲಿ ಕಟ್ಟಡ ನಿರ್ಮಾಣ ಪೂರ್ಣಗೊಂಡಿತು.

1968ರ ಜನವರಿಯಲ್ಲಿ ಈ ಸಂಸ್ಥೆಯನ್ನು ಭಾರತದಲ್ಲಿ ICSU ಗೆ ಭಾರತ ಸರ್ಕಾರದ ಪರವಾಗಿ ದೃಢವಾಗಿ ಬದ್ಧವಾಗಿರುವ ಸಂಸ್ಥೆ ಎಂದು ಅಭಿದಾನ ಮಾಡಿರುವುದು ಈ ಸಂಸ್ಥೆಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

1970ರ ಫೆಬ್ರವರಿಯಲ್ಲಿ ಸಂಸ್ಥೆಗೆ ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ (INSA) ಎಂದು ಮರುನಾಮಕರಣ ಮಾಡಲಾಯಿತು.

**ಸಂಘಟನೆಯ ವಿನ್ಯಾಸ:**

ಅಪ್ರತಿಮ ಸಾಧನೆ ತೋರಿದ ಭಾರತೀಯ ವಿಜ್ಞಾನಿಗಳನ್ನು ಸಂಸ್ಥೆಯೇ ಫೆಲೋ (Fellow) ಆಗಿ ಆಯ್ಕೆ ಮಾಡುವ ಮೂಲಕ ಅವರನ್ನು ಗುರುತಿಸಿ ಗೌರವಿಸಲಾಗುತ್ತದೆ ವಿಜ್ಞಾನ ಮತ್ತು ಇಂಜಿನಿಯರಿಂಗ್‌ನ ವಿವಿಧ ವಿಭಾಗಗಳಿಂದ ಸೂಚಿತವಾದ ಹೆಸರುಗಳನ್ನು 10 ಉಪಸಮಿತಿಗಳು ವಿವರವಾಗಿ ಪರಿಶೀಲಿಸಿದ ಬಳಿಕ ಅಂತಿಮ ಆಯ್ಕೆಯು ಕೌನ್ಸಿಲ್‌ನಿಂದ ನಡೆಯುತ್ತದೆ. ಪ್ರತಿ ವರ್ಷ 'ಫೆಲೋ' ಆಗಿ ಆಯ್ಕೆಯಾಗಲಿರುವ ವಿಜ್ಞಾನಿಗಳ ಸಂಖ್ಯೆ 30ಕ್ಕೆ ಮಿತವಾಗಿರುತ್ತದೆ. ಅಕಾಡೆಮಿಯಿಂದ 'ಫೆಲೋ' ಆಗಿ ಆಯ್ಕೆಯಾಗಿರುವುದು ಒಂದು ಗಮನಾರ್ಹ ಗೌರವ ಎಂಬುದಾಗಿ ದೇಶದ ವಿಜ್ಞಾನಿಗಳು ಭಾವಿಸುತ್ತಾರೆ. ಫೆಲೋಶಿಪ್ ಪಡೆದವರ ಸದ್ಭಾವನೆ, ಸಹಕಾರ ಹಾಗೂ ಸಮರ್ಪಣಾ ಮನೋಭಾವ ಅಕಾಡೆಮಿಗೆ ಬಲ ನೀಡುತ್ತದೆ. ಸ್ಥಾಪನೆಯಾದಂದಿನಿಂದ ಅಕಾಡೆಮಿಯು 1213 ಮಂದಿಗೆ 'ಫೆಲೋ' ಗೌರವ ನೀಡಿದೆ. ಪ್ರಸ್ತುತ 690 ಮಂದಿ ಫೆಲೋಶಿಪ್ ಪಡೆದವರಿದ್ದಾರೆ.

ಭಾರತೀಯ ನಾಗರಿಕರಲ್ಲದಿದ್ದರೂ, ಭಾರತೀಯ, ವಿಜ್ಞಾನದ ಮುನ್ನಡೆಯಲ್ಲಿ ಅತಿ ಆಪ್ತ ಸಂಬಂಧ ಹೊಂದಿದ ವಿಶ್ವದ ವಿವಿಧ ಭಾಗಗಳ ಪ್ರಖ್ಯಾತ ವಿಜ್ಞಾನಿಗಳನ್ನು 'ವಿದೇಶಿ ಫೆಲೋ' ಗೌರವಕ್ಕೆ ಆಯ್ಕೆ ಮಾಡಲಾಗುತ್ತದೆ. ಪ್ರತಿ ವರ್ಷ ಗರಿಷ್ಠ 6 ಮಂದಿ ವಿಜ್ಞಾನಿಗಳನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗುತ್ತದೆ. ಪ್ರಸ್ತುತ 105 ಮಂದಿ 'ವಿದೇಶಿ ಫೆಲೋ' ಗಳಿದ್ದಾರೆ.

ಫೆಲೋಶಿಪ್ ಪಡೆದ ಸದಸ್ಯರಲ್ಲಿ ಕೆಲವರನ್ನು ಆಯ್ಕೆ ಮಾಡಿ ಸಮಿತಿಯೊಂದನ್ನು ರಚಿಸಲಾಗುತ್ತದೆ ಮತ್ತು ಅಕಾಡೆಮಿಯ ಆಡಳಿತ, ನಿರ್ದೇಶನ ಮತ್ತು ನಿರ್ವಹಣೆಯನ್ನು ಈ ಸಮಿತಿಗೆ ಒಪ್ಪಿಸಿಕೊಡಲಾಗುತ್ತದೆ ಸಮಿತಿಯಲ್ಲಿ ಓರ್ವ ಅಧ್ಯಕ್ಷ, ಇಬ್ಬರು ಉಪಾಧ್ಯಕ್ಷರು, ಖಜಾಂಚಿ, ಓರ್ವ ವಿದೇಶ ಕಾರ್ಯದರ್ಶಿಗಳು ಇಬ್ಬರು (ಪ್ರಕಟಣೆಗಳ) ಸಂಪಾದಕರು ಇವರು ಪದಾಧಿಕಾರಿಗಳಾಗಿ ಹಾಗೂ 18 ಇತರ ಸದಸ್ಯರು ಇರುತ್ತಾರೆ. ಇವರೇ ಅಲ್ಲದೆ, ಏಶಿಯಾಟಿಕ್ ಸೊಸೈಟಿ, ಇಂಡಿಯನ್ ಸಮನ್ಸ್ ಕ್ರಾಂಗ್ರೆಸ್ ಅಸೋಸಿಯೇಷನ್, ನ್ಯಾಷನಲ್ ಅಕಾಡೆಮಿ ಆಫ್ ಸಮನ್ಸಸ್, ಇಂಡಿಯಾ ಅಲಹಾಬಾದ್, ಸಂಸ್ಥೆಗಳ ತಲಾ ಓರ್ವ ಪ್ರತಿನಿಧಿಯನ್ನು, ಹಾಗೂ ಭಾರತ ಸರಕಾರದಿಂದ ನಾಮನಿರ್ದೇಶಿತವಾದ ಸದಸ್ಯರನ್ನು ಇದು ಹೊಂದಿರುತ್ತದೆ. ಈ ಎಲ್ಲಾ ನಾಮನಿರ್ದೇಶಿತರು ಅಕಾಡೆಮಿಯ ಫೆಲೋಗಳಾಗಿರಬೇಕು. ದೇಶದ ಕೆಲವು ಸುಪ್ರಸಿದ್ಧ ವಿಜ್ಞಾನಿಗಳಾದ ಲೆಫ್ಟಿನೆಂಟ್ ಕರ್ನಲ್ ಟಿ.ಎನ್. ಚೋಪ್ರಾ, ಪ್ರೊ. ಜೆ.ಸಿ. ಘೋಷ್ ಡಾ. ವಾಡಿಯಾ, ಪ್ರೊ. ಎಸ್.ಎಸ್. ಭಟ್ನಾಗರ್, ಪ್ರೊ. ಎಸ್.ಎನ್. ಬೋಸ್, ಪ್ರೊ. ಕೆ.ಎಸ್. ಕೃಷ್ಣನ್, ಪ್ರೊ. ಎ.ಎನ್. ಖೋಸ್ಲಾ, ಪ್ರೊ. ಟಿ.ಆರ್. ಶೇಷಾದ್ರಿ, ಪ್ರೊ. ಡಿ.ಎಸ್. ಕೊಠಾರಿ ಹಾಗೂ ಡಾ. ಬಿ.ಪಿ. ಪಾಲ್ ಮುಂತಾದವರು ಈ ಹಿಂದೆ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಮೂಲಕ ಅಕಾಡೆಮಿಯ ಚಟುವಟಿಕೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ.

ವಿವಿಧ ಸ್ಥಾಯಿ ಸಮಿತಿಗಳು ಹಾಗೂ ಸಲಹಾ ಸಮಿತಿಗಳು ಕೌನ್ಸಿಲ್‌ನ ಚಿಂತನದಲ್ಲಿ ನೆರವು ನೀಡುತ್ತವೆ. ಫೆಲೋಗಳನ್ನು ಹಾಗೂ ವಿದೇಶೀ ಫೆಲೋಗಳನ್ನು ಆಯ್ಕೆ ಮಾಡುವುದರ ಜೊತೆಗೆ INSA ಸಂಶೋಧನಾ ಪ್ರೊಫೆಸರ್‌ಷಿಪ್, ಹಿರಿಯ ವಿಜ್ಞಾನಿಗಳು, ಯುವ ವಿಜ್ಞಾನಿಗಳು INSA ಪದಕ ಉಪನ್ಯಾಸ ಪ್ರಶಸ್ತಿ ಮೊದಲಾದವುಗಳ ಪುರಸ್ಕೃತರುಗಳ ಆಯ್ಕೆಗಳ ಕುರಿತು ಕೌನ್ಸಿಲ್ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಇದು ಸ್ಥಳೀಯ ಶಾಖೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ, ನೀತಿ ನಿಯಮಗಳ ಬದಲಾವಣೆ ಅಥವಾ ಪರಿಷ್ಕರಣೆ ಬಗ್ಗೆ ವಿದೇಶಿ ಸಂಸ್ಥೆಗಳೊಂದಿಗೆ ಸಂವಹನದ ಬಗ್ಗೆ ಜೊತೆಗೆ ಕಾಲಕಾಲಕ್ಕೆ ಅಕಾಡೆಮಿಯಾಗಿ ವಹಿಸಿಕೊಡಲಾಗುವ ಇತರ ವಿಷಯಗಳ ಬಗ್ಗೆಯೂ ಚಿಂತನ ಮಂಥನ ನಡೆಸುತ್ತದೆ. ವರ್ಷಕ್ಕೆ ನಾಲ್ಕು ಬಾರಿ, ದೇಶದ ವಿವಿಧ ಭಾಗಗಳಲ್ಲಿ ಸಭೆ ಸೇರುವ ಸಮಿತಿಯು ಸ್ಥಳೀಯ ವಿಜ್ಞಾನ ಸಮುದಾಯದ ಸದಸ್ಯರೊಡನೆ ಸಂವಹನ ನಡೆಸುತ್ತದೆ. ಸಮಿತಿಯ ಸಭೆಯ ಸಂದರ್ಭದಲ್ಲಿ ಪ್ರಾದೇಶಿಕ ಅಥವಾ ರಾಷ್ಟ್ರೀಯ ಮಹತ್ವದ ವಿಚಾರಗಳ ಬಗ್ಗೆ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗುತ್ತದೆ. ಭಾರತದಲ್ಲಿ ಆರೋಗ್ಯ, ವಿಜ್ಞಾನ, ವಿಜ್ಞಾನದಲ್ಲಿ ಉನ್ನತ ಶಿಕ್ಷಣ, ಭಾರತದಲ್ಲಿ ಪರ್ಯಾಯ ಇಂಧನ ಮೂಲಗಳು, ಭಾರತದ ಸಸ್ಯ ಸಂಪತ್ತು, ವಿಜ್ಞಾನ ಪ್ರಕಟಣೆಗಳ ಗುಣಮಟ್ಟ, ಬೌದ್ಧಿಕ ಆಸ್ತಿಯ ಹಕ್ಕುಗಳು, ಮತ್ತು ಭಾರತೀಯ ಮಾನವಸ್ವತ್ತು ಮುಂತಾದ ವಿಶಿಷ್ಟ ವಿಷಯಗಳು ಇತ್ತೀಚಿನ ದಿನಗಳಲ್ಲಿ ವಿಚಾರ ಸಂಕಿರಣದ ಕೆಲವು ನಿರ್ದಿಷ್ಟ ಚರ್ಚಾ ವಿಷಯಗಳಾಗಿದ್ದವು.

Digitised by Bharatavani, CIIL

**ಚಟುವಟಿಕೆಗಳ ಚಿತ್ರಣ:**

ವಿಜ್ಞಾನವು ವಿಕಾಸಗೊಂಡ ಬಗ್ಗೆ ಹಾಗೂ ದೇಶದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳು ಅಭಿವೃದ್ಧಿ ಹೊಂದಿದ ಬಗ್ಗೆ ಸಂಶೋಧನೆಯ ಹಾಗೂ ಅದನ್ನು ಪ್ರಕಟಿಸುವ ಮಹತ್ವವನ್ನು ಅರಿತು ಅಕಾಡೆಮಿಯು ಭಾರತೀಯ National Commission for History of Science ಅನ್ನು ಸ್ಥಾಪಿಸಿದೆ. ಕಮಿಷನ್‌ನ ಚಟುವಟಿಕೆಯು ಮೂರು ಅವಧಿಗಳನ್ನು ಒಳಗೊಂಡಿದೆ. ಅವುಗಳೆಂದರೆ :

1) ಕ್ರಿಸ್ತಶಕ 1200 ರವರೆಗಿನ ಆರಂಭಿಕ ಅವಧಿ
2) ಕ್ರಿಸ್ತಶಕ 1200–1800ರವರೆಗಿನ ಮಧ್ಯ ಅವಧಿ
3) ಕ್ರಿಸ್ತಶಕ 1801ರಿಂದ ಆರಂಭವಾಗುವ ನವೀನಯುಗ.

ಕಮೀಷನ್‌ನ ಕಾರ್ಯಗಳು ಇವುಗಳನ್ನು ಒಳಗೊಂಡಿದೆ : (i) ವಿಜ್ಞಾನಕ್ಕೆ ಸಂಬಂಧಿಸಿದ ಪ್ರಾಚೀನ ಹಸ್ತಪ್ರತಿಗಳ ವಿಮರ್ಶಾತ್ಮಕ ಮೌಲ್ಯಮಾಪನ ಮತ್ತು ಭಾಷಾಂತರ (ii) ವಿಚಾರ ಸಂಕಿರಣ ಹಾಗೂ ಕಾರ್ಯಗಾರಗಳನ್ನು ವ್ಯವಸ್ಥೆ ಮಾಡುವುದು ಮತ್ತು (iii) Indian Journal of History of Science ನ ಪ್ರಕಾಶನ ಭಾರತದಲ್ಲಿ ಈ ಬಗೆಯ ಪತ್ರಿಕೆಯು ಇದೊಂದೇ ಆಗಿದ್ದು 30 ವರ್ಷಗಳ ಹಿಂದೆಯೇ ಪ್ರಾರಂಭಗೊಂಡಿದೆ. (iv) ಆಕರ (ಮೂಲ) ದಾಖಲೆಗಳ ಸಂಗ್ರಹ ಮತ್ತು ಅವುಗಳ ದಾಖಲೀಕರಣ.

ಅಕಾಡೆಮಿಯು ವಿಜ್ಞಾನ ಮತ್ತು ತಂತ್ರಜ್ಞಾನದ ಇತಿಹಾಸದ ಕುರಿತು ತಜ್ಞರು ವಿವಿಧ ವಿಭಾಗಗಳಲ್ಲಿ ನಡೆಸುವ ಸಂಶೋಧನಾ ಕಾರ್ಯವನ್ನು ವಿಮರ್ಶಾತ್ಮಕ ಪುನರಾವಲೋಕನ ಪ್ರಕ್ರಿಯೆಗೆ ಒಳಪಡಿಸಿ ಅನಂತರ ಸಹಕಾರ ನೀಡುತ್ತದೆ.

ಸಮಿತಿಯು ಹಿಸ್ಟರಿ ಆಫ್ ಅಸ್ಟ್ರಾನಮಿ ಇನ್ ಇಂಡಿಯಾ, ಹಿಸ್ಟರಿ ಆಫ್ ಮೆಡಿಸಿನ್ ಇನ್ ಇಂಡಿಯಾ, ಹಿಸ್ಟರಿ ಆಫ್ ಟೆಕ್ನಾಲಜಿ ಇನ್ ಇಂಡಿಯಾ (ಮೂರು ಸಂಪುಟಗಳು), ಹಿಸ್ಟರಿ ಆಫ್ ಮೆಟಾಲರ್ಜಿ ಇನ್ ಇಂಡಿಯಾ, ಎ ಕನ್ಸೈಸ್ ಹಿಸ್ಟರಿ ಆಫ್ ಸಯನ್ಸ್ ಇನ್ ಇಂಡಿಯಾ.. ಮುಂತಾದ ವಿಷಯಗಳ ಮೇಲೆ ಏಕವಿಷಯದ ಪ್ರಬಂಧಗಳು ಸೇರಿವೆ. ವೈಜ್ಞಾನಿಕ ವಲಯದಿಂದ ಈ ಮುಂಚೆಯೇ ಅತ್ಯಂತ ಪ್ರಶಂಸೆಗಳಿಸಿರುವ ಪ್ರಕಟಣೆಗಳಲ್ಲಿ ಹೆಸರಿಸಬಹುದಾದವು ಕರಾಹ ಸಂಹಿತ (ಒಂದು ವೈಜ್ಞಾನಿಕ ಸ್ಥೂಲ ನಿರೂಪಣೆ 1960); ಸುಶ್ರುತ ಸಂಹಿತ (ಒಂದು ವೈಜ್ಞಾನಿಕ ಸ್ಥೂಲ ನಿರೂಪಣೆ 1980); ಬೌದ್ಧಯಾನದ ಸುಲಭ ಸೂತ್ರಗಳು, ಆಪಸ್ತಂಭ, ಕಾತ್ಯಾಯನ ಹಾಗೂ ಮಾನವ –ಮೂಲ ಪಾಠದೊಂದಿಗೆ, ಇಂಗ್ಲಿಷ್ ಭಾಷಾಂತರದೊಂದಿಗೆ ವ್ಯಾಖ್ಯಾನ (1983); ಆರ್ಯಭಟನ ಆರ್ಯಭಟೀಯ, ಪಠ್ಯ ಇಂಗ್ಲೀಷ್ ಅನುವಾದದೊಂದಿಗೆ (1976); ಶ್ರೀ ವಾಗ್ಭಟರಿಂದ ಸಂಪಾದಿತವಾದ ರಸರತ್ನ ಸಮುಚ್ಚಯ–ಇಂಗ್ಲೀಷ್ ಅನುವಾದ, ಟಿಪ್ಪಣಿ ಮತ್ತು ಅನುಬಂಧ – ಎರಡು ಭಾಗಗಳಲ್ಲಿ; ಜಹಾಂಗೀರ್ (1969) ಸೇರಿವೆ.

**ಪುರಸ್ಕಾರ ಮತ್ತು ಗೌರವ:**

ವಿವಿಧ ವಲಯಗಳಲ್ಲಿ ಮಹತ್ತರ ಸಾಧನೆ ತೋರಿದ ವಿಜ್ಞಾನಿಗಳಿಗೆ ಅಕಾಡೆಮಿಯು ಪದಕ, ಪುರಸ್ಕಾರ ನೀಡಿ ಗೌರವಿಸುತ್ತದೆ. ಕೆಲವು ಅಂತಾರಾಷ್ಟ್ರೀಯ ಪದಕಗಳು, ಸಾಮಾನ್ಯ ಪದಕಗಳು ಹಾಗೂ ದತ್ತಿ ಪುರಸ್ಕಾರಗಳು ಇವುಗಳಲ್ಲಿ ಸೇರಿವೆ. ಇವುಗಳಲ್ಲಿ ಆರ್ಯಭಟ ಪುರಸ್ಕಾರ, ಚಂದ್ರಶೇಖರ ವೆಂಕಟರಾಮನ್ ಪುರಸ್ಕಾರ, ಮೇಘನಾದ ಸಾಹ ಪುರಸ್ಕಾರ ಹಾಗೂ ಶಾಂತಿಸ್ವರೂಪ್ ಭಟ್ನಾಗರ್ ಪುರಸ್ಕಾರಗಳು ಅಂತಾರಾಷ್ಟ್ರೀಯ ಮಟ್ಟದ ಪ್ರತಿಷ್ಠೆಯ ಪುರಸ್ಕಾರಗಳಾಗಿವೆ. ವಿಜ್ಞಾನದ ಯಾವುದೇ ವಿಭಾಗದಲ್ಲಿ ಮಹತ್ತರವಾದ ಸಾಧನೆ ಹಾಗೂ ಜೀವನಪರ್ಯಂತ ಕೊಡುಗೆ ನೀಡಿದವರಿಗೆ ಈ ಪುರಸ್ಕಾರಗಳು ಸಲ್ಲುತ್ತವೆ. ಈ ಪ್ರಶಸ್ತಿಗಳು ಸ್ಥಾಪನೆಯಾದಂದಿನಿಂದ ಪ್ರಶಸ್ತಿ ಪುರಸ್ಕಾರ ಸಂದರ್ಭದಲ್ಲಿ ನೀಡಲಾದ ಉಪನ್ಯಾಸದ ಮೂಲಪಾಠವನ್ನು ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ.

ಯುವ ವಿಜ್ಞಾನಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ, ಅವರ ಪ್ರತಿಭೆಯ ಅನಾವರಣಕ್ಕೆ ಸೂಕ್ತ ಉತ್ತೇಜನ ನೀಡುವ ಉದ್ದೇಶದಿಂದ 1974ರಿಂದ ಐಎನ್‌ಎಸ್‌ಎ ಯುವ ವಿಜ್ಞಾನಿ ಪದಕವನ್ನು ನೀಡಲಾಗುತ್ತಿದೆ. ಫೆಲೋಗಳು, ಸಂಸ್ಥೆಯ ಮುಖ್ಯಸ್ಥರು, ಪ್ರಯೋಗಾಲಯ ಹಾಗೂ ವಿಶ್ವವಿದ್ಯಾಲಯಗಳ ಹಾಗೂ ಈ ಹಿಂದೆ ಈ ಪ್ರಶಸ್ತಿಗಳನ್ನು ಪಡೆದವರು ಈ ಪ್ರಶಸ್ತಿಗೆ ನಾಮನಿರ್ದೇಶನ ಮಾಡಬಹುದಾಗಿದೆ. ಪ್ರಶಸ್ತಿ ಪಡೆಯಲು ಗರಿಷ್ಠ ವಯೋಮಿತಿ 32 ವರ್ಷ. ಭಾರತದಲ್ಲಿ ಅತ್ಯುತ್ತಮ ಸಂಶೋಧನೆ ನಡೆಸಿದ ಯುವ ಪ್ರತಿಭೆಗಳಿಗೆ ವಾರ್ಷಿಕವಾಗಿ ಈ ಪುರಸ್ಕಾರ ಕೊಡಮಾಡಲಾಗುತ್ತದೆ. ಪದಕ, ನಗದು ಬಹುಮಾನ ಹಾಗೂ ಒಂದು ಪ್ರಶಂಸಾ ಪತ್ರವನ್ನು ಈ ಪುರಸ್ಕಾರ ಒಳಗೊಂಡಿರುತ್ತದೆ. ಪರಸ್ಕಾರ ವಿಜೇತರು ಮೂರು ವರ್ಷಗಳಾವಧಿಯ ಸಂಶೋಧನಾ ಅನುದಾನಕ್ಕೆ ಅರ್ಹರಾಗುತ್ತಾರೆ. ಅಲ್ಲದೆ, ಅಂತಾರಾಷ್ಟ್ರೀಯ ಪ್ರತಿಭಾ ವಿನಿಮಯ ಕಾರ್ಯಕ್ರಮದಡಿ ಸಂಶೋಧನಾ ಕಾರ್ಯ ನಡೆಸಲು ಅಥವಾ ಅಂತಾರಾಷ್ಟ್ರೀಯ ಸಹಭಾಗಿತ್ವದಲ್ಲಿ ನಡೆಯುವ ತರಬೇತಿಯಲ್ಲಿ ಪಾಲ್ಗೊಳ್ಳಲು ಐಎನ್‌ಎಸ್‌ಎಯ ಸಹಕಾರ ಪಡೆಯಲಿದ್ದಾರೆ. ಈ ಪುರಸ್ಕಾರ ಪಡೆದವರು ಸೂಕ್ತ ಸ್ಥಾನಮಾನದ ಉದ್ಯೋಗ ಪಡೆಯುವಲ್ಲಿ ವಿಫಲರಾದರೆ ಅವರಿಗೆ ತಾತ್ಕಾಲಿಕವಾಗಿ ತಿಂಗಳ ಸ್ಟೈಫಂಡ್ ನೀಡಲಾಗುತ್ತದೆ, ಜೊತೆಗೆ ವಾರ್ಷಿಕ ಸಾದಿಲ್ವಾರು ಅನುದಾನ (ಕಂಟಿಜೆನ್ಸಿ ಗ್ರಾಂಟ್) ನೀಡಲಾಗುತ್ತದೆ. ಇದುವರೆಗೆ, 358 ಯುವ ವಿಜ್ಞಾನಿಗಳನ್ನು ಈ ಯೋಜನೆಯಡಿ ಗುರುತಿಸಲಾಗಿದೆ. ಇವರಲ್ಲಿ ಹೆಚ್ಚಿನ ಸಂಖ್ಯೆಯವರು ಶಿಕ್ಷಕ ವೃತ್ತಿ ಮತ್ತು ವೈಜ್ಞಾನಿಕ ವೃತ್ತಿಯನ್ನು ಆರಿಸಿಕೊಂಡಿದ್ದು ಉತ್ಕೃಷ್ಟ ಗುಣಮಟ್ಟದ ಕಾರ್ಯ ನಡೆಸುತ್ತಿದ್ದಾರೆ. ಎಂಬುದು ನೆಮ್ಮದಿಯ ವಿಷಯವಾಗಿದೆ. ಇವರು ಮುಂದುವರೆದು ಸ್ವದೇಶಿ ಹಾಗೂ ವಿದೇಶಗಳಲ್ಲಿ ಮನ್ನಣೆ ಗಳಿಸಿಕೊಂಡಿದ್ದಾರೆ.

ತನ್ನ ಸ್ವರ್ಣ ಮಹೋತ್ಸವದ ಸವಿನೆನಪಿಗಾಗಿ ಸಂಸ್ಥೆಯು 1984ರಲ್ಲಿ – ಆಲ್ಬರ್ಟ್ ಐನ್‌ಸ್ಟೀನ್ ರಿಸರ್ಚ್ ಪ್ರೊಫೆಸರ್‌ಶಿಪ್,

Digitised by Bharatavani, CIIL

ಗೋಲ್ಡನ್ ಜುಬಿಲೀ ರಿಸರ್ಚ್ ಪ್ರೊಫೆಸರ್‌ಷಿಪ್ ಮತ್ತು ಸತ್ಯೇಂದ್ರನಾಥ ಬೋಸ್ ರಿಸರ್ಚ್ ಪ್ರೊಫೆಸರ್‌ಷಿಪ್‌ಗಳನ್ನು ಆರಂಭಿಸಿತು. ದೇಶದಲ್ಲಿರುವ ಅಂಗೀಕೃತ ಸಂಶೋಧನಾ ಸಂಸ್ಥೆ ಅಥವಾ ವಿಶ್ವವಿದ್ಯಾಲಯಗಳಲ್ಲಿ ಅಸಾಧಾರಣ ಸಾಧನೆ ತೋರಿದ ಭಾರತೀಯ ವಿಜ್ಞಾನಿ ಅಥವಾ ತಂತ್ರಜ್ಞರಿಗೆ ಈ ಪುರಸ್ಕಾರ ಪ್ರದಾನ ಮಾಡಲಾಗುತ್ತದೆ ವೇತನ, ಭತ್ಯೆಗಳು ಹಾಗೂ ಸಾದಿಲ್ವಾರು ವೆಚ್ಚ (ಕಂಟಿಜೆನ್ಸಿ ಎಕ್ಸ್‌ಪೆನ್ಸ್)ದ ಜೊತೆಗೆ ಸಂಶೋಧನಾ ಸಹಾಯಕನನ್ನು ನೇಮಿಸಿಕೊಳ್ಳುವ ಅವಕಾಶವು ಈ ಪುರಸ್ಕಾರದೊಡನೆ ಇರುತ್ತದೆ.

ಫೆಲೋಗಳು ನಿವೃತ್ತಿ ಹೊಂದಿದ ಮೇಲೆ ಅವರ ಅನುಭವವನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಅಕಾಡೆಮಿಯು ಮೂರರಿಂದ ಐದು ವರ್ಷಗಳಾವಧಿಯ ಹಿರಿಯ ವಿಜ್ಞಾನಿಗಳ ಪುರಸ್ಕಾರವನ್ನು ಆರಂಭಿಸಿದೆ. ಆಯ್ಕೆಗೊಂಡ ವಿಜ್ಞಾನಿಗಳು ಅಂಗೀಕೃತ ಸಂಶೋಧನಾ ಸಂಸ್ಥೆ ಅಥವಾ ವಿಶ್ವವಿದ್ಯಾನಿಲಯಗಳಲ್ಲಿ ತಮ್ಮ ಹೆಚ್ಚಿನ ಕಾಲದ ಅವಧಿಯನ್ನು ಸಂಶೋಧನಾ ಕಾರ್ಯಕ್ಕಾಗಿ ಮೀಸಲಿರಿಸಬೇಕಾಗಿರುತ್ತದೆ. ತಾವು ಪ್ರಾವೀಣ್ಯ ಪಡೆದಿರುವ ವಿಷಯಗಳಲ್ಲಿ ಪುಸ್ತಕ ಅಥವಾ ಏಕ ವಿಷಯ ಪ್ರಬಂಧಗಳನ್ನು ಅವರು ಬರೆಯಬಹುದಾಗಿದೆ. ಹಿರಿಯ ವಿಜ್ಞಾನಿಗಳಿಗೆ ಮಾಸಿಕ ಗೌರವಧನದ ಜೊತೆಗೆ ವಾರ್ಷಿಕ ಸಾದಿಲ್ವಾರು ಅನುದಾನವನ್ನೂ ನೀಡಲಾಗುತ್ತದೆ.

50ರಷ್ಟು ಐಎನ್‌ಎಸ್‌ಎ ಸಂದರ್ಶಕ ಫೆಲೋಶಿಪ್‌ಗಳನ್ನು (ವಿದ್ಯಾರ್ಥಿ ವೇತನವನ್ನು) ವಿಜ್ಞಾನಿಗಳಿಗೆ ತಮ್ಮ ವಿಜ್ಞಾನ ವೃತ್ತಿ ಅಥವಾ ಸಂಶೋಧನಾ ಸಾಮರ್ಥ್ಯವನ್ನು ಮುಂದುವರಿಸಿಕೊಂಡು ಬರಲು, ಸಹಭಾಗಿತ್ವದ ಸಂಶೋಧನೆ, ನಿರ್ದಿಷ್ಟ ಕೌಶಲದಲ್ಲಿ ತರಬೇತಿ ಹೊಂದಲು, ಅಥವಾ ತಮ್ಮ ಸಂಸ್ಥೆಗಳಲ್ಲಿ ದೊರಕದಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ವಾರ್ಷಿಕವಾಗಿ ನೀಡಲಾಗುತ್ತದೆ.

**ಐಎನ್‌ಎಸ್‌ಎ ಮಾಹಿತಿ ಕೇಂದ್ರ:**

ತನ್ನ ಫೆಲೋಗಳ ಅಗತ್ಯಗಳನ್ನು ಪೂರೈಸಲು ಸ್ವಂತ ವಾಚನಾಲಯವೊಂದನ್ನು ಆರಂಭಿಸಿ ಅದನ್ನು ನಡೆಸಿಕೊಂಡು ಬರುವುದು ಅಕಾಡೆಮಿಯ ಮೊದಲಿನ ಆಸಕ್ತಿಗಳಲ್ಲಿ ಒಂದಾಗಿತ್ತು. ಈ ವಾಚನಾಲಯದ ಬಳಕೆಯನ್ನು ಕ್ರಮೇಣ ಇತರರಿಗೂ ಲಭ್ಯವಾಗಿಸಲಾಗಿದೆ. ಸಾಕಷ್ಟು ಪುಸ್ತಕಗಳ ಸಂಗ್ರಹ ಹಾಗೂ ನಿಯತಕಾಲಿಕೆಗಳ ಕಟ್ಟುಗಳ ಸಂಪುಟವನ್ನು ಇದು ಹೊಂದಿವೆ. ಐಎನ್‌ಎಸ್‌ಎ ಲೈಬ್ರರಿಯ ಒಂದು ವೈಶಿಷ್ಟ್ಯವೆಂದರೆ, ದೇಶ ವಿದೇಶದ ಶೈಕ್ಷಣಿಕ ಹಾಗೂ ವೈಜ್ಞಾನಿಕ ಸಂಸ್ಥೆಗಳಿಂದ ವಿನಿಮಯ ವ್ಯವಸ್ಥೆಯಲ್ಲಿ ಸುಮಾರು 200ಕ್ಕೂ ಮಿಕ್ಕ ನಿಯತಕಾಲಿಕೆಗಳನ್ನು ಪಡೆಯಲಾಗುತ್ತದೆ.

ಸಾಮಾನ್ಯವಾಗಿ ಗ್ರಂಥಾಲಯಗಳಲ್ಲಿ ಲಭ್ಯವಿಲ್ಲದ ವಿಜ್ಞಾನ ಮತ್ತು ರಾಜನೀತಿ, ವಿಜ್ಞಾನ ಮತ್ತು ಸಮಾಜ, ವಿಜ್ಞಾನದ ಇತಿಹಾಸ, ವಿಜ್ಞಾನಿಗಳ ಜೀವನಚರಿತ್ರೆ ಹಾಗೂ ಜನಪ್ರಿಯ ವಿಜ್ಞಾನ ಈ ವಿಷಯಗಳ ಬಗೆಗಿನ ಸಾಹಿತ್ಯಗಳ ಸಂಗ್ರಹದ ಬಗ್ಗೆ ಅಕಾಡೆಮಿಯು ಪ್ರಯತ್ನ ನಡೆಸಿದೆ. ಈ ಪ್ರಕಾರವಾಗಿ, ಸಂಸ್ಥೆಯು ಈ ವಿಷಯಗಳಲ್ಲಿ ದೆಹಲಿ ಹಾಗೂ ಭಾರತದಲ್ಲಿ ಒಂದು ವಿಶೇಷ ಸಂಪನ್ಮೂಲ ಕೇಂದ್ರವಾಗಿ ಗುರುತಿಸಿಕೊಂಡಿದೆ.

ಪ್ರತಿಯೊಬ್ಬ ಫೆಲೋ ಸದಸ್ಯನ ಸಾಧನೆ, ಅವರ ಪ್ರಕಟಣೆಗಳು ಹಾಗೂ ಭಾವಚಿತ್ರವನ್ನು ಸಂಗ್ರಹಿಸುವ ಒಂದು ಅಮೂಲ್ಯವಾದ ಕಾರ್ಯವನ್ನು ವಾಚನಾಲಯ ಮಾಡುತ್ತಿದೆ. ಇದೀಗ ಒಂದು ಪತ್ರಾಗಾರವನ್ನು ಆರಂಭಿಸುವ ಪ್ರಯತ್ನ ಆರಂಭವಾಗಿದ್ದು, ಇದರಲ್ಲಿ ಉಪನ್ಯಾಸ ಹಾಗೂ ಚರ್ಚೆಗಳ ಆಡಿಯೋ–ವಿಡಿಯೋಗಳ ಸಂಗ್ರಹ, ಅಕಾಡೆಮಿಯಲ್ಲಿ ನಡೆದ ಪ್ರಮುಖ ಕಾರ್ಯಕ್ರಮಗಳ ಛಾಯಾಚಿತ್ರಗಳನ್ನು ಇದು ಹೊಂದಲಿದೆ. ಪ್ರಚಲಿತ ಜ್ಞಾನ ಸೇವೆಯಡಿ, ಗ್ರಂಥಾಲಯದಲ್ಲಿ ಲಭ್ಯವಿರುವ ಆಯ್ದ ನಿಯತಕಾಲಿಕೆಗಳ ವಿಷಯಗಳ ಪುಟಗಳನ್ನು ಒದಗಿಸಲಾಗುತ್ತದೆ. ಫೆಲೋ ಸದಸ್ಯರು ಇಚ್ಛಿಸಿದ ಪ್ರಬಂಧಗಳ ಛಾಯಾಪ್ರತಿಯನ್ನು ಕಡಿಮೆ ದರದಲ್ಲಿ ಒದಗಿಸಲಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳ ಬಗೆಗಿನ ಲೇಖನಗಳ ಸಂಗ್ರಹ ವಿಜ್ಞಾನ ಮಾಹಿತಿ ಟಿಪ್ಪಣಿಯನ್ನು ಲೈಬ್ರರಿ ಹೊಂದಿದೆ.

ಲೈಬ್ರರಿಯನ್ನು ಆಧುನಿಕ ಮಾಹಿತಿ ಕೇಂದ್ರವಾಗಿ ರೂಪಿಸುವ ಬಗ್ಗೆ ಪ್ರಯತ್ನಗಳು ಸಾಗುತ್ತಿವೆ. ದಿಲ್ಲಿ ಲೈಬ್ರರಿ ನೆಟ್‌ವರ್ಕ್ (DELNW) ಜೊತೆ ಸಂಪರ್ಕ ಹೊಂದಿರುವ ಜೊತೆಗೆ ಅಂತರ್‌ಜಾಲ ಸಂಪರ್ಕವನ್ನು ಹೊಂದಿದ್ದು, ವಿವಿಧ ವ್ಯಾಪ್ತಿಯ ವೈಜ್ಞಾನಿಕ ಮೂಲ ಮಾಹಿತಿಗಳ ಕುರಿತು ಶೀಘ್ರ ಮಾಹಿತಿ ಪಡೆಯಲು ಇದರಿಂದ ಸಾಧ್ಯವಾಗುತ್ತದೆ. ವಿದೇಶೀ ನಿಯತಕಾಲಿಕೆಗಳು ಹೆಚ್ಚು ದುಬಾರಿಯಾಗಿರುವ ಕಾರಣ, ಪ್ರಮುಖ ವಿದೇಶೀ ನಿಯತಕಾಲಿಕೆಗಳ ಮಾಹಿತಿ ಸಾರಾಂಶವನ್ನು ಸಿಡಿ–ರ್‍ಯಾಂಗಳ ಮೂಲಕ ಪಡೆಯಲಾಗುತ್ತಿದೆ. ಇದರ ಸಂಗ್ರಹ ಸಾಮರ್ಥ್ಯವನ್ನು ಆಧುನೀಕರಿಸಲಾಗಿದೆಯಲ್ಲದೆ ಲೈಬ್ರರಿಯ ಕೆಲಸದ ಕಾಲವನ್ನು ವಿಸ್ತರಿಸಲಾಗಿದೆ ಅಕಾಡೆಮಿಯ ಕಟ್ಟಡದಲ್ಲಿರುವ ಅತಿಥಿ ಗೃಹದಲ್ಲೂ, ಫೆಲೋಗಳು ಅಥವಾ ಇತರ ವಿಜ್ಞಾನಿಗಳು ವಾಚನಾಲಯದಲ್ಲಿ ಸಂಗ್ರಹಿಸಿ ಇಟ್ಟಿರುವ ಮಾಹಿತಿ ಪಡೆಯುವ ವ್ಯವಸ್ಥೆಯೂ ಇದೆ.

**INSA ಪ್ರಕಟಣೆಗಳು:**

**ಅಕಾಡೆಮಿಯ ಪ್ರಮುಖ ಪ್ರಕಟಣೆಗಳು:**

1) ದಿ ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ನ್ಯಾಷನಲ್ ಸಯನ್ಸ್ ಅಕಾಡೆಮಿ ಚಾರ್ಟ್
(ಎ ಫಿಸಿಕಲ್ ಸಯನ್ಸ್ ಮತ್ತು ಬಿ) ಬಯಾಲಾಜಿಕಲ್ ಸಯನ್ಸ್, ಪರ್ಯಾಯ ಮಾಸಗಳು (ಎರಡು ತಿಂಗಳಿಗೊಮ್ಮೆ) ಪ್ರಕಟಿತವಾಗುತ್ತದೆ (ದ್ವೈಮಾಸಿಕ)

2) ಇಂಡಿಯನ್ ಜರ್ನಲ್ ಆಫ್ ಪ್ಯೂರ್ ಆ್ಯಂಡ್ ಅಪ್ಲಾಯ್ಡ್ ಮ್ಯಾಥ್‌ಮೆಟಿಕ್ಸ್, ಒಂದು ಮಾಸಿಕ ಪತ್ರಿಕೆ ಅಕಾಡೆಮಿಯಿಂದ ಪ್ರಾಯೋಜಿಸಲ್ಪಟ್ಟ ವಿಚಾರ ಸಂಕಿರಣಗಳು, ಸಂವಾದಗಳು,

Digitised by Bharatavani, CIIL

ಸಮ್ಮೇಳನಗಳು, ಕಾರ್ಯಾಗಾರಗಳ ನಡಾವಳಿಗಳನ್ನು ಅಕಾಡೆಮಿಯು ಕಾಲಕಾಲಕ್ಕೆ ಪ್ರಕಟಿಸುತ್ತದೆ. (INSA News letter) ಎಂಬ ನಿಯತಕಾಲಿಕೆಯ ಮೂಲಕ ಅಕಾಡೆಮಿಯು ತನ್ನ ಫೆಲೋಗಳೊಂದಿಗೆ ನಿರಂತರ ಸಂಪರ್ಕ ಹೊಂದಿರುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಸಮಿತಿ ತೆಗೆದುಕೊಂಡ ಮಹತ್ವದ ನಿರ್ಣಯಗಳು, ಉಪನ್ಯಾಸಗಳ ಸಾರಾಂಶ, ಅಂತಾರಾಷ್ಟ್ರೀಯ ವಿಚಾರ ಸಂಕೀರಣದ ಪ್ರಮುಖಾಂಶಗಳು, ಫೆಲೋಗಳಿಗೆ ಸಂಬಂಧಿಸಿದ ಸುದ್ದಿ-ವರದಿಗಳು, ಮುಂಬರುವ ಕಾರ್ಯಕ್ರಮಗಳ ಬಗ್ಗೆ ವಿವರಣೆ ಇತ್ಯಾದಿ ಸುದ್ದಿ ಪತ್ರಿಕೆ (News letter) ಒಳಗೊಂಡಿರುತ್ತದೆ.

ನಿಧನ ಹೊಂದಿದ ಫೆಲೋಗಳ ಜೀವನ ಚರಿತ್ರೆ, ಸಾಧನೆಗಳ ಅಧಿಕೃತ ವಿವರಗಳನ್ನೊಳಗೊಂಡ ಜೀವನವೃತ್ತಾಂತ ಸಂಸ್ಮರಣೆ ಎಂಬ ಗ್ರಂಥದ ಪ್ರಕಟಣೆ INSA ಸಾಧನೆಯ ಹೆಗ್ಗುರುತುಗಳಲ್ಲಿ ಒಂದೆನಿಸಿದೆ. ಚಾರಿತ್ರಿಕ ದೃಷ್ಟಿಕೋನದಿಂದ ಯಥಾದೃಶ್ಯ ರೂಪಣವಾಗಿ ಜೀವನಚರಿತ್ರೆ ಅಥವಾ ಸಂಶೋಧನೆ ಕೈಗೊಳ್ಳುವವರಿಗೆ ಈ ಸಂಪುಟಗಳು ಉಪಯುಕ್ತವಾಗಿವೆ.

1987ರಲ್ಲಿ ಪ್ರಕಟಿಸಿದ ವೈಜ್ಞಾನಿಕ ಸಂಶೋಧನೆಗಳ ವ್ಯಕ್ತಿಚಿತ್ರ (Profiles in Scientific Research) ಎಂಬ ಶಿರೋನಾಮೆಯ ಎರಡು ಸಂಪುಟಗಳು ಅಕಾಡೆಮಿಯ ಒಂದು ಮಹತ್ವದ ಕೊಡುಗೆಯಾಗಿದೆ. ನಿಧನ ಹೊಂದಿದ ಫೆಲೋಗಳ ಸಂಶೋಧನಾ ಕೊಡುಗೆಗಳು ಹಾಗೂ ಅವರ ಜೀವನವೃತ್ತಾಂತ ಕುರಿತ ಪ್ರಬಂಧಗಳನ್ನು ಇದು ಒಳಗೊಂಡಿರುತ್ತದೆ. ಭಾರತದಲ್ಲಿನ ಸಮಕಾಲೀನ ವಿಜ್ಞಾನಿಗಳು ಮಾಡಿದ ಕಾರ್ಯಸಾಧನೆಗಳ ಬಗೆಗಿನ ಇಣುಕು ನೋಟವಾಗಿದೆ ಈ ಕೃತಿ. ಇದು ವಿಭಿನ್ನ ಸಾಧನೆಗಳನ್ನು, ಒಲವುಗಳನ್ನು ಸೂಚಿಸುತ್ತದೆ. ಈ ಸಂಪುಟಗಳ ರಚನೆಯಲ್ಲಿ ಫೆಲೋಶಿಪ್‌ಗಳು ನೀಡಿದ ಪ್ರತಿಕ್ರಿಯೆಗಳು ಅಮೋಘವಾಗಿದ್ದು, ಭಾರತದ ಹಾಗೂ ವಿದೇಶದ ವಿಜ್ಞಾನಿಗಳಿಗೂ ಸಂಶೋಧನಾ ತಜ್ಞರಿಗೂ ಒಂದು ಪ್ರಮುಖ ಆಕರ ಗ್ರಂಥವಾಗಿದೆ. ಅಕಾಡೆಮಿಯ ವಜ್ರ ಮಹೋತ್ಸವದ ಸಂದರ್ಭ (1995) ದಲ್ಲಿ ಈ ಕೃತಿಯ ದ್ವಿತೀಯ ಆವೃತ್ತಿಯನ್ನು ಹೊರತರಲಾಗಿದ್ದು ಫೆಲೋಗಳು ಬರೆದ ಕೆಲವು ಹೊಸ ಹಾಗೂ ಆಧುನೀಕರಿಸಿದ ಲೇಖನಗಳನ್ನು ಇದು ಹೊಂದಿದೆ.

ನಮ್ಮ ದೇಶದಲ್ಲಿರುವ ಯುವ ಪ್ರತಿಭೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪ್ರಚುರಪಡಿಸುವ ಉದ್ದೇಶದಿಂದ ಅಕಾಡೆಮಿಯ (Biographical Notes of the Awardeess of INSA Medal for young Scientists (1975-1993) ಎಂಬ ಕೃತಿಯನ್ನು ಪ್ರಕಟಿಸಿತು. ಸುಮಾರು 300ಕ್ಕು ಹೆಚ್ಚಿನ ಯುವ ವಿಜ್ಞಾನಿಗಳು ಇತ್ತೀಚೆಗೆ ನಡೆಸಿದ ಸಾಧನೆ, ಚಟುವಟಿಕೆಗಳ ಕುರಿತಾದ ವರದಿಯನ್ನು ಒಂದೆಡೆ ಲಭ್ಯವಾಗಿಸುತ್ತದೆ. ವಿಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಹುದ್ದೆಗಳಿಗೆ ಸೂಕ್ತ ತಜ್ಞರನ್ನು ನೇಮಿಸುವ ಸಂಸ್ಥೆಗಳಿಗೆ ಈ ಪುಸ್ತಕದ ಮಾಹಿತಿ ಅತ್ಯುಪಯುಕ್ತವಾಗಿದೆ.

**ಇತರ ಸಂಸ್ಥೆಗಳ ಜೊತೆ ಸಂಪರ್ಕಜಾಲ:**

ಭಾರತದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು, ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಲು ವಿಜ್ಞಾನ ಸಂಘಗಳಿಗೆ ಆರ್ಥಿಕ ನೆರವನ್ನು ಅಕಾಡೆಮಿಯು ನೀಡುತ್ತದೆ. ವೈಯಕ್ತಿಕವಾಗಿ ಸಂಶೋಧಕರೊಂದಿಗೆ ಅಥವಾ ಸಂಶೋಧಕರ ತಂಡದೊಂದಿಗೆ ಸಂಪರ್ಕ ಸಾಧಿಸುವ ಮೂಲಕ ವಿಜ್ಞಾನ ಮಾಹಿತಿಯನ್ನು ಪಸರಿಸುವ ಮತ್ತು ರಾಷ್ಟ್ರೀಯ ಮಹತ್ವದ ವಿಷಯಗಳಲ್ಲಿ ಅವನ್ನು ಅನ್ವಯಿಸಿಕೊಳ್ಳಲು ಈ ವಿಚಾರ ಸಂಕಿರಣಗಳು ನೆರವಾಗುತ್ತವೆ. ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಜ್ಞಾನವನ್ನು ಪ್ರೋತ್ಸಾಹಿಸುವ ಉದ್ದೇಶವನ್ನು ಈಡೇರಿಸಿಕೊಳ್ಳಲು ವಿಚಾರ ಸಂಕಿರಣವನ್ನು, ವಿಚಾರಗೋಷ್ಠಿಗಳನ್ನು ಹಮ್ಮಿಕೊಳ್ಳಲು ಹಾಗೂ ಜಂಟಿ ಪ್ರಕಟಣೆಗಳನ್ನು ಹೊರತರಲು ದೇಶದ ಇತರ ವೈಜ್ಞಾನಿಕ ಸಂಸ್ಥೆಗಳ ಜೊತೆ ಸೇರಿ ಕಾರ್ಯನಿರ್ವಹಿಸುತ್ತದೆ.

**ಮಕ್ಕಳಿಗಾಗಿ ಯೋಜನೆಗಳು:**

ಕಳೆದ ಕೆಲವರ್ಷಗಳಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ (ಫೆಬ್ರವರಿ-20)ಸಂದರ್ಭದಲ್ಲಿ ಭಾರೀ ಸಂಖ್ಯೆಯಲ್ಲಿ ಮಕ್ಕಳು ಅಕಾಡೆಮಿಗೆ ಭೇಟಿ ನೀಡುತ್ತಿದ್ದಾರೆ. ವೈಜ್ಞಾನಿಕ ವಿಷಯದ ಮೇಲೆ ಏರ್ಪಡಿಸಲಾದ ಪ್ರಬಂಧ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆಗಳಲ್ಲಿ ಮಕ್ಕಳು ಭಾಗವಹಿಸುತ್ತಾರೆ. ಜನಪ್ರಿಯ ವಿಜ್ಞಾನಕ್ಕೆ ಸಂಬಂಧಿಸಿದ ಉಪನ್ಯಾಸ ಅಥವಾ ಪ್ರಾತ್ಯಕ್ಷಿಕೆ ಏರ್ಪಡಿಸಲಾಗುತ್ತದೆ. ಬಹುಮಾನ ಪಡೆದವರಿಗೆ ಪುಸ್ತಕ ಮತ್ತು ಪ್ರಮಾಣಪತ್ರ ನೀಡಲಾಗುತ್ತದೆ. ವಿದ್ಯಾರ್ಥಿಗಳೊಂದಿಗಿನ ಈ ಕಾರ್ಯಕ್ರಮ ಇತರ ಸ್ಥಳೀಯ ಘಟಕಗಳಲ್ಲೂ ಕ್ರಮೇಣ ಹರಡುತ್ತಿದೆ.

ಪ್ರೇರೇಪಣೆಯು ಅನೇಕ ವೇಳೆ ಮಾನಸಿಕ ಉದ್ರೇಕದಿಂದ ಉಂಟಾಗುತ್ತದೆ. ಮತ್ತು ಇತರ ಹೆಚ್ಚಿನ ಆಕರ್ಷಕ ಅವಕಾಶಗಳು ಇದ್ದರೂ ವಿಜ್ಞಾನದಲ್ಲಿ ದೀರ್ಘಕಾಲದ ವೃತ್ತಿಯನ್ನು ಅವಲಂಬಿಸಬೇಕೆಂಬ ಬದ್ಧತೆಯನ್ನು ಉಂಟುಮಾಡುತ್ತದೆ ಎಂಬುದನ್ನು ಗುರುತಿಸಿ ಕೆಲವು ಹಿರಿಯ ಫೆಲೋಗಳು ಈಚೆಗೆ ಶಾಲಾಮಕ್ಕಳಿಗಾಗಿ, ಒಂದು ಸವಾಲಿನ ಕಾರ್ಯಕ್ರಮವನ್ನು ಅಕಾಡೆಮಿಯ ನೆರವಿನಿಂದ ಪ್ರಾರಂಭಿಸಿದ್ದಾರೆ. ಇದು `INSA ಅಜೆಂಡಾ ಫಾರ್ ಸೈನ್ಸ್ ಎಜುಕೇಷನ್' ಎಂಬ ಕಾರ್ಯಕ್ರಮವಾಗಿದ್ದು ಇದು 10ನೇ ತರಗತಿವರೆಗಿನ ಮಕ್ಕಳಿಗಾಗಿ ಪುಸ್ತಕಗಳ ಒಂದು ಶ್ರೇಣಿಯ ಪ್ರಕಾಶನದತ್ತ ನಿರ್ದೇಶಿತವಾಗಿದೆ. ಎರಡನೆ ಚಟುವಟಿಕೆಯು Understanding Science ಎಂಬ ಶಿರೋನಾಮೆಯಡಿಯಲ್ಲಿ ಶೈಕ್ಷಣಿಕ ಸಾಮಗ್ರಿಗಳ ತಯಾರಿಕೆಯಾಗಿದ್ದು ಇದು 11 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗಾಗಿದೆ. ಇದರಲ್ಲಿ ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳು ಒಳಗೊಂಡಿದ್ದು ಎಲ್ಲ ಸಂಪುಟಗಳೂ ಸೂಕ್ತ ಚಿತ್ರಗಳಿಂದ ಸಮೃದ್ಧವಾಗಿವೆ.

**ಅಂತಾರಾಷ್ಟ್ರೀಯ ಸಂಬಂಧಿಗಳು:**

ವಿಜ್ಞಾನದಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳು ಸಮ್ಮೇಳನ

Digitised by Bharatavani, CIIL

ಹಾಗೂ ಪ್ರಕಟಣೆಗಳ ಮೂಲಕ ವೈಜ್ಞಾನಿಕ ಮಾಹಿತಿಗಳ ಶೀಘ್ರಗತಿಯ ವಿನಿಮಯಕ್ಕೆ ಅಗತ್ಯವಾಗಿರುತ್ತವೆ ಹಾಗೂ ವಿವಿಧ ರಾಷ್ಟ್ರಗಳ ವಿಜ್ಞಾನಿಗಳು ಪರಸ್ಪರ ಸಂಪರ್ಕ ಹಾಗೂ ತಿಳಿವಳಿಕೆಯನ್ನು ವೃದ್ಧಿಸಿಕೊಳ್ಳಲೂ ನೆರವಾಗುತ್ತವೆ. ಈ ಉದ್ದೇಶಗಳ ಈಡೇರಿಕೆಗಾಗಿ ಕಳೆದ ಎರಡು ದಶಕಗಳಿಂದ ಅಕಾಡೆಮಿಯು ಅಂತಾರಾಷ್ಟ್ರೀಯ ಸಂಬಂಧಗಳ ಕಾರ್ಯಕ್ರಮವೊಂದನ್ನು ಅನುಸರಿಸುತ್ತಿದೆ. ಇಂಟರ್‌ನ್ಯಾಷನಲ್ ಕೌನ್ಸಿಲ್ ಆಫ್ ಸೈಂಟಿಫಿಕ್ ಯೂನಿಯನ್ಸ್ (ಐಎಸ್‌ಸಿಯು) ಹಾಗೂ ಐಎಸ್‌ಸಿಯು ಅಧೀನದಲ್ಲಿರುವ ಅಂತಾರಾಷ್ಟ್ರೀಯ ಒಕ್ಕೂಟಗಳಿಗೆ ಭಾರತದ ಪ್ರತಿನಿಧಿಯಾಗಿ ತನ್ನ ಬದ್ಧತೆ ಹಾಗೂ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತದೆ. ತನ್ನ ರಾಷ್ಟ್ರೀಯ ಸಮಿತಿಗಳ ಮೂಲಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಕಾರ್ಯ ಅಭಿವೃದ್ಧಿ, ಮಾನವ ಕಲ್ಯಾಣ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕ ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿದೆ ICSU ಮತ್ತಿತರ ಅಂತಾರಾಷ್ಟ್ರೀಯ ಸಮಿತಿಗಳು ಸಂಸ್ಥೆಗಳಲ್ಲಿ ಭಾರತವನ್ನು ಪ್ರತಿನಿಧಿಸುವ ಪ್ರತಿನಿಧಿಗಳ ಪ್ರಾಯೋಜಕತ್ವ ಮೆರೆಸಿಕೊಳ್ಳುತ್ತದೆ. ವಿಶ್ವದ ಪ್ರಮುಖ ವಿಜ್ಞಾನ ಅಕಾಡೆಮಿಗಳು ಹಾಗೂ ಸಂಸ್ಥೆಗಳೊಂದಿಗೆ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ ದೇಶದ ಏಕೈಕ ಸಂಸ್ಥೆಯಾಗಿದೆ ಐಎನ್‌ಎಸ್‌ಎ ಪ್ರಪ್ರಥಮವಾಗಿ ಲಂಡನ್‌ನ ರಾಯಲ್ ಸೊಸೈಟಿಯೊಂದಿಗೆ ಒಪ್ಪಂದಕ್ಕೆ ಬರಲಾಯಿತು. ಆ ಬಳಿಕ ಜಪಾನ್ ಸೊಸೈಟಿ ಫಾರ್ ದಿ ಪ್ರೊಮೋಷನ್ ಆಫ್ ಸೈನ್ಸ್ (ಜೆಎಸ್‌ಪಿಎಸ್), ಈ ಹಿಂದಿನ ಯುಎಸ್‌ಎಸ್‌ಆರ್ ಅಕಾಡೆಮಿ ಆಫ್ ಸಯನ್ಸಸ್ ಜೊತೆ ಸಹಕಾರ ಒಪ್ಪಂದಕ್ಕೆ ಬರಲಾಯಿತು. ಕಳೆದ ಕೆಲವ ವರ್ಷಗಳಿಂದ ಈ ಕಾರ್ಯಕ್ರಮವು ಗಮನಾರ್ಹವಾಗಿ ವೃದ್ಧಿಯಾಗಿದೆ. ಪ್ರಸಕ್ತ ಅಕಾಡೆಮಿಯು ರಾಯಲ್ ಸೊಸೈಟಿ ಲಂಡನ್, ಜಪಾನ್ ಸೊಸೈಟಿ ಫಾರ್ ದಿ ಪ್ರಮೋಷನ್ ಆಫ್ ಸೈನ್ಸ್ (ಜೆಎಸ್‌ಪಿಎಸ್), ದಿ ಫ್ರೆಂಚ್ ಅಕಾಡೆಮಿ ಆಫ್ ಸಯನ್ಸಸ್, ದಿ ಬ್ರೆಝಿಲಿಯನ್ ಅಕಾಡೆಮಿ ಆಫ್ ಸಯನ್ಸಸ್, ದಿ ಚೈನೀಸ್ ಅಕಾಡೆಮಿ ಆಫ್ ಸಯನ್ಸಸ್, ಅಕಾಡೆಮಿ ಆಫ್ ಸಯನ್ಸ್ ಆಫ್ ಝೆಕ್ ರಿಪಬ್ಲಿಕ್, ದಿ ರೋಯಲ್ ನೆದರ್ಲ್ಯಾಂಡ್ಸ್ ಅಕಾಡೆಮಿ ಆಫ್ ಆರ್ಟ್ಸ್ ಆಂಡ್ ಸಯನ್ಸಸ್, ದಿ ಡ್ಯೂಷ್ ಫೋರ್ಷ‌ಂಗ್ಸ್ ಜೆಮಿನ್‌ಷಾಫ್ಟ್ (ಡಿಎಫ್‌ಜಿ). ಜರ್ಮನಿ, ದಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ಆಂಡ್ ಟೆಕ್ನಾಲಜಿ ಆಫ್ ಫಿಲಿಫೈನ್ಸ್, ರೋಯಲ್ ನೇಪಾಲ್ ಅಕಾಡೆಮಿ ಆಫ್ ಸೈಯನ್ಸ್ ಆಂಡ್ ಟೆಕ್ನಾಲಜಿ, ಕಿರ್ಗಿಜ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್‌ಸ್, ಕೊರಿಯಾ ಸಯನ್ಸ್ ಆಂಡ್ ಇಂಜಿನಿಯರಿಂಗ್ ಫೌಂಡೇಶನ್ (ಕೆಎಸ್‌ಇಎಫ್), ಸ್ಲೋವಾಕ್ ಅಕಾಡೆಮಿ ಆಫ್ ಸೈನ್ಸಸ್, ಉಕ್ರೇನ್ ಅಕಾಡೆಮಿ ಆಫ್ ಸಯನ್ಸ್‌ಸ್, ದಿ ಹಂಗೇರಿಯನ್ ಅಕಾಡೆಮಿ ಆಫ್ ಸಯನ್ಸಸ್, ದಿ ಪೋಲಿಷ್ ಅಕಾಡೆಮಿ ಆಫ್ ಸಯನ್ಸಸ್, ದಿ ರಷಿಯನ್ ಅಕಾಡೆಮಿ ಆಫ್ ಸಯನ್ಸಸ್, ರೋಯಲ್ ಸೊಸೈಟಿ ಆಫ್ ಕೆನಡಾ, ನ್ಯಾಷನಲ್ ಸೆಂಟರ್ ಫಾರ್ ಸೈಟಿಂಫಿಕ್ ರಿಸರ್ಚ್ ವಿಯಟ್ನಾಮ್, ದಿ ಇಸ್ರೇಲ್ ಅಕಾಡೆಮಿ ಆಫ್ ಸಯನ್ಸಸ್ ಆಂಡ್ ಹುಮ್ಯಾನಿಟೀಸ್, ರೋಯಲ್ ಸ್ವೀಡಿಶ್ ಅಕಾಡೆಮಿ ಆಫ್ ಸಯನ್ಸಸ್, ನ್ಯಾಷನಲ್ ಅಕಾಡೆಮಿ ಆಫ್ ಸಯನ್ಸಸ್ ಯುಎಸ್‌ಎ, ಅರ್ಜೆಂಟೀನಾದ ನ್ಯಾಷನಲ್ ಅಕಾಡೆಮಿ, ಡೆಮೊಕ್ರಾಟಿಕ್ ಪೀಪಲ್ ರಿಪಬ್ಲಿಕ್ ಆಫ್ ಕೊರಿಯಾ, ಸ್ಟೇಟ್ ಅಕಾಡೆಮಿ ಮತ್ತು ಬೇಲಾರೂಸ್‌ನ ಅಕಾಡೆಮಿ ಆಫ್ ಸಯನ್ಸಸ್ ಈ ಸಂಸ್ಥೆಗಳೊಂದಿಗೆ ಕಾರ್ಯಕ್ರಮ ವಿನಿಮಯ ಮಾಡಿಕೊಳ್ಳುತ್ತಿದೆ.

**ಮುಂದಿರುವ ಕಾರ್ಯಭಾರಗಳು:**

ಆಧುನಿಕ ಭಾರತದ ನಿರ್ಮಾಣದ ಹೆಬ್ಬಯಕೆ ಹೊಂದಿದ ಸಂಸ್ಥೆಯ ಸ್ಥಾಪಕರ ಆಶಯವೇ ಅಕಾಡೆಮಿಯ ಶ್ರೀರಕ್ಷೆಯಾಗಿದೆ. ಚಲನಶೀಲ, ಸದಾ ಮುನ್ನಡೆಯಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯಿಂದ ಉತ್ತೇಜಿತಗೊಂಡ ಸ್ವತಂತ್ರ ಭಾರತದ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕೆನ್ನುವ ಹೆಬ್ಬಯಕೆ ಅಕಾಡೆಮಿಯದು. ನೆಲ, ಜಲ ಖನಿಜ ಸಂಪನ್ಮೂಲ ಹಾಗೂ ಹೇರಳವಾಗಿ ದೊರೆಯುವ ಸೌರ ಶಕ್ತಿಯನ್ನು ಬಳಸಿಕೊಂಡು ಆಹಾರ ಉತ್ಪನ್ನದಲ್ಲಿ ಸ್ವಾವಲಂಬನೆ ಸಾಧಿಸುವ ಮೂಲಕ ಈ ಮಹಾದಾಸೆಯ ಗುರಿ ಮುಟ್ಟಬಹುದಾಗಿದೆ. ಆರೋಗ್ಯ, ಜೀವನಾವಶ್ಯಕ ಉತ್ಪನ್ನಗಳು, ಆಹಾರೋತ್ಪನ್ನಗಳು, ಸಂಪರ್ಕ, ನೀರಾವರಿ ಸಾರಿಗೆ, ಇಂಧನ, ಉದ್ದಿಮೆ, ವಾಣಿಜ್ಯ ಮತ್ತು ಕಲೆ ಈ ಕ್ಷೇತ್ರಗಳಲ್ಲಿ ನಮ್ಮ ಸಾಧನೆ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ಕೃಷ್ಟ ಸಾಧನೆ ತೋರುವ ಯುವಪ್ರತಿಭೆಗಳ ಒಂದು ಸದೃಢ ನೆಲೆಗಟ್ಟನ್ನು ರೂಪಿಸಲಾಗಿದೆ. ಮೂಲ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ಕೃಷಿ, ವೈದ್ಯಶಾಸ್ತ್ರ, ಅಣುಶಕ್ತಿ, ಉಪಗ್ರಹ, ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಇವು ಭವಿಷ್ಯದ ಜನಾಂಗದಲ್ಲಿ ಆತ್ಮವಿಶ್ವಾಸ ಬೆಳೆಸುವ ಮೂಲಕ್ಷೇತ್ರಗಳು. ಉತ್ತಮ ತರಬೇತಿ ಪಡೆದ ಯುವ ವಿಜ್ಞಾನಿಗಳ ಸಂಖ್ಯೆ ಏಕಪ್ರಕಾರವಾಗಿ ಹೆಚ್ಚುತ್ತಿದೆ. ಈ ಯುವ ಪ್ರತಿಭೆಗಳ ಪ್ರತಿಭಾ ವಿಕಸನಕ್ಕೆ ರಾಷ್ಟ್ರದಲ್ಲಿ ಸೂಕ್ತ ಅವಕಾಶ ಮತ್ತು ವೇದಿಕೆ ಒದಗಿಸುವುದು ಮತ್ತು ಅಂತಾರಾಷ್ಟ್ರೀಯ ಸಹಕಾರ ಒದಗಿಸುವುದು ಅಕಾಡೆಮಿಯ ಕೆಲಸವಾಗಿದೆ.

ಜನತೆ ಮತ್ತು ರಾಷ್ಟ್ರಮುಖಂಡರಲ್ಲಿ ವಿಜ್ಞಾನದ ಬಗ್ಗೆ ನಂಬಿಕೆ ಮತ್ತು ಆಸಕ್ತಿಯನ್ನು ಕ್ರೋಢೀಕರಿಸುವುದು, ಪ್ರಾಂಜಲತೆ (ನಿಷ್ಕಪಟತೆ) ಯ ಸಿದ್ಧಾಂತವನ್ನು ಪ್ರೋತ್ಸಾಹಿಸುವುದು ಗೋಪ್ಯತೆ ಮತ್ತು ಸುಳ್ಳು ಹಕ್ಕು ಸಾಧಿಸುವುದನ್ನು ತಡೆಯುವುದು. ಇವು ಅಕಾಡೆಮಿಯ ಮುಂದಿರುವ ಪ್ರಮುಖ ಕಾರ್ಯಗಳಾಗಿವೆ.

ದೇಶದ ವಿವಿಧ ಭಾಗಗಳಲ್ಲಿರುವ ಮಕ್ಕಳಿಗೆ ಎಲ್ಲ ಆಧುನಿಕ ಮಾಧ್ಯಮಗಳ ಮೂಲಕ ವಿಜ್ಞಾನವನ್ನು ಅಧ್ಯಯನ ಮಾಡುವುದರಿಂದ ಹಾಗೂ ನೂತನ ಜ್ಞಾನವನ್ನು ಉತ್ಪಾದನೆ ಮಾಡುವುದರಿಂದ ಮತ್ತು ಆ ಹೊಸ ಜ್ಞಾನವನ್ನು ಅನ್ವಯಗೊಳಿಸುವುದರಿಂದ ಭಾವೋದ್ವೇಗ ಸಂತೃಪ್ತಿ ಮತ್ತು ಸಂತೋಷ ದೊರಕಿಸಿಕೊಡುವುದು ಅಕಾಡೆಮಿಯ ಉದ್ದೇಶವಾಗಿದೆ. ಇತ್ತೀಚಿನ ದಿನಗಳಲ್ಲಿ ಅನುಷ್ಠಾನಕ್ಕೆ ಬಂದಿರುವ

Digitised by Bharatavani, CIIL

ಮುಕ್ತ ವ್ಯಾಪಾರ ವ್ಯವಸ್ಥೆ ಹೊಸದೊಂದು ಸವಾಲು ತಂದೊಡ್ಡಿದೆ. ಜ್ಞಾನಸಂಪತ್ತು (ಬೌದ್ಧಿಕ ಸಂಪತ್ತು) ಎಂಬುದು ಹಣಗಳಿಕೆಯ ಒಂದು ಸಾಧನವಾಗಿದೆ. ಇದರಿಂದ ಪ್ರತಿಭಾವಂತ ವಿಜ್ಞಾನಿಗಳಿಗೆ ಜಾಗತಿಕ ಮಟ್ಟದಲ್ಲಿ ಉನ್ನತ ಅವಕಾಶಗಳು ಲಭ್ಯವಾಗುತ್ತವೆ. ಈ ಪ್ರಮುಖ ಉದ್ದೇಶಗಳನ್ನು ಈಡೇರಿಸಲು ಅಕಾಡೆಮಿಯಿಂದ ಪ್ರಯತ್ನಿಸುತ್ತಿದ್ದು, ಹೆಚ್ಚಿನ ಸಹಕಾರ ಮತ್ತು ವ್ಯವಸ್ಥೆಯನ್ನು ರೂಪಿಸುತ್ತಿದೆ ಅದೃಷ್ಟವಶಾತ್, ಅಕಾಡೆಮಿಯ ಈ ಪ್ರಯತ್ನಗಳಿಗೆ ಸಕಾರಾತ್ಮಕ ಪ್ರತಿಕ್ರಿಯೆ ಲಭ್ಯವಾಗುತ್ತಿದೆ. ಇಂದು ಬಿತ್ತಿದ ಎಲ್ಲಾ ಬೀಜಗಳು ಸುಂದರವಾದ ಬೃಹತ್ ಉದ್ಯಾನವನವಾಗಿ ಅರಳಲಿದೆ. ಭೂತಕಾಲದ ಉತ್ಸಾಹವು ಉದಾರಶೀಲತೆ ಮತ್ತು ಸ್ವಾರ್ಥರಹಿತ ಸೇವೆಯ ವಿಸ್ಮಯಕಾರಿ ಭವಿಷ್ಯಕ್ಕೆ ಮಾರ್ಗದರ್ಶಿಯಾಗಿದೆ.

**ಮೂಲ: ಗೋವರ್ಧನ ಮೆಹಿತ**
**ಅನು: ಕೃಷ್ಣಮೂರ್ತಿ ಭಟ್ ಬಿ.**

## ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಸ್ಥೆ (ಐಎಸ್‌ಸಿಎ)

ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಸ್ಥೆ (ಐಎಸ್‌ಸಿಎ) ಯನ್ನು ಬ್ರಿಟಿಷ್ ರಸಾಯನಶಾಸ್ತ್ರಜ್ಞರಾದ ಪ್ರೊ॥ ಜೆ.ಐ. ಸಿಮನ್ಸನ್ ಮತ್ತು ಪ್ರೊ॥ ಪಿ.ಎಸ್. ಮೆಕ್‌ಮೋಹನ್ ಆರಂಭಿಸಿದರು. ಬ್ರಿಟಿಷ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸಯನ್ಸ್ ಸಂಸ್ಥೆಯ ರೀತಿಯಲ್ಲೇ ಭಾರತದಲ್ಲೂ ಒಂದು ಸಂಸ್ಥೆಯನ್ನು ಆರಂಭಿಸಿದೆ ಇಲ್ಲಿ ಸಂಶೋಧನಾ ಕಾರ್ಯಕರ್ತರು ವರ್ಷಕ್ಕೊಮ್ಮೆ ಸಭೆ ನಡೆಸುವ ಮೂಲಕ ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೋತ್ಸಾಹ ದೊರಕೀತು ಎನ್ನುವ ನಿರೀಕ್ಷೆ ಈ ಸಂಸ್ಥೆ ಸ್ಥಾಪನೆಯ ಹಿಂದಿತ್ತು.

ಸಂಸ್ಥೆಯ ಪ್ರಥಮ ಮಹಾಸಭೆ 1914ರ ಜನವರಿ 15ರಿಂದ 17ರವರೆಗೆ ಕಲ್ಕತ್ತಾದಲ್ಲಿ ನಡೆಯಿತು. ಕಲ್ಕತ್ತಾ ವಿಶ್ವವಿದ್ಯಾಲಯದ ಆಗಿನ ಉಪಕುಲಪತಿ ಸರ್ ಅಸುತೋಶ್ ಮುಖರ್ಜಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ದೇಶದ ವಿವಿದೆಡೆಯಿಂದ ಹಾಗೂ ವಿದೇಶೀಯರೂ ಸೇರಿದಂತೆ ಒಟ್ಟು 105 ವಿಜ್ಞಾನಿಗಳು ಭಾಗವಹಿಸಿದ್ದರು. ಸಸ್ಯ ವಿಜ್ಞಾನ, ರಸಾಯನಶಾಸ್ತ್ರ, ಮಾನವಜನಾಂಗ ವರ್ಣನೆ, ಭೂಗರ್ಭಶಾಸ್ತ್ರ, ಭೌತವಿಜ್ಞಾನ, ಪ್ರಾಣಿಶಾಸ್ತ್ರ–ಈ ವಿಷಯಗಳಲ್ಲಿ ಚರ್ಚೆ ನಡೆಯಿತು. 105 ಸದಸ್ಯರೊಂದಿಗೆ ಆರಂಭಗೊಂಡ ಸಂಸ್ಥೆಯಲ್ಲಿ ಪ್ರಸ್ತುತ 10 ಸಾವಿರಕ್ಕೂ ಹೆಚ್ಚು ಮಂದಿ ಸದಸ್ಯರಿದ್ದಾರೆ. ಸಂಪರ್ಕ ಸಾಧಿಸಲು ಸುಮಾರು ಸಾವಿರದಷ್ಟು ಪ್ರಬಂಧಗಳನ್ನು ಮಂಡಿಸಲಾಗುತ್ತಿದೆ. ಈಗ 16 ವಿಭಾಗಗಳು, 2 ಸಮಿತಿಗಳು, 6 ಚರ್ಚಾ ವೇದಿಕೆಗಳಿವೆ. ಚರ್ಚಾ ವಿಷಯಗಳಾಗಿ ಕೃಷಿ ವಿಜ್ಞಾನ, ಮಾನವಜನಾಂಗ ವರ್ಣನೆ ಪುರಾತತ್ವಶಾಸ್ತ್ರ, ಜೀವರಸಾಯನ ವಿಜ್ಞಾನ, ಜೀವಭೌತ ವಿಜ್ಞಾನ, ಕಣಜೀವಶಾಸ್ತ್ರ, ಸಸ್ಯ ವಿಜ್ಞಾನ, ರಸಾಯನಶಾಸ್ತ್ರ, ಕಂಪ್ಯೂಟರ್ ಸಯನ್ಸ್, ಭೂವ್ಯವಸ್ಥೆ ಶಾಸ್ತ್ರ, ಇಂಜಿನಿಯರಿಂಗ್ ಸಯನ್ಸ್, ಮೆಟೀರಿಯಲ್ ಸಯನ್ಸಸ್, ಗಣಿತ, ವೈದ್ಯಕೀಯ ಮತ್ತು ಪಶುವೈದ್ಯಕೀಯ ಶಾಸ್ತ್ರ, ಭೌತವಿಜ್ಞಾನ, ಶರೀರ ವಿಜ್ಞಾನ, ಮನೋವಿಜ್ಞಾನ ಮತ್ತು ಶೈಕ್ಷಣಿಕ ವಿಜ್ಞಾನ, ಅಂಕಿ ಅಂಶ ಶಾಸ್ತ್ರ, ಪ್ರಾಣಿಶಾಸ್ತ್ರ, ಕೀಟಶಾಸ್ತ್ರ ಮತ್ತು ಮೀನುಗಾರಿಕೆ ಇವುಗಳನ್ನು ಸೇರಿಸಲಾಗಿದೆ. ಗೃಹ ವಿಜ್ಞಾನ, ವಿಜ್ಞಾನ ಮತ್ತು ಸಮಾಜ – ಈ ಎರಡು ಸಮಿತಿಗಳು, ಸಂಪರ್ಕ ಮತ್ತು ಮಾಹಿತಿ ವಿಜ್ಞಾನ, ಪರಿಸರ ವಿಜ್ಞಾನ, ವೈದ್ಯಕೀಯ ನ್ಯಾಯಶಾಸ್ತ್ರ, ವಿಜ್ಞಾನ ಶಿಕ್ಷಣ, ಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ, ಮಹಳೆ ಮತ್ತು ವಿಜ್ಞಾನ–ಇವು ಚರ್ಚಾ ವೇದಿಕೆಗಳಾಗಿವೆ.

**ಪ್ರಸ್ತಾವನೆ :** ಐಎಸ್‌ಸಿಎಯ ನೋಂದಾಯಿತ ಕಛೇರಿ ಕೊಲ್ಕತ್ತಾದಲ್ಲಿದೆ. ದೇಶದ ಸಮಗ್ರ ಪ್ರಾತಿನಿಧಿಕ ವಿಜ್ಞಾನ ಸಮುದಾಯವನ್ನು ಇದು ಪ್ರತಿನಿಧಿಸುತ್ತದೆ. ದೇಶದಲ್ಲಿರುವ ವಿವಿಧ ವಿಷಯಗಳ ವಿಜ್ಞಾನಿಗಳು, ಅದರಲ್ಲೂ ವಿಶೇಷವಾಗಿ ಯುವ ವಿಜ್ಞಾನಿಗಳು ಪರಸ್ಪರ ಸಂವಹನ ಸಾಧಿಸಲು ನೆರವಾಗುವ ಏಕೈಕ ಸಂಸ್ಥೆ ಇದಾಗಿದೆ. 1938ರಲ್ಲಿ ಸಂಸ್ಥೆಯ ಬೆಳ್ಳಿಹಬ್ಬ ಸಮಾರಂಭ ಕಲ್ಕತ್ತಾದಲ್ಲಿ, ಅಕ್ಟೋಬರ್ 1963ರಲ್ಲಿ ಸ್ವರ್ಣ ಮಹೋತ್ಸವ ದಿಲ್ಲಿಯಲ್ಲಿ, 1973ರ ಜನವರಿಯಲ್ಲಿ ಚಂಡೀಗಢದಲ್ಲಿ ವಜ್ರಮಹೋತ್ಸವ, 1988ರಲ್ಲಿ ಪುಣೆಯಲ್ಲಿ ಅಮೃತ ಮಹೋತ್ಸವ ಆಚರಿಸಲಾಯಿತು. ಈ ಮಹೋತ್ಸವ ಸಂಭ್ರಮದ ಸಂದರ್ಭದಲ್ಲಿ ಸಂಸ್ಥೆಯ ಇತಿಹಾಸ ಹಾಗೂ ದೇಶದಲ್ಲಿರುವ ವಿವಿಧ ವಿಜ್ಞಾನ ವಿಭಾಗಗಳ ಸ್ಥಿತಿ–ಗತಿಯನ್ನು ವಿವರಿಸುವ ವಿಶೇಷ ಸಂಚಿಕೆಗಳನ್ನು ಪ್ರಕಟಿಸಲಾಗಿದೆ.

ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ – ಪ್ರಬಂಧ ಮಂಡನೆ, ಭಿತ್ತಿಪತ್ರಗಳನ್ನು ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗುತ್ತದೆ. ಸಮಸ್ತ ಸದಸ್ಯರು ಪಾಲ್ಗೊಳ್ಳುವ ಸಭೆಯ ಜೊತೆಗೆ ಜನಪ್ರಿಯ ಉಪನ್ಯಾಸಗಳು ಹಾಗೂ ದತ್ತಿನಿಧಿ ಉಪನ್ಯಾಸಗಳನ್ನೂ ಆಯೋಜಿಸಲಾಗುತ್ತದೆ. ವಾರ್ಷಿಕ ಮಹಾಸಭೆಯಲ್ಲಿ ಪ್ರಪಂಚದಾದ್ಯಂತ ಇರುವ ಇಂತಹ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಇವುಗಳಲ್ಲಿ ಅಮೆರಿಕನ್ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್, ಬ್ರಿಟಿಷ್ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್–ಮತ್ತು ಯುಎಸ್‌ಎಸ್‌ಆರ್‌ನ ಅಕಾಡೆಮಿ ಆಫ್ ಸೈನ್ಸ್‌ನ ಪ್ರತಿನಿಧಿಗಳೂ ಇರುತ್ತಾರೆ. ಭಾರತದಲ್ಲಿ ವಿಜ್ಞಾನದ ಉದ್ದೇಶವನ್ನು ಮುಂದುವರಿಸಿಕೊಂಡು ಬರುವುದು ಹಾಗೂ ಇದಕ್ಕೆ ಪ್ರೋತ್ಸಾಹ ನೀಡುವುದು, ದೇಶದ ಸೂಕ್ತ ಸ್ಥಳದಲ್ಲಿ ವಾರ್ಷಿಕ ಮಹಾಸಭೆ ನಡೆಸುವುದು, ಸಭೆಯ ನಿರ್ಣಯಗಳು, ನಿಯತಕಾಲಿಕ ಪತ್ರಿಕೆಗಳು ಅಥವಾ ಸೂಕ್ತ ಎನಿಸಿದ ಇತರ ವಿಷಯಗಳನ್ನು ಪ್ರಕಟಿಸುವುದು, ವಿಜ್ಞಾನದ ಅಭಿವೃದ್ಧಿಗಾಗಿ ಮತ್ತು ದತ್ತಿಗಳನ್ನು ಸ್ಥಾಪಿಸುವ ಉದ್ದೇಶದಿಂದ ನಿಧಿ ಸಂಗ್ರಹಣೆ ಹಾಗೂ ಸಂಗ್ರಹಿಸಿದ ನಿಧಿಯ ಸೂಕ್ತ ನಿರ್ವಹಣೆ ಇವೇ ಮುಂತಾದವು ಸಂಸ್ಥೆಯ ಉದ್ದೇಶಗಳಾಗಿವೆ. ಸಂಸ್ಥೆಯ ಸದಸ್ಯರು, ಗೌರವ ಸದಸ್ಯರು, ಅಧಿವೇಶನದ ಸದಸ್ಯರು, ವಿದ್ಯಾರ್ಥಿ ಸದಸ್ಯರು, ಸಂಸ್ಥಾ ಸದಸ್ಯರು ವೈಯಕ್ತಿಕ ದೇಣಿಗೆದಾರರು ಹಾಗೂ ಸಂಸ್ಥಾ ದೇಣಿಗೆದಾರರನ್ನು ಹೊಂದಿದೆ.

Digitised by Bharatavani, CIIL

**ವಿದೇಶೀ ವಿಜ್ಞಾನ ಅಕಾಡೆಮಿ/ಸಂಘಟನೆಗಳ ಜೊತೆ ಸಂವಹನ:**

ಸ್ವಾತಂತ್ರ್ಯ ದೊರೆತ ಬಳಿಕ ಐಎಸ್‌ಸಿಎಯು ಪರಸ್ಪರರ ಹಿತಾಸಕ್ತಿಗಳಿಗೆ ಲಾಭ ಇರುವ ವಿಷಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುವ ಉದ್ದೇಶದಿಂದ ಬ್ರಿಟಿಷ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸಯನ್ಸ್, ಅಮೆರಿಕನ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸಯನ್ಸ್, ಫ್ರೆಂಚ್ ಅಕಾಡೆಮಿ ಆಫ್ ಸಯನ್ಸ್ ಮುಂತಾದ ವಿದೇಶೀ ವಿಜ್ಞಾನ ಅಕಾಡೆಮಿ/ ಸಂಘಟನೆಗಳ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ. ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ವಿಜ್ಞಾನಿಗಳನ್ನು ಆಹ್ವಾನಿಸಲಾಗುತ್ತದೆ. ನೋಬೆಲ್ ಪ್ರಶಸ್ತಿ ಪಡೆದಿರುವ ಹಲವು ಖ್ಯಾತ ನಾಮರು ಐಎಸ್‌ಎ ಸಭೆಯಲ್ಲಿ ಉಪನ್ಯಾಸ ನೀಡಿದ್ದಾರೆ. 'ರೋಲ್ ಆಫ್ ಸೈಂಟಿಫಿಕ್ ಆಂಡ್ ಇಂಜಿನಿಯರಿಂಗ್ ಸೊಸ್ಯಾಟೀಸ್ ಇನ್ ಡೆವಲಪ್‌ಮೆಂಟ್'ಎಂಬ ವಿಷಯದಲ್ಲಿ 1980ರಲ್ಲಿ ಹೊಸದಿಲ್ಲಿಯಲ್ಲಿ ಜಾಗತಿಕ ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಐಎಸ್‌ಸಿಎ, ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ ಹಾಗೂ ಅಮೆರಿಕನ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸಯನ್ಸ್ ಸಂಸ್ಥೆಗಳ ಸಂಯುಕ್ತ ಆತಿಥೇಯತ್ವದಲ್ಲಿ ಈ ವಿಚಾರ ಸಂಕಿರಣ ನಡೆಯಿತು. ಮುಂದುವರಿಕಾ ಸಮಿತಿಯು ಈ ವಿಷಯಕ್ಕೆ ಸಂಬಂಧಿಸಿದ ವಿಚಾರ ಸಂಕಿರಣಗಳನ್ನು ಸಂಘಟಿಸುವ ಕಾರ್ಯ ನಡೆಸಿದೆ.

**ಕೇಂದ್ರೀಕೃತ ವಿಷಯ ಮತ್ತು ಕಾರ್ಯಪಡೆ:**

ವೈಜ್ಞಾನಿಕ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಮಹತ್ವದ ರಾಷ್ಟ್ರೀಯ ವಿಷಯಗಳಲ್ಲಿ ವಿಜ್ಞಾನಿಗಳು ತೊಡಗಿಸಿಕೊಳ್ಳುವ ಅಗತ್ಯವಿದೆ ಎಂಬ ಭಾವನೆ ರೂಪುಗೊಂಡ ಬಳಿಕ 1976ರಲ್ಲಿ ಒಂದು ಮಹತ್ತರ ಬದಲಾವಣೆಯಾಯಿತು. 1976ರಿಂದ ಅಕಾಡೆಮಿಯ ಅಧ್ಯಕ್ಷರು ರಾಷ್ಟ್ರೀಯ ಮಹತ್ವದ ವಿಷಯವನ್ನು ಪ್ರಸ್ತಾಪಿಸಿದ್ದು ಆ ಬಳಿಕದ ಪ್ರತಿ ವರ್ಷದ ವಾರ್ಷಿಕ ಮಹಾಧಿವೇಶನದಲ್ಲಿ ಪ್ರತಿ ವಿಭಾಗದಲ್ಲೂ, ಸಮಿತಿಯ ವೇದಿಕೆಗಳಲ್ಲೂ ಈ ಬಗ್ಗೆ ಚರ್ಚೆ ನಡೆಯಿತು. ಈ ಕೇಂದ್ರೀಕೃತ ವಿಷಯಗಳ ಬಗ್ಗೆ ಹಲವು ಪೂರ್ಣಾಧಿವೇಶನಗಳನ್ನೂ ಸಂಘಟಿಸಲಾಯಿತು. ಇದರಲ್ಲಿ ವಿಜ್ಞಾನಿಗಳು, ತಂತ್ರಜ್ಞಾನಿಗಳು ಹಾಗೂ ಕಾರ್ಯನೀತಿಗಳನ್ನು ರೂಪಿಸುವವರು, ಆಡಳಿತಗಾರರು ಪಾಲ್ಗೊಂಡು ಪರಸ್ಪರ ಸಂವಹನ ನಡೆಸಿದರು. ಕೇಂದ್ರೀಕೃತ ವಿಷಯಗಳ ಬಗೆಗಿನ ಚರ್ಚೆಗೆ ಇದೊಂದು ಪೂರ್ವ ವೇದಿಕೆಯಾಯಿತು. ವಿವಿಧ ವಿಭಾಗಗಳ ಹಾಗೂ ಜೀವನದ ವಿವಿಧ ಕ್ಷೇತ್ರಗಳವರು ಕೇಂದ್ರೀಕೃತ ವಿಷಯಗಳ ಬಗ್ಗೆ ಚರ್ಚೆಗಳಲ್ಲಿ ಭಾಗವಹಿಸಲು ಸಾಧ್ಯವಾಯಿತು. ಪ್ರತಿಯೊಂದು ವಿಭಾಗದಲ್ಲಿ ಅಂಗೀಕೃತಗೊಂಡ ನಿರ್ಣಯವನ್ನು ಅಧಿವೇಶನದ ಅಂತಿಮ ದಿನ ಕ್ರೋಢೀಕರಿಸಿ, ಒಂದು ಪ್ರಬಂಧದ ರೂಪದಲ್ಲಿ ಸಿದ್ಧಪಡಿಸಲಾಗುತ್ತದೆ.

1980ರಲ್ಲಿ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು (ಡಿಎಸ್‌ಟಿ) ಒಂದು ಖಾಯಂ ಕಾರ್ಯ ಪಡೆಯನ್ನು ಆರಂಭಿಸಿದ್ದು ಡಿಎಸ್‌ಟಿಯ ಕಾರ್ಯದರ್ಶಿ ಇದರ ಅಧ್ಯಕ್ಷರಾಗಿರುತ್ತಾರೆ. ಐಎಸ್‌ಸಿಎಯ ಓರ್ವ ಪ್ರತಿನಿಧಿ, ವಿವಿಧ ಏಜೆನ್ಸಿಗಳ ಮುಖ್ಯಸ್ಥರು, ಸ್ವಯಂ ಸೇವಾ ಸಂಘಟನೆಗಳ ಮುಖ್ಯಸ್ಥರು ಇದರ ಪ್ರತಿನಿಧಿಗಳಾಗಿದ್ದು, ಕೇಂದ್ರೀಕೃತ ವಿಷಯಗಳ ಬಗೆಗಿನ ವಿವಿಧ ನಿರ್ಣಯಗಳ ಕುರಿತು ಮುಂದಿನ ಪ್ರಕ್ರಿಯೆ (ಫಾಲೊ ಅಪ್) ಕೈಗೊಳ್ಳುವುದು ಇವರ ಹೊಣೆಗಾರಿಕೆಯಾಗಿರುತ್ತದೆ. ಡಿಎಸ್‌ಟಿ ಆಶ್ರಯದಲ್ಲಿ ಪ್ರತಿ ವರ್ಷ ನಡೆಯುವ ಸಾಮಾನ್ಯ ಅಧಿವೇಶನದಲ್ಲಿ, ಹಿಂದಿನ ಅಧಿವೇಶನದಲ್ಲಿ ಅಂಗೀಕೃತಗೊಂಡ ವಿವಿಧ ನಿರ್ಣಯಗಳ ಕುರಿತು ನಡೆಸಲಾದ 'ಫಾಲೋ ಅಪ್' ಪ್ರಕ್ರಿಯೆಯ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಈ ಪ್ರಕ್ರಿಯೆಯ ಮೂಲಕ ಐಎಸ್‌ಸಿಎಯು ವಿಜ್ಞಾನದ ಅಭಿವೃದ್ಧಿಯ ಅದರಲ್ಲೂ ವಿಶೇಷವಾಗಿ ರಾಷ್ಟ್ರೀಯ ವಿಜ್ಞಾನ ನೀತಿಯ ಅಭಿವೃದ್ಧಿಯ ನಿಟ್ಟಿನಲ್ಲಿ ಕೊಡುಗೆ ನೀಡುತ್ತಿದೆ.

**ಯುವ ವಿಜ್ಞಾನಿಗಳ ಕಾರ್ಯಕ್ರಮ:**

1981ರಲ್ಲಿ ನಡೆದ ಸಂಸ್ಥೆಯ 68ನೇ ಅಧಿವೇಶನದಿಂದ ಯುವ ವಿಜ್ಞಾನಿಗಳ ನೆರವಿಗಾಗಿ ಕಾರ್ಯಕ್ರಮವೊಂದನ್ನು ಆರಂಭಿಸಲಾಯಿತು. ತಮ್ಮ ಪ್ರಸ್ತಾವಿಕ ಸಂಶೋಧನಾ ಕಾರ್ಯದ ವಿವರವನ್ನು ಯುವ ವಿಜ್ಞಾನಿಗಳು ಪ್ರಸ್ತುತ ಪಡಿಸಲು ಮತ್ತು ಸಂಬಂಧಿತ ಸಮಸ್ಯೆಗಳ ಬಗ್ಗೆ ತಮ್ಮ ಸಮಕಾಲೀನರು ಹಾಗೂ ತಜ್ಞರ ಜೊತೆ ಚರ್ಚಿಸಲು, ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲು ಇಲ್ಲಿ ಅವಕಾಶವಿದೆ. ಅತ್ಯುತ್ತಮ ಪ್ರಬಂಧ ಮಂಡಿಸಿದ 25 ವಿಜ್ಞಾನಿಗಳಿಗೆ 'ಐಎಸ್‌ಸಿಎ ಯುವ ವಿಜ್ಞಾನಿ' ಪುರಸ್ಕಾರ ನೀಡಲಾಗುತ್ತದೆ. ಜನವರಿ 2000 ದಂದು ನಡೆದ ಅಧಿವೇಶನದಲ್ಲಿ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನದ ಭವಿಷ್ಯದ ಬಗ್ಗೆ 22 ಅಸಾಧಾರಣ ಪ್ರತಿಭೆಯ ಯುವ ವಿಜ್ಞಾನಿಗಳು ಹೊಸ ಸಹಸ್ರಮಾನದ ಉಪನ್ಯಾಸ ನೀಡಿದರು. ಪ್ರಬಂಧ ಮಂಡನೆಯು ಮೌಖಿಕ ಹಾಗೂ ಪ್ರಕಟಣೆ ಎಂಬ ಎರಡು ಅವಧಿಗಳನ್ನು ಹೊಂದಿರುತ್ತದೆ. ಸಂಬಂಧಿಸಿದ ವಿಭಾಗಗಳ ಅಧ್ಯಕ್ಷರು, ಕೆಲ ವಿಶೇಷಜ್ಞರ ನೆರವಿನಿಂದ ಇವನ್ನು ಕೂಲಂಕಷವಾಗಿ ಪರಿಶೀಲಿಸಿದ ಬಳಿಕ, ಮಂಡನೆಯಾದ ಪ್ರಬಂಧಗಳಲ್ಲಿ ಹೆಚ್ಚಿನವನ್ನು ಸ್ವೀಕರಿಸಲಾಗುತ್ತದೆ. ಪ್ರಕಟಣಾ ವಿಭಾಗದಲ್ಲಿ ಪ್ರತಿ ವಿಭಾಗದಲ್ಲಿ ಅತ್ಯುತ್ತಮ ಪ್ರಬಂಧಗಳಿಗೆ ಎರಡು ಪ್ರಶಸ್ತಿ ಹಾಗೂ ಪ್ರಮಾಣ ಪತ್ರ, ಪ್ರತಿ ಸಮಿತಿ/ವೇದಿಕೆಗಳಲ್ಲಿ ಒಂದು ಪ್ರಶಸ್ತಿಯಂತೆ, ಗರಿಷ್ಠ ಎಂಟು ಪುರಸ್ಕಾರ ನೀಡಲಾಗುತ್ತದೆ. ಮೌಖಿಕ ಅವಧಿಯು, ಸಲ್ಲಿಸಲ್ಪಟ್ಟ ಪ್ರಬಂಧಗಳಲ್ಲಿ ಕೆಲವನ್ನು ಆಯ್ಕೆಮಾಡಿ ಮಂಡಿಸುವ ಪ್ರಕ್ರಿಯೆಯನ್ನೂ ಒಳಗೊಂಡಿರುತ್ತದೆ.

**ವಿಜ್ಞಾನವನ್ನು ಜನಪ್ರಿಯಗೊಳಿಸುವಿಕೆ:**

ವಿಜ್ಞಾನವನ್ನು ಜನಪ್ರಿಯಗೊಳಿಸುವಿಕೆಯು ಪ್ರಮುಖ ವಿಷಯವಾಗಿದ್ದು ಈ ಬಗ್ಗೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ವೈಜ್ಞಾನಿಕ ವಿಷಯದಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು

Digitised by Bharatavani, CIIL

ದೇಶದ ಅಥವಾ ವಿದೇಶದ ಪ್ರಸಿದ್ಧ ವಿಜ್ಞಾನಿಗಳಿಂದ ಸಾರ್ವಜನಿಕ ಉಪನ್ಯಾಸಗಳು ಇದರಲ್ಲಿ ಸೇರಿವೆ. ಸಮಿತಿ ಅಥವಾ ವೇದಿಕೆಗಳ ಆಶ್ರಯದಲ್ಲಿ ವಿಚಾರಗೋಷ್ಠಿಗಳು ಹಾಗೂ ವಿಶೇಷ ಉಪನ್ಯಾಸಗಳನ್ನೂ ಏರ್ಪಡಿಸಲಾಗುತ್ತದೆ. ಪ್ರಚಲಿತ ವಿಷಯಗಳ ಕುರಿತು ಪ್ರದರ್ಶನ, ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ವಿಶೇಷ ಕಾರ್ಯಕ್ರಮಗಳನ್ನು (ಚರ್ಚಾ ಕೂಟ, ಕಾರ್ಯಯೋಜನೆಗಳ ಪ್ರದರ್ಶನ, ಡಿಎಸ್‌ಟಿಗಳೊಂದಿಗೆ ಯುವ ವಿಜ್ಞಾನಿಗಳ ಸಂವಹನ) ಕೂಡಾ ಆಯೋಜಿಸಲಾಗುತ್ತದೆ.

**ಅಧಿವೇಶನಗಳು:**

ವಾರ್ಷಿಕ ಅಧಿವೇಶನದ ಪ್ರಯುಕ್ತ ಜನವರಿ 3ರಂದು ಉದ್ಘಾಟನಾ ಸಮಾರಂಭ, ಬಳಿಕ ಕೇಂದ್ರೀಕೃತ ವಿಷಯಗಳ ಬಗ್ಗೆ ಏರ್ಪಡಿಸಲಾಗುವ ಪ್ರದರ್ಶನಕ್ಕೆ ಚಾಲನೆ ನೀಡಲಾಗುತ್ತದೆ. ಜನವರಿ 3ರಿಂದ 7ರವರೆಗೆ ನಡೆಯುವ ಅಧಿವೇಶನಗಳಲ್ಲಿ ಕೇಂದ್ರೀಕೃತ ವಿಷಯಗಳ ಬಗ್ಗೆ ವಿಶೇಷ ಸಭೆ, ಖ್ಯಾತ ವಿಜ್ಞಾನಿಗಳಿಂದ ಉಪನ್ಯಾಸ, ಸಂಬಂಧಿಸಿದ ಸಮಿತಿ ಮತ್ತು ವಿಭಾಗಗಳ ಆಶ್ರಯದಲ್ಲಿ ತಾಂತ್ರಿಕ ಅಧಿವೇಶನ ನಡೆಯತ್ತದೆ. ತಾಂತ್ರಿಕ ಅಧಿವೇಶನದಲ್ಲಿ ಸಮಿತಿಗಳ ಅಧ್ಯಕ್ಷರಿಂದ ಭಾಷಣ, ಪ್ರಧಾನ ಉಪನ್ಯಾಸ, ದತ್ತಿನಿಧಿ ಉಪನ್ಯಾಸ, ವಿಶೇಷ ಉಪನ್ಯಾಸ, ವಿಚಾರ ಸಂಕಿರಣಗಳು, ವಿಚಾರಗೋಷ್ಠಿಗಳು, ಪ್ರಬಂಧ ಮಂಡನೆ, ಕೊನೆಯ ದಿನದಂದು ಸಮಾರೋಪ ಸಮಾರಂಭ ನಡೆಯುತ್ತದೆ. ಸಮಾರೋಪದಂದು ಐಎಸ್‌ಸಿಎ ಯುವ ವಿಜ್ಞಾನಿಗಳಿಗೆ ಪುರಸ್ಕಾರ ಪ್ರದಾನ, ಹಾಗೂ ಕೇಂದ್ರೀಕೃತ ವಿಷಯಗಳ ಬಗ್ಗೆ ನಡೆದ ವಿವರವಾದ ಚರ್ಚೆಯ ಬಳಿಕ ಕ್ರೋಢೀಕರಿಸಲ್ಪಟ್ಟ ಪ್ರಸ್ತಾವನೆಯನ್ನು ಮಂಡಿಸಲಾಗುತ್ತದೆ.

**ಎಸ್‌ಸಿಎ ಘಟಕಗಳು:**

ಐಎಸ್‌ಸಿಎ 1962–63ರಿಂದ ದೇಶದ ವಿವಿಧ ಕೇಂದ್ರಗಳಲ್ಲಿ ವಿಜ್ಞಾನದಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡುವ ಕಾರ್ಯಕ್ರಮ ಆರಂಭಿಸಿತು. 1985–86ರವರೆಗೆ ದೇಶದಾದ್ಯಂತದ 17 ಕೇಂದ್ರಗಳಲ್ಲಿ ಉಪನ್ಯಾಸ ನೀಡಲಾಗಿತ್ತು. ಆ ಬಳಿಕ ಪ್ರಾದೇಶಿಕ ಘಟಕಗಳನ್ನು ಆರಂಭಿಸುವುದರೊಂದಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಮರು ರೂಪಿಸಲಾಯಿತು. ಜನರಲ್ಲಿ ವಿಜ್ಞಾನದ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದು, ವಿಜ್ಞಾನದ ಮೂಲ ವಿಷಯಗಳ ಬಗ್ಗೆ, ಪ್ರಾಯೋಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಯುವ ವಿಜ್ಞಾನಿಗಳನ್ನು ಪ್ರೋತ್ಸಾಹಿಸುವುದು ಐಎಸ್‌ಸಿಎಯ ಪ್ರಮುಖ ಉದ್ದೇಶವಾಗಿರುವ ಹಿನ್ನೆಲೆಯಲ್ಲಿ ದೇಶದ ವಿವಿಧೆಡೆ 1986–87ರಲ್ಲಿ ಘಟಕಗಳನ್ನು ಸ್ಥಾಪಿಸಲಾಯಿತು. ಪ್ರಸ್ತುತ ಬೆಂಗಳೂರು, ಬರೋಡಾ, ಭುವನೇಶ್ವರ, ಬೋಧ್‌ಗಯಾ, ಕೊಲ್ಕತ್ತಾ, ಚಂಡೀಗಢ, ಚೆನ್ನೈ, ದಿಲ್ಲಿ, ಗುವಾಹಟಿ, ಹೈದರಾಬಾದ್, ಜೈಪುರ, ಕಾನ್‌ಪುರ, ನಾಗಪುರ, ಪಟಿಯಾಲ ಮತ್ತು ಶಿಲ್ಲಾಂಗ್‌ಗಳಲ್ಲಿ ಐಎಸ್‌ಸಿಎ ಘಟಕಗಳಿವೆ. ಪ್ರಚಲಿತ ವಿಜ್ಞಾನದ ಬಗ್ಗೆ ದೇಶದ ವಿವಿಧ ಕೇಂದ್ರಗಳಲ್ಲಿ ಸ್ಥಳೀಯವಾಗಿ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ.

**ಭಾರತದ ಅಕಾಡೆಮಿಗಳು/ಸಂಸ್ಥೆಗಳ ಜೊತೆ ಸಂಬಂಧ:**

ಐಎಸ್‌ಸಿಎಯು ಈ ಹಿಂದೆ ಐಎನ್‌ಸಿಎ ಜೊತೆ ನಿಕಟ ಸಂಪರ್ಕ ಹೊಂದಿತ್ತು. 1933ರಲ್ಲಿ ನಡೆದ ಐಎಸ್‌ಸಿಎ (ಆಗ ಈ ಸಂಸ್ಥೆಗೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್ ಆಫ್ ಇಂಡಿಯಾ ಎಂಬ ಹೆಸರಿತ್ತು.) ಅಧಿವೇಶನದ ಸಂದರ್ಭದಲ್ಲಿ ಐಎಸ್‌ಸಿಎಯನ್ನು ಆರಂಭಿಸುವ ಬಗ್ಗೆ ಚರ್ಚಿಸಲಾಯಿತು. ಐಎನ್‌ಎಸ್‌ಎಯ ವಾರ್ಷಿಕ ಮಹಾಸಭೆಯು ಐಎಸ್‌ಸಿಎಯ ವಾರ್ಷಿಕ ಅಧಿವೇಶನಕ್ಕಿಂತ ಸ್ವಲ್ಪ ಮೊದಲಿನ ದಿನಗಳಲ್ಲಿ ನಡೆಯುತ್ತದೆ ಮತ್ತು ಐಎನ್‌ಎಸ್‌ಎ ಯುವ ವಿಜ್ಞಾನ ಪ್ರಶಸ್ತಿಯನ್ನು ಐಎಸ್‌ಸಿಎ ವಾರ್ಷಿಕ ಅಧಿವೇಶನದ ಉದ್ಘಾಟನಾ ದಿನದಂದು ಪ್ರದಾನ ಮಾಡಲಾಗುತ್ತದೆ. ಈ ಸಂಪ್ರದಾಯವನ್ನು ಇದೀಗ ಅಂತ್ಯಗೊಳಿಸಲಾಗಿದೆ. ಆದರೆ ಐಎನ್‌ಸಿಯ ಸಮಿತಿಯಲ್ಲಿ ಇಂದಿಗೂ ಐಎಸ್‌ಸಿಎಯ ಪ್ರತಿನಿಧಿಯೊಬ್ಬರಿರುತ್ತಾರೆ.

ವೈಯಕ್ತಿಕ ವಿಷಯ ಸಂಸ್ಥೆಗಳು, ಅದರಲ್ಲೂ ಐಎಸ್‌ಸಿಎ ವಿಭಾಗಗಳಿಗೆ ಸಂಬಂಧಿಸಿದವು. ಸಾಮಾನ್ಯವಾಗಿ ಐಎಸ್‌ಸಿಎಯ ಅಧಿವೇಶನಕ್ಕಿಂತ ಒಂದು ಅಥವಾ ಎರಡು ದಿನಗಳ ಮುನ್ನ ತಮ್ಮ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳುತ್ತವೆ. ಇದರಿಂದ ತಾಂತ್ರಿಕ ಅಧಿವೇಶನವನ್ನು ಐಎಸ್‌ಸಿಎಯ ಅಧಿವೇಶನದ ಜೊತೆ ಮುಂದುವರಿಸಲು ಸಾಧ್ಯವಾಗುತ್ತದೆ. ಆದರೆ ಪ್ರಕ್ರಿಯಾತ್ಮಕ ಸಮಸ್ಯೆಯಿಂದ ಈ ಪದ್ಧತಿಯನ್ನೂ ಇದೀಗ ಸ್ಥಗಿತಗೊಳಿಸಲಾಗಿದೆ.

ಆರಂಭದಲ್ಲಿ ಭಾರತೀಯ ಸಂಶೋಧನಾ ಕಾರ್ಯಕರ್ತರು ಚರ್ಚೆ ನಡೆಸಲು ಒಂದು ವೇದಿಕೆಯಾಗಿ ಸೀಮಿತವಾಗಿದ್ದ ಐಎಸ್‌ಸಿಎಯು ಇದೀಗ ಸಾಕಷ್ಟು ಮುನ್ನಡೆದಿದೆ. ಸದಸ್ಯರ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ, ವೈವಿಧ್ಯಮಯ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡಿರುವುದು. ಇತ್ಯಾದಿಗಳಿಂದ ಐಎಸ್‌ಸಿಎಯ ಘನತೆ ಹೆಚ್ಚಿದೆ. ಇದರ ವಾರ್ಷಿಕ ಅಧಿವೇಶನವು ಇಂದಿಗೂ ಎಲ್ಲ ವಿಭಾಗಗಳ ಕಿರಿಯ ಮತ್ತು ಹಿರಿಯ ವಿಜ್ಞಾನಿಗಳು ರಾಷ್ಟ್ರೀಯ ಮಹತ್ವದ ವಿಷಯಗಳ ಬಗ್ಗೆ ಚರ್ಚಿಸುವ ಒಂದು ಬೃಹತ್ ವೇದಿಕೆಯಾಗಿ ಉಳಿದಿದೆ.

**ಮೂಲ: ಅರ್ಚನ ಶರ್ಮ**

**ಅನು: ಕೃಷ್ಣಮೂರ್ತಿಭಟ್ ಬಿ.**

## ಭಾರತೀಯ ವಿದ್ಯಾ ಭವನ

ಈ ಸಂಸ್ಥೆಯ ಕೇಂದ್ರ ಕಛೇರಿಯು ಮುಂಬಯಿ ನಗರದಲ್ಲಿದೆ. ಇದರ ಶಾಖೆಗಳು ಭಾರತದ ಪ್ರಮುಖ ನಗರಗಳು ಹಾಗೂ ಪಟ್ಟಣಗಳಲ್ಲಿ ಇವೆ. ಇದು ಒಂದು ಅದ್ವಿತೀಯ ಸಂಸ್ಥೆ. ಸಾಂಪ್ರದಾಯಿಕ ಶಿಕ್ಷಣ, ಅಸಾಂಪ್ರದಾಯಿಕ ಶಿಕ್ಷಣ, ಜೀವನಾದ್ಯಂತ ಬೇಕಾಗುವ ಶಿಕ್ಷಣ ಹಾಗೂ ಇನ್ನಿತರ ಶೈಕ್ಷಣಿಕ ಶಾಖೆಗಳನ್ನು ಎಲ್ಲರಗೂ ತಲುಪಿಸುವ ಶ್ಲಾಘನೀಯ ಕಾರ್ಯವನ್ನು ಈ ಸಂಸ್ಥೆ

Digitised by Bharatavani, CIIL

ಮಾಡುತ್ತಿದೆ. ಈ ಸಂಸ್ಥೆಯ ವಿದ್ಯಾಲಯಗಳು ಮತ್ತು ಮಹಾ ವಿದ್ಯಾಲಯಗಳು ಸಾಂಪ್ರದಾಯಿಕ ಶಿಕ್ಷಣ ಮತ್ತು ಅಸಾಂಪ್ರದಾಯಿಕ ಶಿಕ್ಷಣಗಳನ್ನು ಸಮೀಕರಿಸುವ ಕೆಲಸವನ್ನು ಮಾಡುತ್ತಿವೆ. ಶೈಕ್ಷಣಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಸ್ಮರಣೀಯ ಕಾರ್ಯವನ್ನು ಮಾಡುತ್ತಿವೆ. ಭಾರತಾದ್ಯಂತ ಹಾಗೂ ಕೆಲವು ಹೊರದೇಶಗಳಲ್ಲಿ ಶೈಕ್ಷಣಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂಥ ಪುಸ್ತಕಗಳನ್ನು 100 ಕ್ಕೂ ಹೆಚ್ಚು ಶಾಖೆಗಳಲ್ಲಿ ಪ್ರಕಟಿಸುವ ಕಾರ್ಯವನ್ನು ಈ ಸಂಸ್ಥೆ ಮಾಡುತ್ತಿದೆ. ಈ ಪುಸ್ತಕಗಳು ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಶಿಕ್ಷಣವನ್ನು ಪ್ರೋತ್ಸಾಹಿಸುವ ಕಾರ್ಯವನ್ನು ನಿರ್ವಹಿಸುತ್ತಿವೆ. ಭಾರತೀಯ ಸರ್ಕಾರವು ಈ ಸಂಸ್ಥೆಯನ್ನು ರಾಷ್ಟ್ರೀಯ ಮಟ್ಟದ ಮೌಲ್ಯಾಧಾರಿತ ಸಂಸ್ಥೆ ಎಂದು ಪರಿಗಣಿಸಿ, ಅಂಥ ಸಂಸ್ಥೆಗೆ ದೊರೆಯಬೇಕಾದ ಸ್ಥಾನಮಾನಗಳನ್ನಿತ್ತು ಗೌರವಿಸಿದೆ.

ಭಾರತೀಯ ವಿದ್ಯಾ ಸಂಸ್ಥೆಯು ಕ್ರಿ.ಶ. 1938 ನವೆಂಬರ್ 7ನೇ ತಾರೀಖು ಸ್ಥಾಪಿಸಲಾಯಿತು. ಸಮರ್ಥ ರಾಜ ಕಾರಿಣಿ, ವಕೀಲ, ಸ್ವಾತಂತ್ರ್ಯ ಹೋರಾಟಗಾರ, ಅಸಾಮಾನ್ಯ ಸಾಹಿತಿ ಎಂದು ಖ್ಯಾತಿ ಪಡೆದಿದ್ದ ಶ್ರೀಯುತ ಕೆ.ಎಂ.ಮುನ್ಷಿ ಇದರ ಸಂಸ್ಥಾಪಕರು. ಮಹಾತ್ಮಾ ಗಾಂಧೀಜಿಯವರ ಆಶೀರ್ವಾದದೊಂದಿಗೆ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಈ ಸಂಸ್ಥೆಯ ಧ್ಯೇಯವಾಕ್ಯಗಳೆಂದರೆ 'ವಸುದೈವ ಕುಟುಂಬಂ' ಮತ್ತು 'ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ' (ಉದಾತ್ತ ಚಿಂತನೆಗಳು ಎಲ್ಲಿಂದಲಾದರೂ ಎಲ್ಲ ಕಡೆಯಿಂದಲೂ ಬರಲಿ ಎಂಬುದು ಈ ಸಂಸ್ಥೆಯ ಪ್ರಮುಖ ಉದ್ದೇಶ).

ಭಾರತದ ಮಾಜಿ ರಾಷ್ಟ್ರಪತಿಗಳಾದ ಆರ್.ವೆಂಕಟರಾಮನ್‌ರವರು ಈ ಸಂಸ್ಥೆಯ ಸಾರಥ್ಯವನ್ನು ಹೊತ್ತಿದ್ದರು.

ಭಾರತದ ವಿವಿಧೆಡೆಗಳಲ್ಲಿ 60ಕ್ಕೂ ಹೆಚ್ಚಿನ ವಿದ್ಯಾಶ್ರಮಗಳು ಹಾಗೂ ಶಾಲೆಗಳು ತಮ್ಮ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿವೆ. ವಿಜ್ಞಾನ, ಕಲೆ ಹಾಗೂ ವಾಣಿಜ್ಯ ವಿಷಯಗಳ ಮಹಾವಿದ್ಯಾಲಯಗಳನ್ನು, ಕಂಪ್ಯೂಟರ್ ಸಂಸ್ಥೆಗಳನ್ನು, ನಿರ್ವಹಣೆ (Management) ಮತ್ತು ಸಂವಹನಾ (Communication) ಸಂಸ್ಥೆಗಳನ್ನು ನಡೆಸುತ್ತಿದೆ.

**ಸಂಸ್ಥೆಯ ತತ್ವಗಳು ಮತ್ತು ಧ್ಯೇಯಗಳು:** ಸಂಸ್ಥೆಯ ಕುಲಪತಿಗಳಾದ ಶ್ರೀಯುತ ಕೆ.ಎಂ.ಮುನ್ಷಿಯವರು ಹೀಗೆ ಹೇಳುತ್ತಾರೆ ನಮ್ಮ ಸಂಸ್ಕೃತಿಯು ಸುವ್ಯವಸ್ಥಿತ ಒಗ್ಗಟ್ಟಿಲ್ಲಿ ಮತ್ತು ಸಂಘಟಿತ ವಸ್ತುಗಳ ತೆಕ್ಕೆಯಲ್ಲಿ. ಸಾಮಾಜಿಕ ಸಮತೋಲನವನ್ನು ಸಾಧಿಸಲು ಮೂಲಭೂತ ಮೌಲ್ಯಗಳನ್ನು ಎಲ್ಲರಿಗೂ ತಲುಪಿಸುವ ಒಂದು ಕಾರ್ಯ. ಭಾರತವು ಸಂಯೋಜನೆಗೆ ಒಳಗಾಗುವುದಕ್ಕೆ ಕಂಡುಕೊಂಡ ದಾರಿ... ಈ ದೇಶದ ಹೃದಯ ಶ್ರೀಮಂತಿಕೆ ಇರುವ ವ್ಯಕ್ತಿಗಳು ಸೇರಿ ರೂಪಿಸಿದ ದಾರಿ ಇಡಿಯಾದ ಸಂಸ್ಕೃತಿಗಳ ಸ್ವರೂಪದ್ದು.

ಮೌಲ್ಯಾಧಾರಿತ ಶಿಕ್ಷಣ ಹಾಗೂ ಭಾರತೀಯ ಸಂಸ್ಕೃತಿಯ ಬಲವಾದ ಬೇರುಗಳನ್ನು ಹೊಂದಿರುವ ವಿಷಯಗಳನ್ನು ಈ ಅದ್ವಿತೀಯ ಸಂಸ್ಥೆಯು ರಕ್ಷಿಸುತ್ತಿದೆ. ಭಾರತೀಯ ವಿದ್ಯಾ ಭವನದ ವಿದ್ಯಾಶ್ರಮಗಳಲ್ಲಿ ಅನಾದಿ ಕಾಲದಿಂದ ನಡೆದುಕೊಂಡು ಬರುತ್ತಿರುವ ಸತ್‌ಸಂಪ್ರದಾಯ ಮತ್ತು ಸಾಮಾಜಿಕ ಮೌಲ್ಯಗಳು ಹಾಳಾಗದಂತೆ ರಕ್ಷಿಸಿ ಅವುಗಳನ್ನು ಹದವಾಗಿ ಬೆರೆಸಿ ಬೋಧಿಸಲಾಗುತ್ತದೆ.

**ಶಿಕ್ಷಣ ಭಾರತಿ:** ಶಿಕ್ಷಣ ಭಾರತಿ ಎಂಬ ಪ್ರತ್ಯೇಕ ವಿಭಾಗವನ್ನು ಈ ಸಂಸ್ಥೆಯಲ್ಲಿ ಸ್ಥಾಪಿಸಲಾಗಿದೆ. ಇದರ ಪ್ರಮುಖ ಕಾರ್ಯ ಸಂಸ್ಥೆಯ ಎಲ್ಲ ಶೈಕ್ಷಣಿಕ ಸಂಸ್ಥೆಯೊಡನೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡು ಕಾರ್ಯ ನಿರ್ವಹಿಸುವುದು. ಭವನದ ಎಲ್ಲ ಶೈಕ್ಷಣಿಕ ಸಂಸ್ಥೆಗಳಿಗೆ ಆಗಿಂದಾಗ್ಗೆ ತಿಳುವಳಿಕೆಯನ್ನು ಕೊಟ್ಟು ಅವುಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡಲು ಸಹಕರಿಸುವುದು. ಕಾಲಕಾಲಕ್ಕೆ ಶಿಕ್ಷಣ ಭಾರತಿಯು ಕಾರ್ಯಾಗಾರ ಭಾರತಾದ್ಯಂತ ಇರುವ ಭವನದ ಎಲ್ಲ ಶೈಕ್ಷಣಿಕ ಸಂಸ್ಥೆಯ ಸದಸ್ಯರಿಗೆ ನಡೆಸುತ್ತದೆ. ಬೋಧನೆಯ ಎಲ್ಲಾ ವಿಷಯಗಳಿಗೆ ಮಹತ್ವ ನೀಡುವುದಲ್ಲದೆ, ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನು ಕೊಡಲಾಗಿದೆ.

ಶಿಕ್ಷಣ ಭಾರತಿಯು ಪರೀಕ್ಷೆಗಳ ಫಲಿತಾಂಶವನ್ನು ಕಂಪ್ಯೂಟರ್ ಸಹಾಯದಿಂದ ನೀಡುತ್ತದೆ. ಇದರಿಂದ ಒಟ್ಟಾರೆ ಫಲಿತಾಂಶದ ಜೊತೆಗೆ ಪ್ರತಿ ವಿಭಾಗದಲ್ಲಿ/ವಿಷಯದಲ್ಲಿ ವಿದ್ಯಾರ್ಥಿಗಳು/ಶಾಲೆಗಳು ಯಾವ ಮಟ್ಟದಲ್ಲಿದ್ದಾರೆ ಎಂದು ತಿಳಿಯಲು ಅನುಕೂಲವಾಗುತ್ತದೆ. ಅದಕ್ಕೆ ತಕ್ಕಂತೆ ಅಗತ್ಯವಾದ ಸ್ಥಳಗಳಲ್ಲಿ ಯುಕ್ತ ಮಾರ್ಪಾಟನ್ನು ತರಬಹುದು ಎಂಬುದು ಇದರ ಮೂಲ ಉದ್ದೇಶ. ಇದರ ಜೊತೆಗೆ ಒಂದು ಸಮಗ್ರ ಕಂಪ್ಯೂಟರ್ ತಂತ್ರಾಂಶವನ್ನು ನಿಯೋಜಿಸಲಾಗಿದೆ. ಇದರ ಉದ್ದೇಶವೇನೆಂದರೆ ಭಾರತೀಯ ಭವನದ ಎಲ್ಲ ಶಾಲೆಗಳಲ್ಲಿ ಶೈಕ್ಷಣಿಕ ಹಾಗೂ ಸಾಮಾನ್ಯ ಮಟ್ಟದ ಚಟುವಟಿಕೆಗಳ ಮಟ್ಟವನ್ನು ಅಳೆಯುವುದು. ಈ ಉನ್ನತ ಮಟ್ಟದ ತಂತ್ರಾಂಶದಿಂದ ಎಲ್ಲ ಶಾಲೆಗಳಿಗೆ ಅವರವರ ಕಾರ್ಯಕ್ಷಮತೆಯನ್ನು ಆಗಿಂದಾಗ್ಗೆ ತಿಳಿಸುವುದು ಸಾಧ್ಯವಾಗಿದೆ. ಎಲ್ಲಿ ಅದನ್ನು ಉತ್ತಮ ಪಡಿಸುವ ಅಗತ್ಯವಿದೆಯೋ ಅಲ್ಲಿ ಸೂಕ್ತ ಕ್ರಮವನ್ನು ಅನುಸರಿಸಿ ಫಲಿತಾಂಶವನ್ನು ಉತ್ತಮ ಪಡಿಸಿಕೊಳ್ಳುವುದು ಇದರ ಮುಖ್ಯ ಉದ್ದೇಶ.

ಭವನದ ಶಾಲೆ ಮತ್ತು ಮಹಾವಿದ್ಯಾಲಯಗಳು ಭವನದ ಇತರ ವಿಭಾಗಗಳಲ್ಲಿರುವ ಅಸಾಂಪ್ರದಾಯಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತವೆ. ಅದಕ್ಕಾಗಿ ಅನೇಕ ಪ್ರತ್ಯೇಕ ವಿಭಾಗಗಳನ್ನು ತೆರೆದಿದೆ. ಅವುಗಳಲ್ಲಿ ಕೆಲವು ವಿಭಾಗಗಳು ಹೀಗಿವೆ:

**ಸಂಸ್ಕೃತ ಅಧ್ಯಯನ ಕೇಂದ್ರಗಳು:**

1. **ಮುಂಬಾದೇವಿ ಆದರ್ಶ ಸಂಸ್ಕೃತ ಮಹಾವಿದ್ಯಾಲಯ:** ಮುಂಬೈ ನಗರದಲ್ಲಿ 1939 ರಲ್ಲಿ ಸ್ಥಾಪಿಸಲಾದ ಈ ಕೇಂದ್ರವು ಸಂಸ್ಕೃತ ಭಾಷೆ, ವೈದಿಕ ಧರ್ಮದ ಆಚರಣೆಗಳು ಮತ್ತು ಅನುಷ್ಠಾನ, ಖಗೋಳಶಾಸ್ತ್ರಗಳ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡುವ ಒಂದು ಕೇಂದ್ರವಾಗಿದೆ.

Digitised by Bharatavani, CIIL

2. **ಶಾಸ್ತ್ರೀಯ ಸಂಸ್ಕೃತ ಪರೀಕ್ಷಾ ವಿಭಾಗ:** ಈ ವಿಭಾಗವು ಮುಂಬೈ ನಗರದಲ್ಲಿ 1945 ರಲ್ಲಿ ಸ್ಥಾಪಿತವಾಯಿತು. ಈ ಸಂಸ್ಥೆಯು ಸಂಸ್ಕೃತ ಭಾಷೆಯ ಅನೇಕ ಪರೀಕ್ಷೆಗಳನ್ನು ನಡೆಸುತ್ತದೆ. ಪ್ರವೇಶಿಕಾ, ಪೂರ್ವ ಮಾಧ್ಯಮ, ಉತ್ತರ ಮಾಧ್ಯಮ, ಶಾಸ್ತ್ರಿ (ಬಿ.ಎ ಪದವಿಗೆ ತತ್ಸಮಾನವಾದುದು) ಮತ್ತು ಆಚಾರ್ಯ (ಎಂ.ಎ ಪದವಿಗೆ ತತ್ಸಮಾನವಾದುದು) ಪರೀಕ್ಷೆಗಳನ್ನು ನಡೆಸುತ್ತದೆ. ಈ ಪರೀಕ್ಷೆಗಳನ್ನು ದೇಶದಾದ್ಯಂತ 25 ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಈ ಪರೀಕ್ಷೆಗಳಿಗೆ ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ್ ಹಾಗೂ ಅನೇಕ ರಾಜ್ಯ ಸರ್ಕಾರಗಳು ಮಾನ್ಯತೆ ನೀಡಿವೆ.

3. **ಸರಳ ಪರೀಕ್ಷಾ ವಿಭಾಗ:** 1956 ರಲ್ಲಿ ಪ್ರಾರಂಭಿಸಲಾದ ಈ ಸಂಸ್ಥೆಯು ಸಂಸ್ಕೃತ ಪ್ರಾರಂಭಿಕ ಪರೀಕ್ಷೆಗಳನ್ನು ನಡೆಸುತ್ತದೆ. ಪ್ರತಿ ವರ್ಷ ಎರಡು ಬಾರಿ ದೇಶದಾದ್ಯಂತ ಹಾಗೂ ದೇಶದ ಹೊರಗೆ 500ಕ್ಕೂ ಹೆಚ್ಚು ಕೇಂದ್ರಗಳಲ್ಲಿ ವಿವಿಧ ಪರೀಕ್ಷೆಗಳನ್ನು ಈ ಸಂಸ್ಥೆಯು ನಡೆಸುತ್ತದೆ. ಈ ಕೇಂದ್ರಗಳಲ್ಲಿ ನ್ಯೂಯಾರ್ಕ್, ಬಹರೈನ್, ಯುಎಇ ಮತ್ತು ಅಬುದಾಬಿ ಕೇಂದ್ರಗಳು ಸೇರಿವೆ. ಇದುವರೆಗೆ ಎರಡು ದಶಲಕ್ಷ ವಿದ್ಯಾರ್ಥಿಗಳು ಈ ಪರೀಕ್ಷೆಗಳ ಪ್ರಯೋಜನವನ್ನು ಪಡೆದಿದ್ದಾರೆ.

4. **ಗೀತಾ ವಿದ್ಯಾಲಯ:** ಈ ವಿದ್ಯಾಲಯವು 1946 ರಲ್ಲಿ ಸ್ಥಾಪಿತವಾಯಿತು. ಈ ಸಂಸ್ಥೆಯು ದೇಶ ಹಾಗೂ ವಿದೇಶಗಳ ವಿವಿಧ ಕೇಂದ್ರಗಳಲ್ಲಿ ಭಗವದ್ಗೀತೆಯ ವಿಷಯದಲ್ಲಿ ಪರೀಕ್ಷೆಗಳನ್ನು ನಡೆಸುತ್ತದೆ. ಅಮೆರಿಕ, ಇಂಗ್ಲೆಂಡ್, ಬಹರೈನ್, ಯುಎಇ ಮತ್ತು ಅಬುದಾಬಿಗಳಲ್ಲಿ ವರ್ಷದಲ್ಲಿ ಎರಡು ಬಾರಿ ಭಗವದ್ಗೀತೆಯ ವಿಷಯದಲ್ಲಿ ಪರೀಕ್ಷೆಗಳನ್ನು ನಡೆಸುತ್ತದೆ.

5. **ಮಂಗಾಲಾಲ್ ಗೋಯೆಂಕಾ ಭಾರತೀಯ ಶಾಸ್ತ್ರ, ಸಂಸ್ಕೃತ ಮತ್ತು ಭಾರತೀಯ ಸಂಸ್ಕೃತಿಯ ಸ್ನಾತಕೋತ್ತರ ಅಧ್ಯಯನಗಳ ಮತ್ತು ಸಂಶೋಧನ ಸಂಸ್ಥೆ:** ಈ ಸಂಸ್ಥೆಯು ಭಾರತೀಯ ಇತಿಹಾಸ, ಸಂಸ್ಕೃತ ಮತ್ತು ಭಾರತೀಯ ಸಂಸ್ಕೃತಿ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಸಂಶೋಧನೆಗಳನ್ನು ಮಾಡಲು ಎಲ್ಲ ಅನುಕೂಲಗಳನ್ನು ಕಲ್ಪಿಸಿದೆ. ಈ ಸಂಸ್ಥೆಯನ್ನು 1939 ರಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಯಿಂದ ಪಡೆದ ಎಂ.ಎ ಹಾಗೂ ಪಿಎಚ್‌ಡಿ ಪವಿಗಳಿಗೆ ಮುಂಬಯಿ ವಿಶ್ವವಿದ್ಯಾಲಯ ಮಾನ್ಯತೆ ನೀಡಿದೆ.

**ಜನಪ್ರಿಯ ಮಾಧ್ಯಮಗಳ ಮೂಲಕ ಮೌಲ್ಯಾಧಾರಿತ ಶಿಕ್ಷಣ:** ಹರಿಕಥೆ ಮತ್ತು ಕೀರ್ತನೆಗಳು ಜನಸಾಮಾನ್ಯರಿಗೆ ಜ್ಞಾನ ಪ್ರಸಾರ ಮಾಡಬಹುದಾದ ಒಂದು ಮುಖ್ಯ ಮಾಧ್ಯಮ. ರಾಮಾಯಣ, ಮಹಾಭಾರತ ಹಾಗೂ ಭಾಗವತ ಮುಂತಾದ ಮಹಾ ಕಾವ್ಯಗಳನ್ನು ಸ್ಥಳೀಯ ಭಾಷೆಗಳಲ್ಲಿ, ಮರಾಠಿ, ಕನ್ನಡ ಭಾಸೆಗಳ ಮೂಲಕ ಸಾಮಾನ್ಯರಿಗೆ ತಿಳಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಹರಿಕಥೆ ಮತ್ತು ಕೀರ್ತನೆಗಳನ್ನು ಭಕ್ತಿ ಸಂಗೀತದ ಮೂಲಕ ಸಾಮಾನ್ಯರಿಗೆ ತಿಳಿಸಲಾಗುತ್ತದೆ. ಸಂತ ಜ್ಞಾನೇಶ್ವರ್ ಮಹಾವಿದ್ಯಾಲಯ ಹಾಗೂ ಕೀರ್ತನ ಮಹಾವಿದ್ಯಾಲು ಎಂಬ ಎರಡು ಅಂಗ ಸಂಸ್ಥೆಗಳನ್ನು ಪುಣೆ ನಗರದಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರದಲ್ಲಿ ಆಸಕ್ತರಿಗೆ ತರಬೇತಿಯನ್ನು ನೀಡಲಾಗುವುದು. ಈ ಪರಂಪರೆಯು ಮುಂದುವರಿಯಲಿ ಎನ್ನುವುದೇ ಇದರ ಪ್ರಮುಖ ಉದ್ದೇಶ.

**ಮೂಲಭೂತ ಮತ್ತು ಸಾಂಸ್ಕೃತಿಕ ಅಧ್ಯಯನಗಳು:** ಈ ವಿಭಾಗವನ್ನು 1978 ರಲ್ಲಿ ಸ್ಥಾಪಿಸಲಾಯಿತು. ಈ ಕೇಂದ್ರದಲ್ಲಿ ಭಾರತೀಯ ವಿದ್ಯಾ ವಿಶಾರದ, ವೇದಾಂತ ವಿಶಾರದ, ಭಗವದ್ಗೀತಾ ವಿಶಾರದ, ಸಂಸ್ಕೃತ ಭಾಷಾ ವಿಶಾರದ, ಉಪನಿಷತ್ ವಿಶಾರದ ಮತ್ತು ಸುಭಾಷಿತ ಸುಧಾ ಎಂಬ ವಿಷಯಗಳಲ್ಲಿ ತರಬೇತಿಯನ್ನು ಕೊಟ್ಟು ಸೂಕ್ತ ಅರ್ಹತಾ ಪತ್ರವನ್ನು ನೀಡಲಾಗುತ್ತದೆ.

**ಪ್ರಾಚೀನ ಅಂತರ್ದೃಷ್ಟಿಗಳು ಮತ್ತು ಆಧುನಿಕ ಸಂಶೋಧನೆಗಳ ಯೋಜನೆ:**

1. **ವಿಜ್ಞಾನ ಮತ್ತು ತಂತ್ರಜ್ಞಾನ:** ಈ ವಿಭಾಗದ ಕಚೇರಿಯು ಮುಂಬಯಿ ನಗರದಲ್ಲಿದೆ. ಖಗೋಳಶಾಸ್ತ್ರ ಮತ್ತು ಅಣುರಚನಾ ಶಾಸ್ತ್ರಗಳ ವಿಷಯದಲ್ಲಿ ಈ ವಿಭಾಗವು ಕಾರ್ಯ ನಿರ್ವಹಿಸುತ್ತದೆ. ಪರಿಸರ ವಿಜ್ಞಾನದ ಉನ್ನತ ಅಧ್ಯಯನ ಮತ್ತು ಸಂಶೋಧನೆಗಳಿಗಾಗಿ ಈ ವಿಭಾಗ ಶ್ರಮಿಸುತ್ತಿದೆ. ಪರಿಸರ ಮತ್ತು ಪ್ರಾಕೃತಿಕ ಸಮತೋಲನ ಮತ್ತು ನಿರ್ವಹಣಾ ಸಂಸ್ಥೆ ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಸ್ಥಾಪಿತವಾಗಿದೆ. ಈ ಸಂಸ್ಥೆಯಲ್ಲಿ ಅಧ್ಯಯನ ಹಾಗೂ ಸಂಶೋಧನೆಗಳನ್ನು ಮಾಡಲಾಗುತ್ತಿದೆ.

2. **ಜೀವನ ಮತ್ತು ಆರೋಗ್ಯ ವಿಜ್ಞಾನಗಳು:** ಸ್ವಾಮಿ ಪ್ರಕಾಶಾನಂದ ಆಯುರ್ವೇದ ಸಂಶೋಧನಾ ಕೇಂದ್ರ (ಎಸ್‌ಪಿಇಆರ್‌ಸಿ). ಈ ಕೇಂದ್ರವನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರವು ವೈದ್ಯಕೀಯ ಸೇವೆ, ಶಿಕ್ಷಣ ಮತ್ತು ಸಂಶೋಧನೆಗಳಿಗಾಗಿ ಶ್ರಮಿಸುತ್ತಿದೆ. ವೈದ್ಯಕೀಯ ಸಸ್ಯಗಳ ವಿಚಾರವಾಗಿ ಸಮಗ್ರವಾಗಿ ಕಾರ್ಯ ನಿರ್ವಹಿಸುತ್ತಿದೆ.

3. **ಗಾಂಧಿ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಕೇಂದ್ರ:** ಈ ಕೇಂದ್ರವನ್ನು ಬೆಂಗಳೂರು ನಗರದಲ್ಲಿ ತೆರೆಯಲಾಗಿದೆ. ಈ ಕೇಂದ್ರದಲ್ಲಿ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ವಿಚಾರದಲ್ಲಿ ಆಳವಾದ ಅಧ್ಯಯನವನ್ನು ನಡೆಸಲಾಗುತ್ತಿದೆ. ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳನ್ನು ಹದವಾಗಿ ಸಂಯೋಜಿಸುವುದೇ ಈ ಸಂಸ್ಥೆಯ ಉದ್ದೇಶ.

**ಭಾರತೀಯ ಇತಿಹಾಸ ವಿಭಾಗ:** ಈ ಸಂಸ್ಥೆಯು 1944 ರಲ್ಲಿ ಡಾ॥ ಆರ್.ಸಿ.ಮಜುಮ್‌ದಾರ್ ಅವರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟಿತು. ಭಾರತೀಯರ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಪ್ರತಿಬಿಂಬಿಸುವಂಥ ಪ್ರಯತ್ನವನ್ನು ಈ ಸಂಸ್ಥೆಯು ಮಾಡುತ್ತಿದೆ. ಈ ವಿಚಾರವಾಗಿ ಇದುವರೆಗೆ 11 ಹೊತ್ತಗೆಗಳನ್ನು ಹೊತರಲಾಗಿದೆ.

**ಭವನದ ಪುಸ್ತಕ ವಿಶ್ವವಿದ್ಯಾನಿಲಯ:** ಈ ಸಂಸ್ಥೆಯು ಜೀವಜಗತ್ತು,

Digitised by Bharatavani, CIIL

ಸಾಹಿತ್ಯ ಮುಂತಾದ ವಿಷಯಗಳಲ್ಲಿ ಒಳ್ಳೆಯ ಪುಸ್ತಕಗಳನ್ನು ಸುಲಭ ಬೆಲೆಯಲ್ಲಿ ಜನಸಾಮಾನ್ಯರಿಗೆ ಎಟುಕುವ ಬೆಲೆಯಲ್ಲಿ ಹೊರತರುತ್ತಿದೆ. ಈ ಪುಸ್ತಕದಲ್ಲಿ ನೀಡಿರುವ ವಿಷಯಗಳು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತಿವೆ.

**ಸಂಸ್ಕೃತಿ ಕೋರ್ಸ್ ಪಠ್ಯಪುಸ್ತಕಗಳು:** ಮಹಾಕಾವ್ಯಗಳು, ಸಾಹಿತ್ಯದ ವಿವಿಧ ಪ್ರಕಾರಗಳು, ಇತಿಹಾಸ, ಪುರಾಣ ಮೊದಲಾದವುಗಳಿಂದ ಆಯ್ದ ಕಥೆಗಳನ್ನು ಪುಸ್ತಕ ರೂಪದಲ್ಲಿ ತರಲಾಗುತ್ತಿದೆ. ಇದರ ಮೂಲ ಉದ್ದೇಶ ಸಂಸ್ಕೃತಿ ಆಧಾರಿತ ಜೀವನ ಶೈಲಿಯನ್ನು ಸಾಮಾನ್ಯರಿಗೆ ಪರಿಚಯಿಸುವುದು. ಈ ಪುಸ್ತಕಗಳನ್ನು ಭವನದ ಶಾಲೆಗಳಿಗಲ್ಲದೆ ದೇಶದ ಇನ್ನಿತರ ಶಾಲೆಗಳಲ್ಲಿಯೂ ಉಪಯೋಗಿಸಲಾಗುತ್ತಿದೆ.

**ಭವನದ ಪ್ರಿಸಂ ಪಠ್ಯ ಪುಸ್ತಕಗಳ ಯೋಜನೆ:** ಜ್ಞಾನವನ್ನು ಹೆಚ್ಚಿಸುವ ಭರದಲ್ಲಿ ಇತ್ತೀಚೆಗೆ ಪುಸ್ತಕಗಳು ಕೇವಲ ಮಾಹಿತಿಗಳಿಂದ ತುಂಬಿಹೋಗುತ್ತಿದೆ. ಮಕ್ಕಳ ಮಾನಸಿಕ ವಿಕಾಸವನ್ನು ಗಮನದಲ್ಲಿಟ್ಟುಕೊಂಡು ಭವನದ ಪಠ್ಯ ಪುಸ್ತಕ ಯೋಜನೆಯಡಿ ನವೀನ ರೀತಿಯ ಪುಸ್ತಕಗಳನ್ನು ಹೊರ ತರಲಾಗುತ್ತಿದೆ. 1ನೇ ತರಗತಿಯಿಂದ 7ನೇ ತರಗತಿಯವರೆಗೆ ಮಕ್ಕಳಿಗೆ ಇಷ್ಟವಾಗುವ ಚಟುವಟಿಕೆ ಹಾಗೂ ಮಕ್ಕಳ ಸ್ನೇಹಪರ ಪುಸ್ತಗಳನ್ನು ಹೊರತರುವ ಯತ್ನ ನಡೆಯುತ್ತಿದೆ. ಮಕ್ಕಳ ಮನೋವಿಕಾಸವನ್ನು ಕೇಂದ್ರವನ್ನಾಗಿಟ್ಟುಕೊಂಡು ಹಲವಾರು ರೀತಿಯ ಪುಸ್ತಕಗಳನ್ನು ಬೆಂಗಳೂರಿನ ಪ್ರಿಸಂ ಬುಕ್ಸ್ ಪ್ರೈ.ಲಿ.ನವರ ಸಹಯೋಗದೊಂದಿಗೆ ಈ ಕೆಲಸ ನಡೆಯುತ್ತಿದೆ. ಮುಖ್ಯವಾಗಿ ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಗಳ ಬಗ್ಗೆ ಹೊಸ ಹೊಸ ಪುಸ್ತಕಗಳನ್ನು ಹೊರತರಲಾಗುತ್ತಿದೆ.

**ಮಹಾತ್ಮಾ ಗಾಂಧಿ ಕಂಪ್ಯೂಟರ್ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ ಸಂಸ್ಥೆ:** ಈ ಸಂಸ್ಥೆಯು ದೇಶದಾದ್ಯಂತ ವೃತ್ತಿ ಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗವನ್ನು ಗಮನದಲ್ಲಿಟ್ಟುಕೊಂಡು ಕಂಪ್ಯೂಟರ್ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನದ ವಿಷಯಗಳಲ್ಲಿ ವಿಶೇಷ ತರಬೇತಿಯನ್ನು ಕೊಡುತ್ತಿದೆ.

**ಮೂಲ: ವೀರರಾಘವನ್**
**ಅನು: ವಿಶ್ವನಾಥ್ ಜಿ.ಆರ್.**

## ಭಾರತೀಯ ವಿಶ್ವವಿದ್ಯಾಲಯಗಳ ಸಂಘ

**ಪೀಠಿಕೆ:** ಭಾರತೀಯ ವಿಶ್ವವಿದ್ಯಾಲಯಗಳ ಸಂಘವು 'ಎಐಯು' ಹೆಸರಿನಿಂದ ಗುರುತಿಸಲ್ಪಡುವ ಈ ದೇಶದ ಉನ್ನತ ಶಿಕ್ಷಣದ ಕೇಂದ್ರ ಬಿಂದುವಾಗಿದ್ದು, ಇದರ ಪ್ರಧಾನ ಕಾರ್ಯಾಲಯ Head quarters ನವದೆಹಲಿಯಲ್ಲಿ ಇದೆ. ಇದನ್ನು 23, ಮಾರ್ಚ್ 1925ರಲ್ಲಿ ಭಾರತದ ಅಂತರ್–ವಿಶ್ವವಿದ್ಯಾಲಯ ಮಂಡಲಿ (ಇಂಟರ್ ಯೂನಿವರ್ಸಿಟಿ ಬೋರ್ಡ್–ಐಯುಬಿ) ಯಾಗಿ ಸೃಷ್ಟಿಸಲಾಯಿತು. 1919ರಲ್ಲಿ ಈ ವಿಧದ ಸಂಸ್ಥೆಯ ಅಗತ್ಯ ಮನಗಂಡು, ಕಲ್ಕತ್ತಾ ವಿಶ್ವವಿದ್ಯಾಲಯ ಆಯೋಗ (ಸಾಡ್ಲರ್ ಆಯೋಗ)ದ ಶಿಫಾರಸ್ಸುಗಳ ಫಲವಾಗಿ ಭಾರತೀಯ ವಿಶ್ವವಿದ್ಯಾಲಯಗಳ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಈಗ ಇದರ ಉದ್ದೇಶ ಏನಾಗಿತ್ತೆಂದರೆ, ವಿಶ್ವವಿದ್ಯಾಲಯಗಳು ಒದಗಿಸುವ ಪಠ್ಯಕ್ರಮಗಳ (ಕೋರ್ಸುಗಳು) ಕುರಿತಾಗಿ ತಮ್ಮೊಳಗೆ ಸಂಘಟಿತ ವಿಚಾರವನ್ನು ಹೊಂದಿರುವುದು ಮತ್ತು ಅನೇಕ ವಿಶ್ವವಿದ್ಯಾಲಯಗಳು ನೀಡುವ ಪದವಿಗಳಿಗೆ ಮಾನ್ಯತೆಯನ್ನು ನೀಡುವುದು 1924ರಲ್ಲಿ ಆಗಿನ ಭಾರತದ ವೈಸರಾಯ್ ಕರೆನೀಡಿದ ಮೇರೆಗೆ ಸಿಮ್ಲಾದಲ್ಲಿ ನಡೆದ ಭಾರತೀಯ ವಿಶ್ವವಿದ್ಯಾಲಯಗಳ ಅಧಿವೇಶನದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಮಂಡಲಿಯನ್ನು ರೂಪಿಸುವ ಕುರಿತು ಅಂತಿಮ ನಿರ್ಧಾರವನ್ನು ಕೈಗೊಳ್ಳಲಾಗಿತ್ತು. ಅನಂತರ ಅಂತರ್–ವಿಶ್ವವಿದ್ಯಾಲಯ ಮಂಡಲಿಯನ್ನು ಸಂಘವಾಗಿ ಸೊಸೈಟಿ ಗೊತ್ತುವಳಿ ಅಧಿನಿಯಮ 1860ರ ಕೆಳಗೆ ನೋಂದಾಯಿಸಲಾಯಿತು. ಆಮೇಲೆ 1973ರಲ್ಲಿ ಅದರ ಹೆಸರನ್ನು ಭಾರತೀಯ ವಿಶ್ವವಿದ್ಯಾಲಯಗಳ ಸಂಘ(ಎಐಯು)ವಾಗಿ ಬದಲಾಯಿಸಲಾಯಿತು.

ಇಲ್ಲಿಂದ ಈ ಸಂಘವು ಮಹತ್ವಪೂರ್ಣ ಬೆಳವಣಿಗೆಯನ್ನು ಕಂಡಿದೆ. ಈಗ 279 ಸದಸ್ಯ ಸಂಸ್ಥೆಗಳಲ್ಲಿ ವಿಶ್ವವಿದ್ಯಾಲಯ ಮಟ್ಟದ 250 ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಹೆಮ್ಮೆಯ ಸಂಸ್ಥೆ ಇದಾಗಿದೆ. ಎಐಯುವಿನ ಆಶ್ರಯದಲ್ಲಿ ಅಥವಾ ವ್ಯಾಪ್ತಿಯಲ್ಲಿ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು, ಪರಿಗಣಿತ ವಿಶ್ವವಿದ್ಯಾಲಯಗಳು, ಕೃಷಿ ವಿಶ್ವವಿದ್ಯಾಲಯಗಳು, ತಾಂತ್ರಿಕ ವಿಶ್ವವಿದ್ಯಾಲಯಗಳು, ಭಾಷಾ ವಿಶ್ವವಿದ್ಯಾಲಯಗಳು, ಮಹಿಳಾ ವಿಶ್ವವಿದ್ಯಾಲಯಗಳು, ಮುಕ್ತವಿಶ್ವವಿದ್ಯಾಲಯಗಳು, ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿರುವ ಐಐಟಿಐ ನಂತರ ಇತರ ಸಂಸ್ಥೆಗಳು ಪ್ರಾತಿನಿಧಿತ್ವ ಹೊಂದಿವೆ.

**ಎಐಯುವಿನ ಪಾತ್ರ:**

ಕಾಲಾನುಕ್ರಮದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಸಂಘವು ಗಮನಾರ್ಹ ಪ್ರಾಮುಖ್ಯವನ್ನು ಪಡೆದು, ಇವತ್ತಿನ ದಿನ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ನಿರ್ಣಾಯ ರಾಷ್ಟ್ರೀಯ ವಿಚಾರಗಳ ಕುರಿತು ವಿಶ್ವವಿದ್ಯಾಲಯಗಳ ದೃಷ್ಟಿಕೋನವನ್ನು ಮತ್ತು ರಾಜ್ಯ ಮತ್ತು ಕೇಂದ್ರ ಸರಕಾರಗಳು ಕಾಲಾನುಕ್ರಮದಲ್ಲಿ ರೂಪಿಸುವ ಕಾರ್ಯನೀತಿಗಳನ್ನು ಸರಕಾರಕ್ಕೆ ಪ್ರತಿನಿಧಿಸುವ ಸಂಸ್ಥೆಯಾಗಿದೆ. ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ(ಯುಜಿಸಿ), ಮಾನವ ಸಂಪನ್ಮೂಲ ವಿಭಾಗದ ಮಂತ್ರಾಲಯ (ಭಾರತ ಸರಕಾರ) ಗಳಂತಹ ಅನೇಕ ಶಾಸನಬದ್ಧ ಸಂಸ್ಥೆಗಳಿಗೆ ಭಾರತದಲ್ಲಿನ ಉನ್ನತ ಶಿಕ್ಷಣದ ಬೆಳವಣಿಗೆ ಮತ್ತು ವಿಸ್ತರಣೆಗೆ ಸಲಹಾಸೂತ್ರಗಳು ಮತ್ತು ಕಾರ್ಯವಿಧಾನಗಳನ್ನು ಬೆಳೆಸಲು ಇದು ಸಹಾಯ ಒದಗಿಸುತ್ತದೆ. ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಕುಲಪತಿಗಳು ಮತ್ತು ನಿರ್ದೇಶಕರನ್ನು ವಾರ್ಷಿಕ ಅಧಿವೇಶನದ ರೂಪದಲ್ಲಿ ಒಟ್ಟುಗೂಡಿಸುವ ಏಕಮಾತ್ರ

Digitised by Bharatavani, CIIL

ವೇದಿಕೆ ಎಐಯು. ಸಾಮಾನ್ಯವಾಗಿ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ನಡೆಯುವ ಈ ಅಧಿವೇಶನದ ಸ್ಥಳವು ಪ್ರಾಂತದಿಂದ ಪ್ರಾಂತಕ್ಕೆ ಬದಲಾಗುತ್ತಾ ಹೋಗುತ್ತದೆ. ಇದರೊಂದಿಗೆ ಪ್ರಾಂತೀಯ ಮಟ್ಟದಲ್ಲಿ ಆಸಕ್ತಿ ವಿಚಾರಗಳ ಪರಿಶೀಲನೆಗಾಗಿ ಉಪಕುಲಪತಿಗಳ ನಾಲ್ಕು ಪ್ರಾಂತೀಯ ಅಧಿವೇಶನಗಳನ್ನು, ಉತ್ತರ, ಪೂರ್ವ, ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಎಐಯು ಸಂಘಟಿಸುತ್ತದೆ. ಈ ವಿಚಾರಗಳ ಜೊತೆಯಲ್ಲಿ ಇತರ ರಾಷ್ಟ್ರೀಯ ಪ್ರಮುಖ ವಿಚಾರಗಳು ದೇಶದ ವಿವಿಧೆಡೆಗಳಲ್ಲಿ ನಡೆಯುವ ವಾರ್ಷಿಕ ಅಧಿವೇಶನದಲ್ಲಿ ಚರ್ಚೆಯ ಕೇಂದ್ರಬಿಂದುಗಳಾಗಿರುತ್ತವೆ. ವಾರ್ಷಿಕ ಅಧಿವೇಶನದ ಸಾಮಾನ್ಯ ಮತ್ತು ವ್ಯಾವಹಾರಿಕ ಕಾರ್ಯಕಲಾಪಗಳಲ್ಲಿ ಮುಂದಿನ ವರ್ಷದ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಚುನಾಯಿಸಲಾಗುವುರಿಂದ ವಾರ್ಷಿಕ ಅಧಿವೇಶನಕ್ಕೆ ಪ್ರಾಮುಖ್ಯ ಇರುತ್ತದೆ. ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ಕಾರ್ಯಗತಿಯು ಈಗ ಉತ್ತಮ ರೀತಿಯಿಂದ ಆಚರಣೆಗೆ ಬಂದಿರುವುದರಿಂದ ಇದರಲ್ಲಿ ಒಮ್ಮತವು ಮುಖ್ಯ ಸೂಚಿಯಾಗಿರುತ್ತದೆ.

ಎಐಯುವಿಗೆ ಸ್ಥಾಯಿಸಮಿತಿಯ ಮಾರ್ಗದರ್ಶನವಿರುತ್ತದೆ. ಈ ಸ್ಥಾಯಿ ಸಮಿತಿಯಲ್ಲಿ ದೇಶದ ವಿವಿಧ ವಲಯಗಳನ್ನು ಪ್ರತಿನಿಧಿಸುವ 19 ಉಪಕುಲಪತಿಗಳು/ನಿರ್ದೇಶಕರು ಇರುತ್ತಾರೆ. ಇದು ಕೆಲವು ನಿಯಮಗಳಿಂದ ರೂಪಿತವಾದ ಮಾರ್ಗದರ್ಶಕ ಸೂತ್ರಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತದೆ. ಸಂಘದ ಇಡೀ ವರ್ಷದ ಚಟುವಟಿಕೆಗಳಿಗೆ ಸ್ಥಾಯಿ ಸಮಿತಿಯ ಮಾರ್ಗದರ್ಶನವಿರುತ್ತದೆ. ಕಾರ್ಯನೀತಿಯ ದಾಖಲೆಗಳನ್ನು ಮತ್ತು ವರದಿಗಳನ್ನು ರೂಪಿಸುವುದರಲ್ಲಿ, ಜೊತೆಗೆ ಈ ಸಂಸ್ಥೆಗೆ ಘನತೆಯನ್ನು ಹೆಚ್ಚಿಸಲು ಅಗತ್ಯವಿರುವ ಇದೇ ರೀತಿಯ ಇತರ ಚಟುವಟಿಕೆಗಳಿಗೆ ಕೂಡಾ ಸಮಿತಿ ಸಹಾಯ ನೀಡುತ್ತದೆ. ಸ್ಥಾಯಿ ಸಮಿತಿಯ ಕಾರ್ಯಗಳಿಗಾಗಿ ಸಂಘ ರೂಪಿಸಿದ ಮಾರ್ಗದರ್ಶಕ ಸೂತ್ರಗಳು ಮತ್ತು ಮಾಪನ ಮಟ್ಟವನ್ನು ಆಧರಿಸಿ ಸ್ಥಾಯಿ ಸಮಿತಿಯ ಸದಸ್ಯರು ಕೂಡಾ ಕಾಲಾನುಕ್ರಮದಲ್ಲಿ ಬದಲಾಗುತ್ತಾ ಹೋಗುತ್ತಾರೆ. ಪ್ರಾಂತೀಯ ಪ್ರತಿನಿಧಿಕರಣ, ಪ್ರದೇಶ/ರಾಷ್ಟ್ರದಲ್ಲಿ ಉಪಕಲಪತಿಗಳ ಹಿರಿತನವನ್ನು ಪರಿಗಣಿಸಿ ಉಪಕುಲಪತಿಗಳ ಆವರ್ತವನ್ನು ನಡೆಸಲಾಗುತ್ತದೆ. ಸ್ಥಾಯಿ ಸಮಿತಿಯ ಎಲ್ಲಾ ಸಭೆಗಳ ಅಧ್ಯಕ್ಷಸ್ಥಾನವನ್ನು ನಿರ್ವಹಿಸುವ ಸಮಿತಿಯ ಅಧ್ಯಕ್ಷರನ್ನು ಪ್ರತಿವರ್ಷ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಚುನಾಯಿಸಲಾಗುತ್ತದೆ. ಮಹಾ ಕಾರ್ಯದರ್ಶಿಯು (ಸೆಕ್ರೆಟರಿ ಜನರಲ್) ಎಐಯುವಿನ ಮುಖ್ಯ ಕಾರ್ಯನಿರ್ವಾಹಕರಾಗಿ ಮತ್ತು ಸ್ಥಾಯಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಇರುತ್ತಾರೆ. ಇವರನ್ನು ಐದುವರ್ಷಗಳ ಅವಧಿಗೆ ನೇಮಕಗೊಳಿಸಲಾಗುತ್ತದೆ. ಈ ಅವಧಿಯನ್ನು ಮತ್ತಷ್ಟು ಮುಂದುವರಿಸುವುದು ಸಾಧ್ಯವಿದೆ.

ಎಐಯು ಸಮಾನ ಉದ್ದೇಶಗಳ ಇತರ ವಿದೇಶಿ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಹೊಂದಿರುತ್ತದೆ. ಆಸ್ಟ್ರೇಲಿಯಾ, ಜರ್ಮನಿ, ಕೆನಡಾ ಮತ್ತು ಬ್ರಿಟಿಷ್ ವಿಶ್ವವಿದ್ಯಾಲಯಗಳ ರಾಷ್ಟ್ರೀಯ ಸಂಸ್ಥೆಗಳ ಮೂಲಕ ಎಐಯುವಿಗೆ ಈ ವಿಶ್ವವಿದ್ಯಾಲಯಗಳೊಂದಿಗೆ ಪ್ರಬಲ ಸಂಪರ್ಕವಿದೆ, ವಿಶ್ವವಿದ್ಯಾಲಯಗಳ ಆಡಳಿತಾಧಿಕಾರಿಗಳು, ಶಿಕ್ಷಕರು, ಮುಖ್ಯ ಕಾರ್ಯನಿರ್ವಹಕರು ಮತ್ತು ಇದೇ ರೀತಿಯ ಇತರರಿಗೆ ತರಬೇತಿ ಕಾರ್ಯಕ್ರಮಗಳು ಮತ್ತು ಕಾರ್ಯಾಗಾರಗಳು ಮತ್ತು ವಿಚಾರಸಂಕಿರಣಗಳನ್ನು ಸಂಘಟಿಸುವುದು ಸಂಘದ ಮುಖ್ಯ ಕಾರ್ಯಗಳಲ್ಲಿ ಒಂದು. ಸಾಮಾನ್ಯವಾಗಿ ವರ್ಷದಲ್ಲಿ ಈ ರೀತಿಯ 3–4 ಚಟುವಟಿಗಳನ್ನು ನಡೆಸುವುದು ಸಾಮಾನ್ಯ ರೂಢಿ. ಇದನ್ನು ಹೊರತುಪಡಿಸಿ ಭಾರತದ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ಕ್ರೀಡೆಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಎಐಯು ಸಂಘಟಿಸುತ್ತದೆ. ಕಾರ್ಯಕ್ರಮಗಳು ಪ್ರಾಂತೀಯ ಮತ್ತು ವಾರ್ಷಿಕ ಚಟುವಟಿಕೆಗಳಲ್ಲಿ ಬಹಳ ಚೆನ್ನಾಗಿ ಪ್ರಸಾರಪಡೆದು ಒಂದು ವಲಯದಿಂದ ಇನ್ನೊಂದು ವಲಯಕ್ಕೆ ಆವರ್ತನೆಯಾಗುತ್ತಾ ಹೋಗುತ್ತದೆ.

ಎಐಯು ವಿಚಾರಸಂಕಿರಣಗಳು/ಉಪನ್ಯಾಸಮಾಲೆ/ ಕಾರ್ಯಾಗಾರಗಳ ಕಾರ್ಯಕಲಾಪಗಳ ಪ್ರಕಟಿಸುವುದರೊಂದಿಗೆ, ಈ ಕೆಳಗಿನ ವಲಯ ಪ್ರಾಂತ್ಯಾ ಗ್ರಂಥಗಳನ್ನು ಕೂಡಾ ಪ್ರಕಟಿಸುತ್ತದೆ; ವಿಶ್ವವಿದ್ಯಾಲಯಗಳ ಕೈಪಿಡಿ, ವೈದ್ಯಕೀಯ ಶಿಕ್ಷಣ, ಇಂಜಿನಿಯರಿಂಗ್ ಶಿಕ್ಷಣ, ಮ್ಯಾನೇಜ್‌ಮೆಂಟ್ ಶಿಕ್ಷಣ ದೂರಶಿಕ್ಷಣ ಗಣಕ ಶಿಕ್ಷಣ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನಗಳು ಇತ್ಯಾದಿಗಳ ಕೈಪಿಡಿಗಳು, ಉನ್ನತ ಶಿಕ್ಷಣದ ಜರ್ನಲ್, ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ರಾಷ್ಟ್ರೀಯ ವಿಚಾರಗಳ ಮೇಲೆ ವರದಿಗಳು, ಗ್ರಂಥಗಳು ಮತ್ತು ಕಾರ್ಯಕಲಾಪಗಳನ್ನು ಪ್ರಕಟಿಸುತ್ತದೆ. ಇತ್ತೀಚಿನ ಕೆಲವು ಪ್ರಕಟಣೆಗಳೆಂದರೆ: ಇನ್‌ಫಾರ್ಮೇಶನ್ ಟೆಕ್ನಾಲಾಜಿ ಇನ್ ಇಂಡಿಯಾ (2000), ವ್ಯಾಲ್ಯೂ ಎಜ್ಯುಕೇಶನ್ ಇನ್ ಇಂಡಿಯಾ (2000), ಟೀಚರ್ ಎಜ್ಯುಕೇಶನ್ ಇನ್ ಇಂಡಿಯಾ (2000), ಇಫೆಕ್ಟ್‌ವಿನೆಸ್ ಆಂಡ್ ಕ್ವಾಲಿಟಿ ಇನ್ ಹೈಯರ್ ಎಜ್ಯುಕೇಶನ್ (1999), ಎಜ್ಯುಕೇಶನ್ ಆಂಡ್ ವಿಮೆನ್ಸ್ ಎಂಪವರ್‌ಮೆಂಟ್ (1999), ಸೈಂಟಿಫಿಕ್ ಆಂಡ್ ಟೆಕ್ನಾಲಾಜಿಕಲ್ ರೀಸರ್ಚ್ ಇನ್ ಯೂನಿವರ್ಸಿಟೀಸ್ (2000), ಕ್ವಾಲಿಟಿ ಆಶ್ಯುರೆನ್ಸ್ ಇನ್ ಡಿಸ್ಟೆನ್ಸ್ ಹೈಯರ್ ಎಜ್ಯುಕೇಶನ್ (1999), ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ಇನ್ ಡೇರ್ರಿಂಗ್ (2000), ಅನೇಕ ವಿಷಯಗಳ ಗ್ರಂಥ ಋಣ ಪಟ್ಟಿಗಳು ಮತ್ತು ಪ್ರಶ್ನೆಗಳ ಬ್ಯಾಂಕ್‌ಗಳು, ಹೈಯರ್ ಎಜ್ಯುಕೇಶನ್ ಫಾರ್ ಹ್ಯೂಮನ್ ಡೆವಲಪ್‌ಮೆಂಟ್ (2000), ಇತ್ಯಾದಿ.

ಕಳೆದ ಕೆಲವು ವರ್ಷಗಳಲ್ಲಿ ಎಐಯು ಈ ಕೆಳಗಿನ ಏಜೆನ್ಸಿಗಳೊಂದಿಗೆ ಸಹಯೋಗವನ್ನು ಮತ್ತು ನಿಕಟ ಸಂಪರ್ಕವನ್ನು ಹೊಂದಿದೆ: ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ); ಭಾರತೀಯ ಕೃಷಿ ಸಂಶೋಧನಾ ಮಂಡಲಿ; ಶಿಕ್ಷಣ ವಿಭಾಗ ಮತ್ತು ಮಾನವ ಸಂಪನ್ಮೂಲ ವಿಭಾಗದ ಯುವಜನ ಕಾರ್ಯ ಮತ್ತು ಕ್ರೀಡಾ ವಿಭಾಗ; ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಲಿ; ರಾಷ್ಟ್ರೀಯ ತೆರಿಗೆ ನಿರ್ಧಾರಣ ಮತ್ತು ಅರ್ಹತಾ ಮಂಡಲಿ; ದೂರ ಶಿಕ್ಷಣ ಮಂಡಲಿ; ರಾಜ್ಯ ಶಿಕ್ಷಣ ವಿಭಾಗಗಳು ಮತ್ತು ರಾಜ್ಯದ

Digitised by Bharatavani, CIIL

ಉನ್ನತ ಶಿಕ್ಷಣ ಮಂಡಲಿ; ಅಂತಾರಾಷ್ಟ್ರೀಯ ಮಟ್ಟದಲ್ಲೂ ಅಸೋಸಿಯೇಶನ್ ಆಫ್ ಕಾಮನ್‌ವೆಲ್ತ್ ಯೂನಿವರ್ಸಿಟಿಸ್, ಇಂಟರ್‌ನ್ಯಾಶನಲ್ ಅಸೋಸಿಯೇಶ್‌ನ್ ಆಫ್ ಯೂನಿವರ್ಸಿಟಿಸ್ ಮತ್ತು ಕಾಮನ್‌ವೆಲ್ತ್ ಸೆಕ್ರೆಟರೇಟ್, ಕಾಮನ್‌ವೆಲ್ತ್ ಆಫ್ ಲರ್ನಿಂಗ್, ಎವಿಸಿ ಇತ್ಯಾದಿಗಳೊಂದಿಗೆ ಎಐಯುವಿಗೆ ನಿಕಟ ಸಂಬಂಧವಿದೆ.

ಭಾರತದ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಪದವಿಗಳು ಮತ್ತು ಡಿಪ್ಲೊಮಾಗಳಿಗೆ ಮಾನ್ಯತೆ ನೀಡುವಿಕೆ ಮತ್ತು ಸಮಾನತೆಯನ್ನು ಅನುಗ್ರಹಿಸುವುದು (ಅಂಗೀಕರಿಸುವುದು) ಎಐಯುವಿನ ಬಹಳ ಮುಖ್ಯವಾದ ಕಾರ್ಯಗಳಲ್ಲಿ ಒಂದು. ಶೈಕ್ಷಣಿಕ ವಿದ್ಯಾರ್ಹತೆಯ ಮಾನ್ಯತೆ ಮತ್ತು ತತ್‌ಸಮಾನವಾದ ಅನೇಕ ವಿಧದ ಮಾಹಿತಿಗಳನ್ನು ಇದು ಒದಗಿಸುತ್ತದೆ. ವೈದ್ಯಕೀಯ ವೃತ್ತಿಯೊಂದನ್ನು ಹೊರತುಪಡಿಸಿ ಅನೇಕ ವಿದೇಶಿ ಪದವಿಗಳಿಗೆ ಸಮಾನತೆಯನ್ನು ನೀಡುವ ಜವಾಬ್ದಾರಿ ಹೊಂದಿರುವ ಏಕಮಾತ್ರ ಏಜೆನ್ಸಿ ಎಂಬುದಾಗಿ ಮಾನವ ಸಂಪನ್ಮೂಲ ವಿಭಾಗದ ಮಂತ್ರಾಲಯವು ಅಧಿಸೂಚನೆ ನೀಡಿದೆ. ಎಐಯುವಿನ ಪಾತ್ರವನ್ನು ಭಾರತದಲ್ಲಿ ಮತ್ತು ವಿದೇಶದಲ್ಲಿ ಉತ್ತಮ ರೀತಿಯಿಂದ ಗುರುತಿಸಲಾಗಿದೆ. ರಾಷ್ಟ್ರೀಯ ಸಂಸ್ಥೆಗಳಾದ ಆಲ್ ಇಂಡಿಯಾ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜ್ಯುಕೇಶನ್, ಅಮೇರಿಕನ್ ಸ್ಟಡೀಸ್ ರೀಸರ್ಚ್ ಸೆಂಟರ್, ಬೋರ್ಡ್ ಆಫ್ ಎಸೆಸ್‌ಮೆಂಟ್ ಫಾರ್ ಎಜ್ಯುಕೇಶನಲ್ ಕ್ವಾಲಿಫಿಕೇಶನ್, ಕೌನ್ಸಿಲ್ ಫಾರ್ ಇಂಡಿಯನ್ ಸ್ಕೂಲ್ ಸರ್ಟಿಫಿಕೇಶನ್ ಎಕ್ಸಾಮಿನೇಶನ್; ಕಮಿಟಿ ಆನ್ ಡಾಕ್ಯುಮೆಂಟೇಶನ್ ಸರ್ವಿಸಸ್ ಅಂಡ್ ರೀಸರ್ಚ್ ಇನ್‌ಫಾರ್ಮೇಶನ್ ಆಫ್ ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸಾಯನ್ಸ್ ರೀಸರ್ಚ್ ಇತ್ಯಾದಿ ಸಂಸ್ಥೆಗಳಲ್ಲಿ ಎಐಯುವಿನ ಪ್ರತಿನಿಧೀಕರಣವಿದೆ.

**ಎಐಯುವಿನ ಕಾರ್ಯನಿರ್ವಹಣ ವಿಭಾಗಗಳು:**

ಭಾರತದಲ್ಲಿ ಮತ್ತು ವಿದೇಶದಲ್ಲಿ ವಿಶ್ವವಿದ್ಯಾಲಯಗಳು ನೀಡುವ ಪದವಿಗಳು ಮತ್ತು ಡಿಪ್ಲೊಮಾಗಳಿಗೆ ಮಾನ್ಯತೆ ಮತ್ತು ಸಮಾನತೆಯನ್ನು ಒದಗಿಸುವ ಜವಾಬ್ದಾರಿಯು ಮೌಲ್ಯಮಾಪನ ವಿಭಾಗದ್ದಾಗಿರುತ್ತದೆ. ವಿದ್ಯಾರ್ಥಿಗಳ ಮಾಹಿತಿ ಸೇವಾ ವಿಭಾಗವು ಅಂಕಿಅಂಶಗಳ ಇತ್ತೀಚಿನವರೆಗಿನ ಮಾಹಿತಿಯನ್ನು ಪಾಲಿಸಿಕೊಂಡು ಬರುತ್ತದೆ ಮತ್ತು ವಿಶ್ವವಿದ್ಯಾಲಯಗಳ ಕೈಪಿಡಿಯನ್ನು ಮತ್ತು ವೃತ್ತಿಪರ ಕೋರ್ಸ್‌ಗಳ ಇತರ ಕೈಪಿಡಿಗಳನ್ನು ಕೂಡಾ ಹೊರಡಿಸುತ್ತದೆ. ಗ್ರಂಥಾಲಯ ಮತ್ತು ದಾಖಲೀಕರಣ ವಿಭಾಗವು ಪುಸ್ತಕಗಳನ್ನು ದಾಖಲೆಗಳನ್ನು ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಭಾರತದ ಹಾಗೂ ವಿದೇಶಿ ನಿಯತಕಾಲಿಕಗಳ ವಿಶಿಷ್ಟ ರೀತಿಯ ಸಂಗ್ರಹವನ್ನು ನೋಡಿಕೊಳ್ಳುತ್ತದೆ. ಸಂಶೋಧನಾ ವಿಭಾಗವು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಸಮಕಾಲೀನ ಸಮಸ್ಯೆಗಳು ಮತ್ತು ವಿಚಾರಗಳ ಕುರಿತು ಸಂಶೋಧನಾ ಅಧ್ಯಯನಗಳನ್ನು ನಡೆಸುತ್ತದೆ. ಇದು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಾಗಾರಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಅಧಿವೇಶನಗಳನ್ನು ಕೂಡಾ ಸಂಘಟಿಸುತ್ತದೆ. ಈ ವಿಭಾಗವು ಭಾರತದ ಉನ್ನತ ಶಿಕ್ಷಣದ ಮೇಲೆ ವಿಶೇಷ ವರದಿಗಳನ್ನು ಮತ್ತು ಲೇಖನಗಳನ್ನು ನಿಯಮಿತಕಾಲದಲ್ಲಿ ಹೊರಡಿಸುತ್ತದೆ. ಸಂಘದ ಪ್ರಕಟಣೆಗಳ ಮುದ್ರಣದ ಜವಾಬ್ದಾರಿಯನ್ನು ಪ್ರಕಾಶನ ಮತ್ತು ಮಾರಾಟ ವಿಭಾಗ ನೋಡಿಕೊಳ್ಳುತ್ತದೆ. ಕ್ರೀಡಾ ವಿಭಾಗಕ್ಕೆ ಮಾನವ ಸಂಪನ್ಮೂಲ ವಿಭಾಗದಿಂದ ಧನಸಹಾಯ ದೊರೆಯುತ್ತದೆ. ಅಂತರ್ ವಿಶ್ವವಿದ್ಯಾಲಯ ಮಂಡಲಿಯಾಗಿ ಇದು ಕಾರ್ಯನಿರ್ವಹಿಸುತ್ತದೆ. ಮತ್ತು ಅಂತರ್‌ವಿಶ್ವವಿದ್ಯಾನಿಲಯ ಕ್ರೀಡಾಸ್ಪರ್ಧೆಗಳನ್ನು ಮತ್ತು ವಿಶೇಷ ಕೋಚಿಂಗ್ ಕ್ಯಾಂಪ್‌ಗಳನ್ನು ಸಂಘಟಿಸುತ್ತದೆ. ಮಾನವೀಯ ಮೌಲ್ಯಗಳು, ಸಂಸ್ಕೃತಿ, ರಾಷ್ಟ್ರೀಯ ಸಮನ್ವಯ ಇತ್ಯಾದಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಯುವ ವಿಭಾಗವು ಅಂತರ್ ವಿಶ್ವವಿದ್ಯಾನಿಲಯ ಯುವಕಾರ್ಯಕ್ರಮಗಳನ್ನು ಸಂಘಟಿಸುತ್ತದೆ. ರಾಷ್ಟ್ರೀಯ ಸಮನ್ವಯ ಕ್ಯಾಂಪ್‌ಗಳು, ರಾಷ್ಟ್ರೀಯ ಯುವ ಸಪ್ತಾಹ ಆಚರಣೆಗಳು ಇತ್ಯಾದಿಗಳಿಗೆ ಪ್ರೋತ್ಸಾಹ ನೀಡುವ ಜವಾಬ್ದಾರಿಯು ಈ ವಿಭಾಗದ್ದಾಗಿರುತ್ತದೆ.

**ಭವಿಷ್ಯ:** ಎಐಯುವಿನ ಮಹಾಕಾರ್ಯದರ್ಶಿ ಡಾ. ಕೆ.ಬಿ. ಪೊವರ್ ಹೀಗೆಂದಿದ್ದಾರೆ :

ಅತ್ಯಂತ ಉನ್ನತ ಮಟ್ಟದ ಸ್ಪರ್ಧಾತ್ಮಕ ಜ್ಞಾನಾಧಾರಿತ ಸಮಾಜದಲ್ಲಿ ವಿಶ್ವವಿದ್ಯಾಲಯಗಳ ಅಗತ್ಯಗಳನ್ನು ಪೂರೈಸಲು ಎಐಯು ಪರಿಸ್ಥಿತಿಗೆ ಹೊಂದಿಕೊಳ್ಳುವ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ ಎಂಬುದು ಸ್ಪಷ್ಟ. ವಿದ್ಯಾರ್ಥಿ ಕೇಂದ್ರಿತ ಕಲಿಕೆ ಮತ್ತು ಜೀವನ ಪರ್ಯಂತ ಶಿಕ್ಷಣದ ಪರಿಸರದಲ್ಲಿ ವಿಶ್ವವಿದ್ಯಾಲಯಗಳು ಮತ್ತು ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಪಾರದರ್ಶಕ, ವಿಕೇಂದ್ರೀಕೃತ ಮತ್ತು ಸಹಭಾಗಿತ್ವ ಶೈಲಿಯ ಕಾರ್ಯನಿರ್ವಹಣೆಯ ಕಡೆಗೆ ವಿಶ್ವವಿದ್ಯಾಲಯಗಳು ಚಲಿಸಬೇಕಾಗುತ್ತದೆ. ಮಹಾವಿದ್ಯಾಲಯಗಳು, ವಿಶ್ವವಿದ್ಯಾಲಯಗಳು, ಶಾಸನಬದ್ಧ ಸಂಸ್ಥೆಗಳು ಮತ್ತು ಸರಕಾರದ ನಡುವಿನ ಸಂಬಂಧಗಳಲ್ಲಿ ಅಮೂಲಾಗ್ರ/ಬದಲಾವಣೆ ಉಂಟಾಗಬೇಕು. ಹೆಚ್ಚು ಸ್ವಾಯತ್ತತೆಯ ಘೋಷಣೆ ಮತ್ತು ಅದಕ್ಕನುಗುಣವಾಗಿ ಹೆಚ್ಚಿದ ಜವಾಬ್ದಾರಿಯನ್ನು ಪ್ರೋತ್ಸಾಹಿಸಲೇಬೇಕು.

**ಮುಂದುವರಿದು ಅವರು ಸೂಚಿಸಿದ್ದೇನೆಂದರೆ:**

1998ರಲ್ಲಿ ಪ್ಯಾರಿಸಿನಲ್ಲಿ ಸ್ವೀಕರಿಸಲಾದ ಉನ್ನತ ಶಿಕ್ಷಣ ಕುರಿತಂತೆ ಜಾಗತಿಕ ಘೋಷಣೆಯ ಕೊನೆಯ ಕಲಮು 17ರ ಸಹಮತದೊಂದಿಗೆ ಉನ್ನತ ಶಿಕ್ಷಣದ ಭವಿಷ್ಯವು ಸಹಭಾಗಿತ್ವ ಮತ್ತು ನೆಟ್ ವರ್ಕಿಂಗ್ ಮೇಲೆ ಹೆಚ್ಚು ಪ್ರಮಾಣದಲ್ಲಿ ಆಧರಿಸಿ ಇರುತ್ತದೆ. ಇದಕ್ಕಾಗಿ ಅಂತರ್ ವಿಶ್ವವಿದ್ಯಾಲಯ ಸಂಸ್ಥೆಗಳ ಸ್ಥಾಪನೆಗಾಗಿ ವಿಶ್ವವಿದ್ಯಾಲಯಗಳು ಮತ್ತು ಇತರ ಸಂಸ್ಥೆಗಳ ನಡುವೆ ಅನ್ಯೋನ್ಯ ಸಂಬಂಧ ಮತ್ತು ಸಹಕಾರ ಇರಬೇಕಾಗುತ್ತದೆ. ಈ ಅನ್ಯೋನ್ಯ ಸಂಬಂಧ ಮತ್ತು ಸಹಕಾರದ ಕಾರ್ಯವನ್ನು ಎಐಯುವೇ ನಡೆಸಬೇಕಾಗುತ್ತದೆ. ಉನ್ನತ ಶಿಕ್ಷಣದ ಮೇಲಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಗಳ ಕೇಂದ್ರವಾಗಿರುವ

Digitised by Bharatavani, CIIL

ಕಾರ್ಯಸೂಚಿಯನ್ನು ಉಳಿಸುವ ಸಲುವಾಗಿ ಸಂಘವು ವೇಗವರ್ಧಕವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಎಐಯು ತನ್ನ ಪಾತ್ರವನ್ನು ಬದಲಾಯಿಸುವುದರ ಮೂಲಕ ಭಾರತದಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಯ ಪಥಸಂಚಾಲಕವಾಗಬೇಕು. ಭಾರತ ಸರಕಾರ ಮತ್ತು ರಾಜ್ಯ ಸರಕಾರಗಳು ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ಹೊಸ ಕಾರ್ಯನೀತಿಗಳನ್ನು ಅಥವಾ ಚರ್ಚೆಯನ್ನು ಕೈಗೊಳ್ಳುವಾಗ ಎಐಯುವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

**ಮೂಲ: ಬಿ.ಬಿ. ಧರ್**
**ಅನು: ಡಾ. ಗೀತಾ ಶೆಣೈ**

## ಭಾರತೀಯ ಶಿಕ್ಷಣ ಸೇವೆ (ಐಇಎಸ್)

ಭಾರತೀಯ ಶಿಕ್ಷಣ ಸೇವೆ (ಐಇಎಸ್)ಯನ್ನು ಇತರ ಅಖಿಲ ಭಾರತ ಸೇವೆಗಳ ಮಾದರಿಯಲ್ಲಿ ಸೃಷ್ಟಿಸುವ ಅಗತ್ಯ ಇದೆ ಎಂದು ಬೇರೆ ಬೇರೆ ಕಡೆಗಳಿಂದ ಮಾತು ಕೇಳಿ ಬಂದಿದೆ. ಆದರೆ ಈ ಪ್ರಸ್ತಾಪಗಳನ್ನು ಕಾರ್ಯರೂಪಕ್ಕೆ ತರುವ ವಾಸ್ತವ ಪ್ರಯತ್ನ ಯಾವುದೂ ನಡೆದಿಲ್ಲ.

### ಸಂಕ್ಷಿಪ್ತ ಚರಿತ್ರೆ

ಭಾರತದಲ್ಲಿ ಬ್ರಿಟಿಷ್ ಆಡಳಿತದ ಪ್ರಾರಂಭಿಕ ಹಂತದಲ್ಲಿ ಭಾರತ ಸರ್ಕಾರದ 28 ಜುಲೈ 1896ರ ಗೊತ್ತುವಳಿಯಂತೆ ಭಾರತೀಯ ಶಿಕ್ಷಣ ಸೇವೆಯ ಆಂತರಿಕ ವಿನ್ಯಾಸವನ್ನು ಸೃಷ್ಟಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ಡಬ್ಲ್ಯು.ಎ. ಭಾವೆಯವರು ಹೀಗೆ ಹೇಳಿದ್ದಾರೆ:

ಭಾರತೀಯ ಶೈಕ್ಷಣಿಕ ಸೇವೆಯನ್ನು 1896ರಲ್ಲಿ ಸೃಷ್ಟಿಸಲಾಗಿದೆ. ಭಾರತ ಸರಕಾರದ ಕಾರ್ಯದರ್ಶಿಯು ತನ್ನ ರವಾನೆ ಸಂಖ್ಯೆ 22, ಸಾರ್ವಜನಿಕ(ಶಿಕ್ಷಣ), ದಿನಾಂಕ 12 ಮಾರ್ಚ್ 1896ರಲ್ಲಿ ಹಿರಿಯ ಶೈಕ್ಷಣಿಕ ಸೇವೆಯನ್ನು ರೂಪಿಸಲು ಒಪ್ಪಿಕೊಂಡಿದ್ದಾರೆ. ಅದು 2 ಶಾಖೆಗಳಲ್ಲಿ ಇರಬೇಕಾಗುತ್ತದೆ, ಒಂದು ಭಾರತೀಯ ಶಿಕ್ಷಣ ಸೇವೆ ಮತ್ತು ಇನ್ನೊಂದು ಪ್ರಾಂತೀಯ ಶಿಕ್ಷಣ ಸೇವೆ. ಭಾರತ ಸರಕಾರದ ಗೃಹ ವಿಭಾಗದ 28 ಜುಲೈ 1896ರ ಗೊತ್ತುವಳಿಯಂತೆ ಭಾರತೀಯ ಶೈಕ್ಷಣಿಕ ಸೇವೆಯನ್ನು ಸೃಷ್ಟಿಸಲಾಯಿತು. ಮೇಲಿನ ಈ ಗೊತ್ತುವಳಿಯ ಸಹಬಂಧದಲ್ಲಿ ಉಲ್ಲೇಖಿಸಿದಂತೆ ಆಗ ರಚಿಸಲಾದ ಐಇಎಸ್‌ನಲ್ಲಿ 6 ಹುದ್ದೆಗಳು ಈ ಪ್ರಾಂತದಲ್ಲಿ ಇರುತ್ತವೆ. ಇವುಗಳಲ್ಲಿ 3 ಹುದ್ದೆಗಳು ಇನ್ಸ್‌ಪೆಕ್ಟರ್‌ಗಳದು (ಇದರಲ್ಲಿ ಇನ್ಸ್‌ಪೆಕ್ಟರ್ ಜನರಲ್ ಕೂಡ ಸೇರುತ್ತಾರೆ), 2 ಪ್ರಾಂಶುಪಾಲರದು(ನಾಗಪುರ ತರಬೇತಿ ಶಾಲೆಯ ಪ್ರಾಂಶುಪಾಲರನ್ನೂ ಸೇರಿಸಿ) ಮತ್ತು ಒಬ್ಬ ಪ್ರಾಧ್ಯಾಪಕನದ್ದಾಗಿರುತ್ತದೆ. ಇನ್ಸ್‌ಪೆಕ್ಟರ್ ಹುದ್ದೆಗಳಲ್ಲಿ ಅರ್ಧದಷ್ಟನ್ನು ಪ್ರಾಂತೀಯ ಶಾಖೆಗೆ ವರ್ಗಾವಣೆ ಮಾಡಬೇಕೆಂದು ಕೂಡ ಸೂಚಿಸಲಾಗಿದೆ.

ಭಾವೆಯವರು ದ್ವಿಪ್ರಭುತ್ವದ ಸಂದರ್ಭದಲ್ಲಿ ಐಇಎಸ್‌ನ ಸ್ಥಾನವನ್ನು ಸಂಕ್ಷಿಪ್ತವಾಗಿ ಹೀಗೆ ತಿಳಿಸಿದ್ದಾರೆ:

ಸಾರ್ವಜನಿಕ ಶಿಕ್ಷಣದ ನಿರ್ದೇಶಕರು(ಮತ್ತು ಶಿಕ್ಷಣ ಕಾರ್ಯದರ್ಶಿ), ಐಇಎಸ್‌ನ ಸದಸ್ಯರು, ತನ್ನನ್ನು ನೇಮಿಸಿರುವ ಮತ್ತು ಅವರ ಇಚ್ಛೆಗೆ ಅನುಗುಣವಾಗಿ ತಾನು ಸೇವೆಯಲ್ಲಿ ಮುಂದುವರಿಯುವಂತೆ ಮಾಡಿರುವ ವಿದೇಶಾಂಗ ಕಾರ್ಯದರ್ಶಿಯೊಂದಿಗೆ ನಿಷ್ಠೆಯನ್ನು ಹೊಂದಿರಬೇಕಾಗುತ್ತದೆ. ಶಿಕ್ಷಣ ಇಲಾಖೆಯ ಮುಖ್ಯಸ್ಥರಾಗಿ ಅವರು ಜನರ ಆಯ್ದ ಪ್ರತಿನಿಧಿಯಾಗಿರುವ ಶಿಕ್ಷಣ ಮಂತ್ರಿಗಳ ಕಾರ್ಯನೀತಿಗಳಿಗೆ ವಿಧೇಯರಾಗಿ ಅದನ್ನು ಚಲಾವಣೆಗೆ ತರಬೇಕು. ವಿದೇಶಾಂಗ ಕಾರ್ಯದರ್ಶಿ ಮತ್ತು ಶಿಕ್ಷಣ ಮಂತ್ರಿಯವರ ವಿಚಾರಗಳು ಒಂದೇ ರೀತಿಯದ್ದಾಗಿ ಇದ್ದರೆ, ನಿರ್ದೇಶಕರು ತೊಂದರೆಗೆ ಸಿಕ್ಕಿಕೊಳ್ಳುವುದಿಲ್ಲ. ಆದರೆ ಅವರಲ್ಲಿ ಭಿನ್ನಾಭಿಪ್ರಾಯವಿದ್ದರೆ ಇಂಗ್ಲೆಂಡಿನಲ್ಲಿರುವ ರಾಜ್ಯ ಕಾರ್ಯದರ್ಶಿಯು ಭಾರತೀಯ ಜನತೆಯ ಆಶೋತ್ತರಗಳನ್ನು ಬೆಂಬಲಿಸುವುದನ್ನು ನಿರೀಕ್ಷಿಸಲಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ IES ನ ಸದಸ್ಯರ ಅದರಲ್ಲೂ ಮುಖ್ಯವಾಗಿ ನಿರ್ದೇಶಕರ ಇಕ್ಕಟ್ಟಿನ ಪರಿಸ್ಥಿತಿಯನ್ನು ನಾವು ಊಹಿಸಬಹುದು.

ಹೊಸ ನೇಮಕಾತಿಯನ್ನು ನಿಲ್ಲಿಸುವ ನಿರ್ಧಾರವನ್ನು ಕೈಗೊಳ್ಳುವವರೆಗೆ ಅಂದರೆ 1924ರವರೆಗೆ ಭಾರತೀಯ ಶಿಕ್ಷಣ ಸೇವೆ ಮುಂದುವರಿದಿತ್ತು.

ಶಿಕ್ಷಣ ಆಯೋಗವು (1964–66) ಶೈಕ್ಷಣಿಕ ಆಡಳಿತಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯಗಳಿಗೆ ಪ್ರಮುಖ ಶಿಫಾರಸುಗಳನ್ನು ಮಾಡಿದೆ. ಅದು ಹೇಳಿರುವುದು ಹೀಗಿದೆ:

ಸದ್ಯದ ಒಡಂಬಡಿಕೆ ಏನೆಂದರೆ, ಭಾರತ ಸರಕಾರದ ಕಾರ್ಯದರ್ಶಿ ಹುದ್ದೆಗೆ ಐಸಿಎಸ್ ಅಥವಾ ಐಎಎಸ್ ಕೂಟದಿಂದ ಯಾರನ್ನೂ ತೆಗೆದುಕೊಳ್ಳುವ ಹಾಗಿಲ್ಲ. ಅದನ್ನು ಓರ್ವ ಪರಿಣತ ಶಿಕ್ಷಣತಜ್ಞನಿಗೆ ನೀಡಬೇಕು. ಅವರು 'ಭಾರತ ಸರಕಾರದ ಶೈಕ್ಷಣಿಕ ಸಲಹೆಗಾರರು ಮತ್ತು ಶಿಕ್ಷಣ ಮಂತ್ರಾಲಯದ ಕಾರ್ಯದರ್ಶಿ'ಯ ಅಂಕಿತವನ್ನು ಹೊಂದಿರುತ್ತಾರೆ. ಇದು ಆರೋಗ್ಯಪೂರ್ಣ ಸಂಪ್ರದಾಯವಾಗಿದೆ ಮತ್ತು ಇದು ಮುಂದುವರಿಯಬೇಕು... ವಿದ್ವತ್ಪೂರ್ಣ ಜಗತ್ತಿನಲ್ಲಿ ಶಿಕ್ಷಣ ಮಂತ್ರಾಲಯದ ಸದ್ಯದ ಸ್ಥಾನಮಾನಕ್ಕೆ ಮುಖ್ಯವಾಗಿ ಕಾರ್ಯದರ್ಶಿಗಳ ಆಯ್ಕೆ ಕಾರಣವೆಂದು ಉಲ್ಲೇಖಿಸಲು ನಾವು ಬಯಸುತ್ತೇವೆ. ಈ ಕಾರ್ಯದರ್ಶಿಗಳನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಶಿಕ್ಷಣ ಸೇವೆಗಳಿಂದ ಹೊರಗೆ, ಪರಿಣತ ಶಿಕ್ಷಣತಜ್ಞರೊಳಗಿಂದ ಆಯ್ಕೆ ಮಾಡಲಾಗಿದೆ.

### ಆಯೋಗದ ಅಭಿಪ್ರಾಯ ಹೀಗಿತ್ತು:

ಪ್ರಸಿದ್ಧ ಶಿಕ್ಷಣತಜ್ಞರು, ವಿಶ್ವವಿದ್ಯಾನಿಲಯಗಳು ಮತ್ತು ಶಾಲೆಗಳ ಉತ್ಕೃಷ್ಟ ಶಿಕ್ಷಕರು ಮತ್ತು ರಾಜ್ಯ ಶಿಕ್ಷಣ ಇಲಾಖೆಗಳ ಮುಖ್ಯ ಅಧಿಕಾರಿಗಳು ಶಿಕ್ಷಣ ಮಂತ್ರಾಲಯದೊಂದಿಗೆ ಸೇರಿಕೊಳ್ಳಬೇಕು. ಇದರಿಂದ ಶಿಕ್ಷಣ ಇಲಾಖೆಗೆ ಅಗತ್ಯವಾದ ಮುಖಂಡತ್ವವನ್ನು

Digitised by Bharatavani, CIIL

ಒದಗಿಸುವುದು ಸಾಧ್ಯವಾಗುತ್ತದೆ ಮತ್ತು ಸಾರ್ವಜನಿಕರ ಹಾಗೂ ಬೋಧಕ ಸಮುದಾಯದ ವಿಶ್ವಾಸವನ್ನು ಗಳಿಸಬಹುದಾಗಿದೆ.

ವೃತ್ತಿಪರರಿಂದ ಶೈಕ್ಷಣಿಕ ಅಭಿವೃದ್ಧಿಯು ಯೋಜಿಸಲ್ಪಡಬೇಕಾದ ಅಗತ್ಯವಿದೆ ಎಂದು ಆಯೋಗವು ಒತ್ತಿ ಹೇಳಿದೆ. ಅಧಿಕಾರಿಗಳ ಶ್ರೇಣಿಯಲ್ಲಿ, ಅಂದರೆ ಸದ್ಯದ ಸಲಹಾ ಸೇವೆ (ಅಥವಾ ಸಂಘಟಿತವಾದ ನಂತರ ಐಇಎಸ್‌ನಿಂದ) ಮತ್ತು ಅಧಿಕಾರಿಗಳಿಂದ, ಸುಮಾರು ಅರ್ಧದಷ್ಟು ಹುದ್ದೆಗಳನ್ನು ಪದೋನ್ನತಿಯ ಮೂಲಕ ತುಂಬಿಕೊಳ್ಳಬೇಕೆಂದು ಅದು ಶಿಫಾರಸು ಮಾಡಿದೆ. ಈಗ ಶಿಕ್ಷಣ ಕಾರ್ಯದರ್ಶಿಯು ಸಾಮಾನ್ಯವಾಗಿ ಐಎಎಸ್ ಅಧಿಕಾರಿಯಾಗಿರುತ್ತಾರೆ. ಪಶ್ಚಿಮ ಬಂಗಾಲದಲ್ಲಿ ಮಾತ್ರ ಅವರು ಶಿಕ್ಷಣ ಸೇವೆಯಿಂದ ಬಂದವರಾಗಿರುತ್ತಾರೆ. ಶಿಕ್ಷಣ ಅಧಿಕಾರಿಯೂ ಭಾರತ ಸರಕಾರದ ಶೈಕ್ಷಣಿಕ ಸಲಹೆಗಾರರ ಹಾಗೆ ಆಡಳಿತಾಧಿಕಾರಿಯಾಗಿರದೆ ಶಿಕ್ಷಣತಜ್ಞರಾಗಿರಬೇಕೆಂಬ ಅಭಿಪ್ರಾಯವಿದೆ.

**ಆಯೋಗದ ದೃಷ್ಟಿಕೋನ ಹೀಗಿತ್ತು:**

ಈ ದಿಕ್ಕಿನಲ್ಲಿ ಭಾರತೀಯ ಶಿಕ್ಷಣ ಸೇವೆಯನ್ನು ಸೃಷ್ಟಿಸುವುದು ಸರಿಯಾದ ಹೆಜ್ಜೆಯಾಗಿದೆ. ಅದನ್ನು ಸೂಕ್ತಕ್ರಮದಲ್ಲಿ ಸಂಘಟಿಸಿದರೆ ಅಂತಹ ಸೇವೆಯು ಶಿಕ್ಷಣದ ಪ್ರಗತಿಗೆ ನೆರವಾಗಬಲ್ಲದು. ಐಇಎಸ್‌ನ ವಿಶೇಷ ಲಕ್ಷಣಗಳು ಐಎಎಸ್ ಅಥವಾ ಇತರ ಕೇಂದ್ರ ಸೇವೆಗಳಿಗಿಂತ ಅತ್ಯಂತ ಭಿನ್ನವಾಗಿ ಇರಬೇಕೆಂದು ಬಯಸಲಾಗಿದೆ. ಮೊದಲನೆಯದಾಗಿ, ಶಿಕ್ಷಣದಲ್ಲಿ ಆಡಳಿತವು ಬೋಧನೆ ಮತ್ತು ಸಂಶೋಧನೆಗೆ ಸೇವಾ ಸಂಸ್ಥೆಯಾಗಿ ಇರುವುದಲ್ಲದೆ ಅದರ ಒಡೆಯನಾಗಿ ಅಲ್ಲ. ಎರಡನೆಯದಾಗಿ, ಒಬ್ಬ ವ್ಯಕ್ತಿ ಉತ್ತಮ ಶಿಕ್ಷಕನಾಗದೆ ಉತ್ತಮ ಆಡಳಿತಗಾರನಾಗಲು ಸಾಧ್ಯವಿಲ್ಲ. ಮೂರನೆಯದಾಗಿ ಶೈಕ್ಷಣಿಕ ಆಡಳಿತಗಾರನು ಮತ್ತೆ ಬೋಧನೆಗೆ ಅಥವಾ ಸಂಶೋಧನೆಗೆ ಹಿಂತಿರುಗಿ ಬರುವ ಸಾಧ್ಯತೆಗಳು ಯಾವಾಗಲೂ ಇರಬೇಕು. ಅದೇ ರೀತಿ ಶಿಕ್ಷಕನು ಅಧಿಕಾರದ ಅವಧಿಯ ವರ್ಗಪತ್ರದ ಮೂಲಕ ಆಡಳಿತ ಭಾಗಕ್ಕೆ ಹೋಗುವಂತಿರಬೇಕು.

ಐಇಎಸ್‌ನ ಸಂಘಟನೆಯ ಕುರಿತಾದ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಆಯೋಗಕ್ಕೆ ಗಂಭೀರ ಆಕ್ಷೇಪಣೆಗಳು ಇದ್ದವು. ಅವುಗಳಲ್ಲಿ ಈ ಕೆಳಗಿನವುಗಳು ಸೇರಿವೆ:

ಈಗ ಪ್ರಸ್ತಾಪಿಸಿದಂತೆ, ಐಇಎಸ್‌ನ ನೇಮಕಾತಿಯಲ್ಲಿ ಮೂರನೆಯ ಎರಡರಷ್ಟನ್ನು ಬಾಹ್ಯ ಸ್ಪರ್ಧೆಯ ಮೂಲಕ ನೇರವಾಗಿ ನಡೆಸಬೇಕು. ಆಯ್ಕೆಯಾದವರು ಸಾಮಾನ್ಯವಾಗಿ ಬೋಧನೆ ಅಥವಾ ಸಂಶೋಧನೆಯಲ್ಲಿ ಯಾವುದೇ ಅನುಭವವನ್ನು ಹೊಂದಿರುವುದಿಲ್ಲ ಮತ್ತು ಈ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಲು ಯಾವುದೇ ಅವಕಾಶ ಪಡೆದಿರಲಾರರು. ಉಳಿದ ಮೂರನೆಯ ಒಂದು ಭಾಗವನ್ನು ರಾಜ್ಯ ಸೇವೆಗಳಿಂದ ಪದೋನ್ನತಿಯ ಮೂಲಕ ತುಂಬಲಾಗುತ್ತದೆ. ಇವರಲ್ಲಿ ಕೆಲವರು ಸರಕಾರಿ ಶಾಲೆಗಳ ಮತ್ತು ಮಹಾವಿದ್ಯಾಲಯಗಳ ಶಿಕ್ಷಕರಿರಬಹುದು. ಆದರೆ ಎಲ್ಲ ವಿಶ್ವವಿದ್ಯಾಲಯಗಳ ಬೋಧಕರು ಮತ್ತು ಖಾಸಗಿ ಶಾಲೆಗಳು ಮತ್ತು ಮಹಾವಿದ್ಯಾಲಯಗಳ ಬೋಧಕರ ದೊಡ್ಡಭಾಗವನ್ನು ಅದರ ಶ್ರೇಣಿಯೊಳಗೆ ಪ್ರವೇಶಿಸದಂತೆ ನಿಷೇಧಿಸಲಾಗಿದೆ. ಇದು ಬೋಧನಾ ವೃತ್ತಿಯ ಸಂಸ್ಥೆಯ ಮೇಲೆ ಧೃತಿಗೆಡಿಸುವ ಪರಿಣಾಮವನ್ನು ಬೀರಬಲ್ಲದು ಮತ್ತು ಅಂತಿಮವಾಗಿ ಇದು ಶಿಕ್ಷಣದ ಮೇಲೆಯೂ ಇದೇ ಪರಿಣಾಮವನ್ನು ಬೀರುವುದು.

**ಆಯೋಗದ ಶಿಫಾರಸುಗಳು ಹೀಗಿವೆ:**

1. ಕಿರಿಯ ವೇತನಶ್ರೇಣಿಯ ಹಂತದಲ್ಲಿ ಮೂರನೆಯ ಒಂದು ಭಾಗದಷ್ಟು ಹುದ್ದೆಗಳನ್ನು ಮಾತ್ರ ನೇರ ನೇಮಕಾತಿಯ ಮೂಲಕ ತುಂಬಿಕೊಳ್ಳಬೇಕು.
2. ಹಿರಿಯ ಮತ್ತು ಉನ್ನತ ಹಂತಗಳಲ್ಲಿ ಉಳಿದ ಮೂರನೆಯ ಎರಡರಷ್ಟು ಹುದ್ದೆಗಳನ್ನು ಭಾಗಶಃ ನೇರ ನೇಮಕಾತಿ ಮತ್ತು ಭಾಗಶಃ ಪದೋನ್ನತಿಯ ಮೂಲಕ ತುಂಬಿಕೊಳ್ಳಬೇಕು.
3. ಐಇಎಸ್‌ನ ಕೆಲವು ಹುದ್ದೆಗಳನ್ನು ನಿರ್ದಿಷ್ಟ ಅವಧಿಗೆ ಶಿಕ್ಷಕರ ಅಧಿಕಾರಾವಧಿಯ ನೇಮಕಾತಿಗಳ ಮೂಲಕ ತುಂಬಿಕೊಳ್ಳಬೇಕು. ಇದೇ ರೀತಿ ಬೋಧನೆ ಮತ್ತು ಸಂಶೋಧನೆಯ ಕೆಲವು ಹುದ್ದೆಗಳು(ಸ್ಥಾನಗಳು) ಐಇಎಸ್‌ನ ವ್ಯಕ್ತಿಗಳ ಅಧಿಕಾರಾವಧಿಯ ನೇಮಕಾತಿಗಳಲ್ಲಿ ಲಭ್ಯವಾಗುವಂತಿರಬೇಕು.

**ಐಇಎಸ್‌ನ್ನು ರಚಿಸುವಾಗ ಅಳವಡಿಸಿಕೊಳ್ಳಬೇಕಾದ ವಿಧಾನಗಳ ಕುರಿತು ಆಯೋಗದ ಅಭಿಪ್ರಾಯಗಳು ಹೀಗಿವೆ:**

ಐಇಎಸ್‌ನಲ್ಲಿ ಬೋಧನಾ ಭಾಗವನ್ನು ಸೃಷ್ಟಿಸುವ ಕುರಿತಾಗಿ ನಾವು ಎರಡನೆಯ ಅಂಶವಾಗಿ ವಿವರವಾದ ಪರಿಶೀಲನೆಯನ್ನು ನಡೆಸಿದ್ದೇವೆ. ಸದ್ಯದ ಪ್ರಸ್ತಾಪವು ಸರಕಾರಿ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಸ್ಥಾನಗಳನ್ನು ನುರಿತ ತಂಡಕ್ಕೆ(ಕಾಡರ್‌ಗೆ) ಸೇರಿಸುವುದನ್ನು ಕಾಣಿಸುತ್ತದೆ(ಇವುಗಳನ್ನು ಹೆಚ್ಚಾಗಿ ಆಡಳಿತಾತ್ಮಕವೆಂದು ಪರಿಗಣಿಸಲಾಗುವುದೇ ವಿನಹ ಬೋಧನಾ ಹುದ್ದೆಯಾಗಿ ಅಲ್ಲ). ಹಿರಿಯ ಮಾಧ್ಯಮಿಕ ಶಾಲೆಗಳ ಪ್ರಾಂಶುಪಾಲರ ಕೆಲವು ಸ್ಥಾನಗಳನ್ನು ಕ್ಯಾಡರ್‌ಗೆ ಸೇರಿಸಬೇಕೆನ್ನುವ ಸೂಚನೆಯೂ ಇದೆ. ಸರಕಾರಿ ಮಹಾವಿದ್ಯಾಲಯಗಳು ಅಥವಾ ಮಾಧ್ಯಮಿಕ(ಹಿರಿಯ) ಶಾಲೆಗಳ ಪ್ರಾಂಶುಪಾಲರ ಕೆಲವು ಸ್ಥಾನಗಳನ್ನು ಕ್ಯಾಡರ್‌ಗೆ ಸೇರಿಸಲು ಅಭ್ಯಂತರ ಇಲ್ಲ. ಹಾಗೆ ಮಾಡುವುದು ಉತ್ತಮವೇ. ಆದರೆ ಇಲ್ಲಿ ಬೋಧನಾ ವಿಭಾಗವನ್ನು (ಟೀಚಿಂಗ್ ವಿಂಗ್) ಸೃಷ್ಟಿಸುವ ಅಗತ್ಯವಿರುವುದಿಲ್ಲ. ಈ ಪ್ರಾಂಶುಪಾಲರ ಸ್ಥಾನಗಳನ್ನು ಅದಲುಬದಲು ಮಾಡಬಹುದಾಗಿದೆ. ಈಗ ಕೂಡ ಕೆಲವು ಹಂತಗಳ ಪರಿಶೀಲನಾ ಅಧಿಕಾರಿಗಳ ಅದಲು ಬದಲು ಮಾಡಲಾಗುತ್ತಿದೆ. ಒಂದು ವೇಳೆ ಈಗ ಇರುವ ಹಾಗೆಯೇ ಬೋಧನಾ ವಿಭಾಗವನ್ನು(ಟೀಚಿಂಗ್ ವಿಂಗ್) ಸೃಷ್ಟಿಸುವುದರಲ್ಲಿ ಅನೇಕ ಪರಿಹರಿಸಲಾಗದ ತೊಂದರೆಗಳು ಇವೆ. ಒಂದು ವೇಳೆ, ಅದನ್ನು ಸೃಷ್ಟಿಸಲೇಬೇಕಾದರೆ ಉನ್ನತ ಶಿಕ್ಷಣದಲ್ಲಿ

Digitised by Bharatavani, CIIL

ಬೋಧನಾ ಹುದ್ದೆಗಳ ದೊಡ್ಡ ಭಾಗವನ್ನು ಸೇರಿಸಬೇಕಾಗುತ್ತದೆ. ಇದು ಸಾಧ್ಯವಾಗದು. ಏಕೆಂದರೆ ವಿಶ್ವವಿದ್ಯಾಲಯಗಳ ಎಲ್ಲ ಸ್ಥಾನಗಳನ್ನು(ಹುದ್ದೆಗಳು) ಮತ್ತು ಸರಕಾರಿ ಮಹಾವಿದ್ಯಾಲಯಗಳ ದೊಡ್ಡ ಭಾಗವನ್ನು (ಖಾಸಗಿ ಅನುದಾನಿತ ಮಹಾವಿದ್ಯಾಲಯಗಳ ಸ್ಥಾನಗಳ ಕುರಿತು ಏನೂ ಹೇಳಬೇಕಾಗಿಲ್ಲ) ಐಇಎಸ್‌ನಿಂದ ಹೊರಕ್ಕೆ ಇಡಬೇಕಾಗುತ್ತದೆ. ಸರಕಾರಿ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಕೆಲವು ಸ್ಥಾನಗಳನ್ನು ಕ್ಯಾಡರ್‌ಗೆ ಸೇರಿಸುವುದರ ಮೂಲಕ ಬೋಧನಾ ವಿಭಾಗ(ವಿಂಗ್)ವನ್ನು ಸೃಷ್ಟಿಸುವ ಪ್ರಯತ್ನವು ಉತ್ತಮ ಪರಿಣಾಮ ಬೀರುವುದಕ್ಕಿಂತ ಹೆಚ್ಚಾಗಿ ಹಾನಿಯನ್ನೇ ಉಂಟುಮಾಡಬಲ್ಲದು. ಇದು ಒಟ್ಟಾರೆಯಾಗಿ ಬೋಧನಾ ಸಮುದಾಯದ ಸ್ಥೈರ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು.

**ಈ ಸೇವೆಯಲ್ಲಿ ಇರಬೇಕಾದುದು:**

- ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಜಂಟಿ ನಿರ್ದೇಶಕರು, ಸಹ ನಿರ್ದೇಶಕರು ಇತ್ಯಾದಿ ಎಲ್ಲ ಹುದ್ದೆಗಳು, ಜಿಲ್ಲಾ ಶಿಕ್ಷಣ ಅಧಿಕಾರಿಗಳು(ಮತ್ತು ಸಮಾನ ಹುದ್ದೆಗಳು), ರಾಜ್ಯ ಶಿಕ್ಷಣ ವಿಭಾಗಗಳ(ಸರ್ಕಾರಿ ಮಹಾವಿದ್ಯಾಲಯಗಳ ಪ್ರಾಂಶುಪಾಲರು ಮತ್ತು ಹಿರಿಯ ಮಾಧ್ಯಮಿಕ ಶಾಲೆಗಳ ಮುಖ್ಯೋಪಾಧ್ಯಾಯರ ಕೆಲವು ಸ್ಥಾನಗಳು);
- ಶಿಕ್ಷಣ ಮಂತ್ರಾಲಯದ ಎಲ್ಲ ಪತ್ರಾಂಕಿತ ಸಲಹಾ ಹುದ್ದೆಗಳು;
- ಎನ್‌ಸಿಇಆರ್‌ಟಿ ಯಲ್ಲಿನ ಸೂಕ್ತವಾದ ಹುದ್ದೆಗಳು;
- ಭಾರತ ಸರಕಾರದ ಇತರ ಮಂತ್ರಾಲಯಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನೋಡಿಕೊಳ್ಳುವ

  ಎಲ್ಲ ಪತ್ರಾಂಕಿತ ಹುದ್ದೆಗಳು;
- ಕೇಂದ್ರಾಡಳಿತ ಪ್ರದೇಶಗಳ ಶಿಕ್ಷಣ ವಿಭಾಗಗಳ ಸೂಕ್ತ ಪತ್ರಾಂಕಿತ ಹುದ್ದೆಗಳು; ಮತ್ತು
- ಕೇಂದ್ರೀಯ ಶಾಲೆಗಳ ಕಾರ್ಯಯೋಜನೆಯ ಅಡಿಯಲ್ಲಿನ ಹಿರಿಯ ಮಾಧ್ಯಮಿಕ ಶಾಲೆಗಳ ಪ್ರಾಂಶುಪಾಲರ ಸೂಕ್ತ ಹುದ್ದೆಗಳು.

ಶಿಕ್ಷಣ ಆಯೋಗದ ಶಿಫಾರಸುಗಳಿಗೆ ಹೊರತಾಗಿಯೂ ಸೇವೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಯಾವ ನಿಶ್ಚಿತ ಪ್ರಯತ್ನಗಳೂ ನಡೆಯಲಿಲ್ಲ. ಇದಕ್ಕೆ ಮುಖ್ಯ ಕಾರಣ ಪ್ರಸ್ತಾವನೆಗೆ ಕೆಲವು ರಾಜ್ಯಗಳಿಂದ ವ್ಯಕ್ತಗೊಂಡ ವಿರೋಧ.

### ರಾಷ್ಟ್ರೀಯ ಶಿಕ್ಷಣ ನೀತಿ, 1986

ಭಾರತೀಯ ಶಿಕ್ಷಣ ಸೇವೆಯನ್ನು ರಚಿಸುವ ಅಗತ್ಯವನ್ನು ರಾಷ್ಟ್ರೀಯ ಶಿಕ್ಷಣ ನೀತಿ (1986) ಮತ್ತು 1992ರ ಅದರ ತಿದ್ದುಪಡಿಯ ಆವೃತ್ತಿಯಲ್ಲಿ 1992ರ ಕ್ರಿಯಾ ಕಾರ್ಯಕ್ರಮದೊಂದಿಗೆ ಪುನರುಚ್ಚರಿಸಲಾಯಿತು. ದೇಶದಾದ್ಯಂತ ಶೈಕ್ಷಣಿಕ ಆಡಳಿತದಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಭಾರತೀಯ ಶಿಕ್ಷಣ ಸೇವೆಯನ್ನು ಸೃಷ್ಟಿಸುವ ಅಗತ್ಯವಿದೆ. ಇದರಲ್ಲಿ ತಿಳಿಸಿರುವುದೇನೆಂದರೆ:

ಶಿಕ್ಷಣದಲ್ಲಿನ ಸೂಕ್ತ ವಿಧದ ಆಡಳಿತ ರಚನೆಯು ಭಾರತೀಯ ಶಿಕ್ಷಣ ಸೇವೆಯ ಸ್ಥಾಪನೆಯನ್ನು ಅಖಿಲ ಭಾರತ ಸೇವೆಯನ್ನಾಗಿಸುವುದು ಆವಶ್ಯಕವೆನಿಸುವುದು. ಇದು ಈ ಮುಖ್ಯ ಕ್ಷೇತ್ರಕ್ಕೆ ರಾಷ್ಟ್ರೀಯ ದೃಷ್ಟಿಕೋನವನ್ನು ನೀಡುವುದು. ಮೂಲಭೂತ ನಿಯಮಗಳು, ಕಾರ್ಯಗಳು ಮತ್ತು ಸೇವೆಯ ನೇಮಕಾತಿ ಕಾರ್ಯವಿಧಾನಗಳನ್ನು ರಾಜ್ಯ ಸರಕಾರಗಳ ಜೊತೆಗಿನ ಸಮಾಲೋಚನೆಯಲ್ಲಿ ನಿರ್ಧರಿಸಲಾಗುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣದ ಆಡಳಿತದ ಮೇಲೆ ತನ್ನ ಗಮನವನ್ನು ಸ್ಪಷ್ಟವಾಗಿ ಕೇಂದ್ರೀಕೃತಗೊಳಿಸಿದೆ. ಇದು ಶ್ರದ್ಧಾಪೂರ್ಣವಾದ ಕಾರ್ಯನೀತಿ ಮಾತ್ರವೇ ಅಲ್ಲ, ಇದನ್ನು ಅನುಸರಿಸಿ ಉತ್ತಮ ರೀತಿಯಿಂದ ರೂಪಿಸಲಾದ ಕ್ರಿಯಾಕಾರ್ಯಕ್ರಮವೂ ಇದಾಗಿದೆ. ಇದು ತಿಳಿಸುವುದೇನೆಂದರೆ :

ಭಾರತೀಯ ಶಿಕ್ಷಣ ಸೇವೆಯ ಸ್ಥಾಪನೆಯು ಶಿಕ್ಷಣದ ಆಡಳಿತದ ರಾಷ್ಟ್ರೀಯ ದೃಷ್ಟಿಕೋನವನ್ನು ಪ್ರೋತ್ಸಾಹಿಸುವ ದಿಕ್ಕಿನಲ್ಲಿ ಒಂದು ಅತ್ಯಗತ್ಯದ ಹೆಜ್ಜೆಯೂ ಆಗಿರುತ್ತದೆ. ಈ ಸೇವೆಯ ಮೂಲ ನಿಯಮಗಳು, ಕಾರ್ಯಗಳು ಮತ್ತು ಈ ಸೇವೆಗೆ ನೇಮಕಾತಿಗಾಗಿ ಕಾರ್ಯವಿಧಾನಗಳ ಕುರಿತು ರಾಜ್ಯಗಳೊಂದಿಗೆ ವಿವರವಾದ ಸಮಾಲೋಚನೆಯನ್ನು ನಡೆಸಬೇಕಾಗುವುದು. ಇದರಿಂದ ಅವರು ಈ ರಚನೆಯ ಅಗತ್ಯ ಮತ್ತು ಲಾಭವನ್ನು ಅರಿತುಕೊಂಡು ಅದರಲ್ಲಿಯೂ ವಿಶೇಷವಾಗಿ ಪ್ರತಿಭಾವಂತ ಸಿಬ್ಬಂದಿಗಳನ್ನು ಆರ್ಕರ್ಷಿಸುವುದಕ್ಕೆ ಮತ್ತು ಅವರಿಗೆ ಅವರ ಜವಾಬ್ದಾರಿಗಳಿಗೆ ಅನುಗುಣವಾದ ಸ್ಥಾನಮಾನವನ್ನು ನೀಡುವುದನ್ನು ಮೆಚ್ಚಿಕೊಳ್ಳುತ್ತಾರೆ. ಉನ್ನತಿಗೆ ಇದು ಅನುಗುಣವಾಗಿರುತ್ತದೆ. ಇದಕ್ಕಾಗಿ ರಾಜ್ಯ ಸರಕಾರಗಳೊಂದಿಗೆ ಸಮಾಲೋಚನೆ ನಡೆಸಿ ವಿವರವಾದ ಪ್ರಸ್ತಾಪವನ್ನು ಸಿದ್ಧಪಡಿಸಬೇಕಾಗುತ್ತದೆ. ಈ ಪ್ರಸ್ತಾಪದಲ್ಲಿ ಇರಬೇಕಾದುದು ಹುದ್ದೆಗೆ ಪರ್ಯಾಯವಾದ ವೃತ್ತಿ ಮಾರ್ಗಗಳು, ಶಿಕ್ಷಣದಲ್ಲಿ ತೊಡಗಿಸಿಕೊಂಡಿರುವ ಈಗಿನ ಮಾನವಶಕ್ತಿಯ ಆಯ್ಕೆ ಮತ್ತು ಸೇರ್ಪಡೆಯ ಕಾರ್ಯವಿಧಾನಗಳು, ರಾಜ್ಯಗಳು ಮತ್ತು ಕೇಂದ್ರ ಸರಕಾರಗಳ ನಡುವೆ ಚಲನೆಗೆ ಅಗತ್ಯವಿರುವ ವ್ಯವಸ್ಥೆಗಳು, ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಾರ್ಶ್ವ ಚಲನೆಗಳಿಗೆ ಮತ್ತು ಪರಸ್ಪರ ಚಲನೆಗೆ ಅವಕಾಶ.

### ಸದ್ಯದ ಪರಿಸ್ಥಿತಿ

ರಾಷ್ಟ್ರೀಯ ಶಿಕ್ಷಣ ನೀತಿಯ ಕಾರ್ಯನೀತಿಯ ನಿರ್ದೇಶನ ಮತ್ತು ಕ್ರಿಯಾ ಕಾರ್ಯಕ್ರಮಗಳಿಗೆ ನೀಡಲಾದ ವಿವರಣಾತ್ಮಕ ಮಾರ್ಗದರ್ಶಿ ಸೂತ್ರಗಳಿಗೆ ಹೊರತಾಗಿಯೂ ಭಾರತೀಯ ಶಿಕ್ಷಣ ಸೇವೆಯನ್ನು ರಚಿಸಲಾಗಿಲ್ಲ.

ಭಾರತೀಯ ಶಿಕ್ಷಣ ಸೇವೆಯನ್ನು ಸೃಷ್ಟಿಸಬೇಕಾದ ಅಗತ್ಯವನ್ನು ಅನೇಕ ಆಧಾರಗಳ ಮೂಲಕ ಸಮರ್ಥಿಸಬಹುದಾಗಿದೆ. ಮೊದಲನೆಯದಾಗಿ, ಶಿಕ್ಷಣದ ಆಯೋಜನೆ ಮತ್ತು ಅಭಿವೃದ್ಧಿಗಾಗಿ ಸಾಕಷ್ಟು ಪ್ರಮಾಣದ ವೃತ್ತಿಪರ ಕಾರ್ಯಕ್ಷಮತೆಯ ಅಗತ್ಯವಿದೆ

Digitised by Bharatavani, CIIL

ಎಂಬುದರ ಅರಿವು ಹೆಚ್ಚುತ್ತಿದೆ. ಎರಡನೆಯದಾಗಿ, ಶೈಕ್ಷಣಿಕ ಕಾರ್ಯನೀತಿಗಳ ಅನುಷ್ಠಾನಕ್ಕೆ ಒತ್ತಾಸೆ ದೊರೆಯಬೇಕಾದರೆ ಅದನ್ನು ಯಾರು ಕಾರ್ಯಾಗತ ಮಾಡುವವರೆಂಬ ನಿರೀಕ್ಷೆ ಇದೆಯೋ ಅವರಲ್ಲಿ ಕೆಲವು ಆಸ್ಥೆ ಇರಬೇಕಾಗುತ್ತದೆ. ಸಾಮಾನ್ಯವಾಗಿ ಅಖಿಲ ಭಾರತ ಆಡಳಿತಾತ್ಮಕ ಸೇವೆಗಳಿಂದ ಕರೆಸಲಾಗುವ ಸಿಬ್ಬಂದಿಗಳ ಅಧಿಕಾರದ ಅಲ್ಪಾವಧಿಯು ಇದಕ್ಕೆ ಒತ್ತಾಸೆ ನೀಡುವುದಿಲ್ಲ. ಇನ್ನು ನಿರ್ಧಾರಗಳಿಗೆ ಕೈಗೊಳ್ಳಲಾಗುವ ಅಲ್ಪಾವಧಿಯ ಪದನ್ನೋತಿಯ ಲೆಕ್ಕಾಚಾರಗಳು ಕೂಡ ಒತ್ತಾಸೆ ನೀಡುವುದಿಲ್ಲ. ಅಂತಿಮವಾಗಿ, ಶೈಕ್ಷಣಿಕ ಅಭಿವೃದ್ಧಿಗಳಿಗೆ ಅಖಿಲಭಾರತ ದೃಷ್ಟಿಕೋನ ಇರಬೇಕಾಗುತ್ತದೆ. ಏಕೆಂದರೆ, ವೈವಿಧ್ಯತೆಗಳ ಅರಿವಿನೊಂದಿಗೆ ಅದು ರಾಷ್ಟ್ರೀಯ ಅಭಿವೃದ್ಧಿ ಮತ್ತು ರಾಷ್ಟ್ರೀಯ ಐಕ್ಯತೆಯ ಸಮಗ್ರ ಆಸಕ್ತಿಯಿಂದ ಮಾರ್ಗದರ್ಶನವನ್ನು ಪಡೆಯುವುದು. ಅಖಿಲ ಭಾರತ ಆಡಳಿತಾತ್ಮಕ ಸೇವೆಗೆ ಸೇರಿದ ಸಿಬ್ಬಂದಿಗಳು ಶೈಕ್ಷಣಿಕ ಬೆಳವಣಿಗೆಯ ರಾಜ್ಯ ವಿಚಾರಗಳ ಕಡೆಗೆ ವಾಲುವ ಸಂಭವನೀಯತೆ ಕಡಿಮೆ. ಇವು ರಾಷ್ಟ್ರೀಯ ಅಭಿವೃದ್ಧಿಗೆ ಶಿಕ್ಷಣದ ಪಾತ್ರಕ್ಕೆ ವ್ಯತಿರಿಕ್ತವಾಗಿದೆ.

1976ರ ಸಂವಿಧಾನದ ತಿದ್ದುಪಡಿಯು ಶಿಕ್ಷಣವನ್ನು ಸಹವರ್ತಿ ವಿಷಯವಾಗಿಸಿದೆ. ಈ ಕ್ರಮದಿಂದಾಗಿ ಭಾರತ ಸರಕಾರಕ್ಕೆ ಈ ಉದ್ದೇಶಕ್ಕಾಗಿ ಸೂಕ್ತ ರೀತಿಯ ಕಾಯಿದೆಯನ್ನು ರಚಿಸುವುದಕ್ಕೆ ಅವಕಾಶವಾಗಿದೆ. ಹಾಗಿದ್ದರೂ ಕಾರ್ಯನೀತಿಯ ಈಗಿನ ಸ್ವರೂಪ ಮತ್ತು ಗುಣಧರ್ಮವನ್ನು ಗಮನಿಸಿದಾಗ ಭಾರತೀಯ ಶಿಕ್ಷಣ ಸೇವೆಯನ್ನು ಬೆಂಬಲಿಸುವುದಕ್ಕಾಗಿ ರಾಜಕೀಯ ಒಮ್ಮತದ ಅಗತ್ಯವಿರುವುದು ಕಂಡುಬರುತ್ತದೆ.

**ಮೂಲ: ಜಿ. ಚೌರೇಶಿಯಾ**
**ಅನು: ಡಾ. ಗೀತಾ ಶೆಣೈ**

## ಭೌತಶಾಸ್ತ್ರ ಬೋಧನಾ ವಿಧಾನಗಳು

### ಭೌತಶಾಸ್ತ್ರದ ಅರ್ಥ, ಸ್ವರೂಪ ಮತ್ತು ವ್ಯಾಪ್ತಿ:

ವಿಜ್ಞಾನ ಎಂಬುದನ್ನು ಸ್ಪಷ್ಟವಾಗಿ, ನಿರ್ದಿಷ್ಟವಾಗಿ ವ್ಯಾಖ್ಯಾನಿಸುವುದು ಕಷ್ಟ, ಆದರೆ ಸಾಮಾನ್ಯವಾಗಿ ವಿಜ್ಞಾನವನ್ನು ವ್ಯವಸ್ಥಿತ ಜ್ಞಾನ, "ಕ್ರಮಬದ್ದವಾದ ಜ್ಞಾನ", "ಕ್ರಮಬದ್ಧವಾದ ಸಾಮಾನ್ಯ ಅಥವಾ ಬೌದ್ಧಿಕ ಜ್ಞಾನ ಹಾಗೂ ಜ್ಞಾನವನ್ನು ಕಲೆ ಹಾಕುವುದು" ಎಂಬುದಾಗಿದೆ. ಇದಲ್ಲದೆ ಸಾಮಾನ್ಯವಾದ ಅರ್ಥದಲ್ಲಿ "ಸತ್ಯ ಸಂಗತಿಗಳ ಸಂಗ್ರಹವೇ ವಿಜ್ಞಾನವಾಗಿದೆ".

"ಒಂದು ವಸ್ತು ಅಥವಾ ಘಟನೆಯನ್ನು ಮತ್ತು ಅವುಗಳಿಗೆ ಸಂಬಂಧಿಸಿದ ನಿಯಮಗಳನ್ನು ಪ್ರಯೋಗಗಳಿಂದ ಪ್ರಮಾಣೀಕರಿಸಿ ಸತ್ಯವನ್ನು ಕಂಡುಕೊಳ್ಳುವ ಜ್ಞಾನವೇ ಭೌತಶಾಸ್ತ್ರ".

ಭೌತಶಾಸ್ತ್ರವೆಂದರೆ ಶಕ್ತಿ, ದ್ರವ್ಯ, ಬೆಳಕು, ವಿದ್ಯುತ್, ಭೌತಿಕ ರಾಶಿಗಳು ಹಾಗೂ ಮೂಲವಸ್ತುಗಳ ಕುರಿತು ಅವುಗಳ ರಚನೆ, ಗುಣಧರ್ಮ ವಿವಿಧ ಸನ್ನಿವೇಶದಲ್ಲಿ ಅವುಗಳು ತೋರ್ಪಡಿಸುವ ಕ್ರಿಯೆ ಈ ಮೊದಲಾದ ವಿಷಯಗಳನ್ನು ಅಭ್ಯಸಿಸುವ ವಿಜ್ಞಾನವೇ ಭೌತಶಾಸ್ತ್ರ.

**ಭೌತಶಾಸ್ತ್ರ ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿದೆ.**

- ಪ್ರಯೋಗಾತ್ಮಕವಾದದ್ದು.
- ವೈಚಾರಿಕವಾದದ್ದು.
- ನಿಷ್ಪಕ್ಷಪಾತವಾದದ್ದು
- ವಸ್ತುನಿಷ್ಠವಾದದ್ದು.
- ಅಳೆಯಲ್ಪಡುವಂತದ್ದು.
- ಭೌತಿಕ ಜಗತ್ತಿನ ವಿವರಣಾತ್ಮಕವಾದುದ್ದು.
- ವಿಜ್ಞಾನಿಗಳ ಸಂಶೋಧನೆ ಹಾಗೂ ತೀರ್ಮಾನಗಳ ಆಧಾರಿತವಾದುದ್ದು.
- ಕ್ರಮಬದ್ಧವಾದದ್ದು.
- ತಾರ್ಕಿಕವಾದದ್ದು.
- ಧನಾತ್ಮಕ ಹಾಗೂ ನಿಖರವಾದದ್ದು.
- ಮಾದರಿ, ತತ್ವ ಹಾಗೂ ಸಿದ್ಧಾಂತಗಳ ಸಂಗ್ರಹದಿಂದ ಕೂಡಿದುದು.

**ಭೌತಶಾಸ್ತ್ರದ ವ್ಯಾಪ್ತಿಯನ್ನು ಹೀಗೆ ಚಿತ್ರಿಸಬಹುದು.**

Digitised by Bharatavani, CIIL

**ಭೌತಶಾಸ್ತ್ರ ಬೋಧನೆಯ ಉದ್ದೇಶಗಳು:**

ನಮ್ಮ ಭಾರತೀಯ ಪ್ರೌಢಶಾಲೆಗಳಲ್ಲಿ ಭೌತಶಾಸ್ತ್ರದ ಬೋಧನೆಯ ಉದ್ದೇಶಗಳನ್ನು ಈ ರೀತಿಯಾಗಿ ವಿಭಾಗಿಸಿದ್ದಾರೆ.

1) ಜ್ಞಾನ 2) ತಿಳುವಳಿಕೆ, 3) ಅನ್ವಯ, 4) ಕೌಶಲ, 5) ಮನೋಭಾವನೆ, 6) ಮೆಚ್ಚುಗೆ/ಪ್ರಶಂಸೆ 7) ಆಸಕ್ತಿ ಹಾಗೂ 8) ಸಾಮರ್ಥ್ಯ

1) **ಜ್ಞಾನ:** ಇದು ಭೌತಶಾಸ್ತ್ರ ಬೋಧನೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದ್ದು, ಆ ವಿಷಯ ಕುರಿತಾದ ನೈಜ ಮಾಹಿತಿಯನ್ನು ಗಳಿಸುವುದಾಗಿದೆ. ಸಾಮಾನ್ಯವಾಗಿ ಇಲ್ಲಿ ವಿದ್ಯಾರ್ಥಿಗಳು ಭೌತಶಾಸ್ತ್ರದ ಪದಗಳ, ತತ್ವಗಳ, ನಿಯಮಗಳ, ವ್ಯಾಖ್ಯೆಗಳ ಹಾಗೂ ಸೂತ್ರಗಳ ಜ್ಞಾನ ಪಡೆದುಕೊಳ್ಳುವರು.

2) **ತಿಳುವಳಿಕೆ/ಅರಿವು:** ಈ ಹಂತದಲ್ಲಿ ಯಾವುದೇ ಒಂದು ವಿಷಯವನ್ನು ಸೂಕ್ತವಾಗಿ ಅರಿತು ಕೊಂಡಾಗ ಜ್ಞಾನವು ತಿಳುವಳಿಕೆಯಾಗಿ ಮಾರ್ಪಾಡಾಗುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಭೌತಶಾಸ್ತ್ರದ ಹಲವಾರು ಪದಗಳ, ಮೂಲನಿಯಮಗಳ, ಪರಿಕಲ್ಪನೆಗಳ, ಸಂಗತಿಗಳ, ಸೂತ್ರಗಳ ಹಾಗೂ ತತ್ವಗಳ ಕುರಿತು ತಿಳುವಳಿಕೆ ಹೊಂದುವರು.

3) **ಅನ್ವಯ:** ಈ ಹಂತದಲ್ಲಿ ವಿದ್ಯಾರ್ಥಿಗಳು ತಾವು ಗಳಿಸಿದ ಭೌತಶಾಸ್ತ್ರದ ಜ್ಞಾನ ಹಾಗೂ ತಿಳುವಳಿಕೆಯನ್ನು ತಮ್ಮ ವ್ಯಾಪ್ತಿಯಲ್ಲಿರುವ ವಿವಿಧ ಹೊಸ ಸನ್ನಿವೇಶಗಳಿಗೆ ಅನ್ವಯಿಸಿಕೊಳ್ಳುವರು.

ವಿದ್ಯಾರ್ಥಿಗಳು ಕಲಿತ ಭೌತಶಾಸ್ತ್ರದ ಜ್ಞಾನವನ್ನು ವಿವಿಧ ರೀತಿಗಳಲ್ಲಿ ಅನ್ವಯ ಮಾಡುತ್ತಾರೆ. ಪ್ರಯೋಗ ಮಾಡುವುದು, ಓರೆ ಹಚ್ಚುವುದು, ವೈಜ್ಞಾನಿಕ ಘಟನೆಗಳನ್ನು ವಿಶ್ಲೇಷಿಸುವುದು, ನಿತ್ಯ ಜೀವನದಲ್ಲಿ ಬರುವ ಭೌತಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಬಿಡಿಸುವುದು, ಘಟನೆಗಳ ನಡುವೆ ಸಂಬಂಧ ಕಲ್ಪಿಸುವುದು ಅನ್ವಯಿಕತೆಯಲ್ಲಿ ಸೇರಿವೆ.

4) **ಕೌಶಲಗಳು:** ಭೌತಶಾಸ್ತ್ರ ವಿಜ್ಞಾನದ ಪರಿಣಾಮಕಾರಿ ಬೋಧನೆಯ ಮೂಲಕ ಮಕ್ಕಳಲ್ಲಿ ಹಲವಾರು ಕೌಶಲಗಳನ್ನು ಬೆಳೆಸಬಹುದಾಗಿದೆ. ಪ್ರಯೋಗ ಮಾಡುವುದು, ದೂರದರ್ಶಕ, ಸೂಕ್ಷ್ಮ ದೂರದರ್ಶಕ ಮುಂತಾದ ಸಾಧನಗಳನ್ನು ಉಪಯೋಗಿಸುವುದು, ವೈಜ್ಞಾನಿಕ ದಾಖಲೆಗಳನ್ನು ಓದುವುದು, ಲೆಕ್ಕಾಚಾರ ಮಾಡುವುದು ಮುಂತಾದ ಕೌಶಲಗಳನ್ನು ಕಲಿತುಕೊಳ್ಳುತ್ತಾರೆ.

5) **ಮನೋಭಾವಗಳು:** ಭೌತಶಾಸ್ತ್ರದ ಬೋಧನೆಯ ಮೂಲಕ ವಿದ್ಯಾರ್ಥಿಗಳು ಕುತೂಹಲಿಗಳಾಗುವರು, ಮುಕ್ತ ಮನಸ್ಕರಾಗಿ ಸೂಕ್ತ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವರು, ಮೂಢನಂಬಿಕೆಗಳಿಂದ ದೂರವಾಗುವರು.

6) **ಮೆಚ್ಚುಗೆ/ಪ್ರಶಂಸೆ:** ವಿದ್ಯಾರ್ಥಿಗಳು ಭೌತಶಾಸ್ತ್ರದ ಕೊಡುಗೆಗಳನ್ನು ತಿಳಿದು ಮೆಚ್ಚುಗೆ/ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾರೆ.

7) **ಆಸಕ್ತಿ:** ವಿದ್ಯಾರ್ಥಿಗಳು ಭೌತವಿಜ್ಞಾನದ ಬಗ್ಗೆ ಆಸಕ್ತಿಯನ್ನು ಹೊಂದುವುದಾಗಿದೆ.

8) **ಸಾಮರ್ಥ್ಯ:** ಭೌತಶಾಸ್ತ್ರದ ಸೂಕ್ತ ಬೋಧನೆಯಿಂದ ಮಕ್ಕಳಲ್ಲಿ ವೈಜ್ಞಾನಿಕ ವಿಧಾನ ಬಳಸುವ, ಸಂಗ್ರಹ ಮಾಡುವ, ವರದಿ ಮಾಡುವ ಸಾಮರ್ಥ್ಯ ಮುಂತಾಸ ಸಾಮರ್ಥ್ಯಗಳು ಬೆಳೆದು ಬರುತ್ತವೆ.

**ಭೌತಶಾಸ್ತ್ರ ಬೋಧನಾ ವಿಧಾನಗಳು, ತಂತ್ರಗಳು ಮತ್ತು ಮಾದರಿಗಳು:**

ವಿದ್ಯಾರ್ಥಿಗಳಿಗೆ ವಿಷಯವನ್ನು ಪರಿಣಾಮಕಾರಿಯಾಗಿ ಕಲಿಸುವ ಸಂದರ್ಭದಲ್ಲಿ ಶಿಕ್ಷಕನು ಹಲವಾರು ವಿಧಾನಗಳನ್ನು ಬಳಸಿಕೊಳ್ಳುತ್ತಾನೆ. ಅವುಗಳು ಯಾವುವೆಂದರೆ, ಶಿಕ್ಷಕ ಪ್ರಧಾನ, ಭಾಗಿತ್ವ ರೀತಿ ಮತ್ತು ವಿದ್ಯಾರ್ಥಿ ಕೇಂದ್ರಿತ. ಇವುಗಳಲ್ಲಿ ಸೂಕ್ತವಾದುದ್ದನ್ನು ಆಯ್ಕೆ ಮಾಡಿಕೊಳ್ಳುವಾಗ ಕಲಿಯುವವನ ಅಗತ್ಯತೆಗಳು, ಪಠ್ಯ ವಿಷಯದ ಸ್ವರೂಪ ಮತ್ತು ಬೋಧನ ಉದ್ದೇಶಗಳನ್ನು ಗಮನದಲ್ಲಿಟ್ಟು ಕೊಂಡಿರಬೇಕು.

**ಶಿಕ್ಷಕ ಪ್ರಧಾನ:** ಕೆಲವು ವಿಧಾನಗಳು ಶಿಕ್ಷಕ ಪ್ರಧಾನವಾಗಿದ್ದು, ವಿದ್ಯಾರ್ಥಿಗಳ ಅಗತ್ಯತೆಗಳ ಬಗ್ಗೆ ಗಮನ ಹೆಚ್ಚಾಗಿರುವುದಿಲ್ಲ. ಶಿಕ್ಷಕ ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುತ್ತಾನೆ. ಉದಾಹರಣೆಗಳು: ಉಪನ್ಯಾಸ ವಿಧಾನ, ಪ್ರಾತ್ಯಕ್ಷಿಕೆ ವಿಧಾನ ಮತ್ತು ಮೇಲ್ವಿಚಾರಿತ ವಿಧಾನ

**ಭಾಗಿತ್ವ ರೀತಿ:** ಈ ವಿಧಾನದಲ್ಲಿ ಶಿಕ್ಷಕನು ಕಲಿತ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುತ್ತಾನೆ. ಅಂದರೆ ಇದು ಒಂದು ಸಹಕಾರ ಪ್ರಯತ್ನವಾಗಿರುತ್ತದೆ. ಶಿಕ್ಷಕನು ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ತಕ್ಕಂತೆ ಅನುಭವಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯೂ ನೀಡುತ್ತಾನೆ. ಉದಾಹರಣೆಗಳು: ಪ್ರಯೋಗ ಶಾಲಾ ವಿಧಾನ, ಯೋಜನಾ ವಿಧಾನ, ಕಮ್ಮಟಗಳು ಮತ್ತು ಕಾರ್ಯಾಗಾರಗಳು.

**ವಿದ್ಯಾರ್ಥಿ ಕೇಂದ್ರಿತ:** ವಿದ್ಯಾರ್ಥಿಯು ಇಂದು ಶಿಕ್ಷಣ ಪ್ರಕ್ರಿಯೆಯ ಕೇಂದ್ರಬಿಂದು ಆಗಿರುತ್ತಾನೆ. ಅಂದರೆ ಈ ವಿಧಾನವು ವಿದ್ಯಾರ್ಥಿಯ ಅಗತ್ಯತೆ, ಅಭಿರುಚಿ, ದಕ್ಷತೆ ಮತ್ತು ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಶಿಕ್ಷಣದಲ್ಲಿ ವಿದ್ಯಾರ್ಥಿಗೆ ಮೊದಲನೆ ಆದ್ಯತೆ ನೀಡಿ ಅನಂತರ ವಿಷಯ ವಸ್ತು, ಬೋಧನಾ ಮಾದರಿ, ಶಿಕ್ಷಕರು ಮತ್ತು ಆಡಳಿತ ವ್ಯವಸ್ಥೆಗೆ ನಂತರದ ಸ್ಥಾನ ನೀಡಲಾಗುತ್ತದೆ. ಉದಾಹರಣೆಗಳು: ಚರ್ಚಾ ವಿಧಾನ, ಅನ್ವೇಷಣಾ ಕಲಿಕೆ ಮತ್ತು ವೈಯಕ್ತಿಕ ಕಲಿಕೆ.

Digitised by Bharatavani, CIIL

**ಬೋಧನಾ ತಂತ್ರಗಳು:** ಕಲಿಕೆಯ ಉದ್ದೇಶಗಳನ್ನು ಸಾಧಿಸುವುದರ ಮೂಲಕ ಕಲಿಯುವವನ ನಡವಳಿಕೆಯಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ತರುವುದೇ ಶಿಕ್ಷಣದ ಮುಖ್ಯ ಕಾರ್ಯವಾಗಿದೆ. ಈಸ್ಟೋನ್ ಮತ್ತು ಎಸ್.ಮಾರೀಸ್ ರವರ ಪ್ರಕಾರ ಬೋಧನಾ ತಂತ್ರವು ಸಾಮಾನ್ಯೀಕರಿಸಿದ ಮಾಹಿತಿ ಯೋಜನೆಯಾಗಿದೆ. ಇದರಲ್ಲಿ ರಚನಾ ಕ್ರಮ, ಮಾಹಿತಿಯ ಗುರಿ ನಿಗದಿಪಡಿಸುವಲ್ಲಿ ಕಲಿಯುವವನ ಅಪೇಕ್ಷಿತ ವರ್ತನೆ ಮತ್ತು ಯೋಜನಾಬದ್ಧ ರೂಪುರೇಖೆಯನ್ನು ಆಚರಣೆಗೆ ತರುವ ಒಂದು ತಂತ್ರವಾಗಿದೆ.

ಬೋಧನಾ ತಂತ್ರವು ಬೋಧನೆ ಕಲಿಕೆಯ ನಡುವೆ ಇರುವ ಸಂಬಂಧದ ಉದ್ದೇಶಗಳನ್ನು ಸಾಧಿಸುವ ದೃಷ್ಟಿಯಿಂದ ಅದನ್ನು ಊರ್ಜಿತಗೊಳಿಸಲು ಲಕ್ಷ್ಯವಹಿಸುತ್ತದೆ. ಉದಾಹರಣೆಗಳು: ಅನುಗಮನ-ನಿಗಮನ, ಉಪನ್ಯಾಸ-ಪ್ರಾತ್ಯಕ್ಷಿಕೆ, ಮೇಲ್ವಿಚಾರಣಾ ಅಧ್ಯಯನ, ಪ್ರಶ್ನೋತ್ತರ ಅವಧಿ, ಹ್ಯೂರಿಸ್ಟಿಕ್ಸ್, ಅನ್ವೇಷಣೆ, ಪ್ರಯೋಗಶಾಲಾ ಮತ್ತು ಕ್ಷೇತ್ರಕಾರ್ಯ.

**ಬೋಧನಾ ಮಾದರಿಗಳು:** ಜಾಯ್ಸ್ ಮತ್ತು ವೈಲ್‌ರ ಪ್ರಕಾರ, ಪಠ್ಯಕ್ರಮ ನಿರ್ಧರಿಸಲು, ಬೋಧನಾ ಸಾಮಗ್ರಿಗಳನ್ನು ತಯಾರಿಸಲು, ಶಿಕ್ಷಕನ ಕಾರ್ಯಗಳಿಗೆ ಮಾರ್ಗದರ್ಶನ ಮಾಡಲು ಬಳಸಬಹುದಾದ ಯೋಜನೆಯೇ ಬೋಧನಾ ಮಾದರಿ.

ಬೋಧನೆ ಕಲಿಕೆ ಪ್ರಕ್ರಿಯೆ ಸುಗಮವಾಗಿ ಜರುಗಲು ಬೋಧನ ಮಾದರಿಗಳು ಸಹಾಯ ಮಾಡುತ್ತವೆ. ಶೈಕ್ಷಣಿಕ ಚಟುವಟಿಕೆಗಳು ಮತ್ತು ಪರಿಸರವನ್ನು ರೂಪಿಸಲು ಅಗತ್ಯವಾದ ಪಾತ್ರಗಳನ್ನು ಒಳಗೊಂಡಿರುತ್ತದೆ. 21 ಬೋಧನಾ ಮಾದರಿಗಳನ್ನು ನಾಲ್ಕು ವರ್ಗಗಳನ್ನಾಗಿ ಜಾಯ್ಸ್ ಮತ್ತು ವೈಲ್‌ರವರು ವರ್ಗೀಕರಿಸಿದ್ದಾರೆ. ಅವುಗಳೆಂದರೆ, 1) ಮಾಹಿತಿ ಸಂಸ್ಕರಣಾ ಮಾದರಿಗಳು, 2) ವೈಯಕ್ತಿಕ ವಿಕಾಸ ಮಾದರಿಗಳು, 3) ಸಾಮಾಜಿಕ ಅನ್ಯೋನ್ಯ ಕ್ರಿಯೆ ಮಾದರಿಗಳು, 4) ವರ್ತನಾ ಮಾರ್ಪಾಟು ಮಾದರಿಗಳು

**ಉದಾಹರಣೆಗಳು:** ಅನ್ವೇಷಣಾ ತರಬೇತಿ ಮಾದರಿ, ಮುಂಸಂಘಟಕ ಮಾದರಿ ಹಾಗೂ ಪರಿಕಲ್ಪನೆ ಸಿದ್ಧಿ ಮಾದರಿ

**ಅನುಗಮನ – ನಿಗಮನ :**

ಅನುಗಮನ ವಿಧಾನದಲ್ಲಿ ವಿದ್ಯಾರ್ಥಿಯು ನಿರ್ದಿಷ್ಟ ವಾಸ್ತವಾಂಶಗಳು ಮತ್ತು ವಾಸ್ತವಿಕ ಉದಾಹರಣೆಗಳನ್ನೂ ಅವಲೋಕನ ಮಾಡುವ ಮೂಲಕ ಸಾಮಾನ್ಯ ಸಿದ್ಧಾಂತ, ಸ್ಥಿರಪಟ್ಟ ನಿಯಮಗಳು ಅಥವಾ ಪ್ರಮೇಯಗಳನ್ನೂ ರೂಪಿಸಲು ಸಮರ್ಥನಾಗುವಂತೆ ಮಾಡಲಾಗುತ್ತದೆ. ಒಂದು ಸಾರ್ವತ್ರಿಕ ಸತ್ಯವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಸತ್ಯವಾದರೆ ಅಂತಹ ಎಲ್ಲಾ ಸಂದರ್ಭಗಳಲ್ಲೂ ಅದು ಸತ್ಯವಾಗುತ್ತದೆ ಎಂದು ತೋರಿಸಲಾಗುತ್ತದೆ. ಈ ಕ್ರಿಯೆಯನ್ನು ನಿಯಮ ನಿರೂಪಣಾ ಪದ್ಧತಿ ಎಂದು ಕರೆಯುವರು.

**ಉದಾ:–** ವಿದ್ಯಾರ್ಥಿಗಳು ಅನೇಕ ಪ್ರಯೋಗಗಳನ್ನು ಮಾಡಿದ ನಂತರ "ಲೋಹಗಳು ವಿದ್ಯುತ್ ವಾಹಕಗಳು" ಎಂಬ ಸಿದ್ಧಾಂತಕ್ಕೆ ಬರಬಹುದು.




ವಿದ್ಯಾರ್ಥಿಗಳು ಬೆಳವಣಿಗೆ ಹಂತದಲ್ಲಿದ್ದಾಗ ಇದು ಸೂಕ್ತ ವಿಧಾನ. ಈ ವಿಧಾನವು ಹೊಸ ಪರಿಕಲ್ಪನೆಗಳನ್ನು ಬೋಧಿಸಲು ಸೂಕ್ತವಿದ್ದರೂ ಎಲ್ಲ ವಿಷಯಗಳನ್ನೂ ಬೋಧಿಸಲು ಸೂಕ್ತವಲ್ಲ.

ನಿಗಮನ ವಿಧಾನ ಅನುಗಮನ ವಿಧಾನಕ್ಕೆ ವಿರುದ್ಧವಾದ ವಿಧಾನ. ಈ ವಿಧಾನದಲ್ಲಿ ಕಲಿಕೆಯ ಸಾರ್ವತ್ರೀಕರಣದಿಂದ ನಿರ್ದಿಷ್ಟ ಕಡೆಗೆ, ಅಮೂರ್ತದಿಂದ ಮೂರ್ತದ ಕಡೆಗೆ ಮತ್ತು ವ್ಯಾಖ್ಯೆಯಿಂದ ಉದಾಹರಣೆಕಡೆಗೆ ಸಾಗುತ್ತದೆ. ಅಂದರೆ ಶಿಕ್ಷಕನು ಸೂಕ್ತವಾದ ವ್ಯಾಖ್ಯೆಯನ್ನು ಸೂಚಿಸುತ್ತಾನೆ. ಉದಾಹರಣೆಗೆ: ಶಿಕ್ಷಕನು ವಿದ್ಯಾರ್ಥಿಗಳಿಗೆ "ಲೋಹಗಳು ವಿದ್ಯುತ್‌ವಾಹಕಗಳು" ಎಂದು ಹೇಳಿ ನಂತರ ಉದಾಹರಣೆಗಳ ಮೂಲಕ ಪ್ರಯೋಗ ಮಾಡಿ ದೃಢಪಡಿಸಿ ಕೊಳ್ಳಬಹುದು. ಇದು ಉನ್ನತ ಮಟ್ಟದ ವಿದ್ಯಾರ್ಥಿಗಳಿಗೆ ಸೂಕ್ತ ವಿಧಾನ. ಈ ವಿಧಾನ ಸಮಸ್ಯೆ ಪರಿಹರಿಸುವಲ್ಲಿ ವೇಗ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

**ಉಪನ್ಯಾಸ – ಪ್ರಾತ್ಯಕ್ಷಿಕೆ ವಿಧಾನ:**

ಇದೊಂದು ಭೌತಶಾಸ್ತ್ರ ಬೋಧನೆಯಲ್ಲಿ ಬಹು ಮುಖ್ಯವಿಧಾನವಾಗಿದೆ. ಈ ವಿಧಾನವು ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ ಎರಡನ್ನೂ ಒಳಗೊಂಡಿದ್ದು, ಇದು ಉಪನ್ಯಾಸ ವಿಧಾನದ ದೋಷಗಳನ್ನು ನಿವಾರಿಸುತ್ತದೆ. ಅಂದರೆ ಈ ವಿಧಾನದಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸುತ್ತಿರುವ ಹಾಗೆ0ಯೇ ವಿಷಯದ ವಿವರಣೆಯನ್ನು ನೀಡುವುದಾಗಿದೆ. ಈ ವಿಧಾನವು "ಅಮೂರ್ತದಿಂದ ಮೂರ್ತದೆಡೆಗೆ" ಸಾಗುವುದಾಗಿದೆ. ಈ ವಿಧಾನದಿಂದ ವಿದ್ಯಾರ್ಥಿಗಳಲ್ಲಿ ಪ್ರಯೋಗ ಕೌಶಲ ಬೆಳೆಸಬಹುದು.

**1. ಯೋಜನಾ ವಿಧಾನ:**

ಪ್ರೊ. ಕಿಲ್‌ಪ್ಯಾಟ್ರಿಕ್‌ರವರು ಈ ವಿಧಾನದ ಮೂಲಕರ್ತರು, ಈ ವಿಧಾನದಲ್ಲಿ ಯಾವುದೇ ಒಂದು ವಿಷಯವನ್ನು ಕಾ0ರ್ಯಾಚರಣೆಯ ಮೂಲಕ ಕಲಿಯಲಾಗುತ್ತದೆ. ಸಮಸ್ಯಾತ್ಮಕ ಹಾಗೂ ಉದ್ದೇಶಪೂರ್ವಕ ಚಟುವಟಿಕೆಗಳಿಗೆ ಯೋಜನೆ ಎಂದು ಹೇಳಬಹುದು. ಮಕ್ಕಳಿಗೆ ಬಾಹ್ಯ ಒತ್ತಡದಿಂದ ಏನನ್ನೂ ಕಲಿಸಲಾಗುವುದಿಲ್ಲ. ಆದ್ದರಿಂದ ಮಕ್ಕಳು ಅಂತರಿಕ ಪ್ರೇರಣೆಯಿಂದ

Digitised by Bharatavani, CIIL

ಕಲಿಯಲು ಈ ವಿಧಾನ ಸಹಾಯಕವಾಗಿದೆ. ವಿದ್ಯಾರ್ಥಿಗಳ ಆಸಕ್ತಿ ಹೆಚ್ಚಿಸಿ, ರಚನಾತ್ಮಕ ಹಾಗೂ ಸೃಜನಶೀಲತೆ ಬೆಳೆಸಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಉತ್ತೇಜಿಸುತ್ತದೆ. ಆದರೆ ಈ ವಿಧಾನದಿಂದ ಸಾಕಷ್ಟು ವೇಳೆಯ ಅಪವ್ಯಯವಾಗುತ್ತದೆ. ಎಲ್ಲಾ ವಿಷಯವನ್ನು ಈ ವಿಧಾನದಿಂದ ಕಲಿಯಲು ಸಾಧ್ಯವಿಲ್ಲ.

**2. ಪ್ರಯೋಗಾಲಯ ವಿಧಾನ:**

ಭೌತಶಾಸ್ತ್ರವು ಪ್ರಾಯೋಗಿಕವಾದ ವಿಷಯವಾದುದ್ದರಿಂದ ವಿದ್ಯಾರ್ಥಿಗಳ ಕೌಶಲ, ವೈಜ್ಞಾನಿಕ ಮನೋಭಾವ, ವೈಜ್ಞಾನಿಕ ವಿಧಾನಕ್ಕೆ ಸಂಬಂಧಿಸಿದ ಗುಣಗಳನ್ನು ಬೆಳೆಸಲು ಪ್ರಯೋಗಾಲಯ ವಿಧಾನ ಒಂದು ಉತ್ತಮವಾದ ವಿಧಾನವಾಗಿದೆ. ವಿದ್ಯಾರ್ಥಿಗಳೇ ಸ್ವಂತ ಪ್ರಯೋಗ ಮಾಡಿ ಅನುಭವಗಳನ್ನು ಪಡೆಯುವುದರಿಂದ ಕಲಿತ ವಿಷಯಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಹೆಚ್ಚಿನ ಕಾಲದವರೆಗೆ ಉಳಿಯುವುದು. ಈ ವಿಧಾನವು ಮನೋವೈಜ್ಞಾನಿಕ ತತ್ವವನ್ನು ಆಧರಿಸಿದೆ. ವೈಜ್ಞಾನಿಕ ಕೌಶಲ ಕಲಿಕೆಗೆ ಉತ್ತಮ ವಿಧಾನ, ವೈಜ್ಞಾನಿಕ ಕ್ರಮ ಹಾಗೂ ವೈಜ್ಞಾನಿಕ ಮನೋಭಾವನೆ ಮೂಡಿಸುತ್ತದೆ. ಆದರೆ ಎಲ್ಲಾ ಪಠ್ಯಕ್ರಮ ನಿಗದಿತ ಸಮಯದಲ್ಲಿ ಮುಗಿಸಲು ಸಾಧ್ಯವಿಲ್ಲ. ಪ್ರತ್ಯೇಕ ಪ್ರಯೋಗಾಲಯ ಹಾಗೂ ಉಪಕರಣಗಳ ಕೊರತೆಯುಂಟಾಗಬಹುದು. ಶಾಲಾ ವೇಳಾಪಟ್ಟಿಯಲ್ಲಿ ಅಳವಡಿಸುವುದು ಕಷ್ಟ

**3. ಉಪನ್ಯಾಸ ವಿಧಾನ:**

ಅತಿ ದೊಡ್ಡ ಪ್ರಮಾಣದ ತರಗತಿಗಳನ್ನು ಹೊಂದಿದ ಶಾಲಾ ಕಾಲೇಜುಗಳಲ್ಲಿ ಈ ವಿಧಾನವನ್ನು ಸಾಮಾನ್ಯವಾಗಿ ಬಳಸುವರು. ವಿಜ್ಞಾನ ಬೋಧನಾ ಧ್ಯೇಯಗಳನ್ನು ಈಡೇರಿಸುವಲ್ಲಿ; ಅಷ್ಟೇನೂ ಪ್ರಭಾವಕಾರಿಯಲ್ಲದಿದ್ದರೂ ಇದು ಒಂದು ಮುಖ್ಯ ವಿಧಾನವಾಗಿದೆ. ಈ ವಿಧಾನದಿಂದ ವಿದ್ಯಾರ್ಥಿಗಳು ಸಿದ್ಧವಾದ ಜ್ಞಾನವನ್ನು ಶಿಕ್ಷಕರಿಂದ ಪಡೆಯುವರು. ಈ ವಿಧಾನವು ವೆಚ್ಚದಾಯಕವಲ್ಲ, ಸಮಯದ ಉಳಿತಾಯ ಹಾಗೂ ಪ್ರಯೋಗಾಲಯದ ಉಪಕರಣಗಳು ಮತ್ತು ಬೋಧನಾ ಸಲಕರಣೆಗಳ ಅವಶ್ಯಕತೆ ಇರುವುದಿಲ್ಲ.

**4. ಸಮಸ್ಯಾ ಪರಿಹಾರ ವಿಧಾನ:**

ಹೆಸರೇ ಸೂಚಿಸುವಂತೆ ಸಮಸ್ಯಾ ಪರಿಹಾರ ವಿಧಾನ ಎಂದರೆ "ವೈಜ್ಞಾನಿಕ ವಿಧಾನವನ್ನು ಅನುಸರಿಸಿ ಒಂದು ಸಮಸ್ಯೆಗೆ ತಾರ್ಕಿಕವಾಗಿ ವಿಶ್ಲೇಷಿಸಿ ಪರಿಹಾರವನ್ನು ಕಂಡು ಹಿಡಿಯುವ ವಿಧಾನವಾಗಿದೆ." ಅಂದರೆ ಸಮಸ್ಯೆಯನ್ನು ಬಿಡಿಸುವ ವೈಜ್ಞಾನಿಕ ವಿಧಾನದ ವ್ಯವಸ್ಥಿತ ವಿಧಾನವಾಗಿದೆ. ಈ ವಿಧಾನ ಒಳಗೊಂಡಿರುವ ಹಂತಗಳೆಂದರೆ ಸಮಸ್ಯೆಯ ನಿರೂಪಣೆ, ದತ್ತಾಂಶಗಳ ಕ್ರೋಢೀಕರಣ, ಊಹೆಗಳಿಗೆ ತಾತ್ಕಾಲಿಕ ಪರಿಹಾರ ರಚಿಸುವುದು, ಊಹೆಗಳ ಪರೀಕ್ಷೆಗೆ ಪ್ರ0ಯೋಗ, ನಿರ್ಣಯಕ್ಕೆ ಬರುವುದು, ಹಾಗೂ ಸಾಮಾನ್ಯೀಕರಣ. ಈ ವಿಧಾನವು ವೈಜ್ಞಾನಿಕ ಕ್ರಮ ಹಾಗೂ ವೈಜ್ಞಾನಿಕ ಮನೋಭಾವನೆ ಬೆಳೆಸುತ್ತದೆ. ಸಮಸ್ಯೆ ಪರಿಹಾರ ಸಾಮರ್ಥ್ಯ ಬೆಳೆಸುತ್ತದೆ. ಸ್ವಂತಿಕೆ ಹಾಗೂ ಸ್ವಸಂಶೋಧನಾ ಮನೋಭಾವ ಬೆಳೆಯುತ್ತದೆ. ಈ ವಿಧಾನವನ್ನು ಎಲ್ಲಾ ಘಟಕಗಳಿಗೆ ಅನ್ವಯಿಸಲು ಸಾಧ್ಯವಿಲ್ಲ. ನಿಗದಿತ ವೇಳೆಯಲ್ಲಿ ಪಠ್ಯಕ್ರಮ ಮುಗಿಸಲಾಗುವುದಿಲ್ಲ. ಹಾಗೂ ನೈಪುಣ್ಯತೆ ಹೊಂದಿದ ಶಿಕ್ಷಕರ ಕೊರತೆ ಇರುತ್ತದೆ.

**5. ಯೋಜಿತ ಬೋಧನಾ ವಿಧಾನ:**

ಈ ವಿಧಾನವು ವಿದ್ಯಾರ್ಥಿಗಳ ಸ್ವಯಂ ಕಲಿಕಾ ವಿಧಾನವಾಗಿದ್ದು, ಇದು ಬಿ.ಎಫ್.ಸ್ಕಿನ್ನರ್‌ನ ಕೊಡುಗೆಯಾಗಿದೆ. ತನಗೆ ತಿಳಿಯದ ಕ್ಲಿಷ್ಟವಾದ ವಿಷಯ, ಜ್ಞಾನವನ್ನು, ಸ್ವಯಂ–ಗತಿಯಲ್ಲಿ ಚಿಕ್ಕ ಚಿಕ್ಕ ಘಟಕಗಳ ಮುಖಾಂತರ ಬೋಧನಾ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಸಂಪೂರ್ಣವಾಗಿ ತಿಳಿದುಕೊಳ್ಳುವುದಾಗಿದೆ. ವಿಷಯ ವಸ್ತುವನ್ನು ಚಿಕ್ಕ ಚಿಕ್ಕ ಭಾಗಗಳಾಗಿ ವಿಭಾಗಿಸಿ, ಅನುಕ್ರಮವಾಗಿ ಜೋಡಿಸಿದ ಸರಣಿ0ಯ ಕ್ರಮಾನುಗತ ಬೋಧನೆ0ಯಾಗಿದೆ. ಇಲ್ಲಿ ಕಲಿಕಾರ್ಥಿ ಸ್ವ0ಯಂ ಕಲಿಕೆಯಿಂದ ವಿಷ0ಯದ ಜ್ಞಾನವನ್ನು ಪಡೆಯುವನು. ಕ್ರಮಾನುಗತ ಬೋಧನೆಯಲ್ಲಿ ಪ್ರಮುಖವಾಗಿ ನಾವು ರೇಖಾತ್ಮಕ ಕ್ರಮಾನುಗತ ಕಾರ್ಯಸರಣಿ ಮತ್ತು ಶಾಖೀಕೃತ ಕ್ರಮಾನುಗತ ಕಾರ್ಯಸರಣಿಯನ್ನು ನೋಡಬಹುದಾಗಿದೆ. ವಿದ್ಯಾರ್ಥಿ ಸ್ವ–ಚಟುವಟಿಕೆ ಮತ್ತು ಪುನರ್ಬಲನ ಇದರ ಮೂಲತತ್ವಗಳು. ಯಾಂತ್ರೀಕರಿಸಿದ ಕಲಿಕೆ, ಸೃಜನಾತ್ಮಕತೆಗೆ ಪೂರಕವಾಗಿಲ್ಲ. ವೆಚ್ಚದಾಯಕ ಹಾಗೂ ವಿಳಂಬಕಾರಿ.

**6. ಜೀವನ ಚರಿತ್ರೆ ವಿಧಾನ/ಆತ್ಮ ಚರಿತ್ರೆ ಕ್ರಮ:**

ಜಾನ್ ಬ್ರೌನ್ ಎಂಬ ಶ್ರೇಷ್ಠ ವಿಜ್ಞಾನಿಯಿಂದ ಬಳಕೆಗೆ ಬಂದ ಈ ವಿಧಾನ ವಿಜ್ಞಾನದ ಕೆಲವೊಂದು ವಿಷಯಗಳನ್ನು ಬೋಧಿಸಿ ಸ್ಪಷ್ಟಪಡಿಸಲು ಅತಿ ಮಹತ್ವಪೂರ್ಣವಾದ ಬೋಧನಾ ವಿಧಾನವಾಗಿದೆ. ಇದು ವಿವಿಧ ವಿಷಯಕ್ಕೆ ಸಂಬಂಧಿಸಿದ ವಿಜ್ಞಾನಿಗಳ ವ್ಯಕ್ತಿ ಚರಿತ್ರೆಯನ್ನು ಅಭ್ಯಾಸ ಮಾಡುವುದಾಗಿದೆ. ಇಲ್ಲಿ ಅವರುಗಳು ಪಟ್ಟಶ್ರಮ, ಸಂಶೋಧನೆ, ಅವಿಷ್ಕಾರಗಳು ಹಾಗೂ ಆದರ್ಶಗಳನ್ನು ತಿಳಿಸಲಾಗುವುದು. ಉದಾಹರಣೆ: ನ್ಯೂಟನ್‌ನ ಜೀವನ ಚರಿತ್ರೆಯನ್ನು ಹೇಳುವುದರ ಮೂಲಕ ಅವರ ಮಹತ್ವದ ಸಾಧನೆಯಾದ ಗುರುತ್ವಾಕರ್ಷಣ ಶಕ್ತಿಯ ಬಗ್ಗೆ ಮಾಹಿತಿಯನ್ನು ಒದಗಿಸುವುದು.

**7. ನಿಯೋಜಿತ ಕಾರ್ಯಗಳ ವಿಧಾನ:**

ಈ ವಿಧಾನದಲ್ಲಿ ಸಂಪೂರ್ಣ ವಿಷಯ ವಸ್ತುವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಅದನ್ನು ವಿವಿಧ ಭಾಗಗಳಾಗಿ ವಿಂಗಡಿಸಿಕೊಂಡು ವಿದ್ಯಾರ್ಥಿಗಳಿಗೆ ಕೊಡುವ ಕೆಲಸವೇ ನಿಯೋಜಿತ ಕಾರ್ಯವಾಗಿರುತ್ತದೆ. ಈ ಕ್ರಮದ ಯಶಸ್ಸು ಮಕ್ಕಳ ಆಸಕ್ತಿ, ಅಭಿರುಚಿ, ವಯಸ್ಸು, ಒಲವು ಮತ್ತು ಅವರ ಜ್ಞಾನದ ಮಟ್ಟಕ್ಕೆ ಅನುಸಾರವಾಗಿ ನಿಯೋಜಿಸಿದರೆ ಮಾತ್ರ ಸಾಧ್ಯ. ಎರಡು ವಿಧವಾದ ನಿಯೋಜಿತ ಕಾರ್ಯಗಳಿವೆ. (1) ತರಗತಿ ನಿಯೋಜಿತ ಕಾರ್ಯಗಳು (2) ಮನೆ ನಿಯೋಜಿತ ಕಾರ್ಯಗಳು. ಇದು ವಿದ್ಯಾರ್ಥಿಗಳನ್ನು ಕ್ರಿಯಾಶೀಲರನ್ನಾಗಿಸಿದರೂ ಎಲ್ಲ ಕಲಿಕೆ ಈ ವಿಧಾನದಿಂದ ಸಾಧ್ಯವಿಲ್ಲ.

Digitised by Bharatavani, CIIL

**8. ಚರ್ಚಾ ವಿಧಾನ:**

ಕೇವಲ ಉಪನ್ಯಾಸ ಕೊಡುವುದರಿಂದ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಠದಲ್ಲಿ ಭಾಗವಹಿಸಲಾರರು. ಇದಕ್ಕೆ ಪ್ರತಿಯಾಗಿ ಆಧುನಿಕ ಶಿಕ್ಷಣ ತಜ್ಞರು ಚರ್ಚಾ ವಿಧಾನವನ್ನು ಬಳಕೆಗೆ ತಂದರು. ಒಂದು ವಿಷಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲನೆ ಮಾಡಿ ವಿಶ್ಲೇಶಿಸಿ, ಹೋಲಿಸಿ ಮತ್ತು ಮೌಲ್ಯಮಾಪನ ಮಾಡಿ ನಿರ್ಣಯ ಕೈಗೊಳ್ಳುವ ಕ್ರಮವನ್ನು ಚರ್ಚಾ ವಿಧಾನ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಚರ್ಚಾ ವಿಧಾನ ರೀತಿಯ ಪಾಠವು ಎಲ್ಲಾ ವರ್ಗಗಳ ಮಕ್ಕಳಿಗೂ ಉಪಯುಕ್ತವಾಗಿದೆ. ಆದರೆ ಚರ್ಚೆಯನ್ನು ನಿಯಂತ್ರಣದಲ್ಲಿಡುವುದು, ಉದ್ದೇಶ ಸಾಧಿಸುವುದು ಶಿಕ್ಷಕನ ಜವಾಬ್ದಾರಿ.

**9. ಕ್ಷೇತ್ರ ಕಾರ್ಯ ವಿಧಾನ:**

ಇಲ್ಲಿ ವಿಜ್ಞಾನದ ನಿಖರವಾದ ಜ್ಞಾನ ಮತ್ತು ಅದರ ಉಪಯೋಗಗಳನ್ನು ಪಡೆಯಬಹುದು. ಅಂದರೆ ಎಲ್ಲಿ ವಿದ್ಯಾರ್ಥಿಗಳು ನಿಜವಾದ ಕಲಿಕಾ ಅನುಭವಗಳನ್ನು ಪಡೆಯುತ್ತಾರೋ ಅಲ್ಲಿ ಕ್ಷೇತ್ರ ಕಾರ್ಯ ವಿಧಾನವು ವಿದ್ಯಾರ್ಥಿಗಳಿಗೆ ಸೂಕ್ತಕರವಾದ ತರಬೇತಿ ನೀಡಲು ಸಹಾಯಕವಾಗಿದೆ.

**10. ಅನ್ವೇಷಣಾ ತರಬೇತಿ ಮಾದರಿ:**

ಪ್ರಶ್ನೆಗಳ ಮೂಲಕ 'ಕಂಡುಹಿಡಿಯುವ' ಅಥವಾ ತನಿಖೆ ಮಾಡುವ ಪ್ರಕ್ರಿಯೆಯನ್ನು ಅನ್ವೇಷಣಾ ಪ್ರಕ್ರಿಯೆ ಎನ್ನಬಹುದು. ಹೊಸ ಹೊಸ ಜ್ಞಾನ ಕ್ಷೇತ್ರಗಳನ್ನು ಅನ್ವೇಷಿಸಿ ಸೃಜನಾತ್ಮಕವಾಗಿ ಜ್ಞಾನೋತ್ಪಾದನೆ ಮಾಡಲು ಅನುಕೂಲವಾಗುವಂತೆ ಮಕ್ಕಳಲ್ಲಿ ಸ್ವಾಭಾವಿಕವಾಗಿ ಇರುವ ಅನ್ವೇಷಣಾ ಪ್ರವೃತ್ತಿಯನ್ನು ಉತ್ತೇಜಿಸಿ ನಿರ್ದೇಶಿಸಲಿಕ್ಕೊಸ್ಕರ ರಿಚರ್ಡ್ ಸಚ್‌ಮನ್ ಅನ್ವೇಷಣಾ ತರಬೇತಿ ಮಾದರಿಯನ್ನು ರೂಪಿಸಿದರು. ಈ ಮಾದರಿಯಲ್ಲಿ ದಿಗ್ಭ್ರಮೆ ಮಾಡಿಸುವ ಸನ್ನಿವೇಶಗಳು ಪಠ್ಯಕ್ರಮದ ವಿಷಯವನ್ನು ಅನ್ವೇಷಿಸಬೇಕಾದ ಸಮಸ್ಯೆಗಳಾಗಿ ಪರಿವರ್ತಿಸುವುದರ ಮೂಲಕ ವಿದ್ಯಾರ್ಥಿಗಳು ಹೊಸದನ್ನು ಸೃಷ್ಟಿಸುವಂತೆ ಮಾಡುವುದಾಗಿದೆ. ಈ ಮಾದರಿ ಸ್ವತಂತ್ರ ಅಥವಾ ಸ್ವಾಯತ್ತ ಕಲಿಕೆಯನ್ನು ಮತ್ತು ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವುದನ್ನು ಪ್ರೋತ್ಸಾಹಿಸುತ್ತದೆ.

**11. ಮುನ್ ಸಂಘಟಕ ಮಾದರಿ:**

ಡೇವಿಡ್.ಪಿ.ಅಸುಬೆಲ್ ಪ್ರತಿಪಾದಿತ ಅರ್ಥಪೂರ್ಣ ಸ್ವೀಕಾರ ಕಲಿಕೆಯ ಸಿದ್ಧಾಂತವನ್ನು ಮುಂಸಂಘಟಕ ಮಾದರಿ ಆಧರಿಸಿದೆ. ಈ ಮಾದರಿಯ ಪ್ರಮುಖ ಗುರಿಯೇನೆಂದರೆ ವಿದ್ಯಾರ್ಥಿಯಲ್ಲಿರುವ ವಿಷಯ ಸಂಬಂಧಿ ಜ್ಞಾನವನ್ನು ಹಾಗೂ ಅವರಲ್ಲಿರುವ ಜ್ಞಾನಾತ್ಮಕ ಸಂರಚನೆಯನ್ನು ಬಲಪಡಿಸಿ ಹೊಸ ಕಲಿಕೆ ಹೆಚ್ಚು ಅರ್ಥಪೂರ್ಣವಾಗಿಸುವುದು. ಪ್ರತಿಯೊಂದು ಅಂಶಗಳನ್ನು ಕ್ರಮಬದ್ಧ ಶ್ರೇಣಿಯಲ್ಲಿ ಜೋಡಿಸಿ ಪರಿಕಲ್ಪನೆಯ ಸಂರಚನೆಗಳನ್ನು ರಚಿಸಬೇಕಾಗುತ್ತದೆ. ಅಂದರೆ ಪ್ರತಿಯೊಂದು ಜ್ಞಾನವನ್ನು ಮುಕ್ತ ಕ್ರಮಾನುಗತಿಯಲ್ಲಿ ಸಂಘಟಿಸಬೇಕು. ಕಲಿಕೆ ಕಾರ್ಯಕ್ಕೆ ಮುನ್ನ ಒದಗಿಸುವ ಪರಿಚಯಾತ್ಮಕ ಸಾಮಗ್ರಿಯೇ ಮುಂಸಂಘಟಕ.

**12. ಪರಿಕಲ್ಪನೆ ಸಾಧನೆ ಮಾದರಿ:**

ಅಮೇರಿಕನ್ ಮನೋವಿಜ್ಞಾನಿ ಜೆರೋಮ್ ಬ್ರೂನರ್ ಮತ್ತು ಅವನ ಸಂಗಡಿಗರು ಈ ಮಾದರಿಯನ್ನು ರೂಪಿಸಿದರು. ಬ್ರೂನರ್‌ರವರ ಪ್ರಕಾರ ಪರಿಸರವು ಅಸಂಖ್ಯ ವಸ್ತುಗಳು, ಘಟನೆಗಳು ಮತ್ತು ವಿದ್ಯಮಾನಗಳನ್ನು ಒಳಗೊಂಡಿದೆ. ಪ್ರತಿಯೊಬ್ಬರೂ ಅವುಗಳನ್ನು ಅರ್ಥಪೂರ್ಣ ವರ್ಗಗಳಾಗಿ ವರ್ಗೀಕರಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತೇವೆ. ಬ್ರೂನರ್‌ರವರ ಪ್ರಕಾರ ಈ ವರ್ಗೀಕರಣ ಪರಿಕಲ್ಪನೆ ರೂಪಿಸುವಿಕೆ ಮತ್ತು ಪರಿಕಲ್ಪನೆಯ ಸಾಧನೆ ಕ್ರಿಯೆಯನ್ನು ಒಳಗೊಂಡಿರುತ್ತದೆ. ಈ ಮಾದರಿಯಲ್ಲಿ ಕೆಲವು ಅಂಶಗಳಲ್ಲಿ ಸಮಾನತೆ ಇರುವ ಇನ್ನಿತರ ಅಂಶಗಳಲ್ಲಿ ಭಿನ್ನತೆ ಇರುವ ಉದಾಹರಣೆಗಳ ಗಣದ ಅವಶ್ಯಕತೆ ಅಧ್ಯಾಪಕನಿಗೆ ಇರುತ್ತದೆ. ಪರಿಕಲ್ಪನೆಯನ್ನು ಶಾಬ್ದೀಕರಿಸುವ ಮುನ್ನ ಉದಾಹರಣೆಗಳನ್ನು ಮತ್ತು ಉದಾಹರಣೆಯಲ್ಲದವುಗಳನ್ನು ಸರಿಯಾಗಿ ಗುರುತಿಸಿ ಪ್ರತ್ಯೇಕಿಸುವ ಎರಡು ಪ್ರಕ್ರಿಯೆಗಳಿವೆ. ಆಯ್ಕೆ ಮತ್ತು ಸ್ವೀಕಾರ ಮಾದರಿಯನ್ನು ಪರಿಕಲ್ಪನಾ ಸಾಧನೆಯ ತಂತ್ರಗಳ ಪೈಕಿ ಅತ್ಯುತ್ತಮವಾದದ್ದು ಎಂದು ಪರಿಗಣಿಸಲಾಗಿದೆ. ಈ ಮಾದರಿ ಮೂಲಕ ವಿದ್ಯಾರ್ಥಿಗಳಿಗೆ ಪರಿಕಲ್ಪನೆಯ ಮೂಲಾಂಶಗಳನ್ನು ಹೆಚ್ಚು ನೇರವಾಗಿ ಬೋಧಿಸಬಹುದಾಗಿದೆ.

**ಭೌತಶಾಸ್ತ್ರ ಬೋಧನೆಗೆ ಸಂಪನ್ಮೂಲಗಳು:**

ಭೌತ ಶಾಸ್ತ್ರವನ್ನು ಹೆಚ್ಚು ಪುಷ್ಠಿದಾಯಕವಾಗಿಯೂ, ಅರ್ಥವತ್ತಾಗಿಯೂ ಇರುವಂತೆ ಮಾಡಲು ಹಲವಾರು ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಬೇಕು. ಭೌತಶಾಸ್ತ್ರ ಬೋಧನೆಗೆ ಬಳಸಬಹುದಾದಂತಹ ಸಂಪನ್ಮೂಲಗಳೆಂದರೆ, ಪಠ್ಯಪುಸ್ತಕ, ಕಲಿಕೋಪಕರಣಗಳು, ಗ್ರಂಥಾಲಯ, ವಸ್ತು ಸಂಗ್ರಹಾಲಯ, ಕ್ಷೇತ್ರ ಪ್ರವಾಸಗಳು, ಪ್ರಯೋಗಶಾಲಾ ಕೈಪಿಡಿ, ಸ್ವಯಂ-ಕಲಿಕಾ ಸಾಮಗ್ರಿಗಳು, ಸುಧಾರಿತ ಹಾಗೂ ಹೊಸ ಶೋಧಿತ ಉಪಕರಣಗಳು, ವಿಜ್ಞಾನಸಂಘ, ವಿಜ್ಞಾನ ಪ್ರದರ್ಶನಗಳು, ದೃಕ್‌ಶ್ರವಣ ಉಪಕರಣಗಳು ಹಾಗೂ ವಿಜ್ಞಾನ ಮೇಳಗಳು.

1. **ಪಠ್ಯ ಪುಸ್ತಕ:** ಶಿಕ್ಷಣ ಕ್ಷೇತ್ರದ ಪ್ರಮುಖ ಉದ್ದೇಶವಾದ ಜ್ಞಾನದ ಬೆಳಕನ್ನು ಚೆಲ್ಲುವಲ್ಲಿ ಪಠ್ಯಪುಸ್ತಕಗಳು ಶಿಕ್ಷಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಅತೀ ಉಪಯುಕ್ತ ಸಂಚಯವಾಗಿದೆ. ಪಠ್ಯಪುಸ್ತಕಗಳು ವಿಷಯದ ಧ್ಯೇಯೋದ್ದೇಶಗಳು ಹಾಗೂ ರಚನಾ ತತ್ವಗಳಿಗನುಗುಣವಾಗಿ ರಚಿಸಲ್ಪಟ್ಟಿರುತ್ತವೆ. ಪಠ್ಯಪುಸ್ತಕದ ಒಂದು ಅತೀ ಮುಖ್ಯ ಉದ್ದೇಶವೇನೆಂದರೆ ಆಯಾ ವಿಷಯಗಳ ಪರಿಕಲ್ಪನೆಗಳ ಕುರಿತಾದ ಜ್ಞಾನವನ್ನು ಒದಗಿಸುವುದಾಗಿದೆ.

ಯಾವುದೇ ಪಠ್ಯಪುಸ್ತಕವೂ ಸಂಪೂರ್ಣವಾಗಿ ದೋಷ ರಹಿತವಾಗಿರಲು ಸಾಧ್ಯವಿಲ್ಲ. ಪಠ್ಯಪುಸ್ತಕಗಳನ್ನು ಪರಿಷ್ಕರಿಸದೇ ಇದ್ದಲ್ಲಿ ಅದು ತನ್ನ ಸ್ಥಾನಮಾನವನ್ನು ಕಳೆದು ಕೊಳ್ಳುತ್ತದೆ. ಏಕೆಂದರೆ

Digitised by Bharatavani, CIIL

ವಿಜ್ಞಾನದಲ್ಲಿ ಆಗುತ್ತಿರುವ ಬದಲಾವಣೆಗಳು ಅತಿ ಶೀಘ್ರವಾಗಿದೆ. ಸಾಮಾನ್ಯವಾಗಿ ಯಾವುದೇ ಪಠ್ಯಪುಸ್ತಕವು ಸಾಧಾರಣ ಮಟ್ಟದ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲ್ಪಟ್ಟಿರುತ್ತದೆ. ಸಾಮಾನ್ಯವಾಗಿ ಶೀಘ್ರಮತಿ ಅಥವಾ ಮಂದಮತಿಯ ವಿದ್ಯಾರ್ಥಿಗಳಿಗೆ ಇವು ಸಹಕಾರಿಯಾಗಿರುವುದಿಲ್ಲ.

2. **ಕಾರ್ಯ ಪುಸ್ತಕ:** ನಿರ್ದಿಷ್ಟ ಪಠ್ಯವಸ್ತುವಿನ ವಿಷಯವನ್ನು ಅಭ್ಯಾಸದ ಮೂಲಕ ಮಕ್ಕಳೇ ಸ್ವಯಂ ಕಲಿಯಲು ಮೌಲ್ಯ ಮಾಪನ ಮಾಡಿಕೊಳ್ಳಲು ಸಾಧ್ಯವಾಗುವಂತೆ ಉದ್ದೇಶಪೂರ್ವಕವಾಗಿ, ವ್ಯವಸ್ಥಿತವಾಗಿ ರಚಿಸಿರುವ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳನ್ನೊಳಗೊಂಡ ಪುಸ್ತಕವೇ ಕಾರ್ಯಪುಸ್ತಕ.

3. **ಪ್ರಯೋಗ ಶಾಲಾ ಕೈಪಿಡಿ:** ಪ್ರಯೋಗದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿಧಾನ, ನಿರೀಕ್ಷಣೆಗಳನ್ನು ತೆಗೆದುಕೊಳ್ಳುವುದು, ಮುನ್ನೆಚ್ಚರಿಕೆ, ಕುರಿತಾದ ಸಲಹೆ ಮತ್ತು ಮಾರ್ಗದರ್ಶನವನ್ನು ಒದಗಿಸುವುದೇ ಪ್ರಯೋಗಶಾಲಾ ಕೈಪಿಡಿ.

4. **ಶಿಕ್ಷಕರ ಕೈಪಿಡಿ:** ಪಠ್ಯ ಪುಸ್ತಕದಲ್ಲಿ ನೀಡಿರುವ ವಿಷಯ ವಿವರಣೆ ಶಿಕ್ಷಕನಿಗೆ ಬೋಧಿಸಲಿಕ್ಕೆ ಸಾಕಷ್ಟು ಇಲ್ಲದಿರಬಹುದು. ಈ ಕೊರತೆ ನೀಗಿಸಲು ಶಿಕ್ಷಕ ಕೈಪಿಡಿ ಇದೆ. ನಿಗದಿತ ಘಟಕ ಹಾಗೂ ತರಗತಿಗೆ ಶಿಕ್ಷಕ ಬಳಸಬಹುದಾದ ಪೀಠಿಕೆ, ಉಪಕರಣಗಳು, ಚಟುವಟಿಕೆಗಳು ಮಾಡಬಹುದಾದ ಮೌಲ್ಯಮಾಪನ ಕ್ರಮಗಳ ಬಗ್ಗೆ ಮಾಹಿತಿಯನ್ನು ಇದು ಒಳಗೊಂಡಿದ್ದು ಮನೆಗೆಲಸದ ಕಾ೦ರ್ಯಗಳ ಬಗ್ಗೆ ಕೂಡ ವಿವರಣೆ ನೀಡುತ್ತದೆ. ಹಾಗಾಗಿ, ಪುಸ್ತಕದಲ್ಲಿರುವ ಮಾಹಿತಿಗಿಂತ ವ್ಯಾಪಕ ವಿವರಣೆಯನ್ನು ಇದು ಒಳಗೊಳ್ಳುತ್ತದೆ.

5. **ಭೌತಶಾಸ್ತ್ರ ಪ್ರಯೋಗಾಲಯ:** ಭೌತಶಾಸ್ತ್ರದ ತಾತ್ವಿಕ ಪರಿಕಲ್ಪನೆಗಳನ್ನು ಪ್ರತ್ಯಕ್ಷ ಕಂಡು ಪ್ರಮಾಣೀಕರಿಸಲು ಹಾಗೂ ಸಾಮಾನ್ಯೀಕರಿಸಲು ಪ್ರಯೋಗಗಳನ್ನು ಕೈಗೊಳ್ಳುವ ಸ್ಥಳವೇ ಭೌತಶಾಸ್ತ್ರ ಪ್ರಯೋಗಾಲಯ. ಪ್ರಯೋಗ ಕೈಗೊಳ್ಳಲು ತಾತ್ವಿಕ ವಿಚಾರಗಳನ್ನು ಒರೆಗೆ ಹಚ್ಚಲು, ವೈಜ್ಞಾನಿಕ ಮನೋಭಾವನೆ ಮೂಡಿಸಲು, ಅನ್ವ೦ಯನ ಸಾಮರ್ಥ್ಯ, ಪ್ರಾ೦ಯೋಗಿಕ ತಂತ್ರಗಳು, ರಚನಾತ್ಮಕತೆ, ವಿವೇಚನಾ ಶಕ್ತಿ, ಆಸಕ್ತಿ, ಅಭಿರುಚಿ, ಸೃಜನಶೀಲತೆ ಬೆಳೆಸಲು, ಸತ್ಯಾನ್ವೇಷಣೆಗೆ ಪ್ರೋತ್ಸಾಹ ನೀಡಲು, ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ, ದಕ್ಷತೆ ಹೆಚ್ಚಿಸಿ ಅವರನ್ನು ಶೋಧಕರನ್ನಾಗಿ ಮಾಡಲು ಪ್ರಯೋಗಾಲಯ ಅವಶ್ಯಕ. ಪ್ರಯೋಗಾಲಯವು ಯೋಗ್ಯವಾದ ಸ್ಥಳ, ಸರಿಯಾದ ಅಳತೆ (ಉದ್ದ 45' ಹಾಗೂ ಅಗಲ 25'), 40 ವಿದ್ಯಾರ್ಥಿಗಳು ವೀಕ್ಷಿಸುವಂತೆ ಹಾಗೂ 20 ವಿದ್ಯಾರ್ಥಿಗಳು ಪ್ರಯೋಗ ಮಾಡುವಂತಿರಬೇಕು. ಎಲ್ಲಾ ಸಾಧನ ಸಲಕರಣೆ ಹೊಂದಿರಬೇಕು. (ಪ್ರಾತ್ಯಕ್ಷಿತಾ ಮೇಜು, ಕಪ್ಪುಹಲಗೆ, ಕಪಾಟುಗಳು ಸೂಚನಾ ಫಲಕ, ಪ್ರಥಮಾ ಚಿಕಿತ್ಸಾ ಪೆಟ್ಟಿಗೆ)

6. **ದೃಕ್ ಶ್ರವಣೋಪಕರಣಗಳು:** ಭೌತಶಾಸ್ತ್ರ ಬೋಧನೆಯಲ್ಲಿ ಬೋಧನೋಪಕರಣಗಳು ಹಾಗೂ ಬೋಧನಾ ಸಲಕರಣೆಗಳು ಅತ್ಯಂತ ಮಹತ್ವವಾದುವಾಗಿವೆ. ಇವುಗಳ ಸಹಾಯವಿಲ್ಲದೆ ಭೌತಶಾಸ್ತ್ರ ಬೋಧನೆ೦ಯು ಪರಿಣಾಮಕಾರಿಯಾಗಲು ಸಾಧ್ಯವೇ ಇಲ್ಲ. ತ಼ಖ್ತೆಗಳು, ಚಿತ್ರಪಟಗಳು, ಸುರುಳಿಗಳು, ಚಿತ್ರ ಸುರುಳಿಗಳು, ಮಾದರಿಗಳು, ನಕಾಶೆ, ದೂರದರ್ಶನ, ಬಾನುಲಿ, ಚಲನಚಿತ್ರ, ನೆತ್ತಿಯ ಮೇಲಿನ ಪ್ರಕ್ಷೇಪಕ, ಕಂಪ್ಯೂಟರ್ ಇತ್ಯಾದಿಗಳನ್ನು ಬೋಧನೆಯಲ್ಲಿ ಉಪಯೋಗಿಸಬಹುದು.

7. **ಭೌತಶಾಸ್ತ್ರ ಗ್ರಂಥಾಲಯ:** ಗ್ರಂಥಾಲಯವು ಜ್ಞಾನದ ಭಂಡಾರವಾಗಿದೆ. ಈ ಗ್ರಂಥಾಲಯವು ವಿಷಯ ಶಿಕ್ಷಕರ ಮೇಲ್ವಿಚಾರಣೆಯಲ್ಲಿರಬೇಕು. ಒಂದು ಪ್ರತ್ಯೇಕ ಭೌತಶಾಸ್ತ್ರ ಗ್ರಂಥಾಲಯದಿಂದ ಹಲವಾರು ಲಾಭಗಳಿರುತ್ತವೆ.

- ಭೌತಶಾಸ್ತ್ರ ಪುಸ್ತಕಗಳನ್ನು ಸುಲಭವಾಗಿಯೂ ಮತ್ತು ಸಮಯ ವ್ಯಯವಾಗದಂತೆ ಹುಡುಕಬಹುದಾಗಿದೆ.
- ಶಿಕ್ಷಕರು ವಿದ್ಯಾರ್ಥಿಗಳ ವಿಷಯದೆಡೆಗಿನ ಆಸಕ್ತಿಯನ್ನು ಈ ಮೂಲಕ ಅವಲೋಕಿಸಬಹುದು.
- ಓದುವಿಕೆಯು ನಿರ್ದಿಷ್ಟವಾಗಿಯೂ ಮತ್ತು ಪರಿಣಾಮಕಾರಿ ಯಾಗಿರುತ್ತದೆ.

**ಭೌತಶಾಸ್ತ್ರದಲ್ಲಿ ಮೌಲ್ಯಮಾಪನ:** ಭೌತಶಾಸ್ತ್ರ ಕಲಿಕೆಯ ಮೌಲ್ಯಮಾಪನದಲ್ಲಿ ಘಟಕ ಪರೀಕ್ಷೆ(Unit Test),ಲಘು ಪರೀಕ್ಷೆಗಳು, ಅರ್ಧ ವಾರ್ಷಿಕ, ವಾರ್ಷಿಕ ಪರೀಕ್ಷೆ ಇರುತ್ತವೆ. ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ವಸ್ತುವಿಷ್ಠ ಪರೀಕ್ಷಾಂಶಗಳು, ಪ್ರಬಂಧ ಮಾದರಿ ಪ್ರಶ್ನೆಗಳು ಮತ್ತು ಲಘು ಉತ್ತರ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಇದರ ಜೊತೆಗೆ ಕ್ಷೇತ್ರ ಕಾರ್ಯ, ಪ್ರಾಯೋಜನೆಗಳು(Project Work) ಮತ್ತು ನಿಯೋಜಿತ ಕಾರ್ಯಗಳನ್ನು ಮೌಲ್ಯಮಾಪನದಲ್ಲಿ ಉಪಯೋಗಿಸಲಾಗುತ್ತದೆ. ಪ್ರಯೋಗಾಲಯದಲ್ಲಿ ನಡೆಸುವ ಪ್ರಾಯೋಗಿಕ ಪರೀಕ್ಷೆ ಭೌತಶಾಸ್ತ್ರ ಮೌಲ್ಯಮಾಪನದಲ್ಲಿ ಬಹಳ ಮಹತ್ವದ ಸ್ಥಾನ ಪಡೆದಿದೆ.

**ಭೌತಶಾಸ್ತ್ರ ಶಿಕ್ಷಕ**

ಯಾವುದೇ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕನ ಪಾತ್ರ ಮುಖ್ಯವಾದದ್ದು, ಕಾರಣವೇನೆಂದರೆ ಶಿಕ್ಷಣವು ಕಲಿಕೆ ಹಾಗೂ ಕಲಿಸುವಿಕೆ ಎಂಬ ಪ್ರಕ್ರಿಯೆಗಳನ್ನು ಹೊಂದಿದ ಉದ್ದೇಶಿತ ವ್ಯವಸ್ಥೆಯಾಗಿರುತ್ತದೆ ಎಂಬ ಆಂಗ್ಲ ಭಾಷೆ ಹೇಳಿಕೆಯು ಶಿಕ್ಷಣದಲ್ಲಿ ಶಿಕ್ಷಕನ ಸ್ಥಾನಮಾನವನ್ನು ಗುರುತಿಸುತ್ತದೆ. ಯುನೆಸ್ಕೊ ವರದಿಯು "ಯಾವುದೇ ದೇಶದ ಗುಣಮಟ್ಟವು ಆದೇಶದ ಪ್ರಜೆಗಳ ಗುಣಮಟ್ಟವನ್ನು ಅವಲಂಬಿಸಿದೆ. ಆದೇಶದ ಪ್ರಜೆಗಳ ಗುಣಮಟ್ಟವು ಅವರು ಪಡೆಯುವ ಶಿಕ್ಷಣದ ಗುಣಮಟ್ಟವನ್ನು ಅವಲಂಭಿಸಿದೆ. ಅವರ ಶಿಕ್ಷಣದ ಗುಣಮಟ್ಟವು ಅವರ ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿದೆ" ಎಂದು ಸೂಚಿಸುತ್ತದೆ.

ಈ ಮೇಲಿನ ಹೇಳಿಕೆಗಳು ಶಿಕ್ಷಕನ ಜವಾಬ್ದಾರಿಯನ್ನು ಬಿಂಬಿಸುತ್ತಾ ಆತ ಹೊಂದಬೇಕಾದ ಜ್ಞಾನ ಹಾಗೂ ಅರಿವು, ಕೌಶಲಗಳು, ಗುಣಲಕ್ಷಣಗಳು, ವೃತ್ತಿ ಅರ್ಹತೆಗಳ ಬಗ್ಗೆ ಸೂಚಿಸುತ್ತದೆ. ಬೇಕಾದ ಅಗತ್ಯ ಪದವಿಯನ್ನು ಹೊಂದುವುದರ ಜೊತೆಗೆ ಶಿಕ್ಷಕರು ವಿಜ್ಞಾನ ಮತ್ತು ತಂತ್ರ ಜ್ಞಾನ ಹಾಗೂ ವಿಜ್ಞಾನ ಬೋಧನೆಯ ಉದ್ದೇಶಗಳನ್ನು ಅರಿಯಬೇಕು.

Digitised by Bharatavani, CIIL

ಭೌತಶಾಸ್ತ್ರ/ವಿಜ್ಞಾನ ಶಿಕ್ಷಕನು ಹಲವು ವೃತ್ತಿ ಅರ್ಹತೆಗಳನ್ನು ಹೊಂದಿರಬೇಕೆಂದು ಎನ್.ಸಿ.ಟಿ.ಇ. (N.C.T.E) ಸೂಚಿಸುತ್ತಾ, ಈ ಕೆಳಗಿನ ಪರಸ್ಪರ ಸಂಬಂಧಿಸಿದ ವೃತ್ತಿ ಬದ್ಧತೆಗಳ ಕ್ಷೇತ್ರಗಳನ್ನು ನೀಡುತ್ತದೆ. ಅವುಗಳೆಂದರೆ,

- ಕಲಿಯುವವನಿಗೆ ಸಂಬಂಧಿಸಿದ ಬದ್ಧತೆಗಳು
- ಸಮಾಜಕ್ಕೆ ಸಂಬಂಧಿಸಿದ ಬದ್ಧತೆಗಳು
- ವೃತ್ತಿಗೆ ಸಂಬಂಧಿಸಿದ ಬದ್ಧತೆಗಳು
- ಶ್ರೇಷ್ಠ ವೃತ್ತಿ ಪರತೆ ಹೊಂದುವುದಕ್ಕೆ ಬದ್ಧತೆಗಳು
- ಮೂಲ ಮೌಲ್ಯಗಳನ್ನು ಹೊಂದುವುದಕ್ಕೆ ಬದ್ಧತೆಗಳು

**ಭೌತಶಾಸ್ತ್ರ ಶಿಕ್ಷಕನ ವಿಶೇಷ ದಕ್ಷತೆಗಳು:**

ಭೌತಶಾಸ್ತ್ರದ ವಿಷಯದ ಕುರಿತು ವೈಜ್ಞಾನಿಕವಾದ, ತಾರ್ಕಿಕವಾದ ಮತ್ತು ಪರಿಪೂರ್ಣವಾದ ಜ್ಞಾನವನ್ನೂ ವಿದ್ಯಾರ್ಥಿಗಳು ಹೊಂದುವಂತೆ ಮಾರ್ಗದರ್ಶನ ನೀಡಲು ವಿಶೇಷ ಸಾಮರ್ಥ್ಯವುಳ್ಳ (ದಕ್ಷತೆಯುಳ್ಳ) ಶಿಕ್ಷಕನಿಂದ ಮಾತ್ರ ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯ. ವಿಶೇಷ ಸಾಮರ್ಥ್ಯಗಳನ್ನು ಈ ಕೆಳಕಂಡಂತೆ ವಿವರಿಸಬಹುದು.

- **ಸ್ಪಷ್ಟವಾದ ವಿಷಯ ಮಂಡನೆ:** ಯಾವುದೇ ವಿಷಯವನ್ನು ಸರಳವಾಗಿ, ಸ್ಪಷ್ಟವಾಗಿ ವಿದ್ಯಾರ್ಥಿಗಳ ಮುಂದಿಡುವ ಸಾಮರ್ಥ್ಯವನ್ನು ಹೊಂದಿರಬೇಕು.
- **ವಿಷಯ ಮಂಡನೆಯಲ್ಲಿ ವೈವಿಧ್ಯತೆ:** ಸಾಂಪ್ರದಾಯಿಕ ವಿಧಾನಗಳಿಗಿಂತ ನವೀನ ವಿಧಾನಗಳನ್ನು ಬೋಧನೆಯಲ್ಲಿ ಅನುಸರಿಸುವುದು.
- **ಸದಾ ಲವಲವಿಕೆಯಿಂದಿರುವುದು:** ವೇಳಾಪಟ್ಟಿಯ ಯಾವುದೇ ಅವಧಿಯಲ್ಲಾದರೂ ಉತ್ಸಾಹದಿಂದ ಪಾಠವನ್ನು ಬೋಧಿಸುವ ಮತ್ತು ವಿದ್ಯಾರ್ಥಿಗಳನ್ನು ಪಾಠದೆಡೆಗೆ ಸೆಳೆಯುವ ಸಾಮರ್ಥ್ಯವನ್ನು ಹೊಂದಿರಬೇಕು.
- **ಸಾಧಿಸುವ ಹಂಬಲವನ್ನು ಹೊಂದಿರುವ ವರ್ತನೆ:** ಪಾಠ ಬೋಧಿಸಿ ಅಷ್ಟರಲ್ಲೇ ಸಂತೃಪ್ತರಾಗದೇ ತನ್ನ ವಿಷಯದಲ್ಲಿ ಅಥವಾ ಯಾವುದೇ ವಿಷಯದಲ್ಲಿ ಏನನ್ನಾದರೂ ಸಾಧಿಸುವ ಸಾಮರ್ಥ್ಯ ಹೊಂದಿರಬೇಕು.
- **ತರಗತಿಯ ಬೋಧನೆಗೆ ಮುಂಗಡ ಸಿದ್ಧತೆ:** ಪಾಠ ಬೋಧಿಸುವ ಮೊದಲೇ ವ್ಯವಸ್ಥಿತವಾಗಿ ಬೋಧನಾ ಮತ್ತು ಕಲಿಕಾ ಕಾರ್ಯವನ್ನು ಯೋಜಿಸಿ ಕೊಳ್ಳುವ ಸಾಮರ್ಥ್ಯವಿರಬೇಕು.
- **ಹೆಚ್ಚು ವಿಷಯವನ್ನು ಸಂಗ್ರಹಿಸುವ ಮತ್ತು ವಿದ್ಯಾರ್ಥಿಗಳನ್ನು ಹೆಚ್ಚು ಸಾಧಿಸಲು ಪ್ರೋತ್ಸಾಹ ನೀಡುವ ಸಾಮರ್ಥ್ಯವಿರಬೇಕು.**
- **ರಚನಾತ್ಮಕ ವಿಮರ್ಶಾ ಸಾಮರ್ಥ್ಯ:** ಯಾವುದೇ ಹೊಸ ವಿಷಯದ ಬಗ್ಗೆ ಪೂರ್ವಾನುಗ್ರಹ ಪೀಡಿತವಾಗದೇ ವಿಮರ್ಶಿಸುವ ಸಾಮರ್ಥ್ಯವಿರಬೇಕು.
- **ಒಟ್ಟಾರೆ ಅಮೂಲಾಗ್ರವಾಗಿ ವಿಷಯ ಮಂಡಿಸುವ ಸಾಮರ್ಥ್ಯ:** ಯಾವುದೇ ವಿಷಯವನ್ನು ಬೋಧಿಸಿದ ನಂತರ ಇಡೀ ವಿಷಯವನ್ನು ಸ್ಪಷ್ಟವಾಗಿ ಸಂಕ್ಷಿಪ್ತವಾಗಿ ವಿದ್ಯಾರ್ಥಿಗಳ ಮುಂದಿಡುವ ಸಾಮರ್ಥ್ಯವಿರಬೇಕು.
- **ವಿವಿಧ ರೀತಿಯ ಪ್ರಶ್ನೆಗಳನ್ನು ಕೇಳುವ ಸಾಮರ್ಥ್ಯ:** ವೈವಿಧ್ಯಮಯವಾಗಿ ಪ್ರಶ್ನೆಗಳನ್ನು ರಚಿಸುವ ಮತ್ತು ಪ್ರಶ್ನಿಸುವ ಸಾಮರ್ಥ್ಯ ಹೊಂದಿರಬೇಕು.
- **ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಇನ್ನೂ ವಿವರವಾಗಿ ಪಡೆಯುವ ದೃಷ್ಟಿಯಿಂದ ಶೋಧಿಸುವ ಸಾಮರ್ಥ್ಯವಿರಬೇಕು.**
- **ಬೋಧನಾ ಹಂತದ ಕ್ಲಿಷ್ಟತೆಯನ್ನು ಗ್ರಹಿಸುವ ಸಾಮರ್ಥ್ಯ:** ಪಠ್ಯ ವಿಷಯದ ಕಠಿಣತೆಯನ್ನು ಅರಿತು ಮಕ್ಕಳ ಮಾನಸಿಕ ಮಟ್ಟಕ್ಕೆ ಅನುಗುಣವಾಗಿ ಬೋಧನಾ ವಿಧಾನಗಳನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯವಿರಬೇಕು.
- **ಸೂಕ್ತ ವಾಗಿ ಮೌಲ್ಯಮಾಪನ ಮಾಡುವ ಸಾಮರ್ಥ್ಯ:** ವಿವಿಧ ಮೌಲ್ಯಮಾಪನ ವಿಧಾನಗಳ ಬಳಕೆಯ ಸಾಮರ್ಥ್ಯವಿರಬೇಕು.
- **ಕಾರ್ಯ ನಿರ್ವಹಣೆಯ ಸಾಮರ್ಥ್ಯ**
- **ಪೋಷಕರೊಂದಿಗೆ ಕಾರ್ಯ ನಿರ್ವಹಿಸುವ ಸಾಮರ್ಥ್ಯ**
- **ವಿವಿಧ ಸಂಘಟನೆಗಳು ಹಾಗೂ ಸಮುದಾಯದೊಂದಿಗೆ ಕಾರ್ಯ ನಿರ್ವಹಿಸುವ ಸಾಮರ್ಥ್ಯ**

**ಭೌತಶಾಸ್ತ್ರ ಶಿಕ್ಷಕರ ವೃತ್ತಿಪರ ಬೆಳವಣಿಗೆ:**

ಶಿಕ್ಷಕರು ನಿರಂತರವಾಗಿ ವೃತ್ತಿಪರ ಬೆಳವಣಿಗೆಯನ್ನು ಹೊಂದಲು ಅವಕಾಶವನ್ನು ಒದಗಿಸಿ ಕೊಡುವ ಅವಶ್ಯಕತೆ ಇದೆ. ಕಾರಣವೇನೆಂದರೆ ಹೊಸ ಹೊಸ ಜ್ಞಾನವನ್ನು ಒದಗಿಸಲು ಹಾಗೂ ನೂತನವೆನಿಸುವ ಬೋಧನಾ ವಿಧಾನಗಳನ್ನು ಅರಿಯಲು ಹಾಗೂ ನೂತನವೆನಿಸುವ ಬೋಧನಾ ವಿಧಾನಗಳನ್ನು ಅರಿಯಲು ಹಾಗೂ ಅನುಸರಿಸಲು ಸಹಾಯಕವಾಗುತ್ತದೆ. ಭೌತಶಾಸ್ತ್ರ ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಈ ಕೆಳಕಂಡ ಅವಕಾಶಗಳನ್ನು ಒದಗಿಸುವುದರ ಮೂಲಕ ಈಡೇರಿಸಬಹುದಾಗಿದೆ.

- ವಿಚಾರ ಗೋಷ್ಠಿಗಳು
- ಪುನಶ್ಚೇತನ ಕೋರ್ಸುಗಳು
- ಕಾರ್ಯಾಗಾರಗಳು
- ಶಿಕ್ಷಕರ ಅಭ್ಯಾಸ ಮಂಡಳಿಗಳು
- ಲೇಖನ ಅಭ್ಯಾಸ
- ಶಾಲಾ ಕಾರ್ಯ ಕ್ರಮಗಳು
- ವಿವಿಧ ಬೇಸಿಗೆ ಶಿಬಿರಗಳು
- ಉನ್ನತ ವ್ಯಾಸಂಗ

ಭೌತಶಾಸ್ತ್ರ ಶಿಕ್ಷಕನು ಕಲಿಕೆಯ ಉದ್ದೇಶಗಳನ್ನು, ಬೋಧನಾ ವಿಧಾನಗಳನ್ನು ಸಂಪನ್ಮೂಲಗಳನ್ನು ಮೌಲ್ಯಮಾಪನ ಕ್ರಮಗಳನ್ನು ಹಾಗೂ ವೃತ್ತಿ ಸಾಮರ್ಥ್ಯಗಳನ್ನು ಹೊಂದುವ ಕ್ರಮಗಳನ್ನು ಕರಗತ ಮಾಡಿಕೊಳ್ಳುವ ಅಗತ್ಯವಿದೆ. ಇದು ಭೌತಶಾಸ್ತ್ರದ ಪರಿಣಾಮಕಾರಿ ಬೋಧನೆಗೆ ಸಹಾಯಕ.

–ಡಾ. ಗೀತಾ ಎಸ್.

Digitised by Bharatavani, CIIL

## ಪ್ರಧಾನ ಸಂಪಾದಕರ ಪರಿಚಯ

**ಡಾ. ಎನ್. ಲಕ್ಷ್ಮಿ,** ಎಂ.ಎ., ಎಂ.ಎಡ್., ಎಂ.ಫಿಲ್., ಪಿಎಚ್.ಡಿ.
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–06

ಡಾ. ಎನ್. ಲಕ್ಷ್ಮಿಯವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎಡ್., ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಎಂ.ಎ., ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹ ಪ್ರಾಧ್ಯಾಪಕರಾಗಿ ಹಾಗೂ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 1996ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ **"ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಹಾಗೂ ಇತರೆ ಜನಾಂಗದವರ ತಾರುಣ್ಯಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳ ಶೈಕ್ಷಣಿಕ ಹಿಂದುಳಿಯುವಿಕೆ"** ಎಂಬ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಇವರು 1994 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ICC&CE ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕಿಯಾಗಿ ಸೇವೆ ಪ್ರಾರಂಭಿಸಿದರು. ಶ್ರೀಮತಿಯವರು 2001 ರಿಂದ 2003 ರವರೆಗೆ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕಿಯಾಗಿ ಸೇವೆಸಲ್ಲಿಸಿದರು. 2003 ರಿಂದ ಸಹಾಯಕ ಪ್ರಾಧ್ಯಾಪಕರಾಗಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಆರು ಮಂದಿ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಹಾಗೆಯೇ ಹತ್ತು ಮಂದಿ ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. ಪ್ರಸ್ಥುತ ಎಂಟು ಮಂದಿ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಕರಾಮುವಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಬಿ.ಎಡ್., ಬಿ.ಎಡ್. ವಿಶೇಷ ಶಿಕ್ಷಣ, ಎಂ.ಎಡ್., ಎಂ.ಫಿಲ್., ಪಿಎಚ್.ಡಿ. ಹಾಗೂ ಪಿಜಿಡಿಹೆಚ್‌ಇ ಕೋರ್ಸ್‌ಗಳನ್ನು ನಡೆಸಲಾಗುತ್ತದೆ.

ಶ್ರೀಮತಿಯವರು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. "ಶೈಕ್ಷಣಿಕ ಸಂಶೋಧನೆ", "ತತ್ವಶಾಸ್ತ್ರದ ದೃಷ್ಟಿಕೋನದಲ್ಲಿ ಶಿಕ್ಷಣ", "ಸಮಾಜಶಾಸ್ತ್ರದ ದೃಷ್ಟಿಕೋನದಲ್ಲಿ ಶಿಕ್ಷಣ", "ಶೈಕ್ಷಣಿಕ ಆಡಳಿತ, ನಿರ್ವಹಣೆ ಹಾಗೂ ಶಾಲಾ ಸಂಘಟನೆ, "ಶೈಕ್ಷಣಿಕ ನಿರ್ವಹಣೆ ಮತ್ತು ನಾಯಕತ್ವ", "ಮಹಿಳಾ ಶಿಕ್ಷಣ", "ಭಾರತದಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸವಾಲುಗಳು", "ಪ್ರಚಲಿತ ಸಾಮಾಜಿಕ ಮತ್ತು ಶೈಕ್ಷಣಿಕ ಸವಾಲುಗಳು" ಇವರ ಪ್ರಮುಖ ಪುಸ್ತಕಗಳಾಗಿವೆ.

ಡಾ. ಎನ್. ಲಕ್ಷ್ಮಿ ರವರು 2007–08ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ **"ಮೈಸೂರು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳ ತುಲನಾತ್ಮಕ ಅಧ್ಯಯನ"** ಯೋಜನೆ, 2009–10ನೇ ಸಾಲಿನಲ್ಲಿ ಡೆಕ್ ಅನುದಾನದ ಅಡಿಯಲ್ಲಿ **"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎಡ್. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರವೇಶಾತಿ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳ ಒಂದು ಅಧ್ಯಯನ"** ಯೋಜನೆ, 2011–12ನೇ ಸಾಲಿನಲ್ಲಿ ಡೆಕ್ ಅನುದಾನದ ಅಡಿಯಲ್ಲಿ **"ಚಾಮರಾಜನಗರ ಜಿಲ್ಲೆಯ ಹೆಣ್ಣು ಮಕ್ಕಳು ದೂರ ಶಿಕ್ಷಣ ವ್ಯವಸ್ಥೆಯ ಬಗ್ಗೆ ಹೊಂದಿರುವ ಅರಿವು ಮತ್ತು ಅದರ ಪ್ರಯೋಜನವನ್ನು ಪಡೆದುಕೊಂಡಿರುವುದರ ಒಂದು ಮೌಲ್ಯಮಾಪನಾತ್ಮಕ ಅಧ್ಯಯನ",** ಎಂಬ ಯೋಜನೆ ಹಾಗೂ 2011–12ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ **"AN EVALUATIVE STUDY OF THE IMPLIME NTATION OF THE SSA MADARASAS GRANT SCHEME IN KARNATAKA STATE"** ಎಂಬ ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ.

ಕೇಂದ್ರದ ಘನ ಸರ್ಕಾರ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಹಿನ್ನೆಲೆಯಲ್ಲಿ ರಾಜ್ಯದ ಘನ ಸರ್ಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವಿಶ್ವವಿದ್ಯಾನಿಲಯಕ್ಕೆ ಎರಡು ಕೋಟಿ ರೂ.ಗಳ ಅನುದಾನವನ್ನು ಮಂಜೂರು ಮಾಡಿ, ನಮ್ಮ ವಿಶ್ವವಿದ್ಯಾನಿಲಯಕ್ಕೆ ಮೊದಲ ಕಂತಾಗಿ ರೂ. ಒಂದು ಕೋಟಿಯನ್ನು ಬಿಡುಗಡೆ ಮಾಡಿದೆ. ಈ ಯೋಜನೆಯ ವ್ಯಾಪ್ತಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎನ್. ಲಕ್ಷ್ಮಿ ರವರು ಪ್ರಧಾನ ಸಂಪಾದಕರಾಗಿ ಕೈಗೆತ್ತಿಕೊಂಡಿರುವ ಕನ್ನಡ ಭಾಷಾ ಅಭಿವೃದ್ಧಿ ಯೋಜನೆ–06ರ ಅಡಿಯಲ್ಲಿ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಹಾಗೂ ಕನ್ನಡ ಭಾಷಾ ಅಭಿವೃದ್ಧಿ ಯೋಜನೆ–07ರ ಅಡಿಯಲ್ಲಿ **"ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಸಿ.ಡಿ. ಮುಖಾಂತರ ಪಾಠ ಒದಗಿಸುವ ಯೋಜನೆ"**ಗಳು ಸೇರಿರುತ್ತವೆ. ಪ್ರಸ್ತುತ ಯೋಜನೆಯಲ್ಲಿ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಕೃತಿಯನ್ನು ಮೂರು ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಈಗಾಗಲೇ 1000 ಪುಟಗಳಿರುವ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಸಂಪುಟ – 01 ಕೃತಿ ಹಾಗೂ **ಎರಡನೇ ವರ್ಷದ ಬಿ.ಎಡ್. ವಿಶೇಷ ಶಿಕ್ಷಣಕ್ರಮದ ವಿಶೇಷ ಅಧ್ಯಯನ ಪತ್ರಿಕೆಗಳ ವಿಷಯಗಳಿಗೆ ಸಂಬಂಧಿಸಿದಂತೆ, 48 ರೆಕಾರ್ಡೆಡ್ ಸಿ.ಡಿ. ಯೋಜನೆಗಳು** ಆಗಸ್ಟ್ 7, 2012ರಲ್ಲಿ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಿಂದ ಬಿಡುಗಡೆಯಾಗಿದೆ. ಪ್ರಸ್ತುತ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಸಂಪುಟ–2 ಮತ್ತು ಸಂಪುಟ–3 ಕೃತಿಗಳು ಕ್ರಮವಾಗಿ 750 ಪುಟಗಳನ್ನು ಹೊಂದಿದ್ದು ಲೋಕಾರ್ಪಣೆಗೆ ಸಿದ್ಧಗೊಂಡಿವೆ.

ಶ್ರೀಮತಿಯವರು ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ರಾಷ್ಟ್ರೀಯ ಸಮ್ಮೇಳನಗಳಾದ National Seminar on 'ODL-Learner support Services' held on 20 & 21st October 2010 at Dr. B.R. Ambedkar open University, Hyderabad, National Seminar on 'Rejuvenating Intellectual Curiosity Among Teacher

Digitised by Bharatavani, CIIL

Educators' held on 28 & 29th January 2011 at Stella Matutina College of Education, Chennai, National Seminar on 'Current Issues in Teacher Education' held on 14th & 15th March at Department of Education, Faculty of Education and Psychology, The Maharaja Sayajirao University of Baroda, Vadodara Gujarat, National Conference on "Social Media in Education: New Horizons" held on 1st and 2nd February 2013 at Sri Sarada College of Education, Salem, Tamil Nadu, National Conference on "Enhancement of Quality Perspective in Teacher Education" held on 6th and 7th April 2013 at Indra Ganesan College of Education, Tiruchirapalli, Tamil Nadu, National Conference on "Education and Women Empowerment" held on 12th and 13th September 2013 at St. Ann's College of Education, Mangalore, Karnataka, National Conference on "Education for Sustainable Development" held on 27th and 28th March 2014 at Department of Studies in Education, Manasagangothri, Mysore-06, Karnataka ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಹಾಗೆಯೇ ಹಲವು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿಯೂ ಸಹ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ಅಂತರರಾಷ್ಟ್ರೀಯ ಸಮ್ಮೇಳನಗಳಾದ International Conference On "Innovative Thoughts – Education, Management, Arts, Science, Linguistics" (Teaching & Learning) held on 12th, 13th & 14th August 2011 at Department of Indian Studies, Faculty of Arts and sciences, University of Malaya, Kualalumpur, Malaysia, International Seminar on "Global Commitments Towards Inclusive Development of Persons with Disabilities" held on 17th and 19th March 2012 at India Habitat Centre, New Delhi, International Seminar on "Innovations in Teaching, Research and Management in Higher Education" held on 21st and 22nd March 2012 at the Centre for Educational Research, Madurai Kamaraj University, Madurai, Tamil Nadu, International Conference on "Teacher Education: Meeting the Needs of the New Generation" held on 24th and 25th January 2013 at Dr. Sivanthi Aditanar College of Education", Tiruchendur, Tamil Nadu, India, International Conference on "Curriculum Engineering : Principles and Practices" held on 8th and 9th March 2013 at Vellalar College of Education for Women, Erode, Tamil Nadu, India, International Conference on "Teacher Education in Changing Global Society" held on 14th and 15th December 2013 at Bishop Agniswamy College of Education, Muttom, Kanyakumari District, Tamil Nadu, India, International Conference on "Learning Environment for Excellence in Education."(LEEE-2014) 24th and 25th January 2014 at SRM School of Teacher Education and Research, SRM University in Collaboration with Department of Education, Mother Teresa Women's University, Kattankulathur, Kancheepuram District, Tamil Nadu, India, International Conference on "Capacity Building Programmers for Teacher Educators : A Global Scenario" held on 12th and 13th April 2014 at St. Paul's College of Education, Vijayanagar, Bangalore, Karnataka, India ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ.

ಶ್ರೀಮತಿಯವರು ಹಲವಾರು ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ವಿಭಾಗದಲ್ಲಿ ಶೈಕ್ಷಣಿಕವಾಗಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದ ಇವರ ಹಲವು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಕೃತಿಯ ಮೂರು ಸಂಪುಟಗಳಿಗೆ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಸಲಹಾ ಸಮಿತಿ ಸದಸ್ಯರ ಪರಿಚಯ

**ಪ್ರೊ. ಸಿ. ಶೇಷಾದ್ರಿ,** B.sc., M.A. (Phil), M.Ed., Ph.d.
"ಚೆನ್ನಗಿರಿ" ಮನೆ ನಂ. 1391,
ಅನಿಕೇತನ ರಸ್ತೆ,
ದಕ್ಷಿಣ 5ನೇ ಅಡ್ಡ ರಸ್ತೆ,
ಕುವೆಂಪುನಗರ, ಮೈಸೂರು–570 023

ಗಣಿತ ಶಾಸ್ತ್ರದ ಅಧ್ಯಾಪಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದ ಪ್ರೊ|| ಸಿ. ಶೇಷಾದ್ರಿಯವರು, ನಂತರದಲ್ಲಿ ದೆಹಲಿಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ಪ್ರಶಿಕ್ಷಣ ಪರಿಷತ್ತನ್ನು (ಎನ್.ಸಿ.ಇ.ಆರ್.ಟಿ) ಸೇರಿ ದೀರ್ಘಕಾಲ ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಹಾಗೂ ಮೈಸೂರು ಮತ್ತು ಭುವನೇಶ್ವರದಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್.ಐ.ಇ)ಗಳ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಎನ್.ಸಿ.ಇ.ಅರ್.ಟಿ.ಯ ಹಿರಿಯ ಪ್ರಾಧ್ಯಾಪಕರುಗಳಲ್ಲಿ ಒಬ್ಬರಾದ ಶ್ರೀಯುತರು ಆ ಸಂಸ್ಥೆಯ ಶಿಕ್ಷಣಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕೆಲವು ವಿಶ್ವವಿದ್ಯಾನಿಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಪ್ರೊ. ಶೇಷಾದ್ರಿಯವರು 50ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. 6 ಪುಸ್ತಕಗಳನ್ನು ಬರೆದಿದ್ದಾರೆ. ನಿವೃತ್ತಿಯ ನಂತರ ಥಾಯ್‌ಲ್ಯಾಂಡ್, ಇಥಿಯೋಪಿಯ ಮತ್ತು ಚೈನಾ ದೇಶಗಳಲ್ಲಿ ಶಿಕ್ಷಣದ ತಜ್ಞ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

Digitised by Bharatavani, CIIL

**ಡಾ. ಎಂ.ಎಸ್. ತಳವಾರ್,** ಎಂ.ಎ., ಎಂ.ಎಡ್., ಪಿಎಚ್.ಡಿ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಜ್ಞಾನಭಾರತಿ,
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ಎಂ.ಎಸ್. ತಳವಾರ್‌ರವರು ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕೆಲ ವರ್ಷಗಳ ಕಾಲ ಕಾರ್ಯನಿರ್ವಹಿಸಿ, ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ವಿಭಾಗದ ಮುಖ್ಯಸ್ಥರಾಗಿ, ಡೀನ್‌ರಾಗಿ, ಶೈಕ್ಷಣಿಕ ಸಿಬ್ಬಂದಿ ಕಾಲೇಜಿನ ನಿರ್ದೇಶಕರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

ಶ್ರೀಯುತರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯಮಟ್ಟದ ಹಲವು ಕಾರ್ಯಾಗಾರಗಳಲ್ಲಿ, ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದ್ದಾರೆ. ಇವರ ಹಲವಾರು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀಯುತರು ಈಗಾಗಲೇ ಮೂರು ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ 22 ಮಂದಿ ಎಂ.ಫಿಲ್ ಪದವಿಯನ್ನು ಹಾಗೂ 13 ಮಂದಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಶ್ರೀಯುತರು 2009ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದ ವತಿಯಿಂದ (AIATE) "Best Teacher Educator" ಎಂಬ ಪುರಸ್ಕಾರವನ್ನು ಪಡೆದಿದ್ದಾರೆ. ಶ್ರೀಯುತರು 16ಕ್ಕೂ ಹೆಚ್ಚು ಪುಸ್ತಕಗಳನ್ನು ಶಿಕ್ಷಣಶಾಸ್ತ್ರದ ಬಗ್ಗೆ ರಚಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

***

**ಡಾ. ಟಿ. ಪದ್ಮಿನಿ,** ಬಿ.ಎಸ್ಸಿ., ಎಂ.ಎಡ್., ಪಿಎಚ್.ಡಿ.
75, ದಯಾಮಾರ್ಗ, ಸಿದ್ಧಾರ್ಥ ನಗರ,
ಮೈಸೂರು.

ಡಾ. ಟಿ. ಪದ್ಮಿನಿಯವರು 1980ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕಿಯಾಗಿ ತಮ್ಮ ಸೇವೆಯನ್ನು ಆರಂಭಿಸಿ ನಂತರ ಪ್ರವಾಚಕರಾಗಿ, ಪ್ರಾಧ್ಯಾಪಕಿಯಾಗಿ ಮತ್ತು ವಿಭಾಗ ಮುಖ್ಯಸ್ಥೆಯಾಗಿ ದೀರ್ಘಕಾಲ ಸೇವೆ ಸಲ್ಲಿಸಿ 2004ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದರು. ನಿವೃತ್ತಿಯ ನಂತರ ಯುಜಿಸಿ ಯಿಂದ ಎಮಿರೈಟಸ್ ಫೆಲೋಶಿಪ್ ಪಡೆದು 2005 ರಿಂದ 2007ರವರೆಗೆ ಮಾನಸಗಂಗೋತ್ರಿಯಲ್ಲಿ ಸಂಶೋಧನೆ ಕೈಗೊಂಡರು. ಪಿಯಾಜೆ ಪ್ರತಿಪಾದಿತ ಸಂಜ್ಞಾನಾತ್ಮಕ ಸಿದ್ಧಾಂತ ಹಾಗೂ ತತ್‌ಸಂಬಂಧಿತ ಕ್ಷೇತ್ರದಲ್ಲಿ ವಿಶೇಷ ಪರಿಣತಿ ಹೊಂದಿರುವ ಪ್ರೊ. ಪದ್ಮಿನಿಯವರು ಅನೇಕ ಲೇಖನಗಳನ್ನು, ಒಂದು ಪುಸ್ತಕವನ್ನು ಬರೆದಿದ್ದಾರೆ. ನಿವೃತ್ತಿ ನಂತರ ಅಖಿಲ ಭಾರತ ಮಟ್ಟದ 'ಪ್ರಥಮ್' ಸಂಸ್ಥೆಯೊಂದಿಗೆ ತಮ್ಮನ್ನು ತೊಡಗಿಸಿಕೊಂಡು ವಂಚಿತ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ರಮಗಳನ್ನು ನಿರ್ದೇಶಿಸುತ್ತಿರುವುದಲ್ಲದೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ನಡೆಸುತ್ತಿರುವ ಪೂರ್ವ ಪ್ರಾಥಮಿಕ ಶಿಕ್ಷಣದ ಡಿಪ್ಲೋಮಾ ಕಾರ್ಯಕ್ರಮದ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

**ಡಾ. ಎ. ಶಶಿಕಲ,** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

ಮೂರು ದಶಕಗಳಿಂದ ಮಂಗಳೂರಿನ ಸೇಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪನ ಮಾಡುತ್ತಿದ್ದಾರೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಸಂಪಾದಿಸಿದ್ದಾರೆ ಮತ್ತು ಪ್ರಕಟಿಸಿದ್ದಾರೆ. ಹಲವು ಸಂಸ್ಥೆಗಳ ಸಂಶೋಧನ ಯೋಜನೆಗಳನ್ನು ಕೈಗೊಂಡಿದ್ದಾರೆ. ಕರ್ನಾಟಕ ರಾಜ್ಯ ಡಿ.ಎಡ್. ಪಠ್ಯಕ್ರಮ ರಚನಾ ಸಮಿತಿ ಸದಸ್ಯರಲ್ಲಿ ಒಬ್ಬರಾಗಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

***

## ಸಂಪಾದಕ ಮಂಡಳಿ ಸದಸ್ಯರ ಪರಿಚಯ

**ಪ್ರೊ. ಬಿ.ಎನ್. ಮಂಜುನಾಥಯ್ಯ,** ಎಂ.ಎ.(ಮನೋವಿಜ್ಞಾನ), ಎಂ.ಎಡ್.
ನಂ. 1009, 'ಕಲ್ಪದ್ರುಮ', E & F ಬ್ಲಾಕ್,
ಉದಯರವಿ ರಸ್ತೆ, ಕುವೆಂಪು ನಗರ, ಮೈಸೂರು.

ಮಂಗಳೂರಿನ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ 2 ವರ್ಷ ಸೇವೆ ಸಲ್ಲಿಸಿ ನಂತರ ಮೈಸೂರಿನ ಸೋಮಾನಿ ಬಿ.ಎಡ್. ಕಾಲೇಜಿನಲ್ಲಿ 4 ವರ್ಷ, ಮಾನಸಗಂಗೋತ್ರಿಯಲ್ಲಿ 26 ವರ್ಷಗಳ ಕಾಲ ಸೇವೆ ಸಲ್ಲಿಸಿ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ

Digitised by Bharatavani, CIIL

ಸೇವೆಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಶ್ರೀಯುತರು 1977–78 ರಲ್ಲಿ ಯುನೈಟೆಡ್ ಕಿಂಗ್‌ಡಮ್‌ನ(ಇಂಗ್ಲೆಂಡ್) 'ಕಾಮನ್‌ವೆಲ್ತ್ ಎಜುಕೇಷನ್ ಫೆಲೋಷಿಪ್' ವಿದ್ಯಾರ್ಥಿ ವೇತನ ಪಡೆದು ಲಂಡನ್ ವಿಶ್ವವಿದ್ಯಾನಿಲಯದ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ನಲ್ಲಿ ವಿಶೇಷ ಶಿಕ್ಷಣದ ಬಗ್ಗೆ ಒಂದು ವರ್ಷ ಕಾಲ ಅಧ್ಯಯನ ಮಾಡಿ ಅಸೋಸಿಯೇಟ್‌ಷಿಪ್ ಪದವಿ ಪಡೆದಿದ್ದಾರೆ. ಹಲವಾರು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಆನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 8 ವರ್ಷ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ,** ಬಿ.ಎಸ್ಸಿ; ಎಂ.ಎಡ್; ಡಿ.ಬಿ.ಇ; ಡಿ.ಇ.ವಿ.ಜಿ.
ನಂ. 383, 14ನೇ ಮುಖ್ಯ ರಸ್ತೆ,
ಸರಸ್ವತಿ ಪುರಂ, ಮೈಸೂರು.

ಶ್ರೀಯುತರು ಶಿಕ್ಷಕರಾಗಿ, ಪ್ರಶಿಕ್ಷಕರಾಗಿ, ಶೈಕ್ಷಣಿಕ ಮೇಲ್ವಿಚಾರಕರಾಗಿ, ಸಮನ್ವಯಾಧಿಕಾರಿಯಾಗಿ, ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, SKMK ಶಿಕ್ಷಣ ಮಹಾವಿದ್ಯಾಲಯದ ಸಂಸ್ಥಾಪಕ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ. NCERT, DSERT ಹಾಗೂ ಭಾರತ ಸರ್ಕಾರದ EdCILನ ಅನೇಕ ಪ್ರಾಯೋಜನೆಗಳಲ್ಲಿ, ಕಾರ್ಯಾಗಾರಗಳಲ್ಲಿ ಮತ್ತು ಇತರ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಕೆಲವು ಅಂತರರಾಷ್ಟ್ರೀಯ ಕಾರ್ಯಾಗಾರಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. 20ಕ್ಕೂ ಹೆಚ್ಚು ಪಠ್ಯ ಪುಸ್ತಕಗಳನ್ನು ಬರೆದಿರುವುದಲ್ಲದೆ ಕೆಲವು ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಬರೆದಿದ್ದಾರೆ. ಶಿಕ್ಷಣಕ್ಕೆ ಸಲ್ಲಿಸಿರುವ ತಮ್ಮ ಸೇವೆಗಾಗಿ ಅನೇಕ ಪ್ರಶಸ್ತಿ/ಪುರಸ್ಕಾರಗಳನ್ನು ಪಡೆದಿದ್ದಾರೆ. ಕೆಲವು ಶೈಕ್ಷಣಿಕ ಸಂಸ್ಥೆಗಳ ಸಂಸ್ಥಾಪಕರಾಗಿಯೂ ಶ್ರೀಯುತರು ಸೇವೆ ಸಲ್ಲಿಸಿದ್ದಾರೆ. ಶೈಕ್ಷಣಿಕ ಸಂಶೋಧನೆಗಾಗಿ NCERT ಯಿಂದ ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿಗಳಿಸಿದ್ದಾರೆ. ಅಕಾಶವಾಣಿಯ ಹಲವಾರು ಕಾರ್ಯಕ್ರಮಗಳಲ್ಲಿ ಇಂದಿಗೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

**ಡಾ. ಎಸ್. ಶ್ರೀಕಂಠಸ್ವಾಮಿ,** ಬಿ.ಎಸ್ಸಿ., ಎಂ.ಎ., ಎಂ.ಎಡ್., ಪಿಎಚ್.ಡಿ.
ನಂ. 108, 'ಶ್ರೀಮಂಜು'
4ನೇ ಅಡ್ಡರಸ್ತೆ, ಆರ್.ಕೆ.ಲೇಔಟ್,
ಪದ್ಮನಾಭನಗರ, ಬೆಂಗಳೂರು–560 070

ಶ್ರೀಯುತರು ಬೆಂಗಳೂರಿನ ಪ್ರತಿಷ್ಠಿತ ಕ್ರೈಸ್ಟ್ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದ ಹೆಚ್ಚುವರಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದು, ಸುಮಾರು 18ಕ್ಕೂ ಹೆಚ್ಚು ವಿಷಯಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳು/ಅಧ್ಯಾಪಕರುಗಳು ಪಿಎಚ್.ಡಿ. ಮಾಡಲು ಸಹಕಾರಿಯಾಗಿದ್ದಾರೆ. ಪ್ರಸ್ತುತ ಎಂ.ಫಿಲ್ ಮತ್ತು ಪಿಎಚ್.ಡಿ. ಕೋರ್ಸ್‌ಗಳಿಗೆ ಸಂಶೋಧನಾ ವಿಧಾನಗಳನ್ನು ಬೋಧಿಸುತ್ತಿದ್ದಾರೆ. ಹಾಗೂ ಸಂಶೋಧಕರಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ.

ಸೇಂಟ್ ಪ್ಯಾಟ್ರಿಕ್ಸ್ ಪ್ರೌಢಶಾಲೆಯಲ್ಲಿ ಸುಮಾರು 10 ವರ್ಷಗಳ ಕಾಲ ಸೇವೆ ಸಲ್ಲಿಸಿ, ಆನಂತರ ಬೆಂಗಳೂರಿನ ರಾಷ್ಟ್ರೀಯ ವಿದ್ಯಾಲಯದ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಸುಮಾರು 25 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಆರ್.ವಿ. ಟೀಚರ್ಸ್ ಕಾಲೇಜಿನ ಡಿ.ಇ.ಎಸ್. ಮತ್ತು ಐ.ಎ.ಎಸ್.ಇ. ವಿಭಾಗದಲ್ಲಿ ಸಂಯೋಜನಾಧಿಕಾರಿಯಾಗಿ ನೂರಾರು ಸೇವಾ ನಿರತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಡಿ.ಎಸ್.ಇ.ಆರ್.ಟಿ.ಯ ವಿಜ್ಞಾನ ಪಠ್ಯವಸ್ತು ಸಮಿತಿ ಹಾಗೂ ಪಠ್ಯ ಪುಸ್ತಕ ಸಮಿತಿಯಲ್ಲಿ ಪರಿಶೀಲಕರಾಗಿ ಕಾರ್ಯನಿರ್ವಹಿಸಿದ್ದಾರೆ ಮತ್ತು ಸ್ಯಾಟಲೈಟ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಬಿ.ಇಡಿ. ಪಠ್ಯ ವಸ್ತುವಿನ ರಚನೆಯಲ್ಲಿ ಶೈಕ್ಷಣಿಕ ಮನೋವಿಜ್ಞಾನ ವಿಷಯದ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

"ವಿಮರ್ಶಾತ್ಮಕ ಆಲೋಚನಾ ಕೌಶಲ್ಯಗಳು" ಎಂಬ ಇವರ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಲಭಿಸಿದೆ. ಇವರ ಮಾರ್ಗದರ್ಶನದಲ್ಲಿ 5 ಉಪನ್ಯಾಸಕರು ಪಿಎಚ್.ಡಿ. ಪದವಿ ಪಡೆದರೆ, ಇಬ್ಬರು ಪಿಎಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ ಹಾಗೂ ಪ್ರಸ್ತುತ 6 ಉಪನ್ಯಾಸಕರು ಪಿಎಚ್.ಡಿ.ಯನ್ನು ಮಾಡುತ್ತಿದ್ದಾರೆ. ಇದಲ್ಲದೇ ಇವರ ಮಾರ್ಗದರ್ಶನದಲ್ಲಿ 10 ಜನರು ಎಂ.ಫಿಲ್ ಪದವಿಯನ್ನು ಗಳಿಸಿದ್ದಾರೆ.

2008ನೇ ಇಸವಿಯಲ್ಲಿ ಕರ್ನಾಟಕ ರಾಜ್ಯವು 10ನೇ ತರಗತಿಯ ಪ್ರಶ್ನೆಪತ್ರಿಕೆಯ ಸ್ವರೂಪವನ್ನು ಪರಿಶೀಲಿಸಿ ಸಲಹೆ ನೀಡಲು ರಚಿಸಿದ್ದ ರಾಜ್ಯ ಮಟ್ಟದ ಸಮಿತಿ ಅಧ್ಯಕ್ಷರಾಗಿ ವರದಿಯನ್ನು ಮಂಡಿಸಿ ಆ ದಿಕ್ಕಿನಲ್ಲಿ ಬದಲಾವಣೆ ತರಲು ಕಾರಣಕರ್ತರಾಗಿದ್ದಾರೆ.

1988ರಲ್ಲಿ ಇವರು ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ದೆಹಲಿಯ ಎನ್.ಸಿ.ಇ.ಆರ್.ಟಿ. ಯಿಂದ ಪ್ರಶಸ್ತಿ ದೊರಕಿದೆ.

Digitised by Bharatavani, CIIL

ಇದಲ್ಲದೇ ಶ್ರೀಯುತರು ಸಂಶೋಧನೆ ಮತ್ತು ಸೇವಾನಿರತ ಶಿಕ್ಷಣಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ಪರಿಗಣಿಸಿ ಸ್ವಯಂ ಸೇವಾ ಸಂಘಗಳು ಇವರಿಗೆ "ದ್ರೋಣ ಪುರಸ್ಕಾರ" ಮತ್ತು ಜ್ಞಾನ ಸರಸ್ವತಿ" ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

**ಪ್ರೊ. ಕೆ. ಆರ್. ನಾಗರತ್ನ,** ಎಂ.ಎ., ಎಂ.ಎಡ್., ಪಿ.ಜಿ.ಡಿ.ಎಚ್.ಇ.
ನಿವೃತ್ತ ಪ್ರಾಧ್ಯಾಪಕರು
ಸೇಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ
ಜಯಲಕ್ಷ್ಮಿಪುರಂ, ಮೈಸೂರು.

ಪ್ರೊ. ಕೆ.ಆರ್. ನಾಗರತ್ನರವರು 1973 ರಿಂದ 1991ರವರೆಗೆ ಹಾಸನದ ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು 1991 ರಿಂದ ನಿವೃತ್ತರಾಗುವವರೆಗೆ ಮೈಸೂರಿನ ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಹಲವು ಪುನಶ್ಚೇತನ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಹಾಸನದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ವಿಚಾರ ಸಂಕಿರಣದಲ್ಲಿ 'ಕನ್ನಡ ಕಾವ್ಯ' ಎಂಬ ಪ್ರಬಂಧ ಮಂಡಿಸಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

## ಯೋಜನಾ ಸಹಾಯಕರ ಪರಿಚಯ

**ಶ್ರೀ ಎ.ಎಲ್. ಚಿದಾನಂದ** ಎಂ.ಎಡ್., ಪಿ.ಜಿ.ಡಿ.ಎಚ್.ಇ.
ಸಂಶೋಧನಾ ವಿದ್ಯಾರ್ಥಿ
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮಾನಸಗಂಗೋತ್ರಿ, ಮೈಸೂರು – 06

ಶ್ರೀ ಎ. ಎಲ್. ಚಿದಾನಂದರವರು 2009ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಶಿಕ್ಷಣಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಶಿಕ್ಷಣಶಾಸ್ತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇವರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ. ಶ್ರೀಯುತರು 2009 ರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಪ್ರಾಯೋಜನೆಯಲ್ಲಿ ಯೋಜನಾ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಲೇಖಕರ ಪರಿಚಯ

**ಶ್ರೀಮತಿ ಆಶಾ ಪ್ರೇಮಲತಾ** ಎಂ.ಎ; ಎಂ.ಎಡ್; ಎಂ.ಫಿಲ್.
ಪ್ರಾಂಶುಪಾಲರು
ಎಸ್‌ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು

ಇವರು ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 26 ವರ್ಷಗಳಿಂದ ಶಿಕ್ಷಣಶಾಸ್ತ್ರ ರೀಡರ್ ಆಗಿ ಸೇವೆ ಸಲ್ಲಿಸಿ ಪ್ರಸ್ತುತ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸಮನ್ವಯ ಸಮಿತಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಶ್ರೀಮತಿಯವರು ಹಲವಾರು ವರ್ಷಗಳು ಬಿ.ಓ.ಇ. ಮಂಡಳಿಯ ಸದಸ್ಯರಾಗಿ ಹಾಗೂ ಪ್ರಸ್ತುತ ಬಿ.ಓ.ಎಸ್. ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***

**ಡಾ. ಎರ್ರಿಸ್ವಾಮಿ ಎಂ.ಸಿ.** ಎಂ.ಎಸ್ಸಿ., ಎಂ.ಎ., ಎಂ.ಇಡಿ., ಎಂ.ಫಿಲ್., ಪಿಎಚ್.ಡಿ., ಪಿ.ಜಿ.ಡಿ.ಎಚ್.ಇ.
ಸಹ ಪ್ರಾಧ್ಯಾಪಕರು
ಸ್ಕೂಲ್ ಆಫ್ ಎಜುಕೇಷನ್ (ಎಂ.ಇಡಿ.)
ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ,
ಬೆಳಗಾವಿ – 591 156

ಶ್ರೀಯುತರು ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 1996 ರಿಂದ 2012 ರವರೆಗೆ ಬೆಂಗಳೂರಿನ ಡಿ.ಇಡಿ. ಕಾಲೇಜು ಹಾಗೂ ಬಿ.ಇಡಿ. ಕಾಲೇಜುಗಳಲ್ಲಿ ಹಾಗೂ ಸರ್ವಜ್ಞ ಶಿಕ್ಷಣ ಮಹಾವಿದ್ಯಾಲಯ, ವೆಂಕಟ್ ಇಂಟರ್‌ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ ಹಾಗೂ ಮೈಸೂರಿನ ಹತ್ತಿರ ಸುತ್ತೂರಿನಲ್ಲಿರುವ ಜೆ.ಎಸ್.ಎಸ್. ಸ್ನಾತಕೋತ್ತರ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ವಿಷಯಾಧಾರಿತ ಇತಿಹಾಸ ಹಾಗೂ ಪೌರನೀತಿ "ಬೋಧನಾ ವಿಧಾನ" ಮತ್ತು "ದೂರ ಶಿಕ್ಷಣ"ಕ್ಕೆ ಸಂಬಂಧಿಸಿದಂತೆ ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀಯುತರು 75 ಕ್ಕಿಂತ ಹೆಚ್ಚು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಸಮ್ಮೇಳನ ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸಿ 35 ಕ್ಕಿಂತ ಹೆಚ್ಚು ಪ್ರಬಂಧಗಳನ್ನು ಮಂಡಿಸಿದ್ದಾರೆ.

Digitised by Bharatavani, CIIL

**ಡಾ. ಐಹೊಳ್ಳಿ ವಿ. ಡಿ.** ಎಂ.ಎ; ಎಂ.ಎಡ್; ಎಂ.ಫಿಲ್; ಪಿಎಚ್.ಡಿ;
ಪ್ರಾಧ್ಯಾಪಕರು ಎಂಎಡಿಇ
ಜೆ. ಎಸ್. ಎಸ್. ಶಿಕ್ಷಣ ಮಹಾವಿದ್ಯಾಲಯ
ಬಿಜಾಪುರ – 582 102

ಇವರು 1982 ರಿಂದ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಬಿಜಾಪುರದಲ್ಲಿ ಕೆಲಸ ಮಾಡಿದ ನಂತರ 2000 ದಿಂದ ಬಿಜಾಪುರದಲ್ಲಿ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಸುಮಾರು 20 ಶೈಕ್ಷಣಿಕ ಪ್ರಬಂಧಗಳನ್ನು ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ 5 ಶೈಕ್ಷಣಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಚಿಂತಾಮಣಿ, ಹುಡುಕುದೀಪ, ಯಂತ್ರರ್ಷಿ ಮುಂತಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ.

***

**ಶ್ರೀಮತಿ ಕಲ್ಪನ ಎಸ್. ಪ್ರಕಾಶ್**
ಮುಖ್ಯ ಸಂಯೋಜಕರು,
ಕೆ.ಪಿ.ಎ.ಎಂ.ಆರ್.ಸಿ., ಜಯನಗರ ಮೊದಲನೇ ಬ್ಲಾಕ್,
ಬೈರಸಂದ್ರ, ಬೆಂಗಳೂರು

ಶ್ರೀಮತಿ ಕಲ್ಪನ ಪ್ರಕಾಶ್ ಮಾನಸ ಗಂಗೋತ್ರಿ ಹಾಗೂ ಜ್ಞಾನ ಭಾರತಿ ಬೆಂಗಳೂರು ಸೈಕಾಲಜಿ ವಿಭಾಗದಿಂದ ಎಂ.ಎ. ಮತ್ತು ಎಂ.ಫಿಲ್ ಪದವಿಗಳನ್ನು ಪಡೆದಿದ್ದಾರೆ. ಬುದ್ಧಿಮಾಂದ್ಯ ಕ್ಷೇತ್ರದಲ್ಲಿ 20 ವರ್ಷ ಉಪನ್ಯಾಸಕರಾಗಿ ಕೆಲಸ ಮಾಡಿ ಈಗ ಬೆಂಗಳೂರಿನಲ್ಲಿ ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ಸಮಾಲೋಚನೆ, ಸಲಹೆ ನೀಡುತ್ತಿದ್ದಾರೆ. ಬುದ್ಧಿಮಾಂದ್ಯ ಮಕ್ಕಳ ವೃತ್ತಿಪರ ತರಬೇತಿ ಬಗ್ಗೆ ಡ್ಯಾನಿಡಾ ಹಾಗೂ ನೆದರ್‌ಲ್ಯಾಂಡ್ ಎನ್.ಜಿ.ಓ. ಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಬುದ್ಧಿಮಾಂದ್ಯ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ 13 ವಿವಿಧ ಕೋರ್ಸ್ ಸಂಸ್ಥೆಗಳೊಂದಿಗೆ ಪಠ್ಯ ರಚನೆ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದಾರೆ.

**ಶ್ರೀ ಕಾಂತರಾಜ್ ಎಂ.ಎಸ್.** ಎಂ.ಎಸ್ಸಿ., ಎಂ.ಎಡ್,
ಸಹಾಯಕ ಪ್ರಾಧ್ಯಾಪಕರು
ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ
ಅರಸೀಕೆರೆ, ಹಾಸನ (ಜಿ).

ಶ್ರೀಯುತರು ಪಿ.ಎಚ್.ಡಿ. ಪದವಿಗಾಗಿ ಡಾ. ಜಿ. ಶೀಲಾ, ಸಹಾಯಕ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ ಇವರ ಮಾರ್ಗದರ್ಶನದಲ್ಲಿ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ. ರಾಜ್ಯ, ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿ ಹಲವು ರಾಜ್ಯ, ರ಼ಾಷ್ಟ್ರ ಮಟ್ಟದಲ್ಲಿನ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. 2010ರಿಂದ ಇಲ್ಲಿಯವರೆಗೂ ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

***

**ಶ್ರೀ ಕಾಳೇಶ್ವರರಾವ್ ಎನ್.** ಬಿ.ಎಸ್ಸಿ; ಎಂ.ಎಡ್.
ನಂ. 1344, ಶಿವಶ್ರೀ, ಮೊದಲನೇ ಮಹಡಿ,
26ನೇ ಮುಖ್ಯ ರಸ್ತೆ, 24ನೇ ಕ್ರಾಸ್,
ಬನಶಂಕರಿ 2ನೇ ಹಂತ, ಬೆಂಗಳೂರು –560 070

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಪ್ರೌಢಶಾಲೆ, ಶಿಕ್ಷಣಾಧಿಕಾರಿಗಳ ಕಛೇರಿ, ಪ್ರಶಿಕ್ಷಕ, ಶಿಕ್ಷಕ, ಮುಖ್ಯ ಶಿಕ್ಷಕ, ಉಪನ್ಯಾಸಕ, ತನಿಖಾಧಿಕಾರಿ ಹೀಗೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ವಿಜ್ಞಾನ, ಶಿಕ್ಷಣ, ಸಾಹಿತ್ಯ ಸಂಬಂಧಿ ಲೇಖನ, ಪ್ರಬಂಧ, ವಿಚಾರ ಮಂಡನೆ, ಪತ್ರಿಕೆ, ಆಕಾಶವಾಣಿಗಳಲ್ಲಿ ಕ್ರಿಯಾ ಸಂಶೋಧನೆಗೆ ಡಿಎಸ್‌ಇಆರ್‌ಟಿ, ಎನ್‌ಸಿಇಆರ್‌ಟಿ ಪ್ರಶಸ್ತಿಗಳು, ಏರ್ ಇಂಡಿಯಾದ ಬ್ರಾಡ್‌ಔಟ್‌ಲುಕ್ ಲರ್ನರ್ ಟೀಚರ್ (BOLT) ಪ್ರಶಸ್ತಿ ಪಡೆದಿದ್ದಾರೆ. ಇವರು ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

**ಶ್ರೀ ಕುಮಾರ್ ಎಸ್.ಎನ್.** ಎಂ.ಎಸ್ಸಿ.
ಆಯ್ಕೆ ಶ್ರೇಣಿ ಗ್ರಂಥಪಾಲಕರು
ಮಹಿಳಾ ಸರ್ಕಾರಿ ಕಾಲೇಜು,
ಮಂಡ್ಯ – 571 401

ಪ್ರಸ್ತುತ ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಆಯ್ಕೆ ಶ್ರೇಣಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು ಸುಮಾರು 11 ವರ್ಷಗಳಿಗೂ ಹೆಚ್ಚು ಕಾಲ ಗ್ರಂಥಪಾಲಕರಾಗಿ ವಿವಿಧ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎಲ್.ಐ.ಎಸ್ಸಿ. ಗೆ ಸಂಬಂಧಿಸಿದ ಹಲವಾರು ಸಿದ್ಧಪಾಠಗಳನ್ನು ರಚಿಸಿದ್ದಾರೆ. ಇವರಿಂದ ರಚಿತವಾದ ಹಲವಾರು ಲೇಖನಗಳು ರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಮಂಡನೆಯಾಗಿವೆ.

***

Digitised by Bharatavani, CIIL

**ಡಾ. ಕೊಂಗವಾಡ ಎನ್. ಬಿ.**
ಸನ ಕಾಲೇಜ್ ಆಫ್ ಎಜುಕೇಷನ್
ಬೈಂದೇವರಕೊಪ್ಪ, ಹುಬ್ಬಳ್ಳಿ.

ಹುಬ್ಬಳ್ಳಿಯ ಸನಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ಇವರು ಮೂವತ್ತು ವರ್ಷಗಳ ಆಡಳಿತಾತ್ಮಕ ಹಾಗೂ ಬೋಧನಾನುಭವಗಳನ್ನು ಹೊಂದಿದ್ದಾರೆ. ಬಿ.ಎಡ್. ಹಾಗೂ ಎಂ.ಎಡ್. ವಿದ್ಯಾರ್ಥಿಗಳಿಗಾಗಿ ಒಟ್ಟು 75 ಗ್ರಂಥಗಳನ್ನು ರಚಿಸಿದ್ದಾರೆ.

***

**ಡಾ. ಗೀತಾ ಎಸ್.** ಬಿ.ಎಸ್ಸಿ; ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಂಶುಪಾಲರು
ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ.

ಇವರು ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ ಇಲ್ಲಿ 1981 ರಿಂದ ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತುತ ಅದೇ ಸಂಸ್ಥೆಯ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಶೈಕ್ಷಣಿಕ ಹಾಗೂ ವೈಚಾರಿಕ ಲೇಖನಗಳ ಬರವಣಿಗೆಯಲ್ಲಿ ಆಸಕ್ತಿ ಹೊಂದಿದ್ದಾರೆ.

**ಶ್ರೀ ಗೋಪಾಲಸ್ವಾಮಿ ಎಂ.** ಎಂ.ಎಸ್ಸಿ.
ಉಪ ಗ್ರಂಥಪಾಲಕರು
ಕರಾಮುವಿ, ಮಾನಸಗಂಗೋತ್ರಿ, ಮೈಸೂರು

ಕ.ರಾ.ಮು.ವಿ.ಯ ಮೈಸೂರಿನಲ್ಲಿ ಗ್ರಂಥಾಲಯದ ಉಪ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಯುತರು ಈ ಹಿಂದೆ 10 ವರ್ಷಗಳ ಕಾಲ ಬಾಳೆಹೊನ್ನೂರಿನಲ್ಲಿರುವ ಕೇಂದ್ರಿಯ ಕಾಫಿ ಸಂಶೋಧನಾ ಸಂಸ್ಥೆಯಲ್ಲಿ (ಸಿ.ಸಿ.ಆರ್.ಐ.) ಸಹಾಯಕ ಗ್ರಂಥಪಾಲಕರಾಗಿ ಹಾಗೂ ಮೂರು ವರ್ಷಗಳ ಕಾಲ ಮೈಸೂರಿನ ಫರೂಖಿಯಾ ಫಾರ್ಮಸಿ ಕಾಲೇಜ್‌ನಲ್ಲಿ ಗ್ರಂಥಪಾಲಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಹಲವು ರಾಷ್ಟ್ರೀಯ/ಅಂತರರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಮೌಲಿಕವಾದ ಪ್ರಬಂಧಗಳನ್ನು ಮಂಡಿಸಿದ್ದಾರೆ.

***

**ಪ್ರೊ. ಚಂದ್ರಶೇಖರ್ ಬಿ.ಎಂ.** ಬಿ.ಇ., ಎಂ.ಟೆಕ್
ನಂ. 1009, 'ಕಲ್ಪದ್ರುಮ', "E" & "F" ಬ್ಲಾಕ್,
ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು.

ಶ್ರೀಯುತರು ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಮೈಸೂರಿನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸುಮಾರು 14 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಆಧ್ಯಾತ್ಮ ಹಾಗೂ ವೈಜ್ಞಾನಿಕ ವಿಷಯಗಳಲ್ಲಿ ಆಳವಾದ ಆಸಕ್ತಿ ಹೊಂದಿರುವ ಇವರ ಅನೇಕ ಅಧ್ಯಾತ್ಮಿಕ ಹಾಗೂ ವೈಜ್ಞಾನಿಕ ಲೇಖನಗಳು 'ಕಸ್ತೂರಿ', 'ಮಂಜುವಾಣಿ', 'ಕರ್ಮವೀರ, 'ಸದ್ಬೋಧ ಚಂದ್ರಿಕೆ' ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಚಾರ ಪುಸ್ತಕ ಮಾಲೆಗೆ 'ವೈಜ್ಞಾನಿಕ ಆವಿಷ್ಕಾರಗಳ ಇತಿಹಾಸ' ಎಂಬ ಪುಸ್ತಕ ಬರೆದಿದ್ದಾರೆ. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶಕ್ಕೆ ಅನೇಕ ಲೇಖನಗಳನ್ನು ಅನುವಾದಿಸಿ ಕೊಟ್ಟಿದ್ದಾರೆ.

***

**ಡಾ. ಚಂದ್ರಶೇಖರ್ ಹೆಚ್.ಎಲ್.** ಎಂ.ಎ; ಪಿಎಚ್.ಡಿ.
ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಶ್ರೀಯುತರು ಮೈಸೂರು ಮಾನಸಗಂಗೋತ್ರಿಯ ತತ್ವಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಶ್ರೀ ಅನ್ನಮಾಚಾರ್ಯರನ್ನು ಕುರಿತ ಅವರ ಸಂಶೋಧನಾ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ನೀಡಿದೆ. ಇವರು ಸಂವಾದ ತರಂಗಿಣಿ, ಶಿಷಾಪತ್ರಿ, ಚಿಂತನಭಾರತಿ, ರಾಮಕೃಷ್ಣರಿಂದ ರಮಣರ ವರೆಗೆ, ವೇದಾಂತಿ ಶಿವರಾಮ ಶಾಸ್ತ್ರಿ ಎಂಬ ಹೊತ್ತಿಗೆಗಳನ್ನು ಬರೆದಿದ್ದಾರೆ. ಈಚೆಗೆ 'ದರ್ಶನ ಲೋಕ' ಎಂಬ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ತತ್ವಶಾಸ್ತ್ರವನ್ನು ಕುರಿತ ಲೇಖನಗಳ ಸಂಗ್ರಹವನ್ನು ಹೊರತಂದಿದ್ದಾರೆ.

***

**ಶ್ರೀ ಚಿದಾನಂದ ಎನ್. ಕೆ.** ಎಂ.ಎ,. ಎಂ.ಎಡ್., ಪಿಜಿಡಿಎಂಸಿಜೆ
ಸಹಾಯಕ ಪ್ರಾಧ್ಯಾಪಕರು
ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ,
ಮಂಡ್ಯ.

ಪ್ರಸ್ತುತ PET ಶಿಕ್ಷಣ ಸ್ನಾತಕೋತ್ತರ ಕೇಂದ್ರ, ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧನೆ ಕೈಗೊಂಡಿರುತ್ತಾರೆ.

Digitised by Bharatavani, CIIL

**ಡಾ. ಜಾನಕಿ ಎಂ.** ಎಂ.ಎಸ್ಸಿ., ಎಂ.ಎಡ್., ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ,
ಮಾನಸಗಂಗೋತ್ರಿ, ಮೈಸೂರು – 06

ಶ್ರೀಮತಿಯವರು ಮೈಸೂರಿನ ಕಾಗಿನೆಲೆ ಬಿ.ಎಡ್. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆಸಲ್ಲಿಸಿ ಈಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಳೆದ 14 ವರ್ಷಗಳಿಂದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಬರೆದಿದ್ದಾರೆ. ಇವರು ಹಲವಾರು ಸಮ್ಮೇಳನಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಬಂಧಗಳನ್ನು ಮಂಡಿಸಿದ್ದಾರೆ. ಜೊತೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಅನೇಕ ರೇಡಿಯೋ ಪಾಠಗಳನ್ನು ರಚಿಸಿದ್ದಾರೆ.

***

**ಶ್ರೀ ನರಸಿಂಗರಾವ್ ಕೆ. ವಿ.**
ಸಂಯೋಜಕರು ಎಚ್.ಆರ್.ಡಿ.
ಶ್ರೀ ರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್,
ಸಿಎ 1–B, 3ನೇ ಕ್ರಾಸ್, 3ನೇ ಫೇಸ್,
ಜೆ.ಪಿ. ನಗರ, ಬೆಂಗಳೂರು – 78

ರಾಜ್ಯ ಪ್ರಶಸ್ತಿ ವಿಜೇತರಾದ ಶ್ರೀಯುತ ಕೆ.ವಿ. ನರಸಿಂಗರಾವ್ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೋಕಿನ ಕುರುಡುಮಲೆ ಗ್ರಾಮದವರು. ಇವರು ಸ್ನಾತಕೋತ್ತರ ಪದವಿಯ ನಂತರ ಎಂ.ಎಡ್. ಹಾಗೂ ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಪದವಿ ಪಡೆದಿದ್ದಾರೆ. ಇವರು ಕಳೆದ 25 ವರ್ಷಗಳಿಂದ ಶೀ ರಮಣ ಮಹರ್ಷಿ ಅಂಧರ ಪರಿಷತ್ತಿನಲ್ಲಿ ಅಂಧರಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಂಗವಿಕಲರ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಇವರ ಸೇವೆಯನ್ನು ಗುರುತಿಸಿದ ಕರ್ನಾಟಕ ಸರ್ಕಾರವು 2007ರಲ್ಲಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರು ಈಗಾಗಲೇ "ಸಮನ್ವಯ ಸಮನ್ವಿತ ಹಾಗೂ ಹ್ಯಾಂಡ್‌ಬುಕ್ ಆನ್ ವಿಸುವಲ್ ಇಂಪೇರ್‌ಮೆಂಟ್" ಎಂಬ ಎರಡು ಪುಸ್ತಕಗಳನ್ನು ಬರೆದಿದ್ದಾರೆ ಹಾಗೂ ವಿಶೇಷ ಶಿಕ್ಷಣದಲ್ಲಿನ ಡಿ.ಎಡ್. ಕೋರ್ಸಿನ ಪಠ್ಯಕ್ರಮವನ್ನು ಪೂರ್ಣವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ಶ್ರೀ ರಮಣ ಮಹರ್ಷಿ ಅಂಧರ ಪರಿಷತ್ತಿನಲ್ಲಿ ಇವರು ಶ್ರೀ ರಮಣ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ತರಬೇತಿ ಸಂಯೋಜಕರಾಗಿ ಹಾಗೂ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತ ಸರ್ಕಾರದ ಭಾರತೀಯ ಪುನರ್ವಸತಿ ಮಂಡಲಿಯಲ್ಲಿ ರಾಷ್ಟ್ರೀಯ ಮಂಡಳಿಯ ಸದಸ್ಯರಾಗಿದ್ದಾರೆ.

**ಡಾ. ನರಸಿಂಹಮೂರ್ತಿ ಆರ್.** ಬಿ.ಎಸ್ಸಿ; ಎಂ.ಎ; ಎಂ.ಎಡ್; ಎಲ್.ಎಲ್.ಬಿ; ಪಿಎಚ್.ಡಿ.
ಪ್ರಾಂಶುಪಾಲರು,
ಜ್ಞಾನೇಶ್ವರಿ ಶಿಕ್ಷಣ ಮಹಾವಿದ್ಯಾಲಯ,
ಸಾಗರ ರಸ್ತೆ, ಭಟ್ಕಳ

ಇವರು ಸೆಪ್ಟಂಬರ್ 1980 ರಿಂದ ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಎನ್.ಸಿ.ಟಿ.ಇ. ಬೆಂಗಳೂರು ಇದರ ನಿರೀಕ್ಷಣ ತಂಡದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುವರು. ಶ್ರೀಯುತರು ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಸಮಿತಿಗಳಲ್ಲಿ ಸದಸ್ಯರು ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಸಾಮಾಜಿಕ ಮತ್ತು ಶೈಕ್ಷಣಿಕ ಸಂಘಟನೆಗಳಲ್ಲಿ ಅಧ್ಯಕ್ಷರು ಮತ್ತು ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

***

**ಪ್ರೊ. ನಾಗರತ್ನ ಕೆ. ಆರ್.** ಎಂ.ಎ., ಎಂ.ಎಡ್.
ನಿವೃತ್ತ ಪ್ರಾಧ್ಯಾಪಕರು
ಸೇಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ
ಜಯಲಕ್ಷ್ಮಿಪುರಂ, ಮೈಸೂರು.

ಶ್ರೀಮತಿಯವರ ಪರಿಚಯವನ್ನು ಸಂಪಾದಕ ಮಂಡಳಿ ಸದಸ್ಯರ ಪರಿಚಯದಲ್ಲಿ ಮಾಡಿಕೊಡಲಾಗಿದೆ.

***

**ಡಾ. ನಾಗರಾಜ್ ಜಿ. ಯು.** ಎಂ.ಎಸ್ಸಿ., ಎಂ.ಎಡ್., ಪಿಜಿಡಿಎಚ್ಇ, ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ.

2003 ರಿಂದ ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯ, ಹರಿಹರದಲ್ಲಿ ಗಣಿತ ವಿಷಯದ ಪ್ರಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿ ನಂತರ ಇವರು ಅಲ್ಲಿಯ ಎಂ.ಎಡ್. ವಿಭಾಗದಲ್ಲಿ ಸಂಯೋಜನಾಧಿಕಾರಿಯಾಗಿ ಸೇವೆಯನ್ನು ಸಲ್ಲಿಸಿ ನಂತರ ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾವೇರಿ ಶಿಕ್ಷಣ ಮಹಾವಿದ್ಯಾಲಯ, ಕೂಡಿಗೆಹಳ್ಳಿ, ಬೆಂಗಳೂರು ಇಲ್ಲಿ ಸುಮಾರು 5 ವರ್ಷಗಳ ಕಾಲ ಭೌತ ಮತ್ತು ಗಣಿತ ಶಾಸ್ತ್ರಗಳ ಪ್ರಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿದ ನಂತರ ಪ್ರಸ್ತುತ 2010 ರಿಂದ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇಲ್ಲಿನ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕರಾಗಿ

Digitised by Bharatavani, CIIL

ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಪಿಎಚ್.ಡಿ. ಪದವಿಯನ್ನು 2012 ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದಿಂದ ಪಡೆದಿದ್ದಾರೆ. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನ, ಕಾರ್ಯಗಾರಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ.

***

**ನಂದಿನಿ ಪಿ.** ಎಂ.ಎಸ್ಸಿ.(ಮನೋವಿಜ್ಞಾನ), ಎಂ.ಫಿಲ್.
ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್.ಐ.ಇ.),
ಮೈಸೂರು

ಮನೋವಿಜ್ಞಾನದಲ್ಲಿ ಮಾರ್ಗದರ್ಶನ ಮತ್ತು ಸಮಾಲೋಚನೆ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವ ಶ್ರೀಮತಿ ನಂದಿನಿ ರವರು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆ ಆಗಿಂದಾಗ್ಗೆ ಆಯೋಜಿಸುವ ಜೀವನ ಕೌಶಲಗಳ (Life Skills) ತರಬೇತಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾನಿಲಯದಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದ ನಂತರ ಕಳೆದ ಮೂರು ವರ್ಷಗಳಿಂದ ಬೆಂಗಳೂರಿನ ಕ್ರಿಸ್ತ ಜಯಂತಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಮನೋವಿಜ್ಞಾನದಲ್ಲಿ ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ.

***

**ಡಾ. ಪದ್ಮಾವತಿ ಎಂ.**
ಪ್ರಾಧ್ಯಾಪಕರು
ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳೂರು.

ಇವರು ಮಂಗಳೂರಿನ ಸಂತ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಮಂಗಳೂರಿನ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ಡೀನರಾಗಿ ಎರಡು ವರ್ಷ ಸೇವೆಸಲ್ಲಿಸಿದ್ದಾರೆ. ಇವರು N.C.E.R.T New Delhi ಯ ಪ್ರಶಸ್ತಿ ಪಡೆದಿದ್ದಾರೆ. ನಾಲ್ಕು ಪುಸ್ತಕಗಳನ್ನು, 17 ಲೇಖನಗಳನ್ನು ರಚಿಸಿದ್ದಾರೆ. 16 ಸಂಶೋಧನ ಪ್ರಾಯೋಜನೆಗಳನ್ನು ಮುಗಿಸಿದ್ದಾರೆ.

***

**ಡಾ. ಪಾರ್ಶ್ವನಾಥ್ ಹೆಚ್.ಎ.** ಎಂ.ಬಿ.ಬಿ.ಎಸ್; ಎಂ.ಡಿ.
ಪ್ಯಾಥಾಲಜಿ ಪ್ರಾಧ್ಯಾಪಕರು
ಎಸ್‌ಡಿಎಂ ಮೆಡಿಕಲ್ ಕಾಲೇಜು, ಧಾರವಾಡ –580 009

ಇವರು ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (SDM) ವೈದ್ಯಕೀಯ ಕಾಲೇಜಿನಲ್ಲಿ ರೋಗಶಾಸ್ತ್ರ (Pathology) ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಫೆಲೋಶಿಫ್ ಪಡೆದು ಡೆನ್‌ಮಾರ್ಕ್ ಮತ್ತು ಇಂಗ್ಲೆಂಡ್‌ನಲ್ಲಿ ಅಧ್ಯಯನ ಮಾಡಿದ್ದಾರೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಂಶೋಧನ ಲೇಖನಗಳನ್ನು ಮಂಡಿಸಿದ್ದಾರೆ. ಬಳ್ಳಾರಿ, ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರಿನ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿಯೂ, ಕರ್ನಾಟಕ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣದ ಸಹ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

***

**ಡಾ. ಪ್ರಹ್ಲಾದ ಎನ್. ಎನ್.** ಎಂ.ಎ., ಎಂ.ಎಡ್., ಪಿಎಚ್.ಡಿ.
ನಿವೃತ್ತ ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು
ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಮೈಸೂರು

ಮಂಡ್ಯದಲ್ಲಿ ಜನಿಸಿದ ಡಾ. ಎನ್.ಎನ್. ಪ್ರಹ್ಲಾದ ರವರು ಪ್ರಸಕ್ತ ಮೈಸೂರಿನಲ್ಲಿರುವ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಎನ್.ಸಿ.ಇ.ಆರ್.ಟಿ. ಯವರ ದಕ್ಷಿಣ ರಾಜ್ಯಗಳ ನ್ಯಾಷನಲ್ ಅರ್ಲಿ ಲಿಟೆರಸಿ ಕಾರ್ಯಕ್ರಮದ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಲವತ್ತು ಸಂವತ್ಸರಗಳಿಗಿಂತ ಅಧಿಕ ಕಾಲ ಪ್ರಶಿಕ್ಷಕರಾಗಿ ಕಾರ್ಯ ನಿರ್ವಹಿಸಿರುವ ಶ್ರೀಯುತರು ಇದುವರೆಗೆ ರಾಷ್ಟ್ರದ ಪ್ರತಿಷ್ಠಿತ ಪತ್ರಿಕೆಗಳಲ್ಲಿ 820 ಕ್ಕಿಂತ ಅಧಿಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಶ್ರೀಯುತರು 20 ಮಂದಿ ಪಿಎಚ್.ಡಿ. ವಿದ್ಯಾರ್ಥಿಗಳಿಗೆ, 15 ಮಂದಿ ಎಂ.ಫಿಲ್. ವಿದ್ಯಾರ್ಥಿಗಳಿಗೆ ಹಾಗೂ 80 ಮಂದಿ ಎಂ.ಎಡ್. ಡಿಸರ್ಟೇಷನ್ ವಿದ್ಯಾರ್ಥಿಗಳಿಗೆ ಯಶಸ್ವಿ ಮಾರ್ಗದರ್ಶನ ನೀಡಿದ್ದಾರೆ. ದಕ್ಷಿಣ ರಾಜ್ಯಗಳ ಹಲವಾರು ಅಕೆಡಮಿಕ್ ಸ್ಟಾಫ್ ಕಾಲೇಜುಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ನೆರವಾಗಿದ್ದಾರೆ. ಹಲವಾರು ದೇಶ ವಿದೇಶಗಳಿಗೆ ಭೇಟಿ ನೀಡಿ ಅಲ್ಲಿನ ಶಿಕ್ಷಣ ಕ್ರಮ, ಅನುಷ್ಠಾನಗೊಳಿಸಿದ ಪದ್ಧತಿ ಮೊದಲಾದ ಶೈಕ್ಷಣಿಕ ವಿಷಯಗಳನ್ನು ಅಧ್ಯಯನ ಮಾಡಿ ನಮ್ಮ ದೇಶದ ಸಂಬಂಧಪಟ್ಟ ಸಂಸ್ಥೆಗಳಿಗೆ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ.

ಶ್ರೀಯುತರು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಮದ್ರಾಸಿನ ಯು.ಡಬ್ಲ್ಯು.ಎ. ಯ 'ಬೆಸ್ಟ್ ಕಾಂಟ್ರಿಬ್ಯೂಟರ್ಸ್ ಪ್ರಶಸ್ತಿ' ಹಾಗೂ ಜರ್ನಲಿಸಂನಲ್ಲಿನ 'ಶ್ರೇಷ್ಠತೆ ಪ್ರಶಸ್ತಿ'. ಅಮೇರಿಕಾದ ಬಯೋಗ್ರಾಫಿಕಲ್ ಸೊಸೈಟಿಯು 'ಮ್ಯಾನ್

Digitised by Bharatavani, CIIL

ಆಫ್ ದ ಇಯರ್ 2000' ಎಂದು ಗೌರವಿಸಿದೆ. ಇವುಗಳೇ ಅಲ್ಲದೆ ಹಲವಾರು ಹವ್ಯಾಸಿ ಕಲಾ ತಂಡಗಳ ನಟರಾಗಿ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ.

***

**ಡಾ. ಪ್ರೀತಿ ಭಂಡಾರಕರ** ಎಂ.ಎ; ಎಂ.ಎಡ್; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಕಮಲಾ ಬಾಳಿಗ ವಿಶ್ವವಿದ್ಯಾನಿಲಯ
ಕುಮಟ, ಉ.ಕನ್ನಡ(ಜಿ)

ಶಿಕ್ಷಣ, ಮಹಿಳಾ ಸಬಲೀಕರಣ, ಜೀವನ ಮೌಲ್ಯಗಳು ಇತ್ಯಾದಿ ವಿಷಯಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಶಿಕ್ಷಣ ವಿಷಯ ಹಾಗೂ ಮೌಲ್ಯ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಸಂಸ್ಕೃತ ಬೋಧನಾ ಪದ್ಧತಿಯ ಮೇಲೆ ಸ್ವಯಂ ಕಲಿಕಾ ಪುಸ್ತಕಗಳನ್ನು ಬರೆದಿದ್ದಾರೆ. 20 ವರ್ಷಗಳಿಂದ ಕಮಲಾ ಬಾಳಿಗ ಶಿಕ್ಷಣ ಮಹಾವಿದ್ಯಾಲಯ, ಕುಮಟಾದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***

**ಶ್ರೀ ಬಸವಂತರಾಯ ಪಾಟೀಲ**
ಪ್ರಾಧ್ಯಾಪಕರು
ಎಸ್.ಕೆ.ಎಂ.ಕೆ. ಶಿಕ್ಷಣ ಮಹಾವಿದ್ಯಾಲಯ, ರಾಯಚೂರು

ಶ್ರೀ ಬಸವಂತರಾಯ ಪಾಟೀಲರು ಯಾದಗಿರಿಯಲ್ಲಿ 2 ವರ್ಷಗಳ ವರೆಗೆ ಪದವಿ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಮತ್ತು ಯಾದಗಿರಿಯ ಮುರಾರ್ಜಿ ದೇಸಾಯಿ ವಿದ್ಯಾಲಯದಲ್ಲಿ 3 ವರ್ಷಗಳ ವರೆಗೆ ಪ್ರಾಚಾರ್ಯರಾಗಿ ಕೆಲಸ ಮಾಡಿದ ನಂತರ ಸದ್ಯದಲ್ಲಿ ರಾಯಚೂರಿನ ಎಸ್.ಕೆ.ಎಂ.ಕೆ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 6 ವರ್ಷಗಳಿಂದ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***

**ಡಾ. ಬಿರಾದಾರ ಎಲ್.ಎಸ್.** ಎಂ.ಎ; ಎಂ.ಪಿ.ಎಡ್; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ದೈಹಿಕ ಶಿಕ್ಷಣ ವಿಭಾಗ
ಎಲ್‌ವಿಡಿ ಮಹಾವಿದ್ಯಾಲಯ, ರಾಯಚೂರು.

ಕರ್ನಾಟಕ ವಿಶ್ವವಿದ್ಯಾನಿಲಯದಿಂದ ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ದೈಹಿಕ ಶಿಕ್ಷಣದಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ಶ್ರೀಯುತರು 1974ರಲ್ಲಿ ದೈಹಿಕ ಮತ್ತು ಸಾಂಸ್ಕೃತಿಕ ಬೋಧಕರಾಗಿ ಸೇವೆ ಆರಂಭಿಸಿದರು. ಪ್ರಸಕ್ತ ರಾಯಚೂರಿನ ತಾರಾನಾಥ ಶಿಕ್ಷಣ ಸಂಸ್ಥೆಯ ಎಲ್.ವಿ.ಡಿ. ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

***

**ಡಾ. ಮಂಜುನಾಥ ಪಾಟೀಲ್ ಎಂ.ಸಿ.**
ಕೃಷಿ ವಿಜ್ಞಾನ ಕೇಂದ್ರ, ಆಳಂದ ರಸ್ತೆ,
ಗುಲಬರ್ಗ– 585 101

ಡಾ. ಮಂಜುನಾಥ ಪಾಟೀಲ್, ಸಹಾಯಕ ಪ್ರಾಧ್ಯಾಪಕರು (ಪ್ರಾಣಿಶಾಸ್ತ್ರ) ಇವರು ಬಿ.ವಿ.ಎಸ್.ಸಿ. ಮತ್ತು ಎ.ಎಚ್. ಪದವಿಗಳನ್ನು ಪಡೆದಿದ್ದಾರೆ. ಎಂ.ವಿ.ಎಸ್.ಸಿ. (ಶಸ್ತ್ರ ಚಿಕಿತ್ಸೆ) ಪದವಿಯನ್ನೂ ಪಡೆದಿದ್ದಾರೆ. 2010 ರ ವರೆಗೆ ಸುಮಾರು ನಾಲ್ಕು ವರ್ಷಗಳ ಕಾಲ ಕರ್ನಾಟಕ ಸರ್ಕಾರದ ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಪಶು ವೈದ್ಯಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಈಗ ಗುಲಬರ್ಗಾದ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 55 ಜನಪ್ರಿಯ ಲೇಖನಗಳನ್ನು, 10 ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ ಹಾಗೂ ಪಶು ಸಂಗೋಪನೆ ಕುರಿತು ವಿವಿಧ ಕಾರ್ಯಕ್ರಮಗಳನ್ನು ಮಾಧ್ಯಮಗಳ ಮುಖಾಂತರ ರೈತಾಪಿ ಜನರಿಗೆ ತಲುಪಿಸಿದ್ದಾರೆ.

***

**ಪ್ರೊ. ಮಂಜುನಾಥಯ್ಯ ಬಿ.ಎನ್.** ಎಂ.ಎ.(ಮನೋವಿಜ್ಞಾನ), ಎಂ.ಎಡ್.
ನಂ. 1009, 'ಕಲ್ಪದ್ರುಮ', E & F ಬ್ಲಾಕ್,
ಉದಯರವಿ ರಸ್ತೆ.
ಕುವೆಂಪು ನಗರ, ಮೈಸೂರು.

ಶ್ರೀಯುತರ ಪರಿಚಯವನ್ನು ಸಂಪಾದಕ ಮಂಡಳಿ ಸದಸ್ಯರ ಪರಿಚಯದಲ್ಲಿ ಮಾಡಿಕೊಡಲಾಗಿದೆ.

***

Digitised by Bharatavani, CIIL

**ಡಾ. ರಾಜಕುಮಾರ ಆರ್. ಮದನಕರ್** ಎಂ.ಎ; ಎಂ.ಎಡ್; ಎಂ.ಫಿಲ್; ಪಿಎಚ್.ಡಿ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

ಇವರು ಪ್ರಾಧ್ಯಾಪಕರಾಗಿ ಕಳೆದ 13 ವರ್ಷಗಳಿಂದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಹಲವಾರು ಶೈಕ್ಷಣಿಕ ಸಂಶೋಧನಾ ಲೇಖನಗಳು ಪ್ರಮುಖ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಎಂಎಡ್. ಮತ್ತು ಎಂ.ಫಿಲ್. ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಬಂಧಗಳನ್ನು ಮಂಡಿಸಿದ್ದಾರೆ.

***

**ಶ್ರೀ ಮಾಧವ ಗುಡಿ** ಎಂ.ಎ., ಎಂ.ಎಡ್.
ಮನೆ ನಂ. 95, 'ಬನಶಂಕರಿ ನಿವಾಸ',
ವಜ್ರಹನುಮನ ನಗರ 2ನೇ ಹಂತ,
ಡ್ಯಾಪೋಡೈಲ್ಸ್ ಶಾಲೆ ಎದುರು, ಬಾಗಲಕೋಟೆ ರಸ್ತೆ,
ಬಿಜಾಪುರ – 580 101

ಶ್ರೀ ಮಾಧವ ಗುಡಿಯವರು 3 ವರ್ಷಗಳ ಕಾಲ ಬಿಜಾಪುರ ಜಿಲ್ಲೆ, ಇಂಡಿಯ ಲಯನ್ಸ್ ಹೈಸ್ಕೂಲ್‌ನಲ್ಲಿ ಕೆಲಸ ಮಾಡಿದ ನಂತರ ಪ್ರಸ್ತುತದಲ್ಲಿ ಬಿಜಾಪುರದ ಎಸ್.ಎಮ್.ಆರ್.ಕೆ.ವಿ.ವಿ. ಸಂಘ ಶಿಕ್ಷಣ ಮಹಾವಿದ್ಯಾಲಯದಲ್ಲಿ 2010 ರಿಂದ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***

**ಶ್ರೀ ಮಹೇಶ ಎಸ್. ಜೆ.** ಎಂ.ಎ., ಎಂ.ಎಡ್.
ಸಂಶೋಧನಾ ವಿದ್ಯಾರ್ಥಿ
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು – 06

ಶ್ರೀಯುತರು 2009ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಶಿಕ್ಷಣಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹಾಗೂ 2010ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದಿರುತ್ತಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಶಿಕ್ಷಣಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸುತ್ತಿದ್ದಾರೆ. ಇವರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ.

**ಡಾ. ಮಹೇಶ್ ಚಂದ್ರ ಗುರು ಬಿ. ಪಿ.** ಎಂ.ಎ. (ಪತ್ರಿಕೋದ್ಯಮ), ಪಿಎಚ್.ಡಿ.
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಸಂವಹನ ಮತ್ತು ಪತ್ರಿಕೋದ್ಯಮ ಸಂಯುಕ್ತ ಅಧ್ಯಯನ ಮಂಡಳಿ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸೂರು – 06

ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ವಿಭಾಗದಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪತ್ರಿಕೋದ್ಯಮ, ಗ್ರಾಮೀಣ ಸಂವಹನ ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ 30 ವರ್ಷಗಳ ಅನುಭವ ಪಡೆದಿದ್ದಾರೆ. 6 ಮಂದಿ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಸುಮಾರು 60 ಪ್ರಬಂಧಗಳನ್ನು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ. ಇವರ 50 ಕ್ಕೂ ಹೆಚ್ಚಿನ ಲೇಖನಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

***

**ಶ್ರೀ ಮುದ್ದುಮಲ್ಲೇಶ್ ಹೆಚ್.** ಎಂ.ಎ; ಎಂ.ಎಡ್; ಪಿ.ಜಿ.ಡಿ.ಹೆಚ್.ಇ.
ಪ್ರಾಧ್ಯಾಪಕರು
ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ,
ಅರಸೀಕೆರೆ, ಹಾಸನ (ಜಿ)

1981 ರಿಂದ ಅರಸೀಕೆರೆಯ ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಮ್ಮೇಳನ, ಕಾರ್ಯಾಗಾರಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿಕ್ಷಕರ ಮತ್ತು ಪ್ರಶಿಕ್ಷಕರ ಸೇವಾನಿರತ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ್ದಾರೆ.

***

**ಪ್ರೊ. ಮೇರಿರೋಸ್** ಎಂ.ಎ; ಎಂ.ಎಡ್.
ಪ್ರಾಧ್ಯಾಪಕರು
ಸೇಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ,
ಜಯಲಕ್ಷ್ಮಿ ಪುರಂ, ಮೈಸೂರು.

ಸಂತ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯದಲ್ಲಿ 23 ವರ್ಷಗಳಿಂದ ಇತಿಹಾಸ ವಿಭಾಗದ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸಿ ಪ್ರಸ್ತುತ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅನೇಕ ಕಾರ್ಯಾಗಾರಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

Digitised by Bharatavani, CIIL

**ಡಾ. ಯಶೋಧರ ಕೆ.** ಬಿ.ಎಸ್ಸಿ., ಎಂ.ಎ., ಎಂ.ಎಡ್., ಪಿಎಚ್.ಡಿ.
ನಿವೃತ್ತ ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

ಶ್ರೀಮತಿಯವರು 1974 ರಲ್ಲಿ ಮಂಡ್ಯದ ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರು. 1983 ರ ಅವಧಿಯಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಉಪನ್ಯಾಸಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ, ಡೀನ್ ಆಗಿ, ಸೇವೆ ಸಲ್ಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸಮಿತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮುಖ್ಯವಾಗಿ ಮಹಿಳಾ ದೌರ್ಜನ್ಯ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದಾರೆ.

ತಮ್ಮ ಸಮಾರು ನಾಲ್ಕು ದಶಕಗಳ ಕಾಲ ಸಾರ್ಥಕ, ಸಮರ್ಥ ಸೇವಾ ಅವಧಿಯಲ್ಲಿ 16 ಮಂದಿ ಪಿಎಚ್.ಡಿ. ಪದವಿ ಪಡೆಯಲು, 85 ಮಂದಿ ಎಂ.ಎಡ್. ಡೆಸರ್ಟೇಷನ್ ಸಲ್ಲಿಸಲು ಮಾರ್ಗದರ್ಶನ ಮಾಡಿದ್ದಾರೆ. ಈಗಲೂ 8 ಮಂದಿ ವಿದ್ಯಾರ್ಥಿಗಳು ಪಿಎಚ್.ಡಿ. ಪಡೆಯಲು ಅವರ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಶ್ರೀಮತಿಯವರು ಈಗಾಗಲೇ 12 ಶೈಕ್ಷಣಿಕ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಈಗಲೂ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿನ ಅವರ ಸಾಧನೆಗಾಗಿ 2008 ರಲ್ಲಿ "ಹೃದಯವಂತರು" ಪ್ರಶಸ್ತಿ ಪಡೆದಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾಲ್ಕು ಗ್ರಂಥಗಳನ್ನು ರಚಿಸಿದ್ದಾರೆ. ಆಕಾಶವಾಣಿಯ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

***

**ಡಾ. ಯಾದವಾಡ ಎಸ್. ಬಿ.**
ಪ್ರಾಧ್ಯಾಪಕರು
ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ,
ಬಾಗಲಕೋಟೆ.

ಬಾಗಲಕೋಟೆಯ ಬಿ.ವಿ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಮತ್ತು ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ 14 ವರ್ಷಗಳಿಂದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಡಿ.ಎಡ್., ಬಿ.ಎಡ್. ಹಾಗೂ ಎಂ.ಎಡ್. ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ 60 ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

***

**ಶ್ರೀ ರತನ ಭೀ ಚವಾಣ** ಎಂ.ಎಸ್ಸಿ; ಎಂ.ಎಡ್; ಎಂ.ಫಿಲ್.
ಸಹಾಯಕ ಪ್ರಾಧ್ಯಾಪಕರು
ಎಸ್‌ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು

ಇವರು ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 15 ವರ್ಷಗಳಿಂದ ಶಿಕ್ಷಣಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

***

**ಡಾ. ರಾಘವೇಂದ್ರ ರಾವ್ ಹೆಚ್. ಎಸ್.** ಎಂ.ಎ; ಎಂ.ಎಡ್; ಪಿಎಚ್.ಡಿ.
ನಂ. 771, 9ನೇ ಮುಖ್ಯ ರಸ್ತೆ,
ಜೆ.ಪಿ.ನಗರ "ಡಿ" ಬ್ಲಾಕ್, ಮೈಸೂರು – 570 008

ಇವರು ಸರ್ಕಾರಿ ಕಿರಿಯ ಮತ್ತು ಹಿರಿಯ ಕಾಲೇಜುಗಳಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಸುಮಾರು ಮೂರೂವರೆ ದಶಕಗಳ ಕಾಲ ಕೆಲಸ ಮಾಡಿದ್ದಾರೆ. ಭಾರತ ಸರ್ಕಾರದ ಜವಾಹರ್ ನವೋದಯ ವಿದ್ಯಾಲಯದ ಪ್ರಾಚಾರ್ಯರಾಗಿ ಕೆಲಸಮಾಡಿದ್ದಾರೆ. ನಿವೃತ್ತಿಯ ನಂತರ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗಗಳಲ್ಲಿ ಮತ್ತು ಎಸ್. ಕೆ.ಎಮ್.ಕೆ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ.

***

**ಡಾ. ಲೀಲಾ ಕೆ.ಎಸ್.**
ಸಹಾಯಕ ಪ್ರಾಧ್ಯಾಪಕರು
ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ
ಮೈಸೂರು

ಶ್ರೀಮತಿಯವರು ಮೈಸೂರಿನಲ್ಲಿರುವ 'ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ'ದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ವಿಜ್ಞಾನದಲ್ಲಿ ಪದವಿಯನ್ನು ಪಡೆದು, ಮೈಸೂರು ವಿಶ್ವವಿದ್ಯಾನಿಲಯದಿಂದ ಆಂಗ್ಲಭಾಷೆಯಲ್ಲಿ ಮತ್ತು ಶಿಕ್ಷಣಶಾಸ್ತ್ರದಲ್ಲಿ ಸ್ನಾತಕೋತ್ತರಪದವಿಯನ್ನು ಗಳಿಸಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಶಿಕ್ಷಣಶಾಸ್ತ್ರದಲ್ಲಿ 'ಡಾಕ್ಟೊರೇಟ್'

Digitised by Bharatavani, CIIL

ಪದವಿಯನ್ನು ಪಡೆದಿರುತ್ತಾರೆ. ಇವರು 'ಸದರನ್ ಎಕಾನಮಿಸ್ಟ್' ಮತ್ತು 'ಏಷಿಯನ್ ಜರ್ನಲ್ ಆಫ್ ಡೆವೆಲಪ್‌ಮೆಂಟ್ ಮ್ಯಾಟರ್ಸ್' ಎಂಬ ನಿಯತಕಾಲಿಕಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಅಮೃತ ಶಿಕ್ಷಣ ಮಹಾವಿದ್ಯಾಲಯದವರು ಆಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ, ಕ್ರೈಸ್ಟ್ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸಮ್ಮೇಳನದಲ್ಲಿಯೂ ಮತ್ತು ಮೈಸೂರು ವಿಶ್ವವಿದ್ಯಾನಿಲಯದವರು ಆಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿಯೂ ವಿಷಯಮಂಡನೆ ಮಾಡಿರುತ್ತಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಹಾಗೂ ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 'ಬೋರ್ಡ್ ಆಫ್ ಎಜುಕೇಷನ್'ನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

***

**ಶ್ರೀ ಲೋಹಿತ್ ಜೆ.** ಎಂ.ಎ. (ಪತ್ರಿಕೋದ್ಯಮ), ಎಂ.ಫಿಲ್.
ಪ್ರಾಧ್ಯಾಪಕರು
ಪತ್ರಿಕೋದ್ಯಮ ವಿಭಾಗ,
ಮಹಾರಾಜ ಕಾಲೇಜು, ಮೈಸೂರು.

ಶ್ರೀಯುತರು ಕಳೆದ 4 ವರ್ಷಗಳಿಂದ ಮಹಾರಾಜ ಕಾಲೇಜಿನಲ್ಲಿ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು 'ಅನುರಣನ', 'ಸಂಚಲನ' ಮತ್ತು 'ಪ್ರತಿಫಲನ' ಎಂಬ 3 ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಮಾರುಕಟ್ಟೆ ಸಂವಹನ ಎಂಬ ಕೃತಿಯನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಹಲವಾರು ವಿಚಾರ ಸಂಕಿರಣಗಳಲ್ಲಿ ಇವರು ಭಾಗವಹಿಸಿದ್ದಾರೆ. ಇವರ ಲೇಖನಗಳು ಮಾನವಿಕ ಕರ್ನಾಟಕ ಮತ್ತು ಪ್ರಬುದ್ಧ ಕರ್ನಾಟಕ ನಿಯತ ಕಾಲಿಕೆಗಳಲ್ಲಿ ಪ್ರಕಟಗೊಂಡಿದೆ. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಪದವಿಗಾಗಿ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ.

***

**ಶ್ರೀಮತಿ ವಸಂತಕುಮಾರಿ ಸಿ.** ಎಂ.ಎಸ್ಸಿ., ಎಂ.ಎಡ್., ಪಿ.ಜಿ.ಡಿ.ಹೆಚ್.ಇ.
ಸಹಾಯಕ ಪ್ರಾಧ್ಯಾಪಕರು
ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯ,
ಬನ್ನೂರು ರಸ್ತೆ, ಮೈಸೂರು.

ಶ್ರೀಮತಿ ವಸಂತಕುಮಾರಿ ಪ್ರಸ್ತುತದಲ್ಲಿ ಮೈಸೂರಿನ ವಿದ್ಯಾ ವಿಕಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 'ಸಂಸ್ಕೃತ ಸಂಘ'ವನ್ನು ಸಂಘಟಿಸಿದ್ದಾರೆ. ಅನೇಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವುದಲ್ಲದೆ, ಕೆಲವು ಲೇಖನಗಳನ್ನು ಬರೆದಿದ್ದಾರೆ.

***

**ಡಾ. ವಾಮದೇವಪ್ಪ ಹೆಚ್. ವಿ.**
ಪ್ರಾಧ್ಯಾಪಕರು
ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ,
ಅನುಭವ ಮಂಟಪ, ದಾವಣಗೆರೆ.

ದಾವಣಗೆರೆ ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ 1987 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. 'ಶೈಕ್ಷಣಿಕ ಮನೋವಿಜ್ಞಾನ', 'ಅಂಡರ್ ಅಚೀವ್‌ಮೆಂಟ್ ಇನ್ ಬಯಾಲಜಿ', 'ಶಿಕ್ಷಣದಲ್ಲಿ ಮೌಲ್ಯಮಾಪನ ಮತ್ತು ಸಂಖ್ಯಾಶಾಸ್ತ್ರ', 'ಶೈಕ್ಷಣಿಕ ಮನೋವಿಜ್ಞಾನ' ಎಂಬ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.

***

**ಪ್ರೊ. ವಿಜಯಲಕ್ಷ್ಮಿ ದೇಸಾಯಿ** ಬಿ.ಎಸ್ಸಿ; ಎಂ.ಎ; ಎಂ.ಎಡ್; ಎಂ.ಫಿಲ್.
ಪ್ರಾಧ್ಯಾಪಕರು
ಎಂಎಲ್‌ಎಂಎನ್ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ),
ಚೈತನ್ಯ ಭಾರತಿ, ಜ್ಯೋತಿನಗರ,
ಚಿಕ್ಕಮಗಳೂರು – 577 102

ಕಳೆದ 20 ವರ್ಷಗಳಿಂದ ಚಿಕ್ಕಮಗಳೂರಿನ ಎಂ.ಎಲ್. ಎಂ.ಎನ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ. ಶೈಕ್ಷಣಿಕ ಪುಸ್ತಕಗಳನ್ನು ರಚಿಸಿದ್ದಾರೆ. 2006 ರಲ್ಲಿ ರಾಷ್ಟ್ರ ಮಟ್ಟದಲ್ಲಿ ಚಾಣಕ್ಯ ನ್ಯಾಷನಲ್ ಎಕ್ಸ್‌ಲೆನ್ಸಿ ಅವಾರ್ಡ್ ದೊರೆತಿದೆ.

***

**ಡಾ. ವಿಜಯಲಕ್ಷ್ಮಿ ನಾಯಕ್** ಎಂ.ಎಡ್.,ಎಂ.ಫಿಲ್.,ಪಿಎಚ್.ಡಿ.
ಉಪನ್ಯಾಸಕರು
ಶ್ರೀನಿವಾಸ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು

ಶ್ರೀಮತಿ ವಿಜಯಲಕ್ಷ್ಮಿ ನಾಯಕ್ ರವರು ಮಂಗಳೂರಿನ ಶ್ರೀನಿವಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು 9 ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವುದಲ್ಲದೆ, 4 ವರ್ಷಗಳ ವರೆಗೆ ಎನ್.ಜಿ.ಓ. ಗಳೊಂದಿಗೆ

Digitised by Bharatavani, CIIL

ಕೆಲಸ ಮಾಡಿರುವ ಅನುಭವ ಪಡೆದಿದ್ದಾರೆ. ಶ್ರೀಮತಿಯವರು ಶಿಕ್ಷಣಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದಿರುತ್ತಾರೆ. ಇವರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ.

***

**ಪ್ರೊ. ವೆಂಕಟೇಶ ಮೂರ್ತಿ ಸಿ. ಜಿ.** ಎಂ.ಎ.(ಮನೋವಿಜ್ಞಾನ), ಎಂ.ಎಡ್., ಪಿಎಚ್.ಡಿ.
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ
ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್.ಐ.ಇ.), ಮೈಸೂರು

ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಿಂದ ಮನೋವಿಜ್ಞಾನದಲ್ಲಿ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದ ನಂತರ ಎನ್.ಸಿ.ಇ.ಆರ್.ಟಿ. ಯಿಂದ ರೀಡರ್ ಆಗಿ ಆಯ್ಕೆಗೊಂಡು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ತಮ್ಮ ಸೇವೆಯನ್ನು ಆರಂಭಿಸಿದರು. ಪ್ರಸ್ತುತದಲ್ಲಿ ಪ್ರೊ. ಸಿ. ಜಿ. ವಿ. ಮೂರ್ತಿ ಯವರು ಅದೇ ಸಂಸ್ಥೆಯಲ್ಲಿ ಮನೋವಿಜ್ಞಾನದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಾವೇ ಸಂಶೋಧನೆಯಲ್ಲಿ ತೊಡಗಿರುವುದಲ್ಲದೆ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಕಾರ್ಯಗಾರಗಳು ಹಾಗೂ ವಿಚಾರ ಸಂಕಿರಣಗಳನ್ನು ಆಯೋಜಿಸುವುದರ ಜೊತೆಗೆ ಸಂಪನ್ಮೂಲ ವ್ಯಕ್ತಿಗಳಾಗಿ ಕೆಲಸ ಮಾಡಿರುವ ಇವರು ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ.

***

**ಡಾ. ಶಶಿಕಲ ಎ.** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

ಶ್ರೀಮತಿಯವರ ಪರಿಚಯವನ್ನು ಸಲಹಾ ಸಮಿತಿ ಸದಸ್ಯರ ಪರಿಚಯದಲ್ಲಿ ಮಾಡಿಕೊಡಲಾಗಿದೆ.

***

**ಶ್ರೀ ಶಶಿಧರ್ ಎಸ್.ಎಲ್.** ಎಂ.ಎಸ್ಸಿ; ಎಂ.ಎಡ್.
ಮನೆ ನಂ. 409, ಆಂಜನೇಯ ದೇವಸ್ಥಾನ ಹಿಂಬಾಗ,
ಹೇರೋಹಳ್ಳಿ, ವಿಶ್ವನೀಡಂ ಅಂಚೆ,
ಬೆಂಗಳೂರು – 560 091

ಶ್ರೀಯುತರು ಬೆಂಗಳೂರಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ ಸಂಶೋಧನ ಕಾರ್ಯದಲ್ಲಿ ತೊಡಗಿದ್ದಾರೆ.

***

**ಡಾ. ಶಿವಕುಮಾರ ಕಬ್ಬೂರ** ಬಿ.ಎಸ್ಸಿ; ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯ, ಹರಿಹರ.

ಹರಿಹರದಲ್ಲಿರುವ ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿಶಿಷ್ಟ ಮಕ್ಕಳ ಶಿಕ್ಷಣ, ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ, ಅಧ್ಯಾಪಕ ಶಿಕ್ಷಣ ಇವರ ಪರಿಣತಿಯ ಕ್ಷೇತ್ರಗಳಾಗಿವೆ. ದಾವಣಗೆರೆ ಬಿಇಎ ಕಾಲೇಜು ಮತ್ತು ಹರಿಹರದ ಎಸ್‌ಜೆವಿಪಿ ಸ್ವಾಯತ್ತ ಕಾಲೇಜಿನ ಸ್ನಾತಕೋತ್ತರ ವಿಭಾಗಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿರುವುದಲ್ಲದೆ, ಸಂಪನ್ಮೂಲ ವ್ಯಕ್ತಿಯಾಗಿಯೂ ಕೆಲಸ ಮಾಡಿದ್ದಾರೆ. ಎನ್‌ಸಿಟಿಇ ನಿರೀಕ್ಷಣ ತಂಡದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

***

**ಶ್ರೀ ಶಿವರಾಜು ಕೆ. ಸಿ.** ಎಂ.ಎ., ಎಂ.ಎಡ್., ಎಂ.ಫಿಲ್., ಪಿಜಿಡಿಎಚ್ಇ
ಉಪನ್ಯಾಸಕರು
ಸ್ನಾತಕೋತ್ತರ ಶಿಕ್ಷಣ ವಿಭಾಗ
ಶ್ರೀ ಶೈಲ ಶಿಕ್ಷಣ ಮಹಾವಿದ್ಯಾಲಯ, ಹರಿಹರ

ಶ್ರೀಯುತರು ಕಳೆದ ಮೂರು ವರ್ಷಗಳಿಂದ ಶ್ರೀ ಶೈಲ ಶಿಕ್ಷಣ ಮಹಾವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿರುತ್ತಾರೆ ಹಾಗೂ ಎಂ.ಎಡ್. ವಿದ್ಯಾರ್ಥಿಗಳಿಗೆ ಸಂಶೋಧಕ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿರುತ್ತಾರೆ.

Digitised by Bharatavani, CIIL

**ಪ್ರೊ. ಶಿವಲಿಂಗಪ್ಪ ಎಸ್. ಜಿ.**
ಪ್ರಾಂಶುಪಾಲರು
ಬಿಇಎ ಶಿಕ್ಷಣ ಮಹಾವಿದ್ಯಾಲಯ
ನಿಜಲಿಂಗಪ್ಪ ಬಡಾವಣೆ. 2ನೇ ಮೇನ್,
11ನೇ ಕ್ರಾಸ್, ದಾವಣಗೆರೆ – 577 004

ಇವರು ದಾವಣಗೆರೆಯ ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ (ಬಿ.ಇ.ಎ.)ದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸ್ನಾತಕೋತ್ತರ ಶಿಕ್ಷಣ ಕೇಂದ್ರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನ ಅಧ್ಯಯನ ಕೇಂದ್ರದ ದಾವಣಗೆರೆ ಎಂ.ಎಡ್. ವಿಭಾಗದ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

***

**ಡಾ. ಶೀಲಾ ಜಿ.** ಎಂ.ಎಸ್ಸಿ; ಎಂ.ಎಡ್; ಪಿಜಿಡಿಹೆಚ್ಇ; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಇವರು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ, ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ.

***

**ಡಾ. ಶೈಲಜಾ ಹೆಚ್. ಎಮ್.**
ಮುಖ್ಯಸ್ಥರು
ಸ್ಕೂಲ್ ಆಫ್ ಎಜುಕೇಷನ್ (ಎಂ.ಇಡಿ.)
ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ,
ಬೆಳಗಾವಿ – 591 156

ಶ್ರೀಮತಿಯವರು ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಪ್ರಸ್ತುತ ಸ್ನಾತಕೋತ್ತರ ಶಿಕ್ಷಣ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿ ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ವಿವಿಧ ವಿಷಯಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ದೇಶ ವಿದೇಶಗಳಲ್ಲಿ ಅನೇಕ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ವಿಷಯ ಮಂಡಿಸಿದ್ದಾರೆ. ಅವರ ಅನೇಕ ಸಂಶೋಧನಾ ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಗೊಂಡಿವೆ. ಒಂಬತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಮಾರ್ಗದರ್ಶನ ನೀಡಿದ್ದಾರೆ. ಪ್ರಸ್ತುತ ಅನೇಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

***

**ಡಾ. ಶೈಲಜಾ ಪಿ. ಶಾನ್‌ಭಾಗ್** ಎಂ.ಎ; ಎಂ.ಎಡ್; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ,
ಮಾನಸಗಂಗೋತ್ರಿ, ಮೈಸೂರು.

14 ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವ ಶ್ರೀಮತಿಯವರು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ.ರಾ.ಮು.ವಿ.ಯ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಬರೆದಿದ್ದಾರೆ.

***

**ಶ್ರೀಮತಿ ಶೋಭಾ ಬಿ. ಎನ್.** ಬಿ.ಎಸ್ಸಿ., ಎಂ.ಎಡ್., ಬಿ.ಎಸ್ಸಿಇಡಿ.,
ವಿಶೇಷ ಅಧ್ಯಾಪಕರು
ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ,
ಮೈಸೂರು

ಶ್ರೀಮತಿ ಶೋಭಾ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ (AIISH) ವಿಶೇಷ ಶಿಕ್ಷಣ ವಿಭಾಗದಲ್ಲಿ ವಿಶೇಷ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶೇಷ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ಪ್ರಾಯೋಜನೆಗಳನ್ನು ಪೂರ್ಣಗೊಳಿಸಿದ್ದಾರೆ. ಹತ್ತು ವರ್ಷಗಳ ಅನುಭವ ಪಡೆದಿರುವ ಇವರಿಗೆ ಎಂ.ಎಡ್. ಪರೀಕ್ಷೆಯಲ್ಲಿ ಕೆಲವು ಬಹುಮಾನಗಳು ಬಂದಿವೆ.

***

Digitised by Bharatavani, CIIL

**ಶ್ರೀ ಶಂಕರ್ ವೈ ಚಕ್ರವರ್ತಿ** ಎಂ.ಎ., ಎಂ.ಎಡ್., ಪಿಎಚ್.ಡಿ.
ಉಪನ್ಯಾಸಕರು
ಸನ ಶಿಕ್ಷಣ ಮಹಾವಿದ್ಯಾಲಯ
ಬೈಂದೇವರಕೊಪ್ಪ, ಹುಬ್ಬಳ್ಳಿ

ಶ್ರೀಯುತರು ಬೆಳಗಾಂನ ಕೆ.ಎಸ್.ಆರ್. ಶಿಕ್ಷಣ ಮಹಾವಿದ್ಯಾಲಯದಲ್ಲಿ 2 ವರ್ಷಗಳು, ಸಂಕೇಶ್ವರದ ಎ.ಎಸ್. ಎನ್.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಒಂದು ವರ್ಷ ಸೇವೆ ಸಲ್ಲಿಸಿದ ನಂತರ 2008 ರಿಂದ ಹುಬ್ಬಳಿಯ ಸನಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮ್ಯಾನೈಜ್‌ಮೆಂಟ್‌ನಲ್ಲಿ ಡಿಪ್ಲಮೋ ಸಹ ಪಡೆದಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡದಿಂದ ಭಾಷಾ ಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ.

***

**ಡಾ. ಶ್ಯಾಮಲ ಹೆಚ್. ಪಿ.** ಬಿ.ಎಸ್ಸಿ; ಎಂ.ಎಸ್ಸಿ; ಎಂ.ಎಡ್.,ಪಿಹೆಚ್.ಡಿ
2897, ಪಂಪಾಪತಿ ರಸ್ತೆ, 1ನೇ ಕ್ರಾಸ್,
ಸರಸ್ವತಿ ಪುರಂ, ಮೈಸೂರು.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಡೆಮಾನ್‌ಸ್ಟ್ರೇಷನ್ ಶಾಲೆಯಲ್ಲಿ ಗಣಿತಶಾಸ್ತ್ರ ಅಧ್ಯಾಪಕಿಯಾಗಿ ನಂತರ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕಿಯಾಗಿದ್ದು ನಂತರ ನವೋದಯ ವಿದ್ಯಾ ಸಮಿತಿಯನ್ನು ಸೇರಿಕೊಂಡು ಹಾಸನ ಮತ್ತು ಫರೀದಾಬಾದ್‌ಗಳಲ್ಲಿ ನವೋದಯ ಶಾಲೆಗಳಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ನವೋದಯ ವಿದ್ಯಾ ಸಮಿತಿಯ ಅಸಿಸ್ಟೆಂಟ್ ಮತ್ತು ಡೆಪ್ಯೂಟಿ ಕಮಿಷನರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

***

**ಡಾ. ಶ್ರೀನಿವಾಸನ್ ಎ.** ಬಿ.ಎಸ್ಸಿ; ಎಂ.ಎಡ್; ಪಿಎಚ್.ಡಿ.
ನಿವೃತ್ತ ಪ್ರಾಧ್ಯಾಪಕರು
ಸೇಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ,
ಜಯಲಕ್ಷ್ಮಿ ಪುರಂ, ಮೈಸೂರು.

ಇವರು 30 ವರ್ಷಗಳ ಬೋಧನೆಯ ಅನುಭವ ಹೊಂದಿದ್ದು ಮೈಸೂರಿನ ಸೇಂಟ್ ಜೋಸೆಫ್ ಶಿಕ್ಷಣ ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. 'ಕಂಪ್ಯೂಟರ್ ಶಿಕ್ಷಣ' ಪುಸ್ತಕದ ಲೇಖಕರು. ಡಿ.ಎಡ್. ಪಠ್ಯ ಪುಸ್ತಕ ಹಾಗೂ ಡಿ.ಎಡ್. ಶಿಕ್ಷಕ ತರಬೇತಿ ಸಾಹಿತ್ಯ ಕೈಪಿಡಿ ಇವುಗಳ ರಚನಾ ಸಮಿತಿ ಸದಸ್ಯರು.

**ಶ್ರೀ ಶ್ರೀನಿವಾಸ್ ಕೆ. ಎಸ್.** ಎಂ.ಎ., ಎಂ.ಎಡ್.
ಸಹಾಯಕ ಪ್ರಾಧ್ಯಾಪಕರು
ಆರ್.ವಿ. ಶಿಕ್ಷಣ ಮಹಾವಿದ್ಯಾಲಯ
ಜಯನಗರ, ಬೆಂಗಳೂರು

ಶ್ರೀಯುತರು ಬೆಂಗಳೂರಿನ ಆರ್.ವಿ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 7 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದಾರೆ. ಇವರು 3 ಪುಸ್ತಕಗಳನ್ನು ಬರೆದಿರುತ್ತಾರೆ. ಇವರ 15 ಸಂಶೋಧನಾ ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರು ಅನೇಕ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

***

**ಡಾ. ಶ್ರೀಲತಾ ಆರ್. ಎನ್.** ಎಂ.ಎ. ಮ್ಯೂಸಿಕ್, ಪಿಎಚ್.ಡಿ.
ಪ್ರಾಧ್ಯಾಪಕರು
ಲಲಿತ ಕಲೆಗಳ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು.

ಪ್ರೊ. ಆರ್. ಎನ್. ಶ್ರೀಲತಾ ಅವರು ರುದ್ರಪಟ್ಟಣ ಸಂಗೀತ ಪರಂಪರೆಗೆ ಸೇರಿದ, ಸಂಗೀತ ಕ್ಷೇತ್ರದಲ್ಲಿರುವ ಏಕೈಕ ಮಹಿಳೆ. ಹಾಗೆಯೇ ಸಂಗೀತವನ್ನು ತಮ್ಮ ತಂದೆ ಮತ್ತು ಗುರು ವಿದ್ವಾನ್ ಆರ್.ಕೆ. ನಾರಾಯಣ ಸ್ವಾಮಿಯವರಲ್ಲಿ ಅಭ್ಯಾಸ ಮಾಡಿದರು. ನಂತರ ಅಣ್ಣ ವಿದ್ವಾನ್ ಆರ್. ಎನ್. ತ್ಯಾಗರಾಜನ್ ಅವರಲ್ಲಿ ಮುಂದುವರಿಸಿದರು. ಸುಮಾರು 45 ವರ್ಷಗಳಿಂದ ಸಂಗೀತ ಶಿಕ್ಷಣವನ್ನು ನೀಡುತ್ತಾ, ದೇಶ ವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸುತ್ತಾ ಬಂದಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನದ 'ಎ' ಗ್ರೇಡ್ ಕಲಾವಿದೆ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥರಾಗಿದ್ದಾರೆ.

***

Digitised by Bharatavani, CIIL

**ಡಾ. ಸವಿತಾ ಬಡಿಗೇರ**
ಪ್ರಾಧ್ಯಾಪಕರು
ಎಸ್.ಕೆ.ಎಂ.ಕೆ. ಶಿಕ್ಷಣ ಮಹಾವಿದ್ಯಾಲಯ, ರಾಯಚೂರು

ಶ್ರೀಮತಿಯವರು ರಾಯಚೂರಿನ ನಂದಿನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ 3 ವರ್ಷಗಳ ವರೆಗೆ ಕೆಲಸ ಮಾಡಿದ ನಂತರ ಪ್ರಸ್ತುತದಲ್ಲಿ ಎಸ್.ಕೆ.ಎಂ.ಕೆ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 3 ವರ್ಷಗಳಿಂದ ಉಪನ್ಯಾಸಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಇವರು ಶಿಕ್ಷಣಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ.

***

**ಡಾ. ಸಿಸ್ಟರ್ ಲಿಯೋನಿಲ್ಲಾ ಮಿನೇಜಸ್** ಎಂ.ಎ., ಎಂ.ಎಡ್., ಪಿಎಚ್.ಡಿ.
ಪ್ರಾಂಶುಪಾಲರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು

ಡಾ. ಸಿಸ್ಟರ್ ಲಿಯೋನಿಲ್ಲಾ ಮಿನೇಜಸ್ ರವರು ಶಿಕ್ಷಣ ಕ್ಷೇತ್ರದಲ್ಲಿ 29 ವರ್ಷಗಳ ಅನುಭವ ಪಡೆದಿದ್ದಾರೆ. ಬಿ.ಎಡ್., ಎಂ.ಎಡ್. ಹಾಗೂ ಎಂ.ಎ. ಗಳ ರ್‍ಯಾಂಕ್ ಪಡೆದ ಖ್ಯಾತಿ ಇವರದಾಗಿದೆ. 'Young Research Award', 'Best Ph.D. Thesis Award', ಹಾಗೂ 'Best Teacher Award' ಪಡೆದಿರುತ್ತಾರೆ. ಇವರು ದೇಶ ವಿದೇಶಗಳಲ್ಲಿ ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ಸಂಶೋಧನಾ ಲೇಖನಗಳನ್ನು ಮಂಡಿಸಿರುವರು.

***

**ಡಾ. ಸೀತಾರಾಮು ಎ. ಎಸ್.** ಎಂ.ಎಡ್., ಪಿಎಚ್.ಡಿ.
ನಂ. 500, ಬಿಡಿಎ ಲೇಔಟ್, 2ನೇ ಹಂತ,
9ನೇ ಬ್ಲಾಕ್, 4ನೇ ಮುಖ್ಯ ರಸ್ತೆ, 4ನೇ ಕ್ರಾಸ್,
ನಾಗರಭಾವಿ –7, ಬೆಂಗಳೂರು – 72

ಶ್ರೀಯುತರು 1967ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಎಂ.ಎಡ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಹಾಗೂ ಪ್ರಥಮ ರ್‍ಯಾಂಕ್ ಪಡೆದು ನಂತರ ಸಂಶೋಧನಾ ವಿದ್ಯಾರ್ಥಿಯಾಗಿ 1972ರಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಇವರು ಮಣಿಪಾಲದ ಬಿ.ಎಡ್. ಕಾಲೇಜಿನಲ್ಲಿ ಹಾಗೂ ಮಾನಸಗಂಗೋತ್ರಿಯ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆಸಲ್ಲಿಸಿ 1975 ರಿಂದ 2006ರ ವರೆಗೆ ಬೆಂಗಳೂರಿನ ಆರ್ಥಿಕ ಮತ್ತು ಸಾಮಾಜಿಕ ಸಂಶೋಧನಾ ಸಂಸ್ಥೆಯಲ್ಲಿ ಸೇವೆಸಲ್ಲಿಸಿರುತ್ತಾರೆ. 1985 ರಿಂದ ನಿವೃತ್ತಿಯತನಕ ಪ್ರಾಧ್ಯಾಪಕರಾಗಿದ್ದರು. ಇವರು 18 ಪ್ರಮುಖ ಸಂಶೋಧನೆಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೂ, ಫೋರ್ಡ್ ಫೌಂಡೇಶನ್, ವಿಶ್ವಬ್ಯಾಂಕ್ ಹಾಗೂ ಯುನೆಸ್ಕೊ ಸಂಸ್ಥೆಗಳಿಗೂ ನಡೆಸಿಕೊಟ್ಟಿರುತ್ತಾರೆ. 12 ಪುಸ್ತಕಗಳನ್ನು ಹಾಗೂ 50ಕ್ಕೂ ಹೆಚ್ಚಿನ ಲೇಖನಗಳನ್ನು ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಒಂದು ಪುಸ್ತಕ ಯುನೆಸ್ಕೊ ದಿಂದ ಪ್ರಕಟವಾಗಿದೆ. ಇವರು ಹಲವು ಬಾರಿ ವಿದೇಶಗಳಿಗೆ ವಿದ್ವತ್ ಕೆಲಸಗಳಿಗೆ ಹೋಗಿ ಬಂದಿದ್ದಾರೆ. ಸುತ್ತಮುತ್ತಲಿನ ಹತ್ತು ಹಲವು ವಿಶ್ವವಿದ್ಯಾಲಯಗಳಿಗೆ ಅತಿಥಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. 2006 ರಿಂದ 2014 ರವರೆಗೆ ಕರ್ನಾಟಕ ಸರ್ಕಾರದ ಸರ್ವ ಶಿಕ್ಷಣ ಅಭಿಯಾನ ಯೋಜನೆಗೆ ಪೂರ್ಣಾವಧಿ ಮುಖ್ಯ ಸಲಹೆಗಾರರಾಗಿ ಸೇವೆಸಲ್ಲಿಸಿದ್ದಾರೆ.

***

**ಡಾ. ಸುನೀತಾ ಸಿ. ಎನ್.** ಎಂ.ಎ.(ಇಂಗ್ಲಿಷ್), ಎಂ.ಎಸ್ಸಿ.(ಮನಃಶಾಸ್ತ್ರ), ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಸೋಮಾನಿ ಶಿಕ್ಷಣ ಮಹಾವಿದ್ಯಾಲಯ,
ಸರಸ್ವತಿ ಪುರಂ. ಮೈಸೂರು

ಇವರು ಪ್ರಸ್ತುತ ಮೈಸೂರಿನಲ್ಲಿರುವ ಓಂಕಾರ್‌ಮಾಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪರಿಸರ ಶಿಕ್ಷಣ ವಿಷಯದಲ್ಲಿ ಪಿಹೆಚ್.ಡಿ ಪದವಿಯನ್ನು ಪಡೆದಿರುತ್ತಾರೆ. ಡಿ.ಎಡ್‌ನ 'ಆಧುನಿಕ ಶಿಕ್ಷಣದ ಒಲವುಗಳು' – ಎಂಬ ಪಠ್ಯಪುಸ್ತಕದ ಸಹ ಲೇಖಕರಾಗಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ಬಿ.ಎಡ್ ಪದವಿಗಾಗಿ ಶೈಕ್ಷಣಿಕ ತಂತ್ರಜ್ಞಾನ ಎಂಬ ಪುಸ್ತಕದ ಕರ್ತೃವೂ ಆಗಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿನ ಹಲವಾರು ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.

***

**ಡಾ. ಸುರೇಶ ಎಸ್. ಸಮ್ಮಸಗಿ** ಎಂ. ಎ; ಎಂ.ಎಡ್; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾನಿಲಯ ಶಿಕ್ಷಣ ಮಹಾವಿದ್ಯಾಲಯ,
ಧಾರವಾಡ – 01

ಇವರು ಕಾರವಾರ ಜಿಲ್ಲೆಯ ಕುಮಟಾ ತಾಲ್ಲೋಕಿನ ಬಾಡ–ಕಾಗಾಲದ ಜನತಾ ವಿಶ್ವವಿದ್ಯಾಲಯದಲ್ಲಿ 1995 ರಿಂದ 1996 ರವರೆಗೆ ಸಹ ಶಿಕ್ಷಕರಾಗಿಯೂ 1996 ರಿಂದ 2003 ರವರೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಪಬ್ಲಿಕ್ ಸ್ಕೂಲಿನಲ್ಲಿ ಸಹ ಶಿಕ್ಷಕರಾಗಿಯೂ ಕೆಲಸ ಮಾಡಿದ್ದಾರೆ. ಈಗ ಕರ್ನಾಟಕ ವಿಶ್ವವಿದ್ಯಾನಿಲಯದ ಶಿಕ್ಷಣ ಮಹಾವಿದ್ಯಾಲಯದಲ್ಲಿ 2003ರಿಂದ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

Digitised by Bharatavani, CIIL

**ಶ್ರೀ ಸುರೇಶ್ ಬಾಬು** ಎಂ.ಎ., ಎಂ.ಎಡ್
ಪ್ರಾಧ್ಯಾಪಕರು
ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ

ಶ್ರೀಯುತರು ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿಯಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. 22 ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವ ಇವರು ಇತಿಹಾಸ, ಕ್ರಿಯಾ ಸಂಶೋಧನೆ, ಶೈಕ್ಷಣಿಕ ತಂತ್ರಜ್ಞಾನ ಬೋಧನಾ ವಿಷಯಗಳನ್ನು ಬೋಧನೆ ಮಾಡುತ್ತಾರೆ. ಇವರು "ಇತಿಹಾಸ ಮತ್ತು ಪೌರನೀತಿ ಬೋಧನಾ ವಿಧಾನ" ಎಂಬ ಪುಸ್ತಕ ಬರೆದಿದ್ದಾರೆ. ಶ್ರೀಯುತರು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧವನ್ನು ಮಂಡಿಸಿದ್ದಾರೆ.

***

Digitised by Bharatavani, CIIL

## "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಸಂಪುಟ–2 ಕೃತಿಯ ಮೂಲ ಲೇಖನಗಳ ಅನುವಾದಕರ ಸೂಚಿ

ಪ್ರೊ. ಕೃಷ್ಣಮೂರ್ತಿಭಟ್
ಡಾ. ಕೊಂಗವಾಡ ಎನ್. ಬಿ.
ಡಾ. ಗೀತಾಶೆಣೈ
ಪ್ರೊ. ಚಂದ್ರಶೇಖರ್ ಬಿ. ಎಂ.
ಪ್ರೊ. ಮಂಜುನಾಥಯ್ಯ ಬಿ. ಎನ್.
ಪ್ರೊ. ರತ್ನಮ್ಮ ಕೆ. ಎಸ್.
ಪ್ರೊ. ವಸಂತಕುಮಾರಿ ಸಿ.
ಡಾ. ವಿಶಾಲಾಕ್ಷಿ ಕೆ. ಕೆ.
ಪ್ರೊ. ವಿಶ್ವನಾಥ್ ಜಿ. ಆರ್.
ಪ್ರೊ. ವೆಂಕಟರಮಣಶೆಟ್ಟಿ ಸಿ. ಜಿ.
ಡಾ. ಶಶಿಕಲ ಎ.
ಶ್ರೀ ಶಶಿಕುಮಾರ್
ಡಾ. ಶೈಲಜಾ ಪಿ. ಶಾನುಭಾಗ್
ಡಾ. ಷಣ್ಮುಖ

Digitised by Bharatavani, CIIL

# "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಮೊದಲನೇ ಸಂಪುಟದ ಲೇಖನಗಳ ಸೂಚಿ

1. ಅಂಗವಿಕಲತೆಯ ವ್ಯಾಪ್ತಿ ಹಾಗೂ ಪರಿಣಾಮಗಳು
2. ಅಂತರ್ಜಾಲ
3. ಅಂತರರಾಷ್ಟ್ರೀಯ ಪ್ರಜ್ಞೆಯ ಶಿಕ್ಷಣ
4. ಅಂತರ್ ಶಿಸ್ತಿನ ಉಪಕ್ರಮ ಮತ್ತು ಶಿಕ್ಷಣ
5. ಅಂತಃಸ್ರಾವ ಗ್ರಂಥಿಗಳ ವ್ಯೂಹ
6. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ
7. ಅಖಿಲ ಭಾರತ ಸಂಶೋಧನಾ ಸಂಸ್ಥೆಗಳು
8. ಅತೀಂದ್ರಿಯ ಅನುಭವಗಳು
9. ಅಧ್ಯಾತ್ಮಿಕ ಬುದ್ಧಿಶಕ್ತಿ
10. ಅಧ್ಯಾಪಕರ ಶಿಕ್ಷಣ
11. ಅಧ್ಯಾಪಕರ ಶಿಕ್ಷಣದ ಉನ್ನತ ಸಂಸ್ಥೆಗಳು
12. ಅನುದಾನ ಪದ್ಧತಿ
13. ಅನುವಂಶೀಯತೆ ತಂತ್ರಗಳು
14. ಅನುದೇಶ
15. ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳು
16. ಅನುವಂಶೀಯತೆ ಮತ್ತು ಪರಿಸರವಾದ
17. ಅಪಸಮಾಯೋಜನೆ – ಅರ್ಥ, ಮೂಲಗಳು
18. ಅಪಸ್ಮಾರ (ಎಪಿಲೆಪ್ಸಿ)
19. ಅಪೂರ್ಣ ಸಾಧಕರ ಶಿಕ್ಷಣ
20. ಅಭಿವೃತ್ತಿಗಳು/ಮನೋಭಾವಗಳು
21. ಅಭ್ಯಾಸ ಬೋಧನೆ
22. ಅರಬಿಂದೊ ಘೋಷ್
23. ಅವಧಾನ
24. ಅವಲಂಬನ ಸಿದ್ಧಾಂತ
25. ಅವಲೋಕನ ವಿಧಾನ
26. ಆಂತರಿಕ ಮೌಲ್ಯಮಾಪನ
27. ಆಧುನೀಕರಣ ಮತ್ತು ಶಿಕ್ಷಣ
28. ಆನ್‌ಲೈನ್ ಪರೀಕ್ಷಾ ವ್ಯವಸ್ಥೆ
29. ಆಲೋಚನೆ ಮತ್ತು ತಾರ್ಕಿಕತೆ
30. ಆಲ್‌ಫ್ರೆಡ್ ನಾರ್ತ್ ವೈಟ್‌ಹೆಡ್
31. ಇತಿಹಾಸ ಮತ್ತು ಪೌರನೀತಿ ಬೋಧನೆ
32. ಇಸ್ಲಾಂ ಕಾಲದ ಶಿಕ್ಷಣ
33. ಈಶ್ವರಚಂದ್ರ ವಿದ್ಯಾಸಾಗರ
34. ಉದಾರ ಶಿಕ್ಷಣ
35. ಉನ್ನತ ಪ್ರೌಢಶಾಲೆ/ಪದವಿ ಪೂರ್ವ ಶಿಕ್ಷಣ ವ್ಯವಸ್ಥೆ
36. ಏಕೋಪಾಧ್ಯಾಯ ಶಾಲೆಗಳು
37. ಓದುವ ಅಭ್ಯಾಸಗಳು
38. ಓದುವ ಮೂಲೆ
39. ಕಂಪ್ಯೂಟರ್‌ಗಳು
40. ಕರ್ನಾಟಕದಲ್ಲಿ ಅಧ್ಯಾಪಕ ಶಿಕ್ಷಣದ ವ್ಯವಸ್ಥೆ

Digitised by Bharatavani, CIIL

41. ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಬೆಳವಣಿಗೆ
42. ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣ ವ್ಯವಸ್ಥೆ : ಪ್ರಸ್ಥುತ ಸ್ಥಿತಿ
43. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ವ್ಯವಸ್ಥೆ
44. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ
45. ಕರ್ನಾಟಕದಲ್ಲಿ ದೈಹಿಕ ಶಿಕ್ಷಣ
46. ಕರ್ನಾಟಕದಲ್ಲಿ ದೈಹಿಕ ಶಿಕ್ಷಣದ ಬೆಳವಣಿಗೆ
47. ಕರ್ನಾಟಕದಲ್ಲಿ ನಾಟಕ ಶಿಕ್ಷಣ (ರಂಗ ಶಿಕ್ಷಣ)
48. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ
49. ಕರ್ನಾಟಕದಲ್ಲಿ ಪ್ರೌಢ ಶಿಕ್ಷಣ ವ್ಯವಸ್ಥೆ
50. ಕರ್ನಾಟಕದಲ್ಲಿ ಪ್ರೌಢಶಾಲಾ ಶಿಕ್ಷಣದ ಬೆಳವಣಿಗೆ
51. ಕರ್ನಾಟಕದಲ್ಲಿ ಲಲಿತ ಕಲೆಗಳ ಶಿಕ್ಷಣದ ವ್ಯವಸ್ಥೆ
52. ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ
53. ಕರ್ನಾಟಕದಲ್ಲಿ ವೈದ್ಯ ಶಿಕ್ಷಣ – ಪ್ರಸ್ತುತ ಸ್ಥಿತಿ
54. ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣದ ಬೆಳವಣಿಗೆ
55. ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು
56. ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ
57. ಕರ್ನಾಟಕದಲ್ಲಿ ಹಿಂದಿ ಶಿಕ್ಷಣ
58. ಕಲಿಕೆ ಮತ್ತು ಸ್ವವಿಕಾಸ
59. ಕಲಿಕೆಯ ಕನಿಷ್ಟ ಮಟ್ಟಗಳು
60. ಕೃತಕ ಬುದ್ಧಿಶಕ್ತಿ
61. ಕಾರ್ಯಾಗಾರಗಳು
62. ಕಿಶೋರರ ಶಿಕ್ಷಣ
63. ಕ್ರಿಯಾ ಸಂಶೋಧನೆ
64. ಕ್ವಿಜ್‌ಗಳು
65. ಕುಟುಂಬ ಮತ್ತು ಶಿಕ್ಷಣ
66. ಕೂಟ ವಿಶ್ಲೇಷಣೆ
67. ಕೇಂದ್ರೀಯ ಪ್ರವೃತ್ತಿ ಮಾಪಕಗಳು
68. ಕೇಂದ್ರೀಯ ವಿಶ್ವವಿದ್ಯಾನಿಲಯಗಳು
69. ಕ್ಷೇತ್ರ ಅಧ್ಯಯನ
70. ಗಣಿತಶಾಸ್ತ್ರ ಬೋಧನೆ
71. ಗುಂಪು ವರ್ತನೆಯ ಮನೋವಿಜ್ಞಾನ ಮತ್ತು ಶಿಕ್ಷಣ
72. ಗೃಹ ಅರ್ಥಶಾಸ್ತ್ರ
73. ಗ್ರಂಥಾಲಯದ ಬಳಕೆಯ ಶಿಕ್ಷಣ
74. ಜನನ ಪೂರ್ವ ಅವಧಿ
75. ಜನಪದ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು
76. ಜನಸಂಖ್ಯಾ ಶಿಕ್ಷಣ
77. ಜಾಕೀರ್ ಹುಸೇನ್
78. ಜ್ಞಾನ ನಿರ್ವಹಣೆ
79. ಜಾಗತೀಕರಣ ಮತ್ತು ಶಿಕ್ಷಣ
80. ಜಾತ್ಯತೀತತೆ ಮತ್ತು ಶಿಕ್ಷಣ
81. ಜಾನ್‌ಏಮಸ್ ಕೊಮೆನಿಅಸ್
82. ಜಾನ್ ಡ್ಯೂಯಿ

Digitised by Bharatavani, CIIL

83. ಜಾನ್ ಹೆನ್ರಿಚ್ ಪೆಸ್ಟಾಲಝಿ
84. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡಯಟ್ಸ್)
85. ಜೀನ್ ಜೇಕ್ವಿಸ್ ರೂಸೋ
86. ಜೀವ ಪರಿಸರ ವಿಜ್ಞಾನ
87. ಜೀವ ವಿಜ್ಞಾನಗಳ ಬೋಧನೆ
88. ಟೆಲಿ ಕಾನ್ಫರೆನ್ಸ್
89. ಟ್ಯುಟೋರಿಯಲ್ ವ್ಯವಸ್ಥೆ
90. ತಂಡ ಬೋಧನೆ
91. ತಂತ್ರಜ್ಞಾನದ ಹಿನ್ನೆಲೆ
92. ತಪಶೀಲು ಪಟ್ಟಿಗಳು
93. ತಾರುಣ್ಯ (ಕೌಮಾರ್ಯ)
94. ತೆರೆದ ಪುಸ್ತಕ ಪರೀಕ್ಷೆಗಳು
95. ದರ್ಜಾಮಾಪನ
96. ದತ್ತಾಂಶಗಳ ಆಲೇಖೀಕರಣ
97. ದೃಕ್–ಶ್ರವಣ ಶಿಕ್ಷಣ
98. ದೈಹಿಕ ಶಿಕ್ಷಣ ವ್ಯವಸ್ಥೆ
99. ದೈಹಿಕ ಸವಾಲುಳ್ಳ ಮಕ್ಕಳ ಶಿಕ್ಷಣ
100. ದೂರದರ್ಶನ
101. ದೂರವಾಣಿ ಸಮಾಲೋಚನೆ
102. ದೂರ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು
103. ದೂರ ಶಿಕ್ಷಣದಲ್ಲಿ ಆನ್‌ಲೈನ್ ಕಾರ್ಯಕ್ರಮಗಳು
104. ದೂರ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ
105. ದೂರ ಶಿಕ್ಷಣದಲ್ಲಿ ಶೈಕ್ಷಣಿಕ ಸಮಾಲೋಚನೆ
106. ದೃಷ್ಟಾಂತ ದಾಖಲೆ
107. ದ್ವಂದ್ವಗಳು
108. ಧ್ಯಾನ ಮತ್ತು ಅರಿವಿನ ಮೇಲ್ಮಟ್ಟಗಳು
109. ಧಾರ್ಮಿಕ ಶಿಕ್ಷಣ
110. ದ್ವಿಭಾಷಾ ಶಿಕ್ಷಣ
111. ನಗರೀಕರಣ ಮತ್ತು ಶಿಕ್ಷಣ
112. ನವೋದಯ ಶಾಲೆಗಳು
113. ನಾಗರಿಕತೆ ಮತ್ತು ಶಿಕ್ಷಣ
114. ನಾಯಕತ್ವ – ಅರ್ಥ, ಕಾರ್ಯಗಳು
115. ನಾಯಕತ್ವ ಪರಿಣಾಮಕಾರಿತ್ವ
116. ನಾಯಕತ್ವದ ಶೈಲಿಗಳು
117. ನಿರ್ಣಯಿಸುವಿಕೆ
118. ನಿಧಾನ ಕಲಿಕಾರ್ಥಿಗಳ ಶಿಕ್ಷಣ
119. ನಿಯೋಜಿತ ಕಾರ್ಯಗಳು
120. ನಿರುದ್ಯೋಗ ಸಮಸ್ಯೆ
121. ನೈದಾನಿಕ ಪರೀಕ್ಷೆಗಳು
122. ಪಠ್ಯಕ್ರಮ – ಅರ್ಥ, ಅಂಗಗಳು
123. ಪಠ್ಯಕ್ರಮಕ್ಕೆ ವ್ಯವಸ್ಥಾ ಉಪಕ್ರಮ
124. ಪಠ್ಯಕ್ರಮದ ಮೌಲ್ಯಮಾಪನ

Digitised by Bharatavani, CIIL

125. ಪದವಿ ಪೂರ್ವ ಶಿಕ್ಷಣ
126. ಪದವಿ ಪೂರ್ವ ಶಿಕ್ಷಣ ಮಂಡಳಿ
127. ಪರ ಸಂಸ್ಕೃತೀಕರಣ
128. ಪರಿಕಲ್ಪನಾ ನಕ್ಷೆ
129. ಪರಿಸರ ಶಿಕ್ಷಣ
130. ಪರಿಹಾರಾತ್ಮಕ ಬೋಧನೆ
131. ಪರಿಗಣಿತ (ಡೀಮ್ಡ್) ವಿಶ್ವವಿದ್ಯಾನಿಲಯಗಳು–ಕರ್ನಾಟಕ
132. ಪರ್ಯಾಯ ಶಿಕ್ಷಣ
133. ಪರೀಕ್ಷೆಗಳ ಮಾನಕೀಕರಣ
134. ಪಾಠ ವೀಕ್ಷಣೆ
135. ಪಾಶ್ಚಿಮಾತ್ಯೀಕರಣ ಮತ್ತು ಶಿಕ್ಷಣ
136. ಪಾಶ್ಚಾತ್ಯ ಶಿಕ್ಷಣ ಚಿಂತಕರು ಮತ್ತು ಶಿಕ್ಷಣ
137. ಪೂರ್ವಗ್ರಹಗಳು
138. ಪ್ರತಿಭಾವಂತ ಮಕ್ಕಳ ಶಿಕ್ಷಣ
139. ಪ್ರತಿಭಾ ಪಲಾಯನ
140. ಪ್ರತಿದರ್ಶಚಯನ
141. ಪ್ರತ್ಯಕ್ಷಾನುಭವ
142. ಪ್ರಾತ್ಯಕ್ಷಿಕೆ ಪಾಠಗಳು
143. ಪ್ರವೇಶ ಪರೀಕ್ಷೆಗಳು
144. ಪ್ರಶ್ನೆ ಪತ್ರಿಕೆಗಳ ರಚನೆ
145. ಪ್ರಾಚೀನ ಸಾಂಪ್ರದಾಯಿಕ ಕಥೆಗಳಲ್ಲಿ ಶಿಕ್ಷಣ
146. ಪುನಶ್ಚೇತನ ಕಾರ್ಯಕ್ರಮಗಳು
147. ಪೂರ್ವಗ್ರಹ ಮತ್ತು ಶಿಕ್ಷಣ
148. ಪೌರತ್ವಕ್ಕಾಗಿ ಶಿಕ್ಷಣ
149. ಪೌರತ್ವ ಶಿಕ್ಷಣ ಶಿಬಿರ
150. ಪ್ಲೇಟೋ
151. ಬದಲಾವಣೆಗಳ ನಿರ್ವಹಣೆ
152. ಬಂಡವಾಳಶಾಹಿತ್ವ
153. ಬಹುವರ್ಗ ಬೋಧನೆ
154. ಬಹು–ಸಂಸ್ಕೃತಿಯ ಶಿಕ್ಷಣ
155. ಬಾಲಕಿಯರ ಶಿಕ್ಷಣ
156. ಬಾಲ್ಯಾವಸ್ಥೆಯಲ್ಲಿ ದೈಹಿಕ ಮತ್ತು ಗತ್ಯಾತ್ಮಕ ವಿಕಾಸ
157. ಬಾಲ್ಯಾವಸ್ಥೆ ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸ
158. ಬಾಲ್ಯಾವಸ್ಥೆ ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ
159. ಬ್ರಿಟಿಷರ ಕಾಲದ ಶಿಕ್ಷಣ
160. ಬುದ್ಧಿಶಕ್ತಿ ಮಾಪನ
161. ಬುದ್ಧಿಶಕ್ತಿ ಸಿದ್ಧಾಂತಗಳು
162. ಬೆಳವಣಿಗೆ ಮತ್ತು ವಿಕಾಸ
163. ಬೋಧನಾ ತಂತ್ರಗಳು
164. ಬೋಧನಾ ಪ್ರಭಾವಶೀಲತೆ
165. ಬೋಧನಾ ಶೈಲಿ
166. ಬೋಧನಾ ಸೂತ್ರಗಳು

Digitised by Bharatavani, CIIL

167. ಬೋಧನೆಗೆ ಯೋಜನೆ
168. ಬೋಧನೆಯ ಪರಿಕಲ್ಪನೆ
169. ಬೋಧನೆಯ ವ್ಯಕ್ತೀಕರಣ
170. ಬೋಧನೆಯಲ್ಲಿ ಗ್ರಂಥಾಲಯಗಳ ಪಾತ್ರ
171. ಬೋಧನೋದ್ದೇಶಗಳ ವರ್ಗೀಕರಣ
172. ಬೋಧನೋದ್ದೇಶಗಳು–ಸಂವೇಗಾತ್ಮಕ ವಲಯ
173. ಬೋಧನೋದ್ದೇಶಗಳು–ಸಂಜ್ಞಾನಾತ್ಮಕ ವಲಯ
174. ಭಾರತದ ಮುಕ್ತ ವಿಶ್ವವಿದ್ಯಾನಿಲಯಗಳು
175. ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆ
176. ಭಾರತೀಯ ತತ್ವಶಾಸ್ತ್ರದಲ್ಲಿ ಕೆಲವು ಶೈಕ್ಷಣಿಕ ಪರಿಕಲ್ಪನೆಗಳು
177. ಭಾರತದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ
178. ಭಾರತದಲ್ಲಿ ಮಾಧ್ಯಮ ಶಿಕ್ಷಣದ ಬೆಳವಣಿಗೆ
179. ಭಾರತದಲ್ಲಿ ಲಲಿತ (ಪ್ರದರ್ಶಕ) ಕಲೆಗಳ ಶಿಕ್ಷಣದ ಬೆಳವಣಿಗೆ
180. ಭಾರತದಲ್ಲಿ ಸೈನಿಕ ಶಾಲೆಗಳು
181. ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಮಿಶನರಿಗಳ ಕೊಡುಗೆ
182. ಭಾರತೀಯ ಭಾಷಾ ವಿಶ್ವವಿದ್ಯಾನಿಲಯಗಳು
183. ಭಾರತೀಯ ಮೌಲ್ಯ ವ್ಯವಸ್ಥೆ
184. ಭಾಷಾ ಆರ್ಜನೆ–ನೋಮ್ ಚೋಮ್‌ಸ್ಕಿಯ ವಿಚಾರಗಳು
185. ಭಾಸಿತ ಕಲಿವಿನ ಪರಿಸರ
186. ಭೂಗೋಳ ಶಾಸ್ತ್ರದ ಬೋಧನೆ
187. ಬೇಸಿಗೆ ಶಿಬಿರಗಳು
188. ಮಂಡಳಿ ಚರ್ಚೆ
189. ಮನೋಪ್ರಚೋದಕ ಔಷಧಿಗಳು
190. ಮನೋರೋಗಗಳು
191. ಮನೋವಿಜ್ಞಾನದ ಅಧ್ಯಯನದ ವಿಧಾನಗಳು
192. ಮನೋವಿಜ್ಞಾನದ ಪಂಥಗಳು
193. ಮನೋವಿಜ್ಞಾನ–ಪರಿಭಾಷೆ, ವಿಕಾಸ ಪಥ, ವ್ಯಾಪ್ತಿ
194. ಮನೋವಿಜ್ಞಾನದ ಶಾಖೆಗಳು
195. ಮರಿಯಾ ಮಾಂಟೆಸ್ಸೊರಿ
196. ಮಹಾತ್ಮಾ ಗಾಂಧೀಜಿ
197. ಮಾದಕ ದ್ರವ್ಯ ವ್ಯಸನ ಮತ್ತು ಶಿಕ್ಷಣ
198. ಮಾನವ ಹಕ್ಕುಗಳು ಮತ್ತು ಶಿಕ್ಷಣ
199. ಮಾನಸಿಕ ಸ್ವಾಸ್ಥ್ಯ
200. ಮಾನವ ಬಂಡವಾಳ ಮತ್ತು ಮಾನವ ಸಂಪನ್ಮೂಲ ವಿಕಾಸ
201. ಮಾನವ ಸಂಬಂಧಗಳು
202. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ
203. ಮಾಹಿತಿಯ ಸೂಪರ್ ಹೆದ್ದಾರಿ
204. ಮಿದುಳು ನಕ್ಷೆ
205. ಮೆದುಳಿನ ಪಾರ್ಶ್ವತೆ – ಶೈಕ್ಷಣಿಕ ನಿಹಿತಾರ್ಥಗಳು
206. ಮೆದುಳಿನ ಪಾರ್ಶ್ವವಾಯು (Cerebral Palsy)
207. ಮೇಲ್ವಿಚಾರಿತ ಅಧ್ಯಯನ
208. ಮೈಸೂರು ಒಡೆಯರ್ ದೊರೆಗಳ ಆಳ್ವಿಕೆಯಲ್ಲಿ ಶಿಕ್ಷಣ

Digitised by Bharatavani, CIIL

209. ಮೌಖಿಕ ಪರೀಕ್ಷೆ
210. ಮೌಲ್ಯಮಾಪನ – ಅರ್ಥ, ಉದ್ದೇಶಗಳು
211. ಮೌಲ್ಯಮಾಪನದ ಕಾರ್ಯಗಳು
212. ಮೌಲ್ಯಮಾಪನದ ವಿಧಗಳು
213. ಮೌಲ್ಯಮೀಮಾಂಸೆ ಮತ್ತು ಶಿಕ್ಷಣ
214. ಮೌಲ್ಯ ಶಿಕ್ಷಣ
215. ಮೃತ್ಯು ಶಿಕ್ಷಣ
216. ಯೋಗ ಚಿಕಿತ್ಸೆ
217. ಯೋಗ ಮತ್ತು ಶಿಕ್ಷಣ
218. ಯೋಜಿತ ಬೋಧನಾ ಸಾಮಗ್ರಿಗಳ ಮೌಲ್ಯಮಾಪನ
219. ರಕ್ಷಣಾ ತಂತ್ರಗಳು
220. ರವೀಂದ್ರನಾಥ ಟ್ಯಾಗೂರ್
221. ರಾಚನಿಕವಾದ ಮತ್ತು ಶಿಕ್ಷಣ
222. ರಾಜ್ಯ ಸಂಪನ್ಮೂಲ ಕೇಂದ್ರ – ಕರ್ನಾಟಕ
223. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ
224. ರಾಧಾಕೃಷ್ಣನ್ ಎಸ್.
225. ರಾಷ್ಟ್ರೀಯ ಅಧ್ಯಾಪಕ ಪ್ರಶಿಕ್ಷಣ ಪರಿಷತ್ತು
226. ರಾಷ್ಟ್ರೀಯ ಪಠ್ಯಕ್ರಮ
227. ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ
228. ರಾಷ್ಟ್ರೀಯ ಮನಃಸ್ವಾಸ್ಥ್ಯ ಮತ್ತು ನರವಿಜ್ಞಾನ ಸಂಸ್ಥೆ (NIMHANS), ಬೆಂಗಳೂರು
229. ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಮಾಪನ ಪರಿಷತ್ತು (NAAC)
230. ರಾಷ್ಟ್ರೀಯ ಸೇವಾ ಯೋಜನೆ
231. ರಾಷ್ಟ್ರೀಯ ಸ್ವಯಂ ಸೇವಕ ಸಂಘ
232. ರೂಢಕಲ್ಪನೆಗಳು
233. ರೇಡಿಯೋ
234. ಲಿಂಗ ಶಿಕ್ಷಣ
235. ಲಿಖಿತ ಪರೀಕ್ಷೆ
236. ವರ್ಗ ವ್ಯವಸ್ಥೆ ಮತ್ತು ಶಿಕ್ಷಣ
237. ವಸ್ತುನಿಷ್ಠ ಪರೀಕ್ಷಾಂಶಗಳು
238. ವೃದ್ಧಾಪ್ಯ
239. ವೈಗಾಸ್ಕಿಯವರ ಸಾಮಾಜಿಕ–ಸಾಂಸ್ಕೃತಿಕ ಸಿದ್ಧಾಂತ
240. ವ್ಯವಸ್ಥಾ ಉಪಕ್ರಮ – ಶಿಕ್ಷಣದಲ್ಲಿ
241. ವಿಕಾಸಾತ್ಮಕ ಕಾರ್ಯಗಳು
242. ವಿಚಾರ ಗೋಷ್ಠಿ
243. ವಿಚಾರ ಸಂಕಿರಣ
244. ವಿಮರ್ಶಾತ್ಮಕ ಬೋಧನೆ
245. ವಿದ್ಯಾರ್ಥಿ ಸಕ್ರಿಯತೆ
246. ವಿದ್ಯುನ್ಮಾನ ಅಂಚೆ (ಇ–ಮೇಲ್)
247. ವಿಶೇಷ ಅಗತ್ಯವಿರುವ (ಸವಾಳುಳ್ಳ) ಮಕ್ಕಳಿಗೆ ವರ್ತನಾ ಚಿಕಿತ್ಸೆ
248. ವಿಶೇಷ ಶಿಕ್ಷಣ ಮತ್ತು ಪ್ರಶಿಕ್ಷಣ ಕಾರ್ಯಕ್ರಮಗಳು
249. ವಿಶೇಷ ಶಿಕ್ಷಣದಲ್ಲಿ ಸರ್ಕಾರಗಳ ಪಾತ್ರ
250. ವಿಶ್ವವಿದ್ಯಾನಿಲಯ ಅನುದಾನ ಆಯೋಗ

Digitised by Bharatavani, CIIL

251. ವಿಶ್ವವಿದ್ಯಾನಿಲಯಗಳು – ಕರ್ನಾಟಕದ
252. ವಿಷಯ ಕೊಠಡಿಗಳು
253. ವಿಷಯ ವಸ್ತು ವಿಶ್ಲೇಷಣೆ
254. ವಿಸ್ಮರಣೆಯ(ಮರೆವು) ಸ್ವರೂಪ
255. ವಿಜ್ಞಾನ ಬೋಧನೆಯಲ್ಲಿ ಪ್ರಯೋಗಾಲಯಗಳ ಪಾತ್ರ
256. ವೇದಕಾಲೀನ ಶಿಕ್ಷಣ
257. ವೇದಾಂತ ದರ್ಶನ ಮತ್ತು ಶಿಕ್ಷಣ
258. ಶ್ರವಣ ಸವಾಲುಳ್ಳ ಮಕ್ಕಳ ಶಿಕ್ಷಣ
259. ಶಾಲೆ ಒಂದು ಸಾಮಾಜಿಕ ಸಂಸ್ಥೆಯಾಗಿ
260. ಶ್ರೇಣೀಕರಣ ವ್ಯವಸ್ಥೆ
261. ಶಿಕ್ಷಕ ನಿರ್ಮಿತ ಪರೀಕ್ಷೆಗಳು
262. ಶಿಕ್ಷಣದ ಅವಕಾಶಗಳ ಸಮಾನೀಕರಣ
263. ಶಿಕ್ಷಣದಲ್ಲಿ ಪಾಡ್‌ಕ್ಯಾಸ್ಟಿಂಗ್
264. ಶಿಕ್ಷಣದ ವಿವಿಧ ಹಂತಗಳಲ್ಲಿ ಶೈಕ್ಷಣಿಕ ಆಡಳಿತ
265. ಶಿಕ್ಷಣ ಮತ್ತು ಆರ್ಥಿಕ ಗುಣಮಟ್ಟ
266. ಶಿಕ್ಷಣ ಮತ್ತು ಬಂಡವಾಳ ಹೂಡಿಕೆ
267. ಶಿಕ್ಷಣದ ಪ್ರತಿಫಲದ ಲೆಕ್ಕಾಚಾರ
268. ಶಿಕ್ಷಣದ ವೆಚ್ಚಗಳು
269. ಶಿಕ್ಷಣದಲ್ಲಿ ಕಂಪ್ಯೂಟರ್
270. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು
271. ಶಿಸ್ತಿನ ಪರಿಕಲ್ಪನೆ
272. ಶಿಕ್ಷಣದ ಅರ್ಥಶಾಸ್ತ್ರೀಯ ಪರಿಕಲ್ಪನೆಗಳು
273. ಶಿಕ್ಷಣದಲ್ಲಿ ಮೇಲ್ವಿಚಾರಣೆ ಮತ್ತು ತನಿಖೆ
274. ಶಿಕ್ಷಣದಲ್ಲಿ ವೆಚ್ಚ – ಪ್ರತಿಫಲ ವಿಶ್ಲೇಷಣೆ
275. ಶಿಕ್ಷಣದಲ್ಲಿ ಸಂಪನ್ಮೂಲಗಳ ಕ್ರೋಢೀಕರಣ
276. ಶೈಶವಾವಸ್ಥೆ–ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸ
277. ಶೈಕ್ಷಣಿಕ ಅರ್ಥಶಾಸ್ತ್ರ – ಸ್ವರೂಪ ಮತ್ತು ವ್ಯಾಪ್ತಿ
278. ಶೈಕ್ಷಣಿಕ ಅಳತೆ
279. ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆ
280. ಶೈಕ್ಷಣಿಕ ಉದ್ದೇಶಗಳ ಪರಿಷ್ಕೃತ ಮಾದರಿಗಳು
281. ಶೈಕ್ಷಣಿಕ ಕ್ರಿಯಾಶೀಲತೆ
282. ಶೈಕ್ಷಣಿಕ ತತ್ವಶಾಸ್ತ್ರ
283. ಶೈಕ್ಷಣಿಕ ದೂರದರ್ಶನ
284. ಶೈಕ್ಷಣಿಕ ಪ್ರವಾಸ
285. ಶೈಕ್ಷಣಿಕ ಮನೋವಿಜ್ಞಾನದ ಅರ್ಥ ಮತ್ತು ವ್ಯಾಪ್ತಿ
286. ಶೈಕ್ಷಣಿಕ ಮೇಲ್ವಿಚಾರಣೆ
287. ಶೈಕ್ಷಣಿಕ ಯೋಜನೆ
288. ಶೈಕ್ಷಣಿಕ ರೇಡಿಯೋ
289. ಶೈಕ್ಷಣಿಕ ವೀಡಿಯೋಗಳು
290. ಶೈಕ್ಷಣಿಕ ಸಮಾನಾವಕಾಶದ ಪರಿಕಲ್ಪನೆ
291. ಶೈಕ್ಷಣಿಕ ಸಂಶೋಧನೆಯ ಸ್ವರೂಪ
292. ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು

Digitised by Bharatavani, CIIL

293. ಸಮಾಯೋಜಿತ ವ್ಯಕ್ತಿತ್ವ
294. ಸರತಿ ವ್ಯವಸ್ಥೆ
295. ಸಹಕಾರಾತ್ಮಕ ಬೋಧನೆ
296. ಸಂಪನ್ಮೂಲ ಕೇಂದ್ರಗಳು
297. ಸಂಪ್ರದಾಯರಹಿತ ಶಿಕ್ಷಣದ ಉದ್ದೇಶಗಳು ಮತ್ತು ವ್ಯಾಪ್ತಿ
298. ಸಂಬಂಧ ಅಭಿವೃದ್ಧಿ ತಂತ್ರಗಳು
299. ಸಂವೇಗಾತ್ಮಕ ಬುದ್ಧಿಶಕ್ತಿ
300. ಸಂವೇದನೆ
301. ಸಂವೇದನಾಂಗಗಳು
302. ಸಂಶೋಧನಾ ಸಮಸ್ಯೆಯ ಆಯ್ಕೆ
303. ಸಂಶೋಧನಾ ವರದಿ ತಯಾರಿಕೆ
304. ಸಂಸ್ಕೃತಿ ಮತ್ತು ಶಿಕ್ಷಣ
305. ಸಂಸ್ಕೃತೀಕರಣ ಮತ್ತು ಶಿಕ್ಷಣ
306. ಸಂಸ್ಕೃತಿಯ ವರ್ಗಾವಣೆ ಮತ್ತು ಶಿಕ್ಷಣ
307. ಸಂಸ್ಕೃತಿಯ ಹಿಂಬೀಳುವಿಕೆ ಮತ್ತು ಶಿಕ್ಷಣ
308. ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತಗಳು
309. ಸಮಾಜಮಿತಿ ತಂತ್ರ
310. ಸಮಾಜವಾದ ಮತ್ತು ಶಿಕ್ಷಣ
311. ಸಮಾಜಶಾಸ್ತ್ರ ಮತ್ತು ಶಿಕ್ಷಣ
312. ಸಮಾಯೋಜನೆ – ಅರ್ಥ, ಪ್ರಕ್ರಿಯೆ
313. ಸಮಾಯೋಜನೆ ಮತ್ತು ಧ್ಯಾನ
314. ಸಮುದಾಯ ಮತ್ತು ಶಿಕ್ಷಣ
315. ಸಮೂಹ ಗತಿಶಾಸ್ತ್ರ
316. ಸಮೂಹ ಘರ್ಷಣೆಗಳ ಪರಿಹಾರ
317. ಸಮೂಹ ಸಂಘರ್ಷ ಮತ್ತು ಶಿಕ್ಷಣ
318. ಸರ್ವ ಶಿಕ್ಷಣ ಅಭಿಯಾನ (ಎಸ್.ಎಸ್.ಎ.)
319. ಸರ್ವಜ್ಞನ ವಚನಗಳಲ್ಲಿ ಶೈಕ್ಷಣಿಕ ಚಿಂತನೆಗಳು
320. ಸವಾಲುಳ್ಳ ಮಕ್ಕಳ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ
321. ಸವಾಲುಗಳುಳ್ಳ (ವಿಶೇಷ ಅಗತ್ಯವುಳ್ಳ) ಮಕ್ಕಳಿಗೆ ವೃತ್ತಿ ಶಿಕ್ಷಣ
322. ಸರ್ವೋದಯ ಆಂದೋಲನ ಮತ್ತು ಶಿಕ್ಷಣ
323. ಸೃಜನಶೀಲತೆ ಮತ್ತು ಮಾನವ ಸಂಬಂಧಗಳು
324. ಸೃಜನಶೀಲ ಮಕ್ಕಳ ಲಕ್ಷಣಗಳು
325. ಸಾಮಾಜಿಕ ಸಕ್ರಿಯತೆ
326. ಸಾಧನಾ ಅಭಿಪ್ರೇರಣೆ
327. ಸ್ಕೌಟ್ಸ್ ಮತ್ತು ಗೈಡ್ಸ್
328. ಸ್ವತಂತ್ರ ಭಾರತದಲ್ಲಿ ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳ ಪಾತ್ರ
329. ಸ್ಪರ್ಧಾತ್ಮಕ ಪರೀಕ್ಷೆಗಳು
330. ಸ್ಮರಣೆಯ ಮಾದರಿಗಳು
331. ಸ್ಮರಣೆಯ ಸ್ವರೂಪ
332. ಸ್ವನಿರ್ದೇಶಿತ ಕಲಿಕೆ
333. ಸ್ವಮೌಲ್ಯಮಾಪನ
334. ಸ್ವ–ಸಂಸ್ಕೃತೀಕರಣ

Digitised by Bharatavani, CIIL

335. ಸ್ವಯಂ–ನಿರ್ವಹಣಾ ತಂತ್ರಗಳು
336. ಸಾಂಖ್ಯದರ್ಶನ ಮತ್ತು ಶಿಕ್ಷಣ
337. ಸಾಂಸ್ಕೃತಿಕ ಕಟ್ಟಳೆಗಳು ಮತ್ತು ಶಿಕ್ಷಣ
338. ಸಾಂಸ್ಥಿಕ ಯೋಜನೆ
339. ಸಾಧನಾ ಪರೀಕ್ಷೆಗಳು
340. ಸಾಮಾಜಿಕ ಅಂತರ್‌ಕ್ರಿಯೆ ಮತ್ತು ಶಿಕ್ಷಣ
341. ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ
342. ಸಾಮಾಜಿಕ ಚಲನೆ ಮತ್ತು ಶಿಕ್ಷಣ
343. ಸಾಮಾಜಿಕ ನಿಯಂತ್ರಣ ಮತ್ತು ಶಿಕ್ಷಣ
344. ಸಾಮಾಜಿಕ ನ್ಯಾಯ ಮತ್ತು ಶಿಕ್ಷಣ
345. ಸಾಮಾಜಿಕ ಬದಲಾವಣೆ ಮತ್ತು ಶಿಕ್ಷಣ
346. ಸಾಮಾಜಿಕ ವ್ಯವಸ್ಥೆ ಮತ್ತು ಶಿಕ್ಷಣ
347. ಸಾಮಾಜಿಕ ಸಮೂಹ
348. ಸಾಮಾಜಿಕ ಸ್ತರೀಕರಣ ಮತ್ತು ಶಿಕ್ಷಣ
349. ಸಾಮಾಜೀಕರಣ ಮತ್ತು ಶಿಕ್ಷಣ
350. ಸಾರ್ವಜನಿಕ ಶಿಕ್ಷಣ ಇಲಾಖೆ
351. ಸಾಹಿತ್ಯ ಬೋಧನೆ
352. ಸ್ವಾಮಿ ವಿವೇಕಾನಂದ
353. ಸ್ವಾಯತ್ತ ಕಾಲೇಜುಗಳು
354. ಸ್ಥಿತ ಪ್ರಜ್ಞತ್ವದ ಪರಿಕಲ್ಪನೆ
355. ಸ್ತ್ರೀವಾದ ಮತ್ತು ಶಿಕ್ಷಣ
356. ಸೆಬಾಟಿಕ್ ರಜೆ
357. ಸೆಮಿಸ್ಟರ್ ವ್ಯವಸ್ಥೆ
358. ಸೆಂಟಿಮೆಂಟ್ ಅಥವಾ ರಸಭಾವ
359. ಸೇವಾದಳ
360. ಸೂಕ್ಷ್ಮ (ಅಣು) ಬೋಧನೆ
361. ಹರ್ಬಾರ್ಟನ ಪಂಚಸೋಪಾನಗಳು
362. ಹೋಲೋಗ್ರಾಫಿ

Digitised by Bharatavani, CIIL

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಕನ್ನಡ ಭಾಷಾಭಿವೃದ್ಧಿ ಯೋಜನೆ – 06

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ – 3

ಪ್ರಧಾನ ಸಂಪಾದಕರು
ಡಾ. ಎಸ್. ಲಕ್ಷ್ಮಿ

ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006

2014

Digitised by Bharatavani, CIIL

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

## ಸಂಪುಟ – 3

Digitised by Bharatavani, CIIL

**SHIKSHANASHASTHRA VISHAYA VISHVAKOSHA** : Second & Third Volumes of the series of Shikshanashasthra Vishaya Vishvakosha comprising on different aspects of Education.

Chief Editor
**Dr. N. Lakshmi**
Chairperson, Departm ent of Studies and Research in Education,
KSOU, Mukthagangothri, Mysore – 570 006

Editors
**Prof. B. N. Manjunathaiah**
**Prof. C. G. Venkataramana Shetty**
**Prof. S. Shreekantaswamy**
**Prof. K. R. Nagarathna**

Published by
**The Registrar**
KSOU, Mukthagangothri, Mysore – 570 006

© **Karnataka State Open University**

| | | |
|---|---|---|
| First Edition | : | 2014 |
| Pages | : | XIII + 1538 = 1551 |
| Price | : | ₹ **750** |
| Copies | : | 1000 |

Printed by
**Abhimaani Publications Ltd.**
"Aragini Bhavava", 2/4, Dr. Rajkumar Road,
Rajajinagar, Bangalore – 560 010

ಪ್ರಧಾನ ಸಂಪಾದಕರು
**ಡಾ. ಎನ್. ಲಕ್ಷ್ಮಿ**
ಅಧ್ಯಕ್ಷರು
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು – 570 006

ಸಂಪಾದಕರು
**ಪ್ರೊ. ಬಿ. ಎನ್. ಮಂಜುನಾಥಯ್ಯ**
**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ**
**ಪ್ರೊ. ಎಸ್. ಶ್ರೀಕಂಠಸ್ವಾಮಿ**
**ಪ್ರೊ. ಕೆ. ಆರ್. ನಾಗರತ್ನ**

ಪ್ರಕಾಶಕರು
**ಕುಲಸಚಿವರು**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006

© **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**

| | | |
|---|---|---|
| ಮೊದಲ ಮುದ್ರಣ | : | 2014 |
| ಪುಟಗಳು | : | XIII + 1538 = 1551 |
| ಬೆಲೆ | : | ₹ **750** |
| ಪ್ರತಿಗಳು | : | 1000 |

ಅಕ್ಷರ ಸಂಯೋಜನೆ ಹಾಗೂ ಮುದ್ರಣ
**ಅಭಿಮಾನಿ ಪಬ್ಲಿಕೇಶನ್ಸ್ ಲಿಮಿಟೆಡ್**
"ಅರಗಿಣಿ ಭವನ", ನಂ.2/4, ಡಾ. ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ, ಬೆಂಗಳೂರು–560 010 ದೂ. : 080–23123141

Digitised by Bharatavani, CIIL

# ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ

**ಸಂಪುಟ – 3**

ಪ್ರಧಾನ ಸಂಪಾದಕರು

**ಡಾ. ಎನ್. ಲಕ್ಷ್ಮಿ**

ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006

**2014**

Digitised by Bharatavani, CIIL

ಪ್ರಧಾನ ಸಂಪಾದಕರು
**ಡಾ. ಎನ್. ಲಕ್ಷ್ಮಿ**

ಸಲಹಾ ಸಮಿತಿ
**ಪ್ರೊ. ಸಿ. ಶೇಷಾದ್ರಿ**
**ಪ್ರೊ. ಎಂ. ಎಸ್. ತಳವಾರ್**
**ಪ್ರೊ. ಟಿ. ಪದ್ಮಿನಿ**
**ಡಾ. ಎ. ಶಶಿಕಲ**

ಸಂಪಾದಕ ಮಂಡಳಿ
**ಪ್ರೊ. ಬಿ. ಎನ್. ಮಂಜುನಾಥಯ್ಯ**
**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ**
**ಪ್ರೊ. ಎಸ್. ಶ್ರೀಕಂಠಸ್ವಾಮಿ**
**ಪ್ರೊ. ಕೆ. ಆರ್. ನಾಗರತ್ನ**

ಸಂಯೋಜಕರು
**ಪ್ರೊ. ಎಲ್. ರಾಜಶೇಖರಯ್ಯ**
ಕನ್ನಡ ಭಾಷಾಭಿವೃದ್ಧಿ ಯೋಜನೆಗಳು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಯೋಜನಾ ಸಹಾಯಕರು
**ಶ್ರೀ ಎ. ಎಲ್. ಚಿದಾನಂದ**

**ಆರ್ಥಿಕ ನೆರವು:**
**ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆಗೆ ಕರ್ನಾಟಕ ಸರ್ಕಾರ ನೀಡಿದ ಧನ ಸಹಾಯ**

Digitised by Bharatavani, CIIL

# ಕುಲಪತಿಗಳ ಹಾರೈಕೆಯ ನುಡಿ

"ಈ ಸಮಾಜಕ್ಕೆ ಶಿಕ್ಷಣವನ್ನು ನೀಡುವವರು ಯಾರು?" – ಎಂಬ ಕಾರ್ಲ್‌ಮಾರ್ಕ್ಸ್‌ನ ಪ್ರಶ್ನೆಯು ಇಂದಿಗೂ ಪ್ರಸ್ತುತವಾಗಿದೆ. ಶಿಕ್ಷಣವು ಜನರನ್ನು ಸಮಾಜಮುಖಿಗಳನ್ನಾಗಿ ಮಾಡುವ ಕ್ರಿಯಾಶೀಲವಾದ ವ್ಯವಸ್ಥೆಯಾಗಿದೆ. ವ್ಯಕ್ತಿಗಳಿಗೆ ಶಿಕ್ಷಣ ನೀಡದಿದ್ದರೆ ಅವರಲ್ಲಿ ಅಗತ್ಯ ಸಾಮರ್ಥ್ಯಗಳು ರೂಪುಗೊಳ್ಳುವುದು ಅಸಾಧ್ಯ. ಶಿಕ್ಷಣವೆಂಬುದು ಆಧುನಿಕ ಸಮಾಜಗಳ ದಮನಕಾರಿ ಅಸಮಾನತೆಗಳಿಗೆಲ್ಲ ಪರಿಹಾರ. ಆದ್ದರಿಂದ ಶಿಕ್ಷಣ ಕ್ಷೇತ್ರದ ಸುಧಾರಕರು ಸತತವಾಗಿ ಶಿಕ್ಷಣದ ವಸ್ತು ಮತ್ತು ವಿಧಾನಗಳ ಕುರಿತು ಪ್ರಯೋಗ, ಚರ್ಚೆ, ಸಂವಾದಗಳನ್ನು ನಡೆಸುತ್ತ ಬಂದಿದ್ದಾರೆ. ಕ್ರಿಯಾಶೀಲವಾದ ಕಾರ್ಯ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು **'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ಗಳ ರಚನಾತ್ಮಕವಾದ ಕಾರ್ಯ ಯೋಜನೆಯನ್ನು ಹಮ್ಮಿಗೊಂಡಿದೆ. ಯೋಜನೆಯ ಅನುಷ್ಠಾನದ ಹಿನ್ನೆಲೆಯಿಂದ ಮೊದಲನೆಯ ಸಂಪುಟವು ಅನಾವರಣಗೊಂಡಿದೆ. ಪ್ರಸ್ತುತ ಶೈಕ್ಷಣಿಕ ಅವಧಿಯಲ್ಲಿ **'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ದ ಎರಡು ಮತ್ತು ಮೂರನೆಯ ಸಂಪುಟಗಳು ಅನಾವರಣಗೊಳಿಸುತ್ತಿರುವುದು ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆಯ ವಿಚಾರವಾಗಿದೆ.

ಕೇಂದ್ರ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಘೋಷಿಸಿದ ಸಂದರ್ಭದಲ್ಲಿ ಭಾಷೆ – ಸಾಹಿತ್ಯ – ಸಂಸ್ಕೃತಿಯ ಸಂಶೋಧನೆಗಳ ಕುರಿತ ಸಂಶೋಧನೆಗಳಿಗೆ ಪೂರಕವಾಗುವಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ತಲಾ ಎರಡು ಕೋಟಿ ಹಣವನ್ನು ಬಿಡುಗಡೆಗೊಳಿಸಿದೆ. ಈ ಅನುದಾನದಿಂದ ತತ್ಸಂಬಂಧಿತ ಯೋಜನೆಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಿಂದಿನ ಕುಲಪತಿಗಳಾದ ಪ್ರೊ. ವಿವೇಕ ರೈ ಹಾಗೂ ಪ್ರೊ. ಕೆ.ಎಸ್. ರಂಗಪ್ಪ ಅವರ ಅಧಿಕಾರಾವಧಿಯಲ್ಲಿ ಕಾರ್ಯರೂಪವನ್ನು ಪಡೆದಿವೆ. ಇದರ ಪರಿಣಾಮವಾಗಿ 2012ರಲ್ಲಿ 'ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶ'ದ 1014 ಪುಟಗಳ 362 ಲೇಖನಗಳನ್ನು ಒಳಗೊಂಡ ಮೊದಲ ಸಂಪುಟವು ಪ್ರಕಟಗೊಂಡಿರುತ್ತದೆ.

**'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ದ ಎರಡು ಮತ್ತು ಮೂರನೇ ಸಂಪುಟಗಳು 1551 ಪುಟಗಳನ್ನು ಒಳಗೊಂಡಿವೆ. ಶಿಕ್ಷಣಶಾಸ್ತ್ರದ ವಿವಿಧ ವಿಷಯಗಳಿಗೆ ಸಂಬಂಧಿಸಿದ 279 ಲೇಖನಗಳನ್ನು ಒಳಗೊಂಡಿದೆ. ಈ ಸಂಪುಟಗಳಲ್ಲಿ ನವದೆಹಲಿಯ ಎನ್.ಸಿ.ಇ.ಆರ್.ಟಿ. ಪ್ರಕಟಿಸಿರುವ "Encyclopedia of Indian Education" ಎಂಬ ಗ್ರಂಥದ ಎರಡು ಸಂಪುಟಗಳಿಂದ ಆಯ್ದ ಸುಮಾರು 100 ಲೇಖನಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸುತ್ತಿರುವುದು ಒಂದು ವಿಶೇಷವಾಗಿದೆ. ಈ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ವಿಶ್ವಕೋಶದಲ್ಲಿ ಸೇರ್ಪಡೆಗೊಳಿಸಲು ಎನ್.ಸಿ.ಇ.ಆರ್.ಟಿ. ಯ ನಿರ್ದೇಶಕರಾಗಿದ್ದ ಪ್ರೊ. ರವೀಂದ್ರ ಅವರು ಯಾವುದೇ ಆರ್ಥಿಕ ಪ್ರತಿಫಲವನ್ನು ಅಪೇಕ್ಷಿಸದೆ ಅನುಮತಿ ನೀಡಿದ್ದಾರೆ. ಇವರಂಥ ವಿದ್ವಾಂಸರಿಂದ, ಶಿಕ್ಷಣ ತಜ್ಞರಿಂದ ಶಿಕ್ಷಣ ಕ್ಷೇತ್ರವು ಬೆಳೆಯಬೇಕಾಗಿದೆ.

ಈ ಸಂಪುಟಗಳಿಗೆ ಕರ್ನಾಟಕದ ಅನೇಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ, ವಿಶ್ವವಿದ್ಯಾನಿಲಯಗಳ ಶಿಕ್ಷಣಶಾಸ್ತ್ರ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನುಭವಿ ಶಿಕ್ಷಣ ತಜ್ಞರು ತಮ್ಮ ಲೇಖನಗಳನ್ನು ಬರೆದುಕೊಟ್ಟಿದ್ದಾರೆ.

ಈ ಸಂಪುಟವನ್ನು ಸೂಕ್ತ ರೀತಿಯಲ್ಲಿ ಸಿದ್ಧಪಡಿಸಿ ಹೊರತರುವುದರಲ್ಲಿ ಮುಖ್ಯ ಸಂಪಾದಕರಾದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎನ್. ಲಕ್ಷ್ಮಿ ಅವರ ಪಾತ್ರವು ಗಮನಾರ್ಹವಾಗಿದೆ.

ಸಲಹಾ ಸಮಿತಿ ಸದಸ್ಯರಾದ ಪ್ರೊ. ಸಿ. ಶೇಷಾದ್ರಿ, ಪ್ರಾದೇಶಿಕ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಮೈಸೂರು; ಡಾ. ಎಂ. ಎಸ್. ತಳವಾರ್, ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು ಬೆಂಗಳೂರು ವಿಶ್ವವಿದ್ಯಾನಿಲಯ; ಡಾ. ಟಿ. ಪದ್ಮಿನಿ, ನಿವೃತ್ತ ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾನಿಲಯ; ಡಾ. ಎ. ಶಶಿಕಲ, ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು, ಸೆಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಇವರೆಲ್ಲರ ಅಧ್ಯಯನಶೀಲತೆಯ ಸಾಂಘಿಕ ಪರಿಶ್ರಮದಿಂದ ಈ ವಿಶ್ವಕೋಶ ಸಂಪುಟಗಳು ರೂಪುಗೊಂಡಿದೆ.

Digitised by Bharatavani, CIIL

ವಿಶ್ವಕೋಶಕ್ಕೆ ಲೇಖನಗಳನ್ನು, ಕೆಲವು ಲೇಖನಗಳ ಕನ್ನಡಾನುವಾದಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಸಂಪಾದನೆ ಮಾಡಿ ಅವುಗಳಿಗೆ ಅಂತಿಮ ರೂಪ ಕೊಡಲು ಸಂಪಾದಕ ಮಂಡಳಿ ಸದಸ್ಯರಾದ ಪ್ರೊ. ಬಿ.ಎನ್. ಮಂಜುನಾಥಯ್ಯ, ಪ್ರೊ. ಸಿ.ಜಿ. ವೆಂಕಟರಮಣಶೆಟ್ಟಿ, ಪ್ರೊ. ಕೆ. ಆರ್. ನಾಗರತ್ನ ಪ್ರೊ. ಎಸ್. ಶ್ರೀಕಂಠಸ್ವಾಮಿ ಈ ವಿಶ್ವಕೋಶದ ಯೋಜನಾ ಸಹಾಯಕರಾದ ಶ್ರೀ ಚಿದಾನಂದ ಎ. ಎಲ್., ಮತ್ತು ಈ ಸಂಪುಟಗಳನ್ನು ಮುದ್ರಿಸಿದ ಅಭಿಮಾನಿ ಪಬ್ಲಿಕೇಶನ್ಸ್ ಲಿಮಿಟೆಡ್, ಬೆಂಗಳೂರು, ಈ ಸರ್ವರಿಗೂ ವಿಶ್ವವಿದ್ಯಾನಿಲಯದ ಪರವಾಗಿ ಅಭಿನಂದನೆಗಳು.

ಕನ್ನಡದಲ್ಲಿ ಶಿಕ್ಷಣಶಾಸ್ತ್ರದ ಬಗ್ಗೆ ಯಾವುದೇ ವಿಶ್ವಕೋಶದ ಸ್ವರೂಪದ ಗ್ರಂಥ ಇದುವರೆಗೆ ಪ್ರಕಟವಾಗಿರಲಿಲ್ಲ. ಈ ಕೊರತೆಯನ್ನು ತುಂಬಲು **'ಶಿಕ್ಷಣಶಾಸ್ತ್ರದ ವಿಷಯ ವಿಶ್ವಕೋಶ'**ದ ಮೂರು ಬೃಹತ್ ಸಂಪುಟಗಳನ್ನು ಹೊರತಂದಿರುವುದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಒಂದು ಮಹತ್ವಪೂರ್ಣ ಸಾಧನೆಯೆಂದು ನಾನು ಪರಿಗಣಿಸಿದ್ದೇನೆ. ಈ ಕಾರ್ಯಕ್ಕೆ ಆರ್ಥಿಕ ನೆರವು ನೀಡಿದ ಕರ್ನಾಟಕ ಸರ್ಕಾರಕ್ಕೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ವಿಶ್ವವಿದ್ಯಾನಿಲಯದ ಪರವಾಗಿ ಹಾರ್ದಿಕ ವಂದನೆಗಳು.

ತಮ್ಮ ವಿಶ್ವಾಸದ

**ಪ್ರೊ. ಎಂ.ಜಿ. ಕೃಷ್ಣನ್**
**ಕುಲಪತಿ**

Digitised by Bharatavani, CIIL

# ಪ್ರಧಾನ ಸಂಪಾದಕರ ನುಡಿ

ಭಾರತದ ಘನ ಸರ್ಕಾರ 2009 ರಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ (ಪ್ರಾಚೀನ) ಭಾಷೆಯಾಗಿ ಸ್ಥಾನಮಾನ ನೀಡಿದ ನಂತರ ಆಗಿನ ಕರ್ನಾಟಕ ರಾಜ್ಯ ಸರ್ಕಾರ ರಾಜ್ಯದ ಪ್ರತಿ ವಿಶ್ವವಿದ್ಯಾನಿಲಯಕ್ಕೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಪ್ರಾಯೋಜನೆಗಳನ್ನು ಕೈಗೊಳ್ಳಲು ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿತು. ಅದರಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಈ ಅನುದಾನವನ್ನು ಪಡೆಯಿತು. ಆಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಪ್ರೊ. ಬಿ.ಎ. ವಿವೇಕ ರೈ ರವರು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಪೂರಕವಾದ ಪ್ರಾಯೋಜನೆಗಳನ್ನು ಸಲ್ಲಿಸುವಂತೆ ವಿಭಾಗಗಳಿಗೆ ಸೂಚನೆ ನೀಡಿದ್ದರು. ಅದರಂತೆ ನಮ್ಮ ವಿಭಾಗದಿಂದ 'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ' ಯೋಜನೆ – ಈ ಕೃತಿಯನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸುವುದು ಮತ್ತು 'ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಪಠ್ಯಗಳನ್ನು ಸಿ.ಡಿ. ಮುಖಾಂತರ ಒದಗಿಸುವ ಯೋಜನೆ' – ಈ ಎರಡು ಪ್ರಾಯೋಜನೆಗಳನ್ನು ಸಲ್ಲಿಸಲಾಯಿತು. ಇವುಗಳನ್ನು ವಿಶ್ವವಿದ್ಯಾನಿಲಯ ಒಪ್ಪಿಕೊಂಡಿತು. ಈಗಾಗಲೇ 'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ' ಸಂಪುಟ–1 ಹಾಗೂ ಎರಡನೇ ವರ್ಷದ 'ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಪಠ್ಯಗಳನ್ನು ಸಿ.ಡಿ. ಮುಖಾಂತರ ಒದಗಿಸುವ ಯೋಜನೆ'ಯ 48 ಸಿ.ಡಿ.ಗಳನ್ನು ಘನತೆವೆತ್ತ ರಾಜ್ಯಪಾಲರಾದ ಶ್ರೀ ಹಂಸರಾಜ್ ಭಾರದ್ವಾಜ್ ರವರು ಆಗಸ್ಟ್ 7, 2012 ರಲ್ಲಿ ಬಿಡುಗಡೆ ಮಾಡಿದ್ದಾರೆ. **'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'**ದ ಪ್ರಥಮ ಸಂಪುಟ 1014 ಪುಟಗಳನ್ನು ಹೊಂದಿದ್ದು 362 ಲೇಖನಗಳನ್ನು ಹೊಂದಿದೆ.

ಈಗ ಈ ವಿಶ್ವಕೋಶದ ಎರಡು ಸಂಪುಟಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಲೋಕಾರ್ಪಣೆ ಮಾಡಲು ಈ ಪ್ರಾಯೋಜನೆಯ ಪ್ರಧಾನ ಸಂಪಾದಕಿಯಾಗಿ ನನಗೆ ತುಂಬಾ ಸಂತೋಷವಾಗುತ್ತಿದೆ. ಕನ್ನಡ ಸಾಹಿತ್ಯ ಭಂಡಾರಕ್ಕೆ ಒಟ್ಟು ಮೂರು ಸಂಪುಟಗಳನ್ನು ಅರ್ಪಿಸುವ ಅವಕಾಶ ನನಗೆ ದೊರಕಿರುವುದು ನನ್ನ ಭಾಗ್ಯವೆಂದು ತಿಳಿದಿದ್ದೇನೆ. ಕನ್ನಡದಲ್ಲಿ ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಈ ಬಗೆಯ ಗ್ರಂಥ ಇರಲಿಲ್ಲ. ಈ ಮೂರು ಸಂಪುಟಗಳು ಈ ಕೊರತೆಯನ್ನು ನೀಗಿಸುತ್ತವೆ.

ಈ ಸಂಪುಟಗಳು ಸುಮಾರು 1551 ಪುಟಗಳನ್ನು ಹೊಂದಿದ್ದು ಇವುಗಳಲ್ಲಿ 279 ಲೇಖನಗಳಿವೆ. ಈ ಎಲ್ಲಾ ಲೇಖನಗಳು ಬಿ.ಎಡ್., ಎಂ.ಎಡ್., ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಎಲ್ಲಾ ಶಿಕ್ಷಣಾಸಕ್ತರಿಗೆ ಉಪಯುಕ್ತವಾದ ಆಕರ ಸಾಮಗ್ರಿಗಳಾಗುತ್ತವೆ ಎಂದು ನಾನು ತಿಳಿದಿದ್ದೇನೆ. ಈ ಸಂಪುಟಗಳು ನವದೆಹಲಿಯ ಎನ್.ಸಿ.ಇ.ಆರ್.ಟಿ. ಸಂಸ್ಥೆ ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ 'Encyclopedia of Indian Education' ಎಂಬ ಎರಡು ಸಂಪುಟಗಳಿಂದ ಪ್ರಸಿದ್ಧ ಶಿಕ್ಷಣ ತಜ್ಞರು ಬರೆದಿರುವ ಆಯ್ದ ಸುಮಾರು 100 ಲೇಖನಗಳ ಕನ್ನಡ ಅನುವಾದಿತ ಲೇಖನಗಳನ್ನು ಒಳಗೊಂಡಿವೆ. ಇದು ಈ ಸಂಪುಟಗಳ ಒಂದು ವಿಶಿಷ್ಟ ಅಂಶವಾಗಿದೆ.

ಪ್ರಸ್ತುತ ಕುಲಪತಿಗಳಾಗಿರುವ ಪ್ರೊ. ಎಂ.ಜಿ. ಕೃಷ್ಣನ್ ಅವರು ಈ ಪ್ರಾಯೋಜನೆ ಯಶಸ್ವಿಯಾಗಿ ಮುಕ್ತಾಯಗೊಳ್ಳಲು ತಮ್ಮ ಅಮೂಲ್ಯ ಸಲಹೆ, ಸಹಕಾರ, ಮಾರ್ಗದರ್ಶನ, ಧೈರ್ಯ ಹಾಗೂ ಉತ್ಸಾಹ ತುಂಬಿದ್ದಾರೆ. ಈ ಪ್ರಾಯೋಜನೆಗೆ ಆಡಳಿತಾತ್ಮಕವಾಗಿ ಹಾಗೂ ಆರ್ಥಿಕ ನೆರವು ನೀಡುವಲ್ಲಿ ಔದಾರ್ಯ ಹಾಗೂ ಪ್ರೋತ್ಸಾಹ ನೀಡಿದ್ದಾರೆ. ಈ ಪ್ರಾಯೋಜನೆಯ ಎಲ್ಲ ಹಂತಗಳಲ್ಲೂ ನನಗೆ ಸ್ಪೂರ್ತಿ ತುಂಬಿದ ಮಾನ್ಯ ಕುಲಪತಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಪ್ರಾಯೋಜನೆ ಯಶಸ್ವಿಯಾಗಿ ಸಾಗಲು ಪ್ರಾಯೋಜನೆಯ ಅವಧಿಯುದ್ದಕ್ಕೂ ಸಹಕಾರ ನೀಡಿದ, ಈ ಹಿಂದೆ ಕುಲಪತಿಗಳಾಗಿದ್ದ ಪ್ರೊ. ಬಿ. ಎ. ವಿವೇಕ ರೈ ಅವರಿಗೆ ಹಾಗೂ ಪ್ರೊ. ಕೆ. ಎಸ್. ರಂಗಪ್ಪ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಹಿಂದೆ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸಿದ ಶ್ರೀ ಕೆ. ಆರ್. ಜಯಪ್ರಕಾಶ್‌ರಾವ್ ಅವರಿಗೆ ಹಾಗೂ ಪ್ರೊ. ಬಿ. ಎಸ್. ವಿಶ್ವನಾಥ್ ಅವರಿಗೆ ಧನ್ಯವಾದಗಳು.

ಈ ವಿಶ್ವವಿದ್ಯಾನಿಲಯದ ಪ್ರಸ್ತುತ ಕುಲಸಚಿವರಾದ ಪ್ರೊ. ಪಿ.ಎಸ್. ನಾಯಕ್ ರವರು ಕೂಡ ಆಡಳಿತಾತ್ಮಕವಾಗಿ ಎಲ್ಲಾ ರೀತಿಯ ಸಹಕಾರ, ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಈ ಯೋಜನೆ ಪೂರ್ಣಗೊಳ್ಳಲು ಧನಾತ್ಮಕ ಸಹಕಾರ ನೀಡಿರುವ ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದಿನ ಶೈಕ್ಷಣಿಕ ಡೀನ್‌ರಾದ ಪ್ರೊ. ಎಸ್.ಎನ್. ವಿಕ್ರಂ ರಾಜೇ ಅರಸ್‌ರವರಿಗೂ, ಪ್ರಸ್ತುತ ಶೈಕ್ಷಣಿಕ ಡೀನ್‌ರಾದ ಪ್ರೊ. ಟಿ.ಡಿ. ದೇವೇಗೌಡರವರಿಗೂ, ಅಂದಿನ ಹಣಕಾಸು ಅಧಿಕಾರಿಗಳಾದ ಶ್ರೀಮತಿ. ಜಿ. ನಾಗಮಣಿ ಹಾಗೂ ಶ್ರೀಮತಿ. ಪ್ರೊ. ಜಹಾನಾರ ಬೇಗಂರವರಿಗೂ ಹಾಗೂ ಪ್ರಸ್ತುತ ಹಣಕಾಸು ಅಧಿಕಾರಿಯಾದ ಪ್ರೊ. ಎಲ್. ರಾಜಶೇಖರಯ್ಯ ಅವರಿಗೂ ನಾನು ಆಭಾರಿಯಾಗಿದ್ದೇನೆ.

Digitised by Bharatavani, CIIL

ಈ ಎರಡು ಸಂಪುಟಗಳು ಪ್ರಕಟವಾಗಲು ಅನುದಾನ ನೀಡಿ ಉದಾರವಾಗಿ ಧನ ಸಹಾಯ ಮಾಡಿದ ಕರ್ನಾಟಕ ಘನ ಸರ್ಕಾರಕ್ಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ನಾನು ಚಿರಋಣಿಯಾಗಿದ್ದೇನೆ.

ಈ ಲೇಖನಗಳ ಅನುವಾದವನ್ನು ಕೂಲಂಕಶವಾಗಿ ಪರಿಶೀಲಿಸಿ ಮೂಲ ಲೇಖನಗಳಿಗೆ ಯಾವುದೇ ಚ್ಯುತಿ ಉಂಟಾಗದಂತೆ ಅಂತಿಮ ರೂಪ ಕೊಡುವಲ್ಲಿ ನಮ್ಮ ಸಂಪಾದಕ ಮಂಡಳಿಯ ಸದಸ್ಯರುಗಳಾದ ಪ್ರೊ. ಬಿ.ಎನ್. ಮಂಜುನಾಥಯ್ಯ, ಪ್ರೊ. ಸಿ.ಜಿ. ವೆಂಕಟರಮಣ ಶೆಟ್ಟಿ, ಪ್ರೊ. ಕೆ.ಆರ್. ನಾಗರತ್ನ ಮತ್ತು ಪ್ರೊ. ಎಸ್. ಶ್ರೀಕಂಠಸ್ವಾಮಿ ಇವರುಗಳ ಕಾಳಜಿ ಹಾಗೂ ಶ್ರಮ ಅಪಾರವಾದುದು. ಇದರ ಜೊತೆಗೆ ಮೂಲ ಲೇಖನಗಳನ್ನು ಸೂಕ್ತ ರೀತಿಯಲ್ಲಿ ಸಂಪಾದಿಸುವಲ್ಲಿ ಇವರುಗಳು ಶ್ರಮಿಸಿದ್ದಾರೆ. ಇದಕ್ಕಾಗಿ ಸಂಪಾದಕ ಮಂಡಳಿಯ ಎಲ್ಲ ಸದಸ್ಯರುಗಳಿಗೆ ಕೃತಜ್ಞತೆ ಸಲ್ಲಿಸುವುದು ನನ್ನ ಕರ್ತವ್ಯವಾಗಿದೆ. ಹಾಗೆಯೇ ಸಲಹಾ ಸಮಿತಿ ಸದಸ್ಯರಾದ ಡಾ. ಎಂ.ಎಸ್. ತಳವಾರ್, ಪ್ರೊ. ಸಿ. ಶೇಷಾದ್ರಿ, ಡಾ. ಪದ್ಮಿನಿ ಹಾಗೂ ಡಾ. ಎ. ಶಶಿಕಲ ಅವರುಗಳು ಕಾಲಕಾಲಕ್ಕೆ ನಮಗೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಪ್ರಾಯೋಜನೆಯ ಸಂಶೋಧಕ ಸಹಾಯಕರಾದ ಶ್ರೀ ಎ. ಎಲ್. ಚಿದಾನಂದ ರವರು ದಕ್ಷತೆಯಿಂದ ಕಾರ್ಯನಿರ್ವಹಿಸಿ ಎಲ್ಲ ಲೇಖನಗಳನ್ನು ವ್ಯವಸ್ಥಿತವಾಗಿ ದಾಖಲಿಸಿದ್ದಾರೆ ಹಾಗೂ ಲೇಖನಗಳ ಡಿ.ಟಿ.ಪಿ. ಕಾರ್ಯವನ್ನೂ ಮಾಡಿದ್ದಾರೆ. ಇವರಿಗೂ ನನ್ನ ಕೃತಜ್ಞತೆಗಳು.

ನಮ್ಮ ವಿಭಾಗದ ಅಧ್ಯಾಪಕರು ಈ ಯೋಜನೆಯ ಯಶಸ್ಸಿಗೆ ಸಲಹೆ–ಸಹಕಾರ–ಪ್ರೋತ್ಸಾಹವನ್ನು ನಿರಂತರವಾಗಿ ನೀಡುತ್ತಾ ಬಂದಿದ್ದಾರೆ. ಇವರೆಲ್ಲರಿಗೂ ನನ್ನ ಪ್ರೀತಿಯ ಧನ್ಯವಾದಗಳು. ಹಾಗೆಯೇ ನಮ್ಮ ವಿಶ್ವವಿದ್ಯಾನಿಲಯದ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗಳ ಸಂಯೋಜಕರಾದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕರಾದ ಪ್ರೊ. ಎಲ್. ರಾಜಶೇಖರ್ ಅವರಿಗೂ ವಿಶೇಷ ಕೃತಜ್ಞತೆಗಳು.

ಈ ಸಂಪುಟಗಳಿಗೆ ನಮ್ಮ ವಿಭಾಗದ ಅಧ್ಯಾಪಕರೂ ಸೇರಿದಂತೆ, ರಾಜ್ಯದ ವಿವಿಧ ಶಿಕ್ಷಣ ಮಹಾವಿದ್ಯಾಲಯಗಳ ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗಗಳ ಪ್ರಾಧ್ಯಾಪಕರು ಹಾಗೂ ಅಧ್ಯಾಪಕರು ಶ್ರಮವಹಿಸಿ ಉತ್ತಮ ಲೇಖನಗಳನ್ನು ಬರೆದುಕೊಟ್ಟು ಈ ಸಂಪುಟಗಳನ್ನು ಮೌಲ್ಯಯುತವಾದವುಗಳನ್ನಾಗಿ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಧನ್ಯವಾದಗಳು. ಆಯ್ಕೆ ಮಾಡಿದ ಇಂಗ್ಲಿಷ್ ಲೇಖನಗಳನ್ನು ಉತ್ತಮವಾಗಿ ಅನುವಾದ ಮಾಡಿಕೊಟ್ಟ ಎಲ್ಲ ಅನುವಾದಕರಿಗೂ ನನ್ನ ಧನ್ಯವಾದಗಳು.

ಇಂಥಹ ಬೃಹತ್ ಸಂಪುಟಗಳ ಸಿದ್ಧಪಡಿಸುವಾಗ ಕೆಲವು ಲೋಪದೋಷಗಳು ಉಳಿಯುವುದು ಅಸಹಜವೇನಲ್ಲ. ಕೆಲವು ಮುಖ್ಯ ವಿಷಯಗಳ ಲೇಖನಗಳನ್ನು ಸಂಪುಟದಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. ಶಿಕ್ಷಣಾಸಕ್ತರು ಈ ಲೋಪವನ್ನು ಮನ್ನಿಸಿ ಸಂಪುಟಗಳ ಮೌಲ್ಯಯುತ ಅಂಶಗಳಿಗೆ ಮನ್ನಣೆ ನೀಡಿ ಇವುಗಳನ್ನು ಪ್ರೀತಿ, ಆದರಗಳಿಂದ ಸ್ವೀಕರಿಸುವರೆಂದು ನಾನು ಭಾವಿಸುತ್ತೇನೆ.

ನಮ್ಮ ವಿಶ್ವವಿದ್ಯಾನಿಲಯದ ಎಲ್ಲ ಶಾಸನಬದ್ಧ ಅಧಿಕಾರಿ ವರ್ಗದವರಿಗೂ, ಅಧ್ಯಾಪಕ ವರ್ಗಕ್ಕೂ ಹಾಗೂ ಅಧ್ಯಾಪಕೇತರ ವರ್ಗದವರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಈ ಸಂಪುಟದ ಡಿ.ಟಿ.ಪಿ. ಕಾರ್ಯವನ್ನು ನಮ್ಮ ವಿಭಾಗದ ಅಧ್ಯಾಪಕೇತರ ಸಿಬ್ಬಂದಿಯವರಾದ ಶ್ರೀ ಚಂದ್ರಶೇಖರ್, ಶ್ರೀಮತಿ ಶಿವಮ್ಮ ಹಾಗೂ ಶ್ರೀಮತಿ ಅನುಸೂಯ ಮಾಡಿದ್ದಾರೆ. ಅವರಿಗೂ ನನ್ನ ಕೃತಜ್ಞತೆಗಳು.

ಬೆಂಗಳೂರಿನ ಮೇ॥ ಅಭಿಮಾನಿ ಪಬ್ಲಿಕೇಷನ್ಸ್ ಲಿಮಿಟೆಡ್., ರವರು ಈ ಸಂಪುಟಗಳನ್ನು ಬಹಳ ಅಂದವಾಗಿ ಸಕಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞಳಾಗಿದ್ದೇನೆ. ಇಂತಹ ಬೃಹತ್ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ನಮ್ರ ವಂದನೆಗಳು.

**ಡಾ. ಎನ್. ಲಕ್ಷ್ಮಿ**
ಪ್ರಧಾನ ಸಂಪಾದಕರು

Digitised by Bharatavani, CIIL

# ಸಂಪಾದಕ ಮಂಡಳಿಯ ನುಡಿ

ಕನ್ನಡ ಭಾಷೆಗೆ ಭಾರತ ಸರ್ಕಾರ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿದ ನಂತರ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಕರ್ನಾಟಕ ಘನ ಸರ್ಕಾರ ಮಂಜೂರು ಮಾಡಿದ ಎರಡು ಕೋಟಿ ರೂಪಾಯಿಗಳ ಅನುದಾನದಡಿಯಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಕನ್ನಡದಲ್ಲಿ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಎರಡು ಸಂಪುಟಗಳನ್ನು ಸಿದ್ಧಪಡಿಸಲು ಕೈಗೊಂಡಿದ್ದ ಪ್ರಾಯೋಜನೆಗೆ ಸಂಬಂಧಿಸಿದಂತೆ ವಿಷಯ ವಿಶ್ವಕೋಶದ ಈ ಎರಡನೇ ಸಂಪುಟವನ್ನು ಕನ್ನಡಿಗರಿಗೆ ಅರ್ಪಿಸುತ್ತಿರುವುದು ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೆ ಅತೀವ ಆನಂದ ನೀಡಿದೆ. ಈ ಪ್ರಾಯೋಜನೆಯ ಮೊದಲ ಸಂಪುಟ ಆಗಸ್ಟ್ 7, 2012 ರಲ್ಲಿ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಾಗಿದ್ದ ಶ್ರೀ ಹಂಸರಾಜ್ ಭಾರದ್ವಾಜ್ ಅವರಿಂದ ಈಗಾಗಲೇ ಬಿಡುಗಡೆಯಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

**'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'** ಕೃತಿಯ 1551 ಪುಟಗಳ ಈ ಎರಡು ಮತ್ತು ಮೂರನೇ ಸಂಪುಟಗಳು ಶಿಕ್ಷಣಶಾಸ್ತ್ರದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ 279 ವಿದ್ವತ್ಪೂರ್ಣ ಲೇಖನಗಳನ್ನು ಒಳಗೊಂಡಿವೆ. ಇವುಗಳಲ್ಲಿ ನವದೆಹಲಿಯ ಎನ್.ಸಿ.ಇ.ಆರ್.ಟಿ. ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ "Encyclopedia of Indian Education" ಎಂಬ ಗ್ರಂಥದಿಂದ ಭಾರತದ ಪ್ರಸಿದ್ಧ ಶಿಕ್ಷಣ ತಜ್ಞರು ಬರೆದಿರುವ 100 ಲೇಖನಗಳ ಕನ್ನಡ ಅನುವಾದಿತ ಲೇಖನಗಳಿರುವುದು ಈ ಸಂಪುಟಗಳ ವಿಶಿಷ್ಟ ಲಕ್ಷಣವಾಗಿದೆ ಎಂದು ನಾವು ಭಾವಿಸಿದ್ದೇವೆ. ಈ ಲೇಖನಗಳು 2004 ರಲ್ಲಿಯೇ ಪ್ರಕಟವಾಗಿದ್ದು, ಹಲವಾರು ಲೇಖನಗಳಲ್ಲಿರುವ ಅಂಕಿ ಅಂಶಗಳು ಅಂದಿನ ಕಾಲಕ್ಕೆ ಸಂಬಂಧಪಟ್ಟಿದ್ದರೂ, ಈ ಲೇಖನಗಳು ಶಿಕ್ಷಣಶಾಸ್ತ್ರದ ಅಭ್ಯಾಸಿಗಳಿಗೆ ಹೆಚ್ಚು ಉಪಯುಕ್ತವಾದವುಗಳಾಗುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರು. ಈ ಲೇಖನಗಳ ಕನ್ನಡಾನುವಾದಗಳನ್ನು ಈ ಸಂಪುಟದಲ್ಲಿ ಸೇರಿಸಲು ಅನುಮತಿ ನೀಡಿದ ಎನ್.ಸಿ.ಇ.ಆರ್.ಟಿ. ನಿರ್ದೇಶಕರಿಗೆ ಸಂಪಾದಕ ಮಂಡಳಿ ಧನ್ಯವಾದಗಳನ್ನು ಅರ್ಪಿಸುತ್ತದೆ.

**'ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ'** ಕೃತಿಯ ಮೂರು ಸಂಪುಟಗಳ ಸ್ವತಂತ್ರ ಲೇಖನಗಳು ಮತ್ತು ಆಯ್ಕೆ ಮಾಡಿದ ಇಂಗ್ಲಿಷ್ ಲೇಖನಗಳ ಕನ್ನಡಾನುವಾದಗಳನ್ನು ಸಂಪಾದನೆ ಮಾಡಿದ ಈ ಕಾರ್ಯ ನಮಗೆ ಸಮೃದ್ಧ ಶೈಕ್ಷಣಿಕ ಅನುಭವಗಳನ್ನು ನೀಡಿದೆ. ಲೇಖನಗಳನ್ನು ಸಂಪಾದನೆ ಮಾಡುತ್ತಲೇ ನಾವು ಎಷ್ಟೋ ಹೊಸ ವಿಷಯಗಳನ್ನು, ಪರಿಕಲ್ಪನೆಗಳನ್ನು ಕಲಿಯುವ ಅವಕಾಶ ನಮಗೆ ದೊರಕಿತು ಎಂದರೆ ಅತಿಶಯೋಕ್ತಿಯಾಗಲಾರದು. ಲೇಖನಗಳಲ್ಲಿ ಮಿಶ್ರ ಮಟ್ಟದ ಲೇಖನಗಳು ನಮಗೆ ದೊರೆತವು. ಕೆಲವು ಲೇಖನಗಳು ಶ್ರೇಷ್ಠ ಮಟ್ಟದವುಗಳಾಗಿದ್ದು ಅವುಗಳನ್ನು ಸಂಪಾದನೆ ಮಾಡುವುದು ನಮಗೆ ಸುಲಭವಾಯಿತು. ಇನ್ನು ಕೆಲವು ಲೇಖನಗಳನ್ನು ಲೇಖಕರು ಅವುಗಳ ವ್ಯಾಪ್ತಿಯನ್ನು ಸರಿಯಾಗಿ ತಿಳಿದುಕೊಳ್ಳದೆ ಬರೆದಿದ್ದುದರಿಂದ ಅವುಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ ನಾವು ಹೆಚ್ಚಿನ ಶ್ರಮವಹಿಸಬೇಕಾಯಿತು. ಅನುವಾದಿತ ಲೇಖನಗಳನ್ನು ಸರಿಪಡಿಸುವಾಗ ನಮಗೆ ಬೇರೊಂದು ರೀತಿಯ ಅನುಭವವಾಯಿತು. ಮೂಲ ಲೇಖನದ ಆಶಯಕ್ಕೆ ಚ್ಯುತಿ ಬರದಂತೆ ಅನುವಾದವನ್ನು ಸರಿಪಡಿಸಬೇಕಾಯಿತು. ಸೂಕ್ತ ಕನ್ನಡ ಪದಗಳನ್ನು ಬಳಸದೆ ವಾಕ್ಯದ ಕೆಲವು ಅಂಶಗಳನ್ನು ಬಿಟ್ಟಿರುವುದು, ಕೆಲವು ವೇಳೆ ಕೆಲವು ವಾಕ್ಯಗಳನ್ನೇ ಬಿಟ್ಟಿರುವುದು, ಇಂಥಹ ಸಮಸ್ಯೆಗಳು ಎದುರಾದವು. ನಮ್ಮ ಲೇಖಕರು ಮತ್ತು ಅನುವಾದಕರು ಉತ್ತಮ ಲೇಖನಗಳನ್ನು ನೀಡಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದ್ದಾರೆ. ಕೆಲವು ಕಡೆಗಳಲ್ಲಿ ಇಂಗ್ಲಿಷ್‌ನಲ್ಲಿರುವ ಕೆಲವು ತಾಂತ್ರಿಕ ಪದಗಳಿಗೆ ಸೂಕ್ತವಾದ, ಸರ್ವಸಮ್ಮತವಾದ ಕನ್ನಡದ ಪರ್ಯಾಯ ಪದ ದೊರಕದೆ ಇದ್ದಾಗ ಅನುವಾದಕರು ತುಂಬ ಸುಂದರವಾದ, ಸರಳವಾದ, ಒಪ್ಪಬಹುದಾದ ಕನ್ನಡ ಪದಗಳನ್ನು ರೂಪಿಸಿದ್ದಾರೆ. ಇದು ಈ ವಿಶ್ವಕೋಶವು ಕನ್ನಡ ಭಾಷೆಗೆ ನೀಡಿರುವ ಕೊಡುಗೆ ಎನ್ನಬಹುದು. ಇವರೆಲ್ಲರಿಗೂ ಸಂಪಾದಕ ಮಂಡಳಿ ಕೃತಜ್ಞತೆ ಅರ್ಪಿಸುತ್ತದೆ.

ಈ ಸಂಪುಟಗಳ ಗಾತ್ರ ಯೋಜಿಸಿದ್ದಕ್ಕಿಂತ ದೊಡ್ಡದಾದುದರಿಂದ ಇನ್ನೂ ಕೆಲವು ಲೇಖನಗಳನ್ನು ಈ ಸಂಪುಟದಲ್ಲಿ ಸೇರಿಸಲು, ಮೊದಲನೇ ಸಂಪುಟದಲ್ಲಿದ್ದಂತೆ ಚಿತ್ರಗಳನ್ನು/ಆಲೇಖಗಳನ್ನು ಕೊಡಲು ಸಾಧ್ಯವಾಗಲಿಲ್ಲ. ಇನ್ನು ಕೆಲವು ಮುಖ್ಯ ವಿಷಯ ಕ್ಷೇತ್ರಗಳಿಗೆ ಉದಾಹರಣೆಗೆ – ತೌಲನಿಕ ಶಿಕ್ಷಣಶಾಸ್ತ್ರ, ಬೋಧನೆಯ ಮಾದರಿಗಳು – ಸಂಬಂಧಿಸಿದ ಲೇಖನಗಳನ್ನು ಈ ಸಂಪುಟದಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. ಈ ಮಿತಿಗಳಿಗೆ ಸಂಪಾದಕ ಮಂಡಳಿ ವಿಷಾದ ವ್ಯಕ್ತಪಡಿಸುತ್ತದೆ. ಮೊದಲನೇ ಸಂಪುಟದಲ್ಲಿ ಲೇಖನಗಳ ಕೊನೆಯಲ್ಲಿ ಲೇಖಕರ ಹೆಸರಿನ ಸಂಕ್ಷಿಪ್ತ ರೂಪವನ್ನು ಕೊಟ್ಟು, ಅದರ ವಿಸ್ತೃತ ರೂಪವನ್ನು ಕೊಟ್ಟಿರಲಿಲ್ಲ. ಇದರಿಂದ ಯಾವ ಲೇಖನದ ಲೇಖಕರು ಯಾರು ಎಂದು ತಿಳಿದು ಕೊಳ್ಳುವುದು ಕಷ್ಟವಾಯಿತು. ಈ ಸಂಪುಟಗಳಲ್ಲಿ ಆ ನ್ಯೂನತೆಯನ್ನು ಸರಿಪಡಿಸಲಾಗಿದೆ.

ಈ ಸಂಪುಟದ ಸಂಪಾದನೆಯ ಕಾರ್ಯದುದ್ದಕ್ಕೂ ಮಾನ್ಯ ಕುಲಪತಿಗಳು ನಮಗೆ ಪ್ರೋತ್ಸಾಹ ನೀಡಿದ್ದಾರೆ. ಅವರಿಗೆ ಧನ್ಯವಾದಗಳು. ಈ ಪ್ರಾಯೋಜನೆಯ ಪ್ರಧಾನ ಸಂಪಾದಕಿ ಡಾ. ಎನ್. ಲಕ್ಷ್ಮಿ ರವರು ನಮಗೆ ಬೇಕಾದ ಎಲ್ಲ ಅನುಕೂಲಗಳನ್ನು ಒದಗಿಸಿ ಸಹಕರಿಸಿದ್ದಾರೆ. ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಪ್ರಾಯೋಜನೆಯ ಸಹಾಯಕರಾದ ಶ್ರೀ ಎ.ಎಲ್. ಚಿದಾನಂದ ರವರು ಲೇಖನಗಳನ್ನು ಜೋಪಾನಮಾಡುವ, ದಾಖಲಿಸುವ ಕಾರ್ಯವನ್ನು ಚೊಕ್ಕವಾಗಿ ಮಾಡಿದ್ದಾರೆ. ಅವರಿಗೂ ಸಹ ನಮ್ಮ ಕೃತಜ್ಞತೆಗಳು.

ವಿಭಾಗದ ಅಧ್ಯಾಪಕೇತರ ಸಿಬ್ಬಂದಿ ಶ್ರೀ ಚಂದ್ರಶೇಖರ್, ಶ್ರೀಮತಿ ಶಿವಮ್ಮ ಮತ್ತು ಶ್ರೀಮತಿ ಅನುಸೂಯ ಇವರುಗಳು ಲೇಖನಗಳ ಡಿ.ಟಿ.ಪಿ. ಕಾರ್ಯವನ್ನು ಮಾಡಿದ್ದಾರೆ. ಇವರಿಗೂ ನಮ್ಮ ಕೃತಜ್ಞತೆಗಳು.

ಮೊದಲನೇ ಸಂಪುಟದಂತೆ ಈ ಸಂಪುಟಗಳೂ ಶಿಕ್ಷಣಶಾಸ್ತ್ರದ ಬೋಧಕರಿಗೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಎಲ್ಲ ಶಿಕ್ಷಣಾಸಕ್ತರಿಗೂ ಉತ್ತಮ ಆಕರ ಗ್ರಂಥವಾಗುತ್ತದೆ ಹಾಗೂ ಎಲ್ಲರೂ ಈ ಸಂಪುಟಗಳನ್ನು ವಿಶ್ವಾಸದಿಂದ ಸ್ವೀಕರಿಸುತ್ತಾರೆ ಎಂದು ನಾವು ಭಾವಿಸುತ್ತೇವೆ.

**–ಸಂಪಾದಕ ಮಂಡಳಿ**

Digitised by Bharatavani, CIIL

# ಪರಿವಿಡಿ

147. ಮಕ್ಕಳ ಚಲನ ಚಿತ್ರ ಸಂಘ, ಭಾರತ (ಸಿ.ಎಫ್.ಎಸ್.ಐ)....780
148. ಮಕ್ಕಳ ಪುಸ್ತಕ ಟ್ರಸ್ಟ್....782
149. ಮಕ್ಕಳ ಯೋಗಕ್ಷೇಮ ನೀತಿಗಳು ಮತ್ತು ಕಾರ್ಯಕ್ರಮಗಳು....787
150. ಮಕ್ಕಳ ರಂಗಭೂಮಿ....794
151. ಮಕ್ಕಳ ಸಾಹಿತ್ಯ....798
152. ಮಕ್ಕಳ ಹಕ್ಕುಗಳು ಮತ್ತು ಶಿಕ್ಷಣ....809
153. ಮಹಿಳಾ ಸಬಲೀಕರಣ ಮತ್ತು ಶಿಕ್ಷಣ....817
154. ಮಹಿಳೆಯರಿಗೆ ಸಂಬಂಧಿಸಿದ ಆಯೋಗಗಳು....822
155. ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳು....824
156. ಮಾಧ್ಯಮಗಳ ಶಿಕ್ಷಣ....827
157. ಮಾಧ್ಯಮಿಕ ಶಿಕ್ಷಣ ಮಂಡಳಿಗಳು....832
158. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ....837
159. ಮಾನವ ಹಕ್ಕುಗಳ ಶಿಕ್ಷಣ....838
160. ಮಾರ್ಗದರ್ಶನ....847
161. ಮುಕ್ತ ಕಲಿಕೆ....852
162. ಮುಕ್ತ ದೂರ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು....859
163. ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆ....864
164. ಮುಕ್ತ ಶಾಲಾ ಶಿಕ್ಷಣ....868
165. ಮುಕ್ತ ಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆ....882
166. ಮೌಲ್ಯಮಾಪನ ತತ್ವಗಳು....895
167. ಯುವಜನ ಶಿಕ್ಷಣ....896
168. ರಸ್ತೆ ಸುರಕ್ಷತಾ ಶಿಕ್ಷಣ....899
169. ರಾಜಕಾರಣ ಮತ್ತು ಶಿಕ್ಷಣ....903
170. ರಾಷ್ಟ್ರೀಯ ಗ್ರಂಥಾಲಯ....910
171. ರಾಷ್ಟ್ರೀಯ ಪಠ್ಯಕ್ರಮ....920
172. ರಾಷ್ಟ್ರೀಯ ಪ್ರತಿಭಾನ್ವೇಷಣಾ ಯೋಜನೆ....931
173. ರಾಷ್ಟ್ರೀಯ ಸಮಗ್ರತೆಗಾಗಿ ಶಿಕ್ಷಣ....934
174. ಲಿಂಗ ವಿಭೇದೀಕರಣ ಮತ್ತು ಕಾನೂನುಗಳು....943
175. ವಚನ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು....946
176. ವಯಸ್ಸಾವಧಿ....952
177. ವಲಸೆಯ ಶಿಕ್ಷಣ....956

Digitised by Bharatavani, CIIL

178. ವಸತಿ ಶಾಲೆಗಳು....961
179. ವಿಕಾಸದ ಸಿದ್ಧಾಂತಗಳು ....965
180. ವಿಚಲನ ಮಾಪಕಗಳು....969
181. ವಿಜ್ಞಾನ ವಸ್ತು ಸಂಗ್ರಹಾಲಯ....975
182. ವಿಡಿಯೋ ಸುರಳಿಗಳು....983
183. ವಿದೇಶಗಳಲ್ಲಿ ಭಾರತೀಯ ವಿದ್ಯಾರ್ಥಿಗಳು....984
184. ವಿಪತ್ತು ನಿರ್ವಹಣೆ....989
185. ವಿಶೇಷ ಆರೋಗ್ಯ ಸಮಸ್ಯೆಗಳು....991
186. ವಿಶೇಷ ಶಾಲೆಗಳು....995
187. ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆ....998
188. ವಿಶ್ವಸನೀಯತೆ....1003
189. ವಿಸ್ತರಣ ಶಿಕ್ಷಣ ಸೇವೆಗಳು ....1006
190. ವೃತ್ತಿಪರ ಶಿಕ್ಷಣ....1016
191. ವೃತ್ತಿಯಾಗಿ ಬೋಧನೆ....1022
192. ವ್ಯಕ್ತಿತ್ವ – ಅರ್ಥ, ಸ್ವರೂಪ, ಸಿದ್ಧಾಂತಗಳು....1025
193. ವ್ಯಕ್ತಿತ್ವ ಮಾಪನ ವಿಧಾನಗಳು ....1052
194. ಶಕ್ತಿ (ಊರ್ಜಾ) ಶಿಕ್ಷಣ ....1057
195. ಶಾಂತಿಗಾಗಿ ಶಿಕ್ಷಣ....1064
196. ಶಾಂತಿನಿಕೇತನ....1071
197. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ....1072
198. ಶಾಲಾ ಕ್ಯಾಲೆಂಡರ್....1074
199. ಶಾಲಾ ಪೂರ್ವ ಶಿಕ್ಷಣದಲ್ಲಿ ಪಿಯಾಜೆಯ ಉಪಕ್ರಮ ....1075
200. ಶಾಲಾ ವೇಳಾ ಪತ್ರಿಕೆ....1081
201. ಶಾಲಾ ಶಿಕ್ಷಕರ ಸೇವಾ ಷರತ್ತುಗಳು....1085
202. ಶಾಲಾ ಸಂಕೀರ್ಣ ....1094
203. ಶಾಲಾ ಸಿದ್ಧತೆ ....1095
204. ಶಾಲೆಯ ವಾತಾವರಣದ ಪರಿಕಲ್ಪನೆ....1108
205. ಶಿಕ್ಷಕ ಪ್ರಶಸ್ತಿಗಳು ....1111
206. ಶಿಕ್ಷಕರ ಅರ್ಹತೆಗಳು ....1117
207. ಶಿಕ್ಷಕರ ದಿನ ....1123
208. ಶಿಕ್ಷಕರ ಪಾತ್ರ....1128
209. ಶಿಕ್ಷಕರಿಗೆ ವೃತ್ತಿಪರ ನೀತಿ ತತ್ವಗಳು (ಸುವ್ಯವಹಾರ ನಿಯಮಗಳು) ....1137
210. ಶಿಕ್ಷಣ ಒಂದು ಶಾಸ್ತ್ರವಾಗಿ....1140
211. ಶಿಕ್ಷಣ ಮತ್ತು ಅಭಿವೃದ್ಧಿ ....1149
212. ಶಿಕ್ಷಣ ಮತ್ತು ಆರ್ಥಿಕ ವ್ಯವಸ್ಥೆ....1159
213. ಶಿಕ್ಷಣ ಮತ್ತು ಜಾತ್ಯತೀತತೆ....1161
214. ಶಿಕ್ಷಣಕ್ಕೆ ಔದ್ಯೋಗಿಕ ನೆಲೆ....1165

Digitised by Bharatavani, CIIL

215. ಶಿಕ್ಷಣಕ್ಕೆ ಸಂವಿಧಾನಾತ್ಮಕ ಅವಕಾಶಗಳು....1177
216. ಶಿಕ್ಷಣದ ಅನೌಪಚಾರಿಕ ನಿಯೋಗಗಳು....1179
217. ಶಿಕ್ಷಣದ ತಾತ್ವಿಕ ವಿಶ್ಲೇಷಣೆ ....1184
218. ಶಿಕ್ಷಣದ ಮೇಲೆ ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳ ಪ್ರಭಾವ ....1189
219. ಶಿಕ್ಷಣದ ಹಕ್ಕು ಕಾಯ್ದೆ (2009) ....1190
220. ಶಿಕ್ಷಣದಲ್ಲಿ ಅಂತರಾಷ್ಟ್ರೀಯ ಸಹಯೋಗ....1193
221. ಶಿಕ್ಷಣದಲ್ಲಿ ಅಧಿಕಾರಿಶಾಹಿ ವ್ಯವಸ್ಥೆ....1207
222. ಶಿಕ್ಷಣದಲ್ಲಿ ಆದರ್ಶವಾದ ....1213
223. ಶಿಕ್ಷಣದಲ್ಲಿ ಕಥಾವರ್ಣನೆ....1218
224. ಶಿಕ್ಷಣದಲ್ಲಿ ನೀತಿ ನಿರೂಪಣೆ....1219
225. ಶಿಕ್ಷಣದಲ್ಲಿ ಬೊಂಬೆಯಾಟ....1224
226. ಶಿಕ್ಷಣದಲ್ಲಿ ಸರ್ವಸಮತೆ....1227
227. ಶಿಕ್ಷಣದಲ್ಲಿ ಸ್ವಾಯತ್ತತೆ....1241
228. ಶಿಕ್ಷಣವನ್ನು ಕುರಿತ ಸಮಿತಿಗಳು ....1253
229. ಶಿಶುವಿನ ದೈಹಿಕ ಹಾಗೂ ಚಲನಾತ್ಮಕ ವಿಕಾಸ....1271
230. ಶೈಕ್ಷಣಿಕ ಆಟಿಕೆಗಳು ....1276
231. ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಸಹಯೋಗ ....1285
232. ಶೈಕ್ಷಣಿಕ ಚಲನ ಚಿತ್ರಗಳು ....1291
233. ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳು....1296
234. ಶೈಕ್ಷಣಿಕ ನವೀನ ಆಚರಣೆಗಳು ....1301
235. ಶೈಕ್ಷಣಿಕ ಪತ್ರಿಕೋದ್ಯಮ ....1317
236. ಶೈಕ್ಷಣಿಕ ಶಾಸನ ರಚನೆ....1320
237. ಶೈಕ್ಷಣಿಕ ಸಂಶೋಧನ ಪದವಿಗಳು....1329
238. ಶೈಕ್ಷಣಿಕ ಸಂಶೋಧನೆಗೆ ಹಣಕಾಸಿನ ನೆರವು....1331
239. ಶೈಕ್ಷಣಿಕ ಸಂಶೋಧನೆಯ ವಿಧಾನಗಳು....1332
240. ಶೈಕ್ಷಣಿಕ ಸಂಶೋಧನೆಯಲ್ಲಿ ದತ್ತಾಂಶಗಳ ಸಂಗ್ರಹಣೆ ....1338
241. ಶೈಕ್ಷಣಿಕ ಸಂಸ್ಥೆಗಳ ಉತ್ತರದಾಯಿತ್ವ....1339
242. ಶೈಕ್ಷಣಿಕ ಸಮ್ಮೇಳನಗಳು....1342
243. ಶೈಕ್ಷಣಿಕ ಸಿಬ್ಬಂದಿ....1344
244. ಶೈಶವಾವಸ್ಥೆಯಲ್ಲಿನ ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ ....1348
245. ಶ್ರಮದ ಮಾರುಕಟ್ಟೆ ಮತ್ತು ಶಿಕ್ಷಣ....1351
246. ಸಂಪ್ರದಾಯರಹಿತ ಶಿಕ್ಷಣ – ಅರ್ಥ, ಉದ್ದೇಶಗಳು....1352
247. ಸಂಪ್ರದಾಯರಹಿತ ಶಿಕ್ಷಣ – ಪಠ್ಯಕ್ರಮ, ವಿಧಾನಗಳು ....1354
248. ಸಂಬಂಧಿತ ಸಾಹಿತ್ಯಾವಲೋಕನ....1357
249. ಸಂಯುಕ್ತ ರಾಷ್ಟ್ರ ಸಂಘ ಮತ್ತು ಶಿಕ್ಷಣ....1360
250. ಸಂವಹನ ಕೌಶಲಗಳು....1366
251. ಸಂವಹನ ಮತ್ತು ಶಿಕ್ಷಣ....1368


Digitised by Bharatavani, CIIL

252. ಸಂವಹನದ ಅಡಚಣೆಗಳು ....................1370
253. ಸಂಶೋಧನೆ – ಅರ್ಥ, ಸ್ವರೂಪ....................1371
254. ಸಂಸ್ಕೃತಿ ಮತ್ತು ಶಿಕ್ಷಣ ....................1376
255. ಸಮಗ್ರ ಶಿಕ್ಷಣ....................1378
256. ಸಮಾನತೆ ಮತ್ತು ಆರ್ಥಿಕ ವಿತರಣೆ....................1387
257. ಸಮಾಲೋಚನೆ ....................1388
258. ಸಮಾಲೋಚನೆಯ ಸಿದ್ಧಾಂತಗಳು ....................1394
259. ಸಮುದಾಯದತ್ತ ಶಾಲೆ ಕಾರ್ಯಕ್ರಮ ....................1398
260. ಸಮೂಹ ಅನ್ಯೋನ್ಯ ಕ್ರಿಯಾ ವಿಶ್ಲೇಷಣೆಯ ಮಾದರಿಗಳು....................1402
261. ಸಮೂಹ ಕಾರ್ಯ ....................1410
262. ಸಮೂಹ ಮಾಧ್ಯಮಗಳು ಮತ್ತು ಶಿಕ್ಷಣ....................1412
263. ಸರ್ಕಾರೇತರ ಸಂಸ್ಥೆಗಳು ಮತ್ತು ಶಿಕ್ಷಣ ಕ್ಷೇತ್ರಕ್ಕೆ ಪ್ರಥಮ್ ಸಂಸ್ಥೆಯ ಕೊಡುಗೆ ....................1419
264. 'ಸರ್ವರಿಗೂ ಶಿಕ್ಷಣ'ದ ಪರಿಕಲ್ಪನೆ....................1424
265. ಸಹ ಪಠ್ಯಕ್ರಮ....................1425
266. ಸಹ ಶಿಕ್ಷಣ....................1428
267. ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ....................1433
268. ಸಾಮಾಜಿಕ ಮೌಲ್ಯ ವ್ಯವಸ್ಥೆ ಮತ್ತು ಶಿಕ್ಷಣ....................1439
269. ಸಾಮಾಜಿಕ ಸಮಾನತೆ ಮತ್ತು ಶಿಕ್ಷಣ....................1441
270. ಸಾಮಾನ್ಯ ಶಾಲಾ ಪದ್ಧತಿ....................1442
271. ಸಾರ್ವಜನಿಕ ಆಡಳಿತದಲ್ಲಿ ಪ್ರಶಿಕ್ಷಣ....................1445
272. ಸಿಂಧುತ್ವ....................1453
273. ಸಿದ್ಧಾಂತಗಳು ಮತ್ತು ನಿಯಮಗಳು....................1455
274. ಸೃಜನಾತ್ಮಕ ಬೋಧನೆ....................1458
275. ಸ್ತ್ರೀವಾದಿ ಸಿದ್ಧಾಂತಗಳು....................1481
276. ಸ್ಲೈಡ್ ಪ್ರಕ್ಷೇಪಕ ....................1492
277. ಸ್ವಾಯತ್ತ ಸಂಸ್ಥೆಗಳು....................1493
278. ಹಿಂದಿ ಬೋಧನಾ ವಿಧಾನ....................1507
279. ಹಿರೇಮಣಿ ಪದ್ಧತಿ....................1509
ಪ್ರಧಾನ ಸಂಪಾದಕರ ಪರಿಚಯ ....................1515
ಸಲಹಾ ಸಮಿತಿ ಸದಸ್ಯರ ಪರಿಚಯ....................1516
ಸಂಪಾದಕ ಮಂಡಳಿ ಸದಸ್ಯರ ಪರಿಚಯ ....................1517
ಯೋಜನಾ ಸಹಾಯಕರ ಪರಿಚಯ ....................1519
ಲೇಖಕರ ಪರಿಚಯ ....................1519
"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಸಂಪುಟ–3 ಕೃತಿಯ ಮೂಲ ಲೇಖನಗಳ ಅನುವಾದಕರ ಸೂಚಿ....................1529
"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಮೊದಲನೇ ಸಂಪುಟದ ಲೇಖನಗಳ ಸೂಚಿ....................1530

Digitised by Bharatavani, CIIL

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

# ಶಿಕ್ಷಣಶಾಸ್ತ್ರ

# ಮ

## ಮಕ್ಕಳ ಚಲನಚಿತ್ರ ಸಂಘ, ಭಾರತ (ಸಿ.ಎಫ್.ಎಸ್.ಐ)

ಪಂಡಿತ್ ಜವಾಹರ್‌ಲಾಲ್ ನೆಹರು 1955 ರಲ್ಲಿ ಕೆಲವು ಮಕ್ಕಳ ಚಲನಚಿತ್ರಗಳನ್ನು ನೋಡಿದ ಮೇಲೆ ಮಕ್ಕಳ ಚಲನ ಚಿತ್ರಗಳು ಮಕ್ಕಳ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರುವುದರಿಂದ ಒಳ್ಳೆಯದನ್ನು ಚಿಂತಿಸುವ ಎಲ್ಲಾ ವ್ಯಕ್ತಿಗಳಿಂದ ಪ್ರೋತ್ಸಾಹಿಸಲೇಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜನವರಿ 1955 ರಲ್ಲಿ ಇಂದಿರಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಮೂರನೆಯ ಅಂತರ‍್ರಾಷ್ಟ್ರೀಯ ಚಲನ ಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಅಂದಿನ ವಾರ್ತಾ ಮತ್ತು ಪ್ರಸಾರ ಸಚಿವರಾಗಿದ್ದ ಡಾ॥ ಕೇಸ್ಕರ್ ಅವರು ಮಕ್ಕಳ ಚಲನಚಿತ್ರ ಸಂಘ, ಭಾರತ (CFSI) ಎಂಬ ರಾಷ್ಟ್ರ ಮಟ್ಟದ ಸಂಸ್ಥೆಯನ್ನು ಸ್ಥಾಪಿಸುವ ಸರ್ಕಾರದ ಇಂಗಿತವನ್ನು ವ್ಯಕ್ತಪಡಿಸಿದರು. 1949 ರಲ್ಲಿ ಭಾರತ ಸರ್ಕಾರವು ನೇಮಿಸಿದ್ದ ಫಿಲಂ ಎನ್‌ಕ್ವೈಯರಿ ಕಮಿಟಿಯು ನೀಡಿದ ಶಿಫಾರಸಿನ ಆಧಾರದ ಮೇರೆಗೆ ಸಂಘವನ್ನು ಮೇ 1955 ರಲ್ಲಿ ಸ್ಥಾಪಿಸಲಾಯಿತು. ಶಿಕ್ಷಣ ಮತ್ತು ಸಂಸ್ಕೃತಿಯನ್ನು ಮುನ್ನಡೆಸುವುದು ಸಂಘದ ಪ್ರಾಥಮಿಕ ಉದ್ದೇಶ. ಜೊತೆಗೆ ಪ್ರಮುಖವಾಗಿ ಮಕ್ಕಳು ಮತ್ತು ಯುವಕರಲ್ಲಿ ಚಲನ ಚಿತ್ರಗಳ ಮಾಧ್ಯಮದ ಅವಶ್ಯಕತೆಯನ್ನು ಪ್ರತಿಪಾದಿಸಿ, ಆರೋಗ್ಯಕರವಾದ ವಾತಾವರಣದಲ್ಲಿ ಚಲನಚಿತ್ರಗಳ ಬಗ್ಗೆ ಮಕ್ಕಳಲ್ಲಿ ಮೆಚ್ಚುಗೆಯನ್ನು ಸೃಷ್ಟಿಸುವುದು ಮತ್ತು ಬೆಳೆಸುವ ಗುರಿ ಹೊಂದಿತ್ತು. ಈ ಉದ್ದೇಶಕ್ಕಾಗಿ ಸಂಘವು ವಿಶೇಷವಾಗಿ ದೇಶ ಮತ್ತು ವಿದೇಶಗಳ ಮಕ್ಕಳಿಗೆ ಹೊಂದುವ ಅಥವಾ ಮಕ್ಕಳ ಹಾಗೂ ಯುವಕರ ಮೇಲೆ ವಿಶೇಷ ಆಸಕ್ತಯಿಂದ, ನೆರವು, ಪ್ರಾಯೋಜಕತ್ವ ಮತ್ತು ಸಂಯೋಜನೆಗಳ ಮೂಲಕ ಚಲನಚಿತ್ರಗಳ ನಿರ್ಮಾಣ, ವಿತರಣೆ ಮತ್ತು ಪ್ರದರ್ಶನಗಳನ್ನು ಕೈಗೊಂಡಿತು.

ಫಿಲಂ ಎನ್‌ಕ್ವೈಯರಿ ಕಮಿಟಿಯು ಪುಸ್ತಕಗಳ ನಿರ್ಮಾಣದಷ್ಟೇ ಮಕ್ಕಳ ವಿಶೇಷ ಅಗತ್ಯಗಳನ್ನು ಪೂರೈಸಲು ವಿಶೇಷವಾಗಿ ಮಕ್ಕಳಿಗೆ ಚಲನಚಿತ್ರ ನಿರ್ಮಾಣವೂ ನಮ್ಮ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರಮುಖ ಭಾಗವಾಗಿದೆ ಎಂದು ತಿಳಿಸಿದೆ.

ಮಕ್ಕಳ ಚಲನಚಿತ್ರ ಸಂಘ (ಸಿ.ಎಫ್.ಎಸ್.ಐ) ಒಂದು ಲೈಟ್ ಹೌಸ್‌ನ ಸುತ್ತ ಹೆಣೆದ ಒಂದು ಸಾಹಸ ಪ್ರಧಾನ ಕಥೆಯುಳ್ಳ ಜಲದೀಪ್ ಎಂಬ ಪ್ರಥಮ ಚಿತ್ರ ನಿರ್ಮಿಸುವ ಮೂಲಕ ಭಾರತೀಯ ಮಕ್ಕಳ ಚಲನಚಿತ್ರ ಸಂಘವು ತಕ್ಷಣವೇ ಕಾರ್ಯೋನ್ಮುಖವಾಯಿತು. 1975ರ ವೆನಿಸ್ ಚಿತ್ರೋತ್ಸವದಲ್ಲಿ ಈ ಚಿತ್ರಕ್ಕೆ ಅತ್ಯುತ್ತಮ ಮಕ್ಕಳ ಚಲನಚಿತ್ರ ಎಂಬ ಪ್ರಶಸ್ತಿ ಲಭಿಸಿತು.

ಪ್ರತಿಭಾವಂತ ಚಿತ್ರ ನಿರ್ಮಾಪಕರಾಗಿದ್ದ ಕೇದಾರ್ ಶರ್ಮಾ, ಸತ್ಯೆನ್ ಬೋಸ್, ಮೋಹನ್ ಕೌಲ್ ಮತ್ತು ರಾಜೇಂದರ್ ಶರ್ಮಾ ಮುಂತಾದವರು ಮಕ್ಕಳ ಚಲನಚಿತ್ರಗಳನ್ನು ನಿರ್ಮಿಸುವಲ್ಲಿ ಉತ್ಸಾಹ ತೋರಿದರು. ಇವರೊಡನೆ ಮೃಣಾಲ್ ಸೆನ್, ಶ್ಯಾಂ ಬೆನೆಗಲ್, ತಪನ್ ಸಿನ್ಹಾ, ಸಾಯಿ ಪರಾಂಜಪೆ ಮತ್ತು ಇನ್ನೂ ಹಲವು ಬದ್ಧತೆಯುಳ್ಳ ಚಿತ್ರ ತಯಾರಕರು ಸೇರಿಕೊಂಡರು.

ಹಲವಾರು ವರ್ಷಗಳ ವರೆಗೆ ಸಂಸ್ಥೆಯನ್ನು ಸಂರಚಿಸುವ ಮತ್ತು ಪುನರ್ ಸಂರಚಿಸುವ ಕಾರ್ಯಗಳಲ್ಲಿ ತೊಡಗಿ ಸಿ.ಎಫ್.ಎಸ್.ಐ ಇಂದು ವಾರ್ತಾ ಮತ್ತು ಪ್ರಸಾರ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಆರಂಭದಲ್ಲಿ ಗಣ್ಯರಾದ ಪಂಡಿತ ಹೃದಯನಾಥ್ ಕುಂಜ್ರು, ಆರ್.ಆರ್.ದಿವಾಕರ್, ಪುರುಷೋತ್ತಮ್ ಮಂಗೇಷ್ ಲಾಡ್ ಮತ್ತು ಚಿತ್ರ ನಿರ್ಮಾಪಕ ವಿ.ಶಾಂತಾರಾಮ್ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ಕಳೆದ ಎರಡು ಶತಮಾನಗಳಲ್ಲಿ ಸಂಘವನ್ನು ಗಣ್ಯರೆನಿಸುವ ಚಲನಚಿತ್ರ ನಿರ್ಮಾಪಕರು ಮುನ್ನಡೆಸಿ ಅದಕ್ಕೆ ಅಗತ್ಯವಾದ ನವೀನತೆ ಮತ್ತು ಯುವ ಚೈತನ್ಯವನ್ನು ನೀಡಿದ್ದಾರೆ.

**ಸಂಘಟನೆ:** ಸಿ.ಎಫ್.ಎಸ್.ಐ ಕೇಂದ್ರ ಕಛೇರಿಯು ಮುಂಬಯಿಯಲ್ಲಿದ್ದು ಅಧ್ಯಕ್ಷರು ಸಂಘದ ಮುಖ್ಯಸ್ಥರಾಗಿರುತ್ತಾರೆ. ದೆಹಲಿ ಮತ್ತು ಚೆನ್ನೈಗಳಲ್ಲಿ ಶಾಖಾ ಕಛೇರಿಗಳಿವೆ. ಅಧ್ಯಕ್ಷರೇ ಕಾರ್ಯನಿರ್ವಹಣಾ ಮಂಡಳಿ ಹಾಗೂ ಸಾಮಾನ್ಯ ಸಭೆಯ ಅಧ್ಯಕ್ಷರೂ ಆಗಿರುತ್ತಾರೆ. ಇದರಲ್ಲಿ ಭಾರತ ಸರ್ಕಾರದಿಂದ ನಾಮ ನಿರ್ದೇಶಿತ ಸದಸ್ಯರುಗಳು ಇರುತ್ತಾರೆ.

Digitised by Bharatavani, CIIL

**ಚಟುವಟಿಕೆಗಳು: ಉತ್ಪಾದನೆ:** ಮಕ್ಕಳ ಚಲನಚಿತ್ರ ಸಂಘವು ದೀರ್ಘ ಉದ್ದದ ವಿಶಿಷ್ಟ ಚಲನಚಿತ್ರಗಳನ್ನು, ಕಥಾ ಚಲನ ಚಿತ್ರಗಳನ್ನು, ಕಾರ್ಟೂನ್ ಅಥವಾ ಅನಿಮೇಷನ್ ಚಲನಚಿತ್ರಗಳನ್ನೂ, ಕಡಿಮೆ ಅವಧಿಯ ಚಿತ್ರಗಳನ್ನೂ, ಸೂತ್ರದ ಗೊಂಬೆ ಚಿತ್ರಗಳನ್ನೂ ಮತ್ತು ದೂರದರ್ಶನ ಧಾರಾವಾಹಿಗಳನ್ನೂ ನಿರ್ಮಿಸುವಲ್ಲಿ ತೊಡಗಿಕೊಂಡಿದೆ. ಉತ್ತಮ ವಿದೇಶಿ ಚಲನಚಿತ್ರಗಳ ಮತ್ತು ಧಾರಾವಾಹಿಗಳ ಪ್ರದರ್ಶನದ ಹಕ್ಕುಗಳನ್ನೂ ಪಡೆದುಕೊಂಡಿದೆ. ಮಕ್ಕಳ ಚಲನಚಿತ್ರ ಸಂಘವು ನಿರ್ಮಿಸಿದ ಮತ್ತು ಆಮದು ಮಾಡಿಕೊಂಡ ಚಲನಚಿತ್ರಗಳು ವಿವಿಧ ಭಾಷೆಗಳಿಗೆ ಡಬ್ ಆಗಿವೆ.

ಕಥಾವಸ್ತುವನ್ನೂ (ಸ್ಕ್ರಿಪ್ಟ್) ಸ್ವತಂತ್ರ ಸ್ಕ್ರಿಪ್ಟ್ ಕಮಿಟಿಯು ಮೌಲ್ಯಮಾಪನ ಮಾಡುತ್ತದೆ. ಸಂಘವು ನಿರ್ದೇಶಿಸಿದ ಗುಣಮಟ್ಟವನ್ನು ಕಾಪಾಡಲು ಅನುಮೋದನೆಗೊಂಡ ಬರಹಗಳನ್ನು ಸಂಘವು ಎಚ್ಚರದಿಂದ ನಿರ್ಮಾಣಕ್ಕೆ ಎತ್ತಿ ಕೊಳ್ಳುತ್ತದೆ. 47 ವರ್ಷಗಳ ಅದರ ಅಸ್ತಿತ್ವದಲ್ಲಿ ಮಕ್ಕಳ ಚಲನಚಿತ್ರ ಸಂಘವು 200ಕ್ಕೂ ಹೆಚ್ಚು ಶೀರ್ಷಿಕೆಗಳನ ದೀರ್ಘ ಚಲನಚಿತ್ರಗಳನ್ನು ಮತ್ತು ಕಡಿಮೆ ಅವಧಿಯ ಆನಿಮೇಷನ್ ಚಿತ್ರಗಳನ್ನು ನಿರ್ಮಿಸಿದ ಕೀರ್ತಿ ಪಡೆದಿದೆ. ಇದಲ್ಲದೆ ಹಲವು ಸೂತ್ರದ ಗೊಂಬೆ ಚಲನಚಿತ್ರಗಳನ್ನೂ, ಡಾಕ್ಯುಮೆಂಟರಿಗಳನ್ನೂ, ದೂರದರ್ಶನ ಚಿತ್ರಗಳನ್ನೂ ನಿರ್ಮಿಸಿದೆ.

**ವಿತರಣೆ:** ಚಲನಚಿತ್ರಗಳ ಪ್ರದರ್ಶನವು ಸ್ಕ್ರೀನ್‌ನಿಂದ ಟೆಲಿಕಾಸ್ಟ್ ಆಗುವವರೆಗೂ ಹಲವು ಹಂತಗಳಲ್ಲಿ ಏರ್ಪಡುತ್ತದೆ. ಥಿಯೇಟರ್ ಮತ್ತು ಶಾಲೆಗಳಲ್ಲಿ ಸ್ಕ್ರೀನಿಂಗ್ ನಡೆಯುತ್ತದೆ. ರಾಜ್ಯ/ಜಿಲ್ಲೆಯ ಅಧಿಕಾರಿಗಳು ಮತ್ತು ಎನ್.ಜಿ.ಓ ಗಳ ಆಪ್ತ ಸಹಭಾಗಿತ್ವದಲ್ಲಿ ಮಕ್ಕಳ ರಾಜ್ಯ ಮತ್ತು ಜಿಲ್ಲಾ ಚಲನಚಿತ್ರೋತ್ಸವವು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸ್ಥೆಗೊಳ್ಳುತ್ತದೆ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಚಲನಚಿತ್ರ ಸಂಘದ ಹವ್ಯಾಸವನ್ನು ಒಳಗೊಳ್ಳುವಂತೆ ಚಲನಚಿತ್ರ ಸರ್ಕಲ್‌ಗಳೂ ಪ್ರಮುಖ ಭಾರತೀಯ ಪಟ್ಟಣಗಳಲ್ಲಿ ಸ್ಥಾಪನೆಗೊಂಡಿವೆ. ಪ್ರತಿ ಭಾನುವಾರ ಬೆಳಿಗ್ಗೆ ಭಾರತೀಯ ದೂರದರ್ಶನ ರಾಷ್ಟ್ರೀಯ ವಾಹಿನಿಗಳಲ್ಲಿ ಮಕ್ಕಳ ಚಲನಚಿತ್ರ ಸಂಘದ ಕಾರ್ಯಕ್ರಮಗಳನ್ನು ಅರ್ಧ ಗಂಟೆ ಅವಧಿಗೆ ಪ್ರಸಾರ ಮಾಡುತ್ತದೆ.

**ಕಾರ್ಯಾಗಾರಗಳು:** ಹವ್ಯಾಸಗಳಂತೆಯೇ ಹಳೆಯ ಮನೋಧರ್ಮಗಳು ನಾಶವಾಗುವುದು ಕಷ್ಟ. ಹೊಸ ಮನೋ ಧರ್ಮಗಳನ್ನು ಬೆಳೆಸಿಕೊಳ್ಳಬೇಕಾದರೆ ನಾವು ಹೊಸ ಆಲೋಚನೆಗಳ ಸೃಷ್ಟಿಗೆ ಸಾಕ್ಷಿಯಾಗಬೇಕು. ಇನ್ನೊಂದೆಡೆ ಮಕ್ಕಳ ಚಲನಚಿತ್ರ ಸಂಘವು ಮಕ್ಕಳ ನಾಳಿನ ಸಿನಿಮಾ ಸೃಜಿಸಲು ಇಡೀ ಒಂದು ಹೊಸ ಮುದ್ರೆಯ ಬರಹಗಾರರು ಮತ್ತು ಚಿತ್ರ ನಿರ್ಮಾಪಕರನ್ನು ವಿವಿಧ ವ್ಯಾಪಕವಾದ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವ ಮೂಲಕ ಪ್ರೋತ್ಸಾಹಿಸುತ್ತಿದೆ. ವಯಸ್ಕರಿಗೆ ಚಿತ್ರಕಥೆ ಬರವಣಿಗೆಯಲ್ಲಿ ಮತು ಅಭಿನಯ, ಮಕ್ಕಳಿಗಾಗಿ ಆನಿಮೇಷನ್ ಮತ್ತು ದೂರದರ್ಶನ ಉತ್ಪಾದನೆಗಳ ಬಗ್ಗೆ ಕಾರ್ಯಾಗಾರಗಳನ್ನು ನಿಯಮಿತವಾಗಿ ನಡೆಸುತ್ತಿದೆ.

**ಚಲನಚಿತ್ರೋತ್ಸವ:** 1997 ರಿಂದಲೂ ಮಕ್ಕಳ ಚಲನಚಿತ್ರ ಸಂಘವು ದ್ವೈವಾರ್ಷಿಕ ಅಂತಾರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವವನ್ನು ಹಮ್ಮಿಕೊಂಡು ನವೆಂಬರ್ 14 ರಂದು ಪಂಡಿತ್ ಜವಾಹರ್‌ಲಾಲ್ ನೆಹರೂ ಅವರ ಜನ್ಮ ದಿನಾಚರಣೆ ಮತ್ತು ಮಕ್ಕಳ ದಿನಾಚರಣೆಯನ್ನು ಆಚರಿಸುತ್ತಿದೆ. ಹಲವು ವರ್ಷಗಳಿಂದಲೂ ಈ ಉತ್ಸವವು ಗಾತ್ರ ಮತ್ತು ಎತ್ತರದಲ್ಲಿ ಬೆಳೆದಿದೆ. ಚಿನ್ನ ಮತ್ತು ಬೆಳ್ಳಿ ಆನೆಯ ಪ್ರಶಸ್ತಿಗಳು ಮಕ್ಕಳ ಚಲನಚಿತ್ರ ಮಾಡುವವರಿಗೆ ಲಭಿಸುತ್ತಿವೆ. 1997 ರಲ್ಲಿ ಹತ್ತನೆಯ ಚಲನಚಿತ್ರೋತ್ಸವದಲ್ಲಿ 183 ರಷ್ಟು ಚಲನಚಿತ್ರಗಳು, 37 ದೇಶಗಳು, 5 ವಿಭಾಗಗಳಾಗಿ ಭಾಗವಹಿಸುವಿಕೆಯಿಂದ ಇಡೀ ಪ್ರಪಂಚದಲ್ಲೇ ಆ ರೀತಿಯದರಲ್ಲೇ ಬೃಹತ್ತಾದ ಘಟನೆಯಾಗಿತ್ತು. ಹೈದರಾಬಾದ್‌ನಂತಹ ಐತಿಹಾಸಿಕ ನಗರವು ಶಾಶ್ವತವಾದ ಉತ್ಸವದ ಸ್ಥಳವಾಗಿದೆ. ಈ ಉತ್ಸವಗಳಲ್ಲಿ ಮಕ್ಕಳಿಗಾಗಿ ವಿಚಾರ ಸಂಕಿರಣಗಳು ಮತ್ತು ಚಿತ್ರ ನಿರ್ಮಾಣ ಕಾರ್ಯಾಗಾರಗಳು ನಡೆಯುತ್ತವೆ. ವಿಶೇಷವಾಗಿ ಮಕ್ಕಳು ತೀರ್ಪು ಗಾರರಾಗಿ ಪಾಲ್ಗೊಂಡು ಚಲನಚಿತ್ರಗಳ ಬಗ್ಗೆ ತೀರ್ಪು ನೀಡುವುದು ಈ ಉತ್ಸವದ ವಿಶಿಷ್ಟ ಲಕ್ಷಣವಾಗಿದೆ.

**ಗೆದ್ದ ಪ್ರಶಸ್ತಿಗಳು:** ಮಕ್ಕಳ ಚಲನಚಿತ್ರ ಸಂಘವು ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿದೆ. ಅವುಗಳೆಂದರೆ "ಅತ್ಯುತ್ತಮ ಮಕ್ಕಳ ಚಲನಚಿತ್ರ" (ಜಲದೀಪ್, 1957), "ಗೋಲ್ಡನ್ ಪ್ಲೇಕ್" (ಡಾಕ್ ಘರ್, 1966), "ಗೋಲ್ಡನ್ ಎಲಿಫೆಂಟ್" (ಬಾಯ್ ಅಂಡ್ ಕ್ರೊಕೊಡೈಲ್, 1966), "ದಿ ಗೋಲ್ಡನ್ ಪ್ಲೇಕ್" (ಮುಜ್‌ಸೇ ದೋಸ್ತಿ ಕರೋಗೆ? , 1993), "ಗೋಲ್ಡನ್ ಸ್ಟ್ಯಾಚ್ಯೂ" (ಸೇನಾನಿ ಸಾನೆ ಗುರೂಜಿ, 1996) ಇತ್ಯಾದಿ.

**ರಫ್ತು:** ಮಕ್ಕಳ ಚಲನಚಿತ್ರ ಸಂಘವು ಇತರ ಭಾರತೀಯ ನಿರ್ಮಾಪಕರು ತಯಾರಿಸಿದ ಸಿನೆಮಾಗಳನ್ನು ಜಗತ್ತಿನ ಭೂ ಪಟದಲ್ಲಿ ಇರಿಸುವ ಜವಾಬ್ದಾರಿಯನ್ನು ಹೊತ್ತಿದೆ. ಅದು ತನ್ನದೇ ನಿರ್ಮಾಣಗಳನ್ನು ರಫ್ತು ಮಾಡುವುದಲ್ಲದೆ ಇತರರಿಗೂ ಮಕ್ಕಳ ಚಿತ್ರಗಳ ಮಾರುಕಟ್ಟೆಗೆ ಸಹಾಯ ಮಾಡುತ್ತದೆ. ಅದೂ ಅಲ್ಲದೆ, ಇತರ ಸಹಾಯಕ ಬೆಂಬಲವನ್ನೂ ಒದಗಿಸುವುದಲ್ಲದೆ ಮಕ್ಕಳ ಚಲನಚಿತ್ರ ಸಂಘವು ಭಾರತೀಯ ಚಲನಚಿತ್ರಗಳನ್ನು ವಿದೇಶ ಚಿತ್ರೋತ್ಸವಕ್ಕೆ ಶಿಫಾರಸ್ ಮಾಡಿ ಕಳುಹಿಸಿಕೊಡುತ್ತದೆ. ಅದರ ಹಲವು ಚಲನಚಿತ್ರಗಳು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರಶಸ್ತಿಗಳನ್ನು ಪಡೆದುಕೊಂಡಿವೆ.

**ಭವಿಷ್ಯದ ಯೋಜನೆಗಳು:** ಭಾರತದ ಮಕ್ಕಳ ಚಲನಚಿತ್ರ ಸಂಘವು ದೀರ್ಘಕಾಲ ಬಾಳಿಕೆಗಾಗಿ ಡಿಜಿಟಲ್ ವ್ಯವಸ್ಥೆಗೆ (ಫಾರ್ಮೆಟ್‌ಗೆ) ಬದಲಾಗುತ್ತಿದ್ದು, ಅಂತರ್ಜಾಲದ ಮೂಲಕ ಹೊರಜಗತ್ತಿಗೆ ಪ್ರದರ್ಶನಗೊಳ್ಳುತ್ತಿದೆ. ಅದು ಗ್ರಾಮೀಣ ಪ್ರದೇಶಗಳ ಮುನಿಸಿಪಲ್ ಮತ್ತು ಜಿಲ್ಲಾ ಪರಿಷತ್‌ಗಳ ಶಾಲೆಗಳ ಅನುಕೂಲ ವಂಚಿತ ಮಕ್ಕಳಿಗಾಗಿ ದೇಶಾದ್ಯಂತ ತನ್ನ ಪ್ರದರ್ಶನ ಜಾಲವನ್ನು ವಿಸ್ತಾರಗೊಳಿಸಲು ಯೋಜನೆ ಮಾಡಿಕೊಂಡಿದೆ.

ಭಾರತದ ಮಕ್ಕಳ ಚಲನಚಿತ್ರ ಸಂಘದ ಚಿತ್ರಗಳು ಭಾರತಾದ್ಯಂತ ವಾಣಿಜ್ಯೋದ್ದೇಶದಿಂದ ಬಿಡುಗಡೆಯಾಗಿವೆ. ಈ ಚಲನಚಿತ್ರಗಳು ವಿಡಿಯೋ ರೂಪದಲ್ಲಿ– ವಿಡಿಯೋ ಟ್ರೆಷರ್–ಚೆಸ್ಟ್– ಎಂದು ಶಾಲೆಗಳಿಗೆ ಮತ್ತು ಸಂಸ್ಥೆಗಳಿಗೆ ವಿತರಣೆ ಗೊಳ್ಳುತ್ತಿವೆ. ಭಾರತದ ಮಕ್ಕಳ ಚಲನಚಿತ್ರ ಸಂಘವು ತನ್ನ ಗುಣಾತ್ಮಕ ಕಾರ್ಯಕ್ರಮದ ಮೂಲಕ, ಚಲನಚಿತ್ರಗಳ ಮೂಲಕ ದೇಶದ ಮೂಲೆ ಮೂಲೆಗಳ ಮಕ್ಕಳನ್ನು ತಲುಪುವ ಭರವಸೆಯಿದೆ. ಆರೋಗ್ಯಪೂರ್ಣ ಮಕ್ಕಳ ಮನಸ್ಸನ್ನು ರೂಪಿಸಲು ಇದಕ್ಕಿಂತ ಉತ್ತಮ ಅಥವಾ ಇದಕ್ಕಿಂತ ಹೆಚ್ಚಿನ ಮಾರ್ಗ ಇರಲಾರದು.

**ಮೂ: ಮಂಗೂ ಚಂದ್ರನ್**
**ಅನು: ಪ್ರೊ. ರತ್ನಮ್ಮ ಕೆ. ಎಸ್.**

Digitised by Bharatavani, CIIL

## ಮಕ್ಕಳ ಪುಸ್ತಕ ಟ್ರಸ್ಟ್

ಶಂಕರ್ ಎಂದೇ ಖ್ಯಾತರಾದ ಕೇಶವ ಶಂಕರ ಪಿಳ್ಳೈ (1902–89) ಅವರು 1957 ರಲ್ಲಿ ಮಕ್ಕಳ ಪುಸ್ತಕ ಟ್ರಸ್ಟ್ (Children's Book Trust-CBT) ಅನ್ನು ಸ್ಥಾಪಿಸಿದರು. ತುತ್ತತುದಿಯಲ್ಲಿರುವ ಅತಿ ಹೆಚ್ಚು ಸಾಕ್ಷರರಿಂದಲೂ, ಗುಳು ಗುಳು ಹರಿಯುತ್ತಾ, ಶಬ್ದ ಮಾಡುವ ನೀರಿನ ಪ್ರವಾಹವಿರುವ ನದಿಗಳಿಂದಲೂ, ಗೇಲಿ ನಗೆಚಾಟಿಕೆಗಳಿಂದ ಕೂಡಿರುವಂಥ ಕೇರಳದಲ್ಲಿ ಜನಿಸಿದ ಶಂಕರ್ ಭಾರತವು ವಿಶ್ವಕ್ಕೆ ನೀಡಿದ ವಿರಳ ಕೊಡುಗೆ. ಭಾಗಶಃ ಪರಂಪರೆಯಿಂದು ಅರ್ಜಿಸಿಕೊಂಡ ವ್ಯಂಗ್ಯದ ಧಾಟಿ ಅವರನ್ನು ಭಾರತದ ಅತ್ಯಂತ ಪ್ರಸಿದ್ಧ ವ್ಯಂಗ್ಯ ಚಿತ್ರಕಾರರನ್ನಾಗಿ ರೂಪಿಸಿತು. ತ್ರಿವೇಂಡ್ರಂನ ತರುಣ ಪದವೀಧರ ಬೊಂಬಾಯಿಗೆ ಹೋಗಿ ಕಾನೂನು ಕಲಿಯಲು ಸೇರಿದರು. ವ್ಯಂಗ್ಯ ಚಿತ್ರ ರಚನೆಯನ್ನು ಒಂದು ಹವ್ಯಾಸವಾಗಿ ರೂಢಿಸಿಕೊಂಡರು. ಯಾವಾಗಲೂ ಶಂಕರ್ ತಮ್ಮನ್ನು ಹಾಗೂ ಇತರರನ್ನು ಲೇವಡಿ ಮಾಡುವುದನ್ನು ಇಷ್ಟಪಡುತ್ತಿದ್ದರು.

1932 ರಲ್ಲಿ ಶಂಕರ್ ದೆಹಲಿಯ ಪ್ರಸಿದ್ಧ ವೃತ್ತಪತ್ರಿಕೆ ದಿ ಹಿಂದುಸ್ತಾನ್ ಟೈಮ್ಸ್ ಕಛೇರಿಯಲ್ಲಿ ವ್ಯಂಗ್ಯ ಚಿತ್ರಕಾರರಾಗಿ ಸೇರಿ 1946 ರವರೆಗೂ ಮುಂದುವರಿದರು. ಅತ್ಯಂತ ಬಿರುಸಿನ ರಾಷ್ಟ್ರೀಯ ಆಂದೋಲದ ಅವಧಿಯಲ್ಲಿ ಶಂಕರ್ ಬ್ರಿಟಿಷ್ ಆಡಳಿತಶಾಹಿಗಳು, ಭಾರತದ ರಾಜಕೀಯ ನಾಯಕರು, ಸಂಪ್ರದಾಯಿಕ ನಾಗರಿಕ ಸ್ತ್ರೀ ಪುರುಷರಾದಿಯಾಗಿ ಮುಖಸ್ತುತಿಕಾರರನ್ನೂ, ಉನ್ನತ ಪದವಿಯಲ್ಲಿರುವ ಪ್ರಚಂಡರನ್ನೂ ಲೇವಡಿ ಮಾಡುತ್ತಿದ್ದರು. ಅವರು ಯಾರನ್ನೂ ಬಿಡಲಿಲ್ಲ. ಒಂದು ದೋಷಾರೋಪಣೆಯನ್ನೂ ಒಳಗೊಳ್ಳದ ಅವರ ವಿನೋದದಲ್ಲಿ ಮಾತ್ಸರ್ಯ ಇರಲಿಲ್ಲ. ಅವರ ಹಾಸ್ಯವು ತತ್‌ಕ್ಷಣದ ಸಮಕಾಲೀನ ವಿಷಯಗಳನ್ನು ಹೆಚ್ಚಾಗಿ ಗಮನಿಸಿ ನಮ್ಮನ್ನು ಸಂತೋಷದಿಂದ ಉಲ್ಲಾಸಗೊಳಿಸುವಂತೆ ಮಾಡುತ್ತಿತ್ತು. ಆ ಉಲ್ಲಾಸ ಎಂದೆಂದಿಗೂ ಹಾಗೆಯೇ ಇದ್ದಿತು.

ಶಂಕರ್ ಸ್ವಾತಂತ್ರ್ಯಾನಂತರದ ಒಂದು ವರ್ಷದ ಒಳಗೆ ಶಂಕರ್ಸ್ ವೀಕ್ಲಿ (23 ಮೇ 1948) ಎಂಬ ವಾರ ಪತ್ರಿಕೆಯನ್ನು ಹೊರತಂದರು. ಅದರಲ್ಲಿನ ಆರೋಗ್ಯಕರವಾದ ನಗೆಚಾಟಿಕೆಗಳಿಂದ ಅದು ಬೇಗ ಪ್ರಸಿದ್ಧವಾಯಿತು. ಅವರ ಶಕ್ತಿಯುತ ಕುಚೋದ್ಯಗಳುಳ್ಳ ಕುಂಚದೊಳಗೆ ಸೆರೆ ಹಿಡಿಯುವಾಗ ಪ್ರತಿಷ್ಠೆಯ ಎತ್ತರದಷ್ಟೇ ತಗ್ಗಿಗೂ ಅವಕಾಶವಿತ್ತು. ಶಂಕರ್ ಅವರ ವ್ಯಂಗ್ಯ ಚಿತ್ರಗಳು ಅತಿ ಪ್ರಶಂಸೆ ಪಡೆದವು. ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು 'ನನ್ನನ್ನೂ ಬಿಡಬೇಡ ಮಿ.ಶಂಕರ್' ಎಂದು ಮನವಿ ಮಾಡಿಕೊಂಡರು. ಕಾಲು ಶತಮಾನಗಳಿಗೂ ಮೀರಿ ಪ್ರತಿಯೊಬ್ಬರನ್ನೂ ತಮ್ಮ ವಿನೋದದಿಂದ ಸೆರೆಹಿಡಿದಿದ್ದ ಶಂಕರ್ಸ್ ವೀಕ್ಲಿಯು ಅನಿರೀಕ್ಷತವಾಗಿ ಜಿಂಕೆಯಂತೆ ನಿರ್ಗಮಿಸಿತು (ಆಗಸ್ಟ್ 1975)! ತಮ್ಮದೇ ಆಗಿದ್ದ ಸೆರೆಯಿಂದ ಬಿಡುಗಡೆ ಹೊಂದಿ ಬಹುದಿನಗಳ ಕಲ್ಪನೆಯ ಆಸೆಯಾಗಿದ್ದ ಬರವಣಿಗೆಗೆ ತಮ್ಮನ್ನು ತೊಡಗಿಸಿಕೊಳ್ಳಲು ಪೂರ್ಣ ಸ್ವಾತಂತ್ರ್ಯ ದೊರಕಿದ ಅನುಭವ ಶಂಕರ್‌ರವರಿಗೆ ಆಯಿತು.

ಶಂಕರ್ಸ್ ವೀಕ್ಲಿ ಪ್ರಾರಂಭಿಸಿದ ಒಂಭತ್ತು ವರ್ಷಗಳ ನಂತರ ಶಂಕರ್ ಸುಂದರ–ಸಚಿತ್ರ ಮತ್ತು ಸುಂದರ–ವಿನ್ಯಾಸಗಳ ಪುಸ್ತಕಗಳನ್ನು ಹೊರತರುವ ಉದ್ದೇಶದಿಂದ **ಮಕ್ಕಳ ಪುಸ್ತಕ ಟ್ರಸ್ಟ್** ಸ್ಥಾಪಿಸಿದರು. ಶಂಕರ್ ಅವರ ಬುದ್ಧಿ ಶಕ್ತಿ ಮತ್ತು ದೂರದರ್ಶಿತ್ವದಿಂದ ಮಕ್ಕಳ ಪುಸ್ತಕ ಧರ್ಮದತ್ತಿಯು ಮಕ್ಕಳಿಗಾಗಿ ಪುಸ್ತಕಗಳನ್ನು ಪ್ರಕಟಿಸುವ ಹಾದಿಯಲ್ಲಿ ಪ್ರಜ್ವಲಿಸುತ್ತ ಸಾಗಿತು. ಇದುವರೆಗೂ ಒಂದು ಸಾವಿರಕ್ಕೂ ಹೆಚ್ಚು ಶೀರ್ಷಿಕೆಗಳ ಪುಸ್ತಕ ಪ್ರಕಟಣೆ ಮಾಡಿರುವ ಈ ಟ್ರಸ್ಟ್ ಬಹು ದೊಡ್ಡ ಪ್ರಕಾಶನ ಸಂಸ್ಥೆಯಾಗಿ ಮಕ್ಕಳ ಪುಸ್ತಕಗಳ ಪ್ರಕಟಣೆಗೆ ಮೀಸಲಾಗಿತ್ತು. ಮಕ್ಕಳ ಪುಸ್ತಕ ಟ್ರಸ್ಟ್ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲದೆ ಇತರ ಭಾರತೀಯ ಭಾಷೆಗಳಾದ ಅಸ್ಸಾಮಿ, ಬೆಂಗಾಲಿ, ಗುಜರಾತಿ, ಕನ್ನಡ, ಮಲೆಯಾಳಂ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗುಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಲು ಆರಂಭಿಸಿತು. ಮಕ್ಕಳ ಪುಸ್ತಕ ಧರ್ಮದತ್ತಿಯು ಮಕ್ಕಳಿಗಾಗಿ ವಾರ್ತೆ, ವಿಜ್ಞಾನ, ಸಾಂಸ್ಕೃತಿಕ ಮೌಲ್ಯಗಳು, ಪ್ರಾಚೀನ ಜಾನಪದ ಮತ್ತು ಐತಿಹಾಸಿಕ ಕಥೆಗಳು, ಪ್ರಣಯ ಸಾಹಸಗಳು, ಅದ್ಭುತಗಳೇ ಮುಂತಾದ ವೈವಿಧ್ಯಮಯ ವಿಷಯಗಳ ಪುಸ್ತಕಗಳನ್ನು ಹೊರತಂದಿತು. ಲಕ್ಷಾಂತರ ಮಕ್ಕಳಿಗೆ ಆರೋಗ್ಯ, ಸತ್ವಪೂರ್ಣ ವಸ್ತು, ಜೀವಂತಿಕೆ, ಬಣ್ಣ ಮತ್ತು ಅಸಾಧಾರಣವಾದ ಪ್ರದರ್ಶನವುಳ್ಳ ಸಚಿತ್ರ ಪುಸ್ತಕಗಳು ಅಥವಾ ಬೃಹತ್ ಗ್ರಂಥಗಳು ಮೌಲಿಕ ಆಸ್ತಿಯಾದವು. ಕುಂಚದಿಂದ ಲೇಖನಿ ಎಡೆಗೆ ಸಾಗಿದ ಶಂಕರ್ ಶ್ರೇಷ್ಠರನ್ನು ಕುರಿತು 70 ಪುಸ್ತಕಗಳನ್ನು ರಚಿಸಿದರು. ಭಾರತದ ಹಳ್ಳಿಗಳಲ್ಲಿರುವ ಬಹು ಸಂಖ್ಯಾತ ಆಸಕ್ತ ಓದುಗರನ್ನು ತಲುಪುವಂತೆ ಭಾರತದ ಆರ್ಥಿಕ ಸ್ಥಿತಿಗಳನ್ನು ಅರಿತು ಪುಸ್ತಕಗಳ ಬೆಲೆಗಳನ್ನು ಅತಿ ಕಡಿಮೆ ದರದಲ್ಲಿ ನಿಗದಿಪಡಿಸಿದ್ದರು.

ಶಂಕರ್ ಮಕ್ಕಳ ಪುಸ್ತಕಗಳನ್ನು ಬರೆಯುವ ಲೇಖಕರಿಂದ ಹಸ್ತಪ್ರತಿಗಳನ್ನು ಮಕ್ಕಳ ಪುಸ್ತಕ ಟ್ರಸ್ಟ್ ಆಗಾಗ್ಗೆ ಸ್ಪರ್ಧೆಗಳನ್ನು ನಡೆಸಿ ಆರಿಸಿಕೊಳ್ಳುವ ವ್ಯವಸ್ಥೆ ಮಾಡಿದ್ದರು. ಸ್ಪರ್ಧೆಗೆ ವೈವಿಧ್ಯಮಯವಾದ ವಿಭಾಗಗಳಲ್ಲಿ ವಸ್ತು, ವಿಷಯಗಳು, ಕಥೆಗಳು, ಮಕ್ಕಳು ಮತ್ತು ಪರಿಸರ, ಹೊಸ ಸಾಹಸದ ಜಗತ್ತು, ತಾರುಣ್ಯಕ್ಕೆ ಕಾಲಿಡುತ್ತಿರುವುದು ಮುಂತಾದ ವ್ಯಾಪಕ ವಿಷಯಗಳಲ್ಲಿ ಇರುತ್ತಿದ್ದವು. ಕಥೆಗಳಿಗೆಂದೂ ಕೊರತೆಯಿರಲಿಲ್ಲ. ಭಾರತೀಯ ಪರಿಸ್ಥಿತಿ ಮತ್ತು ಜೀವನ ಶೈಲಿಗೆ ಆಧರಿಸಿದಂತೆ ವ್ಯಾಪಕವಾಗಿ ಸಾಮಾಜಿಕ ಪ್ರಸ್ತುತತೆ ಮತ್ತು ಇತರ ಅರ್ಥಪೂರ್ಣ ಕ್ಷೇತ್ರಗಳನ್ನು ಲೇಖಕರು ಆರಿಸಿಕೊಳ್ಳಬಹುದಾಗಿತ್ತು. ಒಟ್ಟಾರೆ 11 ವಿಭಾಗಗಳಲ್ಲಿ ಸ್ಪರ್ಧೆಗಳು ಏರ್ಪಡುತ್ತಿದ್ದವು.

**ವಿಭಾಗ 1:** ಕಲ್ಪನೆಯ ಕಥೆ (9 ವರ್ಷದ ಮೇಲ್ಪಟ್ಟವರಿಗೆ) ವಿಜ್ಞಾನದ ಕಥೆಗಳೂ ಸೇರಿದಂತೆ ಸಾಹಸ ಮತ್ತು ಅದ್ಭುತ, ಯಕ್ಷಿಣಿ ಕಥೆಗಳನ್ನೂ ಭಾರತೀಯ ಇತಿಹಾಸದ ಘಟನೆಗಳನ್ನು ಕಲಾತ್ಮಕವಾಗಿ ಹೇಳುವುದು ಮತ್ತು ವ್ಯಾಖ್ಯಾನಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

**ವಿಭಾಗ 2:** ಪ್ರವಾಸ ಕಥನ (9 ವರ್ಷದ ಮೇಲ್ಪಟ್ಟವರಿಗೆ)

Digitised by Bharatavani, CIIL

ಸಾಹಸ, ಪ್ರವಾಸ, ಚಾರಣ, ಯಾತ್ರೆ, ಪ್ರಯಾಣ, ರಜಾ ದಿನಗಳ ವಿವರಗಳನ್ನು ನೀಡಬೇಕು. ಅವು ಕುತೂಹಲದಿಂದರಬೇಕು. ಉದಾ: ಭೌಗೋಳಿಕ ವಿಷಯಗಳ ಒಂದು ಚುಟುಕಾಗಿರಬಹುದು, ಪರಿಸರ, ಸಮುದಾಯಗಳ ಜೀವನ, ಕಸೂತಿಗಳು ಅಥವಾ ಕಲಾ ರೂಪಗಳು, ರಾಷ್ಟ್ರೀಯ ಚಳುವಳಿಯ ಇತಿಹಾಸ ಮತ್ತು ಇತ್ತೀಚಿನ ಅಭಿವೃದ್ಧಿಯ ಪ್ರಯತ್ನಗಳು, ವಾಸ್ತವಾಂಶ, ದಿನಾಂಕಗಳು, ಮಾಹಿತಿ ಮತ್ತು ನೀಡಿರುವ ವಿವರಗಳು ಪೂರ್ಣವಾಗಿ ಅಧಿಕೃತವಾಗಿರಬೇಕು.

**ವಿಭಾಗ 3:** ವಿಜ್ಞಾನ ಮತ್ತು ತಂತ್ರಜ್ಞಾನ (12 ವರ್ಷದ ಮೇಲ್ಪಟ್ಟವರಿಗೆ) ವಿಜ್ಞಾನವನ್ನು ಸ್ಪಷ್ಟಗೊಳಿಸುವುದು, ಪರಿಕಲ್ಪನೆಗಳನ್ನು ವಿವರಿಸುವುದು, ಸೈದ್ಧಾಂತಿಕ ಸಿದ್ಧಾಂತಗಳು, ತತ್ವಗಳು, ಶೋಧನೆ ಮತ್ತು ಅನ್ವೇಷಣೆಗಳು–ಇತ್ಯಾದಿಗಳ ಮೂಲಕ ವಿಜ್ಞಾನವನ್ನು ಸ್ಪಷ್ಟಗೊಳಿಸಬೇಕು. ಅದರಲ್ಲಿ ವಿಜ್ಞಾನ ವಿಷಯಗಳ ಬಗ್ಗೆ ಮಾಹಿತಿ, ನೈಸರ್ಗಿಕ ಇತಿಹಾಸ, ತಂತ್ರಜ್ಞಾನ, ಕಂಪ್ಯೂಟರ್, ಯಂತ್ರಮಾನವರು (ರೋಬಾಟ್ಸ್), ಪರಿಸರ ವಿಜ್ಞಾನ ಮತ್ತು ಆರೋಗ್ಯ ಶಿಕ್ಷಣಗಳು ಅಡಕವಾಗಿರಬೇಕು. ವೈಜ್ಞಾನಿಕ ವಿಷಯಗಳಲ್ಲಿರುವಂಥ ವೈವಿಧ್ಯಮಯ ಅನುಭವಗಳು ದೊಡ್ಡದಿರಲಿ ಚಿಕ್ಕದಿರಲಿ ಅದನ್ನು ವಿವರಿಸುವಲ್ಲಿ ಮೂಲಭೂತ ವಿಜ್ಞಾನದ ವಿಷಯಗಳಿರಬೇಕು. ಮಕ್ಕಳು ವಿಸ್ಮಯದ ಅಥವಾ ಸೌಂದರ್ಯ ಪ್ರಜ್ಞೆಯನ್ನು ಕಳೆದುಕೊಳ್ಳದೆ ಅದ್ಭುತವಾದುದರ ಹಿಂದೆ ಇರುವ ವೈಜ್ಞಾನಿಕ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳುವ ಉದ್ದೇಶವಿರುತ್ತದೆ.

**ವಿಭಾಗ 4:** ಸಣ್ಣ ಕಥೆಗಳು (9 ರಿಂದ 12 ವರ್ಷಗಳು)

**ವಿಭಾಗ 5:** ಬೆಳೆಯುತ್ತಿರುವ ಮಕ್ಕಳ ಸಂತೋಷ ಮತ್ತು ವ್ಯಥೆ, ವಯಸ್ಕರು ಮತ್ತು ಹದಿಹರೆಯದವರ ನಡುವಿನ ಲೋಪ, ಪೋಷಕರು ಮತ್ತು ಹದಿಹರೆಯದವರ ನಡುವಣ ಸಂಧಿಗ್ಧತೆ ಇತ್ಯಾದಿಗಳನ್ನು ಹದಿಹರೆಯದವರ ಕಥೆಗಳು ಒಳಗೊಂಡಿವೆ. ಕಥೆಗಳು ಭಾರತೀಯ ಕಾಳಜಿಗಳನ್ನು ಮತ್ತು ಪದ್ಧತಿಗಳನ್ನು ಮತ್ತು ನಮ್ಮ ಪ್ರಗತಿಪರ ಸಾಮಾಜಿಕ ಸ್ಥಿತಿಗಳನ್ನು ಇಷ್ಟವಾಗುವಂತೆ ದಾಖಲಿಸಬೇಕು.

**ವಿಭಾಗ 6:** ವಿಚಿತ್ರ ಕಥೆಗಳು (12 ವರ್ಷಗಳು ಮೇಲ್ಪಟ್ಟವರಿಗೆ) ಮಾನವ ಚೈತನ್ಯದಿಂದ ಉದಿಸುವ ಅನುಭವಗಳು ಮತು ಸಂಭವಿಸುವ ಸಂಗತಿಗಳು, ಮನಃಶಾಸ್ತ್ರ, ಸ್ಮರಣಶಕ್ತಿಯ ತಂತ್ರಗಳು, ಭ್ರಮಾತ್ಮಕ ಕಲೆ, ಹೋಲಿಕೆಗಳು, ಸುಲಭವಾಗಿ ನಂಬುವ ಸ್ವಭಾವ, ಅವಳಿಗಳ ರಕ್ತಸಂಬಂಧ–ಯಾವುದರ ಕಾರಣಗಳು ತಿಳಿದಿಲ್ಲವೋ ಅಂತಹ ಸಂಗತಿಗಳನ್ನು ಪರಚಯಿಸುತ್ತವೆ. ಆದರೆ ಸ್ವಾಭಾವಿಕ ವಿಧಾನ, ವೈಜ್ಞಾನಿಕ ವಿಷಯಗಳು ಮತ್ತು ಸಹ ಸಂಬಂಧಗಳನ್ನು ಆಧರಿಸಿದ್ದರೂ ವರ್ತಮಾನದ ಪರಿಸ್ಥಿತಿಗಳು ಮೂಢನಂಬಿಕೆಗಳನ್ನು ನಂಬುವಂತೆ ಮುಗ್ಧಗೊಳಿಸುತ್ತಿವೆ. ಆದ್ದರಿಂದ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸಬಾರದು ಎಂಬ ಅಭಿಪ್ರಾಯಗಳಿರಬೇಕು.

**ವಿಭಾಗ 7:** ಭಾರತೀಯ ಕಥೆಗಳು, ಜನಪದ ಕಥೆಗಳು (9–12 ವರ್ಷಗಳವರಿಗೆ) ಲೇಖಕರಿಂದ ನಿರೂಪತವಾಗಿರುವ ಭಾರತದ ವಿವಿಧ ಭಾಗಗಳ ಕಥೆಗಳನ್ನು ಒಳಗೊಂಡಿರುತ್ತದೆ. ಜನಸಮುದಾಯದಲ್ಲಿ ಉಳಿದಿರುವ ಮೌಲಿಕವಾದ ಹೆಚ್ಚು ಪ್ರಚಲಿತವಾಗಿರದ ಪ್ರಥಮಶ್ರೇಣಿಯ ಗ್ರಂಥಗಳು ಮಹಾಕಾವ್ಯಗಳಿಂದ ಹೊರತಾಗಿರುವ ಪರಂಪರೆಯ ಕಥೆಗಳಾಗಿರಬೇಕು.

**ವಿಭಾಗ 8:** ಶಾಲಾ ಕಥೆಗಳು (8–12 ವರ್ಷಗಳು) ಸಾಮಾನ್ಯವಾಗಿ ಶಾಲೆಗೆ ಸಂಬಂಧಿಸಿದ ಶಾಲೆಯ ಒಳ ಮತ್ತು ಹೊರಗಿನ ಪರಿಸ್ಥಿತಿಗಳು, ಘಟನೆಗಳು, ಆಹ್ಲಾದಕರವಾದ ಕುಚೇಷ್ಟೆಗಳು, ಒಳ್ಳೆಯ ವಿನೋದದ ಬುದ್ಧಿವಾದ, ಬಂಧನದಿಂದ ಬಿಡುಗಡೆಗೊಳ್ಳುವ ಸಾಹಸಗಳು ಮತ್ತು ಉಗ್ರವಾದ ಎಚ್ಚರಿಕೆಗಳನ್ನು ಚಿತ್ರಿಸುತ್ತವೆ.

**ವಿಭಾಗ 9:** ಕ್ರೀಡಾ ಕಥೆಗಳು (8–11 ವರ್ಷಗಳು) ಹೆಚ್ಚು ಪ್ರಚೋದನಕಾರಿಯಾಗಿವೆ. ಈ ಕಥೆಗಳು ಕ್ರೀಡಾಂಗಣದಲ್ಲಿ ಆಗಾಗ್ಗೆ ನಡೆಯುವ ಘಟನೆಗಳು, ಮಾನಸಿಕ ಮತ್ತು ದೈಹಿಕ ತರಬೇತಿ, ಕ್ರೀಡಾ ಮನೋಭಾವ, ಸಾಮೂಹಿಕ ಕೆಲಸ, ಆಕಾಂಕ್ಷೆಗಳು, ನಿರ್ಧಾರಗಳು, ಸವಾಲುಗಳು ಎಲ್ಲಾ ಕಳೆದಮೇಲೂ ಉಳಿದಿರುವ ಶೇಷವನ್ನು ತೋರಿ ಹೇಳಿದರೂ ನಂಬದಿರುವಂಥದಕ್ಕೆ ಸಂಬಂಧಿಸಿವೆ.

**ವಿಭಾಗ 10:** ಮೌಲ್ಯಾತ್ಮಕ ಕಥೆಗಳು (8–11 ವಯಸ್ಸಿನವರು) ಮುಖ್ಯವಾಗಿ ದೃಷ್ಟಾಂತ ಕಥೆಗಳಲ್ಲಿ ಹುದುಗಿರುವ ನೈತಿಕತೆ ಸ್ಪಷ್ಟವಾಗಿ ಹೊರಹೊಮ್ಮುವ ಪೂರ್ಣ ವಸ್ತುವಿರಬೇಕು. ಭಾರತೀಯ ಮೌಲ್ಯಗಳು ಮತ್ತು ಪರಂಪರೆಗಳನ್ನು ಎತ್ತಿ ಹೇಳುವುದು ಮತ್ತು ನಮ್ಮ ಬೆಳವಣಿಗೆಯಲ್ಲಿ ಮತ್ತು ಪಠ್ಯದಲ್ಲಿ ಸಮಿಶ್ರಗೊಳ್ಳುವಂತೆ ಮಾಡುವ ಉದ್ದೇಶ ವಿರಬೇಕು.

**ವಿಭಾಗ 11:** ಗಟ್ಟಿಯಾಗಿ ಓದುವ ಪುಸ್ತಕಗಳು/ಚಿತ್ರ ಕಥೆಗಳು (3–5 ಮತ್ತು 5–8 ವರ್ಷಗಳು) ಅನೇಕ ಸ್ವವಿವರಣೆಯುಳ್ಳ ಚಿತ್ರ ಸಹಿತವಾದ ಅನೇಕ ವಿಷಯಗಳನ್ನು ತಮ್ಮಷ್ಟಕ್ಕೆ ತಿಳಿಸುವಂತಿರಬೇಕು. ಲೇಖಕರು ಹಸ್ತ ಪ್ರತಿಗಳೊಡನೆ ದೃಷ್ಟಾಂತ ಚಿತ್ರಕಥೆ ಅಥವಾ ಚಿತ್ರಗಳನ್ನು ಸಲ್ಲಿಸಬೇಕೆಂದೇನೂ ಇಲ್ಲ.

ಸ್ಪರ್ಧೆಯ ಯಾವುದೇ ವಿಭಾಗವನ್ನೂ ಲಕ್ಷಿಸದೆ, ಕಥೆಯ ತಿರುಳು, ಭಾಷೆ, ಶೈಲಿಗಳ ಆಧಾರದ ಮೇಲೆ ಅತ್ಯುತ್ತಮ ಬಹುಮಾನಿತ ಹಸ್ತಪ್ರತಿಗೆ ಶಂಕರರ ಪ್ರಶಸ್ತಿ ನೀಡಲಾಗುತ್ತದೆ. ಅತ್ಯಧಿಕ ಬಹುಮಾನಿತ ಹಣ ರೂ. 17,500 ಮತ್ತು ಅತಿ ಕಡಿಮೆ ಹಣ ರೂ.4,500. ಈ ಕೆಳಕಂಡ ಮಾಲೆಗಳಲ್ಲಿ ಪ್ರತಿವರ್ಷವೂ ಮಕ್ಕಳ ಪುಸ್ತಕ ಟ್ರಸ್ಟ್‌ನ ಆಧಿಕ್ಯವನ್ನು ಈ ಹಸ್ತಪ್ರತಿಗಳು ರೂಪಿಸಿವೆ.

**ಚಿತ್ರಕೃತಿಗಳು:** ಮಕ್ಕಳ ಪುಸ್ತಕ ಟ್ರಸ್ಟ್ ಘನತೆಯುಳ್ಳ ಚಿತ್ರಕೃತಿಗಳಲ್ಲಿ ಎಂಟು ವರ್ಷಗಳ ಒಳಗಿನ ಮಕ್ಕಳಿಗೆಂದೇ ಉಜ್ವಲವಾದ ವರ್ಣಸಹಿತ ಅಧಿಕ ನಿದರ್ಶನಗಳಿರುತ್ತವೆ. ಒಂದು ಚಿಕ್ಕ ಮಗುವು ದಪ್ಪ ಅಕ್ಷರಗಳ ಪಠ್ಯ ಮತ್ತು ಸರಳವಾದ ಸೃಜನಶೀಲ ಕಥೆಯ ಸಾಲುಗಳಲ್ಲಿರುವ ಕಥಾವಸ್ತುವನ್ನು ಉಲ್ಲಾಸದಿಂದ ಗುರುತಿಸಬಲ್ಲದು. ಉದಾ: 'Animal Fair' ಎಂಬ ಕಥೆಯಲ್ಲಿ ಒಬ್ಬ ಹುಡುಗ ಮತ್ತು ಆತನ ತಂದೆ ಪ್ರಾಣಿಗಳಿಗಾಗಿ ಖರೀದಿಸಲು ಹೋಗುವುದು, ಅವರ ಪ್ರಯಾಣ ಅವರಿಗೆ ಒಂದು ದೊಡ್ಡ ಕೃಷಿಭೂಮಿಯನ್ನು ಅವುಗಳಿಗಾಗಿ ಕಟ್ಟುವಂತೆ ಪ್ರೇರೇಪಿಸುತ್ತದೆ. ಜೊತೆಗೆ ಒಂದು ಕಲಿಯುವ ಅನುಭವವನ್ನು ಅದು ದೃಢಪಡಿಸುತ್ತದೆ. ಇನ್ನೊಂದು ಕಥೆಯಲ್ಲಿ

Digitised by Bharatavani, CIIL

ಒಬ್ಬ ಚಿಕ್ಕ ಹುಡುಗ ಒಂದು ಬಲೂನನ್ನು ಕೊಳ್ಳುತ್ತಾನೆ (Balloons for Me). ಅದರೊಡನೆ ನಾನಾ ರೀತಿಯ ಆಟಗಳನ್ನು ಆಡುತ್ತಾನೆ. ಅದು ಒಡೆದು ಹೋದಾಗ ಅವನಿಗೆ ನಿರಾಶೆಯಾಗುತ್ತದೆ. ಆದರೆ ಅವನಿಗಾಗಿ ತಂದೆಯು ಒಂದು ರಹಸ್ಯವನ್ನು ಅಡಗಿಸಿರುತ್ತಾನೆ. (The Elephant and the Water Tanks) ಕಥೆಯಲ್ಲಿ ಮಧ್ಯರಾತ್ರಿಯಲ್ಲಿ ಅಚ್ಚರಿಗಳು ಸಂಭವಿಸುತ್ತವೆ. ಒಂದು ಹೂವು ಅರಳುತ್ತದೆ, ಒಂದು ನಾಯಿಮರಿ ಬರುತ್ತದೆ, ಚೋರು ಎಂಬ ಚಿಕ್ಕ ಹುಡುಗಿ ಅಂತಹ ಒಂದು ಅದ್ಭುತ ಅನುಭವಕ್ಕೆ ಸಾಕ್ಷಿಯಾಗುತ್ತದೆ.

**ಬಂಗಾರದ ಜತೆಗಳು (ಗೋಲ್ಡನ್ ಸೆಟ್ಸ್):** ಇವು ಅತ್ಯುತ್ತಮವಾದ, ಗಟ್ಟಿ ಬೈಂಡಿನ, ಆಕರ್ಷಕ ಶೀರ್ಷಿಕೆಗಳುಳ್ಳ ಮಕ್ಕಳ ಪುಸ್ತಕ ಧರ್ಮದತ್ತಿಯ ಪ್ರಕಟಣೆಗಳಾಗಿವೆ. ಅರೂಪ್ ಕುಮಾರ್ ದತ್ತರ ಅಡ್ವೆಂಚರ್ ಸ್ಟೋರೀಸ್ ಎಂಬ ನಾಲ್ಕು ಬಹುಮಾನಿತ ಪುಸ್ತಕಗಳ ಸಂಕಲನ, ದಿ ಕಜಿರಂಗ ಟ್ರೇನ್, ಟ್ರಬಲ್ ಅಟ್ ಕೋಲಾಂಗಿಜನ್, ದಿ ಬ್ಲೈಂಡ್ ವಿಟ್ನೆಸ್ ಮತ್ತು ಸ್ಮ್ಯಾಕ್ ಎಂಬ ಕಥೆಗಳಿಂದ ಕೂಡಿದೆ. ಭಾರತದ ಎಲ್ಲೆಡೆಗಳ ಜನಪದ ಕಥೆಗಳ ಸಂಕಲನ ಕೃತಿ ಇಂಡಿಯನ್ ಫೋಕ್ ಟೇಲ್ಸ್ ಹಲವು ಅಹಂಕಾರಿ, ಹಲವು ದಯಾಳು ರಾಜರುಗಳು, ಒಬ್ಬ ದಯಾಶೀಲೆ ರಾಣಿಯ ಯಕ್ಷಿಣಿ ವಿದ್ಯೆಯ ಪವಾಡಗಳು, ಸ್ನೇಹದ ಸಹಾಯಶೀಲ ಭೂತಗಳು, ಒಂದು ಚತುರ ಕಪ್ಪೆ ಮತ್ತು ಒಬ್ಬ ಬುದ್ಧಿವಂತ ಬಾಲಕ, ಹಲವು ಚುರುಕಾದ ಮತ್ತು ಹಲವು ಮೂರ್ಖರಾದ ಜನರು–ಗಳಿಂದ ಕೂಡಿದ ದ ಸ್ಟೋರೀಸ್ ಆಫ್ ಕಿಂಗ್ಸ್ ಕಥೆ. ಪಂಚತಂತ್ರದಿಂದ 28 ಆಯ್ದ ಕಥೆಗಳ ಸಂಗ್ರಹವೇ ಸ್ಟೋರೀಸ್ ಫ್ರಮ್ ಪಂಚತಂತ್ರ. ಇದು ಪ್ರಾಚೀನ ಭಾರತದ ಪ್ರಸಿದ್ಧ ಕೃತಿ ಭಂಡಾರ.

**ಶ್ರೇಷ್ಠ ಗ್ರಂಥಗಳು:** ಇದು ದೇಶದುದ್ದಕ್ಕೂ ಮಕ್ಕಳು ಇಷ್ಟ ಪಡುವಂತಹ ಕಾಲಾತೀತವಾದ ಭಾರತೀಯ ಕಥೆಗಳ ಮಾಲೆ. ಕೃಷ್ಣ ಮತ್ತು ಸುಧಾಮನ ಕತೆ ಸ್ನೇಹದ ಮೌಲ್ಯವನ್ನು ಸಾರುತ್ತದೆ. ಕೃಷ್ಣ ರಾಜನಾಗಿದ್ದರೂ ಸಹಾ ತನ್ನ ಬಾಲ್ಯದ ಗೆಳೆಯನನ್ನು ಮರೆಯುವುದಿಲ್ಲ. ಸುದಾಮ ಬಡವನೆಂದು ಭೇದವೆಣಿಸದೆ ಅನೇಕ ತಿಂಗಳುಗಳ ಕಾಲ ತನ್ನ ಅರಮನೆಯಲ್ಲಿ ಇರಿಸಿಕೊಳ್ಳುತ್ತಾನೆ. ಟೇಲ್ಸ್ ಫ್ರಮ್ ಇಂಡಿಯನ್ ಕ್ಲಾಸಿಕ್ಸ್ ಎಂಬಿತ್ಯಾದಿ ಮೂರು ಸಂಪುಟಗಳು ಇವೆ.

**ಜೀವನ ಚರಿತ್ರೆಗಳು:** ಸ್ವಾಂತಂತ್ರ್ಯಕ್ಕಾಗಿ ನಡೆದ ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿದ ಹಾಗೂ ವಿಶ್ವ ಪ್ರಗತಿಗೆ ಸಹಾಯಕರಾದ ಪ್ರಸಿದ್ಧ ಸ್ತ್ರೀ ಪುರುಷರ ವ್ಯಕ್ತಿ ಚಿತ್ರಣಗಳನ್ನು ಒಳಗೊಂಡ ಮಾಲಿಕೆಯಿದು. ಎಮ್.ಚಲಪತಿ ರಾವ್ ಅವರ ನೆಹರೂ ಫಾರ್ ಚಿಲ್ಡ್ರನ್ ಎಂಬ ಜೀವನ ಚರಿತ್ರೆಯು ಭಾರತೀಯ ಇತಿಹಾಸದ ಸ್ಮರಣೀಯ ಕಾಲಾವಧಿಯ ನೆಹರೂ ಬದುಕನ್ನು ಚಿತ್ರಿಸಿದೆ. ರಾಜಕುಮಾರಿ ಶಂಕರ್ ಅವರ ದಿ ಸ್ಟೋರಿ ಆಫ್ ಗಾಂಧಿ ಎಂಬ ಕೃತಿಯು ಗಾಂಧಿಯವರ ಬಾಲ್ಯ, ಶಿಕ್ಷಣ, ಲಂಡನ್ನಿನ ಮತ್ತು ದಕ್ಷಿಣ ಆಫ್ರಿಕಾದ ವಾಸ, ಭಾರತದ ಸ್ವಾತಂತ್ರ್ಯಕ್ಕಾಗಿ ಅವರ ಹೋರಾಟಗಳನ್ನು ಕುರಿತ ಸ್ವಾರಸ್ಯಕರ ಸಂಗತಿಗಳನ್ನು ಒಳಗೊಂಡಿದೆ. ರಿಮೆಂಬರಿಂಗ್ ಅವರ್ ಲೀಡರ್ಸ್ ಎಂಬ ಕೃತಿಯಲ್ಲಿ ತಾಯಿ ಭಾರತಿಯ ಪ್ರಸಿದ್ಧ ಮಕ್ಕಳನ್ನು ಕುರಿತ ಜೀವನ ಚಿತ್ರಣಗಳಿದ್ದು ಬಂಕಿಮ ಚಂದ್ರ ಚಟರ್‌ಜಿ, ಆನಿ ಬೆಸೆಂಟ್, ಸರೋಜಿನಿ ನಾಯ್ಡು, ಸಿ.ವಿ.ರಾಮನ್, ಶ್ರೀ ಅರವಿಂದರು, ರಾಜಾರಾಮ್ ಮೋಹನ್ ರಾಯ್, ಶ್ರೀನಿವಾಸ ರಾಮಾನುಜಮ್, ದಯಾನಂದ ಸರಸ್ವತಿ, ರವೀಂದ್ರನಾಥ ಠಾಕೂರ್, ಮೇಘನಾದ ಶಹಾ, ದಾದಾಬಾಯಿ ನವರೋಜಿ, ಬಿ.ಆರ್.ಅಂಬೇಡ್ಕರ್, ಕಮಲಾದೇವಿ ಚಟ್ಟೋಪಾಧ್ಯಾಯ, ಮಹಮ್ಮದ್ ಇಕ್ಬಾಲ್, ಜಗದೀಶ್ ಚಂದ್ರ ಬೋಸ್, ಹೋಮಿ ಭಾಬಾ, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ ಮತ್ತಿತರರನ್ನು ಒಳಗೊಂಡಿದೆ.

**ಸಾಹಸ ಮತ್ತು ಯಕ್ಷಿಣಿ:** ಈ ಮಾಲೆಯಲ್ಲಿ ಮೋಸ ಮತ್ತು ಕುಯುಕ್ತಿಗಳ ಸಂದರ್ಭಗಳನ್ನು ಚಾತುರ್ಯ ಮತ್ತು ಧೈರ್ಯಗಳಿಂದ ಎದುರಿಸುವ ನಾಯಕತ್ವ ಗುಣಗಳುಳ್ಳ ಚುರುಕಾದ ಮತ್ತು ಬುದ್ಧಿವಂತ ಚಿಕ್ಕ ಮಕ್ಕಳ ಕಥೆಗಳನ್ನು ಒಳಗೊಂಡಿದೆ.

**ಸಣ್ಣ ಕಥೆಗಳು:** ಈ ಸಂಕಲನಗಳಲ್ಲಿ ಮಕ್ಕಳ ಜೀವನದಲ್ಲಿ ತಂದೆ ತಾಯಿಗಳು, ಮನೆ, ಸೋದರರು, ಶಾಲೆ, ಶಿಕ್ಷಕರು, ಸ್ನೇಹಿತರು ಮತ್ತು ಮುದ್ದಿನ ಪ್ರಾಣಿಗಳು ಎಂದು ಕೆಲವನ್ನು ಹೆಸರಿಸಬಹುದಾದ ವಿಷಯಗಳು ಮುಂತಾದ ನಾನಾ ವಿಷಯಗಳನ್ನು ಕುರಿತ ಕಥೆಗಳಿವೆ.

**ಮಾಹಿತಿ ಮಾಲೆಗಳು:** ಈ ಮಾಲೆಯಲ್ಲಿ ವಿಜ್ಞಾನ, ಸಮುದ್ರ ಜೀವನ, ಪ್ರವಾಸ ಮತ್ತು ಪತ್ರಗಳನ್ನು ಕುರಿತ ಪುಸ್ತಕಗಳಿವೆ. ಕಾಲ್ ಆಫ್ ದಿ ಓಷನ್ ಕಥೆಗಳಲ್ಲಿ ಮನುಷ್ಯನ ಸ್ವಾರ್ಥ ಸಮುದ್ರಕ್ಕೆ ಮಾಡಿರುವ ಅಪಾಯಗಳನ್ನು ತೋರಿಸುತ್ತದೆ. ಮತ್ತು ಸಮುದ್ರವನ್ನು ರಕ್ಷಿಸಿದರೆ ನಮಗೆ ಹೆಚ್ಚಿನದನ್ನು ಕೊಡಬಲ್ಲುದು ಎಂಬುದನ್ನು ಸೂಚಿಸುತ್ತದೆ. ಕಲೆಕ್ಷನ್ ಆಫ್ ಸ್ಟಾಂಪ್ಸ್ ಸ್ವಾತಂತ್ರ ಪೂರ್ವದಲ್ಲಿ ಬಿಡುಗಡೆಗೊಂಡಿರುವ ಚಿತ್ರಸಹಿತವಾದ ಸ್ಟಾಂಪ್‌ಗಳ ಇತಿಹಾಸವನ್ನು ಒಳಗೊಂಡಿದೆ. ಸ್ಟಾಂಪ್‌ಗಳ ಇತಿಹಾಸ ಮತ್ತು ಸೌಂದರ್ಯವನ್ನು ಹಿಡಿದಿಟ್ಟುಕೊಂಡು ವಿವಿಧ ವಸ್ತು ವಿಷಯಗಳನ್ನು ಕುರಿತು ಇತಿಹಾಸ ಮತ್ತು ಸೌಂದರ್ಯವನ್ನು ಹೇಳುತ್ತವೆ. ಅವುಗಳೆಂದರೆ, ಪ್ರಾಚ್ಯ ಶಾಸ್ತ್ರ, ಕಲಾವಿದರು ಮತ್ತು ಕವಿಗಳು, ಹೂಗಳು, ನೆಹರೂ ಕುಟುಂಬ, ಗಾಂಧೀಜಿ, ಏಷಿಯಾ ಕ್ರೀಡೆಗಳು ಇತ್ಯಾದಿ ಹೆಚ್ಚು ವಿವಿಧ ವಿಷಯಗಳು ಇರುತ್ತವೆ. ಗ್ರೇಟ್ ಇನ್ಸ್ಟಿಟ್ಯೂಷನ್ಸ್ ನಮ್ಮ ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಪರಿಣಾಮಕಾರಿಯಾಗಿ ವರ್ತಿಸಿ ತನ್ಮೂಲಕ ಪ್ರಸಿದ್ಧಿ ಪಡೆದಂತಹ ಸಂಸ್ಥೆಗಳನ್ನು ಮಕ್ಕಳಿಗೆ ಪರಿಚಯಿಸುತ್ತದೆ. ಈ ಸಂಪುಟದಲ್ಲಿ 7 ಸಂಸ್ಥೆಗಳಿವೆ. ಅವುಗಳ ಕೆಲಸ ಪ್ರಸ್ತುತವಾಗಿದ್ದು ಮುಂದುವರಿಯುತ್ತಿದೆ. ಅವರ್ ನೇಬರ್ಸ್ ಇಂಡಿಯಾದ ಸುತ್ತಲಿನ ಭೂಪ್ರದೇಶಗಳ ವಿಹಂಗಮ ನೋಟವಾಗಿದೆ. ಅವುಗಳು ಶ್ರೀಲಂಕಾ, ಮೈನ್ಮಾರ್ (ಬರ್ಮಾ), ನೇಪಾಳ, ಭೂತಾನ್, ಬಾಂಗ್ಲಾದೇಶ್ ಮತು ಪಾಕಿಸ್ತಾನಗಳು. ಪ್ರಪಂಚದಾದ್ಯಂತ ಕೋಟ್ಯಂತರ ಜನರಿಗೆ ಸ್ಟಾಂಪ್ ಸಂಗ್ರಹಣೆ ಒಂದು ಆಯ್ಕೆಯ ಹವ್ಯಾಸವಾಗಿದೆ. ಫಿಲಾಟಲಿ

Digitised by Bharatavani, CIIL

ಫಾರ್ ದಿ ಯಂಗ್ ಎಂಬ ಸಂಪುಟದಲ್ಲಿ ಕ್ರಿಯಾಶೀಲ ಅಂಚೆಚೀಟಿ ಸಂಗ್ರಹಕಾರರೊಬ್ಬರು ಸ್ಟಾಂಪ್ ಸಂಗ್ರಹಣೆಯಿಂದ ಅಂಚೆಚೀಟಿ ಕೂಡಿಹಾಕುವ ಕಡೆಗೆ ಹೇಗೆ ಸಾಗುವುದೆಂಬುದರ ಮಾಹಿತಿಗಳನ್ನು ನೀಡಿದ್ದಾರೆ.

**ಭಾರತದಲ್ಲಿ ಮಕ್ಕಳ ಸಾಹಿತ್ಯ:** ಇದು ಮಕ್ಕಳ ಪುಸ್ತಕ ಟ್ರಸ್ಟ್‌ನ ಮಹತ್ವದ ಕೃತಿ. ಈ ಬೃಹತ್ ಸಂಪುಟದ 28 ಅಧ್ಯಾಯಗಳಲ್ಲಿ ಮಕ್ಕಳ ಸಾಹಿತ್ಯದ ವಿವಿಧ ವಿಷಯಗಳಿದ್ದು, ಅಧ್ಯಯನ ಮತ್ತು ಸಂಶೋಧನೆಗೆ ವಸ್ತುಗಳನ್ನು ಒದಗಿಸಿ ಇನ್ನೂ ಹೆಚ್ಚಿನ ಬೆಳವಣಿಗೆಗೆ ಸಂಬಂಧಿಸಿದಂತೆ ಸಾರಾಂಶಗಳನ್ನು ನೀಡುತ್ತದೆ. ಇತಿಹಾಸ, ಬೆಳವಣಿಗೆ ಮತ್ತು ವಿಮರ್ಶಾತ್ಮಕ ವಿಷಯಗಳಲ್ಲದೆ ಇದರ ವ್ಯಾಪ್ತಿಯಲ್ಲಿ ಮಕ್ಕಳ ಸಾಹಿತ್ಯದಲ್ಲಿ ಅಭಿವೃದ್ಧಿಯಿಂದ ಗಮನಾರ್ಹ ಪ್ರಗತಿ ಸಾಧಿಸಿರುವ ಭಾಷೆಗಳನ್ನು ಕುರಿತು ಚರ್ಚೆಯನ್ನು ಒಳಗೊಂಡಿದೆ. ಇದರ ಲೇಖಕರು ಪ್ರಸಿದ್ಧ ವ್ಯಕ್ತಿತ್ವವುಳ್ಳವರು ಮತ್ತು ವೃತ್ತಿಪರ ತಜ್ಞರು. ಮಕ್ಕಳ ಅಗತ್ಯಗಳನ್ನು ಪೂರೈಸುವ ಪ್ರಯತ್ನಗಳ ಸೂಚಿಯಾಗಿ ಮತ್ತು ಹೆಚ್ಚಿನ ಸೃಜನಶೀಲ ಮತ್ತು ಸಂಶೋಧನಾತ್ಮಕ ದಿಕ್ಕಿನಲ್ಲಿ ಆಹ್ವಾನಿಸುವ ಮೌಲಿಕ ಮಾಹಿತಿಗಳಿಂದ ಕೂಡಿದೆ.

**ವನ್ಯಜೀವಿ ಮಾಲೆ:** ಈ ಮಾಲೆಯು ಸ್ವಲ್ಪ ಹೆಚ್ಚು ವಯಸ್ಸಿನ ಮಕ್ಕಳಿಗೆ ಸಂಬಂಧಿಸಿದೆ. ಬೇರೆ ಬೇರೆ ವಿಷಯಗಳಿಗೆ ಒತ್ತು ನೀಡಿರುವ ಇದರಲ್ಲಿ ಒಂದು ಪ್ರಾಂತದ, ಯುಗದ ಪ್ರಾಣಿ, ಸಸ್ಯ, ವಿವರಣ ಗ್ರಂಥ< ಪ್ರದೇಶ, ನೀರು ಇತ್ಯಾದಿ ಗಳಿವೆ. ಈ ವಿಭಾಗದ ಪುಸ್ತಕಗಳು ಪ್ರಕೃತಿಯ ಮೇಲೆ ಪ್ರೀತಿಯನ್ನು, ಅದರ ಸಂರಕ್ಷಣೆಯ ಬಗ್ಗೆ ಜಾಗೃತಿಯನ್ನೂ ಉಂಟುಮಾಡುತ್ತವೆ. ಉದಾ: ಸಮ್ ಇಂಡಿಯನ್ ಬರ್ಡ್ಸ್ ಕೃತಿಯು ರಾಕೆಟ್ ಬಾಲವಿರುವ ಡ್ರೋಂಗೋ ಬಗ್ಗೆ ನಿಮಗೆ ಗೊತ್ತೆ? ಎಂದು ಪ್ರಶ್ನಿಸುತ್ತಲೇ ಪ್ರಾರಂಭವಾಗುತ್ತದೆ. ಇಲ್ಲ ಎಂದಾದರೆ ಈ ವಿಶೇಷ ಪಕ್ಷಿಯ ಬಗ್ಗೆ ಮತ್ತು ಇನ್ನೂ ಹಲವು ವಿಚಾರಗಳ ಬಗ್ಗೆ ಸುಂದರವಾದ ದೃಷ್ಟಾಂತ ಸಹಿತವಾದ ವಿವರಣೆಯುಳ್ಳ ಮತ್ತು ಮಾಹಿತಿಯುಕ್ತ ಗ್ರಂಥವನ್ನು ಓದಿ ಎನ್ನುತ್ತದೆ.

**ಐತಿಹಾಸಿಕ ಕಲ್ಪನೆಯ ಕಥೆ ಮತ್ತು ಅಕಲ್ಪಿತ ವಸ್ತು ಕೃತಿ:** ಈ ಮಾಲೆಯು ಭಾರತೀಯ ಇತಿಹಾಸವನ್ನು ಆಧರಿಸಿದೆ. ಇತಿಹಾಸದ ಕಥೆಗಳನ್ನು ನಾವು ಓದಿದಾಗ ಜನರು ಏನನ್ನು ಮಾಡಿದ್ದರು, ಆದರೆ ಏಕೆ ಹಾಗೆ ಮಾಡಿದ್ದರು ಎಂಬ ವಿಷಯಗಳಿಂದ ಇತಿಹಾಸವು ರೋಮಾಂಚಕವಾಗಿ ಮತ್ತು ಸ್ವಾರಸ್ಯವಾಗಿ ಕಂಡುಬರುತ್ತದೆ. ಭಾರತೀಯ ಇತಿಹಾಸವು ಅಂತಹ ಐತಿಹ್ಯಗಳು ಕೊನೆಯಿಲ್ಲದ ಸರಪಳಿಯಾಗಿದೆ. ಲೆಜೆಂಡ್ಸ್ ಫ್ರಮ್ ಇಂಡಿಯನ್ ಹಿಸ್ಟರಿ ಅಂತಹ ಕೆಲವನ್ನು ಚಿತ್ರಿಸಿದೆ.

**ವಿಜ್ಞಾನ ಕಥೆಗಳು:** ಈ ವಿಭಾಗದ ಕೃತಿಗಳಲ್ಲಿ ಹೊರನಾಡಿಗರು ಭವಿಷ್ಯ ಜೀವನ, ನೀರಿನೊಳಗಿನ ಜೀವನದ ವಸ್ತಗಳಿವೆ. ಉದಾ: ಆದಿತ್ಯ ದಿ ಅಂಡರ್ ವಾಟರ್ ಬಾಯ್, ಜನ ವಾಹನಗಳ ಸಂಚಾರದ ಪರಮಾವಧಿ, ನಾಗಾಲೋಟದ ಜೀವನ, ಮಿತ ಜಾಗ, ಕಿಕ್ಕಿರಿದ ಜನಸಂದಣಿ–ಇತ್ಯಾದಿಗಳು ನಗರ ಜೀವನದ ಹಲವು ಶಾಪಗಳಾಗಿವೆ. ಪ್ರೊ.ಸೇನ್ ಎಂಬ ಒಬ್ಬ ತಳಿ ಶಾಸ್ತ್ರಜ್ಞರು ಅವುಗಳಿಂದ ಹೊರಬರುವ ಒಂದು ಹಾದಿಯನ್ನು ಕಂಡು ಹಿಡಿದಿದ್ದಾರೆ. ಅವರು ಸಮುದ್ರದೊಳಗಿನ ಜೀವನದ ರೋಮಾಂಚಕ ಸಾಹಸಗಳಿಗೆ ಮಕ್ಕಳನ್ನು ಕರೆದೊಯ್ಯುತ್ತಾರೆ.

**ಅದು ಹೇಗೆ ಕೆಲಸಮಾಡುತ್ತದೆ?:** ಈ ಮಾಲೆಯು ಮಕ್ಕಳಿಗೆ ಪರಿಚಿತವಿರುವ ವಸ್ತುಗಳ ಕೆಲಸ ಮತ್ತು ತಾಂತ್ರಿಕತೆ ಗಳನ್ನು ಅದರ ಇತಿಹಾಸವನ್ನೂ ಕುರಿತಂತೆ ವಿವರಣೆ ಮತ್ತು ಪರಿಚಯಗಳನ್ನು ಮಾಡುತ್ತದೆ. ವೈಜ್ಞಾನಿಕ ತತ್ವಗಳನ್ನು ಸರಳವಾದ ಚಿತ್ರಗಳು ಮತ್ತು ದೃಷ್ಟಾಂತಗಳು, ವ್ಯಂಗ್ಯಚಿತ್ರಗಳ ಮೂಲಕ ವಿವರಿಸಲಾಗಿದೆ. ಇದು ವಿಮಾನ, ಗಡಿಯಾರ, ಮೋಟಾರು ವಾಹನ, ರೈಲ್ವೆ ಟ್ರೈನ್ ಮತ್ತು ಇತರ ವಿಷಯಗಳನ್ನು ಒಳಗೊಳ್ಳುತ್ತದೆ.

**ಇಂದ್ರಪ್ರಸ್ಥ ಪ್ರೆಸ್:** ಗುಣಮಟ್ಟದ ಬಗ್ಗೆ ಮೆಚ್ಚಲಸಾಧ್ಯರಾದ ಶಂಕರ್‌ಅವರು ದೆಹಲಿಯ ಪ್ರಿಂಟಿಂಗ್ ಪ್ರೆಸ್‌ಗಳು ಮಾಡುತ್ತಿದ್ದ ಸೇವೆಗಳಿಂದ ತೃಪ್ತಗೊಳ್ಳಲಿಲ್ಲ. ಆದ್ದರಿಂದ ತಮ್ಮದೇ ಆದ ಇಂದ್ರಪ್ರಸ್ಥ ಪ್ರೆಸ್ ಎಂಬ ಪ್ರೆಸ್ ತೆರೆದು ಮಕ್ಕಳ ಪುಸ್ತಕ ಟ್ರಸ್ಟ್‌ನಿಂದ ಉತ್ತಮ ಗುಣಮಟ್ಟವುಳ್ಳ ಪುಸ್ತಕಗಳನ್ನು ಪ್ರಕಟಿಸಿ ಗುಣಮಟ್ಟದ ಮುದ್ರಣವನ್ನು ದೃಢ ಪಡಿಸಿದರು. ಈ ಪ್ರೆಸ್ ಮುಂದುವರಿದ, ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಬಹುವಾಗಿ ಸುಸಜ್ಜಿತ ಗೊಂಡಿದೆ. ಹೊರಗಿನ ಪ್ರತಿಷ್ಠಿತ ಕಲಸಗಳನ್ನೂ ಸ್ವೀಕರಿಸುತ್ತದೆ.

**ಮಕ್ಕಳ ಪ್ರಪಂಚ (Children's World-CW):** ಪುಸ್ತಕಗಳೇ ಅಲ್ಲದೆ ಮಕ್ಕಳ ಬುಕ್ ಟ್ರಸ್ಟ್ ಚಿಲ್ಡ್ರನ್ ವರ್ಲ್ಡ್ ನ್ನು ಜನವರಿ 1968 ರಲ್ಲಿ ಹೊರತಂದಿತು. ಇದು ಭಾರತದ ಅತ್ಯಂತ ಹಳೆಯ ಮಕ್ಕಳ ಇಂಗ್ಲಿಷ್ ಮಾಸಿಕ ಪತ್ರಿಕೆ. ಇದರಲ್ಲಿ ಕಥೆಗಳು, ಕವನಗಳು, ಕಾಮಿಕ್ಸ್, ಮಕ್ಕಳ ಕಲಾಕೆಲಸಗಳು, ಪುಸ್ತಕ ಪರಾಮರ್ಶೆ ಮತ್ತು ಕ್ವಿಜ್‌ಗಳನ್ನು ಪ್ರಕಟಿಸಲಾಗುತ್ತದೆ. ಚಿಲ್ಡ್ರನ್ ವರ್ಲ್ಡ್ ಮೂವತ್ತು ವರ್ಷಗಳಿಂದಲೂ ನಿಧಾನವಾಗಿ ಸಮೃದ್ಧ ವಸ್ತು ಶ್ರೀಮಂತಿಕೆ ಒಳಗೊಂಡು ಬೆಳೆಯುತ್ತಿದೆ.

**ಶಂಕರ್ ಅಂತರ್ರಾಷ್ಟ್ರೀಯ ಬೊಂಬೆಗಳ ಸಂಗ್ರಹಾಲಯ:** 1954 ರಲ್ಲಿ ಶಂಕರ್‌ರವರಿಗೆ ಹಂಗೇರಿಯನ್ ಒಂದು ಬೊಂಬೆ ಕಾಣಿಕೆಯಾಗಿ ಬಂದಿತು. ಅದು ಅವರನ್ನು ಹೊಸ ಆಲೋಚನೆಗೆ ಸೆಳೆಯಿತು. ಶಂಕರ್ ಪ್ರಪಂಚದ ಎಲ್ಲೆಡೆಗಳಿಂದ 6,500 ವೇಷಭೂಷಣ ಸಹಿತ ಬೊಂಬೆಗಳನ್ನು ಸಂಗ್ರಹಿಸಿ, 1965 ರಲ್ಲಿ ಒಂದು ಸಂಗ್ರಹಾಲಯವನ್ನು ಸ್ಥಾಪಿಸಿದರು. ಈ ಬೊಂಬೆಗಳು ಭಾರತಕ್ಕೆ ಹಾಗೂ ಭಾರತದಿಂದ ಸ್ವಲ್ಪಮಟ್ಟಿನ ಸಾಂಸ್ಕೃತಿಕ ರಾಯಭಾರವನ್ನು ಬೀರುವ ಪಾತ್ರ ವಹಿಸುವಲ್ಲಿ ಪರಿಣಾಮಕಾರಿ ಪ್ರಭಾವ ಬೀರಿದೆ. ಭಾರತದ ವಿವಿಧ ಹಬ್ಬಗಳನ್ನು ಸಂದೇತಿಸುವ ಹಲವು ಉತ್ಸವ ಬೊಂಬೆಗಳಿವೆ. ತಮ್ಮ ವೈಭವಯುತ ಅಲಂಕಾರಗಳಿಂದ ಭಾರತದ ವಿಶಿಷ್ಟ ಪರಂಪರೆಯ ನೃತ್ಯ ರೂಪಗಳನ್ನು ಸಂಕೇತಿಸುವ ವ್ಯಕ್ತಿಗಳನ್ನು ಪ್ರತಿನಿಧಿಸುತ್ತವೆ. ವಿಶೇಷ ಆಸಕ್ತಿದಾಯಕ ಬಾಲಕರು ಮತ್ತು ಬಾಲಕಿಯರ ಹಲವು ಬೊಂಬೆಗಳು, ಜಪಾನ್, ಅಮೇರಿಕಾದ ರಾಣಿಯರ ಪ್ರತಿರೂಪದ ಬೊಂಬೆಗಳ ಸಂಗ್ರಹ, ಹಂಗೇರಿಯ ಮೇ ಪೋಲ್ ನೃತ್ಯ,

Digitised by Bharatavani, CIIL

ಕಾಬೂಕಿ ಮತ್ತು ಸಮುರಾಯ್ ಜಪಾನ್ ಬೊಂಬೆಗಳು, ಸ್ಪೆಯಿನ್ ದೇಶದ ಫ್ಲಾಮೆಂಕೊ ನೃತ್ಯಗಾತಿಯರು, ಥಾಯ್ಲೆಂಡಿನ ಮಹಿಳಾ ಆರ್ಕೆಸ್ಟ್ರಾ ಮತ್ತು ಶ್ರೀಲಂಕಾದ ಕಾಂಡಿ ಪೆಹಾರಾ ಬೊಂಬೆಗಳಿವೆ. ಈ ಬೊಂಬೆಗಳು ತಮ್ಮ ಗಾಜಿನ ಪೆಟ್ಟಿಗೆಯೊಳಗಿನಿಂದ ಶೃಂಗಾರದ ಸೊಗಸುಗಾರಿಕೆ, ಗರಿಗಳ ತುರಾಯಿಗಳು ಮತ್ತು ಮನೋಭಾವಗಳಿಂದ ಭೇಟಿ ಮಾಡಿದ ವೀಕ್ಷಕರನ್ನು ದಿಟ್ಟಿಸುತ್ತಿರುತ್ತವೆ.

ಈ ಸಂಗ್ರಹಾಲಯದ ಒಂದು ಭಾಗವಾಗಿ ವೇಷಭೂಷಣ ಸಹಿತವಾದ ಬೊಂಬೆಗಳನ್ನು ವಿನ್ಯಾಸಗೊಳಿಸುವ ಮತ್ತು ಉತ್ಪಾದನಾ ಕೇಂದ್ರವಿದೆ. ಈ ಉತ್ಪಾದನೆಯು ಭಾರತದ ಸಾಂಸ್ಕೃತಿಕ ಶ್ರೀಮಂತಿಕೆ ಮತ್ತು ವೈವಿಧ್ಯತೆಗಳನ್ನು ಅನಾವರಣ ಗೊಳಿಸುತ್ತದೆ. ಇವುಗಳ ವಸ್ತುಗಳಲ್ಲಿ ಭಾರತದ ವಧುಗಳು, ಭಾರತದ ಸ್ತ್ರೀಯರು, ಪುರುಷರು, ಭಾರತದ ಮತ್ತು ಬುಟಕಟ್ಟು ಸಮುದಾಯಗಳ ನೃತ್ಯಗಳ ಬೊಂಬೆಗಳಿವೆ.

ಈ ಕೇಂದ್ರದಿಂದ ತಯಾರಾದ ಬೊಂಬೆಗಳು ಅಂತರ್ರಾಷ್ಟ್ರೀಯ ಮಾನ್ಯತೆ ಪಡೆದವು. ಪೋಲ್ಯಾಂಡಿನ ಕ್ರಾಕೋವ್‌ನ ದ್ವೈವಾರ್ಷಿಕ ಅಂತರರಾಷ್ಟ್ರೀಯ ಬೊಂಬೆಗಳ ಮೇಳದಲ್ಲಿ ಬಂಗಾರದ ನವಿಲುಗರಿಗಳ ಬೊಂಬೆಯೂ ಸೇರಿದಂತೆ ಮಾನ್ಯತೆ ಲಭಿಸಿತು. ದೆಹಲಿಗೆ ಬರುವ ಮಕ್ಕಳು ಮತ್ತು ವೀಕ್ಷಕರಿಗೆ ಈ ಬೊಂಬೆಗಳ ಸಂಗ್ರಹಾಲಯವು ಕ್ರಮೇಣ ಪ್ರಮುಖ ಆಕರ್ಷಣೆಯು ಸ್ಥಳವಾಯಿತು.

**ಶಂಕರ್ಸ್ ಅಂತರ್ರಾಷ್ಟ್ರೀಯ ಮಕ್ಕಳ ಸ್ಪರ್ಧೆ:** ತಮ್ಮ ಶಂಕರ್ಸ್ ವೀಕ್ಲಿಯ ಮೂಲಕ 1949 ರಲ್ಲಿ ದೆಹಲಿಯ ಮಕ್ಕಳಿಗಾಗಿ ಚಿತ್ರ ರಚನೆ ಮತ್ತು ಬರೆವಣಿಗೆಯ ಒಂದು ಸ್ಪರ್ಧೆಯನ್ನು ಏರ್ಪಡಿಸಿದ್ದು ಒಂದು ಅಚ್ಚರಿಯನ್ನು ಉಂಟುಮಾಡಿತು. 5 ರಿಂದ 16ರ ವಯಸ್ಸಿನ ಸಾವಿರ ಮಕ್ಕಳು ಭಾಗವಹಿಸಿದ್ದರು. ಇದರ ಪರಿಣಾಮ ಶಂಕರರಿಗೆ ಮಾಧ್ಯಮದ ಶಕ್ತಿಯನ್ನು ಮನವರಿಕೆ ಮಾಡಿತ್ತು. ಮರುವರ್ಷ ಅವರು ಈ ಸ್ಪರ್ಧೆಯನ್ನು ಎಲ್ಲಾ ದೇಶಗಳ ಮಕ್ಕಳಿಗೂ ಅವಕಾಶ ಸಿಗುವಂತೆ ತೆರೆದರು. ಅಂದಿನಿಂದ ಶಂಕರ್ಸ್ ಅಂತರ್ರಾಷ್ಟ್ರೀಯ ಮಕ್ಕಳ ಸ್ಪರ್ಧೆಗಳು ಪ್ರಾರಂಭವಾದವು (Shankar's International Children's Competition-SICC). 7,000 ಪ್ರವೇಶಗಳಿಂದ 13 ದೇಶಗಳು ಭಾಗವಹಿಸಿದವು. ಅರ್ಧ ಶತಮಾನದಿಂದ ಈಚೆಗೆ ಈ ಪ್ರವೇಶಗಳು 135 ದೇಶಗಳ ಒಟ್ಟು 1,60,000 ದವರೆಗೂ ವಿಸ್ತರಿಸಿದವು. ಅಂತರ್ರಾಷ್ಟ್ರೀಯ ತೀರ್ಪುಗಾರರು ಸಂತಸ ಮತ್ತು ಬುದ್ಧಿವಂತಿಕೆಗಳಿಂದ ಅತ್ಯುತ್ತಮವಾದ 2,000 ಚಿತ್ರಗಳನ್ನು ಆರಿಸಿ, ಅವುಗಳಲ್ಲಿ 800 ಪ್ರಶಸ್ತಿಗೆ ಅರ್ಹ ತೀರ್ಪು ಕೊಟ್ಟರು. ಮಕ್ಕಳು ಭಾರತದ ರಾಷ್ಟ್ರಪತಿಗಳ ಬಂಗಾರದ ಪದಕವನ್ನು ಅತ್ಯುತ್ತಮ ಚಿತ್ರ ರಚನೆಗೆ ಪಡೆಯುತ್ತಾರೆ. ಶಂಕರ್ ಹೆಸರಿನ ಬಂಗಾರದ ಪದಕವನ್ನು ಅತ್ಯುತ್ತಮ ಬರೆವಣಿಗೆಯಲ್ಲಿ ಆಯ್ಕೆಯಾದ ಸ್ಪರ್ಧಿಗಳು ಪಡೆಯುತ್ತಾರೆ. ಅವುಗಳಲ್ಲದೆ 24 ಜವಾಹರ್‌ಲಾಲ್ ಸ್ಮಾರಕ ಬಂಗಾರದ ಪದಕಗಳು ಮತ್ತು ಹಲವು ಬೆಳ್ಳಿಯ ಪದಕಗಳು ಸಹಾ ಪ್ರಶಸ್ತಿಗಾಗಿ ಇರುತ್ತವೆ.. ಅತ್ಯುತ್ತಮ ಚಿತ್ರಗಳನ್ನು ಸಾರ್ವಜನಿಕ ವೀಕ್ಷಣೆಗೆ ಇಡುತ್ತಾರೆ ಮತ್ತು ವರ್ಣಮಯ ಉತ್ಸವವು ದೇಶದ ಛಂದೋಗೆರೆ ಧಾಟಿ ಜಗತ್ತಿನಾದ್ಯಂತ ಶಂಕರ್ಸ್ ಚಿಲ್ಡ್ರನ್ ಆರ್ಟ್ಸ್ ನಂಬರ್ ಎಂಬ ಬಹುಮಾನ ವಿಜೇತರ ವಿವರಗಳಿರುವ ವಿಶೇಷ ಸಂಚಿಕೆಯಾಗಿ ಪ್ರತಿ ವರ್ಷವೂ ಹೊರಬರುತ್ತಿದೆ.

**ಡಾ॥ ಬಿ.ಸಿ.ರಾಯ್ಸ್ ಸ್ಮಾರಕ ಮಕ್ಕಳ ವಾಚನಾಲಯ ಮತ್ತು ಗ್ರಂಥಾಲಯ:** ಮಕ್ಕಳ ಪುಸ್ತಕ ಟ್ರಸ್ಟ್‌ನ ಒಂದು ಯೋಜನೆಯಾದ ಗ್ರಂಥಾಲಯವು 1967 ರಲ್ಲಿ ಆರಂಭವಾಯಿತು. ವರ್ಷಪೂರ್ತಿ ಮಕ್ಕಳು ಪುಸ್ತಕಗಳು, ಪರಾಮರ್ಶೆ ಸಂಪುಟಗಳು ಮತ್ತು ಮಾಸಿಕಗಳ ಮೂಲಕ ಆನಂದಕ್ಕಾಗಿ ಓದುತ್ತಾರೆ. ಇದು ಮಕ್ಕಳಿಗಾಗಿಯೇ ಇರುವ 30,000 ಶೀರ್ಷಿಕೆಗಳಿಗೂ ಮೀರಿದ ಪುಸ್ತಕಗಳಿಂದ ನಾಡಿನ ಬಹು ದೊಡ್ಡ ಗ್ರಂಥಾಲಯವಾಗಿದೆ. ಚಲನಚಿತ್ರ ಪ್ರದರ್ಶನಗಳು, ಕಥೆ ಹೇಳುವುದು, ಕ್ವಿಜ್ ಕಲಾಪಗಳು, ಕಲೆ ಮತ್ತು ಕರಕುಶಲ ಕಲೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಕಂಠಪಾಠ ಸ್ಪರ್ಧೆಗಳು ಗ್ರಂಥಾಲಯವನ್ನು ಕೆಲಸ ಮತ್ತು ವಿನೋದಗಳ ಒಂದು ಚಟುವಟಿಕೆಯ ಜೇನುಗೂಡಿನಂತಿದೆ.

**ಶಂಕರ್ಸ್ ಕಲೆ ಮತ್ತು ಪುಸ್ತಕ ಪ್ರಕಾಶನ ಅಕಾಡೆಮಿ:** 1991 ರಲ್ಲಿ ಕಲೆ ಮತ್ತು ಪುಸ್ತಕ ಪ್ರಕಾಶನ ಅಕಾಡೆಮಿಯು ಶಂಕರರಿಗೆ ಶ್ರದ್ಧಾಂಜಲಿಯಾಗಿ ಅಸ್ತಿತ್ವಕ್ಕೆ ಬಂದಿತು. ಅದು ಆರ್ಟ್ಸ್, ಬುಕ್ ಇಲ್ಲಸ್ಟ್ರೇಷನ್ ಅಂಡ್ ಗ್ರಾಫಿಕ್ಸ್ ಮತ್ತು ಬುಕ್ ಪಬ್ಲಿಷಿಂಗ್ ಎಂಬ ಎರಡು ವಿಭಾಗಗಳನ್ನು ನಡೆಸುತ್ತಿದೆ. ಇದು ಭಾರತದ ಪುಸ್ತಕೋದ್ಯಮವನ್ನು ಬೆಂಬಲಿಸಲು ರೂಪುಗೊಂಡಿವೆ.

ಹೀಗೆ ಮಕ್ಕಳ ಪುಸ್ತಕ ಟ್ರಸ್ಟ್ ತನ್ನ ಬಹುದೂರದ ಪಯಣ ತನ್ನ ಚಟುವಟಿಕೆಗಳ ವೈವಿಧ್ಯತೆಗಳು, ಗುಣಮಟ್ಟ ಮತ್ತು ದೃಷ್ಟಿ ವೈಶಾಲ್ಯಗಳೆರಡರಲ್ಲಿಯೂ ಸಾಗಿಬಂದಿದೆ. ಅದು ಕೇವಲ ಪ್ರಕಾಶನ ಸಂಸ್ಥೆಯಾಗಷ್ಟೇ ಅಲ್ಲ, ಎಲ್ಲಕ್ಕಿಂತ ಹೆಚ್ಚಾಗಿ ಸಂಸ್ಥೆಗಳಾಗಿ, ಶಂಕರ್ ರೂಪಿಸಿದ ಮಕ್ಕಳ ಪುಸ್ತಕ ಧರ್ಮದತ್ತಿಯ ಶಾಖೆಗಳಾಗಿ ಒಂದೇ ಛಾವಣಿಯಡಿಯಲ್ಲಿ ಅಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಡಾ॥ ಎಸ್.ರಾಧಾಕೃಷ್ಣನ್‌ರಿಂದ 1965 ರಲ್ಲಿ ನೆಹರೂ ಹೌಸ್ ಉದ್ಘಾಟನೆಗೊಂಡಿದೆ. ಇಂಡಿಯಾ ಗೇಟ್‌ನಿಂದ ಐತಿಹಾಸಿಕ ಕೆಂಪು ಕೋಟೆಯವರೆಗೆ ಇರುವ ಬಹಾದ್ದೂರ್ ಷಾ ಜಾಫರ್ ಮಾರ್ಗದಲ್ಲಿ, ಮಕ್ಕಳ ಚಿತ್ರಗಳಿರುವ ಆಕರ್ಷಕ ಪ್ರಾಕಾರಗಳ ಒಂದು ಸಾಲು ಕೆಲವೇ ಪ್ರಮುಖ ನಿತ್ಯದ ವಾರ್ತಾಪತ್ರಿಕೆಗಳು ಮತ್ತು ಪ್ರಕಾಶನಗಳಿಗೆ ಸಂಬಂಧಿಸಿದಂತೆ ನಿಂತಿದೆ.

ಈಗ ನಿರ್ಮಾಣವಾಗುತ್ತಿರುವ ಸೆಂಟರ್ ಫಾರ್ ಚಿಲ್ಡ್ರನ್ ಶಂಕರ್ ಅವರ ಒಂದು ಅಂತಿಮ ಕನಸಾಗಿ ಸ್ಥಾಪಿತ ವಾಗಿದೆ. ಅದು ಒಮ್ಮೆ ಪೂರ್ಣಗೊಂಡ ಮೇಲೆ ಶಂಕರ್ ಅವರ ಕನಸಿನ ಭೂಮಿಯಾಗಿ ಸಾಂಕೇತಿಕವಾಗಿರುತ್ತದೆ. ಶಂಕರ್ಸ್ ಸೆಂಟರ್ ಫಾರ್ ಚಿಲ್ಡ್ರನ್ ಒಬ್ಬ ಶ್ರೇಷ್ಠ ಕಲಾವಿದನ ದೂರದರ್ಶಿತ್ವದಲ್ಲಿ ಒಂದು ಮನೆಯಾಗಿ, ಮನೆಯಿಂದ ಹೊರಗೆ ಇರುವ ಪ್ರಪಂಚದ ಮಕ್ಕಳೆಲ್ಲರ ಮನೆಯಾಗಿ, ಒಂದಾಗಿ ವಾಸಿಸುವ, ಪರಸ್ಪರ ಸಂಭಾಷಿಸುವ, ಕೌಶಲ್ಯಗಳಲ್ಲಿ ಸೃಜಿಸುವ ಮತ್ತು ಸ್ಪರ್ಧಿಸುವ ಮತ್ತು ಒಟ್ಟಾರೆ ಮನುಕುಲದ

Digitised by Bharatavani, CIIL

ಐಕ್ಯತೆಯ ಸಾಕ್ಷಿಯಾಗಿ ನಿಲ್ಲಲಿದೆ.

ಅದು ಕೈಗೊಂಡಿರುವ ಎಲ್ಲಾ ವೈವಿಧ್ಯಮಯವಾದ ಚಟುವಟಿಕೆಗಳಲ್ಲಿ ಅಡಗಿರುವ ಹಾಗೂ ಮಕ್ಕಳ ಪುಸ್ತಕ ಧರ್ಮ ದತ್ತಿಯ ಪ್ರೇರಣೆಯಲ್ಲಿ ಶಂಕರರ ಮಕ್ಕಳು ಬಹು ಉತ್ತಮವಾದುದಕ್ಕೆ ಅರ್ಹರು ಎಂಬ ನಂಬಿಕೆಯು ಪ್ರಬಲವಾಗಿತ್ತು.

**ಮೂಲ: ನಿರ್ಮಲ್ ಕಾಂತಿ ಭಟ್ಟಾಚಾರ್‌ಜಿ**
**ಅನು: ಡಾ. ರತ್ನಮ್ಮ ಕೆ.ಎಸ್.**

## ಮಕ್ಕಳ ಯೋಗಕ್ಷೇಮ ನೀತಿಗಳು ಮತ್ತು ಕಾರ್ಯಕ್ರಮಗಳು

ಮಕ್ಕಳ ಕ್ಷೇಮಾಭಿವೃದ್ಧಿಯು ಮಕ್ಕಳಿಗಾಗಿ ಇರುವ ಎಲ್ಲ ವೈವಿಧ್ಯಮಯ ಸೇವೆಗಳನ್ನು ಒಳಗೊಂಡಿದೆ. ಈ ಸೇವೆಗಳು ನಿಯಂತ್ರಣಾತ್ಮಕ, ಕಡಿಮೆ ಮಾಡುವ, ಚಿಕಿತ್ಸಾತ್ಮಕ ಮನರಂಜನಾತ್ಮಕ ಹಾಗೂ ಪುನರ್ವಸತಿ ಕಲ್ಪಿಸುವ ಸ್ವರೂಪದವುಗಳಾಗಿವೆ. ಈ ಸೇವೆಗಳು ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾಗಿ, ಅಂಗವಿಕಲತೆ ಹೊಂದಿರುವ ಮಕ್ಕಳ ವಿಶೇಷ ಅಗತ್ಯಗಳನ್ನು ನಿವಾರಿಸುವ ಉದ್ದೇಶ ಹೊಂದಿವೆ. ಕ್ರಮಾಗತ ಪಂಚವಾರ್ಷಿಕ ಯೋಜನೆಗಳಲ್ಲಿ ಮಕ್ಕಳು ನಮ್ಮ ಜನಸಂಖ್ಯೆಯಲ್ಲಿ ಬಹಳ ಸುರಕ್ಷಿತವಲ್ಲದ ವರ್ಗವೆಂದು ಪರಿಗಣಿಸಲಾಗಿದೆ. ಹೆಚ್ಚು ವಿಶೇಷವಾಗಿ ಅವುಗಳಲ್ಲಿ ಕೆಲವು ಗುಂಪುಗಳನ್ನು ಅದರಲ್ಲಿಯೂ ಕೌಟುಂಬಿಕ ಸಂಸ್ಥೆ ಮತ್ತು ಸಮಾಜಸೇವೆಗಳ ಜಾಲಗಳ ಮೂಲಕ ಸಾಮಾನ್ಯ ಮಕ್ಕಳ ಜನಸಂಖ್ಯೆಯೊಳಗೆ ಇರುವವರಿಗೆ ಯಾವುದನ್ನು ಅಳವಡಿಸಲಾಗುವುದಿಲ್ಲವೋ ಅಂತಹ ಕೆಲವು ವಿಶೇಷ ಗುಂಪುಗಳನ್ನು ಅಗತ್ಯಗಳು ಮತ್ತು ತೊಂದರೆಗಳನ್ನು ಹೊಂದಿರುವ ಗುಂಪುಗಳೆಂದು ಪರಿಗಣಿಸಲಾಗಿದೆ. ಇಂತಹ ಮಕ್ಕಳ ಆರೋಗ್ಯ ಸೇವೆಗಳು ವಾತ್ಸಲ್ಯ ವಂಚಿತ ಮತ್ತು ಅನಾನುಕೂಲತೆ ಹೊಂದಿರುವ ಮತ್ತು ತಿರಸ್ಕಾರ, ನಿಂದನೆ ಮತ್ತು ಶೋಷಣೆಗಳಿಗೆ ಒಳಗಾಗಿರುವ ಮಕ್ಕಳಿಗೆ ಅನ್ವಯಿಸುತ್ತವೆ. ಈ ಸೇವೆಗಳು ಮಕ್ಕಳ ಅವಲಂಬನೆ, ಶೋಷಣೆ ಮತ್ತು ತಿರಸ್ಕಾರಕ್ಕೆ ಒಳಗಾಗುವಂತಹ ತೊಂದರೆಗಳಿಂದ ಹೊರಬರಲು ಶಕ್ತಿ ನೀಡುತ್ತವೆ. ಈ ಸೇವೆಗಳ ಮೂಲಕ ಮನೆಯೊಳಗೆ ಮತ್ತು ಮನೆಯಿಂದ ಹೊರಗೆ ಇರುವ ಮಕ್ಕಳ ಆರೈಕೆಗೆ ಗಮನವಹಿಸಲಾಗಿದೆ.

**ಐತಿಹಾಸಿಕ ದೃಷ್ಟಿಕೋನ:** ಭಾರತೀಯರಲ್ಲಿ ಮಕ್ಕಳ ಕುರಿತಾದ ಕಾಳಜಿಯುಳ್ಳ ಅಭಿವೃದ್ಧಿಶೀಲ ಯೋಜನೆಗಳು ಅನಾದಿಕಾಲದಿಂದಲೂ ಪ್ರಚಲಿತವಾಗಿವೆ. ಮಕ್ಕಳಿಗಾಗಿ ಗಮನವಹಿಸಲು ಭಾರತವು ತನ್ನಲ್ಲಿ ಅವಿಭಕ್ತ ಕುಟುಂಬ ಹಾಗೂ ರಕ್ತಸಂಬಂಧಿಗಳು ಮತ್ತು ಇತರ ಸಾಮಾಜಿಕ ಸಂಸ್ಥೆಗಳನ್ನು ಹೊಂದಿದೆ. ಪ್ರಾಚೀನ ಹಾಗೂ ಮಧ್ಯಕಾಲೀನ ಅವಧಿಯಲ್ಲಿ ಸ್ವಯಂಪ್ರೇರಿತ ಹಾಗೂ ಸಮೂಹ ಪ್ರಯತ್ನಗಳಿಂದ ಮಕ್ಕಳ ಆರೋಗ್ಯಸೇವೆಗಳಿಗೆ ಪ್ರಮುಖ ಭದ್ರತೆಗಳನ್ನು ನೀಡಲಾಗಿತ್ತು. ಉತ್ಸಾಹೀ ಬುದ್ಧಿವಂತ ಅರಸರು ತಮ್ಮ ಆಳ್ವಿಕೆಯಲ್ಲಿ ಸೀಮಿತವಾದ ರೀತಿಯಲ್ಲಿ ಮಕ್ಕಳ ಆರೋಗ್ಯ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಿದ್ದಾರೆ. ಬ್ರಿಟಿಷರ ಆಡಳಿತದಲ್ಲಿ ರಾಜ್ಯ ಪ್ರಯತ್ನಗಳಿಗಿಂತ ಸ್ವಯಂಪ್ರೇರಿತ ಪ್ರಯತ್ನಗಳೇ ಮಕ್ಕಳ ಸೇವಾಯೋಜನೆಗಳಿಗೆ ಪ್ರಮುಖವಾಗಿ ಒದಗಿಬಂದವು.

19ನೇ ಶತಮಾನದ ಅಂತ್ಯದಲ್ಲಿ ಹಾಗೂ 30ನೇ ಶತಮಾನದ ಆರಂಭದಲ್ಲಿ ಸ್ವಾತಂತ್ರ್ಯ ಹೋರಾಟಗಳ ಜೊತೆಗೇ ಸಾಮಾಜಿಕ ಸುಧಾರಣೆಗಳು ಬಹಳ ತೀವ್ರವಾದ ಸಾಮಾಜಿಕ ಚಟುವಟಿಕೆಗಳಾಗಿದ್ದವು. ಆದಾಗ್ಯೂ ಸ್ವಾತಂತ್ರ್ಯ ಹೋರಾಟದ ಪರಿಣಾಮವಾಗಿ, ಮಕ್ಕಳ ಆರೋಗ್ಯಕ್ಕಾಗಿ ಸ್ವಯಂಪ್ರೇರಿತ ಸಂಸ್ಥೆಗಳು, ಮಹಿಳಾ ಮತ್ತು ಹಿಂದುಳಿದ ವರ್ಗಗಳು ಸ್ವಾತಂತ್ರ್ಯ ಹೋರಾಟದ ಫಲಶೃತಿಗಳೇ ಆದವು. ಈ ಅವಧಿಯು ಶಿಕ್ಷಣ ಮತ್ತು ನಿರಾಶ್ರಿತ ಮತ್ತು ಅನಾಥ ಮಕ್ಕಳಿಗೆ ತರಬೇತಿ ನೀಡಿ ಜೀವನಕ್ಕಾಗಿ ಗಳಿಸಲು ಶಕ್ತರಾಗುವಂತೆ ಅವಕಾಶ ಒದಗಿಸುವಂತಹ ಅಪ್ರೆಂಟೀಸ್ ಆ್ಯಕ್ಟ್, ರಿಫಾರ್ಮೆಟರಿ ಸ್ಕೂಲ್ಸ್ ಆಕ್ಟ್ ಮತ್ತು ಚಿಲ್ಡ್ರನ್ಸ್ ಆಕ್ಟ್‌ಗಳು ಶಾಸನಗಳಾಗಿ ಜಾರಿಗೆ ಬಂದವು. ಈ ಶಾಸನಗಳ ಪ್ರೋತ್ಸಾಹದ ಜೊತೆಗೆ ಬಹಳಷ್ಟು ಸ್ವಯಂಪ್ರೇರಿತ ಸಾಮಾಜಿಕ ಆರೋಗ್ಯ ಸಂಸ್ಥೆಗಳು ಮಕ್ಕಳಿಗಾಗಿ ವಿಶಿಷ್ಟ ಸೌಲಭ್ಯಗಳನ್ನು ಕೊಡಲು ಮುಂದಾದವು. ಈ ಸೇವೆಗಳು ಬಹುಪಾಲು ಪರಿಹಾರಾತ್ಮಕವೂ ಮತ್ತು ಗುಣಪಡಿಸುವ ಗುಣಗಳನ್ನು ಹೊಂದಿದ್ದವು. ಸ್ವಾತಂತ್ರ್ಯಪೂರ್ವದಲ್ಲಿ 500ರಷ್ಟು ಸ್ವಯಂಪ್ರೇರಿತ ಸಂಸ್ಥೆಗಳು ಮಕ್ಕಳು ಮತ್ತು ಮಹಿಳೆಯರ ಆರೋಗ್ಯ ಮತ್ತು ಆರೈಕೆಗಾಗಿ ನಿರತವಾಗಿದ್ದವೆಂದು ಹೇಳಲಾಗಿದೆ.

**ಮಗುವನ್ನು ಕುರಿತ ಸಂವಿಧಾನಾತ್ಮಕ ದೃಷ್ಟಿಕೋನ:**

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಮಕ್ಕಳ ಆರೋಗ್ಯದ ಕ್ಷೇತ್ರದಲ್ಲಿ ಒಂದು ಹೊಸ ಯುಗ ಆರಂಭವಾಯಿತು. ಈ ನಿಟ್ಟಿನಲ್ಲಿ ನಡೆದ ಪ್ರಯತ್ನಗಳು ನಮ್ಮ ಸಂವಿಧಾನದ ಬಹಳಷ್ಟು ಅವಕಾಶಗಳಿಂದ ಪ್ರೋತ್ಸಾಹಗೊಂಡು ಮಕ್ಕಳ ಶಿಕ್ಷಣ, ಅವರ ಆಸಕ್ತಿಗಳ ರಕ್ಷಣೆ ಮತ್ತು ಹಕ್ಕುಗಳ ರಕ್ಷಣೆಗಳ ಪ್ರಯತ್ನಗಳಿಗೆ ಸ್ಫೂರ್ತಿ ನೀಡಿದವು. ಭಾರತದ ಸಂವಿಧಾನವು ಭಾರತೀಯ ಮಗುವಿಗೆ ಸಂವಿಧಾನಾತ್ಮಕ ದೃಷ್ಟಿಯಿಂದ ಒಂದು ಗಟ್ಟಿಯಾದ ತಳಹದಿ ರೂಪವನ್ನು ನೀಡಲು ಒಂದು ಚೌಕಟ್ಟನ್ನು ಒದಗಿಸಿತು. ಮಕ್ಕಳ ಆರೋಗ್ಯ ಚಟುವಟಿಕೆಗಳು ರಾಷ್ಟ್ರೀಯ ಅಭಿವೃದ್ಧಿ ವ್ಯವಸ್ಥಿತ ಭಾಗವೆಂದು ಹೇಳುವ ಕಲ್ಯಾಣ ರಾಜ್ಯದ ಗುರಿಯನ್ನು ದೃಢಪಡಿಸಲಾಗಿದೆ. 24, 39 ಮ್ತು 45ನೆಯ ಪರಿಚ್ಛೇದಗಳು ಮಕ್ಕಳ ಕ್ಷೇಮಚಿಂತನೆಯನ್ನು ಒಳಗೊಂಡಿವೆ. ಈ ಪರಿಚ್ಛೇದಗಳಲ್ಲಿ ಮಕ್ಕಳು ಕಷ್ಟಕರವಾದ ಕೆಲಸಗಳನ್ನು ಮಾಡಬಾರದು ಎಂದು ಉಲ್ಲೇಖಿಸಲಾಗಿದೆ. ಎಳೆಯ ವಯಸ್ಸಿನ ಮಕ್ಕಳನ್ನು ನಿಂದಿಸಬಾರದು, ಬಾಲ್ಯ ಮತ್ತು ಯೌವ್ವನದ ಶೋಷಣೆಯಿಂದ ಮತ್ತು ನೈತಿಕ ಮತ್ತು ದೈಹಿಕ ದುರ್ವ್ಯಸನಗಳಿಂದ ರಕ್ಷಿಸಲ್ಪಡಬೇಕು ಮತ್ತು ಹದಿನಾಲ್ಕು ವರ್ಷಗಳು ಮುಗಿಯುವ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ಎಲ್ಲ ಮಕ್ಕಳಿಗೂ ಲಭಿಸಬೇಕು.

Digitised by Bharatavani, CIIL

**ಪಂಚವಾರ್ಷಿಕ ಯೋಜನೆಗಳಲ್ಲಿನ ಪ್ರಯತ್ನಗಳು:**

ಭಾರತದ ಸಂವಿಧಾನವು 1950ರಲ್ಲಿ ಜಾರಿಗೆ ಬಂದಿತು. 1951ರಲ್ಲಿ ಯೋಜನಾ ಆಯೋಗವು ನೇಮಕವಾಯಿತು. ಇವೆರಡು ಸಂಗತಿಗಳಿಂದ ಭಾರತ ಸುವ್ಯವಸ್ಥಿತ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಪಥದಲ್ಲಿ ನಡೆಯಲಾರಂಭಿಸಿತು. ಅದರ ಮುಖ್ಯ ಉದ್ದೇಶವೆಂದರೆ ಸಮಾಜವಾದ ಸಮಾಜದ ಸ್ಥಾಪನೆ. ಒಂದು ಕುಟುಂಬದಲ್ಲಿ ಮಗುವೇ ಅಮೂಲ್ಯ ಆಸ್ತಿಯಾಗಿರುವುದರಿಂದ ಈ ವ್ಯವಸ್ಥಿತ ರಾಷ್ಟ್ರೀಯ ಅಭಿವೃದ್ಧಿ ಒಂದು ಪುಟ್ಟ ಮಗುವಿನ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿತು.

ಮೊದಲನೆಯ ಪಂಚವಾರ್ಷಿಕ ಯೋಜನೆಯ ದಾಖಲೆಯಲ್ಲಿ ಉಲ್ಲೇಖಿಸಿದಂತೆ ಮಕ್ಕಳ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಅವುಗಳ ಅವಶ್ಯಕತೆಗಳಿಗೆ ಹೆಚ್ಚು ಗಮನ ಕೊಡುವುದೇ ಉದ್ದೇಶವಾಗಿದೆ. ಮೊಟ್ಟಮೊದಲನೆಯ ಪಂಚವಾರ್ಷಿಕ ಯೋಜನೆಯು ಮಕ್ಕಳ ಆರೋಗ್ಯವನ್ನು ಗಮನದಲ್ಲಿರಿಸಿಕೊಂಡು ಸಾಮಾಜಿಕ ಕಳಕಳಿ, ಆರೋಗ್ಯ ಮತ್ತು ಶೈಕ್ಷಣಿಕ ಸೇವೆಗಳ ಪ್ರಸ್ತಾವನೆಯನ್ನು ಸಲ್ಲಿಸಿತು. ಭಾರತದಲ್ಲಿ ಸಶಕ್ತ ಶಿಶು ಆರೋಗ್ಯ ಚಳುವಳಿಯನ್ನು ಬೆಳೆಸುವುದಕ್ಕೆ ಮುಖ್ಯ ಒತ್ತು ನೀಡಿತು. ಇದು ಸ್ವಯಂಪ್ರೇರಿತ ಪ್ರಯತ್ನ ಮತ್ತು ಸರ್ಕಾರಿ ಭಾಗವಹಿಸುವಿಕೆಯಾಗಿತ್ತು. ಮಕ್ಕಳ ಆರೋಗ್ಯ ಕಾರ್ಯಕರ್ತರಿಗೆ ಮಾರ್ಗದರ್ಶಿಯಾಗಿರಲು ಮತ್ತು ತಾಂತ್ರಿಕ ತರಬೇತಿ, ನೀಡುವುದಲ್ಲದೆ ಆರ್ಥಿಕ ಸಂಪನ್ಮೂಲಗಳನ್ನು ಮಗುವಿನ ಆರೋಗ್ಯ ಕುರಿತ ಯೋಜನೆಗಳಿಗೆ ಒದಗಿಸಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆ (1950ರಿಂದ 61) ಯು ಸೇವಾ ಜೀವನಮಟ್ಟವನ್ನು ಅಭಿವೃದ್ಧಿಗೊಳಿಸುವುದರಲ್ಲಿ ನಿರತ ಸ್ವಯಂಸೇವಾ ಸಂಸ್ಥೆಗಳಿಗೆ ಒತ್ತು ನೀಡುವುದರ ಬಗ್ಗೆಯೇ ಆಸಕ್ತಿ ಮುಂದುವರಿಸಿತು. ಈ ಯೋಜನಾ ಅವಧಿಯಲ್ಲಿ ಮಕ್ಕಳ ಆರೋಗ್ಯ ಸೇವಾ ಸೌಕರ್ಯಗಳನ್ನು ಸದೃಢಗಳಿಸುವಲ್ಲಿ ದೇಶ ಮುನ್ನಡೆಯಿತು.

ಮೂರನೆಯ ಪಂಚವಾರ್ಷಿಕ ಯೋಜನೆ (1961–66) ಮಕ್ಕಳ ಕಲ್ಯಾಣ ಸೇವೆಗಳನ್ನು ಅಧಿಕವಾಗಿ ವ್ಯವಸ್ಥಿತಗೊಳಿಸಲು ಸಂಯೋಜನೆ ಮತ್ತು ಸುರಕ್ಷಿತ ವಿಧಾನಗಳನ್ನು ಅನುಸರಿಸುವತ್ತ ಕೇಂದ್ರೀಕರಿಸಿತು. ಮಕ್ಕಳ ಆರೋಗ್ಯವು ಸಾಮಾಜಿಕ ಆರೋಗ್ಯ, ಶಿಕ್ಷಣ ಮತ್ತು ಆರೋಗ್ಯ ಮತ್ತು ಸಮುದಾಯ ಅಭಿವೃದ್ಧಿ ಕ್ಷೇತ್ರಗಳತ್ತ ವಿಸ್ತರಿಸಲ್ಪಟ್ಟಿತು. ಮಕ್ಕಳ ಆರೋಗ್ಯ ಸೇವೆಗಳನ್ನು ಸಂಯೋಜಿತ ರೀತಿಯಲ್ಲಿ ಉತ್ತೇಜಿಸುವ ಮೂಲಕ ಗರಿಷ್ಠ ಫಲಿತಾಂಶವನ್ನು ಸಾಧಿಸಲು ಬಹುಪಾಲು ಕೇಂದ್ರ ಮಂತ್ರಿಮಂಡಲಗಳು ಸಂಪನ್ಮೂಲಗಳನ್ನು ನೀಡಿದ್ದರಿಂದ ಮೂರನೇ ಪಂಚವಾರ್ಷಿಕ ಯೋಜನೆಯು ಒಂದು ಮೇಲಿಗಲ್ಲನ್ನು ತಲುಪಿತು. ನಾಲ್ಕನೆಯ ಯೋಜನೆಯಲ್ಲಿ (1969–74) ಅದುವರೆಗೂ ಪ್ರಾಮುಖ್ಯತೆ ಪಡೆಯದೇ ಇದ್ದ ತಿರಸ್ಕೃತ ಮತ್ತು ನಿರಾಶ್ರಿತ ಮಕ್ಕಳ ಸಮಸ್ಯೆಗಳ ಕಡೆಗೆ ಗಮನಹರಿಸಲಾಯಿತು.

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ (1974–79) ಮಕ್ಕಳ ಆರೋಗ್ಯದ ಕಡೆಯಿಂದ ಮಕ್ಕಳ ಅಭಿವೃದ್ಧಿಯೆಡೆಗೆ ಬದಲಾವಣೆ ಆಯಿತು. ಈ ಯೋಜನೆಯ ಆರಂಭದಲ್ಲಿಯೇ ಮಕ್ಕಳಿಗಾಗಿ ರಾಷ್ಟ್ರೀಯ ಕಾರ್ಯನೀತಿ (1974)ಯನ್ನು ಪ್ರಾರಂಭಿಸಲಾಯಿತು. ಇದು ಮಕ್ಕಳ 'ಪೋಷಣೆ', ಮತ್ತು 'ಕಾಳಜಿ' ಮತ್ತು ಸಮತೋಲಿತ ಬೆಳವಣಿಗೆಯತ್ತ ಸರ್ಕಾರದ ಜವಾಬ್ದಾರಿಯನ್ನು ಒತ್ತು ಹೇಳಿತು. ಈ ಯೋಜನೆಯ ಕೊನೆಯಲ್ಲಿ ಭಾರತ 1979ರಲ್ಲಿ ಅಂತಾರಾಷ್ಟ್ರೀಯ ಮಕ್ಕಳ ವರ್ಷವನ್ನು ಆಚರಿಸಿತು. ಆರನೆಯ ಪಂಚವಾರ್ಷಿಕ ಯೋಜನೆಯು (1980–85) ಐದನೆಯ ಪಂಚವಾರ್ಷಿಕ ಯೋಜನೆಯು ರೂಪಿಸಿದ್ದ ಮಾರ್ಗ ಮತ್ತು ಕಾರ್ಯಗಳನ್ನೆ ಪ್ರತಿಪಾದಿಸಿತು. ಮೊದಲೇ ಆರಂಭಿಸಿದ್ದ ಕಾರ್ಯಕ್ರಮಗಳನ್ನೆ ವಿಸ್ತರಿಸಿತಲ್ಲದೆ ಅದರ ಸಂಯೋಜನೆ ಉತ್ತೇಜನ ನೀಡಿತು. ಮತ್ತೊಂದು ಪ್ರಮುಖವಾದ ರಾಷ್ಟ್ರೀಯ ಆರೋಗ್ಯ ನೀತಿ (1983) ಈ ಅವಧಿಯಲ್ಲಿ ರೂಪುಗೊಂಡಿತು. ಏಳನೆಯ ಪಂಚವಾರ್ಷಿಕ ಯೋಜನೆಯು (1985–90) ವಿವಿಧ ಕ್ಷೇತ್ರಗಳಿಗೆ ಮಕ್ಕಳ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ವಿಸ್ತರಿಸಿ ಅಧಿಕಗೊಳಿಸಿತು. ಕೆಲವು ಹೊಸ ಶಾಸನಗಳಾದ ಬಾಲಾಪರಾಧ ನ್ಯಾಯ ಕಾಯಿದೆ, (1986), ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ (1986) ಗಳು ಜಾರಿಗೆ ಬಂದವು. ಕ್ರಮೇಣ, ರಾಷ್ಟ್ರೀಯ ಶಿಕ್ಷಣ ನೀತಿ (1986) ಮತ್ತು ರಾಷ್ಟ್ರೀಯ ಬಾಲಕಾರ್ಮಿಕ ನೀತಿಗಳು ಘೋಷಿತವಾದವು.

ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ (1982–97) ಪ್ರಮುಖವಾಗಿ ಮಾನವ ಅಭಿವೃದ್ಧಿಯನ್ನು ಸಮರ್ಥನೆ, ಸಿದ್ಧಗೊಳಿಸುವಿಕೆ ಮತ್ತು ಸಮುದಾಯ ಸಬಲೀಕರಣದ ಮೂಲಕ ಸಾಧಿಸುವುದೇ ಮುಖ್ಯ ಗುರಿಯಾಯಿತು. 1993–94ರಲ್ಲಿ ರಾಷ್ಟ್ರೀಯ ಶಿಶುನಿಧಿಯು ಸ್ಥಾಪನೆಯಾಯಿತು. ಶಿಶು ಕಲ್ಯಾಣ ಮತ್ತು ಅಭಿವೃದ್ಧಿ ಸೇವೆಗಳಿಗೆ ಶಿಶುವಿನ ಹಾಲು ಉತ್ಪನ್ನಗಳು ಹಾಲು ಕುಡಿಯುವ ಶೀಸೆಗಳು ಮತ್ತು ಶಿಶು ಆಹಾರಗಳು (ನಿಯಂತ್ರಣ) ಮತ್ತು ಉತ್ಪಾದನೆ, ಸರಬರಾಜು ಮತ್ತು ವಿತರಣೆ ಕಾನೂನು 1992 ಮತ್ತು ರಾಷ್ಟ್ರೀಯ ಪೌಷ್ಠಿಕ ಆಹಾರ ನೀತಿ (1993) ಹೊಸದಾಗಿ ಸೇರ್ಪಡೆಯಾದವು. ಕ್ರಮೇಣ ಶಿಶು ಅಭಿವೃದ್ಧಿಗಾಗಿ ಪೌಷ್ಠಿಕತೆಯ ರಾಷ್ಟ್ರೀಯ ನೀತಿಯ ಕ್ರಿಯಾಯೋಜನೆಯ ಮತ್ತೊಂದು ಪ್ರಮುಖ ಸೇರ್ಪಡೆಯಾಯಿತು. 1996ರಲ್ಲಿ ಶಿಶು ಅಭಿವೃದ್ಧಿಗೆ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆಯು ಸಂಕೀರ್ಣವಾದ ಸಂವಹನ ಕಾರ್ಯನೀತಿಯನ್ನು ಹೊರತಂದಿತು. ಒಂಬತ್ತನೆಯ ಯೋಜನೆಯು (1997–2003)ಅನನುಕೂಲಿತರನ್ನು ಒಳಗೊಂಡಂತೆ ಸಮುದಾಯವು ಅದರ ಪವಿತ್ರ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಸೇರಿದಂತೆ 'ಪ್ರತಿ ಎಳೆ'ಯ ಶಿಶು ಮತ್ತು ಅದರ ಕುಟುಂಬವನ್ನು ತಲುಪುವುದು ಎಂಬ ಸಂಗತಿಯನ್ನು ಸವಾಲಾಗಿ ಸ್ವೀಕರಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಕ್ಕಳ ಸಂವಿಧಾನಾತ್ಮಕ ಮತ್ತು ಕಾನೂನುಬದ್ಧ ಹಕ್ಕುಗಳನ್ನು ಸಂರಕ್ಷಿಸಲು ಒಂದು ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿತು. ಪಾರ್ಲಿಮೆಂಟರಿ ವಿಶೇಷ ಸಮಿತಿಯು ಅದನ್ನು

Digitised by Bharatavani, CIIL

ಅನುಮೋದಿಸಿತು ಮತ್ತು ಸರ್ಕಾರವು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ರೀತಿಯಲ್ಲಿಯೇ ರಾಷ್ಟ್ರೀಯ ಮಕ್ಕಳ ಆಯೋಗವನ್ನು ಸ್ಥಾಪಿಸಲು ಒಪ್ಪಿಗೆ ನೀಡಿತು. ಅದೂ ಅಲ್ಲದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯು ಮಕ್ಕಳ ರಾಷ್ಟ್ರೀಯ ನಡೆವಳಿಕೆಯ ಕರಡನ್ನು ಸಿದ್ಧಪಡಿಸಿತ್ತು. ಮತ್ತು ಅದೀಗ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಎಲ್ಲಾ ಕಾರ್ಯಯೋಜನೆಗಳ ಚಲಾವಣೆಯಾಗುವ ಮಕ್ಕಳ ಕ್ಷೇಮಚಿಂತನೆಯು 'ಆರೋಗ್ಯ'ದಿಂದ ಅಭಿವೃದ್ಧಿಯೆಡೆಗೆ, ಅಭಿವೃದ್ಧಿಯಿಂದ ಸಬಲೀಕರಣ ಕಡೆಯ ಪ್ರಯತ್ನಗಳಲ್ಲಿ ಆದ ಪ್ರಮುಖ ಪಥ ಬದಲಾವಣೆಯನ್ನು ನಾವು ಗಮನಿಸಬಹುದಾಗಿದೆ.

**ಮಕ್ಕಳ ಹಕ್ಕುಗಳ ಕುರಿತು ಸಂಯುಕ್ತ ರಾಷ್ಟ್ರಗಳ ಸಮಾವೇಶ:**

ಮಕ್ಕಳ ಅತ್ಯಾವಶ್ಯಕ ಅಗತ್ಯಗಳಿಗ ಅತ್ಯಧಿಕ ಆದ್ಯತೆಯನ್ನು ಸಂಪನ್ಮೂಲಗಳನ್ನು ಹಂಚುವ ಎಲ್ಲಾ ಸಮಯಗಳಲ್ಲೂ ನೀಡಬೇಕೆಂಬ ಸಾಮಾನ್ಯ ನಿಯಮವನ್ನು ಮಕ್ಕಳು ಹಕ್ಕುಗಳ ಮೇಲೆ ನಡೆದ ಸಂಯುಕ್ತ ರಾಷ್ಟ್ರಗಳ ಸಮಾವೇಶದಲ್ಲಿ "ಮಕ್ಕಳಿಗಾಗಿ ಮೊದಲ ಕರೆ" ಎಂಬ ಮೂಲತತ್ವವಾಗಿ ಮಾರ್ಗದರ್ಶನ ಅಳವಡಿಸಿಕೊಂಡಿತು. ಅದು ಮಕ್ಕಳ ಉಳಿವು, ಸಂರಕ್ಷಣೆಗೆ, ಅಭಿವೃದ್ಧಿ ಮತ್ತು ಭಾಗವಹಿಸುವಿಕೆಗಳಿಗೆ ಸಂಬಂಧಿಸಿದಂತೆ ಮಕ್ಕಳ ಹಕ್ಕುಗಳ ಕಡೆಗೆ ಗಮನ ಸೆಳೆಯಿತು. ವಿಶ್ವಸಮ್ಮೇಳನದಲ್ಲಿ ಅಳವಡಿಸಿಕೊಂಡ ಬದ್ಧತೆಗೆ ಅನುಗುಣವಾಗಿ ಭಾರತ ಸರ್ಕಾರವು ಆರೋಗ್ಯ ಪೌಷ್ಠಿಕ ಅಗತ್ಯ, ಶಿಕ್ಷಣ, ಶೌಚಾಲಯ ಮತ್ತು ಪರಿಸರ ಮತ್ತು ಮಕ್ಕಳ ಕಷ್ಟಕರ ಪರಿಸ್ಥಿತಿಗಳು ಮುಂತಾದವುಗಳನ್ನು ಆದ್ಯತಾ ವಲಯಗಳಾಗಿ ಭಾರತ ಸರ್ಕಾರವು ರೂಪಿಸಿಕೊಂಡಿತು.

**ನಿರಾಶ್ರಿತ ಮಕ್ಕಳು:** ಬಡತನ ಮತ್ತು ಅನಾರೋಗ್ಯ ಕಾರಣಗಳಿಂದ ತಮ್ಮ ಕರ್ತವ್ಯಗಳನ್ನು ಮಾಡಲಾಗದ ಪೋಷಕರ ಮಕ್ಕಳನ್ನು ನಿರಾಶ್ರಿತ ಮಕ್ಕಳು ಎಂದು ಗುರುತಿಸುವುದು ಸಾಮಾನ್ಯ ಬಳಕೆಯ ಮಾತು. ಪೋಷಕರಿಲ್ಲದ ಮತ್ತು ಯಾವುದೇ ಸಂಬಂಧಿಕರೂ ಇಲ್ಲದ ಮತ್ತು ಜೀವನಕ್ಕೆ ಯಾವುದೇ ದಾರಿಯಿಲ್ಲದ ಅಥವಾ ವೇಶ್ಯಾವೃತ್ತಿ, ಮದ್ಯಪಾನ ಅಥವಾ ಅಪರಾಧ ಮತ್ತು ಭಯಂಕರ ಭಿಕ್ಷುಕ ವೃತ್ತಿಗಳಿಗೆ ಸೇರಿದ ಪೋಷಕರ ಮಕ್ಕಳುಗಳು ನಿರಾಶ್ರಿತ ಮಕ್ಕಳೇ ಆಗಿರುತ್ತಾರೆ. ಸಾಂಸ್ಥಿಕ ಮತ್ತು ಸಾಂಸ್ಥಿಕವಲ್ಲದ ಎಂಬ ಎರಡು ವಿಸ್ತೃತ ವಿಧಗಳಾಗಿ ನಿರಾಶ್ರಿತರ ಮತ್ತು ಅನಾಥರ ಸೇವೆಗಳನ್ನು ವಿಭಜಿಸಬಹುದು.

**ಸಾಂಸ್ಥಿಕ ಸೇವೆಗಳು:** ನಿರಾಶ್ರಿತ ಮಕ್ಕಳಿಗೆ 'ಮಕ್ಕಳ ಮನೆಗಳೆಂದೇ ಪ್ರಸಿದ್ಧಿಯಾಗರುವ ಅನಾಥಾಲಯ ಅಥವಾ ಅನಾಥಾಶ್ರಮದ ಆಸರೆ ದೊರಕುವಂತೆ ಮಾಡುವುದು ಸಾಂಸ್ಥಿಕ ಸೇವೆಗಳ ಸಾಮಾನ್ಯ ರೀತಿ. ಅವುಗಳಲ್ಲಿ ಬಹಳಷ್ಟು ಭಿನ್ನತೆಗಳಿವೆ. ಈ ಭಿನ್ನತೆಗಳೆಂದರೆ ಅವುಗಳ ಗಾತ್ರ, ಮತ್ತು ರಚನೆ ಮತ್ತು ಅವುಗಳು ಸಲ್ಲಿಸುವ ಸೇವೆಯ ಗುಣಮಟ್ಟಗಳು, ಅವುಗಳಲ್ಲಿ ಬಹುತೇಕ ಅನಾಥಾಲಯಗಳು ಮೇಲ್ವಿಚಾರಣೆಗೆ ಗಮನಹರಿಸುತ್ತವೆ. ಲಭ್ಯವಿರುವ ಮಾಹಿತಿಗಳಿಂದ ಭಾರತದಲ್ಲಿ 100 ಅನಾಥಾಲಯಗಳು 1,40,000 ನಿರಾಶ್ರಿತ ಮಕ್ಕಳಿಗೆ ಆಶ್ರಯ ನೀಡಿವೆ ಎಂದು ತಿಳಿದುಬಂದಿದೆ. ಈ ಸಂಬಂಧವಾಗಿ ಅನಾಥಾಲಯಗಳು ಮತ್ತಿತರ ಧರ್ಮಛತ್ರಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ ಕಾಯಿದೆ 1960) ಕಾಯಿದೆ ಇಂತಹ ಮಕ್ಕಳಿಗೆ ಕನಿಷ್ಠ ಶಿಕ್ಷಣ ಹಾಗೂ ತರಬೇತಿ ದೊರಕಬೇಕೆಂದು ಒತ್ತು ನೀಡಿದೆ. ಸಮಾಜ ಕಲ್ಯಾಣ ಸಚಿವಾಲಯವು 1974–75ರಲ್ಲಿ ಆರೈಕೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಯೋಜನೆಯೊಂದನ್ನು ಆರಂಭಿಸಿತು. ಇದು 1992ರಲ್ಲಿ ಸ್ವಲ್ಪ ನವೀಕರಣಗೊಂಡು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಳಿತ ಪ್ರದೇಶಗಳಿಗೆ ವರ್ಗಾಯಿಸಲ್ಪಟ್ಟಿತು. ಸ್ವಯಂಪ್ರೇರಿತ ಸಂಸ್ಥೆಗಳು ಈ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರಗಳು ಮತ್ತು ಸಾಂಸ್ಥಿಕ ಮತ್ತು ಸಾಂಸ್ಥಿಕವಲ್ಲದ ಸೇವೆಗಳ ಕೊಡುಗೆಗೆ ಕೈ ಜೋಡಿಸಿವೆ. ನಿರಾಶ್ರಿತರ ಮಕ್ಕಳಿಗೂ ಸಾಮಾನ್ಯ ಮಕ್ಕಳಿಗೆ ಕೊಡುವಂತೆಯೇ ಆಹಾರ ಆಶ್ರಯ, ಶಿಕ್ಷಣ, ಆರೋಗ್ಯ ಸೌಕರ್ಯ ಮತ್ತು ತರಬೇತಿಯನ್ನು ಕೊಡುವುದು ಈ ಯೋಜನೆಯ ಮುಖ್ಯ ಉದ್ದೇಶ. 1990–91ರ ಸುಮಾರಿಗೆ ಇಡೀ ದೇಶದಲ್ಲಿ 970 ಸ್ವಯಂಸೇವಾ ಸಂಸ್ಥೆಗಳಿದ್ದವು. ಕುಟೀರವೊಂದರಲ್ಲಿ ಒಬ್ಬ ತಾಯಿಯ ಕೆಳಗೆ ಗರಿಷ್ಠ ಆರರಿಂದ ಎಂಟು ತಿಂಗಳು ವಾಸ ಮತ್ತು ಪಾಲನೆಯ ಮಕ್ಕಳಿಗೆ ಕುಟುಂಬವೊಂದರಲ್ಲಿ ಬೆಳೆದ ವಾತಾವರಣವನ್ನು ನೀಡುವಂತಹ ಆರೈಕೆಯನ್ನು ಎಸ್‌ಓಎಸ್ ವಿಧದ ಆರೈಕೆಯನ್ನು ಒದಗಿಸುತ್ತದೆ. ಅಲ್ಲಿ ಮಕ್ಕಳಿಗೆ ವೈಯಕ್ತಿಕ ಗಮನ ಮತ್ತು ಪಾಲನೆಗೆ ಅವಕಾಶವಿರುತ್ತದೆ. ಭಾರತದಲ್ಲಿ 1964ರಲ್ಲಿ ಎಸ್‌ಓಎಸ್ ಮಕ್ಕಳ ಗ್ರಾಮಗಳು ಪ್ರಾರಂಭವಾಗಿವೆ. ಅಲ್ಲದೆ ಸ್ವಾಭಾವಿಕ ಮತ್ತು ಮಾನವ ನಿರ್ಮಿತ ಅವಘಡಗಳಿಂದ ನೊಂದ ಮಕ್ಕಳಿಗಾಗಿ 32 ಎಸ್‌ಓಎಸ್ ಮಕ್ಕಳ ಗ್ರಾಮಗಳು 122 ಸಂಬಂಧಪಟ್ಟ ಕ್ರಿಯಾಯೋಜನೆಗಳ ಮೂಲಕ 15,000 ಮಕ್ಕಳಿಗೆ ಸೇವೆಯನ್ನು ದೇಶಾದ್ಯಂತ ಒದಗಿಸಿಕೊಟ್ಟಿದೆ.

ಸಾಂಸ್ಥಿಕ ಮಕ್ಕಳ ಸೇವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು ತರಬೇತಿ ಹೊಂದಿದ ಸಿಬ್ಬಂದಿಗಳ ಅವಶ್ಯಕತೆಯನ್ನು ಪೂರೈಸಲು ಸಾರ್ವಜನಿಕ ಸಹಕಾರ ಮತ್ತು ಶಿಶುವಿಕಾಸ ರಾಷ್ಟ್ರೀಯ ಸಂಸ್ಥೆ NIPCCD ಯು ಮೂರು ತರಬೇತಿ ಕಾರ್ಯಕ್ರಮಗಳಿಗೆ 1984ರಿಂದ ಉತ್ತೇಜನ ನೀಡುತ್ತಿದೆ. 1988ರ ಡಿಸೆಂಬರ್ ಅಂತ್ಯದ ವೇಳೆಗೆ ಮಕ್ಕಳ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ 3960 ಕಾರ್ಯನಿವಾಹಕರನ್ನು ಮನೆಯ ತಾಯಂದಿರು/ತಂದೆಯರು (1,794), ಸೂಪರ್‌ವೈಸರ್‌ಗಳು (1506) ಮತ್ತು ಸರ್ಕಾರಿ ಅಧಿಕಾರಿಗಳು ಮಂಡಲ ಸದಸ್ಯರು (613), ಸೇರಿದಂತೆ ತರಬೇತಿ ನೀಡಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಯುನಿಸೆಫ್ ದಿನ ಸಹಾಯ ಒದಗಿಸಿದೆ.

**ಸಾಂಸ್ಥಿಕವಲ್ಲದ ಸೇವೆಗಳು:** ಸಾಂಸ್ಥಿಕ ಸೇವೆಗಳು ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಾಕಷ್ಟು ಪರಿಣಾಮಕಾರಿಯಾಗಿಲ್ಲ ಎಂಬುದು ಕಂಡುಬಂದಿದೆ. ಒಂದು ಸಂಸ್ಥೆಯು ಹೆಚ್ಚೆಂದರೆ ಆಶ್ರಯ ನೀತಿ ಪಾಲಕರ ಆರೈಕೆ ಮಾಡಬಹುದಷ್ಟೆ. ಆದ್ದರಿಂದ ಸಾಂಸ್ಥೀಕರಣವನ್ನು ಕೊನೆಯ ಅಸ್ತ್ರವೆಂಬಂತೆ ಪರಿಗಣಿಸಬಹುದು. ಈ ಸೇವೆಗಳು ತಾವು ಮಾಡುವ ವೆಚ್ಚಕ್ಕೆ ಅನುಗುಣವಾದ ಪರಿಣಾಮ

Digitised by Bharatavani, CIIL

ಉಂಟುಮಾಡಲಾರವು. ಆದ್ದರಿಂದ, ತಡವಾಗಿಯಾದರೂ, ಇತ್ತೀಚೆಗೆ ಕಲ್ಯಾಣ ಯೋಜನಾಕಾರರು ಸಾಂಸ್ಥಿಕವಲ್ಲದ ಸೇವಾ ಕಾರ್ಯಕ್ರಮಗಳಿಗೂ ಹೆಚ್ಚು ಒತ್ತನ್ನು ನೀಡಲಾರಂಭಿಸಿದ್ದಾರೆ. ಈ ಕಾರ್ಯಕ್ರಮಗಳು ದತ್ತು ಸ್ವೀಕಾರ, ಸಾಕು ಮಕ್ಕಳ ಆರೈಕೆ ಮತ್ತು ಪ್ರಾಯೋಜಕತ್ವದ ರೂಪದಲ್ಲಿ ನಡೆಯುತ್ತವೆ.

**ದತ್ತು ಸ್ವೀಕಾರ:** ನಿರಾಶ್ರಿತ ಪೋಷಕರಿಂದ ತ್ಯಜಿಸಲ್ಪಟ್ಟ ಮತ್ತು ಅನಾಥ ಮಗುವಿನ ದತ್ತು ಸ್ವೀಕಾರವು ಕೌಟುಂಬಿಕ ವಲಯದಲ್ಲಿ ಪೋಷಕರ ಪ್ರೀತಿ, ಆರೈಕೆ ಮತ್ತು ರಕ್ಷಣೆಗಳನ್ನುಳ್ಳ ಪುನರ್ವಸತಿಯನ್ನು ನೀಡುವ ಒಂದು ಆದರ್ಶ ಮಾರ್ಗವಾಗಿದೆ. ಭಾರತೀಯ ಸಂದರ್ಭಗಳಲ್ಲಿ ಏಕರೂಪದ ಕಾನೂನು ಇಲ್ಲದಿರುವ ಕಾರಣ ದತ್ತು ಸ್ವೀಕಾರವು ಒಂದು ಮಗುವಿಗೆ ಸ್ಥಾನ ಕಲ್ಪಿಸುವ ಸೇವೆಯಾಗಿ ಇನ್ನೂ ಬೆಳೆದಿಲ್ಲ. ಪ್ರಸ್ತುತದಲ್ಲಿ 1956ರ ಹಿಂದೂ ದತ್ತು ಸ್ವೀಕಾರ ಮತ್ತು ಜೀವನಾಂಶ ಕಾಯ್ದೆಯ ಅಡಿಯಲ್ಲಿ ಒಬ್ಬ ಹಿಂದೂ ಒಂದು ಮಗುವನ್ನು ದತ್ತು ತೆಗೆದುಕೊಳ್ಳಬಹುದಾಗಿದೆ. 1890ರ ಪೋಷಕರು ಮತ್ತು ಪಾಲಕರ ಸುಪರ್ದಿನ ಕಾಯ್ದೆಯಡಿಯಲ್ಲಿ ಕ್ರಿಶ್ಚಿಯನ್ನರು, ಮುಸ್ಲಿಮರು ಮತ್ತು ಇತರ ಧರ್ಮಗಳ ಗುಂಪಿನ ಸದಸ್ಯರುಗಳು ಪೋಷಕರಾಗಬಹುದು. ಮಕ್ಕಳನ್ನು ದತ್ತು ತೆಗೆದುಕೊಳ್ಳಬಹುದು. ಆದಾಗ್ಯೂ ಭಾರತದಲ್ಲಿ ನಿರಾಶ್ರಿತ ಮಗುವು ದತ್ತು ಸ್ವೀಕಾರಶೀಲ ಕುಟುಂಬಗಳಲ್ಲಿ ತನ್ನ ಪಾಲನೆಯ ಅವಕಾಶವನ್ನು ಹೊಂದುವಂತೆ, ದತ್ತು ಸ್ವೀಕಾರವು ಏಕಪ್ರಕಾರದ ಕಾಯ್ದೆಯಾಗುವಂತೆ ಶಾಸನ ಮಾಡಬೇಕಾದ ತ್ವರಿತ ಅವಶ್ಯಕತೆಯಿದೆ.

ಕೇಂದ್ರ ದತ್ತು ಸ್ವೀಕಾರ ಸಂಪನ್ಮೂಲ ಏಜನ್ಸಿಯನ್ನು (Cenral Adoption Resource Agencies CARA) 1990ರಲ್ಲಿ ಸ್ಥಾಪಿಸಲಾಗಿದ್ದು, ಅದು ಸುಪ್ರೀಂಕೋರ್ಟಿನ ನಿರ್ದೇಶನದಂತೆ ಭಾರತದಲ್ಲಿ ದತ್ತು ಸ್ವೀಕಾರವನ್ನು ತ್ವರಿತಗೊಳಿಸಲು ಅದನ್ನು ನಿಯಂತ್ರಿಸುವ ಮತ್ತು ಮುಂದುವರೆಸುವ ಕುರಿತು ಸವಿವರವಾದ ರೂಪುರೇಷೆಗಳ ಚೌಕಟ್ಟನ್ನು ಒದಗಿಸುತ್ತದೆ. ಈ ಏಜೆನ್ಸಿಯು ಈಗ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ (ಹಿಂದೆ ಕುಟುಂಬ ಕಲ್ಯಾಣ ಸಚಿವಾಲಯ) ನಿಧಿಯಿಂದ ನಡೆಸಲ್ಪಡುವ ಒಂದು ಸ್ವಾಯತ್ತ ಘಟಕವಾಗಿ ಕಾರ್ಯನಿರ್ವಹಿಸುತ್ತಿದೆ. ವಿದೇಶದ ದತ್ತು ಸ್ವೀಕಾರ ಕಾರ್ಯದಲ್ಲಿ ತೊಡಗಿ ಪ್ರಾಯೋಜಿಸಲ್ಪಟ್ಟಿರುವ ಭಾರತದ ಮತ್ತು ವಿದೇಶಿ ಸಂಸ್ಥೆಗಳಿಗೂ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ಅನುದಾನ ಹಾಗೂ ಮಾನ್ಯತೆ ದೊರೆಯುತ್ತಿವೆ. ದೇಶದೊಳಗಿನ ಮತ್ತು ಅಂತರ್ದೇಶಿಯವಾದ ದತ್ತು ಸ್ವೀಕಾರಗಳಿಗೆ ದೇಶದಲ್ಲಿ ಮತ್ತು ವಿದೇಶಗಳಲ್ಲಿ ಅನೇಕ ಸಂಸ್ಥೆಗಳು ಪ್ರಾಯೋಜಿಸುವ ಮೂಲಕ ಮಾನ್ಯತೆ ನೀಡುತ್ತಿವೆ. ಕಳೆದ 5 ವರ್ಷಗಳಲ್ಲಿ ದೇಶದಲ್ಲಿ ಒಟ್ಟು 7681 ಮತ್ತು ದೇಶಗಳ ನಡುವೆ 5,951 ರಷ್ಟು ದತ್ತು ಸ್ವೀಕಾರವು ನಡೆದಿದೆಯೆಂದು CARA ವರದಿಯು ಉಲ್ಲೇಖಿಸಿದೆ.

ಭಾರತೀಯ ಮಕ್ಕಳು ದೇಶದೊಳಗಿನ ದತ್ತು ಸ್ವೀಕಾರಕ್ಕಾಗಿ ಒಂದು ಶಿಶು ಗೃಹ ಯೋಜನೆ (Shisu Griha Scheme SGS) ಎಂಬ ಅನುದಾನಿತ ನಿಧಿಯನ್ನು ಏರ್ಪಡಿಸಿ ಶಿಶುಗೃಹಗಳಿಗೆ ಉತ್ತೇಜನ ನೀಡುತ್ತಿದೆ. SGS ಗಳನ್ನು ಪುನರ್‌ನವೀಕರಿಸಿ ಶಿಶುಗಳಿಗೆ ಉತ್ತಮ ಸೇವಾ ಸೌಕರ್ಯಗಳನ್ನು ಏರ್ಪಡಿಸಲು ಅನುದಾನ ನಿಧಿ ಮೊತ್ತದ ಪುನರ್ ಪರಿಶೀಲಿಸಿ ಗರಿಷ್ಠ ಮಿತಿಯನ್ನು ಆರು ಲಕ್ಷ ರೂ.ಗಳಿಗೆ ಏರಿಸಿದೆ. ಸ್ವಯಂಸೇವಾ ಸಂಯೋಜಕ ಏಜೆನ್ಸಿಗಳಿಗೆ ಸಂಬಂಧಿಸಿದಂತೆ ಯಾವುದೇ ರಚನಾತ್ಮಕ ವ್ಯವಸ್ಥೆಗಳಿಲ್ಲ. ಮುಖ್ಯ ಸಚಿವಾಲಯದಿಂದ ಸಾಮಾನ್ಯ ಅನುದಾನದ ನಿಧಿಯಿಂದ ಸ್ವಯಂಪ್ರೇರಿತ ಸಂಯೋಜಕ ಏಜೆನ್ಸಿಗಳಿಗೆ 50 ಲಕ್ಷ ರೂ. ಗಳನ್ನು ನಿಗದಿಪಡಿಸಿ ಭರಿಸಲಾಗುತ್ತಿದೆ. ಕಾಲಕಾಲಕ್ಕೆ ಅನುದಾನ ಸಹಾಯವನ್ನು ಪುನರ್ ನವೀಕರಿಸಲಾಗುತ್ತಿದೆ.

**ಸಾಕುಮಕ್ಕಳ ಪಾಲನೆ:** ದತ್ತು ಸ್ವೀಕಾರ ನೀಡಲಿರುವ ಅಥವಾ ಕುಟುಂಬದ ಜೈವಿಕತೆಯನ್ನು ಶಾಶ್ವತವಾಗಿ ಪುನರ್‌ರೂಪಿಸಲು, ಸಾಕುಮಕ್ಕಳ ಪಾಲನೆಯು ಒಂದು ಯೋಜಿತ ಖಾಯಂ ಅಲ್ಲದ ಸೇವೆಯ ಸೇತುವಾಗಿದೆ. ತ್ಯಜಿಸಲ್ಪಟ್ಟ ಶಿಶುಗಳ ಅಥವಾ ಎಳೆಯ ಶಿಶುಗಳು, ಕುಟುಂಬವಿಲ್ಲದ ಮಕ್ಕಳು, ಒಡೆದ ಕುಟುಂಬಗಳ ಅಥವಾ ತಂದೆತಾಯಿಗಳು ಮೃತರಾಗಿರುವ ಮತ್ತು ವಿಕಲಾಂಗ, ರೋಗಗ್ರಸ್ತ ಅಥವಾ ಭಾವನಾತ್ಮಕವಾಗಿ ತಮ್ಮ ಕುಟುಂಬಗಳಿಗೆ ಹೊಂದಾಣಿಕೆಯಿಲ್ಲದ ಮಕ್ಕಳು ಸಾಕು ಪಾಲಕರ ಆರೈಕೆಗಾಗಿ ಅಲ್ಪಾವಧಿಗೆ ಬಂದಿರುತ್ತಾರೆ.

**ಪ್ರಾಯೋಜಕತ್ವ:** ತಮ್ಮ ಸ್ವಾಭಾವಿಕ/ಮೂಲ ಕುಟುಂಬಗಳಿಂದ ಬೇರ್ಪಡಿಸದ ಅವಶ್ಯಕತೆಯಿರುವ ಮಕ್ಕಳಿಗೆ ಆರ್ಥಿಕ ನೆರವು ನೀಡುವ ಒಂದು ಅತ್ಯಾವಶ್ಯ ಯೋಜನೆಯೇ ಪ್ರಾಯೋಕತ್ವ. ಇದೊಂದು ಅವಶ್ಯಕತೆಯಿರುವ ಮಗುವಿಗೆ ಒಂದು ಏಜೆನ್ಸಿಯ ವ್ಯವಸ್ಥಿತ ಮತ್ತು ಸಂಯೋಜಿತ ಪ್ರಯತ್ನ. ಕ್ರಿಶ್ಚಿಯನ್ ಮಕ್ಕಳ ನಿಧಿ (Christian Children Fund CCF) ಸಂಕಟದಲ್ಲಿ ಕ್ರಿಯೆ (Action in Distress) ಮತ್ತು ಸಾಕು ಮಕ್ಕಳ ಅಂತಾರಾಷ್ಟ್ರೀಯ ಪಾಲಕರ ಯೋಜನೆಯ (Foster Parents Plan International) ಕ್ರಿಯೆಯಲ್ಲಿ ದೇಶದಲ್ಲಿ ಪ್ರಾಯೋಜಕತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

**ಬಾಲಾಪರಾಧಿಗಳು:** ಬಾಲಾಪರಾಧವೆಂದರೆ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಮಕ್ಕಳು ಕಾನೂನು ತೊಡಕಿಗೆ ಸಿಲುಕುವ ಪ್ರಕ್ರಿಯೆ, ಹಿಂದೆ ಮಕ್ಕಳ ಕಾಯಿದೆಯ ಮೂಲಕ ಹಾಗೂ ರಾಜ್ಯ ಸರ್ಕಾರಗಳ ಮಟ್ಟದಲ್ಲಿ ಇಂತಹ ಮಕ್ಕಳನ್ನು ನೋಡಿಕೊಳ್ಳಲಾಗುತ್ತಿತ್ತು. 1986ರ ಅಪ್ರಾಪ್ತ ವಯಸ್ಕ ಮಕ್ಕಳ ಕಾಯ್ದೆ ವಿಶೇಷವಾಗಿ ಭಾರತದ ಅಪ್ರಾಪ್ತ ವಯಸ್ಕ ಮಕ್ಕಳ ಕಾನೂನು ವ್ಯವಸ್ಥೆಯ ಜೊತೆಗೆ ಸಂಬಂಧಿಸಿದೆ. ಇದು ತಿರಸ್ಕೃತ ಮತ್ತು ಅಪರಾಧಿ ಮಕ್ಕಳ ಪಾಲನೆ, ರಕ್ಷಣೆ, ಬೆಳವಣಿಗೆ ಮತ್ತು ಪುನರ್ವಸತಿಗಳಿಗಾಗಿ ಸಂಕೀರ್ಣ ಯೋಜನೆಗಳನ್ನು ಒದಗಿಸಿದೆ. ಪ್ರಸ್ತುತದಲ್ಲಿ ಇರುವ ಸೇವೆಗಳಿಂದ ಗುಣಾತ್ಮಕ ಅಭಿವೃದ್ಧಿಯು ನಿಧಾನಗತಿಯಲ್ಲಿದ್ದರೂ ಕಾಯ್ದೆಯ ಸೌಲಭ್ಯಗಳ ಜಾರಿಯಲ್ಲಿ ಪ್ರಗತಿ ಉಂಟಾಗಿದೆ. 1986–87ರಲ್ಲಿ ಕುಟುಂಬ ಕಲ್ಯಾಣ ಇಲಾಖೆಯು ರೂಪಿಸಿದ ಪರಿಸರಕ್ಕೆ

Digitised by Bharatavani, CIIL

ಹೊಂದಿಕೊಳ್ಳುವ ಬಾಲಾಪರಾಧ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆಯಲ್ಲಿ ಇರುವ ಸೌಲಭ್ಯಗಳನ್ನು ಉನ್ನತಗೊಳಿಸಿ, ಬಲಪಡಿಸುವ ಮತ್ತು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ಆರ್ಥಿಕ ಬೆಂಬಲವನ್ನು ಒದಗಿಸಲು ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ಸರ್ಕಾರ ಮತ್ತು ಸರ್ಕಾರೇತರ ಕ್ಷೇತ್ರಗಳಲ್ಲಿ ಇರುವ ಮೂಲಭೂತ ಅನುಕೂಲಗಳನ್ನು ಉತ್ತಮಪಡಿಸುವುದಕ್ಕೆ ಆರ್ಥಿಕ ನೆರವು ದೊರೆಯುತ್ತದೆ.

ಬಾಲಾಪರಾಧವನ್ನು ತಡೆಗಟ್ಟಲು ಮೇಲಿನ ನಿವಾರಣೋಪಾಯಗಳೇ ಅಲ್ಲದೆ ಇನ್ನೂ ಹಲವು ನಿವಾರಣೋಪಾಯಗಳನ್ನು ಸಮುದಾಯ ಮಟ್ಟದಲ್ಲಿ ತೆಗೆದುಕೊಳ್ಳಲಾಗಿದೆ. ಪಟ್ಟಣಗಳಲ್ಲಿ ಬಾಲಾಪರಾಧ ಮಾಗದರ್ಶಿ ಬ್ಯೂರೋಗಳನ್ನು ಸ್ಥಾಪಿಸುವುದೇ ಮುಂತಾದ ಹಲವು ನಿವಾರಣೋಪಾಯಗಳನ್ನು ಒಳಗೊಳ್ಳುತ್ತದೆ. ಸಮುದಾಯ ಮಟ್ಟದಲ್ಲಿ ಬಹುಮುಖ್ಯ ಪಾತ್ರವಹಿಸಲು ಈ ಸೇವೆಗಳಿಗೆ ಅಪರಾಧ ನಿವಾರಣೆ ಸಹಾಯಕ ಪೊಲೀಸ್ ಘಟಕಗಳು, ಸಂಪರ್ಕ ಕ್ಲಬ್‌ಗಳು ಮತ್ತು ಸಮುದಾಯಗಳು ಮತ್ತು ಕೌಟುಂಬಕ ನೌಕಾ ಕೇಂದ್ರಗಳ ಸ್ಥಾಪನೆಯನ್ನು ಈ ಪರಿಹಾರವು ಒಳಗೊಂಡಿದೆ. ಈ ಸೇವೆಗಳನ್ನು ಒದಗಿಸುವಲ್ಲಿ ಪೊಲೀಸರು ಪ್ರಮುಖ ಪಾತ್ರವನ್ನು ವಹಿಸಬಹುದಾಗಿದೆ.

**ಬೀದಿ ಮಕ್ಕಳು:** ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಸಚಿವಾಲಯವು ಬೀದಿ ಬದಿಯ ಮಕ್ಕಳಿಗಾಗಿ ಸಮಗ್ರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೀದಿಗಳಲ್ಲಿನ ಅವರ ಜೀವನವನ್ನು ಹಿಂದೆಗೆದುಕೊಳ್ಳುವಂತೆ ಮಾಡಿ ಮಕ್ಕಳ ನಿರಾಶ್ರಿತತೆಯನ್ನು ತಡೆಗಟ್ಟುತ್ತದೆ. ಈ ಯೋಜನೆಯ ವಸ್ತುನಿಷ್ಠ ಉದ್ದೇಶ. ಬೀದಿ ಮಕ್ಕಳಿಗೆ ರಕ್ಷಣೆ, ಪೌಷ್ಠಿಕ ಆಹಾರ, ಆರೋಗ್ಯ ಪಾಲನೆ, ಶಿಕ್ಷಣ ಮತ್ತು ಮನರಂಜನೆ ಸೌಲಭ್ಯಗಳನ್ನು ಒದಗಿಸಿ, ನಿಂದನೆ ಶೋಷಣೆಗಳ ವಿರುದ್ಧ ಅವರನ್ನು ರಕ್ಷಿಸಿ ನೋಡಿಕೊಳ್ಳುವುದು, ಬೀದಿ ಮಕ್ಕಳ ರಕ್ಷಣೆಯನ್ನು ಉತ್ತೇಜಿಸುವ ಸಲುವಾಗಿ ಸಚಿವಾಲಯವು ಸ್ವಯಂಸೇವಾ ಸಂಸ್ಥೆಗಳು, ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳು, ಸ್ಥಳೀಯ ಅಂಗಸಂಸ್ಥೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಆರ್ಥಿಕ ನೆರವನ್ನು ಒದಗಿಸುತ್ತಿದೆ.

ಸಚಿವಾಲಯವು ಬೀದಿ ಬದಿಯ ಮಕ್ಕಳ ಕಾರ್ಯಕ್ರಮವನ್ನಾಗಿ ಒಂದು ಶಿಶು ಸಹಾಯವಾಣಿ ಸೇವೆಯನ್ನು ಆರಂಭಿಸಿದೆ. ಈ ಶಿಶುಸಹಾಯವಾಣಿ ಸೇವೆಯು 24 ಗಂಟೆಗಳ ಉಚಿತ ದೂರವಾಣಿ ಸೌಲಭ್ಯ. ಕಷ್ಟದಲ್ಲಿರುವ ಮಕ್ಕಳಿಗೆ ಅಂತಹ ಮಗುವಿನ ಪರವಾಗಿ ಒಬ್ಬ ವಯಸ್ಕರಿಗೆ 1098 ಸಂಖ್ಯೆಗೆ ಡಯಲ್ ಮಾಡುವುದರಿಂದ ಈ ಸೇವೆ ಲಭಿಸುತ್ತದೆ. ಈ ಸೇವೆಯನ್ನು ಮೊದಲು ಮುಂಬಯಿಯಲ್ಲಿ ಆರಂಭಿಸಲಾಯಿತು. ಈಗ ಅದು ಇತರ 9 ನಗರಗಳಲ್ಲಿ ಲಭ್ಯವಿದೆ. ಚೆನ್ನೈ, ನಾಗಪುರ, ಜೈಪುರ, ಭೂಪಾಲ್, ಪಾಟ್ನಾ, ದೆಹಲಿ, ಕಲ್ಕತ್ತ, ಕೊಯಮತ್ತೂರು, ಹೈದರಾಬಾದ್ ಆ ಪಟ್ಟಣಗಳು. ಇಂತಹ ಸಹಾಯವಾಣಿಯ ಮುಖ್ಯ ಉದ್ದೇಶವೆಂದರೆ ಕಷ್ಟದಲ್ಲಿರುವ ಮಕ್ಕಳಿಗೆ ತಕ್ಷಣ ಸ್ಪಂದಿಸುವುದು ಮತ್ತು ಅವರನ್ನು ಸಂಬಂಧಪಟ್ಟ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಿಗೆ ಪರಿಚಯಗೊಳಿಸುವುದು; ಮತ್ತು ಪೊಲೀಸ್, ಆರೋಗ್ಯ ಕೇಂದ್ರಗಳು ಮತ್ತು ಮಹಾನಗರ ಪಾಲಿಕೆಗಳು, ರೈಲ್ವೆ ಮುಂತಾದ ಏಜೆನ್ಸಿಗಳನ್ನು ಇದಕ್ಕೆ ಸ್ಪಂದಿಸುವಂತೆ ಮಾಡುವುದು, ಇಂತಹ ಸೌಲಭ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪಡೆಯುವ ದೂರವಾಣಿ ಸಂಖ್ಯೆಯೆಂದರೆ 1098. ಇದು ಶುಲ್ಕರಹಿತ ದೂರವಾಣಿ ಸೌಲಭ್ಯ.

**ಅಸಮರ್ಥತೆಯುಳ್ಳ ಮಕ್ಕಳು:** ಸಂಯುಕ್ತ ರಾಷ್ಟ್ರಗಳು ವ್ಯಾಖ್ಯಾನಗೊಳಿಸಿರುವಂತೆ ಒಂದು ಅಸಮರ್ಥತೆಯುಳ್ಳ ಮಗು ಎಂದರೆ ತನ್ನ ಕೆಲಸಗಳನ್ನು ಸಂಪೂರ್ಣವಾಗಿಯೋ ಅಥವಾ ಸ್ವಲ್ಪ ಮಟ್ಟಿಗೋ ತಾನೇ ಮಾಡಿಕೊಳ್ಳಲು ಅಶಕ್ತವಾಗಿರುವಂಥದ್ದು. ಒಬ್ಬ ಸಾಮಾನ್ಯ ಮನುಷ್ಯನಂತೆ ಸಾಮಾಜಿಕ ಜೀವನದಲ್ಲಿ ಯಾವದೋ ಒಂದು ಕೊರತೆಯ ಕಾರಣವಾಗಿ ದೈಹಿಕವಾಗಿ ಕುರುಡು ಅಥವಾ ಕಿವುಡಾಗಿಯೋ ಅಥವಾ ದೈಹಿಕ ನ್ಯೂನತೆಗೆ ಒಳಗಾದವರು ಬುದ್ಧಿಮಾಂದ್ಯರಾದವರು, ಬಹಳ ನಿಧಾನವಾಗಿ ಗ್ರಹಿಸುವಂಥಹವರು ಅಸಮರ್ಥತೆಯುಳ್ಳ ಮಕ್ಕಳು.

1981ನೇ ಇಸವಿಯನ್ನು ಅಸಮರ್ಥರ ಅಂತಾರಾಷ್ಟ್ರೀಯ ವರ್ಷವೆಂದು ಘೋಷಿಸಲಾಗಿದೆ. 1982ರಲ್ಲಿ ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯು ವಿಶ್ವಮಟ್ಟದ ಅಸಮರ್ಥರ ಕ್ರಿಯಾಯೋಜನೆಯನ್ನು ಹಮ್ಮಿಕೊಂಡಿತು. 1983ರಿಂದ 1992ರ ಅವಧಿಯನ್ನು ಸಾಮಾನ್ಯ ಸಭೆಯು ಸಂಯುಕ್ತ ರಾಷ್ಟ್ರಗಳ ಅಸಮರ್ಥರ ದಶಕವೆಂದು ಘೋಷಿಸಿತು. ಅದರ ನಂತರ 1993ರಿಂದ 2002ರವರೆಗೆ ಏಷ್ಯಾ ಮತ್ತು ಪೆಸಿಫಿಕ್ ಅಸಮರ್ಥರ ದಶಕವೆಂದು ಕರೆಯಲಾಯಿತು. ಏಷ್ಯಾ ಮತ್ತು ಪೆಸಿಫಿಕ್ ಅಸಮರ್ಥರ ದಶಕದ Escap ಒಡಂಬಡಿಕೆಗೆ ಭಾರತವು ಅಂಕಿತ ಹಾಕಿದೆ.

ಭಾರತವು ತನ್ನ ಅಂತಾರಾಷ್ಟ್ರೀಯ ಒಪ್ಪಂದವನ್ನು ಈಡೇರಿಸಲು ಆ ನಿಟ್ಟಿನಲ್ಲಿ ಕ್ರಮತೆಗೆದುಕೊಂಡು ಸಾಕಷ್ಟು ಪ್ರಗತಿ ಸಾಧಿಸಿದೆ. ಅಂಗವಿಕಲತೆ ಇರುವ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಕಾಯಿದೆಯು ಇತರ ವಿಷಯಗಳ ಜೊತೆಗೆ ತಾರತಮ್ಯ ನಿವಾರಿಸುವ ಗುರಿಯಲ್ಲಿ ಪುನರ್‌ವಸತಿಯು ಒಂದು ಹಕ್ಕೆಂದು ಶಾಸನ ಮಾಡಿದೆ. ಈ ಕಾಯಿದೆಯು ಶೇ. 3ರಷ್ಟು ಮೀಸಲಾತಿಯನ್ನು (ತಲಾ ಶೇ. 1ರಂತೆ ಚಲನೆ, ಶ್ರವ್ಯ ಮತ್ತು ದೃಷ್ಟಿ ವಿಕಲರಿಗೆ) ಎಲ್ಲಾ ಸರ್ಕಾರಿ ಮತ್ತು ಸಾರ್ವಜನಿಕ ಕ್ಷೇತ್ರಗಳ ಕಛೇರಿಗಳಲ್ಲಿ ನೀಡಲು ನಿಗದಿಗೊಳಿಸಿದೆ. ಅಂಗವಿಕಲರ ಸ್ವಯಂ ಉದ್ಯೋಗವನ್ನು ಬೆಂಬಲಿಸಲು ಒಂದು ರಾಷ್ಟ್ರೀಯ ಮಟ್ಟದ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ. ಇತ್ತೀಚೆಗೆ ಸಂಸತ್ತು ಹೊರಡಿಸಿರುವ ರಾಷ್ಟ್ರೀಯ ಆರೋಗ್ಯ ದತ್ತಿಯು ಬಾಲ್ಯದಲ್ಲಿ ಬುದ್ಧಿಭ್ರಮಣೆ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಮತ್ತು ವಿವಿಧ ವಿಕಲತೆಗಳ ಕಾಯ್ದೆಯು ಅಂಗವಿಕಲರಿಗೆ ಇನ್ನೂ ಹೆಚ್ಚಿನ ಬೆಂಬಲ ಮತ್ತು ರಕ್ಷಣೆ ಒದಗಿಸುವ ಸಾಧನವಾಗಿದೆ.

Digitised by Bharatavani, CIIL

1981ರಲ್ಲಿ ಅಂಗವಿಕಲರ ರಾಷ್ಟ್ರಮಟ್ಟದ ಮಾದರಿ ಸಮೀಕ್ಷಾ ಸಂಸ್ಥೆಯು ರಾಷ್ಟ್ರಾದ್ಯಂತ ಎಲ್ಲಾ ವಯಸ್ಸಿನ ಅಂಗವಿಕಲ ವ್ಯಕ್ತಿಗಳ ಸಮೀಕ್ಷೆ ನಡೆಸಿತ್ತು. ಈ ಸಮೀಕ್ಷೆಯಿಂದ 12 ದಶಲಕ್ಷ ಜನರಲ್ಲಿ ಕನಿಷ್ಠ ಒಂದು ವಿಕಲತೆ ಇರುವ 1.8ರಷ್ಟು ವ್ಯಕ್ತಿಗಳು ನಮ್ಮ ದೇಶದಲ್ಲಿ ಇದ್ದಾರೆ ಎಂದು ಅಂದಾಜು ಮಾಡಲಾಗಿದೆ. ಚಲನೆಯ ವಿಕಲತೆಯುಳ್ಳವರು ಎಲ್ಲಕ್ಕಿಂತ ಹೆಚ್ಚು (5.43 ದಶಲಕ್ಷ) ಸಂಖ್ಯೆಯಲ್ಲಿದ್ದು ಕ್ರಮವಾಗಿ ದೃಷ್ಟಿ ವಿಕಲತೆ (3.7 ದಶಲಕ್ಷ), ಶ್ರವ್ಯ (3.02 ದಶಲಕ್ಷ) ಮತ್ತು ಮಾಪನ ವಿಕಲತೆ (1.75 ದಶಲಕ್ಷ) ಇರುತ್ತದೆ. ಒಂದು ಅಂದಾಜಿನಂತೆ ಸುಮಾರು ಶೇ. 3ರಿಂದ 5ರಷ್ಟು ಭಾರತದ ಜನಸಂಖ್ಯೆ ವಿವಿಧ ಮಟ್ಟದ ಬುದ್ಧಿಮಾಂದ್ಯತೆಗೆ ಗುರಿಯಾಗಿದೆ.

ಸುಮಾರು 600ರಷ್ಟು ಸ್ವಯಂಸೇವಾ ಸಂಸ್ಥೆಗಳು ಮತ್ತು 200 ಅಂಗವಿಕಲರ ಸಂಘಗಳು, ಅಂಗವಿಕಲರ ಶಿಕ್ಷಣ ತರಬೇತಿ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಇದರಲ್ಲಿ ಅಂಗವಿಕಲ ಮಕ್ಕಳೂ ಸೇರಿದ್ದಾರೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಒಂದು ಆರ್ಥಿಕ ನೆರವು ನೀಡುವ ಯೋಜನೆಯನ್ನು ಅಂಗವಿಕಲರ ಪುನರ್ವಸತಿಗೆ ಸಹಾಯ ಮಾಡುವ ಸ್ವಯಂಸೇವಾ ಸಂಸ್ಥೆಗಳಿಗೆ ಒದಗಿಸಿದೆ. ಈ ಯೋಜನೆಯ ಸೌಲಭ್ಯಗಳು ಮೂಳೆಯ ವಿಕಲತೆ, ಬುದ್ಧಿಮಾಂದ್ಯತೆ ಮತ್ತು ದೃಷ್ಟಿ ಮತ್ತು ಶ್ರವಣ ವಿಕಲತೆ ಮತ್ತು ಕುಷ್ಠರೋಗದಿಂದ ಮುಕ್ತರೋಗಿಗಳು ಇವರೆಲ್ಲರಿಗೂ ದೊರೆಯುತ್ತವೆ.

ಭಾರತದಲ್ಲಿ ಕೃತಕ ಕಾಲುಗಳ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ರಾಷ್ಟ್ರೀಯ ವೈದ್ಯಕೀಯ ಯೋಜನೆಯು ಪ್ರಮುಖ ಪಾತ್ರವಹಿಸಿದೆ ಕೃತಕ ಕಾಲುಗಳ ತಯಾರಿಕಾ ನಿಗಮವು Artificial Limb Manufacuring Cooperation (ALIMCO) ಮೂಳೆಗಳ ಮತ್ತು ದೃಷ್ಟಿ ವಿಕಲತೆಯ ವ್ಯಕ್ತಿಗಳಿಗೆ ಅಗತ್ಯವಾದ ಗುಣಮಟ್ಟದ ಉಪಕರಣಗಳನ್ನು ಮತ್ತು ಅಳವಡಿಕೆಗಳನ್ನು ತಯಾರಿಸುತ್ತಿದೆ. ಭಾರತೀಯ ಬೆನ್ನುಮೂಳೆ ಗಾಯಗಳ ಕೇಂದ್ರ, ನವದೆಹಲಿ (Indian Spinal Injury Centre) ಬೆನ್ನುಮೂಳೆ ಬಾಧಿತ ರೋಗಿಗಳಿಗೆ ಮಾರ್ಗದರ್ಶನ, ವೃತ್ತಿಪರ ತರಬೇತಿ, ಪುನರ್ವಸತಿ ಸೇವೆಗಳು ಮತ್ತು ವ್ಯಾಪಕವಾದ ಔಷಧೋಪಚಾರಗಳನ್ನು ಒದಗಿಸುತ್ತಿದೆ. 1991ರಿಂದ ಇದು ಆಸ್ಪತ್ರೆಗಳ ಹೊರಗಿನ ರೋಗಿಗಳಿಗೂ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ. ನಾನಾ ವಿಧವಾದ ಬೆನ್ನುಮೂಳೆ ಬಾಧಿತ ಬಡ ಮತ್ತು ಸ್ಥಳೀಯವಾದ ಹೆಚ್ಚು ರೋಗಿಗಳಿಗೆ ಉಚಿತ ಸೇವೆಗಳನ್ನು ಒದಗಿಸಿದೆ.

ರಾಷ್ಟ್ರೀಯ ಅಂಗವಿಕಲ ಆರ್ಥಿಕ ಮತ್ತು ಅಭಿವೃದ್ಧಿ ನಿಗಮವು (National Handicaped Finance and Development Corporation NHFDC) ಸ್ವಉದ್ಯೋಗದ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸಿದೆ; ಅಂಗವಿಕಲ ವ್ಯಕ್ತಿಗಳಿಗೆ ಸಾಲಗಳನ್ನು ವಿಸ್ತರಿಸುತ್ತದೆ. ಅಂಗವಿಕಲರು ತಾಂತ್ರಿಕ ಕೌಶಲಗಳನ್ನು ಉತ್ತಮಪಡಿಸಿಕೊಳ್ಳಲು ಸಹಾಯ ನೀಡುತ್ತಿದೆ. ಮತ್ತು ನೋಂದಾಯಿತ ಕಾರ್ಖಾನೆಗಳು ಮತ್ತು ಕಂಪೆನಿಗಳಲ್ಲಿರುವ ಸ್ವದೇಶಿ ಗುಂಪುಗಳ ವ್ಯಕ್ತಿಗಳಿಗೆ ಮತ್ತು ಸ್ವಉದ್ಯೋಗ ಗುಂಪುಗಳಿಗೆ ಉಚಿತ ಸೇವೆಗಳನ್ನು ಒದಗಿಸಿದೆ.

1993ರಲ್ಲಿ ಸ್ಥಾಪಿತವಾದ ಕಾನೂನುಬದ್ಧ ಘಟಕವಾದ ಭಾರತ ಪುನರ್ವಸತಿ ಪರಿಷತ್ತು (Rehabilitation Council India RCI) ಅಂಗವಿಕಲತೆಯ ಕ್ಷೇತ್ರದ ನಾನಾ ವಿಧವಾದ ವೃತ್ತಿಪರ ಕಾರ್ಯಕ್ರಮ ಮತ್ತು ತರಬೇತಿಗಳ ನಿಯಂತ್ರಣ ನೀತಿಗಳನ್ನು ನಿಯಂತ್ರಿಸುವ ಜವಾಬ್ದಾರಿ ಹೊಂದಿದೆ. ಈ ಭಾರತೀಯ ಪುನರ್ವಸತಿ ಕೇಂದ್ರವು ಅಲ್ಪಾವಧಿಯ ಹಾಗೂ ದೀರ್ಘಾವಧಿಯ ವಿಧಗಳನ್ನು ಹೊಂದಿ ಅಭಿವೃದ್ಧಿಪಡಿಸುತ್ತಿದೆ. ದೇಶದಲ್ಲಿರುವ ಅಂಗವಿಕಲರಿಗೆ ಸಹಾಯ ಮಾಡಲು ತರಬೇತಿ ಪಡೆದ ಮಾನವಶಕ್ತಿಯನ್ನು ಒದಗಿಸಲು ವಿಶೇಷ ಶಿಕ್ಷಕರು ಮತ್ತು ಪೂರಕ ವೈದ್ಯಕೀಯ ಸಿಬ್ಬಂದಿ, ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರುಗಳಿಗೆ ತರಬೇತಿ ಒದಗಿಸುವುದು ಇತ್ಯಾದಿ ಹೊಸ ಯೋಜನೆಗಳನ್ನು ಆರಂಭಿಸಿತು.

ದೈಹಿಕ ಮತ್ತು ಮಾನಸಿಕ ಅಂಗವಿಕಲ ವ್ಯಕ್ತಿಗಳಿಗೆ ಕುಟುಂಬ ಕಲ್ಯಾಣ ಸೇವೆಗಳ ಸಂಪೂರ್ಣ ಮಾಹಿತಿಗಳನ್ನು ಒದಗಿಸಲು ಪ್ರತಿಯೊಂದು ಪ್ರಮುಖ ಅಂಗವಿಕಲ ಕ್ಷೇತ್ರದಲ್ಲಿ ರಾಷ್ಟ್ರೀಯ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಇದು ಮೂಳೆಗಳಿಗೆ ಸಂಬಂಧಿತ ಅಂಗವಿಕಲರ ರಾಷ್ಟ್ರೀಯ ಸಂಸ್ಥೆ ಕಲ್ಕತ್ತ, ದೃಷ್ಟಿ ವಿಕಲತೆಯ ರಾಷ್ಟ್ರೀಯ ಸಂಸ್ಥೆ, ಡೆಹ್ರಾಡೂನ್, ಅಲಿಯಾವರ್ ಜಂಗ್ ಶ್ರವಣ ವಿಕಲತೆ ರಾಷ್ಟ್ರೀಯ ಸಂಸ್ಥೆ, ಮುಂಬೈ, ಬುದ್ಧಿಮಾಂದ್ಯತೆ ರಾಷ್ಟ್ರೀಯ ಸಂಸ್ಥೆ, ಸಿಕಂದರಾಬಾದ್, ಕಟಕ್‌ನ ರಾಷ್ಟ್ರೀಯ ಪುನರ್ವಸತಿ, ತರಬೇತಿ ಮತ್ತು ಸಂಶೋಧನಾ ರಾಷ್ಟ್ರೀಯ ಸಂಸ್ಥೆ, ನವದೆಹಲಿಯ ದೈಹಿಕ ಅಂಗವಿಕಲರ ಸಂಸ್ಥೆ ಇವುಗಳನ್ನು ಒಳಗೊಂಡಿದೆ. ಈ ಸಂಸ್ಥೆಗಳ ಮುಖ್ಯ ಒತ್ತು ಪುನರ್ವಸತಿಗಾಗಿ ಮಾನವಶಕ್ತಿ ಅಭಿವೃದ್ಧಿಪಡಿಸುವುದು, ಪುನರ್ವಸತಿಗಾಗಿ ಸೇವಾವಿತರಣೆ ಮಾದರಿಗಳನ್ನು ಅಭಿವೃದ್ಧಿಗೊಳಿಸುವುದು ಸೇವೆಗಳು ತಲುಪದಿರುವವರಿಗೆ ಹೊರಗಡೆಯೂ ತಲುಪುವಂತಹ ಚಟುವಟಿಕ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದು.

ಸ್ವಯಂಸೇವಾ ಸಂಸ್ಥೆಗಳ, ಮೂಲಕ ಅಂಗವಿಕಲರಿಗೆ ಅಗತ್ಯವಾದ ಸಾಮಗ್ರಿಗಳನ್ನು ಕೊಳ್ಳುವ ಮತ್ತು ಅಳವಡಿಸಿಕೊಳ್ಳುವಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಒಂದು ನೆರವು ಯೋಜನೆಯನ್ನು ಹೊಂದಿದೆ. ದೈಹಿಕ ಅಂಗವಿಕಲತೆ ಉಳ್ಳವರಿಗೆ ಲಾಭಗಳಿಸುವ ಉದ್ಯೋಗ ಅವಕಾಶ ಕಲ್ಪಿಸಲು ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳಿವೆ. ವೃತ್ತಿಪರ ಪುನರ್ವಸತಿ ಕೇಂದ್ರಗಳು ಉದ್ಯೋಗಕ್ಕೆ ಅವಕಾಶ ಮಾಡಿಕೊಡಲು ಅಂಗವಿಕಲರಿಗೆ ನೆರವು ನೀಡುತ್ತವೆ.

16 ದಶಲಕ್ಷ ಅಂಗವಿಕಲ ವ್ಯಕ್ತಿಗಳಲ್ಲಿ 4.52 ದಶಲಕ್ಷ ವ್ಯಕ್ತಿಗಳು ವಿವಿಧ ಉದ್ಯೋಗಗಳಲ್ಲಿದ್ದು ಕ್ರಮವಾಗಿ ಶೇ. 29.1 ಮತ್ತು ಶೇ.

Digitised by Bharatavani, CIIL

25.2 ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇರುವುದನ್ನು ಅಂಗವಿಕಲರ ಉದ್ಯೋಗ ಸ್ಥಿತಿಯು ಸೂಚಿಸುತ್ತಿದೆ.

ತರಬೇತಿ ಸಂಸ್ಥೆಗಳಲ್ಲಿ ಸಾಕಷ್ಟು ತರಬೇತಿ ಅವಕಾಶಗಳನ್ನು ಒದಗಿಸಲು ಅಂಗವಿಕಲರಿಗೆ ಪ್ರವೇಶಗಳನ್ನು ಕಾದಿರಿಸಲಾಗಿದೆ. ಭಾರತ ಸರ್ಕಾರ ಸಹಾ ಶೇ. 3ರಷ್ಟು ಉದ್ಯೋಗಗಳನ್ನು ಕೇಂದ್ರ ಸರ್ಕಾರ ಮತ್ತು ಕೇಂದ್ರ ಸಾರ್ವಜನಿಕ ಕ್ಷೇತ್ರಗಳ ಅಡಿಯಲ್ಲಿ ಗ್ರೂಪ್ ಸಿ ಮತ್ತು ಡಿ ಹುದ್ದೆಗಳನ್ನು ಕಾದಿರಿಸಿದೆ. ಅದೆಂದರೆ ಶ್ರವಣ, ದೃಷ್ಟಿ ಮತ್ತು ಮೂಳೆಗಳಿಗೆ ಸಂಬಂಧಿಸಿದ ಅಂಗವಿಕಲ ವ್ಯಕ್ತಿಗಳಿಗೆ ತಲಾ ಶೇ. 1ರಷ್ಟು ಮೀಸಲಾತಿಯಿರುತ್ತದೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಅತ್ಯಂತ ಹೆಚ್ಚು ಸಾಮರ್ಥ್ಯವುಳ್ಳ ಅಂಗವಿಕಲ ಉದ್ಯೋಗಿಗಳ ಮಾಲೀಕರಿಗೆ ಮತ್ತು ಅಸಾಧಾರಣ ಸೇವೆ ಮಾಡುವ ನೌಕರರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ಸ್ಥಾಪಿಸಿದೆ. ಮೂಳೆಗಳ, ಶ್ರವಣ, ದೃಷ್ಟಿ ಮತ್ತು ಮಾನಸಿಕ ಅಂಗವಿಕಲರು ಮತ್ತು ಕುಷ್ಠರೋಗದಿಂದ ಗುಣವಾಗಿರುವ ವ್ಯಕ್ತಿಗಳ ಪ್ರತಿ ವರ್ಗಕ್ಕೂ ಪ್ರತ್ಯೇಕ ಪ್ರಶಸ್ತಿಗಳಿರುತ್ತವೆ.

ಅಂಗವಿಕಲರಿಗೆ ಸಾಮಾಜಿಕ, ಆರ್ಥಿಕ ಪುನರ್ವಸತಿಯ ತರಬೇತಿ ಮತ್ತು ಶಿಕ್ಷಣಗಳಲ್ಲಿ ವ್ಯಾಪಕವಾಗಿ ಮಾನ್ಯತೆ ಲಭಿಸಿದೆ. ಶೈಕ್ಷಣಿಕ, ವೃತ್ತಿಪರ, ಮತ್ತು ತಾಂತ್ರಿಕ ತರಬೇತಿಗಳನ್ನು ಪಡೆಯಲು ಅಂಗವಿಕಲರಿಗೆ ವಿದ್ಯಾರ್ಥಿವೇತನವನ್ನು ರಾಜ್ಯಸರ್ಕಾರಗಳು, ಕೇಂದ್ರದ ಗಡಿ ಪ್ರದೇಶಗಳು ನೀಡುತ್ತಿವೆ. ಅಂಗವಿಕಲರಿಗೆ ಪ್ರಯಾಣ ರಿಯಾಯಿತಿ, ವೃತ್ತಿ ತೆರಿಗೆಯಿಂದ ವಿನಾಯಿತಿ ಮುಂತಾದ ರಿಯಾಯಿತಿಗಳೂ ಇವೆ.

ವೈದ್ಯಕೀಯ ಹಸ್ತಕ್ಷೇಪ (Medical Intervention) ಮತ್ತು ಶಸ್ತ್ರಚಿಕಿತ್ಸೆಯಿಂದ ಸುಧಾರಣೆ ಸಲಕರಣೆಗಳು ಮತ್ತು ಅಳವಡಿಸುವ ಉಪಕರಣಗಳು, ಚಿಕಿತ್ಸಾ ಸೇವೆಗಳು ಮುಂತಾದ ಸೇವೆಗಳನ್ನು ಒದಗಿಸಲು ಜಿಲ್ಲಾ ಪುನರ್ವಸತಿ ಕೇಂದ್ರ (District Rehabilitation Center DRC) ವಿರುತ್ತದೆ.

**ಮುಕ್ತಾಯ:** ಅವಕಾಶ ವಂಚಿತ ಮತ್ತು ಅಂಗವಿಕಲ ಮಕ್ಕಳ ಸಮಸ್ಯೆಗಳನ್ನು ಕುರಿತ ಅಂಕಿಅಂಶಗಳ ಮಾಹಿತಿಗಳಿಂದ ಅದನ್ನು ಸುಭದ್ರಗೊಳಿಸುವ ದಿಸೆಯಲ್ಲಿ ಒಂದು ವ್ಯವಸ್ಥೆಯು ಹೊರಹೊಮ್ಮಿದ ಅವಶ್ಯಕತೆಯನ್ನು ಭಾರತದ ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು ಮತ್ತು ಸೇವೆಗಳು ವಿಶ್ಲೇಷಣ ಪುನರ್ವಿಮರ್ಶೆಯು ಸೂಚಿಸುತ್ತದೆ. ಮಕ್ಕಳನ್ನು ಬಾಧಿಸುತ್ತಿರುವ ವಿವಿಧ ಸಮಸ್ಯೆಗಳ ವ್ಯಾಪ್ತಿಯ ವಾಸ್ತವಿಕ ಅಂಕಿಅಂಶಗಳು ಇಲ್ಲದಿದ್ದರೆ ವೈಜ್ಞಾನಿಕ ಮಟ್ಟದಲ್ಲಿ ಗಂಭೀರವಾದ ಆರೋಗ್ಯ ಸೇವೆಗಳ ಕುರಿತ ಯೋಜನೆ ಸಿದ್ಧಪಡಿಸುವುದು ಕಷ್ಟಕರ. ಈ ವಿಷಯವಾಗಿ ಸರ್ಕಾರ ಮತ್ತು ವಿವಿಧ ತಾಂತ್ರಿಕ ಸಂಸ್ಥೆಗಳು ಪ್ರಮುಖ ಹೊಣೆಗಳನ್ನು ಹೊರಬೇಕಾಗಿದೆ ಎಂದು ಹೇಳಲೇಬೇಕಾಗಿದೆ.

ಮಕ್ಕಳನ್ನು ಕಾಡುತ್ತಿರುವ ಸಮಸ್ಯೆಗಳ ಬದಲಾಗುತ್ತಿರುವ ಲಕ್ಷಣಗಳ ಮೇಲೆ ಬೆಳಕು ಚೆಲ್ಲುವಂತಹ ಮೌಲ್ಯಮಾಪನಾತ್ಮಕ ಅಧ್ಯಯನಗಳು ಮತ್ತು ಸಂಶೋಧನೆಗಳ ಅಗತ್ಯವಿದೆ. ಕಾರ್ಯಕ್ರಮಗಳ ಪ್ರಭಾವ ಮತ್ತು ಸೇವೆಗಳು ಮತ್ತು ಮಾಡಿರುವ ಪ್ರಯತ್ನಗಳ ಪರಿಣಾಮವನ್ನು ಅಲ್ಲಗಳೆಯುವಂತಿಲ್ಲ. ಈ ಸೇವೆಯಲ್ಲಿ ದೇಶದ ಶೈಕ್ಷಣಿಕ ಮತ್ತು ತಾಂತ್ರಿಕ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ. ಕಾರ್ಯನೀತಿಗಳನ್ನು ಕೈಗೊಳ್ಳುವ ಮತ್ತು ಕಾರ್ಯಕ್ರಮ ಆಯೋಜನೆ ಪ್ರಕ್ರಿಯೆಗಳಲ್ಲಿ ಸಂಶೋಧನಾ ಅಧ್ಯಯನದ ಫಲಗಳನ್ನು ಉಪಯೋಗಿಸುವುದೂ ಅಷ್ಟೇ ಮುಖ್ಯವಾದುದು. ಮಕ್ಕಳ ಕಲ್ಯಾಣ ಸೇವೆಗಳ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳ ಮೌಲ್ಯಮಾಪನವನ್ನು ಪ್ರೋತ್ಸಾಹಿಸುವುದೂ ಅವಶ್ಯವಾಗಿದೆ.

ಸುದೀರ್ಘವಾದ ಅವಧಿಯ ಗುರಿಯಾದ ಮಕ್ಕಳು ಕ್ಷೇಮವನ್ನು ನೋಡಿಕೊಳ್ಳುವ ಉದ್ದೇಶದಿಂದ ಕುಟುಂಬದ ಮಕ್ಕಳ ಪಾಲನೆಯ ದುರ್ಬಲವಾಗಿರುವ ಸಾಂಸ್ಥಿಕ ಸೇವೆಗಳ ಅವಲಂಬನೆಯನ್ನು ಕಡಿಮೆಗೊಳಿಸಲು ಸಮುದಾಯ ಕೇಂದ್ರಿತ ಶಿಶು ಕ್ಷೇಮ ಕಾರ್ಯಕ್ರಮಗಳನ್ನು ಅಂತಿಮವಾಗಿ ಕೆಳವರ್ಗದ ಸಾಮಾಜಿಕ ಆರ್ಥಿಕ ಕುಟುಂಬಗಳ ಸಾಮರ್ಥ್ಯಗಳನ್ನು ಬಲಪಡಿಸುವ ಉದ್ದೇಶದಿಂದ ವಿಸ್ತರಿಸಬೇಕಾದ ಅಗತ್ಯವಿದೆ ಜೊತೆಜೊತೆಗೆ ಕುಟುಂಬ ಸೇವೆಗಳ ಜೊತೆಗೆ ಮಕ್ಕಳ ಸೇವೆಗಳಿಗೂ ಸಂಬಂಧ ಕಲ್ಪಿಸುವುದು ಮುಖ್ಯವಾಗಿದೆ. ಕುಟುಂಬದ ಸಂಪನ್ಮೂಲಗಳನ್ನು ವೃದ್ಧಿಪಡಿಸುವ ಕ್ರಮಗಳನ್ನು ಸಹಾ ನಿರಾಶ್ರಿತ ಮತ್ತು ಅವಕಾಶ ವಂಚಿತರ ಪಾಲಿಗೆ, ಸಂರಕ್ಷಣೆ, ಮತ್ತು ಅಭಿವೃದ್ಧಿಗಳ ಯೋಜನೆಗಳ ಸಂದರ್ಭದಲ್ಲಿ ಪರಿಗಣಿಸಬೇಕು. ದೇಶದ ವಿವಿಧ ಭಾಗಗಳಲ್ಲಿ ಮಕ್ಕಳ ಜನಸಂಖ್ಯೆಯನ್ನು ಪರಿಗಣಿಸುವಾಗ ಪ್ರಾದೇಶಿಕ ಅಸಮತೋಲನ ಇರಬಾರದು ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾದ ಅಗತ್ಯವಿದೆ ಮತ್ತು ಕಾರ್ಯಕ್ರಮಗಳನ್ನು ಆಯೋಜಿಸುವ ಮತ್ತು ಅವುಗಳನ್ನು ಜಾರಿಗೆ ತರುವ ಕೌಶಲದಲ್ಲಿ ಪ್ರಾಂತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈಪರೀತ್ಯಗಳನ್ನು ಗಮನದಲ್ಲಿರಿಸಬೇಕು.

ಸಮಾಜ ಕಲ್ಯಾಣದ ಮತ್ತು ಅಭಿವೃದ್ಧಿಯ ಇತರ ಕ್ಷೇತ್ರಗಳಲ್ಲಿ ಇರುವಂತೆಯೇ ಶಿಶು ಕಲ್ಯಾಣ ಕ್ಷೇತ್ರದಲಿಯೂ ಸರ್ಕಾರಿ ಇಲಾಖೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳಂತೂ ಸಮಾನವಾಗಿ ಮುಖ್ಯ ಪಾತ್ರಗಳನ್ನು ನಿರ್ವಹಿಸಬೇಕಾಗಿದೆ. ಸ್ವಯಂಸೇವಾ ಸಂಸ್ಥೆಗಳಿಗೆ ಅನುದಾನದ ವ್ಯವಸ್ಥೆಯನ್ನು ವಿವೇಚನಾಯುಕ್ತಾವಾಗಿಸಬೇಕಾಗಿದೆ. ಸರ್ಕಾರ ಮತ್ತು ಸ್ವಯಂಸೇವಾ ಕ್ಷೇತ್ರದ ನಡುವೆ ಪಾಲುದಾರಿಕೆಯನ್ನು ಉತ್ತೇಜಿಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ವಿಸ್ತರಿಸುವ ಸಮಗ್ರ ಪ್ರಯತ್ನವಾಗಬೇಕು.

**ಮೂಲ: ಸಲಾಮುತುಲಾಹ್**

**ಅನು: ಡಾ ರತ್ನಮ್ಮ ಕೆ.ಎಸ್.**

Digitised by Bharatavani, CIIL

## ಮಕ್ಕಳ ರಂಗಭೂಮಿ

**ನಾಟಕ ಮತ್ತು ಮಕ್ಕಳ ಕಲಿಕೆಯಲ್ಲಿ ಅದರ ಮಹತ್ವ ಮತ್ತು ಮೌಲ್ಯ:** ಶಿಕ್ಷಣ ಮಕ್ಕಳ ಸಮಗ್ರ ವಿಕಾಸಕ್ಕೆ ಒಂದು ಸಾಧನ. ಮಕ್ಕಳ ಸಮಗ್ರ ವಿಕಾಸಕ್ಕೆ ವ್ಯಕ್ತಿಯ ನಾನಾ ವಿಧವಾದ ಸಾಮರ್ಥ್ಯಗಳನ್ನು ಸರಿಯಾಗಿ ಅಭಿವೃದ್ಧಿಗೊಳಿಸಲು ಮತ್ತು ಅವುಗಳನ್ನು ಬೆಳೆಸಿಕೊಳ್ಳಲು ಅವಕಾಶಗಳನ್ನು ಒದಗಿಸುವುದು ಬಹಳ ಮುಖ್ಯ.

ಮಕ್ಕಳ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳು ಬೆಳವಣಿಗೆಯಾಗಲು ಪಠ್ಯೇತರ ಚಟುವಟಿಕೆಗಳು ಬಹು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದು ಈಗ ಸಾಮಾನ್ಯವಾಗಿ ಸರ್ವಸಮ್ಮತವಾಗಿ ಒಪ್ಪಿರುವ ಅಭಿಪ್ರಾಯ. ರಂಗಭೂಮಿಯು ಪಠ್ಯೇತರ ಚಟುವಟಿಕೆಗಳಲ್ಲಿ ಒಂದಾಗಿದ್ದು ಪ್ರಮುಖವಾದುದು ಮತ್ತು ಮಗುವಿನ ವ್ಯಕ್ತಿತ್ವ ಬೆಳವಣಿಗೆಗೆ ಹೆಚ್ಚು ಸತ್ವವನ್ನು ಪಡೆದಿದೆ. ಇಪ್ಪತ್ತನೆಯ ಶತಮಾನದಲ್ಲಿ ರಂಗಭೂಮಿಗಳ ಅಗತ್ಯವನ್ನು ಪ್ರತಿಪಾದಿಸುವ ಅನೇಕರು ಮುಖ್ಯವಾಗಿ ಇಂಗ್ಲೆಂಡ್, ಯು. ಎಸ್.ಎ, ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿದ್ದಾರೆ. ಆದರೆ ಭಾರತದಲ್ಲಿ ಇದುವರೆಗೂ ಶಾಲಾ ಪಠ್ಯಕ್ರಮದಲ್ಲಿ ನಾಟಕಕ್ಕೆ ಸಾಕಷ್ಟು ಸ್ಥಾನ ನೀಡಿರುವುದಿಲ್ಲ. ಬಹಳಷ್ಟು ಶಾಲೆಗಳಲ್ಲಿ ನಾಟಕವು ವಾರ್ಷಿಕೋತ್ಸವ ದಿನಾಚರಣೆಯ ಸಂದರ್ಭಗಳಲ್ಲಿ ಒಂದು ಅಲಂಕಾರದ ಸಾಧನವಾಗಿದ್ದು ಆಕರ್ಷಣೆ ಪಡೆದಿದೆ. ವಿಶೇಷವಾಗಿ ಖಾಸಗಿಯವರು ನಡೆಸುತ್ತಿರುವ ಸಂಸ್ಥೆಗಳಲ್ಲಿ ನಾಟಕ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ನೈತಿಕ ಉದ್ದೇಶಗಳಿಗೆ ಬಳಸಲಾಗುತ್ತಿದೆ.

ಮಕ್ಕಳ ರಂಗಭೂಮಿ ಕಂಪೆನಿಗಳು ಇಂಗ್ಲೆಂಡಿನಲ್ಲಿ ಹೆಚ್ಚು ಸ್ಥಾಪನೆಯಾಗಿ ಮುನ್ನಡೆ ಸಾಧಿಸಿವೆ ಮತ್ತು ಮಕ್ಕಳಿಗೆ ಪ್ರದರ್ಶನ ಶಿಕ್ಷಣದಲ್ಲಿ ಮತ್ತು ವಯಸ್ಕರ ರಂಗಭೂಮಿ ಕಂಪನಿಗಳಿಗೆ ಶಾಲಾಕ್ರಮದಲ್ಲಿ ನಾಟಕಕ್ಕೆ ಯು.ಎಸ್.ಎ (ಅಮೆರಿಕಾ), ಕೆನಡಾ, ಆಸ್ಟ್ರೇಲಿಯಾ ಮತ್ತು ಇತರ ದೇಶಗಳಲ್ಲಿ ಮಹತ್ವ ನೀಡಲಾಗುತ್ತಿದೆ.

ನಾಟಕವು ಒಂದು ಕಲಾಪ್ರಕಾರವಾಗಿ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳಲು ಮತ್ತು ಸೌಂದರ್ಯ/ಕಲಾ ಪ್ರಜ್ಞೆಯನ್ನು ಬೆಳೆಸಲು ಸಹಾಯ ಮಾಡುತ್ತದೆ. ಗುರುದೇವ ರವೀಂದ್ರನಾಥ ಠಾಕೂರರ ಸಂಗೀತ, ಹಾಡುಗಳು, ನೃತ್ಯ, ಪೇಯಿಂಟಿಂಗ್, ಶಿಲ್ಪಕಲೆ, ಸಾಹಿತ್ಯ ಮತ್ತು ಸಂಗೀತದ ವಾದ್ಯಗಳನ್ನು ಆಂಗಿಕ ಚಲನೆಗಳು, ಧ್ಯಾನ ಮತ್ತು ನಾಟಕ ಅಭಿನಯವನ್ನು ಬೋಧನಾನುಭವಕ್ಕೆ ಅಗತ್ಯ ಅಂಶವೆಂದು ಬೋಧನ ವಿಧಾನವಾಗಿ ಅತ್ಯುತ್ತಮವಾಗಿ ಬೆಳೆಸಿಕೊಂಡವರಲ್ಲಿ ಅತ್ಯುತ್ತಮ ನಿದರ್ಶನವಾಗಿದ್ದಾರೆ. ಅವರು ಮಕ್ಕಳಿಗಾಗಿಯೇ ನಾಟಕಗಳನ್ನು, ಕಥೆಗಳನ್ನು, ಪದ್ಯಗಳನ್ನು ಬರೆದರು ಮತ್ತು ತಮ್ಮ ವಿದ್ಯಾರ್ಥಿಗಳೊಡನೆ ಅವನ್ನು ಅಭಿನಯಿಸಿದರು.

ನಾಟಕ ಮಕ್ಕಳ ನಡತೆಯನ್ನು ರೂಪಿಸುವ ಶಕ್ತಿಯುತ ಸಾಧನವಾಗಿದೆ. ಮಕ್ಕಳಲ್ಲಿ ಕಲ್ಪನೆ, ಸ್ವತಂತ್ರ ಚಿಂತನೆ ಮತ್ತು ಮೌಲ್ಯಿಕ ವಿಚಾರಗಳನ್ನು ಬೆಳೆಸಲು ಅದು ಅವಕಾಶ ಒದಗಿಸುತ್ತದೆ. ನಾಟಕ ಸಮೂಹ ಚಟುವಟಿಕೆ ಯಾದ್ದರಿಂದ ಮಗುವಿಗೆ ಹಂಚಿಕೊಳ್ಳುವುದು, ಸಹಕಾರ, ಆತ್ಮವಿಶ್ವಾಸ ಮತ್ತು ಇತರರಲ್ಲಿ ನಂಬಿಕೆ ಮುಂತಾದ ಗುಣಗಳನ್ನು ರೂಢಿಸಿಕೊಳ್ಳಲು ಒಂದು ಪರಿಸರವನ್ನು ಒದಗಿಸುತ್ತದೆ. ನಾಟಕ ಮಗುವಿಗೆ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಮಗು ತನ್ನ ಮಾತು, ಭಾಷೆ ಮತ್ತು ಅಭಿವ್ಯಕ್ತಿಯನ್ನು ಉತ್ತಮ ಪಡಿಸಿಕೊಳ್ಳಲು ಕಲಿಯುತ್ತದೆ. ಪರಿಣಾಮಕಾರಿಯಾಗಿ ಸಂವಹನಗೊಳಿಸಲು ಮತ್ತು ತನ್ನ ಆಲೋಚನೆಗಳನ್ನು ಸ್ಪಷ್ಟವಾಗಿ ಹೇಳಲು ಮಗು ಕಲಿಯುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಾಟಕವು ಮಗುವಿಗೆ ತನ್ನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಮತ್ತು ಸಾಮಾಜಿಕವಾಗಿ ಇತರರೊಡನೆ ಗುಂಪಿನಲ್ಲಿ ಬೆರೆಯಲು ಒಂದು ವೇದಿಕೆಯನ್ನು ಒದಗಿಸುತ್ತದೆ. ನಾಟಕ ಮಕ್ಕಳಲ್ಲಿ ಕಲಿಯುವ ಆಸಕ್ತಿಯನ್ನು ಉಂಟುಮಾಡಿ ತರಗತಿಗಳಲ್ಲಿ ಬೋಧನೆಯನ್ನು ಪ್ರೋತ್ಸಾಹಿಸುವ ಸಾಧನವಾಗಿ ಸಹ ಉಪಯುಕ್ತವಾಗಿದೆ. ಹೀಗೆ ನಾಟಕ ಮಗುವಿನ ಸಮಗ್ರ ಬೆಳವಣಿಗೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

ನಾಟಕ ವಿಶೇಷವಾಗಿ ದೈಹಿಕ ಅಂಗವಿಕಲರಿಗೆ ಮತ್ತು ಮಾನಸಿಕವಾಗಿ ಅಥವಾ ಸಂವೇದನಾತ್ಮಕವಾಗಿ ತೊಂದರೆಗೆ ಒಳಗಾದ ಮಕ್ಕಳಿಗೆ ಸಾಮಾಜಿಕ ಆರೋಗ್ಯವನ್ನು ಪಡೆದುಕೊಳ್ಳಲು ಒಂದು ಸಾಧನವಾಗಿದೆ ಎಂಬುದನ್ನು ಪ್ರಯೋಗಗಳು ಸಿದ್ಧಪಡಿಸಿವೆ. ಈ ಕ್ಷೇತ್ರದಲ್ಲಿ ಮುಂಬೈನ ನಾಟ್ಯಶಾಲಾ ಚಾರಿಟಿ ಟ್ರಸ್ಟ್ ಆರಂಭಿಕ ಕಾರ್ಯ ಮಾಡಿದೆ. ಈ ಟ್ರಸ್ಟ್ ಅಂಗವಿಕಲ ವ್ಯಕ್ತಿಗಳ ಸಹಾಯಕ್ಕಾಗಿ ನಾಟಕ ಕಲೆಯನ್ನು ಪ್ರಚಾರ ಮಾಡುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಮುಂಬೈಯಲ್ಲಿರುವ ಈ ನಾಟ್ಯಶಾಲೆಯು 2000 ದಲ್ಲಿ ಜಿಸ್ನೆ ಬಚ್ಪನ್ (ಬಾಲ್ಯದ ಉತ್ಸವ) ಎಂಬ ಕಾರ್ಯಕ್ರಮದಲ್ಲಿ ಮಾನವ್ ಕೀ ಕಹಾನಿ ಎಂಬ (ಮಾನವ ಕುಲದ ಕಥೆ) ನಾಟಕದಲ್ಲಿ ಅಂಗವಿಕಲ ಮತ್ತು ದೃಶ್ಯವಿಕಲರಿಗೆ ನಾಟ್ಯಶಾಲಾ ಕಾರ್ಯಾಗಾರದಲ್ಲಿ ತರಬೇತಿ ನೀಡಿ ಪಾತ್ರ ವಹಿಸಲು ಅವಕಾಶ ನೀಡಲಾಗಿತ್ತು. ಅಂಗ ವಿಕಲ ಮಕ್ಕಳು (ಸೆರೆಬ್ರಲ್ ಪಾಲ್ಸಿ) 35 ಶಿಕ್ಷಕರ ಸಾಮೂಹಿಕ ಪ್ರಯತ್ನದಿಂದ ನಾಟಕದ ಮೂಲ ಪಠ್ಯವು ನಾಟ್ಯ ಶಾಲೆಯ ನಾಟಕ ರಚನಾ ಕಾರ್ಯಾಗಾರದಲ್ಲಿ ರಚನೆಗೊಂಡಿತು. ಮಹಾರಾಷ್ಟ್ರದ 3ನೇ ತರಗತಿಯ ಮಕ್ಕಳ ಇತಿಹಾಸ ಪಠ್ಯದ ಆಧಾರದ ಈ ನಾಟಕವು ವಿವಿಧ ಟ್ಯಾಬ್ಲೋಗಳ ಮೂಲಕ ಮನುಕುಲದ ಕಥೆಯನ್ನು ಚಿತ್ರಿಸಿದೆ. ನಮ್ಮ ವಿಶಾಲ ದೇಶದಲ್ಲಿ ಅಸಾಮರ್ಥ್ಯ ಮಕ್ಕಳ ಏಳ್ಗೆಗಾಗಿ ಇಂತಹ ಕಾರ್ಯಾಗಾರಗಳನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವಿದೆ.

ನಾಟಕವನ್ನು ಪ್ರಯೋಗ ರೂಪದಲ್ಲಿ ಅಳವಡಿಸಿದ ಖ್ಯಾತಿ ಶಿಕ್ಷಣ ವಲಯದಲ್ಲಿ ಮಕ್ಕಳ ರಂಗಭೂಮಿ ಜನಕನೆಂದೇ ಪ್ರಸಿದ್ಧನಾದ ಇಂಗ್ಲೆಂಡ್‌ನ ಪೀಟರ್ ಸ್ಲೇಡ್ 1950 ರಲ್ಲಿ ಬೇರೆ ಬೇರೆ ಶಾಲೆಗಳಲ್ಲಿ ಬೇರೆ ಬೇರೆ ವಯೋಮಾನದ ಮಕ್ಕಳೊಂದಿಗೆ ಪ್ರಯೋಗ ನಡೆಸಿದ್ದಾನೆ. ವಯಸ್ಕರೊಂದಿಗೆ ಪ್ರಯೋಗಗಳನ್ನು ನಡೆಸಿದ ಇವನು ಲಂಡನ್ನಿನ ಯುವ ರಂಗಭೂಮಿಯಲ್ಲಿ ಕೆಲಸ

Digitised by Bharatavani, CIIL

ಮಾಡುತ್ತಿದ್ದನು. ಮಕ್ಕಳ ನಾಟಕ ಎಂಬ ತನ್ನ ಕೃತಿಯಲ್ಲಿ ಮಗುವಿನ ನಾಟಕದಲ್ಲಿರುವ ವಿವಿಧ ತತ್ವಗಳನ್ನು, ಮೌಲ್ಯ ಮತ್ತು ಗುರಿಗಳನ್ನು ಚರ್ಚಿಸಿದ್ದಾನೆ. ಪೀಟರ್ ಸ್ಲೇಡ್ ಪ್ರಕಾರ ನಾಟಕವು ಇತರ ಪ್ರತಿ ವಿಷಯದೊಡನೆ ಸಂಬಂಧವಿರುವ ಶಿಕ್ಷಣದ ಪ್ರಮುಖ ಭಾಗವಾಗಿದೆ ಮತ್ತು ಮೂರು ಆರ್ (ಓದು, ಬರಹ, ಅಂಕಗಣಿತ) ಗಳನ್ನು ಶಿಸ್ತುಗೊಳಿಸುವ ಒಂದು ಸಾಧನವಾಗಿದೆ. ಮೂಕಾಭಿನಯ, ಚಲನೆ, ಅಭಿನಯ ಇತ್ಯಾದಿಗಳನ್ನು ಒಳಗೊಂಡ ನಾಟಕ ಕಲಿಕೆಯ ಮುಖ್ಯ ಅಂಶಗಳನ್ನು ಕಲಿಯುವ ಮೂಲಕ ನಾಟಕ ಕಾರ್ಯಾಗಾರಗಳಲ್ಲಿ ಭಾಗವಹಿಸುವ ಮಕ್ಕಳು ಹೆಚ್ಚು ಸಂವಹನಶೀಲರೂ ಮಾತುಗಾರರೂ ಆಗುತ್ತಾರೆ ಎಂದು ಆತ ತೀರ್ಮಾನಿಸಿದ್ದಾನೆ. ಮಕ್ಕಳು ನಾಟಕ ಕೌಶಲಗಳನ್ನು ಕಲಿಯುವುದಷ್ಟೇ ಅಲ್ಲದೆ ಹಂಚಿಕೊಳ್ಳುವಿಕೆ, ಸಹಕಾರ, ಸಾಮೂಹಿಕ ಕೆಲಸ, ನಂಬಿಕೆ, ಆತ್ಮ ವಿಶ್ವಾಸ ಮುಂತಾದ ಸಾಮಾಜಿಕ ಕೌಶಲಗಳನ್ನು ಅಂತರ್ಗತ ಮಾಡಿಕೊಳ್ಳುವರು.

**ರಂಗಭೂಮಿ ಉನ್ನತಿಗೆ ರಾಷ್ಟ್ರೀಯ ನಾಟಕ ಶಾಲೆಯ ಕೊಡುಗೆ:** ಭಾರತವು ಜನಪದ ನೃತ್ಯಗಳು, ಜನಪದ ಕಥೆಗಳು ಮತ್ತು ಇಂತಹುದೇ ಇತರ ಕಲಾಪ್ರಕಾರಗಳ ಶ್ರೀಮಂತ ಪರಂಪರೆಯ ವಿಶಾಲ ದೇಶ. ಎಲ್ಲಾ ರಾಜ್ಯ ಹಾಗೂ ಸಮುದಾಯಗಳಲ್ಲಿ ಈ ಕಲಾ ಪ್ರಕಾರಗಳನ್ನು ಕಲಿಯುವ ಮತ್ತು ಅವಗಳನ್ನು ಒಂದು ಹವ್ಯಾಸವಾಗಿ ಅಥವಾ ವೃತ್ತಿಯನ್ನಾಗಿ ಮುಂದುವರೆಸುವ ಜನ್ಮಜಾತ ಸಾಮರ್ಥ್ಯ ಮಕ್ಕಳಿಂದ ತುಂಬಿ ತುಳುಕುತ್ತಿವೆ. ಆದರೆ ಅವರಲ್ಲಿ ಅಂತರ್ಗತವಾಗಿರುವ ಪ್ರತಿಭೆ ಪೂರ್ಣವಾಗಿ ತನ್ನ ಹಾದಿಯಲ್ಲಿ ಮುನ್ನಡೆಯುವಂತೆ ಮತ್ತು ಪ್ರವಹಿಸುವಂತೆ ನೋಡಿಕೊಳ್ಳುವ ಮಾರ್ಗದರ್ಶಕಗಳಿಲ್ಲದೆ ಸೊರಗುತ್ತದೆ. ದೇಶದಲ್ಲಿ ಮಕ್ಕಳಿಗೆ ರಂಗಭೂಮಿಯ ಕಲಾ ಪ್ರಕಾರದಲ್ಲಿ ಔಪಚಾರಿಕ ಶಿಕ್ಷಣವನ್ನು ತರಬೇತಿಯನ್ನು ನೀಡುವ ಕೇವಲ ಒಂದು ಸಂಸ್ಥೆಯೂ ಈಗಲೂ ಇಲ್ಲ. ರಂಗ ಕಲೆಯಲ್ಲಿ 18 ರಂದ 30 ವರ್ಷಗಳ ಯುವಕ–ಯುವತಿಯರಿಗೆ ತರಬೇತಿ ನೀಡುತ್ತಿರುವ ರಾಷ್ಟ್ರೀಯ ನಾಟಕಶಾಲೆಯು (National School of Drama - NSD) ಈ ದಿಸೆಯಲ್ಲಿ ಒಂದನ್ನು ಪ್ರಾರಂಭಿಸುವ ಅವಶ್ಯಕತೆಯನ್ನು ಮನಗಂಡು 1989ರ ಅಕ್ಟೋಬರ್ 16 ರಂದು ನಟರು ಮತ್ತು ಶಿಕ್ಷಕರ ಒಂದು ಗುಂಪನ್ನು ರಚಿಸಿ ನಿಯಮಿತವಾಗಿ ಮಕ್ಕಳಿಗೆ ಪ್ರದರ್ಶಕ ಕಲೆಗಳನ್ನು ಕಲಿಸುವ ಥಿಯೇಟರ್ ಇನ್ ಎಜುಕೇಷನ್ ಕಂಪನಿ (ಸಂಸ್ಕಾರ್ ರಂಗ್ ಟೋಲಿ [ತಂಡ] ಎಂದು ಮರುನಾಮಕರಣಗೊಂಡಿದೆ) ಯನ್ನು ಸ್ಥಾಪಿಸಿತು. ಕಳೆದ ಹಲವಾರು ವರ್ಷಗಳಲ್ಲಿ ಈ ತಂಡವು ಮ್ಕಕಳ ರಂಗಭೂಮಿಯನ್ನು ಉತ್ತೇಜಿಸಲು ದಾಪುಗಾಲು ಹಾಕುತ್ತಾ ಸಾಗಿದೆ. ಅದು ಮಕ್ಕಳಿಗಾಗಿ ನಾಟಕಗಳನ್ನು ನಿರ್ಮಿಸಿದೆ, ಮಕ್ಕಳಿಗಾಗಿ ಕಮ್ಮಟಗಳನ್ನು ಏರ್ಪಡಿಸಿದೆ, ಶಿಕ್ಷಕರಿಗೆ ತರಬೇತಿಯನ್ನು ನೀಡಿದೆ ಮತ್ತು ಶನಿವಾರದಂದು ಮಕ್ಕಳಿಗಾಗಿ ಶನಿವಾರ ಕ್ಲಬ್‌ಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ. ಮಕ್ಕಳ ರಂಗಭೂಮಿಗೆ ಈ ತಂಡವು ಗಮನಾರ್ಹವಾಗಿ ಸೇವೆ ಸಲ್ಲಿಸುತ್ತ ರಂಗಭೂಮಿಯ ಈ ಶಾಖೆಯು ಜನಪ್ರಿಯಗೊಳಿಸಲು ಮತ್ತು ಸಮೃದ್ಧಗೊಳಿಸಲು ಗಮನಾರ್ಹ ಕೊಡುಗೆಗಳನ್ನಿತ್ತಿದೆ.

**ಮಕ್ಕಳಿಗಾಗಿ ನಾಟಕಗಳ ನಿರ್ಮಾಣ:** ಈ ಟೋಲಿಯ ಪ್ರಮುಖ ಚಟುವಟಿಕೆಗಳೆಂದರೆ ಮಕ್ಕಳಿಗಾಗಿ ನಾಟಕಗಳ ನಿರ್ಮಾಣ ಮತ್ತು ಪ್ರದರ್ಶನ. ಮಕ್ಕಳಿಗಾಗಿಯೇ ವಿಶೇಷವಾಗಿ ರೂಪಿಸಲ್ಪಟ್ಟ ಈ ನಾಟಕಗಳು ಮಕ್ಕಳಲ್ಲಿ ಪ್ರಶ್ನೆಗಳನ್ನು ಎತ್ತುವ ಮೂಲಕ ಜಾಗೃತಿ, ನಿರ್ಧಾರಗಳನ್ನು ಕೈಗೊಳ್ಳುವುದು ಮತ್ತು ರಂಗಕಲೆಯ ಕೌಶಲಗಳನ್ನು ಬೆಳೆಸಿಕೊಳ್ಳುವ ಉದ್ದೇಶದಿಂದ ಕೂಡಿದೆ. ಆಧುನಿಕ ಹಿಂಸಾ ಪ್ರವೃತ್ತಿಗಳು ಮತ್ತು ಉತ್ಪ್ರೇಕ್ಷಿತ ಅಭಿಪ್ರಾಯಗಳಿಂದ ಕಲುಷಿತವಲ್ಲದ ಕೆಲವು ನಾಟಕಗಳು ಸರಳವಾಗಿದ್ದು ಶುದ್ಧ ಮನೋರಂಜನೆ ಒದಗಿಸುತ್ತವೆ. ಮಕ್ಕಳಿಗೆ ನಡೆವಳಿಕೆ ರೂಪಿಸಿಕೊಳ್ಳಲು ಮತ್ತು ಕರುಣೆ, ಸತ್ಯಪ್ರತಿಪಾದನೆ, ಧೈರ್ಯ, ದೇಶಭಕ್ತಿ ಮತ್ತು ಮಾನವೀಯ ಮೌಲ್ಯಗಳಲ್ಲಿ ಗೌರವ ಮುಂತಾದ ಸದ್ಗುಣಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾದ ಗೂಢ, ಸೂಕ್ಷ್ಮ ಸಂದೇಶಗಳಿರುವ ಮತ್ತೊಂದು ವಿಧದ ನಾಟಕಗಳು ಇವೆ. ಯಾವ ಪ್ರೇಕ್ಷಕರು ಅನುಸರಿಸಬಹುದಾದ, ಮೆಚ್ಚತಕ್ಕಂತಹ ಮತ್ತು ಅದರಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಂತಹ ವಸ್ತುವಿನಿಂದ ಕೂಡಿರುವ ಕಥೆಗಳನ್ನು ನಾಟಕದ ನಿರ್ಮಾಣಕ್ಕೆ ಆಯ್ಕೆ ಮಾಡುವ ಪ್ರಯತ್ನಗಳೂ ಕಂಡುಬರುತ್ತವೆ. ದೇಶದ ಇತರ ಭಾಗಗಳಲ್ಲಿ ಮತ್ತು ದೆಹಲಿಯಲ್ಲಿ 1600ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿರುವ ಇಪ್ಪತ್ತು ನಾಟಕಗಳನ್ನು ಟೋಲಿಯು ನಡೆಸುತ್ತಿದೆ. ಹೆಚ್ಚಾಗಿ ಈ ನಾಟಕಗಳನ್ನು ಶಾಲೆಗಳು ಮತ್ತು ಸಂಸ್ಥೆಗಳು ಪ್ರಾಯೋಜಿ ಸುತ್ತಿವೆ.

**ಮಕ್ಕಳಿಗಾಗಿ ಬೇಸಿಗೆ ರಂಗಶಿಬಿರಗಳು:** ಸ್ಥಾಪಿತವಾದ ಒಂದು ವರ್ಷದ ಒಳಗೆ ಟೋಲಿಯು ಪ್ರದರ್ಶಿಸುತ್ತಿರುವ ನಾಟಕಗಳ ಜನಪ್ರಿಯತೆಯು ಹೆಚ್ಚಿತು. ಟೋಲಿಯ ಚಟುವಟಿಕೆಗಳನ್ನು ನೋಡಲೆಂದು ಶಾಲೆಗೆ ಹೋಗುವ ಮಕ್ಕಳು, ಶಿಕ್ಷಕರು/ಪ್ರಾಂಶುಪಾಲರು ಶಾಲೆಗಳಿಂದ ರಾಷ್ಟ್ರೀಯ ರಂಗಶಾಲೆಗೆ ಬರುತ್ತಿರುವವರ ಸಂಖ್ಯೆಯು ವೃದ್ಧಿಸುತ್ತಿದೆ. ಅವರು ಶಾಲಾ ಮಕ್ಕಳು ತೊಡಗಿಸಿಕೊಳ್ಳುವಂತೆ ತಮ್ಮ ಶಾಲೆಗಳಿಗೂ ರಂಗ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಲು ಟೋಲಿಗೆ ಮನವಿ ಮಾಡಿಕೊಳ್ಳುತ್ತಿದ್ದಾರೆ. ಈ ಬೇಡಿಕೆಯನ್ನು ಈಡೇರಿಸಲು 1990 ರಲ್ಲಿ ಟೋಲಿ ನಿಯಮಿತವಾಗಿ ವಾರ್ಷಿಕ ಕಾರ್ಯಕ್ರಮವಾಗಿ 8 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಬೇಸಿಗೆ ರಜಾ ಅವಧಿಯಲ್ಲಿ ತೀವ್ರ ಬೇಸಿಗೆ ರಂಗ ಕಾರ್ಯಾಗಾರ (Intensive Summer Theatre Workshop)ವನ್ನು ನಡೆಸುತ್ತಿದೆ. ಈ ಚಟುವಟಿಕೆಯ ಜನ ಪ್ರಿಯತೆಯು ಸ್ಮರಣಾರ್ಹವಾಗಿದೆ. ಈ ಶಿಬಿರದಲ್ಲಿ ರಂಗಭೂಮಯ ಸಂಬಂಧಿತ ಕಲೆಗಳಲ್ಲಿ ತರಬೇತಿ ನೀಡುವುದಷ್ಟೇ ಅಲ್ಲದೆ ವ್ಯಕ್ತಿತ್ವ ವಿಕಸನ ಮತ್ತು ಮಕ್ಕಳ ಮಾನಸಿಕ ಮತ್ತು ದೈಹಿಕ ವಿಷಯಗಳ ಬೆಳವಣಿಗೆಯ ಸಮಗ್ರ ಅಭಿವೃದ್ಧಿಯು ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ. ಮೇ–ಜೂನ್, 2001 ರಲ್ಲಿ ಒಂದು ಕೇಂದ್ರದಿಂದ ಆರಂಭವಾದ ಈ ಬೇಸಿಗೆ ರಂಗಭೂಮಿ ಕಾರ್ಯಾಗಾರ (ಕಮ್ಮಟ) ಒಂಬತ್ತು ಕೇಂದ್ರಗಳವರೆಗೂ ವ್ಯಾಪಿಸಿತು. ಪ್ರತಿ ಮಗುವಿಗೂ ಒಂದು ತಿಂಗಳ ರಂಗಭೂಮಿ ತರಬೇತಿ ಕಮ್ಮಟಕ್ಕೆ ವಿಧಿಸುವ ಶುಲ್ಕವು 2000 ರೂಗಳು. ಆದರೂ ಪರಿಶಿಷ್ಟ ಜಾತಿ, ಬುಡಕಟ್ಟು ಮತ್ತು ಹಿಂದುಳಿದ ಗುಂಪಿನ ಮ್ಕಕಳಿಗೆ ಜಾತಿ ಪ್ರಮಾಣ ಪತ್ರಗಳ

Digitised by Bharatavani, CIIL

ಆಧಾರದ ಮೇಲೆ 400 ರೂಗಳ ಶುಲ್ಕ ವಿನಾಯಿತಿ ನೀಡಲಾಗಿದೆ.

**ಮಕ್ಕಳಿಗಾಗಿ ಶನಿವಾರದ ಕ್ಲಬ್‌ಗಳು:** ಬೇಸಿಗೆ ರಂಗ ಕಮ್ಮಟಗಳು ಮಕ್ಕಳಲ್ಲಿ ರಂಗಭೂಮಿ ಚಟುವಟಿಕೆಗಳ ಬಗ್ಗೆ ತೀವ್ರ ಕುತೂಹಲ, ಆಸಕ್ತಿ ಕೆರಳಿಸುತ್ತ ಹೆಚ್ಚು ಕಲಿಯುವಂತೆ ಪ್ರೇರೇಪಿಸುತ್ತಿವೆ. ಅಂತಹ ಮಕ್ಕಳ ಅಪೇಕ್ಷೆಗಳನ್ನು ಈಡೇರಿಸಲು ಟೋಲಿಯು 'ಶನಿವಾರ ಕ್ಲಬ್' ಎಂಬ ಒಂದು ಹೊಸ ಯೋಜನೆಯನ್ನು ಹಮ್ಮಿಕೊಂಡಿದೆ. ಸರಳವಾಗಿ ಹೇಳುವುದಾದರೆ, ಶನಿವಾರದ ಕ್ಲಬ್‌ಗಳು ಬೇಸಿಗೆ ರಂಗ ಕಮ್ಮಟಗಳ ವಿಸ್ತರಣೆಯಾಗಿದ್ದು, ವಿವಿಧ ವಯೋಮಾನಗಳ ಮಕ್ಕಳ ಗುಂಪುಗಳು ಅಭಿವೃದ್ಧಿ ಪಡಿಸಿದ ಧಾರಾವಾಹಿಗಳ ವಿಧಾನದ ಮೂಲಕ ಸ್ವತಂತ್ರ ನಾಟಕಗಳಲ್ಲಿ ಜೊತೆಗೂಡಿ ಅಭಿನಯ ಮಾಡುವುದೇ ಆಗಿದೆ. ಈ ತರಬೇತಿಗಳ ಅವಧಿಯಲ್ಲಿ ಮಕ್ಕಳು ಒಂದು ವಸ್ತುವಿನ ಬಗ್ಗೆ ಜೊತೆಯಾಗಿ ತೀರ್ಮಾನ ಮಾಡುತ್ತಾರೆ ಮತ್ತು ಕ್ರಿಯಾಶೀಲ ರೀತಿಯಲ್ಲಿ ಅದರ ಬಗ್ಗೆ ಕೆಲಸ ಮಾಡುತ್ತಾರೆ. ಶನಿವಾರದ ಕ್ಲಬ್‌ಗಳಲ್ಲಿ ಎರಡು ಭಾಗಗಳಲ್ಲಿ ತರಬೇತಿ ಕೊಡಲಾಗುತ್ತದೆ. ಮೊದಲ ಭಾಗದಲ್ಲಿ ಮಕ್ಕಳು ಒಂದು ನಾಟಕವನ್ನು ಅದರ ಸಂಭಾಷಣೆ ಬರೆವಣಿಗೆ, ನಿರ್ದೇಶನ ಮಾಡುವುದು ಇತ್ಯಾದಿಗಳ ಮೂಲಕ ರೂಪಿಸುವುದರ ಗುರಿ ಹೊಂದಿದೆ. ಶನಿವಾರದ ಕ್ಲಬ್ ಒಂದರ ತರಬೇತಿ ಮುಗಿದ ನಂತರ ಮಕ್ಕಳು ರಂಗಭೂಮಿಯ ಒಂದು ವಿಷಯ ಪರಿಚಯಿಸುವ ಎರಡನೆಯ ಭಾಗಕ್ಕೆ ತೆರಳುತ್ತಾರೆ. 2001ರ ವೇಳೆಗೆ 1000 ಮಕ್ಕಳು ಎರಡೂ ಭಾಗಗಳಲ್ಲಿ ತರಬೇತಿಗೆ ಒಳಗಾಗಿ 32ಕ್ಕೂ ಹೆಚ್ಚು ಶ್ಲಾಘನಾರ್ಹ ನಾಟಕಗಳನ್ನು ರಚಿಸಿದ್ದಾರೆ. ಈ ನಾಟಕಗಳನ್ನು ಮಕ್ಕಳು ಅಭಿನಯಿಸಿ ಪ್ರದರ್ಶಿಸಿದಾಗ ಪೋಷಕರು ಮತ್ತು ಸಾರ್ವಜನಿಕರು ವೀಕ್ಷಿಸಿದ್ದಾರೆ. ಶನಿವಾರದ ಕ್ಲಬ್‌ಗಳ ತರಬೇತಿಯು ಶುಲ್ಕರಹಿತವಲ್ಲ. ಪ್ರತಿಯೊಂದು ಮಗುವು ಶನಿವಾರದ ಕ್ಲಬ್ ಭಾಗ-1 ರಲ್ಲಿ ಭಾಗವಹಿಸಲು ರೂ.4000 ಶುಲ್ಕ ಮತ್ತು ಭಾಗ-2 ರ ಶನಿವಾರದ ಕ್ಲಬ್‌ಗೆ ಸೇರಲು ಮುಂಗಡವಾಗಿ ರೂ.6000 ವನ್ನು ನೀಡುತ್ತಾರೆ. ಮಕ್ಕಳನ್ನು ಸಾಮಾನ್ಯವಾಗಿ 8 ರಿಂದ 10 ವರ್ಷಗಳು, 10 ರಿಂದ 12 ವರ್ಷಗಳು, 12 ರಿಂದ 14 ವರ್ಷಗಳು ಮತ್ತು 14 ರಿಂದ 16 ವರ್ಷಗಳ ವಯೋಮಾನದ ಗುಂಪುಗಳಾಗಿ ವಿಭಜಿಸಲಾಗುತ್ತದೆ.

**ಶಿಕ್ಷಕರಿಗಾಗಿ ಕಾರ್ಯಾಗಾರಗಳು:** ಕಲಿಕೆ ಮತ್ತು ಬೋಧನೆಗಳು ಹೆಚ್ಚು ಪರಿಣಾಮಕಾರಿ ಮತ್ತು ಉತ್ಸಾಹದಾಯಕ ವಾಗಿರುವ ತರಗತಿಗಳ ಸಂದರ್ಭದಲ್ಲಿ ಕೌಶಲಗಳನ್ನು ಮತ್ತು ಕಲಿಸುವುದರ ಜೊತೆಗೆ ಮಕ್ಕಳೊಡನೆ ಅರ್ಥಪೂರ್ಣ ನಾಟಕಗಳನ್ನು ರೂಪಿಸಲು ಶಿಕ್ಷಕರಿಗೆ ಟೋಲಿಯು ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸುತ್ತಿದೆ. ದೆಹಲಿ ಶಾಲೆ ಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ತ್ರಿಪುರ, ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ, ಕಲ್ಲತ್ತಾ, ಮುಂಬಯಿ ಮತ್ತ ಕರ್ನಾಟಕಗಳಿಂದ ಬರುವ ಶಿಕ್ಷಕರ ಜೊತೆಗೂಡಿಸಿ ಟೋಲಿ ಕೆಲಸ ಮಾಡುತ್ತಿದೆ.

**ನವೋದಯ ವಿದ್ಯಾಲಯ ಸಮಿತಿಗಳ ಸಹಭಾಗಿತ್ವ:** ಟೋಲಿಯು ನವೋದಯ ವಿದ್ಯಾಲಯ ಸಮಿತಿಗಳ ಜೊತೆಗೆ ಜಂಟಿಯಾಗಿ ಅಲ್ಲಿನ ಮಕ್ಕಳಿಗಾಗಿ ಅವರ ಶಿಕ್ಷಕರಿಗೆ ತರಬೇತಿ ನೀಡಿ ಬಹು ದೊಡ್ಡ ರೀತಿಯಲ್ಲಿ ಪ್ರದರ್ಶನ ಏರ್ಪಡಿಸುತ್ತದೆ. 1999ರ ನವೆಂಬರ್ ತಿಂಗಳಲ್ಲಿ ನವದೆಹಲಿಯ ನಿಜಾಮುದ್ದೀನ್ ಮೊಹಲ್ಲಾದ ಭಾರತೀಯಂ ಗ್ರಾಮ್ 'ನಾಟ್ಯ ನವೋದಯ' ಎಂಬ ಹೆಸರಿನ ನಾಟಕೋತ್ಸವವನ್ನು ಟೋಲಿ ಏರ್ಪಡಿಸಿತ್ತು. ಅದರಲ್ಲಿ 'ಚೌತಿ ದುನಿಯಾ', 'ರೋಬೋ ಭುಜೋ ಏಕ್ ಚಾ ಜಾಲ್', 'ಫೂಲ್ ಖಿಲೇಂ', 'ನಯೀ ಸದೀ ಕೀ ದಾಹ್ಲಿಜ್ ಪರ್', 'ಆಹ್‌ಸಾಸ್', 'ಡ್ಯಾಡಿ ಬದಲ್ ಗಯೇ ಹೈಂ' ಮತ್ತು 'ನಯಾ ಸಂಕಲ್ಪ' ಮುಂತಾದ ಪ್ರದರ್ಶನಗಳನ್ನು ನವೋದಯ ವಿದ್ಯಾಲಯ ಸಮಿತಿ ಸಹಭಾಗಿತ್ವದಲ್ಲಿ ಏರ್ಪಡಿಸಲಾಗಿತ್ತು.

**ಜಷ್ನೆ ಬಚ್‌ಪನ್:** 'ಜಷ್ನೆ ಬಚ್‌ಪನ್' (ಬಾಲ್ಯದ ಉತ್ಸವ) ಎಂಬ ಶೀರ್ಷಿಕೆಯ ಮಕ್ಕಳಿಗಾಗಿ ಏರ್ಪಡಿಸಿದ ರಾಷ್ಟ್ರೀಯ ರಂಗಭೂಮಿ ಉತ್ಸವದ ಬಗ್ಗೆ ಪ್ರಸ್ತಾಪಿಸದಿದ್ದರೆ, ರಂಗಭೂಮಿ ಸಾಮ್ರಾಜ್ಯಕ್ಕೆ ರಾಷ್ಟ್ರೀಯ ರಂಗಭೂಮಿ ಶಾಲೆಯ ಕೊಡುಗೆಯು ಅಪೂರ್ಣವೆನಿಸುತ್ತದೆ. 1998 ರಲ್ಲಿ ಮಕ್ಕಳಿಗಾಗಿ ರಾಷ್ಟ್ರೀಯ ರಂಗಭೂಮಿ ಉತ್ಸವವನ್ನು ಏರ್ಪಡಿಸುವ ಮೂಲಕ ಒಂದೇ ವೇದಿಕೆಯ ಮೇಲೆ ಮಕ್ಕಳ ರಂಗಭೂಮಿ ಗುಂಪುಗಳು ತಮ್ಮ ನಿರ್ಮಾಣಗಳನ್ನು ಪ್ರದರ್ಶಿಸುವಂತೆ ಪ್ರೋತ್ಸಾಹಿಸಲು ರಾಷ್ಟ್ರೀಯ ರಂಗಶಾಲೆ ಒಂದು ಯೋಜನೆಯನ್ನು ಹುಟ್ಟುಹಾಕಿತು. ಉತ್ಸವದ ಉದ್ದೇಶವು ಮಕ್ಕಳ ಮಾನಸಿಕ,ಮನಃಶಾಸ್ತ್ರೀಯ ಹಾಗೂ ಸಾಮಾಜಿಕ ಬೆಳವಣಿಗೆಯನ್ನು ಸ್ಪರ್ಶಿಸುತ್ತಾ ಅದರ ಸರ್ವಾಂಗೀಣ ಬೆಳವಣಿಗೆಯಲ್ಲಿ ಮಕ್ಕಳ ರಂಗಭೂಮಿಯು ಪ್ರತಿಫಲಿಸುವಂತೆ ಮಾಡುವುದೇ ಆಗಿದೆ. ಮೊದಲ 'ಜಷ್ನೆ ಬಚ್‌ಪನ್' ಅನ್ನು 1998ರ ನವೆಂಬರ್‌ನಲ್ಲಿ ಏರ್ಪಡಿಸಲಾಗಿತ್ತು. ಆನಂತರ ಅದು ಪ್ರತಿವರ್ಷದ ನಿಯಮಿತ ಲಕ್ಷಣವೇ ಆಯಿತು. 'ಜಷ್ನೆ ಬಚ್‌ಪನ್' ನಲ್ಲಿ ಸೇರಿದ ನಾಟಕಗಳು ಬೆಳೆಯುತ್ತಿರುವ ಮಕ್ಕಳು ಹಾಗೂ ಪೋಷಕರಿಗೆ ಗೂಢ ಸಂದೇಶಗಳನ್ನು ಒಳಗೊಂಡಿದ್ದವು. ಈ ವಾರ್ಷಿಕ ಉತ್ಸವ ದೇಶದ ವಿವಿಧ ಭಾಗಗಳ ಮಕ್ಕಳ ನಾಟಕಗಳ ಸಂಗಮವಾಗಿತ್ತು. ಇಂತಹ ರಂಗಭೂಮಿ ಗುಂಪುಗಳ ಒಟ್ಟುಗೂಡುವಿಕೆಗೆ ರಂಗಸಂಸ್ಥೆಗಳು ದೇಶದ ವಿವಿಧ ಭಾಗಗಳಿಂದ ಬಂದಿದ್ದು, ವೈವಿಧ್ಯಮಯ ಸಂಸ್ಕೃತಿಯನ್ನೂ ಭಾಷೆಗಳನ್ನೂ ಪ್ರತಿನಿಧಿಸುತ್ತಾ ಭಾರತದೇಶದ ವೈವಿಧ್ಯತೆಯಲ್ಲಿ ಏಕತೆ ಎಂಬ ವೈಶಿಷ್ಟ್ಯತೆಯ ಸ್ಫೂರ್ತಿಯನ್ನು ಪ್ರತಿಬಿಂಬಿಸದವು.

**ರಂಗಭೂಮಿಯ ಮುಂಚೂಣಿ ಗುಂಪುಗಳು:** ಭಾರತದಲ್ಲಿ ಉತ್ತಮ ಸಂಖ್ಯೆಯ ಹೆಚ್ಚು ಮಕ್ಕಳ ರಂಗಭೂಮಿ ಗುಂಪುಗಳು ಕ್ರಿಯಾಶೀಲವಾಗಿವೆ ಮತ್ತು 'ಜಷ್ನೆ ಬಚ್‌ಪನ್' ಮತ್ತು ಇತರ ರಂಗೋತ್ಸವಗಳನ್ನು ಮಕ್ಕಳಿಗಾಗಿ ಏರ್ಪಡಿಸಿದ್ದು ಹಲವು ಸ್ಮರಣಾರ್ಹ ನಾಟಕಗಳು ನಿರ್ಮಾಣಗೊಂಡಿವೆ. ಈ ತಂಡಗಳ ವಿಕಾಸದಾರರು ಮತ್ತು ದೂರವಾಣಿ ಸಂಖ್ಯೆಗಳಿರುವ ಒಂದು ಪಟ್ಟಿಯನ್ನು ಈ ಲೇಖನದ ಕೊನೆಗೆ ನೀಡಲಾಗಿದೆ.

**ಮಕ್ಕಳ ರಂಗಭೂಮಿಯ ಭವಿಷ್ಯ ಯೋಜನೆಗಳು:** ದೇಶದ ದೂರದೂರದ ಪ್ರದೇಶಗಳಲ್ಲಿ ಸ್ಥಾಪಿಸಿರುವ ನವೋದಯ

Digitised by Bharatavani, CIIL

ವಿದ್ಯಾಲಯಗಳ ಶಿಕ್ಷಕರು ಭಾಗವಹಿಸಿ ಕಲಿಯಲು, ನಿರ್ಮಾಣ ಮಾಡಲು, ಮಕ್ಕಳ ಜೊತೆ ನಾಟಕಗಳನ್ನು ನಿರ್ದೇಶಿಸಲು ಮತ್ತು ಪ್ರದರ್ಶನಗಳನ್ನು ನಡೆಸಲು, ಈ ವಸ್ತುಗಳಲ್ಲಿ ಶೈಕ್ಷಣಿಕ ಮೌಲ್ಯಗಳನ್ನು ಗುರುತಿಸುವಂತೆ ಮಾಡಲು, ಮುಖವಾಡ ಮತ್ತು ಭಿತ್ತಿ ಪತ್ರಗಳನ್ನು ರೂಪಿಸಲು, ಟೋಲಿ ಕಲಾವಿದರು ಕಾರ್ಯಾಗಾರಗಳನ್ನು ಏರ್ಪಡಿಸುತ್ತಿದ್ದುದರ ಬಗ್ಗೆ ಈ ಮೊದಲೇ ಪ್ರಸ್ತಾಪಿಸಲಾಗಿದೆ. ಶಿಕ್ಷಕರು ಕಲಿತ ಕಲೆಗಳು ಮತ್ತು ಕೌಶಲಗಳಲ್ಲಿ ಶಾಲಾ ಮಕ್ಕಳಿಗೆ ತರಬೇತಿ ನೀಡಲು ನವೋದಯ ವಿದ್ಯಾಲಯಗಳು ಈ ಶಿಕ್ಷಕರನ್ನು ಉಪಯೋಗಿಸಿಕೊಳ್ಳುತ್ತಿವೆ. ಇದೊಂದು ಬಹಳ ಫಲದಾಯಕ ಅನುಭವವಾಗಿದೆ. ಈ ಪ್ರಯೋಗವು ಶಾಲಾ ಮಟ್ಟದಲ್ಲಿ ರಂಗಭೂಮಿ ಕುರಿತ ಒಂದು ವಿಷಯವನ್ನು ಪ್ರಾರಂಭಿಸಲು ಅವಕಾಶಗಳ ಮುನ್ನೋಟಗಳನ್ನು ತೆರೆದಿದೆ. ಶಾಲೆಗಳಲ್ಲಿನ ಪ್ರಾಥಮಿಕ ಹಂತದಲ್ಲಿ ರಂಗ ಭೂಮಿ ಕುರಿತು ಒಂದು ಐಚ್ಛಿಕ ವಿಷಯವನ್ನು ಪ್ರಾರಂಭಿಸುವ ಬಗ್ಗೆ ಗಂಭೀರ ಚಿಂತನೆಗೆ ಇದು ಸಕಾಲವಾಗಿದೆ. ಈ ದಿಸೆಯಲ್ಲಿ ಪ್ರಾರಂಭಿಸಲು ಶಿಕ್ಷಕರ ಸೇವೆಯನ್ನು ಉಪಯೋತಿಸಿಕೊಳ್ಳಲು ರಾಷ್ಟ್ರೀಯ ರಂಗಶಾಲೆ ಅಲ್ಪಾವಧಿಯ ಪುನರ್ ನವೀಕರಣ ಕೋರ್ಸ್‌ಗಳನ್ನು ಪ್ರಾರಂಭಿಸುವ ಸ್ಥಿತಿಯಲ್ಲಿದೆ. ಕಾಲಕ್ರಮೇಣ ಈ ಯೋಜನೆಗೆ ಪ್ರತಿಕ್ರಿಯೆಗಳು ಪ್ರೋತ್ಸಾಹದಾಯಕವಾಗಿದ್ದು ಶಾಲೆಗಳಲ್ಲಿ ರಂಗಭೂಮಿ ವಿಷಯವನ್ನು ಒಂದು ನಿಯಮಿತ ವಿಷಯವನ್ನಾಗಿ ಪ್ರಾರಂಭಿಸಬಹುದಾಗಿದೆ.

**ಮಕ್ಕಳ ರಂಗಭೂಮಿಯ ತಂಡಗಳ ಪಟ್ಟಿ:**

| | | | |
|---|---|---|---|
| 1 | ಮಿಸೆಸ್ ವಿಭಾ ಮಿಶ್ರಾ, ನಿರ್ದೇಶಕರು, ಟೋಲಿ<br>5 ಸ್ಕ್ವೇರ್ ಅಪಾರ್ಟಮೆಂಟ್, ಪ್ರೊಫೆಸರ್ ಕಾಲೊನಿ,<br>ಭೂಪಾಲ್, ದೂರವಾಣಿ: 0755–660393 | 7 | ಶ್ರೀ ರುದ್ರ ಪ್ರಸಾದ್ ಸೇನ್‌ಗುಪ್ತಾ, ನಿರ್ದೇಶಕರು, ನಂದಿಕರ್<br>47, ಶ್ಯಾಂ ಬಜಾರ್ ರಸ್ತೆ, ಕೊಲಕತಾ–700004<br>ದೂರವಾಣಿ: 5544946 |
| 2 | ಮಿಸೆಸ್ ಪ್ರೇಮಾ ಕಾರಂತ್, ನಿರ್ದೇಶಕರು,<br>ಬೆನಕ ಮಕ್ಕಳ ನಾಟಕ ಕೇಂದ್ರ (ರಿ), ಬಾಬುಕೋಡಿ<br>125, 1ನೇ ಮೆಯ್ನ್, 2ನೇ ಹಂತ, ಗಿರಿನಗರ<br>ಬೆಂಗಳೂರು–560085, ದೂರವಾಣಿ: 6720622 | 8 | ಶ್ರೀ ಅಜಯ್ ಮಂಚಂಡ, ನಿರ್ದೇಶಕರು, ಉರ್ದು ಅಕಾಡೆಮಿ,<br>ಭಲ್ ಮಜನದ್ ರಸ್ತೆ, ದರಿಯಾಗಂಜ್, ನ್ಯೂಡೆಲ್ಲಿ–110002<br>ದೂರವಾಣಿ: 3251206, 3262693, 3276211 |
| 3 | ಶ್ರೀ ಕೆ.ಜಿ.ಕೃಷ್ಣಮೂರ್ತಿ, ನಿರ್ದೇಶಕರು, ಕಿನ್ನರ ಮೇಳ<br>ತುಮರಿ ಪೋಸ್ಟ್, ಸಾಗರ, ಕರ್ನಾಟಕ<br>ದೂರವಾಣಿ: 08183–65690 | 9 | ಮಿಸೆಸ್ ಪದ್ಮಶ್ರೀ ಜೋಸಾಲ್ಕರ್, ನಿರ್ದೇಶಕರು, ಸ್ಕೂಲ್ ಆಫ್ ಡ್ರಾಮಾ, ಕಲಾ ಅಕಾಡೆಮಿ, ಪಣಜಿ, ಗೋವಾ–403001<br>ದೂರವಾಣಿ: 0832–223280/88/89, 228254/88/87<br>ಫಾಕ್ಸ್: 224188 |
| 4 | ಶ್ರೀ ಆತ್ಮಜಿತ್ ಸಿಂಗ್, ನಿರ್ದೇಶಕರು, ಚಾಲ್ ನಾಟ್ಯ ಮಂಚ್<br>11–25–ಬಿ, ರೈಲ್ವೆ ಬರ್ಹಾ ಕಾಲೊನಿ, ಆಲಂಬಾಗ್, ಲಕ್ನೋ<br>ದೂರವಾಣಿ: 462053 | 10 | ಮಿಸೆಸ್ ಚಂದ್ರಾ ಜೈನ್, ಕಾದಂಬರಿ, 599, 12ನೇ ಮೈನ್,<br>ಹೆಚ್.ಎ.ಎಲ್ 2ನೇ ಸ್ಟೇಜ್, ಇಂದಿರಾನಗರ, ಬೆಂಗಳೂರು–560008, ದೂರವಾಣಿ: 5299234, 2213737<br>ಫಾಕ್ಸ್: 080–5274598 |

Digitised by Bharatavani, CIIL

| | | | |
|---|---|---|---|
| 5 | ಪ್ರೊ. ಮೋಹನ್ ಅಗಾಷೆ, ನಿರ್ದೇಶಕರು, ಡಿ.ಎ.ಟಿ.ಇ 55, ಮುಕುಂದ್ ನಗರ್, ಆಲೂಕೇಶ್ವರ್ ವೆಸ್ಟ್, ಪುಣೆ ಪುಣೆ–411037, ದೂರವಾಣಿ: 022–5650137 | 11 | ಶ್ರೀ ಬಹರೂಲ್ ಇಸ್ಲಾಂ, ನೀಗಲ್ ಥಿಯೇಟರ್, ಜೊರೋನಿ ಪಥ್, ಆರ್ ಜಿ ಬರೂಹಾ ರಸ್ತೆ, ಗೌಹಾತಿ–781005 ದೂರವಾಣಿ: 0361–204802 |
| 6 | ಶ್ರೀ ಕ್ಷೇತ್ರಿ ಜುಗೀನದ್ರೋ, ನಿರ್ದೇಶಕರು ಮಣಿಪುರಿ ಎನ್‌ಸೆಂಬಲ್, ಸಂಗ್‌ಜಮೈ, ವಾಂಗ್ಮಾ ಕ್ಷೇತ್ರ ಲೈಕ, ಇಂಫಾಲ–795001 ದೂರವಾಣಿ: 0385–228275 | 12 | ಶ್ರೀ ಭಾಲಾವಂತ್ ಠಾಕೂರ್, ನಟ್‌ರಂಗ್, ಮುನಿಸಿಪಲ್ ಬಿಲ್ಡಿಂಗ್, ಬಾಂಗೇವಾಲ ಗಲಿ, ಪಾಲೇನ್ ರಸೆ, ಜಮ್ಮು–180001, ದೂರವಾಣಿ: 0191–578337, ಫಾಕ್ಸ್: 0191–542640, 462013, 462300 |

**ಮೂಲ: ಆರ್.ಕೆ. ಸೂದ್**
**ಅನು: ಡಾ. ರತ್ನಮ್ಮ ಕೆ.ಎಸ್.**

## ಮಕ್ಕಳ ಸಾಹಿತ್ಯ

ಮಕ್ಕಳ ಅದಮ್ಯ ಕುತೂಹಲ ಮತ್ತು ತಿಳಿಯಬೇಕೆಂಬ ತೀವ್ರತೆಗೆ ಶಾಲೆಯಾಗಲಿ, ಪಠ್ಯಪುಸ್ತಕಳಾಗಲಿ ಅವರನ್ನು ತೃಪ್ತಿಗೊಳಿಸಲು ಸಾಕಾಗುವುದಿಲ್ಲ. ಇದು ಪಠ್ಯಪುಸ್ತಕಗಳಿಗೂ ಮತ್ತು ಸಾಮಾನ್ಯ ಜ್ಞಾನ ಮತ್ತು ಮನೋರಂಜನೆಗಾಗಿ ಬರೆದ ಪುಸ್ತಕಗಳಿಗೂ ಇರುವ ಮೂಲಭೂತ ವ್ಯತ್ಯಾಸ. ಶೈಕ್ಷಣಿಕ ವ್ಯವಸ್ಥೆಗೆ ಅನುಗುಣವಾಗಿ ಸಿದ್ಧಾಂತಪರವಾದ ಜ್ಞಾನ ವನ್ನು ಪಠ್ಯಪುಸ್ತಕಗಳು ಕಲಿಸುವ ಗುರಿ ಹೊಂದಿದೆ. ಮತ್ತೊಂದೆಡೆ ಇತರ ಪುಸ್ತಕಗಳ ಗುರಿ ಮಕ್ಕಳಿಗೆ ಮನೋರಂಜನೆಯನ್ನು ಒದಗಿಸುವುದು, ಮಾನಸಿಕ ಮತ್ತು ಬೌದ್ಧಿಕ ತೃಪ್ತಿ ಒದಗಿಸಿ ಅವರ ಆಂತರಂಗಿಕ ಜೀವನದ ಸಂವೇದನೆಗಳಿಗೆ ಮತ್ತು ಕುತೂಹಲಗಳಿಗೆ ಪರಿಹಾರ ಒದಗಿಸುವುದು. ಮಕ್ಕಳ ಆಸಕ್ತಿಗಳು, ಪ್ರವೃತ್ತಿಗಳು ಮತ್ತು ಮನಶ್ಶಾಸ್ತ್ರಗಳು ಈ ವಿಧದ ಇತರ ಪುಸ್ತಕಗಳ ಆಧಾರವಾಗಿರುತ್ತವೆ.

**ಮಕ್ಕಳ ಸಾಹಿತ್ಯ ಎಂದರೇನು?:** ಡಾ॥ ಹೆನ್ರಿ ಸ್ಟೀಲ್ ಕಮ್ಮಾಗರ್ ಎಂಬಾತ ಈ ಪ್ರಶ್ನೆ ಎತ್ತಿದ್ದಾನೆ. ಮಕ್ಕಳ ಸಾಹಿತ್ಯ ಹಾಗೆಂದರೇನು? ಅದಕ್ಕೆ ಉತ್ತರವಾಗಿ ಆತ ಹೀಗೆ ಹೇಳುತ್ತಾನೆ:

"ಈ ಪದದಿಂದ ನಮಗೆಲ್ಲಾ ಏನು ಅರ್ಥವಾಗಿದೆ? ಇದು ಚಿಕ್ಕವರಿಗಾಗಿಯೇ ವಿಶೇಷವಾಗಿ ಬರೆದ ಸಾಹಿತ್ಯವೆ? ಕಾಲ್ಪನಿಕ ಮತ್ತು ಅದ್ಭುತ ಕಥೆಗಳೇ? ಶಿಶುಗೀತೆಗಳೇ? ಮತ್ತು ಹಾಡುಗಳೇ? ಶಿಷ್ಟಾಚಾರದ ಮತ್ತು ಮೆಚ್ಚುಗೆ ಅಥವಾ ನೈತಿಕ ಪ್ರೇರಣೆಯ ಪುಸ್ತಕಗಳೇ? ಶಾಲೆ ಅಥವಾ ಆಟದ ಮೈದಾನದ ಅಥವಾ ಬಹು ದೂರದಲ್ಲಿ ಸಾಹಸಗಾರನ ಕಥೆಗಳೇ? ಅದು ಇವೆಲ್ಲವೂ ಆಗಿವೆ. ಖಚಿತವಾಗಿಯೂ ಅದಕ್ಕಿಂತಲೂ ಅತಿ ಹೆಚ್ಚು. ಅದು ಇಡಿಯಾದ ವಿಶಾಲವಾದ ಸಾಹಿತ್ಯದ ಅಂಗವಾಗಿ ಮಕ್ಕಳು ಅನುಸರಿಸುವಂಥದ್ದು/ಅಳವಡಿಸಿಕೊಳ್ಳುವಂಥದ್ದು. ತಮ್ಮ ಹಿರಿಯರೊಡನೆ ಸಾಮಾನ್ಯವಾಗಿ ಹಂಚಿಕೊಳ್ಳುವ ಆದರೆ ಕೆಲವೊಮ್ಮೆ ತಮ್ಮಲ್ಲಿಯೇ ಇಟ್ಟುಕೊಂಡಿರುವಂಥದ್ದು. ಅದು ಪದಶಃ ಅವರದೇ ಸಾಹಿತ್ಯ. ಅದಕ್ಕಾಗಿಯೇ ಅದು ತಂದೆತಾಯಿಗಳದಲ್ಲ, ಶಿಕ್ಷಕರದಲ್ಲ, ಬೋಧಕರದಲ್ಲ, ಕಡೆಗೆ ಲೇಖಕರದೂ ಅಲ್ಲ. ಆದರೆ ಮಕ್ಕಳೇ ತಮ್ಮ ಸಾಹಿತ್ಯ ಹೇಗಿರಬೇಕೆಂದು ತಾವೇ ತೀರ್ಮಾನಿಸಿಕೊಳ್ಳುವಂಥದ್ದು."

ಆದರೆ ಲಿಲಿಯನ್ ಸ್ಮಿತ್ ಇನ್ನೂ ಒಂದು ಹೆಜ್ಜೆ ಮುಂದುವರಿದು ಹೀಗೆ ಹೇಳಿದ್ದಾನೆ:

"ಮಕ್ಕಳಿಗಾಗಿ ಬರೆದ ಎಲ್ಲಾ ಪುಸ್ತಕಗಳು ಅಗತ್ಯವಾಗಿ ಸಾಹಿತ್ಯವಾಗಿರುವುದಿಲ್ಲ. ಅಥವಾ ಮಕ್ಕಳ ಪುಸ್ತಕದ ಗ್ರಹಿಕೆಯು ಮಗುವಿನ ಭಾವನೆಯಲ್ಲಿ ಪುಸ್ತಕದ ಅಭಿಪ್ರಾಯದೊಡನೆ ತಾಳೆಯಗುವುದೂ ಇಲ್ಲ. ಮಕ್ಕಳ ಪುಸ್ತಕಗಳೆಂದರೆ ವಯಸ್ಕರು ಪರಭಾವಿಸಿದ ವಸ್ತುವನ್ನು ಕುರಿತದ್ದು ಎಂದು ತಿಳಿದವರೇ ಹೆಚ್ಚು ಇದ್ದಾರೆ. ಈ ಅಭಿಪ್ರಾಯವು ಬಾಲ್ಯವನ್ನು ಕುರಿತ ತಪ್ಪು ಗ್ರಹಿಕೆಯಿಂದಲೋ ಉದ್ಭವಿಸಿರುತ್ತದೆ. ಆದರೆ ಮಕ್ಕಳ ಜ್ಞಾನ ಅನುಭವಗಳು ವಯಸ್ಕರದ್ದಕ್ಕಿಂತ ಭಿನ್ನವಾಗಿರುತ್ತವೆ. ಅವರ ದೃಷ್ಟಿಯಲ್ಲಿ ವಿಭಿನ್ನ ಪ್ರಪಂಚವಿರುತ್ತದೆ– ಒಂದು ಮಗುವಿನ ಜಗತ್ತಿನಲ್ಲಿ ಮೌಲ್ಯಗಳು ಮಕ್ಕಳದೇ ಅರ್ಥದಲ್ಲಿ ವ್ಯಕ್ತಗೊಂಡಿರುತ್ತವೆಯೇ ಹೊರತು ವಯಸ್ಕರ ಅನುಭವಗಳಿಗೆ ಸೇರಿದಂಥವುಗಳಾಗಿರುವುದಿಲ್ಲ." (ಸ್ಮಿತ್ 1953)

ಹೀಗೆ ಮಕ್ಕಳ ಸಾಹಿತ್ಯವೆಂದರೆ ಮಕ್ಕಳು ಸ್ವ ಇಚ್ಛೆಯಿಂದ ಇಷ್ಟಪಡುವಂಥದ್ದು. ನೀವೇನು ಮಕ್ಕಳ ಸಾಹಿತ್ಯ ಎಂಬ ಶೀರ್ಷಿಕೆಯಲ್ಲಿ ಬರೆಯುತ್ತೀರೋ ಅದೇ ಆಗಬೇಕಾಗಿಲ್ಲ. ಮಕ್ಕಳಿಂದ ಸ್ವೀಕೃತವಾಗದೇ ಇರುವಂತಹ ಹಲವು ಅಂತಹ ಮಕ್ಕಳ ಪುಸ್ತಕಗಳನ್ನೇ ಪ್ರಪಂಚದ ಎಲ್ಲಾ ಭಾಷೆಗಳಲ್ಲೂ ಬರೆಯಲಾಗಿದೆ. ವಯಸ್ಕರಿಗಾಗಿ ಬರೆದದ್ದನ್ನೂ ಮಕ್ಕಳು ಇಷ್ಟಪಡದಿರಬಹುದು ಎಂದೇನೂ ಇಲ್ಲ. ಇಷ್ಟಪಡುವಿಕೆಯ ಪಕ್ಷದಲ್ಲಿ ಮಕ್ಕಳು ಸ್ವತಂತ್ರರು. ವಯಸ್ಕರಿಗೆ ಬರೆದ ಪುಸ್ತಕವನ್ನು ಅವರು ಇಷ್ಟಪಡಬಹುದಾದರೆ

Digitised by Bharatavani, CIIL

ಖಂಡಿತ ಅವರು ಅದನ್ನು ಒಪ್ಪಿಕೊಳ್ಳುವರು ಮತ್ತು ತಮ್ಮದನ್ನಾಗಿ ಮಾಡಿಕೊಳ್ಳುವರು. ಮಕ್ಕಳಿಗಾಗಿಯೇ ಬರೆದ 'ಗಲೀವರನ ಪ್ರಯಾಣಗಳು', 'ರಾಬಿನ್‌ಸನ್ ಕ್ರೂಸೋ', 'ಸಿಂದ್‌ಬಾದ್ ದಿ ಸೈಲರ್', 'ಅಡ್ವೆಂಚರ್ಸ್ ಆಫ್ ಟಾಮ್ ಸಾಯರ್', 'ಡೇವಿಡ್ ಕಾಪರ್‌ಫೀಲ್ಡ್' ಇತ್ಯಾದಿ ಪುಸ್ತಕಗಳನ್ನು ಶ್ರೇಷ್ಠ ಮಕ್ಕಳ ಸಾಹಿತ್ಯ ಕೃತಿಗಳೆಂದು ಪರಿಗಣಿಸಲಾಗಿದೆ. ವಾಸ್ತವವಾಗಿ ತಮ್ಮ ಸುತ್ತಲಿನ ಜಗತ್ತನ್ನು ಮಕ್ಕಳು ತಮ್ಮದೇ ಆದ ದೃಷ್ಟಿಕೋನದಲ್ಲಿ ವೀಕ್ಷಿಸುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ ತಮ್ಮ ಮನಸ್ಸಿನಲ್ಲಿ ಇರುವ ಕ್ಯಾಮರಾದ ಮಸೂರವು ಅವರಿಗೆ ಬೇಕಾದಂತೆ ಪ್ರತಿ ಕ್ಷಣದ, ಪ್ರತಿ ವ್ಯಕ್ತಿಯ, ಪ್ರತಿ ವಸ್ತುವಿನ ಮತ್ತು ಅವರ ವಾತಾವರಣದ ಪ್ರತಿ ಸನ್ನಿವೇಶದ ಚಿತ್ರಗಳನ್ನೂ ತೆಗೆಯುತ್ತದೆ ಮತ್ತು ಅವುಗಳನ್ನು ಅವರ ಭಾವನೆಗಳಿಗೆ, ಚಿಂತನೆಗಳಿಗೆ ಮತ್ತು ದೃಷ್ಟಿಕೋನ ಗಳಿಗೆ ಹೊಂದಿಕೆಯಾಗುವಂತೆ ಅನ್ವಯಗೊಳಿಸಿ ತೋರಿಸುತ್ತದೆ. ವಯಸ್ಕರು ಹೇಳಿದ ಮೌಲ್ಯಗಳನ್ನು, ಸಂಗತಿ ವಿವರಣೆ ಗಳನ್ನು, ವ್ಯಕ್ತಿಯೊಬ್ಬನ ಗುಣಗಳನ್ನು ಅಥವಾ ಅನುಭವಗಳನ್ನು ಎತ್ತಿ ಹೇಳುವುದನ್ನು ಮಕ್ಕಳು ಒಪ್ಪಿಕೊಳ್ಳಬಹುದು ಎಂಬುದೇನೂ ಅಗತ್ಯವಲ್ಲ. ಆದ್ದರಿಂದ ಮಕ್ಕಳ ಚಿಂತನೆಯ ಪ್ರಸ್ತುತದ ಜ್ಞಾನ, ಅವರ ದೃಷ್ಟಿಕೋನ ಆಸಕ್ತಿಗಳು ಮತ್ತು ಮನೋಧರ್ಮಗಳಿಗೆ ಅನುಗುಣವಾಗಿ ಬರೆದುದೇ ಮಕ್ಕಳ ಪುಸ್ತಕದ ತಿರುಳಾಗಿರುತ್ತದೆ. ಆದ್ದರಿಂದ ಮಕ್ಕಳ ಸಾಹಿತ್ಯದ ಲೇಖಕನಿಗೆ ಮಕ್ಕಳೊಡನೆ ಆತ್ಮೀಯವಾಗಿ ಬೆರೆಯುವ ಮೂಲಕ ಅವರ ಮನಸ್ಸನ್ನು ಸಂಪೂರ್ಣವಾಗಿ ಅರಿಯುವುದು ಅಗತ್ಯವಿದೆ. ಆಗ ಮಾತ್ರ ಮಕ್ಕಳಿಗಾಗಿ ಆತ ಬರೆಯಬಹುದು. ಮಕ್ಕಳನ್ನು ಆಳವಾಗಿ ಅರಿತಂತಹ ಜ್ಞಾನವಿರುವ ಮಕ್ಕಳ ಸಾಹಿತ್ಯವೇ ನಿಜವಾದ ಮಕ್ಕಳ ಸಾಹಿತ್ಯ. ಅಂತಹ ಸಾಹಿತ್ಯ ನಿಸ್ಸಂದೇಹವಾಗಿ ಮಕ್ಕಳಿಂದ ಸ್ವೀಕೃತ ವಾಗುತ್ತದೆ. ಆದರೆ ಲೇಖಕನು ಇಂಥದಕ್ಕೆ ಎಲ್ಲಿಯೂ ತನ್ನನ್ನು ತೆರೆದುಕೊಳ್ಳದಿರುವ ಪರಿಸ್ಥಿತಿಯಿದೆ. ನೈತಿಕ ಬೋಧನೆ, ತಥಾ ಕಥಿತ ಸಾಂಪ್ರದಾಯಿಕ ಮೌಲ್ಯಗಳು, ಅವರದೇ ಆದ ಅನುಭವಗಳು (ನಾವು ಮಕ್ಕಳಾಗಿದ್ದಾಗ ಇದನ್ನು ಮಾಡುತ್ತಿದ್ದೆವು, ಅಥವಾ ಅದನ್ನು ಮಾಡುತ್ತಿದ್ದೆವು ಇತ್ಯಾದಿ) ಮಕ್ಕಳಿಗೆ ಎಂದೂ ಸೀಕೃತವಾಗುವುದಿಲ್ಲ. ಮಕ್ಕಳು ತಮ್ಮ ಕಲ್ಪನೆಯ ಎತ್ತರದಲ್ಲಿ ಸಾಗಲು ಸಹಾಯವಾಗುವ ಅಥವಾ ಅವರದೇ ಅನುಭವದ ಆಧಾರದಿಂದ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವಂತಹ ವಸ್ತುವುಳ್ಳ ಪುಸ್ತಕಗಳನ್ನು ಓದಲು ಬಯಸುತ್ತಾರೆ.

ಗುರುದೇವ ರವೀಂದ್ರನಾಥ ಠಾಕೂರರು ಬಹಳ ಸ್ಪಷ್ಟ ಶಬ್ದಗಳಲ್ಲಿ ತಮ್ಮ ಕಾಲದ ಮಕ್ಕಳ ಸಾಹಿತ್ಯದ ಅಗತ್ಯ ಮತ್ತು ಪ್ರಾಮುಖ್ಯವನ್ನು ಕುರಿತು ಬರೆದಿದ್ದಾರೆ. ಅವರ ಆಲೋಚನೆಗಳು ಇಂದಿಗೂ ಉಪಯುಕ್ತ ಮತ್ತು ಮುಖ್ಯವಾಗಿವೆ. ಅವರು ಹೀಗೆ ಬರೆಯುತ್ತಾರೆ:

"ಶಿಕ್ಷಣವನ್ನು ಸೀಮಿತಗೊಳಿಸಿದರೆ ಮಕ್ಕಳ ಮನಸ್ಸು ಬೆಳೆಯುವುದಿಲ್ಲ. ಇಲ್ಲಿ ನಾವು ಅವಶ್ಯ ಶಿಕ್ಷಣವನ್ನು ಸ್ವಕಲಿಕಾ ವಿಷಯಗಳ ಜೊತೆ ಸೇರಿಸಲೇಬೇಕು. (ಅವರ ಅರ್ಥದಲ್ಲಿ ಸ್ವಕಲಿಕಾ ವಿಷಯಗಳು ಎಂದರೆ ಮಕ್ಕಳ ಸಾಹಿತ್ಯ ಎಂದರ್ಥ.) ಏಕೆಂದರೆ ಭಾರತೀಯ ಸಾಹಿತ್ಯದಲ್ಲಿ ಆಗಿನ್ನೂ ಈ ಪದದ ಬಳಕೆ ಅಸ್ತಿತ್ವಕ್ಕೆ ಬಂದಿರಲಿಲ್ಲ. ಇಲ್ಲವಾದರೆ ಮಗುವಿನ ಅರಿವು ಬೆಳೆಯುವುದಿಲ್ಲ. ಆ ಮಗು ವಯಸ್ಸಿನಲ್ಲಿ ದೊಡ್ಡವನಾದರೂ ಬುದ್ಧಿಯಲ್ಲಿ ಮಾತ್ರ ಯಾವಾಗಲೂ ಮಗುವೇ ಆಗಿ ಉಳಿಯುತ್ತಾನೆ. ಆದರೆ ದುರದೃಷ್ಟವಶಾತ್ ನಮಗೆ ಸಮಯದ ಅಭಾವ ಹೆಚ್ಚು. ಎಷ್ಟು ಸಾಧ್ಯವೋ ಅಷ್ಟು ಬೇಗನೆ ನಮಗೆ ಅವನು ವಿದೇಶ ಭಾಷೆಯನ್ನು ಕಲಿಯುವ ಸಾಮರ್ಥ್ಯ ಪಡೆಯಬೇಕು, ಪರೀಕ್ಷೆ ಪಾಸಾಗಿ ಕೆಲಸ ಮಾಡಲು ಪ್ರಾರಂಭಿಸಬೇಕು. ಆದ್ದರಿಂದ ನಮ್ಮ ಬಾಲ್ಯದ ಆರಂಭದಿಂದಲೂ ಸರಿಯೋ ತಪ್ಪೋ ಎಂದು ಕೂಡ ನೋಡದೆ ಉಸಿರುಗಟ್ಟುವಂತೆ ಕಲಿಯುವುದರ ಹೊರತು ಮತ್ತೇನನ್ನೂ ಮಾಡಲು ಸಮಯವಿರುವುದಿಲ್ಲ. ಒಂದು ವೇಳೆ ಮಕ್ಕಳ ಕೈಯಲ್ಲಿ ಒಂದು ಮನರಂಜನೆಯ ಪುಸ್ತಕವಿದ್ದರೆ ಅದನ್ನು ಓದಲು ಬಿಡದೆ ಕಿತ್ತುಕೊಳ್ಳಲಾಗುವುದು. ಮತ್ತು ಅಗಾಗ ಅಂತಹ ಪುಸ್ತಕವಾದರೂ ಎಲ್ಲಿ ಸಿಗಬೇಕು? ಅಂತಹ ಪುಸ್ತಕಗಳು ಬಂಗಾಳಿ ಭಾಷೆಯಲ್ಲಿ ಇಲ್ಲವೇ ಇಲ್ಲ. (ಆಸಮಯದಲ್ಲಿ ಭಾರತದ ಎಲ್ಲ ಭಾಷೆಗಳಲ್ಲೂ ಇದೇ ಸ್ಥಿತಿ ಇತ್ತು.) ರಾಮಾಯಣ ಮತ್ತು ಮಹಾಭಾರತ ಖಂಡಿತ ಇದ್ದವು. ಮಕ್ಕಳಿಗೆ ಬಂಗಾಳಿ ಭಾಷೆಯನ್ನು ಸರಿಯಾಗಿ ಕಲಿಸದ ಕಾರಣ ಅವರು ತಮ್ಮ ಇಚ್ಛೆ ಬಂದಂತೆ, ಮನೆಯಲ್ಲಿ ಬಂಗಾಳಿ ಪದ್ಯಗಳನ್ನು ಓದಿ ಸಂತೋಷ ಪಡಲು ಆಗುತ್ತಿರಲಿಲ್ಲ. ಮತ್ತು ಬಡ ಮಕ್ಕಳಿಗೆ ತಕ್ಕ ಮಟ್ಟಿಗಿನ ಇಂಗ್ಲಿಷ್ ತಿಳಿಯದ ಕಾರಣ ಆ ಭಾಷೆಯ ಮಕ್ಕಳ ಪುಸ್ತಕಗಳನ್ನು ಓದಲೂ ಆಗುತ್ತಿರಲಿಲ್ಲ. ಇಂಗ್ಲಿಷ್ ಪುಸ್ತಕಗಳಲ್ಲಿ ಮಕ್ಕಳಿಗೆ ಆಂಗ್ಲ ಸಾಂಸ್ಕೃತಿಕ ವಾತಾವರಣ ಕಂಡುಬರುತ್ತಿತ್ತು. ಪರಿಣಾಮವಾಗಿ ಬಂಗಾಳದ ನಮ್ಮ ಮಕ್ಕಳಿಗೆ ವ್ಯಾಕರಣ, ನಿಘಂಟು, ಭೂಗೋಳ ಇತ್ಯಾದಿಗಳನ್ನು ಬಿಟ್ಟರೆ ಮತ್ತೇನೂ ದೊರಕುತ್ತಿರಲಿಲ್ಲ. ಇತರ ಪುಸ್ತಕಗಳು ಹೆಚ್ಚೇನೂ ಇರಲಿಲ್ಲ. ಇದರಿಂದ ಅವರ ಮಾನಸಿಕ ಜೀರ್ಣಶಕ್ತಿ ಕ್ಷೀಣಿಸಿತು . . . ನಮ್ಮ ಚಿಂತನೆಗಳು, ಕ್ರಿಯೆಗಳು, ಜವಾಬ್ದಾರಿಗಳು ವಯಸ್ಕರಿಗೆ ಎಷ್ಟಿರಬೇಕೋ ಅಷ್ಟು ಪ್ರಬುದ್ಧತೆ ಪಡೆದಿರಲಿಲ್ಲ. ಆದ್ದರಿಂದ ನಮ್ಮ ಬೌದ್ಧಿಕ ಬಡತನವನ್ನು ಅತಿಶಯೋಕ್ತಿ, ಡಾಂಭಿಕ ಪ್ರದರ್ಶನ (ತೋರಿಕೆ–ಸೋಗು) ಮತ್ತು ಆತ್ಮಪ್ರಸಂಸೆಗಳಿಂದ ಮುಚ್ಚಕೊಳ್ಳಲು ಯತ್ನಿಸಿದೆವು. ಇದಕ್ಕೆಲ್ಲಾ ಮುಖ್ಯ ಕಾರಣ ನಮ್ಮ ಬಾಲ್ಯದಿಂದಲೂ ಶಿಕ್ಷಣದಲ್ಲಿ ನಮಗೆ ಸಂತೋಷ, ರಂಜನೆಗಳೇ ಇರುತ್ತಿರಲಿಲ್ಲ. ಯಥಾವತ್ತಾಗಿ ಅಗತ್ಯವಾಗಿರುವುದನ್ನು ಕಂಠಪಾಠ ಮಡುತ್ತಿದ್ದೆವು. ಈ ಮೂಲಕ ನಾವು ಅಗತ್ಯವಾದುದನ್ನು ನಿರ್ವಹಿಸಿಕೊಳ್ಳುತ್ತಿದ್ದೆವೇ ಹೊರತು ನಾವು ಬೆಳೆಯಲಾಗಲಿಲ್ಲ. ನಾವು ಗಾಳಿಯಿಂದ ಬದುಕಲಾರೆವು. ಅದಕ್ಕೆಂದೇ ನಮಗೆ ಆಹಾರ ಬೇಕು. ಆದರೆ ನಾವು ಆಹಾರವನ್ನು ಜೀರ್ಣಿಸಿಕೊಳ್ಳಲು ನಮಗೆ ಗಾಳಿ ಬೇಕು. ಅದೇ ರೀತಿ ಒಂದು ಪಠ್ಯಪುಸ್ತಕವನ್ನು ಚೆನ್ನಾಗಿ ಜೀರ್ಣಿಸಿಕೊಳ್ಳಲು ನಾವು ಪಠ್ಯೇತರ ಪುಸ್ತಕಗಳನ್ನು ಹೆಚ್ಚು ಓದಬೇಕು. (ಎಂದರೆ ಮಕ್ಕಳ ಸಾಹಿತ್ಯ). ಸಂತೋಷಕ್ಕಾಗಿ ಓದುವುದೆಂದರೆ ಅಪರೋಕ್ಷವಾಗಿ ಓದುವ ಶಕ್ತಿಯ ಬೆಳವಣಿಗೆ. ಗ್ರಹಣ ಶಕ್ತಿಯ ವೃದ್ಧಿಗೆ, ಸ್ಮರಣ

Digitised by Bharatavani, CIIL

ಶಕ್ತಿಯನ್ನು ಹೆಚ್ಚಿಸಿ ಕೊಳ್ಳಲು. . .ಚಿಂತನ ಶಕ್ತಿ ಸಾಮಾನ್ಯ ಹಾಗೂ ಸ್ವಾಭಾವಿಕ ನಿಯಮಗಳಿಂದ ಬರುತ್ತದೆ. . .ಆದರೆ ಮಕ್ಕಳ ಪಾಲಿಗೆ ಉಳಿದಿರುವುದೇನು? ಬೌದ್ಧಿಕ ಶಕ್ತಿಯ ಲಾಭ, ಗ್ರಹಿಕೆಯ ಬೆಳವಣಿಗೆ ಮತ್ತು ನಡೆವಳಿಕೆಯ ಸಾಮರ್ಥ್ಯವನ್ನು ಈ ರೀತಿಯಲ್ಲಿ ಒಂದು ಮಗು ಪಡೆಯಬಲ್ಲದೇ? ಆ ಮಗು ನಿಸ್ತೇಜವೂ, ಶಕ್ತಿಹೀನವೂ, ತೆಳು ಹಾಗೂ ಪೋಷಣೆಯ ನ್ಯೂನತೆಗಳಿಂದ ಬಳಲುತ್ತಾ ಉಳಿಯುವುದಿಲ್ಲವೇ? ಅದು ಬೆಳೆದಾಗ ತನ್ನ ಸ್ವಂತಿಕೆಯಲ್ಲಿಯೇ ಏನನ್ನಾದರೂ ಕಟ್ಟಿಕೊಳ್ಳಬಲ್ಲುದೇ? ತನ್ನ ಸ್ವ ಸಾಮರ್ಥ್ಯದಿಂದ ಆ ಮಗು ಅಡೆತಡೆಗಳನ್ನು ಪರಿವರ್ತಿಸಲು ಸಾಧ್ಯವಾಗುವುದೇ? ನೆನಪಿನಲ್ಲಿಟ್ಟುಕೊಳ್ಳುವ, ಇತರರನ್ನು ಅನುಕರಣೆ ಮಾಡುವ, ಮತ್ತು ಇತರರಿಗೆ ಗುಲಾಮನಾಗಿರುವುದನ್ನು ಮಾತ್ರ ಅವನು ಕಲಿತಿರುವುದಿಲ್ಲವೇ? ನಿಸ್ಸಂದೇಹವಾಗಿ ಯೋಚಿಸುವ ಶಕ್ತಿ ಮತ್ತು ಕಲ್ಪಿಸಿಕೊಳ್ಳುವುದು ಈ ಎರಡೂ ಜೀವನದ ಪಯಣಕ್ಕೆ ಅತ್ಯವಶ್ಯ. ಒಂದುವೇಳೆ ನಾವು ನಿಜವಾದ ಮನುಷ್ಯರಾಗಿರಬೇಕಾದರೆ ಅವೆಡಕ್ಕೂ ನಮ್ಮ ಜೀವನದಲ್ಲಿ ಸ್ಥಾನ ನೀಡಲೇಬೇಕು. ಚಿಂತನೆಗೆ ಮತ್ತು ಕಲ್ಪನೆಗೆ ಬಾಲ್ಯದಿಂದಲೂ ಒತ್ತು ನೀಡದೇ ಹೋದರೆ, ಅವುಗಳ ಇಲ್ಲದಿರುವಿಕೆ ಜೀವನದಲ್ಲಿ ಅವುಗಳ ಅಗತ್ಯ ಬೇಕಾದಾಗ ಸ್ಥಿತಿ ಬಹು ಚಿಂತಾಜನಕವಾಗಿರುತ್ತದೆ ಎಂಬುದು ಪ್ರಾಚೀನವಾದ ಅನುಭವದ ಮಾತು. ಆದರೆ ನಮ್ಮ ಇಂದಿನ ಶಿಕ್ಷಣದಲ್ಲಿ ಇವೆರಡಕ್ಕೂ ಬಾಗಿಲು ಮುಚ್ಚಿದೆ. ಆದ್ದರಿಂದ ಮಕ್ಕಳು ನಿಜವಾಗಿ ಮನುಷ್ಯರಾಗಿರಬೇಕೆಂದು ನಮಗೆ ಅನಿಸಿದರೆ ಈ ಚಟುವಟಿಕೆಗಳು ಬಾಲ್ಯದಿಂದಲೇ ಆರಂಭವಾಗಬೇಕು. ಇಲ್ಲವಾದರೆ ಅವರು ಯಾವಾಗಲೂ ಮಕ್ಕಳೇ ಆಗಿರುತ್ತಾರೆ. ಬಾಲ್ಯದಿಂದಲೇ ಅವರಿಗೆ ಸ್ವತಂತ್ರವಾಗಿ ಚಿಂತನೆ ಮತ್ತು ಕಲ್ಪನೆಗಳ ಶಕ್ತಿಗಳನ್ನು ಉಪಯೋಗಿಸಲು ಅವಕಾಶಗಳನ್ನು ನೀಡಬೇಕು. ಅವರು ಕೇವಲ ಜ್ಞಾಪಕ ಶಕ್ತಿಯ ಮೇಲೆ ಅವಲಂಬಿತರಾಗಿರಬಾರದು. ಬೆಳಗಿನಿಂದ ಸಂಜೆಯವರೆಗೂ ಭೂಮಿಯನ್ನು ಉಳುತ್ತಾ ಕಲ್ಲುಗಳನ್ನು ಪಡೆಮಾಡುವ, ತೆನೆ ಬಡಿಯುವ ಹಾಗೆ ಜ್ಞಾಪಕಶಕ್ತಿ ಮತ್ತು ಪರೀಕ್ಷೆಗಳಿಗೆ ಇವಿಷ್ಟೇ ಸಾಕಾಗುವುದಿಲ್ಲ. ಇವುಗಳಿಂದ ನಮ್ಮ ಅಮೂಲ್ಯ ಜೀವನದ ಭೂಮಿಗಳಲ್ಲಿ ಚಿನ್ನವನ್ನು ಪಡೆಯಲಾಗುವುದಿಲ್ಲ.

ಬಾಲ್ಯದಿಂದಲೂ ಭಾವನಾತ್ಮಕ ಶಿಕ್ಷಣದೊಡನೆ ಭಾಷಾ ಶಿಕ್ಷಣಕ್ಕೆ ಸೌಲಭ್ಯವಿದ್ದರೆ ಜೀವನದ ಪ್ರಯಾಣವು ಭಾವನೆಗಳಿಂದ ನಿಯಂತ್ರಿತವಾಗಿದ್ದರೆ ಆಗ ಮಾತ್ರ ಜೀವನದಲ್ಲಿ ನಿಜವಾದ ಹೊಂದಾಣಿಕೆ ಸಾಧ್ಯ. ಆಗ ಮಾತ್ರ ನಮ್ಮ ನಡೆವಳಿಕೆಗಳು ಸಹಜವಾಗಿದ್ದು ಮಾನವೀಯ ನಡೆವಳಿಕೆ ಯಾಗುತ್ತವೆ ಮತ್ತು ಎಲ್ಲಾ ಕ್ಷೇತ್ರಗಳಲ್ಲೂ ಸರಿಯಾದ ಪ್ರತಿಫಲಗಳನ್ನು ನಿರೀಕ್ಷಿಸಬಹುದು."

**ಮಗುವಿನ ವಿಕಾಸದಲ್ಲಿ ಮಕ್ಕಳ ಸಾಹಿತ್ಯದ ಮಹತ್ವ:** ಮಕ್ಕಳ ವಿಕಾಸದಲ್ಲಿ ಮಕ್ಕಳ ಸಾಹಿತ್ಯದ ಪಾತ್ರವು ಬಹು ಮುಖ್ಯ ವದುದು ಎಂಬ ವಿಷಯ ಮಕ್ಕಳ ಮನೋವಿಜ್ಞಾನಿಗಳಿಂದ ಮಾನ್ಯವಾಗಿದೆ. ಸಹಜವಾದ ರೀತಿಯ ಅದರ ಬೆಳವಣಿಗೆಯ ಅನುಭವದಿಂದ ಒಂದು ಮಗುವಿನ ಕಲ್ಪನಾ ಶಕ್ತಿಯು ಬೆಳೆಯುತ್ತದೆ. ವ್ಯಕ್ತಿಯ ಜೀವನದ ವಾತಾವರಣ ಬೆಳೆದಂತೆ, ಅವನು ಕಷ್ಟಕರ ಸನ್ನಿವೇಶಗಳನ್ನು ಎದುರಿಸುತ್ತಾನೆ. ಈ ಸನ್ನಿವೇಶಗಳಿಂದ ಪಡೆದ ನೇರ ಅನುಭವಗಳು ಭವಿಷ್ಯದೆಡೆಗೆ ಸಾಗಲು ಅವನಿಗೆ ಮಾರ್ಗದರ್ಶಿಸುತ್ತವೆ. ಅದು ಅವನ ಅನುಭವಗಳಿಗೆ ಬೆಂಬಲ ನೀಡುತ್ತದೆ ಮತು ಆತನನ್ನು ಜಾಗೃತಗೊಳಿಸುತ್ತದೆ. ಅವನ ಮನಸ್ಸಿನಲ್ಲಿ ಹೊಸ ಕುತೂಹಲಗಳನ್ನು ಅದು ಸೃಷ್ಟಿಸುತ್ತದೆ. ಅವನಿಗೆ ಈಗಾಗಲೇ ಇರುವ ಕುತೂಹಲಗಳಿಗೂ ಉತ್ತರ ಕೊಡುತ್ತದೆ. ಮಕ್ಕಳ ಸಾಹಿತ್ಯ, ಪದ್ಯ, ಕಥೆ, ನಾಟಕ ಅಥವಾ ಕಾದಂಬರಿ ಯಾವುದೇ ರೂಪದಲ್ಲಿರಲಿ ಅದರ ಗುಣಗಳಿಂದ ಮಗುವಿನ ಮನಸ್ಸು ಪ್ರಭಾವ ಗೊಳ್ಳುತ್ತದೆ. ಮತ್ತೊಂದೆಡೆ ಪದ್ಯವು ಅವನ ಕಲ್ಪನೆಗೆ ರೂಪ ನೀಡುತ್ತದೆ. ಇನ್ನೊಂದೆಡೆ ಅವನಲ್ಲಿ ಸಂವೇದನೆಗಳನ್ನು ಸೃಷ್ಟಿಸುತ್ತದೆ. ಅವನ ತಾಳ, ಲಯ ಮತ್ತು ಸಂಗೀತ ಜ್ಞಾನಗಳನ್ನು ವೃದ್ಧಿಗೊಳಿಸುತ್ತದೆ. ಅದು ಅನುಕರಣೆ ಮಾಡವ ಪ್ರೇರಣೆಯನ್ನು ತೃಪ್ತಿಗೊಳಿಸುತ್ತದೆ. ನಾಟಕವು ಅಭಿನಯ, ಚಲನೆ, ಕ್ರಿಯೆ ಮತ್ತು ಸಕಾಲದ ಅರಿವನ್ನು ಹೆಚ್ಚಿಸುತ್ತದೆ. ಅದು ಅವನ ಮನಸ್ಸಿನಂತೆ ನಿರ್ಭಯದಿಂದ ಮಾತನಾಡಲು ಪ್ರೋತ್ಸಾಹಿಸುತ್ತದೆ. ಕಥೆ ಮತ್ತು ಕಾದಂಬರಿ ಮಗುವಿನ ಮನಸ್ಸು ಮತ್ತು ಕಲ್ಪನೆಗಳ ಮೇಲೆ ಪರಿಣಾಮ ಬೀರುತ್ತವೆ. ಕಥೆಗಳಲ್ಲಿ ಅವನನ್ನು ಕಾಡುತ್ತಿರುವ ಪ್ರಶ್ನೆಗಳು ಮತ್ತು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುತ್ತಾನೆ. ಕೆಲವು ವೇಳೆ ಕಥೆಯ ಪಾತ್ರಗಳೊಡನೆ ಅವರು ತಮ್ಮನ್ನು ಗುರುತಿಸಿ ಕೊಳ್ಳುತ್ತಾರೆ. ಕಥೆಗಳು ಮತ್ತು ಕಾದಂಬರಿಗಳು ಅವರ ಮನರಂಜನೆಯ ಅಗತ್ಯಗಳನ್ನು ಉತ್ತಮವಾಗಿ ಪೂರೈಸುತ್ತವೆ. ಅವುಗಳ ಮೂಲಕ ಅವರು ಅನೇಕ ಕಾಲ್ಪನಿಕ ಪ್ರದೇಶಗಳಿಗೆ ಪ್ರಯಾಣ ಮಾಡುವ ಸಾಮರ್ಥ್ಯ ಪಡೆಯುತ್ತಾರೆ. ಜೀವನದ ಬಗ್ಗೆ ಅವರ ದೃಷ್ಟಿಕೋನ ರೂಪುಗೊಳ್ಳುತ್ತದೆ. ಆದ್ದರಿಂದ ಮಕ್ಕಳ ವಿಕಾಸದಲ್ಲಿ ಕಥೆಗಳು ಮತ್ತು ಕಾಲ್ಪನಿಕ ಕಥೆಗಳ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ಪರಿಗಣಿಸಲಾಗಿದೆ.

ಆದರೆ ಬದಲಾಗುತ್ತಿರುವ ಕಾಲಕ್ಕೆ ಅನುಸಾರವಾಗಿ ಕಥೆಗಳನ್ನು ಮಕ್ಕಳಿಗೆ ನೀಡಬೇಕಾಗಿದೆ ಎಂಬ ಎಚ್ಚರಿಕೆಯನ್ನು ಮನಃಶಾಸ್ತ್ರಜ್ಞರು ಮತ್ತು ಶಿಕ್ಷಣತಜ್ಞರು ಹೊಂದಿದ್ದಾರೆ. ಪ್ರಾಚೀನ ಕಥೆಗಳನ್ನು ಮಕ್ಕಳಿಗೆ ಕೊಟ್ಟರೆ ಅವುಗಳನ್ನು ಅಗತ್ಯಕ್ಕೆ ತಕ್ಕಂತೆ ಪರಿಷ್ಕರಿಸುವುದರಿಂದ ಮಕ್ಕಳು ಅವುಗಳಲ್ಲಿ ಆಧುನಿಕ ಸಂದರ್ಭಕ್ಕೆ ಅನುಗುಣವಾಗಿರುವ ಸಂವೇದನೆಗಳು, ಆಲೋಚನೆಗಳು ಮತ್ತು ಸಂದೇಶಗಳನ್ನು ಅರಿಯಬಹುದು. ಹಲವು ವೇಳೆ ಕಾಲ್ಪನಿಕ ಮತ್ತು ಆಧಾರವಿಲ್ಲದ ಕಥೆಗಳು ಮಕ್ಕಳ ಸೂಕ್ಷ್ಮ ಮನಸ್ಸಿನ ಮೇಲೆ ಅವೈಜ್ಞಾನಿಕ ವಿಷಯಗಳನ್ನೂ ನಂಬುವ ಮನೋಭಾವ ಮೂಡಿಸುತ್ತವೆ ಎಂದು ಪ್ರಸಿದ್ಧ ಶಿಕ್ಷಣತಜ್ಞೆ ಮಾರಿಯಾ ಮಾಂಟೆಸ್ಸರಿ ನಂಬಿದ್ದರು. ಬಾಲ್ಯದ ಅಭಿಪ್ರಾಯಗಳು ಶಾಶ್ವತವಾಗಿರುತ್ತವೆ. ಆದ್ದರಿಂದ ಮಗುವಿನ ಮನಸ್ಸಿನಲ್ಲಿ ಉಳಿದುಬಿಡುವ ಅವೈಜ್ಞಾನಿಕ ನಂಬಿಕೆಗಳನ್ನು ಮುಂದೆ ತೊಡೆದು ಹಾಕುವುದು ಕಷ್ಟವಾಗುತ್ತದೆ. ಮಕ್ಕಳ ಕಲ್ಪನೆಯ ವಿಕಾಸದಲ್ಲಿ ಕಥೆಗಳ ಪ್ರಾಮುಖ್ಯದ ದೃಷ್ಟಿಯಿಂದ ಪ್ಲೇಟೋ ಕುಟುಂಬದ ಎಲ್ಲಾ ವಯಸ್ಕ ಹೆಂಗಸರೂ ಉತ್ತಮ ಕಥೆಗಳನ್ನು ಕಲಿಯುವಂತೆ ಮಾಡಬೇಕು ಮತ್ತು ಅವರು ಅವೇ ಕಥೆಗಳನ್ನು ಮಾತ್ರ ಮಕ್ಕಳಿಗೆ ಹೇಳುವಂತೆ ನಿರ್ದೇಶಿಸಬೇಕು ಎಂದಿದ್ದಾನೆ.

Digitised by Bharatavani, CIIL

ಪ್ಲೇಟೊ ಪ್ರಕಾರ, ಅನೈತಿಕ ಅಭಿಪ್ರಾಯಗಳನ್ನು ಮನಸ್ಸಿನಲ್ಲಿ ಮೂಡಿಸುವಂತಹ ಕಥೆಗಳನ್ನು ದೇಶದ ಅಧಿಕಾರಿಗಳೂ ಕೂಡಾ ಹೇಳಲು ಬಿಡಬಾರದು.

ಮಗುವಿನ ರಚನಾತ್ಮಕ ವಿಕಾಸಕ್ಕೆ ಸಹಾಯಕವಾಗುವಂತೆ ಕಥೆಗಳನ್ನು ನಾಟಕೀಯವಾಗಿ ಹೇಳಬೇಕು. ಮತ್ತು ಮಕ್ಕಳಿಗೆ ಅದನ್ನು ಅಭಿನಯಿಸಲು ಅವಕಾಶ ನೀಡಬೇಕು. ಮಗುವಿನ ಹೊರ ಪ್ರಪಂಚದಲ್ಲಿ ಮಗುವಿನ ಅಭಿನಯಕ್ಕೆ ಬಹಳ ಮಹತ್ವವಿದೆ. ಅದು ಅವನ ಜ್ಞಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಅಭಿನಯದ ಮೂಲಕ ಹಲವು ಅಸ್ಪಷ್ಟ ವಿಷಯಗಳು ಸ್ಪಷ್ಟವಾಗುತ್ತವೆ ಮತ್ತು ಅದರಿಂದ ಒಂದು ಸಂಗತಿಯು ಅತ್ಯಂತ ಸೂಕ್ಷ್ಮ ವಿವರಗಳನ್ನು ಪರಿ ಗಣಿಸುವಂತೆ ಮಗು ಕಲಿಯುತ್ತದೆ. ಮಗುವಿನ ರಚನಾತ್ಮಕ ಕಲ್ಪನೆಯು ಗುರಿ-ಕೇಂದ್ರಿತವಾಗಿರುತ್ತದೆ. ವಿಶಿಷ್ಟ ದೃಷ್ಟಿ ಕೋನದಿಂದ ಮಗು ಚಿಂತಿಸಲು ಆರಂಭಿಸುತ್ತದೆ. ಅಭಿನಯದಿಂದ ವಾಸ್ತವತೆ ಮತ್ತು ಕಲ್ಪನೆಗಳ ನಡುವಣ ವ್ಯತ್ಯಾಸವನ್ನು ಗುರುತಿಸಲು ಮಗುವಿಗೆ ಸಾಧ್ಯವಾಗುತ್ತದೆ. ಅಭಿನಯಿಸುತ್ತಿರುವಾಗಲೇ, ಮಗುವಿಗೆ ತಾನಾಗಲೀ, ಸನ್ನಿವೇಶಗಳಾಗಲೀ ನಿಜವಲ್ಲವೆಂದು ತಿಳಿಯುತ್ತದೆ. ಅಭಿನಯಿಸುವುದರಿಂದ ಮಗುವಿನ ನಿಜವಾದ ಆಲೋಚನೆಗಳು ಬೆಳೆಯುತ್ತವೆ. ಮಗುವಿನ ಕಲ್ಪನೆಗಳು ಸಂತೋಷದಾಯಕವಾಗಿರುತ್ತವೆ. ಮತ್ತು ಅದರಿಂದ ಮಗು ರಚನಾತ್ಮಕ ಚಟುವಟಿಕೆಗಳಿಂದ ಕೌಶಲಗಳನ್ನು ಹೊಂದಲು ಆರಂಭಿಸುತ್ತದೆ.

ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಪದ್ಯಗಳು, ಕಥೆಗಳು, ನಾಟಕ ಇತ್ಯಾದಿ ಮಕ್ಕಳ ಸಾಹಿತ್ಯದ ಪ್ರಕಾರಗಳು ಸಹಾಯಕವೂ ಉಪಯುಕ್ತವೆಂದೂ ಸಾಬೀತಾಗಿವೆ ಎಂಬುದು ಸ್ಪಷ್ಟವಾಗಿದೆ. ಮಕ್ಕಳ ಸಾಹಿತ್ಯ ಕೇವಲ ಅವನನ್ನು ಮನರಂಜಿಸುವುದಷ್ಟೇ ಅಲ್ಲ. ಅದು ಅವನ ಗೆಳೆಯನಂತೆ ಅವನೊಡನೆ ಮಾತನಾಡುತ್ತದೆ ಮತ್ತು ಕೇಳುತ್ತದೆ. ಅದು ಅವನ ಮಾರ್ಗದರ್ಶಿಯಾಗುತ್ತದೆ ಮತ್ತು ಪರಿಹಾರಗಳನ್ನು, ಸಲಹೆಗಳನ್ನು ಸೂಚಿಸುತ್ತದೆ. ಅದು ಸರಿ ಮತ್ತು ತಪ್ಪುಗಳ ಮಧ್ಯೆ ವ್ಯತ್ಯಾಸವನ್ನು ತಿಳಿಸಲು ಸಹಾಯಕವಾಗುತ್ತದೆ. ಮಗುವಿನಲ್ಲಿ ನಿರ್ಧಾರಗಳು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತದೆ ಮತ್ತು ಕೊನೆಗೆ ಅದು ಅವನದೇ ಸಾಹಿತ್ಯವಾಗಿ ಪರಿಣಮಿಸುತ್ತದೆ.

ಭಾರತದಲ್ಲಿ ಮಕ್ಕಳ ಸಾಹಿತ್ಯವು ಇಪ್ಪತ್ತನೆಯ ಶತಮಾನದಲ್ಲಿ ಬಹುವಾಗಿ ಬೆಳೆದಿದೆ. ಅದರ ಮಹತ್ವ ಮತ್ತು ಉಪಯುಕ್ತತೆ ಕುರಿತು ಜಾಗೃತಿ ಬೆಳೆದಿದೆ. ಆದರೆ ಈ ಪ್ರಕಾರ ಅಭಿವೃದ್ಧಿ ಹೊಂದುತ್ತಿರುವ ದೇಶದ ಶಿಕ್ಷಿತ ವರ್ಗ ಎಷ್ಟು ನಿರೀಕ್ಷಿಸಿತ್ತೋ ಅಷ್ಟು ಬೆಳೆದಿಲ್ಲ ಎಂಬುದು ಸತ್ಯ. ಆದರೆ ಅದು ಶಿಕ್ಷಣ ಮತ್ತು ಸಾಕ್ಷರ ಪ್ರಪಂಚದಲ್ಲಿ ಇನ್ನೂ ಕೆಳಗೇ ಉಳಿದಿದೆ. ಇದು ವಿಶೇಷವಾಗಿ ಸ್ವಾತಂತ್ರ್ಯೋತ್ತರ ಅವಧಿಯ ಬಗ್ಗೆ ಸತ್ಯವಾಗಿದೆ. ಎಪ್ಪತ್ತರ ದಶಕದ ಆರಂಭ ದಿಂದಲೂ ಮಕ್ಕಳ ಸಾಹಿತ್ಯ ಪ್ರವಾಹದೋಪಾದಿ ಬೆಳೆದಿದೆ ಮತ್ತು ಇಂದಿಗೂ ಮುಂದುವರಿದಿದೆ. ಇಪ್ಪತ್ತನೆಯ ಶತಮಾನದಲ್ಲಿ ಮಕ್ಕಳ ಸಾಹಿತ್ಯದ ಅಭಿವೃದ್ಧಿಯು ಪ್ರಪಂಚದಾದ್ಯಂತ ಉನ್ನತಿಗೇರಿದೆ. ಲಿಲಿಯನ್ ಹಾಲ್ಯಾಂಬ್ ಪ್ರಕಾರ:

"ಮಕ್ಕಳು ಇಂದೆಂದಿಗಿಂತಲೂ ಬಹಳಷ್ಟು ಮುದ್ರಣದಿಂದ ಆವೃತಗೊಂಡಿದ್ದಾರೆ. ಎಲ್ಲಿ ನೋಡಿದರೂ ಪ್ರತಿಯೊಬ್ಬರಿಗೂ ಮುದ್ರಣ ಜಗತ್ತು ಕಾಣುತ್ತಿದೆ. ಒಂದಲ್ಲ ಒಂದು ದಿನಪತ್ರಿಕೆ ಇಲ್ಲದ ಮನೆಗಳೇ ಬಹು ಕಡಿಮೆ ಮತ್ತು ಹೆಚ್ಚು ಮನೆಗಳಲ್ಲಿ ವಾರಪತ್ರಿಕೆಗಳನ್ನೂ ಕೊಳ್ಳುತ್ತಿದ್ದಾರೆ. ಮಕ್ಕಳೂ ತಮ್ಮದೇ ಆದ ಕಾಮಿಕ್ಸ್ ಮತ್ತು ನಿಯತಕಾಲಿಕೆ, ಮಾಸಿಕಗಳನ್ನು ಹೊಂದಿದ್ದಾರೆ. ಒಂದು ಮಗುವು ಬುದ್ಧಿವಂತಿಕೆಯಿಂದ ಓದಲು ಸಹಾಯ ಮಾಡುವುದು ಮುಖ್ಯವೇ ಹೊರತು ಕೇವಲ ಪದಗಳನ್ನಷ್ಟೇ ಉಚ್ಚರಿಸಿದರೆ ಸಾಲದು. ಅವನಿಗೆ ತಾನು ಏನು ಓದಿದೆ ಎಂಬುದು ಅರ್ಥವಾಗಬೇಕು. ಸರಳ ಸೂಚನಾ ಬರಹಗಳನ್ನು ಗಮನಿಸುವಷ್ಟು ಸಮರ್ಥನಾಗಿರಬೇಕು. ಚಿಕ್ಕ ಮಕ್ಕಳೂ ಒಂದು ಪುಸ್ತಕವನ್ನು ತಮ್ಮದೆಂದೇ ಹಕ್ಕಿನಿಂದ ಹೇಳುವ ಮತ್ತು ತನ್ನ ಅಧಿಕಾರದ ಮುದ್ರೆಯನ್ನು ಹೊಂದಿರುವ ತನ್ನದೇ ಒಂದು ಪುಸ್ತಕವನ್ನು ತಾನೇ ಓದಲು ಬರೆಯಲು ಮತ್ತು ಅದರಿಂದ ತೃಪ್ತಿ ಪಡೆಯಲು ಸಮರ್ಥನೆಂಬ ಹೆಮ್ಮೆಯಿರಬೇಕು."

ಮಕ್ಕಳು ತಮಗೆ ಇಷ್ಟವಾಗದಿರುವುದನ್ನು ಓದಬೇಕೆಂದು ಬಲವಂತಪಡಿಸಲು ಪ್ರಪಂಚದ ಯಾವ ಶಕ್ತಿಗೂ ಸಾಧ್ಯವಿಲ್ಲ. ಅವರು ತಮ್ಮ ಆಸಕ್ತಿಯ ಸ್ವಾತಂತ್ರ್ಯದ ಹಕ್ಕನ್ನು ತಮ್ಮೆಲ್ಲಾ ಶಕ್ತಿ ಮತ್ತು ಸಂಕಲ್ಪದಿಂದ ದೃಢಪಡಿಸಿ ಕೊಳ್ಳುತ್ತಾರೆ. ಅವರಿಗೆ ತಾವು ಒಂದು ನಿರ್ದಿಷ್ಟ ಪುಸ್ತಕವನ್ನು ಇಷ್ಟಪಡುತ್ತೇನೆ ಅಥವಾ ಇಷ್ಟಪಡುವುದಿಲ್ಲ ಎಂಬುದು ತಿಳಿದಿರುವುದಿಲ್ಲ. ಏಕೆಂದರೆ ಅವರ ತೀರ್ಮಾನವು ಯಾವುದೇ ವಿಶ್ಲೇಷಣೆಯನ್ನು ಆಧರಿಸಿರುವುದಿಲ್ಲ. ಆದರೆ ಯಾವುದೇ ಪುಸ್ತಕವು ಅದರ ಗುಣಮಟ್ಟದಿಂದ ಸಂತೋಷವನ್ನು ನೀಡುವುದೆಂಬ ಅವರ ಅಭಿಪ್ರಾಯವು ನಿಶ್ಚಿತ ವಾಗಿದೆ. ಒಂದು ವೇಳೆ ಅವರಿಗೆ ಸಂತೋಷವಾಗದಿದ್ದರೆ ಅಥವಾ ಆಹ್ಲಾದ ಪಡೆಯದಿದ್ದರೆ ಅವರು ಅದನ್ನು ಓದುವುದಿಲ್ಲ. ಉದಾ: ದೇಶ ಮತ್ತು ಕಾಲಾತೀತವಾದ ಮಕ್ಕಳ ಪುಸ್ತಕಗಳಾದ 'ಆಲಿಸ್ ಇನ್ ವಂಡರ್‌ಲ್ಯಾಂಡ್', 'ಟ್ರೆಷರ್ ಐಲ್ಯಾಂಡ್', 'ಅಡ್ವೆಂಚರ್ಸ್ ಆಫ್ ಟಾಮ್ ಸಾಯರ್' ಮುಂತಾದ ಪುಸ್ತಗಳು ಮಕ್ಕಳನ್ನು ಮಾಂತ್ರಿಕವಾಗಿ ಆಕರ್ಷಿಸುತ್ತಾ, ಸಂತೋಷವನ್ನು ನೀಡುತ್ತಿವೆ. ಮತ್ತು 'ಪೈಡ್ ಪೈಪರ್ ಆಫ್ ಹೇಮಲಿನ್' ಅನೇಕ ವರ್ಷಗಳಿಂದಲೂ ಪ್ರಪಂಚದಾದ್ಯಂತ ಮಕ್ಕಳನ್ನು ಮನರಂಜನೆಗೊಳಿಸುತ್ತಿದೆ. ವರ್ಷ ವರ್ಷವೂ ಮಕ್ಕಳು ಅವುಗಳನ್ನು ಓದುತ್ತಿದ್ದಾರೆ. ಈ ಪುಸ್ತಕಗಳ ಒಳಗೆ ಏನಿದೆ? ಅದು ಅದರ ಲೇಖಕರ ವರ್ಣಿಸಲಸಾಧ್ಯವಾದ ಮೋಹಕವಾದ ನಿರೂಪಣೆಯ ಮೋಡಿ ಯಾಗಿರಬಹುದು. ಆದ್ದರಿಂದ ಮಕ್ಕಳ ಸಾಹಿತ್ಯ ದೈಹಿಕ, ಮಾನಸಿಕ, ಶೈಕ್ಷಣಿಕ ಮತ್ತು ಸಾಮಾಜಿಕ ನಡೆವಳಿಕೆಗಳ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸಿದೆ.

**ಮಕ್ಕಳ ಸಾಹಿತ್ಯ ಸಾಹಿತ್ಯದ ಒಂದು ಪ್ರಕಾರವಾಗಿದೆ:** ಮಕ್ಕಳ ಸಾಹಿತ್ಯದ ಬಗ್ಗೆ ತಪ್ಪು ತಿಳುವಳಿಕೆಯಿದೆ. ವಯಸ್ಕರು ಬರೆದ ಸರಳ ಅಥವಾ ಬಾಲಿಶ ಬರಹವೇ ಮಕ್ಕಳ ಸಾಹಿತ್ಯ ಎಂಬ ಪರಿಕಲ್ಪನೆ ಇಂದಿಗೂ ಇದೆ. ಮಕ್ಕಳ ಸಾಹಿತ್ಯ ತನ್ನದೇ ಸ್ವತಂತ್ರ ಲಕ್ಷಣಗಳನ್ನು

Digitised by Bharatavani, CIIL

ಹೊಂದಿಲ್ಲ ಎಂದು ನಂಬಿರುವ ಜನರಿಗೇನೂ ಕೊರತೆಯಿಲ್ಲ. ಈ ಬಗೆಯ ಚಿಂತನೆ ನಮ್ಮ ವಿಮರ್ಶಕರ ಅನಾದರವನ್ನು ಸೂಚಿಸುತ್ತದೆ. ವಾಸ್ತವವಾಗಿ ಮಕ್ಕಳ ಸಾಹಿತ್ಯವು ಒಂದು ಪ್ರಮುಖ ಸಾಹಿತ್ಯದ ಪ್ರಕಾರವಾಗಿದೆ ಎಂಬುದನ್ನು ಅವರು ಎಂದಿಗೂ ಚಿಂತಿಸಿಯೇ ಇಲ್ಲ. ಈ ಸಂಬಂಧವಾಗಿ ಪಾಶ್ಚಾತ್ಯ ವಿಮರ್ಶಕರು ನಿಸ್ಸಂದೇಹವಾಗಿ ಬಹು ಜಾಗರೂಕರಾಗಿದ್ದಾರೆ. ಈ ಸಾಹಿತ್ಯವು ಬೆಳೆದಂತೆಲ್ಲಾ ಅದರ ಬಗ್ಗೆ ವಿಮರ್ಶಾ ಕೃತಿಗಳನ್ನು ಬರೆದು ಸಮಕಾಲೀನ ಮಕ್ಕಳ ಆಸಕ್ತಿಗಳು ಮತ್ತು ಅವರ ಪುಸ್ತಕಗಳನ್ನು ಕುರಿತು ತಮ್ಮ ಮೌಲ್ಯಮಾಪನ ನೀಡಿದ್ದಾರೆ. ಆದಾಗ್ಯೂ ವಯಸ್ಕರ ಮತ್ತು ಮಕ್ಕಳ ಸಾಹಿತ್ಯದ ರೂಪವೆಲ್ಲವೂ ಒಂದೇ ವಿಧವಾಗಿದೆ. ಮಕ್ಕಳ ಪದ್ಯ, ಕಥೆ, ಕಾದಂಬರಿ ಮತ್ತು ನಾಟಕ ಅಥವಾ ಜೀವನ ಚರಿತ್ರೆ ಅಥವಾ ಸಾಹಸದ ಕಥೆಗಳ ರೂಪದಲ್ಲಿ ಯಾವುದೇ ವ್ಯತ್ಯಾಸ ವಿರುವುದಿಲ್ಲ. ವ್ಯತ್ಯಾಸಗಳು ಅದರ ವಸ್ತು, ನಿರೂಪಣೆ ಮತ್ತು ಭಾಷೆಯಲ್ಲಿ ಇರುತ್ತವೆ. ಈ ಕಾರಣಗಳಿಂದ ಅದು ವಯಸ್ಕರ ಸಾಹಿತ್ಯದಿಂದ ಸ್ವತಂತ್ರವಾದ ತನ್ನ ಅಸ್ತಿತ್ವವನ್ನು ಸೃಷ್ಟಿಸಿದೆ. ಭಾರತದಲ್ಲಿ ಭಾರತೀಯ ಭಾಷೆಗಳ ಸಾಹಿತ್ಯದ ಇತಿಹಾಸದಲ್ಲಿ ಮಕ್ಕಳ ಸಾಹಿತ್ಯದ ಶೈಲಿಯನ್ನು ವಿಮರ್ಶಕರು ಮತ್ತು ಇತಿಹಾಸಜ್ಞರು ಸೇರಿಸಿಕೊಳ್ಳದೇ ಇದ್ದರೂ ಇಪ್ಪತ್ತನೆಯ ಶತಮಾನದ ಎರಡನೆಯ ದಶಕದಿಂದ ಮಕ್ಕಳ ಸಾಹಿತ್ಯ ಪ್ರಾರಂಭವಾಗಿದೆ. ಇಂದು ಬಂಗಾಳಿ, ಹಿಂದಿ, ಮರಾಠಿ, ಗುಜರಾತಿ, ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಅಸ್ಸಾಮಿ, ಒರಿಯಾ, ಉರ್ದು, ಪಂಜಾಬಿ ಭಾಷೆ ಗಳಲ್ಲಿ ಮಕ್ಕಳ ಸಾಹಿತ್ಯ ಶ್ರೀಮಂತವಾಗಿದೆ. ಮಕ್ಕಳ ಸಾಹಿತ್ಯ ಮತ್ತು ಅದರ ವಿವಿಧ ರೂಪಗಳನ್ನು ಕುರಿತು ಈ ಭಾಷೆ ಗಳಲ್ಲಿ ಬಹಳಷ್ಟು ಸಂಶೋಧನಾ ಅಧ್ಯಯನಗಳು ನಡೆದಿವೆ. ಈ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯವನ್ನು ಪ್ರೋತ್ಸಾಹಿಸಲು ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಳಿಯು (ಎನ್.ಸಿ.ಇ.ಆರ್.ಟಿ) ಮಕ್ಕಳ ಅತ್ಯುತ್ತಮ ಪುಸಸ್ತಕಗಳಿಗೆ ಬಹುಮಾನ ನೀಡುತ್ತಿದೆ. ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ ಮತ್ತು ಭಾರತ ಸರ್ಕಾರದ ಪಬ್ಲಿಕೇಷನ್ ಡಿವಿಜನ್ ಅದ್ಭುತವಾದ ಮಕ್ಕಳ ಸಾಹಿತ್ಯವನ್ನು ಸಮೃದ್ಧ ಪ್ರಮಾಣದಲ್ಲಿ ಪ್ರಕಾಶನ ಮಾಡಿದೆ. ರಾಷ್ಟ್ರೀಯ ಬಾಲಭವನ, ನವದೆಹಲಿಯು ಮಕ್ಕಳ ಸಾಹಿತ್ಯದ ಬಗ್ಗೆ ಭಾರತೀಯ ಭಾಷೆಗಳಲ್ಲಿ ವಿವಿಧ ವಿಷಯಗಳನ್ನು ಕುರಿತಂತೆ ಐದು ಪುಸ್ತಕಗಳನ್ನು ಪ್ರಕಾಶನ ಮಾಡಿದೆ. ಅನೇಕ ವಿಶ್ವವಿದ್ಯಾನಿಲಯಗಳು ಮಕ್ಕಳ ಸಾಹಿತ್ಯದ ಸಂಶೋಧನಾ ಅಧ್ಯಯನಕ್ಕೆ ಪಿ.ಎಚ್.ಡಿ ಪದವಿಗಳನ್ನು ಪ್ರದಾನ ಮಾಡಿದೆ ಮತ್ತು ಅನೇಕ ಸಂಶೋಧಕರು ಅದರ ಬಗ್ಗೆ ಕೆಲಸ ಮಾಡುತ್ತಿದ್ದಾರೆ.

ಇಂದು ಮಕ್ಕಳ ಸಾಹಿತ್ಯದ ಪ್ರಾಮುಖ್ಯವನ್ನು ಒಪ್ಪಿಕೊಳ್ಳುವುದಷ್ಟೇ ಅಲ್ಲದೆ ಅದರ ಭಂಡಾರವು ತೀವ್ರವಾಗಿ ವಿಸ್ತಾರಗೊಂಡಿದೆ. ಎಲ್ಲಾ ಭಾಷೆಗಳಲ್ಲೂ ಅನೇಕ ಅಸಾಧಾರಣವಾದ ಬರಹಗಳು ಪ್ರಕಟವಾಗಿವೆ. ಕೆಲವು ಆಯ್ದ ಮಕ್ಕಳ ಸಾಹಿತ್ಯ ಕೃತಿಗಳನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ತಮ್ಮ ಪ್ರೀತಿಯ ಪುಸ್ತಕಗಳಿಗೆ ಹೆಚ್ಚು ಪರಿಚಿತರಾಗುವಂತೆ ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಇತರ ಸಂಸ್ಥೆಗಳು ಮಕ್ಕಳ ಪುಸ್ತಕ ಮೇಳಗಳನ್ನು ಏರ್ಪಡಿಸುತ್ತಿವೆ. ಮಕ್ಕಳ ಸಾಹಿತ್ಯವು ಮಕ್ಕಳಿಗೆ ಅಗತ್ಯವಿದೆ ಎಂದು ಈಗ ತಂದೆ ತಾಯಿಗಳಿಗೆ ಮತ್ತು ಪೋಷಕರಿಗೆ ಅರಿವಾಗಿದೆ. ಈ ರೀತಿಯಲ್ಲಿ ಭಾರತೀಯ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯವು ಒಂದು ಸ್ವತಂತ್ರ ಸಾಹಿತ್ಯಕ ಪ್ರಕಾರ ಎಂದು ಸ್ವೀಕೃತಗೊಂಡಿದೆ.

**ಮಕ್ಕಳ ಸಾಹಿತ್ಯದ ಪ್ರಕಾರದ ಒಂದು ಸಾಮಾನ್ಯ ವಿಮರ್ಶೆ:** ವಸ್ತು, ನಿರೂಪಣೆ, ಭಾಷೆ ಮತ್ತು ಮೂಲಭೂತವಾಗಿ ಮಕ್ಕಳ ಮನಃಶಾಸ್ತ್ರದ ಕಾರಣಗಳಿಂದ, ಮಕ್ಕಳ ಸಾಹಿತ್ಯವು ವಯಸ್ಕರ ಸಾಹಿತ್ಯಕ್ಕಿಂತ ಭಿನ್ನವಾಗಿದೆ ಎಂದು ಈ ಹಿಂದೆ ಹೇಳಲಾಗಿದೆ. ಈ ಮುಂದೆ ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳನ್ನು ವಿಮರ್ಶಿಸಲಾಗಿದೆ. ಈ ವಿಮರ್ಶೆ ಈ ವಿವಿಧ ಪ್ರಕಾರಗಳ ಲಕ್ಷಣಗಳನ್ನು ಇನ್ನೂ ಸ್ಪಷ್ಟಗೊಳಿಸುತ್ತದೆ.

**ಮಕ್ಕಳ (ಹಾಡುಗಳು) ಗೀತೆಗಳು:** ಮಕ್ಕಳ ಹಾಡುಗಳು ಸ್ವಭಾವದಲ್ಲಿ ಗೇಯರೂಪವಾಗಿವೆ. ಮಕ್ಕಳು ಅವುಗಳನ್ನು ಹಾಡುವುದಕ್ಕೆ ಮತ್ತು ಕೇಳುವುದಕ್ಕೆ ಸಂತೋಷಪಡುತ್ತಾರೆ. ರಾಬರ್ಟ್ ಲಿಂಡ್ ಪ್ರಕಾರ:

"ಪದ್ಯದ/ಕಾವ್ಯದ ಸಂತೋಷವು ಆಯ್ದ ಕೆಲವರ ಸ್ವತ್ತಲ್ಲ. ಅದು ಸಾಮಾನ್ಯ ಮಾನವ ಪರಂಪರೆಯ ಒಂದು ಭಾಗವಾಗಿದೆ. ಮಗುವು ಅದನ್ನು ಪ್ರೀತಿಯಿಂದ ಪುನರುಚ್ಚರಿಸುತ್ತ ಮತ್ತು ಲಯಗಳಲ್ಲಿ ಹಾಡುವುದರಿಂದ ಅದರ ಆರಂಭಗಳನ್ನು ನಾವು ಅಲ್ಲಿ ಕಾಣಬಹುದು." (ಲಿಂಡ್, 1921)

**ಪದ್ಯದಿಂದ ಮಕ್ಕಳು ಪಡೆಯುವ ಸಂತೋಷದ ಬಗ್ಗೆ ಆಗ್ನೆಸ್ ರಾಪ್ಲಯರ್ ಅಭಿಪ್ರಾಯ ಹೀಗಿದೆ:**

"ಪದ್ಯ/ಕವನದಿಂದ ಮಕ್ಕಳು ಪಡೆಯುವ ಸಂತೋಷವು ಅಗಧವಾದುದು. ಮತ್ತು ಅದು ನಾನಾ ವಿಧಗಳಲ್ಲಿರುತ್ತದೆ. ರಕ್ತವನ್ನು ಕುದಿಸುವ ರಣೋತ್ಸಾಹ ಪ್ರವೃತ್ತಿ, ಕಿವಿಗಳಲ್ಲಿ ಅನುರಣಿಸುವ ಸಂಗೀತ, ಅರ್ಥ ಹೇಳದ ಕಥೆಗಳ ಮೂಲಕ ಮಕ್ಕಳು ತಿಳಿದಿರುವ ಮತ್ತು ಪ್ರೀತಿಸುವ ಎಲ್ಲಾ ಬಗೆಯ ವಸ್ತು ವಿಷಯಗಳ ಬಗ್ಗೆ ಎಳೆಯ ಹೃದಯಗಳು ಕನಸು ಕಾಣುತ್ತಿರುತ್ತವೆ. ಪದ್ಯದ ವಿಷಯದಲ್ಲಿ ಒಂದು ಮಗುವಿನ ಕಲ್ಪನೆಯು ಅವನ ಭಾವನೆಗಳು ಅವನ ಬುದ್ಧಿವಂತಿಕೆಗಳನ್ನು ಮೀರಿ ಅತಿ ದೂರದವರೆಗೆ, ಎತ್ತರಕ್ಕೆ ಒಯ್ಯುತ್ತವೆ." (ರಾಪ್ಲಯರ್, 1953)

ಅವನಿಗೆ ಕೇವಲ ಆನಂದ ಬೇಕು. ಅವನ ಹೃದಯದಲ್ಲಿ ಸಂತೋಷವನ್ನು ಅವು ಪ್ರವಹಿಸುವಂತೆ ಮಾಡುವುದೇ ಮಕ್ಕಳ ಗೀತೆಗಳ ತಾಳ ಲಯಬದ್ಧತೆಯ ವೈಲಕ್ಷಣವಾಗಿದೆ. ವಾಲ್ಟರ್ ಡಿ.ಲಾ. ಮೇರ್ ಪ್ರಕಾರ ಪದ್ಯದ ಪದಗಳ ಧ್ವನಿಯು ಸಂಗೀತದ ಧ್ವನಿಯನ್ನು ಹೋಲುತ್ತದೆ. ಅವುಗಳು ಕೇಳುವುದರಿಂದ ಸಂತಸ ಮತ್ತು ಆಹ್ಲಾದದಿಂದ ಅವುಗಳ ಆರೋಹಣ, ಅವರೋಹಣ ಮತ್ತು ಹರಿವ ಬಗೆ ಮತ್ತು ಮೌನ ಮತ್ತು ಪ್ರತಿಧ್ವನಿ ಹಕ್ಕಿಗಳು ಹಾಡಿದಂತೆ ಇರುತ್ತವೆ. (ಡಿ.ಲಾ.ಮೇರ್)

ಮಕ್ಕಳ ಪದ್ಯಗಳಲ್ಲಿ ಶಬ್ದಗಳು ವಿಶೇಷ ಪ್ರಾಮುಖ್ಯತೆ ಪಡೆದಿವೆ. ಅಲ್ಲಿ ಸಂಗೀತದ ಸ್ವರಗಳನ್ನು ಹೋಲುವಂತೆ ಪದಗಳ

Digitised by Bharatavani, CIIL

ಜೋಡಣೆ ಇರುತ್ತದೆ. ಆದರೆ ಮಕ್ಕಳ ಪದ್ಯಗಳಲ್ಲಿ ಕೇವಲ ಸಂಗೀತದ ಶಬ್ದಗಳಿರಬೇಕೆಂದಿಲ್ಲ ಅಥವಾ ಅವುಗಳು ಕೇವಲ ಸಂಗೀತ ಪದಗಳೇ ಆಗಬೇಕೆಂದಿಲ್ಲ. ಆದಾಗ್ಯೂ, ಮಕ್ಕಳ ಪದ್ಯ ಬರೆಯುವ ಅದರ ಲಯಬದ್ಧತೆ ಯಿಂದಾಗಿ ಮಕ್ಕಳ ಮನಸ್ಸು ಪ್ರಭಾವಗೊಳ್ಳುವಂತಹ ಅದು ಸಂತೋಷ ಪಡುವಂತಹ ಪದ್ಯದ ವಸ್ತು, ಭಾವನೆಗಳು ಮತ್ತು ಆಲೋಚನೆಗಳನ್ನು ವಿವರಿಸುವಂತಹ ಪದಗಳನ್ನು ಸೇರಿಸಲು ನಿರೀಕ್ಷಿಸಲಾಗುತ್ತದೆ.

**ಶ್ರೀ ನಿರಂಕರ್ ದೇವ್ ಸೇವಕ್‌ಅವರ ಅಭಿಪ್ರಾಯ ಹೀಗಿದೆ:** ಮಕ್ಕಳ ಎಲ್ಲಾ ಹಾಡುಗಳನ್ನು ರಾಗಗಳ ಲಯ ಬದ್ಧತೆಯಲ್ಲಿ ನಿಯಂತ್ರಿಸಿ ಹಾಡಲಾಗುವುದಿಲ್ಲ. ಆದರೆ, ಮಕ್ಕಳು ಲಯಬದ್ಧವಾಗಿ ಆರಂಭಿಸಿದರೂ ತಮ್ಮದೇ ಆದ ರೀತಿಯಲ್ಲಿ ಹಾಡುವರು. ಆದರೆ, ವೈಯುಕ್ತಿಕ ಸಂವೇದನೆಗಳ ಅಭಿವ್ಯಕ್ತಿಯ ದೃಷ್ಟಿಕೋನದಿಂದ ದೊಡ್ಡವರು ಮತ್ತು ಮಕ್ಕಳ ಹಾಡುಗಳ ಮಧ್ಯೆ ಅಗಾಧ ವ್ಯತ್ಯಾಸವಿದೆ. ದೊಡ್ಡವರ ಹಾಡುಗಳಲ್ಲಿ ಕವಿಯು ತನ್ನ ಆಂತರಿಕ ಅನುಭವಗಳಿಂದ ಸ್ಫೂರ್ತಿಗೊಂಡಿರುತ್ತಾನೆ. ಆದರೆ ಮಕ್ಕಳ ಹಾಡುಗಳ ರಚನೆಯಲ್ಲಿ ಅವನು ತನ್ನ ಸ್ವಾನುಭವಗಳಿಂದ ಸ್ಫೂರ್ತಿಗೊಳ್ಳುವುದಿಲ್ಲ. ಅವನ ಸಂವೇದನೆಗಳೇನೂ ಸ್ವ ಅಭಿವ್ಯಕ್ತಿಯನ್ನು ಒತ್ತಾಯಪಡಿಸುವುದಿಲ್ಲ. ಮಕ್ಕಳ ಚಟುವಟಿಕೆಗಳು, ಸಂಜ್ಞೆಗಳು ಮತ್ತು ಅವರ ವಾತಾವರಣ ಮತ್ತು ಇವುಗಳ ಆಧಾರದಿಂದ ಮಕ್ಕಳ ಹಾಡುಗಳನ್ನು ಬಿಡುವಾಗಿ ಮತ್ತು ಸಂತೋಷದಲ್ಲಿರುವ ಕ್ಷಣಗಳಲ್ಲಿ ಬರೆಯುವಲ್ಲಿ ಕವಿಯು ಮಕ್ಕಳ ವಿಷಯಗಳಿಂದಲೇ ಸ್ಫೂರ್ತಿ ಪಡೆದಿರುತ್ತಾನೆ.

ಮಕ್ಕಳ ಗೀತೆಗಳಲ್ಲಿ ಅವರ ಆಸಕ್ತಿ, ಅವರದೇ ಪರಿಸರ, ಅವರು ಪ್ರೀತಿಸಿದ ಪಾತ್ರಗಳು, ತಿಳಿದ ವಸ್ತುಗಳು, ಹಲವು ವಿಚಿತ್ರ ಘಟನೆಗಳು ಅಥವಾ ಚಟುವಟಿಕೆಗಳು ಸಹ ಅಡಕವಾಗಿವೆ. ಅಂತಹ ಶಿಶುಪ್ರಾಸಗಳು ಮತ್ತು ಮಕ್ಕಳ ಗೀತೆಗಳನ್ನು ಎಲ್ಲಾ ಭಾಷೆಗಳಲ್ಲೂ ಬರೆಯಲಾಗಿದೆ. ಮಕ್ಕಳು ಅವುಗಳನ್ನು ಸುಲಭವಾಗಿ ಸ್ಮರಣೆಯಲ್ಲಿ ಇಟ್ಟುಕೊಳ್ಳ ಬಲ್ಲರು ಮತ್ತು ಆಟದಂತೆ ಕಂಠಪಾಠ ಮಾಡಿ ವಾಚಿಸಬಲ್ಲರು. ಮಕ್ಕಳ ಗೀತೆಗಳ ಭಾಷೆಯು ಆಧುನಿಕವಾಗಿರಬೇಕು ಮತ್ತು ಅವರ ಪರಿಸರಕ್ಕೆ, ಸಮಾಜ, ಕುಟುಂಬಕ್ಕೆ ಹೊಂದಿಕೊಳ್ಳುವಂತಿರಬೇಕು. ಅವರಿಗೆ ಪ್ರಾದೇಶಿಕ ಮತ್ತು ಸ್ಥಳೀಯ ಪದಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಬಹುದು. ಅಂತಹ ಹಾಡುಗಳು ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿ ಉಳಿಯುತ್ತವೆ. ಕಠಿಣವಾದ ಮತ್ತು ವ್ಯಂಜನಾಕ್ಷರಗಳ ಗುಚ್ಛವುಳ್ಳ ಪದಗಳನ್ನು ಬಳಸಬಾರದು. ಅವುಗಳನ್ನು ಉಚ್ಚರಿಸಲು ಮಕ್ಕಳಿಗೆ ಕಷ್ಟವಾಗುತ್ತದೆ. ವಸ್ತುಗಳನ್ನು ಆಯ್ಕೆ ಮಾಡುಕೊಳ್ಳುವಾಗ ಮಕ್ಕಳ ಎಳೆಯ ಮೃದು ಮನಸ್ಸಿಗೆ ಹೊಂದುವಂತಹ ಮತ್ತು ಕಚಗುಳಿ ಇಡುವಂತೆ ಮಾಡುವ ಚಿತ್ರಗಳನ್ನು ಮತ್ತು ಕಣ್ಣಿಗೆ ಕಟ್ಟುವಂತೆ ವರ್ಣಿಸುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಮಕ್ಕಳ ಗೀತೆಗಳು ಮಕ್ಕಳ ವ್ಯಕ್ತಿತ್ವ ಮತ್ತು ಸೂಕ್ಷ್ಮ ಪ್ರಜ್ಞೆಯನ್ನು ಬೆಳೆಸುವಲ್ಲಿ ಹೆಚ್ಚು ಸಹಾಯಕವಾಗುತ್ತವೆ.

**ಮಕ್ಕಳ ಕಥೆಗಳು:** ಎಲ್ಲಾ ವಯಸ್ಸಿನ ಮಕ್ಕಳೂ ಕಥೆಗಳನ್ನು ಕೇಳಲು ಮತ್ತು ಓದಲು ಇಚ್ಛಿಸುತ್ತಾರೆ. ಬಾಲ್ಯದಲ್ಲಿ ಅವರಿಗೆ ಒಂದು ಪ್ರಾಣಿ ಅಥವಾ ಒಂದು ಪಕ್ಷಿ ಅಥವಾ ಒಂದು ಕೀಟ ಮಾತನಾಡುವುದು, ವಿಚಿತ್ರವಾಗಿ ವರ್ತಿಸುವುದು ಮತ್ತು ಅವರನ್ನು ನಗಿಸುವಂತೆ ಮಾಡುವ ಕಥೆಗಳನ್ನು ಇಷ್ಟಪಡುತ್ತಾರೆ. ಅದೇ ಕಥೆಯು ಪದ್ಯದ ರೂಪದಲ್ಲಿದ್ದರೆ ಚಿಕ್ಕ ಮಕ್ಕಳು ಅದರ ಕೆಲವು ಸಾಲುಗಳನ್ನು ಪುನರುಚ್ಚರಿಸಲು ಇಚ್ಛಿಸುತ್ತಾರೆ. ಆದ್ದರಿಂದಲೇ ಮನಃ ಶಾಸ್ತ್ರಜ್ಞರು ಮಕ್ಕಳ ಲಯಬದ್ಧವಾದ ಹಂತ ಎಂದು ಅದನ್ನು ಕರೆಯುತ್ತಾರೆ. ಮಕ್ಕಳ ಕಲ್ಪನೆಯು ಬಹು ತೀವ್ರ ವಾದುದು. ತಮ್ಮ ಕಲ್ಪನೆಯನ್ನು ಯಥಾವತ್ತಾಗಿ ಹೇಳಲು ಆರಂಭಿಸುತ್ತಾರೆ. ಈ ವಯಸ್ಸಿನಲ್ಲಿ ಅವರು ಕಲ್ಪನಾತ್ಮಕ ಕಥೆಗಳನ್ನು ಇಷ್ಟಪಡುತ್ತಾರೆ. ಅವರು ಕಿನ್ನರ ಕಥೆಗಳು, ಪ್ರಾಣಿಗಳು ಮತ್ತು ಪಕ್ಷಿಗಳ, ಅರಣ್ಯ, ಕಣಿವೆಗಳು, ಪ್ರಯಾಣದ ಕಥೆಗಳಲ್ಲಿ ಹೆಚ್ಚು ಆಸಕ್ತಿ ತಳೆಯುತ್ತಾರೆ. ಹದಿವಯಸ್ಸಿನ ಹಂತಗಳಲ್ಲಿ ಸಾಹಸ, ಶೌರ್ಯ, ಒಳ್ಳೆಯ ಕೆಲಸಗಳು, ವಿಕ್ರಮ ಇತ್ಯಾದಿ ಕಥೆಗಳನ್ನು ಇಷ್ಟಪಡುತ್ತಾರೆ.

ಮಕ್ಕಳಿಗೆ ಕಥೆಗಳಲ್ಲಿ ಆಕರ್ಷಕ ವಿಷಯವೆಂದರೆ ಈಗ ಏನಾಗಬಹುದು? ಅದು ಎಲ್ಲಿ ನಡೆಯಲಿದೆ? ಅದು ಯಾರಿಗೆ ಆಗಲಿದೆ? ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಮಕ್ಕಳನ್ನು ವೇಗವಾಗಿ ಸಾಗುವ ಕಥನ ಕ್ರಿಯೆಯು ಹೆಚ್ಚು ಆಕರ್ಷಿಸುತ್ತದೆ. ಯಾವುದೇ ಕಥೆಯಲ್ಲಿ ಸ್ಥಳ, ಕಾಲ ಮತ್ತು ಪಾತ್ರಗಳು ಅಗತ್ಯವಾಗಿರುತ್ತವೆ. ಅವುಗಳು ಒಂದು ರೀತಿಯ ವಾಸ್ತವತೆಯ ಸ್ಪರ್ಷ ನೀಡಿ ಅದರ ಸಂತೋಷವನ್ನು ಹೆಚ್ಚಿಸುತ್ತವೆ. ಬಹುಶಃ ಯಾವುದೇ ಓದುಗ ಮಗು ಯಾವುದೇ ಕಥೆಯಲ್ಲಿ ಏಕೆ ಮತ್ತು ಹೇಗೆ ಎಂದು ಘಟನೆಯನ್ನು ತಿಳಿಯಲು ಪ್ರಯತ್ನಿಸುವುದಿಲ್ಲ. ಆದರೆ ಅಂತಹ ಘಟನೆಗಳನ್ನು ಕಥಯಲ್ಲಿ ಸೇರಿಸಿ ಮಕ್ಕಳ ಗಮನ ಪೂರ್ತಿಯಾಗಿ ಅದರಲ್ಲಿ ಕೇಂದ್ರೀಕೃತವಾಗುವಂತೆ ಮಾಡಿ, ಮುಂದೇನು ಎಂಬ ಕುತೂಹಲವನ್ನು ಹಾಗೆಯೇ ಉಳಿಸುವುದು ಲೇಖಕನ ಕೆಲಸ. ಸಾಹಸ, ಅಚ್ಚರಿ ಮತು ಮಾಂತ್ರಿಕತೆ ಕಥೆಗಳ ಅಗತ್ಯ ಸಾಮಗ್ರಿಗಳು. ಒಂದುವೇಳೆ ಕಥೆಯನ್ನು ಓದುತ್ತಿರುವ ಮಗು ಈಗ ಏನಾಗಲಿದೆ ಅಥವಾ ಮುಂದೇನಾಗಬಹುದು ಎಂದು ತಿಳಿಯಲು ಕುತೂಹಲ ಪಡದಿದ್ದರೆ ಕಥೆಯು ಉತ್ತಮವಲ್ಲ ಎಂದು ಅರ್ಥ. ಅಂತಹ ಕಥೆಯು ಮಗುವನ್ನು ನಿರಾಶೆ ಪಡಿಸಬಹುದು ಅಥವಾ ಅರ್ಧದಲ್ಲೇ ಅದನ್ನು ಓದುವುದನ್ನು ನಿಲ್ಲಿಸಬಹುದು. ಏಕೆಂದರೆ ಮಕ್ಕಳು ಕಥೆಯನ್ನು ಮನರಂಜನೆ ಅಥವಾ ಸಂತೋಷಕ್ಕಾಗಿ ಓದುತ್ತಾರೆ. ಈ ಮನರಂಜನೆ ಮತ್ತು ಸಂತೋಷ ವಿವಿಧ ಕಥೆಗಳಲ್ಲಿ ವಿವಿಧ ಮಕ್ಕಳಿಗೆ ವಿವಿಧ ರೀತಿಯದಾಗಿರುತ್ತದೆ. ಮಗುವಿಗೆ ಒಂದು ಕಥೆಯು ನೀಡಿದ ಸಂತೋಷವನ್ನೇ ಮತ್ತೊಂದು ಕಥೆಯು ಒದಗಿಸುವುದಿಲ್ಲ. ಆದರೂ ಆತನಿಗೆ ಅದು ಆಸಕ್ತಿದಾಯಕವಾಗಿರಬಹುದು. ಆಸಕ್ತಿದಾಯಕ ಮತ್ತು ಘಟನೆಗಳ ಚಲನೆಯಷ್ಟೇ ಕಥೆಯೊಂದನ್ನು ಆಸಕ್ತಿಗೊಳಿಸುವ ಕಾರಣವಾಗಬಾರದು. ಓದುಗನಿಗೆ ಅದು ಹೆಚ್ಚು ಸಂತೋಷವನ್ನು ಕೊಡುವ ಮೂಲವೆಂದು ಪರಿಗಣಿಸಬಾರದು. ಒಂದು ಕಥೆಯನ್ನು ಮಗು ಎಷ್ಟು ಸಾರಿ ಓದುತ್ತದೋ ಅದು ಅಷ್ಟು ಸಂತೋಷದಾಯಕ ಕಥೆ ಎಂದು ತಿಳಿಯಬಹುದು. ಘಟನೆಗಳ ಸರಪಣಿಯಿಂದಷ್ಟೇ ಕಥೆಯನ್ನು ಲೇಖಕ ಹಾಗೇ ಮಾಡುವುದಿಲ್ಲ.

Digitised by Bharatavani, CIIL

ಘಟನೆಗಳನ್ನು ಪೂರ್ತಿಯಾಗಿ ಚೆನ್ನಾಗಿ ತಿಳಿದಿದ್ದರೂ, ಅವನು ಪುನಃ ಪುನಃ ಅದೇ ಕಥೆಯನ್ನು ಓದುತ್ತಿದ್ದರೂ ಅವನಿಗೆ ಸಂತಸ ನೀಡುವ ಮತ್ತು ಅವನನ್ನು ಆಕರ್ಷಿಸುವುದರಿಂದ ಅದರಲ್ಲೇನೋ ಇದೆ ಎಂದು ಅರ್ಥವಾಗುತ್ತದೆ. ಇದರೊಡನೆ ನಾವು ಕುತೂಹಲ ಮತ್ತು ಮುಂದೇನಾಗಲಿದೆ ಎಂಬುದರ ಲಕ್ಷಣಗಳನ್ನು ಪರಿಗಣಿಸಿದರೆ ಅವುಗಳು ಆ ಕಥೆಯನ್ನು ಮತ್ತೆ ಮತ್ತೆ ಓದುವಂತೆ ಅವನನ್ನು ಸೆಳೆಯಲಾರವು. ಏಕೆಂದರೆ ಮೊದಲ ಸಾರಿ ಕಥೆಯನ್ನು ಓದಿದಾಗಲೇ ಅವನ ಕುತೂಹಲ ಮುಗಿಯುತ್ತದೆ. ಆದಾಗ್ಯೂ ಮತ್ತೆ ಅದೇ ಕಥೆಯನ್ನು ಓದಲು ಕಾರಣವೇನೆಂದರೆ ಅದರ ಕಾಲ್ಪನಿಕ ವಸ್ತು, ಅದರ ನಿರ್ವಹಣೆ ಮತ್ತು ಅದರ ಅಭಿವ್ಯಕ್ತಿ. ಕಥೆಯನ್ನು ಅಷ್ಟು ಆಕರ್ಷಕವಾಗಿಸಿದ್ದು ಓದುಗ ಮತ್ತೆ ಮತ್ತೆ ಅದನ್ನು ಓದಲು ಎಡೆ ನೀಡಿದ್ದು ಲೇಖಕನ ಕೌಶಲ. ಲೇಖಕನ ಅನುಭವ ಮತ್ತು ಜ್ಞಾನ ಕಥೆಯನ್ನು ಬರೆಯುವಲ್ಲಿ ತಳಹದಿಯಾಗಿದ್ದು ಓದುಗನಿಗೆ ಅದು ಆಕರ್ಷಕವೆನಿಸುವಂತೆ ಮಾಡುವುದಷ್ಟೇ ಅಲ್ಲದೆ ಅದರಲ್ಲಿ ಓದುಗನ ಮನಸ್ಸು ತನ್ನನ್ನು ಗುರುತಿಸಿ, ಸಂತೋಷ ಪಡುತ್ತದೆ. ಪ್ರಪಂಚದ ಮಕ್ಕಳ ಸಾಹಿತ್ಯದ ಭಾಗವಾಗಿರುವ ಮಕ್ಕಳ ಶಾಶ್ವತ ಕಥೆಗಳನ್ನು ಬರೆದಿರುವ– 'ರಾಬಿನ್‌ಸನ್ ಕ್ರೂಸೋ', 'ಅಡ್ವೆಂಚರ್ಸ್ ಆಫ್ ಟಾಮ್ ಸಾಯರ್', 'ಡೇವಿಡ್ ಕಾಪರ್‌ಫೀಲ್ಡ್', 'ಗಲೀವರ್ಸ್ ಟ್ರಾವೆಲ್ಸ್' –ಕಥೆಗಳು ಇಂತಹ ಗುಣಮಟ್ಟವನ್ನು ಹೊಂದಿವೆ. ಅವುಗಳನ್ನು ಇಂದಿಗೂ ಓದುತ್ತಿದ್ದೇವೆ ಮತ್ತು ವರ್ಷಾನುಗಟ್ಟಲೆಯಿಂದ ಈ ಕಥೆಗಳು ಮಕ್ಕಳನ್ನು ಸ್ಫೂರ್ತಿಗೊಳಿಸಿ ಅವುಗಳನ್ನು ಓದುವಂತೆ ಮಾಡುತ್ತಿವೆ.

ಮಕ್ಕಳಿಗಾಗಿ ಕಥೆ ಬರೆಯುತ್ತಿರುವಾಗ, ಲೇಖಕನಿಗೆ ಬಹುದೊಡ್ಡ ಸವಾಲೆಂದರೆ ಕಥೆಯ ವಸ್ತುವಿನ ಆಯ್ಕೆಯದು. ಕಥಾವಸ್ತು ಮಕ್ಕಳ ಸ್ವಂತ ಪ್ರಪಂಚಕ್ಕೆ ಸೇರಿರಬಹುದು, ಯಾವುದೇ ರೀತಿಯಲ್ಲಿ ಅವನ ವರ್ತನೆ, ಆಟ, ತುಂಟಾಟ, ಇಷ್ಟಾನಿಷ್ಟಗಳು, ಶಾಲೆ ಮತ್ತು ಸ್ನೇಹಿತನಿಗೆ ಸಂಬಂಧಿಸಿರಬಹುದು. ಒಂದುವೇಳೆ ಕಥಾವಸ್ತುವನ್ನು ದೊಡ್ಡವರ ಪ್ರಪಂಚ ದಿಂದ ತೆಗೆದುಕೊಂಡಿದ್ದರೆ, ಮಕ್ಕಳಿಗೆ ಸಂಬಂಧಿಸಿದಂತಹ ಪಾತ್ರಗಳು, ಘಟನೆಗಳು ಅಥವಾ ಸ್ಥಳಗಳನ್ನು ಉಪಯೋಗಿಸ ಬಹುದು. ಅದೂ ಅಲ್ಲದೆ, ಲೇಖಕ ತಾನು ಬರೆಯಲಿರುವ ಮಕ್ಕಳ ಸಮಾಜ, ವಯಸ್ಸು ಮತ್ತು ಕಾಲಕ್ಕೆ ಸಂಬಂಧಿಸಿದಂತೆ ವಸ್ತು ಎಷ್ಟು ಅರ್ಥಪೂರ್ಣ ಎಂಬುದನ್ನು ತೀರ್ಮಾನಿಸಬೇಕು. ಆ ಕಾಲದ ಮಕ್ಕಳ ಬುದ್ಧಿವಂತಿಕೆಯ ಪ್ರಮಾಣ ಎಷ್ಟು? ಅವರ ಸಾಮಾಜಿಕ ಮೌಲ್ಯಗಳೇನು? ಎಂಬುದು ವಸ್ತುವಿನ ಆಯ್ಕೆಯನ್ನು ಪ್ರಭಾವಗೊಳಿಸುತ್ತದೆ. ಇಂದಿನ ವಿಜ್ಞಾನ ಪ್ರಪಂಚದಲ್ಲಿ, ವಯಸ್ಸಾದ ಮಹಿಳೆ ಚಂದ್ರನ ಮೇಲೆ ನೂಲುತ್ತಿರುವವಳು, ಅಥವಾ ಚಂದ್ರನ ಮೇಲೆ ಮೊಲ ಮಕ್ಕಳಿಗೆ ನಂಬಲಸಾಧ್ಯವಾದದ್ದು. 1965 ರಲ್ಲಿ ಈ ಬಗೆಯ ಇಷ್ಟಗಳಿರುವ ಲೇಖಕರು ಯಕ್ಷಿಣಿ ಕಥೆಗಳನ್ನು ಮಕ್ಕಳಿಗೆ ಇಂದಿಗೂ ಕೊಡಬಹುದೇ, ಎಂಬ ಚರ್ಚೆಯನ್ನು ಹಿಂದಿಯಲ್ಲಿ ಪ್ರಾರಂಭಿಸಿದರು. ಇದಕ್ಕೆ ಕಾರಣವೆಂದರೆ ಕಥೆಗಳು ಎಂಬ ಪರಿಕಲ್ಪನೆ ನಮಗೆ ಪಾಶ್ಚಾತ್ಯರಿಂದ ಬಂದದ್ದು– ಇಂಗ್ಲಿಷಿನ ಫೇರಿ ಟೇಲ್‌ಗಳ (ಕಿನ್ನರಿ ಕಥೆ) ರೂಪದಲ್ಲಿ. ಅಂಥ ಕಥೆಗಳನ್ನು ಲೇಖಕರು ಪುನಃ ಬರೆದರು ಮತ್ತು ಅಸಂಖ್ಯ ಯಕ್ಷಿಣಿ ಕಥೆಗಳನ್ನು ಮೂಲ ಸಾಹಿತ್ಯದ ಹೆಸರಿನಲ್ಲಿ ಪ್ರಕಟಿಸಿದರು. ಈ ಕಥೆಗಳು ಮಕ್ಕಳಿಗೆ ಒಂದು ಸುಳ್ಳು ಕನಸಿನ ಪ್ರಪಂಚವನ್ನು ತೋರಿಸಿದ್ದವು. ಆದರೆ ಯಕ್ಷಿಣಿ ಕಥೆಗಳ ಅರ್ಥಪೂರ್ಣತೆಯನ್ನು ಲೇಖಕ ಹೀಗೆ ಪ್ರಶ್ನಿಸುತ್ತಾರೆ:

"ಮಕ್ಕಳ ಕಲ್ಪನೆಯ ಬೆಳವಣಿಗೆಯಲ್ಲಿನ ಭ್ರಾಮಕತೆಯ ವೀಕ್ಷಣೆ ಪ್ರಾಮುಖ್ಯದ ದೃಷ್ಟಿಯಿಂದ ಯಕ್ಷಿಣಿ ಕಥೆಗಳ ರಚನೆಯ ಬಗ್ಗೆ ನಮಗೆ ವಿರೋಧವಿಲ್ಲ. ಆದರೆ ನಾವು ಅವುಗಳ ಅವಾಸ್ತವವಾದ ತಿರುಳನ್ನು ಬದಲಾಯಿಸಬಹುದು. ಇಂದಿನ ವೈಜ್ಞಾನಿಕ ಯುಗದಲ್ಲಿ ವಾಸ್ತವಾಧಾರಿತ ವಸ್ತುಗಳು ಮಕ್ಕಳಿಗೆ ಬೇಕಾಗಿರಬಹುದು ಮತ್ತು ಆಧಾರವಿಲ್ಲದ ಕಲ್ಪನೆಯ ಕಥೆಗಳಲ್ಲ." ಆ ಸಂದರ್ಭದಲ್ಲಿ ಈ ಚರ್ಚೆ ಹಲವು ವರ್ಷಗಳು ನಡೆಯಿತು ಮತ್ತು ಅವುಗಳ ಅರ್ಥ ಪೂರ್ಣತೆಯನ್ನು ತೋರಿಸಲು ವಾಸ್ತವತೆಯುಳ್ಳ ಯಕ್ಷಿಣಿ ಕಥೆಗಳನ್ನು ಬರೆಯಲಾಯಿತು. ವಿಜ್ಞಾನದ ಪ್ರಗತಿ ಮತ್ತು ಸಮಾಜದಲ್ಲಿ ಹೆಚ್ಚುತ್ತಿರುವ ವೈಜ್ಞಾನಿಕ ದೃಷ್ಟಿಕೋನ ಈ ಚರ್ಚೆಯನ್ನು ಸಮರ್ಥಿಸಿತು. ಆಧುನಿಕತೆಯ ಆಗಮನವನ್ನು ಅರ್ಥಮಾಡಿಕೊಳ್ಳುವಿಕೆ ಮತ್ತು ವಿಜ್ಞಾನದ ಬಗ್ಗೆ ಹೆಚ್ಚುತ್ತಿರುವ ಆಸಕ್ತಿ ಮಕ್ಕಳನ್ನು ಹಳೆಯ ಯಕ್ಷಿಣಿ ಕಥೆಗಳು ಮತ್ತು ಜನಪದ ಕಥೆಗಳಿಂದ ದೂರವಿರಿಸಿದವು. ಹಿಂದಿ ಭಾಷೆಯ ಮಾಸಿಕ ಪತ್ರಿಕೆ 'ಪರಾಗ್' ಮಕ್ಕಳ ಆಸಕ್ತಿಯಲ್ಲಿ ಬದಲಾವಣೆಯನ್ನು ತರಲೆಂದು ಆಧುನಿಕತೆಯನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುವಂತೆ ಸಂಬಂಧಿಸಿದ ಕಥೆಗಳನ್ನು ಪ್ರಕಟಿಸುವ ಮೂಲಕ ಬಹು ಮುಖ್ಯ ಪಾತ್ರ ವಹಿಸಿತು. ಈ ಬಗೆಯ ಲೇಖಕರು ಮರಾಠಿ ಮತ್ತು ಗುಜರಾತಿ ಲೇಖಕರನ್ನು ಯಕ್ಷಿಣಿ ಕಥೆಗಳ ಅರ್ಥಪೂರ್ಣತೆಯನ್ನು ಕುರಿತು ಚರ್ಚೆಯಿಂದ ಪ್ರಚೋದನೆಗೊಳಿಸಿದರು ಮತ್ತು ಈ ಭಾಷೆಗಳಲ್ಲಿ ಮಕ್ಕಳ ಕಥೆಗಳ ಬರೆವಣಿಗೆಯಲ್ಲಿ ಬಹಳ ಬದಲಾವಣೆಗಳಾದವು. (ಡಿಸೆಂಬರ್ 2001).

ಅದೇ ಅವಧಿಯಲ್ಲಿ ಈ ಬಗೆಯ ಲೇಖಕರು ಮಕ್ಕಳ ಕಥೆಗಳ ತಿರುಳನ್ನು ಕುರಿತಂತೆ ಇನ್ನೊಂದು ಚರ್ಚೆಯನ್ನು ಆರಂಭಿಸಿದರು. ಇಂದಿನ ಮಕ್ಕಳಿಗೆ ಭೂತಗಳ ಮಾಂತ್ರಿಕತೆ ಮತ್ತು ರಾಜ, ರಾಣಿಯರ ಕಥೆಗಳು ಎಷ್ಟು ಅರ್ಥ ಪೂರ್ಣವಾಗಿದೆ? ಈ ಚರ್ಚೆಯು ಕೆಲವು ಕಾಲ ಮುಂದುವರಿಯಿತು. ಈ ವೈಜ್ಞಾನಿಕ ಯುಗದಲ್ಲಿಯೂ ಭಾರತೀಯ ಸಮಾಜದ ಮಕ್ಕಳಿಗೆ ಮೂಢನಂಬಿಕೆಗಳ, ಭೂತಗಳ ಮತ್ತು ಮಂತ್ರಗಾರರ ಕಾಲ್ಪನಿಕ ಕಥೆಗಳನ್ನು ಕೊಡುವುದು ಎಷ್ಟು ಸಮಂಜಸ? ಇದರ ಔಚಿತ್ಯವೇನು? ಎಲ್ಲ ಶಿಕ್ಷಿತ ಜನರು ಈ ಪ್ರಶ್ನೆಯನ್ನು ಸ್ವೀಕರಿಸಿದರು ಮತ್ತು ಇದು ಜನಪದ ಕಥೆಗಳನ್ನು ಆಧರಿಸಿ ಮಕ್ಕಳ ಕಥೆಗಳನ್ನು ಪುನಃ ಬರೆಯುವ ಪ್ರವೃತ್ತಿಯನ್ನು ಕ್ಷೀಣಗೊಳಿಸಿದವು. ಆಗ ಸಾಮ್ರಾಟರು, ರಾಜ ಮತ್ತು ರಾಣಿಯರು, ಗುಲಾಮರು ಇತ್ಯಾದಿ ಕಥೆಗಳನ್ನು ಕುರಿತು ಪ್ರಭುತ್ವ ಮೌಲ್ಯಾಧಾರಿತ ಕಥೆಗಳನ್ನು ಪ್ರಜಾ ಪ್ರಭುತ್ವದಲ್ಲಿ ಬರೆಯುವ ಅರ್ಥಪೂರ್ಣತೆಯ ಬಗ್ಗೆ ಪ್ರಶ್ನೆಗಳು ಎದ್ದವು. ಸುದೀರ್ಘ ಚರ್ಚೆಯ ನಂತರ ಇಂದಿನ ಮಕ್ಕಳಿಗೆ ಪ್ರಜಾಪ್ರಭುತ್ವದ ಮೌಲ್ಯಗಳಾದ ಸಮಾನತೆ, ಭ್ರಾತೃತ್ವ,

Digitised by Bharatavani, CIIL

ಮಾನವತೆಯ ಪ್ರೇಮ ಮತ್ತು ಐಕ್ಯತೆ ಇತ್ಯಾದಿ ಕುರಿತ ಕಥೆಗಳನ್ನು ಕೊಡಬೇಕೆಂದು ಅಭಿಪ್ರಾಯ ಪಡಲಾಯಿತು. ನಮ್ಮ ಭಾರತೀಯ ಕುಟುಂಬಗಳು ಊಳಿಗ ಮಾನ್ಯ ವ್ಯವಸ್ಥೆಯ ಮೌಲ್ಯಗಳಿಂದ ಹೊರಗಿಲ್ಲ ಎಂಬುದು ಬೇರೆ ವಿಷಯ. ಅವುಗಳು ರಾಜ, ರಾಣಿಯರ ಕಥೆಗಳ ಮೂಲಕ ಅನುವಂಶೀಯವಾಗಿ ಬಂದಿವೆ. ಅಧಿಕಾರಶಾಹಿ ಸಂಪ್ರದಾಯ ಮುಂದುವರಿದು ಮಹಿಳೆ ಮತ್ತು ಮಕ್ಕಳು ಯಾವುದೇ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ. (ದೇವಸಾರೆ, 2001)

ಇಂದಿನ ಮಕ್ಕಳ ಸಾಹಿತ್ಯದ ಬೆಳವಣಿಗೆಯಲ್ಲಿ ದೊಡ್ಡ ಬದಲಾವಣೆ ಆಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಇಂದಿನ ಮಕ್ಕಳ ಕಥೆಗಳು ನೇರವಾಗಿ ಮಕ್ಕಳಿಗೆ ಸಂಬಂಧಿಸಿವೆ ಮತ್ತು ಅವು ಮಕ್ಕಳಿಗೆ ಮನರಂಜಕವಾಗಿರುವಂತೆಯೇ ಮಕ್ಕಳ ಸ್ವಂತ ಜಗತ್ತಿನ ಪ್ರಶ್ನೆಗಳಿಗೆ, ಕುತೂಹಲಗಳಿಗೆ ಮತ್ತು ಸಮಸ್ಯೆಗಳಿಗೆ ಉತ್ತರ ನೀಡುತ್ತಿವೆ. ಲೇಖಕ ಮಕ್ಕಳ ಕಥೆಗಳಿಗೆ ವಸ್ತುವನ್ನು ಆಯ್ಕೆಯನ್ನು ಬಹಳ ಜಾಗರೂಕತೆಯಿಂದ ಮಾಡುತ್ತಿದ್ದಾರೆ. ಸ್ವಂತಿಕೆಯ ಜೊತೆಗೆ ಮಕ್ಕಳ ಕಥೆಗಳ ಬರೆವಣಿಗೆಗಳಲ್ಲಿ ಪ್ರಯೋಗಗಳೂ ನಡೆದಿವೆ. ಭಾರತೀಯ ಭಾಷೆಗಳಲ್ಲಿ ಅಂತಹ ಪುಸ್ತಕಗಳಿದ್ದು ಅದರಲ್ಲಿನ ಪಾತ್ರಗಳು ಮಕ್ಕಳಲ್ಲಿಯೇ ಚರ್ಚೆಯ ವಸ್ತುಗಳಾಗಿ ಪರಿಣಮಿಸಿವೆ. ಪ್ರಪಂಚದ ಯಾವುದೇ ಭಾಷೆಯಲ್ಲಿನ ಮಕ್ಕಳ ಸಾಹಿತ್ಯದ ಉತ್ತಮ ಕೃತಿಗಳೊಡನೆ ಅನುಕೂಲಕರವಾಗಿ ತುಲನೆ ಮಾಡಬಹುದಾದಂಥ ಮಕ್ಕಳ ಪುಸ್ತಕಗಳು ಸಹಾ ನಮ್ಮಲ್ಲಿವೆ.

ವಸ್ತುವಿನ ನಂತರ, ಮಕ್ಕಳ ಕಥೆಗಳ ಇತರ ಅಂಶಗಳು ಉದಾಹರಣೆಗೆ ಸಂಭಾಷಣೆಗಳು, ಪಾತ್ರ ನಿರೂಪಣೆ, ಭಾಷೆ ಹಿರಿಯರ ಕಥೆಗಳಿಗಿರುವ ಸಾಹಿತ್ಯಕ ವಿಮರ್ಶಾ ತತ್ವಗಳನ್ನೇ ಆಧರಿಸಿವೆ. ಒಂದು ವ್ಯತ್ಯಾಸವೆಂದರೆ ಅವುಗಳು ಮಕ್ಕಳಿಗೂ ಹೊಂದಿಕೆ ಆಗುವಂತಿವೆ. ಮಕ್ಕಳ ಕಥೆಯೊಂದರಲ್ಲಿ ಘಟನೆಗಳ ಸರಪಣಿ ಮುಂದುವರಿದಂತೆ ತಕ್ಷಣವೇ ಕುತೂಹಲ ಸ್ಫುರಿಸುತ್ತದೆ. ಮಗುವಿನ ಮನಸ್ಸು ನಿರ್ದಿಷ್ಟ ಪಾತ್ರದೊಡನೆ ಆಪ್ತವಾಗಿ ಬೆರೆಯುತ್ತದೆ ಮತ್ತು ಅದು ಆ ಪಾತ್ರಕ್ಕೆ ಒಳ್ಳೆಯ ಅಥವಾ ಕೆಟ್ಟದ್ದನ್ನು ಬಯಸುತ್ತದೆ. ಮುಂದುವರಿದು, ತಾನು ಬಯಸುವಂತೆಯೇ ಘಟನೆ ನಡೆದಾಗ ಸಂತೋಷಪಡುತ್ತದೆ. ಒಂದುವೇಳೆ ಲೇಖಕನು ವಿವರಣೆ, ಕಥನ ಮತ್ತು ಸಂಭಾಷಣೆಯನ್ನು ಬಹಳ ಪರಿಣಾಮ ಕರವಾಗಿ ಬರೆದಿದ್ದರೆ, ಓದುಗ ಮಗು ಕಥೆಯನ್ನು ಗ್ರಹಿಸಿ ಬಹಳ ಶಕ್ತಿ ಪಡೆಯುತ್ತದೆ. ಅದನ್ನು ಸಂಪೂರ್ಣವಾಗಿ ಓದದ ಹೊರತು ಬಿಡುವುದಿಲ್ಲ. ಆದರೆ ಸಂಭಾಷಣೆ ದೀರ್ಘವಾಗಿರಬಾರದು. ಚಿಕ್ಕ ಮತ್ತು ಅರ್ಥಪೂರ್ಣ ಸಂಭಾಷಣೆಗಳು ಸಂದರ್ಭಕ್ಕೆ ಅನುಗುಣವಾದ ಭಾಷೆಯಲ್ಲಿ ಬರೆದಿದ್ದರೆ ಬಹಳ ಪರಿಣಾಮಕಾರಿಯಾಗಿರುತ್ತವೆ. ಕಠಿಣವಾದ ಮತ್ತು ಜಟಿಲವಾದ ಪದಗಳು ಮಾತಿನಲ್ಲಿ ಬಳಕೆಯಲ್ಲಿದ್ದರೆ ಸಂಭಾಷಣೆಯ ಹರಿವು ಕ್ಷೀಣಗೊಳ್ಳುತ್ತದೆ. ಕಥೆಯ ಸ್ವರೂಪಕ್ಕೆ ಅನುಗುಣವಾಗಿ ಸಂಭಾಷಣೆಯು ಸರಳವಾಗಿ ದಿನನಿತ್ಯದ ಭಾಷೆಯಲ್ಲಿರಬೇಕು. ಭಾಷೆ ಕಠಿಣ ವ್ಯಾಕರಣ ಶಿಸ್ತಿನ ಭಾಷೆಯಾಗಿರಬಾರದು. ಅಂತಹ ಸರಳ ಭಾಷೆಯು ಪಾತ್ರಗಳಿಗೆ ಒಂದು ಆಕಾರವನ್ನು ನೀಡಲು ಸಹಾಯಕವಾಗುತ್ತದೆ. ಮಗುವಿನ ಕಥೆಯ ಪಾತ್ರಗಳು ವಸ್ತುವಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತವೆ. ಆದರೆ ಅವುಗಳಲ್ಲಿ ಪ್ರತಿಯೊಂದೂ ತನ್ನದೇ ಆದ ಸ್ವಂತ ವೈಯಕ್ತಿಕ ಲಕ್ಷಣಗಳಿಂದ ಕೂಡಿರುತ್ತದೆ. ಆ ಲಕ್ಷಣವನ್ನು ಒಬ್ಬ ವ್ಯಕ್ತಿ ಅಥವಾ ಒಂದು ಮಗುವಿನಲ್ಲಿ ವಿಶೇಷವಾಗಿ ಕಾಣಬಹುದು. ಅಂತಹ ಪಾತ್ರಗಳ ಬಗ್ಗೆ ಓದುತ್ತಿರುವಾಗ, ಮಗುವು ಅಂತಹುದೇ ಪಾತ್ರವನ್ನು ತನ್ನ ಪರಿಸರದಲ್ಲಿ ಗುರುತಿಸುತ್ತದೆ ಮತ್ತು ಕಥೆಯನ್ನು ಓದುತ್ತಾ ಸಂತೋಷ ಪಡುತ್ತದೆ. ಒಂದು ವೇಳೆ ಭಾಷೆಯು ಸರಳವಾಗಿದ್ದರೆ, ವಾಕ್ಯಗಳು ಚಿಕ್ಕದಾಗಿದ್ದರೆ ಕಥೆಯು ಬಹಳ ಪರಿಣಾಮಕಾರಿಯಾಗಿರುತ್ತದೆ.

**ಮಕ್ಕಳ ಕಾದಂಬರಿಗಳು:** ಮಕ್ಕಳ ಕಾದಂಬರಿಗಳಲ್ಲಿ ಕಥಾ ಸಾಮಗ್ರಿಯು ಮೇಲೆ ಚರ್ಚಿಸಲ್ಪಟ್ಟಿರುವ ರೀತಿಯಲ್ಲೇ ಇರುತ್ತದೆ. ಕಾದಂಬರಿಯಲ್ಲಿ ಕಥಾ ಹರಹು ದೊಡ್ಡದಾಗಿರುವುದೊಂದೇ ಒಂದು ವ್ಯತ್ಯಾಸವಾಗಿರುತ್ತದೆ. ಒಂದು ವೇಳೆ ಅಲ್ಲಿ ಹಲವು ಪಾತ್ರಗಳಿದ್ದರೆ, ಪ್ರತಿಯೊಂದು ಪಾತ್ರವನ್ನೂ ಸ್ಪಷ್ಟವಾಗಿ ನಿರೂಪಿಸಲು ಲೇಖಕ ಸಮರ್ಥವಾಗಿರಬೇಕು. ಮಕ್ಕಳ ಕಾದಂಬರಿಗಳಲ್ಲಿ ಮಕ್ಕಳ ಮನಸ್ಸು ಬೆಳೆಯುವಂತೆ, ಒಂದು ಸಂಗತಿ, ಸ್ಥಳ ಅಥವಾ ಕಾಲವನ್ನು ವಿಶಾಲವಾದ ಹರಹಿನಲ್ಲಿ ವಿವರಗಳನ್ನು ತೆರೆದಿರಿಸಲಾಗುತ್ತದೆ. ಲೇಖಕ ಹೆಚ್ಚು ಕಲ್ಪನೆಯನ್ನು ಬೆಳೆಸಿಕೊಳ್ಳುತ್ತಾನೆ ಮತ್ತು ಅಸ್ತಿತ್ವದ ವಾಸ್ತವಿಕತೆಯಿಂದ ಅನುಭವಗಳ ನಿಧಿಯನ್ನು ಪಡೆಯುತ್ತಾನೆ. ಆದ್ದರಿಂದ ಒಂದು ಕಾದಂಬರಿಯು ವಿವಿಧ ಘಟನೆಗಳನ್ನು, ಅವು ಪ್ರಪಂಚದ ಕುತೂಹಲಗಳನ್ನು ಮತ್ತು ನಿಗೂಢಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಿಸಿಕೊಳ್ಳುವಂತೆ, ಮಕ್ಕಳು ತಮ್ಮದೇ ಆದ ಅನೇಕ ಬಿಡಿಸಲಾಗದ ಪ್ರಶ್ನೆಗಳಿಗೆ ರಹಸ್ಯಗಳನ್ನು ಗೋಜಿಲ್ಲದ ಹಾಗೆ ಬಿಡಿಸಲು ಸಮರ್ಥರಾಗುವಂತೆ ವಿವರಿಸಲಾಗುತ್ತದೆ.

**ಮಕ್ಕಳ ನಾಟಕ:** ಮಕ್ಕಳು ಪರಿಸ್ಥಿತಿಗೆ ಅನುಗುಣವಾಗಿ ಅಭಿನಯಿಸುತ್ತಾರೆ. ಅದೂ ಅಲ್ಲದೆ ನಾಟಕವು ಮಾನವ ನಡೆವಳಿಕೆ ಹಾಗೂ ಸ್ವಭಾವವನ್ನು ಅಧ್ಯಯನ ಮಾಡಲು ಮತ್ತು ಸಂವೇದನೆಗಳನ್ನು ಅಭಿವ್ಯಕ್ತಿಸಲು, ಭಾಷೆಯನ್ನು ಸರಿಯಾಗಿ ಉಚ್ಚಾರ ಮಾಡಲು, ಮಾತನಾಡಲು ಮತ್ತು ಅಭಿನಯಿಸಲು ಕಲಿಸುತ್ತದೆ. ಸಾಮಾನ್ಯವಾಗಿ ತಿಳಿದಿರುವಂತೆ ನಾಟಕದ ಗುರಿಯು, ಶಿಕ್ಷಣ ನೀಡುವುದಲ್ಲ, ಕೆಲವು ಒಳ್ಳೆಯ ಸಂಗತಿಗಳನ್ನು ಕಲಿಸುವುದು ಮಾತ್ರ. ಅದರ ಮುಖ್ಯ ಗುಣ ಮನರಂಜನೆ ನೀಡುವುದು. ಅದು ವೇದಿಕೆಯ ಮೇಲಿರುವ ಪಾತ್ರಗಳೊಡನೆ ಪ್ರೇಕ್ಷಕರು ಸಾಮಾನ್ಯೀಕರಣಗೊಂಡು ಪಡೆಯುವ ತಾದಾತ್ಮ್ಯದ ಮನರಂಜನೆಯಾಗಿರುತ್ತದೆ. ಈ ಕಾರಣದಿಂದ ಮಕ್ಕಳು ಹಲವು ಹತ್ತು ಸಾರಿ ನಾಟಕವನ್ನು ನೋಡಿ ಮನರಂಜನೆ ಪಡೆಯುತ್ತಾರೆ. ಆದರೆ ನಾಟಕದ ವಸ್ತುವು ಅವರಲ್ಲಿ ಜಾಗೃತಿ ಮೂಡಿಸಿ ಅವರ ವ್ಯಕ್ತಿತ್ವವನ್ನು ಬೆಳೆಸುವ ಮತ್ತು ಅನುಭವದ ವಲಯವನ್ನು ವಿಸ್ತರಿಸುವ ಸಾಮರ್ಥ್ಯವನ್ನು ಬೆಳೆಸಲು ಸಹಾಯವಾಗುವಂತೆ ಇರಬೇಕು. ಪೀಟರ್ ಸ್ಲೇಡ್ ತನ್ನ 'Child Drama' (ಮಕ್ಕಳ

Digitised by Bharatavani, CIIL

ನಾಟಕ) ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾನೆ:

"ಮಕ್ಕಳ ನಾಟಕವೆಂದರೆ ಅಭಿನಯ ಮತ್ತು ಸಂಘರ್ಷ. ಅದೊಂದು ದೊಡ್ಡ ಸಮಾರಂಭ. ಎಲ್ಲೆಲ್ಲಿ ಜೀವನವಿದೆಯೋ ಅದೆಂದೂ ನಿಲುಗಡೆಯಾಗದು. ಅದು ಮಾನಸಿಕ ಆರೋಗ್ಯದೊಡನೆ ಆಪ್ತ ಸಂಬಂಧ ಹೊಂದಿರುತ್ತದೆ. ಅದು ಜೀವನವನ್ನು ಬದುಕುವ ಕಲೆ. ವಾಸ್ತವಿಕತೆಯ ಒಂದು ಪ್ರಭಾವಪೂರ್ಣ ವಿಷಯವನ್ನು ಅನುಕೂಲಕರವಾದ ರೀತಿಯಲ್ಲಿ ನಿರೂಪಿಸಿದಾಗ ಅದು ಕೆಲಸ ಮಾಡುತ್ತದೆ. ಮಕ್ಕಳ ನಾಟಕವು ದೊಡ್ಡವರ ನಾಟಕದ ಸಂಗ್ರಹ ರೂಪ ಅಥವಾ ಸರಳ ರೂಪದ ಪ್ರತಿಕೃತಿಯಲ್ಲ. ಶಾಲೆ ಮತ್ತು ಕಾಲೇಜುಗಳಲ್ಲಿ ಆದರ್ಶದ ಮತ್ತು ಶೈಕ್ಷಣಿಕವಾದ ಹಾಗೂ ಅದರಲ್ಲಿ ಮೌಲ್ಯಾಧಾರಿತ ಗುಣಗಳನ್ನುಳ್ಳ ನಾಟಕವೊಂದನ್ನು ಹುಡುಕುವಾಗ ಚಾಚೂತಪ್ಪದೆ ಇದನ್ನೇ ಮಾಡುತ್ತಾರೆ. ಏಕೆಂದರೆ ಆದರ್ಶ ಮತ್ತು ಶಿಸ್ತು ಕೇಂದ್ರಿತವಾದ ಶೈಕ್ಷಣಿಕ ವ್ಯವಸ್ಥೆಯು ಪ್ರಾಚೀನವಾದ ಹಾಗೂ ಪಾರಂಪರಿಕ ಮೌಲ್ಯ ಗಳ ರಕ್ಷಣೆಯ ಜವಾಬ್ದಾರಿ ಹೊಂದಿರುತ್ತದೆ. ಶಾಲೆಯೊಂದರಲ್ಲಿ ನಾಟಕೋತ್ಸವವನ್ನು ಪರದರ್ಶಿಸುವಾಗ ಯಾವುದೇ ಸಮುದಾಯ ಅಥವಾ ಧರ್ಮದ ಬಗ್ಗೆ ವಿಮರ್ಶಿಸುವ ಅಥವಾ ಅಗೌರವ ತೋರಿಸುವಂತಹ ಹಲವು ವಿಷಯಗಳು ಅಡ್ಡಿಯಾಗುತ್ತವೆ. ಶಾಲೆಯ ಅಧಿಕಾರವರ್ಗ ಒಂದು ವೇಳೆ ಮಕ್ಕಳ ಪ್ರಪಂಚಕ್ಕೆ ಸಂಬಂದಿಸಿದ, ಅದರ ಘಟನೆಗಳು, ಸಮಸ್ಯೆಗಳು ಮತ್ತು ಪಾತ್ರಗಳನ್ನು ತೋರಿಸುವುದರಿಂದ ಹಲವು ವೇಳೆ ತಮ್ಮ ಕೆಲಸವನ್ನು ಕಳೆದುಕೊಳ್ಳುವ ಸಂದರ್ಭ ಗಳೂ ಇರುತ್ತವೆ. ಆದ್ದರಿಂದ ಅವರು ಏಕಲವ್ಯ, ಭಕ್ತ ಪ್ರಹ್ಲಾದ ಅಥವಾ ಶ್ರವಣ ಕುಮಾರ ಮುಂತಾದ ಆದರ್ಶ ಮಕ್ಕಳ ಕಥೆಗಳ ನಾಟಕಗಳನ್ನು ಸುರಕ್ಷಿತವೆಂದು ಭಾವಿಸುತ್ತಾರೆ. ಈ ಕಾರಣದಿಂದಲೇ ನಮ್ಮ ದೇಶದಲ್ಲಿ ಮಕ್ಕಳ ನಾಟಕಗಳನ್ನು ಬರೆಯುವಲ್ಲಿ ಹೆಚ್ಚು ಪ್ರಗತಿಯಾಗಿಲ್ಲ.

ಮಕ್ಕಳ ನಾಟಕದ ನಿರ್ಮಾಣವು ಹಲವು ವೇಳೆ ಕಷ್ಟಕರ. ಏಕೆಂದರೆ ಮಕ್ಕಳಿಗೆ ಒಂದು ನಾಟಕವನ್ನು ಪ್ರದರ್ಶಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಪಡೆದುಕೊಳ್ಳಲು ಸಾಮರ್ಥ್ಯವಿರುವುದಿಲ್ಲ. ಅವರು ಹಿರಿಯರ ಸಹಾಯವನ್ನು ಪಡೆಯಬೇಕು. ಇದರಿಂದಾಗಿ ಹಿರಿಯರು ನಾಟಕದಲ್ಲಿ ಇದು ಸರಿಯಿಲ್ಲ, ಅದು ಸರಿಯಿಲ್ಲ ಇತ್ಯಾದಿಗಳನ್ನು ಹೇಳಿ ತಮ್ಮ ನಿಯಂತ್ರಣವನ್ನು ಹೇರುವ ಅವಕಾಶ ದೊರೆಯುತ್ತದೆ. ಪರಿಣಾಮವಾಗಿ ಮಕ್ಕಳು ನಾಟಕದ ಮೂಲಕ ತಾವು ಪಡೆಯಬೇಕಾದ ಮಾನಸಿಕ ಮತ್ತು ಜೀವನದ ಅಭಿವೃದ್ಧಿಯ ಸೌಲಭ್ಯದಿಂದ ವಂಚಿತರಾಗುತ್ತಾರೆ. ಶಾಲೆಯಲ್ಲಿ ಹಿಂದಿ ನಾಟಕವನ್ನು ನಿರ್ಮಾಣ ಮಾಡುವ ಕಲವೇ ಸಂದರ್ಭಗಳು ಸಿಗುತ್ತವೆ. ಆ ಸಂದರ್ಭಗಳು ಯಾವುದೇ ಇರಲಿ, ಅಲ್ಲಿ ಅವರ ಮೇಲೆ ನಿಯಂತ್ರಣವಿರುತ್ತದೆ. ಬಂಗಾಳ, ಗುಜರಾತ ಮತ್ತು ಮಹಾರಾಷ್ಟ್ರ ಹೊರತುಪಡಿಸಿ ಬೇರೆ ಯಾವ ರಾಜ್ಯದಲ್ಲಿಯೂ ಸಾರ್ವಜನಿಕ ಜೀವನದಲ್ಲಿ ಮಕ್ಕಳು ನಾಟಕವಾಡುವ ಸಂಪ್ರದಾಯ ಇರುವುದಿಲ್ಲ. ಇತ್ತೀಚೆಗೆ ಕಳೆದ ಮೂರು ನಾಲ್ಕು ದಶಕಗಳಿಂದ, ವ್ಯಾಪಕವಾಗಿ ಗಣೇಶೋತ್ಸವ ಮತ್ತು ದುರ್ಗಾ ಪೂಜೆಗಳ ಹತ್ತು ದಿನಗಳ ಕಾರ್ಯ ಕ್ರಮಗಳ ಅಂಗವಾಗಿ ಮಕ್ಕಳಿಂದ ನಾಟಕವನ್ನು ನಿರ್ಮಾಣ ಮಾಡುವ ವ್ಯವಸ್ಥೆ ಬೆಳೆಯುತ್ತಿದೆ. ನಗರವಾದ ದೆಹಲಿಯಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ, ಸಾಹಿತ್ಯ ಕಲಾ ಪರಿಷತ್ ಮತು ರೇಖಾ ಜೈನರ ಸಂಸ್ಥೆ 'ಉಮಂಗ್'– ರಜಾ ಅವಧಿಯಲ್ಲಿ ಮಕ್ಕಳಿಗೆ ನಾಟಕದ ಅಭಿನಯ ತರಬೇತಿಯನ್ನು ಆರಂಭಿಸಿವೆ. ತರಬೇತಿಯ ಸ್ಪರ್ಧೆಗಳಲ್ಲಿ ಈ ಮಕ್ಕಳಿಂದ ವಿವಿಧ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಅದೊಂದು ಉತ್ತಮ ಸಂಪ್ರದಾಯ ಮತ್ತು ಮಕ್ಕಳ ನಾಟಕ ಗಳಿಗೆ ಇದು ದೊಡ್ಡ ಪ್ರೇರಣೆ ನೀಡಿದೆ. ಆದರೂ ಕೆಲವೇ ಉತ್ತಮ ಮಕ್ಕಳ ನಾಟಕಗಳು ಮಕ್ಕಳಿಗಾಗಿ ಬರೆಯಲಾಗಿವೆ.

ಮಕ್ಕಳ ನಾಟಕದ ರಚನೆಗಳ ಬಗ್ಗೆ ಗಮನಿಸಿದಾಗ ನಮಗೆ ಎರಡು ವಿಧಗಳು ಕಾಣಬರುತ್ತವೆ– ವೇದಿಕೆ ರಹಿತ ನಾಟಕಗಳು– ವೇದಿಕೆಯ ನಾಟಕಗಳು. ವೇದಿಕೆ ರಹಿತ ನಾಟಕಗಳು ಬಹಳ ಚಿಕ್ಕ ಮಕ್ಕಳಿಗೂ, ಎಳೆಯ ಮಕ್ಕಳಿಗೂ ಬರೆದಂತಹವುಗಳು. ಅವುಗಳನ್ನು ಅಭನಯಿಸಲು ಪಾತ್ರಗಳಿಗೆ ವೇದಿಕೆ ಮತ್ತು ಒಬ್ಬ ನಿರ್ದೇಶಕನ ಅವಶ್ಯಕತೆಯಿಲ್ಲ. ಮಕ್ಕಳು ಸಹಜವಾದ ರೀತಿಯಲ್ಲಿ ಅಭಿನಯಿಸುತ್ತಾರೆ. ಅಂತಹ ನಾಟಕಗಳನ್ನು ತರಗತಿ, ವರಾಂಡಾ, ಮನೆ ಅಥವಾ ಪಾರ್ಕ್‌ಗಳಲ್ಲಿ ಮರದ ಹಲಗೆ ನಿಲ್ಲಸಿ ನಾಟಕಗಳನ್ನಾಡಿಸುತ್ತಾರೆ. ಚಿಕ್ಕ ಮಕ್ಕಳು ಅಂತಹ ನಾಟಕಗಳನ್ನು ಯವುದೇ ನಿರ್ದೇಶಕರ ಅಥವಾ ಬೇರೆ ಪ್ರಯತ್ನಗಳಿಲ್ಲದೆ ಆಡಬಲ್ಲರು. ಈ ವಯಸ್ಸಿನ ಮಕ್ಕಳಿಗೆ ರೈಲ್ ಗಾಡಿ ಅಂತಹ ಚಿಕ್ಕ ನಾಟಕಗಳನ್ನೋ ಅಥವಾ ಹಾಸ್ಯ ಪಾತ್ರಗಳನ್ನೋ ಅಥವಾ ಯಾರನ್ನೋ ಅಣಕ ಮಾಡುವುದೋ ಮಕ್ಕಳಿಗೆ ಸುಲಭವಾಗಿರುತ್ತದೆ. ಒಂದು ವೇಳೆ ಅಲ್ಲಿ ಸರಳವಾದ ಗೀತಾತ್ಮಕ ನಾಟಕವಿದ್ದರೆ, ಅವರು ಅದನ್ನು ನಾಟಕೀಕರಿಸಲು ಸಮರ್ಥರಿದ್ದಾರೆ. ಈ ಎಳೆಯ ಮಕ್ಕಳ ಮೂಲಕ ಒಳ್ಳೆಯ ಹವ್ಯಾಸಗಳನ್ನು ಕಲಿಸುವ ಸಂದೇಶಗಳು, ಕೆಟ್ಟ ಹವ್ಯಾಸ ಗಳಿಂದ ದೂರವಿರುವುದು ಮತು ಇತರ ಚಿಕ್ಕ ಮಾಹಿತಿಗಳು ಸುಲಭವಾಗಿ ಸಂವಹನಗೊಳ್ಳುತ್ತವೆ. ಸಂಕ್ಷಿಪ್ತ ಸುದ್ದಿ, ಚಿಕ್ಕ ವಾಕ್ಯಗಳ, ಸರಳ ಭಾಷೆ ಮತ್ತು ಪರಿಚಿತ ಪರಿಸರ ಇತ್ಯಾದಿಗಳು ಈ ನಾಟಕಗಳ ಲಕ್ಷಣಗಳಾಗಿವೆ. ಚಿಕ್ಕ ಮಕ್ಕಳು ಬಹಳ ಕಲ್ಪನಾಶೀಲರಾಗಿರುತ್ತಾರೆ. ಅವರು ಏನನ್ನು ನೋಡುತ್ತಾರೋ, ಕೇಳುತ್ತಾರೋ ಅದನ್ನು ತಾವೇ ಮಾಡುವ ಮೂಲಕ ಅನುಭವಿಸಲು ಕುತೂಹಲಿಗಳಾಗಿರುತ್ತಾರೆ. ಮಕ್ಕಳಲ್ಲಿ ಈ ತಾದಾತ್ಮ್ಯವನ್ನು ಪ್ರೋತ್ಸಾಹಿಸಲು ಸಣ್ಣ ನಾಟಕಗಳು ಬಹಳ ಸಹಾಯ ಮಾಡುತ್ತವೆ.

ವೇದಿಕೆಯ ನಾಟಕಗಳು ಹೆಚ್ಚಿನ ವಯಸ್ಸಿನ ಮಕ್ಕಳಿಗಾಗಿ ಇರುತ್ತವೆ. ಪ್ರೇಕ್ಷಕ ಮಕ್ಕಳನ್ನು ಆಕರ್ಷಿಸಲು ಸುಂದರ ದೃಶ್ಯಗಳು, ವೇದಿಕೆಯ ಇತರ ಅಲಂಕಾರ ಇತ್ಯಾದಿಗಳು ನಾಟಕದ ಕಥೆ ಹಾಗೂ ಸಂಭಾಷಣೆಯನ್ನು ಹೆಚ್ಚು ಪರಿಣಾಮಕರಗೊಳಿಸಲು ಮಕ್ಕಳ ವೇದಿಕೆಯು ವೇದಿಕೆಯ ನಾಟಕಗಳಿಗೆ ಅವಶ್ಯವಿದೆ. ಆದಾಗ್ಯೂ ಮಕ್ಕಳ ನಾಟಕಗಳ ವೇದಿಕೆಯ ರೂಪ ಮತ್ತು ತಂತ್ರಗಳು ಬೇರೆಯಾಗಿರುತ್ತವೆ. ಮಕ್ಕಳ ನಾಟಕ ವೇದಿಕೆಯ

Digitised by Bharatavani, CIIL

ಮಿತಿಗಳು ಮಕ್ಕಳ ಮಾರ್ಗಗಳ ಮತ್ತು ಅವರ ಸಾಮರ್ಥ್ಯಗಳ ಮಿತಿಯೂ ಆಗಿರುತ್ತವೆ. ಮಕ್ಕಳ ನಾಟಕ ವೇದಿಕೆಯು ಅವರದೇ ಸ್ವಂತ ತೆರೆದ ವೇದಿಕೆಯಾಗಿದ್ದು, ಅವರ ಸ್ವಂತ ಇಚ್ಛೆಗಳಂತೆ ಮತ್ತು ಇಷ್ಟದಂತೆ ಅಭಿನಯಿಸಲು, ಮಾತನಾಡಲು ಮತ್ತು ಹಾಡಲು ಪೂರ್ಣ ಸ್ವಾತಂತ್ರ್ಯ ಹೊಂದಿರುತ್ತಾರೆ. ಈಗ ಅಂತಹ ನಾಟಕಗಳೂ ಸಹ ರಚನೆಯಾಗುತ್ತಿದ್ದು, ವೇದಿಕೆಯ ಮೇಲೆ ಮಕ್ಕಳು ತಮ್ಮದೇ ಸೀಮಿತ ಮಾರ್ಗಗಳಲ್ಲಿ ಪ್ರದರ್ಶನ ನೀಡಬಹುದಾಗಿದೆ.

ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಕ್ಕಳ ನಾಟಕದ ಪಾತ್ರವು ಬಹು ಮುಖ್ಯವೆಂದು ಪರಿಗಣಿಸಲಾಗಿದೆ. ಸುಪ್ರಸಿದ್ಧ ನಾಟಕ ವಿಮರ್ಶಕ, ಲೇಖಕ ಮತ್ತು ಕವಿ ಶ್ರೀ ನೇಮಿಚಂದ್ರ ಜೈನ್‌ರವರ ಪ್ರಕಾರ:

"ನಾಟಕ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಮಕ್ಕಳ ವ್ಯಕ್ತಿತ್ವವು ಅನೇಕ ವಿಧಗಳಲ್ಲಿ ಸಮೃದ್ಧಗೊಳ್ಳುತ್ತದೆ. ನಾಟಕವೊಂದರಲ್ಲಿ ಭಾಗವಹಿಸುವುದರಿಂದ ಮಕ್ಕಳಿಗೆ ಗುಂಪಿನಲ್ಲಿ ಜೀವಿಸುವುದು, ಒಟ್ಟಾಗಿ ಕೆಲಸ ಮಾಡುವುದು ಮತ್ತು ಪರಸ್ಪರ ಒಬ್ಬರಿಗೊಬ್ಬರು ಸಹಕರಿಸುವುದನ್ನು ಮಕ್ಕಳು ಕಲಿಯುತ್ತಾರೆ. ಅದೇ ರೀತಿಯಲ್ಲಿ ಅವರು ಹಲವು ಹಂತಗಳಲ್ಲಿ ಸಮಯ ಪ್ರಜ್ಞೆಯಿಂದ ಅಭ್ಯಾಸ ಮಾಡುವುದನ್ನೂ ಕಲಿಯುತ್ತಾರೆ. ರಿಹರ್ಸಲ್‌ಗಳಲ್ಲಿ ಮತ್ತು ಪ್ರದರ್ಶನದ ಅವಧಿಯಲ್ಲಿ ಅವರು ಸರಿಯಾದ ಸಮಯಕ್ಕೆ ಪೂರ್ವ ಸೂಚಿತ ಸಿಗ್ನಲ್ ಕೇಳಿದ ಕೂಡಲೇ ಪ್ರಾರಂಭಿಸಬೇಕು. ಒಂದು ವೇಳೆ ಯಾವುದೇ ಅಲಕ್ಷ್ಯ ಅಥವಾ ಅಜಾಗರೂಕತೆಯಿಂದ ಇದ್ದಾಗ ನಾಟಕವು ಶಿಥಿಲಗೊಳ್ಳುತ್ತದೆ. ಅಭಿನಯದಲ್ಲಿ ಒಂದು ವಿಧವಾದ ತತ್‌ಕ್ಷಣದ ಪ್ರತಿಕ್ರಿಯೆ, ಮನೋಧರ್ಮದ ಏಕಾಗ್ರತೆ ಮತ್ತು ಸಂವೇದನೆ ಅತ್ಯವಶ್ಯ ವಾಗಿರುತ್ತವೆ. ಇವುಗಳ ಅಭ್ಯಾಸ ಮಕ್ಕಳ ಮಾನಸಿಕ ಮತ್ತು ದೈಹಿಕ ಶಿಥಿಲತೆಯನ್ನು ಖಂಡಿತವಾಗಿಯೂ ಕಡಿಮೆ ಮಾಡುತ್ತದೆ." (ದೇವ್‌ಸಾರೆ, 1979)

**ಮಕ್ಕಳ ನಾಟಕಗಳ ಬೇರೆ ಉಪಯೋಗಗಳ ಬಗ್ಗೆ ಶ್ರೀ ನೇಮಿಚಂದ್ರ ಜೈನ್ ಹೀಗೆ ಅಭಿಪ್ರಾಯ ಪಡುತ್ತಾರೆ:**

"ಜೀವನ ಮತ್ತು ಸಂಸ್ಕೃತಿಯನ್ನು ಮಕ್ಕಳು ಅರ್ಥ ಮಾಡಿಕೊಳ್ಳುವ ಮೂಲಕ ಪರಿಣಾಮಕಾರಿಯಾಗಿ ಸಮೃದ್ಧಗೊಳ್ಳಲು ನಾಟಕಗಳು ಉಪಯುಕ್ತವಾಗಿವೆ. ವಿವಿಧ ವಯೋಮಾನದ ಮಕ್ಕಳ ಮನಸ್ಸು, ಬುದ್ಧಿವಂತಿಕೆ, ಭಾವನೆ ಮತ್ತು ಅನುಭವಗಳ ಕ್ಷೇತ್ರವನ್ನು ಮನಸ್ಸಿನಲ್ಲಿ ಇರಿಸಿಕೊಂಡು ನಾಟಕಗಳನ್ನು ಬರೆಯಬೇಕು ಮತ್ತು ಅವುಗಳನ್ನು ಪ್ರದರ್ಶಿಸುವಂತಿರಬೇಕು. ತಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥ ಮಾಡಿಕೊಳ್ಳಲು, ಅನುಭವಿಸಲು ಮತ್ತು ಅದಕ್ಕೆ ಹೊಂದಿಕೊಳ್ಳಲು ಇದರಿಂದ ಅವರಿಗೆ ಸುಲಭವಾಗುತ್ತದೆ. ಇಂದಿನ ಪ್ರಪಂಚದಲ್ಲಿ ಈ ಹೊಂದಾಣಿಕೆ ಎಷ್ಟು ಅಗತ್ಯವಿದೆ ಎಂಬುದಕ್ಕೆ ಅತಿಯಾಗಿ ಒತ್ತಿ ಹೇಳಬೇಕಾಗಿಲ್ಲ."

**ಮಕ್ಕಳಿಗಾಗಿ ಜೀವನ ಚರಿತ್ರೆಗಳು:** ಮಕ್ಕಳು ಬೆಳೆದಂತೆ ಒಳ್ಳೆಯ ನಾಗರಿಕರಾಗಿ, ಒಳ್ಳೆಯ ಮಾನವರಾಗಿ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾರೆ. ಇದಕ್ಕಾಗಿ ಬಾಲ್ಯದಿಂದಲೇ ಸದ್ಗುಣಗಳನ್ನು ಬೆಳೆಸಿಕೊಳ್ಳುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಮಕ್ಕಳಲ್ಲಿ ಅನುಕರಿಸುವ ಮತ್ತು ಅಣಕಿಸುವ ಸ್ವಭಾವ ಸಹಜ ಪ್ರವೃತ್ತಿ. ಅವರು ತಮ್ಮ ಹಿರಿಯರು ಮತ್ತು ಇತರ ಸುತ್ತಲಿನ ಜನರ ವರ್ತನೆ ಮತ್ತು ವ್ಯಕ್ತಿತ್ವದಿಂದ ಪ್ರಭಾವಿತರಾಗಿರುತ್ತಾರೆ. ಮತ್ತು ದವರಂತೆ ಆಗಲು ಬಯಸುತ್ತಾರೆ. ಈ ಭಾವನೆ ನಿಧಾನವಾಗಿ ಮುಂದುವರಿಯುತ್ತ ಬೆಳೆಯುತ್ತದೆ. ಸಮಾಜದ ಒಳ್ಳೆಯ ಮತ್ತು ಕೆಟ್ಟ ನಡೆವಳಿಕೆಗಳಿಂದ ಮಕ್ಕಳು ಪ್ರಭಾವಿತರಾಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಜೀವನಚರಿತ್ರೆಗಳು ಅವರನ್ನು ಸರಿಯಾದ ಹಾದಿಯಲ್ಲಿರಿಸಲು ಸಹಾಯಕವಾಗಿವೆ. ಆದರೆ ಜೀವನಚರಿತ್ರೆಯೊಂದನ್ನು ಮಕ್ಕಳಿಗೆ ಕೊಡುವಾಗ ಅದು ಹೇಗೆ ಮಗುವನ್ನು ಪ್ರಭಾವ ಗೊಳಿಸಬಲ್ಲದು ಮತ್ತು ಮಕ್ಕಳ ಮೇಲೆ ಬಹುದೂರದ ಪರಿಣಾಮ ಹೇಗಾಗಲಿದೆ ಎಂಬುದನ್ನು ನಾವು ಯೋಚಿಸ ಬೇಕು. ಮಕ್ಕಳು ಒಂದು ಜೀವನ ಚರಿತ್ರೆ ಓದಿದಾಗ ನಿಧಾನವಾಗಿ ಮುಖ್ಯ ಪಾತ್ರದೊಡನೆ ತಮ್ಮನ್ನು ಗುರುತಿಸಿ ಕೊಳ್ಳುತ್ತಾರೆ. ಮಗು ಆ ಪಾತ್ರವನ್ನು ತನ್ನ ಪರಿಸರದೊಡನೆ ತುಲನೆ ಮಾಡುತ್ತದೆ ಮತ್ತು ಅನೇಕ ಸಲ ಆ ಪಾತ್ರದ ಸ್ಥಾನದಲ್ಲಿ ತಾನು ನಿಂತು ಯೋಚಿಸುತ್ತದೆ. ಅಂತಹ ಪಾತ್ರದ ಬಗ್ಗೆ ಸಹಜ ಗೌರವ, ಆಕರ್ಷಣೆ ಮತ್ತು ಪ್ರಭಾವಂತಿಕೆ ಅವರ ಮನಸ್ಸಿನಲ್ಲಿ ಸಹಜವಾಗಿ ಮೂಡುತ್ತದೆ. ಮಹಾತ್ಮ ಗಾಂಧಿ ಸಹಾ ಬಾಲ್ಯದಲ್ಲಿಯೇ ಸತ್ಯವಾದಿ ಹರಿಶ್ಚಂದ್ರ ನಾಟಕವನ್ನು ಓದುತ್ತಾ, ನೋಡುತ್ತಾ ಸತ್ಯದ ಬಗ್ಗೆ ನಂಬಿಕೆಯನ್ನು ಬೆಳೆಸಿಕೊಂಡೆನೆಂದು ಹೇಳಿಕೊಂಡಿದ್ದಾರೆ. ಮತ್ತೊಂದೆಡೆ ನಮಗೆ ಇನ್ನೊಂದು ನಿದರ್ಶನವಿದೆ. ಭಗತ್‌ಸಿಂಗರನ್ನು ನೇಣು ಹಾಕುವ ಆದೇಶವನ್ನು ಘೋಷಿಸಲೆಂದು ಜೈಲಿನ ಅಧಿಕಾರಿ ಅವರ ಬಳಿ ಬಂದಾಗ ಅವರು "ಸ್ವಲ್ಪ ತಡೆ, ಒಬ್ಬ ಕ್ರಾಂತಿಕಾರಿಯು ಮತ್ತೊಬ್ಬ ಕ್ರಾಂತಿಕಾರಿಯನ್ನು ಈ ಕ್ಷಣದಲ್ಲಿ ಭೇಟಿ ಮಾಡುತ್ತಿದ್ದಾರೆ" ಎಂದಾಗ ಅವರು ಲೆನಿನರ ಜೀವನ ಚರಿತ್ರಯನ್ನು ಆ ಸಮಯದಲ್ಲಿ ಓದುತ್ತದ್ದರಂತೆ. ಆದ್ದರಿಂದ ಅವರ ಪ್ರಭಾವವನ್ನು, ಸೂಕ್ಷ್ಮ ಭಾಗಗಳನ್ನು ಒಪ್ಪಿಕೊಳ್ಳುವ, ಮುಟ್ಟುವ ಮೊದಲು ಪರೀಕ್ಷಿಸುವುದು ಉತ್ತಮ. ಮಕ್ಕಳಿಗಾಗಿ ಜೀವನಚರಿತ್ರೆ ಬರೆಯುವಾಗ ಮಕ್ಕಳು ಅವರ ಬಗ್ಗೆ ತಮ್ಮದೇ ಆದ ತೀರ್ಪು ಕೊಡುವಂತೆ ಮಾಡಲು ವ್ಯಕ್ತಿ ಚಿತ್ರಣಗಳನ್ನು ಚಿತ್ರಿಸುವಾಗ ಗಮನ ಹರಿಸಬೇಕು. ಪಾತ್ರಗಳ ಜೀವನದ ಪ್ರಭಾವವು ಬಹು ಗಹನವಾಗಿದ್ದು ಮಕ್ಕಳ ಮನಸ್ಸನ್ನು ಗಾಢವಾಗಿ ತಟ್ಟುವುದರಿಂದ ಅದನ್ನು ನಂತರ ಕದಲಿಸುವುದು ಸುಲಭವಲ್ಲ. ಅದೂ ಅಲ್ಲದೆ, ಜೀವನ ಚರಿತ್ರೆಗಳು ಮಕ್ಕಳಲ್ಲಿ ಒಂದು ಆದರ್ಶವಾದವನ್ನು ಮತ್ತು ಭವಿಷ್ಯದಲ್ಲಿ ಅವರಂತೆಯೇ ಆಗ ಬೇಕೆಂಬ ಭಾವವನ್ನು ಬೆಳೆಸಲು ಸಹಾಯಕವಾಗಿವೆ. ಮಕ್ಕಳಿಗೆ ವಿಭಿನ್ನ ಆಸಕ್ತಿಗಳಿರುತ್ತವೆ. ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸರ ಬದಲಾವಣೆ ಆಗುತ್ತಿರುತ್ತದೆ. ಕಾಲ ಮತ್ತು ಸಂದರ್ಭಗಳಿಗೆ ಅನುಗುಣವಾಗಿ ಒಂದು ಪಾತ್ರದ ಹಲವು ವಿಷಯಗಳು ಬಹು ಮುಖ್ಯವಾಗುತ್ತವೆ ಅಥವಾ ನಗಣ್ಯವಾಗುತ್ತವೆ. ಭವಿಷ್ಯದಲ್ಲಿ ಮಕ್ಕಳಿಗಾಗಿ ಉತ್ತಮ ರೀತಿಯ ಜೀವನವನ್ನು ರೂಪಿಸಲು ಎಂತಹ ಜೀವನ ಚರಿತ್ರೆಗಳನ್ನು ಬರೆಯಬೇಕೆಂದು

Digitised by Bharatavani, CIIL

ಲೇಖಕರೇ ತೀರ್ಮಾನಿಸಬೇಕಾಗಿದೆ. ಮ್ಯಾಕ್ಸಿಂಗಾರ್ಕಿಯು ಎಚ್.ಜಿ.ವೆಲ್ಸ್‌ರಿಗೆ ಬರೆದ ಒಂದು ಪತ್ರವು ಇದಕ್ಕೆ ಸುಂದರವಾದ ಉದಾಹರಣೆಯಾಗಿದೆ:

"ಪ್ರೀತಿಯ ವೆಲ್ಸ್... ನೀವು ಒಂದು ಅತ್ಯುತ್ತಮ ಪುಸ್ತಕವನ್ನು ಬರೆದಿದ್ದೀರಿ. ಮತ್ತು ಮೆಚ್ಚುಗೆಯಿಂದ ನಾನು ನಿಮ್ಮ ಕೈ ಕುಲುಕುತ್ತಿದ್ದೇನೆ. ಈಗ ನಾನು ನಿಮಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಪ್ರಪಂಚದಲ್ಲಿ ಉತ್ತಮ ಮತ್ತು ಹೆಚ್ಚು ಅವಶ್ಯವಿರುವ ವಿಷಯವೆಂದರೆ ಮಕ್ಕಳು. ಮಕ್ಕಳ ಮನಸ್ಸಿನಲ್ಲಿರುವ ಭಯಾನಕವಾದ ಮತ್ತು ಅರ್ಥಹೀನವಾದ ಯುದ್ಧಗಳ ರಕ್ತ ಅಂಟಿರುವ ಕಲೆಗಳನ್ನು ನಾವು ತೊಡೆದು ಹಾಕಬೇಕಾಗಿದೆ. ನಾವು ಅವರ ಮನಸ್ಸಿನಲ್ಲಿ ಮಾನವ ಕುಲದ ಬಗ್ಗೆ ಗೌರವ ಮತ್ತು ನಂಬಿಕೆಯನ್ನು ಜಾಗೃತಗೊಳಿಸಬೇಕು. ನೀವು ಮಕ್ಕಳಿಗಾಗಿ ಎಡಿಸನ್‌ರ ಜೀವನ ಮತ್ತು ಅವರ ಕೆಲಸಗಳನ್ನು ಕುರಿತು ಒಂದು ಪುಸ್ತಕ ಬರೆಯಬೇಕೆಂದು ಪ್ರಾರ್ಥಿಸುತ್ತೇನೆ. ಅಂತಹ ಪುಸ್ತಕದ ಅಗತ್ಯವನ್ನು ನೀವೆಲ್ಲಾ ಅರ್ಥಮಾಡಿಕೊಳ್ಳಲಿರುವಿರಿ. ನಾನು ರೊಮೆಯ್ನ್ ರೋಲ್ಯಾಂಡ್‌ರನ್ನು ಕೊಲಂಬಸ್ ಕುರಿತು ಬರೆಯಲು ಕೇಳುತ್ತೇನೆ. ನಾನೇ ಗರಿಬಾಲ್ಡಿಯವರ ಬಗ್ಗೆ ಬರೆಯಲಿದ್ದೇನೆ. ಈ ರೀತಿಯಲ್ಲಿ ನಾವು ಬರೆಯುವುದರಿಂದ ಮಕ್ಕಳಿಗೆ ಅನೇಕ ಶ್ರೇಷ್ಠ ಮನುಷ್ಯರ ಚಿತ್ರಶಾಲೆಯನ್ನು ಕಾಣಿಕೆ ನೀಡಬಹುದು. ಚಾರ್ಲ್ಸ್ ಡಿಕನ್ಸ್‌ರ, ಬೈರನ್ ಮತು ಷೆಲ್ಲಿಯವರ ಬಗ್ಗೆ ಯಾರು ಬರೆಯಬಲ್ಲರು ಎಂಬುದನ್ನು ದಯವಿಟ್ಟು ನನಗೆ ತಿಳಿಸಿ. ತಮ್ಮ– ಗಾರ್ಕಿ." (ಗಾರ್ಕಿ ಮತ್ತು ವೆಲ್ಸ್, 1917)

**ಇಂದಿನ ಭಾರತೀಯ ಮಕ್ಕಳ ಸಾಹಿತ್ಯ:** ಇಪ್ಪತ್ತನೆಯ ಶತಮಾನದ ಕಳೆದ ಭಾಗದಲ್ಲಿ ಭಾರತೀಯ ಭಾಷೆಗಳಲ್ಲಿ ನಂಬಲಸಾಧ್ಯವಾದ ಪ್ರಗತಿ ಉಂಟಾಯಿತು. ಶತಮಾನದ ಅಂತ್ಯದ ವೇಳೆಗೆ ಕೆಲವು ಅಪವಾದಗಳನ್ನು ಹೊರತು ಪಡಿಸಿ, ಭಾರತೀಯ ಎಲ್ಲಾ ಭಾಷೆಗಳಲ್ಲಿಯೂ ಹಲವು ಉತ್ಕೃಷ್ಟ ಮಕ್ಕಳ ಸಾಹಿತ್ಯ ಹೊರಹೊಮ್ಮಿತು. ಕಾವ್ಯ ಮತ್ತು ಕಥೆ ಪುಸ್ತಕಗಳೇ ಅಲ್ಲದೆ ವಿಜ್ಞಾನ ಕಥೆಗಳು, ಕಾದಂಬರಿಗಳು, ಜೀವನಚರಿತ್ರೆಗಳು ಮತ್ತು ಮಾಹಿತಿಪೂರ್ಣ ಸಾಹಿತ್ಯವು ಮಕ್ಕಳಿಗೆ ಬೇಕಾದಷ್ಟು ಒದಗಿತು. ಹಲವು ಲೇಖಕರು ತಮ್ಮ ಬರೆವಣಿಗೆಯಲ್ಲಿ ಹೊಸ ಪ್ರಯೋಗಗಳನ್ನು ಮಾಡಿದರು. ಮಕ್ಕಳ ಪುಸ್ತಕಗಳಲ್ಲಿ ನಿರೂಪಣೆ, ಮುದ್ರಣ, ಚಿತ್ರಗಳು, ಕಾಗದ ಇತ್ಯಾದಿಗಳಲ್ಲಿ ಉತ್ತಮ ಪ್ರಗತಿ ಉಂಟಾಯಿತು. ಮಕ್ಕಳ ನಿಯತಕಾಲಿಕೆಗಳು ಸಹಾ ಪ್ರಕಟವಾದವು ಮತ್ತು ಮಕ್ಕಳಲ್ಲಿ ಓದುವ ಆಸಕ್ತಿ ಬೆಳೆಯಿತು. ಮಕ್ಕಳ ಪುಸ್ತಕ ಮೇಳಗಳಲ್ಲಿ ಮಕ್ಕಳ ಪುಸ್ತಕಗಳು ಮಕ್ಕಳನ್ನು ಆಕರ್ಶಿಸಿದವು. ಇದರಿಂದ ಒಳ್ಳೆಯ ಮಕ್ಕಳ ಸಾಹಿತ್ಯದ ತೃಷೆ ಮಕ್ಕಳಲ್ಲಿ ಹೇಗಿದೆ ಎಂಬುದನ್ನು ಕಾಣಬಹುದು. ಈ ಮೇಳಗಳಲ್ಲಿ ಅತ್ಯಧಿಕ ವೈವಿಧ್ಯಮಯವಾದ ಆಸಕ್ತಿ ಕೆರಳಿಸುವ ಮತ್ತು ಆಕರ್ಷಿಸುವ ಪುಸ್ತಕಗಳು ಪ್ರದರ್ಶನಗೊಂಡವು. ಭಾರತೀಯ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯದ ಶ್ರೀಮಂತಿಕೆಯನ್ನು ಯಾರೇ ಆದರೂ ಸುಲಭವಾಗಿ ಅಂದಾಜು ಮಾಡಬಹುದು. ಕಳೆದ ಎರಡು ಶತಮಾನಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕಾಮಿಕ್ಸ್‌ಗಳು ಮಕ್ಕಳಿಗಾಗಿ ಪ್ರಕಟವಾದವು. ಆರಂಭದಲ್ಲಿ ವಿದೇಶಿ ಪುಸ್ತಕಗಳ ಅನುವಾದಗಳು ಬಂದವು. ಆದರೆ ನಿಧಾನವಾಗಿ ಭಾರತೀಯ ಸ್ವಂತ ಕಾಮಿಕ್ಸ್‌ಗಳು ಮಾರುಕಟ್ಟೆಗೆ ಬರಲಾರಂಭಿಸಿದವು. ಭಾರತೀಯ ಇತಿಹಾಸ, ಧರ್ಮ, ಸಂಸ್ಕೃತಿ ಮತ್ತು ಸಾಹಿತ್ಯದ ಪಾತ್ರಗಳು 'ಅಮರ ಚಿತ್ರ ಕಥಾ' ಮಾಲೆಯಲ್ಲಿ ಕಾಮಿಕ್ಸ್‌ಗಳು ಪ್ರಕಟವಾದವು. ಅವು ಅತ್ಯುತ್ಕೃಷ್ಟ ಪ್ರಕಟಣೆಗಳಾಗಿದ್ದವು. ಅವುಗಳು ಭಾರತೀಯ ಭಾಷೆಗಳಿಗೆಲ್ಲಾ ಅನುವಾದಗೊಂಡವು. ಮತ್ತು ಭಾರತೀಯ ವಿದೇಶವಾಸಿ ಮಕ್ಕಳಿಗಾಗಿ 'ಭಾರತೀಯತ್ವ'ದೊಡನೆ ಬೆಸುಗೆಯಿರುವ ಪಾತ್ರಗಳನ್ನು ಚಿತ್ರಿಸುವ ಪುಸ್ತಕ ಗಳಿಂದ ಮಾಹಿತಿಗಳನ್ನು ಒದಗಿಸಲಾಯಿತು.

ಮಾಧ್ಯಮ ಮತ್ತು ಮಾಹಿತಿ ತಂತ್ರಜ್ಞಾನಗಳ ಅಭಿವೃದ್ಧಿಯು ಮಕ್ಕಳ ಸಾಹಿತ್ಯಕ್ಕೆ ಸವಾಲೊಡ್ಡಿದೆ. ಮಕ್ಕಳ ಪುಸ್ತಕಗಳು ಹೆಚ್ಚು ಅರ್ಥಪೂರ್ಣವಾಗುತ್ತಿವೆ ಮತ್ತು ಅವುಗಳು ಮನರಂಜನೆಯ ಶಾಶ್ವತವಾದ ಮಾಧ್ಯಮವಾಗುತ್ತಿವೆ. ಇದರಿಂದ ಮಕ್ಕಳ ಪುಸ್ತಕಗಳ ಅಗತ್ಯವು ಹೆಚ್ಚುತ್ತಿದೆ ಎಂದು ತಜ್ಞರ ಅಭಿಪ್ರಾಯವಾಗಿದೆ. ಸಂವಹನ ಮಾಧ್ಯಮದೊಡನೆ ತುಲನೆ ಮಾಡಿದಾಗ ಮಕ್ಕಳ ಪುಸ್ತಕಗಳ ಪ್ರಾಮುಖ್ಯತೆಯು ವೃದ್ಧಿಸುತ್ತದೆ. ಏಕೆಂದರೆ ಪುಸ್ತಕಗಳಿಂದ ಸಾಧ್ಯವಾಗುವ ಜ್ಞಾನವನ್ನು ಪಡೆಯುವ ಅಗತ್ಯವನ್ನು ಮಾಧ್ಯಮವು ಪೂರೈಸಲಾಗುವುದಿಲ್ಲ. ಹೊಸ ಮಾಹಿತಿ ತಂತ್ರಜ್ಞಾನ ಕ್ರಾಂತಿಯು ಇಂತಹ ಹಲವು ಸವಾಲುಗಳನ್ನು ಉಂಟುಮಾಡುತ್ತಿವೆ. ಈಗ ತಂದೆತಾಯಿಗಳಿಗೆ ತಮ್ಮ ಮಕ್ಕಳು ಹೆಚ್ಚ ಸಮಯವನ್ನು ಕಂಪ್ಯೂಟರ್ ಮುಂದೆ ಕಳೆಯುತ್ತಿದ್ದಾರೆ ಎಂಬ ಚಿಂತೆ ಕಾಡುತ್ತಿದೆ. ತೀವ್ರಗತಿಯಲ್ಲಿ ಬೆಳೆಯುತ್ತಿರುವ ಮಾಹಿತಿ ತಂತ್ರ ಜ್ಞಾನವು ತನ್ನದೇ ಆದ ಮಹತ್ವ ಹೊಂದಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಅದು ಮಕ್ಕಳ ಸಾಹಿತ್ಯಕ್ಕೆ ಪರ್ಯಾಯವಾಗಬಲ್ಲುದೆ? ಇಲ್ಲ. ಕಂಪ್ಯೂಟರನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ಇಡಲಾಗಿರುತ್ತದೆ ಎಂಬುದೇ ಕಾರಣ. ನೀವು ಅದನ್ನು ಎತ್ತಿ ಸುತ್ತಲೂ ಒಂದು ಪುಸ್ತಕದಂತೆ ಉಪಯೋಗಿಸಲು ಸಾಧ್ಯವಿಲ್ಲ. ಒಂದು ಪುಸ್ತಕವು ಮಾತ್ರ ಈ ಅನುಕೂಲವನ್ನು ಒದಗಿಸಬಲ್ಲುದು. ನೀವು ಒಂದು ಆಸಕ್ತಿದಾಯಕ ಪುಸ್ತವನ್ನು ಒಂದು ಕೊಠಡಿ, ವರಾಂಡಾ, ಮೇಲ್ಛಾವಣಿ ಅಥವಾ ಒಂದು ಮರದ ಕೆಳಗೆ ಕುಳಿತು ಓದಬಹುದು. ಆದರೆ ಕಂಪ್ಯೂಟರನ್ನು ಹಾಗೆ ಮಾಡಲಾಗದು. ಆದ್ದರಿಂದ ಮಾಹಿತಿ ತಂತ್ರಜ್ಞಾನವು ಪುಸ್ತಕಗಳ ಅವಶ್ಯಕತೆಯನ್ನು ಕುಗ್ಗಿಸುವಂತೆ ಮಾಡಿ ಮಕ್ಕಳ ಸಾಹಿತ್ಯಕ್ಕೆ ಅಪಾಯವನ್ನು ಉಂಟುಮಾಡಲಾಗುವುದಿಲ್ಲ. ವಿವಿಧ ದೂರದರ್ಶನ ವಾಹಿನಿಗಳಲ್ಲಿ ತೋರಿಸುತ್ತಿರುವ ಕಾರ್ಯಕ್ರಮಗಳು ನಿಶ್ಚಯವಾಗಿಯೂ ಲೇಖಕರಿಗೆ ಸವಾಲನ್ನು ಒಡ್ಡುತ್ತಿವೆ. ಮಕ್ಕಳು ದೂರಕರ್ಶನ ಕಾರ್ಯಕ್ರಮಗಳಿಗೆ ಪರ್ಯಾಯಗಳನ್ನು ಪಡೆಯುವಂತೆ ಆಸಕ್ತಿದಾಯಕ ಪುಸ್ತಕಗಳನ್ನು ಬರೆಯುವಂತಹ ಸವಾಲನ್ನು ಲೇಖಕರು ಎದುರಸಬೇಕಾಗಿದೆ. ಇಂದಿನ ಜೀವನದ ವಿಷಯಗಳನ್ನು ಕುರಿತು ಪುಸ್ತಕಗಳನ್ನು ಬರೆಯುವುದು ಅವಶ್ಯವಾಗಿದೆ. ಇಂದಿನ ಪರಿಸರ, ಮಕ್ಕಳ ಮನೋಧರ್ಮ, ಭವಿಷ್ಯದ ಬಗ್ಗೆ ಅವರ ದೂರದೃಷ್ಟಿ ಮತ್ತು ವೈಜ್ಞಾನಿಕ ಅಭಿವೃದ್ಧಿಗಳನ್ನು ಕುರಿತು– ಕಾವ್ಯ,

Digitised by Bharatavani, CIIL

ಕಥೆ, ಕಾದಂಬರಿ, ನಾಟಕ ಅಥವಾ ಮಾಹಿತಿ ಪುಸ್ತಕ ಹೀಗೆ ಯಾವುದೇ ಪ್ರಕಾರದ ಪುಸ್ತಕವನ್ನು ಬರೆಯಬಹುದು. ಇದರ ಜೊತೆಗೆ ಇಂದಿನ ಮಕ್ಕಳ ಸಾಹಿತ್ಯವು ಬದಲಾಗುತ್ತಿರುವ ಸಮಾಜದ ಅವಲೋಕನದ ಮೂಲಕ ಅದರ ಬದಲಾಗುತ್ತಿರುವ ಮೌಲ್ಯಗಳ ಅರಿವನ್ನು ಪಡೆದಿರಬೇಕು. ವಿಜ್ಞಾನ ಮತ್ತು ತಂತ್ರಜ್ಞಾನದ ಜೊತೆಗೆ ಪೂರಕವಾಗಿ ವಿಶ್ವಭ್ರಾತೃತ್ವ, ವಿಶ್ವಶಾಂತಿಗೆ ಸಂಬಂಧಿಸಿದಂತೆ ಸಾಮಾಜಿಕ, ಆರ್ಥಿಕ, ಮನೋವೈಜ್ಞಾನಿಕ, ಸಾಂಸಾರಿಕ ಮೌಲ್ಯಗಳು, ನೈತಿಕತೆ ಮತ್ತು ಆದರ್ಶಗಳಿಗೆ ಸಂಬಂಧಿಸಿದಂತೆ ಸವಾಲೊಡ್ಡುವ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದು ಭವಿಷ್ಯದಲ್ಲಿ ಅವುಗಳನ್ನೆದುರಿಸಲು ಮಕ್ಕಳನ್ನು ಸಿದ್ಧಗೊಳಿಸಬೇಕಾಗಿದೆ. ಅವರು ಈ ಸವಾಲುಗಳನ್ನು ಎದುರಿಸಲು ಸಮರ್ಥರಾಗುವಂತೆ ಧೈರ್ಯ, ಶಕ್ತಿ ಮತ್ತು ವಿಚಾರಗಳನ್ನು ಕೊಡುವಂತಹ ಸಾಹಿತ್ಯವನ್ನು ಮಕ್ಕಳಿಗೆ ಕೊಡುವುದು ನಮ್ಮ ಜವಾಬ್ದಾರಿಯಾಗಿದೆ.

ಮಕ್ಕಳ ಸಾಹಿತ್ಯವು ಇಂದಿನ ಬೆಲೆಕಟ್ಟಲಾಗದ, ಅಮೂಲ್ಯ, ಅಗತ್ಯವಾಗಿದೆ. ಹೊಸ ಮಕ್ಕಳ ಸಾಹಿತ್ಯವನ್ನು ನಿರ್ಮಿಸುವ ಅನಿವಾರ್ಯತೆಯನ್ನು ಅರ್ಥಮಾಡಿಕೊಂಡು ಅವರಲ್ಲಿ ಈ ಬಗೆಯ ಬದಲಾವಣೆಯನ್ನು ತರಬೇಕಾಗಿದೆ.

**ಸೂಚನೆ:** ಗುರುದೇವ ರವೀಂದ್ರನಾಥ ಠಾಕೂರರ ಸುದೀರ್ಘ ಉದ್ಧೃತ ಭಾಗವನ್ನು ಹಲವು ಕಾರಣಗಳಿಂದ ಇಲ್ಲಿ ಕೊಡಲಾಗಿದೆ. ಮಕ್ಕಳ ಸಾಹಿತ್ಯವು ಇನ್ನೂ ಶೈಶವಾವಸ್ಥೆಯಲ್ಲಿದ್ದಾಗ, ಭಾರತೀಯ ಭಾಷೆಗಳಲ್ಲಿ ಊಹಾತ್ಮಕ ಸಂಗತಿ ಎಂಬಂತೆ ಮಾತನಾಡುತ್ತಿದ್ದ ಕಾಲಘಟ್ಟದಲ್ಲಿ, ಮಕ್ಕಳ ಸಾಹಿತ್ಯವನ್ನು ಅರ್ಥಮಾಡಿಕೊಂಡವರು ಅವರೊಬ್ಬರೇ. ಅದನ್ನು ಕೇವಲ ಮಕ್ಕಳ ಶಾಲಾ ಅವಶ್ಯಕತೆ ಎಂದು ಪರಿಗಣಿಸಲಾಗಿತ್ತು. ಬ್ರಿಟಿಷರಿಂದ ಉತ್ತೇಜಿಸಲ್ಪಟ್ಟ ಹೊಸ ಶಿಕ್ಷಣ ವ್ಯವಸ್ಥೆಗೆ ಆಗ ಪುಸ್ತಕಗಳನ್ನು ಬರೆಯಲು ಆರಂಭಿಸುತ್ತಿದ್ದ ಅವಧಿಯೆಂದು ಭಾರತೀಯ ಭಾಷೆಗಳ ಮಕ್ಕಳ ಸಾಹಿತ್ಯ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಕ್ರಮೇಣ ಕೆಲವು ನಿಯತಕಾಲಿಕೆಗಳು ಪ್ರಕಟವಾದವು. ಅವುಗಳಲ್ಲಿ ಮಕ್ಕಳಿಗೆಂದೇ ಕೆಲವನ್ನಾದರೂ ಕಾಣುವುದು ಕಷ್ಟವಾಗಿತ್ತು. ಭಾರತೀಯ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕ್ರೈಸ್ತ ಮಿಷನರಿಗಳು ಸ್ವಲ್ಪ ಕೆಲಸವನ್ನು ಮಾಡಿದ್ದಾರೆ. ಅವರು ಅನೇಕ ಸ್ಥಳಗಳಲ್ಲಿ ಮುದ್ರಣಾಲಯಗಳನ್ನು ತೆರೆದು ಮಕ್ಕಳ ಪುಸ್ತಕಗಳನ್ನು ಬರೆಯಿಸಿ, ಭಾರತೀಯ ಭಾಷೆಗಳಲ್ಲಿ ಮುದ್ರಿಸಿದರು. ಅವರು ಶಾಲಾ ಶಿಕ್ಷಣಕ್ಕಾಗಿಯೂ ಬರೆದ ಮಸ್ತಗಳನ್ನು ಹೊರ ತಂದರು. ಹೀಗೆ ಆರಂಭದಲ್ಲಿ ಭಾರತೀಯ ಮಕ್ಕಳ ಸಾಹಿತ್ಯವು ಈ ರೀತಿಯಲ್ಲಿ ಬರೆಯಲ್ಪಟ್ಟಿತ್ತು. ಆದರೆ ಗುರುದೇವ ರವೀಂದ್ರನಾಥ ಠಾಕೂರರು ಮಾತ್ರ ಆಗಲೇ ಅವರ ಅಭಿಪ್ರಾಯವನ್ನು ತರ್ಕಬದ್ಧವಾಗಿ ಅಂದಾಜು ಮಾಡಿದ್ದರು. ಆದ್ದರಿಂದ ಈ ಲೇಖನದಲ್ಲಿ ನಮ್ಮ ದೇಶ, ಸಮಾಜ ಮತ್ತು ಸಂಸ್ಕೃತಿಗೆ ಸೇರಿದಂತೆ ಭಾರತೀಯ ಮಕ್ಕಳಿಗೆಂದೇ ಪ್ರಾಥಮಿಕವಾಗಿ ಬರೆಯುವ ಅಗತ್ಯವನ್ನು ಅವರು ದೃಢವಾಗಿ ಪ್ರತಿಪಾದಿಸಿದ್ದಾರೆ.

ಗುರುದೇವ ರವೀಂದ್ರನಾಥ ಠಾಕೂರರು ಮಾತ್ರ ಭಾರತೀಯ ಮಕ್ಕಳ ಸಾಹಿತ್ಯದ ರೂಪ ಹೇಗಿರಬೇಕೆಂಬುದನ್ನು ಮೊತ್ತ ಮೊದಲಿಗೆ ಅವರ ಈ ಲೇಖನದಲ್ಲಿ ವರ್ಗೀಕರಿಸಿದ್ದಾರೆ. ಅವರಂತೆಯೇ ಬೇರೆ ಯಾವ ಭಾಷೆಯ ಹಿರಿಯ ಲೇಖಕರೂ ತಮ್ಮ ಭಾಷೆಯಲ್ಲಿ ಮಕ್ಕಳ ಸಾಹಿತ್ಯದ ಅಗತ್ಯ ಕುರಿತು ಕಾಳಜಿಯನ್ನು ವ್ಯಕ್ತಪಡಿಸಲಿಲ್ಲ.

ಗುರುದೇವರ ಈ ಅಭಿಪ್ರಾಯಗಳ ಸಂದರ್ಭದಲ್ಲಿ ಅವರ ಮಕ್ಕಳ ಸಾಹಿತ್ಯವನ್ನು ಸಾಹಿತ್ಯದ ಈ ಪ್ರಕಾರದಲ್ಲಿ ಬರೆಯುತ್ತಿದ್ದವರಲ್ಲಿ ಅವರೆಷ್ಟು ಹಿರಿಯರೆಂಬುದನ್ನು ನಾವು ಕಾಣಬಹುದಾಗಿದೆ. ಇಂದಿಗೂ ಅವರ ಅಲೋಚನೆಗಳು ಹಲವು ಬಗೆಯಲ್ಲಿ ಪ್ರಮುಖವೆನಿಸಿವೆ.

**ಮೂಲ: ಹರಿಕೃಷ್ಣನ್ ದೇವ್‌ಸಾರೆ**

**ಅನು: ಡಾ. ರತ್ನಮ್ಮ ಕೆ.ಎಸ್.**

## ಮಕ್ಕಳ ಹಕ್ಕುಗಳು ಮತ್ತು ಶಿಕ್ಷಣ

ಇಂದಿನ ಮಕ್ಕಳು ಮುಂದಿನ ಪ್ರಜೆಗಳು ಎಂಬುದು ಎಲ್ಲ ಜನರು ಹೇಳುವ ಸಾಮಾನ್ಯ ಮಾತು. ಆದರೆ ಆಧುನಿಕ ಪ್ರಜಾಸತ್ತಾತ್ಮಕ ಸಮಾಜದಲ್ಲಿ 'ಮಕ್ಕಳೇ ಇಂದಿನ ಪ್ರಜೆಗಳು' ಎನ್ನುವ ಅನೇಕ ತಜ್ಞರ ಅಭಿಪ್ರಾಯವನ್ನು ಇಂದು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಯಾವುದೇ ಸಮಾಜದ ಅಭಿವೃದ್ಧಿ/ಪ್ರಗತಿ ಆ ಸಮಾಜದ ಮಕ್ಕಳನ್ನು ಸುಶಿಕ್ಷರನ್ನಾಗಿಸುವ ಹೊಣೆಗಾರಿಕೆಯ ಮೇಲೆ ಅವಲಂಬಿತವಾಗಿರುವುದರಿಂದ ಮಕ್ಕಳ ಮೂಲಭೂತ ಹಕ್ಕುಗಳ ಪರಿಕಲ್ಪನೆಯ ಜ್ಞಾನ ಸಮಾಜದಲ್ಲಿ ಪ್ರತಿಯೊಬ್ಬರಿಗೂ ಅಗತ್ಯ. ಇದು ಮಕ್ಕಳ ಘನತೆ, ಗೌರವ ಮತ್ತು ಅವುಗಳ ಸಂರಕ್ಷಣೆಗಾಗಿ ನಿರ್ವಹಿಸಬೇಕಾದ ಕರ್ತವ್ಯಗಳನ್ನೂ ಸೂಚಿಸುತ್ತದೆ.

ಮಕ್ಕಳ ಹಕ್ಕುಗಳೆಂದರೆ – ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅವಶ್ಯಕತೆಗಳು, ಅಗತ್ಯವಾದುದು, ಬೇಕೇ ಬೇಕಾದುವುಗಳು, ಲಭಿಸಬೇಕಾದದ್ದುವುಗಳನ್ನು ಪಡೆಯಲೇಬೇಕಾದುವುಗಳು ಮತ್ತು ಅನುಭವಿಸಲೇಬೇಕಾದುವುಗಳು.

ಹದಿನೆಂಟು ವರ್ಷದೊಳಗಿನವರೆಲ್ಲರೂ ಮಕ್ಕಳೆಂದು ಪರಿಗಣಿಸಲಾಗುತ್ತದೆ (ಮಕ್ಕಳ ಹಕ್ಕುಗಳ ಒಡಂಬಡಿಕೆ 1989 ಹಾಗು ಬಾಲನ್ಯಾಯ ಕಾಯ್ದೆ 2000 – ಪೋಷಣೆ ಮತ್ತು ರಕ್ಷಣೆ ಪ್ರಕಾರ). ಮಕ್ಕಳಿಗೂ ವಯಸ್ಕರಂತೆಯೇ ಅವರ ಸರ್ವತೋಮುಖ ವಿಕಾಸಕ್ಕೆ ಅನುಕೂಲವಾದ ಪರಿಸ್ಥಿತಿಗಳನ್ನು ಹೊಂದುವ ಅವರದೇ ಆದ ಹಕ್ಕುಗಳಿವೆ ಎಂಬುದರ ಪರಿಕಲ್ಪನೆ ಕಳೆದ ಎರಡು ಶತಮಾನಗಳಿಂದೀಚೆಗೆ ವಿಕಾಸಗೊಂಡಿದೆ. ಅದಕ್ಕೂ ಮೊದಲು, ಮಕ್ಕಳನ್ನು ಸಂರಕ್ಷಿಸುವ ಮತ್ತು ಬೆಳೆಸುವ ಹೊಣೆಗಾರಿಕೆ ತಂದೆ, ತಾಯಿಗಳಿಗಿರುವುದರಿಂದ ಅವರು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂದು ತಿಳಿಯಲಾಗಿತ್ತು. ಆದರೆ ಅನೇಕ ಕಾರಣಗಳಿಂದ ಬಹುತೇಕ ಮಕ್ಕಳು ತಮ್ಮ ವ್ಯಕ್ತಿತ್ವವಿಕಾಸಕ್ಕೆ ಪೂರಕವಾದ ಪ್ರೋತ್ಸಾಹಕ ಪರಿಸರದಿಂದ ವಂಚಿತರಾಗಿರುವುದೇ

Digitised by Bharatavani, CIIL

ಅಲ್ಲದೆ ಸಮಾಜದ ವಿವಿಧ ರೀತಿಯ ದಬ್ಬಾಳಿಕೆ, ದೌರ್ಜನ್ಯಗಳಿಗೆ ಸಿಕ್ಕಿ ನಲುಗುತ್ತಿರುವುದು ಹಾಗೂ ಪಿತೃಪ್ರಧಾನ ಕುಟುಂಬದಲ್ಲಿ ತಂದೆಯ ದಬ್ಬಾಳಿಕೆ, ಅಜ್ಞಾನ, ಧರ್ಮದ ಕೆಲವು ಅಂಶಗಳು, ನಿರಕ್ಷರತೆ, ಬಡತನ, ಭ್ರೂಣಹತ್ಯೆ, ಶಿಶುಹತ್ಯೆಗಳಂತಹ ಕೆಲವು ಸಾಮಾಜಿಕ ಕೆಡುಕುಗಳಿಂದ ಸಮಾಜದ ಮೇಲೆ ಆಗುವ ದುಷ್ಪರಿಣಾಮಗಳನ್ನು ಇಂದಿಗೂ ಕಾಣುತ್ತಿದ್ದೇವೆ.

ಅನೇಕ ಕಾರಣಗಳಿಂದ ಮಕ್ಕಳ ಹಕ್ಕುಗಳು ಹಾಗೂ ಅದನ್ನು ಕುರಿತ ಶಿಕ್ಷಣ ಮಹತ್ವವೆನಿಸಿಕೊಳ್ಳುತ್ತದೆ. ಪ್ರತಿಯೊಂದು ಮಗುವೂ ಜನ್ಮ ಹೊಂದಲು, ಒಂದು ಹೆಸರನ್ನು ಹೊಂದಲು ಜೀವಿಸಲು, ಉತ್ತಮ ಆರೋಗ್ಯ ಸೇವೆ ಪಡೆಯಲು, ತಾನು ಒಂದೇ ದೇಶದ ಪ್ರಜೆ ಎಂದು ಗುರುತಿಸಿಕೊಳ್ಳಲು, ತಂದೆ – ತಾಯಿಗಳು ಅಜ್ಞಾನ/ಮೂಢನಂಬಿಕೆಗಳಿಂದ ಒಳಗಾಗುವ ದಂಡನೆ – ದಬ್ಬಾಳಿಕೆಗಳಿಂದ ಮಕ್ಕಳನ್ನು ರಕ್ಷಿಸಲು, ಮಕ್ಕಳಿಗೆ ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆಗೆ ಅವಕಾಶಗಳನ್ನು ಒದಗಿಸಲು, ಶಾಲೆಗಳಲ್ಲಿ ನೀಡುವ ದಂಡನೆಗಳಿಂದ ತಪ್ಪಿಸಲು, ಮಕ್ಕಳನ್ನು ಶಿಕ್ಷಣದಿಂದ ವಂಚಿತಗೊಳಿಸಿ ಅಪಾಯಕಾರಿ ಉದ್ಯೋಗಳಲ್ಲಿ ದುಡಿಮೆಗೆ ನೂಕುವುದನ್ನು ನಿರ್ಮೂಲನಗೊಳಿಸಲು, ಮಕ್ಕಳ ಮಾರಾಟ, ಸಾಗಾಣೆ, ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ ರಕ್ಷಿಸಲು,

ಮಕ್ಕಳ ತಮ್ಮ ಸಾಮರ್ಥ್ಯಗಳನ್ನು ಪೂರ್ಣರೂಪದಲ್ಲಿ ವ್ಯಕ್ತಗೊಳಿಸಲು ಯೋಗ್ಯವಾದ ಸಾಮಾಜಿಕ, ಆರ್ಥಿಕ, ಭೌತಿಕ, ರಾಜಕೀಯ ಹಾಗೂ ಧಾರ್ಮಿಕ ಅವಕಾಶಗಳನ್ನು ಹೊಂದುವ ಹಕ್ಕುಗಳು ಮಕ್ಕಳಿಗೆ ಇರಬೇಕಾಗುತ್ತದೆ. ಸಮಾಜ ಮತ್ತು ಸರ್ಕಾರಕ್ಕೆ ಈ ಹಕ್ಕುಗಳನ್ನು ಅನುಷ್ಠಾನಕ್ಕೆ ತರುವ/ಸಂರಕ್ಷಿಸುವ ಹೊಣೆಗಾರಿಕೆಯೂ ಇದೆ.

ಮಕ್ಕಳ ಹಕ್ಕುಗಳ ಈ ಪರಿಕಲ್ಪನೆಗೆ ವಿಶೇಷ ಚಾರಿತ್ರಿಕ ಹಿನ್ನೆಲೆ ಇದೆ. ಮಗುವಿನ ಹಕ್ಕುಗಳ ಬಗ್ಗೆ ಪ್ರಪಂಚದಾದ್ಯಂತ ಅನೇಕ ದೇಶಗಳು ವಿಶೇಷ ಗಮನ ನೀಡಿರುವುದು ಕಳೆದ ಎರಡು ಶತಮಾನಗಳ ಒಂದು ಮುಖ್ಯ ಪ್ರವೃತ್ತಿಯಾಗಿದೆ. ಅದಕ್ಕೂ ಮುಂಚೆ ವಯಸ್ಕರಂತೆಯೇ ಮಕ್ಕಳಿಗೂ ಪ್ರತ್ಯೇಕ ಹಕ್ಕುಗಳಿರಬೇಕು ಎಂಬ ವಿಚಾರ ಯಾವುದೇ ಸಮಾಜಕ್ಕೆ ಹೊಳೆದಿರಲಿಲ್ಲವೆಂದು ಕಾಣುತ್ತದೆ. ವಿಶ್ವಮಟ್ಟದಲ್ಲಿ ಅದರಲ್ಲೂ ಯೂರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಕಳೆದ ಎರಡು ಶತಮಾನಗಳಿಂದೀಚೆಗೆ ಜನರ ಗಮನ ಮಗುವಿನ ಹಕ್ಕುಗಳ ಅವಶ್ಯಕತೆ ಬಗ್ಗೆ ಕೇಂದ್ರೀಕೃತವಾಗಿದೆ. ಬಹುಶಃ ವಿಶ್ವದಲ್ಲಿ ಪ್ರಪ್ರಥಮವಾಗಿ ಶಿಶುಗಳ ಹಕ್ಕುಗಳಿಗೆ 1796ರಲ್ಲಿ ಥಾಮಸ್ ಸ್ಪೆನ್ಸ್ ಎಂಬಾತ ಒತ್ತು ಕೊಟ್ಟನೆಂದು ತಿಳಿದುಬಂದಿದೆ. ಅಮೇರಿಕಾದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಆಂದೋಲನ 1800ರ ದಶಕದಲ್ಲಿ ಆರಂಭವಾಯಿತು. ಆಗಿನ ಕಾಲದಲ್ಲಿ ಅನಾಥ ಮಕ್ಕಳನ್ನು ದುಡಿಮೆಗೆ ತೊಡಗಿಸುತ್ತಿದ್ದುದು ಈ ಆಂದೋಲನಕ್ಕೆ ಪ್ರೇರಣೆ ನೀಡಿತ್ತು. ಈ ಆಂದೋಲನದ ಫಲವಾಗಿ 1852ರಲ್ಲಿ ಮೆಸಾಚುಸೆಟ್ಸ್‌ನಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಬೇಕಾದುದನ್ನು ಕಡ್ಡಾಯಗೊಳಿಸಲಾಯಿತು. 1853ರಲ್ಲಿ ಚಾರ್ಲ್ಸ್ ಬ್ರೇಸ್ ಎಂಬಾತ ಮಕ್ಕಳ ಸಹಾಯ ಸಂಸ್ಥೆಯೊಂದನ್ನು ಆರಂಭಿಸಿದನು. 1890ರಲ್ಲಿ ಅಮೇರಿಕಾ ಸರ್ಕಾರ ಮಕ್ಕಳ ದುಡಿಮೆಯನ್ನು ತೊಡೆದು ಹಾಕಲು 'ರಾಷ್ಟ್ರೀಯ ಮಕ್ಕಳ ದುಡಿಮೆ ನಿರ್ಮೂಲನ ಸಮಿತಿ' ಯೊಂದನ್ನು ರೂಪಿಸಿಕೊಂಡಿತು. 20ನೇ ಶತಮಾನದ ಆರಂಭದಲ್ಲಿ ಯೂರೋಪ್ ದೇಶಗಳಲ್ಲಿ ಮತ್ತು ಅಮೇರಿಕಾ ದೇಶದಲ್ಲಿ ವಯಸ್ಕರ ಹಕ್ಕುಗಳಿಂದ ಪ್ರತ್ಯೇಕವಾದ ಮಕ್ಕಳ ಹಕ್ಕುಗಳ ವಿಚಾರದ ಬಗ್ಗೆ ಆಂದೋಲನ ಆರಂಭವಾಯಿತು. 1919ರಲ್ಲಿ ಪೋಲೆಂಡ್ ದೇಶದ ಶಿಕ್ಷಣತಜ್ಞ ಜಾನುಜ್ ಕೋರೆಜಾಕ್ ಎಂಬುವನು ತನ್ನ 'ಊಂಆ ಣಂ ಐಂತಜ ಚ ಙುಟಜ' (ಮಗುವನ್ನು ಪ್ರೀತಿಸುವುದು ಹೇಗೆ?) ಎಂಬ ಪುಸ್ತಕದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಬರೆದನು. ರಷ್ಯಾದಲ್ಲಿ ಕಮ್ಯೂನಿಸ್ಟ್ ಕ್ರಾಂತಿಯಾದ ನಂತರ ಅಲ್ಲಿನ ಸರ್ಕಾರ 1917ರಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಒಂದು ಘೋಷಣೆಯನ್ನು ಹೊರಡಿಸಿತು. 1923 ರಲ್ಲಿ ಈಗಲ್‌ಟೈನ್ ಜೆಬ್ ಎಂಬುವನು ವಿವರವಾದ ಮಕ್ಕಳ ಹಕ್ಕುಗಳ ಘೋಷಣೆಯೊಂದನ್ನು ನಿರೂಪಿಸಿದನು. ಆಗ ಅಸ್ತಿತ್ವದಲ್ಲಿದ್ದ ಲೀಗ್ ಆಫ್ ನೇಷನ್ಸ್ (ರಾಷ್ಟ್ರಗಳ ಒಕ್ಕೂಟ) 1924ರಲ್ಲಿ ಈ ಘೋಷಣೆಯನ್ನು ಒಪ್ಪಿಕೊಂಡು ಅದಕ್ಕೆ ಮಾನ್ಯತೆ ನೀಡಿತು ದ್ವಿತೀಯ ಮಹಾಯುದ್ಧದ ನಂತರ ಹೊಸದಾಗಿ ರೂಪುಗೊಂಡ ಸಂಯುಕ್ತ ರಾಷ್ಟ್ರ ಸಂಘ (U.N.O - United Nations Organization) ಈ ಘೋಷಣೆಯನ್ನು ಸಂಯುಕ್ತ ರಾಷ್ಟ್ರ ಸಂಘ ಮಕ್ಕಳ ಹಕ್ಕುಗಳ ಒಡಂಬಡಿಕೆ (United Nations Convention of the Children's Rights) ರೂಪದಲ್ಲಿ ಘೋಷಿಸಿದೆ. ಇದಾದ ನಂತರ ವಿಶ್ವದಾದ್ಯಂತ ಮಕ್ಕಳ ಹಕ್ಕುಗಳ ಆಂದೋಲನ ಆರಂಭವಾಗಿ, ಎಲ್ಲರ ಗಮನ ಸೆಳೆದಿದೆ. ಭಾರತದಲ್ಲಿ ಸ್ವಾತಂತ್ರ್ಯಕ್ಕೂ ಮೊದಲು ಮಕ್ಕಳ ಹಕ್ಕುಗಳ ಬಗ್ಗೆ ಗಮನ ಹರಿಸದಿದ್ದರೂ ಸ್ವತಂತ್ರ ಭಾರತದ ಸಂವಿಧಾನ ರೂಪಿಸಿದಾಗ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಲು ಅನುಕೂಲವಾಗುವಂತೆ ಪ್ರಾವಧಾನ (Provision) ಗಳನ್ನು ಕಲ್ಪಿಸಲಾಗಿದೆ. ಇದರ ಪ್ರಕಾರ,

ಪರಿಚ್ಛೇದ 21 ರಲ್ಲಿ – ಭಾರತದಲ್ಲಿ ಹುಟ್ಟಿದ ಎಲ್ಲಾ ಮಕ್ಕಳಿಗೆ ನಾಗರೀಕರಾಗಿ ಬದುಕುವ ಹಕ್ಕು ಮತ್ತು 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಗೂ 'ಶಿಕ್ಷಣದ ಮೂಲಭೂತ' ಹಕ್ಕು,

ಪರಿಚ್ಛೇದ 24 ರಲ್ಲಿ – ಹದಿನಾಲ್ಕು ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದರ ನಿಷೇಧ. ಪರಿಚ್ಛೇದ 39 ರಲ್ಲಿ – ಪೋಷಕರು ತಮ್ಮ ಕುಟುಂಬ ನಡೆಸಲು ಮಕ್ಕಳ ಬಳಕೆಯ ನಿಷೇಧ.

ಪರಿಚ್ಛೇದ 45 ರಲ್ಲಿ – ಹದಿನಾಲ್ಕು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಇವುಗಳನ್ನು ನೀಡಲಾಗಿದೆ.

ಈ ದಿಶೆಯಲ್ಲಿ ಅನೇಕ ಕಾಯ್ದೆಗಳನ್ನು ಜಾರಿಗೊಳಿಸಲಾಯಿತು. ಇವುಗಳಿಂದ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾದ ಹಕ್ಕುಗಳನ್ನು ಮತ್ತು ಅನುಕೂಲಗಳನ್ನು ಮಕ್ಕಳು ಪಡೆಯಲು ಸಾಧ್ಯವಾಗಿದೆ.

Digitised by Bharatavani, CIIL

14 ವರ್ಷ ವಯಸ್ಸಿನೊಳಗಿನ ಮಕ್ಕಳಿಗೆ ಸಾರ್ವತ್ರಿಕ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಮಕ್ಕಳ ಆರೋಗ್ಯ, ಪೌಷ್ಟಿಕತೆ ಮತ್ತು ಶಿಕ್ಷಣಕ್ಕಾಗಿ ಅನೇಕ ಸೇವೆಗಳಿಗಾಗಿ ಹಣ ಮೀಸಲಿಡಲಾಗಿರುವುದು ಮಕ್ಕಳ ಹಕ್ಕುಗಳನ್ನು ಕುರಿತ ರಾಷ್ಟ್ರೀಯ ಪ್ರಯತ್ನವಾಗಿದೆ.

ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ವಿಶೇಷವಾಗಿ ಭಾರತ ದೇಶವು ಸಂಯುಕ್ತ ರಾಷ್ಟ್ರ ಸಂಘದ 1959ರ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಒಪ್ಪಿಕೊಂಡಿತು 1974ರಲ್ಲಿ ಭಾರತ ಸರ್ಕಾರ ಮಕ್ಕಳಿಗಾಗಿ ರಾಷ್ಟ್ರೀಯ ನೀತಿಯೊಂದನ್ನು ಅನುಸರಿಸಲು ತೀರ್ಮಾನಿಸಿತು. ಇದರ ಪ್ರಕಾರ 'ರಾಷ್ಟ್ರದ ಮಕ್ಕಳು ರಾಷ್ಟ್ರದ ಅತ್ಯುಚ್ಚ ಮಹತ್ವವುಳ್ಳ ಆಸ್ತಿ' ಎಂದು ಘೋಷಿಸಲಾಯಿತು. ಅದೇ ವರ್ಷ (1974) 'ಸರ್ಕಾರ ರಾಷ್ಟ್ರೀಯ ಮಕ್ಕಳ ಬೋರ್ಡ್' ನ್ನು ರೂಪಿಸಿತು. 1985ರಲ್ಲಿ ಮಾನವ ಸಂಪನ್ಮೂಲ ವಿಕಾಸ ಸಚಿವಾಲಯದಲ್ಲಿ **'ಮಹಿಳೆಯರು ಮತ್ತು ಶಿಶುವಿಕಾಸ'** ಇಲಾಖೆಯನ್ನು ಪ್ರಾರಂಭಿಸಲಾಯಿತು. 1992ರಲ್ಲಿ ಮಕ್ಕಳಿಗಾಗಿ ರಾಷ್ಟ್ರೀಯ ಕಾರ್ಯಯೋಜನೆಯೊಂದನ್ನು ಯೋಜಿಸಲಾಯಿತು. ನವೆಂಬರ್ 1992ರಲ್ಲಿ ಭಾರತ 1989ರ **ಸಂಯುಕ್ತ ರಾಷ್ಟ್ರ ಸಂಘದ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು** ಒಪ್ಪಿಕೊಂಡು ಡಿಸೆಂಬರ್ 11 ರಂದು ಅದಕ್ಕೆ ಸಹಿ ಹಾಕಿತು.

ಈ ಒಪ್ಪಂದದಂತೆ ಎಲ್ಲಾ ರಾಜ್ಯ ಸರ್ಕಾರಗಳು ಸಂಯುಕ್ತ ರಾಷ್ಟ್ರ ಸಂಘದ ಒಡಂಬಡಿಕೆಯಲ್ಲಿ ತಿಳಿಸಿರುವ ಮಕ್ಕಳ ಹಕ್ಕುಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಕಲಮುಗಳನ್ನು ಅಕ್ಷರಶಃ ಒಪ್ಪಿಕೊಂಡು ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಲು ಎಲ್ಲಾ ವಿಧದ ಕ್ರಮಗಳನ್ನು ತೆಗೆದುಕೊಳ್ಳುವುದು ಕಡ್ಡಾಯವಾಗಿದೆ. ಈ ದಿಶೆಯಲ್ಲಿ 1994ರಲ್ಲಿ ಅನೇಕ ರಾಜ್ಯಗಳಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಬಗ್ಗೆ ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ತಿಳುವಳಿಕೆ ಮೂಡಿಸಲು ರಾಜ್ಯಮಟ್ಟದ ಕಾರ್ಯಾಗಾರಗಳನ್ನು ಏರ್ಪಡಿಸಲಾಯಿತು.

ಡಿಸೆಂಬರ್ 29, 2006ರಲ್ಲಿ ಭಾರತ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಅಂಗೀಕಾರವಾದ ಕಾಯ್ದೆ ಮೇರೆಗೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವನ್ನು (National Commission for Protection of Child Right Act - 2007) ಸ್ಥಾಪಿಸಿತು. ಈ ಆಯೋಗ ಶಿಶು ಆರೋಗ್ಯ, ಶಿಕ್ಷಣ, ಶಿಶುಸಂರಕ್ಷಣೆ ಮತ್ತು ವಿಕಾಸ, ಬಾಲಕರಿಗೆ ನ್ಯಾಯ, ಅಸಮರ್ಥತೆಯುಳ್ಳ ಮಕ್ಕಳು, ಬಾಲ ದುಡಿಮೆ ನಿರ್ಮೂಲನೆ, ಶಿಶು ಮನೋವಿಜ್ಞಾನ ಮತ್ತು ಸಮಾಜಶಾಸ್ತ್ರ ಮತ್ತು ಮಕ್ಕಳ ಸಂಬಂಧಿತ ಕಾನೂನುಗಳು ಈ ಕ್ಷೇತ್ರಗಳಿಂದ ಆಯ್ಕೆ ಮಾಡುವ ಆರು ಸದಸ್ಯರನ್ನು ಹೊಂದಿದೆ. ಈ ಆಯೋಗಕ್ಕೆ ಮಕ್ಕಳ ಮೇಲಿನ ದೌರ್ಜನ್ಯ, ಶೋಷಣೆಯನ್ನು ನಿಯಂತ್ರಿಸುವ ಮತ್ತು ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವ ಅಧಿಕಾರ ನೀಡಲಾಗಿದೆ.

ಇತ್ತೀಚೆಗೆ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಮತ್ತು ಮಕ್ಕಳ ಬಗ್ಗೆ ಆಗಬಹುದಾದ ದುಡಿಮೆ, ವೇಶ್ಯಾವೃತ್ತಿಗೆ ತೊಡಗಿಸುವುದು, ದಂಡನೆಗೆ ಒಳಪಡಿಸುವುದು, ಮಾರಾಟ ಮಾಡುವುದು, ಹಕ್ಕುಗಳಿಂದ ವಂಚಿಸುವುದು ಮುಂತಾದ ದೌರ್ಜನ್ಯಗಳನ್ನು ತಡೆಗಟ್ಟುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನೇಕ ಕಾಯ್ದೆಗಳನ್ನು ಜಾರಿಗೊಳಿಸಲಾಗಿದೆ. ವಿಶ್ವಸಂಸ್ಥೆಯು 1979ರಿಂದ ಚರ್ಚೆ ನಡೆಸಿ **ಮಕ್ಕಳ ಹಕ್ಕುಗಳ ಒಡಂಬಡಿಕೆ**ಯನ್ನು ರೂಪಿಸಿ 1989ರಲ್ಲಿ ನವೆಂಬರ್ 12 ರಂದು ಅಂಗೀಕರಿಸಿದೆ.

**ಮಕ್ಕಳ ಹಕ್ಕುಗಳ ಒಡಂಬಡಿಕೆ – 1989**

ಮಕ್ಕಳಿಗೆ ಕಾನೂನು ಬದ್ಧವಾಗಿ ಅನುಭವಿಸಲು ಅವರಿಗೆ ಹಕ್ಕುಗಳನ್ನು ನೀಡಬೇಕು ಎನ್ನುವ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯು 1989 ನವೆಂಬರ್ 12 ರಂದು ಅಂಗೀಕರಿಸಿದ ಒಡಂಬಡಿಕೆಗೆ ಭಾರತ ದೇಶವು 1992 ಡಿಸೆಂಬರ್ 12 ರಂದು ಒಪ್ಪಿ ಸಹಿಹಾಕಿದೆ. ಈ ಒಡಂಬಡಿಕೆಯಲ್ಲಿ ಮುಖ್ಯವಾಗಿ 54 ಪರಿಚ್ಛೇದಗಳಿದ್ದು ಒಡಂಬಡಿಕೆಯ ಮೊದಲನೇ ಭಾಗದ 41 ಪರಿಚ್ಛೇದಗಳಲ್ಲಿ ಒಟ್ಟಾಗಿ ಮುಖ್ಯವಾಗಿ 4 ಹಕ್ಕುಗಳು ಎದ್ದು ಕಾಣುತ್ತವೆ. ಇವು ಇಡೀ ಒಡಂಬಡಿಕೆಯ 54 ಪರಿಚ್ಛೇದಗಳ ಪೈಕಿ ಬಹಳ ಪ್ರಮುಖವಾದ ನಾಲ್ಕು ಹಕ್ಕುಗಳಾಗಿವೆ. ಅವುಗಳೆಂದರೆ, ಬದುಕುವ ಹಕ್ಕು, ಅವಕಾಶ ಮತ್ತು ವಿಕಾಸನ ಹೊಂದುವ ಹಕ್ಕು ಮತ್ತು ಭಾಗವಹಿಸುವ ಹಕ್ಕು.

ಬದುಕುವ ಹಕ್ಕುಗಳ ಭಾಗವಾಗಿ ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಒಂದು ಹೆಸರು ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ ಪಡೆಯುವ, ಪೌಷ್ಟಿಕ ಆಹಾರ ಪಡೆಯುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕುಗಳು ಸೂಚಿತವಾಗಿವೆ. ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ ತುರ್ತು ಸಂದರ್ಭಗಳಲ್ಲಿ ಮತ್ತು ಶಸ್ತ್ರಾಸ್ತ್ರಗಳಿಂದ ರಕ್ಷಣೆ, ಮಕ್ಕಳ ಮಾರಾಟ ಮತ್ತು ಸಾಗಾಣಿಕೆ ವಿರುದ್ಧ ರಕ್ಷಣೆಯ ಹಕ್ಕು. ಇವುಗಳು ರಕ್ಷಣೆಯ ಹಕ್ಕುಗಳಾಗಿವೆ. ವಿಕಾಸ/ಬೆಳೆಯಲು ಅವಕಾಶ, ಶಿಕ್ಷಣ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಹೊಂದುವ ಹಕ್ಕು. ಇವುಗಳನ್ನು ಒಳಗೊಳ್ಳುತ್ತದೆ. ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿಯ ಲಭ್ಯತೆ, ಚಿಂತನೆಗೆ ಬೌದ್ಧಿಕ ಚಟುವಟಿಕೆಗಳಿಗೆ ಅವಕಾಶ, ಸಂಘಟಿತರಾಗುವುದು ಮತ್ತು ಧಾರ್ಮಿಕ ಹಕ್ಕುಗಳು ಇವು ಭಾಗವಹಿಸುವ ಹಕ್ಕಿನ ಅಡಿಯಲ್ಲಿ ಗುರುತಿಸಲ್ಪಡುತ್ತವೆ.

**ಮಕ್ಕಳ ಹಕ್ಕುಗಳ ಒಡಬಂಡಿಕೆಯಲ್ಲಿರುವ 54 ಪರಿಚ್ಛೇದಗಳಲ್ಲಿ ಇನ್ನೂ ಕೆಲವು ಮುಖ್ಯವಾದ ಪರಿಚ್ಛೇದಗಳು ಹೀಗಿವೆ.**

- **ಮಕ್ಕಳ ನಡುವೆ ತಾರತಮ್ಯ, ಭೇದಭಾವ ಇರಬಾರದು (ಪರಿಚ್ಛೇದ–2):** ಅಂದರೆ, ಯಾವುದೇ ಮಗುವನ್ನು ಇತರರಿಂದ ಬೇರೆಯಾಗಿ ಪರಿಗಣಿಸಬಾರದು. ಮಗುವು ಮತ್ತು ಮಗುವಿನ ತಂದೆ–ತಾಯಿ, ಪೋಷಕರ ಜಾತಿ, ವರ್ಣ, ಲಿಂಗ, ಭಾಷೆ, ಪ್ರದೇಶ, ರಾಜಕೀಯ ನಿಲುವು, ಅಂಗವೈಕಲ್ಯತೆ, ಹುಟ್ಟು ನಗರ, ಗ್ರಾಮ ಬುಡಕಟ್ಟು, ಆದಿವಾಸಿ ಹಿನ್ನಲೆಯಲ್ಲಿ ಆ ಮಗುವನ್ನು ಇತರ ಮಕ್ಕಳಿಂದ ಬೇರೆಯಾಗಿ ನೋಡಬಾರದು. ಎಲ್ಲಾ ಮಕ್ಕಳಿಗೂ

Digitised by Bharatavani, CIIL

ಒಂದೇ ಭಾವನೆಯಿಂದ ಬೆರೆಯಲು ಅವಕಾಶ ನೀಡಬೇಕು.

• **ಎಲ್ಲವೂ ಮಕ್ಕಳ ಹಿತದೃಷ್ಟಿಯಿಂದ ಆಗಬೇಕು (ಪರಿಚ್ಛೇದ – 3):** ಮೊದಲನೆಯದಾಗಿ ಸಾರ್ವಜನಿಕ ಇಲ್ಲವೆ ಖಾಸಗಿ ಸಮಾಜ ಕಲ್ಯಾಣ ಸಂಸ್ಥೆ, ನ್ಯಾಯಾಲಯ, ಆಡಳಿತ ಮಂಡಳಿ, ಪ್ರಾಧಿಕಾರಗಳು ಅಥವಾ ಶಾಸಕಾಂಗ ಮಕ್ಕಳನ್ನು ಕುರಿತಾಗಿ ತೆಗೆದುಕೊಳ್ಳುವ ಯಾವುದೇ ನಿರ್ಧಾರ, ಕಾರ್ಯಕ್ರಮಗಳು ಮಕ್ಕಳ ಹಿತದೃಷ್ಟಿಗೆ ಮೊದಲ ಆದ್ಯತೆ ನೀಡಬೇಕು. ಎರಡನೆಯದಾಗಿ ಮಕ್ಕಳನ್ನು ಸಾಕಿ ಸಲುಹುವ ಜವಾಬ್ದಾರಿ ವಹಿಸಿಕೊಂಡ ತಂದೆ–ತಾಯಿ ಕಾನೂನಿನನ್ವಯ ನೇಮಿಸಲಾದ ಪೋಷಕರು ಮತ್ತು ಸಂಸ್ಥೆಗಳು ಇವರ ಹಕ್ಕು ಮತ್ತು ಜವಾಬ್ದಾರಿಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ರಕ್ಷಣೆ ಆರೈಕೆಗಾಗಿ ಸೂಕ್ತವಾದ ಆಡಳಿತ ಹಾಗೂ ಶಾಸನಾತ್ಮಕ ಕ್ರಮಗಳನ್ನು ಸರ್ಕಾರಗಳು ಕೈಗೊಳ್ಳಬೇಕು. ಮೂರನೆಯದಾಗಿ ಮಕ್ಕಳ ಆರೈಕೆ, ಲಾಲನೆ, ಪಾಲನೆ, ರಕ್ಷಣೆಯ ಜವಾಬ್ದಾರಿ ತೆಗೆದುಕೊಂಡಿರುವ ಸ್ವಯಂ ಸೇವಾ ಸಂಸ್ಥೆಗಳು, ಸಂಘಗಳು, ಅರ್ಹ ಸಂಸ್ಥೆಗಳು, ಸರ್ಕಾರಗಳು ನೇಮಿಸುವ, ನಿಗದಿ ಮಾಡಿದ ಮಾನಸಿಕಗಳು, ಮಟ್ಟಗಳನ್ನು ಅನುಸರಿಸಿ ಸುರಕ್ಷತೆ, ಆರೋಗ್ಯ ಸಂರಕ್ಷಣೆ ಮಾಡಬೇಕು. ಸೂಕ್ತ ಸಂಖ್ಯೆಯ ತರಬೇತಿ ಹೊಂದಿದ್ದ ಸಿಬ್ಬಂದಿ ಹಾಗೂ ಮೇಲ್ವಿಚಾರಣಾ ವ್ಯವಸ್ಥೆಗಳನ್ನು ಮಾಡಬೇಕು.

• **ಜೀವಿಸುವ ಹಕ್ಕು (ಪರಿಚ್ಛೇದ–6):** ಮಕ್ಕಳಿಗೆ ಜೀವಿಸಲು ಇರುವ ಹಕ್ಕನ್ನು ಸ್ಪಷ್ಟಪಡಿಸುತ್ತದೆ. ಅದರ ಪ್ರಕಾರ ಪ್ರತಿಯೊಂದು ಮಗುವಿಗು ಜೀವಿಸುವ ಹಕ್ಕಿದೆ. ಯಾವ ಮಗುವೂ ಸಹ ಅಸ್ವಾಭಾವಿಕ ಸಾವಿಗೆ ಈಡಾಗಬಾರದು. ಮಕ್ಕಳಿಗಿರುವ ಮೌಲ್ಯಕ್ಕೆ ಗೌರವ ನೀಡಬೇಕು. ಆರೋಗ್ಯ ಸೇವೆ ದೊರೆಯದೆ, ಪೌಷ್ಟಿಕ ಆಹಾರ ಸಿಕ್ಕದೆ ಮಕ್ಕಳು ಮರಣಿಸುತ್ತಿದ್ದರೆ ಆ ಕುರಿತು ಜಾಗೃತಿ ಮೂಡಿಸುವುದು ಶಿಕ್ಷಣ ಕೊಡಿಸುವುದು ಸಂಬಂಧಪಟ್ಟ ಎಲ್ಲರ ಕರ್ತವ್ಯ.

• **ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು (ಪರಿಚ್ಛೇದ–12):** ಮಕ್ಕಳಿಗೆ ಸಂಬಂಧಿಸಿದ ಮತ್ತೊಂದು ಹಕ್ಕು. ಇದರ ಪ್ರಕಾರ ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಸಮರ್ಥರಾದ ಮಕ್ಕಳಿಗೆ ಯಾವುದೇ ಅಡ್ಡಿ ಆತಂಕಗಳು ಇಲ್ಲದಂತಹ ವಾತಾವರಣದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕು. ಮಕ್ಕಳ ಮನಸ್ಸು, ವಯಸ್ಸು, ಪ್ರಬುದ್ಧತೆಯನ್ನು ಗಮನಿಸಿ ಅವರ ಅಭಿಪ್ರಾಯಗಳಿಗೆ ಸೂಕ್ತ ಪ್ರಾಮುಖ್ಯ ನೀಡಬೇಕು.

• **ಪೋಷಕರೊಂದಿಗಿರುವ ಹಕ್ಕು (ಪರಿಚ್ಛೇದ–10):** ಇಲ್ಲೆ ನಮೂದಿತವಾಗಿದೆ. ಇದರ ಪ್ರಕಾರ ಪ್ರತಿಯೊಂದು ಮಗುವಿಗೂ ತಂದೆ–ತಾಯಿ/ಪೋಷಕರೊಂದಿಗೆ ಬದುಕುವ ಹಕ್ಕಿದೆ. ಯಾವುದಾದರೂ ಮಗು ಅಥವಾ ಮಕ್ಕಳ ತಾಯಿ ತಂದೆಯರು ಬೇರೆ ಬೇರೆ ದೇಶದಲ್ಲಿದ್ದು ತಾವು ಒಟ್ಟಿಗೆ ಇರುವ ಉದ್ದೇಶದಿಂದ ದೇಶದಿಂದ ದೇಶಕ್ಕೆ ಹೋಗಲು ಅಥವಾ ಬರಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದಾಗ ಅಂತಹ ಅರ್ಜಿಗಳನ್ನು ಸರ್ಕಾರಗಳು ಆದಷ್ಟು ಬೇಗ ವಿಲೇವಾರಿ ಮಾಡಬೇಕು.

• **ಪೋಷಕರ ಜವಾಬ್ದಾರಿ (ಪರಿಚ್ಛೇದ–18):** ಕುರಿತ ಹಕ್ಕು ಇಲ್ಲಿ ಕಾಣಸಿಗುತ್ತದೆ. ತಮ್ಮ ಮಕ್ಕಳನ್ನು ಸಾಕಿ ಸಲಹುವುದು, ಬೆಳೆಸುವುದು, ತಂದೆ ತಾಯಿಗಳ ಜವಾಬ್ದಾರಿ ಇದು ಕಾನೂನು ಬದ್ಧ. ಪೋಷಕರಿಗೂ ಅನ್ವಯಿಸುತ್ತದೆ. ಪೋಷಕರು ಅಥವಾ ತಂದೆ ತಾಯಿಯರು ಈ ಜವಾಬ್ದಾರಿಯನ್ನು ಮಗುವಿನ ಹಿತದೃಷ್ಟಿಯಿಂದ ವಹಿಸಿಕೊಳ್ಳತಕ್ಕದ್ದು.

ದುಡಿಯುವ ಪೋಷಕರಿಗೆ ಅವರ ಮಕ್ಕಳ ಲಾಲನೆ ಪಾಲನೆಗಾಗಿ ಸರ್ಕಾರ ವ್ಯವಸ್ಥೆ ಮಾಡಿಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲೆಲ್ಲಿ ದುಡಿಯುವ ಪೋಷಕರು ಇದ್ದಾರೋ ಅಲ್ಲೆಲ್ಲಾ ಶಿಶುಪಾಲನಾ ಕೇಂದ್ರಗಳ ವ್ಯವಸ್ಥೆ ಮಾಡಲಾಗಿದೆ.

• **ಕೌಟುಂಬಿಕ ವಾತಾವರಣ ವಂಚಿತ ಮಕ್ಕಳನ್ನು ಕುರಿತ ಉಲ್ಲೇಖ ಇಲ್ಲಿದೆ (ಪರಿಚ್ಛೇದ–20):** ಯಾವುದಾದರೂ ಮಗು ತನ್ನ ತಂದೆ ತಾಯಿಯರಿಂದ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ದೂರವಾಗುವುದು ಅನಿವಾರ್ಯವಾದರೆ ಅಥವಾ ಮಗುವಿನ ಹಿತದೃಷ್ಟಿಯಿಂದ ತಂದೆ ತಾಯಿಯರು ಇರುವ ಪರಿಸರದಲ್ಲಿರುವುದು ಒಳ್ಳೆಯದಲ್ಲ ಎಂದು ತೀರ್ಮಾನವಾದರೆ ಅಂತಹ ಮಗುವಿಗೆ ಸರ್ಕಾರ ವಿಶೇಷ ರಕ್ಷಣೆಯನ್ನು ನೀಡಬೇಕು. ಅದಕ್ಕಾಗಿ ಕೆಲವು ಪರ್ಯಾಯ ವ್ಯವಸ್ಥೆಯನ್ನು ಸೃಷ್ಟಿಸಬೇಕು. ಅಂದರೆ ಯಾವುದಾದರೂ ಸೂಕ್ತ ಸಂಸ್ಥೆಯಲ್ಲಿ ಇರಿಸುವುದು

• **ಅಂಗವಿಕಲ ಮಕ್ಕಳಿಗೆ ರಕ್ಷಣೆ (ಪರಿಚ್ಛೇದ–23):** ಕುರಿತಂತೆ ಇಲ್ಲಿ ಉಲ್ಲೇಖಿಸಲಾಗಿದೆ. ಮಾನಸಿಕ ಅಥವಾ ದೈಹಿಕ ಅಂಗವಿಕಲತೆಯಿರುವ ಮಕ್ಕಳೂ ಸಹ ಎಲ್ಲರಂತೆ ಮನುಷ್ಯರೇ. ಅವರಿಗೂ ಸಹ ಅವಕಾಶಗಳನ್ನು ನೀಡಿ, ಅವರು ಮುಖ್ಯವಾಹಿನಿಯಲ್ಲಿ ಬೆರೆತು, ಗೌರವದಿಂದ, ಸ್ವಾವಲಂಬಿಗಳಾಗಿ, ಜನಸಮುದಾಯಗಳೊಡನೆ ಯಾವುದೇ ತಾರತಮ್ಯ ಇಲ್ಲದೆ ಬದುಕುವಂತೆ ನೋಡಿಕೊಳ್ಳಬೇಕು. ಇಂತಹ ಮಕ್ಕಳಿರುವ ಕುಟುಂಬಗಳಿಗೂ ಕೂಡ ಅದು ಒಂದು ರೀತಿಯಲ್ಲಿ ಆರ್ಥಿಕ, ಸಾಮಾಜಿಕ ಹೊರೆಯಾಗಿದ್ದು, ಈ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಗಳು ಇಂತಹ ಕುಟುಂಬಗಳಿಗೆ ಮತ್ತು ಅಂಗವಿಕಲ ಮಕ್ಕಳಿಗೆ ಸೌಲಭ್ಯಗಳನ್ನು ಒದಗಿಸಬೇಕು. ಉದಾ : ಶುಲ್ಕ ರಹಿತ ಶಿಕ್ಷಣ ಹಾಗೂ ವೈದ್ಯಕೀಯ ಸೇವೆ, ತರಬೇತಿ, ಆಟಪಾಠಗಳಿಗೆ ಅವಕಾಶ, ಉದ್ಯೋಗಾವಕಾಶಗಳು ಇತ್ಯಾದಿ ಸೌಲಭ್ಯಗಳು

• **ಲೈಂಗಿಕ ಶೋಷಣೆಯಿಂದ ರಕ್ಷಣೆ (ಪರಿಚ್ಛೇದ – 34):** ಯನ್ನು ಇದರ ಅಡಿಯಲ್ಲಿ ಒದಗಿಸಲಾಗುವುದು. ಮಕ್ಕಳನ್ನು ಎಲ್ಲ ರೀತಿಯ ಲೈಂಗಿಕ ಶೋಷಣೆ ಮತ್ತು ಲೈಂಗಿಕ ದೂಷಣೆ, ದುರುಪಯೋಗಗಳಿಂದ ರಕ್ಷಿಸಬೇಕು. ಇದಕ್ಕಾಗಿ ಎಲ್ಲ ದೇಶಗಳು ತಮ್ಮ ಸ್ವದೇಶದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಂದ ಹಾಗೂ ಕ್ರಮಗಳನ್ನು ಕೈಗೊಳ್ಳಬೇಕು.

**ಶಿಶುಗಳ ಹಕ್ಕುಗಳ ಕಾಯ್ದೆಗಳು**

**ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಹಾಗೂ ಅವರ ಪರವಾಗಿ**

Digitised by Bharatavani, CIIL

**ಹೋರಾಡಲು ಭಾರತದಲ್ಲಿ ಚಾಲ್ತಿಯಲ್ಲಿರುವ ಕೆಲವು ಕಾಯ್ದೆ/ ಕಾನೂನುಗಳು:**

- **ಸಂವಿಧಾನದ, ಭಾರತೀಯ ದಂಡ ಸಂಹಿತೆ – 1860 ಸೆಕ್ಷನ್ 361**

16 ವರ್ಷದೊಳಗಿನ ಗಂಡು ಅಥವಾ 18 ವರ್ಷದೊಳಗಿನ ಹೆಣ್ಣು ಮಗುವನ್ನು ಅಪಹರಿಸುವುದು, ಲೈಂಗಿಕವಾಗಿ ಪ್ರಚೋದಿಸುವುದು ಅಪರಾಧರಾಗುತ್ತದೆ. ಸೆಕ್ಷನ್ 366ರ ಪ್ರಕಾರ ಮಕ್ಕಳನ್ನು ವೈಶ್ಯಾವೃತ್ತಿಗೆ ಬಲವಂತಪಡಿಸುವುದು, ದೂಡುವುದು ಅಪರಾಧವಾಗುತ್ತದೆ.

- **ಬಾಲ್ಯ ವಿವಾಹದ ನಿಯಂತ್ರಣ ಕಾಯ್ದೆ – 1929**

ಹೆಣ್ಣು ಮಕ್ಕಳಿಗೆ 18 ವರ್ಷಕ್ಕೆ ಮೊದಲು ಮತ್ತು ಗಂಡುಮಕ್ಕಳಿಗೆ 20 ವರ್ಷಕ್ಕೆ ಮೊದಲು ಮದುವೆ ಮಾಡುವುದು ಬಾಲ್ಯ ವಿವಾಹವಾಗುವುದರಿಂದ ಅದು ಅಪರಾಧವಾಗುತ್ತದೆ.

- **ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ – 1986**

14 ವರ್ಷದೊಳಗಿನ ಮಕ್ಕಳನ್ನು ಯಾವುದೇ ರೀತಿಯ ದುಡಿಮೆ ಕೆಲಸಗಳಿಗೆ, ಅದರಲ್ಲೂ ಅಪಾಯಕಾರಿಯಾದ ಪರಿಸ್ಥಿತಿಗಳಲ್ಲಿ ದುಡಿಸಿಕೊಳ್ಳುವುದು ಈ ಕಾಯ್ದೆ ಪ್ರಕಾರ ಅಪರಾಧವೆನಿಸುತ್ತದೆ.

- **ರಾಷ್ಟ್ರೀಯ ಕ್ರಿಯಾ ಯೋಜನೆಗಳು**

ಆಗಾಗ್ಗೆ ರೂಪಿತವಾಗುವ ಈ ಕ್ರಿಯಾಯೋಜನೆಗಳು ಮಕ್ಕಳ ಹಕ್ಕುಗಳ ರಕ್ಷಣೆಗೆ ತೆಗೆದುಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡುತ್ತವೆ.

- **ಅನೈತಿಕ ಸಾಗಾಣಿಕೆ (ನಿಷೇಧ) ಕಾಯ್ದೆ 1956 (1986ರ ತಿದ್ದುಪಡಿ ನಂತರ)** : ಈ ಕಾಯ್ದೆ ಮಕ್ಕಳನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸಲು ಅಥವಾ ದುಡಿಸಿಕೊಳ್ಳಲು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಕ್ರಮವಾಗಿ ಸಾಗಿಸುವುದನ್ನು ತಡೆಯುತ್ತದೆ.

- **ಬಾಲ (ಜೀತ ಕಾರ್ಮಿಕ) ಕಾಯ್ದೆ 1933** : ಈ ಕಾಯ್ದೆ ಪ್ರಕಾರ 14 ವರ್ಷದ ಒಳಗಿನ ಮಕ್ಕಳನ್ನು ದೀರ್ಘಾವಧಿ ಒಪ್ಪಂದ ಮಾಡಿಕೊಂಡು ದುಡಿಮೆಗೆ ಹಚ್ಚುವುದನ್ನು ನಿಷೇಧಿಸಲಾಗಿದೆ ಈ ಪದ್ಧತಿಯನ್ನು ಜೀತಪದ್ಧತಿ ಎನ್ನುತ್ತಾರೆ.

- **ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2000 (ಜೆ.ಜೆ.ಆಕ್ಟ್ – 2000)**

ಮಕ್ಕಳ ನ್ಯಾಯ ಕುರಿತು ಮಕ್ಕಳ ನ್ಯಾಯ ಕಾಯ್ದೆ 1986 ಎಂಬುದು ಮೊದಲೇ ಜಾರಿಯಲ್ಲಿತ್ತು. ಆದರೆ ಈ ಕಾಯ್ದೆಯು ಭಾರತದ ಎಲ್ಲಾ ರಾಜ್ಯಗಳಲ್ಲಿ ಜಾರಿಯಾಗಿರಲಿಲ್ಲ. 1989 ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಹಿನ್ನೆಲೆಯಲ್ಲಿ ಹಲವಾರು ಬದಲಾವಣೆಗಳನ್ನು ತರುವ ಉದ್ದೇಶದಿಂದ ಕಾಯ್ದೆಯನ್ನು 30ನೇ ಡಿಸೆಂಬರ್ 2000 ರಂದು ಸಂಸತ್ತಿನಲ್ಲಿ ಅನುಮೋದನೆ ನೀಡಿ ದೇಶದ ಎಲ್ಲಾ ರಾಜ್ಯಗಳಲ್ಲಿ ಜಾರಿಗೊಳಿಸಲಾಗಿದೆ. ಮಕ್ಕಳ ಹಕ್ಕುಗಳನ್ನು ರಕ್ಷಿಸುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿದೆ.

ಕರ್ನಾಟಕ ರಾಜ್ಯ ಸರ್ಕಾರವು ಈ ಕಾಯ್ದೆಗೆ ಅನುಗುಣವಾಗಿ ನಿಯಮಗಳನ್ನು ರೂಪಿಸಿ 26ನೇ ಸೆಪ್ಟಂಬರ್ 2002ರಲ್ಲಿ ಜಾರಿಗೆ ತಂದಿರುತ್ತದೆ. ಮಕ್ಕಳನ್ನು ರಕ್ಷಿಸಿ, ಪೋಷಿಸಿ, ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ವಿಧಿಸಲು ಸೂಚಿಸುವ ಹಾಗೂ ಮಕ್ಕಳ ಹಕ್ಕುಗಳನ್ನು ರಕ್ಷಿಸುವುದೆ ಮಕ್ಕಳ ನ್ಯಾಯ ಕಾಯ್ದೆಯ ಪ್ರಮುಖ ಕಾರ್ಯವಾಗಿರುತ್ತದೆ.

**ಮಕ್ಕಳ ಹಕ್ಕುಗಳ ಕಾಯ್ದೆಗಳ ಅನುಷ್ಠಾನ:**

ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಹಲವಾರು ಕಾನೂನು/ಕಾಯ್ದೆಗಳನ್ನು ರೂಪಿಸಿದ್ದು, ಅವುಗಳ ಪರಿಣಾಮಕಾರಿ ಅನುಷ್ಠಾನ ಬಹಳ ಮುಖ್ಯವಾಗಿರುತ್ತದೆ. ಮಕ್ಕಳ ಹಕ್ಕುಗಳ ಕಾಯ್ದೆಗಳ ಅನುಷ್ಠಾನದಲ್ಲಿ ಸಾರ್ವಜನಿಕರು, ಸಂಘಸಂಸ್ಥೆಗಳು ಹಾಗೂ ಸರ್ಕಾರಗಳು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಬೇಕಾಗುತ್ತದೆ.

**ಸರ್ಕಾರದ ಪಾತ್ರ** : ಮಕ್ಕಳ ಹಕ್ಕುಗಳ ರಕ್ಷಣೆಗಾಗಿ, ಅವರ ಅಭಿವೃದ್ಧಿಗಾಗಿ ರೂಪಿಸಲಾಗಿರುವಂತಹ ಎಲ್ಲ ರೀತಿಯ ಕಾಯ್ದೆ (ಕಾನೂನುಗಳನ್ನು ಕಟ್ಟುನಿಟ್ಟಾಗಿ) ಅನುಷ್ಠಾನಕ್ಕೆ ತರಲು ಸರ್ಕಾರ ಪ್ರಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ಕಾನೂನುಗಳನ್ನು ಉಲ್ಲಂಘಿಸಿದವರಿಗೆ, ಮಕ್ಕಳ ಹಕ್ಕುಗಳಿಗೆ ಧಕ್ಕೆ ಉಂಟುಮಾಡಿದವರಿಗೆ ಜಾತಿ, ಲಿಂಗ, ವರ್ಣ ಮುಂತಾದವುಗಳ ಆಧಾರದ ಮೇಲೆ ಬೇಧ-ಭಾವ ಮಾಡದೆ ಅಂತಹವರಿಗೆ ಶಿಕ್ಷೆ ವಿಧಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ.

ಈ ನಿಟ್ಟಿನಲ್ಲಿ ಸರ್ಕಾರವು ಮಕ್ಕಳ ನ್ಯಾಯ ಮಂಡಳಿ (ಎಣತಜಟಟಜ ಎಣಾಣುಛಿಜ ಃಡಿಚಿಡಿಜ), ಹಲವಾರು ಮಕ್ಕಳ ಕಲ್ಯಾಣ ಸಮಿತಿಗಳನ್ನು ಸ್ಥಾಪಿಸಿ, ಮಕ್ಕಳ ಅಭಿವೃದ್ಧಿಗಾಗಿ, ಅವರ ಹಕ್ಕುಗಳ ರಕ್ಷಣೆಗಾಗಿ ಶ್ರಮಿಸುತ್ತಿದೆ. ಅಷ್ಟೇ ಅಲ್ಲದೆ ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ರೂಪಿಸಲು ಜನರನ್ನು ಎಚ್ಚರಿಸುವ ಸಲುವಾಗಿ ಕೆಲವು ದಿನಗಳನ್ನು ಆಯ್ಕೆ ಮಾಡಿ ಆಚರಿಸಲಾಗುತ್ತಿದೆ.

- ಏಪ್ರಿಲ್ 30 ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ.
- ನವೆಂಬರ್ 14 ಮಕ್ಕಳ ದಿನಾಚರಣೆ
- ನವೆಂಬರ್ 16 ಮಕ್ಕಳ ಹಕ್ಕುಗಳ ಒಡಂಬಡಿಕೆ ದಿನ
- ಡಿಸೆಂಬರ್ 10 ಜಾಗತಿಕ ಮಾನವ ಹಕ್ಕುಗಳ ದಿನ
- ಜೂನ್ 12 ಅಂತರರಾಷ್ಟ್ರೀಯ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ

**ಖಾಸಗಿ ಸೇವಾ ಸಂಸ್ಥೆಗಳ ಪಾತ್ರ:** ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ, ಅವರ ಅಭಿವೃದ್ಧಿಯಲ್ಲಿ ಹಲವಾರು ಖಾಸಗೀ ಸಂಘ-ಸಂಸ್ಥೆಗಳು/ ಸ್ವಯಂ ಸೇವಾ ಸಂಸ್ಥೆಗಳೂ ಕೂಡ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತಿವೆ.

ಸಾಮಾಜಿಕ ಕಳಕಳಿ ಇರುವಂತಹ ವ್ಯಕ್ತಿಗಳು ಸೇವಾ ಮನೋಭಾವನೆಯಿಂದ ಮಕ್ಕಳಿಗಾಗಿಯೇ ಹಲವಾರು ಸಂಘ-

Digitised by Bharatavani, CIIL

ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಮಕ್ಕಳ ಹಿತದೃಷ್ಟಿಯಿಂದ ಶ್ರಮಿಸುತ್ತಿವೆ.

ಉದಾ : ಮೈಸೂರಿನಲ್ಲಿ "ಒಡನಾಡಿ ಸೇವಾ ಸಂಸ್ಥೆ", "ನೆಲೆ ಸಂಸ್ಥೆ", "ಆಶಾದಾಯಕ ಸಂಸ್ಥೆ", "ಪ್ರಯತ್ನ ಸಂಸ್ಥೆ" ಇತ್ಯಾದಿ.

**ಶಾಲೆಗಳ ಮತ್ತು ಎಸ್.ಡಿ.ಎಮ್.ಸಿಯ ಪಾತ್ರ:**

ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಅವರ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಾಲೆಗಳ ಹಾಗೂ ಎಸ್.ಡಿ.ಎಮ್.ಸಿ ಯ ಪಾತ್ರವೂ ಕೂಡ ಮಹತ್ವಪೂರ್ಣದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶಾಲೆಗಳ ಜವಾಬ್ದಾರಿಯನ್ನು ಈ ಕೆಳಕಂಡಂತೆ ಕಾಣಬಹುದಾಗಿದೆ.

1. ಶಾಲೆಗಳನ್ನು ಮಕ್ಕಳಿಗೆ ಆಕರ್ಷಿತವಾಗಿರುವಂತೆ ಮಾಡುವುದು
2. ಮಕ್ಕಳ ಹಕ್ಕುಗಳ ಆಧಾರವಾಗಿಟ್ಟು ಶಾಲೆಗಳಲ್ಲಿ ಮಕ್ಕಳನ್ನು ನೋಡುವುದು.
3. ಮಕ್ಕಳಿಗೆ ಅರ್ಥವಾಗುವಂತೆ ಪಾಠ ಮಾಡುವುದು.
4. ಶಾಲೆಗಳಿಗೆ ಮಕ್ಕಳ ಹಕ್ಕುಗಳ ವೇದಿಕೆಯನ್ನು ತಯಾರಿಸುವುದು.
5. ತಮ್ಮ ಗ್ರಾಮದಲ್ಲಿರುವ ಎಲ್ಲಾ 14 ವರ್ಷದೊಳಗಿನ ಮಕ್ಕಳು ಶಾಲೆಯಲ್ಲಿರುವಂತೆ ಮಾಡುವುದು.
6. 10ನೇ ತರಗತಿ ತನಕ ಯಾವುದೇ ಮಕ್ಕಳು ಶಾಲೆ ಬಿಡದಂತೆ ನೋಡಿಕೊಳ್ಳುವುದು.
7. ತಮ್ಮ ಗ್ರಾಮವನ್ನು ಬಾಲಕಾರ್ಮಿಕ ರಹಿತ ಗ್ರಾಮವನ್ನಾಗಿ ಮಾಡುವುದು.

**ಗ್ರಾಮ ಪಂಚಾಯಿತಿಯ ಪಾತ್ರ:**

- ಮಕ್ಕಳ ಶಿಕ್ಷಣಕ್ಕಾಗಿ ಗ್ರಾಮ ಪಂಚಾಯಿತಿಯ ಅನುದಾನದಲ್ಲಿ ಹಣವನ್ನು ಮೀಸಲಿಡುವುದು.
- ಪಂಚಾಯಿತಿಗೆ ವ್ಯಾಪ್ತಿಗೆ ಸೇರಿದ ಶಾಲೆಗಳ ಮಾಹಿತಿ ಕ್ರೋಢೀಕರಿಸಿ ಅಗತ್ಯ ಗಮನಹರಿಸುವುದು.
- ಶಾಲಾ ಕಟ್ಟಡದ ದುರಸ್ತಿ ಹಾಗೂ ಮೂಲಭೂತ ಸೌಲಭ್ಯ ಪೂರೈಕೆಗೆ ಗಮನ ಹರಿಸುವುದು.
- ಶಾಲೆಗಳ ಸ್ಥಿತಿಗತಿಗಳ ಬಗ್ಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಜೊತೆ ಚರ್ಚಿಸಿ ಅಗತ್ಯಗಳನ್ನು ಪೂರೈಸುವುದು.
- ಮಕ್ಕಳ ಹಾಜರಾತಿ, ಗುಣಮಟ್ಟದ ಸುಧಾರಣೆ, ಮಕ್ಕಳ ಮತ್ತು ಶಿಕ್ಷಕರ ಅನುಪಾತ ಗುರ್ತಿಸಿ, ಶಾಲಾಭಿವೃದ್ಧಿ ಸಮಿತಿಯ ಮೂಲಕ ಶಾಲೆಯನ್ನು ಅಭಿವೃದ್ಧಿಗೊಳಿಸುವುದು.
- ಗ್ರಾಮಪಂಚಾಯಿತಿ ಮತ್ತು ಶಾಲೆಗಳ ಸಂಬಂಧ ಹೆಚ್ಚಿಸುವುದು.

**ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿರುವ 54 ಪರಿಚ್ಛೇದಗಳು**

**ವಿಧಿ :**

1. ಸಾಮಾನ್ಯವಾಗಿ 18 ವರ್ಷದ ಕೆಳಗಿನ ಎಲ್ಲರನ್ನೂ ಮಗು, ಮಕ್ಕಳು ಎಂದು ಪರಿಗಣಿಸಲಾಗುತ್ತದೆ.
2. ಜಾತಿ, ವರ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ಇತ್ಯಾದಿ ಯಾವುದೇ ಆಧಾರದಲ್ಲಿ ಮಕ್ಕಳಲ್ಲಿ ಭೇದ ಭಾವ ತೋರದೆ ಮಕ್ಕಳ ಹಕ್ಕುಗಳನ್ನು ಗೌರವಿಸುವುದು.
3. ಕಾಯಿದೆಗಳನ್ನು ರೂಪಿಸುವಾಗ ಮಕ್ಕಳ ಹಿತಾಸಕ್ತಿಗಳನ್ನು ಬಹುಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಬೇಕು.
4. ಮಕ್ಕಳ ಹಕ್ಕುಗಳನ್ನು ಸರ್ಕಾರ ಪ್ರಾಮಾಣಿಕವಾಗಿ ಜಾರಿಗೆ ತರಬೇಕು.
5. ಮಕ್ಕಳ ಬಗ್ಗೆ ಪೋಷಕರ, ಹೆತ್ತವರ ಜವಾಬ್ದಾರಿ ಮತ್ತು ಹಕ್ಕುಗಳನ್ನು ಸರ್ಕಾರವು ಗೌರವಿಸಬೇಕು.
6. ಮಗುವಿಗೆ ಜೀವಿಸುವ ಹಕ್ಕು ಇದೆ. ಪ್ರತಿಯೊಂದು ಮಗುವೂ ಸಾಯದೆ ಬದುಕುವ, ವಿಕಾಸ ಹೊಂದುವಂತೆ ಮಾಡುವ ಜವಾಬ್ದಾರಿ ಸರಕಾರದ್ದಾಗಿದೆ.
7. ಮಗುವಿನ ಹುಟ್ಟನ್ನು ನೋಂದಣಿ ಮಾಡಬೇಕು. ಅದಕ್ಕೆ ತನ್ನದೇ ಆದ ಹೆಸರು, ರಾಷ್ಟ್ರೀಯತೆ ಹೊಂದುವ ಹಕ್ಕನ್ನು, ತನ್ನ ಹೆತ್ತವರು ಯಾರು ಎಂದು ತಿಳಿದುಕೊಳ್ಳುವ, ಹೆತ್ತವರಿಂದ ಆರೈಕೆ ಪಡೆಯುವ ಹಕ್ಕನ್ನು ದೊರಕಿಸಿಕೊಡಬೇಕು.
8. ಮಕ್ಕಳ ಅನನ್ಯತೆಯನ್ನು ರಕ್ಷಿಸಬೇಕು. ಅನನ್ಯತೆಯನ್ನು ಕಳೆದುಕೊಂಡಿದ್ದರೆ ಮರಳಿ ಅದನ್ನು ದೊರಕಿಸಿಕೊಡಬೇಕು.
9. ಪ್ರತಿಯೊಂದು ಮಗುವಿಗೂ ತನ್ನದೇ ಪೋಷಕರೊಂದಿಗೆ ಬದುಕುವ ಹಕ್ಕು ಇದೆ.
10. ಯಾವುದೇ ದೇಶಕ್ಕೆ ಹೋಗುವ, ಮರಳಿ ಬರುವ ಮತ್ತು ತಂದೆ ತಾಯಿಯರೊಂದಿಗೆ ಸಂಪರ್ಕ ಇಟ್ಟುಕೊಳ್ಳುವ ಹಕ್ಕು ಮಗುವಿಗೆ ಇದೆ.
11. ಮಕ್ಕಳನ್ನು ಕಾನೂನಿಗೆ ವಿರುದ್ಧವಾಗಿ ಸ್ಥಳಾಂತರಿಸುವುದಾಗಲಿ, ಮರಳಿಸದಿರುವುದಾಗಲಿ ಕೂಡದು.
12. ತನ್ನ ಹಿತಕ್ಕೆ ಸಂಬಂಧಿಸಿದ ಅಭಿಪ್ರಾಯ ವ್ಯಕ್ತ ಪಡಿಸುವ ಹಕ್ಕು ಮಗುವಿಗಿದೆ. ಹಿರಿಯರು ಅದನ್ನು ಆಲಿಸಿ ಪಾಲಿಸಬೇಕು.
13. ಯಾವುದೇ ಮಾಧ್ಯಮಗಳ ಮೂಲಕ ಮಾಹಿತಿ ಪಡೆಯುವ, ಮಾಹಿತಿ ನೀಡುವ ಹಕ್ಕು ಮಗುವಿಗೆ ಇದೆ.
14. ತನ್ನ ನಂಬಿಕೆ ಅಥವಾ ಧರ್ಮಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಹಕ್ಕು ಮಗುವಿಗಿದೆ.

Digitised by Bharatavani, CIIL

15. ಸಂಘಟಿತರಾಗಲು ಮತ್ತು ಶಾಂತ ರೀತಿಯಿಂದ ಸಭೆ ಸೇರಲು ಮಕ್ಕಳಿಗೆ ಹಕ್ಕು ಇದೆ.

16. ತನ್ನ ವೈಯುಕ್ತಿಕ, ಕೌಟುಂಬಿಕ ವ್ಯವಹಾರಗಳಲ್ಲಿ ಮೂರನೆಯವರು ಮೂಗು ತೂರಿಸುವುದರ ವಿರುದ್ಧ ರಕ್ಷಣೆ ಪಡೆಯುವ ಹಕ್ಕು ಮಗುವಿಗೆ ಇದೆ.

17. ದೇಶದ ಮತ್ತು ಅಂತರ್ ದೇಶಿಯ ವಿವಿಧ ಮೂಲಗಳಿಂದ ಮಾಹಿತಿ ಪಡೆಯಲು ಮಕ್ಕಳಿಗೆ ಸರ್ಕಾರವು ಸೌಲಭ್ಯ ಒದಗಿಸಬೇಕು.

18. ತಮ್ಮ ಮಕ್ಕಳನ್ನು ಲಾಲಿಸಿ ಪಾಲಿಸಿ ಬೆಳೆಸುವ ಜವಾಬ್ದಾರಿಯನ್ನು ತಂದೆ ತಾಯಿಯರಿಬ್ಬರೂ ಹೊಂದಿದ್ದಾರೆ.

19. ಪೋಷಕರಾಗಲಿ ಅಥವಾ ಇನ್ನು ಯಾರೇ ಆಗಲಿ ಮಕ್ಕಳನ್ನು ದುರುಪಯೋಗ ಮಾಡುವಂತಿಲ್ಲ.

20. ತನ್ನು ಕುಟುಂಬದಿಂದ ಬೇರ್ಪಟ್ಟ ಮಗುವಿಗೆ ಸೂಕ್ತ ಪರ್ಯಾಯ ವ್ಯವಸ್ಥೆ ರಕ್ಷಣೆ ಸರಕಾರ ಒದಗಿಸಬೇಕು.

21. ದತ್ತು ನೀಡುವ, ಪಡೆಯುವ ಯಾವ ವ್ಯವಹಾರದಲ್ಲಿಯೂ ಮಗುವಿಗೆ ಅನ್ಯಾಯವಾಗಬಾರದು.

22. ನಿರಾಶ್ರಿತವಾದ ಮಕ್ಕಳಿಗೆ ಸರ್ಕಾರವು ಸೂಕ್ತ ರಕ್ಷಣೆ ಒದಗಿಸಬೇಕು.

23. ಅಂಗವಿಕಲ ಮಕ್ಕಳಿಗೆ ವಿಶೇಷವಾದ ಆರೈಕೆ ಪಡೆದು ಸ್ವಾಲಂಬನೆ ಮತ್ತು ಗೌರವದಿಂದ ಕೂಡಿದ ಜೀವನ ನಡೆಸುವ ಹಕ್ಕು ಇದೆ.

24. ಅತ್ಯುತ್ತಮವಾದ ಮತ್ತು ಗರಿಷ್ಟ ಮಟ್ಟದ ಆರೋಗ್ಯ ಸೇವಾ ಸೌಲಭ್ಯ ಪಡೆಯುವ ಹಕ್ಕು ಮಕ್ಕಳಿಗೆ ಇದೆ. ಗರ್ಭಿಣಿಯರಿಗೆ ಸೂಕ್ತ ಆರೋಗ್ಯ ಸೇವಾ ಸೌಲಭ್ಯದ ನಿರಾಕರಣೆಯು ತಾಯಿಯ ಗರ್ಭದಲ್ಲಿ ಮಗುವಿನ ಮೇಲೆ ಪರಿಣಾಮ ಬೀರುವುದರಿಂದ ತಾಯಂದಿರಿಗೆ ಆರೋಗ್ಯ ಸೇವಾ ಸೌಲಭ್ಯವು ಮಕ್ಕಳ ಹಕ್ಕು ಆಗಿದೆ.

25. ಪಾಲನೆ, ರಕ್ಷಣೆ, ಚಿಕಿತ್ಸೆಯ ಉದ್ದೇಶದಿಂದ ಮಕ್ಕಳನ್ನು ವಿಶೇಷ ಕೇಂದ್ರಗಳಲ್ಲಿ ಇರಿಸಿದ್ದರೆ ಅಲ್ಲಿನ ಪರಿಸ್ಥಿತಿಯನ್ನು ಆಗಾಗ ಪರಿಶೀಲಿಸುವುದೂ ಮಕ್ಕಳ ಹಕ್ಕುಗಳಲ್ಲಿ ಸೇರಿದೆ.

26. ಅಗತ್ಯ ಕಂಡಾಗಲೆಲ್ಲ ಸಾಮಾಜಿಕ ಭದ್ರತೆ ಹಾಗೂ ಜೀವ ವಿಮೆ ಹೊಂದುವ ಹಕ್ಕು ಇದೆ.

27. ಜೀವನ ಮಟ್ಟದ ಸುಧಾರಣೆ, ರಕ್ಷಣೆ ಇತ್ಯಾದಿಗಳಿಗೆ ಕೊರತೆ ಉಂಟಾದಾಗ ಅದನ್ನು ಸರ್ಕಾರದಿಂದ ಪಡೆಯುವುದು ಮಕ್ಕಳ ಹಕ್ಕು.

28. ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರ ಕೊಡಿಸಬೇಕು ಉನ್ನತ ಶಿಕ್ಷಣ ಪಡೆಯಲು ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡಬೇಕು. ಮಕ್ಕಳ ಘನತೆ ಗೌರವಗಳಿಗೆ ಶಾಲೆಯ ಶಿಸ್ತು ಪೋಷಕವಾಗುವಂತೆ ನೋಡಿಕೊಳ್ಳಬೇಕು.

29. ಮಗುವಿಗೆ ಶಿಕ್ಷಣ ನೀಡುವ ಉದ್ದೇಶ ಅವರ ವ್ಯಕ್ತಿತ್ವ ಮತ್ತು ಪ್ರತಿಭೆಯನ್ನು ವಿಕಸಿಸುವಂತಿರಬೇಕು. ಸಮಾಜದಲ್ಲಿ ಸ್ವಾವಲಂಬಿಯಾಗಿ ಜವಾಬ್ದಾರಿ ಜೀವನ ನಡೆಸುವ ಶಿಕ್ಷಣ ಮಗುವಿಗೆ ಒದಗಿಸಬೇಕು. ತಂದೆ ತಾಯಿಯರ, ಮೂಲಭೂತ ಮಾನವ ಹಕ್ಕುಗಳು, ಸ್ವಾಭಾವಿಕ ಪರಿಸರ, ತಾನು ಹುಟ್ಟಿ ಬೆಳೆದ ಸಂಸ್ಕೃತಿ ಇತ್ಯಾದಿಗಳನ್ನು ಗೌರವಿಸುವ ಮನೋಭಾವವನ್ನು ಮಕ್ಕಳಲ್ಲಿ ಶಿಕ್ಷಣವು ಬೆಳೆಸುವಂತಿರಬೇಕು.

30. ಅಲ್ಪ ಸಂಖ್ಯಾತ ಸಮುದಾಯಗಳಿಗೆ, ಮೂಲ ನಿವಾಸಿ ಗುಂಪಿಗೆ ಸೇರಿದ ಮಕ್ಕಳಿಗೆ ತಮ್ಮದೇ ಆದ ಧರ್ಮ, ಸಂಸ್ಕೃತಿ, ಭಾಷೆ ಬಳಸುವ ಹಕ್ಕು ಇದೆ.

31. ವಿಶ್ರಾಂತಿ ಆಟ ಹಾಗೂ ಸಾಂಸ್ಕೃತಿಕ ಕಲಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮಕ್ಕಳ ಹಕ್ಕು.

32. ಆರೋಗ್ಯ, ಶಿಕ್ಷಣ, ವಿಕಾಸಕ್ಕೆ ಅಡ್ಡಿ ಉಂಟುಮಾಡುವ ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸುವುದರ ವಿರುದ್ಧ ರಕ್ಷಣೆ ಪಡೆಯುವ ಹಕ್ಕು ಮಕ್ಕಳಿಗೆ ಇದೆ. ಉದ್ಯೋಗಕ್ಕೆ ಸೇರಲು ಮಕ್ಕಳಿಗೆ ವಯೋಮಿತಿ ನಿಗದಿಪಡಿಸಿ, ಉದ್ಯೋಗದ ಸ್ಥಿತಿಗತಿಗಳನ್ನು ಸರ್ಕಾರವು ನಿಯಂತ್ರಿಸಿ ನಿಯಮಿತಗೊಳಿಸಬೇಕು. ಕಾನೂನು ಬಾಹಿರ ಕಾರ್ಮಿಕತೆಗೆ ಅವಕಾಶ ನೀಡುವವರಿಗೆ ಸರ್ಕಾರ ಶಿಕ್ಷೆ ವಿಧಿಸಬೇಕು.

33. ಮಕ್ಕಳು ಮಾದಕ ದ್ರವ್ಯಗಳು ಮತ್ತು ಮಾನಸಿಕ ಭ್ರಮಣೆಗೆ ಕಾರಣವಾಗುವ ದ್ರವ್ಯಗಳನ್ನು ಸೇವಿಸದಂತೆ ಸರಕಾರವು ಅವರನ್ನು ರಕ್ಷಿಸಬೇಕು. ಕಾನೂನು ಬಾಹಿರ ಮಾದಕ ದ್ರವ್ಯಗಳ ಉತ್ಪಾದನೆ, ಸಾಗಣೆ ವಿತರಣೆಗಳಲ್ಲಿ ಮಕ್ಕಳು ತೊಡಗದಂತೆ, ದುರ್ಬಳಕೆಗೊಳ್ಳದಂತೆ, ಬಲಿಯಾಗದಂತೆ ಅವರನ್ನು ರಕ್ಷಿಸಬೇಕು.

34. ಯಾವುದೇ ರೀತಿಯ ಲೈಂಗಿಕ ಶೋಷಣೆಗೆ ಮಕ್ಕಳು ಬಲಿಯಾಗದಂತೆ ನೋಡಿಕೊಳ್ಳಬೇಕು. ವೇಶ್ಯಾವೃತ್ತಿಗೆ ಈಡಾಗದಂತೆ ಹಾಗೂ ಅಶ್ಲೀಲ ಸಾಹಿತ್ಯ, ಚಿತ್ರಗಳ ಕಡೆಗೆ ಸೆಳೆಯಲ್ಪಡದಂತೆ ಮಕ್ಕಳನ್ನು ಸರಕಾರ ರಕ್ಷಿಸಬೇಕು.

35. ಮಕ್ಕಳ ಅಕ್ರಮ ಮಾರಾಟ, ವಿನಿಮಯ, ಸಾಗಣೆ ಇತ್ಯಾದಿಗಳನ್ನು ಸರ್ಕಾರವು ತಡೆಯಬೇಕು.

36. ಮಕ್ಕಳನ್ನು ಎಲ್ಲ ರೀತಿಯ ಇತರೆ ಶೋಷಣೆಗಳಿಂದ ರಕ್ಷಿಸಬೇಕು.

37. ಕಾನೂನಿಗೆ ವಿರುದ್ಧವಾಗಿ ಮನಬಂದಂತೆ ಮಕ್ಕಳ ಸ್ವಾತಂತ್ರ್ಯ ಹರಣ ಮಾಡಕೂಡದು. ಈ ಬಗ್ಗೆ ಸರ್ಕಾರ ಅವರಿಗೆ ರಕ್ಷಣೆ ನೀಡಬೇಕು. ಅಪರಾಧ ನಡೆಸಿದ ಮಕ್ಕಳೊಡನೆ

Digitised by Bharatavani, CIIL

ಮಾನವೀಯತೆಯಿಂದ ವ್ಯವಹರಿಸಬೇಕು. ಅವರನ್ನು ಸರಿದಾರಿಗೆ ತರಲು ಯತ್ನಿಸಬೇಕು. ಬಾಲಾಪರಾಧಿಗಳಿಗೆ ಚಿತ್ರಹಿಂಸೆ ಅಥವಾ ಇತರ ಕ್ರೂರ, ಅಮಾನವೀಯ ಶಿಕ್ಷೆ ನೀಡಕೂಡದು. ಮರಣದಂಡನೆ ಅಥವಾ ಅಜೀವ ಸೆರೆವಾಸ ಇತ್ಯಾದಿ ಶಿಕ್ಷೆಯ ಸಂದರ್ಭದಲ್ಲಿ ಮಕ್ಕಳನ್ನು ವಿಶೇಷವಾಗಿ ಗಮನದಲ್ಲಿರಿಸಿ ಸರ್ಕಾರ ಅವರನ್ನು ರಕ್ಷಿಸಬೇಕು. ಬಾಲಾಪರಾಧಿಗಳಿಗೆ ತಮ್ಮ ಕುಟುಂಬದೊಡನೆ ಸಂಪರ್ಕ ಹೊಂದಿರಲು, ಕಾನೂನು ನೆರವು ಪಡೆಯಲು ಅವಕಾಶ ಕಲ್ಪಿಸಬೇಕು.

38. 15 ವರ್ಷದೊಳಗಿನ ಮಗು ನೇರವಾಗಿ ಯುದ್ಧಗಳಲ್ಲಿ ಪಾಲ್ಗೊಳ್ಳದಂತೆ ತಡೆಯಬೇಕು. 15 ವರ್ಷದೊಳಗಿನ ಮಕ್ಕಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಾರದು. ಸಶಸ್ತ್ರ ಸಂಘರ್ಷಗಳ ಸಂದರ್ಭಗಳಲ್ಲಿ ಬಹಳ ಮುಖ್ಯವಾಗಿ ತೊಂದರೆಗೆ ಈಡಾಗುವ ಮಕ್ಕಳ ಪಾಲನೆಗೆ ಸರ್ಕಾರ ರಕ್ಷಣೆ ನೀಡಬೇಕು.

39. ನಿರ್ಲಕ್ಷ್ಯ, ಶೋಷಣೆ, ಹಿಂಸೆ ಅಥವಾ ಯುದ್ಧ ಸಂದರ್ಭಗಳಲ್ಲಿ ತೊಂದರೆಗೀಡಾದ ಮಕ್ಕಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಗುಣಮುಖರಾಗಲು ಅವಕಾಶ ಮಾಡಿಕೊಡಬೇಕು.

40. ಅಪರಾಧ ಆರೋಪಕ್ಕೆ ಈಡಾದ ಮಕ್ಕಳನ್ನು ಗೌರವದಿಂದ ನಡೆಸಿಕೊಳ್ಳಬೇಕು. ಮಗುವಿನ ಮೇಲೆ ಆರೋಪಿಸಿದ ಅಪರಾಧವು ರುಜುವಾತು ಆಗುವವರೆವಿಗೂ ಅವರ ಮೇಲಿರುವ ಆಪಾದನೆಗಳ ಬಗ್ಗೆ ಅದಕ್ಕೆ ತಿಳಿಸಿ ಹೇಳಬೇಕು. ಅಂತಹ ಮಗುವಿಗೆ ಅಗತ್ಯವಾದ ಕಾನೂನು ಸಹಾಯ ಒದಗಿಸಬೇಕು. ಮಗುವಿನಿಂದ ಬಲವಂತವಾಗಿ ಸಾಕ್ಷಿ ಹೇಳಿಸುದುವುದಾಗಲಿ, ಆರೋಪವನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸುವುದಾಗಲಿ ಕೂಡದು. ಈ ಬಗ್ಗೆ ಸರ್ಕಾರಗಳು ರಕ್ಷಣೆ ಒದಗಿಸಬೇಕು.

41. ಯಾವುದೇ ದೇಶದ ಕಾನೂನುಗಳು ಮಕ್ಕಳ ಪಾಲಿಗೆ ಮಕ್ಕಳ ಅಂತರರಾಷ್ಟ್ರೀಯ ಒಡಂಬಡಿಕೆಯ ಅಂಶಗಳಿಗಿಂತಲೂ ಉತ್ತಮವಾಗಿದ್ದರೆ ಅವುಗಳನ್ನೇ ಎತ್ತಿ ಹಿಡಿಯಬೇಕು. ರಕ್ಷಣೆ ಒದಗಿಸಬೇಕು.

42. ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿನ ವಿಚಾರಗಳನ್ನು ವಿಧಿ ವಿಧಾನಗಳನ್ನು ಎಲ್ಲಾ ವಯಸ್ಕರಿಗೆ ಮತ್ತು ಮಕ್ಕಳಿಗೆ ತಿಳಿಸಲು ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕು.

43. ಒಡಂಬಡಿಕೆಯ ಉದ್ದೇಶಗಳ ಈಡೇರಿಕೆಗಾಗಿ ಕೈಗೊಂಡ ಕ್ರಮಗಳ ಪ್ರಗತಿಯ ಮೇಲೆ ನಿಗಾ ಇಡಲು, ಮಕ್ಕಳ ಹಕ್ಕುಗಳ ಸಂರಕ್ಷಣಾ ಸಮಿತಿಯನ್ನು ಸರ್ಕಾರಗಳು ಸ್ಥಾಪಿಸಬೇಕು.

44. ಒಡಂಬಡಿಕೆಯಲ್ಲಿ ಒಪ್ಪಿಕೊಳ್ಳಲಾಗಿರುವ ಹಕ್ಕುಗಳನ್ನು ಜಾರಿಗೆ ತರಲು ಮತ್ತು ಕೈಗೊಂಡ ಕ್ರಮಗಳು, ಸಾಧಿಸಲಾಗಿರುವ ಪ್ರಗತಿ, ಇವುಗಳ ಬಗ್ಗೆ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಮೂಲಕ, ಸಮಿತಿಗೆ ತಮ್ಮ ವರದಿಯನ್ನು ಸರ್ಕಾರಗಳು ಸಲ್ಲಿಸಬೇಕು.

45. ಪ್ರಸ್ತುತ ಒಡಂಬಡಿಕೆಯನ್ನು ಪರಿಣಾಮಕಾಗಿಯಾದ ರೀತಿಯಲ್ಲಿ ಜಾರಿಗೆ ತರಲು ಮತ್ತು ಒಡಂಬಡಿಕೆಯ ವ್ಯಾಪ್ತಿಗೆ ಒಳಪಟ್ಟ ಕ್ಷೇತ್ರಗಳಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಹೊಂದಲು, ಸಂಬಂಧಪಟ್ಟ ಸಂಸ್ಥೆಗಳು, ಸರ್ಕಾರಗಳ ಸಲಹೆ, ಸೂಚನೆ ವರದಿ ಪಡೆದುಕೊಂಡು ಮುಂದುವರೆಯಬೇಕು.

46. ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಲು ಎಲ್ಲಾ ದೇಶಗಳಿಗೆ ಅವಕಾಶವಿದೆ.

47. ಸದರಿ ಒಡಂಬಡಿಕೆಯ ಮಾನ್ಯತೆಗಳಿಸಿದ ಬಳಿಕವೇ ಚಾಲ್ತಿಗೆ ಬರುತ್ತದೆ. ಮಾನ್ಯತೆಯ ದಾಖಲು ಪತ್ರಗಳನ್ನು ವಿಶ್ವಸಂಸ್ಥೆಯ ಪ್ರಧಾನಕಾರ್ಯದರ್ಶಿಗಳಿಗೆ ಕಳುಹಿಸಬೇಕು.

48. ಯಾವ ದೇಶವೇ ಆಗಲಿ ಯಾವಾಗಲಾದರು ಸರಿ ಈ ಒಡಂಬಡಿಕೆಯನ್ನು ಅಂಗೀಕರಿಸಿ ಅದರಂತೆ ನಡೆಯಬಹುದಾಗಿದೆ.

49. ಸದಸ್ಯ ದೇಶಗಳು ಒಡಂಬಡಿಕೆಗೆ ಮಾನ್ಯ ಮಾಡಿ ಅಧಿಕೃತ ಪತ್ರವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಿದ ಮೂವತ್ತು ದಿನಗಳ ಬಳಿಕೆ ಈ ಒಡಂಬಡಿಕೆ ಆಯಾ ದೇಶಗಳಿಗೆ ಜಾರಿಗೆ ಬರುತ್ತದೆ.

50. ಯಾವ ದೇಶವೇ ಆಗಲಿ, ಪ್ರಸ್ತುತ ಒಡಂಬಡಿಕೆಗೆ ತಿದ್ದುಪಡಿ ಸೂಚಿಸಬಹುದು. ಬಹುಮತದ ಆಧಾರದ ಮೇಲೆ ಈ ಸೂಚನೆಗಳನ್ನು ಅಂಗೀಕರಿಸಿ ಅಳವಡಿಸಬಹುದಾಗಿದೆ.

51. ಈ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಮಾನ್ಯಗೊಳಿಸುವ ಸಮಯದಲ್ಲಿ ಸದಸ್ಯ ದೇಶಗಳು ಎತ್ತಬಹುದಾದ ಆಕ್ಷೇಪಗಳ ಪೂರ್ಣ ವಿವರವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಎಲ್ಲ ಸದಸ್ಯ ದೇಶಗಳಿಗೆ ಕಳುಹಿಸಬೇಕು. ಒಡಂಬಡಿಕೆಯ ಧ್ಯೇಯ ಉದ್ದೇಶಗಳಿಗೆ ವಿರುದ್ಧವಾದ ಆಕ್ಷೇಪಗಳಿಗೆ ಅವಕಾಶವಿಲ್ಲ.

52. ಸದಸ್ಯ ದೇಶಗಳು ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಲಿಖಿತ ಸೂಚನೆ ನೀಡಿ ಒಡಂಬಡಿಯಿಂದ ಹೊರಬರಬಹುದಾಗಿದೆ.

53. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಈ ಒಡಂಬಡಿಕೆಯ ಮೇಲ್ವಿಚಾರಕರು.

54. ಮಕ್ಕಳ ಹಕ್ಕುಗಳ ಒಡಂಬಡಿಕೆಯ ಮೂಲ ಪ್ರತಿ ಮತ್ತು ಅರೇಬಿಕ್, ಚೈನೀ, ಇಂಗ್ಲೀಷ್, ಫ್ರೆಂಚ್, ರಶಿಯನ್ ಮತ್ತು ಸ್ಪ್ಯಾನಿಷ್‌ಗಳ ಭಾಷಾಂತರಿತ ಪ್ರತಿಗಳನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಬಳಿ ಇರಿಸಲಾಗುವುದು. ತಮ್ಮ ತಮ್ಮ ದೇಶಗಳ ಸರ್ಕಾರಗಳಿಂದ ಅಧಿಕಾರ ಪಡೆದ ಎಲ್ಲಾ ರಾಯಭಾರಿಗಳು ಈ ಒಡಬಂಡಿಕೆಗೆ ಸಹಿ ಹಾಕಿದ್ದಾರೆ.

– ಡಾ. ಪದ್ಮಿನಿ ಟಿ.

Digitised by Bharatavani, CIIL

## ಮಹಿಳಾ ಸಬಲೀಕರಣ ಮತ್ತು ಶಿಕ್ಷಣ

ಮಹಿಳೆ ಪಡೆಯಬಹುದಾದ ಶಿಕ್ಷಣ ಯಾವ ರೀತಿಯಲ್ಲಿರಬೇಕೆಂಬುದರ ಬಗ್ಗೆ ರಾಷ್ಟ್ರದಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ. ಒಂದು ಗುಂಪಿನ ವಿದ್ವಾಂಸರ ಅಭಿಪ್ರಾಯ ಮಹಿಳಾ ಶಿಕ್ಷಣ ಪುರುಷರ ಶಿಕ್ಷಣಕ್ಕಿಂತ ಭಿನ್ನವಾಗಿರಬೇಕು. ಏಕೆಂದರೆ ಅವರು ನಿರ್ವಹಿಸುವ ಪಾತ್ರ ಸಮಾಜದಲ್ಲಿ ಪುರುಷರಿಗಿಂತ ಭಿನ್ನವಾಗಿರುತ್ತದೆ. ಹಾಗಾದರೆ ಅವರು ಪಡೆಯುವ ಶಿಕ್ಷಣ ಕುಟುಂಬ ನಿರ್ವಹಣೆಗೆ ಸಾಕೆ? ಅಥವಾ ಸಾರ್ವಜನಿಕ ವಲಯದಲ್ಲಿ ಪಾತ್ರ ವಹಿಸುವಂತಹ ಶಿಕ್ಷಣ ಬೇಕೆ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಇದಕ್ಕೆ ಸಂಬಂಧಸಿದಂತೆ ಹೇಳುವುದಾದರೆ ಎಲ್ಲ ಮಹಿಳೆಯರಿಗೆ ಸಾರ್ವಜನಿಕ ಜೀವನಕ್ಕಾಗಿ ಶಿಕ್ಷಣ ನೀಡುವುದು ಸೂಕ್ತವಲ್ಲ. ಕುಟುಂಬ ನಿರ್ವಹಣೆಗೆ ಸಂಬಂಧ ಪಟ್ಟಂತೆ, ಮಕ್ಕಳ ಲಾಲನೆ–ಪಾಲನೆ, ವೈಯಕ್ತಿಕ ಆರೋಗ್ಯ ಹಾಗೂ ಕುಟುಂಬದ ಆರ್ಥಿಕ ನಿರ್ವಹಣೆಗೆ ಸಂಬಂಧಪಟ್ಟಂತೆ ಶಿಕ್ಷಣ ನೀಡುವುದು ಕ್ಷೇಮಕರ.

ಕುಟುಂಬ ಜೀವನದಲ್ಲಿ ಮಹಿಳೆಯ ಪಾತ್ರ ಮಹತ್ವವುಳ್ಳದ್ದು. ಅವಳನ್ನು ಕೇವಲ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಇರಗೊಡುವುದು ಸೂಕ್ತವಲ್ಲ. ಮಹಿಳೆಯರೂ ರಾಷ್ಟ್ರದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಪುನರ್‌ರಚನೆಗೆ ತಮ್ಮ ಅಮೂಲ್ಯ ಕೊಡುಗೆ ನೀಡುವಂತಾಗಬೇಕು. ಮಾಧ್ಯಮಿಕ ಶಿಕ್ಷಣ ಆಯೋಗ ಪುರುಷರಿಗೆ ಕೊಡುವ ಎಲ್ಲಾ ಪ್ರಕಾರದ ಶಿಕ್ಷಣವನ್ನು ಮಹಿಳೆಯರಿಗೂ ಕೊಡಬೇಕು, ಅವರುಗಳಿಗೆ ಇಂಜಿನಿಯರಿಂಗ್, ವೈದ್ಯಕೀಯ, ಕೃಷಿ ವಿಜ್ಞಾನ, ಪಶುವೈದ್ಯ, ವಾಣಿಜ್ಯ, ಕಾನೂನು, ಕಲೆ – ಮುಂತಾದ ಕ್ಷೇತ್ರಗಳಲ್ಲೂ ಸಾಕಷ್ಟು ಸೀಟುಗಳು ಮೀಸಲಾತಿಗೆ ಅನುಗುಣವಾಗಿ ದೊರೆಯುವಂತಾಗಬೇಕು ಎಂದಿದೆ. ಇದರರ್ಥ ಮಹಿಳೆ ಕೇವಲ ನಿಶ್ಚಿತ ಕ್ಷೇತ್ರಗಳಿಗೆ ಸೀಮಿತಗೊಳ್ಳದೆ ತನ್ನ ಬೌದ್ಧಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಶಿಕ್ಷಣ ಪಡೆದು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿ ಬದಲಾಗಬೇಕು.

**ಸಬಲೀಕರಣದ ಅರ್ಥ:** ಸ್ವಾತಂತ್ರ್ಯಾನಂತರದ ದೇಶದ ಅಭಿವೃದ್ಧಿ ಸ್ತ್ರೀ ಶಿಕ್ಷಣದ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅರಿತುಕೊಂಡು ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಬಾಲಕಿಯರ ಶಿಕ್ಷಣ ಕುಂಟುತ್ತ ಸಾಗುತ್ತಿದೆ. ಅನಕ್ಷರತೆ, ಬಡತನ, ಮೂಢನಂಬಿಕೆ, ಕಂದಾಚಾರ ಹಾಗೂ ಲಿಂಗ ತಾರತಮ್ಯದಿಂದ ಪ್ರಾಥಮಿಕ ಶಿಕ್ಷಣ ಹಂತದಲ್ಲೆ ಶಾಲಾ ಶಿಕ್ಷಣವನ್ನು ಬಾಲಕಿಯರು ಪೂರೈಸುತ್ತಿಲ್ಲ. ಇದನ್ನು ಹೋಗಲಾಡಿಸಲಿಕ್ಕಾಗಿಯೇ ಕೇಂದ್ರ ಸರ್ಕಾರ ಒಂಬತ್ತನೇ (1997–2002) ಪಂಚ ವಾರ್ಷಿಕ ಯೋಜನೆಯಲ್ಲಿ ಎರಡು ಮುಖ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಮೊದಲನೆಯದು – ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡುವುದು. ಎರಡನೆಯದು – ಮಹಿಳೆಗೆ ಸಂಬಂಧಿಸಿದ ವಲಯಗಳಲ್ಲಿ ಲಭ್ಯವಿರುವ ಎಲ್ಲಾ ಸೇವೆಗಳನ್ನು ಒಗ್ಗೂಡಿಸಿ ಚೈತನ್ಯಗೊಳಿಸುವುದು.

ಹಾಗಾದರೆ ಮಹಿಳಾ ಸಬಲೀಕರಣವೆಂದರೇನು? ಎಂಬ ಪ್ರಶ್ನೆ ಸಹಜವಾಗಿ ಎಲ್ಲರಲ್ಲೂ ಮೂಡುತ್ತದೆ. "ಮಹಿಳೆ ತನ್ನ ಬೌದ್ಧಿಕ ಹಾಗೂ ಭೌತಿಕ ಸಾಮರ್ಥ್ಯದಿಂದ ಸಂಪನ್ಮೂಲಗಳನ್ನು ವೈಜ್ಞಾನಿಕವಾಗಿ ಬಳಸಿಕೊಂಡು ಕುಟುಂಬದ ಆರೋಗ್ಯ, ಆರ್ಥಿಕತೆ, ಉದ್ಯೋಗ, ವಿದ್ಯಾಭ್ಯಾಸ ಮುಂತಾದ ಸಮಸ್ಯೆಗಳನ್ನು ಪರಿಹರಿಸಿಕೊಂಡು ಸ್ವಾವಲಂಬನೆಯಿಂದ ಬದುಕುವ ಕ್ರಮವನ್ನೇ ಮಹಿಳಾ ಸಬಲೀಕರಣ" ಎನ್ನುವರು.

ಬದುಕಿನಲ್ಲಿ ಕುಟುಂಬ ಜವಾಬ್ದಾರಿ ಹೊರುವ ಮಹಿಳೆ ತಾಯಿಯಾಗಿ, ಹೆಂಡತಿಯಾಗಿ, ಗೃಹಿಣಿಯಾಗಿ ಕುಟುಂಬದ ಕೇಂದ್ರ ಬಿಂದುವಾಗಿ ನಿಂತು ಸಮಾಜದ ಸ್ವಾಸ್ಥ್ಯ ಕಾಪಾಡಲು ಹಾಗೂ ಆರ್ಥಿಕ ವಾಗಿ ಸ್ವಾವಲಂಬನೆ ಸಾಧಿಸಲು ಸಿದ್ಧಳಾಗಬೇಕು.

ಸಬಲೀಕರಣದ ಅರ್ಥವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ–ಮಹಿಳೆಯ ಸರ್ವಾಂಗೀಣ ಬೆಳವಣಿಗೆಗೆ ಸಂಬಂಧಿಸಿದಂತೆ ಶಾಸನಬದ್ಧ ನೈತಿಕ ಶಕ್ತಿ ಪಡೆಯುವುದನ್ನೇ ಮಹಿಳಾ ಸಬಲೀಕರಣ ಎನ್ನುವರು. ಇದನ್ನು ವಿಶಾಲ ಅರ್ಥದಲ್ಲಿ ಹೇಳುವುದಾದರೆ – ದಮನ, ಅನ್ಯಾಯ ಹಾಗೂ ಲಿಂಗ ತಾರತಮ್ಯದ ವಿರುದ್ಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶಾಸನಾತ್ಮಕವಾಗಿ ಮಹಿಳೆ ಹೋರಾಟ ಮಾಡುವುದನ್ನೇ ಮಹಿಳಾ ಸಬಲೀಕರಣವೆನ್ನುತ್ತಾರೆ. ಇದರಿಂದ ಆಕೆ ಸಮಾಜದ ಎಲ್ಲ ಜನರೊಡನೆ ನೆಮ್ಮದಿಯಿಂದ ಕೂಡಿ ಬಾಳಬಲ್ಲಳು. ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ವೃದ್ಧಿಪಡಿಸಿಕೊಳ್ಳಬಲ್ಲಳು. ಗಂಭೀರ ಹಾಗೂ ಘನತೆಯಿಂದ ಕುಟುಂಬದ ಜವಾಬ್ದಾರಿ ಹೊರಬಲ್ಲಳು. ಆರ್ಥಿಕವಾಗಿಯೂ ಸ್ವಾವಲಂಬನೆ ಸಾಧಿಸಬಲ್ಲಳು.

ಚೀನಾದ ಬೀಜಿಂಗ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಭಾರತ ಸರ್ಕಾರ ಮಹಿಳಾ ಸಬಲೀಕರಣ ಕುರಿತಂತೆ ಮಹಿಳೆ ಅಧಿಕಾರದಿಂದ ವಂಚಿತಳಾಗಿದ್ದು ಅಧಿಕಾರ ಪಡೆಯಲು ಪೂರ್ಣ ಪ್ರಮಾಣದಲ್ಲಿ ಸಿದ್ಧಳಾಗುವಂತೆ ಮಾಡುವುದೇ ಮಹಿಳಾ ಸಬಲೀಕರಣ ಎಂದು ವ್ಯಾಖ್ಯಾನಿಸಿದೆ. ಇದರಿಂದ ಮಹಿಳೆ ಸ್ವಸಾಮರ್ಥ್ಯ ಹಾಗೂ ಸ್ವಪ್ರತಿಷ್ಠೆ ಹೆಚ್ಚಿಸಿಕೊಂಡು ಆರ್ಥಿಕವಾಗಿ ಸದೃಢಗೊಳ್ಳುವಳು. ಮುಂದೆ ಎದುರಾಗಬಹುದಾದ ಯಾವುದೇ ರೀತಿಯ ಕಠಿಣ ಪರಿಸ್ಥಿತಿಯನ್ನು ಮತ್ತು ಸಮಸ್ಯೆಗಳನ್ನು ಎದುರಿಸಬಲ್ಲಳು ಹಾಗೂ ಅಭಿವೃದ್ಧಿ ಚಟುವಟಿಕೆಗಳಿಗೆ ಮುನ್ನುಗ್ಗಬಲ್ಲಳು ಎಂದು ವಿಶ್ಲೇಷಿಸಿದೆ.

ಮಹಿಳಾ ಸಬಲೀಕರಣ ಪರಿಕಲ್ಪನೆ ಇತ್ತೀಚಿನದು. ಕಳೆದ 15 ವರ್ಷಗಳಿಂದ ಇದಕ್ಕೆ ವಿಶೇಷ ಗಮನ ಹರಿಸಲಾಗುತ್ತಿದೆ. ಅದೂ ಅಲ್ಲದೆ ಇದು ಅಭಿವೃದ್ಧಿಯ ಕೇಂದ್ರ ಬಿಂದುವಾಗಿದೆ. ಈ ನಿಟ್ಟಿನಲ್ಲಿ ಹಲವಾರು ಬದಲಾವಣೆಗಳು ಹಾಗೂ ಏರುಪೇರುಗಳು ಕಂಡು ಬಂದಿವೆ. ಎಪ್ಪತ್ತರ ದಶಕದಲ್ಲಿ ಯೋಗಕ್ಷೇಮ ಪರಿಕಲ್ಪನೆಯಾಗಿತ್ತು. ಎಂಬತ್ತರ ದಶಕದಲ್ಲಿ ಅಭಿವೃದ್ಧಿಯು ಕೇಂದ್ರವಾಯಿತು. ತೊಂಬತ್ತರ ದಶಕ ಸಬಲೀಕರಣದ ಪರಿಕಲ್ಪನೆಗೆ ಮಹತ್ವ ನೀಡಿತು.

Digitised by Bharatavani, CIIL

**ಮಹಿಳಾ ಸಬಲೀಕರಣದ ಅಗತ್ಯ:** ಮಹಿಳೆಗೆ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಗಂಡಸಿನಷ್ಟೇ ಸಮಾನವಾದ ಅವಕಾಶಗಳನ್ನು ನೀಡುವುದು ಸೂಕ್ತವೇ? ಯೋಗ್ಯವೇ? ಸಮಂಜಸವೇ? ಎಂಬುದರ ಬಗ್ಗೆ ಭಾರತೀಯ ಸಮಾಜದಲ್ಲಿ ಇನ್ನೂ ಚರ್ಚಾಸ್ಪದ ವಿಷಯವಾಗಿದೆ. ಆದರೂ ನಾವು ಇಪ್ಪತ್ತೊಂದನೆಯ ಶತಮಾನದ ಆದಿ ಭಾಗದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರಭಾವದಿಂದ ದಾಪುಗಾಲು ಹಾಕುತ್ತಿದ್ದೇವೆ. ಅದಕ್ಕೆ ತಕ್ಕಂತೆ ಕುಟುಂಬ, ಸಮಾಜ ಹಾಗೂ ದೇಶ ಮುನ್ನಡೆಯ ಬೇಕಿದೆ. ಇದಕ್ಕೆ ಪೂರಕವಾಗಿ ಮಹಿಳಾ ಸಬಲೀಕರಣದ ಅಗತ್ಯತೆಯಿುಂಟು.

- ಮಹಿಳೆಯು ಪುರುಷನಷ್ಟೇ ಆರ್ಥಿಕ ಹಾಗೂ ಸಾಮಾಜಿಕವಾಗಿ ಸಾಧನೆ ಮಾಡಬಲ್ಲಳು ಎಂಬುದನ್ನು ಗುರ್ತಿಸಲು
- ಜೀವನ ಮಾರ್ಗ ಆಯ್ದುಕೊಳ್ಳುವಲ್ಲಿ, ಸ್ವತಂತ್ರವಾಗಿ ಚಿಂತನೆ ಹಾಗೂ ವಿಚಾರಗಳನ್ನು ಅಭಿವೃದ್ಧಿ ಪಡಿಸಲು
- ರಾಜಕೀಯ ಹಾಗೂ ಆರ್ಥಿಕ ರಂಗದಲ್ಲಿ ಸ್ಪರ್ಧಾತ್ಮಕವಾಗಿ ಉತ್ತಮ ಕಾರ್ಯ ನಿರ್ವಹಿಸಲು
- ಕುಟುಂಬ ಹಾಗೂ ಮಕ್ಕಳ ಆರೋಗ್ಯ, ಶಿಕ್ಷಣ, ಸಂಸ್ಕೃತಿ, ಸಂಪ್ರದಾಯ ಹಾಗೂ ಆಚಾರ–ವಿಚಾರಗಳನ್ನು ಉತ್ತಮಪಡಿಸಲು
- ಸಮಾಜದಲ್ಲಿ ಏರ್ಪಡುವ ಲಿಂಗಾಧಾರಿತ ಅಸಮಾನತೆಯನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಹೋಗಲಾಡಿಸಲು
- ವೈಯಕ್ತಿಕ ಆರೋಗ್ಯ, ಶಿಕ್ಷಣ, ಉದ್ಯೋಗ ಹಾಗೂ ಹಕ್ಕುಗಳ ಬಗ್ಗೆ ಸ್ವತಂತ್ರವಾಗಿ ನಿರ್ಣಯ ಕೈಗೊಳ್ಳಲು
- ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹಾಗೂ ನೈತಿಕವಾಗಿ ಪುರುಷರೊಡನೆ ಎಲ್ಲಾ ಮಾನವ ಹಕ್ಕುಗಳನ್ನು ಸಮಾನವಾಗಿ ಅನುಭವಿಸಲು
- ಎಲ್ಲ ಹಂತಗಳಲ್ಲಿ ಆರೋಗ್ಯ ರಕ್ಷಣೆ, ಉತ್ತಮ ಗುಣಮಟ್ಟದ ಶಿಕ್ಷಣ, ಉದ್ಯೋಗ ಹಾಗೂ ಸಮಾನ ಸಂಭಾವನೆ ಪಡೆಯಲು
- ಮಹಿಳೆ ಮತ್ತು ಹೆಣ್ಣು ಮಗುವಿನ ವಿರುದ್ಧದ ಎಲ್ಲ ರೀತಿಯ ದೌರ್ಜನ್ಯ ಹಾಗೂ ತಾರತಮ್ಯದ ನಿವಾರಣೆಗೆ
- ನಾಗರಿಕ ಸಮಾಜದಲ್ಲಿ ಮಹಿಳೆಯರಿಗೆ ಆಗುವ ಅನ್ಯಾಯವನ್ನು ತಡೆಗಟ್ಟಲು ಹಾಗೂ ಮಹಿಳಾ ಸಂಘಟನೆಗಳ ಮೂಲಕ ಅದರ ಬಲ ವೃದ್ಧಿಪಡಿಸಲು
- ಸಬಲೀಕರಣದಿಂದ ಮಹಿಳೆ ತನ್ನ ಹಾಗೂ ಕುಟುಂಬದ ಆದಾಯ ಹೆಚ್ಚಿಸಿಕೊಳ್ಳುವಳು. ಪರಿಸರದಲ್ಲಿನ ಹಲವಾರು ಮಹಿಳೆಯರಿಗೆ ಉದ್ಯೋಗ ಒದಗಿಸುವಲ್ಲಿ ಮುಂದಾಗುವಳು
- ಕುಟುಂಬ, ಸಮಾಜ, ಸಮುದಾಯ ಹಾಗೂ ರಾಷ್ಟ್ರದ ರಾಜಕೀಯದಲ್ಲಿ ನಿರ್ಧಾರ ಕೈಗೊಳ್ಳುವುದರ ಮೂಲಕ ಅಧಿಕಾರ ಪಡೆಯುವ ಸಾಮರ್ಥ್ಯ ಹೆಚ್ಚಿಸಿಕೊಳ್ಳುವಳು. ಅಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗವಹಿಸುವಳು.

ಮಹಿಳಾ ಸಬಲೀಕರಣ ಒಂದು ವಿಶ್ವವ್ಯಾಪಿ ಚರ್ಚಾಸ್ಪದ ವಿಷಯವಾಗಿದ್ದು ಆಸಕ್ತದಾಯಕ ಹಾಗೂ ವಿವಿಧ ಆಯಾಮಗಳಿಂದ ಕೂಡಿದ ಪ್ರಕ್ರಿಯೆಯಾಗಿದೆ. ಸಬಲೀಕರಣ ಹೊಂದಿದ ಮಹಿಳೆ ಹೆಚ್ಚು ಪ್ರಭಾವಶಾಲಿಯಾಗಿ ಸಮಾಜದ ಅಗತ್ಯಗಳನ್ನು ಪೂರೈಸಲು ಶಕ್ತಳಾಗುವಳು. ಸಮಾಜ ಹಾಗೂ ಕುಟುಂಬಗಳ ದಮನದ ವಿರುದ್ಧ ನಿರ್ದಿಷ್ಟ ತೀರ್ಮಾನ ಕೈಗೊಳ್ಳಲು ಸಾಮರ್ಥ್ಯ ಹೊಂದುವಳು.

**ಮಹಿಳಾ ಸಬಲೀಕರಣದ ಕಾರ್ಯತಂತ್ರಗಳು:** ಮಹಿಳಾ ಶಿಕ್ಷಣವನ್ನು ಯಶಸ್ವಿಗೊಳಿಸಲು ಸರ್ಕಾರ ವಿವಿಧ ಕಾರ್ಯ ಯೋಜನೆಗಳನ್ನು ಈಗಾಗಲೇ ಹಮ್ಮಿಕೊಂಡಿದೆ. ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು 6 ರಿಂದ 14ನೇ ವಯಸ್ಸಿನವರೆಗೆ ನಿಡಲಾಗುತ್ತಿದೆ. ಬಾಲಕಿಯರಿಗೆ ಉಚಿತವಾಗಿ ಪುಸ್ತಕಗಳು, ಬಟ್ಟೆಗಳು, ವಿದ್ಯಾರ್ಥಿ ವೇತನ ವಿದ್ಯಾರ್ಥಿ ನಿಲಯ ಹಾಗೂ ಇತರ ಸೌಲಭ್ಯಗಳನ್ನು ನೀಡುತ್ತಿದೆ. ಪೋಷಕರ ಮನ ಪರಿವರ್ತಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಕಪ್ಪು–ಹಲಗೆಯ ಯೋಜನೆ ಹಾಗೂ ಸರ್ವಶಿಕ್ಷಣ ಅಭಿಯಾನದಂತಹ ಬೃಹತ್ ಕಾರ್ಯಕ್ರಮವನ್ನು ಈಗಾಗಲೇ ಅನುಷ್ಠಾನಗೊಳಿಸಿದೆ.

ಇದರಿಂದ ಸರ್ಕಾರ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಶಾಲಾ –ಕಾಲೇಜುಗಳನ್ನು ಸ್ಥಾಪಿಸುತ್ತಿವೆ. ಆದರೂ ನಾನಾ ಕಾರಣಗಳಿಂದ ಹೇಳಿಕೊಳ್ಳುವಷ್ಟು ಯಶಸ್ಸು ಸದೃಢಗೊಳಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ.

**ಉದ್ಯೋಗಾವಕಾಶಗಳು:** ಮಹಿಳಾ ಶಿಕ್ಷಣದಲ್ಲಿ ಸುಧಾರಣೆ ತರಲು ಸರ್ಕಾರ ಕೆಲವು ವಿಶೇಷ ಯೋಜನೆಗಳನ್ನು ಜಾರಿಗೆ ತಂದಿದೆ. ಮಹಿಳೆಯರಿಗೆ ಉಚಿತವಾಗಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು, ಅವರು ವಿದ್ಯಾವಂತರಾದಂತೆ ಉದ್ಯೋಗಾವಕಾಶಗಳನ್ನು ಮೀಸಲಾತಿಯ ಮೂಲಕ ಒದಗಿಸುವುದು. ಇತ್ತೀಚೆಗೆ ಸರ್ಕಾರವೇ ಮಹಿಳೆಯ ಅಭಿವೃದ್ಧಿಗಾಗಿ ಎಲ್ಲ ಹಂತಗಳಲ್ಲೂ ವಿಶೇಷ ಕಾನೂನುಗಳನ್ನು ರೂಪಿಸಿದೆ. ಅವರಿಗೆ ಉನ್ನತ ಶಿಕ್ಷಣ ಒದಗಿಸುವುದರ ಜೊತೆಗೆ ಉದ್ಯೋಗಾವಕಾಶಗಳು ಕಾನೂನು ಬದ್ಧವಾಗಿ ದೊರೆಯುವಂತೆ ಮಾಡುತ್ತಿದೆ.

ಪ್ರಾಥಮಿಕ ಹಾಗೂ ಪ್ರೌಢಶಾಲಾ ಅಧ್ಯಾಪಕ ಹುದ್ದೆಗೆ ಮೀಸಲಾತಿಯ ಮೂಲಕ ಉದ್ಯೋಗಾವಕಾಶ ಮಾಡಿಕೊಡುತ್ತಿದೆ. ಮಹಿಳಾ ಆಯೋಗಗಳ ಸಲಹೆಯ ಮೇರೆಗೆ ಕೇಂದ್ರ ಸರ್ಕಾರ "ಶ್ರೀಮತಿ ನಾಥುಬಾಯಿ ದಾಮೋದರ್ ಥ್ಯಾಕರೆ" ಎಂಬ ಮಹಿಳಾ ವಿಶ್ವವಿದ್ಯಾನಿಲಯವನ್ನು ಮುಂಬೈನಲ್ಲಿ ಸ್ಥಾಪಿಸಿದೆ. ಇನ್ನೂ ವೃತ್ತಿಪರ ಶಿಕ್ಷಣವಾದ ಇಂಜಿನಿಯರಿಂಗ್, ವೈದ್ಯಕೀಯ, ಬಾಹ್ಯಾಕಾಶ, ಪರಿಸರ ಶಿಕ್ಷಣ, ಮಿಲಿಟರಿ ಮುಂತಾದ ಕೌಶಲ್ಯಯುತ ಉದ್ಯೋಗಗಳನ್ನು ಸ್ಪರ್ಧಾತ್ಮಕವಾಗಿ ಪಡೆಯುವಂತಹ ಸಾಮರ್ಥ್ಯವನ್ನು ಅವರಲ್ಲಿ

Digitised by Bharatavani, CIIL

ಬೆಳೆಸುತ್ತಿದೆ.

ಅನಕ್ಷರಸ್ಥ ಗ್ರಾಮೀಣ ಮಹಿಳೆಯಾಗಿದ್ದರೆ ವಯಸ್ಕರ ಶಿಕ್ಷಣದ ಮೂಲಕ ಸಾಮಾಜಿಕ ಅರಿವನ್ನು ಅವಳಲ್ಲಿ ಬೆಳೆಸಲಾಗುತ್ತದೆ. ಅವರನ್ನು ಸ್ವ-ಸಹಾಯ ಗುಂಪುಗಳ ಮೂಲಕ ಸಂಘಟಿಸಿ, ಆರ್ಥಿಕ ನೆರವು ಒದಗಿಸುತ್ತದೆ. ಇದರಿಂದ ಅವರನ್ನು ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹಿಸಿದಂತಾಗುತ್ತದೆ. ಆದರೆ ಅಸಂಘಟಿತ ವಲಯದಲ್ಲಿನ ಮಹಿಳೆಯರಿಗೆ ಕಡಿಮೆ ವೇತನ ನೀಡಲಾಗುತ್ತದೆ. ಇದನ್ನು ಹೋಗಲಾಡಿಸಲು ಸರ್ಕಾರ ವಿವಿಧ ರೀತಿಯ ಕಾನೂನು ಕಟ್ಟಳೆಗಳನ್ನು ಜಾರಿಗೆ ತಂದಿದೆ.

ಈ ರೀತಿ ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಲು ಸರ್ಕಾರ ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕಾರ್ಯ ಯೋಜನೆಗಳನ್ನು ಜಾರಿಗೆ ತಂದಿದೆ. ಪುರುಷರೊಡನೆ ಸಮಾನತೆಯ ಆಧಾರದ ಮೇಲೆ ಮೂಲಭೂತ ಸ್ವಾತಂತ್ರ್ಯ ಹಾಗೂ ಮಾನವ ಹಕ್ಕುಗಳನ್ನು ಅನುಭವಿಸಲು ಮತ್ತು ಅದನ್ನು ಸಾಧಿಸಲು ಸಾಧ್ಯವಾಗುವಂತೆ ವಿವಿಧ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದೆ.

**ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ:** ಲಿಂಗ ಪಕ್ಷಪಾತ ಹಾಗೂ ದಮನಕಾರಿ ಮನೋಭಾವ ಭಾರತದಲ್ಲೂ ಸಾಂಪ್ರದಾಯಿಕವಾಗಿ ಮುಂದುವರಿಯುತ್ತಿದೆ. ಆದರೆ ಮಹಿಳಾ ಸಂಘಟನೆಗಳ ಹೋರಾಟದಿಂದ ಮಹಿಳೆಯರಲ್ಲಿ ಜಾಗೃತಿ ಮೂಡುತ್ತಿದೆ. ಇದನ್ನು ತಡೆಗಟ್ಟಲು ಕೆಲವಾರು ಕಾನೂನುಗಳನ್ನು ರೂಪಿಸಲಾಗುತ್ತಿದೆ.

- ಮಹಿಳೆಗೆ ಕಾನೂನುಬದ್ಧ ಅವಕಾಶಗಳನ್ನು ಸಂವಿಧಾನಬದ್ಧವಾಗಿ ಒದಗಿಸಲಾಗುತ್ತಿದೆ
- ಮಹಿಳೆಯರ ಬಗ್ಗೆ ತೋರುತ್ತಿದ್ದ ಎಲ್ಲಾ ವಿಧವಾದ ತಾರತಮ್ಯವನ್ನು ಹೋಗಲಾಡಿಸಲಾಗುತ್ತಿದೆ
- ಮಹಿಳಾ ಸಮಾನತೆಯನ್ನು, ಸ್ವಾಭಿಮಾನ ಹಾಗೂ ಗೌರವ ಹೆಚ್ಚಿಸಲು ರಾಷ್ಟ್ರೀಯ ಮಹಿಳಾ ಸಮ್ಮೇಳನಗಳನ್ನು ದೇಶದ ವಿವಿಧ ಭಾಗಗಳಲ್ಲಿ ಏರ್ಪಡಿಸಿ ನೀತಿ-ನಿಯಮಗಳನ್ನು ರೂಪಿಸಲಾಗುತ್ತಿದೆ
- ಲಿಂಗ ತಾರತಮ್ಯವಿಲ್ಲದಂತೆ ಸಮಾನ ಉದ್ಯೋಗ ಅವಕಾಶಗಳನ್ನು ಒದಗಿಸಲಾಗುತ್ತಿದೆ
- ಮಹಿಳಾ ಸಮಸ್ಯೆಗಳ ಪರಿಹಾರಕ್ಕೆ ಪ್ರತ್ಯೇಕ ನಿಗಮ ಹಾಗೂ ಮಂಡಳಿಗಳನ್ನು ಕೇಂದ್ರ ಹಾಗೂ ರಾಜ್ಯಗಳ ಮಟ್ಟದಲ್ಲಿ ರಚಿಸಲಾಗುತ್ತಿದೆ
- ಆರ್ಥಿಕವಾಗಿ ಸಬಲೀಕರಣಗೊಳ್ಳಲು ವಿವಿಧ ಕ್ರಿಯಾತ್ಮಕ ಯೋಜನೆಗಳನ್ನು ಅಗತ್ಯಕ್ಕೆ ತಕ್ಕಂತೆ ಹಮ್ಮಿ ಕೊಳ್ಳಲಾಗುತ್ತಿದೆ
- ರಾಜಕೀಯವಾಗಿ ಮಹಿಳೆ ಪ್ರವರ್ಧಮಾನಕ್ಕೆ ಬರುವಂತೆ ಮಾಡಲು ವಿಧಾನ ಸಭೆ ಹಾಗೂ ಲೋಕಸಭೆಗಳಲ್ಲಿ ಮೀಸಲಾತಿ ಸೌಲಭ್ಯ ಒದಗಿಸಲು ಪ್ರಯತ್ನಿಸಲಾಗುತ್ತಿದೆ
- ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಮಹಿಳೆಯರಿಗಾಗಿ ಮೀಸಲಾತಿ ಸೌಲಭ್ಯ ಒದಗಿಸುತ್ತಿದೆ.

ಇಂತಹ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗೆ ಭಾರತವಷ್ಟೇ ಅಲ್ಲ, ಮುಂದುವರಿದ, ಮುಂದುವರಿಯುತ್ತಿರುವ ರಾಷ್ಟ್ರಗಳೂ ಕೈಜೋಡಿಸುತ್ತಿವೆ. ಅವು ಮಹಿಳೆಯರಲ್ಲಿ ಸ್ವಾವಲಂಬನೆ, ಸ್ವಾಭಿಮಾನಕ್ಕೆ ಪೂರಕವಾಗುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ.

ಸಾಂಸ್ಕೃತಿಕ ಬದಲಾವಣೆ ಸಾಮಾನ್ಯವಾಗಿ ಎರಡು ರೀತಿಯಲ್ಲಿ ನಡೆಯುತ್ತದೆ. 1) ಯಾವಾಗ ಮಹಿಳೆ ಸ್ವಯಂ ಸಾಮರ್ಥ್ಯದಿಂದ ಮುಂದುವರಿಯಲು ಅಥವಾ ಪ್ರಗತಿ ಕಾಣಲು ಮುಂದಾಗುತ್ತಾಳೋ ಆಗ ಅವಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತಹ ಸಾಮರ್ಥ್ಯ ಹೊಂದುತ್ತಾಳೆ. ಶಿಕ್ಷಣ, ಆರ್ಥಿಕತೆ, ನೀತಿ-ನಿಯಮಗಳಯ ಹಾಗೂ ಕಾನೂನು ವಿಧಿಸುವಿಕೆಯಲ್ಲೂ ಪ್ರಬುದ್ಧಳಾಗಿರುತ್ತಾಳೆ. 2) ಸಮೂಹ ಮಾಧ್ಯಮಗಳಾದ ಪತ್ರಿಕೆಗಳು, ರೇಡಿಯೋಗಳು, ದೂರದರ್ಶನಗಳು ಸಾಂಸ್ಕೃತಿಕವಾಗಿ ನಿರ್ವಹಿಸುತ್ತವೆ. ಅದರಲ್ಲೂ ದೂರದರ್ಶನ ನಿರ್ವಹಿಸುತ್ತಿರುವ ಪಾತ್ರ ಮಹಿಳೆಯ ವಿಶಾಲ ದೃಷ್ಟಿಕೋನವನ್ನು ಸಮಾಜದಲ್ಲಿ ಪ್ರತಿಬಿಂಬಿಸಲು ನೆರವಾಗುತ್ತದೆ. ದೂರದರ್ಶನದ ಪ್ರಭಾವ ಅತಿ ಬೇಗ ವೈವಿಧ್ಯಮಯವಾಗಿ ಸಂವಹನವುಂಟುಮಾಡಿ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗೆ ಸಹಾಯ ಮಾಡುತ್ತದೆ.

**ಮಹಿಳೆಯರಿಗಾಗಿ ವಿಶೇಷ ಸೌಲಭ್ಯಗಳು:** ಮಹಿಳೆಯರನ್ನು ಸ್ವಶಕ್ತೀಕರಣಗೊಳಿಸಲಿಕ್ಕಾಗಿ ಸರ್ಕಾರ ಇತ್ತೀಚೆಗೆ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದೆ, ತರುತ್ತಿದೆ. ಅವರಿಗೆ ಮೂಲಭೂತವಾಗಿ ಶಿಕ್ಷಣ, ಆರೋಗ್ಯ, ರಕ್ಷಣೆ, ಸ್ವಾವಲಂಬನೆ ಹಾಗೂ ಮಾನವ ಹಕ್ಕುಗಳನ್ನು ಒದಗಿಸಲು ವಿಶೇಷ ಕಾರ್ಯಕ್ರಮಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಮ್ಮಿಕೊಳ್ಳುತ್ತಿವೆ. ಅವುಗಳಲ್ಲಿ ಅತ್ಯಂತ ಮುಖ್ಯವೂ ಪ್ರಮುಖವೂ ಆದಂತವು ಶಿಕ್ಷಣ ಸೌಲಭ್ಯಗಳು.

**ಶೈಕ್ಷಣಿಕ ಅವಕಾಶಗಳು:** ಮಹಿಳಾ ಶಿಕ್ಷಣದ ಪ್ರಗತಿಗೆ ಸ್ವಾತಂತ್ರ್ಯಾನಂತರ ಕೇಂದ್ರ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳನ್ನು ಯಶಸ್ವಿಗೊಳಿಸಲು ರಾಜ್ಯ ಸರ್ಕಾರಗಳಿಗೆ ಆರ್ಥಿಕ ನೆರವನ್ನು ಉದಾರವಾಗಿ ನೀಡುತ್ತಿದೆ. ಆದರೂ 1998ರ ಜನಗಣತಿಯ ಪ್ರಕಾರ ದೇಶದಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಶೇ. 32.6 ರಷ್ಟು ಮಾತ್ರ. ಶಾಲಾ ದಾಖಲಾತಿಯ ಪ್ರಮಣ ವರ್ಷಂಪ್ರತಿ ಏರುಮುಖವಾಗುತ್ತಿದೆ. ಆದರೆ ಅವರು ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಮುಂದುವರಿದಿದೆ. ಇದರಿಂದ ಲಿಂಗ ತಾರತಮ್ಯತೆಯೂ ಮುಂದುವರಿಯುತ್ತಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಬಾಲಕಿಯರ ಶಿಕ್ಷಣದ ಅಪವ್ಯಯ

Digitised by Bharatavani, CIIL

ಹಾಗೂ ಅನುತ್ತೀರ್ಣತೆ ಹೆಚ್ಚುತ್ತಿರುವುದಕ್ಕೆ ಸಾಕಷ್ಟು ಸೌಲಭ್ಯಗಳ ಕೊರತೆಯೇ ಕಾರಣವಾಗಿದೆ. ಮಹಿಳಾ ಶಿಕ್ಷಕಿಯರ ಅಭಾವ, ಶಾಲಾ ಕಟ್ಟಡಗಳ ಕೊರತೆ, ಪಠ್ಯಕ್ರಮದ ದೋಷ, ಸಮರ್ಪಕವಾಗಿ ಬೋಧನೆ ಇಲ್ಲದಿರುವುದು, ಲಿಂಗ ತಾರತಮ್ಯ, ಪೋಷಕರ ತಾತ್ಸಾರ ಇವೆಲ್ಲವೂ –ಕಾರಣವಾಗಿವೆ. ಈ ಸಮಸ್ಯೆಗಳ ಪರಿಹಾರಕ್ಕೆ ಕೇಂದ್ರ ಸರ್ಕಾರ ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ.

- ಮಹಿಳಾ ಶಿಕ್ಷಣದ ಮಹತ್ವವನ್ನು ವಿವಿಧ ಮಾಧ್ಯಮಗಳ ಮೂಲಕ ಪೋಷಕರಿಗೆ ಹಾಗೂ ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡುವುದು
- ಶಾಲೆ ಸಾಮಾನ್ಯವಾಗಿ ಒಂದು ಕಿ.ಮೀ. ಅಂತರದಲ್ಲಿರುವಂತೆ ತೆರೆಯುವುದು
- ಶಾಲೆಯಿಂದ ಹೊರಗುಳಿದ ಬಾಲಕಿಯರಿಗೆ ಬಿಡುವಿನ ವೇಳೆಯಲ್ಲಿ ಕಲಿಯುವಂತೆ ವ್ಯವಸ್ಥೆಗೊಳಿಸುವುದು
- ಪ್ರತಿ ವರ್ಷ ಮಕ್ಕಳ ಗಣತಿಯನ್ನು ಡಿಸೆಂಬರ್ ತಿಂಗಳಲ್ಲಿ ಮಾಡಿಸಿ, ನಿಗದಿತ ವೇಳೆಯಲ್ಲಿ ಶಾಲೆಗೆ ದಾಖಲಾತಿ ಮಾಡಿಸುವಂತೆ ಪ್ರೋತ್ಸಾಹಿಸುವುದು
- ಬಾಲಕಿಯರು ತಪ್ಪದೇ ಶಾಲೆಗೆ ಬರುವಂತೆ ಮನ ಒಲಿಸುವುದು
- ಅಪವ್ಯಯ ಹಾಗೂ ಅನುತ್ತೀರ್ಣ ಆಗದಂತೆ ನೋಡಿಕೊಳ್ಳುತ್ತಿದೆ
- ಶಾಲಾ ವೇಳೆಯನ್ನು ಬಾಲಕಿಯರ ಅನುಕೂಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುತ್ತಿದೆ
- ಪ್ರತಿ ಶಾಲೆಗೆ ಶೇ. 50ರಷ್ಟು ಮಹಿಳಾ ಶಿಕ್ಷಕಿಯರನ್ನೇ ನೇಮಿಸುತ್ತಿದೆ
- ಕಪ್ಪು–ಹಲಗೆ ಕಾರ್ಯಾಚರಣೆ ಹಾಗೂ ಸರ್ವಶಿಕ್ಷ ಅಭಿಯಾನವನ್ನು ತಪ್ಪದೇ ಪಾಲಿಸಲು ಯತ್ನಿಸಲಾಗುತ್ತಿದೆ.

ಇಷ್ಟೆಲ್ಲಾ ಸೌಲಭ್ಯಗಳನ್ನು ಬಾಲಕಿಯರಿಗಾಗಿ ದೇಶಾದ್ಯಂತ ಒದಗಿಸಲು ಕೇಂದ್ರ ಸರ್ಕಾರ ರಾಜ್ಯಗಳಿಗೆ ಆರ್ಥಿಕ ನೆರವು ನೀಡುತ್ತಿದೆ. ಸಂವಿಧಾನವೇ ನಿರ್ದೇಶಿಸಿದಂತೆ ಬಾಲಕಿಯರಿಗೆ 6 ರಿಂದ 14ನೇ ವಯಸ್ಸಿನವರೆಗೆ ಉಚಿತ, ಕಡ್ಡಾಯ ಹಾಗೂ ಸಾರ್ವತ್ರಿಕ ಶಿಕ್ಷಣ ಸೌಲಭ್ಯಗಳನ್ನು ಒದಗಿಸುತ್ತಿದೆ.

**ವಿಶೇಷ ವಿದ್ಯಾರ್ಥಿ ವೇತನಗಳು:** ಬಾಲಕಿಯರು ತಪ್ಪದೇ ಶಾಲೆಗೆ ಹಾಜರಾಗುವಂತೆ ಮಾಡಲು ಹಾಗೂ ಅವರ ಪೋಷಕರಿಗೆ ಸ್ವಲ್ಪ ಪ್ರಮಾಣದ ಆರ್ಥಿಕ ನೆರವು ಒದಗಿಸಲು ಸರ್ಕಾರ ವಿದ್ಯಾರ್ಥಿ ವೇತನ ನೀಡುವ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಈ ಕ್ರಮವನ್ನು ಬ್ರಿಟಿಷರ ಆಡಳಿತದಲ್ಲಿಯೇ ಜಾರಿಗೆ ತರಲಾಗಿತ್ತು. ಇತ್ತೀಚೆಗೆ ಸರ್ಕಾರ ಶಿಕ್ಷಣವನ್ನು ಸಾರ್ವತ್ರಿಕ ಗೊಳಿಸಿದ್ದರಿಂದ ಹಾಗೂ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದ್ದರಿಂದ ಬಡ ಕುಟುಂಬ ಅದರಲ್ಲೂ ಗ್ರಾಮೀಣ ಪರಿಸರದ ಅಲ್ಪಸಂಖ್ಯಾತ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಕುಟುಂಬಗಳಿಂದ ಬರುವ ಬಾಲಕಿಯರು ಶಾಲೆಗೆ ತಪ್ಪದೆ ಬರುವಂತೆ ಮಾಡಲು ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಇದರಲ್ಲಿ ಕೆಲವರಿಗೆ ಪ್ರತಿಭೆಯ ಆಧಾರದ ಮೇಲೆ ಕೊಟ್ಟರೆ ಇನ್ನು ಕೆಲವು ಬಾಲಕಿಯರಿಗೆ ಜಾತಿ, ಧರ್ಮ ಹಾಗೂ ಭಾಷೆಯ ಆಧಾರದ ಮೇಲೆ ಕೊಡಲಾಗುತ್ತದೆ. ಪ್ರಾಥಮಿಕ ಶಾಲಾ ಹಂತದಲ್ಲಿ ಕೊಡುವ ವಿದ್ಯಾರ್ಥಿ ವೇತನ ಕಡಿಮೆ ಇರಬಹುದಾದರೂ, ಉನ್ನತ ಹಂತದಲ್ಲಿ ಅಭ್ಯಾಸಿಸುವ ಹುಡುಗಿಯರಿಗೆ ಹೆಚ್ಚಿನ ವಿದ್ಯಾರ್ಥಿ ವೇತನ ಕೊಡಲಾಗುವುದು.

**ಉಚಿತ ಪಠ್ಯ ಪುಸ್ತಕಗಳು:** ಅದರಲ್ಲೂ ಗ್ರಾಮಾಂತರ ಪ್ರದೇಶದ ಬಡ ಕುಟುಂಬಗಳ ಬಾಲಕಿಯರಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲಿ ಉಚಿತವಾಗಿ ಪಠ್ಯಪುಸ್ತಕಗಳನ್ನು ವಿತರಿಸಲಾಗುವುದು. ಇತ್ತೀಚೆಗೆ ಮಹಿಳೆಯರಿಗಾಗಿಯೇ ಉಪಯುಕ್ತವಾದ ಪಠ್ಯಪುಸ್ತಕಗಳು ಅವಶ್ಯವೆಂಬ ಬೇಡಿಕೆಯನ್ನು ಮಹಿಳಾ ಸಂಘಟನೆಗಳು ಮುಂದಿಟ್ಟಿವೆ. ಇದೊಂದು ಉತ್ತಮ ಕ್ರಮವಾಗಿದ್ದು, ಯಾವುದೆ ವಿದ್ಯಾರ್ಥಿನಿ ಓದಲು ಅಗತ್ಯವಾದ ಪಠ್ಯ ಪುಸ್ತಕಗಳಿಲ್ಲ ಎಂಬ ಕೊರಗನ್ನು ನೀಗಿಸಲು ಕೈಗೊಂಡ ಆದರ್ಶವಾಗಿದೆ. ಇದರಿಂದ ಲಿಂಗ ತಾರತಮ್ಯ ಹಾಗೂ ಕೀಳರಿಮೆಯನ್ನು ಹೋಗಲಾಡಿಸಬಹುದು. ಈ ರೀತಿ ಪಠ್ಯಪುಸ್ತಕಗಳನ್ನು ವಿತರಿಸಲು ಕರ್ನಾಟಕ ಸರ್ಕಾರ ವರ್ಷಂಪ್ರತಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ.

**ಉಚಿತ ಸಮವಸ್ತ್ರಗಳು:** ಸಾರ್ವತ್ರಿಕ ಶಿಕ್ಷಣದ ಯಶಸ್ಸಿಗೆ ಪೂರಕವಾಗಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲಿ ಉಚಿತ ಸಮವಸ್ತ್ರಗಳನ್ನು ಕರ್ನಾಟಕ ಸರ್ಕಾರ ಒದಗಿಸುತ್ತಿದೆ. ಅದರಲ್ಲೂ ಬಾಲಕಿಯರಿಗೆ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಬಡ ಕುಟುಂಬಗಳಿಂದ ಶಾಲೆಗೆ ಬರುವ ಬಾಲಕಿಯರು ಉತ್ತಮ ಬಟ್ಟೆ ಇಲ್ಲ ಎಂಬ ಕೊರಗನ್ನು ನಿವಾರಿಸಲು ಈ ಕ್ರಮವನ್ನು ಜಾರಿಗೊಳಿಸಲಾಗಿದೆ. ಇದರಿಂದ ಶಾಲೆಗೆ ಬರುವ ಬಾಲಕಿಯರಲ್ಲಿ ಮೇಲು–ಕೀಳು ಎಂಬ ಭಾವನೆಯನ್ನು ತೊಡೆದು ಹಾಕಬಹುದು. ಸಮಾನತಾ ಭಾವನೆಯನ್ನು ಅವರಲ್ಲಿ ಮೂಡಿಸಬಹುದು.

**ಅಕ್ಷರ ದಾಸೋಹ:** ಕರ್ನಾಟಕ ಸರ್ಕಾರ ಇತ್ತೀಚೆಗೆ ವಿಶೇಷ ಯೋಜನೆಯಾಗಿ ಇದನ್ನು ಜಾರಿಗೆ ತಂದಿದೆ. ಹಸಿವಿನಿಂದ ಮಕ್ಕಳು ಕಲಿಯುವುದು ಕಷ್ಟ. ಆದ್ದರಿಂದ ಅವರ ಪೌಷ್ಟಿಕಾಂಶದ ಕೊರತೆ ನೀಗಿಸಲು, ಅಪವ್ಯಯ, ಅನುತ್ತೀರ್ಣತೆ ಕಡಿಮೆಗೊಳಿಸಲು, ಮಧ್ಯಾಹ್ನದ ವೇಳೆ 1 ರಿಂದ 7ನೇ ತರಗತಿಯವರೆಗಿನ ಎಲ್ಲ ಮಕ್ಕಳಿಗೂ ಉಚಿತವಾಗಿ ಊಟವನ್ನು ಕೊಡುತ್ತದೆ.

**ವಸತಿ ಗೃಹಗಳ ಸೌಲಭ್ಯ:** ವಿದ್ಯಾರ್ಥಿನಿಯರು ಹೆಚ್ಚಿನ ವ್ಯಾಸಂಗ ಕೈಗೊಳ್ಳಲು ಉಪಯುಕ್ತವಾಗುವಂತೆ ಸಮಾಜ ಕಲ್ಯಾಣ ಇಲಾಖೆಯ ಪ್ರಮುಖ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ವಸತಿ ಗೃಹಗಳನ್ನು ಸ್ಥಾಪಿಸಿದೆ, ಸ್ಥಾಪಿಸುತ್ತಿದೆ.

ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಅನುದಾನದ ಮೂಲಕ

Digitised by Bharatavani, CIIL

ಈ ವಸತಿಗೃಹಗಳ ವ್ಯವಸ್ಥೆಗೆ ನೆರವು ನೀಡುತ್ತಿದೆ. ಖಾಸಗಿ ಸಂಸ್ಥೆಗಳೂ ವಿದ್ಯಾರ್ಥಿನಿಯರ ವಸತಿಗೃಹಗಳನ್ನು ಸರ್ಕಾರದ ಆರ್ಥಿಕ ನೆರವಿನಿಂದ ನಡೆಸುತ್ತಿವೆ. ಬಡ ವಿದ್ಯಾರ್ಥಿನಿಯರಿಗೆ ಈ ಗೃಹಗಳು ಹೆಚ್ಚಿನ ರೀತಿಯಲ್ಲಿ ಉಪಯೋಗವಾಗುತ್ತವೆ.

**ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ:** ಮಹಿಳೆ ಮದುವೆಯಾಗಿ ಸಂಸಾರ ಮಾಡುವುದು, ಮಕ್ಕಳನ್ನು ಹೆರುವುದು, ಲಾಲನೆ ಪಾಲನೆ ಮಾಡುವುದು ಇಷ್ಟರಿಂದಲೇ ತೃಪ್ತಿ ಪಟ್ಟುಕೊಳ್ಳುವಂತಹ ಕಾಲ ಕಡಿಮೆಯಾಗುತ್ತಿದೆ. ತಾನೂ ವಿದ್ಯಾವಂತಳಾಗಬೇಕು, ಸ್ವಾವಲಂಬನೆಯಿಂದ ಜೀವನವನ್ನು ಸಾಗಿಸಬೇಕು, ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂಬ ಮನೋಭಾವ ಮಹಿಳೆಯರಲ್ಲಿ ಇತ್ತೀಚೆಗೆ ವಿಶೇಷವಾಗಿ ಕಂಡುಬರುತ್ತಿದೆ.

ಸರ್ಕಾರವೂ ಮಹಿಳಾ ಸಬಲೀಕರಣಕ್ಕೆ ಪೂರಕವಾಗುವಂತಹ ಚಟುವಟಿಕೆಗಳಿಗೆ ಸಹಾಯ ಧನ ನೀಡುತ್ತಿದೆ. ಮಹಿಳೆ ಗಂಡಸಿನಂತೆಯೇ ವಿವಿಧ ಕ್ಷೇತ್ರಗಳಲ್ಲಿ ದುಡಿಯಲು ಮುನ್ನುಗ್ಗುತ್ತಿರುವುದನ್ನು ಮಹಿಳಾ ಸಂಘಟನೆಗಳು ಸ್ವಾಗತಿಸುತ್ತಿವೆ ಹಾಗೂ ಪ್ರೇರೇಪಿಸುತ್ತಿವೆ.

**ದುಡಿಮೆಯ ವಿವಿಧ ಮುಖಗಳು:** ಆಧುನಿಕ ಸಮಾಜದಲ್ಲಿ ಮಹಿಳೆ ವಿದ್ಯಾವಂತಳಾದರೆ ಸಾಲದು. ವಿದ್ಯೆಗೆ ತಕ್ಕಂತಹ ಉದ್ಯೋಗ ಪಡೆಯುವುದರ ಮೂಲಕ ದುಡಿಮೆ ಮಾಡಿದಾಗ ಕುಟುಂಬ ಆರ್ಥಿಕವಾಗಿ ಪ್ರಗತಿಯಾಗುತ್ತದೆ. ಸಮಾಜದಲ್ಲಿ ಗೌರವವೂ ದೊರೆಯುತ್ತದೆ. "ಉದ್ಯೋಗಂ ಪುರುಷ ಲಕ್ಷಣಂ" ಎಂಬ ಭಾವನೆ ಈಗ "ಉದ್ಯೋಗಂ ಸ್ತ್ರೀ, ಪುರುಷ ಲಕ್ಷಣಂ" ಎಂದು ಬದಲಾಗಿದೆ.

ಹೀಗಾಗಿ ಮಹಿಳೆ ಫ್ಯಾಷನ್ ಲೋಕದಲ್ಲಿ ಸಾಕಷ್ಟು ಪ್ರಗತಿ ಸಾಧಿಸುತ್ತಿದ್ದಾಳೆ. ಗೃಹಾಲಂಕಾರಗಳು, ಡ್ರಾಯಿಂಗ್, ಕಸೂತಿ, ಟೈಲರಿಂಗ್, ಕಂಪ್ಯೂಟರ್ ಬಳಕೆ, ಹರ್ಬಲ್‌ಗಳು ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿದ್ದಾಳೆ. ಮಹಿಳೆ ಆರ್ಥಿಕವಾಗಿ ಪ್ರಗತಿಯೆಡೆಗೆ ಮುನ್ನುಗ್ಗುವಂತೆ ಮಾಡಲು ಬ್ಯಾಂಕುಗಳು ಉದಾರವಾಗಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಿವೆ. ಸಣ್ಣ ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳಿಗೆ ಅವರುಗಳ ವಿದ್ಯೆ, ಸಾಮರ್ಥ್ಯ ಹಾಗೂ ತರಬೇತಿಯನ್ನು ಪರಿಗಣಿಸಿ ಸಾಲ–ಸೌಲಭ್ಯ ನೀಡುತ್ತವೆ. ವಿಶಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳು ತರಬೇತಿಯನ್ನು ನೀಡಿ, ಆರ್ಥಿಕ ನೆರವು ನೀಡುತ್ತವೆ. ಇತ್ತೀಚೆಗೆ ಅಧಿಕ ಲಾಭ ತರುವ ಹೋಟೆಲ್ ಉದ್ಯಮ, ಬ್ಯಾಂಕಿಂಗ್ ಉದ್ಯಮ, ಸಣ್ಣ ಕೈಗಾರಿಕೆಗಳು ನಡೆಸುವುದು ಮುಂತಾದ ಕ್ಷೇತ್ರಗಳಲ್ಲಿ ಸಹಕಾರದಿಂದ ಮಹಿಳೆ ಪ್ರಗತಿಯೆಡೆಗೆ ದಾಪುಗಾಲು ಹಾಕುತ್ತಿದ್ದಾಳೆ.

**ಗ್ರಾಮೀಣ ಪ್ರದೇಶಗಳು:** ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಲು ವಿಪುಲ ಅವಕಾಶಗಳು ಇತ್ತೀಚೆಗೆ ದೊರೆಯುತ್ತಿವೆ. ಸ್ಥಳೀಯವಾಗಿದೊರೆಯುವ ನೈಸರ್ಗಿಕ ಕಚ್ಚಾ ವಸ್ತುಗಳನ್ನು ಬಳಸಿಕೊಂಡು ಉಪಯುಕ್ತ ವಸ್ತುಗಳನ್ನಾಗಿ ಮಾಡಲು ಸರ್ಕಾರ ಆರ್ಥಿಕ ನೆರವನ್ನು ನೀಡುತ್ತದೆ. ಅಲ್ಪಸ್ವಲ್ಪ ಅಕ್ಷರ ಜ್ಞಾನವಿದ್ದವರೂ ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಸಾಂಬಾರ ಪುಡಿ, ರೊಟ್ಟಿ, ಚಟ್ನಿಗಳು, ಸಿಹಿ ವಸ್ತುಗಳು ಮುಂತಾದವುಗಳನ್ನು ತಯಾರಿಸಬಹುದು. ಬ್ಯಾಂಕುಗಳು ಸ್ತ್ರೀಶಕ್ತಿ ಗುಂಪುಗಳಿಗೆ ಹಾಗೂ ವೈಯಕ್ತಿಕವಾಗಿ ಸಾಲಗಳನ್ನು ಕೊಡುತ್ತವೆ.

ಇನ್ನೂ ಕೆಲವು ಮಹಿಳೆಯರು ಸರ್ಕಾರದ ಆರ್ಥಿಕ ನೆರವನ್ನು ಬಳಸಿಕೊಂಡು ಎರೆಹುಳುವಿನ ಸಾವಯವ, ಗೊಬ್ಬರ ತಯಾರಿಕೆ, ಹಸುಗಳನ್ನು ಸಾಕಿ ಹಾಲು ಮಾರಾಟ, ಮಣ್ಣು ಸಂರಕ್ಷಣೆ, ತೋಟಗಾರಿಕೆ, ಮೀನು ಸಾಕುವುದು – ಮುಂತಾದ ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಕೆಲವು ಸಂಘಟಿತ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚು ಲಾಭ ಪಡೆಯುತ್ತಿದ್ದು ಸಂಪನ್ಮೂಲ ವೃದ್ಧಿಗೆ ಆದಾಯಗಳಿಕೆಗೆ ರೂವಾರಿಗಳಾಗಿರುವುದು ಪ್ರಗತಿಯ ಮುನ್ಸೂಚನೆಯಾಗಿದೆ.

**ನಗರ ಪ್ರದೇಶಗಳಲ್ಲಿ:** ನಗರ ಪ್ರದೇಶಗಳಲ್ಲಿ ಮಹಿಳೆಯರು ಹೆಚ್ಚು ಸುಶಿಕ್ಷಿತರಾಗಿದ್ದು ವಿವಿಧ ಉದ್ಯಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಅವರುಗಳ ಕ್ಷೇತ್ರ ಸಾಮಾನ್ಯವಾಗಿ ವಿಜ್ಞಾನ ಹಾಗೂ ತಂತ್ರಜ್ಞಾನ. ಬಹಳಷ್ಟು ಮಹಿಳೆಯರು ವಾಸ್ತುಶಿಲ್ಪ ಹಾಗೂ ಒಳಾಂಗಣಗಳೆರಡನ್ನೂ ಆಯ್ಕೆ ಮಾಡಿಕೊಳ್ಳುವರು. ಇನ್ನೂ ಕೆಲವರು ಸಿದ್ಧ ಉಡುಪುಗಳ ತಯಾರಿಕೆ ಹಾಗೂ ಮರಾಟ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವರು.

ಸರ್ಕಾರದ ಉದಾರ ಆರ್ಥಿಕ ನೀತಿಯಿಂದ ಸಾಲ–ಸೌಲಭ್ಯಗಳನ್ನು ಪಡೆದು ಉದ್ಯಮ ಕ್ಷೇತ್ರದಲ್ಲಿ ತೊಡಗುತ್ತಿದ್ದಾರೆ. ಇಲ್ಲಿ ಮಹಿಳೆಗೆ ವ್ಯವಹಾರ ಜ್ಞಾನ ಹಾಗೂ ಗ್ರಾಹಕರ ಮನ ಒಲಿಕೆಯ ಸಾಮರ್ಥ್ಯವಿದ್ದರೆ ಉದ್ಯಮದಲ್ಲಿ ಸಾಕಷ್ಟು ಪ್ರಗತಿ ಸಾಧಿಸಬಲ್ಲಳು.

ಕೆಲವು ವೇಳೆ ಉದ್ಯಮದಲ್ಲಿ ಲಿಂಗ–ತಾರತಮ್ಯ ಹಾಗೂ ವ್ಯವಹಾರಿಕ ಜ್ಞಾನದಲ್ಲಿ ಜಾಣ್ಮೆ ಇಲ್ಲದಿದ್ದರೆ ನಷ್ಟ ಸಂಭವಿಸುತ್ತದೆ. ಆದರೆ ಆಕೆಯಲ್ಲಿ ಜಾಣ್ಮೆ, ಕೌಶಲ ಹಾಗೂ ಸ್ವ–ಸಾಮರ್ಥ್ಯವಿದ್ದರೆ ಆರ್ಥಿಕ ಸಂದರ್ಭದಲ್ಲೂ ಅಭ್ಯುದಯ ಸಾಧಿಸಬಲ್ಲಳು.

ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರು ಪುರುಷರೊಡನೆ ಸರಿಸಮಾನ ರೀತಿಯಲ್ಲಿ ಪಾಲ್ಗೊಳ್ಳಲು ಸಂವಿಧಾನ ಅವಕಾಶಗಳನ್ನು ಮಾಡಿಕೊಟ್ಟಿದೆ. ಆದರೂ ಆಕೆ ಸಾಂಪ್ರದಾಯಿಕ ರೀತಿಯ ಗೃಹ ನಿರ್ವಹಣೆ ಹಾಗೂ ಶಿಶುಪಾಲನಾ ಚೌಕಟ್ಟಿನಿಂದ ಇನ್ನೂ ಹೊರಬರಲಿಕ್ಕೆ ಕೆಲವು ವರ್ಷಗಳೇ ಬೇಕಾಗಬಹುದು. ಇದಕ್ಕೆ ಮಹಿಳೆಯರ ಬಗೆಗಿನ ತಾರತಮ್ಯ ಸಮಾಜದಲ್ಲಿ ಪೂರ್ಣವಾಗಿ ನಿವಾರಣೆಯಾಗದಿರುವುದು. ಆದ್ದರಿಂದ ವಿಶ್ವಸಂಸ್ಥೆಯ ಒಡಂಬಡಿಕೆಯನ್ನು ಅಂಗೀಕರಿಸಿ ಉದ್ಯೋಗ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸಮಾನ ರೀತಿಯ ಹಕ್ಕುಗಳನ್ನು ಒದಗಿಸಲು ಸರ್ಕಾರ ನೆರವಾಗಬೇಕಿದೆ.

ನಗರೀಕರಣ, ನಾಗರಿಕತೆಯ ಪ್ರಭಾವದಿಂದ ನಗರ ಹಾಗೂ

Digitised by Bharatavani, CIIL

ಗ್ರಾಮೀಣ ಮಹಿಳೆಯರು ಇತ್ತೀಚೆಗೆ ಎಲ್ಲ ಹಂತದ ಕಾರ್ಯ ಕ್ಷೇತ್ರಗಳಲ್ಲಿ ಸರಿ ಸಮಾನರಾಗಿ ಪಾಲ್ಗೊಳ್ಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪುರುಷ ಸ್ವಾಮ್ಯದ ಎಲ್ಲ ಕಾರ್ಯ ಕ್ಷೇತ್ರಗಳನ್ನು ತನ್ನದಾಗಿಸಿಕೊಳ್ಳುವಲ್ಲಿ ಮಹಿಳೆ ಮುನ್ನಡೆಯಬಲ್ಲಳು ಎಂಬುದರಲ್ಲಿ ಸಂಶಯವಿಲ್ಲ. ಈ ರೀತಿ ಮಹಿಳೆಯರನ್ನು ಸಬಲೀಕರಣಗೊಳಿಸಲು ಸರ್ಕಾರ ವಿವಿಧ ರೀತಿಯ ಕಾರ್ಯಕ್ರಮಗಳನ್ನು ದೇಶದಾದ್ಯಂತ ಕೈಗೊಳ್ಳುತ್ತಿದೆ. ಅದರಲ್ಲಿ ಅತಿ ಮುಖ್ಯವಾದದ್ದು ಮಹಿಳಾ ಶಿಕ್ಷಣ. ಮಹಿಳಾ ಸಂಘಟನೆಗಳು ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿವೆ. ಆದರೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರ, ಲಿಂಗ ತಾರತಮ್ಯ, ವರದಕ್ಷಿಣೆ – ಮುಂತಾದ ಸಮಸ್ಯೆಯಳಿಗೆ ಪರಿಹಾರ ಕಂಡುಕೊಳ್ಳಲು ಇನ್ನೂ ಬಹುದೂರ ಸಾಗಬೇಕಿದೆ. ಸೂಕ್ತ ಶಿಕ್ಷಣ ಮಾತ್ರ ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ಪ್ರಮುಖ ಅಸ್ತ್ರವಾಗಿದೆ ಎಂದು ಹೇಳಬಹುದು.

–ಪ್ರೊ. ಆಶಾಪ್ರೇಮಲತಾ

## ಮಹಿಳೆಯರಿಗೆ ಸಂಬಂಧಿಸಿದ ಆಯೋಗಗಳು

ಮಹಿಳಾ ಶಿಕ್ಷಣವು ಸಂತೃಪ್ತಿಕರ ಮತ್ತು ಆರೋಗ್ಯಕರ ಮನೆ ವಾತಾವರಣಕ್ಕೆ ಸಮಾಜ ಸುಧಾರಣೆಗೆ ಆರ್ಥಿಕ ಪುರೋಭಿವೃದ್ಧಿ ಹಾಗೂ ರಾಷ್ಟ್ರೀಯ ಸೌಹಾರ್ದತೆಗೆ ಅತ್ಯಂತ ಅವಶ್ಯಕವಾಗಿದೆ. ಭಾರತದಲ್ಲಿ ಸ್ತ್ರೀ ಶಿಕ್ಷಣ ಪ್ರಗತಿಪರವಾಗಿದೆ ಎಂಬುದು ನಿಸ್ಸಂದೇಹವೆನಿಸಿದರೂ ಇತರ ದೇಶಗಳಿಗೆ ಹೋಲಿಸಿದಾಗ ಅದು ಇನ್ನೂ ಮಂದಗತಿಯಲ್ಲೆ ಸಾಗುತ್ತಿದೆ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಈತನಕವೂ ಬಹು ಸಂಖ್ಯಾತ ಮಹಿಳೆಯರು ಶಿಕ್ಷಣ ಪಡೆಯುವದರಿಂದ ವಂಚಿತರಾಗಿದ್ದಾರೆ. ಪುರುಷರ ಶಿಕ್ಷಣ ಮತ್ತು ಮಹಿಳೆಯರ ಶಿಕ್ಷಣಗಳ ನಡುವೆ ಬಹುದೊಡ್ಡ ಅಂತರವಿರುವದು ಕಂಡುಬರುತ್ತದೆ. ಈ ಅಂತರವನ್ನು ಇಲ್ಲದಂತೆ ಮಾಡಲು ಏನೆಲ್ಲ ಪ್ರಯತ್ನಗಳನ್ನು ಮಾಡಬೇಕಾಗಿದೆ. ಕಾರಣ ಪುರುಷರ ಶಿಕ್ಷಣಕ್ಕಿಂತ ಮಹಿಳಾ ಶಿಕ್ಷಣ ಮಹತ್ವಪೂರ್ಣವೆನಿಸಿರುವುದೇ ಆಗಿದೆ.

ವಿಶ್ವವಿದ್ಯಾಲಯ ಶಿಕ್ಷಣ ಆಯೋಗ (1948–49) ಹಾಗೂ ಕೊಠಾರಿ ಆಯೋಗ (1964–66)ಗಳು "ವಿದ್ಯಾವಂತ ಸ್ತ್ರೀಯರಿಲ್ಲದೆ ವಿದ್ಯಾವಂತ ಪುರುಷರು ಇರಲಾರರು" ಎಂದು ಮಹಿಳೆಯರ ಶಿಕ್ಷಣ ಕುರಿತು ಅಭಿಪ್ರಾಯಪಟ್ಟಿವೆ. ಜವಾಹರಲಾಲ ನೆಹರುರವರು "ಒಬ್ಬ ಹುಡುಗನಿಗೆ ಶಿಕ್ಷಣವನ್ನು ನೀಡಿದರೆ ಅದು ಒಂದು ವ್ಯಕ್ತಿಯ ಶಿಕ್ಷಣ ಆದರೆ ಒಂದು ಹುಡುಗಿಗೆ ಶಿಕ್ಷಣವನ್ನು ನೀಡಿದರೆ ಅದು ಇಡೀ ಕುಟುಂಬದ ಶಿಕ್ಷಣವಾಗುತ್ತದೆ" ಎಂದು ಹೇಳಿದ್ದಾರೆ. ಶಿಕ್ಷಣದ ಮೇಲಿನ ರಾಷ್ಟ್ರೀಯ ನೀತಿಯು ಸ್ತ್ರೀ ಶಿಕ್ಷಣವು ಕೇವಲ ಸಾಮಾಜಿಕ ನ್ಯಾಯದ ಆಧಾರದಿಂದ ಮಾತ್ರ ಮಹತ್ವವನ್ನು ಸ್ವೀಕರಿಸದೆ ಸಾಮಾಜಿಕ ಹಸ್ತಾಂತರವನ್ನು ತೀವ್ರಗೊಳಿಸಬೇಕು ಎಂದು ತಿಳಿಸಿತು.

ಮಹಿಳೆಯರ ಸ್ಥಿತಿಯನ್ನು ಉತ್ತಮಪಡಿಸಲು ಅನೇಕ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಮಹಿಳೆಯರ ಶಿಕ್ಷಣದ ಪ್ರಗತಿಗಾಗಿ ಶಿಕ್ಷಣ ಆಯೋಗಗಳು ಅನೇಕ ಶಿಫಾರಸುಗಳನ್ನು ಮಾಡಿವೆ. ಕೆಲವು ಆಯೋಗಗಳನ್ನು ಮಹಿಳೆಯರ ಸ್ಥಿತಿಗತಿಯನ್ನು ಉತ್ತಮಪಡಿಸಲೆಂದೇ ರಚಿಸಲಾಗಿದೆ.

### 1. ಡಾ. ರಾಧಾಕೃಷ್ಣನ್ ಆಯೋಗ (1948–49):

ಈ ಆಯೋಗವನ್ನು ವಿಶ್ವವಿದ್ಯಾಲಯ ಆಯೋಗ ವೆಂತಲೂ ಕರೆಯುವರು. ಇದು ಕಾಲೇಜು ಮತ್ತು ವಿಶ್ವವಿದ್ಯಾಲಯ ಹಂತದ ಮಹಿಳಾ ಶಿಕ್ಷಣ ಕುರಿತು ಈ ಕೆಳಗಿನ ಶಿಫಾರಸುಗಳನ್ನು ಮಾಡಿದೆ.

1) ಮಹಿಳೆಯರಿಗೆ ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಾಗಿ ಕಲ್ಪಿಸಬೇಕು.

2) ಮಹಿಳೆಯರು ತಮ್ಮ ನಿಜವಾದ ಆಸಕ್ತಿಯ ಬಗೆಗೆ ಪೂರ್ಣ ದೃಷ್ಟಿಯನ್ನು ಹೊಂದಲು ಸಹಾಯಕವಾಗುವಂತೆ ನುರಿತ ವಿದ್ವಾಂಸರುಗಳಿಂದ ಜಾಣ್ಮೆಯುತ ಶೈಕ್ಷಣಿಕ ಮಾರ್ಗದರ್ಶನವನ್ನು ಒದಗಿಸಬೇಕು.

3) ಸಾಮಾನ್ಯವಾಗಿ ಮಹಿಳೆಯರಿಗೆ ತಮ್ಮ ಯಥಾವಸ್ಥಿತ ಸ್ಥಾನವನ್ನು ಕಂಡುಕೊಳ್ಳಲು ಸಹಾಯ ಮಾಡಬೇಕು. ಈ ಸಹಾಯದ ಮೂಲಕ ಮಹಿಳೆ ಸಮಾಜದಲ್ಲಿ ತಾನೊಬ್ಬ ಹೊಣೆಗಾರಿಕೆಯುಳ್ಳ ಪ್ರಜೆ ಎಂಬುದನ್ನು ತಿಳಿದುಕೊಳ್ಳಬೇಕು.

4) ಸಹ ಶಿಕ್ಷಣದ ಕಾಲೇಜುಗಳಲ್ಲಿ ಸರಿಯಾದ ಸೌಜನ್ಯತೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ವಿಸ್ತರಿಸಲು ಪುರುಷರ ಮೇಲೆ ಪ್ರಭಾವವನ್ನು ಬೀರಬೇಕು. ಅಲ್ಲದೆ ಸಹ ಶಿಕ್ಷಣದ ಶಾಲೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನಗಳನ್ನು ಒದಗಿಸುವಂತಾಗಬೇಕು.

### 2. ಮಹಿಳಾ ಶಿಕ್ಷಣದ ರಾಷ್ಟ್ರೀಯ ಸಭೆ:

ಮಹಿಳಾ ಶಿಕ್ಷಣಕ್ಕಾಗಿ ಅಸ್ತಿತ್ವಗೊಂಡ ರಾಷ್ಟ್ರೀಯ ಮಹಾಸಭೆಯ ಪ್ರಮುಖ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

1) ವಯಸ್ಕ ಮಹಿಳೆಯರು ಬಾಲಕಿಯರ ಶಾಲಾಹಂತದಲ್ಲಿನ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರಕಾರಕ್ಕೆ ಸಲಹೆ ಮಾಡುವುದು.

2) ಬಾಲಕಿಯರ ಮತ್ತು ಮಹಿಳೆಯರ ಶಿಕ್ಷಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಲು, ಗುರಿಗಳನ್ನು ನಿರ್ಧರಿಸಲು ಸುಧಾರಣೆಯ ಆದ್ಯತೆಗಳನ್ನು ಮತ್ತು ವಿಸ್ತರಣೆಯ ಕುರಿತು ಸಲಹೆ ನೀಡುವುದು.

3) ಬಾಲಕಿಯರ ಮತ್ತು ಮಹಿಳೆಯರ ಶಿಕ್ಷಣದ ಪರವಾಗಿರುವ ಸಾರ್ವಜನಿಕರ ಅಭಿಪ್ರಾಯಗಳನ್ನು ತಿಳಿಯಲು ಸೂಕ್ತ ಅಳತೆಗೋಲುಗಳ ಬಗೆಗೆ ಸಲಹೆ ಮಾಡುವುದು.

Digitised by Bharatavani, CIIL

4) ಕಾಲದಿಂದ ಕಾಲಕ್ಕೆ ಈ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯನ್ನು ಅಳೆಯುವುದು. ಈ ವಿಷಯಕ್ಕೆ ಸಂಬಂಧಿಸಿದಂತಹ ಸಮಸ್ಯೆಗಳ ಮೇಲಿನ ಅಂಕಿಸಂಖ್ಯೆಗಳನ್ನು ಸಂಗ್ರಹಿಸಲು ಶಿಫಾರಸು ಮಾಡುವುದು.

**3. 1957–59 ರಲ್ಲಿ ಡಾ꞉ ಶ್ರೀಮತಿ ದುರ್ಗಾಬಾಯಿ ದೇಶಮುಖರವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಮಹಿಳಾ ಶಿಕ್ಷಣ ಸಮಿತಿಯ ಶಿಫಾರಸುಗಳು:**

ಈ ಸಮಿತಿಯು ಮಹಿಳಾ ಶಿಕ್ಷಣದ ಪ್ರಸಾರಕ್ಕಾಗಿ ಅಭಿವೃದ್ಧಿಗಾಗಿ ಅನೇಕ ಶಿಫಾರಸುಗಳನ್ನು ಮಾಡಿತು. ಕೆಲವು ಮಹತ್ವದ ಶಿಫಾರಸುಗಳು ಈ ಕೆಳಗಿನಂತಿವೆ.

1) ಹುಡುಗಿಯರ ಹಾಗೂ ವಯಸ್ಕ ಮಹಿಳೆಯರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಹಾಗೂ ರಾಜ್ಯ ಮಹಿಳಾ ಶಿಕ್ಷಣ ಮಂಡಳಿಗಳನ್ನು ರಚಿಸಬೇಕು.

2) ಬಡಪಾಲಕರ ಹೆಣ್ಣುಮಕ್ಕಳಿಗೆ ರಿಯಾಯಿತಿ ತೋರಬೇಕು.

3) ಹುಡುಗಿಯರ ಶಿಕ್ಷಣಕ್ಕಾಗಿ ಗ್ರಾಮಗಳಿಗೆ ಉತ್ತೇಜನ ನೀಡಬೇಕು.

4) ಹುಡುಗಿಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸಬೇಕು.

5) ಪ್ರಾಥಮಿಕ ಹಂತದಲ್ಲಿ ಹುಡುಗರಿಗೆ ಹಾಗೂ ಹುಡುಗಿಯರಿಗೆ ಒಂದೇ ರೀತಿಯ ಪಠ್ಯಕ್ರಮ ಹಾಗೂ ಮಾಧ್ಯಮಿಕ ಹಂತದಲ್ಲಿ ಭಿನ್ನ ರೀತಿಯ ಪಠ್ಯಕ್ರಮವಿರಬೇಕು.

6) ಶಿಕ್ಷಕಿಯರಿಗೆ ವಸತಿ ಗೃಹಗಳನ್ನು ಒದಗಿಸಬೇಕು.

**4. ರಾಷ್ಟ್ರೀಯ ಮಹಿಳಾ ಶಿಕ್ಷಣ ಆಯೋಗ (1964):**

ಹುಡುಗರ ಮತ್ತು ಹುಡುಗಿಯರ ಶಿಕ್ಷಣದಲ್ಲಿನ ವ್ಯತ್ಯಾಸವನ್ನು ಪರಿಶೀಲಿಸುವುದಕ್ಕಾಗಿ ರಾಷ್ಟ್ರೀಯ ಮಹಿಳಾ ಶಿಕ್ಷಣ ಮಂಡಳಿ 1964ರಲ್ಲಿ ಒಂದು ಆಯೋಗವನ್ನು ರಚಿಸಿತು. ಆಯೋಗವು ಸರಕಾರಕ್ಕೆ ತನ್ನ ವರದಿಯನ್ನು 1964ರಲ್ಲಿ ಸಲ್ಲಿಸಿತು. ಆ ವರದಿಯ ಕೆಲವು ಮಹತ್ವದ ಶಿಫಾರಸುಗಳು ಈ ಕೆಳಗಿನಂತಿವೆ.

1) ಹುಡುಗಿಯರ ಹಾಗೂ ಹುಡುಗರ ಶಿಕ್ಷಣದಲ್ಲಿಯ ಅಂತರವನ್ನು ಕಡಿಮೆ ಮಾಡಲು ಕ್ರಮಕೈಗೊಳ್ಳುವುದು ಅಗತ್ಯವಾಗಿದೆ.

2) ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕಿಯರನ್ನು ನೇಮಿಸಬೇಕು.

3) ಹುಡುಗಿಯರಿಗಾಗಿ ಪ್ರತ್ಯೇಕವಾಗಿರುವ ಮಾಧ್ಯಮಿಕ ಶಾಲೆ ಹಾಗೂ ಕಾಲೇಜುಗಳಲ್ಲಿ ಶಿಕ್ಷಕರನ್ನು ನೇಮಿಸಬೇಕು. ಇದರ ತದ್ವಿರುದ್ಧವಾಗಿ ಹುಡುಗರ ಶಾಲೆ ಹಾಗೂ ಕಾಲೇಜುಗಳಲ್ಲಿ ಮಹಿಳಾ ಶಿಕ್ಷಕರನ್ನು ನೇಮಿಸಬೇಕು.

4) ಮಾಧ್ಯಮಿಕ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವನ್ನು ನೀಡಬೇಕು.

1963–65ರಲ್ಲಿ ಮಹಿಳೆಯರ ಶಿಕ್ಷಣ ಮಂಡಳಿಯಿಂದ ನೇಮಿಸಲ್ಪಟ್ಟ "ಹುಡುಗಿಯರ ಶಿಕ್ಷಣ ಹಾಗೂ ಸಾರ್ವಜನಿಕ ಸಹಕಾರ ಸಮಿತಿ"ಯು ಹುಡುಗಿಯರ ಶಿಕ್ಷಣದ ಸುಧಾರಣೆಗೆ ಸಾರ್ವಜನಿಕರು ಭಾಗವಹಿಸಬೇಕೆಂದು ಸಲಹೆ ಮಾಡಿದೆ. ಇತರ ಸಲಹೆಗಳು ಈ ಕೆಳಗಿನಂತಿವೆ.

1) ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕಿಯರನ್ನು ನೇಮಿಸುವುದು.

2) ಶಾಲೆಯನ್ನು ಬಿಟ್ಟ ವಿವಾಹಿತ ಶಿಕ್ಷಕಿಯರನ್ನು ಮರಳಿ ಉದ್ಯೋಗಕ್ಕೆ ಕರೆತರುವುದು.

3) ನೇಮಕಾತಿಯಲ್ಲಿ ಮಹಿಳೆಯರಿಗೆ ವಯೋಮಿತಿಯಲ್ಲಿ ರಿಯಾಯಿತಿ ನೀಡುವುದು.

4) ವಿವಾಹಿತ ಶಿಕ್ಷಕಿಯರಿಗಾಗಿ ಅಲ್ಪಾವಧಿ ಬೋಧನಾವಕಾಶ ಒದಗಿಸುವುದು.

5) ಪ್ರತ್ಯೇಕ ಮಹಿಳಾ ಉಸ್ತುವಾರುದಾರರನ್ನು ನೇಮಿಸುವುದು.

6) ಕೇಂದ್ರದಿಂದ ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ನೆರವು ಹಾಗೂ ಸಹಕಾರ ದೊರಕಬೇಕು.

**5. ರಾಷ್ಟ್ರೀಯ ಶಿಕ್ಷಣ ನೀತಿ – 1968:**

1968ರ ರಾಷ್ಟ್ರೀಯ ಶಿಕ್ಷಣ ನೀತಿಯ "ಕೇವಲ ಸಾಮಾಜಿಕ ನ್ಯಾಯ ಒದಗಿಸುವುದಕ್ಕಾಗಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕಾಗಿಲ್ಲ, ಅದು ಸಾಮಾಜಿಕ ಬದಲಾವಣೆಯನ್ನು ತೀವ್ರಗೊಳಿಸುತ್ತದೆ ಎಂಬ ಕಾರಣಕ್ಕಾಗಿ ಮಹಿಳಾ ಶಿಕ್ಷಣಕ್ಕೆ ಮಹತ್ವ ನೀಡಬೇಕಾಗಿದೆ" ಎಂದು ಅಭಿಪ್ರಾಯಪಟ್ಟಿತು.

**6. 1971–74ರ ಸ್ತ್ರೀಯರ ಸ್ಥಾನಮಾನ ಕುರಿತಾದ ಮಂಡಳಿ:**

ಭಾರತದ ಸರಕಾರದ ಶಿಕ್ಷಣ ಸಚಿವಾಲಯ 1971ರಲ್ಲಿ ನೇಮಿಸಲ್ಪಟ್ಟ ಮಹಿಳೆಯರ ಸ್ಥಾನಮಾನ ಕುರಿತಾದ ಮಂಡಳಿಯು 1974 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಆ ವರದಿಯ ಕೆಲವು ಸಲಹೆಗಳು ಈ ಕೆಳಗಿನಂತಿವೆ.

1) ಸಹ ಶಿಕ್ಷಣವನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಸಾಮಾನ್ಯ ನೀತಿ ನಿಯಮಗಳಿರಬೇಕು.

2) ಹುಡುಗಿಯರಿಗಾಗಿ ಪ್ರತ್ಯೇಕ ಕಾಲೇಜುಗಳಿಗೆ ಉತ್ತೇಜನ ನೀಡಬೇಕು.

3) ಸಹ–ಶಿಕ್ಷಣ ನೀಡುವ ಶಾಲೆಗಳಲ್ಲಿ ಶಿಕ್ಷಕ ಶಿಕ್ಷಕಿಯರಿಬ್ಬರೂ ಕೆಲಸ ಮಾಡುವುದನ್ನು ಮಾನ್ಯತೆ ನೀಡುವ ನಿಯಮಗಳಲ್ಲಿ ಒಂದನ್ನಾಗಿಸಬೇಕು.

4) ಹತ್ತನೆಯ ತರಗತಿಯವರೆಗೆ ಹುಡುಗಿರಯರಿಗೆ ಹಾಗೂ ಹುಡುಗರಿಗೆ ಒಂದೇ ರೀತಿಯ ಪಠ್ಯಕ್ರಮವಿರಬೇಕು.

5) ವಸತಿ ಗೃಹ ಸೌಲಭ್ಯ ಹೊಂದಿದ ಶಾಲೆಗಳ ಹಾಗೂ ಸಂಚಾರಿ ಶಾಲೆಗಳ ಸೌಲಭ್ಯ ಒದಗಿಸಬೇಕು.

Digitised by Bharatavani, CIIL

6) ಶಾಲಾಪೂರ್ವ ಶಿಕ್ಷಣವನ್ನು ಒದಗಿಸಬೇಕು.

7) ಮಕ್ಕಳು ಶಾಲೆಗೆ ಬರುವಂತೆ ಉತ್ತೇಜಿಸಿ ಮಧ್ಯಾಹ್ನ ಭೋಜನ, ಉಡುಪು, ಓದುವ ಹಾಗೂ ಬರೆಯುವ ಸಲಕರಣೆಗಳನ್ನು ಒದಗಿಸಬೇಕು.

8) ಹುಡುಗಿಯರ ಪ್ರವೇಶ ಪ್ರಮಾಣ ಕಡಿಮೆಯಿರುವ ಪ್ರದೇಶಗಳಲ್ಲಿ ವಿಶೇಷ ಉತ್ತೇಜನ ನೀಡಬೇಕು.

9) ಶೇಕಡಾ 50 ರಷ್ಟು ಶಿಕ್ಷಕಿಯರು ಪ್ರಾಥಮಿಕ ಶಿಕ್ಷಣದಲ್ಲಿರುವಂತೆ ಮಾಡಬೇಕು.

10) ಶಾಲೆಗೆ ಹೋಗುವ ವಯಸ್ಸಿನ ಕೆಳಗಿನ ಚಿಕ್ಕಮಕ್ಕಳಿಗೆ ತಮ್ಮ ಸಹೋದರಿಯರ ಜೊತೆ ಶಾಲೆಗೆ ಬರುವ ಸೌಲಭ್ಯ ಒದಗಿಸಬೇಕು.

**ಉಪಸಂಹಾರ:**

ಮಹಿಳಾ ಶಿಕ್ಷಣಕ್ಕೆ ಮಹತ್ವದ ಸ್ಥಾನವನ್ನು ಕಲ್ಪಿಸುವುದಾದರೆ, ಬಾಲಕರ ಮತ್ತು ಬಾಲಕಿಯರ ಶಿಕ್ಷಣ ಕ್ರಮದಲ್ಲಿನ ಅಂತರವನ್ನು ಇಲ್ಲವಾಗಿಸಬೇಕಾದರೆ ಹೆಚ್ಚು ಹೆಚ್ಚು ಶಾಲೆಗಳನ್ನು ಬಾಲಕಿಯರಿಗಾಗಿ ತೆರೆಯಬೇಕು. ಈವರೆಗೆ ವಾಸ್ತವವಾಗಿ ನಿರ್ಲಕ್ಷಿಸಲ್ಪಟ್ಟ ಗ್ರಾಮಾಂತರ ಪ್ರದೇಶಗಳಿಗೆ ವಿಶೇಷ ಪ್ರಾತಿನಿಧ್ಯವನ್ನು ಕೊಡಬೇಕು ವಿದ್ಯಾರ್ಥಿ ನಿಲಯಗಳು, ಪ್ರಯೋಗ ಶಾಲೆಗಳು, ಆಟದ ಮೈದಾನಗಳು ಮತ್ತು ಗ್ರಂಥಾಲಯಗಳ ಸ್ಥಾಪನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಸರಕಾರವು ಸಹಾಯ ಮಾಡಬೇಕು. ಈ ಸಂಸ್ಥೆಗಳು ಎದುರಿಸುತ್ತಿರುವ ಹಣಕಾಸಿನ ತೊಂದರೆಯನ್ನು ಪರಿಹರಿಸುವಲ್ಲಿ ಮುಂದಾಗಬೇಕು. ಹೆಚ್ಚುತ್ತಿರುವ ಇಂದಿನ ಬೇಡಿಕೆಗಳಿಗನುಗುಣವಾಗಿ ಸರಕಾರವು ತಾಂತ್ರಿಕ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ತೆರೆಯಬೇಕು. ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯಲು ಸಾಧ್ಯವಾಗದೆ ಇರುವ ಕಡೆ ಸಹಶಿಕ್ಷಣಕ್ಕೆ ಉತ್ತೇಜನ ನೀಡಬೇಕು. ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸಲು ಅಧಿಕ ಸಂಖ್ಯೆಯಲ್ಲಿ ಶಿಷ್ಯವೇತನ ಕೊಡಬೇಕು. ಮಹಿಳಾ ಶಿಕ್ಷಣವಿಲ್ಲದೆ ರಾಷ್ಟ್ರದಲ್ಲಿ ನಾವು ಸಾಮಾಜಿಕ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸಲಾರೆವು.

**–ಪ್ರೊ. ಆಶಾಪ್ರೇಮಲತಾ**

## ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳು

ಭಾರತ ಸಂವಿಧಾನದ 14ನೇ ಅನುಚ್ಛೇದವು ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂದು ಹೇಳುತ್ತದೆ. ಇನ್ನೂ ಮುಂದುವರಿದು 15ನೇ ಅನುಚ್ಛೇದದಲ್ಲಿ – ರಾಜ್ಯವು ಯಾವುದೇ ನಾಗರೀಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ತಾರತಮ್ಯವನ್ನು ಮಾಡಬಾರದೆಂದು ಹೇಳಿದೆ. ಮಹಿಳೆಯರು ಮತ್ತು ಮಕ್ಕಳಿಗಾಗಿ ಅವರ ಕಲ್ಯಾಣಾಭಿವೃದ್ಧಿಗಾಗಿ ವಿಶೇಷ ವ್ಯವಸ್ಥೆಯನ್ನು ಮಾಡುವುದಕ್ಕೆ ರಾಜ್ಯಗಳನ್ನು ಜವಾಬ್ದಾರಿಯುತರನ್ನಾಗಿ ಮಾಡಲು ಈ ಅನುಚ್ಛೇದವನ್ನು ಸೇರಿಸಲಾಗಿದೆ. ಅನುಚ್ಛೇದ 39ರಲ್ಲಿ ರಾಜ್ಯಗಳು ವಿಶೇಷವಾಗಿ ಸ್ತ್ರೀಯರು ಪುರುಷನಿಗೆ ಸಮಾನವಾಗಿ ಜೀವನ ನಿರ್ವಹಿಸುವುದಕ್ಕೆ ಸಾಕಷ್ಟು ಸಾಧನಗಳನ್ನು ಹೊಂದುವುದು, ಪುರುಷರಿಗೆ ಮತ್ತು ಮಹಿಳೆಯರಿಗೆ ಕೆಲಸಕ್ಕೆ ಸಮಾನ ವೇತನ ನೀಡುವುದು, ಸ್ತ್ರೀಯರ ಆರೋಗ್ಯ ರಕ್ಷಣೆ ಹಾಗೂ ಮಕ್ಕಳ ಎಳೆಯ ವಯಸ್ಸಿನ ದುರುಪಯೋಗವಾದಂತೆ ಮತ್ತು ವಯಸ್ಸಿಗೆ ಅಥವಾ ಬಲಕ್ಕೆ ತಕ್ಕದಲ್ಲದ ಉದ್ಯೋಗಗಳಲ್ಲಿ ತೊಡಗಲು ಬಲಾತ್ಕರಿಸದೆ ಇರುವುದು, ಬಾಲ್ಯ ಮತ್ತು ಯೌವ್ವನದಲ್ಲಿರುವವರ ಶೋಷಣೆಯ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಮತ್ತು ನೈತಿಕ ಹಾಗೂ ಪ್ರಾಪಂಚಿಕ ಭ್ರಷ್ಟತೆಯ ವಿರುದ್ಧ ಮಹಿಳೆಯರಿಗೆ ಸಂರಕ್ಷಣೆ ನೀಡುವುದಕ್ಕೆ ಸಂಬಂಧಿಸಿದಂತೆ ನೀತಿಯನ್ನು ನಿರ್ದೇಶಿಸತಕ್ಕದೆಂದು ಹೇಳಿದೆ.

42ನೇ ಅನುಚ್ಛೇದದಲ್ಲಿ ಮಹಿಳೆಯರು ಕೆಲಸ ಮಾಡಲು ನ್ಯಾಯಪರ ಮತ್ತು ದಯಾಪೂರ್ಣ ಸ್ಥಿತಿಗಳಿರುವಂತೆ ಮತ್ತು ಪ್ರಸೂತಿ ಪರಿಹಾರ ದೊರೆಯುವಂತೆ ರಾಜ್ಯವು ವ್ಯವಸ್ಥೆಯನ್ನು ಮಾಡತಕ್ಕದೆಂದು ಹೇಳಿದೆ. ಸಂವಿಧಾನವು ಮಾಡಿರುವ ಈ ಅವಕಾಶವನ್ನು ಬಳಸಿಕೊಂಡು ಮಹಿಳೆಯರಿಗೆ ಸಂಬಂಧಿಸಿದ ಹಲವು ಕಾಯಿದೆಗಳನ್ನು ರೂಪಿಸಿ ಜಾರಿಗೆ ತರಲಾಗಿದೆ.

### 1. ವರದಕ್ಷಿಣೆ ನಿಷೇಧ ಅಧಿನಿಯಮ (1961):

- ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು
- ವರದಕ್ಷಿಣೆ ಎಂದರೆ ಬೆಲೆ ಬಾಳುವ ಯಾವುದೇ ಸ್ವತ್ತು ಅಥವಾ ಭದ್ರತೆ. ಮದುವೆಯ ಪೂರ್ವದಲ್ಲಿ / ಸಮಯದಲ್ಲಿ/ ನಂತರದಲ್ಲಿ ವರನು ವಧುವಿಗೆ ಅಥವಾ ವಧುವು ವರನಿಗೆ ಅಥವಾ ಅವರ ಸಂಬಂಧಿಕರಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಕೊಟ್ಟಿರುವ ಅಥವಾ ಕೊಡುವ ಒಪ್ಪಂದ ಉಡುಗೊರೆಗಳು ವರದಕ್ಷಿಣೆ ಅಲ್ಲ.
- ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದು ಶಿಕ್ಷಾರ್ಹ ಅಪರಾಧ. ಇದಕ್ಕೆ ಕನಿಷ್ಟ 5 ವರ್ಷಗಳಿಗೆ ಕಡಿಮೆ ಇಲ್ಲದ ಕಾರಾಗೃಹವಾಸ ಹಾಗೂ ಕನಿಷ್ಠ 15,000/–ರೂ.ಗಳ ಅಥವಾ ವರದಕ್ಷಿಣೆ ಮೊತ್ತ ಅದಕ್ಕಿಂತಲೂ ಹೆಚ್ಚಿದ್ದರೆ ಆ ಮೊತ್ತದಷ್ಟು ದಂಡದ ಶಿಕ್ಷೆಯನ್ನು ವಿಧಿಸಲಾಗುವುದು (ಕಲಂ 3)
- ವರದಕ್ಷಿಣೆಯನ್ನು ಕೇಳುವುದು ಸಹ ಶಿಕ್ಷಾರ್ಹ ಅಪರಾಧ. ಇದಕ್ಕೆ ಕನಿಷ್ಟ 5 ತಿಂಗಳಿಗೆ ಕಡಿಮೆ ಇಲ್ಲದ ಆದರೆ 5 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಹಾಗೂ ಗರಿಷ್ಟ ರೂ 10,000/– ವರೆಗೆ ದಂಡದ ಶಿಕ್ಷೆ ಇದೆ – (ಕಲಂ 4)
- ವರದಕ್ಷಿಣೆ ಸಂಬಂಧ ಜಾಹಿರಾತು ನೀಡುವುದು ಅಪರಾಧ. ಇದಕ್ಕೆ ಕನಿಷ್ಟ 6 ತಿಂಗಳಿಗೆ ಕಡಿಮೆ ಇಲ್ಲದ ಆದರೆ 5 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಹಾಗೂ ರೂ.75,000/–ರವರೆಗೆ ದಂಡದ ಶಿಕ್ಷೆ ಇದೆ.

Digitised by Bharatavani, CIIL

- ವರದಕ್ಷಿಣೆಯು ವಧುವಿನ ಸ್ತ್ರೀಧನದ ಒಂದು ಭಾಗ. ವರದಕ್ಷಿಣೆಯನ್ನು ವಧುವಿನ ಹೊರತಾಗಿ ಬೇರೆ ಯಾರಾದರೂ ಪಡೆದಿದ್ದಲ್ಲಿ ಅಂಥವರು ಅದನ್ನು ಆಕೆಗೆ ವರ್ಗಾಯಿಸತಕ್ಕದ್ದು. ಇಲ್ಲದಿದ್ದಲ್ಲಿ ಶಿಕ್ಷೆಗೆ ಅರ್ಹರು.
- ವರದಕ್ಷಿಣೆ ಸಂಬಂಧ ದೂರನ್ನು ವಧು/ವಧುವಿನ ತಂದೆ ಅಥವಾ ತಾಯಿ/ ಸಂಬಂಧಿಗಳು /ಸರ್ಕಾರದಿಂದ ಮಾನ್ಯತೆ ಪಡೆದಿರುವ ಸಾಮಾಜಿಕ ಕಲ್ಯಾಣ ಸಂಸ್ಥೆ ಯಾರಾದರೂ ಸಲ್ಲಿಸಬಹುದು. ದೂರು ಸಲ್ಲಿಸಲು ಕಾಲಮಿತಿ ಇಲ್ಲ.
- ಈ ಕಾನೂನಿನಡಿಯ ಅಪರಾಧಗಳು ಜಾಮೀನು ಪಡೆಯಲಾಗದ ಹಾಗೂ ರಾಜಿಗೆ ಯೋಗ್ಯವಲ್ಲದ ಅಪರಾಧಗಳು–(ಕಲಂ 8ಎ)
- ಅಪರಾಧ ಎಸಗಿಲ್ಲದೆಂದು ರುಜುವಾತುಪಡಿಸುವ ಹೊಣೆ ಆರೋಪಿಯದು
- ವಿವಾಹಿತ ಮಹಿಳೆಯೊಬ್ಬಳು ತನ್ನ ಮದುವೆಯಾದ 7 ವರ್ಷಗಳಲ್ಲಿ ಅಸಹಜವಾಗಿ ಮೃತಪಟ್ಟಲ್ಲಿ ಆಕೆಯ ಸಾವು ವರದಕ್ಷಿಣೆ ಸಾವು ಎಂದು ಪರಿಗಣಿಸಲ್ಪಡುತ್ತದೆ. ಇದು ಶಿಕ್ಷಾರ್ಹ ಅಪರಾಧ– (ಭಾ. ದಂ. ಸಂ. –ಕಲಂ 304 ಬಿ(1))
- ವರದಕ್ಷಿಣೆ ಸಾವಿನ ಅಪರಾಧಕ್ಕೆ ಶಿಕ್ಷೆ. ವರದಕ್ಷಿಣೆ ಸಂಬಂಧವಾಗಿ ಮಕ್ಕಳನ್ನು ಹಿಂಸಿಸಿ ಕ್ರೌರ್ಯಕ್ಕೊಳಪಡಿಸಿದ ಆಕೆಯ ಪತಿ ಹಾಗೂ ಆತನ ಸಂಬಂಧಿಗಳಿಗೆ ಕನಿಷ್ಠ 7 ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಜೀವಾವಧಿವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಲಾಗುತ್ತದೆ – (ಭಾ. ದಂ. ಸಂ. – ಕಲಂ 304 ಬಿ (2))
- ವಿವಾಹಿತ ಮಹಿಳೆಗೆ ಕಾನೂನು ಬಾಹಿರ ಬೇಡಿಕೆಯನ್ನು ಪೂರೈಸುವಂತೆ ಒತ್ತಾಯಿಸಿ ಆಕೆಯನ್ನು ಕ್ರೌರ್ಯಕ್ಕೆ ಒಳಪಡಿಸುವುದು ಅಥವಾ ಕ್ರೂರತನದಿಂದ ನಡೆಸಿಕೊಳ್ಳುವುದು ಅಪರಾಧ – (ಭಾ. ದಂ. ಸಂ. – ಕಲಂ 498ಎ)
- ವಿವಾಹಿತ ಮಹಿಳೆ ಮದುವೆಯಾದ 7 ವರ್ಷಗಳೊಳಗೆ ಆತ್ಮಹತ್ಯೆ ಮಾಡಿಕೊಂಡಲ್ಲಿ ಆಕೆಯ ಗಂಡ ಅಥವಾ ಆತನ ಸಂಬಂಧಿ ಆತ್ಮಹತ್ಯೆಗೆ ದುಷ್ಪ್ರೇರಣೆ ನೀಡಿರಬಹುದೆಂದು ನ್ಯಾಯಾಲಯ ಪೂರ್ವಭಾವನೆ ಹೊಂದಬಹುದು – (ಕಲಂ 113ಎ)

## 2. ಮಹಿಳೆಯರ ಮೇಲಿನ ದೌರ್ಜನ್ಯ:

**ಅತ್ಯಾಚಾರ:**

- ಅತ್ಯಾಚಾರವನ್ನು ಆಕೆಯ ಇಚ್ಛೆಗೆ ವಿರೋಧವಾಗಿ / ಆಕೆಗೆ ಬೇಕಾದ ವ್ಯಕ್ತಿಯ ಜೀವಕ್ಕೆ ಭಯ ಒಡ್ಡುವ ಮೂಲಕ ಸಮ್ಮತಿಯನ್ನು ಪಡೆದು ಮಾಡಿದ್ದಲ್ಲಿ / ಮದುವೆಯಾದ ಗಂಡ ಎಂದು ನಂಬುವಂತೆ ಮಾಡಿ/ ಮತ್ತುಬರುವ ಪದಾರ್ಥವನ್ನು ಸೇವಿಸುವಂತೆ ಮಾಡಿ ಆಕೆಯ ಸಮ್ಮತಿ ಇದೆಯೆಂದು ತಿಳಿದು ಮಾಡಿದ್ದಲ್ಲಿ / ಆಕೆ ಮಾನಸಿಕ ಅಸ್ವಸ್ಥಳಾಗಿದ್ದಾಗ ಜರುಗಿಸಿದ್ದಲ್ಲಿ ಅದು ಒಂದು ಘೋರ ಅಪರಾಧ.
- 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯೊಂದಿಗೆ ಲೈಂಗಿಕ ಸಂಭೋಗವನ್ನು ಸಮ್ಮತಿ ಪಡೆದಾಗಲೀ ಅಥವಾ ಸಮ್ಮತಿ ಪಡೆಯದೆ ನಡೆಸಿದರೂ ಸಹ ಅದು ಅತ್ಯಾಚಾರವಾಗುತ್ತದೆ.
- 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯೊಂದಿಗೆ ಆಕೆ ಪತಿ ಆಕೆಯ ಇಚ್ಛೆಗೆ ವಿರುದ್ಧವಾಗಿ/ ಸಮ್ಮತಿ ಪಡೆದು ಲೈಂಗಿಕ ಸಂಭೋಗ ನಡೆಸಿದರೂ ಅದು ಕೂಡ ಅತ್ಯಾಚಾರ.
- ಅಧಿಕಾರ ಹಾಗೂ ಪ್ರಭಾವೀ ಸ್ಥಾನದಲ್ಲಿರುವ ವ್ಯಕ್ತಿಗಳು ಅತ್ಯಾಚಾರ ಎಸಗಿದ್ದಲ್ಲಿ ಅದಕ್ಕೆ ಹೆಚ್ಚಿನ ಶಿಕ್ಷೆ ಇದೆ.
- ಅತ್ಯಾಚಾರಕ್ಕೆ ಪ್ರಯತ್ನ ನಡೆಸುವುದೂ ಕೂಡ ಶಿಕ್ಷಾರ್ಹ ಅಪರಾಧ
- ಅತ್ಯಾಚಾರ ಜರುಗಿದ ತಕ್ಷಣ ಆಕೆ ಈ ಕೃತ್ಯದ ಬಗ್ಗೆ

➢ ತನ್ನ ಸಂಬಂಧಿಗಳಿಗೆ ಅಥವಾ ತನ್ನನ್ನು ಮೊದಲು ಕಂಡವರಿಗೆ ತಿಳಿಸಬೇಕು.

➢ ಸಮೀಪದ ಪೊಲೀಸ್ ಠಾಣೆಗೆ ಕೂಡಲೇ ದೂರನ್ನು ಸಲ್ಲಿಸಬೇಕು. ಆಕೆ ಹೇಳುವ ಸ್ಥಿತಿಯಲ್ಲಿರದಿದ್ದರೆ ಆಕೆಯನ್ನು ಆ ಸ್ಥಿತಿಯಲ್ಲಿ ಕಂಡವರು ಆಕೆಯನ್ನು ಹತ್ತಿರದ ಪೊಲೀಸ್ ಠಾಣೆಗೆ ಕರೆದೊಯ್ದು ದೂರನ್ನು ಸಲ್ಲಿಸಬೇಕು.

➢ ದೂರು ಸಲ್ಲಿಸಿದವರು ದೂರಿನ ನಕಲನ್ನು ಪೊಲೀಸರಿಂದ ಪಡೆದುಕೊಳ್ಳಬೇಕು.

➢ ಆಕೆಯನ್ನು ತಡಮಾಡದೇ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು ಹಾಗೂ ವೈದ್ಯರ ಮುಂದೆ ಘಟನೆಯನ್ನು ವಿವರವಾಗಿ ಬರೆಯಿಸಬೇಕು.

➢ ಆಕೆ ವೈದ್ಯಕೀಯ ಪರೀಕ್ಷೆಗೆ ಒಳಪಡುವ ಮುನ್ನ ಮೊದಲು ಸ್ನಾನ ಮಾಡಬಾರದು, ಅಂಗಾಂಗಗಳನ್ನು ಮತ್ತು ಬಟ್ಟೆಗಳನ್ನು ಸ್ವಚ್ಛಗೊಳಿಸಬಾರದು.

- ಅತ್ಯಾಚಾರದ ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯದ ಕೊಠಡಿಯಲ್ಲಿ ಗೌಪ್ಯವಾಗಿ ನಡೆಸಲಾಗುತ್ತದೆ. ವಿಚಾರಣೆಯ ಸಮಯದಲ್ಲಿ ಅನಧಿಕೃತ ವ್ಯಕ್ತಿಗಳು ಯಾರೂ ಇರುವುದಿಲ್ಲ. ಇಂತಹ ಪ್ರಕರಣಗಳ ನಡವಳಿಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
- ಅತ್ಯಾಚಾರಕ್ಕೆ ಒಳಗಾದ ಮಹಿಳೆಯು ಘಟನೆಯ ಕುರಿತು ಸಂಕೋಚವಿಲ್ಲದೇ, ಸರಿಯಾಗಿ ಮತ್ತು ಧೈರ್ಯವಾಗಿ ಸಾಕ್ಷ್ಯ ನುಡಿಯಬೇಕು. ಇಲ್ಲದಿದ್ದಲ್ಲಿ, ಆರೋಪಿಯು ಕೃತ್ಯ ಎಸಗಿಯೂ ಶಿಕ್ಷೆಯಿಂದ ಪಾರಾಗಲು ಅವಕಾಶವಾಗುತ್ತದೆ.

Digitised by Bharatavani, CIIL

**3. ಸ್ತ್ರೀ ಭ್ರೂಣ ಹತ್ಯೆ:**

**ಗರ್ಭಧಾರಣೆ ಪೂರ್ವ ಮತ್ತು ಜನನ ಪೂರ್ವ ರೋಗ ಪರೀಕ್ಷೆ ತಂತ್ರಜ್ಞಾನ (ಲಿಂಗ ಆಯ್ಕೆ ನಿಷೇಧ ಕಾನೂನು 1994)**

- 'ಲಿಂಗ ಆಯ್ಕೆ' ಎಂದರೆ ಪ್ರಾರಂಭದ ಹಂತದಲ್ಲಿರುವ ಒಂದು ಭ್ರೂಣ ನಿರ್ದಿಷ್ಟ ಲಿಂಗದ್ದೇ ಆಗಿದೆಯೆಂಬುದನ್ನು ಖಚಿತಪಡಿಸಲು ಅಥವಾ ನಿರ್ದಿಷ್ಟ ಲಿಂಗದ್ದೇ ಆಗುವ ಸಂಭವನೀಯತೆಯನ್ನು ಹೆಚ್ಚಿಸಲು ಯಾವುದೇ ಪ್ರಕ್ರಿಯೆ, ತಂತ್ರಜ್ಞಾನ, ಪರೀಕ್ಷೆ ಅಥವಾ ಔಷಧಿಯನ್ನು ಕೊಡುವುದು/ ಸೂಚಿಸುವುದು/ ಒದಗಿಸುವುದು – (ಕಲಂ2 (ಒ))
- ಬಂಜೆತನ ಕ್ಷೇತ್ರದಲ್ಲಿನ ಯಾವುದೇ ತಜ್ಞ ಅಥವಾ ತಜ್ಞರ ತಂಡದ ವ್ಯಕ್ತಿಯು ಲಿಂಗ ಆಯ್ಕೆ ಪ್ರಕ್ರಿಯೆಯನ್ನು ತಾನೇ ಸ್ವತಃ ಅಥವಾ ಬೇರೆಯವರ ಮೂಲಕ ಅಥವಾ ಜರುಗಿಸುವ ತಂಡಕ್ಕೆ ಸಹಾಯ ಮಾಡತಕ್ಕದಲ್ಲ – (ಕಲಂ 3ಎ)
- ಸ್ತ್ರೀಯೊಬ್ಬಳ ಗಂಡ, ಸಂಬಂಧಿ ಆಕೆಯನ್ನು ಲಿಂಗ ಆಯ್ಕೆಯ ತಂತ್ರಜ್ಞಾನದ ಪರೀಕ್ಷೆಗೆ ಒಳಪಡುವಂತೆ/ ಲಿಂಗ ಪತ್ತೆಗಾಗಿ ಭ್ರೂಣದ ಪರೀಕ್ಷೆಗೆ ಒಳಪಡುವಂತೆ ಮಾಡತಕ್ಕದಲ್ಲ ಅಥವಾ ಪ್ರೋತ್ಸಾಹಿಸತಕ್ಕದಲ್ಲ – (ಕಲಂ (4), 4(5))
- ಈ ಅಧಿನಿಯಮದಡಿಯಲ್ಲಿ ನೋಂದಾಯಿಸದ ಯಾವುದೇ ಪ್ರಯೋಗಾಲಯ, ಚಿಕಿತ್ಸಾಲಯ ಅಥವಾ ಸಲಹೆ ಕೇಂದ್ರಗಳಿಗೆ ಭ್ರೂಣದ ಲಿಂಗಪತ್ತೆಗಾಗಿ ಬಳಸುವ ಉಪಕರಣಗಳನ್ನು ಮಾರಾಟ ಮಾಡಬಾರದು – (ಕಲಂ 3 ಬಿ)
- ಈ ಕೆಳಗಿನ ಉದ್ದೇಶಗಳಲ್ಲಿ ಯಾವುದಾದರೊಂದರ ಹೊರತು ಇತರ ಯಾವುದೇ ಉದ್ದೇಶಕ್ಕಾಗಿ ಗರ್ಭಸ್ಥ ಭ್ರೂಣವನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸತಕ್ಕದಲ್ಲ
- ವರ್ಣತಂತುಗಳಲ್ಲಿನ ಅಸಹಜತೆ ಪತ್ತೆ ಮಾಡಲು
- ಅನುವಂಶೀಯ ಕಾಯಿಲೆಗಳನ್ನು ಪತ್ತೆ ಮಾಡಲು
- ರಕ್ತಕೋಶಗಳಲ್ಲಿ ಪ್ರಾಣವಾಯುವನ್ನು ಕೊಂಡೊಯ್ಯುವ ಕಣಗಳಲ್ಲಿ ಅಸಹಜತೆ ಪತ್ತೆ ಮಾಡಲು
- ಲಿಂಗ ಸಂಬಂಧಿತ ಅನುವಂಶೀಯ ರೋಗಗಳನ್ನು ಪತ್ತೆ ಮಾಡಲು.
- ಕೇಂದ್ರಿಯ ಮೇಲ್ವಿಚಾರಣೆ ಮಂಡಲಿ ನಿರ್ದಿಷ್ಟಪಡಿಸಿದ ಇತರ ಯಾವುದೇ ಅಸಹಜತೆ ಪತ್ತೆ ಮಾಡಲು ಹೊರತುಪಡಿಸಿ ಇತರ ಉದ್ದೇಶಗಳಿಗೆ ಭ್ರೂಣ ಪರೀಕ್ಷೆ ಮಾಡಿಸಬಾರದು.
- ಇತರ ಯಾವುದೇ ಉದ್ದೇಶಕ್ಕಾಗಿ ಭ್ರೂಣ ಪರೀಕ್ಷೆಯಾದಲ್ಲಿ ತಂತ್ರಜ್ಞಾನ ಬಳಕೆ ಮಾಡಿದವರು, ಗರ್ಭಿಣಿ ಸ್ತ್ರೀ, ಆಕೆಯ ಸಂಬಂಧಿ ಅಥವಾ ಗಂಡ ಇವರು ಶಿಕ್ಷೆಗೆ ಒಳಗಾಗುತ್ತಾರೆ. ಕಾನೂನಿನ ಉಲ್ಲಂಘನೆಗೆ ಮೊದಲ 3 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಮತ್ತು ರೂ 10,000/– ಗಳವರೆಗೆ ಜುಲ್ಮಾನೆ. ಇದೇ ಉಲ್ಲಂಘನೆ ಮತ್ತೆ ಮಾಡಿದ್ದಲ್ಲಿ 5 ವರ್ಷಗಳವರೆಗೆ ಕಾರಾಗೃಹವಾಸ ಮತ್ತು ರೂ.50,000/– ಗಳವರೆಗೆ ಜುಲ್ಮಾನೆ.

**4. ಲೈಂಗಿಕ ಕಿರುಕುಳ:**

- ಲೈಂಗಿಕ ಕಿರುಕುಳವೆಂದರೆ
- ಅನಾವಶ್ಯಕ ದೈಹಿಕ ಸ್ಪರ್ಶ
- ಲೈಂಗಿಕ ಒಲವಿಗಾಗಿ ಒತ್ತಾಯ ಅಥವಾ ಬೇಡಿಕೆ
- ಲೈಂಗಿಕ ಲೇಪದ ಟೀಕೆಗಳು
- ಅಶ್ಲೀಲ ವಿಷಯವನ್ನೊಳಗೊಂಡ ಸಾಹಿತ್ಯ ತೋರಿಸುವುದು
- ಬಾಯಿ ಮಾತಿನ ಅಥವಾ ಬಾಯಿ ಮಾತಿನಲ್ಲಲ್ಲದ ಲೈಂಗಿಕ ಸ್ವರೂಪದ ನಡತೆ
- ಲೈಂಗಿಕ ಕಿರುಕುಳಕ್ಕೊಳಗಾದ ಮಹಿಳೆ ಖಾಯಂ ನೌಕರಳು/ ಗೌರವಧನ ಪಡೆಯುವ ನೌಕರಳು/ ಸ್ವಯಂ ಸೇವಕಳಾಗಿ ದುಡಿಯುವ ಮಹಿಳೆ/ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ದುಡಿಯುವ ಮಹಿಳೆಯಾಗಿರಬಹುದು.
- ಲೈಂಗಿಕ ಕಿರುಕುಳ ಎಸಗಿದವನ ವಿರುದ್ಧ ದೂರನ್ನು ಸಂಸ್ಥೆಯ ಅಧಿಕಾರಿ/ ಯಜಮಾನ ಅಥವಾ ಸೂಕ್ತ ಅಧಿಕಾರಿಯ ಮುಂದೆ ದೂರನ್ನು ಸಲ್ಲಿಸುವುದು ಮತ್ತು ನಿಯಮಗಳಿಗನುಸಾರವಾಗಿ ಶಿಸ್ತುಕ್ರಮ ಜರುಗಿಸತಕ್ಕದ್ದು.
- ಲೈಂಗಿಕ ಕಿರುಕುಳ ಅನುಭವಿಸಿದ ಮಹಿಳೆ ಆ ಸ್ಥಳದಿಂದ ಬೇರೆಡೆಗೆ ತನ್ನ ಅಥವಾ ಕೃತ್ಯವೆಸಗಿದವನ ವರ್ಗಾವಣೆ ಕೇಳುವ ಆಯ್ಕೆಯ ಹಕ್ಕನ್ನು ಹೊಂದಿರತಕ್ಕದ್ದು.
- ಲೈಂಗಿಕ ಕಿರುಕುಳ ಅನುಭವಿಸಿದ ಮಹಿಳೆಗೆ ಪರಿಹಾರ ದೊರಕಿಸುವ ಸಂಬಂಧವಾಗಿ ಸಂಸ್ಥೆಯಲ್ಲಿ ದೂರು ಸಮಿತಿಯನ್ನು ರಚಿಸತಕ್ಕದ್ದು. ಸಮಿತಿಯ ಅಧ್ಯಕ್ಷೆ ಮಹಿಳೆಯಾಗಿರಬೇಕು. ಸಮಿತಿಯ ಅರ್ಧದಷ್ಟು ಸದಸ್ಯರು ಮಹಿಳೆಯರೇ ಆಗಿರಬೇಕು. ಸಮಿತಿಯಲ್ಲಿ ಸರ್ಕಾರೇತರ ಸಂಸ್ಥೆಯ ಅಥವಾ ಮೂರನೇ ವ್ಯಕ್ತಿ ಒಬ್ಬರಿರಬೇಕು.

**5. ದುಡಿಯುವ ಮಹಿಳೆಯರಿಗಿರುವ ಕಾನೂನುಗಳು:**

**ಕನಿಷ್ಟ ಮಜೂರಿ:**

- ದುಡಿಯುಚ ಮಹಿಳೆ ತನ್ನ ದುಡಿಮೆಗೆ ಪ್ರತಿಯಾಗಿ ಕನಿಷ್ಟ ಮಜೂರಿಯನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾಳೆ. ಮಹಿಳೆಯೊಬ್ಬಳು ಕನಿಷ್ಟ ಮಜೂರಿಗಿಂತ ಕಡಿಮೆ ಮಜೂರಿಗೆ ಕೆಲಸ ಮಾಡಲು ಒಪ್ಪಿಕೊಂಡಿದ್ದಾಳೆಂದು ಆಕೆಯನ್ನು ದುಡಿಸಿಕೊಳ್ಳುವಂತಿಲ್ಲ.
- ಕನಿಷ್ಟ ಮಜೂರಿಗಿಂತ ಕಡಿಮೆ ಮಜೂರಿ ಕೊಡುವುದು ಶಿಕ್ಷಾರ್ಹ

Digitised by Bharatavani, CIIL

ಅಪರಾಧ. ಇದಕ್ಕೆ 6 ತಿಂಗಳವರೆಗಿನ ಕಾರಾಗೃಹವಾಸ ಅಥವಾ ರೂ500/–ಗಳವರೆಗಿನ ದಂಡ ಅಥವಾ ಎರಡೂ ವಿಧದ ಶಿಕ್ಷೆ ಇದೆ – (ಕಲಂ 22)

- ಬೇರೆ ಬೇರೆ ವಯಸ್ಸಿನ ಕೆಲಸಗಾರರಿಗೆ ಬೇರೆ ಬೇರೆ ಕನಿಷ್ಠ ಮಜೂರಿಯನ್ನು ನಿಗದಿಗೊಳಿಸಲಾಗಿದೆ ಅಲ್ಲದೆ ಬೇರೆ ಬೇರೇ ಕೆಲಸಗಳನ್ನು ಮಾಡುವವರಿಗೆ ಬೇರೆ ಬೇರೆ ದರದಲ್ಲಿ ಮಜೂರಿಯನ್ನು ನಿಗದಿಗೊಳಿಸಲಾಗಿದೆ.
- ಕನಿಷ್ಠ ಮಜೂರಿಯನ್ನು ಭಾಗಶಃ ನಗದು ಮತ್ತು ಭಾಗಶಃ ಧಾನ್ಯದ ರೂಪದಲ್ಲಿ ನೀಡಬಹುದು.
- ದಿನದ ಕೆಲಸದ ಅವಧಿ 9 ಗಂಟೆಗಳಿಗಿಂತ ಹೆಚ್ಚು ಇರತಕ್ಕದಲ್ಲ. ಇದಕ್ಕಿಂತ ಹೆಚ್ಚಿನ ಅವಧಿ ಕೆಲಸ ನಿರ್ವಹಿಸಿದ್ದಲ್ಲಿ ಹೆಚ್ಚಿನ ಮಜೂರಿಗೆ ಅರ್ಹಳಾಗುತ್ತಾಳೆ.
- ವಾರದಲ್ಲಿ ಒಂದು ದಿನ ಮಜೂರಿ ಸಹಿತ ರಜೆ ಪಡೆಯಲು ಕೆಲಸಗಾರಳು ಅರ್ಹಳಾಗಿರುತ್ತಾಳೆ.
- ಪುರುಷ ಮತ್ತು ಮಹಿಳೆ ಮಾಡುವ ಕೆಲಸ ಒಂದೇ ರೀತಿಯ ನೈಪುಣ್ಯತೆ ಮತ್ತು ಶ್ರಮ ಒಳಗೊಂಡಿದ್ದರೆ ಇಬ್ಬರಿಗೂ ಸಮಾನ ವೇತನವನ್ನು ಕೊಡಬೇಕಾಗುತ್ತದೆ.
- ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರಿಗೆ ವಿಶೇಷ ಹಕ್ಕುಗಳಿವೆ. ಇವರಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಇವರ ಮಕ್ಕಳಿಗೆ ಶಿಶುವಿಹಾರವೊಂದನ್ನು ಒದಗಿಸಬೇಕು. ವಾರದಲ್ಲಿ 48 ಗಂಟೆಗಳ ಅವಧಿಗೆ ಹಾಗೂ ಸತತವಾಗಿ 5 ಗಂಟೆಗಳಿಗಿಂತ ಹೆಚ್ಚು ಅವಧಿಗೆ ಕೆಲಸ ಮಾಡಿಸಬಾರದು.

**6. ಹೆರಿಗೆ ಸೌಲಭ್ಯ ಅಧಿನಿಯಮ (1961ರ):**

- ಹೆರಿಗೆಗೆ ಮೊದಲ 6 ವಾರ ಹಾಗೂ ಹೆರಿಗೆ ನಂತರ 6 ವಾರಗಳವರೆಗೆ ವೇತನ ಸಹಿತ ರಜೆಯನ್ನು ಮಹಿಳೆ ಪಡೆಯಬಹುದು. ಆಕೆ ಇಚ್ಛೆಪಟ್ಟಲ್ಲಿ ಇಡೀ 12 ವಾರಗಳ ರಜೆಯನ್ನು ಹೆರಿಗೆ ನಂತರ ತೆಗೆದುಕೊಳ್ಳಬಹುದು.
- ಹೆರಿಗೆ ಪೂರ್ವದಲ್ಲಿ ಒಂದು ತಿಂಗಳ ಅವಧಿಯಲ್ಲಿ ಗರ್ಭಿಣಿ ಮಹಿಳೆಯಿಂದ ಶಾರೀರಿಕ ಆಯಾಸವಾಗುವುದು.

**–ಪ್ರೊ. ಆಶಾ ಪ್ರೇಮಲತಾ**

## ಮಾಧ್ಯಮಗಳ ಶಿಕ್ಷಣ

ಇಂದಿನ ಜಾಗತೀಕರಣ ಯುಗದಲ್ಲಿ ಬದುಕಿನ ಎಲ್ಲ ಕ್ಷೇತ್ರಗಳನ್ನು ಮಾರುಕಟ್ಟೆ ಆವರಿಸಿಕೊಂಡಿದೆ. ಸಂವಹನ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳಲ್ಲಿಯೂ ಆರ್ಥಿಕ ಉದಾರೀಕರಣ ನೀತಿಯಿಂದಾಗಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳು ಜರುಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಜರುಗಿರುವ ವಿಸ್ಮಯಕಾರಿ ಬೆಳವಣಿಗೆಯಿಂದಾಗಿ ಮಾಧ್ಯಮಕ್ಷೇತ್ರ ಜ್ಞಾನದ ಜಾಗತೀಕರಣಕ್ಕೆ ಅನುವು ಮಾಡಿಕೊಟ್ಟಿದೆ. ಹಿಂದೆ ಮುದ್ರಣ ಮಾಧ್ಯಮ ಮಾತ್ರ ಅಸ್ತಿತ್ವದಲ್ಲಿದ್ದ ಕಾರಣ 'ಪತ್ರಿಕೋದ್ಯಮ' ಎಂಬ ಹೆಸರಿನಲ್ಲಿ ಸಾರ್ವತ್ರಿಕ ಶಿಕ್ಷಣವನ್ನು ಒದಗಿಸಲಾಗುತ್ತಿತ್ತು. ಅಂದು ವೃತ್ತಿಯಾಗಿದ್ದ ಪತ್ರಿಕೋದ್ಯಮ ಇಂದು ಉದ್ದಿಮೆಯಾಗಿ ಪರಿವರ್ತನೆಗೊಂಡಿದೆ. ಇಂದು ಪಾರಂಪರಿಕ ಮಾಧ್ಯಮ, ಮುದ್ರಣ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ ಮತ್ತು ನೂತನ ಸಂವಹನ ಮಾಧ್ಯಮಗಳು ಸಾರ್ವಜನಿಕರಿಗೆ ಸಮಾಚಾರ, ಶಿಕ್ಷಣ, ಮಾರ್ಗದರ್ಶನ, ಮನರಂಜನೆ ಮೊದಲಾದ ಸೇವಾಸೌಲಭ್ಯಗಳನ್ನು ಒದಗಿಸುತ್ತಿವೆ. ಈ ಹಿನ್ನಲೆಯಲ್ಲಿ 'ಪತ್ರಿಕೋದ್ಯಮ' ಎಂಬ ಪದ ವಿಶಾಲ **ಹರವನ್ನು** ಹೊಂದಿದ್ದು 'ಮಾಧ್ಯಮ' ಎಂಬ ವಿಶಾಲ ಕ್ಷೇತ್ರ ಎಲ್ಲ ರೀತಿಯ ಜ್ಞಾನ ಒದಗಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೇ ಆಧಾರಸ್ತಂಭವಾಗಿ ವಿಸ್ಮಯಕಾರಿ ಬೆಳವಣಿಗೆ ಹೊಂದಿದೆ.

**ಜಾಗತೀಕರಣದ ಐತಿಹಾಸಿಕ ಹಿನ್ನೆಲೆ**

ಬಹಳಷ್ಟು ವಿದ್ವಾಂಸರು ಜಾಗತೀಕರಣವನ್ನು 20ನೇ ಶತಮಾನದ ಕೊನೆಯ ಭಾಗವನ್ನು ಅಮೇರಿಕಾ ನೇತೃತ್ವದಲ್ಲಿ ಜರುಗಿದ ಆರ್ಥಿಕ ಉದಾರೀಕರಣ ಮತ್ತು ಖಾಸಗೀಕರಣಗಳ ಸಮ್ಮಿಲನವೆಂದು ಸಂಕುಚಿತ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ. ವಾಸ್ತವವಾಗಿ ಜಾಗತೀಕರಣ ಅತ್ಯಂತ ಹಳೆಯದಾದ ಎಲ್ಲರನ್ನೂ ಒಂದು ವ್ಯವಸ್ಥೆಯಡಿ ಒಗ್ಗೂಡಿಸುವ ಪ್ರಕ್ರಿಯೆಯಾಗಿದೆ. 2500 ವರ್ಷಗಳ ಹಿಂದೆ ಬುದ್ಧನ ನೇತೃತ್ವದಲ್ಲಿ ಜರುಗಿದ ಜಾಗತೀಕರಣ ವಿಶ್ವದ ಮೊದಲ ಹಂತದ ಜಾಗತೀಕರಣವಾಗಿದೆ. ಅಂದು ಬುದ್ಧ ಅಲಕ್ಷಿತ, ದಮನೀತ ಮತ್ತು ಅವಮಾನಿತ ಜನವರ್ಗಗಳಿಗೆ ಜ್ಞಾನ, ಅಧಿಕಾರ, ಸಂಪತ್ತು ಮತ್ತು ಅವಕಾಶಗಳನ್ನು ಅಹಿಂಸಾತ್ಮಕ ಮತ್ತು ಪ್ರಜಾಸತ್ತಾತ್ಮಕ ಹೋರಾಟಗಳಿಂದ ಒದಗಿಸಿ ಬದುಕಿನ ಮಾನವೀಕರಣಕ್ಕೆ ನಾಂದಿ ಹಾಡಿದನು. ಬುದ್ಧ ಮೊಟ್ಟ ಮೊದಲ ವೈಚಾರಿಕ ಸಾಂಸ್ಕೃತಿಕ ಮತ್ತು ಜನಪರ ಶಕ್ತಿಯೆಂದೇ ಇತಿಹಾಸದಲ್ಲಿ ದಾಖಲಾಗಿದ್ದಾನೆ. ಜಗತ್ತಿಗೆ ಮೊದಲ ಬಾರಿಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನೀಡಿ ಸರ್ವರಿಗೂ ಸಮಬಾಳು ಮತ್ತು ಸರ್ವರಿಗೂ ಸಮಪಾಲು ನೀಡಿದ ಮಹಾ ಮಾನವತಾವಾದಿ ಬುದ್ಧನೇ ಮೊದಲ ಹಂತದ ಜಾಗತೀಕರಣದ ರೂವಾರಿ.

ಕೈಗಾರಿಕಾಕ್ರಾಂತಿಯ ನಂತರದ ಕಾಲಘಟ್ಟದಲ್ಲಿ ಯೂರೋಪಿನ ವಸಾಹತುವಾದಿಗಳಾದ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ವ್ಯಾಪಾರದ ನೆಪದಲ್ಲಿ ಜಗತ್ತಿನ ಬಹಳಷ್ಟು ಕಡೆ ಪ್ರಯಾಣಿಸಿ ತಮ್ಮದೇ ಆದ ವಸಾಹತುಗಳನ್ನು ಸ್ಥಾಪಿಸಿದರು. ವಸಾಹತುವಾದಿಗಳು ಅಂದು ಬದುಕಿನ ವ್ಯಾಪಾರೀಕರಣ ಮಾಡಿ ಇಡೀ ವಿಶ್ವದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳನ್ನು ನಿಯಂತ್ರಿಸಿದರು. ಇವರ ನೇತೃತ್ವದ ಜಾಗತೀಕರಣ ಬದುಕಿನ ವ್ಯಾಪಾರೀಕರಣಕ್ಕೆ ನಾಂದಿ ಹಾಡಿದ

Digitised by Bharatavani, CIIL

ಎರಡನೇ ಹಂತದ ಜಾಗತೀಕರಣವಾಗಿದೆ. 20ನೇ ಶತಮಾನದ ಕೊನೆಯ ಭಾಗದಲ್ಲಿ ಅಮೇರಿಕಾ ನೇತೃತ್ವದ ಜಾಗತೀಕರಣ ನವ ವಸಾಹತುವಾಗಿದ್ದಕ್ಕೆ ನಾಂದಿ ಹಾಡಿದೆ. ಈ ಅವಧಿಯಲ್ಲಿ ಜಗತ್ತಿನ ಕೆಲವೇ ಶ್ರೀಮಂತ ರಾಷ್ಟ್ರಗಳು ಅತಿ ಹೆಚ್ಚು ಶ್ರೀಮಂತಿಕೆಯನ್ನು ಗಳಿಸಿ ಜಗತ್ತಿನ ಬಡರಾಷ್ಟ್ರಗಳು ಮತ್ತು ಸಮುದಾಯಗಳನ್ನು ಶೋಷಣೆಗೆ ಗುರಿಪಡಿಸಿವೆ. ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಅಮರ್ತ್ಯಸೇನರು ಇತ್ತೀಚಿನ ಜಾಗತೀಕರಣದಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ಕಂದಕ ಹೆಚ್ಚಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅಮೇರಿಕಾ ನೇತೃತ್ವದ ಮೂರನೇ ಹಂತದ ಜಾಗತೀಕರಣ ಬದುಕಿನ ರಾಕ್ಷಸೀಕರಣಕ್ಕೆ ನಾಂದಿ ಹಾಡಿದೆ. ಇದು ಕೆಟ್ಟ ಜಾಗತೀಕರಣವಾಗಿದ್ದು ವಿಶ್ವದ ಬಡರಾಷ್ಟಗಳು ಮತ್ತು ದುರ್ಬಲ ಜನವರ್ಗಗಳನ್ನು ಶೋಷಿಸುವ ಪ್ರಕ್ರಿಯೆಯಾಗಿದೆ.

**ಆರ್ಥಿಕ ವ್ಯವಸ್ಥೆಯ ಜಾಗತೀಕರಣ**

ವರ್ತಮಾನ ಕಾಲದ ಜಾಗತೀಕರಣ ಬಹುಮುಖ್ಯವಾಗಿ ಆರ್ಥಿಕ ಜಾಗತೀಕರಣವನ್ನು ಪ್ರತಿಬಿಂಬಿಸುತ್ತದೆ. ಇದು ಮಾನವ ಬದುಕಿನ ಎಲ್ಲ ಕ್ಷೇತ್ರಗಳ ಮೇಲೆ ಮಾರುಕಟ್ಟೆ ಶಕ್ತಿಗಳು ತಮ್ಮದೇ ಆದ ನಿಯಂತ್ರಣ ಹೊಂದಿರುವುದನ್ನು ಪ್ರತಿನಿಧಿಸುತ್ತದೆ. ಇಂದು ಪ್ರಾದೇಶಿಕ ಮತ್ತು ರಾಷ್ಟ್ರೀಯ ಅರ್ಥವ್ಯವಸ್ಥೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಬಹುರಾಷ್ಟ್ರೀಯ ಕಂಪನಿಗಳ ಕಪಿಮುಷ್ಠಿಗೆ ಒಳಪಟ್ಟಿವೆ. ವಿದೇಶಿ ಬಂಡವಾಳದ ನೇರ ಹೂಡಿಕೆಯಿಂದಾಗಿ ವಿದೇಶಿ ಬಂಡವಾಳ ಹರಿವು, ಕಾರ್ಮಿಕರ ವಲಸೆ, ತಂತ್ರಜ್ಞಾನದ ವಿಸ್ತರಣೆ, ಮಿಲಟರಿ ಬಲದ ಹೆಚ್ಚಳ, ಗ್ರಾಹಕರ ಶೋಷಣೆಗೆ ಕಾರಣವಾಗಿದ್ದು ಬಹುರಾಷ್ಟ್ರೀಯ ಕಂಪನಿಗಳ ಅಟ್ಟಹಾಸ ಹೆಚ್ಚಾಗಿದೆ. ಇಂದು ದೇಶಿ ಸಂಸ್ಕೃತಿ, ಜೀವನ ಧರ್ಮ, ಜೀವನ ಮೌಲ್ಯಗಳು ಮತ್ತು ವ್ಯವಸ್ಥೆಗಳು ದುರ್ಬಲಗೊಂಡು ಬಹುರಾಷ್ಟ್ರೀಯ ಕಂಪನಿಗಳ ನೇತೃತ್ವದ ಹೊಸ ಭೋಗ ಸಂಸ್ಕೃತಿ ಅಸ್ತಿತ್ವಕ್ಕೆ ಬಂದಿದೆ. ಪರಿಸರ ಮತ್ತು ಮಾನವೀಯತೆಗಳನ್ನು ನಾಶಗೊಳಿಸುವಂತಹ ಶೋಷಣೆ ಕೇಂದ್ರಿತ ಹೊಸ ಆರ್ಥಿಕ ವ್ಯವಸ್ಥೆಯಿಂದಾಗಿ ರೈತರು, ಕಾರ್ಮಿಕರು, ಮಹಿಳೆಯರು, ದುರ್ಬಲ ವರ್ಗಗಳು, ಅಲ್ಪಸಂಖ್ಯಾತರು, ದಲಿತರು, ಆದಿವಾಸಿಗಳು ಮೊದಲಾದ ಕೆಳಸ್ತರದ ಜನರು ತಮ್ಮ ಮೂಲಭೂತ ಹಕ್ಕುಗಳು ಮತ್ತು ರಕ್ಷಣೆಗಳಿಂದ ವಂಚಿತರಾಗಿದ್ದಾರೆ. ಹೀಗಿರುವಾಗ ಶಿಕ್ಷಣ ಪಡೆಯಬೇಕೆಂಬ ವಿಚಾರವೆಲ್ಲಿ?

ಇಂದಿನ ಜಾಗತೀಕರಣವನ್ನು ಕುರಿತು ಶಿಲ್ಲರ್ (1985) ಹೀಗೆ ಅಭಿಪ್ರಾಯಪಟ್ಟಿದ್ದಾರೆ. "ಆರ್ಥಿಕ ವ್ಯವಸ್ಥೆಯ ಮೇಲೆ ಜಾಗತೀಕರಣದ ಪ್ರಭಾವವನ್ನು ವಿಶ್ವದೆಲ್ಲೆಡೆ ವಿದ್ವಾಂಸರು ಗಂಭೀರವಾಗಿ ಅಧ್ಯಯನ ಮಾಡುತ್ತಿದ್ದಾರೆ. ಇಂದು ವಿಶ್ವದಾದ್ಯಂತ ಉತ್ಪಾದನೆ, ವಿತರಣೆ, ವ್ಯಾಪಾರ, ಹಣಕಾಸು ಅಭಿವೃದ್ಧಿ ಮೊದಲಾದ ಕ್ಷೇತ್ರಗಳು ಮಾರುಕಟ್ಟೆ ಶಕ್ತಿಗಳಿಂದ ನಿಯಂತ್ರಿಸಲ್ಪಟ್ಟಿವೆ. ಜಗತ್ತಿನ ಸಾರಿಗೆ ಮತ್ತು ಸಂವಹನ ಸೇವಾ ಸೌಲಭ್ಯವನ್ನು ವಿಸ್ತರಿಸಿ ಆರ್ಥಿಕ ವಹಿವಾಟುಗಳನ್ನು ಬಹುರಾಷ್ಟ್ರೀಯ ಕಂಪನಿಗಳು ನಿಯಂತ್ರಿಸುತ್ತಿವೆ. ಇಂದು ಮಾಹಿತಿ ಕ್ಷೇತ್ರದಲ್ಲಿ ಉಂಟಾಗಿರುವ ಕ್ರಾಂತಿಕಾರಕ ಬೆಳವಣಿಗೆಯಿಂದಾಗಿ ವಾಯುಸಾರಿಗೆ, ವಸತಿ ಸೌಕರ್ಯ, ಬಂಡವಾಳದ ಹರಿವು, ಅಂತರಾಷ್ಟ್ರೀಯ ವಾಣಿಜ್ಯ ಮೊದಲಾದ ಕ್ಷೇತ್ರಗಳು ಹೆಚ್ಚು ವ್ಯಾಪಕವಾಗಿ ಬೆಳೆದಿದೆ. ಇಂದು ಬಹಳಷ್ಟು ದೇಶಗಳಲ್ಲಿ ಮಾರುಕಟ್ಟೆ ಮತ್ತು ಉತ್ಪಾದನಾ ವ್ಯವಸ್ಥೆಗಳು ಹೊರಗಿನ ಶಕ್ತಿಗಳನ್ನು ಹೆಚ್ಚಾಗಿ ಅವಲಂಬಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ."

ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆ (2000) ನಡೆಸಿದ ಸಮೀಕ್ಷೆ ಜಗತ್ತಿನ ನೂರು ಬೃಹತ್ ಆರ್ಥಿಕ ಸಂಸ್ಥೆಗಳ ಪೈಕಿ ಶೇ.51ಕ್ಕೂ ಹೆಚ್ಚು ಸಂಸ್ಥೆಗಳು ಪ್ರಭಾವಶಾಲಿ ಬಹುರಾಷ್ಟ್ರೀಯ ಸಂಸ್ಥೆಗಳಾಗಿದ್ದು ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಸ್ವಾವಲಂಬನೆಗೆ ಮಾರಣಾಂತಿಕ ಪೆಟ್ಟು ನೀಡಿವೆಯೆಂದು ವರದಿ ಮಾಡಿದೆ. ಇಂದು ಬಹಳಷ್ಟು ಅಭಿವೃದ್ಧಿಶೀಲ ದೇಶಗಳಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಖಾಸಗಿ ಕ್ಷೇತ್ರಕ್ಕೆ ಒಳಪಡುತ್ತಿವೆ. ರಾಷ್ಟ್ರೀಯ ಸ್ವಾಯತ್ತತೆ ಮರೆಯಾಗುತ್ತಿದ್ದು ಅಂತರರಾಷ್ಟ್ರೀಯ ಆರ್ಥಿಕ ಒಡಂಬಡಿಕೆಗಳು ದೇಶಿ ಅರ್ಥವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿವೆ. ವಿದ್ವಾಂಸರು ಅಂತರರಾಷ್ಟ್ರೀಯ ಆರ್ಥಿಕ ಚಟುವಟಿಕೆ, ಸಂವಹನ ಜಾಲ ಅಭಿವೃದ್ಧಿ ಮತ್ತು ವಿದೇಶಿ ಸಾಂಸ್ಕೃತಿಕ ದಬ್ಬಾಳಿಕೆ ಜಾಗತೀಕರಣ ಪ್ರಮುಖ ಕಾರಣವಾಗಿದೆಯೆಂದು ವಿಶ್ಲೇಷಿಸಿದ್ದಾರೆ. ಇಂದು ಜಗತ್ತಿನೆಲ್ಲೆಡೆ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದ್ದು ದೇಶಿ ಸಂಸ್ಕೃತಿ, ಪರಿಸರ, ಜೀವನ ಮೌಲ್ಯ ಮತ್ತು ವ್ಯವಸ್ಥೆಗಳು ತಮ್ಮ ಅಸ್ತಿತ್ವನ್ನು ಕಳೆದುಕೊಳ್ಳುತ್ತಿವೆ. ಇಂತಹ ಆರ್ಥಿಕ ಜಾಗತೀಕರಣ ಹೊಸ ಪೀಳಿಗೆಯ ಶೋಷಕರನ್ನು ಮತ್ತು ಶೋಷಣಾ ಪ್ರವೃತ್ತಿಗಳನ್ನು ಹುಟ್ಟು ಹಾಕಿ ಜಗತ್ತಿನ ವಿಘಟನೆ ಮತ್ತು ಅಭಿವೃದ್ಧಿ ಕೊರತೆಗೆ ಕಾರಣವಾಗಿದೆ.

ವರ್ತಮಾನದ ಜಾಗತೀಕರಣವನ್ನು ಗ್ರೇ (2003) ವಿಶ್ಲೇಷಿಸಿದ್ದಾರೆ. "ಇಂದು ಜಾಗತೀಕರಣದಿಂದಾಗಿ ಉತ್ತರ ಮತ್ತು ದಕ್ಷಿಣ ರಾಷ್ಟ್ರಗಳ ನಡುವಿನ ಅಭಿವೃದ್ಧಿ ಅಂತರ ನಿರಂತರವಾಗಿ ಹೆಚ್ಚುತ್ತಿದೆ. ರಾಷ್ಟ್ರೀಯ ಸಾರ್ವಭೌಮತ್ವ ಮರೆಯಾಗಿ ಬಹುರಾಷ್ಟ್ರೀಯ ಕಂಪನಿಗಳ ದಬ್ಬಾಳಿಕೆ ವ್ಯಾಪಕವಾಗುತ್ತಿದೆ. ಆರ್ಥಿಕ ಮತ್ತು ತಾಂತ್ರಿಕ ಆಯಾಮಗಳನ್ನು ಒಳಗೊಂಡ ಇಂದಿನ ಜಾಗತೀಕರಣ ಜಗತ್ತಿನ ವಿವಿಧ ಸಮುದಾಯಗಳನ್ನು ತಾಂತ್ರಿಕವಾಗಿ ಒಂದುಗೂಡಿಸುವ ಸಾಮರ್ಥ್ಯ ಹೊಂದಿದ್ದರೂ ಮಾನವ ಹಕ್ಕುಗಳ ನಿರಂತರ ಉಲ್ಲಂಘನೆಗೆ ಪೂರಕವಾಗಿದೆ. ಇಂದು ಜಗತ್ತಿನ ದುರ್ಬಲ ಜನವರ್ಗಗಳ ಬದುಕಿನ ಮಾರಣ ಹೋಮಕ್ಕೆ ಪ್ರಸ್ತುತ ಜಾಗತೀಕರಣ ಪ್ರಮುಖ ಕಾರಣವಾಗಿದೆ. ಮಾರುಕಟ್ಟೆ ಶಕ್ತಿಗಳು ಮಾತ್ರ ಅತಿ ಹೆಚ್ಚಿನ ಲಾಭವನ್ನು ಗಳಿಸಿ ಮಾನವೀಯ ಮೌಲ್ಯಗಳನ್ನು ಅಳಿಸಿ ಹಾಕಿ ಮಾರುಕಟ್ಟೆ ಮೌಲ್ಯಗಳನ್ನು ಪ್ರತಿಷ್ಠಾಪಿಸಿವೆ. ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳನ್ನು ಅಮಾನವೀಯವಾಗಿ ಶೋಷಿಸಿ ಸಾಮಾಜಿಕ–ಆರ್ಥಿಕ ಅಸಮತೋಲನಕ್ಕೆ ಪ್ರಮುಖವಾಗಿ ಕಾರಣವಾಗಿವೆ.

ಜಾಗತೀಕರಣ ಸಂಸ್ಕೃತಿ, ಪರಿಸರ, ನ್ಯಾಯವ್ಯವಸ್ಥೆ, ರಾಜಕಾರಣ, ಆರ್ಥಿಕತೆ, ಶಿಕ್ಷಣ, ಮಾಧ್ಯಮ ಮೊದಲಾದ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿದೆ. ಇಂದು ರಾಷ್ಟ್ರೀಯ ಗಡಿಗಳು ಅಪ್ರಸ್ತುತವಾಗಿ ಜಾಗತೀಕ

Digitised by Bharatavani, CIIL

ಮಾರುಕಟ್ಟೆ ಶಕ್ತಿಗಳು ಎಲ್ಲಡೆ ತಮ್ಮ ಪ್ರಭಾವಗಳನ್ನು ವಿಸ್ತರಿಸಿಕೊಳ್ಳಲು ಜಾಗತೀಕರಣ ಪೂರಕವಾಗಿದೆ. ಸಂಪತ್ತಿನ ಹಂಚಿಕೆ ಸಮಾನತೆಯ ನೆಲೆಗಟ್ಟಿನಲ್ಲಿ ಆಗುವಲ್ಲಿ ಜಾಗತೀಕರಣ ಬಹುದೊಡ್ಡ ಅಡ್ಡಗಲ್ಲಾಗಿದೆ. ಜಾಗತೀಕರಣದ ನೈತಿಕ ಮತ್ತು ಮಾನವೀಯ ಪ್ರಶ್ನೆಗಳನ್ನು ಇಂದು ಪ್ರಮುಖವಾಗಿ ಚರ್ಚಿಸಲಾಗುತ್ತಿದೆ. ಜಾಗತೀಕರಣ ಜಗತ್ತಿನ ಎಲ್ಲಡೆ ಸಾಮಾಜಿಕ–ಆರ್ಥಿಕ ಅಸಮತೋಲನಕ್ಕೆ ಕಾರವಾಗಿದೆ. ಇಂದು ಅಮೇರಿಕಾದ ವಾಲ್‌ಸ್ಟ್ರೀಟ್ ಚಳುವಳಿ ಮತ್ತೊಮ್ಮೆ ಬುದ್ಧ ಮಾರ್ಗದಲ್ಲಿ ಜಗತ್ತಿನ ಮಾನವೀಕರಣಕ್ಕೆ ಅವಶ್ಯಕವಾದ ಹೊಸ ಪ್ರಜಾಸತ್ತಾತ್ಮಕ ಚಳವಳಿಯಾಗಿ ಬೆಳೆಯುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಯೂರೋಪಿನಲ್ಲಿ ಉದಾರವಾದಿ ಮತ್ತು ಸಮಾಜವಾದಿ ಶಕ್ತಿಗಳು ಮರುಹುಟ್ಟನ್ನು ಪಡೆದು ದುರ್ಬಲ ವರ್ಗಗಳ ಸಬಲೀಕರಣಕ್ಕೆ ಭೂಮಿಕೆಯನ್ನು ಸಿದ್ಧಪಡಿಸುತ್ತಿವೆ.

### ಮಾಧ್ಯಮ ಮತ್ತು ಜಾಗತೀಕರಣ

ಜಾಗತೀಕರಣ ಇಂದು ಆಯ್ಕೆಯಾಗಿರದೇ ಒಂದು ಹೊಸ ಜೀವನ ವಿಧಾನವಾಗಿ ಬೆಳೆದಿದೆ. ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂವಹನ ಸೇವೆ ಸೌಲಭ್ಯಗಳ ವಿಸ್ತರಣೆಯಾಗಿದೆ. 1960ರ ದಶಕದಲ್ಲಿ ಸಂವಹನ ಜಗತ್ತಿನ ಎಲ್ಲಡೆ ಜ್ಞಾನಶಾಖೆಯಾಗಿ ಬೆಳೆಯಿತು. ಮಾಧ್ಯಮ ಶಿಕ್ಷಣಕ್ಕೆ ಜಗತ್ತಿನ ಬಹಳಷ್ಟು ದೇಶಗಳು ವಿಶೇಷ ಮಹತ್ವ ನೀಡಿದವು. 1980ರ ದಶಕದಲ್ಲಿ ಮ್ಯಾಕ್‌ಬ್ರೈಡ್ ಆಯೋಗ ಸಂವಹನ ಸೇವಾ ಸೌಲಭ್ಯಗಳನ್ನು ಜಗತ್ತಿನ ಎಲ್ಲಡೆ ವಿಸ್ತರಿಸಬೇಕೆಂದು ಕರೆ ನೀಡಿತು. 1990ರ ದಶಕದಲ್ಲಿ ಆರ್ಥಿಕ ಉದಾರೀಕರಣದಿಂದಾಗಿ ಸಂವಹನ ಸೇವಾ ಸೌಲಭ್ಯಗಳನ್ನು ಮಾರುಕಟ್ಟೆ ಶಕ್ತಿಗಳು ನಿಯಂತ್ರಿಸಿದವು. ಇಂದು ಖಾಸಗೀಕರಣದಿಂದಾಗಿ ದೇಶಿಯ ಮತ್ತು ಅಂತರಾಷ್ಟ್ರೀಯ ಬಂಡವಾಳಶಾಹಿ ಮಾಧ್ಯಮ ಸಂಸ್ಥೆಗಳನ್ನು ನಿಯಂತ್ರಿಸುತ್ತಿದೆ. ಇಂದು ಮಾಧ್ಯಮ ಮಾಲಿಕತ್ವ ನಿಯಂತ್ರಣ ಮತ್ತು ನಿರ್ವಹಣೆ ಖಾಸಗಿ ಮತ್ತು ಸರ್ಕಾರಿ ವಲಯಗಳ ವ್ಯಾಪ್ತಿಗೊಳಪಟ್ಟಿವೆ. ಮಾಧ್ಯಮ ಆರ್ಥಿಕತೆ ಇಂದು ಹೆಚ್ಚು ಚರ್ಚಿಸಲ್ಪಟ್ಟಿರುವ ವಿಷಯವಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆಯಿಂದಾಗಿ ಸ್ಥಳೀಯ ಮುದ್ರಣ, ವಿದ್ಯುನ್ಮಾನ ಮತ್ತು ನೂತನ ಮಾಧ್ಯಮಗಳ ಸಂರಚನೆ, ಕಾರ್ಯವೈಖರಿ ಮತ್ತು ನಿರ್ವಹಣೆಗಳು ಹಲವಾರು ಬದಲಾವಣೆಗಳನ್ನು ಕಂಡಿವೆ. ಮನರಂಜನೆ ಮತ್ತು ಜಾಹೀರಾತುಗಳು ಬೃಹತ್ ಉದ್ದಿಮೆಗಾಗಿ ಜಗತ್ತಿನ ಎಲ್ಲಡೆ ಬೆಳದಿವೆ. ಇಂದಿನ ಜಾಗತೀಕರಣ ಯುಗದಲ್ಲಿ ಮಾಧ್ಯಮ ವೃತ್ತಿಪರರು ಮಾಧ್ಯಮ ಕಾರ್ಯ ನಿರ್ವಾಹಕರಾಗಿ ಪರಿವರ್ತನೆಗೊಂಡಿದ್ದಾರೆ.

ಹಿಂದೆ ವೃತ್ತಿಯಾಗಿ ಆರಂಭಗೊಂಡ ಮಾಧ್ಯಮ ಇಂದು ಉದ್ದಿಮೆಗಳಾಗಿ ಪರಿವರ್ತನೆಗೊಂಡಿವೆ. ಪತ್ರಿಕೋದ್ಯಮ, ಸುದ್ದಿ ಉದ್ದಿಮೆ, ಚಲನಚಿತ್ರ ನಿರ್ಮಾಣ, ಪ್ರಸಾರೋದ್ಯಮ, ಮೊಬೈಲ್ ಸಂವಹನ, ಅಂತರ್ಜಾಲ, ಕಾರ್ಪೋರೇಟ್ ಸಂವಹನ ಕಾರ್ಪೋರೇಟ್ ಜಾಹೀರಾತು ಮೊದಲಾದ ಉಪಜ್ಞಾನ ಶಾಖೆಗಳನ್ನು ಮಾಧ್ಯಮ ಕ್ಷೇತ್ರದ ವ್ಯಾಪ್ತಿಗೊಳಪಟ್ಟಿವೆ. ಮಾಧ್ಯಮ ಆರ್ಥಿಕತೆ ಇಂದು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮೊದಲಾದ ಆಯಾಮಗಳನ್ನು ಒಳಗೊಂಡಿದೆ. ಇಂದು ಸ್ಟೀವನ್ ಎಸ್. ವಿಲ್ಟ್‌ಮನ್, ಅಲನ್ ಅಲಬಾರನ್, ಬ್ರೂಸ್ ಎಂ. ಓವನ್, ಬೆನ್ ಕಂಪನಿ ಸ್ಟುವರ್ಟ್ ಮ್ಯಾಕ್ ಫೇಡನ್, ಗಿಲಿಯನ್ ಡೊಯಿಲೆ, ಕಾರ್ಲ್ ಎರಿಕ್ ಗುಸ್ಟಾಪ್ಸನ್, ನದೀನ್ ಡೆಸ್‌ಮೊಲಿನ್, ಆಕ್ಟರ್ ಫೆನ್ನಿ, ಸ್ಟೀಫನ್ ಲೇಸಿ ಮೊದಲಾದ ಮಾಧ್ಯಮ ಆರ್ಥಿಕ ತಜ್ಞರು ತಮ್ಮ ಸಂಶೋಧನೆಗಳಿಂದ ಜಗತ್ತಿನ ಗಮನ ಸೆಳೆದಿದ್ದಾರೆ.

ಇಂದು ಮುದ್ರಣ, ವಿದ್ಯುನ್ಮಾನ ಮತ್ತು ನೂತನ ಮಾಧ್ಯಮ ತಂತ್ರಜ್ಞಾನಗಳಲ್ಲಿ ಅಗಾಧ ಬೆಳವಣಿಗೆಗಳುಂಟಾಗಿವೆ. ಉಪಗ್ರಹ ಸಂವಹನ ಮತ್ತು ಕಂಪ್ಯೂಟರ್ ಸಂವಹನಗಳು ಜಗತ್ತಿನ ಎಲ್ಲಡೆ ಕ್ರಾಂತಿಕಾರಕ ಬೆಳವಣಿಗೆ ಹೊಂದಿ ಇಡೀ ಜಗತ್ತನ್ನು ಒಂದೇ ಜಾಲದಡಿ ತಂದಿದೆ. ಯಾರು ಬೇಕಾದರೂ ಯಾವುದೇ ಮಾಹಿತಿಯನ್ನು ಯಾವುದೇ ಮೂಲದಿಂದ ಯಾವುದೇ ಕ್ಷಣದಲ್ಲಿ ಪಡೆಯುವ ಮತ್ತು ರವಾನಿಸುವ ಅವಕಾಶಗಳು ಇಂದು ಲಭಿಸಿವೆ.

ಹರ್ಮನ್ ಮತ್ತು ಮ್ಯಾಕ್ ಚೆಸ್ನಿ (1998) ರವರು ಮಾಧ್ಯಮ ಕ್ಷೇತ್ರದ ಮೇಲೆ ಜಾಗತೀಕರಣದ ಪ್ರಭಾವವನ್ನು ಹೀಗೆ ವಿವರಿಸಿದ್ದಾರೆ. "ಇಂದು ಜಾಗತೀಕರಣ ಯುಗದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಮಾಧ್ಯಮ ಸಂಸ್ಥೆಗಳಲ್ಲಿ ಬಂಡವಾಳ ಹೂಡಿವೆ. ಬೃಹತ್ ಪತ್ರಿಕೆಗಳು, ಪ್ರಸಾರ ಮಾಧ್ಯಮಗಳು ಮತ್ತು ನೂತನ ಮಾಧ್ಯಮಗಳ ಮೇಲೆ ಬಹುರಾಷ್ಟ್ರೀಯ ಕಂಪನಿಗಳು ವಿಶೇಷ ಹಿಡಿತ ಹೊಂದಿವೆ. ಇಂದಿನ ವಾಣಿಜ್ಯ ಮಾದರಿಯನ್ನು ಅಳವಡಿಸಿಕೊಂಡು ಮಾಧ್ಯಮ ಸಂಸ್ಥೆಗಳನ್ನು ಮಾರುಕಟ್ಟೆ ಶಕ್ತಿಗಳು ನಿಯಂತ್ರಿಸುತ್ತಿವೆ. ಹೊಸ ಭೋಗ ಸಂಸ್ಕೃತಿಯನ್ನು ಜಗತ್ತಿನೆಲ್ಲೆಡೆ ಹರಡುವಂತಹ ಮಾಧ್ಯಮ ಸೇವೆ ಮತ್ತು ಸರಕುಗಳನ್ನು ನೀಡಲಾಗುತ್ತಿದೆ. ಸಾರ್ವಜನಿಕರ ಹಿತರಕ್ಷಣೆಗಿಂತ ಮಾರುಕಟ್ಟೆ ಶಕ್ತಿಗಳು ತಮ್ಮ ಸಾರ್ವಭೌಮತ್ವದ ವಿಸ್ತರಣೆಗೆ ಇಂದು ಹೆಚ್ಚಿನ ಆದ್ಯತೆ ನೀಡಿವೆ. ಮಾಧ್ಯಮಕ್ಷೇತ್ರ ಧನಬಲದಿಂದ ನಿಯಂತ್ರಿಸಲ್ಪಟ್ಟು ಜನರು ಮಾಧ್ಯಮಕ್ಷೇತ್ರದಿಂದ ದೂರ ಸರಿಯುವಂತಹ ಅಸಹಾಯಕ ಸ್ಥಿತಿ ಇಂದು ನಿರ್ಮಾಣವಾಗಿದೆ".

ಮ್ಯಾಕ್‌ಬ್ರೆಡ್ ಮತ್ತು ರೋಚ್ (2000)ರವರು 1980ರ ದಶಕದಲ್ಲಿ ಮಾಧ್ಯಮ ಕ್ಷೇತ್ರದ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾಯಿತೆಂದು ತಿಳಿಸುತ್ತಾರೆ. ಮುಕ್ತ ಮಾರುಕಟ್ಟೆ ವ್ಯವಸ್ಥೆ ಸರ್ಕಾರ ಮತ್ತು ಸಾರ್ವಜನಿಕರು ಮಾಧ್ಯಮ ಸಂಸ್ಥೆಗಳ ಮೇಲೆ ಹೊಂದಿರುವ ಹಿಡಿತವನ್ನು ಕಡಿಮೆಗೊಳಿಸಿದೆ. ಯೂರೋಪ್. ಅಮೇರಿಕಾ ಮೊದಲಾದೆಡೆ ಮಾಧ್ಯಮಸಂಸ್ಥೆಗಳು ಖಾಸಗಿ ಮಾರುಕಟ್ಟೆ ಶಕ್ತಿಗಳ ಮಾಲಿಕತ್ವ ಮತ್ತು ನಿಯಂತ್ರಣಕ್ಕೆ 1990ರ ದಶಕದಲ್ಲಿ ಒಳಪಟ್ಟವು. ಕೇಬಲ್, ದೂರಸಂಪರ್ಕ, ಅಂತರ್ಜಾಲ ಮೊದಲಾದ ಸಂವಹನ ಸೇವಾ ಸೌಲಭ್ಯಗಳು ವಿದೇಶಿ ನೇರ ಬಂಡವಾಳ ಹೂಡಿಕೆಯಿಂದಾಗಿ ಜಗತ್ತಿನೆಲ್ಲೆಡೆ ವಿಸ್ತರಿಸಲ್ಪಟ್ಟಿವೆ. ಸಾಂಸ್ಕೃತಿಕ ವಸಾಹತುವಾದ ಜಗತ್ತಿನಲ್ಲಿ ಬೆಳೆಯಲು ಮಾಧ್ಯಮ ಜಾಗತೀಕರಣ ಪ್ರಮುಖ ಕಾರಣವೆಂದು ಮಾಧ್ಯಮ ವಿಮರ್ಶಕ ಮ್ಯಾಕ್‌ಚೆಸ್ನೆ (2005) ಅಭಿಪ್ರಾಯಪಟ್ಟಿದ್ದಾರೆ.

Digitised by Bharatavani, CIIL

ಜಾಗತೀಕರಣ ಯುಗದಲ್ಲಿ ಜರುಗಿದ ಸಂವಹನ ಕ್ರಾಂತಿಯಿಂದಾಗಿ ಮಾಧ್ಯಮಗಳು ಜನ ಮಾಧ್ಯಮಗಳ ಬದಲಾಗಿ ವರ್ಗ ಮಾಧ್ಯಮಗಳಾಗಿ ಪರಿವರ್ತನೆಗೊಂಡಿವೆ. ಸಾಮಾಜಿಕ ನ್ಯಾಯವಿತರಣೆಗೆ ಇಂದಿನ ಮಾಧ್ಯಮ ಸಂಸ್ಥೆಗಳು ಹೆಚ್ಚಿನ ಆದ್ಯತೆ ನೀಡಿಲ್ಲ. ಆರ್ಥಿಕ ಉದಾರೀಕರಣ ನೀತಿಯಿಂದಾಗಿ ಮಾಧ್ಯಮ ಸಂಸ್ತೆಗಳು ಸಾಮಾಜಿಕ ಹೊಣೆಗಾರಿಕೆಯಿಂದ ವಿಮುಖವಾಗಿವೆ. ನೂತನ ಸಂವಹನ ತಂತ್ರಜ್ಞಾನಗಳು ಜಗತ್ತಿನ ದಿಕ್ಕನ್ನೇ ಬದಲಿಸಿವೆ. ಇಂದು ಮುದ್ರಣ ಮಾಧ್ಯಮದಿಂದ ಹಿಡಿದು ಅಂತರ್ಜಾಲ ಮಾಧ್ಯಮದ ತನಕ ನೂತನ ಸಂವಹನ ತಂತ್ರಜ್ಞಾನಗಳ ಕಾರುಬಾರು ಅವ್ಯಾಹತವಾಗಿ ಮುಂದುವರೆದಿದೆ. ಇಂದು ಡಿಜಿಟಲ್ ತಂತ್ರಜ್ಞಾನದಿಂದಾಗಿ ಮಾಧ್ಯಮ ಕ್ಷೇತ್ರದಲ್ಲಿಯೂ ಕೂಡ ಸಾಕ್ಷರರು ಮತ್ತು ಅನಕ್ಷರಸ್ಥರ ನಡುವಿನ ಅಂತರ ಹೆಚ್ಚಾಗಿದೆ. ನೂತನ ಸಂವಹನ ತಂತ್ರಜ್ಞಾನಗಳು ಒಳಗೊಳ್ಳುವ ಅಭಿವೃದ್ಧಿಗೆ ಪೂರಕವಾಗಿರದೇ ದುರ್ಬಲ ಜನವರ್ಗಗಳನ್ನು ರಾಷ್ಟ್ರೀಯ ಮುಖ್ಯವಾಹಿನಿಯಿಂದ ಹೊರದಬ್ಬುವ ಕೆಲಸವನ್ನು ಮಾಡುತ್ತಿದೆ.

ಇಂದು ಜಾಗತಿಕ ಮಾಧ್ಯಮ ಮಾರುಕಟ್ಟೆಯನ್ನು 8 ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳು ನಿಯಂತ್ರಿಸುತ್ತಿವೆ. ಅವುಗಳೆಂದರೆ – ಜನರಲ್ ಎಲೆಕ್ಟ್ರಿಕ್, ವಯಾಕ್ರಾಮ್ ಮತ್ತು ಸಿಯಾಗ್ರಾಮ್ ಮತ್ತು ಪ್ಲಸ್ ಬರ್ಟಲ್ಸ್‌ಮನ್, ಮುಕ್ತಮಾರುಕಟ್ಟೆ ನೀತಿಯಿಂದಾಗಿ ದೇಶಿಯ ಮಾಧ್ಯಮ ಸಂಸ್ಥೆಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದರಿಂದಾಗಿ ದೇಶಿಯ ಮೌಲ್ಯಗಳು, ಪರಂಪರೆ ಮತ್ತು ಪರಿಸರಗಳಿಗೆ ಮಾರಕವಾದ ವಿದೇಶಿ ಮಾಧ್ಯಮ ಸೇವಾ ಸರುಕುಗಳು ಹೆಚ್ಚಿನ ಪ್ರಮಾಣದಲ್ಲಿ ಲಭಿಸುತ್ತಿವೆಯೆಂದು ಫರ್ಗ್ಯುಸನ್ (2002) ಟೀಕಿಸಿದ್ದಾರೆ. ಸಿಗ್ನೋರೇಲಿ (1990), ಓ'ನೇಲ್ (1993), ಗಾರ್ಡನ್ ಗೌ (2001), ಹೆಡ್, ಸ್ಪಾನ್ ಮತ್ತು ಮ್ಯಾಕ್‌ಗ್ರೆಗರ್ (2001), ಲಿಟಲ್ ಜಾನ್ (2002, ಓಲಿವರ್ ಬಾಯ್ಡ್–ಬಾರೆಟ್ ಮತ್ತು ಟೆರ್ರಿ ರಂತನೆನ್ (2002), ಬ್ಲೋಚ್ ಮತ್ತು ಲೆಮೀಸ್ (2003(, ಪಾವ್ಲಿಕ್ ಮತ್ತು ಮ್ಯಾಕ್‌ಇಂತೋಸ್ (2005 ಮೊದಲಾದ ವಿಮರ್ಶಕರು ಜಗತ್ತಿನ ಬೃಹತ್ ಮಾಧ್ಯಮ ಸಂಸ್ಥೆಗಳು ತಮ್ಮ ತೋಳ್ಬಲ, ಧನಬಲ ಮತ್ತು ತಂತ್ರಜ್ಞಾನ ಬಲಗಳಿಂದಾಗಿ ಸಣ್ಣ ಮಾಧ್ಯಮ ಸಂಸ್ಥೆಗಳ ಮೇಲೆ ಸವಾರಿ ನಡೆಸಿ ಸಾರ್ವಜನಿಕರ ಹಿತವನ್ನು ಕಡೆಗಣಿಸಿವೆಯೆಂದು ಬಹುತೇಕ ಮಾಧ್ಯಮ ವಿಮರ್ಶಕರು ತಮ್ಮ ಬರಹಗಳಲ್ಲಿ ದಾಖಲಿಸಿದ್ದಾರೆ. ಇಂದು ಜಗತ್ತಿನ ಮಾಧ್ಯಮ ಪ್ರೇಕ್ಷಕರು ಬಹುರಾಷ್ಟ್ರೀಯ ಕಂಪನಿಗಳ ಮಾಲಿಕತ್ವದ ಮಾಧ್ಯಮ ಸಂಸ್ಥೆಗಳು ಅನಾರೋಗ್ಯಕರ ಮತ್ತು ಅಶ್ಲೀಲಕರ ಮಾಧ್ಯಮ ಸರಕುಗಳಿಂದ ದಾರಿತಪ್ಪಿದ್ದಾರೆಂದು ಬಹಳಷ್ಟು ಅಧ್ಯಯನಗಳು ದೃಢಪಡಿಸಿವೆ.

ಜಾಗತೀಕರಣ ಯುಗದಲ್ಲಿ ಮಾಧ್ಯಮ ಮಾರುಕಟ್ಟೆಗಳನ್ನು ಸೃಜನಶೀಲತೆ, ಪ್ರತಿಭೆ, ಕೇಂದ್ರಿತ, ಮಾರುಕಟ್ಟೆ, ಆರ್ಥಿಕ ಸಂಪನ್ಮೂಲ ಕೇಂದ್ರಿತ ಮಾರುಕಟ್ಟೆ ಮತ್ತು ಗ್ರಾಹಕರ ಒಪ್ಪಿಗೆ ಗಳಿಸುವ ಮಾರುಕಟ್ಟೆ ಎಂಬುದಾಗಿ ಗುರುತಿಸಲಾಗಿದೆ. ಗ್ರಾಹಕರ ಧೋರಣೆಯನ್ನು ಬದಲಾಯಿಸುವ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸೇವೆ ಮತ್ತು ಸರಕುಗಳಿಗೆ ಗ್ರಾಹಕರ ಒಪ್ಪಿಗೆಯನ್ನು ರೂಪಿಸುವ ಮಾಧ್ಯಮ ಸೇವಾ ಸೌಲಭ್ಯಗಳು ಇಂದು ಹೆಚ್ಚಿನ ಪ್ರಮಾಣದಲ್ಲಿ ಲಭಿಸುತ್ತಿವೆಯೆಂದು ಹೆಸರಾಂತ ಮಾಧ್ಯಮ ವಿಮರ್ಶಕ ನೋಮ್ ಚಾಮ್‌ಸ್ಕಿರವರು ತಿಳಿಸುತ್ತಾರೆ. ಇಂದು ಅಮೇರಿಕಾ ಮತ್ತು ಯೋರೋಪಿನ ಮಾಧ್ಯಮ ಮಾರುಕಟ್ಟೆಗಳು ಜಗತ್ತಿನಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ಜನರನ್ನು ದಿಕ್ಕು ತಪ್ಪಿಸುತ್ತಿವೆ.

### ಜಾಗತೀಕರಣ ಮತ್ತು ಪತ್ರಿಕೋದ್ಯಮ ಶಿಕ್ಷಣ

ಶಿಕ್ಷಣವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜ್ಞಾವಂತ ಪ್ರಜೆಯನ್ನು ರೂಪಿಸುವ ಅಸ್ತ್ರವಾಗಿದೆ. ಶಿಕ್ಷಣದ ಮೂಲಕವೇ ಪ್ರಜೆಗಳಿಗೆ ಸ್ವಾತಂತ್ರ್ಯ, ಸಮಾನತೆ, ಸರ್ವೋದಯ ಮೊದಲಾದ ಮಾನವೀಯ ಮೌಲ್ಯಗಳನ್ನು ಪರಿಚಯಿಸಲು ಸಾಧ್ಯ. ಸುಶಿಕ್ಷಿತ ಜನರಿಂದಲೇ ಪ್ರಜಾಪ್ರಭುತ್ವದ ಆರೋಗ್ಯಕರ ಬೆಳವಣಿಗೆ ಉಂಟಾಗುತ್ತದೆ. ಪ್ರಜೆಗಳು ಅಜ್ಞಾನಿಗಳಾಗಿದ್ದಾಗ ಪ್ರಭುಗಳಾದವರು ಅಧಿಕಾರ ದುರುಪಯೋಗಪಡಿಸಿಕೊಂಡು ತಪ್ಪು ಅಭಿವೃದ್ಧಿಯನ್ನಷ್ಟೇ ಸಾಧಿಸಿಕೊಳ್ಳುತ್ತಾರೆ. ಜನರ ಸಜ್ಞಾನವೇ ಪಟ್ಟಭದ್ರ ಹಿತಾಶಕ್ತಿಗಳ ಮೂಲ ಬಂಡವಾಳವಾಗಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣದಿಂದಲೇ ಪರಿವರ್ತನೆ ಮತ್ತು ಪ್ರಗತಿ ಸಾಧ್ಯವೆಂದು ಚಿಂತಕರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಂಗ ಮತ್ತು ಮಾಧ್ಯಮಗಳೆಂಬ ನಾಲ್ಕು ಪ್ರಮುಖ ಆಧಾರಸ್ತಂಭಗಳಿಗೆ. ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸ್ನೇಹ ಸೇತುವೆ ನಿರ್ಮಿಸುವಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖವಾದುದು. ಅಮೇರಿಕಾದ ಮಾಜಿ ರಾಷ್ಟ್ರಾಧ್ಯಕ್ಷ ಥಾಮಸ್ ಜಫರ್‌ಸನ್ ಪತ್ರಿಕೆಗಳಿಲ್ಲದ ಸರ್ಕಾರ ಮತ್ತು ಸರ್ಕಾರವಿಲ್ಲದ ಪತ್ರಿಕೆಗಳು– ಇವೆರಡರ ನಡುವೆ ನನ್ನ ಆಯ್ಕೆ ಸರ್ಕಾರವಿಲ್ಲದ ಪತ್ರಿಕೆಗಳೇ ಆಗಿವೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಲೇಖನಿಯ ಶಕ್ತಿ ಖಡ್ಗ ಶಕ್ತಿಗಿಂತಲೂ ಮಿಗಿಲಾದುದೆಂದು ಸರ್ವಾಧಿಕಾರಿ ನೆಪೋಲಿಯನ್ ಬೋನಾಪಾರ್ಟೆ ಬಹಳ ಹಿಂದೆಯೇ ನುಡಿದಿದ್ದಾರೆ. ಇಡೀ ಜಗತ್ತನ್ನು ಪರಿವರ್ತಿಸುವ ಮತ್ತು ಸಬಲೀಕರಣದೆಡೆಗೆ ಮುನ್ನಡೆಸುವ ನಿಟ್ಟಿನಲ್ಲಿ ಮಾಧ್ಯಮಗಳ ಪಾತ್ರ ಬಹುದೊಡ್ಡದು.

ಇಂದು ಪತ್ರಿಕೋದ್ಯಮದ ವ್ಯಾಪ್ತಿಗೆ ಕೇವಲ ಮುದ್ರಣ ಮಾಧ್ಯಮಗಳು ಮತ್ತು ಸೇವಾ ಸೌಲಭ್ಯಗಳು ಬರುವುದಿಲ್ಲ. ಪಾರಂಪರಿಕ ಮಾಧ್ಯಮಗಳು ಮತ್ತು ಆಧುನಿಕ ಮಾಧ್ಯಮಗಳು ಮತ್ತು ಸೇವಾ ಸೌಲಭ್ಯಗಳು ಇಂದು ಪತ್ರಿಕೋದ್ಯಮ ವ್ಯಾಪ್ತಿಗೆ ಒಳಪಟ್ಟಿವೆ. ಪತ್ರಿಕೋದ್ಯಮವು ಪತ್ರಿಕೆಗಳು, ನಿಯತಕಾಲಿಕೆಗಳು, ಬಾನುಲಿ ದೂರದರ್ಶನ, ಅಂತರ್ಜಾಲ, ಉಪಗ್ರಹ, ಜಾಹಿರಾತು, ಸಾರ್ವಜನಿಕ ಸಂಪರ್ಕ, ಪ್ರಚಾರ ಯೋಜಿತ ಪ್ರಚಾರ ಮೊದಲಾದ ಸಾಧನಗಳು ಮತ್ತು ಸೇವಾ ಸೌಲಭ್ಯಗಳನ್ನು ಒಳಗೊಂಡಿದೆ. ವಿಶಾಲ ಅರ್ಥದಲ್ಲಿ ಸಕಲ ಸಾಧನಗಳು ಮತ್ತು ವಾಹಿನಿಗಳು ಅಭಿವೃದ್ಧಿ 'ಮಾಧ್ಯಮ' ಪರಿಕಲ್ಪನೆಗಳು ಒಳಪಟ್ಟಿವೆ. 20ನೇ ಶತಮಾನದಲ್ಲಿ ಅನೇಕ ಬಗೆಯ ಆಧುನಿಕ ಮಾಧ್ಯಮಗಳು ಅಭಿವೃದ್ಧಿ ಹೊಂದಿದವು.

Digitised by Bharatavani, CIIL

20ನೇ ಶತಮಾನವನ್ನು 'ಮಾಧ್ಯಮ ಯುಗ'ವೆಂದು ಪಂಡಿತರು ಪರಿಗಣಿಸಿದ್ದಾರೆ. 20ನೇ ಶತಮಾನದ ಅಂತ್ಯ ಭಾಗದಲ್ಲಿ ನೂತನ ಸಂವಹನ ತಂತ್ರಜ್ಞಾನಗಳ ಬೆಳವಣಿಗೆಯಿಂದಾಗಿ ಜ್ಞಾನದ ಜಾಗತೀಕರಣ ಸಾಧ್ಯವಾಯಿತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲ ಪ್ರಜೆಗಳಿಗೂ ವಾಕ್ ಅಭಿವ್ಯಕ್ತಿ ಸ್ವಾತಂತ್ರ್ಯವೆಂಬ ಮೂಲಭೂತ ಹಕ್ಕುಗಳಿವೆ. ಅಂತೆಯೇ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಅಭಿವೃದ್ಧಿಯಲ್ಲಿ ಸಾರ್ವಜನಿಕರ ಸಹಭಾಗಿತ್ವ ದೊರಕಿಸುವ ಸಾಧನವಾಗಿ ಮಾಹಿತಿ ಹಕ್ಕನ್ನು ಪ್ರಜೆಗಳಿಗೆ ವಿಶ್ವದ ಎಲ್ಲೆಡೆ ನೀಡಲಾಗಿದೆ. ಆದ್ದರಿಂದಲೇ ಇಂದಿನ ಯುಗವನ್ನು 'ಮಾಧ್ಯಮ ಯುಗ' ಮತ್ತು ಮಾಹಿತಿ ಯುಗ'ವೆಂದು ಬಣ್ಣಿಸಲಾಗಿದೆ. ಮಾಧ್ಯಮ ಶಿಕ್ಷಣ ಜಾಗತೀಕರಣ ಯುಗದಲ್ಲಿ ಹೊಸ ಆಯಾಮವನ್ನು ಪಡೆದುಕೊಂಡಿದೆ.

ಭಾರತದಲ್ಲಿ ಇಂದು ಪತ್ರಿಕೋದ್ಯಮ ಸುಮಾರು 50 ಬಿಲಿಯನ್ ರೂಪಾಯಿಗಳಷ್ಟು ಆದಾಯವನ್ನು ಪ್ರತಿವರ್ಷ ಗಳಿಸುತ್ತಿದೆ. ಇಂದು ಸುಮಾರು 65.000 ನೋಂದಾಯಿತ ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕಗಳು ಭಾರತದಲ್ಲಿ ಅಸ್ತಿತ್ವದಲ್ಲಿವೆಯೆಂದು ಭಾರತದ ವೃತ್ತಪತ್ರಿಕೆಗಳ ರಿಜಿಸ್ಟ್ರಾರ್ ಕಛೇರಿಯ ಅಂಕಿ ಅಂಶಗಳು ತಿಳಿಸುತ್ತವೆ. ಭಾರತದಲ್ಲಿ ಆಕಾಶವಾಣಿ ಜಗತ್ತಿನಲ್ಲಿಯೇ ಅತ್ಯಂತ ಬೃಹತ್ ಬಾನುಲಿ ಪ್ರಸಾರ ಜಾಲವೆಂಬ ಹೆಗ್ಗಳಿಕೆ ಹೊಂದಿದೆ. ಭಾರತದ ಶೇ.99ರಷ್ಟು ಜನರು ಮತ್ತು ಶೇ.9ರಷ್ಟು ಭೌಗೋಳಿಕ ಪ್ರದೇಶಗಳಿಗೆ ಬಾನುಲಿ ಸೇವೆ ಲಭಿಸುತ್ತಿದೆ. ಭಾರತದ ಟಿವಿ ಜಾಲ ಜಗತ್ತಿನ ಎರಡನೇ ದೊಡ್ಡ ದೂರದರ್ಶನ ವ್ಯವಸ್ಥೆಯೆಂದೇ ಹೆಸರಾಗಿದೆ. ಇಂದು ಶೇ.75ಎಷ್ಟು ಭೌಗೋಳಿಕ ಪ್ರದೇಶಗಳು ಮತ್ತು ಶೇ. 90ರಷ್ಟು ಸಾರ್ವಜನಿಕರು ಟಿ.ವಿ. ಮಾಧ್ಯಮದ ಸೇವಾ ಸೌಲಭಗಳನ್ನು ಪಡೆಯುತ್ತಿದ್ದಾರೆ. ಭಾರತ ಜಗತ್ತಿನಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಸುದ್ದಿ ಚಿತ್ರಗಳು, ಸಾಕ್ಷ್ಯ ಚಿತ್ರಗಳು ಮತ್ತು ಚಲನಚಿತ್ರಗಳನ್ನು ಉತ್ಪಾದಿಸುವ ದೇಶವಾಗಿ ಬೆಳೆದಿದೆ. ಭಾರತದ ಉಪಗ್ರಹ ಸಂವಹನ ಸೇವಾ ಸೌಲಭ್ಯಗಳು ಮತ್ತು ಕಂಪ್ಯೂಟರ್ ಸಂವಹನ ಸೇವಾ ಸೌಲಭ್ಯಗಳು ವಿಶ್ವದಲ್ಲೇ ಮುಂಚೂಣಿಯಲ್ಲಿವೆ. ಭಾರತದ ಜಗತ್ತಿನ ಪ್ರತಿಷ್ಠಿತ ಮಾಧ್ಯಮ ಶಕ್ತಿಯಾಗಿ ಬೆಳೆದಿದೆ. ಭಾರತದಲ್ಲಿ ಅಧಿಕೃತ ಮಾಧ್ಯಮ ಶಿಕ್ಷಣ ಇಂದು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಲಭಿಸುತ್ತಿದೆ..

ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ಸುಮಾರು 60 ಪಾರಂಪರಿಕ ವಿಶ್ವವಿದ್ಯಾನಿಯಗಳು, 25 ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು 100 ಖಾಸಗಿ ಸಂಸ್ಥೆಗಳು 6000 ವಿದ್ಯಾರ್ಥಿಗಳಿಗೆ ಡಿಪ್ಲೊಮೊ, ಪದವಿ ಮತ್ತು ಸ್ನಾತಕೋತ್ತರ ಸಂವಹನ ಮತ್ತು ಪತ್ರಿಕೋದ್ಯಮ ಶಿಕ್ಷಣ ನೀಡುತ್ತಿವೆ. ವರದಿಗಾರಿಕೆ, ಪ್ರತಿಸಂಪಾದನೆ, ಛಾಯಾಚಿತ್ರ ಪತ್ರಿಕೋದ್ಯಮ, ಮಾಧ್ಯಮ ನಿರ್ವಹಣೆ, ಮಾಧ್ಯಮ ಕಾನೂನುಗಳು, ಮಾಧ್ಯಮ ಸಂಶೋಧನೆ, ಅಭಿವೃದ್ಧಿ ಸಂವಹನ, ಪರಿಸರ ಸಂವಹನ, ಜಾಹಿರಾತು, ಸಾರ್ವಜನಿಕ ಸಂಪರ್ಕ, ಬಾನುಲಿ ಪತ್ರಿಕೋದ್ಯಮ, ಟಿವಿ ಪತ್ರಿಕೋದ್ಯಮ, ಹವ್ಯಾಸಿ ಪತ್ರಿಕೋದ್ಯಮ, ತಾಂತ್ರಿಕ ಬರವಣಿಗೆ, ಭಾಷಾಂತರ ಮೊದಲಾದ ವಿಷಯಗಳಲ್ಲಿ ಸುಧಾರಿತ ಶಿಕ್ಷಣ ಮತ್ತು ಸೌಲಭ್ಯಗಳನ್ನು ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಕಾಲೇಜುಗಳು ಒದಗಿಸುತ್ತಿವೆ. ಪತ್ರಿಕೋದ್ಯಮ, ಶಿಕ್ಷಣ ಪಡೆದ ಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾಧ್ಯಮ ಕ್ಷೇತ್ರವನ್ನು ಪ್ರವೇಶಿಸಿ ಉತ್ತಮ ಉದ್ಯೋಗಾವಕಾಶಗಳು, ವೇತನ ಬಡ್ತಿ ಮೊದಲಾದ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇಂದಿಗೂ ಸಹ ಮಾಧ್ಯಮ ಶಿಕ್ಷಣ ಕ್ಷೇತ್ರ ಯುವ ಜನತೆಗೆ ವಿಫುಲ ಉದ್ಯೋಗಾವಕಾಶಗಳನ್ನು ಒದಗಿಸುವ ಓಯಸಿಸ್ ಎಂದೇ ಭಾರತದಲ್ಲಿ ಹೆಸರಾಗಿದೆ. ಮಾಧ್ಯಮ ಕ್ಷೇತ್ರದಲ್ಲಿ ಲಭ್ಯವಿರುವ ಬೇಡಿಕೆಗಿಂತ ಇಂದು ತಯಾರಾಗುತ್ತಿರುವ ಯುವ ಪದವೀಧರರ ಮತ್ತು ಸ್ನಾತಕೋತ್ತರ ಪದವೀಧರರ ಸಂಖ್ಯೆ ಕಡಿಮೆಯಿದೆ. ಈ ಹಿನ್ನೆಲೆಯಲ್ಲಿ ಪ್ರತಿಭೆ, ಪರಿಣಿತಿ ಮತ್ತು ಪರಿಶ್ರಮಗಳಿಗೆ ಹೆಸರಾದ ಮಾಧ್ಯಮ ವಿದ್ಯಾರ್ಥಿಗಳಿಗೆ ಮಾಧ್ಯಮ ಸಂಸ್ಥೆಗಳಲ್ಲಿ ಸ್ವಾಗತ ಲಭಿಸುತ್ತಿರುವುದು ಭಾರತೀಯ ಪತ್ರಿಕೋದ್ಯಮ, ಶಿಕ್ಷಣದ ಹೆಗ್ಗಳಿಕೆಯಾಗಿದೆ.

ಆರ್ಥಿಕ ಉದಾರೀಕರಣ, ಮಾಧ್ಯಮ ಖಾಸಗೀಕರಣ ಯುಗದಲ್ಲಿ ಮಾಧ್ಯಮ ಶಿಕ್ಷಣಕ್ಕೆ ಭಾರತದಲ್ಲಿ ವಿಶೇಷ ಮಹತ್ವ ಲಭಿಸಿದೆ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಶಿಕ್ಷಕರ ನೇಮಕ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮಾಧ್ಯಮ ಸಂಶೋಧನೆ, ತಂತ್ರಜ್ಞಾನದ ಬಳಕೆ, ಪ್ರಾಯೋಗಿಕ ತರಬೇತಿ ಮೊದಲಾದ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡಿದೆ. ಬಹಳಷ್ಟು ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗಗಳಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಉದಾರ ಆರ್ಥಿಕ ನೆರವು ನೀಡಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಹೊಸ ಆಯಾಮ ನೀಡಿದೆ. ಇಂದು ಹಲವಾರು ವಿಷಯಗಳಲ್ಲಿ ತಜ್ಞರಾದ ಬೋಧಕರು ಮತ್ತು ತಾಂತ್ರಿಕ ಸಿಬ್ಬಂದಿ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿಭಾವಂತ ಯುವಕ-ಯುವತಿಯರಿಗೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ.

1980 ಮತ್ತು 90ರ ದಶಕದಲ್ಲಿ ಭಾರತದಲ್ಲಿ ಮುದ್ರಣ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ, ನೂತನ ಸಂವಹನ ಮಾಧ್ಯಮ, ಜಾಹಿರಾತು, ಸಾರ್ವಜನಿಕ ಸಂಪರ್ಕ, ಮಾಧ್ಯಮ ನಿರ್ವಹಣೆ ಮೊದಲಾದ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬೆಳವಣಿಗೆಗಳುಂಟಾದವು. ಪತ್ರಿಕೋದ್ಯಮ ಶಿಕ್ಷಣಕ್ಕೆ 21ನೇ ಶತಮಾನದ ಹೆಚ್ಚಿನ ಪ್ರೋತ್ಸಾಹ ಲಭಿಸಿದೆ. ಬದಲಾಗುತ್ತಿರುವ ಆರ್ಥಿಕ ಮತ್ತು ತಾಂತ್ರಿಕ ಪರಿಸರಗಳಿಗೆ ಅನುಗುಣವಾಗಿ ಸೈದ್ಧಾಂತಿಕ ಶಿಕ್ಷಣಕ್ಕಿಂತ ಹೆಚ್ಚಿನ ಮಹತ್ವವನ್ನು ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳು ಪ್ರಾಯೋಗಿಕ ಶಿಕ್ಷಣಕ್ಕೆ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ವಿಶ್ವವಿದ್ಯಾನಿಲಯಗಳು ಮತ್ತು ಮಾಧ್ಯಮ ಸಂಸ್ಥೆಗಳ ನಡುವೆ ಹೆಚ್ಚಿನ ಸಂವಹನ ಮತ್ತು ಸಹಕಾರಗಳು ಏರ್ಪಟ್ಟಿರುವುದರಿಂದ ಯುವ ಸಮೂಹ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಶಿಕ್ಷಣ ಸೌಲಭ್ಯವನ್ನು ಪಡೆಯಲು ಸಾಧ್ಯವಾಗಿದೆ. ಅಧ್ಯಯನ ಮಂಡಳಿಯ ಕಲಾಪಗಳಲ್ಲಿ

Digitised by Bharatavani, CIIL

ಮಾಧ್ಯಮ ವೃತ್ತಿಪರರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದರಿಂದ ಮಾಧ್ಯಮ ಶಿಕ್ಷಣಕ್ಕೆ ವಿಶಿಷ್ಟವಾದ ಪ್ರಾಯೋಗಿಕ ಆಯಾಮ ದೊರೆಯುತ್ತಿದೆ. ಪರೀಕ್ಷಾ ಮಂಡಳಿಗಳಲ್ಲಿಯೂ ಬೋಧಕರು ಮತ್ತು ಮಾಧ್ಯಮ ವೃತ್ತಿಪರರ ಸಹಭಾಗಿತ್ವದಿಂದಾಗಿ ಅರ್ಥಪೂರ್ಣ ಮೌಲ್ಯಮಾಪನ ಮಾಧ್ಯಮ ಶಿಕ್ಷಣ ಕ್ಷೇತ್ರದಲ್ಲಿ ಸಾಧ್ಯವಾಗಿದೆ. ವಿದ್ಯಾರ್ಥಿ ಸಮುದಾಯಕ್ಕೆ ಮಾಧ್ಯಮ ಸಂಸ್ಥೆಗಳಲ್ಲಿ ಅನೌಪಚಾರಿಕ ತರಬೇತಿ ಪಡೆಯಲು ಅವಕಾಶಗಳು ಇಂದು ಹೆಚ್ಚಾಗಿ ಲಭಿಸುತ್ತಿವೆ. ಬಹಳಷ್ಟು ಜನ ಪ್ರತಿಭಾವಂತ ಮಾಧ್ಯಮ ಶಿಕ್ಷಣ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರು ತರಬೇತಿಯ ಅವಧಿಯಲ್ಲಿ ತಮ್ಮ ಪ್ರತಿಭಾ ಪ್ರದರ್ಶನದಿಂದ ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಲು ಸಾಧ್ಯವಾಗಿದೆ.

ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಮಾಧ್ಯಮ ಶಿಕ್ಷಣ ಬಹು ಬೇಡಿಕೆಯಲ್ಲಿರುವ ಜ್ಞಾನಶಾಖೆಯಾಗಿದೆ. “ಬದಲಾಗುತ್ತಿರುವ ಮಾಧ್ಯಮ ತಂತ್ರಜ್ಞಾನಗಳು ಮತ್ತು ಸೇವಾ ಸೌಲಭ್ಯಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಪಠ್ಯಕ್ರಮದಲ್ಲಿಯೂ ಕೂಡ ಸಾಕಷ್ಟು ಮಾರ್ಪಡುಗಳನ್ನು ಮಾಡಲಾಗುತ್ತದೆ. ತರಗತಿಗಳಲ್ಲಿಯೂ ಕೂಡ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಯುವ ಸಮುದಾಯಕ್ಕೆ ಉತ್ತಮ ತರಬೇತಿ ನೀಡಲಾಗುತ್ತಿದೆ” ಎಂದ ಗೋಪ ಬಾಗ್ಚಿ ಮತ್ತು ಪ್ರದೋಶ್ ಕುಮಾರ್ ರಾತ್ (2009) ಅಭಿಪ್ರಾಯಪಟ್ಟಿದ್ದಾರೆ. ಹೆಚ್ಚುತ್ತಿರುವ ವಿವಿಧೊದ್ದೇಶ ಮಾಧ್ಯಮ ಸಂಸ್ಥೆಗಳು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಕರ್ಷಕ ಉದ್ಯೋಗಾವಕಾಶಗಳನ್ನು ನೀಡುತ್ತಿವೆ. ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿರುವ ಹಲವಾರು ಸಂಸ್ಥೆಗಳು ಇಂದು ವರ್ಚಸ್ಸು ವೃದ್ಧಿ, ಕಾರ್ಯಕ್ರಮ ನಿರ್ವಹಣೆ, ಸಮುದಾಯ ಸಂಪರ್ಕ ಗ್ರಾಹಕ ಸಂಪರ್ಕ, ಮಾಧ್ಯಮ ಸಂಪರ್ಕ, ಸಂಕಷ್ಟ ನಿರ್ವಹಣೆ, ತಾಂತ್ರಿಕ ಬರವಣಿಗೆ, ಪ್ರಚಾರ ಆಂದೋಲನ ನಿರ್ವಹಣೆ, ಜಾಹಿರಾತು ಆಂದೋಲನ ನಿರ್ವಹಣೆ ಮೊದಲಾದ ಉದ್ದೇಶಗಳಿಗಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಗಳನ್ನು ನೇಮಿಸಿಕೊಳ್ಳುತ್ತವೆ. ಮಾಧ್ಯಮ ಶಿಕ್ಷಣ ಮತ್ತು ತರಬೇತಿ ಪಡೆದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಇಂತಹ ಸಂಸ್ಥೆಗಳಲ್ಲಿ ಆಕರ್ಷಕ ಉದ್ಯೋಗಾವಕಾಶಗಳು ದೊರಕುತ್ತಿವೆ.

ಇಂದು ಮಾಧ್ಯಮ ಶಿಕ್ಷಣ ಹಲವಾರು ಜ್ಞಾನಶಾಖೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದೆ. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಶಿಕ್ಷಣಶಾಸ್ತ್ರ, ಸಮಾಜಶಾಸ್ತ್ರ, ಕಾನೂನುಶಾಸ್ತ್ರ, ನಿರ್ವಹಣೆ ಶಾಸ್ತ್ರ, ಮಾಹಿತಿ ತಂತ್ರಜ್ಞಾನ, ಪರಿಸರ ವಿಜ್ಞಾನ, ಮಾನವಾಭಿವೃದ್ಧಿ ಮೊದಲಾದ ಜ್ಞಾನಶಾಖೆಗಳಿಂದ ಮಾಧ್ಯಮ ಶಿಕ್ಷಣ ಹಲವಾರು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಅಂಶಗಳನ್ನು ಪಡೆದು ಹೊಸ ಪೀಳಿಗೆಯ ವಿದ್ಯಾರ್ಥಿ ಸಮುದಾಯವನ್ನು ರೂಪಿಸಲು ನೆರವಾಗಿದೆಯೆಂದು ದಯಾಳ್ (2008) ತಿಳಿಸುತ್ತಾರೆ. ಅಂತರ್ ಶಾಸ್ತ್ರೀಯ ಸಂಶೋಧನಾ ಕಾರ್ಯಚಟುವಟಿಕೆಗಳಿಗೂ ಸಹ ಇಂದು ಹೆಚ್ಚಿನ ಪ್ರೋತ್ಸಾಹ ಲಭಿಸುತ್ತದೆ. ಮಾಧ್ಯಮ ಶಿಕ್ಷಣ ಏಕಮುಖಿಯಾಗಿರದೇ ಆಧುನಿಕ ಸಮಾಜದಲ್ಲಿ ಬಹುಮುಖಿ ದೃಷ್ಟಿಕೋನವನ್ನು ಒಳಗೊಂಡಿದೆ. ಇಂದಿನ ಪೀಳಿಗೆಯ ಸಂಶೋಧಕರು ಮಾಧ್ಯಮ ನಿರ್ವಹಣೆಯ ವಿವಿಧ ಆಯಾಮಗಳನ್ನು ಕೇಂದ್ರೀಕರಿಸಿ ತಮ್ಮ ಸಂಶೋಧನಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಜಾಗತೀಕರಣ ಯುಗದಲ್ಲಿ ಬಹುಮುಖಿ ಮಾಧ್ಯಮ ತರಬೇತಿ ಮತ್ತು ಸಂಶೋಧನೆಗಳಿಗೆ ಹೆಚ್ಚಿನ ಅವಕಾಶಗಳಿವೆ.

ಹಲವಾರು ಇತಿಮಿತಿಗಳ ನಡುವೆಯೂ ಇಂದಿನ ಜಾಗತೀಕರಣ ಯುಗದಲ್ಲಿ ಮಾಧ್ಯಮ ಶಿಕ್ಷಣ ಭಾರತದಲ್ಲಿ ಹಲವಾರು ರಚನಾತ್ಮಕ ಸುಧಾರಣೆಗಳನ್ನು ಕಂಡಿದೆ. ಜಗತ್ತಿನ ವಿವಿಧ ಭಾಗಗಳಿಂದ ಭಾರತೀಯ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ಸಂಸ್ಥೆಗಳಿಗೆ ಮಾಧ್ಯಮ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ವಿಶೇಷವಾಗಿ ಲ್ಯಾಟಿನ್. ಅಮೇರಿಕಾ, ಆಫ್ರಿಕಾ, ಮಧ್ಯಪ್ರಾಚ್ಯ ಮೊದಲಾದ ಪ್ರದೇಶಗಳಿಂದ ವಿದ್ಯಾರ್ಥಿಗಳು ಭಾರತಕ್ಕೆ ಬರುತ್ತಿದ್ದಾರೆ. ಸ್ನಾತಕೋತ್ತರ ಪದವಿಗಳನ್ನಷ್ಟೇ ಪಡೆಯದೇ ಎಂ.ಫಿಲ್, ಪಿಎಚ್‌ಡಿ. ಖಿ.ಲಿಟ್ ಮೊದಲಾದ ಉನ್ನತ ಪದವಿಗಳಿಗಾಗಿ ಹೆಚ್ಚಿನ ಸಂಶೋಧನೆ ನಡೆಸಲು ವಿದೇಶಿ ವಿದ್ಯಾರ್ಥಿಗಳು ಭಾರತಕ್ಕೆ ಬರುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳು ಮತ್ತು ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳ ನಡುವೆ ಒಡಂಬಡಿಕೆಯುಂಟಾಗಿ ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಏರ್ಪಡಿಸಲಾಗುತ್ತಿದೆ. ಇಂತಹ ವಿಶೇಷ ವಿದ್ಯಮಾನಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಶಿಕ್ಷಕರು ಮತ್ತು ಸಂಶೋಧಕರಿಗೆ ವೃತ್ತಿಪರ ಮನ್ನಣೆ ಲಭಿಸುತ್ತಿದೆ. ಇಂತಹ ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳು ಅಂತರ–ಸಾಂಸ್ಕೃತಿಕ ಸಂಬಂಧ ವೃದ್ಧಿ ಮತ್ತು ವಿದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಲು ಪೂರಕವಾಗಿವೆ. ಮಾಧ್ಯಮ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಗಳಿಗೆ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆಯಿಂದಾಗಿ ಶಿಕ್ಷಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ಜ್ಞಾನಸಾಗರದಲ್ಲಿ ಈಜಿ ತಮಗೆ ಬೇಕಾದ ಜ್ಞಾನಭಂಡಾರವನ್ನು ಗಳಿಸಿ ಜಾಗತೀಕರಣ ಯುಗದಲ್ಲಿ ಜ್ಞಾನಿಗಳಾಗಿ ಬೆಳೆಯಲು ಸಾಧ್ಯವಾಗಿದೆ. ಜಾಗತೀಕರಣ ಮಾಧ್ಯಮದ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಗಳ ದೃಷ್ಟಿಯಿಂದ ಹೊಸ ಸಾಧ್ಯತೆಗಳನ್ನು ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೆರೆದಿಟ್ಟಿದೆ.

**–ಡಾ. ಮಹೇಶ್‌ಚಂದ್ರಗುರು ಬಿ.ಪಿ.**

**–ಲೋಹಿತ್ ಜೆ.**

## ಮಾಧ್ಯಮಿಕ ಶಿಕ್ಷಣ ಮಂಡಳಿಗಳು

**ಚಾರಿತ್ರಿಕ ಹಿನ್ನೆಲೆ:** ನಮ್ಮ ಇಂದಿನ ಶಿಕ್ಷಣ ಪದ್ಧತಿಯು 1854ರಲ್ಲಿ ಜಾರಿಗೆ ಬಂದ ವುಡ್ಸ್ ನೀತಿ ನಿಯಮಾವಳಿಗಳ (Woods Despatch 1854) ಪರಿಣಾಮವಾಗಿದೆ. ಬಹುಮಟ್ಟಿಗೆ ಈ ನಿಯಮಾವಳಿಗಳು ಇಂದಿನ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪದ್ಧತಿಗೆ ಬುನಾದಿಯಾಗಿವೆ. 10 ವರ್ಷಗಳ ಅಧ್ಯಯನದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ನಡೆಸುವ

Digitised by Bharatavani, CIIL

ಪರೀಕ್ಷೆಯೂ ಸೇರಿರುತ್ತದೆ. ಈ ಪರೀಕ್ಷೆಯನ್ನು 'ಮೆಟ್ರಿಕ್ಯುಲೇಷನ್ ಪರೀಕ್ಷೆ' ಎಂದು ಕರೆಯಲಾಗುತ್ತಿತ್ತು. ಶಾಲಾ ಶಿಕ್ಷಣದ ಪಠ್ಯ ವಸ್ತುಗಳು ಬಹುಪಾಲು ವಿಶ್ವವಿದ್ಯಾನಿಲಯದಿಂದ ಪ್ರಭಾವಿತವಾಗಿರುತ್ತಿದ್ದವು. ನಮಗೆ ಸ್ವಾತಂತ್ರ್ಯ ಶಾಲಾ ಶಿಕ್ಷಣಕ್ಕೆ ಸ್ವಾಯತ್ತತೆ ಬರುವುದಕ್ಕೆ ಮುನ್ನ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಅದರ ಫಲವಾಗಿ 1923ರಲ್ಲಿ ಪ್ರೌಢಶಾಲೆಗಳ ಅಪ್ಪರ್ ಪ್ರೈಮರಿ ಬೋರ್ಡ್ ಮತ್ತು ಇಂಟರ್‌ಮಿಡಿಯಟ್ ಪರೀಕ್ಷಾ ಮಂಡಳಿಗಳು ಅಸ್ತಿತ್ವಕ್ಕೆ ಬಂದುವು. ಸುಮಾರು ಇದೇ ಸಮಯದಲ್ಲಿ ಮದ್ರಾಸ್ ಮಂಡಳಿಯನ್ನೂ ಸಹ ಸ್ಥಾಪಿಸಲಾಯಿತು. ಶಾಲಾ ವಿದ್ಯಾಭ್ಯಾಸದ ವಿಷಯದಲ್ಲಿ ಆಳವಾದ ಚಿಂತನೆಗಳು 1944ರಲ್ಲಿ ಸರ್ಜೆಂಟ್ಸ್ ಸಮಿತಿಯಿಂದ ನಡೆದವು. ಇದು ಸ್ವಲ್ಪ ಹೆಚ್ಚು ಕಡಿಮೆ ಬ್ರಿಟೀಷ್ ಶಾಲಾ ಶಿಕ್ಷಣ ವ್ಯವಸ್ಥೆಯ ಮಾದರಿಯಲ್ಲಿ ಇತ್ತು.

1952ರಲ್ಲಿ ಅಂದರೆ ಸ್ವಾತಂತ್ರ್ಯ ಬಂದ ನಂತರ 'ಮೊದಲಿಯಾರ್ ಸಮಿತಿ' ಎಂಬ ಸಮಿತಿಯನ್ನು ಸೆಕೆಂಡರಿ ಹಂತದಲ್ಲಿ ರಚಿಸಲಾಯಿತು. ಈ ಸಮಿತಿಯಲ್ಲಿ ಶಿಕ್ಷಣದ 'ವ್ಯಾಖ್ಯೆ' (Definition) ಮತ್ತು ಅದರ ಪಾತ್ರವನ್ನು ಸಿದ್ಧಪಡಿಸುವ ಪ್ರಯತ್ನ ಮಾಡಲಾಯಿತು. ಮಾಧ್ಯಮಿಕ ಶಿಕ್ಷಣದ ಪ್ರಮುಖ ಗುರಿ ಏನಾಗಿರಬೇಕೆಂಬ ಚಿಂತನೆಯೂ ನಡೆಯಿತು. ಈ ಸಮಿತಿಯನ್ನು ಮಾಧ್ಯಮಿಕ ಶಿಕ್ಷಣ ಸಮಿತಿ ಎಂದು ಗುರುತಿಸಲಾಗಿದೆ. ಈ ಸಮಿತಿಯಲ್ಲಿ ಮಾಧ್ಯಮಿಕ ಹಂತದ ತಾಂತ್ರಿಕ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಚಿಂತನೆಗಳನ್ನು ನಡೆಸಲಾಯಿತು. ಮಾಧ್ಯಮಿಕ ಹಂತದ ಪಠ್ಯವಸ್ತುಗಳ ಮತ್ತು ಪರೀಕ್ಷಾ ಪದ್ಧತಿಗಳ ಸುಧಾರಣೆ ಬಗ್ಗೆ ಹೆಚ್ಚು ಒತ್ತು ಕೊಡಲಾಯಿತು. ಈ ಸಮಿತಿಯ ವರದಿಯು ಬಂದ ನಂತರ ಪರೀಕ್ಷಾ ಮಂಡಳಿಗಳು ಅಸ್ತಿತ್ವಕ್ಕೆ ಬಂದುವು. 1964–66ರ ಸಮಯದಲ್ಲಿ ರಚಿತವಾದ ಶಿಕ್ಷಣ ಸಮಿತಿಯು ಮೊದಲಿಯಾರ್ ಸಮಿತಿಯ ನಿರ್ಣಯಗಳನ್ನು ಮತ್ತೆ ಎತ್ತಿ ಹಿಡಿಯಿತು. ಆದರೆ ಒಂದು ತಿದ್ದುಪಡಿಯನ್ನು ಸೂಚಿಸಲಾಯಿತು. ಅದು ಏನೆಂದರೆ ಮೊದಲಿಯಾರ್ ಸಮಿತಿಯಲ್ಲಿ ಪ್ರೌಢಶಿಕ್ಷಣವು 11 ವರ್ಷಗಳ ಕಾಲ ಇರಬೇಕೆಂದು ತೀರ್ಮಾನಿಸಲಾಗಿತ್ತು. ಇದರ ಬದಲು 12 ವರ್ಷಗಳ ಕಾಲ ಇರಬೇಕೆಂಬುದು. 1964–66ರ ಶಿಕ್ಷಣ ಸಮಿತಿಯು ಎಲ್ಲ ಶಾಲಾ ಶಿಕ್ಷಣ ಮಂಡಳಿಗಳಲ್ಲಿ ಮಾಧ್ಯಮಿಕ ಶಿಕ್ಷಣವು 12ವರ್ಷಗಳ ಕಾಲ ಇರಲೇಬೇಕೆಂದು ನಿಚ್ಚಳವಾಗಿ ಘೋಷಿಸಲಾಯಿತು. ವಿವಿಧ ಸಮಿತಿಗಳು ಶಾಲಾ ಶಿಕ್ಷಣದ ಎಲ್ಲ ಹಾದಿಗಳ ಮೂಲಕ ಹಾದು ಹೋಗುವುದರಿಂದ ಸಮಿತಿಗಳಿಗೆ ತನ್ನದೇ ಆದ ಸೂಕ್ತ ಹೆಸರನ್ನು ಇಡಬೇಕೆಂಬುದಾಗಿ ಹೇಳಲಾಯಿತು. ಇದಲ್ಲದೆ ಈ ಮಂಡಳಿಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡುವ ಬಗ್ಗೆ ಹಾಗೂ ಅವುಗಳ ಕಾರ್ಯಗಳ ಬಗ್ಗೆ ಒಂದು ರೂಪುರೇಷೆಯನ್ನು ಸಿದ್ಧಪಡಿಸಲಾಯಿತು. ಪ್ರಸ್ತುತ ನಮ್ಮ ದೇಶದಲ್ಲಿ 34 ಮಂಡಳಿಗಳು ಅಸ್ತಿತ್ವದಲ್ಲಿವೆ. ಇವುಗಳ ಪಟ್ಟಿಯನ್ನು ಲೇಖನದ ಕೊನೆಯಲ್ಲಿ ಕೊಡಲಾಗಿದೆ. (ಪಟ್ಟಿ 1)

1952ರ ಮೊದಲಿಯಾರ್ ಸಮಿತಿ ಮತ್ತು 1964–66ರ ಶೈಕ್ಷಣಿಕ ಸಮಿತಿಯ ಸಲಹೆಗಳಿದ್ದರೂ ಶಿಕ್ಷಣದ ವಿವಿಧ ಹಂತಗಳಿಗೆ ಅನುಸಾರವಾಗಿ ಅನೇಕ ಮಂಡಳಿಗಳಿವೆ. ಅವುಗಳನ್ನು ಹೀಗೆ ಸ್ಥೂಲವಾಗಿ ವರ್ಗೀಕರಿಸಬಹುದು.

1. ತರಗತಿ 1ರಿಂದ ಹಿಡಿದು 12ನೇ ತರಗತಿಯ ಶಿಕ್ಷಣದ ವಿಚಾರಗಳನ್ನು ವ್ಯವಹರಿಸುವ ಒಂದು ಸಮಗ್ರ ಶಿಕ್ಷಣ ಸಮಿತಿ. ಇವುಗಳಿಗೆ ಉದಾಹರಣೆ ಎಂದರೆ ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರಿಯಾಣ, ಮುಂತಾದ ಪ್ರದೇಶಗಳಲ್ಲಿ ಹಾಗೂ ಈಶಾನ್ಯ ಪ್ರದೇಶದಲ್ಲಿ ಇರುವ ಕೆಲವು ಶಿಕ್ಷಣ ಮಂಡಳಿಗಳು.

2. ತರಗತಿ 11 ಮತ್ತು 12ರ ವಿಚಾರಗಳನ್ನು ಮಾತ್ರ ವ್ಯವಹರಿಸುವ ಮಂಡಳಿಗಳು. ಇವುಗಳನ್ನು ಮಾಧ್ಯಮಿಕ ಶಿಕ್ಷಣ ಮಂಡಳಿಗಳೆಂದು ಹೆಸರಿಸಲಾಗಿದೆ. ಈ ವರ್ಗದಲ್ಲಿ ಬರುವ ಕೆಲವು ಮಂಡಳಿಗಳನ್ನು ವಿಶೇಷವಾಗಿ ಹೆಸರಿಸಬಹುದು – ಒರಿಸ್ಸಾ, ಪಶ್ಚಿಮ ಬಂಗಾಳ, ಮಣಿಪುರ, ಅಸ್ಸಾಂ ಮತ್ತು ಆಂಧ್ರಪ್ರದೇಶದ ಇಂಟರ್ ಮೀಡಿಯೇಟ್ ಶಿಕ್ಷಣ ಮಂಡಳಿಗಳು.

3. ಮೂರನೆ ವರ್ಗಕ್ಕೆ ಸೇರಿದ ಮಂಡಳಿಗಳು ತರಗತಿ 9 ರಿಂದ ಹಿಡಿದು 12ನೇ ತರಗತಿಯವರೆಗಿನ ಶಿಕ್ಷಣದ ವಿಚಾರಗಳನ್ನು ವ್ಯವಹರಿಸುತ್ತವೆ. ಇವುಗಳಲ್ಲಿ ಕೆಲವು ಮುಖ್ಯ ಮಂಡಳಿಗಳು ಹೀಗಿವೆ. ಮಾಧ್ಯಮಿಕ ಶಿಕ್ಷಣದ ಕೇಂದ್ರೀಯ ಮಂಡಳಿ(CBSE), ಭಾರತೀಯ ಶಾಲಾ ಪರೀಕ್ಷೆಗಳ ಅರ್ಹತಾಪತ್ರಗಳ ಸಲಹಾ ಸಮಿತಿ(CISCE), ರಾಷ್ಟ್ರೀಯ ಮುಕ್ತ ಶಾಲೆ(NOS), ಮಹಾರಾಷ್ಟ್ರ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಮಂಡಳಿ, ರಾಜಾಸ್ಥಾನ ಮಾಧ್ಯಮಿಕ ಶಿಕ್ಷಣ ಮಂಡಳಿ ಮತ್ತು ಉತ್ತರ ಪ್ರದೇಶದ ಪ್ರೌಢಶಾಲಾ ಮತ್ತು ಇಂಟರ್‌ಮೀಡಿಯೇಟ್ ಶಿಕ್ಷಣ (Intermediate) ಮಂಡಳಿ. ಮಾಧ್ಯಮಿಕ ಶಿಕ್ಷಣದ ಕೇಂದ್ರೀಯ ಮಂಡಳಿ(CBSE) ಮತ್ತು ಭಾರತೀಯ ಶಾಲಾ ಪರೀಕ್ಷೆಗಳ ಅರ್ಹತಾಪತ್ರಗಳ ಸಲಹಾ ಸಮಿತಿ(CISCE)ಗಳು ಅಂಗೀಕೃತವಾದ ಸಮ್ಮಿಶ್ರ ಶಾಲೆಗಳನ್ನು (1ರಿಂದ 12ನೇ ತರಗತಿಗಳು) ಕೂಡ ಹೊಂದಿವೆ.

ಮೇಲೆ ಉಲ್ಲೇಖಿಸಿರುವ ಬಹುತೇಕ ಮಂಡಳಿಗಳು ಆಯಾ ರಾಜ್ಯಗಳ ಶಾಸನದ ಕಾಯಿದೆಗಳಿಂದ ರಚಿತವಾಗಿವೆ. ಈ ಮಂಡಳಿಗಳ ವ್ಯಾಪ್ತಿಯು ಬಹುತೇಕ ಸಂದರ್ಭಗಳಲ್ಲಿ ಆಯಾ ರಾಜ್ಯಗಳ ಸೀಮಾ ಕ್ಷೇತ್ರಗಳಿಗೆ ಸೀಮಿತವಾಗಿರುತ್ತದೆ. ಆದರೂ CBSE, CISCE ಮತ್ತು NOS ಗಳು ಅಖಿಲಭಾರತ ಹಿರಿಮೆಯನ್ನು ಹೊಂದಿವೆ.

**ಅಖಿಲ ಭಾರತ ಮಂಡಳಿಗಳು:**

1929ರಲ್ಲಿ ಭಾರತ ಸರ್ಕಾರದಿಂದ ಅಜ್ಮೀರ್‌ನಲ್ಲಿ ಮಾಧ್ಯಮಿಕ ಶಿಕ್ಷಣದ ಕೇಂದ್ರೀಯ ಮಂಡಳಿ(CBSE) ಯನ್ನು ಆಯೋಜಿಸಲಾಯಿತು. ಕ್ರಮೇಣ ಈ ಮಂಡಳಿಯ ವ್ಯಾಪ್ತಿಯು ಅಖಿಲ ಭಾರತದ ಹಂತದಲ್ಲಿ ಇರಬೇಕೆಂಬ ಚಿಂತನೆಯು ಬಂದಿತು. ಅನಂತರ ಈ ಮಂಡಳಿಯನ್ನು 1962ರಲ್ಲಿ ದೆಹಲಿಗೆ ವರ್ಗಾಯಿಸಲಾಯಿತು ಮತ್ತು ಅದರ ಈಗಿನ ಸ್ವರೂಪವನ್ನು ಆನಂತರ ದೆಹಲಿಯಲ್ಲಿ ರೂಪಿಸಲಾಯಿತು. ಈ ಸಂಸ್ಥೆಯು

Digitised by Bharatavani, CIIL

ಇಂದಿನವರೆಗೆ ಶಿಕ್ಷಣದಲ್ಲಿ ಬದಲಾಗುತ್ತಿರುವ ಸನ್ನಿವೇಶಗಳಿಗೆ, ಶಿಕ್ಷಣದ ಅಗತ್ಯಗಳಿಗೆ ತಕ್ಕಂತೆ ಪಠ್ಯಕ್ರಮ, ಅದರ ನಿರ್ವಹಣೆ ಮತ್ತು ಅವುಗಳ ಮೌಲ್ಯಮಾಪನ ಪದ್ಧತಿ ಮೊದಲಾದ ವಿಷಯಗಳಿಗೆ ಸ್ಪಂದಿಸುತ್ತಿದೆ. ವಾಸ್ತವವಾಗಿ ಅನೇಕ ಮಂಡಳಿಗಳು ಇದನ್ನು ಒಂದು ಮಾದರಿ ಸಂಸ್ಥೆ ಎಂದು ಪರಿಗಣಿಸುತ್ತಿವೆ.

ಹೀಗೆಯೇ CISCE ಯು ಹಿಂದಿನ ಆಂಗ್ಲೋ ಇಂಡಿಯನ್ ಮಂಡಳಿಯಿಂದ ಇಂದಿನ ರೂಪದಲ್ಲಿ ಹೊರಹೊಮ್ಮಿದೆ. ಅನೇಕ ರೀತಿಯಲ್ಲಿ ಈ ಸಂಸ್ಥೆಯೂ ಸಹ ಬದಲಾಗುತ್ತಿರುವ ಶಿಕ್ಷಣ ಕ್ಷೇತ್ರದ ಅಗತ್ಯಗಳಿಗೆ ಸ್ಪಂದಿಸುತ್ತಿದೆ.

ರಾಷ್ಟ್ರೀಯ ಮುಕ್ತ ಶಾಲೆ(NOS) ಎನ್ನುವ ಸಂಸ್ಥೆಯು ಮೊದಲಿಗೆ ಪ್ರೌಢ ಶಿಕ್ಷಣದ ಕೇಂದ್ರೀಯ ಮಂಡಳಿ(CBSE) ಯ ಒಂದು ಭಾಗವಾಗಿದ್ದು ಈಗ ತನ್ನದೇ ಆದ ಅಸ್ತಿತ್ವವನ್ನು ಹೊಂದಿದೆ. CBSE ಸಂಸ್ಥೆಯ ಪರೀಕ್ಷೆಗಳನ್ನು ಕೆಲವು ವಿದ್ಯಾರ್ಥಿಗಳು ತೆಗೆದುಕೊಳ್ಳುವುದಿಲ್ಲ. ಅಂತಹ ವಿದ್ಯಾರ್ಥಿಗಳಿಗೆ NOS ಸಂಸ್ಥೆಯು ಪರೀಕ್ಷೆಗಳನ್ನು ನಡೆಸುತ್ತದೆ. ಶಾಲೆಗೆ ಹೋಗದ ವಿದ್ಯಾರ್ಥಿಗಳಿಗಾಗಿ ಹೊಂದುವಂಥ ಪಠ್ಯಕ್ರಮವನ್ನು ಜಾರಿಗೆ ತಂದಿದೆ. ಅಸಾಂಪ್ರದಾಯಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದನ್ನು ಒಂದು ಪಥ ನಿರ್ಮಾಪಕ ಸಂಸ್ಥೆ ಎನ್ನಬಹುದು.

**ಮಂಡಳಿಗಳ ಪಾತ್ರ ಮತ್ತು ಅವುಗಳ ಸ್ಥಾನಮಾನ:**

ಇತ್ತೀಚಿನವರೆಗೆ ಕೆಲವನ್ನು ಹೊರತುಪಡಿಸಿ ಉಳಿದ ಎಲ್ಲ ಮಂಡಳಿಗಳು 10ನೇ ತರಗತಿ ಮತ್ತು 12ನೇ ತರಗತಿಯಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸುತ್ತಿದ್ದುವು. ಇಂದಿಗೂ ಸಹ ಅನೇಕ ಮಂಡಳಿಗಳನ್ನು ಪರೀಕ್ಷಾ ಮಂಡಳಿಗಳೆಂದೇ ಕರೆಯಲಾಗಿದೆ. ಪ್ರಾಧ್ಯಾಪಕ ಅಮ್ರಿಕ್ ಸಿಂಗ್ ಅವರ ನೇತೃತ್ವದ ಮಂಡಳಿಗಳ ವಿಶೇಷ ಕಾರ್ಯಪಡೆಯು ಮಾನ್ಯತೆಯ ವಿಚಾರಗಳಲ್ಲಿ ನೀಡಿದ ವರದಿಯ ಪ್ರಕಾರ ಈ ಮಂಡಳಿಗಳು ಶಾಲಾ ಶಿಕ್ಷಣದ ಮಂಡಳಿಗಳಾಗಿ ಮಾರ್ಪಾಟಾಗಿವೆ. ಅಂದರೆ ಈಗ ಈ ಮಂಡಳಿಗಳು ಪಠ್ಯಕ್ರಮವನ್ನು ಉತ್ತಮ ಪಡಿಸುವುದು, ಪಠ್ಯಕ್ರಮದ ವಿಚಾರದಲ್ಲಿ ನಿರ್ವಹಿಸುವ ತಂತ್ರಾಂಶಗಳು, ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಈ ಕೆಲಸಗಳನ್ನು 10 ಮತ್ತು 12ನೇ ತರಗತಿಗಳ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸುವುದರ ಜೊತೆಗೆ ನಿರ್ವಹಿಸುತ್ತಿವೆ. ಕೆಲವು ಮಂಡಳಿಗಳು 8ನೇ ತರಗತಿಯ ಕೊನೆಗೆ ಪರೀಕ್ಷೆಯನ್ನು ನಡೆಸುತ್ತಿವೆ ಎನ್ನುವುದು ಗಮನಾರ್ಹ ಅಂಶ. ಇದು ಕಡಿಮೆ ಪ್ರಮಾಣದ್ದಾದರೂ ಸಹ ಕೆಲಸವನ್ನು ನಿರ್ವಹಿಸುತ್ತಿವೆ. 1986– 92ರ ರಾಷ್ಟ್ರೀಯ ಶಿಕ್ಷಣ ನಿಯಮಾವಳಿಗಳ ಪ್ರಕಾರ ವಿದ್ಯಾರ್ಥಿಗಳ 10ನೇ ವರ್ಷದ ಕೊನೆಯಲ್ಲಿ ಮೊದಲನೆಯ ಪರೀಕ್ಷೆಯನ್ನು ನಡೆಸಬೇಕೆಂದು ಸಲಹೆಯನ್ನು ಕೊಡಲಾಗಿದೆ.

**ಆಂತರಿಕ ಕಾರ್ಯಾಚರಣೆ:**

ಅರ್ಮಿಕ್ ಸಿಂಗ್‌ರವರ ಕಾರ್ಯಪಡೆಯ ವರದಿಯು ವಿವಿಧ ಮಂಡಳಿಗಳ ಪಾತ್ರ ಮತ್ತು ಕಾರ್ಯಾಚರಣೆಯ ಬಗ್ಗೆ ಅಧ್ಯಯನವನ್ನು ಮಾಡಿ ಈ ಅಧ್ಯಯನಕ್ಕೆ 1952ರಲ್ಲಿ ರಚಿಸಲಾಗಿದ್ದ ಮುದಲಿಯಾರ್ ಸಮಿತಿಯ ವರದಿಯನ್ನು ಶಿಕ್ಷಣ ಆಯೋಗ (1964–66) ಮತ್ತು NPE 1986/92 ಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಲಾಯಿತು. ಅನಂತರ ಪ್ರತಿ ಮಂಡಳಿಯು ಕೆಳಗೆ ಸೂಚಿಸಿರುವಂತೆ ಮುಖ್ಯ ವಿಭಾಗಗಳನ್ನು ಹೊಂದಿರಬೇಕೆಂದು ಸಲಹೆ ಮಾಡಿತು.

**ಪಟ್ಟಿ–1**

**ಸೆಕೆಂಡರಿ ಶಿಕ್ಷಣ ಮಂಡಳಿಗಳು: ಅವುಗಳ ಸ್ಥಾನಮಾನ ಮತ್ತು ಅವು ಸ್ಥಾಪಿತವಾದ ವರ್ಷ**

**ಅನುಬಂಧ – 1**

**ದೇಶದಲ್ಲಿ ಇರುವ ವಿವಿಧ ಮಂಡಳಿಗಳ ಪಟ್ಟಿ**

| ರಾಜ್ಯ | ಮಂಡಳಿ | ಸ್ಥಾಪಿತವಾದ ವರ್ಷ | ಆಡಳಿತ ವ್ಯವಸ್ಥೆ |
|---|---|---|---|
| ಆಂಧ್ರ ಪ್ರದೇಶ | 1. ಆಂಧ್ರಪ್ರದೇಶ ಮಾಧ್ಯಮಿಕ ಶಿಕ್ಷಣ ಮಂಡಳಿ | 1953 | ರಾಜ್ಯ ಶಿಕ್ಷಣ ಇಲಾಖೆಯ ಒಂದು ಭಾಗ |
| | 2. ಆಂಧ್ರಪ್ರದೇಶ ಇಂಟರ್‌ಮಿಡಿಯಟ್ ಶಿಕ್ಷಣ ಮಂಡಳಿ | 1971 | ಕಾನೂನುಸಮ್ಮತ |
| ಅಸ್ಸಾಂ | 1. ಮಾಧ್ಯಮಿಕ ಶಿಕ್ಷಣ ಮಂಡಳಿ, ಅಸ್ಸಾಂ | 1962 | ಕಾನೂನುಸಮ್ಮತ |
| | 2. ಅಸ್ಸಾಂ ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿ | 1984 | ಕಾನೂನುಸಮ್ಮತ |

Digitised by Bharatavani, CIIL

| | | | |
|---|---|---|---|
| ಬಿಹಾರ | 1. ಬಿಹಾರ ಶಾಲಾ ಪರೀಕ್ಷಾ ಮಂಡಳಿ<br>2. ಬಿಹಾರ ಮಾಧ್ಯಮಿಕ ಶಿಕ್ಷಣ ಮಂಡಳಿ | 1952<br>1980 | ಕಾನೂನುಸಮ್ಮತ<br>ಕಾನೂನುಸಮ್ಮತ |
| ಗೋವಾ | ಗೋವಾ ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿ | 1975 | ಕಾನೂನುಸಮ್ಮತ |
| ಗುಜರಾತ್ | ಗುಜರಾತ್ ಮಾಧ್ಯಮಿಕ ಶಿಕ್ಷಣ ಮಂಡಳಿ | 1960 | ಕಾನೂನುಸಮ್ಮತ |
| ಹರಿಯಾನಾ | ಹರಿಯಾನಾ ಶಿಕ್ಷಣ ಮಂಡಳಿ | 1969 | ಕಾನೂನುಸಮ್ಮತ |
| ಹಿಮಾಚಲ ಪ್ರದೇಶ | ಹಿಮಾಚಲ ಪ್ರದೇಶ ಶಾಲಾ ಶಿಕ್ಷಣ ಮಂಡಳಿ | 1969 | ಕಾನೂನುಸಮ್ಮತ |
| ಜಮ್ಮು ಮತ್ತು ಕಾಶ್ಮೀರ | ಜಮ್ಮು ಮತ್ತು ಕಾಶ್ಮೀರ ರಾಜ್ಯದ ಶಾಲಾ ಶಿಕ್ಷಣ ಮಂಡಳಿ | 1965 | ಕಾನೂನುಸಮ್ಮತ |
| ಕರ್ನಾಟಕ | 1. ಕರ್ನಾಟಕ ಮಾಧ್ಯಮಿಕ ಶಿಕ್ಷಣ ಪರೀಕ್ಷಾ ಮಂಡಳಿ<br>2. ಕರ್ನಾಟಕ ಸ್ನಾತಕಪೂರ್ವ ಶಿಕ್ಷಣ ಮಂಡಳಿ | 1966<br>1970 | ರಾಜ್ಯ ಶಿಕ್ಷಣ ಇಲಾಖೆಯ ಒಂದು ಭಾಗ<br>ರಾಜ್ಯ ಸ್ನಾತಕಪೂರ್ವ ಶಿಕ್ಷಣ ಇಲಾಖೆಯ ಒಂದು ಭಾಗ |
| ಕೇರಳ | ಕೇರಳ ಸಾರ್ವಜನಿಕ ಪರೀಕ್ಷಾ ಮಂಡಳಿ | 1949 | ಕಾನೂನುಸಮ್ಮತ |
| ಮಹಾರಾಷ್ಟ್ರ | ಮಹಾರಾಷ್ಟ್ರ ರಾಜ್ಯದ ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿ | 1966 | ಕಾನೂನುಸಮ್ಮತ |
| ಮಧ್ಯಪ್ರದೇಶ | ಮಧ್ಯಪ್ರದೇಶ ಮಾಧ್ಯಮಿಕ ಶಿಕ್ಷಣ ಮಂಡಳಿ | 1959 | ಕಾನೂನುಸಮ್ಮತ |
| ಮಣಿಪುರ | 1. ಮಣಿಪುರ ಮಾಧ್ಯಮಿಕ ಶಿಕ್ಷಣ ಮಂಡಳಿ<br>2. ಮಣಿಪುರ ಉನ್ನತ ಮಾಧ್ಯಮಿಕ ಶಿಕ್ಷಣ ಸಮಿತಿ | 1972<br>1992 | ಕಾನೂನುಸಮ್ಮತ<br>ಕಾನೂನುಸಮ್ಮತ |
| ಮೇಘಾಲಯ | ಮೇಘಾಲಯ ಶಾಲಾ ಶಿಕ್ಷಣ ಮಂಡಳಿ | 1973 | ಕಾನೂನುಸಮ್ಮತ |
| ಮಿಜೋರಾಂ | ಮಿಜೋರಾಂ ಶಾಲಾ ಶಿಕ್ಷಣ ಮಂಡಳಿ | 1976 | ಕಾನೂನುಸಮ್ಮತ |
| ನಾಗಾಲ್ಯಾಂಡ್ | ನಾಗಾಲ್ಯಾಂಡ್ ಶಾಲಾ ಶಿಕ್ಷಣ ಮಂಡಳಿ | 1974 | ಕಾನೂನುಸಮ್ಮತ |
| ಒರಿಸ್ಸಾ | 1. ಒರಿಸ್ಸಾ ಮಾಧ್ಯಮಿಕ ಶಿಕ್ಷಣ ಮಂಡಳಿ<br>2. ಒರಿಸ್ಸಾ ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿ | 1965<br>1955 | ಕಾನೂನುಸಮ್ಮತ<br>ಕಾನೂನುಸಮ್ಮತ |
| ಪಂಜಾಬ್ | ಪಂಜಾಬ್ ಶಾಲಾ ಶಿಕ್ಷಣ ಮಂಡಳಿ | 1969 | ಕಾನೂನುಸಮ್ಮತ |
| ರಾಜಾಸ್ಥಾನ | ರಾಜಾಸ್ಥಾನ ಮಾಧ್ಯಮಿಕ ಶಿಕ್ಷಣ ಮಂಡಳಿ | 1957 | ಕಾನೂನುಸಮ್ಮತ |

Digitised by Bharatavani, CIIL

| | | | |
|---|---|---|---|
| ತಮಿಳುನಾಡು | 1. ತಮಿಳುನಾಡು ಮಾಧ್ಯಮಿಕ ಶಿಕ್ಷಣ ಮಂಡಳಿ<br>2. ತಮಿಳುನಾಡು ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿ | 1908<br>1982 | ರಾಜ್ಯ ಶಿಕ್ಷಣ ಇಲಾಖೆಯ ಒಂದು ಭಾಗ<br>ರಾಜ್ಯ ಶಿಕ್ಷಣ ಇಲಾಖೆಯ ಒಂದು ಭಾಗ |
| ತ್ರಿಪುರ | ತ್ರಿಪುರ ಮಾಧ್ಯಮಿಕ ಶಿಕ್ಷಣ ಮಂಡಳಿ | 1973 | ಕಾನೂನುಸಮ್ಮತ |
| ಉತ್ತರ ಪ್ರದೇಶ | ಉತ್ತರ ಪ್ರದೇಶ ಪ್ರೌಢಶಾಲಾ ಮತ್ತು ಇಂಟರ್‌ಮಿಡಿಯಟ್ ಶಿಕ್ಷಣ ಮಂಡಳಿ | 1922 | ಶಿಕ್ಷಣ ಇಲಾಖೆಯ ಅಡಿಯಲ್ಲಿ ಸ್ವಾಯತ್ತತೆ ಪಡೆದ ಸಂಸ್ಥೆ |
| ಪಶ್ಚಿಮ ಬಂಗಾಳ | 1. ಪಶ್ಚಿಮ ಬಂಗಾಳ ಮಾಧ್ಯಮಿಕ ಶಿಕ್ಷಣ ಮಂಡಳಿ<br>2. ಪಶ್ಚಿಮ ಬಂಗಾಳ ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿ | 1951 (1964ರಲ್ಲಿ ಇದನ್ನು ಪುನರ್‌ರಚಿಸಲಾಯಿತು)<br>1929 (1962ರಲ್ಲಿ ಇದನ್ನು ಪುನರ್‌ರಚಿಸಲಾಯಿತು) | ಕಾನೂನುಸಮ್ಮತ<br>ಕಾನೂನುಸಮ್ಮತ |
| ಅಖಿಲ ಭಾರತ ಮಂಡಳಿಗಳು | 1. ಸಿ.ಬಿ.ಎಸ್.ಇ– ನವದೆಹಲಿ<br>2.ಸಿ.ಐ.ಎಸ್.ಸಿ.ಇ–ನವದೆಹಲಿ<br>3.ಎನ್.ಓ.ಎಸ್– ನವದೆಹಲಿ | 1929<br>1958<br>1989 | ಭಾರತ ಸರ್ಕಾರದ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ<br>ನೋಂದಾಯಿತ ಸಂಘ<br>ಭಾರತ ಸರ್ಕಾರದ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ |

1. **ಶೈಕ್ಷಣಿಕ ವಿಭಾಗ:** ಪಠ್ಯಕ್ರಮವನ್ನು ಅಭಿವೃದ್ಧಿಗೊಳಿಸುವುದು, ಅದರ ನಿರ್ವಹಣೆ ಮತ್ತು ಶೈಕ್ಷಣಿಕ ಮಟ್ಟಗಳನ್ನು ನಿರ್ಧರಿಸುವುದು ಈ ಕಾರ್ಯದಲ್ಲಿ ಶೈಕ್ಷಣಿಕ ವಿಭಾಗಗಳು NCERT ಮತ್ತು ರಾಷ್ಟ್ರದಲ್ಲಿರುವ ಅದೇ ಬಗೆಯ ಸಂಪನ್ಮೂಲ ವ್ಯವಸ್ಥೆಗಳೊಂದಿಗೆ ಪರಸ್ಪರ ಕಾರ್ಯಗಳನ್ನು ನಡೆಸುತ್ತವೆಂದು ಭಾವಿಸಲಾಗಿದೆ.

2. **ಸೇವಾಂತರ್ಗತ ತರಬೇತಿ ವಿಭಾಗ:** ಈ ವಿಭಾಗವು ಹಾಲಿ ಶಿಕ್ಷಕ ವೃತ್ತಿಯಲ್ಲಿರುವವರಿಗೆ ತರಬೇತಿಯನ್ನು ಕೊಡುತ್ತದೆ. ಅರ್ಮಿಕ್ ಸಿಂಗ್ ಸಮಿತಿಯು ಮಾಧ್ಯಮಿಕ ಶಿಕ್ಷಣದ ಗುಣಮಟ್ಟವನ್ನು ಕಾಪಾಡಬೇಕಾದರೆ ಶಿಕ್ಷಕರಿಗೆ ಆಗಿಂದಾಗ್ಯೆ ತರಬೇತಿಯನ್ನು ಕೊಡುತ್ತಿರಬೇಕು ಎಂದು ಅಭಿಪ್ರಾಯ ಪಟ್ಟಿದೆ. ಅನಂತರ ಕಂಡು ಬಂದ ವಿಷಯವೇನೆಂದರೆ ಮಂಡಳಿಗಳು ತಾವೇ ಸ್ವತಃ ಇಷ್ಟು ದೊಡ್ಡ ಕಾರ್ಯಭಾರವನ್ನು ಹೊರಲಾರವು. ವಿದ್ಯಾರ್ಥಿಗಳು ಮುಕ್ತವಾಗಿ ಕಲಿಯುವ ವ್ಯವಸ್ಥೆಯು ಇರಬೇಕೆಂದರೆ ಈ ಮಂಡಳಿಗಳು NCERT ಮತ್ತು ರಾಜ್ಯಮಟ್ಟದಲ್ಲಿ ಸ್ಥಾಪಿತವಾಗಿರುವ SCERT, DIET, College of Education ಮುಂತಾದ ಸಂಸ್ಥೆಗಳ ಸಹಾಯವನ್ನು ಪಡೆಯಬೇಕು.

3. **ಪರೀಕ್ಷಾ ವಿಭಾಗ:** ಈ ವಿಭಾಗವು ಶೈಕ್ಷಣಿಕ ಅಭಿವೃದ್ಧಿ ವಿಭಾಗದ ಸಹಯೋಗವನ್ನು ಪಡೆದು ಪರೀಕ್ಷೆಗಳ ಪದ್ಧತಿಯ ಸುಧಾರಣೆಗಳನ್ನು ತರುವ ಜವಾಬ್ದಾರಿಯನ್ನು ಹೊಂದಿದೆ.

ಈ ಮೂರು ವಿಭಾಗಗಳಲ್ಲದೆ ಎಲ್ಲ ಮಂಡಳಿಗಳಲ್ಲಿ ಇರುವಂತೆ ಆಡಳಿತ ಮತ್ತು ಹಣ ನಿರ್ವಹಣಾ ವಿಭಾಗಗಳೂ ಇರುತ್ತವೆ.

Digitised by Bharatavani, CIIL

CBSE, CISCE, ಪಂಜಾಬ್ ಮತ್ತು ಜಮ್ಮು & ಕಾಶ್ಮೀರದ ಮಂಡಳಿಗಳು ಮೊದಲಾದುವು ಮಂಡಳಿಗಳ ಭಾಗವಾಗಿ ತಮ್ಮದೇ ಆದ ಶೈಕ್ಷಣಿಕ ವಿಭಾಗಗಳನ್ನು ಹೊಂದಿವೆ. ಈ ವಿಚಾರದಲ್ಲಿ CBSE ಮಂಡಳಿಯು ಉಳಿದ ಎಲ್ಲ ಶೈಕ್ಷಣಿಕ ಮಂಡಳಿಗಳಿಗಿಂತ ಮುಂಚೂಣಿಯಲ್ಲಿದೆ. ಈ ಮಂಡಳಿಯೂ ಒಬ್ಬ ಸ್ವತಂತ್ರ ನಿರ್ದೇಶಕರ ಆಡಳಿತಕ್ಕೆ ಒಳಪಟ್ಟಿದೆ. ಈ ನಿರ್ದೇಶಕರ ಸ್ಥಾನವು ಉಳಿದ ಸಂಸ್ಥೆಗಳ ಮುಖ್ಯಸ್ಥರಷ್ಟೇ ಉನ್ನತ ಮಟ್ಟದ್ದಾಗಿದೆ. ಉಳಿದ ಬಹುತೇಕ ಮಂಡಳಿಗಳಲ್ಲಿ ಪರೀಕ್ಷಾ ವಿಭಾಗವು ಎಲ್ಲ ವಿಭಾಗಗಳಿಗಿಂತ ಪ್ರಮುಖವಾಗಿದೆ. CBSE ಮಂಡಳಿಯ ವಿಚಾರದಲ್ಲಿ ಹಾಗಲ್ಲ. ಇಲ್ಲಿ ಶೈಕ್ಷಣಿಕ ವಿಭಾಗವನ್ನು ಬಲಪಡಿಸಲಾಗಿದೆ. ಇತರ ಮಂಡಳಿಗಳಲ್ಲೂ ಶೈಕ್ಷಣಿಕ ವಿಭಾಗವನ್ನು ಹೆಚ್ಚಿನ ಮಟ್ಟಿಗೆ ಬಲಪಡಿಸುವ ಆಲೋಚನೆಯು ಇದೆ.

CBSE ಮಂಡಳಿಯು ಅಖಿಲ ಭಾರತದ ಮಟ್ಟದಲ್ಲಿ ಇದ್ದರೂ ಹೊರದೇಶದಲ್ಲಿರುವ ಅನೇಕ ಶಾಲೆಗಳು ಈ ಮಂಡಳಿಯ ಅಂಗಸಂಸ್ಥೆಗಳು. ಯಾವುದಾದರೂ ರಾಜ್ಯದಲ್ಲಿ ಶಿಕ್ಷಣ ಮಂಡಳಿಯು ಇಲ್ಲದಿದ್ದಲ್ಲಿ ತನ್ನದೇ ಆದ ಒಂದು ಮಂಡಳಿಯನ್ನು ಸ್ಥಾಪಿಸಲು ಈ ಮಂಡಳಿಯು ನೆರವಾಗಲೂ CBSE ಗೆ ಸ್ವಾತಂತ್ರ್ಯವನ್ನು ಕೊಡಲಾಗಿದೆ.

ಈ ಮಂಡಳಿಗಳು ಶಿಕ್ಷಣ ಪದ್ಧತಿಯನ್ನು ವಿಶ್ವವಿದ್ಯಾನಿಲಯದ ಪದ್ಧತಿಯಿಂದ ಮುಕ್ತಿಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ದೇಶದಲ್ಲಿ ಮಾಧ್ಯಮಿಕ ಶಿಕ್ಷಣಕ್ಕೆ ಸ್ವಂತ ಅಸ್ತಿತ್ವ ದೊರೆತಿದೆ. ಈ ಮಾಧ್ಯಮಿಕ ಶಿಕ್ಷಣಕ್ಕೆ ಉನ್ನತ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ನಂತರ ಯಾವುದೇ ವಿದ್ಯಾರ್ಥಿ ಉದ್ಯೋಗಲೋಕವನ್ನು ಪ್ರವೇಶಿಸಿ ಮಧ್ಯಮ ಹಂತದ ಉದ್ಯೋಗವನ್ನು ಪಡೆಯಲು ಶಕ್ತನಾಗಿರಬೇಕು. ಒಂದು ಸ್ವತಂತ್ರ ಸ್ಥಾನಮಾನ ದೊರೆತಿದ್ದು ಬಹುತೇಕ ವಿದ್ಯಾರ್ಥಿಗಳಿಗೆ ಅಂತಿಮ ಘಟ್ಟವಾಗಿದೆ.

**ವೃತ್ತಿಪರವಾಗಿ ಮೇಲ್ದರ್ಜೆಗೆ ಏರಿಸುವುದು:**

ಎಲ್ಲ ಮಂಡಳಿಗಳ ಸಿಬ್ಬಂದಿ ವರ್ಗವನ್ನು ನಿರಂತರವಾಗಿ ಮೇಲ್ದರ್ಜೆಗೆ ಕೊಂಡೊಯ್ಯಬೇಕು ಎಂಬ ಅಂಶವನ್ನು ಗುರುತಿಸಲಾಯಿತು. ಹೊಸ ಹೊಸ ಪರೀಕ್ಷಾ ತಂತ್ರಗಳ ಬಗ್ಗೆ NCERT ಸಂಸ್ಥೆಯು ಎಲ್ಲ ಮಂಡಳಿಗಳ ಸಿಬ್ಬಂದಿಗೆ ತರಬೇತಿಯನ್ನು ಕೊಡುವ ವಿಚಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಇದರ ಪರಿಣಾಮವಾಗಿ ಈ ಸಂಸ್ಥೆಯು ತಯಾರಿಸಿದ ವಿವಿಧ ಪ್ರಶ್ನಪತ್ರಿಕೆಗಳಲ್ಲಿ ಗಮನೀಯ ಸುಧಾರಣೆಯು ಕಂಡುಬಂದಿದೆ. ಒಟ್ಟಾರೆ ಇಡೀ ದೇಶದಲ್ಲಿ ಶಾಲಾಶಿಕ್ಷಣವನ್ನು ಇನ್ನಷ್ಟು ಬಲಪಡಿಸಲು NCERT, NIEPA ಮತ್ತು NCTE ಸಂಸ್ಥೆಗಳು ಪರಸ್ಪರ ಶ್ರಮಿಸುತ್ತಿವೆ.

**ಮೂಲ: ಡಿ.ವಿ. ಶರ್ಮ**

**ಅನು: ವಿಶ್ವನಾಥ ಜಿ.ಆರ್.**

## ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ

ಶಿಕ್ಷಣವೇ ಮಾನವ ಸಂಪನ್ಮೂಲ ಅಭಿವೃದ್ಧಿಯ ಮುಖ್ಯಾಂಶ. ಶಿಕ್ಷಣ ಸಮಾಜದ ಸಾಮಾಜಿಕ–ಆರ್ಥಿಕ ಸ್ಥಿತಿಗಳ ಸಮತೋಲನವನ್ನು ಕಾಪಾಡುವುದರಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಭಾರತದ ಪ್ರಜೆಗಳು ಬಹು ಮುಖ್ಯವಾದ ಮತ್ತು ಮೌಲ್ಯಯುತವಾದ ಸಂಪನ್ಮೂಲವಾದುದರಿಂದ ಆ ಸಂಪನ್ಮೂಲವನ್ನು ಬಹಳ ಎಚ್ಚರಿಕೆಯಿಂದ ಬೆಳೆಸುವುದರಲ್ಲಿ ಶಿಕ್ಷಣ ಮುಖ್ಯಪಾತ್ರವನ್ನು ವಹಿಸುತ್ತದೆ. ಅದರಿಂದ ಜನರ ಜೀವನದ ಗುಣಮಟ್ಟ ಸುಧಾರಿಸುತ್ತದೆ. ಸುಭದ್ರವಾದ ಶಿಕ್ಷಣದ ತಳಪಾಯದಿಂದ ದೇಶದ ಪ್ರಜೆಗಳ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ಕಾರ್ಯಸಾಧನೆಗಾಗಿ 1985ರ ಸೆಪ್ಟೆಂಬರ್ 26ರಂದು "ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ"ವನ್ನು ಭಾರತ ಸರ್ಕಾರದ (ಕೆಲಸ ನಿರ್ವಹಣೆ ಹಂಚಿಕೆ) ಕಾನೂನನ್ನು ಮಾಡಿ (1961) 174ನೇ ತಿದ್ದುಪಡಿ ಮೂಲಕ ಸ್ಥಾಪಿಸಿ ಜಾರಿಗೆ ತರಲಾಯಿತು. ತನ್ನ ಧ್ಯೇಯ ಸಾಧನೆಗಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು (Ministry to Human Resource Development -MHRD) ಎರಡು ಇಲಾಖೆಗಳ ಮೂಲಕ ಕೆಲಸ ಮಾಡುತ್ತದೆ:

1. ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಮತ್ತು
2. ಉನ್ನತ ಶಿಕ್ಷಣದ ಇಲಾಖೆ

ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯು ದೇಶದ ಶಾಲಾ ಶಿಕ್ಷಣ ಮತ್ತು ಸಾಕ್ಷರತೆಗಳ ಅಭಿವೃದ್ಧಿಯ ಜವಾಬ್ದಾರಿಯನ್ನು ವಹಿಸಿಕೊಂಡರೆ, ಉನ್ನತ ಶಿಕ್ಷಣದ ಇಲಾಖೆಯು ಪ್ರಪಂಚದ ಮೂರನೇ ದೊಡ್ಡ ವ್ಯವಸ್ಥೆಯ ಉನ್ನತ ಶಿಕ್ಷಣದ ಕ್ಷೇತ್ರವನ್ನು ಹೊಂದಿರುವ ಭಾರತದ ಉನ್ನತ ಶಿಕ್ಷಣ ಅಭಿವೃದ್ಧಿಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯು ಮಕ್ಕಳ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ಅವರನ್ನು ಉತ್ತಮ ಪ್ರಜೆಗಳಾಗಿ ಮಾಡುವತ್ತ ತನ್ನ ಗಮನವನ್ನು ಕೇಂದ್ರಿಕರಿಸಿದೆ. ಇದಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅದರಿಂದಾಗಿ ಶಾಲೆಗಳಲ್ಲಿನ ದಾಖಲಾತಿ ಪ್ರಮಾಣವು ಗಣನೀಯವಾಗಿ ಹೆಚ್ಚಿದೆ. ಇವುಗಳಲ್ಲಿ "ಸರ್ವ ಶಿಕ್ಷಣ ಅಭಿಯಾನ" ಬಹು ಮುಖ್ಯವಾದ ಮತ್ತು ಬೃಹತ್ತಾದ ಹಾಗೂ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿಯ ಇಲಾಖೆಯು ಉನ್ನತಶಿಕ್ಷಣಕ್ಕೆ ಪ್ರಪಂಚದಲ್ಲೇ ಉನ್ನತವಾದ ಅವಕಾಶ ದೊರಕುವಂತೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅಗತ್ಯವಾದ ಸಂಶೋಧನೆಗಳನ್ನು ಮಾಡುವುದರ ಮೂಲಕ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ವೇದಿಕೆಯ ಮೇಲೆ ಯಾವುದೇ ಮುಜುಗರಕ್ಕೆ ಎಡೆ ಇಲ್ಲದಂತೆ ಮಾಡಲು ಸಾಕಷ್ಟು ವ್ಯವಸ್ಥೆಯನ್ನು ಮಾಡಲು ಪಣತೊಟ್ಟಿದೆ. ಇದಕ್ಕಾಗಿ ಈ ಇಲಾಖೆಯು ವಿವಿಧ ವಿದೇಶಿ

Digitised by Bharatavani, CIIL

ಸಂಸ್ಥೆಗಳೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುತ್ತಿದೆ.

ಈ ಸಚಿವಾಲಯದ ಮುಖ್ಯ ಉದ್ದೇಶವೇನೆಂದರೆ:

- ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದು ಅದನ್ನು ಯಥಾಸ್ಥಿತಿಯಲ್ಲಿ ಪಾಲಿಸಲು ಕ್ರಮವನ್ನು ಕೈಗೊಳ್ಳುವುದು.
- ದೇಶಾದ್ಯಂತ ಶೈಕ್ಷಣಿಕ ಸಂಸ್ಥೆಗಳ ಅಭಿವೃದ್ಧಿಯನ್ನು ಕೈಗೊಂಡು ಅವುಗಳ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಶೈಕ್ಷಣಿಕ ಸೌಲಭ್ಯವಂಚಿತ ಪ್ರದೇಶಗಳಲ್ಲಿ ಅವುಗಳ ಸೌಲಭ್ಯಗಳನ್ನು ಉಂಟುಮಾಡುವುದು.
- ಬಡವರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಹೆಚ್ಚಿನ ಗಮನವನ್ನು ಕೊಡುವುದು.
- ವಿದ್ಯಾರ್ಥಿವೇತನ, ಸುಲಭವಾದ ಶಿಕ್ಷಣ ಸಾಲ ಸೌಲಭ್ಯ, ಮುಂತಾದವುಗಳು ಯೋಗ್ಯ ವಿದ್ಯಾರ್ಥಿಗಳಿಗೆ ಮತ್ತು ಹಿಂದುಳಿದ ಜನಾಂಗದವರಿಗೆ ದೊರಕುವಂತೆ ಮಾಡುವುದು.
- ಶೈಕ್ಷಣಿಕ ರಂಗದಲ್ಲಿ ಅಂತರ ರಾಷ್ಟ್ರೀಯ ಸಹಕಾರಕ್ಕೆ ಪ್ರೋತ್ಸಾಹ ಸಿಗುವಂತೆ ಮಾಡಲು ಯುನೆಸ್ಕೋ ಮತ್ತು ಇತರ ವಿದೇಶಿ ವಿಶ್ವವಿದ್ಯಾನಿಲಯಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು.

–ಡಾ. ರಾಘವೇಂದ್ರ ರಾವ್ ಹೆಚ್.ಎಸ್.

## ಮಾನವ ಹಕ್ಕುಗಳ ಶಿಕ್ಷಣ

**ಚಾರಿತ್ರಿಕ ಪರಿಪ್ರೇಕ್ಷೆ:** ಮನುಕುಲದ ಚರಿತ್ರೆಯಲ್ಲಿನ ಅತ್ಯಂತ ಗಮನಾರ್ಹ ಬೆಳವಣಿಗೆಗಳಲ್ಲಿ ವ್ಯಕ್ತಿಯ ಹಕ್ಕುಗಳನ್ನು ಗುರುತಿಸುವುದರಲ್ಲಿ ಜಾಗತಿಕ ಕಾಳಜಿ ಹೆಚ್ಚುತ್ತಿರುವುದು ಒಂದಾಗಿದೆ. ಕಳೆದ ಐದು ದಶಕಗಳಲ್ಲಿ ವಿಶ್ವಸಂಸ್ಥೆಯ ಉದಾರ ಆಶ್ರಯದಲ್ಲಿ ವ್ಯಕ್ತಗೊಂಡಂತಹ ಮಾನವ ಹಕ್ಕುಗಳ ರಕ್ಷಣೆಯ ಕ್ರಮಾನುಗತ ಹೇಳಿಕೆ ಮತ್ತು ಬಹಳ ಹಿಂದೆಯೇ ಮನುಷ್ಯನಿಂದ ಪ್ರಾರಂಭಗೊಂಡ ಸಾಮಾಜಿಕ ಮತ್ತು ರಾಜಕೀಯ ಕ್ರಮದ ಸಾಂಸ್ಥೀಕರಣದ ಮೂಲಕ ಹಾದು ಬಂದಿರುವ ಜಾಗತಿಕ ಚಳವಳಿಯು ಮನುಕುಲದ ಚಾರಿತ್ರಿಕ ಪ್ರಯಾಣದ ಪರಮಾವಧಿಯನ್ನು ಅದು ಪ್ರತಿನಿಧಿಸುತ್ತದೆ. ಜಾಗತಿಕ ನೆಲೆಯಲ್ಲಿ ಎರಡನೆಯ ಮಹಾಯುದ್ಧದ ಮುಕ್ತಾಯದ ಬಳಿಕ ಮಾತ್ರ 'ಮಾನವ ಹಕ್ಕುಗಳು' ಎಂಬ ಪದ ಚಲಾವಣೆಗೆ ಬಂತು. ವಿಶ್ವಸಂಸ್ಥೆಯ ಸನ್ನದು ತನ್ನ ಪೀಠಿಕೆ ಮತ್ತು ಆರು ವಿಭಿನ್ನ ಅನುಚ್ಛೇದಗಳಲ್ಲಿ ತನ್ನ ಉದ್ದೇಶಗಳಲ್ಲಿ ಒಂದಾಗಿರುವ ಮಾನವ ಹಕ್ಕುಗಳ ಪ್ರವರ್ತನೆಗೆ ತನ್ನ ಸದಸ್ಯರಲ್ಲಿ ಇರುವ ನಂಬಿಕೆಯನ್ನು ದೃಢೀಕರಿಸಿದೆ. ಆದರೆ ಕಳೆದ ಶತಮಾನದುದ್ದಕ್ಕೂ ಮಾನವ ಹಕ್ಕುಗಳ ಪರಿಕಲ್ಪನೆ ನಡೆದು ಬಂದ ದಾರಿ ಬಹಳ ಗೊಂದಲಮಯವಾಗಿದೆ.

ಪ್ರಮುಖವಾಗಿ ದೇಶ ಮತ್ತು ಯಾವುದೇ ಅನಿರ್ಬಂಧಿತ ಅಧಿಕಾರ ಆಗರಗಳ ವಿರುದ್ಧ ಪರಿಕಲ್ಪಿಸಲಾದ ಮನುಷ್ಯನ ಹಕ್ಕುಗಳು ಕ್ರಮೇಣ ತಮ್ಮ ಜಾಗತಿಕತೆ ಮತ್ತು ವೈಯಕ್ತಿಕತೆಯ ಪರಿಕಲ್ಪನೆಯಲ್ಲಿ ಮಾನವ ಹಕ್ಕುಗಳಾಗಿ ಬೆಳೆದುಬಂದ ದಾರಿಯಲ್ಲಿ ಅನೇಕ ರೀತಿಯ ಅಭಿವ್ಯಕ್ತಿಗಳನ್ನು ಕಂಡಿವೆ. ಹಿಂದೆ ಪಶ್ಚಿಮದ ರಾಜಕೀಯ ತಾತ್ವಿಕತೆಯಲ್ಲಿ ಇವುಗಳನ್ನು ಬೇರೆ ಬೇರೆ ಹೆಸರುಗಳಿಂದ, ಉದಾಹರಣೆಗೆ ಮನುಷ್ಯನ 'ಸಹಜ ಹಕ್ಕುಗಳು', 'ಅಂತರ್ಗತ ಹಕ್ಕುಗಳು', 'ಅವಿಚ್ಛಿನ್ನ ಹಕ್ಕುಗಳು' ಮತ್ತು 'ಮೂಲಭೂತ ಹಕ್ಕುಗಳು' ಎಂದು ಕರೆಯಲಾಗುತ್ತಿತ್ತು. ಮನುಷ್ಯನ ಈ ಹಕ್ಕುಗಳ ಕಲ್ಪನೆಯು ರಾಜ್ಯಾಡಳಿತದ ನಿರಂಕುಶ ವರ್ತನೆಯ ವಿರುದ್ಧ ಜನರ ಉಗ್ರ ರೀತಿಯ ಪ್ರತಿಕ್ರಿಯೆಯನ್ನು ಒಳಗೊಂಡಂತಹ ಇಂಗ್ಲೆಂಡ್ ಕ್ರಾಂತಿ, ಅಮೇರಿಕೆಯ ಕ್ರಾಂತಿ ಮತ್ತು ಫ್ರೆಂಚ್ ಕ್ರಾಂತಿಯಲ್ಲಿ ಪ್ರಕಟವಾಯಿತು. ಮಾನವ ಹಕ್ಕುಗಳ ಪರಿಕಲ್ಪನೆಯು ಅನುಕ್ರಮವಾಗಿ ರಾಜಕೀಯ ತಾತ್ವಿಕತೆಯ ವಲಯದಿಂದ ನಾಗರಿಕರ 'ನಿರಪೇಕ್ಷ ಮತ್ತು ಸಾರಭೂತ' ಹಕ್ಕುಗಳಾಗಿ ಕಾನೂನು ವ್ಯಾಪ್ತಿಯ ವಲಯಕ್ಕೆ ವರ್ಗಾಯಿಸಲ್ಪಟ್ಟಿತು ಮತ್ತು 'ಮೂಲಭೂತ ಹಕ್ಕುಗಳು ಅಥವಾ 'ಮೂಲ ಹಕ್ಕುಗಳು' ಎಂಬ ಪದ ಚಲಾವಣೆಗೆ ಬಂದ ಪ್ರಗತಿಪರ ಸಂವಿಧಾನದ ಅತ್ಯಗತ್ಯ ಲಕ್ಷಣವಾಗಿ ಪರಿಗಣಿಸಲ್ಪಟ್ಟಿತು. ಎರಡನೆಯ ಮಹಾಯುದ್ಧದ ನಂತರವೇ ಜಾಗತಿಕ ಶಾಂತಿ ಮತ್ತು ಮನುಷ್ಯನ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯದ ನಡುವಿನ ಪರಸ್ಪರ ಅವಲಂಬನವನ್ನು ಗುರುತಿಸುವುದರ ಮೂಲಕ ವಿಶ್ವಸಂಸ್ಥೆಯು ಈ ಹಕ್ಕುಗಳನ್ನು ಮಾನವ ಹಕ್ಕುಗಳಾಗಿ ಘೋಷಿಸಿತು. ಇದು ಫ್ಯಾಸಿಸ್ಟ್ ಮತ್ತು ಕೆಲವು ಆಕ್ರಮಣಶೀಲ ಸರಕಾರಗಳು ತಮ್ಮದೇ ಪ್ರಜೆಗಳ ವಿರುದ್ಧ ಕೂಡ ನಡೆಸಿದಂತಹ ಅತಿದೌರ್ಜನ್ಯದ ಕ್ರೂರಕೃತ್ಯಗಳ ಪ್ರತಿಕ್ರಿಯೆಯಾಗಿದೆ. ಮಾನವ ಹಕ್ಕುಗಳನ್ನು ಎಲ್ಲ ವ್ಯಕ್ತಿಗಳ ಪರವಾಗಿ ದೇಶ (ಸರಕಾರ) ಮತ್ತು ಸಾಮಾಜಿಕ ಗುಂಪುಗಳು ಸಾಮುದಾಯಿಕ ಕಾರ್ಯವನ್ನು ನಡೆಸಲು ಶಕ್ತವಾಗುವಂತಹ ವ್ಯಕ್ತಿಯ ನ್ಯಾಯಬದ್ಧ ಹಕ್ಕೋತ್ತಾಯಗಳೆಂದು ಪರಿಗಣಿಸಲ್ಪಟ್ಟಿದೆ.

**ಪರಿಕಲ್ಪನಾತ್ಮಕ ಪರಿಪ್ರೇಕ್ಷೆ:**

**ಅಂತಾರಾಷ್ಟ್ರೀಯ ಮಾನ್ಯತೆ:** ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಡಿಸೆಂಬರ್ 10, 1948ರಲ್ಲಿ ಅಳವಡಿಸಿಕೊಂಡ ಮಾನವ ಹಕ್ಕುಗಳ ಜಾಗತಿಕ ಘೋಷಣೆಯು ಮೂಲ ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಅತ್ಯಂತ ಅಧಿಕೃತ ಗಣನೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆದ ಮೊತ್ತಮೊದಲಿನ ಪ್ರಯತ್ನವಾಗಿದೆ. ಹೀಗಾಗಿ ಇದನ್ನು 'ಮನುಕುಲದ ಅಂತಾರಾಷ್ಟ್ರೀಯ ಮ್ಯಾಗ್ನಾಕಾರ್ಟರ್' ಎಂಬುದಾಗಿ ಸರಿಯಾಗಿಯೇ ಕರೆಯಲಾಗಿದೆ. ಮಾನವ ಹಕ್ಕುಗಳ ಅಗಾಧ ಪ್ರಾಮುಖ್ಯತೆ ಇರುವುದು ಅದು 'ಎಲ್ಲ ಜನಾಂಗಗಳ ಮತ್ತು ದೇಶಗಳ ಸಾಧನೆಯ ಸಾಮಾನ್ಯ ಮಟ್ಟ'ವಾಗಿ ಅಧಿಕೃತ ರೀತಿಯಲ್ಲಿ ಅಭಿವ್ಯಕ್ತಗೊಂಡದ್ದರಲ್ಲಿ. ಜಗತ್ತಿನಾದ್ಯಂತ ಅನೇಕ ದೇಶಗಳ ಸಂವಿಧಾನಗಳ ಮೇಲೆ ಮತ್ತು ಪ್ರಾದೇಶಿಕ ಸಂಸ್ಥೆಗಳ ಮೇಲೆ ಪ್ರಭಾವ ಬೀರುವ ಮೂಲಕ ಇದು ಅನುಕ್ರಮವಾಗಿ ಕಾನೂನಿನ

Digitised by Bharatavani, CIIL

ದೃಢ ನಿಯಮಗಳ ವಿಕಾಸಕ್ಕೆ ದಾರಿ ಮಾಡಿಕೊಟ್ಟಿದೆ.

ಮಾನವ ಹಕ್ಕುಗಳ ಪ್ರಯಾಸಕರ ಪ್ರಯಾಣದ ಮುಂದಿನ ಮೈಲಿಗಲ್ಲೆಂದರೆ ವಿಶ್ವಸಂಸ್ಥೆಯ ಘೋಷಣೆ ನೈತಿಕ ಒಪ್ಪಂದಗಳನ್ನು ವಿಸ್ತರಿಸಿ ಹೇಳಿದಾಗ ಮತ್ತು 1966ರಲ್ಲಿ ವಿಶ್ವಸಂಸ್ಥೆಯು ಎಲ್ಲ ದೇಶಗಳ ಪಕ್ಷಗಳ ನಡುವೆ ಕಾನೂನು ಬದ್ಧ ಅಧಿಕಾರದ ಪರಿಭಾವನೆಯನ್ನು ಎರಡು ವ್ಯಾಪಕ ಅಂತಾರಾಷ್ಟ್ರೀಯ ಅಧಿವೇಶನಗಳೊಂದಿಗೆ ಜೋಡಿಸಿಕೊಂಡದ್ದಾಗಿದೆ. ಈ ಎರಡು ಅಧಿವೇಶನಗಳೆಂದರೆ, ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಧಿವೇಶನ ಮತ್ತು ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಅಧಿವೇಶನ. ಈ ಅಧಿವೇಶನಗಳು ಮತ್ತು ಇದಕ್ಕೆ ಸಂಬಂಧಿಸಿದ ವಿಶಿಷ್ಟ ವಿಚಾರಗಳಾದ ನರಮೇಧ, ಜನಾಂಗೀಯ ತಾರತಮ್ಯ, ನಿರಾಶ್ರಿತರು, ಗುಲಾಮತನ ಮತ್ತು ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ಕುರಿತಾದ ಅನೇಕ ಅಂತಾರಾಷ್ಟ್ರೀಯ ಸಮ್ಮೇಳನಗಳು ಇಂದು ಪರಿಣಾಮಕಾರಿಯಾಗಿ ನಡೆಯುತ್ತಿವೆ ಮತ್ತು ಮಾನವ ಹಕ್ಕುಗಳ ಆಧುನಿಕ ಅಂತಾರಾಷ್ಟ್ರೀಯ ಕಾನೂನಿನ ಮುಖ್ಯ ಅಂಗಕ್ಕೆ ತಳಹದಿಯನ್ನು ರೂಪಿಸಿವೆ. ವ್ಯಕ್ತಿಗಳ ಸಾಂಪ್ರದಾಯಿಕ ರೀತಿಯಿಂದ ಪ್ರತ್ಯೇಕ ಮತ್ತು ಸರ್ವಸ್ವತಂತ್ರ ದೇಶಗಳ ಗೃಹ ಕಾನೂನುಗಳ ಪ್ರತ್ಯೇಕ ಕಾಳಜಿಯಾಗಿರುವುದರಿಂದ ಮುಕ್ತಗೊಳ್ಳಲು ಇವು ನೆರವಾಗಿವೆ.

ಮಾನವ ಹಕ್ಕುಗಳ ನೇರ ಮತ್ತು ಆಳವಾದ ವಿಶ್ಲೇಷಣೆ ಮತ್ತು ಸಮತಳದ ವಿಸ್ತರಣೆಯ ವಿದ್ಯಮಾನವು ಗಾಢವಾದ ಪ್ರಭಾವವನ್ನು ಬೀರಿದೆ. ಇದರ ಪರಿಣಾಮವಾಗಿ ಇವುಗಳನ್ನು ಮೂರು ತಲೆಮಾರುಗಳ ಹಕ್ಕುಗಳು ಎಂದು ಕರೆಯಲಾಗುತ್ತದೆ. 'ಮೊದಲ ತಲೆಮಾರಿನ' ಹಕ್ಕುಗಳು ಮುಖ್ಯವಾಗಿ ನಾಗರಿಕ ಮತ್ತು ರಾಜಕೀಯ ಹಕ್ಕುಗಳಿಗೆ ಗಮನ ನೀಡುವಂತಹವು. ಇವು ವ್ಯಕ್ತಿಗತ ಸ್ವಾತಂತ್ರ್ಯ ಕ್ರಮದಲ್ಲಿ ಮಧ್ಯಪ್ರವೇಶವನ್ನು ತಡೆಹಿಡಿಯಲು ಸರಕಾರದ ಋಣಾತ್ಮಕ ನಿರ್ಬಂಧಗಳನ್ನು ನಿರೀಕ್ಷಿಸುತ್ತವೆ. 'ಎರಡನೆಯ ತಲೆಮಾರಿನ' ಹಕ್ಕುಗಳೆಂದರೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು. ಇವು 'ಭದ್ರತೆಯನ್ನು ಕೇಂದ್ರ'ವಾಗಿ ಹೊಂದಿವೆ. ಈ ಹಕ್ಕುಗಳ ಅನುಷ್ಠಾನವನ್ನು ನಿಶ್ಚಿತಗೊಳಿಸುವ ಸಲುವಾಗಿ ಇವು ಸರಕಾರದಲ್ಲಿ ಧನಾತ್ಮಕ ಕರ್ತವ್ಯಗಳ ಸಂಭಾವ್ಯತೆಯನ್ನು ನಿರೀಕ್ಷಿಸುತ್ತವೆ. 'ಮೂರನೆಯ ತಲೆಮಾರಿನ' ಹಕ್ಕುಗಳು ಅಥವಾ ಐಕ್ಯಮತದ ಹಕ್ಕುಗಳೆಂದರೆ ವ್ಯಕ್ತಿಗಳಿಗಿಂತ ಜನರಿಗೆ ಸೇರಿದ ಗುಂಪು ಹಕ್ಕುಗಳು. ಈ ಹಕ್ಕುಗಳಿಗೆ ಉದಾಹರಣೆಗಳೆಂದರೆ ಅಭಿವೃದ್ಧಿ ಕುರಿತಾದ ಹಕ್ಕುಗಳು, ಸ್ವನಿರ್ಧಾರದ ಹಕ್ಕು, ಮತ್ತು ದೇಶದ ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ಸರ್ವಸ್ವತಂತ್ರ ದೇಶಗಳ ಹಕ್ಕುಗಳು. ಮಾನವ ಹಕ್ಕುಗಳ ಒಳಾಂಶದ ಚರಿತ್ರೆ ಮತ್ತು ಪರಿಣಾಮಕಾರಿ ಬೆಳವಣಿಗೆಯು ಆಧುನಿಕ ದೇಶ–ರಾಜ್ಯಗಳ, ರಾಷ್ಟ್ರೀಯವಾದ, ವಸಾಹತುವಾದ ಮತ್ತು ವಸಾಹತೋತ್ತರವಾದದ ಉಗಮದ ಉತ್ಪನ್ನ ಮತ್ತು ಪ್ರತಿಕ್ರಿಯೆ ಎರಡೂ ಆಗಿದೆ. ಇವು ಜನರ ದೃಢವಾದ ಸಮಾಜೋ–ರಾಜಕೀಯ ಹೋರಾಟಗಳ ಪ್ರತಿ

ಫಲಗಳಾಗಿವೆ. ಇವು ಮಾನವೀಯ ಸಮಾಜ ನಿರ್ಮಾಣದ ಜಾಗತಿಕ ಕಾರ್ಯಗತಿಯನ್ನು ಪ್ರತಿನಿಧಿಸುವುದಷ್ಟೇ ಅಲ್ಲ, ಇವುಗಳನ್ನು ನಮ್ಮ ಕಾಲದ ಅತ್ಯಂತ ಜಾಗತೀಕೃತ ರಾಜಕೀಯ ಮೌಲ್ಯಗಳಾಗಿ ಕೂಡಾ ಕಾಣಲಾಗಿದೆ. ವ್ಯಕ್ತಿ ಗೌರವ ಮತ್ತು ಕಾನೂನಿನ ನಿಯಮದಲ್ಲಿ ನಂಬಿಕೆಯನ್ನು ಹೊಂದಿರುವಂತಹ ಬಹುತೇಕ ರಾಷ್ಟ್ರಗಳ ಸಂವಿಧಾನಗಳು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಅನೇಕ ಅಂತಾರಾಷ್ಟ್ರೀಯ ಘೋಷಣೆಗಳ/ ಅಧಿವೇಶನಗಳ ಉಪಬಂಧಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಸ್ಪಷ್ಟವಾಗಿ ಅಥವಾ ಸೂಚಿತವಾಗಿ ಅಳವಡಿಸಿಕೊಂಡಿವೆ.

**ಭಾರತೀಯ ಸನ್ನಿವೇಶಗಳು:**

ಭಾರತದಲ್ಲಿ ಮಾನವ ಹಕ್ಕುಗಳನ್ನು ಪಡೆಯುವ ಹೋರಾಟವು 20ನೇ ಶತಮಾನದ ಪ್ರಾರಂಭದಲ್ಲಿ ಬಾಲಗಂಗಾಧರ ತಿಲಕರ ಹೊಡೆದೆಬ್ಬಿಸುವ ಕರೆಯೊಂದಿಗೆ ಪ್ರಾರಂಭವಾಗಿ ಮಹಾತ್ಮಾಗಾಂಧಿಯವರು ಸಂಪೂರ್ಣ ಸ್ವರಾಜ್ಯ ಮತ್ತು ಸ್ವಾತಂತ್ರ್ಯ ಜನರ ಜನ್ಮಸಿದ್ಧ ಹಕ್ಕಿಗಾಗಿ ಪ್ರಾರಂಭಿಸಿದ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯನ್ನು ಅನುಸರಿಸಿ ಬಂತು. ಮುಸ್ಲಿಮ್ ಮತ್ತು ಬ್ರಿಟಿಷ್ ಪ್ರಭುತ್ವಗಳ ಆಕ್ರಮಣಗಳು ಮತ್ತು ಅತಿಕ್ರಮಗಳ ಸರಣಿಗಳಿಗಿಂತ ಮೊದಲು ಭಾರತದ ಉಪಖಂಡದ ವೈಭವಯುತ ಗತಕಾಲದ ಬೌದ್ಧ, ಹಿಂದೂ ಮತ್ತು ಏಶಿಯಾದ ಸಂಪ್ರದಾಯಗಳು ಮತ್ತು ಪ್ರಚಲಿತ ಸಮಾಜೋ–ರಾಜಕೀಯ ವ್ಯವಸ್ಥೆಗಳು ಸಾಮಾನ್ಯ ಜನಾಂಗೀಯ ನಿಯಮದ ಕೆಳಗೆ ನಡೆಯುತ್ತಿದ್ದು, ಇಲ್ಲಿ ಕರ್ತವ್ಯಕೇಂದ್ರಿತ ಸಮಾಜವು ಪ್ರತಿಯೊಬ್ಬ ವ್ಯಕ್ತಿ ಅಥವಾ ಗುಂಪುಗಳು ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲೇಬೇಕು ಎಂಬ ನಿಯಮಕ್ಕೆ ಹೆಚ್ಚಿನ ಒತ್ತನ್ನು ನೀಡಿದ್ದವು. ಇದರ ಫಲವಾಗಿ ತಮ್ಮ ನ್ಯಾಯಯುತ ಬಾಧ್ಯತೆಯ ಈಡೇರಿಕೆಗೆ ಯಾರು ಕೂಡ ತಮ್ಮ ಹಕ್ಕುಗಳನ್ನು ಸ್ಥಾಪಿಸುವ ಅಗತ್ಯವಿರುತ್ತಿರಲಿಲ್ಲ. ಹೀಗೆ, ಭಾರತೀಯ ಮೌಲ್ಯಸಂಚಯ ಮತ್ತು ಸಾಮಾಜಿಕ ತಾತ್ವಿಕತೆಯು ಆಗಾಗ ಆದ ಇದರ ಉಲ್ಲಂಘನೆಯ ಹೊರತಾಗಿಯೂ, ವ್ಯಕ್ತಿಗತ ಗೌರವ ಮತ್ತು ಗುಂಪಿನ ಹಕ್ಕುಗಳಿಗೆ ಭದ್ರವಾದ ತಳಹದಿಯನ್ನು ದೀರ್ಘ ಕಾಲದವರೆಗೆ ಒದಗಿಸಿತ್ತು. ಪ್ರಗತಿಪರ ಪ್ರಜಾಪ್ರಭುತ್ವದ ಭಾರತೀಯ ರಾಜ್ಯಾಡಳಿತವು ಘೋಷಣಾತ್ಮಕ ಮತ್ತು ಸಂವಿಧಾನಾತ್ಮಕ ರಕ್ಷಣೆ; ಸಾಮಾನ್ಯ ಕಾನೂನಿನ ರಕ್ಷಣೆ; ನ್ಯಾಯಾಂಗ ವ್ಯವಸ್ಥೆಯ ಕಟ್ಟೆಚ್ಚರದಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಆಯೋಗಗಳ ಪರಿವೀಕ್ಷಣೆ, ಕಾರ್ಯವಿಧಾನಗಳ ಅನುಷ್ಠಾನ ಮತ್ತು ಪರಿಹಾರೋಪಾಯ ವ್ಯವಸ್ಥೆಯನ್ನು ಒದಗಿಸುವುದರ ಮೂಲಕ ಮಾನವ ಹಕ್ಕುಗಳ ಕುರಿತಾಗಿ ಧನಾತ್ಮಕ ರೀತಿಯಿಂದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದೆ. ವಿಶ್ವಸಂಸ್ಥೆಯ ಘೋಷಣೆಗಿಂತ ಸುಮಾರು ಎರಡು ವರ್ಷ ಮೊದಲೇ ಭಾರತೀಯ ಸಂವಿಧಾನವನ್ನು ರೂಪಿಸುವ ಕಾರ್ಯ ಪ್ರಾರಂಭಗೊಂಡಿತ್ತು. ಆದರೆ ಅದನ್ನು ಅಳವಡಿಸಿಕೊಂಡದ್ದು 26, ನವೆಂಬರ್ 1949ರಲ್ಲಿ, ವಿಶ್ವಸಂಸ್ಥೆಯ ಘೋಷಣೆಯಲ್ಲಿ ಪಟ್ಟಿ ಮಾಡಲಾದ ಬಹುಪಾಲು ಮಾನವ ಹಕ್ಕುಗಳು ಭಾರತದ ಸಂವಿಧಾನದಲ್ಲಿ ಎರಡು ಭಾಗಗಳಲ್ಲಿ ಪ್ರತಿಷ್ಠಾಪನೆಗೊಂಡಿವೆ.

Digitised by Bharatavani, CIIL

ಮೊದಲ ಉಪಬಂಧಗಳ ಗುಂಪು ಮೂಲಭೂತ ಹಕ್ಕುಗಳನ್ನು 12ರಿಂದ 15ರವರೆಗಿನ ಅನುಚ್ಛೇದಗಳಲ್ಲಿ ಕಾಣಿಸಿದರೆ (ಡೀಲಿಂಗ್), ಇವು ವಿಶ್ವಸಂಸ್ಥೆಯ ಘೋಷಣೆಯ 2 ರಿಂದ 21ರವರೆಗಿನ ಅನುಚ್ಛೇದದಲ್ಲಿ ಪ್ರತಿಫಲಿತವಾಗಿದೆ. ಎರಡನೆಯ ಭಾಗವು ರಾಜ್ಯ ಕಾರ್ಯನೀತಿಯ ನಿರ್ದೇಶನಾತ್ಮಕ ತತ್ವಗಳಿಗೆ 36 ರಿಂದ 51ರ ವರೆಗಿನ ಅನುಚ್ಛೇದ ಅವಕಾಶ ನೀಡುತ್ತದೆ. ಇದು ಘೋಷಣೆಯ 22ರಿಂದ 28ರವರೆಗಿನ ಅನುಚ್ಛೇದದಲ್ಲಿ ಪ್ರತಿಫಲಿತವಾಗಿದೆ. ಮೂಲಭೂತ ಕರ್ತವ್ಯಗಳ 51 ಎ ಅನುಚ್ಛೇದವು ವಿಶ್ವಸಂಸ್ಥೆಯ ಘೋಷಣೆಯ 29ನೇ ಅನುಚ್ಛೇದದಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬರೂ ನಡೆಸಬೇಕಾದ ಕರ್ತವ್ಯಗಳ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ. ಇವುಗಳೊಂದಿಗೆ 19ರಿಂದ 30ರವರೆಗಿನ ಅನುಚ್ಛೇದಗಳಲ್ಲಿ ಇತರ ಮೂಲಭೂತ ಹಕ್ಕುಗಳು ಇವೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಅದರ ಸಂವಿಧಾನದ (ಪೀಠಿಕೆ, ಭಾಗ 3, 4 ಮತ್ತು 4ಎ, ಅನುಚ್ಛೇದಗಳು 226, 300ಎ, 325 ಮತ್ತು 326) ಹೊರತಾಗಿಯೂ, ಮಾನವ ಹಕ್ಕುಗಳಿಗೆ ಪ್ರೋತ್ಸಾಹ ಮತ್ತು ರಕ್ಷಣೆ ನೀಡುವುದನ್ನು ಸಮರ್ಥಿಸುವ ಅನೇಕ ಪ್ರಮುಖ ಅಧಿನಿಯಮಗಳನ್ನು ಜಾರಿಗೆ ತರಲಾಗಿದೆ. ಉದಾಹರಣೆಗೆ ಜಾತಿ ಅಸಮರ್ಥತೆಯನ್ನು ತೆಗೆದು ಹಾಕುವ ಅಧಿನಿಯಮ, 1850; ಅನೈತಿಕ ವ್ಯವಹಾರ ಅಧಿನಿಯಮ, 1956; ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955; ಮಕ್ಕಳ ದುಡಿಮೆಯ ಅಧಿನಿಯಮ, 1986; ಮಕ್ಕಳ ಅಧಿನಿಯಮ, 1960; ಜೀತಪದ್ಧತಿ ನಿರ್ಮೂಲನಾ ಅಧಿನಿಯಮ, 1976, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧಕ) ಅಧಿನಿಯಮ, 1986; ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ, 1993 (ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಜ್ಯ ಮಾನವ ಹಕ್ಕುಗಳ ಆಯೋಗ ಮತ್ತು ಮಾನವ ಹಕ್ಕುಗಳ ನ್ಯಾಯಾಲಯ ಸ್ಥಾಪನೆಗೆ ಅವಕಾಶ ನೀಡುವ), ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990; ರಾಷ್ಟ್ರೀಯ ಅಲ್ಪಸಂಖ್ಯಾತರಿಗಾಗಿ ಆಯೋಗ ಅಧಿನಿಯಮ, 1992; ಮತ್ತು ಇನ್ನು ಅನೇಕ ಪರಿನಿಯಮಗಳು ಮತ್ತು ಜಾರಿಗೊಳ್ಳಲಿರುವ ಬೇರೆ ಹಲವು ಪರಿನಿಯಮಗಳು ರಾಷ್ಟ್ರೀಯ ಮಟ್ಟದಲ್ಲಿ ಮಾನವಹಕ್ಕುಗಳ ರಕ್ಷಣೆ, ಅನುಷ್ಠಾನ ಮತ್ತು ಪರಿವೀಕ್ಷಣೆಯ ಕುರಿತಾಗಿ ಸರಕಾರ ತನ್ನ ಬಾಧ್ಯತೆಯನ್ನು ವ್ಯಕ್ತಪಡಿಸಿದ ಕೆಲವು ಪ್ರಯತ್ನಗಳನ್ನು ಸೂಚಿಸುತ್ತವೆ. ಅಧಿನಿಯಮವು ತನ್ನಷ್ಟಕ್ಕೆ ಕಾರ್ಯವೆಸಗಲಾರದು. ಅದರ ಅನುಷ್ಠಾನಕ್ಕೆ ಮತ್ತು ಸಮಾಜದಿಂದ ಅದಕ್ಕೆ ಗೌರವಯುತ ಐಚ್ಛಿಕ ಅಂಗೀಕಾರ ದೊರೆಯಲು ಮಾನವ ಸೇವಾಸಂಸ್ಥೆಯ ಅಗತ್ಯವಿರುತ್ತದೆ. ಇದು ಸಾಮಾಜಿಕ ಮತ್ತು ಕಾನೂನು ಕ್ರಮದಲ್ಲಿ ಎಲ್ಲ ಭಾಗಗಳಿಗೆ ಸಾಂಸ್ಕೃತಿಕ ಶಿಕ್ಷಣದ ಅವಶ್ಯಕತೆಯನ್ನು ಸೂಚಿಸುತ್ತದೆ.

**ಮಾನವ ಹಕ್ಕು ಬೋಧನೆ:**

**ಗುರಿಗಳು ಮತ್ತು ಪ್ರಾಮುಖ್ಯತೆ :** ಮಾನವ ಹಕ್ಕುಗಳ ಸಂಸ್ಕೃತಿಯು ಪ್ರತಿಯೊಬ್ಬ ಮನುಷ್ಯರಲ್ಲಿ ಮತ್ತು ಜನರ ಮೂಲಭೂತ ಅಗತ್ಯಗಳ ಪ್ರಜ್ಞೆಯಲ್ಲಿ ಮತ್ತು ಸಾಮಾಜಿಕ ತಾತ್ವಿಕತೆಯ ಭಾಗವಾಗಿ ಮನುಷ್ಯರ ಕುರಿತಾದ ಗೌರವ ಮತ್ತು ಘನತೆಯಲ್ಲಿ ಬೇರೂರಿದೆ. ಮಾನವ ಹಕ್ಕುಗಳ ಶಿಕ್ಷಣ ಮತ್ತು ಬೋಧನೆಯು ಜನರ ಅಗತ್ಯಗಳಿಗಾಗಿ ಸ್ಪಂದನಶೀಲ ಮತ್ತು ಮಾನವತ್ವದ ಸಂಸ್ಕೃತಿ, ಮೌಲ್ಯಗಳು ಮತ್ತು ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರಲ್ಲಿ ಮತ್ತು ಪ್ರವರ್ತಿಸುವುದರಲ್ಲಿ ಇದೆ. ಇದರ ಆಶಯವು ಹೀಗಿದೆ :

ಅ) ಬೇರೆಯವರ ಘನತೆಗೆ ಅವಹೇಳನಾತ್ಮಕವಾಗಿರುವ ಮನೋಭಾವನೆಗಳನ್ನು ಬದಲಾಯಿಸುವ ಮೂಲಕ ವೈಯಕ್ತಿಕ ಮತ್ತು ಸಾಮಾಜಿಕ ಪೂರ್ವಗ್ರಹಗಳನ್ನು ಕಿತ್ತೊಗೆಯುವುದು;

ಆ) ಸಮಾಜದ ದುರ್ಬಲ, ಬಡ ಮತ್ತು ಟೀಕೆ ಮತ್ತು ಖಂಡನೆಗೆ ಬಲಿಯಾಗುವ ಗುಂಪುಗಳಲ್ಲಿ ಆತ್ಮವಿಶ್ವಾಸ ಮತ್ತು ಸಾಮರ್ಥ್ಯಗಳನ್ನು ತುಂಬುವುದು;

ಇ) ಮಾನವ ಹಕ್ಕುಗಳು ಮತ್ತು ಇದಕ್ಕೆ ಸಂಬಂಧಿಸಿದ ಕರ್ತವ್ಯಗಳ ಕುರಿತು ಹೊಸ ತಲೆಮಾರಿನ ಮತ್ತು ವಯಸ್ಕ ಜನರಲ್ಲಿ ಅರಿವನ್ನು ಪ್ರಸಾರ ಮಾಡುವುದು;

ಈ) ಉತ್ತಮ ಗುಣಮಟ್ಟದ ಬದುಕಿಗಾಗಿ ಪ್ರಜಾಪ್ರಭುತ್ವ, ಅಭಿವೃದ್ಧಿ ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯದ ಪ್ರಾಮುಖ್ಯ ಮತ್ತು ವಿಧಿರೂಪ ಅಗತ್ಯವನ್ನು ಒತ್ತಾಯಪಡಿಸುವುದು;

ಉ) ಯಾವುದೇ ವ್ಯಕ್ತಿಯಿಂದ, ಅಥವಾ ಅಧಿಕಾರ ಕೇಂದ್ರದಿಂದ ಅದರಲ್ಲಿಯೂ ವಿಶೇಷವಾಗಿ ಸರಕಾರದಿಂದ ಅಧಿಕಾರದ ದುರುಪಯೋಗ, ಪೀಡನೆ, ಅಥವಾ ಶೋಷಣೆ ನಡೆಯುತ್ತಿದ್ದರೆ ಅದನ್ನು ತಡೆಹಿಡಿಯಲು ಜಾಗೃತ ಮತ್ತು ಪರಿಣಾಮಕಾರಿ ಪ್ರಯತ್ನಗಳನ್ನು ಪ್ರತಿಯೊಬ್ಬರೂ ನಡೆಸುವಂತೆ ಪ್ರೋತ್ಸಾಹಿಸುವುದು;

ಊ) ಮಾನವ ಹಕ್ಕು ಸಂಸ್ಕೃತಿಯ ಅಗತ್ಯಗಳಿಗನುಗುಣವಾಗಿ ಅನುಷ್ಠಾನವು ಹೆಚ್ಚು ಸಂವೇದನಾತ್ಮಕವಾಗಿರುವಂತೆ ನೋಡಿಕೊಳ್ಳಲು ಕಾಯಿದೆಗಳನ್ನು ರೂಪಿಸುವವರಿಗೆ ಮತ್ತು ಅವರ ಸಂಸ್ಥೆಗಳಿಗೆ ವಿಭಿನ್ನ ರೀತಿಯ ಅಧ್ಯಯನ, ತರಬೇತಿ ಮತ್ತು ಹೊಸದೃಷ್ಟಿಯ ಕಾರ್ಯಕ್ರಮಗಳನ್ನು (ಅಭಿಶಿಕ್ಷಣದ ಕಾರ್ಯಕ್ರಮಗಳು) ಏರ್ಪಡಿಸುವುದು ಮತ್ತು ಕಾನೂನು ಅನುಷ್ಠಾನ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಹೊಣೆಗಾರಿಕೆಯಿಂದ ವ್ಯಾಖ್ಯಾನಿಸುವುದು; ಮತ್ತು ಕೊನೆಯದಾಗಿ

ಋ) ಬಹುತತ್ವವನ್ನು ಹೊಂದಿರತಕ್ಕಂತಹ ಪ್ರಜಾಪ್ರಭುತ್ವದ ಸಮಾಜದ ವಿಭಿನ್ನತೆಗಳು ಮತ್ತು ವೈವಿಧ್ಯತೆಗಳಿಗೆ ಹೆಚ್ಚು ಅರ್ಥೈಸುವಿಕೆ, ತಾಳ್ಮೆ ಮತ್ತು ಗೌರವವನ್ನು ತುಂಬುವುದರ ಮೂಲಕ ಧನಾತ್ಮಕ ಸಾಮಾಜಿಕ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಮೌಲ್ಯವನ್ನು ಪೋಷಿಸುವುದು, ಮಾನವ ನಾಗರಿಕ ಸಮಾಜದಲ್ಲಿ ಬಳಕೆಯಲ್ಲಿ

Digitised by Bharatavani, CIIL

ಇರುವಂತೆ ಮಾನವ ಹಕ್ಕುಗಳ ಸಂಸ್ಕೃತಿಯನ್ನು ಸೃಷ್ಟಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಇದಕ್ಕಾಗಿ ಶಿಕ್ಷಣದ ಎಲ್ಲ ಹಂತಗಳಲ್ಲಿ – ಪ್ರಾಥಮಿಕದಿಂದ, ಮಾಧ್ಯಮಿಕ ಶಾಲೆಯಿಂದ, ವಿಶ್ವವಿದ್ಯಾಲಯ/ವೃತ್ತಿಪರ ಹಾಗೂ ಅನೌಪಚಾರಿಕ ಶಿಕ್ಷಣ ವಲಯಗಳಲ್ಲಿ, ಹಾಗೂ ನಿರಂತರ ಶಿಕ್ಷಣ, ವಯಸ್ಕ ಸಾಕ್ಷರತೆ ಮತ್ತು ವಯಸ್ಕ ಸಾಕ್ಷರೋತ್ತರ ಕಾರ್ಯಕ್ರಮಗಳಲ್ಲಿ ಮಾನವ ಮೌಲ್ಯಗಳನ್ನು ಮತ್ತು ಹಕ್ಕುಗಳನ್ನು ಕಲಿಸುವುದು ಅಗತ್ಯ.

ಈ ನಿಟ್ಟಿನಲ್ಲಿ ಭಾರತದಲ್ಲಿ ಶಾಲೆಯ ಪಠ್ಯಕ್ರಮಗಳ ಎಲ್ಲ ಭಾಗಗಳಲ್ಲಿ, ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಣದಲ್ಲಿ ಮತ್ತು ಶಿಕ್ಷಕರು, ಆರಕ್ಷಕರು ಮತ್ತು ರಕ್ಷಣಾ ಸಿಬ್ಬಂದಿಗಳು, ಕಾನೂನು ಅನುಷ್ಠಾನದ ಅಧಿಕಾರಿಗಳು ಮತ್ತು ರಕ್ಷಣಾ ಸೇವೆಯವರು ಮತ್ತು ಇದಕ್ಕೆ ಸಂಬಂಧಿಸಿದಂತೆ ಇತರ ಸಂಸ್ಥೆಗಳಿಗೆ ಮಾನವ ಮೌಲ್ಯಗಳು ಮತ್ತು ಮಾನವ ಹಕ್ಕುಗಳ ಎಲ್ಲಾ ವಿಷಯಾಂಶಗಳನ್ನು ಕಲಿಸುವುದಕ್ಕೆ ಒತ್ತನ್ನು ನೀಡಬೇಕಾಗಿದೆ. ವಾಸ್ತವದಲ್ಲಿ, ಆಡಳಿತಗಾರರು, ವೈದ್ಯರು, ನರ್ಸ್‌ಗಳು, ಇಂಜಿನಿಯರುಗಳ ಮತ್ತು ವಿಜ್ಞಾನಿಗಳಿಗೆ ಅವರ ಜವಾಬ್ದಾರಿಗಳ ನಿರ್ವಹಣೆಯಲ್ಲಿ ಒಳಗೊಂಡಿರತಕ್ಕಂತಹ ಮಾನವ ಹಕ್ಕುಗಳ ಆಯಾಮಗಳನ್ನು ಅವರ ತರಬೇತಿ/ವೃತ್ತಿಪರ ಶಿಕ್ಷಣ ಸಂದರ್ಭಗಳಲ್ಲಿ ಒದಗಿಸಿಕೊಡಬೇಕು.

**ಪದವಿ-ಪೂರ್ವ ಶಿಕ್ಷಣ:** ಮಾನವ ಹಕ್ಕುಗಳ ಶಿಕ್ಷಣವೆಂದರೆ ಮೌಲ್ಯಗಳು ಮತ್ತು ತಿಳಿವಳಿಕೆ ಇವೆರಡನ್ನೂ ಕಲಿಸಿಕೊಡುವಂತಹ ಕಾರ್ಯವಿಧಾನ. ವ್ಯಕ್ತಿಗಳಿಗೆ ನೀಡತಕ್ಕಂತಹ ಗೌರವ, ವ್ಯಕ್ತಿಯ ಘನತೆ ಮತ್ತು ಹಕ್ಕುಗಳು ಇರುವುದು ಮನಸ್ಸಿನ ಧೋರಣೆ ಮತ್ತು ಮಾನವ ಮೌಲ್ಯಗಳ ಸಂಸ್ಕೃತಿಯಲ್ಲಿ, ಸಮಾಜವೊಂದರಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮೌಲ್ಯದ ಬೆಳವಣಿಗೆ ಇರುವಂತಹ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ವ್ಯವಸ್ಥೆಗಳು ಬದುಕಿನ ಗುಣಮಟ್ಟದ ಸುಧಾರಣೆ, ಸಾಮರಸ್ಯದ ಪ್ರವರ್ತನೆ ಮತ್ತು ಎಲ್ಲರಿಗೂ ಅನ್ವಯಿಸುವ ಹಿತಸಾಧನೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ದಯೆಯ ಪರಿಕಲ್ಪನೆಯಲ್ಲಿ ಮತ್ತು ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದ ಆದರ್ಶಗಳ ಬದ್ಧತೆಯಲ್ಲಿ ಮೌಲ್ಯಗಳು ಬೇರೂರಿವೆ. ಸಾಂಪ್ರದಾಯಿಕ ಮೂರು 'ಆರ್'ಗಳ ಬೋಧನೆಯೊಂದಿಗೆ ಮಾನವ ಮೌಲ್ಯಗಳನ್ನು ಕಲಿಸುವುದನ್ನು ಕೂಡ ಮೂಲ ಕಲಿಕೆಯಾಗಿ ಪರಿಗಣಿಸಬೇಕು. ಮಾನವ ಮೌಲ್ಯಗಳಿಗೆ ಪ್ರಜ್ಞಾಪೂರ್ವಕ ಬದ್ಧತೆಯನ್ನು ಮೂಡಿಸುವ ದೃಷ್ಟಿಯಿಂದ ಶಾಲಾ ವ್ಯಾಸಂಗಕ್ರಮದಲ್ಲಿ ಓದುವುದು, ಬರೆಯುವುದು ಮತ್ತು ಅಂಕಗಣಿತ ಇರುವಂತೆ ಈ ನಾಲ್ಕನೆಯ 'ಆರ್'ಗೆ ಕೇಂದ್ರ ಸ್ಥಾನ ಲಭಿಸಬೇಕು.

ಭಾರತ ಸರ್ಕಾರದ ಶಿಕ್ಷಣ ನಿಬಂಧನೆಯ ಕುರಿತಾದ 1968 ಮತ್ತು 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅಸಮತೆಯ ತೊಲಗಿಸುವಿಕೆ, ಅವಕಾಶಗಳ ಸಮತೆ, ಮತ್ತು ಸಮಾನತೆ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಶಿಕ್ಷಣ ವಂಚಿತರಿಗೆ ಅಥವಾ ಸಮಾಜದ ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪಸಂಖ್ಯಾತ ಗುಂಪುಗಳಿಗೆ ಸೂಕ್ತ ಪ್ರೋತ್ಸಾಹಕಗಳನ್ನು ನೀಡುವುದು. ಇದಲ್ಲದೆ, ಅಗತ್ಯ ಮೌಲ್ಯಗಳ ವ್ಯಾಪಕ ನಾಶದ ಕುರಿತು ವಿಶೇಷ ಕಾಳಜಿಯನ್ನು ವ್ಯಕ್ತಪಡಿಸಲಾಗಿದೆ. ಸಾಮಾಜಿಕ ಮತ್ತು ನೈತಿಕ ಮೌಲ್ಯಗಳ ಬೆಳೆಸುವಿಕೆಗೆ ಪ್ರಬಲ ಉಪಕರಣವಾಗಿ ಮೌಲ್ಯ ಶಿಕ್ಷಣದ ಹೋರಾಟದ ಪಾತ್ರವನ್ನು ಅಂಗೀಕರಿಸುತ್ತ ರಾಷ್ಟ್ರೀಯ ಗುರಿಗಳು ಮತ್ತು ಸಂವೇದನೆಗಳನ್ನು ಆಧರಿಸಿ ಸಾರ್ವತ್ರಿಕ ಮತ್ತು ಶಾಶ್ವತ ಮೌಲ್ಯಗಳನ್ನು ಪೋಷಿಸುವ ದೃಷ್ಟಿಯಿಂದ ಈ ಅಂಶದ ಮೇಲೆ ಅಥವಾ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಭಾರತೀಯ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ರಾಷ್ಟ್ರೀಯ ಕಾರ್ಯನೀತಿಯನ್ನು ಅಳವಡಿಸಿಕೊಳ್ಳುವ ನೆಲೆಯಲ್ಲಿ ದೇಶದ ಎಲ್ಲ ಭಾಗಗಳಿಗೆ ಸಮಾನ ಶೈಕ್ಷಣಿಕ ರಚನೆಯನ್ನು ಗ್ರಹಿಸಿದೆ. ಶಾಲಾ ಪ್ರಾಥಮಿಕ ವ್ಯವಸ್ಥೆಯ ಮೊದಲ 10 ವರ್ಷಗಳಲ್ಲಿ ಇರುವುದು: ಪ್ರಾಥಮಿಕ (1ರಿಂದ 5ನೇ ತರಗತಿ), ಹಿರಿಯ ಪ್ರಾಥಮಿಕ (6ರಿಂದ 8ನೇ ತರಗತಿ) ಮತ್ತು ಮಾಧ್ಯಮಿಕ( 9 ಮತ್ತು 10ನೇ ತರಗತಿ) ಹಂತಗಳು. ಇವು ವಿಭಿನ್ನ ಪಠ್ಯಕ್ರಮದಲ್ಲಿ ಸಾಮಾನ್ಯ ಶಿಕ್ಷಣವನ್ನು ಒದಗಿಸುತ್ತವೆ. ಇದನ್ನು ಅನುಸರಿಸಿ ಇರುವುದು ಹಿರಿಯ ಮಾಧ್ಯಮಿಕ ಹಂತ (11 ಮತ್ತು 12ನೇ ತರಗತಿ). ಇಲ್ಲಿ ವಿದ್ಯಾರ್ಥಿಗಳು ತಮ್ಮ ಅಗತ್ಯಗಳು, ಆಸಕ್ತಿಗಳು ಮತ್ತು ಬುದ್ಧಿ ಸಾಮರ್ಥ್ಯಗಳಿಗೆ ಅನುಗುಣವಾಗಿ ವಿಶೇಷ ರೀತಿಯ ಶೈಕ್ಷಣಿಕ ಅಥವಾ ವೃತ್ತಿಪರ ಕೋರ್ಸ್‌ಗಳನ್ನು ಆಯ್ದುಕೊಳ್ಳುವ ವೈವಿಧ್ಯತೆಗಳ ಕಡೆಗೆ ಸಾಗುವರು. ಈ ರಚನೆಯು 10+2 ವಿನ್ಯಾಸವಾಗಿ ಜನಪ್ರಿಯವಾಗಿದೆ. ಹಿರಿಯ ಮಾಧ್ಯಮಿಕದ ಬಳಿಕ ಮೊದಲ ವಿಶ್ವವಿದ್ಯಾಲಯ ಪದವಿಗೆ 3 ವರ್ಷಗಳು ಹಿಡಿಯುತ್ತವೆ.

ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ಆಗ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು (1975, 1988) ಆಧರಿಸಿ ಇತ್ತು. ಮೌಲ್ಯದ ಉದ್ದೇಶದ ಸಾಮಾನ್ಯ ಚೌಕಟ್ಟನ್ನು ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲಿ 'ತಿರುಳಿನ ಪಠ್ಯಕ್ರಮ'ದಲ್ಲಿ ಅಳವಡಿಸಿಕೊಳ್ಳಲಾಗಿತ್ತು. 'ಸಾಮಾನ್ಯ ತಿರುಳಿನ' ಪಠ್ಯಕ್ರಮವು ವಿಷಯದ ಪ್ರದೇಶಗಳನ್ನು ಮೀರಿ ಇತರ ನಮ್ಯ ಘಟಕಗಳೊಂದಿಗೆ ಮೂಲ ಮೌಲ್ಯ ಚೌಕಟ್ಟನ್ನು ಒದಗಿಸುತ್ತದೆ. ಈ ಕೆಳಗಿನ ಅಂಶಗಳ ಸಂವರ್ಧನೆಗಾಗಿ ಇದನ್ನು ವಿನ್ಯಾಸಗೊಳಿಸಲಾಗಿದೆ; ಪ್ರಜಾಪ್ರಭುತ್ವ ಮೌಲ್ಯಗಳು ಮತ್ತು ಸಂವಿಧಾನಾತ್ಮಕ ಬಾಧ್ಯತೆಗಳ ಸಂವರ್ಧನೆ; ಸಾಮಾಜಿಕ ಪ್ರಜ್ಞೆಯ ಉದಯ ಮತ್ತು ಸಾಮಾಜಿಕ ನ್ಯಾಯದ ಪ್ರಜ್ಞೆ; ಸಾಮಾನ್ಯ ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯ ಐಕಮತ್ಯ; ಮತ್ತು ಯಾವುದೇ ತಾರತಮ್ಯವಿಲ್ಲದ ಸಮಾನತಾವಾದತ್ವ, ಜಾತ್ಯತೀತತೆ, ಸಮಾನತೆಗಳ ಮೌಲ್ಯಗಳು; ಪರಿಸರ ಸಂರಕ್ಷಣೆ, ಸಾಮಾಜಿಕ ತಡೆಗಳ ನಿವಾರಣೆ, ಚಾರಿತ್ರ್ಯದ ನಿರ್ಮಾಣ ಮತ್ತು ವೈಜ್ಞಾನಿಕ ಮನೋಭಾವವನ್ನು ಮೈಗೂಡಿಸಿಕೊಳ್ಳುವಿಕೆ.

ಇದಲ್ಲದೆ, ಪಠ್ಯಕ್ರಮದ ತಿರುಳಿನ ಮೂಲಕ ನೀಡತಕ್ಕಂತಹ ಮೌಲ್ಯ ಶಿಕ್ಷಣದ ಗುರಿಯು ಪ್ರಚಲಿತ ಪೂರ್ವಗ್ರಹಗಳ ವೈವಿಧ್ಯತೆಗಳು ಮತ್ತು ಸಂಕೀರ್ಣತೆಗಳ ಕುರಿತು ಮತ್ತು ಸಾಮಾಜಿಕ ವಾತಾವರಣದ ಮೂಲಕ ಪ್ರಸಾರಗೊಂಡಿರುವ ಅಂತರ್ಗತ ಅಸಮಾನತೆಯ ಕುರಿತು ಕೂಡ ಅರಿವನ್ನು ಸೃಷ್ಟಿಸುವುದಾಗಿದೆ. ಮುಂದುವರಿದು ಸಾರ್ವತ್ರಿಕ ಮತ್ತು ಶಾಶ್ವತ ಮೌಲ್ಯಗಳನ್ನು ಮತ್ತು ಪರಂಪರೆಯನ್ನು ಆಧರಿಸಿದ

Digitised by Bharatavani, CIIL

ರಾಷ್ಟ್ರೀಯ ಮತ್ತು ಜಾಗತಿಕ ಗುರಿಗಳನ್ನು ಪೋಷಿಸುವುದನ್ನು, ಗೊಡ್ಡು ಸಂಪ್ರದಾಯ ಶರಣತೆ, ಧಾರ್ಮಿಕ ಮೂಲಭೂತವಾದ, ಹಿಂಸೆ, ಅಂಧಶ್ರದ್ಧೆಗಳು ಮತ್ತು ದೈವಾಯುಕ್ತವಾದವನ್ನು ಪ್ರತಿಭಟಿಸುವುದು ಮತ್ತು ನಿರ್ಮೂಲ ಮಾಡುವುದನ್ನು ಕೂಡ ಇದು ಒತ್ತಾಯಿಸುತ್ತದೆ. ರಾಷ್ಟ್ರಮಟ್ಟದಲ್ಲಿ ಎನ್‌ಸಿಇಆರ್‌ಟಿ ಸಿದ್ಧಪಡಿಸಿದ ಅನೇಕ ವಿಷಯಗಳ ಪಠ್ಯಪುಸ್ತಕಗಳಲ್ಲಿ ಮತ್ತು ಶಾಲಾ ಶಿಕ್ಷಣದ ವಿವಿಧ ಹಂತಗಳ ವ್ಯತ್ಯಾಸರಹಿತ ಪಠ್ಯಕ್ರಮದಲ್ಲಿ ಗೊತ್ತುಪಡಿಸಲಾದ ಪಠ್ಯಪುಸ್ತಕಗಳಲ್ಲಿ 'ತಿರುಳು ಪಠ್ಯಕ್ರಮ'ದ ಒತ್ತು ಕಾಣಿಸಿಕೊಂಡಿದೆ. ಶಾಲಾ ಪಠ್ಯವಸ್ತುವಿನ ಸಮಾಜ ವಿಜ್ಞಾನಗಳು, ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ ಮತ್ತು ಇವುಗಳನ್ನು ಆಧರಿಸಿದ ಪಠ್ಯಪುಸ್ತಕಗಳಲ್ಲಿ ಮಾನವೀಯ ಮೌಲ್ಯಗಳು, ಹಕ್ಕುಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ ಪ್ರಮುಖ ಘಟಕಗಳು ಕಾಣಿಸಿಕೊಂಡಿವೆ.

ಸಮಾಜ ವಿಜ್ಞಾನ ವಿಷಯಗಳಲ್ಲಿ ಪೌರನೀತಿ, ಇತಿಹಾಸ, ಅರ್ಥಶಾಸ್ತ್ರ, ಪರಿಸರ ಅಧ್ಯಯನಗಳು ಮತ್ತು ಭೂಗೋಳ ಇವೆ. ತಿರುಳು ಪಠ್ಯಕ್ಷೇತ್ರಗಳ ಅನೇಕ ಘಟಕಗಳನ್ನು ಅದಕ್ಕೆ ಸಂಬಂಧಿಸಿದ ವಿಷಯಗಳ ಕ್ಷೇತ್ರದಲ್ಲಿ ಸೂಕ್ತರೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಶಾಲಾ ಶಿಕ್ಷಣದ ಪ್ರತಿಯೊಂದು ಹಂತದಲ್ಲಿ ಗ್ರಹಿಕೆಯ ಮಟ್ಟವನ್ನು ಗಮನದಲ್ಲಿಟ್ಟು ವಿದ್ಯಾರ್ಥಿಗಳು ಕಲಿಯುವುದು ಇದರ ಉದ್ದೇಶ, ಭಾಷಾ ಕೋರ್ಸ್‌ಗಳು ಮಾನವ ಘನತೆಯ ನೈತಿಕ ಮತ್ತು ಇತರ ಮೌಲ್ಯಗಳು, ಸ್ವಾವಲಂಬನೆ, ಚಾರಿತ್ರ್ಯ ಬೆಳವಣಿಗೆ, ದೇಶಭಕ್ತಿ, ಸಾಮಾಜಿಕ ಅರಿವು, ಜ್ಞಾನ ಸಂಪಾದನೆ ಮತ್ತು ಅನಾಥ ರಕ್ಷಣೆ ಇತ್ಯಾದಿಗಳಿಗೆ ಸಾಹಿತ್ಯದ ಮೂಲಕ ಪ್ರಾಮುಖ್ಯತೆ ನೀಡುತ್ತವೆ. ಪೌರನೀತಿ ಕೋರ್ಸ್‌ಗಳು ವಿವಿಧ ಹಂತಗಳಲ್ಲಿ ನ್ಯಾಯ ವಿತರಣೆಗೆ ಸಂಬಂಧಿಸಿದಂತೆ ಮಾನವ ಹಕ್ಕುಗಳು, ಅವಕಾಶಗಳ ಸಮಾನತೆ, ಸಾಮಾಜಿಕ ಜವಾಬ್ದಾರಿಗಳು; ಔರಸತ್ವ (ಕಾನೂನು ಸಮ್ಮತತೆ) ಅಥವಾ ಸರಕಾರದಿಂದ ಹಿಂಸೆಯ ಬಳಕೆಯ ಯುಕ್ತತೆ ಅಥವಾ ಔಚಿತ್ಯ ಸ್ವಾತಂತ್ರ್ಯ ಮತ್ತು ಸಮಾನತೆ ಕುರಿತು ಮನುಷ್ಯನ ಚಾರಿತ್ರಿಕ ಬಯಕೆ; ಮನುಕುಲದ ಏಕತೆ ಮತ್ತು ಒಗ್ಗಟ್ಟು; ವಿಶ್ವಸಂಸ್ಥೆ ಅಳವಡಿಸಿಕೊಂಡಿರುವ ಮಾನವ ಹಕ್ಕುಗಳು ಮತ್ತು ಪ್ರಗತಿಗೆ ಸಂಬಂಧಿಸಿದ ಲಿಖಿತಪತ್ರಗಳಲ್ಲಿ ವ್ಯಕ್ತಗೊಂಡಿರುವ ಪ್ರಮುಖ ಸಾಧನೆಗಳು ಇತ್ಯಾದಿಗಳಿಗೆ ಸಂಬಂಧಿಸಿದ ಪೌರಸಂಬಂಧಿ ಲಿಖಿತಪತ್ರಗಳಲ್ಲಿ ವ್ಯಕ್ತಗೊಂಡಿರುವ ಪ್ರಮುಖ ಸಾಧನೆಗಳು ಇತ್ಯಾದಿಗಳಿಗೆ ಸಂಬಂಧಿಸಿದ ಪೌರಸಂಬಂಧಿ ಮತ್ತು ಮಾನವ ಹಕ್ಕುಗಳ ಕುರಿತಾದ ಕಾಳಜಿಗಳನ್ನು, ವಿಷಯಗಳನ್ನು ಮತ್ತು ಆಯಾಮಗಳನ್ನು ಒಳಗೊಂಡಿರುತ್ತವೆ. ಅರ್ಥಶಾಸ್ತ್ರದಲ್ಲಿ ಬಳಕೆದಾರರ ಹಕ್ಕುಗಳ ಕುರಿತು ಇರುತ್ತದೆ. ಚರಿತ್ರೆಯ ವಿಷಯದಲ್ಲಿ ವಿಶಿಷ್ಟ ಚಾರಿತ್ರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು ಮತ್ತು ಸಮಾಜದಲ್ಲಿನ ಪರಿವರ್ತನೆಗಳ ಕಾರ್ಯವಿಧಾನದ ವಿವರಗಳು ಇವೆ. ಭಾರತೀಯ ನಾಗರಿಕತೆ ಮತ್ತು ಮಾನವ ನಾಗರಿಕತೆ ಮತ್ತು ಮನುಕುಲದ ಒಟ್ಟು ಪರಂಪರೆಯ ತಳಹದಿಗಳ ಅರ್ಥೈಸುವಿಕೆ ಮತ್ತು ಗುಣಗ್ರಹಣಕ್ಕಾಗಿ ಇವುಗಳನ್ನು ಅಳವಡಿಸಿಕೊಳ್ಳಲಾಗಿದೆ. ಭೂಗೋಳ ಶಾಸ್ತ್ರವು ಬದುಕಿನ ಹಲವು ವಿಧಾನಗಳ ಕುರಿತಾದ ಧ್ವನಿಯನ್ನು ಬೆಳೆಸುತ್ತದೆ ಮತ್ತು ಭೌತಿಕ ವಾತಾವರಣ ಮತ್ತು ಜಗತ್ತಿನ ವಿವಿಧ ಭಾಗಗಳ ಅಂತರ ಸಂಬಂಧಗಳು ಮತ್ತು ಪರಿಸರದೊಂದಿಗೆ ಪರಸ್ಪರ ವರ್ತನೆಯನ್ನು ಅದು ಪ್ರಸ್ತಾಪಿಸುತ್ತದೆ. ವಿಜ್ಞಾನ ಶಿಕ್ಷಣದಲ್ಲಿ ಶೋಧನಾ ಪ್ರಜ್ಞೆ, ಸೃಜನಶೀಲತೆ, ವಸ್ತುನಿಷ್ಠತೆ ಮತ್ತು ಪ್ರಗತಿಪರ ದೃಷ್ಟಿಕೋನದ ಮೌಲ್ಯಗಳನ್ನು ಪ್ರಧಾನವಾಗಿ ಪರಿಗಣಿಸಲಾಗಿದೆ. ಇದರಿಂದ ಪರಿಸರದ ಸಮಸ್ಯೆಗಳನ್ನು, ಸಮಾಜದಲ್ಲಿ ವ್ಯಕ್ತಿಯ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆಯ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ.

**ಪ್ರಾಥಮಿಕ ಹಂತ:** ಈ ಹಂತದಲ್ಲಿ ಸಮಾಜಶಾಸ್ತ್ರವು ಪರಿಸರ ಅಧ್ಯಯನಗಳ ಘಟಕವಾಗಿರುತ್ತದೆ. ಮಾನವ ಆಯಾಮದ ಮುಖ್ಯ ಗಮನವು ಸುತ್ತಮುತ್ತಲಿನ ಪರಿಸರದ, ಉದಾಹರಣೆಗೆ ಮನೆ, ಶಾಲೆ ಮತ್ತು ಮಗುವಿನ ಗ್ರಹಿಕೆ, ಅನುಭವ ಮತ್ತು ಆಸಕ್ತಿಗಳಿಗೆ ಸೀಮಿತವಾಗಿರುವ ದೈನಂದಿನ ಘಟನೆಗಳ ಭೌತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಾಂಶಗಳ ಅರ್ಥೈಸುವಿಕೆಯನ್ನು ಮತ್ತು ಇನ್ನೂ ಮುಂದುವರಿದು ಮಗುವಿನ ಮಾನಸಿಕ ವಿಷಯಾಂಶಗಳ ಅರ್ಥೈಸುವಿಕೆಯನ್ನು ಮತ್ತು ಇನ್ನೂ ಮುಂದುವರಿದು ಮಗುವಿನ ಮಾನಸಿಕ ವ್ಯಾಪ್ತಿಯನ್ನು ರಾಜ್ಯ, ದೇಶ ಮತ್ತು ಜಗತ್ತಿಗೆ ವಿಸ್ತರಿಸುವುದನ್ನು ಪ್ರೋತ್ಸಾಹಿಸುವುದಾಗಿದೆ. ಭಾಷಾ ಶಾಸ್ತ್ರದ ವಿಷಯಗಳು ಬದುಕಿಗೆ ಸಂಬಂಧಿಸಿದ ಮೌಲ್ಯ ಕೇಂದ್ರಿತವಾಗಿವೆ. ಇವುಗಳಲ್ಲಿ ಗ್ರಾಮೀಣ ಮತ್ತು ನಗರದ ಜಾನಪದ ಕತೆಗಳು, ಜಾತ್ರೆಗಳು ಮತ್ತು ಹಬ್ಬಗಳು, ಆರೋಗ್ಯ ಮತ್ತು ನೈರ್ಮಲ್ಯ, ವೃತ್ತಿಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿ ದೇಶ ಸಾಧಿಸಿದ ಪ್ರಗತಿಯ ವಿವರಗಳು ಇರುತ್ತವೆ.

**ಹಿರಿಯ ಪ್ರಾಥಮಿಕ ಹಂತ:** ಈ ಹಂತದಲ್ಲಿ ಸಮಾಜ ಶಾಸ್ತ್ರದ 'ತಿರುಳು ಪಠ್ಯಕ್ರಮ'ದ ಮಾನವೀಯ ಮೌಲ್ಯಗಳ ಘಟಕವು ದುಡಿಮೆಯ ಪ್ರೀತಿ, ಪ್ರಾಮಾಣಿಕತೆ ಶಿಸ್ತು, ಸತ್ಯಸಂಧತೆ, ಸಹಕಾರ, ಮರುಕ, ಭ್ರಾತೃತ್ವ, ಸಮಾನತೆ, ಸರ್ವ–ಧರ್ಮ–ಸಮಭಾವ, ಜವಾಬ್ದಾರಿಗಳ ಪ್ರಜ್ಞೆ, ಕಾಲನಿಷ್ಠೆ, ಸ್ವಂತ ಕರ್ತವ್ಯದ ನಿಭಾಯಿಸುವಿಕೆ ಮತ್ತು ತ್ಯಾಗ ಮಾಡುವಿಕೆ ಇತ್ಯಾದಿಗಳಿಗೆ ಒತ್ತಾಸೆ ನೀಡುತ್ತದೆ. ಇಲ್ಲಿ ಸಮಾಜ ಶಾಸ್ತ್ರದಲ್ಲಿ ಪೌರನೀತಿ, ಚರಿತ್ರೆ ಮತ್ತು ಭೂಗೋಳ ಇರುತ್ತದೆ. ಪೌರ ಮೌಲ್ಯಗಳು, ಅನೇಕ ವಿಧದ ಸಾಮಾಜಿಕ ಜವಾಬ್ದಾರಿಗಳು ಮತ್ತು ಪೌರ ಕಾರ್ಯವಿಧಾನಗಳ ಕುರಿತು ಇವುಗಳು ಉತ್ತಮ ಮಾಹಿತಿಯನ್ನು ನೀಡುತ್ತವೆ. ಇದರ ಉದ್ದೇಶ ರಾಷ್ಟ್ರೀಯ ಸಂವಿಧಾನದ ಮೌಲ್ಯಗಳನ್ನು ವಿವರಿಸುವುದು, ಸರಕಾರ, ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳ ಕಾರ್ಯಗತಿಯ ಕುರಿತು ತಿಳಿವಳಿಕೆ ಮೂಡಿಸುವುದು ಮತ್ತು ಸಮಕಾಲೀನ ವಿಚಾರಗಳು ಮತ್ತು ಸಮಸ್ಯೆಗಳನ್ನು ತಿಳಿಸಿಕೊಡುವುದಾಗಿದೆ. ಚರಿತ್ರೆಯಲ್ಲಿರುವ ಮಾನವ ಹಕ್ಕುಗಳ ಆಯಾಮವು ಭಾರತದ ವ್ಯಾಪಕ ಚಿತ್ರಣವನ್ನು ಒದಗಿಸುತ್ತದೆ. ಅದರ ಗಮನವು ಮುಖ್ಯವಾಗಿ ಅನೇಕ ವಿಚಾರಗಳಲ್ಲಿ ಕೇಂದ್ರೀಕೃತಗೊಂಡಿರುತ್ತದೆ. ಅವುಗಳೆಂದರೆ: ಪ್ರಮುಖ ರಾಜಕೀಯ

Digitised by Bharatavani, CIIL

ಬೆಳವಣಿಗೆಗಳು, ಭಾರತದ ಸಮ್ಮಿಶ್ರ ಸಂಸ್ಕೃತಿಯ ಸಾಂಸ್ಕೃತಿಕ ಪರಂಪರೆ, ಭಾರತೀಯ ಸಮಾಜದ ಪ್ರಗತಿಪರ ವೈವಿಧ್ಯತೆ, ಮಹಿಳೆಯರು ಮತ್ತು ಸಮಾಜದ ಅಲಕ್ಷಿತ ವಿಭಾಗಗಳ ಕುರಿತು ಇರುವಂತಹ ಅಸಮಾನತೆಗಳು ಮತ್ತು ಭಾರತೀಯ ಸಮಾಜವನ್ನು ಮರುರಚಿಸುವ ಸಲುವಾಗಿ ಸಮಾನತಾವಾದದ ಸಮಾಜ–ಇವುಗಳನ್ನು ತಿಳಿದುಕೊಳ್ಳುವುದಾಗಿದೆ. ಪೌರನೀತಿಯ ಪಠ್ಯಕ್ರಮದ ಗುರಿಯು ಹೀಗಿದೆ: ಪ್ರಜಾಪ್ರಭುತ್ವ, ರಾಷ್ಟ್ರೀಯ ಐಕ್ಯತೆ ಮತ್ತು ಭಾರತದ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾದ ಆದರ್ಶಗಳ ಮೌಲ್ಯಗಳನ್ನು ಎತ್ತಿತೋರಿಸುವುದು; ಸಮುದಾಯದ ಆಗುಹೋಗುಗಳಲ್ಲಿ, ಅಳವಡಿಸಿಕೊಳ್ಳಲಾದ ಆದರ್ಶಗಳ ಮೌಲ್ಯಗಳಲ್ಲಿ ಎತ್ತಿತೋರಿಸುವುದು; ಸಮುದಾಯದ ಆಗುಹೋಗುಗಳಲ್ಲಿ, ಮತ್ತು ಪೌರ ಮತ್ತು ರಾಜಕೀಯ ಸಂಸ್ಥೆಗಳಲ್ಲಿ ಕ್ರಿಯಾಶೀಲವಾಗಿ ಪಾಲುಗೊಳ್ಳುವುದು. ಸಂವಿಧಾನದ ಅನೇಕ ವಿಷಯಾಂಶಗಳ ಅಧ್ಯಯನವು ಮಾನವ ಹಕ್ಕಿನ ಆಯಾಮಗಳನ್ನು ಹೊಂದಿಕೊಂಡಿದೆ. ಅದರಲ್ಲಿಯೂ ವಿಶೇಷವಾಗಿ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು, ಸಮಕಾಲೀನ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಮತ್ತು ಸಂಗತಿಗಳು, ರಾಷ್ಟ್ರೀಯ ಗುರಿಗಳು, ಮತ್ತು ಸರ್ವಸಮಾನತೆಯ ಅಭಿವೃದ್ಧಿಯ ಸಮಾಜವನ್ನು ನಿರ್ಮಿಸುವ ಸವಾಲುಗಳು ಮತ್ತು ಎಲ್ಲರ ಹಿತಕ್ಕಾಗಿ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆ. ವಿಜ್ಞಾನದ ಕೋರ್ಸ್ ವೈಜ್ಞಾನಿಕ ದೃಷ್ಟಿಕೋನ ಮತ್ತು ಸಂಕುಚಿತ ಆಲೋಚನೆಗಳನ್ನು ಆಧರಿಸಿದ ಸಂದಿಗ್ಧತೆ ಮತ್ತು ಪೂರ್ವಗ್ರಹಗಳ ವಿರುದ್ಧ ಹೋರಾಡಲು ಪ್ರಗತಿಪರ ಅನುಸಂಧಾನದ ಮೌಲ್ಯಗಳಿಗೆ ಒತ್ತನ್ನು ನೀಡುತ್ತದೆ. ಭಾಷಾ ಕೋರ್ಸಿನ ವಸ್ತು ಮತ್ತು ಆದರ್ಶದ ಘಟಕವು ಮಾನವೀಯ ಮೌಲ್ಯಗಳ ಸಂಸ್ಕೃತಿಯಲ್ಲಿ ತನ್ನ ಗಮನವನ್ನು ಕೇಂದ್ರೀಕೃತಗೊಳಿಸಿದೆ ಮತ್ತು ಮಾನವ ಹಕ್ಕುಗಳ ಕುರಿತಾದ ಅರಿವು ಮತ್ತು ಸಾಮಾನ್ಯ ನೆಲೆಯಲ್ಲಿ ಮಾನವ ಸಮಾಜ ಮತ್ತು ಅದರಲ್ಲೂ ಮುಖ್ಯವಾಗಿ ಭಾರತೀಯ ಸಮಾಜದ ಸಂಗತಿಗಳನ್ನು ಅರ್ಥೈಸುವಿಕೆಯ ಕುರಿತು ಅರಿವನ್ನು ಸೃಷ್ಟಿಸುತ್ತದೆ.

**ಮಾಧ್ಯಮಿಕ ಹಂತ:** ಈ ಹಂತದಲ್ಲಿ ಸಮಾಜ ವಿಜ್ಞಾನವು ಚರಿತ್ರೆ, ಭೂಗೋಳ, ಪೌರನೀತಿ ಮತ್ತು ಅರ್ಥಶಾಸ್ತ್ರವನ್ನು ಒಳಗೊಂಡಿರುತ್ತದೆ. ಇದರ ಉದ್ದೇಶ ಮಾನವ ಹಕ್ಕುಗಳ ಅನೇಕ ವಿಷಯಾಂಶಗಳನ್ನು ಮತ್ತು ಆಯಾಮಗಳನ್ನು ತಿಳಿದುಕೊಳ್ಳುವುದು. ಚರಿತ್ರೆಯ ಕೋರ್ಸ್‌ಗಳಲ್ಲಿ ಮನುಷ್ಯನ ನಾಗರಿಕತೆಯ ಬೆಳವಣಿಗೆ ಸಂಬಂಧಿಸಿದ ಮುಖ್ಯ ಹಂತಗಳು ಮತ್ತು ಸಾಧನೆಗಳು; ಮನುಕುಲದ ಸಾಮಾನ್ಯ ಪರಂಪರೆಗೆ ಬೇರೆ ಬೇರೆ ಜನರು ನೀಡಿದ ಕೊಡುಗೆಗಳು; ಎರಡು ಮಹಾಯುದ್ಧಗಳಿಂದಾದ ವಿಪತ್ತು; ವಸಾಹತುಶಾಹಿಯ ಅಂತ್ಯ ಮತ್ತು ರಾಷ್ಟ್ರ–ರಾಜ್ಯಗಳ ಸಂಖ್ಯಾವೃದ್ಧಿ; ವಿಶ್ವಸಂಸ್ಥೆಯ ಚಳವಳಿ ಮತ್ತು ಮಾನವಹಕ್ಕುಗಳ ಜಾಗತಿಕ ಮಾನ್ಯತೆ, ಅದರ ಕ್ರಿಯಾಶೀಲತೆ ಮತ್ತು ಪ್ರಮುಖ ಘೋಷಣೆ ಮತ್ತು ಸಭೆಗಳು; ಸರ್ವಾಧಿಕಾರದ ಕುಸಿತ ಮತ್ತು ಪ್ರಜಾಪ್ರಭುತ್ವದ ವಿಜಯ ಇವುಗಳ ವ್ಯಾಪಕ ಪರಿಪ್ರೇಕ್ಷೆಯನ್ನು ಒದಗಿಸಲಾಗುತ್ತದೆ. ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯ ಮತ್ತು ಜನರ ಸ್ವ–ನಿರ್ಧಾರದ ಚಳವಳಿಗಳಿಗೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಚಾಲನಶಕ್ತಿಯನ್ನು ಒದಗಿಸಿದಂತಹ ಯುರೋಪಿನ ಪುನರುತ್ಥಾನದ ಚಾರಿತ್ರಿಕ ಬೆಳವಣಿಗೆಗಳು, ಅದರ ಮಾನವೀಯತ್ವದ ಗುಣಲಕ್ಷಣಗಳು, ರಾಷ್ಟ್ರ–ರಾಜ್ಯಗಳ ಉದಯ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ, ಕ್ರಾಂತಿಕಾರಿ ಮತ್ತು ರಾಷ್ಟ್ರೀಯ ಚಳವಳಿಗಳು, ಅಮೇರಿಕೆಯ ಸ್ವಾತಂತ್ರ್ಯ ಸಮರ ಮಾನವಹಕ್ಕು ಮತ್ತು ಸ್ವಾತಂತ್ರ್ಯಗಳಿಗೆ ಅಗಾಧ ಪ್ರಚೋದನೆ ನೀಡಿದ ಫ್ರೆಂಚ್ ಮತ್ತು ರಶ್ಯನ್ ಕ್ರಾಂತಿಗಳು, ದಕ್ಷಿಣ ಆಫ್ರಿಕಾದ ವರ್ಣಬೇಧ ನೀತಿಯ ಕುಸಿತ–ಇವುಗಳೆಲ್ಲ ನಿರ್ದಿಷ್ಟ ವಿಷಯಗಳ ಉದಾಹರಣೆಗಳನ್ನು ನೀಡುವುದಲ್ಲದೆ, ಮಾನವ ಹಕ್ಕುಗಳ ಆಯಾಮಗಳೊಂದಿಗೆ ಆಪ್ತ ಸಂಬಂಧವನ್ನು ಹೊಂದಿರುವುದರಿಂದ, ಜಾಗತಿಕ ಶಾಂತಿ ಮತ್ತು ನ್ಯಾಯದೊಂದಿಗೆ ಜಾಗತಿಕ ಮಾನವ ಹಕ್ಕುಗಳ ಜೋಡಣೆಯ ಕುರಿತಾದ ತಿಳಿವಳಿಕೆ ಮತ್ತು ವಿಶ್ಲೇಷಾತ್ಮಕ ಅರ್ಥೈಸುವಿಕೆಯನ್ನು ವಿಸ್ತರಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ವಿಶೇಷ ಆಸಕ್ತಿ ಒದಗಿಸುತ್ತದೆ.

ಪೌರನೀತಿ ಅಧ್ಯಯನ ವಿಷಯವು ಮಾನವ ಹಕ್ಕುಗಳ ಶಿಕ್ಷಣದೊಂದಿಗೆ ನೇರ ಸಂಬಂಧವನ್ನು ಹೊಂದಿದೆ. ಅದು ವ್ಯಾಪಕ ನೆಲೆಯಲ್ಲಿ ವ್ಯಕ್ತಿ, ಸಮಾಜ ಮತ್ತು ದೇಶದ ನಡುವೆ ಇರುವಂತಹ ಸಂಕೀರ್ಣ ಸಂಬಂಧಗಳು; ಸಾಮಾಜಿಕ, ರಾಜಕೀಯ ಮತ್ತು ಸರಕಾರಿ ಸಂಸ್ಥೆಗಳು ಮತ್ತು ಅವುಗಳ ಪಾತ್ರ, ಸರಕಾರದ ಅನೇಕ ರೂಪಗಳು ಮತ್ತು ವಿಶೇಷವಾಗಿ ಪ್ರಗತಿಪರ ಪ್ರಜಾಪ್ರಭುತ್ವದ ಮತ್ತು ಪ್ರಜಾಪ್ರಭುತ್ವದ ನಾಗರಿಕರ ಹಕ್ಕುಗಳು ಮತ್ತು ಜವಾಬ್ದಾರಿಗಳು, ಅದರಲ್ಲಿಯೂ ವಿಶೇಷವಾಗಿ ಮೂಲಭೂತ ಕರ್ತವ್ಯಗಳು – ಇವುಗಳನ್ನು ಒಳಗೊಂಡಿರುತ್ತದೆ. ಪೌರನೀತಿ ಪಠ್ಯವಸ್ತುವಿನಲ್ಲಿ ಇರುವ ಪ್ರಮುಖ ಅಂಶಗಳೆಂದರೆ – ಸಂವಿಧಾನದ ಪ್ರಮುಖ ಮೂಲ ಲಕ್ಷಣಗಳು, ಅದರ ಆದರ್ಶಗಳು ಮತ್ತು ಮೂಲ ಮೌಲ್ಯಗಳು, ಪ್ರಜಾಪ್ರಭುತ್ವವಾದಿ ಸಂಸ್ಥೆಗಳ ಅವಕಾಶಗಳು, ಬೇರೆ ಬೇರೆ ಹಂತಗಳಲ್ಲಿ ಸರಕಾರದ ಕಾರ್ಯವಿಧಾನಗಳು ಮತ್ತು ಅವುಗಳ ಕಾರ್ಯಾಚರಣೆಗಳು, ನಾಗರಿಕರ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು, ಸಮಕಾಲೀನ ಸಮಸ್ಯೆಗಳು, ಭಾರತೀಯ ಪ್ರಜಾಪ್ರಭುತ್ವದ ಮುಂದಿರುವ ಅನೇಕ ಚರ್ಚಾ ವಿಷಯಗಳು ಮತ್ತು ಸವಾಲುಗಳು, ವೈವಿಧ್ಯಮಯ ಸಾಮಾಜಿಕ ಸಮಸ್ಯೆಗಳು ಮತ್ತು ಚಾಲ್ತಿಯಲ್ಲಿರುವ ಅಸಮಾನತೆಗಳು, ಮತ್ತು ಮಾನವ ಹಕ್ಕುಗಳಿಗೆ ಒತ್ತಾಸೆ ನೀಡಿ ಅದನ್ನು ಕಾಪಾಡಿಕೊಂಡು ಬರಲು ಕೈಗೊಂಡ ಕಾರ್ಯಗಳ ಪರಿಶೀಲನೆ, ಅರ್ಥಶಾಸ್ತ್ರದ ಪಠ್ಯವಸ್ತುವು ಮೂಲ ಆರ್ಥಿಕ ತಿಳವಳಿಕೆ, ಸಮಕಾಲೀನ ಆರ್ಥಿಕ ಸಮಸ್ಯೆಗಳೊಂದಿಗೆ ಸಂಪರ್ಕ ದೇಶದ ಸಂಪನ್ಮೂಲಗಳು ಮತ್ತು ಸಾಧ್ಯತೆಗಳನ್ನು ತಿಳಿದುಕೊಳ್ಳುವುದು, ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಉತ್ತಮ ಬಳಕೆಯ ಕುರಿತು ಪರವಾದ ಧೋರಣೆ, ಸಾಮಾಜಿಕ ನ್ಯಾಯದ ಕುರಿತು ಪ್ರೀತಿ ಮತ್ತು ದೇಶದ ಮರುರಚನಾ ಕಾರ್ಯದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವ ಬಯಕೆಗಳಿಗೆ ಅವಕಾಶ ಮಾಡಿಕೊಡುತ್ತದೆ. ವಿಜ್ಞಾನ ಪಠ್ಯವಸ್ತುವು ಪರಿಶೋಧನೆ, ವೈಜ್ಞಾನಿಕ ಮನೋಭಾವ, ಸೃಜನಶೀಲತೆ, ವಸ್ತುನಿಷ್ಠತೆಗೆ ಪ್ರಜ್ಞೆಯ

Digitised by Bharatavani, CIIL

ಮೌಲ್ಯಗಳಿಗೆ ಒತ್ತನ್ನು ನೀಡುತ್ತದೆ. ಕೃಷಿ, ಸಂವಹನ, ಕೈಗಾರಿಕೆ, ಶಕ್ತಿ, ಸಾರಿಗೆ, ಆರೋಗ್ಯ, ಸಾಮಾಜಿಕ ಅರಣ್ಯ ಮತ್ತು ಪರಿಸರದಲ್ಲಿ ವಿಜ್ಞಾನದ ಬಳಕೆಗಳು ಮತ್ತು ದುರ್ಬಳಕೆಗಳ ಕುರಿತು ಅರಿವನ್ನು ಹೆಚ್ಚಿಸುವುದು. ಭಾಷಾ ಪಠ್ಯವಸ್ತುದಲ್ಲಿ ಭಾವನೆ, ತಾಳ್ಮೆ, ಮತ್ತು ಅಸಹಿಂಸೆಯ ಮಾನವ ಮೌಲ್ಯಗಳನ್ನು ಪ್ರತಿಪಾದಿಸುವ ಸಾಹಿತ್ಯ ರಚನೆಗಳು ಇರುತ್ತವೆ. ಈ ರಚನೆಗಳು ಗುಣಮಟ್ಟದ ಬದುಕಿಗೆ ಅಡ್ಡಿಯಾಗಿ ಪರಿಣಮಿಸಿರುವ ಸಮಕಾಲೀನ ಸಮಸ್ಯೆಗಳಾದ ಅಸಮಾನತೆಗಳು, ಹಿಂದುಳಿಯುವಿಕೆ ಮತ್ತು ಶೋಷಣೆಯ ಕುರಿತು ಅರಿವು ಮತ್ತು ಸಂವೇದನೆಯನ್ನು ಸೃಷ್ಟಿಸುತ್ತವೆ.

ಆದರೆ, ಶಾಲಾ ಪಠ್ಯವಸ್ತುವಿನಲ್ಲಿ ಮೂಲಭೂತ ವಿಚಾರಗಳು, ಚರಿತ್ರೆ, ವಿಷಯಾಂಶಗಳು ಮತ್ತು ಮಾನವ ಹಕ್ಕುಗಳ ರಕ್ಷಣೆ ಪ್ರಚಾರಕ್ಕೆ ಹೆಚ್ಚಿನ ಗಮನವನ್ನು ನೀಡುವ ಅವಕಾಶವಿರುವುದು ಬಹಳ ಕಡಿಮೆ. ಇವು ಮಾನವ ಹಕ್ಕುಗಳೊಂದಿಗೆ ಸ್ಥೂಲ ಸಂಬಂಧವನ್ನು ಹೊಂದಿರಬಹುದು ಆದರೆ ಇದರಿಂದ ಮುಖ್ಯವಾಗಿ ಮಾನವ ಮೌಲ್ಯಗಳು ಮತ್ತು ಸಮಾಜೋ–ಆರ್ಥಿಕ ತಳಹದಿಗಳ ಕುರಿತು ತಿಳಿವಳಿಕೆ ಬರುತ್ತದೆ. ಇದು ನಾಗರಿಕ, ರಾಜಕೀಯ ಮತ್ತು ಮೂಲಭೂತ ಹಕ್ಕುಗಳನ್ನು ಮಾತ್ರವಲ್ಲ ನಾಗರಿಕರ ಕರ್ತವ್ಯಗಳನ್ನು ತಿಳಿಯಲು ಕೂಡ ಸಹಕಾರಿಯಾಗುತ್ತವೆ.

**ವಿಶ್ವವಿದ್ಯಾನಿಲಯಗಳು ಮತ್ತು ಮಹಾವಿದ್ಯಾಲಯಗಳು:**

**ಭಾರತದಲ್ಲಿ ಅನೇಕ ವಿಧದ ವಿಶ್ವವಿದ್ಯಾನಿಲಯಗಳು ಇವೆ. ಅವುಗಳೆಂದರೆ:**

1. ಸಂಸದ್ ಮಸೂದೆಯಿಂದ ಸೃಷ್ಟಿಸಲಾದ ಕೇಂದ್ರ ವಿಶ್ವವಿದ್ಯಾನಿಲಯಗಳು.
2. ರಾಜ್ಯ ಮಸೂದೆಗಳಿಂದ ಸ್ಥಾಪಿಸಲಾದ ರಾಜ್ಯ ವಿಶ್ವವಿದ್ಯಾನಿಲಯಗಳು.
3. ಖಾಸಗಿ ವಿಶ್ವವಿದ್ಯಾನಿಲಯಗಳು ಮತ್ತು ಪರಿಗಣಿತ ವಿಶ್ವವಿದ್ಯಾನಿಲಯಗಳು.

ಇವುಗಳು ವಸತಿ ಸೌಕರ್ಯದ ವಿಶ್ವವಿದ್ಯಾಲಯಗಳಾಗಿರಬಹುದು ಅಥವಾ ಮಹಾವಿದ್ಯಾಲಯಗಳನ್ನು ಹೊಂದಿರುವ ಸಂಯೋಜಿತ ವಿಶ್ವವಿದ್ಯಾಲಯಗಳು ಅಥವಾ ಮಿಶ್ರ ವಸತಿಸೌಕರ್ಯದ ಮತ್ತು ಸಂಯೋಜಿತ ವಿಶ್ವವಿದ್ಯಾಲಯಗಳು. ವಸತಿಸೌಕರ್ಯದ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕ್ರಮದ ಪಠ್ಯವಸ್ತುವನ್ನು ಕೇಂದ್ರದಲ್ಲಿ ನಿರ್ಧರಿಸಲಾಗುವುದು ಮತ್ತು ಹೊಸ ಅಧ್ಯಯನ ಕ್ರಮದ ಅಳವಡಿಕೆ, ಮಾರ್ಪಾಟು ಮತ್ತು ಪರಿಷ್ಕರಣಗಳನ್ನು ಯಾವುದೇ ವಿಳಂಬವಾಗಲೀ, ಕಷ್ಟವಾಗಲೀ ಇಲ್ಲದೆ ಅಧ್ಯಯನಗಳ ಮಂಡಳಿಯೇ ಜಾರಿಗೆ ತರುತ್ತವೆ. ಆದರೆ ಸಂಯೋಜಿತ ವಿಶ್ವವಿದ್ಯಾಲಯಗಳಲ್ಲಿ, ಹತ್ತಿರ ಮತ್ತು ದೂರದ ಪ್ರದೇಶಗಳಲ್ಲಿ ಮಹಾವಿದ್ಯಾಲಯಗಳು ಇರುವುದರಿಂದ ಪಠ್ಯವಸ್ತುವಿನ ಬಗ್ಗೆ ಆಸಕ್ತಿ ತೋರಿಸುವುದಾಗಲೀ, ಅದರಲ್ಲಿ ಬದಲಾವಣೆಯನ್ನು ಅಳವಡಿಸುವುದರಲ್ಲಿಯಾಗಲೀ ಶಿಕ್ಷಕರಿಗೆ ಇರುವ ಅವಕಾಶ ಬಹಳ ಸೀಮಿತವಾದುದು. ಪಠ್ಯಕ್ರಮ ಮತ್ತು ಸಹ ಪಠ್ಯಕ್ರಮಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿವೆ.

**ಸ್ನಾತಕಪೂರ್ವ ಹಂತ:** ಮೂರು ವರ್ಷಗಳ ಮರುರಚಿತ ಬಿ.ಎ. ಪದವಿ ಅಧ್ಯಯನ ಕ್ರಮದಲ್ಲಿ ಮಾನವ ಹಕ್ಕುಗಳು ಸಮಾಜ ವಿಜ್ಞಾನಗಳ ಪಠ್ಯವಸ್ತುವಿನ ಭಾಗವಾಗಿ ಒಂದು ಉಪ–ವಿಷಯವಾಗಿದೆ. ರಾಜ್ಯಶಾಸ್ತ್ರ ಕ್ಷೇತ್ರದ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಭಾರತದ ಸಂವಿಧಾನದ ಪ್ರಶ್ನೆ ಪತ್ರಿಕೆ ಇರಬಹುದು ಅಥವಾ ವಿಶ್ವಸಂಸ್ಥೆಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ವ್ಯವಹಾರಗಳು ಮತ್ತು ಸಂಘಟನೆಗಳ ಪ್ರಶ್ನೆಪತ್ರಿಕೆ ಇರಬಹುದು. ಇವುಗಳಲ್ಲಿ ಮಾನವ ಹಕ್ಕು ಅಧ್ಯಯನಗಳು ಸೀಮಿತ ವಿಷಯಾಂಶಗಳನ್ನು ಮಾತ್ರ ಹೊಂದಿವೆ. ಇದೇ ರೀತಿ ಸಮಾಜಶಾಸ್ತ್ರ, ಮಾನವಶಾಸ್ತ್ರ, ಸಮಾಜಕಾರ್ಯ, ಚರಿತ್ರೆ, ಅರ್ಥಶಾಸ್ತ್ರ, ತುಲನಾತ್ಮಕ ಸರಕಾರಗಳು ಮತ್ತು ರಾಜಕಾರಣ, ಮನಃಶಾಸ್ತ್ರ ಅಥವಾ ತತ್ವಜ್ಞಾನ, ಇವುಗಳಲ್ಲಿ ಮಾನವ ಹಕ್ಕುಗಳು ನಿಜವಾಗಿಯೂ ನಿರ್ದಿಷ್ಟ ಮುಖ್ಯ ಸ್ಥಾನವನ್ನು ಪಡೆದಿಲ್ಲ. ಮಾನವ ಹಕ್ಕುಗಳ ಕೆಲವು ವಿಷಯಾಂಶಗಳು ಸಮಾಜ ವಿಜ್ಞಾನ ಪಠ್ಯಗಳ ವಿಷಯದಲ್ಲಿ ಸಂಯೋಜಿತವಾಗಿವೆ. ಉದಾಹರಣೆಗೆ ರಾಜ್ಯಶಾಸ್ತ್ರದಲ್ಲಿರುವ ಮಾನವ ಹಕ್ಕುಗಳ ಸಂವಿಧಾನಾತ್ಮಕ ವಿಷಯಾಂಶಗಳು ಮತ್ತು ಚರಿತ್ರೆಯಂತಹ ಪಠ್ಯಗಳಲ್ಲಿ ಇರುವಂತಹ ಸಾರ್ವಜನಿಕ ಆಡಳಿತ, ಮತ್ತು ಪ್ರಜಾಪ್ರಭುತ್ವದ ಅಥವಾ ಸ್ವಾತಂತ್ರ ಚಳವಳಿಗಳು. ಸಮಾಜಶಾಸ್ತ್ರ, ಸಮಾಜ ಕಾರ್ಯ ಮತ್ತು ಮನಃಶಾಸ್ತ್ರಗಳಲ್ಲಿ ಗುಂಪಿನ ಅಂತರ್‌ಸಂಬಂಧಗಳು, ಅಥವಾ ಸಮಾಜಗಳ ಸಂಬಂಧಗಳು, ಸಾಮಾಜಿಕ ಸಮಸ್ಯೆಗಳು, ಸಾಂಪ್ರದಾಯಿಕ ಸಾಮಾಜಿಕ ರಚನೆಯನ್ನು ಆಧರಿಸಿದ ಪಕ್ಷಪಾತಗಳು ಮತ್ತು ಪೂರ್ವಗ್ರಹಗಳ ಕುರಿತು ಇರುವ ಕಡಿಮೆ ಪ್ರಮಾಣದ ಉಲ್ಲೇಖಗಳಲ್ಲಿ ಮಾನವ ಹಕ್ಕುಗಳಿಗೆ ಅದು ಇರುವ ರೀತಿಯಲ್ಲಿಯೇ ಕೆಲ ಮಟ್ಟಿಗಿನ ಅವಕಾಶ ದೊರೆತಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ಪಠ್ಯವಸ್ತುಗಳಲ್ಲಿ ಮಾನವ ಹಕ್ಕುಗಳ ಆಧಾರವಾಗಿಲ್ಲ. ಕಾನೂನು ಅಧ್ಯಯನ ಕೇಂದ್ರಗಳಲ್ಲಿ ಕೂಡಾ ರಾಷ್ಟ್ರೀಯ ಕಾನೂನು ವಿದ್ಯಾಲಯವನ್ನು ಹೊರತುಪಡಿಸಿ, ಮಾನವ ಹಕ್ಕುಗಳನ್ನು ಸಾಂಪ್ರದಾಯಿಕ ಕಾನೂನು ಪರಿಪ್ರೇಕ್ಷೆಯಿಂದ ಉಪಘಟಕವಾಗಿ ಕಲಿಸಲಾಗುತ್ತದೆ. ಸಂವಿಧಾನಾತ್ಮಕ ಕಾನೂನು ಮತ್ತು ಮಾನವ ಹಕ್ಕುಗಳ ಭಾಗವಾಗಿ ಕಲಿಸಲಾಗುವ ಮೂಲಭೂತ ಹಕ್ಕುಗಳು ಕೂಡಾ ಅಂತಾರಾಷ್ಟ್ರೀಯ ಕಾನೂನಿನ ಸೀಮಿತ ಘಟಕವಾಗಿ ರೂಪುಗೊಂಡಿವೆ. ಇವುಗಳಿಗೆ ಕಾನೂನಿಗೆ ಸಂಬಂಧಿಸಿದ ಪ್ರಬಲ ಗುರಿ ಇದೆ. ವಿಷಯಕ್ಕೆ ಸಂಬಂಧಿಸಿದಂತೆ ತೀರ್ಮಾನವಾದ ಮೊಕದ್ದಮೆ ಅಥವಾ ಮೊಕದ್ದಮೆಯ ಅಧ್ಯಯನಗಳ ಮೇಲೆ ಹೆಚ್ಚುವರಿ ಕಾನೂನು ಒತ್ತು ಇರುತ್ತದೆ. ಇತ್ತೀಚಿಗೆ ದೇಶದ ಕೆಲವು ಕಾನೂನು ಬೋಧನಾಂಗಗಳಲ್ಲಿ ಮಾನವ ಹಕ್ಕುಗಳ ಬಗ್ಗೆ ನಿರ್ದಿಷ್ಟ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ.

Digitised by Bharatavani, CIIL

**ಸ್ನಾತಕೋತ್ತರ ಹಂತ:** ಬಹುಪಾಲು ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ಸಂವಿಧಾನಾತ್ಮಕ ಕಾನೂನು ವಿಷಯದ ಘಟಕವಾಗಿ ಮೂಲಭೂತ ಹಕ್ಕುಗಳನ್ನು ಕಡ್ಡಾಯ ವಿಷಯವಾಗಿ ಕಲಿಸುತ್ತಿದ್ದರೆ, ಕೆಲವು ವಿಶ್ವವಿದ್ಯಾಲಯಗಳ ಕಾನೂನು ವಿಭಾಗಗಳಲ್ಲಿ ಈ ಕಡ್ಡಾಯ ವಿಷಯದೊಂದಿಗೆ ಮಾನವ ಹಕ್ಕುಗಳ ವಿಶೇಷ ಕೋರ್ಸ್ ಎಲ್‌ಎಲ್‌ಎಮ್ ಸ್ನಾತಕ ಪದವಿಯಲ್ಲಿ ಐಚ್ಛಿಕ ವಿಷಯವಾಗಿ ಇರುತ್ತದೆ. ರಾಜ್ಯಶಾಸ್ತ್ರದ ವಿಭಾಗಗಳಲ್ಲಿ ಮಾನವ ಹಕ್ಕುಗಳು ಮಾಸ್ಟರ್ಸ್ ಪದವಿಯಲ್ಲಿ ಮಾತ್ರ ಒಂದು ಅಥವಾ ಎರಡು ಪ್ರಶ್ನಪತ್ರಿಕೆಗಳ ಭಾಗವಾಗಿ ಇದೆ. ಮಾನವ ಹಕ್ಕುಗಳಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ನ್ನು ಪ್ರಾರಂಭಿಸಿರುವ ಕೆಲವು ವಿಶ್ವವಿದ್ಯಾನಿಲಯಗಳು ಕೂಡ ಇವೆ.

**ಎಂಫಿಲ್ ಮತ್ತು ಪಿಹೆಚ್.ಡಿ. ಹಂತಗಳು:** ಮಾನವ ಹಕ್ಕುಗಳ ವಿಷಯಾಂಶಗಳ ಕುರಿತು ಅನೇಕ ಸಂಪ್ರಬಂಧಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. ಆದರೆ ಪ್ರಕಟವಾಗಿರುವ ಸಂಪ್ರಬಂಧಗಳು ಮಾತ್ರ ಕೆಲವೇ ಕೆಲವು. ಮಾನವ ಹಕ್ಕುಗಳು ಸಂಕೀರ್ಣ ಸಂಗತಿಗಳಾಗಿವೆ. ಮಾನವ ಹಕುಗಳ ಉಲ್ಲಂಘನೆಯ ಕಾರಣಗಳನ್ನು ಮತ್ತು ಪರಿಣಾಮಗಳನ್ನು ತಿಳಿದುಕೊಳ್ಳಲು ಮತ್ತು ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ದೃಷ್ಟಿಯಿಂದ ಮಾನವ ಹಕ್ಕುಗಳನ್ನು ಶಿಕ್ಷಣದ ಬೇರೆ ಬೇರೆ ಭಾಗಗಳಲ್ಲಿ ಸೇರಿಸಿಕೊಳ್ಳಬೇಕು ಮತ್ತು ಇವುಗಳ ಮೂಲಕ ಪರಿಶೋಧಿಸಬೇಕು. ಆದರೆ ದುರಾದೃಷ್ಟದ ವಿಚಾರವೆಂದರೆ ಇವುಗಳನ್ನು ಸಾಂಪ್ರದಾಯಿಕ ರೀತಿಯಲ್ಲಿ ಮತ್ತು ಸಮಕಾಲೀನವಾಗಿ ಸಂಗತವೆನಿಸದ ವಿಷಯಗಳ ಮೇಲೆ ಇದನ್ನು ಬರೆಯಲಾಗಿದೆ. ಕಾಲಾನುಕ್ರಮದಲ್ಲಿ ಮಾನವ ಹಕ್ಕುಗಳ ಬೋಧನೆಯು ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಸ್ಥಿರವಾಗಿ ನೆಲೆಗೊಂಡ ಬಳಿಕ ಈ ಕ್ಷೇತ್ರದಲ್ಲಿ ಗಂಭೀರ ಸಂಶೋಧನೆಯನ್ನು ಕೈಗೊಳ್ಳಲಾಗುವುದೆಂದು ನಿರೀಕ್ಷಿಸಲಾಗಿದೆ.

**ಮಾನವ ಕರ್ತವ್ಯ ಶಿಕ್ಷಣ:** ಭಾರತೀಯ ತತ್ವಜ್ಞಾನದ ಪರಂಪರೆ, ಪುರಾಣ ಕಥನಗಳು ಮತ್ತು ಸಾಧು ಸಂತರ ಆಧ್ಯಾತ್ಮಿಕ ಮತ್ತು ಧಾರ್ಮಿಕ ಬೋಧನೆಗಳ ಕುರಿತು ಕರ್ತವ್ಯಗಳು, ಜವಾಬ್ದಾರಿಗಳು ಮತ್ತು ಆಭಾರವನ್ನು ಎತ್ತಿ ಹಿಡಿದಿವೆ. ಆದರೆ, ಶತಮಾನಗಳಿಂದ ಈ ಆದರ್ಶವನ್ನು ಕಾರ್ಯಗತಗೊಳಿಸದ ವೈಫಲ್ಯ ಮತ್ತು ಇತ್ತೀಚೆಗೆ ತನ್ನಲ್ಲಿರುವ ಒಳ್ಳೆಯದನ್ನು ಇನ್ನೊಬ್ಬರಿಗೆ 'ನೀಡುವ ಕರ್ತವ್ಯಕ್ಕಿಂತ 'ತೆಗೆದುಕೊಳ್ಳುವ' ಹಕ್ಕುಗಳ ಕೈ ಮೇಲಾಗಿರುವುದನ್ನು ಗಮನಿಸಲಾಗಿದೆ. ಇದು ಹಕ್ಕುಗಳು ಮತ್ತು ಕರ್ತವ್ಯಗಳ ನಡುವಿನ ಸಮತೋಲನವನ್ನು ಭಂಗಗೊಳಿಸಿದೆ. ಇದರ ಪರಿಣಾಮವಾಗಿ ಕರ್ತವ್ಯಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗುತ್ತದೆ. ಸಂವಿಧಾನದ ತಿದ್ದುಪಡಿಯ ಮೂಲಕ ಮೂಲಭೂತ ಹಕ್ಕುಗಳನ್ನು ಅಧಿನಿಯಮ 51 ಎ ಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಧಿನಿಯಮ 42ರಲ್ಲಿ ಅನೇಕ ಮೂಲಭೂತ ಮೌಲ್ಯಗಳನ್ನು ಕಾಪಾಡಿಕೊಂಡು ಬರಲಾಗಿದೆ. ಇದರಿಂದಾಗಿ ಮೂಲಭೂತ ಕರ್ತವ್ಯಗಳ ಪರಿಕಲ್ಪನೆ ಮತ್ತು ಚಲಾವಣೆಯ ಕುರಿತು ಸಾರ್ವಜನಿಕರಲ್ಲಿ ಅರಿವನ್ನು ಮತ್ತು ಮೆಚ್ಚುಗೆಯನ್ನು ಸೃಷ್ಟಿಸುವುದು ಅಗತ್ಯವಾಗಿದೆ. ಆದುದರಿಂದ ಭಾರತ ಸರಕಾರವು 1998ರಲ್ಲಿ ಜಸ್ಟಿಸ್ ವರ್ಮಾ ಸಮಿತಿಯನ್ನು ನೇಮಕಗೊಳಿಸಿ ಮೂಲಭೂತ ಕರ್ತವ್ಯಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕುಶಲ ವಿಧಾನಗಳನ್ನು ತಿಳಿಸುವಂತೆ ಮತ್ತು ಶಿಕ್ಷಣದ ಎಲ್ಲ ಹಂತಗಳಲ್ಲಿ ಮತ್ತು ಶಿಕ್ಷಕರಿಗೆ ವಿವಿಧ ಹಂತಗಳಲ್ಲಿ ತರಬೇತಿಯನ್ನು ನೀಡಲು ಮೂಲಭೂತ ಕರ್ತವ್ಯಗಳನ್ನು ಕಲಿಸಲು ಕಾರ್ಯಕ್ರಮಗಳನ್ನು ರೂಪಿಸುವಂತೆ ಕೇಳಲಾಯಿತು. ಇದಲ್ಲದೆ, ನಾಗರಿಕರಿಗೆ ಅನೌಪಚಾರಿಕ ಶಿಕ್ಷಣ/ವಯಸ್ಕ ಸಾಕ್ಷರತಾ ಕಾರ್ಯಕ್ರಮಗಳು ಮತ್ತು ಸಮೂಹ ಮಾಧ್ಯಮಗಳ ಮೂಲಕ ತರಬೇತಿಯನ್ನು ನೀಡಲು ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸುವಂತೆ ಕೇಳಿಕೊಳ್ಳಲಾಯಿತು.

ಈ ಶಿಫಾರಸ್ಸು ಅನುಸರಣೆಯಲ್ಲಿ, ಅದರಲ್ಲಿಯೂ ವಿಶೇಷವಾಗಿ ಶಿಕ್ಷಣವನ್ನು ಮರುರೂಪಿಸುವ ವಿಚಾರದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಹೀಗೆ ಎಲ್ಲ ಹಂತಗಳಲ್ಲಿ ಕೂಡ ಮೌಲ್ಯಗಳು ಮತ್ತು ಮೂಲಭೂತ ಕರ್ತವ್ಯಗಳ ಬೋಧನೆಯ ಪಠ್ಯಕ್ರಮವನ್ನು ಪರಿವರ್ತಿಸುವ ನಿಟ್ಟಿನಲ್ಲಿ ಕೆಲವು ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು. ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ (2000) ಜನರ ಐಕ್ಯತೆ, ದೃಢತೆ ಮತ್ತು ಅವರ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯನ್ನು ಕೇಂದ್ರವಾಗಿಟ್ಟುಕೊಂಡಿರುವ ಸಾರ್ವತ್ರಿಕ ಮತ್ತು ನೈತಿಕ ಮತ್ತು ಆಧ್ಯಾತ್ಮಿಕ ಚಿರಂತನ ಮೌಲ್ಯಗಳನ್ನು ಕಾಪಾಡಿಕೊಂಡು ಬರುವ ಮತ್ತು ಮರುಸ್ಥಾಪಿಸುವ ಕುರಿತಾದ ಮೌಲ್ಯಶಿಕ್ಷಣ ಮತ್ತು ಶಿಕ್ಷಣದ ಪ್ರಾಮುಖ್ಯತೆಯನ್ನು ಎತ್ತಿಹಿಡಿದಿದೆ. ಪ್ರತಿಯೊಂದು ಧರ್ಮದ ಸಾಮಾನ್ಯ ಸಾರವನ್ನು ವಿದ್ಯಾರ್ಥಿಗಳು ತಿಳಿಯುವಂತೆ ಮಾಡಿದರೆ ಸಾಮಾಜಿಕ ಸಂಬದ್ಧತೆ ಮತ್ತು ಧಾರ್ಮಿಕ ಸಾಮರಸ್ಯ ಸಾಧ್ಯವಾಗುವುದು. ಜೊತೆಗೆ ಶಾಲಾ ಪಠ್ಯಕ್ರಮಗಳು ನಡತೆ ಮತ್ತು ಪ್ರಜ್ಞೆಯಿಂದ ಹಿಡಿದು ಸಮಾನತೆ ಮತ್ತು ಸಹೋದರತ್ವದ ಮುಖ್ಯ ಗುಣಗಳ ಬೆಳೆಸುವಿಕೆಯನ್ನು ಮತ್ತು ಪ್ರಜಾಪ್ರಭುತ್ವವಾದಿ ಮೌಲ್ಯಗಳ ಬಾಧ್ಯತೆಗಳನ್ನು ಆವಶ್ಯಕವಾಗಿಸುವುದನ್ನು ಉದ್ದೇಶಿಸಿವೆ. ಈ ಎಲ್ಲವುಗಳನ್ನು ನ್ಯಾಯಬದ್ಧ ರೀತಿಯಿಂದ ವಿದ್ಯಾಸಂಬಧಿ ಕ್ಷೇತ್ರಗಳಲ್ಲಿ ಅಧ್ಯಯನದ ಎಲ್ಲ ಪಠ್ಯವಿಷಯಗಳಲ್ಲಿ ಮತ್ತು 'ಸಹ–ವಿದ್ಯಾಸಂಬಂಧಿ ಕ್ಷೇತ್ರಗಳ' ಎಲ್ಲ ಚಟುವಟಿಕೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಸೂಕ್ತವಾಗಿ ಸಂಯೋಜಿಸಬೇಕಾಗಿದೆ. ಮೂಲಭೂತ ಹಕ್ಕುಗಳನ್ನು ಸೂಕ್ತಕ್ರಮದಿಂದ ಶಾಲಾ ವ್ಯಾಸಂಗದ ತಿರುಳಿನ ಘಟಕಗಳಲ್ಲಿ ಸೇರಿಸಬೇಕು. ಶೈಕ್ಷಣಿಕ ಪ್ರಸ್ತಾಪದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಶಿಕ್ಷಣ, ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಮತ್ತು ಬುಡಕಟ್ಟು–ಕೇಂದ್ರಿತ ತಂತ್ರಜ್ಞಾನವು ಮುಖ್ಯ ಭಾಗವಾಗಿರಬೇಕು. ಇದುಸಾಂಪ್ರದಾಯಿಕ ವಿಷಯ ಪರಿಧಿಗಳನ್ನು ದಾಟಿರಬೇಕು ಮತ್ತು ಸಮಾಜೋ–ಆರ್ಥಿಕ ವಿಚಾರಗಳಲ್ಲಿ ಪರಿಣತಿಯನ್ನು ಹೊಂದಿರಬೇಕು.

**ಸಧ್ಯದ ಪರಿಸ್ಥಿತಿ ಮತ್ತು ಭವಿಷ್ಯದ ಯೋಜನೆ:**

ಯುಜಿಸಿ 9ನೇ ಯೋಜನಾ ಪ್ರಸ್ತಾಪದಲ್ಲಿರುವ

Digitised by Bharatavani, CIIL

ವಿಶ್ವವಿದ್ಯಾಲಯಗಳು ಮತ್ತು ಮಹಾವಿದ್ಯಾಲಯಗಳಲ್ಲಿ (1998) ಮಾನವ ಹಕ್ಕುಗಳ ಶಿಕ್ಷಣದ ಪ್ರವರ್ತನೆಯು ಮಾನವ ಹಕ್ಕುಗಳ ಶಿಕ್ಷಣದ ಸ್ಥೂಲ ಪರಿಪ್ರೇಕ್ಷೆಯನ್ನು ನೀಡುತ್ತದೆ. ಅದು ಪ್ರಜಾಪ್ರಭುತ್ವ, ಅಭಿವೃದ್ಧಿ, ಸಾಂಸ್ಕೃತಿಕ ಬಹುತ್ವಗಳ ನಡುವೆ ಅಂತರ್-ಅವಲಂಬನವನ್ನು ಮತ್ತು ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ತಳರೂಪಿ ಕೇಂದ್ರಿತ ಹಾಗೂ ಪ್ರಬಲ ಬಹು-ಶಿಸ್ತೀಯ ಸಂಶೋಧನಾ ಘಟಕದೊಂದಿಗೆ ಮಾನವ ಹಕ್ಕುಗಳ ಶಿಕ್ಷಣದ ಸಜೀವ ಮತ್ತು ಸ್ಪಂದನಶೀಲ ಮಾನವ ಹಕ್ಕುಗಳ ಸಂಸ್ಕೃತಿಗೆ ಪ್ರೋತ್ಸಾಹ ನೀಡುವುದನ್ನು ಎತ್ತಿ ಹಿಡಿಯುತ್ತದೆ (ಒತ್ತಿ ಹೇಳುತ್ತದೆ). ವಿಶ್ವವಿದ್ಯಾಲಯಗಳು ಮಾನವ ಹಕ್ಕುಗಳ ಶಿಕ್ಷಣವನ್ನು ಜೊತೆಯಲ್ಲಿ ನೀಡುವುದಕ್ಕಾಗಿ ಅದು ವಿಶ್ವವಿದ್ಯಾಲಯಗಳಿಗೆ ಏಕಕಾಲದಲ್ಲಿ ಅನುಷ್ಠಾನಗೊಳಿಸಬೇಕಾದ ಮೂರು ಪರ್ಯಾಯಗಳ ಪ್ರಸ್ತಾಪನೆಯನ್ನು ಸಲ್ಲಿಸುತ್ತದೆ. ಅವುಗಳೆಂದರೆ :

1. ಮಾನವ ಹಕ್ಕುಗಳ ಪ್ರತ್ಯೇಕ ಅಧ್ಯಯನಕ್ರಮಗಳನ್ನು (ಕೋರ್ಸ್) ಪ್ರಾರಂಭಿಸುವುದು.

2. ಈಗಾಗಲೇ ಇರುವ ಅಧ್ಯಯನ ಕ್ರಮಗಳಲ್ಲಿ ಮಾನವ ಹಕ್ಕುಗಳ ವಿಚಾರಗಳನ್ನು ಸಂಯೋಜಿಸುವುದು.

3. ಈಗ ಇರುವಂತಹ ಪಠ್ಯವಸ್ತುವಿಗೆ (ಸಿಲೆಬಸ್) ಅಪ್ರಧಾನವಾಗಿ ಕಂಡಂತಹ ಮಾನವ ಹಕ್ಕುಗಳ ಘಟಕದ ಜಾಗದಲ್ಲಿ ವ್ಯಕ್ತಿಯನ್ನು ಕೇಂದ್ರ ವಸ್ತುವಿಷಯವಾಗಿ ತೆಗೆದುಕೊಂಡು ಶೈಕ್ಷಣಿಕ ಸಮಗ್ರತೆಯೊಂದಿಗೆ ಎಲ್ಲ ಅಧ್ಯಯನ ಕ್ರಮಗಳನ್ನು ಸಮನ್ವಯಗೊಳಿಸುವುದು. ಅದು ಮತ್ತೂ ಮುಂದುವರಿದು ಕಲ್ಪಿಸಿಕೊಳ್ಳುವುದೇನೆಂದರೆ, ಮಾನವ ಹಕ್ಕುಗಳ ಅಧ್ಯಯನಕ್ರಮಗಳು ಈ ಕೆಳಗಿನವುಗಳನ್ನು ಪ್ರತಿಫಲಿಸುವಂತಿರಬೇಕು; ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಪರಿಪ್ರೇಕ್ಷೆಗಳು; ತಾತ್ವಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಮೂಲಗಳು; ಮಾನವ ಸಮಾಜದ ಎಲ್ಲ ಹಂತಗಳಲ್ಲಿ ಮಾನವ ಹಕ್ಕುಗಳು, ಪ್ರಜಾಪ್ರಭುತ್ವ, ಬಹುತ್ವ, ಅಭಿವೃದ್ಧಿ, ಪರಿಸರ ಸಮತೋಲನ, ಶಾಂತಿ ಮತ್ತು ಸೌಹಾರ್ದತೆಯ ನಡುವೆ ಅನ್ಯೋನ್ಯಾಶ್ರಯ ಮತ್ತು ಜೋಡಣೆಗಳು; ರಾಷ್ಟ್ರೀಯ ಪರಿಪ್ರೇಕ್ಷೆ ಮತ್ತು ಸಾಧನೆಗಳು; ಮಾನವ ಹಕ್ಕುಗಳ ಸಂಸ್ಕೃತಿಯನ್ನು ಬೆಳೆಸುವುದಕ್ಕಾಗಿ ಪ್ರತ್ಯೇಕ ಗುಂಪುಗಳು/ ಸಮುದಾಯ ಗುಂಪುಗಳು ಮತ್ತು ಸಮುದಾಯವನ್ನು ಸ್ಪಂದಿಸುವುದು. ಮಾನವ ಮೌಲ್ಯಗಳು ಮತ್ತು ಸೂಕ್ತವಾದ ಮನೋಭಾವಗಳನ್ನು ಒತ್ತಿ ಹೇಳುವುದು ಹಾಗೂ ಹಕ್ಕುಗಳು ಮತ್ತು ಕರ್ತವ್ಯಗಳ ನಡುವಿನ ಸಹ-ಸಂಬಂಧದ ಕುರಿತು ಅರಿವನ್ನು ಪ್ರಸಾರ ಮಾಡುವುದು.

ಮಾನವ ಹಕ್ಕುಗಳ ಶಿಕ್ಷಣದ ಪ್ರವರ್ತನೆಗಾಗಿ ಯುಜಿಸಿಯು ಮಾನವ ಹಕ್ಕುಗಳ ಪಠ್ಯಕ್ರಮದ ಅಭಿವೃದ್ಧಿ ಸಮಿತಿಯನ್ನು ರಚಿಸಿದೆ. ಇತ್ತೀಚೆಗೆ ಈ ಸಮಿತಿಯು ವಿಶ್ವವಿದ್ಯಾಲಯಗಳ ಪ್ರಸರಣೆಗಾಗಿ ಮಾನವ ಹಕ್ಕುಗಳು ಮತ್ತು ಕರ್ತವ್ಯಗಳ ಮಾದರಿ ವ್ಯಾಸಂಗಕ್ರಮಗಳನ್ನು (ಕೋರ್ಸ್‌ಗಳನ್ನು) ತಯಾರಿಸಿದೆ. ಅವುಗಳೆಂದರೆ :

1. ಮಾನವ ಹಕ್ಕುಗಳು ಮತ್ತು ಕರ್ತವ್ಯಗಳ ಮೂಲ ವ್ಯಾಸಂಗಕ್ರಮ (ಫೌಂಡೇಶನ್ ಕೋರ್ಸ್)

   –ಸ್ನಾತಕ ಹಂತದಲ್ಲಿ (ಎಲ್ಲ ಜ್ಞಾನಶಿಸ್ತುಗಳ ಎಲ್ಲ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾಗಿರುವುದು)

2. ಮಾನವ ಹಕ್ಕುಗಳು ಮತ್ತು ಕರ್ತವ್ಯಗಳ ಪ್ರಮಾಣ ಪತ್ರ ವ್ಯಾಸಂಗಕ್ರಮ (ಸರ್ಟಿಫಿಕೇಟ್ ಕೋರ್ಸ್)

– 4 ತಿಂಗಳ ಅವಧಿಯ ಕೋರ್ಸ್ (ಈ ವಸ್ತುವಿಷಯದಲ್ಲಿ ಆಸಕ್ತಿಯುಳ್ಳವರಿಗೆ)

3. ಮಾನವ ಹಕ್ಕುಗಳು ಮತ್ತು ಕರ್ತವ್ಯಗಳು ಸ್ನಾತಕ ಹಂತದಲ್ಲಿ ಐಚ್ಛಿಕ ವ್ಯಾಸಂಗಕ್ರಮ

   – ಶೈಕ್ಷಣಿಕ ವರ್ಷದ ಅವಧಿ ಮತ್ತು 2 ಪ್ರಶ್ನೆಪತ್ರಿಕೆಗಳು ಮತ್ತು

4. ಮಾನವ ಹಕ್ಕುಗಳು ಮತ್ತು ಕರ್ತವ್ಯಗಳ ಸ್ನಾತಕೋತ್ತರ ಡಿಪ್ಲೊಮ

   – 1 ಶೈಕ್ಷಣಿಕ ವರ್ಷದ ಅವಧಿ ಮತ್ತು 3 ಪ್ರಶ್ನೆ ಪತ್ರಿಕೆಗಳು

ವಿಷಯವನ್ನು ಬೋಧಿಸುವ ಶಿಕ್ಷಕರು ಕೂಡ ಮಾನವ ಹಕ್ಕುಗಳ ಶಿಕ್ಷಣದ ವಿಧಾನಗಳು, ಬೋಧನಾ ಸಾಮಗ್ರಿಗಳ ತಯಾರಿ, ಪಠ್ಯಕ್ರಮದ ಅಭಿವೃದ್ಧಿ, ಅಧ್ಯಯನ ಮತ್ತು ಸಂಶೋಧನೆಯ ಕಾರ್ಯಸಾಧ್ಯ ಯೋಜನೆಗಳ ಗುರುತಿಸುವಿಕೆ ಇತ್ಯಾದಿಗಳಲ್ಲಿ ಸೂಕ್ತ ತರಬೇತಿಯನ್ನು ಪಡೆಯುವ ಅಗತ್ಯವಿದೆ. ಇದಕ್ಕಾಗಿ, ಮಾನವ ಹಕ್ಕುಗಳ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳ ಸಾಮರಸ್ಯ ಮತ್ತು ನಿರ್ವಹಣೆಗಾಗಿ ಮಾನವ ಹಕ್ಕುಗಳ ಶಿಕ್ಷಣ ಕೇಂದ್ರಗಳ ಸ್ಥಾಪನೆ ಅತ್ಯಗತ್ಯ. ಈಗಾಗಲೇ ಇವುಗಳನ್ನು ಸಮುದಾಯ ಮತ್ತು ಮಹಿಳೆ, ಮಗು, ಬಡವರು ಮತ್ತು ಸಾಮಾಜಿಕವಾಗಿ ನಿರ್ಲಕ್ಷಿತ ವಿಭಾಗಗಳಿಗಾಗಿ ಕೆಲಸ ಮಾಡುತ್ತಿರುವ ಸಮುದಾಯಗಳೊಂದಿಗೆ, ಸರಕಾರೇತರ ಸಂಸ್ಥೆಗಳೊಂದಿಗೆ ಹತ್ತಿರದ ಸಂಪರ್ಕ ಹೊಂದಿರುವಂತಹ ಎಂಟು ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾಪಿಸಲಾಗಿದೆ. ಇದೇ ರೀತಿ, ಅನೇಕ ಹಕ್ಕುಗಳ ಕ್ಷೇತ್ರದಲ್ಲಿ ಬೋಧನೆ, ಸಂಶೋಧನೆ, ಕಾರ್ಯ ಮತ್ತು ಕ್ಷೇತ್ರಕಾರ್ಯಗಳ ಮೂಲಕ ಮಹಿಳಾ ಅಧ್ಯಯನಗಳ ಪ್ರವರ್ತನೆ ಮತ್ತು ಬಲಗೊಳಿಸುವಿಕೆಗಾಗಿ ವೇಗವರ್ಧಕಗಳಾಗಿ ಹಣವನ್ನು ಒದಗಿಸುವ ಪ್ರಮುಖ ಸಂಸ್ಥೆಯಾಗಿರುವ ಯುಜಿಸಿಯು ಕೋರ್ಸ್‌ಗಳನ್ನು ಪ್ರಾರಂಭಿಸಲು ಮತ್ತು ವಿಚಾರಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ನಡೆಸುವ ಸಲುವಾಗಿ ಆರ್ಥಿಕ ಸಹಾಯ ನೀಡಲು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. ಇದಲ್ಲದೆ, ಅನೇಕ ವಿಶ್ವವಿದ್ಯಾಲಯಗಳಲ್ಲಿ ಪರಿಸರ ವಿಷಯದಲ್ಲಿ ಎಂ.ಎಸ್ಸಿ. ಕೋರ್ಸ್ ಪ್ರಾರಂಭಿಸಲು ಯುಜಿಸಿ ಬೆಂಬಲ ನೀಡಿದೆ

Digitised by Bharatavani, CIIL

ಮತ್ತು ಪರಿಸರದ ಬಹುಶಿಸ್ತೀಯ ಅಧ್ಯಯನಗಳನ್ನು, ಅವುಗಳನ್ನು ಒಂದು ವಿಷಯದೊಂದಿಗೆ ಸಂಯೋಜಿತವಾಗಿ ಅಥವಾ ವಿಶೇಷ ವಿಷಯವಾಗಿ ಪ್ರಾರಂಭಿಸಲು ಪ್ರಚೋದನೆ ನೀಡಿದೆ. ಯುಜಿಸಿಯ ಶೈಕ್ಷಣಿಕ ಸಂವಹನಕ್ಕಾಗಿ ಇರುವ ಸಹವ್ಯವಸ್ಥೆಯು ದೇಶದ ವಿವಿಧ ಭಾಗಗಳಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾಪನೆಗೊಂಡಿರುವ 17 ಮಾಧ್ಯಮ ಕೇಂದ್ರಗಳಿಗೆ ಸಮನ್ವಯ ನೀಡುತ್ತಿದೆ. ವಿದ್ಯಾರ್ಥಿಗಳು ಮತ್ತು ಇತರ ನಾಗರಿಕರಿಗೆ ಅವರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಅರಿವನ್ನು ಹುಟ್ಟಿಸುವ ಸಲುವಾಗಿ ಈ ಕೇಂದ್ರಗಳು ಪರಿಸರ, ಅಭಿವೃದ್ಧಿ ಮತ್ತು ಮಾನವ ಹಕ್ಕುಗಳಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿವೆ. ವಯಸ್ಕ ಮತ್ತು ನಿರಂತರ ಶಿಕ್ಷಣಕ್ಕಾಗಿ ಅನೇಕ ವಿಶ್ವವಿದ್ಯಾಲಯಗಳಲ್ಲಿ ನೂರಕ್ಕೂ ಹೆಚ್ಚು ಕೇಂದ್ರಗಳನ್ನು ಯುಜಿಸಿ ಸ್ಥಾಪಿಸಿದೆ. ಇದರ ಮುಖ್ಯ ಗುರಿಯು ವಿಸ್ತರಿತ ಶಿಕ್ಷಣವನ್ನು ನೀಡುವುದು ಮತ್ತು ಶೈಕ್ಷಣಿಕ ಚಟುವಟಿಕೆಗಳು ಮತ್ತು ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಚಾರಗಳ ಮೂಲಕ ಕ್ಷೇತ್ರ–ಕಾರ್ಯದ ಕಾರ್ಯಕ್ರಮಗಳನ್ನು ನಡೆಸುವುದು. ಯುಜಿಸಿ ತನ್ನ ಶೈಕ್ಷಣಿಕ ಸಿಬ್ಬಂದಿ ಮಹಾವಿದ್ಯಾಲಯಗಳಿಂದ ಸಂಘಟಿಸಲಾಗುವ ಮಾನವ ಹಕ್ಕುಗಳು ಮತ್ತು ಕರ್ತವ್ಯಗಳ ಪುನರಾಧ್ಯಯನ ಕ್ರಮವನ್ನು ಪ್ರೋತ್ಸಾಹಿಸುತ್ತಿದೆ. ಅದು ಮಾನವ ಹಕ್ಕುಗಳು ಮತ್ತು ಶಿಕ್ಷಣಕ್ಕಾಗಿ ಇರುವಂತಹ ಯುರೋಪಿಯನ್ ಕಮಿಶನ್ ಮತ್ತು ರೆಡ್ ಕ್ರಾಸ್‌ನ ಅಂತಾರಾಷ್ಟ್ರೀಯ ಸಮಿತಿಯೊಂದಿಗೆ ಸಂಯೋಜನೆಯನ್ನು ನಡೆಸುತ್ತಿದೆ. ಇದರಲ್ಲಿ ಪಠ್ಯಕ್ರಮದ ಪ್ರಗತಿ, ಬೋಧನಾ ವಿಧಾನಗಳು ಮತ್ತು ಬೋಧನಾ ವಿಭಾಗಗಳ ಅಭಿವೃದ್ಧಿಯೂ ಸೇರಿದೆ. ಭಾರತದಲ್ಲಿ ಮಾನವ ಹಕ್ಕುಗಳ ಮತ್ತು ಕರ್ತವ್ಯಗಳ ಬೋಧನೆಯನ್ನು ಬಲಪಡಿಸಲು ನಾವು ಎಲ್ಲ ಪ್ರಯತ್ನಗಳನ್ನು ನಡೆಸಬೇಕಾದ ಸಮಯ ಬಂದಿದೆ.

**ಮೂಲ: ಆರ್.ಪಿ. ಧೋಕಾಲಿಯ**
**ಅನು: ಡಾ. ಗೀತಾಶಣೈ**

## ಮಾರ್ಗದರ್ಶನ

ಇಂದು ನಾವು ವೇಗವಾಗಿ ಪ್ರಗತಿ ಹೊಂದುತ್ತಿರುವ ಚಲನಶೀಲ ಸಮಾಜದಲ್ಲಿ ಬದುಕುತ್ತಿದ್ದೇವೆ. ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ, ಇತರರೊಂದಿಗೆ ಸಮರ್ಪಕ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಅನೇಕ ಚಟುವಟಿಕೆಗಳನ್ನು ನಿರ್ವಹಿಸಬೇಕಾಗುತ್ತದೆ. ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಲವಾರು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ತನ್ನದೇ ಆದ ದೃಷ್ಟಿಕೋನಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಹೀಗಿರುವಾಗ ವ್ಯಕ್ತಿ ತಾನು ಗರಿಷ್ಠ ಅಭಿವೃದ್ಧಿಯನ್ನು ಹೊಂದಿ ತೃಪ್ತಿಕರ ಜೀವನವನ್ನು ನಡೆಸುವ ಗುರಿಯನ್ನು ಒಂಟಿಯಾಗಿ ಸಾಧಿಸುವುದು ತೀರಾ ಕಠಿಣಕಾರ್ಯವಾಗಿದೆ. ಇಂಥ ಸಂದರ್ಭಗಳಲ್ಲಿ ವ್ಯಕ್ತಿಗಳಿಗೆ ವೃತ್ತಿಪರ ಸಹಾಯದ ಅವಶ್ಯಕತೆಯಿದ್ದು ಈ ರೀತಿಯ ಸಹಾಯವನ್ನು ನೀಡುವುದಕ್ಕೆ ಮಾರ್ಗದರ್ಶನ ಎನ್ನುತ್ತಾರೆ.

**ಮಾರ್ಗದರ್ಶನದ ಪರಿಭಾಷೆ:**

ಮಾರ್ಗದರ್ಶನ ಎನ್ನುವ ಪದಕ್ಕೆ ಎಲ್ಲರೂ ಒಪ್ಪುವಂತಹ ಒಂದೇ ವ್ಯಾಖ್ಯಾನವನ್ನು ಕೊಡುವುದು ಕಷ್ಟ. ವಿವಿಧ ಲೇಖಕರು 'ಮಾರ್ಗದರ್ಶನ' ಎಂಬ ಪದಕ್ಕೆ ತಮ್ಮದೇ ಆದ ವ್ಯಾಖ್ಯಾನವನ್ನು ನೀಡಿರುತ್ತಾರೆ.

ಬಿ.ಎಫ್. ಸ್ಕಿನ್ನರ್‌ರು 'ಮಾರ್ಗದರ್ಶನವು ವ್ಯಕ್ತಿಯೊಬ್ಬನು ತನ್ನೊಂದಿಗೆ, ಇತರರೊಂದಿಗೆ ಮತ್ತು ಸನ್ನಿವೇಶಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಯಲು ಸಹಾಯ ನೀಡುವ ಪ್ರಕ್ರಿಯೆಯಾಗಿದೆ' ಎಂದು ಹೇಳಿದ್ದಾರೆ.

ಮ್ಯಾಥ್ಯೂಸನ್ (Mathewson)ರವರ ಪ್ರಕಾರ "ಮಾರ್ಗದರ್ಶನವು ವ್ಯಕ್ತಿಯೊಬ್ಬನು ತನ್ನ ಗುಣಗಳು ಮತ್ತು ಸಾಮರ್ಥ್ಯಗಳ ಉತ್ತಮ ಪರಿಜ್ಞಾನವನ್ನು ಗಳಿಸಿಕೊಳ್ಳಲು ಮತ್ತು ಸಾಮಾಜಿಕ ಅವಶ್ಯಕತೆಗಳು ಮತ್ತು ಅವಕಾಶಗಳಿಗೆ, ಸಾಮಾಜಿಕ ಮತ್ತು ನೈತಿಕ ಮೌಲ್ಯಗಳಿಗನುಗುಣವಾಗಿ, ತೃಪ್ತಿಕರವಾಗಿ ಒಗ್ಗಿಕೊಳ್ಳುವಂತಾಗಲು ಶೈಕ್ಷಣಿಕ ಮತ್ತು ಅರ್ಥೈಸುವಿಕೆಯ ವಿಧಾನಗಳ ಮೂಲಕ ಯಾವುದೇ ವ್ಯಕ್ತಿಗೆ ಸಹಾಯ ಮಾಡುವ ವ್ಯವಸ್ಥಿತ ವೃತ್ತಿಪರ ಪ್ರಕ್ರಿಯೆಯಾಗಿದೆ."

ಎ.ಎಸ್. ಜೋನ್ಸ್‌ರವರು "ಮಾರ್ಗದರ್ಶನವು ವ್ಯಕ್ತಿಯೊಬ್ಬರು ನೀಡುವ ವೈಯಕ್ತಿಕ ಸಹಾಯವನ್ನು ಒಳಗೊಳ್ಳುತ್ತದೆ. ಒಬ್ಬ ವ್ಯಕ್ತಿಯು ತಾನು ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಅಥವಾ ತನ್ನ ಉದ್ದೇಶಗಳನ್ನು ಅತ್ಯುತ್ತಮವಾಗಿ ಸಾಧಿಸಿಕೊಳ್ಳುವುದು ಹೇಗೆ ಎಂಬುದನ್ನು ನಿರ್ಧರಿಸಲು ಸಹಾಯ ನೀಡುವುದಕ್ಕಾಗಿ ಮಾರ್ಗದರ್ಶನ ರೂಪಿಸಲಾಗಿದೆ; ಅದು ಜೀವನದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಹಾಯ ಮಾಡುತ್ತದೆ" ಎಂದು ಹೇಳಿದ್ದಾರೆ.

**ಮಾರ್ಗದರ್ಶನದ ಸ್ವರೂಪ:** ಮಾರ್ಗದರ್ಶನ ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಎಲ್ಲ ವಯಸ್ಸಿನ, ಯಾವುದೇ ಹಂತದಲ್ಲಿರುವ ಎಲ್ಲ ವ್ಯಕ್ತಿಗಳಿಗಾಗಿ ಇದೆ. ಮಾರ್ಗದರ್ಶನ ತನಗೆ ತಾನೇ ಸಹಾಯ ಮಾಡಿಕೊಳ್ಳಲು ವ್ಯಕ್ತಿಗಳಿಗೆ ಸಹಾಯ ಒದಗಿಸುವ ಸೇವೆಯಾಗಿದೆ. ಇದು ವ್ಯಕ್ತಿಗಳಿಗೆ ಅವರ ತಕ್ಷಣದ ಮತ್ತು ಭವಿಷ್ಯದ ಗುರಿಗಳನ್ನು ಸಾಧಿಸುವುದಕ್ಕೆ ಬೇಕಾದ ಮಾರ್ಗಗಳನ್ನು ಕಂಡುಕೊಳ್ಳಲು ಸಹಾಯ ಮಾಡುವುದಾಗಿದೆ. ಇದು ಸಲಹೆ ನೀಡುವುದು ಮತ್ತು ಮಾಹಿತಿ ಒದಗಿಸುವುದನ್ನು ಒಳಗೊಂಡಿದೆಯಾದರೂ ಕೇವಲ ಸಲಹೆ ಅಥವಾ ಮಾಹಿತಿ ನೀಡುವುದಷ್ಟೆ ಆಗಿಲ್ಲ. ಸ್ವಗ್ರಹಿಕೆ, ಸ್ವಪ್ರಯತ್ನ ಮತ್ತು ಸ್ವಸಹಾಯಕ್ಕೆ ಅನುವು ಮಾಡಿಕೊಡುವುದು ಮಾರ್ಗದರ್ಶನದ ವಾಸ್ತವವಾದ ಗುರಿಗಳಾಗಿವೆ. ಸಹಜವಾಗಿಯೇ ಮಾರ್ಗದರ್ಶನವು ಪ್ರಜಾಸತ್ತಾತ್ಮಕ ಈ ತತ್ವಗಳನ್ನು ಆಧರಿಸಿದೆ. ಇದೊಂದು ಕಲಿಯುವ ಪ್ರಕ್ರಿಯೆಯಾಗಿದ್ದು ಇಲ್ಲಿ ವ್ಯಕ್ತಿಯು ತನ್ನ

Digitised by Bharatavani, CIIL

ಸ್ವಂತ ಅವಶ್ಯಕತೆಗಳಿಗೆ ಮತ್ತು ತಾನು ಬದುಕುತ್ತಿರುವ ಸಮಾಜದ ಅವಶ್ಯಕತೆಗಳಿಗೆ ಸಂಯೋಜನೆ ಮಾಡಿಕೊಳ್ಳಲು ಕಲಿಯುತ್ತಾನೆ/ಳೆ. ಮಾರ್ಗದರ್ಶನ ಒಂದು ವೃತ್ತಿಪರ ಚಟುವಟಿಕೆಯಾಗಿದ್ದು, ವ್ಯಕ್ತಿಗಳ ಅವಶ್ಯಕತೆಗಳನ್ನು ಆಧರಿಸಿದ ಸಾಮಾನ್ಯೀಕೃತ ಮತ್ತು ವಿಶಿಷ್ಟ ಸೇವೆಗಳೆರಡನ್ನು ಒಳಗೊಳ್ಳುತ್ತದೆ.

ಮಾರ್ಗದರ್ಶನ ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು, ವಿದ್ಯಾರ್ಥಿಗಳು ಸ್ವತಃ ಶೈಕ್ಷಣಿಕ ಮತ್ತು ಸಂಬಂಧಿತ ಯೋಜನೆಗಳನ್ನು ರೂಪಿಸಿಕೊಳ್ಳಲು, ತಮ್ಮ ಅಂತಃ ಸಾಮರ್ಥ್ಯಗಳನ್ನು ಮತ್ತು ಅಗತ್ಯಗಳನ್ನು ಅರಿತುಕೊಂಡು ಅವುಗಳ ಮೌಲ್ಯವನ್ನು ನಿರ್ಧರಿಸಲು, ಸಾಮರ್ಥ್ಯಕ್ಕೆ ಅನುಗುಣವಾಗಿ ಶೈಕ್ಷಣಿಕ ಗುರಿ ಮತ್ತು ವೃತ್ತಿಗುರಿಗಳನ್ನು ನಿರ್ಧರಿಸಿಕೊಳ್ಳಲು ಸಹಾಯ ಮಾಡುತ್ತದೆ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಅರಿತುಕೊಳ್ಳುವ ಪ್ರಯತ್ನಕ್ಕೆ ಒತ್ತು ನೀಡುವ ಉದ್ದೇಶವನ್ನು ಮಾರ್ಗದರ್ಶನ ಹೊಂದಿದೆ. ಬೋಧನೆ, ಮಾರ್ಗದರ್ಶನ ಮತ್ತು ಉಪಬೋಧನಾ ಸೇವೆಗಳು ಒಂದಕ್ಕೊಂದು ಪೂರಕವಾದವುಗಳಾಗಿವೆ.

ಮಾರ್ಗದರ್ಶನ ಇರುವ ಅವಕಾಶಗಳು ಮತ್ತು ಸಂಪನ್ಮೂಲಗಳ ಬಗೆಗೆ ಅರಿತು ಅವುಗಳ ಪೂರ್ಣ ಪ್ರಯೋಜನ ಪಡೆಯಲು, ತನ್ನ ಅನುಭವಗಳ ಮೌಲ್ಯ ನಿರ್ಧರಿಸಲು, ಅನುಭವದ ಆಧಾರದ ಮೇಲೆ ಗುರಿಗಳಲ್ಲಿ ಯುಕ್ತ ಮಾರ್ಪಾಡು ಮಾಡಿಕೊಳ್ಳಲು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತದೆ. ಶಿಕ್ಷಣ ವ್ಯಕ್ತಿಗಳನ್ನು ಜೀವನಕ್ಕೆ ಸಿದ್ಧಪಡಿಸುವ ಪ್ರಧಾನ ಗುರಿಯುಳ್ಳದ್ದಾಗಿದ್ದರೆ, ಮಾರ್ಗದರ್ಶನ ವ್ಯಕ್ತಿಗಳು ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯಗಳಿಗನುಗುಣವಾಗಿ ಗರಿಷ್ಠ ಅಭಿವೃದ್ಧಿ ಹೊಂದುವುದಕ್ಕೆ ಅಗತ್ಯವಾದ ಯುಕ್ತ ಆಯ್ಕೆಗಳನ್ನೂ, ತೀರ್ಮಾನಗಳನ್ನೂ ಮಾಡಲು ಸಹಾಯ ಮಾಡುವ ಮುಖ್ಯ ಗುರಿಯುಳ್ಳದ್ದಾಗಿದೆ.

**ಮಾರ್ಗದರ್ಶನದ ತತ್ವಗಳು:** ಮಾರ್ಗದರ್ಶನ ಒಂದು ವೃತ್ತಿಪರ ಸೇವೆಯಾಗಿದ್ದು ಕೆಲವು ನಿರ್ದಿಷ್ಟ ತತ್ವಗಳನ್ನು ಆಧರಿಸಿದೆ. ಇವು ಮಾರ್ಗದರ್ಶನ ಸೇವೆಯ ಅಭಿವರ್ಧನೆಗೆ ಅಗತ್ಯವಾದ ತಾತ್ವಿಕ ಚೌಕಟ್ಟನ್ನು ಒದಗಿಸುತ್ತವೆ. ಈ ತತ್ವಗಳು ಅನುಭವದಿಂದಲೂ ಮತ್ತು ವೃತ್ತಿಯ ಮೌಲ್ಯಗಳಿಂದಲೂ ಮೂಡಿ ಬಂದಿವೆ. ಅವುಗಳು ಈ ಕೆಳಗಿನಂತಿವೆ.

- **ಮಾರ್ಗದರ್ಶನವು ಒಂದು ನಿರಂತರ ಪ್ರಕ್ರಿಯೆ**

  ಇದು ಯಾವುದೇ ಒಂದು ಗುಂಪು ಅಥವಾ ವಯೋಮಾನಕ್ಕೆ ಸೀಮಿತವಾಗಿರದೆ ಜೀವಮಾನವಿಡೀ ನಡೆಯುವ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಎಲ್ಲ ವಯಸ್ಸಿನ ಎಲ್ಲರಿಗೂ ಮಾರ್ಗದರ್ಶನದ ಅವಶ್ಯಕತೆಯಿರುತ್ತದೆ.

- **ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವದ ಬಗೆಗೆ ಕಾಳಜಿ ವಹಿಸುತ್ತದೆ.**

  ಒಬ್ಬ ವ್ಯಕ್ತಿಯ ಪ್ರತಿಯೊಂದು ಅಂಶವೂ ಆತನ ವ್ಯಕ್ತಿತ್ವದ ಭಾಗವಾಗಿದ್ದು ಮಾರ್ಗದರ್ಶನ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ.

- **ಮಾರ್ಗದರ್ಶನ ಕಾರ್ಯಕ್ರಮಗಳು ನಮ್ಯತೆಯನ್ನು ಹೊಂದಿರುತ್ತದೆ.**

ವ್ಯಕ್ತಿಗಳ ಮತ್ತು ಸಮುದಾಯದ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ.

- **ಮಾರ್ಗದರ್ಶನವು ಒಂದು ವೃತ್ತಿಪರ ಚಟುವಟಿಕೆಯಾಗಿದೆ.**

ಎಲ್ಲರೂ ಪರಿಣಾಮಕಾರಿಯಾಗಿ ಮಾರ್ಗದರ್ಶನವನ್ನು ನೀಡಲು ಸಾಧ್ಯವಿಲ್ಲ. ಯುಕ್ತ ತರಬೇತಿ ಹೊಂದಿದ ವೃತ್ತಿಪರ ವ್ಯಕ್ತಿಗಳು ಪರಿಣಾಮಕಾರಿಯಾಗಿ ಮಾರ್ಗದರ್ಶನ ನೀಡಬಲ್ಲರು.

- **ಮಾರ್ಗದರ್ಶನ ಒಂದು ಸಹಕಾರಿ ಪ್ರಯತ್ನವಾಗಿದೆ.**

ಶಾಲೆಗಳಲ್ಲಿ ಶಿಕ್ಷಕರು, ಪೋಷಕರು ಮತ್ತು ಸಮುದಾಯದ ವ್ಯಕ್ತಿಗಳೆಲ್ಲರೂ ಮಾರ್ಗದರ್ಶಕರೊಟ್ಟಿಗೆ ಸೇರಿ ಕೆಲಸ ಮಾಡಿದಾಗ ಮಾತ್ರ ಮಾರ್ಗದರ್ಶನ ಪರಿಣಾಮಕಾರಿಯಾಗುತ್ತದೆ.

- **ಮಾರ್ಗದರ್ಶನವು ವ್ಯಕ್ತಿಯ ಘನತೆಗೆ ಮಾನ್ಯತೆ ಕೊಡುತ್ತದೆ.**

ಇದು ವ್ಯಕ್ತಿಯ ಘನತೆ, ಗೌರವಕ್ಕೆ ಧಕ್ಕೆ ಬಾರದಂತೆ ನಡೆಯುವ ಕಾರ್ಯವಾಗಿದ್ದು, ವ್ಯಕ್ತಿಯ ಘನತೆಗೆ ಆದ್ಯ ಸ್ಥಾನ ನೀಡಲಾಗುತ್ತದೆ.

- **ಮಾರ್ಗದರ್ಶನ ವಸ್ತುನಿಷ್ಠ ಮಾಹಿತಿಗಳನ್ನು ಆಧರಿಸಿರುತ್ತದೆ.**

ಮಾರ್ಗದರ್ಶನ ಪ್ರಜ್ಞಾಪೂರ್ವಕವಾಗಿ ಯೋಜಿಸಿದ ಸ್ಪಷ್ಟ ಗುರಿಗಳನ್ನು ಹೊಂದಿದ, ಅತ್ಯಂತ ವ್ಯವಸ್ಥಿತವಾದ ಉದ್ದೇಶಪೂರ್ವಕ ಚಟುಚಟಿಕೆಯಾಗಿದೆ.

ಮಾರ್ಗದರ್ಶನವು ವ್ಯಕ್ತಿಯ ಬಗೆಗೆ ಮಾಹಿತಿ ಸಂಗ್ರಹಿಸಲು ಹಲವು ತಂತ್ರಗಳು, ವಿಧಾನಗಳು ಮತ್ತು ಪರೀಕ್ಷೆಗಳನ್ನು ಬಳಸಿಕೊಳ್ಳುತ್ತದೆ. ಈ ವಸ್ತುನಿಷ್ಠ ಮಾಹಿತಿಗಳು ಮಾರ್ಗದರ್ಶನಕ್ಕೆ ಭೂಮಿಕೆಯನ್ನು ಒದಗಿಸುತ್ತದೆ.

**ಮಾರ್ಗದರ್ಶನದ ಅವಶ್ಯಕತೆ:** ಇಂದಿನ ಆಧುನಿಕ ಪ್ರಪಂಚದಲ್ಲಿ ಜೀವನವು ಸಂಕೀರ್ಣವೂ ಸ್ಪರ್ಧಾತ್ಮಕವೂ ಮತ್ತು ಸವಾಲಿನದೂ ಆಗಿದೆ. ವ್ಯಕ್ತಿಗಳು, ಅದರಲ್ಲೂ ವಿಶೇಷವಾಗಿ ಯುವಕರು ತಮ್ಮ ಮುಂದಿರುವ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಮತ್ತು ಎಚ್ಚರಿಕೆಯಿಂದ ಅವುಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಂದಿನ ಬಹಳಷ್ಟು ಯುವಕರು ತಮ್ಮ ಮನೆ, ಕಾಲೇಜು ಮತ್ತು ಅವರ ಸಾಮಾಜಿಕ ಪರಿಸರದಲ್ಲಿರುವ ವಿವಿಧ ರೀತಿಯ ಸೆಳೆತಗಳಲ್ಲಿ ಸಿಕ್ಕಿ ಹಾಕಿಕೊಂಡಿರುತ್ತಾರೆ. ಇಂಥ ಪರಿಸ್ಥಿತಿಯಿಂದ ಹೊರ ಬರಲು ಮತ್ತು ತಮ್ಮ ಪರಿಸರಕ್ಕೆ ಹೊಂದಿಕೊಳ್ಳಲು ವ್ಯವಸ್ಥಿತವಾದ ಸಹಾಯ ಅತ್ಯಗತ್ಯ. ಮಾರ್ಗದರ್ಶನ ಈ ಕೆಲಸ ಮಾಡುತ್ತದೆ.

ಜೀವನದ ಅನೇಕ ಮತ್ತು ವೈವಿಧ್ಯಪೂರ್ಣ ಸನ್ನಿವೇಶಗಳಲ್ಲಿ ವ್ಯಕ್ತಿಗಳಿಗೆ ಮಾರ್ಗದರ್ಶನದ ಅಗತ್ಯವಿರುತ್ತದೆ. ಕೆಲವು ವ್ಯಕ್ತಿಗಳಿಗೆ ಜೀವನಪರ್ಯಂತ ಮಾರ್ಗದರ್ಶನದ ಅಗತ್ಯವಿರುತ್ತದೆ. ಕೆಲವರಿಗೆ

Digitised by Bharatavani, CIIL

ಕೆಲವು ನಿರ್ದಿಷ್ಟ ಸನ್ನಿವೇಶಗಳನ್ನು ಎದುರಿಸುವಾಗ ಅಥವಾ ಕೆಲವು ಸಂದಿಗ್ಧ ಪರಿಸ್ಥಿತಿಯಲ್ಲಿ ಸಹಾಯದ ಅಗತ್ಯವಿರುತ್ತದೆ. ವ್ಯಕ್ತಿಯ ವೈಯಕ್ತಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಸಮಂಜಸವಾಗಿ ಪೂರೈಸಿಕೊಳ್ಳಲು ಮತ್ತು ವ್ಯಕ್ತಿ ಸಂಪೂರ್ಣವಾಗಿ ಕಾರ್ಯಶೀಲನಾಗಿರುವಂತೆ ಮಾಡಲು ಮಾರ್ಗದರ್ಶನದ ಅಗತ್ಯವಿದೆ. ವ್ಯಕ್ತಿ ತನ್ನನ್ನು ತಾನು ಉತ್ತಮವಾಗಿ ಮತ್ತು ಸಮಗ್ರವಾಗಿ ತಿಳಿದುಕೊಳ್ಳಲು ಮತ್ತು ಇತರರೊಂದಿಗೆ ಉತ್ತಮ ಹೊಂದಾಣಿಕೆ ಮತ್ತು ಸಂತೋಷದಾಯಕ ಸಂಬಂಧಗಳನ್ನು ಇಟ್ಟುಕೊಳ್ಳುವುದಕ್ಕೆ ಮಾರ್ಗದರ್ಶನ ಅವಶ್ಯಕವಾಗಿದೆ. ವ್ಯಕ್ತಿ ತನ್ನ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಅಭಿವರ್ಧಿಸಿಕೊಳ್ಳಲು, ಯುಕ್ತ ಕಾಲದಲ್ಲಿ ವೃತ್ತಿ ಯೋಜನೆ ಮತ್ತು ವೃತ್ತಿ ಆಯ್ಕೆಯನ್ನು ಮಾಡಿಕೊಳ್ಳಲು, ಯುಕ್ತ ವಿದ್ಯಾಸಂಸ್ಥೆಗಳು ಮತ್ತು ಸರಿಯಾದ ಕೋರ್ಸ್‌ಗಳನ್ನು ಮತ್ತು ಕಾರ್ಯಕ್ರಮಗಳನ್ನು ಆಯ್ದುಕೊಳ್ಳುವಲ್ಲಿ ಮತ್ತು ಶೈಕ್ಷಣಿಕ ಪ್ರಯತ್ನದಲ್ಲಿ ಎದುರಾಗುವ ಸಮಸ್ಯೆಗಳ ಅಥವಾ ಅಡಚಣೆಗಳನ್ನು ನಿವಾರಿಸಿಕೊಳ್ಳಲು ಮಾರ್ಗದರ್ಶನ ಸಹಾಯಕ. ಜೀವನದಲ್ಲಿ ಸ್ವಂತ ಜವಾಬ್ದಾರಿ ಮತ್ತು ಸ್ವಮಾರ್ಗಗಳನ್ನು ಬೆಳೆಸಿಕೊಳ್ಳಲು, ಶೈಕ್ಷಣಿಕ ಮತ್ತು ಔದ್ಯೋಗಿಕ ಮಾಹಿತಿಗಳನ್ನು ಪಡೆದುಕೊಳ್ಳಲು, ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳಲು ಮತ್ತು ಜೀವನದ ಗುರಿಗಳನ್ನು ಅಭಿವರ್ಧಿಸಿಕೊಳ್ಳಲು ಮಾರ್ಗದರ್ಶನ ಅತ್ಯಗತ್ಯ.

ನಮ್ಮ ಸಮಾಜದ ಅವಶ್ಯಕತೆಗಳು ಮತ್ತು ತಾತ್ವಿಕತೆಯೊಂದಿಗೆ ಶಿಕ್ಷಣದ ಗುರಿಗಳು ಬದಲಾಗುತ್ತಿವೆ. ಹೀಗೆ ಕಾಲಕಾಲಕ್ಕೆ ಬದಲಾಗುತ್ತಿರುವ ಶಿಕ್ಷಣದ ಗುರಿಗಳನ್ನು ಸಾಧಿಸಲು ಉತ್ತಮ ಮಾರ್ಗದರ್ಶನ ಬೇಕೇಬೇಕು. ವಿದ್ಯಾಸಂಸ್ಥೆಗಳು ನೀಡುವ ಕೋರ್ಸ್‌ಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದ್ದು, ಪಠ್ಯವಿಷಯಗಳು ಬದಲಾಗುತ್ತಲೇ ಇವೆ. ಪ್ರತಿ ವರ್ಷ ಪರಿಚಯಿಸುತ್ತಿರುವ ಹೊಸ-ಹೊಸ ಕೋರ್ಸ್‌ಗಳ ಬಗೆಗೆ ಅಂದರೆ ಅದರ ಲಭ್ಯತೆ, ವ್ಯಾಪ್ತಿ, ಸೇರಲು ಬೇಕಾದ ಅರ್ಹತೆ ಮತ್ತು ಅವಶ್ಯಕ ಸಿದ್ಧತೆಯ ಬಗೆಗೆ ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿ ಇರುವುದಿಲ್ಲ. ಮಾರ್ಗದರ್ಶನ ಸೇವೆಗಳ ಮೂಲಕ ವಿದ್ಯಾರ್ಥಿಗಳಿಗೆ ಈ ಹೊಸ ಕೋರ್ಸ್‌ಗಳ ಬಗೆಗೆ ಯುಕ್ತ ಮಾಹಿತಿ ಒದಗಿಸಬಹುದು. ಕೈಗಾರಿಕೀಕರಣದಿಂದಾಗಿ ಉದ್ಯೋಗಗಳ ಲಭ್ಯತೆಗಳು ಹೆಚ್ಚುತ್ತಿದ್ದು ಅದಕ್ಕೆ ವಿಶೇಷ ಕೌಶಲಗಳನ್ನು ಪಡೆದಿರುವ ವ್ಯಕ್ತಿಗಳ ಅವಶ್ಯಕತೆ ಇರುತ್ತದೆ. ಯುವಕರು ಇಂಥ ಅವಕಾಶಗಳ ಲಾಭ ಪಡೆದುಕೊಳ್ಳುವಂತಾಗಲು ಅವರಿಗೆ ಸಮರ್ಪಕ ಮಾರ್ಗದರ್ಶನ ಅವಶ್ಯಕ.

ನಮ್ಮ ದೇಶವು ಮಾನವ ಸಂಪನ್ಮೂಲಗಳಿಂದ ಸಮೃದ್ಧವಾಗಿದೆ. ಈ ಮಾನವ ಸಂಪನ್ಮೂಲದ ಸಾಮರ್ಥ್ಯಗಳು, ಪ್ರತಿಭೆಗಳು ಮತ್ತು ಕೌಶಲಗಳನ್ನು ರಾಷ್ಟ್ರಾಭಿವೃದ್ಧಿಯ ಕಡೆಗೆ ವಿನಿಯೋಗಿಸಬೇಕಾದರೆ ಸಮರ್ಪಕ ಯೋಜನೆಯಿರಬೇಕು. ಮಾನವ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಯೋಜಿಸುವುದಕ್ಕೆ ಉತ್ತಮ ಮಾರ್ಗದರ್ಶನ ಅಗತ್ಯ. ವ್ಯಕ್ತಿಗಳ ವೈಯಕ್ತಿಕ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ತೃಪ್ತಿಪಡಿಸಲು ಮತ್ತು ಪ್ರತಿಯೊಬ್ಬ ವ್ಯಕ್ತಿಯಿಂದ ಅತ್ಯುತ್ತಮವಾದುದನ್ನು ಹೊರತರಲು ಮಾರ್ಗದರ್ಶನವು ಸಹಾಯಕವಾಗಿದೆ.

**ಮಾರ್ಗದರ್ಶನದ ವಿಧಗಳು:** ವ್ಯಕ್ತಿಗಳ ಅಗತ್ಯಗಳು, ಸಮಸ್ಯೆಗಳ ಸ್ವರೂಪ, ಉದ್ದೇಶಗಳು, ಸಮಸ್ಯೆ ಪರಿಹಾರಕ್ಕೆ ನೀಡಬೇಕಾದ ಪರಿಹಾರಗಳು, ಉಪಯೋಗಿಸುವ ತಂತ್ರಗಳು ಇತ್ಯಾದಿಗಳನ್ನು ಆಧರಿಸಿ ಮಾರ್ಗದರ್ಶನವನ್ನು ಮೂರು ವಿಧಗಳಾಗಿ ವಿಭಾಗಿಸಲಾಗಿದೆ.

### 1. ಶೈಕ್ಷಣಿಕ ಮಾರ್ಗದರ್ಶನ

ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಅಂಶಗಳ ಬಗೆಗೆ ನೀಡಬಹುದಾದ ಸಹಾಯಕ್ಕೆ ಶೈಕ್ಷಣಿಕ ಮಾರ್ಗದರ್ಶನ ಎನ್ನುತ್ತೇವೆ. ಬ್ರೀವರ್‌ರವರ ಪ್ರಕಾರ "ಒಬ್ಬ ವ್ಯಕ್ತಿಯ ಬುದ್ಧಿಶಕ್ತಿಯ ಬೆಳವಣಿಗೆಗೆ ಸಹಾಯ ಮಾಡಲು ನಡೆಸುವ ಪ್ರಜ್ಞಾ ಪೂರ್ವಕ ಪ್ರಯತ್ನವೇ ಶೈಕ್ಷಣಿಕ ಮಾರ್ಗದರ್ಶನ" ಕಲಿಕೆ ಮತ್ತು ಬೋಧನೆಗೆ ಸಂಬಂಧಿಸಿದ ಎಲ್ಲ ಅಂಶಗಳು ಶೈಕ್ಷಣಿಕ ಮಾರ್ಗದರ್ಶನದ ಅಡಿಯಲ್ಲಿ ಬರುತ್ತವೆ. ಯುಕ್ತ ಕೋರ್ಸ್‌ಗಳ ಆಯ್ಕೆ ಶಾಲಾ ಪರಿಸರದೊಂದಿಗೆ ಹೊಂದಾಣಿಕೆ ಪಠ್ಯವಿಷಯಗಳಲ್ಲಿ ತೃಪ್ತಿಕರ ಸಾಧನೆ, ಕಲಿಕೆಗೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೆ, ಪ್ರತಿಭೆಯ ವರ್ಧನೆ, ಕಲಿಯಲು ಮಕ್ಕಳನ್ನು ಅಭಿಪ್ರೇರೇಪಿಸುವುದು, ನಿಧಾನಗತಿಯಲ್ಲಿ ಕಲಿಯುವ ಮಕ್ಕಳಿಗೆ ಸಂಬಂಧಿಸಿದಂತೆ ಸಹಾಯಕ (ಬಿಡುವಿನ ವೇಳೆಯಲ್ಲಿ) ಉತ್ತಮ ಕಲಿಕಾ ಅಭ್ಯಾಸಗಳನ್ನು ಬೆಳೆಸುವುದು, ಶಾಲಾ ಸಂಪನ್ಮೂಲಗಳ ಗರಿಷ್ಠ ಪ್ರಯೋಜನ ಪಡೆಯುವುದು ಮುಂತಾದವು ಶೈಕ್ಷಣಿಕ ಮಾರ್ಗದರ್ಶನದ ಗುರಿಗಳಾಗಿವೆ.

ಇಂದು ಶಿಕ್ಷಣವು ಒಂದು ಸರಳ ಪ್ರಕ್ರಿಯೆಯಾಗಿರದೆ ವೈವಿಧ್ಯ ಸಮಸ್ಯೆಗಳ ಸರಮಾಲೆಯನ್ನೇ ಒಡ್ಡುತ್ತಿದೆ. ಬಹಳಷ್ಟು ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಹಲವಾರು ರೀತಿಯ ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇವುಗಳನ್ನು ಅವರೇ ನಿರ್ವಹಿಸಲು ಸಾಧ್ಯವಾಗುವಂತಿರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಶೈಕ್ಷಣಿಕ ಮಾರ್ಗದರ್ಶನ ಅವಶ್ಯಕ. ಶೈಕ್ಷಣಿಕ ಮಾರ್ಗದರ್ಶನ ನಿರ್ದಿಷ್ಟ ಲಕ್ಷಣಗಳುಳ್ಳ ಒಬ್ಬ ವಿದ್ಯಾರ್ಥಿ ಮತ್ತು ಲಭ್ಯವಿರುವ ಅವಕಾಶಗಳು ಮತ್ತು ಅಪೇಕ್ಷೆಗಳ ನಡುವೆ ಅನುಕೂಲಕರ ಸಂಬಂಧವನ್ನು (ಸೇತುವನ್ನು) ನಿರ್ಮಿಸಿ ವಿದ್ಯಾರ್ಥಿಯ ಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳನ್ನು ಸುಗಮಗೊಳಿಸುವ ಪ್ರಕ್ರಿಯೆಯಾಗಿದೆ.

ಶೈಕ್ಷಣಿಕ ಮಾರ್ಗದರ್ಶನ ಒಂದು ನಿರಂತರ ಪ್ರಕ್ರಿಯೆಯಾಗಿದ್ದು ಮಗು ಶಾಲೆಗೆ ಸೇರಿದಂದಿನಿಂದ ಪ್ರಾರಂಭವಾಗಿ ಶಾಲೆ, ಕಾಲೇಜು ಬಿಡುವವರೆಗೂ ಮುಂದುವರಿಯುತ್ತದೆ. ಇದಲ್ಲದೆ ಯಾವುದೇ ವಯಸ್ಸಿನ ವ್ಯಕ್ತಿಗೆ ಶಿಕ್ಷಣಕ್ಕೆ ಅಥವಾ ಶೈಕ್ಷಣಿಕ ಅಂಶಗಳಿಗೆ ಸಂಬಂಧಿಸಿದಂತೆ ನೀಡುವ ಸಹಾಯವು ಶೈಕ್ಷಣಿಕ ಮಾರ್ಗದರ್ಶನದ ಪರಿಧಿಯೊಳಗೆ ಬರುತ್ತದೆ. ಶೈಕ್ಷಣಿಕ ಮಾರ್ಗದರ್ಶನವು ವ್ಯಕ್ತಿಗಳ ಅಗತ್ಯಗಳನ್ನು, ಅವರ ಸಾಮರ್ಥ್ಯಗಳನ್ನು, ಅವರ ವ್ಯಕ್ತಿತ್ವದ

Digitised by Bharatavani, CIIL

ಲಕ್ಷಣಗಳನ್ನು ಆಧರಿಸಿ ನೀಡುವ ಒಂದು ಸಂಘಟಿತ ಕಾರ್ಯವಾಗಿದೆ. ಇದರ ಯಶಸ್ಸಿಗೆ ಶಿಕ್ಷಕರು, ಪೋಷಕರು, ಮಾರ್ಗದರ್ಶಕರು ಮತ್ತು ಸಮುದಾಯದ ನಡುವೆ ಸಮನ್ವಯ ಮತ್ತು ಸಹಕಾರ ತೀರ ಅಗತ್ಯ. ಲಭ್ಯವಿರುವ ಸಂಪನ್ಮೂಲಗಳ ಪರಿಮಿತಿಯಲ್ಲಿ ಶೈಕ್ಷಣಿಕ ಮಾರ್ಗದರ್ಶನದ ಅಗತ್ಯವಿರುವ ಎಲ್ಲ ವ್ಯಕ್ತಿಗಳಿಗೆ ಸಾಧ್ಯವಿರುವ ಎಲ್ಲಾ ಸಹಾಯಗಳನ್ನು ಒದಗಿಸುವುದೇ ಇದರ ಗುರಿಯಾಗಿದೆ.

**2. ವೃತ್ತಿ ಮಾರ್ಗದರ್ಶನ**

ವೃತ್ತಿ ಮಾರ್ಗದರ್ಶನವು ವ್ಯಕ್ತಿಗಳು ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಆ ವೃತ್ತಿಯನ್ನು ಪ್ರವೇಶಿಸಲು ಸಿದ್ಧತೆ ನಡೆಸಿ, ವೃತ್ತಿಯನ್ನು ಪ್ರವೇಶಿಸಿ, ಅಲ್ಲಿ ಯಶಸ್ವಿಯಾಗಿ ಮುಂದುವರಿಯಲು ಸಹಾಯ ನೀಡುವ ಪ್ರಕ್ರಿಯೆಯಾಗಿದೆ. ಅಂತಾರಾಷ್ಟ್ರೀಯ ಶ್ರಮಿಕ ಸಂಸ್ಥೆಯು (ILO) ನೀಡಿರುವ ವೃತ್ತಿ ಮಾರ್ಗದರ್ಶನದ ವ್ಯಾಖ್ಯೆಯು ಇಂತಿದೆ. "ವೃತ್ತಿ ಮಾರ್ಗದರ್ಶನವು ಒಬ್ಬ ವ್ಯಕ್ತಿಯ ವಿಶಿಷ್ಟ ಮತ್ತು ವಿಶೇಷ ಸಾಮರ್ಥ್ಯಗಳೊಂದಿಗೆ ಅವನು/ಅವಳಿಗೆ ದೊರೆಯಬಹುದಾದ ಔದ್ಯೋಗಿಕ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ವೃತ್ತಿ ಆಯ್ಕೆ ಮತ್ತು ಮುನ್ನಡೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಇನ್ನೊಬ್ಬ ವ್ಯಕ್ತಿ ನೀಡುವ ವೃತ್ತಿಪರ ಸಹಾಯವಾಗಿದೆ.

ವ್ಯಕ್ತಿಗಳಲ್ಲಿರುವ ವ್ಯಕ್ತಿ ಭಿನ್ನತೆಯನ್ನು ಮತ್ತು ವೃತ್ತಿ ಅಥವಾ ಉದ್ಯೋಗಗಳಲ್ಲಿ ಇರುವ ವೈವಿದ್ಯತೆಯನ್ನು ಗಮನದಲ್ಲಿಟ್ಟುಕೊಂಡು ಯುಕ್ತ ಉದ್ಯೋಗಕ್ಕೆ ತಕ್ಕ ವ್ಯಕ್ತಿಯನ್ನು ನಿಯೋಜಿಸುವುದು ವೃತ್ತಿ ಮಾರ್ಗದರ್ಶನದ ಪ್ರಧಾನ ಗುರಿಯಾಗಿದೆ. ಇದು ವಿದ್ಯಾರ್ಥಿ ತನ್ನ ಭವಿಷ್ಯದ ವೃತ್ತಿಯ ಮೇಲೆ ಪ್ರಭಾವ ಬೀರುವ ಯಾವುದೇ ಆಯ್ಕೆ ಮತ್ತು ನಿರ್ಧಾರಗಳನ್ನು ಕೈಗೊಳ್ಳುವ ಹಂತದಲ್ಲಿ ಪ್ರಾರಂಭವಾಗಿ ಅವನ/ಅವಳ ದುಡಿಮೆಯ ಜೀವನದುದ್ದಕ್ಕೂ ಮುಂದುವರಿಯುತ್ತದೆ. ವೃತ್ತಿ ಮಾರ್ಗದರ್ಶನ ವ್ಯಕ್ತಿಯ ಅವಶ್ಯಕತೆಗಳು, ಆಕಾಂಕ್ಷೆಗಳು, ಆಸಕ್ತಿಗಳು ಮತ್ತು ಅಭಿಕ್ಷಮತೆಗಳನ್ನು ಅವಲಂಭಿಸಿರುತ್ತದೆ. ವೃತ್ತಿ ಮಾರ್ಗದರ್ಶನ ವೃತ್ತಿ ಶಿಕ್ಷಣದ ಒಂದು ಅವಿಭಾಜ್ಯ ಅಂಗವಾಗಿದ್ದು, ಇದು ವ್ಯಕ್ತಿಯ ಪ್ರಸ್ತುತ ಮತ್ತು ಭವಿಷ್ಯದ ವೃತ್ತಿ ವರ್ಧನೆಯ ಅವಶ್ಯಕತೆಗಳನ್ನು ಅವಲಂಭಿಸಿರುತ್ತದೆ. ವೃತ್ತಿ ಮಾರ್ಗದರ್ಶನ ಗ್ರಾಹಕನ ಉದ್ದೇಶಗಳ ಈಡೇರಿಕೆಗಾಗಿ ವಸ್ತುನಿಷ್ಠ ಮಾಹಿತಿಗಳನ್ನು ಮತ್ತು ವಿವಿಧ ವಿಧಾನ, ತಂತ್ರಗಳು ಮತ್ತು ಪರೀಕ್ಷೆಗಳನ್ನು ಬಳಸಿಕೊಳ್ಳುತ್ತದೆ. ವಿದ್ಯಾರ್ಥಿಗಳು ತಮ್ಮ ವೃತ್ತಿ ಬೆಳವಣಿಗೆಗೆ ತಾವೇ ಜವಾಬ್ದಾರರಾಗುವಂತೆ ಮಾಡಲು ವೃತ್ತಿ ಮಾರ್ಗದರ್ಶನದ ಕಾರ್ಯಕ್ರಮಗಳು ಯತ್ನಿಸುತ್ತವೆ.

ಇಂದಿನ ಸಮಾಜದಲ್ಲಿ ವೃತ್ತಿಗಳಲ್ಲಿರುವ ವೈವಿದ್ಯತೆ, ವಿವಿಧ ವೃತ್ತಿಗಳಿಗೆ ಬೇಕಾಗುವ ಶೈಕ್ಷಣಿಕ ಅರ್ಹತೆ ಮತ್ತು ಕೌಶಲಗಳು, ಅವುಗಳನ್ನು ಗಳಿಸಿಕೊಳ್ಳಲು ಇರುವ ಅವಕಾಶಗಳು, ವೃತ್ತಿ ನಿರ್ಧಾರ, ವೃತ್ತಿ ಆಯ್ಕೆ, ವೃತ್ತಿಯಲ್ಲಿ ಅತೃಪ್ತಿ, ಏರುತ್ತಿರುವ ನಿರುದ್ಯೋಗ ಸಮಸ್ಯೆ, ಮಾನವ ಸಂಪನ್ಮೂಲಗಳ ಸಮರ್ಪಕ ಬಳಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ನೀಡುವ ಸಹಾಯವಾದ್ದರಿಂದ ವೃತ್ತಿ ಮಾರ್ಗದರ್ಶನ ಹೆಚ್ಚಿನ ಮಹತ್ವವನ್ನು ಗಳಿಸಿಕೊಳ್ಳುತ್ತದೆ. ಔದ್ಯೋಗಿಕ ಪ್ರಪಂಚದ ಚಲನಶೀಲ ಸ್ವರೂಪವನ್ನು ಅರಿಯಲು, ಅದರ ಬಗೆಗೆ ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳಲು, ವಿವಿಧ ವೃತ್ತಿಗಳು ತಂದು ಕೊಡಬಹುದಾದ ಲಾಭಗಳು ಮತ್ತು ಪ್ರಯೋಜನಗಳನ್ನು ಅನ್ವೇಷಿಸಲು ವೃತ್ತಿ ಮಾರ್ಗದರ್ಶನ ಅತ್ಯಂತ ಸಹಾಯಕವಾಗಿದೆ.

**3. ವೈಯಕ್ತಿಕ ವ್ಯಕ್ತಿಗತ ಮಾರ್ಗದರ್ಶನ**

ಸಾಮಾನ್ಯವಾಗಿ ವ್ಯಕ್ತಿಗಳ ಬೆಳವಣಿಗೆ ಮತ್ತು ವಿಕಾಸದ ಕಿಶೋರಾವಸ್ಥೆಯ ಅವಧಿಯಲ್ಲಿ ಅವರು ಅತ್ಯಂತ ಹೆಚ್ಚಿನ ಸಂವೇಗಾತ್ಮಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಚಿಕ್ಕಪುಟ್ಟ ವಿಷಯಗಳೂ ಕೂಡ ಅವರ ಸಂವೇಗಾತ್ಮಕ ಸಮತೋಲನವನ್ನು ಕೆಡಿಸುತ್ತವೆ. ಇದು ಅತೃಪ್ತಿಕರ ಶೈಕ್ಷಣಿಕ ಕಾರ್ಯಾಚರಣೆ, ಮನೆಯ ಸದಸ್ಯರೊಂದಿಗೆ ಮತ್ತು ಶಾಲೆಯಲ್ಲಿ ಸಮವಯಸ್ಕರೊಂದಿಗೆ ಸಮಾಯೋಜನೆಯ ಸಮಸ್ಯೆಯನ್ನು ಒಡ್ಡಬಹುದು. ಆತಂಕ ಮತ್ತು ಆಶಾಭಂಗ ಈ ವಯಸ್ಸಿನ ವ್ಯಕ್ತಿಗಳಲ್ಲಿ ಒತ್ತಡವನ್ನು ಉಂಟುಮಾಡುತ್ತದೆ. ಇಂಥ ಸಂವೇಗಾತ್ಮಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಗೂ ತಮ್ಮ ಉದ್ವೇಗವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ವ್ಯಕ್ತಿಗಳಿಗೆ ಸಹಾಯ ಮಾಡುವ ಕಾರ್ಯವೇ ವೈಯಕ್ತಿಕ ಮಾರ್ಗದರ್ಶನ.

ವ್ಯಕ್ತಿಗಳು ತಮ್ಮ ಸಂವೇಗಾತ್ಮಕ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಪರಿಹರಿಸಿಕೊಳ್ಳಲು ಸಹಾಯ ಮಾಡುವುದು ಮತ್ತು ಅವರು ಸಂವೇಗಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಾಯ ಮಾಡುವುದು ವೈಯಕ್ತಿಕ ಮಾರ್ಗದರ್ಶನದ ಪ್ರಧಾನಗುರಿಯಾಗಿದೆ.

**ಮಾರ್ಗದರ್ಶನ ಸೇವೆಗಳು**

ವ್ಯಕ್ತಿಗಳು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು, ಅವರು ತಮ್ಮ ಸಾಮರ್ಥ್ಯ, ಅಭಿಕ್ಷಮತೆ, ಆಸಕ್ತಿ ಮತ್ತು ಮನೋಭಾವಗಳನ್ನು ಅರಿತುಕೊಂಡು, ಅವುಗಳನ್ನು ಸ್ವೀಕರಿಸಿ, ತಮ್ಮ ಗುಣ ಮತ್ತು ಸಾಮರ್ಥ್ಯಗಳನ್ನು ವರ್ಧಿಸಿಕೊಳ್ಳುವಂತೆ ಮಾಡುವುದು ಮಾರ್ಗದರ್ಶನ ಕಾರ್ಯಕ್ರಮಗಳ ಉದ್ದೇಶವಾಗಿದೆ. ಇವುಗಳನ್ನು ಪರಿಣಾಮಕಾರಿಯಾಗಿ ಸಾಧಿಸಲು ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಹಲವಾರು ರೀತಿಯ ಸೇವೆಗಳಾಗಿ ರೂಪಿಸಲಾಗಿದೆ.

**1. ಪರಿಚಯಾತ್ಮಕ ಸೇವೆ:**

ಈ ಸೇವೆಯು ಹೊಸದಾಗಿ ಶಾಲೆಗೆ ಸೇರಿದ ಮಕ್ಕಳಿಗೆ ಶಾಲೆಯ ಕಟ್ಟುಪಾಡುಗಳು, ಸನ್ನಿವೇಶಗಳು, ಸಂಪ್ರದಾಯಗಳು, ಕೋರ್ಸ್‌ಗಳು, ಪಠ್ಯಕ್ರಮ ಶಾಲೆಯ ಸೌಕರ್ಯಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪರಿಚಯ ಮಾಡಿಕೊಡುವುದಾಗಿದೆ. ಇವಲ್ಲದೆ ಶಾಲೆಯ ವಾಚನಾಲಯ, ಪ್ರಯೋಗಶಾಲೆ, ಆಟದ ಮೈದಾನ, ಶೌಚಾಲಯ ಮೊದಲಾದವುಗಳ ಬಗೆಗೆ ತಿಳಿಸಿಕೊಡುವುದು

Digitised by Bharatavani, CIIL

ಪರಿಚಯಾತ್ಮಕ ಸೇವೆಯಡಿಯಲ್ಲೇ ಬರುತ್ತದೆ. ಪರಿಚಯಾತ್ಮಕ ಸೇವೆಯನ್ನು ಪರಿಚಯಾತ್ಮಕ ಉಪನ್ಯಾಸ, ಸಣ್ಣ ಗುಂಪುಗಳಲ್ಲಿ ಸಭೆಗಳು, ತಜ್ಞರೊಡನೆ ಚರ್ಚೆಗಳು, ಶಾಲಾ ವಿವರಣಾ ಪತ್ರ ಕೊಡುವುದು, ಹೊಸಬರನ್ನು ವಿವಿಧ ವಿಭಾಗಗಳಿಗೆ ಕರೆದುಕೊಂಡು ಹೋಗುವುದು, ವಿಡಿಯೋ ಚಿತ್ರಗಳ ಬಳಕೆ ಇತ್ಯಾದಿಗಳ ಮೂಲಕ ನೀಡಬಹುದಾಗಿದೆ.

**2. ಮಾಹಿತಿ ಸೇವೆಗಳು**

ಸಮಗ್ರ ಮತ್ತು ನಿಖರವಾದ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು ಈ ಸೇವೆಯ ಮುಖ್ಯ ಉದ್ದೇಶವಾಗಿದೆ. ಈ ಸೇವೆಯಡಿಯಲ್ಲಿ ಮಾಹಿತಿ ಕೇಂದ್ರದ ಸ್ಥಾಪನೆ, ಶಿಕ್ಷಣ ಮತ್ತು ವೃತ್ತಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಬುಲೇಟಿನ್ ಬೋರ್ಡ್, ವೃತ್ತಿ ಚಾರ್ಟ್‌ಗಳ ಮೂಲಕ ಪ್ರದರ್ಶಿಸುವುದು, ವೃತ್ತಿ ಸಮ್ಮೇಳನ ಮತ್ತು ವಿಚಾರ ಸಂಕಿರಣಗಳನ್ನು (ಸೆಮಿನಾರ್‌ಗಳನ್ನು) ಏರ್ಪಡಿಸುವುದು, ವೃತ್ತಿ ದಿನಾಚರಣೆ ಮತ್ತು ವೃತ್ತಿ ಉಪನ್ಯಾಸಗಳನ್ನು ಏರ್ಪಡಿಸುವುದು, ಕೈಗಾರಿಕೆಗಳು ಮತ್ತು ಇತರ ಸಂಸ್ಥೆಗಳಿಗೆ ಭೇಟಿ ಇತ್ಯಾದಿ ಚಟುವಟಿಕೆಗಳ ಮೂಲಕ ಮಾಹಿತಿ ಒದಗಿಸಬಹುದು.

**3. ವೈಯಕ್ತಿಕ ಮಾಹಿತಿ ಸೇವೆ**

ಈ ಸೇವೆಯಡಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿಗತ ಮಾಹಿತಿಯನ್ನು ಸಂಗ್ರಹಿಸಿ, ಕ್ರೋಢೀಕರಿಸಿ, ವ್ಯವಸ್ಥಿತ ರೀತಿಯಲ್ಲಿ ದಾಖಲಿಸಿ ಇಡಲಾಗುವುದು. ವೈಯಕ್ತಿಕ ಮಾಹಿತಿಯು ವಿದ್ಯಾರ್ಥಿಯ ಕೌಟುಂಬಿಕ ಹಿನ್ನೆಲೆ, ಆಸಕ್ತಿಗಳು, ಅಭಿರುಚಿ, ಸಾಧನೆಗಳು ಇತ್ಯಾದಿ ಅಂಶಗಳನ್ನು ಒಳಗೊಳ್ಳುತ್ತದೆ. ಶಾಲೆಗಳಲ್ಲಿ ಸಂಚಿತದಾಖಲೆ, ಅಂಕಪತ್ರಗಳು, ಘಟನಾ ದಾಖಲೆ, ಆತ್ಮ ಚರಿತ್ರೆ, ಸಂದರ್ಶನ ವರದಿ, ಆರೋಗ್ಯ ದಾಖಲೆ, ವ್ಯಕ್ತಿ ಅಧ್ಯಯನ ದಾಖಲೆ, ದಿನಚರಿ ದಾಖಲೆ ಇತ್ಯಾದಿಗಳಲ್ಲಿ ವೈಯಕ್ತಿಕ ಮಾಹಿತಿಗಳು ದೊರೆಯುತ್ತವೆ.

**4. ಆರೋಗ್ಯ ಮಾರ್ಗದರ್ಶನ ಸೇವೆ**

ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವುದು ಈ ಸೇವೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಮತ್ತು ಪರಿಸರ ನೈರ್ಮಲ್ಯಗಳೆರಡೂ ಒಳಗೊಂಡಿವೆ. ಆರೋಗ್ಯ ಮಾರ್ಗದರ್ಶನವನ್ನು ನೀಡಲು ತಜ್ಞರಿಂದ ಭಾಷಣ, ಚಲನಚಿತ್ರಗಳು, ವಿಡೀಯೊ ಚಿತ್ರಗಳು, ಭಿತ್ತಿ ಪತ್ರಗಳು, ಬುಲೇಟಿನ್ ಬೋರ್ಡ್‌ಗಳನ್ನು ಬಳಸಿ, ಆರೋಗ್ಯ ಕೇಂದ್ರ ಮತ್ತು ಆಸ್ಪತ್ರೆಗಳಿಗೆ ಭೇಟಿ ನೀಡುವುದು, ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನ ಏರ್ಪಡಿಸುವುದು, ಆರೋಗ್ಯ ತಪಾಸಣೆ ಇತ್ಯಾದಿ ಚಟುವಟಿಕೆಗಳನ್ನು ಆಯೋಜಿಸಲಾಗುವುದು.

**5. ನಿಯೋಜನ ಸೇವೆ**

ನಿಯೋಜನ ಸೇವೆಯಡಿಯಲ್ಲಿ ಸರಿಯಾದ ಶಾಲೆಯನ್ನು ಸೇರಲು ಕೋರ್ಸ್‌ಗಳನ್ನು ಆಯ್ದುಕೊಳ್ಳಲು, ಯುಕ್ತ ಸಹಪಠ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು, ಪ್ರಸ್ತುತ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸಹಾಯವನ್ನು ನೀಡುವುದಾಗಿದೆ. ಶಿಕ್ಷಣವನ್ನು ಪೂರೈಸಿದ ನಂತರ ಅವರ ಅಗತ್ಯಗಳಿಗನುಗುಣವಾಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಥವಾ ಉದ್ಯೋಗಕ್ಕೆ ಸೇರಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ನೀಡುವ ಸೇವೆಯಾಗಿದೆ. ಈ ಸೇವೆಯು ಎಲ್ಲಾ ರೀತಿಯ ವಿದ್ಯಾರ್ಥಿಗಳಿಗೆ (ಸಾಮಾನ್ಯ, ಪ್ರತಿಭಾವಂತ, ಕಲಿಕೆಯಲ್ಲಿ ಹಿಂದುಳಿದ ಇತ್ಯಾದಿ) ಉಪಯುಕ್ತವಾದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಯೋಗ್ಯ ಮತ್ತು ಯುಕ್ತ ಸ್ಥಾನಗಳಿಸಿಕೊಳ್ಳಲು ಸಹಾಯ ಒದಗಿಸುತ್ತದೆ.

**6. ಉಪಬೋಧನ/ಸಲಹಾ ಸೇವೆ**

ಉಪಬೋಧನ/ಸಲಹಾ (Counselling) ಸೇವೆ ಒದಗಿಸಲು ಒಬ್ಬ ವೃತ್ತಿಪರ ಉಪಬೋಧಕನ ಅವಶ್ಯಕತೆಯಿರುತ್ತದೆ. ಈ ಸೇವೆ ಶೈಕ್ಷಣಿಕ, ಔದ್ಯೋಗಿಕ ಮತ್ತು ವೈಯಕ್ತಿಕ ಉಪಬೋಧನೆಗೆ ಸಂಬಂಧಿಸಿರಬಹುದು. ಈ ಸೇವೆಯಲ್ಲಿ ವ್ಯಕ್ತಿಯು ತನ್ನನ್ನು ಮತ್ತು ತನಗಿರುವ ಅವಕಾಶಗಳನ್ನು ಮೌಲ್ಯಮಾಪನ ಮಾಡಲು, ಗುರಿ ತಲುಪಲು ಸಮರ್ಪಕ ಮಾರ್ಗವನ್ನು ಆಯ್ದುಕೊಳ್ಳಲು ಮತ್ತು ಆಯ್ಕೆಗೆ ಅನುಗುಣವಾದ ಮಾರ್ಗದಲ್ಲಿ ಮುನ್ನಡೆಯಲು ಮತ್ತು ಶಿಕ್ಷಣ ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಉಪಬೋಧನೆ ನೀಡಲಾಗುವುದು.

**7. ಸ್ವ-ವರದಿ ಸೇವೆ**

ಯಾವುದೇ ವೃತ್ತಿ ಅಥವಾ ಜೀವನ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಲು ವ್ಯಕ್ತಿ ತನ್ನನ್ನು ತಾನು ಅರಿತುಕೊಳ್ಳುವುದು ಅತಿ ಮುಖ್ಯ. ವ್ಯಕ್ತಿ ತನ್ನ ಸಾಮರ್ಥ್ಯಗಳು, ಆಸಕ್ತಿಗಳು, ಗುಣಗಳು, ಆಕಾಂಕ್ಷೆಗಳು, ಆರೋಗ್ಯದ ಪರಿಸ್ಥಿತಿಯನ್ನು ಅರಿತುಕೊಳ್ಳಲು ಸಹಾಯ ಮಾಡುವುದು ಈ ಸೇವೆಯ ಉದ್ದೇಶವಾಗಿದೆ. ಈ ಸೇವೆಯಡಿಯಲ್ಲಿ ವಿದ್ಯಾರ್ಥಿಗಳ ಬಗೆಗೆ ಅಗತ್ಯವಾದ ಅನೇಕ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ ಮತ್ತು ಸಂರಕ್ಷಿಸಲಾಗುತ್ತದೆ.

**8. ಅನುಸರಣ ಸೇವೆ**

ಒಬ್ಬ ವ್ಯಕ್ತಿಯನ್ನು ಒಂದು ಕೋರ್ಸ್ ಅಥವಾ ಉದ್ಯೋಗದಲ್ಲಿ ನಿಯೋಜಿಸಿದ ನಂತರ ಆ ವ್ಯಕ್ತಿಯು ತನ್ನ ಪರಿಸರದೊಂದಿಗೆ ಎಷ್ಟರಮಟ್ಟಿಗೆ ಹೊಂದಿಕೊಂಡಿದ್ದಾನೆ. ಮಾರ್ಗದರ್ಶನ ಎಷ್ಟರಮಟ್ಟಿಗೆ ಫಲಕಾರಿಯಾಗಿದೆ. ಇತ್ಯಾದಿಗಳನ್ನು ಮಾರ್ಗದರ್ಶಕರು ಮುಂದುವರಿದು ಮೌಲ್ಯಮಾಪನ ಮಾಡಬೇಕು. ಮಾರ್ಗದರ್ಶನ ಕಾರ್ಯವನ್ನು ವ್ಯವಸ್ಥಿತವಾಗಿ ಮೌಲ್ಯಮಾಪನ ಮಾಡುವುದೇ ಅನುಸರಣ (Follow up) ಸೇವೆ. ಒದಗಿಸಿದ ಮಾರ್ಗದರ್ಶನ ಸೇವೆಯು ವ್ಯಕ್ತಿಯ ಅವಶ್ಯಕತೆಗಳನ್ನು ಪೂರೈಸುತ್ತಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಮಾರ್ಗದರ್ಶನದ ಪುನರಾವಲೋಕನ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಮೌಲ್ಯಮಾಪನದ ನಂತರ ಅಗತ್ಯವಿದ್ದರೆ ಪುನಃ ಮತ್ತಷ್ಟು ಸಹಾಯವನ್ನು ನೀಡುವುದು ಅಥವಾ ಮಾರ್ಪಡಿಸಿದ ಮಾರ್ಗದರ್ಶನವನ್ನು ನೀಡಲಾಗುತ್ತದೆ.

Digitised by Bharatavani, CIIL

ಅನುಸರಣ ಸೇವೆಯಲ್ಲಿ ಸಂದರ್ಶನ ಅಂಚೆ ಕಾರ್ಡಿನ ಮೂಲಕ ಸರ್ವೇಕ್ಷಣೆ, ಪ್ರಶ್ನಾವಳಿಗಳು ಇವೇ ಮೊದಲಾದ ತಂತ್ರಗಳನ್ನು ಬಳಸಲಾಗುವುದು. ಅನುಸರಣ ಕಾರ್ಯಕ್ರಮಗಳ ಮೂಲಕ ಲಭ್ಯವಾದ ಮಾಹಿತಿಗಳ ಆಧಾರದ ಮೇಲೆ ಮಾರ್ಗದರ್ಶನ ಸೇವೆಯನ್ನು ಉತ್ತಮಪಡಿಸಿ ಇನ್ನು ಹೆಚ್ಚು ಪರಿಣಾಮಕಾರಿಯಾದ ಮಾರ್ಗದರ್ಶನ ಕಾರ್ಯಕ್ರಮಗಳನ್ನು ನೀಡಬಹುದು.

**ಮಾರ್ಗದರ್ಶಕನ ಲಕ್ಷಣಗಳು**

ಮಾರ್ಗದರ್ಶನ ಒಂದು ವೃತ್ತಿಪರ ಚಟುವಟಿಕೆಯಾಗಿದ್ದು ಮಾರ್ಗದರ್ಶಕನು ಈ ಕೆಳಗಿನ ಲಕ್ಷಣಗಳನ್ನು ಹೊಂದಿರಬೇಕು.

- ವೃತ್ತಿ ಪಾತ್ರಕ್ಕೆ ಬೇಕಾದ ಮಾರ್ಗದರ್ಶನದಲ್ಲಿ ಶೈಕ್ಷಣಿಕ ಅರ್ಹತೆಗಳನ್ನು ಹೊಂದಿರಬೇಕು.
- ವ್ಯಕ್ತಿಗಳಲ್ಲಿ ಆಸಕ್ತಿ, ಪ್ರೀತಿ ಮತ್ತು ನಂಬಿಕೆ ಇರಬೇಕು.
- ತಾಂತ್ರಿಕವಾಗಿ ಪರಿಣತಿಯುಳ್ಳವನಾಗಿರಬೇಕು.
- ಸಹನೆಯುಳ್ಳವನು, ಕಾರ್ಯಶ್ರದ್ಧೆಯುಳ್ಳವನಾಗಿರಬೇಕು.
- ಮಾನವ ವರ್ತನೆಯ ಮನೋವೈಜ್ಞಾನಿಕ ನೆಲೆಗಳ ಮೂಲಭೂತ ಜ್ಞಾನವಿರಬೇಕು.
- ತೆರೆದ ಮನಸ್ಸಿನವನೂ, ನಮ್ರತೆಯುಳ್ಳವನೂ, ಪ್ರಜಾಪ್ರಭುತ್ವದ ತತ್ವಗಳಲ್ಲಿ ನಂಬಿಕೆಯುಳ್ಳವನೂ ಆಗಿರಬೇಕು.
- ವೃತ್ತಿಗೆ ಬೇಕಾದ ನೈತಿಕ ಶಿಷ್ಟಾಚಾರಗಳನ್ನು ಪಾಲಿಸುವಂತವನಾಗಿರಬೇಕು.
- ಸಲಹಾರ್ಥಿಗಳನ್ನು ಅರ್ಥ ಮಾಡಿಕೊಳ್ಳುವ ಇಚ್ಛೆ ಮತ್ತು ಸಾಮರ್ಥ್ಯವಿರಬೇಕು.
- ಸಲಹಾರ್ಥಿಗಳ ಸಮಸ್ಯೆಗಳು ಮತ್ತು ಭಾವನೆಗಳಿಗೆ ಸ್ಪಂದಿಸುವಂತವನಾಗಿರಬೇಕು.
- ಇತರರೊಂದಿಗೆ ಒಳ್ಳೆಯ ಸಂಬಂಧವನ್ನು ಕಾಪಾಡಿಕೊಂಡು ಒಟ್ಟಾಗಿ ಕೆಲಸ ಮಾಡಬಲ್ಲವನಾಗಿರಬೇಕು.

**ಮಾರ್ಗದರ್ಶನದಲ್ಲಿ ತರಬೇತಿ**

ಶಾಲೆ, ಕಾಲೇಜುಗಳಲ್ಲಿ ಮಾರ್ಗದರ್ಶಕರಾಗಿ ಅಥವಾ ಮಾರ್ಗದರ್ಶಕ ಆಪ್ತಸಮಾಲೋಚಕರಾಗಿ ಕೆಲಸ ಮಾಡಲು ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆಯಲ್ಲಿ ತರಬೇತಿಯನ್ನು ಪಡೆದಿರಬೇಕು. ಭಾರತದಲ್ಲಿ ಹಲವಾರು ಸಂಸ್ಥೆಗಳು ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆಯಲ್ಲಿ ಸ್ನಾತಕೋತ್ತರ ಡಿಪ್ಲೋಮೊ ಕಾರ್ಯಕ್ರಮವನ್ನು ನೀಡುತ್ತಿವೆ. ಇದು ಒಂದು ವರ್ಷದ ಕಾರ್ಯಕ್ರಮವಾಗಿದ್ದು ಇದನ್ನು ಸಾಮಾನ್ಯವಾಗಿ ಮನೋವಿಜ್ಞಾನದಲ್ಲಿ ಪದವಿ(ಒಂದು ಐಚ್ಛಿಕ ವಿಷಯವಾಗಿ ಓದಿದವರು) ಅಥವಾ ಸ್ನಾತಕೋತ್ತರ ಪದವಿಯುಳ್ಳವರು ಮಾಡಬಹುದಾಗಿದೆ. ಪಂಜಾಬ ವಿಶ್ವವಿದ್ಯಾನಿಲಯವು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ–ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ (Master of Education Guidance and Counselling) ಕಾರ್ಯಕ್ರಮವನ್ನು ನೀಡುತ್ತಿದೆ. ಅಣ್ಣಾಮಲೈ ವಿಶ್ವವಿದ್ಯಾನಿಲಯವು ಉಪಬೋಧನೆಯ ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಡಿಪ್ಲೋಮೊ ಕಾರ್ಯಕ್ರಮವನ್ನು ನೀಡುತ್ತಿದೆ. ನಮ್ಮ ದೇಶದಲ್ಲಿ ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆಯಲ್ಲಿ ಎಂ.ಎಸ್ಸಿ ಪದವಿ ಮತ್ತು ಮಗುವಿನ ಮಾರ್ಗದರ್ಶನ ಮತ್ತು ಕುಟುಂಬ ಆಪ್ತಸಮಾಲೋಚನೆಯಲ್ಲಿ ಸ್ನಾತಕೋತ್ತರ ಡಿಪ್ಲೋಮೊ ಕಾರ್ಯಕ್ರಮಗಳೂ ಇವೆ. ಭಾರತದಲ್ಲದೆ ಹೊರ ದೇಶಗಳಲ್ಲಿಯೂ ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆಯಲ್ಲಿ ತರಬೇತಿ ಪಡೆಯಲು ಅನೇಕ ಅವಕಾಶಗಳಿವೆ.

**–ಡಾ.ಶೈಲಜಾ ಪಿ.ಶ್ಯಾನ್‌ಬಾಗ್**

## ಮುಕ್ತ ಕಲಿಕೆ

ಮುಕ್ತ ಕಲಿಕೆ ಶಿಕ್ಷಣದ ಪ್ರಜಾಪ್ರಭುತ್ವೀಕರಣಕ್ಕಾಗಿ ಇರುವ ರಾಜನಿಕ ಮತ್ತು ಶಿಶುಬೋಧನ ಶಾಸ್ತ್ರೀಯ ನವೀನ ಆಚರಣೆಯಾಗಿದೆ. ವಿದ್ಯಾರ್ಥಿಗಳ ಕಲಿಕೆಯಲ್ಲಿ ಸೃಜನಾತ್ಮಕತೆ ಮತ್ತು ಸ್ವಪ್ರೇರಣೆಗಳನ್ನು ಪ್ರೋತ್ಸಾಹಿಸಲು ಮುಕ್ತ ಅವಕಾಶ (Open Space) ದ ಮಹತ್ವ ಹಾಗೂ ಪ್ರಾಸಂಗಿಕತೆಯನ್ನು ಒತ್ತಿ ಹೇಳುವ ಠಾಗೋರರ ಮುಕ್ತ ಶಿಕ್ಷಣದ ಪರಿಕಲ್ಪನೆಯೊಡನೆ ಈ ಪರಿಕಲ್ಪನೆಯನ್ನು ಹೋಲಿಸುವುದು ಗೊಂದಲಕ್ಕೆ ಎಡೆ ಮಾಡುತ್ತದೆ. ಭಾರತದಲ್ಲಿ 50ರ ಹಾಗೂ 60ರ ದಶಕಗಳಲ್ಲಿ ಶೈಕ್ಷಣಿಕ ರೇಡಿಯೋ ಮತ್ತು ಶೈಕ್ಷಣಿಕ ದೂರದರ್ಶನಗಳ ಬಳಕೆ ಮುಕ್ತ ಕಲಿಕೆಯ ಮುನ್ಸೂಚಕಗಳೆಂದು ಹೇಳಬಹುದು. ಆದಾಗ್ಯೂ, ಭಾರತದಲ್ಲಿ ಮುಕ್ತ ಕಲಿಕೆ ತನ್ನ ಸಾಂಸ್ಥಿಕ ಸ್ವರೂಪದಲ್ಲಿ 1979ರಲ್ಲಿ ಉದಯವಾಯಿತು.

'ಭವಿಷ್ಯದಲ್ಲಿ ಮುಕ್ತ ದೂರ ಶಿಕ್ಷಣದ ದಿಶೆಯಲ್ಲಿ ಒತ್ತನ್ನು ನೀಡಲಾಗುವುದು' (ಪು.5) ಎಂಬ ರಾಷ್ಟ್ರೀಯ ಶಿಕ್ಷಣ ನೀತಿ (National Policy of Education NPE 1986) ಯ ಘೋಷಣೆ ಮುಕ್ತ ಕಲಿಕೆಯ ವ್ಯವಸ್ಥೆಗೆ ಶುಭ ಸೂಚಕವಾಗಿ ಹಾಗೂ ಇದರಿಂದ ದೇಶದ ಶೈಕ್ಷಣಿಕ ಸನ್ನಿವೇಶಕ್ಕೆ ಒಂದು ದೃಢನೆಲೆ ಖಚಿತಪಟ್ಟಿದೆ. 1992ರಲ್ಲಿ ಕೈಗೊಂಡ ಕೆಲವು ಮಾರ್ಪಾಡುಗಳ ನಂತರ NPE ಹೀಗೆ ಪುನರುಚ್ಚರಿಸಿತು – "ಮುಕ್ತಕಲಿಕೆಯ ವ್ಯವಸ್ಥೆಯನ್ನು ಶಿಕ್ಷಣದ ಪ್ರಜಾಪ್ರಭುತ್ವದ ಒಂದು ಉಪಕರಣವನ್ನಾಗಿಸಿಕೊಂಡು ಉನ್ನತ ಶಿಕ್ಷಣಕ್ಕಾಗಿ ಅವಕಾಶಗಳನ್ನು ಹೆಚ್ಚಿಸಲು ಮತ್ತು ಇದನ್ನು ಜೀವನಪರ್ಯಂತದ ಪ್ರಕ್ರಿಯೆಯನ್ನಾಗಿಸಲು ಪ್ರಾರಂಭಿಸಲಾಗಿದೆ" ಹೊಸಶಿಕ್ಷಣ ನೀತಿ (198) (NPE 1986) ಕ್ರಿಯಾ ಕಾರ್ಯಕ್ರಮವು (1992, ಪು.71) ಮುಕ್ತ ಕಲಿಕೆಯ ವ್ಯಾಪ್ತಿ ಹಾಗೂ ಸಮೃದ್ಧಿಯನ್ನು ಹೆಚ್ಚಿಸಲು ಆಧಾರವನ್ನು, ತಿರುಳನ್ನು ದೂರಶಿಕ್ಷಣ ಸಮಿತಿಯ ಸ್ಥಾಪನೆಯ ಮುಖಾಂತರ ಒದಗಿಸುವ ಪ್ರಕ್ರಿಯೆಗಳನ್ನು ಮತ್ತು

Digitised by Bharatavani, CIIL

ವ್ಯವಸ್ಥೆಗಳನ್ನು ಸ್ಪಷ್ಟಪಡಿಸುತ್ತದೆ. "ಕೋರ್ಸುಗಳನ್ನು ಮತ್ತು ಕಾರ್ಯಕ್ರಮಗಳನ್ನು ಖಚಿತಪಡಿಸಲೆಂದು ಮತ್ತು ಕಾರ್ಯಕ್ರಮಗಳ ಹಾಗೂ ಸಂಸ್ಥೆಗಳ ನಡುವೆ ವಿದ್ಯಾರ್ಥಿ ಸಲಹೆಯನ್ನು ಸುಲಭಗೊಳಿಸುವ ಮುಕ್ತ ವಿಶ್ವವಿದ್ಯಾನಿಲಯಗಳ ಕಾರ್ಯಕ್ರಮಗಳ ಮಾದರಿ ಮತ್ತು ಸಂರಚನೆಗಳನ್ನು ವಿಕಾಸಗೊಳಿಸಲೆಂದು ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳ ಮತ್ತು ಇತರ ದೂರಶಿಕ್ಷಣ ಸಂಸ್ಥೆಗಳ ಜಾಲವನ್ನು ನಿರ್ಮಿಸಲು ದೂರಶಿಕ್ಷಣ ಸಮಿತಿಯು (Distance Education Council-DEC) ಕ್ರಮಗಳನ್ನು ಕೈಗೊಳ್ಳುವುದು ಎಂದು ಇದು ಹೇಳಿದೆ. ಆದ್ದರಿಂದ ಮುಕ್ತಕಲಿಕೆ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ತರ ಸ್ಥಾನವನ್ನು ಗಳಿಸಿಕೊಂಡಿದೆ.

ವಾಲ್ಟರ್ ಪೈ ಎಂಬಾತನ (1978) ಪ್ರಕಾರ ಮುಕ್ತ ಕಲಿಕೆಯ ವ್ಯವಸ್ಥೆಯ ಸುಸ್ಪಷ್ಟ ಸಂಚಲನೆಯು ಮೂರು ಶಕ್ತಿಗಳಿಂದ ಉಂಟಾಗಿದೆ; ಅವು ಯಾವುವೆಂದರೆ ಮಾಹಿತಿ ತಂತ್ರಜ್ಞಾನ, ಸಮಾನತಾವಾದ ಮತ್ತು ವಯಸ್ಕರ ಶಿಕ್ಷಣ. ಆದರೆ, ಸೂಕ್ಷ್ಮವಾಗಿ ಪರಿಸೀಲಿಸಿದಾಗ ವಿಶ್ವದಾದ್ಯಂತ ಮುಕ್ತ ಕಲಿಕೆಯ ವ್ಯವಸ್ಥೆಯ ಸ್ಥಾಪನೆಗೆ ಇತರ ಅಂಶಗಳು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಸಹಾಯ ಮಾಡಿವೆ ಎಂಬುದನ್ನು ಅಲ್ಲಗಳೆಯಲಾಗದು. ಅವು ಯಾವುವೆಂದರೆ ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಬೇಕೆಂದು ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ನಮ್ಯತೆಯಿರಬೇಕೆಂದು ಬೇಡಿಕೆಯಿಟ್ಟ ಬರ್ಕ್ಲೆ ಹಾಗೂ ಪ್ಯಾರಿಸ್ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಕ್ರಾಂತಿ ಮತ್ತು ಸಂಸ್ಥಾಗತ ಕಲಿಕೆಯ ಅಧಿಕಾರಕ್ಕೆ ಸವಾಲೆಸೆದ, ಶಾಲಾಶಿಕ್ಷಣದ ಪರಿಮಿತಿಗಳ ನಿಜ ಸ್ವರೂಪವನ್ನು ತೋರ್ಪಡಿಸಿದ ಇಲಿಚ್ (1971) ರೈಮರ್ (1971) ಮತ್ತು ಗುಡ್‌ಮನ್ (1971) ಮುಂತಾದ ಶಾಲಾಶಿಕ್ಷಣ ವಿರೋಧಿಗಳ ಉಚ್ಚಸ್ವರದ, ಕೋಲಾಹಲ ಪೂರ್ಣ ವಿರೋಧ ಈ ಬೆಳವಣಿಗೆಗೂ ಮುಕ್ತಕಲಿಕೆ ಉದಯವನ್ನು ತ್ವರಿತಗೊಳಿಸಿದವು. ಅಮೇರಿಕಾದಲ್ಲಿ ಮುಕ್ತಕಲಿಕೆ ಅಸ್ತಿತ್ವದಲ್ಲಿದ್ದರೂ 1969ರಲ್ಲಿ ಇಂಗ್ಲೆಂಡ್‌ನಲ್ಲಿ ಮುಕ್ತ ವಿಶ್ವವಿದ್ಯಾಲಯದ ಸ್ಥಾಪನೆಯಿಂದ ಈ ಆಂದೋಲನಕ್ಕೆ ಪುಷ್ಟಿ ಸಿಕ್ಕಿತು. ಶಿಕ್ಷಣದಲ್ಲಿ ಸಂರಚನಾತ್ಮಕ ನಮ್ಯತೆಯನ್ನು ಸಮರ್ಥಿಸಿದ ಯುನೆಸ್ಕೊ ವರದಿ (1972)ಯ ಪರಿಣಾಮ ಮತ್ತು ತತ್ಫಲವಾಗಿ ಆದ ಮುಕ್ತಕಲಿಕೆಯ ವೃದ್ಧಿ ಮತ್ತು ವ್ಯಾಪಕತೆ ಈ ಅಂಶಗಳನ್ನಾ ಇಲ್ಲಿ ಉಲ್ಲೇಖಿಸುವುದು ಸುಸಂಗತ.

**ಉತ್ಪತ್ತಿ:** ಭಾರತೀಯ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯದ ತರುವಾಯ, ಸುಮಾರು ಒಂದೂವರೆ ದಶಕಗಳವರೆಗೆ ದೇಶದಲ್ಲಿನ ಶಿಕ್ಷಣ ವ್ಯವಸ್ಥೆ ಹೆಚ್ಚುಕಡಿಮೆ ಅದೇ ನೀತಿಯನ್ನು ಅನುಸರಿಸಿತು; ಹೆಚ್ಚು ಸಂಸ್ಥೆಗಳ ಪ್ರಾರಂಭ, ಹೆಚ್ಚು ಶಿಕ್ಷಕರ ನೇಮಕಾತಿ, ಹೆಚ್ಚು ವಿದ್ಯಾರ್ಥಿಗಳ ದಾಖಲಾತಿ, ಆದರೆ ಅರವತ್ತರ ದಶಕದಲ್ಲಿ, ಪ್ರೊಫೆಸರ್ ಡಿ.ಎಸ್. ಕೊಠಾರಿ ಅವರ ನೇತೃತ್ವದಲ್ಲಿ ಭಾರತೀಯ ಶಿಕ್ಷಣ ತಜ್ಞರು ಶಿಕ್ಷಣ ವ್ಯವಸ್ಥೆಯು ತನ್ನ ಗರಿಷ್ಠ ಮಟ್ಟದ ದಕ್ಷತೆಯೊಂದಿಗೆ ಕೆಲಸಮಾಡುತ್ತಿಲ್ಲವಾಗಿ ಪರ್ಯಾಯ ಕಾರ್ಯನೀತಿಗಳ ಅವಶ್ಯಕತೆ ಇದೆಯೆಂದು ಮನಗಂಡರು. ಆದ್ದರಿಂದ, ಶಿಕ್ಷಣ ಆಯೋಗವು (1964–66) 'ಪೂರ್ಣ ಕಾಲಿಕ' ಮತ್ತು 'ಅರೆಕಾಲಿಕ' ಶಿಕ್ಷಣ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು. ಇದಕ್ಕೆ ಮುನ್ನ ವಿಶ್ವವಿದ್ಯಾನಿಲಯ ಅನುದಾನ ಆಯೋಗವು 1962ರಲ್ಲಿ ಅಂಚೆತೆರಪಿನ ಶಿಕ್ಷಣದ ಬಳಕೆಯನ್ನು ಶಿಫಾರಸ್ಸು ಮಾಡಿತ್ತು. ದೆಹಲಿಯಲ್ಲಿ ಪ್ರಪ್ರಥಮ ಸಂಸ್ಥೆಯ ಸ್ಥಾಪನೆಯ ಮೂಲಕ ದೂರಕಲಿಕೆಯ ಬೀಜವನ್ನು ಬಿತ್ತಂತಾಯಿತು. (ರೆಡ್ಡಿ, 1988), ಮಧ್ಯಪ್ರದೇಶದ ಭೂಪಾಲ್‌ನಲ್ಲಿ 1965ರಲ್ಲಿ ಶಾಲಾ ಶಿಕ್ಷಣ ಬೋರ್ಡ್‌ನ ಸ್ಥಾಪನೆಯೊಂದಿಗೆ ಶಾಲಾಸ್ತರದಲ್ಲಿ ಅಂಚೆತೆರಪಿನ ಸಂಸ್ಥೆಗಳು ಪ್ರಾರಂಭಗೊಂಡವು. ತದನಂತರ, ರಾಜಾಸ್ಥಾನ್, ಒರಿಸ್ಸಾ ದೆಹಲಿ ಮತ್ತು ಉತ್ತರಪ್ರದೇಶ ಮುಂತಾದ ರಾಜ್ಯಗಳೂ ತಮ್ಮ ತಮ್ಮ ಅಂಚೆತೆರಪಿನ (ಪತ್ರಾಚಾರ್) ಶಾಲೆಗಳನ್ನು ತೆರೆದವು.

ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಅಂಚೆ ಮತ್ತು ತೆರಪಿನ ಅಧ್ಯಯನಕ್ಕಾಗಿ ಸಂಸ್ಥೆಗಳ ಸ್ಥಾಪನೆಯ ಜೊತೆಗೆ 1973ರಲ್ಲಿ ಶೈಕ್ಷಣಿಕ ತಂತ್ರಜ್ಞಾನ ಕೇಂದ್ರವನ್ನು ಸ್ಥಾಪಿಸುವ ಪ್ರಾರಂಭಿಕ ನೀತಿಯನ್ನು ಕೈಗೊಳ್ಳಲಾಯಿತು. ಈ ಕೇಂದ್ರವು ತರುವಾಯ 1983ರಲ್ಲಿ NCERT ಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಅಧ್ಯಾಪಕ ಶಿಕ್ಷಣಗಳಿಗೆ ಬೆಂಬಲ ನೀಡಲು ರೇಡಿಯೋ ಮತ್ತು ದೂರದರ್ಶನ ಪ್ರಸಾರಗಳ ಮುಖಾಂತರ ಮುಕ್ತ ಕಲಿಕೆಯನ್ನು ಪ್ರೋತ್ಸಾಹಿಸಲು ಕೇಂದ್ರೀಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಯ (CIET) ರೂಪದಲ್ಲಿ ಉನ್ನತೀಕರಿಸಲಾಯಿತು. 1975–76ರ ವರ್ಷದಲ್ಲಿ ಅಮೇರಿಕಾದ ಎರವಲು ಉಪಗ್ರಹ ARS/6ನ ಸಹಾಯದಿಂದ ಪ್ರಥಮ ಉಪಗ್ರಹ ಬೋಧನಾ ದೂರದರ್ಶನ ಪ್ರಯೋಗವನು SITE) ಕೈಗೊಳ್ಳಲಾಯಿತು. ಈ ಪ್ರಯೋಗವು ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಿತು.

ವಿವಿಧ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗಳನ್ನು ವಿಶ್ವವಿದ್ಯಾಲಯಗಳಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದಾಗ ಅವುಗಳ ಉದ್ದೇಶ ಮತ್ತು ಆಚರಣೆಗಳು ಎಪ್ಪತ್ತರ ದಶಕದ ಅಂತ್ಯದಲ್ಲಿ ಮತ್ತು ಎಂಬತ್ತರ ಆದಿಭಾಗದಲ್ಲಿ ಸ್ಥಾಪನೆಗೊಂಡ ಮುಕ್ತಶಾಲೆ ಮತ್ತು ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆ ಮತ್ತು ಬೆಳವಣಿಗೆಯನ್ನು ಕುರಿತಂಥ ಉದ್ದೇಶಗಳು ಮತ್ತು ಆಚರಣೆಗಳಿಗಿಂತ ಭಿನ್ನವಾಗಿದ್ದವು. ಆವರಣದೊಳಗಿನ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ತಗ್ಗಿಸುವುದು ಮತ್ತು ಮೂಲವೆಚ್ಚ ಹಾಗೂ ಆವರ್ತನೆಗೊಳ್ಳುವ ವೆಚ್ಚಗಳನ್ನು ಕಡಿಮೆ ಮಾಡುವುವು ಅಂಚೆ ಮತ್ತು ತೆರಪಿನ ಶಿಕ್ಷಣದ ಗುರಿಗಳಾಗಿದ್ದವು. ಮತ್ತೊಂದು ಕಡೆ, ವಿದ್ಯಾರ್ಥಿಗಳಿಗೆ ತೃತೀಯ ಸ್ತರದ ಶಿಕ್ಷಣದ ಲಭ್ಯತೆಯನ್ನು ವಿಸ್ತರಿಸುವುದು ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚು ಹೆಚ್ಚು ಸಂರಚನಾತ್ಮಕ ನಮ್ಯತೆಯನ್ನು ನಿರ್ಮಿಸುವುದು ಈ ಉದ್ದೇಶಗಳು ಮುಕ್ತಕಲಿಕೆಯ ವ್ಯವಸ್ಥೆಗೆ ಕಾರಣೀಭೂತವಾದುವು (ದೇವಲ್, 1992; ಮುಖ್ಯೋಪಾಧ್ಯಾಯ, 1994). ಭಾರತದಲ್ಲಿ ಮೊದಲು ಮುಕ್ತಕಲಿಕೆ ಶಾಲಾಸ್ತರದಲ್ಲಿ ಆರಂಭಗೊಂಡು ತರುವಾಯ ವಿಶ್ವವಿದ್ಯಾಲಯದ ಮಟ್ಟದಲ್ಲಿ

Digitised by Bharatavani, CIIL

ಪ್ರಾರಂಭವಾಯಿತು ಎಂಬ ಅಂಶವನ್ನು ಇಲ್ಲಿ ಉಲ್ಲೇಖಿಸುವುದು ಸುಸಂಗತವಾಗುವುದು (ದೇವಲ್, 1990) CBSE ಅಧೀನದಲ್ಲಿ ಮೊದಲನೆಯ ಮುಕ್ತಶಾಲೆ 1979ರಲ್ಲಿ ಪ್ರಾರಂಭವಾಯಿತು ಮತ್ತು 1982ರಲ್ಲಿ ಆಂಧ್ರಪ್ರದೇಶದಲ್ಲಿ ಪ್ರಥಮ ಮುಕ್ತ ವಿಶ್ವವಿದ್ಯಾಲಯ ಪ್ರಾರಂಭಗೊಂಡಿತು.

**ಪರಸ್ಪರ ವ್ಯಾಪಕತೆಯುಳ್ಳ ಪರಿಕಲ್ಪನೆಗಳು:** ಮುಕ್ತ ಕಲಿಕೆ ಅಥವಾ ಮುಕ್ತ ಶಿಕ್ಷಣ ಎಂಬ ಪದಗಳನ್ನು ಸಾಮಾನ್ಯ ರೀತಿಯಲ್ಲಿ ಬಳಸಲಾಗುವುದು. ವಿದ್ಯಾರ್ಥಿಗಳ ಪ್ರವೇಶ ಮತ್ತು ಅರ್ಹತೆಯ ಮಾನದಂಡಗಳು ಹಾಗೂ ಅಧ್ಯಯನ ಮತ್ತು ಪರೀಕ್ಷಾ ವಿಧಾನಗಳಿಗೆ ಸಂಬಂಧಿಸಿದಂತೆ ಪರಿಮಿತಿಗಳನ್ನು ತೆಗೆದುಹಾಕುವುದು ಇಲ್ಲವೆ ಅವಕಾಶಗಳನ್ನು ಕಲ್ಪಿಸುವುದು. ಇವುಗಳಿಗೆ ಸಂಬಂಧಿಸಿದಂತೆ ಮೇಲಿನ ಪದಗುಚ್ಛಗಳನ್ನು ಬಳಸಲಾಗುತ್ತದೆ. ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಶಾಲೆ ಮತ್ತು ಮುಕ್ತ ಏಜೆನ್ಸಿ ಮುಂತಾದ ಪದಗಳನ್ನು ಒಂದು ಸಾಂಸ್ಥಿಕ ವ್ಯವಸ್ಥೆ ಅಥವಾ ಸಾಂಘಿಕ ವ್ಯವಸ್ಥೆಗಳನ್ನು ಸೂಚಿಸುವ ನಿರ್ದಿಷ್ಟ ಸಂದರ್ಭದಲ್ಲಿ ಉಪಯೋಗಿಸಲಾಗುವುದು.

ಎಲ್ಲ ಮುಕ್ತ ಕಲಿಕಾ ಕಾರ್ಯಕ್ರಮಗಳು ಪ್ರಬಲವಾದ ವಿದ್ಯಾರ್ಥಿ ಬೆಂಬಲ ಸೇವೆಗಳ ಲೇಖನವನ್ನು ಹೊಂದಿ ಮತ್ತು ಬೋಧನೆಗಿಂತ ಮಿಗಿಲಾಗಿ ಕಲಿಕೆಯನ್ನು ಒತ್ತಿ ಹೇಳುತ್ತವೆ. ಅಲ್ಲದೆ ಇವು ಪರಸ್ಪರ ಸಂಬಂಧವಿಲ್ಲದ ಜ್ಞಾನಕ್ಕಿಂತ ದಕ್ಷತೆಗಳಿಗೆ, ವಿಷಯಾಧಾರಿತ ಮಾಹಿತಿಗಿಂತ ಅವಶ್ಯಕತೆ ಆಧಾರಿತ ವಿಷಯಗಳಿಗೆ ಒತ್ತು ನೀಡುತ್ತದೆ. ವಿದ್ಯಾಥಿಗಳಿಗಿರುವ ಆಯ್ಕೆ ಮತ್ತು ವಿದ್ಯಾರ್ಥಿಗಳ ಸ್ವಾತಂತ್ರ್ಯಗಳನ್ನು ಹೆಚ್ಚಿಸುವುದು ಮುಕ್ತಕಲಿಕಾ ಕಾರ್ಯಕ್ರಮಗಳ ಮಹದೋದ್ದೇಶಗಳಾಗಿವೆ. ಮುಕ್ತ ಕಲಿಕಾ ಸಂಸ್ಥೆಗಳಲ್ಲಿ ಏಕೆ, ಹೇಗೆ, ಏನನ್ನು, ಯಾವಾಗ ಮತ್ತು ಎಲ್ಲಿ ಅಧ್ಯಯನ ಮಾಡಬೇಕು ಎಂಬುದನ್ನು ವಿದ್ಯಾರ್ಥಿಯು ನಿರ್ಣಯಿಸುವನು. “ಪತ್ರವ್ಯವಹಾರ/ ಅಂಚೆ ಶಿಕ್ಷಣ” ಮತ್ತು “ದೂರಶಿಕ್ಷಣ” ಎಂಬ ಪದಗುಚ್ಛಗಳನ್ನು ಬಳಸಲು ಮುಕ್ತ ಕಲಿಕೆಗೆ ಸಮಾನಾರ್ಥಕಗಳೆಂಬಂತೆ ತಪ್ಪಾಗಿ ಬಳಸುವುದುಂಟು. ಅಭಿಮನ್ಯುಸಿಂಗ್ (1992) ಮತ್ತು ಮುಖ್ಯೋಪಾಧ್ಯಾಯ (1994) ಮುಕ್ತ ಹಾಗೂ ದೂರಶಿಕ್ಷಣ ಬೆಳವಣಿಗೆ ಮತ್ತು ವಿಕಾಸದ ಬಗ್ಗೆ ಸಮಗ್ರ ವ್ಯಾಪ್ತಿಯುಳ್ಳ ಅಧ್ಯಯನ ನಡೆಸಿದ್ದಾರೆ. ಬಹುತೇಕ ಸ್ವರೂಪದಲ್ಲಿ ಸ್ವಯಂಬೋಧಕವಲ್ಲದ ಮತ್ತು ಬೋಧನೆಯ ಉದ್ದೇಶಕ್ಕಾಗಿ ಎಲೆಕ್ಟ್ರಾನಿಕ್ ಮಾಧ್ಯಮವನ್ನು ಯತ್‌ಕಿಂಚಿತ್ ಬಳಸುವ ಇಲ್ಲವೇ ಬಳಸದೇ ಇರುವ ಮುದ್ರಣ ಸಾಮಗ್ರಿಗಳ ಮೇಲೆ ಅಂಚೆಶಿಕ್ಷಣ ಬಹುವಾಗಿ ಅವಲಂಬಿಸಿದೆ. ಆದರೆ, ದೂರಶಿಕ್ಷಣ ಜೀವಂತ ಶಿಕ್ಷಕನ ಹಸ್ತಕ್ಷೇಪವಿಲ್ಲದೆ ಕಾರ್ಯೋನ್ಮುಖವಾಗುವುದು. ಇದು ಮೊದಲೇ ಸಿದ್ಧಪಡಿಸಿದ ಸ್ವಯಂ ಪರಿಪೂರ್ಣವೂ, ಸ್ವಯಂ ಬೋಧಕವೂ ಆದ ಸಾಮಗ್ರಿಗಳನ್ನು ಮತ್ತು ಆಡಿಯೋ ವಿಡಿಯೋ ಮತ್ತು ಕಂಪ್ಯೂಟರ್ ಪ್ರೋಗ್ರಾಂಗಳನ್ನು ಒಳಗೊಂಡ ಬಹು ಮಾಧ್ಯಮಗಳ ಬಳಕೆಯನ್ನು ಅವಲಂಬಿಸಿದೆ. ಈ ಸಂಬಂಧದಲ್ಲಿ ಡೇವಿಡ್ ಸ್ಟ್ಯೂಯರ್ಟ್ (1992, ಪು. 238) ಮತ್ತು ಜಾನ್ ಡೇನಿಯಲ್ (1996) – ಇವರುಗಳ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಬೇಕು. ಪುಸ್ತಕಗಳು, ಕಾರ್ಯಕ್ರಮ ಘಟಕಗಳು ಮತ್ತು ರೇಡಿಯೋ ದೂರದರ್ಶನ ಮತ್ತು ಕಂಪ್ಯೂಟರ್ ಪ್ರೋಗ್ರಾಂಗಳನ್ನು ಒಳಗೊಳ್ಳುವ ‘ಬೋಧನಾ ಸಾಮಗ್ರಿಗಳ ಪರಿಪೂರ್ಣ ಕಂತೆಯೆಂದು ಭಾವಿಸಲಾಗುವ ಸಾಮಗ್ರಿಗಳ ಜೊತೆಗೆ ವಿದ್ಯಾರ್ಥಿ ಬೆಂಬಲ ಸೇವೆಗಳನ್ನು ಒದಗಿಸಬೇಕು ಎಂದು ಸ್ಟ್ಯೂಯರ್ಟ್ ಪ್ರಬಲವಾಗಿ ವಾದಿಸುತ್ತಾನೆ. ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ವಿಶ್ವವಿದ್ಯಾಲಯವೇ ಬೋಧಿಸುತ್ತದೆಯೆ ಹೊರತು ಅಧ್ಯಾಪಕರಲಿ ಎಂಬ ಅಂಶಕ್ಕೆ ಜಾನ್ ಡೇನಿಯಲ್ ಒತ್ತು ನೀಡುತ್ತಾನೆ. ಬೋರ್ಜಿ ಹೋಮ್‌ಬರ್ಗ್ (1992) ಪ್ರಕಾರ ದೂರಶಿಕ್ಷಣ ಸತತವಲ್ಲದ, ಮಾರ್ಗದರ್ಶಿತ, ಬೋಧನಾ ವ್ಯವಸ್ಥೆ ಶ್ರಮದ ವಿಭಜನೆ, ಯಾಂತ್ರೀಕರಣ, ಅಧಿಕ ಸಂಖ್ಯೆಯಲ್ಲಿ ಉತ್ಪಾದನೆ, ಕೇಂದ್ರೀಕರಣ ಮತ್ತು ನಿಯಂತ್ರಗಳ ಮೇಲೆ ಒತ್ತು ನೀಡುವ ಕೈಗಾರಿಕೀಕರಣಗೊಂಡ ಶಿಕ್ಷಣ ವ್ಯವಸ್ಥೆಯ ಘಟಕಗಳನ್ನು ದೂರಶಿಕ್ಷಣವು ಹೊಂದಿದೆ ಎಂದು ಒಟ್ಟೊ ಪೀಟರ್ಸ್ (1983) ವಾದಿಸಿರುವುದನ್ನು, ಕೀಗನ್ (1986) ಎಂಬಾತನ ಪ್ರಕಾರ ದೂರಶಿಕ್ಷಣವು ಆರು ಘಟಕಗಳನ್ನು ಹೊಂದಿದೆ. ಅಧ್ಯಾಪಕ ಮತ್ತು ವಿದ್ಯಾರ್ಥಿಯ ಬೇರ್ಪಡಿಕೆ, ಶೈಕ್ಷಣಿಕ ಮಾಧ್ಯಮಗಳ ಬಳಕೆ, ದ್ವಿಮುಖ ಸಂಪರ್ಕ, ಸ್ವಯಂ ಬೋಧನಾ ಕಲಿಕಾ ಸಾಮಗ್ರಿಗಳು, ಸಾಂದರ್ಭಿಕ ವಿಚಾರಗೋಷ್ಠಿಗಳು ಮತ್ತು ಶಿಕ್ಷಣದ ಔದ್ಯೋಗಿಕೀಕರಣ ಸ್ವರೂಪ. ಸಂಪರ್ಕ ಕಾರ್ಯಕ್ರಮಗಳು ರೂಪಣಾತ್ಮಕ ಅಭ್ಯಾಸಗಳು, ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಶಿಕ್ಷಕನ ಪ್ರತಿಕ್ರಿಯೆ ಮುಂತಾದ ತಂತ್ರಗಳ ಅಳವಡಿಕೆ ಹಾಗೂ ಸಾಂಧರ್ಭಿಕ ವಿಚಾರಗೋಷ್ಠಿಗಳ ಆಯೋಜನೆ ಇವುಗಳ ಮೂಲಕ ದೂರಶಿಕ್ಷಣದಲ್ಲಿ ವಿದ್ಯಾರ್ಥಿ ಮತ್ತು ಸಂಸ್ಥೆಯ ನಡುವಣ ಸಂಪರ್ಕವನ್ನು ಸುಗಮಗೊಳಿಸಲಾಗುತ್ತದೆ.

ಇಂಗ್ಲೆಂಡಿನ ಮುಕ್ತ ವಿಶ್ವವಿದ್ಯಾಲಯದ 1969ರಲ್ಲಿ ನಡೆದ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಅದರ ಸ್ಥಾಪಕ ಕುಲಪತಿಗಳಾಗಿದ್ದ ಲಾರ್ಡ್ ದರ್‌ರವರು ಮುಕ್ತ ವಿಶ್ವವಿದ್ಯಾಲಯವು ಸಾರ್ವಜನಿಕರು, ಸ್ಥಳಗಳು, ವಿಧಾನಗಳು ಮತ್ತು ವಿಚಾರಗಳಿಗೆ ಮುಕ್ತವಾಗಿರುವುದು ಎಂದು ಘೋಷಿಸಿದರು ಎಂಬ ಅಂಶದ ಸ್ಮರಣೆ ಬೋಧಪ್ರದವಾಗುವುದು. ಹತ್ತು ವರ್ಷಗಳ ನಂತರ, 28, ಜುಲೈ 1979ರಲ್ಲಿ ನಡೆದ ಮುಕ್ತಶಾಲೆಯ ಮೊದಲನೆಯ ಸಲಹಾ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿದ್ದ ಅಂದಿನ ಭಾರತದ ಶಿಕ್ಷಣ ಸಚಿವರು ಸಭಾನಾಯಕಂರವರು CBCE ಸ್ಥಾಪಿಸಿರುವ ಮುಕ್ತಶಾಲೆ ಒಂದು ಸಂಸ್ಥೆಗಿಂತ ಹೆಚ್ಚಾಗಿ ಒಂದು ಪರಿಕಲ್ಪನೆಯಾಗಿದೆ ಎಂದು ಕಲ್ಪಿಸಿಕೊಂಡಿದ್ದರು. (ದೇವಲ್, 1986).

**ಮುಕ್ತ ಶಿಕ್ಷಣ:** ಮುಕ್ತಶಿಕ್ಷಣವು ಶೈಕ್ಷಣಿಕ ವ್ಯವಸ್ಥೆಯ ಕಠಿಣತೆಯನ್ನು ತಗ್ಗಿಸುವ ಮತ್ತು ಪ್ರಜ್ಞಾಪೂರ್ವಕವಾಗಿ ಮುಕ್ತತೆ ಮತ್ತು ನಮ್ಯತೆಗಳನ್ನು ಹೆಚ್ಚಿಸುವ ಒಂದು ಸಂರಚನಾತ್ಮಕ ಉಪಕರಣ ಮುಕ್ತಶಿಕ್ಷಣದ ಪ್ರಾರಂಭಿಕ ವರ್ಷಗಳಲ್ಲಿ ಮಾನ್ಯತೆಯ ಸಮಾನತೆಯನ್ನು ಕುರಿತಂತೆ ಕೆಲವು ಅಭ್ಯಂತರಗಳು, ಹಿಂಜರಿಕೆಗಳು ಇದ್ದವು. ಕಠಿಣತೆ ಮತ್ತು ಸಮಾನಸ್ಕಂದರ ನಡುವಿನ ಅನ್ಯೋನ್ಯಕ್ರಿಯೆಯಿಂದ ವಂಚಿತವಾಗುವ ಲಾವಣೆ ಸೂಚಿಸುವ ಮುಕ್ತ ಶಿಕ್ಷಣಕ್ಕೆ ಸಾಂಪ್ರದಾಯಕ ಮುಖಾ–

Digitised by Bharatavani, CIIL

ಮುಖಿ ಸಂಸ್ಥೆಗಳು ಎರಡನೇ ಶ್ರೇಣಿಯನ್ನು ನೀಡಿದವು. ಈಗ ಅಂತಹ ಗ್ರಹಿಕೆಗಳು ಸಂಪೂರ್ಣವಾಗಿ ಇಲ್ಲವಾಗಿದ್ದು ವಿದ್ಯಾರ್ಥಿಪ್ರವೇಶ, ಅರ್ಹತೆ, ಪರೀಕ್ಷೆ, ಕ್ರೆಡಿಟ್‌ಗಳ ವರ್ಗಾವಣೆ ಮತ್ತು ಸಂಕಲನ ಕಲಿಕೆಯ ವಿಷಯವಸ್ತು ಮತ್ತು ಕೋರ್ಸುಗಳ ಮಿಶ್ರಣದಲ್ಲಿ ವಿಸ್ತಾರವಾದ ಆಯ್ಕೆಗಳು ಇತ್ಯಾದಿಗಳಿಗೆ ಅವಕಾಶವನ್ನೀಯುವುದರಿಂದ ಮುಕ್ತಶಿಕ್ಷಣಕ್ಕೆ ಹೆಚ್ಚಿನ ಪ್ರಶಂಸೆಗೆ ಪಾತ್ರವಾಗಿದೆ. ಭಾರತೀಯ ಹಿನ್ನೆಲೆಯಲ್ಲಿ ಎಲ್ಲಾ ಮುಕ್ತ ಸಂಸ್ಥೆಗಳು ದೂರಸ್ಥ ತಂತ್ರಗಳ ಮೂಲಕ ಬೋಧಿಸುವುದರಿಂದ ಮತ್ತು ಮುಕ್ತತೆ ಹಾಗೂ ತಂತ್ರಗಳ ಮೂಲಕ ಬೋಧಿಸುವುದರಿಂದ ಮುಕ್ತ ದೂರ ಕಲಿಕೆ (Open Distance Learning -OPL) ಪದಗುಚ್ಛವನ್ನು ಬಳಸಲಾಗುತ್ತದೆ.

ಪತ್ರವ್ಯವಹಾರದ ಶಿಕ್ಷಣವನ್ನು 1962ರಲ್ಲಿ ಪ್ರಾರಂಭಿಸಿದಾಗ ಇದೊಂದು ಪೂರಕ ವ್ಯವಸ್ಥೆಯಾಗಿತ್ತು; ಕಾರ್ಯಕ್ರಮಗಳು, ಪಠ್ಯಕ್ರಮ, ಪರೀಕ್ಷಾ ವ್ಯವಸ್ಥೆ ಅಥವಾ ಅಧ್ಯಯನದ ವಿಧಾನಗಳಿಗೆ ಸಂಬಂಧಿಸಿದ ನಿಯಮಗಳು ಒಂದೇ ತೆರನಾಗಿದ್ದವು. ಅಂಚೆ ಮೂಲಕ ಶಿಕ್ಷಣ ಒಂದು ಪೂರಕ ಅಂಗವಾಗದ್ದುಕೊಂಡು ಔಪಚಾರಿಕ ವ್ಯವಸ್ಥೆಯನ್ನು ಪ್ರೋತ್ಸಾಹಿಸಿ ಬೆಂಬಿಸಿತು. ಶೈಕ್ಷಣಿಕ ಪರಿದೃಶ್ಯದಲ್ಲಿ ಮುಕ್ತ ಶಿಕ್ಷಣವು ಒಂದು ಪರ್ಯಾಯವಾಗಿ ಪ್ರವೇಶಿಸಿತು. ವಿಭಿನ್ನ ರೀತಿಯಲ್ಲಿ ಅವಲಂಬಿತ ಕಲಿಕಾರ್ಥಿಗಳ ಅವಶ್ಯಕತೆಗಳನ್ನು ಪೂರೈಸಲು, ಅವಶ್ಯಕತೆ–ಆಧಾರಿತ ಹೊಸ ಕೋರ್ಸುಗಳಿಗೆ ಅವಕಾಶ ಕಲ್ಪಿಸಲು ಹಾಗೂ ವಿದ್ಯಾರ್ಥಿ ದಾಖಲಾತಿ, ಅರ್ಹತೆ, ಕೋರ್ಸುಗಳ ಸಂಯೋಜನೆ ಮತ್ತು ಪರೀಕ್ಷೆಗಳನ್ನು ಕುರಿತಂತೆ ನಮ್ಯತೆಗಳನ್ನು ಒದಗಿಸಲು ಇದನ್ನು ಆರಂಭಿಸಲಾಯಿತು. ಹೀಗೆ, ಮುಕ್ತಶಿಕ್ಷಣವು ವಿದ್ಯಾರ್ಥಿ ಸ್ವಾತಂತ್ರ್ಯಕ್ಕೆ ಬದ್ಧವಾಗಿ ನಿಂತಿತು. ಇಂದು ಇದು ಸಾಂಪ್ರದಾಯಿಕ ಆವರಣದೊಳಗಿನ ಶಿಕ್ಷಣದ ಕ್ಷೀಣ ಪ್ರತಿರೂಪವಾಗಿ ಉಳಿದಿಲ್ಲ. ಆವಣರದೊಳಗಿನ ಶಿಕ್ಷಣದ ಅನುಭವ ಮತ್ತು ಕ್ರಿಯಾಶೀಲತೆಗಳನ್ನು ತನ್ನಲ್ಲಿ ಬೆಳೆಸಿಕೊಂಡು ಅಂಚೆ ಮೂಲಕ ಬೋಧಿಸುವ ತನ್ನ ದೋಷಗಳನ್ನು ನಿವಾರಿಸಿಕೊಂಡಿದೆ.

ಮುಕ್ತಶಿಕ್ಷಣದ ಸಂಭಾರತಂತ್ರ (Logistics) ದ ಬಗ್ಗೆ ವಿಮರ್ಶಾತ್ಮಕವಾಗಿ ನೋಡುವುದು ಸೂಕ್ತ. ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಕೆಲವು ಪ್ರವೇಶಾರ್ಹತೆಗಳನ್ನು ಪೂರೈಸುವ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗುತ್ತದೆ. ಮುಕ್ತಶಿಕ್ಷಣದಲ್ಲಿ ಪ್ರವೇಶದ ಅವಶ್ಯಕತೆಗಳು ನಮ್ಯವಾದುವುಗಳು. ಕೆಲವು ವಿಶ್ವವಿದ್ಯಾಲಯಗಳಲ್ಲಿ (ಯು.ಕೆ. ಮುಕ್ತ ವಿಶ್ವವಿದ್ಯಾಲಯ ಮತ್ತು ಯುನಿವರ್ಸಿಟಿ ಆಫ್ ನ್ಯೂ ಇಂಗ್ಲೆಂಡ್, ಆಸ್ಟ್ರೇಲಿಯಾ) ಪ್ರಾಪ್ತವಯಸ್ಕ ಯೋಜನೆಯಡಿಯಲಿ ವಿದ್ಯಾರ್ಥಿಗಳು 21 ವರ್ಷಕ್ಕೆ ಮೇಲ್ಪಟ್ಟವರಾಗಿದ್ದು ಬರೆವಣಿಗೆಯಲ್ಲಿ ಸಮರ್ಥರಾಗಿದ್ದರೆ ಅವರನ್ನು ಕೋರ್ಸಿಗೆ ಸೇರಿಕೊಳ್ಳಲಾಗುತ್ತದೆ. ಮದ್ರಾಸ್ ವಿಶ್ವವಿದ್ಯಾಲಯ, ಅಣ್ಣಾಮಲೈ ವಿಶ್ವವಿದ್ಯಾಲಯ ಮತ್ತು IGNOUಗಳಲ್ಲಿ ಪ್ರಾಪ್ತ ವಯಸ್ಕ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿತ್ತು. ಆದರೆ, ತರುವಾಯ ಕೆಲವು ಕಾರ್ಯವಿಧಾನಗಳಲ್ಲಿ ತೊಡಕು ಉಂಟಾದ್ದರಿಂದ ಈ ನಮ್ಯತೆಗಳನ್ನು ಸಾಕಷ್ಟು ಕಡಿತಗೊಳಿಸಲಾಯಿತು.

ಸಂಪ್ರದಾಯಿಕ ವ್ಯವಸ್ಥೆಗಳು ಆಯ್ಕೆಯನ್ನು ಆಧರಿಸಿದ್ದು ವರ್ಗ ಪರಿಮಿತಿಗಳು ವಿದ್ಯಾರ್ಥಿಗಳ ನಡುವೆ ಉಂಟಾಗುವಂತೆ ಮಾಡಿ ಸಮಾಜದಲ್ಲಿ ಅಂತರ ತರುವಂತಿವೆಯಾದ್ದರಿಂದ ಮುಕ್ತ ವ್ಯವಸ್ಥೆಗಳು ಈ ವ್ಯವಸ್ಥೆಗಿಂತ ಈ ದೃಷ್ಟಿಯಲ್ಲಿ ಉತ್ತಮವಾಗಿವೆ. ಮತ್ತೊಂದು ಕಡೆ, ಮುಕ್ತ ಸಂಸ್ಥೆಗಳು ವಿದ್ಯಾರ್ಥಿಗಳ ಮನೆಬಾಗಿಲ ಬಳಿಯೇ ಶಿಕ್ಷಣವನ್ನು ಕೊಂಡೊಯ್ಯುತ್ತವೆ. ಪೂರ್ಣ ಅವಧಿಯ ವಿದ್ಯಾರ್ಥಿಯಾಗಿ ತರಗತಿಗಳಿಗೆ ನಿಯಮಿತವಾಗಿ ಹಾಜರಾದಾಗ ಮಾತ್ರ ಉತ್ತಮ ಶಿಕ್ಷಣವನ್ನು ಒದಗಿಸಬಹುದು ಎನ್ನುವುದರಲ್ಲಿ ವಿಶ್ವಾಸವಿಡುವುದಲ್ಲವಾದ್ದರಿಂದ ಮುಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಜೀವನದ ಯಾವ ಹಂತದಲ್ಲಾದರೂ ಶಿಕ್ಷಣವನ್ನು ಒದಗಿಸಬಹುದು. ಎನ್ನುವುದರಲ್ಲಿ ವಿಶ್ವಾಸವಿಡುವುದಲ್ಲವಾದ್ದರಿಂದ ಮುಕ್ತಶಿಕ್ಷಣ ವ್ಯವಸ್ಥೆಯಲ್ಲಿ ಜೀವನದ ಯಾವ ಹಂತದಲ್ಲಾದರೂ ಶಿಕ್ಷಣವನ್ನು ಒದಗಿಸಬಹುದು. ಅನುಭವ ಪಡೆದ ನಂತರ ಶಿಕ್ಷಣವು ಹೆಚ್ಚು ಅರ್ಥಪೂರ್ಣವೂ, ಪ್ರಭಾವಕಾರಿಯೂ ಆಗುವುದು ಎಂಬ ವಿಚಾರವು ಮುಕ್ತ ಶಿಕ್ಷಣ ವ್ಯವಸ್ಥೆಯ ಆಧಾರಸ್ತಂಭಗಳಲ್ಲಿ ಒಂದಾಗಿದೆ. ಸಾಂಪ್ರದಾಯಿಕ ಶಿಕ್ಷಣದಲ್ಲಿ ಶಿಕ್ಷಣ ಪೂರ್ಣಕಾಲಿಕ ಚಟುವಟಿಕೆಯಾದರೆ ಮುಕ್ತ ವ್ಯವಸ್ಥೆಯಲ್ಲಿ ಶಿಕ್ಷಣ ಮತ್ತು ಕೆಲಸ ಜೊತೆಜೊತೆಗೆ ನಡೆಯಬಹುದು. ಮತ್ತು ಶಿಕ್ಷಣ ಜೀವನ ಪರ್ಯಂತ ವಿಸ್ತರಿಸಿರುವುದು.1 ಈ ದೃಷ್ಟಿಕೋನದಿಂದ ಮುಕ್ತ ಶಿಕ್ಷಣವು ಕಲಿಯುವ ಸಮಾಜದ (Learning Society) ಉದಯಕ್ಕೆ ಸಾಂಪ್ರದಾಯಿಕ ವ್ಯವಸ್ಥೆಗಳಿಗಿಂತಲೂ ಅಧಿಕ ಕೊಡುಗೆಯನ್ನು ನೀಡುವುದು ಎಂದು ತೋರುತ್ತದೆ.

**ಸದ್ಯದ ಸ್ಥಾನಮಾನ:**

ರಾಜಕೀಯವಾದ ಇಚ್ಛೆ, ಶೈಕ್ಷಣಿಕ ಪ್ರಯತ್ನ ಮತ್ತು ಅಧಿಕಾರಶಾಹಿಯ ಬೆಂಬಲಗಳು ಇದ್ದಾಗ ಮಾತ್ರ ಸಂರಚನಾತ್ಮಕ ನಾವೀನ್ಯತೆಗಳು ಸಫಲವಾಗುವುವು. ಅದೃಷ್ಟವಶಾತ್, 1979ರಲ್ಲಿ ಶಾಲಾಮಟ್ಟದಲ್ಲಿ ಮತ್ತು 1982ರಲ್ಲಿ ವಿಶ್ವವಿದ್ಯಾಲಯದ ಮಟ್ಟದಲ್ಲಿ ಮುಕ್ತ ಕಲಿಕೆ ಭಾರತದಲ್ಲಿ ಪ್ರಾರಂಭವಾದಾಗ, ಈ ಆಂದೋಲನ ರಾಜಕೀಯ ಇಚ್ಛೆ ಮತ್ತು ಅಧಿಕಾರಶಾಹಿಯ ಬೆಂಬಲವನ್ನು ಪರ್ಯಾಪ್ತ ಮಟ್ಟದಲ್ಲಿ ಪಡೆಯಿತು. ಶಾಲೆ ಮತ್ತು ವಿಶ್ವವಿದ್ಯಾಲಯಗಳ ಮಟ್ಟದಿಂದ ಪೂರ್ಣಪ್ರಮಾಣದ ಶೈಕ್ಷಣಿಕ ಬೆಂಬಲ ದೊರಕಿತು. ತನ್ನ ಪ್ರಾರಂಭಿಕ ವರ್ಷಗಳ ಅಸ್ತಿತ್ವದಲ್ಲಿ ಮುಕ್ತ ಶಾಲೆ ಅಂತರರಾಷ್ಟ್ರೀಯ ಯಶೋಗಾಥೆಯಾಯಿತು. (ದೇವಲ್, 1986) IGNOU ವಿನ ಸಾಧನೆಗಳು ಅದನ್ನು ಮಹಾವಿಶ್ವವಿದ್ಯಾಲಯವನ್ನಾಗಿಸಿತು. ಹಾಗೂ ಶ್ರೇಷ್ಠತೆಯ ಸಂಸ್ಥೆಯನ್ನಾಗಿ ಮಾಡಿತು (ಸಿಂಗ್, 1992), ಅಲ್ಲದೆ, CBSE ಯ ಪ್ರಾರಂಭಿಕ ಪ್ರಾಯೋಜನೆಯಾಗಿದ್ದ ಮುಕ್ತಶಾಲೆ 1989ರಲ್ಲಿ ರಾಷ್ಟ್ರೀಯ ಮುಕ್ತಶಾಲೆಯಾಗಿ ಉನ್ನತಿ ಹೊಂದಿತು. ಇದರ ವಿವಿಧ ಚಟುವಟಿಕೆಗಳನ್ನು, ಇದು ಸಿದ್ಧಪಡಿಸಿರುವ ಪ್ರಗತಿಪರ ಕೋರ್ಸುಗಳನ್ನು ಮತ್ತು ಶ್ರೇಷ್ಠ ಗುಣಮಟ್ಟದ ಬೋಧನಾ ಸಾಮಗ್ರಿಗಳನ್ನು ಪರಿಗಣಿಸಿ 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ರಾಷ್ಟ್ರೀಯ ಮುಕ್ತಶಾಲೆಗೆ 'ಶ್ರೇಷ್ಠ ಸಂಸ್ಥೆ'ಯ ಸ್ಥಾನಮಾನವನ್ನು

Digitised by Bharatavani, CIIL

ಪ್ರದಾನಮಾಡಿದೆ. ಇದು SAARC ದೇಶಗಳಲ್ಲಿ ಮೂಲಭೂತ ಶಿಕ್ಷಣವನ್ನು ಪ್ರೋತ್ಸಾಹಿಸುವಲ್ಲಿ ನೇತೃತ್ವವನ್ನು ವಹಿಸಿದೆಯಲ್ಲದೆ (ಗೋಪ ಬಿಸ್ವಾಸ್, 1994) ಕೆಲವು ಇ–9 ದೇಶದಲ್ಲಿನ ಮುಕ್ತಶಾಲಾ ಶಿಕ್ಷಣದ ಯೋಜನೆ ಮತ್ತು ನಿರ್ವಹಣೆಯ ಕಡೆ ಗಮನಹರಿಸಿದೆ. (ಮಿತ್ರ–1995). ಆಂಧ್ರಪ್ರದೇಶ ವಿಶ್ವವಿದ್ಯಾಲಯವು ಇತರ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳಿಗೆ ದಾರಿಮಾಡಿಕೊಟ್ಟಿತು. ಮುಕ್ತ ಕಲಿಕಾ ವ್ಯವಸ್ಥೆಯು ಸುಮಾರು ಎರಡು ದಶಕಗಳಷ್ಟು ಹಳೆಯದಾಗಿರುವ ಈ ವೇಳೆಯಲ್ಲಿ ಭಾರತವು ಅಂಚೆ ಮೂಲಕ ಕೋರ್ಸ್‌ಗಳನ್ನು ನಡೆಸುತ್ತಿರುವ 10 ಕಾರ್ಯೋನ್ಮುಖ ಮುಕ್ತಶಾಲೆಗಳನ್ನು 10 ವಿಶ್ವವಿದ್ಯಾಲಯಗಳನ್ನು ಮತ್ತು ಅಂಚೆ ಮೂಲಕ ಕೋರ್ಸ್‌ಗಳನ್ನು ನೀಡುವ 62 ವಿಶ್ವವಿದ್ಯಾಲಯಗಳನ್ನು ಹೊಂದಿದೆ. ಆದಾಗ್ಯೂ, ಈ ಸಂಸ್ಥೆಗಳು ತಮ್ಮ ನಡುವೆ ಅಡ್ಡವಾದ, ಲಂಬವಾದ ಸಂಪರ್ಕಗಳನ್ನು ವಿನ್ಯಾಸಗೊಳಿಸಿದಲ್ಲಿ ಮುಕ್ತ ಕಲಿಕಾ ವ್ಯವಸ್ಥೆ ಮತ್ತು ಅದರ ಕಾರ್ಯಕ್ರಮಗಳು ಹೆಚ್ಚು ಉತ್ಪಾದಕವಾಗುವುವು. ಈ ದಿಶೆಯಲ್ಲಿ ಬಹಳಷ್ಟು ಸಾಧಿಸುವುದಿದೆ.

ಕಳೆದ ಕೆಲವು ವರ್ಷಗಳಿಂದ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಸಫಲ ಬಳಕೆಯಿಂದಾಗಿ ಮುಕ್ತ ಕಲಿಕಾ ವ್ಯವಸ್ಥೆ ಅಧಿಕ ಗೌರವ ಮತ್ತು ಪ್ರಶಂಸೆಗೆ ಪಾತ್ರವಾಗಿದೆ. ಮುಕ್ತ ಕಲಿಕೆಯ ವಿಕಾಸದಲ್ಲಿ ಇಲೆಕ್ಟ್ರಾನಿಕ್ ಮಾಧ್ಯಮವನ್ನು ಅಧಿಕಾಧಿಕವಾಗಿ ಬಳಸಲಾಗುತ್ತಿದೆ. ಸದ್ಯದಲ್ಲಿ, ಜ್ಞಾನದರ್ಶನ ಮತ್ತು ಜ್ಞಾನವಾಣಿ IGNOU, NCERT ಮತ್ತು ರಾಷ್ಟ್ರೀಯ ಮುಕ್ತ ಶಾಲೆಗಳ ಶೈಕ್ಷಣಿಕ ಕಾರ್ಯಕ್ರಮಗಳನ್ನು ದಿನಂಪ್ರತಿ ಸುಮಾರು 18 ಗಂಟೆಗಳ ಕಾಲ ಒದಗಿಸುತ್ತವೆ. ಯು.ಜಿ.ಸಿ. ದೇಶದಾದ್ಯಂತದ ತರಗತಿ (Country wide classrom) ಕಾರ್ಯಕ್ರಮಗಳು. ದೇಶದಾದ್ಯಂತ ವಿಶ್ವವಿದ್ಯಾಲಯ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ದೂರದರ್ಶನ ಪಾಠಗಳನ್ನು ಪ್ರಸ್ತುತ ಪಡಿಸುತ್ತದೆ. ಅಲ್ಲದೆ ವಿದ್ಯಾರ್ಥಿಯ ಸಾಮರ್ಥ್ಯದ ಮಿತಿಯೊಳಗೆ ತಂತ್ರಜ್ಞಾನವನ್ನು ಲಭ್ಯವಾಗಿಸುವಂತೆ ಒದಗಿಸಲಾಗಿದೆ ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು (ಬೇಟ್ಸ್, 1995).

ಅಂತರ್ಜಾಲದ ಕಾರಣದಿಂದ, ಮುಕ್ತ ಶಿಕ್ಷಣದಲ್ಲಿನ ಮಾಹಿತಿ ಬದಲಾವಣೆ ಹೊಂದುತ್ತಿದೆ. ಪುಸ್ತಕಗಳು ಬದಲಾಗಿ ಡಿಸ್ಕ್‌ಗಳು ವೀಡಿಯೋ ಡಿಸ್ಕ್‌ಗಳು ಅಥವಾ ಸಿ.ಡಿ. ರೋಮ್ ಮುಂತಾದ ಪರಿಮಿತ ಸಾಧನೆಗಳಿಗೆ ಬದಲಾಗಿ ಸದಾ ಬದಲಾಗುತ್ತಿರುವ ಸದಾ ವಿಸ್ತಾರಗೊಳ್ಳುತ್ತಿರುವ ಮಾಹಿತಿ ವ್ಯವಸ್ಥೆಯನ್ನು ಅಂತರ್ಜಾಲದ ಮೂಲಕ ತಲುಪಬಹುದಾಗಿದೆ. (ಸೀಗೆಲ್ ಮತ್ತು ಸೌಸಾ, 1994 ಪು.22). ಅಂತರ್ಜಾಲವು ವರ್ಲ್‌ವೈಡ್‌ವೆಬ್ ಮೂಲಕ ವಿದ್ಯಾರ್ಥಿಯು ಓದಲು ಅನುವು ಮಾಡಿಕೊಡುತ್ತದೆ. ಸಹ ವಿದ್ಯಾರ್ಥಿಗಳೊಡನೆ ನೇರವಾಗಿ ವ್ಯವಹರಿಸಲು, ಚರ್ಚಾಗುಂಪುಗಳಲ್ಲಿ ಭಾಗವಹಿಸಲು, ಬೋಧಕರಿಗೆ ಪ್ರಶ್ನೆಗಳನ್ನು ಇ–ಮೇಲ್ ಮಾಡಲು ಮತ್ತು ಎಲೆಕ್ಟ್ರಾನಿಕ್ ರೂಪದಲ್ಲಿ ಅಭ್ಯಾಸಗಳನ್ನು ಸಲ್ಲಿಸಲು ಇದು ವಿದ್ಯಾರ್ಥಿಗಳಿಗೆ ಸಹಾಯ ನೀಡುತ್ತದೆ. ಅಂತರ್ಜಾಲವು ಪ್ರತ್ಯೇಕತೆಯ (Isolation) ಸಮಸ್ಯೆಯನ್ನು ಸಹ ಬಗೆಹರಿಸುತ್ತದೆ. ವಿಶ್ವದ ಯಾವುದೇ ಭಾಗದಲ್ಲಿ ಕೋರ್ಸುಗಳನ್ನು ಉಪಯೋಗಿಸಿಕೊಳ್ಳಬಹುದು. ಆದ್ದರಿಂದ, ಅಂತರದ ನಿರಂಕುಶತೆಯನ್ನು ಅಂತರ್ಜಾಲ ಮೀರಿ ನಿಂತಿದೆ. ನಿಯೋಜಿತ ಕಾರ್ಯಗಳನ್ನು ಮತ್ತು ಅವುಗಳ ತಿದ್ದುಪಡಿಯನ್ನು ಇಲೆಕ್ಟ್ರಾನಿಕ್ ರೂಪದಲ್ಲಿ ಪರಿಚಯಿಸಬಹುದಾದ ಸಮಯ ನಮ್ಮ ದೇಶದಲ್ಲಿ ಬಹಳ ದೂರವಿಲ್ಲ. ಇಲೆಕ್ಟ್ರಾನಿಕ್ ಸ್ವರೂಪದ ನಿಯೋಜಿತ ಕಾರ್ಯಗಳು ವಿದ್ಯಾರ್ಥಿಯ ಅಧ್ಯಯನದ ಒಟ್ಟು ವೇಳೆಯನ್ನು ಕಡಿಮೆಯಾಗಿಸುತ್ತದೆ. ವಿದ್ಯಾರ್ಥಿಯು ನಿಯೋಜಿಕಾರ್ಯಗಳನ್ನು ಎಲೆಕ್ಟ್ರಾನಿಕ್ ಸ್ವರೂಪದಲ್ಲಿ ಸಿದ್ಧಪಡಿಸಿ ಬೋಧಕರಿಗೆ ಕಳಿಸಿದಾಗ, ಬೋಧಕನು ಅದನ್ನು ಕುರಿತು ಟಿಪ್ಪಣಿ ಮಾಡಿ ಅದನ್ನು ಎಲೆಕ್ಟ್ರಾನಿಕ್ ಮಾಧ್ಯಮದಲ್ಲೇ ಪತ್ರಿಕೆಯ ಮೇಲೆ ಗುರುತುಮಾಡಿ ವಿದ್ಯಾರ್ಥಿಗಳಿಗೆ ಹಿಂತಿರುಗಿಸಬಹುದು. ಭಾರತದಲ್ಲಿ 2008ರ ವೇಳೆಗೆ ಒಂದು ಪಕ್ವ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನದ ಸಂಪರ್ಕ ದೇಶದ ಪ್ರತಿಯೊಂದು ಭಾಗದ ನಡುವೆ ಏರ್ಪಟ್ಟರೆ ಎಲೆಕ್ಟ್ರಾನಿಕ್ ನಿಯೋಜಿತ ಕಾರ್ಯ ಸಾಧಾರಣ ಲಕ್ಷಣವಾಗುವುದು.

ಈಗ ಮುಕ್ತ ಸಂಸ್ಥೆಗಳು ತಮ್ಮದೇ ಆದ ವೆಬ್‌ತಾಣಗಳನ್ನು ಸೃಷ್ಟಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿದ್ದು ಎಲೆಕ್ಟ್ರಾನಿಕ್ ಸಂಪರ್ಕ ಮತ್ತು ಜಾಲಗಳ ಮೂಲಕ ಪರಸ್ಪರ ಸಂಪರ್ಕದಲ್ಲಿರುವ ಯೋಜನೆಗಳನ್ನು ಹೊಂದಿವೆ. ಮುದ್ರಿತ ಬೋಧನಾ ಸಾಮಗ್ರಿ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುವುದು ಎಂದು ಇದರ ಅರ್ಥವಲ್ಲ. ದೂರಕಲಿಕೆಯಲ್ಲಿ ಸ್ವಯಂ–ಬೋಧನಾ ಮಾಡ್ಯೂಲ್‌ಗಳು ತಮ್ಮ ಕೇಂದ್ರ ಸ್ಥಾನದೊಂದಿಗೆ ಮುಂದುವರೆಯುವುವು. ಇದೇ ರೀತಿ, ಶಿಕ್ಷಕರ ಪಾತ್ರ, ವಿಶೇಷಃ ಸಂಪರ್ಕ ಕಾರ್ಯಕ್ರಮಗಳಲ್ಲಿ, ಕುಂಠಿತವಾಗುವುದಿಲ್ಲ.

**ಮಿಶ್ರ ಮಾಧ್ಯಮದ ಪರವಾಗಿ:** ಭಾರತದ ಅತ್ಯುಚ್ಚ ಸ್ತರದ ನಿರ್ಧಾರಣಾ ಅಂಗವಾದ ಶಿಕ್ಷಣದ ಕೇಂದ್ರ ಸಲಹಾ ಸಮಿತಿ (CABE) ಪ್ರತಿಯೊಂದು ರಾಜ್ಯದಲ್ಲಿಯೂ ಕನಿಷ್ಠ ಒಂದರಂತೆ ಮುಕ್ತಶಾಲೆಯ ಮತ್ತು ಮುಕ್ತ ವಿಶ್ವವಿದ್ಯಾಲಯದ ಸಂಖ್ಯೆಯ ಹೆಚ್ಚಳಕ್ಕೆ ಶಿಫಾರಸ್ಸು ಮಾಡಿದೆ. ಬಹುಪಾಲು ಎಲ್ಲಾ ಸಂಸ್ಥೆಗಳನ್ನು ಮಿಶ್ರ ಮಾಧ್ಯಮವುಳ್ಳ ಶಾಲೆಗಳನ್ನಾಗಿ ಮಾಡದಿದ್ದಲ್ಲಿ ಈ ಸಲಹೆ ಪರ್ಯಾಪ್ತವೆನಿಸುವುದಿಲ್ಲ. ಆವರಣದೊಳಗಿನ ಶಿಕ್ಷಣ ಮತ್ತು ದೂರಶಿಕ್ಷಣಗಳನ್ನು ಎರಡು ಸಂಬಂಧಪಡದ ಪರ್ಯಾಯಗಳೆಂದು ಪರಿಗಣಿಸುವುದು ತಪ್ಪು. ಅವು ಒಂದೇ ಘಟಕದ ಅಂಶ ಭಾಗಗಳಂತಿವೆ. ಶಿಕ್ಷಣವನ್ನು ಹಲವು ಉಪವ್ಯವಸ್ಥೆಗಳನ್ನು ಹೊಂದಿರುವ ಒಂದು 'ವ್ಯವಸ್ಥೆ' ಯಂತೆ ಕಾಣಬೇಕು ಹಾಗೂ ಒಂದು ಉಪವ್ಯವಸ್ಥೆ ಇತರ ಉಪ–ವ್ಯವಸ್ಥೆಗಳೊಂದಿಗೆ ಸಂಪರ್ಕವನ್ನು ಹೊಂದಿರಬೇಕು. ಆದ್ದರಿಂದ, ಆವರಣದೊಳಗಿನ ಮತ್ತು ದೂರ ಶಿಕ್ಷಣಗಳು. ಒಂದಕ್ಕೊಂದು ಸಂಪೂರಕವಾಗಿರಬೇಕು. ಇಪ್ಪತ್ತೊಂದನೆ ಶತಮಾನದ ಶಿಕ್ಷಣದ ಅಂತರರಾಷ್ಟ್ರೀಯ ಆಯೋಗದ ಈ ವಾದವನ್ನು ಬೆಂಬಲಿಸುತ್ತದೆ. 'ಕಲಿಕೆ ಆಂತರ್ಯದ ಸಂಪತ್ತು' (ಯುನೆಸ್ಕೊ, 1996, ಪು.134) ಸುಸ್ಪಷ್ಟವಾಗಿ ಹೀಗೆ ಉಲ್ಲೇಖಿಸಿದೆ, 'ಪ್ರತಿಯೊಂದು

Digitised by Bharatavani, CIIL

ವಿಶ್ವವಿದ್ಯಾಲಯವು ಮುಕ್ತ ವಿಶ್ವವಿದ್ಯಾಲಯವಾಗಿ ವಿವಿಧ ಕಾಲದಲ್ಲಿ ದೂರ ಕಲಿಕೆಯ ಸಾಧ್ಯತೆಗಳನ್ನು ಒದಗಿಸಬೇಕು. ಉನ್ನತ ಶಿಕ್ಷಣ ಸ್ತರದಲ್ಲಿ ಅಧ್ಯಯನ ಕೈಗೊಳ್ಳುತ್ತಿರುವವರಿಗೆ ಮಾಧ್ಯಮಗಳು, ಅಂಚೆ ಮೂಲಕದ ಕಾರ್ಯಕ್ರಮಗಳು, ಕಂಪ್ಯೂಟರ್, ಸಂಪರ್ಕತಂತ್ರಜ್ಞಾನ ಮತ್ತು ವೈಯಕ್ತಿಕ ಸಂಪರ್ಕ – ಇವುಗಳ ವಿವೇಕಯುತ ಮಿಶ್ರಣವು ಕಡಿಮೆಬೆಲೆಯಲ್ಲಿ ಆಯ್ಕೆಗಳನ್ನು ವಿಸ್ತಾರಗೊಳಿಸಬಲ್ಲದು ಎಂಬುದನ್ನು ದೂರಬೋಧನೆಯಲ್ಲಿನ ಅನುಭವ ತೋರಿಸಿಕೊಟ್ಟಿದೆ. ಈ ವಾದವನ್ನು ಸಮರ್ಥಿಸಲು ನಾಲ್ಕು ಕಾರಣಗಳಿವೆ.

**ವಿಸ್ತೃತ ಲಭ್ಯತೆ:** "ಎಲ್ಲರಿಗೂ" ಎಂಬುದನ್ನು ಸಾಕಾರಗೊಳಿಸಬೇಕಾದರೆ ಆವರಣದೊಳಗಿನ ಮತ್ತು ದೂರಶಿಕ್ಷಣದ ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಪೂರೈಸುವ ಸಂಸ್ಥೆಗಳು ಇರಬೇಕು. "ಸರ್ವರಿಗೂ ಶಿಕ್ಷಣದ"ದ ಮತ್ತು 'ಸರ್ವಶಿಕ್ಷಾ ಅಭಿಯಾನ'ದ ಗುರಿಯನ್ನು ಸಾಧಿಸಲು ವಿದ್ಯಾರ್ಥಿಗಳ ಮನೆಬಾಗಿಲಿಗೆ ಶಿಕ್ಷಣವನ್ನು ಕೊಂಡೊಯ್ಯುವ ನೂರಾರು ಸಂಸ್ಥೆಗಳಿದ್ದಲ್ಲಿ ಮಾತ್ರ ಸಾಧ್ಯವಾಗುವುದು. ಮಿಶ್ರ ಮಾಧ್ಯಮ ಸಂಸ್ಥೆಗಳು ಈ ಕನಸನ್ನು ನನಸಾಗಿಸಬಲ್ಲವು.

**ಉಳಿಸಿ ಬೆಳೆಸುವಿಕೆ:** ಏಕ ಮಧ್ಯಮ ಮುಕ್ತ ವಿಶ್ವವಿದ್ಯಾಲಯಗಳ ಹಿನ್ನೆಲೆಯಲ್ಲಿ ದೂರಸ್ಥ ಬೋಧನಾ ವಿಶ್ವವಿದ್ಯಾಲಯಗಳ ನಡುವೆ ತೌಲನಿಕ ದೂರಸ್ಥ ಬೋಧನಾ ವಿಶ್ವವಿದ್ಯಾಲಯಗಳ ನಡುವೆ ತೌಲನಿಕ ದೋಷಯುಕ್ತತೆ ಕಂಡುಬರುವುದು. (ರಂಬಲ್, 1986, 199). ರಾಷ್ಟ್ರವು ಏಕಮಾಧ್ಯಮ ಸಂಸ್ಥೆಗೆ ಅಪಾರ ಧನಸಂಪನ್ಮೂಲಗಳನ್ನು ಒದಗಿಸಲು ಸಾಧ್ಯವಿಲ್ಲ. ಹೀಗಾಗಿ, ಏಕ–ಮಾಧ್ಯಮ ಮುಕ್ತ ಸಂಸ್ಥೆಗಳು ಹಲವಾರು ವರ್ಷಗಳು ಉಳಿದು ಬೆಳೆಯಲಾರವು. ದೆಹಲಿಯಲ್ಲಿ ಮೊದಲನೆಯ ಮುಕ್ತಶಾಲೆ 1979ರಲ್ಲಿ ಪ್ರಾರಂಭವಾಯಿತು. 2000ದ ವೇಳೆಗೆ ಹನ್ನೆರಡಕ್ಕಿಂತಲೂ ಕಡಿಮೆ ಸಂಖ್ಯೆಯ ಮುಕ್ತಶಾಲೆಗಳು ವಿಭಿನ್ನ ಕಾರ್ಯಕ್ರಮತೆಯೊಂದಿಗೆ ಕಾರ್ಯೋನ್ಮುಖವಾಗಿರುವುದನ್ನು ಇಂದು ನಾವು ಕಾಣುತ್ತಿರುವೆವು.

**ಬೋಧನಾ ಸಾಮಗ್ರಿಗಳ ವಿಸ್ತೃತ ಬಳಕೆ:** ಮಿಶ್ರ ಮಾಧ್ಯಮ ವಿಧಾನವು ಬೋಧನಾ ಸಾಮಗ್ರಿಗಳ ಅಧಿಕ ಬಳಕೆಯನ್ನು ಸಾಧ್ಯವಾಗಿಸುವುದು ಇದರ ಹಲವು ಉಪಯೋಗಗಳಲ್ಲಿ ಒಂದು. ದೂರಸ್ಥ ಕಲಿಕಾರ್ಥಿಗಳಿಗಾಗಿ ಸಿದ್ಧಪಡಿಸಲಾದ ಸಾಮಗ್ರಿಗಳು ಹಲವು ಹಂತಗಳನ್ನು ದಾಟಿ ಮುಂದುವರೆಯುವುದರಿಂದ ಗುಣಾತ್ಮಕ ಉತ್ಪಾದನೆಯನ್ನು ಒದಗಿಸುವುದು. ಈ ಸಾಮಗ್ರಿಗಳನ್ನು ಅನ್ಯೋನ್ಯಕ್ರಿಯಾತ್ಮಕತೆ ಮತ್ತು ಹಿನ್ನುಣಿಕೆಗಳ ತತ್ವಗಳನ್ನು ಒಳಗೊಳ್ಳುವಂತೆ ಸ್ವಯಂ–ಕಲಿಕೆಯ ಶೈಲಿಯಲ್ಲಿ ಬರೆಯಲಾಗುವುದು. ಸಂಸ್ಥೆಗಳು ಮುದ್ರಿತ ಸಾಮಗ್ರಿ, ಆಡಿಯೋ ಕ್ಯಾಸೆಟ್, ಟಿವಿ ಪ್ರಸಾರ ಮತ್ತು ಅಧ್ಯಯನ ಮಾರ್ಗದರ್ಶಿಗಳನ್ನು ಒಳಗೊಳ್ಳುವ ಬಹುಮಾಧ್ಯಮ ಪ್ಯಾಕೇಜ್‌ಗಳನ್ನೂ ಸಿದ್ಧಪಡಿಸುವುವು. ಈ ಬಹುಮಾರ್ಗವುಳ್ಳ ಉಪಕ್ರಮವು ವಿಕಾಸದ ಅವಿಭಾಜ್ಯ ಅಂಗವಾಗಿರುವ ರಚನೆಯ ಪರೀಕ್ಷೆಯನ್ನು ಕಠಿಣ ರೀತಿಯಲ್ಲಿ ಕೈಗೊಂಡು ಗುಣಮಟ್ಟದ ಉತ್ಪಾದನೆಯನ್ನು ಖಚಿತಪಡಿಸಿಕೊಳ್ಳಲಾಗುವುದು.

**ವಿದ್ಯಾರ್ಥಿ ಸ್ವಾತಂತ್ರ್ಯಕ್ಕೆ ಪ್ರೋತ್ಸಾಹನ:** ಮಿಶ್ರಮಾಧ್ಯಮದ ಶಾಲಾ ವ್ಯವಸ್ಥೆ ವಿದ್ಯಾರ್ಥಿಗಳಿಗೆ ಅವರು ಇಚ್ಛಿಸಿದ ವಿಧದ ಅಧ್ಯಯನಕ್ಕೆ ಸ್ವಾತಂತ್ರ್ಯವನ್ನೀಯುವುದು. ಕೆಲವು ವಿದ್ಯಾರ್ಥಿಗಳು ಕೆಲವು ವಿಷಯಗಳಿಗೆ ಆವಣರದೊಳಗಿನ ಶಾಲೆಗಳಿಗೆ ಸೇರಲು ಇಚ್ಛಿಸಿ ಮತ್ತಿತರ ವಿಷಯಗಳಿಗೆ ದೂರ ಮುಕ್ತಶಾಲೆಗಳನ್ನು ಬಯಸಬಹುದು. ಈ ನಮ್ಯತೆಯ ಹಲವು ಬಾಲಕಿ ಅಭ್ಯರ್ಥಿಗಳನ್ನು ಶಿಕ್ಷಣ ಪಡೆಯಲು ಹಿಂದಿರುಗಿ ಬರುವಂತೆ ಪ್ರೇರೇಪಿಸುವುದು. ಈ ಸೌಲಭ್ಯ ಬಾಲಕಿಯರ ದಾಖಲಾತಿಯಲ್ಲಿ ಅಗಾಧ ಹೆಚ್ಚಳವನ್ನು ತರುವುದು. ಮತ್ತೊಂದು ದೃಷ್ಟಿಯಿಂದ ನೋಡಿದಾಗ, ಹೆಚ್ಚಿನ ಸಂಖ್ಯೆಯ ಶಾಲೆಗಳಲ್ಲಿ ಮುಕ್ತಶಿಕ್ಷಣವನ್ನು ಪ್ರೋತ್ಸಾಹಿಸುವುದರಿಂದ ಗುರಿಯ ನಿಶ್ಚಯ, ಕಲಿಕಾ ಸಂಪನ್ಮೂಲಗಳ ಸ್ವಯಂ–ಮೌಲ್ಯಮಾಪನ ಇತ್ಯಾದಿಗಳನ್ನು ಒಳಗೊಳ್ಳುವ ಸ್ವಯಂ–ಕಲಿಕೆಯ ತಂತ್ರಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಾಧ್ಯವಾಗುವುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಸಂಜ್ಞಾನಾತ್ಮಕ ಕೌಶಲಗಳಲ್ಲಿ ಬಹಳ ಮುಖ್ಯವಾದ ಸ್ವಯಂ ನಿರ್ದೇಶನದ ಒಲವನ್ನು ಬೆಳೆಸುವುದು.

**ದೂರಶಿಕ್ಷಣ ಪರಿಷತ್ತು:** 'IGNOU ವಿನ ಶಾಸನಬದ್ಧ ಅಂಗವಾದ ದೂರಶಿಕ್ಷಣ ಪರಿಷತ್ತು (Distance Education Council, DEC) ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳ ಜಾಲವನ್ನು ನಿರ್ಮಿಸಲು ಕ್ರಮಗಳನ್ನು ಕೈಗೊಳ್ಳುವುದು' ಮತ್ತು ವಿದ್ಯಾರ್ಥಿಗಳ ಸಂಚಲನೆಯನ್ನು ಸುಲಭಗೊಳಿಸುವಂಥ ಮುಕ್ತ ವಿಶ್ವವಿದ್ಯಾಲಯಗಳ ಕಾರ್ಯಕ್ರಮಗಳಿಂದಾಗಿ ಒಂದು ವಿನ್ಯಾಸ ಹಾಗೂ ಸಂರಚನೆಯನ್ನು ವಿಕಾಸಗೊಳಿಸುವುದು ಎಂದು ಹೊಸ ಶಿಕ್ಷಣ ನೀತಿಯ (1986) ಕ್ರಿಯಾ ಯೋಜನೆ (POA) ತರಲಾಗಿದೆ. ದೂರಸ್ಥ ಶಿಕ್ಷಣದ ಉಸ್ತುವಾರಿ ಮಾಡುವ ದೂರಶಿಕ್ಷಣ ಪರಿಷತ್ತನ್ನು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು ಸ್ಥಾಪಿಸಿದೆ. ಆದಾಗ್ಯೂ, ವರ್ತಮಾನದಲ್ಲಿ DECಯ ವ್ಯಾಪ್ತಿ ವಿಶ್ವವಿದ್ಯಾಲಯದ ಶಿಕ್ಷಣ ಮಾತ್ರವಾಗಿದೆ. ಮೊದಲ ಹಂತದಲ್ಲಿ ಇದು ಮುಕ್ತವಿಶ್ವವಿದ್ಯಾಲಯಗಳಿಗೆ ಅಭಿವೃದ್ಧಿ ಮತ್ತು ಕಾರ್ಯಕ್ರಮ ಇವೆರಡೂ ಉದ್ದೇಶಗಳಿಗೆಂದು ಧನಸಹಾಯವನ್ನಿತ್ತಿದೆ. ಇದರ ಎರಡನೇ ಹಂತದಲ್ಲಿ, 2000 ಇಸವಿಯಿಂದ ಅಂಚೆ ಮೂಲಕ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ಅಡಿಯಲ್ಲಿ ತರಬೇತಿ, ಸ್ವಯಂ–ಬೋಧನಾ ಸಾಮಗ್ರಿಗಳ ಸಿದ್ಧತೆ ಮತ್ತು ಮಾಧ್ಯಮಗಳ ಕಾರ್ಯಕ್ರಮಗಳ ನಿರ್ಮಾಣಕ್ಕಾಗಿ ಧನಸಹಾಯ ನೀಡಲು ಆರಂಭಿಸಿದೆ. ಶಾಲಾ ಮಟ್ಟದಲ್ಲಿ ರಾಷ್ಟ್ರೀಯ ಮುಕ್ತಶಾಲೆಯು ಮುಕ್ತಶಾಲೆಗಳ ಒಕ್ಕೂಟವೊಂದನ್ನು ರಚಿಸಿದ್ದು ಈ ಒಕ್ಕೂಟದಲ್ಲಿ ರಾಷ್ಟ್ರೀಯ ಮುಕ್ತಶಾಲೆಯು ವೇಗವರ್ಧಕದ ಪಾತ್ರ ವಹಿಸುತ್ತಿದೆ. ಸದ್ಯದಲ್ಲಿ ಈ ಒಕ್ಕೂಟದ ಸಚಿವಾಲಯವು ರಾಷ್ಟ್ರೀಯ ಮುಕ್ತಶಾಲೆಯಕಲ್ಲಿ ಇದೆ ಹಾಗೂ ಇದು ರಾಜ್ಯ ಮುಕ್ತಶಾಲೆಗಳಿಗೆ ವಿವಿಧ ಚಟುವಟಿಕೆಗಳ ಸಲುವಾಗಿ ಧನಸಹಾಯ ನೀಡುತ್ತಿದೆ. ಈ ಒಕ್ಕೂಟವು ಮಾಧ್ಯಮಿಕ ಸ್ತರದಲ್ಲಿ ಮುಕ್ತ ದೂರಶಿಕ್ಷಣವನ್ನು ಪ್ರೋತ್ಸಾಹಿಸಲು ಶಕ್ತಿಯುತ ಸಯೋಗವಾಗಿ ಅಭಿವೃದ್ಧಿ ಹೊಂದುವುದೆಂಬ ಭರವಸೆಯಿದೆ.

Digitised by Bharatavani, CIIL

ದೂರಶಿಕ್ಷಣ ಪರಿಷತ್ತು (DEC) IGNOU ವಿನ ಶಾಸನಬದ್ಧ ಅಧಿಕೃತ ಅಂಗವಾಗಿರುವುದರಿಂದ, ವಿಶ್ವವಿದ್ಯಾಲಯ ಮತ್ತು ಶಾಲಾಸ್ತರಗಳಲ್ಲಿ ಮುಕ್ತಶಿಕ್ಷಣ, ಮುಕ್ತ ದೂರಕಲಿಕಾ ಸಂಸ್ಥೆಗಳ ಸಂಯೋಜನೆ ಮತ್ತು ಎಲ್ಲಾ ಸ್ತರಗಳಲ್ಲಿ ಗುಣಮಟ್ಟ ಕಾಪಾಡುವಿಕೆ – ಈ ಮೂರು ಗುರಿಗಳೊಂದಿಗೆ ದೂರ ಮುಕ್ತ ಕಲಿಕೆಯನ್ನು ತನ್ನ ವ್ಯಾಪ್ತಿಗೆ ತರುವಂತೆ ಮಾಡಬಹುದು. ಹೊಸ ಜ್ಞಾನಗಳ ಸ್ಥಾಪನೆ, ಹೊಸ ಸಂಸ್ಥೆಗಳಿಗೆ ನೆರವು ಮತ್ತು ಸ್ಥಾನೀಯ ಕ್ಷೇತ್ರ ಮತ್ತು ವಿಸ್ತೃತ ಕ್ಷೇತ್ರ ಜಾಲಗಳ ಪ್ರೋತ್ಸಾಹ ಇವುಗಳ ಅಗತ್ಯವಿದೆ. ದತ್ತಾಂಶ ಆಕರ (Data base) ಅಭಿವೃದ್ಧಿ ಮತ್ತು ಸಂಶೋಧನಾ ಅನುದಾನದ ಉದಾಹರಣೆಗಳನ್ನು DEC ಕೈಗೆತ್ತಿಕೊಳ್ಳಬಹುದು.

**ಭವಿಷ್ಯಕ್ಕಾಗಿ ದರ್ಶನ:**

ಸರ್ವಶಿಕ್ಷಾ ಅಭಿಯಾನ (ಸರ್ವರಿಗೂ ಶಿಕ್ಷಣ) ಮತ್ತು ಗುಣಾತ್ಮಕ ಶಿಕ್ಷಣ ರಾಷ್ಟ್ರೀಯ ಅನಿವಾರ್ಯತೆಗಳು ಮತ್ತು ಅಂತರರಾಷ್ಟ್ರೀಯ ನಿರ್ಬಂಧಗಳಾಗಿವೆ. ಏಕ ಮಧ್ಯಮ ಮುಕ್ತ ಸಂಸ್ಥೆಗಳು ತಮ್ಮ ಸಾಂದರ್ಭಿಕತೆಯನ್ನು ಹೊಂದಿದ್ದರೂ ಅವು ನಮ್ಮನ್ನು ಬಹಳ ದೂರ ಕೊಂಡೊಯ್ಯಲಾರವು. ಹೆಚ್ಚುತ್ತಿರುವ ವಿದ್ಯಾರ್ಥಿ ಸಂಖ್ಯೆಗಳನ್ನು ನಿರ್ವಹಿಸಲಾರವು. 90ರ ದಶಕದ ಅಂತ್ಯಭಾಗದಿಂದ ಕಿರಿಯ ಪ್ರಾಥಮಿಕ ಮಟ್ಟದ ಶಿಕ್ಷಣದ ಪ್ರೋತ್ಸಾಹದಲ್ಲಿ ಮುಕ್ತ ದೂರಶಿಕ್ಷಣ ತನ್ನ ಪಾತ್ರದ ಮಹತ್ವವನ್ನು ಪ್ರಾಮುಖ್ಯವನ್ನೂ ವೃದ್ಧಿಸಿಕೊಳ್ಳುತ್ತಲಿವೆ. ರಾಷ್ಟ್ರೀಯ ಮುಕ್ತಶಾಲೆಯು ತನ್ನ ನಾವೀನ್ಯಯುತ ಕಾರ್ಯಕ್ರಮವೊಂದರಲ್ಲಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದಕ್ಕೆ ಸರ್ಕಾರೇತರ ಸಂಸ್ಥೆಗಳ (NGO) ಪ್ರಾಥಮಿಕ ಶಿಕ್ಷಣಕ್ಕೆ ಸಹಾಯವನ್ನು ಕೋರಿದೆ. 2003ರ ವೇಳೆಗೆ 6ರಿಂದ 14ರ ವಯೋಮಾನದ ಎಲ್ಲಾ ವಿದ್ಯಾರ್ಥಿಗಳ ದಾಖಲಾತಿ, 2007ರ ವೇಳೆಗೆ ಸರ್ವರಿಗೂ ಪ್ರಾಥಮಿಕ ಶಿಕ್ಷಣ ಮತ್ತು 2010ರ ಹೊತ್ತಿಗೆ ಕಿರಿಯ ಪ್ರಾಥಮಿಕ ಸ್ತರದಲ್ಲಿ (1ರಿಂದ 4ನೆ ತರಗತಿ) ಸರ್ವರಿಗೂ ಶಿಕ್ಷಣ ಮತ್ತು ಎಲ್ಲರನ್ನೂ ಶಿಕ್ಷಣದಲ್ಲಿ ಉಳಿಸಿಕೊಳ್ಳುವಿಕೆ ಎಂಬೀ ಗುರಿಯಗಳನ್ನು ಹೊಂದಿದ್ದ (ಈಗ ಈ ಗುರಿಯನ್ನು 2015ಕ್ಕೆ ಮುಂದೂಡಲಾಗಿದೆ) ಸರ್ವಶಿಕ್ಷಾ ಅಭಿಯಾನ ಗುರಿ ಸಾಕಾರವಾಗಬೇಕಾದರೆ ಅಪಾರ ಸಂಖ್ಯೆಯ ಮುಕ್ತ ಕಲಿಕೆಯ ಸಂಸ್ಥೆಗಳು ಬೇಕಾಗುವುವು. ಸರ್ವಶಿಕ್ಷಾ ಅಭಿಯಾನದ ಅಧೀನದಲ್ಲಿ 2007ರ ವೇಳೆಗೆ ಸರ್ವ ವಿಧದ ಲಿಂಗಭೇದಗಳು ಮತ್ತು ಸಾಮಾಜಿಕ ಅಂತರಗಳನ್ನು ಪ್ರಾಥಮಿಕ ಸ್ತರದಲ್ಲಿ ಮತ್ತು 2010ರ ವೇಳೆಗೆ ಕಿರಿಯ ಪ್ರಾಥಮಿಕ ಸ್ತರದಲ್ಲಿ ಇಲ್ಲವಾಗಿಸುವ ಗುರಿಯನ್ನು ಪ್ರಸ್ತಾಪಿಸಲಾಗಿತ್ತು. (ಈಗ ಈ ಗುರಿಗಳನ್ನು 2015ಕ್ಕೆ ಮುಂದೂಡಲಾಗಿದೆ) ಏಕ ಮಾಧ್ಯಮದೊಂದಿಗೆ ಮಿಶ್ರ ಮಾಧ್ಯಮ ಸಂರಚನೆಯನ್ನು ವಿನ್ಯಾಸಗೊಳಿಸಿ ಪ್ರೋತ್ಸಾಹಿಸಿದಲ್ಲಿ ಇದು ಸಾಧ್ಯವಾಗುವುದು. ಇದಕ್ಕೆ ಮಹತ್ ಪ್ರಯತ್ನಗಳೂ, ದೋಷರಹಿತ ಯೋಜನೆಯೂ ಹಾಗೂ ಪರ್ಯಾಪ್ತ ಸಂಪನ್ಮೂಲಗಳ ಅವಶ್ಯಕತೆಯಿದೆ. ರಾಷ್ಟ್ರೀಯ ಮುಕ್ತಶಾಲೆಯು ತನ್ನ ಒಂದು ನವೀನ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ NGO ಸಂಸ್ಥೆಗಳೊಡನೆ ಸಹಯೋಗವನ್ನು ಹೊಂದಿದೆ. ವರ್ಷಪೂರ್ತಿ ಪರೀಕ್ಷೆಗೆ ಅವಕಾಶ ನೀಡುವ ಬಗ್ಗೆಯೂ ಇದು ಚಿಂತಿಸುತ್ತಿದೆ. ವಿದ್ಯಾರ್ಥಿಗಳು ವರ್ಷದ ಯಾವುದೇ ಕಾಲದಲ್ಲಿ ಮೌಲ್ಯಮಾಪನವನ್ನು ಕೋರಬಹುದು ಹಾಗೂ ಪರೀಕ್ಷಾ ಪ್ರಶ್ನೆಗಳ ಸಂಕಲನ ಆಧಾರದ ಮೇಲೆ ರಾಷ್ಟ್ರೀಯ ಮುಕ್ತಶಾಲೆಯು ಬೇಡಿಕೆಗೆ ಅನುಗುಣವಾಗಿ ಪರೀಕ್ಷೆಗಳನ್ನು ನಡೆಸಬಹುದು.

ಮುಕ್ತ ಕಲಿಕೆಯ ಬಗ್ಗೆ ಉಲ್ಲೇಖಿಸುವಾಗ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾದ ಪ್ರಭಾವದ ಬಗ್ಗೆ ಮತ್ತು ಜ್ಞಾನ ಸಮುದಾಯದ ಬಗ್ಗೆ ಹೇಳದಿದ್ದರೆ ಅದು ಅಪೂರ್ಣವೆನಿಸುವುದು. (ವೆಂಕಟ್ ಸುಬ್ರಹ್ಮಣಿಯನ್, 1999). ಈ ತಂತ್ರಜ್ಞಾನದಲ್ಲಿ ಭಾಷೆಯನ್ನು ಸಾಮಾಜಿಕ ಜ್ಞಾನವನು ಸೂಚಿಸುವ ಅಥವಾ ವೈಯಕ್ತಿಕ ಬಲವರ್ಧನೆಗಾಗಿ ಮಾತ್ರ ಬಳಸದೆ ಆರ್ಥಿಕ ಅಭಿವೃದ್ಧಿಗಾಗಿ ಮೂಲ ಸಂಪನ್ಮೂಲದಂತೆ ಬಳಸಲಾಗುವುದು. ಜ್ಞಾನ ಸಮುದಾಯವು ಜ್ಞಾನವನ್ನು ಸೃಷ್ಟಿಸಿ, ಹಂಚಿಕೊಂಡು ಆರ್ಥಿಕ, ಸಾಮಾಜಿಕ ಮತ್ತು ತಾಂತ್ರಿಕ ಮುನ್ನಡೆಗಾಗಿ ಅದನ್ನು ಬಳಸುವುದು, ವೆಬ್‌ತಾಣಗಳು, ಅಂತರ್ಜಾಲ ಮತ್ತು ದೂರಸಂಪರ್ಕ ತಂತ್ರಜ್ಞಾನಗಳ ಉದಯದಿಂದ ಭಾರತದಲ್ಲಿ ಮುಕ್ತ ಕಲಿಕೆಯ ಸಂಸ್ಥೆಗಳು ಜ್ಞಾನಸಮುದಾಯದ ಸೃಷ್ಟಿ ಮತ್ತು ಡಿಜಿಟಲೈಸೇಷನ್ ಮಾಡುವತ್ತ ಸಾಗಿವೆ. IGNOU ಮುಂತಾದ ಮುಕ್ತ ಕಲಿಕಾ ಸಂಸ್ಥೆಗಳು ಸೂಕ್ತ ಸಂದರ್ಭಗಳಲ್ಲಿ ವೀಡಿಯೊ ಉಪನ್ಯಾಸಗಳನ್ನು ನೀಡುತ್ತವೆ ಹಾಗೂ ವಿಡಿಯೊ ಕಾನ್‌ಫರೆನ್ಸ್‌ಗಳನ್ನು ಆಯೋಜಿಸುತ್ತವೆ ಮತ್ತು ವರ್ಚುಯಲ್ ತರಗತಿ (ಭಾಸಿತ ತರಗತಿ) ಯನ್ನು ಕೈಗೊಳ್ಳುತ್ತವೆ.

ಭಾರತೀಯ ಹಿನ್ನೆಲೆಯಲ್ಲಿ, ಮುಕ್ತ ಕಲಿಕಾ ಸಂಸ್ಥೆಗಳು ಪ್ರಮಾಣ ಪತ್ರದಲ್ಲಿ ಕೊನೆಗೊಳ್ಳುವ ಬಹುತೇಕ ಔಪಚಾರಿಕ ಕಾರ್ಯಕ್ರಮಗಳತ್ತ ಕೇಂದ್ರೀಕೃತವಾಗಿವೆ ಎಂಬ ಅಂಶವನ್ನು ಇಲ್ಲಿ ಉಲ್ಲೇಖಿಸುವುದು ಸುಸಂಗತವಾಗುವುದು. ಮುಕ್ತ ಕಲಿಕಾ ಸಂಸ್ಥೆಗಳ ಮೂಲಕ ಜೀವನವನ್ನು ಸಂಪದ್ಭರಿತಗೊಳಿಸುವ ಮತ್ತು ವೃತ್ತಿಪರವಾದ ಶಿಕ್ಷಣವನ್ನು ಕೈಗೊಂಡು ಪ್ರೋತ್ಸಾಹಿಸಲು ಸಾಕಷ್ಟು ಅವಕಾಶಗಳಿವೆ. ಕಲೆ, ಸಂಗೀತ, ವರ್ಣಚಿತ್ರಕಲೆ, ನಾಟಕಕಲೆ, ಅಡಿಗೆ, ಆಂತರಿಕ ವಿನ್ಯಾಸ, ವಸ್ತ್ರ ವಿನ್ಯಾಸ, ವ್ಯಾವಹಾರಿಕ ಭಾಷಾ ಕಾರ್ಯಕ್ರಮಗಳು, ಯೋಗ ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿಭಿನ್ನ ಕೋರ್ಸುಗಳನ್ನು ಆರಂಭಿಸಬಹುದು. ಇದೇ ರೀತಿ, ಪರಿಸರ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಸಾಗರಜೀವಶಾಸ್ತ್ರ ಇತ್ಯಾದಿಗಳಲ್ಲಿ ವಿಶೇಷ ಕೋರ್ಸುಗಳನ್ನು ಪರಿಚಯಿಸಬಹುದು. ಈ ನಿಟ್ಟಿನಲ್ಲಿ ಮಾರ್ಗಗಳನ್ನು, ಉಪಾಯಗಳನ್ನು ಸೂಚಿಸಿ ಔದ್ಯೋಗಿಕ ತರಬೇತಿಗೆ ಪ್ರೋತ್ಸಾಹ ನೀಡಲು NCERT, UGC ಮತ್ತು DEC ಒಟ್ಟಾಗಿ ಕಾರ್ಯೋನ್ಮುಖವಾಗಬಹುದು. NCERT ಯ ಭೂಪಾಲ್‌ನ ಕೇಂದ್ರೀಯ ಔದ್ಯೋಗಿಕ ಶಿಕ್ಷಣ ಸಂಸ್ಥೆ ಮಹತ್ತರ ಪಾತ್ರವನ್ನು ವಹಿಸಬಹುದು.

ಭಾರತದಲ್ಲಿ ಜೀವನವನ್ನು ಶ್ರೀಮಂತಗೊಳಿಸುವ ಕಾರ್ಯಕ್ರಮಗಳೆಂದು ಕರೆಯಲಾಗಿರುವ ವೈಯಕ್ತಿಕ ವಿಕಾಸ

Digitised by Bharatavani, CIIL

ಕಾರ್ಯಕ್ರಮಗಳ ಮೇಲೆ ಯುನೆಸ್ಕೊವಿನ ವರದಿ (1996) 'ಕಲಿಕೆ ಆಂತರ್ಯದ ಸಂಪತ್ತು' ಪ್ರಧಾನವಾಗಿ ಒತ್ತು ನೀಡಿದೆ. ಈ ಕಾರ್ಯಕ್ರಮಗಳು ಮುಕ್ತಕಲಿಕೆಯ ಸಂಸ್ಥೆಗಳ ಒಟ್ಟಾರೆ ಕಾರ್ಯಕ್ರಮಗಳಲ್ಲಿ ಸಾಕಷ್ಟು ಅವಕಾಶವನ್ನು ಪಡೆದಿಲ್ಲ.

ಪ್ರಾಥಮಿಕ ಶಿಕ್ಷಣ ಸ್ತರದಲ್ಲಿ ಸಂಖ್ಯೆ ವೃದ್ಧಿಗೊಂಡಾಗ ಮಾಧ್ಯಮಿಕ ಸ್ತರದಲ್ಲಿ ಮುಕ್ತಕಲಿಕೆಗೆ ಹೆಚ್ಚಿನ ಪಾತ್ರವನ್ನು ವಹಿಸುವಂತೆ ಕೋರಲಾಗುವುದು. ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಸೇತು ಮತ್ತು ಆಧಾರಭೂತ ಕಾರ್ಯಕ್ರಮಗಳ ಮುಖಾಂತರ ಸಾರ್ವತ್ರೀಕರಣಗೊಳಿಸಲು ಹಾಗೂ ಮಾಧ್ಯಮಿಕ ಶಿಕ್ಷಣಕ್ಕೆ ವ್ಯತ್ಯಾಸವಿಲ್ಲದ ಪಠ್ಯಕ್ರಮವನ್ನು ಪರಿಚಯಿಸಲು ಶಾಲಾಮಟ್ಟದಲ್ಲಿ ಮುಕ್ತಶಿಕ್ಷಣ ವ್ಯವಸ್ಥೆಯು ತನ್ನನ್ನು ಸಮರ್ಪಿಸಿಕೊಳ್ಳಲು ಅದನ್ನು ಸಬಲೀಕರಣಗೊಳಿಸಬೇಕಾಗಿದೆ. +2 ಹಿರಿಯ ಸೆಕೆಂಡರಿ ಸ್ತರದಲ್ಲಿ ಮುಕ್ತ ಶಾಲಾವ್ಯವಸ್ಥೆಯನ್ನು ಶೈಕ್ಷಣಿಕ ಮತ್ತು ಔದ್ಯೋಗಿಕ ಧಾರೆಗಳಿಗೆ ಪೂರ್ಣವಾಗಿ ಉಪಯೋಗಿಸಿಕೊಳ್ಳಬಹುದು. ಮುಕ್ತ ಕಲಿಕೆಗೆ ವ್ಯವಸ್ಥೆಯು ವಿಷಯಗಳ ಸಂಯೋಜನೆಯನ್ನು ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುಲಭೀಕರಿಸುವುದರಿಂದ ಬಹಳ ವಿದ್ಯಾರ್ಥಿಗಳು +2 ಸ್ತರದಲ್ಲಿ ಇದರ ಮುಖಾಂತರ ಔದ್ಯೋಗಿಕ ಕೋರ್ಸುಗಳಿಗೆ ಸೇರುವರು ಎಂದು ಭಾವಿಸಲಾಗಿದೆ. ಮಾನದಂಡಗಳಲ್ಲಿ ಸಮಾನತೆಯನ್ನು ಕಾಪಾಡುತ್ತಾ ಔಪಚಾರಿಕ ವ್ಯವಸ್ಥೆ ಮತ್ತು ಮುಕ್ತಶಿಕ್ಷಣ ವ್ಯವಸ್ಥೆಗಳು ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದಂತೆ ವಿಭಿನ್ನವಾದ ಆದರೆ ಹೋಲಿಕೆಯುಳ್ಳ ಪಠ್ಯಕ್ರಮಗಳನ್ನು ಹೊಂದಬಹುದು. ಗುಣಮಟ್ಟ ಮತ್ತು ಮಾನದಂಡಗಳ ಕಡೆಗೆ ಗಮನವೀಯುವುದರಿಂದ, ಎರಡು ವ್ಯವಸ್ಥೆಗಳ ಪಠ್ಯಕ್ರಮಗಳ ಸಾದೃಶ್ಯತೆ ಮುಕ್ತಕಲಿಕಾ ವ್ಯವಸ್ಥೆಯಿಂದ ಔಪಚಾರಿಕ ಶಾಲಾಶಿಕ್ಷಣ ವ್ಯವಸ್ಥೆಯೆಡೆಗೆ ಮತ್ತು ಔಪಚಾರಿಕ ವ್ಯವಸ್ಥೆಯಿಂದ ಮುಕ್ತಶಿಕ್ಷಣದ ಕಡೆಗೆ ವಿದ್ಯಾರ್ಥಿಗಳು ಬರಲು ಸಹಾಯ ಮಾಡುತ್ತದೆ.

ಭಾರತದಲ್ಲಿನ ಮುಕ್ತಕಲಿಕಾ ಕಾರ್ಯಕ್ರಮಗಳು ಯುನೆಸ್ಕೊ, ಅಂತರರಾಷ್ಟ್ರೀಯ ದೂರಶಿಕ್ಷಣ ಸಮಿತಿ ಏಷ್ಯಾ ಮುಕ್ತ ವಿಶ್ವವಿದ್ಯಾಲಯಗಳ ಸಂಘ, ಯು.ಕೆ. ಮುಕ್ತ ವಿಶ್ವವಿದ್ಯಾಲಯ ಮತ್ತು ಕಾಮನ್‌ವೆಲ್ತ್ ಆಫ್ ಲರ್ನಿಂಗ್, ವ್ಯಾಂಕೂವರ್, ಕೆನಡಾ ಈ ಸಂಸ್ಥೆಗಳಿಂದ ಬಹಳಷ್ಟು ಸಹೋದ್ಯಮ, ಸಹಕಾರ ಮತ್ತು ನೆರವನ್ನು ಪಡೆಯುತ್ತವೆ. ತಮ್ಮದೇ ಆದ ವೆಬ್‌ತಾಣಗಳು ಮತ್ತು ಅಂತರ್ಜಾಲ ಸೌಲಭ್ಯಗಳಿಂದಾಗಿ ಹೆಚ್ಚಿನ ವ್ಯಾಪಕತೆ ಮತ್ತು ವಿಶಾಲ ಸಂಚಲನೆಯ ಆರೋಗ್ಯಕರ ಕುರುವು ಎನ್ನಬಹುದಾದ ಇತರ ನಿಯೋಗಗಳೊಡನೆ ದ್ವಿಪಕ್ಷೀಯ ಹಾಗೂ ಬಹುಪಕ್ಷೀಯ ಸಹೋದ್ಯಮಗಳು ಸ್ಥಾಪನೆಗೊಳ್ಳುವ ಸಂಭವವಿವೆ.

ಸಂಪರ್ಕ ತಂತ್ರಜ್ಞಾನದಲ್ಲಿ ಆಗುತ್ತಿರುವ ಮಹತ್ತರ ಬದಲಾವಣೆಗಳಿಂದಾಗಿ ಮುಕ್ತಕಲಿಕೆ ಹೊಸ ಆಯಾಮಗಳನ್ನು ಪಡೆದುಕೊಳ್ಳುವ ಸಾಧ್ಯತೆಯಿದೆ. ಭಾರತ ಸರ್ಕಾರವು 'ನೇರವಾಗಿ ಗೃಹಕ್ಕೆ' (Direct to Home) ಸಂಬಂಧಿಸಿದ ತಂತ್ರಜ್ಞಾನಕ್ಕೆ ಒಪ್ಪಿಗೆ ನೀಡಿದೆ ('ದಿ ಹಿಂದೂ', 30 ನವೆಂಬರ್ 2000). ಈ ತಂತ್ರಜ್ಞಾನದಿಂದ ದೂರದರ್ಶನ ವಿಷಯವಸ್ತು ಪೂರೈಕೆ ಮಾಡುವವರು Ku ಬ್ಯಾಂಡ್ ಮೂಲಕ ನೇರವಾಗಿ ಸಂಪರ್ಕ ಕಲ್ಪಿಸಿಕೊಳ್ಳಬಲ್ಲರು. ಈ ಬ್ಯಾಂಡ್ ಅಧಿಕ ಪ್ರಸಾರ ಆವರ್ತನವನ್ನೂ (Frequency) ಕಡಿಮೆ ತರಂಗಾಂತರವನ್ನೂ (Wavelength) ಹೊಂದಿದ್ದು ಇದಕ್ಕೆ 30ರಿಂದ 40ಸೆಂ.ಮೀ. ವ್ಯಾಸವುಳ್ಳ ಸಣ್ಣ ಗಾತ್ರದ ಆ್ಯಂಟನಾದ ಅವಶ್ಯಕತೆಯಿದೆ. ಡೈರೆಕ್ಟ್ ಟು ಹೋಮ್' ಆಪರೇಟರ್‌ಗಳು ಸೆಟ್‌ಟಾಪ್ ಬಾಕ್ಸ್ ಎಂಬ ಟಿ.ವಿ. ಸಿಗ್ನಲ್‌ಗಳನ್ನು ಗ್ರಹಿಸುವ ವಿಶೇಷ ಡೀಕೋಡರನ್ನು 'ನೇರವಾಗಿ ಗೃಹಕ್ಕೆ' ಎಂಬ ಸೌಲಭ್ಯದಿಂದಾಗಿ ಮುಕ್ತ ಕಲಿಕೆ ಹೊಸ ಉನ್ನತಿಯನ್ನು ಹೊಂದಿ ಕಲಿಯುವವರಿಗೆ ಕಲ್ಪನಾತೀತ ಸೌಲಭ್ಯಗಳನ್ನು ನಮ್ಯತೆಗಳನ್ನು ಒದಗಿಸುವುದು, ಆದಾಗ್ಯೂ, ಇವೆಲ್ಲವೂ ಕೈಗೂಡಬೇಕಾದರೆ ಸುಸಂಗತವೂ, ಮೌಲ್ಯಯುತವೂ ಮತ್ತು ಮಹತ್ವವುಳ್ಳ ಕಾರ್ಯಕ್ರಮಗಳನ್ನು ಟಿ.ವಿ. ನಿರ್ಮಾಪಕರಿಗೆ ಒದಗಿಸುವ ಅಂತರ್ವಸ್ತು ನಿರ್ಮಾಣ ಕೇಂದ್ರಗಳ ಅಗತ್ಯವಿದೆ.

**ಮೂಲ: ಒ.ಎಸ್. ದೇವಲ್**

**ಅನು: ಚಂದ್ರಶೇಖರ್ ಬಿ.ಎಂ.**

## ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು

ಭಾರತದಲ್ಲಿ 1970ರ ಆದಿಭಾಗ ಹಾಗೂ 1980ರ ದಶಕದ ಪೂರ್ವ ಅವಧಿಯಲ್ಲಿ ಅಂಚೆ ತೆರಪಿನ ಶಿಕ್ಷಣದ ಮೂಲಕ ಶಿಕ್ಷಣವನ್ನು ಮುಂದುವರೆಸುವ ಕ್ರಿಯಾಶೀಲ ಬೆಳವಣಿಗೆಗಳು ಶಿಕ್ಷಣ ಕ್ಷೇತ್ರದಲ್ಲಿ ಕಂಡು ಬಂದವು. ಇದರಿಂದಾಗಿ, ಈ ಅವಧಿಯಲ್ಲ ಹಲವಾರು ನಿಯಮಿತ ವಿಶ್ವವಿದ್ಯಾನಿಲಯಗಳು ತಮ್ಮ ಕಾರ್ಯಕ್ಷೇತ್ರದ ವಿಸ್ತರಣೆಯ ಸಲುವಾಗಿ ಮೂಲಸಂಸ್ಥೆಯ ಅಂಗಸಂಸ್ಥೆಗಳಾಗಿ ಅಂಚೆ–ತೆರಪಿನ ಶಿಕ್ಷಣ ನಿರ್ದೇಶನಾಲಯಗಳನ್ನು ತೆರೆದವು. ಪ್ರಾರಂಭದಲ್ಲಿ, ಈ ನಿರ್ದೇಶನಾಲಯಗಳು ಕೇವಲ ಕಲೆ, ವಾಣಿಜ್ಯ ಮತ್ತು ನಿರ್ವಹಣೆ ವಿಷಯದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿದವು. ಕಾಲಾನಂತರ ಪ್ರಾಯೋಗಿಕ ವಿಷಯವನ್ನೊಳಗೊಂಡ ವಿಜ್ಞಾನ ವಿಷಯದಲ್ಲಿಯೂ ಶಿಕ್ಷಣ ಕಾರ್ಯಕ್ರಮಗಳನ್ನು ಆರಂಭಿಸಿದವು. ದೂರಶಿಕ್ಷಣ ನಿರ್ದೇಶನಾಲಯಗಳು ಸಾಂಪ್ರ ದಾಯಿಕ ವಿಶ್ವವಿದ್ಯಾನಿಲಯಗಳ ಅಂಗಸಂಸ್ಥೆಯಾಗಿ ಕಾರ್ಯಾರಂಭ ಮಾಡಿದವು. ಇವು ವಿಷಯ ಕ್ಷೇತ್ರಗಳು, ಪಠ್ಯವಿಷಯಗಳು ಹಾಗೂ ನೀತಿ–ನಿಯಮಾವಳಿಗಳನ್ನೂ ನಿಯಮಿತ ವಿಶ್ವವಿದ್ಯಾನಿಲಯಗಳಿಂದಲೇ ಅಳವಡಿಸಿಕೊಂಡಿದ್ದವು. ಭಾರತದಲ್ಲಿ ದೂರ ಶಿಕ್ಷಣ ನಿರ್ದೇಶನಾಲಯಗಳ ಪ್ರಮುಖ ಅಂಶಗಳು ಈ ರೀತಿಯಾಗಿದ್ದವು.

1. ದೂರಶಿಕ್ಷಣ ನಿರ್ದೇಶನಾಲಯಗಳು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಿಗೆ ವಿಸ್ತರಣಾ ಸಂಸ್ಥೆಗಳಾಗಿದ್ದು, ಅವುಗಳಲ್ಲಿ ಅಳವಡಿಸಲಾಗಿದ್ದ ವಿಷಯಗಳನ್ನೇ ಇವೂ ಬೋಧಿಸಲು

Digitised by Bharatavani, CIIL

ತೊಡಗಿದ್ದವು.

2. ಈ ನಿರ್ದೇಶನಾಲಯಗಳು ಮಾತೃ ಸಂಸ್ಥೆಗಳ ನಿಯಮಾವಳಿಗಳನ್ನೇ ಅಳವಡಿಸಿಕೊಂಡಿದ್ದವು.
3. ಈ ನಿರ್ದೇಶನಾಲಯಗಳು ಯಾವುದೇ ರೀತಿಯ ಆರ್ಥಿಕ ಹಾಗೂ ಆಡಳಿತಾತ್ಮಕವಾದ ಸ್ವಾಯತ್ತತೆಯನ್ನು ಹೊಂದಿರಲಿಲ್ಲ.
4. ಮಾತೃಸಂಸ್ಥೆಯ ಆಡಳಿತದ ಮಾದರಿಯನ್ನೇ ಅನುಸರಿಸುತ್ತಿದುದರಿಂದ ಇವುಗಳ ಪರೀಕ್ಷಾ ವ್ಯವಸ್ಥೆಯಲ್ಲಿಯೂ ಯಾವುದೇ ಮಾರ್ಪಾಡುಗಳಿರಲಿಲ್ಲ.

1980ರ ದಶಕದಲ್ಲಿ ಹಲವಾರು ವಿಶ್ವವಿದ್ಯಾನಿಲಯಗಳು / ಸಂಸ್ಥೆಗಳು ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯಗಳನ್ನು ಸ್ಥಾಪಿಸಿದ್ದರಿಂದಾಗಿ, ದೂರ ಶಿಕ್ಷಣ ವ್ಯವಸ್ಥೆಯು ನಿಧಾನವಾಗಿ ಶಿಕ್ಷಣ ಕ್ಷೇತ್ರದಲ್ಲಿ ಬೇರೂರತೊಡಗಿತು. ಬಿ.ಎ. ಬಿ.ಕಾಂ., ಬಿ.ಎಸ್.ಸಿ., ಎಂ.ಎಡ್. ಇವೇ ಮೊದಲಾದ ಸಾಂಪ್ರದಾಯಿಕ ಪದವಿಗಳೊಡನೆ, ಕೆಲವೊಂದು ವೃತ್ತಿಪರ ಪದವಿಗಳ ಶಿಕ್ಷಣವನ್ನು ಇವು ನೀಡಲು ಆರಂಭಿಸಿದವು. ಹಾಗೆಯೇ ಜನತೆಯ ಬೇಡಿಕೆಯನ್ನನುಸರಿಸಿ ಕೆಲವು ದೂರ ಶಿಕ್ಷಣ ನಿರ್ದೇಶನಾಲಯಗಳು ವಿಜ್ಞಾನ ಕ್ಷೇತ್ರಗಳಾದ ಗಣಿತಶಾಸ್ತ್ರ, ಭೌತಶಾಸ್ತ್ರ, ಪ್ರಾಣಿಶಾಸ್ತ್ರ, ರಸಾಯನಶಾಸ್ತ್ರ ಮುಂತಾದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯ ಶಿಕ್ಷಣವನ್ನು ಪ್ರಾರಂಭಿಸಿದವು. ಇನ್ನೂ ಕೆಲವು ವಿಶ್ವವಿದ್ಯಾನಿಲಯಗಳು ವೃತ್ತಿಪರ ಪದವಿಗಳಾದ ಎಂ.ಬಿ.ಎ. ಕಂಪ್ಯೂಟರ್ ವಿಜ್ಞಾನ, ಇಂಜಿನಿಯರಿಂಗ್ ಮುಂತಾದ ಶಿಕ್ಷಣವನ್ನು ದೂರಶಿಕ್ಷಣದ ಮೂಲಕ ಕೊಡಮಾಡಿದವು ಮತ್ತು ಕೆಲವು ವಿಶ್ವವಿದ್ಯಾನಿಲಯಗಳು ಗ್ರಾಮೀಣ ಜನರ ಅಭಿವೃದ್ಧಿದ್ಯೋತಕವಾದ ಕೃಷಿ ವಿಜ್ಞಾನ ವಿಷಯದಲ್ಲಿಯೂ ಪದವಿ ಹಾಗೂ ಅಲ್ಪಾವಧಿ ಶಿಕ್ಷಣವನ್ನು ಪ್ರಾರಂಭಿಸಿದವು. ಇಂತಹ ಶಿಕ್ಷಣ ವಿಧಾನಕ್ಕೆ ಕೇವಲ ಉದ್ಯೋಗಿಗಳಲ್ಲದೇ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ದಾಖಲಾತಿ ದೊರೆಯದ, ಇಲ್ಲವೇ ಕಾರಣಾಂತರದಿಂದ ಮೊಟಕುಗೊಳಿಸಿದ ತಮ್ಮ ಶಿಕ್ಷಣವನ್ನು ಮುಂದುವರೆಸುವ ಹಂಬಲವನ್ನು ಹೊಂದಿದ್ದ ವಿದ್ಯಾರ್ಥಿಗಳೂ ದಾಖಲಾಗುವ ಉತ್ಸಾಹ ತೋರಿದವು.

**ದೂರಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು:**

ವಿದ್ಯಾರ್ಥಿ ಬೆಂಬಲ ಸೇವೆಗಳ ಆರಂಭದ ಪ್ರಾಥಮಿಕ ಹಂತದಲ್ಲಿ ಎರಡು ಅಭಿಪ್ರಾಯಗಳಿದ್ದವು. ಮೊದಲನೆಯದು, ದೂರಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರಿಕೆ ಶಿಕ್ಷಣಕ್ಕೆ ದಾಖಲಾದ ವಿದ್ಯಾರ್ಥಿಗಳು ಯಾವುದೇ ವಿಧದ ಬೆಂಬಲ ಸೇವೆಗಳ ಅಗತ್ಯವಿಲ್ಲದೇ ಸ್ವತಃ ತಾವೇ ಅಭ್ಯಾಸ ಮಾಡುವಷ್ಟು ಸಮರ್ಥರಿರುತ್ತಾರೆ ಎಂಬುದಾಗಿದ್ದರೆ, ಎರಡನೆಯದು – ದೂರಶಿಕ್ಷಣ ವ್ಯವಸ್ಥೆಯಲ್ಲಿ ದಾಖಲಾದ ವಿದ್ಯಾರ್ಥಿಗಳು ತಮಗೆ ಅಗತ್ಯವಿರುವ ಶೈಕ್ಷಣಿಕ ಸಮಾಲೋಚಕರು ಹಾಗೂ ವಿಷಯತಜ್ಞರೊಡನೆ ವಿಚಾರ ವಿನಿಮಯಕ್ಕಾಗಿ ಬೆಂಬಲ ಸೇವೆಗಳ ಅಗತ್ಯವಿದೆ ಎಂಬುದಾಗಿತ್ತು. ಎರಡನೆಯ ಅಭಿಪ್ರಾಯವು ಸಾರ್ವಜನಿಕ ಮನ್ನಣೆಗಳಿಸಿದ್ದರಿಂದಾಗಿ, ಭಾರತದಲ್ಲಿ ದೂರಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳನ್ನು ಪರಿಚಯಪಡಿಸಿದವು.

**ವಿದ್ಯಾರ್ಥಿ ಬೆಂಬಲ ಸೇವೆಗಳ ಪ್ರಮುಖ ಉದ್ದೇಶಗಳು**

1. ವಿದ್ಯಾರ್ಥಿಗಳಿಗೆ ಪೂರೈಸಿರುವ ಸಿದ್ಧಪಾಠಗಳಿಗೆ ಪೂರಕವಾಗಿ ಶೈಕ್ಷಣಿಕ ಮಾರ್ಗದರ್ಶನಗಳನ್ನು ಒದಗಿಸುವುದು.
2. ಅಗತ್ಯವಾದ ಶೈಕ್ಷಣಿಕ ಮಾಹಿತಿಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮವಾದ ವಿಷಯಗಳ ಬಗ್ಗೆ ಆಯ್ಕೆ ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವುದು.
3. ಸಂಪರ್ಕ ತರಗತಿಗಳನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿ ಆಧ್ಯಾಪಕರ ನಡುವೆ ಸಮನ್ವಯತೆಯನ್ನುಂಟು ಮಾಡುವುದು.
4. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾಹಿತಿ ಸಂಪನ್ಮೂಲಗಳು ಹಾಗೂ ಪರಸ್ಪರ ಪ್ರತಿಕ್ರಿಯಾತ್ಮಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವುದು.
5. ವಿದ್ಯಾರ್ಥಿಗಳು ಅಧ್ಯಯನದ ಬಗ್ಗೆ ಆಸಕ್ತಿವಹಿಸಲು, ಹಾಗೂ ತಮ್ಮ ಶಿಕ್ಷಣವನ್ನು ಮುಂದುವರೆಸಲು ಪ್ರೇರೇಪಿಸುವುದು.

**ಗ್ರಂಥಾಲಯ ಮತ್ತು ಅಧ್ಯಯನ ಕೇಂದ್ರಗಳು:**

ಸಾಂಪ್ರದಾಯಿಕ ಹಾಗೂ ದೂರಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಗ್ರಂಥಾಲಯ ಸೌಲಭ್ಯವನ್ನು ಒದಗಿಸುವುದು ವಿದ್ಯಾರ್ಥಿ ಬೆಂಬಲ ಸೇವೆಗಳಲ್ಲಿ ಅತಿ ಪ್ರಮುಖವಾದುದಾಗಿದೆ. ದೂರಶಿಕ್ಷಣ ವಿಧಾನದ ಶಿಕ್ಷಣಾರ್ಥಿಗಳಿಗೆ ಪರಾಮರ್ಶನ ಸೇವೆಯನ್ನು ಗ್ರಂಥಾಲಯದ ಮೂಲಕ ಒದಗಿಸಿದಾಗ, ಅವರ ಪೂರಕ ಕಲಿಕೆಗೆ ಹಾಗೂ ಜ್ಞಾನಾರ್ಜನೆಗೆ ಅನುಕೂಲಕರವಾಗಿದೆ. ಯುಜಿಸಿಯ ನಿಯಮಾವಳಿಯಂತೆ, ದೂರಶಿಕ್ಷಣ ಸಂಸ್ಥೆಗಳು ಸುಸಜ್ಜಿತವಾದ ಗ್ರಂಥಾಲಯ ಹಾಗೂ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದು ಅತ್ಯವಶ್ಯವಾಗಿದೆ. ಕೆಲವು ದೂರಶಿಕ್ಷಣ ಸಂಸ್ಥೆಗಳು ಕೇವಲ ಮುಖ್ಯ ಕಛೇರಿಯ ಸ್ಥಳದಲ್ಲಿ ಮಾತ್ರ ಗ್ರಂಥಾಲಯಗಳು ಹಾಗೂ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿರುವುದರಿಂದ, ಕೇಂದ್ರ ಸ್ಥಳದ ಸುತ್ತಮುತ್ತಲಿನ ವಿದ್ಯಾರ್ಥಿಗಳು ಮಾತ್ರ ಇವುಗಳ ಸೌಲಭ್ಯಗಳನ್ನು ಬಳಸಲು ಸಾಧ್ಯವಾಗುತ್ತದೆ; ಹಾಗೆಯೇ ಕೇಂದ್ರ ಸ್ಥಳದಿಂದ ದೂರದಲ್ಲಿರುವ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಬಳಸಿಕೊಳ್ಳಲು ವಿಫಲರಾಗುತ್ತಾರೆ. ಅಂತೆಯೇ ಪರ್ಯಾಯ ವ್ಯವಸ್ಥೆಯ ಸೌಲಭ್ಯವಿಲ್ಲದೇ ಸಿದ್ಧಪಾಠಗಳ ಅಧ್ಯಯನವನ್ನೇ ಕೈಗೊಳ್ಳುವುದರಿಂದ, ಇವರು ಪರಾಮರ್ಶನ ಗ್ರಂಥಗಳ ಅವಲೋಕನದಿಂದ ದೂರವುಳಿಯಬೇಕಾಗುತ್ತದೆ. ಕೆಲವು ದೂರಶಿಕ್ಷಣ ಸಂಸ್ಥೆಗಳು ತಮ್ಮ ವ್ಯಾಪ್ತಿಯೊಳಗೆ ಒಳಗೊಳ್ಳುವಂತೆ ಒಂದಕ್ಕಿಂತ ಹೆಚ್ಚು ಗ್ರಂಥಾಲಯ ಹಾಗೂ ಅಧ್ಯಯನ ಕೇಂದ್ರಗಳನ್ನು

Digitised by Bharatavani, CIIL

ಸ್ಥಾಪಿಸಿರುತ್ತವೆ. ಇದರಿಂದ ವಿದ್ಯಾರ್ಥಿಗಳಿಗೆ ತಮ್ಮ ಪಠ್ಯವಿಷಯಗಳ ಪೂರಕ ಅಧ್ಯಯನಕ್ಕೆ ಸಹಾಯಕಾರಿಯಾಗಿದೆ.

ಕೆಲವು ಮುಕ್ತ ಮತ್ತು ದೂರಶಿಕ್ಷಣ ವಿಶ್ವವಿದ್ಯಾನಿಲಯಗಳು ಅಧ್ಯಯನ ಕೇಂದ್ರಗಳ ಮೂಲಕ ವಿದ್ಯಾರ್ಥಿಗಳಿಗೆ ದಾಖಲಾತಿ ಹಾಗೂ ಪರೀಕ್ಷಾ ವಿಷಯಗಳಲ್ಲಿ ಸಹಾಯಮಾಡಿ, ಸಂಪರ್ಕ ತರಗತಿಗಳನ್ನು ಏರ್ಪಡಿಸುವುದಲ್ಲದೇ, ಇವುಗಳಲ್ಲಿ ನಿಯಮಿತ ಪ್ರಮಾಣದ ಹಣವನ್ನು ಠೇವಣಿಯಿಡುವ ಮೂಲಕ ಗ್ರಂಥಾಲಯ ಸೌಲಭ್ಯವನ್ನು ಬಳಸಿಕೊಳ್ಳಬಹುದಾದ ಸೌಲಭ್ಯ ಒದಗಿಸಿವೆ. ಕೆಲವು ಸಂಸ್ಥೆಗಳಲ್ಲಿ ಅಂಚೆಯ ಮೂಲಕವಾಗಿಯೂ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಪುಸ್ತಕಗಳನ್ನು ರವಾನಿಸಿ, ನಿರ್ದಿಷ್ಟ ಅವಧಿಯವರೆಗೆ ಅದನ್ನು ಬಳಸಲು ಅನುಮತಿ ನೀಡುತ್ತಿವೆ. ಮಾಹಿತಿ ತಂತ್ರಜ್ಞಾನದ ಅನ್ವಯಿಕತೆಯಿಂದ ಇದು ಇಂದು ಆಧುನೀಕರಣಗೊಂಡಿದೆ. ಇದರ ಪರಿಣಾಮವಾಗಿ ನೇರ ಮಾಹಿತಿ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳಿಗೆ ಅಗತ್ಯವಾದ ಪಠ್ಯಟಿಪ್ಪಣಿಗಳನ್ನು ಗುರುತುಹಾಕಿಕೊಳ್ಳಲು ಅವಕಾಶವಿದೆ. ಅಂತೆಯೇ, ಟೆಲಿಕಾನ್ಫರೆನ್ಸಿಂಗ್, ಅಂತರ್ಜಾಲದ ಪಠ್ಯಟಿಪ್ಪಣಿಗಳನ್ನು ಗುರುತುಹಾಕಿಕೊಳ್ಳಲು ಅವಕಾಶವಿದೆ. ಅಂತೆಯೇ, ಟೆಲಿಕಾನ್ಫರನ್ಸಿಂಗ್, ಅಂತರ್ಜಾಲದ ಮೂಲಕವಾಗಿಯೂ ವಿಶ್ವವಿದ್ಯಾನಿಲಯದ ಜಾಲ ತಾಣಕ್ಕೆ ಭೇಟಿ ನೀಡಿ, ಮಾಹಿತಿಯನ್ನು ಶೋಧಿಸುವ ಅನುಕೂಲವನ್ನು ಕಲ್ಪಿಸಲಾಗಿದೆ.

**ಸಿದ್ಧಪಾಠಗಳ ತಯಾರಿಕೆ:** ಮುಕ್ತ ವಿಶ್ವವಿದ್ಯಾನಿಲಯ ಹಾಗೂ ದೂರಶಿಕ್ಷಣ ಸಂಸ್ಥೆಗಳು ತಾವು ತಯಾರಿಸುವ ಸಿದ್ಧಪಾಠಗಳ ಗುಣಮಟ್ಟದಿಂದಲೇ ವಿಶಿಷ್ಟ ಸ್ಥಾನದಲ್ಲಿ ನಿಲ್ಲುತ್ತವೆ. ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ನಿಯಮಿತ ವ್ಯವಸ್ಥೆಯಲ್ಲಿರುವ ಪಠ್ಯವಿಷಯವನ್ನೇ ತಮ್ಮಲ್ಲಿಯೂ ಅಳವಡಿಸಿಕೊಂಡಿರುವುದರಿಂದ ಸಿದ್ಧಪಾಠಗಳ ತಯಾರಿಕೆ ಹಾಗೂ ರವಾನೆಯನ್ನು ನಿಯಮಿತ ಶಿಕ್ಷಣ ಸಂಸ್ಥೆಗಳ ನೇರ ತರಗತಿಗಳ ಉಪನ್ಯಾಸಕ್ಕೆ ಪರ್ಯಾಯವೆಂದು ಪರಿಗಣಿಸಲಾಗಿದೆ. ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಲಾದ ಈ ಟಿಪ್ಪಣಿಗಳನ್ನು ಅಂಚೆಯ ಮೂಲಕ ತಲುಪಿಸುವ ವಿಧಾನವನ್ನು ಒಳಗೊಂಡಿದ್ದರೂ, ಅದು ನಿರ್ದಿಷ್ಟ ಅವಧಿಯಲ್ಲಿ ತಲುಪುವುದಿಲ್ಲವೆನ್ನುವ ಕೂಗು ಕೇಳಿಬಂದ ಹಿನ್ನೆಲೆಯಲ್ಲಿ ಈ ಸಿದ್ಧಪಾಠಗಳನ್ನು ದಾಖಲಾತಿಯ ಸಮಯದಲ್ಲಿಯೇ ವಿದ್ಯಾರ್ಥಿಗಳಿಗೆ ವಿತರಿಸುವ ಪರಿಪಾಠ ಆರಂಭವಾಗಿದೆ. ಈ ಸಿದ್ಧಪಾಠಗಳು ಆಯಾ ವಿಷಯಕ್ಷೇತ್ರದ ತಜ್ಞರಿಂದ ರಚಿಸಲ್ಪಡುವುದರಿಂದ ಸಮಗ್ರ ಮಾಹಿತಿಯನ್ನು ಒಳಗೊಂಡಿರುವುದರಿಂದ, ಪ್ರಾದೇಶಿಕ ಭಾಷೆಯಲ್ಲಿಯೂ ದೊರೆಯುವುದರಿಂದ ಹಾಗೂ ಸರಳವಾದ ನಿರೂಪಣೆಯನ್ನು ಹೊಂದಿರುವುದರಿಂದ, ಬಹಳಷ್ಟು ಜನಪ್ರಿಯವಾಗಿವೆ ಇವುಗಳ ಆಳವಾದ ಅಧ್ಯಯನದಿಂದ ಯಾವುದೇ ವಿಷಯದ ಬಗ್ಗೆ ಆಮೂಲಾಗ್ರ ಜ್ಞಾನವನ್ನು ಹೊಂದಬಹುದೆಂಬುದು ವಿದ್ಯಾರ್ಥಿಗಳ ಸರ್ವಮಾನ್ಯ ಅಭಿಪ್ರಾಯವಾಗಿದೆ.

**ಒಂದೇ ಬಾರಿಗೆ ಪದವಿಯನ್ನು ಪಡೆಯುವ ಅವಕಾಶ:** ನಿರ್ದಿಷ್ಟ ವಯೋಮಾನವನ್ನು ತಲುಪಿದ ಯಾವುದೇ ವಿದ್ಯಾರ್ಥಿಗಳು ನಿಗದಿತ ಪಠ್ಯವಸ್ತುವನ್ನು ಅಧ್ಯಯನಮಾಡಿ, ಒಂದೇ ಬಾರಿಗೆ ಪರೀಕ್ಷೆಯನ್ನು ಎದುರಿಸಿ ಪದವಿಯನ್ನು ಪಡೆಯುವ ಸದವಕಾಶವನ್ನು ಕೆಲವು ಮುಕ್ತ ದೂರಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಟ್ಟಿದ್ದವಾದರೂ, ಯುಜಿಸಿ ಸಂಸ್ಥೆಯು ಈ ವಿಷಯದ ಬಗ್ಗೆ ಸ್ವತಂತ್ರ ಸಮಿತಿಯನ್ನು ರಚಿಸಿ, ಅದರ ಮಾರ್ಗದರ್ಶನದಂತೆ 1996–97 ರಿಂದೀಚೆಗೆ ಇಂತಹ ಪದವಿಗಳಿಂದ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಸಾಧ್ಯವಿಲ್ಲವೆಂಬುದನ್ನು ಮನಗಂಡು ಈ ವಿಧಾನವನ್ನು ಮೊಟಕುಗೊಳಿಸಿತು.

**ಆಪ್ತ ಸಲಹಾ ಸೌಲಭ್ಯ:** ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹಾಗೂ ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಣೆ ಹಾಗೂ ಮಾಹಿತಿಯನ್ನು ಸಂಗ್ರಹಿಸುವುದು ಸಾಮಾನ್ಯವಾಗಿ ಕಂಡುಬರುವ ಅಂಶವಾಗಿದೆ. ಇದೆ ರೀತಿಯ ಅಂಶಗಳು ದೂರಶಿಕ್ಷಣ ಸಂಸ್ಥೆಗಳಲ್ಲಿಯೂ ಕಂಡುಬರುತ್ತದೆ. ಈ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಉಂಟಾಗಬಹುದಾದ ಭಯ ಅಥವಾ ಉದ್ವೇಗ ನಿವಾರಣೆ, ಫಲಿತಾಂಶದ ನಂತರದ ದಿನಗಳಲ್ಲಿ ಉದ್ಯೋಗ ಅನ್ವೇಷಣೆಯಲ್ಲಿ ಸಹಕರಿಸುವುದು ಹಾಗೂ ಅದರ ಬಗೆಗಿರುವ ಗೊಂದಲ ನಿವಾರಣೆ, ಅಧ್ಯಯನದ ಸಮಯದಲ್ಲಿ ಉಂಟಾಗುವ ಶೈಕ್ಷಣಿಕ ಸಮಸ್ಯೆಗಳ ಪರಿಹಾರ ಇವೇ ಮೊದಲಾದ ವಿಷಯಗಳಲ್ಲಿ ಆಪ್ತ ಸಲಹೆಯನ್ನು ನೀಡಲಾಗುತ್ತದೆ. ಅಲ್ಲದೇ ಶಿಕ್ಷಣವನ್ನು ಕಾರಣಾಂತರಗಳಿಂದ ಮೊಟಕುಗೊಳಿಸುವುದು, ಅವರಿಗೆ ದೊರೆಯಬಹುದಾದ ವಿದ್ಯಾರ್ಥಿವೇತನ ಇವೇ ಮೊದಲಾದ ಅಂಶಗಳ ಬಗ್ಗೆಯೂ ಇಲ್ಲಿ ಆಪ್ತ ಸಲಹೆಯ ಮೂಲಕ ಪರಿಹಾರ ಸೂಚಿಸಲಾಗುತ್ತದೆ. ಆದರೆ ಇಂತಹ ಸೌಲಭ್ಯಗಳು ಕೇವಲ ಕೇಂದ್ರ ಸ್ಥಾನ ಹಾಗೂ ಆಯ್ದ ಕೆಲವು ಅಧ್ಯಯನ ಕೇಂದ್ರಗಳಲ್ಲಿ ಮಾತ್ರ ದೊರೆಯುತ್ತವೆ. ಇದಕ್ಕೆ ನುರಿತ ಸಮಾಲೋಚಕರ ಅಗತ್ಯವಿರುವುದರಿಂದ ಇಂತಹ ಸೌಲಭ್ಯಗಳು ಕೆಲವೊಮ್ಮೆ ಅರ್ಧದಲ್ಲಿ ನಿಂತುಬಿಡುವ ಸಂಭವವಿರುತ್ತದೆ. ಆದ್ದರಿಂದ ಮುಕ್ತ ದೂರಶಿಕ್ಷಣ ಕೇಂದ್ರಗಳು ಪೂರ್ಣಕಾಲಿಕ ಆಪ್ತಸಲಹಗಾರರನ್ನು ನೇಮಿಸಿಕೊಳ್ಳುವುದೊಳಿತು. ಇದರಿಂದ ದೂರಶಿಕ್ಷಣ ಸಂಸ್ಥೆಗಳ ಜನಪ್ರಿಯತೆ ಇನ್ನಷ್ಟು ಹೆಚ್ಚುತ್ತದೆ.

**ಸಂಪರ್ಕ ತರಗತಿಗಳು:** ದೂರಶಿಕ್ಷಣ ಸಂಸ್ಥೆಗಳಲ್ಲಿ ವರ್ಷಕ್ಕೊಮ್ಮೆ ಸಂಯೋಜಿಸುವ ಸಂಪರ್ಕ ತರಗತಿಗಳು ವಿದ್ಯಾರ್ಥಿಗಳಿಗೆ ವರದಾಯಕವಾಗಿದೆ. ಇಂತಹ ತರಗತಿಗಳಿಗೆ ಹಾಜರಾಗುವುದರಿಂದ ತಾವು ಅಧ್ಯಯನ ಕೈಗೊಂಡ ವಿಷಯದಲ್ಲಿ ಎದುರಾದ ಗೊಂದಲಗಳನ್ನು ಪರಿಹರಿಸಿಕೊಳ್ಳಲು ಸಹಾಯ ದೊರೆಯುತ್ತದೆ. ಇಂತಹ ಸಂಪರ್ಕ ತರಗತಿಗಳನ್ನು ಯಾವುದೇ ಪ್ರದೇಶದಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅವರಿಗೆ ಹತ್ತಿರವಿರುವ ಸ್ಥಳದಲ್ಲಿ ನಡೆಸಲಾಗುತ್ತದೆ. ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ತರಗತಿಗಳಿಗೆ ಸಮಾನವಾಗಿ ಇಂತಹ ಸಂಪರ್ಕ ತರಗತಿಗಳನ್ನು ಏರ್ಪಡಿಸಲಾಗಿರುತ್ತದೆ. ಸಾಮಾನ್ಯವಾಗಿ

Digitised by Bharatavani, CIIL

ಎಂ.ಬಿ.ಎ. ಬಿ.ಎಡ್, ಎಂ.ಎಡ್ ಮುಂತಾದ ಕೆಲವು ವೃತ್ತಿಪರ ಕಾರ್ಯಕ್ರಮಗಳಿಗೆ ಸಂಪರ್ಕ ಕಾರ್ಯಕ್ರಮಗಳ ಹಾಜರಾತಿ ಕಡ್ಡಾಯವಾಗಿರುತ್ತದೆ. ಇನ್ನೂ ಕೆಲವು ಕಾರ್ಯಕ್ರಮಗಳಿಗೆ ಇಂತಹ ತರಗತಿಗಳಿಗೆ ಹಾಜರಾತಿ ಕಡ್ಡಾಯವಾಗಿರುವುದಿಲ್ಲ, ಆದರೆ ತರಗತಿಗೆ ಹಾಜರಾಗುವುದರಿಂದ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆಯುವುದು ಸಾಧ್ಯವಾಗುವುದು ಸಾಧ್ಯವಾಗುತ್ತದೆ. ಇಂತಹ ತರಗತಿಗಳನ್ನು ನಡೆಸುವಾಗ ವಿಶ್ವವಿದ್ಯಾನಿಲಯದಲ್ಲಿರುವ ಪ್ರಾಧ್ಯಾಪಕರಲ್ಲದೇ ಅದೇ ವಿಷಯಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ಸಂಸ್ಥೆಗಳ ವಿಷಯತಜ್ಞರ ನೆರವನ್ನೂ ಪಡೆಯಲಾಗುತ್ತದೆ. ಶಿಕ್ಷಣಾರ್ಥಿಗಳಿಗೆ ಅನುಕೂಲಕರವಾಗಲೆಂಬ ದೃಷ್ಟಿಯಿಂದ ದೂರಶಿಕ್ಷಣ ಕೇಂದ್ರಗಳು ವಿಚಾರಗೋಷ್ಠಿಗಳು, ಸಮ್ಮೇಳನಗಳನ್ನು ಆಯೋಜಿಸಿ ಇಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ವಿಷಯ ಪರಿಣಿತರೊಡನೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಭವಿಷದಲ್ಲಿ ಅನುಕೂಲಕರವಾದ ಸನ್ನಿವೇಶಗಳು ದೊರೆಯುವ ಸಾಧ್ಯತೆಯಿರುತ್ತದೆ.

**ಮೌಲ್ಯಮಾಪನ ವಿಧಾನ:** ಮುಕ್ತ–ದೂರ ಶಿಕ್ಷಣ ವ್ಯವಸ್ಥೆಯಲ್ಲಿನ ಶೈಕ್ಷಣಿಕ ಉತ್ಕೃಷ್ಟತೆ ಹಾಗೂ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಸಂಸ್ಥೆಯು ಸಿದ್ಧಪಡಿಸಿರುವ ಆಂತರಿಕ ಮೌಲ್ಯಮಾಪನ ವ್ಯವಸ್ಥೆಯು ನಿಖರವಾಗಿರಬೇಕು. ಮೌಲ್ಯಮಾಪನ ನಿತ್ಯ ನಿರಂತರವಾದ ಪ್ರಕ್ರಿಯೆಯಾಗಿದ್ದು, ಇದರ ಮೂಲಕ ಶಿಕ್ಷಣಾರ್ಥಿಗಳು ತಮ್ಮ ಶೈಕ್ಷಣಿಕ ದೌರ್ಬಲ್ಯ ಹಾಗೂ ಪ್ರಾಬಲ್ಯಗಳನ್ನು ತಿಳಿಯಲು ಸಹಾಯಕಾರಿಯಾಗಿದೆ. ಈ ವಿದ್ಯಾರ್ಥಿ ಮೌಲ್ಯಮಾಪನ ಪ್ರಕ್ರಿಯೆಯ ಮೂಲಕ ಸಂಸ್ಥೆ ಹಾಗೂ ಅಲ್ಲಿನ ಉಪನ್ಯಾಸಕರೂ ಸಹಾ ತಮ್ಮ ದುರ್ಬಲತೆ ಹಾಗೂ ಉತ್ಕೃಷ್ಟತೆಗಳನ್ನು ಪ್ರತ್ಯೇಕವಾಗಿ ಅರಿಯಲು ಸಾಧ್ಯವಾಗುತ್ತದೆ.

ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಎರಡು ರೀತಿಯಿಂದ ನಡೆಸಬಹುದಾಗಿದೆ. ವಿದ್ಯಾರ್ಥಿಗಳ ಪ್ರಗತಿಯನ್ನು ನಿರ್ಧರಿಸಲು ಆಂತರಿಕ ಮೌಲ್ಯಮಾಪನವನ್ನು ನಡೆಸುವುದು ಒಂದು ಬಗೆ; ಇದಕ್ಕಾಗಿ ಅವರು ರಚಿಸಿರುವ ನಿಬಂಧಗಳ ಗುಣಮಟ್ಟವನ್ನು ನಿರ್ಧರಿಸಿ ಅಂಕಗಳನ್ನು ನೀಡಲಾಗುತ್ತದೆ. ಇದಕ್ಕಾಗಿ ಪ್ರತಿ ಸಿದ್ಧಪಾಠಗಳ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳು ಇಲ್ಲವೇ ಅದಕ್ಕಾಗಿಯೇ ನಿಗದಿಪಡಿಸಿರುವ ನಿರ್ದಿಷ್ಟ ಪ್ರಶ್ನೆಗಳನ್ನು ಆಂತರಿಕ ಮೌಲ್ಯಮಾಪನದ ಪ್ರಶ್ನೆಗಳಾಗಿ ಗೊತ್ತುಪಡಿಸಲಾಗುತ್ತದೆ. ಕೆಲವೊಮ್ಮೆ ಅವರ ಆಂತರಿಕ ಶೈಕ್ಷಣಿಕ ಮೌಲ್ಯಮಾಪನವನ್ನು ಮೌಖಿಕ ಪರೀಕ್ಷೆಯ ಮೂಲಕವಾಗಿಯೂ ನಡೆಸಲಾಗುತ್ತದೆ. ವಿದ್ಯಾರ್ಥಿಗಳು ಆಂತರಿಕ ಮೌಲ್ಯಮಾಪನಕ್ಕಾಗಿ ನಿಗದಿಪಡಿಸಿರುವ ಪ್ರಶ್ನೆಗಳಿಗೆ ಮೌಲಿಕವಾಗಿಯೂ ಉತ್ತರವನ್ನು ಇಲ್ಲವೇ ಪ್ರಬಂಧವನ್ನು ರಚಿಸಲು ಪರಾಮರ್ಶನ ಗ್ರಂಥಗಳನ್ನು ಅಧ್ಯಯನ ಮಾಡುವ ಅವಶ್ಯಕತೆಯಿರುತ್ತದೆ. ವಿದ್ಯಾರ್ಥಿಗಳು ರಚಿಸಿರುವ ಪ್ರಬಂಧಗಳಲ್ಲಿ ಓರೆಕೋರೆಗಳು ಕಂಡುಬಂದಲ್ಲಿ, ಆ ಅಂಶಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲಾಗುತ್ತದೆ. ಇದರಿಂದ ಅವರು ತಮ್ಮ ಮುಂದಿನ ವಾರ್ಷಿಕ ಪರೀಕ್ಷೆಯಲ್ಲಿ ತಮ್ಮ ಉತ್ತರವನ್ನು ಬರೆಯುವ ವಿಧಾನವನ್ನು ಸುಧಾರಿಸಿಕೊಳ್ಳಲು ಸಹಾಯಕಾರಿಯಾಗಿದೆ. ಇಂತಹ ಆಂತರಿಕ ಮೌಲ್ಯಮಾಪನದಿಂದ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಉತ್ತಮ ಕಲಿಕಾ ವಿಧಾನಗಳನ್ನು ಅನುಸರಿಸಬಹುದಾಗಿದೆ.

**ಪಾರಸ್ಪರಿಕ ಅನ್ಯೋನ್ಯಕ್ರಿಯೆ:** ಯಾವುದೇ ರೀತಿಯ ವ್ಯವಸ್ಥೆ ಅದರಲ್ಲೂ ಮುಖ್ಯವಾಗಿ ದೂರಶಿಕ್ಷಣ ವ್ಯವಸ್ಥೆಯ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕೆಂದರೆ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ಮತ್ತು ಬಳಕೆದಾರರು ಹಾಗೂ ಸಂಸ್ಥೆಯ ನಡುವೆ ಆಗಿಂದಾಗ್ಗೆ ಪಾರಸ್ಪರಿಕ ಅನ್ಯೂನ್ಯಕ್ರಿಯೆ ಅಳವಡಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಈ ಅನ್ಯೋನ್ಯಕ್ರಿಯೆ ಶೀಘ್ರತರವಾದ, ನಿಯಮಿತವಾದ ಹಾಗೂ ವಿವರಣಾತ್ಮಕವಾದ ಪ್ರಕ್ರಿಯೆಯಾಗಿದೆ. ಇದು ಗುಣಮಟ್ಟವನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ನಿಯಮಿತ ತರಗತಿಗಳನ್ನು ನಡೆಸುವ ಸಾಮಾನ್ಯ ವಿಶ್ವವಿದ್ಯಾನಿಲಯಗಳು ಪಡೆಯುವಷ್ಟು ಸುಲಭವಾಗಿ ದೂರಶಿಕ್ಷಣ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆ ಪಡೆಯಲು ಸಾಧ್ಯವಾಗುವುದಿಲ್ಲ. ಮುಕ್ತ ದೂರ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳಿಗೆ ರವಾನಿಸಿದ ಆಂತರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದ ಪ್ರಶ್ನೆಗಳ ಸರಣಿ ಹಾಗೂ ವಿದ್ಯಾರ್ಥಿಗಳು ಹಿಂದಿರುಗಿ ಕಳುಹಿಸಿದ ನಿಬಂಧ ರೂಪದಲ್ಲಿರುವ ಉತ್ತರಗಳ ಗುಣಮಟ್ಟ ಹಾಗೂ ಪ್ರತಿಪಾದಿತ ವಿಷಯಗಳು ಪ್ರತಿಕ್ರಿಯೆ ರೂಪದಲ್ಲಿ ಕಾರ್ಯನಿರ್ವಹಿಸುತ್ತವೆ ಎಂದು ಹೇಳಬಹುದು. ಹಾಗೆಯೇ ವಿದ್ಯಾರ್ಥಿಗಳು ಕಳುಹಿಸಿದ ನಿಬಂಧಗಳನ್ನು ಉಪನ್ಯಾಸಕರು ಮೌಲ್ಯಮಾಪನ ಮಾಡಿ, ನಂತರ ಅದರಲ್ಲಿ ಕೊರತೆಯಿರುವ ಅಂಶಗಳ ಬಗ್ಗೆ ಟಿಪ್ಪಣಿ ಬರೆದು ಕಳುಹಿಸಿದ ಅಂಶಗಳೂ ಪ್ರತಿಕ್ರಿಯೆಗಳ ಕಾರ್ಯನಿರ್ವಹಿಸುತ್ತವೆ. ಹೀಗೆ ಪ್ರಶ್ನೆ ಹಾಗೂ ಉತ್ತರ ರೂಪಗಳು ಸಂಸ್ಥೆ ಹಾಗೂ ವಿದ್ಯಾರ್ಥಿಗಳಿಗೆ ಪರಸ್ಪರ ಅನ್ಯೋನ್ಯಕ್ರಿಯೆಗಳಾಗಿ ಕಾರ್ಯನಿರ್ವಹಿಸುತ್ತವೆ ಎಂದು ಬಗೆಯಬಹುದು. ಇದು ಸಂಸ್ಥೆಯ ಉದ್ದೇಶಗಳಿಗೆ ಹಾಗೂ ಉಪನ್ಯಾಸಗಳಿಗೆ ವಿದ್ಯಾರ್ಥಿಗಳು ಸ್ಪಂದಿಸಿದ ಹಾಗೂ ಅವರು ತೋರಿದ ಪ್ರಗತಿಗೆ ದ್ಯೋತಕವಾಗಿರುತ್ತವೆ. ಹಾಗೆಯೇ ಸಂಸ್ಥೆಗಳು ಮುಂದಿನ ದಿನಗಳಿಗೆ ಯಾವ ರೀತಿಯ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬುದನ್ನು ನಿರ್ದರಿಸುವುದಕ್ಕೆ ಮಾರ್ಗಸೂಚಿಯಾಗಿದೆ.

ಮುಕ್ತ ದೂರಶಿಕ್ಷಣ ವಿಶ್ವವಿದ್ಯಾನಿಲಯ ಆಯೋಜಿಸಿಸುವ ಸಂಪರ್ಕ ತರಗತಿಗಳೂ ಅನ್ಯೋನ್ಯಕ್ರಿಯಾ ಪ್ರಕ್ರಿಯೆಯ ಅಂಗವಾಗಿ ಕಾರ್ಯನಿರ್ವಹಿಸುತ್ತವೆ. ಇದರ ಮೂಲಕ ಸಂಸ್ಥೆಯು ನೀಡಿರುವ ಹಲಬಗೆಯ ಸೇವೆಗಳು ಹಾಗೂ ಅವುಗಳಿಗೆ ವಿದ್ಯಾರ್ಥಿಗಳು ನೀಡಿದ ದರ್ಜೆಗಳು ತಿಳಿದುಬರುತ್ತದೆ. ಅಂದರೆ ಈ ಅನ್ಯೋನ್ಯಕ್ರಿಯೆಯಲ್ಲಿ ವಿದ್ಯಾರ್ಥಿಗಳು ತಮ್ಮ ಪದವಿಯ ಗುಣಮಟ್ಟ, ಉದ್ಯೋಗ ಮಾರುಕಟ್ಟೆಯಲ್ಲಿ ಅದಕ್ಕಿರುವ ಬೇಡಿಕೆ, ಸಿದ್ಧಪಾಠಗಳ ರಚನೆ,

Digitised by Bharatavani, CIIL

ಕ್ಲಿಷ್ಟಕರ ವಿಷಯಗಳ ಕುರಿತು ಚರ್ಚೆ, ಉಪನ್ಯಾಸ, ಪರೀಕ್ಷೆ ಹಾಗೂ ಮೌಲ್ಯಮಾಪನ ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳು, ಕೊರತೆಗಳು, ನಿರ್ಧರಿಸುವ ಗುಣಮಟ್ಟ ಹಾಗೂ ಒಟ್ಟಾರೆಯಾಗಿ ನೀಡುವ ಸಮಗ್ರ ದರ್ಜೆ ಇವುಗಳ ಬಗ್ಗೆ ಸಂಸ್ಥೆಯ ಮುಖ್ಯಸ್ಥರು ಅರಿಯಬಹುದು. ಅನ್ಯೋನ್ಯ ಪ್ರಕ್ರಿಯೆಯಿಂದ ದೂರಶಿಕ್ಷಣ ಕೇಂದ್ರಗಳು ತಮ್ಮ ಸೇವೆಯನ್ನು ಉತ್ತಮಪಡಿಸಿಕೊಂಡು, ಸುಧಾರಿತ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಸಹಾಯಕಾರಿಯಾಗಿದೆ.

**ವಿದ್ಯುನ್ಮಾನ ಮಾಧ್ಯಮ:** ಮುಕ್ತ ದೂರಶಿಕ್ಷಣ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಮೂಹ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿವೆ. ದೂರಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ರೇಡಿಯೋವನ್ನು ಪರಿಣಾಮಕಾರಿಯಾದ ಮಾಧ್ಯಮವಾಗಿ ಪರಿಗಣಿಸಲಾಗಿದೆ. ಹಾಗಾಗಿ ನಿಯಮಿತವಾಗಿ, ನಿರ್ದಿಷ್ಟ ಅವಧಿಯಲ್ಲಿ ರೇಡಿಯೋ ಕಾರ್ಯಕ್ರಮಗಳ ಮೂಲಕ ವಿವಿಧ ವಿಷಯಗಳ ಮೇಲೆ ತಯಾರಿಸಿದ ವಿಶೇಷ ಉಪನ್ಯಾಸಗಳನ್ನು ಪ್ರಸಾರಮಾಡಲಾಗುತ್ತದೆ. ಹಾಗೆಯೇ ದೂರದರ್ಶನವೂ ಉತ್ತಮ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ಇದರಲ್ಲಿ ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ಚಿತ್ರಿತವಾದ ದೃಶ್ಯ ತುಣುಕುಗಳನ್ನು ಮೌಖಿಕ ವಿವರಣೆಯೊಡನೆ ಪ್ರಸಾರ ಮಾಡಲಾಗುತ್ತದೆ. ಇವೆರಡೂ ಉತ್ತಮ ಹಾಗೂ ಪರಿಣಾಮಕಾರೀ ಮಾಧ್ಯಮಗಳಾದುದರಿಂದ ಕೆಲವು ಮುಕ್ತ–ದೂರ ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ಎಫ್. ಎಂ. ರೇಡಿಯೋ ಹಾಗೂ ದೂರದರ್ಶನ ಚಾನಲ್‌ಗಳನ್ನು ಹೊಂದಿವೆ. (ಉದಾ: ಕರಾಮುವಿಯ ಜ್ಞಾನವಾಣಿ ಎಫ್.ಎಂ.) ಇದಲ್ಲದೇ ಸಿದ್ಧಪಾಠಗಳೊಡನೆ, ಆಯ್ದ ವಿಷಯಗಳ ಮೇಲೆ ತಯಾರಿಸಲಾಗಿರುವ ಆಡಿಯೋ ಹಾಗೂ ವಿಡಿಯೋ ಕ್ಯಾಸೆಟ್‌ಗಳನ್ನು ಮತ್ತು ವಿಸಿಡಿ., ಡಿವಿಡಿಗಳನ್ನು ಸಹಾ ವಿದ್ಯಾರ್ಥಿಗಳಿಗೆ ರವಾನಿಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಕ್ಲಿಷ್ಟಕರವಾದ ವಿಷಯಗಳು ಸರಳವಾದ ರೀತಿಯಲ್ಲಿ ವಿವರಿಸಲ್ಪಟ್ಟಿರುತ್ತವೆ. ಅಲ್ಲದೇ, ಕೆಲವು ವಿವಿಗಳು ಯುಜಿಸಿಯ ಧನಸಹಾಯದಿಂದ ಸುಸಜ್ಜಿತವಾದ ಸ್ಟುಡಿಯೋ ಹೊಂದಿರುವ ವಿದ್ಯುನ್ಮಾನ ಬಹುಮಾಧ್ಯಮ ಸಂಶೋಧನಾ ಕೇಂದ್ರ (AVRC/EMMRC) ಗಳನ್ನು ಸ್ಥಾಪಿಸಿರುತ್ತವೆ. ಇವುಗಳಲ್ಲಿ ಮುಖ್ಯವಾಗಿ ದೆಹಲಿ, ಪಂಜಾಬ್, ಪಂಜಾಬಿ, ಮಧುರೈ ವಿಶ್ವವಿದ್ಯಾನಿಲಯಗಳು ಇಂತಹ ಮಾಧ್ಯಮ ಅವಲಂಬಿತ ಉಪನ್ಯಾಸಗಳನ್ನು ಪ್ರಸಾರಮಾಡುತ್ತವೆ.

**ದೂರಶಿಕ್ಷಣ ವ್ಯವಸ್ಥೆ ಮತ್ತು ನೇರಸಂಪರ್ಕ ತಂತ್ರಜ್ಞಾನ:** ದೂರಶಿಕ್ಷಣ ಕಲಿಕೆ (ಮುಕ್ತ ಕಲಿಕೆ)ಯಲ್ಲಿ ವಿದ್ಯುನ್ಮಾನ ಕಲಿಕೆಯೆಂದರೆ ಕಂಪ್ಯೂಟರ್ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಹಾಗೂ ಬಹುಮಾಧ್ಯಮ(Multimedia) ಸಾಧನಗಳ ಸಹಾಯದಿಂದ ಅಂತರ್ಜಾಲದ ಮೂಲಕ ವಿದ್ಯಾರ್ಥಿಗಳು ಯಾವುದೇ ದೂರಶಿಕ್ಷಣ ಕಲಿಕಾ ಕೇಂದ್ರಗಳ ನೇರ ಸಂಪರ್ಕಕ್ಕೊಳಪಟ್ಟು, ತಮಗೆ ಅಗತ್ಯವಾದ ಐಚ್ಛಿಕ ವಿಷಯಗಳ ಸಂಯೋಜನೆಯೊಡನೆ ಪದವಿಗೆ ದಾಖಲಾಗಿ, ನಿರ್ದಿಷ್ಟ ಸಮಯದಲ್ಲಿ ಪರೀಕ್ಷೆಗೆ ತಯಾರಾಗಿ, ನೇರ ಸಂಪರ್ಕದೊಡನೆ ಪರೀಕ್ಷೆಯನ್ನು ಕಂಪ್ಯೂಟರ್ ಸಹಾಯದಿಂದ ಬರೆದು, ಅಲ್ಲಿಂದಲೇ ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರವನ್ನು ಪಡೆಯುವ ವ್ಯವಸ್ಥೆಯಾಗಿದೆ.

**ಮಾಹಿತಿ ಸೇವೆ:** ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಅವರಿಗೆ ಬೇಕಾದ ಮಾಹಿತಿಗಳನ್ನು ಸಕಾಲದಲ್ಲಿ ಸಮರ್ಪಕವಾಗಿ ಒದಗಿಸುವ ಮಾಹಿತಿ ಸೇವೆ ಬಹಳ ಮುಖ್ಯವಾದುದು. ಏಕೆಂದರೆ ಈ ವಿದ್ಯಾರ್ಥಿಗಳು ಸತತವಾಗಿ ವಿಶ್ವವಿದ್ಯಾನಿಲಯದ ಕೇಂದ್ರ ಸ್ಥಾನದಲ್ಲಿ ಇರುವುದಿಲ್ಲ. ಪ್ರವೇಶ ಪಡೆಯುವಾಗ, ಸಂಪರ್ಕ ಕಾರ್ಯಗಳಿಗೆ ಮತ್ತು ಪರೀಕ್ಷೆ ಬರೆಯುವಾಗ ಮಾತ್ರ ಈ ವಿದ್ಯಾರ್ಥಿಗಳು ಕೇಂದ್ರ ಸ್ಥಾನದಲ್ಲಿ ಇರಬೇಕಾಗುತ್ತದೆ. ಹೀಗಾಗಿ ದೀರ್ಘಕಾಲ ಅವರು ಅವರ ಸ್ವಂತ ಸ್ಥಳಗಳಲ್ಲಿ ಅಥವಾ ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಇರುತ್ತಾರೆ. ಆದ್ದರಿಂದ ವಿಶ್ವವಿದ್ಯಾನಿಲಯದಿಂದ ತಮಗೆ ಬೇಕಾದ ಮಾಹಿತಿಗಳನ್ನು (ಸಂಪರ್ಕ ಕಾರ್ಯಕ್ರಮದ ದಿನಾಂಕಗಳು ನಿಯೋಜಿತ ಕಾರ್ಯಗಳು ಮತ್ತು ಅವುಗಳನ್ನು ಸಲ್ಲಿಸಬೇಕಾದ ಅಂತಿಮ ದಿನಾಂಕಗಳು, ಪರೀಕ್ಷೆಗಳ ದಿನಾಂಕಗಳು ಮತ್ತು ವೇಳಾಪಟ್ಟಿ, ಫಲಿತಾಂಶ ಪ್ರಕಟಣೆ ಇತರ ಯಾವುದಾದರೂ ಮಾಹಿತಿ) ಸಕಾಲದಲ್ಲಿ ಪಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾಹಿತಿ ಸೇವೆ ಸಮರ್ಪಕ ರೀತಿಯಲ್ಲಿ ವ್ಯವಸ್ಥಿತವಾಗಬೇಕಾಗುತ್ತದೆ.

**ವಿದ್ಯಾರ್ಥಿ ನಿಲಯಗಳು:** ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಬೇರೆ ದೂರದ ಸ್ಥಳಗಳಿಂದ ಪ್ರವೇಶ ಪಡೆಯಲು ಸಂಪರ್ಕ ಕಾರ್ಯಕ್ರಮಕ್ಕೆ ಹಾಜರಾಗಲು ಮತ್ತು ಪರೀಕ್ಷೆ ಬರೆಯಲು ವಿಶ್ವವಿದ್ಯಾನಿಲಯದ ಕೇಂದ್ರಸ್ಥಳಕ್ಕೆ ಬಂದು ಅಲ್ಪ ಕಾಲಾವಧಿವರೆಗೆ ಇರಬೇಕಾಗುತ್ತದೆ. ಇದಕ್ಕಾಗಿ ಕೇಂದ್ರ ಸ್ಥಾನದಲ್ಲಿ ಪುರುಷರಿಗೆ, ಮಹಿಳೆಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳು ಇರಬೇಕಾಗುತ್ತದೆ. ಇವುಗಳಲ್ಲಿ ಎಟುಕುವ ಪ್ರಮಾಣದಲ್ಲಿ ಇರಬೇಕಾದುದು ಮುಖ್ಯ. ಹಾಗೆಯೇ ವಿದ್ಯಾರ್ಥಿನಿಲಯಗಳಲ್ಲಿ ನಿರ್ವಹಣೆ ಸಮರ್ಪಕ ರೀತಿಯಲ್ಲಿ ಆಗಬೇಕು. ವಿದ್ಯಾರ್ಥಿನಿಲಯಗಳಲ್ಲಿ ತಾತ್ಕಾಲಿಕವಾಗಿಯಾದರೂ ಉಪಹಾರ ಭೋಜನ ವ್ಯವಸ್ಥೆ ಮಾಡುವುದು ಉತ್ತಮ, ಸಮೀಪದಲ್ಲಿಯೇ ವಿಶ್ವವಿದ್ಯಾನಿಲಯದ ಉಪಹಾರ ಗೃಹವಿದ್ದರೆ ಈ ಸಮಸ್ಯೆ ಇರುವುದಿಲ್ಲ.

**ವಾಹನ ಸೌಕರ್ಯ:** ದೂರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮಕ್ಕೆ, ಪರೀಕ್ಷೆಗೆ ಬರುವಾ ರೈಲ್ವೆ, ಬಸ್ ನಿಲ್ದಾಣದಿಂದ ವಿಶ್ವವಿದ್ಯಾನಿಲಯದ ಕೇಂದ್ರಸ್ಥಾನವನ್ನು ತಲುಪುವಾಗ ಕೆಲವು ವೇಳೆ ಆಟೋಚಾಲಕರಿಂದ ಸ್ವಲ್ಪ ತೊಂದರೆಗಳಾಗುವ ಸಾಧ್ಯತೆಯಿದೆ ಇದನ್ನು ಪರಿಹರಿಸಲು ಮುಕ್ತ ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಆಟೋ/ಟ್ಯಾಕ್ಸಿ/ಬಸ್ ಹೊಂದಿದ್ದು ಬೇರೆ ಊರುಗಳಿಂದ ಬರುವ ವಿದ್ಯಾರ್ಥಿಗಳಿಗೆ ಶುಲ್ಕ ಸಹಿತ ವಾಹನ ಸೌಕರ್ಯ ಒದಗಿಸಬಹುದು.

Digitised by Bharatavani, CIIL

**ವಿದ್ಯಾರ್ಥಿ ಕುಂದುಕೊರತೆ ಸೇವೆ:** ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಅವರದೇ ಆದ ಸಮಸ್ಯೆ, ಕುಂದುಕೊರತೆಗಳಿರುತ್ತವೆ. ಇವು ಶೈಕ್ಷಣಿಕ ವಿಚಾರಗಳಿಗೆ ಸಂಬಂಧಿಸಿರಬಹುದು, ವಿಶ್ವವಿದ್ಯಾನಿಲಯದ ಅಧಿಕಾರಿಗಳ ವರ್ತನೆಗೆ ಸಂಬಂಧಿಸಿರಬಹುದು, ವ್ಯವಸ್ಥೆಯಿಂದ ಅವರಿಗೆ ಆಗಿರುವ ಉಪೇಕ್ಷೆ, ಅನ್ಯಾಯವಾಗಿರಬಹುದು, ತೀರ ವೈಯಕ್ತಿಕವಾದ ಆರೋಗ್ಯ, ಹೊಂದಾಣಿಕೆಗೆ ಸಂಬಂಧಿಸಿರಬಹುದು ವಿದ್ಯಾರ್ಥಿನಿಯರಿಗೆ ಅವರದೇ ಆದ ಸಮಸ್ಯೆಗಳಿರುತ್ತವೆ. ಈ ಎಲ್ಲಾ ಸಮಸ್ಯೆಗಳನ್ನು / ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನವು ಸಮಾಲೋಚನೆಗೆ ನೀಡಲು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ಕುಂದುಕೊರತೆ (Student Grievance Redresal cells) ತೆರೆಯಬೇಕಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಲಿಖಿತ ಮೂಲಕ ಇಲ್ಲಿ ಸಲ್ಲಿಸಬೇಕು. ಈ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯ ನೇಮಿಸಿರುವ ಒಂದು ಸಮಿತಿ ವಿದ್ಯಾರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ ಅವಶ್ಯಕತೆಯಿದ್ದರೆ ಸೂಕ್ತ ಕ್ರಮ ಕೈಗೊಂಡು, ಮಾರ್ಗದರ್ಶನ / ಸಮಾಲೋಚನೆ ನೀಡಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ.

**ಇತರ ಸೇವೆಗಳು :** ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅಗತ್ಯವಾದ ಇತರ ಕೆಲವು ಸೇವೆಗಳಿವೆ. X-rox ಸೌಲಭ್ಯ ಕುಡಿಯುವ ನೀರಿನ ಸೌಲಭ್ಯ ದೂರವಾಣಿ / ಇಂಟರ್‌ನೆಟ್ ಸೌಲಭ್ಯ ಸಾಕಷ್ಟು ಸಂಖ್ಯೆಯಲ್ಲಿ ಸ್ತ್ರೀ/ಪುರುಷರಿಗೆ ಪ್ರತ್ಯೇಕ ಶೌಚಾಲಯಗಳು, ಸ್ಟೇಷನರಿ ಸ್ಟಾಲ್–ಇವು ಇತರ ಸೇವೆಗಳಲ್ಲಿ ಸೇರಿವೆ.

ಈ ಎಲ್ಲಾ ವಿದ್ಯಾರ್ಥಿ ಬೆಂಬಲ ಸೇವೆಗಳನ್ನು ಸಮರ್ಪಕ ರೀತಿಯಲ್ಲಿ ವ್ಯವಸ್ಥೆ ಗೊಳಿಸಬೇಕಾದುದು ಬಹಳ ಮುಖ್ಯ. ಈ ಸೇವೆಗಳನ್ನು ಮೇಲ್ವಿಚಾರಣೆ ಮಾಡಲು ಒಬ್ಬ ಅಧಿಕಾರಿಯನ್ನು (ಉಪಕುಲ ಸಚಿವರ ಮಟ್ಟದ) ನೇಮಿಸಬೇಕು. ಪ್ರತಿಯೊಂದು ಸೇವೆಯ ಜವಾಬ್ದಾರಿಯನ್ನು ಒಬ್ಬ ಗುಮಾಸ್ತನಿಗೆ ವಹಿಸಬೇಕು. ಇವರುಗಳ ಕೆಲಸಗಳನ್ನು ಒಬ್ಬ ಗುಮಾಸ್ತನಿಗೆ ವಹಿಸಬೇಕು. ಇವರುಗಳ ಕೆಲಸಗಳನ್ನು ನಿಗಾವಣೆಗೆ ಮಾಡುವುದರ ಕಡೆಗೆ ವಿದ್ಯಾರ್ಥಿ ಬೆಂಬಲ ಸೇವೆಗಳ ಉಪಕುಲಸಚಿವರು ಗಮನ ನೀಡಬೇಕು.

ಅಂತರ್ಜಾಲದ ಕ್ರಾಂತಿಯಿಂದ ಹಾಗೂ ಶೈಕ್ಷಣಿಕ ತಂತ್ರಾಂಶದ ಸುಧಾರಣೆಯಿಂದಾಗಿ ಇಂದು ವಿಶ್ವದಾದ್ಯಂತ ಹಲವಾರು ನೇರಸಂಪರ್ಕ ಕಲಿಕಾ ಕೇಂದ್ರಗಳು ಸ್ಥಾಪಿಸಲ್ಪಟ್ಟವೆ. ಇವುಗಳ ಜನಪ್ರಿಯತೆಯಿಂದಾಗಿ ಜಗತ್ತಿನಾದ್ಯಂತ ಜನರು ಅಧ್ಯಯನವನ್ನು ಮುಂದುವರೆಸುತ್ತಿದ್ದಾರೆ ಎಂಬುದು ವಿವಿಧ ಸಂಶೋಧನೆಗಳಿಂದ ದೃಢಪಟ್ಟಿದೆ.

–ಗೋಪಾಲಸ್ವಾಮಿ ಎಂ.

–ಕುಮಾರ್ ಎಸ್.ಎನ್.



## ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆ

**ಪೀಠಿಕೆ:** ಇಂದಿನ ಆಧುನಿಕ ಜಗತ್ತಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಭಿವೃದ್ಧಿಯಾದಂತೆಲ್ಲಾ, ಅದರ ಪರಿಣಾಮ ಶಿಕ್ಷಣ ಕ್ಷೇತ್ರದ ಮೇಲೂ ಕಾಣಲಾರಂಭಿಸಿದೆ. ಇದರಿಂದ ಹಲವಾರು ಶಿಕ್ಷಣ ಸಂಸ್ಥೆಗಳು, ಉನ್ನತ ಶಿಕ್ಷಣ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಗಿರುವಂತೆಯೇ, ಶಿಕ್ಷಣ ಸಾರ್ವತ್ರೀಕರಣದ ದ್ಯೋತಕವಾದ ಮುಕ್ತ ಹಾಗೂ ದೂರಶಿಕ್ಷಣ ಸಂಸ್ಥೆಗಳು ಸ್ಥಾಪನೆಗೊಂಡಿವೆ. ಇದಲ್ಲದೇ ನೇರ ಮಾಹಿತಿ ಮತ್ತು ವಿದ್ಯುನ್ಮಾನ ಶಿಕ್ಷಣ ಸಂಸ್ಥೆಗಳೂ ಸಹಾ ಕಾರ್ಯಾರಂಭ ಮಾಡಿವೆ. ಇವುಗಳಿಂದಾಗಿ ಮುಕ್ತ ಮತ್ತು ದೂರಶಿಕ್ಷಣ ಸಂಸ್ಥೆಗಳು ನಿಯಮಿತ ಸಂಸ್ಥೆಗಳಿಗೆ ಸ್ಪರ್ಧೆಯೊಡ್ಡುಯತ್ತಿವೆ ಎಂದರೆ ತಪ್ಪಾಗಲಾರದು. ದಾಖಲಾತಿಗೆ ಸಂಬಂಧಿಸಿದಂತೆ ಇರುವ ಮೃದುನಿಯಮಗಳು, ಉತ್ಕೃಷ್ಟ ಮಟ್ಟದ ಪಠ್ಯವಸ್ತು, ವಿದ್ಯಾರ್ಥಿಸ್ನೇಹಿ ಪರೀಕ್ಷಾ ಪದ್ಧತಿ ಹಾಗೂ ಅಂತಾಶಾಸ್ತ್ರೀಯ ಪಠ್ಯವಿಷಯಗಳು ಇವೇ ಮೊದಲಾದ ಕಾರಣಗಳಿಂದಾಗಿ ದೂರ ಮತ್ತು ಮುಕ್ತ ಶಿಕ್ಷಣ ಸಂಸ್ಥೆಗಳು ಜನಪ್ರಿಯವಾಗಿವೆ. ಹೆಚ್ಚುತ್ತಿರುವ ಕೌಶಲ್ಯಾಧಾರಿತ ತರಬೇತಿಯ ಅವಶ್ಯಕತೆ ಹಾಗೂ ತಂತ್ರಜ್ಞಾನಾಧಾರಿತವಾಗಿ ಅಧಿಕ ಸಂಖ್ಯೆಯ ವಿಷಯಗಳನ್ನು ಕಲಿಯುವ ಅವಕಾಶಗಳಿಂದಾಗಿ ದೂರ ಮತ್ತು ಮುಕ್ತ ಶಿಕ್ಷಣ ಸಂಸ್ಥೆಗಳು ಯಶಸ್ವಿಯಾಗಿವೆ. ಯುನೆಸ್ಕೋ ಸಂಸ್ಥೆಯೂ ಸಹಾ ಶಿಕ್ಷಣ ಕ್ಷೇತ್ರದಲ್ಲಿ ಕೌಶಲ್ಯ, ಸಾಮರ್ಥ್ಯ ಹಾಗೂ ಸಹಕಾರ ಅಭಿವೃದ್ಧಿಗೆ ಒತ್ತುನೀಡಿರುವುದರಿಂದ ದೂರ ಮುಕ್ತ ಶಿಕ್ಷಣ ಸಂಸ್ಥೆಗಳು ನೆಲೆಯೂರಲು ಸಹಾಯಕಾರಿಯಾಗಿದೆ.

**ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆ:**

ಶಿಕ್ಷಣ ಹಾಗೂ ತರಬೇತಿಗೆ ಮುಕ್ತ ಅವಕಾಶ ಕಲ್ಪಿಸುವ, ಸಮಯ ಹಾಗೂ ಸ್ಥಳದ ಪರಿಮಿತಿಯಿಲ್ಲದೆ ಕಲಿಕೆಯನ್ನು ಬೆಂಬಲಿಸುವ ಹಾಗೂ ವಿದ್ಯಾರ್ಥಿಗಳಿಗೆ ಸರಳವಾದ ರೀತಿಯಲ್ಲಿ ವಿಷಯಗಳನ್ನು ಕಲಿಯಲು ಸಹಕರಿಸುವ ವಿಧಾನವೇ ದೂರ ಶಿಕ್ಷಣ ಮತ್ತು ಮುಕ್ತ ಶಿಕ್ಷಣ ವಿಧಾನವೆಂದು ಕರೆಯಬಹುದು. ಮುಕ್ತ ಮತ್ತು ದೂರ ಶಿಕ್ಷಣ ಸಂಸ್ಥೆಗಳು ತಮ್ಮ ಕಾರ್ಯವೈಖರಿಯಲ್ಲಿ ಆಧುನಿಕತೆಯ ತಂತ್ರಗಳನ್ನು ಒಳಗೊಂಡಿರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡುತ್ತಿವೆ. ಇದರಿಂದಾಗಿ ತಮ್ಮ ವೈಯಕ್ತಿಕ ಕಾರಣಗಳಿಂದ ನಿಯಮಿತ ಶಿಕ್ಷಣ ಸಂಸ್ಥೆಗಳಿಗೆ ದಾಖಲಾಗಲು ಸಾಧ್ಯವಿಲ್ಲದ ಎಲ್ಲ ಸ್ತರದ ಶಿಕ್ಷಣಾಸಕ್ತರೂ ಇಲ್ಲಿಗೆ ದಾಖಲಾಗಿ ಶಿಕ್ಷಣವನ್ನು ಪಡೆಯಲು ಸಹಾಯಕಾರಿಯಾಗಿದೆ.

**ಮುಕ್ತ ಮತ್ತು ದೂರ ಶಿಕ್ಷಣ ಸಂಸ್ಥೆಯ ಬೆಳವಣಿಗೆಯ ವಿವಿಧ ಹಂತಗಳು:**

ಇಂದು ಸಮಾಜದ ಎಲ್ಲ ಸ್ತರದ ಜನರನ್ನು ತಲುಪಿ ಅತ್ಯಂತ ಜನಪ್ರಿಯವಾಗಿರುವ ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆಯ ಬೆಳವಣಿಗೆಯಲ್ಲಿ ನಾಲ್ಕು ಪ್ರಮುಖ ಹಂತಗಳನ್ನು ಗುರ್ತಿಸಬಹುದಾಗಿದೆ.

Digitised by Bharatavani, CIIL

**1. ಅಂಚೆ ತೆರಪಿನ ವ್ಯವಸ್ಥೆ:** ಈ ವ್ಯವಸ್ಥೆಯಲ್ಲಿ ಶಿಕ್ಷಣ ಸಂಸ್ಥೆಗೆ ದಾಖಲಾದ ವಿದ್ಯಾರ್ಥಿಗಳಿಗೆ ಅಂಚೆಯ ಮೂಲಕ ಸಿದ್ಧಪಾಠಗಳನ್ನು ತಲುಪಿಸಿ, ಅದಕ್ಕೆ ಪೂರಕವಾದ ದೃಕ್‌ಶ್ರವಣ ಸಾಧನಗಳನ್ನು ರವಾನಿಸಿ, ವಿದ್ಯಾರ್ಥಿ ಹಾಗೂ ಸಂಸ್ಥೆಯ ನಡುವೆ ಅಂಚೆಯ ಮೂಲಕ ರವಾನಿಸುವ ಪ್ರತಿಕ್ರಿಯೆಗಳನ್ನು ಹಾಗೂ ಅವಕ್ಕೆ ಸೂಕ್ತ ಪರಿಹಾರಗಳನ್ನು ಒದಗಿಸಲಾಗುತ್ತಿತ್ತು.

**2. ಶೈಕ್ಷಣಿಕ ದೂರದರ್ಶನ ಅಥವಾ ರೇಡಿಯೋ ವ್ಯವಸ್ಥೆ:** ಈ ವ್ಯವಸ್ಥೆಯಲ್ಲಿ ಮುಕ್ತ ಶಿಕ್ಷಣ ಸಂಸ್ಥೆಗೆ ದಾಖಲಾದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ನಿರ್ದಿಷ್ಟ ಸಮಯದಲ್ಲಿ ಸ್ಥಳೀಯ ದೂರದರ್ಶನ ಕೇಂದ್ರ ಇಲ್ಲವೇ ರೇಡಿಯೋ ಕೇಂದ್ರಗಳ ಮೂಲ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಸಿದ್ಧಪಡಿಸಿದ ಉಪನ್ಯಾಸಗಳನ್ನು ಪ್ರಸಾರ ಮಾಡಲಾಗುತ್ತಿತ್ತು. ಈ ಕಾರ್ಯಕ್ರಮಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲಿಯೂ ಅತ್ಯಂತ ಯಶಸ್ವೀ ಮಾಧ್ಯಮವಾಗಿ ಕಾರ್ಯನಿರ್ವಹಿಸಿವೆ.

**3. ಬಹುಮಾಧ್ಯಮ ವ್ಯವಸ್ಥೆ:** ಈ ವ್ಯವಸ್ಥೆಯಲ್ಲಿ ಪಠ್ಯ, ದೃಶ್ಯ, ಶ್ರವಣ ಹಾಗೂ ಗಣಕಾಧಾರಿತ ಉಪಕರಣಗಳನ್ನು ಬಳಸಿ ಪರಿಣಾಮಕಾರಿಯಾದ ಬೋಧನಾ ಸಾಧನಗಳನ್ನು ಬಳಸಿ ತಯಾರಿಸಿದ ಪ್ರತಿಕ್ರಿಯಾತ್ಮಕ ಸಿದ್ಧಪಾಠಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿತ್ತು. ಇದರಿಂದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ವೃದ್ಧಿಸಲು ಕಾರಣವಾಗಿತ್ತು.

**4. ಅಂತರ್ಜಾಲಾಧಾರಿತ ವ್ಯವಸ್ಥೆ:** ಈ ವ್ಯವಸ್ಥೆಯಲ್ಲಿ ಬಹುಮಾಧ್ಯಮ ಸಾಧನಗಳ ಮೂಲಕ ತಯಾರಿಸಿದ ಸಿದ್ಧಪಾಠಗಳನ್ನು ಗಣಕಯಂತ್ರ ಮತ್ತು ಅಂತರ್ಜಾಲದ ಜಾಲತಾಣದ ಮೂಲಕ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ. ಹಾಗೆಯೇ ಕೆಲವು ದತ್ತಾಂಶ ಮೂಲಗಳು ಮತ್ತು ವಿದ್ಯುನ್ಮಾನ ಗ್ರಂಥಾಲಯ ತಾಣಗಳನ್ನು ನೇರವಾಗಿ ಅನ್ವೇಷಿಸಲು ಸಹಾಯ ಮಾಡುತ್ತಿತ್ತು.

ಈ ಎಲ್ಲ ಹಂತಗಳನ್ನು ದಾಟಿ ಬಂದಿರುವ ದೂರ ಮತ್ತು ಮುಕ್ತ ಶಿಕ್ಷಣ ವ್ಯವಸ್ಥೆಯು ಮಾಹಿತಿ ತಂತ್ರಜ್ಞಾನದ ಸಮರ್ಥ ಬಳಕೆಯ ಮೂಲಕ ಅಸಾಂಪ್ರದಾಯಿಕ ಶಿಕ್ಷಣ ವಲಯದಲ್ಲಿ ಸಂಚಲನವನ್ನುಂಟುಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

**ಕಾರ್ಯವ್ಯಾಪ್ತಿ:** ಮುಕ್ತ ಹಾಗೂ ದೂರ ಶಿಕ್ಷಣ ಸಂಸ್ಥೆಗಳು ಸಾಮಾನ್ಯವಾಗಿ ಈ ಕೆಳಕಂಡ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

1. ಸಾಮಾನ್ಯ ಶಿಕ್ಷಣ
2. ಶಿಕ್ಷಕ ತರಬೇತಿ
3. ಕೌಶಲ್ಯಾಧಾರಿತ ಮುಂದುವರಿಕೆ ಶಿಕ್ಷಣ
4. ಅಸಾಂಪ್ರದಾಯಿಕ ಶಿಕ್ಷಣ
5. ಉನ್ನತ ಶಿಕ್ಷಣ

**ದೂರಶಿಕ್ಷಣ ಪ್ರವೇಶ ನಿಯಮಗಳು:**

ಮುಕ್ತ ಹಾಗೂ ದೂರರಶಿಕ್ಷಣ ವ್ಯವಸ್ಥೆಯ ಪ್ರವೇಶಾತಿಯಲ್ಲಿ ಎರಡು ಕ್ರಮಗಳಿವೆ. ಅವುಗಳೆಂದರೆ,

01. ನಿಯಮಿತ ಶಿಕ್ಷಣ ವಿಧಾನ

02. ಮುಕ್ತ ಶಿಕ್ಷಣ ವಿಧಾನ

ಇದರಲ್ಲಿ ಮೊದಲನೆಯದಾದ ನಿಯಮಿತ ಶಿಕ್ಷಣ ವಿಧಾನದ ಮೂಲಕ ದಾಖಲಾಗಲು ಶಿಕ್ಷಣಾರ್ಥಿಗಳು ಇತರ ಸಾಮಾನ್ಯ ಸಂಸ್ಥೆಗಳ ಕ್ರಮದಲ್ಲಿ ದಾಖಲಾಗಲು ಅವಶ್ಯಕವಾದ ಪೂರಕ ಮೂಲಕ ಶಿಕ್ಷಣವನ್ನು ಪಡೆದಿರಬೇಕಾದದ್ದು ಅನಿವಾರ್ಯವಾಗಿದೆ.

ಹಾಗೆಯೇ ಮುಕ್ತ ಪದ್ಧತಿಯ ಮೂಲಕ ದಾಖಲಾಗಲು ಬಯಸುವ ವಿದ್ಯಾರ್ಥಿಗಳು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ, ಅವಶ್ಯಕವಾದ ಮೂಲಶಿಕ್ಷಣವನ್ನು ಹೊಂದಿಲ್ಲದಿದ್ದರೂ ದಾಖಲಾಗುವ ಹಾಗೂ ಶಿಕ್ಷಣವನ್ನು ಮುಂದುವರೆಸುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಈ ರೀತಿಯ ದಾಖಲಾತಿಗಳು ಕೇವಲ ಸರ್ಟಿಫಿಕೇಟ್ ಹಾಗೂ ಡಿಪ್ಲೋಮ ತರಗತಿಗಳಿಗೆ ಸೀಮಿತವಾಗಿವೆ. ಮುಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಕೊಡಮಾಡುವ ಕೆಲವು ವೃತ್ತಿಪರ ವಿಷಯಗಳ ಶಿಕ್ಷಣಕ್ಕೆ ದಾಖಲಾಗಲು ಶಿಕ್ಷಣಾರ್ಥಿಗಳು ಸಂಬಂಧಿತ ಕ್ಷೇತ್ರದಲ್ಲಿ ನಿರ್ದಿಷ್ಟ ಅವಧಿಯ ಕಾರ್ಯಾನುಭವ, ಪೂರಕ ಮೂಲಶಿಕ್ಷಣದಲ್ಲಿ ಉತ್ತಮ ಅಂಕಗಳು ಹಾಗೂ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವ ಅವಶ್ಯಕತೆಯಿರುತ್ತದೆ.

ಹಾಗೆಯೇ ಮುಕ್ತ ಪದ್ಧತಿಯ ಮೂಲಕ ದಾಖಲಾಗಲು ಬಯಸುವ ವಿದ್ಯಾರ್ಥಿಗಳು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ, ಅವಶ್ಯಕವಾದ ಮೂಲಶಿಕ್ಷಣವನ್ನು ಹೊಂದಿಲ್ಲದಿದ್ದರೂ ದಾಖಲಾಗುವ ಹಾಗೂ ಶಿಕ್ಷಣವನ್ನು ಮುಂದುವರೆಸುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಈ ರೀತಿಯ ದಾಖಲಾತಿಗಳು ಕೇವಲ ಸರ್ಟಿಫಿಕೇಟ್ ಹಾಗೂ ಡಿಪ್ಲೋಮ ತರಗತಿಗಳಿಗೆ ಸೀಮಿತವಾಗಿವೆ. ಮುಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಕೊಡಮಾಡುವ ಕೆಲವು ವೃತ್ತಿಪರ ವಿಷಯಗಳ ಶಿಕ್ಷಣಕ್ಕೆ ದಾಖಲಾಗುವ ಶಿಕ್ಷಣಾರ್ಥಿಗಳು ಸಂಬಂಧಿತ ಕ್ಷೇತ್ರದಲ್ಲಿ ನಿರ್ದಿಷ್ಟ ಅವಧಿಯ ಕಾರ್ಯಾನುಭವ, ಪೂರಕ ಮೂಲಶಿಕ್ಷಣದಲ್ಲಿ ಉತ್ತಮ ಅಂಕಗಳು ಹಾಗೂ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವ ಅವಶ್ಯಕತೆಯಿರುತ್ತದೆ. ಹಾಗೆಯೇ ದಾಖಲಾತಿಗಾಗಿ ಪೈಪೋಟಿಯು ಹೆಚ್ಚಾಗಿದ್ದಾಗ ಸೀಮಿತ ಅನುಪಾತದಡಿಯಲ್ಲಿ ಸಂದರ್ಶನ ನಡೆಸಿಯೂ ಸಹಾ ಸದರಿ ಶಿಕ್ಷಣ ವ್ಯವಸ್ಥೆಗೆ ದಾಖಲಾತಿಯನ್ನು ನೀಡಲಾಗುತ್ತದೆ.

**ದೂರ ಹಾಗೂ ಮುಕ್ತ ಶಿಕ್ಷಣ ಸಂಸ್ಥೆಗಳ ಕಾರ್ಯಕ್ರಮಗಳು:**

ದೂರ ಶಿಕ್ಷಣ ಸಂಸ್ಥೆಗಳು ಸಾಮಾನ್ಯವಾಗಿ ಸಾಂಪ್ರದಾಯಿಕ ಶಿಕ್ಷಣ ಸ್ಥೆಗಳು ನೀಡುವ ಎಲ್ಲ ಬಗೆಯ ಶಿಕ್ಷಣವನ್ನು ನೀಡುತ್ತಿವೆ. ಅಂದರೆ ಸರ್ಟಿಫಿಕೇಟ್, ಡಿಪ್ಲೊಮ, ಪದವಿ, ಸ್ನಾಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೋಮ, ಎಂ.ಫಿಲ್., ಹಾಗೂ

Digitised by Bharatavani, CIIL

ಪಿ.ಹೆಚ್.ಡಿ. ಅಧ್ಯಯನವನ್ನು ಹಲವಾರು ವಿಷಯ ಕ್ಷೇತ್ರದಲ್ಲಿ ಮಾಡಬಹುದಾಗಿದೆ.

ಇಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಅಧ್ಯಯನ ಕೈಗೊಳ್ಳುವ ವಿಷಯಕ್ಷೇತ್ರದ ಆಯ್ಕೆಗೆ ಸ್ವಾತಂತ್ರ್ಯವಿರುತ್ತದೆ. ಇಲ್ಲಿ ಅಧ್ಯಯನಶೀಲರಾಗುವ ಬಹುತೇಕ ವಿದ್ಯಾರ್ಥಿಗಳು ತಮ್ಮ ಮುಂದಿನ ವೃತ್ತಿ ಜೀವನಕ್ಕೆ ಅವಶ್ಯಕವಾದ ವಿಷಯವನ್ನು ಕಲಿಯಲು ಬಯಸುವುದರಿಂದ, ಕೌಶಲ್ಯ ಅಭಿವೃದ್ಧಿಗೆ ಪೂರಕವಾದ ವಿಷಯಗಳನ್ನು ಈ ವ್ಯವಸ್ಥೆಯಲ್ಲಿ ಸೇರಿಸಲಾಗಿರುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಅಗತ್ಯವಾದ ರೀತಿಯಲ್ಲಿ ವಿಷಯಗಳ ಸಂಯೋಜನೆ ಮಾಡಿಕೊಳ್ಳುವ ಮೂಲಕ ಅಧ್ಯಯನ ಕೈಗೊಳ್ಳುವ ಮೃದು ಶಿಕ್ಷಣ ವ್ಯವಸ್ಥೆಯನ್ನು ಮುಕ್ತ ಶಿಕ್ಷಣ ಸಂಸ್ಥೆಗಳು ಹೊಂದಿರುತ್ತವೆ ಇದೀಗ ತಾಂತ್ರಿಕ ಹಾಗೂ ವೈದ್ಯಕೀಯ ವಿಷಯಗಳನ್ನು ಈ ವ್ಯವಸ್ಥೆಯಲ್ಲಿ ಕಲಿಸಲಾಗುತ್ತಿದೆ.

**ಬೋಧನಾ ವಿಧಾನಗಳು:**

ದೂರ ಮತ್ತು ಮುಕ್ತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಕಾರ್ಥಿಗಳ ಹಿತದೃಷ್ಟಿಯಿಂದ ಹಲವಾರು ವಿನೂತನ ಬಗೆಯ ಬೋಧನಾ ವಿಧಾನಗಳನ್ನು ಅಳವಡಿಸಲಾಗಿರುತ್ತದೆ. ಇದರಿಂದಾಗಿ ನಿಯಮಿತ ವಿಧಾನದಿಂದ ದೂರದ ಪ್ರದೇಶಗಳಲ್ಲಿದ್ದು, ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಂಡು, ತಮ್ಮ ಮುಂದಿನ ವೃತ್ತಿ ಜೀವನಕ್ಕೆ ಅಗತ್ಯವಾದ ವಿಷಯಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಹಾಯಕವಾಗುವಂತೆ ಕೆಲವು ನೂತನ ಕ್ರಮಗಳನ್ನನುಸರಿಸಿ ಸಿದ್ಧಪಡಿಸಲಾದ ಬೋಧನಾ ಕ್ರಮಗಳು ಕಲಿಕಾರ್ಥಿಗಳಿಗೆ ಸಹಾಯಕವಾಗಿವೆ. ಇವುಗಳೆಂದರೆ:

**1. ಸಂಪರ್ಕ ಕಾರ್ಯಕ್ರಮಗಳು:** ನಿಗದಿಪಡಿಸಲಾದ ಪಠ್ಯವಸ್ತುವಿನ ಅನ್ವಯ ನುರಿತ, ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಸಿದ್ಧಪಡಿಸಲಾದ ಸಿದ್ಧಪಾಠಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಿ, ಅದರ ಅಧ್ಯಯನ ಕೈಗೊಳ್ಳಲು ಕಾಲಾವಕಾಶ ನೀಡಿ, ನಂತರ ಅಂತಿಮ ಪರೀಕ್ಷೆಗೆ ದಿನಗಳು ಸಮೀಪಿಸಿದ ವೇಳೆಯಲ್ಲಿ ಕನಿಷ್ಠ ಹತ್ತು ದಿನಗಳ ಕಾಲ ಸಂಪರ್ಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಈ ಸಂಪರ್ಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಪ್ರಾದೇಶಿಕ ಅಧ್ಯಯನ ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಈ ಕಾರ್ಯಕ್ರಮಗಳಲ್ಲಿ ಅನುಭವಿ ಪ್ರಾಧ್ಯಾಪಕರಿಂದ ಉಪನ್ಯಾಸಗಳನ್ನು ಏರ್ಪಡಿಸಿ, ವಿದ್ಯಾರ್ಥಿಗಳು ಅಧ್ಯಯನ ವೇಳೆಯಲ್ಲಿ ಎದುರಿಸಿದ ವಿಷಯ ಸಂಬಂಧಿ ಸಮಸ್ಯೆಗಳಿಗೆ ಪರಿಹಾರವನ್ನು ನೀಡಲಾಗುತ್ತದೆ. ಹಾಗೂ ಇದೇ ಅವಧಿಯಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿದ ನಿಯೋಜಿತ ಪ್ರಬಂಧಗಳನ್ನು ಪಡೆದು, ಅದರ ಮೌಲ್ಯಮಾಪನ ಮಾಡಿ ಅದರಲ್ಲಿರುವ ಉತ್ತಮ ಅಂಶಗಳು ಹಾಗೂ ದುರ್ಬಲ ವಿಷಯಗಳ ಬಗ್ಗೆ ಚರ್ಚಿಸಿ, ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಪಡಿಸಲಾಗುತ್ತದೆ.

**2. ಸಿದ್ಧಪಾಠಗಳು:** ದೂರಶಿಕ್ಷಣ ಸಂಸ್ಥೆಗಳು ಯಾವುದೇ ಶಿಕ್ಷಣ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಪಠ್ಯವಸ್ತುವಿನ ಆಧಾರದ ಮೇಲೆ ವಿಷಯ ತಜ್ಞರು ಹಾಗೂ ಸಂಪನ್ಮೂಲಗಳ ವ್ಯಕ್ತಿಗಳಿಂದ ತಯಾರಿಸಲ್ಪಟ್ಟ ಸಿದ್ಧಪಾಠಗಳ ಹಸ್ತಪ್ರತಿಯನ್ನು ಸ್ವೀಕರಿಸಿ, ಅದನ್ನು ಸಂಪಾದಕ ಮಂಡಳಿಯ ಸದಸ್ಯರಿಂದ ಪರಿಷ್ಕರಣೆಗೊಳಪಡಿಸಿ, ಮುದ್ರಿಸಿ ವಿದ್ಯಾರ್ಥಿಗಳಿಗೆ ತಲುಪಿಸಲಾಗುತ್ತದೆ. ಪ್ರತಿ ಭಾಗದ ಕೊನೆಯಲ್ಲಿ ಕೆಲವು ಕ್ಲಿಷ್ಟ ವಿಚಾರಗಳ ವಿವರಣೆ ಹಾಗೂ ಹೆಚ್ಚಿನ ಅಭ್ಯಾಸಕ್ಕಾಗಿ ಕೆಲವು ಪ್ರಶ್ನೆಗಳನ್ನು ನೀಡಲಾಗುತ್ತದೆ. ಹಾಗೂ ಪತ್ರಿಕೆಯ ಅಂತ್ಯಭಾಗದಲ್ಲಿ ಈ ಪ್ರಶ್ನೆಗಳಿಗೆ ನಿರ್ದಿಷ್ಟ ಉತ್ತರಗಳನ್ನು ನೀಡಲಾಗಿರುತ್ತದೆ. ಇದರಿಂದ ವಿದ್ಯಾರ್ಥಿಗಳು ಪರೀಕ್ಷೆಗೆ ಸಾವಕಾಶವಾಗಿ ತಯಾರಾಗಲು ಹಾಗೂ ಸಮಸ್ಯೆಗೆ ಪರಿಹಾರ ಪಡೆಯಲು ಸಹಾಯಕವಾಗುತ್ತದೆ.

**3. ಬಹುಮಾಧ್ಯಮ ಕ್ರಮ:** ಪಠ್ಯವಸ್ತುವಿಗೆ ಸಂಬಂಧಿಸಿದಂತೆ ಪೂರಕ ವಿಷಯಗಳನ್ನು ಕುರಿತು ಪಠ್ಯ, ದೃಶ್ಯ, ಶ್ರವ್ಯ ಹಾಗೂ ಕಂಪ್ಯೂಟರ್‌ಧಾರಿತ ಉಪಕರಣಗಳನ್ನು ಬಳಸಿ ಟಿಪ್ಪಣಿ/ಉಪನ್ಯಾಸಗಳನ್ನು ಸಿದ್ಧಪಡಿಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ವಿಷಯವನ್ನು ಪರಿಣಾಮಕಾರಿಯಾಗಿ ಮನದಟ್ಟುಮಾಡಲು ಸಹಾಯಕವಾಗುತ್ತದೆ.

**4. ನೇರ ಕಲಿಕೆ:** ನೇರ ಕಲಿಕೆ ವ್ಯವಸ್ಥೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಹಾಗೂ ಬಹುಮಾಧ್ಯಮ ಸಾಧನಗಳನ್ನು ಬಳಸಿಕೊಂಡು ಪರಿಣಾಮಕಾರಿಯಾದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತದೆ. ಈ ಶಿಕ್ಷಣ ಪದ್ಧತಿಯ ಮೂಲಕ ದೂರಶಿಕ್ಷಣ–ಆನ್‌ಲೈನ್ ಕಲಿಕಾ ವಿಧಾನಕ್ಕೆ ದಾಖಲಾದ ವಿದ್ಯಾರ್ಥಿಗಳು ಪಠ್ಯಕ್ರಮ, ಪಠ್ಯವಸ್ತುಗಳನ್ನು ನೇರಸಂಪರ್ಕ ತಂತ್ರಜ್ಞಾನದ ಮೂಲಕವಾಗಿ ಪಡೆದು, ವಾರ್ಷಿಕ ಪರೀಕ್ಷೆ ಮತ್ತು ಪೂರಕ ಮೌಖಿಕ ಪರೀಕ್ಷೆಯನ್ನು ನೇರವಾಗಿಯೇ ಎದುರಿಸಿ, ಪರೀಕ್ಷಾ ಫಲಿತಾಂಶ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನೂ ಸಹಾ ನೇರ ಮಾಹಿತಿ ತಂತ್ರಜ್ಞಾನದ ಮೂಲಕವಾಗಿಯೇ ಪಡೆಯುವ ಅವಕಾಶವನ್ನು ಕಲ್ಪಿಸಿಕೊಡುತ್ತದೆ.

ನೇರ ಕಲಿಕೆ ಅಥವಾ ಆನ್‌ಲೈನ್ ಶಿಕ್ಷಣ ಪದ್ಧತಿಯು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನುಂಟುಮಾಡಿದ್ದು, ತನ್ನ ಸರಳತೆಯಿಂದಾಗಿ ಅತಿ ಕಡಿಮೆ ಅವಧಿಯಲ್ಲಿ ಬಹಳಷ್ಟು ಜನಪ್ರಿಯತೆಯನ್ನು ಪಡೆದಿದೆ. ವಿದ್ಯಾರ್ಥಿಗಳು ತಮ್ಮ ನಿಯಮಿತ ಪದವಿಯನ್ನು ಕಾರಣಾಂತರಗಳಿಂದ ಮೊಟಕುಗೊಳಿಸಿದ್ದು, ಅಗತ್ಯವೆನಿಸಿದಾಗ ಆನ್‌ಲೈನ್ ಶಿಕ್ಷಣ ವಿಧಾನದ ಮೂಲಕ ಶಿಕ್ಷಣ/ಅಧ್ಯಯನವನ್ನು ಮುಂದುವರೆಸಬಹುದಾದೆ. ಹಾಗೂ ಈ ವಿಧಾನದಿಂದ ಪಡೆದ ಪದವಿಗಳಿಂದ ಇತರ ಸಾಂಪ್ರದಾಯಿಕ ಸಂಸ್ಥೆಗಳಿಂದ ಪಡೆದ ಪದವಿಗಳಷ್ಟೇ ಮಾನ್ಯತೆ ಪಡೆದಿರುವ ಪದವಿಯನ್ನು ಪಡೆದು, ಆ ಪದವಿಯ ಆಧಾರದ ಮೇಲೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳಬಹುದು. ಇಂತಹ ಆನ್‌ಲೈನ್ ಪದವಿಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳಬಹುದಾಗಿದೆ.

Digitised by Bharatavani, CIIL

**5. ವಿದ್ಯುನ್ಮಾನ ಮಾಧ್ಯಮ:** ಮುಕ್ತ ದೂರ ಶಿಕ್ಷಣ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಮೂಹ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿವೆ. ದೂರಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ರೇಡಿಯೋ ಹಾಗೂ ದೂರದರ್ಶನಗಳನ್ನು ಉತ್ತಮವಾದ ಪ್ರಸರಣಾ ಮಾಧ್ಯಮವಾಗಿ ಪರಿಗಣಿಸಲಾಗಿದೆ. ಹಾಗಾಗಿ ಆಗಾಗ್ಗೆ ನಿಯಮಿತವಾಗಿ, ನಿರ್ದಿಷ್ಟ ಅವಧಿಯಲ್ಲಿ ರೇಡಿಯೋ ಕೇಂದ್ರದ ಮೂಲಕ ವಿಶೇಷ ಉಪನ್ಯಾಸಗಳನ್ನು ಪ್ರಸಾರಮಾಡಲಾಗುತ್ತದೆ. ಹಾಗೆಯೇ ದೂರದರ್ಶನವೂ ಸಹಾ ಉತ್ತಮ ಮಾಧ್ಯಮವಾಗಿ ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ಚಿತ್ರಿತವಾದ ದೃಶ್ಯ ತುಣುಕುಗಳನ್ನು ಮೌಖಿಕ ವಿವರಣೆಯೊಂದಿಗೆ ಪ್ರಸಾರ ಮಾಡಲಾಗುತ್ತದೆ. ಇವೆರಡೂ ಉತ್ತಮ ಮತ್ತು ಪರಿಣಾಮಕಾರೀ ಮಾಧ್ಯಮಗಳಾದುದರಿಂದ ಕೆಲವು ಮುಕ್ತ ದೂರ ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ಎಫ್.ಎಂ. ರೇಡಿಯೋ ಹಾಗೂ ದೂರದರ್ಶನ ಚಾನಲ್‌ಗಳನ್ನು ಹೊಂದಿವೆ.

**6. ಶೈಕ್ಷಣಿಕ ಸಮಾಲೋಚನೆ:** ಸಿದ್ಧಪಾಠಗಳ ರಚನೆ ಹಾಗೂ ದೃಕ್‌ಶ್ರವಣ ಸಾಧನಗಳ ಬಳಕೆಯಿಂದ ತಯಾರಿಸಿದ ವಿಶೇಷ ಉಪನ್ಯಾಸಗಳನ್ನು ರೇಡಿಯೋ ಅಥವಾ ದೂರದರ್ಶನದ ಮೂಲಕ ಪ್ರಸಾರ ಮಾಡಿದ ನಂತರ, ಅದನ್ನು ವೀಕ್ಷಿಸಿದ ವಿದ್ಯಾರ್ಥಿಗಳು ವಿಷಯ ತಜ್ಞರೊಡನೆ ಟೆಲಿಕಾನ್ಫರೆನ್ಸಿಂಗ್‌ನ ಮೂಲಕ ನೇರ ಹಾಗೂ ಪ್ರತಿಕ್ರಿಯಾತ್ಮಕವಾಗಿ ಸಂಭಾಷಿಸಿ, ತಮ್ಮ ಪಠ್ಯ ಸಂಬಂಧೀ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಪಡೆಯಬಹುದು. ಅಲ್ಲದೇ ಕೆಲವು ಸಂದರ್ಭಗಳಲ್ಲಿ ಶೈಕ್ಷಣಿಕ ಸಮಾಲೋಚನೆಯೊಡನೆ ಆಡಳಿತಾತ್ಮಕ ಸಂಬಂಧೀ ಸಮಸ್ಯೆಗಳಾದ ದಾಖಲಾತಿ ವಿವರಗಳು, ಫಲಿತಾಂಶ ವಿಚಾರಣೆ, ವೃತ್ತಿ ಮಾರ್ಗದರ್ಶನ ಇವೇ ಮೊದಲಾದ ವಿಚಾರಗಳನ್ನು ಚರ್ಚಿಸಬಹುದಾಗಿದೆ.

**ವಿದ್ಯಾರ್ಥಿ ಬೆಂಬಲ ಸೇವೆಗಳು:** ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅಧ್ಯಯನವನ್ನು ಕೈಗೊಂಡಿರುವ ವಿದ್ಯಾರ್ಥಿಗಳಿಗೆ ಅಗತ್ಯವಾದ ಸೇವೆಗಳನ್ನು ಸ್ಥೂಲವಾಗಿ ಈ ರೀತಿ ವಿಂಗಡಿಸಬಹುದು.

1) ಶೈಕ್ಷಣಿಕ ಸೇವೆಗಳು 2) ಆಡಳಿತಾತ್ಮಕ ಸೇವೆಗಳು ಹಾಗೂ 3) ಮಾಹಿತಿ ಸೇವೆಗಳು

ಜಗತ್ತಿನ ಬಹುತೇಕ ದೂರಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿ ಬೆಂಬಲ ಸೇವಾ ಕೇಂದ್ರಗಳು ಅಥವಾ ಪ್ರಾದೇಶಿಕ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ, ತನ್ಮೂಲಕ ದಾಖಲಾತಿ ವಿವರ, ವೆಚ್ಚ ವಿವರ ಇವೇ ಮೊದಲಾದ ಆಡಳಿತಾತ್ಮಕ ಸೇವೆಗಳು ಕಲಿಕೆಗೆ ಆಯ್ದುಕೊಳ್ಳಲು ಲಭ್ಯವಿರುವ ವಿಷಯಗಳು, ಸಿದ್ಧಪಾಠ ರವಾನೆ, ಆಪ್ತಸಲಹೆ ಮತ್ತು ಮಾರ್ಗದರ್ಶನ, ಸಂಪರ್ಕ ಕಾರ್ಯಕ್ರಮಗಳ ವಿವರ, ಪರೀಕ್ಷಾ ವೇಳಾಪಟ್ಟಿ ಇವೇ ಮೊದಲಾದ ಶೈಕ್ಷಣಿಕ ಸೇವೆಗಳು ಹಾಗೂ ವಿದ್ಯಾರ್ಥಿಗಳು ಬಯಸುವ ಇತರ ಸಾಮಾನ್ಯ ವಿಷಯಗಳಾದ ಪ್ರಯಾಣ ಸೌಲಭ್ಯ, ತಂಗುವ ವ್ಯವಸ್ಥೆ, ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳು ಇವೇ ಮೊದಲಾದ ಮಾಹಿತಿ ಸೇವೆಗಳನ್ನು ಒದಗಿಸುತ್ತವೆ. ದೂರಶಿಕ್ಷಣ ವ್ಯವಸ್ಥೆಯ ಯಶಸ್ಸಿಗೆ ಅವು ವಿದ್ಯಾರ್ಥಿಗಳಿಗೆ ಒದಗಿಸುವ ಬೆಂಬಲ ಸೇವೆಗಳೇ ಕಾರನ ಎಂದರೆ ತಪ್ಪಾಗಲಾರದು. ಶಿಕ್ಷಣ ಸಂಸ್ಥೆಗಳು ಒದಗಿಸುವ ಬೆಂಬಲ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಂಡಲ್ಲಿ ಇದನ್ನು ಕಲ್ಪಿಸಿರುವ ಉದ್ದೇಶವು ಸಫಲವಾಗುತ್ತದೆ. ("ಮುಕ್ತ ದೂರಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು ಲೇಖನ ನೋಡಿ)

**ಪ್ರಾಧ್ಯಾಪಕರ ಅರ್ಹತೆಗಳು:**

ಮುಕ್ತ ಹಾಗೂ ದೂರಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಪ್ರಾಧ್ಯಾಪಕರು ಶೈಕ್ಷಣಿಕ ಅನುಭವದೊಡನೆ, ಬಹುಮಾಧ್ಯಮ ಸಾಧನಗಳ ಜ್ಞಾನವನ್ನು ಹೊಂದಿರುತ್ತಾರೆ. ಅಲ್ಲದೇ ಇಲ್ಲಿ ಕಾರ್ಯನಿರ್ವಹಿಸುವ ಬೋಧಕರು ಸಿದ್ಧಪಾಠಗಳ ರಚನೆ, ಬೋಧನಾ ಕೌಶಲ್ಯ, ಸಮಾಲೋಚನಾ ಸಾಮರ್ಥ್ಯ ಇವುಗಳಲ್ಲಿ ಅದ್ವಿತೀಯರೆನಿಸಿರುತ್ತಾರೆ. ಇವರು ಸಂಪರ್ಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಅತಿ ಕಡಿಮೆ ಅವಧಿಯಲ್ಲಿ ಅತಿ ಹೆಚ್ಚು ವಿಷಯಗಳ ಬಗ್ಗೆ ಉಪನ್ಯಾಸ ನೀಡುವ ಕೌಶಲ್ಯ ಹೊಂದಿರುತ್ತಾರೆ. ಸಿದ್ಧಪಾಠಗಳ ರಚನೆಯಲ್ಲಿಯೂ ತಮ್ಮದೇ ಆದ ವಿಶೇಷ ವಿಧಾನಗಳ ಮೂಲಕ ಅತಿ ಕ್ಲಿಷ್ಟಕರ ವಿಷಯಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ವಿವರಿಸಿ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಯಾವುದೇ ರೀತಿಯ ಕಷ್ಟಗಳು ಎದುರಾಗದಂತೆ ಇವರು ಎಚ್ಚರಿಕೆ ವಹಿಸಿರುತ್ತಾರೆ.

ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಪ್ರಾಧ್ಯಾಪಕರು ನಿರಂತರ ಕಲಿಕೆ, ಬೋಧನೆ ಹಾಗೂ ಅಧ್ಯಯನ ಸಾಮಗ್ರಿ ರಚನಾ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಅಲ್ಲದೇ ವಿಶೇಷ ಉಪನ್ಯಾಸ ನೀಡಿಕೆ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಚಾರಗೋಷ್ಠಿ, ಕಾರ್ಯಗಾರಗಳು (ಕಮ್ಮಟಗಳು) ಹಾಗೂ ಚರ್ಚಾಗೋಷ್ಠಿಗಳ ಸಂಘಟನೆ ಹಾಗೂ ಲೇಖನಗಳ ಮಂಡನೆ, ಅಧ್ಯಕ್ಷತೆ ನಿರ್ವಹಣೆ ಇಂತಹ ಹಲವಾರು ಶೈಕ್ಷಣಿಕ ಆಯಾಮಗಳನ್ನು ಹೊರಗೆಡಹುವ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಅಂತೆಯೇ ಇವರು ನವೀನ ತಂತ್ರಜ್ಞಾನಾಧಾರಿತ ಅಂತರ್ಜಾಲ ಬಳಕೆ ಹಾಗೂ ಬಹುಮಾಧ್ಯಮ ಸಾಧನಗಳನ್ನು ಬಳಸಿಕೊಂಡು ಪವರ್‌ಪಾಯಿಂಟ್ ಸ್ಲೈಡ್‌ಗಳನ್ನು ತಯಾರಿಸಿ, ವಿದ್ಯಾರ್ಥಿಗಳಿಗೆ ಪ್ರದರ್ಶಿಸುವ ಮೂಲಕ ಕ್ಲಿಷ್ಟಕರ ಪರಿಕಲ್ಪನೆಗಳು ಸುಲಭವಾಗಿ ಅರ್ಥವಾಗುವಂತೆ ಪರಿಶ್ರಮಪಡುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ದೂರಶಿಕ್ಷಣ ಸಂಸ್ಥೆಗಳ ಬಗೆಗೆ ಇರುವ ನಂಬಿಕೆ ಇನ್ನಷ್ಟು ಹೆಚ್ಚಾಗುತ್ತದೆ.

ಅಲ್ಲದೇ ಈ ಪ್ರಾಧ್ಯಾಪಕರು ತಮ್ಮ ವೃತ್ತಿ ಜೀವನದ ಬೆಳವಣಿಗೆಗೆ ಅಗತ್ಯವಾದ ಪಿ.ಹೆಚ್.ಡಿ. ಅಧ್ಯಯನ ಕೈಗೊಳ್ಳುವುದು, ಹಲವಾರು ಪ್ರಾಯೋಜಿತ ಸಂಸ್ಥೆಗಳಿಂದ ಧನಸಹಾಯ ಪಡೆದು ಲಘು ಸಂಶೋಧನೆಗಳನ್ನು ಕೈಗೊಳ್ಳುವುದು, ವಿದ್ಯಾರ್ಥಿಗಳಿಗೆ ಸಂಶೋಧನೆ ಕೈಗೊಳ್ಳಲು ಮಾರ್ಗದರ್ಶನ ನೀಡುವುದು ಇವೇ ಮೊದಲಾದ ಶೈಕ್ಷಣಿಕ ಕಾರ್ಯಗಳ ಮೂಲಕ ತಮ್ಮ ವಿಷಯ ಕ್ಷೇತ್ರಗಳಲ್ಲಿ

Digitised by Bharatavani, CIIL

ಅದ್ವಿತೀಯ ಸಾಧನೆಯಲ್ಲಿ ತೊಡಗಿರುವುದನ್ನು ಕಾಣಬಹುದು.

**ರಾಷ್ಟ್ರೀಯ ಮುಕ್ತ ಶಾಲೆಗಳು:**

1989ರಲ್ಲಿ ನವದೆಹಲಿಯಲ್ಲಿ ಸ್ಥಾಪಿತವಾದ ಈ ಮುಕ್ತ ಶಾಲೆಯು 'ಎಲ್ಲರಿಗೂ ಶಿಕ್ಷಣ' 'ಸಮಾಜದಲ್ಲಿ ಹೆಚ್ಚಿನ ಸಮಾನತೆ ಹಾಗೂ ನ್ಯಾಯ' ಮತ್ತು 'ಕಲಿಕಾ ಸಮಾಜದ ಅವಿರ್ಭಾವ' ಎಂಬ ಉದ್ದೇಶಗಳನ್ನು ಹೊಂದಿವೆ. ಈ ಶಾಲೆಯನ್ನು ಈಗ ಮುಕ್ತ ಶಿಕ್ಷಣದ ರಾಷ್ಟ್ರೀಯ ಸಂಸ್ಥೆ ಎಂದು ಕರೆಯಲಾಗುತ್ತಿದೆ. ಇದರ ಪ್ರಮುಖ ಉದ್ದೇಶ ಈ ರೀತಿಯಾಗಿದೆ.

* ಮುಂದುವರಿಕೆ ಶಿಕ್ಷಣವನ್ನು ಉತ್ತೇಜಿಸುವುದು.
* ಸಲಹಾ ಕೇಂದ್ರವಾಗಿ ಕಾರ್ಯನಿರ್ವಹಿಸುವುದು
* ಮಾಹಿತಿ ಪ್ರಸರಣಾ ಕೇಂದ್ರವಾಗಿ ಕಾರ್ಯನಿರ್ವಹಿಸುವುದು.
* ಸಾಂಪ್ರದಾಯಿಕ ಸಂಸ್ಥೆಗಳಿಗೆ ಪರ್ಯಾಯವಾಗಿ ಕಾರ್ಯ ನಿರ್ವಹಿಸುವುದು.

ಸಾಮಾನ್ಯವಾಗಿ ಮುಕ್ತ ಶಾಲೆಗಳು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಹಂತಗಳಲ್ಲಿ ಶೈಕ್ಷಣಿಕ ಹಾಗೂ ವೊಕೇಷನಲ್ ತರಬೇತಿಯನ್ನು ನೀಡುತ್ತಾ, ಸಾಂಪ್ರದಾಯಿಕ ಸಂಸ್ಥೆಗಳಿಗೆ ಪರ್ಯಾಯವಾಗಿ ಕಾರ್ಯನಿರ್ವಹಿಸುತ್ತಾ, ತರಬೇತಿಯನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವೃತ್ತಿ ಕೌಶಲ್ಯವನ್ನು ಕಲಿಸುತ್ತಾ ಅವರು ಜೀವನದಲ್ಲಿ ನೆರೆಹೊಂದಲು ಸಹಾಯಮಾಡುತ್ತವೆ. ಇವು ಮುಂದುವರಿಕೆ ಶಿಕ್ಷಣವನ್ನು ಗುರಿಯನ್ನಾಗಿ ಹೊಂದಿರುವುದರಿಂದ ಜನತೆ ವೃತ್ತಿಸಾಮರ್ಥ್ಯವನ್ನು ವೃದ್ಧಿಪಡಿಸುವತ್ತ ಆಸಕ್ತಿ ವಹಿಸಿವೆ. ಹಾಗಾಗಿ ಈ ಮುಕ್ತ ಶಾಲೆಗಳಲ್ಲಿ ಹೊಲಿಗೆ ತರಬೇತಿಯಿಂದ ಹಿಡಿದು ಗಣಕ ಶಿಕ್ಷಣ ತರಬೇತಿಯವರೆಗೆ ಎಲ್ಲ ರೀತಿಯ ಕೌಶಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಾ ದೇಶದ ವಿವಿದೆಡೆ ಕಾರ್ಯೋನ್ಮುಖವಾಗಿ ಯಶಸ್ವಿಯಾಗಿವೆ.

ದೂರಶಿಕ್ಷಣ ಸಂಸ್ಥೆಗಳು ವಯೋಮಾನವ ನಿರ್ಬಂಧವಿಲ್ಲದೇ ಅಂಕಗಳ ಪರಿಮಿತಿಯಿಲ್ಲದೇ, ಪೂರಕ ಜ್ಞಾನದ ಅವಶ್ಯಕತೆಯಿಲ್ಲದೇ, ದಾಖಲಾತಿಯ ಸ್ಥಳ ಹಾಗೂ ಸಮಯದ ಮಿತಿಯಿಲ್ಲದೇ, ಯಾವುದೇ ವಿಷಯಗಳನ್ನು ಕಲಿಯುವ ಅವಕಾಶವನ್ನು ಹಾಗೂ ಎಲ್ಲರನ್ನು ತಲುಪುವ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದರ ಮೂಲಕ ಅಸಾಂಪ್ರದಾಯಿಕ ಶಿಕ್ಷಣ ವಿಧಾನವನ್ನು ಜನಪ್ರಿಯಗೊಳಿಸಿವೆ.

ದೂರಶಿಕ್ಷಣವು ಕಲಿಕಾಸಕ್ತರಿಗೆ ಸಿದ್ಧಪಾಠಗಳು, ಸಂಪರ್ಕ ಕಾರ್ಯಕ್ರಮಗಳು ಇವೇ ಮೊದಲಾದ ವಿದ್ಯಾರ್ಥಿ ಬೆಂಬಲ ಸೇವೆಗಳನ್ನು ಕಲ್ಪಿಸಿಕೊಡುವುದರ ಜತೆಯಲ್ಲಿಯೇ ಆಧುನಿಕ ತಂತ್ರಜ್ಞಾನ ಆಧಾರಿತವಾದ ವಿದ್ಯುನ್ಮಾನ ಅಂಚೆ, ವಿದ್ಯುನ್ಮಾನ ಕೂಟಗಳು, ವೀಡಿಯೋ ಕಾನ್ಫರೆನ್ಸಿಂಗ್, ಚಾಟ್‌ರೂಂಗಳು, ಬುಲೆಟಿವ್ ಬೋರ್ಡ್‌ಗಳು, ಇನ್ಸ್‌ಟೆಂಟ್ ಮೆಸೇಜಿಂಗ್ ಇವೇ ಮೊದಲಾದ ಅಂತರ್ಜಾಲಾಧಾರಿತ ಸಂಪರ್ಕ ವಿಧಾನಗಳ ಮೂಲಕ ಶಿಕ್ಷಣವನ್ನು ಒದಗಿಸುತ್ತಾ ಕಲಿಕಾಸಕ್ತರನ್ನು ಅಧಿಕ ಸಂಖ್ಯೆಯಲ್ಲಿ ತಮ್ಮೆಡೆಗೆ ಸೆಳೆಯುತ್ತಿವೆ.

**ದೂರ ಮತ್ತು ಮುಕ್ತ ಶಿಕ್ಷಣ ವ್ಯವಸ್ಥೆಯ ಅನುಕೂಲಗಳು:**

ಇವು ಹಲವಾರು ಬಗೆಯ ಉಪಯೋಗಗಳನ್ನು ಜನತೆಗೆ ನೀಡುತ್ತಿದ್ದು, ಅದರಲ್ಲಿ ಪ್ರಮುಖ ಅನುಕೂಲಗಳನ್ನು ಈ ರೀತಿ ಹೇಳಬಹುದು.

* ಕಲಿಕೆ, ಹಾಗೂ ತರಬೇತಿ ಅವಕಾಶವನ್ನು ಒಟ್ಟೊಟ್ಟಿಗೆ ಕಲ್ಪಿಸುವುದು.
* ಕೌಶಲ್ಯ ಕಲಿಕೆಯನ್ನು ಉತ್ತೇಜಿಸುವುದು
* ಶೈಕ್ಷಣಿಕ ಸಂಪನ್ಮೂಲ ವೆಚ್ಚವನ್ನು ಪರಿಣಾಮಕಾರಿಯಾಗಿ ತಗ್ಗುಸುವುದು.
* ಲಭ್ಯವಿರುವ ಶಿಕ್ಷಣ ವಿಧಾನದ ಗುಣಮಟ್ಟವನ್ನು ಉತ್ತಮ ಪಡಿಸುವುದು
* ಕಲಿಕಾ ಸಾಮರ್ಥ್ಯವನ್ನು ವೃದ್ಧಿಸುವುದು.

–ಗೋಪಾಲಸ್ವಾಮಿ ಎಂ.

–ಕುಮಾರ್ ಎಸ್.ಎನ್.

## ಮುಕ್ತ ಶಾಲಾ ಶಿಕ್ಷಣ

**ಪೀಠಿಕೆ:** ಆಧುನಿಕ ಕಾಲದಲ್ಲಿ ದೂರ ಶಿಕ್ಷಣದ ಪ್ರಥಮ ಉದಾಹರಣೆಯೆಂದರೆ 1914ರಲ್ಲಿ ಆಸ್ಟ್ರೇಲಿಯಾದ ಒಟ್ವಾವ ಪರ್ವತದಲ್ಲಿನ ಬೀಚ್ ಫಾರೆಸ್ಟ್‌ನಲ್ಲಿ ಪೋಷಕರಿಗೆ ಇದರ ಬಗ್ಗೆ ತಿಳಿವು ನೀಡಿದ ಭಾಷಣ. ಸಾಂಪ್ರದಾಯಿಕ ಶಾಲೆ ವ್ಯವಹಾರವಲ್ಲದ ಚದುರಿಹೋದ ಜನಗಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಈ ಭಾಷಣ ನಡೆಯಿತು. 1916ರ ಹೊತ್ತಿಗೆ ವಿಶೇಷ ಅಂಚೆ ತೆರಪಿನ ಶಾಖೆಯೊಂದು ಸ್ಥಾಪನೆಯಾಗಿತ್ತು. ಬೀಚ್ ಫಾರೆಸ್ಟ್‌ನಲ್ಲಿನ ಈ ಕಾರ್ಯಕ್ರಮದ ಪ್ರಾರಂಭದ ಯಶಸ್ಸು ಇತರ ಆಸ್ಟ್ರೇಲಿಯಾದ ರಾಜ್ಯ ಹಾಗೂ ಪ್ರದೇಶಗಳಿಗೆ ಇಂಥ ಕಾರ್ಯಕ್ರಮಗಳು ಹರಡಲು ಕಾರಣವಾಯಿತು. ಇದಾದ ನಂತರ ಆಸ್ಟ್ರೇಲಿಯಾ ಹೊರತಾಗಿ ಇಂಥ ಕಾರ್ಯಕ್ರಮಗಳು ಪ್ರಥಮವಾಗಿ 1919ರಲ್ಲಿ ಕೆನಡಾ ರಾಷ್ಟ್ರದಲ್ಲಿ ಹಾಗೂ 1922ರಲ್ಲಿ ನ್ಯೂಜಿಲ್ಯಾಂಡ್ ರಾಷ್ಟ್ರದಲ್ಲಿ ಆರಂಭಗೊಂಡವು ಇದಾದ ನಂತರ ಹಲವು ದಶಕಗಳು ಎಲ್ಲ ಶಾಂತವಾಗಿ ಬಿಟ್ಟಿತು. ಪುನಃ 1960ರ ದಶಕದಲ್ಲಿ ಶಾಲಾ ಮಟ್ಟದಲ್ಲಿ ದೂರಶಿಕ್ಷಣ ಪ್ರಾರಂಭಗೊಂಡಿತು. ಅಂದಿನಿಂದ ಬಾಂಗ್ಲಾದೇಶ, ಭಾರತ, ಇಂಡೋನೇಶಿಯಾ, ದಕ್ಷಿಣ ಕೊರಿಯಾ, ಜಿಂಬಾಬ್ವೆ ಇತ್ಯಾದಿ ರಾಷ್ಟ್ರಗಳನ್ನೊಳಗೊಂಡಂತೆ ಜಗತ್ತಿನ ವಿವಿಧ ರಾಷ್ಟ್ರಗಳಿಗೆ ಮುಕ್ತಶಿಕ್ಷಣ ಬೇರೆಬೇರೆ ರೂಪದಲ್ಲಿ ಹರಡಿತು. ಮುಕ್ತಶಾಲೆಗಳನ್ನು

Digitised by Bharatavani, CIIL

ತೆರೆಯುವ ಪ್ರಯತ್ನಗಳು ದಕ್ಷಿಣ ಅಫ್ರಿಕಾ, ಈಜಿಪ್ಟ್, ಚೈನಾ, ನೈಜೀರಿಯಾ, ಇಂಡೊನೇಷಿಯಾ ಮತ್ತು ಪಾಕಿಸ್ತಾನ ಮುಂತಾದ ಇತರ ರಾಷ್ಟ್ರಗಳಲ್ಲಿ ಜಾರಿಯಲ್ಲಿವೆ.

ವ್ಯಾಂಕೂವರ್‌ನ ಕಾಮನ್‌ವೆಲ್ತ್ ಆಫ್ ಲರ್ನಿಂಗ್‌ನ ಸೂಚನೆಯ ಮೇರೆಗೆ ಮುಖ್ಯೋಪಾಧ್ಯಾಯ ಮತ್ತು ಫಿಲಿಪ್ಸ್‌ರವರು (1995) ಆಸ್ಟ್ರೇಲಿಯಾದ ವಿಕ್ಟೋರಿಯಾ (ಲಗ್, 1995) ಭಾರತ ರಾಷ್ಟ್ರೀಯ ಮುಕ್ತಶಾಲೆ (ಮುಖ್ಯೋಪಾಧ್ಯಾಯ, 1995) ಸ್ಕಾಟ್‌ಲೆಂಡ್ (ಪೈನೆ, 1995), ಆಲ್ಬರ್ಟ (ಪೊನ್ ಎಲ್. ಆರ್, 1995) ಇಂಡೊನೇಷಿಯಾ (ಸಾಡಿಮನ್, 1995) ಜಾಂಬಿಯಾ (ಸಿಯಾಸಿವೆನಾ, 1995), ಬ್ರಿಲಿಪ್ಸ್ ಕೊಲಂಬಿಯಾ (ಸ್ವ್ಯಾಕ್ ಮತ್ತು ಪವರ್, 1995), ಮತ್ತು ನ್ಯೂಜಿಲ್ಯಾಂಡ್ (ಟೇಟ್, 1995) ಎಂಬೀ ಸ್ಥಳಗಳಲ್ಲಿನ ದೂರಶಿಕ್ಷಣ ಕ್ರಮಗಳ ರಾಷ್ಟ್ರೀಯ ಮಟ್ಟದ ವಿವರವಾಗಿ ದಾಖಲಿಸುವಿಕೆಯನ್ನು ಕೈಗೊಂಡರು.

ಈ ಲೇಖನದಲ್ಲಿ ಭಾರತ ಮುಕ್ತಶಿಕ್ಷಣದ ಇತ್ತೀಚಿನ ವ್ಯವಸ್ಥೆಯನ್ನು ದಾಖಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಹಲವಾರು ರಾಜ್ಯ ಮುಕ್ತಶಾಲೆಗಳಿದ್ದರೂ ಈ ಲೇಖನದ ಕೇಂದ್ರ ವಸ್ತು ಹೆಚ್ಚಾಗಿ ರಾಷ್ಟ್ರೀಯ ಮುಕ್ತ ಶಾಲೆಯಾಗಿದೆ. ಇದೀಗ, ರಾಷ್ಟ್ರೀಯ ಮುಕ್ತ ಕಲಿಕಾ ಸಂಸ್ಥೆ (National institute of open learning) ಯೆಂದು ಕರೆಯಲ್ಪಡುವ ರಾಷ್ಟ್ರೀಯ ಮುಕ್ತಶಾಲೆ ಬಗ್ಗೆ ಸಾಕಷ್ಟು ಮಾಹಿತಿ ಚೆನ್ನಾಗಿ ದಾಖಲು ಮಾಡಿರುವುದಷ್ಟೇ ಅಲ್ಲದೆ ಈ ಶಾಲೆ ಭಾರತದ ಮುಕ್ತಶಿಕ್ಷಣದ ದಿಶೆ ಮತ್ತು ಅನುಭಗಳನ್ನೂ ಸಹ ಪ್ರತಿನಿಧಿಸುತ್ತದೆ.

ಭಾರತೀಯ ಮುಕ್ತಶಾಲೆಯ ವಿಕಾಸ : ಪ್ರಥಮ ಬಾರಿಗೆ ಮೂರನೆ ಪಂಚವಾರ್ಷಿಕ ಯೋಜನೆ (1961–66)ಯಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಯೋಜನೆಯನ್ನು ಸೇರಿಸಲಾಯಿತು. ಕೆಲವು ಆಯ್ದ ವಿಶ್ವವಿದ್ಯಾನಿಲಯಗಳಲ್ಲಿ ಅಂಚೆ ಮತ್ತು ತೆರಪಿನ ಕಾರ್ಯಕ್ರಮಗಳನ್ನು ಪ್ರಾರಂಭಿಸುವಂತೆ ಸಲಹೆ ನೀಡಿದ, ಸಮಿತಿಯೊಂದನ್ನು ಡಾ॥ ಡಿ.ಎಸ್. ಕೊಠಾರಿ ಅವರ ನೇತೃತ್ವದಲ್ಲಿ ರಚಿಸಲಾಯಿತು. 1962ರಲ್ಲಿ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಭಾರತದಲ್ಲೇ ಪ್ರಪ್ರಥಮ ಅಂಚೆ ಮತ್ತು ತೆರಪಿನ ಶಿಕ್ಷಣ ಘಟಕವೊಂದನ್ನು ಸ್ಥಾಪಿಸಲಾಯಿತು. ಶಾಲಾಮಟ್ಟದ ಅಂಚೆ ಮತ್ತು ತೆರಪಿನ ಶಿಕ್ಷಣ 1965ರಲ್ಲಿ ಆರಂಭಗೊಂಡಿತು. ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಲು ಖಾಸಗಿ ವಿದ್ಯಾರ್ಥಿಗಳಿಗೆ ಅಂಚೆ ಮತ್ತು ತೆರಪಿನ ಕಾರ್ಯಕ್ರಮಗಳನ್ನು ಪ್ರಾರಂಭಿಸುವಂತೆ ಮಾಧ್ಯಮಿಕ (ಸೆಕೆಂಡರಿ) ಶಿಕ್ಷಣ ಬೋರ್ಡ್‌ಗಳ ಕಾನ್‌ಫರೆನ್ಸ್ ಸಲಹೆ ನೀಡಿತು. ಮಧ್ಯಪ್ರದೇಶ ರಾಜ್ಯ ಮಾಧ್ಯಮಿಕ ಶಿಕ್ಷಣ ಬೋರ್ಡ್ 1965ರಲ್ಲಿ ಪ್ರಥಮ ಬಾರಿಗೆ ಅಂಚೆ ಮತ್ತು ತೆರಪಿನ ಕಾರ್ಯಕ್ರಮಗಳನ್ನು ಆರಂಭಿಸಿತು. ಇದರ ನಂತರ ದೆಹಲಿಯ ಪತ್ರಾಚಾರ್ ವಿದ್ಯಾಲಯ ಮತ್ತು ರಾಜಾಸ್ಥಾನದ ಮಾಧ್ಯಮಿಕ ಶಿಕ್ಷಣ ಬೋರ್ಡ್ ಅಜಮೇರ್‌ನಲ್ಲಿ 1968ರಲ್ಲಿ ಇಂಥ ಕಾರ್ಯಕ್ರಮಗಳನ್ನು ಪ್ರಾರಂಭಿಸಿದವು.

1974ರ ಸ್ಯಾಟಿಲೈಟ್ ಇನ್ಸ್‌ಟ್ರಕ್ಷನರ್ ಟೆಲಿವಿಷನ್ ಎಕ್ಸ್‌ಪೆರಿಮೆಂಟ್ (Site) ಕಾರ್ಯಕ್ರಮದ ಯಶಸ್ಸಿನ ನಂತರ ಮುಕ್ತಶಾಲೆಯ ವಿಚಾರ ಉದಯಿಸಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಪರ್ಯಾಯ ಶಿಕ್ಷಣ ವಿಧಾನಗಳ ಅಗತ್ಯ ಮತ್ತು ಮಾಧ್ಯಮಿಕ ಶಿಕ್ಷಣದ ಮೇಲೆ ಇದರ ಒತ್ತಡಗಳನ್ನು ಗುರುತಿಸಲಾಯಿತು. ಎನ್.ಸಿ.ಇ.ಆರ್.ಟಿ. ಕಾರ್ಯಸಮೂಹ ಒಂದನ್ನು ರಚಿಸಿತು. 1978ರ ವೇಳೆಗೆ ಶಿಕ್ಷಣ ಇಲಾಖೆ ಸಿ.ಬಿ.ಎಸ್.ಇ. ಅಡಿಯಲ್ಲಿ ಮುಕ್ತಶಾಲೆಯೊಂದನ್ನು ಪ್ರಾರಂಭಿಸುವ ಪ್ರಸ್ತಾಪವನ್ನು ಅಂಗೀಕರಿಸಿತು. ಸಿ.ಬಿ.ಎಸ್.ಇ. ಬೋರ್ಡ್‌ಗೆ ರೂಪುರೇಖೆಗಳನ್ನು ಸಿದ್ಧಪಡಿಸುವ ಜವಾಬ್ದಾರಿ ವಹಿಸಲಾಯಿತು.

ಭಾರತದಲ್ಲಿ ಮುಕ್ತಶಾಲೆಯ ಕಲ್ಪನೆಯು ಚಿಗುರುವುದಕ್ಕೆ ಆಸಕ್ತಿಕರ ಮತ್ತು ಪ್ರಮುಖ ಸಂಧಿಕಾಲವೊಂದಿತ್ತು. ಅಂತರರಾಷ್ಟ್ರೀಯ ಅಂಚೆ ಮತ್ತು ತೆರಪಿನ ಶಿಕ್ಷಣ ಪರಿಷತ್ತು (International Council for correspondence Education, (ಈಗ ಇದು ICDE ಎಂದು ಹೆಸರಿಸಲ್ಪಟ್ಟಿದೆ) ತನ್ನ ಹನ್ನೊಂದನೆಯ ಸಮ್ಮೇಳನವನ್ನು ದೆಹಲಿಯಲ್ಲಿ ಜರುಗಿಸಿತು. ಎಂದಿನಂತೆ ಮುಕ್ತ ಹಾಗೂ ದೂರಶಿಕ್ಷಣದಲ್ಲಿ ಜಾಗತಿಕ ನೇತಾರರಾದ ಪ್ರೊ॥ ಹೊಮ್‌ಬರ್ಗ್, ಸೀವರ್ಟ್ ಹಾಗೂ ಇತರರನ್ನು ಈ ಸಮ್ಮೇಳನವು ಆಕರ್ಷಿಸಿತು. ಅಂಚೆ ಮತ್ತು ತೆರಪಿನ ಶಿಕ್ಷಣ ಹಾಗೂ ಮುಕ್ತಶಿಕ್ಷಣಗಳ ನಡುವಿನ ಅಂತರವನ್ನು ಈ ಸಮ್ಮೇಳನವು ಸ್ಪಷ್ಟೀಕರಿಸಿತು. ಮುಕ್ತಶಿಕ್ಷಣ ವ್ಯವಸ್ಥೆಯ ಗುಣಲಕ್ಷಣಗಳನ್ನು ವಿವರಿಸುವ ಸಂದರ್ಭದಲ್ಲಿ ಭಾರತದ ಉದ್ದಗಲವನ್ನೂ ವ್ಯಾಪಿಸುವ ಮುಕ್ತಶಾಲೆಯೊಂದನ್ನು ಪ್ರಯೋಗಾರ್ಥವಾಗಿ ಪ್ರಾರಂಭಿಸಬೇಕೆಂಬ ನೇರವಾದ ಅಸಂದಿಗ್ಧವಾದ ಸಲಹೆಯನ್ನು ಈ ಸಮ್ಮೇಳನದಲ್ಲಿ ನೀಡಲಾಯಿತು. ಇದೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭೂಪಾಲ್ ಅಜ್ಮೀರ್ ಮತ್ತು ಮೈಸೂರುಗಳಲ್ಲಿ ಕೆಲವು ಪ್ರಾದೇಶಿಕ ಸಮ್ಮೇಳನಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಇಂಥ ಪ್ರತಿಯೊಂದು ಪ್ರಾದೇಶಿಕ ಸಮ್ಮೇಳನವು ಮುಕ್ತಶಾಲೆಯ ವಿಚಾರವನ್ನು ಮತ್ತಷ್ಟು ಬಲಗೊಳಿಸುವುದಕ್ಕೆ ಮಹತ್ವಪೂರ್ಣ ಕೊಡುಗೆಯನ್ನು ನೀಡಿತಲ್ಲದೆ ಮೈಸೂರಿನಲ್ಲಿ ನಡೆದ ಸಮ್ಮೇಳನವು ಒಂದು ತಿರುವಿನಂತಿತ್ತು. ಈ ಸಮ್ಮೇಳನದಲ್ಲಿ ಇದರ ಜೊತೆಗೆ ಯುನೈಟೆಡ್ ಕಿಂಗ್‌ಡಮ್‌ನ (UK) ಮುಕ್ತ ವಿಶ್ವವಿದ್ಯಾಲಯದ ಜಾನ್‌ಡೋಡ್ ಭಾಗವಹಿಸಿದ್ದು ಇವರು ಸಮ್ಮೇಳನದಲ್ಲಿ ಭಾಗವಹಿಸಿದವರ, ಎನ್.ಸ.ಇ.ಆರ್.ಟಿ. ಸಂಸ್ಥೆಯ ಹಾಗೂ ಇತರ ಸಂಸ್ಥೆಗಳ ಶೈಕ್ಷಣಿಕ ತಜ್ಞರ ಮನೋಭಾವವನ್ನು ಸಾಕಷ್ಟು ಪ್ರತಿಭಾವಿಸಿದ್ದಷ್ಟೇ ಅಲ್ಲದೆ ಸರ್ಕಾರದ ನಿಲುವನ್ನು ಪ್ರಭಾವಿಸಿತ್ತೆಂದು ತೋರುವುದು. 1979ರ ವೇಳೆಗೆ ಈ ದಿಶೆಯಲ್ಲಿ ಮೂರು ಮಹತ್ವಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಮುಕ್ತಶಾಲೆಯ ಯೋಜನೆಯನ್ನು ಸಿ.ಬಿ.ಎಸ್.ಇ. ನ ಭಾಗವಾಗಿ ಪ್ರಾರಂಭಿಸುವುದು; ಮುಕ್ತಶಾಲೆಯ ಯೋಜನೆಗೆ ಸಿ.ಬಿ.ಎಸ್.ಇ. ಧನಸಹಾಯ ಮಾಡವುದು; ಮುಕ್ತಶಾಲೆಯ ನಿರ್ದೇಶಕರನ್ನು ಗುರುತಿಸಿ ನೇಮಕ ಮಾಡುವುದು.

1979ರಲ್ಲಿ ಭಾರತದ ಮುಕ್ತಶಾಲೆ ಸ್ಥಾಪನೆಗೊಂಡಿತು. ಇದು 1981ರಲ್ಲಿ ಕಾರ್ಯಕ್ರಮಗಳಿಗೆ ಅವಕಾಶಗಳನ್ನು ಒದಗಿಸಿತು.

Digitised by Bharatavani, CIIL

ಭಾರತದಲ್ಲಿ ಮುಕ್ತಶಾಲೆಯ ಸ್ಥಾಪನೆಯನ್ನು ಕುರಿತು ವಿಸ್ತೃತ ದಾಖಲೆಗಾಗಿ ಓದಿಗರು ದೇವಲ್ (1986)ರ ಗ್ರಂಥವನ್ನು ಪರಾಮರ್ಶಿಸಬಹುದು.

ಸಿ.ಬಿ.ಎಸ್.ಇ. ಆರಂಭಿಸಿದ ಮುಕ್ತಶಾಲೆಯ ಯೋಜನೆ ಸುಮಾರು ಒಂದು ದಶಕ ಮುಂದುವರೆದುದಲ್ಲದೆ ಸಾಕಷ್ಟು ಒಳ್ಳೆಯ ಸಾಮಗ್ರಿಯೊಂದಿಗೆ ಭಾರತದಲ್ಲಿ ಮುಕ್ತ ಶಾಲಾ ಕಾರ್ಯಕ್ರಮವನ್ನು ವಿಸ್ತರಿಸುವ ಶ್ರೇಷ್ಠ ಕಾರ್ಯವನ್ನು ಮಾಡಿತು. ಇದಕ್ಕಿಂತ ಮುಖ್ಯವಾಗಿ, ಎ.ಸಿ.ಬಿ.ಎಸ್.ಇ. ಸಂಸ್ಥೆಯ ಆಡಳಿತದ ಚುಕ್ಕಾಣಿ ಹಿಡಿದಿದ್ದವರ ಆದರ್ಶಪ್ರಾಯವಾದ ವ್ಯವಸ್ಥಾಪನಾ ಕುಶಲತೆಯ ಒಂದು ಉದಾಹರಣೆಯಾಗಿತ್ತು. ಈ ಸಂಸ್ಥೆಯವರು ಸಾಂಪ್ರದಾಯಿಕ ಶಾಲಾವ್ಯವಸ್ಥೆಯ ಜಾಲವನ್ನು ಮತ್ತು ಮುಕ್ತ, ನಮ್ಯ, ಶ್ರೇಷ್ಠಗುಣಮಟ್ಟದ ಮುಕ್ತ ಕಲಿಕಾ ವ್ಯವಸ್ಥೆಯನ್ನು ಏಕಕಾಲದಲ್ಲಿ ಅಪಾರ ಸಾಮರ್ಥ್ಯದೊಂದಿಗೆ ನಡೆಸಲು ಸಮರ್ಥರಾದರು.

ರಾಷ್ಟ್ರೀಯ ಶಿಕ್ಷಣನೀತಿ (1986) ಭಾರತದಲ್ಲಿ ಪರ್ಯಾಯ ಶಿಕ್ಷಣಕ್ಕೆ ಮುಖ್ಯ ಉಪಾಯಗಳಲ್ಲಿ ಒಂದಾಗಿ ಮುಕ್ತ ಶಿಕ್ಷಣಕ್ಕೆ ನವ ಪ್ರೋತ್ಸಾಹವನ್ನು ನೀಡಿತು. ಇದು ರಾಷ್ಟ್ರೀಯ ಮುಕ್ತಶಾಲೆಯನ್ನು ಒಂದು ಸ್ವತಂತ್ರ ಸಂಸ್ಥೆಯಾಗಿ ಸ್ಥಾಪಿಸಬೇಕೆಂಬ ಸಲಹೆ ನೀಡಿತು. ಈ ಸಲಹೆಗೆ ಅನುಸಾರವಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಸೂಚನೆಯಂತೆ ಒಂದು ಹೊಸ ರೂಪುರೇಷೆಯನ್ನು ವಿಕಾಸಗೊಳಿಸಲಾಯಿತು. ಶೈಕ್ಷಣಿಕ ವಿಷಯಗಳಲ್ಲಿ ವಿಸ್ತೃತ ಸ್ವಾಯತ್ತತೆ ಮಾತ್ರವಲ್ಲದೆ ಆಡಳಿತ ಮತ್ತು ಆರ್ಥಿಕ ವ್ಯವಸ್ಥಾಪನೆಯ ವಿಷಯದಲ್ಲಿ ಸ್ವಾಯತ್ತತೆಯನ್ನು ಹೊಂದಿದ ರಾಷ್ಟ್ರೀಯ ಮುಕ್ತ ಶಾಲೆ (National open School (NOS) ಯನ್ನು ಒಂದು ನೋಂದಾಯಿತ ಸಂಘವಾಗಿ ಸ್ಥಾಪಿಸಲು ನಿರ್ಧರಿಸಲಾಯಿತು. ಸಿ.ಬಿ.ಎಸ್.ಇ.ನಲ್ಲಿ ರಾಷ್ಟ್ರೀಯ ಮುಕ್ತಶಾಲೆ (NOS) ಪ್ರಾರಂಭಗೊಂಡ ಹತ್ತು ವರ್ಷಗಳ ನಂತರ 1989ರಲ್ಲಿ ನೋಂದಾಯಿತಗೊಂಡಿತು.

1989ರಿಂದ – 1992ರವರೆಗಿನ ಮೊದಲ ಮೂರು ವರ್ಷಗಳಲ್ಲಿ ಭಾರತಾದ್ಯಂತ ರಾಷ್ಟ್ರೀಯ ಮುಕ್ತಶಾಲೆ ಮುಖಾಂತರ ಮುಕ್ತಶಿಕ್ಷಣದಲ್ಲಿ ಅಭಿವೃದ್ಧಿ ಮತ್ತು ಅದರ ವ್ಯಾಪಕತೆ ಗಮನಾರ್ಹವಾಗಿದ್ದವು. ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಅಗಾಧ ವಿಸ್ತರಣೆಯಾಯಿತಲ್ಲದೆ ಭಾರತದ ಉದ್ದಗಲಕ್ಕೂ ಅಧ್ಯಯನ ಕೇಂದ್ರಗಳ ಜಾಲ ಹರಡಿತು. ಈ ಕಾಲಾವಧಿಯಲ್ಲಿ ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಸ್ತರಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷಿಸುವ ಮತ್ತು ಅವರಿಗೆ ಪ್ರಮಾಣಪತ್ರ ನೀಡುವ ಅಧಿಕಾರವನ್ನು ಎನ್.ಒ.ಎಸ್.ಗೆ ನೀಡಲಾಯಿತು. ಇದರಿಂದಾಗಿ ಎನ್.ಒ.ಎಸ್. ಒಂದು ಸಮಗ್ರ ಮತ್ತು ಸ್ವಯಂಪೂರ್ಣ ಮುಕ್ತಶಾಲೆಯಾಯಿತು. ಇದು ರಾಜ್ಯಗಳ ಇತರ ಮಾಧ್ಯಮಿಕ ಶಿಕ್ಷಣ ಬೋರ್ಡ್‌ಗಳಿಗೆ ಸಮನಾದ ಹೊಸ ಸ್ಥಾನವನ್ನು ಪಡೆಯಿತು. ಈ ಕಾಲಾವಧಿಯಲ್ಲಿ ಮಧ್ಯಮಿಕ ಶಿಕ್ಷಣವನ್ನು ಪರಿಷ್ಕರಿಸಿ ಆಧುನಿಕೀಕರಣಗೊಳಿಸಲಾಯಿತು.

ನಂತರ ಮೂರು ವರ್ಷಗಳಲ್ಲಿ ಅಂದರೆ 1993 ರ ಆದಿಯಿಂದ 1996ರ ಪ್ರಾರಂಭದವರೆಗೆ ಹೊಸ ಒತ್ತಡ (Trust) ಉದ್ಭವಿಸಿತು. ಎನ್.ಒ.ಎಸ್. ದೇಶದಲ್ಲಿ ಹೊಸ ನೆಲೆಯನ್ನು ಸ್ಥಾಪಿಸಿತಲ್ಲದೆ ಅಂತರರಾಷ್ಟ್ರೀಯ ಸಮುದಾಯದಲ್ಲಿ ತನ್ನ ಸ್ಥಾನಮಾನಗಳನ್ನು ಹಾಗೂ ಸ್ತರವನ್ನು ಹೆಚ್ಚಿಸಿಕೊಂಡಿತು. ಇದನ್ನು ಏಷ್ಯಾದ ಅಂತರರಾಷ್ಟ್ರೀಯ ದೂರಶಿಕ್ಷಣ ಸಮಿತಿಯ ಉಪಾಧ್ಯಕ್ಷ ಸ್ಥಾನಕ್ಕೆ ನೇಮಿಸಲಾಯಿತು. ಮುಕ್ತಶಿಕ್ಷಣ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನ Information communication Technology) ಪಾತ್ರಗಳಿಗೆ ಸಂಬಂಧಿಸಿದಂತೆ ಇ–9 ರಾಷ್ಟ್ರಗಳಿಗೆ ಅಧ್ಯಯನ ಭೇಟಿ ಸಮೇತದ ತರಬೇತಿ ಕಾರ್ಯಾಗಾರಗಳ ಸರಣಿಯನ್ನು ಆಯೋಜಿಸಲು ಯುನೆಸ್ಕೊ ಒಪ್ಪಿಕೊಂಡಿತು. ದಾಖಲಾತಿಯಲ್ಲಿ ವಿಸ್ತರಣೆ, ಅಧ್ಯಯನ ಕೇಂದ್ರಗಳ ಜಾಲದಲ್ಲಿ ವಿಸ್ತರಣೆ ಹಾಗೂ ಇವುಗಳ ಮುಂದುವರಿಕೆಯ ಜೊತೆಗೆ ವೃತ್ತಿಪರ ಕಾರ್ಯಕ್ರಮಗಳನ್ನು ರೂಪಿಸುವಿಕೆ ಮತ್ತು ಆರಂಭ, ಎಲೆಕ್ಟ್ರಾನಿಕ್ ಮಾಧ್ಯಮಗಳ ಬಳಕೆ, ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು, ಸಿಬ್ಬಂದಿವರ್ಗದ ಅಭಿವೃದ್ಧಿ, ವಿದ್ಯಾರ್ಥಿ ಮೌಲ್ಯಮಾಪನದ ಆಧುನಿಕೀಕರಣ ಇತ್ಯಾದಿಗಳು ಹೊಸ ಬೆಳವಣಿಗೆಗಳಾಗಿದ್ದವು. ಈ ಕಾಲಾವಧಿಯಲ್ಲೇ ಭಾರತದಲ್ಲಿ ಮುಕ್ತಶಿಕ್ಷಣದ ವಿಸ್ತರಣೆ ಮತ್ತು ಅಭಿವೃದ್ಧಿಗೆ ಬೇರೊಂದು ಚೌಕಟ್ಟನ್ನು ಪ್ರಸ್ತಾವಿಸುವುದರ ಮೂಲಕ ಹೊಸದೊಂದು ದೃಷ್ಟಿಕೋನವನ್ನು ವಿಕಾಸಗೊಳಿಸಲಾಯಿತು.

ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯಕ್ರಮಗಳ ಒಂದು ಪ್ರಮುಖವಾದ ಹೊಸ ಒತ್ತಡವಾಯಿತು. ಇದುವರೆಗೆ ಎನ್.ಒ.ಎಸ್. ಹಿಂದಿ ಮತ್ತು ಇಂಗ್ಲಿಷ್ ಮಧ್ಯಮಗಳಲ್ಲಿ ಮಾತ್ರ ಕಾರ್ಯಕ್ರಮಗಳನ್ನು ನಡೆಸಿತ್ತು. ಮಾಧ್ಯಮಿಕ ಶಿಕ್ಷಣದ ಬೋಧನಾ ಸಾಮಗ್ರಿಯನ್ನು ಹಲವು ಭಾರತೀಯ ಭಾಷೆಗಳಿಗೆ ಭಾಷಾಂತರಿಸಲಾಯಿತು. ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯಕ್ರಮಗಳ ವಿಕಾಸ ನಂತರದಲ್ಲಿ ರಾಜ್ಯ ಮುಕ್ತಶಾಲೆಗಳಿಗೆ ದಾರಿಮಾಡಿಕೊಟ್ಟಿತು. ಈ ಶಾಲೆಗಳು ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿದವು ಹಾಗೂ ನಿರ್ದಿಷ್ಟ ಕಾಲಾವಧಿಯ ನಂತರ ಎನ್.ಒ.ಎಸ್. ಹಿಂದಿ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಮಾತ್ರ ಕಾರ್ಯಕ್ರಮಗಳನ್ನು ನಡೆಸುವುದು ಎಂಬ ವಿಶ್ವಾಸದೊಂದಿಗೆ ರಾಜ್ಯ ಮುಕ್ತಶಾಲೆಗಳು ಪ್ರಾರಂಭಗೊಂಡವು. ವಾಸ್ತವವಾಗಿ, ರಾಜ್ಯ ಮುಕ್ತಶಾಲೆಗಳಿಗೆ ಶಿಕ್ಷಣ ಪ್ರಸಾರ ಹಾಗೂ ವಿತರಣೆಯ ಪಾತ್ರವನ್ನು ಎನ್.ಒ.ಎಸ್.ಗೆ ವರ್ಗಾಯಿಸುತ್ತಾ ಇದು ಮುಕ್ತಶಿಕ್ಷಣಕ್ಕೆ ಒಂದು ರಾಷ್ಟ್ರೀಯ ಸಂಪನ್ಮೂಲ ಏಜೆನ್ಸಿಯಾಗಿ ಕಾರ್ಯನಿರ್ವಹಿಸಬೇಕೆಂಬ ಇದರ ಹೊಸ ಪಾತ್ರದ ಬಗ್ಗೆ ವಿಚಾರ ಮಾಡಲಾಯಿತು. ಪ್ರಮುಖ ವಿಸ್ತರಣಾ ಸಂಸ್ಥೆಯಾಗಿ ಕೆಲಸ ಮಾಡುವ ಸಂಪನ್ಮೂಲ ಏಜೆನ್ಸಿಯಾಗಿ ಪಾತ್ರವಹಿಸಬೇಕೆಂದು ಸಲಹೆ ನೀಡಲಾಯಿತಲ್ಲದೆ (NOS) ಹೆಸರನ್ನು ಮುಕ್ತ ಕಲಿಕೆಯ ರಾಷ್ಟ್ರೀಯ ಸಂಸ್ಥೆ ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಓಪನ್ ಲರ್ನಿಂಗ್ NIOL ಎಂದು ಬದಲಾಯಿಸಬೇಕೆಂದು ಸಲಹೆ ನೀಡಲಾಯಿತು. ಭಾರತದ ಪ್ರಮುಖ ಭಾಷೆಗಳನ್ನು ಮುಕ್ತ ಕಲಿಕೆಯ ವ್ಯಾಪ್ತಿಗೆ ತರಲು 20 ರಾಜ್ಯ ಮುಕ್ತಶಾಲೆಗಳ ಜಾಲವನ್ನು ಸ್ಥಾಪಿಸಬೇಕೆಂಬ ಭವಿಷ್ಯ ಯೋಜನೆಯನ್ನು ಈ ಬೆಳವಣಿಗೆಯ ಅವಧಿಯಲ್ಲಿ ಮುಕ್ತಶಾಲೆಯ ಸಂಘ ಸ್ಥಾಪನೆಯ ಯೋಜನೆಯ ಮುಖ್ಯವಾದುದು. ಮುಕ್ತಶಾಲೆಗಳ

Digitised by Bharatavani, CIIL

ಸಂಘವು 1997–98ರಲ್ಲಿ ಅಸ್ತಿತ್ವಕ್ಕೆ ಬಂದಿತು.

NOS (ನ್ಯಾಷನಲ್ ಒಪನ್ ಸ್ಕೂಲ್) ಗಳು ಹೊಸ ನೊಂದಾಯಿತಗಳಾಗಿ NIOS (ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಒಪನ್ ಸ್ಕೂಲ್) ಗಳಾಗಿ ರೂಪಾಂತರಗೊಳ್ಳಲು ಹಲವು ವರ್ಷಗಳೇ ಹಿಡಿದವು. 1999 ರಿಂದ 2002ರವರೆಗಿನ ಈ ನಿರ್ದಿಷ್ಟ ಅವಧಿಯು ಮಹತ್ವಪೂರ್ಣ ಬೆಳವಣಿಗೆಗಳ ಮಹಾಪ್ರಯತ್ನಗಳನ್ನು ಕಂಡಿತು. ದಾಖಲಾತಿಯಲ್ಲಿ ವಿಸ್ತರಣೆಯನ್ನು ಮಾಡುವುದೊಂದಿಗೆ ನವಸಾಕ್ಷರರಿಗೆ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸವಾಲುಳ್ಳವರಿಗೆ ಹಾಗೂ ಇನ್ನಿತರರಿಗೆ ನಾವೀನ್ಯಯುತ ಹಾಗೂ ಸೃಜನಾತ್ಮಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು.

ಭಾರತದಲ್ಲಿ ಮುಕ್ತಶಾಲೆಯ ಉದಯ ಕಲ್ಪನೆಯ ವಿಚಾರವಾಗಿರಲಿಲ್ಲವೆಂಬುದು ಸ್ವಯಂವಿಧಿತ. ಇದು ಶೈಕ್ಷಣಿಕ ಅವಕಾಶಗಳಿಂದ ವಂಚಿತರಾದ ಬಹುಸಂಖ್ಯಾತ ಭಾರತೀಯರನ್ನು ಶಿಕ್ಷಿತರನ್ನಾಗಿಸುವ ಅಗತ್ಯದಿಂದ ಪ್ರೇರಿತವಾಗಿತ್ತು. ಸುಮಾರು 40 ದಶಲಕ್ಷ ಸಂಖ್ಯೆಯ ಶಾಲೆಗೆ ಹೋಗುವ ವಯಸ್ಸಿನ ಆದರೆ ಶಾಲೆಯಿಂದ ಹೊರಗುಳಿದ ಮಕ್ಕಳು, ಸುಮಾರು 60 ದಶಲಕ್ಷ ಶಾಲೆಗೆ ಹೋಗುವ ವಯಸ್ಸಿನ ಪ್ರೌಢರು ಮತ್ತು 7.5 ದಶ ಲಕ್ಷ ನವಸಾಕ್ಷರರು ಇವರುಗಳಿಗೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು ಭಾರತದ "ಸರ್ವರಿಗೂ ಶಿಕ್ಷಣ"ದ ಸಮ್ಮುಖದಲ್ಲಿನ ಸವಾಲಾಗಿತ್ತು. ಶಾಲೆಯಿಂದ ಹೊರಗುಳಿದ ಬಹುಮಂದಿ ಸಮ್ಮುಖದಲ್ಲಿನ ಸವಾಲಾಗಿತ್ತು. ಶಾಲೆಯಿಂದ ಹೊರಗುಳಿದ ಬಹುಮಂದಿಯಲ್ಲಿ ಬಾಲಕಿಯರು, ಮಹಿಳೆಯರು, ಪರಿಶಿಷ್ಟ ಜಾತಿ/ವರ್ಗದವರು ಮತ್ತು ಇತರ ಅಲ್ಪಸಂಖ್ಯಾತರು ಒಳಗೊಂಡಿದ್ದರು. ರಾಷ್ಟ್ರೀಯ ಆದೇಶವನು (National Mandate) ಪೂರೈಸುವುದಕ್ಕೆ ಔಪಚಾರಿಕ ಶೈಕ್ಷಣಿಕ ಸೌಲಭ್ಯಗಳು ಪರ್ಯಾಪ್ತವಾಗಿಲ್ಲ. ಭಾರತ ಸರ್ಕಾರ ಅನೌಪಚಾರಿಕ ಶಿಕ್ಷಣ, ಸಂಪೂರ್ಣ ಸಾಕ್ಷರತಾ ಆಂದೋಲನದ ಮುಖಾಂತರ ವಯಸ್ಕರ ಶಿಕ್ಷಣ ಮುಂತಾದ ವಿಭಿನ್ನ ವಿಧಾನಗಳನ್ನು ಗುರುತಿಸಿತ್ತು ಹಾಗೂ ಶಿಕ್ಷಣದ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ ಹಾಗೂ ಗುಣಮಟ್ಟಗಳನ್ನುಸುಧಾರಿಸಲು ಹಲವು ತಂತ್ರಜ್ಞಾನಗಳನ್ನು ಬಳಸಿತು. ಶಿಕ್ಷಣದ ಎಲ್ಲಾ ಪ್ರಮುಖ ಧ್ಯೇಯ ಗುಂಪು (Target group) ಗಳಿಗೆ; ಅದರಲ್ಲೂ ಪ್ರತಿಕೂಲ ಪರಿಸ್ತಿತಿಯಲ್ಲಿರುವವರಿಗೆ ಶಿಕ್ಷಣದ ವಿಸ್ತೃತ ಲಭ್ಯತೆಯ ಸಲುವಾಗಿ ಅರ್ಥಪೂರ್ಣ ಅವಕಾಶಗಳನ್ನು ಕಲ್ಪಿಸುವ ಅಂಥ ಒಂದು ಪರ್ಯಾಯ ವಿಧಾನವೆಂದರೆ ಮುಕ್ತ ಹಾಗೂ ದೂರ ಶಿಕ್ಷಣ ವ್ಯವಸ್ಥೆ.

**ಪ್ರಸಕ್ತ ಪರಿಸ್ಥಿತಿ:** ಹಿಂದೆ ಹೇಳಿದಂತೆ ಮುಕ್ತಶಾಲೆಯಲ್ಲದೆ ಪ್ರಥಮ ದೂರಶಿಕ್ಷಣ ಕಾರ್ಯಕ್ರಮ ಮಧ್ಯಪ್ರವೇಶದ ಮಾಧ್ಯಮಿಕ ಶಿಕ್ಷಣ ಬೋರ್ಡ್‌ನ ಕೋರಿಕೆ ಹಾಗೂ ಪ್ರಯತ್ನದಿಂದಾಗಿ 1965ರಲ್ಲಿ ಆರಂಭಗೊಂಡಿತು. ಮುಕ್ತಶಾಲೆಯ ಪ್ರಯೋಗ.. ಆರಂಭಗೊಳ್ಳುವುದಕ್ಕೆ ಮುಂಚೆ ದೆಹಲಿ ಸರ್ಕಾರ ಪತ್ರಚಾರ್ ವಿದ್ಯಾಲಯದ ಮೂಲಕ ಶಾಲಾಸ್ತರದಲ್ಲಿ ಅಂಚೆ ಮೂಲಕ ಶಿಕ್ಷಣವನ್ನು ಆರಂಭಿಸಿತು. ಮುಕ್ತಶಾಲೆಯ ಪ್ರಾಯೋಜನೆಯನ್ನು ಹೊಸ NOS ಗಳಲ್ಲಿ ಸೇರಿಸಲಾಯಿತು. 1986 ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮುಕ್ತಶಾಲೆಯ ಪರವಾಗಿ ಪ್ರಧಾನ ಒತ್ತನ್ನು ನೀಡಿದ್ದರಿಂದ ಕೆಲವು ರಾಜ್ಯಗಳು ರಾಜ್ಯಮುಕ್ತ ಶಾಲೆಗಳನ್ನು ತೆರೆಯಲನುವಾದವು. 1990ರಲ್ಲಿ ಮುಕ್ತಶಾಲೆಯನ್ನು ಪ್ರಪ್ರಥಮವಾಗಿ ಆರಂಭಿಸಿದ ರಾಜ್ಯಗಳೆಂದರೆ ಆಂಧ್ರಪ್ರದೇಶ. ಪಂಜಾಬ್, ತಮಿಳುನಾಡು ಮತ್ತು ರಾಜಾಸ್ಥಾನಗಳಲ್ಲಿ ಎಸ್.ಸಿ.ಇ.ಆರ್.ಟಿ. ಅಥವಾ ರಾಜ್ಯ ಮಾಧ್ಯಮಿಕ ಶಿಕ್ಷಣ ಬೋರ್ಡ್‌ಗಳಿಗೆ ಸೇರಿದಂತೆ ಮುಕ್ತಶಾಲೆಗಳೆಂದು ಕರೆಯಲಾದ ಕೆಲವು ಘಟಕಗಳು ಕಾರ್ಯೋನ್ಮುಖವಾಗಿದ್ದವು. ಈ ಘಟಕಗಳು ಮುಕ್ತಶಾಲೆಯಂತೆ ಪೂರ್ಣಪ್ರಮಾಣದ ರಚನೆ ಹಾಗೂ ಕಾರ್ಯಗಳನ್ನು ಹೊಂದಿರಲಿಲ್ಲವಾದರೂ ಇವು ಈಗಾಗಲೇ ಭಾರತದಲ್ಲಿ ಲಭ್ಯವಿದ್ದ ಮುಕ್ತಶಾಲೆಯ ಬೀಜ ರೂಪದಂತಿದ್ದ ಘಟಕಗಳಾಗಿದ್ದವು. ಎನ್.ಒ.ಎಸ್.ಗಳ ಮುಖಾಂತರ ಉದಾರ ಆರ್ಥಿಕ ಬೆಂಬಲವನ್ನು ರಾಜ್ಯ ಮುಕ್ತಶಾಲೆಗಳನ್ನು ತೆರೆಯಲು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ನೀಡಿತು. ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಕರ್ನಾಟಕ, ಹರಿಯಾಣ, ಕೇರಳ, ಪಂಜಾಬ್ ಉತ್ತರ ಪ್ರದೇಶ ಹಾಗೂ ಇನ್ನಿತರ ರಾಜ್ಯಗಳಲ್ಲಿ ಎನ್.ಒ.ಎಸ್.ನ ಪ್ರೇರಣೆ ಹಾಗೂ ಸಹಕಾರದೊಂದಿಗೆ ರಾಜ್ಯ ಮುಕ್ತಶಾಲೆಗಳನ್ನು ತೆರೆಯಲಾಯಿತು. ಸಂಬಂಧಿತ ರಾಜ್ಯಗಳಲ್ಲಿ ಮುಕ್ತಶಾಲೆಯ ಪ್ರಾಯೋಜನೆಯನ್ನು ವಿನ್ಯಾಸಗೊಳಿಸುವಲ್ಲಿ ವೃತ್ತಿಪರ ಬೆಂಬಲವನ್ನು ನೀಡುವ ಪ್ರಯತ್ನ NOS ದಾಗಿತ್ತು. ತಮ್ಮ ಆರಂಭಿಕ ಸ್ಥಿತಿಯಲ್ಲಿ ಎನ್.ಒ.ಎಸ್. ಮುಕ್ತಶಾಲೆಗಳಿಗೆ, ಎಸ್.ಒ.ಎಸ್. ತನ್ನ ಬೋಧನಾ ಸಾಮಗ್ರಿಗಳನ್ನು ಸ್ಥಳೀಯ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸುವುದಕ್ಕೆ ಅನುಮತಿ ಮತ್ತು ಪ್ರೋತ್ಸಾಹಗಳನ್ನು ನೀಡಿತು. ಭಾರತೀಯ ಮುಕ್ತಶಾಲೆ ವ್ಯವಸ್ಥೆ ಇಂದು (ಅಕ್ಟೋಬರ್ 2002) ಮುಕ್ತಕಲಿಕೆಯ ರಾಷ್ಟ್ರೀಯ ಸಂಸ್ಥೆ (NIOS) ಮತ್ತು ಆಂಧ್ರಪ್ರದೇಶ, ಮಧ್ಯಪ್ರದೇಶ, ಕರ್ನಾಟಕ, ಪಶ್ಚಿಮ ಬಂಗಾಳ, ಗುಜರಾತ್, ಪಂಜಾಬ್, ಹರಿಯಾಣ ಮತ್ತು ಕೇರಳ ರಾಜ್ಯಗಳಲ್ಲಿರು ರಾಜ್ಯ ಮುಕ್ತಶಾಲೆಗಳನ್ನು ಒಳಗೊಂಡಿದೆ.

**ಗುಣಲಕ್ಷಣಗಳು:** ಮುಕ್ತಶಾಲೆಗಳನ್ನು ಇತರ ಶಿಕ್ಷಣ ಸಂಸ್ಥೆಗಳಿಂದ ಬೇರ್ಪಡಿಸುವ ಕೆಲವು ಮುಖ್ಯ ಗುಣಲಕ್ಷಣಗಳು ಈ ಕೆಳಗಿನಂತಿವೆ.

**ವಯಸ್ಸಿನಲ್ಲಿ ಮುಕ್ತತೆ:** ಸಾಂಪ್ರದಾಯಿಕ ಶಿಕ್ಷಣ ಶಿಕ್ಷಣಕ್ಕಾಗಿ ವಯೋಮಾನದ ವ್ಯಾಪ್ತಿಯನ್ನು ಹೊಂದಿದೆ. ಉದಾಹಣೆಗಾಗಿ, 6 ರಿಂದ 11 ವರ್ಷದವರೆಗೆ ಪ್ರಾಥಮಿಕ ಶಿಕ್ಷಣ, 11ರಿಂದ 14 ವರ್ಷದವರೆಗೆ ಉನ್ನತ ಪ್ರಾಥಮಿಕ ಶಿಕ್ಷಣ, 17ರಿಂದ 23 ವರ್ಷದವರೆಗೆ ಕಾಲೇಜು ಶಿಕ್ಷಣ ಇತ್ಯಾದಿ. ಮೇಲೆ ಹೇಳಿದ ವಯೋಮಾನದ ವ್ಯಾಪ್ತಿಯ ಮೇಲೆ ಅಥವಾ ಕೆಳಗಿನ ವಯೋಮಾನದವರನ್ನು ದಾಖಲೆಗಾಗಿ ಹೆಚ್ಚಿನ ಅಥವಾ ಕಡಿಮೆ ವಯಸ್ಸಿನವರೆಂದು ಪರಿಗಣಿಸಲಾಗುತ್ತದೆ.

ಮುಕ್ತಶಾಲೆಗಳಲ್ಲಿ ವಯಸ್ಸು ಒಂದು ಮಿತಿಯಲ್ಲಿ, 14 ವಯಸ್ಸಿಗಿಂತ ಕಡಿಮೆ ವಯಸ್ಸಿನವರು ಮುಕ್ತಶಾಲೆಗೆ ಪ್ರವೇಶಿಸುವಂತಿಲ್ಲ ಎಂಬುದೇ ಏಕೈಕ ಅಪವಾದ. ವಾಸ್ತವವಾಗಿ ಅಧಿಕ ವಯಸ್ಸೆಂಬ ಮಿತಿ ಇಲ್ಲ.

Digitised by Bharatavani, CIIL

ಉದಾಹರಣೆಗೆ 1995–96ರರಲ್ಲಿ ಎನ್.ಓ.ಎಸ್.ನಲ್ಲಿ ಒಮ್ಮೆ 70 ವಯಸ್ಸಿನ ಮಹಿಳಾ ವಿದ್ಯಾರ್ಥಿ ಸೇರಿದ್ದರು. ಅವರು ಮೊದಲು ಮಧ್ಯಮಿಕ ಮಟ್ಟದ ಕಾರ್ಯಕ್ರಮಗಳನ್ನು ಪೂರೈಸಿ ನಂತರ ಹಿರಿಯ ಮಾಧ್ಯಮಿಕ ಕಾರ್ಯಕ್ರಮಗಳನ್ನು ಮುಗಿಸಿದರು.

**ಸ್ಥಾನದ ಮುಕ್ತತೆ:** ಸಾಂಪ್ರದಾಯಿಕ ಶಾಲೆಗಳು ಶಾಲೆಯ ಆವರಣ ಹಾಗೂ ಕಟ್ಟಡದ ಮಿತಿಯಲ್ಲಿ ಕಾರ್ಯಕ್ರಮಗಳನ್ನು ಬೋಧಿಸುತ್ತವೆ. ಇದಕ್ಕೆ ಹೋಲಿಸಿದಾಗ ಮುಕ್ತಶಾಲಾ ಕಾರ್ಯಕ್ರಮಕ್ಕೆ ಒಂದು ನಿರ್ದಿಷ್ಟ ಸ್ಥಳವಿಲ್ಲ. ವಿದ್ಯಾರ್ಥಿಯ ಗೃಹದಲ್ಲಿ, ತಾನು ಕೆಲಸ ಮಾಡುವ ಸ್ಥಳದಲ್ಲಿ, ಮೈದಾನದಲ್ಲಿ, ಅಡುಗೆಮನೆಯಲ್ಲಿ, ಕಾರ್ಖಾನೆಯಲ್ಲಿ, ಅಂಗಡಿಯಲ್ಲಿ ಅಥವಾ ಒಂದು ಮರದ ಅಡಿಯಲ್ಲೂ ವಿದ್ಯಾರ್ಜನೆ ಮಾಡಬಹುದು.

**ಸಮಯದ ಮುಕ್ತತೆ:** ಸಾಂಪ್ರದಾಯಿಕ ಶಾಲೆಗಳಿಗೆ ಪ್ರಾತಃ ಮಧ್ಯಾಹ್ನ ಇಲ್ಲವೆ ಸಾಯಂಕಾಲ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಟ್ಟಿಗೆ ಕಲಿತು ಕಲಿಯುವ – ಸುನಿರ್ದಿಷ್ಟ ಸಮಯ – ಅಂದರೆ ನಾಲ್ಕರಿಂದ ಆರು ತಾಸುಗಳು – ಇರುತ್ತದೆ. ಇದಕ್ಕೆ ಹೋಲಿಸಿದಾಗ ಮುಕ್ತಶಾಲೆಯಲ್ಲಿ ಕಲಿಯುವವರಿಗೆ ನಿಗದಿತ ಸಮಯವಿಲ್ಲ. ವಿದ್ಯಾರ್ಥಿ ತನ್ನ ಸಮಯವನ್ನು ತಾನು ಆಯ್ಕೆಮಾಡಿಕೊಳ್ಳಬಹುದು. ಇದೇ ರೀತಿ ಸಾಂಪ್ರದಾಯಿಕ ಶಾಲೆಗಳಿಗೆ ವರ್ಷದ ಸುಮಾರು 42 ವಾರಗಳಷ್ಟು ಕೆಲಸವಿದ್ದು ಉಳಿದ 10 ವಾರಗಳು ರಜೆ ಅಥವಾ ಅಲ್ಪಾವಧಿ ವಿರಾಮಗಳಿಗೆಂದು ಮೀಸಲಾಗಿರುವುದು. ಆದರೆ ಮುಕ್ತಶಾಲೆಗಳಲ್ಲಿ ರಜೆ ಅಥವಾ ಅಲ್ಪಾವಧಿ ವಿರಾಮಗಳಿಲ್ಲ. ಸಮಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ತಮ್ಮ ಸಮಯದ ಆಯ್ಕೆಯಲ್ಲಿ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.

**ಕಾರ್ಯಕ್ರಮಗಳ ಆಯ್ಕೆಯಲ್ಲಿ ಮುಕ್ತತೆ:** ಔಪಚಾರಿಕ ಅಥವಾ ಸಾಂಪ್ರದಾಯಿಕ ಶಾಲೆಯಲ್ಲಿ ಕಾರ್ಯಕ್ರಮದ ಆಯ್ಕೆ ನಿಶ್ಚಿತ. ಮಾಧ್ಯಮಿಕ ಸ್ತರದಲ್ಲಿ ಸರ್ವ ವಿಷಯಗಳೂ ಕಡ್ಡಾಯ. ಹಿರಿಯ ಮಧ್ಯಮಿಕ ಸ್ತರಗಳಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ಅಥವಾ ವಾಣಿಜ್ಯ ಅಥವಾ ಮಾನವಿಕ ವಿಷಯಗಳ ಗುಂಪಿನಡಿಯಲ್ಲಿ ಬರುವ ವಿಷಯಗಳ ಪೂರ್ವನಿರ್ಧಾರಿತ ಸಂಯೋಜನೆಯಿರುವುದು. ಮುಕ್ತಶಾಲೆಗಳಲ್ಲಿ ಇಂಥ ನಿರ್ಧಾರಿತ ಸಂಯೋಜನೆಗಳಿಲ್ಲ. ತಮಗೆ ಇಷ್ಟೆ ಬಂದ ವಿಷಯಗಳನ್ನು ವಿದ್ಯಾರ್ಥಿಗಳು ಆಯ್ಕೆಮಾಡಿಕೊಳ್ಳಬಹುದು. ಉದಾಹರಣೆಗೆ, ಮಧ್ಯಮಿಕ ಸ್ತರದಲ್ಲಿ ಇಂಗ್ಲೀಷ್, ಗಣಿತ ಅಥವಾ ವಿಜ್ಞಾನ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಇಲ್ಲವೇ ಬಿಡಬಹುದು. ಇಂಗ್ಲೀಷ್, ಹಿಂದಿ ಅಥವಾ ಮಾತೃಭಾಷೆಯನ್ನು ಕಡ್ಡಾಯ ಮಾಡದೆಯೆ ಯಾವುದಾದರೊಂದು ಭಾಷೆಯನ್ನು ಆಯ್ಕೆ ಮಾಡಬೇಕು ಎನ್ನುವುದೊಂದೇ ಎನ್.ಓ.ಎಸ್. ವಿಧಿಸುವ ಏಕೈಕ ನಿಯಮ. ಇದೇ ರೀತಿ ಹಿರಿಯ ಮಾಧ್ಯಮಿಕ ಮಟ್ಟದಲ್ಲಿ, ಉದಾಹರಣೆಗೆ, ವಿದ್ಯಾರ್ಥಿಯು ಇತಿಹಾಸದ ವಿಷಯದೊಂದಿಗೆ ರಸಾಯನಶಾಸ್ತ್ರ ಮತ್ತು ಸೆಣಬು ಉತ್ಪಾದನೆ ವಿಷಯಗಳನ್ನು ಆಯ್ಕೆಮಾಡಲು ಸ್ವತಂತ್ರನಿದ್ದಾನೆ.

ಆದಾಗ್ಯೂ, ವಿಷಯಗಳ ಆಯ್ಕೆಯಲ್ಲಿನ ಈ ನಮ್ಯತೆ ಎಲ್ಲಾ ಮುಕ್ತಶಾಲೆಗಳಿಗೂ ಸಮಾನವಾಗಿಲ್ಲ. ಎನ್.ಓ.ಎಸ್. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಯತೆ ಮತ್ತು ಮುಕ್ತತೆಗೆ ಸಂಬಂಧಿಸಿದಂತೆ ಉತ್ತಮೋತ್ತಮವಾದುದು. ತನ್ನ ವಿದ್ಯಾರ್ಥಿಗಳಿಗೆ ವಿಷಯಗಳ ಆಯ್ಕೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಎನ್.ಓ.ಎಸ್. ನೀಡುತ್ತದೆ. ರಾಜ್ಯ ಮುಕ್ತಶಾಲೆಗಳು, ಅದರಲ್ಲೂ ಮಾಧ್ಯಮಿಕ ಶಿಕ್ಷಣ ಬೋರ್ಡ್‌ಗೆ ಸೇರಿರುವ ಹಾಗೂ ನಿಯಂತ್ರಿಸಲ್ಪಡುವ ಮುಕ್ತಶಾಲೆಗಳು ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ವಿಷಯ ಸಮೂಹ ಹಾಗೂ ನಿಯಮಗಳನ್ನು ವಿಧಿಸುತ್ತವೆ. ತತ್ಪರಿಣಾಮವಾಗಿ, ಮುಕ್ತಶಾಲೆಯ ಮೂಲ ಉದ್ದೇಶದಿಂದ ಇವು ದೂರಸರಿಯುತ್ತವೆ.

**ಪರೀಕ್ಷೆಯಲ್ಲಿ ಮುಕ್ತತೆ :** ಔಪಚಾರಿಕ ವ್ಯವಸ್ಥೆಯಲ್ಲಿ, ಪರೀಕ್ಷೆಗೆ ಒಂದು ನಿಯಮಿತ ಸಮಯವಿರುತ್ತದೆ. ವಿದ್ಯಾರ್ಥಿಯು ಒಂದೇ ಬಾರಿಗೆ, ಅಂದರೆ ವಾರ್ಷಿಕ ಪರೀಕ್ಷೆ ಅಥವಾ ಬೋರ್ಡ್ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳ ಪರೀಕ್ಷೆಗಳನ್ನು ಬರೆಯಬೇಕಾಗುತ್ತದೆ. ಮುಕ್ತಶಾಲೆಯಲ್ಲಿ ಕ್ರೆಡಿಟ್ ರೂಪದ ಅಂಕ ಮೌಲ್ಯದ ಸಂಕಲನಕ್ಕೆ ಅವಕಾಶವಿರುತ್ತದೆ. ಆರು ತಿಂಗಳಿಗೆ ಒಮ್ಮೆ, ವರ್ಷಕ್ಕೆ ಎರಡು ಬಾರಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ವಿದ್ಯಾರ್ಥಿಯು ಒಮ್ಮೆಗೆ ಒಂದು ಅಥವಾ ಹೆಚ್ಚು ವಿಷಯಗಳಲ್ಲಿ ಪರೀಕ್ಷೆಗಳನ್ನು ತೆಗೆದುಕೊಂಡು ಅಂತಿಮ ಮಾನ್ಯತೆಗೆಂದು ಕ್ರೆಡಿಟ್‌ಗಳನ್ನು ಸಂಕಲನ ಮಾಡಿಕೊಳ್ಳಬಹುದಾಗಿದೆ. ಬೇಡಿಕೆಯ ಮೇರೆಗೆ ಪರೀಕ್ಷಾ ವ್ಯವಸ್ಥೆ On Demand Examination System (ODES) ಎಂಬ ಮತ್ತೊಂದು ನಮ್ಯತೆಯನ್ನು ಇತ್ತೀಚೆಗೆ ಎನ್.ಓ.ಎಸ್. ಪ್ರಾರಂಭಿಸಿದೆ. ವಿದ್ಯಾರ್ಥಿಯು ತನ್ನ ಅಧ್ಯಯನ ಕೇಂದ್ರವನು ಸಮೀಪಿಸಿ ತನ್ನನ್ನು ಪರೀಕ್ಷಿಸಿ ಎಂದು ಹೇಳಬಹುದು. ಮೇಲೆ ಹೇಳಿದ ಪರೀಕ್ಷೆಯಲ್ಲಿನ ನಮ್ಯತೆ ಮತ್ತು ಮುಕ್ತತೆ ಎಲ್ಲಾ ರಾಜ್ಯದ ಮುಕ್ತಶಾಲೆಗಳಲ್ಲಿರುವುದಕ್ಕಿಂತ ಎನ್.ಡಿ.ಓ.ಎಸ್.ನಲ್ಲಿ ಅಧಿಕವಾಗಿದೆ. ರಾಜ್ಯ ಮುಕ್ತಶಾಲೆಗಳು ರಾಜ್ಯ ಮಾಧ್ಯಮಿಕ ಬೋರ್ಡ್‌ಗಳ ಸಂಸ್ಕೃತಿ ಮತ್ತು ಆಚರಣೆಗಳಿಂದ ನಿಯಂತ್ರಿಸಲ್ಪಡುತ್ತಿರುವುದರಿಂದ ಆ ಶಾಲೆಗಳು ಇಂದಿಗೂ ಸಾಂಪ್ರದಾಯಿಕ ಗುಣಲಕ್ಷಣಗಳನ್ನು ಹೊದಿವೆ; ಅಥವಾ ರಾಜ್ಯ ಬೋರ್ಡ್‌ಗಳು ಶಾಲೆಗಳಿಗೆ ಕೆಲವು ಷರತ್ತುಗಳನ್ನು ವಿಧಿಸಿ ಅವುಗಳನ್ನು ಪೂರೈಸಲು ಹೇಳುವುದು ಸಹ ಇದಕ್ಕೆ ಮತ್ತೊಂದು ಕಾರಣವಿರಬಹುದು.

ದೇಶದ ಮುಕ್ತಶಾಲೆಗಳ ಇಂದಿನ ನಮ್ಯತೆ ಹಾಗೂ ಮುಕ್ತತೆಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ನಮ್ಯತೆ ಮತ್ತು ಮುಕ್ತತೆಗಳಿಗೆ ಸಂಬಂಧಿಸಿದಂತೆ ಎನ್.ಐ.ಓ.ಎಸ್. ಬಹುತೇಕ ಉತ್ತಮ ಉದಾಹರಣೆಯಾಗಿದೆ. ರಾಜ್ಯ ಮುಕ್ತಶಾಲೆಗಳು ವಿಷಯಗಳ ಆಯ್ಕೆಗಳಲ್ಲಿ, ಪರೀಕ್ಷೆಗಳಲ್ಲಿ ಮತ್ತು ಕ್ರೆಡಿಟ್ ಸಂಕಲನಗಳಲ್ಲಿ ತಮ್ಮ ತಮ್ಮಲ್ಲಿಯೇ ಬಹಳ ವ್ಯತ್ಯಾಸಗಳನ್ನು ಹೊಂದಿವೆ.

ಪ್ರವೇಶಾರ್ಹತೆಯಲ್ಲಿನ ನಮ್ಯತೆ ಎನ್.ಐ.ಓ.ಎಸ್.ನ ಮತ್ತೊಂದು ನವೀನ ಲಕ್ಷಣ. ಎನ್.ಐ.ಓ.ಎಸ್. ತನ್ನ ಕಾರ್ಯಕ್ರಮಗಳ ಪ್ರವೇಶಕ್ಕೆ ಕನಿಷ್ಠ ಅರ್ಹತೆಯನ್ನು ನಿರೀಕ್ಷಿಸುತ್ತದೆ. ಪ್ರಾಥಮಿಕ ಶಾಲೆಯನ್ನು ಸಫಲವಾಗಿ ಮುಗಿಸಿರುವ ಯಾವುದೇ ವಿದ್ಯಾರ್ಥಿ

Digitised by Bharatavani, CIIL

ಸೇತುಕಾರ್ಯಕ್ರಮ ಅಥವಾ ಮಾಧ್ಯಮಿಕ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯಬಹುದು. ಆದಾಗ್ಯೂ, ಹಿರಿಯ ಮಾಧ್ಯಮಿಕ ಕಾರ್ಯಕ್ರಮಗಳಿಗೆ ದಾಖಲಾಗಬೇಕಾದರೆ ವಿದ್ಯಾರ್ಥಿಯು ಮಾಧ್ಯಮಿಕ ಸ್ತರವನ್ನು ಉತ್ತೀರ್ಣ ಹೊಂದಿರಬೇಕು.

ಸಾಮಾನ್ಯತಃ ಮುಕ್ತಶಾಲೆಯ ಹಾಗೂ ವಿಶೇಷತಃ ಎನ್.ಐ.ಸಿ.ಎಸ್.ನ ಮೂಲಭೂತ ಲಕ್ಷಣಗಳನ್ನು ವಿವರಿಸಿದ ನಂತರ ಮುಂದುವರಿಯುವ ಎನ್.ಐ.ಓ.ಎಸ್. ಭಾರತದ ಮುಕ್ತಶಾಲೆ ಶಿಕ್ಷಣದ ಬಲವನ್ನು ಅದರ ವ್ಯಾಪ್ತಿ (Size) ಯಲ್ಲಿ ಮಾತ್ರವಷ್ಟೇ ಅಲ್ಲದೆ ಅದರ ಗುಣಮಟ್ಟ, ನಾವೀನ್ಯತೆ ಮತ್ತು ಸಮಗ್ರ ಪ್ರಭಾವಗಳನ್ನೂ ಪ್ರತಿನಿಧಿಸುತ್ತದೆ.

ಬಹಳಷ್ಟು ರಾಜ್ಯ ಮುಕ್ತಶಾಲೆಗಳು ತಮ್ಮ ವಿಕಾಸಕ್ಕೆ ಸಂಬಂಧಿಸಿದಂತೆ ಇನ್ನೂ ಬಾಲ್ಯದ ಸ್ಥಿತಿಯಲ್ಲಿವೆ. ಅವು ಇನ್ನೂ ಬೆಳೆಯಬೇಕಾಗಿದ್ದು ಒಂದರಿಂದ ಮತ್ತೊಂದನ್ನು ಬೇರ್ಪಡಿಸುವ ಲಕ್ಷಣಗಳೇನು ಎಂಬುದನ್ನು ಗುರುತಿಸಿಕೊಳ್ಳಬೇಕಾಗಿದೆ. ಈ ವಿಷಯದಲ್ಲಿ ಆಂಧ್ರಪ್ರದೇಶದ ರಾಜ್ಯ ಮುಕ್ತಶಾಲೆ ಪ್ರಾಥಮಿಕ ಸ್ತರಗಳಲ್ಲಿ ಕಾರ್ಯಕ್ರಮಗಳನ್ನು ಹೊಂದಿದ್ದು ಅಂಥ ವಿಶೇಷ ಸ್ವಂತಿಕೆಯನ್ನು ಪಡೆದಿದೆ. ಆದರೆ ಇನ್ನುಳಿದ ರಾಜ್ಯ ಮುಕ್ತಶಾಲೆಗಳು ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ರಾಜ್ಯ ಮುಕ್ತಶಾಲೆಗಳು ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಶಿಕ್ಷಣದ ಮೇಲೆ ಮಾತ್ರ ಗಮನಹರಿಸುತ್ತಿವೆ.

**ವಿದ್ಯಾರ್ಥಿ ದಾಖಲಾತಿ:** ಭಾರತೀಯ ಮುಕ್ತಶಾಲಾ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ದಾಖಲಾತಿ ಸತತವಾಗಿ ಪರಿವರ್ತನೆ ಹೊಂದುತ್ತಿದೆ. ಸಂಖ್ಯೆಗೆ ಬದಲಾಗಿ ದಾಖಲಾತಿ ದಿಸೆ ಎತ್ತಲಿದೆಯೆಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಎನ್.ಐ.ಓ.ಎಸ್.ನ ದಾಖಲಾತಿ 1991ರಲ್ಲಿ 40,884 ರಷ್ಟಿದ್ದು 1999–2000ದಲ್ಲಿ 1,45,329 ರಷ್ಟಾಗಿ 10 ವರ್ಷಗಳಲ್ಲಿ 3.55ರಷ್ಟು ಪಟ್ಟು ಬೆಳವಣಿಗೆಯನ್ನು ಕಂಡಿದೆ. ವಿವಿಧ ರೀತಿಯ ಕಾರ್ಯಕ್ರಮಗಳಲ್ಲಿ ನಿರ್ದಿಷ್ಟವಾದ ದಾಖಲಾತಿಯ ದಿಸೆಯ ಪ್ರವೃತ್ತಿಯನ್ನು ಕಾಣಬಹುದು. ಉದಾಹರಣೆಗೆ, ಮಾಧ್ಯಮಿಕ ಶಿಕ್ಷಣ ಕಾರ್ಯಕ್ರಮಗಳಿಗೆ ಅತಿ ಹೆಚ್ಚಿನ ದಾಖಲಾತಿಯಿದ್ದು ನಂತರ ಕ್ರಮವಾಗಿ ಹಿರಿಯ ಮಾಧ್ಯಮಿಕ, ವೃತ್ತಿಪರ ಮತ್ತು ಸೇತುಕಾರ್ಯಕ್ರಮಗಳಿಗೆ ಅವರೋಹಣ ಕ್ರಮದಲ್ಲಿ ದಾಖಲಾತಿ ಕಂಡುಬಂದಿದೆ. ಎನ್.ಐ.ಓ.ಎಸ್.ನಲ್ಲಿ ಆಗುವ ಒಟ್ಟು ದಾಖಲಾತಿಯಲ್ಲಿ ಸುಮಾರು ಶೇಕಡಾ 60ರಷ್ಟು ದಾಖಲಾತಿ ಮಾಧ್ಯಮಿಕ ಸ್ತರದಲ್ಲಿದ್ದು ಕೇವಲ ಶೇಕಡಾ 35ರಷ್ಟು ಹಿರಿಯ ಮಾಧ್ಯಮಿಕ ಸ್ತರದಲ್ಲಿ ಕಂಡುಬಂದಿರುತ್ತದೆ. ಒಟ್ಟು ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಶೇಕಡಾ 5ಕ್ಕಿಂತಲೂ ಕಡಿಮೆ ವೃತ್ತಿಪರ ಕಾರ್ಯಕ್ರಮಗಳನ್ನು ದಾಖಲಾತಿಯಾಗುವುದು.

ಪ್ರಾದೇಶಿಕವಾಗಿ ದಾಖಲಾತಿಯ ವಿಶ್ಲೇಷಣೆಯನ್ನು ಮಾಡಿದಾಗ ದೆಹಲಿಯೊಂದರಲ್ಲೇ ಶೇಕಡಾ 39.48ರಷ್ಟು ದಾಖಲಾತಿಯಾಗಿದೆ; ನಂತರ, ಕ್ರಮವಾಗಿ ಉತ್ತರ, ದಕ್ಷಿಣ, ಈಶಾನ್ಯ ಮತ್ತು ಪೂರ್ವಭಾಗಗಳ ದಾಖಲಾತಿ ಅವರೋಹಣ ಕ್ರಮದಲ್ಲಿದೆ. ವಿಶ್ವದ ವಿಶ್ಲೇಷಣೆ ಕೆಲವು ಕುತೂಹಲಕಾರಿ ಪ್ರವೃತ್ತಿಗಳನ್ನು ಸೂಚಿಸುತ್ತದೆ. ಉದಾಹರಣೆಗೆ ರವೀಂದ್ರ ಮುಕ್ತವಿಶ್ವವಿದ್ಯಾಲಯದಲ್ಲಿ ಈಗಲೂ 4000 ದಾಖಲಾತಿಯಾಗುತ್ತಿದ್ದರೂ ಈ ಮುನ್ನ ದೆಹಲಿ ಹಾಗೂ ಉತ್ತರಭಾಗಗಳಿಗಿಂತ ದಾಖಲಾತಿಯಲ್ಲಿ ಎರಡನೆ ಸ್ಥಾನದಲ್ಲಿರುತ್ತಿದ್ದ ಈ ಪೂರ್ವಭಾಗವು ಐದನೇ ಸ್ಥಾನಕ್ಕೆ ಇಳಿದಿದ್ದು ಒಟ್ಟು ದಾಖಲಾತಿಯಲ್ಲಿ ಈ ಪ್ರವೃತ್ತಿಯು ಗ್ರಾಮೀಣ ನಗರ ಮಧ್ಯದ ಅಂತರವನ್ನು ಸೂಚಿಸುತ್ತದೆ. ಹಿಂದಿನ ವರ್ಷಗಳಲ್ಲಿ ನಗರಗಳು ದಾಖಲಾತಿಯಲ್ಲಿ ಮುಂದಿದ್ದು ಈ ಪ್ರವೃತ್ತಿಯು 1999–2000 ದಲ್ಲಿ ಎನ್.ಎ.ಓ.ಎಸ್.ಗೆ 58.52% ಗ್ರಾಮೀಣ ಪ್ರದೇಶದಿಂದ ದಾಖಲಾತಿಯಾಗುವ ಮೂಲಕ ಹಿಂದಿನ ಪ್ರವೃತ್ತಿಯು ಬದಲಾಗಿದೆ. ಆದಾಗ್ಯೂ, ಲಿಂಗಭೇದದ ದೃಷ್ಟಿಯಿಂದ ಈ ಅಂಶ ಸತ್ಯವಲ್ಲ. ಬಾಲಕಿಯರು 35–36% ಮಟ್ಟದ ದಾಖಲಾತಿಯನ್ನು ಪಡೆಯುತ್ತಲಿದ್ದು ಹೆಚ್ಚು ಕಡಿಮೆ ಒಂದೇ ಮಟ್ಟದಲ್ಲಿ ಮುಂದುವರೆದಿದೆ. ಸಾಂಪ್ರದಾಯಿಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಈ ಅಂಕಿ–ಅಂಶ ಸ್ವಲ್ಪ ಅಧಿಕವಾಗಿದೆಯೆಂದು ಹೇಳಬಹುದು.

ಎನ್.ಐ.ಓ.ಎಸ್.ನಲ್ಲಿನ ದಾಖಲಾತಿಗೆ ಹೋಲಿಸಿದಾಗ ರಾಜ್ಯ ಮುಕ್ತಶಾಲೆಗಳಲ್ಲಿನ ದಾಖಲಾತಿ ಈಗಲೂ ಅತ್ಯಲ್ಪ. 1998–99ರ ಸಾಲಿನಲ್ಲಿನ ತುಲನಾತ್ಮಕ ದತ್ತಾಂಶದ ಪ್ರಕಾರ ಎನ್.ಐ.ಓ.ಎಸ್.ನ ಮಾಧ್ಯಮಿಕ ಶಿಕ್ಷಣ ಕಾರ್ಯಕ್ರಮ ಮತ್ತು 8 ರಾಜ್ಯ ಮುಕ್ತಶಾಲೆಗಳಲ್ಲಿ ಆದ ಒಟ್ಟು 2,32,248 ದಾಖಲಾತಿಗಳಲ್ಲಿ ಎನ್.ಓ.ಎಸ್.ನಲ್ಲಿ 77,931 ದಾಖಲಾತಿಗಳಾಗಿದ್ದವು. ಅಂತೆಯೇ, ಹಿರಿಯ ಮಾಧ್ಯಮಿಕ ಶಿಕ್ಷಣದಲ್ಲಿನ 86,969 ದಾಖಲಾತಿಗಳಲ್ಲಿ 47,345 ವಿದ್ಯಾರ್ಥಿಗಳು ಎನ್.ಐ.ಓ.ಎಸ್. ಒಂದರಲ್ಲೇ ದಾಖಲಾಗಿದ್ದರು. ಮುಕ್ತಶಾಲೆಗಳಲ್ಲಿನ ದಾಖಲಾತಿಯ ಹೆಚ್ಚು ವಿವರವಾದ ವಿಶ್ಲೇಷಣೆಗಾಗಿ ಓದುಗರು ಸುಜಾತ (2002)ರವರ ಉಲ್ಲೇಖನವನ್ನು ನೋಡಬಹುದು.

**ಕಾರ್ಯಕ್ರಮಗಳು:**

ಮುಕ್ತಶಾಲೆಗಳು ಪ್ರಾಥಮಿಕ, ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಶಿಕ್ಷಣಕ್ಕೆ ಸಮನಾದ ಪದವಿಪೂರ್ವ ಮಟ್ಟದವರೆಗಿನ ಕಾರ್ಯಕ್ರಮಗಳಿಗೆ ಪ್ರವೇಶ ನೀಡುತ್ತವೆ. ಸಾಂಪ್ರದಾಯಿಕ ಶಾಲೆಗಳು ನಡೆಸುವ ಕಾರ್ಯಕ್ರಮಗಳಿಗಿಂತ ಈ ಶಾಲೆಗಳು ವಿಸ್ತೃತ ಹರವಿನ ಕಾರ್ಯಕ್ರಮಗಳನ್ನು ನಡೆಸುತ್ತವೆ. ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಕಾರ್ಯಕ್ರಮಗಳು ಮುಕ್ತಶಾಲೆಗಳ ಹೆಚ್ಚು ಜನಪ್ರಿಯ ಕಾರ್ಯಕ್ರಮಗಳು. ವೃತ್ತಿಪರವಾದ, ಜೀವನವನ್ನು ಪುಷ್ಟಿಗೊಳಿಸುವ ಹಾಗೂ ವಿಶೇಷ ಶಿಕ್ಷಣ ಕಾರ್ಯಕ್ರಮಗಳನ್ನು ಒಳಗೊಂಡ ಹೊಸದಾದ ಹಾಗೂ ನಾವೀನ್ಯಯುತ ಪ್ರಯತ್ನಗಳು ನಡೆದಿವೆ. ಬಹಳ ಇತ್ತೀಚಿನ ಸೇರ್ಪಡೆಯೆಂದರೆ ನವಸಾಕ್ಷರರಿಗೆ ಮುಕ್ತ ಮೂಲಭೂತ ಹಾಗೂ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (Open Basic and Elementary Education Programme, OBEE

8, 10 ಮತ್ತು 12ನೆಯ ಶ್ರೇಣಿಗೆ ಕ್ರಮವಾಗಿ ಸೇತುಬಂಧ, ಮಾಧ್ಯಮಿಕ ಮತ್ತು ಹಿರಿಯ ಮಧ್ಯಮಿಕ ಕಾರ್ಯಕ್ರಮಗಳು ಸಮಾನವಾಗಿದ್ದು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಒಳಗೊಂಡಿವೆ.

Digitised by Bharatavani, CIIL

5ನೆಯ ಶ್ರೇಣಿಯನ್ನು ಪೂರೈಸಿರುವ ಮತ್ತು ಅಥವಾ ಅದಕ್ಕೆ ಸಮನಾದ ಸ್ಥಾನವನ್ನು ಹೊಂದಿರುವ ಮತ್ತು ಈ ಅಧ್ಯಯನವನ್ನು ಮುಂದುವರೆಸುವ ಇಚ್ಛೆಯಿರುವವರಿಗೆ ಸೇತುಬಂಧ ಅಥವಾ ಮೂಲಭೂತ ಕಾರ್ಯಕ್ರಮ ಕೊಂಡಿಯಂತಿರುವ ಕಾರ್ಯಕ್ರಮವಾಗಿದೆ. ಈ ಸೇತುಬಂಧ ಕಾರ್ಯಕ್ರಮವು ಹಿರಿಯ ಪ್ರಾಥಮಿಕ ಸ್ತರಕ್ಕೆ ಸಮನಾಗಿದೆ ಅಂದರೆ ಸಾಂಪ್ರದಾಯಿಕ ಶಿಕ್ಷಣದ 8ನೆಯ ತರಗತಿಗೆ ಇದು ಸಮನಾಗಿದೆ. ಸೇತುಬಂಧ ಕಾರ್ಯಕ್ರಮದಲ್ಲಿ ದಾಖಲಾತಿ ಪಡೆಯಲು ವಿದ್ಯಾರ್ಥಿ 14 ವರ್ಷಗಳ ವಯಸ್ಸನ್ನು ಮುಗಿಸಿರಬೇಕು.

ಒ.ಬಿ.ಇ.ಇ. ಕಾರ್ಯಕ್ರಮವು 8ನೇ ಶ್ರೇಣಿಗೆ ಸಮನಾದ ಕಲಿಕೆಯನ್ನು ಸಾಧಿಸಲು ಉದ್ದೇಶಿತವಾಗಿದ್ದರೂ ಇದರ ಮೂಲಭೂತ ದರ್ಶನ ಮತ್ತು ಉಪಕ್ರಮ ವಿಭಿನ್ನವಾಗಿದೆ. ಪಶ್ಚಿಮ ಬಂಗಾಳದ ಮಿಡ್ನಾಪುರ್ ಜಿಲ್ಲೆಯ ಯುವ ಸಾಕ್ಷರ ಕಾರ್ಯಕ್ರಮದ ಮೌಲ್ಯಮಾಪನವನ್ನು ಪ್ರಸ್ತುತ ಲೇಖಕರು (ಮುಖ್ಯೋಪಾಧ್ಯಾಯರು, 1997) ಕೈಗೊಂಡಾಗ ನಡೆದ ಘಟನೆಯಿಂದ ಈ ಕಾರ್ಯಕ್ರಮ ಸ್ಫೂರ್ತಿ ಪಡೆಯಿತು. ಸಾಕ್ಷರ ಪರೀಕ್ಷೆಯನ್ನು ಸಫಲತೆಯಿಂದ ಪೂರ್ಣ ಪ್ರಕ್ರಿಯೆಯ ಮೂಲಕ ತನ್ನನ್ನು ಕೊಂಡೊಯ್ಯುವ ಕಾರ್ಯಕ್ರಮವೊಂದು ಬೇಕೆಂದು ಕೋರಿದರು. ಈ ಕೋರಿಕೆ ಎನ್.ಒ.ಎಸ್.ನಲ್ಲಿ ಒ.ಬಿ.ಇ.ಇ. (OBEE) ಯ ಪರಿಕಲ್ಪನೆ ಉದ್ಭವವಾಗಲು ಕಾರಣವಾಯಿತು. ಒ.ಬಿ.ಇ.ಇ. ಮೂರು ಸ್ತರಗಳಲ್ಲಿ ಪರಿಕಲ್ಪಿತವಾಗಿದೆ ಆಗತಾನೆ ಸಾಕ್ಷರರಾಗಿರುವವರಿಗೆ 3ನೆ ಶ್ರೇಣಿಗೆ ಸಮನಾದ ಎ–ಸ್ತರ, 5ನೇ ಶ್ರೇಣಿಗೆ ಸಮನಾದ ಬಿ–ಸ್ತರ ಮತ್ತು 8ನೇ ಶ್ರೇಣಿಗೆ ಸಮಾನವಾದ ಸಿ–ಸ್ತರ. ಈ ಒ.ಬಿ.ಇ.ಇ. ಕಾರ್ಯಕ್ರಮವು ಕೇವಲ ಭಾಷೆ, ಗಣಿತ ವಿಜ್ಞಾನ, ಪರಿಸರ ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಂಥ ಶೈಕ್ಷಣಿಕ ವಿಷಯಗಳನ್ನಷ್ಟೇ ಅಲ್ಲದೆ ಔದ್ಯೋಗಿಕ ಪೂರ್ವ ಹಾಗೂ ಔದ್ಯೋಗಿಕ ಕಾರ್ಯಕ್ರಮಗಳನ್ನೂ ಸಹ ಒಳಗೊಳ್ಳುತ್ತದೆ. ಒಳ್ಳೆಯ ಪೋಷಕತ್ವವನ್ನು ಕೇಂದ್ರಬಿಂದುವಾಗಿಸಿಕೊಂಡಿರುವ ವಯಸ್ಕರಿಗಾಗಿ ಒ.ಬಿ.ಇ.ಇ. ಮತ್ತೊಂದು ಪೂರಕ ಕಾರ್ಯಕ್ರಮ. ಜಂಟಿ ಪ್ರಮಾಣೀಕರಣದ ಅವಕಾಶದೊಂದಿಗೆ ಈ ಎರಡು ಕಾರ್ಯಕ್ರಮಗಳನ್ನು ಎನ್.ಜಿ.ಒ. (N.G.O.) ಗಳ ಸಹಭಾಗಿತ್ವದಲ್ಲಿ ನಡೆಸಲಾಗುತ್ತದೆ.

ಮಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಕಾರ್ಯಕ್ರಮಗಳು 10ನೇ ಮತ್ತು 12ನೇ ಶ್ರೇಣಿಗೆ ದಾರಿಮಾಡಿಕೊಡುತ್ತವೆಯಲ್ಲದೆ ಈ ಸರ್ಟಿಫಿಕೇಟ್‌ಗಳು ಸರ್ಕಾರಿ ಹಾಗೂ ಇನ್ನಿತರ ಔದ್ಯೋಗಿಕ ಏಜೆನ್ಸಿಗಳಿಂದ ಹಾಗೂ ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾನಿಲಯಗಳಿಂದ ಅಂಗೀಕೃತವಾಗಿವೆ. ಮಧ್ಯಮಿಕ ಕಾರ್ಯಕ್ರಮಗಳನ್ನು 8ನೇ ತರಗತಿಯ ಶಿಕ್ಷಣ ಪೂರೈಸಿದವರಿಗಾಗಿ ತೆರೆದಿಡಲಾಗಿದೆ. ಆದರೆ, 8ನೇ ಶ್ರೇಣಿಯ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಮಾಣಪತ್ರವನ್ನು ಹಾಜರುಪಡಿಸಬೇಕೆಂಬ ಯಾವುದೇ ನಿರ್ದಿಷ್ಟ ನಿಯಮವಿಲ್ಲ. ಈ ಕಾರ್ಯಕ್ರಮಕ್ಕೆ ಕನಿಷ್ಠ ವಯೋಮಾನದ ಮಿತಿ 15 ವರ್ಷ. ಹಿರಿಯ ಮಾಧ್ಯಮಿಕ ಕಾರ್ಯಕ್ರಮಗಳಲ್ಲಿ ಮಾಧ್ಯಮಿಕ ಶಾಲಾಶಿಕ್ಷಣವನ್ನು ಪೂರೈಸಿರುವವರಿಗೆ ಹಾಗೂ 12ನೇ ಶ್ರೇಣಿಯವರೆಗೆ ಶಿಕ್ಷಣವನ್ನು ಮುಂದುವರೆಸುವ ಇಚ್ಛೆಯುಳ್ಳವರಿಗೆ ಪ್ರವೇಶವಿದೆ. ಈ ಕಾರ್ಯಕ್ರಮಕ್ಕೆ ಸೇರುವವರು 16 ವರ್ಷದ ವಯೋಮಾನವನ್ನು ಮೀರಿರಬೇಕು. ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಸ್ತರಗಳಲ್ಲಿ ವಿಸ್ತೃತ ಹರವಿನ ವಿಷಯಗಳನ್ನು ಬೋಧಿಸಲಾಗುತ್ತದೆ. ಆದರೆ, ರಾಜ್ಯ ಮುಕ್ತಶಾಲೆಗಳು ಇಂಥ ವಿಸ್ತಾರ ಹರವಿನ ವಿಷಯಗಳನ್ನು ಬೋಧಿಸುವುದಿಲ್ಲ.

ಎನ್.ಐ.ಒ.ಎಸ್. ನಿಯತಕಾಲಗಳಲ್ಲಿ ಕಾರ್ಯಕ್ರಮಗಳನ್ನು ನವೀಕರಿಸುವುದರ ಜೊತೆಗೆ ಹೊಸ ಕಾರ್ಯಕ್ರಮಗಳನ್ನು ಆರಂಭಿಸುತ್ತದೆ ಎಂಬ ಅಂಶವನ್ನು ನಾವಿಲ್ಲಿ ಉಲ್ಲೇಖಿಸಬೇಕು. ಇದಕ್ಕೆ ಹೋಲಿಸಿದಾಗ ರಾಜ್ಯ ಮುಕ್ತಶಾಲೆಗಳು ಸಾಮಾನ್ಯವಾಗಿ ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಸ್ತರಗಳಲ್ಲಿ ಕೆಲವೇ ವಿಷಯಗಳನ್ನು ಬೋಧಿಸುತ್ತವೆ.

**ಔದ್ಯೋಗಿಕ ಕಾರ್ಯಕ್ರಮಗಳು:**

ಮುಕ್ತ ಶಾಲಾ ವ್ಯವಸ್ಥೆಯು, ಅದರಲ್ಲೂ ಎನ್.ಐ.ಒ.ಎಸ್., ಸ್ವತಂತ್ರವಾಗಿ ಹಾಗೂ ಇತರ ವಿಷಯಗಳ ಜೊತೆಯಲ್ಲಿ ವಿಸ್ತೃತ ವ್ಯಾಪ್ತಿಯ ವೃತ್ತಿಪರ ಕಾರ್ಯಕ್ರಮಗಳನ್ನು ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಮಟ್ಟಗಳಲ್ಲಿ ಬೋಧಿಸುತ್ತದೆ. ಸ್ವತಂತ್ರ ಕಾರ್ಯಕ್ರಮಗಳು ಆರು ಮಾಸ ಇಲ್ಲವೇ ಒಂದು ವರ್ಷದ ಅವಧಿಯದಾಗಿರುತ್ತವೆ. ಇತರ ಶೈಕ್ಷಣಿಕ ವಿಷಯಗಳ ಜೊತೆಗೆ ತೆಗೆದುಕೊಳ್ಳುವ ವೃತ್ತಿಪರ ಕಾರ್ಯಕ್ರಮಗಳಿಗೆ ಇಂಥ ಕಾಲಮಿತಿ ಅನ್ವಯವಾಗುವುದಿಲ್ಲ. ಯುವಜನತೆಯಲ್ಲಿ ಉಪಯುಕ್ತ ಕೌಶಲಗಳನ್ನು ಬೆಳೆಸುವುದು ಈ ಔದ್ಯೋಗಿಕ ಕಾರ್ಯಕ್ರಮಗಳ ಮುಖ್ಯ ಗುರಿಯಾಗಿದೆ. ಕಛೇರಿಯ ಕೆಲಸಗಳು, ಗ್ರಂಥಾಲಯದ ಕಾರಕೂನ ಹಾಗೂ ಸಹಾಯಕ; ಎಲೆಕ್ಟ್ರಿಕಲ್ ಮತ್ತು ಹೌಸ್ ವೈರಿಂಗ್; ಎಲೆಕ್ಟ್ರಿಕಲ್ ಟೆಕ್ನೀಷಿಯನ್; ರೇಡಿಯೋ ಮತ್ತು ಟಿ.ವಿ. ರಿಪೇರಿ; ಕಟಿಂಗ್, ಹೊಲಿಗೆ ಮತ್ತು ವಸ್ತ್ರ ತಯಾರಿಕೆ ಇತ್ಯಾದಿ. ಕಾರ್ಯತಂತ್ರದ ಭಾಗವಾಗಿ ಕೃಷಿ, ಪಶುಸಂಗೋಪನೆ, ತಂತ್ರಜ್ಞಾನ, ಅರೆವೈದ್ಯಕೀಯ ಮತ್ತು ಗೃಹ ವಿಜ್ಞಾನ ಈ ಆಯ್ದ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ವಿಕಾಸಗೊಳಿಸಲಾಗಿದೆ.

**ಔದ್ಯೋಗಿಕ ಕಾರ್ಯಕ್ರಮಗಳು ಎರಡು ಘಟಕಗಳನ್ನು ಹೊಂದಿವೆ:**

ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಔದ್ಯೋಗಿಕ ಕಾರ್ಯಕ್ರಮಗಳಿಗಾಗಿ ಸಿದ್ಧಪಡಿಸಿದ ಸಾಮಗ್ರಿಯಲ್ಲಿ ಕಾರ್ಯಕ್ರಮದ ಸೈದ್ಧಾಂತಿಕ ವಿಚಾರಗಳು ಒಳಗೊಂಡಿರುತ್ತವೆ. ಪ್ರಾಯೋಗಿಕ ಭಾಗವನ್ನು ಮಾನ್ಯತೆ ಪಡೆದ ಔದ್ಯೋಗಿಕ ಸಂಸ್ಥೆಗಳಲ್ಲಿ (Accredited Vocational Institutes AVI) ಬೋಧಿಸಲಾಗುತ್ತದೆ. ರಾಜ್ಯ ಮುಕ್ತಶಾಲೆಗಳಲ್ಲಿ ಔದ್ಯೋಗಿಕ ಕಾರ್ಯಕ್ರಮಗಳು ಅಷ್ಟು ರೂಢಿಯಲ್ಲಿಲ್ಲ.

Digitised by Bharatavani, CIIL

**ಜೀವನ ಪುಷ್ಟೀಕರಣ ಕಾರ್ಯಕ್ರಮಗಳು:**

ಈ ಕಾರ್ಯಕ್ರಮ ಸಮಾಜದ ಎಲ್ಲಾ ವರ್ಗಗಳಿಂದ ಹಾಗೂ ಜೀವನದ ಎಲ್ಲಾ ಪಥಗಳಿಂದ ಬರುವವರಿಗೆ ಮೀಸಲಾಗಿದೆ. ವ್ಯಕ್ತಿಗಳ ಆಸಕ್ತಿಗಳನ್ನು ತೃಪ್ತಿಗೊಳಿಸಲು ಮತ್ತು ಇತರ ಕಲಿಕಾ ಅಗತ್ಯಗಳನ್ನು ಪೂರೈಸಲು ಕಾರ್ಯಕ್ರಮಗಳನ್ನು ಒದಗಿಸುವ ಮುಖಾಂತರ ಜನರ ಜೀವನವನ್ನು ಪುಷ್ಟೀಕರಿಸುವುದು ಇದರ ಪ್ರಮುಖ ಉದ್ದೇಶ. ಸಮುದಾಯ ಆರೋಗ್ಯ, ಪೋಷಕತ್ವ, ಮಹಿಳೆಯರ ಸಬಲೀಕರಣ ಇತ್ಯಾದಿ ಈ ಗುಂಪಿನಲ್ಲಿ ಒಳಗೊಳ್ಳುತ್ತದೆ. ದೇಶದಲ್ಲಷ್ಟೆ ಅಲ್ಲದೆ ಆದಿವಾಸಿ ಭಾರತೀಯರಲ್ಲಿ ನಮ್ಮ ಸಂಸ್ಕೃತಿಯ ಶ್ರೀಮಂತಿಕೆಯನ್ನು ಪ್ರಸಾರಗೊಳಿಸುವ ಉದ್ದೇಶದಿಂದ ಎನ್.ಐ.ಓ.ಎಸ್. ಭಾರತೀಯ ಸಂಸ್ಕೃತಿ ಮತ್ತು ಪರಂಪರೆ ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಎನ್.ಐ.ಓ.ಎಸ್.ನಿಂದ ಮಾನ್ಯಗೊಂಡ ಸಂಸ್ಥೆಗಳಲ್ಲಿನ ವಿದ್ಯಾರ್ಥಿ ಮತ್ತು ಶಿಕ್ಷಕರಲ್ಲಿ ಅಪೇಕ್ಷಿತ ಮಾನವೀಯ ಮೌಲ್ಯಗಳನ್ನು ಬಲಗೊಳಿಸಲು ಮಾನವೀಯ ಮೌಲ್ಯಗಳ ಶಿಕ್ಷಣದ ಬಗ್ಗೆ ಕಾರ್ಯಕ್ರಮವೊಂದನ್ನು ಇದು ಪ್ರಾರಂಭಿಸಲಾಗಿದೆ.

**ಕಾರ್ಯಕ್ರಮ ನಡೆಸುವಿಕೆ:**

ವಿವಿಧ ಕಾರಣಗಳಿಂದಾಗಿ ಮುಕ್ತಶಾಲೆಗಳಲ್ಲಿನ ಕಾರ್ಯಕ್ರಮ ನಡೆಸುವಿಕೆ ಸಾಂಪ್ರದಾಯಿಕ ಶಾಲೆಗಳಲ್ಲಿರುವುದಕ್ಕಿಂತ ಸ್ಪಷ್ಟ ರೀತಿಯಲ್ಲಿ ಭಿನ್ನವಾಗಿದೆ. ಹೆಚ್ಚಿನ ಮಟ್ಟದ ಪ್ರೇರಣೆ ಮತ್ತು ಪಕ್ವತೆಯನ್ನು ಹೊಂದಿರುವ ಆದರೆ ಅಧ್ಯಯನಕ್ಕೆ ಅಲ್ಪ ಕಾಲಾವಕಾಶವಿರುವ ವಯಸ್ಕನು ಸಾಮಾನ್ಯವಾಗಿ ಮುಕ್ತಶಾಲೆಯ ಕಲಿಕಾರ್ಥಿಯಾಗಿರುತ್ತಾನೆ ಎಂಬುದು ಮೊದಲನೆಯ ಹಾಗೂ ಬಹುಮುಖ್ಯ ಅಂಶವಾಗಿದೆ. ಕಲಿಕಾರ್ಥಿಗಳು ಪ್ರೇರಣೆ ಪಕ್ವತೆಗಳೊಂದಿಗೆ ನಿಜಜೀವನದಿಂದ ಅಪಾರ ಅನುಭವವನ್ನು ತಮ್ಮೊಡನೆ ತರುತ್ತಾರೆ. ಆದ್ದರಿಂದ, ಸಾಂಪ್ರದಾಯಿಕ ಶಾಲೆಗಳ ಬೋಧನಶಾಸ್ತ್ರಕ್ಕೂ ವಯಸ್ಕರ ಶಿಕ್ಷಣದ ವಯಸ್ಕ ಬೋಧನಾಶಾಸ್ತ್ರಕ್ಕೂ ಅಂತರವಿದೆ. ಮೂಲಭೂತ ವ್ಯತ್ಯಾಸವೆಂದರೆ ಮುಕ್ತ ಕಲಿಕೆಯಲ್ಲಿ ಕಲಿಯುವ ಕರ್ತವ್ಯ ವಿದ್ಯಾರ್ಥಿಯ ಮೇಲಿದೆ. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕ ನಿರ್ದೇಶಿತ ಕಲಿಕಾ ಪ್ರಕ್ರಿಯೆಗೆ ನೀಡುವ ಒತ್ತಿಗೆ ಹೋಲಿಸಿದಾಗ ಕಲಿಕಾರ್ಥಿಗಳು ಸ್ವನಿಯಂತ್ರಿತ ವಿದ್ಯಾರ್ಥಿಗಳಾಗಿರಬೇಕಾಗುತ್ತದೆ.

ಉದ್ಯೋಗ ನಿರತ ವಯಸ್ಕರು ಹಾಗೂ ಯುವಕರ ಶಿಕ್ಷಣದ ಸವಾಲನ್ನು ಎದುರಿಸಲು ವಿಶ್ವದಾದ್ಯಂತವಿರುವ ಮುಕ್ತಶಿಕ್ಷಣ ಬಹುಪಥವುಳ್ಳ ಕಲಿಕಾ ವ್ಯವಸ್ಥೆಯನ್ನು ತನ್ನದಾಗಿಸಿಕೊಂಡಿವೆ. ಸಾಧಾರಣವಾಗಿ ಭಾರತೀಯ ಮುಕ್ತ ಶಾಲಾವ್ಯವಸ್ಥೆ ಬಹುಪಥವುಳ್ಳ ಕಲಿಕಾ ವ್ಯವಸ್ಥೆಯನ್ನು ಅನುಸರಿಸುತ್ತಿದ್ದು ಎನ್.ಐ.ಓ.ಎಸ್. ಈ ದಿಶೆಯಲ್ಲಿ ನಾಯಕತ್ವವನ್ನು ವಹಿಸಿದೆ. ಮುದ್ರಿತ ಸ್ವಯಂ ಬೋಧನಾ ಸಾಮಗ್ರಿಗಳು; ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮ ಮತ್ತು ಸಲಹೆ; ಶ್ರವಣ ಮತ್ತು ದೃಶ್ಯ ಕಾರ್ಯಕ್ರಮಗಳು; ಮತ್ತು ಜ್ಞಾನ ದರ್ಶನ' ಎಂಬ ಶೈಕ್ಷಣಿಕ ಟಿವಿ. ಚಾನೆಲ್ ಇವುಗಳ ಮುಖಾಂತರ ಕಾರ್ಯಕ್ರಮವನ್ನು ನಡೆಸಿಕೊಡಲಾಗುತ್ತದೆ. ಬಹುಪಥ ಕಲಿಕಾ ಪದ್ಧತಿಯಲ್ಲಿ ವಿಭಿನ್ನ ಪಥಗಳು ಒಂದಕ್ಕೊಂದು ಪುಷ್ಟಿಯನ್ನೀಯುತ್ತವೆ. ಸೈದ್ಧಾಂತಿಕವಾಗಿ, ವಿವಿಧ ಪಥಗಳು ಬಹು ಪಥ ಕಲಿಕಾ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ನಿಲ್ಲಬಲ್ಲವು. ಹಾಗೆಯೇ, ಭಾರತೀಯ ಮುಕ್ತಶಾಲೆಗಳಲ್ಲಿಯೂ ವಿದ್ಯಾರ್ಥಿಗಳು ಸ್ವತಂತ್ರವಾಗಿ ಕಲಿಯಬಲ್ಲರು. ಏಕೆಂದರೆ, ಇಲ್ಲಿ ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮ ಕಡ್ಡಾಯವಲ್ಲವಾದ್ದರಿಂದ ಬಹಳ ವಿದ್ಯಾರ್ಥಿಗಳು ಈ ಕಾರ್ಯಕ್ರಮಕ್ಕೆ ಹಾಜರಾಗುವುದಿಲ್ಲ; ಅವರು ಮುದ್ರಿತ ಸ್ವಯಂ-ಬೋಧನಾ ಸಾಮಗ್ರಿಯನ್ನು ಅವಲಂಬಿಸುತ್ತಾರೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ದೂರದರ್ಶನ ಕಾರ್ಯಕ್ರಮಗಳು ಇವೆಯಾದರೂ, ಮುಕ್ತಶಾಲಾ ವ್ಯವಸ್ಥೆಗೆ ತನ್ನ ಕಾರ್ಯಕ್ರಮಗಳಿಗಾಗಿ ಈಗಲೂ ಶೈಕ್ಷಣಿಕ ದೂರದರ್ಶನ ಲಭ್ಯವಿಲ್ಲ. ಶೈಕ್ಷಣಿಕ ಛಾನೆಲ್ ಆಗಿರುವ 'ಜ್ಞಾನ ದರ್ಶನ' ಮುಕ್ತಶಾಲೆಯ ಕಾರ್ಯಕ್ರಮಗಳನ್ನು ಬಿತ್ತರಿಸಲು ಅವಕಾಶ ಮಾಡಿಕೊಡುತ್ತದೆ. ಇಲ್ಲಿಯೂ ಈ ಅವಕಾಶ ರಾಷ್ಟ್ರೀಯ ಸಂಸ್ಥೆಗಳಿಗಾಗಿ ಮಾತ್ರ ಸೀಮಿತವಾಗಿದೆ. ಉದಾಹರಣೆಗೆ, ಎನ್.ಐ.ಓ.ಎಸ್. ಪ್ರತಿ ಶುಕ್ರವಾರ ವಾರಕ್ಕೊಮ್ಮೆ 30 ನಿಮಿಷದ ಕಾರ್ಯಕ್ರಮ ಬಿತ್ತರಿಸುತ್ತದೆ. ಎಲ್ಲಾ ರಾಜ್ಯ ಮುಕ್ತಶಾಲೆಗಳು ಮುದ್ರಿತ ಸ್ವಯಂಬೋಧನಾ ಸಾಮಗ್ರಿಗಳನ್ನು ಮತ್ತು ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮಗಳನ್ನು ಬಳಸಿಕೊಳ್ಳುತ್ತವೆ. ಶ್ರವಣ ಮತ್ತು ದೃಶ್ಯ ಬೋಧನಾ ಸಾಮಗ್ರಿಗಳನ್ನು ಉಪಯೋಗಿಸಿರುವ ಕೆಲವು ರಾಜ್ಯ ಮುಕ್ತಶಾಲೆಗಳು ಇವೆ. ವಾಸ್ತವವಾಗಿ, ಆಂಧ್ರಪ್ರದೇಶ ಮುಕ್ತಶಾಲೆ ಭಾರತದಲ್ಲಿ ಮುಕ್ತಶಾಲೆಗಳಲ್ಲಿ ಶ್ರವಣ ಕಾರ್ಯಕ್ರಮವನ್ನು ಪ್ರಪ್ರಥಮವಾಗಿ ಬಳಕೆಗೆ ತಂದಿತು.

ಮುದ್ರಿತ ಸ್ವಯಂ-ಬೋಧನಾ ಸಾಮಗ್ರಿಗಳ ಪರಿಕಲ್ಪನೆ ಮತ್ತು ಬಳಕೆಯ ಬಗ್ಗೆ ವಿಶೇಷ ವಿವರಣೆಯ ಅಗತ್ಯವಿದೆ. ಸಾಂಪ್ರದಾಯಿಕ ದೂರಶಿಕ್ಷಣವು ಕ್ರಮಬದ್ಧವಲ್ಲದ, ಸ್ವಯಂಬೋಧಕವೂ ಅಲ್ಲದೆ ಪತ್ರವ್ಯವಹಾರದ ಪಾಠಗಳ ಮುಖಾಂತರ ಕಾರ್ಯಕ್ರಮಗಳನ್ನು ನಡೆಸುತ್ತಿತ್ತು. ಬಹಳ ಮುಂಚಿನ ವರ್ಷಗಳಲ್ಲಿ ದೇಶದಲ್ಲಾದ ಕಾರ್ಯಕ್ರಮ ಆಧಾರಿತ ಕಲಿಕಾ ಆಂಧೋಲನದ ಪ್ರೇರಿತವಾಗಿ ಎನ್.ಓ.ಎಸ್. ಶ್ರೇಷ್ಠ ಗುಣಮಟ್ಟದ ಕ್ರಮಬದ್ಧ ಸ್ವಯಂಬೋಧನಾ ಸಾಮಗ್ರಿಗಳನ್ನು ವಿಕಾಸಗೊಳಸಿತು. ಅಂಥ ಸ್ವಯಂಬೋಧನಾ ಸಾಮಗ್ರಿಗಳು ನಂತರ ವಸ್ತುವಿಷಯ, ರಚನೆ, ಉದಾಹರಣೆಗಳು ಹಾಗೂ ಪುಟವಿನ್ಯಾಸ, ಮುದ್ರಣ ಮತ್ತು ಉತ್ಪಾದನೆ ಈ ಅಂಶಗಳಲ್ಲಿ ಸುಧಾರಿತಗೊಂಡವು.

ರಾಜ್ಯ ಮುಕ್ತಶಾಲೆಗಳ ಪ್ರಾಯೋಜನೆ ಮತ್ತು ಅವುಗಳಿಗೆ ತನ್ನ ಸಾಮಗ್ರಿಗಳನ್ನು ಒದಗಿಸುವ ಕಾರ್ಯನೀತಿ ಎನ್.ಓ.ಎಸ್.ನ ಕಾರ್ಯನೀತಿಯ ಪರಿಣಾಮವಾಗಿ ಆ ಶಾಲೆಗಳು ಕ್ರಮಬದ್ಧ ಸ್ವಯಂಬೋಧನ ಸಾಮಗ್ರಿಗಳನ್ನು ಬಳಸಲಾರಂಭಿಸಿದವು. ಬಹುತೇಕ ದೂರಶಿಕ್ಷಣ ಕಾರ್ಯಕ್ರಮಗಳು ದ್ವಿಮುಖ ರೀತಿ (Dualmode) ಯಲ್ಲಿ ಪ್ರಸ್ತುತಗೊಂಡರೆ ವಿಶ್ವವಿದ್ಯಾಲಯಗಳು ಇಂದಿಗೂ ಹಳೆಯ ಸಾಂಪ್ರದಾಯಿಕ ಗ್ರಾಂಥಿಕ ಸಾಮಗ್ರಿಗಳನ್ನು ಉಪಯೋಗಿಸುತ್ತಿವೆ; ಭಾರತೀಯ ಮುಕ್ತಶಾಲೆಗಳು ಕಾರ್ಯಕ್ರಮ

Digitised by Bharatavani, CIIL

ನಡೆಸುವಿಕೆಯಲ್ಲಿ ಕ್ರಮಬದ್ಧ ಸ್ವಯಂ ಬೋಧನಾ ಸಾಮಗ್ರಿಗಳನ್ನು ಅಂತರ್ಗತಗೊಳಿಸಿಕೊಂಡು ಅವುಗಳನ್ನು ಕಾರ್ಯಕ್ರಮ ನಡೆಸುವುದಕ್ಕೆ ಪ್ರಮುಖ ವಿಧಾನವಾಗಿಸಿಕೊಳ್ಳುವಲ್ಲಿ ಮಹತ್ವಪೂರ್ಣ ಹೆಜ್ಜೆಯನ್ನಿಟ್ಟಿವೆ.

ದೈಹಿಕ ಸವಾಲನ್ನೆದುರಿಸುವ ವಿದ್ಯಾರ್ಥಿಗಳ ಶಿಕ್ಷಣವನ್ನು ಬೆಂಬಲಿಸಲು ಎನ್.ಐ.ಓ.ಎಸ್. ಸಮನ್ವಯ ಶಿಕ್ಷಣವನ್ನು ಆರಂಭಿಸಿದೆ. ಮಾಧ್ಯಮಿಕ ಸ್ತರದಲ್ಲಿ ಬ್ರೈಲ್‌ಲಿಪಿ ಹಾಗೂ ಆಡಿಯೋ ಕ್ಯಾಸೆಟ್‌ಗಳ ರೂಪದಲ್ಲಿ ಸ್ವಯಂಬೋಧನಾ ಸಾಮಗ್ರಿಗಳನ್ನು ಪರಿಚಯಿಸಿದೆ.

ವಿದ್ಯಾರ್ಥಿಗಳಿಗೆ ತಮ್ಮ ಸಂಶಯವನ್ನು ಪರಿಹರಿಸಿಕೊಳ್ಳುವ ಸಲುವಾಗಿ ಪಾಠವನ್ನು ಹೇಳಲು ವಿನ್ಯಾಸಗೊಳಿಸಿರುವ ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮಗಳು ದುರದೃಷ್ಟವಶಾತ್ ತಮ್ಮ ಉದ್ದೇಶವನ್ನು ಸಮರ್ಪಕವಾಗಿ ಸಾಧಿಸಿಲ್ಲ. ಸಾಂಪ್ರದಾಯಿಕ ತರಗತಿಯಲ್ಲಿ ಕೆಲವು ಅವಧಿಗಳಲ್ಲಿ ಶಿಕ್ಷಕರು ಸಾರಭೂತವಾಗಿ ನೀಡುವ ಬೋಧನೆಯ ಪ್ರತಿರೂಪದಂತೆ ಈ ಕಾರ್ಯಕ್ರಮಗಳು ನಡೆಯುತ್ತಿವೆ. ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮಕ್ಕೆ ಹಾಜರಾಗುವ ವಿದ್ಯಾರ್ಥಿಗಳು ಹಾಜರಾಗದ ವಿದ್ಯಾರ್ಥಿಗಳಿಗಿಂತ ಉತ್ತಮ ಫಲಿತಾಂಶಗಳನ್ನು ಸಾಧಿಸಲೇಬೇಕು ಎಂಬುದಿಲ್ಲ ಎಂಬ ಅಂಶವನ್ನು ಸೂಚಿಸುವ ಕೆಲವು ಕುತೂಹಲಕಾರಿ ಪ್ರಯೋಗಗಳು ನಡೆದಿದೆ. ವೈಜ್ಞಾನಿಕವಾಗಿ ವಿನ್ಯಾಸಗೊಂಡ ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮಕ್ಕೆ ಹಾಜರಾದವರು ಕಾರ್ಯಕ್ರಮಕ್ಕೆ ಹಾಜರಾದವರಿಗಿಂತ ಗಮನಾರ್ಹವಾಗಿ ಉತ್ತಮ ಫಲಿತಾಂಶಗಳನ್ನು ಸಾಧಿಸುವರು ಎಂಬ ಅಂಶವನ್ನು ಹೊರಗೆಡಹುವ ಅಧ್ಯಯನಗಳು ಸಹ ನಡೆದಿವೆ (ಶರ್ಮ, 1997).

ವಿಶ್ವದಾದ್ಯಂತ ಎಲೆಕ್ಟ್ರಾನಿಕ್ ಮಾಧ್ಯಮ ಮುಕ್ತಶಾಲಾ ಶಿಕ್ಷಣದಲ್ಲಿ ಸರ್ವೇಸಾಮಾನ್ಯವಾಗಿ ಬಳಕೆಯಾಗುತ್ತಿದೆ. ಪ್ರಾರಂಭದ ಎನ್.ಐ.ಓ.ಎಸ್. ಈ ಮಾಧ್ಯಮವನ್ನು ಬಳಸಲಿಲ್ಲ. ಸಂಸ್ಥೆಯಲ್ಲೇ ಸಿದ್ಧಪಡಿಸಿದ ಇಲ್ಲವೇ ಹೊರಗಿನ ಏಜೆನ್ಸಿಗಳಿಂದ ಖರೀದಿಸಿದ ಆಡಿಯೋ ಮತ್ತು ವಿಡಿಯೋ ಕಾರ್ಯಕ್ರಮಗಳು ಕಲಿಕಾರ್ಥಿಗಳ ಮೇಲೆ ಯಾವುದೇ ಮಹತ್ವಪೂರ್ಣ ಪ್ರಭಾವ ಬೀರುವಷ್ಟು ಸಂಖ್ಯೆಯಲ್ಲಿಲ್ಲ. ವಿದ್ಯಾರ್ಥಿ ಸಲಹೆ/ಮಾರ್ಗದರ್ಶನ ಮುಕ್ತಕಲಿಕೆಯ ಮತ್ತೊಂದು ಘಟಕ ಬೇರೆಬೇರೆ ಮುಕ್ತಶಾಲೆಗಳಲ್ಲಿ ವಿದ್ಯಾರ್ಥಿಸಲಹೆ ಬೇರೆ ಬೇರೆ ಸ್ವರೂಪವನ್ನು ಪಡೆಯುತ್ತದೆ. ಮುಕ್ತಶಾಲೆಗಳು ವಿಸ್ತೃತ ವ್ಯಾಪ್ತಿಯ ವಿಷಯಗಳನ್ನು ನೀಡುತ್ತವೆ; ಆದ್ದರಿಂದ ವಿದ್ಯಾರ್ಥಿಗಳಿಗೆ ಸೂಕ್ತ ವಿಷಯಗಳ ಸಂಯೋಜನೆಯನ್ನು ಆಯ್ಕೆ ಮಾಡಲು ಸಹಾಯದ ಅಗತ್ಯವಿದೆ. ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯ ಉಸ್ತುವಾರಿ ನೋಡಲು ಸಹ ವಿದ್ಯಾರ್ಥಿ ಸಲಹೆ/ಮಾರ್ಗದರ್ಶನದ ಅಗತ್ಯವಿದೆ.

**ಮೌಲ್ಯಮಾಪನ ಮತ್ತು ವಿದ್ಯಾರ್ಥಿ ಮೌಲ್ಯ ನಿರ್ಧಾರ:**

ವಿದ್ಯಾರ್ಥಿ ಮೌಲ್ಯಮಾಪನ ಕ್ರಮ ಒಂದು ಮುಕ್ತ ಶಾಲೆಯಿಂದ ಮತ್ತೊಂದು ಮುಕ್ತಶಾಲೆಗೆ ಆಯಾ ಶಾಲೆಯ ಸ್ಥಾನಮಾನವನ್ನು ಆಧರಿಸಿ ವಿಭಿನ್ನವಾಗಿರುತ್ತದೆ. ಎನ್.ಐ.ಓ.ಎಸ್. ಅಧಿಕೃತ ಪರೀಕ್ಷಾ ಅಂಗ. ಆದ್ದರಿಂದ ಇದು ಪರೀಕ್ಷೆಗಳನ್ನು ನಡೆಸಿ ಸಫಲರಾದವರಿಗೆ ಪ್ರಮಾಣ ಪತ್ರ ನೀಡುತ್ತದೆ. ಪಶ್ಚಿಮ ಬಂಗಾಳದ ರಾಜ್ಯ ಮುಕ್ತಶಾಲೆ (RMV) ಯೂ ಪರೀಕ್ಷೆಗಳನ್ನು ನಡೆಸಿ ಪ್ರಮಾಣ ಪತ್ರ ಪ್ರದಾನ ಮಾಡಲು ಅಧಿಕೃತಗೊಂಡಿದೆ. ಮಧ್ಯಪ್ರದೇಶ, ಹರಿಯಾಣ, ಕರ್ನಾಟಕ ಇತ್ಯಾದಿ ರಾಜ್ಯಗಳಲ್ಲಿನ ಮುಕ್ತಶಾಲೆಗಳ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡುವ ಅಧಿಕಾರವನ್ನು ಆಯಾ ರಾಜ್ಯ ಮಾಧ್ಯಮಿಕ ಶಿಕ್ಷಣ ಬೋರ್ಡ್‌ಗಳಿಗೆ ನೀಡಲಾಗಿದೆ.

ಈ ಎರಡು ಪರೀಕ್ಷಾ ಅಂಗಗಳು ಅನುಸರಿಸುವ ಕ್ರಮಗಳಲ್ಲಿ ವ್ಯತ್ಯಾಸವಿದೆ. ಎಲ್ಲೆಲ್ಲಿ ರಾಜ್ಯ ಬೋರ್ಡ್‌ಗಳು ಪರೀಕ್ಷೆಗಳನ್ನು ನಡೆಸುತ್ತವೆಯೋ ಅಲ್ಲಿ ಮೌಲ್ಯಮಾಪನವು ಸಾಂಪ್ರದಾಯಿಕ ಶಾಲಾ ವ್ಯವಸ್ಥೆಯಲ್ಲಿ ನಡೆಸಲಾಗುವ ಸಾಂಪ್ರದಾಯಿಕ ಮಾದರಿಯಂತೆಯೇ ಇರುತ್ತದೆ. ಎನ್.ಐ.ಓ.ಎಸ್. ಹಾಗೂ ಕೆಲವು ಇತರ ರಾಜ್ಯ ಮುಕ್ತ ಶಾಲೆಗಳಲ್ಲಿನ ವಿದ್ಯಾರ್ಥಿ ಮೌಲ್ಯನಿರ್ಧಾರ ಹಾಗೂ ಮೌಲ್ಯಮಾಪನಗಳ ನಾವೀನ್ಯಯುತ ಅಂಶಗಳು ಹೀಗಿವೆ. ಪ್ರತಿ ಆರು ತಿಂಗಳಿಗೊಮ್ಮೆ ಪರೀಕ್ಷೆಗಳನ್ನು ನಡೆಸಲಾಗುತ್ತದೆ; ಒಮ್ಮೆಗೆ ವಿದ್ಯಾರ್ಥಿಗಳು ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು; ಐದು ವರ್ಷಗಳ ಒಳಗೆ ತಮ್ಮ ಕಾರ್ಯಕ್ರಮವನ್ನು ಪೂರೈಸಲು ಕ್ರೆಡಿಟ್‌ಗಳನ್ನು ಸಂಕಲಿಸಿಕೊಳ್ಳಬಹುದು; ಅಂತಿಮ ಮೌಲ್ಯಮಾಪನದಲ್ಲಿ ಬೋಧಕರು ಕೈಗೊಂಡ ಮೌಲ್ಯಮಾಪನವನ್ನು ಸೇರಿಸಲಾಗುತ್ತದೆ; ವಸ್ತುನಿಷ್ಠ ಪರೀಕ್ಷೆ, ಬಹುಸಂಕ್ಷಿಪ್ತ ಉತ್ತರ, ಸಂಕ್ಷಿಪ್ತ ಉತ್ತರ ಹಾಗೂ ವಿವರಣಾತ್ಮಕ ಸ್ವರೂಪದ ಪರೀಕ್ಷೆ –ಇವುಗಳನ್ನು ಪರೀಕ್ಷೆಯಲ್ಲಿ ಬಳಸಿಕೊಳ್ಳಲಾಗುತ್ತದೆ; ಹಾಗೂ ವ್ಯಕ್ತಿನಿಷ್ಠತೆಯನ್ನು ಕಡಿಮೆ ಮಾಡಲು ವಿದ್ಯಾರ್ಥಿಗಳ ಉತ್ತರಗಳನ್ನು ತಜ್ಞರ ಸಮಿತಿಯಿಂದ ಸಿದ್ಧಪಡಿಸಲಾದ ಮಾದರಿ ಉತ್ತರಗಳೊಂದಿಗೆ ಹೋಲಿಸಲಾಗುತ್ತದೆ.

ಪ್ರಮಾಣೀಕರಣ ಮತ್ತು ಸಮಾನ ಮೌಲ್ಯತೆಗಳು ಮುಕ್ತಶಾಲೆಗಳಲ್ಲಿರೆ ಸಂಬಂಧಿಸಿದ ಪ್ರಮುಖ ವಿಷಯ. ಈ ಹಿಂದೆ ಎನ್.ಐ.ಓ.ಎಸ್. ಹಾಗೂ ಇತರ ರಾಜ್ಯ ಮುಕ್ತಶಾಲೆಗಳಲ್ಲಿನ ಪ್ರಮಾನೀಕರಣ ಕ್ರಮದ ಬಗ್ಗೆ ಉಲ್ಲೇಖಿಸಿದ್ದೇವೆ. ವಿಶ್ವವಿದ್ಯಾಲಯಗಳ ಉನ್ನತ ಶಿಕ್ಷಣದ ಕಾರ್ಯಕ್ರಮಗಳಿಗಾಗಿ ಮತ್ತು ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಈ ಪ್ರಮಾಣಪತ್ರಗಳ ಮಾನ್ಯತೆ ಹಾಗೂ ಸಮಾನತೆ ಮುಖ್ಯ ವಿಷಯವಾಗಿದೆ.

ಮುಕ್ತಶಿಕ್ಷಣ ಹಾಗೂ ಮುಕ್ತಶಾಲೆಗಳ ಪ್ರಮಾಣಪತ್ರಗಳನ್ನು ಸಾಂಪ್ರದಾಯಿಕ ಪ್ರಮಾಣಪತ್ರಗಳಿಗೆ ಸಮಾನವೆಂದು ಪರಿಗಣಿಸಲು ವಿರೋಧವಿತ್ತು, ಈಗಲೂ ಇದೆ. ಈ ಸಮಾನತೆಯ ಬೇಡಿಕೆಯನ್ನು ಇಡುವುದರ ಮೂಲಕ ಎನ್.ಐ.ಓ.ಎಸ್. ಹೊಸ ಪಥವನ್ನು ಕಂಡುಕೊಂಡಿತು. ಇಂದು, ಈ ಪ್ರಮಾಣಪತ್ರಗಳನ್ನು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಗಳಂಥ (IIT) ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳು ಸೇರಿದಂತೆ ಬಹುತೇಕ ಎಲ್ಲಾ ವಿಶ್ವವಿದ್ಯಾನಿಲಯಗಳು ಮಾನ್ಯ ಮಾಡಿವೆ. ಆದಾಗ್ಯೂ, ಮುಕ್ತಶಾಲೆಗಳ

Digitised by Bharatavani, CIIL

ಪ್ರಮಾಣಪತ್ರಗಳನ್ನು ಮಾನ್ಯ ಮಾಡಿವೆ. ಆದಾಗ್ಯೂ, ಮುಕ್ತಶಾಲೆಗಳ ಪ್ರಮಾಣಪತ್ರಗಳನ್ನು ಮಾನ್ಯಮಾಡಬೇಕಾದ ಇನ್ನೂ ಕೆಲವು ವಿಶ್ವವಿದ್ಯಾನಿಲಯಗಳಿವೆ. ರಾಜ್ಯ ಸರ್ಕಾರಗಳು ಹೆಚ್ಚು ಸಂಖ್ಯೆಯಲ್ಲಿ ರಾಜ್ಯ ಮುಕ್ತಶಾಲೆಗಳನ್ನು ತೆರೆಯುತ್ತಿರುವುದರಿಂದ ಮತ್ತು ಈ ವಿಶ್ವವಿದ್ಯಾನಿಲಯಗಳಿಗೆ ಪ್ರೋತ್ಸಾಹ, ಧನಸಹಾಯಗಳನ್ನು ರಾಜ್ಯ ಸರ್ಕಾರಗಳು ನೀಡುತ್ತಿರುವುದರಿಂದ ಅಂಥ ವಿಶ್ವವಿದ್ಯಾನಿಲಯಗಳ ಮೇಲೆ ರಾಜ್ಯ ಮುಕ್ತಶಾಲೆಗಳ ಪ್ರಮಾಣಪತ್ರವನ್ನು ಮಾನ್ಯ ಮಾಡಬೇಕಾದ ಒತ್ತಡವಿದೆ. ಆದ್ದರಿಂದ, ಕ್ರಮೇಣ ಸಮಾನತೆಯ ತೊಂದರೆ ಕಡಿಮೆಯಾಗುತ್ತಿದೆ.

ಉದ್ಯೋಗ ಮಾರುಕಟ್ಟೆಗೆ ಬಂದಾಗ ಪರಿಸ್ಥಿತಿ ಇದರಂತೆಯೇ ಇಲ್ಲ. ಮುಕ್ತಶಿಕ್ಷಣದ ಗುಣಮಟ್ಟದ ಬಗ್ಗೆ ತಪ್ಪು ಕಲ್ಪನೆಗಳಿಂದಾಗಿ ತೀವ್ರತರವಾದ ಸಂಶಯಗಳಿವೆ. ಶಿಕ್ಷಣದ ಬಗೆಗಿನ ಜನಪ್ರಿಯ ಅಭಿಪ್ರಾಯ ಇಂದಿಗೂ ಸಾಂಪ್ರದಾಯಿಕ ಶಾಲೆಯ ಸುತ್ತಲೇ ಸುತ್ತುತ್ತದೆ.

**ಧನಸಹಾಯ:**

ಸಾಮಾನ್ಯವಾಗಿ ಮುಕ್ತ ಶಾಲಾಶಿಕ್ಷಣ ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಅಗ್ಗವೆಂಬ ಭಾವನೆಯಿದೆ. ಆದರೆ, ಅಭಿಪ್ರಾಯದ ಬಗ್ಗೆ ವಿಶ್ವದಾದ್ಯಂತ ಚರ್ಚೆಗಳು ನಡೆದಿವೆ. ಸಾಂಪ್ರದಾಯಿಕ ಶಾಲಾ ಶಿಕ್ಷಣದಂತೆಯೇ, ಮುಕ್ತಶಾಲೆಯ ಅಥವಾ ಮುಕ್ತಶಿಕ್ಷಣದ ಬೆಲೆ ನಡೆಸಲಾಗುವ ಕಾರ್ಯಕ್ರಮಗಳ ಗುಣಮಟ್ಟವನ್ನು ನೇರವಾಗಿ ಅವಲಂಬಿಸಿದೆ. ಈ ಚರ್ಚೆಗೆ ಹಲವಾರು ಪ್ರಮುಖ ಸಂಶೋಧಕರು ಕೊಡುಗೆ ನೀಡಿದ್ದಾರೆ. ಇ–ಕಲಿಕೆಯ ರಾಷ್ಟ್ರೀಯ ಕಾರ್ಯನೀತಿಗಳ ಮೇಲಿನ ಟೋನಿ ಬೇಟ್‌ನ ಸಂಶೋಧನೆ ಇತ್ತೀಚಿನದ್ದು (ಬೇಟ್ಸ್, 2001) ಆದಾಗ್ಯೂ, ಭಾರತೀಯ ಮುಕ್ತಶಾಲಾ ಶಿಕ್ಷಣದ ಬೆಲೆ ಸಾಂಪ್ರದಾಯಿಕ ಶಿಕ್ಷಣದ ಬೆಲೆಗಿಂತ ಅಗ್ಗವಾಗಿದೆ. ಮುಕ್ತವಾಗಿ, ಮುಕ್ತಶಾಲಾ ಶಿಕ್ಷಣದ ಸಾರ್ವಜನಿಕ ಖರ್ಚು ಮತ್ತಷ್ಟು ಕಡಿಮೆ.

ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಮತ್ತು ಕೆನಡಾಗಳಲ್ಲಿ "ತಲುಪಿಲ್ಲದವರಿಗೆ ತಲುಪಿಸುವುದು" ಎಂಬ ಉದ್ದೇಶದಿಂದ ಮುಕ್ತಶಾಲಾ ಶಿಕ್ಷಣವು ಪ್ರೇರಿತವಾದರೆ ಭಾರತದ ಮುಕ್ತಶಾಲಾ ಶಿಕ್ಷಣವು "ತಲುಪಿಲ್ಲದವರಿಗೆ ಕಡಿಮೆ ಬೆಲೆಯಲ್ಲಿ ಅಥವಾ ಉಚಿತವಾಗಿ ತಲುಪಿಸುವುದು" ಎಂಬ ಉದ್ದೇಶದಿಂದ ಪ್ರೇರಿತವಾಯಿತು. ಈ ಪ್ರೇರಣೆಯಲ್ಲಿನ ಉಪನೀತಿ ಮುಖ್ಯವಾದುದು; ಏಕೆಂದರೆ, ಈ ಉಪನೀತಿಯೇ ಭಾರತೀಯ ಮುಕ್ತಶಾಲಾ ಶಿಕ್ಷಣವನ್ನು ಇತರರಿಗಿಂತ ಉದ್ದೇಶದಲ್ಲಿ ಭಿನ್ನವಾಗಿಸದೆ. ಸಮಾನವಾದ ಹೋಲಿಸಬಹುದಾದಂಥ ಶಿಕ್ಷಣದ ಗುಣಮಟ್ಟವನ್ನು ಪರಿಗಣಿಸಿದಾಗ ಭಾರತೀಯ ಮುಕ್ತಶಾಲಾ ಶಿಕ್ಷಣ ಔಪಚಾರಿಕ ಶಾಲಾಶಿಕ್ಷಣಕ್ಕಿಂತ ಅಗ್ಗವಾಗಿದೆ. ಒಂದು ವೇಳೆ ಗುಣಮಟ್ಟವನ್ನು ಉತ್ತಮಗೊಳಿಸಿದ ಸಂದರ್ಭದಲ್ಲಿಯೂ ಮುಕ್ತಶಾಲಾ ಶಿಕ್ಷಣವು ಅಗ್ಗವಾಗಿಯೇ ಉಳಿಯುತ್ತದೆಯೇ ಎನ್ನುವುದರ ಬಗ್ಗೆ ಅರ್ಥಪೂರ್ಣ ಹಾಗೂ ಅವಲಂಬನಾರ್ಹ ತೀರ್ಮಾನವನ್ನು ಕೈಗೊಳ್ಳಲು, ಲಭ್ಯವಿರುವ ಸಂಶೋಧನಾ ದತ್ತಾಂಶಗಳು ಅತ್ಯಂತ ಕಡಿಮೆ.

1991ರಲ್ಲಿ ಕೈಗೊಂಡ ಅಂದಾಜಿನ ಪ್ರಕಾರ ಓರ್ವ ವಿದ್ಯಾರ್ಥಿಗೆ ಕೇಂದ್ರೀಯ ವಿದ್ಯಾಲಯದಲ್ಲಿ 904.52 ರೂ.ಗಳು, ಅನುದಾನಿತ ಶಾಲೆಗಳಲ್ಲಿ 969.62 ರೂ.ಗಳು ಹಾಗೂ ಸರ್ಕಾರಿ ಶಾಲೆಗಳಲ್ಲಿ 1,019.04 ರೂ.ಗಳಷ್ಟು ಸಾಂಸ್ಥಿಕ ವೆಚ್ಚ ತಗುಲುತ್ತಿದ್ದು ಇದಕ್ಕೆ ಹೋಲಿಸಿದಾಗ ಮುಕ್ತ ಶಾಲೆಗಳಲ್ಲಿ 639 ರೂ.ಗಳಷ್ಟು ವೆಚ್ಚವಾಗುತ್ತಿತ್ತು. (ಗಾಬ, 1997). ಇದೇ ರೀತಿಯ 1997ರ ವಿಶ್ಲೇಷಣೆಯೊಂದು ಮುಕ್ತಶಾಲೆಗಳಲ್ಲಿ ಪ್ರತಿವಿದ್ಯಾರ್ಥಿಗೆ 945 ರೂ.ಗಳ ವೆಚ್ಚವನ್ನು ಸೂಚಿಸುತ್ತದೆ. ಇದು ಮುಕ್ತಶಾಲಾ ಶಿಕ್ಷಣದ ಏಕಾಂಶ ವೆಚ್ಚ (Unit cost) ಸತತವಾಗಿ ಹೆಚ್ಚುತ್ತಿದೆ ಎಂಬುದನ್ನು ಸೂಚಿಸುತ್ತದೆ. ಆದರೂ ಈ ಏಕಾಂಶ ವೆಚ್ಚವು ಕಾರ್ಯಕ್ರಮವನ್ನು ಮುದ್ರಿತ ಸಾಮಗ್ರಿ, ವಿಷಯ, ಒಂದಕ್ಕೆ 30 ತಾಸುಗಳ ಮುಖಾಮುಖಿ ಬೋಧನೆ ಅಥವಾ ಪೂರ್ಣ ಕಾರ್ಯಕ್ರಮಕ್ಕೆ 150 ತಾಸುಗಳ ಬೋಧನೆ ಇವುಗಳಿಗೆ ತಗಲುವ ವೆಚ್ಚವಾಗಿದೆ. ಮಾಧ್ಯಮಕ್ಕೆ ತಗಲುವ ವೆಚ್ಚ ನಗಣ್ಯವಲ್ಲದಿದ್ದರೂ ಅತ್ಯಂತ ಕಡಿಮೆ.

ಮುಖ್ಯವಾಗಿ ಮುಕ್ತಶಾಲಾ ಶಿಕ್ಷಣ ಬಹುತೇಕ ಮುದ್ರಿತ ಸಾಮಗ್ರಿಯ ಮೇಲೆ ಅವಲಂಬಿತವಾಗಿರುವುದರಿಂದ ದಾಖಲಾತಿಯಲ್ಲಿ ಏರಿಕೆಯಾದಂತೆ ಕಾರ್ಯಕ್ರಮ ಸಾಮಗ್ರಿ ಸಿದ್ಧಪಡಿಸುವ ವೆಚ್ಚವೂ ಹಂಚಿಕೋಗುತ್ತದೆ. ಎನ್.ಐ.ಒ.ಎಸ್. ನಂತಹ ಅಧಿಕ ದಾಖಲಾತಿಯಿರುವ ಸಂಸ್ಥೆಗಳಿಗೆ ಮಿತವ್ಯಯ ಸಾಧ್ಯವಾಗುತ್ತದೆ. ಮುಕ್ತಶಾಲಾ ಶಿಕ್ಷಣದ ವೆಚ್ಚಕ್ಕೆ ಸಂಬಂಧಿಸಿದಂತೆ ಎರಡು ಪ್ರಮುಖ ಅಂಶಗಳಿವೆ. ಮೊದಲನೆಯದಾಗಿ, ಮುದ್ರಿತ ಸಾಮಗ್ರಿ ಹಾಗೂ ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮಗಳ ವ್ಯಾಪ್ತಿಯಲ್ಲಿರುವವರೆಗೂ ಮುಕ್ತಶಾಲಾ ಶಿಕ್ಷಣದ ವೆಚ್ಚ ಕಡಿಮೆಯೇ ಇರುತ್ತದೆ. ಹೊಸ ಮಾಧ್ಯಮದ ಬಳಕೆ, ವಿಶೇಷತಃ ಇ–ಕಲಿಕೆಯ ಬಳಕೆ ಪ್ರಾರಂಭ ಮಾಡಿದಲ್ಲಿ ವೆಚ್ಚವು ಗಮನಾರ್ಹವಾಗಿ ಬದಲಾಗುತ್ತದೆ. ಎರಡನೆಯದಾಗಿ ಮಿತವ್ಯಯ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಸಕ್ತಿಕರ ಆರ್ಥಿಕ ಅಧ್ಯಯನಗಳು ನಡೆದಿವೆಯಾದರೂ ಮುಕ್ತಶಾಲಾ ಶಿಕ್ಷಣದಲ್ಲಿ ಲಾಭ–ನಷ್ಟಗಳನ್ನು ಸಮನಾಗಿಸುವ (Break-even) ದಾಖಲಾತಿಯನ್ನು ಸೂಚಿಸಲು ಯಾವುದೇ ಅಧ್ಯಯನಗಳು ನಡೆದಿಲ್ಲ. ಆದರೂ ಸಹ ಪ್ರಯೋಜನ ಪಡೆಯಬಲ್ಲ ಫಲಾನುಭವಿಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಭಾರತದ ಬಹುತೇಕ ಎಲ್ಲಾ ಮುಕ್ತಶಾಲೆಗಳಲ್ಲಿ ಮಿತವ್ಯಯ ಹಾಗೂ ಕಡಿಮೆ ವೆಚ್ಚದ ಮುಕ್ತ ಶಿಕ್ಷಣವನ್ನು ಸಾಧಿಸಲು ಸಾಧ್ಯವಾಗುವಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗುತ್ತಾರೆ.

ಮುಕ್ತಶಾಲೆಗಳಲ್ಲಿನ ವೆಚ್ಚ ಯಾವ ಮಾದರಿಯಲ್ಲಿರುತ್ತದೆ ಎಂಬುದು ಆಸಕ್ತಿಕರವಾಗಿದೆ. ವಿವಿಧ ರಾಜ್ಯ ಮುಕ್ತಶಾಲೆಗಳಿಗೆ ಸಂಬಂಧಿಸಿದಂತೆ ಸಾಕಷ್ಟು ದತ್ತಾಂಶ ಲಭ್ಯವಿಲ್ಲದಿರುವುದರಿಂದ ನಾವು ಎನ್.ಐ.ಒ.ಎಸ್.ಗೆ ಸಂಬಂಧಿಸಿದ ಹಾಗೂ ಎನ್.ಐ.ಒ.ಎಸ್.ನಿಂದ ಲಭ್ಯವಿರುವ ಮಾಹಿತಿಯನ್ನು ಅವಲಂಬಿಸುತ್ತೇವೆ. ಪುನರಾವೃತ್ತಿಗೊಳ್ಳುವ ಮುಕ್ತಶಾಲೆಗಳ ಪುನರಾವೃತ್ತಿಗೊಳ್ಳುವ ಒಟ್ಟು ವೆಚ್ಚದ ಶೇಕಡಾ 57ಕ್ಕಿಂತಲೂ ಹೆಚ್ಚು ಮುದ್ರಿತ ಸಾಮಗ್ರಿಗಳಿಗೆ

Digitised by Bharatavani, CIIL

ತಗುಲುತ್ತದೆ. ಶೇಕಡಾ 2.33ರಷ್ಟು ಮಾಧ್ಯಮಗಳ ಮೇಲೆ', ಶೇಕಡಾ 8.26ರಷ್ಟು ಪರೀಕ್ಷಾ ವೆಚ್ಚ; ಮತ್ತು ಸಿಬ್ಬಂದಿ ವೇತನ, ಕಟ್ಟಡ, ಅಂಚೆವೆಚ್ಚ, ಸ್ಟೇಷನರಿ ಇತ್ಯಾದಿಗಳು ಸೇರಿದಂತೆ ಹೆಚ್ಚುವರಿ ಖರ್ಚು ಶೇಕಡಾ 21ರಷ್ಟಾಗುತ್ತದೆ.

ಮುಕ್ತಶಾಲಾ ಶಿಕ್ಷಣದ ವೆಚ್ಚದ ಪರಿಣಾಮವಾಗಿ ಮುಕ್ತಶಾಲೆಗಳಿಗೆ ಸಂಬಂಧಿಸಿದ ಖಾಸಗಿ ವೆಚ್ಚ ಹಾಗೂ ಸಾರ್ವಜನಿಕ ವೆಚ್ಚ – ಇವೆರಡರ ನಡುವಿನ ಸಂಬಂಧ ಸಾಂಪ್ರದಾಯಿಕ ಶಾಲೆಗಳಲ್ಲಿರುವುದಕ್ಕೆ ತದ್ವಿರುದ್ಧವಾಗಿದೆ ಎಂಬ ಅಂಶವನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯ. ಸಾಂಪ್ರದಾಯಿಕ ಶಾಲಾಶಿಕ್ಷಣಕ್ಕೆ ಸರ್ಕಾರವು ಹೇರಳವಾಗಿ ಧನಸಹಾಯ ನೀಡಿದರೆ ಮುಕ್ತಶಾಲೆಗಳಿಗೆ ತಮ್ಮ ಅಗತ್ಯವನ್ನು ತಾವೇ ಪೂರೈಸಿಕೊಳ್ಳುವಂತೆ ಕೋರಲಾಗುತ್ತದೆ. ಇದರ ಪರಿಣಾಮವಾಗಿ ಮುಕ್ತಶಾಲೆಗಳಲ್ಲಿನ ಖಾಸಗಿ ವೆಚ್ಚ ಅತ್ಯಧಿಕ; ಆದಾಯ ವಿಶ್ಲೇಷಣೆಯ ಪ್ರಕಾರ ಮುಕ್ತಶಾಲಾ ಶಿಕ್ಷಣದಲ್ಲಿ ಏಕಾಂಶ ವೆಚ್ಚದ ಶೇ. 98 ಭಾಗ ಖಾಸಗಿ ವೆಚ್ಚವೆಂದು ಸೂಚಿತವಾಗಿದೆ.

ಮುಕ್ತಶಾಲೆಗಳಲ್ಲಿ ಶಿಕ್ಷಣದ ವೆಚ್ಚ ವ್ಯವಸ್ಥೆಯ ವರಮಾನದ ಮಾದರಿಯನ್ನು ನೇರವಾಗಿ ಅವಲಂಬಿಸಿದೆ. ಮುಕ್ತಶಾಲೆಗಳನ್ನು ತೆರೆಯಲು ಕೇಂದ್ರಸರ್ಕಾರವು ಪ್ರಯತ್ನಿಸುತ್ತಿದ್ದರೂ ರಾಜ್ಯಸರ್ಕಾರಗಳ ಬೆಂಬಲ ಕನಿಷ್ಠ ಮಟ್ಟದ್ದಾಗಿದೆ. ಈ ಧೋರಣೆ ಸರ್ಕಾರದ ಕನಿಷ್ಠ ಮಟ್ಟದ ಜವಾಬ್ದಾರಿ ಮತ್ತು ಬದ್ಧತೆಯೊಂದಿಗೆ ಶಿಕ್ಷಣದ ಅವಕಾಶ ಮಾಡಿಕೊಡುವುದು ಎಂಬ ನೀತಿಗೆ ಅನುಗುಣವಾಗಿದೆ. ಉದಾಹರಣೆಗೆ, ಸರ್ಕಾರದಿಂದ ಎನ್.ಐ.ಓ.ಎಸ್. ಪುನರಾವರ್ತನೆಗೊಳ್ಳುವ ವೆಚ್ಚದ ಕೇವಲ ಶೇ. 2.08ರಷ್ಟು ಮಾತ್ರ ಪಡೆಯುತ್ತದೆ. ಉಳಿದ ಶೇಕಡಾ 98 ಭಾಗದಷ್ಟು ಆದಾಯ ಕಾರ್ಯಕ್ರಮ ಶುಲ್ಕ (56.63%), ಪರೀಕ್ಷಾ ಶುಲ್ಕಗಳ ಮುಖಾಂತರ ಬರುತ್ತದೆ. ಈ ದತ್ತಾಂಶ 1995–96ನೇ ಸಾಲಿನದು. ಕೇಂದ್ರ ಸರ್ಕಾರ ಎನ್.ಐ.ಓ.ಎಸ್.ಗೆ ಯೋಜನಾ ಅನುದಾನ ನೀಡುವಲ್ಲಿ ಉದಾರತೆಯನ್ನು ತೋರಿದೆ.

ಪರ್ಯಾಪ್ತ ಸಂಪನ್ಮೂಲಗಳಿಲ್ಲದೆ ಶಾಲೆಗೆ ಹಾಜರಾಗದವರಿಗೆ ಇಲ್ಲವೇ ತಮ್ಮ ಮೂಲಭೂತ ಜೀವನೋಪಾಯದ ಅವಲಂಬನೆಯನ್ನು ಬಿಟ್ಟು ಶಾಲೆಗೆ ಬರಲಾಗದವರು ಸಾಂಪ್ರದಾಯಿಕ ಶಿಕ್ಷಣದಿಂದ ಈ ಕಾರಣಗಳಿಂದಾಗಿ ವಂಚಿತರಾದ ಇಂಥವರಿಗೆ ಈ ಮುಕ್ತಶಾಲೆಗಳನ್ನು ಒಂದೆಡೆ ತೆರೆಯಲಾಗುತ್ತಿದ್ದರೆ ಮತ್ತೊಂದೆಡೆ ಸಮಾಜದ ವಂಚಿತವರ್ಗಗಳಿಂದ ಒಂದು ಮುಕ್ತಶಾಲೆಗೆ ಸೇರಿದವರಿಂದ ತಮ್ಮ ಶಿಕ್ಷಣಕ್ಕೆ ಹಣವನ್ನು ನೀಡಿ ಎಂದು ಹೇಳಲಾಗುತ್ತಿರುವುದು ಕುತೂಹಲಕಾರಿ ವಿಪರ್ಯಾಸ. ಸಮಾಜದ ಬಡ ಹಾಗೂ ನಿರ್ಬಲ ವರ್ಗದವರ ಶಿಕ್ಷಣ ಹಾಗೂ ಆರೋಗ್ಯಗಳಂಥ ಮೂಲಭೂತ ಸೇವೆಗಳಿಗೆ ಸರ್ಕಾರ ಬದ್ಧವಾಗಿರುವಂಥ ಜನ ಹಿತೈಸಿ ದೇಶದಲ್ಲಿ ಮುಕ್ತಶಾಲಾ ಶಿಕ್ಷಣದ ವಿಷಯದಲ್ಲಿ ಆ ಬದ್ಧತೆಯ ಕುರುಹುಗಳು ಕಾಣಿಸುತ್ತಿಲ್ಲ.

**ನಿರ್ವಹಣೆಯ ರಚನೆ:** ಈ ಹಿಂದೆ ಹೇಳಿದಂತೆ, ಭಾರತೀಯ ಮುಕ್ತಶಾಲಾ ಶಿಕ್ಷಣವನು ಮೂರು ತೆರನ ಸಂಸ್ಥೆಗಳ ಮುಖಾಂತರ ಒದಗಿಸಲಾಗುತ್ತಿದೆ ಎನ್.ಐ.ಓ.ಎಸ್; ರಾಜ್ಯ ಮುಕ್ತಶಾಲೆಗಳು; ಮತ್ತು ಮಾಧ್ಯಮಿಕ ಶಿಕ್ಷಣ ಬೋರ್ಡ್‌ನಲ್ಲಿನ ಅಂಚೆ ಶಿಕ್ಷಣ ವಿಭಾಗ.

ಈ ಸಂಸ್ಥೆಗಳ ನಿರ್ವಹಣೆ (Management) ವಿಧ ಸಾಕಷ್ಟು ಭಿನ್ನವಾಗಿದೆ. ಹೆಸರೇ ಸೂಚಿಸುವಂತೆ ಅಂಚೆಶಿಕ್ಷಣ ವಿಭಾಗ ರಾಜ್ಯ ಮಾಧ್ಯಮಿಕ ಶಿಕ್ಷಣ ಬೋರ್ಡ್‌ಗೆ ಸೇರಿದ ವಿಭಾಗಗಳಲ್ಲಿ ಒಂದಾಗಿದೆ. ಔಪಚಾರಿಕ ಶಾಲೆಗಳಿಗೆ ಬೋರ್ಡ್ ಸೂಚಿಸುವ ಕಾರ್ಯಕ್ರಮ ಸಾಮಗ್ರಿಗಳನ್ನು ಸಿದ್ಧಪಡಿಸುವ ಮುಖ್ಯ ಜವಾಬ್ದಾರಿ ಈ ವಿಭಾಗಗಳ ಮೇಲಿದೆ. ಈ ಅಂಚೆಶಿಕ್ಷಣ ವಿಭಾಗ ಸಾಮಾನ್ಯ ಸಾಂಪ್ರದಾಯಿಕ ಶಾಲೆಗಳಿಗೆ ಇಡಲಾಗುವ ಪಠ್ಯಕ್ರಮ ಮತ್ತು ಪರೀಕ್ಷೆಗಳನ್ನೆ ಅನುಸರಿಸುತ್ತವೆ. ಇಷ್ಟರ ಮಟ್ಟಿಗೆ ಸಿದ್ಧಪಡಿಸುವ ಅಥವಾ ಪರೀಕ್ಷೆಗಳನ್ನು ವಿನ್ಯಾಸಗೊಳಿಸಿ ಅವುಗಳನ್ನು ನಡೆಸುವ ಶೈಕ್ಷಣಿಕ ಸ್ವಾತಂತ್ರ್ಯ ಅಂಚೆ ಶಿಕ್ಷಣ ವಿಭಾಗಗಳಿಗೆ ಇಲ್ಲ. ಅಂಚೆ ಮೂಲಕ ಕಳಿಸುವ ಸಾಮಗ್ರಿಗಳ ವಿನ್ಯಾಸ, ಅವುಗಳನ್ನು ವಿದ್ಯಾರ್ಥಿಗಳಿಗೆ ರವಾನಿಸುವುದು ಮತ್ತು ವ್ಯಕ್ತಿಗತ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸುವುದು – ಇವು ಈ ವಿಭಾಗಗಳ ಪ್ರಮುಖ ಕಾರ್ಯ ಕ್ಷೇತ್ರಗಳು. ಅಲ್ಲದೆ, ಔಪಚಾರಿಕ ನಿರ್ವಹಣೆ ಇರುವಂತಹ ಸಂರಚನೆಯನ್ನೇ ಈ ವಿಭಾಗಗಳು ಅನುಸರಿಸುತ್ತವೆ; ಇದರಿಂದ ವಿದ್ಯಾರ್ಥಿಗಳು ಔಪಚಾರಿಕ ಶಾಲೆಗಳಲ್ಲಿ ನೀಡಲಾಗುವ ಕಾರ್ಯಕ್ರಮಗಳನ್ನೇ ಆಯ್ಕೆ ಮಾಡುತ್ತಾರೆ ಎಂದು ಅರ್ಥವಾಗುತ್ತದೆ. ಬೋರ್ಡಿನ ಒಂದು ಘಟಕವಾಗಿರುವುದರಿಂದ ಈ ವಿಭಾಗಕ್ಕೆ ಬಹಳ ಸ್ವಾಯತ್ತತೆ ಇದೆಯೆಂದು ಹೇಳುವುದಾದರೆ ಅದು ಅತ್ಯಲ್ಪ.

ಭಾರತದಲ್ಲಿ ಮುಕ್ತಶಾಲೆಗಳ ನಿರ್ವಹಣ ಸಂರಚನೆಯಲ್ಲಿ ಮೂರು ವಿಭಿನ್ನ ಮಾದರಿಗಳಿವೆ; ರಾಜ್ಯ ಸರ್ಕಾರದ ಒಂದು ವಿಭಾಗ ಅಂಗವಾಗಿ ಆದರೆ ರಾಜ್ಯ ಶಿಕ್ಷಣ ಬೋರ್ಡ್‌ಗಳಿಂದ ಸ್ವತಂತ್ರವಾಗಿರುವುದು ಉದಾಹರಣೆಗೆ ರಬೀಂದ್ರ ಮುಕ್ತ ವಿದ್ಯಾಲಯ, ಪಶ್ಚಿಮ ಬಂಗಾಳ, ಮತ್ತು ಆಂಧ್ರಪ್ರದೇಶದ ಮುಕ್ತಶಾಲೆಗಳು; ರಾಜ್ಯ ಮಾಧ್ಯಮಿಕ ಶಿಕ್ಷಣ ಬೋರ್ಡ್‌ನ ಒಂದು ಭಾಗವಾಗಿರುವುದು ಉದಾಹರಣೆಗೆ, ಹರಿಯಾಣ ಮುಕ್ತಶಾಲೆ; ಮತ್ತು ಸ್ವಾಯತ್ತ ಸಂಸ್ಥೆಗಳಾಗಿರುವುದು, ಉದಾಹರಣೆಗೆ, ಎನ್.ಐ.ಓ.ಎಸ್. ಕರ್ನಾಟಕ ರಾಜ್ಯ ಮುಕ್ತಶಾಲೆ ರವೀಂದ್ರ ಮುಕ್ತ ವಿದ್ಯಾಲಯ ಒಂದು ಸೊಸೈಟಿಯಂತೆ ನೋಂದಣಿಯಾಗಿದೆ.

ಸಂರಚನೆ ಮತ್ತು ಸಂಸ್ಥೆ ಇವುಗಳ ಆಧಾರದ ಮೇಲೆ ಮುಕ್ತಶಾಲೆಗಳು ವಿವಿಧ ಶ್ರೇಣಿಯ ಸ್ವಾಯತ್ತತೆಯನ್ನು ಅನುಭವಿಸುತ್ತವೆ. ಬೋರ್ಡ್‌ಗೆ ಸೇರಿದ ಮುಕ್ತಶಾಲೆಗಳೆಲ್ಲವೂ ದಾಖಲಾತಿ ನೀತಿಗಳನ್ನು ಹೊರತುಪಡಿಸಿ ಹೆಚ್ಚು ಕಡಿಮೆ ಅಂಚೆಶಿಕ್ಷಣ ವಿಭಾಗದ ಮಾದರಿಯಲ್ಲೇ ಕೆಲಸಮಾಡುತ್ತವೆ. ಮಿಕ್ಕುಳಿದ ಎರಡು ರೀತಿಯ ಸಂಸ್ಥೆಗಳು ಸಾಕಷ್ಟು ಸ್ವಾಯತ್ತತೆಯನ್ನು ಹೊಂದಿರುತ್ತವೆ. ಇವುಗಳು ತಮ್ಮದೇ ಆದ ಪಠ್ಯಕ್ರಮ, ಬೋಧನಾಸಾಮಗ್ರಿ, ನಡೆಸುವಿಕೆಯ ವ್ಯವಸ್ಥೆ, ಪರೀಕ್ಷೆ ಹಾಗೂ ಪ್ರಮಾಣೀಕರಣವನ್ನೂ ಸಿದ್ಧಪಡಿಸಿಕೊಳ್ಳುತ್ತವೆ. ಆದಾಗ್ಯೂ ಸೊಸೈಟಿಯ ಸ್ಥಾನಮಾನವನ್ನು ಅನುಭವಿಸುವ ರಾಜ್ಯ ಮುಕ್ತಶಾಲೆಗಳ ಸ್ವಾಯತ್ತತೆಯ ಶ್ರೇಣಿ ನಿರ್ವಹಣೆಯಲ್ಲಿನ ಪರಿಕಲ್ಪನಾತ್ಮಕ ನಾಯಕತ್ವವನ್ನು

Digitised by Bharatavani, CIIL

ಅವಲಂಬಿಸಿ ಬದಲಾಗುತ್ತದೆ. ಉದಾಹರಣೆಗೆ, ಪಶ್ಚಿಮಬಂಗಾಳದ ರಾಜ್ಯ ಮುಕ್ತಶಾಲೆ RMV-Rabindra Mukta Vidyalay) ನವೀನತೆಯನ್ನು ಸಾಧಿಸಲು ಬೇಕಾದ ಸಂರಚನಾತ್ಮಕ ಸ್ವಾತಂತ್ರವನ್ನು ಹೊಂದಿದೆಯಲ್ಲದೆ ಕಳೆದ ಕೆಲವು ವರ್ಷಗಳಿಂದ ಪ್ರಾರಂಭದಲ್ಲಿದ್ದ ಮುಕ್ತತೆಯನ್ನು ತ್ಯಜಿಸಿ ಸಾಂಪ್ರದಾಯಿಕ ವ್ಯವಸ್ಥೆಗ ತನ್ನನ್ನು ಹೊಂದಿಸಿಕೊಂಡಿದೆ. ಸಾಂಪ್ರದಾಯಿಕ ವ್ಯವಸ್ಥೆ ಮುಕ್ತ ಕಲಿಕೆಯ ವ್ಯವಸ್ಥೆಯು ತನ್ನ ದಾರಿಗೆ ಬರಬೇಕೆಂದು ಒತ್ತಡ ಹೇರುತ್ತಿರುವುದೇ ಇದಕ್ಕೆ ಪ್ರಧಾನ ಕಾರಣವಾಗಿದೆ.

ಎನ್.ಐ.ಒ.ಎಸ್. ನೋಂದಾಯಿತ ಸೊಸೈಟಿಯಾಗಿದ್ದು ಭಾರತ ಸರ್ಕಾರದಿಂದ ಧನಸಹಾಯ ಪಡೆಯುತ್ತಿರುವ ಸ್ವಾಯತ್ತ ಸಂಸ್ಥೆಯಾಗಿದೆ. ಇದು ಸಂಪೂರ್ಣ ಸ್ವಾಯತ್ತತೆಯನ್ನು ಅನುಭವಿಸುತ್ತದೆ. ವಿಶೇಷವಾಗಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಹೆಚ್ಚಿನ ಸ್ವಾಯತ್ತತೆಯನ್ನು ಇದು ಹೊಂದಿದೆ. ಆರ್ಥಿಕ ವಿಷಯದಲ್ಲಿನ ಸ್ವಾಯತ್ತತೆ ಪರಿಮಿತ; ಈ ಪರಿಮಿತಿಯೂ ಬಹಳ ಅತ್ಯಲ್ಪ. ಎನ್.ಐ.ಒ.ಎಸ್. ಮಾನವ ಸಂಪನ್ಮೂಲ ವಿಕಾಸ ಖಾತೆಯಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದು ಈ ಇಲಾಖೆ ಎನ್.ಐ.ಒ.ಎಸ್.ನ ನಾಯಕತ್ವವನ್ನು ವಹಿಸುತ್ತದೆ. ಮುಖ್ಯ ಕಾರ್ಯನಿರ್ವಾಹಕರೂ ಆಗಿರುವ ಸಭಾಧ್ಯಕ್ಷರು ಕಾರ್ಯಕಾರಿ ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ಹಣಕಾಸು ಸಮಿತಿ ಕಾರ್ಯಕಾರಿ ಸಮಿತಿಗೆ ಬೆಂಬಲ ನೀಡುತ್ತದೆ. ಆಂತರಿಕ ಸಂರಚನೆಯಲ್ಲಿ ಎನ್.ಐ.ಒ.ಎಸ್. ಮೂರು ವಿಭಾಗಗಳನ್ನು ಹೊಂದಿದೆ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಪರೀಕ್ಷಾ ವಿಭಾಗ ಇತ್ತೀಚೆಗೆ ವಿದ್ಯಾರ್ಥಿ ಸಹಾಯ ಸೇವೆಗಳು ಮತ್ತು ಔದ್ಯೋಗಿಕ ಶಿಕ್ಷಣಗಳೆಂಬ ವಿಭಾಗಗಳನ್ನು ಸೇರಿಸಲಾಗಿದೆ. ಸಾಕಷ್ಟು ಸಮಗ್ರವಾದ ಕ್ಷೇತ್ರ ಅಧಿಕಾರಿಗಳ ಜಾಲವನ್ನು ಇದು ವಿಕಸನಗೊಳಿಸಿದೆ.

**ಅಧ್ಯಯನ ಕೇಂದ್ರಗಳು:** ದೇಶದ ಉದ್ದಗಲಕ್ಕೂ ಹರಡಿರುವ ಮಾನ್ಯಗೊಂಡ ಸಂಸ್ಥೆಗಳ ಅಥವಾ ಅಧ್ಯಯನ ಕೇಂದ್ರಗಳ ಜಾಲದ ಬಗ್ಗೆ ಉಲ್ಲೇಖಿಸದಿದ್ದಲ್ಲಿ ಮುಕ್ತಶಾಲೆಗಳ ವ್ಯವಸ್ಥಾಪನೆಯ ಕಥೆ ಅಪೂರ್ಣವಾಗುವುದು. ಮುಕ್ತಕಲಿಕೆಯನ್ನು ನಡೆಸಿಕೊಡುವ ಸಾಂಸ್ಥಿಕ ಯಂತ್ರವೆಂದರೆ ಪ್ರಮುಖತಃ ಈ ಅಧ್ಯಯನ ಕೇಂದ್ರಗಳು ದೇಶದಾದ್ಯಂತ ಎನ್.ಐ.ಒ.ಎಸ್. 1000 ಅಧ್ಯಯನ ಕೇಂದ್ರಗಳನ್ನು ಹೊಂದಿದ್ದರೆ ರಾಜ್ಯ ಮುಕ್ತಶಾಲೆಗಳು ಸಧಾರಣವಾಗಿ ಆಯಾ ರಾಜ್ಯಗಳಲ್ಲಿ ಸುಮಾರು 100 ಅಧ್ಯಯನ ಕೇಂದ್ರಗಳನ್ನು ಹೊಂದಿರುತ್ತವೆ. ಉದಾಹರಣೆಗೆ, ರಾಜ್ಯ ಮುಕ್ತಶಾಲೆಗಳು ಕನಿಷ್ಠ ಒಂದು ಅಥವಾ ಹೆಚ್ಚು ಅಧ್ಯಯನ ಕೇಂದ್ರಗಳನ್ನು ಹೊಂದಿರುವ ಬ್ಲಾಕ್ ಮಟ್ಟದವರೆಗೆ ವ್ಯಾಪ್ತಿಯನ್ನು ಹೊಂದುವ ಉದ್ದೇಶವನ್ನು ಇರಿಸಿಕೊಂಡಿವೆ.

ಅಧ್ಯಯನ ಕೇಂದ್ರಗಳು ವಿವಿಧ ಬಗೆಯವು. ಆಯಾ ಸಂಬಂಧಿತ ರಾಜ್ಯದ ಶಿಕ್ಷಣ ಬೋರ್ಡ್‌ಗಳಿಂದ ಮಾನ್ಯತೆ ಪಡೆದಿರುವ ಸಾಂಪ್ರದಾಯಿಕ ಮಾಧ್ಯಮಿಕ ಅಥವಾ ಹಿರಿಯ ಮಾಧ್ಯಮಿಕ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ; ಇಂತಹ ಶಾಲೆಗಳು ಅರ್ಹತೆಯುಳ್ಳ ಶಿಕ್ಷಕರು, ಶಾಲಾಕೊಠಡಿಗಳು, ಗ್ರಂಥಾಲಯಗಳು, ಪ್ರಯೋಗಾಲಯಗಳು ಇತ್ಯಾದಿ ಅವಶ್ಯವಾದ ಸೌಲಭ್ಯಗಳನ್ನು ಹೊಂದಿರುತ್ತವೆ. ಔಪಚಾರಿಕ ಶಾಲೆಗಳ ಸಹಯೋಗದೊಂದಿಗೆ ಸರ್ಕಾರೇತರ ಸಂಸ್ಥೆಗಳು ನಡೆಸುವ ಅಧ್ಯಯನ ಕೇಂದ್ರಗಳೂ ಇವೆ. ಆದರೆ ಔದ್ಯೋಗಿಕ ಶಿಕ್ಷಣಕ್ಕಾಗಿ ಇರುವ ಅಧ್ಯಯನ ಕೇಂದ್ರಗಳು ಬೇರೆ ರೀತಿಯವು. ಈ ಸಂಸ್ಥೆಗಳು ಪ್ರಾಯೋಗಿಕ ಕಾರ್ಯಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಹೊಂದಿರುವುವು. ಉದಾಹರಣೆಗೆ, ಶ್ರಮಿಕ ವಿದ್ಯಾಪೀಠ, ಕೃಷಿ ವಿಜ್ಞಾನ ಕೇಂದ್ರ, ಔದ್ಯೋಗಿಕ ತರಬೇತಿ ಸಂಸ್ಥೆಗಳು ಇತ್ಯಾದಿ. ಇತ್ತೀಚೆಗೆ ಅನನುಕೂಲಿತರ ಶಿಕ್ಷಣಕ್ಕೆಂದು ವಿಶೇಷ ಮಾನ್ಯತೆಪಡೆದ ಸಂಸ್ಥೆಗಳನ್ನು ಎನ್.ಐ.ಒ.ಎಸ್. ಸ್ಥಾಪಿಸಿದ್ದು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸವಾಲನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳ ಹಾಗೂ ಸಾಮಾಜಿಕವಾಗಿ ಮತ್ತು ಭೌಗೋಳಿಕವಾಗಿ ಪ್ರತ್ಯೇಕಿಗೊಂಡಿರುವ ಪ್ರದೇಶಗಳ ವಿದ್ಯಾರ್ಥಿಗಳ ಕಲಿಕೆಯ ಅವಶ್ಯಕತೆಗಳನ್ನು ಪೂರೈಸುತ್ತಿದೆ.

ರಾಷ್ಟ್ರೀಯ ಮತ್ತು ರಾಜ್ಯ ಮುಕ್ತಶಾಲೆಗಳು ದಾಖಲಾತಿಗಾಗಿ ವೃತ್ತಪತ್ರಿಕೆಗಳಲ್ಲಿ ವಿಜ್ಞಾಪನೆಯನ್ನು ನೀಡಿದರೂ ಸಹ :

- ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಮುಕ್ತಶಾಲೆಗಳು ಒದಗಿಸುವ ಅರ್ಜಿಗಳ ಆಧಾರದ ಮೇಲೆ ವಿದ್ಯಾರ್ಥಿಗಳ ದಾಖಲಾತಿ ನಡೆಯುತ್ತದೆ.
- ಇಂತಹ ದಾಖಲಾತಿ ಸಂದರ್ಭದಲ್ಲಿ ಈ ಅಧ್ಯಯನ ಕೇಂದ್ರಗಳು ವಿದ್ಯಾರ್ಥಿಗಳಿಗೆ ಪರಾಮರ್ಶನ ಸೇವೆಯನ್ನು ಒದಗಿಸಿ ಲಭ್ಯವಿರುವ ವಿಷಯಗಳನ್ನು ಆಯ್ಕೆ ಮಾಡುವಲ್ಲಿ ಸಹಾಯ ನೀಡುತ್ತವೆ.
- ಮುಕ್ತಶಾಲೆಗಳು ಈ ಅಧ್ಯಯನ ಕೇಂದ್ರಗಳಿಗೆ ಅಧ್ಯಯನ ಸಾಮಗ್ರಿಗಳನ್ನು ಒದಗಿಸುತ್ತವೆ... ತದನಂತರ ಈ ಕೇಂದ್ರಗಳು ದಾಖಲಾದ ವಿದ್ಯಾರ್ಥಿಗಳಿಗೆ ಇವುಗಳನ್ನು ತಲುಪಿಸುತ್ತವೆ.
- ಮಾನ್ಯತೆ ಪಡೆದ ಸಂಸ್ಥೆಗಳು ಅಥವಾ ಅಧ್ಯಯನ ಕೇಂದ್ರಗಳು ತಮ್ಮ ಶಿಕ್ಷಕರ ಸಹಾಯದಿಂದ ವ್ಯಕ್ತಿಗಳ ಸಂಪರ್ಕಕಾರ್ಯಕ್ರಮಗಳನ್ನು ನಡೆಸಿಕೊಡುತ್ತವೆ.
- ಪುನಃ ವಿದ್ಯಾರ್ಥಿಗಳು ಪರೀಕ್ಷೆಗಾಗಿ ಈ ಕೇದ್ರಗಳಲ್ಲಿ ಅರ್ಜಿಯನ್ನು ಭರ್ತಿ ಮಾಡುತ್ತಾರೆ.
- ಈ ಅಧ್ಯಯನ ಕೇಂದ್ರಗಳಲ್ಲಿ ವಿಜ್ಞಾನದ ಕೋರ್ಸುಗಳಿಗೆ ವಿದ್ಯಾರ್ಥಿಗಳು – ಶಿಕ್ಷಕರು ಪ್ರಯೋಗಶಾಲೆಯಲ್ಲಿ ಪ್ರಾಯೋಗಿಕ ಕಾರ್ಯವನ್ನು ಕೈಗೊಳ್ಳುತ್ತಾರೆ.

ಪ್ರತಿಯೊಂದು ಅಧ್ಯಯನ ಕೇಂದ್ರವೂ ಓರ್ವ ಸಂಯೋಜಕನನ್ನು ನೇಮಿಸುತ್ತದೆ; ಬಹುತೇಕ ಸಂದರ್ಭಗಳ ಶಾಲೆಯ ಪ್ರಾಂಶುಪಾಲಕರು ಇಲ್ಲವೇ ಮುಖ್ಯೋಪಾಧ್ಯಾಯರು ಸಂಯೋಜಕರಾಗಿರುವರು. ಆದಾಗ್ಯೂ, ಈ ನಿಯಮಕ್ಕೆ ಅಪವಾದಗಳೂ ಉಂಟು. ಪ್ರವೇಶದಿಂದ ಮೊದಲುಗೊಂಡು ಪರೀಕ್ಷೆಯವರೆಗೆ ಭಾರತದ

Digitised by Bharatavani, CIIL

ಮುಕ್ತಶಾಲಾ ಶಿಕ್ಷಣದ ವ್ಯವಸ್ಥಾಪನೆಗೆ ಈ ಅಧ್ಯಯನ ಕೇಂದ್ರಗಳು ಬೆನ್ನೆಲುಬಿನಂತಿದ್ದು ವಾಸ್ತವದಲ್ಲಿ ವಿದ್ಯಾರ್ಥಿಗಳು ಈ ಅಧ್ಯಯನ ಕೇಂದ್ರಗಳಿಂದ ಸೇವೆಯನ್ನು ಪಡೆಯುತ್ತಾರೆಂಬುದು ಸ್ವಯಂ ವೇದ್ಯವಾಗಿದೆ.

ಇದು ಭಾರತೀಯ ಮುಕ್ತಶಾಲಾ ಶಿಕ್ಷಣದಲ್ಲಿ ಆಗಿರುವ ಶ್ರೇಷ್ಠತಮ ನಾವೀನ್ಯತೆಗಳಲ್ಲಿ ಒಂದು ಎಂದು ಅಂತರರಾಷ್ಟ್ರೀಯ ಸ್ತರದಲ್ಲಿ ಮೆಚ್ಚುಗೆ ಸಂಪಾದಿಸಿದೆ. ಕಾರಣ, ಈ ವ್ಯವಸ್ಥೆ ಮುಕ್ತಶಾಲೆಗಾಗಿ ಹೊಸ ಮೂಲಭೂತ ಸೌಕರ್ಯಗಳಿಗಾಗಿ ಧನವ್ಯಯವನ್ನು ತಪ್ಪಿಸುತ್ತದೆ; ಮತ್ತು ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಶೈಕ್ಷಣಿಕ ಮೂಲಭೂತ ಸೌಕರ್ಯಗಳಿಗೆ ಉಳಿಯುವ ಶಾಲಾವಕಾಶದ ಪ್ರಯೋಜನ ಪಡೆದುಕೊಳ್ಳುತ್ತದೆ. ಅಲ್ಲದೆ, ಸಾಂಪ್ರದಾಯಿಕ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಮುಕ್ತಕಲಿಕಾ ವ್ಯವಸ್ಥೆಗೆ ಹತ್ತಿರ ತರುತ್ತದೆ.

ಮುಕ್ತಶಾಲೆಗಳ, ವಿಶೇಷತಃ, ಎನ್.ಐ.ಒ.ಎಸ್.ನ ನಿರ್ವಹಣೆಯ ಪ್ರಮುಖ ಕ್ಷೇತ್ರವೆಂದರೆ ತಂತ್ರಜ್ಞಾನದ ಬಳಕೆ. ವಿದ್ಯಾರ್ಥಿ ಮಾಹಿತಿ ವ್ಯವಸ್ಥೆಯ ಸಂಪೂರ್ಣ ಕಂಪ್ಯೂಟರೀಕರಣ ಮತ್ತು ಬೋಧನ ಸಾಮಗ್ರಿಗಳ ಸಲುವಾಗಿ ಡಿ.ಟಿ.ಪಿ. ಕಾರ್ಯ ಇವುಗಳೊಂದಿಗೆ ಎನ್.ಐ.ಒ.ಎಸ್. ಪಥ ಪ್ರದರ್ಶನ ಮಾಡುತ್ತಿದೆ. ಈ ವ್ಯವಸ್ಥೆಯ ಅನುಕರಣೆಯನ್ನು ಹಲವು ರಾಜ್ಯ ಮುಕ್ತಶಾಲೆಗಳು ಮಾಡುತ್ತಿದ್ದು ವಿಶೇಷವಾಗಿ, ಕಂಪ್ಯೂಟರ್ ಮುಖಾಂತರದ ವಿದ್ಯಾರ್ಥಿ ಮಾಹಿತಿ ವ್ಯವಸ್ಥೆಯ ನಿರ್ವಹಣೆಯಲ್ಲಿ ಈ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿದೆ. ಎನ್.ಐ.ಒ.ಎಸ್.ನಲ್ಲಿನ ಇತ್ತೀಚಿನದೆಂದು ಹೇಳಬಹುದಾದ ಬೆಳವಣಿಗೆಯೆಂದರೆ ಪ್ರವೇಶ, ಪರೀಕ್ಷೆ, ನಕಲು ಗುರುತು ಚೀಲಗಳನ್ನು ಕೊಡುವುದರ ಬಗೆಗಿನ ವಿಧಿವಿಧಾನ, ವಿಷಯಗಳ ಬದಲಾವಣೆ ಮತ್ತು ಸೇರ್ಪಡೆ ಇತ್ಯಾದಿಗಳನ್ನು ಕುರಿತ ದಿನನಿತ್ಯದ ವಿಚಾರಣೆಗೆ ಅನ್ಯೋನ್ಯ ಕ್ರಿಯಾತ್ಮಕ ವಾಯ್ಸ್‌ಮೇಲ್ ವ್ಯವಸ್ಥೆಯ ಬಳಕೆ NIOS ನ ಮುಖ್ಯಕಾರ್ಯಾಲಯದಲ್ಲಿ ಈ ಕುರಿತ ಪ್ರಾರಂಭಿಕ ಪ್ರಯೋಗದ ಸಫಲತೆಯೊಂದಿಗೆ ಕೊಲ್ಕತ್ತ, ಚಂಡೀಗಡ್ ಮತ್ತು ಪುಣೆ ಪ್ರಾದೇಶಿಕ ಕೇಂದ್ರಗಳಿಗೆ ಈ ಸೌಕರ್ಯವನ್ನು ಈಗ ವಿಸ್ತರಿಸಲಾಗಿದೆ.

**ಸಿಬ್ಬಂದಿ:** ಸಾಂಸ್ಥಿಕ ಸಂರಚನೆಯಲ್ಲಿರುವಂತೆಯೇ ಮುಕ್ತಶಾಲೆಗಳ ಸಿಬ್ಬಂದಿ ರಚನೆಯಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ. ಎನ್.ಐ.ಸಿ.ಎಸ್. ಬಹುಮಟ್ಟಿಗೆ ಶ್ರೇಷ್ಠ ಸಿಬ್ಬಂದಿಯುಳ್ಳ ಸಂಸ್ಥೆಯಾದರೆ ರಾಜ್ಯ ಮುಕ್ತಶಾಲೆಗಳು ಅನುಮೋದಿತ ಸಿಬ್ಬಂದಿಗಿಂತ ಕಡಿಮೆ ಸಿಬ್ಬಂದಿಯ ಸಹಾಯದಿಂದ ನಡೆಯುತ್ತವೆ. ಆದರೂ ಎಲ್ಲಾ ಮುಕ್ತಶಾಲೆಗಳಲ್ಲಿಯೂ, ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಪರೀಕ್ಷೆ–ಈ ಮೂರು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ರಚನೆ ಕಂಡುಬರುತ್ತದೆ. ಪಠ್ಯಕ್ರಮ, ಬೋಧನಾ ಸಾಮಗ್ರಿ, ಮೌಲ್ಯಮಾಪನ ವ್ಯವಸ್ಥೆ ಮತ್ತು ಪರೀಕ್ಷೆಗಳು ಇತ್ಯಾದಿಗಳ ವಿಕಸನವು ಶೈಕ್ಷಣಿಕ ಸಿಬ್ಬಂದಿಯ ಪ್ರಮುಖ ಜವಾಬ್ದಾರಿಯಾಗಿದೆ. ಆಡಳಿತಾತ್ಮಕ ಸಿಬ್ಬಂದಿ ಸಂಸ್ಥೆಯು ದೈನಂದಿನ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದೆ. ಪರೀಕ್ಷಾಪೂರ್ವ ಮತ್ತು ಪರೀಕ್ಷಾನಂತರದ ಹಂತಗಳಲ್ಲಿ ಪರೀಕ್ಷೆಯನ್ನು ನಡೆಸಿ ನಿರ್ವಹಿಸುವುದು ಪರೀಕ್ಷಾ ಸಿಬ್ಬಂದಿಯ ಜವಾಬ್ದಾರಿಯಾಗಿದೆ.

ಸಿಬ್ಬಂದಿ ಸಂರಚನೆಯಲ್ಲಿ ಗುಣಾತ್ಮಕ ವಿವಾದಾಂಶಗಳು ಪರಿಗಣಿತಗೊಂಡಿವೆ. ರಾಷ್ಟ್ರೀಯ ಮಟ್ಟದಲ್ಲಿ ಶೃಂಗ ಸಂಸ್ಥೆಯಾದ ಎನ್.ಐ.ಒ.ಎಸ್. ನೇತೃತ್ವವನ್ನು ಭಾರತ ಸರ್ಕಾರದ ಜಂಟಿ ಸಚಿವರ ಹುದ್ದೆಯ ಸ್ತರವುಳ್ಳ ಛೇರ್‌ಮನ್ ಅಥವಾ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರು ವಹಿಸಿಕೊಳ್ಳುತ್ತಾರೆ. ವಿಭಾಗಗಳ ಮುಖ್ಯಸ್ಥರು, ನಿರ್ದೇಶಕರು (ಶೈಕ್ಷಣಿಕ) ಸೇರಿದಂತೆ, ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಸ್ತರಕ್ಕಿಂತ ಕಡಿಮೆ ಸ್ತರವುಳ್ಳವರಾಗಿರುತ್ತಾರೆ. ಇದರಿಂದಾಗಿ ಅಪೇಕ್ಷಿತ ಮಟ್ಟಕ್ಕಿಂತ ಕಡಿಮೆ ಸ್ತರದಲ್ಲಿ ನಿರ್ದೇಶಕರ ನೇಮಕಾತಿಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಸಾಮಾನ್ಯವಾಗಿ ಇವರು ಮಧ್ಯಮಿಕ ಶಿಕ್ಷಣ ಬೋರ್ಡ್‌ನ ಕೆಳಗಿನ ಶ್ರೇಣಿಗಳಿಂದ ಇಲ್ಲವೆ ಪ್ರಾಧ್ಯಾಪಕ ಹುದ್ದೆ ಸುಲಭವಾಗಿ ಸಿಗಲಾರದಂಥ ಶೈಕ್ಷಣಿಕ ಸಂಸ್ಥೆಗಳಿಂದ ಬಂದವರಾಗಿರುತ್ತಾರೆ. ತತ್ಫಲವಾಗಿ, ನಿರ್ದೇಶಕರ (ಶೈಕ್ಷಣಿಕ) ನಾಯಕತ್ವದಲ್ಲಿ ಆಗಾಗ್ಗೆ ಸಮಸ್ಯೆಗಳು ತಲೆದೋರಿವೆ. ಆದಾಗ್ಯೂ, ಎನ್.ಐ.ಒ.ಎಸ್.ನ ಸಿಬ್ಬಂದಿ ಸಂರಚನೆಯ ತೀವ್ರತರ ಸಮಸ್ಯೆಯೆಂದರೆ ವರ್ಗೋನ್ನತಿಗೆ ಯಾವ ಅವಕಾಶವೂ ಇಲ್ಲದಂತೆ ಇದರ ಶೈಕ್ಷಣಿಕ ಸಿಬ್ಬಂದಿಯ ವೇತನವನ್ನು ಇತ್ತೀಚೆಗೆ ವಿಶ್ವವಿದ್ಯಾಲಯದ ಅಧ್ಯಾಪಕರ ವೇತನದ ಮಟ್ಟಕ್ಕೆ ಪರಿಷ್ಕೃತಗೊಳಿಸಲಾಗಿರುವ ಸರಕಾರಿ ಪ್ರಭಾಗೀಯ ಅಧಿಕಾರಿಗಳ ವೇತನಕ್ಕೆ ಸರಿಸಮಾನವಾಗಿದ್ದು, ಬೋಧಕರಾಗಿ ಬಹುಮಟ್ಟಿಗೆ ಪ್ರತಿಭಾವಂತರಾದ ಯುವ ಪುರುಷ ಹಾಗೂ ಮಹಿಳೆಯರನ್ನು ನೇಮಕಮಾಡಿಕೊಳ್ಳಲಾಗಿದ್ದು ಇವರ ಪ್ರೇರಕಶಕ್ತಿಯನ್ನು ಉಳಿಸಿಬೆಳೆಸಿ ನಿರ್ವಹಿಸುವುದು ಹಲವು ಬಾರಿ ಕಷ್ಟಕರವಾಗುತ್ತದೆ.

ಎನ್.ಐ.ಒ.ಎಸ್.ನ ಅನುಭವದಿಂದಲೂ ಮತ್ತು ಅದರ ಶೈಕ್ಷಣಿಕ ಅಂಗದ ನ್ಯೂನತೆಗಳಿಂದಲೂ ಪಾಠ ಕಲಿತದ್ದರಿಂದ ಎನ್.ಐ.ಒ.ಎಸ್.ನ ಸಲಹೆಯ ಮೇರೆಗೆ ತಯಾರಿಸಲಾದ ರಾಜ್ಯ ಮುಕ್ತಶಾಲೆಯ ರಚನೆಯಲ್ಲಿ ಶೈಕ್ಷಣಿಕ ಸಿಬ್ಬಂದಿಯ ಶ್ರೇಣಿಯನ್ನು ಉನ್ನತೀಕರಿಸಿ ವಿಶ್ವವಿದ್ಯಾನಿಲಯಗಳಿಗೆ ಸಮನಾಗುವಂತೆ ಮಾಡಲಾಗಿದೆ. ರಾಜ್ಯ ಮುಕ್ತಶಾಲೆಯ ನಿರ್ದೇಶಕರು (ಶೈಕ್ಷಣಿಕ) NIOS ನಲ್ಲಿ ತನ್ನ ಸಮಾನಸ್ಕಂದರಿಗಿಂತ ಹೆಚ್ಚಿನ ಶ್ರೇಣಿಯನ್ನು ಹೊಂದಿರುತ್ತಾರೆ. ಇದರಿಂದಾಗಿ ವಿಶ್ವವಿದ್ಯಾನಿಲಯ ಹಾಗೂ ಸಮಾನ ಶೈಕ್ಷಣಿಕ ಸಂಸ್ಥೆಗಳಿಂದ ವೃತ್ತಿಪರರು ರಾಜ್ಯ ಮುಕ್ತಶಾಲೆಗಳಿಗೆ ಸುಗಮವಾಗಿ ಬಂದು ಸೇರಲು ಸಹಾಯಕವಾಗಿದೆ. ಆದರೆ, ಈ ಶಾಲೆಗಳು ನಿಯಮಿತ ರೂಪದ ಯಾವುದೇ ಶೈಕ್ಷಣಿಕ ಸಿಬ್ಬಂದಿಯನ್ನು ಹೊಂದಿಲ್ಲವೆಂದು ಹೇಳಬೇಕಾಗುವುದು. ನಿರ್ವಹಣೆಯ ದೃಷ್ಟಿಕೋನದಿಂದ ನೋಡಿದಾಗ ಭಾರತದಲ್ಲಿ ಮುಕ್ತಶಾಲೆಗಳ ಸಿಬ್ಬಂದಿ ಸಂರಚನೆ ಒಂದು ಬಹಳ ಗಹನವಾದ ವಿಷಯವಾಗಿದೆ.

ರಾಜ್ಯ ಮುಕ್ತಶಾಲೆಗಳ ಅಥವಾ NIOS ನ ಸಿಬ್ಬಂದಿ ಸಂರಚನೆಯ ಹೊರಗೆ ಕಾಣಿಸುವ ಅಂಗ. ಮುಕ್ತಶಾಲೆಗಳು

Digitised by Bharatavani, CIIL

ಕಾರ್ಯಕ್ರಮಗಳ ನಡೆಸುವಿಕೆಗಾಗಿ ಮಾನ್ಯತೆ ಪಡೆದ ಸಂಸ್ಥೆಗಳ ಸಿಬ್ಬಂದಿಯನ್ನು ಅವಲಂಬಿಸಿದ್ದು ಸಾಮಾನ್ಯವಾಗಿ ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಶಾಲೆಗಳಾಗಿರುತ್ತವೆ. ಒಂದು ನಿರ್ದಿಷ್ಟ ಅಧ್ಯಯನ ಕೇಂದ್ರವು ಅಧ್ಯಯನಕ್ಕೆ ಅವಕಾಶ ನೀಡುವ ವಿಷಯಗಳ ಸಂಖ್ಯೆಯ ಆಧಾರದ ಮೇಲೆ ಶಿಕ್ಷಕರ ಸಂಖ್ಯೆಯು ನಿರ್ಧಾರವಾಗುತ್ತದೆ. ಶಾಲಾ ಮಟ್ಟದಲ್ಲಿ ಎಲ್ಲಾ ಮುಕ್ತ ಕಲಿಕೆಯ ಸಂಸ್ಥೆಗಳನ್ನು ಬೆಂಬಲಿಸುವ ಅಧ್ಯಯನ ಕೇಂದ್ರಗಳು ದೇಶದಲ್ಲಿ ಎಷ್ಟು ಸಂಖ್ಯೆಯಲ್ಲಿವೆ ಎಂಬುದನ್ನು ಸೂಚಿಸಲು ಸಾಕಷ್ಟು ಮಾಹಿತಿ ಲಭ್ಯವಿಲ್ಲ. ಎನ್.ಐ.ಒ.ಎಸ್. ಒಂದೇ ಭಾರತಾದ್ಯಂತ 1000ಕ್ಕೂ ಅಧಿಕ ಅಧ್ಯಯನ ಕೇಂದ್ರಗಳನ್ನು ಹೊಂದಿದೆ. ಆದ್ದರಿಂದ, ಅಧ್ಯಯನ ಕೇಂದ್ರದ ಸ್ತರದಲ್ಲಿ ವಾಸ್ತವವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಡಲು ಹಲವು ಸಹಸ್ರ ಶಿಕ್ಷಕರು ಭಾಗಿಯಾಗಿರುತ್ತಾರೆ. ಇದರ ಜೊತೆಗೆ, ಹಲವು ಸಂಖ್ಯೆಯಲ್ಲಿ ಶೈಕ್ಷಣಿಕ ವೃತ್ತಿಪರರು ಪಠ್ಯಕ್ರಮ ವಿಕಾಸ ಮತ್ತು ಕಾರ್ಯಕ್ರಮ ಸಾಮಗ್ರಿಗಳ ಸಿದ್ಧತೆಗಳಲ್ಲಿ ತೊಡಗಿಕೊಂಡಿದ್ದಾರೆ. ಶಾಲಾಸ್ತರದ ಮುಕ್ತಕಲಿಕೆಯ ವ್ಯವಸ್ಥೆಯಲ್ಲಿನ ಈ ಅಗೋಚರ ಸಿಬ್ಬಂದಿ ಒಂದು ಮುಖ್ಯ ಅಂಗವಾಗಿದೆ.

ಎನ್.ಐ.ಒ.ಎಸ್. ತನ್ನ ಸಿಬ್ಬಂದಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುವುದರ ಜೊತೆಗೆ ಮುಕ್ತ ಶಾಲೆಗಳಿಗೆ ಅವುಗಳ ಸಿಬ್ಬಂದಿ ವಿಕಾಸದಲ್ಲಿ ಸಹಕರಿಸುವುದಾದರೂ ಈ ಕಾರ್ಯಕ್ರಮಗಳು ಹೊರಗೆ ಗೋಚರವಾಗುವ ಸಿಬ್ಬಂದಿಗಳಿಗೆ ಮಾತ್ರ ಸೀಮಿತವಾಗಿವೆ. ದೇಶದಲ್ಲಿನ ಮುಕ್ತಶಾಲಾ ಶಿಕ್ಷಣ ವ್ಯವಸ್ಥೆಯ ಸಿಬ್ಬಂದಿ ವಿಕಾಸ ಕಾರ್ಯಕ್ರಮದಿಂದ ಹೊರಗೆ ಇರುವ ಅಪಾರ ಸಂಖ್ಯೆಯ ಅಗೋಚರ ಸಿಬ್ಬಂದಿಯೇ ವಾಸ್ತವದಲ್ಲಿ ಮುಕ್ತಶಾಲಾ ಶಿಕ್ಷಣದ ಗುಣಾತ್ಮಕತೆಯನ್ನು ನಿರ್ಧರಿಸುವುದು.

**ಉಪಸಂಹಾರ:**

1979ರಲ್ಲಿ ಪ್ರಾರಂಭಗೊಂಡ ಮುಕ್ತಶಾಲಾ ಶಿಕ್ಷಣ ಕಳೆದ ಎರಡು ದಶಕಗಳಲ್ಲಿ ಬಹಳ ದೂರ ಸಾಗಿ ಬಂದಿದೆ. ಇದು ತನ್ನ ಅಂಗಗಳನ್ನು ರಾಷ್ಟ್ರಮಟ್ಟದಿಂದ ರಾಜ್ಯಮಟ್ಟದ ಸಂಸ್ಥೆಯವರೆಗೆ ಹಿಂದಿ ಮತ್ತು ಆಂಗ್ಲ ಭಾಷೆಯಿಂದ ಪ್ರಾದೇಶಿಕ ಭಾಷೆಯ ಮಾಧ್ಯಮಗಳವರೆಗೆ; ಸಾಂಪ್ರದಾಯಿಕ ಶೈಕ್ಷಣಿಕ ಕಾರ್ಯಕ್ರಮಗಳಿಂದ ಔದ್ಯೋಗಿಕ ಕಾರ್ಯಕ್ರಮಗಳು ಹಾಗೂ ಜೀವನ ಸಮೃದ್ಧೀಕರಣ ಕಾರ್ಯಕ್ರಮಗಳವರೆಗೆ; ಅಂಚೆತೆರಪಿನ ಶಿಕ್ಷಣದಿಂದ ಬಹುಮಾಧ್ಯಮ ದೂರಶಿಕ್ಷಣದವರೆಗೆ ಹರಡಿದೆ. ಆದರೆ, ಇದು ಒಂದು ವ್ಯವಸ್ಥೆಯ ದೃಷ್ಟಿಯಿಂದ ಇನ್ನೂ ಬಹುದೂರ ಸಾಗಬೇಕಾಗಿದೆ. ಮುಕ್ತಶಾಲೆಗಳಲ್ಲಿನ ವೃತ್ತಿಪರತೆ ಮತ್ತು ಉತ್ಕೃಷ್ಟ ದರ್ಜೆಯ ನಿರ್ವಹಣೆ ಮತ್ತು ನಿಡೆಸುಕೊಡುವಿಕೆ ಪ್ರಮುಖ ಸವಾಲುಗಳಾಗಿವೆ. ಬಹುಮಟ್ಟಿಗೆ ಅಜ್ಞಾತವಾಗಿ ಸಾಂಪ್ರದಾಯಿಕ ಶಿಕ್ಷಣ ಮತ್ತು ಉದ್ಯೋಗ ವಲಯಗಳಿಂದ ತಾರತಮ್ಯವನ್ನು ಎದುರಿಸುವುದು ಮತ್ತೊಂದು ಸವಾಲಾಗಿದೆ.

6ರಿಂದ 14 ವಯೋಮಾನದ ಮಕ್ಕಳಿಗೆ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿಸಿದ 2001 ಸಂವಿಧಾನದ ತಿದ್ದುಪಡಿಗೆ ದೇಶದಲ್ಲಿನ ಶೈಕ್ಷಣಿಕ ಅವಕಾಶಗಳಲ್ಲಿ ಮಾದರಿಯಂತಿರುವ ಬದಲಾವಣೆ ಅತ್ಯಗತ್ಯ. ಈ ಹೊಸ ಬೇಡಿಕೆಯನ್ನು ಪೂರೈಸಲು ವಿನ್ಯಾಸಗೊಂಡಿರುವ ಸರ್ವಶಿಕ್ಷಾ ಅಭಿಯಾನವು 2010ರ ವೇಳೆಗೆ 6ರಿಂದ 14 ವಯೋಮಾನದ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣದ ಭರವಸೆಯನ್ನು ನೀಡುತ್ತದೆ. ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪರ್ಯಾಯ ಪರಿಸ್ಥಿತಿಗಳನ್ನು ಮುಂಗಾಣುವ ಹಲವು ಅಂದಾಜುಗಳಿವೆ. ಅಂತಹ ಒಂದು ಅಂದಾಜಿನ ಪ್ರಕಾರ ಮಾಧ್ಯಮಿಕ ಶಿಕ್ಷಣದಲ್ಲಿನ 7.8 ದಶಲಕ್ಷ ದಾಖಲಾತಿಯ ಸದ್ಯದ ಮಟ್ಟವು 2020ರ ವೇಳೆಗೆ ಸುಮಾರು 28.3 ದಶಲಕ್ಷವಾಗುವುದು. ಸ್ವಾತಂತ್ರದ ಉಷಃಕಾಲದಲ್ಲಿ ಭಾರತದಲ್ಲಿ ಸುಮಾರು 4000 ಪ್ರೌಢಶಾಲೆಗಳಿದ್ದವು; ಪಠ್ಯಪುಸ್ತಕಗಳು, ಕಪ್ಪುಹಲಗೆಗಳು ಮತ್ತು ಶಿಕ್ಷಕರು ಇವಿಷ್ಟೇ ಕಲಿಕೆಯ ಏಕಮಾತ್ರ ಸಾಧನಗಳಾಗಿದ್ದವು. ಈಗ ಈ ವ್ಯವಸ್ಥೆ ವಿಸ್ತಾರಗೊಂಡಿದೆ. ಈಗ ಈ ವ್ಯವಸ್ಥೆ ಸುಮಾರು 1,17,000 ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಶಾಲೆಗಳನ್ನು ಒಳಗೊಂಡಿದೆ. ಮುಂಬರುವ ವರ್ಷಗಳಿಗಾಗಿ ಅಂದಾಜು ಮಾಡಲಾಗಿರುವ ವಿಸ್ತರಣೆ ಮತ್ತು ಮಾಧ್ಯಮಿಕ ಶಿಕ್ಷಣದ ಬೇಡಿಕೆಯನ್ನು ಸರಿಹೊಂದಿಸಿಕೊಳ್ಳಲು ಇಷ್ಟು ಸಂಖ್ಯೆಯ ಶಾಲೆಗಳೂ ಸಹ ಅಪರ್ಯಾಪ್ತವಾಗಿವೆ. ಇದಕ್ಕೆ ಪರ್ಯಾಯ ಶೈಕ್ಷಣಿಕ ಅವಕಾಶಗಳು ಅಗತ್ಯವಾಗಿವೆ. ಎಂಟುವರ್ಷದ ಶಿಕ್ಷಣವನ್ನು ಪೂರೈಸುವ ಎಲ್ಲರೂ ಸಾಂಪ್ರದಾಯಿಕ ಹಾಗೂ ಔಪಚಾರಿಕ ಶಾಲಾ ಶಿಕ್ಷಣದ ಪ್ರಯೋಜನವನ್ನು ಪಡೆಯಲು ಸಮರ್ಥರಾಗುವುದಿಲ್ಲ. ಮುಂಬರುವ ವರ್ಷಗಳಲ್ಲಿ ಮುಕ್ತಶಾಲಾ ಶಿಕ್ಷಣವು ಔಪಚಾರಿಕ ಶಿಕ್ಷಣಕ್ಕೆ ಪೂರಕವಾಗುವಂಥ ಅರ್ಥಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ಸವಾಲನ್ನು ಎದುರಿಸಬೇಕಾಗುತ್ತದೆ.

ಭಾರತೀಯ ಮುಕ್ತಶಾಲಾ ಶಿಕ್ಷಣವು 1979ರಲ್ಲಿ ಮೊದಲು ಉದಯವಾದಾಗಿನಿಂದ ಮಹತ್ವಪೂರ್ಣ ವ್ಯಾಪ್ತಿಯನ್ನು ಸಾಧಿಸಿದೆಯಾದರೂ ಇದು ಇನ್ನೂ ಬಹು ದೂರ ಕ್ರಮಿಸಬೇಕಾಗಿದೆ. ಕಾರ್ಯಕ್ರಮಗಳು ಈಗಲು ಸಹ ಬಹುಮಟ್ಟಿಗೆ ಸಾಂಪ್ರದಾಯಿಕ ತೆರನದಾಗಿದ್ದು ಅಲ್ಲೊಂದು ಇಲ್ಲೊಂದು ನಾವೀನ್ಯತೆಯನ್ನುಳ್ಳದಾಗಿದೆ. ಸಾಂಪ್ರದಾಯಿಕ ಕಾರ್ಯಕ್ರಮಗಳ ಬದಲಾವಣೆ ಅಥವಾ ಅವುಗಳನ್ನು ಸಾರಭೂತವಾಗಿ ಔದ್ಯೋಗಿಕ ಮತ್ತು ಜೀವನಸಮೃದ್ಧಿ ಕಾರ್ಯಕ್ರಮಗಳಿಂದ ಸಂಪನ್ನವಾಗಿಸುವವರೆಗೆ ಇದರ ಸಾಮಂಜಸ್ಯ ಗಂಭೀರ ಪ್ರಶ್ನೆಯಾಗಿಯೇ ಮುಂದುವರೆಯುವುದು. ನಿಜಜೀವನ ಮತ್ತು ಕಾರ್ಯಪ್ರಪಂಚ ಇವೆರಡರಲ್ಲಿಯೂ ನಿರಂತರ ಶಿಕ್ಷಣವನ್ನು ಮುಕ್ತಶಾಲಾ ಶಿಕ್ಷಣ ತನ್ನ ಪ್ರಧಾನ ಗಮನ ಕೇಂದ್ರವಾಗಿಸಿಕೊಳ್ಳಬೇಕಾಗಿದೆ. ಭಾರತೀಯ ಮುಕ್ತಶಾಲಾ ಶಿಕ್ಷಣದ ಮುಂದಿರುವ ಎರಡನೆಯ ಮುಖ್ಯ ಸವಾಲೆಂದರೆ ಗುಣಮಟ್ಟದ ನಿರ್ವಹಣೆ. ಬೃಹತ್ ಪ್ರಮಾಣದಲ್ಲಿ ಸ್ಥಾಪನೆಗೊಂಡಿರುವ ಸಾಂಪ್ರದಾಯಿಕತೆಯ ಬಿಗಿ ಹಿಡಿತದಲ್ಲಿರುವ ಔಪಚಾರಿಕ ಶಾಲಾ ಶಿಕ್ಷಣದ ವಿರುದ್ಧ ಅಸಮಾನ ಸಮರದಲ್ಲಿ ಮುಕ್ತಶಾಲಾ ಶಿಕ್ಷಣವು ತೊಡಗಿಕೊಂಡಿರುವುದನ್ನು ನಾವು ಪ್ರಶಂಸಿಸಬೇಕಾಗಿದೆ. ಸಮಾನತೆಯ ವ್ಯವಸ್ಥೆಯನ್ನು ಪಡೆಯಲು ಮುಕ್ತಶಾಲಾ ಶಿಕ್ಷಣವು

Digitised by Bharatavani, CIIL

ದೇಶದ ಔಪಚಾರಿಕ ಶಾಲಾ ಶಿಕ್ಷಣದ ವ್ಯವಸ್ಥೆಗಿಂತ ದ್ವಿಗುಣವಾಗಿ ಶ್ರೇಷ್ಠತೆಯನ್ನು ಹೊಂದುವ ಅಗತ್ಯವಿದೆ.

ಮೂಲ: ಮಾರ್ಮರ್ ಮುಖ್ಯೋಪಾಧ್ಯಾಯರು
ಅನು: ಚಂದ್ರಶೇಖರ್ ಬಿ.ಎಂ.

## ಮುಕ್ತ ಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆ

**ಚಾರಿತ್ರಿಕ ದೃಷ್ಟಿಕೋನ:** ಭಾರತೀಯ ಸಂದರ್ಭದಲ್ಲಿ ರಾಷ್ಟ್ರೀಯ ಮುಕ್ತ ಶಾಲೆಯು (National Open School) 1989ರಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಆವಿರ್ಭವಿಸಿತು. ಇದಕ್ಕೂ ಮುನ್ನ 1983ರಲ್ಲಿ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (CBSE) ನಿಂದ ಒಂದು ಮುಕ್ತ ಶಾಲೆಯು ಸ್ಥಾಪಿಸಲ್ಪಟ್ಟಿತು. ಆದಾಗ್ಯೂ, ಮುಕ್ತಶಾಲೆಯ ಪ್ರಾರಂಭವನ್ನು 1965ರಲ್ಲಿ ಸೆಕೆಂಡರಿ ಎಜುಕೇಷನ್ ಬೋರ್ಡ್‌ನವರು ಪ್ರಾರಂಭಿಸಿದ ಶಾಲಾಮಟ್ಟದ ಅಂಚೆಶಿಕ್ಷಣದ ಕೋರ್ಸಿಗೂ ತಳಕು ಹಾಕಬಹುದಾಗಿದೆ. ವಾಸ್ತವವಾಗಿ ಮುಕ್ತಶಾಲೆ ಹಾಗೂ ದೂರಶಿಕ್ಷಣದ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು 1986ರ ರಾಷ್ಟ್ರೀಯ ಶಿಕ್ಷಣ ನೀತಿ (1986) ಯಲ್ಲಿ ಈ ಕೆಳಕಂಡ ಮಾತುಗಳಲ್ಲಿ ಒತ್ತಿ ಹೇಳಿದೆ:

"ಯುವಕರು, ಗೃಹಿಣಿಯರು, ಕೃಷಿ ಮತ್ತು ಕೈಗಾರಿಕಾ ಕೆಲಸಗಾರರು ಹಾಗೂ ವೃತ್ತಿಪರರು ತಮಗೆ ಇಷ್ಟಬಂದ ಶಿಕ್ಷಣವನ್ನು ತಮಗೆ ಸರಿಹೊಂದುವ ಗತಿಯಲ್ಲಿ ಒದಗಿಸಲು ಅವಕಾಶಗಳನ್ನು ಒದಗಿಸಿ ಕೊಡಲಾಗುತ್ತದೆ. ಮುಂದಿನ ಪ್ರಬಲ ಪ್ರಯತ್ನವು ಮುಕ್ತ ಹಾಗೂ ದೂರಕಲಿಕೆಯ ದಿಕ್ಕಿನಲ್ಲಿ ಇರುತ್ತದೆ. (ರಾಷ್ಟ್ರೀಯ ಶಿಕ್ಷಣ ನೀತಿ (1986)ಯು 3.11)"

ವಾಸ್ತವವಾಗಿ ಇದು MHRDಯು NOSಅನ್ನು ಸ್ಥಾಪಿಸುವ ಒಂದು ಯೋಜನಾ ವರದಿಯನ್ನು ತಯಾರಿಸುವ ಕಾರ್ಯವನ್ನು ಕೈಗೊಳ್ಳಲು ಉತ್ತೇಜನ ನೀಡಿತು. ರಾಷ್ಟ್ರೀಯ ಮುಕ್ತಶಾಲೆಯು ಒಂದು ರಾಷ್ಟ್ರೀಯ ಪರ್ಯಾಯ ಮುಕ್ತ ಕಲಿಕೆಯ ಕ್ರಮವನ್ನು ರೂಪಿಸಲು ಶಕ್ತವಾಗುತ್ತದೆ ಎಂದು ಈ ವರದಿಯು ಭಾವಿಸಿತು. ಈ ಮುಕ್ತಶಾಲೆಯು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ (IGNOU)ವು ಕಾರ್ಯನಿರ್ವಹಿಸುತ್ತಿರುವಂತೆಯೇ ಕಾರ್ಯನಿರ್ವಹಿಸಬೇಕೆಂದೂ ಆದರೆ ಶಿಕ್ಷಣದ ಮಟ್ಟದಲ್ಲಿ ಮಾತ್ರ ವ್ಯತ್ಯಾಸ ಹೊಂದಿರತಕ್ಕದ್ದು ಎಂದೂ ಪರಿಭಾವಿಸಿತು. ಇದು ಪದವಿಪೂರ್ವ ಹಂತದವರೆಗಿನ ಶಾಲಾಮಟ್ಟದಲ್ಲಿ ಕಾರ್ಯ ನಿರ್ವಹಿಸಬೇಕಾಗಿತ್ತು. ಇದು ಭಾರತದಲ್ಲಿ ಮುಕ್ತ ಶಾಲೆಗಳು ವಿಕಸನಗೊಂಡ ಚರಿತ್ರೆಯಾಗಿದೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಮುಕ್ತಶಾಲೆಗಳ ಪರಿಕಲ್ಪನೆಯು ಬಹುಮುಂಚೆಯೇ ಮತ್ತೊಂದು ರಾಷ್ಟ್ರದಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಆಸ್ಟ್ರೇಲಿಯಾದ ಓಟ್‌ವೇ(otway) ಪರ್ವತಗಳಲ್ಲಿನ ಅಂಚೆ ಶಿಕ್ಷಣ ಪಾಠಗಳು 1914ರಷ್ಟು ಮುಂಚಿತವಾಗಿಯೇ ಅಸ್ತಿತ್ವದಲ್ಲಿ ಇದ್ದವು. ಇವು ಒಂದು ರೀತಿಯಲ್ಲಿ ಮುಕ್ತ ವ್ಯವಸ್ಥೆ ಹಾಗೂ ದೂರಶಿಕ್ಷಣ ವಿಧಾನದಲ್ಲಿ ಶಾಲಾ ಕಾರ್ಯಕ್ರಮಗಳ ಪ್ರಾರಂಭ ಎನ್ನಬಹುದು. ಈ ಬಗೆಯ ಶಾಲಾ ಕಾರ್ಯಕ್ರಮಗಳ ಯಶಸ್ಸು ಅಂಚೆ ಶಿಕ್ಷಣ ಶಾಲೆಗಳನ್ನು ಆಸ್ಟ್ರೇಲಿಯಾದ ಇತರ ಅನೇಕ ರಾಜ್ಯಗಳಿಗೂ ಭೂ ಪ್ರದೇಶಗಳಿಗೂ ವಿಸ್ತರಿಸುವಂತೆ ಆಯಿತು. ಕೆನಡಾ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಕ್ರಮವಾಗಿ 1919 ಮತ್ತು 1922ರಲ್ಲಿ ಶಾಲಾ ಅಂಚೆ ಶಿಕ್ಷಣ ಕಾರ್ಯಕ್ರಮಗಳು ಜಾರಿಗೆ ಬಂದವು. ಈ ಪ್ರಯೋಗಗಳಲ್ಲಿ ಹಲವಾರು ಅಂಶಗಳು ಗಮನಕ್ಕೆ ಬಂದವು. ಇವು ಮುಕ್ತತೆಯ ಮತ್ತು ನಮ್ಯತೆಯ ವಿಷಯಗಳಲ್ಲಿದ್ದು ಕಲಿಯುವವರಿಗೆ ಶೈಕ್ಷಣಿಕ ಅವಕಾಶಗಳನ್ನು ಅಧಿಕಗೊಳಿಸುವ ಸಾಧ್ಯತೆಯ ಕಡೆಗೆ ಬೊಟ್ಟು ಮಾಡಿದವು. ಕಾಲಾಂತರದಲ್ಲಿ ಈ ಕಾರ್ಯಕ್ರಮಗಳು ಇಂದು ಮುಕ್ತ ಶಾಲೆಗಳು ಎಂದು ಕರೆಯಲಾಗುವ ಶಾಲೆಗಳಿಗೆ ಜನ್ಮ ನೀಡಿದವು. ಕೆಲವು ಮಿತಸಂಖ್ಯೆಯ ರಾಷ್ಟ್ರಗಳಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಈ ಬಗೆಯ ಶೈಕ್ಷಣಿಕ ಅವಕಾಶಗಳು ಕಂಡವು.

### ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮುಕ್ತ ಶಾಲೆಗಳು

ಇಂದು ಬಾಂಗ್ಲಾದೇಶ, ಭಾರತ, ಇಂಡೋನೇಶಿಯಾ, ದಕ್ಷಿಣ ಕೊರಿಯಾ, ಜಾಂಬಿಯ ಮತ್ತು ದಕ್ಷಿಣ ಆಫ್ರಿಕಾ ಕೆಲವು ಭಾಗಗಳಲ್ಲಿ ಮುಕ್ತಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಇನ್ನೂ ಅನೇಕ ರಾಷ್ಟ್ರಗಳು ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಡುತ್ತಿವೆ. ಮುಕ್ತ ವಿಶ್ವವಿದ್ಯಾಲಯಗಳು ಬಹು ಮುಂಚೆಯೇ ಯು.ಕೆ., ಪಾಕಿಸ್ತಾನ, ಥೈಲ್ಯಾಂಡ್, ಕೊರಿಯಾ, ಪಾಪುಅನ್ಯೂಗಿನಿ, ಇರಾನ್, ಇಸ್ರೇಲ್‌ಗಳಲ್ಲಿಯೂ ಆನಂತರ ಬಾಂಗ್ಲಾದೇಶ, ಶ್ರೀಲಂಕಾ ಹಾಗೂ ಭಾರತೀಯ ಉಪಖಂಡದಲ್ಲಿಯೂ ಸ್ಥಾಪಿತಗೊಂಡವು. ಮುಕ್ತಶಾಲೆಗಳು ದೂರಶಿಕ್ಷಣ ವಿಧಾನದ ಅಂಶಗಳೊಡನೆ ಪ್ರಪಂಚದಲ್ಲೆಲ್ಲಾ ಇದುವರೆಗೂ ಕೈಗೆಟುಕದ ಅಗಾಧ ಸಂಖ್ಯೆಯ ಮಕ್ಕಳು ಹಾಗೂ ಯುವಜನತೆಯನ್ನು ಸಂಪರ್ಕಿಸುವ ಸವಾಲನ್ನು ಎದುರಿಸಲು ಅನಿವಾರ್ಯ ಅಗತ್ಯವೆಂದು ಒಪ್ಪಿಕೊಳ್ಳಲೇಬೇಕಾಗಿ ಬಂದಿದೆ. ಮುಕ್ತಶಾಲೆಗಳನ್ನು ಸ್ಥಾಪಿಸುವ ಅಗತ್ಯದ ಬಗ್ಗೆ ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ನಡುವೆ ಮುಖ್ಯವಾಗಿ ಇವುಗಳ ಹಿತಾಸಕ್ತಿಗಳ ಸ್ವರೂಪದ ಬಗ್ಗೆ ಕೆಲವು ಭಿನ್ನಾಭಿಪ್ರಾಯಗಳು ಇವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಎರಡು ಬಗೆಯ ಹಿತಾಸಕ್ತಿಗಳು ವ್ಯಕ್ತವಾಗಿವೆ. ಅವೆಂದರೆ, ಚದುರಿ ಹೋದ ಪ್ರದೇಶಗಳಲ್ಲಿನ ಪ್ರತಿಕೂಲ ಪರಿಸ್ಥಿತಿಯ ಜನತೆಯ ಗುಂಪುಗಳಿಗೆ, ಸಾಂಪ್ರದಾಯಿಕ ಶಾಲೆಗಳನ್ನು ಸ್ಥಾಪಿಸಲು ಆಗದೆ ಇರುವಾಗ, ಶಿಕ್ಷಣವನ್ನು ನೀಡುವುದು. ಮತ್ತೊಂದು ವಿದ್ಯಾರ್ಥಿಗಳಿಗೂ ಮತ್ತು ಅವರನ್ನು ಹೆತ್ತವರಿಗೂ ಏನನ್ನು ಕಲಿಯಬೇಕೆಂಬ ಆಯ್ಕೆಯನ್ನು ಅವರಿಗೆ ನೀಡುವುದು.

ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಂಬಂಧಿಸಿದ ಮೂಲಭೂತ ಹಿತಾಸಕ್ತಿಗಳೆಂದರೆ ಶಾಲೆ ಬಿಟ್ಟ ಮಕ್ಕಳು ಮುಂದೆ

Digitised by Bharatavani, CIIL

ಅನಕ್ಷರಸ್ಥರಾಗುವುದನ್ನು ತಡೆಯಲು ಅವರಿಗೆ ಒಂದು ರಕ್ಷಣಾಜಾಲವನ್ನು ಒದಗಿಸುವುದು ಮತ್ತು ಸಮಾಜೋ–ಆರ್ಥಿಕ ಒತ್ತಡಗಳಿಂದ ಬಳಲುತ್ತಿರುವವರು ಮತ್ತು ವಯಸ್ಸು ಮೀರಿದವರು ಶಾಲೆಗೆ ಹಾಜರಾಗುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಅಂತಹವರಿಗೆ ಶಿಕ್ಷಣವನ್ನು ಒದಗಿಸುವುದು.

### ಮುಕ್ತ ಶಾಲಾ ರಾಷ್ಟ್ರೀಯ ಸಂಸ್ಥೆಯಾಗಿ ರಾಷ್ಟ್ರೀಯ ಮುಕ್ತಶಾಲೆ

ಭಾರತದಲ್ಲಿ ಮೊದಲಿದ್ದ ರಾಷ್ಟ್ರೀಯ ಮುಕ್ತ ಶಾಲೆಯು (NOS) ಇಂದು ಮುಕ್ತಶಾಲಾ ರಾಷ್ಟ್ರೀಯ ಸಂಸ್ಥೆ (NIOS) ಯಾಗಿ ಸ್ಥಾನಗಳಿಸಿದೆ. ಇಲ್ಲಿ ಸೆಕೆಂಡರಿ, ಸೀನಿಯರ್ ಸೆಕೆಂಡರಿ ಮತ್ತು ವೃತ್ತಿಪರ ಕಾರ್ಯಕ್ರಮಗಳಲ್ಲಿ 7.53 ಲಕ್ಷ ವಿದ್ಯಾರ್ಥಿಗಳು ಇರುವುದು ಒಂದು ದಾಖಲೆಯಾಗಿದೆ. ಇದಲ್ಲದೆ ಸುಮಾರು 4 ಲಕ್ಷ ಮಂದಿ ಎಲಿಮೆಂಟರಿ ಹಂತದಲ್ಲೂ ಅಂದಾಜು ಮಾಡಲಾಗದಷ್ಟು ವಯಸ್ಕರು ಜಿಲ್ಲಾ ಸಾಕ್ಷರತಾ ಸಮಿತಿಗಳ ಮೂಲಕವಾಗಿಯೂ ಒಳಗೊಂಡಿರುತ್ತಾರೆ. ರಾಷ್ಟ್ರೀಯ ಮುಕ್ತಶಾಲೆಯು (NOS) ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಹಲವಾರು ಗಣನೀಯ ನವೀನ ಪ್ರಯೋಗಗಳು ಹಾಗೂ ಹಾಕಿರುವ ಹಿರಿದಾದ ದಾಪುಗಾಲುಗಳು ಈ ಸಂಸ್ಥೆಗೆ 2002 ಜುಲೈನಲ್ಲಿ ಭಾರತ ಸರ್ಕಾರದಿಂದ ಮುಕ್ತಶಾಲಾ ರಾಷ್ಟ್ರೀಯ ಸಂಸ್ಥೆ ಎಂಬುದಾಗಿ ಪುನರ್ ನಾಮಕರಣಗೊಳ್ಳುವುದರಲ್ಲಿ ಮುಕ್ತಾಯವಾಗಿದೆ. ಇದು ಕೇವಲ 10 ವರ್ಷಗಳ ಪುಟ್ಟ ಅಂತರದಲ್ಲಿ ಸಾಧ್ಯವಾಗಿದೆ.

NIOS ನ ವಿವಿಧ ಕಾರ್ಯಭಾರಗಳನ್ನು, ಚಟುವಟಿಕೆಗಳನ್ನು ಪರಿಶೀಲಿಸುವುದಕ್ಕೆ ಮುನ್ನ ಮುಕ್ತಶಾಲಾ ಶಿಕ್ಷಣ ಮತ್ತು ದೂರಶಿಕ್ಷಣ ಎಂಬ ಎರಡು ಪದಗಳ ಅರ್ಥವನ್ನು ಸ್ಪಷ್ಟಗೊಳಿಸುವುದರಿಂದ ಇವುಗಳ ಪರಿಕಲ್ಪನೆಗಳಲ್ಲಿ ಸ್ಪಷ್ಟತೆ ಇರುತ್ತದೆ. ಸಾಮಾನ್ಯವಾಗಿ ಸಾಹಿತ್ಯದಲ್ಲಿ ಹಾಗೂ ಸಾಮಾನ್ಯ ರೂಢಿಯ ಮಾತಿನಲ್ಲಿ ಈ ಎರಡು ಪದಗಳನ್ನು ಅದಲು ಬದಲಾಗಿ ಬಳಸಲಾಗುತ್ತದೆ. ಆದರೂ ಈ ಎರಡು ಪದಗಳ ನಡುವೆ ಕೆಲವು ವ್ಯತ್ಯಾಸಗಳಿವೆ. ಮುಕ್ತ ಶಾಲಾಶಿಕ್ಷಣ ಎಂಬ ಪದವು ಇಲ್ಲಿ ವ್ಯವಸ್ಥೆಯು ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯ ಕಾಲ, ಸ್ಥಳ, ಕಲಿಕೆಯ ವೇಗ, ಮೊದಲಾದ ಅತಿಯಾದ ನಿಯಮ ನಿಷ್ಠೆಗಳಿಂದ ಮುಕ್ತವಾಗಿರುತ್ತದೆ. ಇದು (1) ಶಾಲೆಗೆ ಸೇರುವ ವಯಸ್ಸು, ಕಲಿಯುವವನ ಆಯ್ಕೆ ಮತ್ತು ಆಸಕ್ತಿಗಳಿಗೆ ಅನುಗುಣವಾದ ವಿಷಯಗಳನ್ನು ಆರಿಸಿಕೊಳ್ಳುವುದು, ಕಲಿಕಾರ್ಥಿಯ ಅನುಕೂಲಕ್ಕೆ ತಕ್ಕಂತೆ ಪರೀಕ್ಷೆಗೆ ಕುಳಿತುಕೊಳ್ಳುವ ಸ್ವಾಯತ್ತತೆ, (2) ಕಲಿಯುವುದಕ್ಕೆ ಸ್ವಾತಂತ್ರ್ಯದ ಉತ್ತೇಜನ (3) ಶೈಕ್ಷಣಿಕ ಮಾಧ್ಯಮದ ಮತ್ತು (4) ಪ್ರವೇಶ, ಅರ್ಹತೆ, ವಿಷಯಗಳ ಆಯ್ಕೆಯ ಅವಕಾಶ ಮತ್ತು ಅಧ್ಯಯನದ ಒಟ್ಟು ಕಾಲಾವಧಿ ಇವುಗಳಲ್ಲಿ ಮುಕ್ತತೆ ಇವುಗಳನ್ನು ಒದಗಿಸುತ್ತದೆ. ಮುಕ್ತ ಶಾಲಾಶಿಕ್ಷಣವು ದೂರವಿಧಾನದಲ್ಲಿ ಪಠನ, ವಾಚನಗಳನ್ನು ನೀಡುವಿಕೆಯನ್ನು ಉಪಯೋಗಿಸಲೂಬಹುದು, ಉಪಯೋಗಿಸದೆಯೂ ಇರಬಹುದು.

ಆದರೆ ದೂರ ಶಿಕ್ಷಣವು ಕಲಿಯುವವನ ಮತ್ತು ಶಿಕ್ಷಕನ ನಡುವೆ ಇರುವ ಭೌಗೋಳಿಕ ದೂರಕ್ಕೆ ಸಂಬಂಧಿಸಿದೆ. ಇಲ್ಲಿ ಕಲಿಕೆಯ ಮುಖ್ಯ ಸಾಧನಗಳೆಂದರೆ ಬಹುಮಾಧ್ಯಮಗಳಿಂದ ಕೂಡಿರುವ ಅಥವಾ ಅವು ಇಲ್ಲದಿರುವ ಸ್ವಶಿಕ್ಷಣದ ಕಲಿಕಾ ಸಾಮಗ್ರಿಗಳು (ಬೋರ್ಜ್ ಹೋಮ್ ಬೆರ್ಗ್ 1981). ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ನೇರ ಸಂಪರ್ಕ ಹೊಂದದೆ ಶಿಕ್ಷಣವನ್ನು ನೀಡುವ ವಿಧಾನ ಇದಾಗಿದೆ. ದೂರ ಶಿಕ್ಷಣದ ಮತ್ತಿತರ ಕೆಲವು ನಿರ್ದಿಷ್ಟ ಲಕ್ಷಣಗಳೆಂದರೆ ವಿದ್ಯಾರ್ಥಿ ಒತ್ತಾಸೆಯ ಸೇವೆಗಳು: ವಿದ್ಯಾರ್ಥಿ ಮತ್ತು ಸಂಸ್ಥೆಯು ಸಂಪರ್ಕ ಅಧಿವೇಶನದ ಮೂಲಕ ಒದಗಿಸುವ ದ್ವಿಮುಖ ಸಂವಹನ, ಶಿಕ್ಷಕರು ಗುರುತಿಸಿದ ನಿಗದಿತ ಕಾರ್ಯಗಳು (TMA), ವಿದ್ಯುನ್ಮಾನ ಮಾಧ್ಯಮದ ಉಪಯೋಗ ಮತ್ತು ವಿದ್ಯಾರ್ಥಿ ಕೇಳುವ ವಿಚಾರಗಳಿಗೆ ವಿಳಂಬವಿಲ್ಲದ ಪ್ರತಿಕ್ರಿಯೆ. ಆದರೂ ಈ ಎರಡರ ನಡುವಿನ ವ್ಯತ್ಯಾಸವನ್ನು ತುಂಬಾ ಒತ್ತಿ ಹೇಳಬೇಕಾಗಿಲ್ಲ. ಏಕೆಂದರೆ ಭಾರತದಲ್ಲಿ ಬಹುತೇಕ ಎಲ್ಲ ಮುಕ್ತಶಾಲೆಗಳು ದೂರಶಿಕ್ಷಣ ವಿಧಾನವನ್ನು ಅನುಸರಿಸುತ್ತಿವೆ.

ಭಾರತದಲ್ಲಿ NIOS ಎರಡು ವಿಧಾನಗಳನ್ನು ಸಂಯೋಜಿಸಿದೆ. ಕಲಿಕೆಯ ಪ್ರಕ್ರಿಯೆಯ ಪ್ರಮುಖ ಅಂಗಗಳು ಸ್ವಕಲಿಕೆಯ ಮಾಡ್ಯೂಲ್‌ಗಳ ನಿರ್ಣಾಯಕ ಅಂಶಗಳನ್ನು, ಬಹುಮಾಧ್ಯಮ ಪ್ಯಾಕೇಜ್ ಅನ್ನು, ವೈಯಕ್ತಿಕ ಸಂಪರ್ಕ ಕಾರ್ಯಕ್ರಮಗಳನ್ನು (PCPs), ಶಿಕ್ಷಕರು ಗುರುತಿಸಿದ ನಿಗದಿತ ಕಾರ್ಯಗಳನ್ನು ಸೇರಿದ ವಿದ್ಯಾರ್ಥಿ ಸೇವೆಗಳನ್ನು ಒಳಗೊಂಡಿದೆ. ಈ ದೃಷ್ಟಿಕೋನದಿಂದ ನೋಡಿದಾಗ ಅಂಚೆ ತೆರಪಿನ ಶಿಕ್ಷಣದ ಪರಿಕಲ್ಪನೆಯು ಮುಕ್ತಶಾಲಾಶಿಕ್ಷಣ ದೂರಶಿಕ್ಷಣದಿಂದ ಬಹಳ ಭಿನ್ನವಾಗಿದೆ. ಇದು ಮುಖ್ಯವಾಗಿ ಮುದ್ರಣ ಮಾಧ್ಯಮವಾಗಿದ್ದು ಕಲಿಯುವವರನ್ನು ಸಾಂಪ್ರದಾಯಿಕ ಪಬ್ಲಿಕ್ ಪರೀಕ್ಷೆಗೆ ಸಿದ್ಧಪಡಿಸುವ ಸಾಂಪ್ರದಾಯಿಕ ಶಿಕ್ಷಣದ ಒಂದು ಭಾಗವೇ ಆಗಿದೆ.

NIOS ವಿಭಿನ್ನ ಹಿನ್ನೆಲೆಯ ಹಾಗೂ ಶೈಕ್ಷಣಿಕ ಮಟ್ಟಗಳ ವಿದ್ಯಾರ್ಥಿಗಳ ಬಹುದೊಡ್ಡ ಸಮೂಹವನ್ನು ಹೊಂದಿದೆ. ಇವರು ರಾಷ್ಟ್ರದ ಒಳಗಿನ ಹಾಗೂ ಹೊರಗಿನ ವಿಶಾಲವಾದ ಭೌಗೋಳಿಕ ಕ್ಷೇತ್ರಗಳಲ್ಲಿ ಹರಡಿಕೊಂಡಿದ್ದಾರೆ. ಆದ್ದರಿಂದ ಇದು ಪ್ರಪಂಚದ ಅತ್ಯಂತ ದೊಡ್ಡ ಮುಕ್ತ ಶಾಲಾಶಿಕ್ಷಣ ವ್ಯವಸ್ಥೆ ಎಂಬುದಾಗಿ ಗುರುತಿಸಿಕೊಂಡಿರುವ ಹೆಗ್ಗಳಿಕೆಯನ್ನು ಪಡೆದಿದೆ. ಇದಕ್ಕೆ ದೂರಶಿಕ್ಷಣದಲ್ಲಿನ ಸಾಧನೆಗಾಗಿ Common Wealth of Learning Award for Institutional Achievement in Distance Education ಎಂಬ ಪ್ರಶಸ್ತಿ ದೊರಕಿದೆ. ಈ ಪ್ರಶಸ್ತಿಯನ್ನು 4 ಮಾರ್ಚ್ 1999ರಲ್ಲಿ ಬ್ರುನೈನ ಡರುಸ್ಸಲಾಮ್‌ನಲ್ಲಿ ಮುಕ್ತಕಲಿಕೆಯ Pan Common Weath Forumನಲ್ಲಿ ಪ್ರದಾನ ಮಾಡಲಾಯಿತು. ಈಗ ಇದು ಸುಮಾರು ಏಳು ಲಕ್ಷ ವಿದ್ಯಾರ್ಥಿಗಳಿಗೆ ಶಿಕ್ಷಣದ ಸಂಪನ್ಮೂಲಗಳನ್ನು ದೊರಕಿಸಿಕೊಡುತ್ತದೆ. ಈ ವಿದ್ಯಾರ್ಥಿಗಳನ್ನು ಭಾರತದ ಬಹುತೇಕ ಎಲ್ಲ ಭಾಗಗಳಲ್ಲೂ ಮಧ್ಯ ಪೂರ್ವ ರಾಷ್ಟ್ರಗಳಲ್ಲೂ ನೇಪಾಳ ಮತ್ತು ಕೆನಡಾ ಹಾಗೂ ಯುನೈಟೆಡ್ ಸ್ಟೇಟ್ಸ್‌ಗಳಲ್ಲಿ ಅಲ್ಲಲ್ಲಿ ಚದುರಿ ಹೋದ ಭಾರತೀಯರ ಗುಂಪುಗಳಲ್ಲಿ

Digitised by Bharatavani, CIIL

ಕಾಣಬಹುದು.

**NIOSಗಳ ಪಾತ್ರ ಮತ್ತು ಉದ್ದೇಶಗಳು**

ಅಕ್ಟೋಬರ್ 1990ರಲ್ಲಿ ಭಾರತ ಸರ್ಕಾರದ ಒಂದು ನಿರ್ಣಯದಿಂದ NIOSಗೆ ತನ್ನೊಂದಿಗೆ ನೋದಾಯಿಸಿಕೊಂಡಿರುವ ವಿದ್ಯಾರ್ಥಿಗಳನ್ನು ಅವರ ಪದವಿ ಪೂರ್ವ ಹಂತದವರೆಗಿನ ಕೋರ್ಸ್‌ಗಳನ್ನು ಪರೀಕ್ಷಿಸುವ ಹಾಗೂ ಕಾನೂನು ಸಮ್ಮತವಾದ ರೀತಿಯಲ್ಲಿ ಪ್ರಮಾಣೀಕರಿಸುವ ಅಧಿಕಾರವನ್ನು ನೀಡಲಾಗಿದೆ. ಇದನ್ನು ಅಧಿಕ ಸಮಾನತೆ ಹಾಗೂ ಸಾಮಾಜಿಕ ನ್ಯಾಯಗಳ ಆಧಾರದ ಮೇಲೆ ಎಲ್ಲರಿಗೂ ಶಿಕ್ಷಣವನ್ನು ನೀಡಬೇಕೆಂಬ ಉದ್ದೇಶದಿಂದ ನೀಡಲಾಗಿದೆ. ಇದು ಮುಕ್ತಶಿಕ್ಷಣಶಾಲೆಯಲ್ಲಿ ಮೂರು ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತದೆ: (i) ವಿದ್ಯಾರ್ಥಿಗಳ ದಾಖಲಾತಿ (ii) ಪಠ್ಯಕ್ರಮವನ್ನು ವಿಕಾಸಗೊಳಿಸುವುದು ಮತ್ತು ಸ್ವ-ಕಲಿಕೆಯ ಸಾಮಗ್ರಿಗಳನ್ನು ಮಾಡ್ಯುಲರ್ ರೂಪದಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸುವುದು ಮತ್ತು (iii) ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಿ ಮುಕ್ತ ಶಾಲಾ ಶಿಕ್ಷಣದ ಪ್ರಮಾಣ ಪತ್ರ ನೀಡುವುದು. ಮುಕ್ತಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆ (NIOS)ಯ ಉದ್ದೇಶಗಳು ಇಂತಿವೆ: (i) ಮುಂದುವರಿಕೆಯ ಹಾಗೂ ಅಭಿವೃದ್ಧಿಯ ಶಿಕ್ಷಣಕ್ಕೆ ಅವಕಾಶಗಳನ್ನು ಒದಗಿಸುವುದು (ii) ಸಲಹಾ ಸೇವೆಯನ್ನು ಒದಗಿಸುವುದು (iii) ದೂರಶಿಕ್ಷಣ ಮತ್ತು ಮುಕ್ತ ಕಲಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಸಮರ್ಪಕವಾಗಿ ವಿತರಿಸುವ ಮಾಧ್ಯಮವಾಗಿ (iv) ದೂರಶಿಕ್ಷಣ ವ್ಯವಸ್ಥೆಯಲ್ಲಿನ ಕಲಿಕೆಯ ಗುಣಮಟ್ಟವನ್ನು ಮತ್ತು ಪ್ರಮಾಣಕವನ್ನು ಗುರುತಿಸುವುದು ಹಾಗೂ ಉತ್ತೇಜಿಸುವುದು ಮತ್ತು (v) ಪರ್ಯಾಯ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ದೂರಕಲಿಕೆ ಶಿಕ್ಷಣವಿಧಾನವನ್ನು ಉಪಯೋಗಿಸುವುದನ್ನು ಪ್ರೋತ್ಸಾಹಿಸುವುದು.

ಮುಕ್ತ ಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆಯು ಗ್ರಾಮೀಣ ಯುವಕರು, ನಗರ ಪ್ರದೇಶಗಳ ಬಡವರು, ಹೆಣ್ಣು ಮಕ್ಕಳು ಹಾಗೂ ಮಹಿಳೆಯರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳವರು, ಹಿಂದುಳಿದ ವರ್ಗದವರು, ವೈಲಕ್ಷಣ್ಯವಾಗಿ ಸಮರ್ಥರಾದ ಮಕ್ಕಳು ಮತ್ತು ಮಾಜಿ ಸೈನಿಕರು – ಇವರನ್ನು ಒಳಗೊಂಡ ಶಾಲೆ ತೊರೆದ ಮತ್ತು ಅಮುಖ್ಯರಾಗಿರುವ ಗುಂಪಿಗೆ ಮೊದಲ ಪ್ರಾಮುಖ್ಯತೆ ನೀಡುತ್ತದೆ. ಪ್ರಸಕ್ತ ಶಿಕ್ಷಣದ ಎಲ್ಲ ಹಂತಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಅಗಾಧ ಏರಿಕೆಯಾಗಿದೆ. ಇದರಲ್ಲಿನ ವೈಶಿಷ್ಟ್ಯ ಸೂಚಕ ಲಕ್ಷಣವೆಂದರೆ ಇದು ಶಿಕ್ಷಣವನ್ನು ಮುಂದುವರೆಸಲು ಆಧುನಿಕ ಸಂವಹನಕ್ರಮವನ್ನು ಉಪಯೋಗಿಸುವ ಅವಕಾಶವನ್ನು ಒದಗಿಸುತ್ತದೆ ಹಾಗೂ ಪ್ರವೇಶ ಹಂತದಲ್ಲಿ ವಯಸ್ಸಿನ ಯಾವ ಮಿತಿಯೂ ಇಲ್ಲ.

ದಶಕಗಳ ಕಾಲದ ಅರ್ಪಣಾತ್ಮಕ ಸೇವೆಯನ್ನು ಸಲ್ಲಿಸಿದ ನಂತರ NIOSನ ಕೆಲವು ಲಕ್ಷಣಗಳು ಹೊರಮೂಡಿದ್ದು ಅವುಗಳಲ್ಲಿ ನಿರ್ದಿಷ್ಟವಾಗಿ ಎದ್ದು ಕಾಣುವ ಕೆಲವು ಲಕ್ಷಣಗಳು ಇಂತಿವೆ. ಐದು ವರ್ಷಗಳ ಅವಧಿಯವರೆಗೆ ಕ್ರೆಡಿಟ್‌ಗಳನ್ನು ಕೂಡಿಡುವ ಸೌಲಭ್ಯವಿದ್ದು ಪರೀಕ್ಷೆಗೆ ಕುಳಿತುಕೊಳ್ಳಲು ಒಂಬತ್ತು ಅವಕಾಶಗಳು ಇರುತ್ತವೆ. ಈ ಅವಧಿಯಲ್ಲಿ TMAಗಳ ಮೂಲಕ ನಿರಂತರ ಮೌಲ್ಯಮಾಪನಕ್ಕೆ ಹಾಗೂ ವೈಯಕ್ತಿಕ ಸಂಪರ್ಕ ಕಾರ್ಯಕ್ರಮಗಳ ಮೂಲಕ ಕಲಿಕೆಗೆ ನೆರವನ್ನು ಪಡೆಯುವ ಅವಕಾಶವೂ ಇರುತ್ತದೆ. ಸಂಸ್ಥೆಯು CBSE, ರಾಜ್ಯ ಶಿಕ್ಷಣ ಬೋರ್ಡ್ ಮತ್ತು ರಾಜ್ಯದ ಮುಕ್ತ ಶಾಲಾ ವಿದ್ಯಾರ್ಥಿಗಳಿಗೆ ಕ್ರೆಡಿಟ್‌ಗಳನ್ನು ವರ್ಗಾಯಿಸಲೂ ಅನುವು ಮಾಡಿಕೊಡುತ್ತದೆ.

**ಒದಗಿಸಲಾದ ವ್ಯಾಸಂಗ ಮಾಲೆ ಅಥವಾ ಕೋರ್ಸ್‌ಗಳು**

NIOS ತನ್ನ ಆಧಾರಭೂತ ಶಿಕ್ಷಣ, ಫೌಂಡೇಷನ್, ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಕೋರ್ಸ್‌ಗಳ ಮೂಲಕ ಆಸಕ್ತಿ ಇರುವ ಕಲಿಕಾರ್ಥಿಗಳಿಗೆ ಮುಂದುವರಿಕೆಯ ಶಿಕ್ಷಣವನ್ನು ಒದಗಿರುತ್ತದೆ. ಫೌಂಡೇಷನ್ ಕೋರ್ಸ್‌ಗಳ ಮತ್ತು ಮುಕ್ತ ಆಧಾರಭೂತ ಶಿಕ್ಷಣ, (OBE-Elementory) ಮತ್ತು OBEE (ವಯಸ್ಕ) ಗಳು ಆಧಾರಭೂತ ಶಿಕ್ಷಣ ಕೋರ್ಸ್‌ನಲ್ಲಿ ಸೇರಿವೆ.

ಎಲಿಮೆಂಟರಿ ಮಟ್ಟದ ಫೌಂಡೇಷನ್ ಕೋರ್ಸ್‌ಗಳು ಸೈದ್ಧಾಂತಿಕವಾಗಿ ತರಗತಿ VIII ಕ್ಕೆ ಸಮವಾಗಿವೆ. ಸೆಕೆಂಡರಿ ಶಿಕ್ಷಣಕ್ಕೆ ಪೂರ್ವಭಾವಿಯಾದ ಅಧಿಕೃತವಾದ ಹಾಗೂ ಆಧಾರಮಟ್ಟದ ಸಾಮರ್ಥ್ಯಗಳನ್ನು ಗಳಿಸಲು ಕಲಿಕಾರ್ಥಿಗೆ ಇದು ನೆರವಾಗಿರುತ್ತದೆ.

ಮುಟ್ಟದೇ ಇರುವುದನ್ನು ಮುಟ್ಟುವ ಹಾದಿಯಲ್ಲಿ OBEE ಕಾರ್ಯಕ್ರಮವು ಮೂರು ಹಂತಗಳ ಶಿಕ್ಷಣವನ್ನು ಒಳಗೊಂಡಿರುತ್ತದೆ. ಅಂದರೆ A, B ಮತ್ತು C ಮಟ್ಟ. ಇವು ಕ್ರಮವಾಗಿ ಸಾಂಪ್ರದಾಯಿಕ ಶಾಲೆಯ III, V ಮತ್ತು VIIIನೇ ತರಗತಿಗಳಿಗೆ ಸಮನಾಗಿರುತ್ತವೆ. ಈ ಕೋರ್ಸ್ ಪಠ್ಯ ವಿಷಯಗಳಾದ ಭಾಷೆ, ಗಣಿತ, ಪರಿಸರ ಅಭ್ಯಾಸ ಮತ್ತು ಆರೋಗ್ಯ ಹಾಗೂ ಉತ್ಪಾದಕ ಜೀವನ (APHL)ಗಳನ್ನು ಒಳಗೊಂಡಿರುತ್ತದೆ. APHLನಲ್ಲಿ ಆರೋಗ್ಯ, ನೈರ್ಮಲ್ಯ ಶಾಸ್ತ್ರ, ದೈಹಿಕ ಶಿಕ್ಷಣ, ಕಲೆ ಮತ್ತು ಕಾರ್ಯಾನುಭವ ಚಟುವಟಿಕೆಗಳು ಸೇರಿವೆ. ಇಲ್ಲಿನ ಸಂಪೂರ್ಣ ಕೋರ್ಸ್, ಅದರಲ್ಲೂ ಮುಖ್ಯವಾಗಿ A ಮತ್ತು B ಮಟ್ಟಗಳು ಸಮಗ್ರವಾದ ಕಲಿಕಾ ಕಂತೆ ಅಥವಾ ಪ್ಯಾಕೇಜ್ ರೂಪದಲ್ಲಿ ನೀಡಲ್ಪಡುತ್ತವೆ. ಶೈಕ್ಷಣಿಕ ಮತ್ತು ವೃತ್ತಿಪೂರ್ವ ಕೋರ್ಸ್‌ಗಳು ಮಗುವಿನೊಟ್ಟಿಗೆ ಸಹಜವಾದ ರೀತಿಯಲ್ಲಿ ಮಿಳಿತವಾಗಿದ್ದು ಇಲ್ಲಿ ಪರಿಸರವೇ ಸಮಗ್ರತೆಯ ಪ್ರಧಾನ ಬಿಂದುವಾಗಿರುತ್ತದೆ.

NIOS ತನ್ನ OBE ಕಾರ್ಯಕ್ರಮಗಳ ಮೂಲಕ ಹೆಚ್ಚಿನ ಸಂಖ್ಯೆಯ ಹೆಣ್ಣುಮಕ್ಕಳಿಗೆ ಅವರು ತಮಗೆ ಅನುಕೂಲವಾದ ಕಾಲದಲ್ಲಿ ತಮ್ಮ ಸ್ವಂತ ಸ್ಥಳಗಳಲ್ಲಿಯೇ ಇದ್ದುಕೊಂಡು ತಮ್ಮ ದೈನಂದಿನ ಚಟುವಟಿಕೆಗಳ ಛಂದೋಬದ್ಧತೆಯಲ್ಲಿ ಯಾವ ವ್ಯತ್ಯಾಸವನ್ನು ಮಾಡದೆ ತಮ್ಮ ಶೈಕ್ಷಣಿಕ ಪ್ರಯತ್ನಗಳನ್ನು ಮುಂದುವರೆಸಿಕೊಂಡು ಹೋಗಲು ಅವಕಾಶಗಳನ್ನು ಒದಗಿಸುವ ಮೂಲಕ ಒಂದು ಮಹತ್ವಪೂರ್ಣ ಪಾತ್ರವನ್ನು ವಹಿಸಿವೆ.

ಎಲಿಮೆಂಟರಿ ಮಟ್ಟದಲ್ಲಿ ಅಭಿವೃದ್ಧಿ ಆಧಾರಿತ ಶೈಕ್ಷಣಿಕ

Digitised by Bharatavani, CIIL

ಕಾರ್ಯಕ್ರಮಗಳ ಹಾಗೂ ಭಾರತದಲ್ಲಿ ಸಾಕ್ಷರತಾ ಚಳುವಳಿಗಳ ಕ್ಷೇತ್ರದಲ್ಲಿ ಸಂಪದ್ಭರಿತವಾದ ಹಾಗೂ ದೀರ್ಘಕಾಲದ ಅನುಭವವನ್ನು ಪಡೆದಿರುವ ಸರ್ಕಾರೇತರ ಸಂಸ್ಥೆ (NGO)ಗಳೊಡನೆ ಅತಿ ಸಮೀಪದ ಪಾಲುದಾರಿಕೆಯನ್ನು ಹೊಂದಿರುವುದು ಮುಕ್ತ ಮೂಲಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಒಂದು ಮಹತ್ವಪೂರ್ಣ ಬೆಳವಣಿಗೆ. "ಎಲ್ಲರಿಗೂ ಶಿಕ್ಷಣ" ಚಳವಳಿಯಲ್ಲಿ ಕೈಜೋಡಿಸಿ ಕೆಲಸ ಮಾಡಿದ 165ರಷ್ಟು ಹೆಸರುವಾಸಿ NGO ಗಳಿಗೆ ವಿಶ್ವಾಸಪತ್ರವನ್ನು ನೀಡಿರುವುದು ವಾಸ್ತವವಾಗಿ NIOS ನ ಒಂದು ಅತಿ ಮಹತ್ವದ ಕಾರ್ಯವಾಗಿದೆ. ಅದರಲ್ಲೂ ಈ NGOಗಳು ವಿಶೇಷವಾಗಿ ಅಲಕ್ಷಿಸಲ್ಪಟ್ಟ ಮಕ್ಕಳ ಮತ್ತು ಯುವಕರ ಗುಂಪುಗಳೊಂದಿಗೆ ಕೆಲಸ ಮಾಡಿವೆ. ವಿಶ್ವಾಸಾರ್ಹವಾದ ಈ ಸರ್ಕಾರೇತರ ಸಂಸ್ಥೆಗಳ ಅಪಾರವಾದ ಸಹಾಯದಿಂದ ರಾಷ್ಟ್ರದ ಎಲ್ಲೆಡೆ ಹಾಗೂ ರಾಷ್ಟ್ರದ ಹೊರಗೂ ಹರಡಿರುವ ವ್ಯಾಸಂಗ ಕೇಂದ್ರಗಳ ವಿಶಾಲವಾದ ಜಾಲದ ನೆರವಿನಿಂದ ಬಾಲಕ-ಬಾಲಿಕೆಯರ ಸುಮಾರು 4,00,000 ಆದ್ಯತಾ ಗುಂಪುಗಳಿಗೆ ಎಲಿಮೆಂಟರಿ ಹಂತದಲ್ಲಿ NIOS ತನ್ನ ಸಹಾಯ ಹಸ್ತವನ್ನು ಚಾಚಲು ಸಾಧ್ಯವಾಗಿದೆ. ಅತ್ಯುತ್ತಮ ಸೇವಾ ಚರಿತ್ರೆಯನ್ನು ಹೊಂದಿರುವ ಇನ್ನು ಅನೇಕ ಸರ್ಕಾರೇತರ ಸಂಸ್ಥೆಗಳು NIOS ನಿಂದ ವಿಶ್ವಾಸ ಪತ್ರ ಪಡೆಯುವ ಹಾದಿಯಲ್ಲಿವೆ-

NIOS ನ ವಯಸ್ಕರಿಗಾಗಿನ ಮುಕ್ತ ಮೂಲಶಿಕ್ಷಣದ ಕೆಲವು ಮಹತ್ವದ ವಿಷಯಗಳು ಇಂತಿವೆ:

- ಸಮಾನತೆಗಾಗಿ ಮೌಲ್ಯಮಾಪನ ಮಾನಕಗಳನ್ನು ಸ್ಥಾಪಿಸುವಲ್ಲಿ NGOಗಳೊಡನೆ ಸಹಭಾಗಿತ್ವ.
- "ಉತ್ತಮ ಮೂಲಗಳು" ಎಂಬುದನ್ನು ಕೇಂದ್ರೀಯ ವಿಷಯವನ್ನಾಗಿ ಇರಿಸಿಕೊಂಡ ಆದರ್ಶ ಸಾಮಗ್ರಿಯನ್ನು ವೃದ್ಧಿಗೊಳಿಸುವುದು.
- ಮಗುವಿನ ವ್ಯಕ್ತಿತ್ವವನ್ನು ಮತ್ತು ಅದರ ಮೌಲ್ಯಗಳನ್ನು ಬೆಳೆಸುವಲ್ಲಿ ಹಾಗೂ ಅವರ ಪಾತ್ರಗಳನ್ನು ಅರ್ಥ ಮಾಡಿಕೊಳ್ಳುವಂತೆ ಮಾಡುವಲ್ಲಿ ಹೆತ್ತವರು ಅತ್ಯಂತ ವರ್ಚಸ್ವಿಯಾದ ಮೂಲಗಳೆಂಬುದನ್ನು ಗುರುತಿಸುವುದು.
- ಬೋಧನಾ ವಿಷಯಗಳಲ್ಲಿ ಹಿಂದಿ, ಇಂಗ್ಲೀಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳು ಸೇರಿವೆ ಎಂಬುದು,
- ಬೋಧನಾ ಸಾಮಗ್ರಿಗಳು ಕನಿಷ್ಠ ಕಲಿಕೆಯ ಮಟ್ಟಗಳನ್ನು ಆಧರಿಸಿದ್ದು ಶಾಲಾಶಿಕ್ಷಣ ವ್ಯವಸ್ಥೆಯ ಪ್ರಮಾಣಕಗಳಿಗೆ ಹೋಲಿಸುವಂತೆ ಇರಬೇಕು ಎಂಬುದು.

ಅನೌಪಚಾರಿಕ ಶಿಕ್ಷಣ ವ್ಯವಸ್ಥೆ ಹಾಗೂ ಸಾಂಪ್ರದಾಯಿಕ ಪ್ರಾಥಮಿಕ ಶಾಲೆಗಳಿಂದ ಮಧ್ಯದಲ್ಲಿಯೇ ಹೊರಬಂದವರಲ್ಲದೆ ಈ ಕಾರ್ಯಕ್ರಮವು ರಾಷ್ಟ್ರದಲ್ಲಿರುವ ಸುಮಾರು ಮೂರು ದಶಲಕ್ಷ ನವಸಾಕ್ಷರರನ್ನು ತನ್ನ ಗುರಿಯ ಗುಂಪಿನಲ್ಲಿ ಸೇರಿಸಿಕೊಂಡಿದೆ.

**ನೀಡಲಾದ ವಿಷಯಗಳಲ್ಲಿ ಆಯ್ಕೆಮಾಡಿಕೊಳ್ಳಲು ವಿಶಾಲವಾದ ವಿವಿಧತೆ ಹಾಗೂ ನಮ್ಯತೆ**

NIOS ವಿವಿಧ ಮಟ್ಟಗಳಲ್ಲಿ ವಿವಿಧ ಬಗೆಯ ಕೋರ್ಸ್‌ಗಳನ್ನು ಪ್ರಸ್ತಾಪಿಸಿದೆ. ಉಪಾಹಾರ ಗೃಹದ ಅನುಸಂಧಾನದಲ್ಲಿ ಇರುವಂತೆ ಕಲಿಯುವವರಿಗೆ ಸೆಕೆಂಡರಿ ಹಂತದ ವಿಶಾಲ ವ್ಯಾಪ್ತಿಯ ಶೈಕ್ಷಣಿಕ ಕೋರ್ಸ್‌ಗಳನ್ನು ಸೂಚಿಸಲಾಗುತ್ತದೆ. ಅವನು/ಅವಳು ಒಂದು ಭಾಷೆಯನ್ನು ಸೇರಿಸಿದಂತೆ ಈ ವಿಷಯಗಳಲ್ಲಿ ಒಟ್ಟು ಐದು ವಿಷಯಗಳನ್ನು ಆರಿಸಿ ಆಯ್ಕೆ ಮಾಡಿಕೊಳ್ಳಬಹುದು. ಈ ಐದು ವಿಷಯಗಳ ಜೊತೆಗೆ ತಾನು ಅಪೇಕ್ಷಿಸಿದರೆ ಮತ್ತೊಂದು ವಿಷಯವನ್ನು ಆರಿಸಿಕೊಳ್ಳಬಹುದು. ಈ ಆರನೆ ವಿಷಯವು ಒಂದು ಭಾಷೆಯೂ ಆಗಿರಬಹುದು ಭಾರತವು ಬಹುಭಾಷಾ ಹಿನ್ನೆಲೆಯ ರಾಷ್ಟ್ರವಾಗಿದೆ. ಕ್ಲಾಸ್ X ಗೆ ಸಮನಾಗಿರುವ ಸೆಕೆಂಡರಿ ಶಿಕ್ಷಣ ಹಂತದಲ್ಲಿ 12 ಭಾಷೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದಾದ ಹೆಚ್ಚಿನ ಅವಕಾಶವನ್ನು NIOS ಒದಗಿಸಿದೆ. NIOS ನ ಕೋರ್ಸ್‌ಗಳ ಮತ್ತೊಂದು ಎದ್ದು ಕಾಣುವ ಲಕ್ಷಣವೆಂದರೆ ಕಲಿಯುವವರು ತಮ್ಮ ಆಯ್ಕೆಯ, ಆಸಕ್ತಿಕ್ಷೇತ್ರದ ಹಾಗೂ ಭವಿಷ್ಯದ ಯೋಜನೆಗೆ ಸೂಕ್ತವಾದಂತಹ ವಿಷಯಗಳ ವಿವಿಧ ಬಗೆಯ ಸಂಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಲು ಸಂಪೂರ್ಣ ಸ್ವತಂತ್ರರಾಗಿರುತ್ತಾರೆ. ಸೆಕೆಂಡರಿ ಕೋರ್ಸ್‌ನಲ್ಲಿ ವ್ಯಕ್ತಿಯು ವಿಜ್ಞಾನ ಮತ್ತು ಉದ್ಯೋಗ ಅಭ್ಯಾಸಗಳನ್ನು ಒಟ್ಟಿಗೆ ಆರಿಸಿಕೊಳ್ಳಲು ಸ್ವತಂತ್ರನಾಗಿರುತ್ತಾನೆ. ಸೀನಿಯರ್ ಸೆಕೆಂಡರಿ ಕೋರ್ಸ್‌ನಲ್ಲಿ ಕಲಿಯುವವನು ಚರಿತ್ರೆ, ರಸಾಯನ ಶಾಸ್ತ್ರ ಮತ್ತು ಅಕೌಂಟೆನ್ಸಿಗಳನ್ನು ಆರಿಸಿಕೊಳ್ಳಬಹುದು. ಭಾಷೆಯೊಂದನ್ನು ಬಿಟ್ಟು ಇತರ ಯಾವ ವಿಷಯವೂ ಕಡ್ಡಾಯವಾಗಿಲ್ಲದೆ ಇರುವುದರಿಂದ ಕಲಿಯುವವನು ತನ್ನ ಸ್ವಂತ ಅಗತ್ಯಗಳಿಗೆ ಮತ್ತು ಗುರಿಗಳಿಗೆ ಅನುಗುಣವಾಗಿ ವಿಷಯಗಳನ್ನು ಆರಿಸಿಕೊಳ್ಳಬಹುದು.

ಶೈಕ್ಷಣಿಕ ಕೋರ್ಸ್‌ಗಳ ಜೊತೆಗೆ ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಹಂತಗಳಲ್ಲಿ ವೃತ್ತಿಪರ ವಿಷಯಗಳನ್ನು, ಶೈಕ್ಷಣಿಕ ವಿಷಯಗಳನ್ನು ಆರಿಸಿಕೊಳ್ಳುವ ಅವಕಾಶವನ್ನು NIOS ಒದಗಿಸುತ್ತದೆ. ವೃತ್ತಿಪರ ಕೋರ್ಸ್‌ಗಳು ಶೈಕ್ಷಣಿಕ ಕೋರ್ಸ್‌ಗಳೊಂದಿಗೆ ಸೇರುವುದರಿಂದ ಕಲಿಯುವವನು ಇವೆರಡನ್ನು ಅಥವಾ ಈ ಎರಡರಲ್ಲಿ ಯಾವುದಾದರೂ ಒಂದನ್ನು ಮುಂದುವರೆಸಿಕೊಂಡು ಹೋಗುವ ಆಯ್ಕೆ ಇರುತ್ತದೆ.

ಮುಕ್ತ ಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆಯ ವೃತ್ತಿಶಿಕ್ಷಣದ ಕಾರ್ಯಕ್ರಮದ ಉದ್ದೇಶವು ಕಲಿಯುವವನಿಗೆ ಅಗತ್ಯವಾಗಿ ಬೇಕಾದ ವೃತ್ತಿಕೌಶಲಗಳನ್ನು ತಾಂತ್ರಿಕಜ್ಞಾನವನ್ನು ಬೆಳೆಸುವ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವುದನ್ನು ಖಾತ್ರಿಮಾಡಿಕೊಳ್ಳುವುದು ಮತ್ತು ತನ್ಮೂಲಕ ಅವನು ತನ್ನ ಸ್ವಂತ ಉದ್ಯೋಗವನ್ನು ನಡೆಸಿಕೊಂಡು ಹೋಗುವ ಸಾಮರ್ಥ್ಯವನ್ನು ಪಡೆದ ವಾಣಿಜ್ಯೋದ್ಯಮಿಯನ್ನಾಗಿ ಮಾಡುವುದೇ ಆಗಿದೆ. ವೃತ್ತಿಶಿಕ್ಷಣ ಕಾರ್ಯಕ್ರಮಗಳ ಪ್ರಾಧಾನ್ಯವೆಂದರೆ ಕುಶಲರಾದ ಚಿಕ್ಕ ಸಾಹಸಿ ವಾಣಿಜ್ಯೋದ್ಯಮಿಗಳ ಒಂದು ಪಡೆಯನ್ನು ರಚಿಸುವುದು. ಅದರಲ್ಲೂ ಮುಖ್ಯವಾಗಿ ಹೆಣ್ಣುಮಕ್ಕಳು, ಮಹಿಳೆಯರು, ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಜನಾಂಗಕ್ಕೆ

Digitised by Bharatavani, CIIL

ಸೇರಿದವರು, ಬಡವರು ಮೊದಲಾದವರು ಕೇವಲ ಉದ್ಯೋಗವನ್ನು ಅರಸಿಕೊಂಡು ಹೋಗುವುದಕ್ಕಿಂತ ಉದ್ಯೋಗವನ್ನು ನೀಡುವ ಸಾಮರ್ಥ್ಯವನ್ನು ಹೊಂದಿರಬೇಕು.

ಈಗ NIOS ನೀಡುತ್ತಿರುವ 60 (ಇದು ಇನ್ನು ಹೆಚ್ಚಾಗುತ್ತಿದೆ) ವೃತ್ತಿ ಕೋರ್ಸ್‌ಗಳು ಕೃಷಿ, ತಂತ್ರಜ್ಞಾನ, ಆರೋಗ್ಯ ಮತ್ತು ವೈದ್ಯ ಪೂರಕೀಯ, ಗೃಹ ವಿಜ್ಞಾನ, ಉದ್ಯೋಗ ಮತ್ತು ವಾಣಿಜ್ಯ, ಕಂಪ್ಯೂಟರ್ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ, ಶಿಕ್ಷಕ ತರಬೇತಿ, ಗ್ರಂಥಾಲಯ ವಿಜ್ಞಾನ ಮೊದಲಾದವು. ಈ ವಿಶಾಲ ಕ್ಷೇತ್ರದಲ್ಲಿನ ಕೆಲವು ಉದಾಹರಣೆಗಳು ಕೋರ್ಸ್‌ಗಳ ವ್ಯಾಪ್ತಿಯು ಕಲಿಯುವವರ ಅಗತ್ಯಗಳಿಗೆ ತಕ್ಕಂತೆ ಹಾಗೂ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ವರ್ಷದಿಂದ ವರ್ಷಕ್ಕೆ ವಿಶಾಲವಾಗುತ್ತಾ ಹೋಗುತ್ತದೆ. ಪ್ರಸಕ್ತ ಕೋರ್ಸ್‌ಗಳು ಗ್ರಾಮಾಂತರ ಹಾಗೂ ನಗರ ಪ್ರದೇಶಗಳೆರಡಕ್ಕೂ ಅನ್ವಯವಾಗುತ್ತದೆ.

NIOS ವೃತ್ತಿಕೋರ್ಸ್‌ಗಳನ್ನು ಪೂರ್ವ ಮಾಧ್ಯಮಿಕ, ಮಾಧ್ಯಮಿಕ, ಹಿರಿಯ ಮಾಧ್ಯಮಿಕ ಹಾಗೂ ಹಿರಿಯ ಮಾಧ್ಯಮಿಕದ ನಂತರದ ಹಂತಗಳಲ್ಲಿ ನೀಡಲಾಗುತ್ತಿದೆ. ಪೂರ್ವ ಮಾಧ್ಯಮಿಕ ಕೋರ್ಸ್‌ಗಳು ಕಲಿಕಾರ್ಥಿಗಳನ್ನು ಮುಖ್ಯವಾಗಿ ಉದ್ಯಮ ಪ್ರಪಂಚಕ್ಕೆ ಪರಿಚಯಿಸುವುದೇ ಆಗಿದ್ದು NIOS ನ ಮುಕ್ತ ಮೂಲಶಿಕ್ಷಣ ಕಾರ್ಯಕ್ರಮಗಳಿಗೆ ಜೋಡಿಸಲ್ಪಟ್ಟಿರುತ್ತದೆ. ವೃತ್ತಿಪರ ಅರಿವಿನ ಅಡಿಯಲ್ಲಿ ಜೀವನ ಸಂವರ್ಧನ ಕೋರ್ಸ್‌ಗಳನ್ನು ನೀಡಲಾಗುತ್ತದೆ.

**ಪ್ರಸ್ತುತ ವೃತ್ತಿಪರ ಕೋರ್ಸ್‌ಗಳನ್ನು ಹೀಗೆ ನೀಡಲಾಗುತ್ತಿದೆ:**

(i) ತಿಂಗಳ ಅವಧಿಯ ಸರ್ಟಿಫಿಕೇಟ್ ಮಟ್ಟದ ಒಟ್ಟಾರೆಯ ಕೋರ್ಸ್‌ಗಳು ಮತ್ತು ಒಂದು ಅಥವಾ ಎರಡು ವರ್ಷ ಅವಧಿಯ ಡಿಪ್ಲೊಮಾ ಮಟ್ಟದ ಕೋರ್ಸ್‌ಗಳು.

(ii) ಶೈಕ್ಷಣಿಕ ಕೋರ್ಸ್‌ಗಳ ಜೊತೆಯಲ್ಲಿ ಸಂಯೋಜನೆಗೊಂಡಿರುವ ಲಭ್ಯವಿರುವ ಕೋರ್ಸ್‌ಗಳು ಮತ್ತು ಏಕಾಂಗಿಯಾಗಿ ನಿಲ್ಲಬಲ್ಲ ಕೋರ್ಸ್‌ಗಳು.

(iii) ಜೀವನ ಸಂವರ್ಧನ ಕೋರ್ಸ್‌ಗಳು.

ಈ ಕೋರ್ಸ್‌ಗಳಿಗೆ ಒಂದು ಕ್ಯಾಲೆಂಡರ್ ವರ್ಷದಲ್ಲಿ ಎರಡು ಬಾರಿ ಪ್ರವೇಶಗಳನ್ನು ಮಾಡಲಾಗುತ್ತದೆ. ವೃತ್ತಿಪರ ಕೋರ್ಸ್‌ಗಳನ್ನು ಅಧಿಕೃತ ವೃತ್ತಿಶಿಕ್ಷಣ ಸಂಸ್ಥೆ (AVI)ಗಳೆಂದು ಕರೆಯಲಾಗುವ ವೃತ್ತಿಪರ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ. ಇವು ಸಾಮಾನ್ಯವಾಗಿ ನೋಂದಾಯಿತ ಸಂಘ ಅಥವಾ ಶಾಲೆಗಳಾಗಿರುತ್ತವೆ. ಇಲ್ಲಿ ಈ ವೃತ್ತಿಪರ ಕೋರ್ಸ್‌ಗಳನ್ನು ನಡೆಸಲು ಮುಖ್ಯವಾಗಿ ಕೈಗಳ ಮೂಲಕ, ಪ್ರತ್ಯಕ್ಷವಾಗಿ ತರಬೇತಿ ನೀಡಲು ಸೌಕರ್ಯಗಳು ಲಭ್ಯವಿರುತ್ತವೆ. ಕೋರ್ಸ್‌ಗಳ ಪರೀಕ್ಷೆಗಳೂ ಕೂಡ ವರ್ಷದಲ್ಲಿ ಎರಡು ಬಾರಿ ನಡೆಯುತ್ತವೆ.

**ವೃತ್ತಿಪರ ಕಾರ್ಯಕ್ರಮಗಳಿಗೆ ಗ್ರಾಮೀಣ ದೃಷ್ಟಿ**

ವೃತ್ತಿಶಿಕ್ಷಣ ಕಾರ್ಯಕ್ರಮಗಳಿಗೆ ಗ್ರಾಮೀಣದೃಷ್ಟಿಯನ್ನು ನೀಡಲು NIOS ಒಂದು ನವೀನ ಯೋಜನೆಯನ್ನು 'ಗ್ರಾಮೀಣ ಸಮುದಾಯ ಕಾರ್ಯಾಗಾರ' (RCW) ಎಂಬ ಹೆಸರಿನಲ್ಲಿ ಹಮ್ಮಿಕೊಂಡಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ವೃತ್ತಿಪರ ತರಬೇತಿಯನ್ನು ತನ್ನ ಕೈಯಾರೆ ಹೊಂದಲು ಅಗತ್ಯವಾದ ಮೂಲಭೂತ ಸೌಕರ್ಯವನ್ನು ಸೃಷ್ಟಿಸಲು ತಳಮಟ್ಟದ ಸರಕಾರೇತರ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಹೊಂದುವುದು. ಈ ನಿಟ್ಟಿನಲ್ಲಿ NIOS ಯು 14 ಸಂಸ್ಥೆಗಳನ್ನು ಗುರುತಿಸಿದೆ. ಈ ಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿಯೇ ಇವೆ. ಇವು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ NIOS ಜೊತೆಯಲ್ಲಿ ಮುಂದೆ ಕಾರ್ಯರೂಪಕ್ಕೆ ಬರುವ ಸಾಮರ್ಥ್ಯವಿರುವ ಸಹಭಾಗಿಗಳಾಗಿ ಕೆಲಸ ಮಾಡುತ್ತವೆ. ಹೊಸ ಕ್ಷೇತ್ರಗಳ ವೃತ್ತಿಪರ ಕೋರ್ಸ್‌ಗಳಿಗಾಗಿ ಕಲಿಕಾರ್ಥಿಗಳಿಂದ ಬರುವ ಹೆಚ್ಚಿನ ಬೇಡಿಕೆಗಳಿಗೆ ಸ್ಪಂದಿಸಲು NIOS ಬಗೆಬಗೆಯ ವೃತ್ತಿಪರ ಕೋರ್ಸ್‌ಗಳನ್ನು ಸೇರಿಸುತ್ತಿದೆ. ಹೊಸದಾಗಿ ಸೇರ್ಪಡೆಯಾದ ಕೆಲವು ಕೋರ್ಸ್‌ಗಳು ಮಾಹಿತಿ ತಂತ್ರಜ್ಞಾನದಲ್ಲಿ ಡಿಪ್ಲೊಮಾ, ಕಂಪ್ಯೂಟರ್ ಹಾರ್ಡ್‌ವೇರ್ ಜೋಡಣೆ ಮತ್ತು ಸಂರಕ್ಷಣೆ, ಕಂಪ್ಯೂಟರ್ ಅನ್ವಯದಲ್ಲಿ ಸರ್ಟಿಫಿಕೇಟ್, ಸಾಂಪ್ರದಾಯಿಕ ಭಾರತೀಯ ಕಸೂತಿ, ಜೇನುನೊಣಗಳ ವಿಶಿಷ್ಟ ಪ್ರಪಂಚ, ಆಧುನಿಕ ಸೆಕ್ರೆಟರಿಯಲ್ ಅಭ್ಯಾಸ ಮತ್ತು ಉರ್ದುವಿನಲ್ಲಿ ಬೆರಳಚ್ಚು ಮಾಡುವುದು (ಸೀನಿಯರ್ ಸೆಕೆಂಡರಿ ಹಂತದಲ್ಲಿ).

**ಭವಿಷ್ಯದಲ್ಲಿ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಮುನ್ನುಗ್ಗುವಿಕೆ**

ಹತ್ತನೆಯ ಪಂಚವಾರ್ಷಿಕ ಯೋಜನೆಯ ಉದಾರವಾದ ಉದ್ದೇಶಗಳನ್ನು ಗಮನದಲ್ಲಿ ಇಟ್ಟುಕೊಂಡು NIOS ಗಳ ವೃತ್ತಿಪರ ಕೋರ್ಸ್‌ಗಳ ಭವಿಷ್ಯದ ಮುನ್ನುಗ್ಗುವಿಕೆಯೂ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಅರ್ಥಪೂರ್ಣ, ಕೌಶಲ್ಯಾಧಾರಿತ ಉದ್ಯೋಗದ ಬಗ್ಗೆ ತರಬೇತಿಯನ್ನು ನೀಡುವುದಾಗಿದೆ. ಮುಂದಿನ ವರ್ಷಗಳಲ್ಲಿ ಕೋರ್ಸ್‌ನ್ನು ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ಸಾಂಪ್ರದಾಯಿಕವಲ್ಲದ, ತಂತ್ರಜ್ಞಾನವನ್ನು ಗುರಿಯಾಗಿಸಿಕೊಂಡ ಮತ್ತು ಸಾಮರ್ಥ್ಯಾಧಾರಿತ ಕೋರ್ಸ್‌ಗಳನ್ನು ಪ್ರಾರಂಭಿಸುವುದು ಸೇರಿಕೊಂಡಿರುತ್ತದೆ.

ಬಾಲಕಿಯರಿಗೂ ಮಹಿಳೆಯರಿಗೂ ಹಾಗೂ ಸಮಾಜದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿ ಇರುವವರಿಗೂ ವೃತ್ತಿಪರ ಕೋರ್ಸ್‌ಗಳನ್ನು ಪ್ರಾರಂಭಿಸಲು ಚಿಂತಿಸಲಾಗಿದೆ. ಗ್ರಾಮೀಣ ಸಮುದಾಯವನ್ನು ತಲುಪಲು ಗ್ರಾಮೀಣ ವೃತ್ತಿಪರ ಕೋರ್ಸ್‌ಗಳ ಶಿಕ್ಷಣ ಹಾಗೂ ಸೇವಾಕೇಂದ್ರಗಳ ಮೂಲಭೂತ ವ್ಯವಸ್ಥೆಗಳನ್ನು ಬಹುದೊಡ್ಡ ರೀತಿಯಲ್ಲಿ ರೂಪಿಸಲು ಯೋಜನೆಗಳನ್ನು ಕೈಗೊಳ್ಳಲಾಗಿದೆ. AVIಗಳ ವಿಸ್ತರಣೆ ಮತ್ತು ಕೈಗಾರಿಗೆ, ಮಾರುಕಟ್ಟೆ ಉದ್ಯಮಗಳೊಂದಿಗೆ ಸಂಪರ್ಕ ಏರ್ಪಡಿಸುವುದನ್ನು ಯೋಚಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಈ ಕಾರ್ಯಕ್ರಮಗಳನ್ನು ನಡೆಸುವವರಿಗೂ ಹಾಗೂ ಇತರ ಸಿಬ್ಬಂದಿವರ್ಗಕ್ಕೂ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು

Digitised by Bharatavani, CIIL

ಚಾಕ್ಷುಕ್ಷೀಕರಿಸಲಾಗಿದೆ.

NIOS ನ ಕಲಿಕಾರ್ಥಿಗಳಿಗೆ ವೃತ್ತಿಪರ ಹಾಗೂ ಜೀವನ ಕೌಶಲಗಳನ್ನು ಕಲಿಸಲು ರೋಮಾಂಚಕ, ಸುಸಂಗತ ಹಾಗೂ ಚಟುವಟಿಕೆಯಿಂದ ಕೂಡಿದ ಕಾರ್ಯಕ್ರಮಗಳನ್ನು ರೂಪಿಸುವುದೇ ಮುಂದಿನ ವೃತ್ತಿಪರ ಶಿಕ್ಷಣ ಕಾರ್ಯಕ್ರಮಗಳ ಒತ್ತಾಸೆಯಾಗಿದೆ.

**ವಿಶೇಷವಾಗಿ ವಿನ್ಯಾಸಗೊಳಿಸಲಾದ ಜೀವನ ಅಭಿವರ್ಧಕ ಕಾರ್ಯಕ್ರಮಗಳು**

ಮೇಲೆ ಉಲ್ಲೇಖಿಸಲಾದ ಕೋರ್ಸ್‌ಗಳ ಜೊತೆಗೆ ಮುಕ್ತಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆಯು ಜೀವನ ಅಭಿವರ್ಧಕ ಕಾರ್ಯಕ್ರಮಗಳ ಅಡಿಯಲ್ಲಿ ಕೆಲವು ವಿಶೇಷವಾದ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿದೆ.

ಇದು ಅನೇಕ ಕೋರ್ಸ್‌ಗಳನ್ನು ಒಳಗೊಂಡಿದೆ. ಅವುಗಳೆಂದರೆ ಪರಿಪೂರ್ಣ ಮಹಿಳೆ(ಮಹಿಳಾ ಸಬಲೀಕರಣ/ಅಧಿಕೃತ ಸ್ಥಿತಿ), ಯೋಗ, ಭಾರತೀಯ ಸಂಸ್ಕೃತಿ ಮತ್ತು ಪರಂಪರೆ, ಜನಸ್ವಾಸ್ಥ್ಯ (ಸಮುದಾಯದ ಆರೋಗ್ಯ), ಸಂಗೀತ, ನೃತ್ಯ, ಚಿತ್ರಕಲೆಗಳನ್ನು ಒಳಗೊಂಡ ಕುಶಲಕಲೆಗಳು, ಸರ್ವರಿಗೂ ವಿಜ್ಞಾನ, ಗ್ರಾಹಕ ಶಿಕ್ಷಣ, ಮಾನವೀಯ ಮೌಲ್ಯಗಳು ಮತ್ತು ಪೌರತ್ವ ಶಿಕ್ಷಣ, ಮಾನವೀಯ ಮೌಲ್ಯಗಳನ್ನು ಬೆಳೆಸಿ, ಪೋಷಿಸುವ ಉದ್ದೇಶವನ್ನು ಹೊಂದಿದೆ. ಮಕ್ಕಳು, ಯುವಕರು, ಹೆತ್ತವರು, ಶಿಕ್ಷಕರು, ಶಾಲೆಗಳ ಪ್ರಿನ್ಸಿಪಾಲರುಗಳು. ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಲ್ಲಿನ ಕಾರ್ಯನಿರ್ವಾಹಕರೂ ಸೇರಿದಂತೆ ಸಾರ್ವಜನಿಕರು ಮೊದಲಾದ ವಿವಿಧ ಉದ್ದಿಷ್ಟ ಗುಂಪುಗಳ ವಿಶೇಷ ಅಗತ್ಯಗಳನ್ನು ಈ ಕೋರ್ಸ್ ಗಮನದಲ್ಲಿ ಇರಿಸಿಕೊಂಡಿರುತ್ತದೆ. ಈ ಕಾರ್ಯಕ್ರಮದ ಮತ್ತೊಂದು ಮುಖ್ಯ ಗುರಿ ಎಂದರೆ ಅನಿವಾಸಿ ಭಾರತೀಯರಿಗೂ ಅಲ್ಲಲ್ಲಿ ಗುಂಪುಗಳಾಗಿ ಚದುರಿ ಹೋಗಿರುವ ನಮ್ಮ ದೇಶೀಯರಿಗೂ ನಮ್ಮ ಸಂಪದ್ಭರಿತ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯ ಮಾಡಿಕೊಡುವುದು ಮತ್ತು ನಮ್ಮ ಅನೂಚಾನವಾದ ಆಚಾರ ವಿಚಾರಗಳಲ್ಲಿ ಪ್ರತಿಷ್ಠಾಪಿತವಾದ ಸಾರ್ವತ್ರಿಕ ಹಾಗೂ ಶಾಶ್ವತ ಮೌಲ್ಯಗಳನ್ನು ಅವರಲ್ಲಿ ಬೆಳೆಸುವುದೂ ಆಗಿದೆ.

**ವಿತರಣಾ ವಿಧಾನದಲ್ಲಿ ಕಲಿಯುವವನ ಸ್ವಾಯತ್ತತೆಯೇ ಕೇಂದ್ರಬಿಂದು**

NIOS ನ ವಿತರಣಾ ವಿಧಾನದಲ್ಲಿ ಕಲಿಯುವವನ ಸ್ವಾಯತ್ತತೆಯೇ ಕೇಂದ್ರಬಿಂದುವಾಗಿರುತ್ತದೆ. ಇಡೀ ಪ್ರಕ್ರಿಯೆಯಲ್ಲಿ ಕಲಿಯುವವನನ್ನು ಜ್ಞಾನದ ರಚನಾಕಾರ ಎಂದು ಕಾಣಲಾಗಿದೆ. ಅವನಿಗೆ/ಅವಳಿಗೆ ಸ್ವಕಲಿಕೆಯ ಸಾಮಗ್ರಿಗಳನ್ನು ಮತ್ತು ಮಾಧ್ಯಮ ಹಾಗೂ ಮಾಹಿತಿ ಸಂವಹನ ತಂತ್ರಜ್ಞಾನ ಆಧಾರಿತವಾದ ಇತರ ಕಲಿಕಾ ಸಂಪನ್ಮೂಲಗಳನ್ನು ಒದಗಿಸಲಾಗುತ್ತದೆ. ಮಾಹಿತಿಯನ್ನು ಪಡೆಯುವ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಯು ಅಗತ್ಯವೆಂದು ಭಾವಿಸಿದಾಗ ಶಿಕ್ಷಕರ ನೆರವನ್ನು ಪಡೆಯುತ್ತಾನೆ. ಇದು ಕಲಿಯುವವನನ್ನು ಸಂಪ್ರದಾಯಬದ್ಧ ತರಗತಿ ಕೊಠಡಿಯ ಕಿರಿದಾದ ಗಡಿಯಿಂದಾಚೆಗೆ ಮುಕ್ತ ಕಲಿಕಾ ಪರಿಸರಕ್ಕೆ ಕೊಂಡೊಯ್ಯುತ್ತದೆ.

**ವ್ಯವಹಾರ ಅಂಶಗಳ ಬಗೆಗಳು**

**ಮುದ್ರಿತ ಸ್ವಕಲಿಕೆಯ ಸಾಮಗ್ರಿ**

ಕಲಿಕಾರ್ಥಿಗಳಿಗೆ ಸ್ವಕಲಿಕೆಯ ಮಾಡ್ಯುಲರ್ ರೂಪದಲ್ಲಿ ತಯಾರಿಸಿದ ಕಲಿಕಾ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ಇದರಲ್ಲಿ ಒಳ ಸೇರಿಸಿದ ಪ್ರಶ್ನೆಗಳು ಇರುತ್ತವೆ. ಕೊನೆಯಲ್ಲಿ ನಿಗದಿತ ಕಾರ್ಯ (Assignment)ಗಳನ್ನು ಚಟುವಟಿಕೆಗಳನ್ನು ಸೇರಿಸಲಾಗಿರುತ್ತದೆ. ಈ ಸಾಮಗ್ರಿಗಳು ಪಠ್ಯವಿಷಯಗಳ ಅರ್ಥ ವಿವರಣೆ ಮಾಡುವ ಶಿಕ್ಷಕನ ಪಾತ್ರವನ್ನು ಕಡಿಮೆ ಮಾಡುವಂತೆ ವಿನ್ಯಾಸಗೊಂಡಿರುತ್ತವೆ.

**ಬಹು ರೀತಿಯ ಪ್ಯಾಕೇಜ್**

ಬಹು ರೀತಿಯ ಪ್ಯಾಕೇಜ್ ಶ್ರವ್ಯ ಮತ್ತು ವೀಡಿಯೋ ಕಾರ್ಯಕ್ರಮಗಳು, ಪುಸ್ತಿಕೆ, ಪರಸ್ಪರ ಪ್ರಭಾವ ಬೀರುವ ನಿಯತಕಾಲಿಕೆಗಳು– ಓಪನ್ ಲರ್ನಿಂಗ್ (ಅರ್ಧ ವಾರ್ಷಿಕ), ಓಪನ್ ಸ್ಕೂಲಿಂಗ್ (ತ್ರೈಮಾಸಿಕ ವಾರ್ತಾ ಪತ್ರಿಕೆ), ಜನಸಂಖ್ಯೆ ಮತ್ತು ಅಭಿವೃದ್ಧಿ ಶಿಕ್ಷಣ ಕಾರ್ಯಕ್ರಮ, ಮಹಿಳಾ ಜಾಗೃತಿಯ ಬಗ್ಗೆ ಇರುವ ಮಾರ್ಗದರ್ಶಿ ಪುಸ್ತಕಗಳು ಮತ್ತು ಕಲಿಕಾ ಸಾಮಗ್ರಿಗಳು, ಭಾರತದ ಸಾಂಸ್ಕೃತಿಕ ಪರಂಪರೆ, ಸಾಂದರ್ಭಿಕ ಘಟನೆಗಳನ್ನು ಆಧರಿಸಿದ ಮೌಲ್ಯಾಧಾರಿತ ಚಿತ್ರಮಯ ಚೌಕಟ್ಟುಗಳು, ಸಂದೇಶ ತುಂಬಿದ ದೊಡ್ಡ ಚಿತ್ರಪಟಗಳು, ಹಾಸ್ಯ/ವಿನೋದ ಪತ್ರಿಕೆ, ಮುಂತಾದವುಗಳನ್ನು ಆಧರಿಸಿರುತ್ತದೆ. ಇವುಗಳನ್ನು ಕಲಿಯುವವರ ಸ್ವಂತ ಸ್ಥಳಕ್ಕೆ ಸ್ವ–ಅಭ್ಯಾಸ, ಪುನರಾಲೋಚನೆ ಮತ್ತು ನಿರ್ದಿಷ್ಟ ಸನ್ನಿವೇಶಗಳಿಗೆ ಸೂಕ್ತವಾದ ಕಲಿಕಾ ಕಾರ್ಯಗಳಿಗೆ ಪ್ರತಿಕ್ರಿಯಿಸಲು ಒದಗಿಸಲಾಗುತ್ತದೆ. NIOS ನೀಡುವ ಬಹುರೀತಿಯ ಪ್ಯಾಕೇಜ್‌ನ ಭಾಗಗಳಲ್ಲಿ ಶ್ರವಣ–ದೃಶ್ಯ ಕಾರ್ಯಕ್ರಮಗಳು ಒಂದು ಮುಖ್ಯ ಅಂಗವಾಗಿರುತ್ತವೆ. ಕಲಿಕಾರ್ಥಿಗಳು ಸಂಪರ್ಕ ತರಗತಿಗಳಲ್ಲಿ ಇವುಗಳನ್ನು ವೀಕ್ಷಿಸುತ್ತಾರೆ ಮತ್ತು ಉಪಯೋಗಿಸುತ್ತಾರೆ. ಇತರ ಬಗೆಯ ಕಲಿಕಾ ಸಂಪನ್ಮೂಲಗಳನ್ನು ಇಂಟರ್‌ನೆಟ್, ದೂರದರ್ಶನದಿಂದ ಪ್ರಸಾರವಾಗುವ ಕಾರ್ಯಕ್ರಮಗಳಿಂದಲೂ ಮತ್ತು ಜನಸಂಖ್ಯೆ ಮತ್ತು ಅಭಿವೃದ್ಧಿ ಶಿಕ್ಷಣದ ಮೇಲೆ NIOS ಒದಗಿಸುವ Inter Active Voice Mail Services(IVMS), ಮುಕ್ತ ಮೂಲಶಿಕ್ಷಣ ಹಾಗೂ ಮೌಲ್ಯಮಾಪನಕ್ಕೆ ಸಂಬಂಧಿಸಿದ ಸಾಮಗ್ರಿಗಳಿಂದ ಪಡೆಯಬಹುದು.

**ವೈಯಕ್ತಿಕ ಸಂಪರ್ಕ ಕಾರ್ಯಕ್ರಮಗಳು (PCP)ಗಳು**

ಮುಖಾಮುಖಿ ಸಂಪರ್ಕ ತರಗತಿಗಳನ್ನು ಅಧಿಕೃತ ಸಂಸ್ಥೆ (AIs) ಮತ್ತು ಅಧಿಕೃತ ವೃತ್ತಿಪರ ಸಂಸ್ಥೆ (AVIs)ಗಳು ವ್ಯವಸ್ಥೆ ಮಾಡುತ್ತವೆ. ಇಲ್ಲಿ ಕಲಿಕಾರ್ಥಿಗಳು ತಮ್ಮ ಶಿಕ್ಷಕರಿಂದ ಕಲಿಕೆಗೆ ಸಂಬಂಧಿಸಿದ ತಮ್ಮ ತೊಂದರೆಗಳನ್ನು ವಿವಿಧ ವಿಷಯಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸಿ ಸ್ಪಷ್ಟೀಕರಣ ಪಡೆಯಬಹುದು. ಇವು ವೈಯಕ್ತಿಕವಾದ ಸೈದ್ಧಾಂತಿಕ ಮತ್ತು ಪರಿಹಾರಾತ್ಮಕ ಸ್ವರೂಪದವು ಎಂದು ಭಾವಿಸಲಾಗುತ್ತದೆ. ಕಲಿಕಾರ್ಥಿಗಳು ವೈಯಕ್ತಿಕವಾಗಿ

Digitised by Bharatavani, CIIL

ಅಪೇಕ್ಷಿಸಿದಾಗ ಆಪ್ತ ಸಮಾಲೋಚನಾ ಸೇವೆ ಕೂಡ ಲಭ್ಯವಿದೆ. ಅವರು PCP ಸಂದರ್ಭದಲ್ಲಿ ಶ್ರವ್ಯ-ದೃಶ್ಯ ಕಾರ್ಯಕ್ರಮಗಳನ್ನು ವೀಕ್ಷಿಸಲು ಅವಕಾಶಗಳನ್ನು ಒದಗಿಸಲಾಗುತ್ತದೆ. ಇವು ಅವರ ಕಲಿಕೆಯನ್ನು ವೃದ್ಧಿಸುತ್ತವೆ.

**ಉಪಾಧ್ಯಾಯರು ಗುರುತು ಮಾಡಿರುವ ನಿಗದಿತ ಕಾರ್ಯ (TMA)**

ಮುಕ್ತ ಮತ್ತು ದೂರಕಲಿಕೆಯಲ್ಲಿ ಉಪಾಧ್ಯಾಯರು ಗುರುತು ಮಾಡಿರುವ ನಿಗದಿತ ಕಾರ್ಯವನ್ನು ವಿತರಣೆ ಮಾಡುವ ವಿಧಾನವು ಕಲಿಕೆಯ ಪ್ರಕ್ರಿಯೆಯ ಅಂಶಗಳಲ್ಲಿ ಒಂದು ಮುಖ್ಯ ಅಂಶವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಬೋಧನೆ-ಕಲಿಕೆ ಸಾಮಗ್ರಿಗಳು ಮತ್ತು ಕಲಿಕೆಯ ಇತರ ಸಂಪನ್ಮೂಲಗಳಿಂದ ವಿವಿಧ ವಿಷಯಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೂಡಿ ಬಂದ ಕೆಲವು ಆಯ್ದ ನಿಗದಿತ ಕಾರ್ಯಗಳನ್ನು ಕೊಡಲಾಗುತ್ತದೆ. ಈ ನಿಗದಿತ ಕಾರ್ಯಗಳನ್ನು ಮಾಡಿ ಮುಗಿಸಲು ಕಲಿಕಾರ್ಥಿಗಳು ಮಾಹಿತಿಯ ಬೇರೆ ಬೇರೆ ಮೂಲಗಳನ್ನು ಅವಲೋಕಿಸಬೇಕಾಗುತ್ತದೆ. ಇವುಗಳನ್ನು ಅಭ್ಯಾಸಕೇಂದ್ರಗಳ ಶಿಕ್ಷಕರು ವಿಮರ್ಶಿಸುತ್ತಾರೆ. ಅವರು ನಿಗದಿತ ಕಾರ್ಯದ ಪುಸ್ತಕದ ಮೇಲೆ ಸೂಕ್ತ ಸ್ಥಳಗಳಲ್ಲಿ ತಮ್ಮ ಟೀಕೆ-ಟಿಪ್ಪಣಿಗಳನ್ನು ಬರೆಯುತ್ತಾರೆ.

ಕಲಿಕಾರ್ಥಿ ಮತ್ತು ಉಪಾಧ್ಯಾಯರ ನಡುವೆ ಅಂತರವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಮತ್ತು ಅವರೀರ್ವರ ನಡುವೆ ಸಂವಾದ ನಡೆಯುವುದನ್ನು ಪ್ರಾರಂಭವಾಗುವಂತೆ TMA ಯನ್ನು ವಿನ್ಯಾಸಗೊಳಿಸಲಾಗಿದೆ. ಕಲಿಯುವವನು ತನ್ನ ಸ್ವಕಲಿಕೆಯ ಕೌಶಲಗಳನ್ನು ಚುರುಕುಗೊಳಿಸಿಕೊಳ್ಳಲು, ತಾನು ಮಾಡಿದ ತಪ್ಪುಗಳ ಬಗ್ಗೆ ಸಕಾಲಿಕ ಪ್ರತ್ಯಾದಾನ ಪಡೆದುಕೊಳ್ಳಲು ತನ್ನ ಕಲಿಕಾ ಕ್ರಮದಲ್ಲಿನ ಧನಾತ್ಮಕ ಅಂಶಗಳನ್ನು ತಿಳಿದುಕೊಳ್ಳಲು ಅವಕಾಶಗಳನ್ನು ಒದಗಿಸುವುದು ಇದರ ಉದ್ದೇಶ. ಒಟ್ಟಿನಲ್ಲಿ ಉಪಾಧ್ಯಾಯರಿಂದ ಒದಗಿಸಲಾದ ಪ್ರತ್ಯಾದಾನದ ಪ್ರಕಾರ ಕಲಿಕೆಯ ಚಟುವಟಿಕೆಗಳನ್ನು ಮುಂದುವರಿಸಲು ಸರಿಯಾದ ಮಾರ್ಗವನ್ನು ಇದು ತೋರಿಸುತ್ತದೆ.

**ಶೈಕ್ಷಣಿಕ ಸೇವೆಗಳ ಪರಿಣಾಮಕಾರಿ ವಿತರಣೆಗೆ ICTಯ ಸಾಮರ್ಥ್ಯವನ್ನು ಅನ್ವೇಷಿಸುವುದು**

ಧರ್ಮಸಮ್ಮತ, ಸಮಾನಸ್ಕಂಧತೆಯ ಹಾಗೂ ಗುಣಮಟ್ಟದ ಶಿಕ್ಷಣದ ಮೂಲಹಿತಾಸಕ್ತಿಗಳನ್ನು ಗಮನದಲ್ಲಿ ಇರಿಸಿಕೊಂಡು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ನವೀನ ಬೆಳವಣಿಗೆಗಳನ್ನು ಉಪಯೋಗಿಸುವತ್ತ NIOS ನವೀನ ಪ್ರಯತ್ನಗಳನ್ನು ಮಾಡಿದೆ. ಇದು ಸಾಂಪ್ರದಾಯಿಕ ತರಗತಿಯಲ್ಲಿನ ಮುಖಾಮುಖಿ ವಿಧಾನಗಳ ಜೊತೆಗೆ ಶ್ರವಣ-ದೃಶ್ಯ ಕಾರ್ಯಕ್ರಮಗಳು (ಪ್ರಸಾರವಾದ ಹಾಗೂ ಪ್ರಸಾರವಾಗದ ವಿಧಾನ), ದ್ವಿಮುಖ ಟೆಲಿ ಸಮಾಲೋಚನೆಗಳು. NIOS ನ ವೆಬ್‌ಸೈಟ್‌ನಲ್ಲಿ www.nos.org ಮತ್ತು www.nios.ac.in ಎಂಬ ವಾಸ್ತವವಾಗಿ ಭೌತಿಕ ಅಸ್ತಿತ್ವದಲ್ಲಿ ಇಲ್ಲದಿರುವ ಆದರೆ ಸಾಫ್ಟ್‌ವೇರ್‌ನಿಂದ ಅಸ್ತಿತ್ವದಲ್ಲಿ ಇರುವಂತೆ ತೋರುವ ಒಂದು ಸಾರ್ವಜನಿಕ ಸಭಾಸ್ಥಾನವನ್ನು ಎಲ್ಲ ಸೇವೆಗಳಿಗೂ ಮತ್ತು ಮಾಹಿತಿಗಳಿಗೂ ನಿರ್ಮಾಣ ಮಾಡಿದೆ. ಪ್ರವೇಶ, ಪರೀಕ್ಷೆ, ವಿಷಯಗಳ ಬದಲಾವಣೆ/ಸೇರ್ಪಡೆ ಮೊದಲಾದ ವಿಷಯಗಳ ಬಗ್ಗೆ ಕಲಿಕಾರ್ಥಿಗಳು ಮಹತ್ವದ ಮಾಹಿತಿಯನ್ನು ಪಡೆಯಲು ಇದು IVMS ಅನ್ನು ಸ್ಥಾಪಿಸಿದೆ. NIOS ನ ಕೇಂದ್ರ ಕಾರ್ಯಾಲಯದಿಂದ ತುಂಬಾ ದೂರವಿರುವ ಕಲಿಕಾರ್ಥಿಗಳ ಅನಕೂಲಕ್ಕಾಗಿ ಮುಕ್ತ ಮೂಲಶಿಕ್ಷಣ (OBE)ದ ಕೋರ್ಸ್‌ಗಳ ಬಗೆಗಿನ ಮಾಹಿತಿಯನ್ನು IVSMನಲ್ಲಿ ಹಾಕಲಾಗಿದೆ.

ನಿರ್ದಿಷ್ಟ ಪರಿಸರ ಸನ್ನಿವೇಶಗಳಿಗೆ ಸೂಕ್ತವಾಗುವಂತೆ ಒಂದು ವಿಧಾನವನ್ನು ಉಪಯೋಗಿಸುವುದೇ ಅಲ್ಲದೆ ICTಯ ವಿಶಾಲಶ್ರೇಣಿಯ ಮಿಶ್ರಣವನ್ನು ಉಪಯೋಗಿಸಲು ಸಾಧ್ಯವಾಗುವಂತಹ ಸೂಕ್ತವಾದ ತಂತ್ರಜ್ಞಾನವನ್ನು ಹೊರಹೊರಡಿಸಲು NIOS ಒಂದು ಪ್ರಜ್ಞಾಪೂರ್ವಕ ತೀರ್ಮಾನ ವನ್ನು ಕೈಗೊಂಡಿದೆ.

**ದೂರ ಶಿಕ್ಷಣ(DE)ದಲ್ಲಿನ ಪ್ರಮುಖವಾದ ಆರಂಭದ ಹೆಜ್ಜೆಗಳು ಮತ್ತು ಸಾಧನಗಳು:**

ಮುಕ್ತಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆಯು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದೊಂದಿಗೆ ಶಿಕ್ಷಕರಿಗೆ, ಸಮನ್ವಯಾಧಿಕಾರಿಗಳಿಗೆ, ಸುಗಮಗೊಳಿಸುವವರಿಗೆ ತರಬೇತಿ ನೀಡುವುದಲ್ಲದೆ ಕಲಿಕಾರ್ಥಿಗಳೊಂದಿಗೆ ಟೆಲಿ-ಸಮಾಲೋಚನೆ ಕಾರ್ಯಕ್ರಮಗಳ ಮೂಲಕ ನೇರವಾಗಿ ಪರಸ್ಪರವಾಗಿ ಕಾರ್ಯ ನಡೆಸಲು ಜತೆಗೆಲಸ ಮಾಡುತ್ತಿದೆ. IGNOU ತನ್ನ ಸ್ಟುಡಿಯೋ ಅನುಕೂಲಗಳನ್ನು ಒದಗಿಸುತ್ತದೆ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ತನ್ನ ಉಪಗ್ರಹ ಮೇಲ್ಮುಖ ಸಂಪರ್ಕದ ಸೌಲಭ್ಯಗಳನ್ನು (ಏಕಮುಖ ದೃಶ್ಯ ಮತ್ತು ದ್ವಿಮುಖ ಶ್ರಾವ್ಯ ವ್ಯವಸ್ಥೆಯನ್ನು) ಶಿಕ್ಷಣ ಮತ್ತು ತರಬೇತಿಗಳಿಗಾಗಿ ಉಪಯೋಗಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ. NIOSಯು 50,000 ವಿದ್ಯಾರ್ಥಿಗಳು, 800 ಸಮನ್ವಯಾಧಿಕಾರಿಗಳು, 800 ಸುಗಮಗೊಳಿಸುವವರು ಮತ್ತು 200ಕ್ಕಿಂತ ಹೆಚ್ಚು ಶಿಕ್ಷಕರೊಂದಿಗೆ ಮುಕ್ತ ಶಾಲಾ ಶಿಕ್ಷಣದ ವಿವಿಧ ಅಂಶಗಳ ಬಗ್ಗೆ ಪರಸ್ಪರ ಪ್ರಭಾವ ಬೀರಲು ಶಕ್ತವಾಗಿದೆ. ಇಂತಹ ಜಾಲದಿಂದ ಮೂಲದೊಂದಿಗೆ ಪರಸ್ಪರವಾಗಿ ಕಾರ್ಯ ನಡೆಸಬಲ್ಲ ಒಂದು ಅತಿ ದೊಡ್ಡ ಸಂಖ್ಯೆ ಗ್ರಾಹಕರನ್ನು ತಲುಪಲು ಸಾಧ್ಯವಾಗುತ್ತದೆ.

ಪ್ರತಿ ಶುಕ್ರವಾರ ಬೆಳಿಗ್ಗೆ 5-02 ರಿಂದ 5-25ರವರೆಗೆ ದೂರದರ್ಶನದಲ್ಲಿ ರಾಷ್ಟ್ರವ್ಯಾಪಿ ಪ್ರಸಾರವಾಗುವ ವೀಡಿಯೋ ಕಾರ್ಯಕ್ರಮಗಳು NIOSಗೆ ಸಂಬಂಧಿಸಿದ ಮತ್ತೊಂದು ಮಹತ್ತರವಾದ ಘಟನೆ. NIOS ಕಾರ್ಯಕ್ರಮಗಳ ಜ್ಞಾನದರ್ಶನ್‌ನ ಶೈಕ್ಷಣಿಕ ಆವರ್ತ ಪಟ್ಟಿ ಅಂದರೆ ಚಾನಲ್‌ನಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಮಧ್ಯಾಹ್ನ 3.00 ರಿಂದ 3.30ರವರೆಗೆ ಪ್ರಸಾರವಾಗುತ್ತವೆ.

Digitised by Bharatavani, CIIL

ಈಗಿರುವಂತೆ ಮುಕ್ತ ಶಾಲಾಶಿಕ್ಷಣದ ರಾಷ್ಟ್ರೀಯ ಸಂಸ್ಥೆಯು 35 ಶ್ರಾವ್ಯ ಕಾರ್ಯಕ್ರಮಗಳನ್ನು ಹಿಂದಿ ಮತ್ತು ಇಂಗ್ಲೀಷ್‌ಗಳಲ್ಲಿಯೂ 64 ವೀಡಿಯೋ ಕಾರ್ಯಕ್ರಮಗಳನ್ನು ಹಿಂದಿ ಮತ್ತು ಇಂಗ್ಲೀಷ್‌ಗಳೆರಡಲ್ಲೂ ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಕೋರ್ಸ್‌ಗಳ ವಿವಿಧ ವಿಷಯಗಳ ಬಗ್ಗೆ ಒದಗಿಸಿದೆ. ಇದು ಮುಕ್ತ ಮೂಲ ಶಿಕ್ಷಣ ಕೋರ್ಸ್‌ಗಳಿಗಾಗಿಯೂ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಿದೆ. ಇವುಗಳೇ ಅಲ್ಲದೆ ವೃತ್ತಿಪರ ಕೋರ್ಸ್‌ಗಳಿಗಾಗಿಯೂ ವೀಡಿಯೋ ಕಾರ್ಯಕ್ರಮಗಳನ್ನು ತಯಾರಿಸಿದೆ.

ಇದು ಜೀವನ ಅಭಿವರ್ಧಕ ಕೋರ್ಸ್‌ಗಳಿಗಾಗಿಯೂ ಕಾರ್ಯಕ್ರಮಗಳನ್ನು ತಯಾರಿಸಿದೆ. ಇವು ಭಾರತದ ಸಾಂಸ್ಕೃತಿಕ ಪರಂಪರೆಯ ಒಂದು ಭಾಗವಾಗಿಸುವ ಹಾಗೂ ಅದರ ಅನನ್ಯತೆಯನ್ನು ಹೊಂದಿರುವ ಭಾವನೆಯನ್ನು ಉಂಟುಮಾಡುವಂತಹ ರೀತಿಯಲ್ಲಿ ವಿಶೇಷವಾಗಿ ವಿನ್ಯಾಸಗೊಂಡಿವೆ. ಶ್ರವ್ಯ ಮತ್ತು ದೃಶ್ಯ ಕಾರ್ಯಕ್ರಮಗಳು NIOS ನ ಬಹು ಆವರ್ತನ ಪಟ್ಟಿಯ (Multi Channel) ಪ್ಯಾಕೇಜ್‌ನ ಅತಿ ಪ್ರಮುಖ ಅಂಗಗಳಲ್ಲಿ ಒಂದಾಗಿವೆ. ಈ ಕಾರ್ಯಕ್ರಮಗಳು ಕಲಿಕೆಯ ಇತರ ಮಾರ್ಗಗಳಾದ ಮುದ್ರಿತ ಸ್ವಕಲಿಕೆ ಸಾಮಗ್ರಿಗಳು ಮತ್ತು PCP ಗಳಿಗೆ ಪೂರಕ ಹಾಗೂ ಪರಿಪೂರಕವಾಗಿರುತ್ತವೆ. ಎಲ್ಲ ವ್ಯಾಸಂಗಕೇಂದ್ರಗಳಿಗೂ ತರಗತಿಗಳಲ್ಲಿ ಉಪಯೋಗಿಸಲು ಈ ಪ್ಯಾಕೇಜ್‌ಗಳನ್ನು ನೀಡಲಾಗಿರುತ್ತದೆ. ಸುಮಾರು ಶೇಕಡಾ 75 ಭಾಗ ವ್ಯಾಸಂಗ ಕೇಂದ್ರಗಳು TV, VCR ಮತ್ತು Audio Cassette Recorder ಗಳ ಸೌಲಭ್ಯವನ್ನು ಹೊಂದಿವೆ. ಈ ಸೌಕರ್ಯಗಳಿಲ್ಲದ ಕೇಂದ್ರಗಳಿಗೆ ಸ್ಥಳೀಯ ಮಾರುಕಟ್ಟೆಯಿಂದ ಈ ಉಪಕರಣಗಳನ್ನು ಬಾಡಿಗೆಗೆ ತರಲು ಸ್ವಲ್ಪ ಹಣವನ್ನು ನೀಡಲಾಗುತ್ತದೆ. ಕಲಿಕಾರ್ಥಿಗಳೂ ಕೂಡ ಈ ಶ್ರವ್ಯ ಕಾರ್ಯಕ್ರಮಗಳನ್ನು ಒಂದು ವಾರದವರೆಗೆ ಸಾಂಕೇತಿಕ ಹಣ ಪಾವತಿ ಮಾಡಿ ಬಾಡಿಗೆಗೆ ತರಬಹುದು. ಇವೆಲ್ಲವೂ ಜ್ಞಾನ್ ದರ್ಶನ್‌ನಲ್ಲಿ ಪ್ರಸಾರವಾಗುತ್ತದೆ ಹಾಗೂ ವೀಡಿಯೋ CDಗಳಲ್ಲಿ ಲಭ್ಯವಿದೆ. ಈ ಕಾರ್ಯಕ್ರಮಗಳು ಸ್ವಕಲಿಕೆ ವಿಧಾನದಲ್ಲಿರುವ ಕಲಿಕೆಯ ಅವಕಾಶಗಳನ್ನು ವೃದ್ಧಿಪಡಿಸುತ್ತವೆ.

ಮುಕ್ತ ಕಲಿಕಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ(ICT)ದೊಂದಿಗೆ ಯಶಸ್ವಿಯಾಗಿ ನಡೆಸಿದ ಪ್ರಯೋಗದ ನಂತರ ಮತ್ತೊಂದು ಗಮನಾರ್ಹ ಕ್ಷೇತ್ರದಲ್ಲಿ ಪ್ರಯೋಗವನ್ನು ಪ್ರಾರಂಭಿಸಿದೆ. ಮುಕ್ತ ಮೂಲಶಿಕ್ಷಣ ಕಾರ್ಯಕ್ರಮಕ್ಕಾಗಿ ಕಂಪ್ಯೂಟರಿನಲ್ಲಿ ಬಳಸುವ ತಂತ್ರಾಂಶವನ್ನು ಅತ್ಯಂತ ಜಾಗರೂಕತೆಯಿಂದ ತಯಾರಿಸಿದ್ದು ಇದನ್ನು "ಕೋರಿದಾಗ ಪರೀಕ್ಷೆ"ಗೆ ಉಪಯೋಗಿಸಲಾಗುತ್ತದೆ. ಈ ನವೀನ ಕ್ರಮವನ್ನು ಈಗ ಸೆಕೆಂಡರಿ ಮಟ್ಟಕ್ಕೆ ವಿಸ್ತರಿಸಲಾಗುತ್ತಿದೆ. ಈ 'ಕೋರಿದಾಗ ಪರೀಕ್ಷೆ' ವ್ಯವಸ್ಥೆ (ODES)ಯಲ್ಲಿ NIOS ಕಲಿಕಾರ್ಥಿಯು ಯಾವುದೇ ಒಂದು ಅಧಿಕೃತ ಪರೀಕ್ಷಾಕೇಂದ್ರಕ್ಕೆ ತನ್ನ ಆಯ್ಕೆಯ ಯಾವುದೇ ದಿನದಂದು ತೆರಳಿ ತಾನು ಅಪೇಕ್ಷಿಸುವ ಒಂದು ಅಥವಾ ಹೆಚ್ಚಿನ ವಿಷಯಗಳಲ್ಲಿ ಪರೀಕ್ಷೆಗೆ ಕೂರಬಹುದು. ಕಲಿಕಾರ್ಥಿಗೆ ಕಂಪ್ಯೂಟರ್‌ನಿಂದ ಉತ್ಪತ್ತಿಯಾದ ಪ್ರಶ್ನೆಪತ್ರಿಕೆಯೊಂದನ್ನು ಕೊಡಲಾಗುತ್ತದೆ. ಕೆಲವು ದಿನಗಳಲ್ಲಿಯೇ ಫಲಿತಾಂಶಗಳನ್ನು ಆಕೆ/ಅವಳು ಪಡೆಯಬಹುದು. ODES ಗಳು ಶ್ರಮಭಾರತಿ, P.O, ಖಾದಿಗ್ರಾಮ್, ಜಮ್ಮು, ಬಿಹಾರ್; ಜಗದಾಂಬಾ ಲಾಲ ವಿದ್ಯಾಮಂದಿರ್, ಸುಲ್ತಾನ್‌ಪುರ್, ಅಮೌಲಿ, ಫತೇಪುರ್, ಯು.ಪಿ; ಲಕ್ಕಿ ಎಜುಕೇಷನ್ ಸೊಸೈಟಿ, ಮೇಹಮ್, ರೋಹ್‌ಟಕ್, ಹರಿಯಾಣ ಮತ್ತು ಗಾಂಧಿ ವಿದ್ಯಾಮಂದಿರ್, ಸರ್ದಾರ್ ಶಹರ್, ಚುರು, ರಾಜಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಕಲಿಕಾರ್ಥಿಯು ಈ ಪರೀಕ್ಷೆಗಳನ್ನು ತನಗೆ ಸಮಾಧಾನವಾಗುವವರೆಗೆ ಎಷ್ಟು ಬಾರಿಯಾದರೂ ತೆಗೆದುಕೊಳ್ಳಬಹುದು. ಈಗಾಗಲೇ ನಾಲ್ಕು ಸಾವಿರ ಮಂದಿ ಎಲಿಮೆಂಟರಿ ಹಂತದಲ್ಲಿ (XIIIನೇ ತರಗತಿ) ಈ ಪರೀಕ್ಷೆಗಳನ್ನು ತೆಗೆದುಕೊಂಡಿದ್ದಾರೆ.

**ವಿದ್ಯಾರ್ಥಿಯನ್ನು ಬೆಂಬಲಿಸುವ ವ್ಯವಸ್ಥೆ– ಕಲಿಕಾರ್ಥಿ ಸ್ನೇಹಿ ಮಾರ್ಗ.**

NIOSನ ವಿತರಣಾ ವ್ಯವಸ್ಥೆಗಳಲ್ಲಿನ ಮುಖ್ಯ ಆಯಾಮಗಳಲ್ಲಿ ಒಂದು, ವಿದ್ಯಾರ್ಥಿಗೆ ನೆರವಿನ ವ್ಯವಸ್ಥೆಯ ಅಡಿಯಲ್ಲಿ ನೀಡಲಾಗುತ್ತಿರುವ ಸೇವೆಗಳಿಗೆ ಸಂಬಂಧಿಸಿದೆ. ಇಲ್ಲಿ ಸ್ವೀಕೃತವಾಗಿರುವ ಮಾರ್ಗವು NIOSನ ಕಲಿಕಾರ್ಥಿ ಸ್ನೇಹಿ ಕಾರ್ಯ ವಿಧಾನವನ್ನು ಪ್ರತಿಬಿಂಬಿಸುತ್ತದೆ. ಇದು ಭಾವಿ ವಿದ್ಯಾರ್ಥಿಗಳಿಗೆ NIOS ನ ಕಾರ್ಯಕ್ರಮಗಳ ಬಗ್ಗೆ ಮತ್ತು ಇಲ್ಲಿ ಉಪಯೋಗಿಸಲ್ಪಡುವ ವಿಧಾನಗಳ ಬಗ್ಗೆ ಮಾಹಿತಿ; ದಾಖಲಾತಿ ಮತ್ತು ನೋಂದಾಯಿಸಿಕೊಳ್ಳುವ ಬಗ್ಗೆ; ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಬುದ್ಧಿವಾದ ಹಾಗೂ ಆಪ್ತ ಸಮಾಲೋಚನೆ; ಸ್ವ ಅಭ್ಯಾಸ ಸಾಮಗ್ರಿಗಳನ್ನು ಕಾಲಕ್ಕೆ ಸರಿಯಾಗಿ ಲಭ್ಯವಾಗುವಂತೆ ಮಾಡುವ ಭರವಸೆ ನೀಡುವುದು; ಮತ್ತು PCPಗಳು– ಇವುಗಳನ್ನು ಒಳಗೊಂಡಿರುತ್ತವೆ.

**ಪರೀಕ್ಷಾ ಪದ್ಧತಿ**

ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಪರೀಕ್ಷೆಗಳ ರಾಷ್ಟ್ರೀಯ ಮಂಡಳಿ (CBSE) ಮತ್ತು ಭಾರತೀಯ ಶಾಲೆಗಳ ಸರ್ಟಿಫಿಕೇಟ್ ಪರೀಕ್ಷೆಗಳ ಕೌನ್ಸಿಲ್ (CISCE) ಗಳಂತೆ NIOS ಕೂಡ ವರ್ಷಕ್ಕೆ ಎರಡು ಬಾರಿ ಸೆಕೆಂಡರಿ, ಸೀನಿಯರ್ ಸೆಕೆಂಡರಿ ಮತ್ತು ವೃತ್ತಿಪರ ಕೋರ್ಸ್‌ಗಳಿಗೆ ಪರೀಕ್ಷೆ ನಡೆಸುತ್ತದೆ. ಪರೀಕ್ಷಾರ್ಥಿಗಳು ಒಂದು, ಎರಡು ಅಥವಾ ಅದಕ್ಕಿಂತ ಹೆಚ್ಚಿನ ವಿಷಯಗಳಲ್ಲಿ ಕುಳಿತುಕೊಳ್ಳಲು ಅವಕಾಶ ನೀಡಲಾಗುತ್ತದೆ ಮತ್ತು ಪ್ರಮಾಣೀಕರಣ ಮಾನದಂಡವು ಪೂರ್ಣಗೊಳ್ಳುವ ತನಕ ಕ್ರೆಡಿಟ್‌ಗಳು ಶೇಖರವಾಗುತ್ತಾ ಹೋಗುತ್ತವೆ. ಪರೀಕ್ಷಾರ್ಥಿಗೆ ಪಬ್ಲಿಕ್ ಪರೀಕ್ಷೆಗೆ ಕುಳಿತುಕೊಳ್ಳುವ ಒಂಬತ್ತು ಅವಕಾಶಗಳು ಲಭ್ಯವಿರುತ್ತವೆ.

ಎಲಿಮೆಂಟರಿ ಮಟ್ಟದಲ್ಲಿ ಪರೀಕ್ಷಾ ಪದ್ಧತಿಯು; ಅನುಕೂಲವಾದಾಗ ಪರೀಕ್ಷೆಗಳು (ಕೋರಿಕೆಯ ಮೇರೆಗೆ ಪರೀಕ್ಷೆಗಳ ಸಾಗುವಿಕೆ); ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ; ನೈದಾನಿಕ

Digitised by Bharatavani, CIIL

ಮತ್ತು ಪರಿಹಾರಾತ್ಮಕ ಮಾರ್ಗ; ರಂಗದ ಅಂತ್ಯದ ಪರೀಕ್ಷೆ ಮತ್ತು ಪ್ರಮಾಣೀಕರಣ; ಜ್ಞಾನಾತ್ಮಕವಲ್ಲದ ವ್ಯಕ್ತಿತ್ವದ ಅಂಶಗಳು ಪ್ರಮಾಣಪತ್ರದಲ್ಲಿ ಬಿಂಬಿತವಾಗಿರುವುದು, ಇವುಗಳು ಸೇರಿರುತ್ತವೆ.

ತಳಮಟ್ಟದಲ್ಲಿ ಪ್ರಭಾವ ಬೀರಿರುವ NIOS ನ ಕೆಲವು ಗಮನಾರ್ಹ ಯೋಜನೆಗಳೆಂದರೆ: ಭಾರತೀಯ ಸಂಸ್ಕೃತಿ ಮತ್ತು ಪರಂಪರೆ; ಮಾನವೀಯ ಮೌಲ್ಯಗಳು/ಜೀವನಕಲೆ; ಭಾರತದಲ್ಲಿನ ಜನ; ಕಾರ್ಮಿಕ ಮಂತ್ರಾಲಯದ ಸಹಯೋಗದೊಂದಿಗೆ ಬಾಲಕಾರ್ಮಿಕ ಶಿಕ್ಷಣ; ಜನಸಂಖ್ಯೆ ಮತ್ತು ಅಭಿವೃದ್ಧಿ ಶಿಕ್ಷಣ.

**ಸಾಂಸ್ಥಿಕ ರಚನೆ**

NIOS ನ ಅಧ್ಯಕ್ಷರೇ ಇದರ ಮುಖ್ಯ ಕಾರ್ಯ ನಿರ್ವಾಹಕರು. ಇವರಿಗೆ ಎಲ್ಲ ಅಂದರೆ–ತಾಂತ್ರಿಕ, ಆಡಳಿತಾತ್ಮಕ ಮತ್ತು ಆರ್ಥಿಕ ವಿಷಯಗಳಲ್ಲಿ ನೆರವಾಗಲು ಒಬ್ಬ ಕಾರ್ಯದರ್ಶಿ ಇರುತ್ತಾರೆ. ಇಲ್ಲಿ ನಾಲ್ಕು ಮಂದಿ ನಿರ್ದೇಶಕರು ಇರುತ್ತಾರೆ. ಇವರು ವಿವಿಧ ಇಲಾಖೆಗಳನ್ನು ನೋಡಿಕೊಳ್ಳುವುದೇ ಅಲ್ಲದೆ ತಮಗೆ ಸಂಬಂಧಪಟ್ಟ ಇಲಾಖೆಗಳ ವಿಷಯದಲ್ಲಿ ಅಧ್ಯಕ್ಷರಿಗೆ ನೆರವಾಗುತ್ತಾರೆ. ಸಾಮಾನ್ಯಸಭೆಯ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಶೈಕ್ಷಣಿಕ ಮಾರ್ಗದರ್ಶನವನ್ನು ನೀಡುತ್ತಾರೆ ಮತ್ತು ಸಮಿತಿಗೆ ಕಾರ್ಯನೀತಿಗಳನ್ನು ರೂಪಿಸುವಲ್ಲಿ ಮತ್ತು ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಕಾರ್ಯಕಾರಿ ಸಮಿತಿಯು ಕಾರ್ಯನೀತಿಗಳನ್ನು ಮತ್ತು ಕ್ರಿಯಾಯೋಜನೆಗಳನ್ನು ತಯಾರಿಸಲು ಯೋಜನೆಗಳನ್ನು ಕಳಿಸಿಕೊಡುತ್ತದೆ. ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವುದನ್ನು ಖಾತ್ರಿ ಮಾಡಿಕೊಳ್ಳಲು ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುತ್ತದೆ ಮತ್ತು ವಿಮರ್ಶೆ ಕಾರ್ಯಗಳನ್ನು ಕೈಗೊಳ್ಳುತ್ತದೆ.

**NIOS ಕಾರ್ಯಕ್ರಮಗಳ ಅನುಷ್ಠಾನ**

ಮುಕ್ತ ಶಾಲಾ ಶಿಕ್ಷಣದ ರಾಷ್ಟ್ರೀಯ ಸಮಿತಿಯು ತನ್ನ ಕಾರ್ಯಕ್ರಮಗಳನ್ನು 10 ಪ್ರಾದೇಶಿಕ ಕೇಂದ್ರಗಳು ಹಾಗೂ ಭಾರತದಾದ್ಯಂತ ಮತ್ತು ವಿದೇಶಗಳಲ್ಲಿ (ನೇಪಾಳ, ಮಧ್ಯ ಪೂರ್ವ, ಕೆನಡಾ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನಗಳು) ಪ್ರತಿಷ್ಠಾಪಿಸಲಾಗಿರುವ 2000ಕ್ಕಿಂತ ಅಧಿಕ ವ್ಯಾಸಂಗಕೇಂದ್ರಗಳ ಜಾಲದ ಮೂಲಕ ಅನುಷ್ಠಾನಗೊಳಿಸುತ್ತದೆ. NIOSನ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ರಾಷ್ಟ್ರದಾದ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಲು 10 ಪ್ರಾದೇಶಿಕ ಕೇಂದ್ರಗಳನ್ನು ಕೊಲ್ಕತ್ತಾ, ಚಂಡೀಗಢ, ದೆಹಲಿ, ಗುವಾಹತಿ, ಹೈದರಾಬಾದ್, ಕೊಚ್ಚಿ, ಪುಣೆ, ಅಲಹಾಬಾದ್, ಪಾಟ್ನಾ ಮತ್ತು ಜೈಪುರಗಳಲ್ಲಿ ಸ್ಥಾಪಿಸಲಾಗಿದೆ. ಇವುಗಳ ಜೊತೆಯಲ್ಲಿ ಅಧಿಕೃತ ಸಂಸ್ಥೆಗಳೆಂದು ಗುರುತಿಸಲಾಗಿರುವ ಅಭ್ಯಾಸಕೇಂದ್ರಗಳೂ ಇವೆ. ಇವು ಕಲಿಯುವವರ ಕಲಿಕಾ ಪ್ರಕ್ರಿಯೆಯನ್ನು ಸುಗಮಗೊಳಿಸಲು ಅವರಿಗೆ ವೈಯಕ್ತಿಕ ಬೆಂಬಲವನ್ನು ಒದಗಿಸುತ್ತವೆ.

NIOS ವೃತ್ತಿಪರ ಕೋರ್ಸ್‌ಗಳನ್ನು ಅಧಿಕೃತ ವೃತ್ತಿಪರ ಸಂಸ್ಥೆಗಳೆಂದು (AVI) ಕರೆಯಲ್ಪಡುವ ವೃತ್ತಿಪರ ತರಗತಿ ಸಂಸ್ಥೆಗಳ ಮೂಲಕ ನೀಡುತ್ತದೆ. ಇವು ವಿದ್ಯಾರ್ಥಿಗಳಿಗೆ ತಾತ್ವಿಕ ಮತ್ತು ಪ್ರಾಯೋಗಿಕ ತರಬೇತಿಯನ್ನು ಕೊಡುತ್ತವೆ. ಪ್ರಸ್ತುತ NIOS ಕಾರ್ಮಿಕರ ಶಿಕ್ಷಣ ಸಂಸ್ಥೆಗಳು, ಗ್ರಾಮೀಣ ಕೃಷಿಕೇಂದ್ರಗಳು, ಸಮುದಾಯ ಪಾಲಿಟೆಕ್ನಿಕ್ (ವಿವಿಧ ತಾಂತ್ರಿಕ ವಿದ್ಯೆಗಳಲ್ಲಿ ಶಿಕ್ಷಣ ನೀಡುವ) ಶಾಲೆಗಳು, ವೃತ್ತಿಪರ ಶಾಲೆಗಳು, ಮತ್ತು NIOS ಗೆ ತರಬೇತಿ ಕೇಂದ್ರಗಳಾಗಿ ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿದೆ.

NIOS ನೊಂದಿಗೆ ವ್ಯಾಸಂಗ ಕೇಂದ್ರಗಳಾಗಿ ಸೇರಿಕೊಂಡಿರುವ ಅಧಿಕೃತ ಸಂಸ್ಥೆ (AI)ಗಳು ಸೀನಿಯರ್ ಸೆಕೆಂಡರಿ ಅಥವಾ ಸೆಕೆಂಡರಿ, ನೋಂದಾಯಿತ/ಮನ್ನಣೆಗೆ ಪಡೆದ ಶಾಲೆಗಳಾಗಿವೆ. ವಿಶೇಷ ಸಂದರ್ಭಗಳಲ್ಲಿ ಉನ್ನತ ಮಟ್ಟದ ಲೋಕೋಪಕಾರಿಯಾದ ಕಾರ್ಯಗಳಲ್ಲಿ ತೊಡಗಿಕೊಂಡಿರುವ ನೋಂದಾಯಿತ ಸಂಸ್ಥೆಗಳಿಗೂ, ತುಂಬಾ ಪ್ರಸಿದ್ಧಿ ಪಡೆದಿರುವ ಸೊಸೈಟಿಗಳಿಗೂ ಮನ್ನಣೆ ನೀಡಲಾಗಿದೆ. ಫೌಂಡೇಷನ್, ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಕೋರ್ಸ್‌ಗಳನ್ನು ಈ ಕೇಂದ್ರಗಳ ಮೂಲಕ ನಡೆಸಲಾಗುತ್ತದೆ.

ಅಧಿಕೃತ ಸಂಸ್ಥೆ(AI)ಗಳು ಮತ್ತು ಅಧಿಕೃತ ವೃತ್ತಿಪರ ಸಂಸ್ಥೆ (AVI)ಗಳನ್ನು ಅಲ್ಲದೆ ವಿಶೇಷವಾದ ಕಲಿಯುವವರ ಅಗತ್ಯಗಳನ್ನು ಪೂರೈಸುವ ಸಲುವಾಗಿ ಮತ್ತೆ ಕೆಲವು ಸಂಸ್ಥೆಗಳನ್ನು ಅಧಿಕೃತಗೊಳಿಸಿದೆ. ಈ ಗುಂಪಿಗೆ ಸೇರಿದ ವ್ಯಾಸಂಗ ಕೇಂದ್ರಗಳನ್ನು ಪ್ರತಿಕೂಲ ಪರಿಸ್ಥಿತಿಯಲ್ಲಿರುವವರ ಶಿಕ್ಷಣಕ್ಕಾಗಿನ ವಿಶೇಷವಾದ ಅಧಿಕೃತ ಸಂಸ್ಥೆ(SAIED)ಗಳು ಎಂದು ಕರೆಯಲಾಗುತ್ತದೆ. ದೈಹಿಕ ಮತ್ತು ಜ್ಞಾನೇಂದ್ರಿಯಗಳು ಹಾಳಾಗಿರುವ ಮತ್ತು ಸಾಮಾಜಿಕವಾಗಿ ಹಾಗೂ ಭೌಗೋಳಿಕವಾಗಿ ಅನಾನುಕೂಲದಲ್ಲಿರುವ ಒಂದು ಪ್ರತ್ಯೇಕ ಹಾಗೂ ಅತಿ ಮುಖ್ಯ ಗುಂಪಿನ ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಅವರಿಗೆ ನೆರವಾಗುವುದೇ ಈ ಸಂಸ್ಥೆಗಳ ಉದ್ದೇಶ.

ಈಗ ಇರುವಂತೆ ಮುಕ್ತ ಶಾಲಾಶಿಕ್ಷಣದ ರಾಷ್ಟ್ರೀಯ ಸಂಸ್ಥೆಯು ಮುಕ್ತ ಮೂಲ ಎಲಿಮೆಂಟರಿ ಶಿಕ್ಷಣ ಕಾರ್ಯಕ್ರಮಗಳಿಗಾಗಿ 175ಕ್ಕೂ ಅಧಿಕ ನಿಯೋಗಿಯ ಕಾರ್ಯ ಶಾಲೆಗಳಿಗೆ ಅಂದರೆ ಏಜೆನ್ಸಿಗಳಿಗೆ ಮತ್ತು ಮುಕ್ತ ಮೂಲ ಎಲಿಮೆಂಟರಿ ಶಿಕ್ಷಣ(ವಯಸ್ಕರ) ಕಾರ್ಯಕ್ರಮಗಳಿಗಾಗಿ ಸುಮಾರು 50 ಏಜೆನ್ಸಿಗಳಿಗೂ ಅಧಿಕೃತ ಮನ್ನಣೆ ನೀಡಿದೆ. ಈ ಏಜೆನ್ಸಿಗಳಲ್ಲಿ ಸ್ವಯಂಪ್ರೇರಿತ ಸಂಸ್ಥೆಗಳೂ ಸರ್ಕಾರೇತರ ಸಂಸ್ಥೆಗಳೂ ಜಿಲ್ಲಾ ಸಾಕ್ಷರತಾ ಸಮಿತಿಗಳಂತಹ ಸರ್ಕಾರಿ ಏಜೆನ್ಸಿಗಳೂ ಸೇರಿವೆ. ಪ್ರತಿ ಏಜೆನ್ಸಿಯಲ್ಲಿಯೂ ಹಲವಾರು ಕೇಂದ್ರಗಳಿವೆ.

**ಸರ್ಕಾರೇತರ ಸಂಸ್ಥೆ (NGO)ಗಳೊಂದಿಗೆ NIOS ನ ಸಹಭಾಗಿತ್ವ**

ಈಚಿನ ವರ್ಷಗಳಲ್ಲಿ ಭಾರತ ಮತ್ತು ಇತರ ಏಷಿಯಾದ ರಾಷ್ಟ್ರಗಳಲ್ಲಿ ಕಾಣಬರುವ ಒಂದು ಪ್ರವೃತ್ತಿ ಎಂದರೆ ಸರ್ಕಾರ ಮತ್ತು NGOಗಳು ಪರಸ್ಪರ ಸಹಯೋಗದೊಂದಿಗೆ ಹೋರಾಡುವುದು.

Digitised by Bharatavani, CIIL

ಭಾರತದಲ್ಲಿ ಸಾಕ್ಷರತೆ ಮತ್ತು ಮುಕ್ತ ಶಾಲಾ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸ್ವಯಂ ಪ್ರೇರಿತವು ಒಂದು ಚುರುಕಾದ ಪಾತ್ರವನ್ನು ವಹಿಸುತ್ತದೆ. ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ರಾಷ್ಟ್ರಮಟ್ಟದಲ್ಲಿ ಮುಕ್ತಶಾಲಾ ಶಿಕ್ಷಣ ವ್ಯವಸ್ಥೆಯೂ ರಾಜ್ಯಮಟ್ಟದಲ್ಲಿ ಮುಕ್ತಶಾಲೆಗಳೂ ಪ್ರಪಂಚದಾದ್ಯಂತ ಮುಕ್ತಶಾಲಾಶಿಕ್ಷಣವನ್ನು ಬಲಪಡಿಸುವಲ್ಲಿ ಗಣನೀಯ ಪಾತ್ರವನ್ನು ವಹಿಸುತ್ತವೆ ಎಂದು ನಿರೀಕ್ಷಿಸಲಾಗಿದೆ. NGOಗಳ ಸಹಯೋಗದೊಂದಿಗೆ NIOS, ತಲುಪಲು ಕಠಿಣವಾಗಿರುವ ಕಲಿಕಾರ್ಥಿಗಳ ಗುಂಪು, ಸಮಾಜದಲ್ಲಿರುವ ಉಪೇಕ್ಷಿತ, ಅಮುಖ್ಯವಾಗಿರುವ ಹಾಗೂ ಪ್ರತಿಕೂಲ ಪರಿಸ್ಥಿತಿಯ ಗುಂಪುಗಳೆಡೆಗೆ ಮುಕ್ತಶಾಲಾ ಶಿಕ್ಷಣದ ಚಳವಳಿಯನ್ನು ಕೊಂಡೊಯ್ಯುವ ಸವಾಲನ್ನು ಎದುರಿಸಲು ವಿಶೇಷವಾದ ಪೂರ್ವಭಾವಿ ಕ್ರಮವನ್ನು ಕೈಗೊಂಡಿದೆ. ಈ ರಾಷ್ಟ್ರದ ಬಹುದೊಡ್ಡ ಸಂಖ್ಯೆಯ ಸ್ವಯಂಸೇವಾ ಸಂಸ್ಥೆಗಳಿಗೆ ತನ್ನ ಅಧಿಕೃತ ಏಜೆನ್ಸಿಗಳು ಎಂಬುದಾಗಿ ಮನ್ನಣೆ ನೀಡುತ್ತಿದೆ. ಈ NGOಗಳಿಗೆ ತನ್ನಲ್ಲಿರುವ ಸಾಮಗ್ರಿಯನ್ನು ಅವರ ಅವಶ್ಯಕತೆಗೆ ಸರಿಹೊಂದುವಂತೆ ರೂಪಾಂತರ ಮಾಡಿಕೊಳ್ಳಲು ಕಲಿಕಾಸಾಮಗ್ರಿಯನ್ನು ಅವರಿಗೆ ಒದಗಿಸುವುದರ ಮೂಲಕ ಅವರಿಗೆ ಬೆಂಬಲ ನೀಡುತ್ತಿದೆ. ಅಲ್ಲದೆ ಸ್ಥಳೀಯ ಸಂದರ್ಭಕ್ಕೆ ಅನುಗುಣವಾಗಿ ಸಾಮಗ್ರಿಗಳನ್ನು ತಯಾರಿಸುವಲ್ಲಿ, ನೀಲನಕ್ಷೆ ಆಧಾರಿತ ಪ್ರಶ್ನೆಪತ್ರಿಕೆ ತಯಾರಿಸುವಲ್ಲಿ, ಮಾದರಿ ಪ್ರಶ್ನೆಪತ್ರಿಕೆಗಳ ಪರ್ಯಾಯ ಸೆಟ್ಟುಗಳನ್ನು ರೂಪಿಸುವಲ್ಲಿ ಅವರಿಗೆ ನೆರವು ನೀಡಿದೆ. ಅರ್ಹವಾದ ಕಲಿಕಾರ್ಥಿಗಳಿಗೆ ಜಂಟಿಯಾಗಿ ಪ್ರಮಾಣಪತ್ರಗಳನ್ನು ನೀಡುವುದೂ ಇದರಲ್ಲಿ ಸೇರಿದೆ. NIOS ಮತ್ತು NGOಗಳ ಸಹಿ ಮಾಡಿರುವ ಪರಸ್ಪರ ಒಪ್ಪಿಗೆಯ ಪ್ರಮಾಣಪತ್ರದಲ್ಲಿ ಸೂಚಿಸಿರುವಂತೆ ಸಂಸ್ಥೆಯ ಮುಖ್ಯಸ್ಥರು ಹಾಗೂ NIOS ಒಟ್ಟಾಗಿ ಈ ಕಾರ್ಯವನ್ನು ನೆರವೇರಿಸುತ್ತಾರೆ.

NGOಗಳು ತಳಮಟ್ಟದ ಕೆಲಸಗಾರರಂತೆ NIOS ನ ಎಲ್ಲ ನವೀನತಮ ಮಧ್ಯ ಪ್ರವೇಶಗಳಲ್ಲಿ ಅತ್ಯಂತ ಹೆಚ್ಚಿನ ನೆರವನ್ನು ನೀಡುತ್ತಿವೆ. ಅಧಿಕೃತವಾದ ಈ ಏಜೆನ್ಸಿಗಳ ಬೆಂಬಲದಿಂದ NIOS ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಪರ್ಯಾಯ ಕಾರ್ಯತಂತ್ರಗಳನ್ನು ರೂಪಿಸಲು ಸಾಧ್ಯವಾಗಿದೆ. NIOS ಮತ್ತು NGOಗಳ ಮುಂದಿರುವ ಪ್ರಮುಖ ಚರ್ಚಾಂಶಗಳಲ್ಲಿ ಒಂದು ಅಂಶವೆಂದರೆ ಮುಕ್ತಶಾಲಾ ಶಿಕ್ಷಣ ಮತ್ತು ದೂರಶಿಕ್ಷಣ ಕಾರ್ಯಕ್ರಮಗಳನ್ನು ತಳಹಂತದ ಸಮಸ್ಯೆಗಳಿಗೆ ಸಂಪರ್ಕ ಕಲ್ಪಿಸುವುದು. NIOS ನ ಮುಂದಿರುವ ಸಮಂಜಸವಾದ ಪ್ರಶ್ನೆ ಎಂದರೆ 'NGO ಗಳು ಮುಕ್ತಶಾಲಾ ಶಿಕ್ಷಣದ ಸಂದರ್ಭದಲ್ಲಿ 'ಶಿಕ್ಷಣದ ಪಹರೆದಳ'ವಾಗಿ ಕಾರ್ಯನಿರ್ವಹಿಸಲು ಅವುಗಳನ್ನು ಶಕ್ತಿಶಾಲಿಯನ್ನಾಗಿಸಲು ಕ್ರಿಯಾಯೋಜನೆಯು ಹೇಗಿರಬೇಕು?' ಎಂಬುದು.

ಮುಕ್ತಶಾಲಾಶಿಕ್ಷಣದ ರಾಷ್ಟ್ರೀಯ ಸಂಸ್ಥೆಯು NGO ಗಳ ಎರಡು ಸ್ಪಷ್ಟವಾದ ಪಾತ್ರಗಳನ್ನು ಕಣ್ಣಮುಂದೆ ತಂದುಕೊಳ್ಳುತ್ತದೆ. ಮೊದಲನೆಯದು PCPಗಳನ್ನು ಪುಷ್ಟಿಗೊಳಿಸುವುದು. ಮತ್ತೊಂದು ಈ ಕಾರ್ಯದಲ್ಲಿ ಅತಿ ಅಗತ್ಯವಾಗಿ ಇರಬೇಕಾದ ಸ್ವಯಂ ಪ್ರೇರಣೆಯ ಹುಮ್ಮಸ್ಸನ್ನು ಅಸ್ತಿತ್ವಕ್ಕೆ ತರುವುದು. ಔಪಚಾರಿಕ, ಮುಕ್ತ ಶಾಲಾಶಿಕ್ಷಣ ಮತ್ತು NGO ಗಳು ನಡೆಸುವ ಕಾರ್ಯಕ್ರಮಗಳು ಮೊದಲಾದ ಎಲ್ಲ ಬಹುಕವಲುಗಳುಳ್ಳ ಹಾಗೂ ಅಭಿಗಾಮಿ ಪ್ರಯತ್ನಗಳು ಇನ್ನೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪಡೆಯಬೇಕಾದ ಜಂಟಿ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು.

NIOS ಈ ಕಾಳಜಿಗಳನ್ನು COL, ಕೆನಡಾದ ಜೊತೆಯಲ್ಲಿ ಹಂಚಿಕೊಳ್ಳುತ್ತದೆ. ಈ ಸಂದರ್ಭದಲ್ಲಿ NIOS ಮತ್ತು COLಗಳು 2001 ನವೆಂಬರ್ 23 ಮತ್ತು 24ರಂದು ಸ್ವಯಂಪ್ರೇರಿತ್ವ, ಸರ್ಕಾರೇತರ ಸಂಸ್ಥೆಗಳು ಮತ್ತು ಮುಕ್ತ ಶಾಲಾಶಿಕ್ಷಣದ ಬಗ್ಗೆ ಭಾರತದ ನವದೆಹಲಿಯಲ್ಲಿ ಒಂದು ಅಂತರರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿದವು. ಈ ಕಾರ್ಯಾಗಾರದ ಕೆಲವು ಪ್ರಧಾನ ಶಿಫಾರಸ್ಸುಗಳು NIOS ಮತ್ತು NGOಗಳು ಜಂಟಿ ಮಧ್ಯಸ್ಥಿಕೆಯನ್ನು ಯೋಜಿಸುವ ಬಗ್ಗೆ ಮುಖ್ಯವಾಗಿ ಭಾರತದಲ್ಲಿ ಹಾಗೂ ಇತರ ಎಲ್ಲ ಏಷಿಯನ್ ಮತ್ತು ದಕ್ಷಿಣ ಆಫ್ರಿಕಾ ರಾಷ್ಟ್ರಗಳ ಬಗ್ಗೆ ವಿಶೇಷ ಮಹತ್ವ ಹೊಂದಿದೆ. ಇವು ಈ ಕೆಳಕಂಡ ಕ್ಷೇತ್ರಗಳಿಗೆ ಸಂಬಂಧಿಸಿವೆ;

- ಸ್ವಯಂ ಪ್ರೇರಿತತ್ವ, ವಿಶೇಷವಾಗಿ ವಿನ್ಯಾಸಗೊಳಿಸಿದ ತರಬೇತಿ ಕಾರ್ಯಕ್ರಮಗಳು ಮತ್ತು ಪೂರ್ವ ನಿಯಂತ್ರಕ ಕಾರ್ಯಕ್ರಮಗಳ ಕೋರ್ಸಿನ ನೆರವಿನಿಂದ, ಮುಕ್ತಕಲಿಕೆ ಹಾಗೂ ದೂರಶಿಕ್ಷಣಗಳ ಮೂಲಕ ಸ್ವಯಂಪ್ರೇರಿತತ್ವದ ಪ್ರಗತಿಯನ್ನು ಮಾಡಬಹುದು.

- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ವಯಂಪ್ರೇರಿತತ್ವದ ಬಗ್ಗೆ ಅನುಭವಗಳನ್ನು ಹಂಚಿಕೊಳ್ಳಬಹುದು ಹಾಗೂ ಅದಲು ಬದಲು ಮಾಡಿಕೊಳ್ಳಬಹುದು. ಇದು ವಿಶೇಷವಾಗಿ ದಕ್ಷಿಣ ಏಷಿಯಾ ರಾಷ್ಟ್ರಗಳಿಗೆ ಸಂಬಂಧಿಸಿರುತ್ತದೆ. ಇದನ್ನು ಒಂದು ನಿರ್ದೇಶಿಕೆಯನ್ನು ರಚಿಸುವುದರ ಮೂಲಕ ಮತ್ತು ಮುಕ್ತ ಶಾಲಾಶಿಕ್ಷಣದಲ್ಲಿ ಒಂದು ಅಂತರರಾಷ್ಟ್ರೀಯ ಸಂಪನ್ಮೂಲಕೇಂದ್ರವನ್ನು ಸ್ಥಾಪಿಸುವುದರ ಮೂಲಕ ಮಾಡಬೇಕು. ಸ್ವಯಂ ಸೇವಕರ ಒಂದು ರಾಷ್ಟ್ರೀಯ ಒಕ್ಕೂಟವನ್ನು ಸ್ಥಾಪಿಸಬೇಕು. ಮತ್ತು ಈ ಕಾರ್ಯಕ್ಕಾಗಿ ಪ್ರಪಂಚದ ವಿವಿಧ ಭಾಗಗಳಲ್ಲಿ ಅನೇಕ ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಕಾರ್ಯಾಗಾರಗಳನ್ನು ಆಯೋಜಿಸಬೇಕು.

ಈ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ NIOS ಒಂದು ಕ್ರಿಯಾಯೋಜನೆಯ ಬಗ್ಗೆ ಕೆಲಸ ಮಾಡುತ್ತಿದೆ.

**ಭಾರತದಲ್ಲಿ ಮುಕ್ತಶಾಲಾಶಿಕ್ಷಣಕ್ಕಾಗಿ ಒಂದು ರಾಷ್ಟ್ರೀಯ ಒಕ್ಕೂಟವನ್ನು ಆಯೋಜಿಸುವುದು.**

ರಾಷ್ಟ್ರದಲ್ಲಿ ಮುಕ್ತಶಾಲಾ ಶಿಕ್ಷಣವನ್ನು ಬೆಳೆಸುವ ಮತ್ತು ಉತ್ತೇಜಿಸುವ ಕಾರ್ಯದಲ್ಲಿ NIOS ಒಂದು ನಿರ್ಣಾಯಕ ಪಾತ್ರವನ್ನು ವಹಿಸಬೇಕಾಗಿದೆ. ಭಾರತದಂತಹ ವಿಶಾಲವಾದ

Digitised by Bharatavani, CIIL

ರಾಷ್ಟ್ರದಲ್ಲಿ ಪ್ರಾದೇಶಿಕ ಅವಶ್ಯಕತೆಗಳನ್ನು ಪೂರೈಸುವುದು ರಾಷ್ಟ್ರೀಯಮಟ್ಟದ ಒಂದು ಸಂಸ್ಥೆಗೆ ಸಾಧ್ಯವಿಲ್ಲ. ಆದ್ದರಿಂದ NIOS ರಾಜ್ಯ ಮುಕ್ತ ಶಾಲೆಗಳನ್ನು ಹಾಗೂ ಮುಕ್ತ ಶಾಲಾಶಿಕ್ಷಣಕ್ಕಾಗಿ ರಾಜ್ಯ ಮುಕ್ತ ಶಾಲೆಗಳನ್ನು ವಿಶೇಷವಾಗಿ ಪ್ರಾಂತೀಯ ಮಾಧ್ಯಮದಲ್ಲಿ ಪ್ರಾರಂಭಿಸಿ ಅವುಗಳನ್ನು ಅಭಿವೃದ್ಧಿಪಡಿಸಲು NIOS ರಾಜ್ಯಗಳಿಗೆ ವೃತ್ತಿಪರವಾದ ಮತ್ತು ತಾಂತ್ರಿಕ ನೆರವನ್ನು ಒದಗಿಸುತ್ತಿದೆ.

ಮುಕ್ತ ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಒಕ್ಕೂಟವನ್ನು (NCOS) 1997ರ ಸೆಪ್ಟೆಂಬರ್ 3 ರಂದು ಪ್ರಾರಂಭಿಸಲಾಯಿತು. ಇದರ ಉದ್ದೇಶವೆಂದರೆ ರಾಷ್ಟ್ರದಲ್ಲಿ ಮುಕ್ತ ಶಾಲಾಶಿಕ್ಷಣ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವಲ್ಲಿ NIOS ಒಂದು ಅತ್ಯುನ್ನತಮಟ್ಟದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಬೇಕು ಎಂಬುದಾಗಿದೆ.

NIOS ನ ಚಾಕ್ಷುಕ್ಷೀಕರಿಸಿದ ಮುಖ್ಯ ಪಾತ್ರವೆಂದರೆ ರಾಜ್ಯ ಸರ್ಕಾರಗಳ ಸಹಕಾರವನ್ನು ಪಡೆಯುವುದು. ಶಿಕ್ಷಣವನ್ನು ದೊರಕಿಸುವ ಮತ್ತು ಸಾರ್ವತ್ರಿಕರಣಗೊಳಿಸುವ ಉದ್ದೇಶಗಳನ್ನು ಶಾಲಾಮಟ್ಟದಲ್ಲಿ ಸಾಧಿಸುವುದು ಮತ್ತು ಶಿಕ್ಷಣವನ್ನು ಸರ್ವರಿಗೂ ಒದಗಿಸುವುದು – ಈ ಗುರಿಗಳನ್ನು ಸಾಧಿಸಲು ಸರ್ಕಾರದ ನೆರವು ಪಡೆದ ಹಾಗೂ ಸರ್ಕಾರೇತರ ಸಂಘಟನೆಗಳ ಸಹಕಾರವನ್ನು ಮುಕ್ತ ಕಲಿಕಾ ವ್ಯವಸ್ಥೆ (OLS)ಯನ್ನು ಅಭಿವೃದ್ಧಿಪಡಿಸುವ ಮತ್ತು ವಿಸ್ತಾರಗೊಳಿಸುವ ಕಾರ್ಯದಲ್ಲಿ ಪಡೆಯುವುದು.

### NIOS ನ ಉದ್ದೇಶಗಳು ಮತ್ತು ಚಟುವಟಿಕೆಗಳು

NIOS ನ ಮೇಲೆ ಕಾನೂನು ಬದ್ಧವಾಗಿ ಬಂದಿರುವ ಆದೇಶವನ್ನು ಗಮನದಲ್ಲಿ ಇರಿಸಿಕೊಂಡು ಮುಕ್ತ ಶಾಲಾಶಿಕ್ಷಣದಲ್ಲಿ ತೊಡಗಿಕೊಂಡಿರುವ ಏಜೆನ್ಸಿ/ಸಂಸ್ಥೆಗಳ ನಡುವೆ ಉತ್ತಮ ಸಹಕಾರವನ್ನು ಉತ್ತೇಜಿಸುವ ವಿಶಾಲ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತದೆ. NIOS ನ ವಿಶಾಲವಾದ ಗುರಿಗಳನ್ನು ಊಹಿಸಿಕೊಂಡು ರೂಪಿಸಲಾದ ಮುಖ್ಯ ಉದ್ದೇಶಗಳು ಇಂತಿವೆ; (i) ಮುಕ್ತ ಶಾಲಾ ಶಿಕ್ಷಣದ ವಿಸ್ತರಣೆ, ಸಹಕಾರ ಹಾಗೂ ಗುಣ ಮತ್ತು ಮಾನಕಗಳ ಖಾತ್ರಿಯ ಬಗ್ಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದು (ii) ಬೆಲೆಯ ಮೇಲೆ ಪರಿಣಾಮ ಉಂಟುಮಾಡುವ ದಿಕ್ಕಿನಲ್ಲಿ ಸಂಪನ್ಮೂಲಗಳನ್ನು ಮತ್ತು ಮೂಲಸೌಕರ್ಯಗಳನ್ನು ಪರಸ್ಪರ ಲಾಭ ಹಾಗೂ ಬೆಳವಣಿಗೆಗಾಗಿ ಹಂಚಿಕೊಳ್ಳುವುದು. (iii) ಮುಕ್ತ ಶಾಲಾ ಶಿಕ್ಷಣದ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಮೌಲ್ಯಮಾಪನ ಚಟುವಟಿಕೆಗಳಿಗೆ ಸಂಬಂಧಿಸಿದ ಜಂಟಿ ಸಾಹಸೋದ್ಯಮಗಳನ್ನು ಉತ್ತೇಜಿಸುವುದು. (iv) ಮುಕ್ತ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿವಿಧ ರಾಷ್ಟ್ರೀಯ, ಅಂತರರಾಷ್ಟ್ರೀಯ ಏಜೆನ್ಸಿಗಳೊಂದಿಗೆ ಸಹಕರಿಸುವ, ಸಮನ್ವಯ ಮಾಡುವ, ಒಟ್ಟಾಗಿ ಕೆಲಸ ಮಾಡುವ ಕಾರ್ಯಗಳಲ್ಲಿ ಸಂಪರ್ಕ ಏಜೆನ್ಸಿಯಾಗಿ ಕೆಲಸ ಮಾಡುವುದು ಮತ್ತು (v) ಮುಕ್ತ ಶಾಲಾ ಶಿಕ್ಷಣ ಏಜೆನ್ಸಿಗಳು ಮತ್ತು ಸಂಸ್ಥೆಗಳಲ್ಲಿ ಸಂಶೋಧನಾ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.

NCOSನ ಚಟುವಟಿಕೆಗಳಲ್ಲಿ ಇವು ಧಾರಾಳವಾಗಿ ಸೇರಿಕೊಂಡಿರುತ್ತವೆ. (i) ರಾಜ್ಯ ಮುಕ್ತ ಶಾಲೆಗಳನ್ನು ಮತ್ತು ಮುಕ್ತ ಶಾಲಾ ಶಿಕ್ಷಣದ ರಾಜ್ಯ ಕೇಂದ್ರಗಳನ್ನು ಅಂಚೆ ತೆರಪಿನ ಶಾಲೆ (ಪತ್ರಾಚಾರ್ ವಿದ್ಯಾಲಯ)ಗಳನ್ನು ಮುಕ್ತ ಶಾಲೆ(ಮುಕ್ತ ವಿದ್ಯಾಲಯ)ಗಳನ್ನಾಗಿ ತಾಂತ್ರಿಕ ಹಾಗೂ ವೃತ್ತಿಪರ ನೆರವನ್ನು ಮತ್ತು ಸಮಾಲೋಚನೆಯನ್ನು ಒದಗಿಸುವುದು (ii) ಕ್ರೆಡಿಟ್ ವರ್ಗಾವಣೆಯ ಸಾಧ್ಯತೆಯೂ ಸೇರಿದಂತೆ ದೂರವಿಧಾನ ಮತ್ತು ಮುಕ್ತ ಕಲಿಕಾ ವ್ಯವಸ್ಥೆಗಳ ಮೂಲಕ ಆಯೋಜಿಸಲಾಗುವ ವಿವಿಧ ಕಾರ್ಯಕ್ರಮ/ಚಟುವಟಿಕೆಗಳ ಪ್ರಮಾಣಕ ಮತ್ತು ಗುಣಮಟ್ಟಗಳನ್ನು ಕಾಪಾಡಲು ರೂಢಿಯ ಮಟ್ಟ ಮತ್ತು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು (iii) ಪರಸ್ಪರ ಆಸಕ್ತಿ ಮತ್ತು ಲಾಭಕ್ಕಾಗಿ ಸಂಪನ್ಮೂಲಗಳನ್ನು, ಪರಿಣತಿಯನ್ನು, ಪಠ್ಯಕ್ರಮವನ್ನು, ಕಲಿಕೆಯ ಸಾಮಗ್ರಿಗಳನ್ನು ಮತ್ತು ಬೋಧನಾ–ಕಲಿಕಾ ತಂತ್ರಗಳನ್ನು ಹಂಚಿಕೊಳ್ಳುವುದು (iv) ಪ್ರಕಟಣೆಗಳು, ಸಭೆಗಳು, ಕಾರ್ಯಾಗಾರಗಳು ಮತ್ತು ವಿಚಾರಸಂಕಿರಣಗಳು ಮೊದಲಾದ ವೇದಿಕೆಗಳನ್ನು (ಅನುಭವಗಳನ್ನು ಹಂಚಿಕೊಳ್ಳಲು) ಏರ್ಪಡಿಸುವುದು. ಇವುಗಳನ್ನು ವ್ಯವಸ್ಥೆಯ ಗುಣಮಟ್ಟ ಮತ್ತು ಪ್ರಮಾಣಕಗಳನ್ನು ಉತ್ತಮ ಪಡಿಸಲು ಮತ್ತು ಸುಲಭ ಗಮ್ಯತೆ ಹಾಗೂ ಧರ್ಮನ್ಯಾಯ ಅಂದರೆ ಕಾನೂನಿನಲ್ಲಿ ಬಿಟ್ಟು ಹೋಗಿರುವುದನ್ನು ಸೇರಿಸಿಕೊಂಡು ನಡೆಸುವ ನ್ಯಾಯಗಳನ್ನು ವೃದ್ಧಿಪಡಿಸುವುದೂ ಇದರಲ್ಲಿ ಸೇರಿದೆ. (v) ರಾಷ್ಟ್ರದಲ್ಲಿ ಮತ್ತು ವಿದೇಶಗಳಲ್ಲಿನ ಮುಕ್ತಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಅವಸ್ಥೆಗಳ ದತ್ತಾಂಶ ಸಂಗ್ರಹವನ್ನು ಅಭಿವೃದ್ಧಿಗೊಳಿಸುವುದು ಮತ್ತು ಕಾಪಾಡುವುದು. (vi) ಔಪಚಾರಿಕ ಮತ್ತು ಅನೌಪಚಾರಿಕ ಸಮಾಲೋಚನೆಗಳ ಮೂಲಕ ಮುಕ್ತ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಏಜೆನ್ಸಿಗಳೊಂದಿಗೆ ಉತ್ತಮ ಸಂಪರ್ಕ ಇಟ್ಟುಕೊಳ್ಳಲು ಸಹಾಯ ಮಾಡುವುದು. (vii) ಪಠ್ಯಕ್ರಮದ ವಿಶದೀಕರಣ, ಕೋರ್ಸ್ ಸಾಮಗ್ರಿಗಳ ತಯಾರಿಕೆ, ಕೋರ್ಸ್‌ಗಳು, ತರಬೇತಿ ಮತ್ತು ಸಂಶೋಧನೆಗಳ ವಿತರಣೆ. (viii) ಮುಕ್ತ ಶಾಲಾ ಶಿಕ್ಷಣದ ವಿವಿಧ ವ್ಯವಸ್ಥೆಗಳಲ್ಲಿ ಹೊಸತನ ತರುವ ಪರ್ಯಾಯಗಳನ್ನು ಹೊರ ಹೊಮ್ಮಿಸಲು ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು, ಸುಗಮಗೊಳಿಸುವುದು, ಉತ್ತಮ ಅರಿವನ್ನು ಬೆಳೆಸುವುದು, ಜ್ಞಾನವನ್ನು ಉತ್ಪತ್ತಿ ಮಾಡುವುದು, ಮತ್ತು ಬೋಧನ–ಕಲಿಕೆ ಪ್ರಕ್ರಿಯೆ, ತರಬೇತಿ ಮತ್ತು ನಿಯಂತ್ರಣಗಳನ್ನು ಉತ್ತಮಪಡಿಸಲು ಶೈಕ್ಷಣಿಕ, ಸಂವಹನ ಮತ್ತು ಮಾಹಿತಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಮುಕ್ತ ಶಾಲೆಗಳು ಹಾಗೂ ಇತರ ಇಂತಹ ಸಂಸ್ಥೆಗಳಿಗೆ ತಾಂತ್ರಿಕ ನೆರವನ್ನು ಒದಗಿಸುವುದು.

ಮೇಲೆ ಉಲ್ಲೇಖಿಸಿದ NCOSನ ಪಾತ್ರಗಳನ್ನು ಕಾರ್ಯಗತಗೊಳಿಸಲು ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅಧಿವೇಶನಗಳನ್ನು COL, ಕೆನಡಾದ ಸಹಯೋಗದೊಂದಿಗೆ NIOS ನಡೆಸಿತು. ಈ ಸಮಾವೇಶಗಳಿಂದ

Digitised by Bharatavani, CIIL

ಈ ಕೆಳಗೆ ಉಲ್ಲೇಖಿಸಲಾದ ಕೆಲವು ಶಿಫಾರಸ್ಸುಗಳು NIOS ಕಾರ್ಯಕ್ರಮಗಳನ್ನು ಯೋಜಿಸುವುದರ ಬಗ್ಗೆ ಗಣನೀಯವಾದ ಸಂಬಂಧ ಹೊಂದಿವೆ.

(i) ರಾಜ್ಯಶಿಕ್ಷಣ ಇಲಾಖೆಗಳು ಸಾಮಾಜಿಕ ಪುನರ್ ನಿರ್ಮಾಣಕ್ಕಾಗಿ ಇದುವರೆಗೂ ಎಟುಕುವವರನ್ನು ಸಾಮಾನ್ಯವಾದ ಜೀವನವನ್ನು ಸಮೃದ್ಧಿಗೊಳಿಸುವ ಮತ್ತು ವೃತ್ತಿಪರ ಶಿಕ್ಷಣವನ್ನು ಪ್ರಾಥಮಿಕ ಹಂತದಿಂದ ಪದವಿಪೂರ್ವ ಹಂತದವರೆಗೆ ಕೋರ್ಸ್‌ಗಳು ಮತ್ತು ಕಾರ್ಯಕ್ರಮಗಳ ಮೂಲಕ ನೀಡಲು ಮುಕ್ತ ಶಾಲಾ ಶಿಕ್ಷಣವನ್ನು ಕಾರ್ಯಸಾಧ್ಯವಾದ ಮತ್ತು ಪರಿಣಾಮಕಾರಿಯಾದ ಪರ್ಯಾಯ ಹಾಗೂ ಪರಿಣಾಮಕಾರಿಯಾದ ಶಿಕ್ಷಣವ್ಯವಸ್ಥೆ ಎಂದು ಭಾವಿಸಿ ಅದನ್ನು ಪ್ರೋತ್ಸಾಹಿಸಲು ಪರಿಗಣಿಸುವುದು.

(ii) NIOS, ರಾಜ್ಯ ಮುಕ್ತ ಶಾಲೆ(SOS)ಗಳು, MHRD, ರಾಜ್ಯ ಶಿಕ್ಷಣಇಲಾಖೆಗಳು ಮತ್ತು ಇತರ ಸಂಬಂಧಪಟ್ಟ ಸಂಘಟನೆಗಳ ಒಂದು ಜಾಲವನ್ನು ರೂಪಿಸಲು ಒಂದು ಚಾರಟ್ಟನ್ನು ತಯಾರಿಸಿ ಅದನ್ನು ಕಾರ್ಯಸಮರ್ಥವನ್ನಾಗಿ ಮಾಡುವುದು.

(iii) NIOS ಮತ್ತು SOSಗಳು ಉಪಜೀವಿ(chient)ಗಳ ಶೈಕ್ಷಣಿಕ ಅಗತ್ಯಗಳನ್ನು ಗುರುತಿಸಲು ಜಂಟಿಯಾದ ಸಮಾಜೋ-ಶೈಕ್ಷಣಿಕ ಸಮೀಕ್ಷೆಗಳನ್ನು ನಡೆಸುವುದು.

(iv)ಮುಕ್ತ ಶಾಲೆಗಳನ್ನು ಆಜೀವ ಕಲಿಕಾ ಸಾಧನತ್ವ ಎಂದು ಭಾವಿಸಬಹುದು. ಅದರ ವಿಷಯಗಳ ವೇಳಾಪಟ್ಟಿಯಲ್ಲಿ ಜೀವನವನ್ನು ಸಮೃದ್ಧಪಡಿಸುವ ಹಾಗೂ ಏಕಾಂಗಿಯಾಗಿ ನಿಲ್ಲಬಲ್ಲ ಕೋರ್ಸ್‌ಗಳು ಪ್ರಮುಖ ಸ್ಥಾನವನ್ನು ಪಡೆಯಬೇಕು.

(v) NIOS ತನ್ನ ಪ್ರಾದೇಶಿಕ ಕೇಂದ್ರಗಳಲ್ಲಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಬೇಕು. SOS ಕೂಡ ರಾಜ್ಯಮಟ್ಟದ ಹಾಗೂ ಜಿಲ್ಲಾಮಟ್ಟದ ಸಂಪನ್ಮೂಲ ಕೇಂದ್ರಗಳನ್ನು ಮುಕ್ತ ಮೂಲ ಶಿಕ್ಷಣ ಶಾಲೆಗಳಲ್ಲಿ ಸ್ಥಾಪಿಸಬಹುದು.

(vi)NIOSನ ಮುಕ್ತ ಕಲಿಕಾ ಕಾರ್ಯಕ್ರಮಗಳು, ಸಮೃದ್ಧಿಗೊಳಿಸುವ ಕಾರ್ಯಕ್ರಮಗಳು ಅನಿವಾಸಿ ಭಾರತೀಯರಿಗೂ ಇತರ ಆಸಕ್ತರಿಗೂ ತಲುಪುವಂತೆ ಅವುಗಳನ್ನು ವಿಸ್ತರಿಸಬೇಕು. ಭಾರತೀಯ ಸಾಂಸ್ಕೃತಿಕ ಪರಂಪರೆ ಹಾಗೂ ಮೌಲ್ಯಗಳಿಗೆ ವಿಶೇಷ ಗಮನ ನೀಡಬೇಕು.

(vii) NIOS ಹಾಗೂ SOS ಗಳು ದೀರ್ಘಕಾಲೀನ ಹಾಗೂ ಸಾಧಾರಣ ಅವಧಿಯ ಯೋಜನೆಗಳನ್ನು ಮುಕ್ತ ಶಾಲಾ ಶಿಕ್ಷಣ ವ್ಯವಸ್ಥೆ ವರ್ಧಿಸುವ ಹಾಗೆ ಚಾಕ್ಷುಷೀಕರಿಸಬೇಕು

ಈ ಸಮಾವೇಶದ ಪ್ರಮುಖ ಶಿಫಾರಸ್ಸುಗಳನ್ನು ಕಾರ್ಯಗತ ಗೊಳಿಸುವಲ್ಲಿ ಭಾರತದ NIOS ಪ್ರಸ್ತುತ ತನ್ನ ಈಗಿನ ಕಾರ್ಯಕ್ರಮಗಳಿಗೆ ಮತ್ತು ಚಟುವಟಿಕೆಗಳಿಗೆ ಒಂದು ಹೊಸ ದೃಷ್ಟಿಯನ್ನಿತ್ತು ತನ್ನ ಕ್ರಿಯಾಯೋಜನೆಯನ್ನು ಪರಿಷ್ಕರಿಸುತ್ತಿದೆ.

**ಮುಕ್ತ ಶಾಲಾ ಶಿಕ್ಷಣದ ತರಬೇತಿಗಾಗಿ ಅಂತರರಾಷ್ಟ್ರೀಯ ಕೇಂದ್ರವನ್ನು ಸ್ಥಾಪನೆ.**

MHRDಮತ್ತು NIOS ಗಳು ಕಾಮನ್‌ವೆಲ್ತ್ ಆಫ್ ಲರ್ನಿಂಗ್(COL) ಮತ್ತು UNESCO ಗಳ ಸಹಯೋಗದಿಂದ ಮುಕ್ತ ಶಾಲಾ ಶಿಕ್ಷಣದ ತರಬೇತಿಗಾಗಿ ಒಂದು ಅಂತರ ರಾಷ್ಟ್ರೀಯ ಕೇಂದ್ರ(ICTOS)ವನ್ನು NIOS ನಲ್ಲಿ ಸ್ಥಾಪಿಸಲಾಗಿದೆ. ಇಲ್ಲಿ ಮುಕ್ತ ಶಾಲಾ ಶಿಕ್ಷಣ ಮತ್ತು ಮುಕ್ತ ಮೂಲ ಶಿಕ್ಷಣಗಳಲ್ಲಿ ತೊಡಗಿಕೊಂಡಿರುವ ಬೇರೆ ಬೇರೆ ರಾಷ್ಟ್ರಗಳ ಕಾರ್ಯಕರ್ತರ ತರಬೇತಿ ಅಗತ್ಯಗಳನ್ನು ಮುಖತಃ ಅಥವಾ ಲಿಖಿತವಾಗಿ ತಿಳಿಸಲಾಗುತ್ತದೆ. ಅಂತರರಾಷ್ಟ್ರೀಯ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾಗಳಲ್ಲಿ ಮಾಡಿರುವ ಚಿಂತನೆಗಳ ಉದ್ದೇಶಗಳು ಇಂತಿವೆ.

(i) ಮುಕ್ತ ಶಾಲಾ ಶಿಕ್ಷಣ ಮತ್ತು ಮುಕ್ತ ಮೂಲಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಾಮರ್ಥ್ಯ ನಿರ್ಮಾಣ ಮತ್ತು ಸಿಬ್ಬಂದಿ ಅರ್ಹತೆಯನ್ನು ಹೆಚ್ಚಿಸುವುದು. ಅದರಲ್ಲೂ ಮುಖ್ಯವಾಗಿ ಈ ಮುಂದಿನ ಕಾರ್ಯಗಳಲ್ಲಿ ತೊಡಗಿಕೊಂಡಿರುವವರು; ಯೋಜನೆ, ಮೇಲ್ವಿಚಾರಣೆ, ಪಠ್ಯಕ್ರಮ ಹಾಗೂ ಶೈಕ್ಷಣಿಕ ವಿನ್ಯಾಸ, ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು, ಕಲಿಕಾರ್ಥಿಗೆ ಸೇವಾ ಬೆಂಬಲ, ಬೆಲ ಕಟ್ಟುವಿಕೆ ಮತ್ತು ಮೌಲ್ಯಮಾಪನ ಮತ್ತು

(ii) ಮುಕ್ತ ಶಾಲಾ ಶಿಕ್ಷಣ ಮತ್ತು ಮುಕ್ತ ಮೂಲಶಿಕ್ಷಣಕ್ಕೆ ಸಂಬಂಧಿಸಿದಂತೆಯೂ ಅನೌಪಚಾರಿಕ ಶಿಕ್ಷಣ ಮತ್ತು NGOಗಳು ಕೈಗೊಳ್ಳುವ ಈ ಬಗೆಯ ಕಾರ್ಯಗಳಲ್ಲಿ ಕೆಲಸ ಮಾಡಲು ಅಪೇಕ್ಷಿಸುವ ವಿದ್ವಾಂಸರ ಮತ್ತು ವೃತ್ತಿಗಾರರ ಸಂಭಾವ್ಯತೆಯ ಗುಂಪೊಂದನ್ನು ಕಾದಿಟ್ಟಿರಬೇಕು.

ICTOSಯು ಮುಕ್ತ ಶಾಲಾಶಿಕ್ಷಣದಲ್ಲಿ ಭಾರತ, ಕಾಮನ್‌ವೆಲ್ತ್, UNESCOನ ಒಡನಾಡಿ ರಾಷ್ಟ್ರಗಳ ಮತ್ತು ಆಫ್ರಿಕಾದ ಸಬ್‌ಸಹರಾನ್ ಪ್ರಾಂತ್ಯಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗಾಗಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮೊ ಕೋರ್ಸ್‌ಗಳನ್ನು ಪ್ರಾರಂಭಿಸಲು ಯೋಚಿಸುತ್ತಿದೆ. ಈ ಕಾರ್ಯಕ್ರಮದ ಯಶಸ್ವಿ ನೆರವೇರಿಸುವಿಕೆಯು ಭಾಗಿಗಳಾಗಿರುವ ಸಿಬ್ಬಂದಿಯ ಸಾಮರ್ಥ್ಯನಿರ್ಮಾಣದಲ್ಲಿ ಬಹುದೂರ ಸಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ಈ ಕೋರ್ಸ್‌ಗಳಿಗಾಗಿ ವಿಶೇಷವಾಗಿ ವಿನ್ಯಾಸ ಮಾಡಲ್ಪಟ್ಟಿರುವ ಯಾವುದೇ ರೂಪದ ಬೆಂಬಲದ ಮಾಡ್ಯೂಲ್‌ಗಳು ಬಹುಸಂಖ್ಯೆಯ ತಜ್ಞರು ಹಾಗೂ ಕ್ಷೇತ್ರವೃತ್ತಿಗಾರರಿಂದ ಪರಿಷ್ಕೃತಗೊಂಡ ಅಂತಿಮ ರೂಪ ಪಡೆದಿವೆ. COL ಮತ್ತು UNESCOಗಳು ಕಾರ್ಯಕ್ರಮವನ್ನು ರೂಪಿಸುವ ಮೂಲಕ ಹಾಗೂ ಕಾರ್ಯಕ್ಕೆ ಆರ್ಥಿಕ ನೆರವನ್ನು ನೀಡುವ ಮೂಲಕ ಅಪಾರವಾದ ಬೆಂಬಲವನ್ನು ನೀಡಿದೆ.

Digitised by Bharatavani, CIIL

**ಅಂತರ ರಾಷ್ಟ್ರೀಯ ಕೂಡಿಕೆಗಳು ಮತ್ತು ಉಪಕ್ರಮಗಳು**

ಶಾಲಾಮಟ್ಟದಲ್ಲಿ ಶಿಕ್ಷಣವನ್ನು ದೂರವಿಧಾನದಲ್ಲಿ ಪ್ರಸರಿಸುತ್ತಿರುವ ಪ್ರಮುಖ ಸಂಸ್ಥೆಗಳಲ್ಲಿ NIOS ಒಂದಾಗಿದ್ದು ಪ್ರಪಂಚದ ಎಲ್ಲೆಡೆ ಇರುವ ಸಹೋದ್ಯೋಗಿಗಳೊಂದಿಗೆ ಪರಸ್ಪರ ವರ್ತನೆಯಿಂದ ಮುಕ್ತ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಧನಾತ್ಮಕ ಬದಲಾವಣೆಗಳನ್ನು ತರಬಹುದು ಎಂಬ ದೃಢ ನಂಬಿಕೆಯಿಂದ ಅಂತರರಾಷ್ಟ್ರೀಯ ಅಂತರಮುಖ ಬೆಳೆಸಲು ಪ್ರಯತ್ನಗಳನ್ನು ಮಾಡಿದೆ. 1993ರ ಪ್ರಾರಂಭದಿಂದ ಅಂತರ ರಾಷ್ಟ್ರೀಯ ಏಜೆನ್ಸಿಗಳು ಮುಕ್ತ ಶಾಲಾ ಶಿಕ್ಷಣ ಮತ್ತು ದೂರಶಿಕ್ಷಣದ ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಯಾಗಾರಗಳನ್ನು ಸಂಘಟಿಸುವುದರ ಮೂಲಕ NIOS ನ ಹಲವು ಉಪಕ್ರಮಗಳನ್ನು ಬೆಂಬಲಿಸಿವೆ. ವಿವಿಧ ಭಾಗಗಳ, ವಿವಿಧ ರೀತಿಯ ಶಿಕ್ಷಣತಜ್ಞರು ಇದರಲ್ಲಿ ಭಾಗವಹಿಸಿ ಕಾರ್ಯಕ್ರಮದ ನಡವಳಿಕೆಗೆ ನೆರವಾಗುವುದೇ ಇದರ ಉದ್ದೇಶವಾಗಿದೆ.

**ಕಾಮನ್‌ವೆಲ್ತ್‌ನ ಮುಕ್ತ ಶಾಲಾ ಶಿಕ್ಷಣದ ಸಂಘ(OSAC)**

ಮುಕ್ತ ಶಾಲಾ ಶಿಕ್ಷಣ ಕಾರ್ಯಕ್ರಮಗಳನ್ನು ಉಪಯೋಗಿಸುವಲ್ಲಿ ಸಂಬಂಧಪಟ್ಟ ರಾಷ್ಟ್ರಗಳು ಅಂತರ ರಾಷ್ಟ್ರ ಸಹಕಾರ ಮತ್ತು ಸಹಯೋಗದ ಅವಶ್ಯಕತೆಯ ಅನಿಸಿಕೆಯನ್ನು ವ್ಯಕ್ತಪಡಿಸುತ್ತವೆ. ಕಾಮನ್‌ವೆಲ್ತ್ ಆಫ್ ಲರ್ನಿಂಗ್ (COL) ಸಂಸ್ಥೆಯು ಸದಸ್ಯ ರಾಷ್ಟ್ರಗಳಲ್ಲಿನ ಮುಕ್ತ ಶಾಲಾಶಿಕ್ಷಣ ಕ್ಷೇತ್ರದಲ್ಲಿನ ವಿಚಾರಗಳನ್ನು ಮತ್ತು ಮಾಹಿತಿಯನ್ನು ಪರಸ್ಪರ ಬದಲಾಯಿಸಲು ಒಂದು ವೇದಿಕೆಯನ್ನು ಸೃಷ್ಟಿಸಲು ಮುಂದಾಳತ್ವ ವಹಿಸಿತು. UNESCO, UNICEF ಮತ್ತು UNDPಗಳಂತಹ ಇತರ ಕೆಲವು ಅಂತರರಾಷ್ಟ್ರೀಯ ಸಂಸ್ಥೆಗಳೂ ಸಹ ಮುಕ್ತ ಶಾಲಾ ಶಿಕ್ಷಣದ ಉತ್ತೇಜನಕ್ಕೆ ತಮ್ಮದೇ ಆದ ಕಾಣಿಕೆ ನೀಡುತ್ತಿವೆ. ಕಾಮನ್‌ವೆಲ್ತ್‌ನ ಮುಕ್ತ ಶಾಲಾ ಶಿಕ್ಷಣ (OSAC) ಸಂಸ್ಥೆಯು COLನ ಆಶ್ರಯದಲ್ಲಿ ಸ್ಥಾಪಿತವಾಗಿದೆ. OSACಯು ಮಾಹಿತಿ ವಿತರಣೆ, ಸಮನ್ವಯ ಮತ್ತು ಪರಸ್ಪರ ಸಮಾಲೋಚನೆಗಳಿಗಾಗಿ ಸಂಪರ್ಕ ಏಜೆನ್ಸಿಯಾಗಿ ಕಾರ್ಯನಿರ್ವಹಿಸಬೇಕು. ಇದು ಮುಕ್ತ ಶಾಲಾ ಶಿಕ್ಷಣದ ಕಾರ್ಯಕರ್ತರಿಗೆ HRD ಕಾರ್ಯಕ್ರಮಗಳನ್ನು ಸಂಘಟಿಸಬೇಕು ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕು. ಇವೆಲ್ಲವುಗಳ ಮಧ್ಯೆ ಮುಕ್ತ ಶಾಲಾ ಶಿಕ್ಷಣಕ್ಕೆ ಅನ್ವಯಿಸುವ ಪ್ರಮಾಣಕಗಳ ಗುಣಮಟ್ಟವನ್ನೂ ಇದು ಖಾತರಪಡಿಸಬೇಕು.

ಭಾರತದಲ್ಲಿನ ನವದೆಹಲಿಯಲ್ಲಿರುವ ಮುಕ್ತ ಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆ (NIOS)ಯು ಕಾಮನ್‌ವೆಲ್ತ್‌ನ ಮುಕ್ತ ಶಾಲಾಶಿಕ್ಷಣ (OSAC)ದ ಆಡಳಿತ ಕಚೇರಿಯಾಗಿ ಕಾರ್ಯನಿರ್ವಹಿಸುತ್ತದೆ. ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿನ ಮುಕ್ತ ಶಾಲಾಶಿಕ್ಷಣದ ಸಂಸ್ಥೆಗಳು OSACಯನ್ನು ಸೇರುವಂತೆ ಮನ ಒಲಿಸಲು ಪ್ರಯತ್ನಗಳು ಸಾಗಿವೆ.

OSACಯು ರಚಿತವಾಗಿರುವುದು ಮುಕ್ತ ಕಲಿಕೆ ಮತ್ತು ದೂರಶಿಕ್ಷಣ ವಿಧಾನದಿಂದ ಶೈಕ್ಷಣಿಕ ವಿಭಾಗದಲ್ಲಿ ನವೀನ ಆವಿಷ್ಕಾರಗಳೂ ವಿಶಾಲವಾಗಿ ಸೇರಿಕೊಳ್ಳಲು ಮಾಡಿರುವ ತೀರ್ಮಾನದ ಸ್ಪಷ್ಟಪಡಿಸುವಿಕೆಯಾಗಿದೆ. ಅಗತ್ಯದ ಅವಶ್ಯಕತೆಯನ್ನು ಗಮನದಲ್ಲಿ ಇರಿಸಿಕೊಂಡು OSAC journal of open schooling ಎಂಬ ಪತ್ರಿಕೆಯನ್ನು NIOS ಪ್ರಾರಂಭಿಸಿದೆ. ಇದರ ಮೊದಲ ಸಂಚಿಕೆಯು 2001ರ ನವೆಂಬರ್‌ನಲ್ಲಿ ಬಿಡುಗಡೆಯಾಯಿತು.

OSAC Journal of open schooling ಪತ್ರಿಕೆಯು ಕಾಮನ್‌ವೆಲ್ತ್ ರಾಷ್ಟ್ರಗಳ ಮಧ್ಯೆ ಒಂದು ವೇದಿಕೆಯನ್ನು ಒದಗಿಸುವುದರ ಮೂಲಕ ಒಂದು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಇಲ್ಲಿ ಮುಕ್ತ ಶಾಲಾಶಿಕ್ಷಣ ಅಥವಾ ಮುಕ್ತ ಕಲಿಕೆ ಮತ್ತು ಸಂಶೋಧನೆಯನ್ನು ಪ್ರಸರಿಸುವುದು, ಅಂತರ ಶಿಕ್ಷಣ ವಿಭಾಗೀಯ ಅಧ್ಯಯನಗಳೂ ಸೇರಿದಂತೆ ತಾತ್ವಿಕ ಮತ್ತು ಪ್ರಾಯೋಗಿಕ ವಿಷಯಗಳ ಬಗ್ಗೆ ಮುಕ್ತ ಶಾಲಾಶಿಕ್ಷಣ ಅಥವಾ ಮುಕ್ತ ಕಲಿಕೆಗಳಿಗೆ ಸಂಬಂಧಿಸಿದಂತೆ ವಿದ್ವತ್‌ಪೂರ್ಣ ಚರ್ಚೆಗೆ ಅನುವು ಮಾಡಿಕೊಡಲಾಗುತ್ತದೆ. OSAC ನಿಯತಕಾಲಿಕವನ್ನು ಹೊರತರುವುದರ ಜೊತೆಯಲ್ಲಿ COLನ ಸಹಯೋಗಿತ್ವದಲ್ಲಿ NIOS ಅಂತರ ರಾಷ್ಟ್ರೀಯ ಸಭೆಗಳನ್ನು, ವಿಚಾರಸಂಕಿರಣಗಳನ್ನು ಏರ್ಪಡಿಸಿ ಮುಕ್ತ ಶಾಲಾಶಿಕ್ಷಣದಲ್ಲಿನ ಅನೇಕ ಸವಾಲುಗಳ ಬಗ್ಗೆ ಚರ್ಚೆ ಮತ್ತು ಅಭಿಪ್ರಾಯ ಹಾಗೂ ಮಾಹಿತಿಯ ವಿನಿಮಯಗಳಿಗಾಗಿ ಅವಕಾಶವನ್ನು ಒದಗಿಸುತ್ತದೆ. ಇವುಗಳಿಗೆ ಸೂಕ್ತ ಪ್ರತಿಕ್ರಿಯೆಗಳನ್ನು ಕಣ್ಣ ಮುಂದೆ ತಂದುಕೊಳ್ಳಬೇಕಾಗುತ್ತದೆ ಮತ್ತು ಕಾರ್ಯರೂಪಕ್ಕೆ ತರಬೇಕಾಗುತ್ತದೆ. NIOS ಯು ವಿವಿಧ ದೇಶಗಳಲ್ಲಿ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯ, ಹೃದಯಕ್ಕೆ ಸಮೀಪವಾಗಿರುವ ಗುರಿಯನ್ನು ಸಾಧಿಸಲು ವಿವಿಧ ರಾಷ್ಟ್ರಗಳಲ್ಲಿ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪರಿಣಿತರಾಗಿರುವ ತಜ್ಞರನ್ನು ಕಾರ್ಯಕ್ರಮಗಳಲ್ಲಿ ಒಳಗೊಳ್ಳುವಂತೆ ಹಾಗೂ ಭಾಗವಹಿಸುವಂತೆ ಮಾಡಬೇಕಾಗಿದೆ. ಈ ದಿಸೆಯಲ್ಲಿ NIOS ಕಾಡುಮೇಡುಗಳ ಸಂಶೋಧನೆಗಳು, ಕಾರ್ಯಕ್ರಮಗಳನ್ನು ಸಮೃದ್ಧಿಗೊಳಿಸುವ ಶೈಕ್ಷಣಿಕ ಸಾಮಗ್ರಿಗಳ ವಿನಿಮಯದ ಕಾರ್ಯಕ್ರಮಕ್ಕೆ ಪ್ರೋತ್ಸಾಹಕ್ಕೆ ಮತ್ತು ಹುಮ್ಮಸ್ಸು ನೀಡುತ್ತಿದೆ.

**NIOSನಲ್ಲಿ ಸಂಶೋಧನೆಗಳು**

ಒಂದು ದಶಕಕ್ಕಿಂತ ಹೆಚ್ಚುಕಾಲ ತಳಮಟ್ಟದಲ್ಲಿ ಸಾಮಗ್ರಿ ತಯಾರಿಕೆ, ಸಾಮರ್ಥ್ಯ ಬೆಳೆಸಲು ತರಬೇತಿ ಮತ್ತು ಸಂಪನ್ಮೂಲ ಬೆಂಬಲವನ್ನು ವಿಶಾಲವಾದ ಜಾಲಬಂಧದಿಂದ ಉತ್ಪತ್ತಿ ಮಾಡಿದ NIOS ಈಗ ತನ್ನ ಗಮನವನ್ನು ಅಭಿವೃದ್ಧಿ ಕಾರ್ಯಕ್ರಮಗಳಿಂದ ಸಂಶೋಧನೆ ಆಧಾರಿತ ಚಟುವಟಿಕೆಗಳತ್ತ ಬದಲಾಯಿಸಿದೆ. ಇದರ ಗಮನ ಈಗ ಇವುಗಳ ಮೇಲಿದೆ. (i) ಸುಲಭ ಲಭ್ಯತೆ, (ii) ಮುಕ್ತ ಶಾಲಾಶಿಕ್ಷಣ ವ್ಯವಸ್ಥೆಯಲ್ಲಿ ನಮ್ಯತೆ ಮತ್ತು ಮುಕ್ತತೆಗಳ ಪುನಃ ಪರಿಶೀಲನೆ (iii) ಕಲಿಕಾರ್ಥಿ ಸ್ನೇಹಿ ಬೆಂಬಲ ಸೇವೆಗಳು (iv) ಸ್ವಕಲಿಕೆ ಸಾಮಗ್ರಿಗಳ, ಮಾಧ್ಯಮ ಬೆಂಬಲದ ಮತ್ತು PCPಗಳ ಮೌಲ್ಯಮಾಪನ (v) NIOS ನಲ್ಲಿ ವಿದ್ಯಾಭ್ಯಾಸವನ್ನು ನಡುವೆ ತೊರೆದವರ ಮತ್ತು ತೇರ್ಗಡೆ ಹೊಂದಿ ಹೋದವರ ಅಧ್ಯಯನ

Digitised by Bharatavani, CIIL

ಮತ್ತು (vi) ಅಗತ್ಯ ಆಧಾರಿತ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ಪ್ರಧಾನ ವಸ್ತುಗಳೆಂದು ಗ್ರಹಿಸಿದ ಕ್ಷೇತ್ರಗಳ ಅಗತ್ಯಗಳು.

**ಮೂಲ: ಎನ್.ಕೆ. ಆಂಬಷ್ಟ್**

**ಅನು: ವೆಂಕಟರಮಣಶೆಟ್ಟಿ ಸಿ.ಜಿ.**

## ಮೌಲ್ಯಮಾಪನ ತತ್ವಗಳು

ಮೌಲ್ಯಮಾಪನವು ಶಿಕ್ಷಣ ವ್ಯವಸ್ಥೆಯ ಒಂದು ಮುಖ್ಯ ಘಟ್ಟ.. ಮೌಲ್ಯಮಾಪನವೆಂದರೆ ಒಂದು ಅಥವಾ ಅನೇಕ ಪುರಾವೆಗಳ ಆಧಾರದ ಮೇಲೆ ಒಂದು ವಸ್ತುವಿನ ಯೋಗ್ಯತೆಯ ಬೆಲೆ ಕಟ್ಟುವಿಕೆ ಎಂದರ್ಥ. ಇದು ಒಂದು ವ್ಯವಸ್ಥಿತ, ನಿರಂತರ ಹಾಗೂ ಸಮಗ್ರ ಪ್ರಕ್ರಿಯೆಯಾಗಿದೆ.

ಮೌಲ್ಯಮಾಪನದಲ್ಲಿ ವಸ್ತುವಿನ/ವ್ಯಕ್ತಿಯ/ಪದ್ಧತಿಯ ನಿಜವಾದ ಬೆಲೆ ನಿರ್ಧರಿಸುವ ಪ್ರಯತ್ನ ನಡೆಯುತ್ತದೆ. ಈ ಪ್ರಕ್ರಿಯೆಯು ವಸ್ತುವಿನ/ವ್ಯಕ್ತಿಯ/ಪದ್ಧತಿಯ ಮೌಲ್ಯವನ್ನು ಪರಿಮಾಣಾತ್ಮಕವಾಗಿ ಹಾಗೂ ಗುಣಾತ್ಮಕವಾಗಿ ನಿರ್ಧರಿಸುತ್ತದೆ.

ಮೌಲ್ಯಮಾಪನ ಪ್ರಕ್ರಿಯೆಯು ಒಂದು ನಿರಂತರ ಹಾಗೂ ಸಮಗ್ರ ಪ್ರಕ್ರಿಯೆ. ಬೋಧನೋದ್ದೇಶಗಳು ಎಷ್ಟರ ಮಟ್ಟಿಗೆ ಈಡೇರಿವೆ ಎಂಬುದನ್ನು ಈ ಪ್ರಕ್ರಿಯೆಯು ನಿರ್ಧರಿಸುತ್ತದೆ. ಕೆಲವೇ ಮೂಲ ತತ್ವಗಳ ಆಧಾರದ ಮೇಲೆ ಮೌಲ್ಯಮಾಪನ ಪ್ರಕ್ರಿಯೆಯು ಹೆಚ್ಚು ಪರಿಣಾಮಕಾರಿಯಾಗಬಲ್ಲುದು. ಈ ತತ್ವಗಳು ಮೌಲ್ಯಮಾಪನ ಪ್ರಕ್ರಿಯೆಗೆ ನಿರ್ದೇಶನ ನೀಡುವುದಲ್ಲದೆ, ನಿರ್ದಿಷ್ಟ ವಿಧಿ ವಿಧಾನಗಳ ಪರಿಣಾಮವನ್ನು ಮೌಲ್ಯಾಂಕನ ಮಾಡುವ ನಿರ್ಧಾರಕಾಂಶಗಳಾಗಿ ವರ್ತಿಸುತ್ತವೆ.

**ಮೌಲ್ಯಮಾಪನ ಪ್ರಕ್ರಿಯೆಯ ಕೆಲವು ತತ್ವಗಳು ಈ ಕೆಳಕಂಡಂತಿವೆ:**

1. ಮೌಲ್ಯಮಾಪನದ ಉದ್ದೇಶಗಳು ಸೂಕ್ತವಾಗಿ ನಿರೂಪಿಸಲ್ಪಟ್ಟವಾಗಿರಬೇಕು. ಇದಕ್ಕಾಗಿ ಸಾಧಿಸಬೇಕಾದ ಬೋಧನೋದ್ದೇಶಗಳು ಸ್ಪಷ್ಟವಾಗಿ, ನಿಖರವಾಗಿ ನಿರ್ಧರಿಸಲ್ಪಟ್ಟವಾಗಿದ್ದು ಸೂಕ್ತವಾಗಿ ನಿರೂಪಿಸಲ್ಪಟ್ಟವಾಗಿರಬೇಕು. ಮೌಲ್ಯಮಾಪಕರಿಗೆ ಈ ಉದ್ದೇಶಗಳ ಸ್ಪಷ್ಟ ಅರಿವಿರಬೇಕು. ಯಾವ ವಿಷಯ ವಸ್ತುವನ್ನು ಹೇಗೆ ಮೌಲ್ಯಮಾಪನ ಮಾಡಬೇಕು ಎಂಬುದು ಸೂಕ್ತವಾಗಿ ನಿರೂಪಿಸಲ್ಪಟ್ಟ ಬೋಧನಾ ಉದ್ದೇಶಗಳು ನಿರ್ಧರಿಸುತ್ತದೆ. ಹಾಗಾಗಿ ಈ ತತ್ವವು ಮೌಲ್ಯಮಾಪನ ಕಾರ್ಯಕ್ರಮದ ಸೂಕ್ತ ಯೋಜನೆಗೆ ಮಾರ್ಗದರ್ಶನ ನೀಡುತ್ತದೆ.

2. ಮೌಲ್ಯಮಾಪನ ಕಾರ್ಯವನ್ನು ಸರಿಯಾಗಿ ನೆರವೇರಿಸಲು, ಸೂಕ್ತ ಮೌಲ್ಯಮಾಪನ ಸಾಧನಗಳ/ತಂತ್ರಗಳ ಆಯ್ಕೆ ಆಗಬೇಕು. ಅವು ಮೌಲ್ಯಮಾಪನದ ಗುರಿ ಮತ್ತು ಉದ್ದೇಶಗಳಿಗೆ ಸರಿದೂಗುವಂತಿದ್ದು, ವಿದ್ಯಾರ್ಥಿಗಳಿಗೂ ಸೂಕ್ತವಾಗಿರಬೇಕು. ವ್ಯಾಪಕ ಉದ್ದೇಶಗಳಿಗೆ ಮೌಲ್ಯಮಾಪನದ ಸಾಧನ/ತಂತ್ರಗಳ ಆಯ್ಕೆ ಮಾಡುವಾಗ ಎಚ್ಚರಿಕೆ ವಹಿಸಿ



ಅವುಗಳ ಸಾಮರ್ಥ್ಯದ ವ್ಯಾಪ್ತಿ ಹೆಚ್ಚಿಸಬೇಕು. ಅಲ್ಲದೆ ಒಂದೇ ವಿಷಯ ವಸ್ತುವಿಗೆ ಸಂಬಂಧಿಸಿದ ವಿವಿಧ ಸಾಮರ್ಥ್ಯಗಳನ್ನು ಅಳೆಯಲು ವೈವಿಧ್ಯಮಯ ಸಾಧನ/ತಂತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

3. ಮೌಲ್ಯಮಾಪನವು ಸಾಧ್ಯವಿದ್ದಷ್ಟೂ ಸಮಗ್ರವಾಗಿ ಆಗಬೇಕು. ವಿದ್ಯಾರ್ಥಿ ವರ್ತನೆಯ ಅನೇಕ ಅಂಶಗಳನ್ನು ಅಳೆಯುವ ಸಲುವಾಗಿ ಮೌಲ್ಯಮಾಪನದ ತಂತ್ರ/ಸಾಧನೆಗಳು ವೈವಿಧ್ಯತೆಯನ್ನು ಹೊಂದಿರಬೇಕು. ವಿದ್ಯಾರ್ಥಿ ಸಾಧನೆಯ ಸಂಪೂರ್ಣ ಚಿತ್ರ ಪಡೆಯಲು ಮೌಲ್ಯಮಾಪನದ ವಿವಿಧ ತಂತ್ರ/ಸಾಧನಗಳಿಂದ ದೊರೆತ ಫಲಿತಾಂಶಗಳೆಲ್ಲದರ ಒಟ್ಟಾರೆ ವಿಶ್ಲೇಷಣೆಯ ಅವಶ್ಯಕತೆ ಇದೆ.

4. ಮೌಲ್ಯಮಾಪನದ ಫಲಿತಾಂಶವು ಆದಷ್ಟು ದೋಷರಹಿತ ವಾಗಿರಬೇಕು. ಇದು ಮೌಲ್ಯಮಾಪಕರನ್ನು ಅವಲಂಬಿಸಿದೆ. ಮೌಲ್ಯಮಾಪಕರಿಗೆ ತಾವು ಬಳಸುವ/ತಮಗೆ ಲಭ್ಯವಿರುವ ತಂತ್ರ/ಸಾಧನಗಳ ಸಾಮರ್ಥ್ಯ, ಇತಿಮಿತಿ, ಲೋಪ–ದೋಷ ಇತ್ಯಾದಿಗಳ ಅರಿವಿರಬೇಕು. ಏಕೆಂದರೆ ಲಭ್ಯವಿರುವ ಎಲ್ಲಾ ತಂತ್ರ/ಸಾಧನೆಗಳು ದೋಷ–ರಹಿತ ಅಥವಾ ಮಿತಿ ಇಲ್ಲದ ಸಾಮರ್ಥ್ಯವುಳ್ಳವಾಗಿರುವುದಿಲ್ಲ. ಕೆಲವು ಸಾಧನ/ತಂತ್ರಗಳು ಕೇವಲ ಒಂದು ಸಾಮಗ್ರಿಯಾಗಿವೆ. ಆದ್ದರಿಂದ ಫಲಿತಾಂಶವು ದೋಷ–ರಹಿತ ಆಗಬೇಕಾದರೆ ಸೂಕ್ತ ಸಾಧನ/ತಂತ್ರದ ಆಯ್ಕೆ ಮಾಡಬೇಕಲ್ಲದೆ ಮೌಲ್ಯಮಾಪಕರು ಅವುಗಳನ್ನು ಸೂಕ್ತ ಬಳಕೆ ಮಾಡಿಕೊಳ್ಳುವ ಕೌಶಲ್ಯ ಹೊಂದಿರಬೇಕು.

5. ಮೌಲ್ಯಮಾಪನವು ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಈ ಎರಡೂ ಸ್ವರೂಪವುಳ್ಳದ್ದು. ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ನೈತಿಕ ವರ್ತನೆಗಳ ಮೌಲ್ಯಮಾಪನವು ಗುಣಾತ್ಮಕ ಸ್ವರೂಪದ ಮೌಲ್ಯಮಾಪನವಾಗಿದೆ. ಈ ಕ್ಷೇತ್ರಗಳ ಮೌಲ್ಯಮಾಪನಕ್ಕೆ ಗುಣವಾಚಕ ಶಬ್ದಗಳ ಬಳಕೆ ಅಂಕಿಅಂಶಗಳಿಗೆ ಪರ್ಯಾಯವಾಗಿ ಇರುತ್ತದೆ. ಪರಿಮಾಣಾತ್ಮಕ ಮೌಲ್ಯಮಾಪನವು ವಿದ್ಯಾರ್ಥಿಗಳ ಸಾಧನೆ/ಮಟ್ಟ ಇವುಗಳ ಪರಿಮಾಣವನ್ನು ಅಂಕಗಳ ರೂಪದಲ್ಲಿ ಅಳೆಯಲು ಸಹಾಯಮಾಡುತ್ತದೆ. ಸಾಮಾನ್ಯವಾಗಿ ಇದರ ಫಲಿತ ಅಂಕಿಅಂಶಗಳ ವಿಶ್ಲೇಷಣೆಯಿಂದ ಅರಿವಾಗುತ್ತವೆ.

6. ಮೌಲ್ಯಮಾಪನ ಗುರಿ ತಲುಪುವ ಸಾಧನವೇ ಹೊರತು, ಅದೇ ಒಂದು ಗುರಿಯಲ್ಲ. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಬೋಧನೆಯ ಉದ್ದೇಶಗಳ ಈಡೇರಿಕೆಯ ಮಟ್ಟವನ್ನು ಅರಿಯಲು ತಂತ್ರ/ಸಾಧನಗಳನ್ನು ಬಳಸಲಾಗುತ್ತದೆ. ತಂತ್ರ/ಸಾಧನಗಳ ಗರಿಷ್ಠ ಲಾಭ ಪಡೆಯಲು ಇವುಗಳನ್ನು ಬಳಸುವ ಶಿಕ್ಷಕರಿಗೆ ಮೌಲ್ಯಮಾಪನದ ಉದ್ದೇಶಗಳ ಅರಿವು ಸ್ಪಷ್ಟವಾಗಿರಬೇಕು. ಮೌಲ್ಯಮಾಪನದ ಫಲಿತಾಂಶಗಳನ್ನು ಅಂತಿಮ ಎಂದು ಪರಿಗಣಿಸದೆ ಆ ಫಲಿತಾಂಶಗಳನ್ನು ಅರ್ಥೈಸಿ/ವಿಶ್ಲೇಷಿಸಿ, ವಿದ್ಯಾರ್ಥಿ ಕಲಿಕೆಯ/ಸಾಮರ್ಥ್ಯದ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಬೋಧನಾ ಸುಧಾರಣೆ

Digitised by Bharatavani, CIIL

ಹಾಗೂ ವಿದ್ಯಾರ್ಥಿ ಕಲಿಕೆಯ ಮಾರ್ಗದರ್ಶನಕ್ಕೆ ಪೂರಕವಾಗದ ಮೌಲ್ಯಮಾಪನ ಪ್ರಕ್ರಿಯೆ ಅರ್ಥಹೀನವಾಗುತ್ತದೆ.

7. ಮೌಲ್ಯಮಾಪಕರು ಫಲಿತಾಂಶಗಳ ವ್ಯಾಖ್ಯಾನದ ಬಗ್ಗೆ ಉತ್ತಮ ಜ್ಞಾನ ಹೊಂದಿರಬೇಕು. ಹಾಗೂ ಪರೀಕ್ಷೆ ನಡೆಸುವುದು, ಅಳೆಯುವುದು ಮತ್ತು ಫಲಿತಾಂಶವನ್ನು ಸೂಕ್ತವಾಗಿ ಅರ್ಥೈಸುವುದು ಇತ್ಯಾದಿ ಕಾರ್ಯಗಳಲ್ಲಿ ಪರಿಣತಿ ಹೊಂದಿರಬೇಕು.

8. ಮೌಲ್ಯಮಾಪನವು ವಸ್ತು ನಿಷ್ಠವಾಗಿರಬೇಕು. ಮೌಲ್ಯಮಾಪಕರ ವೈಯಕ್ತಿಕ ಭಾವನೆಗಳು, ತಪ್ಪು ಕಲ್ಪನೆಗಳು, ಮನೋಧೋರಣೆಗಳು, ಉದಾಸೀನತೆ ಇತ್ಯಾದಿಗಳು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ದೋಷಗಳನ್ನುಂಟು ಮಾಡಿ ಅದರ ನಿಖರತೆಯನ್ನು ಸಂಕುಚಿತಗೊಳಿಸುತ್ತದೆ. ಇಂತಹ ವರ್ತನೆಗಳು ಮೌಲ್ಯಮಾಪನದ ವಸ್ತುನಿಷ್ಠತೆಯನ್ನು ಕಡಿಮೆಗೊಳಿಸುತ್ತದೆ. ಆದ್ದರಿಂದ ಮೌಲ್ಯಮಾಪನದಲ್ಲಿ ದೋಷಗಳುಂಟಾಗದಂತೆ ಮೌಲ್ಯಮಾಪಕರು ಎಚ್ಚರ ವಹಿಸಬೇಕು.

9. ಮೌಲ್ಯಮಾಪನದ ಫಲಿತಾಂಶಗಳನ್ನು ಸೂಕ್ತವಾಗಿ ಹಾಗೂ ಪರಿಣಾಮಕಾರಿಯಾಗಿ ಅರ್ಥೈಸಿ ಬಳಸಬೇಕು. ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆಗೆ ಅವಕಾಶ ಕಲ್ಪಿಸಬೇಕು. ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ, ಆಡಳಿತ ಮಂಡಳಿಗೆ ಮತ್ತು ಪೋಷಕರಿಗೆ ಮೌಲ್ಯಮಾಪನದ ಫಲಿತಾಂಶವು ಪ್ರತಿಪುಷ್ಟಿಯನ್ನು ಒದಗಿಸಬೇಕು.

10. ಮೌಲ್ಯಮಾಪನವು ನಿರಂತರವಾಗಿರಬೇಕು. ಶೈಕ್ಷಣಿಕ ಅವಧಿಯ ಕಡೆಯಲ್ಲಿ ಮೌಲ್ಯಮಾಪನ ಮಾಡುವುದು ಸಾಮಾನ್ಯವಾಗಿದ್ದರೂ, ವಿದ್ಯಾರ್ಥಿಗಳಿಗೆ ತಮ್ಮ ಬೆಳವಣಿಗೆಯ ಬಗ್ಗೆ ಸದಾ ಅರಿವು ಮೂಡಿಸುತ್ತಲೇ ಇರಬೇಕಾದ ಅನಿವಾರ್ಯತೆಯನ್ನು ಶಿಕ್ಷಣ ತಜ್ಞರು ಮನಗಂಡಿದ್ದಾರೆ. ಅಲ್ಲದೆ ಮೌಲ್ಯಮಾಪನದ ನಿರಂತರತೆಯು ಶಿಕ್ಷಕರಿಗೂ ತಮ್ಮ ಬೋಧನೆಯ ಬಗೆಗೆ ನಿಷ್ಪಕ್ಷಪಾತವಾಗಿ ನಿರ್ದೇಶನ ನೀಡಬಲ್ಲುದು. ಕಿರುಪರೀಕ್ಷೆಗಳು ಹಾಗೂ ವೀಕ್ಷಣಾ ತಂತ್ರಗಳು ಮೌಲ್ಯಮಾಪನದ ನಿರಂತರತೆಗೆ ಸಹಾಯ ಮಾಡುತ್ತವೆ.

(ಮೌಲ್ಯಮಾಪನದ ಅರ್ಥ, ಸ್ವರೂಪ ಮತ್ತು ಕಾರ್ಯಗಳ ಬಗ್ಗೆ ಸಂಪುಟ–1ನ್ನು ನೋಡಿ.)

–ಡಾ. ಆಶಾ ಬಿ.ಎನ್.

# ಯ

## ಯುವಜನ ಶಿಕ್ಷಣ

**ಪೀಠಿಕೆ:** ಒಂದು ರಾಷ್ಟ್ರದ ಅಭಿವೃದ್ಧಿ ಅಲ್ಲಿನ ಯುವಕರ ಮತ್ತು ವಿದ್ಯಾರ್ಥಿಗಳ ಕೈಯಲ್ಲಿದೆ. ಎಂಬ ಬೆಂಜಮಿನ್‌ರವರ ಮಾತು ಯುವಕರ ಮಹತ್ವವನ್ನು ತಿಳಿಸುತ್ತದೆ. ಒಂದು ದೇಶದ ತರುಣ ಶಕ್ತಿಗೆ ಯೋಗ್ಯ ಮಾರ್ಗದರ್ಶನ ದೊರಕಿದಲ್ಲಿ ಪ್ರಗತಿ ಸಾಧ್ಯ ಎಂಬುದರಲ್ಲಿ ಸಂಶಯವಿಲ್ಲ. ಭಾರತ ಸ್ವತಂತ್ರ ಪಡೆದ ಇಷ್ಟು ವರ್ಷಗಳಾದರೂ ಪ್ರಗತಿಯಾಗದಿರುವುದಕ್ಕೆ ಯುವಶಕ್ತಿಯ ಶಿಕ್ಷಣ ಮತ್ತು ಯುವಶಕ್ತಿಯ ಸದುಪಯೋಗವಾಗದಿರುವುದು ಕಾರಣಗಳಾಗಿವೆ.

ಗಾಂಧೀಜಿಯವರು 3–7–1925ರ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಹೇಳಿರುವಂತೆ "ನನ್ನ ಭರವಸೆಯಿರುವುದು ರಾಷ್ಟ್ರದ ಯುವಕರಲ್ಲಿ, ಅದರಲ್ಲಿ ದುರ್ನಡತೆಗೆ ಜಾರಿದವರೂ ಸ್ವಭಾವತಃ ದುಷ್ಟರಲ್ಲ, ಮುಂದಾಲೋಚನೆಯಿಲ್ಲದೆ ನಿಸ್ಸಹಾಯಕರಾಗಿ ಅವರು ದುರ್ನಡತೆಯ ಸೆಳವಿಗೆ ಸಿಕ್ಕಿದ್ದಾರೆ. ಅದರಿಂದ ಅವರಿಗೂ ಸಮಾಜಕ್ಕೂ ಆಗಿರುವ ಅಪಾಯವನ್ನು ಅವರು ತಿಳಿಯಲೇಬೇಕು. ತಮ್ಮನ್ನೂ, ರಾಷ್ಟ್ರವನ್ನೂ ಸರ್ವನಾಶದಿಂದ ಕಾಪಾಡತಕ್ಕದ್ದು. ಕಟ್ಟುನಿಟ್ಟಾದ ಶಿಸ್ತಿನ ಜೀವನವಲ್ಲದೆ ಇನ್ನೊಂದಿಲ್ಲವೆಂಬುದನ್ನೂ ಯುವಕರು ತಿಳಿಯಲೇಬೇಕು" ಎಂಬ ವಾಕ್ಯಗಳು ಯುವಕರ ಪ್ರಾಮುಖ್ಯವನ್ನು ತೋರಿಸುತ್ತವೆ.

**ಯುವಜನ ಶಿಕ್ಷಣದ ಉದ್ದೇಶಗಳು:** 15–30 ವಯೋಮಿತಿ ಯಲ್ಲಿರುವ ವ್ಯಕ್ತಿಗಳನ್ನು ಸಾಮಾನ್ಯವಾಗಿ ಯುವಕರೆಂದು ಸಂಬೋಧಿಸುತ್ತೇವೆ. ಈ ವಯೋಮಾನದವರಿಗೆ ನೀಡುವ ಶಿಕ್ಷಣವನ್ನು ನಾವು ಯುವಜನ ಶಿಕ್ಷಣ ಎಂದು ಕರೆಯುತ್ತೇವೆ. ಯುವಜನ ಶಿಕ್ಷಣಕ್ಕೆ ಇಂದು ಅತಿ ಹೆಚ್ಚಿನ ಮಹತ್ವ ಬಂದಿದೆ. ಜಗತ್ತಿನ ಶಿಕ್ಷಣ ತಜ್ಞರು, ಮುತ್ಸದ್ದಿಗಳು ಹಾಗೂ ರಾಜಕೀಯ ವಿಶ್ಲೇಷಕರು ಯುವಜನ ಶಿಕ್ಷಣಕ್ಕೆ ಅಧಿಕ ಒತ್ತು ನೀಡಲು ಸಲಹೆ ನೀಡಿವೆ. ದೇಶದ ವಿವಿಧ ಶೈಕ್ಷಣಿಕ ಆಯೋಗಗಳು ಕೂಡಾ ಯುವಜನ ಶಿಕ್ಷಣದ ಮಹತ್ವವನ್ನು ತಿಳಿಸಿವೆ. ಯುವಜನ ಶಿಕ್ಷಣವು ಈ ಕೆಳಗಿನ ಉದ್ದೇಶಗಳನ್ನು ಈಡೇರಿಸುವಂತಿರಬೇಕು.

- ಯುವಕರಲ್ಲಿ ಸಾಮಾಜಿಕ ಗುಣಗಳನ್ನು ಬೆಳೆಸುವುದು.
- ನಾಯಕತ್ವದ ಗುಣಗಳು ಮೂಡಿಸುವುದು
- ಸಮಾಜ ಸೇವಾ ಮನೋಭಾವನೆಗಳನ್ನು ಬೆಳೆಸುವುದು.
- ಉತ್ತಮ ಶಾರೀರಿಕ ಬೆಳವಣಿಗೆಗೆ ಬೇಕಾದ ಚಟುವಟಿಕೆಗಳನ್ನು ಕೈಗೊಳ್ಳುವುದು.
- ಮಾನಸಿಕ ಆರೋಗ್ಯವನ್ನು ವೃದ್ಧಿಸುವುದು.
- ವಿರಾಮ ಕಾಲವನ್ನು ಸದುಪಯೋಗ ಪಡಿಸಿಕೊಳ್ಳಲು ಉತ್ತಮ

Digitised by Bharatavani, CIIL

ಮಾರ್ಗದರ್ಶನ ಮಾಡುವುದು.

- ಯುವಕರಲ್ಲಿ ಉತ್ತಮ ಹವ್ಯಾಸಗಳನ್ನು ಬೆಳೆಸುವುದು.
- ಯುವಕರಲ್ಲಿ ಸುಪ್ತ ಪ್ರತಿಭೆಗಳನ್ನು ವಿಕಾಸಗೊಳಿಸುವುದು.

**ಯುವಶಕ್ತಿಯ ಪರಿಣಾಮಕಾರಿ ಸದುಪಯೋಗಕ್ಕಾಗಿ ಯುವಜನ ಶಿಕ್ಷಣ:** ಭಾರತದಲ್ಲಿ 25 ವರ್ಷ ಪ್ರಾಯಕ್ಕಿಂತ ಕಡಿಮೆಯವರು ಶೇ 55 ಇರುವುದು ಜನಗಣತಿಯಿಂದ ತಿಳಿದುಬಂದಿದೆ. ಸಾಮಾನ್ಯವಾಗಿ 15–30 ವಯೋಮಿತಿಯಲ್ಲಿರುವ ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ಕೂಲಿಕಾರರು, ಯುವತಿಯರು ಈ ವರ್ಗದಲ್ಲಿ ಸೇರುತ್ತಾರೆ. ಈ ತರುಣ/ತರುಣಿಯರಲ್ಲಿ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಿರುವುದಕ್ಕಿಂತಲೂ ಹೆಚ್ಚು ಶಕ್ತಿ ಇರುತ್ತದೆ. ಇತರ ವ್ಯಕ್ತಿಗಳಿಗಿಂತ ಹೆಚ್ಚು ಉತ್ಸಾಹ, ಹುಮ್ಮಸ್ಸು, ಸಾಮರ್ಥ್ಯಗಳಿರುತ್ತವೆ. ಯುವಜನರು ಸದಾ ಯಾವುದಾದರೊಂದು ಕಾರ್ಯವನ್ನು ಮಾಡಲು ಹಾತೊರೆಯುತ್ತಿರುತ್ತಾರೆ. ಯುವಶಕ್ತಿಗೆ ಯೋಗ್ಯ ಮಾರ್ಗದರ್ಶನ ಸಿಗದೆ ಅನೇಕ ಸಲ ಅದು ನಿರರ್ಥಕ ಚಳುವಳಿಗಳಲ್ಲಿ, ಅನಿಷ್ಟವಾದ ಕಾರ್ಯ ಕುತೂಹಲದಲ್ಲಿ ವ್ಯರ್ಥವಾಗುತ್ತದೆ. ಇದರಿಂದ ಅಪಾರ ಹಾನಿಯುಂಟಾಗುವುದಲ್ಲದೆ, ರಾಷ್ಟ್ರದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಯುವಜನತೆಗೆ ಯೋಗ್ಯ ಮಾರ್ಗದರ್ಶನ ನೀಡುವುದರ ಮೂಲಕ ಮತ್ತು ರಾಷ್ಟ್ರದ ಪ್ರಗತಿಯನ್ನು ಸಾಧಿಸಬಹುದಲ್ಲದೆ ಯುವಕ ಯುವತಿಯರ ವ್ಯಕ್ತಿತ್ವವೂ ವಿಕಾಸವಾಗಲು ಸಾಧ್ಯವಾಗುತ್ತದೆ. ಯುವಶಕ್ತಿಯ ಸದುಪಯೋಗಕ್ಕೆ ಕೆಳಗಿನ ಶೈಕ್ಷಣಿಕ ಮಾರ್ಗಗಳನ್ನನುಸರಿಸಬೇಕು.

- ರಾಷ್ಟ್ರಸೇವೆ ಮತ್ತು ಸಮಾಜ ಸೇವೆ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿರಬೇಕು. ರಜಾದಿನಗಳಲ್ಲಿ ಹಳ್ಳಿಗಳಲ್ಲಿ ಸಮಾಜ ಸೇವಾ ಶಿಬಿರಗಳನ್ನು ಏರ್ಪಡಿಸಬೇಕು.
- ಪ್ರತಿಯೊಂದು ಕಾಲೇಜಿನಲ್ಲಿ ಹವ್ಯಾಸಿ ಸಂಘಗಳಿರಬೇಕು ಪ್ರತಿಯೊಬ್ಬ ವಿದ್ಯಾರ್ಥಿಯೂ ಯಾವುದಾದರೂ ಒಂದು ಸಂಘದ ಸದಸ್ಯನಾಗಿರಬೇಕು.
- ಧಾರ್ಮಿಕ ಮತ್ತು ನೈತಿಕ ಶಿಕ್ಷಣಗಳಿಗೆ ಅವಕಾಶವಿರಬೇಕು.
- ಸ್ವ–ಉದ್ಯೋಗ ಶಿಕ್ಷಣ ಕ್ರಮವನ್ನು ಅನುಷ್ಠಾನಕ್ಕೆ ತರಬೇಕು.
- ಸಮಾಜದಲ್ಲಿ ಕಂಡುಬರುವ ಅಸ್ಪೃಶ್ಯತೆ, ವರದಕ್ಷಿಣೆ, ಧೂಮಪಾನ ಮುಂತಾದವುಗಳ ದುಷ್ಪರಿಣಾಮಗಳನ್ನು ಯುವಜನಾಂಗಕ್ಕೆ ಮನದಟ್ಟು ಮಾಡಿಕೊಟ್ಟು ಅವುಗಳಿಂದ ದೂರವಿರಲು ಸಹಕರಿಸಬೇಕು.
- ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಬಾಲ್ಯದಿಂದಲೇ ಶಿಸ್ತು ಸಂಯಮಗಳನ್ನು ಕಲಿಸಬೇಕು.

**ವಿದ್ಯಾರ್ಥಿಗಳಲ್ಲದ ಇತರರು ಅಂದರೆ ಕಾರ್ಖಾನೆ ಕಾರ್ಮಿಕರು, ರೈತರು ಇತ್ಯಾದಿ ಯುವಕರಿಗಾಗಿ ಶಿಕ್ಷಣ:**

- ಪ್ರತಿಯೊಂದು ಹಳ್ಳಿಯಲ್ಲಿ ಮತ್ತು ಕಾರ್ಮಿಕರು ವಾಸಿಸುವ ಸ್ಥಳಗಳಲ್ಲಿ ಯುವ ಶಿಕ್ಷಣ ಮಂಡಳಿಗಳು ಪ್ರಾರಂಭವಾಗಬೇಕು. ಬಿಡುವಿನ ವೇಳೆಯಲ್ಲಿ ಯುವಕರು ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಮನೋರಂಜನೆಗಳು ಮುಂತಾದ ಚಟುವಟಿಕೆಗಳಲ್ಲಿ ಕಾರ್ಯಮಗ್ನರಾಗುವಂತೆ ವ್ಯವಸ್ಥೆ ಇರಬೇಕು.
- ಯುವ ಕೇಂದ್ರಗಳ ಮೂಲಕ ವಿದ್ಯಾವಂತರು ಅನಕ್ಷರಸ್ಥರಿಗೆ ಓದು, ಬರಹ ಕಲಿಸಬೇಕು.
- ಹಳ್ಳಿಗಳಲ್ಲಿನ ಆರೋಗ್ಯ– ನೈರ್ಮಲ್ಯ ಕಾಪಾಡಲು ನರವಿನಿಂದ ಜೇನು ಸಾಕುವುದು, ಹೈನುಗಾರಿಗೆ, ಕೋಳಿಸಾಕುವ ಉದ್ಯಮಗಳ ಬಗ್ಗೆ ಜ್ಞಾನ ನೀಡಬೇಕು.

**ನಾಗರಿಕ ಹೊಣೆಗಾರಿಕೆಗಾಗಿ ಯುವಜನ ಶಿಕ್ಷಣ:**

ನಾಗರಿಕ ಹೊಣೆಗಾರಿಕೆ, ದೇಶಪ್ರೇಮ, ಸಾಂಸ್ಕೃತಿಕ ಅಭಿರುಚಿ, ಕ್ರೀಡಾಸಕ್ತಿ, ಸಮುದಾಯ ಅಭಿವೃದ್ಧಿ ಹಾಗೂ ದೇಶಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿದಾಗ ಯುವಕ/ಯುವತಿಯರ ವ್ಯಕ್ತಿತ್ವದ ಪೂರ್ಣ ವಿಕಾಸವಾಗುವುದು. ಅವರು ಸಾಮಾಜಿಕವಾಗಿ ಉಪಯುಕ್ತರಾಗಿ ಕಾರ್ಯನಿರ್ವಹಣೆಯಲ್ಲಿ ದಕ್ಷರಾಗುವರು. ಆರ್ಥಿಕವಾಗಿ ಫಲಕಾರಿಯಾಗುವರು. ಯುವಶಕ್ತಿಯ ಪರಿಣಾಮಕಾರಿ ಸದುಪಯೋಗ ಸಮಾಜಕ್ಕೆ, ದೇಶಕ್ಕೆ ದೊರೆಯುವುದು. ಒಂದು ನಾಡಿನ ಯುವಶಕ್ತಿ ಒಂದು ಅಮೂಲ್ಯ ನಿಧಿಯಾಗಿರುತ್ತದೆ. ಯುವ–ಶಕ್ತಿಯ ಸ್ವಭಾವ ಸರಳವಾದುದು, ಯೋಗ್ಯ ಶಿಕ್ಷಣದಿಂದ ಇದರ ಸದುಪಯೋಗ ಸಾಧ್ಯ.

**ವಿವಿಧ ಸಂಘಟನೆಗಳ ಮೂಲಕ ಯುವಜನರಿಗೆ ಶಿಕ್ಷಣ:**

ಸಮಾಜ ಸೇವೆಯನ್ನೇ ಪರಮ ಗುರಿಯನ್ನಾಗಿಸಿಕೊಂಡ ಅನೇಕ ಸಂಘಟನೆಗಳು ಇಂದು ಪ್ರಪಂಚದಾದ್ಯಂತ ವಿಶೇಷವಾಗಿ ಭಾರತದಲ್ಲಿ ಪ್ರಾರಂಭವಾಗಿವೆ ಅವು ಯುವಕರಿಗೆ ವಿವಿಧ ಕ್ಷೇತ್ರದಲ್ಲಿ ವಿವಿಧ ಅಂಶಗಳ ಬಗ್ಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇಂದು ಶಿಕ್ಷಣ ನೀಡುತ್ತಿವೆ. ಇವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ. ಬೇಧ – ಭಾವವಿಲ್ಲದ ರಾಷ್ಟ್ರೀಯತೆಯನ್ನು ಪರಿಗಣಿಸದೆ ನಿಸ್ವಾರ್ಥ ಸೇವೆಯಲ್ಲಿ ನಿರತವಾಗಿವೆ. ಅವುಗಳು ಧ್ಯೇಯಗಳು, ಚಟುವಟಿಕೆಗಳು, ಕಾರ್ಯವಿಧಾನಗಳು, ಜನತೆಗೆ ಅತ್ಯುತ್ತಮ ಶಿಕ್ಷಣ ನೀಡುವುದರಲ್ಲಿ ಸಂಶಯವಿಲ್ಲ. ವಿಶ್ವದ ಜನರ ನೆಮ್ಮದಿ ಸಹಕಾರ, ಆರೋಗ್ಯ, ಶಿಕ್ಷಣ, ದೀನದಲಿತರ ಉದ್ಧಾರ, ಮಾಡುವ ಇಂತಹ ಸಂಸ್ಥೆಗಳು ಶಿಕ್ಷಣದ ಪರೋಕ್ಷ, ಪ್ರಾತಿನಿಧಿಕ ಸಂಸ್ಥೆಗಳಾಗಿವೆ. ಉದಾಹರಣೆಗೆ ರೋಟರಿ ಸಂಸ್ಥೆ, ಲಯನ್ಸ್ ಸಂಸ್ಥೆ, ರೆಡ್ ಕ್ರಾಸ್, ಸ್ಕೌಟ್, ಸೇವಾದಳ ಇತರ ಯುವ ಸಂಘಟನೆಗಳು.

Digitised by Bharatavani, CIIL

**ಬುಲ್ ಬುಲ್ ಮತ್ತು ಕಬ್ಸ್‌ಗಳು:**

ಬಾಲ್ಯಾವಸ್ಥೆ ಮಕ್ಕಳಿಗೆ ಉತ್ತಮ ನಡತೆ, ಶಿಸ್ತು, ಪರಹಿತ ಸೇವೆ, ಹಾಗೂ ನೈತಿಕ ವರ್ತನೆಯನ್ನು ಬೆಳೆಸಲು ಸ್ಥಾಪಿತವಾಗಿರುವ ಸಂಸ್ಥೆಗಳೇ ಕಬ್ಸ್ ಮತ್ತು ಬುಲ್ ಬುಲ್‌ಗಳು, ಇವು ಆರು ವರ್ಷದಿಂದ ಹತ್ತು ವರ್ಷದೊಳಗಿನ ಮಕ್ಕಳಿಗಾಗಿ ರೂಪಿತವಾಗಿರುವ ಭಾರತ್ ಸ್ಕೌಟ್‌ನ ಅಂಗ ಸಂಸ್ಥೆಗಳು.

ಲಾರ್ಡ್‌ಬೇಡನ್‌ಪೋವೆಲ್‌ರವರು 22–2–1857ರಲ್ಲಿ ಇಂಗ್ಲೆಂಡನಲ್ಲಿ ಸ್ಕೌಟನ್ನು ಪ್ರಾರಂಭಿಸಿದನು. ಸೇನಾನಿಯಾಗಿದ್ದ ಪೋವೆಲ್‌ರವರು ಮಕ್ಕಳು ಮತ್ತು ಯುವಕರಲ್ಲಿ ಶಿಸ್ತು, ಸಂಯಮ ಮತ್ತು ಸೇವಾ ಕಾರ್ಯಗಳನ್ನು ಮಾಡುವ ಮನೋಭಾವನೆ ಬೆಳೆಸುವ ಉದ್ದೇಶದಿಂದ ಈ ಸಂಸ್ಥೆ ಪ್ರಾರಂಭಿಸಿದರು. ಇದರ ಅಂಗ ಸಂಸ್ಥೆಯೇ ಕಬ್ಸ್‌ಗಳು.

ಶಾಲಾ ಮಟ್ಟದಲ್ಲಿ ಪ್ರಾರಂಭಿಸುವ ಕಬ್ಸ್ ತನ್ನದೇ ಆದ ಹೆಸರನ್ನು ಹೊಂದಿರುತ್ತವೆ. ಇದರ ಧ್ಯೇಯೋದ್ದೇಶಗಳು– 'ಸಾಧ್ಯವಾದಷ್ಟು ಉತ್ತಮ ಕಾರ್ಯ ಮಾಡು' (Do your best) 'ಸದಾ ಸಿದ್ಧನಾಗಿರು', 'ದಿನಕ್ಕೊಂದು ಒಳ್ಳೆಯ ಕೆಲಸ ಮಾಡು', ಪ್ರತಿಯೊಬ್ಬ ಸದಸ್ಯ 'ನಾನು ನನ್ನ ಕೈಲಾದಮಟ್ಟಿಗೆ ದೇವರಿಗೂ ನನ್ನ ದೇಶಕ್ಕೂ ನನ್ನ ಕರ್ತವ್ಯ ಮಾಡುತ್ತೇನೆಂದು' ಪ್ರತಿಜ್ಞೆ ಮಾಡುತ್ತಾನೆ.

ವಿಶ್ವಾಸಾರ್ಹತೆ, ನಿಷ್ಠಾವಂತಿಕೆ, ಸ್ನೇಹತ್ವ ದಯಾಪರತೆ, ನಿಸರ್ಗಪ್ರೇಮ, ಶಿಸ್ತು, ಮಿತವ್ಯಯ, ಧೈರ್ಯ ಮತ್ತು ಕಾಯ, ವಾಚಾ, ಮನಸಾ, ಪರಿಶುದ್ಧತೆಯನ್ನು ಮಕ್ಕಳಲ್ಲಿ ಬೆಳೆಸುವುದು ಇದರ ತತ್ವಗಳ ಮುಖ್ಯ ಉದ್ದೇಶವಾಗಿದೆ.

ಇಂತಹ ಸಂಸ್ಥೆಗಳಿಂದ ಸತ್‌ಪ್ರಜೆಗಳನ್ನು ನಿರ್ಮಾಣ ಮಾಡಬಹುದಾಗಿದೆ. ಅವು ನಡೆಸುವ ಚಟುವಟಿಕೆಗಳಲ್ಲಿ ಮನರಂಜನೆ, ಕ್ರೀಡೆಗಳು, ಸಾಹಸ, ಸಮಾಜ ಸೇವೆಗಳು ಸೇರಿವೆ. ಆಗಾಗ್ಗೆ ಶಿಬಿರಗಳನ್ನು ಏರ್ಪಡಿಸಿ ವಿಶೇಷ ತರಬೇತಿಯನ್ನು ಮಕ್ಕಳಿಗೆ ನೀಡಲಾಗುತ್ತದೆ. ಇದರಿಂದ ಮಕ್ಕಳು ತಪ್ಪುದಾರಿ ಹಿಡಿಯದೇ, ಸೋಮಾರಿಗಳಾಗದೇ ಬೆಳೆಯಲು ಸಹಕಾರಿಯಾಗಿವೆ. ಇದೊಂದು ಬಗೆಯ ಅನೌಪಚಾರಿಕ ಶಿಕ್ಷಣವಾಗಿದ್ದು ಇದರ ಸೌಲಭ್ಯ ಎಲ್ಲಾ ಮಕ್ಕಳಿಗೂ ದೊರೆಯಬೇಕು. ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಈ ಸಂಸ್ಥೆಗಳು ಪ್ರಾರಂಭವಾಗಬೇಕಾಗಿದೆ.

**ರೋಟರ್‍ಯಾಕ್ಟ್:**

ಅಂತರರಾಷ್ಟ್ರೀಯ ರೋಟರೀ ಸಂಸ್ಥೆಯಲ್ಲಿ ಯುವ ಜನತೆಗೆ ಸೇವಾ ನಾಯಕತ್ವದಲ್ಲಿ ಮತ್ತು ಸ್ನೇಹ ಸಂಪಾದನೆಯಲ್ಲಿ ತರಬೇತಿ ನೀಡಲು ಕಿರಿಯರ ವಿಭಾಗಗಳನ್ನು ಹೊಂದಿದೆ. 1905ರಲ್ಲಿ ಅಮೇರಿಕಾದ ಚಿಕಾಗೋದಲ್ಲಿ ಪಾಲ್ ಹ್ಯಾರಿಸ್‌ರವರಿಂದ ಸ್ಥಾಪಿತವಾದ ರೋಟರಿ– ಸಂಸ್ಥೆಯ ಅಂಗ ಸಂಸ್ಥೆಯೇ ರೋಟರ್‍ಯಾಕ್ಟ್ (Rotaract), 18 ರಿಂದ 30ರ ವಯೋಮಿತಿಯಲ್ಲಿರುವವರನ್ನು ಈ ಸಂಸ್ಥೆಯು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗುತ್ತದೆ. ರೋಟರ್‍ಯಾಕ್ಟ್ ಸಂಸ್ಥೆಯ ಉದ್ದೇಶಗಳು ಹೀಗಿವೆ.

- ಯುವ ಜನಾಂಗದಲ್ಲಿ ವ್ಯಕ್ತಿತ್ವದ ವಿಕಾಸಕ್ಕೆ ಸಹಾಯಕವಾಗುವ ಜ್ಞಾನ, ತಿಳುವಳಿಕೆ ಮತ್ತು ನೈಪುಣ್ಯವನ್ನು ಬೆಳೆಸುವುದು.
- ಸಮಾಜ ಸೇವಾ ಕಾರ್ಯದಲ್ಲಿ ಯುವಕರನ್ನು ತೊಡಗಿಸುವುದು.
- ವಿಶ್ವದಲ್ಲೆಲ್ಲ ಪರಸ್ಪರ ಸ್ನೇಹ, ಸೇವೆ, ಹೊಂದಾಣಿಕೆ ನಿರ್ಮಿಸುವುದು. ವಿಶ್ವಶಾಂತಿಯ ಸಂದೇಶ ಸಾರುವುದು.
- ನಾಯಕತ್ವದ ನೈಪುಣ್ಯಗಳನ್ನು ಬೆಳೆಸುವುದು, ಅವುಗಳನ್ನು ಮುಂದೆ ಕೈಗೊಳ್ಳಬಹುದಾದ ವೃತ್ತಿಯಲ್ಲಿ ಅಳವಡಿಸಿಕೊಳ್ಳಲು ನೆರವಾಗುವುದು.
- ವ್ಯಕ್ತಿಯೊಬ್ಬನ ಪ್ರತಿಭೆಯನ್ನು ಗುರುತಿಸುವುದು, ಗೌರವಿಸುವುದು, ಮತ್ತು ಪ್ರೋತ್ಸಾಹಿಸುವುದು.
- ನೀತಿ ಸಂಹಿತೆಯನ್ನು ಎಲ್ಲ ಕಾಲದಲ್ಲಿಯೂ ಅಳವಡಿಸಿಕೊಳ್ಳಲು ತರಬೇತಿ ಮತ್ತು ಮಾರ್ಗದರ್ಶನ ನೀಡುವುದು.
- ಕೈಗೊಳ್ಳಬಹುದಾದ ವೃತ್ತಿಯಲ್ಲಿ ಜವಾಬ್ದಾರಿಯನ್ನು ಹೆಚ್ಚಿಸುವುದು. ವಿಶ್ವದ ಸಮಸ್ಯೆಗಳನ್ನು ಅರಿಯುವುದು ಮತ್ತು ಅವುಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸುವಂತೆ ಮಾಡುವುದು.
- ಅಂತರಾಷ್ಟ್ರೀಯ ತಿಳುವಳಿಕೆಗೆ ಸಾಕಷ್ಟು ಅವಕಾಶ ಕಲ್ಪಿಸುವುದು.

ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲಿಯೇ ಸಭೆ ಸಮಾರಂಭಗಳನ್ನು ವ್ಯವಸ್ಥೆ ಮಾಡುವ ಮೂಲಕ ನಾಯಕತ್ವ ತರಬೇತಿಯನ್ನು ಪಡೆಯುವರು, ಬಡವರಿಗೆ, ರೋಗಿಗಳಿಗೆ, ಮಕ್ಕಳಿಗೆ ಸಮಾಜದ ಹಲವು ವರ್ಗಗಳಿಗೆ ಸೇವಾ ಕಾರ್ಯವನ್ನು ಕೈಗೊಳ್ಳುವುದು ಒಂದು ಪ್ರಮುಖ ಕಾರ್ಯ. ತಮ್ಮ ಖರ್ಚಿಗೆ ಪೋಷಕರು ಕೊಡುವ ಹಣದಲ್ಲಿಯೇ ಸ್ವಲ್ಪವನ್ನು ಉಳಿಸಿ ಸಂಗ್ರಹವಾಗುವ ಹಣವನ್ನು ರೋಟರ್‍ಯಾಕ್ಟ್ ಸೇವಾ ಕಾರ್ಯದಲ್ಲಿ ತೊಡಗಿಸುತ್ತದೆ. ಹಿರಿಯ ರೋಟರಿ ಸದಸ್ಯರ ಮತ್ತು ಸಂಸ್ಥೆಯ ಮಾರ್ಗದರ್ಶನದಲ್ಲಿ ಇದು ಕಾರ್ಯ ನಿರ್ವಹಿಸುವುದು.

ಇಂತಹ ರೋಟರ್‍ಯಾಕ್ಟ್ ಕೂಟಗಳನ್ನು ಶಾಲೆಗಳಿಗೆ ವಿಸ್ತರಿಸಿದ್ದು, ಶಾಲಾ ಮಕ್ಕಳಲ್ಲಿ ಸಮುದಾಯ ಸೇವಾ ಮನೋಭಾವನೆ, ವ್ಯಕ್ತಿತ್ವ ಬೆಳವಣಿಗೆ, ಮನೋವೈಶಾಲ್ಯತೆ, ವಿಶ್ವಭಾವನೆಯುಳ್ಳ ವಿಚಾರಗಳನ್ನು ಮೂಡಿಸಬಹುದಾಗಿದೆ. ಈ ಕೂಟದ ಆಶ್ರಯದಲ್ಲಿ ಶಾಲೆ ಮಕ್ಕಳಿಗಾಗಿ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ.

- ಸಮುದಾಯ ಸೇವಾ ಕಾರ್ಯಚಟುವಟಿಕೆ.
- ಹಳ್ಳಿಗಳಲ್ಲಿ ಜನರ ಆರೋಗ್ಯ, ಶಿಕ್ಷಣ, ಸ್ವಚ್ಛತೆ ಬಗ್ಗೆ ಉಪನ್ಯಾಸ ಹಾಗೂ ಪ್ರಾಯೋಗಿಕ ಕಾರ್ಯಕ್ರಮಗಳು.
- ಪರಿಸರ ಸಂರಕ್ಷಣಾ ಕಾರ್ಯಗಳು.
- ಮಕ್ಕಳ ಆರೋಗ್ಯ ರಕ್ಷಣೆಯ ವಿವಿಧ ಕಾರ್ಯಕ್ರಮಗಳು.
- ವಿವಿಧ ಮನರಂಜನಾ ಸ್ಪರ್ಧೆಗಳನ್ನೇರ್ಪಡಿಸಿ ಬಹುಮಾನ

Digitised by Bharatavani, CIIL

ಪ್ರಶಸ್ತಿ ನೀಡುವ ಮೂಲಕ ಮಕ್ಕಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಸಾಂಸ್ಕೃತಿಕ ಬೆಳವಣಿಗೆ ಮಾಡಬಹುದು.

- ಸಾಹಿತ್ಯಾಭಿರುಚಿ ಮೂಡಿಸುವಂತಹ ಉಪನ್ಯಾಸ, ಭಾಷಣ, ವಿಚಾರ ಸಂಕಿರಣ ಕಾರ್ಯಕ್ರಮಗಳು.
- ರಸಪ್ರಶ್ನೆ, ಆಶುಭಾಷಣ, ಅಂತ್ಯಾಕ್ಷರಿ ಕಾರ್ಯಕ್ರಮಗಳನ್ನು ಮಾಡಿ ವಿರಾಮ ವೇಳೆಯ ಸದುಪಯೋಗ ಮಾಡಿಕೊಡುವುದು.
- ವಿವಿಧ ಕ್ರೀಡೆಗಳಲ್ಲಿ ಶಾಲಾ, ಸ್ಥಳೀಯ, ತಾಲೂಕ್, ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನೇರ್ಪಡಿಸಿ ಕ್ರೀಡಾ ಮನೋಭಾವನೆ ಮೂಡಿಸುವುದು.
- ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಂಸ್ಕೃತಿಯ ಅರಿವು ಮೂಡಿಸುವುದು.

ಹೀಗೆ ರೋಟಾರ್‍ಯಾಕ್ಟಗಳು ಶಾಲಾ ಹಂತದಲ್ಲಿ ಅತ್ಯುತ್ತಮ ಸಹ–ಪಠ್ಯ ಚಟುವಟಿಕೆಗಳನ್ನು ಸಂಘಟಿಸಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗಬಲ್ಲವು. ಇದೊಂದು ಉತ್ತಮವಾದ ಅನೌಪಚಾರಿಕ ಪ್ರಾತಿನಿಧಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

**ಸೇವಾದಳ:**

ಸೇವಾದಳ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಂಗಸಂಸ್ಥೆ, ಗಾಂಧೀಜಿಯವರಿಂದ ಸ್ಥಾಪಿತವಾದ 'ಸ್ವಯಂ ಸೇವೆಯೇ ಕಾಯಕ' ವೆಂಬ ಸಂಘವೇ ಕಾಂಗ್ರೆಸ್‌ನ ಸೇವಾದಳ. 1923ರ ಡಿಸೆಂಬರ್ 27 ರಂದು ನೆಹರೂರವರ ಅಧ್ಯಕ್ಷತೆಯಲ್ಲಿ ಡಾ. ಹರ್ಡೇಕರ್‌ರವರ ನೇತೃತ್ವದಲ್ಲಿ 'ಸೇವಾದಳ' ಪ್ರಾರಂಭವಾಯಿತು. ಇದು ಸ್ವಯಂ ಸೇವಕರಿಗೆ, ತರುಣರಿಗೆ ಶಿಸ್ತು, ಸಂಯಮ ತ್ಯಾಗ, ಬಲಿದಾನ, ಕಷ್ಟ ಸಹಿಷ್ಣುತೆ, ಸತ್ಯ ಅಹಿಂಸೆ, ಸಂಘಟನೆಗಳ ಬಗ್ಗೆ ತರಬೇತಿ ನೀಡುವ ಮುಖ್ಯ ಉದ್ದೇಶ ಹೊಂದಿರುವ ಸಂಸ್ಥೆಯಾಗಿದೆ. ಇದರ ಉದ್ದೇಶಗಳು ಇಂತಿವೆ.

- ಗಾಂಧೀಜಿಯವರ ಆದರ್ಶಗಳನ್ನು ಯುವಕರಲ್ಲಿ ಬೆಳೆಸುವುದು.
- ಸ್ವಯಂ ಸೇವಕರಿಗೆ ಸಂಯಮ, ಶಿಸ್ತು, ಸಂಘಟನೆಗಳ ತರಬೇತಿ ನೀಡುವಿಕೆ.
- ಖಾದಿ ಪ್ರಚಾರ ಮಾಡುವುದು, ಮದ್ಯಪಾನ ಪ್ರತಿಬಂಧಕ ನಡೆಸುವುದು.
- ಪ್ರಕೃತಿ ವಿಕೋಪಕ್ಕೊಳಗಾಗಿ ನೊಂದವರಿಗೆ ಸಹಾಯ ಮಾಡುವುದು.
- ಹಳ್ಳಿಗಳ ನೈರ್ಮಲ್ಯ, ರಸ್ತೆ, ನಿರ್ಮಾಣ, ಪರಿಸರ ಸಂರಕ್ಷಣೆ, ಅನಕ್ಷರಸ್ಥರಿಗೆ ಶಿಕ್ಷಣ ಕೊಡುವುದು.

ಯುವಜನರಿಗೆ ನೀಡುವ ಶಿಕ್ಷಣ ರಾಷ್ಟ್ರದ ಪ್ರಗತಿಗೆ ಅತಿಮುಖ್ಯ ಕೊಡುಗೆಯಾಗುತ್ತದೆ. ಯುವಜನರ ಶಕ್ತಿಯು ಸೂಕ್ತರೀತಿಯಲ್ಲಿ ಉಪಯೋಗವಾಗಬೇಕಾದರೆ ಅವರಿಗೆ ನೀಡುವ ಶಿಕ್ಷಣ ಪರಿಣಾಮಕಾರಿಯಾಗಿರಬೇಕು. ಶಿಕ್ಷಣ ಮಾತ್ರ ಯುವಕರ (ದೇಶದ) ಅಭಿವೃದ್ಧಿಯ ಮಾಧ್ಯಮವಾಗಿದೆ.

–ಪ್ರೊ. ಆಶಾ ಪ್ರೇಮಲತಾ

# ರ

## ರಸ್ತೆ ಸುರಕ್ಷತಾ ಶಿಕ್ಷಣ

**ರಸ್ತೆ ಸುರಕ್ಷತಾ ಶಿಕ್ಷಣದ ಪರಿಕಲ್ಪನೆ ಮತ್ತು ಅಗತ್ಯ:** ಆಧುನಿಕ ಜಗತ್ತಿನಲ್ಲಿ ಬದುಕುತ್ತಿರುವ ನಮಗೆ ಮುಂದುವರೆದ ನಾಗರೀಕತೆಗೆ ಅನುಗುಣವಾಗಿ ಜೀವನದಲ್ಲಿನ ನಮ್ಮ ಅಗತ್ಯಗಳು, ಅವಶ್ಯಕತೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಮಾನವನು ಕೇವಲ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುವುದಕ್ಕೆ ಮಾತ್ರವಷ್ಟೇ ಅಲ್ಲದೆ ದೇಶದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸರಕನ್ನು ಸಾಗಿಸಲೂ ವೇಗದ ಸಾರಿಗೆ ಮಾಧ್ಯಮವನ್ನು ಬಳಸುವ ಅವಶ್ಯಕತೆಯಿದೆ. ನಮ್ಮ ಸಾರಿಗೆಯ ಪ್ರಮುಖ ಭಾಗವು ರಸ್ತೆಯ ಮುಖಾಂತರವೇ ನಡೆಯುವುದು. ಇಂತಹ ಸನ್ನಿವೇಶದಲ್ಲಿ ರಸ್ತೆ ಸುರಕ್ಷತೆಯು ಅತಿ ಹೆಚ್ಚಿನ ಪ್ರಾಮುಖ್ಯವನ್ನು ಹೊಂದಿದೆ. ಆದ್ದರಿಂದ ರಸ್ತೆ ಸುರಕ್ಷತಾ ಶಿಕ್ಷಣವೂ ಅನಿವಾರ್ಯವಾಗಿದೆ. ರಸ್ತೆ ಸುರಕ್ಷತೆ ಎಂದರೆ ರಸ್ತೆಗಳಲ್ಲಾಗುವ ಅಪಘಾತಗಳನ್ನು ತಪ್ಪಿಸುವುದು ಮತ್ತು ಜನರ ಸುರಕ್ಷತೆಯನ್ನು ಕಾಪಾಡುವುದಾಗಿದೆ.

ಮೆಸಪೊಟೊಮಿಯಾ ನಾಗರಿಕತೆಯಲ್ಲಿ ಆದ ಗಾಲಿಗಳ ಅನ್ವೇಷಣೆಯು ನಮ್ಮದೇ ಆದ ನಾಗರೀಕತೆಗೆ ಚಾಲನೆ ನೀಡಿತು. ಕ್ರಿ.ಶ. 1645ರಲ್ಲಿ ಬ್ರೇಕ್, ಪೆಡಲ್ ಅಥವಾ ನಿಯಂತ್ರಣ ದಂಡ (ಸ್ಟೀರಿಂಗ್)ವಿಲ್ಲದ ಒಂದು ಸೈಕಲ್ಲನ್ನು ಜೀನ್ ಥೆಸನ್ ಎಂಬುವನು ತಯಾರಿಸಿದನು. ಕ್ರಿ.ಶ. 1839ರಲ್ಲಿ ಕೆ. ಮ್ಯಾಕ್‌ಮಿಲನ್ ಸರಿಯಾದ ಸೈಕಲ್ಲಿನ ಮಾದರಿಯನ್ನು ರೂಪಿಸಿದನು. ಮೊದಲನೆಯ 'ಸ್ಟೀಮ್‌ಟ್ರಕ್' ಕಂಡುಹಿಡಿದ ನಿಕೊಲಸ್ ಜೋಸೆಫ್ ಕನ್ನಾಟ್ 1769 ರಲ್ಲಿ ಆಟೊಮೊಬೈಲ್ ಅಶ್ವ ಶಕ್ತಿಯ ಸಾಧ್ಯತೆಯ ಬಗ್ಗೆ ಆಲೋಚಿಸಿದನು. ತದನಂತರ ,ಆಟೊಮೊಬೈಲ್‌ಗಳು ನಮ್ಮ ಜೀವನ ಮತ್ತು ಸಂಸ್ಕೃತಿಗಳನ್ನು ಆವರಿಸಿಕೊಂಡುಬಿಟ್ಟವು. ಆದರೆ 'ಅಪಘಾತ' ಎಂಬ ಕಲ್ಪನೆಯು ನಮ್ಮ ಭವಿಷ್ಯವನ್ನು ಅಪಾಯಕ್ಕೀಡು ಮಾಡಿತು. ಕ್ರಿ.ಶ. 1751 ರಲ್ಲಿ ಪ್ಯಾರಿಸ್‌ನಲ್ಲಿ ಶಸ್ತ್ರಾಗಾರದ ಆವರಣದ ಮೋಟು ಗೋಡೆಯೊಂದಕ್ಕೆ ಕನ್ನಾಟ್‌ನ ಸ್ಟೀಮ್ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ಮೋಟಾರು ವಾಹನದ ಪ್ರಥಮ ಅಪಘಾತವೆನಿಸಿಕೊಂಡಿತು. 1899ರಲ್ಲಿ ಚಾಲಕನೊಬ್ಬನ ಮರಣದೊಂದಿಗೆ ಪ್ರಾಣಾಂತಕ ಅಪಘಾತವೊಂದು ಸಂಭವಿಸಿತು. ಇದಾದ ನಂತರ ವಿಶ್ವದಲ್ಲಿ ಹಲವಾರು ರಸ್ತೆ ಸುರಕ್ಷತಾ ಕ್ರಮಗಳನ್ನು ಮುಂದಿಡಲಾಯಿತು. 1865 ರಲ್ಲಿ ಮೊದಲನೆಯ ಕಾಯ್ದೆಯನ್ನು

Digitised by Bharatavani, CIIL

(ಲೊಕೊಮೊಟಿವ್ ಮತ್ತು ಹೆದ್ದಾರಿ ಕಾಯ್ದೆ, The Locomotive and Highway Act) ಜಾರಿಗೊಳಿಸಲಾಯಿತು. ಈ ಕಾಯ್ದೆಗೆ 'ಕೆಂಪು ಬಾವುಟ ಕಾಯ್ದೆ' (Red Flag Act) ಎಂಬ ಹೆಸರೂ ಇತ್ತು. ಆದರೆ ದಿನೇದಿನೇ ರಸ್ತೆ ಅಪಘಾತದಲ್ಲಿ ಮರಣಿಸುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಇಂದು ವಿಶ್ವದಾದ್ಯಂತ ಪ್ರತಿವರ್ಷ ಸುಮಾರು 5 ಲಕ್ಷ ಜನರು ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪುತ್ತಿದ್ದು ಲಕ್ಷಾಂತರ ವ್ಯಕ್ತಿಗಳು ಗಾಯಾಳುಗಳಾಗುತ್ತಿದ್ದಾರೆ.

ಮಕ್ಕಳು ಸಹ ರಸ್ತೆ ಸುರಕ್ಷತಾ ಸಂಸ್ಕೃತಿಯ ಬಗ್ಗೆ ಪರಿಚಿತರಾಗಿರಬೇಕಾದುದು ಈ ಕಾಲಘಟ್ಟದ ಅಗತ್ಯವಾಗಿದೆ. ಇದರ ಮಾಹಿತಿಯುಳ್ಳ ಮಗುವು ಮಾತ್ರ ಸುರಕ್ಷಿತ ಭವಿಷ್ಯವನ್ನು ನಿಶ್ಚಿತಗೊಳಿಸಬಲ್ಲದು. ಆದ್ದರಿಂದಲೇ ವಯಸ್ಕ ಜೀವನದ ಅವಕಾಶಗಳು, ಜವಾಬ್ದಾರಿಗಳು ಮತ್ತು ಅನುಭವಗಳಿಗೆ ಮಕ್ಕಳನ್ನು ವಿಕಾಸಗೊಳಿಸಿ ಅವರನ್ನು ಸಿದ್ಧಪಡಿಸುವ ಗುರುತರ ಜವಾಬ್ದಾರಿಯು ಶಾಲೆಗಳದ್ದಾಗಿದೆ. ಶಾಲೆಗಳಲ್ಲಿ ಬೋಧನಾ ವೇಳಾಪಟ್ಟಿಯು ಯಾವಾಗಲೂ ಒತ್ತಡ ತರುವಂತೆಯೇ ಇರುವುದು. ಮತ್ತೊಂದು ವಿಷಯವನ್ನು ಪರಿಚಯಿಸುವುದು ಈಗಾಗಲೇ ಒತ್ತಡದಲ್ಲಿರುವ ವಿದ್ಯಾರ್ಥಿಗೆ ಮತ್ತಷ್ಟು ಹೊರೆಯಾಗುವುದು. ಆದ್ದರಿಂದ ರಸ್ತೆ ಸುರಕ್ಷತೆ, ರಸ್ತೆ ಸಂಚಾರಕ್ಕೆ ಸಂಬಂಧಿಸಿದ ಕಾನೂನುಗಳು ಮತ್ತು ಜ್ಞಾನದ ಅವಶ್ಯಕತೆ ಹೆಚ್ಚಾಗುತ್ತಿರುವುದರಿಂದ ಈ ವಿಷಯವನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಪಠ್ಯಕ್ರಮದ ವಿಷಯಗಳಲ್ಲಿಯೇ ಸಮಗ್ರಗೊಳಿಸಿ ಬೋಧಿಸಬಹುದಾಗಿದೆ.

ಇದು ಹೀಗಿರಬೇಕು.

1. ಶಾಸನಬದ್ಧ ಪಠ್ಯಕ್ರಮ
2. ಗೌಪ್ಯ ಪಠ್ಯಕ್ರಮ
3. ಪಠ್ಯೇತರ ಚಟುವಟಿಕೆಗಳು

ಪಠ್ಯಕ್ರಮವು ಮಕ್ಕಳಲ್ಲಿನ ಮೌಲ್ಯಗಳನ್ನು ಹಾಗೂ ಅವರ ಮನೋದೃಷ್ಟಿಯನ್ನು ಶ್ರೀಮಂತಗೊಳಿಸುವಂಥ ಶಾಲೆಯೊಳಗಿನ ಎಲ್ಲಾ ಚಟುವಟಿಕೆಗಳು, ಕಾರ್ಯಯೋಜನೆಗಳು ಮತ್ತು ಸಂವಾದಗಳನ್ನು ಒಳಗೊಳ್ಳುತ್ತದೆ. ಆದ್ದರಿಂದ ಸದ್ಯದ ಪರಿಸರದಲ್ಲಿ ಆಗುವ ಬದಲಾವಣೆಗೆ ಅನುಗುಣವಾದ ಪಠ್ಯಕ್ರಮವು ವಿಶಾಲ ವ್ಯಾಪ್ತಿಯುಳ್ಳದ್ದಾಗಿರಬೇಕು.

**ರಸ್ತೆ ಸುರಕ್ಷತೆಯ ಶಿಕ್ಷಣವನ್ನು ನೀಡಲು ಕಾರ್ಯವಿಧಾನಗಳು**

ಶಾಲೆಗಳಲ್ಲಿ ರಸ್ತೆ ಸುರಕ್ಷತೆ ಶಿಕ್ಷಣವನ್ನು ಎರಡು ಹಂತಗಳಲ್ಲಿ ನೀಡಬೇಕಾಗುವುದು:

1. ಪ್ರಾಥಮಿಕ ಹಂತ
2. ಮಾಧ್ಯಮಿಕ ಹಂತ

**ಪ್ರಾಥಮಿಕ ಹಂತ**

ರಸ್ತೆ ಸುರಕ್ಷತೆಯ ಮಾಹಿಯನ್ನು ಕವನಗಳು, ಕಥೆಗಳು, ಭಿತ್ತಿ ಚಿತ್ರಗಳು, ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳು ಇತ್ಯಾದಿಗಳ ಮೂಲಕ ನೀಡಬಹುದಾಗಿದೆ. ತರುವಾಯ, ಮಕ್ಕಳಿಗೆ ಈ ಕೆಳಗಿನ ಕೆಲವು ರಸ್ತೆಯ ಮುಖ್ಯ ನಿಯಮಗಳನ್ನು ಕುರಿತು ಮಾಹಿತಿ ನೀಡಬೇಕು:

1. ಯಾವಾಗಲೂ ಫುಟ್‌ಪಾತ್‌ನಲ್ಲಿಯೇ ನಡೆಯಿರಿ.
2. ಝೀಬ್ರಾ ಕ್ರಾಸಿಂಗ್, ಟ್ರಾಫಿಕ್ ಸಿಗ್ನಲ್, ಸಬ್‌ವೇ, ಕಾಲು–ಮೇಲುಸೇತುವೆ( ಫುಟ್ ಓವರ್ ಬ್ರಿಡ್ಜ್) –ಈ ಸೌಲಭ್ಯಗಳಲ್ಲಿಯೇ ರಸ್ತೆ ದಾಟಬೇಕು. ಈ ಸೌಲಭ್ಯಗಳು ಇಲ್ಲದಿದ್ದಾಗ ಸುರಕ್ಷಿತ ಸ್ಥಳದಲ್ಲಿ ರಸ್ತೆಯನ್ನು ದಾಟಬೇಕು.
3. ರಸ್ತೆಯನ್ನು ಓಡುತ್ತಾ ದಾಟುವುದು ಅಪಾಯಕಾರಿ. ಏಕೆಂದರೆ ನೀವು ಜಾರಿ ಬೀಳಬಹುದು.
4. ಯಾವಾಗಲೂ ಸರತಿಯನ್ನು (ಕ್ಯೂ) ಪಾಲಿಸಬೇಕು.

ಇವೆಲ್ಲವನ್ನು ಪರಿಸರ ವಿಜ್ಞಾನದ ಭಾಗವಾಗಿ ಬೋಧಿಸಬಹುದು.

**ಮಾಧ್ಯಮಿಕ ಹಂತ**

**ಮಾಧ್ಯಮಿಕ ಹಂತದಲ್ಲಿ ಈ ಕೆಳಗಿನವುಗಳು ನಮ್ಮ ಉದ್ದೇಶವಾಗಿರಬೇಕು:**

1. ರಸ್ತೆ ಬಳಸುವಿಕೆಯಲ್ಲಿ ಜವಾಬ್ದಾರಿ ಮನೋಭಾವನೆ ಬೆಳೆಸುವುದು ಮತ್ತು ಅಪಾಯಕರವಾಗಿ ರಸ್ತೆ ಬಳಸುವುದನ್ನು ಕಡಿಮೆ ಮಾಡುವುದು.
2. ರಸ್ತೆಗಳು ಮತ್ತು ಅವುಗಳ ಗುಣಲಕ್ಷಣಗಳ ಬಗ್ಗೆ ಮತ್ತು ಟ್ರಾಫಿಕ್ ನಿಯಂತ್ರಣ ಉಪಕರಣಗಳ ಬಗ್ಗೆ ಅರಿವು ಮೂಡಿಸುವುದು.
3. ಸಂಚಾರಿ ನಿಯಂತ್ರಣ ಮತ್ತು ಸಂಚಾರಿ ನಿಯಮಗಳ ಬಗೆಗೆ ಚಿರಪರಿಚಿತರನ್ನಾಗಿ ಮಾಡುವುದು.
4. ಅಪಘಾತದ ಸಾಮಾನ್ಯ ಕಾರಣಗಳನ್ನು, ವಿಶೇಷವಾಗಿ, ಸುಲಭವಾಗಿ ಅಪಾಯಕ್ಕೆ ಒಳಗಾಗಬಹುದಾದ ಪಾದಚಾರಿಗಳು, ಸೈಕಲ್ ಸವಾರರು, ಮಕ್ಕಳು ಇತ್ಯಾದಿಗಳನ್ನು ಒಳಗೊಳ್ಳುವ ಅಪಘಾತಗಳ ವಿಶ್ಲೇಷಣೆ.
5. ರಸ್ತೆಗಳಲ್ಲಿ ಅಪಘಾತ ಸಂಭವಿಸಿದಾಗ, ಗಾಯಾಳುಗಳಾದಾಗ ಏನು ಮಾಡಬೇಕೆಂಬುದರ ಬಗ್ಗೆ ಅರಿವು ಮೂಡಿಸುವುದು.
6. ಮದ್ಯಪಾನ, ಮಾದಕ ವಸ್ತುಗಳು, ಅನಾರೋಗ್ಯ ಮತ್ತು ಇನ್ನಿತರ ಅಂಶಗಳು ರಸ್ತೆ ಅಪಘಾತಗಳಿಗೆ ಸಂಬಂಧಿಸಿದಂತೆ ಬೀರುವ ಪ್ರಭಾವದ ಬಗ್ಗೆ ಅರಿವು ಮೂಡಿಸುವುದು.
7. ರಸ್ತೆ ಅಪಘಾತಗಳನ್ನು ತಗ್ಗಿಸಲು ಸಮಾಜಕ್ಕೆ ಲಭ್ಯವಿರುವ ಮಾರ್ಗಗಳ ಬಗ್ಗೆ ಅರಿವು ಮೂಡಿಸುವುದು.

Digitised by Bharatavani, CIIL

8. ವಯೋವೃದ್ಧರಿಗೆ , ವಿಕಲಚೇತನರಿಗೆ ಮತ್ತು ಸಣ್ಣ ಮಕ್ಕಳಿಗೆ ಬೇಕಾದ ರಸ್ತೆಗೆ ಸಂಬಂಧಿಸಿದ ವಿಶೇಷ ಅಗತ್ಯಗಳ ಬಗೆಗೆ ತಿಳಿಸಿಕೊಡುವುದು.

9. ರಸ್ತೆಗಳಲ್ಲಿ ವಾಹನ ಸಂಚಾರ ತಗ್ಗಿಸುವ ಮಾರ್ಗಗಳ ಬಗ್ಗೆ ವಿಚಾರ ಮಾಡುವುದು.

10. ಪ್ರಯಾಣದ ವಿಧಾನದ ಆಯ್ಕೆಯನ್ನು ಪ್ರಭಾವಿಸುವ ಅಂಶಗಳನ್ನು ವಿಶ್ಲೇಷಿಸುವುದು.

11. ಮಾಲಿನ್ಯದ ಕಾರಣ ಹಾಗೂ ಅದರ ವ್ಯಾಪ್ತಿಗಳನ್ನು ಕುರಿತ ಜಾಗೃತಿಯನ್ನು ಹೆಚ್ಚಿಸುವುದು.

ಮಾಧ್ಯಮಿಕ ಹಂತದ ವಿದ್ಯಾರ್ಥಿಗಳಿಗೆ ರಸ್ತೆಗೆ, ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಪ್ರಮುಖವಾದ ನಿಯಮಗಳು, ನೀತಿಗಳ ಬಗೆಗೆ ಶಿಕ್ಷಕರು ತಿಳಿಸಿಕೊಡಬೇಕು. ಈ ಹಂತದಲ್ಲಿ ರಸ್ತೆ ಸುರಕ್ಷತಾ ಶಿಕ್ಷಣವನ್ನು ಶಾಲೆಯಲ್ಲಿರುವ ವಿವಿಧ ವಿಷಯಗಳೊಂದಿಗೆ ಸಂಯೋಜಿಸಬಹುದು. ಉದಾಹರಣೆಗೆ

1. **ಭೂಗೋಳ ಶಾಸ್ತ್ರ;** ದೇಶ, ರಾಜ್ಯ, ಜಿಲ್ಲೆ, ನಗರ, ಸ್ಥಳೀಯ ಪ್ರದೇಶ, ಶಾಲೆ, ಆಸ್ಪತ್ರೆಗಳು, ಪೊಲೀಸ್ ಠಾಣೆಗಳು, ಟರ್ಮಿನಲ್ಸ್, ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೇ ಇತ್ಯಾದಿಗಳ ಸ್ಥಾನದ ಬಗ್ಗೆ ಮಗುವಿಗೆ ಮಾಹಿತಿ ನೀಡಬಹುದಾಗಿದೆ. ನಕ್ಷೆಗಳ ಮೂಲಕ ಅವರು ಇರಬಹುದಾದ ದೂರವನ್ನು ಅಂದಾಜು ಮಾಡಿಕೊಂಡು ಸುಲಭವಾಗಿ ಮತ್ತು ಸುರಕ್ಷಿತವಾಗಿ ತಾವು ಸೇರಬೇಕಾದ ಸ್ಥಳವನ್ನು ತಲುಪಬಹುದು.

2. **ಇಂಗ್ಲಿಷ್:** ವಿವಿಧ ಸ್ಪರ್ಧೆಗಳಾದ ರಸಪ್ರಶ್ನೆ, ಆಶುಭಾಷಣ, ಪ್ರಬಂಧ ರಚನೆ, ಚರ್ಚಾ ಸ್ಪರ್ಧೆ, ಹಾಡುಗಾರಿಕೆ, ಕವನ ರಚನೆ, ಲಘು ವಿಡಂಬನೆ ಮತ್ತು ನಾಟಕಗಳು ಇವೇ ಮುಂತಾದವುಗಳನ್ನು ಆಯೋಜಿಸುವುದು. ರಸ್ತೆ ಸುರಕ್ಷತೆಯ ಬಗ್ಗೆ ಚರ್ಚೆಗಳು ಮತ್ತು ಟಿಪ್ಪಣಿ ರಚನೆಗಳೂ ಸಹ ಸಹಾಯಕವಾಗಬಹುದು.

3. **ಕಲೆ ಮತ್ತು ಕರಕುಶಲತೆ:** ಮಕ್ಕಳನ್ನು ಘೋಷವಾಕ್ಯಗಳನ್ನು ರಚಿಸುವಂತೆ, ವ್ಯಂಗ್ಯ ಚಿತ್ರಗಳನ್ನು ಬರೆಯುವಂತೆ ಪ್ರೋತ್ಸಾಹಿಸಬಹುದು. ಇವಲ್ಲದೆ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ವಿವಿಧ ವಿಷಯಗಳಾದ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು, ಸಂಚಾರಿ ನಿಯಮಗಳು ಸಂಕೇತಗಳು ಮತ್ತು ಗುರುತುಗಳ ಉಲ್ಲಂಘನೆ, ಸಂಚಾರ ಮಾಲಿನ್ಯ, ಅತಿವೇಗ ಮತ್ತು ಅಪಘಾತ ಇವೇ ಮುಂತಾದವನ್ನು ಕುರಿತಾದ ಚಿತ್ರಕಲೆ ಹಾಗೂ ವರ್ಣಚಿತ್ರ ಕಲೆಗಳ ಸ್ಪರ್ಧೆಗಳೂ ಸಹ ಮಕ್ಕಳಲ್ಲಿ ರಸ್ತೆ ಸುರಕ್ಷತೆಯ ಬಗೆಗೆ ಆಸಕ್ತಿಯನ್ನು ಮೂಡಿಸಬಲ್ಲವು.

4. **ರಸಾಟುನ ಶಾಸ್ತ್ರ:** ರಸಾಯನ ಶಾಸ್ತ್ರದ ಮೂಲಕ ವಾಹನಗಳಲ್ಲಿ ಬಳಸಲಾಗುವ ಡೀಸೆಲ್, ಪೆಟ್ರೋಲ್, ಲೆಡ್–ಮುಕ್ತ ಪೆಟ್ರೋಲ್, ಸಂಪೀಡಿತ ಸ್ವಾಭಾವಿಕ ಅನಿಲ – ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್, ವಿದ್ಯುಚ್ಛಕ್ತಿ ಮತ್ತು ಸೌರಶಕ್ತಿ ಮುಂತಾದ ವಿವಿಧ ಬಗೆಯ ಇಂಧನಗಳ ಬಗ್ಗೆ ಮಕ್ಕಳು ಮಾಹಿತಿಯನ್ನು ಪಡೆಯಬಹುದು. ವಿವಿಧ ರಾಸಾಯನಿಕ ವಸ್ತುಗಳಾದ ಲೆಡ್ (P6) ಇಂಗಾಲದ ಮಾನಾಕ್ಸೈಡ್ (Carbon Monoxide, CO) ಸಾರಜನಕದ ಆಕ್ಸೈಡ್‌ಗಳು (Oxides of Nitrogen, NO) ಇತ್ಯಾದಿಗಳಿಂದ ಮಾಲಿನ್ಯ ಉಂಟಾಗುವುದು ಎಂದು ಅವರಿಗೆ ಮಾಹಿತಿ ನೀಡಬೇಕು. ನೈಜ ಪರಿಸರ ಹಾಗೂ ಕೃತಕ ಪರಿಸರಗಳ ಮೇಲೆ ವಿವಿಧ ರಾಸಾಯನಿಕ ವಸ್ತುಗಳಿಂದ ಆಗುವ ಹಾನಿಕಾರಕ ಪರಿಣಾಮದ ಬಗ್ಗೆ ಮಕ್ಕಳಿಗೆ ತಿಳಿಸಿಕೊಡಬೇಕು.

5. **ಭೌತಶಾಸ್ತ್ರ:** ಭೌತಶಾಸ್ತ್ರವು ಗತಿ, ವೇಗ, ವೇಗೋತ್ಕರ್ಷ ಮತ್ತು ಆವೇಗ ಪರಿಮಾಣ – ಇವುಗಳ ಬಗ್ಗೆ ಶಿಕ್ಷಣ ನೀಡಬಲ್ಲದು. ರಸ್ತೆಯ ಮೇಲಾಗುವ ಘರ್ಷಣೆ ಮತ್ತು ಒದ್ದೆಯಾದ ಹಾಗೂ ಒಣಗಿದ ರಸ್ತೆಗಳ ಬಗ್ಗೆ ಭೌತಶಾಸ್ತ್ರವು ತಿಳಿಸಿಕೊಡಬಲ್ಲದು. ವಿದ್ಯಾರ್ಥಿಗಳು ಕೇಂದ್ರಾಭಿಮುಖ ಹಾಗೂ ಕೇಂದ್ರಾಪಗಮನ ಶಕ್ತಿಯ ತತ್ವಗಳನ್ನು ಅರಿತು ಅವುಗಳನ್ನು ತಮ್ಮ ಪ್ರಾಯೋಗಿಕ ಜೀವನದಲ್ಲಿ ಉಪಯೋಗಿಸಿಕೊಳ್ಳಬಹುದು. ಬೆಳಕು ಮತ್ತು ಶಬ್ದಗಳ ತೀವ್ರತೆ ಹಾಗೂ ವೇಗಗಳ ಬಗ್ಗೆಯೂ ಅವರು ತಿಳಿದುಕೊಳ್ಳಬಹುದು. ದೃಗ್ಗೋಚರತೆ/ದೃಶ್ಯಸಾಧ್ಯತೆ (Visibility) ಕಡಿಮೆಯಿರುವ ದಿನದಂದು ರಸ್ತೆಯ ಮೇಲೆ ವಾಹನ ಚಾಲನೆ ಮಾಡುವುದರಿಂದ ಆಗುವ ಅಪಾಯದ ಬಗ್ಗೆ ವಿದ್ಯಾರ್ಥಿಗಳು ಪರಿಚಿತರಾಗಬಹುದು.

6. **ಗಣಿತ:** ರಸ್ತೆ ಮತ್ತು ಸಂಚಾರಕ್ಕೆ ಸಂಬಂಧಿಸಿದ ದತ್ತಾಂಶಗಳು ರಸ್ತೆ ಅಪಘಾತಗಳ ಬಗ್ಗೆ ವಿಶ್ವಾಸಾರ್ಹ ಚಿತ್ರಣವನ್ನು ನೀಡಬಲ್ಲವು. ವಾಹನಗಳ ಸಂಖ್ಯೆ, ರಸ್ತೆಯ ಉದ್ದ ಮತ್ತು ಬೀದಿಗಳ ಅಗಲ ಇವೇ ಮೊದಲಾದ ವಿವಿಧ ಅಂಕಿಅಂಶಗಳ ಬಗೆಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬಹುದು. ಏಕಪರಿಮಾಣಾತ್ಮಕ ಮತ್ತು ವರ್ಗಾತ್ಮಕ ಸಮೀಕರಣಗಳು (Linear and Quadratic equations), ಏಕಾತ್ಮಕ ವಿಧಾನಗಳು (Unitary Methods), ಅನುಲೋಮ ಹಾಗೂ ವಿಲೋಮ ಅನುಪಾತಗಳು (Direct and Indirect Proportion) ಇವೇ ಮುಂತಾದ ಗಣಿತದ ತತ್ವಗಳು ವೇಗ, ದೂರ ಮತ್ತು ಸಮಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕವಾಗಬಹುದು.

**ಶಾಲೆಯ ಹೊರಗೆ:**

ಶಾಲೆಯ ಹೊರಗೆ ರಸ್ತೆ ಸುರಕ್ಷತೆಯನ್ನು ಕುರಿತ ಶಿಕ್ಷಣವನ್ನು ಸ್ವಯಂ ಸೇವಕ ಸಂಸ್ಥೆಗಳು ಮತ್ತು ಇತರ ಸಂಘ ಸಂಸ್ಥೆಗಳು ನೀಡಬಹುದು.

**ಸಾರ್ವಜನಿಕರಿಗೆ ಶಿಕ್ಷಣ ನೀಡುವಲ್ಲಿ ರಾಜ್ಯಮಟ್ಟದ ಪ್ರಯತ್ನಗಳು:**

ಸಂಚಾರಿ ಪೊಲೀಸರು ಟ್ರಾಫಿಕ್ ಪಾರ್ಕ್‌ಗಳು, ಕರಪತ್ರಗಳು, ಭಿತ್ತಿಪತ್ರಗಳು, ಘೋಷವಾಕ್ಯಗಳು, ದೂರದರ್ಶನ ಇತ್ಯಾದಿಗಳ ಮುಖಾಂತರ ಜನರಿಗೆ ಮೌಲ್ಯಯುತ ಮಾಹಿತಿಯನ್ನು ನೀಡುತ್ತಿದ್ದಾರೆ. ಮಹಾನಗರಗಳಲ್ಲಿನ ನಾಲ್ಕೂ ರಸ್ತೆಗಳು ಸೇರುವೆಡೆ ಬಸ್ ಚಾಲಕರು ಮುಂತಾದವರಿಗೆ ವೇಗ, ಬೆಳಕು ಇತ್ಯಾದಿಗಳ

Digitised by Bharatavani, CIIL

ಬಗ್ಗೆ ಮಾಹಿತಿ ಒದಗಿಸಲು ವ್ಯಕ್ತಿಗಳನ್ನು ಸಂಚಾರಿ ಪೊಲೀಸರು ನಿಯೋಜಿಸಿದ್ದಾರೆ. ಟ್ರಾಫಿಕ್ ಪೊಲೀಸರು ಬಸ್ ಹಾಗೂ ಟ್ರಕ್ ಚಾಲಕರು, ಪಾದಚಾರಿಗಳು, ಸೈಕಲ್ ಸವಾರರು ಮತ್ತು ದ್ವಿಚಕ್ರ ವಾಹನ ಚಾಲಕರುಗಳಿಗೆ ಅವರ ಸುರಕ್ಷತೆಯನ್ನು ಖಚಿತಪಡಿಸಲು ನಿಯಮಾವಳಿಗಳನ್ನು ಸಿದ್ಧಪಡಿಸಿದ್ದಾರೆ. ಇದು ಶಾಲಾ ಶಿಕ್ಷಕರಿಗೆ, ಶಾಲಾ ಮಕ್ಕಳಿಗೆ ಮತ್ತು ತಂದೆ ತಾಯಿ/ಪೋಷಕರಿಗೆ ಮಾರ್ಗದರ್ಶನ ಒದಗಿಸಿದೆ.

ಕಠಿಣ ಕಾನೂನುಗಳನ್ನು ರಚಿಸಿ ಅವುಗಳನ್ನು ಜಾರಿಗೆ ತರುವುದರ ಮೂಲಕ ಅಪಘಾತಗಳನ್ನು ತಡೆಗಟ್ಟಲು ಸಾಧ್ಯ. ಪೊಲೀಸರು ರಸ್ತೆಯಲ್ಲಿ ಆಗಬಹುದಾದ ಸಂಚಾರಿ ನಿಯಮಗಳ ಉಲ್ಲಂಘನೆಗಳನ್ನು ಗಮನಿಸುತ್ತಾರಲ್ಲದೆ ತಪ್ಪಿತಸ್ಥರನ್ನು ಪತ್ತೆಹಚ್ಚಲು ಉಪಕರಣಗಳಿಂದ ಸುಸಜ್ಜಿತರಾಗಿದ್ದಾರೆ.

**ಸ್ವಯಂ ಸೇವಾ ಸಂಸ್ಥೆಗಳ ಕೊಡುಗೆ:**

ಸ್ವಯಂ ಸೇವಾ ಸಂಸ್ಥೆಗಳು ಸಾರ್ವಜನಿಕರನ್ನು ರಸ್ತೆ ಸುರಕ್ಷತೆಯ ಬಗ್ಗೆ ಕುತೂಹಲಿಗಳನ್ನಾಗಿ ಮಾಡಬಲ್ಲವು. ಅಂತಹ ಕೆಲವು ನಿಯೋಗಗಳು ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಶಿಕ್ಷಣವನ್ನು ಒದಗಿಸುವ ಕರ್ತವ್ಯವನ್ನು ತಮ್ಮ ನೈತಿಕ ಜವಾಬ್ದಾರಿಯ ರೂಪದಲ್ಲಿ ಸ್ವತಃ ವಹಿಸಿಕೊಂಡಿವೆ. ಈ ಸಂಸ್ಥೆಗಳು ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಬಗ್ಗೆ ತಿಳಿಸಲು ಘೋಷವಾಕ್ಯಗಳು, ಕರಪತ್ರ, ಜಾಹಿರಾತುಗಳು ಇತ್ಯಾದಿ ವಿವಿಧ ಮಾಧ್ಯಮಗಳನ್ನು ಉಪಯೋಗಿಸುವುವು. ಸರ್ಕಾರೇತರ ಸಂಸ್ಥೆಗಳು ಇತರ ಕ್ರಮಗಳನ್ನು ಕೈಗೊಳ್ಳುವುವು. ರಾಜಸ್ಥಾನದಲ್ಲಿ ರಸ್ತೆ ಅಪಘಾತಗಳಲ್ಲಿ ಮೃತರಾದ ಮಕ್ಕಳ ತಂದೆತಾಯಿಗಳು ಮಸ್ಕನ್ ಎಂಬ ಎನ್.ಜಿ.ಓ. ಒಂದನ್ನು ಸಂಘಟಿಸಿದ್ದಾರೆ. ಇದು ಜನರಿಗೆ ರಸ್ತೆ ಅಪಘಾತಗಳ ಬಗ್ಗೆ ತಿಳಿಹೇಳುವುದಲ್ಲದೆ ಮೌಲ್ಯಯುತ ಮಾಹಿತಿಯನ್ನು ಒದಗಿಸುತ್ತದೆ. ರಸ್ತೆ ಸುರಕ್ಷತೆಯ ಬಗ್ಗೆ ಜನರಿಗೆ ಶಿಕ್ಷಣ ನೀಡುವಾಗ ಅದರ ಎಲ್ಲಾ ಮುಖಗಳನ್ನು ಪರಿಗಣಿಸಲಾಗುತ್ತದೆ. ರಸ್ತೆ ಸುರಕ್ಷತೆಯ ನಿಯಮಗಳು, ರಸ್ತೆಯ ಮೇಲೆ ಜವಾಬ್ದಾರಿಯುತ ವರ್ತನೆ, ಪರವಾನಗಿ ನೀಡಿಕೆ (Licensing), ಚಾಲಕರಿಗೆ ಸೂಕ್ತ ತರಬೇತಿ (ವೃತ್ತಿಪರ ಹಾಗೂ ಇತರೆ) ಇವೇ ಮುಂತಾದವುಗಳನ್ನು ರಂಗಮಂಟಪ, ಹಾಡು, ಘೋಷವಾಕ್ಯ, ವಿವಿಧ ವಾಸ್ತವಾಂಶಗಳ ನಾಟಕೀಕರಣಗಳಿಂದ ನಡೆಸಿಕೊಡಲಾಗುತ್ತದೆ. ಈ ಸಂಸ್ಥೆ ಜಯಪುರದ ಟ್ರಾಫಿಕ್ ಪೊಲೀಸರ ಸಹಯೋಗದೊಡನೆ ಕಾರ್ಯಪ್ರವೃತ್ತವಾಗಿದೆ. ಪರವಾನಗಿ ನೀಡುವಿಕೆ ಮತ್ತು ಚಾಲನೆಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ಬದಲಾಯಿಸುವ ಅಗತ್ಯವಿದ್ದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯುವಲ್ಲಿ ವಿಚಾರ ಸಂಕಿರಣಗಳನ್ನು ಆಯೋಜಿಸುತ್ತದೆ. ಜೈಪುರ ನಗರದಲ್ಲಿ ಶಿರಸ್ತ್ರಾಣವನ್ನು (Helmet) ಕಡ್ಡಾಯಗೊಳಿಸಲು ಮಸ್ಕನ್ ಸಂಸ್ಥೆಯು ರ‍್ಯಾಲಿಗಳಲ್ಲಿ ಶಾಲಾ ಮಕ್ಕಳನ್ನು ಸೇರಿಸಿಕೊಂಡು ಸಾರ್ವಜನಿಕ ಅಭಿಪ್ರಾಯವನ್ನು ಸಂಚಲಿತಗೊಳಿಸಿತ್ತು.

ಇನ್ಸ್ಟಿಟ್ಯೂಟ್ ಆಫ್ ರೋಡ್ ಟ್ರಾಫಿಕ್ ಎಜುಕೇಷನ್ (IRTE) ಎಂಬ ಮತ್ತೊಂದು ಸರ್ಕಾರೇತರ ಸಂಸ್ಥೆಯು ಡಿಸೆಂಬರ್ 1971ರಲ್ಲಿ ಸ್ಥಾಪನೆಗೊಂಡಿತು. ಪೊಲೀಸ್, ವೈದ್ಯರು, ಪತ್ರಕರ್ತರು ತಂತ್ರಜ್ಞರು, ಶಿಕ್ಷಣತಜ್ಞರು, ಮಾಜಿ ಸೈನಿಕರು, ಶಿಲ್ಪಶಾಸ್ತ್ರಜ್ಞರು, ಆಟೋಮೊಬೈಲ್ ತಜ್ಞರು ಇವರನ್ನು ಒಳಗೊಂಡ ಅಂತರ್ವಿಷಯಕ ಸದಸ್ಯರ ಗುಂಪು ಈ ಸಂಸ್ಥೆಯನ್ನು ಸ್ಥಾಪಿಸಿತು. ಸಮಾಜದಲ್ಲಿ ರಸ್ತೆ ಸಂಸ್ಕೃತಿ ಬಗ್ಗೆ ಸಕಾರಾತ್ಮಕ ಮನೋಭಾವವನ್ನು ಸೃಷ್ಟಿಸುವ ಅವಶ್ಯಕತೆಯಿಂದಾಗಿ ಈ ಸಂಸ್ಥೆಯು ಜನ್ಮ ತಾಳಿತು. IRTE ಸಂಸ್ಥೆಯು ಇತರ ಸಂಘ ಸಂಸ್ಥೆಗಳು ಮತ್ತು ಸರ್ಕಾರದೊಂದಿಗೆ ಈ ಕೆಳಗಿನವುಗಳನ್ನು ಕಾರ್ಯರೂಪಕ್ಕೆ ತರಲು ಕೆಲಸ ಮಾಡುತ್ತಿದೆ. ಸಂಚಾರಿ ಪೊಲೀಸರಿಗೆ ತರಬೇತಿ ನೀಡುವುದು; ಸಂಚಾರಿ ನಿಯಮಗಳನ್ನು ಜಾರಿಗೊಳಿಸುವ ಸ್ವಯಂಚಾಲಿತ ತಾಂತ್ರಿಕ ವ್ಯವಸ್ಥೆಯ (Enforcement Technology Systems) ಬೆಳವಣಿಗೆ, ಸಂಚಾರಿ ಪಾಲಕ ಯೋಜನೆಯ ಬಳಕೆ; ರಸ್ತೆ ಬಳಕೆದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು, ಬಸ್ ಚಾಲಕರು ಮತ್ತು ಪೊಲೀಸ್ ಸಿಬ್ಬಂದಿಯನ್ನು ಪಾಲುದಾರರನ್ನಾಗಿಸಿಕೊಳ್ಳುವುದು; ಪ್ರದೇಶ ಅಭಿವೃದ್ಧಿ ಪ್ರಾರಂಭಿಕ ಯೋಜನೆಗಳನ್ನು ಶುರು ಮಾಡುವುದರ ಮೂಲಕ ಸಂಚಾರಿ ತಂತ್ರಜ್ಞಾನದ (Traffic Engineering) ಅರಿವು ಮೂಡಿಸುವುದು, ಮೋಟಾರು ವಾಹನ ನಿಯಮಗಳಿಗೆ ಸಂಬಂಧಿಸಿದ ನೀತಿ ವಿಷಯಗಳನ್ನು ಕುರಿತಂತೆ ಕಾರ್ಯಾಗಾರ, ವಿಚಾರ ಸಂಕಿರಣ, ಚರ್ಚೆ, ವಿಚಾರ ವಿಮರ್ಶೆ ಹಾಗೂ ಇನ್ನಿತರ ಅನ್ಯೋನ್ಯ ಕ್ರಿಯಾತ್ಮಕ ಸಭೆಗಳನ್ನು ಏರ್ಪಡಿಸುವುದು.

IRTE ಸಂಸ್ಥೆಯು ಕೈಗೊಳ್ಳುತ್ತಿರುವ ಪ್ರಮುಖ ಚಟುವಟಿಕೆಗಳಲ್ಲಿ ಶಾಲಾ ಖಾಸಗಿ ಸಭೆಯ ಕಾರ್ಯಕ್ರಮವು ಒಂದಾಗಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಪಠ್ಯಕ್ರಮ ವಿಷಯಗಳ ಮೂಲಕ ಶಾಲಾ ಮಕ್ಕಳಿಗೆ ರಸ್ತೆ ಸುರಕ್ಷತೆಯ ಶಿಕ್ಷಣವನ್ನು ತಲುಪಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ.

ಲಾಸ್ ಪ್ರಿವೆನ್ಷನ್ ಅಸೋಸಿಯೇಷನ್ ಆಫ್ ಇಂಡಿಯಾ, ಲಿಮಿಟೆಡ್ (ಭಾರತ ನಷ್ಟ ನಿವಾರಣಾ ಸಂಘ, ನಿಯಮಿತ) ಎಂಬುದು ಲಾಭರಹಿತ ಸಂಸ್ಥೆಯಾಗಿದ್ದು, ಶಿಕ್ಷಣ, ತರಬೇತಿ ಮತ್ತು ಪರಾಮರ್ಶೆಗಳ ಮುಖಾಂತರ ಸುರಕ್ಷತೆ ಮತ್ತು ನಷ್ಟ ನಿಯಂತ್ರಣಗಳಲ್ಲಿ ತೊಡಗಿಸಿಕೊಂಡಿದೆ. ಈ ಸಂಘದ ಕಾರ್ಯವು ಶೈಕ್ಷಣಿಕ ಮತ್ತು ಇಂಜಿನಿಯರಿಂಗ್ ಇವೆರಡೂ ಮುಖಗಳನ್ನು ಒಳಗೊಳ್ಳುತ್ತದೆ. ಸಂಸ್ಥೆಯು ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ನಿಯಮಿತವಾಗಿ ಶಾಲಾ ಕಾರ್ಯಕ್ರಮಗಳನ್ನು ನಡೆಸುತ್ತದೆ. ಈ ಕಾರ್ಯಕ್ರಮಗಳು ಸ್ಲೈಡ್‌ಗಳ ಸಹಿತ ಉಪನ್ಯಾಸ, ಚಿತ್ರಗಳ ಪ್ರದರ್ಶನ ಮತ್ತು ಸುರಕ್ಷತೆಯ ಬಗೆಗಿನ ರಸಪ್ರಶ್ನೆಗಳನ್ನು ಒಳಗೊಳ್ಳುತ್ತದೆ. ಇವೆಲ್ಲದರ ಜೊತೆಗೆ ಸುರಕ್ಷತೆಯನ್ನು ಕುರಿತ ಪುಸ್ತಕಗಳು/ಕರಪತ್ರಗಳು, ಪೋಸ್ಟರ್‌ಗಳು ಮತ್ತು ಬುಲೆಟಿನ್‌ಗಳನ್ನು ಪ್ರಕಟಿಸುತ್ತದೆ.

Digitised by Bharatavani, CIIL

ಇದೇ ರೀತಿ, ಇತರ ಎನ್.ಜಿ.ಒ.ಗಳು ಸಹಾ ರಸ್ತೆ ಸುರಕ್ಷತೆಯನ್ನು ತಮ್ಮ ನೈತಿಕ ಜವಾಬ್ದಾರಿಯಾಗಿ ಪರಿಗಣಿಸಿ ಮುಂದಿನ ಪೀಳಿಗೆಗೆ ಸುರಕ್ಷಿತ ಹಾಗೂ ಉಜ್ವಲ ಭವಿಷ್ಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ತಮ್ಮ ಕೊಡುಗೆಯನ್ನು ನೀಡಬೇಕು. ಬೋಧಕ ಸಮುದಾಯದ ಗಮನಾರ್ಹ ಪ್ರಯತ್ನಗಳ ಮೂಲಕ ಇಂದಿನ ಯುವ ಪೀಳಿಗೆ ಮತ್ತು ಮುಂಬರುವ ಪೀಳಿಗೆ ಸುರಕ್ಷಿತರು ಎಂಬ ಆಶಾಭಾವನೆಯನ್ನು ಹೊಂದಬಹುದಲ್ಲದೆ ಇತರರನ್ನು ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತರನ್ನಾಗಿ ಮಾಡಬಹುದು. ಅಲ್ಲದೆ, ಅವರು ಕಾನೂನು ರೀತ್ಯಾ ವಯಸ್ಸಿನ ಮಿತಿಯನ್ನು ತಲುಪಿದ ನಂತರ ಸ್ವತಃ ಒಳ್ಳೆಯ ಹಾಗೂ ಸುರಕ್ಷಿತ ವಾಹನ ಚಾಲಕರಾಗುವರು.

**ಮೂಲ: ಕೆ.ಕೆ. ಪಾಲ್**

**ಅನು: ಜಗದೀಶ್**

## ರಾಜಕಾರಣ ಮತ್ತು ಶಿಕ್ಷಣ

ಶಿಕ್ಷಣವನ್ನು ಆಧುನಿಕ ದೇಶಗಳ ಮುಖ್ಯ ಜವಾಬ್ದಾರಿಯನ್ನಾಗಿ ಪರಿಗಣಿಸಲಾಗುತ್ತಿದೆ. ಸುಶಿಕ್ಷಿತ ಸಮಾಜ ಮತ್ತು ಸುಶಿಕ್ಷಿತ ವ್ಯಕ್ತಿಯ ಶ್ರೇಷ್ಠ ಉಪಯೋಗದಿಂದಾಗಿ ಶಿಕ್ಷಣವು ಸಾಮಾಜಿಕ ಹಕ್ಕಿನ ವಾಹಿನಿಯಲ್ಲಿ ಪ್ರವೇಶ ಪಡೆದಿದೆ. ಮಾನವ ಹಕ್ಕುಗಳ ಜಾಗತಿಕ ಘೋಷಣೆಯ ವಿಧಿ 26(1)ರಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಶಿಕ್ಷಣದ ಹಕ್ಕನ್ನು ಒಪ್ಪಿಕೊಳ್ಳಲಾಗಿದೆ. ವ್ಯಕ್ತಿಯ ವ್ಯಕ್ತಿತ್ವದ ಘನತೆ ಮತ್ತು ಮುಕ್ತ ಬೆಳವಣಿಗೆಗೆ ಅಗತ್ಯವಿರುವ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳಿಗೆ ಶಿಕ್ಷಣ ಅತ್ಯವಶ್ಯವೆಂದು ಪರಿಗಣಿಸಲಾಗಿದೆ(ವಿಧಿ 22). ಎರಡನೆಯ ಮಹಾಯುದ್ಧದ ನಂತರ ಮನುಷ್ಯನ ಸಾಮರ್ಥ್ಯದ ಬೆಳವಣಿಗೆ ಮತ್ತು ಮನುಷ್ಯರ ಆಕಾಂಕ್ಷೆಗಳ ಕುರಿತು ಕಾಳಜಿ ಹುಟ್ಟಿಕೊಂಡ ಪರಿಣಾಮವಾಗಿ ಶಿಕ್ಷಣದ ವಿಸ್ತರಣೆ ಅಪಾರ ಪ್ರಮಾಣದಲ್ಲಿ ನಡೆಯಿತು. ಸ್ವತಂತ್ರ ಭಾರತದ ಸಂವಿಧಾನವು ತನ್ನ 3ನೇ ಭಾಗದಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಸೇರಿಸಿಲ್ಲ, ರಾಜ್ಯ ಕಾರ್ಯನೀತಿಯ ನಿರ್ದೇಶನಾತ್ಮಕ ತತ್ವಗಳನ್ನು ಒಳಗೊಂಡಿರುವ 4ನೇ ಭಾಗದಲ್ಲಿ ಅದಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇತ್ತೀಚಿಗೆ ಪ್ರತಿಯೊಬ್ಬ ಪ್ರಜೆಗೆ ನಿರ್ದಿಷ್ಟ ವಯಸ್ಸಿನವರೆಗೆ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸುವ ಸಂವಿಧಾನ ತಿದ್ದುಪಡಿಯನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ. ಭಾರತದ ಸಂಯುಕ್ತ ರಚನೆ ಮತ್ತು ಕಾರ್ಯಕ್ಕೆ ಸಂಬಂಧಿಸಿದಂತೆ ಶಿಕ್ಷಣವು ರಾಜ್ಯ ವಿಷಯವಾಗಿ, ಅದರಲ್ಲಿಯೂ ನಿರ್ದಿಷ್ಟವಾಗಿ ಶಿಕ್ಷಣದಲ್ಲಿ ರಾಷ್ಟ್ರೀಯ ಕಾರ್ಯನೀತಿಗಳಿಗೆ ಸಂಬಂಧಿಸಿ ಇರುವಾಗ, ಅದು ಅತ್ಯಂತ ಹೆಚ್ಚಿನ ರಾಜಕೀಯ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಯಾವುದೇ ಶಾಸಕಾಂಗ ಕ್ರಮಗಳ ಅನುಪಸ್ಥಿತಿಯಲ್ಲಿ ಕೇಂದ್ರ ಸರಕಾರದ ವತಿಯಿಂದ ಸಮವರ್ತಿತ್ವವಾಗಿ ಶಿಕ್ಷಣದ ಬಗ್ಗೆ ರಾಜ್ಯಗಳ ಅಧಿಕಾರಗಳಿಗೆ ಯಾವುದೇ ಪರಿಣಾಮ ಉಂಟಾಗಿಲ್ಲ. ಕೇಂದ್ರ-ರಾಜ್ಯ ಸಂಬಂಧಗಳ ಕಾನೂನು ಮತ್ತು ಔಪಚಾರಿಕ ಆದೇಶಗಳಿಂದಾಗಿ ಕೇಂದ್ರ ಸರಕಾರವು ಅನೇಕ ಸಂದರ್ಭಗಳಲ್ಲಿ ಅಸಹಾಯಕ ಸ್ಥಿತಿಯಲ್ಲಿ ಇರುತ್ತದೆ. ಶಿಕ್ಷಣದಲ್ಲಿ ರಾಜ್ಯಗಳ ತೀವ್ರ ಆಸಕ್ತಿ ಮತ್ತು ಇದಕ್ಕೆ ವ್ಯತಿರಿಕ್ತವಾಗಿ ಭಾರತೀಯ ಸಂಯುಕ್ತ ರಾಜ್ಯಾಡಳಿತ ಕ್ರಮದ ಸ್ವರೂಪ ಇದನ್ನು ಆದ್ಯಂತವಾಗಿ ರಾಜಕೀಯವಾಗಿಸಿದೆ. ಶಿಕ್ಷಣಕ್ಕೆ ಸಂಪನ್ಮೂಲಗಳನ್ನು ಒದಗಿಸುವಂತಹ ಕೇಂದ್ರ ಸರಕಾರದ ಅಧಿಕಾರವು ಶಿಕ್ಷಣವನ್ನು ರಾಜಕೀಯವಾಗಿ ಬಹಳ ದುಬಾರಿಯಾಗಿ ಮತ್ತು ಅಸಾಮಾನ್ಯ ಕ್ರಿಯಾಶೀಲವಾಗಿ ಮಾಡಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಇದರೊಂದಿಗೆ, ಶಿಕ್ಷಣದಲ್ಲಿ ಸಮಾನಾಂತರ ರಾಷ್ಟ್ರೀಯ ಕಾರ್ಯನೀತಿಯನ್ನು ರೂಪಿಸುವ ಪ್ರಯತ್ನಗಳು ಮತ್ತು ಪರಿಶ್ರಮಗಳು ರಾಜಕೀಯ ಮತ್ತು ಆದರ್ಶಮಯ ವಿಚಾರ ವಿನಿಮಯದ ಅಂತರ್ಗತ ಬೀಜಗಳನ್ನು ಮತ್ತು ಅಸಮ್ಮತಿಯನ್ನು ಹೊಂದಿವೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕತೆ ಮತ್ತು ಪ್ರತಿಯೊಬ್ಬರಿಗೂ ಅವಕಾಶಗಳ ಸಮಾನತೆಯ ಕಲ್ಪನೆಗೆ ಒತ್ತನ್ನು ನೀಡುವ ಜನಪ್ರಿಯ ಶಿಕ್ಷಣದ ಕಲ್ಪನೆಯು ಅತ್ಯಂತ ದೊಡ್ಡ ರಾಜಕೀಯ ಕಾರ್ಯಸೂಚಿಯಾಗುವ ಸಾಧ್ಯತೆ ಇದೆ. ಶೈಕ್ಷಣಿಕ ಸಂಸ್ಥೆಗಳ ಮತ್ತು ಅವುಗಳಲ್ಲಿ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಅಗಾಧ ಪ್ರಮಾಣದ ಹೆಚ್ಚಳವಾಗಿದೆ. ಶಿಕ್ಷಣ ವ್ಯವಸ್ಥೆಯ ವಿಸ್ತರಣವು 'ಸರಕಾರದ ಎಲ್ಲ ಹಂತಗಳ ರಾಜಕೀಯ ಬೇಡಿಕೆಗಳಿಗೆ ವ್ಯಕ್ತಗೊಂಡಿರುವ ಪ್ರತಿಕ್ರಿಯೆಯಾಗಿದೆ'(ರುಡೋಲ್ಫ್ ಮತ್ತು ರುಡೋಲ್ಫ್, ಪುಟ: 27). ಇದರಲ್ಲಿ ತೊಡಗಿಸಿಕೊಂಡವರು ರಾಜಕಾರಣಿಗಳು ಮತ್ತು ಪಕ್ಷಗಳು. ಇವರೇ ಈ ವಿಸ್ತರಣಕ್ಕೆ ಅನಿವಾರ್ಯ ಕಾರಣರಾಗಿದ್ದಾರೆ. ಈ ಬೆಳವಣಿಗೆಯೊಂದಿಗೆ ನೇರ ಜೋಡಣೆಯನ್ನು ಹೊಂದಿರುವ ವಿಚಾರಗಳೆಂದರೆ ರಾಜಕಾರಣತ್ವ ಮತ್ತು ಸಾರ್ವಜನಿಕ ಹಿತಾಸಕ್ತಿಯ ರಾಜ್ಯದ ಒತ್ತಡ. ಇದರೊಂದಿಗೆ, ರಾಜಕೀಯ ಒತ್ತಡಗಳು ಮತ್ತು ರಾಜಕಾರಣದ ಮಧ್ಯೆ ಪ್ರವೇಶಿಕೆಗಳಿಗೆ ಅದು ಈಡಾಗಲು ಶಿಕ್ಷಣದ ಖರ್ಚುವೆಚ್ಚಗಳು ಹೆಚ್ಚಾಗಿರುವುದು ಖಂಡಿತವಾಗಿಯೂ ಕಾರಣವೆನಿಸಿದೆ. ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಪ್ರಭಾವ ಮತ್ತು ರಾಜಕೀಯ ಒಳದಾರಿಗಳನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳ ಸಾಂಪ್ರದಾಯಿಕ ಪಾತ್ರದಲ್ಲಿ ಕಾಣಬಹುದಾಗಿದೆ. ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯ ಪ್ರಮುಖ ವಾಸ್ತವಾಂಶಗಳೆಂದರೆ ರಾಜ್ಯದ ಶಾಸನ ಮತ್ತು ಸಾರ್ವಜನಿಕ ಹಣಕಾಸು ಒದಗಿಸುವಿಕೆ. ಇವು ಶಿಕ್ಷಣವನ್ನು ರಾಜಕೀಯದ ಸೆಳೆತಗಳು ಮತ್ತು ಒತ್ತಡಗಳಿಗೆ ಈಡು ಮಾಡುತ್ತವೆ. ಶೈಕ್ಷಣಿಕ ಕಾರ್ಯನೀತಿಯು ರೂಪುಗೊಳ್ಳುವುದೇ ಕೆಲವು ಸಂಸ್ಥೆಗಳಿಂದ ಮತ್ತು ಕಾರ್ಯವಿಧಾನಗಳಿಂದ. ಇವುಗಳ ಗುರುತಿಸುವಿಕೆ ಮತ್ತು ತೊಡಗಿಸಿಕೊಳ್ಳುವಿಕೆಯ ಹಿನ್ನೆಲೆಯಲ್ಲಿ ರಾಜಕೀಯವಿರುತ್ತದೆ. ಹಾಗಿದ್ದರೂ ರಾಜ್ಯ ಶಿಕ್ಷಣ ಮಂತ್ರಿಗಳ ಅಧಿವೇಶನ ಮತ್ತು ಶಿಕ್ಷಣದ ಕೇಂದ್ರ ಸಲಹಾ ಮಂಡಳಿಯಲ್ಲಿ ಯಾವಾಗಲೂ ಇಂತಹ ಸಂಸ್ಥೆಗಳ ಮೂಲಕ ಶಿಕ್ಷಣ ಕಾರ್ಯನೀತಿಯ ಮೇಲೆ ಮತ್ತು ಶಿಕ್ಷಣ ಕಾರ್ಯನೀತಿಗಾಗಿ ಒಮ್ಮತವನ್ನು ಮೂಡಿಸುವ ಪ್ರಯತ್ನವನ್ನು ನಡೆಸಲಾಗುತ್ತದೆ. ಸಂಸತ್ತು ಕಾರ್ಯನೀತಿಯನ್ನು ಅಳವಡಿಸಿಕೊಳ್ಳುವುದೇ ರಾಜಕೀಯ ಒಮ್ಮತವನ್ನು ಖಾತ್ರಿಗೊಳಿಸುವ ಕಾರ್ಯವಿಧಾನವಾಗಿದೆ.

Digitised by Bharatavani, CIIL

ಜನಪ್ರಿಯ ಮತ್ತು ದೇಶೀಯ ಪ್ರಭಾವಗಳನ್ನು ತಡೆಯುವ ಮತ್ತು ಅವುಗಳನ್ನು ಅಂಚಿಗೆ ತಳ್ಳುವ ದಾರಿಯನ್ನಾಗಿ ಭಾರತದಲ್ಲಿ ಬ್ರಿಟಿಷರು ಶಿಕ್ಷಣವನ್ನು ಪರಿಗಣಿಸಿದರು. ವಸಾಹತು ಆಡಳಿತಕ್ಕೆ ಸ್ಥಳೀಯ ಶಕ್ತಿಗಳ ತಾಕತ್ತಿನ ಕುರಿತು ಹೆಚ್ಚಿನ ಚಿಂತೆ ಇತ್ತು. ಇದನ್ನು ಎದುರಿಸಲು ಅವರು ಶಿಕ್ಷಣವನ್ನು ಪ್ರಬಲ ಶಕ್ತಿಯನ್ನಾಗಿ ಕಂಡರು. ಬ್ರಿಟಿಷರು ಭಾರತದ ಮೇಲೆ ತಮ್ಮ ಹಿಡಿತವನ್ನು ಬಲಪಡಿಸುವ ದುರುದ್ದೇಶದಿಂದ ಭಾರತದಲ್ಲಿ ಶಿಕ್ಷಣವನ್ನು ಪರಿಕಲ್ಪಿಸಿ ಅದನ್ನು ಅಭಿವೃದ್ಧಿ ಪಡಿಸಿದರು ಮತ್ತು ಅದಕ್ಕೆ ಪ್ರೋತ್ಸಾಹ ನೀಡಿದರು. ಭಾರತದಲ್ಲಿ ಬ್ರಿಟಿಷರ ಇರುವಿಕೆ ಮುಂದುವರಿಯುವುದಕ್ಕೆ ಸುಶಿಕ್ಷಿತ ಭಾರತವು ಸುಭದ್ರ ಪ್ರತಿಪಾದನೆಯಾಗಿದೆ. ಆದರೆ ಪರಿಣಾಮಗಳು ಮಾತ್ರ ಭಿನ್ನ ರೀತಿಯದ್ದಾಗಿವೆ. ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಮತ್ತು ಬ್ರಿಟಿಷ್ ಸಂಸ್ಥೆಗಳ ಕಾರ್ಯಾಚರಣೆಗೆ ತೆರೆದುಕೊಂಡ ಜನರೇ ಅನೇಕ ವಿಧಗಳಲ್ಲಿ ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿ ಕಾಣಿಸಿಕೊಂಡವರಾಗಿದ್ದಾರೆ.

ಆದರೆ ಸ್ವಾತಂತ್ರ್ಯ ದೊರೆತ ಬಳಿಕ ಧುರೀಣರು ಶಿಕ್ಷಣದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗೆ ಸಾಧನಗಳನ್ನು ಕಂಡರಷ್ಟೇ ಅಲ್ಲ, ಆಧುನಿಕ ಭಾರತದ ಎಲ್ಲಾ ಅನಿಷ್ಟಗಳಿಗೆ ಅಕ್ಷರಶಃ ದಿವ್ಯೌಷಧಿಯನ್ನು ಕೂಡ ಗುರುತಿಸಿದರು. ಅದನ್ನು ಸಾಮಾಜಿಕ ಮತ್ತು ರಾಜಕೀಯ ವಾತಾವರಣಕ್ಕೆ ಹೊಂದಿಕೊಳ್ಳುವ ಯಾಂತ್ರಿಕ ವಿಧಾನವಾಗಿ ಹೆಚ್ಚು ಹೆಚ್ಚು ಕಾಣಲಾಗುತ್ತಿದೆ. ಉದಾಹರಣೆಗೆ, ರಾಷ್ಟ್ರೀಯ ಸಮಗ್ರೀಕರಣವನ್ನು ಶೈಕ್ಷಣಿಕ ಅಭಿವೃದ್ಧಿಯ ಪ್ರಮುಖ ಉದ್ದೇಶವಾಗಿ ಕಾಣಲಾಗುತ್ತದೆ. ಶಿಕ್ಷಣವು ಸಾಮಾಜಿಕ ಅಗತ್ಯಗಳ ಸಾರ್ವಜನಿಕ ಚರ್ಚೆಗೆ ಅವಕಾಶವನ್ನು ಒದಗಿಸುತ್ತದೆ, ಲಭ್ಯ ಸಂಪನ್ಮೂಲಗಳ ಮತ್ತು ಸೇವೆಗಳ ಯೋಗ್ಯ ಬಳಕೆಗೆ ಅದು ಕೊಡುಗೆಯನ್ನು ನೀಡುತ್ತದೆ ಮತ್ತು ಅವಕಾಶ ವಂಚಿತರು ಶೋಷಣೆಯನ್ನು ಪ್ರತಿರೋಧಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು, ರಾಜಕೀಯವಾಗಿ ಸಂಘಟಿತರಾಗಲು ಮತ್ತು ಉತ್ತಮ ಅವಕಾಶಗಳನ್ನು ಪಡೆಯಲು ಶಿಕ್ಷಣ ನೆರವಾಗುತ್ತದೆ. ಇವೆಲ್ಲಾ ದೇಶದ ರಾಜಕೀಯವು ತನ್ನನ್ನು ತೊಡಗಿಸಿಕೊಳ್ಳುವ ಮತ್ತು ಹೆಚ್ಚಿನ ಆಸಕ್ತಿಯನ್ನು ತೋರುವ ಕಾಳಜಿಗಳಾಗಿವೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಉಂಟಾಗಿರುವ ಬೃಹತ್ ಬದಲಾವಣೆಯೆಂದರೆ ಬ್ರಿಟಿಷ್ ಕಾಲದ ಶಿಕ್ಷಣದ ವಿದೇಶೀಯ ಮತ್ತು ಸಾರವತ್ತಾದ ಗುಣಲಕ್ಷಣಗಳ ಪಾತ್ರ ನಿರ್ವಹಣೆಗೆ ನಿರಾಕರಣೆ ಕಾಣಿಸಿರುವುದು. ಇವತ್ತಿನ ದಿನಗಳಲ್ಲಿ ಶಿಕ್ಷಣ ಕಾರ್ಯನೀತಿಗಳು ಮತ್ತು ಸಂಸ್ಥೆಗಳು ತಮ್ಮ ಸಾಮಾಜಿಕ ಮತ್ತು ರಾಜಕೀಯ ಪರಿಸರಕ್ಕೆ ಹೊಂದಿಕೊಳ್ಳುವ ಅಗತ್ಯವನ್ನು ಬಯಸಲಾಗಿದೆ. ಶಿಕ್ಷಣವು ದೇಶೀಯವಾಗಿದೆ ಮತ್ತು ಇನ್ನೂ ಹೆಚ್ಚು ದೇಶೀಯವಾಗುವ ಹಾದಿಯಲ್ಲಿ ಇದೆ. ಶಿಕ್ಷಣವು ದೇಶದ ಅಂಗೀಕಾರ ಪಡೆದ ಜವಾಬ್ದಾರಿಯಾಗಿದೆ. ಶಿಕ್ಷಣದಲ್ಲಿ ದೇಶ/ರಾಜ್ಯವು ಹೂಡಿಕೆಯನ್ನು ನಡೆಸುವ ಮುಖ್ಯ ಉದ್ದೇಶ ಮಾನವ ಸಂಪನ್ಮೂಲಗಳ ಸುಧಾರಣೆ ಮತ್ತು ಹೆಚ್ಚಳ, ಹೊಸ ಅರಿವು ಮತ್ತು ತಂತ್ರಜ್ಞಾನಗಳ ಸೃಷ್ಟಿ ಮತ್ತು ಪರಿಸರವನ್ನು ಇನ್ನೂ ಚೆನ್ನಾಗಿ ನಿರ್ವಹಿಸುವ ದೃಷ್ಟಿಯಿಂದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ.

**ರಾಜಕಾರಣ ಮತ್ತು ಶಿಕ್ಷಣ : ಇವುಗಳ ಪರಸ್ಪರ ಕ್ರಿಯೆ**

ಜೀವನದ ಎಲ್ಲಾ ಮಾರ್ಗಗಳಲ್ಲಿ ರಾಜಕಾರಣದ ಪ್ರವೇಶವಿದೆ. ರಾಜಕಾರಣವು ಸಮಾಜದ ಬಹುವಾಗಿ ಸ್ಪಂದಿಸುವ ಅಂಶವಾಗಿದ್ದು ಅದರ ಪ್ರಭಾವದಿಂದ ತಪ್ಪಿಸಿಕೊಂಡಿರುವ ಸಮಾಜದ ಘಟಕ ಯಾವುದೂ ಇಲ್ಲ. ರಾಜಕಾರಣವು ಇತರ ಮನುಷ್ಯರನ್ನು ಕೆಲವು ನಿರ್ದಿಷ್ಟ ರೀತಿಗಳಲ್ಲಿ ನಡೆದುಕೊಳ್ಳುವಂತೆ ಮನವೊಲಿಸುವ ಕಲೆಯಾಗಿದೆ. ಸಾಮಾನ್ಯ ನೆಲೆಯಲ್ಲಿ, ಅದು ಸಾಮಾಜಿಕ ರಚನೆಯನ್ನು ಕಾಪಾಡಿಕೊಳ್ಳುವ, ವರ್ಗಾಯಿಸುವ ಮತ್ತು ಮರುರಚಿಸುವ ರಾಜಕೀಯ ಆದರ್ಶದೊಂದಿಗೆ ಸಾಮಾಜಿಕ ಅಧಿಕಾರದ ಬಹುಮುಖತ್ವವನ್ನು ಏಕೀಕರಿಸುವ ಕಾಳಜಿಯನ್ನು ಹೊಂದಿದೆ. ಈಗಾಗಲೇ ಇರುವಂತಹ ವಿಚಾರ ಪರಂಪರೆಯನ್ನು ಅಥವಾ ಇದರಲ್ಲಿ ತೊಡಗಿಸಿಕೊಂಡವರ ಆದರ್ಶವನ್ನು ಸ್ಥಾನಾಂತರಗೊಳಿಸಿ ಹೊಸತನ್ನು ಸ್ಥಾಪಿಸುವ ಪ್ರಯತ್ನವೂ ನಡೆಯಬಹುದು. ಆರ್ಥಿಕ ಅಥವಾ ರಾಜಕೀಯವಾದವುಗಳಲ್ಲಿ ಯಾವುದೇ ಆದರೂ ಇವುಗಳ ಆಧುನೀಕರಣ ಮತ್ತು ಅಭಿವೃದ್ಧಿಗಳನ್ನು ಸಾಧಿಸುವಲ್ಲಿ ಸರಕಾರಗಳು ಶಿಕ್ಷಣವನ್ನು ಶಕ್ತಿಶಾಲೀ ಅಸ್ತ್ರವನ್ನಾಗಿ ಉಪಯೋಗಿಸುತ್ತವೆ. ಸಾಮಾನ್ಯವಾಗಿ ಜನರು ಶಿಕ್ಷಣವನ್ನು ಪ್ರಗತಿಗೆ ಅಗತ್ಯವಿರುವ ಸ್ಥಿತಿಯಾಗಿ ಕಾಣುತ್ತಾರೆ. ಆದುದರಿಂದ ಈ ಕ್ಷೇತ್ರದಲ್ಲಿ ರಾಜಕಾರಣಿಗಳು ಆಸಕ್ತಿ ತೋರಿಸುವುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಶಿಕ್ಷಣವನ್ನು ಪ್ರೋತ್ಸಾಹಿಸುವುದರಲ್ಲಿ ಆಧುನಿಕ ದೇಶ/ರಾಜ್ಯ ಮತ್ತು ಸರಕಾರದ ನಿರ್ಲಕ್ಷ್ಯ ಮತ್ತು ಪಾತ್ರವು ಒಂದು ವಿಧದಲ್ಲಿ ರಾಜಕಾರಣವನ್ನು ಒಳನುಗ್ಗಿಸುವ ಕಾರ್ಯವನ್ನು ನಡೆಸುತ್ತದೆ. ಅದನ್ನು ಸುಲಭವಾಗಿ ನಿವಾರಿಸಿಕೊಳ್ಳುವ ಹಾಗಿಲ್ಲ. ಆಧುನಿಕ ಶಿಕ್ಷಣ ವ್ಯವಸ್ಥೆಯ ಮುಖ್ಯ ಪ್ರಶ್ನೆಗಳಾದ ಶೈಕ್ಷಣಿಕ ಸಂಸ್ಥೆಗಳನ್ನು ಯಾರು ನಡೆಸಬೇಕು, ಸರಕಾರ ಅಥವಾ ಖಾಸಗಿ ವಲಯವೋ ಅಥವಾ ಪಠ್ಯಕ್ರಮವನ್ನು ಯಾರು ನಿರ್ಧರಿಸಬೇಕು ಇತ್ಯಾದಿಗಳು ರಾಜಕೀಯ ಚರ್ಚೆಯನ್ನು ಎಬ್ಬಿಸುವುದರಿಂದ, ಸಹಜವಾಗಿ ರಾಜಕಾರಣ ಮತ್ತು ಶಿಕ್ಷಣದ ನಡುವೆ ಪರಸ್ಪರ ಗಂಭೀರ ಪ್ರತಿಕ್ರಿಯೆಗಳಿಗೆ ದಾರಿ ಮಾಡಿಕೊಡುತ್ತವೆ. ಇತ್ತೀಚಿಗಿನ ವರ್ಷಗಳಲ್ಲಿ ಶಿಕ್ಷಣದಲ್ಲಿ ಯಾವ ಯಾವ ವಿಷಯಗಳು ಇರಬೇಕು ಎಂಬುದು ಪ್ರಮುಖ ರಾಜಕೀಯ ಹಿತಾಸಕ್ತಿಯಾಗಿ ಪರಿಣಮಿಸಿದೆ. ಕಾರ್ಯನೀತಿಯನ್ನು ರೂಪಿಸುವುದು ರಾಜ್ಯದ ವಿಶೇಷಾಧಿಕಾರವಾಗಿದ್ದರೂ ಶಿಕ್ಷಣತಜ್ಞರಲ್ಲದೆ, ಕೆಲವು ಸಾಮಾನ್ಯ ಹೊಂದಾಣಿಕೆಗಳು ಅಥವಾ ವಿಶಾಲ ಅರ್ಥೈಸುವಿಕೆಯಿಂದ ರಾಜಕೀಯ ಪಕ್ಷಗಳು, ರಾಜಕಾರಣಿಗಳು ಎಲ್ಲ ವಿಧದ ಅಬ್ಬರದ ತತ್ತ್ವವಾದಗಳು, ದೀರ್ಘಕಾಲದ ಚರ್ಚೆಗಳು ಅಥವಾ ವಾದಗಳಲ್ಲಿ ಕಾಣಿಸಿಕೊಳ್ಳುವುದು ಕಡ್ಡಾಯವಾಗಬಹುದು. ಆದ್ದರಿಂದ ಶಿಕ್ಷಣದ ನಿರ್ವಹಣೆಯಲ್ಲಿ ರಾಜಕಾರಣವನ್ನು ದೂರವಿರಿಸುವ ಹಾಗಿಲ್ಲ. ಕಾರ್ಯನೀತಿಗಳನ್ನು ಜಾರಿಗೊಳಿಸುವ ಸಂದರ್ಭಗಳಲ್ಲಿ ರಾಜಕೀಯ ಮತ್ತು ಇತರ ಗುಂಪುಗಳ ಒಪ್ಪಂದವು ನಿರ್ಣಾಯಕವಾಗಿರುತ್ತದೆ.

Digitised by Bharatavani, CIIL

ಇದು ಶಿಕ್ಷಣದ ಸಿಬ್ಬಂದಿ, ಸಂಪನ್ಮೂಲಗಳಿಗಾಗಿ ಮಾತ್ರವಲ್ಲ, ಅದರ ಉದ್ದೇಶಗಳು ಮತ್ತು ವಿಷಯಾಂಶಗಳ ಮೇಲಿನ ನಿಯಂತ್ರಣಕ್ಕೆ ತೀವ್ರ ಪೈಪೋಟಿಯ ಅವಕಾಶವನ್ನು ಕಲ್ಪಿಸಿದೆ. ಇದು ಒಂದೆಡೆ ರಾಜಕಾರಣಿಗಳ ಗುಂಪು ಮತ್ತು ಇನ್ನೊಂದೆಡೆ ಬೇರೆಯವರು, ಅದರಲ್ಲಿ ವಿಶೇಷವಾಗಿ ಶಿಕ್ಷಣತಜ್ಞರ ನಡುವೆ ನಡೆಯುವ ಸ್ಪರ್ಧೆಯಾಗಿರಬೇಕಾಗಿಲ್ಲ, ಇದು ರಾಜಕಾರಣಿಗಳು ತಮ್ಮೊಳಗೆ ನಡೆಸುವ ಸ್ಪರ್ಧೆಯಾಗಿದೆ. ಈ ಸ್ಪರ್ಧೆಯು ಭಾರತದಲ್ಲಿ ತೀವ್ರವಾಗಿದೆ. ಇತ್ತೀಚಿಗಿನ ವರ್ಷಗಳಲ್ಲಿ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಘಗಳು ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಳ್ಳುವುದು ಸಾಮಾನ್ಯವಾಗಿದೆ. ಅನೇಕ ಬಾರಿ ಸಂಘಗಳ ಚುನಾವಣೆಗಳು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಆಶ್ರಯದಲ್ಲಿ ಮತ್ತು ಅವುಗಳ ಸಂಪನ್ಮೂಲಗಳಿಂದ ನಡೆಯುತ್ತವೆ. ಈ ರೀತಿಯ ಸಂಬಂಧವು ಶಿಕ್ಷಣ ಕ್ಷೇತ್ರದ ನಿರ್ಧಾರ ಕೈಗೊಳ್ಳುವ ಅಧಿಕಾರಿಗಳು, ಆಡಳಿತಗಾರರು ಮತ್ತು ಬೋಧನಾ ಸಿಬ್ಬಂದಿಗಳ ಮೇಲೆ ಪರಿಣಾಮ ಬೀರುತ್ತವೆ.

ಕೋಗನ್(1978) ರವರ ಪ್ರಕಾರ ಶಿಕ್ಷಣವು ತನ್ನ ಸಹಜ ಸ್ವರೂಪದಿಂದಲೇ ರಾಜಕೀಯವಾಗಿದೆ. ಶಿಕ್ಷಣವನ್ನು ಸಾಂಸ್ಕೃತಿಕ ಮೌಲ್ಯಗಳು ಮತ್ತು ಸಾಮಾಜಿಕ ಪಾತ್ರಗಳನ್ನು ಸಾಗಿಸುವ ಮುಖ್ಯ ವಾಹಕವಾಗಿ ಪರಿಗಣಿಸಲಾಗುತ್ತಿದೆ. ಇದರಿಂದಾಗಿ ಬಹುತೇಕ ಎಲ್ಲಾ ಶೈಕ್ಷಣಿಕ ಆಯ್ಕೆಗಳು ರಾಜಕೀಯವಾಗಿವೆ. ರಾಜಕೀಯ ಅಧಿಕಾರ ಮತ್ತು ಮಾರ್ಪಾಟುಗಳು ಅನುಕೂಲತೆಗಳು ಮತ್ತು ವೆಚ್ಚಗಳ ಹಂಚುವಿಕೆಯ ಮೇಲೆ ಪರಿಣಾಮ ಬೀರುತ್ತವೆ. ವ್ಯಕ್ತಿಗಳು, ರಾಜಕೀಯ ಪಕ್ಷಗಳು, ಆಸಕ್ತ ಗುಂಪುಗಳು, ಅಧಿಕಾರಶಾಹಿ, ವಿವಿಧ ಆಸಕ್ತಿಗಳು ಮತ್ತು ನಿರೀಕ್ಷೆಗಳನ್ನು ಮತ್ತು ವಿವಿಧ ರೀತಿಯ ಸಂಪನ್ಮೂಲಗಳನ್ನು ಹೊಂದಿರುವ ಎಲ್ಲಾ ರಾಜಕೀಯ ಪಾತ್ರಧಾರಿಗಳು ಲಾಭಗಳನ್ನು ಹಂಚಿಕೊಳ್ಳಲು ಔಪಚಾರಿಕ ಸಂಸ್ಥೆಗಳು ಮತ್ತು ಅನೌಪಚಾರಿಕ ಸಂಪರ್ಕಗಳ ಮೂಲಕ ಕಾರ್ಯನಿರ್ವಹಿಸುವರು. ಹೀಗೆ ಅವರು ರಾಜಕೀಯ ಕಾರ್ಯವಿಧಾನದ ಭವಿಷ್ಯವನ್ನು ರೂಪಿಸುತ್ತಾರೆ. ಯಾರು ಎಷ್ಟು ಖರ್ಚಿನಲ್ಲಿ ಮತ್ತು ಯಾವ ಫಲಿತಾಂಶದೊಂದಿಗೆ ಭಾಗವಹಿಸಬಹುದು ಎಂಬುದನ್ನು ಸಾಂಸ್ಥಿಕ ರಚನೆಗಳು ನಿರ್ಧರಿಸುತ್ತವೆ. ಯಾರಾದರೂ ಶಿಕ್ಷಣದಲ್ಲಿ ರಾಜಕೀಯದ ಹೇರುವಿಕೆಯನ್ನು ಅಸಹ್ಯವೆಂದು ಮತ್ತು ಅಪಾಯಕಾರಿ ಎಂಬುದಾಗಿಯೂ ಪರಿಗಣಿಸುವುದಾದರೆ, ಈ ರೀತಿಯ ರಾಜಕೀಯದ ಮಧ್ಯಸ್ಥಿಕೆಯ ಋಣಾತ್ಮಕ ಪರಿಣಾಮಗಳನ್ನು ಕಡಿಮೆಗೊಳಿಸುವ ಪ್ರಯತ್ನವನ್ನು ನಡೆಸಬೇಕಲ್ಲದೆ ಅದನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳುವುದಲ್ಲ. ಏಕೆಂದರೆ ರಾಜಕಾರಣವನ್ನು ಸಂಪೂರ್ಣವಾಗಿ ಶಿಕ್ಷಣದಿಂದ ದೂರವಿಡುವುದು ಅಸಾಧ್ಯದ ಮಾತಾಗಿದೆ.

### ರಾಜ್ಯದ ಮಧ್ಯಪ್ರವೇಶಿಕೆ

ರಾಜ್ಯದ ಪಾತ್ರ, ಅಂದರೆ ಶಿಕ್ಷಣದಲ್ಲಿ ರಾಜ್ಯದ ಸಾಂಪ್ರದಾಯಿಕ ಮಧ್ಯಪ್ರವೇಶಿಕೆಯು ವಿಶೇಷವಾಗಿ ವಿಶ್ವವಿದ್ಯಾಲಯಗಳ ಕಾರ್ಯ ನಿರ್ವಹಣೆಯಲ್ಲಿ ಸರಕಾರ ಹೊಂದಿರುವ ನಿಯಂತ್ರಣವಾಗಿದೆ. ಉದಾಹರಣೆಗೆ ಭಾರತದಲ್ಲಿ ಮೊಟ್ಟಮೊದಲನೆಯದಾಗಿ ಮಟ್ಟಗಳ ಕುಸಿತಕ್ಕೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಜನಪ್ರಿಯ ಒಳಹಾದಿಗಳು ಕಾರಣವೆಂದು ಊಹಿಸಲಾಗಿದೆ. ಚಾರಿತ್ರಿಕವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಮಹತ್ವಾಕಾಂಕ್ಷೆಯ ರಾಜಕಾರಣಿಗಳಿಂದ ರಕ್ಷಿಸಿಕೊಳ್ಳುವ ಸಲುವಾಗಿ ರಾಜ್ಯ ಮತ್ತು ಅದರ ಸರಕಾರಿ ಕಾರ್ಯವೈಖರಿ ಒಂದೆಡೆ, ಶಿಕ್ಷಣ ವ್ಯವಸ್ಥೆ ಇನ್ನೊಂದೆಡೆ ಬಹಳ ಹತ್ತಿರದ ಸಂಬಂಧ ಹೊಂದಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಬ್ರಿಟಿಷ್ ಆಡಳಿತಗಾರರಿಗೆ ಮಧ್ಯಸ್ಥಿಕೆಯ ಪ್ರತಿಯೊಂದು ವರ್ತನೆಯು ಸ್ವಾಯತ್ತತೆಯ ಅತಿಕ್ರಮಣವಾಗಿರದೆ, ಸ್ವಾಯತ್ತತೆಯನ್ನು ರಕ್ಷಿಸುವ ವರ್ತನೆಯಾಗಿ ಕಾಣುತ್ತಿತ್ತು. ಆದರೆ, ಇದರ ನಂತರ ಶೈಕ್ಷಣಿಕ ಸಂಸ್ಥೆಗಳ ಮೇಲೆ ರಾಜ್ಯದ ನಿಯಂತ್ರಣ, ಅದರಲ್ಲಿಯೂ ವಿಶೇಷವಾಗಿ ವಿಶ್ವವಿದ್ಯಾಲಯಗಳ ಮೇಲಿನ ನಿಯಂತ್ರಣವು ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ನಿರ್ಧಾರಿತವೂ ವಿಚಾರ ಪ್ರಜ್ಞೆಗೆ ಅಪಾಯಕಾರಿಯಾಗಿಯೂ ಕಾಣಲಾಗಿದೆ. ಈ ಚರ್ಚೆ ಇನ್ನೂ ಮುಗಿದಿಲ್ಲ. ಇದು ಕಾಲದಿಂದ ಕಾಲಕ್ಕೆ ಕೋಪೋದ್ರಿಕ್ತಗೊಂಡು ಗಂಭೀರ ಸ್ಥಿತಿಯನ್ನು ತಲುಪುತ್ತದೆ. ರಾಜಕೀಯ ವಲಯದಲ್ಲಿ ಬದಲಾವಣೆ ಕಾಣಿಸಿಕೊಂಡಾಗಲೆಲ್ಲಾ, ಅದು ರಾಷ್ಟ್ರಮಟ್ಟದಲ್ಲಿ ಇರಬಹುದು ಅಥವಾ ರಾಜ್ಯ ಮಟ್ಟಗಳಲ್ಲಿ ಇರಬಹುದು, ಶಿಕ್ಷಣದಲ್ಲಿ ರಾಜಕೀಯ ಪ್ರವೇಶದ ಕುರಿತು ದೂರುಗಳು ಇರುತ್ತವೆ. ಈ ಪ್ರವೇಶವು ಕೆಲವು ಸೈದ್ಧಾಂತಿಕ ಅಥವಾ ರಾಜಕೀಯ ಉದ್ದೇಶಗಳ ಈಡೇರಿಕೆಯ ದೀರ್ಘಾವಧಿಯ ಉದ್ದೇಶಗಳನ್ನು ಹೊಂದಿರುತ್ತವೆ. ಶಿಕ್ಷಣವನ್ನು ತಮ್ಮ ಪಕ್ಷದ ಮತ್ತು ಅತೀತ ಗುರಿಗಳ ಸಂಕುಚಿತ ಉದ್ದೇಶಗಳಿಗೆ ಬಳಸಿಕೊಳ್ಳುವುದರ ಮೂಲಕ ರಾಜಕೀಯ ಶಕ್ತಿಗಳು ಅವಕಾಶಗಳನ್ನು ಮತ್ತು ಫಲಭರಿತ ಕ್ಷೇತ್ರವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ.

ಭಾರತದಲ್ಲಿ ಬ್ರಿಟಿಷ್ ಆಡಳಿತವಿದ್ದಾಗ ರಾಜ್ಯ ಮತ್ತು ಸರಕಾರವನ್ನು ವಿಶ್ವವಿದ್ಯಾಲಯದ ಸ್ವಾಯತ್ತತೆಯ ಹೊಣೆಗಾರರಾಗಿ ಕಾಣಲಾಗುತ್ತಿತ್ತೇ ವಿನಹ ಅದರ ವೈರಿಯಾಗಿ ಅಲ್ಲ. ಆದರೆ, ಆನಂತರ ಸ್ಥಾನಗಳು ಬದಲಾದವು ಮತ್ತು ಇಂದು ಶಿಕ್ಷಣದಲ್ಲಿ ರಾಜ್ಯದ ಪಾತ್ರವನ್ನು ಹೆಚ್ಚಿಸುವ ಪ್ರತಿಯೊಂದು ಪ್ರಯತ್ನವನ್ನು ನಿಯಂತ್ರಿಸುವ ಮತ್ತು ಮಾನವ ಸ್ವಾತಂತ್ರ್ಯದ ಅನಗತ್ಯ ಅತಿಕ್ರಮಣವಾಗಿ ಕಾಣಲಾಗುತ್ತದೆ. ವಿಶ್ವವಿದ್ಯಾಲಯ ಸಂಸ್ಥೆಗಳಲ್ಲಿ ಭಾರತೀಯ ಅಭಿಪ್ರಾಯ ಮತ್ತು ಆಸಕ್ತಿಗಳ ಪ್ರತಿನಿಧಿತ್ವದ ಅಗತ್ಯದ ಚರ್ಚೆಗಳು ಬ್ರಿಟಿಷ್ ಆಡಳಿತದ ಸಮಯದಲ್ಲಿಯೇ ಪ್ರಾರಂಭವಾಗಿದ್ದು, ಅಪರಿಚಿತ ಸರಕಾರದ ಅಧಿಕಾರಕ್ಕೆ ಬಹುತೇಕ ವ್ಯತಿರಿಕ್ತವೆನಿಸುವ ರೀತಿಯಲ್ಲಿ ಇವತ್ತಿಗೂ ಮುಂದುವರಿಯುತ್ತಿದೆ. ಇಂತಹ ಬೇಡಿಕೆಗಳನ್ನು ಅನುಚಿತ ಮತ್ತು ತಪ್ಪು ಮಾಹಿತಿಯದೆಂದು ಬ್ರಿಟಿಷರು ತಳ್ಳಿ ಹಾಕಿದ್ದರು. ಅವರ ದೃಷ್ಟಿಯಲ್ಲಿ ಅವರ ಅಧಿಕಾರಕ್ಕೆ ಇವುಗಳು ಬೆದರಿಕೆಯಾಗಿ, 'ರಾಜ್' ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿದ್ದವು. ಭಾರತೀಯರ ದೃಷ್ಟಿಯಲ್ಲಿ ಇದು ರಾಷ್ಟ್ರೀಯವಾದಿತ್ವವಾಗಿದ್ದು, ಗೌರವ ಮತ್ತು ಆತ್ಮಾಭಿಮಾನದ ಮೌಲ್ಯಗಳಿಂದ ಪ್ರೇರಣೆ ಹೊಂದಿದ್ದಾಗಿತ್ತು. ಇದು ರಾಜಕಾರಣ ಮತ್ತು ಶಿಕ್ಷಣದ ನಡುವೆ ವಿಶೇಷ ಸಂಪರ್ಕವನ್ನು

Digitised by Bharatavani, CIIL

ಕಾಣಿಸುವ ಕ್ಷೇತ್ರವಾಗಿತ್ತು. ಆದರೆ, ಇಂದು ಆಧುನಿಕ ಸ್ವತಂತ್ರ ಭಾರತದಲ್ಲಿ ಸರಕಾರವನ್ನು ಅಪರಿಚಿತ ಅಧಿಕಾರವಾಗಿ ಅಥವಾ ರಾಜ್ಯವನ್ನು ವೈರಿಯಾಗಿ ಕಾಣಲಾಗುವುದಿಲ್ಲ. ಹಾಗಿದ್ದರೂ ವಿಶ್ವವಿದ್ಯಾಲಯಗಳ ವಿಚಾರಣಾ ಸ್ವಾತಂತ್ರ್ಯ ಮತ್ತು ಸ್ವಾಯತ್ತ ಕಾರ್ಯವಿಧಾನಗಳಲ್ಲಿ ರಾಜ್ಯಾಡಳಿತ ಮತ್ತು ಸರಕಾರದ ಅಧಿಕಾರಗಳನ್ನು ಅನಿಯಮಿತವೆಂದು ಕಾಣಲಾಗುತ್ತಿದೆ. ರಾಜ್ಯದ ಮಧ್ಯಪ್ರವೇಶಿಕೆಯ ಲೋಕೋಕ್ತಿ ಅನುಮಾನವು ವೈಯಕ್ತಿಕ ವ್ಯಕ್ತಿತ್ವ ಮತ್ತು ಬೆಳವಣಿಗೆಗೆ ದ್ವೇಷದ ಸ್ವರೂಪದ್ದಾಗಿದ್ದರೆ, ರಾಜ್ಯದ ಪ್ರತಿಯೊಂದು ಮಧ್ಯಪ್ರವೇಶಿಕೆಯ ಕಾರ್ಯವು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸ್ವಾತಂತ್ರ್ಯ ಮತ್ತು ಸ್ವಾಯತ್ತ ಕಾರ್ಯಾಚರಣೆಗಳಿಗೆ ಸಾಮರಸ್ಯವಿಲ್ಲದಿರುವಂತೆ ಭಾವಿಸಲಾಗುತ್ತಿದೆ. ಇಂದಿನ ದಿನಗಳಲ್ಲಿ ಭಾರತದ ವಿಶ್ವವಿದ್ಯಾಲಯ ವ್ಯವಸ್ಥೆಯ ಕಾರ್ಯಗಳಲ್ಲಿ ಇವು ಬಹುಮುಖ್ಯ ವಿಚಾರಗಳಾಗಿರುತ್ತವೆ. ಪ್ರತಿಯೊಂದು ಬಾರಿ ರಾಜ್ಯ ಸರಕಾರ ಅಥವಾ ಕೇಂದ್ರ ಸರಕಾರ ತನ್ನ ವಿಶ್ವವಿದ್ಯಾಲಯ ಅಧಿನಿಯಮಗಳ ತಿದ್ದುಪಡಿ ನಡೆಸಿದಾಗ ಅಥವಾ ಹೊಸ/ಪರಿಷ್ಕೃತ ಅಧಿನಿಯಮವನ್ನು ಜಾರಿಗೆ ತಂದಾಗ, ವಿಶ್ವವಿದ್ಯಾಲಯದ ಸ್ವಾತಂತ್ರ್ಯದ ಮಟ್ಟದ ಕುರಿತು, ಅದೇ ರೀತಿ ಇಂದಿನ ದಿನಗಳಲ್ಲಿ ರಾಜ್ಯ ಅಥವಾ ಕೇಂದ್ರ ಸರಕಾರಕ್ಕೆ ಇರುವಂತಹ ಸ್ವಾತಂತ್ರ್ಯದ ಕುರಿತು ಚರ್ಚೆಗಳು ನಡೆಯುತ್ತಿರುತ್ತವೆ. ಇದನ್ನು ಶೈಕ್ಷಣಿಕ ಸಮುದಾಯ ಹೇಗೆ ಕಾಣುತ್ತದೆ ಎಂಬುದಕ್ಕೆ ಇತ್ತೀಚಿಗಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದ ಅಳವಡಿಕೆಯು ಉದಾಹರಣೆಯಾಗಿದೆ.

**ಶಿಕ್ಷಣದ ಖಾಸಗಿ ಒಡೆತನ**

ರಾಜಕೀಯವು ರಾಷ್ಟ್ರೀಯ ಅನನ್ಯತೆ ಮತ್ತು ಸಾರ್ವಜನಿಕ ತಾತ್ವಿಕತೆಯ ಕುರಿತಾಗಿದೆ. ಇದರ ಪರಿಣಾಮವಾಗಿ 'ಭಾರತೀಯ' ಅಥವಾ 'ಭಾರತೀಯರಲ್ಲದ' ವಿಚಾರಗಳನ್ನು, ಸ್ಥಾಪಿಸಬೇಕಾಗಿರುವ, ಪ್ರೋತ್ಸಾಹಿಸಬೇಕಾದ ಮತ್ತು ಚಲಾವಣೆಗೆ ತರಬೇಕಾದ ರಾಜಕೀಯ ಮತ್ತು ಸಾಮಾಜಿಕ ಕ್ರಮಗಳನ್ನು, ಅದನ್ನು ಬೆಂಬಲಿಸುವ ಸಾಂಸ್ಥಿಕ ವ್ಯವಸ್ಥೆಯನ್ನು ಅದು ಎತ್ತಿಹಿಡಿಯುತ್ತದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ರಾಜಕೀಯವು ಇವುಗಳ ಸಾಧನೆಗಾಗಿ ಮೌಲ್ಯಗಳನ್ನು ಮತ್ತು ಹಾದಿಗಳನ್ನು ಮತ್ತು ವಿಧಾನಗಳನ್ನು ತಿಳಿಸಿ ಹೇಳುತ್ತದೆ. ಇದರಲ್ಲಿ ಭೂತ, ವರ್ತಮಾನ, ಮತ್ತು ಭವಿಷ್ಯಗಳು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ನಿರ್ದಿಷ್ಟವಾಗಿ ಈ ಕಾರಣಕ್ಕಾಗಿಯೇ ಶಿಕ್ಷಣಕ್ಷೇತ್ರದಲ್ಲಿ ಬೇರೆ ಬೇರೆ ಸಮುದಾಯಗಳ ಮೌಲ್ಯ ವ್ಯವಸ್ಥೆಗಳು ಮತ್ತು ರೂಢಿಗಳು ಕಾಣಿಸಿಕೊಂಡು ವಿವಾದಗಳಿಗೆ ಮತ್ತು ಒತ್ತಡಗಳಿಗೆ ದಾರಿ ಮಾಡಿಕೊಡುತ್ತವೆ. ಭಾರತವು ಜಾತ್ಯಾತೀತ ಸಿದ್ಧಾಂತಕ್ಕೆ ಬದ್ಧವಾಗಿದ್ದು, ಅದರ ಸಂವಿಧಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಒಡೆತನವನ್ನು ಹೊಂದುವ ಹಕ್ಕುಗಳನ್ನು ನೀಡಲಾಗಿದ್ದರೂ ಈ ರೀತಿಯದು ಸಂಭವಿಸುತ್ತದೆ. ಇದರ ಪರಿಣಾಮವೇನೆಂದರೆ, ಧಾರ್ಮಿಕ ಗುಂಪುಗಳು ತಮ್ಮದೇ ಆದ ಮೌಲ್ಯಗಳ ಪ್ರಸಾರಕ್ಕಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವುದು. ಆದರೂ, ಖಾಸಗಿ ಆಡಳಿತದ ಸಂಸ್ಥೆಗಳ ಸ್ಥಾಪನೆಯು ಸಂಪೂರ್ಣವಾಗಿ ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಒದಗಿಸಲಾದ ರಕ್ಷಣೆಯ ಪರಿಣಾಮವೆಂದು ಹೇಳುವ ಹಾಗಿಲ್ಲ. ಅಲ್ಪಸಂಖ್ಯಾತರೆಂದು ಪರಿಗಣಿಸಿದವರನ್ನು ಹೊರತುಪಡಿಸಿಯೂ ಅನೇಕ ಇತರ ಸಮುದಾಯಗಳ ಖಾಸಗಿ ಆಡಳಿತದ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಸ್ಥಾಪನೆಯಾಗಿವೆ.

ಭಾರತದಲ್ಲಿ ಅನೇಕ ಶಾಲೆಗಳು ಮತ್ತು ಕಾಲೇಜುಗಳಿಗೆ ಖಾಸಗಿ ಉದ್ಯಮಗಳಿಂದ ಹಣಕಾಸು ದೊರೆಯುತ್ತಿದೆ. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿಯೇ ಸರಕಾರೇತರ ಅನುದಾನದ ಮೂಲಕ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಕಾರ್ಯವು ಕ್ರೈಸ್ತ ಮಿಶನರಿಗಳಿಂದ ನಡೆದಿದೆ. ಸ್ವಾತಂತ್ರ್ಯ ಹೋರಾಟದಿಂದಾಗಿ, ಭಾರತದ ಯುವಜನಾಂಗದಲ್ಲಿ ನಮ್ಮ ಸಂಪ್ರದಾಯದ ಪ್ರೀತಿ ಮತ್ತು 'ಭಾರತೀಯತೆ'ಯ ಕುರಿತಾದ ಗೌರವವನ್ನು ಮೂಡಿಸುವ ಉದ್ದೇಶದಿಂದ ಅಪ್ಪಟ ಸ್ವದೇಶೀ ಶಿಕ್ಷಣವನ್ನು ಒದಗಿಸುವ ಉನ್ನತ ವಿಚಾರಗಳಿಂದ ಪ್ರೇರಿತರಾದ ವ್ಯಕ್ತಿಗಳಿಂದ ಅಥವಾ ಗುಂಪುಗಳಿಂದ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಾಯಿತು. ಈ ಸಂಸ್ಥೆಗಳು ಸರ್ಕಾರಿ ಬೆಂಬಲದಿಂದ ಸ್ಥಾಪನೆಯಾದ ವ್ಯವಸ್ಥೆಯ ಸ್ಪರ್ಧೆಯನ್ನು ತಾಳಿಕೊಂಡು ಬಂದಿವೆ. ಆದರೆ, ರಾಜಕೀಯ ಗುರಿಗಳು ಬದಲಾಗುವುದರೊಂದಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ರಾಷ್ಟ್ರೀಯ ಗುರಿಗಳು ಕೂಡ ಬದಲಾವಣೆಯನ್ನು ಹೊಂದಿವೆ. ಅಧಿಕಾರ, ಪ್ರತಿಷ್ಠೆ ಮತ್ತು ಪ್ರಭಾವದ ಕಡೆಗೆ ಕೇಂದ್ರೀಕೃತಗೊಂಡಿರುವ ವೃತ್ತಿಯಾಗಿ ರಾಜಕಾರಣವನ್ನು ತನ್ನದಾಗಿಸಿಕೊಳ್ಳುವುದು ಪ್ರಾಮುಖ್ಯತೆಯನ್ನು ಪಡೆದಿದೆ. ಇದನ್ನು ಸಾಧಿಸುವ ಎಲ್ಲಾ ಹಾದಿಗಳನ್ನು ಬಹಳ ಚತುರತೆಯಿಂದ ಬಳಸಿಕೊಳ್ಳಲಾಗುತ್ತಿದೆ. ಶಿಕ್ಷಣ ಸಂಸ್ಥೆಯ ಸ್ಥಾಪನೆ ಮತ್ತು ಅದರ ಕಾರ್ಯಗತಿಗಳಲ್ಲಿ ತೊಡಗಿಸಿಕೊಂಡವರಿಗೆ ಮತ್ತು ಆ ಪ್ರದೇಶಕ್ಕೆ, ಆ ಶಿಕ್ಷಣ ಸಂಸ್ಥೆಯು ಪ್ರತಿಷ್ಠೆಯ ಸಂಕೇತವಾಗಿರುತ್ತದೆ. ಇದರ ಪರಿಣಾಮವಾಗಿ, ಶೈಕ್ಷಣಿಕ ಕ್ಷೇತ್ರದಲ್ಲಿ ಉದ್ಯಮಶೀಲತೆಯ ಒಲವಿನೊಂದಿಗೆ ಪ್ರವೇಶ ಪಡೆಯುವ ಗುಂಪಿನೊಂದಿಗೆ ನಿರ್ಣಾಯಕ ಪ್ರಭಾವ ಬೀರುವ ಎಲ್ಲಾ ವಿಧದ ಶಕ್ತಿಗಳನ್ನು ನಾವು ಕಾಣುತ್ತೇವೆ. ರಾಷ್ಟ್ರೀಯವಾದಿ, ಪಂಥಾನುಯಾಯಿ ಮತ್ತು ಜಾತೀಯ ಶಕ್ತಿಗಳ ವಿಚಾರದಲ್ಲಿ ಇದು ದಿಟವಾಗಿದ್ದು, ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಇವುಗಳ ಪಾತ್ರ ಗಮನಾರ್ಹವಾಗಿದೆ. ಅಲ್ಲದೆ, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಹಾಗೂ ನಡೆಸಲು ಹಣ ಹೂಡುವಿಕೆಯು, ಮುಖ್ಯವಾಗಿ ಕೆಳಹಂತಗಳಲ್ಲಿ ಹಾಗೂ ವೃತ್ತಿಪರ ಶಿಕ್ಷಣ ಹಂತಗಳಲ್ಲಿ, ಆರ್ಥಿಕವಾಗಿ ಲಾಭ ತರುವ ಕಾರ್ಯವಾಗಿದೆ ಎಂದು ಭಾವಿಸಲಾಗಿದೆ.

ಖಾಸಗಿ ಒಡೆತನದ ಮಹಾವಿದ್ಯಾಲಯವು ಬಹಳ ಹಳೆಯದಾಗಿದ್ದು ಅದು ತನ್ನ ಸ್ವಂತ ಸಂಪ್ರದಾಯವನ್ನು ಹೊಂದಿದ್ದರೆ, ಅದು ಇರುವ ಪ್ರದೇಶಕ್ಕೆ ಮತ್ತು ಅದನ್ನು ನಡೆಸುವವರಿಗೆ ಅದು ಬಹಳ ಪ್ರತಿಷ್ಠೆಯ ವಿಚಾರವಾಗಿ ಇರುತ್ತದೆ. ಅದು ಅನಿವಾರ್ಯವಾಗಿ ತನ್ನ ಪಂಥೀಯ ಲಕ್ಷಣವನ್ನು ಪ್ರತಿಬಿಂಬಿಸುತ್ತದೆ ಮತ್ತು ತನ್ನನ್ನು ಅಧಿಕಾರ ಕೇಂದ್ರವಾಗಿ ಅಭಿವ್ಯಕ್ತಿಸುತ್ತದೆ. ಸ್ಥಳೀಯ ರಾಜಕಾರಣದಲ್ಲಿ

Digitised by Bharatavani, CIIL

ಖಾಸಗಿ ಮಹಾವಿದ್ಯಾಲಯಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳು ಗಮನಾರ್ಹ ಪಾತ್ರ ನಿರ್ವಹಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಸಂಸ್ಥೆಗಳು ವಿಶೇಷವಾಗಿ ಚುನಾವಣೆಯ ಸಮಯದಲ್ಲಿ ಪಕ್ಷದ ಹುದ್ದೆಗಳಿಗೆ, ಬೆಂಬಲಿಗರಿಗೆ, ಮತ್ತು ಆಶ್ರಯದಾತರಿಗೆ ರಾಜಕೀಯ ಸಂಪನ್ಮೂಲಗಳಾಗಿ ಕಾರ್ಯನಿರ್ವಹಿಸುತ್ತವೆ. ಜೊತೆಗೆ ಪಕ್ಷಾಭಿಮಾನಿ ಪ್ರತಿಷ್ಠೆ ಮತ್ತು ಪ್ರಭಾವಕ್ಕೆ ಸಾಧನವಾಗಿರುತ್ತವೆ. ಸಾಮಾನ್ಯವಾಗಿ ಸಂಸ್ಥೆಯ ಸ್ಥಾಪಕರು ರಾಜಕೀಯ ಪಕ್ಷದೊಂದಿಗೆ ಸಂಬಂಧವನ್ನು ಹೊಂದಿರುವಾಗ ಅಥವಾ ಅವನು/ಅವಳು ನಿರ್ದಿಷ್ಟ ವಿಚಾರಪರಂಪರೆ ಅಥವಾ ತಾತ್ವಿಕತೆಯೊಂದಿಗೆ ಗುರುತಿಸಿಕೊಂಡಾಗ ಈ ರೀತಿಯದು ನಡೆಯುತ್ತದೆ. ಕೆಲವೊಮ್ಮೆ ನಿರ್ದಿಷ್ಟ ಪಕ್ಷ ಸಂಘಟನೆಗಾಗಿ ಆ ಪ್ರದೇಶದ ಖಾಸಗಿ ಮಹಾವಿದ್ಯಾಲಯಗಳೇ ಚೌಕಟ್ಟನ್ನು ಒದಗಿಸಿಕೊಡುತ್ತವೆ.

ಸುಧಾರಣಾ ಚಳವಳಿಗಾಗಿ ಕಾರ್ಯ ನಿರ್ವಹಿಸುತ್ತಿರುವ ಪಂಥೀಯ ಮತ್ತು ಜಾತೀಯ ವಿಭಾಗಗಳು ತಮ್ಮ ಅನನ್ಯತೆ ಮತ್ತು ನಿಬಂಧನೆಗಳನ್ನು ವ್ಯಕ್ತಪಡಿಸಲು ಶಿಕ್ಷಣವನ್ನು ಬಳಸುತ್ತವೆ. ಉದಾಹರಣೆಗೆ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಯಲ್ಲಿ ಆರ್ಯ ಸಮಾಜವು ಬಹು ಮುಖ್ಯವಾಗಿದೆ. ಆರ್ಯ ಸಮಾಜದ ಪ್ರತಿಪಾದಕರು ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಮಂತ್ರಿ ಪದವಿಗಳನ್ನು ಹೊಂದಿರುವುದು ಮತ್ತು ವಿಶ್ವವಿದ್ಯಾಲಯಗಳಲ್ಲಿ ಉಪಕುಲಪತಿಗಳು ಕೂಡ ಆಗಿರುವುದನ್ನು ಗಮನಿಸಿದಾಗ ಆರ್ಯ ಸಮಾಜದ ಸಾಮಾಜಿಕ ಮತ್ತು ರಾಜಕೀಯ ಪ್ರಭಾವ ಎಷ್ಟಿದೆ ಎಂಬುದನ್ನು ತಿಳಿಯಬಹುದು. ಸುಧಾರಣಾ ಚಳವಳಿಗಳಲ್ಲಿ ಸ್ಥಾಪನೆಯಾದ ಶೈಕ್ಷಣಿಕ ಸಂಸ್ಥೆಗಳು ಕ್ರೈಸ್ತ ಮತ್ತು ಮುಸ್ಲಿಮ್ ಸಮುದಾಯದವುಗಳ ರೀತಿಯದ್ದೇ ಆಗಿವೆ. ಪ್ರಾರಂಭದಲ್ಲಿ ಆಂಗ್ಲೋ–ಓರಿಯೆಂಟಲ್ ಕಾಲೇಜ್ ಎಂಬುದಾಗಿ ಸ್ಥಾಪನೆಗೊಂಡ ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯವು, ತಮ್ಮ ಉದ್ಯಮಶೀಲತೆಯಲ್ಲಿ ದೇಶದ ರಾಜಕಾರಣದಲ್ಲಿ ಒತ್ತಡ ಮತ್ತು ಪ್ರಭಾವವನ್ನು ಬೀರಬಲ್ಲ ಹೆಚ್ಚು ಅವಕಾಶವನ್ನು ಪಡೆದಂತಹ ಆ ವಿಭಾಗದ ಸಮುದಾಯವನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತದೆ. ಕರ್ನಾಟಕದಲ್ಲಿ ವಿವಿಧ ಜಾತಿಗಳು ಮತ್ತು ಸಮುದಾಯಗಳಿಂದ ಪ್ರಾರಂಭಗೊಂಡ ಮತ್ತು ಅವುಗಳ ಒಡೆತನವಿರುವ ಸಾಕಷ್ಟು ಸಂಖ್ಯೆಯ ಸಂಸ್ಥೆಗಳು ಇವೆ. ಒಂದು ವಿಧದಲ್ಲಿ ಕ್ರೈಸ್ತ ಮಿಶನರಿಗಳ ಒಡೆತನದಲ್ಲಿ ತಲೆ ಎತ್ತಿರುವ ಶಾಲೆಗಳು ಮತ್ತು ಕಾಲೇಜುಗಳಿಗೆ ಪ್ರತಿಕ್ರಿಯಾತ್ಮಕವಾಗಿ ಈ ವಿಧದ ಬಹುಪಾಲು ಸಂಸ್ಥೆಗಳು ಪ್ರಾರಂಭಗೊಂಡಿವೆ. ಆಮೇಲೆ, ಬೆಳವಣಿಗೆಯ ಒಂದು ವಿನ್ಯಾಸವನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಇದು ಸೂಚಿಸುವುದೇನೆಂದರೆ, ಈ ರೀತಿಯ ಶಾಲೆಗಳು ಮತ್ತು ಕಾಲೇಜುಗಳ ಅಗತ್ಯವನ್ನು ಬೇರೆ ಬೇರೆ ಜಾತಿಗಳು ಮತ್ತು ಸಮುದಾಯಗಳು ಗಮನಿಸಿರುವುದಲ್ಲದೆ, ಅವುಗಳನ್ನು ಅವರು ಪ್ರತಿಷ್ಠೆ ಮತ್ತು ಪ್ರಭಾವದ ಸಂಕೇತಗಳಾಗಿ ಕೂಡ ಕಾಣುತ್ತಾರೆ. ಶಿಕ್ಷಣದ ವಿಚಾರದಲ್ಲಿ ಪ್ರತ್ಯೇಕ ಸ್ಥಾನವನ್ನು ಹೊಂದಿರುವ ಕರ್ನಾಟಕದಲ್ಲಿ ಬ್ರಾಹ್ಮಣರು, ಲಿಂಗಾಯತರು, ಒಕ್ಕಲಿಗರು (ಹಿಂದುಗಳಲ್ಲಿನ ಪ್ರಮುಖ ಜಾತಿಗಳು), ಕ್ರಿಶ್ಚಿಯನ್ನರು, ಮುಸ್ಲಿಮರು, ಜೈನರು ಇತ್ಯಾದಿ ಸಮುದಾಯಗಳ ಒಡೆತನದಲ್ಲಿ ಅಪಾರ ಸಂಖ್ಯೆಯಲ್ಲಿ ಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಕ್ ಇತ್ಯಾದಿಗಳು ನಡೆಯುತ್ತಿದ್ದು, ಇವುಗಳ ಕ್ರಿಯಾಶೀಲ ತೊಡಗಿಸಿಕೊಳ್ಳುವಿಕೆಯನ್ನು ಹೊರತುಪಡಿಸಿ ಕರ್ನಾಟಕದ ಶಿಕ್ಷಣವನ್ನು ಊಹಿಸಿಕೊಳ್ಳುವುದು ಸಾಧ್ಯವಿಲ್ಲ. ರಾಜ್ಯದಲ್ಲಿನ ಯಾವುದೇ ಸರಕಾರವು ಕಾರ್ಯನೀತಿಯನ್ನು ರೂಪಿಸಿಕೊಳ್ಳುವಾಗ ಈ ಶೈಕ್ಷಣಿಕ ಸಂಸ್ಥೆಗಳ ಆಡಳಿತಗಳನ್ನು ನಿರ್ಲಕ್ಷಿಸುವ ಹಾಗೇ ಇಲ್ಲ.

**ಶಿಕ್ಷಣವನ್ನು ರಾಜಕೀಯಗೊಳಿಸುವಿಕೆ:**

ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ವಾಸ್ತವಾಂಶಗಳ ಪಾತ್ರದ ಕುರಿತಾದ ಗಂಭೀರ ಪ್ರಶ್ನೆಯು ಆಧುನಿಕ ರಾಜ್ಯಗಳಲ್ಲಿ ತಲೆದೋರುವುದು ಸಾಮಾನ್ಯವಾಗಿದೆ. ಇದಕ್ಕೆ ಉತ್ತರವು ಶಿಕ್ಷಣವನ್ನು ಶಿಕ್ಷಣತಜ್ಞರಿಗೆ ಬಿಟ್ಟುಬಿಡುವ ಆದರ್ಶ ಮತ್ತು ಅನೇಕ ಹಂತಗಳಲ್ಲಿ ರಾಜಕೀಯ ನಿಯಂತ್ರಣ ಮತ್ತು ಪ್ರಭಾವದ ಸಾಮಾನ್ಯ ಪರಿಪಾಠದ ನಡುವೆ ಇದೆ. ಶಾಲೆಗಳು ಏನು ಮಾಡುತ್ತವೆ ಎನ್ನುವುದನ್ನು ನಿಯಂತ್ರಿಸಲು ರಾಜಕೀಯ ಹಾದಿಗಳ ಉಪಯುಕ್ತತೆಯನ್ನು ಹಲವರು ಪರಿಗಣಿಸಿದರೆ, ಬೇರೆ ಹಲವರಿಗೆ ಸಮಾಜೋ–ಆರ್ಥಿಕ ರಚನೆಗಳು ಮತ್ತು ಸಮಾಜದಲ್ಲಿರುವ ಶಾಲೆಗಳ ನಡುವೆ ಮಧ್ಯಸ್ಥಿಕೆ ವಹಿಸಲು ರಾಜಕೀಯ ಶಕ್ತಿಗಳು ಅಗತ್ಯವೆಂಬ ಭಾವನೆ ಇದೆ. ರಾಜಕಾರಣ, ರಾಜಕೀಯ ವ್ಯವಸ್ಥೆಗಳು ಮತ್ತು ರಾಜಕೀಯ ಸಂಬಂಧಗಳು ಕಾರ್ಯವಿಧಾನಗಳನ್ನು ಮತ್ತು ಸಂಸ್ಥೆಗಳನ್ನು ಸೂಚಿಸುತ್ತವೆ. ಇಲ್ಲಿ ನಿರ್ಣಾಯಕ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ, ಸಂಪನ್ಮೂಲಗಳನ್ನು ಹಂಚಲಾಗುತ್ತದೆ, ಸದಸ್ಯರ ನಡತೆಯನ್ನು ನಿಯಂತ್ರಿಸಲಾಗುತ್ತದೆ, ಪಾತ್ರಗಳ ಸಮನ್ವಯವನ್ನು ನಡೆಸಲಾಗುತ್ತದೆ, ಮತ್ತು ಸರಕುಗಳು ಮತ್ತು ಸೇವೆಗಳನ್ನು ಹಂಚಲಾಗುತ್ತದೆ. ಶಿಕ್ಷಣದಲ್ಲಿ 'ರಾಜಕೀಯ'ವು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಏಕೆಂದರೆ ಅಧಿಕಾರ ಮತ್ತು ಪ್ರಭುತ್ವವು ಸಾರ್ವಜನಿಕ ಕಾರ್ಯಸೂಚಿಯನ್ನು, ಬಳಸಿಕೊಳ್ಳಬೇಕಾದ ಸಂಪನ್ಮೂಲಗಳನ್ನು ಮತ್ತು ಲಾಭದ ಹಂಚುವಿಕೆಯನ್ನು ನಿರ್ಧರಿಸುತ್ತದೆ. ಶಿಕ್ಷಣದ ಪರಿಣಾಮಗಳ ಮೇಲೆ ನೇರ ಪ್ರಭಾವ ಬೀರುವ ಅಂಶಗಳೆಂದರೆ ಅಧಿಕಾರದ ಹಂಚುವಿಕೆ ಮತ್ತು ನಿರ್ಧಾರ ಕೈಗೊಳ್ಳುವ ವ್ಯವಸ್ಥೆ. ಭಾರತದಲ್ಲಿ ರಾಜ್ಯ ಮತ್ತು ಸರಕಾರದ ಸಾಂಪ್ರದಾಯಿಕ ಪಾತ್ರದಲ್ಲಿ ಶಿಕ್ಷಣದಲ್ಲಿನ ರಾಜಕಾರಣದ ಪ್ರಭಾವದ ಬೇರುಗಳನ್ನು ಕಾಣಬಹುದಾಗಿದೆ. ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯ ಮುಖ್ಯ ಆಯಾಮಗಳೆಂದರೆ ರಾಜ್ಯದ ಶಾಸನ ಮತ್ತು ಸಾರ್ವಜನಿಕರಿಂದ ಪಡೆಯುವ ಹಣಕಾಸು.

ಶಿಕ್ಷಣದಲ್ಲಿ ರಾಜಕಾರಣದ ಪಾತ್ರದ ವಿಚಾರವಾಗಿ ಭಾರತದಲ್ಲಿ ಅಭಿಪ್ರಾಯಗಳು ಬದಲಾಗುತ್ತಿವೆ. ಸುಮಾರು ಐವತ್ತರ ದಶಕದಷ್ಟು ಹಿಂದೆಯೇ ಈ ಸಮಸ್ಯೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. 1957ರಲ್ಲಿ ನಡೆದ ಉಪಕುಲಪತಿಗಳ ಮೊದಲ ಅಧಿವೇಶನದಲ್ಲಿ, ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರ ನೇತೃತ್ವದಲ್ಲಿ ನಡೆದ ಗೋಷ್ಠಿಯಲ್ಲಿ ಭಾರತೀಯ ವಿಶ್ವವಿದ್ಯಾಲಯಗಳು ರಾಜಕಾರಣ ಮತ್ತು ರಾಜಕೀಯ ಒತ್ತಡಗಳ ಪ್ರಭಾವಕ್ಕೆ ಒಳಪಡುವುದರ ಕುರಿತು ಪರಿತಾಪವನ್ನು ವ್ಯಕ್ತಪಡಿಸಲಾಗಿದೆ. ಉನ್ನತ ಶಿಕ್ಷಣದಲ್ಲಿ

Digitised by Bharatavani, CIIL

ಸರಕಾರದ ಮಧ್ಯಪ್ರವೇಶವನ್ನು ಸಮರ್ಥಿಸಿಕೊಂಡವರೆಂದರೆ, ಭಾರತ ಸರಕಾರದ ಶಿಕ್ಷಣ ಕಾರ್ಯದರ್ಶಿ ಡಾ. ಸಾಯಿದ್ದೀನ್ ಮತ್ತು ಡಾ. ಕುಂಜು ಅವರು. ಹಾಗಿದ್ದರೂ, ಅಲಹಾಬಾದಿನ ಮಾಜಿ ಉಪಕುಲಪತಿಗಳಾದ ಬಿ.ಎನ್.ಝಾ ಅವರಂತಹವರು ಶಿಕ್ಷಣದಲ್ಲಿ ರಾಜಕಾರಣದ ಮಧ್ಯಪ್ರವೇಶವನ್ನು ತಡೆಯುವುದನ್ನು ತಪ್ಪಿಸುವುದು ಕಷ್ಟಕರ ಮಾತ್ರವಲ್ಲ, ಅದು ಅನಿವಾರ್ಯ ಮತ್ತು ಅಗತ್ಯದ್ದೆಂದು ಸಮರ್ಥಿಸಿಕೊಂಡಿದ್ದಾರೆ. ಅವರು ಹೇಳುವ ಪ್ರಕಾರ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ರಾಜಕೀಯ ಪಕ್ಷದವರಾಗಿರುತ್ತಾರೆ ಅಥವಾ ಕೆಲವು ರಾಜಕೀಯ ಸಿದ್ಧಾಂತಗಳ ಬೆಂಬಲಿಗರಾಗಿ ಇರುವುದರಿಂದ ವಿಶ್ವವಿದ್ಯಾಲಯಗಳು ರಾಜಕೀಯ ಪ್ರಭಾವದಿಂದ ದೂರವಿರುವುದು ಸಾಧ್ಯವಿಲ್ಲ. ವಿಶ್ವವಿದ್ಯಾಲಯದ ಆವರಣದಲ್ಲಿ ರಾಜಕಾರಣ ಮತ್ತು ಸಿದ್ಧಾಂತಗಳ ಇರುವಿಕೆಯು 'ಬದುಕಿನ ವಾಸ್ತವ'ವಾಗಿರುವುದರೊಂದಿಗೆ, ಅದು 'ಸಹಜ ಬೆಳವಣಿಗೆ' ಕೂಡ ಆಗಿರುವುದಾಗಿ ಜೆ.ಎಸ್. ಖನ್ನಾ ಪರಿಗಣಿಸುತ್ತಾರೆ(ಅಮ್ರಿಕ್ ಸಿಂಘ್ ಮತ್ತು ಶರ್ಮಾ, 1989). ಈ ನಿಟ್ಟಿನಲ್ಲಿ ಚರ್ಚೆ ಮುಂದುವರಿದಿದ್ದು ಶಿಕ್ಷಣದಲ್ಲಿ ರಾಜಕಾರಣದ ಮಧ್ಯಪ್ರವೇಶಿಕೆಯನ್ನು ಕನಿಷ್ಠವಾಗಿಸುವ ಮತ್ತು ಆ ವಿಧದ ಮಧ್ಯಪ್ರವೇಶದಿಂದ ಉಂಟಾಗುವ ಕೆಟ್ಟ ಪರಿಣಾಮಗಳನ್ನು ಕಿತ್ತೊಗೆಯುವ ಪ್ರಯತ್ನಗಳು ನಡೆಯುತ್ತಿವೆ. ಆಡಳಿತಕ್ಕೆ ಪರ್ಯಾಯ ಮಾದರಿಗಳನ್ನು ಪರಿಗಣಿಸುವ ಸಲುವಾಗಿ ಪ್ರೊಫೆಸರ್ ಜ್ಞಾನಮ್ ಅವರ ಅಧ್ಯಕ್ಷತೆಯಲ್ಲಿ 1990ರಲ್ಲಿ ಯುಜಿಸಿಯಿಂದ ರೂಪಿಸಲಾದ ಸಮಿತಿಯು ಶಿಫಾರಸು ಮಾಡಿದ್ದೇನೆಂದರೆ, ಮಂತ್ರಿಗಳು, ಸಂಸತ್ತಿನ ಸದಸ್ಯರು ಅಥವಾ ರಾಜಕೀಯ ಪಕ್ಷಗಳ ಪದಾಧಿಕಾರಿಗಳು ವಿಶ್ವವಿದ್ಯಾಲಯದ ವ್ಯವಸ್ಥೆಯಲ್ಲಿ ಸ್ಥಾನ ಪಡೆಯುವ ಅವಕಾಶವನ್ನು ನೀಡಬಾರದು ಮತ್ತು ರಾಜಕೀಯ ಪಕ್ಷಗಳು ತಮ್ಮ ಪಾಡಿಗೆ ತಾವು ಕೆಲಸಗಳನ್ನು ನಡೆಸಬೇಕು ಮತ್ತು ಸದಾಚಾರ ಸಂಹಿತೆಗೆ ಅಂಟಿಕೊಂಡಿರಬೇಕು. ಇದರಿಂದ ವಿದ್ಯಾರ್ಥಿಗಳು ರಾಜಕಾರಣದಿಂದ ದೂರ ಉಳಿಯುವಂತಾಗುತ್ತದೆ ಮತ್ತು ರಾಜಕಾರಣದಂತಹ ಬಾಹ್ಯ ಶಿಕ್ಷಣೇತರ ಶಕ್ತಿಗಳ ಪ್ರಭಾವಕ್ಕೆ ಒಳಗಾಗದೆ ತಮ್ಮಷ್ಟಕ್ಕೆ ತಮ್ಮ ಅಧ್ಯಯನ ಮತ್ತು ಸಂಶೋಧನೆಯನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಯುಜಿಸಿ ಸಮಿತಿಯ ಈ ಶಿಫಾರಸ್ಸನ್ನು ಕೇಂದ್ರ ಶಿಕ್ಷಣ ಸಲಹಾ ಸಮಿತಿಯು ಪ್ರೊಫೆಸರ್ ಸೊನೆರಿಯವರ ಅಧ್ಯಕ್ಷತೆಯಲ್ಲಿ ರೂಪಿಸಿರುವ ಉಪಸಮಿತಿಯು ಬೆಂಬಲಿಸಿದೆ ಮತ್ತು ಈ ವ್ಯವಸ್ಥೆಯನ್ನು ಮಾನವ ಸಂಪನ್ಮೂಲ ಇಲಾಖೆಯ ಮಂತ್ರಾಲಯ, ಯುಜಿಸಿ, ರಾಜ್ಯ ಸರಕಾರಗಳು ಮತ್ತು ವಿಶ್ವವಿದ್ಯಾಲಯಗಳು ಜಾರಿಗೆ ತರಬೇಕೆಂದು ಬಯಸಿದೆ. ಆದರೆ ಇದು ಇನ್ನೂ ಜಾರಿಗೆ ಬಂದಿಲ್ಲ.

### ಶೈಕ್ಷಣಿಕ ತೀರ್ಮಾನ ಕೈಗೊಳ್ಳುವಿಕೆ

ಪ್ರಜಾಸತ್ತೆಯ ಸಮಾಜಗಳಲ್ಲಿ ಶೈಕ್ಷಣಿಕ ತೀರ್ಮಾನಗಳಾದ– ಯಾರು ಕಲಿಸಬೇಕು, ಏನನ್ನು ಕಲಿಸಬೇಕು, ಯಾರಿಗೆ ಕಲಿಸಬೇಕು, ಯಾವ ರೀತಿಯಲ್ಲಿ ಶೈಕ್ಷಣಿಕ ಉದ್ದೇಶಗಳಿಗೆ ಹಣವನ್ನು ವಿನಿಯೋಗಿಸಬೇಕು ಮತ್ತು ಯಾರು ಶೈಕ್ಷಣಿಕ ಯೋಜನೆಗಳನ್ನು ಮತ್ತು ಕಾರ್ಯನೀತಿಗಳನ್ನು ರೂಪಿಸಬೇಕು ಇತ್ಯಾದಿಗಳನ್ನು ಶಿಕ್ಷಣತಜ್ಞರ ಅರಿವಿಗೆ ಬಿಟ್ಟರೆ ಉತ್ತಮ ಎಂಬ ಸಾಮಾನ್ಯ ನಂಬಿಕೆ ಇದೆ. ಆರ್ಥಿಕ ಕಾರ್ಯನೀತಿಯ ರೂಪಣೆಯು ಶೈಕ್ಷಣಿಕ ಕಾರ್ಯನೀತಿಯ ರೂಪಣೆಯ ನಂತರ ಬರಬೇಕು. ಇದು ಉತ್ತಮ ತರ್ಕವಾಗಿದ್ದು, ಇದರಲ್ಲಿ ಎರಡು ಅಭಿಪ್ರಾಯಗಳು ಇರುವುದು ಸಾಧ್ಯವಿಲ್ಲ. ಆದರೆ 'ರಾಜಕಾರಣ'ದ ಶಿಕ್ಷಣತಜ್ಞರು ಮತ್ತು ರಾಜಕಾರಣಿಗಳಾಗಿರುವ ಶಿಕ್ಷಣತಜ್ಞರ ಇರುವಿಕೆಯನ್ನು ಪರಿಗಣಿಸಿದಾಗ ಭೀತಿಯ ಪ್ರಮಾಣ ಅಗಾಧವಾಗಿರುತ್ತದೆ. ಏನೇ ಆದರೂ, ಸಾರ್ವಜನಿಕ ಬದುಕು ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಪರಿಗಣಿಸುವ ಅಗತ್ಯದ ಕುರಿತು ಮಾನ್ಯತೆ ಇರುವುದರಿಂದ ಶೈಕ್ಷಣಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಇದನ್ನು ನಿರ್ಲಕ್ಷಿಸುವ ಹಾಗಿಲ್ಲ. ಇದು ಭಾರತೀಯ ಶೈಕ್ಷಣಿಕ ಜಗತ್ತಿನಲ್ಲಿ ಪ್ರಮುಖ ಅಂಗೀಕಾರದ ಕ್ಷೇತ್ರವಾಗಿ ಪರಿಣಮಿಸಿದೆ. ತನ್ನ ಅಗಾಧ ಸಾಮಾಜಿಕ ಜವಾಬ್ದಾರಿಗಳನ್ನು ಹೊಂದಿರುವ ರಾಜ್ಯ, ಮೌಲ್ಯ ವ್ಯವಸ್ಥೆಗೆ ಆದ್ಯತೆ ನೀಡುವ ವ್ಯವಸ್ಥೆ, ಸ್ವಾತಂತ್ರ್ಯದ ಗೀಳನ್ನು ಹಚ್ಚಿಕೊಂಡು ಒಬ್ಬರು ಇನ್ನೊಬ್ಬರ ಆಸಕ್ತಿಗಳನ್ನು ತುಳಿದು ಹಾಕದಂತೆ ಜಾಗೃತಿ ವಹಿಸುತ್ತಿರುವ ಶಿಕ್ಷಣ ತಜ್ಞರು– ಇವೆಲ್ಲವುಗಳಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಇಲ್ಲಿ ಭಾರತದ ವಿಶ್ವವಿದ್ಯಾಲಯಗಳ ಉದಾಹರಣೆಯೊಂದಿಗೆ ವಿವರಿಸುವುದು ಹೆಚ್ಚು ಅರ್ಥಪೂರ್ಣವಾದೀತು. ಈ ವಿಶ್ವವಿದ್ಯಾಲಯಗಳು ಸ್ವ–ಆಡಳಿತವನ್ನು ಹೊಂದಿದ್ದು, ತಮಗೆ ಸರಿ ಎಂದು ಕಂಡುಬಂದ ನಿಯಮಗಳನ್ನು ರೂಪಿಸಲು ನ್ಯಾಯಬದ್ಧವಾಗಿ ಸ್ವತಂತ್ರವಾಗಿವೆ ಮತ್ತು ತಮ್ಮ ಸ್ವಂತದ ಆಂತರಿಕ ಬದುಕನ್ನು ನಿಯಂತ್ರಿಸಲು ಮತ್ತು ನಿರ್ದೇಶಿಸಲು ನಿರ್ದಿಷ್ಟ ಸ್ವಾಯತ್ತತೆಯನ್ನು ಪಡೆದಿವೆ. ಹಾಗಿದ್ದರೂ ಅವು ಸಂಪೂರ್ಣವಾಗಿ ಸ್ವ–ನಿಯಂತ್ರಿತವಾಗಿಲ್ಲ. ಅವು ತಮ್ಮ ಸ್ಥಾಪನೆ ಮತ್ತು ಅಸ್ತಿತ್ವಕ್ಕೆ ಸಾರ್ವಜನಿಕ ಶಾಸನವನ್ನು ಅವಲಂಬಿಸಿರುತ್ತವೆ. ಇಂದಿನ ದಿನಗಳಲ್ಲಿ ವಿಶ್ವವಿದ್ಯಾಲಯಗಳು ಹೆಚ್ಚು ಹೆಚ್ಚು ಸಾರ್ವಜನಿಕ ಹಣಕಾಸಿನ ಮೇಲೆ ಅವಲಂಬಿತವಾಗಿವೆ.

### ವಿದ್ಯಾರ್ಥಿಗಳು ಮತ್ತು ರಾಜಕಾರಣ

ಪ್ರಜಾಸತ್ತೆಯು ಭಾರತದಲ್ಲಿ ವಿದ್ಯಾರ್ಥಿ ಚಳವಳಿಗೆ ಅಭಿವ್ಯಕ್ತಿಯನ್ನು ನೀಡಲು ನೆರವನ್ನು ಒದಗಿಸಿದೆ. ಅದು ಸಾಮಾಜಿಕ ಕಾರ್ಯವಿಧಾನವೂ ಆಗಿದೆ. ರಾಜಕಾರಣದಲ್ಲಿ ವಿದ್ಯಾರ್ಥಿಗಳ ಪಾಲುಗೊಳ್ಳುವಿಕೆಯ ಉನ್ನತ ಪರಂಪರೆ ಭಾರತದಲ್ಲಿ ಇದೆ. 1920ರ ಅಸಹಕಾರ ಚಳವಳಿ, 1942ರ ಭಾರತ ಬಿಟ್ಟು ತೊಲಗಿ ಚಳವಳಿ, ಮತ್ತು ಗಾಂಧೀಜಿಯವರ ನೇತೃತ್ವದ ಸ್ವಾತಂತ್ರ್ಯ ಚಳವಳಿಯಲ್ಲಿ ಒಟ್ಟಾರೆ ವಿದ್ಯಾರ್ಥಿಗಳು ಗಮನಾರ್ಹ ಪಾತ್ರವನ್ನು ವಹಿಸಿದ್ದಾರೆ. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಒಂದಲ್ಲ ಒಂದು ರೀತಿಯಿಂದ ಕ್ರಿಯಾಶೀಲವಾಗಿ ಭಾಗವಹಿಸಿದ್ದಾರೆ. ಅವರು ಅನೇಕ ರಾಜಕೀಯ ಪಕ್ಷಗಳೊಂದಿಗೆ ಸಂಬಂಧವನ್ನು ಹೊಂದಿದ್ದಾರೆ. ಇದರ ಪರಿಣಾಮವಾಗಿ ವಿದ್ಯಾರ್ಥಿ ಚಳವಳಿಯ ಬಹುಪಾಲು ನಿಬಂಧನೆಗಳು ಮತ್ತು ಚಿಹ್ನೆಗಳು ಆ ಅನುಭವದ ಆಧಾರದಿಂದ ಪಾರಂಪರಿಕವಾಗಿ ಬಂದವುಗಳಾಗಿವೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಮುಸ್ಲಿಮ್ ಲೀಗ್ ಮತ್ತು ಕಮ್ಯೂನಿಸ್ಟ್ ಪಕ್ಷದಂತಹ ರಾಜಕೀಯ ಪಕ್ಷಗಳೊಂದಿಗೆ ವಿದ್ಯಾರ್ಥಿಗಳು ತಮ್ಮನ್ನು

Digitised by Bharatavani, CIIL

ಬಹಿರಂಗವಾಗಿ ಗುರುತಿಸಿಕೊಂಡಿದ್ದಾರೆ. ಇತ್ತೀಚಿಗೆ ವಿದ್ಯಾರ್ಥಿ ಚಳವಳಿಯ ಮೇಲಿನ ರಾಜಕೀಯ ಪಕ್ಷಗಳ ಮತ್ತು ರಾಜಕಾರಣಿಗಳ ಪ್ರಭಾವವು ಹಿಂದಿನ ಪರಂಪರೆಯ ಮುಂದುವರಿಕೆಯಾಗಿದ್ದು, ಅದನ್ನು ಬಲವಾಗಿ ಖಂಡಿಸುವ ಮತ್ತು ನೈತಿಕವಾಗಿ ವಿರೋಧಿಸುವ ಮನೋಭಾವವಿದ್ದರೂ ಅದು ಭಾರತೀಯ ಶಿಕ್ಷಣ ವ್ಯವಸ್ಥೆಯ ಬಹು ಮುಖ್ಯ ಅಂಶವಾಗಿದೆ. ಪ್ರತಿಯೊಂದು ರಾಜಕೀಯ ಪಕ್ಷಕ್ಕೆ ಅನಿವಾರ್ಯವಾಗಿ ತನ್ನ ಸ್ವಂತದ ವಿದ್ಯಾರ್ಥಿ ಬಣ ಅಥವಾ ಯುವ ಬಣ ಇದ್ದೇ ಇದೆ. ಮೊದಲ ಎರಡು ಸಂಸತ್ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ವಿದ್ಯಾರ್ಥಿಗಳಿಗೆ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವನ್ನು ನೀಡಿತ್ತು. ಆದರೆ ಆನಂತರ ದೇಶದ ರಾಜಕಾರಣದಲ್ಲಿ ವಿದ್ಯಾರ್ಥಿಗಳ ಕ್ರಿಯಾಶೀಲ ಭಾಗವಹಿಸುವಿಕೆಯನ್ನು ತಡೆಯುವ ಪ್ರಬಲ ಮನೋಭಾವ ಕಾಣಿಸಿತು.

ಇತ್ತೀಚಿಗಿನ ಪರಿಸ್ಥಿತಿ ಮತ್ತು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಲಭಿಸಿದ್ದ ಪರಿಸ್ಥಿತಿಯ ನಡುವಿನ ವ್ಯತ್ಯಾಸವೇನೆಂದರೆ, ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ವಿದ್ಯಾರ್ಥಿಗಳು ರಾಜಕಾರಣ ಮತ್ತು ರಾಜಕೀಯ ಪಕ್ಷಗಳಲ್ಲಿ ಕ್ರಿಯಾಶೀಲರಾಗಿದ್ದರು. ಕೆಲವೊಮ್ಮೆ ಅದು ಅವರ ಅಧ್ಯಯನ ಮತ್ತು ಶೈಕ್ಷಣಿಕ ವೃತ್ತಿಗಳಿಗೆ ಸಂಚಕಾರ ಒದಗಿಸುವ ಮಟ್ಟದಲ್ಲಿ ಇರುತ್ತಿತ್ತು. ಸ್ವಾತಂತ್ರ್ಯದ ನಂತರ ಶೈಕ್ಷಣಿಕ ಆವರಣದಲ್ಲಿ ಒಳ ನುಗ್ಗುವ ಪ್ರಯತ್ನವನ್ನು ನಡೆಸಿದವರು ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು. ವಿಶ್ವವಿದ್ಯಾಲಯಗಳು, ಮಹಾವಿದ್ಯಾಲಯಗಳು ಮತ್ತು ಇತರ ಕಲಿಕಾ ಸಂಸ್ಥೆಗಳು ಪಕ್ಷ ಬೆಂಬಲಿಗರ, ಪಕ್ಷ ಕಾರ್ಯಕರ್ತರ ಮತ್ತು ಪಕ್ಷ ಮುಖಂಡತ್ವದ ಉತ್ಪನ್ನ ಕ್ಷೇತ್ರಗಳಾಗಿವೆ. ಕಲಿಕಾ ಸಂಸ್ಥೆಗಳ ಶೀಘ್ರ ರೀತಿಯ ವಿಸ್ತರಣೆಯಿಂದಾಗಿ ವಿದ್ಯಾರ್ಥಿ ಶಕ್ತಿಯು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ. ಅದು ರಾಜಕೀಯ ಚೌಕಟ್ಟಿನ ಹೊಸ ವಾಸ್ತವತೆಯೂ ಆಗಿದೆ. ವಿದ್ಯಾರ್ಥಿ ಕ್ರಿಯಾವಾದ ಮತ್ತು ವಿದ್ಯಾರ್ಥಿ ಚಳವಳಿಗಳಿಗೆ ರಾಜಕಾರಣಿಗಳ ಮತ್ತು ರಾಜಕೀಯ ಪಕ್ಷಗಳ ಆಶ್ರಯ ದೊರೆತಿರುವುದರಿಂದ ಇವುಗಳು ವೇಗ, ಗೌರವ ಮತ್ತು ಬಲವನ್ನು ಪಡೆದಿವೆ.

ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿ ಚಳವಳಿಯು ಮೂಲತಃ ರಾಜಕೀಯ ಸ್ವರೂಪವನ್ನು ಹೊಂದಿದೆ. ವಿದ್ಯಾರ್ಥಿಗಳು ರಾಜಕೀಯವಾಗಿ ಅಸ್ಥಿರವಾಗಿರುವ ಮತ್ತು ಸಾಮರ್ಥ್ಯದಲ್ಲಿ ಅಪಾಯಕಾರಿಯಾಗಿರುವ ವಿಚಾರಗಳಲ್ಲಿ ಆಸಕ್ತಿ ತೋರಿ ಅನಿವಾರ್ಯತೆಯಿಂದ ಭಾಗವಹಿಸುತ್ತಿದ್ದಾರೆ. ಉದಾಹರಣೆಗೆ ಮೀಸಲಾತಿ ನೀತಿ, ನಿರುದ್ಯೋಗ ಸಮಸ್ಯೆ, ಭಾಷೆಯ ಪ್ರಶ್ನೆ, ಕೋಮುವಾದ ಇತ್ಯಾದಿ. ಕೆಲವು ಸಂದರ್ಭಗಳಲ್ಲಿ ತಮ್ಮ ರಾಜಕೀಯ ಚಳವಳಿಗಳಲ್ಲಿ ಅವರು ಯಶಸ್ಸನ್ನು ಕಂಡಿದ್ದಾರೆ. ಉದಾಹರಣೆಗೆ ಆಸ್ಸಾಮ್(1985), ಗುಜರಾತ್(1974) ಮತ್ತು ಬಿಹಾರ(1977) ದಲ್ಲಿ. ಅನೇಕ ಸಂದರ್ಭಗಳಲ್ಲಿ ವಿದ್ಯಾರ್ಥಿ ಚಳವಳಿಯು ತನ್ನನ್ನು ಪ್ರಮುಖ ರಾಜಕೀಯ ಪಾತ್ರಧಾರಿಯಾಗಿ ಕಾಣಿಸಿಕೊಂಡಿದೆ. ಇದು 1970ರ ದಶಕದಲ್ಲಿ ದೇಶ ಸಾಕ್ಷಿಯಾಗಿ ಕಂಡಂತಹ 'ವಿದ್ಯಾರ್ಥಿ ಶಕ್ತಿಯ ರಾಜಕಾರಣ'(ಆನಂದ ಕುಮಾರ್, 1989) ದಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ.

ಪ್ರಸ್ತುತ ಭಾರತೀಯ ಪ್ರಜಾಸತ್ತೆಯ ರಾಜಕಾರಣದಲ್ಲಿ ರಾಜಕೀಯ ಶಕ್ತಿಗಳು ಮತ್ತು ಶೈಕ್ಷಣಿಕ ಆವರಣಗಳಲ್ಲಿ ನಡೆಯುವ ಆಂತರಿಕ ವ್ಯವಹಾರವನ್ನು ನಿರ್ಲಕ್ಷಿಸುವ ಹಾಗಿಲ್ಲ. ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ತಮ್ಮ ಸ್ಥಾನಗಳನ್ನು ಮತ್ತು ಬೆಂಬಲವನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮತ್ತು ಭವಿಷ್ಯದ ಮುಖಂಡರನ್ನು ಬೆಳೆಸುವ ಉದ್ದೇಶದಿಂದ ವಿಶ್ವವಿದ್ಯಾಲಯದ ಆವರಣವನ್ನು ಬಳಸುವುದರಲ್ಲಿ ಹೆಚ್ಚು ಹೆಚ್ಚು ತೊಡಗಿಕೊಂಡಿದ್ದಾರೆ. ಈ ಅಭ್ಯಾಸದಿಂದಾಗಿ ವಿದ್ಯಾರ್ಥಿಗಳು ತಮ್ಮನ್ನು ರಾಜಕಾರಣದಲ್ಲಿ ತೊಡಗಿಸಿಕೊಳ್ಳುವುದಲ್ಲದೆ, ರಾಜಕೀಯ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಅಧ್ಯಾಪಕರು ಮತ್ತು ಇತರ ಉದ್ಯೋಗಿಗಳು ಕೂಡ ಇದರ ಕಡೆಗೆ ಸೆಳೆಯಲ್ಪಡುತ್ತಾರೆ. ಇಂತಹ ಶಿಕ್ಷಣ ಮತ್ತು ಕಲಿಕಾ ಜಾಗಗಳಲ್ಲಿ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ಪ್ರವೇಶ ಪಡೆಯುವುದನ್ನು ವಿರೋಧಿಸುವ ಬಹುತೇಕ ಟೀಕೆಗಳು ಕೋಮುಗಲಭೆ, ಜಾತಿ ಮತ್ತು ಪ್ರಾದೇಶಿಕ ವಿಚಾರಗಳ ಕುರಿತು ಹೆದರಿಕೆಯ ಕಾರಣದಿಂದ ಕಾಣಿಸಿಕೊಂಡಿರುವುದಾಗಿವೆ(ಇಕ್ಬಲ್ ನರೇನ್, 1986). ಪ್ರಬಲ ವಿದ್ಯಾರ್ಥಿ ಸಂಘಟನೆಗಳಾದ ಎಸ್‌ಎಫ್‌ಐ, ಎನ್‌ಎಸ್‌ಯುಐ, ಎಬಿವಿಪಿ ಇತ್ಯಾದಿಗಳು ರಾಜಕೀಯ ಪಕ್ಷಗಳೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿರುವ ವಿಚಾರವನ್ನು ಇಲ್ಲವೆನ್ನಲಾಗುವುದಿಲ್ಲ. ಈ ಸಂಬಂಧವನ್ನು ಯಾರಾದರೂ ಅತ್ಯಂತ ಅಪಾಯಕಾರಿ ಮತ್ತು ಸಾಮಾನ್ಯನೆಲೆಯಿಂದ ಸಮಾಜದ ಮತ್ತು ವೈಯಕ್ತಿಕ ನೆಲೆಯಿಂದ ವಿದ್ಯಾರ್ಥಿಗಳ ಗಂಭೀರ ಬೆಳವಣಿಗೆಯೆಂದು ಖಂಡಿಸುವುದಾದರೆ, ಇನ್ನು ಕೆಲವರು ಇದನ್ನು ಭಾರತೀಯ ರಾಜಕೀಯ ಪರಿಸ್ಥಿತಿಗೆ ಇದು ಸಹಜವಾದುದು ಮತ್ತು ಸಹಾಯಕವಾದುದು ಎಂದು ತಿಳಿಯುತ್ತಾರೆ.

**ಉಪಸಂಹಾರ:** ಶಿಕ್ಷಣವನ್ನು ಸಾಮಾಜಿಕ ಹಕ್ಕು ಎಂದು ಪರಿಗಣಿಸುವ ಬೇಡಿಕೆ ಮತ್ತು ಸಾರ್ವಜನಿಕ ಕಾರ್ಯನೀತಿಯ ಮೇಲೆ ಪ್ರಜಾಸತ್ತೆಯ ರಾಜಕಾರಣದ ಸೀಮಿತ ಸಂಪನ್ಮೂಲಗಳ ಮತ್ತು ಪ್ರಭಾವದಿಂದಾಗಿ ರಾಜಕೀಯ ಮತ್ತು ಶೈಕ್ಷಣಿಕ ವ್ಯವಸ್ಥೆಗಳ ನಡುವೆ ಪರಸ್ಪರ ಪ್ರತಿಕ್ರಿಯಾತ್ಮಕ ಅಂಶಗಳು ಹೆಚ್ಚುತ್ತಾ ಹೋಗಿವೆ. ಶಿಕ್ಷಣದ ಮೇಲೆ ಯಾವುದೇ ವಿಧದ ನಿಯಂತ್ರಣವನ್ನು ಸಾರ್ವಜನಿಕ ಹಿತಾಸಕ್ತಿಯ ತತ್ವವನ್ನು ಆಧರಿಸಿ ಬೆಂಬಲಿಸಲಾಗುತ್ತದೆ. ಆದರೆ ಅದನ್ನು ಬಹಳ ಮಂದಿ ರಚನೆಗಳ(ವಿಶ್ವವಿದ್ಯಾಲಯಗಳ ರೀತಿಯವು) ಸ್ವಾಯತ್ತತೆಯನ್ನು ಬುಡಮೇಲು ಮಾಡುವ ಪ್ರಕ್ರಿಯೆಯಾಗಿ ಮತ್ತು ರಾಜಕೀಯವಾಗಿಸುವ ಪ್ರಯತ್ನಗಳಾಗಿ ಕಾಣುತ್ತಾರೆ. ರಾಜ್ಯದ 'ಸಾರ್ವಜನಿಕ ಹಿತಾಸಕ್ತಿ'ಯ ಸಮ್ಮತಿಯು ಅದಕ್ಕೆ ಪ್ರಬಲ ಅಧಿಕೃತ ಆಸಕ್ತಿಯ ಅಧಿಕಾರವನ್ನು ಪಡೆಯುವಂತೆ ಮಾಡಿದೆ. ಇದು ಶಿಕ್ಷಣ ವ್ಯವಸ್ಥೆಯನ್ನು ರಾಜಕೀಯವಾಗಿಸುವುದಕ್ಕೆ ದಾರಿ ಮಾಡಿಕೊಡುತ್ತದೆ.

ಯಾವುದೇ ಸಾಮಾಜಿಕ ವ್ಯವಸ್ಥೆಯ ಪರಿಣಾಮಕಾರತ್ವವು ಮೂಲಭೂತವಾಗಿ ದೇಶಕ್ಕಾಗಿ ನಿರ್ಣಯಾತ್ಮಕ ತೀರ್ಮಾನಗಳನ್ನು

Digitised by Bharatavani, CIIL

ತೆಗೆದುಕೊಳ್ಳುವ ಎಲ್ಲ ಜನರ ಚಾರಿತ್ರ್ಯ, ಪ್ರಚೋದನೆ, ನೈತಿಕ ಮಟ್ಟಗಳು ಮತ್ತು ಮನಃಸ್ಥಿತಿಯಿಂದ ನಿರ್ಧರಿಸಲ್ಪಡುತ್ತದೆ. ಪ್ರಜಾರಾಜ್ಯಪದ್ಧತಿಯ ಗುಣಮಟ್ಟವು ಅದರ ಮುಖಂಡತ್ವದ ಗುಣಮಟ್ಟವನ್ನು ಆಧರಿಸಿ ಇರುತ್ತದೆ. ದೇಶಕ್ಕೆ ನಿಖರ ಪ್ರಜ್ಞೆಯ ನಿರ್ದೇಶನ ಮತ್ತು ಉದ್ದೇಶ ಮತ್ತು ಬದ್ಧತೆಯ ಮುಖಂಡತ್ವದ ಅಗತ್ಯವಿದೆ. ಮುಂಬರುವ ಸವಾಲುಗಳನ್ನು ಎದುರಿಸಲು ಉತ್ತಮ ರೀತಿಯಿಂದ ಸಿದ್ಧತೆಯನ್ನು ಮಾಡಿಕೊಂಡಿರುವ ಮುಖಂಡರನ್ನು ಸಿದ್ಧಗೊಳಿಸುವುದರಲ್ಲಿ ಶಿಕ್ಷಣಕ್ಕೆ ಪ್ರಧಾನ ಪಾತ್ರವಿದೆ. ಶಿಕ್ಷಣವು ರಾಷ್ಟ್ರೀಯವಾಗಿ ಮಾತ್ರವಲ್ಲ ರಾಷ್ಟ್ರ ನಿರ್ಮಾಣಕಾರಿಯಾಗಿಯೂ ಇರಬೇಕೆಂದು ಸ್ವಾಮಿ ವಿವೇಕಾನಂದರು ಒತ್ತಿ ಹೇಳಿದ್ದಾರೆ: 'ಬದುಕಿನ ನಿರ್ಮಾಣ, ಚಾರಿತ್ರ್ಯದ ರೂಪಣೆ, ಸಮಗ್ರ ಮತ್ತು ಉತ್ತಮಾಂಶಗಳ ಆಯ್ಕೆ.' ಹೀಗೆ ಶಿಕ್ಷಣವು ರಾಜ್ಯ ನಿರ್ಮಾಣ, ದೇಶ ನಿರ್ಮಾಣ ಮತ್ತು ದೇಶದಲ್ಲಿ ಬದುಕುತ್ತಿರುವ ಜನರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿಯ ಪ್ರಯತ್ನದಲ್ಲಿ ಶಿಕ್ಷಣ ವ್ಯವಸ್ಥೆಯು ಪ್ರಮುಖ ಸ್ಥಾನವನ್ನು ಹೊಂದಿರುತ್ತದೆ.

ಇಂದು ಭಾರತದಲ್ಲಿ ಶಿಕ್ಷಣಕ್ಕೆ ಎರಡು ಮುಖ್ಯ ಕಾರ್ಯ ತಂತ್ರಗಳ ಅಗತ್ಯವಿದೆ– ಕಲಿಕೆಯ ಸುಧಾರಣೆ ಮತ್ತು ಆಡಳಿತದ ಸುಧಾರಣೆ. ಈ ಎರಡು ಕಾರ್ಯ ತಂತ್ರಗಳಲ್ಲಿ ರಾಜಕಾರಣವು ಗಂಭೀರ ಘಟಕವಾಗಿರುತ್ತದೆ. ಕಲಿಕೆಯ ಸುಧಾರಣೆಯನ್ನು ವೃತ್ತಿಪರರಿಗೆ, ಅಂದರೆ ಶಿಕ್ಷಣತಜ್ಞರು ಮತ್ತು ಪರಿಣತರಿಗೆ ಬಿಟ್ಟುಕೊಡುವುದು ಉತ್ತಮ. ಆದರೆ ಇದು ರಾಜಕಾರಣದ ಮಧ್ಯ ಪ್ರವೇಶದಿಂದ ತಪ್ಪಿಸಿಕೊಳ್ಳುವ ಹಾಗಿಲ್ಲ. ಏಕೆಂದರೆ, ಆಡಳಿತದ ಸುಧಾರಣೆಯ ತೊಡಕುಗಳು ರಾಜಕೀಯವಾಗಿ ಜಟಿಲವಾಗಿರುತ್ತವೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಇತ್ಯಾದಿಗಳು ಶೈಕ್ಷಣಿಕ ಸಂಸ್ಥೆಗಳ ಕಾರ್ಯನಿರ್ವಾಹಕರಾಗಿ ಮಾತ್ರ ಇರುವುದಿಲ್ಲ. ಆದರೆ ಈ ಸಂಸ್ಥೆಗಳ ಮೂಲಕ ತಮ್ಮ ಸ್ವಂತ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿರುತ್ತಾರೆ.

ಇವತ್ತಿನ ದಿನಗಳಲ್ಲಿ ಭಾರತದಲ್ಲಿ ಜಾಗತೀಕರಣದ ಶಕ್ತಿಗಳು ಮತ್ತು ಸ್ಥಳೀಯ ಸಾಂಸ್ಕೃತಿಕ ಅನನ್ಯತೆಯ ನಡುವೆ ಬಹು ದೊಡ್ಡ ಪ್ರತಿಷೇಧವಿದೆ. ಈ ವಿರುದ್ಧ ಶಕ್ತಿಗಳ ನಡುವಿನ ಅಂತರವನ್ನು ತುಂಬಿಕೊಳ್ಳಬೇಕಾಗಿದೆ ಮತ್ತು ಕೆಲವು ಪ್ರಮಾಣದ ಸಾಮರಸ್ಯವನ್ನು ಸಾಧಿಸಬೇಕಾಗಿದೆ. ಸಾಮರಸ್ಯವನ್ನು ನಡೆಸುವ ಈ ಪ್ರಕ್ರಿಯೆಯಲ್ಲಿ ರಾಜಕೀಯ ವ್ಯವಸ್ಥೆ, ರಾಜಕಾರಣಿಗಳು, ರಾಜಕೀಯ ಪಕ್ಷಗಳು, ಸಾಮಾನ್ಯ ನೆಲೆಯಲ್ಲಿ ರಾಜಕೀಯ ಮತು ಶೈಕ್ಷಣಿಕ ವ್ಯವಸ್ಥೆಗಳಿಗೆ ಕಾರ್ಯನಿರ್ವಹಿಸುವುದರಲ್ಲಿ ಮುಖ್ಯ ಪಾತ್ರವಿದೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

**ಮೂಲ: ವೈ. ರಫೀಕ್ ಅಹಮದ್**
**ಅನು: ಡಾ. ಗೀತಾ ಶೆಣೈ**

## ರಾಷ್ಟ್ರೀಯ ಗ್ರಂಥಾಲಯ

ರಾಷ್ಟ್ರೀಯ ಗ್ರಂಥಾಲಯದ (ನ್ಯಾಶನಲ್ ಲೈಬ್ರರಿ) ಮುಖ್ಯ ದ್ವಾರದಲ್ಲಿ ಮಹಾತ್ಮಾ ಗಾಂಧೀಜಿಯವರ ಆಖ್ಯಾನವಾಗಿರುವ ಈ ಉಲ್ಲೇಖವಿದೆ: 'ನನ್ನ ಮನೆಗೆ ನಾಲ್ಕೂ ದಿಕ್ಕಿನಿಂದ ಗೋಡೆಗಳನ್ನು ಹೊದಿಸುವುದು ಮತ್ತು ನನ್ನ ಕಿಟಕಿಗಳು ಮುಚ್ಚಿಕೊಂಡಿರುವುದು ನನಗೆ ಬೇಕಾಗಿಲ್ಲ. ನನ್ನ ಮನೆಗೆ ಎಲ್ಲೆಡೆಗಳ ಸಂಸ್ಕೃತಿಗಳು ಸಾಧ್ಯವಾದಷ್ಟು ಮುಕ್ತರೀತಿಯಲ್ಲಿ ಪ್ರವೇಶ ಪಡೆಯಬೇಕೆನ್ನುವುದು ನನ್ನ ಆಶಯ. ಆದರೆ ನನ್ನ ಕಾಲುಗಳು ಮಾತ್ರ ಯಾವುದರಿಂದಲೂ ಸ್ಥಿರತೆ ಕಳೆದುಕೊಳ್ಳುವುದನ್ನು ನಾನು ನಿರಾಕರಿಸುತ್ತೇನೆ.' ಇದು ಭಾರತೀಯ ವಿದ್ವತ್ತಿನ ಒಟ್ಟು ಲಕ್ಷಣವನ್ನು ತಿಳಿಸುವಂತಿದ್ದರೆ, ಇದು ರಾಷ್ಟ್ರಪಿತ ಕನಸು ಕಂಡಂತಹ ರಾಷ್ಟ್ರೀಯ ಗ್ರಂಥಾಲಯದ ಸ್ವರೂಪವನ್ನು ವಿಶಿಷ್ಟ ರೀತಿಯಿಂದ ಅಭಿವ್ಯಕ್ತಿಸುತ್ತದೆ. ಭಾರತವು ಸ್ಥಾಪಕ ಪಿತಾಮಹರ ಕನಸುಗಳನ್ನು ನನಸು ಮಾಡಿರುವುದೇ ಎಂದು ಹೇಳುವುದು ಕಷ್ಟ.

**ಇತಿಹಾಸ:** ರಾಷ್ಟ್ರೀಯ ಗ್ರಂಥಾಲಯವು ಕಲ್ಕತ್ತಾದ ಸಾರ್ವಜನಿಕ ಗ್ರಂಥಾಲಯವನ್ನು(ಸಿಪಿಎಲ್) ತನ್ನ ಪೂರ್ವರೂಪವನ್ನಾಗಿ ಪರಿಗಣಿಸುತ್ತದೆ. ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಕಲ್ಕತ್ತಾದ ಉನ್ನತ ವರ್ಗದ ಭಾರತೀಯರು ಮತ್ತು ಬ್ರಿಟಿಷ್ ಪ್ರಜೆಗಳ ಅಗತ್ಯ ಬೆಂಬಲದೊಂದಿಗೆ 'ಇಂಗ್ಲಿಷ್‌ಮನ್' ಪತ್ರಿಕೆಯ ಸಂಪಾದಕರಾದ ಜೆ.ಹೆಚ್. ಸ್ಟೊಕ್ವೆಲರ್ ಅವರ ಹುಮ್ಮಸ್ಸಿನಿಂದ ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯ ಅಸ್ತಿತ್ವಕ್ಕೆ ಬಂತು. ಭಾರತೀಯ ಮತ್ತು ಯುರೋಪಿಯನ್ ಈ ಎರಡೂ ಸಮುದಾಯಗಳನ್ನು ಪ್ರತಿನಿಧಿಸುವ ಪ್ರಜೆಗಳು ಮತ್ತು ವಿದ್ವಾಂಸರನ್ನು ಒಳಗೊಂಡಂತಹ ಪ್ರಾಂತೀಯ ಸಮಿತಿಯು ಸಾರ್ವಜನಿಕ ಗ್ರಂಥಾಲಯದ ಧ್ಯೇಯಗಳನ್ನು ರೂಪಿಸಿತು. ಕವಿ ರವೀಂದ್ರನಾಥ ಠಾಕೂರರ ಪಿತಾಮಹರಾದ ಸುಪ್ರಸಿದ್ಧ ರಾಜಕುಮಾರ ದ್ವಾರಕನಾಥ ಠಾಕೂರರು ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯದ ಮೊದಲ ಯಜಮಾನರಾಗಿದ್ದರು. ಅವರು ಈ ಗ್ರಂಥಾಲಯವನ್ನು ನಡೆಸಿದ ಸ್ಮಾರಕವಾಗಿ ರಾಷ್ಟ್ರೀಯ ಗ್ರಂಥಾಲಯದ ಮುಖದ್ವಾರದಲ್ಲಿ ಅವರ ಎದೆಮಟ್ಟದ ಅಮೃತಶಿಲೆಯ ಪ್ರತಿಮೆ ಈಗಲೂ ಇದೆ. ಸಿಪಿಎಲ್‌ನ ಸಂಗ್ರಹ, ಆಗಿನ ಇಂಪೀರಿಯಲ್ ಗ್ರಂಥಾಲಯ, ಸೆಕ್ರೆಟರೇಟಿನ ಗ್ರಂಥಾಲಯದ ಒಂದು ಭಾಗ ಮತ್ತು ಫೋರ್ಟ್ ವಿಲಿಯಮ್ ಕಾಲೇಜ್ ಗ್ರಂಥಾಲಯ ಒಟ್ಟು ಸೇರಿ ಇಂಪೀರಿಯಲ್ ಗ್ರಂಥಾಲಯದ ಸಂಗ್ರಹವಾಗಿರುತ್ತದೆ. 1903ರಲ್ಲಿ ಲಾರ್ಡ್ ಕರ್ಜನ್ ಅವರಿಂದ ಈ ಇಂಪೀರಿಯಲ್ ಗ್ರಂಥಾಲಯ ಪ್ರಾರಂಭವಾಯಿತು. ಈ ಗ್ರಂಥಾಲಯ ಪ್ರಾರಂಭವಾದಾಗಿನಿಂದ ಇದರ ಮುಖ್ಯಸ್ಥಾನವನ್ನು ಪ್ರಸಿದ್ಧ ಗ್ರಂಥಪಾಲಕರು ಮತ್ತು ವಿದ್ವಾಂಸರು ಅಲಂಕರಿಸಿದ್ದಾರೆ. ಮೊದಲ ಗ್ರಂಥಪಾಲಕರಾಗಿದ್ದವರು ಜಾನ್ ಮ್ಯಾಕ್‌ಫರಲೇನ್. ಅಂದಿನ ಪ್ರಮುಖ ಗ್ರಂಥಪಾಲಕರೆಂದರೆ ಪ್ರಸಿದ್ಧ ವಿದ್ವಾಂಸರೂ ಮತ್ತು ಭಾಷಾತಜ್ಞರೂ ಆಗಿದ್ದ ಪ್ರೊಫೆಸರ್ ಹರಿನಾಥ ಡೆ, ಜೆ.ಎ. ಚಾಪ್‌ಮನ್

Digitised by Bharatavani, CIIL

ಮತ್ತು ಖಾನ್ ಬಹಾದೂರ್ ಕೆ.ಎಮ್. ಅಸ್ಸದುಲ್ಲಾ ಮೊದಲಾದವರು. ಇಂಪೀರಿಯಲ್ ಗ್ರಂಥಾಲಯದ ಅಧಿನಿಯಮ 1902ರಲ್ಲಿ ಗ್ರಂಥಾಲಯದ ಧ್ಯೇಯವನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ, 'ಇದು ಪರಾಮರ್ಶನೆಯ ಗ್ರಂಥಾಲಯವಾಗಿರಬೇಕೆಂದು ಬಯಸಲಾಗಿದೆ. ಇದು ವಿದ್ಯಾರ್ಥಿಗಳು ಕಾರ್ಯನಿರ್ವಹಿಸುವ ಜಾಗ ಮತ್ತು ಭಾರತದ ಭವಿಷ್ಯದ ಇತಿಹಾಸಕಾರರಿಗೆ ಮಾಹಿತಿಯ ಉಗ್ರಾಣವಾಗಿರುವುದು. ಸಾಧ್ಯವಾದಷ್ಟು ಇದರಲ್ಲಿ ಭಾರತದ ಕುರಿತು ಯಾವುದೇ ಕಾಲದಲ್ಲಿ ಬರೆದಿರುವ ಪ್ರತಿಯೊಂದು ಗ್ರಂಥರಚನೆಗಳು ಕಾಣಲು ಮತ್ತು ಓದಿಕೊಳ್ಳಲು ಲಭ್ಯವಿರುವಂತೆ ಮಾಡಲಾಗುವುದು.'

**ಸ್ವಾತಂತ್ರ್ಯದ ನಂತರ ರಾಷ್ಟ್ರೀಯ ಗ್ರಂಥಾಲಯ**: 1948ರಲ್ಲಿ ಭಾರತದ ಸಂಸತ್ತಿನ ಇಂಪೀರಿಯಲ್ ಲೈಬ್ರರಿ ಅಧಿನಿಯಮ(ಹೆಸರು ಬದಲಾವಣೆಯ ಅಧಿನಿಯಮ) ಸ್ವೀಕೃತವಾದ ಬಳಿಕ ರಾಷ್ಟ್ರೀಯ ಗ್ರಂಥಾಲಯ ಅಸ್ತಿತ್ವಕ್ಕೆ ಬಂತು. ಭಾರತದ ಸಂವಿಧಾನದ ಏಳನೆಯ ಅನುಸೂಚಿಯ ಕೇಂದ್ರಪಟ್ಟಿಯ 62ನೇ ಅನುಚ್ಛೇದದಲ್ಲಿ ರಾಷ್ಟ್ರೀಯ ಗ್ರಂಥಾಲಯವನ್ನು ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಸಂಸ್ಥೆಯಾಗಿ ಘೋಷಿಸಲಾಯಿತು. ಈ ಗೌರವ ಪಡೆದ ಏಕಮಾತ್ರ ಗ್ರಂಥಾಲಯ ಇದಾಗಿದೆ. ಸ್ವಾತಂತ್ರ್ಯ ದೊರೆತ ಬಳಿಕ ಬೆಲ್ವೆಡೆರೆಯ ಬಹು ಸುಂದರವಾದ ವೈಸರೆಗಲ್ ವಸತಿಗೃಹದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸ್ಥಾಪನೆಗೊಳ್ಳಲು, ವಿದ್ವಾಂಸರೂ ಮತ್ತು ಪ್ರಸಿದ್ಧ ವ್ಯಕ್ತಿತ್ವದವರೂ ಆಗಿದ್ದ ರಾಜಗೋಪಾಲಾಚಾರಿ, ಜವಾಹರಲಾಲ್ ನೆಹರೂ, ಅಬ್ದುಲ್ ಕಲಮ್ ಅಜಾದ್ ಮತ್ತು ಹುಮಾಯುನ್ ಕಬೀರ್ ಅವರಂತಹವರು ನೆರವನ್ನು ನೀಡಿದ್ದರಲ್ಲದೆ, ಮೊದಲ ರಾಷ್ಟ್ರೀಯ ಗ್ರಂಥಪಾಲಕರಾದ ಬಿ.ಎಸ್. ಕೇಶವನ್ ಅವರು ತಮ್ಮ ಸಮರ್ಥ ಮಾರ್ಗದರ್ಶನದಲ್ಲಿ ಅದು ಆಡಳಿತಾತ್ಮಕವಾಗಿ ಮತ್ತು ವೃತ್ತಿಪರವಾಗಿ ರಾಷ್ಟ್ರೀಯ ಗ್ರಂಥಾಲಯವಾಗಿ ಮೂಡಿಬರುವಂತೆಯೂ ಸಹಾಯ ಮಾಡಿದ್ದಾರೆ.

ಶ್ರೇಷ್ಠ ವಿದ್ವಾಂಸರು ಮತ್ತು ಆಡಳಿತಗಾರರ ಉತ್ತಮ ಉದ್ದೇಶಗಳ ಹೊರತಾಗಿಯೂ ಸ್ವಾತಂತ್ರ್ಯದ ನಂತರದ ಕಾಲದಲ್ಲಿ ರಾಷ್ಟ್ರೀಯ ಗ್ರಂಥಾಲಯದ ಧ್ಯೇಯಗಳನ್ನು ಮತ್ತು ಜವಾಬ್ದಾರಿಗಳನ್ನು ಉತ್ತಮ ರೀತಿಯಿಂದ ವ್ಯಾಖ್ಯಾನಿಸಲಾಗಿಲ್ಲ. ರಾಷ್ಟ್ರೀಯ ಗ್ರಂಥಾಲಯದ ಧ್ಯೇಯಗಳು, ಜವಾಬ್ದಾರಿಗಳು, ವಿಶೇಷ ಸವಲತ್ತುಗಳು ಮತ್ತು ಪಾತ್ರವು ಅನೇಕ ವಿಧದಲ್ಲಿ ಇರುತ್ತದೆ. ಆದುದರಿಂದ ಅಗತ್ಯವಿರುವ ನಿರ್ದೇಶನವನ್ನು ನೀಡುವುದಕ್ಕಾಗಿ ಅದರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಸರಕಾರ ರೂಪಿಸಿದ ಅನೇಕ ಸಮಿತಿಗಳಿದ್ದವು. ಇದರಲ್ಲಿ ಬಹು ಮುಖ್ಯವಾದುದು 1968ರಲ್ಲಿ ಶಿಕ್ಷಣ ಮಂತ್ರಾಲಯ ನೇಮಕಗೊಳಿಸಿದ ಪರಿಶೀಲನಾ ಸಮಿತಿಯಾಗಿದೆ. ಈ ಸಮಿತಿಯನ್ನು 'ಕಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯದ ಕಾರ್ಯದ ಪರಿಶೀಲನೆಗೆ ಮತ್ತು ಅದರ ಪರಿಣಾಮಕಾರಿ ಕಾರ್ಯನಿರ್ವಹಣೆ ಮತ್ತು ಭವಿಷ್ಯದ ಬೆಳವಣಿಗೆಗೆ ಸೂಕ್ತ ಕ್ರಮ ಸೂಚಿಸುವುದಕ್ಕಾಗಿ ನೇಮಕಗೊಳಿಸಲಾಯಿತು. ಸಮಿತಿ ತನ್ನ ವರದಿಯನ್ನು 14 ಜುಲೈ, 1969ರಲ್ಲಿ ಸಲ್ಲಿಸಿತು. ಸಮಿತಿಯ ವರದಿಯಲ್ಲಿ ಸೂಚಿಸಲಾದ ಈ ಕೆಳಗಿನ ಶಿಫಾರಸುಗಳು ಇವತ್ತಿಗೂ ರಾಷ್ಟ್ರೀಯ ಗ್ರಂಥಾಲಯದ ಚಟುವಟಿಕೆಗಳ ಮೂಲ ಲಕ್ಷಣಗಳಾಗಿ ಉಳಿದು ಬಂದಿವೆ:

1. ಅಲ್ಪಕಾಲಿಕಗಳನ್ನು ಹೊರತುಪಡಿಸಿ, ದೇಶದಲ್ಲಿ ಉತ್ಪಾದಿಸಲಾದ ಎಲ್ಲಾ ಪ್ರಮುಖ ಮುದ್ರಿತ ಮಾಹಿತಿಗಳ

   ಸಂಗ್ರಹ ಮತ್ತು ಸಂರಕ್ಷಣೆ;
2. ದೇಶಕ್ಕೆ ಸಂಬಂಧಿಸಿದ ಮುದ್ರಿತ ಮಾಹಿತಿಯ ಸಂಗ್ರಹ. ಅದು ಎಲ್ಲಿಯೇ ಪ್ರಕಟವಾಗಿರಲಿ, ದೇಶದಲ್ಲಿ ಅದು ಲಭ್ಯವಿಲ್ಲದಿದ್ದರೂ ಅಂತಹ ಮುದ್ರಿತ ಮಾಹಿತಿಯ ಛಾಯಾಚಿತ್ರ ದಾಖಲೆಯ ಸಂಗ್ರಹ ಮಾಡುವುದು;
3. ರಾಷ್ಟ್ರೀಯ ಪ್ರಾಮುಖ್ಯತೆ ಇರುವ ಹಸ್ತಪ್ರತಿಗಳ ಸಂಗ್ರಹಕಾರ್ಯ ಮತ್ತು ಅದರ ಸಂರಕ್ಷಣೆ;
4. ದೇಶಕ್ಕೆ ಅಗತ್ಯವಿರುವ ವಿದೇಶಿ ಮಾಹಿತಿಗಳ ಯೋಜಿತ ಸಂಗ್ರಹ ಕಾರ್ಯ;
5. ಸಾಮಾನ್ಯ ಮತ್ತು ವಿಶೇಷ ರೀತಿಯದ್ದಾಗಿರುವ ಪೂರ್ವಾನ್ವಯವುಳ್ಳ ಮಾಹಿತಿಯ ಗ್ರಂಥಸೂಚಿ ಮತ್ತು

   ದಾಖಲೀಕರಣದ ಸೇವೆಗಳ ಒದಗಿಸುವಿಕೆ;
6. ಗ್ರಂಥಸೂಚಿ ಚಟುವಟಿಕೆಗಳ ಎಲ್ಲಾ ಮೂಲಗಳ ಸಮಗ್ರ ಮತ್ತು ನಿಖರ ಜ್ಞಾನವನ್ನು ಸರಬರಾಜು ಮಾಡುವ ಪರಾಮರ್ಶನ ಕೇಂದ್ರವಾಗಿ ಕಾರ್ಯನಿರ್ವಹಿಸುವುದು;
7. ಛಾಯಾನಕಲು ಮತ್ತು ಪ್ರತಿ ಮಾಡುವ ಸೇವೆಗಳನ್ನು ಒದಗಿಸುವುದು; ಮತ್ತು
8. ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಮತ್ತು ಅಂತಾರಾಷ್ಟ್ರೀಯ ಎರವಲು ಕೇಂದ್ರವಾಗಿ ಕಾರ್ಯನಿರ್ವಹಿಸುವುದು.

ಈ ಶಿಫಾರಸುಗಳನ್ನು ಸರಕಾರ ಯುಕ್ತರೀತಿಯಿಂದ ಸ್ವೀಕರಿಸಿತು. ಇದೇ ಸಮಿತಿಯ ಶಿಫಾರಸುಗಳನ್ನು ಆಧರಿಸಿ, 11 ಜೂನ್, 1976ರಂದು ದಿ ನ್ಯಾಶನಲ್ ಲೈಬ್ರರಿ ಆಫ್ ಇಂಡಿಯಾ ಅಧಿನಿಯಮ 1976ನ್ನು ಅಂಗೀಕರಿಸಲಾಯಿತು. ಈ ಅಧಿನಿಯಮದ ಪ್ರಕಾರ, ರಾಷ್ಟ್ರೀಯ ಗ್ರಂಥಾಲಯ ಮಂಡಳಿಯವರು ಗ್ರಂಥಾಲಯವನ್ನು ಸ್ವಾಯತ್ತ ಸಂಸ್ಥೆಯಾಗಿ ನಡೆಸಿಕೊಳ್ಳಬೇಕು. ಆದರೆ ಅನೇಕ ಕಾರಣಗಳಿಂದಾಗಿ ಈ ಅಧಿನಿಯಮ ಜಾರಿಗೆ ಬರಲಿಲ್ಲ. ಆದುದರಿಂದ ಸದ್ಯ ಗ್ರಂಥಾಲಯವು ಪರಿಶೀಲನಾ ಸಮಿತಿ ರೂಪಿಸಿದ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತಿದೆ. ಗ್ರಂಥಾಲಯವು ಯಾವ ವಿಧದ ವಸ್ತುಗಳನ್ನು (ಮಾಹಿತಿ) ಸಂಗ್ರಹಿಸಬೇಕು ಎನ್ನುವ ಕುರಿತು ಕೂಡ ಪರಿಶೀಲನಾ ಸಮಿತಿ ಶಿಫಾರಸು ಮಾಡಿದೆ. ಅದು ಹೀಗಿದೆ:

1. ಭಾರತದ ಕುರಿತಾದ ಗ್ರಂಥಗಳು ಮತ್ತು ಪತ್ರಿಕೆಗಳು. ಇವು ಯಾವುದೇ ಭಾಷೆಯದ್ದಾಗಿರಬಹುದು,

   ಜಗತ್ತಿನ ಯಾವುದೇ ಭಾಗದಲ್ಲಿ ಪ್ರಕಟವಾಗಿರಬಹುದು;

Digitised by Bharatavani, CIIL

2. ಗ್ರಂಥಾಲಯದಲ್ಲಿ ಲಭ್ಯವಿಲ್ಲದ 1954ಕ್ಕಿಂತ ಮೊದಲು ಮುದ್ರಣವಾದ ಭಾರತೀಯ ಪ್ರಕಟಣೆಗಳು.

3. ವಿದೇಶದಲ್ಲಿ ಪ್ರಕಾಶನ ಹೊಂದಿದ ಭಾರತೀಯ ಲೇಖಕರ ಕೃತಿಗಳು;

4. ಗುಣಮಟ್ಟದ ಪರಾಮರ್ಶನ ಗ್ರಂಥಗಳು;

5. ಗ್ರಂಥಾಲಯ ವಿಜ್ಞಾನದ ಕುರಿತಾದ ಕೃತಿಗಳು;

6. ಬಂಗಾಲಿ ಮತ್ತು ಉರ್ದು ಭಾಷೆಯ ಪಾಕಿಸ್ತಾನದ ಎಲ್ಲಾ ಪ್ರಕಾಶನಗಳು;

7. ಸಾಮಾನ್ಯ ಚರಿತ್ರೆಗಳು, ವೈಜ್ಞಾನಿಕ ಮತ್ತು ತಂತ್ರಜ್ಞಾನದ ವಿಷಯಗಳಿಗೆ ಸಂಬಂಧಿಸಿದ ಮುಖ್ಯಾಂಶಗಳು ಮತ್ತು ಪರಾಮರ್ಶನ ಮಾಹಿತಿಗಳನ್ನು ಒಳಗೊಂಡ ಗ್ರಂಥಗಳು;

8. ಶಿಕ್ಷಣ, ಕೃಷಿ, ಯೋಜನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಗ್ರಂಥಗಳು;

9. ಗ್ರಂಥಾಲಯದಲ್ಲಿರುವ ಹರಿದುಹೋದ ಮತ್ತು ಊನಗೊಂಡ ಸಂಪುಟಗಳನ್ನು ಬದಲಿಸುವುದು;

10. ಗ್ರಂಥಾಲಯ ಸಂಗ್ರಹದ ತೆರವನ್ನು ತುಂಬಿಸುವುದು;

11. ಮುಖ್ಯ ಸಂಶೋಧನಾ ಪತ್ರಿಕೆಗಳ ಸಂಪುಟಗಳು;

12. ನಮ್ಮ ಆಯವ್ಯಯಕ್ಕೆ ಎಟಕುವ ರೀತಿಯಲ್ಲಿ ವಿದೇಶಿ ಭಾಷೆಗಳ ಗ್ರಂಥಗಳು;

13. ಅಪರೂಪದ ಮತ್ತು ಈಗ ಲಭ್ಯವಿಲ್ಲದ ಗ್ರಂಥಗಳ ಮೈಕ್ರೊಫಿಲ್ಮ್‌ಗಳು ಮತ್ತು ನೆರಳುಪ್ರತಿಗಳು;

14. ಜಗತ್ತಿನ ಪ್ರಮುಖ ವ್ಯಕ್ತಿಗಳ ಜೀವನಚರಿತ್ರೆಗಳು; ಮತ್ತು

15. ಚರಿತ್ರೆ, ಭೂಗೋಳಶಾಸ್ತ್ರ, ಸಮಾಜಶಾಸ್ತ್ರ ಇತ್ಯಾದಿ ವಿಷಯಗಳ ಗುಣಮಟ್ಟದ ಗ್ರಂಥಗಳು.

ಕಲ್ಕತ್ತಾದಲ್ಲಿ ವಿಜ್ಞಾನಗ್ರಂಥಾಲಯದ ತುರ್ತಿನ ಪರಿಶೀಲನೆಗಾಗಿ ಅನೇಕ ಸಮಿತಿಗಳು ಇದ್ದವು. ಇದರಲ್ಲಿ ಅತ್ಯಂತ ಮುಖ್ಯವಾದುದು ಬಾಬಾ ಅಣುಶಕ್ತಿ ಸಂಶೋಧನಾ ಕೇಂದ್ರದ ವಿಜ್ಞಾನ ಮಾಹಿತಿ ಅಧಿಕಾರಿಯಾಗಿದ್ದ ಡಾ.ವಿ.ಎ. ಕಾಮತರ ಅಧ್ಯಕ್ಷತೆಯಲ್ಲಿ ರೂಪುಗೊಂಡ ಸಮಿತಿಯಾಗಿದೆ. ಇದೇ ವಿಚಾರವಾಗಿದ್ದಂತಹ ಇನ್ನಿತರ ಸಮಿತಿಗಳೆಂದರೆ:

1. 1973ರಲ್ಲಿ ಸ್ಥಾಪಿಸಲಾದ ಸುರ್ಜಿತ್ ಸಿಂಗ್ ಸಮಿತಿ. ಇದರ ಅಧ್ಯಕ್ಷರು ಡಾ. ಸುರ್ಜಿತ್ ಸಿಂಗ್. ಇವರು ಕಲ್ಕತ್ತಾದ ಭಾರತೀಯ ಮಾನವಶಾಸ್ತ್ರ ಸಮೀಕ್ಷೆಯ ನಿರ್ದೇಶಕರು.

2. 1976ರಲ್ಲಿ ಸ್ಥಾಪಿಸಲಾದ ಮೆಹ್ರೊತ್ರಾ ಸಮಿತಿ. ಇದರ ಅಧ್ಯಕ್ಷರು ಡಾ. ಆರ್.ಸಿ. ಮೆಹ್ರೊತ್ರಾ. ಇವರು ದೆಹಲಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು.

ರಾಷ್ಟ್ರೀಯ ಗ್ರಂಥಾಲಯದೊಳಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರತ್ಯೇಕ ವಿಭಾಗದ ಸ್ಥಾಪನೆಗೆ ಈ ಎಲ್ಲಾ ಸಮಿತಿಗಳ ಸಮ್ಮತಿ ಇತ್ತು. ಪ್ರೊಫೆಸರ್ ನಿಹಾರ್ ರಂಜನ್ ರೇ ಅವರ ನೇತೃತ್ವದಲ್ಲಿದ್ದ ಮ್ಯಾನೇಜ್‌ಮೆಂಟ್ ಸಮಿತಿಯು ಜುಲೈ, 1973ರಲ್ಲಿ ಭಾರತ ಸರಕಾರದಿಂದ ರೂಪಿಸಲಾದ ಪರಿಶೀಲನಾ ಸಮಿತಿಯಾಗಿತ್ತು. ಇದರ ಕಾರ್ಯವೇನೆಂದರೆ, ರಾಷ್ಟ್ರೀಯ ಗ್ರಂಥಾಲಯದ ಕಾರ್ಯನಿರ್ವಹಣೆಯ ಕುರಿತು ಸಂಸ್ಕೃತಿ ಇಲಾಖೆ ಮತ್ತು ಕಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯದ ಹಂಗಾಮಿ ಗ್ರಂಥಪಾಲಕರಿಗೆ ಸೂಚನೆ ನೀಡುವುದು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಗ್ರಂಥಾಲಯದ ಸಂಗ್ರಹಕಾರ್ಯದ ಪರಿಶೀಲನೆಯನ್ನು ನಡೆಸಿದ ಸಮಿತಿಯು ಸೂಚಿಸಿದ್ದೇನೆಂದರೆ, 'ರಾಷ್ಟ್ರೀಯ ಗ್ರಂಥಾಲಯವು ಪರಿಣಿತ ಗ್ರಂಥಾಲಯವಾಗಿಲ್ಲದ್ದರಿಂದ, ಬೇರೆ ಅನೇಕ ಸಂಸ್ಥೆಗಳ ಸಂಗ್ರಹದಲ್ಲಿ ಇರತಕ್ಕಂತಹ ವಿಜ್ಞಾನ ಮತ್ತು ತಂತ್ರಜ್ಞಾನದ ಯಾವುದೇ ಶಾಖೆಗಳ ಅತ್ಯುನ್ನತ ಪರಿಣಿತ ಗ್ರಂಥಗಳನ್ನು ಅದು ಸಂಗ್ರಹಿಸಬಾರದು. ಆದರೆ ಈ ಕೆಳಗಿನ ಕ್ಷೇತ್ರಗಳಿಗೆ ಮಾತ್ರ ಗಮನವನ್ನು ನೀಡಬೇಕು:

1. ವಿಜ್ಞಾನ ಮತ್ತು ತಂತ್ರಜ್ಞಾನದ ಇತಿಹಾಸ;

2. ವಿಜ್ಞಾನದ ಚಿಂತನೆ;

3. ವಿಜ್ಞಾನ ಮತ್ತು ಸಮಾಜ;

4. ವಿಜ್ಞಾನ, ಸಂಸ್ಕೃತಿ ಮತ್ತು ನಾಗರಿಕತೆ;

5. ವೈಜ್ಞಾನಿಕ ಸಂಶೋಧನಾ ಕಾರ್ಯನೀತಿ; ಮತ್ತು

6. ಪರಿಸರ ಮಾಲಿನ್ಯ.

ಸದ್ಯದ ಗ್ರಂಥ ಖರೀದಿಯ ಆಯ್ಕೆಯನ್ನು ಪರಿಶೀಲನಾ ಸಮಿತಿ ಮತ್ತು ಆಡಳಿತ ಸಮಿತಿ ಒದಗಿಸಿದ ಮಾರ್ಗದರ್ಶಕ ಸೂತಗಳನ್ನು ಆಧರಿಸಿ ನಡೆಸಲಾಗುತ್ತದೆ. ಇತ್ತೀಚೆಗೆ ಪ್ರೊಫೆಸರ್ ಸತೀಶಚಂದ್ರ ಅವರ ಅಧ್ಯಕ್ಷತೆಯಲ್ಲಿ ಹಿಂದೆ ನೇಮಕಗೊಳಿಸಲಾದ ಪರಿಶೀಲನಾ ಸಮಿತಿಯು ರಾಷ್ಟ್ರೀಯ ಗ್ರಂಥಾಲಯದ ಕಾರ್ಯನಿರ್ವಹಣೆಯಲ್ಲಿ ಬದಲಾವಣೆಗಳನ್ನು ಶಿಫಾರಸು ಮಾಡಿದೆ.

**ಸದ್ಯದ ಸ್ಥಿತಿಗತಿ ಮತ್ತು ಕಾರ್ಯಗಳು:**

ಈಗ ರಾಷ್ಟ್ರೀಯ ಗ್ರಂಥಾಲಯವು ಭಾರತದಲ್ಲಿ ಉತ್ಪಾದಿಸಲಾದ ಎಲ್ಲಾ ವಾಚನ ಮತ್ತು ಮಾಹಿತಿ ಸಾಮಗ್ರಿಗಳು, ಭಾರತೀಯರು ಬರೆದಂತಹ ಎಲ್ಲಾ ಮುದ್ರಿತಸಾಮಗ್ರಿ ಮತ್ತು ಭಾರತದ ಕುರಿತಾಗಿ ಯಾವುದೇ ಭಾಷೆಯಲ್ಲಿ ಪ್ರಕಟವಾದ ವಿದೇಶಿಯರು ಬರೆದಂತಹ ವಸ್ತುವಿಷಯಗಳಿಗೆ ಖಾಯಂ ಮಳಿಗೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಗ್ರಂಥಾಲಯವನ್ನು ಜಗತ್ತಿನ ವಿವಿಧ ದೇಶಗಳ ರಾಷ್ಟ್ರೀಯ ಗ್ರಂಥಾಲಯಗಳ ಮಟ್ಟಕ್ಕೆ ತರಲು ಭಾರತ ಸರಕಾರವು ಮೊದಲ ಹೆಜ್ಜೆಯಾಗಿ 'ಡೆಲಿವರಿ ಆಫ್ ಬುಕ್ಸ್ ಆಕ್ಟ್, 1954'(ಗ್ರಂಥಗಳ ವಿತರಣಾ ಅಧಿನಿಯಮ, 1954) ಜಾರಿಗೆ

Digitised by Bharatavani, CIIL

ತಂದಿದೆ. ಈ ಅಧಿನಿಯಮದ ಪ್ರಕಾರ ಪ್ರತಿಯೊಬ್ಬ ಪ್ರಕಾಶಕನು ದೇಶದ ಯಾವುದೇ ಭಾಗದಲ್ಲಿ ಪ್ರಕಟಿಸಿದ ತನ್ನ ಪ್ರಕಾಶನದ ಒಂದು ಪ್ರತಿಯನ್ನು ರಾಷ್ಟ್ರೀಯ ಗ್ರಂಥಾಲಯಕ್ಕೆ ನೀಡಬೇಕಾಗುತ್ತದೆ. ಇದಕ್ಕೆ ಅಂಚೆವೆಚ್ಚವೂ ಸೇರಿದಂತೆ ಯಾವುದೇ ಶುಲ್ಕವನ್ನು ಹಣದ ರೂಪದಲ್ಲಿ ಪಾವತಿಸಬೇಕಾಗಿಲ್ಲ. 1956ರಲ್ಲಿ ಈ ಕಾಯಿದೆಯ ವ್ಯಾಪ್ತಿಯನ್ನು ನಿಯತಕಾಲಿಕೆಗಳು ಮತ್ತು ಪತ್ರಿಕೆಗಳಿಗೆ ಕೂಡ ವಿಸ್ತರಿಸಲಾಗಿದೆ.

ಇದು ಗ್ರಂಥಾಲಯದ ಸಂಗ್ರಹಕ್ಕೆ ಸೇರಿಕೊಳ್ಳುವ ಏಕಮಾತ್ರ ಮತ್ತು ಅತ್ಯಂತ ಸಮೃದ್ಧಿ ಮೂಲವಾಗಿ ಕಂಡುಬಂದರೆ, ಗ್ರಂಥಾಲಯವು ವಿದೇಶಿ ಅಧಿಕೃತ ದಾಖಲೆಗಳನ್ನು ಅನೇಕ ರಾಷ್ಟ್ರಗಳಿಂದ, ಉದಾಹರಣೆಗೆ ಯುಎಸ್ಎ, ಬ್ರಿಟನ್ ಮತ್ತು ಕೆನಡ ಮತ್ತು ವಿಶ್ವಸಂಸ್ಥೆಯ ಪ್ರಕಟಣೆಯಿಂದ ಪಡೆಯುತ್ತದೆ. ಈ ಸ್ವೀಕರಣಗಳಲ್ಲಿ ಹೆಚ್ಚಿನವು ಅಧಿಕೃತ ಶೇಖರಣೆಯ ನಿಬಂಧನೆಗಳ ವ್ಯಾಪ್ತಿಗೆ ಸೇರುತ್ತವೆ. ಬೇರೆ ದೇಶಗಳೊಂದಿಗಿನ ಭಾರತ ಸರಕಾರದ ಅಧಿಕೃತ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳ ಕೆಳಗೆ ಕೂಡ ವಿದೇಶಿ ಭಾಷೆಗಳ ಪ್ರಕಟಿತ ಗ್ರಂಥಗಳು ಸ್ವೀಕೃತವಾಗುತ್ತವೆ.

ವಿವಿಧ ಸಾಂಸ್ಥಿಕ ವಾಹಿನಿಗಳು ಗ್ರಂಥಪೂರೈಕೆಯ ಮೂಲಗಳಾಗಿ ಕಾರ್ಯ ನಿರ್ವಹಿಸಿದರೆ, ಪ್ರಸಿದ್ಧ ವ್ಯಕ್ತಿಗಳ ಮತ್ತು ಸಂಸ್ಥೆಗಳ ಖಾಸಗಿ ಸಂಗ್ರಹಗಳ ದೇಣಿಗೆಯು ಗ್ರಂಥಾಲಯವನ್ನು ಸಮೃದ್ಧಗೊಳಿಸಿದೆ. ಇವುಗಳಲ್ಲಿ ಅನೇಕ ಗ್ರಂಥಗಳು ಶ್ರೇಷ್ಠತರವಾದ ಮೌಲ್ಯಗಳನ್ನು ಹೊಂದಿವೆ. ಅತಿ ಮುಖ್ಯವಾದ ಮೂರು ಸಂಗ್ರಹಗಳೆಂದರೆ ಬುಹರ್ ಸಂಗ್ರಹ, ಸರ್ ಜಾದುನಾಥ್ ಸರಕಾರರ ಸಂಗ್ರಹ ಮತ್ತು ಅಶುತೋಷ್ ಸಂಗ್ರಹ. ಬುಹರ್ ಸಂಗ್ರಹದಲ್ಲಿ ಅನೇಕ ಅಪರೂಪದ ಗ್ರಂಥಗಳು ಮತ್ತು ಹಸ್ತಪ್ರತಿಗಳು ಇವೆ. ಇವುಗಳಲ್ಲಿ ಹೆಚ್ಚಿನವು ಅರೇಬಿಕ್ ಮತ್ತು ಪರ್ಶಿಯನ್. ಸರ್ ಜಾದುನಾಥ್ ಸರಕಾರರ ಸಂಗ್ರಹದಲ್ಲಿ ಮಧ್ಯಕಾಲೀನ ಅವಧಿಯ ಮೌಲ್ಯಯುತ ಚಾರಿತ್ರಿಕ ದಾಖಲೆಗಳು ಇವೆ. 1949ರಲ್ಲಿ ಸರ್ ಅಶುತೋಷ್ ಮುಖೊಪಾಧ್ಯಾಯರು ಅತ್ಯಂತ ಉತ್ಕೃಷ್ಟ ಸಂಗ್ರಹವನ್ನು ಅವರ ಕುಟುಂಬ ದಾನವಾಗಿ ನೀಡಿದೆ. ಈ ಸಂಗ್ರಹದಲ್ಲಿ 86,000ಕ್ಕೂ ಮಿಕ್ಕಿದ ಸಂಪುಟಗಳು ಇದ್ದು, ಇವತ್ತಿನ ದಿನ ಜಗತ್ತಿನ ಯಾವುದೇ ರಾಷ್ಟ್ರೀಯ ಗ್ರಂಥಾಲಯದಲ್ಲಿರುವ ಖಾಸಗಿ ಸಂಗ್ರಹಗಳಲ್ಲಿ ಇದು ಅತ್ಯಂತ ದೊಡ್ಡದಾದ ಏಕಮಾತ್ರ ಖಾಸಗಿ ಸಂಗ್ರಹವಾಗಿದೆ.

ಗ್ರಂಥಾಲಯದಲ್ಲಿರುವ ಕೆಲವು ಅಮೂಲ್ಯವೆಂದು ಭಾವಿಸಲ್ಪಡುವ ಗ್ರಂಥಗಳು ಮತ್ತು ಹಸ್ತಪ್ರತಿಗಳು ಹೀಗಿವೆ: ಪ್ಲಿನಿಯ ನ್ಯಾಚುರಲಿಸ್ ಹಿಸ್ಟೋರಿಯಾ(ಪರ್ಮಾ, 1481); ಬಿಬ್ಲಿಯ ಡಮುಲಿಕ (ಟ್ರಾನ್‌ಕ್ವೆಬರ್, 1723); ಮತ್ತು ಹಿಕ್ಕಿಯ ಬೆಂಗಾಲ್ ಗೆಝೆಟ್ ಅಥವಾ ಕಲ್ಕತ್ತಾ ಜನರಲ್ ಅಡ್ವರ್ಟೈಸರ್(1780–81), ಭಾರತದ ಮೊದಲ ವಾರ್ತಾಪತ್ರಿಕೆ. ಇತರ ಸಂಗ್ರಹಗಳೆಂದರೆ, ಸರ್ ಜಾದುನಾಥ್ ಸರಕಾರರ ಹಸ್ತಪ್ರತಿಗಳು ಮತ್ತು ಡಾ. ಜಿ.ಎಸ್. ಸರದೇಸಾಯಿ ಜೊತೆಗಿನ ಅವರ ಪತ್ರವ್ಯವಹಾರ, ರೇವಾ ಎಸ್ಟೇಟ್ ಮತ್ತು ಡಾ. ಥಿಬಂತ್ ಮತ್ತು ಡಾ. ರಾಮ ದಾಸ್ ಸೇನ್ ಅವರಿಂದ ದೊರೆತ ಸಂಸ್ಕೃತ ಹಸ್ತಪ್ರತಿಗಳು; ವೈಯಪಿಳ್ಳೈಯವರ ಸಂಗ್ರಹದಲ್ಲಿ ದೊರೆತ ತಮಿಳು ಪ್ರಾಚೀನ ತಾಳೆಗರಿ ಹಸ್ತಪ್ರತಿಗಳು; ಮತ್ತು ಸರ್ ತೇಜ್ ಬಹಾದೂರ್ ಸಪ್ರು, ಬಿ.ಎಸ್. ಮೂಂಜೇ ಮತ್ತು ಹರಿನಾಥ ಡೇ ಅವರ ವೈಯಕ್ತಿಕ ಲೇಖನಗಳು, ಅನೇಕ ಪ್ರಸಿದ್ಧ ಗ್ರಂಥಗಳು ಇವೆ. ಉದಾಹರಣೆಗೆ ಯುಕ್ಲಿಡನ ರೇಖಾಗಣಿತದ ಮೊದಲ ಇಂಗ್ಲಿಷ್ ಅನುವಾದ, ಶೀರ್ಷಿಕೆ ದಿ ಎಲಿಮೆಂಟ್ಸ್ ಆಫ್ ಜಾಮೆಟ್ರಿ ಆಫ್ ದಿ ಮೋಸ್ಟ್ ಎನ್‌ಶಂಟ್ ಫಿಲೋಸಫರ್ ಯುಕ್ಲಿಡ್ ಆಫ್ ಮೆಗರ; 1552ರಲ್ಲಿ ರೋಮನ್ ನ್ಯಾಯ ಮತ್ತು ಆಡಳಿತಕ್ಕೆ ಸಂಬಂಧಿಸಿದ ಲ್ಯಾಟೀನ್ ಭಾಷೆಯ ಪುಸ್ತಕ, 1570ರಲ್ಲಿ ತತ್ವಜ್ಞಾನದ ಬಗ್ಗೆ ಪ್ರಕಟವಾದ ಗ್ರೀಸ್ ಗ್ರಂಥ, 1668ರಲ್ಲಿ ಪ್ರಕಟವಾದ ಪದ್ಯರೂಪದಲ್ಲಿರುವ ಈಸೋಪನ ಕಥೆಗಳು ಹಾಗೂ ಇಂತಹವು. ಇದರೊಂದಿಗೆ ಗ್ರಂಥಾಲಯದಲ್ಲಿ ಗ್ರಂಥರೂಪವಲ್ಲದ ಅನೇಕ ಮಾಹಿತಿ ಸಂಗ್ರಹಗಳನ್ನು ಮೈಕ್ರೋರೂಪಗಳು ಮತ್ತು ನಕ್ಷೆಯ ರೂಪದಲ್ಲಿ ಹೊಂದಿದೆ.

**ಸಾಂಸ್ಥಿಕ ಸಂರಚನೆ:**

ಈಗ ರಾಷ್ಟ್ರೀಯ ಗ್ರಂಥಾಲಯವು ನವದೆಹಲಿಯ ಭಾರತ ಸರ್ಕಾರದ ಪ್ರವಾಸ ಮತ್ತು ಸಂಸ್ಕೃತಿ ಮಂತ್ರಾಲಯದ, ಸಂಸ್ಕೃತಿ ವಿಭಾಗದ ಅಧೀನ ಕಚೇರಿಯಾಗಿ ಕಾರ್ಯನಿರ್ವಹಿಸುತ್ತಿದೆ. ನಿರ್ದೇಶಕರು ಸಂಸ್ಥೆಯ ಮುಖ್ಯಸ್ಥರಾಗಿದ್ದಾರೆ. ಇವರ ಕೈಕೆಳಗೆ ಗ್ರಂಥಾಲಯದ ಸಮಗ್ರ ಜವಾಬ್ದಾರಿ ಇಬ್ಬರು ವೃತ್ತಿಪರ ಗ್ರಂಥಪಾಲಕರದ್ದಾಗಿರುತ್ತದೆ. ತಾಂತ್ರಿಕ ವಿಭಾಗದಲ್ಲಿ ನಿರ್ದೇಶಕರು ಮತ್ತು ಗ್ರಂಥಪಾಲಕರಿಗೆ ಉಪ–ಗ್ರಂಥಪಾಲಕರು ನೆರವಾದರೆ, ಆಡಳಿತಾತ್ಮಕ ವಿಭಾಗದಲ್ಲಿ ಒಬ್ಬ ಹಿರಿಯ ಆಡಳಿತಾಧಿಕಾರಿ ಮತ್ತು ಇಬ್ಬರು ಆಡಳಿತ ಅಧಿಕಾರಿಗಳು ಇರುತ್ತಾರೆ.

**ಕಾರ್ಯ ನಿರ್ವಹಣಾ ಸಂರಚನೆ:**

ಕಾರ್ಯನಿರ್ವಹಣೆಯ ದೃಷ್ಟಿಯಿಂದ ಗ್ರಂಥಾಲಯದ ಕೆಲಸವನ್ನು ಎರಡು ವ್ಯಾಪಕ ಕ್ಷೇತ್ರಗಳಾಗಿ ವಿಭಜಿಸಲಾಗಿದೆ: ತಾಂತ್ರಿಕ ಮತ್ತು ಆಡಳಿತಾತ್ಮಕ. ತಾಂತ್ರಿಕ ಕ್ಷೇತ್ರವನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ: 1. ವೃತ್ತಿಪರ ಮತ್ತು 2. ಸಂರಕ್ಷಣಾತ್ಮಕ. ವಾಚನ ಸಾಮಗ್ರಿಗಳು ಮತ್ತು ವಾಚನ ಸೇವೆಯ ನಿರ್ವಹಣೆಗೆ ಅನೇಕ ವೃತ್ತಿಪರ ವಿಭಾಗಗಳು ಜವಾಬ್ದಾರಿಯಾಗಿರುತ್ತವೆ. ಸದ್ಯ 40ಕ್ಕೂ ಹೆಚ್ಚು ವೃತ್ತಿಪರ ವಿಭಾಗಗಳು ಇವೆ. ಸಂರಕ್ಷಣಾ ವಿಭಾಗದಲ್ಲಿ ಮೂರು ಘಟಕಗಳು ಇವೆ. ಅವುಗಳೆಂದರೆ: 1. ಪುನರುತ್ಪತ್ತಿ(ಮರುಪ್ರತೀಕರಣ), 2. ಸಂರಕ್ಷಣೆ, ಮತ್ತು 3. ಪ್ರಯೋಗಶಾಲೆ. ಈ ಮೂರು ವಿಭಾಗಗಳು ಭೌತಿಕ ಮತ್ತು ಮೈಕ್ರೋಲೇಖನಗಳ ಸಂರಕ್ಷಣೆಗೆ ಜವಾಬ್ದಾರಿಯಾಗಿರುತ್ತವೆ. ಆಡಳಿತಾತ್ಮಕ ವಿಭಾಗವು ಸಿಬ್ಬಂದಿ, ಹಣಕಾಸು, ಕಟ್ಟಡ, ತೋಟ, ಕಾವಲು ಇತ್ಯಾದಿಗಳ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ. ತಾಂತ್ರಿಕ ವಿಭಾಗಗಳನ್ನು ಯಾವ ರೀತಿಯಲ್ಲಿ ಸಂಯೋಜಿಸಲಾಗಿದೆಯೆಂದರೆ, ಗ್ರಂಥಾಲಯಗಳ ಸಂಪನ್ಮೂಲಗಳ ಗರಿಷ್ಠ ಬಳಕೆ ಮತ್ತು ಓದುಗರಿಗೆ ನೀಡುವ ಸೇವೆಯ ಸುಧಾರಣೆಯನ್ನು

Digitised by Bharatavani, CIIL

ಕೂಡ ಇಲ್ಲಿ ಗಮನಕ್ಕೆ ತಂದುಕೊಳ್ಳಲಾಗಿದೆ. ರಸಾಯನತಜ್ಞರ ಕೈಕೆಳಗೆ ಇರುವ ಪ್ರಯೋಗಶಾಲೆ, ಮತ್ತು ಸಹ ಗ್ರಂಥಪಾಲಕರ ಮತ್ತು ಮೈಕ್ರೋಫೊಟೋಗ್ರಾಫರ್ ಅವರ ಜಂಟಿ ಮೇಲುಸ್ತುವಾರಿಯಲ್ಲಿರುವ ಪುನರುತ್ಪತ್ತಿ ವಿಭಾಗವನ್ನು ಹೊರತುಪಡಿಸಿದರೆ, ಬೇರೆ ಎಲ್ಲಾ ತಾಂತ್ರಿಕ ವಿಭಾಗಗಳ ಮುಖ್ಯಸ್ಥರಾಗಿ ಸಹ ಗ್ರಂಥಪಾಲಕರು ಇರುತ್ತಾರೆ. ಇವರು ಉಪ ಗ್ರಂಥಪಾಲಕರ ಕೈಕೆಳಗೆ ಇರುತ್ತಾರೆ. ಸಮಗ್ರ ನಿಯಂತ್ರಣವು ಗ್ರಂಥಪಾಲಕರದ್ದಾಗಿರುತ್ತದೆ.

ಭಾರತೀಯ ರಾಷ್ಟ್ರೀಯ ಗ್ರಂಥಾಲಯವನ್ನು ಈ ಕೆಳಗಿನ ಕಟ್ಟಡಗಳಲ್ಲಿ ಹಂಚಿಕೊಳ್ಳಲಾಗಿದೆ. ಇದರಲ್ಲಿ ಮೊದಲ ಮೂರು ಕಟ್ಟಡಗಳು ಬೆಲ್ವದೆರೆ ಆವರಣದಲ್ಲಿದ್ದರೆ, ನಾಲ್ಕನೆಯದು ಎಸ್‌ಪ್ಲನೆಡೆ ಪ್ರದೇಶದಲ್ಲಿ ಇದೆ:

1. ಮುಖ್ಯ ಕಟ್ಟಡ;
2. ಉಪಭಾಗವಾಗಿ ಕಟ್ಟಿದ ಕಟ್ಟಡ;
3. ನೂತನವಾಗಿ ಉಪಭಾಗವಾಗಿ ಕಟ್ಟಿದ ಕಟ್ಟಡ; ಮತ್ತು
4. ಎಸ್‌ಪ್ಲನೆಡ್ ವಾಚನಾಲಯ.

ಇದರೊಂದಿಗೆ ಆರು ಮಹಡಿಯ ಭಾಷಾಭವನವು ಬೆಲ್ವದೆರೆ ಆವರಣದಲ್ಲಿ ನಿರ್ಮಾಣದ ಹಂತದಲ್ಲಿ ಇದೆ.

### ಆಯವ್ಯಯ

ಗ್ರಂಥಾಲಯದ ಯಾವುದೇ ರೀತಿಯ ಅಭಿವೃದ್ಧಿಯನ್ನು ರೂಪಿಸುವುದಕ್ಕೆ ಹಣಕಾಸಿನ ಅನುದಾನವು ಬಹಳ ಮುಖ್ಯವಾಗಿರುತ್ತದೆ. ಗ್ರಂಥಾಲಯಕ್ಕೆ ಸಂಪೂರ್ಣ ಹಣಕಾಸಿನ ನೆರವನ್ನು ಭಾರತ ಸರಕಾರದ ಸಂಸ್ಕೃತಿ ಇಲಾಖೆ ನೀಡುತ್ತದೆ. ವರ್ಷಾನುಕ್ರಮದಲ್ಲಿ ಇದರ ಅಭಿವೃದ್ಧಿ, ಪುನರ್ನಿರ್ಮಾಣ ಮತ್ತು ನಿರ್ಮಾಣದ ಚಟುವಟಿಕೆಗಳಿಗೆ ಸಾಕಷ್ಟು ದಾರಿಗಳನ್ನು ಕಂಡುಕೊಳ್ಳಲಾಗಿದೆ.

### ರಾಷ್ಟ್ರೀಯ ಗ್ರಂಥಾಲಯದ ಪ್ರಮುಖ ಚಟುವಟಿಕೆಗಳು

ಸದ್ಯ ರಾಷ್ಟ್ರೀಯ ಗ್ರಂಥಾಲಯದಲ್ಲಿ ಈ ಕೆಳಗಿನ ಐದು ಚಟುವಟಿಕೆಗಳು ಇವೆ:

1. ಸಂಗ್ರಹದ ಅಭಿವೃದ್ಧಿ ಮತ್ತು ಸಂಗ್ರಹದ ಸಾಂಘಿಕ ಕಾರ್ಯಕ್ರಮಗಳು;
2. ವಾಚಕರ ಸೇವಾ ಕಾರ್ಯಕ್ರಮಗಳು;
3. ಗ್ರಂಥಾಲಯ ಸಾಮಗ್ರಿಗಳ ಸಂರಕ್ಷಣಾ ಕಾರ್ಯಕ್ರಮ;
4. ಆಧುನಿಕೀಕರಣ ಮತ್ತು ಸ್ವಯಂಚಾಲನಾ ಕಾರ್ಯಕ್ರಮಗಳು;
5. ಆಡಳಿತಾತ್ಮಕ ಚಟುವಟಿಕೆಗಳು.

### ಸಂಗ್ರಹ ಅಭಿವೃದ್ಧಿ ಮತ್ತು ಸಂಘಟನೆ

ಗ್ರಂಥಾಲಯದಲ್ಲಿ ಸಂಗ್ರಹದ ಅಭಿವೃದ್ಧಿ ಮತ್ತು ಸಂಯೋಜನೆಯ ಪ್ರಮುಖ ವಿಚಾರಗಳಲ್ಲಿ ನೇರವಾಗಿ ಕಾರ್ಯನಿರ್ವಹಿಸುವ ಅನೇಕ ವಿಭಾಗಗಳು ಇವೆ. ಅವುಗಳೆಂದರೆ: ಸಂಗ್ರಹಣಾ ವಿಭಾಗ, ಭಾರತೀಯ ಭಾಷೆ ಮತ್ತು ವಿದೇಶಿ ಭಾಷೆಯ ವಿಭಾಗ, ನಕ್ಷೆ ಮತ್ತು ಮುದ್ರಣ ವಿಭಾಗ, ಭಾರತೀಯ ಅಧಿಕೃತ ದಾಖಲೆಗಳ ವಿಭಾಗ ಮತ್ತು ವಿದೇಶಿ ಅಧಿಕೃತ ದಾಖಲೆಗಳ ವಿಭಾಗ. ಇವುಗಳಿಂದ ಪ್ರತ್ಯೇಕವಾಗಿ ವಿಶೇಷ ವಿಭಾಗಗಳು ಇವೆ. ಈ ವಿಭಾಗಗಳು ಸಂಗ್ರಹ ಅಭಿವೃದ್ಧಿ ಮತ್ತು ಸಂಗ್ರಹ ಸಂಸ್ಕರಣೆಯ ವಿವಿಧ ಅಂಶಗಳಲ್ಲಿ ವಿಶೇಷ ರೀತಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಉದಾಹರಣೆಗೆ ಮುದ್ರಿತ ಗ್ರಂಥಪಟ್ಟಿ ವಿಭಾಗ, ಉಡುಗೊರೆ ಮತ್ತು ವಿನಿಮಯ ವಿಭಾಗ, ಅಪರೂಪದ ಗ್ರಂಥಗಳ ವಿಭಾಗ, ಅಶುತೋಷ್ ಸಂಗ್ರಹ, ಮತ್ತು ಮಕ್ಕಳ ಗ್ರಂಥಾಲಯ. ಗ್ರಂಥಾಲಯದಲ್ಲಿ ಭಾರತದ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಉಲ್ಲೇಖಿತವಾಗಿರುವ ಎಲ್ಲಾ 15 ಭಾರತೀಯ ಭಾಷೆಗಳ ಕಾರ್ಯನಿರ್ವಹಣಾ ವಿಭಾಗಗಳು ಇರುವುದು ವಿಶೇಷ. ವಿದೇಶಿ ಭಾಷಾ ವಿಭಾಗದಲ್ಲಿ ಸ್ಲಾವೊನಿಕ್, ರೊಮಾನ್ಸ್, ಜರ್ಮನಿಕ್ ಮತ್ತು ಆಫ್ರೊ–ಏಶಿಯನ್ ಭಾಷೆಗಳು ಇವೆ. ಇವುಗಳೆಲ್ಲಾ ಪ್ರತ್ಯೇಕ ಸಣ್ಣ ಗ್ರಂಥಾಲಯಗಳಂತೆ ಕಾರ್ಯನಿರ್ವಹಿಸುತ್ತವೆ.

ಈ ಕೆಳಗಿನ ವಿಭಾಗಗಳ ಕುರಿತು ವಿಶೇಷ ಉಲ್ಲೇಖಗಳನ್ನು ನೀಡಬಹುದಾಗಿದೆ.

### ಭಾರತೀಯ ಭಾಷಾ ವಿಭಾಗಗಳು

ಭಾರತೀಯ ಭಾಷಾ ವಿಭಾಗಗಳೆಲ್ಲವೂ ಹಳೆಯ ಸ್ವಾಧೀನತೆಗಳ ಭಾಗಗಳಾಗಿವೆ. ಪೂರ್ಣ ಪ್ರಮಾಣದ ಭಾಷಾ ವಿಭಾಗಗಳನ್ನಾಗಿ ಮಾಡುವ ಸಲುವಾಗಿ 1969–70ರಲ್ಲಿ ಇವುಗಳನ್ನು ಸಂಬಂಧಪಟ್ಟ ಭಾಷಾ ಘಟಕಗಳೊಂದಿಗೆ ವಿಲೀನಗೊಳಿಸಲಾಯಿತು. ಈಗ ಭಾರತದ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಉಲ್ಲೇಖಿತವಾಗಿರುವ ಎಲ್ಲಾ 15 ಪ್ರಮುಖ ಭಾರತೀಯ ಭಾಷೆಗಳ ಕಾರ್ಯನಿರತ ವಿಭಾಗಗಳು ಗ್ರಂಥಾಲಯದಲ್ಲಿ ಇದೆ. ಹೊಸದಾಗಿ ಗುರುತಿಸಲ್ಪಟ್ಟ ಭಾಷೆಗಳ ವಾಚನ ಸಾಮಗ್ರಿಗಳನ್ನು ಪಡೆಯುವ ಮತ್ತು ಸಂಸ್ಕರಿಸುವ ಪ್ರಯತ್ನಗಳು ನಡೆಯುತ್ತಿವೆ.

### ಯುರೋಪಿಯನ್ ಮತ್ತು ಆಫ್ರೊ–ಏಶಿಯನ್ ಭಾಷಾ ಸಾಮಗ್ರಿಗಳು

ಯುರೋಪಿಯನ್ ಮತ್ತ ಆಫ್ರೊ–ಏಶಿಯನ್ ಭಾಷಾ ವಿಭಾಗದ ವ್ಯಾಪ್ತಿಯಲ್ಲಿ ಸ್ಲವೊನಿಕ್, ರೊಮನ್ಸ್, ಜರ್ಮನಿ ಮತ್ತು ಆಫ್ರೊ–ಏಶಿಯನ್ (ಅರೇಬಿಕ್, ಪರ್ಶಿಯನ್, ಚೀನಿ ಇತ್ಯಾದಿ) ಭಾಷೆಗಳು ಇವೆ. ಇವುಗಳೆಲ್ಲ ಪ್ರತ್ಯೇಕ ಸಣ್ಣ ಗ್ರಂಥಾಲಯಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ಎಲ್ಲಾ ವಿಭಾಗಗಳ ಸ್ವಾಧೀನತೆಯ ಮುಖ್ಯ ಮೂಲವೆಂದರೆ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳ ಕೆಳಗೆ ನಡೆಯುವ ವಾಚನ ಸಾಮಗ್ರಿಗಳ ವಿನಿಮಯದ ಮೂಲಕ ನಡೆಯುವಂತಹದು. ಭಾರತ ಸರಕಾರ ಜಗತ್ತಿನ ವಿವಿಧ ದೇಶಗಳೊಂದಿಗೆ ನಡೆಸುವಂತಹ ಈ ಕಾರ್ಯಕ್ರಮಗಳಲ್ಲಿ

Digitised by Bharatavani, CIIL

ವಾಚನ ಸಾಮಗ್ರಿಗಳ ವಿನಿಮಯದಲ್ಲಿ ರಾಷ್ಟ್ರೀಯ ಗ್ರಂಥಾಲಯವು ಅನುಷ್ಠಾನ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ.

**ನಕಾಶೆಗಳು ಮತ್ತು ಮುದ್ರಣಗಳು**

ಪ್ರಾರಂಭದ ವರ್ಷಗಳಲ್ಲಿ ಇಂಪೀರಿಯಲ್ ಗ್ರಂಥಾಲಯದಲ್ಲಿ 36 ನಕ್ಷೆಗಳು ಮತ್ತು ಅಟ್ಲಾಸ್‌ಗಳ ಸಣ್ಣಸಂಗ್ರಹ ಇತ್ತು. ಆದುದರಿಂದ ರಾಷ್ಟ್ರೀಯ ಗ್ರಂಥಾಲಯದ ಪಾಲಿಗೆ ಗಣನೀಯವಲ್ಲದ ಸಂಗ್ರಹ ಬಂದಿತ್ತು. DB ಅಧಿನಿಯಮದ ಸ್ವೀಕೃತಿಯ ಬಳಿಕ 1959ರಲ್ಲಿ ಸ್ವಾಧೀನತೆಯ ವಿಭಾಗದಿಂದ 1963ರಲ್ಲಿ ಪ್ರತ್ಯೇಕ ನಕ್ಷೆ ವಿಭಾಗ ರೂಪಿಸಲ್ಪಟ್ಟಿತು. ಇಂದು ಇದರಲ್ಲಿ 78,000ಕ್ಕೂ ಅಧಿಕ ನಕ್ಷೆಗಳು, ಅಟ್ಲಾಸ್‌ಗಳು ಮತ್ತು ಹಸ್ತಪ್ರತಿ ನಕಾಶೆಗಳು ಇವೆ. ಈಗ ವ್ಯಾಪಕ ನಕಾಶಾ ವರ್ಣಪಂಕ್ತಿಗಳನ್ನೇ ಕಾಣಬಹುದಾಗಿದೆ: ಭೂ ಮಾಪನ ನಕಾಶೆಗಳು; ಪ್ರಾಕೃತಿಕ ಸಂಪನ್ಮೂಲಗಳು, ಜನಸಂಖ್ಯೆ, ಸಾರಿಗೆ, ಪ್ರದೇಶ, ಸಂವಹನಗಳ ವ್ಯವಸ್ಥೆ, ಕೃಷಿ ಉತ್ಪಾದನೆ, ಮಣ್ಣು, ಸಸ್ಯರಾಶಿ, ಖನಿಜಗಳು, ಭೂಗರ್ಭಶಾಸ್ತ್ರ ಇತ್ಯಾದಿ ವಿಷಯಗಳ ಕುರಿತಾದ ನಕಾಶೆಗಳು; ಪ್ರವಾಹ ನಿರ್ವಹಣಾ ಸಮೀಕ್ಷೆ ನಕಾಶೆಗಳು, ನೀರು ಮತ್ತು ವಾಯುಯಾನ, ಚಾರಿತ್ರಿಕ ನಕಾಶೆಗಳು; ಪ್ರವಾಸಿಗರ ಕೈಪಿಡಿ ನಕಾಶೆಗಳು, ಇತ್ಯಾದಿ.

**ಅಪರೂಪದ ಗ್ರಂಥಗಳ ವಿಭಾಗ**

ರಾಷ್ಟ್ರೀಯ ಗ್ರಂಥಾಲಯವು ಅಪರೂಪದ ಗ್ರಂಥಗಳ ಮತ್ತು ಹಸ್ತಪ್ರತಿಗಳ ಸಂಗ್ರಹವನ್ನು ಪಡೆದಿರುವುದಲ್ಲದೆ ಕ್ರಮೇಣ ಇದಕ್ಕೆ ಅನೇಕ ಸೇರ್ಪಡೆಗಳು ನಡೆದಿವೆ. ಈ ವಿಭಾಗವು ಅತ್ಯಂತ ವಿಶೇಷ ರೀತಿಯದ್ದಾಗಿದೆ. ಏಕೆಂದರೆ ಅತ್ಯಂತ ಮೌಲ್ಯಯುತ ಸಾಮಗ್ರಿಗಳನ್ನು ಮುಂದಿನ ಪೀಳಿಗೆಗಾಗಿ ಕಾದಿರಿಸಲಾಗಿದೆ. ಇವುಗಳಲ್ಲಿ ಹೆಚ್ಚಿನವು ಶ್ರೇಷ್ಠ ಭಾರತೀಯರ ವೈಯಕ್ತಿಕ ಸಂಗ್ರಹದ್ದಾಗಿವೆ. ಇತ್ತೀಚಿನ ವರ್ಷಗಳಲ್ಲಿ ಭಾರತದ ಜನಪ್ರಿಯ ಬರಹಗಾರರು ಮತ್ತು ಜನಮುಖಂಡರ ಉತ್ತರಾಧಿಕಾರಿಗಳಿಂದ ಮೌಲ್ಯಭರಿತ ಹಸ್ತಪ್ರತಿಗಳನ್ನು ಮತ್ತು ವೈಯಕ್ತಿಕ ಪತ್ರಗಳನ್ನು ಗ್ರಂಥಾಲಯ ಪಡೆದುಕೊಂಡಿದೆ.

ಅಮೂಲ್ಯ ಗ್ರಂಥಗಳು ಮತ್ತು ಹಸ್ತಪ್ರತಿಗಳಲ್ಲಿ ಉಲ್ಲೇಖಿಸಬಹುದಾದ ಕೆಲವು ಬೆಲೆ ಕಟ್ಟಲಾಗದ ಸ್ವತ್ತುಗಳೆಂದರೆ:

- ವಾರೆನ್ ಹೇಸ್ಟಿಂಗ್‌ನ ವಿಚಾರಣೆಯಲ್ಲಿ ವಹಿಸಿದ ಸಾಕ್ಷಿಯ ಕುರಿತು ಹೌಸ್ ಆಫ್ ಲಾರ್ಡ್ಸ್‌ನಲ್ಲಿ ನಡೆದ ಚರ್ಚೆ, 1797ರಲ್ಲಿ ಲಂಡನ್‌ನಲ್ಲಿ ಪ್ರಕಟವಾಗಿರುವುದು.
- ಪೆಂಟೊಗ್ರಾಫಿಯಾ– ಜಗತ್ತಿನ ಎಲ್ಲಾ ಪರಿಚಿತ ಅಕ್ಷರಮಾಲೆಯ ನಿಖರ ಪ್ರತಿಗಳನ್ನು ಒಳಗೊಂಡಿರುವಂತಹದು –ವೆಲ್ಲಮ್ ಕುರಿತು ಎಡ್ಮಂಡ್ ಫ್ರೈ ಅವರದು(1799ರಲ್ಲಿ ಲಂಡನ್‌ನಲ್ಲಿ ಪ್ರಕಟಣೆ).
- ರಾಮಾಯಣ ಕಾವ್ಯದ ಐದು ಸಂಪುಟಗಳು. ಲೇಖಕರು ಕೀರ್ತಿ ಬಸ್ಸ್, ಪ್ರಕಟಣೆ ಮಿಶನ್ ಪ್ರೆಸ್, ಸೆರಂಪೋರ್, 1802. ಇದು ರಾಮಾಯಣದ ಅತ್ಯಂತ ಜನಪ್ರಿಯವಾದ ಬಂಗಾಲಿ ಅನುವಾದದ ಪ್ರಥಮ ಆವೃತ್ತಿ.
- ಇತ್ತೀಚಿಗೆ ನೇತಾಜಿ ಸುಭಾಶಚಂದ್ರ ಬೋಸ್ ಮತ್ತು ಅವರ ಸೋದರ ಸುಪ್ರಸಿದ್ಧ ಶರತಚಂದ್ರ ಬೋಸ್ ಅವರ ನಡುವಿನ ವೈಯಕ್ತಿಕ ಪತ್ರಗಳು ಗ್ರಂಥಾಲಯಕ್ಕೆ ದೊರೆತಿವೆ. ಇನ್ನೂ ಇತ್ತೀಚಿಗೆ ಪ್ರಸಿದ್ಧ ಕವಿಗಳಾದ ಕಬಿಶೇಖರ್ ಕಾಳಿದಾಸ್ ರಾಯ್ ಅವರ ಬಂಗಾಲಿ ಹಸ್ತಪ್ರತಿಗಳು ಮತ್ತು ಶ್ರೀ ಜಾದುನಾಥ್ ಸರಕಾರ್ ಅವರ ವೈಯಕ್ತಿಕ ದಿನಚರಿಗಳು ಮತ್ತು ಪತ್ರಗಳು ದೊರೆತಿವೆ.

**ಅಶುತೋಷ್ ಸಂಗ್ರಹ**

ರಾಷ್ಟ್ರೀಯ ಗ್ರಂಥಾಲಯದಲ್ಲಿ 'ಅಶುತೋಷ್ ಸಂಗ್ರಹ'ವೆಂದೇ ಪ್ರಸಿದ್ಧವಾಗಿರುವ ಸರ್ ಅಶುತೋಷ್ ಮುಖ್ಯೋಪಾಧ್ಯಾಯರ ಪ್ರಸಿದ್ಧ ವೈಯಕ್ತಿಕ ಸಂಗ್ರಹವನ್ನು ಗ್ರಂಥಾಲಯದ ಪ್ರಥಮ ಗ್ರಂಥಪಾಲಕರಾದ ಬಿ.ಎಸ್. ಕೇಶವನ್ ಅವರು ಗ್ರಂಥಾಲಯದ 'ಆಭರಣ ಪೆಟ್ಟಿಗೆ' ಎಂದೇ ಕರೆಯುತ್ತಿದ್ದರು. ಇದರಲ್ಲಿ 86,000 ಘಟಕಗಳಿವೆ. ಜಗತ್ತಿನ ಯಾವುದೇ ಗ್ರಂಥಾಲಯದಲ್ಲಿರುವ ವೈಯಕ್ತಿಕ ಸಂಗ್ರಹದಲ್ಲಿ ಇದು ಅತ್ಯಂತ ದೊಡ್ಡದೆಂದು ತಿಳಿಯಲಾಗಿದೆ. ಇದು ಗ್ರಂಥಾಲಯದ ಸಾಮಾನ್ಯ ಸಂಗ್ರಹಗಳಿಂದ ಪ್ರತ್ಯೇಕವಾಗಿ ಇಡಬೇಕೆಂಬ ಷರತ್ತಿನ ಉಡುಗೊರೆಯಾಗಿದೆ.

**ವಾಚಕರ ಸೇವಾ ಕಾರ್ಯಕ್ರಮ**

ರಾಷ್ಟ್ರೀಯ ಗ್ರಂಥಾಲಯವು ಭಾರತದ ಮತ್ತು ಜಗತ್ತಿನ ವಿವಿಧ ಭಾಗಗಳ ವಾಚಕರಿಗಾಗಿ ವರ್ಷದಲ್ಲಿ 362 ದಿನಗಳ ಸೇವೆಗಳನ್ನು ಒದಗಿಸುತ್ತದೆ. ಇದು ರಾಷ್ಟ್ರೀಯ ದಿನಗಳಲ್ಲಿ(26 ಜನವರಿ, 15 ಆಗಸ್ಟ್ ಮತ್ತು 2 ಅಕ್ಟೋಬರ್) ಮಾತ್ರ ಮುಚ್ಚಿರುತ್ತದೆ. ಉಳಿದ ದಿನಗಳಲ್ಲಿ ವರ್ಷದುದ್ದಕ್ಕೂ ಬೆಳಗ್ಗೆ ಗಂಟೆ 9 ರಿಂದ ರಾತ್ರಿ 8 ರವರೆಗೆ, ವಾರಾಂತ್ಯದ ಮತ್ತು ರಜಾ ದಿನಗಳಲ್ಲಿ ಬೆಳಗ್ಗೆ 9.30 ರಿಂದ ಸಂಜೆ 6 ಗಂಟೆಯವರೆಗೆ ತೆರೆದಿರುತ್ತದೆ. 18 ವರ್ಷದ ಮೇಲಿನ ವಯೋಮಿತಿಯ ಎಲ್ಲ ಭಾರತೀಯ ಪ್ರಜೆಗಳು ಗ್ರಂಥಾಲಯದ ಸದಸ್ಯರಾಗಬಹುದು. ಪ್ರತಿದಿನ ಗ್ರಂಥಾಲಯದ ಸೇವಾ ವಿಭಾಗಗಳಿಂದ ನೇರವಾಗಿ ಅಥವಾ ಇನ್ನಿತರ ವಿಭಾಗಗಳಿಂದ ಸರಾಸರಿ 1,000 ವಾಚಕರಿಗೆ ಸೇವೆ ಸಲ್ಲುತ್ತಿದೆ.

ರಾಷ್ಟ್ರೀಯ ಗ್ರಂಥಾಲಯದ ವಾಚಕ ಸೇವೆಗಳಲ್ಲಿ ನಕಲುಮಾಡುವ (ರಿಪ್ರೊಗ್ರಾಫಿಕ್) ಸೌಲಭ್ಯಗಳು ಇವೆ. ಗ್ರಂಥಾಲಯದಲ್ಲಿ ಮುದ್ರಿತ ಗ್ರಂಥಗಳನ್ನು ಎರವಲು ನೀಡುವ ಸೌಲಭ್ಯವಿದೆ. ಅದು ಅಂತಾರಾಷ್ಟ್ರೀಯ ಸಾಲ ಕೇಂದ್ರವಾಗಿಯೂ ಕಾರ್ಯ ನಿರ್ವಹಿಸುತ್ತಿದೆ. ಇದು ಅನೇಕ ಅಂತಾರಾಷ್ಟ್ರೀಯ ಫೆಡರೇಶನ್ ಆಫ್ ಲೈಬ್ರರಿ ಅಸೋಸಿಯೇಶನ್ಸ್‌ಗಳು ಮತ್ತು ಸಂಸ್ಥೆಗಳ(ಐಎಫ್‌ಎಲ್‌ಎ) ಬೇಡಿಕೆಗಳನ್ನು ಪೂರೈಸುತ್ತದೆ. ವಿದ್ವಾಂಸರ ಅನುಕೂಲತೆಗಾಗಿ ವಿದೇಶದಿಂದ ಸಂಶೋಧನಾ ಸಾಮಾಗ್ರಿಗಳ ಮೈಕ್ರೋಫಿಲ್ಮ್ ಮತ್ತು ನೆರಳುಪ್ರತಿಗಳನ್ನು ತರಿಸಿಕೊಡುತ್ತದೆ.

Digitised by Bharatavani, CIIL

ರಾಷ್ಟ್ರೀಯ ಗ್ರಂಥಾಲಯವು ಭಾರತದಲ್ಲಿ ಮತ್ತು ವಿದೇಶದಲ್ಲಿ ಪ್ರಕಟವಾಗುವ ಸಾಮಗ್ರಿಗಳ ಮಳಿಗೆಯಾಗಿರುವುದರಿಂದ ಅದು ಭಾರತದ ಪ್ರಮುಖ ಗ್ರಂಥಸೂಚಿ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಅದು ಇಂಡೊಲಾಜಿ ಮತ್ತು ಇತರ ವಿಷಯಗಳ ಸದ್ಯದ ಮತ್ತು ಹಿಂದಿನ ಗ್ರಂಥಸೂಚಿಗೆ ಜವಾಬ್ದಾರಿಯಾಗಿರುತ್ತದೆ. ಭಾರತ ಮತ್ತು ವಿದೇಶದ ವ್ಯಕ್ತಿಗಳಿಂದ ಮತ್ತು ಸಂಸ್ಥೆಗಳಿಂದ ಬರುವ ವಿಶೇಷ ಬೇಡಿಕೆಗಳಿಗಾಗಿ ಅನೇಕ ವಿಷಯಗಳಿಗೆ ಸಂಬಂಧಿಸಿದ ಆಯ್ದ ಗ್ರಂಥಸೂಚಿಗಳನ್ನು ಮತ್ತು ವಾಚನ ಸಾಮಗ್ರಿಗಳ ಪಟ್ಟಿಯನ್ನು ತಯಾರಿಸಲಾಗುತ್ತದೆ. ಅದು ಯುನೆಸ್ಕೊಗೆ ಗ್ರಂಥಸೂಚಿಯ ಮಾಹಿತಿ ಮತ್ತು ಗ್ರಂಥ ಉತ್ಪಾದನಾ ಸಂಖ್ಯಾಮಾಹಿತಿಯನ್ನು ಕೂಡ ಒದಗಿಸುತ್ತದೆ.

### ಗ್ರಂಥಾಲಯ ಸಾಮಗ್ರಿಗಳ ಸಂರಕ್ಷಣಾ ಕಾರ್ಯಕ್ರಮ

ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿಯೇ ಸಂರಕ್ಷಣಾ ಸೌಲಭ್ಯಗಳ ಅಗತ್ಯವನ್ನು ಕಂಡುಕೊಂಡವರು ಇಂಪೀರಿಯಲ್ ಗ್ರಂಥಾಲಯದ ಗ್ರಂಥಪಾಲಕರಾದ ಜೆ.ಎ. ಚಾಪ್‌ಮನ್(1911–1930).

1957ರಲ್ಲಿ ಸಣ್ಣ ದುರಸ್ತಿ ಘಟಕವಾಗಿ ಪ್ರಾರಂಭವಾದುದು ಈಗ ಪರಿಪೂರ್ಣ ರೀತಿಯ ಸಂರಕ್ಷಣಾ ಭಾಗವಾಗಿದ್ದು ಇದರಲ್ಲಿ ಮೂರು ಪ್ರಮುಖ ವಿಭಾಗಗಳು ಇವೆ: 1. ಸಂರಕ್ಷಣಾ ವಿಭಾಗ; 2. ಪ್ರಯೋಗಶಾಲೆ ವಿಭಾಗ; ಮತ್ತು 3. ರಿಪ್ರೊಗ್ರಫಿ ವಿಭಾಗ.

#### 1. ಸಂರಕ್ಷಣಾ ವಿಭಾಗ

ಈ ವಿಭಾಗವು ಗ್ರಂಥಗಳು, ಸರಣಿ ಪ್ರಕಟಣೆಗಳು(ಪತ್ರಿಕೆಗಳು, ನಿಯತಕಾಲಿಕೆಗಳು, ಗೆಜೆಟ್‌ಗಳು, ಸರಕಾರಿ ಪ್ರಕಟಣೆಗಳು, ವಿದೇಶಿ ಅಧಿಕೃತ ದಾಖಲೆಗಳು, ಯುಎನ್ ಪ್ರಕಟಣೆಗಳು ಇತ್ಯಾದಿ), ಹಸ್ತಪ್ರತಿಗಳು ಮತ್ತು ನಕಾಶೆಗಳನ್ನು ಪೂರ್ವಸ್ಥಿತಿಗೆ ತರುವುದಕ್ಕೆ ಜವಾಬ್ದಾರಿಯಾಗಿರುತ್ತದೆ. ಇದನ್ನು ಅವರು ಲ್ಯಾಮಿನೇಶನ್, ಅಂಚು, ರಟ್ಟು, ಹೊದಿಕೆ ಹಾಕುವುದು, ಚಿನ್ನದ ರೇಖು, ಮರುಗುರುತು ನೀಡುವಿಕೆ ಇತ್ಯಾದಿ ಕಾರ್ಯವಿಧಾನಗಳ ಮೂಲಕ ದುರಸ್ತಿ ಕಾರ್ಯವನ್ನು ನಡೆಸುತ್ತಾರೆ. ಅಮೂಲ್ಯವಾದ ಹಸ್ತಪ್ರತಿಗಳ ಉತ್ತಮ ಸಂರಕ್ಷಣೆಗಾಗಿ ಆಮ್ಲ ನಿರೋಧಕ ರಟ್ಟುಗಳಿಂದ ತಯಾರಿಸಿದ ಪೆಟ್ಟಿಗೆಗಳನ್ನು ತಯಾರಿಸಲಾಗುತ್ತದೆ.

#### 2. ಪ್ರಯೋಗಶಾಲಾ ವಿಭಾಗ

ಪ್ರಯೋಗಶಾಲಾ ವಿಭಾಗವು ನಿಯಮಿತ ಮತ್ತು ಅತಿಶೀಘ್ರ ಕಾರ್ಯವಿಧಾನದ ಮೂಲಕ ನೇರವಾಗಿ ಸಂರಕ್ಷಣೆಯನ್ನು ನಡೆಸುತ್ತದೆ. ಡಿಆಸಿಡಿಫಿಕೇಶನ್, ಹಳೆ ಚರ್ಮದ ಹೊದಿಕೆಯ ಸಂರಕ್ಷಣೆ ವ್ಯವಸ್ಥಿತವಾಗಿ ಜೋಡಿಸಿ ಇಟ್ಟಿರುವ ದಾಸ್ತಾನಿನಲ್ಲಿ ಶಿಲೀಂದ್ರಗಳ ನಿಯಂತ್ರಣ ಇತ್ಯಾದಿಗಳನ್ನು ನಿಯಮಿತ ಕಾರ್ಯಕ್ರಮಗಳ ಮೂಲಕ ನಡೆಸಲಾಗುತ್ತದೆ. ಮುದ್ರಿತ ವಿಷಯಗಳೊಂದಿಗೆ ಪ್ರಯೋಗಶಾಲೆಯು ಕಾಗದ, ತಾಳೆಗರಿ, ಚರ್ಮದ ಕಾಗದ ಮತ್ತು ಬಟ್ಟೆಗಳ ಮೇಲಿರುವ ಹಸ್ತಪ್ರತಿಗಳನ್ನು ಉಪಚರಿಸಿ ಕಾಪಾಡುತ್ತದೆ.

ಸಂಪೂರ್ಣವಾಗಿ ಕ್ರಿಮಿರಹಿತವಾಗಿರಲು ಅದು ನಿರ್ವಾತ ಶುದ್ಧೀಕರಣ ತಂತ್ರಜ್ಞಾನವನ್ನು ಕೂಡ ಬಳಸುತ್ತದೆ. ಈ ಕೋಶವನ್ನು 1984ರಲ್ಲಿ ಸ್ಥಾಪಿಸಲಾಯಿತು.

#### 3. ರಿಪ್ರೊಗ್ರಫಿ ವಿಭಾಗ

ಗ್ರಂಥಾಲಯದ ಅಪರೂಪದ ಮತ್ತು ಅಮೂಲ್ಯವಾದ ಸಾಮಗ್ರಿಗಳನ್ನು, ಇದರಲ್ಲಿ ನಿಯತಕಾಲಿಕೆಗಳ ಹಳೆಯ ಕಡತಗಳೂ ಸೇರುವಂತೆ ಸಂರಕ್ಷಿಸುವ ಗ್ರಂಥಾಲಯದ ಸಂರಕ್ಷಣಾ ಕಾರ್ಯಕ್ರಮದಲ್ಲಿ ಮೈಕ್ರೊಗ್ರಾಫಿಯನ್ನು ಅನ್ವಯಿಸುವುದಕ್ಕೆ ಹೆಚ್ಚಿನ ಒತ್ತನ್ನು ನೀಡುವ ಮೂಲಕ ರಿಪ್ರೊಗ್ರಫಿ ವಿಭಾಗವು 1970ರಲ್ಲಿ ಪೂರ್ಣಪ್ರಮಾಣದಲ್ಲಿ ಕಾರ್ಯನಿರತವಾಯಿತು.

ಈಗ, ರಿಪ್ರೊಗ್ರಫಿ ವಿಭಾಗದಲ್ಲಿ ನಿರ್ದಿಷ್ಟವಾದ ಅನೇಕ ಚಟುವಟಿಕೆಗಳು ಇವೆ: ಮೈಕ್ರೋಫಿಲ್ಮ್ ತಯಾರಿಕೆ, ವಾಚಕರಿಗೆ ಪ್ರತಿಕೃತಿಯ ಸೇವೆ ನೀಡುವಿಕೆ, ಮೈಕ್ರೋಫಾರಂಗಳ ಮತ್ತು ಮುದ್ರಣಗಳ ಭೌತಿಕ ನಿರ್ವಹಣೆ.

### ಗ್ರಂಥಾಲಯ ಸೇವೆಗಳ ಆಧುನೀಕರಣ ಮತ್ತು ಸ್ವಯಂಚಾಲನೆ

ಗ್ರಂಥಾಲಯವು ತನ್ನ ಕಾರ್ಯನಿರ್ವಹಣೆಯನ್ನು ಆಧುನೀಕರಣಗೊಳಿಸುವ ಮೊದಲ ಹೆಜ್ಜೆಯಾಗಿ ಸ್ವಯಂಚಾಲನೆಯ ಕಾರ್ಯಕ್ರಮದ ವತಿಯಿಂದ ಎಎಸಿಆರ್2(ಆಂಗ್ಲೊ–ಅಮೇರಿಕನ್ ಕ್ಯಾಟಲಾಗಿಂಗ್ ರೂಲ್ಸ್ 2)ನ್ನು ಜಾರಿಗೊಳಿಸಿತು. ಇದನ್ನು ಭವಿಷ್ಯದ ಗಣಕೀಕೃತ ಸಂಯೋಜನೆಗೆ ನಾಂದಿಯಾಗಿ ಪರಿಗಣಿಸಲಾಯಿತು. ಭಾರತೀಯ ಲಿಪಿಗಳನ್ನು ಸ್ವಯಂಚಾಲನಾ ವ್ಯವಸ್ಥೆಗಳ ಮೂಲಕ ರೋಮನ್ ಲಿಪಿಗೆ ಬದಲಾಯಿಸುವುದಕ್ಕಾಗಿ ವ್ಯತ್ಯಾಸವನ್ನು ತೋರುವ ಅಂಕಗಳ ಪ್ರಮಾಣೀಕರಣದಲ್ಲಿ ಗ್ರಂಥಾಲಯವು ಮುಂದಾಳುತನದ ಪಾತ್ರ ನಿರ್ವಹಿಸಿದೆ. ಭಾರತ ಮತ್ತು ವಿದೇಶದ ಹಿರಿಯ ಗ್ರಂಥಪಾಲಕರು, ಭಾಷಾತಜ್ಞರು ಮತ್ತು ಗಣಕಯಂತ್ರಜ್ಞರ ನೆರವಿನಿಂದ ಭಾರತೀಯ ಭಾಷೆಗಳಲ್ಲಿ ಸ್ವಯಂಚಾಲಿತ ಗ್ರಂಥಸೂಚಿ ಸೇವೆಗಾಗಿ ಉಚ್ಚಾರಣಾ ಭೇದವನ್ನು ಕಾಣಿಸುವ ಪ್ರಮಾಣೀಕೃತ ನಕ್ಷೆಯನ್ನು ಅಭಿವೃದ್ಧಿಪಡಿಸಿದೆ.

ಏಳನೆಯ ಪಂಚವಾರ್ಷಿಕ ಯೋಜನೆ–1985–90 ಗಾಗಿ ಗ್ರಂಥಾಲಯದ ಆಧುನೀಕರಣದ ಮತ್ತು ಮಾಹಿತಿ ತಂತ್ರಜ್ಞಾನದ ಕಾರ್ಯಕ್ರಮಗಳ ಕೆಳಗೆ ಕಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯವು ತನ್ನ ತಾಂತ್ರಿಕ ಚಟುವಟಿಕೆಗಳನ್ನು ಸ್ವಯಂಚಾಲಿತಗೊಳಿಸಲು ನಿರ್ಧರಿಸಿದೆ.

### ಸ್ವಯಂಚಾಲಿತ ಗ್ರಂಥಾಲಯ ಸೇವೆಗಳ ವಿಕಾಸ

ಬಳಕೆದಾರ ಸಮುದಾಯಕ್ಕಾಗಿ ಗ್ರಂಥಾಲಯ ಸ್ವಯಂಚಾಲಿತ ಕಾರ್ಯಕ್ರಮದ ಕೆಳಗೆ ಮೊದಲು ಆಂತರಿಕ ದತ್ತಸಂಚಯವನ್ನು ಸೃಷ್ಟಿಸುವುದು ಮತ್ತು ಆಮೇಲೆ ಕ್ರಮೇಣ ಸಿಡಿ ರೋಮ್ಸ್ ಮತ್ತು

Digitised by Bharatavani, CIIL

ವಿವಿಧ ಜಾಲಗಳ ಮೂಲಕ ಲಭ್ಯವಾಗುವ ಪೂರಕ ಮಾಹಿತಿ ಸೇವೆಗಳನ್ನು ಸ್ಥಾಪಿಸುವುದು ಎಂಬ ನಿರ್ಧಾರ ಕೈಗೊಳ್ಳಲಾಯಿತು. ಗ್ರಂಥಸೂಚಿಯ ದತ್ತಸಂಚಯದ ಸೃಷ್ಟಿಯು ಗ್ರಂಥಾಲಯ ಸ್ವಯಂಚಾಲನೆಯ ಮುಖ್ಯವಾದ ಮತ್ತು ಪ್ರಧಾನ ಚಟುವಟಿಕೆಗಳಲ್ಲಿ ಒಂದು.

ಮೊದಲ ಹಂತದಲ್ಲಿ ಹೊಸ ಗ್ರಂಥಗಳ ಸ್ವಾಧೀನತೆ ಮತ್ತು ಸರಣಿ ನಿಯಂತ್ರಣದ ದತ್ತಸಂಚಯಗಳನ್ನು ಸಿದ್ಧಪಡಿಸಲಾಯಿತು. ಸ್ವಯಂಚಾಲನಾ ಕಾರ್ಯನಿರ್ವಹಣೆಯ ಎರಡನೆಯ ಹಂತವು ಪರಿಷ್ಕರಣದ ಚಟುವಟಿಕೆಗಳನ್ನು ನಡೆಸುತ್ತದೆ. ಪರಸ್ಪರ ಕಾರ್ಯ ನಿರ್ವಹಿಸುವ ಮಾರ್ಕ್‌ನ(ಯಂತ್ರ ಓದಬಲ್ಲ ಪುಸ್ತಕಪಟ್ಟಿಯ ತಯಾರಿಕೆ–ಮೆಶೀನ್ ರೀಡೆಬಲ್ ಕ್ಯಾಟಲಾಗಿಂಗ್) ದಾಖಲೆಗಳು ಮತ್ತು ವ್ಯವಸ್ಥೆಗಳನ್ನು ವಿಶ್ಲೇಷಿಸುವ ಮೂಲಕ, ಗ್ರಂಥಾಲಯ ಜಗತ್ತಿನಲ್ಲಿ ಪ್ರಸಕ್ತ 20 ಕ್ಕೂ ಹೆಚ್ಚು ದೇಶಗಳ ಅಥವಾ ಸಂಸ್ಥೆಗಳ ಮಾರ್ಕ್ ವಿಶಿಷ್ಟ ವಿನ್ಯಾಸಗಳು ಕಾರ್ಯನಿರ್ವಹಿಸುತ್ತಿರುವುದು ತಿಳಿದುಬಂದಿದೆ. ಇವೆಲ್ಲವೂ ಗ್ರಂಥಸೂಚಿ ಮಾಹಿತಿ ಆಂತರಿಕ ಬದಲಾವಣೆಯ ಅಂತರಾಷ್ಟ್ರೀಯ ಮಾನ ಐಎಸ್‌ಓ 2709ರ ವಿನ್ಯಾಸವನ್ನು ಅನುಸರಿಸುತ್ತಿವೆಯಾದರೂ ಈ ಮಾರ್ಕ್ ವಿನ್ಯಾಸಗಳು ವಿಭಿನ್ನ ವಿಷಯ ಅಂಕಿತಗಳನ್ನು(ಉದಾಹರಣೆಗೆ ಟ್ಯಾಗ್‌ಗಳು, ಸೂಚಕಗಳು, ಉಪ–ಕ್ಷೇತ್ರದ ಗುರುತುಗಳು), ಸಂಕೇತೀಕರಿಸಿದ ಮೌಲ್ಯಗಳು ಇತ್ಯಾದಿಗಳನ್ನು ಹೊಂದಿರುತ್ತವೆ. ಈ ಎಲ್ಲಾ ಸಮಸ್ಯೆಗಳನ್ನು ತಪ್ಪಿಸುವುದಕ್ಕಾಗಿ ಅಂತಾರಾಷ್ಟ್ರೀಯ ಗ್ರಂಥಾಲಯ ಸಂಘಗಳು ಮತ್ತು ಸಂಸ್ಥೆಗಳ ಫೆಡರೇಶನ್(ಐಎಫ್‌ಎಲ್‌ಎ) ಯೂನಿಮಾರ್ಕ್(ಯೂನಿವರ್ಸಲ್ ಮೆಶೀನ್ ರೀಡೇಬಲ್ ಕ್ಯಾಟಲಾಗಿಂಗ್) ವಿನ್ಯಾಸವನ್ನು ತಯಾರಿಸಿದೆ–ಇದು ಯಂತ್ರ ಓದುವ ವಿನ್ಯಾಸದಲ್ಲಿ ಅಂತಾರಾಷ್ಟ್ರೀಯ ದತ್ತ ವಿನಿಮಯಕ್ಕಾಗಿ ಪ್ರಮಾಣೀಕೃತ ವಿನ್ಯಾಸವಾಗಿರುತ್ತದೆ. ರಾಷ್ಟ್ರೀಯ ಗ್ರಂಥಾಲಯವು ಈ ಯೂನಿಮಾರ್ಕ್ ವಿನ್ಯಾಸವನ್ನು ಯಂತ್ರ ಓದುವ ಪುಸ್ತಕಪಟ್ಟಿ ತಯಾರಿಕೆಗಾಗಿ ಬಳಸುತ್ತಿದೆ. ಇದರಿಂದ 'ಬಹು ರಾಷ್ಟ್ರೀಯ ಮಾರ್ಕ್ ವಿನ್ಯಾಸಗಳು ಸೃಷ್ಟಿಸಿದ ಆಂತರಿಕ ತೊಂದರೆಗಳನ್ನು ನಿವಾರಿಸಲು ರಾಷ್ಟ್ರೀಯ ಗ್ರಂಥಸೂಚಿ ಏಜೆನ್ಸಿಗಳಿಗೆ ದಾಖಲೆಗಳ ವಿನಿಮಯಕ್ಕೆ ಯಾಂತ್ರಿಕ ವಿಧಾನವನ್ನು ಒದಗಿಸಿದಂತಾಗುತ್ತದೆ'.

ಮೂರನೆಯ ಹಂತದಲ್ಲಿ, ಸ್ವಯಂಚಾಲನಾ ಕಾರ್ಯಕ್ರಮವು ಎರವಲು ಪಡೆಯುವವರು ಮತ್ತು ಎರವಲು ನೀಡಿಕೆ ಮತ್ತು ವಾಚಕರ ಸೇವೆಗಳಿಗೆ ಇತರ ದತ್ತಸಂಚಯಗಳ ಸೃಷ್ಟಿಯನ್ನು ಒಳಗೊಳ್ಳುತ್ತದೆ.

1989ರಲ್ಲಿ ನಿಧಾನಗತಿಯಿಂದ ಪ್ರಾರಂಭಗೊಂಡ ಗಣಕೀಕರಣದ ಚಟುವಟಿಕೆಯು ಸಾಧ್ಯವಾದಷ್ಟು ಮಟ್ಟಿಗೆ ವಿಸ್ತರಣಗೊಂಡಿದೆ ಮತ್ತು ಗ್ರಂಥಸೂಚಿ ಮಾಹಿತಿಯ ಗಣಕೀಕರಣಕ್ಕಾಗಿ ಮತ್ತು ಓದುಗರಿಗೆ ಅದು ಸುಲಭವಾಗಿ ದೊರೆಯುವ ಸೌಲಭ್ಯಗಳಿಗಾಗಿ ಸ್ಥಳೀಯ ಪ್ರದೇಶ ಜಾಲವು (ಲೋಕಲ್ ಏರಿಯಾ ನೆಟವರ್ಕ್–ಎಲ್‌ಎಎನ್) ಬೆಳವಣಿಗೆಯ ಹಂತದಲ್ಲಿ ಇದೆ. ಅಂತರ್‌ಜಾಲದ ಪ್ರವೇಶ, ಅದರಲ್ಲಿಯೂ ವಿಶೇಷವಾಗಿ ಮಿಂಚಂಚೆ(ಇ–ಮೇಲ್) ಯ ಸೇವೆಗಳು ರಾಷ್ಟ್ರೀಯ ಗ್ರಂಥಾಲಯವನ್ನು ದೇಶದ ಮತ್ತು ವಿದೇಶದ ಇತರ ಗ್ರಂಥಾಲಯಗಳ ಸಂಪರ್ಕಕ್ಕೆ ತಂದಿವೆ. ವೆಬ್‌ಸೈಟನ್ನು ಸೃಷ್ಟಿಸುವ ಕಾರ್ಯ ನಡೆಯುತ್ತಿದೆ. ಇದು ಈ ಉನ್ನತ ಸಂಸ್ಥೆಯ ಚಟುವಟಿಕೆಗಳಿಗೆ ಕನ್ನಡಿಯಾಗಲಿದೆ. ಭಾರತದ ಮತ್ತು ವಿದೇಶದ ಎಲ್ಲಾ ಪ್ರಮುಖ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದುವ ಸಲುವಾಗಿ ಲ್ಯಾನ್ ವ್ಯವಸ್ಥೆಯು(ಎಲ್‌ಎಎನ್) ಶೀಘ್ರದಲ್ಲಿಯೇ ವಾನ್ ವ್ಯವಸ್ಥೆಯಿಂದ(ಡಬ್ಲುಎಎನ್–ವೈಡ್ ಏರಿಯಾ ನೆಟ್‌ವರ್ಕ್) ಅನುಸರಿಸಲ್ಪಡಲಿದೆ. ಗ್ರಂಥಾಲಯದಲ್ಲಿ ರೂಢಿಗತ ಮತ್ತು ರಾಸಾಯನಿಕ ಮತ್ತು ಭೌತಿಕ ಸಂರಕ್ಷಣೆಗಾಗಿ ಸಾಂಪ್ರದಾಯಿಕ ಸಂರಕ್ಷಣಾ ಸೌಲಭ್ಯಗಳನ್ನು ಹೊಂದಿದ್ದರೂ ಅದರ ಅಮೂಲ್ಯ ಸಾಮಗ್ರಿಗಳ ಸಂರಕ್ಷಣೆ ಮತ್ತು ಪ್ರವೇಶ್ಯಕ್ಕಾಗಿ ಮಾಹಿತಿ ತಂತ್ರಜ್ಞಾನವು ಹೆಚ್ಚಿನ ನಿರೀಕ್ಷಣೆಗಳನ್ನು ಒದಗಿಸಿದೆ. ಗ್ರಂಥಾಲಯವು ತನ್ನ ಕೆಲವು ಅಪರೂಪದ ಮತ್ತು ಅಮೂಲ್ಯವಾದ, ಆದರೆ ಅವನತಿ ಹೊಂದುತ್ತಿರುವ ಚಿಂದಿಯಾಗಲಿರುವ ಗ್ರಂಥಗಳನ್ನು ವಿದ್ಯುನ್ಮಾನ ಸ್ವರೂಪಕ್ಕೆ ಬದಲಿಸಿ ಸಿಡಿ–ರೋಮ್ ವಿನ್ಯಾಸದಲ್ಲಿ ಪರಿವರ್ತಿಸುತ್ತಿದೆ. ಈ ಮುಖ್ಯ ಯೋಜನೆಯನ್ನು ಭಾರತದ ಬೇರೆ ಭಾಗಗಳ ಮತ್ತು ಜಗತ್ತಿನ ಬಹುತೇಕ ಗ್ರಂಥಾಲಯಗಳಲ್ಲಿ ಇಲ್ಲದ ಸಾಮಗ್ರಿಗಳಿಗೆ ಕೂಡ ಇದನ್ನು ವಿಸ್ತರಿಸಿಕೊಳ್ಳಲಾಗಿದೆ. ಈ ದಾಖಲೆಗಳ ಗಣಕೀಕರಣದಿಂದ(ಡಿಜಿಟೈಜೇಶನ್) ವ್ಯಾಪಕ ನೆಲೆಯ ವಾಚಕರಿಗೆ ಇದು ಅಂತರಜಾಲದಲ್ಲಿ ಕೈಗೆಟಕುವ ಅವಕಾಶ ಸಿಗುತ್ತದೆ.

**ತರಬೇತಿ ಕಾರ್ಯಕ್ರಮಗಳು, ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಮತ್ತು ಸಮ್ಮೇಳನಗಳು**

ರಾಷ್ಟ್ರೀಯ ಗ್ರಂಥಾಲಯದ ಸ್ವಯಂಚಾಲಿತ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸಲು ಅನೇಕ ತರಬೇತಿ ಕಾಲಾವಧಿಗಳು, ಕಾರ್ಯಾಗಾರಗಳು, ವಿಚಾರಸಂಕಿರಣಗಳು, ಸಮ್ಮೇಳನಗಳು ಇತ್ಯಾದಿಗಳನ್ನು ಗಣಕಕೇಂದ್ರದಲ್ಲಿ ಮತ್ತು ಬೇರೆಡೆಗಳಲ್ಲಿ ನಡೆಸಲಾಯಿತು. ತಾಂತ್ರಿಕ ಸಿಬ್ಬಂದಿಯು ಕಲ್ಕತ್ತಾದ ಜಾದವಪುರ ಪ್ರಾದೇಶಿಕ ಗಣಕ ಕೇಂದ್ರದಿಂದ ಗಣಕ ಅನ್ವಯಿಸುವಿಕೆಯಲ್ಲಿ ಪ್ರಾಥಮಿಕ ತರಬೇತಿಯನ್ನು ಪಡೆದರು. ಇವುಗಳಲ್ಲದೆ, ಅನೇಕ ತರಬೇತಿ ಕಾರ್ಯಕ್ರಮಗಳು, ಸಭೆಗಳು ಮತ್ತು ವಿಚಾರಸಂಕಿರಣಗಳನ್ನು ಆಯೋಜಿಸಿ ಗ್ರಂಥಾಲಯದ ಸ್ವಯಂಚಾಲನಾ ಕಾರ್ಯಕ್ರಮಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಲು ಸಿಬ್ಬಂದಿಯನ್ನು ಆಹ್ವಾನಿಸಲಾಯಿತು.

ರಾಷ್ಟ್ರೀಯ ಗ್ರಂಥಾಲಯದ ವತಿಯಿಂದ ಇತರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರಸಂಕಿರಣಗಳು ಆಯೋಜಿಸಲ್ಪಟ್ಟಿವೆ. ಇಲ್ಲಿ ಮುಖ್ಯವಾಗಿ ಚರ್ಚೆಗೆ ಬಂದ ವಿಚಾರಗಳೆಂದರೆ, ರಾಷ್ಟ್ರಮಟ್ಟದಲ್ಲಿ ಗ್ರಂಥಸೂಚಿಯ ನಿಯಂತ್ರಣ, ಗ್ರಂಥಾಲಯ ಚಟುವಟಿಕೆಗಳ ಸ್ವಯಂಚಾಲನೆ, ಗ್ರಂಥಾಲಯ ಸಾಮಗ್ರಿಗಳ ಸಂರಕ್ಷಣೆ, ಭಾರತದಲ್ಲಿ ಮತ್ತು ವಿದೇಶದಲ್ಲಿ ಇಂಡಾಲಜಿ ಅಧ್ಯಯನಗಳು, ಮತ್ತು ವಾಚಕರ ಸೇವೆಗಳು ಇತ್ಯಾದಿ. ಕಳೆದ ಕೆಲವು ವರ್ಷಗಳಿಂದ ಗ್ರಂಥಾಲಯದ

Digitised by Bharatavani, CIIL

ವೃತ್ತಿಪರ ಸಿಬ್ಬಂದಿಯು ದೇಶ, ವಿದೇಶಗಳಲ್ಲಿ ನಡೆಯುವ ಅಧಿವೇಶನಗಳಲ್ಲಿ ಮತ್ತು ವಿಚಾರಸಂಕಿರಣಗಳಲ್ಲಿ ಭಾಗವಹಿಸುವುದು ಸಾಕಷ್ಟು ಪ್ರಮಾಣದಿಂದ ಹೆಚ್ಚಾಗಿದೆ.

**ಪ್ರಕಟಣೆಗಳು**

ರಾಷ್ಟ್ರೀಯ ಗ್ರಂಥಾಲಯವು ಬಹಳ ಹಿಂದಿನಿಂದಲೇ ಪ್ರಮುಖ ದಾಖಲೆಗಳನ್ನು ಮತ್ತು ತನ್ನಲ್ಲಿರುವ ಅತಿ ಉನ್ನತ ಮಟ್ಟದ ಸಂಗ್ರಹದ ಉತ್ತಮ ರೀತಿಯಲ್ಲಿ ಸಂಯೋಜಿಸಲಾದ ಪಟ್ಟಿಗಳನ್ನು(ಕ್ಯಾಟಲಾಗ್ಸ್) ಪ್ರಕಟಿಸುತ್ತಾ ಬಂದಿದೆ. ಇತ್ತೀಚಿಗಿನ ವರ್ಷಗಳಲ್ಲಿ ಏಕವಿಷಯಕ ಗ್ರಂಥಗಳನ್ನು ಮತ್ತು ಪ್ರಮುಖ ಅಧಿವೇಶನದ ಕಾರ್ಯಕಲಾಪಗಳನ್ನು ಕೂಡ ಪ್ರಕಟಿಸುತ್ತಿದೆ. ಇವುಗಳನ್ನು ಉನ್ನತಮಟ್ಟದ ವೃತ್ತಿಪರ ಪ್ರಕಟಣೆಗಳೆಂದು ಮೆಚ್ಚಿಕೊಳ್ಳಲಾಗಿದೆ. ಕೆಟಲಾಗ್‌ಗಳೂ ಸೇರಿ ರಾಷ್ಟ್ರೀಯ ಗ್ರಂಥಾಲಯದ 36 ಪ್ರಕಟಿತ ಶೀರ್ಷಿಕೆಗಳು ಇವೆ. ಗ್ರಂಥಾಲಯವು ತನ್ನ ಉನ್ನತಮಟ್ಟದ ಸಂಗ್ರಹದ ಮೈಕ್ರೋಫಿಲ್ಮ್‌ಗಳನ್ನು ಸಂರಕ್ಷಣೆಗಾಗಿ ಮತ್ತು ಓದುಗರಿಗಾಗಿ ತಯಾರಿಸುತ್ತಿದೆ. ಗ್ರಂಥಾಲಯದಲ್ಲಿ ನಿಯಮಿತವಾದ ಮೈಕ್ರೋಫಿಲ್ಮ್ ತಯಾರಿಕೆಯ ಕಾರ್ಯಕ್ರಮಗಳು ನಡೆಯುತ್ತವೆ. ಪ್ರಸ್ತುತ 42 ಅಪರೂಪದ ವೃತ್ತಪತ್ರಿಕೆ ಶೀರ್ಷಿಕೆಗಳು ಮತ್ತು ಅಪರೂಪದ 72 ಗ್ರಂಥ ಶೀರ್ಷಿಕೆಗಳ, ಪತ್ರಿಕೆಗಳ ಮತ್ತು ಹಸ್ತಪ್ರತಿಗಳ ಮೈಕ್ರೋಫಿಲ್ಮ್‌ಗಳು ಇವೆ.

**ಕಟ್ಟಡ ಕಾರ್ಯಕ್ರಮ**

ಅನೇಕ ವರ್ಷಗಳಿಂದ ಗ್ರಂಥಾಲಯವನ್ನು ಸ್ಥಳಾವಕಾಶದ ಕೊರತೆ ಬಾಧಿಸುತ್ತಿದೆ. ಆದಾಗ್ಯೂ ಎಂಟನೆಯ ಯೋಜನೆಯ ಕಾಲಾವಧಿಯಲ್ಲಿ ಆರು ಮಹಡಿಗಳ ಭಾಷಾ ಭವನ ಹೆಸರಿನ ಹೊಸ ಕೇಂದ್ರ ಕಟ್ಟಡದ ಪ್ರಸ್ತಾಪಕ್ಕೆ ಭಾರತ ಸರಕಾರದಿಂದ ಸಮ್ಮತಿ ದೊರೆತಿದೆ. ಇದರೊಂದಿಗೆ ಬೆಲ್ವೆದೆರಯ ಇಡೀ ಅವರಣಕ್ಕೆ ಸಮಗ್ರ ಯೋಜನೆಯೊಂದನ್ನು ರೂಪಿಸಲಾಗಿದೆ.

ದೇಶದ ರಾಷ್ಟ್ರೀಯ ಗ್ರಂಥಾಲಯದಲ್ಲಿ ಲಭ್ಯವಾಗಿರಬೇಕಾದಂತಹ ಎಲ್ಲ ಸೌಲಭ್ಯಗಳನ್ನು ಹೊಂದಿರುವಂತಹ ಹೊಸ ಕಟ್ಟಡವು ನಿರ್ಮಾಣದ ಹಂತದಲ್ಲಿದೆ. ಈ ಕಟ್ಟಡವು ಸಹಜವಾಗಿ ಭಾರತೀಯ ಶಿಕ್ಷಣ ಮತ್ತು ಗ್ರಂಥಾಲಯ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ರೀತಿಯಿಂದ ಕಾರ್ಯ ನಡೆಸಬೇಕಾಗಿದೆ ಮತ್ತು ಅಂತಾರಾಷ್ಟ್ರೀಯ ಚಟುವಟಿಕೆಗಳಲ್ಲಿ ಕೂಡ ಉಪಯುಕ್ತ ರೀತಿಯಿಂದ ಭಾಗವಹಿಸಬೇಕಾಗಿದೆ. ಪ್ರಮುಖ ದೇಶಗಳ ಎಲ್ಲಾ ರಾಷ್ಟ್ರೀಯ ಗ್ರಂಥಾಲಯಗಳಿಗೆ ವಾಸ್ತು ಸ್ವರೂಪದಲ್ಲಿ ಒಳಂಗಾಣದ ಉತ್ತಮ ಸೌಲಭ್ಯಗಳನ್ನು ಒದಗಿಸಲಾಗಿದೆ. ಹೀಗಾಗಿ ಇವು ಆಯಾ ದೇಶಗಳ ಅತ್ಯಂತ ಸುಂದರ ಕಟ್ಟಡಗಳಲ್ಲಿ ಒಂದಾಗಿವೆ. ಭಾಷಾ ಭವನವನ್ನು ಕೂಡ ಈ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ.

ಭಾಷಾಭವನವು ಆರು ಮಹಡಿಯ ಆಧುನಿಕ ಕಟ್ಟಡವಾಗಿದ್ದು, 40,000 ಚದರ ಅಡಿಯ ಒಟ್ಟು ಪ್ರದೇಶದಲ್ಲಿ ನಿರ್ಮಾಣಗೊಳ್ಳಲಿದೆ. ಗ್ರಂಥಾಲಯವು ತನ್ನ ಸಂಪೂರ್ಣ ಕಾರ್ಯಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸಗಳನ್ನು ನಡೆಸುವಂತೆ ಪ್ರತಿಯೊಂದು ಮಹಡಿಯಲ್ಲಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. ರಾಷ್ಟ್ರೀಯ ಗ್ರಂಥಾಲಯವು ಈಗ ಎದುರಿಸುತ್ತಿರುವ ಸ್ಥಳಾವಕಾಶದ ಕೊರತೆಯನ್ನು ಭಾಷಾ ಭವನ ಪೂರೈಸುವುದಲ್ಲದೆ, ವಾಚಕರಿಗೂ ಹೆಚ್ಚಿನ ಮತ್ತು ಉತ್ತಮ ಸೇವೆಗಳನ್ನು ನೀಡಲು ಅದು ನೆರವಾಗುವುದು. ಅದು ಗಣಕೀಕೃತ ಮಾಹಿತಿ ಮತ್ತು ಪುನಃಪ್ರಾಪ್ತಿ ವ್ಯವಸ್ಥೆಯನ್ನು ದೊಡ್ಡ ರೀತಿಯಿಂದ ನೀಡಲಿದೆ. ಜಾಲದ ಮೂಲಕ ಸಂಪನ್ಮೂಲಗಳ ಹಂಚಿಕೊಳ್ಳುವಿಕೆಯು ವ್ಯಾಪಕ ಮತ್ತು ಪರಿಪೂರ್ಣವಾಗಿ ಇರುತ್ತದೆ.

**ಪ್ರತೀಕ್ಷೆಗಳು**

ರಾಷ್ಟ್ರೀಯ ಗ್ರಂಥಾಲಯವು ಭಾರತದಲ್ಲಿ ಪ್ರಕಟಗೊಳ್ಳುವ ಎಲ್ಲ ದಾಖಲೆಗಳ(ಎಲ್ಲ ಪ್ರಕಟಣೆಗಳ) ಸಂಚಯನ ಸ್ಥಾನ ಮತ್ತು ದಾಸ್ತಾನು ಮಳಿಗೆಯಾಗಿದೆ. ಅದು ಭಾರತೀಯರು ಬರೆದ ಮತ್ತು ಭಾರತದ ಕುರಿತು ವಿದೇಶಿ ವಿದ್ವಾಂಸರು ಬರೆದು ಪ್ರಕಟಿಸಿದ ಎಲ್ಲಾ ವಿಷಯಗಳ ಸಮಗ್ರ ಸಂಗ್ರಹವಾಗಿ ಅಭಿವೃದ್ಧಿ ಹೊಂದಬೇಕಾಗಿದೆ. 'ಭಾರತ'ವೆಂಬ ವಿಷಯದ ಅಂತಿಮೋಪಾಯದ ಗ್ರಂಥಾಲಯವಾಗಿ ರಾಷ್ಟ್ರೀಯ ಗ್ರಂಥಾಲಯ ಕಾರ್ಯನಿರ್ವಹಿಸಲು ಈ ಚಟುವಟಿಕೆ ಪೂರ್ವಾಪೇಕ್ಷಿತವಾಗುತ್ತದೆ.

ಭಾರತೀಯ ಪ್ರಕಟಣೆಗಳ ಮಳಿಗೆಯಾಗಿರುವ ರಾಷ್ಟ್ರೀಯ ಗ್ರಂಥಾಲಯದ ಪಾತ್ರವನ್ನು ಗ್ರಂಥಸೂಚಿ ಕೇಂದ್ರವಾಗಿ ಮುಂಚೂಣಿಯಲ್ಲಿ ಗುರುತಿಸಬೇಕಾದ ಅಗತ್ಯವಿದೆ. ರಾಷ್ಟ್ರೀಯ ಗ್ರಂಥಾಲಯದ ಪಾತ್ರವನ್ನು ನೆರವೇರಿಸಲು ಮತ್ತು ಜಗತ್ತಿನ ರಾಷ್ಟ್ರೀಯ ಗ್ರಂಥಾಲಯಗಳಿಗೆ ಸಮಾನ ದರ್ಜೆಯದ್ದಾಗಿರಲು ಈ ಮುಖ್ಯ ಚಟುವಟಿಕೆಯನ್ನು ಭಾರತದ ರಾಷ್ಟ್ರೀಯ ಗ್ರಂಥಾಲಯ ನಡೆಸಬೇಕಾಗಿದೆ. ಈಗಿನ ಈ ಘಟ್ಟದಲ್ಲಿ ಮಾಹಿತಿ ತಂತ್ರಜ್ಞಾನವು ಉತ್ತಮ ಗ್ರಂಥಾಲಯ ಸೇವೆಗಳ ಮೂಲಾಧಾರವಾಗಿರುವಾಗ, ರಾಷ್ಟ್ರೀಯ ಗ್ರಂಥಾಲಯವು ಗ್ರಂಥ ವಿತರಣಾ ಅಧಿನಿಯಮದ(ಡೆಲಿವರಿ ಆಫ್ ಬುಕ್ಸ್ ಆಕ್ಟ್) ಅಡಿಯಲ್ಲಿ ಇತರ ಗ್ರಾಹಕ ಗ್ರಂಥಾಲಯಗಳ ಸಹಯೋಗದೊಂದಿಗೆ ಗ್ರಂಥಸೂಚಿ ಸೇವೆಗಳನ್ನು ಒದಗಿಸುವ ಸಂಧಿ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸಬೇಕಾಗಿದೆ.

ಗ್ರಂಥಾಲಯ ಮತ್ತು ಮಾಹಿತಿ ವ್ಯವಸ್ಥೆಯ ರಾಷ್ಟ್ರೀಯ ಕಾರ್ಯನೀತಿ(NAPLIS)ಯ ವರದಿಯಲ್ಲಿ ಶಿಫಾರಸು ಮಾಡಿದಂತೆ ದೆಹಲಿ, ಮುಂಬೈ ಮತ್ತು ಚೆನ್ನೈನ ಮೂರು ಸಾರ್ವಜನಿಕ ಗ್ರಂಥಾಲಯಗಳು ಪ್ರಾದೇಶಿಕ ಭಾಷೆಗಳ ಕೇಂದ್ರಗಳಾಗಿ ಕಾರ್ಯನಿರ್ವಹಿಸಬಹುದು ಮತ್ತು ಎಲ್ಲಾ ಭಾರತೀಯ ಪ್ರಕಟಣೆಗಳ ಮಳಿಗೆಯಾಗಿರುವ ರಾಷ್ಟ್ರೀಯ ಗ್ರಂಥಾಲಯವು ಭಾರತದಲ್ಲಿ ಮತ್ತು ವಿದೇಶದಲ್ಲಿ ಮಾಹಿತಿ ಮತ್ತು ದಸ್ತಾವೇಜುಗಳ ಹಂಚಿಕೆಯನ್ನು ನೋಡಿಕೊಳ್ಳುವ ಕೇಂದ್ರಸ್ಥಾನವಾಗಿ ಇರಬಹುದು.

ಭಾರತೀಯ ರಾಷ್ಟ್ರೀಯ ಗ್ರಂಥಾಲಯ ವ್ಯವಸ್ಥೆಯೊಳಗೆ,

Digitised by Bharatavani, CIIL

ರಾಷ್ಟ್ರೀಯ ಗ್ರಂಥಾಲಯವು ಪ್ರತಿಯೊಬ್ಬರಿಗೂ ರಾಷ್ಟ್ರಮಟ್ಟದಲ್ಲಿ ಮಾಹಿತಿ ದೊರೆಯುವಂತೆ ಮಾಡುವ ಪ್ರಥಮ ಸಂಸ್ಥೆಯೂ ಆಗಿರಬೇಕು. ಭಾರತ ಮೂಲದ ಎಲ್ಲಾ ದಾಖಲೆಗಳನ್ನು ಸ್ವೀಕರಿಸುವ ಸಂಸ್ಥೆಯಾಗಿರುವ ರಾಷ್ಟ್ರೀಯ ಗ್ರಂಥಾಲಯವು ಭಾರತದ ಗ್ರಂಥ ಉತ್ಪಾದನೆಯ ಮೇಲ್ವಿಚಾರಣೆ ನಡೆಸುವ ಏಜೆನ್ಸಿಯಾಗಿಯೂ ಕಾರ್ಯನಿರ್ವಹಿಸಬೇಕಾಗಿದೆ. ಭಾರತದಿಂದ ಯುನೆಸ್ಕೊಗೆ ಗ್ರಂಥ ಉತ್ಪಾದನೆಯ ಅಂಕಿಅಂಶಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿರುವುದರಿಂದ, ರಾಷ್ಟ್ರೀಯ ಗ್ರಂಥಾಲಯವು ಗ್ರಂಥ ಉತ್ಪಾದನೆಯ ಮಾಹಿತಿಯ ಕೇಂದ್ರೀಕೃತ ಏಜೆನ್ಸಿಯಾಗಿರುವ ಅಗತ್ಯವಿದೆ.

ರಾಷ್ಟ್ರೀಯ ಗ್ರಂಥಾಲಯ ವ್ಯವಸ್ಥೆಯ ಅಡಿಯಲ್ಲಿ, ರಾಷ್ಟ್ರೀಯ ಗ್ರಂಥಾಲಯವು ನಗರ ಜಾಲಗಳು ಮತ್ತು ರಾಷ್ಟ್ರೀಯ ಜಾಲಗಳೊಂದಿಗೆ ನೇರ ಸಂಪರ್ಕ ಹೊಂದಿರುವುದನ್ನು ನಿರೀಕ್ಷಿಸಲಾಗುತ್ತದೆ. ದೇಶದ ಅತ್ಯಂತ ದೊಡ್ಡ ಸಂಗ್ರಹವಾಗಿ, ಅದು ಮುಖ್ಯ ಸಹಯೋಗಿ ಗ್ರಂಥಾಲಯವಾಗಿರುತ್ತದೆ. ರಾಷ್ಟ್ರೀಯ ಗ್ರಂಥಾಲಯ ವ್ಯವಸ್ಥೆ ವಿವಿಧ ಸಂಗ್ರಹಗಳ ದತ್ತ ಸಂಚಯವನ್ನು ಸೃಷ್ಟಿಸಿದಾಗ, ಲಭ್ಯವಿರುವ ದಾಖಲೆಗಳ ರಾಷ್ಟ್ರೀಯ ದತ್ತಸಂಚಯವು ಭಾರತದ ಪ್ರಮುಖ ಗ್ರಂಥಾಲಯಗಳಲ್ಲಿ ದೊರೆಯುವಂತಾಗುತ್ತದೆ.

ರಾಷ್ಟ್ರೀಯ ಗ್ರಂಥಾಲಯ ವ್ಯವಸ್ಥೆಯು ಭಾರತದ ಪೂರ್ಣಪ್ರಮಾಣದ ಸಂಪನ್ಮೂಲ ಹಂಚಿಕಾ ವ್ಯವಸ್ಥೆಯಾಗಿ ರೂಪುಗೊಂಡಾಗ ರಾಷ್ಟ್ರೀಯ ಗ್ರಂಥಾಲಯವು ಪ್ರಮುಖ ದಾಖಲೆ ವಿತರಣಾ ಕೇಂದ್ರವೂ ಆಗುವುದು. ಮಾಹಿತಿ ತಂತ್ರಜ್ಞಾನ ಕೇಂದ್ರಿತ ಹೊಸ ವಾತಾವರಣದಲ್ಲಿ ಗ್ರಂಥಾಲಯದ ಪಾತ್ರವು ಇದುವರೆಗೆ ಸಮಿತಿಗಳು ಶಿಫಾರಸು ಮಾಡಿರುವುದಕ್ಕಿಂತ ಇನ್ನೂ ಹೆಚ್ಚಿನ ವ್ಯಾಪಕ ತಳಹದಿಯದ್ದಾಗಿ ಇರಬೇಕಾಗುತ್ತದೆ. ಅದು ರಾಷ್ಟ್ರೀಯ ಗ್ರಂಥಸೂಚಿ ದತ್ತಸಂಚಯಕ್ಕೆ ಸಂಧಿ ಏಜೆನ್ಸಿಯಾಗಿಯೂ ಕಾರ್ಯನಿರ್ವಹಿಸಬೇಕಾಗುತ್ತದೆ. ಇದಕ್ಕಾಗಿ ಭಾರತದ ಎಲ್ಲಾ ಪ್ರಮುಖ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರುವುದು ಆವಶ್ಯಕ. ಭಾರತದ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಗ್ರಂಥಸೂಚಿ ದತ್ತಸಂಚಯವು ಜಾಲಗಳ ಹಂಚಿಕಾ ವ್ಯವಸ್ಥೆಯಾಗಿರಬೇಕಾಗುತ್ತದೆ. ಇದರಲ್ಲಿ ವಿವಿಧ ವಿಧದ ಗ್ರಂಥಾಲಯಗಳು ರಾಷ್ಟ್ರೀಯ ಗ್ರಂಥಾಲಯದೊಂದಿಗೆ ಮತ್ತು ಪ್ರಮುಖ ಗ್ರಂಥಸೂಚಿ ಕೇಂದ್ರದೊಂದಿಗೆ ಸಂಪರ್ಕ ಹೊಂದಿರಬೇಕು. ಭಾರತೀಯ ರಾಷ್ಟ್ರೀಯ ಗ್ರಂಥಸೂಚಿಯು ರಾಷ್ಟ್ರೀಯ ಗ್ರಂಥಾಲಯದ ಪ್ರಮುಖ ಚಟುವಟಿಕೆಯ ಭಾಗವಾಗಿರುತ್ತದೆ. ಏಕೆಂದರೆ ಭಾರತೀಯ ರಾಷ್ಟ್ರೀಯ ಗ್ರಂಥಸೂಚಿಯು(ಐಎನ್‌ಬಿ) ರಾಷ್ಟ್ರೀಯ ಗ್ರಂಥಾಲಯದ ಗ್ರಂಥಗಳ ವಿತರಣಾ ಅಧಿನಿಯಮದ ಕೆಳಗೆ ಸ್ವೀಕೃತಿಯ ಉತ್ಪನ್ನವಾಗಿರುತ್ತದೆ.

ಸರಕಾರವು ವಿದ್ಯುನ್ಮಾನ ದಾಖಲೆಗಳು ಮತ್ತು ಇತರ ಮಾಧ್ಯಮಗಳನ್ನು ಸೇರಿಸಿ ಗ್ರಂಥಗಳ ವಿತರಣಾ ಅಧಿನಿಯಮದಲ್ಲಿ ತಿದ್ದುಪಡಿ ಅಳವಡಿಸುವುದರಲ್ಲಿ ಇರುವುದರಿಂದ, ರಾಷ್ಟ್ರೀಯ ಗ್ರಂಥಾಲಯವು ವಿದ್ಯುನ್ಮಾನ ದಾಖಲೆಗಳು ಮತ್ತು ಇತರ ಅಸಾಂಪ್ರದಾಯಿಕ ಮಾಹಿತಿ ಮಾಧ್ಯಮಗಳಿಗೆ ಮಾಹಿತಿ ಆಧಾರವನ್ನು ರೂಪಿಸುವ ಹೊಸ ಕಾರ್ಯಕ್ರಮಗಳೊಂದಿಗೆ ಮುಂದೆ ಬರಬೇಕಾಗಿದೆ. ಗ್ರಂಥಾಲಯದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಾಂಪ್ರದಾಯಿಕ ಗ್ರಂಥಗಳು ಮತ್ತು ಪತ್ರಿಕೆಗಳು ಮುಖ್ಯಸ್ಥಾನವನ್ನು ಅಲಂಕರಿಸುವುದು ಸಹಜವಾಗಿದ್ದರೂ, ಭವಿಷ್ಯದ ಕುರಿತು ವ್ಯಾವಹಾರಿಕ ದೃಷ್ಟಿಯನ್ನು ಕೂಡ ಹೊಂದಿರುವುದು ಆವಶ್ಯಕ. ಏಕೆಂದರೆ, ಮಾಹಿತಿ ತಂತ್ರಜ್ಞಾನದ ವಿಭಿನ್ನ ವಿನ್ಯಾಸಗಳನ್ನು ಆಧರಿಸಿದ ಅನೇಕ ಸಾಮಗ್ರಿಗಳು ಭವಿಷ್ಯದಲ್ಲಿ ಗ್ರಂಥಾಲಯದ ಸ್ಥಳಾವಕಾಶ ಮತ್ತು ಗಮನವನ್ನು ಹೆಚ್ಚು ಹೆಚ್ಚು ಸೆಳೆಯುವುದರಲ್ಲಿ ಸಂದೇಹವೇ ಇಲ್ಲ.

ಸಮೂಹ ಶಿಕ್ಷಣ ಮತ್ತು ಮಾಹಿತಿ ಹಕ್ಕುಗಳಿಗೆ ಪ್ರಾಮುಖ್ಯತೆ ಇರುವುದರಿಂದ ಭಾರತದ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಂಥಾಲಯವು ವಿಶೇಷ ಗುಂಪಿನ ಜನರಿಗಾಗಿ ವಿಶೇಷ ಸೇವೆಗಳನ್ನು ಒದಗಿಸುವುದರಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಬೇಕಾಗಿದೆ.

### ಗ್ರಂಥಾಲಯ ಸಾಮಗ್ರಿಗಳ ಸಂರಕ್ಷಣೆಗಾಗಿ ತರಬೇತಿ ಕೇಂದ್ರ

ಭಾರತದಲ್ಲಿ ಸುಸಜ್ಜಿತ ಸಂರಕ್ಷಣಾ ಘಟಕವಿರುವುದು ಬಹಳ ಕಡಿಮೆ ಸಂಖ್ಯೆಯ ಗ್ರಂಥಾಲಯಗಳಲ್ಲಿ ಮಾತ್ರ. ಹಿಂದೆ ತಿಳಿಸಿದಂತೆ, ಗ್ರಂಥಾಲಯ ಸಾಮಗ್ರಿಗಳ ಸಂರಕ್ಷಣೆಗಾಗಿ ಪ್ರತ್ಯೇಕ ಚಾಲಿತ ಕಾರ್ಯಯೋಜನೆಯು ರಾಷ್ಟ್ರೀಯ ಗ್ರಂಥಾಲಯದಲ್ಲಿ ಇದೆ. ಸಂರಕ್ಷಣಾ ಕಾರ್ಯಕ್ರಮವು ಮೂರು ವಿಭಿನ್ನ ಚಟುವಟಿಕೆಗಳನ್ನು ಹೊಂದಿರುವುದರಿಂದ ಸಿಬ್ಬಂದಿಗೆ ಈ ತಾಂತ್ರಿಕತೆಯನ್ನು ತಜ್ಞತೆಯಿಂದ ನಿರ್ವಹಿಸುವುದು ಸಾಧ್ಯವಿದೆ. ಆದುದರಿಂದ, ಸುಸಜ್ಜಿತ ಸಂರಕ್ಷಣಾ ಘಟಕಗಳ ಅಗತ್ಯವಿರುವ ಇತರ ಗ್ರಂಥಾಲಯಗಳ ಸಿಬ್ಬಂದಿಗೆ ತರಬೇತಿ ಅವಕಾಶಗಳನ್ನು ಒದಗಿಸುವ ಸಲುವಾಗಿ ರಾಷ್ಟ್ರೀಯ ಗ್ರಂಥಾಲಯವು ತರಬೇತಿ ಕೇಂದ್ರವಾಗಿ ಕಾರ್ಯನಿರ್ವಹಿಸಬಹುದಾಗಿದೆ.

**ಉಪಸಂಹಾರ:** ಈ ಗ್ರಂಥಾಲಯದ ಘನತೆ ಮತ್ತು ಮಟ್ಟವನ್ನು ಉಳಿಸಿಕೊಳ್ಳುವ ಮತ್ತು ಜಗತ್ತಿನ ಪ್ರಮುಖ ರಾಷ್ಟ್ರೀಯ ಗ್ರಂಥಾಲಯಗಳಲ್ಲಿ ಒಂದಾಗುವಂತೆ ಇದರ ಮಟ್ಟವನ್ನು ಏರಿಸುವ ನಿರ್ಧಾರಿತ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಇದರಲ್ಲಿ ಉತ್ತಮ ಗ್ರಂಥಾಲಯವನ್ನಾಗಿಸುವ ಎಲ್ಲ ಮೂಲ ಘಟಕಗಳು ಇವೆ. ಅತ್ಯುನ್ನತ ಸಂಗ್ರಹವಿದೆ; ವೃತ್ತಿಪರ ಗ್ರಂಥಪಾಲಕರ ಬಹು ದೊಡ್ಡ ಗುಂಪು ನಿಯಮಿತ ಉದ್ಯೋಗಿಗಳಾಗಿ ಇದ್ದಾರೆ; ಅತ್ಯಂತ ಬುದ್ಧಿಮತ್ತೆಯ ವಾಚಕವೃಂದ, ಕನಿಷ್ಠ ಆಯವ್ಯಯ ಸಮಸ್ಯೆಗಳು, ಮತ್ತು ಉತ್ತಮ ಸರಕಾರಿ ಬೆಂಬಲವಿದೆ. ಇದು ಖಂಡಿತವಾಗಿಯೂ ಭಾರತದಲ್ಲಿ ಮಾತ್ರವಲ್ಲ ಇಡೀ ದಕ್ಷಿಣ ಏಶ್ಯಾ ವಲಯದಲ್ಲಿಯೇ ಮಾದರಿ ಗ್ರಂಥಾಲಯ ಸೇವೆಗಳ ಚಳವಳಿಯನ್ನು ಬೆಳೆಸಲು ವೇಗವರ್ಧಕವಾಗಿ ಪರಿಣಮಿಸಬಹುದಾಗಿದೆ.

**ಮೂಲ: ಕಲ್ಪನಾ ದಾಸ್‌ಗುಪ್ತಾ**

**ಅನು: ಡಾ. ಗೀತಾ ಶೆಣೈ**

Digitised by Bharatavani, CIIL

# ರಾಷ್ಟ್ರೀಯ ಪಠ್ಯಕ್ರಮ

**ಪ್ರವೇಶ**: ಲ್ಯಾಟಿನ್ ಪದ ವಿವರಣೆಯಲ್ಲಿ ಪಠ್ಯಕ್ರಮ (ಕ್ಯರಿಕುಲಂ) ವೆಂದರೆ ಶೈಕ್ಷಣಿಕ ಸಂಸ್ಥೆಯೊಂದು ತರಗತಿ ಕೋಣೆಯ ಒಳಗೆ ಮತ್ತು ಹೊರಗೆ ಕೈಗೊಳ್ಳಬೇಕಾದ ವ್ಯಾಪಕ ಅಧ್ಯಯನ ಕ್ರಮವಾಗಿದೆ. ಇದು ಬೋಧನಾ ವಿಷಯವನ್ನು ಮತ್ತು ಈ ವಿಷಯದ ವ್ಯಾಪ್ತಿ ಮತ್ತು ವಿಸ್ತಾರವನ್ನು ಕೂಡ ತಿಳಿಸುತ್ತದೆ. ಸಂಸ್ಕೃತದಲ್ಲಿ ಪಠ್ಯಕ್ರಮದ ಸಮಾನಪದವು 'ಪಠ್ಯಕ್ರಮ'ವೇ ಆಗಿದ್ದು, ಮುಖ್ಯವಾಗಿ ಅಧ್ಯಯನ ಪಥದ ಸರಣಿ, ಬೋಧನಾ ವಿಷಯ ಮತ್ತು ಕಾರ್ಯವಿಧಾನವೆಂಬ ಅರ್ಥವೂ ಆಗುತ್ತದೆ. ಹೀಗೆ ಪಠ್ಯಕ್ರಮದಲ್ಲಿ ಇರುವುದು ಬೋಧನಾ ವಿಷಯ, ಅಳವಡಿಕೆಯಾಗಿರುವ ಕಾರ್ಯವಿಧಾನಗಳು ಮತ್ತು ಶಿಕ್ಷಣದ ಹಂತಗಳಿಗೆ ಅನುಗುಣವಾಗಿ ರಚಿಸಲಾದ ಅಧ್ಯಯನ ಸರಣಿ.

'ಪಾಠ'ವೆಂಬ ಪದದಲ್ಲಿ ವಿದ್ಯೆ ಮತ್ತು ಶಿಕ್ಷಾ ಎನ್ನುವ ಎರಡು ಅರ್ಥಗಳೂ ಸಮ್ಮಿಳಿತಗೊಂಡಿವೆ. ವಿದ್ಯೆಯ ನಾಲ್ಕು ನಿರ್ದಿಷ್ಟ ಕಾರ್ಯವಿಧಾನಗಳನ್ನು ತಜ್ಞರು (ಸೂರ್ಯಕಾಂತ, 1995, ಪು: 529) ಉಲ್ಲೇಖಿಸುತ್ತಾರೆ. ವಿದ್ಯೆಯ ಮೊದಲ ಅರ್ಥ– ತಿಳಿಯುವುದು, ಅರ್ಥ ಮಾಡಿಕೊಳ್ಳುವುದು, ಗ್ರಹಿಸುವುದು. ಎರಡನೆಯ ಅರ್ಥ –ಒಕ್ಕಣಿಸುವುದು(ತಿಳಿಸುವುದು). ಮೂರನೆಯ ಅರ್ಥ ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದ್ದು. ನಾಲ್ಕನೆಯ ಅರ್ಥ ಚಿಂತಿಸುವುದಕ್ಕೆ, ಅಭಿವ್ಯಕ್ತಿಸುವುದಕ್ಕೆ ಸಂಬಂಧಿಸಿದ್ದು. ಹೀಗೆ ನಾವು ರಾಷ್ಟ್ರೀಯ ಪಠ್ಯಕ್ರಮವನ್ನು ಅದರ ಲ್ಯಾಟಿನ್ ಅರ್ಥದೊಂದಿಗೆ ತೆಗೆದುಕೊಂಡರೆ, ಅದು ರಾಷ್ಟ್ರೀಯ ಮಟ್ಟದಲ್ಲಿ ಅಧ್ಯಯನದ ವ್ಯಾಪಕ ಪಥ/ಕ್ರಮ(ಕೋರ್ಸ್) ಎಂದಾಗುತ್ತದೆ. ಆದರೆ ಅದನ್ನು ಅದರ ಸಂಸ್ಕೃತ ಅರ್ಥದೊಂದಿಗೆ ಪರಿಗಣಿಸಿದರೆ ಅದು ತಿಳಿವಳಿಕೆ, ಹೊಂದಿರುವಿಕೆ, ಪಡೆಯುವಿಕೆ ಮತ್ತು ಅಭಿವ್ಯಕ್ತಿಸುವಿಕೆಯ ಪಂಕ್ತಿಗಳ ಶ್ರೇಣೀಕೃತ ಕಾರ್ಯವಿಧಾನಗಳೊಂದಿಗೆ ಹಂತಗಳಲ್ಲಿ ವ್ಯವಸ್ಥೆಗೊಳಿಸಿದ ಮತ್ತು ಅನುಕ್ರಮಗೊಳಿಸಿದ ಅಧ್ಯಯನದ ವ್ಯಾಪಕ ಪಥವಾಗುತ್ತದೆ.

ಇನ್ನೂ ಮುಂದುವರಿದು ರಾಷ್ಟ್ರೀಯ ಪಠ್ಯಕ್ರಮವು ಎರಡು ಅರ್ಥಗಳನ್ನು ತಿಳಿಸುತ್ತದೆ. ಒಂದು ಅರ್ಥದಲ್ಲಿ ಅದು ಕೇಂದ್ರೀಯವಾಗಿ ವಿನ್ಯಾಸಗೊಳಿಸಿದ ಪಠ್ಯಕ್ರಮವಾಗುತ್ತದೆ. ಇದನ್ನು ಸಮಗ್ರ ದೇಶದ ಶೈಕ್ಷಣಿಕ ಸಂಸ್ಥೆಗಳು ಜಾರಿಗೊಳಿಸಬೇಕು, ನಿರ್ವಹಿಸಿಬೇಕು ಮತ್ತು ಅದರ ಮೌಲ್ಯಮಾಪನವನ್ನು ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಸಣ್ಣ ದೇಶಗಳಿಗೆ ಅದು ಹೆಚ್ಚು ಸಂಗತವೆನಿಸುತ್ತದೆ. ಇನ್ನೊಂದು ಅರ್ಥದಲ್ಲಿ ಅದು, ದೇಶದ ರಾಜ್ಯಗಳು ಅಥವಾ ಪ್ರಾಂತ್ಯಗಳು ತಮ್ಮ ಸ್ವಂತ ಪಠ್ಯಕ್ರಮವನ್ನು ಬೆಳೆಸುವ ಮತ್ತು ವಿನ್ಯಾಸಗೊಳಿಸುವ ಸಂದರ್ಭದಲ್ಲಿ ಗಮನದಲ್ಲಿ ಇಟ್ಟುಕೊಳ್ಳಬೇಕಾದ ಚೌಕಟ್ಟನ್ನು ಪ್ರತಿನಿಧಿಸುತ್ತದೆ. ಇಲ್ಲಿ ರಾಷ್ಟ್ರೀಯ ಪಠ್ಯಕ್ರಮವು ಮುಖ್ಯವಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿಗೆ ಸಮಾನವಾಗಿರುತ್ತದೆ ಮತ್ತು ಶಿಕ್ಷಣವು ವಿಕೇಂದ್ರೀಕೃತ ಚಟುವಟಿಕೆಯಾಗಿರುವ ದೇಶಗಳಿಗೆ ಇದು ಸಂಗತವಾಗುತ್ತದೆ. ಭಾರತೀಯ ಸಂದರ್ಭದಲ್ಲಿ, ರಾಷ್ಟ್ರೀಯ ಪಠ್ಯಕ್ರಮವೆಂದರೆ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ಆಗಿರುತ್ತದೆ. ಈ ಚೌಕಟ್ಟು, ರಾಜ್ಯಗಳು ತಮ್ಮ ಸ್ವಂತದ ಪಠ್ಯಕ್ರಮವನ್ನು ಸುಗಮಗೊಳಿಸಲು ಮತ್ತು ಪಠ್ಯಕ್ರಮದ ಬದಲಾವಣೆಯ ಕಾರ್ಯವಿಧಾನವನ್ನು ಪ್ರಾರಂಭಿಸಲು ಮಾರ್ಗದರ್ಶಕ ಸೂತ್ರಗಳನ್ನು ಒದಗಿಸುತ್ತವೆ. ದೇಶವೊಂದರ ಶಿಕ್ಷಣ ವ್ಯವಸ್ಥೆ ತನ್ನ ಶೈಕ್ಷಣಿಕ ಕಾರ್ಯನೀತಿಯನ್ನು ಅಳವಡಿಸಿಕೊಳ್ಳಬೇಕಾದರೆ ಅದು ಯಾವ ದಿಕ್ಕುಗಳಲ್ಲಿ ಮುಂದುವರಿಯಬೇಕು ಎಂಬ ಸೂಚನೆ ಕೊಡುವುದು ಶಾಲಾ ಶಿಕ್ಷಣ ಪಠ್ಯಕ್ರಮ ಚೌಕಟ್ಟಿನ ಲಕ್ಷ್ಯ.

ಪ್ರಸ್ತುತ ಲೇಖನವು ರಾಷ್ಟ್ರೀಯ ಪಠ್ಯಕ್ರಮದ ಚರ್ಚೆಯನ್ನು ಶಾಲಾ ಶಿಕ್ಷಣಕ್ಕೆ ಸೀಮಿತಗೊಳಿಸಿದೆ. ಉನ್ನತ ಶಿಕ್ಷಣದ ಅನೇಕ ಹಂತಗಳಲ್ಲಿ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಮಾದರಿ ಪಠ್ಯ ಕ್ರಮವನ್ನು ರೂಪಿಸಲು ಯುಜಿಸಿ ಸ್ಥಾಪಿಸಿದ ಪಠ್ಯಕ್ರಮದ ಕೇಂದ್ರಗಳ ಕೆಲಸ ಮತ್ತು ಕಾರ್ಯಗಳನ್ನು ವಿವರಿಸುವ ಮತ್ತು ವರ್ಣಿಸುವ ಯಾವುದೇ ಪ್ರಯತ್ನವನ್ನು ಇಲ್ಲಿ ಮಾಡಲಾಗಿಲ್ಲ. ನಿರ್ದಿಷ್ಟವಾಗಿ ಉನ್ನತ ಶಿಕ್ಷಣದ ಪಠ್ಯಕ್ರಮವು ಈ ಲೇಖನದ ಭಾಗವಾಗಿಲ್ಲ. ಏಕೆಂದರೆ ಪಠ್ಯಕ್ರಮದ ವಿನ್ಯಾಸ ಮತ್ತು ಬೆಳವಣಿಗೆಯ ಕಾರ್ಯವಿಧಿಯು ವಿಶ್ವವಿದ್ಯಾಲಯದಿಂದ ವಿಶ್ವವಿದ್ಯಾಲಯಕ್ಕೆ, ಬಹಳ ಭಿನ್ನವಾಗಿರುತ್ತದೆ. ಇನ್ನೊಂದು ದಿಕ್ಕಿನಲ್ಲಿ ಶಾಲಾಮಟ್ಟದ ಪಠ್ಯಕ್ರಮದ ಕತೆ ಬೇರೆಯೇ ಇದೆ. ಮೊದಲನೆಯದಾಗಿ ಇಲ್ಲಿ ಕೇಂದ್ರ ಶಾಲೆಗಳು, ನವೋದಯ ವಿದ್ಯಾಲಯಗಳು, ಸೈನಿಕ ಶಾಲೆಗಳು, ರೈಲ್ವೆ ಶಾಲೆಗಳು, ಮಿಲಿಟರಿ ಶಾಲೆಗಳು ಇವೆ. ಈ ಶಾಲೆಗಳು ದೇಶದಾದ್ಯಂತ ಹರಡಿಕೊಂಡಿದ್ದು, ಇವು ರಾಷ್ಟ್ರೀಯ ಪಠ್ಯ ಕ್ರಮವನ್ನು ಅನುಸರಿಸುತ್ತವೆ. ಎರಡನೆಯದಾಗಿ ಈ ಶಾಲೆಗಳ ಮತ್ತು ದೇಶದಾದ್ಯಂತ ಹರಡಿಕೊಂಡಿರುವ ಇನ್ನು ಕೆಲವು ಉನ್ನತಸ್ತರದ ಶಾಲೆಗಳಾದ ಸಾರ್ವಜನಿಕ ಮತ್ತು ಪ್ರಗತಿಪರ ಶಾಲೆಗಳ ಸಂಯೋಜನೆಗೆ ಇರುವಂತಹ ಸಂಸ್ಥೆ ಕೇಂದ್ರ ಮಾಧ್ಯಮಿಕ ಶಾಲಾ ಮಂಡಳಿ(ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್). ಈ ಶಾಲೆಗಳ ಪಠ್ಯ ಕ್ರಮ ಮತ್ತು ಪಠ್ಯವಸ್ತುವನ್ನು ಎನ್‌ಸಿಇಆರ್‌ಟಿ ತಯಾರಿಸುತ್ತದೆ ಮತ್ತು ಇದನ್ನು ದೇಶದುದ್ದಕ್ಕೂ ಬಳಸಲಾಗುತ್ತದೆ. ಇನ್ನು, ಎನ್‌ಸಿಇಆರ್‌ಟಿಯ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿಗೆ (1975, 1988, 2000) ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಾಮುಖ್ಯತೆ ಇದೆ. ಏಕೆಂದರೆ ಅದನ್ನು ಸ್ಥಳೀಯ ಪರಿಸ್ಥಿತಿಗಳಿಗೆ ಮತ್ತು ಅಗತ್ಯಗಳಿಗೆ ಅನುಗುಣವಾಗಿ ಅಳವಡಿಸಿಕೊಳ್ಳಬಹುದಾದ ಮತ್ತು ಅಂಗೀಕರಿಸಬಹುದಾದ ಮಾದರಿಯಾಗಿ ಕಾಣಲಾಗುತ್ತದೆ.

ಶಿಕ್ಷಣವು ರಾಜ್ಯ ಮತ್ತು ಸಹವರ್ತಿ ಪಟ್ಟಿಗಳೆರಡರ ವಿಷಯವಾಗಿರುವುದರಿಂದ ಪಠ್ಯಕ್ರಮಕ್ಕಾಗಿ ರೂಪಿಸಲಾದ ಪ್ರಕ್ರಿಯೆ ನಡೆಯುವ ರೀತಿಯು ಸಂಕೀರ್ಣವಾಗಿರುತ್ತದೆ. ಕೇಂದ್ರ ಮತ್ತು ರಾಜ್ಯಗಳು ಇವೆರಡರಲ್ಲಿಯೂ ಪಠ್ಯಕ್ರಮದ ವಿನ್ಯಾಸ ಮತ್ತು ಬೆಳವಣಿಗೆಯ ಅನುಷ್ಠಾನವನ್ನು ವಿವಿಧ ಹಂತಗಳಲ್ಲಿ

Digitised by Bharatavani, CIIL

ನಡೆಸಲಾಗುತ್ತದೆ. ರಾಜ್ಯಗಳಲ್ಲಿ, ಪಠ್ಯಕ್ರಮವು ಪ್ರಾಥಮಿಕ ಶಿಕ್ಷಣಕ್ಕೆ(1–8 ತರಗತಿ) ಸಂಬಂಧಿಸಿದ್ದಾಗಿದ್ದರೆ ಅದು ಎಸ್‌ಸಿಇಆರ್‌ಟಿಗಳ ವ್ಯಾಪ್ತಿಯದ್ದಾಗಿರುತ್ತದೆ. ಅದು ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಹಂತಗಳಿಗೆ ಸಂಬಂಧಿಸಿದ್ದಾಗಿದ್ದರೆ, ಮಾಧ್ಯಮಿಕ ಶಿಕ್ಷಣದ ರಾಜ್ಯ ಮಂಡಳಿಗಳ ವ್ಯಾಪ್ತಿಯೊಳಗೆ ಬರುತ್ತದೆ. ಕೇಂದ್ರದಲ್ಲಿ ಎನ್‌ಸಿಇಆರ್‌ಟಿಯು ಸಿಬಿಎಸ್‌ಇ ಯ ಸಹಯೋಗದೊಂದಿಗೆ ಪಠ್ಯ ಕ್ರಮ ಮತ್ತು ಪಠ್ಯವಸ್ತುವನ್ನು ರೂಪಿಸುಸುತ್ತದೆ. ಎನ್‌ಸಿಇಆರ್‌ಟಿ ಅಭಿವೃದ್ಧಿಪಡಿಸಿದ ಪಠ್ಯಕ್ರಮದ ಚೌಕಟ್ಟನ್ನು ನಂತರ ಸಿಬಿಎಸ್‌ಇ ಯಿಂದ ಅಂಗೀಕೃತವಾದ ಶಾಲೆಗಳಿಗೂ ಎಸ್‌ಸಿಇಆರ್‌ಟಿ ಮತ್ತು ಮಾಧ್ಯಮಿಕ ಶಿಕ್ಷಣದ ರಾಜ್ಯ ಮಂಡಳಿಗಳಿಗೂ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗುತ್ತದೆ. ಮೇಲೆ ಉಲ್ಲೇಖಿಸಿದಂತೆ, ರಾಜ್ಯಗಳು ಪಠ್ಯಕ್ರಮದ ಚೌಕಟ್ಟನ್ನು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಅಳವಡಿಸಿಕೊಳ್ಳಬಹುದು ಮತ್ತು ತಿದ್ದುಪಡಿ ಮಾಡಬಹುದಾಗಿದೆ.

**ಚಾರಿತ್ರಿಕ ದೃಷ್ಟಿಕೋನ:** ವಸಾಹತು ಆಡಳಿತದ ಬಳಿಕ, 1948ರಲ್ಲಿ ಡಾ. ಎಸ್. ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ ರೂಪುಗೊಂಡಾಗ ಶಿಕ್ಷಣವನ್ನು ಪ್ರಥಮ ಬಾರಿಗೆ ವಿಮರ್ಶಾತ್ಮಕವಾಗಿ ನೋಡುವ ಪ್ರಯತ್ನ ನಡೆಯಿತು. ಆಯೋಗವು ಪ್ರೌಢಶಾಲೆಗಳನ್ನು ಮತ್ತು ಇಂಟರ್‌ಮೀಡಿಯೆಟ್ ಕಾಲೇಜುಗಳನ್ನು ಪರೀಕ್ಷಿಸಿದ ಸಂದರ್ಭದಲ್ಲಿ, ದೇಶದಲ್ಲಿ ಮಾಧ್ಯಮಿಕ ಶಿಕ್ಷಣವು ಅತ್ಯಂತ ದುರ್ಬಲ ಕೊಂಡಿಯಾಗಿದೆ ಎಂದು ಟೀಕಿಸಿತ್ತು. ಮಾಧ್ಯಮಿಕ ಶಿಕ್ಷಣವನ್ನು ವಿಮರ್ಶಾತ್ಮಕವಾಗಿ ಕಾಣುವ ಸಲುವಾಗಿ 1953ರಲ್ಲಿ ಮಾಧ್ಯಮಿಕ ಶಿಕ್ಷಣ ಆಯೋಗವನ್ನು ಸ್ಥಾಪಿಸಲಾಯಿತು.

1947ಕ್ಕಿಂತ ಮೊದಲು ಶಾಲಾಶಿಕ್ಷಣ ವ್ಯವಸ್ಥೆಯು 10 ವರ್ಷಗಳ ಅವಧಿಯದ್ದಾಗಿತ್ತು(ಮಾಧ್ಯಮಿಕ ಮತ್ತು ಪ್ರೌಢಶಾಲೆ ಅಥವಾ ಮೆಟ್ರಿಕ್ಯುಲೇಶನ್) ಮತ್ತು ಇದು ಒಳಗೊಂಡಿದ್ದ ಕಲಿಕಾ ವಿಷಯಗಳೆಂದರೆ ಇಂಗ್ಲಿಷ್, ಸ್ಥಳೀಯ ಭಾಷಾ ಕಲಿಕೆ, ಗಣಿತ, ಚರಿತ್ರೆ, ಭೂಗೋಳ ಮತ್ತು ವಿಜ್ಞಾನ. ಮಾಧ್ಯಮಿಕ ಶಿಕ್ಷಣ ಆಯೋಗವು(1952–53) ಆಗ ಇದ್ದಂತಹ ಶಾಲಾಪಠ್ಯಕ್ರಮವನ್ನು ಪರೀಕ್ಷಿಸಿ ಅದು ಬಹಳ ಕಿರಿದಾಗಿ ರೂಪಿಸಲ್ಪಟ್ಟಿರುವುದನ್ನು ಗಮನಿಸಿತು. ಅದು ಪುಸ್ತಕವನ್ನು ಅವಲಂಬಿಸಿ, ಪರೀಕ್ಷಾ ಕೇಂದ್ರಿತವಾಗಿತ್ತು. ಅದರಲ್ಲಿ ಮಾಹಿತಿಗಳು ಮತ್ತು ವಿವರಗಳು ಕಿಕ್ಕಿರಿದು ತುಂಬಿದ್ದವು. ಅದು ಬದಲಾಗುತ್ತಿರುವ ಸಾಮಾಜಿಕ ಅಗತ್ಯಗಳನ್ನು ತೆಗೆದುಕೊಂಡಿರಲಿಲ್ಲ ಮತ್ತು ವಿದ್ಯಾರ್ಥಿಗಳ ಬೌದ್ಧಿಕ ಅಗತ್ಯಗಳನ್ನು ಪೂರೈಸುವ ರೀತಿಯದ್ದಾಗಿ ಇರಲಿಲ್ಲ. ಎಂಟನೆಯ ತರಗತಿಯವರೆಗೆ ಐದು ವಿಷಯಗಳನ್ನು (ಎರಡು ಭಾಷೆಗಳು, ಗಣಿತ, ಸಮಾಜ ವಿಜ್ಞಾನಗಳು ಮತ್ತು ಸಾಮಾನ್ಯ ವಿಜ್ಞಾನ) ಕಲಿಯುವಂತೆ, ಮತ್ತು 9 ರಿಂದ 11ನೇ ತರಗತಿಯವರೆಗೆ ಅದು ಮುಂದುವರಿಯುವಂತೆ ಆಯೋಗ ಶಿಫಾರಸು ಮಾಡಿತು. ಶಾಲಾಶಿಕ್ಷಣದ ಅವಧಿಯನ್ನು ಹನ್ನೊಂದು ವರ್ಷಗಳಿಗೆ ನಿಗದಿಪಡಿಸಲಾಯಿತು. ವಿವಿಧ ರೀತಿಯ ಶೈಕ್ಷಣಿಕ ಮತ್ತು ವೃತ್ತಿಪರ ವಿಷಯಗಳಲ್ಲಿ ಶಿಕ್ಷಣ ನೀಡುವ ಬಹು ಉದ್ದೇಶಿತ ಶಾಲೆಗಳ ಸ್ಥಾಪನೆಗೆ ಶಿಫಾರಸು ಮಾಡಿತು.

ಶಿಕ್ಷಣ ಆಯೋಗವು(1964–66) ಐದು ವರ್ಷಗಳ ಪ್ರಾಥಮಿಕ ಶಿಕ್ಷಣ, ಎಂಟು ವರ್ಷಗಳ ಎಲಿಮೆಂಟರಿ ಶಿಕ್ಷಣ (ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳು ಸೇರಿ), ಹತ್ತು ವರ್ಷಗಳ ಸೆಕೆಂಡರಿ ಶಿಕ್ಷಣ, ಇದನ್ನು ಅನುಸರಿಸಿ ಎರಡು ವರ್ಷಗಳ ಹೈಯರ್ ಸೆಕೆಂಡರಿ ಶಿಕ್ಷಣವನ್ನು ಒಳಗೊಂಡಿರುವ ಸಮಾನ ವಿನ್ಯಾಸದ ಶಿಕ್ಷಣದ ಸ್ಥಾಪನೆಗೆ ಶಿಫಾರಸು ಮಾಡಿತು. ಅದು ಅಭಿನ್ನವಾದ ವ್ಯಾಸಂಗ ಕ್ರಮವನ್ನು ಶಿಫಾರಸು ಮಾಡಿ, ವಿಜ್ಞಾನ ಮತ್ತು ಗಣಿತಗಳನ್ನು ಹತ್ತನೆಯ ತರಗತಿಯವರೆಗೆ ಕಡ್ಡಾಯ ವಿಷಯಗಳನ್ನಾಗಿ ಮಾಡಿತು. ಹತ್ತನೆಯ ತರಗತಿಯವರೆಗೆ ಕಾರ್ಯಾನುಭವವನ್ನು ಒಳಗೊಂಡಿರುವ ಸಾಮಾನ್ಯ ಪಠ್ಯಕ್ರಮವನ್ನು ಶಿಫಾರಸು ಮಾಡಿತ್ತಾದರೂ, +2 ಹಂತದಲ್ಲಿ ಶೈಕ್ಷಣಿಕ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ಒದಗಿಸಲೇ ಬೇಕಿತ್ತು.

ಶಿಕ್ಷಣ ಆಯೋಗದ ಶಿಫಾರಸುಗಳನ್ನು ಆಧರಿಸಿ(1964–66), ಶಿಕ್ಷಣದ ಕುರಿತಾಗಿ ರಾಷ್ಟ್ರೀಯ ಕಾರ್ಯನೀತಿಯ ಗೊತ್ತುವಳಿಯನ್ನು ಪ್ರಕಟಿಸಲಾಯಿತು. ಈ ಗೊತ್ತುವಳಿಯಲ್ಲಿ ಶಿಕ್ಷಣದ ವಿಷಯವು ಬದುಕಿಗೆ ಹತ್ತಿರದಿಂದ ಸಂಬಂಧಿರಬೇಕು, ಶೈಕ್ಷಣಿಕ ಅವಕಾಶಗಳು ವಿಸ್ತರಿಸಿಕೊಳ್ಳಬೇಕು ಮತ್ತು ಅವುಗಳನ್ನು ಕಾಪಾಡಿಕೊಂಡು ಬರಬೇಕು ಮತ್ತು ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವ ಪ್ರಯತ್ನವನ್ನು ನಡೆಸಬೇಕು ಎಂಬುದಾಗಿ ತಿಳಿಸಲಾಯಿತು. ಸಾಮಾನ್ಯ ಶಾಲಾ ಶಿಕ್ಷಣವನ್ನು ಸೃಷ್ಟಿಸುವುದು ಮತ್ತು ಶಿಕ್ಷಣದ ಮೂಲಕ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವುದಕ್ಕೆ ಒತ್ತನ್ನು ನೀಡಲಾಯಿತು.

ಮೂರನೆಯ ಪ್ರಮುಖ ಬೆಳವಣಿಗೆಯೆಂದರೆ, ಎನ್‌ಸಿಇಆರ್‌ಟಿಯ 'ಹತ್ತು ವರ್ಷಗಳ ಶಾಲಾ ಪಠ್ಯಕ್ರಮ–ಒಂದು ಚೌಕಟ್ಟು' ವರದಿಯ ಸಿದ್ಧತೆ. ಇದಕ್ಕೆ ಮುಖ್ಯ ಪ್ರೇರಣೆ ಮತ್ತು ಪ್ರೋತ್ಸಾಹ ನೀಡಿದ ಮೂರು ಅಂಶಗಳೆಂದರೆ: ಮೊದಲನೆಯದು ಶಿಕ್ಷಣ ಆಯೋಗ(1964–66)ದ ಶಿಫಾರಸುಗಳಿಗೆ ಸಂಬಂಧಿಸಿದ ಪಠ್ಯವಿಷಯಗಳನ್ನು ವಾಸ್ತವಗೊಳಿಸುವುದು; ಎರಡನೆಯದು ರಾಷ್ಟ್ರೀಯ ಶಿಕ್ಷಣ ಕಾರ್ಯನೀತಿ(1968)ಯ ಗೊತ್ತುವಳಿಯನ್ನು ಕಾರ್ಯಗತಗೊಳಿಸುವುದು; ಮೂರನೆಯದು ಶಿಕ್ಷಣವನ್ನು ಸಹವರ್ತಿ ವಿಷಯವಾಗಿಸಿದ 1976ರ ಸಂವಿಧಾನಾತ್ಮಕ ತಿದ್ದುಪಡಿಯನ್ನು ಗಮನದಲ್ಲಿ ಇಟ್ಟುಕೊಂಡು ಶಿಕ್ಷಣದ ಅಭಿವೃದ್ಧಿಯನ್ನು ಸುಲಲಿತಗೊಳಿಸುವುದು.

1988ರಲ್ಲಿ, ಎನ್‌ಸಿಇಆರ್‌ಟಿಯು 'ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ–ಒಂದು ಚೌಕಟ್ಟು'ವನ್ನು ಹೊರ ತಂದಿತು. ಇದಕ್ಕೆ ಜೋಡಿ ಉದ್ದೇಶಗಳಿದ್ದವು: ಪಠ್ಯಕ್ರಮದ ಕಾರ್ಯವಿಧಾನವನ್ನು ಸುಗಮಗೊಳಿಸುವುದು ಮತ್ತು ಸಾಂಸ್ಥಿಕ ಸುಧಾರಣೆಗಳಿಗೆ ಪ್ರೋತ್ಸಾಹ ನೀಡುವುದು. ಈ ಚೌಕಟ್ಟಿನಲ್ಲಿ ದೇಶವನ್ನು ಕಟ್ಟುವುದರಲ್ಲಿ ಪಠ್ಯಕ್ರಮದ ಪಾತ್ರವನ್ನು ಎತ್ತಿ ತೋರಿಸಲಾಯಿತು ಮತ್ತು ಸರಕಾರವು ಶಿಕ್ಷಕರಿಗೆ, ಶಾಲೆ ಮತ್ತು ಸ್ಥಳೀಯ ಶಿಕ್ಷಣ ಅಧಿಕಾರಿಗೆ ಸೂಕ್ತ ಪ್ರೋತ್ಸಾಹ ಮತ್ತು ಮಧ್ಯಸ್ಥಿಕೆ

Digitised by Bharatavani, CIIL

ನೀಡಬಹುದು ಎಂಬುದಾಗಿ ಶಿಫಾರಸು ಮಾಡಿತು. ಇಲ್ಲಿ ಹೆಚ್ಚು ಒತ್ತನ್ನು ನೀಡಲಾದುದು ಶಿಶು–ಕೇಂದ್ರಿತ ಬೋಧನೆ, ಮರು ಹೊಂದಾಣಿಕೆ ಮತ್ತು ಶಿಕ್ಷಕರಿಗೆ ಸೇವಾನಿರತ ತರಬೇತಿ, ಪರೀಕ್ಷಾ ಸುಧಾರಣೆ ಮತ್ತು ಸಾಂಸ್ಥಿಕ ಸೌಲಭ್ಯಗಳಿಗೆ ಕನಿಷ್ಠ ಪ್ರವೇಶವನ್ನು ಒದಗಿಸುವುದು. ಸ್ಥಳೀಯ ಸಮುದಾಯವು ಶಾಲೆಯ ಆಡಳಿತದಲ್ಲಿ ಪಾಲುಗೊಳ್ಳುವುದನ್ನು ಇದು ಶಿಫಾರಸು ಮಾಡಿತು.

2000 ಇಸವಿಯಲ್ಲಿ ಎನ್‌ಸಿಇಆರ್‌ಟಿಯು ಶಾಲಾಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಹೊರತಂದಿತು. ಈ ಚೌಕಟ್ಟು ಶಿಕ್ಷಣದ ರಾಷ್ಟ್ರೀಯ ಕಾರ್ಯನೀತಿಯನ್ನು(1986 ಮತ್ತು 1992) ಮತ್ತು 1988ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಪುನರಾವರ್ತಿಸಿದೆ. ಆದರೆ, ಮಾಧ್ಯಮಿಕ ಹಂತದವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ವಿಷಯವಾಗಿ ಕಲಿಸುವುದು ಮತ್ತು ಸಮಾಜವಿಜ್ಞಾನಗಳ ಬೋಧನೆಯನ್ನು ಸಂಯೋಜಿತ ರೀತಿಯಿಂದ ನಡೆಸುವುದು, ಸಂಸ್ಕೃತವನ್ನು ಅನೌಪಚಾರಿಕ ಮತ್ತು ಸಹ–ವ್ಯಾಸಂಗ ಚಟುವಟಿಕೆಗಳಾಗಿ ಕಲಿಸುವುದು ಇತ್ಯಾದಿ ಶಿಫಾರಸು ಮಾಡಿದೆ. ಅದು ಮೌಲ್ಯ ಶಿಕ್ಷಣ ಮತ್ತು ಧರ್ಮಗಳ ಕುರಿತಾದ ಬೋಧನೆಯನ್ನು ಕೂಡ ಒತ್ತಿಹೇಳಿದೆ. ಚೌಕಟ್ಟಿನ ಅವಲೋಕನದ ಪ್ರಕಾರ, 'ಶಿಕ್ಷಣ ವ್ಯವಸ್ಥೆಯನ್ನು ದೇಶದ ತಾತ್ವಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಪ್ರದಾಯದ ಗಟ್ಟಿ ನೆಲದ ಮೇಲೆ ಕಟ್ಟಿಕೊಳ್ಳಬೇಕು ಮತ್ತು ಅದರ ಅಗತ್ಯಗಳು ಮತ್ತು ಮಹತ್ವಾಕಾಂಕ್ಷೆಗಳಿಗೆ ಪ್ರತಿಕ್ರಿಯೆಯನ್ನು ತೋರಬೇಕು.' ಇಲ್ಲಿ ಪಠ್ಯಕ್ರಮದ ದೇಶೀಯತೆಯನ್ನು ಬಲವಾಗಿ ಪ್ರತಿಪಾದಿಸಲಾಗಿದೆ.

**ನಿರ್ಣಾಯಕ ಅಂಶ ಮತ್ತು ಕಾರ್ಯ ವಿಧಾನಗಳು:** ರಾಷ್ಟ್ರೀಯ ಪಠ್ಯಕ್ರಮವು ಕೆಲವು ಮೂಲಭೂತ ನಿರ್ಣಾಯಕ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಮತ್ತು ಅವುಗಳನ್ನು ಅನುಸರಿಸಬೇಕು. ಅದು ವಿಷಯಕ್ಕೆ ಸಂಬಂಧಿಸಿದ್ದಾಗಿರಬೇಕು(ಸಂಗತವಾಗಿ). ಈ ಸಂಗತತನವನ್ನು ಮೂರು ಹಂತಗಳಲ್ಲಿ ಕಾಣಬೇಕು: ಪಠ್ಯಕ್ರಮವು ವಯಸ್ಸಿಗೆ ಅನುಗುಣವಾಗಿ, ಪ್ರದೇಶಕ್ಕೆ ಅನುಗುಣವಾಗಿ ಮತ್ತು ವಿಷಯಕ್ಕೆ ಅನುಗುಣವಾಗಿ ಸಂಗತವಾಗಿರಬೇಕು. ಯಾವುದೇ ಪಠ್ಯಕ್ರಮದ ವಿಷಯಾಂಶವು ವಿದ್ಯಾರ್ಥಿಯ ಗ್ರಹಿಕೆಯ ಮಟ್ಟಕ್ಕಿಂತ ಮೀರಿದ್ದರೆ ಅದು ಅಸಂಗತ ಮತ್ತು ಅರ್ಥಹೀನವಾಗುತ್ತದೆ. ಇದೇ ರೀತಿ ಪಠ್ಯಕ್ರಮವು ಭೌಗೋಳಿಕ ಪ್ರದೇಶವನ್ನು ಗಮನದಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ. ಚಿರಾಪುಂಜಿಗೆ ಸಂಬಂಧಿಸಿದ ವಿಷಯವು ಜೈಸಲ್‌ಮೇರದ ವಿದ್ಯಾರ್ಥಿಗಳಿಗೆ ಸಂಗತವಾಗಲಿಕ್ಕಿಲ್ಲ. ಬೇರೆ ಮುಖ್ಯ ವಿಚಾರಗಳೆಂದರೆ: ವಿಸ್ತಾರ ಮತ್ತು ಆಳ. ಶಾಲಾ ಶಿಕ್ಷಣದ ಪ್ರಾರಂಭಿಕ ಹಂತಗಳಲ್ಲಿ ಪಠ್ಯಕ್ರಮವು ಆಳಕ್ಕಿಂತ ಹೆಚ್ಚಾಗಿ ವಿಸ್ತಾರವಾಗಿರಬೇಕು. ವಿದ್ಯಾರ್ಥಿ, ಹಿರಿಯ ಮಾಧ್ಯಮಿಕ ತರಗತಿಗಳನ್ನು ತಲುಪಿದಾಗ, ಅವನು/ಅವಳು ವಿಷಯದ ಆಳವನ್ನು ತಿಳಿದುಕೊಳ್ಳುವಂತಿರಬೇಕು. ಪಠ್ಯಕ್ರಮದ ರಚನೆಯ ಬೇರೆ ನಿರ್ಣಾಯಕ ಅಂಶಗಳೆಂದರೆ, ಸಂಬದ್ಧತೆ ಮತ್ತು ಜೋಡಣೆ. 1 ನೇ ತರಗತಿಯಿಂದ 12ನೇ ತರಗತಿಯವರೆಗೆ ಅಧ್ಯಯನ ಕೋರ್ಸ್‌ಗಳ ನಡುವೆ ಪ್ರಾಥಮಿಕ ಜೋಡಣೆ ಇರಬೇಕಾಗುತ್ತದೆ. ಇದೇ ರೀತಿ, ಕಲಿತ ವಸ್ತುಗಳಲ್ಲಿ ಸುಸಂಬದ್ಧತೆ ಇರಬೇಕು. ಸಮಾನತೆ ಮತ್ತು ಉತ್ಕೃಷ್ಟತೆಗಳು ಇನ್ನೆರಡು ನಿರ್ಣಾಯಕ ಅಂಶಗಳು. ಇವುಗಳನ್ನು ಪಠ್ಯಕ್ರಮದ ಚೌಕಟ್ಟನ್ನು ರೂಪಿಸುವಾಗ ಗಮನದಲ್ಲಿ ಇಟ್ಟುಕೊಳ್ಳಬೇಕು. ಕೆಲವು ವ್ಯಕ್ತಿಗಳಲ್ಲಿ ನ್ಯಾಯ ಮತ್ತು ಉತ್ಕೃಷ್ಟತೆಯ ನಡುವೆ ಅಡಗಿದ ವ್ಯತಿರಿಕ್ತತೆ ಕಾಣಬಹುದು. ಆದರೆ ಈ ಗೊಂದಲವನ್ನು ಚಿಂತನಾತ್ಮಕ ಅನುಸಂಧಾನವು ನಿವಾರಿಸಬಲ್ಲದು. ಇದರೊಂದಿಗೆ, ಮೇಲೆ ಉಲ್ಲೇಖಿಸಿರುವ ಏಳು ನಿರ್ಣಾಯಕ ಅಂಶಗಳಲ್ಲದೆ, ಪಠ್ಯಕ್ರಮದ ಬೆಳವಣಿಗೆಯು ನಿರ್ದಿಷ್ಟ ಕಾರ್ಯವಿಧಾನವನ್ನು ಅನುಸರಿಸುತ್ತದೆ.

ಪಠ್ಯಕ್ರಮವು ಶೈಕ್ಷಣಿಕ ಕಾರ್ಯ ವಿಧಾನದ ತುಡಿತವನ್ನು ಹೊಂದಿದೆ. ಪಠ್ಯಕ್ರಮದ ವಿನ್ಯಾಸ ಮತ್ತು ಚೌಕಟ್ಟು ಚಾಲ್ತಿಯಲ್ಲಿರುವ ಸಾಮಾಜಿಕ ವಾಸ್ತವತೆಗಳನ್ನು ಮತ್ತು ದೇಶದ ಭವಿಷ್ಯದ ದೃಷ್ಟಿಯನ್ನು ಕೇಂದ್ರೀಕೃತಗೊಳಿಸಿ ಇರಬೇಕಾಗುತ್ತದೆ. ನಿಯಮಿತ, ನಿರಂತರ ಮತ್ತು ಆವರ್ತ ಸ್ವರೂಪದ ಈ ಕಾರ್ಯ ವಿಧಾನವು ಪಠ್ಯಕ್ರಮದ ಕಾರ್ಯನೀತಿಯೊಂದಿಗೆ ಪ್ರಾರಂಭಗೊಳ್ಳುತ್ತದೆ. ನಂತರ ಅದು ವ್ಯಾಸಂಗ ರಚನೆ, ವ್ಯಾಸಂಗ ಕ್ರಮದ ಅಭಿವೃದ್ಧಿ, ಪಠ್ಯಕ್ರಮದ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಪುನರ್ವಿಮರ್ಶೆ ಮತ್ತು ಪರಿಷ್ಕರಣದೊಂದಿಗೆ ಮುಂದುವರಿಯುತ್ತದೆ.

**ಪಠ್ಯಕ್ರಮದ ಕಾರ್ಯನೀತಿ:** ಶಿಕ್ಷಣದ ವ್ಯಾಪಕ ನೋಟವು ಪಠ್ಯದ ಕಾರ್ಯನೀತಿಯನ್ನು ನಿರ್ಧರಿಸುತ್ತದೆ. ಅದು ಪಠ್ಯದ ಸಂದರ್ಭಗಳನ್ನು ಮತ್ತು ಹಿತಾಸಕ್ತಿಗಳನ್ನು ಗಮನಿಸಬೇಕಾಗುತ್ತದೆ. ಪಠ್ಯದ ಸಂದರ್ಭವು ಶೈಕ್ಷಣಿಕ ಸಂದರ್ಭವು ಉಪ ಗುಂಪು ಆಗಿದೆ ಮತ್ತು ಶೈಕ್ಷಣಿಕ ಸಂದರ್ಭವು ರಾಷ್ಟ್ರೀಯ ಸಮಾಜೋ–ಆರ್ಥಿಕ, ಸಾಂಸ್ಕೃತಿಕ ಮತ್ತು ತಂತ್ರಜ್ಞಾನದ ಸಂದರ್ಭದ ಉಪ ಗುಂಪು ಆಗಿದೆ. ಪಠ್ಯದ ಕಾರ್ಯನೀತಿಗಳು ಶೈಕ್ಷಣಿಕ ಕಾರ್ಯನೀತಿಗಳಿಂದ ಹೊರಟಿರುವಂತಹವುಗಳು. ಶೈಕ್ಷಣಿಕ ಕಾರ್ಯನೀತಿಗಳನ್ನು ರಾಷ್ಟ್ರೀಯ ಕಾರ್ಯನೀತಿಗಳು ನಿರ್ಧರಿಸುತ್ತವೆ.

ಪಠ್ಯಕ್ರಮದ ಕಾರ್ಯನೀತಿಗಳು ಹೆಚ್ಚಾಗಿ ಕೆಲವು ಮೂಲಭೂತ ಗ್ರಹಿಕೆಗಳನ್ನು ತಮ್ಮಷ್ಟಕ್ಕೆ ಆಧರಿಸಿ ಇರುತ್ತವೆ. ಉದಾಹರಣೆಗೆ ಪಠ್ಯಕ್ರಮ ಕ್ರಮದಲ್ಲಿ ಸಂಬದ್ಧತೆ, ನಿರಂತರತೆ, ವಿಸ್ತಾರ ಮತ್ತು ಆಳ ಇರಬೇಕು. ಅದು ಶಿಕ್ಷಣದ ಹಂತಕ್ಕೆ ಸೂಕ್ತ ರೀತಿಯದ್ದಾಗಿ ಇರಬೇಕು, ಅದರಲ್ಲಿ ಕಲಿಕೆಯ ವಿಭಿನ್ನ ವಿಷಯಾಂಶಗಳಿಗೆ ಸಂಬಂಧಿಸಿದಂತೆ ಸಮತೋಲನ ಮತ್ತು ಅನುಪಾತ ಇರಬೇಕು. ಅದರಲ್ಲಿ ಪ್ರಗತಿಪರ ಸಾಂದರ್ಭಿಕತೆ ಇರಬೇಕು. ಬಹುಪಾಲು ಎಲ್ಲ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟುಗಳು ತಾವು ಗಮನದಲ್ಲಿ ಇಟ್ಟುಕೊಂಡಿರುವ ಮೂರು ಮೂಲಭೂತ ಗ್ರಹಿಕೆಗಳನ್ನು ಬಹಿರಂಗ ಪಡಿಸಿವೆ: ಅವುಗಳೆಂದರೆ ಕಲಿಯುವ ವ್ಯಕ್ತಿಯ ಬೌದ್ಧಿಕ, ಭಾವನಾತ್ಮಕ ಮತ್ತು ಗ್ರಹಿಕಾ ಪ್ರಗತಿ, ತಿಳಿವಳಿಕೆಗೆ ಸಂಬಂಧಿಸಿದ ವಿಷಯಗಳು, ಅದರ ರಚನೆ, ಬೆಳವಣಿಗೆ ಮತ್ತು ಬೆಳೆಯುವ ಎಲ್ಲೆಕಟ್ಟು, ಸಾಮಾಜಿಕ ವಾಸ್ತವತೆ ಮತ್ತು ರಾಷ್ಟ್ರೀಯ ದೃಷ್ಟಿ..

Digitised by Bharatavani, CIIL

ಪಠ್ಯ ಕಾರ್ಯನೀತಿಗಳಿಗೆ ಸಂಬಂಧಿಸಿದಂತೆ, ಶಾಪೋರ್ ರಾಸೆಖ್(2001, ಪುಟ:9) ಅವರು ಮೂರು ಮುಖ್ಯ ಸವಾಲುಗಳ ರೂಪುರೇಷೆಯನ್ನು ನೀಡಿದ್ದಾರೆ. ಅವನ್ನು ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ: ಜಾಗತಿಕ ಸ್ವರೂಪ ಹೊಂದಿರುವಂತಹವು, ಶಿಕ್ಷಣಕ್ಕೆ ಆಂತರಿಕ ಮತ್ತು ಅಂತರ್ಗತವಾಗಿ ಇರುವಂತಹವು ಮತ್ತು ಒಂದು ರಾಷ್ಟ್ರಕ್ಕೆ ವಿಶಿಷ್ಟವಾಗಿರುವ ಸವಾಲುಗಳು. ರಾಸೆಖ್ ಅವರು ಪಟ್ಟಿ ಮಾಡಿರುವ ಜಾಗತಿಕ ಸವಾಲುಗಳೆಂದರೆ(2001): ದೇಶಗಳ ನಡುವೆ ಹೆಚ್ಚುತ್ತಿರುವ ಪರಸ್ಪರ ಪ್ರತಿಕ್ರಿಯೆ ಮತ್ತು ಪರಸ್ಪರಾವಲಂಬನ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಬೆಳವಣಿಗೆಯ ಹೆಚ್ಚುತ್ತಿರುವ ಪ್ರಗತಿ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಬಹುಸಂಸ್ಕೃತಿತ್ವ, ಖಿನ್ನತೆ, ಅಸುರಕ್ಷತೆ, ಮತ್ತು ಹಿಂಸೆಯ ಸಾಮಾನ್ಯ ಭಾವನೆ, ಸನ್ನಡತೆ ಮತ್ತು ನೀತಿಗೆ ಸಂಬಂಧಿಸಿದ ಮೌಲ್ಯಗಳ ಕುಸಿತ.

'ನಾವು ನಮ್ಮ ಮಕ್ಕಳಿಗಾಗಿ ಹಿಂದೆ ಬಿಡುತ್ತಿರುವ ಜಗತ್ತು ನಾವು ಈ ಜಗತ್ತಿಗೆ ಬಿಟ್ಟು ಹೋಗುತ್ತಿರುವ ಮಕ್ಕಳನ್ನು ಅವಲಂಬಿಸಿ ಇರುತ್ತದೆ' ಎಂದು ಹೇಳಲಾಗಿದೆ(ಜಾಗತಿಕ ಶಿಕ್ಷಣ, ವರದಿ 1998). ಪ್ರಸ್ತುತ ಜಗತ್ತು ಮೂರು ಗುಣಲಕ್ಷಣಗಳನ್ನು ಹೊಂದಿದೆ: ವಿಶ್ವವ್ಯಾಪಿ ಜಗತ್ತು, ಧ್ರುವೀಕರಣಗೊಂಡ ಜಗತ್ತು, ಮತ್ತು ತಂತ್ರಜ್ಞಾನದ ಜಗತ್ತು. ಈ ಜಾಗತಿಕ ಪ್ರವೃತ್ತಿಗಳಿಗೆ ಅನುಸರಣೆಯಾಗಿ ಜೀವಂತ ಸ್ವರೂಪವಾಗಿ ಪಠ್ಯ ಕಾರ್ಯನೀತಿಗಳು ಇರಬೇಕಾಗುತ್ತವೆ ಮತ್ತು ಇದನ್ನು ಎದುರಿಸಲು ಕಲಿಯುವವರನ್ನು ಸಿದ್ಧಗೊಳಿಸಬೇಕಾಗಿದೆ.

**ಪಠ್ಯಕ್ರಮ ರಚನೆ:** ಪಠ್ಯಕ್ರಮದ ಬೆಳವಣಿಗೆಯ ಎರಡನೆಯ ವಿಷಯಾಂಶವೆಂದರೆ ಅಧ್ಯಯನದ ವಿವಿಧ ಹಂತಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳ ವೈವಿಧ್ಯತೆಗಳನ್ನು ಒದಗಿಸುವುದು. ಉದಾಹರಣೆಗೆ ಪೂರ್ವ–ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ, ಮತ್ತು ಹಿರಿಯ ಮಾಧ್ಯಮಿಕ. ಎನ್‌ಸಿಎಫ್‌ಎಸ್‌ಇ(2000)ಯು 1 ಮತ್ತು 2ನೇ ತರಗತಿಗಳಿಗೆ ಬರೀ ಮೂರು ಅಧ್ಯಯನ ವಿಷಯಗಳನ್ನು ಮಾತ್ರ, ಅಂದರೆ ಭಾಷೆ, ಗಣಿತ ಮತ್ತು ಆರೋಗ್ಯ ಹಾಗೂ ಉತ್ಪನ್ನಕಾರಿ ಜೀವನ ಕಲೆಯನ್ನು ಒದಗಿಸುತ್ತದೆ. ಪ್ರಾರಂಭದ ಎರಡು ವರ್ಷಗಳನ್ನು ಮನೆಯಿಂದ ಶಾಲೆಗೆ ಬದಲಾಯಿಸಿಕೊಳ್ಳುವ ಪ್ರಕ್ರಿಯೆಗೆ ಅವಕಾಶವನ್ನು ಮಾಡಿಕೊಡುವುದರೊಂದಿಗೆ, ಮೂಲ ಭಾಷೆಯ ಅಭಿವೃದ್ಧಿ ಮತ್ತು ಗಣಿತದ ಸಮರ್ಥನೆಗೆ ಕೂಡ ಮೀಸಲಾಗಿ ಇಡಲಾಗುತ್ತದೆ. ಕಲಿಯುವವರಿಗೆ ಅವರ ವಯಸ್ಸಿಗೆ ಸೂಕ್ತವಾಗುವ ವಿಧಾನದಿಂದ ಆರೋಗ್ಯದ ಮೂಲಾಂಶಗಳನ್ನು ತಿಳಿಸಿಕೊಡುವುದು ಆರೋಗ್ಯ ಹಾಗೂ ಉತ್ಪನ್ನಕಾರಿ ಬದುಕಿನ ಕಲೆಯ ನಿರೀಕ್ಷೆಯಾಗಿದೆ. ಪರಿಸರ ಅಧ್ಯಯನಗಳ ಕಲಿಕೆಯನ್ನು ಭಾಷೆ ಮತ್ತು ಅಂಕಗಣಿತದೊಂದಿಗೆ ಸಂಯೋಜನೆಗೊಳಿಸಲಾಗಿದೆ. ಮೊದಲ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳು ಸಂಗೀತ, ನಾಟಕ, ಚಿತ್ರಕಲೆ ಮತ್ತು ಆವೆಮಣ್ಣಿನ (ಜೇಡಿ ಮಣ್ಣಿನ) ಮಾದರಿಗಳನ್ನು ಕೂಡ ತಿಳಿದುಕೊಳ್ಳುತ್ತಾರೆ.

3 ರಿಂದ 5 ನೇ ತರಗತಿಗಳಲ್ಲಿ ನಾಲ್ಕು ವಿಷಯಗಳನ್ನು ಸೂಚಿಸಲಾಗಿದೆ, ಅವುಗಳೆಂದರೆ ಭಾಷೆ, ಅಂಕಗಣಿತ, ಪರಿಸರ ಅಧ್ಯಯನಗಳು ಮತ್ತು ಆರೋಗ್ಯ ಹಾಗೂ ಉತ್ಪನ್ನಕಾರಿ ಜೀವನ ಕಲೆ. ಇದರಿಂದ ಪಠ್ಯಕ್ರಮದ ವ್ಯಾಪ್ತಿಯು ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರಗಳನ್ನು ಜೊತೆಗೂಡಿಸಿಕೊಂಡಿರುವ ಪರಿಸರ ಅಧ್ಯಯನಗಳನ್ನು(ಭಾಗ 1 ಮತ್ತು 2) ಒಳಗೊಳ್ಳುವಷ್ಟು ಹೆಚ್ಚು ವಿಸ್ತಾರಗೊಂಡಿರುವುದನ್ನು ನಾವು ಕಾಣುತ್ತೇವೆ.

ನಾವು 6, 7 ಮತ್ತು 8ನೇ ತರಗತಿಗಳಿಗೆ ಮುಂದುವರಿಯುತ್ತಿದ್ದಂತೆ ವ್ಯಾಪ್ತಿ ವಿಸ್ತರಿಸಿಕೊಳ್ಳುತ್ತದೆ ಮತ್ತು ವಸ್ತು ಆಳವಾಗುತ್ತದೆ. ಅಂಕಗಣಿತದೊಂದಿಗೆ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಸುವ ಹಂತ ಇದಾಗಿದೆ. ಆರೋಗ್ಯ ಮತ್ತು ಉತ್ಪನ್ನಕಾರಿ ಬದುಕಿನ ಕಲೆಯ ವಿಷಯವು 3 ವಿಷಯ ಕ್ಷೇತ್ರಗಳಲ್ಲಿ ಕವಲೊಡೆಯುತ್ತದೆ, ಅವುಗಳೆಂದರೆ ಕಾರ್ಯಾನುಭವ, ಕಲಾ ಶಿಕ್ಷಣ ಮತ್ತು ಆರೋಗ್ಯ ಹಾಗೂ ದೈಹಿಕ ಶಿಕ್ಷಣ. ಪರಿಸರ ಅಧ್ಯಯನಗಳು 1. ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು 2. ಸಮಾಜ ವಿಜ್ಞಾನ ಇವುಗಳಿಗೆ ಸಂಬಂಧಿಸಿದ ವಿಶೇಷ ಕಲಿಕೆಯನ್ನು ಒಳಗೊಂಡಿರುವ ಹಂತ ಇದು. ಇದೇ ವಿಷಯಗಳ ಗುಂಪು ಇನ್ನೂ ಹೆಚ್ಚಿನ ಪರಿವರ್ತನೆಗಳೊಂದಿಗೆ ಮಾಧ್ಯಮಿಕ ತರಗತಿಗಳಿಗೆ(9 ಮತ್ತು 10) ಮುಂದುವರಿಯುತ್ತದೆ. ಇದರ ನಂತರ 11 ಮತ್ತು 12ನೇ ತರಗತಿಗಳಲ್ಲಿ ಪ್ರವಾಹ ರೂಪದ ಚಲನೆ ಪ್ರಾರಂಭಗೊಳ್ಳುತ್ತದೆ.

**ಪಠ್ಯಕ್ರಮದ ಚೌಕಟ್ಟು:** ಪಠ್ಯಕ್ರಮದ ಚೌಕಟ್ಟು ಪಠ್ಯಕ್ರಮದಿಂದ ಭಿನ್ನವಾಗಿದೆ. 1988ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣದ ಗುರಿಗಳನ್ನು ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ಅಧ್ಯಯನದ ಕಾರ್ಯಯೋಜನೆಗಳನ್ನು, ಬೋಧನಾ ಕೌಶಲ್ಯಗಳು, ಬೋಧನೆಯ ಮಾಧ್ಯಮ ಮತ್ತು ಬೊಧನೆಯ ಸಮಯವನ್ನು ಒದಗಿಸಲಾಗಿದೆ. ಪಠ್ಯಕ್ರಮದ ಚೌಕಟ್ಟು ಶಿಕ್ಷಣದ ಅನೇಕ ಹಂತಗಳಲ್ಲಿ ಅಧ್ಯಯನದ ಕಾರ್ಯಯೋಜನೆಯನ್ನು ಆಧರಿಸಿ ಕಾರ್ಯರೂಪಗೊಳಿಸುತ್ತದೆ ಮತ್ತು ವಾಸ್ತವಗೊಳಿಸುತ್ತದೆ. ಅದು ಪ್ರತಿಯೊಂದು ವಿಷಯ, ಕಾರ್ಯ ವ್ಯವಹಾರದ ಕೌಶಲಗಳು ಮತ್ತು ಮೌಲ್ಯಮಾಪನ ಕಾರ್ಯವಿಧಾನಗಳಿಗೆ ಮಹತ್ವವನ್ನು ಮತ್ತು ಬೋಧನಾ ಸಮಯವನ್ನು ಒದಗಿಸುತ್ತದೆ.

ರಾಷ್ಟ್ರೀಯ ಪಠ್ಯಕ್ರಮ 2000, ಅನೇಕ ವಿಷಯಗಳಲ್ಲಿ ದೂರ ಸರಿದಿದೆ. ಇದರಲ್ಲಿ ಪ್ರಮುಖವಾದವುಗಳಲ್ಲಿ ಒಂದು, ಪ್ರತಿಯೊಂದು ವಿಷಯಕ್ಕೆ ಅಗತ್ಯವಿರುವ ಬೋಧನೆಯ ಸಮಯದ ಉಲ್ಲೇಖವಿಲ್ಲದಿರುವುದು. ಇದನ್ನು ಕೈಬಿಟ್ಟಿರುವುದರ ಹಿನ್ನೆಲೆಯೇನೆಂದರೆ ಅದು ಇನ್ನೂ ಹೆಚ್ಚು ನಮ್ಯವಾಗಿರಬೇಕು ಎನ್ನುವುದು. 1998ರ ಪಠ್ಯಕ್ರಮದ ಚೌಕಟ್ಟಿನಲ್ಲಿ ಬೋಧನೆಯ ಸಮಯಕ್ಕೆ ಮತ್ತು ವಿಭಿನ್ನ ಕ್ಷೇತ್ರಗಳಿಗೆ ನಿಗದಿಪಡಿಸಲಾದ ಸಮಯಕ್ಕೆ ನಿರ್ದಿಷ್ಟ ರೂಪುರೇಖೆಯನ್ನು ನೀಡಲಾಗಿದೆ. ಈ ರೀತಿಯ ವಿಷಯಕ್ಕೆ ಅನುಗುಣವಾದ ನಿಗದಿಯನ್ನು 2000ದ ಪಠ್ಯಕ್ರಮದ ಚೌಕಟ್ಟಿನಲ್ಲಿ ಈ ಬಗೆಯ ಶಿಫಾರಸು ಮಾಡಲಾಗಿಲ್ಲ. ಈ ನಿಟ್ಟಿನಲ್ಲಿ ಸಂಸ್ಥೆಗಳು ನಿರ್ಧಾರ ಕೈಗೊಳ್ಳುವುದು ಉಚಿತವೆಂದು ತಿಳಿದು ಕೈಬಿಡಲಾಗಿದೆ.

Digitised by Bharatavani, CIIL

ಈ ನಿರ್ಧಾರವು ವಿಕೇಂದ್ರೀಕರಣದ ತತ್ವದೊಂದಿಗೆ ನಡೆಸಲಾದ ಒಪ್ಪಂದವಾಗಿದೆ. ಲ್ಯಾಟಿನ್ ಅಮೇರಿಕೆಯ ಸಂದರ್ಭವೊಂದರ ಚರ್ಚೆಯಲ್ಲಿ ಬ್ರಾಸ್ಲಾವ್‌ಸ್ಕಿ(2000) ಕೆಲವು ಪ್ರವೃತ್ತಿಗಳನ್ನು ರೂಪಿಸಿದ್ದಾರೆ. ಇವು ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಅಸ್ತಿತ್ವದಲ್ಲಿ ಇವೆ. ಸಮಯದ ನಿಗದಿಗೆ ಸಂಬಂಧಿಸಿದವುಗಳಲ್ಲಿ ವೇಳಾಪಟ್ಟಿಯ ಸೂಚಿಯನ್ನು ಹೆಚ್ಚು ನಮ್ಯಗೊಳಿಸಿರುವುದು ಸೇರುತ್ತದೆ; ಮತ್ತು ಹಿಂದೆ ಹಂಚಿ ಬಿಡಲಾದ ವೇಳೆಯಿಂದ ವಿಸ್ತರಿಸಲಾದ ವೇಳೆಯನ್ನು ಶಾಲೆಗಳ ನಿರ್ಧಾರಕ್ಕೆ ಬಿಡಲಾಗಿದೆ.

ಸಂಪೂರ್ಣವಾಗಿ ನೂರ ಎಂಭತ್ತು ದಿನಗಳನ್ನು ಬೋಧನಾ ಉದ್ದೇಶಗಳಿಗಷ್ಟೇ ಬಳಸಿಕೊಳ್ಳಬಹುದೆಂದು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ(2000, ಪುಟ 76–77) ಉಲ್ಲೇಖಿಸಲಾಗಿದೆ. ಹಾಗಿದ್ದರೂ, ಪೂರ್ವ–ಶಾಲಾ ಕೇಂದ್ರಗಳು 3 ಗಂಟೆಗಳು, ಪ್ರಾಥಮಿಕ ಶಾಲೆಗಳು 5 ಗಂಟೆಗಳು, ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು 6 ಗಂಟೆಗಳು(ಪ್ರತಿಯೊಂದು ತರಗತಿಯ ಅವಧಿ ನಲ್ವತ್ತು ನಿಮಿಷಗಳು) ಕಾರ್ಯನಿರ್ವಹಿಸಬೇಕೆಂದು ಉಲ್ಲೇಖಿಸಲಾಗಿದೆ.

**ಪಠ್ಯಕ್ರಮವನ್ನು ಕಾರ್ಯಗತಗೊಳಿಸುವಿಕೆ:** ಪಠ್ಯಕ್ರಮವನ್ನು ಕಾರ್ಯಗತಗೊಳಿಸುವುಕೆ ಎಂದರೆ ವಿವಿಧ ಚಟುವಟಿಕೆಗಳನ್ನು ಪರಸ್ಪರ ಜೋಡಿಸಿಕೊಳ್ಳುವ ಅಗತ್ಯವನ್ನು ಹೊಂದಿರುವ ಕೌಶಲ ಮತ್ತು ನಿರ್ವಹಣಾ ಕಾರ್ಯ. ಉತ್ತಮ ಮತ್ತು ಪರಿಣಾಮಕಾರಿಯಾದ ಪರಿಪಾಲನೆಯ ಮೂಲಭೂತ ಸೌಕರ್ಯಗಳು, ಬೋಧನೆ–ಕಲಿಕೆಯ ವಸ್ತುಗಳು ಮತ್ತು ಶಿಕ್ಷಕರ ತರಬೇತಿಯನ್ನು ಆಧರಿಸಿ ಇರುತ್ತದೆ. ಶೈಕ್ಷಣಿಕ ಆಡಳಿತಗಾರರು ಮತ್ತು ಮೇಲ್ವಿಚಾರಕರ ಧೋರಣೆಗಳು ಕೂಡ ಬಹಳ ಮುಖ್ಯ. ಈ ವಾಸ್ತವಾಂಶಗಳು ಒಟ್ಟಾಗಿ ಮತ್ತು ಸಮಾನ ಪಾತಳಿಯಲ್ಲಿ ಕೆಲಸ ಮಾಡದೇ ಇದ್ದರೆ ಕಾರ್ಯಗತಗೊಳಿಸುವಿಕೆಯಲ್ಲಿ ಯಾವಾಗಲೂ ಅಂತರಗಳು ಇರುತ್ತವೆ. ಪರಿಪಾಲನೆಗೆ ಅಗತ್ಯವಿರುವ ಅವಶ್ಯಕ ಅಂಶಗಳು ತಕ್ಕ ಸಮಯಕ್ಕೆ ತಕ್ಕ ರೀತಿಯಿಂದ ಲಭ್ಯವಿರುವಂತೆ ಶಿಕ್ಷಣ ಯೋಜನಕಾರರು ನೋಡಿಕೊಳ್ಳಬೇಕು. ಕೆಲವು ಆವಶ್ಯಕ ಅಂಶಗಳು ಭೌತಿಕವಾಗಿ ಇರುತ್ತವೆ. ಉದಾಹರಣೆಗೆ ಪಠ್ಯಪುಸ್ತಕಗಳು, ಮೂಲಭೂತ ಸೌಕರ್ಯಗಳು, ಬೋಧನೆ–ಕಲಿಕೆಯ ವಸ್ತುಗಳು, ಇತ್ಯಾದಿ. ಇನ್ನಿತರ ಅಂಶಗಳು ಸಾಮರ್ಥ್ಯಕ್ಕೆ ಸಂಬಂಧಿಸಿದ್ದಾಗಿವೆ. ಉದಾಹರಣೆಗೆ ಶಿಕ್ಷಕರ ಮಾನಸಿಕ ಸಿದ್ಧತೆ, ಅವರ ಬೋಧನಾ ಶೈಲಿ ಮತ್ತು ಶೈಕ್ಷಣಿಕ ಆಡಳಿತಗಾರರ ಧೋರಣೆ. ಆಡಳಿತಗಾರರಿಗೆ ಸಾಕಷ್ಟು ಅರಿವು, ಪುನರ್ಮನನ ಹಾಗೂ ತರಬೇತಿಗಳ ಅಗತ್ಯವಿದೆ.

ಕಾರ್ಯಗತಗೊಳಿಸುವಿಕೆಯು ಒಂದು ವ್ಯವಸ್ಥೆಯಾಗಿ ಕಾಣಬಹುದು. ಈ ವ್ಯವಸ್ಥೆಯಲ್ಲಿ ಅನೇಕ ಉಪ–ವ್ಯವಸ್ಥೆಗಳು ಇರುತ್ತವೆ. ಉದಾಹರಣೆಗೆ ಪಠ್ಯಕ್ರಮದ ಅಭಿವೃದ್ಧಿ, ಪಠ್ಯಪುಸ್ತಕಗಳ ತಯಾರಿ, ಮತ್ತು ವಿದ್ಯಾರ್ಥಿಗಳಿಗೆ ಬೆಂಬಲ ನೀಡುವ ವಸ್ತುಗಳು, ಹೊಸ ವಿಷಯಾಂಶಗಳಲ್ಲಿ ಶಿಕ್ಷಕರಿಗೆ ತರಬೇತಿ, ಸೇವಾಪೂರ್ವ ಶಿಕ್ಷಕ ಶಿಕ್ಷಣದಲ್ಲಿ ಸೂಕ್ತ ರೀತಿಯ ಹಸ್ತಕ್ಷೇಪಗಳು, ಮೇಲ್ವಿಚಾರಕ ಮತ್ತು ಆಡಳಿತ ಸಿಬ್ಬಂದಿವರ್ಗಕ್ಕೆ ಪ್ರಶಿಕ್ಷಣ ಮತ್ತು ತರಬೇತಿ. ಶಾಲೆಗಳಲ್ಲಿ ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ಶಿಕ್ಷಕರು ಲಭ್ಯವಿಲ್ಲದೇ ಹೋದರೆ ಮತ್ತು ಕನಿಷ್ಟ ಸೌಲಭ್ಯಗಳನ್ನು ನೀಡದೇ ಹೋದರೆ, ವ್ಯಾಸಂಗ ಕ್ರಮದ ಬದಲಾವಣೆಗಳ ಕುರಿತು ಅನೇಕ ಅಧಿಕಾರಿಗಳು ತಿಳಿಯದೇ ಹೋದರೆ ಮತ್ತು ವ್ಯಾಸಂಗ ಕ್ರಮದಲ್ಲಿನ ಬದಲಾವಣೆಯ ಸ್ವರೂಪ ಕುರಿತು ಶಿಕ್ಷಕರು ಸಂಪೂರ್ಣವಾಗಿ ತಿಳಿವಳಿಕೆಯನ್ನು ಹೊಂದದಿದ್ದರೆ ಅದರ ಕಾರ್ಯಗತಗೊಳಿಸುವಿಕೆಯು ಬರೀ ತೋರಿಕೆಯದ್ದಾಗಿರುತ್ತದೆ.

**ಪಠ್ಯಕ್ರಮದ ಪುನರ್ವಿಮರ್ಶೆ ಮತ್ತು ಪರಿಷ್ಕರಣ:** ಎಷ್ಟೇ ಅದ್ಭುತವಾಗಿ ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ ವ್ಯಾಸಂಗ ಕ್ರಮವಾದರೂ ಅದರ ಪರಿವೀಕ್ಷಣೆ, ಪುನರ್ವಿಮರ್ಶೆ ಮತ್ತು ಪರಿಷ್ಕರಣವನ್ನು ಸೂಕ್ತ ರೀತಿಯಲ್ಲಿ ನಡೆಸಲೇಬೇಕು. ಪರಿವೀಕ್ಷಣೆಯೆಂದರೆ ಕಾರ್ಯಕ್ರಮವೊಂದರ ಚಟುವಟಿಕೆಗಳು ಮತ್ತು ಫಲಿತಾಂಶಗಳ ದತ್ತಾಂಶ ಸಂಗ್ರಹ. ಪುನರ್ವಿಮರ್ಶೆಯನ್ನು ಪರಿವೀಕ್ಷಣೆಯ ಆಧಾರದಲ್ಲಿ ನಡೆಸಲಾಗುತ್ತದೆ. ಇದು ಪರಿಷ್ಕರಣಕ್ಕೆ ದಾರಿ ಮಾಡಿಕೊಡಬಹುದು. ಪರಿಷ್ಕರಣದಲ್ಲಿ ಹೊಂದಾಣಿಕೆ ಮತ್ತು ಸುಧಾರಣೆಗಳು ಇರುತ್ತವೆ. ಉದ್ದೇಶಗಳು ಮತ್ತು ಸಾಧನೆಗಳ ನಡುವೆ ಅಂತರವಿದ್ದಾಗ ಪರಿಷ್ಕರಣವನ್ನು ಕಾರ್ಯಗತಗೊಳಿಸಬೇಕು. ಇದು ಉದ್ದೇಶಗಳ ಮಟ್ಟದಲ್ಲಿರಬಹುದು, ಪಠ್ಯವಸ್ತುವಿನ (ಸಿಲೆಬಸ್) ಮಟ್ಟದಲ್ಲಿ ಅಥವಾ ಬೆಂಬಲದ ಮಟ್ಟದಲ್ಲಿ(ಪಠ್ಯಪುಸ್ತಕಗಳು ಮತ್ತು ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳು) ಇರಬಹುದು.

**ಅಭಿವೃದ್ಧಿ ಮಾದರಿಗಳು:** ಬೋಧನೆಯನ್ನು ಮಾಡುವವರೇ ಪಠ್ಯಕ್ರಮವನ್ನು ವಿನ್ಯಾಸಗೊಳಿಸಬೇಕು ಎಂದು ಹೇಳುವ ಕ್ರಮ ಇದೆ. ಸೈದ್ಧಾಂತಿಕವಾಗಿ ಇದು ಸರಿಯೆಂದು ಕಾಣುತ್ತದೆ. ಆದರೆ ಪ್ರಾಯೋಗಿಕವಾಗಿ, ಇದು ವ್ಯತ್ಯಾಸಗಳಿಗೆ ಅವಕಾಶ ಮಾಡಿಕೊಡುವುದರಿಂದ ಅನೇಕ ಮಂದಿ ಇದನ್ನು ಒಪ್ಪಿಕೊಳ್ಳುವುದಿಲ್ಲ. ಹಾಗಾಗಿ ಕೇಂದ್ರ ಸಂಸ್ಥೆಗಳೇ ಪ್ರಾದೇಶಿಕ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಬೇಕೆಂದು ಶಿಫಾರಸು ಮಾಡಲಾಗಿದೆ. ಈ ಅನುಸಂಧಾನವು ಬ್ರಾಸ್‌ಲೆಸ್ಕಿ(2001) ಸೂಚಿಸಿದ ಜಾಲದ ಒಂದು ಅಂಶವನ್ನು ರೂಢಿಗೆ ತರುತ್ತದೆ.

ಪಠ್ಯಕ್ರಮದ ಅಭಿವೃದ್ಧಿಯಲ್ಲಿ ಬ್ರಾಸ್‌ಲೆಸ್ಕಿ ಎರಡು ವಿಧಗಳ ಕ್ರಿಯಾ ನಿದರ್ಶನಗಳನ್ನು ಪ್ರಸ್ತಾಪಿಸುತ್ತಾರೆ. ಅದರಲ್ಲಿ ಮೊದಲನೆಯದನ್ನು ಅವರು ಸಮುದಾಯ ಕ್ರಿಯಾ ನಿದರ್ಶನವೆಂದು ಕರೆಯುತ್ತಾರೆ. ಇದರಲ್ಲಿ ಸ್ಥಳೀಯ ಅಧಿಕಾರಿಗಳು ಪಠ್ಯಕ್ರಮವನ್ನು ವಿನ್ಯಾಸಗೊಳಿಸುತ್ತಾರೆ ಮತ್ತು ಅದನ್ನು ಅಭಿವೃದ್ಧಿ ಪಡಿಸುತ್ತಾರೆ. ಅವರೇ ಶೈಕ್ಷಣಿಕ ಉದ್ಯಮದ ನಿರ್ವಹಣೆಯನ್ನು ಕೈಗೊಳ್ಳುತ್ತಾರೆ. ಎರಡನೆಯದು ರಾಜ್ಯ ನಿಯಂತ್ರಿತ ಕ್ರಿಯಾ ನಿದರ್ಶನ. ಇದರಲ್ಲಿ ಶೈಕ್ಷಣಿಕ ಉದ್ಯಮವನ್ನು ಸರಕಾರ ನಿಯಂತ್ರಿಸುತ್ತದೆ. ಇದರಲ್ಲಿ ಶೈಕ್ಷಣಿಕ ರಚನೆ, ಪಠ್ಯಕ್ರಮ, ವಿಷಯಾಂಶ, ಕಾರ್ಯವಿಧಾನಗಳು ಮತ್ತು ಮೌಲ್ಯಮಾಪನ ಸೇರಿರುತ್ತವೆ. ಭಾರತದಲ್ಲಿ, ಪರಿಸ್ಥಿತಿಯು ಬೇರೆ ಬೇರೆ ಕಾಲಾವಧಿಗಳಲ್ಲಿ ಬೇರೆ ಬೇರೆ ರೀತಿಯದ್ದಾಗಿ

Digitised by Bharatavani, CIIL

ಇರುತ್ತದೆ. 42ನೇ ತಿದ್ದುಪಡಿಗಿಂತ ಮೊದಲು, ಶಾಲಾ ಶಿಕ್ಷಣವು ರಾಜ್ಯಗಳಿಗೆ ಸಂಬಂಧಪಟ್ಟಿತ್ತು. ಶಾಲಾ ಶಿಕ್ಷಣದ ಸ್ವರೂಪ ಮತ್ತು ವಿಷಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಕೇಂದ್ರ ಸರಕಾರ ನೇರವಾಗಿ ಮಧ್ಯ ಪ್ರವೇಶಿಸುತ್ತಲೇ ಇರಲಿಲ್ಲ. ಆದರೆ ಅದು ಶಾಲಾ ಶಿಕ್ಷಣಕ್ಕೆ ನಿರ್ದೇಶನಗಳನ್ನು ಒದಗಿಸುತ್ತಿತ್ತು. ಶೈಕ್ಷಣಿಕ ಕಾರ್ಯನೀತಿಗಳ ಚರ್ಚೆ ಮತ್ತು ಶೋಧನಾತ್ಮಕ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿರುವ ಶೈಕ್ಷಣಿಕ ಚಟುವಟಿಕೆಗಳಿಗೆ ಆರ್ಥಿಕ ನೆರವನ್ನು ನೀಡುವ ಮೂಲಕ ಅದರ ನಿರ್ದೇಶನವಿರುತ್ತಿತ್ತು. ಆನಂತರ, ಕೇಂದ್ರ ಸರಕಾರವು ಕ್ರಿಯಾಶೀಲ ಸಹಭಾಗಿಯಾಗಿರಬೇಕು ಮತ್ತು ವೇಗವರ್ಧಕ ಹಾಗೂ ನೆರವಾಗುವ ಪಾತ್ರವನ್ನು ನಿರ್ವಹಿಸಬೇಕೆಂದು ಬಯಸಲಾಯಿತು. ಹೀಗಾಗಿ, ಶಿಕ್ಷಣವನ್ನು ಸಹವರ್ತಿ ಪಟ್ಟಿಯಲ್ಲಿ ಸೇರಿಸಲಾಯಿತು. ಇದು ರಾಜ್ಯಗಳೊಂದಿಗಿನ ಪಾಲುದಾರಿಕೆಯೊಂದಿಗೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ನಾವೀನ್ಯಪೂರ್ಣ ಬದಲಾವಣೆಗಳನ್ನು ನಡೆಸಲು ಕೇಂದ್ರ ಸರಕಾರಕ್ಕೆ ಅವಕಾಶವನ್ನು ಒದಗಿಸಿತು.

ವಿಕಾಸಾತ್ಮಕವಾದ ಮಾದರಿಗಳ ಮೇಲೆ ಕ್ಷಿಪ್ರ ದೃಷ್ಟಿಯನ್ನು ಹರಿಸಿದಾಗ ಕಳೆದ ಹಲವು ವರ್ಷಗಳಲ್ಲಿ ವ್ಯಾಸಂಗ ಕ್ರಮದ ಮೇಲೆ ಪರಿಣಾಮ ಬೀರಿದ ವಿವಿಧ ಪ್ರವೃತ್ತಿಗಳು ಹುಟ್ಟಿಕೊಂಡಿರುವುದು ಕಂಡುಬರುತ್ತದೆ. ನಾವೀಗ ಬಾಬ್ಬಿಟ್ಟ್(1918) ಮತ್ತು ಟೈಲರ್(1949) ಪ್ರತಿನಿಧಿಸುವ ಮೊದಲ ಪ್ರವೃತ್ತಿಯತ್ತ ದೃಷ್ಟಿ ಬೀರೋಣ. ಪಠ್ಯಕ್ರಮವು ಅನುಭವಗಳ ಸರಣಿ, ಎಂದು ಬಾಬ್ಬಿಟ್ಟ್ ವ್ಯಾಖ್ಯಾನಿಸಿದ್ದಾರೆ. ವಯಸ್ಕ ಬದುಕಿನ ಕೆಲಸ ಕಾರ್ಯಗಳಿಗೆ ಅಗತ್ಯವಿರುವ ಸಂಗತಿಗಳನ್ನು ನಡೆಸುವ ಸಾಮರ್ಥ್ಯವನ್ನು ಬೆಳೆಸಲು ಅನುಕೂಲವಾಗುವ ರೀತಿಯಿಂದ ಮಕ್ಕಳು ಮತ್ತು ಯುವ ಜನತೆ ಅದನ್ನು ತಿಳಿದುಕೊಂಡು ಅನುಭವಿಸಬೇಕು. ವ್ಯಾಸಂಗ ಕ್ರಮವು ನಾಲ್ಕು ಮೂಲಭೂತ ಪ್ರಶ್ನೆಗಳಿಗೆ ಉತ್ತರ ನೀಡಬೇಕೆಂದು ಟೈಲರ್ ಅವರ ವಾದವಾಗಿದೆ:

* ಶಾಲೆಗಳು ಯಾವ ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸಲು ಹುಡುಕಾಟ ನಡೆಸಬೇಕು?
* ಯಾವ ಶಿಕ್ಷಣ ಅನುಭವಗಳನ್ನು ಒದಗಿಸಬೇಕು?
* ಈ ಅನುಭವಗಳನ್ನು ಪರಿಣಾಮಕಾರಿಯಾಗಿ ಹೇಗೆ ಸಂಘಟಿಸಬಹುದು?
* ಉದ್ದೇಶಗಳನ್ನು ಸಾಧಿಸಲಾಗಿದೆ ಎಂದು ನಾವು ನಿರ್ಧರಿಸುವುದು ಹೇಗೆ?

ಟಾಬ (1962) ಅವರಿಗೆ ಪಠ್ಯಕ್ರಮದ ಅಭಿವೃದ್ಧಿಯು ರೇಖಾತ್ಮಕ ಮತ್ತು ತಾಂತ್ರಿಕ ಕಾರ್ಯವಿಧಾನವಾಗಿದೆ. ಇದರಲ್ಲಿ ಶೈಕ್ಷಣಿಕ ಗುರಿಗಳು, ಒದಗಿಸಬೇಕಾದ ಶಿಕ್ಷಣ ಅನುಭವಗಳು, ಅನುಭವಗಳ ಸಂಘಟನೆ ಮತ್ತು ಎಷ್ಟು ಸಾಧಿಸಲಾಗಿದೆ ಎಂಬುದನ್ನು ಕಂಡುಕೊಳ್ಳುವುದು ಮುಖ್ಯವಾಗಿರುತ್ತದೆ. ಪಠ್ಯಕ್ರಮದ ಅಭಿವೃದ್ಧಿಗಾಗಿ ಅವರು ಏಳು ಹಂತಗಳನ್ನು ಪಟ್ಟಿ ಮಾಡುತ್ತಾರೆ:

* ಶಿಕ್ಷಣದ ಅಗತ್ಯಗಳ ಲಕ್ಷಣಗಳನ್ನು ನಿರೂಪಿಸುವುದು.
* ಗುರಿಯನ್ನು ರೂಪಿಸುವುದು.
* ವಿಷಯಾಂಶವನ್ನು ಆಯ್ಕೆ ಮಾಡುವುದು.
* ವಿಷಯಾಂಶವನ್ನು ಸಂಘಟಿಸುವುದು.
* ಕಲಿಕೆಯ ಅಭ್ಯಾಸವನ್ನು ಆಯ್ಕೆ ಮಾಡುವುದು.
* 'ಕಲಿಕೆ'ಯ ಅನುಭವಗಳನ್ನು ಸಂಘಟಿಸುವುದು.
* ಮೌಲ್ಯಮಾಪನ.

ಎರಡನೆಯ ಪ್ರವೃತ್ತಿಯು ಸುಪ್ರಸಿದ್ಧ ಬ್ರಿಟಿಷ್ ಶೈಕ್ಷಣಿಕ ತತ್ವಜ್ಞಾನಿ ಹಿರ್ಸ್ಟ್ (1974) ಅವರ ಬರೆವಣಿಗೆಯಲ್ಲಿ ಪ್ರತಿನಿಧಿಸಲ್ಪಟ್ಟಿದೆ. ಅವರ ದೃಷ್ಟಿಯಲ್ಲಿ ಶಾಲಾ ವ್ಯಾಸಂಗ ಕ್ರಮದ ಮುಖ್ಯ ಗುರಿಯು ಅದರ ಅನೇಕ ಅಭಿವ್ಯಕ್ತಿಗಳಲ್ಲಿ ಜ್ಞಾನವನ್ನು ಸಂಪಾದಿಸುವುದಾಗಿದೆ. ಶೈಕ್ಷಣಿಕ ಅನುಭವಗಳು ಚರಿತ್ರೆ, ಭೂಗೋಳ, ತರ್ಕಶಾಸ್ತ್ರ, ಸಂಗೀತ ಅಥವಾ ಗಣಿತದಂತಹವುಗಳು ತಮ್ಮ ವಿವಿಧ ಅಭಿವ್ಯಕ್ತಿಗಳಲ್ಲಿ ತಿಳಿವಳಿಕೆಯನ್ನು ಒದಗಿಸಬೇಕು. ಮೂರನೆಯ ಪ್ರವೃತ್ತಿಯು ಪಠ್ಯಕ್ರಮವನ್ನು ಅಂಗೀಕೃತ ಪದ್ಧತಿಯಾಗಿ ಕಾಣುವ ಪೌಲೊ ಫ್ರೆರ್(1970) ಅವರಿಂದ ಪ್ರತಿನಿಧಿಸಲ್ಪಟ್ಟಿದೆ. ಅವರ ದೃಷ್ಟಿಯಲ್ಲಿ ಪಠ್ಯಕ್ರಮವು ವಾಸ್ತವತೆಯ ಮೇಲಿನ ವಿಮರ್ಶಾತ್ಮಕ ಪ್ರತಿಫಲನ ಮತ್ತು ಕ್ರಿಯೆಯಾಗಿದೆ. ಕಲಿಯುವವರು ಸಾಮಾಜಿಕ ವಾಸ್ತವತೆಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ರೀತಿಯಲ್ಲಿ ಮತ್ತು ಅವರು ಆ ವಾಸ್ತವತೆಯನ್ನು ಪರಿವರ್ತಿಸಲು ಬಯಸುವ ಮತ್ತು ಆ ಕೌಶಲ ಹೊಂದಿರುವ ಕಾರ್ಯಕರ್ತರಾಗಲು ಸಮರ್ಥರಾಗುವ ರೀತಿಯಲ್ಲಿ ಪಠ್ಯಕ್ರಮವಿರಬೇಕು.

ಎಂಭತ್ತರದ ದಶಕದಲ್ಲಿ ಸ್ವ-ಸಶಕ್ತೀಕರಣ, ಆತ್ಮ ವಿಶ್ವಾಸ, ಸ್ವಾಯತ್ತತೆ ಮತ್ತು ವೈಯಕ್ತಿಕ ಸ್ವಾಯತ್ತತೆ ನಾಲ್ಕನೆಯ ಪ್ರವೃತ್ತಿ ಕಾಣಿಸಿಕೊಂಡಿರಬೇಕು. ಅದು ಪ್ರತಿಯೊಬ್ಬರ ಸಾಮರ್ಥ್ಯಗಳ ಬೆಳವಣಿಗೆಗೆ ವೇಗವನ್ನು ಒದಗಿಸಿದೆ. ಐದನೆಯ ಪ್ರವೃತ್ತಿಯನ್ನು ಲರ್ನಿಂಗ್: ದಿ ಟ್ರೆಶರ್ ವಿದಿನ್ (ಯುನೆಸ್ಕೊ, 1996)ದಲ್ಲಿ ಗುರುತಿಸಬಹುದು. ಇದರಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹಕಾರದಿಂದ ಕೂಡಿ ಬಾಳುವ ಸಾಮರ್ಥ್ಯಕ್ಕೆ ಮಹತ್ವ ನೀಡಲಾಗಿದೆ. ಇದನ್ನು ಕಲಿಕೆಯ ನಾಲ್ಕನೇ ಸ್ತಂಭ ಎಂದು ಕರೆಯಲಾಗಿದೆ.

ಈ ಎಲ್ಲ ಕಾಳಜಿಗಳನ್ನು ಒಂದು ವಿಧದಲ್ಲಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟುಗಳು(1975, 1988, 2000) ಕೇಂದ್ರವಾಗಿ ಇಟ್ಟುಕೊಂಡಿವೆ. ಆದರೂ ಎನ್‌ಸಿಎಫ್(1988) ಮತ್ತು ಎನ್‌ಸಿಎಫ್(2000) ಗಳು ವಿಶೇಷ ಗಮನವನ್ನು ನೀಡಿರುವುದು ಸ್ವ-ಸಶಕ್ತೀಕರಣ, ಸಾಮಾಜಿಕ ಸಂಯೋಜನೆ, ಬೆಳೆಯುತ್ತಿರುವ ಜ್ಞಾನದ ಸರಹದ್ದುಗಳು (ಮುಂಚೂಣಿಯ ಪಠ್ಯಕ್ರಮ) ಮತ್ತು

Digitised by Bharatavani, CIIL

ಕೂಡಿ ಬಾಳುವುದನ್ನು ಕಲಿಯುವುದಕ್ಕೆ. ಇಲ್ಲಿ ಮೌಲ್ಯ ಶಿಕ್ಷಣ, ಊರ್ಜಿತವಾಗಬಲ್ಲ ಅಭಿವೃದ್ಧಿ ಮತ್ತು ಶಾಂತಿ ಶಿಕ್ಷಣಕ್ಕೆ ಒತ್ತನ್ನು ನೀಡಲಾಗಿದೆ.

ಎನ್‌ಸಿಎಫ್‌ಎಸ್‌ಇ 2000 ಯು ವಿಭಿನ್ನ ಅಭಿವೃದ್ಧಿಯ ಕೌಶಲವನ್ನು ಅನುಸರಿಸಿದೆ. ಅದು ಸೆಪ್ಟೆಂಬರ್ 1999ರಲ್ಲಿ ಪಠ್ಯಕ್ರಮದ ಒಂದು ಗುಂಪನ್ನು ಸಂಯೋಜಿಸಿತು. ಈ ಗುಂಪು ಮೊದಲ ಹಂತದಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆ(ನ್ಯಾಶನಲ್ ಇನ್ಸ್‌ಟಿಟ್ಯೂಟ್ ಆಫ್ ಎಡ್ಯುಕೇಶನ್–ಎನ್‌ಐಇ), ಪ್ರಾದೇಶಿಕ ಶಿಕ್ಷಣ ಸಂಸ್ಥೆ(ರೀಜನಲ್ ಇನ್ಸ್‌ಟಿಟ್ಯೂಟ್ ಆಫ್ ಎಡ್ಯುಕೇಶನ್–ಆರ್‌ಐಇ), ಕೇಂದ್ರೀಯ ಶೈಕ್ಷಣಿಕ ಟಿಲಿವಿಜನ್ ಸಂಸ್ಥೆ (ಸಿಐವಿಇ) ಯ ಸದಸ್ಯರೊಂದಿಗೆ ವ್ಯಾಪಕ ಚರ್ಚೆಯನ್ನು ನಡೆಸಿತು. ಆನಂತರ 'ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟ'ನ್ನು ತಯಾರಿಸಲು ಏನನ್ನು ಮಾಡುವ ಅಗತ್ಯವಿದೆ ಎಂಬುದನ್ನು ತಿಳಿಯುವ ಸಲುವಾಗಿ ದೇಶದ ಪ್ರಮುಖ ಶಿಕ್ಷಣತಜ್ಞರೊಂದಿಗೆ ಮಾತುಕತೆ ನಡೆಸಿತು. ಎನ್‌ಸಿಇಆರ್‌ಟಿ ಕೂಡ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ ನಿರ್ದೇಶಕರೊಂದಿಗೆ, ಮಾಧ್ಯಮಿಕ ಶಿಕ್ಷಣ ಮಂಡಳಿಗಳ ಅಧ್ಯಕ್ಷರೊಂದಿಗೆ ಪ್ರಮುಖ ವಿಚಾರಗಳ ಕುರಿತು ಅಭಿಪ್ರಾಯವನ್ನು ಪಡೆಯಿತು. ಮೇಲೆ ಉಲ್ಲೇಖಿಸಲಾದ ಚಿಂತನೆ, ವಿಚಾರ ವಿನಿಮಯಗಳು ಕರಡು ದಸ್ತಾವೇಜಿನ(ಡಾಕ್ಯುಮೆಂಟ್) ರೂಪದಲ್ಲಿ ಪ್ರಕಟವಾದವು. ಇದನ್ನು ವ್ಯಾಪಕವಾಗಿ ಪ್ರಸಾರಕ್ಕೆ ತರಲಾಯಿತು. ಅವಲೋಕನಗಳು ಮತ್ತು ಅಭಿಮತಗಳಿಗಾಗಿ ವಿಚಾರಸಂಕಿರಣಗಳನ್ನು ಆಯೋಜಿಸಲಾಯಿತು. ಈ ವ್ಯಾಪಕ ಚರ್ಚೆಗಳನ್ನು ಆಧರಿಸಿ 14, ನವೆಂಬರ್, 2000ದಲ್ಲಿ ಎನ್‌ಸಿಎಫ್‌ಎಸ್‌ಇಯನ್ನು ಹೊರತರಲಾಯಿತು. ಈ ಕಾರ್ಯವಿಧಾನವು 'ಸಂಯೋಜಿತ ವಿಕೇಂದ್ರೀಕೃತ ಕಾರ್ಯವಿಧಾನ'ವೆಂದು ತಿಳಿಯಲ್ಪಟ್ಟಿದೆ. ಕೇಂದ್ರೀಕೃತ ಅನುಸಂಧಾನವಾಗಲೀ ಅಥವಾ ಸಂಪೂರ್ಣ ವಿಕೇಂದ್ರೀಕೃತ ಅನುಸಂಧಾನವಾಗಲೀ ಯಶಸ್ವಿಯಲ್ಲ ಎಂಬುದನ್ನು ಅಂತರರಾಷ್ಟ್ರೀಯ ಅನುಭವಗಳು ತೋರಿಸಿಕೊಟ್ಟಿವೆ. ತಳದಿಂದ ಮೇಲೆ ಅಥವಾ ಮೇಲಿನಿಂದ ಕೆಳಗಿನ ಅನುಸಂಧಾನಗಳು ಬಯಸಿದ ಫಲಿತಾಂಶಗಳನ್ನು ನೀಡಿಲ್ಲ. ಇಲ್ಲಿ ಜಾಲದ ಅನುಸಂಧಾನವು ನಿರ್ವಹಣಾ ಚಾತುರ್ಯವಾಗಿರಬೇಕಾಗಿದೆ.

**ರಾಷ್ಟ್ರೀಯ ಪಠ್ಯಕ್ರಮದ ಹಿತಾಸಕ್ತಿಗಳು:** ರಾಷ್ಟ್ರೀಯ ಪಠ್ಯಕ್ರಮವನ್ನು ಪುನರ್ವಿಮರ್ಶಿಸುವ ಮತ್ತು ಮರುಪರಿಶೀಲಿಸುವ ಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ ಕೆಲವು ಪ್ರಮುಖ ಹಿತಾಸಕ್ತಿಗಳನ್ನು ಗಮನಕ್ಕೆ ತಂದುಕೊಳ್ಳಬೇಕಾದ ಅಗತ್ಯವಿದೆ. ಪಠ್ಯಕ್ರಮದ ಬೆಳವಣಿಗೆಗೆ ವಿಮರ್ಶಾತ್ಮಕವಾಗಿರುವ ನಾಲ್ಕು ಪ್ರಮುಖ ಹಿತಾಸಕ್ತಿಗಳು ಕಲಿಯುವ ವ್ಯಕ್ತಿಯ ಪರಿಚಯ, ತಿಳಿವಳಿಕೆಯ ವ್ಯಾಪ್ತಿ, ರಾಷ್ಟ್ರೀಯ ಆವಶ್ಯಕತೆಗಳು ಮತ್ತು ಜಾಗತಿಕ ದೃಷ್ಟಿಕೋನಗಳಿಗೆ ಸಂಬಂಧಿಸಿದ್ದಾಗಿವೆ. ಇವುಗಳನ್ನು ಮತ್ತು ಇನ್ನೂ ಕೆಲವು ವಿಶಿಷ್ಟ ಹಿತಾಸಕ್ತಿಗಳನ್ನು ರಾಷ್ಟ್ರೀಯ ಪಠ್ಯಕ್ರಮದ(1988) ದಲ್ಲಿ ಉಲ್ಲೇಖಿಸಲಾಗಿದೆ. ಇವು(ವಿಶಿಷ್ಟ ಹಿತಾಸಕ್ತಿಗಳು) ಶಿಕ್ಷಣದ ಸಮಾನತೆ ಮತ್ತು ಅವಕಾಶ, ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ಸಂವಿಧಾನದ ಬಾಧ್ಯತೆಗಳ(ದೇಶವನ್ನು ಜಾತ್ಯತೀತ ಮತ್ತು ಪ್ರಜಾಪ್ರಭುತ್ವದ ರಾಷ್ಟ್ರವನ್ನಾಗಿಸಲು ನಿಶ್ಚಯಿಸಿದ) ಕುರಿತಾದ ಪ್ರಜ್ಞೆ, ರಾಷ್ಟ್ರೀಯ ಅನನ್ಯತೆಯ ಬಲಪಡಿಸುವಿಕೆ, ಚಾರಿತ್ರ್ಯವನ್ನು ಬೆಳೆಸುವಿಕೆ, ಮೌಲ್ಯಗಳ ಅಚ್ಚೊತ್ತುವಿಕೆ, ಪರಿಸರ ರಕ್ಷಣೆ, ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆ, ಸಣ್ಣ ಕುಟುಂಬದ ನಿಯಮಗಳು ಇವುಗಳ ಅನುಸರಣೆಗೆ ಸಂಬಂಧಿಸಿದ್ದಾಗಿವೆ. ದಸ್ತಾವೇಜಿನಲ್ಲಿ ಎತ್ತಿ ಹಿಡಿಯಲಾದ ಶಿಕ್ಷಣಶಾಸ್ತ್ರದ ಹಿತಾಸಕ್ತಿಗಳೆಂದರೆ: ಸಮಗ್ರ ಬೆಳವಣಿಗೆಗಾಗಿ ಶಿಕ್ಷಣ, ಶಿಶು–ಕೇಂದ್ರಿತ ಶಿಕ್ಷಣ, ಹೇಗೆ ಕಲಿಯಬೇಕು ಎಂಬುದನ್ನು ಕಲಿಯಲು ಅನುಕೂಲ ಒದಗಿಸುವುದು, ಸೃಜನಶೀಲ ಅಭಿವ್ಯಕ್ತಿ ಹೇಗಿರಬೇಕು ಎನ್ನುವುದನ್ನು ಸುಗಮಗೊಳಿಸುವುದು, ವೈಜ್ಞಾನಿಕ ಪ್ರಜ್ಞೆಯನ್ನು ಅಚ್ಚೊತ್ತುವುದು, ಶಿಕ್ಷಣ ಮತ್ತು ಕೆಲಸದ ಜಗತ್ತಿನ ನಡುವೆ ಅಂತರ್‌ಸಂಪರ್ಕವನ್ನು ಸಾಧಿಸುವುದು, ಮಾಧ್ಯಮ ಮತ್ತು ಶೈಕ್ಷಣಿಕ ತಂತ್ರಜ್ಞಾನದ ನಿರಂತರ ಮತ್ತು ವ್ಯಾಪಕವಾದ ಮೌಲ್ಯಮಾಪನ ಮತ್ತು ಬಳಕೆ.

ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು(2000) ಸಂಯೋಜಿತ ಸಮಾಜದ ಅಗತ್ಯವನ್ನು ಕೇಂದ್ರೀಯ ಹಿತಾಸಕ್ತಿಯಾಗಿ ಉಲ್ಲೇಖಿಸುತ್ತದೆ. ಅದರಲ್ಲಿ ಹೆಣ್ಣುಮಕ್ಕಳ ಶಿಕ್ಷಣ, ವಿಶೇಷ ಅಗತ್ಯಗಳಿರುವ ಕಲಿಕೆದಾರರಿಗೆ ಶಿಕ್ಷಣ, ಅಲಕ್ಷಿತ ಗುಂಪುಗಳ ಕಲಿಕೆದಾರರಿಗೆ ಶಿಕ್ಷಣ, ಔಚಿತ್ಯಪೂರ್ಣ ಪರಿಗಣನೆಯ ವಿಶೇಷ ಗುರಿಯ ಗುಂಪುಗಳ ಮೇಧಾವಿ ಮತ್ತು ಪ್ರತಿಭಾವಂತರಿಗಾಗಿ ಶಿಕ್ಷಣವನ್ನು ಉಲ್ಲೇಖಿಸಲಾಗಿದೆ. ಅದು ಹಿಂದಿನ ಹಿತಾಸಕ್ತಿಗಳಾದ ರಾಷ್ಟ್ರೀಯ ಅನನ್ಯತೆಯ ಬಲಪಡಿಸುವಿಕೆ, ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ಮತ್ತು ಸ್ವದೇಶಿ ಜ್ಞಾನದ ಸಂಯೋಜನೆಗಳನ್ನು ಪುನರಾವರ್ತಿಸಿದೆ. ದಸ್ತಾವೇಜಿನಲ್ಲಿ ಜಾಗತೀಕರಣ ಮತ್ತು ಐಸಿಟಿಯ ಪ್ರಭಾವವನ್ನು ಮುಖ್ಯ ಹಿತಾಸಕ್ತಿಗಳಾಗಿ ಉಲ್ಲೇಖಿಸಲಾಗಿದೆ. ಪಠ್ಯಕ್ರಮದ ಇತರ ಹಿತಾಸಕ್ತಿಗಳೆಂದರೆ ಮೌಲ್ಯ ಶಿಕ್ಷಣ, ಧರ್ಮಗಳ ಕುರಿತಾದ ಶಿಕ್ಷಣ, ಜೀವನ ಕೌಶಲ್ಯಗಳ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ.

**ಪಠ್ಯಕ್ರಮದ ಹೊರೆ ಮತ್ತು ಕಲಿಯುವುದನ್ನು ಕಲಿತುಕೊಳ್ಳುವುದು:** ಪಠ್ಯಕ್ರಮದ ಹೊರೆಯು ಹೆತ್ತವರಲ್ಲಿ, ಸಮುದಾಯದಲ್ಲಿ ಮತ್ತು ಶಿಕ್ಷಣತಜ್ಞರಲ್ಲಿ ಬಹು ಮುಖ್ಯ ಚರ್ಚೆಯ ವಿಷಯವಾಗಿದೆ. ಶಿಕ್ಷಣದ ಹಂತಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಪಠ್ಯಕ್ರಮದ ಸೂಕ್ತರೀತಿಯ ವಿಷಯಾಂಶವನ್ನು, ಅದು ಆ ನಿರ್ದಿಷ್ಟ ಹಂತದಲ್ಲಿ ಕಲಿಯುವವರಿಗೆ ಹೆಚ್ಚು ಹಗುರವೂ ಆಗಿರಬಾರದು, ಹೆಚ್ಚು ಭಾರವೂ ಆಗಿರಬಾರದು, ಅಂತಹವುಗಳನ್ನು ಗುರುತಿಸುವುದು ಯುಕ್ತವಾಗಿದೆ. ಒಟ್ಟಾರೆ ದೃಷ್ಟಿಯಲ್ಲಿ ವ್ಯಾಸಂಗದ ಹೊರೆಯನ್ನು ಮಗು ತನ್ನ ಚೀಲದಲ್ಲಿ ಹೊತ್ತುಕೊಳ್ಳುವ ಹೊರೆಗೆ ಸಮಾನವಾಗಿ (ತಪ್ಪಾಗಿ)ಕಾಣಲಾಗುತ್ತದೆ. ಬರೀ ಪಠ್ಯಪುಸ್ತಕಗಳ ಪ್ರಮಾಣವನ್ನು ಕಡಿಮೆ ಮಾಡುವುದರಿಂದ ಪಠ್ಯಕ್ರಮದ ಹೊರೆಯ ಪ್ರಶ್ನೆಯನ್ನು ಸರಿಯಾದ ರೀತಿಯಿಂದ ನಿಭಾಯಿಸಿದಂತೆ ಆಗುವುದಿಲ್ಲ. ವ್ಯಾಸಂಗದ ಹೊರೆಯನ್ನು ಮೂಲಭೂತವಾಗಿ ಮೂರು ಆಯಾಮಗಳಲ್ಲಿ

Digitised by Bharatavani, CIIL

ಆಲೋಚಿಸಬಹುದು: ಮಾಹಿತಿ ಸಾಂದ್ರತೆ ಹೊರೆ, ಅಪ್ರಸ್ತುತವಾದ ಹೊರೆ, ಮತ್ತು ಗ್ರಹಣಶಕ್ತಿಗೆ ನಿಲುಕದ ಹೊರೆ.

ಮಾಹಿತಿಗೆ ಸಂಬಂಧಿಸಿದ ಮೊದಲ ವಿಧದ ಪಠ್ಯದ ಹೊರೆ ಕಾಣಿಸಿಕೊಳ್ಳುವುದು ಪ್ರಸಕ್ತ ವಿಷಯಾಂಶ ಮತ್ತು ಆ ಹಂತದಲ್ಲಿ ಕಲಿಯುವ ವ್ಯಕ್ತಿಯ ಗ್ರಹಿಕಾ ಸಾಮರ್ಥ್ಯದ ನಡುವೆ ಸರಿಸಾಟಿ ಇಲ್ಲದಿದ್ದಾಗ. ವಿಷಯಾಂಶಗಳು ಗ್ರಾಂಥಿಕವಾಗಿದ್ದಾಗ, ಸಂಬಂಧವಿಲ್ಲದಂತಿರುವಾಗ ಮತ್ತು ವಾಸ್ತವತೆಯಿಂದ ದೂರವಿದ್ದಾಗ, ಅಪ್ರಸ್ತುತ ಹೊರೆ ವಿದ್ಯಾರ್ಥಿಗಳಿಗೆ ನೀರಸವಾಗುತ್ತದೆ. ಗ್ರಹಣಶಕ್ತಿಗೆ ನಿಲುಕದ ಹೊರೆಯು ಮೂಲ ಪರಿಕಲ್ಪನೆಯ ಅರ್ಥೈಸುವಿಕೆಯ ಕೊರತೆಯ ಪರಿಣಾಮವಾಗಿದೆ. ಮೊದಲ ವಿಧದ ಪಠ್ಯದ ಹೊರೆ ವಿದ್ಯಾರ್ಥಿಗಳಿಂದ ಹೆಚ್ಚಿನ ಶ್ರಮವನ್ನು ಬಯಸಬಹುದು, ಆದರೆ ಉಳಿದ ಎರಡು ವಿಧಗಳು ಬೌದ್ಧಿಕ ಬಳಲುವಿಕೆಯನ್ನು ಉಂಟುಮಾಡುತ್ತವೆ. ಅಪ್ರಸ್ತುತ ಹೊರೆಯು ಆಸಕ್ತಿಯನ್ನು ಕಳೆದು ಉದಾಸೀನತೆಯನ್ನು ಹುಟ್ಟಿಸುತ್ತದೆ. ಗ್ರಹಣಶಕ್ತಿಗೆ ನಿಲುಕದ ಹೊರೆಯು ಒತ್ತಡ, ಪ್ರಯಾಸ, ಮತ್ತು ನರದೌರ್ಬಲ್ಯವನ್ನು ಬೆಳೆಸುತ್ತದೆ. ಇದು ವ್ಯವಸ್ಥೆಯಿಂದ ಕಳಚಿಕೊಳ್ಳುವ(ದೂರ ಸರಿಯುವ) ಪರಿಣಾಮವನ್ನು ಬೀರಬಹುದು.

ಪಠ್ಯದ ಹೊರೆಯ ಪ್ರಶ್ನೆಯನ್ನು ಕಲಿಕೆಯಲ್ಲಿರುವ ಮಾನಸಿಕ ಕಾರ್ಯವಿಧಾನಗಳ ಸಂಬಂಧದಲ್ಲಿ ನೋಡಬೇಕು. ವಿಷಯಾಂಶವು ವಾಸ್ತವರೂಪದ್ದಾಗಿರದಿದ್ದರೆ ಆದರಿಂದ ಬೃಹತ್ ಶೈಕ್ಷಣಿಕ ಲಾಭವಾಗದೆ, ಅದನ್ನು ಬರೀ ನೆನಪಿನಲ್ಲಿ ಇಟ್ಟುಕೊಂಡಂತೆ ಆಗುತ್ತದೆ. ಆದರೆ ವಿಷಯಾಂಶವು ಸಂಬಂಧಗಳನ್ನು ಬೆಳೆಸುವ, ವಿಶ್ಲೇಷಣೆ, ಸಂಯೋಜನೆ ಅಥವಾ ಅನ್ವಯತೆಗಳನ್ನು ಬೆಳೆಸಿಕೊಳ್ಳುವ ರೀತಿಯದ್ದಾಗಿದ್ದರೆ ಅದು ಉನ್ನತ ಸಂವೇದನೆಗೆ(ಜ್ಞಾನ) ಒತ್ತಾಸೆಯಾಗುತ್ತದೆ ಮತ್ತು ಅದು ಅಪೇಕ್ಷಣೀಯವಾಗಿರುತ್ತದೆ.

ಪಠ್ಯಕ್ರಮದ ಹೊರೆಯೊಂದಿಗೆ ಒಂದು ನೈಜವಾದ ಪ್ರಶ್ನೆಯನ್ನು ಕೂಡ ಕೇಳಬೇಕಾಗುತ್ತದೆ, ಅದೇನೆಂದರೆ ಪಠ್ಯಕ್ರಮವು ಸಾಮರ್ಥ್ಯ ಅಥವಾ ಕೌಶಲಗಳಿಗೆ ಮಹತ್ವವನ್ನು ನೀಡುತ್ತಿದೆಯೇ? ಸಾಮರ್ಥ್ಯ–ಕೇಂದ್ರಿತ ಪಠ್ಯಕ್ರಮವು ಕಲಿಯುವವರಿಗೆ ಸಮೃದ್ಧವಾದ ಹಿನ್ನೆಲೆಯನ್ನು ಒದಗಿಸುತ್ತದೆ ಮತ್ತು ಅದು ಒಂದಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಬಳಸಬಹುದಾದ ಸಾಮರ್ಥ್ಯವನ್ನು ಬೆಳೆಸುತ್ತದೆ. ಪಠ್ಯಕ್ರಮದ ಸಮರ್ಥತೆಗಳನ್ನು ಬೆಳೆಸುವ ಅಗತ್ಯವನ್ನು ಯುನೆಸ್ಕೊ (1996, ಪುಟ ಸಂಖ್ಯೆ 89) ಎತ್ತಿ ಹಿಡಿದಿದೆ. ಕಲಿಯುವವರಲ್ಲಿ ಸ್ವತಃ ತಮ್ಮಷ್ಟಕ್ಕೆ ಕಲಿಯುವ ಸಾಮರ್ಥ್ಯವನ್ನು ಬೆಳೆಸುವುದು ರಾಷ್ಟ್ರೀಯ ಪಠ್ಯಕ್ರಮದ ಹಿತಾಸಕ್ತಿಗಳಲ್ಲಿ ಒಂದು. ಇದು ಹೇಳಿದಷ್ಟು ಸುಲಭವಲ್ಲ. ಏಕೆಂದರೆ, ಕಲಿಯುವುದನ್ನು ಕಲಿತುಕೊಳ್ಳುವುದು ಒಂದು ಕೌಶಲವಾಗಿದೆ. ಇದನ್ನು ಪ್ರಾರಂಭದಿಂದಲೇ, ವ್ಯವಸ್ಥಿತವಾಗಿ ಬೆಳೆಸುವುದರ ಅಗತ್ಯವಿದೆ. ಒಬ್ಬ ವ್ಯಕ್ತಿಗೆ ಲಭ್ಯವಿರುವ ಜ್ಞಾನದ ಒಟ್ಟು ಜಗತ್ತು ಮತ್ತು ಅದರ ಶಾಖೋಪಶಾಖೆಗಳ ಕುರಿತಾದ ವಿಸ್ಮಯವು ಕಲಿಯುವುದನ್ನು ಕಲಿತುಕೊಳ್ಳುವುದರಲ್ಲಿ ಇರಬೇಕಾಗುತ್ತದೆ. ಈ ವಿಸ್ಮಯ ಪ್ರಜ್ಞೆಯು ತನಗೆ ಎಷ್ಟು ಕಡಿಮೆ ತಿಳಿದಿದೆ ಎನ್ನುವ ಬೌದ್ಧಿಕ ವಿನಯದಿಂದ ಕೂಡ ಕಾಣಿಸಿಕೊಳ್ಳುತ್ತದೆ. ನಾವು ನ್ಯೂಟನನ ಪ್ರಸಿದ್ಧ ಹೇಳಿಕೆಯನ್ನು ನೆನಪಿಗೆ ತಂದುಕೊಳ್ಳಬಹುದು, "ನಾನು ಸಮುದ್ರ ತೀರದಲ್ಲಿ ಕುಳಿತು ಕಲ್ಲುಹರಳುಗಳನ್ನು ಹೆಕ್ಕಿಕೊಳ್ಳುತ್ತಿದ್ದೇನೆ, ಆದರೆ ನನ್ನ ಮುಂದೆ ಅನ್ವೇಷಿಸದ ಮತ್ತು ಆಳವರಿಯದ ಜ್ಞಾನದ ವಿಸ್ತಾರ ಸಮುದ್ರವೇ ಇದೆ."

ಕಲಿಯುವ ಕೌಶಲಗಳ ಕುರಿತು (ಓ ನೀಲ್ 1978, ನಿಸ್‌ಬೆತ್ ಮತ್ತು ಶಕ್ಸ್‌ಸ್ಮಿತ್ 1988) ಮತ್ತು ಕಲಿಯುವುದನ್ನು ಕಲಿತುಕೊಳ್ಳುವುದರ ಕುರಿತು(ನೊವೆಕ್ ಮತ್ತು ಗೊವಿನ್ 1984, ಸ್ಮಿತ್ 1983) ಸಾಕಷ್ಟು ಗ್ರಂಥಗಳು ಲಭ್ಯ ಇವೆ. ಕಲಿಯುವುದನ್ನು ಕಲಿಯುವುದಕ್ಕೆ ಕಲಿಯುವವರಲ್ಲಿ ಪೋಷಕವಾಗುವಂತಹ ಒಂದೇ ಸಮನಾದ ಪ್ರಚೋದನೆ ಇರಬೇಕಾಗುತ್ತದೆ. ಇವರಲ್ಲಿ ಸ್ವ–ನಿರ್ದೇಶನ ಸ್ವ–ಪ್ರೇರಣೆ ಮತ್ತು ತಮ್ಮ ಸ್ವಂತದ ಕಲಿಕಾ ಅಗತ್ಯಗಳನ್ನು ಗುರುತಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಅರಿವು ಮತ್ತು ವಿಶೇಷವಾಗಿ ಈ ಅರಿವಿಗೆ ಸಂಬಂಧಿಸಿದ ಕೌಶಲವಿರಬೇಕಾಗುತ್ತದೆ. ಜೊತೆಗೆ ಜ್ಞಾನ ಸಂಪಾದನೆ ಮತ್ತು ಕಲಿಯುವ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯ ಬೇಕಾಗುತ್ತದೆ; ಅಂದರೆ ಅಗತ್ಯವಿರುವ ತಿಳಿವಳಿಕೆಯನ್ನು ಪಡೆಯುವುದಕ್ಕಾಗಿ ಸಂಸ್ಥೆಗಳ, ವ್ಯಕ್ತಿಗಳ ಮತ್ತು ಅಂಕಿಅಂಶಗಳ(ಮಾಹಿತಿ) ಅನ್ವೇಷಣೆ ಅಥವಾ ಪರಿಶೋಧನೆಯೂ ಬೇಕಾಗುತ್ತದೆ. ಒಬ್ಬ ವ್ಯಕ್ತಿ ಹೇಗೆ ತಿಳಿದುಕೊಳ್ಳುತ್ತಾನೆ, ತನ್ನ ಸ್ವಂತ ಕಲಿಕೆಯನ್ನು ಹೇಗೆ ಮೌಲ್ಯಮಾಪನ ಮಾಡುತ್ತಾನೆ ಎಂಬುದರ ಕುರಿತಾಗಿ ಕಲ್ಪಿಸಿಕೊಳ್ಳಬಲ್ಲ ಕೌಶಲದ ಅಗತ್ಯವೂ ಬೇಕಾಗುತ್ತದೆ. ತಿಳಿವಳಿಕೆಯನ್ನು ಸಾಂದರ್ಭಿಕವಾಗಿಸುವ ಸಾಮರ್ಥ್ಯವೂ ಇರಬೇಕಾಗುತ್ತದೆ. ಈ ವಿಚಾರವನ್ನು 1988ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ (ಪುಟ 8) ಮತ್ತು ಎನ್‌ಸಿಎಫ್‌ಎಸ್‌ಇ (2000, ಪುಟ 25) ಯಲ್ಲಿ ಗಮನಕ್ಕೆ ತಂದುಕೊಳ್ಳಲಾಗಿದೆ ಎನ್ನುವುದು ಉಲ್ಲೇಖನೀಯ. ಇಲ್ಲಿ 'ವಿದ್ಯಾರ್ಥಿಗಳು ಕಲಿಯುವುದು ಹೇಗೆಂಬುದನ್ನು ಕಲಿತುಕೊಳ್ಳಲು ಬೋಧನೆ ಸಜ್ಜುಗೊಂಡಿರಬೇಕು' ಎಂಬುದಾಗಿ ತಿಳಿಸಲಾಗಿದೆ.

**ಶಿಕ್ಷಕರು ಮತ್ತು ರಾಷ್ಟ್ರೀಯ ಪಠ್ಯಕ್ರಮ:** ಶಿಕ್ಷಕರಿಗೆ ಪಠ್ಯಕ್ರಮದ ಕಾರ್ಯ ಮತ್ತು ಮೌಲ್ಯಮಾಪನದಲ್ಲಿ ನಿಶ್ಚಿತ ಪಾತ್ರವಿರುತ್ತದೆ. ಶಿಕ್ಷಕರು ಕುತೂಹಲವನ್ನು ಕೆರಳಿಸುತ್ತಾರೆ, ಸ್ವತಂತ್ರವಾಗಿ ಆಲೋಚಿಸುವುದನ್ನು ಪ್ರಚೋದಿಸುತ್ತಾರೆ ಮತ್ತು ವಿದ್ಯಾರ್ಥಿಗಳಲ್ಲಿ ಅರ್ಥೈಸುವಿಕೆ ಮತ್ತು ತಾಳ್ಮೆಯನ್ನು ಬೆಳೆಸುತ್ತಾರೆ. ಇವು ಪಠ್ಯದ ಉದ್ದೇಶಗಳಲ್ಲಿ ಬಹುಮುಖ್ಯವಾಗಿವೆ. ಬೋಧನಾ ಶೈಲಿಯ ಖಂಡಿತವಾಗಿಯೂ ಪಠ್ಯದ ವಿಷಯಾಂಶದ ಮೇಲೆ ಪ್ರಭಾವ ಬೀರುತ್ತದೆ(ಸ್ಕಿಲ್‌ಬೆಕ್, 1990). 'ಪಠ್ಯಕ್ರಮವನ್ನು ಯೋಜಿಸುವುದರ ಹೊರತಾಗಿ ಶಿಕ್ಷಕರು ಪಾಲುಗೊಳ್ಳುವ ಬೇರೆ ಹಂತಗಳು ಕೂಡ ಇವೆ. ಅವುಗಳೆಂದರೆ, ಪಠ್ಯಕ್ರಮದ ಅಭಿವೃದ್ಧಿ, ಪಠ್ಯಕ್ರಮದ ರವಾನೆ, ಪಠ್ಯಕ್ರಮದ ಮೌಲ್ಯಮಾಪನ ಮತ್ತು ಪುನರ್ವಿಮರ್ಶೆ. ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವ ಕಾರ್ಯವಿಧಾನದಲ್ಲಿ ಶಿಕ್ಷಕರೊಂದಿಗೆ ಸಮಾಲೋಚನೆ ನಡೆಸಲಾಗುತ್ತದೆಯಾದರೂ ಅವರ

Digitised by Bharatavani, CIIL

ನಿಜವಾದ ಕಾರ್ಯ ಪ್ರಾರಂಭವಾಗುವುದು ಪಠ್ಯಕ್ರಮವನ್ನು ಅವರು ರೂಪಾಂತರಿಸಿದಾಗ ಮತ್ತು ಜಾರಿಗೆ ತಂದಾಗ. ಅವರ ಬೋಧನಾ ಶೈಲಿಯು ಬರಿಯ ಕಂಠಪಾಠದ ನೆನಪನ್ನು ಬೆಳೆಸಬಹುದು ಅಥವಾ ಅವರ ಯೋಚನಾ ವಿಧಾನಗಳನ್ನು ಪ್ರಚೋದಿಸಬಹುದು. ಅದು ಹಗುರ ಕಲಿಕೆ ಅಥವಾ ಆಳ ಕಲಿಕೆಯನ್ನು ಕೂಡಾ ಪ್ರೋತ್ಸಾಹಿಸಬಹುದು. ಅನೇಕ ಸಂಶೋಧಕರ ದೃಷ್ಟಿಯಲ್ಲಿ ಪ್ರಾಥಮಿಕ ಹಂತದಲ್ಲಿ ರಚನಾತ್ಮಕ ಬೋಧನೆಯು ಹೆಚ್ಚು ಸೂಕ್ತ ಮತ್ತು ಉತ್ಪಾದನಕಾರಿಯಾಗಿರುತ್ತದೆ(ಸ್ಕೀರೆನ್ಸ್, 1992).

ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳು, ಅವು ಸೇವಾನಿರತದ್ದಾಗಿರಬಹುದು ಅಥವಾ ಸೇವಾ ಪೂರ್ವದ್ದಾಗಿರಬಹುದು, ಸಹ–ಪಠ್ಯ ಚಟುವಟಿಕೆಗಳು ಹೆಚ್ಚುವರಿ ವಿಷಯಗಳಲ್ಲವೆಂಬ ಅಂಶವನ್ನು ಒತ್ತಿ ಹೇಳಬೇಕಾಗಿದೆ. ಅವುಗಳು ಎಲ್ಲ ಶೈಕ್ಷಣಿಕ ಚಟುವಟಿಕೆಗಳ ಭಾಗವಾಗಿರಬೇಕು. ಶಿಕ್ಷಕರು ಸಹ–ಪಠ್ಯ ಚಟುವಟಿಕೆಗಳನ್ನು ಕಲಿಸುವಾಗ, ಪರೀಕ್ಷಿಸುವಾಗ ಮತ್ತು ಸಂಘಟಿಸುವಾಗ ಸಮರ್ಪಣಾ ಭಾವ ಮತ್ತು ಬದ್ಧತೆಯಿಂದ ಕೆಲಸ ಮಾಡಬೇಕು, ಮತ್ತು ವಿದ್ಯಾರ್ಥಿಗಳನ್ನು ಚರ್ಚೆಗಳು ಮತ್ತು ಮಾತುಕತೆಗಳ ಮೂಲಕ ಪ್ರಚೋದಿಸಬೇಕು.

**ನಿರ್ವಹಣೆ ಮತ್ತು ಮೌಲ್ಯಮಾಪನ:** ಪಠ್ಯಕ್ರಮದ ನಿರ್ವಹಣೆಯು ಪಠ್ಯಕ್ರಮವನ್ನು ಜಾರಿಗೊಳಿಸುವಿಕೆಯ ಉಪ–ವ್ಯವಸ್ಥೆಯಾಗಿದೆ ಮತ್ತು ಎಲ್ಲಕ್ಕಿಂತ ಹೆಚ್ಚು ಮುಖ್ಯದ್ದಾಗಿ ಇದೆ. ಶಿಕ್ಷಕರು ವ್ಯಾಸಂಗ ಕ್ರಮದ ಬೃಹತ್ ಉದ್ದೇಶಗಳ ಕಡೆಗೆ ಸೂಕ್ತ ರೀತಿಯ ಗಮನವನ್ನು ಹರಿಸಬೇಕು. ಇದರಿಂದ ಅದರ ಒತ್ತನ್ನು ಅವರು ಅರ್ಥ ಮಾಡಿಕೊಳ್ಳುವಂತಾಗುತ್ತದೆ. ಉದಾಹರಣೆಗೆ ರಾಷ್ಟ್ರೀಯ ಪಠ್ಯಕ್ರಮ 2000ದ ಅತಿ ಮುಖ್ಯ ಸಂಬಂಧವಿರುವುದು ಕಲಿಯುವುದನ್ನು ಕಲಿತುಕೊಳ್ಳುವುದಕ್ಕೆ, ಪರಿಸರದ ಕುರಿತು ಪ್ರಜ್ಞೆ ಬೆಳೆಸುವುದಕ್ಕೆ, ಲಿಂಗ ಸಮಾನತೆ, ಸಾಮಾಜಿಕ ಸಂಬದ್ಧತೆ, ಸಾಮಾನ್ಯ ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯ ಅನನ್ಯತೆಗೆ ಪ್ರೋತ್ಸಾಹ ನೀಡುವಿಕೆಯೊಂದಿಗೆ. ಈ ಬೃಹತ್ ಉದ್ದೇಶಗಳು ತರಗತಿ ಬೋಧನೆಯ ಸಂದರ್ಭದಲ್ಲಿ ಸೂಕ್ತವಾದ ರೀತಿಯಲ್ಲಿ ಶ್ರುತಗೊಳ್ಳುವಂತೆ ಶಿಕ್ಷಕರು ದೃಢಪಡಿಸಿಕೊಳ್ಳಬೇಕು.

ಪಠ್ಯಕ್ರಮದ ನಿರ್ವಹಣೆಯ ಮೇಲೆ ಪರಿಣಾಮ ಬೀರುವ ಮತ್ತು ಸಾಮಾನ್ಯವಾಗಿ ಯಾವಾಗಲೂ ನಿರ್ಲಕ್ಷ್ಯಕ್ಕೆ ಒಳಪಡುವ ಮೂರು ಪ್ರಮುಖ ವಿಚಾರಗಳು ಇವೆ. ಇವು ನಿರ್ವಹಣಾ ಉದ್ದೇಶಗಳಿಗೆ ಲಭ್ಯವಿರುವ ಬೋಧನಾ ಸಮಯ, ವ್ಯಾಸಂಗ ಕ್ರಮದ ನಿರ್ವಹಣೆಗೆ ಪಡೆಯಬೇಕಾದ ಸಮುದಾಯ ಬೆಂಬಲ, ಮತ್ತು ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಕ್ರಮಗಳಿಗೆ ಸಂಬಂಧಿಸಿದ್ದಾಗಿವೆ. ಮೇಲೆ ಉಲ್ಲೇಖಿಸಿದ ಎಲ್ಲ ಮೂರು ಅಳತೆಗೋಲುಗಳು ಗುಣಮಟ್ಟದ ಶಿಕ್ಷಣದ ಮೇಲೆ ಪ್ರಭಾವ ಬೀರುವ ರೀತಿಯವುಗಳು. ಶಿಕ್ಷಕರಿಗೆ ಅಪೇಕ್ಷಿತ ಸಮಯವನ್ನು ನೀಡದೇ ಇದ್ದರೆ ಅವರು ಸೂಚಿತ ಪಠ್ಯಕ್ರಮವನ್ನು ಅವಸರದಿಂದ ಮುಗಿಸುವ ಸಾಧ್ಯತೆ ಇದೆ. ಪರಿಹಾರಾತ್ಮಕ (ಕಲಿಕೆಯಲ್ಲಿ ಹಿಂದೆ ಬಿದ್ದ ಮಕ್ಕಳಿಗೆ ನೀಡುವ) ಮತ್ತು ಗುಣವೃದ್ಧಿ ಚಟುವಟಿಕೆಗಳನ್ನು ನಡೆಸುವುದಂತೂ ಸಾಧ್ಯವೇ ಇಲ್ಲ. ಆದರೆ ಇವುಗಳಿಲ್ಲದೆ ಯಾವುದೇ ಪಠ್ಯಕ್ರಮದ ನಿರ್ವಹಣೆಯು ಅನಾವಶ್ಯಕವಾದಂತಾಗಿ ಉಳಿಯುತ್ತವೆ. ಇದೇ ರೀತಿ ಮೇಲ್ವಿಚಾರಣೆಯ ಮತ್ತು ಆಡಳಿತಾತ್ಮಕ ಸಿಬ್ಬಂದಿಗಳು ಶಿಕ್ಷಕರಿಗೆ ಶೈಕ್ಷಣಿಕ ತರಬೇತಿ ನೀಡದೇ ಇದ್ದರೆ ಶಾಲಾ ಪರಿವೀಕ್ಷಣೆಗಳಿಗೆ ಯಾವುದೇ ಪ್ರಾಮುಖ್ಯತೆ ಇರುವುದಿಲ್ಲ.

ಪಠ್ಯಕ್ರಮದ ನವೀಕರಣ ಮತ್ತು ಮರುಪರಿಶೀಲನೆಯನ್ನು ಉತ್ತೇಜಿಸುವ ಮೌಲ್ಯಮಾಪನವು ಅತ್ಯಂತ ಮುಖ್ಯ ಕ್ಷೇತ್ರವಾಗಿದೆ. ಡೇವಿಸ್(1981), ಕ್ರೊನ್‌ಬಕ್(1963), ಹ್ಯಾಮಿಲ್ಟನ್(1976) ಮೊದಲಾದವರು ಪಠ್ಯಕ್ರಮದ ಮೌಲ್ಯ ಮಾಪನವನ್ನು ಒಂದು ಚಟುವಟಿಕೆಯಾಗಿ ಕಾಣುತ್ತಾರೆ. ಇದು ಪಠ್ಯಕ್ರಮದ ನಿರ್ವಹಣೆ, ಪಠ್ಯಕ್ರಮದ ಮರುಪರಿಶೀಲನೆ, ಪಠ್ಯಪುಸ್ತಕ ಉತ್ಪಾದನೆ ಮತ್ತು ಶಿಕ್ಷಕರ ತರಬೇತಿಗೆ ಅಂತರಾರ್ಥವನ್ನು ಹೊಂದಿರುತ್ತದೆ. ಹೊಸ ಪಠ್ಯಕ್ರಮದ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಹಣ ಒಳಗೊಂಡಿರುತ್ತದೆ. ಪಠ್ಯಕ್ರಮದ ಮರುಪರಿಶೀಲನೆ ಆವಶ್ಯಕವೆಂದು ಹೂಡಿಕೆದಾರರು ಮನಗಾಣುವುದು ಮುಖ್ಯ. ವೇದಪ್ರಕಾಶರ (2002) ಅಭಿಪ್ರಾಯದಲ್ಲಿ ಉದ್ದೇಶಿತ, ಅವಲೋಕಿತ ಮತ್ತು ಮರೆಯಲ್ಲಿರುವ ಪಠ್ಯಕ್ರಮದ ಮೌಲ್ಯಮಾಪನದಲ್ಲಿ ವಿವಿಧ ತಂತ್ರಗಳನ್ನು ಅಳವಡಿಸಿಕೊಂಡು ಒಳಗಿನವರನ್ನು ಮತ್ತು ಹೊರಗಿನವರನ್ನು ಬಳಸಿಕೊಳ್ಳಬೇಕಾಗುತ್ತದೆ.

ಪಠ್ಯಕ್ರಮದ ಮೌಲ್ಯಮಾಪನದ ತಂತ್ರಗಳು ಬಹು ರೀತಿಯದ್ದಾಗಿ ಇರಬಹುದು. ಇದರಲ್ಲಿ ಸುಲಭವಾದುದು ಪಠ್ಯಕ್ರಮ ತಜ್ಞರಿಂದ ಅಭಿಪ್ರಾಯ ಪಡೆಯುವುದು. ನಂತರ ಶಿಕ್ಷಕರಿಂದ ಮತ್ತು ಶಾಲಾ ಆಡಳಿತಗಾರರು ಮತ್ತು ನಿರ್ವಾಹಕರಿಂದ ಅಭಿಪ್ರಾಯಗಳನ್ನು ಪಡೆಯುವುದು. ಮೂರನೆಯದಾಗಿ ಹೆತ್ತವರು ಮತ್ತು ವಿದ್ಯಾರ್ಥಿಗಳ ಅಭಿಪ್ರಾಯಗಳ ಮೇಲೆ ಕಣ್ಣು ಹಾಯಿಸಬಹುದು. ಪಠ್ಯಕ್ರಮದ ಮರುಪರಿಶೀಲನೆಯನ್ನು ಮೌಲ್ಯಮಾಪನದ ಕೇವಲ ಒಂದು ತಂತ್ರಕ್ಕೆ ಸೀಮಿತಗೊಳಿಸಬಾರದು. ಮೇಲೆ ಉಲ್ಲೇಖಿಸಿದಂತೆ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿದ ಅಭಿಪ್ರಾಯಗಳನ್ನು ಆಧರಿಸಿ ಪಠ್ಯಕ್ರಮದ ಮೌಲ್ಯಮಾಪನವನ್ನು ಸಾಧ್ಯವಾದಷ್ಟು ವೈಜ್ಞಾನಿಕವಾಗಿ ನಡೆಸಬೇಕು. ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು (2000) ವಿನ್ಯಾಸಗೊಳಿಸುವಾಗ ಎಲ್ಲ ವಿಭಾಗಗಳ ಮಧ್ಯಸ್ಥಗಾರರೊಂದಿಗೆ ಸಮಾಲೋಚನೆಯನ್ನು ನಡೆಸಲಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. 1982ರಲ್ಲಿ ಚಲಾವಣೆಯಲ್ಲಿದ್ದ ಪಠ್ಯಕ್ರಮದ ಗುಣಮಟ್ಟ ಪರಿಶೀಲನೆಯನ್ನು ಕ್ಷಿಪ್ರವಾಗಿ ಕೈಗೊಳ್ಳಲಾಗಿತ್ತು ಮತ್ತು ಇದನ್ನು ಆಧರಿಸಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು(1988) ವಿನ್ಯಾಸಗೊಳಿಸಲಾಗಿತ್ತು.

ಪಠ್ಯಕ್ರಮದ ಮೌಲ್ಯಮಾಪನವು ಪಠ್ಯಕ್ರಮದ ಮರುಪರಿಶೀಲನೆಯ ಪೂರ್ವ ಸ್ಥಿತಿಯಾಗಿದೆ. ಮೌಲ್ಯಮಾಪನವನ್ನು ಸರಿಯಾದ ಕ್ರಮದಲ್ಲಿ, ವ್ಯವಸ್ಥಿತವಾಗಿ ಮತ್ತು ವ್ಯಾಪಕವಾಗಿ ನಡೆಸದೇ ಇದ್ದರೆ ಫಲಿತಾಂಶ ತಪ್ಪು ಅಭಿಪ್ರಾಯ ಮೂಡಿಸುವ ರೀತಿಯದ್ದಾಗಿರುವ ಸಾಧ್ಯತೆಗಳು

Digitised by Bharatavani, CIIL

ಇವೆ. ಹೀಗೆ, ಪಠ್ಯಕ್ರಮದ ಮೌಲ್ಯಮಾಪನದ ಮರುಪರಿಶೀಲನೆ ಮತ್ತು ಮರುಪರಿಷ್ಕರಣ ನಡೆಸಲು ಮುಖ್ಯ ಹೆಜ್ಜೆಗಳನ್ನು ರೂಪಿಸಿಕೊಳ್ಳಬೇಕು. ಇವುಗಳು ನಿಯಮಿತ, ನಿರಂತರ, ವ್ಯಾಪಕ ಮತ್ತು ವ್ಯವಸ್ಥಿತವಾಗಿರಬೇಕು. ಪಠ್ಯಕ್ರಮದ ಮೌಲ್ಯಮಾಪನವನ್ನು ವ್ಯಾಪಕ ರೀತಿಯಿಂದ ಅರ್ಥೈಸಿಕೊಳ್ಳಬಹುದು. ಅದು ರಾಷ್ಟ್ರೀಯ ಪಠ್ಯಕ್ರಮದ ಉದ್ದೇಶಗಳು ಮತ್ತು ಹಿತಾಸಕ್ತಿಗಳು, ಮತ್ತು ಅನುಷ್ಠಾನದ ಮಗ್ಗಲುಗಳ ಮೌಲ್ಯಮಾಪನವನ್ನು ನಡೆಸುವಂತಿರಬೇಕು. ಜೊತೆಗೆ ಕಲಿಯುವವರ ಸಾಧನೆಯನ್ನು ಕೂಡ ತಿಳಿಯುವ ಪ್ರಯತ್ನವನ್ನು ನಡೆಸಬೇಕಾಗುತ್ತದೆ.

ಪಠ್ಯಕ್ರಮದ ಮೌಲ್ಯಮಾಪನದ ಕೆಳಗೆ, ಮೌಲ್ಯಮಾಪನವು ತನ್ನ ಗಮನವನ್ನು ಪಠ್ಯಕ್ರಮದ ಮೂರು ಉದ್ದೇಶಗಳಲ್ಲಿ ಕೇಂದ್ರೀಕರಿಸಬೇಕು. ಅವುಗಳೆಂದರೆ, ಪ್ರಸಕ್ತತೆ, ಉತ್ಕೃಷ್ಟತೆ, ಮತ್ತು ಸರ್ವಸಮತೆ. ಇನ್ನೂ ಮುಂದುವರಿದು ಪಠ್ಯಕ್ರಮದ ಹಿತಾಸಕ್ತಿಗಳ ಮೌಲಮಾಪನವನ್ನೂ ನಡೆಸಬೇಕು. ಉದಾಹರಣೆಗೆ, ಪಠ್ಯಕ್ರಮವು ವೈಜ್ಞಾನಿಕ ಪ್ರಜ್ಞೆಯನ್ನು ಹೆಚ್ಚಿಸಿದೆಯೇ? ಅದು ಸಾಂಸ್ಕೃತಿಕ ಪರಂಪರೆಗೆ ಪ್ರೋತ್ಸಾಹ ನೀಡಿದೆಯೇ? ICT ಮತ್ತು ಸೌಂದರ್ಯ ಪ್ರಜ್ಞೆಯನ್ನು ಬಳಸಿದೆಯೇ? ಪಠ್ಯಕ್ರಮವು ಮಹಿಳೆಯರ ಮತ್ತು ವಿಶೇಷ ಅಗತ್ಯಗಳಿರುವ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದೆಯೇ? ಇತ್ಯಾದಿ.

**ಪಠ್ಯಕ್ರಮದ ಬದಲಾವಣೆಯ ನಿರ್ವಹಣೆ:** ರಾಷ್ಟ್ರೀಯ ಪಠ್ಯಕ್ರಮದ ಜಾರಿಗೊಳಿಸುವಿಕೆ ಮತ್ತು ಪಠ್ಯ ಬದಲಾವಣೆಗಳ ನಿರ್ವಹಣೆ ಅನೇಕ ವಾಸ್ತವಾಂಶಗಳನ್ನು ಆಧರಿಸಿ ಇರುತ್ತದೆ. ಇದರಲ್ಲಿ ಮುಖ್ಯವಾದುದು ರಾಜಕೀಯ ಸಂಕಲ್ಪ ಮತ್ತು ಅಧಿಕಾರಶಾಹಿಯ ಬೆಂಬಲ, ಪ್ರಾರಂಭಿಕ ಸೌಲಭ್ಯಗಳ ಲಭ್ಯತೆ, ಶಿಕ್ಷಕರ ದಕ್ಷತೆ ಮತ್ತು ಬದ್ಧತೆ, ಹೆತ್ತವರ ಸಹಕಾರ, ಸಮುದಾಯದ ಬೆಂಬಲ ಮತ್ತು ಕಲಿಯುವವರ ಪ್ರೇರಣೆ. ಪಠ್ಯಕ್ರಮಗಳ ಬದಲಾವಣೆಗಳು ತಳಹಂತದ ಸಾಮಾಜಿಕ ವಾಸ್ತವತೆಗಳನ್ನು ಮತ್ತು ಭವಿಷ್ಯದ ನೋಟವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ ಮತ್ತು ಪಠ್ಯಕ್ರಮದಲ್ಲಿ ಅಳವಡಿಸಲಾದ ಬದಲಾವಣೆಗಳು ನೀಡಬೇಕಾದ ಆಶ್ವಾಸನೆಗಳೆಂದರೆ ಲಿಂಗಸಮಾನತೆಯನ್ನು ಬಲಪಡಿಸುವುದು, ವಿಶೇಷ ಅಗತ್ಯಗಳಿರುವ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು, ಐಸಿಟಿಯ ಸಾಮರ್ಥ್ಯವನ್ನು ಬಳಸುವುದು, ಕಲಿಯುವವರು ಜಾಗತಿಕ ವಿಚಾರಗಳ ಅರಿವನ್ನು ಹೊಂದಿರುವಂತೆ ಮಾಡುವುದು ಮತ್ತು ಅವರನ್ನು ಮೌಲ್ಯಶಿಕ್ಷಣದಲ್ಲಿ ತೊಡಗಿಸಿಕೊಳ್ಳುವುದು. ನಂತರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಪಠ್ಯವಸ್ತುವಾಗಿ ರೂಪಾಂತರಿಸುವುದು. ಇದನ್ನು ಅನುಸರಿಸಿ ಯೋಗ್ಯ ಪಠ್ಯಪುಸ್ತಕಗಳನ್ನು ಮತ್ತು ಇತರ ಬೆಂಬಲಿತ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು. ಇತರ ಪೂರ್ವಭಾವಿ ಸಿದ್ಧತೆಗಳು ಹೀಗಿವೆ:

* ಶಿಕ್ಷಕರು ಪಠ್ಯಕ್ರಮವನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದಕ್ಕಾಗಿ ಅವರಿಗೆ ತರಬೇತಿ ನೀಡಬೇಕಾಗುತ್ತದೆ.

* ಶಿಕ್ಷಕರಿಗಾಗಿ ಮಾರ್ಗದರ್ಶಿ ಮತ್ತು ಬೆಂಬಲಿತ ಸಾಮಗ್ರಿಗಳನ್ನು ಸಿದ್ಧಗೊಳಿಸಬೇಕಾಗುತ್ತದೆ.

* ಇತರ ಮೂಲಭೂತ ಸೌಕರ್ಯಗಳನ್ನು ನೀಡಬೇಕಾಗುತ್ತದೆ. ಉದಾಹರಣೆಗೆ ಪ್ರತಿಯೊಂದು ಶಾಲೆಯು

ಕನಿಷ್ಠ 180 ದಿನಗಳನ್ನು ಮತ್ತು ಪ್ರತಿದಿನ 5 ಗಂಟೆಗಳನ್ನು ಬೋಧನಾ ವೇಳೆಯಾಗಿ ಮೀಸಲಾಗಿಡಬೇಕು.

* ತರಗತಿಯ ಬೋಧನೆಯಲ್ಲಿ ವಿದ್ಯಾರ್ಥಿಗಳ ಪಾಲುಗೊಳ್ಳುವಿಕೆ ಆವಶ್ಯವೆಂದು ಶಿಕ್ಷಕರು ತಿಳಿದುಕೊಳ್ಳಬೇಕು.

* ಮೌಲ್ಯಮಾಪನವು ನಿರಂತರ, ವ್ಯಾಪಕ ಮತ್ತು ಕಲಿಯುವವರ ಪರವಾಗಿ ಇರುವಂತೆ ಶಿಕ್ಷಕರು ಅದನ್ನು ನಡೆಸಬೇಕು.

* ಪಠ್ಯಕ್ರಮದ ಅನುಷ್ಠಾನ ಮತ್ತು ಅದರ ಬದಲಾವಣೆಯ ನಿರ್ವಹಣೆಯನ್ನು ಸರಕಾರಿ ವಲಯಕ್ಕೆ

ಮಾತ್ರ ಬಿಟ್ಟುಬಿಡುವ ಹಾಗಿಲ್ಲ. ಇದರಲ್ಲಿ ಸರಕಾರೇತರ ಸಂಸ್ಥೆಗಳು (ಎನ್‌ಜಿಒ) ದೊಡ್ಡ ರೀತಿಯಲ್ಲಿ ಪಾಲುಗೊಳ್ಳಬೇಕಾಗುತ್ತದೆ.

* ಪಠ್ಯಕ್ರಮವು ಸಮಗ್ರವಾಗಿ, ಅಕ್ಷರಶಃ ಹಾಗೂ ಚೈತನ್ಯಪೂರ್ವಕವಾಗಿ ಜಾರಿಗೆ ಬರುವಂತಾಗಲು ಶೈಕ್ಷಣಿಕ ಆಡಳಿತಾಧಿಕಾರಿಗಳು ಮತ್ತು ಪಠ್ಯಕ್ರಮದ ವಿನ್ಯಾಸಕಾರರು ಬದಲಾವಣೆಯ ಕಾರ್ಯಕರ್ತರಾಗಬೇಕಾಗುತ್ತದೆ.

ಯಾವುದೇ ಪಠ್ಯಕ್ರಮ, ಅದು ಪ್ರಾಥಮಿಕ ಅಥವಾ ಮಾಧ್ಯಮಿಕ ಹಂತದ್ದಾಗಿರಲಿ, ಸಾಮಾಜಿಕ ವಾಸ್ತವತೆಯಲ್ಲಿ ಹುದುಗಿರುವ ಮುಖ್ಯ ಸನ್ನಿವೇಶ ಮತ್ತು ಹಿತಾಸಕ್ತಿಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಪಠ್ಯಕ್ರಮವು ರಾಷ್ಟ್ರೀಯ ಮತ್ತು ಜಾಗತಿಕ ಸನ್ನಿವೇಶವನ್ನು ಗಮನದಲ್ಲಿ ಇಟ್ಟುಕೊಳ್ಳದಿದ್ದರೆ ಅದು ಉಪಯುಕ್ತ ಉದ್ದೇಶವನ್ನು ಈಡೇರಿಸುವುದಿಲ್ಲ. ಪಠ್ಯಕ್ರಮವು ಮಾಹಿತಿ, ಸಂಪರ್ಕ ತಂತ್ರಜ್ಞಾನವನ್ನು ಮತ್ತು ಶಿಕ್ಷಕರೊಂದಿಗಿನ ಮಾತುಕತೆಯ ಆಪ್ತತೆಯನ್ನು ಪೂರ್ಣ ಪ್ರಮಾಣದಿಂದ ಬಳಸದೇ ಹೋದರೆ ಅದು ಪ್ರತಿಫಲವನ್ನು ನೀಡುವುದಿಲ್ಲ. ಯಾವುದೇ ಪಠ್ಯಕ್ರಮವು ಲಿಂಗ ಸಮಾನತೆ ಮತ್ತು ಪುಷ್ಟಿದಾಯಕ ಅಭಿವೃದ್ಧಿಯ ಕುರಿತು ಸಂವೇದನೆಯನ್ನು ಮೂಡಿಸದೇ ಹೋದರೆ ಅದು ತನ್ನ ತಾತ್ವಿಕತೆಗೆ ಯೋಗ್ಯವಲ್ಲವೆಂದಾಗುತ್ತದೆ. ಶಾಂತಿಯುತ ಸಂಸ್ಕೃತಿ ಮತ್ತು ಅಂತರ್–ಸಾಂಸ್ಕೃತಿಕ ಅರ್ಥೈಸುವಿಕೆಯನ್ನು ಪ್ರೋತ್ಸಾಹಿಸದ ಪಠ್ಯಕ್ರಮವು ತನ್ನ ಉದ್ದೇಶವನ್ನು ಈಡೇರಿಸಲಾರದು.

ಶೈಕ್ಷಣಿಕ ಆಡಳಿತಾಧಿಕಾರಿಗಳು ಮತ್ತು ಮೇಲ್ವಿಚಾರಕರು ಪಠ್ಯಕ್ರಮದ ಬದಲಾವಣೆಗಳನ್ನು ಒಂದು ವ್ಯವಸ್ಥೆಯಾಗಿ ಕಾಣಬೇಕು, ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳು ಪಠ್ಯಕ್ರಮದ ತಾತ್ವಿಕತೆ ಮತ್ತು ಚೈತನ್ಯವನ್ನು ಪ್ರತಿಫಲಿಸುವಂತೆ ಗಮನವನ್ನು ಹರಿಸಬೇಕು; ಸೇವಾನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಸೂಕ್ತರೀತಿಯಲ್ಲಿ ಆಯೋಜಿಸಬೇಕು; ಮಾಧ್ಯಮದ ಬೆಂಬಲವನ್ನು ಪಡೆಯಬೇಕು; ಮುಂಚೂಣಿಯ

Digitised by Bharatavani, CIIL

ಪಠ್ಯಕ್ರಮವು ಅದರ ಸ್ಥಾನದಲ್ಲಿರಬೇಕು; ನೈದಾನಿಕ ಮತ್ತು ಪರಿಹಾರ ವ್ಯವಸ್ಥೆಗಳನ್ನು ಯೋಜಿಸಬೇಕು; ಸಾಂಸ್ಥಿಕ ಸೌಲಭ್ಯಗಳು ಲಭ್ಯವಿರಬೇಕು. ಎರಡನೆಯ ಅಂಶವೆಂದರೆ, ಬೋಧನೆಯು ಸಹಭಾಗಿತ್ವದ್ದಾಗಿರುವಂತೆ ಮತ್ತು ಕಲಿಯುವ ವ್ಯಕ್ತಿ ತಿಳಿವಳಿಕೆಯ ಕ್ರಿಯಾಶೀಲ ನಿರ್ಮಾಣಕಾರನಾಗುವಂತೆ ನೋಡಿಕೊಳ್ಳುವುದು. ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಸಂಯೋಜನೆಗಾಗಿ ಯಾಂತ್ರಿಕ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು. ಕಲಿಕೆಯ ಕನಿಷ್ಠ ಮಟ್ಟಗಳನ್ನು ಸಾಧಿಸುವುದರ ಮೇಲೆ ಒತ್ತನ್ನು ನೀಡುವುದು.

ಸಹ–ಪಠ್ಯ ಚಟುವಟಿಕೆಗಳ ಸಂಘಟನೆಯು ಅತ್ಯಂತ ಸಂಗತವಾಗಿ ಇರುತ್ತದೆ. ಕಲಿಯುವವರ ಭೌತಿಕ, ಬೌದ್ಧಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಮಗ್ಗಲುಗಳು ಬೆಳವಣಿಗೆಯನ್ನು ಸಾಧಿಸಲು ಅನೇಕ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಈ ಕಾರ್ಯಯೋಜನೆಯಲ್ಲಿ ಯೋಗ, ಕ್ರೀಡೆ, ವಾದ ಮಂಡನೆ, ರಸಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮಗಳಾದ ನಾಟಕಗಳ ಪ್ರದರ್ಶನದ ಏರ್ಪಾಟು ಮತ್ತು ಕವಿತಾ ವಾಚನಗಳಂತಹವುಗಳು ಮುಖ್ಯ ಪಾತ್ರ ವಹಿಸುತ್ತವೆ. ಗ್ರಹಿಕೆಯ ದೃಷ್ಟಿಯಲ್ಲಿ, ಸಾಕ್ಷರತೆ ಮತ್ತು ಎಣಿಕೆಯ ಪದ್ಧತಿಯ ತಳಹದಿಯನ್ನು ರೂಪಿಸುವ ಮೂಲಭೂತ ತಂತ್ರಗಳನ್ನು ಪಠ್ಯಕ್ರಮ ಒದಗಿಸಬೇಕು. ಅದು ವೃತ್ತಿ ಮತ್ತು ಕೈ ಕೆಲಸದ ಕುರಿತು ಧನಾತ್ಮಕ ಧೋರಣೆಯನ್ನು ಬೆಳೆಸಬೇಕು. ಅದು ಜಾಗತಿಕ ನೆಲೆಯಲ್ಲಿ ಒಪ್ಪಿತವಾದ ಮೌಲ್ಯಗಳ ಮತ್ತು ಜೀವನ ಕೌಶಲಗಳಿಗೆ ತಳಹದಿಯನ್ನು ಒದಗಿಸಬೇಕು. ಕಲಿಯುವವರಿಗೆ ಯಾವ ರೀತಿಯಲ್ಲಿ ತರಬೇತಿ ನೀಡಬೇಕೆಂದರೆ, ಅವರು ಸಂವಹನವನ್ನು ಪರಿಣಾಮಕಾರಿಯಾಗಿ ನಡೆಸುವಂತಾಗಬೇಕು, 'ವಿವಾದಾಂಶ'ಗಳನ್ನು 'ವಿವಾದಾಂಶಗಳಲ್ಲ'ದ್ದರಿಂದ ಪ್ರತ್ಯೇಕಿಸುವುದನ್ನು (ಹೊಟ್ಟಿನಿಂದ ಕಾಳನ್ನು ಬೇರ್ಪಡಿಸಿದಂತೆ) ತಿಳಿದಿರಬೇಕು, ಸಮಸ್ಯೆಗಳನ್ನು ಗುರುತಿಸಿ ಪರಿಹಾರಗಳನ್ನು ಕಂಡುಕೊಳ್ಳುವಂತಿರಬೇಕು, ಮತ್ತು ವ್ಯತ್ಯಾಸಗಳನ್ನು ಮೆಚ್ಚಿಕೊಳ್ಳುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ತಾರತಮ್ಯ ಮತ್ತು ದೈನ್ಯತೆಯನ್ನು ಹೋಗಲಾಡಿಸುವುದು ವ್ಯಾಸಂಗ ಕ್ರಮದ ನಿರ್ವಹಣೆಯ ಮುಖ್ಯ ಉದ್ದೇಶವಾಗಿರಬೇಕು.

ತಂತ್ರಗಳ ಅಥವಾ ಕ್ರಮಗಳ ಅನುಷ್ಠಾನಕ್ಕಾಗಿ ಪಠ್ಯಕ್ರಮದ ಚೌಕಟ್ಟುಗಳು(1988, 2000) ಇಡೀ ಒಂದು ಅಧ್ಯಾಯವನ್ನೇ ಮೀಸಲಾಗಿಟ್ಟಿವೆ. ಅದನ್ನು 'ವ್ಯವಸ್ಥೆಯ ನಿರ್ವಹಣೆ' ಎಂದು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು(2000, ಪುಟ: 106)ಕರೆಯುತ್ತದೆ. ರಾಷ್ಟ್ರೀಯ ವ್ಯಾಸಂಗ ಕ್ರಮದ ಅನುಷ್ಠಾನದಲ್ಲಿ ಮುಖ್ಯ ಪಾತ್ರ ವಹಿಸುವವರು ಶೈಕ್ಷಣಿಕ ಯೋಜನಕಾರರು ಮತ್ತು ಆಡಳಿತಾಧಿಕಾರಿಗಳು. ವ್ಯವಸ್ಥೆಯ ದೃಷ್ಟಿಕೋನವನ್ನು ಕೇಂದ್ರವಾಗಿಟ್ಟುಕೊಂಡು ಶೈಕ್ಷಣಿಕ ಆಡಳಿತಾಧಿಕಾರಿಗಳು ಮತ್ತು ಪಠ್ಯಕ್ರಮದ ಯೋಜನಕಾರರು 'ಕ್ರಿಯಾ ಯೋಜನೆ'(ಆಕ್ಷನ್ ಪ್ಲಾನ್)ಯನ್ನು ವಿವರವಾಗಿ ಹಮ್ಮಿಕೊಳ್ಳಬೇಕು. ಈ ಕ್ರಿಯಾ ಯೋಜನೆಯು ಸಮಯದ ಚೌಕಟ್ಟಿನ ಒಳಗೆ ಅನೇಕ ಚಟುವಟಿಕೆಗಳನ್ನು ಗುರುತಿಸುತ್ತದೆ ಮತ್ತು ಇದು ಮೇಲ್ವಿಚಾರಕರಿಗೆ ರಸ್ತೆ ನಕ್ಷೆಯಾಗಬೇಕು. ಆಡಳಿತಗಾರರು ಪಠ್ಯಕ್ರಮದ ಅನುಷ್ಠಾನಕ್ಕಾಗಿ ಕಾರ್ಯ ಯೋಜನೆಯನ್ನು ಬೆಳೆಸಿಕೊಳ್ಳಬೇಕು. ಶಿಕ್ಷಕರ ತರಬೇತಿ, ಪಠ್ಯಪುಸ್ತಕಗಳ ಅಭಿವೃದ್ಧಿ, ಮತ್ತು ಶಿಕ್ಷಕರಿಗೆ ಬೆಂಬಲಿತ ವಸ್ತುವಿಷಯಗಳ ಬೆಳವಣಿಗೆಗೆ ಸಂಬಂಧಿಸಿದ ಮುಂದಿನ ಚಟುವಟಿಕೆಗಳು ಸ್ಥಾನ ಪಡೆಯುವಂತೆ ಆಡಳಿತಾಧಿಕಾರಿಗಳು ನೋಡಿಕೊಳ್ಳಬೇಕು.

ಒಮ್ಮೆ ಆ ರಸ್ತೆ ನಕ್ಷೆ ಸಿದ್ಧವಾಯಿತೆಂದರೆ, ಅನುಷ್ಠಾನದ ಕ್ರಮವನ್ನು ವಿವರವಾಗಿ ಅಭಿವ್ಯಕ್ತಿಸಬೇಕು. ರಾಷ್ಟ್ರೀಯ ಪಠ್ಯಕ್ರಮವನ್ನು ಜಾರಿಗೆ ತರಲು ಸೌಕರ್ಯಗಳನ್ನು ಒದಗಿಸುವುದರ ಅಗತ್ಯವಿರುವುದರಿಂದ, ಯಾರು ಯಾವುದನ್ನು ಯಾವಾಗ ಮಾಡುತ್ತಾರೆ ಎಂಬುದನ್ನು ತಿಳಿಯಲು ಆಡಳಿತಾತ್ಮಕ ಕ್ರಿಯಾ ಯೋಜನೆಯೊಂದನ್ನು ವಿಶದೀಕರಿಸಬೇಕು. ಕ್ರಿಯಾ ಯೋಜನೆಯನ್ನು ರೂಪಿಸಿದ ಬಳಿಕ ಮೇಲೆ ಉಲ್ಲೇಖಿಸಿದ ಎಲ್ಲ ಅಂಶಗಳು ಜಾರಿಗೆ ಬರುವಂತೆ ಆಡಳಿತಾಧಿಕಾರಿಗಳು ಈ ಕೆಳಕಂಡಂತೆ ಸೂಕ್ತ ಆಡಳಿತಾತ್ಮಕ ರಚನೆಯನ್ನು ಚಾಲನೆಗೆ ತರಬೇಕು:

* ಪಠ್ಯಕ್ರಮವನ್ನು ಅಭಿವೃದ್ಧಿ ಪಡಿಸಲಾಗುತ್ತದೆ ಮತ್ತು ವಿವಿಧ ಹಕ್ಕುದಾರರಿಗೆ ಅದನ್ನು ತಲುಪಿಸಲಾಗುತ್ತದೆ.
* ಶಿಕ್ಷಕರ ತರಬೇತಿಯನ್ನು ಆಯೋಜಿಸಲಾಗುತ್ತದೆ.
* ಪಠ್ಯಪುಸ್ತಕಗಳ ಮತ್ತು ಬೆಂಬಲಿತ ಸಾಮಗ್ರಿಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತದೆ.
* ತಂತ್ರಗಳ ಮೇಲ್ವಿಚಾರಣೆಯನ್ನು ಸೂಕ್ತರೀತಿಯಲ್ಲಿ ನೋಡಿಕೊಳ್ಳಲಾಗುತ್ತದೆ.

'ಮೇಲ್ವಿಚಾರಣಾ ತಂತ್ರ'ವು ಅನುಷ್ಠಾನದ ಅವಿಭಾಜ್ಯ ಅಂಗವಾಗಿರಬೇಕು. ಅದು ಕಾರ್ಯಾಗತಗೊಂಡ ಮಾಹಿತಿಯನ್ನು–ಕಲ್ಪಿಸಿಕೊಂಡ ರೀತಿಯಲ್ಲಿಯೇ ಅನುಷ್ಠಾನಕ್ಕೆ ಬಂದಿದೆಯೇ–ಎನ್ನುವುದನ್ನು ಕಂಡುಕೊಳ್ಳಬೇಕು. ಮೇಲಿನ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ನಡೆಸಲು ಆಡಳಿತಾಧಿಕಾರಿಗಳು ಕೆಳಕಂಡ ಕೆಲವು ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು:

* ರಾಷ್ಟ್ರೀಯ ಪಠ್ಯಕ್ರಮವನ್ನು ಜಾರಿಗೆ ತರಲು ಆಡಳಿತಾತ್ಮಕ ಕ್ರಿಯೆಯನ್ನು ಪ್ರಾರಂಭಿಸಲಾಗಿದೆಯೇ?
* ಶಿಕ್ಷಕರ ತರಬೇತಿ, ಪಠ್ಯಪುಸ್ತಕಗಳ ಮತ್ತು ಬೆಂಬಲಿತ ಸಾಮಗ್ರಿಗಳ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಲಾಗಿದೆಯೇ? ಅದು ಕಾಲಕ್ಕೆ ಸರಿಯಾಗಿ ನಡೆಯುತ್ತಿದೆಯೇ?
* ತರಗತಿ ಬೋಧನೆಯು ಸೂಚಿತ ರೀತಿಯಿಂದ ನಡೆಯುತ್ತಿದೆಯೇ? ಸಂಸ್ಥೆಗಳು ಪ್ರಾರಂಭಿಕ ಸೌಕರ್ಯಗಳನ್ನು ಪಡೆದುಕೊಂಡಿವೆಯೇ?

ರಾಷ್ಟ್ರೀಯ ಪಠ್ಯಕ್ರಮದ ನಿರ್ವಹಣೆಯನ್ನು ನಡೆಸುವಾಗ ಶೈಕ್ಷಣಿಕ ಆಡಳಿತಾಧಿಕಾರಿಗಳು ಬದಲಾವಣೆಯ ಕಾರ್ಯಕರ್ತ ರಾಗಬೇಕಾಗುತ್ತದೆ. ಕಾರ್ಯನೀತಿಯ ಉತ್ತಮ ಉದ್ದೇಶಗಳು

Digitised by Bharatavani, CIIL

ಪಠ್ಯಕ್ರಮ ಮತ್ತು ಪಠ್ಯವಸ್ತುಗಳಲ್ಲಿ ಸಂಪೂರ್ಣವಾಗಿ ಪ್ರತಿಫಲಿತ ವಾಗುವಂತೆ ನೋಡಿಕೊಳ್ಳಲು ಪಠ್ಯಕ್ರಮದ ಅನುಷ್ಠಾನಕಾರರು ಮತ್ತು ಪಠ್ಯಕ್ರಮದ ಮೌಲ್ಯಮಾಪಕರು ನಿಯತವಾಗಿ ಸಂಪರ್ಕದಲ್ಲಿರುವಂತಹ ಸನ್ನಿವೇಶವನ್ನು ಅವರು ಸೃಷ್ಟಿಸಬೇಕು. ಆನಂತರ, ರಾಷ್ಟ್ರೀಯ ಪಠ್ಯಕ್ರಮದ ಮೂಲ ಸತ್ವವನ್ನು(ಆತ್ಮ) ಶಾಲೆಗಳಲ್ಲಿ ನಿರ್ವಹಿಸಲಾಗುತ್ತದೆ, ಸಂವಹನಗೊಳಿಸಲಾಗುತ್ತದೆ ಮತ್ತು ಅದರ ಮೌಲ್ಯಮಾಪನವನ್ನು ನಡೆಸಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅದರ ಮೇಲ್ವಿಚಾರಣೆಯನ್ನು ನಡೆಸಬೇಕಾಗುತ್ತದೆ. ಪಠ್ಯಕ್ರಮವನ್ನು ಸ್ಪಂದನಶೀಲವಾಗಿ, ಜೀವಂತ ವಾಗಿ ಮತ್ತು ಸಂತೋಷದಾಯಕವಾಗಿ ಮಾಡಲು ಆಡಳಿತಾತ್ಮಕ ಒಳನೋಟದೊಂದಿಗೆ ಬದ್ಧತೆಯ ಪ್ರಜ್ಞೆ ಕೂಡ ಇರಬೇಕು. ಧೂಳುಮಯವಾಗಿ, ಅಸ್ತವ್ಯಸ್ತವಾಗಿ ತಗ್ಗುದಿಣ್ಣೆಗಳಿಂದ ತುಂಬಿರುವ ರಸ್ತೆಯಲ್ಲಿ ಪಯಣಿಸುವುದರಲ್ಲಿ ಮತ್ತು ಗುರಿಯನ್ನು ತಲುಪುವುದರಲ್ಲಿ ತೃಪ್ತಿ ಹೊಂದಬೇಕಾದಂತಹ ಮನಃಸ್ಥಿತಿ ಇಲ್ಲಿ ಇರಬೇಕಾಗುತ್ತದೆ.

**ಮೂಲ: ಒ.ಎಸ್. ದೇವಲ್**

**ಅನು: ಡಾ. ಗೀತಾ ಶೆಣೈ**

## ರಾಷ್ಟ್ರೀಯ ಪ್ರತಿಭಾನ್ವೇಷಣಾ ಯೋಜನೆ

**ಯೋಜನೆಯ ಉಗಮ:** ಸ್ವಾತಂತ್ರ್ಯಾನಂತರ ಭಾರತವೂ ಇತರ ದೇಶಗಳಂತೆ ದೇಶದಲ್ಲಿ ಯೋಜನೆ ಮತ್ತು ಪ್ರಗತಿಯ ಬಗ್ಗೆ ವಿಶೇಷವಾದ ಚಿಂತನೆಗಳನ್ನು ಮಾಡಿ, ದೇಶದ ಸಂಪನ್ಮೂಲದ ಒಂದು ಭಾಗವನ್ನು ವಿಜ್ಞಾನದ ಸಂಶೋಧನೆ ಮತ್ತು ಪ್ರಗತಿಗಾಗಿ ವಿನಿಯೋಗಿಸಲು ನಿರ್ಧಾರಮಾಡಿತು. ರಾಷ್ಟ್ರದ ಪ್ರಗತಿಯ ಈ ಉದ್ದೇಶವನ್ನು ಸಾಧಿಸುವ ಸಲುವಾಗಿ ಉನ್ನತಶಿಕ್ಷಣ, ರಾಷ್ಟ್ರೀಯ ಪ್ರಯೋಗಾಲಯಗಳು, ರಾಷ್ಟ್ರ ರಕ್ಷಣಾ ಸಂಸ್ಥೆಗಳು, ಬಾಹ್ಯಾಕಾಶ ಸಂಶೋಧನಾ ಕೇಂದ್ರಗಳು ಮೊದಲಾದ ವಿವಿಧ ಸಂಸ್ಥೆಗಳನ್ನು ಸ್ಥಾಪಿಸಿತು. ಈ ಸಂಸ್ಥೆಗಳ ಅಗತ್ಯಗಳನ್ನು ಪೂರೈಸಲು ವಿಜ್ಞಾನದ ಪ್ರಗತಿಯಲ್ಲಿ ದೇಶವನ್ನು ಮುಂಚೂಣಿಗೆ ಕೊಂಡೊಯ್ಯುವ ವಿಜ್ಞಾನಿಗಳ ಅವಶ್ಯಕತೆ ಇತ್ತು. ಹೀಗಾಗಿ ಸಮರ್ಥರೂ ಪ್ರತಿಭಾನ್ವಿತರೂ ಆದ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಪ್ರಕ್ರಿಯೆಯ ಪ್ರಾರಂಭದಿಂದಲೇ ಗುರುತಿಸುವುದು ಹಾಗೂ ಅವರನ್ನು ದೇಶಸೇವೆಗಾಗಿ ಸಾಧನೆಮಾಡುವ ವಿಜ್ಞಾನಿಗಳಾಗಿ ಬೆಳೆಸುವುದು ಅಗತ್ಯವಾಗಿತ್ತು.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಕೇಂದ್ರವು (NCERT) ಈ ರೀತಿಯಲ್ಲಿ ಭವಿಷ್ಯದಲ್ಲಿ ಪ್ರಾವೀಣ್ಯವನ್ನು ಸಾಧಿಸುವ ಸಾಮರ್ಥ್ಯವನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಲು ಹಾಗೂ ಅವರಿಗೆ ಅಗತ್ಯವಾದ ಸಹಾಯ ಮತ್ತು ಪ್ರೋತ್ಸಾಹವನ್ನು ಕೊಡಲು ಒಂದು ಯೋಜನೆಯನ್ನು ರೂಪಿಸಿಕೊಂಡಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಂದರೆ ಅವರ ಪ್ರತಿಭೆಗಳನ್ನು ಗುರುತಿಸುವುದು ಹಾಗೂ ಅವುಗಳನ್ನು ಪೋಷಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿತ್ತು. ಈ ಉದ್ದೇಶದಿಂದ ಮೂಡಿದ ಯೋಜನೆಗೆ 'ರಾಷ್ಟ್ರೀಯ ವಿಜ್ಞಾನ ಪ್ರತಿಭಾನ್ವೇಷಣಾ ಯೋಜನೆ' (National Science Talent Search Scheme) ಎಂದು ನಾಮಕರಣ ಮಾಡಲಾಯಿತು. ಈ ಯೋಜನೆ 1963ನೇ ಇಸವಿಯಲ್ಲಿ ಜಾರಿಗೆ ಬಂದು ಶಾಲೆಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಲು ಹಾಗೂ ಈ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಿ ಸಂಶೋಧಕರೂ ವಿಜ್ಞಾನಿಗಳೂ ಆಗಿ ಬೆಳೆಯಲು ಸಹಕಾರಿಯಾಗುವಂತೆ ಇವರಿಗೆ ವಿದ್ಯಾರ್ಥಿವೇತನನ್ನು ನೀಡಲು ಅನುವು ಮಾಡಿಕೊಟ್ಟಿತು.

ಈ ಯೋಜನೆಯನ್ನು ಕಾರ್ಯರೂಪಗೊಳಿಸಿದ ಮೊದಲ ವರ್ಷದಲ್ಲಿ ಇದು ಕೇಂದ್ರಾಡಳಿತ ಪ್ರದೇಶವಾದ ದೆಹಲಿಯನ್ನು ಮಾತ್ರ ಒಳಗೊಂಡಿದ್ದು 11ನೇ ತರಗತಿಯ 10 ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿವೇತನವನ್ನು ನೀಡಲಾಯಿತು. 1964ನೇ ವರ್ಷದಲ್ಲಿ ಈ ಯೋಜನೆಯನ್ನು ದೇಶದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ವಿಸ್ತರಿಸಲಾಯಿತು. ಈ ಸಂದರ್ಭದಲ್ಲೇ ವಿದ್ಯಾರ್ಥಿವೇತನಗಳ ಸಂಖ್ಯೆಯೂ ಹೆಚ್ಚಾಗಿ 11ನೆ ತರಗತಿಯ 350 ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನ ಸಿಗುವಂತಾಯಿತು.

1976ರಲ್ಲಿ ಶಿಕ್ಷಣದ ವಿನ್ಯಾಸ 10+2+3 ಆದ ಹಿನ್ನೆಲೆಯಲ್ಲಿ ಈ ಯೋಜನೆಯಲ್ಲೂ ಬದಲಾವಣೆಗಳಾದವು. ಈ ಸಂದರ್ಭದಲ್ಲಿ ಯೋಜನೆಯನ್ನು ಸಮಾಜವಿಜ್ಞಾನ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕ್ಷೇತ್ರಗಳಿಗೂ ವಿಸ್ತರಿಸಲಾಯಿತು. ಇದೇ ಸಮಯದಲ್ಲಿ ಯೋಜನೆಯನ್ನು 'ರಾಷ್ಟ್ರೀಯ ಪ್ರತಿಭಾನ್ವೇಷಣಾ ಯೋಜನೆ' (National Talent Search Scheme) ಎಂದು ಪುನರ್ನಾಮಕರಣ ಮಾಡಲಾಯಿತು. ವಿದ್ಯಾರ್ಥಿವೇತನದ ಸಂಖ್ಯೆಯನ್ನು 500ಕ್ಕೆ ಏರಿಸಲಾಯಿತು. ದೇಶದಲ್ಲಿ ಶೈಕ್ಷಣಿಕವ್ಯವಸ್ಥೆ ಬದಲಾಗುತ್ತಿದ್ದುದರಿಂದ, ಈ ಯೋಜನೆಯನ್ನು 10, 11 ಮತ್ತು 12ನೇ ತರಗತಿಗಳಿಗೂ ವಿಸ್ತರಿಸಿ, ಪ್ರತಿ ತರಗತಿಗೆ ಪ್ರತ್ಯೇಕ ಪರೀಕ್ಷೆಗಳನ್ನು ನಡೆಸಲು ಪ್ರಾರಂಭ ಮಾಡಲಾಯಿತು.

1981ರಲ್ಲಿ ವಿದ್ಯಾರ್ಥಿವೇತನದ ಸಂಖ್ಯೆಯನ್ನು 500ರಿಂದ 550ಕ್ಕೆ ಹೆಚ್ಚಿಸಲಾಯಿತು. ಈ ಹೆಚ್ಚುವರಿ 50 ವಿದ್ಯಾರ್ಥಿವೇತನವನ್ನು ಪ್ರತ್ಯೇಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮೀಸಲಿಡಲಾಯಿತು. ಮತ್ತೆ 1983ರಲ್ಲಿ ವಿದ್ಯಾರ್ಥಿವೇತನದ ಸಂಖ್ಯೆಯನ್ನು 750ಕ್ಕೆ ಏರಿಸಿ 70 ವಿದ್ಯಾರ್ಥಿವೇತನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮೀಸಲು ಇಡಲಾಯಿತು ಈ ಯೋಜನೆಯಲ್ಲಿ ಬದಲಾವಣೆಗಳನ್ನು ತಂದು 1985ರಲ್ಲಿ ಇದನ್ನು 10ನೇ ತರಗತಿಗೆ ಮಾತ್ರ ಮಿತಿಗೊಳಿಸಿ ವಿದ್ಯಾರ್ಥಿವೇತನಗಳ ಸಂಖ್ಯೆಯನ್ನ ಇರುವಂತೆಯೇ ಉಳಿಸಿಕೊಳ್ಳಲಾಯಿತು. 2000ದ ವರ್ಷದಲ್ಲಿ ವಿದ್ಯಾರ್ಥಿವೇತನಗಳ ಸಂಖ್ಯೆ 750ರಿಂದ 1000ಕ್ಕೆ

Digitised by Bharatavani, CIIL

ಏರಿತು. ರಾಷ್ಟ್ರೀಯ ಮಾನಕದ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕ್ರಮವಾಗಿ ಶೇ. 15 ಮತ್ತು ಶೆ.. 7.5 ಮೀಸಲಾತಿಗೆ ಅವಕಾಶಮಾಡಿಕೊಡಲಾಯಿತು.

**ಆಯ್ಕೆಯ ಪ್ರಕ್ರಿಯೆ:** 1985ರವರೆಗೆ ಈ ಯೋಜನೆ ಸಂಪೂರ್ಣವಾಗಿ ಕೇಂದ್ರೀಕೃತವಾಗಿತ್ತು. 10, 11 ಮತ್ತು 12ನೇ ತರಗತಿಗಳಿಗೆ 15 ಭಾಷೆಗಳಲ್ಲಿ 400ಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ಮೂರು ಪರೀಕ್ಷೆಗಳು ಎನ್‌ಸಿಇಆರ್‌ಟಿಯ ಕಡೆಯಿಂದ ನಡೆಯುತ್ತಿದ್ದವು. ಯೋಜನೆಯ ಎರಡು ದಶಕಗಳ ಅನುಭವದಿಂದ, ಈ ಯೋಜನೆಯ ಪ್ರಯೋಜನವನ್ನು ಕೆಲವೇ ಪ್ರದೇಶದ ವಿದ್ಯಾರ್ಥಿಗಳು ನಿಯಮಿತವಾಗಿ ಪಡೆದುಕೊಳ್ಳುತ್ತಿರುವುದು ಗಮನಕ್ಕೆ ಬಂದಿತು. ದೇಶದ ಬಹಳಷ್ಟು ಪ್ರದೇಶಗಳಿಂದ ಈ ಯೋಜನೆಯ ಫಲಾನುಭವಿಗಳ ಪ್ರಾತಿನಿಧ್ಯವಿರಲಿಲ್ಲ. ಈ ಅಂಶದ ಹಿನ್ನೆಲೆಯಲ್ಲಿ ಇದೇ ಯೋಜನೆಯನ್ನು ವಿಕೇಂದ್ರೀಕರಣಗೊಳಿಸಲಾಯಿತು. ಹೊಸ ವ್ಯವಸ್ಥೆಯಲ್ಲಿ, ದ್ವಿಹಂತದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆಮಾಡಲು ಮೊದಲು ಮಾಡಲಾಯಿತು. ಮೊದಲ ಹಂತದಲ್ಲಿ, ಪರೀಕ್ಷೆಯನ್ನು ನಡೆಸಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಜವಾಬ್ದಾರಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳದ್ದಾಗಿತ್ತು. ಇದಕ್ಕೆ 'ರಾಜ್ಯಮಟ್ಟದ ಪ್ರತಿಭಾನ್ವೇಷಣಾ ಪರೀಕ್ಷೆ' (State Level Talent Search Examination) ಎಂದು ಹೆಸರು, ಎರಡನೇ ಹಂತದಲ್ಲಿ ಎನ್ ಸಿ ಇ ಆರ್ ಟಿ ಆಯ್ಕೆಯ ಪ್ರಕ್ರಿಯೆಯನ್ನು ನಡೆಸುತ್ತಿತ್ತು.

ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳನ್ನು (ರಾಜ್ಯ ಖೋಟಾ), ಎನ್ ಸಿ ಇ ಆರ್ ಟಿ 3000 ವಿದ್ಯಾರ್ಥಿಗಳಿಗೆ ನಡೆಸುವ ರಾಷ್ಟ್ರಮಟ್ಟದ ಪರೀಕ್ಷೆಗೆ ಶಿಫಾರಸ್ಸು ಮಾಡಲಾಗುತ್ತಿತ್ತು. ಈ ಮಿತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೆಕೆಂಡರಿ ಹಂತದಲ್ಲಿ ದಾಖಲಾಗುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ, ಸೂಕ್ತ ಅನುಪಾತದಲ್ಲಿ, ಕೇಂದ್ರಾಡಳಿತ ಪ್ರದೇಶಗಳಿಗೆ ಕನಿಷ್ಠ 10, ರಾಜ್ಯಗಳಿಗೆ ಕನಿಷ್ಠ 25 ಇದ್ದು ಇವೆರಡರಲ್ಲಿ ಯಾವುದಕ್ಕೂ ಗರಿಷ್ಠ 500 ಎಂದು ನಿಗದಿಯಾಗಿದೆ. =ಈ ಕೋಟಾವನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಪುನರ್ ವಿಮರ್ಶೆ ಮಾಡಬೇಕು. 2000ದ ವರ್ಷದಲ್ಲಿ ವಿದ್ಯಾರ್ಥಿವೇತನ ಹೆಚ್ಚಾದ ಹಿನ್ನೆಲೆಯಲ್ಲಿ ರಾಜ್ಯದ ಕೋಟಾ ಸಹ 3ರಿಂದ 4 ಸಾವಿರ ವಿದ್ಯಾರ್ಥಿಗಳಿಗೆ ವಿಸ್ತಾರವಾಯಿತು. ಇದು 2001ರಲ್ಲಿ ಚಾಲ್ತಿಗೆ ಬಂದಿತು.

**ಮೌಲ್ಯಮಾಪನ ವಿಧಾನ:** ರಾಷ್ಟ್ರೀಯ ವಿಜ್ಞಾನ ಪ್ರತಿಭಾನ್ವೇಷಣಾ ಯೋಜನೆ NSTSS ಯ ಅಡಿಯಲ್ಲಿ ಮೊದಲಿಗೆ ಪ್ರತಿಭಾನ್ವಿತರಾದ ವಿದ್ಯಾರ್ಥಿಗಳನ್ನು ಗುರುತಿಸಲಾಗುತ್ತಿತ್ತು. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಒಂದು ಪರೀಕ್ಷೆಯನ್ನು ಕೊಡಲಾಗುತ್ತಿತ್ತು. ಇದು ಒಂದು ವಿಜ್ಞಾನ ಅಭಿವೃತ್ತಿ ಪರೀಕ್ಷೆ, ಒಂದು ಪ್ರಬಂಧ ಬರವಣಿಗೆ, ಮತ್ತು ವಿಜ್ಞಾನದ ಹೊಳಹುಗಳನ್ನು ಪ್ರದರ್ಶಿಸುವ ಒಂದು ಪ್ರಾಜೆಕ್ಟ್ ವರದಿಯನ್ನು ಒಳಗೊಂಡಿತ್ತು. ಈ ಹಂತದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಒಂದು ಕಿರುಪಟ್ಟಿ (short list) ಯನ್ನು ತಯಾರಿಸಲಾಗುತ್ತಿತ್ತು. ಈ ವಿದ್ಯಾರ್ಥಿಗಳಿಗೆ ಒಂದು ಮುಖಾಮುಖಿ ಸಂದರ್ಶನವನ್ನು ನಡೆಸಲಾಗುತ್ತಿತ್ತು. ನಾಲ್ಕೂ ಅಂಶಗಳಲ್ಲಿ ವಿದ್ಯಾರ್ಥಿಗಳ ಸಾಧನೆಯ ಆಧಾರದ ಮೇಲೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿತ್ತು.

ಮೊದಲಿಗೆ ಪರೀಕ್ಷೆಯ ಭಾಷೆ ಇಂಗ್ಲಿಷ್ ಮಾತ್ರವಾಗಿತ್ತು. 1969ರ ನಂತರ, ವಿಜ್ಞಾನ ಯೋಗ್ಯತಾ ಪರೀಕ್ಷೆಯನ್ನು ಸಂವಿಧಾನದಲ್ಲಿ ಅಂಗೀಕೃತವಾಗಿರುವ ಎಲ್ಲ ಭಾಷೆಗಳಲ್ಲಿ ಕೊಡಲಾಯಿತು. ವಿದ್ಯಾರ್ಥಿಗಳು ಪ್ರಬಂಧ ಮತ್ತು ಪ್ರಾಜೆಕ್ಟ್‌ಗಳಿಗೆ ತಮ್ಮದೇ ಆಯ್ಕೆಯ ಭಾಷೆಯನ್ನು ಆರಿಸಿಕೊಳ್ಳಲು ಅವಕಾಶಮಾಡಿ ಕೊಡಲಾಯಿತು.

ಯೋಜನೆಯಲ್ಲಿ ವಿದ್ಯಾರ್ಥಿವೇತನಕ್ಕಾಗಿ ಸಮಾಜವಿಜ್ಞಾನ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಷಯಗಳನ್ನು ಸೇರಿಸಿದ ಹಿನ್ನೆಲೆಯಲ್ಲಿ, ಆಯ್ಕೆಯ ಪ್ರಕ್ರಿಯೆಯಲ್ಲೂ ಮಾರ್ಪಡುಗಳಾದವು. ಈಗ ವಿದ್ಯಾರ್ಥಿಗಳು 2 ವಸ್ತುನಿಷ್ಠ ಮಾದರಿ ಲಿಖಿತ ಪರೀಕ್ಷೆಗಳನ್ನು ಉತ್ತರಿಸಬೇಕು. ಒಂದು, ಬೌದ್ಧಿಕ ಸಾಮರ್ಥ್ಯ ಪರೀಕ್ಷೆ (MAT) ಮತ್ತೊಂದು ಶೈಕ್ಷಣಿಕ ಅಭಿವೃತ್ತಿ ಪರೀಕ್ಷೆ (SAT)100 ಬಹುಆಯ್ಕೆಯ ಪ್ರಶ್ನೆಗಳನ್ನುಳ್ಳ ಬೌದ್ಧಿಕ ಸಾಮರ್ಥ್ಯ ಪರೀಕ್ಷೆಯನ್ನು ಎಲ್ಲ ವಿದ್ಯಾರ್ಥಿಗಳೂ ಉತ್ತರಿಸಬೇಕು. ಶೈಕ್ಷಣಿಕ ಅಭಿವೃತ್ತಿ ಪರೀಕ್ಷೆಯಲ್ಲಿ ಒಟ್ಟು ಎಂಟು ಶಾಲಾ ವಿಷಯಗಳಿದ್ದು–ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಇತಿಹಾಸ, ಭೂಗೋಳಶಾಸ್ತ್ರ, ಪೌರನೀತಿ ಮತ್ತು ಅರ್ಥಶಾಸ್ತ್ರ–ಇದರಲ್ಲಿ ಪ್ರತಿ ವಿಷಯವನ್ನು ಕುರಿತಂತೆ 25 ಪ್ರಶ್ನೆಗಳಿರುತ್ತವೆ. ಈ ಎಂಟು ವಿಷಯಗಳಲ್ಲಿ ವಿದ್ಯಾರ್ಥಿಯು ತನ್ನ ಆಯ್ಕೆಯ ನಾಲ್ಕು ವಿಷಯಗಳಲ್ಲಿ ಒಟ್ಟು 100 ಪ್ರಶ್ನೆಗಳನ್ನು ಉತ್ತರಿಸಬೇಕು. ಈ ಪರೀಕ್ಷೆಗಳಲ್ಲಿ ಪಾಸಾದ ನಿಯಮಿತ ಸಂಖ್ಯೆಯ ವಿದ್ಯಾರ್ಥಿಗಳು ಇದಕ್ಕಾಗಿಯೇ ಯೋಜಿತವಾದ ಸಂದರ್ಶನದಲ್ಲಿ ಭಾಗವಹಿಸಬೇಕು. ಬೌದ್ಧಿಕ ಸಾಮರ್ಥ್ಯ ಪರೀಕ್ಷೆ, ಶೈಕ್ಷಣಿಕ ಅಭಿವೃತ್ತಿ ಪರೀಕ್ಷೆ ಮತ್ತು ಸಂದರ್ಶನ ಇವುಗಳ ಒಟ್ಟು ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ವಿದ್ಯಾರ್ಥಿವೇತನಕ್ಕೆ ಆಯ್ಕೆ ಮಾಡಲಾಗುತ್ತಿತ್ತು.

ಆಯ್ಕೆಯ ವಿಧಾನಕ್ಕೆ ಸಂಬಂಧಿಸಿದಂತೆ, 1995ನೇ ವರ್ಷದಲ್ಲಿ ಪುನಃ ಒಂದು ಪ್ರಮುಖವಾದ ಬದಲಾವಣೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಹಿಂದೆ ವಿವಿಧ ವಿಷಯಗಳನ್ನು ಕುರಿತಂತೆ ಇದ್ದ ಆಯ್ಕೆಗೆ ಅವಕಾಶವನ್ನು ತೆಗೆದುಹಾಕಲಾಯಿತು. ಎಲ್ಲ ವಿಷಯಗಳನ್ನೂ, ವಿಜ್ಞಾನ, ಸಮಾಜವಿಜ್ಞಾನ, ಗಣಿತ 40:40:20ರ ಅನುಪಾತದಲ್ಲಿ ಕಡ್ಡಾಯಮಾಡಲಾಯಿತು.

**ಪರೀಕ್ಷಾ ವಿನ್ಯಾಸ:** ಈ ಯೋಜನೆಯಲ್ಲಿ ಬೌದ್ಧಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಒಟ್ಟು 100 ಬಹುಆಯ್ಕೆ ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳಲ್ಲಿ ಐದು ಆಯ್ಕೆಗಳಿದ್ದು ಅವುಗಳಲ್ಲಿ ಒಂದು ಸರಿಯಾದ ಉತ್ತರವಾಗಿರುತ್ತದೆ. ಹೀಗೆಯೇ ಶೈಕ್ಷಣಿಕ ಅಭಿವೃತ್ತಿ ಪರೀಕ್ಷೆಯಲ್ಲಿ ಒಟ್ಟು 100 ಬಹುಆಯ್ಕೆಯ ಪ್ರಶ್ನೆಗಳಿದ್ದು ಪ್ರತಿಯೊಂದಕ್ಕೂ ನಾಲ್ಕು

Digitised by Bharatavani, CIIL

ಆಯ್ಕೆಗಳಿರುತ್ತವೆ. ಎರಡೂ ಪರೀಕ್ಷೆಯಲ್ಲಿ ಪ್ರತಿ ಪ್ರಶ್ನಾಂಶಕ್ಕೆ ಒಂದು ಅಂಕ ನಿಗದಿಯಾಗಿರುತ್ತದೆ.

ಪ್ರತಿ ಪರೀಕ್ಷೆಯ ಅವಧಿ 90 ನಿಮಿಷಗಳು. ಪ್ರತಿ ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ ಪಂಗಡದ ವಿದ್ಯಾರ್ಥಿಗಳು ಕ್ರಮವಾಗಿ ಕನಿಷ್ಠ 40 ಮತ್ತು 32 ಅಂಕಗಳನ್ನು ಪ್ರತಿ ಪರೀಕ್ಷೆಯಲ್ಲಿ ಪಡೆಯಬೇಕು. ವಿದಾರ್ಥಿಗಳ ಸಾಧನೆಗೆ ಅನುಗುಣವಾಗಿ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ. ಸಂದರ್ಶನಕ್ಕೆ 25 ಅಂಕಗಳಿದ್ದು ಅದರಲ್ಲಿ ವಿದ್ಯಾರ್ಥಿಗಳು ಇಷ್ಟು ನಿರ್ದಿಷ್ಟ ಅಂಕಗಳನ್ನು ಪಡೆಯಬೇಕು ಎಂಬ ನಿಯಮವೇನೂ ಇರುವುದಿಲ್ಲ. ರಾಷ್ಟ್ರೀಯ ಮಟ್ಟದ ಪರೀಕ್ಷೆ ಮತ್ತು ಸಂದರ್ಶನದ ಆಧಾರದ ಮೇಲೆ ವಿದ್ಯಾರ್ಥಿವೇತನವನ್ನು ಪ್ರಕಟಿಸಲಾಗುತ್ತದೆ.

**ರಾಜ್ಯಮಟ್ಟದ ಪರೀಕ್ಷೆ ಮತ್ತು ಅರ್ಹತೆ:** ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಅದರದ್ದೇ ಮಟ್ಟದಲ್ಲಿ ಪರೀಕ್ಷೆಯನ್ನು ನಡೆಸುತ್ತದೆ. ವಿದ್ಯಾರ್ಥಿಗಳ ಅರ್ಹತೆಗಳನ್ನು ನಿಗದಿಪಡಿಸುವಲ್ಲಿ ಅವುಗಳದ್ದೇ ಮಾನಕಗಳನ್ನು ನಿರ್ಣಯಿಸಿಕೊಳ್ಳುವ ಸ್ವಾತಂತ್ರ್ಯ ಅವುಗಳಿಗಿದೆ. ಎನ್‌ಸಿಇಆರ್‌ಟಿ ಮಾಡುವ ಎರಡನೇ ಹಂತದ ಪರೀಕ್ಷೆಗೆ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳನ್ನು ಶಿಫಾರಸ್ಸು ಮಾಡುವುದು ಈ ಪರೀಕ್ಷೆಯ ಪ್ರಮುಖ ಉದ್ದೇಶ. ಈ ರಾಜ್ಯ ಅಥವಾ ಕೇಂದ್ರಾಡಳಿತ ಮಟ್ಟದ ಪರೀಕ್ಷೆಯನ್ನು ಸಾಮಾನ್ಯವಾಗಿ ಪ್ರತಿವರ್ಷ ಅಕ್ಟೋಬರ್–ನವೆಂಬರ್ ತಿಂಗಳುಗಳಲ್ಲಿ ನಡೆಸಲಾಗುತ್ತದೆ. ಆದಾಗ್ಯೂ ನಿರ್ದಿಷ್ಟ ದಿನಾಂಕವನ್ನು ಇದಕ್ಕಾಗಿಯೇ ನಿಯೋಜಿತವಾದ ಆಯೋಗ ಆಯಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುತ್ತೋಲೆಯ ಮೂಲಕ ತಿಳಿಸುತ್ತದೆ. ರಾಜ್ಯ ಅಥವಾ ಕೇಂದ್ರದಿಂದ ಅಂಗೀಕೃತವಾದ ಕೇಂದ್ರಿಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ ಇತ್ಯಾದಿಗಳನ್ನೂ ಒಳಗೊಂಡ ಯಾವುದೇ ರೀತಿಯ ಶಾಲೆಯ ಹತ್ತನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿ ಶಾಲೆ ಇರುವ ಭೌಗೋಳಿಕ ಸ್ಥಳದಿಂದಲೇ ರಾಜ್ಯಮಟ್ಟದ ಪರೀಕ್ಷೆಗೆ ಹಾಜರಾಗಬಹುದು. ಆದರೂ ಭಾರತದಲ್ಲೇ ನೆಲೆಸಿರಬೇಕೆಂಬ ನಿಯಮವೇನೂ ಇಲ್ಲ.

**ರಾಷ್ಟ್ರಮಟ್ಟದ ಪರೀಕ್ಷೆ ಮತ್ತು ಅರ್ಹತೆ:** ರಾಷ್ಟ್ರೀಯ ಪ್ರತಿಭಾನ್ವೇಷಣಾ ಯೋಜನೆಯು ಭಾರತದ ರಾಷ್ಟ್ರೀಯತೆಯನ್ನು ಹೊಂದಿರುವ ಭಾರತದಲ್ಲಿ ಅಥವಾ ಹೊರಗೆ ಅಧ್ಯಯನ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ರಾಜ್ಯ ಮತ್ತು ಕೇಂದ್ರಾಡಳಿತಗಳ ಆಯಾ ಮಟ್ಟದ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಫಲಿತಾಂಶದ ಆಧಾರದ ಮೇಲೆ ಶಿಫಾರಸ್ಸು ಮಾಡಲಾಗಿರುವ ವಿದ್ಯಾರ್ಥಿಗಳು ಮಾತ್ರ ಎನ್‌ಸಿಇಆರ್‌ಟಿ ನಡೆಸುವ ಪರೀಕ್ಷೆಗೆ ಅರ್ಹರಾಗಿರುತ್ತಾರೆ. ಈ ಪರೀಕ್ಷೆಯು ಸಾಮಾನ್ಯವಾಗಿ ಪ್ರತಿವರ್ಷ ಮೇ ತಿಂಗಳ ಎರಡನೇ ಭಾನುವಾರ (ಬೇರೆ ದಿನವನ್ನು ನಿರ್ದಿಷ್ಟವಾಗಿ ಸೂಚಿಸದಿದ್ದಲ್ಲಿ) ನಡೆಯುತ್ತದೆ.

ಹೊರದೇಶದಲ್ಲಿ ಹತ್ತನೇ ತರಗತಿಯ ಅಥವಾ ಅದಕ್ಕೆ ಸಮನಾದ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ಭಾರತದ ವಿದ್ಯಾರ್ಥಿಗಳಿಗೆ ಮೊದಲನೆ ಹಂತದ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಈ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಭಾಗವಹಿಸಬೇಕಾದರೆ ಹಿಂದಿನ ವರ್ಷದ ಪರೀಕ್ಷೆಯಲ್ಲಿ ಕೊನೆಯ ಪಕ್ಷ ಒಟ್ಟಾರೆ ಶೇ. 60 ಅಂಕಗಳನ್ನು ಪಡೆದಿರಬೇಕು. ಇವರು ಭಾರತದಲ್ಲಿ ಅವರ ಆಯ್ಕೆಯ NTSE ಕೇಂದ್ರದಲ್ಲಿ ಸ್ವಂತಖರ್ಚಿನಲ್ಲಿ ಪರೀಕ್ಷೆಗೆ ಹಾಜರಾಗಬಹುದು. ಇಂತಹ ವಿದ್ಯಾರ್ಥಿಗಳು ಅವರು ಅಧ್ಯಯನ ಮಾಡುತ್ತಿರುವ ಶಾಲೆಯ ಮುಖ್ಯಸ್ಥರ ಮೂಲಕ ಈ ಪರೀಕ್ಷೆಯಲ್ಲಿ ಭಾಗವಹಿಸಲು ಅರ್ಜಿ ಹಾಕಬೇಕು. ಅರ್ಜಿ ಹಾಕುವ ಸಂದರ್ಭದಲ್ಲಿ ಹಿಂದಿನ ಪರೀಕ್ಷೆಗೆ ಸಂಬಂಧಿಸಿದ ಅಂಕಪಟ್ಟಿಯ ಪ್ರತಿಯನ್ನು 'ಅಟೆಸ್ಟ್ ಮಾಡಿ' ಲಗತ್ತಿಸಿ, ಮುಖ್ಯಸ್ಥರು, ಶೈಕ್ಷಣಿಕ ಮಾಪನ ಮತ್ತು ಮೌಲ್ಯಮಾಪನ ವಿಭಾಗ, ಎನ್‌ಸಿಇಆರ್‌ಟಿ, ಹೊಸದಿಲ್ಲಿ (Head, Department of Educational Measurement and Evaluation, NCERT, New Delhi)) ಇವರಿಗೆ ಆಯಾ ವರ್ಷದ ಮಾರ್ಚ್ 31ರ ಒಳಗೆ ತಲುಪಿಸಬೇಕು.

**ಯೋಜನೆಯ ಪರಿಣಾಮ:** ವಿದ್ಯಾರ್ಥಿವೇತನ ಪಡೆದು ಪ್ರಥಮ ಮತ್ತು ದ್ವಿತೀಯ ಪದವಿ ಮಟ್ಟದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಶೇಕಡಾವಾರು ಸಂಖ್ಯೆಯ ಆಧಾರದ ಮೇಲೆ ಯೋಜನೆಯ ಪರಿಣಾಮವನ್ನು ಗುರುತಿಸಬಹುದು. 1987 ಮತ್ತು 1998ರ ಅವಧಿಯಲ್ಲಿ ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಛೇರಿಯಿಂದ ಪಡೆಯಲಾಗಿದೆ. ಈ ಅವಧಿಯಲ್ಲಿ ಪ್ರತಿವರ್ಷ ಕೊಟ್ಟ ವಿದ್ಯಾರ್ಥಿವೇತನಗಳ ಸಂಖ್ಯೆ 750. ವಿವಿಧ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಭಿನ್ನವಾಗಿದೆ. ಈ ಸನ್ನಿವೇಶದ ಒಟ್ಟಾರೆ ನೋಟವನ್ನು ಕೊಡಲು ಈ ಅವಧಿಯಲ್ಲಿ ವಿವಿಧ ಕೋರ್ಸುಗಳಿಗೆ ಪ್ರವೇಶಪಡೆದ ವಿದ್ಯಾರ್ಥಿಗಳ ಕನಿಷ್ಠ ಮತ್ತು ಗರಿಷ್ಠ ಶೇಕಡಾ ಸಂಖ್ಯೆಯನ್ನು ಈ ಕೆಳಗೆ ಕೊಡಲಾಗಿದೆ.

ವಿದ್ಯಾರ್ಥಿವೇತನವನ್ನು ಪಡೆದ ವಿದ್ಯಾರ್ಥಿಗಳ ಪೈಕಿ 1989ರಲ್ಲಿ ಶೇ. 12ರಷ್ಟು ಮತ್ತು 1992ರಲ್ಲಿ ಶೇ. 5ರಷ್ಟು ವಿದ್ಯಾರ್ಥಿಗಳು ಮೂಲವಿಜ್ಞಾನ, ಸಾಮಾಜಿಕ ವಿಜ್ಞಾನ ಮತ್ತು ವಾಣಿಜ್ಯದ ಕೋರ್ಸುಗಳಿಗೆ ಪ್ರವೇಶ ಪಡೆದಿದ್ದಾರೆ. 1990ರಲ್ಲಿ ಸುಮಾರು ಶೇ. 8, 1995ರಲ್ಲಿ ಶೇ. 67ರಷ್ಟು ವಿದ್ಯಾರ್ಥಿಗಳು ಬಿ.ಟೆಕ್ ಕೋರ್ಸಿಗೆ ಪ್ರವೇಶ ಪಡೆದಿದ್ದಾರೆ. 1991ರಲ್ಲಿ ಶೇ. 17ರಷ್ಟು ಮತ್ತು 1998ರಲ್ಲಿ ಸುಮಾರು ಶೇ. 8ರಷ್ಟು ವಿದ್ಯಾರ್ಥಿಗಳು '+2' ಹಂತವನ್ನು ಮುಗಿಸಿ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ. 1988ರಲ್ಲಿ ಸುಮಾರು 2.4 ಮತ್ತು 1992ರಲ್ಲಿ ಸುಮಾರು ಶೇ. 1.5ರಷ್ಟು ವಿದ್ಯಾರ್ಥಿಗಳು ಮಾಸ್ಟರ್ ಡಿಗ್ರಿ ಮಟ್ಟದ ವೈದ್ಯಕೀಯ (Medicine), ಶಸ್ತ್ರಚಿಕಿತ್ಸೆ (Surgery) ಮತ್ತು ತಂತ್ರಜ್ಞಾನದ (ಇಂಜಿನಿಯರಿಂಗ್) ಕೋರ್ಸುಗಳನ್ನು ಅಧ್ಯಯನ ಮಾಡಿದ್ದಾರೆ. 1998ರಲ್ಲಿ ಸುಮಾರು ಶೇ. 4.8 ಮತ್ತು 1991ರಲ್ಲಿ ಶೇ. 1.9ರಷ್ಟು ವಿದ್ಯಾರ್ಥಿಗಳು ವಿಜ್ಞಾನ, ಸಮಾಜವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಮುಗಿಸಿದ್ದಾರೆ. 1990ರಲ್ಲಿ ಶೇ. 4.5 ಮತ್ತು

Digitised by Bharatavani, CIIL

1993ರಲ್ಲಿ ಶೇ. 0.8ರಷ್ಟು ವಿದ್ಯಾರ್ಥಿಗಳು ವಾಣಿಜ್ಯ ಆಡಳಿತದಲ್ಲಿ ಸ್ನಾತಕೋತ್ತರ ಪದವಿಯನ್ನು ಆಯ್ಕೆಮಾಡಿಕೊಂಡಿದ್ದಾರೆ. ಪ್ರಸ್ತುತ ಈ ಯೋಜನೆಯ ಅಡಿಯಲ್ಲಿ ವಾಣಿಜ್ಯ, ಮೂಲವಿಜ್ಞಾನ ಹಾಗೂ ಸಾಮಾಜಿಕ ವಿಜ್ಞಾನಕ್ಕೆ ಸಂಬಂಧಿಸಿದ ಕೋರ್ಸುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಮಟ್ಟದವರೆಗೆ ವಿದ್ಯಾರ್ಥಿವೇತನ ಕೊಡಲಾಗುತ್ತದೆ. ಆದರೆ, ವಿದ್ಯಾರ್ಥಿವೇತನದ ವಿವರಣೆಗೆ ಸಂಬಂಧಿಸಿದ ನಿಬಂಧನೆಗಳನ್ನು ಪೂರೈಸಿದಲ್ಲಿ, ವೈದ್ಯಕೀಯ, ಇಂಜಿನಿಯರಿಂಗ್, ತಂತ್ರಜ್ಞಾನ ಮತ್ತು ನಿರ್ವಹಣೆ ಈ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಎರಡನೇ ಪದವಿ ಹಂತದವರೆಗೆ ಪಡೆಯಲು ಅರ್ಹರಾಗಿರುತ್ತಾರೆ.

**ಪೋಷಕ ಕಾರ್ಯಕ್ರಮ:** ಎನ್‌ಸಿಇಆರ್‌ಟಿ ಸಂಸ್ಥೆಯು ಕೆಲವು ಕಾಲ, ಈ ಯೋಜನೆಯಡಿ ವಿದ್ಯಾರ್ಥಿವೇತನ ಪಡೆದು ರಾಷ್ಟ್ರದ ವಿವಿಧ ಉನ್ನತಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಪೋಷಕ ಕಾರ್ಯಕ್ರಮಗಳನ್ನು ಸಂಘಟಿಸಿತು. ಇವುಗಳಲ್ಲಿ ಪ್ರಮುಖವಾದುವು ಬೇಸಿಗೆ ಶಾಲೆಗಳು. ಇವು ಪ್ರಮುಖವಾಗಿ ವಿದ್ಯಾರ್ಥಿವೇತನ ಪಡೆದ ಪದವಿಪೂರ್ವ ವಿದ್ಯಾರ್ಥಿಗಳಿಗೆ ಉನ್ನತಶಿಕ್ಷಣ ಸಂಸ್ಥೆಗಳಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ವಿವಿಧ ವಿಶ್ವವಿದ್ಯಾನಿಲಯಗಳ ವಿಭಾಗಗಳು, ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮೊದಲಾದ ಕಡೆಗಳಲ್ಲಿ ಆಯೋಜಿತವಾಯಿತು. ಈ ಬೇಸಿಗೆ ಶಾಲೆಗಳು ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರ, ಗಣಿತ ಮುಂತಾದ ವಿಷಯಗಳಲ್ಲಿ, ವಿದ್ಯಾರ್ಥಿಗಳು ಈಗಾಗಲೇ ನಡೆಸುತ್ತಿರುವ ಅಧ್ಯಯನಕ್ಕೆ ಪೂರಕವಾಗಿ, ವಿಶೇಷವಾದ ಆಧುನಿಕ ಶೈಕ್ಷಣಿಕ ಒಳಹರಿವಿನ ಜೊತೆಯಲ್ಲೇ ಯೋಜಿತವಾದವು. ಸ್ನಾತಕೋತ್ತರ ಹಂತದಲ್ಲಿದ್ದ ಈ ಯೋಜನೆಯ ಅಡಿಯಲ್ಲಿನ ಫಲಾನುಭವಿ ವಿದ್ಯಾರ್ಥಿಗಳಿಗೆ ಸ್ಥಾನೀಕರಣ ಸೇವೆಯನ್ನು ಯೋಜಿಸಲಾಯಿತು. ಇದು ಪ್ರಮುಖವಾಗಿ CSIR ನ ಅಡಿಯಲ್ಲಿ ಯೋಜನೆಯಾಗಿದ್ದು, ವೈಯಕ್ತಿಕ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವಂತೆ ಮಾಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಸಂಶೋಧನಾ ವಿಧಾನದ ಅರಿವನ್ನು ಬೆಳೆಸುವ ಉದ್ದೇಶದ ಕಡೆಗೆ ಗಮನ ಕೇಂದ್ರೀಕರಿಸಿತ್ತು. ಈ ಕಾರ್ಯಕ್ರಮ ಈಗ ಚಾಲ್ತಿಯಲ್ಲಿಲ್ಲ.

ಈ ಯೋಜನೆ ಇಂದು ಶಾಲೆ ಹಾಗೂ ವಿದ್ಯಾರ್ಥಿಗಳಲ್ಲಿ ಬಹಳ ಜನಪ್ರಿಯವಾಗಿದೆ. ಈ ರೀತಿಯ ವಿದ್ಯಾರ್ಥಿವೇತನದ ಅವಕಾಶದಿಂದಾಗಿ ವಿದ್ಯಾರ್ಥಿಗಳು ತಮ್ಮ ಮುಂದಿನ ಅಧ್ಯಯನವನ್ನು ಪೂರೈಸಲು ಸಾಧ್ಯವಾಗಿರುವುದು ಮಾತ್ರವಲ್ಲದೆ, ಈ ಯೋಜನೆಯಲ್ಲಿ ವಿದ್ಯಾರ್ಥಿವೇತನ ಪಡೆಯುವುದು ವಿದ್ಯಾರ್ಥಿಯ ಮುಡಿಗೆ ವಿಶಿಷ್ಟವಾದ ಗರಿಯಾಗಿ, ಹೆಮ್ಮೆಯ ಹಾಗೂ ಉತ್ಕೃಷ್ಟ ಶೈಕ್ಷಣಿಕ ಸಾಮರ್ಥ್ಯದ ಸಂಕೇತವಾಗಿದೆ ಹಾಗೂ ತನ್ನ ಮುಂದಿನ ಉನ್ನತ ವ್ಯಾಸಂಗಕ್ಕೆ ಸಹಾಯಕವಾಗಿಯೂ ಇದೆ.

**ಮೂಲ: ವಿ.ಕೆ. ಜೈನ್**
**ಅನು: ಡಾ. ಶಶಿಕಲಾ ಎ.**

# ರಾಷ್ಟ್ರೀಯ ಸಮಗ್ರತೆಗಾಗಿ ಶಿಕ್ಷಣ

ಸ್ವತಂತ್ರ ಭಾರತವು ಸತತ ಸ್ಪರ್ಧಾತ್ಮಕವಾಗಿರುವ ರಾಷ್ಟ್ರಗಳ ಕೂಟದಲ್ಲಿ ಉಳಿದುಕೊಳ್ಳಲು ತನ್ನ ಗುರಿಗಳು ಹಾಗೂ ಮೌಲ್ಯಗಳನ್ನು ಪುನರ್ ಆವಿಷ್ಕರಿಸುವ ನಿಟ್ಟಿನಲ್ಲಿ ಸಕ್ರಿಯ ಕಾರ್ಯಕೈಗೊಳ್ಳುತ್ತಾ ಬಂದಿದೆ, ಈ ರೀತಿಯ ಎಂದೂ ಮುಗಿಯದ ರಾಷ್ಟ್ರ ನಿರ್ಮಾಣ ಕಾರ್ಯವು ಇಂದು 'ರಾಷ್ಟ್ರೀಯ ಸಮಗ್ರತೆ (ಭಾವೈಕ್ಯತೆ) ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದನ್ನೇ ನಾವು ಸರಳವಾಗಿ ಸಾಮಾಜಿಕ ಸುಬದ್ಧತೆ ಎಂದು ಕರೆಯಬಹುದು. ಈ ರೀತಿಯ ರಾಷ್ಟ್ರೀಯ ಸಮಗ್ರತೆಯನ್ನು ಉಂಟು ಮಾಡುವಲ್ಲಿ ಶಿಕ್ಷಣ ರಚನಾತ್ಮಕ ಕಾರ್ಯವನ್ನು ನಿರ್ವಹಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

**ಶಿಕ್ಷಣದ ಆವಶ್ಯಕತೆ, ಸವಾಲುಗಳು ಹಾಗೂ ಆವಿಷ್ಕಾರಗಳು:**

ಭಾರತದಲ್ಲಿರುವ ಹಲವಾರು ಜನಾಂಗೀಯ ಗುಂಪುಗಳು ವಿಶಾಲ ಕ್ಷೇತ್ರಗಳು ಹಾಗೂ ದೊಡ್ಡ ಸಂಖ್ಯೆಯ ಜನಸಂಖ್ಯೆ ಈ ಅಂಶಗಳು ಹಲವಾರು ಆಯಾಮಗಳನ್ನು ಈ ಸಮಸ್ಯೆಗೆ ಸೇರಿಸಿವೆ. ಪರಿಸ್ಥಿತಿಯ ತೀವ್ರತೆಯಿಂದಾಗಿ ಈ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿಕೊಂಡು ಈ ಸಮಸ್ಯೆಯನ್ನು ಎದುರಿಸಲು ತುರ್ತಾದ ಮತ್ತು ಭರವಸೆಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದಲೇ 1964–66ರ ಶಿಕ್ಷಣ ಆಯೋಗವು ಹಲವಾರು ಆಯಾಮಗಳಲ್ಲಿ ಈ ಸಮಸ್ಯೆಯನ್ನು ವಿಶ್ಲೇಷಿಸಿ ಅದನ್ನು ಪರಿಹರಿಸಲು ಆವಶ್ಯಕವಾದ ಸೂಚನೆಗಳನ್ನು ಸಹ ಸೂಚಿಸಿತು.

ಭಾರತ ಒಂದು ದೊಡ್ಡ ರಾಷ್ಟ್ರ ಮಾತ್ರವಲ್ಲದೇ ಅದಕ್ಕೆ ತನ್ನದೇ ಆದ ಪ್ರಾಚೀನ ನಾಗರಿಕತೆಯಿದೆ. ಹಲವಾರು ಕ್ಷೇತ್ರಗಳಲ್ಲಿ ಅದು ಮೊದಲಿನಿಂದಲೂ ಗುರುತರ ಪ್ರಗತಿಯನ್ನು ಸಾಧಿಸುತ್ತ ಬಂದಿದೆ. ಅವುಗಳಲ್ಲಿ ಕೆಲವು ಪ್ರಮುಖ ಉದಾಹರಣೆಗಳೆಂದರೆ ಗಣಿತ ಹಾಗೂ ತತ್ವಶಾಸ್ತ್ರ, ಯೋಗ ಹಾಗೂ ವೈದ್ಯಕೀಯಶಾಸ್ತ್ರ, ವಾಸ್ತುಶಾಸ್ತ್ರ ಹಾಗೂ ಲೋಹಶಾಸ್ತ್ರ, ಸಾಹಿತ್ಯ ಹಾಗೂ ವಾಣಿಜ್ಯಶಾಸ್ತ್ರ ಬಟ್ಟೆ ತಯಾರಿಕೆ ಹಾಗೂ ಹಡಗು ತಯಾರಿಕೆ ಭಾರತದ ಮಾನವ ನಾಗರಿಕತೆಯು 'ವಿಶ್ವಭ್ರಾತೃತ್ವ' (ವಸುದೈವ ಕುಟುಂಬಕಂ) ಸಂದೇಶವನ್ನು ಸಾರುತ್ತ ಮಾನವ ನಾಗರಿಕತೆಯ ಮಹತ್ಕಾರ್ಯಕ್ಕೆ ಮುಂಚೂಣಿಯಲ್ಲಿದೆ.

ಈ ಶೀಲಸ್ವಭಾವಕ್ಕೆ (ethos) ಬದ್ಧವಾಗಿ ಭಾರತ ಹೊಸ ವಿಚಾರ ಸ್ವೀಕರಿಸಿ ಜೀರ್ಣಿಸಿಕೊಳ್ಳುತ್ತಾ ಬದಲಾಗುತ್ತಿರುವ ಕಾಲಕ್ಕೆ ಹೊಂದಿಕೊಳ್ಳುತ್ತಾ ಬರುತ್ತಿದೆ. ನಮ್ಮ ಸಾಂಸ್ಕೃತಿಕ ಸದಾಚಾರ (Cultural Ethics) ನಿಲುವಿನಿಂದ ಕೊಠಾರಿ ಶಿಕ್ಷಣ ಆಯೋಗ ಉಲ್ಲೇಖಿಸಿರುವ ಜವಾಹರ್‌ಲಾಲ್ ನೆಹರೂರವರ ಹೇಳಿಕೆಯನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. 'ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯನ್ನು ಮನಸ್ಸು ಮತ್ತು ಚೈತನ್ಯದೊಂದಿಗೆ ಮೇಳೈಸಲು ನಮಗೆ ಸಾಧ್ಯವಾಗಬಹುದೇ?' ಆಯೋಗ ಈ ಹೇಳಿಕೆಯನು ಮತ್ತೂ ಹೀಗೆ ಮುಂದುವರೆಸಿದೆ –"ವಿಜ್ಞಾನ ಮತ್ತು ಚೈತನ್ಯದ ಮೌಲ್ಯವನ್ನು ಸಾಮಂಜ್ಯಸತೆಯೊಂದಿಗೆ ಒಟ್ಟು ತರಲು ಭಾರತ

Digitised by Bharatavani, CIIL

ಪ್ರಯತ್ನಿಸಲೇಬೇಕೆಂದು ನಾವು ನಂಬುತ್ತೇವೆ ಮತ್ತು ಇದರಿಂದಾಗಿ ವ್ಯಕ್ತಿಯ ವ್ಯಕ್ತಿತ್ವದ ಒಂದು ನಿರ್ದಿಷ್ಟ ಅಂಶದ ವಿಕಾಸಕ್ಕಾಗಿ ಅಲ್ಲದೆ, ಇಡಿಯಾಗಿ ಮಾನವ ವಿಕಾಸಕ್ಕೆ ಅವಕಾಶ ನೀಡುವ ಸಮಾಜದ ಉದಯಕ್ಕೆ ಅವಕಾಶ ಉಂಟಾಗುತ್ತಿದೆ." ನಾವು ಈ ಕಾರ್ಯವನ್ನು ಅಪೂರ್ಣ ಸ್ಥಿತಿಯಲ್ಲಿ ಮಾನವ ಕುಲದ ಮುಂದೆ ಬಿಡಲಾರೆವು.

ಭಾರತ ಜಾತ್ಯತೀತ ಆಡಳಿತದ ದೀರ್ಘ ಪದ್ಧತಿಯನ್ನು ಹೊಂದಿದ್ದು ವಿಶ್ವದ ಎಲ್ಲಾ ಧರ್ಮಗಳ ಹೆಮ್ಮೆಯ ನೆಲೆವೀಡಾಗಿದೆ ಶತಶತಮಾನಗಳಿಂದ ಬೇರೆಬೇರೆ ನಂಬಿಕೆ (ಧರ್ಮ)ಗಳನ್ನು ಆಚರಿಸುತ್ತಿರುವ ಜನರು ಪರಸ್ಪರ ವಿಶ್ವಾಸದಿಂದ ಅಕ್ಕಪಕ್ಕದವರಾಗಿ ಜೀವಿಸುತ್ತಾ ಬಂದಿದ್ದಾರೆ. ಈ ರಾಷ್ಟ್ರೀಯ ಶೀಲಸ್ವಭಾವವನ್ನು ಗಮನದಲ್ಲಿಟ್ಟುಕೊಂಡು ಭಾರತದ ಸಂವಿಧಾನ ಇತರ ಮಾನವ ಹಕ್ಕುಗಳೊಂದಿಗೆ ಉಪಾಸನೆ (ಪೂಜೆ)ಯ ಹಕ್ಕನ್ನೂ ಖಾತರಿಗೊಳಿಸಿದೆ. ಇದರ ಮೂಲಕ ಭಾರತದ ಎಲ್ಲಾ ನಾಗರಿಕರು ಎಲ್ಲಾ ಧರ್ಮಗಳನ್ನು ಅವುಗಳ ಬೋಧನೆಗಳನ್ನು ಮತ್ತು ಆರಾಧನೆಯ ಮಾರ್ಗಗಳನ್ನು ಗೌರವಿಸುವ ಮತ್ತು ತಾವೇ ಹೊಂದಲು ಇಷ್ಟಪಡುವ ಈ ರೀತಿಯ ಸ್ವಾತಂತ್ರ್ಯವನ್ನು ಬೇರೆಯವರಿಗೆ ನೀಡುವ ಶತಮಾನಗಳಿಂದ ವಿಕಾಸಗೊಂಡು ಬಂದಿರುವ ಅಲಿಖಿತ ನಡತೆಯ ಸಂಹಿತೆಯನ್ನು ಸೂಚಿಸಲಾಗಿದೆ. ಕೊಠಾರಿ ಶಿಕ್ಷಣ ಆಯೋಗ (1962–63) ಈ ರೀತಿ ದಾಖಲಿಸಿದೆ.

"ಪೌರತ್ವ ಶಿಕ್ಷಣದ ಕೋರ್ಸ್‌ನಲ್ಲಿ ಅಥವಾ ಮೊದಲ ಪದವಿವರೆಗಿನ ಶಾಲಾ–ಕಾಲೇಜುಗಳಲ್ಲಿ ನೀಡುವ ಸಾಮಾನ್ಯ ಶಿಕ್ಷಣದ ಒಂದು ಭಾಗವಾಗಿ ಪ್ರತಿಯೊಂದು ಪ್ರಮುಖ ಧರ್ಮದಿಂದ ಸರಿಯಾಗಿ ಆಯ್ಕೆ ಮಾಡಿದ ಮಾಹಿತಿಯನ್ನು ಕೊಡುವ ಒಂದು ಪಠ್ಯವಸ್ತುವನ್ನು ನಾವು ಸಲಹೆ ಮಾಡುತ್ತೇವೆ ಇದು ವಿಶ್ವದ ಮಹಾನ್ ಧರ್ಮಗಳ ನಡುವೆ ಇರುವ ಮೂಲಭೂತ ಸಮಾನತೆಗಳ ಮೇಲೆ ಬೆಳಕು ಚೆಲ್ಲಬೇಕು. ಮತ್ತು ಕೆಲವು ತುಲನಾತ್ಮಕ ನೈತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವುದರ ಬಗ್ಗೆ ಒತ್ತು ನೀಡಿರುವುದನ್ನು ತಿಳಿಸಬೇಕು" (ಪು.36)

ನಮ್ಮ ಜಾತ್ಯತೀತ ನೀತಿಯನ್ನು ಸಫಲಗೊಳಿಸಲು ಆಯೋಗ "ಮುಕ್ತ ಮನಸ್ಸು, ಸಹಿಷ್ಣುತೆ ಮತ್ತು ವಸ್ತುನಿಷ್ಠತೆಗೆ ಒತ್ತು ನೀಡುವ ವಿಜ್ಞಾನದ ಜೀವಂತ ಅಧ್ಯಯನ ಇನ್ನೂ ಹೆಚ್ಚಿನ ಜ್ಞಾತ್ಯತೀತ, ದೃಷ್ಟಿಕೋನದ ವಿಕಾಸಕ್ಕೆ ಸಹಜವಾಗಿಯೇ ಮಾರ್ಗ ತೋರಿಸುತ್ತದೆ" ಎಂದು ಹೇಳಿದೆ.

ಬಹು ಧರ್ಮಗಳ ದೇಶವಾಗಿರುವುದರ ಜೊತೆಗೆ ಭಾರತ ಬಹುಭಾಷೆಗಳ ದೇಶವೂ ಆಗಿದೆ. ಶತಮಾನಗಳಿಂದಲೂ ದ್ವಿಭಾಷಿತ್ವ, ಬಹುಭಾಷಿತ್ವ ಈ ದೇಶದ ಜನಗಳ ಒಂದು ಜೀವನ ಶೈಲಿಯೇ ಆಗಿದೆ. ಇದು ಭಾರತಕ್ಕಿಂತಲೂ ದೊಡ್ಡದಾದ ದೇಶಗಳಲ್ಲಿಯೂ ಕಾಣಲು ಅಪರೂಪವಾಗಿರುವಂಥ ವಿಶೇಷವಾದ ಸಾಂಸ್ಕೃತಿಕ ವೈವಿಧ್ಯತೆಗೆ ಅವಕಾಶ ಮಾಡಿಕೊಟ್ಟಿರುವ ಸರ್ವವ್ಯಾಪಕತೆಯ ಮತ್ತು ಪರಂಪರೆ ಕೊಡುಕೊಳುಗೆಯ ಸ್ಫೂರ್ತಿಗೆ ಎಡೆಮಾಡಿಕೊಟ್ಟಿದೆ. ರಾಷ್ಟ್ರೀಯ ಒಮ್ಮತದಿಂದ ಉದ್ಭವಿಸಿರುವ ತ್ರಿಭಾಷಾ ಸೂತ್ರವನ್ನು ನಾವು ಅಕ್ಷರಶಃ ಸತ್ವತಃ ಅನುಸರಿಸಬೇಕು. ಈಗ ಬಹುಭಾಷಿತ್ವವನ್ನು ಒಂದು ಋಣಾತ್ಮಕ ಶಕ್ತಿಯಾಗಿ ನಾವು ಪರಿಗಣಿಸಬೇಕಾದ ಅಗತ್ಯವಿಲ್ಲ ಆದರೆ ಶತಮಾನಗಳಿಂದಲೂ ಅದು ನಮ್ಮ ಒಂದು ಶಕ್ತಿಯಾಗಿತ್ತೆಂಬುದು ಸಿದ್ಧವಾಗಿದೆ ಮತ್ತು ವೇಗವಾಗಿ ಸಂಕುಚಿತಗೊಳ್ಳುತ್ತಿರುವ ವಿಶ್ವದ ಇಂದಿನ ಸಂದರ್ಭದಲ್ಲಿ ಅದು ನಮಗೆ ಶಕ್ತಿ ಮತ್ತು ಸತ್ವವಾಗುತ್ತದೆ. ಇಂದಿನ ಅತಿಯಾದ ಸ್ಪರ್ಧಾತ್ಮಕ ಮತ್ತು ಸಕಲ ಪ್ರಪಂಚದಲ್ಲಿ ಬದುಕಿ ಉಳಿಯಲು ಅವಶ್ಯಕವಾದ ಮನಃಸ್ಥಿತಿಯನ್ನು ನಮಗೆ ನೀಡುತ್ತದೆ. ನಿಜ ಹೇಳಬೇಕೆಂದರೆ, ತಂತ್ರಜ್ಞಾನದಲ್ಲಿ ಮುಂದುವರಿದಿರುವ ದೇಶಗಳು ಈ ವಿಷಯದಲ್ಲಿ ನಮ್ಮ ಬಗ್ಗೆ ಅಸೂಯೆಪಡುವಂತಾಗಿದೆ.

ಧರ್ಮದಂತೆಯೆ ಮಾತೃಭಾಷೆಯ ಬಗ್ಗೆ ಇರುವ ಜನರ ಪ್ರೀತಿ ಸ್ವಾಭಾವಿಕವಾದುದಂತಾಗಿದೆ. ಮತ್ತು ಭಾರತೀಯ ರಾಷ್ಟ್ರೀಯತೆ ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದೆ ಮತ್ತು ಈ ವಿಚಾರದ ಬಗೆಗಿನ ಸಂವೇದನಶೀಲತೆಯನ್ನು ಒಪ್ಪಿಕೊಳ್ಳಬೇಕಾದ ಅಗತ್ಯವಿದೆ ಮತ್ತು ಈ ವಿವಾದವನ್ನು ವಿಚಾರ ವಿನಿಮಯದ ಭಾವನೆಯಿಂದ ಪರಿಗಣಿಸಬೇಕಾಗುತ್ತದೆ. ಕಳೆದ ಅರ್ಧ ಶತಮಾನಕ್ಕೂ ಮೇಲ್ಪಟ್ಟು ಆಡಳಿತ ಹಾಗೂ ಭಾರತೀಯ ಒಕ್ಕೂಟದ ರಾಷ್ಟ್ರೀಯ ಭಾಷೆಯ ರೂಪದಲ್ಲಿ ಹಿಂದಿ ಭಾಷೆ ಮತ್ತು ಸಹಯೋಗಿ ಭಾಷೆಯಾಗಿ ಇಂಗ್ಲೀಷ್ ಭಾಷೆ ಸರಿಯಾಗಿಯೇ ಕಾರ್ಯನಿರ್ವಹಿಸುತ್ತಿವೆ ಮತ್ತು ವಿಕಾಸ ಹೊಂದುತ್ತಿರುವ ನಮ್ಮ ವ್ಯಾವಹಾರಿಕ ನಿಲುವಿನ ಮತ್ತು ರಾಷ್ಟ್ರೀಯ ಪಕ್ವತೆಯ ದ್ಯೋತಕಗಳಾಗಿವೆ. ಭಾಷೆ ಮತ್ತು ಸಂಸ್ಕೃತಿಗಳ ಆಧಾರದ ಮೇಲೆ ಭಾರತದ ರಾಜಕೀಯ ಭೂಪಟವನ್ನು ಪುನರ್ ರಚಿಸಿದುದು ಈ ವಿವಾದಾಂಶಗಳ ಬಗ್ಗೆ ಇದ್ದ ಪ್ರಬಲ ಭಾವನೆಗಳನ್ನು ಭೀತಿಯನ್ನು ಮತ್ತು ಆತಂಕವನ್ನು ನಿವಾರಣೆಗೊಳಿಸಿದೆ. ಭಾರತೀಯ ಸಂವಿಧಾನ ಆಗಾಗ್ಗೆ ಬೇರೆ ಬೇರೆ ಭಾಷೆಗಳನ್ನು ಗುರ್ತಿಸಿ ಈ ವಿಷಯದ ಬಗ್ಗೆ ಮುಕ್ತಿಯನ್ನು ಹೊಂದಿದೆ ಮತ್ತು ಭಾಷಿಕ ಅಲ್ಪಸಂಖ್ಯಾತರ ಆಶೆ ಆಕಾಂಕ್ಷೆಗಳ ಬಗ್ಗೆ ಸಹಾನುಭೂತಿ ಹೊಂದಿದೆ ಎಂಬುದನ್ನು ಸೂಚಿಸಿದೆ.

ಆಗಾಧವಾದ ಭೂಮೇಲ್ಮೈ ಲಕ್ಷಣಗಳಲ್ಲಿ ಮತ್ತು ವಾಯುಗುಣ ಸ್ಥಿತಿಗಳಲ್ಲಿ ಇರುವ ವೈರುಧ್ಯ, ಭಾರತದಲ್ಲಿರುವ ಸ್ಪಷ್ಟವಾಗಿ ದೃಷ್ಟಿಗೆ ಬೀಳುವ ಧಾರ್ಮಿಕ, ಸಾಂಸ್ಕೃತಿಕ, ಭಾಷಿಕ ಮತ್ತು ಪ್ರಾದೇಶಿಕ ವೈವಿಧ್ಯತೆಗಳನ್ನು ಮತ್ತಷ್ಟು ಹೆಚ್ಚಿಸಿದೆ ಈ ಬಹುತಾದಾತ್ಮ್ಯಗಳಿಗೆ ವಿರುದ್ಧವಾಗಿ ಭಾರತೀಯ ರಾಷ್ಟ್ರ ಕಾರ್ಯಕರ್ತವಾಗಿರುವ ಶಕ್ತಿಗಳ ನಡುವೆ ನ್ಯಾಯಯುತವಾದ ಸಮತೋಲನವನ್ನು ಸಾಧಿಸುವ ಗುರಿಯನ್ನು ಹೊಂದಿದೆ ಈ ಸಂದರ್ಭದಲ್ಲಿ ನಮ್ಮ ಸಂವಿಧಾನವು ವಿಶಿಷ್ಟವಾದ ಒಕ್ಕೂಟದ ಕೆಲವು ಲಕ್ಷಣಗಳನ್ನು ಒಪ್ಪಿಕೊಂಡುದರ ಜೊತೆಗೆ ಏಕಪೌರತ್ವವಿರುವ, ಸಂಯುಕ್ತ ನ್ಯಾಯಪಾಲಿಕೆಯನ್ನು ಹೊಂದಿರುವ ಪ್ರಬಲವಾದ ಕೇಂದ್ರ ಸರ್ಕಾರಕ್ಕೂ ಅವಕಾಶ ಕಲ್ಪಿಸಿದೆ ಎನ್ನುವುದನ್ನು ಗಮನಿಸುವುದು ಮುಖ್ಯವಾಗುತ್ತದೆ.

ಸಾಮಾಜಿಕ ಕ್ಷೇತ್ರಕ್ಕೂ ಸಂಬಂಧಿಸಿದಂತೆ ಇದುವರೆಗೂ ಭಾರತ ಬಹಳ ಬಿಗಿಯಾದ ಮತ್ತು ಅತಿಯಾಗಿ ಶ್ರೇಣೀಕೃತವಾದ, ಲಂಬೀಯ

Digitised by Bharatavani, CIIL

ಸಾಮಾಜಿಕ ಚಲನೆ ಅವಕಾಶವಿಲ್ಲದಿರುವಿಕೆಯಿಂದ ಗಮನ ಸೆಳೆಯುವ ಜಾತಿ ಸಂರಚನೆಯನ್ನು ಹೊಂದಿತ್ತು. ಈ ಶ್ರೇಣಿಯ ಅತ್ಯಂತ ಕೆಳಗಿನ ಮೆಟ್ಟಿಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿದ್ದವು. ಪರಿಶಿಷ್ಟ ಜಾತಿಯವರನ್ನು ಶತಮಾನಗಳಿಂದಲೂ ಅಸ್ಪೃಶ್ಯರೆಂದು ಪರಿಗಣಿಸಲಾಗಿತ್ತು. ಈಗ ಭಾರತೀಯ ಸಂವಿಧಾನ ಅಸ್ಪೃಶ್ಯತೆಯ ಆಚರಣೆಯನ್ನು ಕಾನೂನು ವಿರುದ್ಧವಾದುದೆಂದು ಪರಿಗಣಿಸಿದೆ. ಇದಕ್ಕೂ ಮಿಗಿಲಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿಗೆ (SC&ST) ಸೇರಿದವರಿಗೆ ಅವರ ಜನಸಂಖ್ಯೆಗೆ ಸರ್ಕಾರಿ ಮತ್ತು ಅರ್ಧ ಸರ್ಕಾರಿ ಸಂಘಟನೆಗಳಲ್ಲಿ ಕೆಲಸಗಳನ್ನು ಕಾಯ್ದಿರಿಸುವ ಧನಾತ್ಮಕ ಹಸ್ತಕ್ಷೇಪಣೀಯ ಅವಕಾಶವನ್ನು ಒದಗಿಸಿದೆ. ಜೊತೆಗೆ ಈ ವರ್ಗಗಳ ಮಕ್ಕಳಿಗೆ ವಿದ್ಯಾರ್ಥಿ ವೇತನಗಳನ್ನು ಸಹಾಯಧನವನ್ನು, ಮತ್ತು ಉಚಿತ ಪಠ್ಯಪುಸ್ತಕಗಳು ಮತ್ತು ಶಾಲಾ ಸಮವಸ್ತ್ರಗಳನ್ನು ನೀಡಲಾಗುತ್ತಿದೆ. ಅನೇಕ ರಾಜ್ಯಗಳಲ್ಲಿ ಜಾರಿಯಲ್ಲಿರುವ ಮಧ್ಯಾಹ್ನ ಊಟದ ಕಾರ್ಯಕ್ರಮ ಈ ಮಕ್ಕಳ ದಾಖಲಾತಿಯನ್ನು ಮತ್ತು ದೈನಿಕ ಹಾಜರಿಯನ್ನು ಹೆಚ್ಚಿಸಲು ಸಹಾಯ ಮಾಡಿದೆ. ಇದೇ ರೀತಿ ಎಲ್ಲ ಮಟ್ಟಗಳ ಶಾಸನ ಸಭೆಗಳಲ್ಲಿ ಇವರ ಜನಸಂಖ್ಯೆಗೆ ಅನುಪಾತೀಯವಾಗಿ ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಈಗ ಇವರು ಹೆಚ್ಚು ಹೆಚ್ಚಾಗಿ ಸಾಮಾಜಿಕ ಮತ್ತು ರಾಜಕೀಯ ಜೀವನದ ಮುಖ್ಯ ಪ್ರವಾಹಕ್ಕೆ ಬರತೊಡಗಿದ್ದಾರೆ. ಈ ಫಲಿತಾಂಶದಿಂದ ಪ್ರಭಾವಿತರಾಗಿ ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾಗಿ ಸೇರಿ ಇಡೀ ಸಮಾಜ ಈ ವರ್ಗಗಳ ಪ್ರೀತಿ ತೋರಿಸಿರುವ ಈ ಅನುಕೂಲ ಒದಗಿಸಲು ಈ ಹಿಂದೆ ಇದ್ದ ಕಾಲಮಿತಿಯನ್ನು ಮುಂದಕ್ಕೆ ಹಾಕಲು ಒಪ್ಪಿಗೆ ನೀಡಿದೆ. ಶತಶತಮಾನಗಳಿಂದ ಈ ವರ್ಗಗಳಿಗೆ ಮಾಡಿರುವ ಅನ್ಯಾಯಕ್ಕೆ ಭಾರತೀಯ ಸಮಾಜ ತೆರಬೇಕಾದ ಕನಿಷ್ಟ ಬೆಲೆ ಇದಾಗಿದೆ.

ಪರಿಶಿಷ್ಟ ಜಾತಿ/ವರ್ಗದ ಸಾಮಾಜಿಕ ಯೋಗಕ್ಷೇಮಕ್ಕೆ ತೆಗೆದುಕೊಂಡ ಕ್ರಮಗಳಿಂದ ಸ್ಫೂರ್ತಿ ಪಡೆದು ಇತರ ಹಿಂದುಳಿದ ವರ್ಗಗಳೂ ಇದೇ ರೀತಿಯ ಸವಲತ್ತುಗಳನ್ನು ಕೇಳುತ್ತಿರುವ ವಾದ ಸರಿ ಎನಿಸುತ್ತದೆ. ಸರಿಸುಮಾರು ಅರ್ಧದಷ್ಟು ಜನಸಂಖ್ಯೆ ಈ ವರ್ಗಗಳಿಂದ ಕೂಡಿದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭೇಧಭಾವ ಇಲ್ಲದೆ ಇವರ ಬೇಡಿಕೆಗಳ ಬಗ್ಗೆ ಸಹಾನುಭೂತಿ ಪೂರ್ವವಾಗಿವೆ ಮತ್ತು ಇತ್ತೀಚಿನ ವರ್ಷಗಳಲ್ಲಿ ಈ ವರ್ಗಗಳ ಬಹುತೇಕ ಸಮೂಹಗಳು ಅದೇ ರೀತಿಯ ಕಾಯ್ದಿರಿಸುವಿಕೆಗೆ ಅರ್ಹರು ಎಂದು ಪರಿಗಣಿಸಲ್ಪಟ್ಟಿದ್ದಾರೆ. ಸಾಕಷ್ಟು ಶಿಕ್ಷಣವಿಲ್ಲದೆ ಮತ್ತು ಮೇಲ್ಮುಖವಾದ ಸಾಮಾಜಿಕ ಚಲನೆಗೆ ಅವಕಾಶವಿಲ್ಲದೆ ಇದ್ದ ಈ ಜನರ ಸ್ಥಿತಿಯನ್ನು ಉತ್ತಮಪಡಿಸಲು ಅತಿರಿಕ್ತ ಪ್ರಯತ್ನಗಳು ಮತ್ತು ಕ್ರಮಗಳು ಬೇಕಾಗುತ್ತವೆ. ಎನ್ನುವುದರಲ್ಲಿ ಸಂಶಯವಿಲ್ಲ. ಸಂಪೂರ್ಣ ನಿರ್ಮೂಲನದಲ್ಲಿ ಮತ್ತು ಮೇಲ್ಮುಖವಾದ ಸಾಮಾಜಿಕ ಚಲನೆಗೆ ಅವಕಾಶವಿರುವ ಆರ್ಥಿಕ ಬೆಳವಣಿಗೆ ವೇಗವನ್ನು ಹೆಚ್ಚಿಸಲು ಅವಕಾಶ ಕಲ್ಪಿಸುವ ಗುಣಾತ್ಮಕವಾದ ಹಾಗೂ ಕಾರ್ಯಾತ್ಮಕವಾದ ಶಿಕ್ಷಣದ ಪ್ರಸಾರದಲ್ಲಿ ಈ ಎಲ್ಲಾ ಸಮಸ್ಯೆಗಳ ಅಂತಿಮ ಉತ್ತರವಿದೆ.

ಭಾರತದಲ್ಲಿರುವ ನಗರ ಗ್ರಾಮೀಣ ವ್ಯತ್ಯಾಸವೂ ಅಷ್ಟೇ ಮಹತ್ವಪೂರ್ಣವಾದುದು. ತೀವ್ರವಾದ ನಗರೀಕರಣ ಉಂಟಾಗಿದ್ದರೂ ನಾಲ್ಕು ವ್ಯಕ್ತಿಗಳಲ್ಲಿ ಮೂವರು ಇನ್ನೂ ಗ್ರಾಮೀಣ ಭಾರತದಲ್ಲಿ ವಾಸಿಸುತ್ತಾರೆ. ಇವರಲ್ಲಿ ಶೇ. 66ರಷ್ಟು ಜನಸಂಖ್ಯೆ ಪೂರ್ಣಗತಃ ಕೃಷಿಯಿಂದಲೇ ಜೀವಿಸುತ್ತಿದೆಯಾದರೂ, ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕೆ ಕೃಷಿ ಉತ್ಪನ್ನಗಳು ಪೋಷಿಸುವ ಕೃಷಿ ಆಧಾರಿತ ಕೈಗಾರಿಕೆಗಳ ಬೆಳವಣಿಗೆಯ ಜೊತೆಜೊತೆಗೆ ಭಾರತದಲ್ಲಿನ ಕೃಷಿಯಲ್ಲಿ ಆಹಾರ ಉತ್ಪಾದನೆಯಲ್ಲಿ ಭಾರತ ನಾಲ್ಕುಪಟ್ಟು ಹೆಚ್ಚಳ ದಾಖಲಿಸಿದ್ದರೂ ಈ ಸ್ಥಿತಿ ಉಂಟಾಗಿದೆ. ಕೈಗಾರಿಕಾ ಉತ್ಪನ್ನಗಳಿಗೆ ಬೆಲೆ ಕಟ್ಟುವುದರಲ್ಲಿ ಮತ್ತು ಕೃಷಿ ಉತ್ಪನ್ನಗಳಿಗೆ ಬೆಲೆ ಕಟ್ಟುವುದರಲ್ಲಿ ಇರುವ ಅಗಾಧ ವ್ಯತ್ಯಾಸವನ್ನು ಇದು ತೋರಿಸುತ್ತದೆ. ಗ್ರಾಮೀಣ ಭಾರತದಲ್ಲಿ ಇರುವ ಹೆಚ್ಚಿನ ನಿರುದ್ಯೋಗದ ಪ್ರಮಾಣವನ್ನು ಮತ್ತು ಇರುವ ಬಡತನವನ್ನು ಇದು ವಿವರಿಸುತ್ತದೆ. ನಮ್ಮ ದೇಶದ ತ್ವರಿತ ಗತಿಯ ಕೈಗಾರಿಕೀಕಣ ಪ್ರಬಲವಾದ, ಅಭಿವೃದ್ಧಿಶೀಲ ಮತ್ತು ವಾಣಿಜ್ಯಕೀಯ ಕೃಷಿಯನ್ನು ಅವಲಂಬಿಸಿದೆಯೇ ಹೊರತು ಬಹಳ ಹಿಂದಿನಿಂದಲೂ ಮುಂದುವರಿದುಕೊಂಡು ಬರುತ್ತಿರುವ ಉಳಿಯುವಿಕೆಗಾಗಿ ಮಾಡುವ ಕೃಷಿಯನ್ನಲ್ಲ. ನೀರಾವರಿ ಆಧಾರಿತ ಕೃಷಿ ಕ್ಷೇತ್ರದಲ್ಲಿರುವ ಉದ್ಯೋಗದ ಸತ್ಯವನ್ನು ನಾವು ಪೂರ್ಣಗತಃ ಉಪಯೋಗಿಸಿಕೊಳ್ಳಬೇಕು. ಕೃಷಿಗೆ ಬೇಕಾದ ಮೂಲಭೂತ ಸೌಕರ್ಯಗಳಿಗೆ ಹೂಡುವ ಬಂಡವಾಳವನ್ನು ಹೆಚ್ಚಿಸಬೇಕು ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಕೃಷಿ ಭೂಮಿಯ ಮತ್ತು ಪಡುವ ಶ್ರಮದ ಪ್ರತಿ ಘಟಕಕ್ಕೆ ಅಗತ್ಯವಾಗಿ ಕೃಷಿಕರಿಗೆ ಪ್ರೋತ್ಸಾಹಕಗಳನ್ನು ಒದಗಿಸಬೇಕು. ಇದು ಮಾತ್ರ ತಮ್ಮ ಮಿತಿಯಿಂದ ಕೂಡಿದ, ಬಿಗಿತದಿಂದ ಕೂಡಿದ ಸಾಮಾಜಿಕ ಮತ್ತು ಪೌರಸೇವೆಗಳಿಂದಾಗಿ ದೊಡ್ಡ ನಗರಗಳಿಗೆ ವಲಸೆ ಹೋಗುತ್ತಿರುವ ಗ್ರಾಮೀಣ ಶ್ರಮಿಕವರ್ಗದ ಗತಿಯನ್ನು ಮತ್ತು ಅದರಿಂದ ಪರಿಣಾಮವಾಗಿ ಬೆಳೆಯುತ್ತಿರುವ ಸಾಮಾಜಿಕ ಬಿಗಿತಗಳನ್ನು ಕಡಿಮೆ ಮಾಡಬಲ್ಲುದು. ಕೃಷಿ ಕ್ಷೇತ್ರದಲ್ಲಿಯೂ ನೀರಾವರಿ ಆಧಾರಿತ ಕೃಷಿ ಮತ್ತು ಮಳೆನೀರಿನ ಆಧಾರಿತ ಕೃಷಿ ನಡುವಣ ವ್ಯತ್ಯಾಸಕ್ಕೂ ಒಂದು ಸಂಬಂಧಿತ ಸಮಾಜ ನಿರ್ಮಾಣದ ಉದ್ದೇಶದಿಂದ ಗಮನಹರಿಸಬೇಕಾದ ಅಗತ್ಯವಿದೆ ಈ ದಿಶೆಯಲ್ಲಿ ಸಹಕಾರ ಆಧಾರಿತ ಹಾಲು ಉತ್ಪನ್ನ ಸಂಘಗಳು ಒಳ್ಳೆಯ ನಿರ್ದೇಶಕಗಳಾಗಿವೆ ಅದೇ ರೀತಿ ಗ್ರಾಮೀಣ ಮಹಿಳೆಯರ ಉಳಿತಾಯ ಸಮೂಹಗಳೂ ಉದಾಹರಣೆಗಳಾಗಿವೆ.

ಕೃಷಿ ಆಧಾರಿತ ಬೃಹತ್ ಪ್ರಮಾಣದ ಉತ್ಪಾದನಾ ಕೈಗಾರಿಕೆಗಳು ಭಾರತದ ವಿಸ್ತೃತ ಕೈಗಾರಿಕೀಕರಣದ ಮುಂದಾಳತ್ವ ವಹಿಸಿವೆ. ಇವು ದೇಶೀಯವಾಗಿ ಬೆಳೆಯುವ ವಾಣಿಜ್ಯ ಬೆಳೆಗಳ ಗಮನಾರ್ಹ ಬೆಳವಣಿಗೆಗೆ ಪ್ರೋತ್ಸಾಹ ನೀಡಿವೆ. ಒಂದು ನಿರ್ದಿಷ್ಟ ಬಂಡವಾಳದ ಮಿತಿಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳು ಖನಿಜ ಆಧಾರಿತ ಬೃಹತ್ ಕೈಗಾರಿಕೆಗಳು ಸೃಷ್ಟಿಸುವುದಕ್ಕಿಂತ ಹಲವುಪಟ್ಟು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುತ್ತವೆ. ಕೃಷಿ ಆಧಾರಿತ ಮತ್ತು ಖನಿಜ ಆಧಾರಿತ ಕೈಗಾರಿಕೆಗಳು ಈ ಎರಡರ ಮೌಲ್ಯ ತಮ್ಮ ಉತ್ಪಾದನೆಗಳಿಂದ ಸಂಪತ್ತನ್ನು ಸೃಷ್ಟಿಸುವುದಕ್ಕೆ ಸೇರಿಸುವ ಮೌಲ್ಯವನ್ನು ಆಧರಿಸಿದೆ

Digitised by Bharatavani, CIIL

ಅದೂ ಅಲ್ಲದೆ ನಮ್ಮ ಬೆಳೆಯುತ್ತಿರುವ ರಫ್ತುಗಳ ಪ್ರಮಾಣದಲ್ಲಿ ಕೃಷಿ ಆಧಾರಿತ ಮತ್ತು ಲಘು ಇಂಜಿನಿಯರಿಂಗ್ ಕೈಗಾರಿಕೆಗಳ ಉತ್ಪನ್ನಗಳು ಸಾಕಷ್ಟು ಪ್ರಮಾಣದಲ್ಲಿವೆ. ನಮ್ಮ ಸಮಾಜದ ಜನಸಮೂಹದ ಮೇಲ್ಮುಖ ಸಾಮಾಜಿಕ ಚಲನೆಗಾಗಿ ಅವರ ಜೀವನಮಟ್ಟವನ್ನು ಹೆಚ್ಚಿಸಲು ಹೊಸ ಉದ್ಯೋಗಗಳ ಸೃಷ್ಟಿ ಮತ್ತು ಬೆಳೆಯುತ್ತಿರುವ ರಫ್ತಿನ ಪ್ರಮಾಣ ಪೂರ್ವಾವಶ್ಯಕ ಷರತ್ತುಗಳಾಗಿವೆ.

ಜಾಗತೀಕರಣಗೊಳ್ಳುತ್ತಿರುವ ನಮ್ಮ ರಾಷ್ಟ್ರೀಯ ಆರ್ಥಿಕತೆಯ ಸಂದರ್ಭದಲ್ಲಿ ನಮ್ಮ ಸರ್ಕಾರಗಳು ದೇಶದ ಒಳಗಿನಿಂದ ಮತ್ತು ಹೊರಗಿನಿಂದ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ವಿವೇಚನಾಯುಕ್ತ ಮತ್ತು ಸೂಕ್ತ ನೀತಿಗಳನ್ನು ಕೈಗೊಳ್ಳುವುದರ ಮೂಲಕ ಮತ್ತು ಮೂಲ ಮಟ್ಟದರಲ್ಲಿಯೇ ಸತತವಾದ ಪರ್ಯವೇಕ್ಷಣೆಯನ್ನು ಕೈಗೊಳ್ಳುವುದರ ಮೂಲಕ ಸಂಯೋಗಿಸುವ ಮತ್ತು ವೇಗ ವರ್ಧಿಸುವ ಪಾತ್ರವಹಿಸಬೇಕು. ಇದಕ್ಕೆ ಸಂಬಂಧಿಸಿದಂತೆ ವಿಶ್ವದಾದ್ಯಂತ ಇರುವ ಅತಿಯಾದ ಸ್ಪರ್ಧಾನತೆಯಲ್ಲಿ ಸಫಲವಾಗಲು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಔದ್ಯಮಿಕ ಕೌಶಲಗಳನ್ನು ಪಡೆದುಕೊಳ್ಳುವುದು ಅಷ್ಟೇ ಮುಖ್ಯವಾದುದಾಗುತ್ತದೆ. ಇದಕ್ಕೂ ಮುಖ್ಯವಾದುದು ವೇಗವಾದ ಸಾರಿಗೆ ಸಾಧನಗಳು, ತತ್‌ಕ್ಷಣದ ಸಂವಹನ ವ್ಯವಸ್ಥೆ, ಪ್ರಬಲವಾದ ಬ್ಯಾಂಕ್ ವ್ಯವಸ್ಥೆ ಮತ್ತು ಹಣಕಾಸಿನ ಸೇವೆಗಳು, ಇನ್ಶೂರೆನ್ಸ್, ನಮ್ಮ ಶ್ರಮ ಕಾನೂನುಗಳನ್ನು ಸುಧಾರಿಸುವುದಿಲ್ಲ, ಬಂಡವಾಳ ಹೂಡಿಕೆಗೆ ಸ್ನೇಹಪರವಾದ ತೆರಿಗೆ ವ್ಯವಸ್ಥೆ, ಲೆಕ್ಕಾಚಾರ ಮತ್ತು ಆಡಿಟಿಂಗ್ ಕ್ರಮಗಳು ಮತ್ತು ಆಚರಣೆಗಳು ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದೂ ಇನ್ನೂ ಮುಖ್ಯವಾಗುತ್ತದೆ. ಇಡೀ ದೇಶದ ಕೈಗಾರಿಕೀಕರಣದಲ್ಲಿ ಪ್ರಾದೇಶಿಕ ವ್ಯತ್ಯಾಸಗಳುಂಟಾಗದಂತೆ ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಸರ್ಕಾರಗಳು ಹೊಂದಿವೆ.

ಈ ಸ್ಥಿತ್ಯಂತರದ ಅವಧಿಯಲ್ಲಿ ವಿಮೋಕ್ಷವಾಗಿ ಗ್ರಾಮೀಣ ಕ್ಷೇತ್ರಗಳಲ್ಲಿ ಶ್ರಮವನ್ನು ಉಳಿಸುವ ತಂತ್ರಜ್ಞಾನಗಳಿಗೂ ಮತ್ತು ಕುಶಲಿಗಳಲ್ಲದ ಮತ್ತು ಅರ್ಧಕುಶಲಿಗಳಾದ ಶ್ರಮಿಕರಿಗೆ ಗರಿಷ್ಠ ಮಟ್ಟದಲ್ಲಿ ಅವಕಾಶ ಕಲ್ಪಿಸುವ ಅಗತ್ಯತೆ ನಡುವೆ ನ್ಯಾಯಯುತ ಸಮತೋಲನವಿರಬೇಕು. ಯಾವ ಜನರಿಗಾಗಿ ಈ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆಯೋ ಅವರಿಗೆ ತೊಂದರೆಗಳು ಕನಿಷ್ಠ ಮಟ್ಟದಲ್ಲಿ ಆಗುವಂತೆ ಖಚಿತಪಡಿಸಿಕೊಳ್ಳುವಾಗ ವಿಕಾಸ ಮತ್ತು ತಂತ್ರಜ್ಞಾನದ ನಡುವೆ ಇರಬೇಕಾದ ಮಾನವೀಯತೆಯ ಸಂಬಂಧವನ್ನು ನಾವು ಉಪೇಕ್ಷಿಸಬೇಕಾದ ಅವಶ್ಯಕತೆಯಿಲ್ಲ.

ಭಾರತದಂಥ ಬಹುಧರ್ಮೀಯ ದೇಶದಲ್ಲಿ ಸಮಾಜದಲ್ಲಿನ ಒಂದು ಸಣ್ಣ ಗುಂಪಿನ ಜನರು ಆಗಾಗ್ಗೆ ಜನಗಳ ಧಾರ್ಮಿಕ ನಂಬಿಕೆಗಳ ದುರುಪಯೋಗ ಪಡೆಯುವುದಕ್ಕಾಗಿ ಜನರನ್ನು ಸಮಾಜದ ಮುಖ್ಯ ಪ್ರವಾಹದಿಂದ ಪ್ರತ್ಯೇಕಿಸುವ ಪ್ರಯತ್ನ ಮಾಡುತ್ತಾರೆ. ಭಾರತದಲ್ಲಿರುವ ಪ್ರತಿಯೊಂದು ಧರ್ಮವೂ ಬೇರೆ ಬೇರೆ ಭಾಷೆಗಳು, ಪ್ರದೇಶಗಳು, ರಾಜ್ಯಗಳು, ಮತ್ತು ಸಾಮಾಜಿಕ ಆರ್ಥಿಕ ಗುಂಪುಗಳನ್ನು ಒಂದೇ ರಾಷ್ಟ್ರವೇದಿಕೆಯ ಮೇಲೆ ತಂದು ಧನಾತ್ಮಕವಾಗಿ ಸಮಗ್ರತೆಗೊಳಿಸುವ ಪಾತ್ರವನ್ನು ವಹಿಸುತ್ತಿದೆ ಎನ್ನುವುದನ್ನು ಇಂಥ ಜನರು ಉದ್ದೇಶಪೂರ್ವಕವಾಗಿ ಉಪೇಕ್ಷಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಹೀಗಾಗಿ ಧರ್ಮಗಳು ಜನರನ್ನು ಒಟ್ಟುಗೂಡಿಸುವ ಅತಿ ಶಕ್ತಿಯುತ ಪಾತ್ರವನ್ನು ನಿರ್ವಹಿಸುತ್ತಿವೆ. ಪ್ರದೇಶಗಳ ನಡುವಣ ಸಂಕುಚಿತ ಸೀಮೆಗಳನ್ನು ಮೀರಿ ಎಲ್ಲಾ ರಾಜ್ಯಗಳಲ್ಲಿ ಇರುವ ಭಾಷೆ, ಸಮೂಹಗಳು, ರಾಜಕೀಯ ಪಕ್ಷಗಳು, ಸಾಮಾಜಿಕ–ಆರ್ಥಿಕ ವರ್ಗಗಳು ಮತ್ತು ಜಾತಿಗಳ ವಿಷಯದಲ್ಲಿಯೂ ಈ ತಥ್ಯಾಂಶ ಅಷ್ಟೇ ನಿಜವಾದುದು.

ವಿಸ್ತೃತವಾಗಿ ಹಬ್ಬಿರುವ ಅನಕ್ಷರತೆ, ಕಡು ಬಡತನ ಮತ್ತು ಬಿಗಿಯಾದ ಜಾತಿ ವ್ಯವಸ್ಥೆಯನ್ನು ಹೊಂದಿದ್ದರೂ ಭಾರತೀಯ ಪ್ರಜಾಸತ್ತೆ ವಿಶ್ವಸನೀಯತೆಯನ್ನು ಪಡೆದುಕೊಂಡಿದೆ ಪ್ರಜಾಸತ್ತಾತ್ಮಕ ಸಂವಿಧಾನವನ್ನು ಸ್ವೀಕರಿಸಿದಂದಿನಿಂದ ನಮ್ಮ ರಾಜಕೀಯ ಸಂಸ್ಥೆಗಳು ಜನಸಮೂಹಗಳ ನಂಬಿಕೆಯನ್ನು ಗಮನಾರ್ಹ ಪ್ರಮಾಣದಲ್ಲಿ ಪಡೆದುಕೊಂಡಿವೆ. ನಮ್ಮ ಸಂವಿಧಾನವು ಎಲ್ಲಾ ಪೌರರಿಗೂ ಖಚಿತಗೊಳಿಸಿರುವ ವಿವಿಧ ರೀತಿಯ ಮಾನವ ಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕುಗಳ ಸಂರಕ್ಷಣೆಗಾಗಿ ಪಾತ್ರ ವಹಿಸಲು ಎಲ್ಲರನ್ನೂ ಸಮರ್ಥಗೊಳಿಸಲು ರಾಜಕೀಯ ಸಂಸ್ಥೆಗಳ ಬಗ್ಗೆ ಜನರ ವಿಶ್ವಾಸವನ್ನು ಶಿಕ್ಷಣ ಖಚಿತಗೊಳಿಸಬೇಕಾಗಿದೆ.

ಭಾರತೀಯ ರಾಷ್ಟ್ರೀಯತೆ ಮತ್ತು ಅಂತಾರಾಷ್ಟ್ರೀಯತೆ ಅಥವಾ ವಿಶ್ವಭ್ರಾತೃತ್ವಭಾವನೆಯ ನಡುವೆ ಯಾವುದೇ ರೀತಿಯ ಸಂಘರ್ಷವಿಲ್ಲ. ವಾಸ್ತವವಾಗಿ ಅವು ಒಂದಕ್ಕೊಂದು ಪೂರಕವಾದವುಗಳಾಗಿವೆ. ರಾಷ್ಟ್ರೀಯತೆ ಮತ್ತು ಅಂತಾರಾಷ್ಟ್ರೀಯತೆ ಈ ಎರಡನ್ನೂ ಕ್ರಮೇಣ ವೃದ್ಧಿಸುವ ರೀತಿಯಲ್ಲಿ ಮಗು ತನ್ನ ಆರಾಮದಾಯಕ ಮನೆಯನ್ನು ಬಿಟ್ಟು ಅದನ್ನು ಸ್ವಾಗತಿಸುವ ಅಂಗನವಾಡಿ ಅಥವಾ ದಿನಪೂರ್ತಿ ಸಂರಕ್ಷಣ ಕೇಂದ್ರಕ್ಕೆ ಪ್ರವೇಶಿಸುವ ಶಾಲಾಪೂರ್ವ ಅಥವಾ ಅಂಗನವಾಡಿ ಹಂತದಿಂದಲೇ ಆರಂಭಿಸಲಾಗುತ್ತದೆ. ಅಲ್ಲಿ ತನಗೆ ಅರಿವಿಲ್ಲದೆಯೆ ತನ್ನ ಸೀಮಿತ ಅಹಂ ಪರಿಕಲ್ಪನೆಯನ್ನು ವಿಶಾಲಗೊಳಿಸಿಕೊಳ್ಳುವ ಅಥವಾ ಮುಂದುವರಿಸುವ ಮೂಲಭೂತ ಪಾಠಗಳನ್ನು ಕಲಿತುಕೊಳ್ಳುತ್ತದೆ ಸಾಮಾಜೀಕರಣಗೊಳಿಸುವ ಒಂದು ನಿಯೋಗವಾಗಿ ಶಾಲೆ ಮಗುವಿಗೆ ಇನ್ನೂ ಹೆಚ್ಚಿನ ಸಂಖ್ಯೆಯ ಸೋದರ–ಸೋದರಿಯರ ಅಥವಾ ಸ್ನೇಹಿತರ ಜೊತೆ ಆಟವಾಡಿಕೊಂಡು, ಹಾಡಿಕೊಂಡು,. ನರ್ತನ ಮಾಡಿಕೊಂಡು ಮತ್ತು ಒಟ್ಟಿಗೆ ಊಟಮಾಡಿ ವಿಶ್ರಾಂತಿ ಪಡೆದುಕೊಂಡು ಜೀವಿಸುವ ಒಂದು ವಿಸ್ತೃತಗೊಂಡ ಕುಟುಂಬವೇ ಆಗುತ್ತದೆ. ಇಲ್ಲಿ ಶಿಕ್ಷಕರು ಪೋಷಕರ ಸ್ಥಾನವನ್ನು ತೆಗೆದುಕೊಳ್ಳುತ್ತಾರೆ. ಸ್ನೇಹಿತರು ಮತ್ತು ಶಿಕ್ಷಕರು ಬೇರೆ ಬೇರೆ ಉದ್ಯೋಗವಿರುವ ಮನೆಗಳಿಂದ ಮತ್ತು ಜಾತಿಗಳಿಂದ ಬಂದಿರುತ್ತಾರೆ. ಇದನ್ನು ಮಗು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತದೆ ಎಲ್ಲಾ ಮಕ್ಕಳು ಮನೆಯಲ್ಲಿ ಒಂದೇ ಭಾಷೆಯನ್ನು ಮಾತನಾಡುವುದಿಲ್ಲವೆನ್ನುವುದನ್ನು ಮತ್ತು ಅದೇ ರೀತಿ ದೇವರನ್ನು ಬೇರೆ ಬೇರೆ ರೀತಿಗಳಲ್ಲಿ ಆರಾಧಿಸುತ್ತಾರೆ ಎಂಬುದನ್ನು ಮಗು ಅರ್ಥಮಾಡಿಕೊಳ್ಳುತ್ತದೆ ಮಗು ತರಗತಿಯಿಂದ ತರಗತಿಗೆ

Digitised by Bharatavani, CIIL

ತೇರ್ಗಡೆ ಹೊಂದುತ್ತದೆ. ಮತ್ತು ನಾನು ಸೇರಿರುವ ಹಳ್ಳಿ ಅಥವಾ ಪಟ್ಟಣ/ನಗರದೊಂದಿಗೆ ತಾದಾತ್ಮತೆ ಹೊಂದಲು ಕಲಿಯುತ್ತದೆ. ತನ್ನನ್ನೇ ತಾನು ವಿಸ್ತರಿಸಿಕೊಳ್ಳ ತೊಡಗುತ್ತದೆ. ಮಾನವ ನಿರ್ಮಿತ ಅಥವಾ ಕೃತಕ ಸ್ಥಾನಗಳು ಕುಸಿಯತೊಡಗುತ್ತವೆ ಮತ್ತು ನೆರೆಹೊರೆ, ಜಿಲ್ಲೆ, ರಾಜ್ಯ, ದೇಶ ಅಥವಾ ರಾಷ್ಟ್ರ ಮತ್ತು ಬೃಹತ್ ಪ್ರಪಂಚಕ್ಕೆ ಆತನು ಸೇರಿರುವುದನ್ನು ಮಗು ಆನಂದಿಸತೊಡಗುತ್ತದೆ. ಈ ಬೃಹತ್ ವಿಶ್ವ ಈಗ ಮಾತನಾಡುವ, ಬರೆಯುವ ಶಬ್ದಗಳೇ ಅಲ್ಲದೆ, ಇವುಗಳಿಗಿಂತ ಹೆಚ್ಚು ಪ್ರಭಾವಪೂರ್ಣವಾಗಿ ಮತ್ತು ಮನವೊಪ್ಪಿಸುವಂತೆ ಧ್ವನಿಗಳು, ಚಿತ್ರಗಳು ಅಂದರೆ ವರ್ತಮಾನ ಪತ್ರಿಕೆಗಳು, ಪುಸ್ತಕಗಳು, ರೇಡಿಯೋ, ಟೆಲಿವಿಷನ್, ಸಿನೆಮಾ, ಕಡೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಡಲಾಗುವ ಕ್ರೀಡೆಗಳ ಮಾಧ್ಯಮದ ಮೂಲಕ ಪ್ರತಿಯೊಂದು ಮನೆಗೆ, ಶಾಲೆಗೆ, ತರಗತಿಗೆ ಪ್ರವೇಶಿಸುತ್ತದೆ. ಚಲನಚಿತ್ರ ತಾರೆಯರು ಅಂತಾರಾಷ್ಟ್ರೀಯ ಮಟ್ಟದಲ್ಲಿರುವ ಕ್ರೀಡಾಪಟುಗಳು ಮಗುವಿಗೆ ವೀರರಾಗುತ್ತಾರೆ. ಮಗು ಸ್ಥಾನ ಮತ್ತು ಕಾಲಗಳ ಸೀಮೆಯನ್ನು ದಾಟಿ, ಸ್ಥಾನ, ಕಾಲ ಮತ್ತು ಧರ್ಮಗಳನ್ನು ಅತಿಕ್ರಮಿಸಿ ಧಾರ್ಮಿಕ ಅಥವಾ ಪೌರಾಣಿಕ ವೀರರೊಡನೆ ತಾದಾತ್ಮತೆ ಹೊಂದುತ್ತದೆ. ಮಗುವಿನ ಮನಸ್ಸಿನಲ್ಲಿರುವ ಈ ಎಲ್ಲಾ ಬಿಂಬಗಳನ್ನು ಮತ್ತು ಅನುಭವಗಳನ್ನು ಒಂದು ರೀತಿಯಲ್ಲಿ ಕ್ರಮಬದ್ಧಗೊಳಿಸುವುದು ಅಥವಾ ವ್ಯವಸ್ಥಿತಗೊಳಿಸುವುದು ಮಾತ್ರ ಶಿಕ್ಷಣ ಮಾಡಬೇಕಾದ ಕೆಲಸವಾಗುತ್ತದೆ. ಇಂದಿನ ಕುತೂಹಲಪೂರ್ಣ ಮಗು ತಾನು ಸೇರಿದ ಹಳ್ಳಿಯ ಪಂಚಾಯಿತ್ತಿಗಳಲ್ಲಿ ಅಥವಾ ಪುರಸಭೆಗಳ ಕಾರ್ಯಕಲಾಪಗಳಲ್ಲಿ ದಕ್ಷತೆಯಿಂದ ಪಾಲ್ಗೊಂಡು ಹೆಚ್ಚಿನ ಜನರಿಗೆ ಅನುಕೂಲವುಂಟಾಗುವಂತೆ ಅವುಗಳ ಕಾರ್ಯನಿರ್ವಹಿಸುವ ಭವಿಷ್ಯದ (ನಾಳೆಯ) ಚೆನ್ನಾಗಿ ಮಾಹಿತಿ ಹೊಂದಿದ, ಸಕ್ರಿಯ ಪೌರನನ್ನಾಗಿ ಮಾಡಲು ಪ್ರಬಲವಾದ ಅಸ್ತಿಭಾರವನ್ನು ಶಾಲೆ ಹಾಕುತ್ತದೆ, ಇದರ ಜೊತೆ ಜೊತೆಗೆ ಭವಿಷ್ಯದ ಅಂಥ ಪೌರ ಸಕ್ರಿಯ ಮತದಾರನಾಗುತ್ತಾನೆ. ಮತ್ತು ಅವಕಾಶ ದೊರೆತಲ್ಲಿ ರಾಜ್ಯ ಅಥವಾ ರಾಷ್ಟ್ರವನ್ನು ಆಳುವ ಪ್ರಜಾಪ್ರತಿನಿಧಿಯೂ ಆಗುತ್ತಾನೆ. ಕುಗ್ಗುತ್ತಿರುವ ಇಂತಿನ ಪ್ರಪಂಚದಲ್ಲಿ ಅಂಥ ಪೌರ ರಾಷ್ಟ್ರೀಯ ಮಟ್ಟಕ್ಕೇ ನಿಲ್ಲಬೇಕಾಗಿಲ್ಲ. ಆದರೆ ಇಡೀ ವಿಶ್ವದ ಶಾಂತಿಗಾಗಿ, ಅಭಿವೃದ್ಧಿಗಾಗಿ ಧ್ವನಿ ಎತ್ತಬಹುದು, ಅಭಿಪ್ರಾಯ ವ್ಯಕ್ತಪಡಿಸಬಹುದು, ಸಲಹೆಗಳನ್ನು ಕೊಡಬಹುದು ಏಕೆಂದರೆ ನಿಜವಾದ ಅರ್ಥದಲ್ಲಿ ವಿಶ್ವಪೌರನಾಗುವ ಹಕ್ಕನ್ನು ಅವನು ಪಡೆದಿದ್ದಾನೆ. ತನ್ನ ಸೀಮಿತ ವಿಧೇಯತೆಯನ್ನು ಮೇಲ್ಮಟ್ಟಗಳ ವಿಧೇಯತೆ ಅಡಿಯಲ್ಲಿ ತರಲು, ಮತ್ತು ಈ ಎರಡೂ ಮಟ್ಟಗಳ ವಿಧೇಯತೆಗಳ ನಡುವೆ ಹೆಚ್ಚಿನ ಸಂಘರ್ಷವನ್ನು ತಂದುಕೊಳ್ಳದಿರಲು ಮಗುವಿಗೆ ಸಹಾಯ ಮಾಡುವುದು ಮಾತ್ರ ಶಿಕ್ಷಕನ ಕಾರ್ಯವಾಗುತ್ತದೆ.

ಪ್ರಾಥಮಿಕ ಹಂತದಲ್ಲಿಯೇ ಒಂದು ವಿಚಾರವನ್ನು ಮಗುವಿಗೆ ತಳಿಸಿಕೊಡಬೇಕಾದ ಅಗತ್ಯವಿದೆ ದೇಶದ ಉದ್ದಗಲಕ್ಕೂ ದಿನನಿತ್ಯದ ಬದುಕಿನಲ್ಲಿ ಆರ್ಥಿಕ ಪರಸ್ಪರಾವಲಂಬನೆ ಇದೆ ಎನ್ನವುದೇ ಈ ವಿಚಾರವಾಗಿದೆ ನಮ್ಮ ಬೆಳಗಿನ ಉಪಹಾರದಲ್ಲಿ ಏನೆಲ್ಲ ಇದೆ ಮತ್ತು ಆ ಎಲ್ಲಾ ಪದಾರ್ಥಗಳನ್ನು ಎಲ್ಲೆಲ್ಲಿಂದ ಶೇಖರಿಸಲಾಗಿದೆ ಎಂಬುದನ್ನು ವಿಶ್ಲೇಷಿಸೋಣ. ದೇಶದಾದ್ಯಂತ ಕುಡಿಯುವ ಚಹಾಕ್ಕೆ ಚಹಾ(ಟೀ) ಎಲೆಗಳು ಬೇಕಾಗುತ್ತವೆ ಇವು ನಮ್ಮ ದೇಶದ ಉತ್ತರ–ಪೂರ್ವ ಅಥವಾ ದಕ್ಷಿಣ–ಪಶ್ಚಿಮ ಮೂಲೆಗಳಿಂದ ಬರುತ್ತವೆ. ನಮ್ಮ ಚಹವನ್ನು ಸಿಹಿಯಾಗಿಸುವ ಸಕ್ಕರೆ ಉತ್ತರದಲ್ಲಿ ಉತ್ತರ ಪ್ರದೇಶದಿಂದ, ಪಶ್ಚಿಮದಲ್ಲಿ ಮಹಾರಾಷ್ಟ್ರದಿಂದ, ದಕ್ಷಿಣದಲ್ಲಿ ತಮಿಳುನಾಡಿನಿಂದ ಬರುತ್ತದೆ. ನಮ್ಮ ಚಹ ಅಥವಾ ಕಾಫಿಯನ್ನು ಬಿಳಿಯಾಗಿಸುವ ಹಾಲು ಗುಜರಾತಿನಿಂದ ಬರುತ್ತದೆ ಖೇಡಾ ಜಿಲ್ಲೆಯ ಹಾಲು ಸಹಕಾರ ಸಂಘಗಳು ಪ್ಯಾಶ್ಚರೈಸ್ (ವಿಷಕೀಟಾಣು ಶಕ್ತಿ ಕುಂದಿಸುವ ಕ್ರಿಂಪಿ) ಮಾಡಿದ ತಮ್ಮಲ್ಲಿನ ಹಾಲನ್ನು ಶೀತಲೀಕೃತ ಟ್ಯಾಂಕರ್‌ಗಳಲ್ಲಿ ಸುದೂರದ ದೆಹಲಿ, ಕೊಲ್ಕತ್ತಾ ಮುಂತಾದ ನಗರಗಳಿಗೆ ಎಕ್ಸ್‌ಪ್ರೆಸ್ ರೈಲುಗಳಲ್ಲಿ ಪ್ರತಿದಿನ ಕಳುಹಿಸುತ್ತವೆ. ಪ್ರತಿದಿನ ಬೆಳಿಗ್ಗೆ ಕಾಫಿ ಕುಡಿಯುವವರು ಕರ್ನಾಟಕದಿಂದ ಅಥವಾ ಪಕ್ಕದ ತಮಿಳುನಾಡು, ಕೇರಳ ರಾಜ್ಯಗಳಿಂದ ಬರುವ ಕಾಫಿ ಬೀಜಗಳಿಗಾಗಿ ಕಾಯಬೇಕಾಗುತ್ತದೆ. ನಿಮ್ಮಲ್ಲಿ ಕೆಲವರಿಗೆ ನಿಮ್ಮ ಟೋಸ್ಟ್ (ಬ್ರೆಡ್) ಅನ್ನು ಇನ್ನೂ ಹೆಚ್ಚು ರುಚಿಕರವಾಗಿಸಲು ಕರಿಮೆಣಸು ಬೇಕಾಗುತ್ತದೆ. ಅದಕ್ಕಾಗಿ ಅವರು ಸಾಂಬಾರ್ ಪದಾರ್ಥಗಳಲ್ಲಿ ಮುಂದಿರುವ ಕೇರಳ ರಾಜ್ಯವನ್ನು ಅವಲಂಬಿಸಬೇಕಾಗುತ್ತದೆ. ನಿಮ್ಮ ಬ್ರೆಡ್‌ಗೆ ಬೇಕಾದ ಹಿಟ್ಟು ದೇಶದ ಉತ್ತರ ಪ್ರಶ್ಚಿಮ ಭಾಗದಿಂದ ಬಂದಿರಬಹುದು. ನೀವು ತಿನ್ನುವ ಹಣ್ಣುಗಳು ಸಹ ಅನೇಕ ರಾಜ್ಯಗಳನ್ನು ದಾಟಿ ಬಂದಿರುತ್ತವೆ. ಸೇಬಿನ ಹಣ್ಣುಗಳು ಜಮ್ಮು–ಕಾಶ್ಮೀರದಿಂದ, ಹಿಮಾಚಲ ಪ್ರದೇಶದಿಂದ ಬರುತ್ತವೆ. ಕಿತ್ತಳೆ ಮತ್ತು ಬಾಳೆಹಣ್ಣುಗಳು ಸಾಮಾನ್ಯವಾಗಿ ಮಹಾರಾಷ್ಟ್ರದಿಂದ, ದ್ರಾಕ್ಷಿಹಣ್ಣುಗಳು ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಿಂದ ಬರುತ್ತವೆ. ಇಂಥ ಉದಾಹರಣೆಗಳನ್ನು ಕೊನೆಯಿಲ್ಲದೆ ಕೊಡುತ್ತಾ ಹೋಗಬಹುದು.

**ತಿರುಳು ಅಂಶಗಳು ಮತ್ತು ಮೂಲಭೂತ ಕರ್ತವ್ಯಗಳು:**

ಶಿಕ್ಷಣ ಆಯೋಗದ ವರದಿ: ಶಿಕ್ಷಣ ಮತ್ತು ಅಭಿವೃದ್ಧಿಯ ಬಗ್ಗೆ ಪರಿಗಣಿಸುವಾಗ, ಶೈಕ್ಷಣಿಕ ಪುನರ್‌ರಚನೆಗೆ ಹೆಚ್ಚಿನ ನಿರ್ಧಾರದ ಗುರಿ ಹೊಂದಿದ್ದ ಭಾರತ ಸರ್ಕಾರದ 1968ರ ನಿರ್ಣಯ ರಾಷ್ಟ್ರದ ಸಮಗ್ರತೆ (ಭಾವೈಕ್ಯತೆ)ಗೆ ದೇಶದ ಸಾಂಸ್ಕೃತಿಕ ಮತ್ತು ಆರ್ಥಿಕ ವಿಕಾಸಕ್ಕೆ ಸೂಕ್ತವಾದ ಶಿಕ್ಷಣ ನೀತಿ ಮುಖ್ಯವಾದುದು ಎಂದು ಸೂಚಿಸಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಇದುವರೆಗೂ ಬದಲಾಗದೆ ಇರುವ ಹೊಸ ಶಿಕ್ಷಣ ನೀತಿ (1986) ಭಾರತದ ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ 10 ಅಂಶಗಳನ್ನು ಗುರ್ತಿಸಿದೆ. ಅವು ಇಂತಿವೆ:

(i) ಭಾರತ ಸ್ವಾತಂತ್ರ್ಯ ಆಂದೋಲನದ ಇತಿಹಾಸ

(ii) ಸಂವೈಧಾನಿಕ ಕರ್ತವ್ಯಗಳು

(iii) ರಾಷ್ಟ್ರೀಯ ತಾದಾತ್ಮ್ಯತೆಯನ್ನು ಪೋಷಿಸಲು ಮುಖ್ಯವಾದ ವಿಷಯವಸ್ತು

(iv) ಭಾರತದ ಸಾಮಾನ್ಯ ಸಾಂಸ್ಕೃತಿಕ ಪರಂಪರೆ

Digitised by Bharatavani, CIIL

(v) ಸಮಾನತೆ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ

(vi) ಲಿಂಗಗಳ ಸಮಾನತೆ

(vii) ಪರಿಸರದ ಸಂರಕ್ಷಣೆ

(viii)ಸಾಮಾಜಿಕ ಅಡಚಣೆಗಳ ನಿರ್ಮೂಲನ

(ix) ಸಣ್ಣ ಕುಟುಂಬದ ಆದರ್ಶ ಪಾಲನೆ

(x) ವೈಜ್ಞಾನಿಕ ಮನೋಭಾವದ ಬೆಳವಣಿಗೆ

ಈ ಮೇಲಿನವುಗಳಲ್ಲಿ ಬಹಳಷ್ಟು ಅಂಶಗಳು ರಾಷ್ಟ್ರೀಯ ಸಮಗ್ರತೆ (ಭಾವೈಕ್ಯತೆ)ಯ ಆಯಾಮಗಳಾಗಿವೆ.

ಸಂವಿಧಾನದ ಸಂವೈಧಾನಿಕ ಕರ್ತವ್ಯಗಳ (ತಿರುಳು ಅಂಶಗಳು ಸಂ.2) ಅನುಚ್ಛೇದ 51–ಎ ಯಲ್ಲಿ ತಿಳಿಸಿರುವ ಮೂಲಭೂತ ಕರ್ತವ್ಯಗಳನ್ನು ವಿಸ್ತೃತಗೊಳಿಸಿ ಹತ್ತು ತಿರುಳು ಅಂಗಗಳ ಭಾಗಗಳನ್ನಾಗಿ ಮಾಡಲಾಗಿದೆ. ಈ ಹತ್ತು ಅಂಶಗಳು ಹೀಗಿವೆ.

(a) ಸಂವಿಧಾನಕ್ಕೆ ಬದ್ಧರಾಗಿರುವುದು ಮತ್ತು ಅದರ ಆದರ್ಶಗಳನ್ನು ಸಂಸ್ಥೆಗಳನ್ನು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(b) ನಮ್ಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿ ನೀಡಿದ ಘನ ಆದರ್ಶಗಳನ್ನು ಸದಾ ನೆನಪಿಸುತ್ತಾ ಅನುಸರಿಸುವುದು.

(c) ಭಾರತದ ಪರಮಾಧಿಕಾರವನ್ನು ಏಕತೆಯನ್ನು, ಸಮಗ್ರತೆಯನ್ನು ಎತ್ತಿ ಹಿಡಿಯುವುದು ಮತ್ತು ಸಂರಕ್ಷಿಸುವುದು.

(d) ರಾಷ್ಟ್ರದ ಕರೆ ಬಂದಾಗ ದೇಶವನ್ನು ರಕ್ಷಿಸುವುದು ಮತ್ತು ರಾಷ್ಟ್ರ ಸೇವೆಯಲ್ಲಿ ತೊಡಗುವುದು.

(e) ಎಲ್ಲಾ ರೀತಿಯ ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ವೈವಿಧ್ಯತೆಗಳನ್ನು ಅತಿಕ್ರಮಿಸಿ ಭಾರತದ ಎಲ್ಲಾ ಜನರಲ್ಲಿ ಸಾಮರಸ್ಯ ಭಾವನೆಯನ್ನು ಮತ್ತು ಸಾಮಾನ್ಯ ಭ್ರಾತೃತ್ವದ ಚೇತನ (ಸ್ಫೂರ್ತಿ)ವನ್ನು ಉತ್ತೇಜಿಸುವುದು; ಸ್ತ್ರೀಯರ ಘನತೆಗೆ ಅಪಮಾನಕಾರಕಗಳಾದ ಆಚರಣೆಗಳನ್ನು ತ್ಯಜಿಸುವುದು.

(f) ನಮ್ಮ ಸಂಯುಕ್ತ ಸಂಸ್ಕೃತಿಯ ಸಮೃದ್ಧ ಪರಂಪರೆಯನ್ನು ಗೌರವಿಸಿ, ಸಂರಕ್ಷಿಸುವುದು.

(g) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ಅರಣ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಮತ್ತು ಸುಧಾರಿಸುವುದು ಮತ್ತು ಎಲ್ಲಾ ಜೀವಜಂತುಗಳ ಬಗ್ಗೆ ಕರುಣೆ ತೋರಿಸುವುದು.

(h) ವೈಜ್ಞಾನಿಕ ಮನೋಭಾವ, ಮಾನವೀಯತೆ ಮತ್ತು ಶೋಧನೆ ಹಾಗೂ ಸುಧಾರಣೆಯ ಭಾವನೆಗಳನ್ನು ವಿಕಾಸಗೊಳಿಸುವುದು.

(i) ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ಬಿಡುವುದು.

(ii) ರಾಷ್ಟ್ರವು ತನ್ನ ಪ್ರಯತ್ನಗಳಲ್ಲಿ ಮತ್ತು ಸಾಧನೆಗಳಲ್ಲಿ ಸತತವಾಗಿ ಮೇಲೇರುವಂತೆ ವೈಯಕ್ತಿಕ ಮತ್ತು ಸಮೂಹದ ಚಟುವಟಿಕೆಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಶ್ರೇಷ್ಠತೆಗಾಗಿ ಪ್ರಯತ್ನಿಸುವುದು.

**ಸುಬದ್ಧ ಸಮಾಜಕ್ಕಾಗಿ ಶಿಕ್ಷಣ:** ನಾವು ಇದುವರೆಗೆ ಶಿಕ್ಷಣ ಆಯೋಗ (1964–66) ಸೂಚಿಸಿದ ನಾವು ಎದುರಿಸಬೇಕಾದ ಸವಾಲುಗಳ ಬಗ್ಗೆ ಮತ್ತು ಅವುಗಳನ್ನು ಹೇಗೆ ಎದುರಿಸಬೇಕೆಂಬುದರ ಬಗ್ಗೆ ತಿಳಿದುಕೊಂಡೆವು. 1986ರ ಶಿಕ್ಷಣನೀತಿ ಇತ್ತೀಚೆಗೆ ಗುರ್ತಿಸಿರುವ ರಾಷ್ಟ್ರೀಯ ಪಠ್ಯಕ್ರಮದ ತಿರುಳು ಅಂಶಗಳು ಮತ್ತು ಸಂವೈಧಾನಿಕ ಕರ್ತವ್ಯಗಳ ಆಧಾರದ ಮೇಲೆ ರೂಪಿಸಿದ ಮೂಲಭೂತ ಕರ್ತವ್ಯಗಳ ಬಗ್ಗೆಯೂ ಗಮನಹರಿಸಿದೆವು. ಇದೇ ರೀತಿ, ಎನ್.ಸಿ.ಇ.ಆರ್.ಟಿ. ರೂಪಿಸಿರುವ 'ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿ'ನಲ್ಲಿ 'ಸುಬದ್ಧ ಸಮಾಜಕ್ಕಾಗಿ ಶಿಕ್ಷಣ' ಎನ್ನುವ ಶೀರ್ಷಿಕೆಯಡಿಯಲ್ಲಿ ಇದೇ ವಿಚಾರವನ್ನು ಪ್ರಸ್ತಾಪಿಸಿದೆ.

**'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿ'ನ ನಿಲುವು ಹೀಗಿದೆ:** "ಇಂದು ನಮಗೆ ಬೇಕಾಗಿರುವುದು ಶಾಲಾ ಶಿಕ್ಷಣದ ಪ್ರತಿಯೊಂದು ಮುಖದಲ್ಲಿಯೂ ಶ್ರೇಷ್ಠತೆಯಲ್ಲಿದೆ ಬೇರೆನೂ ಅಲ್ಲ' ಏಕೆಂದರೆ ಅದು ನಮ್ಮ ಪ್ರಥಮ ಅತ್ಯಗತ್ಯತೆಯಾಗಿದೆ. ಪಠ್ಯಕ್ರಮ (i) ಸಂಬಂಧತೆ ಪ್ರಸಕ್ತತೆ (ii) ಸಮಗ್ರ ಮತ್ತು (iii) ಶ್ರೇಷ್ಠತೆ ಈ ಮೂರು ಸ್ಥಂಭಗಳ ಆಧಾರವನ್ನು ಹೊಂದಿರಬೇಕು ಎಂದು ಅದು ಒತ್ತಿ ಹೇಳುತ್ತದೆ. ಸುಬದ್ಧ ಸಮಾಜಕ್ಕಾಗಿ ಶಿಕ್ಷಣವನ್ನು ವ್ಯಾಖ್ಯಾನಿಸುವಾಗ ಪಠ್ಯಕ್ರಮ ಚೌಕಟ್ಟು ಅವಕಾಶಗಳ ಸಮಾನತೆಯನ್ನು ಈ ಶಬ್ದಗಳಿಂದ ವಿವರಿಸಿದೆ "ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕಲಿಕೆಯ ವೇಗಕ್ಕೆ ತಕ್ಕುದಾದ ಮತ್ತು ತನಗೆ ಅನುಕೂಲಕರವಾದ ವಿಧಾನಗಳ ಮೂಲಕ ತನಗೆ ಹೊಂದುವ ಶಿಕ್ಷಣವನ್ನು ಪಡೆಯಬೇಕು. ಅವಕಾಶ ವಂಚಿತ ಗುಂಪುಗಳು ಮತ್ತು ಸಾಮಾಜಿಕವಾಗಿ ಪ್ರತ್ಯೇಕಿಸಲ್ಪಟ್ಟ ಗುಂಪುಗಳು ಮತ್ತು ನಿರ್ದಿಷ್ಟ ಸವಾಲುಗಳಿಂದ ತೊಂದರೆಗೆ ಒಳಪಟ್ಟಿರುವ ಮಕ್ಕಳಿಗೆ ವಿಶೇಷ ಗಮನ ನೀಡಬೇಕು" "ಲಭ್ಯತಯೇ ಅಲ್ಲದೆ, ಸಫಲರಾಗಲು ಬೇಕಾದ ಪರಿಸ್ಥಿತಿಗಳನ್ನು ಒದಗಿಸುವುದು ಸಮಾನತೆಯನ್ನು ಪ್ರೋತ್ಸಾಹಿಸಲು ಬೇಕಾದ ಪೂರ್ವಾವಶ್ಯಕತೆಗಳಾಗಿವೆ" ಎಂದು ಅದು ತೀರ್ಮಾನಿಸಿದೆ.

**ಮೌಲ್ಯ ಶಿಕ್ಷಣ:** ರಾಷ್ಟ್ರೀಯ ಭಾವೈಕ್ಯತೆ ಬಗ್ಗೆ ಇದುವರೆಗೆ ಮೂಡಿದ ಪೂರ್ತಿ ಚರ್ಚೆ 'ಆಧ್ಯಾತ್ಮಿಕ ಸಹ ಅಸ್ತಿತ್ವದಲ್ಲಿನ ಉದಾತ್ತಪೂರ್ಣ ಸಹಯೋಗವನ್ನು ಸೂಚಿಸುತ್ತದೆ' 'ಶಾಲಾ ಪಠ್ಯಕ್ರಮದಲ್ಲಿ ಮೂಲಭೂತ ಮೌಲ್ಯಗಳನ್ನು ವಿಕಾಸಗೊಳಿಸುವಿಕೆಯನ್ನು ಮತ್ತು ದೇಶದಲ್ಲಿರುವ ಧರ್ಮಗಳ ಮುಖ್ಯ ಮೌಲ್ಯಗಳ ಅರಿವನ್ನು ಸೇರಿಸುವುದು ಅತ್ಯಗತ್ಯವಾಗಿದೆ' ಆದರೆ ಈ ವಿಷಯಗಳನ್ನು ಯಾವುದೇ ಹಂತದಲ್ಲಿಯಾಗಲಿ ಅಧ್ಯಯನದ ಪ್ರತ್ಯೇಕ

Digitised by Bharatavani, CIIL

ವಿಷಯವಾಗಿಯಾಗಲಿ ಅಥವಾ ಪರೀಕ್ಷೆಯ ವಿಷಯವಾಗಿಯಾಗಲಿ ಮಾಡಬೇಕಾಗಿಲ್ಲ. ಈ ವಿಷಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಅಧ್ಯಯನದ ಶೈಕ್ಷಣಿಕ ಕ್ಷೇತ್ರಗಳೊಂದಿಗೆ ಮತ್ತು ತರಗತಿಯ ಸಹ ಶೈಕ್ಷಣಿಕ ಚಟುವಟಿಕೆಗಳೊಂದಿಗೆ, ಶಾಲಾ ಸಭೆ (ಅಸೆಂಬ್ಲಿ), ಕ್ರೀಡಾ ಮೈದಾನ, ಸಾಂಸ್ಕೃತಿಕ ಕೇಂದ್ರಗಳು ಮುಂತಾದವುಗಳೊಂದಿಗೆ ಸಮಗ್ರಗೊಳಿಸಬೇಕಾಗುತ್ತದೆ. ಶಾಲಾಶಿಕ್ಷಣ ಆರಂಭಿಕ ಹಂತದಿಂದಲೇ ಶಾಲೆಯ ದಿನನಿತ್ಯದ ಕಾರ್ಯಕ್ರಮದ ನಿಯಮಿತ ಭಾಗವಾಗಿ ಮೌಲ್ಯಗಳ ಬೋಧನೆಗಾಗಿ ಒಂದು ವ್ಯಾಪಕ ಕಾರ್‍ಯಕ್ರಮವನ್ನು ಆರಂಭಿಸಲೇಬೇಕು. ಇದರ ಮೂಲಕ ಇಂದಿನ 'ಒಳ್ಳೆಯ'ದನ್ನು ತಿಳಿದುಕೊಳ್ಳುವ,'ಒಳ್ಳೆಯ'ದನ್ನು ಪ್ರೀತಿಸುವ ಮತ್ತು 'ಒಳ್ಳೆಯ'ದನ್ನು ಮಾಡುವ ವಿದ್ಯಾರ್ಥಿಗಳು ಬೆಳೆದು ಮುಂದೆ ಪರಸ್ಪರ ಸಹಿಷ್ಣುತೆಯುಳ್ಳ ಪೌರರಾಗಿ ರೂಪುಗೊಳ್ಳುತ್ತಾರೆ.

**ಮೌಲ್ಯಮಾಪನ ಸಂಜ್ಞಾನಾತ್ಮಕ ಮತ್ತು ಸಂಜ್ಞಾನೇತರ:** ಮೌಲ್ಯಮಾಪನ ಬೋಧನೆ ಕಲಿಕೆ ಪ್ರಕ್ರಿಯೆಯ ಅವಿಭಾಜ್ಯ ಅಂಗ. ಸಮಗ್ರಗೊಳಿಸುವಿಕೆ ಹೆಚ್ಚಾದಷ್ಟೂ ಕಲಿಕೆಯ ಫಲಿತಗಳು ಉತ್ತಮಗೊಳ್ಳುತ್ತವೆ. ಆದ್ದರಿಂದ, ಶಿಕ್ಷಕರು ಏನನ್ನು ಬೋಧಿಸುತ್ತಾರೆಯೋ ಅದನ್ನು ಮತ್ತು ವಿದ್ಯಾರ್ಥಿಗಳು ಏನನ್ನು ಕಲಿಯುತ್ತಾರೆಯೋ ಅದನ್ನು ಈ ಎರಡು ಪ್ರಕ್ರಿಯೆಗಳನ್ನು ಗುಣಾತ್ಮಕತೆಯನ್ನು ಪ್ರಭಾವಗೊಳಿಸುವ ಒಂದು ಸಶಕ್ತ ಸಾಧನವಾಗಿ ಉಪಯೋಗಿಸುವ ರೀತಿಯಲ್ಲಿ ಮೌಲ್ಯಮಾಪನವನ್ನು ವಿನ್ಯಾಸಗೊಳಿಸಬೇಕು. 'ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು' (2000) ಇನ್ನೂ ಮುಂದುವರಿಸುತ್ತಾ ಮೌಲ್ಯಮಾಪನವು ಸೂಕ್ತವಾದ ಮೌಲ್ಯಮಾಪನ ಕ್ರಮಗಳನ್ನು ಹೊಂದಿರುವುದರ ಜೊತೆಜೊತೆಗೆ ವಿಷಯವಸ್ತು, ತರಗತಿಯ ಪ್ರಕ್ರಿಯೆಗಳು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ಬೆಳವಣಿಗೆ ಸೇರಿದಂತೆ ಇಡೀ ಕಾರ್ಯಕ್ರಮದ ಪರಿಣಾಮಕಾರಿತ್ವದ ಬಗ್ಗೆ ಪ್ರತಿಪುಷ್ಟಿ ಒದಗಿಸಬೇಕು. ಪಠ್ಯಕ್ರಮ ಚೌಕಟ್ಟಿನ ಶಬ್ದಗಳನ್ನೇ ಉಪಯೋಗಿಸಿಕೊಂಡು ಕಲಿಕೆಯ ಸಂಜ್ಞಾನಾತ್ಮಕ ಮತ್ತು ಸಂಜ್ಞಾನೇತರ ಕ್ಷೇತ್ರಗಳೆರಡರಲ್ಲಿಯೂ ವಿದ್ಯಾರ್ಥಿಗಳ ಪ್ರಗತಿ ಮತ್ತು ಸಾಧನೆಯ ಬಗ್ಗೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವ, ವಿಶ್ಲೇಷಿಸುವ ಮತ್ತು ಅರ್ಥೈಸುವ ವ್ಯವಸ್ಥಿತ ಪ್ರಕ್ರಿಯೆಯ ಮೌಲ್ಯಮಾಪನ' ಎಂದು ಹೇಳಿದರೆ ಸಾಕಾಗುತ್ತದೆ.

ದುರದೃಷ್ಟವಶಾತ್, ಇಂದಿನ ಮೌಲ್ಯಮಾಪನ ವ್ಯವಸ್ಥೆ ಕೇವಲ ಸಂಜ್ಞಾನಾತ್ಮಕ ಕಲಿಕಾ ಫಲತೆಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಮಾನವ ಕ್ಷೇತ್ರದ ಮುಖ್ಯ ಭಾಗಗಳಾದ ಸಂಜ್ಞಾನೇತರ (ಸಂವೇಗಾತ್ಮಕ ಮತ್ತು ಮನೋಗತ್ಯಾತ್ಮಕ) ಫಲಿತಾಂಶಗಳನ್ನು ಪೂರ್ತಿಯಾಗಿ ಉಪೇಕ್ಷಿಸುತ್ತಿದೆ. ಸಂಜ್ಞಾನಾತ್ಮಕ ಕ್ಷೇತ್ರದಲ್ಲಿಯೂ ಸ್ಮರಣೆಗೆ ಅತಿ ಹೆಚ್ಚು ಮಹತ್ವ ನೀಡಲಾಗುತ್ತಿದೆ ಮತ್ತು ಸಮಸ್ಯೆ ಪರಿಹಾರ, ಸೃಜನಾತ್ಮಕ ಚಿಂತನೆ, ಸಾರಾಂಶೀಕರಿಸುವಿಕೆ, ತೀರ್ಮಾನ ಕೈಗೊಳ್ಳುವಿಕೆ, ವಾದಿಸುವಿಕೆ ಮುಂತಾದವುಗಳನ್ನು ಉಪಯೋಗಿಸಬೇಕಾದ ಉನ್ನತ ಮಟ್ಟದ ಮಾನಸಿಕ ಸಂಕ್ರಿಯೆಗಳ ಸಾಮರ್ಥ್ಯಗಳು ಹಾಗೂ ಕೌಶಲ್ಯಗಳಿಗೆ ಅತಿ ಸ್ವಲ್ಪ ಮಹತ್ವ ನೀಡುತ್ತಿದೆ' ಮುಂದುವರಿಸುತ್ತಾ 'ಪಠ್ಯಕ್ರಮ ಚೌಕಟ್ಟು' 'ಶಿಕ್ಷಕರು ಯಾವುದನ್ನು ಮೌಲ್ಯಮಾಪನ ಮಾಡಬೇಕೋ ಅದನ್ನು ಬೋಧಿಸಬೇಕು ಮತ್ತು ಯಾವುದನ್ನು ಮೌಲ್ಯಮಾಪನ ಮಾಡುವುದಿಲ್ಲವೋ ಅದನ್ನು ಬೋಧಿಸಬೇಕಾಗಿಲ್ಲ' ಎನ್ನುವ ಸೂತ್ರಕ್ಕೆ ಅನುಸಾರವಾಗಿ ತಮ್ಮ ಬೋಧನೆಯನ್ನು ಹೊಂದಿಸಿಕೊಳ್ಳುತ್ತಾರೆ' ಎಂದು ಹೇಳುತ್ತದೆ. ಹೀಗೆ ರಾಷ್ಟ್ರೀಯ ಭಾವೈಕ್ಯತೆ (ಸಮಗ್ರ)ಗೆ ಶಿಕ್ಷಣದ ಜೀವಾಳವಾಗಿರುವ ಮೌಲ್ಯಮಾಪನವು ನಿಜವಾಗಿಯೂ ನಿರಂತರವಾದುದು ಮತ್ತು ವ್ಯಾಪಕವಾದುದಾಗಬೇಕಾದರೆ ಅದು ರೂಪಣ ಮತ್ತು ಸಂಕಲಿತವಾದುದಾಗಿರಬೇಕು, ಸ್ವಯಂ ಸಂಬಂಧಿತವಾಗಿರಬೇಕು, ನಿರ್ಣಾಯಕ ಆಧಾರಿತವಾಗಿರಬೇಕು. ಮತ್ತು ಆದರ್ಶ ಆಧಾರಿತವಾಗಬೇಕು ಎಂದು ಸಾರಾಂಶ ಸೂತ್ರದಲ್ಲಿ ಹೇಳಬಹುದು.

**ಶೈಕ್ಷಣಿಕ ಮತ್ತು ಸಹ ಶೈಕ್ಷಣಿಕ ಚಟುವಟಿಕೆಗಳ ಪಾತ್ರ:** ಚಟುವಟಿಕೆಗಳು ವ್ಯಕ್ತಿಗತ ಮತ್ತು ಸಮೂಹ ಚಟುವಟಿಕೆಗಳಾಗಿರಬಹುದು. ಶಿಕ್ಷಕರನ್ನು ಈ ನಿಟ್ಟಿನಲ್ಲಿ ಪ್ರಚೋದಿಸುವ ದೃಷ್ಟಿಯಿಂದ ಕೆಲವು ಚಟುವಟಿಕೆಗಳನ್ನು ಈ ಮುಂದೆ ಕೊಡಲಾಗಿದೆ :

**ಮುಂದುವರಿಯುವ ಚಟುವಟಿಕೆಗಳು:**

ಒಂದು ತರಗತಿಯನ್ನು ನಾಲ್ಕು ಅಥವಾ ಐದು ವಿದ್ಯಾರ್ಥಿಗಳಿರುವ ಗುಂಪುಗಳಾಗಿ ವಿಂಗಡಿಸಬಹುದು. ಚಟುವಟಿಕೆಯ ಅವಧಿ, ಉದಾಹರಣೆಗೆ ಕೆಲವು ತಿಂಗಳುಗಳು ಅಥವಾ ಒಂದು ಶೈಕ್ಷಣಿಕ ವರ್ಷ – ಎಲ್ಲಾ ಗುಂಪುಗಳಿಗೂ ಒಂದೇ ಆಗಿರಬಹುದು. ದೀರ್ಘ ರಜೆ ಆರಂಭವಾಗುವುದಕ್ಕೆ ಮುಂಚೆಯೆ ಈ ಗುಂಪುಗಳನ್ನು ಮಾಡಿದರೆ ಅವುಗಳನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಪ್ರತಿಯೊಂದು ಗುಂಪು ಸ್ವಇಚ್ಛೆಯಿಂದ ಅಥವಾ ಲಾಟರಿ ಮೂಲಕ ಒಂದೊಂದು ರಾಜ್ಯವನ್ನು ಆಯ್ಕೆ ಮಾಡಿಕೊಳ್ಳಬೇಕು ಪ್ರತಿಯೊಂದು ಗುಂಪು ನಿಗದಿತ ಅವಧಿಯ ಅಂತ್ಯದಲ್ಲಿ ತಾನು ಆಯ್ಕೆ ಮಾಡಿಕೊಂಡ ರಾಜ್ಯದ ಬಗ್ಗೆ ಒಂದು ಮಾಹಿತಿ ಪುಸ್ತಕವನ್ನು (ಸ್ಕ್ರಾಪ್ ಬುಕ್) ಸಿದ್ಧಪಡಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಈ ಚಟುವಟಿಕೆ ಎಲ್ಲಾ ಗುಂಪುಗಳ ಮಾಹಿತಿ ಪುಸ್ತಕಗಳ ಒಂದು ಪ್ರದರ್ಶನವನ್ನು ಏರ್ಪಡಿಸಿ ಶಿಕ್ಷಕ ವೃಂದದವರು ಮತ್ತು ಪೋಷಕರನ್ನು ಪ್ರದರ್ಶನಕ್ಕೆ ಆಹ್ವಾನಿಸುವುದರಲ್ಲಿ ಅಂತ್ಯಗೊಳ್ಳಬಹುದು. ಮಾಹಿತಿ ಪುಸ್ತಕದ ವಿಷಯ ವಸ್ತು ಆಯಾ ರಾಜ್ಯಕ್ಕೆ ಸಂಬಂಧಿಸಿದ ಇತಿಹಾಸ, ಭೌಗೋಳಿಕ ಸ್ಥಿತಿ, ಭಾಷೆಗಳು, ಧರ್ಮ, ಕ್ರೀಡೆಗಳು, ಹಬ್ಬ ಹರಿದಿನಗಳು, ಉಡುಪು, ಇತಿಹಾಸ ಸ್ಮಾರಕಗಳು, ಕೈಗಾರಿಕೆಗಳು, ಕೃಷಿ ನಗರ ಮತ್ತು ಗ್ರಾಮೀಣ ವಾಸಸ್ಥಾನಗಳು, ಮತ್ತು ಪ್ರವಾಸಿಗಳ ಆಸಕ್ತಿ ಸ್ಥಳಗಳನ್ನು ಒಳಗೊಳ್ಳಬಹುದು. ಆಯಾ ರಾಜ್ಯ ಆಗಾಗ್ಗೆ ಎದುರಿಸಬೇಕಾಗಬುಹುದಾದ ನೈಸರ್ಗಿಕ ಅಪಾಯಗಳ ಮಾಹಿತಿಯನ್ನು ಈ ಪುಸ್ತಕದಲ್ಲಿ ಸೇರಿಸಬಹುದು.

**ಯುವ ಸಂಸತ್ (ಪಾರ್ಲಿಮೆಂಟ್) ಸಂಘಟಿಸುವುದು:** ಈ ವಿಷಯಕ್ಕೆ ಸಂಬಂಧಿಸಿದಂತೆ DESSH/NCERT ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಾಲಯ ಒಟ್ಟಾಗಿ ಒಂದು

Digitised by Bharatavani, CIIL

ಪುಸ್ತಿಕೆಯನ್ನು ಹೊರತಂದಿದ್ದಾರೆ ಈ ಪುಸ್ತಿಕೆ ಪಾರ್ಲಿಮೆಂಟ್ ಕ್ರಮಗಳ ಬಗ್ಗೆ ಮತ್ತು ದೇಶಾದ್ಯಂತ ಅವುಗಳನ್ನು ವ್ಯವಸ್ಥಿತವಾಗಿ ಜನಪ್ರಿಯಗೊಳಿಸುವ ಬಗ್ಗೆ ವಿವರವಾದ ಮತ್ತು ಅಧಿಕೃತವಾದ ಸಲಹೆ ಸೂಚನೆಗಳನ್ನು ಒಳಗೊಂಡಿರುವುದರಿಂದ ಈ ಪುಸ್ತಿಕೆಯ ಪ್ರಯೋಜನ ಪಡೆಯಬಹುದು. ಜ್ಯೂನಿಯರ್ NCC ಶಿಬಿರಗಳು, ಬಾಯ್ ಸ್ಕೌಟ್ ಮತ್ತು ಗರ್ಲ್‌ಗೈಡ್ ಸಂಘಗಳು ಮತ್ತು ಅವುಗಳ ಜಂಬೂರಿ (ಸಮ್ಮೇಳನ) ಗಳು ಮುಂತಾದವುಗಳಲ್ಲಿ ಶಾಲೆಗಳು ಪಾಲ್ಗೊಂಡು ಮುಂಬರುವ ವರ್ಷಗಳಲ್ಲಿ ಶಿಸ್ತುಬದ್ಧ ನಾಯಕತ್ವವನ್ನು ದೇಶಕ್ಕೆ ಒದಗಿಸುವ ಈ ಜನಪ್ರಿಯ, ರಚನಾತ್ಮಕ ಆಂದೋಲನಗಳ ಪ್ರಯೋಜನವನ್ನು ಪಡೆದುಕೊಳ್ಳಬಹುದು.

**ರಾಷ್ಟ್ರೀಯ ಸಮಗ್ರತೆ ಶಿಬಿರಗಳು:**

ಎನ್.ಸಿ.ಇ.ಆರ್.ಟಿಯು ತನ್ನ ರಾಷ್ಟ್ರೀಯ ಭಾವೈಕ್ಯತೆ ಘಟಕ ರಾಷ್ಟ್ರೀಯ ಭಾವೈಕ್ಯತೆ ಶಿಬಿರಗಳನ್ನು ಸಂಘಟಿಸುತ್ತದೆ. 1969ರಲ್ಲಿ ಡಾ॥ ವಿ.ಕೆ.ಆರ್.ವಿ. ರಾವ್ ಶಿಕ್ಷಣ ಯುವಜನ ಚಟುವಟಿಕೆಗಳ ಮಂತ್ರಿಗಳಾಗಿದ್ದಾಗ ಈ ಶಿಬಿರಗಳನ್ನು ಆರಂಭಿಸಲಾಯಿತು. ಆಗಿನಿಂದಲೂ ದೇಶದ ವಿವಿಧ ಭಾಗಗಳಲ್ಲಿ ಈ ಶಿಬಿರಗಳನ್ನು ನಿರಂತರವಾಗಿ ಸಂಘಟಿಸಲಾಗುತ್ತಿದೆ. ಪ್ರತಿಯೊಂದು ಶಿಬಿರವೂ ಎರಡು ವಾರದ ಅವಧಿಗೆ ದೇಶದ ನಾಲ್ಕು ಪ್ರದೇಶಗಳಿಂದ ಆಯ್ಕೆ ಮಾಡಿದ 75 ವಿದ್ಯಾರ್ಥಿಗಳಿಗೆ ಮತ್ತು 15 ಶಿಕ್ಷಕರಿಗೆ ಅವಕಾಶ ಕಲ್ಪಿಸುತ್ತದೆ. ಮಕ್ಕಳು ಈ ಶಿಬಿರಗಳಲ್ಲಿ ಬೇರೆ ಬೇರೆ ರಾಜ್ಯಗಳ ವಿಶೇಷ ದಿನ (ಹಬ್ಬ)ಗಳನ್ನು ಆಚರಿಸುತ್ತಾರೆ. ಮತ್ತು ಭಾಗವಹಿಸುವ ರಾಜ್ಯಗಳ ವಿದ್ಯಾರ್ಥಿಗಳಿಂದ ಕೆಲವು ಶಬ್ದಗಳನ್ನೂ, ವಾಕ್ಯಗಳನ್ನು ಕಲಿತುಕೊಳ್ಳುತ್ತಾರೆ. ಮಕ್ಕಳು ಬೇರೆ ಬೇರೆ ರಾಜ್ಯಗಳ ವಿಶೇಷ ಖಾದ್ಯಗಳನ್ನು ತಯಾರಿಸುತ್ತಾರೆ, ಪೋಷಾಕುಗಳನ್ನು ಧರಿಸುತ್ತಾರೆ. ಮತ್ತು ಶಿಬಿರದ ಅಂತಿಮ ದಿನದಂದು ಮನಸ್ಸಿಲ್ಲದ ಮನಸ್ಸಿನಿಂದ ಒಬ್ಬರನ್ನೊಬ್ಬರು ಬೀಳ್ಕೊಡುತ್ತಾರೆ.

**ರೇಡಿಯೋ ಮತ್ತು ದೂರದರ್ಶನ ವೃಂದಗಾನ:**

ಎನ್.ಸಿ.ಇ.ಆರ್.ಟಿ. ಮತ್ತು ಅದರ ರಾಷ್ಟ್ರೀಯ ಭಾವೈಕ್ಯತೆ ಘಟಕ ಪ್ರಾಯೋಜಿಸಿರುವ ಮತ್ತೊಂದು ಚಟುವಟಿಕೆ ದೇಶದ ವಿವಿಧ ಪ್ರಾದೇಶಿಕ ಬಾಷೆಗಳ ಆಯ್ಕೆ ಮಾಡಿದ ಗೀತೆಗಳನ್ನು ಎಲ್ಲಾ ಪಕ್ಕವಾದ್ಯಗಳೊಂದಿಗೆ, ಸಂಗೀತ ಕ್ಷೇತ್ರದ ತಜ್ಞರ ಮಾರ್ಗದರ್ಶನದಲ್ಲಿ ಸಾಮೂಹಿಕವಾಗಿ ಹಾಡುವುದು. ದೇಶದ ಎಲ್ಲಾ ಭಾಷೆಗಳ ರಾಷ್ಟ್ರಭಕ್ತಿ ಗೀತೆಗಳನ್ನು ಜನಪ್ರಿಯಗೊಳಿಸಲು ಆಕಾಶವಾಣಿಯಿಂದ ಮತು ದೂರದರ್ಶನದ ಮೂಲಕ ನಿಯಮಿತವಾಗಿ ಪ್ರಸಾರ ಮಾಡಲಾಗುತ್ತದೆ.

**ವ್ಯಕ್ತಿಗತ ಮತ್ತು ಸಮೂಹ ಪ್ರಾಯೋಜನೆ (ಪ್ರಾಜೆಕ್ಟ್)ಗಳು:**

ಅಂಕ (ಕ್ರೆಡಿಟ್)ಗಳನ್ನು ಪಡೆಯುವುದಕ್ಕೋಸ್ಕರ ವ್ಯಕ್ತಿಗತವಾಗಿ ಅಥವಾ 2–3 ವಿದ್ಯಾರ್ಥಿಗಳ ಗುಂಪಿಗೆ ಸುಲಭವಾದ ಪ್ರಾಯೋಜನೆಗಳನ್ನು ಕೊಡಬಹುದು. ಈ ಪ್ರಾಜೆಕ್ಟ್‌ಗಳನ್ನು ಆಯ್ಕೆಮಾಡಲು, ಆಯೋಜಿಸಲು ಶಿಕ್ಷಕರು ಮಾರ್ಗದರ್ಶನ ಮಾಡುತ್ತಾರೆ. ಅಂಥ ಕೆಲವು ಪ್ರಾಯೋಜನೆಗಳ ವಿಷಯಗಳು ಉದಾಹರಣೆಗಾಗಿ ಹೀಗಿವೆ : (i) ಭಾರತದ ನದಿಗಳು (ii) ಭಾರತೀಯ ವನ್ಯಜೀವಿಗಳು (iii) ಭಾರತದ ಐತಿಹಾಸಿಕ ಸ್ಮಾರಕಗಳು (iv) ಭಾರತದ ಪರ್ವತ ಮತ್ತು ಸಮುದ್ರ ವಿಶ್ರಾಂತಿಧಾಮಗಳು (v) ಭಾರತದ ಹಬ್ಬ–ಹರಿದಿನಗಳು (vi) ಭಾರತದ ಕ್ರೀಡೆಗಳು (vii) ಭಾರತದ ಸಾಕು ಪ್ರಾಣಿಗಳು (viii) ಭಾರತದ ಉಡುಪುಗಳು (ix) ಭಾರತೀಯ ನೋಬೆಲ್ ಪದವಿ ವಿಜೇತರು (x) ಭಾರತದ ವಿವಾಹ ಮತ್ತು ಪದ್ಧತಿಗಳು (xi) ಭಾರತದ ಆಭರಣಗಳು (xii) ಭಾರತದ ವಿವಿಧ ರಾಜ್ಯಗಳ, ವಿವಿಧ ಧರ್ಮಗಳ ಸಂತರು (xii) ಭಾರತದ ಭಾಷೆಗಳು (xiv) ಭಾರತದ ನೃತ್ಯಗಳು ಮತ್ತು ಸಂಗೀತ.

**ವಿಶೇಷ ದಿನಗಳು, ವಾರ್ಷಿಕೋತ್ಸವಗಳು ಮತ್ತು ಶತಾಬ್ದಿ ದಿನಾಚರಣೆ:**

ಜನವರಿ 26 (ಗಣರಾಜ್ಯ ದಿನ), ಆಗಸ್ಟ್ 15 (ಸ್ವಾತಂತ್ರ್ಯೋತ್ಸವದ ದಿನ), ಅಕ್ಟೋಬರ್ 2 (ಮಹಾತ್ಮ ಗಾಂಧೀಜಿಯವರ ಜನ್ಮದಿನೋತ್ಸವ) ಈ ಮೂರು ನಾವು ಉತ್ಸಾಹ ಮತ್ತು ಘನತೆಯಿಂದ ಆಚರಿಸಬೇಕಾದ ರಾಷ್ಟ್ರೀಯ ದಿನಗಳು. ನಮ್ಮ ಗತಕಾಲದ ಇತಿಹಾಸದಲ್ಲಿ ಮತ್ತು ಭವಿಷ್ಯದಲ್ಲಿ ನಮ್ಮ ಕನಸುಗಳಿಗೆ ಸಂಬಂಧಿಸಿದಂತೆ ಇವುಗಳ ಮಹತ್ವವೇನು ಎನ್ನುವುದನ್ನು ವಿದ್ಯಾರ್ಥಿಗಳಿಗೆ ನೆನಪಿಸುವುದಕ್ಕೋಸ್ಕರ ಈ ದಿನಗಳನ್ನು ನಾವು ಕಲ್ಪನಾತ್ಮಕ ರೀತಿಯಲ್ಲಿ ಆಚರಿಸಬೇಕು. ಜನವರಿ 30ನ್ನು ನಾವೆಲ್ಲರು ಸ್ವಾತಂತ್ರ್ಯ ಮತ್ತು ಗುಲಾಮಗಿರಿಯ ಬಂಧನವಿಲ್ಲದೆ ಜೀವಿಸಲೆಂದು ತಮ್ಮ ಪ್ರಾಣವನ್ನು ಬಲಿಕೊಟ್ಟು ಎಲ್ಲರನ್ನೂ ನೆನಪಿಸಿಕೊಳ್ಳಲು ಹುತಾತ್ಮರ ದಿನವಾಗಿ ಗಂಭೀರಪೂರ್ಣ ಘನತೆಯಿಂದ ಆಚರಿಸಬೇಕು. ಡಿಸೆಂಬರ್ 10ರಂದು ಮಾನವ ಹಕ್ಕುಗಳ ದಿನ ಜೂನ್ 5ರಂದು ಪರಿಸರ ದಿನ, ಜನಸಂಖ್ಯಾ ದಿನ, ಮತ್ತು ಕೆಲವು ರಾಷ್ಟ್ರೀಯ ವೀರರ ವಾರ್ಷಿಕೋತ್ಸವಗಳು ಹಲವಾರು ಶತಮಾನಗಳಲ್ಲಿ ಆಗಿಹೋದ ಮಹಾನ್ ಭಾರತೀಯ ಪುರುಷರ/ಮಹಿಳೆಯರ ಜನ್ಮ ಶತಮಾನೋತ್ಸವಗಳು, ಶಾಲಾ ಅಸೆಂಬ್ಲಿಯಲ್ಲಿ/ಪ್ರಾರ್ಥನಾ ಚಟುವಟಿಕೆ ಸಮಯದಲ್ಲಿ ವಿದ್ಯಾರ್ಥಿಗಳು ಸ್ಮರಿಸಿಕೊಳ್ಳಬೇಕಾದ ಇತರ ದಿನಗಳಾಗಿವೆ ಈ ವಿಷಯಕ್ಕೆ ಸಂಬಂಧಿಸಿದಂತೆ ಎನ್.ಸಿ.ಇ.ಆರ್.ಟಿ. ಪ್ರಕಟಿಸಿರುವ (i) ನಮ್ಮ ರಾಷ್ಟ್ರೀಯ ಚಿಹ್ನೆಗಳು ಮತ್ತು (ii) ನಮ್ಮ ರಾಷ್ಟ್ರೀಯ ಹಬ್ಬಗಳು ಎನ್ನುವ ಎರಡು ಪುಸ್ತಿಕೆ ಇವುಗಳ ವಿಷಯದಲ್ಲಿ ಏನು ಮಾಡಬೇಕು ಮತ್ತು ಏನು ಮಾಡಬಾರದು ಎನ್ನುವುದನ್ನು ತಿಳಿದುಕೊಳ್ಳಲು ಶಿಕ್ಷಕರು ಪರಾಮರ್ಶಿಸಬಹುದು.

**ಎನ್.ಸಿ.ಇ.ಆರ್.ಟಿ. ಸಿದ್ಧಪಡಿಸಿರುವ ಸಂಬಂಧಿತ ಬೋಧನಾ ಸಾಮಗ್ರಿಗಳು:**

ಎನ್.ಸಿ.ಇ.ಆರ್.ಟಿ. ಸಂಸ್ಥೆಯ ಶಿಕ್ಷಣಶಾಸ್ತ್ರ ವಿಭಾಗ ಮತ್ತು ರಾಷ್ಟ್ರೀಯ ಭಾವೈಕ್ಯತೆ ಘಟಕ ಈ ಮುಂದಿನ ಬೆಲೆ ಇಡದ (ಮುಕ್ತವಾಗಿ ಪಡೆಯಬಹುದಾದ) ಬೋಧನ ಸಾಮಗ್ರಿಗಳನ್ನು ಹೊರ ತಂದಿವೆ. ಶಾಲೆ ಮತ್ತು ರಾಷ್ಟ್ರ. (a) ಇತಿಹಾಸ (b)

Digitised by Bharatavani, CIIL

ಭೂಗೋಳಶಾಸ್ತ್ರ (c) ಪೌರನೀತಿ ಈ ವಿಷಯಗಳ ಬೋಧನೆಯನ್ನು ಸುಧಾರಿಸುವುದು; ಯುವ ಸಂಸತ್ (ಪಾರ್ಲಿಮೆಂಟ್; ಭಾರತೀಯ ಸಂವಿಧಾನ ಮತ್ತು ಮಾನವ ಹಕ್ಕುಗಳು; ನಮ್ಮ ರಾಷ್ಟ್ರೀಯ ಚಿಹ್ನೆಗಳು ನಮ್ಮ ರಾಷ್ಟ್ರೀಯ ಹಬ್ಬಗಳು; ಭಾರತೀಯ ಭಾಷೆಗಳಿಂದ ಆಯ್ಕೆ ಮಾಡಿದ ರಾಷ್ಟ್ರೀಯ /ದೇಶಭಕ್ತಿಯ ಗೀತೆಗಳು; ಭೂಗೋಳ ಶಾಸ್ತ್ರ ಬೋಧನೆ ಮತ್ತು ರಾಷ್ಟ್ರೀಯ ಸಮಗ್ರತೆ (1973); ಮಾಧ್ಯಮಿಕ ಶಾಲೆಗಳಿಗೆ ಇತಿಹಾಸದ ಕೈಪಿಡಿ ಮಾಧ್ಯಮಿಕ ಶಾಲೆಗಳಿಗೆ ಪೌರನೀತಿ ಕೈಪಿಡಿ; ಭೂಗೋಳಶಾಸ್ತ್ರದಲ್ಲಿ ಕಾರ್ಯಾತ್ಮಕ ಪ್ರಾಯೋಜನೆಗಳು; ಭೂಗೋಳಶಾಸ್ತ್ರದಲ್ಲಿ ಕಲಿಕಾ ಅನುಭವಗಳನ್ನು ಸಂಘಟಿಸುವಿಕೆ (ಇದು ಗುಜರಾತಿ ಭಾಷೆಗೆ ಅನುವಾದಿತವಾಗಿದೆ). ಈ ಕಡೆಯ ಪುಸ್ತಕ ಬೇರೆ ವಿಷಯಗಳ ಜೊತೆಗೆ ಸಂಯೋಜಿತ ಕಾರ್ಯಗಳು, ತರ್ಕಿಸುವಿಕೆ ಮತ್ತು ಕಲ್ಪನೆ ಮಾಡುವಿಕೆಯ ಶಕ್ತಿಗಳು ಪ್ರಯೋಗಗಳು ಮತ್ತು ವೀಕ್ಷಣೆಗಳು, ಮತ್ತು ಅಭಿವೃತ್ತಿ ವಿಕಾಸ ಈ ವಿಷಯಗಳ ಬಗ್ಗೆ ಒಂದೊಂದು ಅಧ್ಯಾಯವನ್ನು ಒಳಗೊಂಡಿದೆ (1961) ಕೆಲವು ತಿರುಳು ಪಠ್ಯಕ್ರಮ ಕ್ಷೇತ್ರಗಳ ಬಗ್ಗೆ ಉದಾಹರಣ ಸಾಮಗ್ರಿಗಳು (1987) ಎನ್ನುವ ಪುಸ್ತಕ ಬೇರೆ ವಿಷಯಗಳ ಜೊತೆಗೆ ನಮ್ಮ ಸ್ವಾತಂತ್ರ್ಯ ಸಂಗ್ರಾಮ, ನಮ್ಮ ರಾಷ್ಟ್ರೀಯ ಚಿಹ್ನೆಗಳನ್ನು ಗೌರವಿಸುವುದು, ನಮ್ಮ ರಾಷ್ಟ್ರೀಯ ಧ್ಯೇಯಗಳನ್ನು, ಅರ್ಥಮಾಡಿಕೊಳ್ಳುವುದು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ ಲಿಂಗ ಒಲವನ್ನು ದೂರಮಾಡುವುದು, ಮೌಲ್ಯಗಳು ನಂಬಿಕೆಗಳು, ವಿವಾಹ ಮತ್ತು ಕುಟುಂಬ ಎಂಬ ಅಧ್ಯಯನಗಳನ್ನು ಒಳಗೊಂಡಿದೆ (ಈ ಎಲ್ಲಾ ಪುಸ್ತಕಗಳು ಇಂಗ್ಲೀಷ್ ಭಾಷೆಯಲ್ಲಿವೆ)

**ಉಪಸಂಹಾರ:** ರಾಷ್ಟ್ರೀಯ ಅಥವಾ ಸಾಮಾಜಿಕ ಸುಬದ್ಧತೆಯನ್ನು ಪ್ರೋತ್ಸಾಹಿಸುವ ಸುದೀರ್ಘ ಗುರಿಯಲ್ಲಿ ಶಿಕ್ಷಣ ವ್ಯವಸ್ಥೆ ಶಾಂತರೀತಿಯಿಂದ ಆದರೆ ತನಗೆ ಲಭ್ಯವಿರುವ ಪ್ರತಿಯೊಂದು ಮಾಧ್ಯಮದ ಮೂಲಕ ಸರ್ವವ್ಯಾಪಕವಾದ ಪಾತ್ರವನ್ನು ವಹಿಸಬೇಕು. ರಾಷ್ಟ್ರೀಯ ಭಾವೈಕ್ಯತೆಯ ಸವಾಲುಗಳನ್ನು ಆತ್ಮವಿಶ್ವಾಸದ ಮತ್ತು ತುರ್ತಿನ ಸ್ವರೂಪದ ಅವಕಾಶಗಳನ್ನಾಗಿ ಬದಲಾಯಿಸಿಕೊಳ್ಳಬೇಕಾದ ಅಗತ್ಯವಿದೆ. ದೀರ್ಘಕಾಲದ ಆಧ್ಯಾತ್ಮಿಕ ಪದ್ಧತಿಯನ್ನು ಹೊಂದಿರುವುದರಿಂದ ಭಾರತ ಮಾನವನ ಐಕ್ಯತೆಯ ವಿಕಾಸಕ್ಕೆ ಅನುಕೂಲಿಸುವಂತೆ ವಿಜ್ಞಾನ ಮತ್ತು ಆಧ್ಯಾತ್ಮಿಕತೆಯ ಚೈತನ್ಯ ಈ ಎರಡನ್ನೂ ಒಟ್ಟಾಗಿಸಬೇಕು. ದೀರ್ಘಕಾಲದ ಜಾತ್ಯತೀತ ರಾಷ್ಟ್ರದ ಪದ್ಧತಿಯ ದೃಷ್ಟಿಯಿಂದ ಬಹಳಕಾಲದಿಂದಲೂ ಭಾರತ ವಿಶ್ವದ ಮುಖ್ಯ ಧರ್ಮಗಳ ಹೆಮ್ಮೆಯ ನೆಲೆವೀಡಾಗಿದೆ ನಾವು ಮಕ್ಕಳಿಗೆ ಪ್ರಪಂಚದ ಮುಖ್ಯ ಧರ್ಮಗಳ **ಬಗ್ಗೆ** ಶಿಕ್ಷಣ ನೀಡಬೇಕು. ಭಾರತ ಬಹುಧರ್ಮಗಳ ಮತ್ತು ಬಹುಭಾಷೆಗಳ ಸಮಾಜವಾಗಿರುವುದರಿಂದ ದ್ವಿಭಾಷಿತ್ವ ಹಾಗೂ ಬಹುಭಾಷಿತ್ವ ಶತಮಾನಗಳ ಪರ್ಯಂತ ಒಂದು ಜೀವನ ಮಾರ್ಗದಂತೆಯೇ ಆಗಿದೆ. ಭಾರತದ ರಾಷ್ಟ್ರೀಯತೆ ಒಂದೆಡೆ ದೇಶ, ಮತ್ತೊಂದೆಡೆಗೆ ಧರ್ಮಗಳು ಹಾಗೂ ಭಾಷೆಗಳು ಇವುಗಳ ನಡುವೆ ಯಾವುದೇ ರೀತಿಯ ದ್ವಂದ್ವವಿದೆಯೆಂದು ಪರಿಗಣಿಸುವುದಿಲ್ಲ. ಕೆಳದ ವಿವಿಧ ಪ್ರದೇಶಗಳ ಬಗ್ಗೆಯೂ ಈ ನಿಲುವು ಸತ್ಯವಾದುದಾಗಿದೆ. ನಮ್ಮ ದೇಶದ ಅತಿ ಬಿಗಿಯಾದ ಶ್ರೇಣೀಬದ್ಧ ಹಾಗೂ ಜಾತಿ ಸಂರಚನೆ ಮೇಲ್ಮುಖದ ಸಾಮಾಜಿಕ ಚಲನೆಗೆ ಅವಕಾಶವಿಲ್ಲದ್ದರಿಂದ ರಾಷ್ಟ್ರೀಯ ಭಾವೈಕ್ಯತೆಯ ಅಥವಾ ಸಾಮಾಜಿಕ ಸುಬದ್ಧತೆಯ ಪ್ರಕ್ರಿಯೆಯ ಗತಿಯನ್ನು ನಿಧಾನವಾಗಿಸುತ್ತಿದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದವರನ್ನು ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಜೀವನದ ಮುಖ್ಯ ಪ್ರವಾಹಕ್ಕೆ ತರುವುದು ಸ್ವತಂತ್ರ ಭಾರತದ ಅತಿ ಕ್ಲಿಷ್ಟ ಸವಾಲಾಗಿದೆ. ಈ ಸ್ಥಿತ್ಯಂತರದ ಅವಧಿಯನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ಪೂರೈಸಲು ನಮ್ಮ ಸಂವಿಧಾನ ಅವಕಾಶ ಕಲ್ಪಿಸಿರುವ ಧನಾತ್ಮಕ ಹಸ್ತಕ್ಷೇಪಣ ಕಾರ್ಯಕ್ರಮಗಳನ್ನು ಶಕ್ತಿಯುತವಾಗಿ ಅನುಸರಿಸಬೇಕಾಗುತ್ತದೆ. ಇತರ ಹಿಂದುಳಿದಿರುವ ವರ್ಗಗಳ ಆಶೋತ್ತರಗಳನ್ನು ಗೌರವಿಸಿ, ಸಹಾನುಭೂತಿಯಿಂದ ಪರಿಗಣಿಸಬೇಕು.

ಅನಕ್ಷರತೆಯ ಮತ್ತು ಬಡತನ ನಿರ್ಮೂಲನ ಅತ್ಯಂತ ಹೆಚ್ಚಿನ ಆದ್ಯತೆ ಪಡೆಯಬೇಕು. ಪ್ರಪಂಚದ ಇತರ ದೇಶಗಳೊಂದಿಗೆ ನಮ್ಮ ರಾಷ್ಟ್ರೀಯ ಆರ್ಥಿಕತೆಯನ್ನು ಸಮಗ್ರಗೊಳಿಸುವುದು ನಮ್ಮ ರಾಷ್ಟ್ರೀಯ ಬದ್ಧತೆಯಾಗಿರುವುದರಿಂದ ಅದರಿಂದ ಉಂಟಾಗಿರುವ ಕೆಲವು ಹೊಸ ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿದೆ. ಎಲ್ಲರನ್ನೂ ಅದರಲ್ಲೂ ವಿಶೇಷವಾಗಿ ಶತಮಾನಗಳಿಂದ ಹಿಂದುಳಿಯುತ್ತಾ ಬಂದಿರುವುವವರನ್ನು ಸಮೃದ್ಧ ಸ್ಥಿತಿಗೆ ತರಲು ನಮ್ಮ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ಮತ್ತು ಸಾಮಾಜಿಕ ಆರ್ಥಿಕ ಬದಲಾವಣೆಯ ಸಾಧನಗಳ ಬಗ್ಗೆ ಜನತೆಯ ವಿಶ್ವಾಸವನ್ನು ಬಲಪಡಿಸಬೇಕಾದ ಅಗತ್ಯವಿದೆ ದೇಶದಾದ್ಯಂತ ಏಕ ಮಾರುಕಟ್ಟೆ ಮತ್ತು ಏಕಪೌರತ್ವ ಒಂದನ್ನೊಂದು ಬಲಗೊಳಿಸಿ ನಮ್ಮ ಸಾಮಾಜಿಕ ಆರ್ಥಿಕ ಬಿಡುಗಡೆಯ ವೇಗವನ್ನು ಆದಷ್ಟು ಬೇಗ ಹೆಚ್ಚಿಸಬೇಕು.

ಈ ಎಲ್ಲಾ ಸಂದರ್ಭಗಳಲ್ಲಿ ರಾಷ್ಟ್ರೀಯ ಶಿಕ್ಷಣನೀತಿ (1986) ಯಿಂದ ಮತ್ತು ಸಂವಿಧಾದ ಕರ್ತವ್ಯಗಳಿಂದ ಹೊರಹೊಮ್ಮಿರುವ ಹತ್ತು ಮೂಲಭೂತ ಕರ್ತವ್ಯಗಳನ್ನು ನಮ್ಮ ಶಾಲೆಗಳ ಶೈಕ್ಷಣಿಕ ವಿಷಯ ವಸ್ತುಗಳ ಮತ್ತು ಪ್ರಕ್ರಿಯೆಗಳ ಸಮಗ್ರ ಭಾಗವಾಗಿ ಮಾಡಬೇಕು. ಭಾವೈಕ್ಯತೆಗಾಗಿ ಶಿಕ್ಷಣ ಮೌಲ್ಯ ಶಿಕ್ಷಣದ ಒಂದು ಭಾಗವೇ ಆಗಿದೆ. ಮುಖ್ಯವಾಗಿ ಸಂಜ್ಞಾನೇತರ ಕ್ಷೇತ್ರಗಳಿಗೆ ಸೇರುವ ತಿರುಳು ಸಮಸ್ಯೆಗಳನ್ನು ಸರಿಯಾಗಿ ಪರಿಹರಿಸಬೇಕಾದರೆ ಶಾಲಾ ಆಧಾರಿತ ವ್ಯಾಪಕ ನಿರಂತರ ಮೌಲ್ಯಮಾಪನ ವ್ಯವಸ್ಥೆಯನ್ನು ಅನುಸರಿಸಿದರೆ ಭಾವೈಕ್ಯತೆಯ ಬಗ್ಗೆ ಚೆನ್ನಾಗಿ ಬೋಧಿಸಬಹುದು. ಹೆಚ್ಚಿನ ಆದ್ಯತೆಗಳಿರುವ ರಾಷ್ಟ್ರೀಯ ಧ್ಯೇಯಗಳನ್ನು ಪ್ರೋತ್ಸಾಹಿಸುವಲ್ಲಿ ಶೈಕ್ಷಣಿಕ ಹಾಗೂ ಸಹ ಶೈಕ್ಷಣಿಕ ಚಟುವಟಿಕೆಗಳು ನಿರ್ಣಾಯಕ ಪಾತ್ರ ವಹಿಸಬೇಕಾಗುತ್ತದೆ. ಇವುಗಳ ಬಗ್ಗೆ ಸಾಕಷ್ಟು ಪಠ್ಯ ಮತ್ತು ಬೆಂಬಲ ಸಾಮಗ್ರಿಗಳು ಈಗಾಗಲೇ ಲಭ್ಯವಿವೆ. ನಮ್ಮ ಶಾಲೆಗಳು ಮತ್ತು ಶಿಕ್ಷಕ ಸಮುದಾಯ ಇವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾದ ಅಗತ್ಯವಿದೆ.

**ಮೂಲ: ಬಿ.ಎಸ್. ಪರೇಖ್**

**ಅನು: ಪ್ರೊ. ಮಂಜುನಾಥಯ್ಯ ಬಿ.ಎನ್.**

Digitised by Bharatavani, CIIL

# ಲ

## ಲಿಂಗ ವಿಭೇದೀಕರಣ ಮತ್ತು ಕಾನೂನುಗಳು

ಭಾರತೀಯ ಸಮಾಜದಲ್ಲಿ ಪ್ರಾಚೀನ ಕಾಲದಿಂದಲೂ ಗಂಡು ಹೆಣ್ಣುಗಳ ಲಿಂಗ ತಾರತಮ್ಯ ಹಲವಾರು ಕಾರಣಗಳಿಂದ ಕಂಡುಬರುತ್ತದೆ. ಸರ್ಕಾರ ಹಾಗೂ ಸಮಾಜ ಎಷ್ಟೇ ಸುಧಾರಣಾ ಕ್ರಮ ಕೈಗೊಂಡರೂ ಬದಲಾವಣೆ ಮರೀಚಿಕೆಯಾಗಿಯೇ ಉಳಿದಿದೆ. ನಗರ ಪ್ರದೇಶಗಳಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ಶಿಕ್ಷಣದ ಪ್ರಭಾವದಿಂದ ಮಹಿಳೆ ಜಾಗೃತಳಾಗಿ ಸಬಲೀಕರಣದತ್ತ ಮುಂದುವರಿಯುತ್ತಿದ್ದಾಳೆ. ಆದರೆ ಗ್ರಾಮೀಣ ಮಹಿಳೆ, ಅನಕ್ಷರತೆ, ಬಡತನ, ಮೂಢನಂಬಿಕೆಗಳಿಂದ ನಾಲ್ಕು ಗೋಡೆಗಳ ಮಧ್ಯೆ ಮಕ್ಕಳನ್ನು ಹೆತ್ತು, ಅಡುಗೆ ಮಾಡಿ, ಗಂಡನ ಆರೈಕೆ ಮಾಡುವಲ್ಲಿಯೇ ಅವಳ ಜೀವನ ಸಾಕಾಗುತ್ತದೆ. ಮಹಿಳೆ ತನ್ನ ಜೀವಿತದ ವಿವಿಧ ಸ್ತರಗಳಲ್ಲಿ ಪಡೆದುಕೊಂಡ ಗೌರವ ಹಾಗೂ ಪ್ರತಿಷ್ಠೆ ಆಕೆಯ ಸ್ಥಾನಮಾನ ನಿರ್ಧರಿಸುತ್ತವೆ. ಆದರೆ ಅವಳು ಪಡೆಯುವ ಅವಕಾಶಗಳು ತುಂಬಾ ಕಡಿಮೆ.

**ಆರೋಗ್ಯ:** ಸ್ತ್ರೀಯ ಸ್ಥಾನಮಾನ ನಿರ್ಧರಿಸುವಲ್ಲಿ ಸ್ತ್ರೀ ಪುರುಷರ ಲಿಂಗಾನುಪಾತ ಅತ್ಯಂತ ಪ್ರಮುಖವಾದುದು. ಇದನ್ನೇ ಆಧಾರವಾಗಿಟ್ಟುಕೊಂಡು ಮಾಹಿತಿ ಸಂಗ್ರಹಿಸಿದಾಗ ಗಂಡು ಹಾಗೂ ಹೆಣ್ಣು ಮಕ್ಕಳ ಬಗ್ಗೆ ಕುಟುಂಬ ಹಾಗೂ ಸಮಾಜ ನಡೆದುಕೊಳ್ಳುವ ಚಿತ್ರಣ ನಮ್ಮ ಮುಂದೆ ನಿಲ್ಲುತ್ತದೆ. ತಾಯಿ ಎದೆ ಹಾಲುಣಿಸುವುದರಿಂದ ಹಿಡಿದು, ಆರೋಗ್ಯದ ಬಗ್ಗೆ ಗಮನ ಹರಿಸುವವರೆಗೂ ಗಂಡು–ಹೆಣ್ಣು ಮಕ್ಕಳ ಬಗ್ಗೆ ತೋರುವ ಭೇದಭಾವ, ತಾರತಮ್ಯತೆಯನ್ನು ನೋಡುತ್ತೇವೆ. ಇದರಲ್ಲಿ ಗಂಡು ಮಗುವಿನ ಆರೋಗ್ಯಕ್ಕೆ ಆದ್ಯತೆ ನೀಡಿದಷ್ಟು ಹೆಣ್ಣು ಮಗುವಿನ ಆರೋಗ್ಯಕ್ಕೆ ಆದ್ಯತೆ ನೀಡುವುದಿಲ್ಲ. ಏನಿದ್ದರೂ ಆಕೆಗೆ ಎರಡನೆಯ ಸ್ಥಾನ.

**ಶಿಕ್ಷಣ:** ಸಾರ್ವತ್ರಿಕವಾಗಿ ಗಮನಿಸಿದಾಗ ದೇಶದಲ್ಲಿ ಮಹಿಳಾ ಅನಕ್ಷರತೆ ಗಂಡಸರಿಗಿಂತ ಜಾಸ್ತಿ ಇರುವುದು ಕಂಡು ಬರುತ್ತದೆ. ಹೆಣ್ಣು ಮಕ್ಕಳ ಶಿಕ್ಷಣ ಕಡಿಮೆಯಾದಷ್ಟು ಅನಕ್ಷರತೆ ಜಾಸ್ತಿಯಾಗುತ್ತದೆ. ಇದರಿಂದ ಬಡತನ, ಮೂಢನಂಬಿಕೆಗಳು, ಪರಾವಲಂಬನೆ ಅತಿಯಾಗಿ ಮಹಿಳಾ ಸಬಲೀಕರಣವೂ ಇಳಿ ಮುಖವಾಗುವುದು. ಸ್ಥಾನಮಾನ ಕನಿಷ್ಠ ಮಟ್ಟದ್ದಾಗಿರುತ್ತದೆ.

**ಆರ್ಥಿಕ:** ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.50 ರಷ್ಟು ಮಹಿಳೆಯರೇ ಇರುವರು. ಆದರೆ ಅವರ ಆರ್ಥಿಕ ಸಾಮರ್ಥ್ಯವನ್ನು ಗಮನಿಸಿದಾಗ ಶೇ.1 ರಷ್ಟಾದರೂ ಅವರ ಹೆಸರಲ್ಲಿ ಆಸ್ತಿ ಇರುವುದಿಲ್ಲ. ಕುಟುಂಬ ನಿರ್ವಹಣೆಯ ಎಲ್ಲ ಕೆಲಸ ಕಾರ್ಯಗಳಲ್ಲಿ ಅವರದೇ ಪ್ರಮುಖ ಪಾತ್ರ. ಆದರೂ ಹುಟ್ಟಿನಿಂದ ಸಾಯುವವರೆಗೆ ಪರಾವಲಂಬನೆಯಿಂದ ಜೀವಿಸಬೇಕು.

**ಸಾಮಾಜಿಕ:** ಸಮಾಜದಲ್ಲಿ ಪ್ರಾಚೀನ ಕಾಲದಿಂದ ಮಹಿಳೆಯರ ಬಗ್ಗೆ ಬೇರೂರಿರುವ ಕಹಿ ಅಂಶಗಳೆಂದರೆ– ಮಹಿಳೆ ಮನೆ, ಗಂಡ, ಸಂಸಾರ, ಮಕ್ಕಳು ಇಷ್ಟರಿಂದಲೇ ತೃಪ್ತಿ ಪಡಬೇಕು. ಆದರೆ ಪುರುಷ 'ಉದ್ಯೋಗಂ ಪುರುಷ ಲಕ್ಷಣಂ' ಎಂಬಂತೆ ಉದ್ಯೋಗ ನಿರತನಾಗಿ ಸಮಾಜದಲ್ಲಿ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಬಲ್ಲನು. ಆದರೆ ಮಹಿಳೆಗೆ ಪರ್ದಾ ಪದ್ಧತಿ, ಬುರ್ಖಾ ಪದ್ಧತಿ, ವರದಕ್ಷಿಣೆ, ವೇಶ್ಯಾ ವೃತ್ತಿ, ದೇವದಾಸಿ ಪದ್ಧತಿ ಮುಂತಾದ ಕಂದಾಚಾರ ಪದ್ಧತಿಗಳುಂಟು. ವಿಧವೆ ಮರು ವಿವಾಹ ಆಗುವಂತಿಲ್ಲ. ಆದರೆ ಪುರುಷ ಮರು ವಿವಾಹ ಆಗಬಹುದು. ಇದೆಲ್ಲ ಸಮಾಜ ನಿರ್ಮಿಸಿರುವ ಕೆಟ್ಟ ಸಂಪ್ರದಾಯಗಳು. ಇದರ ಜೊತೆಗೆ ಮಹಿಳೆ ಇನ್ನೂ ಯಾವ ಯಾವ ಕ್ಷೇತ್ರದಲ್ಲಿ ಲಿಂಗಾಧಾರಿತ ಪಕ್ಷಪಾತಕ್ಕೆ ಒಳಗಾಗಿದ್ದಾಳೆ ಎಂಬುದನ್ನು ಈ ಕೆಳಗಿನ ಅಂಶಗಳಿಂದ ಗುರ್ತಿಸಬಹುದು.

- ಪ್ರತಿ ಆರು ಮಹಿಳೆಯರ ಮರಣದಲ್ಲಿ ಒಂದು ಸಾವು ಲಿಂಗ ಪಕ್ಷಭೇದದಿಂದಲೇ ಸಂಭವಿಸುತ್ತದೆ.
- ಕುಟುಂಬದಲ್ಲಿ ಸಾಮಾನ್ಯವಾಗಿ ಹೆಣ್ಣು ಎಂದು ತಿಳಿದು ಭ್ರೂಣ ಹತ್ಯೆ ಮಾಡಿಸುವ ಸಂಗತಿಗಳು ದಿನೇ ದಿನೇ ಹೆಚ್ಚುತ್ತಿವೆ.
- ಚಿಕ್ಕ ವಯಸ್ಸಿನಲ್ಲಿಯೇ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ, ಸಾಂಸಾರಿಕ ತಾಪತ್ರಯಕ್ಕೆ ಆಕೆಯನ್ನು ನೂಕಲಾಗುವುದು. ಎಷ್ಟೋ ವೇಳೆ ಸ್ತ್ರೀ ತನ್ನ ಭಾವನೆಗಳನ್ನು ಅಭಿವ್ಯಕ್ತ ಪಡಿಸುವ ಸ್ವಾತಂತ್ರ್ಯವಿರುವುದಿಲ್ಲ.
- ಮತ್ತೊಂದು ರೀತಿಯ ದುರಂತವೆಂದರೆ ಮಹಿಳೆ ಯಾವುದೇ ರೀತಿಯ ಉದ್ಯಮ ಕೈಗೊಳ್ಳಲು ಜಾಣ್ಮೆ ಹಾಗೂ ಕೌಶಲ್ಯವಿದ್ದರೂ ಆರ್ಥಿಕ ಸಾಮರ್ಥ್ಯವಿರುವುದಿಲ್ಲ. ಅರ್ಹತೆ ಹಾಗೂ ಸಾಮರ್ಥ್ಯವಿದ್ದರೂ ಗಂಡನ ಅನುಮತಿ ಹಾಗೂ ಪ್ರೋತ್ಸಾಹ ದೊರೆಯದಿದ್ದರೆ ಉದ್ಯೋಗ ಪಡೆಯಲು ಸಾಧ್ಯವಿಲ್ಲ.

**ಲಿಂಗ ಸೂಕ್ಷ್ಮತೆ (Gender Sensitization):** ಮಹಿಳಾ ಸಬಲೀಕರಣಕ್ಕೆ ಅಡೆ–ತಡೆಯಾಗಿರುವುದು ಲಿಂಗ ಸೂಕ್ಷ್ಮತೆಯೇ. ಬಾಲಕಿ ಸ್ವಭಾವತಃ ನಾಚಿಕೆ ಸ್ವಭಾವದವಳು. ಅಳುಕು, ಅಂಜಿಕೆ ಸಹಜ. ಈ ಭಾವನೆಗಳನ್ನು ತಪ್ಪಾಗಿ ಭಾವಿಸಿ, ಆಕೆ ಕಷ್ಟಕರವಾದ ಕೆಲಸ ಮಾಡಲಾರಳು, ಹೊಲ ಗದ್ದೆಗಳಲ್ಲಿ ಶ್ರಮಯುತ ಕೆಲಸ ಮಾಡಲಾರಳು, ದುಡಿದು ಕುಟುಂಬ ನಿರ್ವಹಿಸಲಾರಳು ಎಂಬ ಸಾಂಪ್ರದಾಯಿಕ ಮನೋಭಾವ ಸಮಾಜದಲ್ಲಿ ಮನೆಮಾಡಿದೆ. ಕುಟುಂಬದಲ್ಲಿ ಅಡಿಗೆ ಮಾಡುವುದು, ಗಂಡನ ಮನೋಭಾವನೆಗೆ ತಕ್ಕಂತೆ ವರ್ತಿಸುವುದು, ಮಕ್ಕಳನ್ನು ಹೆರುವುದು, ಸಾಕುವುದು, ಕಸೂತಿ, ಬಣ್ಣ ಹಾಕುವುದು, ಟೈಲರಿಂಗ್ ಮುಂತಾದ ಸೂಕ್ಷ್ಮ ಕೆಲಸಗಳನ್ನಷ್ಟೇ ಮಾಡಲು ಹೆಣ್ಣು ಶಕ್ತಳು ಎಂಬ ಭಾವನೆ ಇಂದಿಗೂ ನಮ್ಮ ಸಮಾಜದಲ್ಲಿ ಇದೆ.

ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಸಮಾಜದ ಕಂದಾಚಾರಗಳು, ಮೂಢ ನಂಬಿಕೆಗಳು ಇತ್ತೀಚೆಗೆ ಕಡಿಮೆಯಾಗುತ್ತಿವೆ ಮಹಿಳೆ ಗಂಡಸಿನ ಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲೂ ದುಡಿಯುತ್ತಿದ್ದಾಳೆ. ಶಿಕ್ಷಣದ ಪ್ರಭಾವವೇ ಮಹಿಳೆ ಬದಲಾವಣೆಯಾಗಲು ಕಾರಣವಾಗಿದೆ.

Digitised by Bharatavani, CIIL

ಭಾರತ ಸಂವಿಧಾನವೂ ಮಹಿಳೆಗೆ ಸಮಾನತೆಯನ್ನು ಕಾನೂನುಬದ್ಧವಾಗಿ ಒದಗಿಸಿದೆ. ಶಿಕ್ಷಣ, ಆರೋಗ್ಯ, ಉದ್ಯೋಗ ಹಾಗೂ ಇತರ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲೂ ಮೀಸಲಾತಿಯ ಮೂಲಕ ಸೌಲಭ್ಯಗಳನ್ನು ಒದತಿಸುತ್ತಿದೆ. ಇವು ಮಹಿಳೆಯನ್ನು ಸಬಲೀಕರಣದತ್ತ ಕೊಂಡೊಯ್ಯುವಲ್ಲಿ ನೆರವಾಗುತ್ತಿವೆ. ಅದರಲ್ಲೂ ಗ್ರಾಮೀಣ ಮಹಿಳೆ ಬಡತನ, ಅನಕ್ಷರತೆ ಹಾಗೂ ಮೂಢ ನಂಬಿಕೆಗಳಿಂದ ಹೊರಬರುವಂತೆ ಮಾಡಲು ಹೊಸ ಹೊಸ ಕಾರ್ಯ ಯೋಜನೆಗಳನ್ನು ಸರ್ಕಾರ ಕೈಗೆತ್ತಿಕೊಳ್ಳುತ್ತಿದೆ. ಇದರಿಂದ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿನ ಮಹಿಳೆಯರು ಸರ್ಕಾರದ ಆರ್ಥಿಕ ನೆರವನ್ನು ಸದುಪಯೋಗ ಪಡಿಸಿಕೊಂಡು ವಿವಿಧ ಉದ್ಯೋಗಗಳನ್ನು ಕೈಗೊಳ್ಳುತ್ತಿದ್ದಾರೆ. ಇನ್ನು ಕೆಲವರು ಶಿಕ್ಷಕಿಯರು, ವಕೀಲರು, ಇಂಜಿನಿಯರು, ಆಡಳಿತಾಧಿಕಾರಿಗಳೂ ಆಗಿ ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಪ್ರಗತಿಯೆಡೆಗೆ ಸಾಗುತ್ತಿದ್ದಾರೆ. ಇದರಿಂದ ಅವಳು ಗಂಡಿಗಿಂತ ಕೀಳು ಎಂದು ಭಾವಿಸದೆ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ನೆರವು ನೀಡುತ್ತಿದ್ದಾಳೆ.

**ಕಾನೂನುಗಳು:** ಲಿಂಗ ಪಕ್ಷಪಾತ ಹಾಗೂ ದಮನಕಾರಿ ಮನೋಭಾವ ಭಾರತದಲ್ಲೂ ಸಾಂಪ್ರದಾಯಿಕವಾಗಿ ಮುಂದು ವರಿಯುತ್ತಿದೆ. ಆದರೆ ಮಹಿಳಾ ಸಂಘಟನೆಗಳ ಹೋರಾಟದ ಪ್ರಭಾವದಿಂದ ಮಹಿಳೆಯರಲ್ಲಿ ಜಾಗೃತಿ ಮೂಡುತ್ತಿದೆ. ಇದನ್ನು ತಡೆಗಟ್ಟಲು ಕೆಲವಾರು ಕಾನೂನುಗಳನ್ನು ರೂಪಿಸಲಾಗುತ್ತಿದೆ.

- ಮಹಿಳೆಗೆ ಕಾನೂನು ಬದ್ಧ ಅವಕಾಶಗಳನ್ನು ಸಂವಿಧಾನ ಬದ್ಧವಾಗಿ ಒದಗಿಸಲಾಗುತ್ತಿದೆ
- ಮಹಿಳೆಯರ ಬಗ್ಗೆ ತೋರುತ್ತಿದ್ದ ಎಲ್ಲ ವಿಧವಾದ ತಾರತಮ್ಯವನ್ನು ಹೋಗಲಾಡಿಸಲಾಗುತ್ತಿದೆ
- ಮಹಿಳಾ ಸಮಾನತೆಯನ್ನು ಸ್ವಾಭಿಮಾನ ಹಾಗೂ ಗೌರವ ಹೆಚ್ಚಿಸಲು ರಾಷ್ಟ್ರೀಯ ಮಹಿಳಾ ಸಮ್ಮೇಳನಗಳನ್ನು ದೇಶದ ವಿವಿಧ ಭಾಗಗಳಲ್ಲಿ ಏರ್ಪಡಿಸಿ ನೀತಿ ನಿಯಮಗಳನ್ನು ರೂಪಿಸಲಾಗುತ್ತಿದೆ
- ಲಿಂಗ ತಾರತಮ್ಯವಿಲ್ಲದಂತೆ ಸಮಾನ ಉದ್ಯೋಗ ಅವಕಾಶಗಳನ್ನು ಒದಗಿಸಲಾಗುತ್ತಿದೆ
- ಮಹಿಳಾ ಸಮಸ್ಯೆಗಳ ಪರಿಹಾರಕ್ಕೆ ಪ್ರತ್ಯೇಕ ನಿಗಮ ಹಾಗೂ ಮಂಡಳಿಗಳನ್ನು ಕೇಂದ್ರ ಹಾಗೂ ರಾಜ್ಯಗಳ ಮಟ್ಟದಲ್ಲಿ ರಚಿಸಲಾಗುತ್ತಿದೆ
- ಆರ್ಥಿಕವಾಗಿ ಸಬಲೀಕರಣಗೊಳ್ಳಲು ವಿವಿಧ ಕ್ರಿಯಾತ್ಮಕ ಯೋಜನೆಗಳನ್ನು ಅಗತ್ಯತೆಗೆ ತಕ್ಕಂತೆ ಹಮ್ಮಿ ಕೊಳ್ಳಲಾಗುತ್ತಿದೆ
- ರಾಜಕೀಯವಾಗಿ ಮಹಿಳೆ ಪ್ರವರ್ಧಮಾನಕ್ಕೆ ಬರುವಂತೆ ಮಾಡಲು ವಿಧಾನ ಸಭೆ ಹಾಗೂ ಲೋಕಸಭೆಗಳಲ್ಲಿ ಮೀಸಲಾತಿ ಸೌಲಭ್ಯ ಒದಗಿಸಲು ಪ್ರಯತ್ನಿಸಲಾಗುತ್ತಿದೆ
- ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಮಹಿಳೆಯರಿಗಾಗಿ ಮೀಸಲಾತಿ ಸೌಲಭ್ಯ ಒದಗಿಸುತ್ತಿದೆ.

ಇಂತಹ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗೆ ಭಾರತವಷ್ಟೇ ಅಲ್ಲ, ಮುಂದುವರಿದ, ಮುಂದುವರಿಯುತ್ತಿರುವ ರಾಷ್ಟ್ರಗಳೂ ಕೈಜೋಡಿಸುತ್ತಿವೆ. ಅವು ಮಹಿಳೆಯರಲ್ಲಿ ಸ್ವಾವಲಂಬನೆಗೆ, ಸ್ವಾಭಿಮಾನಕ್ಕೆ ಪೂರಕವಾಗುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ.

ಸಮಾನ ಹಕ್ಕುಗಳಿಗಾಗಿ ಕಾನೂನು (Law for Equal Rights): ಭಾರತದ ಸಂವಿಧಾನ ನೀಡಿರುವ ಹಲವಾರು ಹಕ್ಕುಗಳು ತತ್ವಶಃ ಮಾನವ ಹಕ್ಕುಗಳೇ ಆಗಿವೆ. ಅವುಗಳಲ್ಲಿ ಮುಖ್ಯವಾದವುಗಳು –

1) ಭಾರತದ ಯಾವುದೇ ವ್ಯಕ್ತಿ ಕಾನೂನಿನ ಮುಂದೆ ಸಮಾಜ ಅಥವಾ ಕಾನೂನಿನಿಂದ ಸಮಾನ ರಕ್ಷಣೆ ಪಡೆಯುವನು, 2) ಧರ್ಮ, ಲಿಂಗ, ಜಾತಿ ಹಾಗೂ ಜನ್ಮ ಸ್ಥಳಗಳ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ, 3) ಉದ್ಯೋಗಾವಕಾಶಗಳಲ್ಲಿ ಗಂಡು–ಹೆಣ್ಣು ಎಂಬ ಭಿನ್ನತೆ ಇಲ್ಲದೆ ಸಮಾನವಾದ ರೀತಿಯಲ್ಲಿ ಅವಕಾಶಗಳನ್ನು ಪಡೆಯಬಹುದು, 4) ಅಸ್ಪೃಶ್ಯತೆಯ ಆಚರಣೆ ಮಾಡುವಂತಿಲ್ಲ, 5) ದುಡಿಮೆಯ ಹಕ್ಕು ಎಲ್ಲಾ ಮಾನವಜೀವಿಗಳಿಗೂ ಅವಿಭಾಜ್ಯ ಹಕ್ಕಾಗಿದೆ.

ಈ ರೀತಿಯ ಹಕ್ಕುಗಳು ನಮ್ಮ ರಾಜ್ಯಾಂಗದಲ್ಲಿ ನಿರೂಪಿತವಾಗಿದ್ದರೂ ಅವು ಕಾರ್ಯರೂಪಕ್ಕೆ ಬರದಿರಲು ಹಲವಾರು ಕಾರಣಗಳು ಸಾಮಾಜಿಕ ಜೀವನದಲ್ಲಿ ಕಂಡು ಬರುತ್ತಿವೆ. ಈ ಹಕ್ಕುಗಳನ್ನು ಸಮಾನ ರೀತಿಯಲ್ಲಿ ಜಾರಿಗೆ ತರಬೇಕು ಎಂದು ಮಹಿಳಾ ಸಂಘಟನೆಗಳು ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಹೋರಾಡುತ್ತಿವೆ. ಇದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಂತ ಹಂತವಾಗಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಕಾನೂನುಗಳನ್ನು ಜಾರಿಗೆ ತರುತ್ತಿವೆ.

- ಸಂವಿಧಾನದ 45ನೇ ಪರಿಚ್ಛೇದದಂತೆ 6 ರಿಂದ 14ನೇ ವಯಸ್ಸಿನ ವರೆಗೆ ಉಚಿತ, ಕಡ್ಡಾಯ ಹಾಗೂ ಸಾರ್ವತ್ರಿಕ ಲಿಂಗತಾರತಮ್ಯವನ್ನು ಮಾಡದೆ, ಜಾತಿ, ಮತ, ಧರ್ಮಗಳ ಭಿನ್ನತೆಯನ್ನೆಣಿಸದೆ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- ಗಂಡು ಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಪಾಲು ಪಡೆಯುವ ಅವಕಾಶಗಳಿದ್ದಂತೆ ಹೆಣ್ಣು ಮಕ್ಕಳಿಗೂ ಈ ಸೌಲಭ್ಯವನ್ನು ಕರ್ನಾಟಕ ಸರ್ಕಾರ ಕಾನೂನುಬದ್ಧವಾಗಿ ಜಾರಿಗೆ ತಂದಿದೆ.
- ಉದ್ಯೋಗ ಪಡೆಯುವಲ್ಲಿ ಮಹಿಳೆಯರಿಗಾಗಿ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಮೀಸಲಾತಿ ಸೌಲಭ್ಯಗಳನ್ನು ಕೆಲವು ರಾಜ್ಯಗಳು ಕಾನೂನುಬದ್ಧವಾಗಿ ಜಾರಿಗೊಳಿಸಿವೆ.

Digitised by Bharatavani, CIIL

- ರಾಜಕೀಯ ಕ್ಷೇತ್ರದಲ್ಲಿಯೂ ಮಹಿಳೆಯರಿಗೆ ಮೀಸಲಾತಿಯ ಮೂಲಕ ಅವಕಾಶ ಮಾಡಿಕೊಡಲಾಗಿದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಸಹಕಾರ ಸಂಘಗಳಲ್ಲೂ ಮೀಸಲಾತಿ ಸೌಲಭ್ಯ ಒದಗಿಸಲಾಗುತ್ತಿದೆ.
- ಆರ್ಥಿಕಕ್ಷೇತ್ರದಲ್ಲೂ ಮಹಿಳಾ ಸಬಲೀಕರಣಕ್ಕೆ ಪೂರಕವಾಗುವಂತೆ ಸಣ್ಣ ಹಾಗೂ ದೊಡ್ಡ ಉದ್ಯಮಗಳಿಗೆ ಸಾಲದ ರೂಪದಲ್ಲಿ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸುತ್ತಿದೆ.
- ಮಹಿಳೆಯರು ನೆಮ್ಮದಿಯಿಂದ ಬದುಕಲು ಅಗತ್ಯವಾದ ಆರ್ಥಿಕ ನೆರವು, ಭದ್ರತೆ ಹಾಗೂ ರಕ್ಷಣೆ ಒದಗಿಸುವುದರ ಮೂಲಕ ಸ್ವಾವಲಂಬನೆಯ ಜೀವನ ನಡೆಸಲು ಸಹಾಯ ಮಾಡುತ್ತಿದೆ.
- ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ, ಕೊಲೆ, ಹಿಂಸೆ ಹಾಗೂ ಶೋಷಣೆಯನ್ನು ತಪ್ಪಿಸಲು ಮಹಿಳಾ ಕಾನ್‌ಸ್ಟೇಬಲ್ ಹಾಗೂ ಮಹಿಳಾ ಸಬ್ ಇನ್ಸ್‌ಪೆಕ್ಟರುಗಳನ್ನು ಪೋಲೀಸ್ ಠಾಣೆಗಳಲ್ಲಿ ನೇಮಿಸಲಾಗುತ್ತಿದೆ. ತಪ್ಪಿತಸ್ಥರಿಗೆ ಸಮಾಜದಿಂದ ಪ್ರತಿಭಟನೆ, ಬಹಿಷ್ಕಾರ, ಸಜೆ, ಮರಣದಂಡನೆ ಮುಂತಾದ ಶಿಕ್ಷೆ ವಿಧಿಸಲಾಗುತ್ತಿದೆ.
- ಈ ಎಲ್ಲಾ ಕೇಂದ್ರಗಳಲ್ಲಿ ಮಹಿಳಾ ರಕ್ಷಣಾ ಕಾರ್ಯಕ್ರಮಗಳನ್ನು ಸ್ಥಾಪಿಸಲಾಗುತ್ತಿದ್ದು ಅದರಲ್ಲಿ ಮಹಿಳಾ ಹಕ್ಕುಗಳ ರಕ್ಷಣೆಗೆ ವಕೀಲರ ಹಾಗೂ ಆರೋಗ್ಯ ರಕ್ಷಣೆಗೆ ಮಹಿಳಾ ವೈದ್ಯರ ಸಹಾಯವನ್ನು ಒದಗಿಸುತ್ತಿದೆ.
- ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರಿಗೆ ರಕ್ಷಣೆಯನ್ನು ಒದಗಿಸುವುದರ ಜೊತೆಗೆ ಪುನರ್ವಸತಿಗೆ ಅಗತ್ಯವಾದ ಸೌಲಭ್ಯಗಳನ್ನು ನೀಡುತ್ತಿದೆ. ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡಲು ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುತ್ತಿದೆ.
- ಒತ್ತಾಯ ಹಾಗೂ ದೌರ್ಜನ್ಯದಿಂದ ವೇಶ್ಯಾವೃತ್ತಿಗೆ ಒಳಗಾದ ಮಹಿಳೆಯರಿಗೆ ಸರ್ಕಾರ ಪುನರ್ವಸತಿ ಕಲ್ಪಿಸುವುದರ ಮೂಲಕ ಆಕೆಯೂ ಸಮಾಜದಲ್ಲಿ ಸ್ವಾವಲಂಬನೆಯ ಜೀವನ ನಡೆಸಲು ನೆರವಾಗುತ್ತಿದೆ.

ಮಹಿಳಾ ಸಂಘಟನೆಗಳು ಮಹಿಳೆಯರ ರಾಜ್ಯಾಂಗ ಬದ್ಧ ಹಕ್ಕುಗಳಿಗಾಗಿ ಸರ್ಕಾರದೊಡನೆ ಹೋರಾಟ ನಡೆಸಿ ಹಲವಾರು ಕಾನೂನುಬದ್ಧ ಸುಧಾರಣಾ ಕ್ರಮ ಕೈಗೊಳ್ಳುವಲ್ಲಿ ಯಶಸ್ವಿಯಾಗಿವೆ. ಮಹಿಳೆ ಮೊದಲು ವಿದ್ಯಾವಂತಳಾಗುವ ತನಕ, ತನ್ನ ಹಕ್ಕುಗಳ ಬಗ್ಗೆ ಅರಿತುಕೊಳ್ಳುವ ತನಕ ಸರ್ಕಾರ ಯಾವುದೇ ರೀತಿಯ ಕಾನೂನನ್ನು ತಂದರೂ ಸಫಲತೆ ಹೇಳಿಕೊಳ್ಳುವಷ್ಟು ಆಗಲಾರದು.

**ರಾಷ್ಟ್ರೀಯ ಮಹಿಳಾ ಆಯೋಗ (NWC-National Women's Commission):** ಮಹಿಳೆಯರ ಹಲವಾರು ಕುಂದುಕೊರತೆಗಳನ್ನು ಪರಿಹರಿಸಲು ಹಾಗೂ ಹಕ್ಕುಗಳನ್ನು ಕಾಯ್ದುಕೊಳ್ಳುವಂತೆ ಮಾಡಲು ರಾಷ್ಟ್ರೀಯ ಮಹಿಳಾ ಆಯೋಗವನ್ನು 1992ರ ಜನವರಿ 31ರಂದು ರಚಿಸಲಾಯಿತು. ಇದನ್ನು 1990ರ ರಾಷ್ಟ್ರೀಯ ಮಹಿಳಾ ಕಾನೂನಿನ ಅನ್ವಯ ಸ್ಥಾಪಿಸಲಾಗಿದೆ. ಇದಕ್ಕೆ ಒಬ್ಬರು ಅಧ್ಯಕ್ಷರು ಹಾಗೂ ಐವರು ಸದಸ್ಯರಿರುವರು. ಇವರುಗಳ ಅಧಿಕಾರದ ಅವಧಿ ಮೂರು ವರ್ಷಗಳು ಮಾತ್ರ. ಇದರ ಉದ್ದೇಶಗಳು

- ಮಹಿಳೆಯರಿಗೆ ಸಂವಿಧಾನ ನೀಡಿರುವ ಹಕ್ಕುಗಳನ್ನು ರಕ್ಷಿಸುವುದು
- ಮಹಿಳಾ ಹಕ್ಕುಗಳನ್ನು ಕೇಂದ್ರ ಸರ್ಕಾರ ಸಾಕಾರಗೊಳಿಸುವಂತೆ ತಾಕೀತು ಮಾಡುವುದು
- ಮಹಿಳೆಯರ ಜೀವನ ಮಟ್ಟ ಸುಧಾರಣೆಗೆ ಕೇಂದ್ರ ಹಗೂ ರಾಜ್ಯ ಸರ್ಕಾರಗಳು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಲಹೆ ನೀಡುವುದು
- ಶಾಸನ ಸಭೆಗಳ ಮೂಲಕ ಮಹಿಳೆಯರ ಸಂವಿಧಾನ ಬದ್ಧ ಹಕ್ಕುಗಳನ್ನು ಪುನರ್ ವಿಮರ್ಶಿಸಲು ಹಾಗೂ ಕಾರ್ಯಗತಗೊಳಿಸಲು ಮಾರ್ಗದರ್ಶನ ನೀಡುವುದು
- ಮಹಿಳೆಯರಿಗೆ ಸಂಬಂಧ ಪಟ್ಟ ಹಕ್ಕುಗಳ ಮೇಲೆ ಅಪಚಾರವೆಸಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುವುದು
- ಮಹಿಳಾ ಹಕ್ಕುಗಳು ಭ್ರಷ್ಟತೆಗೆ ಒಳಗಾದರೆ, ಕಾನೂನು ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಪಡಿಸುವುದು
- ಮಹಿಳಾ ಸ್ವಾತಂತ್ರ್ಯ ಹಾಗೂ ಸಮಾನತೆಯ ಹಕ್ಕುಗಳನ್ನು ಕಾನೂನುಬದ್ಧವಾಗಿ ಜಾರಿಗೊಳಿಸುವಂತೆ ಮಾಡುವುದು
- ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದ ನೀತಿ–ನಿರ್ಣಯಗಳು ಹಾಗೂ ಮಾರ್ಗದರ್ಶನಗಳನ್ನು ಸರ್ಕಾರ ಕಾರ್ಯಗತ ಗೊಳಿಸುವಂತೆ ಒತ್ತಾಯಪಡಿಸುವುದು.

**ಕಾರ್ಯ ಚಟುವಟಿಕೆಗಳು:** ಈ ಆಯೋಗವು ಮಹಿಳೆಯರಿಗೆ ಸಂಬಂಧಪಟ್ಟಂತಹ ಹಲವಾರು ವಿಚಾರಾಂಶಗಳನ್ನು ಕೈಗೆತ್ತಿಕೊಂಡು ಪರಹರಿಸುತ್ತಿವೆ.

- ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ದೌರ್ಜನ್ಯ ಹಾಗೂ ತಾರತಮ್ಯ ಹೋಗಲಾಡಿಸಲು ನಿರಂತರ ಹೋರಾಟ ಮಾಡುತ್ತಿದೆ
- ಮಹಿಳೆ ಎದುರಿಸುತ್ತಿರುವ ಕುಟುಂಬ ಕಲಹಗಳು, ಹಕ್ಕುಗಳು ಹಾಗೂ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ತಜ್ಞರ ಮೂಲಕ ಸಂಶೋಧನೆ ಕೈಗೊಂಡು ಪರಿಹಾರ ಒದಗಿಸುತ್ತಿದೆ
- ಜೈಲಿನಲ್ಲಿರುವ ಮಹಿಳಾ ಖೈದಿಗಳು, ರಿಮಾಂಡ್ ಹೋಂಗಳು, ಮಹಿಳಾ ಸಂಸ್ಥೆಗಳು ಮುಂತಾದವುಗಳಿಗೆ ಭೇಟಿ ನೀಡಿ ಅವರುಗಳ ಮೊಕದ್ದಮೆಗಳನ್ನು ಪರಹರಿಸಲು ನೆರವು ನೀಡುತ್ತಿದೆ

Digitised by Bharatavani, CIIL

- ಮಹಿಳೆಯರ ನೈಜ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಆಗಾಗ್ಗೆ ವರದಿ ನೀಡಿ ಪರಿಹಾರ ಕಂಡುಕೊಳ್ಳಲು ನೆರವಾಗುತ್ತಿದೆ.

**ಮೊದಲ ಏಳು ವರ್ಷಗಳ ಕಾರ್ಯ ಚಟುವಟಿಕೆಗಳು:**

- ಮಹಿಳೆಯರ ಮೇಲೆ ಆಗುತ್ತಿದ್ದ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ, ಲಿಂಗ ತಾರತಮ್ಯ, ಆಸ್ತಿ ಹಕ್ಕು –ಮುಂತಾದ ವಿಷಯಗಳ ಮೇಲೆ ಕಾನೂನು ಬದ್ಧವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ದೇಶಾದ್ಯಂತ ಹೋರಾಟ ಮಾಡಿತು.
- ಈ ಹೋರಾಟದಿಂದ ಸುಮಾರು 3,000 ಮೊಕದ್ದಮೆಗಳಿಗೆ ನ್ಯಾಯಾಲಯದಿಂದ ಪರಿಹಾರ ಪಡೆಯಲಾಯಿತು. ಈ ಮೊಕದ್ದಮೆಗಳಲ್ಲಿ ಹೆಚ್ಚಿನವು ವರದಕ್ಷಿಣೆ, ಅತ್ಯಾಚಾರ, ಗಂಡ–ಹೆಂಡಿರ ಜಗಳ, ಆಸ್ತಿ ಹಕ್ಕು ಕಿರುಕುಳ, ವಿವಾಹ ವಿಚ್ಛೇದನ – ಇವೇ ಮುಂತಾದವುಗಳು.
- ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಿಶೇಷ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಮಹಿಳಾ ಸಂಘಟನೆಗಳು ವಿವಿಧ ಮಾಧ್ಯಮಗಳ ಮೂಲಕ ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿತುಕೊಳ್ಳುವಂತೆ ಪ್ರಸಾರ ಮಾಡುತ್ತಿವೆ.
- ಬಾಲಕಿಯರ ಮೇಲೆ ಅತ್ಯಾಚಾರ, ಒತ್ತಾಯದಿಂದ ದುಡಿಸಿಕೊಳ್ಳುವುದು, ವೇಶ್ಯಾವಾಟಿಕೆಗೆ ತಳ್ಳುವುದು, ನಿಂದಿಸುವುದು, ಜೈಲು ಶಿಕ್ಷೆಗೊಳಪಡಿಸುವುದು – ಮುಂತಾದ ದುಷ್ಕೃತ್ಯಗಳನ್ನು ತಡೆಗಟ್ಟಲು ವಿಶೇಷ ಕಾನೂನಗಳನ್ನು ಜಾರಿಗೊಳಿಸಲು ನೆರವಾಗುತ್ತಿದೆ.
- ರಾಜಕೀಯವಾಗಿಯೂ ಮಹಿಳೆ ಸಶಸ್ತ್ರೀಕರಣಗೊಳ್ಳಲು ಗ್ರಾಮ ಪಂಚಾಯಿತಿ ಮಟ್ಟದಿಂದಲೇ ಅಧಿಕಾರ ಪಡೆಯುವಂತೆ ಮಾಡಿದೆ. ರಾಷ್ಟ್ರದ ರಾಜಕೀಯದಲ್ಲಿ ಅಧಿಕಾರ ಹಂಚಿಕೊಳ್ಳಲು ಅವರಿಗೆ ತರಬೇತಿ ನೀಡಲಾಗುತ್ತಿದೆ. ಮಹಿಳೆಯರಿಗೆ ಪಂಚಾಯತಿ ಮಟ್ಟದಲ್ಲಿ ಅಧಿಕಾರ ನಡೆಸುವುದರ ಬಗ್ಗೆ ಅನುಭವಿಗಳಿಂದ ತರಬೇತಿ ನೀಡಲಾಗುವುದು.
- ಆರ್ಥಿಕವಾಗಿಯೂ ಮಹಿಳೆ ಸದೃಢಗೊಳ್ಳುವಂತೆ ಮಾಡಲು ಉದ್ಯೋಗಾವಕಾಶಗಳು ವಿವಿಧ ಕ್ಷೇತ್ರಗಳಲ್ಲಿ ದೊರೆಯುವಂತೆ ವ್ಯವಸ್ಥೆಗೊಳಿಸಲಾಗುತ್ತಿದೆ. ಅವರವರ ವಿದ್ಯೆ, ಅನುಭವ, ತಾಂತ್ರಿಕ ಪರಿಣತಿಗೆ ತಕ್ಕಂತೆ ಕೈಗಾರಿಕೆ ಕ್ಷೇತ್ರಗಳಲ್ಲೂ ಮೀಸಲಾತಿಯ ಆಧಾರದ ಮೇಲೆ ಉದ್ಯೋಗ ದೊರೆಯುವಂತೆ ಕಾನೂನನ್ನು ಸದೃಢ ಗೊಳಿಸಲಾಗಿದೆ. ಅನಕ್ಷರಸ್ಥ ಗ್ರಾಮೀಣ ಮಹಿಳೆಯರಿಗೂ ಸ್ತ್ರೀಶಕ್ತಿ ಗುಂಪುಗಳ ಮೂಲಕ ಆರ್ಥಿಕ ನೆರವನ್ನು ನೀಡಿ ಸಬಲೀಕರಣಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಈ ರೀತಿ ಲಿಂಗ ವಿಭೇದೀಕರಣ ಅಥವಾ ಲಿಂಗ ತಾರತಮ್ಯ ಕಡಿಮೆ ಮಾಡಲು ಹಲವಾರು ಕಾನೂನುಗಳಿದ್ದರೂ, ಭಾರತೀಯ ಸಮಾಜದಲ್ಲಿ ಹಲವಾರು ತೊಂದರೆಗಳು ಅವುಗಳನ್ನು ಪಾಲಿಸಿಕೊಂಡು ಬರುವಲ್ಲಿ ಕಂಡುಬರುತ್ತವೆ. ಆದರೆ ಇಂದು ಸ್ವತಃ ಮಹಿಳೆಯರು ಹಾಗೂ ಮುತ್ಸದ್ದಿಗಳು ಇಂತಹ ತೊಡಕುಗಳನ್ನು ಕಡಿಮೆಮಾಡಲು ಪ್ರಯತ್ನಿಸುತ್ತಿರುವರು.

–ಪ್ರೊ. ಬಸವಂತರಾಯ ಎ.ಪಾಟೀಲ್

# ವ

## ವಚನ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು

ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿತ್ವದ ಸರ್ವತೋಮುಖ ವಿಕಾಸವಾಗಿದೆ. ಶಿಕ್ಷಣ ವ್ಯಕ್ತಿಯನ್ನು ಅಜ್ಞಾನವೆಂಬ ಅಂಧಕಾರದಿಂದ ಸುಜ್ಞಾನವೆಂಬ ಜ್ಯೋತಿಯೆಡೆಗೆ ಕೊಂಡೊಯ್ಯುವ ದೀಪ ಶಿಕ್ಷಣವಿಲ್ಲದವ ಪಶುಸಮಾನ ಎಂಬ ಮಾತಿದೆ. ವ್ಯಕ್ತಿಯನ್ನು ಶಿಕ್ಷಣ ಸಂಸ್ಕಾರಯುಕ್ತನನ್ನಾಗಿ ಮಾಡುತ್ತದೆ. ವ್ಯಕ್ತಿ ಸಾಗಬೇಕಾದ ದಾರಿಯನ್ನು ಶಿಕ್ಷಣ ತೋರುತ್ತದೆ. ಶಿಕ್ಷಣ ಮಾನವೀಯ ಮೌಲ್ಯಗಳಿಗೆ ಬುನಾದಿಯನ್ನು ಹಾಕುತ್ತದೆ. ಈ ಮಾನವೀಯ ಮೌಲ್ಯಗಳೇ ನಿಜವಾದ ಅರ್ಥದಲ್ಲಿ ಮನುಷ್ಯನಿಗೆ ಮಾನವನಾಗಿ ಬದುಕಲು ಪ್ರೇರಣೆ ನೀಡುತ್ತವೆ.

ಶಿಕ್ಷಣವನ್ನು ಕುರಿತಂತೆ ನಮ್ಮ ದೇಶದಲ್ಲಿ ಬಹಳಷ್ಟು ಚಿಂತನೆಗಳು ಹೊರಹೊಮ್ಮಿವೆ. ದೇಶದ ಮಹಿಮರೆಲ್ಲ ಶಿಕ್ಷಣಕ್ಕೆ ತಮ್ಮದೇ ಆದ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಇಲ್ಲಿ ಶಿಕ್ಷಣವೆಂದರೆ ಕಲಿಯುವುದು, ಪಾಂಡಿತ್ಯ ಪಡೆದುಕೊಳ್ಳುವುದು ಎಂಬ ಸಾಮಾನ್ಯ ಅರ್ಥ ಇದೆಯಾದರೂ ಅದೇ ಎಲ್ಲವೂ ಅಲ್ಲ. ಶಿಕ್ಷಣದಿಂದ ವ್ಯಕ್ತಿಯ ಮತ್ತು ಸಮಾಜದ ಕಲ್ಯಾಣ ಆಗಬೇಕು ಶಿಕ್ಷಣ ಚಾರಿತ್ರ್ಯವಂತ ಪ್ರಜೆಗಳನ್ನು ರೂಪಿಸಬೇಕು. ತನ್ನ ಸಮಾಜ ಸರ್ವಾಂಗೀಣ ಪ್ರಗತಿಗೆ ಶಿಕ್ಷಣದ ಗುರಿಯಾಗಬೇಕು. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ–

"ಗೀತವ ಬಲ್ಲಾತ ಜಾಣನಲ್ಲ, ಮಾತು ಬಲ್ಲಾತ ಜಾಣನಲ್ಲ,
ಜಾಣನು, ಜಾಣನು ಆತ ಜಾಣನು:
ಲಿಂಗವ ನೆರೆನಂಬಿದಾತ ಜಾಣನು,
ಜಂಗಮಕ್ಕೆ ಸವೆಸುವಾತ ಜಾಣನು.

ತಮ್ಮ ಇನ್ನೊಂದು ವಚನದಲ್ಲಿ–

ಗಿಳಿಯೋದಿ ಫಲವೇನು?
ಬೆಕ್ಕು ಬಹುದ ಹೇಳಲರಿಯದು.
ಜಗವೆಲ್ಲವ ಕಾಂಬ ಕಣ್ಣು,
ತನ್ನ ಕೊಂಬ ಕೊಲ್ಲೆಯ ಕಾಣಲರಿಯದು.

Digitised by Bharatavani, CIIL

ಇದಿರ ಗುಣವ ಒಲ್ಲೆವೆಂಬರು, ತಮ್ಮ ಗುಣವನರಿಯರು,

ಕೂಡಲ ಸಂಗಮದೇವಾ.

ಎಂದಿದ್ದಾರೆ. ಅಂದರೆ ಬರಿ ಅಕ್ಷರ ಜ್ಞಾನ ಕಲಿತವ ವಿದ್ಯಾವಂತನಲ್ಲ ಎಂಬ ಮಾತನ್ನು ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ನಾನಾ ಪ್ರತಿಮೆಗಳ ಮೂಲಕ ಹೇಳಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಬಂದ ವಚನ ಸಾಹಿತ್ಯವನ್ನು ನೂರಾರು ಶರಣರು ಸಮೃದ್ಧಗೊಳಿಸಿದ್ದಾರೆ. ಇವರೆಲ್ಲರ ಲೋಕಾನುಭವ ಮತ್ತು ಚಿಂತನೆ ವಚನ ಸಾಹಿತ್ಯದಲ್ಲಿ ಹರಳುಗಟ್ಟಿದೆ. ವಚನ ಸಾಹಿತ್ಯ ರಚಿಸಿದ ಶರಣ ಶರಣೆಯರು ತಮ್ಮ ಎಲ್ಲ ವಚನಗಳಲ್ಲಿ ತಾವು ಕಂಡ ಸಮಾಜದ ಅಸಾಂಗತ್ಯಗಳನ್ನು ಮತ್ತು ಅಸಮಾನತೆಗಳನ್ನು ಪದ್ಯಗಮಧಿ ವಚನಗಳ ಮೂಲಕ ಎಷ್ಟು ಮಾರ್ಮಿಕವಾಗಿ ಅಭಿವ್ಯಕ್ತಿಸಿದ್ದಾರೆಂದರೆ ಒಂದೊಂದು ವಚನದಲ್ಲೂ ಒಂದೊಂದು ಸತ್ಯ, ದರ್ಶನ ಮತ್ತು ಶಿಕ್ಷಣ ಇಣುಕಿದೆ. ಶರಣ ಸಮಾಜದಲ್ಲಿ ಇದ್ದವರೆಲ್ಲ ಬೇರೆ ಬೇರೆ/ವರ್ಗಗಳಿಂದ ಮತ್ತು ಜಾತಿಗಳಿಂದ ಬಂದವರು. ಇವರೆಲ್ಲ ಲಿಂಗ ದೀಕ್ಷೆಯನ್ನು ಪಡೆದು ಸಮತಾ ಸಮಾಜವನ್ನು ಕಟ್ಟಲು ಕನಸು ಕಂಡವರು. ಬಸವಣ್ಣನವರು ಉದಾತ್ತ ಮಾನವೀಯ ದೃಷ್ಟಿ ಹೊಂದಿದ್ದ ಎಲ್ಲರನ್ನೂ ಮಾನವೀಯ ನೆಲೆಯಲ್ಲಿ ಕಾಣಬೇಕೆನ್ನುವ ಅಭಿಪ್ರಾಯುಳ್ಳ, ಎಲ್ಲ ಕಾಯಕಗಳನ್ನು ಸಮಾಜಕ್ಕೆ ಅನಿವಾರ್ಯವೆಂದು ಹೇಳಿದೆ. ಎಲ್ಲ ಕಾಯಕಗಳಿಗೂ ಗೌರವವನ್ನು ನೀಡಿದ ಮತ್ತು ಹೆಣ್ಣಿಗೂ ಸಮಾಜದಲ್ಲಿ ಪುರುಷನಿಗೆ ಸಮನಾದ ಹಕ್ಕು ಮತ್ತು ಅಧಿಕಾರವನ್ನು ನೀಡಿದ ಮಹಾನ್ ಪುರುಷರು.

ಹಾಗೆ ನೋಡಿದರೆ ಭಾರತೀಯ ಸಮಾಜದಲ್ಲಿ "ಯತ್ರನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ" (ಎಲ್ಲಿ ಮಹಿಳೆಯರನ್ನು ಗೌರವಿಸಲಾಗುತ್ತದೆಯೋ, ಅಲ್ಲಿ ದೇವತೆಗಳು ನೆಲೆಸುತ್ತಾರೆ) ಎಂದು ಹೇಳಿ ಪ್ರಾಚೀನ ಕಾಲದಿಂದಲೂ ಮಹಿಳೆಯರಿಗೆ ಗೌರವ ನೀಡಲಾಗಿದೆ. ಹಾಗೆ ನೋಡಿದರೆ ಸೀತಾರಾಮ ಎಂಬಲ್ಲಿ ಸೀತೆಗೆ ಮೊದಲ ಸ್ಥಾನ ನೀಡಿ ಆಧರಿಸಲಾಗಿದೆ. ಅರ್ಧಾಂಗಿನಿ ಇಲ್ಲದೆ ಯಾವ ಧಾರ್ಮಿಕ ಸಂಸ್ಕಾರಗಳು ಪೂರ್ಣಗೊಳ್ಳುವುದಿಲ್ಲ. ಗೃಹಿಣೀ ಗೃಹಮುಚ್ಚತೆ' (ಗೃಹಿಣಿಯರಿಂದಲೇ ಗೃಹ) ಎಂದು ಹೇಳಿ ಆಕೆಗೆ ಮಹತ್ವವನ್ನು ನೀಡಲಾಗಿದೆ. ಎಲ್ಲ ಹೆಣ್ಣುಗಳನ್ನು ಅಮ್ಮ ಎಂದು ಸಂಬೋಧಿಸುವುದರ ಮೂಲಕ ಅವರಿಗೆ ವಿಶೇಷ ಗೌರವವನ್ನು ನೀಡಲಾಗಿದೆ. ಮನೆಯಲ್ಲಿ ಈ ಹೆಣ್ಣೇ ತಾಯಿಯಾಗಿ ಮೊದಲ ಗುರು ಆಗುತ್ತಾಳೆ. ಆದರೆ ಕಾಲಾಂತರದಲ್ಲಿ ಈ ಎಲ್ಲ ಮಾತುಗಳು ಅದರ ಸೂಚಕಗಳಾಗಿ ಉಳಿದವೇ ಹೊರತಾಗಿ ಸಮಾಜದಲ್ಲಿ ಸಿಗಬೇಕಾದ ಗೌರವ ಆದರಗಳು ಆಕೆಗೆ ಸಿಗದಿದ್ದನ್ನು ಕಂಡು ಶರಣರು ಗಂಭೀರವಾಗಿ ಚಿಂತಿಸಿದರು. ಹೆಣ್ಣಿಗೆ ತಮ್ಮ ಧರ್ಮದಲ್ಲಿ ಸಮಾನವಾದ ಸ್ಥಾನವನ್ನು ಕೊಟ್ಟು ಗೌರವಿಸಿದರು. ಶರಣರ ಚಿಂತನೆಗಳಲ್ಲಿ ಮಹಿಳೆಯರಿಗೆ ಮಹತ್ವದ ಸ್ಥಾನವಿದೆ, ಇಲ್ಲಿ ಆಕೆ ಗುರುವಾಗಿದ್ದಾಳೆ. ಸಮಾಜಕ್ಕೆ ಮೌಲ್ಯಗಳನ್ನು ಬಿತ್ತರಿಸಿದ ಶಿಕ್ಷಕಿಯಾಗಿದ್ದಾಳೆ. ಆಯ್ದಕ್ಕಿ ಲಕ್ಕಮ್ಮ ಎಂಬ ಶರಣೆ ತನ್ನ ಗಂಡನಿಗೆ ಹೇಳಿದ ಕೆಳಗಿನ ವಚನದಲ್ಲಿ ಆಸೆಯ ನಿಗ್ರಹ, ರೋಷದ ನಿಯಂತ್ರಣ, ಸಂಗ್ರಹ ಪ್ರವೃತ್ತಿಯ ವಿರೋಧ ಎಳೆ-ಎಳೆಯಾಗಿ ಬಂದಿದೆ-

ಆಸೆಯೆಂಬುದು ಅರಸಿಂಗಲ್ಲದೆ,

ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದು ಯಮದೂತರಿಲ್ಲದೆ,

ಅಜಾತರಿಗುಂಟೆ ಅಯ್ಯಾ?

ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ

ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ.

ಶರಣರ ಶೈಕ್ಷಣಿಕ ವಿಚಾರಗಳನ್ನು ಅರಿಯುವ ಮೊದಲು ಅವರು ಬಳಸಿರುವ ಒಂದೆರಡು ಪಾರಿಭಾಷಿಕ ಶಬ್ದಗಳ ಅರ್ಥಗಳನ್ನು ತಿಳಿದುಕೊಳ್ಳುವುದು ಅಗತ್ಯ. ಶರಣರು ಶಿಕ್ಷಣಕ್ಕೆ ಸಂವಾದಿಯಾಗಿ ಬಳಸಿರುವ ಶಬ್ದವೇ 'ಅರಿವು'. ಅರಿವೆಂದರೆ ಜ್ಞಾನ, ತಿಳುವಳಿಕೆ. ಈ ಅರಿವು ಶರಣರಿಗೆ ಗುರು, ಹೀಗಾಗಿ 'ಅರಿವೇ ಗುರು' ಎಂದು ಹೇಳಲಾಗಿದೆ. ತನ್ನನ್ನು ತಾನು ಅರಿಯುವ ಜ್ಞಾನವೇ ಗುರು. ಮುಕ್ತಾಯಕ್ಕ ಎಂಬ ಶರಣೆ 'ತನ್ನ ತಾನರಿದವಂಗೆ ಅರಿವೇ ಗುರು' ಎಂದು ಹೇಳಿದ್ದಾಳೆ. ಅರಿವು ಜ್ಞಾನದ ಬಲ, ಅರಿವು ಸಜ್ಜನ ಸಹವಾಸದ ಬಲ, ಅರಿವು ಬಾಹ್ಯದಲ್ಲಿ ಇಷ್ಟಲಿಂಗ ಅರಿವು ಅಂತರಂಗದಲ್ಲಿ ಪ್ರಾಣಲಿಂಗ, ಅರಿವು ಭಾವದಲ್ಲಿ ಆತ್ಮಲಿಂಗ, 'ಅರಿತವನೇ ಚಿರಂಜೀವಿ' ಎಂದು ಸಿದ್ದರಾಮ ಹೇಳಿದ್ದಾನೆ. ಅರುಹು ಬೇಕು ಆಚರಣೆಯಲ್ಲಿ, 'ಮರಹು' (ಅಜ್ಞಾನ) ಬೇಕು. ವಿಷಯಂಗಳಲ್ಲಿ ಎಂಬ ಅವನ ಹೇಳಿಕೆಗಳೂ ಗಮನಾರ್ಹವಾಗಿವೆ. ಬಸವಣ್ಣನವರು 'ಅರಿವು' ಎಂಬ ಜ್ಞಾನದ ಬಲದಿಂದ ಏನೆಲ್ಲ ಪರಿಣಾಮಗಳಾಗುತ್ತವೆ ಎಂಬುದನ್ನು ತಮ್ಮ ಒಂದು ವಚನದಲ್ಲಿ ಹೇಳಿದ್ದಾರೆ-

'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ,

ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ,

ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ,

ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ,

ಕೂಡಲ ಸಂಗನ ಶರಣರ ಅನುಭಾವದ ಬಲದಿಂದ

ಎನ್ನ ಭವದ ಕೇಡು ನೋಡಯ್ಯ.

ಇಲ್ಲಿ ಜ್ಞಾನ, ಜ್ಯೋತಿ, ಸತ್ಯ, ಪರುಷ ಶರಣರ ಅನುಭಾವದಿಂದ (ಜ್ಞಾನ) ತನ್ನ ಭವದ ಕೇಡು ಆಯಿತು ಎಂದು ಹೇಳುವುದರ ಮೂಲಕ ಬಸವಣ್ಣನವರು ಅರಿವಿಗೆ ಇನ್ನಿಲ್ಲದ ಮಹತ್ವ ಕೊಟ್ಟಿದ್ದಾರೆ. ತಮ್ಮ ಎಷ್ಟೋ ವಚನಗಳಲ್ಲಿ ಬಸವಣ್ಣನವರು ಶಾಸ್ತ್ರಗಳನ್ನೋದಿದವರನ್ನು ಮಾತ್ರ ಪಂಡಿತರೆಂದು ಪರಿಗಣಿಸದೆ ವಿವೇಕ ಉಳ್ಳವರನ್ನು

Digitised by Bharatavani, CIIL

ಮಾನವೀಯ ಗುಣಗಳ ಗಣಿಗಳಾಗಿರುವವರನ್ನು ವಿದ್ಯಾವಂತರೆಂದು ಪರಿಗಣಿಸಿದ್ದಾರೆ. ಏಕೆಂದರೆ ಇವರ ಜೀವನ–ಶಿಕ್ಷಣ ಮಹತ್ವದ್ದಾಗಿದೆ. ಶಿಕ್ಷಣ ಕಲಿತವರು ಅಹಂಕಾರದಿಂದ ಬೀಗುವುದನ್ನು ಶರಣರು ಖಂಡಿಸಿದ್ದಾರೆ. ಹೀಗಾಗಿ ವಿದ್ಯೆ ವಿನಯ ಕಲಿಸಬೇಕೆಂದು ಇವರು ಪ್ರತಿಪಾದಿಸುತ್ತಾರೆ. ಅಲ್ಲಮಪ್ರಭು ತಮ್ಮ ಒಂದು ವಚನದಲ್ಲಿ ಅಕ್ಷರ ಕಲಿತವರ ದುಃಸ್ಥಿತಿಯನ್ನು ಮಾರ್ಮಿಕವಾಗಿ ಹೇಳಿದ್ದಾರೆ.

ಅಕ್ಷರವ ಬಲ್ಲೆನೆಂ (ವೇಂ?)ದು ಅಹಂಕಾರವಡೆಗೊಂಡು,
ಲೆಕ್ಕಗೊಳ್ಳರಯ್ಯ,

ಗುರು ಹಿರಿಯರು ತೋರಿದ ಉಪದೇಶದಿಂದ;

ವಾಗದ್ವೈತವನೆ ಕಲಿತು ವಾದಿಪರಲ್ಲದೆ.

ಆಗು–ಹೋಗೆಂಬುದನರಿಯರು.

ಭಕ್ತಿಯನರಿಯರು ಯುಕ್ತಿಯನರಿಯರು,
(ಮುಕ್ತಿಯನರಿಯರು)

ಮತ್ತೂ ವಾದಕೆಳಸುವರು

ಹೋದರು ಗುಹೇಶ್ವರಾ ಸಲೆ ಕೊಂಡಮಾರಿಗೆ.

ಈ ವಚನದಲ್ಲಿ ಅಕ್ಷರ ಬಲ್ಲವರು ವಿನಯಶಾಲಿಗಳಾಗದೆ ತಾನು ಕಲಿತವನೆಂಬ ಅಹಂಕಾರದಿಂದ ವಾದವಿವಾದದಲ್ಲಿಯೇ ತಮ್ಮ ಸಮಯವನ್ನು ಹಾಳುಮಾಡಿಕೊಳ್ಳುವ ಜನರ ಬಗ್ಗೆ ವಿಷಾದದಿಂದ ನುಡಿದಿದ್ದಾರೆ.

ವಚನ ಸಾಹಿತ್ಯದಲ್ಲಿ ನೈತಿಕ ಶಿಕ್ಷಣಕ್ಕೆ ಮಹತ್ವದ ಸ್ಥಾನ ನೀಡಲಾಗಿದೆ. ಶಿಕ್ಷಣದ ಮುಖ್ಯ ಉದ್ದೇಶವೇ ಮನಸ್ಸುಗಳನ್ನು ತಿದ್ದುವುದಾಗಿದೆ. ಅವರನ್ನು ಋಜುಮಾರ್ಗದಲ್ಲಿ ತೆಗೆದುಕೊಂಡು ಹೋಗುವುದಾಗಿದೆ. ಎಲ್ಲ ವಚನಕಾರರು ನೈತಿಕತೆಯನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವನ್ನಾಗಿ ಸ್ವೀಕರಿಸಿದ್ದಾರೆ. ನೈತಿಕತೆ ಇಲ್ಲದ ಬದುಕು ಇವರ ದೃಷ್ಟಿಯಲ್ಲಿ ಮಹತ್ವವಿಲ್ಲದ್ದು. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಸಾಮಾಜಿಕ ಜೀವನಕ್ಕೆ ಏಳು ಸಂಹಿತೆಗಳನ್ನು ನೀಡಿ ಜನರು ಯಾವ ದಿಕ್ಕಿನಲ್ಲಿ ಹೋಗಬೇಕು ಎಂಬುದನ್ನು ಹೇಳಿದ್ದಾರೆ.–

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,

ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,

ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,

ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,

ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

ಈ ವಚನದಲ್ಲಿ ಕಳ್ಳತನ, ಕೊಲೆ, ಸುಳ್ಳು, ಮುನಿಸು, ಅನ್ಯರಿಗೆ ಅಸಹ್ಯ ಪಡುವುದು ಇವೆಲ್ಲವನ್ನೂ ವ್ಯಕ್ತಿಗೆ ಭೂಷಣವಲ್ಲವೆಂದು ಹೇಳುತ್ತ ಇವುಗಳಿಗೆ ಒಳಗಾಗದವನೇ ಕೂಡಲ ಸಂಗನಿಗೆ ಪ್ರಿಯ ಎಂದು ಹೇಳುತ್ತಾರೆ. ಅದೇ ರೀತಿ ಅಲ್ಲಮ ಪ್ರಭುಗಳು ತಮ್ಮ ಒಂದು ವಚನದಲ್ಲಿ ಆಸೆಯ ತೆಕ್ಕೆಗೆ ಒಳಗಾದವರ ಸ್ಥಿತಿಯನ್ನು ಕಂಡು ತನಗೆ ಹೇಸಿಗೆಯಾಯಿತು ಎಂದು ಹೀಗೆ ಹೇಳುತ್ತಾರೆ–

ಆಸೆಯೆಂಬ ಶೂಲದ ಮೇಲೆ, ವೇಷವೆಂಬ ಹೆಣದ ಕುಳ್ಳಿರಿಸಿ;

ಧರೆಯ ಮೇಲುಳ್ಳ ಹಿರಿಯರು ಹೀಂಗೆ ಸವೆದರು ನೋಡಾ!

ಆಸೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರು ಕಂಡು,

ಹೇಸಿಗೆಯಾಯಿತ್ತು ಗುಹೇಶ್ವರಾ.

ವಚನ ಸಾಹಿತ್ಯದ ಮೂಲ ದ್ರವ್ಯವೇ ನೈತಿಕ ಮೌಲ್ಯವಾದ ಶೀಲವನ್ನು ಪ್ರತಿಪಾದಿಸುವುದು. ಶೀಲವಂತ ಎಂದೂ ಕಾಮ ಕ್ರೋಧಾದಿಗಳ ಹಿಡಿತಕ್ಕೆ ಬರಬಾರದು. ಹೀಗೆ ಬಂದರೆ ಆತ ಶೀಲವಂತನಾಗಲಾರ. ಚೆನ್ನಬಸವಣ್ಣ ತಮ್ಮ ಅನೇಕ ವಚನಗಳಲ್ಲಿ ಶೀಲವಂತರೆಂದು ಬೀಗುವವರನ್ನು ಕಂಡು ವ್ಯಂಗ ಮಾಡಿದ್ದಾರೆ. ಚೆನ್ನಬಸವಣ್ಣ ತನ್ನ ಸುತ್ತಮುತ್ತ ನೋಡಿದ ಶೀಲವಂತರನ್ನು ಕಂಡು ಇದೆಂತಹ ಶೀಲ ಎಂದು ಕೇಳಿದ್ದಾರೆ.

ಭಕ್ತರ ಮಠಕ್ಕೆ ಬಂದು ಒಳಹೊರಗೆಂಬುದು ಶೀಲವೇ?

ಎನ್ನ ಲಿಂಗಕ್ಕೆ ಒಳ್ಳಿಹ ಅಗ್ಘಣಿಯ ತನ್ನಿ ಎಂಬುದು ಶೀಲವೇ?

ಎನ್ನ ಲಿಂಗಕ್ಕೆ ಒಳ್ಳಿಹ ಪುಷ್ಪವ ತನ್ನಿ ಎಂಬುದು ಶೀಲವೇ?

ಎನ್ನ ಲಿಂಗಕ್ಕೆ ಓಗರ ಮಾಡಿ ಎಂಬುದು ಶೀಲವೇ?

ಪಂಚೇಂದ್ರಿಯ ಸಪ್ತಧಾತು ಅರಿಷಡ್ವರ್ಗವ ಕೊಂದಾತನು

ಕೂಡಲಚೆನ್ನ ಸಂಗನಲ್ಲಿ ಆತನೆ ಶೀಲವಂತನು.

ಹೀಗೆ ಶೀಲವಂತರ ಸೋಗನ್ನು ಅನಾವರಣ ಮಾಡಿರುವ ಚೆನ್ನಬಸವಣ್ಣನ ದೃಷ್ಟಿಯಲ್ಲಿ ಶೀಲವಂತರು ಅಪರೂಪ. ಏಕೆಂದರೆ ಶೀಲವಂತರು ಶೀಲದ ಸೋಗಿನಲ್ಲಿ ಮಾಡುವ ಶೀಲವಲ್ಲದ ವ್ಯವಹಾರ ಚೆನ್ನಬಸವಣ್ಣನವರನ್ನು ಕಾಡಿದೆ.

ಅಲ್ಲಮಪ್ರಭುಗಳು ಸಹ ತಮ್ಮ ವಚನಗಳಲ್ಲಿ ವ್ಯಕ್ತಿಯ ನಡಾವಳಿಗಳಿಗೆ ಮಹತ್ವವನ್ನು ಕೊಟ್ಟು ಉತ್ತಮ ಬದುಕನ್ನು ಕಂಡುಕೊಳ್ಳುವುದರತ್ತ ಸಂಕೇತಿಸಿದ್ದಾರೆ. ಉತ್ತಮ ಮನುಷ್ಯನಾಗಲು ಆಸೆಯನ್ನು ಗೆಲ್ಲಬೇಕು ಎಂದು ಹೇಳಿದ್ದಾರೆ.

ಆಚಾರವರಿಯದೆ, ವಿಭವವಳಿಯದೆ,

ಕೋಪವಡಗದೆ ತಾಪ ಮುರಿಯದೆ,

ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆಯುವ ಕೇಡಿಂಗೆ

ನಾನು ಮರುಗುವೆ ಕಾಣಾ ಗುಹೇಶ್ವರ.

. . .

Digitised by Bharatavani, CIIL

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ.

ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ

ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ.

ಹೀಗೆ ವಚನ ಸಾಹಿತ್ಯದ ಪ್ರಮುಖ ಶೈಕ್ಷಣಿಕ ಸಿದ್ಧಾಂತವಾಗಿ ಎಲ್ಲ ಶರಣರ ವಚನಗಳು ನೈತಿಕ ಮೌಲ್ಯಗಳ ಪ್ರತಿಪಾದನೆಯಾಗಿವೆ.

ಶಿಕ್ಷಣದ ಮುಖ್ಯ ಗುರಿ ಮನುಷ್ಯನ ವರ್ತನೆಗಳಲ್ಲಿ ಪರಿವರ್ತನೆ ತರುವುದೇ ಆಗಿದೆ. ಮನುಷ್ಯ ಪ್ರಪಂಚಕ್ಕೆ ಬಂದಾಗ ಮಗುವಾಗಿರುತ್ತಾನೆ. ಜಗತ್ತಿನ ಯಾವುದಕ್ಕೂ ಪ್ರತಿಕ್ರಿಯೆ ಮಾಡದ ಸ್ಥಿತಿಯಲ್ಲಿರುತ್ತಾನೆ. ಆ ಮಗು ಬೆಳೆದು ದೊಡ್ಡದಾಗುತ್ತ ಹೋದಂತೆ, ತನ್ನ ಸುತ್ತಲ ಪರಿಸರಕ್ಕೆ ಒಗ್ಗಿಕೊಳ್ಳುತ್ತಾ ಹೋದಂತೆ, ಒಳಿತು ಕೆಡಕುಗಳ ಅರಿವನ್ನು ಪಡೆದುಕೊಳ್ಳುತ್ತಾ ಹೋದಂತೆ ತಾನೆತ್ತ ಹೋಗಬೇಕು ಎಂಬ ಸಂದಿಗ್ಧಕ್ಕೆ ಸಿಲುಕಿಕೊಳ್ಳುತ್ತದೆ. ಆಗ ಬದುಕಿನ ಮೌಲ್ಯಗಳ ಬಗ್ಗೆ ತಿಳುವಳಿಕೆಯನ್ನು ನೀಡುವುದು ಶಿಕ್ಷಣದ ಗುರಿಯಾಗಿದೆ. ಶರಣ ಶರಣೆಯರು ಮಹಾನ್ ಶಿಕ್ಷಕರೇ ಆಗಿದ್ದಾರೆ. ಸಮಾಜಕ್ಕೆ ಉನ್ನತ ಮೌಲ್ಯಗಳನ್ನು ಕೊಡುವ ಗುರುಗಳಾಗಿದ್ದಾರೆ. ಅದರಲ್ಲೂ ಕನ್ನಡದ ವಚನಕಾರ್ತಿಯರು 'ಮನೆಗೆ ಮಾತೆಯೇ ಮೊದಲ ಗುರು' ಎಂಬಂತೆ ಮೌಲ್ಯಗಳನ್ನು ಹೇಳಿದ್ದಾರೆ. ಮಾತು ಕಲಿಯುವ ಮಕ್ಕಳಿಗೆ ಹೇಳುವ ಬುದ್ಧಿವಾದಗಳಂತೆ ಮುಕ್ತಾಯಕ್ಕ ವ್ಯಕ್ತಿಯ ನಡೆ ಹೇಗಿರಬೇಕು ಎಂಬುದನ್ನು ಹೀಗೆ ತಿಳಿಹೇಳಿದ್ದಾಳೆ–

ನುಡಿಯಲುಬಾರದು ಕೆಟ್ಟನುಡಿಗಳ,

ನಡೆಯಲುಬಾರದು ಕೆಟ್ಟನಡೆಗಳ,

ನುಡಿದಡೇನು ನುಡಿಯದಿರ್ದಡೇನು?

ಹಿಡಿದ ವ್ರತ ಬಿಡದಿರಲು, ಅದೆ ಮಹಾಜ್ಞಾನದಾಚರಣೆ,

ಎಂಬೆನು ಅಜಗಣ್ಣ ತಂದೆ.

ಬಸವಣ್ಣನವರು ತಮ್ಮ ವಚನಗಳಲ್ಲಿ ನುಡಿಯ ಸ್ವರೂಪ ಹೇಗಿರಬೇಕು ಮತ್ತು ನುಡಿ ಮತ್ತು ನಡೆಗಳಲ್ಲಿ ಸಾಮರಸ್ಯ ಅನಿವಾರ್ಯ ಎಂಬ ಮಾತನ್ನು ಹೇಳಿದ್ದಾರೆ. ಇಲ್ಲಿ ಕೊಟ್ಟಿರುವ ಒಂದೊಂದು ಉದಾಹರಣೆಯೂ ಮಾತಿನ ಮಹತ್ವವನ್ನು ಹೇಳುತ್ತದೆ–

ನುಡಿದಡೆ ಮುತ್ತಿನ ಹಾರದಂತಿರಬೇಕು

ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು

ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು

ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು

ನುಡಿಯೊಳಗಾಗಿ ನಡೆಯದಿದ್ದಡೆ,

ಕೂಡಲಸಂಗಮದೇವನೆಂತೊಲಿವನಯ್ಯಾ?

ಮನುಷ್ಯ ಬೆಳೆದು ದೊಡ್ಡವನಾದಂತೆಲ್ಲ ಅವನ ಮುಂದೆ ನಾನಾ ಬಗೆಯ ಆಸೆಗಳು, ಆಕರ್ಷಣೆಗಳು ತಮ್ಮ ರಂಗಿನಾಟವನ್ನು ತೋರಿಸತೊಡಗುತ್ತವೆ. ಹೆಣ್ಣು, ಹೊನ್ನು, ಮಣ್ಣುಗಳ ಆಕರ್ಷಣೆಗಳಿಂದ ಮನುಷ್ಯ ತತ್ತರಿಸತೊಡಗುತ್ತಾನೆ. ಈ ಮೂರನ್ನೂ ಗೆಲ್ಲುವುದು ಅಥವಾ ತನ್ನ ವಶದಲ್ಲಿರಿಸಿಕೊಳ್ಳುವುದು ನಿಜಕ್ಕೂ ಒಂದು ಸವಾಲೇ ಆಗಿರುತ್ತದೆ. ಎಲ್ಲ ಶರಣರು ಶುದ್ಧ ಬದುಕಿಗೆ ಈ ಮೂರನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಾರೆ. ಶರಣೆ ಸತ್ಯಕ್ಕ ಅರ್ಚನೆ ಮಂತ್ರ–ತಂತ್ರ, ಧೂಪ–ದೀಪ ಆರತಿಗಳು ನೇಮವಲ್ಲ ಎನ್ನುತ್ತಾರೆ. ಆಕೆಯ ಪ್ರಕಾರ–

ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ.

ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ

ಬಸವಣ್ಣನವರು ಸಹ ತಮ್ಮ ಅನೇಕ ವಚನಗಳಲ್ಲಿ ಪರಧನ, ಪರಸ್ತ್ರೀ ಮುಂತಾದ 'ವಿಷಯ'ಗಳನ್ನು ತಮ್ಮ ಮುಂದೆ ಪಸರಿಸದಂತೆ ಪರಮಾತ್ಮನಲ್ಲಿ ವಿನಂತಿಸಿಕೊಂಡಿದ್ದಾರೆ. ಇಲ್ಲಿ ತಮ್ಮನ್ನು ಪಶುವೆಂತಲೂ ಈ ಪಶುವಿಗೆ ಸುಬುದ್ಧಿಯನ್ನು ನೀಡೆಂತಲೂ ವಿನಂತಿಸಿದ್ದಾರೆ–

ವಿಷಯವೆಂಬ ಹಸುರನೆನ್ನ ಮುಂದೆ ತಂದು
ಪಸರಿಸಿದೆಯಯ್ಯ,

ಪಶುವೇನು ಬಲ್ಲುದು? ಹಸುರೆಂದೆಳೆಸುವುದು,

ವಿಷಯ ರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,

ಸುಬುದ್ಧಿಯೆಂಬ ಉದಕವನೆರೆದು,

ನೋಡಿ ಸಲಹಯ್ಯಾ ಕೂಡಲಸಂಗಮದೇವಾ.

ಬಸವಣ್ಣನವರು ನಡೆ–ನುಡಿಗೆ ಎಂತಹ ಮಹತ್ವವನ್ನು ಕೊಟ್ಟಿದ್ದಾರೆಂದರೆ ಇವೆರಡರ ನಡುವೆ ಸಾಮಂಜಸ್ಯವನ್ನು ಕಂಡುಕೊಳ್ಳಬೇಕೆಂದು ಹೇಳಿದ್ದಾರೆ. ಇದರಲ್ಲಿ ಒಂದು ಜವೆಯಷ್ಟು ಕೊರತೆಯಾದರೆ 'ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮ ದೇವಾ', ಎಂದು ಹೇಳಿದ್ದಾರೆ. ಶರಣರು ಸಾರ್ವಜನಿಕ ಬದುಕಿನಲ್ಲಿರುವ ಜನರಿಗೆ ಶುದ್ಧ ಜೀವನ ನಡೆಸಬೇಕೆಂಬ ಶಿಕ್ಷಣವನ್ನು ನೀಡಿದ್ದಾರೆ. ಬಸವಣ್ಣನವರು ಬಿಜ್ಜಳನ ಭಂಡಾರದ ಅಧಿಕಾರಿಯಾಗಿದ್ದರು. ಅವರು ಅಲ್ಲಿನ ಯಾವ ಆಕರ್ಷಣೆಗೂ ಒಳಗಾಗದೆ ಶುದ್ಧ ಜೀವನವನ್ನು ನಡೆಸಿದ ಮಹಾತ್ಮರು. ಅವರೇ ಹೇಳುವಂತೆ ಅವರು ಯಾವ ಲೋಭಕ್ಕೂ ಒಳಗಾಗದವರು–

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂಡೆಳೆಯ

ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ

ನಿಮ್ಮಾಣೆ, ನಿಮ್ಮ ಪ್ರಮಥರಾಣೆ.

ಸತ್ಯಕ್ಕ ಸಹ ಸಾಮಾಜಿಕ ಜೀವನದಲ್ಲಿ ಸತ್ಯ ಶುದ್ಧ ವ್ಯವಹಾರಕ್ಕೆ ಒತ್ತು ಕೊಟ್ಟವಳು. ಈಕೆಗೆ ಭಿಕ್ಷೆ ಪ್ರಿಯವಾಗುತ್ತದೆಯೇ ಹೊರತಾಗಿ ಲಂಚ ಅಥವಾ ಪರರ ವಸ್ತುಗಳು ಪ್ರಿಯವಾಗುವುದಿಲ್ಲ. ಈಕೆಯ

Digitised by Bharatavani, CIIL

ಕೆಳಗಿನ ವಚನ ಅಂದಿನ ಶರಣೆಯರ ನಿಲುವನ್ನು ತೋರಿಸುತ್ತದೆ. ಅಂತೆಯೇ ಜೀವನ ಶಿಕ್ಷಣವನ್ನು ನೀಡುತ್ತದೆ–

ಲಂಚವಂಚನಕ್ಕೆ ಕೈಯಾನದ ಭಾಷೆ!

ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ,

ಕೈಮುಟ್ಟಿ ಎತ್ತಿದೆನಾದಡೆ, ಅಯ್ಯಾ ನಿಮ್ಮಾಣೆ!

ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ,

ಶಂಭುಜಕ್ಕೇಶ್ವರದೇವಯ್ಯಾ! ನಿಮ್ಮಾಣೆ.

ಬದುಕಿನಲ್ಲಿ ಶಿಸ್ತಿರಬೇಕು ಸತ್ಯ ಶುದ್ಧ ನಡೆನುಡಿ ಇರಬೇಕು ಎಂದೂ ತನ್ನ ವ್ರತಾಚರಣೆಗಳಿಗೆ ಕುಂದು ತರಬಾರದು. ಅಂತಹವರನ್ನು ದೂರ ಇಟ್ಟಿರಬೇಕು ಎಂದು ಕಾಳವ್ವೆ ಎಂಬ ಶರಣೆ ಹೇಳುತ್ತಾಳೆ–

ವ್ರತಭ್ರಷ್ಟನ, ಲಿಂಗ ಬಾಹ್ಯನ ಕಂಡಡೆ

ಸತ್ತನಾಯ, ಕಾಗೆಯ ಕಂಡಂತೆ

ಅವರೊಡನೆ ನುಡಿಯಲಾಗದು ಭೀಮೇಶ್ವರಾ.

ಅಂಬಿಗನ ಚೌಡಯ್ಯನೆಂಬ ದಿಟ್ಟ ಶರಣ ಪರಧನ, ಪರಸತಿ, ಪರನಿಂದೆಗಳನ್ನು ಕುರಿತಂತೆ ಹೇಳಿರುವ ಮಾತುಗಳು, ಅವು ಸಾಮಾಜಿಕ ಜೀವನದಲ್ಲಿ ತಿರಸ್ಕಾರ ಯೋಗ್ಯ ಎಂದು ಹೇಳಲು ಕೊಟ್ಟಿರುವ ದೃಷ್ಟಾಂತಗಳು ಸಹ ಶಿಕ್ಷಣದ ವಿಧಾನವನ್ನೇ ಬಿಂಬಿಸುತ್ತವೆ. ಇವು ವಿಚಾರಗಳನ್ನು ಸ್ಪಷ್ಟಪಡಿಸಲು ಅನಿವಾರ್ಯವಾಗುತ್ತವೆ. ಅಂಬಿಗರ ಚೌಡಯ್ಯನ ಈ ವಚನ ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ–

ಪರಧನ ಪರಸತಿ ಪರನಿಂದೆಗಳಿರೆ

ಮುಂದೆ ನರಕವು ಎಂದು ಗುರುವಾಕ್ಯ ಸಾರುತ್ತಿದೆ.

ಪರಧನ–ಪರಸತಿ–ಪರಭೂಮಿಗಳುಪಿ

ಹತವಾಗಿ ಹೋದ ದುರ್ಯೋಧನ

ಹರಿವ ನದಿಯಲಿ ಮಿಂದು ಗೋದಾನ ಮಾಡುವ

ನರಕಿಗಳ ನುಡಿಯ ಕೇಳಲಾಗದು.

ವಚನ ಸಾಹಿತ್ಯದ ಯಾವುದೇ ಆಯಾಮವನ್ನು ನೋಡಿದರೂ ಅಲ್ಲಿ ಶಿಕ್ಷಣವೆ ಮುಪ್ಪುರಿ ಗೊಂಡಿದೆ. ಪಾರಂಪರಿಕ ಅರ್ಥದಲ್ಲಿ ಶಿಕ್ಷಣ ಕೊಡುವುದು ಶರಣರ ಗುರಿಯಾಗಿರಲಿಲ್ಲವಾದರೂ ಅವರು ಪ್ರತಿಪಾದಿಸಿದ ಸಿದ್ಧಾಂತಗಳು ಶಿಕ್ಷಣವನ್ನು ಕೊಡುವ ಉದ್ದೇಶವನ್ನು ಹೊಂದಿದೆ. ಶರಣರ ಪಾಠಶಾಲೆ ಎಂದರೆ ಅನುಭವ ಮಂಟಪ. ಅನುಭವ ಮಂಟಪವೆಂದರೆ ಜೀವನಾನುಭವಗಳನ್ನು ಒಂದೆಡೆ ಕುಳಿತು ಚರ್ಚಿಸಿ ವಿಚಾರ ವಿನಿಮಯ ಮಾಡಿಕೊಳ್ಳುವ ಒಂದು ವೇದಿಕೆ. ಅನುಭವ ಮಂಟಪ ಬಸವಣ್ಣನವರು ಸ್ಥಾಪಿಸಿದ ಒಂದು/ಶೈಕ್ಷಣಿಕ ಸಂಸ್ಥೆ. ಅಲ್ಲಮಪ್ರಭುಗಳು ಇದರ ಅಧ್ಯಕ್ಷರಾಗಿದ್ದವರು, ಅವರ ಅಧ್ಯಕ್ಷತೆಯಲ್ಲಿ ಎಲ್ಲ ಜಾತಿಗಳ, ವರ್ಗಗಳ ಮತ್ತು ಕಾಯಕಗಳ ಜನರು ಸೇರಿ ಸಾಮಾಜಿಕ ಬದುಕಿನ ಹತ್ತು ಹಲವಾರು ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಕಲ್ಯಾಣದಲ್ಲಿ ಇದ್ದ ಆದರ್ಶ ರಾಜ್ಯದ ಪರಿಕಲ್ಪನೆಗೆ ಅನುಭವ ಮಂಟಪವೆಂಬ ವೇದಿಕೆ ಅರ್ಥಪೂರ್ಣವಾಗಿ ಚರ್ಚೆಗಳನ್ನು ಮಾಡಿತು. ಹೀಗಾಗಿ ಅನುಭವ ಮಂಟಪವನ್ನು ಇಂದಿನ ಅರ್ಥದಲ್ಲಿ ಅಂದಿನ ಪಾರ್ಲಿಮೆಂಟು ಎಂದು ಹೇಳಬಹುದು.

ಶರಣರು ಪ್ರತಿಪಾದಿಸಿದ ಮುಖ್ಯ ಸಿದ್ಧಾಂತಗಳೆಂದರೆ ಕಾಯಕ ಮತ್ತು ದಾಸೋಹ. ಈ ಎರಡು ತತ್ವಗಳನ್ನು ಶರಣರು ಎಷ್ಟರಮಟ್ಟಿಗೆ ಪ್ರತಿಪಾದಿಸಿದರೆಂದರೆ ಇವುಗಳಲ್ಲಿ ಶರಣಧರ್ಮವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಕಾಯಕವೆಂದರೆ ಶರೀರ ಶ್ರಮ. ಶರೀರ ಶ್ರಮವನ್ನು ಮಾಡದೆ ಯಾವೊಬ್ಬನಿಗೂ ತಿನ್ನುವ ಅಧಿಕಾರವಿಲ್ಲ ಎಂದು ಶರಣರು ಪ್ರತಿಪಾದಿಸಿದರು. ಇವರ ಕಾಯಕ ಸಿದ್ಧಾಂತದಲ್ಲಿ ವೃತ್ತಿಗೌರವಕ್ಕೆ ಮಹತ್ವದ ಸ್ಥಾನವಿದೆ. ವೃತ್ತಿಗಳು ಜೀವನೋಪಾಯಕ್ಕಿರುವ ಸಾಧನಗಳು. ಈ ವೃತ್ತಿಗಳೇ ಕಾಯಕಗಳು ಈ ಕಾಯಕಗಳಿಂದಲೇ ವ್ಯಕ್ತಿಗೆ ಮುಕ್ತಿ, ಕೈಲಾಸ ಪ್ರಾಪ್ತಿ, ಸ್ವಾಭಿಮಾನ ಮತ್ತು ಸ್ವಾವಲಂಬನೆ ಬದುಕಿಗೆ ಕಾಯಕಗಳು ಗರಿಮೆಯನ್ನು ತಂದುಕೊಡುವ ಸಾಧನಗಳು. ಶರಣರಿಗೆ ದೇಹವೇ ದೇವಾಲಯವಾಗಿದ್ದಂತೆ ಕಾಯಕವೇ ಕೈಲಾಸವಾಗಿತ್ತು. ಕಾಯಕವು ವಚನಕಾರರಿಗೆ ಪೂಜೆಯಾಗಿತ್ತು. ಅವರ ದೃಷ್ಟಿಯಲ್ಲಿ ಕಾಯಕ ರಹಿತ ಪೂಜೆ ಅರ್ಥಹೀನವಾಗಿತ್ತು. ಕಾಯಕದಲ್ಲಿ ನಿಷ್ಠೆ, ಶ್ರದ್ಧೆ ಮತ್ತು ದುಡಿಮೆ ಅನಿವಾರ್ಯವಾಗಿತ್ತು. ಶರಣರು ರೂಪಿಸಿದ ಕಾಯಕ ಮಾರ್ಗದಲ್ಲಿ ಎಲ್ಲರೂ ಸಮಾನರು. ಎಲ್ಲ ಕಾಯಕಗಳು ಸಮಾನವಾದವು. ಇಲ್ಲಿ ನೇಕಾರ, ಕ್ಷತ್ರೀಯ, ಅಂಬಿಗ, ಅಗಸ, ಚಮ್ಮಾರ, ಮಾದಿಗ, ಕೃಷಿಕ, ಮಡಿವಾಳ ಮುಂತಾದ ಕೆಲಸಗಳನ್ನು ಮಾಡುವ ಶರಣರಿದ್ದರು. ಇವರೆಲ್ಲ ತಮ್ಮ ತಮ್ಮ ಕಾಯಕಗಳನ್ನು ಮಾಡುತ್ತ ಲಿಂಗವಂತರಾಗಿ ಶರಣ ಸಮಾಜದಲ್ಲಿ ಸಮಾನ ಆದರ–ಗೌರವಗಳನ್ನು ಪಡೆದುಕೊಂಡರು. ಇವರು ತಮ್ಮ ಕಾಯಕದಲ್ಲಿ ಕೀಳರಿಮೆಯನ್ನು ಅನುಭವಿಸದೆ ವೃತ್ತಿಪರಾಕಾಷ್ಠೆಯನ್ನು ಮೆರೆದರು. ಇವರೆಲ್ಲ ತಮ್ಮ ಕಾಯಕಕ್ಕೆ ಎಂತಹ ಗೌರವವನ್ನು ಕೊಟ್ಟಿದ್ದರೆಂದರೆ ಕಾಯಕಕ್ಕಾಗಿ ಲಿಂಗಪೂಜೆಯನ್ನು ಬಿಡಲು ಹೇಳಿದರು. ಕಾಯಕದ ಬಗ್ಗೆ ಇವರ ಆದರ ಭಾವನೆಯ ಪ್ರತೀಕವಾಗಿ ಆಯ್ದಕ್ಕಿ ಮಾರಯ್ಯನ ಒಂದು ವಚನವನ್ನು ಉದಾಹರಣೆಯಾಗಿ ನೋಡಬಹುದು–

ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದರೂ ಮರೆಯಬೇಕು,

ಲಿಂಗಪೂಜೆಯಾದಡೂ ಮರೆಯಬೇಕು,

ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು,

ಕಾಯಕವೇ ಕೈಲಾಸವಾದ ಕಾರಣ

ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.

Digitised by Bharatavani, CIIL

ನುಲಿಯ ಚಂದಯ್ಯ ಎಂಬ ಶರಣ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಆತನ ಇಷ್ಟಲಿಂಗ ನೀರಿನಲ್ಲಿ ಬಿದ್ದು ಮುಳುಗಿತು. ಚಂದಯ್ಯ ಅದನ್ನು ಹುಡುಕಲು ಎಷ್ಟೋ ಪ್ರಯತ್ನಪಟ್ಟ. ಆದರೂ ಅದು ಸಿಗಲಿಲ್ಲ. ಅಷ್ಟು ಹೊತ್ತಿಗೆ ಆತನಿಗೆ ತನ್ನ ಕಾಯಕದ ನೆನಪಾಗಿ ಇಷ್ಟಲಿಂಗವನ್ನು ಅಲ್ಲಿಯೇ ಬಿಟ್ಟು ತನ್ನ ಕಾಯಕಕ್ಕೆ ಹೋದ. ಈತನಿಗೆ ಲಿಂಗಕ್ಕಿಂತ ಕಾಯಕ ಮಹತ್ವವೆನಿಸಿತು. ಮತ್ತೊಬ್ಬ ಶರಣ ಕಾರೆಯ ಸೊಪ್ಪಾದರೂ ಕೂಡ ಕಾಯಕದಿಂದ ಬಂದರೆ ಮಾತ್ರ ಅದು ಲಿಂಗಕ್ಕೆ ಅರ್ಪಿತ. ಇಲ್ಲವಾದರೆ ಅದು ಅನರ್ಪಿತ ಎಂದು ಹೇಳಿ ಕಾಯಕಕ್ಕೆ ಮಹತ್ವದ ಸ್ಥಾನ ಕೊಟ್ಟಿದ್ದಾರೆ. ಬಸವಣ್ಣನವರಂತೂ ದುಡಿಯದೆ ಬಂದ ಹಣವನ್ನು ಪಾಪಿಯ ಧನವೆಂದು ಕರೆದು 'ಈ ಪಾಪಿಯ ಧನ' ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು, ಇಂತಹ ಹಣ ನಾಯಿಯ ಹಾಲಿನಂತೆ ಎಂದು ಹೇಳಿದ್ದಾರೆ-

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ,
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ.

ಬಸವಣ್ಣನವರು ಮಾಡುವ ಕಾಯಕದಿಂದ ಮನುಷ್ಯನ ಗುಣವನ್ನು ಅಳೆಯಲಾಗದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಸವಣ್ಣನವರು ವ್ಯಕ್ತಿಯ ಕುಲಕ್ಕೂ ಮಾಡುವ ಕಾಯಕಕ್ಕೂ ಆತನ ಜಾತಿಗೂ ಬೆಸುಗೆ ಹಾಕುವುದು ಸಲ್ಲದು ಎಂದು ಖಡಾಖಂಡಿತವಾಗಿ ನುಡಿಯುತ್ತಾರೆ-

ದೇವಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ!
ಕೂಡಲ ಸಂಗಮದೇವಾ ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ.

ಹೀಗೆ ವಚನ ಸಾಹಿತ್ಯದಲ್ಲಿ ಕಾಯಕ ಶಿಕ್ಷಣ ಒಂದು ಮೌಲ್ಯವಾಗಿದೆ. ಇಂದು ಪಾರಂಪರಿಕ ವೃತ್ತಿಗಳು ಮರೆಯಾಗುತ್ತಿವೆಯೇನೋ ನಿಜ, ಆದರೆ ಈ ಕಾಯಕಗಿಗೆ ಶರಣರು ಅಪಾರ ಆದರವನ್ನು ಕೊಟ್ಟಿದ್ದರು. ಇವರು ಬೋಧಿಸಿದ ವೃತ್ತಿ ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂವನೆಯ ಪಾಠ ಎಂದಿಗೂ ಮಹತ್ವದ್ದಾಗಿದೆ. ಶರಣರ ಕಾಯಕ ಪೂಜೆಯಲ್ಲಿ ಕುಂದಾಗಿರುವುದು ಕಾಣುವುದಿಲ್ಲ. ಶರಣರ ಈ ಕಾಯಕ ಶಿಕ್ಷಣ ಇಂದಿಗೂ ನಮಗೆ ಒಂದು ಜೀವನ ಶಿಕ್ಷಣವಾಗಿಯೇ ಇದೆ. ಬಸವಣ್ಣನವರಂತೂ ಶ್ರಮವನ್ನು ಅಂದರೆ ಕಾಯಕ ಸಂಸ್ಕೃತಿಯನ್ನು ಪುರಸ್ಕರಿಸಿ ;ಪೂಜೆ ಕಾಯಕವಲ್ಲ ಕಾಯಕವೇ ಪೂಜೆ' ಎಂದು ಹೇಳಿದರು. 'ವರ್ಕ್ ಈಸ್ ವರ್ಶಿಪ್' ಎಂಬ ಥಾಮಸ್ ಕಾರ್ಲ್ಸನ ಹೇಳಿಕೆ ಆರು ನೂರು ವರ್ಷಗಳ ಹಿಂದೆಯೇ ಆಯ್ದಕ್ಕಿ ಮಾರಯ್ಯ ಎಂಬ ಶರಣ 'ಕಾಯಕವೇ ಕೈಲಾಸ'ವೆಂದು ಘೋಷಿಸಿದ. ಬಸವಣ್ಣನವರು 'ನಮಿಸುವ ಕೈಗಳಿಗಿಂತ ದುಡಿಯುವ ಕೈಗಳೇ ಬಲಿಷ್ಠ' ಎಂದು ಹೇಳಿದ್ದು ಗಮನಾರ್ಹವಾಗಿದೆ. ಹೀಗೆ ಬಸವಾದಿ ಶರಣರೆಲ್ಲ ಕಾಯಕ ಜೀವಿಗಳಾಗಿ ಬದುಕಿದವರು. ಕಾಯಕವನ್ನು ತಮ್ಮ ಜೀವನ ವ್ರತವೆಂದು ಭಾವಿಸಿದವರು. ಕಾಯಕ ಸಂಸ್ಕೃತಿ ಎಲ್ಲ ಶರಣರ ಬೋಧನೆಯ ತಿರುಳಾಗಿದೆ. ಅವರ ಶಿಕ್ಷಣದ ಜೀವಾಳವಾಗಿದೆ.

ಶರಣರು ಕಾಯಕದಷ್ಟೇ ಅನನ್ಯ ಪ್ರೀತಿಯನ್ನು ತೋರಿದ ಇನ್ನೊಂದು ಸಿದ್ಧಾಂತವೆಂದರೆ ದಾಸೋಹ. ದಾಸೋಹವೆಂದರೆ ಹಂಚಿ ತಿನ್ನುವುದು. ಸತ್ಯ-ಶುದ್ಧ ಮನಸ್ಸಿನಿಂದ ಗುರು-ಲಿಂಗ-ಜಂಗಮ ಸೇವೆಗೆ ತನು ಮನ ಧನವನ್ನು ಅರ್ಪಿಸುವುದೇ ದಾಸೋಹ. ದಾಸೋಹದ ಭಕ್ತ ಅಂದರೆ ಶರಣ ತನ್ನೆಲ್ಲ ಗಳಿಕೆಯನ್ನು ತ್ರಿಕರಣ ಪೂರ್ವಕವಾಗಿ ಸಮಾಜಕ್ಕೆ ಅರ್ಪಿಸುವುದೇ ದಾಸೋಹ. ಉದಾಹರಣೆಗೆ, ಕಲಿತ ಜ್ಞಾನವನ್ನು ಸಮಾಜಕ್ಕೆ ಹಂಚುವುದು ಜ್ಞಾನ ದಾಸೋಹ. ಸತ್ಯ ಶುದ್ಧ ಭಾವದಿಮದ ಸಂಪಾದಿಸಿದ್ದನ್ನು ಹಸಿದವರ ಹಸಿವನ್ನು ನೀಗಿಸುವುದೇ ಅನ್ನ ದಾಸೋಹ. ಇಲ್ಲಿ ಯಾವುದೇ ಜಾತಿ-ಭೇದ, ಬಡವ-ಶ್ರೀಮಂತ ಎಂಬ ಭೇದವನ್ನು ಮಾಡಬಾರದು. ಈ ಎರಡೂ ದಾಸೋಹಗಳಲ್ಲಿ ತಾನು ಕೊಟ್ಟೆನೆಂಬ ಅಹಂಕಾರ ಇಣುಕಬಾರದು. ಅಹಂಕಾರ ಪಟ್ಟರೆ ಮಾಡಿದ ಎರಡೂ ದಾಸೋಹಗಳಿಗೆ ಅನಾದರ ತೋರಿದಂತೆ. ಶರಣರ ಈ ಸಿದ್ಧಾಂತ ಶೈಕ್ಷಣಿಕ ಮೌಲ್ಯವಾಗಿದೆ. ಹಂಚಿ ತಿನ್ನುವುದನ್ನು ಇಂದು ನಮ್ಮ ಶೈಕ್ಷಣಿಕ ಬದುಕಿನಲ್ಲಿ ಅವಶ್ಯ ಅಳವಡಿಸಿಕೊಳ್ಳಬೇಕಿದೆ.

ವೀರಶೈವ ಧರ್ಮದ ಅನುಯಾಯಿಗಳಿಗೆ ಕೆಲವು ಧಾರ್ಮಿಕ ಕಟ್ಟಳೆಗಳಿವೆ. ಇವನ್ನು ಅಷ್ಟಾವರಣ ಮತ್ತು ಪಂಚಾಚಾರಗಳೆಂದು ಕರೆಯುತ್ತಾರೆ. ಇವುಗಳ ಮೂಲಕ ಸಮಾಜದಲ್ಲಿ ಧಾರ್ಮಿಕ ಶಿಸ್ತನ್ನು ತರುವ ಪ್ರಯತ್ನವಿದೆ. ಅಷ್ಟಾವರಣಗಳು ಎಂಟು. ಇವುಗಳಲ್ಲಿ ಗುರು ಅಗ್ರಪೂಜೆ ಇದೆ. ಗುರುಪಥವಿಲ್ಲದೆ ಸಾಧಕನಿಗೆ ಮುಕ್ತಿ ಪಥ ಕಾಣಿಸುವುದಿಲ್ಲ. ವೀರಶೈವ ಧರ್ಮದಲ್ಲಿ ಗುರುಪಥವೇ ಮೊದಲು. ಈ ಗುರು ಶೂರ. ಸಾಧಕನಿಗೆ ಮಾಯಾ ಮೋಹದೊಂದಿಗೆ ಹೋರಾಡುವ ಶಕ್ತಿಯನ್ನು ಗುರುವೇ ಕರುಣಿಸುತ್ತಾನೆ. ಈ ಗುರುವಿಗೆ ಮೂರು ರೂಪುಗಳು. 1. ದೀಕ್ಷಾಗುರು-ಅಂದರೆ ಅಂಗದ ಮೇಲೆ ಲಿಂಗವನ್ನು ಸ್ಥಾಪಿಸುವುದು. 2. ಮೋಕ್ಷಗುರು-ಅಂದರೆ ಮನಸ್ಸಿಗೆ ಜ್ಞಾನದ ಅರಿವನ್ನು ನೀಡುವುದು. 3. ಜ್ಞಾನಗುರು- ಅಂದರೆ ಪ್ರಪಂಚದ ರಹಸ್ಯವನ್ನು ಮರ್ಮವನ್ನು ಹೇಳುವುದು. ನಿಜವಾದ ಗುರು ಪರಂಜ್ಯೋತಿಯಂತೆ. ಈ ಗುರುಕೃಪೆಯಿಂದಾಗಿ ಭಕ್ತರ ಹಾದಿಯಲ್ಲಿ ಬರುವ ಎಲ್ಲ ತೊಂದರೆಗಳು ನೀಗುತ್ತವೆ. ಚೆನ್ನಬಸವಣ್ಣ ಹೇಳುವಂತೆ 'ಗುರು ನಿಂತಲ್ಲಿ ಕಾಶಿ, ಗುರು ದರ್ಶನವೇ ಪೂಜೆ', ಗುರುವಿಗಿಂತ ದೊಡ್ಡವನು ಇನ್ನಿಲ್ಲ. ಇಡೀ ವಿಶ್ವದ ಮೂಲ ಚೇತನವನ್ನು ಮತ್ತು ತನ್ನನ್ನು ತಾನು ತಿಳಿಯಲು ನೆರವಾಗುವವನೇ ಗುರು.

ಶರಣರಲ್ಲಿ ಗುರು ಆಧ್ಯಾತ್ಮ ನಾಯಕ. ಸಾಧನಾ ಪಥದಲ್ಲಿ ಶಿಷ್ಯನನ್ನು ಕೊಂಡೊಯ್ಯುವ ಶಕ್ತಿ. ಗುರು ಶಿಷ್ಯರ ಸಂಬಂಧ ಆತ್ಮೀಯವಾಗಿದ್ದಷ್ಟೂ ಅರಿವಿನ ವಿಸ್ತಾರವು ಹೆಚ್ಚಾಗುತ್ತದೆ. ಶರಣರು ಗುರುವನ್ನು ವ್ಯಾಖ್ಯಾನಿಸಿರುವ ರೀತಿ ಅಂದಿಗೂ ಮಾದರಿ ಇಂದಿಗೂ ಮಾದರಿ. ಏಕೆಂದರೆ ಅಂದು ಸಹ ಗುರುವೇ ಶಿಷ್ಯನನ್ನು ಸರಿಯಾದ

Digitised by Bharatavani, CIIL

ಮಾರ್ಗದಲ್ಲಿ ಕೊಂಡೊಯ್ಯುತ್ತಿದ್ದ. ಇಂದು ಸಹ ಗುರುವೇ ಶಿಷ್ಯನನ್ನು ಸರಿ ಪಥದಲ್ಲಿ ಕೊಂಡೊಯ್ಯುವ ಶಕ್ತಿಯಾಗಿದ್ದಾನೆ. ಸ್ವಾಮಿ ವಿವೇಕಾನಂದರು ಹೇಳುವಂತೆ ಶಿಕ್ಷಕರೆಂದರೆ– 'ತ್ಯಾಗಶೀಲನಾಗಿರಬೇಕು, ಪವಿತ್ರ ಜೀವನ ನಡೆಸಬೇಕು, ನಿಸ್ವಾರ್ಥರಾಗಿರಬೇಕು, ವಿದ್ಯಾರ್ಥಿಗಳನ್ನು ಪ್ರೀತಿಸುವವನಾಗಿರಬೇಕು ಮತ್ತು ಎಲ್ಲ ಮತಗಳ ಸಾರ ಒಂದೇ ಎಂದು ಅರಿತಿರಬೇಕು'. ಈ ಎಲ್ಲವೂ ಗುರುವಿನಲ್ಲಿ ಮೇಳೈಸಿದಾಗ ಮಾತ್ರ ಆತ ಸಮಾಜಕ್ಕೆ ದಾರಿದೀಪವಾಗುತ್ತಾನೆ. ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ ಗುರುವನ್ನು ಎಷ್ಟು ಸ್ತುತಿಸಿದ್ದಾಳೆಂದರೆ, ವಿವೇಕಾನಂದರ ಮಾತುಗಳು ಇಲ್ಲಿ ಸಾರ್ಥಕವಾದಂತೆ ಭಾಸವಾಗುತ್ತವೆ. ಅಕ್ಕಮಹಾದೇವಿ ಗುರುವಿನ ಬಗ್ಗೆ ಹೇಳಿರುವ ಕೆಳಗಿನ ಮಾತುಗಳನ್ನು ನೋಡಬಹುದು–

"ನರಜನ್ಮ ತೊಡೆದು, ಹರಜನ್ಮ ಮಾಡಿದ ಗುರುವೆ,
ಭವ ಬಂಧನವ ಬಿಡಿಸಿ, ಪರಮ ಸುಖವ ತೋರಿದ ಗುರುವೆ,
ಭವಿ ಎಂಬುದ ತೊಡೆದು, ಭಕ್ತನೆಂದೆನಿಸಿದ ಗುರುವೆ,
ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೇ ಶರಣು"

ಈ ಗುರುಕಾರುಣ್ಯದಿಂದ ಅಜ್ಞಾನ ಹೋಗಿ ಜ್ಞಾನದ ದೀವಿಗೆ ಪ್ರಜ್ವಲಿಸುತ್ತದೆ. ಗುರುವಿನ ಕಾರುಣ್ಯವನ್ನು ಪಡೆದ ಭಕ್ತ ಗುರು ತೋರಿದ ಹಾದಿಯಲ್ಲಿ ನಡೆದು ತನ್ನಲ್ಲಿರುವ ಧೀಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಬೇಕು. ಇಂತಹ ಗುರುಗಳು ಅಂದೂ ಇದ್ದರು ಎಂದೆಂದಿಗೂ ಇರಬೇಕು ಎಂಬುದು ಶರಣರ ಚಿಂತನೆಯಾಗಿದೆ. ಎಲ್ಲ ಶರಣರು ಗುರುವಿಗೆ ವಂದಿಸಿದ್ದಾರೆ. ಗುರುವಿನ ಮಾರ್ಗದರ್ಶನಕ್ಕಾಗಿ ಹಾತೊರೆದಿದ್ದಾರೆ. ಶರಣರು ಹೇಳಿದಂತೆ ಗುರುಗಳು ಸಮಾಜದ ಪಥ ಪ್ರದರ್ಶಕರಾಗಿದ್ದಾರೆ.

ಪಂಚಾಚಾರಗಳಲ್ಲಿ ಒಂದಾದ ಸದಾಚಾರ ಶರಣರ ಒಂದು ಶೈಕ್ಷಣಿಕ ಮೌಲ್ಯವಾಗಿತ್ತು. ಸಚ್ಚಾರಿತ್ರ್ಯ ಉಳ್ಳವನೇ ಸದಾಚಾರಿ. ಶಿವಭಕ್ತರಿಗೆ ಸತ್ಯ ಶುದ್ಧನಡೆ ಅನಿವಾರ್ಯ. ಯಾಚನೆ ಮಾಡುವುದು, ಕಾಯಕ ಮಾಡದೆ ತಿನ್ನುವುದು, ಇನ್ನೊಬ್ಬರ ಶ್ರಮದ ಫಲವನ್ನು ತಾನು ಅನುಭವಿಸುವುದು, ಕದಿಯುವುದು, ಹಿಂಸಾಕಾರ್ಯಗಳಲ್ಲಿ ತೊಡಗುವುದು ಭಕ್ತರಿಗೆ ಸಲ್ಲದ ನಡವಳಿಕೆಗಳು. ಬಸವಣ್ಣನವರು ಹೇಳುವಂತೆ 'ಆಚಾರವೇ ಸ್ವರ್ಗ ಅನಾಚಾರವೇ ನರಕ'. ಆಚಾರಗಳೆಂದರೆ ಋಜುಮಾರ್ಗದಲ್ಲಿ ಸಾಗುವುದು ಎಂದರ್ಥ. ಎಲ್ಲ ಶರಣರ ಈ ಋಜುಮಾರ್ಗವನ್ನು ಸಮರ್ಥಿಸಿದ್ದಾರೆ.

ವಚನ ಸಾಹಿತ್ಯದಲ್ಲಿ ಬರುವ ಶೈಕ್ಷಣಿಕ ಚಿಂತನೆಗಳನ್ನು ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ರೂಢಿಸಿಕೊಳ್ಳುವ ಅವಶ್ಯಕತೆ ಇದೆ. ಶರಣರ ಶೈಕ್ಷಣಿಕ ಚಿಂತನೆಗಳು ಜೀವನ ಮೌಲ್ಯಗಳಾಗಿವೆ. ಶರಣರ ಒಂದೊಂದು ವಚನದಲ್ಲೂ ಶಿಕ್ಷಣವಿದೆ, ಮೌಲ್ಯವಿದೆ, ಪಾಠವಿದೆ, ಇವನ್ನು ಅರ್ಥಮಾಡಿಕೊಂಡು ಬದುಕಿನಲ್ಲಿ ಅಳವಡಿಸಿಕೊಂಡಿದ್ದಾದರೆ, ವ್ಯಕ್ತಿಯ ಬದುಕು ಮತ್ತು ಸಾಮಾಜಿಕ ಬದುಕು ಹಸನಾಗುತ್ತವೆ. ಶರಣರು ಆಧ್ಯಾತ್ಮಿಕ ಸಾಧಕರಷ್ಟೇ ಅಲ್ಲ, ಶ್ರೇಷ್ಠ ಸಮಾಜ ಸುಧಾರಕರೂ ಆಗಿರುವುದರಿಂದ ಅವರ ದೃಷ್ಟಿ ತಾವು ಬದುಕುತ್ತಿದ್ದ ಸಮಾಜದ ಮೇಲೆ ಸದಾ ಇರುತ್ತಿತ್ತು. ಸಮಾಜ ಆದರ್ಶ ಸಮಾಜವಾಗಬೇಕೆಂಬ ಕನಸು ವಚನಕಾರರದು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ತಾನು ಸುಧಾರಿಸಿಕೊಂಡು ಸಮಾಜದ ಸುಧಾರಣೆಗೆ ಪ್ರಯತ್ನಶೀಲನಾಗಬೇಕೆಂದು ಅವರ ಮನಸ್ಸು ತುಡಿಯಿತು. ಹೀಗಾಗಿ ವಚನ ಸಾಹಿತ್ಯದಲ್ಲಿ ಸೋದರ ಭಾವನೆ, ಸರ್ವಸಮಾನತೆ, ಸರ್ವೋದಯ ಸಿದ್ಧಾಂತ ಮತ್ತು ಜಾತ್ಯತೀತ ಸಮಾಜದ ಚಿಂತನೆಗಳು ಕಾಣುತ್ತವೆ. ಈ ಎಲ್ಲವೂ ಮಾನವೀಯತೆಯ ಆಧಾರದ ಮೇಲೆ ನೆಲೆಗೊಳ್ಳಬೇಕು ಎಂಬುದು ಇವರ ಚಿಂತನೆಯಾಗಿದೆ.

–ಡಾ. ತಿಪ್ಪೇಸ್ವಾಮಿ

## ವಯಸ್ಕಾವಧಿ

'ಅಡಲ್ಟ್' ಎಂಬ ಪದವು ಲ್ಯಾಟಿನ್ ಭಾಷೆಯ 'Adolescere' ಎಂಬ ಪದದಿಂದ ಬಂದಿದೆ. 'ಅಡೋಲೆಸರ್' ಎಂದರೆ 'ಬೆಳೆದು ಪಕ್ವವಾಗುವುದು' ಎಂದರ್ಥ. ಆದ್ದರಿಂದ ಇದನ್ನು 'ವಯಸ್ಕ' ಎಂದು ಸಹ ಕರೆಯುವರು. ವಿಕಾಸ ಮನೋವಿಜ್ಞಾನಿಗಳು ಮಾನವನ ಜೀವಿತ ಅವಧಿಯನ್ನು ಗರ್ಭದಿಂದ ಗೋರಿಯವರೆಗೆ ವಿವಿಧ ಅವಧಿಗಳನ್ನಾಗಿ ವಿಂಗಡಿಸಿದ್ದಾರೆ. ಅದರಂತೆ ಸುಮಾರು 21 ವರ್ಷದಿಂದ 60 ವರ್ಷದವರೆಗಿನ ಅವಧಿಯನ್ನು 'ವಯಸ್ಕಾವಧಿ' ಎಂದು ಕರೆಯುವರು.

ವಯಸ್ಕಾವಧಿಯು ವ್ಯಕ್ತಿಯ ಜೀವನದಲ್ಲಿ ಉಳಿದೆಲ್ಲಾ ಅವಧಿಗಳಿಗಿಂತ ಬಹಳ ದೀರ್ಘವಾದ ಅವಧಿಯಾಗಿರುತ್ತದೆ. ಇದನ್ನು ಮುಖ್ಯವಾಗಿ ವಯಸ್ಕಾವಧಿ, ಮಧ್ಯ ವಯಸ್ಕಾವಧಿ, ವೃದ್ಧಾಪ್ಯ ಸಮೀಪ ಅಥವಾ ಉತ್ತರ ವಯಸ್ಕಾವಧಿ ಎಂದು ಮೂರು ಹಂತಗಳಾಗಿ ವರ್ಗೀಕರಿಸಲಾಗಿದೆ. ವಯಸ್ಕಾವಧಿಯಲ್ಲಿ ವ್ಯಕ್ತಿ ತನ್ನ ಉದ್ಯೋಗ, ಸಂಸಾರ ಮತ್ತು ಸಮಾಜದ ನಿರೀಕ್ಷೆಗಳಿಗೆ ಸರ್ಮಪಕವಾಗಿ ಮತ್ತು ತೃಪ್ತಿಕರವಾಗಿ ಸಮಾಯೋಜನೆ ಗೊಳ್ಳಬೇಕಾಗುತ್ತದೆ. ವಯಸ್ಕರು ಎಂದರೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಪರಿಪಕ್ವತೆಯನ್ನು ಹೊಂದಿ ಸಮಾಜದಲ್ಲಿ ಜವಾಬ್ದಾರಿಯುತ ಪಾತ್ರಗಳನ್ನು ನಿರ್ವಹಿಸಲು ಸಿದ್ಧವಾಗಿರುವಂತಹ ವ್ಯಕ್ತಿಗಳಾಗಿದ್ದಾರೆ ಎಂದರ್ಥವಾಗುತ್ತದೆ. ವಯಸ್ಕನು ಜೀವನ ಸಂಗಾತಿ, ತಂದೆ ತಾಯಿ ಮತ್ತು ಕುಟುಂಬದ ಯಜಮಾನ ಮತ್ತು ಜವಾಬ್ದಾರಿಯುತ ನಾಗರಿಕ ಹೀಗೆ ಹಲವಾರು ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಹಾಗೂ ತನ್ನ ಪಾತ್ರಗಳಿಗೆ ಅನುಗುಣವಾದ ಮನೋಧೋರಣೆ, ಆಸಕ್ತಿಗಳು ಮತ್ತು ಮೌಲ್ಯಗಳನ್ನು ಅಳವಡಿಸಿ ಕೊಳ್ಳಬೇಕಾಗುತ್ತದೆ.

Digitised by Bharatavani, CIIL

ತಾರುಣ್ಯಾವಧಿ ಹಂತದಿಂದ ವಯಸ್ಕಾವಧಿಯ ಹಂತಕ್ಕೆ ತಲುಪುತ್ತಿದ್ದಂತೆಯೇ ಯುವಕರು ತಮ್ಮ ಮುಂದಿನ ಸಂಸಾರಿಕ ಜೀವನಕ್ಕಾಗಿ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಲು ಪ್ರಾರಂಭಿಸುತ್ತಾರೆ. ಮತ್ತು ತಮ್ಮ ಸಂಸಾರದ ಜವಾಬ್ದಾರಿಯನ್ನು ಹೊರಲು ಸಿದ್ಧರಾಗುತ್ತಾರೆ. ಹಾಗೆಯೆ ಯುವತಿಯರು ತಾರುಣ್ಯಾವಧಿಯಿಂದ ವಯಸ್ಕಾವಧಿಗೆ ಬರುವ ಹೊತ್ತಿಗೆ ಕುಟುಂಬವನ್ನು ನಿರ್ವಹಿಸುವ ಮತ್ತು ತಾಯಿಯಾಗಿ ಕರ್ತವ್ಯ ನಿರ್ವಹಿಸುವ ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ವಯಸ್ಕಾವಧಿಯಲ್ಲಿ ಗಮನಿಸಬಹುದಾದ ದೈಹಿಕ, ಮಾನಸಿಕ, ಸಾಮಾಜಿಕ ಮಾರ್ಪಾಟುಗಳು ಕಂಡುಬರುತ್ತವೆ.

**ದೈಹಿಕಮಾರ್ಪಾಟುಗಳು:** ತಾರುಣ್ಯವಧಿಯಲ್ಲಿ ಪ್ರಾರಂಭವಾಗುವಂತಹ ದೈಹಿಕ ಪರಿಪಕ್ವತೆಯ ಪ್ರಕ್ರಿಯೆ ವಯಸ್ಕಾವಧಿಗೆ ತಲುಪಿದಾಗ ಪೂರ್ಣಗೊಂಡು ವ್ಯಕ್ತಿ ದೈಹಿಕವಾಗಿ ಪರಿಪಕ್ವತೆಯನ್ನು ಹೊಂದುತ್ತಾನೆ. 21 ರಿಂದ 35 ವಯಸ್ಸಿನ ಅವಧಿಯನ್ನು 'ಪ್ರಾರಂಭದ 'ವಯಸ್ಕಾವಧಿ ಎಂದು ಕರೆಯುವರು. ಈ ಅವಧಿಯಲ್ಲಿ ಜೀವನದ ಇತರ ವಿವಿಧ ಅವಧಿಗಳಿಗೆ ಹೋಲಿಸಿದಾಗ ವ್ಯಕ್ತಿಯು ದೈಹಿಕವಾಗಿ ಶಕ್ತನು ಮತ್ತು ಸಮರ್ಥನೂ ಆಗಿರುವುದನ್ನು ಕಾಣಬಹುದು. ಈ ಅವಧಿಯಲ್ಲಿ ವ್ಯಕ್ತಿ ತಾನು ತಾರುಣ್ಯವಧಿಯಲ್ಲಿ ಕಂಡಂತಹ ಕನಸುಗಳನ್ನು, ಗುರಿಗಳನ್ನು ಮತ್ತು ತೆಗೆದುಕೊಂಡ ನಿರ್ಧಾರಗಳನ್ನು ವಾಸ್ತವಿಕತೆಯಲ್ಲಿ ಸಾಕಾರಗೊಳಿಸಲು ಪ್ರಯತ್ನಿಸುತ್ತಾನೆ. ಅದಕ್ಕಾಗಿ ತನ್ನ ಸಣ್ಣಪುಟ್ಟ ಆಸೆ ಆಮಿಷಗಳನ್ನು ಬದಿಗೊತ್ತಿ ಜೀವನದ ಮೌಲ್ಯಗಳು ಮತ್ತು ನೀತಿ ನಿಯಮಗಳಡಿಯಲ್ಲಿ ತನ್ನ ಕನಸುಗಳನ್ನು ಮತ್ತು ಗುರಿಗಳನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ವಯಸ್ಕಾವಧಿಯಲ್ಲಿ ವ್ಯಕ್ತಿಯ ದೈಹಿಕ ಸಾಮರ್ಥ್ಯ ಮುಂಚಿನ ವಿವಿಧ ವಿಕಾಸದ ಅವಧಿಗಳಿಗಿಂತ ಹೆಚ್ಚಾಗಿರುತ್ತದೆ ಮತ್ತು ವಯಸ್ಕಾವಧಿಯಲ್ಲಿ ವ್ಯಕ್ತಿಯ ಆರೋಗ್ಯ ಉತ್ತಮವಾಗಿದ್ದು ರೋಗ ನಿರೋಧಕ ಶಕ್ತಿಯು ಹೆಚ್ಚಾಗಿರುವುದು ಕಂಡು ಬರುತ್ತದೆ.

ಸುಮಾರು 35 ರಿಂದ 45 ವರ್ಷಗಳ ಅವಧಿಯನ್ನು ಮಧ್ಯ ವಯಸ್ಕಾವಧಿಯೆಂದು ಪರಿಗಣಿಸಲಾಗಿದೆ. ಈ ವಯೋಮಾನದ ವಯಸ್ಕರಲ್ಲಿ ಹಿಂದಿನ ಅವಧಿಗಿಂತ ದೈಹಿಕ ಸಾಮರ್ಥ್ಯಗಳು ಕ್ರಮೇಣ ಕಡಿಮೆಯಾಗುತ್ತವೆ. ಮತ್ತು ಈ ಅವಧಿಯಲ್ಲಿ ಮಧ್ಯ ವಯಸ್ಕರು ಕೆಲಸಗಳನ್ನು ಮಾಡುವಾಗ ದೈಹಿಕವಾಗಿ ಬೇಗ ಆಯಾಸಗೊಳ್ಳುತ್ತಾರೆ. ಮತ್ತು ಹಿಂದಿನ ಹಾಗೆ ನಿರಂತರವಾಗಿ ಕೆಲಸ ಮಾಡಲು ಆಗದೆ ಮಧ್ಯ ಮಧ್ಯ ವಿಶ್ರಾಂತಿಯನ್ನು ಪಡೆಯಲು ಬಯಸುತ್ತಾರೆ. ಈ ಅವಧಿಯಲ್ಲಿ ಪಂಚೇಂದ್ರಿಯಗಳ ಸಾಮರ್ಥ್ಯವೂ ಕಡಿಮೆಯಾಗುತ್ತದೆ. ಅದನ್ನು ನಿಭಾಯಿಸಲು ವಯಸ್ಕರು ಕೆಲವೊಂದು ಸಲಕರಣೆಗಳನ್ನು (ಕನ್ನಡಕ, ಶ್ರವಣ ಉಪಕರಣಗಳು, ಮುಂತಾದವು) ಬಳಸಲು ಪ್ರಾರಂಭಿಸುತ್ತಾರೆ. ಈ ಅವಧಿಯಲ್ಲಿ ರೋಗ ನಿರೋಧಕ ಶಕ್ತಿಯು ಕಡಿಮೆಯಾಗುವುದರಿಂದ ಮಧ್ಯವಯಸ್ಕರು ಪದೇ ಪದೇ ಅನಾರೋಗ್ಯದಿಂದ ಬಳಲುವುದನ್ನು ಕಾಣಬಹುದು.

ವಯಸ್ಕಾವಧಿಯಲ್ಲಿನ ಕೊನೆಯ ಹಂತವೆಂದರೆ 'ಉತ್ತರ ವಯಸ್ಕಾವಧಿ' ಈ ಅವಧಿಯ ವಯಸ್ಕರು ಸುಮಾರು 45ರಿಂದ 60 ವಯಸ್ಸಿನವರಾಗಿರುತ್ತಾರೆ. ಇವರಲ್ಲಿ ದೈಹಿಕ ಶಕ್ತಿ ಸಾಮರ್ಥ್ಯಗಳು ಬಹಳಷ್ಟು ಕ್ಷೀಣಗೊಳ್ಳುತ್ತವೆ. ರೋಗ ನಿರೋಧಕ ಶಕ್ತಿಯು ಕಡಿಮೆಯಾಗಿ ಅನಾರೋಗ್ಯದಿಂದ ಬಳಲುತ್ತಾರೆ. ಅನಾರೋಗ್ಯದಿಂದಾಗಿ ಜೀರ್ಣ ಶಕ್ತಿಯು ಕುಂಠಿತಗೊಳ್ಳುತ್ತದೆ. ಆರೋಗ್ಯದಲ್ಲಿ ಅಸ್ತವ್ಯಸ್ತತೆ ಕಂಡುಬರುತ್ತದೆ. ಔಷದಿ ಸೇವನೆ ಹೆಚ್ಚಾಗುತ್ತದೆ, ಅಲ್ಲದೆ ಈ ಅವಧಿಯ ವಯಸ್ಕರಲ್ಲಿ ಸಾಮಾನ್ಯವಾಗಿ ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು ಕಂಡು ಬರುತ್ತವೆ.

ಸುಮಾರು 40 ರಿಂದ 50ನೇ ವಯಸ್ಸಿನ ಪುರುಷ ಮತ್ತು ಸ್ತ್ರೀಯರಿಬ್ಬರಲ್ಲೂ ಸಂತಾನೋತ್ಪತ್ತಿ ಶಕ್ತಿ ಕ್ಷೀಣವಾಗುತ್ತದೆ. ಇದರ ಫಲವಾಗಿ ಪುರುಷರಲ್ಲಿ ವೀರ್ಯದ ಉತ್ಪಾದನೆ ಕಡಿಮೆಯಾಗುತ್ತದೆ. ಮತ್ತು ಸ್ತ್ರೀಯರ ಋತುಚಕ್ರದಲ್ಲಿ ಏರುಪೇರಾಗುವುದು ಪ್ರಾರಂಭವಾಗುತ್ತದೆ. ಅಲ್ಲದೆ 50ನೇ ವಯಸ್ಸಿನಲ್ಲಿ ಋತುಸ್ರಾವ ನಿಂತು ಹೋಗುತ್ತದೆ.

**ಮಾನಸಿಕ ಮಾರ್ಪಾಟುಗಳು:**

ಬಾಲ್ಯಾವಧಿ ಮತ್ತು ತಾರುಣ್ಯಾವಧಿಗಳಲ್ಲಿ ವ್ಯಕ್ತಿಯ ವಿವಿಧ ಬೆಳವಣಿಗೆಗಳು ತೀವ್ರಗತಿಯಲ್ಲಿ ಕಂಡುಬರುತ್ತದೆ. ಈ ಅವಧಿಯಲ್ಲಿ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗಳು ಸಂಪೂರ್ಣ ಬೆಳವಣಿಗೆ ಹೊಂದಿ ಪರಿಪೂರ್ಣತೆಯೆಡೆಗೆ ಬಂದಿರುತ್ತವೆ. ಆದ್ದರಿಂದ ಈ ಅವಧಿಯನ್ನು ಬೆಳವಣಿಗೆಗಳು 'ನೆಲೆನಿಲ್ಲುವ' ಅವಧಿಯೆಂದು ಕರೆಯುತ್ತಾರೆ. ಸಾಮಾನ್ಯವಾಗಿ ವಯಸ್ಕಾವಧಿ ಹಂತದಲ್ಲಿ ಕೆಲವರು ಪದವಿಯ ವಿದ್ಯಾಭ್ಯಾಸವನ್ನು ಮುಗಿಸಿ ಉನ್ನತ ವ್ಯಾಸಂಗಕ್ಕಾಗಿ ಸಿದ್ಧತೆ ನಡೆಸುತ್ತಿದ್ದರೆ ಮತ್ತೆ ಕೆಲವರು ತಮ್ಮಲ್ಲಿರುವ ಆಸಕ್ತಿ ಮತ್ತು ಅಭಿಕ್ಷಮತೆಗಳನ್ನು ಆಧರಿಸಿ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಹಂತದಲ್ಲಿರುತ್ತಾರೆ. ಈ ಅವಧಿಯಲ್ಲಿ ವಯಸ್ಕರು ತಮ್ಮ ಕಲ್ಪನೆ ಮತ್ತು ಬಯಕೆಯಂತೆ ಬಾಳಸಂಗಾತಿಯನ್ನು ಆಯ್ಕೆಮಾಡಿಕೊಂಡು ಸಂಸಾರಿಕ ಜೀವನಕ್ಕೆ ಪಾದರ್ಪಣೆ ಮಾಡುವ ಉತ್ಸುಕತೆಯಲ್ಲಿರುತ್ತಾರೆ. ಈ ಅವಧಿಯಲ್ಲಿ ವಯಸ್ಕರು ಸಾಮಾಜಿಕ ಜೀವನಕ್ಕೆ ಸರಿಹೊಂದುವಂತಹ ಸೂಕ್ತ ಉದ್ಯೋಗವನ್ನು ಆರಿಸಿಕೊಳ್ಳುವಂತಹ ವಿವಿಧ ಸಂದರ್ಭಗಳಲ್ಲಿ ಮಾನಸಿಕ ಗೊಂದಲಕ್ಕೆ ಮತ್ತು ದ್ವಂದ್ವಕ್ಕೆ ಒಳಗಾಗುತ್ತಾರೆ. ಆದ್ದರಿಂದಲೇ ಮನೋವಿಜ್ಞಾನಿಗಳು ಈ ಅವಧಿಯನ್ನು 'ಸಮಸ್ಯಾ ಅವಧಿ ಅಥವಾ ಸಂವೇಗಾತ್ಮಕ ಬಿಕ್ಕಟ್ಟಿನ ಕಾಲ' ಎಂದು ಕರೆಯುತ್ತಾರೆ. ಈ ಅವಧಿಯಲ್ಲಿ ವ್ಯಕ್ತಿ ಒಂದಾದ ಅನಂತರ ಮತ್ತೊಂದರಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾನೆ. ಒಂದು ಸಮಸ್ಯೆಗೆ ಪರಿಹಾರ ಕಂಡುಕೊಂಡ ಅನಂತರ ಮತ್ತೊಂದು ಸಮಸ್ಯೆಯನ್ನು ಎದುರಿಸಲು ಸಿದ್ಧನಾಗುತ್ತಾನೆ. ಒಟ್ಟಿನಲ್ಲಿ ಈ ಅವಧಿಯಲ್ಲಿ ಸಮಸ್ಯೆ ಪರಿಹರಿಸಿಕೊಳ್ಳುವ ಪ್ರಯತ್ನವು ನಿರಂತರವಾಗಿ ಕಂಡುಬರುತ್ತದೆ.

Digitised by Bharatavani, CIIL

ಮಾನವ ಜೀವನದ ಹಿಂದಿನ ಅವಧಿಗಳಿಗೆ ಹೋಲಿಸಿದಾಗ ವಯಸ್ಕಾವಧಿಯಲ್ಲಿ ವ್ಯಕ್ತಿ ತನ್ನ ವೈಯಕ್ತಿಕ ಮತ್ತು ಇತರರ ಅನುಭವಗಳನ್ನು ಆಧರಿಸಿ ತನ್ನ ಭವಿಷ್ಯದ ಬಗ್ಗೆ ಬುದ್ಧಿವಂತಿಕೆಯಿಂದ ಕೂಡಿದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾನೆ. ಈ ನಿರ್ಣಯಗಳು ಹೆಚ್ಚು ವಾಸ್ತವಿಕತೆ ಮತ್ತು ನೈಜತೆಯಿಂದ ಕೂಡಿರುತ್ತವೆ. ವಯಸ್ಕರಲ್ಲಿ ಹೊಸ ಹೊಸ ವಿಚಾರಗಳನ್ನು ಅರ್ಥೈಸಿಕೊಳ್ಳುವ ಮತ್ತು ಅಳವಡಿಸಿಕೊಳ್ಳುವ ಸಾಮರ್ಥ್ಯ ಉತ್ತಮವಾಗಿರುತ್ತದೆ, ಅಲ್ಲದೆ ನಮ್ಯವಾಗಿ ಆಲೋಚಿಸುತ್ತಾರೆ. ಒಂದು ಸಮಸ್ಯೆಯು ಎದುರಾದಾಗ ಅದರ ಬಗ್ಗೆ ಆಲೋಚಿಸಿ, ವಿವೇಚಿಸಿ ಹಲವಾರು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ಈ ಪರಿಹಾರಗಳು ವಾಸ್ತವಿಕತೆಯಿಂದ ಕೂಡಿರುತ್ತವೆ.

**ಸಾಮಾಜಿಕ ಮಾರ್ಪಾಟುಗಳು:**

ವಯಸ್ಕಾವಧಿಯಲ್ಲಿ ವ್ಯಕ್ತಿಗಳು ಸಮಾಜದಲ್ಲಿ ಕೆಲವೊಂದು ಸೂಕ್ತ ಸ್ಥಾನಮಾನಗಳನ್ನು ಪಡೆಯುತ್ತಾರೆ. ಇದರಿಂದಾಗಿ ಅವರು ನಿರ್ವಹಿಸಬೇಕಾದ ಜವಾಬ್ದಾರಿ ಮತ್ತು ಕರ್ತವ್ಯಗಳು ಹೆಚ್ಚಾಗುತ್ತವೆ. ಅಂದರೆ ವಯಸ್ಕರು ಸಾಮಾಜಿಕ ಸಮೂಹದ ಸದಸ್ಯರಾಗಿ, ಉತ್ತಮ ಪೌರರಾಗಿ, ಉದ್ಯೋಗಸ್ಥರಾಗಿ, ಸಂಸಾರಿಕರಾಗಿ, ಪೋಷಕರಾಗಿ, ಸಮಾಜ ಮತ್ತು ಸಂಸ್ಕೃತಿ ನಿರೀಕ್ಷಿಸುವ ನಿಟ್ಟಿನಲ್ಲಿ ತಮ್ಮ ಪಾತ್ರಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಈ ಅವಧಿಯಲ್ಲಿ ವ್ಯಕ್ತಿ ಸಾಮಾಜಿಕ ಬಾಂಧವ್ಯಗಳನ್ನು ಬೆಳೆಸಿಕೊಳ್ಳಲು ಇಚ್ಛಿಸುವಾಗ ದೀರ್ಘಕಾಲಿಕ ಆಗು ಹೋಗುಗಳನ್ನು ಪರಿಗಣಿಸಿ ತನ್ನ ವೈಯಕ್ತಿಕ ಮತ್ತು ಸಾಮಾಜಿಕ ಬಾಂಧವ್ಯಗಳನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುತ್ತಾನೆ. ಇದು ಆತನು ಪರಾವಲಂಬಿತನದಿಂದ ಸ್ವಾವಲಂಬಿತನಕ್ಕೆ ಮಾರ್ಪಾಟುಗೊಳ್ಳುತ್ತಿರುವ ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ವಯಸ್ಕಾವಧಿಯಲ್ಲಿ ವಯಸ್ಕರು ಬದಲಾದ ಜೀವನ ಸಂದರ್ಭ ಮತ್ತು ಜೀವನ ಶೈಲಿಗೆ ಅನುಗುಣವಾಗಿ ಹೊಸ ಹೊಸ ಕೌಶಲ್ಯಗಳನ್ನು ಕಲಿತು ಅಳವಡಿಸಿಕೊಳ್ಳಬೇಕಾಗುತ್ತದೆ.

**ಅಭಿರುಚಿಗಳಲ್ಲಿ ಮಾರ್ಪಾಟುಗಳು:**

ವಯಸ್ಕಾವಧಿಯ ವ್ಯಕ್ತಿಗಳ ಅಭಿರುಚಿಗಳಲ್ಲಿ ಅನೇಕ ಬದಲಾವಣೆಗಳು ಮತ್ತು ಭಿನ್ನತೆಗಳು ಕಂಡುಬರುತ್ತವೆ. ವ್ಯಕ್ತಿ ತಾರುಣ್ಯಾವಧಿಯಲ್ಲಿ ಸ್ವತಃ ಭಾಗವಹಿಸಿ ಆನಂದಪಡುತ್ತಿದ್ದಂತಹ ಕ್ರೀಡೆಗಳಾದ ನೃತ್ಯ, ಮನೋರಂಜನೆ, ಸಂಗೀತ ಹಾಡುವುದು, ಅಂಗ ಸಾಧನೆ ಮುಂತಾದ ಚಟುವಟಿಕೆಗಳಲ್ಲಿ ಅಭಿರುಚಿ ಕ್ಷೀಣಿಸುತ್ತಾ ಬರುತ್ತದೆ. ಅವುಗಳಿಗೆ ಬದಲಾಗಿ ಪ್ರೇಕ್ಷಕನಾಗಿ, ನೋಡಿ ಆನಂದಿಸುವಂತಹ ಅಭಿರುಚಿಗಳಾದ ಸಂಗೀತ ಕೇಳುವುದು, ಸಾಹಿತ್ಯ ಓದುವುದು, ಚಲನ ಚಿತ್ರಗಳು ಮತ್ತು ಕ್ರೀಡೆಗಳನ್ನು ವೀಕ್ಷಿಸುವುದು ಮುಂತಾದ ಚಟುವಟಿಕೆಗಳಲ್ಲಿ ಅಭಿರುಚಿ ಕಂಡುಬರುತ್ತದೆ. ನಲ್ವತ್ತನೇ ವಯಸ್ಸಿನ ಆನಂತರ ಪುರುಷ ಮತ್ತು ಸ್ತ್ರಿಯರಲ್ಲಿ ಲೈಂಗಿಕ ಆಸಕ್ತಿ ಮತ್ತು ಅಭಿರುಚಿ ತಗ್ಗುತ್ತಾ ಬರುತ್ತದೆ. ವಯಸ್ಕಾವಧಿಯಲ್ಲಿ ಪುರುಷರು ದೇಹದ ಆಕಾರ, ಎತ್ತರ, ರೂಪದ ಬಗ್ಗೆ ಹೆಚ್ಚು ಅಭಿರುಚಿವುಳ್ಳವರಾಗಿರುತ್ತಾರೆ. ಮಹಿಳೆಯರು ಉಡುಗೆ– ತೊಡುಗೆ– ಸೌಂದರ್ಯದ ಬಗ್ಗೆ ಅಭಿರುಚಿಯನ್ನು ಉಳ್ಳವರಾಗಿರುತ್ತಾರೆ. ಭೌತಿಕ ವಸ್ತುಗಳನ್ನು ಸಂಗ್ರಹಿಸುವಲ್ಲಿ ಮಹಿಳೆಯರು ಮತ್ತು ಪುರುಷರಿಬ್ಬರಲ್ಲೂ ಅಭಿರುಚಿ ಕಂಡು ಬರುತ್ತದೆ.

**ಆರೋಗ್ಯದಲ್ಲಿನ ಮಾರ್ಪಾಟುಗಳು:**

ವ್ಯಕ್ತಿ ಮಧ್ಯ ವಯಸ್ಕಾವಧಿಯ ಹಂತಕ್ಕೆ ತಲುಪುತ್ತಿದ್ದ ಹಾಗೆಯೇ ದೈಹಿಕ ಶಕ್ತಿ ಕುಗ್ಗುವುದಲ್ಲದೆ ರೋಗ ನಿರೋಧಕ ಶಕ್ತಿಯು ಕಡಿಮೆಯಾಗುತ್ತಾ ಬರುತ್ತದೆ. ಇದರಿಂದಾಗಿ ಕೆಲವೊಂದು ಆರೋಗ್ಯದ ತೊಂದರೆಗಳನ್ನು ವ್ಯಕ್ತಿ ಎದುರಿಸುತ್ತಾನೆ. ಅವುಗಳೆಂದರೆ ಹೃದಯ ಸಂಬಂಧಿ ಕಾಯಿಲೆಗಳು, ಅಧಿಕ ರಕ್ತದೊತ್ತಡ, ಬೊಜ್ಜು, ಹಸಿವಿಲ್ಲದಿರುವುದು, ನಿದ್ರೆ ಬಾರದಿರುವುದು, ಅತಿಯಾದ ಆಯಾಸ, ಅಂಗಾಗಗಳ ಸಂವೇದನಾ ತೀಕ್ಷ್ಣತೆ ಕಡಿಮೆಯಾಗುವಿಕೆ, ಮುಂತಾದವುಗಳು. ಸುಮಾರು ನಲವತ್ತೈದು ವರ್ಷ ತುಂಬುತ್ತಿದ್ದ ಹಾಗೆಯೇ ವ್ಯಕ್ತಿಯಲ್ಲಿ ಅಶಕ್ತತೆ, ಅಸಮರ್ಥತೆ, ಮತ್ತು ಅಪ್ರಯೋಜಕನಾಗುತ್ತಿದ್ದೇನೆ ಎಂಬ ನಕಾರಾತ್ಮಕ ಭಾವನೆಗಳು ಮನಸ್ಸಿನಲ್ಲಿ ಉದ್ಭವಿಸಬಹುದು. ಇದರಿಂದ ವ್ಯಕ್ತಿ ಆತನು ಮಾನಸಿಕ ಖಿನ್ನತೆಗೆ ಒಳಗಾಗುತ್ತಾನೆ. ವಯಸ್ಕಾವಧಿಯಲ್ಲಿ ಕುಟುಂಬ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ವಿವಿಧ ಜವಾಬ್ದಾರಿ ಮತ್ತು ಪಾತ್ರಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕಾಗಿರುವುದರಿಂದ ಕೆಲವೊಮ್ಮೆ ವ್ಯಕ್ತಿಯಲ್ಲಿ ಅತಿಯಾದ ಮಾನಸಿಕ ಒತ್ತಡ ಉಂಟಾಗುತ್ತದೆ.

**ಸಮಾಯೋಜನೆ:** ವ್ಯಕ್ತಿ ತಾನು ವಾಸಿಸುವ ವಾತಾವರಣಕ್ಕೆ ಮತ್ತು ಸನ್ನಿವೇಶಕ್ಕೆ ತಕ್ಕ ಹಾಗೇ ಹೊಂದಿಕೊಳ್ಳುವ ಪ್ರಕ್ರಿಯೆಯನ್ನು 'ಸಮಾಯೋಜನೆ' ಎನ್ನುವರು. ವಯಸ್ಕಾವಧಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಹೊಸದಾದ ಜವಾಬ್ದಾರಿ ಮತ್ತು ಪಾತ್ರಗಳಿಗೆ ಸಮಾಜ ಮತ್ತು ಸಂಸ್ಕೃತಿ ನಿರೀಕ್ಷಿಸುವ ರೀತಿಯಲ್ಲಿ ಸಮರ್ಪಕವಾಗಿ ಸಮಾಯೋಜನೆಗೊಳ್ಳಬೇಕಾಗುತ್ತದೆ. ವಯಸ್ಕರಲ್ಲಿ ತಾವು ನಿರ್ವಹಿಸಬೇಕಾದ ಜವಾಬ್ದಾರಿ ಮತ್ತು ಪಾತ್ರಗಳ ಬಗ್ಗೆ ಸಂಪೂರ್ಣವಾದ ತಿಳುವಳಿಕೆಯಿದ್ದಾಗ ಉತ್ತಮವಾದ ಸಮಾಯೋಜನೆ ಕಂಡು ಬರುತ್ತದೆ. ಒಂದು ವೇಳೆ ತಾವು ನಿರ್ವಹಿಸುವ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ಇಲ್ಲದೆ ಗೊಂದಲವಿದ್ದರೆ ಅಪಸಮಾಯೋಜನೆ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಯಸ್ಕಾವಧಿಯಲ್ಲಿ ವೃತ್ತಿ ಮತ್ತು ದಾಂಪತ್ಯಕ್ಕೆ ಸಂಬಂಧಿಸಿದಂತೆ ಸಮಾಯೋಜನೆ ಬಹು ಮುಖ್ಯವಾಗುತ್ತದೆ.

**ವೃತ್ತಿ ಸಮಾಯೋಜನೆ:** ವಯಸ್ಕಾವಧಿಯ ಹಂತದಲ್ಲಿ ವ್ಯಕ್ತಿಗೆ ತನಗೆ ಸರಿಹೊಂದುವಂತಹ ವೃತ್ತಿಯನ್ನು ಆಯ್ಕೆಮಾಡಿಕೊಳ್ಳುವುದು ಒಂದು ಸವಾಲಾಗಿರುತ್ತದೆ. ವ್ಯಕ್ತಿ ತನ್ನ ವಿದ್ಯಾರ್ಹತೆ, ಅಭಿರುಚಿ, ಆಸಕ್ತಿ, ಮತ್ತು ಅಭಿಕ್ಷಮತೆ ಹಾಗೂ ನಿರೀಕ್ಷೆಗಳನ್ನು ಆಧರಿಸಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡಾಗ ಉತ್ತಮ ವೃತ್ತಿ ಸಮಾಯೋಜನೆ ಮತ್ತು ಸಂತೃಪ್ತಿಯನ್ನು ಹೊಂದುತ್ತಾನೆ. ವ್ಯಕ್ತಿ ಆಯ್ದುಕೊಳ್ಳುವ ಉದ್ಯೋಗ ಆತನ ಜೀವನದ ಎಲ್ಲಾ ಚಟುವಟಿಕೆಗಳ ಮೇಲೆ ಪ್ರಭಾವವನ್ನು

Digitised by Bharatavani, CIIL

ಬೀರುತ್ತದೆ. ಆದುದರಿಂದ ವ್ಯಕ್ತಿ ಉತ್ತಮವಾದ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಬೇಕು. ಮತ್ತು ಅದಕ್ಕೆ ಸಮರ್ಪಕವಾಗಿ ಸಮಾಯೋಜನೆಗೊಳ್ಳಬೇಕು. ಇದರಿಂದಾಗಿ ಆತನ ವೈಯಕ್ತಿಕ, ಕೌಟುಂಬಿಕ, ದಾಂಪತ್ಯ, ಮತ್ತು ಸಾಮಾಜಿಕ ಸಮಾಯೋಜನೆಗಳು ಉತ್ತಮವಾಗಿರುತ್ತವೆ. ಒಂದು ವೇಳೆ ವೃತ್ತಿ ಅಪಸಮಾಯೋಜನೆ ಉಂಟಾದರೆ ವ್ಯಕ್ತಿ ಮದ್ಯಪಾನ, ಧೂಮಪಾನ ಮತ್ತು ಮಾದಕ ವಸ್ತುಗಳ ಸೇವನೆಗಳಿಗೆ ದಾಸನಾಗುತ್ತಾನೆ. ಇದರಿಂದ ಅನೇಕ ತೊಂದರೆಗಳಿಗೆ ಸಿಲುಕಿ ಜೀವನ ಹಾಳಾಗುತ್ತದೆ.

ವ್ಯಕ್ತಿಯು ಆಯ್ಕೆ ಮಾಡಿಕೊಳ್ಳುವಂತಹ ವೃತ್ತಿ ಆತನಿಗೆ ಸಮಾಜದಲ್ಲಿ ಉತ್ತಮ ಮನ್ನಣೆಯನ್ನು ತಂದುಕೊಡಬೇಕು. ಅಲ್ಲದೆ ವೃತ್ತಿ ಆತನಿಗೆ ಕುಟುಂಬದ ರಕ್ಷಣೆ, ಪಾಲನೆ ಮತ್ತು ಪೋಷಣೆಗಳು ಹಾಗೂ ಭದ್ರತೆಯನ್ನು ಒದಗಿಸಬೇಕು. ಆ ಮೂಲಕ ಆತನ ಜೀವನದಲ್ಲಿ ಪ್ರಗತಿ ಉಂಟಾಗಬೇಕು. ಈ ರೀತಿಯಾದಾಗ ವ್ಯಕ್ತಿ ವೃತ್ತಿ ಸಂತೃಪ್ತಿ ಹೊಂದಿ ಪ್ರಾಮಾಣಿಕತೆ ಮತ್ತು ಅರ್ಪಣೆ ಮನೋಭಾವದಿಂದ ವೃತ್ತಿ ನಿರ್ವಹಣೆ ಮಾಡುತ್ತಾನೆ.

**ನಿವೃತ್ತಿಗೆ ಮಾನಸಿಕ ಸಿದ್ಧತೆ:**

ವಯಸ್ಕಾವಧಿ ಮುಗಿಯುವ ವೇಳೆಗಾಗಲೇ ವ್ಯಕ್ತಿ ತನ್ನ ಔದ್ಯೋಗಿಕ ಜೀವನದಲ್ಲಿ ಹಂತ ಹಂತವಾಗಿ ಮುಂದೆ ಬಂದಿರುತ್ತಾನೆ. ಹೇಗೆ ಔದ್ಯೋಗಿಕ ಜೀವನದುದ್ದಕ್ಕೂ ಸಕರಾತ್ಮಕ ಬದಲಾವಣೆಗಳನ್ನು ಅಳವಡಿಸಿಕೊಂಡು ಬಂದಿರುತ್ತಾನೋ, ಹಾಗೆಯೇ ಮುಂದೆ ಬರುವಂತಹ ನಿವೃತ್ತಿಯ ಜೀವನದ ಬಗೆಗೂ ಸಕಾರಾತ್ಮಕ ದೃಷ್ಟಿಕೋನವನ್ನು ವಯಸ್ಕಾವಧಿಯ ಕೊನೆಯ ಹಂತದಲ್ಲಿ (ನಿವೃತ್ತಿಯು ಸಮೀಪಿಸುವ ಹಂತದಲ್ಲಿ) ಬೆಳೆಸಿಕೊಳ್ಳಬೇಕು. ವ್ಯಕ್ತಿ ಈ ರೀತಿ ಪೂರ್ವಭಾವಿಯಾಗಿ ಮಾನಸಿಕ ಸಿದ್ಧತೆಯನ್ನು ಹೊಂದಿದ್ದಲ್ಲಿ ನಿವೃತ್ತಿ ಸಮೀಪದ ಔದ್ಯೋಗಿಕ ಜೀವನದಲ್ಲಿ ಸಂತೃಪ್ತತೆ ಕಂಡುಬರುತ್ತದೆ. ಒಂದು ವೇಳೆ ಮುಂದೆ ಬರುವ ನಿವೃತ್ತಿ ಜೀವನದ ಬಗೆಗೆ ಸರಿಯಾದ ಮಾನಸಿಕ ಸಿದ್ಧತೆ ಇಲ್ಲದಿದ್ದರೆ ವ್ಯಕ್ತಿ ಮಾನಸಿಕ ಒತ್ತಡ, ಆತಂಕ, ಖಿನ್ನತೆ ಮತ್ತು ಗೊಂದಲಗಳನ್ನು ಎದುರಿಸಬೇಕಾಗುತ್ತದೆ.

**ದಾಂಪತ್ಯ ಸಮಾಯೋಜನೆ:**

ವಯಸ್ಕಾವಧಿಯಲ್ಲಿ ಕಂಡು ಬರುವಂತಹ ಸಮಾಯೋಜನೆಯಲ್ಲಿ ದಾಂಪತ್ಯ ಸಮಾಯೋಜನೆ ತುಂಬ ಪ್ರಮುಖವಾದದ್ದು. ಯುವಕ ಯುವತಿಯರು ತಮ್ಮ ಆಸೆ ಆಕಾಂಕ್ಷೆ ನಿರೀಕ್ಷೆಗಳಿಗೆ ಸರಿಹೊಂದುವಂತಹ ಗುಣಗಳಿರುವವರನ್ನು ಒಪ್ಪಿ ಮದುವೆಯಾಗಿ ಸಾಂಸರಿಕ ಜೀವನಕ್ಕೆ ಕಾಲಿಟ್ಟು ದಂಪತಿಗಳಾಗಿ ಜೀವನ ಸಾಗಿಸುವುದು ವಯಸ್ಕಾವಧಿಯಲ್ಲಿ ಕಂಡು ಬರುತ್ತದೆ. ಆದುದರಿಂದ ಈ ಅವಧಿಯಲ್ಲಿ ದಂಪತಿಗಳಾಗುವವರಿಗೆ ಪತಿ-ಪತ್ನಿಯ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಅರಿವಿರಬೇಕು. ವಯಸ್ಕಾವಧಿಯ ಹಂತದಲ್ಲಿ ಪತಿ-ಪತ್ನಿಯಾಗುವವರು ತಮ್ಮ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಸಿದ್ಧರಾಗದೆ ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರೆ ಮುಂದೆ ಅವರ ದಾಂಪತ್ಯ ಜೀವನದಲ್ಲಿ ಅಪಸಮಾಯೋಜನೆ ಕಂಡುಬರುವ ಸಾಧ್ಯತೆ ಇರುತ್ತದೆ.

ಪತಿ-ಪತ್ನಿ ಒಂದೇ ಧರ್ಮ ಮತ್ತು ಸಂಸ್ಕೃತಿಯ ಹಿನ್ನೆಲೆಯಿಂದ ಬಂದವರಾಗಿದ್ದರೆ ಅವರಲ್ಲಿ ಉತ್ತಮವಾದ ದಾಂಪತ್ಯ ಸಮಾಯೋಜನೆ ಕಂಡುಬರುತ್ತದೆ. ಅವಿಭಕ್ತ ಕುಟುಂಬಗಳು ಅಣ್ಣ ತಮ್ಮಂದಿರು, ಅತ್ತೆ ಮಾವಂದಿರು, ಭಾವ ಮೈದುನರು, ಅತ್ತಿಗೆ ನಾದಿನಿಯರಿಂದ ಕೂಡಿರುತ್ತವೆ. ಇಲ್ಲಿ ಪತಿ-ಪತ್ನಿ ಸಾಮರಸ್ಯದಿಂದ ಹೊಂದಿಕೊಂಡು ನಡೆದಾಗ ದಾಂಪತ್ಯ ಜೀವನ ಉತ್ತಮವಾಗಿರುತ್ತದೆ. ದಾಂಪತ್ಯ ಸಮಾಯೋಜನೆಯ ಮೇಲೆ ಹಲವಾರು ಅಂಶಗಳು ಪ್ರಭಾವ ಬೀರುತ್ತವೆ. ಅದರಲ್ಲಿ ಆರ್ಥಿಕ ಸ್ಥಿತಿ ತುಂಬಾ ಪ್ರಮುಖವಾಗಿರುತ್ತದೆ. ಪತಿ ಉದ್ಯೋಗದಲ್ಲಿದ್ದು ಉತ್ತಮ ಮಟ್ಟದ ಸಂಬಳ ಪಡೆಯುತ್ತಿದ್ದರೆ ಕುಟುಂಬದ ನಿರ್ವಹಣೆ ಯಶಸ್ವಿಯಾಗಿ ನಡೆಯುತ್ತದೆ ಮತ್ತು ದಾಂಪತ್ಯ ಸಮಾಯೋಜನೆ ಉತ್ತಮವಾಗಿರುತ್ತದೆ.

ಪತಿ-ಪತ್ನಿಯಲ್ಲಿ ಉತ್ತಮ ದಾಂಪತ್ಯ ಸಮಾಯೋಜನೆಯು ಕಂಡು ಬರಬೇಕಾದರೆ ಅವರಲ್ಲಿನ ಪರಸ್ಪರ ನಿರೀಕ್ಷೆಗಳು ಮತ್ತು ಆಸೆ-ಆಕಾಂಕ್ಷೆಗಳು ಹಾಗೂ ಬೇಕು ಬೇಡಗಳು ಮಿತಿಯಿಂದ ಕೂಡಿರಬೇಕು. ಒಂದು ವೇಳೆ ಅತಿಯಾದ ನಿರೀಕ್ಷೆಗಳು ಮತ್ತು ಬೇಕು-ಬೇಡಗಳನ್ನು ಪತಿ-ಪತ್ನಿಯರು ಹೊಂದಿದ್ದು ಅವುಗಳು ಪೂರೈಕೆ ಆಗದಿದ್ದರೆ ದಾಂಪತ್ಯ ಜೀವನದ ಸಮಾಯೋಜನೆಯಲ್ಲಿ ಅಡಚಣೆ ಕಂಡುಬರುತ್ತದೆ. ಅಲ್ಲದೆ ಪತಿ-ಪತ್ನಿಯ ಆದರ್ಶಗಳು, ಮೌಲ್ಯಗಳು ಮತ್ತು ಅಭಿರುಚಿಗಳು ಸಾಮ್ಯತೆಯಿಂದ ಕೂಡಿರಬೇಕು. ಬದಲಾಗಿ ಇವುಗಳಲ್ಲಿ ಪರಸ್ಪರ ಭಿನ್ನತೆ ಕಂಡು ಬಂದರೆ ಘರ್ಷಣೆ, ವಾಗ್ವಾದಗಳು, ಒಳಜಗಳ, ಮುನಿಸು ಮುಂತಾದವುಗಳು ಏರ್ಪಟ್ಟು ದಾಂಪತ್ಯ ಜೀವನದಲ್ಲಿ ಅಪಸಮಾಯೋಜನೆ ಉಂಟಾಗುತ್ತದೆ.

ಹಿತಕರವಾದ ದಾಂಪತ್ಯ ಸಮಾಯೋಜನೆಗೆ ಪತಿ-ಪತ್ನಿಯ ನಡುವೆ ಲೈಂಗಿಕ ತೃಪ್ತಿಯು ಬಹಳ ಮುಖ್ಯವಾದ ಅಂಶವಾಗಿದೆ. ವಯಸ್ಕಾವಧಿಯಲ್ಲಿ ಲೈಂಗಿಕ ಸಂಬಂಧವು ಉತ್ತಮವಾಗಿದ್ದರೆ ದಾಂಪತ್ಯ ಜೀವನವೂ ತೃಪ್ತಿಕರವಾಗಿರುತ್ತದೆ. ಅಲ್ಲದೆ ಪತ್ನಿ ಗರ್ಭಿಣಿಯಾಗುವುದರ ಬಗ್ಗೆ ತಳೆಯುವ ಮನೋಭಾವ, ಎಷ್ಟು ಮಕ್ಕಳನ್ನು ಹೊಂದಬೇಕು ಎಂಬುದರ ಬಗ್ಗೆ ತೆಗೆದುಕೊಳ್ಳುವ ನಿರ್ಧಾರ ಮುಂತಾದವುಗಳು ದಾಂಪತ್ಯ ಸಮಾಯೋಜನೆಯ ಮೇಲೆ ತುಂಬಾ ಪ್ರಭಾವ ಬೀರುತ್ತವೆ.

ಕುಟುಂಬದಲ್ಲಿ ತಂದೆ-ತಾಯಿ ಮತ್ತು ಮಕ್ಕಳು ಪರಸ್ಪರ, ಸ್ನೇಹ, ಪ್ರೀತಿ ಮತ್ತು ಸಾಮರಸ್ಯವಾದ ಬಾಂಧವ್ಯದಿಂದ ಬದುಕಬೇಕು. ಆಗ ದಾಂಪತ್ಯ ಜೀವನವು ತೃಪ್ತಿಕರವಾಗಿರುತ್ತದೆ. ಒಂದು ವೇಳೆ ತಂದೆ-ತಾಯಿ ಮತ್ತು ಮಕ್ಕಳ ನಡುವೆ ಸಂಬಂಧ ಹದಗೆಟ್ಟಿದ್ದರೆ ತಂದೆ-ತಾಯಿಗಳ ದಾಂಪತ್ಯ ಜೀವನವು ಅಸ್ತವ್ಯಸ್ತವಾಗಿ ಇದು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮವನ್ನುಂಟುಮಾಡುತ್ತದೆ. ಇದರ ಪರಿಣಾಮವಾಗಿ ದಾಂಪತ್ಯದಲ್ಲಿ ಬಿರುಕು ಉಂಟಾಗಿ

Digitised by Bharatavani, CIIL

ಕುಟುಂಬದಲ್ಲಿ ಹಲವಾರು ಸಮಸ್ಯೆಗಳು ತಲೆದೋರುತ್ತವೆ. ಅಲ್ಲದೆ ವಿವಾಹ ವಿಚ್ಛೇದನ, ತಂದೆ ತಾಯಿಗಳಿಂದ ಮಕ್ಕಳು ಬೇರ್ಪಡುವಿಕೆ, ಪತಿ–ಪತ್ನಿಯರು ಪುನರ್‌ವಿವಾಹವಾಗುವುದು ಮುಂತಾದವು ಕಂಡು ಬರುತ್ತವೆ.

ಎರಿಕ್ ಎರಿಕ್‌ಸನ್‌ರವರು ಅಭಿಪ್ರಾಯ ಪಡುವಂತೆ ಪೂರ್ವ ವಯಸ್ಕಾವಧಿಯಲ್ಲಿ ವ್ಯಕ್ತಿಗಳಲ್ಲಿ ಪ್ರೀತಿಸುವ ಸಾಮರ್ಥ್ಯವು ಕಂಡು ಬರುತ್ತದೆ. ಆತ್ಮೀಯತೆ ತದ್ವಿರುದ್ಧವಾದ ಒಂಟಿತನ, ಆತ್ಮೀಯ ಸಂಬಂಧಗಳು, ಗಾಢವಾದ ಭಾವನಾತ್ಮಕ ಸಂಬಂಧಗಳ ಬೆಸೆದುಕೊಳ್ಳುವಿಕೆ ಮುಂತಾದವುಗಳು ಈ ಹಂತದಲ್ಲಿ ಪ್ರಮುಖವಾಗಿರುತ್ತವೆ. ಎರಿಕಸನ್‌ರವರ ಪ್ರಕಾರ ಯಶಸ್ವಿ ಮನೋಸಾಮಾಜಿಕ ಗುರುತಿಸುವಿಕೆಯಿಂದಾಗಿ ತಾರುಣ್ಯಾವಧಿಯಲ್ಲಿ ಆತ್ಮೀಯತೆಯ ವಿಕಾಸವು ಉಂಟಾಗುತ್ತದೆ. ವಯಸ್ಕಾವಧಿಯ ಹಂತದಲ್ಲಿ ಸ್ತ್ರೀಯರು ಮತ್ತು ಪುರುಷರು ಕೆಲವೊಂದು ಪ್ರಮುಖ ಗುಣಲಕ್ಷಣಗಳ ಆಧಾರದ ಮೇಲೆ ತಮ್ಮ ಸಂಸಾರಿಕ ಜೀವನಕ್ಕೆ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಇವರು ಸಾಮಾನ್ಯವಾಗಿ ಸಹೃದಯತೆ, ವಿಧೇಯತೆ, ಪ್ರಾಮಾಣಿಕತೆ, ಬುದ್ಧಿವಂತಿಕೆ ಮತ್ತು ಉತ್ತಮ ವ್ಯಕ್ತಿತ್ವ ಸಾಮ್ಯತೆಯಿಂದ ಕೂಡಿರುವ ಆಸಕ್ತಿ ಮತ್ತು ಅಭಿರುಚಿಯಂತಹ ಗುಣಗಳನ್ನು ಹೊಂದಿರುವ ವ್ಯಕ್ತಿಯನ್ನು ಬಾಳಸಂಗಾತಿಯಾಗಿ ಸ್ವೀಕರಿಸಲು ಪರಸ್ಪರ ಬಯಸುತ್ತಾರೆ. ಇಲ್ಲಿ ಗಮನಿಸಬಹುದಾದ ಬಹು ಮುಖ್ಯ ಅಂಶವೆಂದರೆ ಪುರುಷರು ತಮ್ಮ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ದೈಹಿಕ ಆಕರ್ಷಣೆಗೆ ಹೆಚ್ಚು ಮಹತ್ವ ನೀಡುತ್ತಾರೆ. ಹಾಗೆಯೇ ಸ್ತ್ರೀಯರು ತಮ್ಮ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಪುರುಷರು ಸಂಪಾದಿಸುವ ಸಾಮರ್ಥ್ಯಕ್ಕೆ ಹೆಚ್ಚು ಮಹತ್ವ ನೀಡುತ್ತಾರೆ ಎಂಬ ಅಂಶಗಳು ಸಂಶೋಧನೆಗಳಿಂದ ತಿಳಿದು ಬರುತ್ತವೆ.

ಜೀವನದಲ್ಲಿ ಯಾವುದೇ ಸಂಬಂಧಗಳು ಯಶಸ್ವಿಯಾಗುವಲ್ಲಿ ವ್ಯಕ್ತಿಗಳ ವಯಸ್ಸು, ಧರ್ಮ, ಮನೋಭಾವ, ವ್ಯಕ್ತಿತ್ವ, ಬುದ್ಧಿವಂತಿಕೆ ಮತ್ತು ವಿದ್ಯಾಭ್ಯಾಸದ ಮಟ್ಟ ಮುಂತಾದವುಗಳು ಪ್ರಮುಖವಾದ ಅಂಶಗಳಾಗಿರುತ್ತವೆ. ವೈವಾಹಿಕ ಜೀವನದ ಪ್ರಾರಂಭದ ಹಂತದಲ್ಲಿ ದಂಪತಿಗಳು ಯಾವುದೇ ಸಮಸ್ಯೆಗಳು ಎದುರಾದಾಗ ಭಯಪಡದೆ ಮತ್ತು ಆತಂಕಕ್ಕೆ ಒಳಗಾಗದೆ ಸಮಸ್ಯೆಯ ಬಗೆಗೆ ಪರಸ್ಪರ ಮುಕ್ತವಾಗಿ ಚರ್ಚಿಸುವುದು ದಾಂಪತ್ಯ ಸಮಾಯೋಜನೆಯ ದೃಷ್ಟಿಯಲ್ಲಿ ಬಹಳ ಮುಖ್ಯವಾದದ್ದು. ಬದಲಾಗಿ ಸಣ್ಣ ಪುಟ್ಟ ಸಮಸ್ಯೆಗಳು ಎದುರಾದಾಗ ಪರಸ್ಪರ ಆರೋಪಣೆಯಲ್ಲಿ ತೊಡಗಿ ಮನಃಸ್ತಾಪವನ್ನು ಬೆಳೆಸಿಕೊಂಡಾಗ ಮತ್ತು ಹಠಮಾರಿತನದಿಂದ ವರ್ತಿಸಿದಾಗ ದಾಂಪತ್ಯ ಜೀವನವು ಹಾಳಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ವಯಸ್ಕಾವಧಿಯು ಮಾನವನ ಜೀವಿತಾವಧಿಯ ಒಂದು ಪ್ರಮುಖವಾದ ಘಟ್ಟವಾಗಿದೆ. ಈ ಅವಧಿಯಲ್ಲಿ ವ್ಯಕ್ತಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಪರಿಪಕ್ವತೆಯನ್ನು ಹೊಂದುತ್ತಾನೆ. ಅಲ್ಲದೆ ಈ ಅವಧಿಯಲ್ಲಿ ವ್ಯಕ್ತಿಯ ಸಾಮಾಜಿಕ, ಮಾನಸಿಕ, ದೈಹಿಕ ಮತ್ತು ಅಭಿರುಚಿಗಳಲ್ಲಿ ಗಮನಾರ್ಹವಾದ ಮಾರ್ಪಾಟುಗಳು ಕಂಡುಬರುತ್ತದೆ. ಅಲ್ಲದೆ ಈ ಅವಧಿಯು ಸಮಸ್ಯಾಪೂರ್ಣ ಅವಧಿಯಾಗಿದ್ದು ವ್ಯಕ್ತಿಯು ಉದ್ಯೋಗವನ್ನು ಆಯ್ದುಕೊಳ್ಳುವ, ಬಾಳಸಂಗಾತಿಯನ್ನು ಆಯ್ಕೆಮಾಡಿಕೊಳ್ಳುವ ಮತ್ತು ತಾನು ನಿರೀಕ್ಷಿಸಿದ ಗುರಿಗಳನ್ನು ಮುಟ್ಟುವಂತಹ ಸವಾಲುಗಳನ್ನು ಎದುರಿಸುತ್ತಾನೆ ಮತ್ತು ಸಮಾಜದಲ್ಲಿ ವಿವಿಧ ಪಾತ್ರಗಳನ್ನು ಮತ್ತು ಜವಾಬ್ದಾರಿಗಳನ್ನು ನಿಭಾಯಿಸಿ ಉತ್ತಮ ರೀತಿಯಲ್ಲಿ ಬದುಕಲು ಪ್ರಯತ್ನಿಸುತ್ತಾನೆ.

–ಡಾ. ಮಂಜುನಾಥ್ ಪಿ

## ವಲಸೆಯ ಶಿಕ್ಷಣ

**ವಲಸೆ:** ದೊರಕುವ ಸಂಪನ್ಮೂಲಗಳಿಗೂ ಜನಸಂಖ್ಯೆಗೂ ನಡುವೆ ಸಮತೋಲನ ಉಂಟುಮಾಡುವ ನಿಟ್ಟಿನಲ್ಲಿ ಹಲವು ಜನರು ವಲಸೆ ಹೋಗುವ ಕ್ರಮ ಅನಾದಿ ಕಾಲದಿಂದಲೂ ರೂಢಿಯಲ್ಲಿದೆ. ಆದರೂ ಜನರಿಗೆ ತಾವು ವಾಸಮಾಡುವ ಜಾಗವನ್ನು ತೊರೆದು ಬೇರೆ ಸ್ಥಳಗಳಿಗೆ ಹೋಗಲು ಯವುದಾದರೂ ಬಲವಾದ ಕಾರಣವಿರಬೇಕು. ಆದ್ದರಿಂದ ಜನರ ವಲಸೆಯನ್ನು ಅಧ್ಯಯನ ಮಾಡುವುದು ಎಂದರೆ ಅದಕ್ಕೆ ಕಾರಣವಾದ ಸಾಮಾಜಿಕ ಮತ್ತು ಆರ್ಥಿಕ ಆಗುಹೋಗುಗಳ ಅಧ್ಯಯನವೇ ಎನ್ನಬಹುದು. ಹೀಗೆ ವಲಸೆ ಎನ್ನುವುದು ಮಾನವ ಜೀವನದ ಎಲ್ಲಾ ಸ್ವರೂಪವನ್ನು ಹಾಗೂ ಎಲ್ಲಾ ವಿಷಯಗಳನ್ನೂ ಒಳಗೊಂಡಿರುತ್ತದೆ. ಸಮಾಜವಿಜ್ಞಾನದ ಪ್ರತಿಯೊಂದು ವಿಷಯವೂ ವಲಸೆಯ ಅಧ್ಯಯನವನ್ನು ಬೇರೆ ಬೇರೆ ದೃಷ್ಟಿಕೋನದಿಂದ ನೋಡುತ್ತದೆ. ಉದಾ: ಅರ್ಥಶಾಸ್ತ್ರಜ್ಞರ ದೃಷ್ಟಿಕೋನ ವಲಸೆಗೆ ಕಾರಣ ಶ್ರಮದ ಪೂರೈಕೆ, ಕೂಲಿ ಮತ್ತು ಶ್ರಮ ವಿಭಜನೆಯದಾಗಿರುತ್ತದೆ. ಸಮಾಜಶಾಸ್ತ್ರಜ್ಞರು ವಲಸೆಯಿಂದಾಗುವ ಸಾಮಾಜಿಕ ಬದಲಾವಣೆ, ಸಂಸ್ಕೃತಿಗಳಿಂದ ಜನರು ಒಂದಾಗುವುದು, ಸಾಮಾಜಿಕ, ಆರ್ಥಿಕ ಮತ್ತು ವೃತ್ತಿಗಳಿಂದಾಗಿ ಜನರ ಚಲನೆ ಮುಂತಾದವುಗಳ ಬಗ್ಗೆ ದೃಷ್ಟಿ ಹರಿಸುತ್ತಾರೆ. ಭೂಗೋಳ ಶಾಸ್ತ್ರಜ್ಞರು ವಲಸೆಗೆ ಮುಖ್ಯ ಕಾರಣಗಳಾದ ಜನಸಾಂದ್ರತೆ, ಪಟ್ಟಣ ಮತ್ತು ನಗರಗಳ ನಿರ್ಮಾಣ ಮತ್ತು ಅವುಗಳ ಬೆಳವಣಿಗೆ ಇತ್ಯಾದಿಗಳನ್ನು ಗಮನಿಸುತ್ತಾರೆ. ಜನಸಂಖ್ಯಾ ಶಾಸ್ತ್ರಜ್ಞರ ಗಮನ ಮರಣ ಪ್ರಮಾಣ, ಜನರ ಶಿಕ್ಷಣ ಮತ್ತು ಅವುಗಳಿಗೆ ಸಂಬಂಧಿಸಿದ ಹಲವಾರು ಅಂಶಗಳ ಮೇಲೆ ಆಗುವ ಪರಿಣಾಮಗಳ ಮೇಲಿರುತ್ತದೆ.

**ವಲಸೆಯ ಪರಿಕಲ್ಪನಾತ್ಮಕ ವ್ಯಾಖ್ಯೆ:** ಜನಸಂಖ್ಯೆಗೆ ಸಂಬಂಧಪಟ್ಟ ಹಲವಾರು ವಿಷಯಗಳಲ್ಲಿ ಜನರ ವಲಸೆಯನ್ನು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಥೈಸಲಾಗಿದೆ. ಜನರ ಪ್ರತಿಯೊಂದು ಚಲನೆಯನ್ನೂ ವಲಸೆ ಎನ್ನಲಾಗುವುದಿಲ್ಲ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸುವ ರೀತಿಗಳು ಇವುಗಳಾಗಿರಬಹುದು.

1. ಕೆಲಸಕ್ಕಾಗಿ ಅಥವಾ ಶಿಕ್ಷಣ ಪಡೆಯಲು ಸ್ಥಳದಿಂದ ಸ್ಥಳಕ್ಕೆ ಚಲಿಸುವುದು

Digitised by Bharatavani, CIIL

2. ಪದಾರ್ಥಗಳನ್ನು ಕೊಂಡುಕೊಳ್ಳಲು ಅಂಗಡಿಗೆ ಹೋಗುವುದು
3. ಸಂಬಂಧಿಗಳನ್ನು ಅಥವಾ ಸ್ನೇಹಿತರನ್ನು ಭೇಟಿ ಮಾಡಲು ಹೋಗುವುದು
4. ವ್ಯಾಪಾರಕ್ಕಾಗಿ ಅಥವಾ ಮನರಂಜನೆಗಾಗಿ ಪ್ರಯಾಣ ಮಾಡುವುದು
5. ಒಂದೇ ಸ್ಥಳದಲ್ಲಿ ಮನೆಯನ್ನು ಬದಲಾಯಿಸುವುದು
6. ಅಲೆಮಾರಿಗಳು ಒಂದು ಗೊತ್ತಾದ ಜಾಗದಲ್ಲಿ ಇರದೆ ಸ್ಥಳ ಬದಲಾಯಿಸುವುದು
7. ಒಂದು ಗೊತ್ತಾದ ಕಾಲದಲ್ಲಿ ಒಂದು ಬೇರೆ ಸ್ಥಳಕ್ಕೆ ಹೋಗಿ ನೆಲಸಿ ಹಿಂದಿರುಗುವುದು.

ವಲಸೆಯು ತಮ್ಮ ಮೂಲ ಸ್ಥಳದಿಂದ ಹೋಗಿ ಬೇರೆ ಸ್ಥಳದಲ್ಲಿ ನೆಲಸಿ ಆ ಸ್ಥಳಕ್ಕೆ ಹೊಂದಿಕೊಳ್ಳುವುದಾಗಿದೆ. ಕೇವಲ ಒಂದೇ ಸ್ಥಳದಲ್ಲಿ ವಾಸಸ್ಥಳವನ್ನು ಬದಲಾಯಿಸುವುದನ್ನು ವಲಸೆ ಎಂದು ಕರೆಯುವುದನ್ನು ತಪ್ಪಿಸಲು ವಲಸೆಯನ್ನು ಒಂದು ನಾಗರಿಕ ವಲಯದಿಂದ ಮತ್ತೊಂದು ನಾಗರಿಕ ವಲಯಕ್ಕೆ ವಾಸಸ್ಥಳವನ್ನು ಬದಲಾಯಿಸುವುದು (UN 1931 ಪು1) ಎಂದು ವ್ಯಾಖ್ಯಾನಿಸಲಾಗಿದೆ. ವಲಸೆಯ ಪ್ರಮಾಣ ಆಯಾ ನಾಗರಿಕ ವಲಯದ ವಿಸ್ತೀರ್ಣವನ್ನು ಅವಲಂಬಿಸಿರುತ್ತದೆ. ಒಂದು ವೇಳೆ ಒಂದು ಹಳ್ಳಿಯು ಒಂದು ನಾಗರಿಕ ವಲಯವಾದರೆ ವಲಸೆಯ ಪ್ರಮಾಣ ಹೆಚ್ಚಾಗಿರುತ್ತದೆ. ಅದೇ ರೀತಿ ಒಂದು ಜಿಲ್ಲೆ ಒಂದು ನಾಗರಿಕ ವಲಯ ಎಂದಾದರೆ ಅಲ್ಲಿನ ವಲಸೆಯ ಪ್ರಮಾಣ ಹೆಚ್ಚಾಗಿರುವುದಿಲ್ಲ. ಜಿಲ್ಲೆಯ ಮಿತಿಯೊಳಗೆ ನಡೆಯುವ ಅಂತರ ಗ್ರಾಮಾಂತರ ವಲಸೆಯನ್ನು ವಲಸೆ ಎಂದು ಪರಿಗಣಿಸುವುದಿಲ್ಲ. ಆದ್ದರಿಂದಲೇ ವಲಸೆ ಪ್ರಮಾಣ ಈ ವ್ಯಾಪ್ತಿಯಲ್ಲಿ ಬಹಳ ಕಡಿಮೆ ಎನ್ನುವುದು. ಅದೇ ರೀತಿ ಒಂದು ರಾಜ್ಯವನ್ನೇ ಒಂದು ನಾಗರಿಕ ವಲಯವೆಂದು ಪರಿಗಣಿಸಿದರೆ ಅಲ್ಲಿನ ಜನರ ಚಲನೆಯನ್ನು ವಲಸೆ ಎಂದು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ಅಲ್ಲಿ ವಲಸೆ ಪ್ರಮಾಣ ಮತ್ತಷ್ಟು ಕಡಿಮೆ ಇರುತ್ತದೆ. ಹೀಗೆ ಜಿಲ್ಲೆಯೊಳಗಿನ ಮತ್ತು ರಾಜ್ಯದೊಳಗಿನ ವಲಸೆಯನ್ನು ಪರಿಗಣಿಸುವುದಿಲ್ಲ. ಕೇವಲ ಅಂತರ–ರಾಜ್ಯ ವಲಸೆಯನ್ನು ಮಾತ್ರ ಗಣನೆಗೆ ತೆಗೆದು ಕೊಳ್ಳಲಾಗುತ್ತದೆ.

**ವಲಸೆಯ ಸಂಕ್ರಿಯಾತ್ಮಕ ವ್ಯಾಖ್ಯೆ:** ಮೇಲಿನ ವ್ಯಾಖ್ಯೆಗಳು ಯಾವುದೇ ಸರ್ವೇಕ್ಷಣೆಗೆ ಅಥವಾ ಇನ್ಯಾವುದಕ್ಕೂ ಉಪಯೋಗಿಸಲು ಬರುವುದಿಲ್ಲ. ಆದ್ದರಿಂದ ವ್ಯಕ್ತಿಯು ಜನಿಸಿದ ಸ್ಥಳದ ಆಧಾರದ ಮೇಲೆ ವಲಸೆಯ ವ್ಯಾಖ್ಯೆಯನ್ನು ಮಾಡಿ, ಜನಗಣತಿ ಸಮಯದಲ್ಲಿ ಭಾರತದಲ್ಲಿ ಹಾಗೂ ಇತರ ರಾಷ್ಟ್ರಗಳಲ್ಲಿ ಉಪಯೋಗಿಸಲಾಗುತ್ತದೆ.

**'ಜನನ ಸ್ಥಳ' ವಲಸೆಯ ವ್ಯಾಖ್ಯೆ:** ಈ ವ್ಯಾಖ್ಯೆಯು ಜನಗಣತಿ ಸಮಯದಲ್ಲಿ ವ್ಯಕ್ತಿಯು ಇರುವ ಜಾಗವನ್ನೇ ಅವನ ಜನ್ಮಸ್ಥಳವೆಂಬ ಊಹೆಯ ಆಧಾರವನ್ನು ಹೊಂದಿದೆ. ಆದ್ದರಿಂದ ಭಾರತದ ಜನಗಣತಿಯು ವ್ಯಕ್ತಿಯ ಜನಗಣತಿಯ ಸಮಯದಲ್ಲಿ ಇರುವ ಸ್ಥಳದ ಹೆಸರನ್ನಲ್ಲದೆ ಅವನು ಜನಿಸಿದ ಸ್ಥಳವನ್ನೂ ಗುರುತಿಸಿಕೊಳ್ಳುತ್ತದೆ. ಒಂದುವೇಳೆ ಅವನು ಜನಗಣತಿ ಸಮಯದಲ್ಲಿ ಇರುವ ಸ್ಥಳವೇ ಅವನ ಜನ್ಮಸ್ಥಳವಾದರೆ ಅವನನ್ನು ವಲಸಿಗನೆಂದು ಪರಿಗಣಿಸುವುದಿಲ್ಲ. ಆದರೆ ಅವುಗಳು ಬೇರೆ ಬೇರೆಯಾದರೆ ಆಗ ಆ ವ್ಯಕ್ತಿಯನ್ನು ವಲಸಿಗನೆಂದು ಪರಿಗಣಿಸಲಾಗುತ್ತದೆ.

**'ಹಿಂದೆ ವಾಸವಿದ್ದ ಸ್ಥಳ' ವಲಸೆಯ ವ್ಯಾಖ್ಯೆ:** ಜನ್ಮ ಸ್ಥಳದ ಪರಿಕಲ್ಪನೆ ಹಲವು ಲೋಪದೋಷಗಳಿಂದ ಕೂಡಿದೆ. ಒಂದುವೇಳೆ ಒಬ್ಬ ವ್ಯಕ್ತಿಯು ಅನೇಕ ಬಾರಿ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗಿ ಜನಗಣತಿಯ ಸಮಯದಲ್ಲಿ ತನ್ನ ಜನ್ಮಸ್ಥಳಕ್ಕೆ ಹಿಂದಿರುಗಿದರೆ ಆ ವ್ಯಕ್ತಿಯ ಜನ್ಮಸ್ಥಳ ಮತ್ತು ವಾಸವಿರುವ ಸ್ಥಳ ಎರಡೂ ಒಂದೇ ಆಗಿರುವುದರಿಂದ ಅವನನ್ನು ವಲಸಿಗ ಎಂದು ಹೇಳಲು ಸಾಧ್ಯವಿಲ್ಲ. ಈ ದೋಷವನ್ನು ನಿವಾರಿಸಲು ಆ ವ್ಯಕ್ತಿಯು 'ಹಿಂದೆ ವಾಸವಿದ್ದ ಸ್ಥಳ'ದ ಪರಿಕಲ್ಪನೆಯನ್ನು ರೂಪಿಸಲಾಗಿದೆ. ಅನೇಕ ಜನಗಣತಿಗಳಲ್ಲಿ ಮತ್ತು ಭಾರತದ ಜನಗಣತಿಯಲ್ಲಿ 'ಹಿಂದೆ ವಾಸವಿದ್ದ ಸ್ಥಳ'ವನ್ನೂ ಗುರುತಿಸಿಕೊಳ್ಳಲಾಗುತ್ತದೆ, ಜನಗಣತಿಯ ಸಮಯದಲ್ಲಿ ಇರುವ ಸ್ಥಳ ಮತ್ತು ಜನ್ಮಸ್ಥಳ ಒಂದೇ ಆಗಿದ್ದರೂ 'ಹಿಂದೆ ವಾಸವಿದ್ದ ಸ್ಥಳ' ಬೇರೆಯಾದರೆ ಆ ವ್ಯಕ್ತಿಯನ್ನು ವಲಸಿಗನೆಂದು ಪರಿಗಣಿಸಲಾಗುವುದು.

**ವಲಸೆಯ ಅವಧಿ:** ವಲಸೆಯು ಆಗಿಂದಾಗ್ಗೆ ನಡೆಯುತ್ತಲೇ ಇರುತ್ತದೆ. ಆದ್ದರಿಂದ ವಲಸೆಯ ಲೆಕ್ಕಾಚಾರಕ್ಕೆ ಒಂದು ಗೊತ್ತಾದ ಅವಧಿಯೂ ಮುಖ್ಯವಾಗುತ್ತದೆ. ಇಂತಹ ವಲಸೆಗಳನ್ನು ಅವಧಿಯ ವಲಸೆ ಅಥವಾ ಒಂದು ಗೊತ್ತಾದ ಕಾಳದ ವಲಸೆ ಎನ್ನಬಹುದು. ಒಂದುವೇಳೆ ವಲಸೆಗೆ ಯಾವುದೇ ಮಧ್ಯಂತರ ಇಲ್ಲದಿದ್ದರೆ ಅದನ್ನ 'ಜೀವನ ಪರ್ಯಂತ ವಲಸೆ' ಎನ್ನಬಹುದು. ಒಂದುವೇಳೆ ವಲಸೆಯು ಎರಡು ಜನಗಣತಿಗಳ ನಡುವೆಯದಾದರೆ ಅದನ್ನು ಅಂತರ ಜನಗಣತಿ ವಲಸೆ ಎನ್ನಬಹುದು. ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಅಥವಾ ಮೂರು ತಿಂಗಳ ವಲಸೆಯನ್ನು ಇತ್ತೀಚಿನ ವಲಸೆ ಎನ್ನುತ್ತಾರೆ.

**ಋತುಮಾನದ ವಲಸೆ:** ಸಾಮಾನ್ಯವಾಗಿ ಋತುಮಾನದ ವಲಸೆ ಒಂದು ಗೊತ್ತಾದ ಕಾಲದಲ್ಲಿ ಕಂಡುಬರುವ ವಲಸೆಯಾಗಿದೆ. ಉದಾ" ವ್ಯವಸಾಯದ ಕಾಲದಲ್ಲಾಗುವ ವಲಸೆ. ಹಸಿರು ಕ್ರಾಂತಿಯ ಫಲವಾಗಿ ದೇಶದ ಹಲವು ಪ್ರದೇಶಗಳಲ್ಲಿ ವ್ಯವಸಾಯದ ಕೆಲಸಗಾರರ ಬೇಡಿಕೆ ಹೆಚ್ಚಾಯಿತು. ಬಿತ್ತನೆ, ನಾಟಿ ಮತ್ತು ಕುಯಿಲು ಕಾಲದಲ್ಲಿ ಕೆಲಸಕ್ಕೆ ಹೆಚ್ಚು ಜನರು ಬೇಕಾಗುತ್ತಾರೆ. ಅಂತಹ ಸಮಯದಲ್ಲಿ ಆ ಪ್ರದೇಶದಿಂದ ದೂರ ಇರುವ ಹೆಚ್ಚಿಗೆ ಕೆಲಸಗಾರರನ್ನು ಕರೆದುಕೊಳ್ಳಲಾಗುತ್ತದೆ. ಉದಾ: ಹೆಚ್ಚು ಕೆಲಸಗಾರರಿರುವ ಬಿಹಾರ ರಾಜ್ಯದಿಂದ ಪಂಜಾಬ್, ಹರಿಯಾನ ಮುಂತಾದ ವ್ಯವಸಾಯದ ರಾಜ್ಯಗಳಿಗೆ ಕೆಸಗಾರರು ವ್ಯವಸಾಯದ ಕಾಲದಲ್ಲಿ ವಲಸೆ ಹೋಗುವರು. ಈ ವಲಸೆ ಅಲ್ಪ ಕಾಲಾವಧಿಯದು. ಆ ಕಾಲಾವಧಿಯಾದಮೇಲೆ ಅವರು ಹಿಂತಿರುಗುವರು. ಇದೇ ರೀತಿ ಪ್ರತಿವರ್ಷ ವಲಸೆಯು ಪುನರಾವರ್ತಿತವಾಗುತ್ತಿರುತ್ತದೆ.

Digitised by Bharatavani, CIIL

**ವಲಸೆಯ ಮೂಲ ಮತ್ತು ಮುಕ್ತಾಯ:** ಯಾವಾಗಲೂ ವಲಸೆಗೆ ಒಂದು ಪ್ರಾರಂಭಿಕ ಸ್ಥಳ (ಮೂಲ) ಮತ್ತು ಹೋಗಿ ಸೇರುವ ಸ್ಥಳ (ಮುಕ್ತಾಯ) ಎಂಬುವುಗಳು ಇರುತ್ತವೆ. ವ್ಯಕ್ತಿಯು ಎಲ್ಲಿಂದ ವಲಸೆಯನ್ನು ಪ್ರಾರಂಭಿಸುವನೋ ಅದು ವಲಸೆಯ ಮೂಲ ಮತ್ತು ಅವನು ಹೋಗಿ ನೆಲಸುವ ಸ್ಥಳ ವಲಸೆಯ ಮುಕ್ತಾಯ.

**ವಲಸೆಯ ದೂರ:** ಪ್ರತಿಯೊಂದು ವಲಸೆಯಲ್ಲೂ ಅದರ ದೂರ ಒಂದು ಮುಖ್ಯವಾದ ಅಂಶ. ಅದು ಕಿ.ಮೀ, ಮೈಲು ಮುಂತಾದವುಗಳಿಂದ ಎಷ್ಟು ದೂರದ್ದಾದರೂ ಆಗಬಹುದು. ವಲಸೆಯ ವರ್ಗೀಕರಣಕ್ಕಾಗಿ ಮೊದಲು ಅದು ಅಂತರ ರಾಷ್ಟ್ರೀಯ ವಲಸೆಯೆ ಅಥವಾ ದೇಶದೊಳಗಿನ ವಲಸೆಯೆ ಎಂಬುದನ್ನು ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ ಅಂತರ ರಾಷ್ಟ್ರೀಯ ವಲಸೆಯು ಹೆಚ್ಚು ದೂರದ ವಲಸೆಯಾಗುತ್ತದೆ. ಆದರೆ ಕೆಲವು ಸಮಯ ದೇಶದೊಳಗಿನ ವಲಸೆಯೇ ಹೆಚ್ಚು ದೂರದ ವಲಸೆಯಾಗಬಹುದು.

**ಅಂತರ ರಾಷ್ಟ್ರೀಯ ವಲಸೆ:** ಜನರು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗಿ ನೆಲಸುವುದನ್ನು ಅಂತರ ರಾಷ್ಟ್ರೀಯ ವಲಸೆ ಎನ್ನುತ್ತಾರೆ. ಆದರೆ ಅಂತರ ರಾಷ್ಟ್ರೀಯ ವಲಸೆಗೆ ಹಲವು ನಿರ್ಬಂಧಗಳಿರುತ್ತವೆ. ಹೋಗಿ ನೆಲಸುವ ದೇಶದ ಸರ್ಕಾರವು ಹಾಗೆ ಮೊದಲು ವೀಸಾ (ಅನುಮತಿ) ನೀಡುವುದರ ಮೂಲಕ ಒಪ್ಪಿಕೊಳ್ಳಬೇಕು. ನೆರೆಹೊರೆಯ ದೇಶಗಳಿಗೆ ವಲಸೆ ಹೋಗುವುದು ಹತ್ತಿರವಾದರೂ ಸಾಮಾನ್ಯವಾಗಿ ಅಂತರ ರಾಷ್ಟ್ರೀಯ ವಲಸೆಯು ದೂರದ ವಲಸೆಯಾಗಿರುತ್ತದೆ.

**ಆಂತರಿಕ ವಲಸೆ:** ಒಂದೇ ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಜನರು ಹೋಗಿ ನೆಲಸುವುದನ್ನು ಆಂತರಿಕ ವಲಸೆ ಎನ್ನುತ್ತಾರೆ. ಈ ವಲಸೆಗೆ ಅನುಮತಿಯಾಗಲಿ, ವೀಸಾ ಆಗಲಿ ಬೇಕಾಗಿಲ್ಲ. ಹಾಗೆ ದೇಶದೊಳಗೇ ವಲಸೆ ಹೋಗುವುದು ನಾಗರಿಕರ ಹಕ್ಕು ಎಂದು ತೀರ್ಮಾನಿಸಲಾಗಿದೆ. ಈ ಬಗೆಯ ಅಂತರಿಕ ವಲಸೆಯನ್ನು ಅಲ್ಪ ದೂರದ (ಸೂಕ್ಷ್ಮ ಮಟ್ಟ), ಮಧ್ಯಮ ದೂರದ (ಪ್ರಾಂತೀಯ ಮಟ್ಟ) ಮತ್ತು ಹೆಚ್ಚು ದೂರದ (ರಾಷ್ಟ್ರ ಮಟ್ಟ) ವಲಸೆ ಎಂದು ವರ್ಗೀಕರಿಸಲಾಗಿದೆ.

ಈ ವರ್ಗೀಕರಣಕ್ಕೆ ಭಾರತದ ಜನಗಣತಿಯು (ಅ) ಒಂದೇ ಜಿಲ್ಲೆಯೊಳಗಿನ ವಲಸೆಯನ್ನು ಅಲ್ಪ ದೂರದ ವಲಸೆ ಎಂದೂ (ಆ) ರಾಜ್ಯದೊಳಗಿನ ವಲಸೆಯನ್ನು ಮಧ್ಯಮ ದೂರದ ವಲಸೆ ಎಂದೂ (ಅಂತರ ಜಿಲ್ಲಾ ವಲಸೆ), (ಇ) ಜನಗಣತಿಯ ರಾಜ್ಯದ ಹೊರಗಿನ ವಲಸೆಯನ್ನು ಹೆಚ್ಚು ದೂರದ ವಲಸೆ (ಅಂತರ ರಾಜ್ಯ) ಎಂದೂ ಹೆಸರಿಸಿದೆ.

**ವಲಸೆಯ ಹರಿವು:** ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದನ್ನು ವಲಸೆಯ ಹರಿವು ಎನ್ನುತ್ತಾರೆ. ಒಂದು ಪ್ರದೇಶದಲ್ಲಿ 10 ಸ್ಥಳಗಳಿದ್ದರೆ ಅಲ್ಲಿ 10x9 ವಲಸೆಯ ಹರಿವುಗಳಿರುತ್ತವೆ. ಎರಡು ಸ್ಥಳಗಳು 'i' ಮತ್ತು 'j' ಗಳ ವಲಸೆಯ ಹರಿವು 'mij' ಎನ್ನುವುದು 'i' ಸ್ಥಳದಿಂದ 'j' ಸ್ಥಳಕ್ಕೆ ವಲಸೆಯ ಪ್ರಮಾಣವನ್ನು ಸೂಚಿಸುತ್ತದೆ. ಇಲ್ಲಿ 'i' ಎನ್ನುವುದು ವಲಸಿಗರ ಮೂಲಸ್ಥಾನ, 'j' ಎನ್ನುವುದು ವಲಸಿಗರು ನೆಲಸುವ ಸ್ಥಳ. ಆದ್ದರಿಂದ 'mij' ಎನ್ನುವುದು 'i' ಇಂದು ಒಟ್ಟು 'j' ಗೆ ಹೊರಹೋದವರು ಮತ್ತು 'j' ಎನ್ನು 'i' ಇಂದ ಬಂದು ನೆಲಸಿದ ಸ್ಥಳ. ಪ್ರದೇಶಗಳು ವಿಸ್ತಾರವಾದಂತೆ ವಲಸೆಯ ಹರಿವಿನ ಸಂಖ್ಯೆ ದ್ವಿಗುಣವಾಗುತ್ತಾ ಹೋಗುತ್ತದೆ. ವಲಸೆಯ ಹರಿವಿನ ಸಂಖ್ಯೆಯು ವಲಸೆಯ ಮೂಲ ಮತ್ತು ಮುಕ್ತಾಯಗಳ ಸಂಖ್ಯೆಗೆ ಅನುಗುಣವಾಗಿರುತ್ತದೆ. ಇಲ್ಲಿ ಒಂದು ವಿಷಯವನ್ನು ಒತ್ತಿ ಹೇಳಬೇಕು. ಅದೇನೆಂದರೆ ಒಂದು ಪ್ರದೇಶದಲ್ಲಿನ ಎಲ್ಲಾ ವಲಸೆಯ ಹರಿವುಗಳೂ ಮುಖ್ಯವಲ್ಲ. ಯಾವ ವಲಸೆಯ ಹರಿವು ಪ್ರಮುಖವಾದುದು ಎನ್ನುವುದು ಆಯಾ ಪ್ರದೇಶದ ಮತ್ತು ಎಲ್ಲಿ ಹೋಗಿ ನೆಲಸುತ್ತಾರೋ ಆ ಪ್ರದೇಶದ ಪ್ರಾಮುಖ್ಯತೆಗೆ ಅನುಗುಣವಾಗಿರುತ್ತದೆ. ಮುಖ್ಯವಾದ ನಾಲ್ಕು ಹರಿವುಗಳೆಂದರೆ

1. ಗ್ರಾಮಾಂತರ ಪ್ರದೇಶಗಳಿಂದ ಪಟ್ಟಣ ಪ್ರದೇಶಗಳಿಗೆ
2. ಗ್ರಾಮಾಂತರ ಪ್ರದೇಶದಿಂದ ಮತ್ತೊಂದು ಗ್ರಾಮಾಂತರ ಪ್ರದೇಶಕ್ಕೆ
3. ಪಟ್ಟಣ ಪ್ರದೇಶದಿಂದ ಗ್ರಾಮಾಂತರ ಪ್ರದೇಶಕ್ಕೆ
4. ಪಟ್ಟಣ ಪ್ರದೇಶದಿಂದ ಮತ್ತೊಂದು ಪಟ್ಟಣ ಪ್ರದೇಶಕ್ಕೆ

**ವಲಸೆಯ ವಿರುದ್ಧ ದಿಕ್ಕಿನ ಹರಿವು:** ಪ್ರತಿಯೊಂದು ವಲಸೆಯ ಹರಿವಿಗೂ ಅದರ ವಿರುದ್ಧ ದಿಕ್ಕಿನ ಹರಿವು ಇರುತ್ತದೆ. ಉದಾ: ಪಟ್ಟಣ ಪ್ರದೇಶದಿಂದ ಗ್ರಾಮಾಂತರ ಪ್ರದೇಶಕ್ಕೆ ಒಂದು ವಲಸೆಯ ಹರಿವು ಇದ್ದಂತೆ ಗ್ರಾಮಾಂತರ ಪ್ರದೇಶದಿಂದ ಪಟ್ಟಣ ಪ್ರದೇಶಕ್ಕೆ ವಲಸೆಯ ಹರಿವು ಇರುತ್ತದೆ.

ಹೀಗೆ ಮೇಲೆ ಹೇಳಿದ ನಾಲ್ಕು ಹರಿವುಗಳ ವಿರುದ್ಧ ದಿಕ್ಕಿನ ಹರಿವುಗಳು ಹೀಗಿರುತ್ತವೆ:

ವಲಸೆಯ ಹರಿವುಗಳು ವಲಸೆಯ ವಿರುದ್ಧ ದಿಕ್ಕಿನ ಹರಿವು

1. ಗ್ರಾಮಾಂತರದಿಂದ ಪಟ್ಟಣಕ್ಕೆ ಪಟ್ಟಣದಿಂದ ಗ್ರಮಾಂತರಕ್ಕೆ
2. ಗ್ರಾಮಾಂತರದಿಂದ ಗ್ರಾಮಾಂತರಕ್ಕೆ ಗ್ರಾಮ (ಮೂಲ) ದಿಂದ ಗ್ರಾಮ (ಮುಕ್ತಾಯ)ಕ್ಕೆ
3. ಪಟ್ಟಣದಿಂದ ಗ್ರಾಮಾಂತರಕ್ಕೆ ಗ್ರಾಮಾಂತರದಿಂದ ಪಟ್ಟಣಕ್ಕೆ
4. ಪಟ್ಟಣದಿಂದ ಪಟ್ಟಣಕ್ಕೆ ಪಟ್ಟಣ (ಮೂಲ) ದಿಂದ ಪಟ್ಟಣ (ಮುಕ್ತಾಯ)ಕ್ಕೆ

**ವಲಸೆ ಬಂದವರು, ವಲಸೆ ಹೋದವರು, ನಿವ್ವಳ ವಲಸೆಯ ಪ್ರಮಾಣ ಮತ್ತು ಒಟ್ಟು ವಲಸೆಯ ಪ್ರಮಾಣ**

**ವಲಸೆ ಬಂದವರು:** ಒಂದು ಗೊತ್ತಾದ ಸಮಯದಲ್ಲಿ ಜನರು ತಮ್ಮ ಮೂಲ ಸ್ಥಾನದಿಂದ ಹೊರಟು ವಲಸೆ ಬಂದು ಒಂದು ಸ್ಥಳದಲ್ಲಿ ನೆಲಸಿದರೆ ಅವರನ್ನು ವಲಸೆ ಬಂದವರು ಎನ್ನುತ್ತಾರೆ.

Digitised by Bharatavani, CIIL

**ವಲಸೆ ಹೋದವರು:** ಒಂದು ಗೊತ್ತಾದ ಸಮಯದಲ್ಲಿ ಜನರು ತಮ್ಮ ಮೂಲ ಸ್ಥಾನವನ್ನು ಬಿಟ್ಟು ಮತ್ತೊಂದು ಸ್ಥಳದಲ್ಲಿ ನೆಲಸಿದರೆ ಅವರನ್ನು ವಲಸೆ ಹೋದವರು ಎನ್ನುತ್ತಾರೆ.

**ವಲಸೆಯಿಂದ ಹಿಂದಿರುಗುವುದು:** ಏಷ್ಯಾದ ಅನೇಕ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮತ್ತು ಪ್ರಪಂಚದ ಇತರ ಭಾಗಗಳಲ್ಲಿ ಜನರು ಗ್ರಾಮಾಂತರ ಪ್ರದೇಶಗಳಿಂದ ಪಟ್ಟಣ ಪ್ರದೇಶಕ್ಕೆ ಹಾಗೂ ಪಟ್ಟಣ ಪ್ರದೇಶದಿಂದ ಮತ್ತೊಂದು ಪಟ್ಟಣ ಪ್ರದೇಶಕ್ಕೆ ವಲಸೆ ಹೋದರೂ ತಮ್ಮ ಮೂಲ ಸ್ಥಳಗಳೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಳ್ಳುತ್ತಾರೆ. ಅನೇಕರು ತಾವು ಕೆಲಸದಿಂದ ನಿವೃತ್ತರಾದಮೇಲೆ ತಮ್ಮ ಸ್ವಂತ ಸ್ಥಳಕ್ಕೆ ಹಿಂತಿರುಗುವ ನಿರ್ಧಾರ ಮಾಡುತ್ತಾರೆ. ಮತ್ತು ತಮ್ಮ ಉಳಿದ ಜೀವತಾವಧಿಯನ್ನು ಅಲ್ಲೇ ಕಳೆಯಲು ಬಯಸುತ್ತಾರೆ. ಇಂತಹ ವಲಸೆಯನ್ನು ವಲಸೆಯಿಂದ ಹಿಂತಿರುಗುವುದು ಎನ್ನಬಹುದು.

**ವಲಸೆಯ ಹಂತಗಳು:** ಒಬ್ಬ ವ್ಯಕ್ತಿಯು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗಿ ನಂತರ ಅಲ್ಲಿಂದ ಮತ್ತೊಂದು ಸ್ಥಳಕ್ಕೆ ನಂತರ ಮಗದೊಂದು ಸ್ಥಳಕ್ಕೆ ವಲಸೆ ಹೋದರೆ, ಅವನು ಸ್ಥಳ ಬದಲಾವಣೆ ಮಾಡಿದುದೆಲ್ಲಾ ಒಂದೊಂದು ಹಂತದ ವಲಸೆ ಮೊದಲನೇ ಹಂತ, ಎರಡನೇ ಹಂತ, ಮುಂತಾಗಿ.

**ನಿವ್ವಳ ವಲಸೆ:** ಒಂದು ಸ್ಥಳಕ್ಕೆ ಒಂದು ಗೊತ್ತಾದ ಕಾಲದ ಅವಧಿಯಲ್ಲಿ ಒಟ್ಟು ವಲಸೆ ಬಂದವರಿಂದ ಒಟ್ಟು ವಲಸೆ ಹೋದವರನ್ನು ಕಳೆದಾಗ ಉಳಿಯುವ ವಲಸೆ ಬಂದವರ ಸಂಖ್ಯೆಯು ನಿವ್ವಳ ವಲಸೆ ಎನಿಸಿಕೊಳ್ಳುವುದು. ಇದರಿಂದ ಆ ಸ್ಥಳದಲ್ಲಿ ಜನಸಂಖ್ಯೆಯಲ್ಲಿ ಉಂಟಾದ ಹೆಚ್ಚಳವನ್ನು ತೋರಿಸುತ್ತದೆ. ಅಥವಾ ವಲಸೆ ಹೋದವರ ಸಂಖ್ಯೆಯೇ ಹೆಚ್ಚಾಗಿದ್ದರೆ ಜನಸಂಖ್ಯೆಯಲ್ಲಿ ಉಂಟಾದ ಕಡಿತವನ್ನು ತೋರಿಸುತ್ತದೆ.

**ಒಟ್ಟು ವಲಸೆ:** ಒಂದು ಗೊತ್ತಾದ ಕಾಲದ ಅವಧಿಯಲ್ಲಿ ವಲಸೆ ಬಂದವರ ಮತ್ತು ಹೋದವರ ಒಟ್ಟು ಸಂಖ್ಯೆಯು ಜನರ ಚಲನೆಯ ಪ್ರಮಾಣವನ್ನು ತೋರಿಸುತ್ತದೆ.

**ವಲಸೆಯ ಪ್ರಮಾಣ:** ವಲಸೆಯ ಗಾತ್ರವನ್ನು ನಿಯಂತ್ರಿಸಲು ವಲಸೆಯ ಪ್ರಮಾಣದ ಲೆಕ್ಕಾಚಾರವನ್ನು ಕೈಗೊಳ್ಳಲಾಗುವುದು. ವಲಸೆಯ ಪ್ರಮಾಣವು ವಲಸೆಯ ಸಾಧ್ಯತೆಯನ್ನು ಗುರುತಿಸುತ್ತದೆ. ಅದು ವಲಸೆಯ ಸಾಧ್ಯತೆ ಇರುವ ಜನರ ಸಂಖ್ಯೆಯಿಂದ ಒಟ್ಟು ವಲಸೆಯಾದ ಜನಸಂಖ್ಯೆಯನ್ನು ಭಾಗಿಸುವುದೇ ಆಗಿದೆ. ಅಂತಹ ನಾಲ್ಕು ಪ್ರಮಾಣಗಳನ್ನು ಹೀಗೆ ವ್ಯಾಖ್ಯಾನಿಸಲಾಗಿದೆ:

| | | |
|---|---|---|
| ಹೊರ ವಲಸೆಯ ಪ್ರಮಾಣ | = | (ಒ/ಪಿ)*ಕೆ |
| ಒಳ ವಲಸೆಯ ಪ್ರಮಾಣ | = | (ಐ/ಪಿ)*ಕೆ |
| ನಿವ್ವಳ ವಲಸೆಯ ಪ್ರಮಾಣ | = | (ಐ–ಪಿ)*ಕೆ |
| ಒಟ್ಟು ವಲಸೆಯ ಪ್ರಮಾಣ | = | (ಐ+ಪಿ)*ಕೆ |

'ಒ' ಎನ್ನುವುದು ಒಂದು ಗೊತ್ತಾದ ಪ್ರದೇಶದಿಂದ ನಿರ್ಗಮಿಸಿದ ಅಥವಾ ಹೊರ ವಲಸೆಯಾದವರು, 'ಐ' ಅನ್ನುವುದು ಒಳ ವಲಸೆ ಅಥವಾ ಒಂದು ಗೊತ್ತಾದ ಪ್ರದೇಶದೊಳಗೆ ವಲಸೆ ಬಂದವರು, 'ಪಿ' ಎನ್ನುವುದು ಆ ಪ್ರದೇಶದ ಜನಸಂಖ್ಯೆ, 'ಕೆ' ಎನ್ನವುದು ಸ್ಥಿರ, 100 ಅಥವಾ 1000.

ಆ ಪ್ರಮಾಣಗಳನ್ನು ನಿಗದಿತ ವಯೋಮಾನದ ಗುಂಪುಗಳಿಗೆ ಲೆಕ್ಕಹಾಕಬಹುದು. ಗಂಡಸರು, ಹೆಂಗಸರು, ವೃತ್ತಿ ಪರರು ಮತ್ತಿತರ ಪಂಗಡಗಳ ರೀತಿಯಲ್ಲೂ ಲೆಕ್ಕ ಹಾಕಿ, ಜನಸಂಖ್ಯೆಯ ಯಾವ ಭಾಗ ಹೆಚ್ಚು ಅಥವಾ ಕಡಿಮೆ ವಲಸೆಯನ್ನು ಕೈಗೊಳ್ಳುತ್ತದೆ ಎಂದು ತಿಳಿದುಕೊಳ್ಳಬಹುದು.

**ವಲಸೆಯ ಭಿನ್ನತೆ:** ಆರ್ಥಿಕ, ಸಾಮಾಜಿಕ ಮುಂತಾದ ಆಧಾರಗಳಿಂದ ರಚಿಸಲಾದ ಜನಸಂಖ್ಯಾ ಗುಂಪುಗಳ ನಡುವೆ ಇರುವ ವಲಸೆಯ ಪ್ರಮಾಣದ ವ್ಯತ್ಯಾಸವನ್ನು ವಲಸೆಯ ಭಿನ್ನತೆ ಎನ್ನುತ್ತಾರೆ.

**ವಲಸೆಯ ಆಯ್ಕೆ:** ವಲಸೆಯ ಭಿನ್ನತೆಯ ಅಧ್ಯಯನವು ವಲಸೆಯ ಆಯ್ಕೆಯ ಅಭ್ಯಾಸಕ್ಕೆ ಸಮಾನವಾದುದು. ವಿವಿಧ ಗುಣಲಕ್ಷಣಗಳುಳ್ಳ ಜನರಲ್ಲಿ ಸಾಮಾನ್ಯ ಜನರಿಗಿಂತ ವಲಸೆ ಹೋಗುವ ಸ್ವಭಾವ ಹೆಚ್ಚಾಗಿರುತ್ತದೆ. ವಲಸೆಯ ಆಯ್ಕೆಯ ಸಾಮಾನ್ಯ ವಿಧಗಳು ಎಂದರೆ:

**ವಯೋಮಾನರೀತಿ ವಲಸೆಯ ಆಯ್ಕೆ:** ಹೆಚ್ಚು ವಯಸ್ಸಾದವರಿಗಿಂತ ಕಡಿಮೆ ವಯಸ್ಸಿನವರು ವಲಸೆ ಹೋಗುವುದು ಹೆಚ್ಚು. ಯುವಕ ಯುವತಿಯರು ವಯಸ್ಸಾದವರಿಗಿಂತ ಹೊಸ ಜಾಗಕ್ಕೆ ಬೇಗ ಹೊಂದಿಕೊಳ್ಳುವುದೇ ಇದಕ್ಕೆ ಕಾರಣ.

**ಲಿಂಗರೀತಿ ವಲಸೆಯ ಆಯ್ಕೆ:** ಹೆಂಗಸರಿಗಿಂತ ಗಂಡಸರು ವಲಸೆ ಹೋಗುವುದು ಹೆಚ್ಚು. ಗಂಡಸರಿಗೆ ಯಾವುದೇ ಭಯ, ಸಂಕೋಚಗಳಿಲ್ಲದಿರುವುದೇ ಇದಕ್ಕೆ ಕಾರಣ. ಉದಾ: ಉತ್ತರ ಪ್ರದೇಶದ ಹಲವು ಬೆಟ್ಟಗಾಡು ಪ್ರದೇಶಗಳಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆ ಹೆಚ್ಚು. ಏಕೆಂದರೆ ಅಲ್ಲಿ ಗಂಡಸರಿಗೆ ವ್ಯವಸಾಯದ ಭೂಮಿಯ ಕೊರತೆ ಇರುವುದರಿಂದ ಅವರು ವ್ಯವಸಾಯದ ಕೆಲಸವನ್ನು ಹುಡುಕಿಕೊಂಡು ವಲಸೆ ಹೋಗುವುದೇ ಕಾರಣ. ಹೆಂಗಸರು ಮಾತ್ರ ಸಾಮಾನ್ಯವಾಗಿ ಅಲ್ಲೇ ಉಳಿಯುವುದರಿಂದ ಅವರ ಸಂಖ್ಯೆ ಗಂಡಸರ ಸಂಖ್ಯೆಗಿಂತ ಹೆಚ್ಚು.

**ಶಿಕ್ಷಣ ಮಟ್ಟದ ವಲಸೆಯ ಆಯ್ಕೆ:** ಶಿಕ್ಷಣದಿಂದ ಪಡೆಯುವ ಜ್ಞಾನ ಮತ್ತು ಕೌಶಲಗಳಿಂದಾಗಿ ವಿದ್ಯಾವಂತರಿಗೆ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಕೆಲಸಗಳನ್ನು ಕೈಗೊಳ್ಳುವ ಅವಕಾಶ ಇರುತ್ತದೆ. ಇದರಿಂದಾಗಿ ಶಿಕ್ಷಣ ಮಟ್ಟ ಹೆಚ್ಚಾದಷ್ಟೂ ಅಂತಹವರ ವಲಸೆಯ ಪ್ರಮಾಣವೂ ಹೆಚ್ಚು.

**ವೃತ್ತಿಯಿಂದಾಗಿ ವಲಸೆಯ ಆಯ್ಕೆ:** ಶಿಕ್ಷಣದಿಂದಾಗುವ ವಲಸೆಯಂತೆ ಉತ್ತಮ ವೃತ್ತಿ ದೊರಕುವ ಅವಕಾಶಗಳಿಂದಲೂ ವಲಸೆ ಹೆಚ್ಚುತ್ತದೆ. ಸಾಧಾರಣ ವೃತ್ತಿಗಳಿಗಿಂತ ಉತ್ತಮ ಮಟ್ಟದ ವೃತ್ತಿಗಳನ್ನು ದೊರಕಿಸಿಕೊಳ್ಳುವವರಲ್ಲಿ ವಲಸೆ ಹೆಚ್ಚು.

Digitised by Bharatavani, CIIL

ಒಬ್ಬ ವ್ಯಕ್ತಿಯ ಒಟ್ಟು ಜೀವಿತಾವಧಿಗೆ ಅನುಗುಣವಾಗಿ ಈ ಬಗೆಯ ವಲಸೆಯ ಪ್ರಮಾಣ ಇರುತ್ತದೆ. ನಿರ್ದಿಷ್ಟ ಸಂಖ್ಯೆಯ ವ್ಯಕ್ತಿಗಳು ವಲಸೆ ಹೋಗಬೇಕಾಗಿ ಅನಿವಾರ್ಯತೆ ಉಂಟಾದರೆ, ತಮ್ಮ ಜೀವಿತಾವಧಿಯಲ್ಲಿ ಆಗ ಇದ್ದಿರಬೇಕಾದ ವಲಸೆಯ ಪ್ರಮಾಣಕ್ಕೆ ಸಂಬಂಧಿಸಿದಂತೆ ಮಾಡುವ ವಲಸೆಯ ಚಲನೆಯ ಸಂಖ್ಯೆಯನ್ನು ನಿರ್ಧರಿಸಲು ಸಹಾಯವಾಗುತ್ತದೆ.

**ವಲಸೆ ಬರುವಿಕೆ ಮತ್ತು ವಲಸೆ ಹೋಗುವಿಕೆ:** ಒಂದು ಹೊರ ದೇಶದಿಂದ ನಮ್ಮ ದೇಶಕ್ಕೆ ವಲಸೆ ಹೋಗುವವರನ್ನು ನಮ್ಮ ದೇಶದ ದೃಷ್ಟಿಯಿಂದ ವಲಸೆ ಬರುವಿಕೆ (immigration) ಎಂದೂ, ಅಂಥ ವ್ಯಕ್ತಿಗಳನ್ನು ವಲಸೆ ಬಂದವರು (immigrants) ಎಂದು ಕರೆಯಲಾಗುತ್ತದೆ. ನಮ್ಮ ದೇಶದಿಂದ ಪರ ದೇಶಗಳಿಗೆ ವಲಸೆ ಹೋಗುವುದನ್ನು ವಲಸೆ ಹೋಗುವಿಕೆ (emigration) ಎಂದೂ, ಅಂಥ ವ್ಯಕ್ತಿಗಳನ್ನು ವಲಸೆ ಹೋದವರು (emigrants) ಎಂದೂ ಕರೆಯಲಾಗುತ್ತದೆ.

**ವಲಸೆಯ ಕಾರಣಗಳು ಮತ್ತು ಪರಿಣಾಮಗಳು: (ಅ) ಕಾರಣಗಳು:** ಪ್ರತಿಯೊಬ್ಬ ವಲಸೆಗನಿಗೂ ತನ್ನ ವಲಸೆಗೆ ತನ್ನದೇ ಆದ ಕಾರಣವಿದ್ದರೂ ಅವುಗಳ ರೀತಿ ನೀತಿಗಳಿಗನುಗುಣವಾಗಿ ವಲಸೆಯ ಕರಣಗಳನ್ನು ಸ್ಥೂಲವಾಗಿ ವರ್ಗೀಕರಿಸಬಹುದು.

**ಒತ್ತಡದ ಅಂಶ:**

1. ವ್ಯವಸಾಯದ ಭೂಮಿಯ ಉತ್ಪಾದನೆಯ ತಲಾ ಉತ್ಪಾದನೆಯಲ್ಲಿನ ಕುಸಿತ, ತಾಂತ್ರಿಕ ಬದಲಾವಣೆಗಳು, ಗಣಿಗಳಲ್ಲಿ ಅದಿರು ಮುಗಿದುಹೋಗುವುದು, ಮರದ ದಿಮ್ಮಿಗಳ ಕೊರತೆ, ಮತ್ತಿತರ ಸಂಪನ್ಮೂಲಗಳ ಕೊರತೆ, ಕೈಗಾರಿಕೆಗಳು ಮುಚ್ಚಿ ಹೋಗುವುದು
2. ಯಾಂತ್ರೀಕರಣದಿಂದ ಉದ್ಯೋಗಾವಕಾಶಗಳು ಕಡಿಮೆಯಾಗುವುದು
3. ಸಾಮಾಜಿಕ, ರಾಜಕೀಯ ಅಥವಾ ಮತೀಯ ತಾರತಮ್ಯಗಳು
4. ಮರಣ ಪ್ರಮಾಣದ ಇಳಿಮುಖ, ಜನನ ಪ್ರಮಾಣದ ಮೇಲೆ ನಿಯಂತ್ರಣ ಇಲ್ಲದಿರುವುದು, ಜನಸಂಖ್ಯೆ ಏರಿಕೆ, ಸಂಪನ್ಮೂಲಗಳ ಕೊರತೆ
5. ಪ್ರಾಕೃತಿಕ ವಿಕೋಪಗಳಾದ ವಾಯುಭಾರ ಕುಸಿತ, ಕ್ಷಾಮ, ಭೂಕಂಪ ಮತ್ತು ಸಾಂಕ್ರಾಂಮಿಕ ರೋಗಗಳು ಇತ್ಯಾದಿ
6. ಯುದ್ಧ ಮುಂತಾದವುಗಳಿಂದ ಉಂಟಾಗುವ ಅಸುರಕ್ಷತೆ.

**ಎಳೆತದ ಅಂಶಗಳು:**

1. ಅಗ್ಗದ ದರದಲ್ಲಿ ಸಿಗುವ ಭೂಮಿ, ಶ್ರಮ ಮತ್ತಿತರ ಸಂಪನ್ಮೂಲಗಳು, ಹೆಚ್ಚಗೆ ದೊರಕುವ ಕೂಲಿ, ಕೆಲಸ ಮತ್ತು ಉತ್ತಮ ಸಾರಿಗೆ ವ್ಯವಸ್ಥೆ
2. ಶಿಕ್ಷಣದ ಉತ್ತಮ ಅವಕಾಶಗಳು, ಉತ್ತಮ ಜೀವನ ಮಟ್ಟ, ಮದುವೆಯ ಅನಿರ್ಬಂಧತೆ
3. ಉತ್ತಮ ರಕ್ಷಣೆ ಮತ್ತು ಕ್ಷೇಮಾಭ್ಯುದಯ
4. ಉತ್ತಮ ಹವಾಮಾನ
5. ಜನಸಂಖ್ಯೆಯ ಕಡಿಮೆ ಒತ್ತಡ, ಉತ್ತಮ ಆರೋಗ್ಯ ಮತ್ತು ನಿವೃತ್ತರಿಗೆ ಮನರಂಜನೆಯ ಅನುಕೂಲಗಳು
6. ಕುಟುಂಬದ ಮೇಲಿನ ಅವಲಂಬನೆ ಮತ್ತು ಕುಟುಂಬವು ಚಲಿಸಿದರೆ ಅವಲಂಬಿತ ವ್ಯಕ್ತಿಯೂ ಅದರೊಂದಿಗೆ ಚಲಿಸುವುದು.

**ವಲಸೆಯ ಪರಿಣಾಮಗಳು:** ವಲಸೆಯ ಕಾರಣ ಮತ್ತು ಪರಿಣಾಮಗಳಲ್ಲಿನ ವ್ಯತ್ಯಾಸವನ್ನು ಕಾಣುವುದು ಕಷ್ಟವಾದರೂ, ವಲಸೆಯ ಮೂಲ ಸ್ಥಳದಲ್ಲಿ ವಲಸೆಯ ಪರಿಣಾಮಗಳನ್ನು ಹೀಗೆ ವಿವರಿಸಬಹುದು

1. ವ್ಯವಸಾಯಗಾರರಿಗೆ ತಮ್ಮ ಸಂಪಾದನೆಯ ಜೊತೆಗೆ ಮತ್ತಷ್ಟು ಗಳಿಸಿ ಶಿಕ್ಷಣ, ವ್ಯವಸಾಯದ ಅಭಿವೃದ್ಧಿಗೆ ಅದನ್ನು ಉಪಯೋಗಿಸಬಹುದು ಹಾಗೂ ಅವರ ಭೂಮಿಯ ವಿಭಜನೆಯನ್ನೂ ತಪ್ಪಿಸಬಹುದು
2. ವಿರುದ್ಧ ಪರಿಣಾಮಗಳೂ ಆಗುವುದುಂಟು. ಸಾಮಾನ್ಯವಾಗಿ ವಲಸೆ ಹೋಗುವವರು ಯುವಕರೂ ಸಾಹಸಪ್ರಿಯರೂ ಆಗಿರುವುದರಿಂದ ಅವರ ಸ್ವಸ್ಥಾನದಲ್ಲಿ ಅವರ ಸೇವೆ ದೊರಕುವುದಿಲ್ಲ. ಇದರಿಂದ ಅವರ ನಾಯಕತ್ವ ಮತ್ತು ಉದ್ಯಮಸಾಹಸದಿಂದ ಸ್ವಸ್ಥಾನವು ವಂಚಿತವಾಗುತ್ತದೆ. ಅಲ್ಲಿ ಉಳಿಯುವವರು ಕೇವಲ ಹೆಂಗಸರೂ ಮತ್ತು ವಯಸ್ಸಾದವರೂ ಆದ್ದರಿಂದ ಅಲ್ಲಿ ಶ್ರಮದ ಕೊರತೆ ಉಂಟಾಗುತ್ತದೆ.
3. ಇದರಿಂದಾಗಿ ಹೆಂಗಸರ ಸಂಖ್ಯೆ ಹೆಚ್ಚಾಗಿ ಮುಂದಿನ ಜನಸಂಖ್ಯೆಯ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

   ಇದೇ ರೀತಿ ಬಲಸೆ ಹೋದವರು ಹೋಗಿ ನೆಲಸುವ ಸ್ಥಳಗಳಲ್ಲೂ ಉಂಟಾಗುವ ಹಲವು ಪರಿಣಾಮಗಳು ಹೀಗಿರುತ್ತವೆ

1. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪಟ್ಟಣಗಳಿಗೆ ಅಥವಾ ಮಹಾನಗರಗಳಿಗೆ ಜನರು ವಲಸೆ ಹೋಗುವುದು ಸಾಮಾನ್ಯ. ಈ ಬಗೆಯ ವಲಸೆ ಬಹಳ ಕಷ್ಟದಲ್ಲಿರುವ ಬಡಜನರು ಜೀವನೋಪಾಯಕ್ಕಾಗಿ ಪಟ್ಟಣಕ್ಕೆ ವಲಸೆ ಹೋಗುವುದೇ ಆಗಿರುತ್ತದೆ. ಹೀಗೆ ವಲಸೆ ಹೋದವರು ಆ ಸ್ಥಳದ ಜನರೊಂದಿಗೆ ಕೆಲಸಕ್ಕಾಗಿ ಪೈಪೋಟಿ ನಡೆಸಬೇಕಾಗುತ್ತದೆ. ಸ್ಥಳೀಯರು ವಲಸೆ ಬಂದವರನ್ನು ಸರಿಯಾಗಿ ಸ್ವೀಕರಿಸುವುದಿಲ್ಲ. ಆಗ ಘರ್ಷಣೆಗಳಿಗೆ ಅವಕಾಶವಾಗುತ್ತದೆ

Digitised by Bharatavani, CIIL

2. ಹೀಗೆ ವಲಸೆ ಹೋದ ಜನರು ತಾವು ಹೋದ ಸ್ಥಳದಲ್ಲಿ ಸಿಕ್ಕುವ ಕಡಿಮೆ ಆದಾಯದಿಂದ ಉತ್ತಮ ಜೀವನ ನಡೆಸಲಾಗುವುದಿಲ್ಲ. ಇದರಿಂದಾಗಿ ಪಟ್ಟಣಗಳಲ್ಲಿ ಕೊಳಚೆ ಪ್ರದೇಶಗಳು ಬೆಳೆಯುತ್ತವೆ. ಅಲ್ಲಿನ ಮುನಿಸಿ ಪಾಲಿಟಿಯೂ ಹಣದ ಅಭಾವದಿಂದ ಇವರಿಗೆ ಏನೂ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ

3. ಒಂದೇ ಸಮನೆ ವಲಸೆ ಬರುವ ಜನರಿಂದ ಪಟ್ಟಣಗಳಲ್ಲಿನ ಜನಸಂಖ್ಯಾ ಹಂಚಿಕೆ ಅಸ್ತವ್ಯಸ್ತಗೊಳ್ಳುತ್ತದೆ. ವಾಸದ ಮನೆಗಳಿಗೆ ಮತ್ತು ಕುಡಿಯುವ ನೀರಿಗೆ ಮುಂತಾದವುಗಳಿಗೆ ಕೊರತೆ ಉಂಟಾಗುತ್ತದೆ. ಒಟ್ಟಿನಲ್ಲಿ ಜನರ ಜೀವನ ವಲಸಿಗರ ಸಂಖ್ಯೆ ಮಿತಿಮೀರುವುದರಿಂದ ದುರ್ಭರವಾಗುತ್ತದೆ.

**ವಲಸೆಯ ಶಿಕ್ಷಣದ ಅಗತ್ಯ:** ಕಳೆದ ಶತಮಾನದ ಕೊನೆಯ ಭಾಗದಲ್ಲಿ ಹೆಚ್ಚಾದ ಜನಸಂಖ್ಯೆಯ ಬೆಳವಣಿಗೆ, ಪಟ್ಟಣ ಮತ್ತು ನಗರಗಳ ಪ್ರಾಮುಖ್ಯತೆ, ದೇಶದೊಳಗಿನ ಹಾಗೂ ಅಂತರರಾಷ್ಟ್ರೀಯ ವಲಸೆಗಳು ಮುಂತಾದವುಗಳನ್ನು ಕಾಣಬಹುದು. ವಲಸೆ ಬಂದವರಿಂದ ಹೆಚ್ಚು ಅನುಕೂಲವಾದದ್ದು ಸಂಪನ್ಮೂಲಗಳಿಂದ ಕೂಡಿದ ದೇಶಗಳಿಗೆ. ಇದರಿಂದ ಅಲ್ಲಿನ ಆರ್ಥಿಕ ಪ್ರಗತಿಗೆ ಸಹಾಯವಾಯಿತು. ಮತ್ತು ವಲಸೆ ಬಂದವರ ಸ್ವಸ್ಥಾನಕ್ಕೂ ಲಾಭವಾಯಿತು. ಆದರೆ ಕಾಲಕ್ರಮೇಣ ವಲಸೆಯಿಂದ ಹಲವು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳೂ ಉದ್ಭವಿಸಿದವು. ಈ ಸಮಸ್ಯೆ ಗಳನ್ನು ಆದಷ್ಟು ಕಡಿಮೆ ಮಾಡುವ ದೃಷ್ಟಿಯಿಂದ ವಲಸೆ ಬಂದವರಿಗೆ ಅವರ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿಸುವ ಶಿಕ್ಷಣದ ಅವಶ್ಯಕತೆ ಉಂಟಾಯಿತು. ಇಂಥ ಶಿಕ್ಷಣವನ್ನು ವಲಸಿಗರ ಶಿಕ್ಷಣ ಎನ್ನಬಹುದು. ವಲಸೆ ಬಂದವರು ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಳ್ಳಬೇಕು, ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಯಾವ ರೀತಿ ಕೆಲಸ ಮಾಡಬೇಕು, ತಮ್ಮ ಉದ್ಯಮ ಸಾಹಸ, ಶ್ರಮ ಮುಂತಾದವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ವಲಸೆಯ ಶಿಕ್ಷಣವು ಕೊಡಬೇಕೆಂಬ ದೃಷ್ಟಿಯಿಂದ ಅದನ್ನು ಸಿದ್ಧಪಡಿಸಲಾಯಿತು.

**ವಲಸೆಯ ಶಿಕ್ಷಣ ಮಾಡುತ್ತಿರುವ ಪ್ರಯತ್ನಗಳು:** ಜನಸಂಖ್ಯಾ ಶಾಸ್ತ್ರದಲ್ಲಿ ವಲಸೆಯು ಒಂದು ಮುಖ್ಯವಾದ ಭಾಗವಾಗಿಯೂ, ಹೆಚ್ಚು ತಾಂತ್ರಿಕತೆಯಿಂದ ಕೂಡಿದ್ದೂ ಆಗಿದೆ. ಸಮಾಜ ವಿಜ್ಞಾನಗಳ ವಿಷಯಗಳಾದ ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ ಮುಂತಾದವುಗಳಲ್ಲಿ ಸ್ವಲ್ಪ ಮಟ್ಟಿಗೆ ವಲಸೆಯ ವಿಚಾರಗಳನ್ನು ಸೇರಿಸಲಾಗಿದೆ. ಆದರೆ ವಲಸೆಯ ಪ್ರಾಮುಖ್ಯತೆಯನ್ನು ಅರಿತು ಹಲವು ರಾಷ್ಟ್ರಗಳು ಯುನೆಸ್ಕೊ ಮೂಕಲ ಅದನ್ನು ಶಾಲಾ ಪಠ್ಯವಿಷಯದಲ್ಲಿ ಸೇರಿಸುವ ಪ್ರಯತ್ನವನ್ನು ಮಾಡುತ್ತಿವೆ.

**ವಲಸೆಯ ಶಿಕ್ಷಣದ ಭವಿಷ್ಯ:** ಪ್ರಪಂಚವು ಮುಂದುವರೆದಂತೆ ಎಲ್ಲರೂ ಒಟ್ಟಿಗೆ ಬದುಕುವುದು ಸಾಮಾನ್ಯವಾಗಿದೆ. ಪ್ರತಿಯೊಬ್ಬರನ್ನೂ ಅವರ ಜ್ಞಾನ ಮತ್ತು ಕೌಶಲಕ್ಕೆ ಹಾಗೂ ಕೆಲಸ ಮಾಡುವ ಉತ್ಸಾಹಕ್ಕೆ ಆದರಿಸಲಾಗುತ್ತದೆ. ಇಂತಹ ಸನ್ನಿವೇಶ ಭವಿಷ್ಯದಲ್ಲಿ ವಲಸೆಯ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿರುತ್ತದೆ. ಇದೇ ಉತ್ಸಾಹ ಮತ್ತು ಆದರವನ್ನು ಮುಂದುವರೆಸಿಕೊಂಡು ಹೋಗಲು ವಲಸೆಯ ಶಿಕ್ಷಣ ಹೆಚ್ಚು ಸಹಾಯ ಮಾಡುತ್ತದೆ. ಎದರಿಂದ ವಲಸೆ ಬಂದವರಿಗೂ, ಅದೇ ಸ್ಥಳಿಕರಿಗೂ ನಡುವೆ ಯಾವ ಭೇದ ಭಾವವೂ ಉಂಟಾಗದೆ ಹೊಂದಾಣಿಕೆಯ ಜೀವನ ನಡೆಸಲು ವಲಸೆಯ ಶಿಕ್ಷಣ ಸಹಾಯ ಮಾಡುತ್ತದೆ. ಹೀಗಾಗಿ ವಲಸೆಯ ಶಿಕ್ಷಣಕ್ಕೆ ಉತ್ತಮ ಭವಿಷ್ಯವಿದೆ ಎಂದು ಹೇಳಬಹುದು.

**ಮೂಲ: ಅಸ್ಲಂ ಮೆಹಮೂದ್**

**ಅನು: ಡಾ. ರಾಘವೇಂದ್ರರಾವ್ ಎಚ್. ಎಸ್.**

## ವಸತಿ ಶಾಲೆಗಳು

### ನವೋದಯ ವಿದ್ಯಾಲಯಗಳು

ರಾಷ್ಟ್ರೀಯ ಶಿಕ್ಷಣ ನೀತಿ (1986) ಅನುಗುಣವಾಗಿ ಭಾರತ ಸರ್ಕಾರವು ಜವಾಹರ್ ನವೋದಯ ವಿದ್ಯಾಲಯಗಳನ್ನು ಪ್ರಾರಂಭಿಸಿತು. ಈಗ ಈ ವಿದ್ಯಾಲಯಗಳು 27 ರಾಜ್ಯಗಳಲ್ಲಿ ಹಾಗೂ 7 ಕೇಂದ್ರಾಡಳಿತ ಪ್ರದೇಶಗಳಲ್ಲಿ ವ್ಯಾಪಿಸಿವೆ. ಇವು ಸಹಶಿಕ್ಷಣ ವಸತಿಶಾಲೆಗಳಾಗಿದ್ದು, ಇವುಗಳಿಗೆ ಸ್ವಾಯತ್ತ ಸಂಸ್ಥೆಯಾದ ನವೋದಯ ವಿದ್ಯಾಲಯ ಸಮಿತಿಯ ಮೂಲಕ ಭಾರತ ಸರ್ಕಾರವು ಪೂರ್ಣ ಆರ್ಥಿಕ ಸಹಾಯವನ್ನು ನೀಡುತ್ತ ಆಡಳಿತ ನಿರ್ವಹಣೆ ಮಾಡುತ್ತಿದೆ. ಜವಾಹರ್ ನವೋದಯ ವಿದ್ಯಾಲಯಗಳಿಗೆ ಆಯ್ಕೆ ಪರೀಕ್ಷೆಯ ಮೂಲಕ ಆರನೆಯ ತರಗತಿಗೆ ಪ್ರವೇಶ ನೀಡಲಾಗುವುದು. ಈ ವಿದ್ಯಾಲಯಗಳಲ್ಲಿ ಬೋಧನಾ ಮಾಧ್ಯಮವು 8ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾಂತೀಯ ಭಾಷೆಯಾಗಿರುವುದು. ಮೇಲಿನ ತರಗತಿಗಳಲ್ಲಿ ಗಣಿತ ಹಾಗೂ ವಿಜ್ಞಾನ ವಿಷಯಗಳಿಗೆ ಇಂಗ್ಲಿಷ್ ಹಾಗೂ ಸಮಾಜಶಾಸ್ತ್ರ ವಿಷಯಗಳಿಗೆ ಹಿಂದಿ ಬೋಧನಾ ಮಾಧ್ಯಮವಾಗಿರುವುದು. ಜವಾಹರ್ ನವೋದಯ ವಿದ್ಯಾಲಯಗಳ ವಿದ್ಯಾರ್ಥಿಗಳಯ ಕೇಂದ್ರ ಮಾಧ್ಯಮಿಕ ಶಿಕ್ಷಣ ಮಂಡಳಿಯು ನಡೆಸುವ 10 ಮತ್ತು 12ನೇ ತರಗತಿಗಳ ಪರೀಕ್ಷೆಗಳನ್ನು ತೆಗೆದುಕೊಳ್ಳವರು. ಈ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಕೊಡುವುದರೊಂದಿಗೆ ಊಟ, ವಸತಿ, ಸಮವಸ್ತ್ರ ಮತ್ತು ಪಠ್ಯಪುಸ್ತಕಗಳನ್ನು ಕೊಡಲಾಗುವುದು. ಆದ್ದರಿಂದ ನಾಮಮಾತ್ರಕ್ಕೆ ಎಂಬಂತೆ ಪ್ರತಿ ತಿಂಗಳಿಗೆ ಶುಲ್ಕದ ರೂಪದಲ್ಲಿ (ಫೀಸ್) ರೂಪಾಯಿ 200/– ಗಳನ್ನು 9ನೇ ತರಗತಿಯಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಕೊಡಬೇಕಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿದ್ಯಾರ್ಥಿನಿಯರು ಹಾಗೂ ಅಂಗವಿಕಲರು ಹಾಗೂ ಬಡತನದ

Digitised by Bharatavani, CIIL

ರೇಖೆಗಿಂತ ಕಡಿಮೆ ಆದಾಯವಿರುವ ಕುಟುಂಬದ ವಿದ್ಯಾರ್ಥಿಗಳಿಗೆ ಈ ಶುಲ್ಕವೂ ಇರುವುದಿಲ್ಲ.

**ನವೋದಯ ವಿದ್ಯಾಲಯಗಳ ಆಡಳಿತ:**

ನವೋದಯ ವಿದ್ಯಾಲಯಗಳು ಮಾಧ್ಯಮಿಕ ಶಿಕ್ಷಣದ ಕೇಂದ್ರ ಮಂಡಳಿಗೆ ಸಂಲಗ್ನತೆಯನ್ನು ಹೊಂದಿರುವುದು. ಮಾನವ ಸಂಪನ್ಮೂಲ ಅಭಿವೃದ್ಧಿ (ಶಿಕ್ಷಣ ವಿಭಾಗ) ಶಾಖೆಯಲ್ಲಿ ಒಂದು ಸ್ವಾಯತ್ತ ಸಂಸ್ಥೆ (ನವೋದಯ ವಿದ್ಯಾಲಯ ಸಮಿತಿ)ಯನ್ನು ಸ್ಥಾಪಿಸಿದೆ. ಇದು ಈ ವಿದ್ಯಾಲಯಗಳನ್ನು ಸ್ಥಾಪಿಸುವ ಮತ್ತು ಆಡಳಿತ ನಡೆಸುವ ಹೊಣೆಯನ್ನು ಹೊಂದಿರುತ್ತದೆ. ಈ ಸಂಸ್ಥೆಯು ಮೌಲ್ಯಮಾಪನ ಹಾಗೂ ಮೇಲ್ವಿಚಾರಣೆ ಮಾಡಲು ಸೂಕ್ತವಾದ ವ್ಯವಸ್ಥೆ ಮಾಡುವುದಲ್ಲದೆ ನವೋದಯ ವಿದ್ಯಾಲಯ ಪದ್ಧತಿಯಲ್ಲಿ ಪ್ರಗತಿಪರ ಸುಧಾರಣೆಗಳನ್ನು ತರುವ ದಿಸೆಯಲ್ಲಿ ಮಾಡುವ ಚಿಕ್ಕ ಪ್ರಯೋಗಗಳಿಗೆ ಅನುಕೂಲ ಮಾಡಿ ಕೊಡುತ್ತದೆ. ಸ್ಥಾನಿಕ ಸ್ಥಿತಿಗನುಗುಣವಾಗಿ ತನ್ನದೇ ಆದ ಸಂಸ್ಕೃತಿ ಮತ್ತು ಸ್ಥಾನಿಕ ತಜ್ಞರನ್ನು ಉಪಯೋಗಿಸಿಕೊಂಡು ವಿದ್ಯಾಲಯ ಒಳ್ಳೆಯ ರೀತಿಯಿಂದ ಅಭಿವೃದ್ಧಿಗೊಳ್ಳಲು ಅವಕಾಶವಿರುವುದರಿಂದ ದಿನನಿತ್ಯದ ಆಡಳಿತ ಹಾಗೂ ಶೈಕ್ಷಣಿಕ ವ್ಯವಸ್ಥೆಯ ಹಕ್ಕನ್ನು ಅಗತ್ಯವಿದ್ದಷ್ಟು ಆಯಾ ವಿದ್ಯಾಲಯಗಳಿಗೆ ಕೊಡಲಾಗುವುದು.

**ಯೋಜನೆಯ ಉದ್ದೇಶಗಳು:**

ವಿಶೇಷವಾಗಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಅತ್ಯಾಧುನಿಕ ಶಿಕ್ಷಣ ಹಾಗೂ ಉತ್ತಮ ಗುಣಮಟ್ಟದ ಸಂಸ್ಕೃತಿಯನ್ನು ಒಳಗೊಂಡ ಮೌಲ್ಯಾಧಾರಿತ ಶಿಕ್ಷಣ ಕೊಡುವುದರೊಂದಿಗೆ, ಪರಿಸರದ ಜಾಗೃತಿಯನ್ನು, ಸಾಹಸಮಯ ಚಟುವಟಿಕೆಗಳನ್ನು ಮತ್ತು ಶಾರೀರಿಕ ಶಿಕ್ಷಣವನ್ನು ಕೊಡಲಾಗುವುದು–ಮಕ್ಕಳಿಗೆ ಮೂರು ಭಾಷೆಗಳಲ್ಲಿ ಓದು, ಬರಹ ಕಲಿಯಲು ಅನುವು ಮಾಡಿಕೊಡಲಾಗುವುದು–ವಿದ್ಯಾರ್ಥಿಗಳ ವಿಶೇಷ ವಲಸೆ ನೀತಿಯ ಮುಖಾಂತರ, ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸುವ ಸಲುವಾಗಿ ವಿದ್ಯಾರ್ಥಿಗಳನ್ನು ಹಿಂದಿ ಮಾತನಾಡದ ರಾಜ್ಯಗಳಿಂದ, ಹಿಂದಿ ಮಾತನಾಡುವ ರಾಜ್ಯಗಳಿಗೆ ಕಳುಹಿಸಿಕೊಡಲಾಗುವುದು. ಇದೇ ರೀತಿಯಾಗಿ ಹಿಂದಿ ಮಾತನಾಡುವ ರಾಜ್ಯಗಳಿಂದ, ಹಿಂದಿ ಮಾತನಾಡದ ರಾಜ್ಯಗಳಿಗೆ ಕಳುಹಿಸಿಕೊಡಲಾಗುವುದು–ಪ್ರತಿ ಜಿಲ್ಲೆಯಲ್ಲಿ ಅತ್ಯುತ್ತಮ ಗುಣಮಟ್ಟದ ಶಾಲಾ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಮತ್ತು ಅನುಭವಗಳನ್ನು ಹಾಗೂ ಸೌಲಭ್ಯಗಳನ್ನು ಪರಸ್ಪರ ವಿನಿಮಯಿಸಿಕೊಳ್ಳುವ ಕೇಂದ್ರವಾಗಿರುವುದು.

**ವಿಶೇಷ ಲಕ್ಷಣಗಳು:**

1. ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವದ ವಿಕಾಸ ಮಾಡುವುದು.
2. ಆತ್ಮವಿಶ್ವಾಸವನ್ನು ವೃದ್ಧಿಸುವುದು.
3. ನಾಯಕತ್ವದ ಗುಣಗಳನ್ನು ಬೆಳೆಸುವುದು.
4. ಆಲೋಚನಾ ಶಕ್ತಿ, ತಾರ್ಕಿಕ ಶಕ್ತಿ, ವಿಮರ್ಶಾತ್ಮಕ ಗುಣಗಳನ್ನು ಬೆಳೆಸುವುದು.
5. ವಿದ್ಯಾರ್ಥಿಗಳಲ್ಲಿ ಸಹಕಾರ ಮನೋಭಾವನೆ ಬೆಳೆಸುವುದು.
6. ಚರ್ಚೆ, ವಿಚಾರಗೋಷ್ಠಿ, ವಿಚಾರ ಸಂಕಿರಣಗಳ ಮೂಲಕ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
7. ಸ್ವಯಂಶಿಸ್ತು, ಸ್ವಯಂಕಲಿಕೆ, ಸ್ವ–ಅಭಿವ್ಯಕ್ತಿ ಗುಣಗಳನ್ನು ಬೆಳೆಸುವುದು.

**ರಾಜ್ಯಾನುಸಾರ ಜವಾಹರ್ ನವೋದಯ ವಿದ್ಯಾಲಯಗಳ ಹಂಚಿಕೆ:**

ನವೋದಯ ವಿದ್ಯಾಲಯ ಯೋಜನೆಯನ್ವಯ ಪ್ರತಿ ಜಿಲ್ಲೆಗೆ ಒಂದರಂತೆ ಜವಾಹರ್ ನವೋದಯ ವಿದ್ಯಾಲಯಗಳನ್ನು ಹಂತಹಂತವಾಗಿ ಸ್ಥಾಪಿಸಲಾಗುವುದು. ಪ್ರಸ್ತುತ 27 ರಾಜ್ಯಗಳಲ್ಲಿ ಹಾಗೂ 7 ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 593 (574+17**) ವಿದ್ಯಾಲಯಗಳು ಸ್ಥಾಪನೆಗೊಂಡಿವೆ. ಇದರಲ್ಲಿ 577 (565+12) ವಿದ್ಯಾಲಯಗಳು ಕಾರ್ಯರೂಪದಲ್ಲಿವೆ.

**ವಿವಿಧ ರಾಜ್ಯಗಳಲ್ಲಿ ಸ್ಥಾಪನೆಗೊಂಡಿರುವ ವಿದ್ಯಾಲಯಗಳ ವಿವರ ಈ ಕೆಳಕಂಡಂತಿದೆ**

| | | | |
|---|---|---|---|
| ಆಂಧ್ರಪ್ರದೇಶ | 22+2 | ದಮನ್ ಮತ್ತು ದೀವ್ | 02 |
| ಆಸ್ಸಾಂ | 27+1 | ದಾದರ್ ಮತ್ತು ನಗರ್ ಹವೇಲಿ | 01 |
| ಅರುಣಾಚಲ ಪ್ರದೇಶ | 16 | ಗೋವಾ | 02 |
| ಅಂಡಮಾನ್ ಮತ್ತು | | ಗುಜರಾತ್ | 25+1 |
| ನಿಕೋಬಾರ್ ಐಲೆಂಡ್ಸ್ | 02 | ಹರಿಯಾಣಾ | 20 |
| ಬಿಹಾರ್ | 38+1 | ಹಿಮಾಚಲ ಪ್ರದೇಶ | 12 |

Digitised by Bharatavani, CIIL

| | | | |
|---|---|---|---|
| ಚಂಡೀಘಡ್ | 01 | ಜಮ್ಮು-ಕಾಶ್ಮೀರ್ | 17 |
| ಛತ್ತೀಸ್ ಘಡ್ | 16+1 | ಜಾರ್ಖಂಡ್ | 22+2 |
| ದೆಹಲಿ | 02 | ಕರ್ನಾಟಕ | 27+1 |
| ಕೇರಳ | 14 | ಒರಿಸ್ಸಾ | 30+1 |
| ಲಕ್ಷದ್ವೀಪ | 01 | ಪಂಜಾಬ್ | 20+1 |
| ಮಧ್ಯಪ್ರದೇಶ | 48+2 | ಪಾಂಡಿಚೇರಿ | 04 |
| ಮಹಾರಾಷ್ಟ್ರ | 32+1 | ರಾಜಸ್ಥಾನ್ | 32+1 |
| ಮಣಿಪುರ | 09 | ಸಿಕ್ಕಿಂ | 04 |
| ಮೇಘಾಲಯ | 07+1 | ತ್ರಿಪುರ | 04 |
| ಮಿಜೋರಂ | 08 | ಉತ್ತರಪ್ರದೇಶ | 69 |
| ನಾಗಾಲ್ಯಾಂಡ್ | 11 | ಉತ್ತರಾಂಚಲ | 13 |
| ಪಶ್ಚಿಮ ಬಂಗಾಳ | 17+1 | | |
| | | **ಒಟ್ಟು** | **576+17=593** |

ಪ್ರತಿ ವಿದ್ಯಾಲಯದಲ್ಲಿಯೂ 6ನೇ ತರಗತಗೆ, ಆಯ್ಕೆ ಪರೀಕ್ಷೆಯ ಮೂಲಕ ಯೋಗ್ಯ ಅಭ್ಯರ್ಥಿಗಳ ಲಭ್ಯತೆಯನ್ನಾಧರಿಸಿ ಗರಿಷ್ಠ 80 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ವಿದ್ಯಾಲಯದಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲದಿದ್ದರೆ ವಿದ್ಯಾರ್ಥಿಗಳ ಸಂಖ್ಯೆಯನ್ನು 40ಕ್ಕೆ ಇಳಿಸುವ ಅಥವಾ ಪ್ರವೇಶ ಪರೀಕ್ಷಾ ಫಲಿತಾಂಶವನ್ನು ಅಥವಾ ಪರೀಕ್ಷೆ ನಡೆಸುವುದನ್ನು ತಡೆ ಹಿಡಿಯುವ ಅಧಿಕಾರವನ್ನು ಸಮಿತಿಯು ಹೊಂದಿದೆ. ಆ ಪರೀಕ್ಷೆಯು ಗಣಿತಜ್ಞಾನ, ಭಾಷಾಸಾಮರ್ಥ್ಯ ಹಾಗೂ ಬುದ್ಧಿಮಾಪನ ಪರೀಕ್ಷೆಯನ್ನು ಒಳಗೊಂಡಿರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಹೆಚ್ಚು ಇರುವ ಜಿಲ್ಲೆಗಳಲ್ಲಿ ಹೆಚ್ಚುವರಿ ಜವಾಹರ್ ನವೋದಯ ವಿದ್ಯಾಲಯಗಳನ್ನು ಮಂಜೂರು ಮಾಡಲಾಗಿದೆ.

**ಬೋಧಕವರ್ಗದವರ ಆಯ್ಕೆ:**

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏರ್ಪಡಿಸಿ, ಅದರಲ್ಲಿ ಜೇಷ್ಠತೆಯ ಆಧಾರದಮೇಲೆ ಅರ್ಹತೆ ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು. ಸಂದರ್ಶನವು ಅವಶ್ಯಕ ಅಭ್ಯರ್ಥಿಗಳನ್ನು ಗಮನಿಸಿ ಆಯಾ ರಾಜ್ಯದಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸುತ್ತದೆ. ಅದರಂತೆ ನವೋದಯ ಲೀಡರ್‌ಶಿಪ್ ಇನ್‌ಸ್ಟಿಟ್ಯುಟ್ ಸಹಾಯದಿಂದ ಬೋಧಕ ವರ್ಗಕ್ಕೆ ಹೆಚ್ಚಿನ ತರಬೇತಿ ನೀಡಲಾಗುವುದು.

**ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು:**

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿ ಸಹಿತ ಶಿಕ್ಷಣ ನೀಡುವ ಘನ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯ ಸರ್ಕಾರದ ಅಡಿಯಲ್ಲಿ ಕೇಂದ್ರ ಸರ್ಕಾರದ ಜವಾಹರ್ ನವೋದಯ ಮಾದರಿ ವಸತಿ ಶಾಲೆಗಳಂತೆ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ತಿಂಗಳಿಗೊಮ್ಮೆ ಒಂದು ರವಿವಾರದಂದು ಪಾಲಕರ ಭೇಟಿಗೆ ಅವಕಾಶವಿದೆ ಪ್ರಾರಂಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಗಿರಿಜನ ಕಲ್ಯಾಣ ಇಲಾಖೆ ಹೀಗೆ ವಿವಿಧ ಇಲಾಖೆಗಳ ಅಡಿಯಲ್ಲಿ 6ನೇ ತರಗತಿಯಿಂದ 10ನೇ ತರಗತಿಗಳವರೆಗಿನ ವಸತಿ ಶಾಲೆಗಳನ್ನು ಕ್ರಿ.ಶ.1995-96 ರಲ್ಲಿ ಜನತಾದಳ ಸರ್ಕಾರ ಪ್ರಾರಂಭಿಸಿ, ಆಯಾ ಇಲಾಖೆಗಳ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಒದಗಿಸಲಾದ ಆಯವ್ಯಯದಿಂದ ನಿರ್ವಹಣೆ ಮಾಡಲಾಗುತ್ತಿತ್ತು.

**ಪ್ರಾರಂಭವಾದ ವರ್ಷ ಮತ್ತು ಕಾಯ್ದೆ:**

1995-96 ನೇ ಸಾಲಿನಲ್ಲಿ ಕರ್ನಾಟಕದ ಆಡಳಿತ ಚುಕ್ಕಾಣಿ ಹಿಡಿದ ಜನತಾದಳ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಂದ ಮೊರಾರ್ಜಿ ವಸತಿ ಶಾಲೆ ಕಾರ್ಯಾರಂಭ ಹಾಗೂ ಅಂದಿನ ಅರ್ಥಸಚಿವರಿಂದ ಆಯವ್ಯಯ ಮಂಡನೆ ಕಾಲದಲ್ಲಿ ಆರ್ಥಿಕ ಬೆಂಬಲದ ಘೋಷಣೆಯಾಯಿತು. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯು ಪ್ರಾರಂಭದ ಪ್ರಸ್ತಾವನೆ ತಯಾರಿಸಿತು. ಇದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಯಿತು. ಸರ್ಕಾರಿ ಆದೇಶ

Digitised by Bharatavani, CIIL

ಸಂಖ್ಯೆ ಇಡಿ 101 ಯೋಯೋಕ 95 ಬೆಂಗಳೂರು ದಿನಾಂಕ 17.10.95 ರನ್ವಯ ಶಿಕ್ಷಣ ಇಲಾಖೆ ವತಿಯಿಂದ 95–96ರ ಸಾಲಿನಲ್ಲಿ ಜಿಲ್ಲೆಗೊಂದರಂತೆ ಮೊರಾರ್ಜಿ ವಸತಿ ಶಾಲೆ ಪ್ರಾರಂಭಿಸುವ ಆದೇಶ ಹೊರಡಿಸಿತು. ಅಂದು ಎಲ್ಲ ಕಡೆಗಳಲ್ಲಿ ಕಟ್ಟಡದ ಕೊರತೆಯಿದ್ದ ಕಾರಣ ಎಲ್ಲೆಲ್ಲಿ ವಯಸ್ಕರ ಶಿಕ್ಷಣ ವಿದ್ಯಾಪೀಠ ಇದೆಯೋ ಅಲ್ಲಲ್ಲೇ ಪ್ರಾರಂಭಿಸುವ ನಿರ್ಣಯ ತೆಗೆದುಕೊಳ್ಳಲಾಯಿತು. ಈ ಶಾಲೆಗಳು ಇಂದು ಸ್ವಂತ ಕಟ್ಟಡದ ನಿರ್ಮಾಣ ಹಂತದಲ್ಲಿವೆ.

2001–02ನೇ ಸಾಲಿನಿಂದ ಈ ಎಲ್ಲಾ ವಸತಿ ಶಾಲೆಗಳ ನಿರ್ವಹಣೆಯನ್ನು ಹೊಸದಾಗಿ ಸ್ಥಾಪಿಸಲಾದ "ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ" ಬೆಂಗಳೂರು ಇವರಿಗೆ ವಹಿಸಲಾಗಿದೆ. ದಿನಾಂಕ 01–04–2005 ರಿಂದ ಈ ಎಲ್ಲಾ ವಸತಿ ಶಾಲೆಗಳ ನಿರ್ವಹಣೆಯನ್ನು ಆಯಾ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಗೆ ವರ್ಗಾಯಿಸಲಾಗಿದೆ. ಹಾಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ 394 ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

**ವಿಶೇಷ ಲಕ್ಷಣಗಳು:**

1) ಓದುವ ಹವ್ಯಾಸ ಮೂಡಿಸುವುದು
2) ಚಿಂತನೆಗೆ ಅವಕಾಶ ಕಲ್ಪಿಸುವುದು
3) ವಿರಾಮ ವೇಳೆಯ ಸದುಪಯೋಗ
4) ವಿಷಯ ಜ್ಞಾನ ಹೆಚ್ಚಳಕ್ಕೆ ಆದ್ಯತೆ
5) ಸ್ವಯಂ ಅಧ್ಯಯನ ಸಾಮರ್ಥ್ಯ ಬೆಳವಣಿಗೆ
6) ಉತ್ತಮ ನಾಗರಿಕನಾಗಲು ಅವಕಾಶ
7) ಸ್ವಸಾಮರ್ಥ್ಯ ಹೆಚ್ಚಳಕ್ಕೆ ಅವಕಾಶ
8) ಸಮಯ ಪರಿಪಾಲನೆ, ಸಹಬಾಳ್ವೆಗೆ ಅವಕಾಶ ಕಲ್ಪಿಸುವುದು
9) ಕಾಯಕದ ಮಹತ್ವ ಅರಿವು ಮತ್ತು ಅಳವಡಿಕೆ

**ಯೋಜನೆಯ ಉದ್ದೇಶಗಳು:**

- ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣಕ್ಕಾಗಿ ಪ್ರತಿಭೆಗೆ ಪುರಸ್ಕಾರ ನೀಡುವುದಲ್ಲದೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವುದಾಗಿದೆ.
- ಉಚಿತ ಊಟ, ವಸತಿ ಸಹಿತ ಗುಣಾತ್ಮಕ ಶಿಕ್ಷಣ ಒದಗಿಸುವುದು.
- ವಿದ್ಯಾರ್ಥಿಗಳಿಗೆ ಕಾಯಕದ ಮಹತ್ವ ತಿಳಿಸಿ ಸ್ವಾವಲಂಬಿಗಳಾಗುವಂತೆ ಉತ್ತೇಜಿಸುವುದು.
- ಕ್ರೀಡೆ, ಯೋಗ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಜೀವನ ವಿಜ್ಞಾನದ ಕೌಶಲಗಳನ್ನು ಬೆಳೆಸುವುದು ಮತ್ತು ವಿದ್ಯಾರ್ಥಿಯ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕೆ ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳ ಬೌದ್ಧಿಕ, ದೈಹಿಕ, ಮಾನಸಿಕ, ಆಧ್ಯಾತ್ಮಿಕ ಶಕ್ತಿಗಳ ಬೆಳವಣಿಗೆಗೆ ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸೌಹಾರ್ದತೆಯೊಂದಿಗೆ ವಿದ್ಯಾರ್ಜನೆ ಹೊಂದುವಲ್ಲಿ ನೆರವಾಗುವುದು.

**ಲಭ್ಯವಿರುವ ವಿಭಾಗಗಳು:** 6ನೇ ತರಗತಿಯಿಂದ 10ನೇ ತರಗತಿಯವರೆಗೆ ವಿದ್ಯಾರ್ಥಿಗಳಿಗೆ ಊಟ–ವಸತಿಯೊಂದಿಗೆ ಕಲಿಯುವ ಎಲ್ಲಾ ಅವಕಾಶಗಳನ್ನು ಕಲ್ಪಿಸಲಾಗಿದೆ. ಇತ್ತೀಚೆಗೆ 10ನೇ ತರಗತಿಯ ನಂತರದಲ್ಲಿ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿ ಪಿ.ಯು.ಸಿ ವಿಭಾಗಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿದ್ದಾರೆ.

**ಬೋಧಕ ವರ್ಗದವರ ಆಯ್ಕೆ:** ಜಿಲ್ಲಾ ಪಂಚಾಯತಿಯ ವ್ಯಾಪ್ತಿಯಲ್ಲಿ ಎನ್.ಜಿ.ಓ (NGO-Non Government Organisation) ಟೆಂಡರ್ ಕರೆದು, ಅದರಲ್ಲಿ ಆಯ್ಕೆಯಾದ ಸಂಬಂಧಿಸಿದ ಎನ್.ಜಿ.ಓ (NGO) ದವರು ಪ್ರತಿ ಜಿಲ್ಲಾದ್ಯಂತ ಖಾಲಿ ಇರುವ ಹುದ್ದೆಗಳನ್ನು ಗಮನಿಸಿ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ಕರೆದು ತಾತ್ಕಾಲಿಕ 1ವರ್ಷಕ್ಕೆ ಸಂಬಂಧಿಸಿದಂತೆ ನೇಮಕಾತಿ ಮಾಡಿಕೊಳ್ಳುತ್ತಾರೆ. ಈ ನೇಮಕಾತಿ ತಾತ್ಕಾಲಿಕವಾಗಿರುತ್ತದೆ. (ಶೇಕಡಾವಾರು ಫಲಿತಾಂಶವನ್ನು ಗಮನಿಸಿ ಮೆರಿಟ್ ಆಧಾರದಮೇಲೆ ನೇಮಕಾತಿ ಪ್ರಕ್ರಿಯೆ ನಡೆಯುತ್ತದೆ.)

**ವಿಶೇಷ ಆದ್ಯತೆ:**

- ರೇಡಿಯೋ, ಕಂಪ್ಯೂಟರ್, ಟಿ.ವಿ, ಸಿ.ಡಿ ಮೊದಲಾದ ವಿದ್ಯುನ್ಮಾನ ಯಂತ್ರಗಳನ್ನು ಬಳಸಿ ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ಹೆಚ್ಚು ಸಂತಸದಾಯಕ ಹಾಗೂ ಪರಿಣಾಮಕಾರಿಯಾಗಿ ಮಾಡುವುದು.
- ಸಾಮರ್ಥ್ಯ ವೃದ್ಧಿಸಿಕೊಳ್ಳಲು ಬಿಡುವಿನ ವೇಳೆಯನ್ನು ಸದುಪಯೋಗ ಮಾಡಿಕೊಳ್ಳುವುದು.
- ಆತ್ಮವಿಶ್ವಾಸವನ್ನು ಬೆಳೆಸುವುದು.
- ದೈಹಿಕ ಆರೋಗ್ಯ, ವೈಯಕ್ತಿಕ ಸ್ವಚ್ಛತೆಗಳ ಸರಳ ವಿಚಾರಗಳ ತಿಳುವಳಿಕೆ ನೀಡುವುದು.
- ಸಾಂಘಿಕ ಶಕ್ತಿಯ ಅರಿವು ಮೂಡಿಸುವುದು.
- ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವುದು.
- ಲಲಿತ ಕಲೆಗಳಾದ ಚಿತ್ರಕಲೆ, ಸಂಗೀತ, ರಂಗಕಲೆಯಲ್ಲಿ ಪರಿಣತಿ ಗಳಿಸಲು ಸಹಾಯ.
- ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯದ ಮೂಲಕ ವೃತ್ತಿ ಗೌರವ ಬೆಳೆಸುವುದು.
- ಸಮಯ ಪರಿಪಾಲನೆ, ಕಾರ್ಯಶ್ರದ್ಧೆ, ಶ್ರಮದ ಗೌರವ,

Digitised by Bharatavani, CIIL

ಸೌಂದರ್ಯ ಪ್ರಜ್ಞೆಗಳನ್ನು ಬೆಳೆಸುವುದು.

- ಶಿಬಿರದಲ್ಲಿ ಭಾಗವಹಿಸಿ ಸಂತೋಷ ಹಂಚಿಕೊಳ್ಳುವುದು.
- ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದು.

**ಉಚಿತ ಸೌಲಭ್ಯಗಳು:** ಆಹಾರ ಭತ್ಯೆ, ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ.500/–. ಇದರಲ್ಲಿ ವೈದ್ಯಕೀಯ ವೆಚ್ಚ ಒಳಗೊಂಡಿರುತ್ತದೆ. ಅಲ್ಲದೇ ವಿದ್ಯಾರ್ಥಿಗಳಿಗೆ ಸೋಪು, ಎಣ್ಣೆ, ಬ್ರಷ್ ಇತ್ಯಾದಿ ಆಯುಷ್ಕರ್ಮ ವೆಚ್ಚವನ್ನು ಆಹಾರ ಭತ್ಯೆಯಲ್ಲಿಯೇ ಭರಿಸಲಾಗುವುದು. ಸಮವಸ್ತ್ರ, ಪಠ್ಯಪುಸ್ತಕ, ನೋಟ್ ಪುಸ್ತಕ, ಪೆನ್ನು, ಪೆನ್ಸಿಲ್ ಹಾಗೂ ಬೂಟ್–ಸಾಕ್ಸ್ ಇತ್ಯಾದಿಗಳಿಗೆ ಪ್ರತಿವರ್ಷ ಪ್ರತಿ ವಿದ್ಯಾರ್ಥಿಗೆ ರೂ.500/– ಖರ್ಚು ಮಾಡಲು ಅವಕಾಶವಿದೆ. ವಸತಿ ಶಾಲೆಯ ಮಕ್ಕಳಿಗೆ ಮಲಗಲು ಮಂಚ, ಗಾದಿ, ದಿಂಬು, ಬೆಡ್‌ಶೀಟ್, ರಗ್ಗು, ಟಾವೆಲ್, ಟ್ರಂಕ್, ಬಕೇಟ್, ತಟ್ಟೆ, ಲೋಟ, ಚಮಚ ಇತ್ಯಾದಿ ಸಾಮಗ್ರಿಗಳನ್ನು ಉಚಿತವಾಗಿ ಒದಗಿಸಲಾಗುವುದು.

**ಪರೀಕ್ಷೆ:** 5ನೇ ತರಗತಿ ಪಾಸಾದ ವಿದ್ಯಾರ್ಥಿಗಳಿಂದ ಪರೀಕ್ಷಾ ನಮೂನೆ ತುಂಬಿಸಿ, ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸುತ್ತಾರೆ. ಪರೀಕ್ಷೆಯನ್ನು ಜಿಲ್ಲಾ ಡಯಟ್‌ನವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಸುವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಸಾಮಾನ್ಯ ಕನ್ನಡ, ಇಂಗ್ಲೀಷ್, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಗಣಿತ ವಿಷಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಪರೀಕ್ಷೆ ನಡೆಸಿ 6ನೇ ವರ್ಗಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

**ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ರೀತಿ/ಬಗೆ:**

- ಉಪನ್ಯಾಸ ಹಾಗೂ ಪ್ರಶ್ನೋತ್ತರ
- ಚರ್ಚಾ ಸ್ಪರ್ಧೆಗಳು
- ಪಾತ್ರಾಭಿನಯಗಳು
- ರಸಪ್ರಶ್ನೆ ಕಾರ್ಯಕ್ರಮ
- ಭಿತ್ತಿ ಚಿತ್ರ ರಚನೆ ಹಾಗೂ ಪ್ರದರ್ಶನ
- ಬೀದಿ ನಾಟಕಗಳು
- ಕಿರು ಚಿತ್ರಗಳ ಪ್ರದರ್ಶನ, ವಿಶ್ಲೇಷಣೆ
- ಸ್ಲೈಡ್ಸ್ ಸಿ.ಡಿ ಬಳಕೆ
- ತಜ್ಞರಿಂದ ಸಲಹೆ, ಮಾರ್ಗದರ್ಶನ
- ವೃತ್ತಿ ಶಿಕ್ಷಣ ಮಾರ್ಗದರ್ಶನ

**–ಮಾಧವಗುಡಿ**

## ವಿಕಾಸದ ಸಿದ್ಧಾಂತಗಳು

**ವಿಕಾಸದ ಸಿದ್ಧಾಂತಗಳು. (ಎರಿಕ್‌ಸನ್):**

ಎರಿಕ್ ಎಚ್.ಎರಿಕಸನ್ ರವರು ಜೂನ್ 15, 1903ರಲ್ಲಿ ಜನಿಸಿದರು. ಮೂಲತಃ ಮನೋ–ವಿಶ್ಲೇಷಣಾತ್ಮಕ ನಿಲುವುಗಳನ್ನು ಒಪ್ಪಿಕೊಂಡ ಅವರು ಹುಟ್ಟಿದ ಶಿಶುವಿನ ವರ್ತನೆಯನ್ನು ಅಭಿಪ್ರೇರಿಸುವ ಹಲವಾರು ಜನ್ಮಜಾತ ಪ್ರವೃತ್ತಿಗಳನ್ನು ಮಾನವನು ಪಡೆದುಕೊಂಡಿರುತ್ತಾನೆ., ಮುಖ್ಯ ಮನೋಸತ್ವಗಳು ಸಾಮಾಜಿಕ ಪ್ರಕ್ರಿಯೆಗಳ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತವೆ ಎಂದರು. ವ್ಯಕ್ತಿತ್ವ ವಿಕಾಸದ ಮನೋ–ಸಾಮಾಜಿಕ ಹಂತಗಳನ್ನು ವಿವರಿಸಿದರು.

ಮಗು ಸಾಮಾಜಿಕ ಸನ್ನಿವೇಶದಲ್ಲಿ ವಿಕಾಸಗೊಂಡಂತೆಲ್ಲಾ ಅದರ ಜನ್ಮಜಾತ ಪ್ರವೃತ್ತಿಗಳಿಗೂ, ಸಾಮಾಜಿಕಾಂಶಗಳಿಗೂ ನಡುವೆ ಘರ್ಷಣೆ ಉಂಟಾಗುತ್ತದೆ. ಈ ಘರ್ಷಣೆ೦ಯ ಪರಿಣಾಮವಾಗಿ ವಿರುದ್ಧ ರೀತಿ೦ಯ ಪ್ರವೃತ್ತಿಗಳನ್ನುಂಟು ಮಾಡುವ ಸಂದಿಗ್ಧ ಪರಿಸ್ಥಿತಿಗಳು ಉಂಟಾಗುತ್ತವೆ. ಈ ರೀತಿಯ ಸಂದಿಗ್ಧ ಪರಿಸ್ಥಿತಿಗಳು ಜೀವನದುದ್ದಕ್ಕೂ ಉಂಟಾಗುತ್ತವೆ. ಈ ರೀತಿಯ ಪ್ರತಿಯೊಂದು ಸಂದಿಗ್ಧತೆಯೂ ಒಂದು ಪ್ರಧಾನ ವಿಷಯದ ಮೇಲೆ ಕೇಂದ್ರೀಕೃತವಾಗಿರುತ್ತದೆ. ಎರಿಕ್‌ಸನ್ ಅವರು ಜೀವನ ಪರ್ಯಂತ ಉಂಟಾಗಬಹುದಾದ ಎಂಟು ರೀತಿಯ ದ್ವಂದ್ವತೆಗಳನ್ನು ಈ ರೀತಿಯಲ್ಲಿ ಗುರುತಿಸಿರುತ್ತಾರೆ.

**ಮೂಲಭೂತ ನಂಬುಗೆ ವಿರುದ್ಧ ಅಪನಂಬುಗೆ:** ಇದು ಮೊದಲನೆಯ ಹಂತವಾಗಿದೆ. ಇದು ಜನ್ಮ ತಾಳಿದ ಶಿಶು ಎದುರಿಸಬೇಕಾದ ಮೊದಲ ದ್ವಂದ್ವ. ಶೈಶವವಸ್ಥೆಯಲ್ಲಿ ಶಿಶು ಜೈವಿಕವಾಗಿ ಮತ್ತು ಮಾನಸಿಕವಾಗಿ ತಾಯಿಯನ್ನೇ ಅವಲಂಬಿಸಿರುತ್ತದೆ. ಈ ಅವಧಿಯಲ್ಲಿ ಹಸಿವು, ನೀರಡಿಕೆ ಮುಂತಾದ ಜೈವಿಕ ಬೇಡಿಕೆಗಳನ್ನು ಮತ್ತು ತಾಯಿಯ ಪ್ರೀತಿ, ವಾತ್ಸಲ್ಯಗಳು, ಮಾನಸಿಕ ಬೇಡಿಕೆಗಳೆಲ್ಲವೂ ತಾಯಿಯಿಂದಲೇ ಅಥವಾ ತಾಯಿಯ ಸ್ಥಾನದಲ್ಲಿರುವ ವ್ಯಕ್ತಿಯಿಂದಾಗಲಿ ಸರಿಯಾಗಿ ತೃಪ್ತಿಗೊಳಿಸಲ್ಪಟ್ಟರೆ ಮತ್ತೆ ಮೂಲಭೂತ ನಂಬುಗೆಯ ಭಾವನೆಗಳನ್ನು ಬೆಳೆಸಿಕೊಳ್ಳುತ್ತದೆ. ಈ ಮೂಲಭೂತ ನಂಬುಗೆ ಮುಂದುವರಿದು ಮುಂದೆ ಪಾರಸ್ಪರಿಕ ನಂಬುಗೆಯ ಆಧಾರದ ಮೇಲೆ ಸಾಮಾಜಿಕ ಸಂಬಂಧಗಳನ್ನು ರೂಪಿಸಿಕೊಳ್ಳಲು ಆಧಾರವಾಗುತ್ತದೆ.

ಶೈಶವವಸ್ಥೆಯಲ್ಲಿ ಈ ಬೇಡಿಕೆಗಳ ತೃಪ್ತಿ ಸರಿಯಾದ ರೀತಿಯಲ್ಲಿ ಆಗದೇ ಹೋದರೆ ಮಗುವಿನಲ್ಲಿ ಮೂಲಭೂತ ಅಪನಂಬುಗೆಗಳು ಬೆಳೆಯುತ್ತವೆ.ಇದೇ ಮುಂದುವರೆದು ಸಾಮಾಜಿಕ ಸಂಬಂಧದ ಮೇಲೆ ಪ್ರಭಾವ ಬೀರುತ್ತದೆ. ಅಪನಂಬುಗೆಗೆ ಕಾರಣಗಳು ತಾಯಿಯ ಅಗಲುವಿಕೆ, ತಾಯಿಯ ಸಾವು, ಇತ್ಯಾದಿ.

ಶಿಶುವಿನ ಅತಿಯಾದ ಅವಲಂಬನೆಯೂ ಸರಿಯಲ್ಲ. ಆದುದರಿಂದ ಮಗು ಅಹಂ ತಾದಾತ್ಮತೆಯನ್ನು ಬೆಳೆಸಿಕೊಳ್ಳುವುದು ಕಷ್ಟವಾಗುತ್ತದೆ. ಈ ರೀತಿಯಲ್ಲಿ ನಂಬುಗೆಯ ಜೊತೆಯಲ್ಲಿ ಅಪನಂಬುಗೆಯೂ ಅಗತ್ಯವಾಗಿದೆ. ಈ ದ್ವಂದ್ವವು ತಾಯಿ ಮಗುವಿನ

Digitised by Bharatavani, CIIL

ಸಂಬಂಧದ ಮೇಲೆ ಕೇಂದ್ರೀಕೃತವಾಗಿರುತ್ತದೆ.

**ಸ್ವಾಯತ್ತತೆ ವಿರುದ್ಧ ನಾಚಿಕೆ ಮತ್ತು ಸಂಶಯ:** ಇದು ಮನೋ ಸಾಮಾಜಿಕ ವಿಕಾಸದ ಎರಡನೆಯ ಹಂತ. ಇದು ಶಿಶುವಿನ ಎರಡನೇ ವರ್ಷದಲ್ಲಿ ಬರುವಂತದ್ದು, ಈ ಹಂತದಲ್ಲಿ ಶಿಶು ಸ್ವಾತಂತ್ರ್ಯದ ಭಾವನೆ ಮತ್ತು ನಾಚಿಕೆ, ಸಂಶ0ಯ, ಹಾಗೂ ವಿಫಲತೆಯ ಭಾವನೆಗಳ ನಡುವಿನ ದ್ವಂದ್ವವನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಎರಡನೆಯ ವರ್ಷದ ಹೊತ್ತಿಗೆ ಶಿಶು ಕ್ರಮೇಣ ತಾಯಿಯಿಂದ ಸ್ವತಂತ್ರವಾಗತೊಡಗುತ್ತದೆ. ಈ ಅವಧಿ ಚಟುವಟಿಕೆಯಿಂದ ಕೂಡಿರುತ್ತದೆ. ಧ್ವನಿ ನಿಯಂತ್ರಣವನ್ನು ಹಾಗೂ ಸ್ವಯಂ-ನಿಯಂತ್ರಣವನ್ನು ಹೊಂದಿರುತ್ತದೆ. ಈ ಕೆಲಸದಲ್ಲಿ ಯಶ್ವಸಿಯಾದರೆ ಅದರಲ್ಲಿ ಸ್ವಾಯತ್ತತೆ/ಸ್ವಾತಂತ್ರ್ಯತೆಯ ಭಾವನೆ ಮೂಡುತ್ತದೆ. ಪದೇ ಪದೇ ವಿಫಲತೆಯುಂಟಾದರೆ, ಸ್ವಲ್ಪ ಮಟ್ಟಿಗೆ ಶಿಶುವು ನಾಚಿಕೆಯ , ಸಂಶಯದ ಭಾವನೆಗಳನ್ನು ಬೆಳೆಸಿಕೊಳ್ಳುತ್ತದೆ.

ಈ ದ್ವಂದ್ವವನ್ನು ಅಪೇಕ್ಷಿತ ದಿಶೆಯಲ್ಲಿ ಪರಿಹರಿಸಿದರೆ ನಾಚಿಕೆಯ ಪ್ರವೃತ್ತಿ ಹಾಗೂ ಸಂಶಯದ ಪ್ರವೃತ್ತಿ ದೂರವಾಗುತ್ತದೆ. ಈ ಅವಧಿಯಲ್ಲಿ ಶಿಶುವಿಗೆ ಆತ್ಮ ವಿಶ್ವಾಸವನ್ನು ಮೂಡಿಸಬೇಕು.

**ಕಾರ್ಯೋತ್ಸಾಹ ವಿರುದ್ಧ ಗ್ಲಾನಿ( ಅಪರಾಧ ಪ್ರಜ್ಞೆ):** ಈ ಹಂತವನ್ನು ಎರಡನೆಯ ಹಂತದ ವಿಸ್ತೃತ ಅವಧಿ ಎಂದು ಹೇಳಬಹುದು. ಈ ಹಂತ 3 ನೇ ವರ್ಷದಿಂದ 5 ನೇ ವರ್ಷದವರೆಗೆ ವ್ಯಾಪಿಸುತ್ತದೆ. ಈ ಅವಧಿ0ಯು ಮತ್ತಷ್ಟು ಚಟುವಟಿಕೆಯಿಂದ ಕೂಡಿರುತ್ತದೆ. ಈ ಎಲ್ಲಾ ಕೆಲಸವನ್ನು ಮಾಡಬೇಕೆನ್ನುವ ಕಾರ್ಯೋತ್ಸಾಹ ಪ್ರವೃತ್ತಿ ಮಗುವಿನಲ್ಲಿ ಉಂಟಾಗುತ್ತದೆ. ಹಿರಿಯರು ಮಾಡುವ ಕಾರ್ಯವನ್ನು ತಾನೂ ಮಾಡಲು ಬಯಸುತ್ತದೆ. ಅದನ್ನು ಹಿರಿಯರು ನಿರಾಕರಿಸಿದರೆ ಹತಾಶೆಯನ್ನು ಹೊಂದುತ್ತದೆ. ಅದೇ ಮುಂದುವರಿದರೆ ಅಪರಾಧಿ ಪ್ರಜ್ಞೆ ಬೆಳೆಯುತ್ತದೆ. ಅದೇ ಜೀವನ ಪರ್ಯಂತ ಮುಂದುವರಿಯುತ್ತದೆ. ಅದಕ್ಕೆ ವಿರುದ್ಧವಾಗಿ ಪಾಲಕರು ಮಗುವಿಗೆ ಚಿಕ್ಕ ಚಿಕ್ಕ ಕೆಲಸಗಳನ್ನು ನೀಡಿ ಯಶಸ್ಸು ಹೊಂದುವಂತಹ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಈ ರೀತಿ ಮಾಡುವುದರಿಂದ ಮಗುವಿನಲ್ಲಿ ಕಾರ್ಯೋತ್ಸಾಹ, ಮುಕ್ತ ಮನಸ್ಸು, ಧೈರ್ಯ, ಸಾಹಸ ಪ್ರವೃತ್ತಿ ಬೆಳೆಯುತ್ತದೆ.

**ಕಾರ್ಯತತ್ಪರತೆ ವಿರುದ್ಧ ಕೀಳರಿಮೆ:** ಈ ನಾಲ್ಕನೇ ಹಂತವು ಮಗುವಿನ ಆರನೇ ವರ್ಷದಿಂದ ಪೂರ್ವ-ತಾರುಣ್ಯಾವಸ್ಥೆಯವರೆಗೂ ಮುಂದುವರಿಯುತ್ತದೆ. ಏರಿಕಸನ್ ಈ ಹಂತವನ್ನು ಸುಪ್ತಾವಸ್ಥೆಯೆಂದೂ ಪೂರ್ಣ ತಾರುಣ್ಯಾವಧಿಯ ಅಲ್ಲೋಲ-ಕಲ್ಲೋಲತೆಗೆ ಮುಂಚಿನ ತಾತ್ಕಾಲಿಕ ಶಾಂತತೆಯ ಅವಧಿಯೆಂದೂ ಪರಿಗಣಿಸಿದ್ದಾರೆ. ಈ ಹಂತದಲ್ಲಿ ಮಗು ವಸ್ತುಗಳನ್ನು ಸೃಷ್ಟಿಸಿ ಕಾರ್ಯಗಳನ್ನು ಪೂರ್ತಿಮಾಡಿ ಮೆಚ್ಚುಗೆ ಪಡೆಯಲೂ ಇಚ್ಚಿಸುತ್ತದೆ. ಇದಕ್ಕಾಗಿ ಕಠಿಣ ಪರಿಶ್ರಮ ಪಡುವುದಕ್ಕೆ ಸಿದ್ಧವಾಗುತ್ತದೆ.

ಮಗು ಕಾರ್ಯ ಸಾಧನೆ ಮಾಡಲು ಕಾರ್ಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಬಯಸುತ್ತದೆ. ಇದಕ್ಕೆ ಪ್ರತಿಯಾಗಿ ಮಗು ತಾನು ಪ್ರತಿಸಲ ಸೋತಾಗಲೂ ಕೀಳರಿಮೆಯ ಭಾವನೆಯನ್ನು ಅನುಭವಿಸುತ್ತದೆ. ಮತ್ತು ತಾನು ಅಸಮರ್ಥನೆಂದು ತಿಳಿಯತೊಡಗುತ್ತದೆ. ಕೆಲವು ವೇಳೆ ಸೋಲು

ಅನಿವಾರ್ಯವಾಗುತ್ತದೆ. ಈ ದ್ವಂದ್ವ ಅಪೇಕ್ಷಿತವಾದ ರೀತಿಯಲ್ಲಿ ಪರಿಹಾರಕೊಂಡರೆ ಮಗುವಿವಲ್ಲಿ ಕಾರ್ಯದಕ್ಷತೆ ಮತ್ತು ಸಹಕಾರ ಮನೋಭಾವನೆ ಬೆಳೆಯುತ್ತದೆ. ಅದಕ್ಕಾಗಿ ಶಾಲೆ ಮತ್ತು ಮನೆಯಲ್ಲಿ ಅಂತಹ ವಾತಾವರಣ ಇರಬೇಕು. ಎಲ್ಲಾ ಮಕ್ಕಳಿಗೂ ಸಮಾನ ಅವಕಾಶ, ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ನೀಡಿ ಅವರನ್ನು ಯಶಸ್ವಿಯಾಗಲು ಸಹಾಯ ಮಾಡಬೇಕು.

**ತಾದ್ಯಾತ್ಮತೆ ವಿರುದ್ಧ ಪಾತ್ರಗೊಂದಲ:**

ಈ ಹಂತವು ತಾರುಣ್ಯಾವಸ್ಥೆಯಲ್ಲಿ ಬರುತ್ತದೆ. ಈ ಹಂತದಲ್ಲಿ ಸಾಮಾಜಿಕ ಸಮೂಹಗಳು ಮತ್ತು ನಾಯಕತ್ವದ ಮಾದರಿಗಳು ಹೆಚ್ಚಿನ ಪಾತ್ರವನ್ನು ವಹಿಸುತ್ತವೆ. ಈ ಹಂತದಲ್ಲಿ ತರುಣರು ತಮ್ಮ ಪಾತ್ರವನ್ನು ಸರಿಯಾಗಿ ಗುರುತಿಸಿಕೊಂಡು ವಯಸ್ಕಾವಸ್ಥೆಯಲ್ಲಿ ತಾವು ವಹಿಸಬೇಕಾದ ಪಾತ್ರಗಳಿಗೆ ತಮ್ಮನ್ನು ಸಿದ್ಧಗೊಳಿಸುತ್ತಾರೆ. ಪಾತ್ರವನ್ನು ಗುರುತಿಸುವಿಕೆಯು ತರುಣರು ಸೇರುವ ಸಮೂಹ ಹಾಗೂ ಇತರ ಸಾಮೂಹಿಕ ಸಮೂಹಗಳಿಂದ ಮತ್ತು ಅವರು ಆದರ್ಶಪ್ರಾಯರು ಎಂದು ಸ್ವೀಕರಿಸುವ ನಾಯಕರ ಪ್ರಭಾವದಿಂದ ಆಗುತ್ತದೆ. ಈ ವಯಸ್ಸಿನಲ್ಲಿ ತರುಣ/ತರುಣಿಯರು ಅಧಿಕಾರವನ್ನು ಮತ್ತು ಸಮಾಜದಲ್ಲಿ ಇತರ ಅಧಿಕಾರವುಳ್ಳವರನ್ನು ತಿರಸ್ಕರಿಸುವ ಮತ್ತು ಉಪೇಕ್ಷಿಸುವ ಮನೋಭಾವನೆಯನ್ನು ಹೊಂದಿರುತ್ತಾರೆ. ಆದರೆ ಸಮೂಹಗಳ ಮತ್ತು ಇತರ ಗುಂಪುಗಳ ಬಗ್ಗೆ ವಿಧೇಯತೆಯ ಮನೋಭಾವವುಳ್ಳವರಾಗಿರುತ್ತಾರೆ. ತಮ್ಮ ಸ್ನೇಹಿತರ ದೃಷ್ಟಿಯಲ್ಲಿ ಹೇಗೆ ಕಾಣಿಸಿಕೊಳ್ಳಬೇಕೆಂಬುದರ ಬಗೆಗೆ ಹೆಚ್ಚು ಮಹತ್ವ ನೀಡುತ್ತಾರೆ. ಯಾವುದಾದರೊಂದು ಗುಂಪು ಅಥವಾ ಧೈರ್ಯ ಅಥವಾ ಸಾಹಸದಲ್ಲಿ ತಾದಾತ್ಮತೆಯನ್ನು ಹೊಂದಿಕೊಳ್ಳುವುದಿಲ್ಲ, ಆಗ ಸಮಾಜದಲ್ಲಿ ತನ್ನ ಪಾತ್ರವೇನೆಂಬುದರ ಬಗೆಗೆ ಅನಿಶ್ಚಿತತೆ ಉಂಟಾಗಿ ಪಾತ್ರಗೊಂದಲವನ್ನು ಅನುಭವಿಸುವ ತರುಣರು ಸಮಾಜದಲ್ಲಿ ಸಮಸ್ಯೆಯನ್ನು ಉಂಟುಮಾಡುತ್ತಾರೆ. ಆದುದರಿಂದ ಶಾಲೆಗಳಲ್ಲಿ ರಚನಾತ್ಮಕ ಚಟುವಟಿಕೆಗಳಿಗೆ ಬೇಕಾದ ಗುಂಪುಗಳನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿಕೊಡುವ ವಿವಿಧ ರೀತಿಯ ಸಾಮಾಜಿಕ ಮತ್ತು ದಾರ್ಶನಿಕ ವಿಚಾರ ಪಂಥಗಳು, ಧಾರ್ಮಿಕ ಸಮೂಹಗಳು ಮತ್ತು ಶಾಲಾಧ್ಯಾಯಗಳು ತರುಣರು ಸರಿಯಾಗಿ ತಮ್ಮ ಪಾತ್ರಗಳೊಂದಿಗೆ ಸರಿಯಾಗಿ ತಾದ್ಯಾತ್ಮತೆಯನ್ನು ಹೊಂದಲು ಸಹಾಯ ಮಾಡುತ್ತವೆ.

**ಆತ್ಮೀಯತೆ ವಿರುದ್ಧ ಏಕಾಂತತೆ:** ಈ ದ್ವಂದ್ವವು ವಯಸ್ಕಾವಸ್ಥೆ ಅಥವಾ ಉತ್ತರ ತಾರುಣ್ಯಾವಸ್ಥೆಯಲ್ಲಿ ಉಂಟಾಗುತ್ತದೆ. ಈ ಹಂತದಲ್ಲಿ ವ್ಯಕ್ತಿಗೆ ತನ್ನ ಸುಖ ದುಃಖದ ಭಾವನೆಗಳನ್ನು ಹಂಚಿಕೊಳ್ಳುವಂತಹ ವ್ಯಕ್ತಿಗಳೊಡನೆ, ಆತ್ಮೀಯ ಸಂಬಂಧವನ್ನು ಸ್ಥಾಪಿಸಿಕೊಳ್ಳುವ ಹಾಗೂ ನಿಕಟ ಸಂಬಂಧವನ್ನು ಹೊಂದುವ ಅಗತ್ಯವಿರುತ್ತದೆ. ವ್ಯಕ್ತಿ

Digitised by Bharatavani, CIIL

ಬಯಸುತ್ತಾನೆ. ಗಂಡ– ಹೆಂಡರ ಸಂಬಂಧವು ಈ ರೀತಿಯ ಆತ್ಮೀಯ ಸಾಮಾಜಿಕ ಸಂಬಂಧಕ್ಕೆ ಉದಾಹರಣೆಯಾಗಿದೆ. ಈ ರೀತಿಯ ಸಾಮಾಜಿಕ ಸಂಬಂಧವನ್ನು ಬೆಳೆಸಿಕೊಳ್ಳುವಲ್ಲಿ ವಿಫಲವಾದರೆ ಅವನು ರಹಸ್ಯಾವಾದಿಯೂ, ಏಕಾಂಗಿಯೂ ಆಗುವನಲ್ಲದೇ ಒಂದು ತೆರನಾದ ಅನಾಥ ಪ್ರಜ್ಞೆಯಿಂದ ಬಳಲುತ್ತಾನೆ. ಸ್ನೇಹದ ಸಂಬಂಧಗಳು ಮತ್ತು ವೈವಾಹಿಕ ಸಂಬಂಧಗಳು ಆತ್ಮೀಯತೆಯನ್ನು ಸಾಧಿಸಲು ನೆರವಾಗುತ್ತವೆ. ಅರ್ಥ ಮಾಡಿಕೊಳ್ಳಬಲ್ಲ ತಂದೆ–ತಾಯಿ, ಶಿಕ್ಷಕರು ಈ ದ್ವಂದ್ವವನ್ನು ಅಪೇಕ್ಷಿತ ದಿಶೆಯಲ್ಲಿ ಪರಿಹರಿಸಲು ನೆರವು ನೀಡಬಲ್ಲರು.

**ಉತ್ಪಾದಕತೆ ವಿರುದ್ಧ ಸ್ಥಗಿತತೆ:** ಈ ಹಂತ ಪ್ರಾರಂಭಿಕ ವಯಸ್ಕಾವಸ್ಥೆಯಿಂದ (20 ವರ್ಷ) ಮಧ್ಯಾವಯಸ್ಕಾವಸ್ಥೆ (50 ವರ್ಷ)ವರೆಗೂ ವಿಸ್ತರಿಸುತ್ತದೆ. ಈ ಹಂತದಲ್ಲಿ ವ್ಯಕ್ತಿ ಉತ್ಪಾದಕ ಮತ್ತು ಸೃಜನಶೀಲನಾಗಿರುತ್ತಾನೆ. ಇಲ್ಲವೇ ನಿಷ್ಕ್ರಿಯನಾಗಿರುತ್ತಾನೆ. ಎರಿಕ್‌ಸನ್ ಉತ್ಪಾದಕತೆಯಲ್ಲಿ ಸೃಜನಾತ್ಮಕತೆಯನ್ನು ಸೇರಿಸಿರುತ್ತಾನೆ. ಉತ್ಪಾದಕತೆ ಬೌದ್ಧಿಕ ಸಾಧನೆಯಾಗಿರಬಹುದು.ಈ ಸಾಧನೆಗೆ ಉತ್ತಮ ಪ್ರೇರಣೆಯಿದ್ದರೆ ವ್ಯಕ್ತಿ ಸಮಾಜಕ್ಕೆ ಉತ್ತಮ ಸೇವೆಯನ್ನು ಸಲ್ಲಿಸುತ್ತಾನೆ. ಇಲ್ಲದಿದ್ದರೆ ನಿಷ್ಕ್ರಿಯನಾಗಿ ಬಿಡುತ್ತಾನೆ. ಉತ್ಪಾದಕತೆಯ ಮನೋಭಾವವು ಪ್ರಯೋಜನಾತ್ಮಕ ಕಾರ್ಯಗಳು ಮತ್ತು ಸಂರಕ್ಷಣಾತ್ಮಕ ಚಟುವಟಿಕೆಗಳಿಗೂ ಉತ್ಸಾಹವನ್ನು ನೀಡುತ್ತವೆ. ಸ್ಥಗಿತತೆಯ ಮನೋಭಾವ ಏಕತಾನತೆ, ಉತ್ಸಾಹಹೀನತೆ ಮತ್ತು ಕಾರ್ಯದಲ್ಲಿ ತಲ್ಲೀನತೆಯಿಲ್ಲದಿರುವುಕೆಯನ್ನು ಉಂಟು ಮಾಡುತ್ತದೆ. ಎರಿಕ್‌ಸನ್‌ರವರ ಪ್ರಕಾರ ಕೆಲವೇ ಮಂದಿ ಉತ್ಪಾದಕತೆಯನ್ನು ಮುಂದುವರಿಸಿಕೊಂಡು ಜೀವನದ ಬಗ್ಗೆ ಉತ್ಸಾಹವನ್ನು ಉಳಿಸಿಕೊಳ್ಳುತ್ತಾರೆ.

**ಸಮಗ್ರತೆ ವಿರುದ್ಧ ನೈರಾಗ್ಯ ಭಾವನೆ:** ಎರಿಕಸನ್‌ರ ಪ್ರಕಾರ ಇದು ಮನೋಸಾಮಾಜಿಕ ವಿಕಾಸದ ಅಂತಿಮ ಹಂತವಾಗಿದೆ. ಜೀವನದ ಅಂತಿಮ ಭಾಗದಲ್ಲಿ ಮೃತ್ಯು ಸನ್ನಿಹಿತವಾಗುವುದಕ್ಕೆ ಮೊದಲು ಪ್ರತಿಯೊಬ್ಬ ವ್ಯಕ್ತಿಯು ಈ ದ್ವಂದ್ವವನ್ನು ಎದುರಿಸಿ ಪರಿಹರಿಸಲೇಬೇಕಾಗುತ್ತದೆ. ಈ ಹಂತದಲ್ಲಿ ವ್ಯಕ್ತಿಯು ಸಾಫಲ್ಯತೆಯ ಭಾವನೆಯನ್ನು, ಸಮಗ್ರತೆಯ ಭಾವನೆಯನ್ನು ಬೆಳೆಸಿ ಕೊಳ್ಳಬೇಕು. ತನ್ನದೇ ಆದ ಜೀವನವನ್ನು ಕಳೆದಿದ್ದೇನೆ, ಎನ್ನುವ ತೃಪ್ತಿಯ ಭಾವನೆಯನ್ನು ಹೊಂದಬೇಕು. ಇದರ ಜೊತೆಗೆ ನಿವೃತ್ತಿ ಜೀವನಕ್ಕೆ ಸಿದ್ಧನಾಗಬೇಕು. ಮೃತ್ಯುವನ್ನು ಗೆಲ್ಲಲು, ಎದುರಿಸಲು ಪ್ರಯತ್ನಿಸಬೇಕು. ಇವೆಲ್ಲವೂ ಜೀವನದ ಬಗ್ಗೆ ಸಮಗ್ರತೆಯ ದೃಷ್ಟಿಕೋನವನ್ನು ಬೆಳೆಸಿಕೊಂಡರೆ ಮಾತ್ರ ಸಾಧ್ಯವಾಗುತ್ತವೆ. ಈ ಸಮಗ್ರತೆಯನ್ನು ಸಾಧಿಸಲು ವ್ಯಕ್ತಿ ವಿಫಲಗೊಂಡರೆ ಜೀವದಲ್ಲಿ ನಿರಾಶೆಯ ಭಾವನೆಯನ್ನು ತಾಳುತ್ತಾನೆ. ಜೀವನದ ಉದ್ದೇಶದ ಬಗ್ಗೆ, ಅದರ ಸಾರ್ಥಕತೆಯ ಅಧಿಕವಾಗಿ ಆತಂಕ ಸ್ಥಿತಿಯನ್ನು ಅನುಭವಿಸತೊಡಗಿ ವೃದ್ಧಾಪ್ಯದಲ್ಲಿ ಸರಿಯಾಗಿ ಸಮಾಯೋಜನೆ ಮಾಡಿಕೊಳ್ಳಲು ವಿಫಲನಾಗಿ ಇತರರಿಗೆ ಸಮಸ್ಯೆಯನ್ನುಂಟು ಮಾಡುತ್ತಾನೆ.

**ಸಿಗ್ಮಂಡ್ ಫ್ರಾಯ್ಡ್:** ಮನೋವಿಶ್ಲೇಷಣೆಯ ಪಿತೃವೆನ್ನಿಸಿದ ಸಿಗ್ಮಂಡ ಫ್ರಾಯ್ಡನು 1856 ಮೇ 6 ರಂದು ಜನಿಸಿದನು. ಈತನು ತನ್ನ ಸತ್ವಪೂರ್ಣ ಒಳನೋಟಗಳ ನೆರವಿನಿಂದ ಸುಪ್ತ ಮನೋರಂಗದ ಆಳ ಅಗಲಗಳನ್ನೂ ಸಮೀಕ್ಷಿಸಿ ಒಂದು ಮಹತ್ವ ಪೂರ್ಣ ವ್ಯಕ್ತಿತ್ವ ಸಿದ್ಧಾಂತವನ್ನು ಜಗತ್ತಿಗೆ ಕಾಣಿಕೆಯನ್ನಾಗಿ ನೀಡಿದನು.

**ವ್ಯಕ್ತಿತ್ವ ರಚನೆ:** ಫ್ರಾಯ್ಡನು ಮಾನವನ ಮನಸ್ಸಿನ ಸಂಶೋಧನೆಗೂ ಮತ್ತು ಮಾನಸಿಕ ರೋಗಗಳ ಚಿಕಿತ್ಸೆಗೂ ಒಂದು ಹೊಸ ವಿಧಾನವನ್ನು ರೂಪಿಸಿದನು. ಫ್ರಾಯ್ಡನ ಸಂಕಲ್ಪನೆಯಲ್ಲಿ ವ್ಯಕ್ತಿತ್ವ ಚೈತನ್ಯಗಳ ಒಂದು ಗತಿಶೀಲ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ 3 ಭಾಗಗಳಿವೆ. ಅಂದರೆ ಫ್ರಾಯ್ಡನ ಪ್ರಕಾರ ವ್ಯಕ್ತಿತ್ವವು 3 ಪ್ರಾಧಾನವಾದ ವ್ಯವಸ್ಥೆಗಳಿಂದ ಕೂಡಿದ ಸಂರಚನೆಯಾಗಿರುತ್ತದೆ. ಅವುಗಳನ್ನು ಇಡ್, ಈಗೋ (ಅಹಂ) ಮತ್ತು ಸೂಪರ್ ಈಗೋ ಎಂದು ಹೆಸರಿಸಲಾಗಿದೆ. ಈ ಮೂರು ವ್ಯವಸ್ಥೆಗಳು ತಮ್ಮ ಚಟುವಟಿಕೆಗಳು, ಗುಣಲಕ್ಷಣಗಳು, ಕಾರ್ಯ ನಿರ್ವಹಣಾ ತತ್ವಗಳು, ಗತಿಶೀಲತೆಯಲ್ಲಿ ವ್ಯತ್ಯಾಸ ಹೊಂದಿದ್ದರೂ ಇವುಗಳ ನಡುವೆ ಅತಿ ನಿಕಟವಾದ ಪರಸ್ಪರಾನುವರ್ತನೆ ಜರುಗುತ್ತಲಿರುತ್ತದೆ. ಈ ಪರಸ್ಪರಾನುವರ್ತನೆಯ ಪ್ರತಿಫಲವೇ ವ್ಯಕ್ತಿಯ ಈ ಹೊರ ಪ್ರಪಂಚ ದಲ್ಲಿ ಪ್ರದರ್ಶಿಸುವ ವರ್ತನೆ. ವ್ಯಕ್ತಿ ಬೆಳೆದಂತೆ ಈ ಮೂರು ಭಾಗಗಳು ಕ್ರಮೇಣ ರೂಪುಗೊಳ್ಳುತ್ತವೆ.

**1. ಇದ್:** ಇದು ವ್ಯಕ್ತಿತ್ವದ ಮೂಲಭೂತ ಜೈವಿಕ ವ್ಯವಸ್ಥೆ. ವ್ಯಕ್ತಿ ಅನುವಂಶೀ0ಯವಾಗಿ ಗಳಿಸಿದ ವಂಶವಾಹಿಗಳ (ಜೀನ್ಸ್) ಕೊಡುಗೆ ಆಗಿದೆ. ಇದು ತಂದೆ ತಾಯಿಯಿಂದ ಪಡೆದ ಎಲ್ಲಾ ಮನೋವೈಜ್ಞಾನಿಕ, ಜೈವಿಕ ಅಂಶಗಳನ್ನೂ ಒಳಗೊಂಡಿರುತ್ತದೆ. ಇದು ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಲೈಂಗಿಕ, ಆಕ್ರಮಣಕಾರಿ ಸಹಜ ಪ್ರವೃತ್ತಿಗಳನ್ನು ಒಳಗೊಂಡಿರುತ್ತದೆ. ಇದು ಮಾನಸಿಕ ಶಕ್ತಿ ಅಥವಾ ಲೈಂಗಿಕ ಶಕ್ತಿ ಅಥವಾ ಲಿಬಿಡೋವನ್ನು ತನ್ನಲ್ಲಿ ಸಂಗ್ರಹಿಸಿಟ್ಟುಕೊಂಡಿರುತ್ತದೆ. ಈ ಲಿಬಿಡೋ ಶಕ್ತಿಯ ಸಹಾಯದಿಂದಲೇ ಉಳಿದೆರಡು ವ್ಯವಸ್ಥೆಗಳು ತಮ್ಮ ಕಾರ್ಯ ನಿರ್ವಹಿಸುತ್ತವೆ. ಈ ಲಿಬಿಡೋ ಶಕ್ತಿ ಒಂದು ವಿಧದ ಮಾನಸಿಕ ಶಕ್ತಿಯಾಗಿದ್ದು ಸಹಜ ಪ್ರವೃತ್ತಿಗಳಿಂದ ಉತ್ಪಾದಿಸಲ್ಪಡುತ್ತದೆ. ಸಿಗ್ಮಂಡ ಫ್ರಾಯ್ಡನು 'ಈದ್' ನ್ನು "ನಿಜವಾದ ಮಾನಸಿಕ ವಾಸ್ತವಿಕತೆ" (true psychic reality) ಎಂದು ಕರೆದಿದ್ದಾನೆ.

ಫ್ರಾಯ್ಡನ ಪ್ರಕಾರ 'ಇದ್' ನೀತಿರಹಿತವಾದುದಾಗಿದೆ. ಇದು ಬಾಹ್ಯ ಪ್ರಪಂಚದಲ್ಲಿನ ಕಟ್ಟಳೆಗಳು, ಸಂಪ್ರದಾಯಗಳು, ಮೌಲ್ಯಗಳೊಂದಿಗೆ ಸಂಬಂಧ ಹೊಂದಿರುವುದಿಲ್ಲ. ಸಂಸ್ಕೃತಿ, ಆಚಾರ, ವಿಚಾರಗಳು 'ಇದ್' ನ ಮೇಲೆ ಪ್ರಭಾವ ಬೀರಲಾರವು. ಇದು ಸುಖಾಪೇಕ್ಷೆಯ ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಅಂದರೆ ವ್ಯಕ್ತಿಗಳು ಯಾವಾಗಲೂ ನೋವನ್ನು ಕ್ಷೀಣಗೊಳಿಸಿ ಸುಖವನ್ನು ವೃದ್ಧಿಗೊಳಿಸಿಕೊಳ್ಳಲು ಹೋರಾಟ ನಡೆಸುತ್ತಿರುತ್ತಾರೆ. ಇದು ವಾಸ್ತವಿಕತೆಯನ್ನು ಪ್ರತಿಪಾದಿಸುವ ತತ್ವಗಳಿಗೆ ಮಹತ್ವ ನೀಡುವುದಿಲ್ಲ. ವ್ಯಕ್ತಿತ್ವದ ಮೂಲಭೂತ ಅಂಗವೆನಿಸಿದ ಈ 'ಇದ್' ನಿಂದ ವ್ಯಕ್ತಿ ಸಂಪೂರ್ಣವಾಗಿ ನಿಯಂತ್ರಿಸಲ್ಪಟ್ಟಿರುತ್ತಾನೆ. ಇದರ ಸ್ವಭಾವ

Digitised by Bharatavani, CIIL

ಯಾವಾಗಲೂ ತತ್‌ಕ್ಷಣವಾಗಿ ಮತ್ತು ಸಂಪೂರ್ಣವಾಗಿ ಸುಖವನ್ನು ಅಥವಾ ತೃಪ್ತಿಯನ್ನು ಹೊಂದುವುದೇ ಆಗಿದೆ. ಆದುದರಿಂದಲೇ ಇವು ಬಾಹ್ಯ ಪರಿಸರದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಇದು ಅತ್ಯಂತ ಕ್ರೂರವಾದ ಹಾಗೂ ಅಸಂಸ್ಕೃತವೆನಿಸಿದ ವ್ಯಕ್ತಿತ್ವದ ಅಂಗವಾಗಿದೆ.

**2. ಈಗೋ( ಅಹಂ):** ಬಾಹ್ಯ ವಾಸ್ತವಿಕ ಪ್ರಪಂಚದೊಂದಿಗೆ ವ್ಯವಹರಿಸಿ, ಜೀವಿ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಬೇಕಾದಲ್ಲಿ 'ಈಗೋ' ನ ಅಸ್ತಿತ್ವ ಅತ್ಯಗತ್ಯ. ಆಗತಾನೇ ಜನಿಸಿದ ಮಗುವಿನ ವ್ಯಕ್ತಿತ್ವ ಸಂಪೂರ್ಣವಾಗಿ 'ಇದ್' ನಿಂದ ಆಚ್ಛಾದಿತವಾಗಿರುತ್ತದೆ. ಬಾಹ್ಯ ಪ್ರಪಂಚದೊಂದಿಗೆ ಪರಸ್ಪರಾನುವರ್ತಿಯಿಂದ ವರ್ತಿಸುವವರ ಮೂಲಕ ಮಗುವಿನಲ್ಲಿ ಈಗೋ ಮೂಡಿ ಬರುತ್ತದೆ. ದೈಹಿಕ ತೃಪ್ತಿಗಾಗಿ ಇದ್ ಸ್ವಚ್ಛಂದ ರೀತಿಯಲ್ಲಿ ನಿಯಮ ಬಾಹಿರ ಮಾರ್ಗಗಳನ್ನು ಹಿಡಿದರೆ ಅದು ಅನೇಕ ರೀತಿಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಆಸೆಯನ್ನು ನಿಯಂತ್ರಿಸಲು ವ್ಯಕ್ತಿಯಲ್ಲಿರುವ ಅಹಂ ಅಥವಾ ನಾನು ಎಂಬ ಮನೋಭಾವನೆ ಈ ಸ್ವಚ್ಛಂದ ಅಭಿಲಾಷೆಗಳನ್ನು ತಡೆಗಟ್ಟಿ , ನಿಯಂತ್ರಿಸಿ, ಎಷ್ಟು ಬೇಕೋ ಅಷ್ಟನ್ನು ಪಡೆಯಲು ಒಂದು ನಿರ್ದಿಷ್ಟ ಮಾರ್ಗದ ಮೂಲಕ ಹೋಗಲು ನೆರವಾಗುತ್ತದೆ. ಇದಕ್ಕೆ ತನ್ನದೇ ಆದ ಅಂಕುಶವಿದೆ. ವಾಸ್ತವಿಕತೆಯ ಅರಿವು ಇರುತ್ತದೆ. ಈಗೋ ವಾಸ್ತವಿಕತೆಯನ್ನು ಪರೀಕ್ಷಿಸುವ ತತ್ವದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಸಮಾಜದಿಂದ/ಪೋಷಕರಿಂದ ದೊರೆಯುವ ದಂಡನೆ/ಪುರಸ್ಕಾರಗಳ ದೃಷ್ಟಿಯಿಂದ ವ್ಯಕ್ತಿ ವರ್ತಿಸುವಂತೆ ಮಾಡುತ್ತದೆ. ನಿಯಮಕ್ಕೆ ತಕ್ಕಂತೆ ಬೇರೆಯವರಿಗೆ ತೊಡಕಾಗದ ರೀತಿಯಲ್ಲಿತನ್ನ ಬಯಕೆಯನ್ನು ತೀರಿಸಿಕೊಳ್ಳಲು ತನ್ನ ಬುದ್ಧಿ ಶಕ್ತಿಯ ಬಲದಿಂದ ನಡೆದುಕೊಳ್ಳುತ್ತದೆ.

'ಈಗೋ'ನ ಚಟುವಟಿಕೆ 'ಇದ್'ನ ಗುರಿಗಳನ್ನು ತೃಪ್ತಿಗೊಳಿಸುವುದಾಗಿದೆ. ಇದ್ ತನ್ನಲ್ಲಿ ಶೇಖರಿಸಿಟ್ಟುಕೊಂಡಂತಹ ಬಯಕೆಗಳು, ಅಗತ್ಯಗಳನ್ನು ಪೂರೈಸುವ ಒಂದು ಸಾಧನವಾಗಿ ಈಗೋ ಕಾರ್ಯನಿರ್ವಹಿಸುತ್ತದೆ. 'ಇದ್' ಭಾಗದಲ್ಲಿರುವ ಪ್ರೇರಣೆಗಳನ್ನೂ ಸೂಕ್ತವಾದ ವಸ್ತು ಬಾಹ್ಯ ಪ್ರಪಂಚದಲ್ಲಿ ದೊರೆಯುವವರೆಗೆ ತನ್ನಲ್ಲಿ ಕಾಪಾಡಿಕೊಂಡಿರುತ್ತದೆ. ಇದರ ಮೂಲಕ 'ಈಗೋ' ಸುಖಾಪೇಕ್ಷೆಯ ತತ್ವಗಳ ಮೇಲೆ ಕಾರ್ಯನಿರ್ವಹಿಸದೇ ವಾಸ್ತವಿಕತೆಯ ತತ್ವಗಳನ್ನೂ ಅನುಸರಿಸಿ ಅಭಿವ್ಯಕ್ತಿಗೊಳಿಸುತ್ತದೆ ಎಂಬುದು ಸ್ಫುಟವಾಗಿ ಗೋಚರಿಸುತ್ತದೆ.

'ಈಗೋ' ಕೇವಲ 'ಇದ್'ನ ಪ್ರೇರಕಗಳೊಂದಿಗೆ ಹೊಂದಿಕೊಳ್ಳದೇ, ವ್ಯಕ್ತಿತ್ವದ ನೈತಿಕ ಭಾಗವಾದ 'ಸೂಪರ್ ಈಗೋ'ನೊಂದಿಗೂ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿಯಲ್ಲಿ ಇದು ದ್ವಿಪಾತ್ರವನ್ನು ಅನುಸರಿಸಬೇಕಾಗುತ್ತದೆ.

ಸಿಗ್ಮಂಡ ಫ್ರಾಯ್ಡನ ಪ್ರಕಾರ 'ಈಗೋ' ಒಂದು ರಣಭೂಮಿ ಆಗಿದ್ದು ಇಲ್ಲಿ 'ಇದ್' ಹಾಗೂ 'ಸೂಪರ್ ಈಗೋ'ನ ಪ್ರೇರಣೆಗಳು ನಿರಂತರವಾಗಿ ಕಾದಾಟ ನಡೆಸಿರುತ್ತವೆ. ಬಹುತೇಕ 'ಈಗೋ' ವಿನ ಎಲ್ಲ ಪ್ರಕ್ರಿಯೆಗಳು ಪ್ರಾಜ್ಞಾವಸ್ಥೆಯಲ್ಲಿ ಹೊಂದಿದ್ದು ಗತಿಶೀಲವಾಗಿರುತ್ತವೆ ಹಾಗೂ ಕೆಲವು ಪ್ರಕ್ರಿಯೆಗಳು ಮಾತ್ರ ಅಪ್ರಜ್ಞಾವಸ್ಥೆಯಲ್ಲಿ ಉಂಟಾಗುತ್ತವೆ ಹಾಗೂ ಇವು ಸುರಕ್ಷಿತ ಮತ್ತು ವ್ಯಾಕುಲತೆಯನ್ನು ಕಡಿಮೆಗೊಳಿಸುವ ಕಾರ್ಯದಲ್ಲಿ 'ಈಗೋ'ಗೆ ನೆರವಾಗುತ್ತವೆ. ಒಬ್ಬ ವ್ಯಕ್ತಿ ಪ್ರಜ್ಞಾ ಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ರಕ್ಷಣಾ ತಂತ್ರಗಳನ್ನು ತನ್ನ ಈಗೋ ವನ್ನೂ ರಕ್ಷಿಸಲು ಬಳಸಿಕೊಳ್ಳುತ್ತಾನೆ. 'ಸುಪರ್ ಈಗೋ', 'ಇದ್' ಇವು ಬಾಹ್ಯ ಪ್ರಪಂಚದೊಂದಿಗೆ ನೇರ ಸಂಪರ್ಕವನ್ನು ಹೊಂದಲಾರವು. ಇಲ್ಲಿ ಈಗೋ ಏಜೆಂಟನಾಗಿ, ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತದೆ.

**3. ಸೂಪರ್ ಈಗೋ:** ಇದು ವ್ಯಕ್ತಿತ್ವದ ಮೂರನೆಯ ಹಾಗೂ ಕೊನೆಯ ವ್ಯವಸ್ಥೆಯೆನಿಸಿದೆ. ಇದು ವ್ಯಕ್ತಿಯ ಆಂತರೀಕರಣಗೊಂಡ ನೈತಿಕ ಪ್ರಜ್ಞೆ ಎನಿಸಿದೆ. ಸಾಮಾಜಿಕ ಸತ್ಯಗಳಿಗೆ ವಿರುದ್ಧವಾಗಿರುವ ಲೈಂಗಿಕತೆ, ಆಕ್ರಮಣ ಮುಂತಾದ ಪ್ರವೃತ್ತಿಗಳನ್ನು ನಿಯಂತ್ರಿಸಿ ಅವಲೋಕಿಸುವ ಪ್ರವೃತ್ತಿಯೇ ಸುಪರ್ ಈಗೋ. ಇದು ಅತಿಮಾನುಷತ್ವಗುಣ. ಇದು ಸಾಂಪ್ರದಾಯಕ ಮೌಲ್ಯಗಳು ಹಾಗೂ ಆದರ್ಶಗಳಿಗೆ ಮಹತ್ವ ನೀಡುತ್ತದೆ. ಸರಳ ಜೀವನ ಬಯಸುವ, ಭೌತಿಕ ಪ್ರಪಂಚದ ಆಗು ಹೋಗುಗಳ ಬಗ್ಗೆ ಅಷ್ಟಾಗಿ ಕಾಳಜಿ ವಹಿಸದೇ, ದೈನಂದಿನ ಸಮಸ್ಯೆ, ಸುಖಗಳಿಗಿಂತ ಭವಿತವ್ಯ ಶಾಶ್ವತ ಸುಖವನ್ನು ಬಯಸುವ ವ್ಯಕ್ತಿಗಳಲ್ಲಿ ಈ ಭಾಗ ಪ್ರಬಲವಾಗಿರುತ್ತದೆ.

ಒಳ್ಳೆಯದು–ಕೆಟ್ಟದ್ದು, ಸತ್ಯ–ಅಸತ್ಯ, ಅಶ್ಲೀಲ–ಸೌಂದರ್ಯವನ್ನು ವಿಮರ್ಶಿಸುವ ಶಕ್ತಿ ಸೂಪರ್ ಈಗೋಗೆ ಇರುತ್ತದೆ. ಸ್ವಯಂ ತೃಪ್ತಿ ಮುಂದೆ ಸ್ವಾರ್ಥವನ್ನೂ ಕಡಿಮೆ ಮಾಡಿ ವ್ಯಕ್ತಿಯಲ್ಲಿ ಆದರ್ಶ ಗುಣಗಳನ್ನು ಬೆಳೆಸಬಹುದು. ಆದ್ದರಿಂದ ತೃಪ್ತಿ, ಅಹಂ ಮತ್ತು ಪಾರಮಾರ್ಥಿಕ ಗುಣಗಳು ಒಂದಕ್ಕೊಂದು ಸಂಬಂಧಿಸಿದ್ದು ಒಂದು ಇನ್ನೊಂದು ಹಂತವನ್ನು ತಲುಪಲು ಸೋಪಾನವಾಗಿದೆ. ಆದರೆ ತಾನು ವಿವರಿಸಿರುವ ಯಾವ ಗುಣ ವಿಶೇಷತೆಗಳು ಪ್ರತ್ಯೇಕವಾಗಿ, ನಿರ್ದಿಷ್ಟವಾಗಿ ವ್ಯಕ್ತಿಯಲ್ಲಿ ತೋರುವುದಿಲ್ಲ ಎಂದು ಫ್ರಾಯ್ಡನು ವಿವರಿಸಿದ್ದಾನೆ.

ಒಬ್ಬ ವ್ಯಕ್ತಿಯ ವರ್ತನೆ ಈ ಸುಪರ್ ಈಗೋವಿನಿಂದ ಸಂಪೂರ್ಣವಾಗಿ ಪ್ರಭಾವಕ್ಕೊಳಪಟ್ಟಿರುತ್ತದೆ. ವ್ಯಕ್ತಿತ್ವದ ಈ ಮಹತ್ತರ ಅಂಶವನ್ನು ನಾವು ಆಗತಾನೇ ಜನಿಸಿದ ಮಗುವಿನಲ್ಲಿ ಕಾಣಲಾರೆವು. ಆ ಮಗು 'ಇದ್' ನಿಂದ ಸಂಪೂರ್ಣವಾಗಿ ಪ್ರಚೋದಿತವಾಗಿರುತ್ತದೆ. ಇದನ್ನು 'ಸೂಪರ್ ಈಗೋ'ಗೆ ವರ್ಗಾಯಿಸುವುದು ಶಿಕ್ಷಣದ, ಶಿಕ್ಷಕರ ಕರ್ತವ್ಯವೆನಿಸುವುದು.

ಪ್ರಥಮವಾಗಿ ಇದು ಪಾಲಕರ, ಪೋಷಕರ, ಆದ್ಯ ಕರ್ತವ್ಯ. ಏಕೆಂದರೆ ಫ್ರಾಯ್ಡನ ಪ್ರಕಾರ ಪೂರ್ವ ಬಾಲ್ಯಾವ್ಯಸ್ಥೆಯಲ್ಲಿ–5 ವರ್ಷಗಳೊಳಗಾಗಿಯೇ ಮಗುವಿನ ವ್ಯಕ್ತಿತ್ವ ಸಂಪೂರ್ಣವಾಗಿ ರೂಪಿತವಾಗಿರುತ್ತದೆ. ಆದರೆ ಇಂದಿನ ಪಾಲಕರು ಈ ವಿಷಯದತ್ತ ಗಮನ ಹರಿಸುತ್ತಿಲ್ಲ. ಕೇವಲ ತಮ್ಮ ಹೊಣೆಗಾರಿಕೆಯನ್ನು ಶಿಕ್ಷಣಕ್ಕೆ ವರ್ಗಾಯಿಸುತ್ತಿದ್ದಾರೆ. ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ ವ್ಯಕ್ತಿತ್ವದ ಈ ಮಹತ್ವ ಪೂರ್ಣವೆನಿಸಿದ ಅಂಶವನ್ನು ಬೆಳೆಸುವಲ್ಲಿ ಸಂಪೂರ್ಣವಾಗಿ

Digitised by Bharatavani, CIIL

ವಿಫಲಗೊಂಡಿದೆ. ಇದ್' ನಲ್ಲಿ ಅಂತರ್ಗತ ಗೊಂಡಿರುವ ಸಹಜ ಪ್ರವೃತ್ತಿಗಳು ಹಾಗೂ ಅಗತ್ಯತೆಗಳನ್ನು ನಿಯಂತ್ರಿಸುವಲ್ಲಿ ವಿಫಲಗೊಂಡಿದೆ.

'ಸುಪರ್ ಈಗೋ' ವ್ಯಕ್ತಿತ್ವದ ನೈತಿಕ ಪ್ರಜ್ಞೆಯಾಗಿರುತ್ತದೆ. ಇದು ಸನ್ನಿವೇಶವೊಂದರಲ್ಲಿ ಜರುಗಿದ ಸೂಕ್ತ ಹಾಗೂ ಅಸಮರ್ಪಕ ವರ್ತನೆಗಳನ್ನು ವಿಭೇದೀಕರಿಸುತ್ತದೆ. ಶಿಕ್ಷಣದ ಕಾರ್ಯ ಇದನ್ನು ಬಲಯುತಗೊಳಿಸುವುದೆ ಆಗಿದೆ. ಸಿಗ್ಮಂಡ್ ಫ್ರಾಯ್ಡನ ಪ್ರಕಾರ ಸುಪರ್ ಈಗೋ, ಆತ್ಮ ಸಾಕ್ಷಿ (Self Conscience) ಮತ್ತು ಅಹಂ ಆದರ್ಶ (Ego Ideal) ಎಂಬ ಎರಡು ಅಂಶಗಳನ್ನು ಒಳಗೊಂಡಿರುತ್ತದೆ.

**1. ಆತ್ಮ ಸಾಕ್ಷಿ:** ಶಿಕ್ಷೆಯ ಅಸ್ತ್ರವನ್ನು ಬಳಸುವುದರ ಮೂಲಕ ಇದನ್ನು ರೂಪಿಸಲಾಗುತ್ತದೆ. ಇದು ಒಂದು ಕಲಿತ

ವರ್ತನೆ. ಇಲ್ಲಿ ಮಾನಸಿಕ ಸಾಮರ್ಥ್ಯದ ಬಳಕೆ ಆಗದು.

**2. ಅಹಂ ಆದರ್ಶ:** ಇಲ್ಲಿ ಮಾನಸಿಕ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುತ್ತದೆ. ಇಲ್ಲಿ ಸ್ವಯಂ ಕಲಿಕೆ ಜರುಗುತ್ತದೆ. ವ್ಯಕ್ತಿ ತಾನು ಆದರ್ಶವೆಂದು ಆಯ್ಕೆ ಮಾಡಿಕೊಂಡಿರುವ ವ್ಯಕ್ತಿಯಂತೆ ವರ್ತಿಸಲು ಇದು ಪ್ರೇರಣೆ ನೀಡುತ್ತದೆ.

**ಸುಪರ್ ಈಗೋ ಚಟುವಟಿಕೆ**

1. ಇದ್ ನ ಆಕಾಂಕ್ಷೆಗಳನ್ನು ನಿಯಂತ್ರಿಸುವುದು.
2. ವಾಸ್ತವಿಕ ರೂಪದಲ್ಲಿರುವ ಗುರಿಗಳನ್ನು, ನೈತಿಕ ಗುರಿಗಳಾಗಿ ಬದಲಿಸಿಕೊಳ್ಳುವಂತೆ 'ಈಗೋ' ಗೆ ಮನವರಿಕೆ ಮಾಡಿಕೊಡುವುದು. ಹಾಗೂ ಪೂರ್ಣತೆಯನ್ನು ತಲುಪಲು ಮಾರ್ಗದರ್ಶನ ನೀಡುವುದು.

**–ಡಾ. ಸಿಸ್ಟರ್ ಲಿಯೋನಿಲ್ಲಾ ಮಿನೇಜಸ್**

## ವಿಚಲನ ಮಾಪಕಗಳು

ಅಂಕಗಣಿತೀಯ ಸರಾಸರಿ, ಮಧ್ಯಾಂಕ ಮತ್ತು ಬಹುಲಾಂಕಗಳಿಂದ ಒಂದು ಗುಂಪಿನ ಸರ್ವೇಸಾಮಾನ್ಯ ಲಕ್ಷಣಗಳನ್ನು ಅಂಕ ವಿತರಣೆಯಲ್ಲಿನ ಕೇಂದ್ರೀಯ ಪ್ರವೃತ್ತಿಯನ್ನು ತಿಳಿಯಬಹುದೇ ವಿನಃ ಹರಡುವಿಕೆಯ ಚಿತ್ರಣವನ್ನಲ್ಲ. ಪ್ರಾಪ್ತಾಂಕಗಳು ಸರಾಸರಿಯಿಂದ ಹೇಗೆ ಭಿನ್ನವಾಗಿವೆ, ಸರಾಸರಿಯಿಂದ ಎಷ್ಟು ದೂರದಲ್ಲಿ ಇಲ್ಲವೆ ಇವೆ ಎನ್ನುವುದನ್ನು ತಿಳಿಯುವುದೂ ಸಹ ಇಲ್ಲಿ ಅಗತ್ಯ.

ಉದಾಹರಣೆಗೆ ಎಂ.ಎ ಪ್ರಥಮ ಸಮಾಜಶಾಸ್ತ್ರದ ವಿಭಾಗದ ವಿದ್ಯಾರ್ಥಿಗಳು ಪಡೆದ ಗುಣಗಳನ್ನು ಪರಿಶೀಲಿಸೋಣ.

ಹುಡುಗರು: 145,20,30,31,45 ಮತ್ತು 55
ಹುಡುಗಿಯರು: 25,26,31,34,38 ಮತ್ತು 42

ಇವೆರಡೂ ಗುಂಪಿನ ಅಂಕಗಳು ವಿಭಿನ್ನವಾಗಿದ್ದರೂ ಎರಡು ಗುಂಪುಗಳ ಸರಾಸರಿ 32.6 ಆದರೂ ಅಂಕಗಳು ಎರಡು ಗುಂಪಿನಲ್ಲಿ ಒಂದೇ ವಿಧವಾಗಿ ಹರಡಿಕೊಂಡಿಲ್ಲ ಅಂಕಗಳಲ್ಲಿನ ಹೆಚ್ಚು ಕಡಿಮೆ (ಹರವು ಅಥವಾ ವಿಚಲನೆ) ಸ್ಪಷ್ಟವಾಗಿ ಕಾಣುವುದು. ಹುಡುಗರ ಅಂಕಗಳು 15ರಿಂದ 55ರವರೆಗೂ ಮತ್ತು ಹುಡುಗಿಯರ ಅಂಕಗಳು 25ರಿಂದ 42ರವರೆಗೆ ಅಂದರೆ 17 ಅಂಕಗಳ ವ್ಯಾಪ್ತಿ ಪಡೆದಿದೆ. ವ್ಯಾಪ್ತಿಯ ಅಂತರದಲ್ಲಿ ಬಹಳ ವ್ಯತ್ಯಾಸವಿದೆ. ಆದರೆ ಹುಡುಗರ ವಿಭಾಗದಲ್ಲಿ ಏಕರೀತಿಯಲ್ಲಿ ಅಂಕಗಳಿಲ್ಲವೆಂದೂ, ಹುಡುಗಿಯರ ವಿಭಾಗದ ಅಂಕಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಏಕತೆಯನ್ನು ಕಾಣಬಹುದು. ಈ ದಿಶೆಯಲ್ಲಿ ಎರಡು ಗುಂಪುಗಳ ಸರಾಸರಿ ಒಂದೇ ಆಗಿದ್ದರೂ ಇವು ಏಕರೂಪ ಹೊಂದಿರುವ ಗುಂಪುಗಳಲ್ಲ. ಸರಾಸರಿಯಿಂದ ಅಂಕಗಳು ಹೇಗೆ ಪ್ರಸಾರವಾಗಿವೆ ಎಂದು ತಿಳಿಯುವುದು ಅಗತ್ಯ. ಆದ್ದರಿಂದ ಸರಾಸರಿ ಗುಂಪಿನ ಸ್ಥೂಲ ಚಿತ್ರವನ್ನು ನೀಡುವುದೇ ವಿನಃ ಅಂಕಗಳಲ್ಲಿನ ಹೆಚ್ಚು ಕಡಿಮೆಗಳನ್ನು ಅಥವಾ ಪ್ರಸರಣವನ್ನು ತಿಳಿಸುವುದಿಲ್ಲ. ಆದ್ದರಿಂದ ಗುಂಪಿನ ಅಂಕ ವಿತರಣೆಯ ಸ್ಪಷ್ಟತೆಯನ್ನು ಅರಿಯಲು ಬೇರೆ ಮಾಪಕಗಳನ್ನು ಉಪಯೋಗಿಸಬೇಕು. ಅಂಕಗಳ ಹರವನ್ನು ಕಂಡುಹಿಡಿಯುವ ಮಾಪಕಗಳನ್ನು (ಸಾಂಖ್ಯಿಕಗಳನ್ನು) ವಿಚಲನ ಮಾಪಕಗಳು (Measures of variability) ಎಂದು ಹೇಳುತ್ತಾರೆ.

ಉದಾ: ಕೆಳಗೆ ಒಂದೇ ಗುಂಪಿನ ಬೇರೆ ಬೇರೆ ವಿಷಯಗಳಲ್ಲಿನ ಪ್ರಾಪ್ತಾಂಕಗಳನ್ನು ಕೊಡಲಾಗಿದೆ. ಅವುಗಳ ಸರಾಸರಿಯು ಒಂದೇ ಆಗಿದ್ದರೂ(50) ಪ್ರಾಪ್ತಾಂಕಗಳ ಹರಡುವಿಕೆಯ ರೀತಿಯು ಒಂದೇ ತೆರನಾಗಿಲ್ಲ.

1) 15, 20, 25, 30, 35, 40, 45, 50, 55, 60, 65, 70, 75, 80, 85
2) 43, 44, 45, 46, 47, 48, 49, 50, 51, 52, 53, 54, 55, 56, 57
3) 23, 25, 31, 37, 43, 49, 51, 56, 58, 61, 63, 65, 73, 79

ಈ ಹರಡುವಿಕೆಯ ರೀತಿಯನ್ನು ತೋರಿಸುವ ಸೂಚ್ಯಂಕಗಳಿಗೆ (Index) ಮಾಪಕಗಳು ಎಂದು ಹೆಸರು. ಇವುಗಳಿಗೆ ಹರವಿನ ಸೂಚ್ಯಾಂಕಗಳೆಂದೂ ಕರೆಯುವರು. ಅಂಕಗಳ ಹರಡುವಿಕೆಗೆ ಅಂಕಗಳ ವಿಚಲನೆ (Variability or Dispersion of scores) ಎಂದು ಹೆಸರು.

"ಕೇಂದ್ರಿಯ ಪ್ರವೃತ್ತಿ ಸುತ್ತಲೂ ಪ್ರಾಪ್ತಾಂಕಗಳ ವಿಚಲನೆಯ ಅಥವಾ ಹರಡುವಿಕೆಯ ಪ್ರಮಾಣವನ್ನು ತೋರಿಸುವ ಮಾಪಕವೇ ವಿಚಲನ ಮಾಪಕ".

Digitised by Bharatavani, CIIL

"ಸರಾಸರಿಯ ಸುತ್ತಲೂ ಪ್ರಾಪ್ತಾಂಕಗಳು ಎಷ್ಟು ಪ್ರಮಾಣದಲ್ಲಿ ಹರಡಿವೆ ಎಂಬುದನ್ನು ತಿಳಿಸುವ ಸಾಂಖ್ಯಿಕಿಯ ಬೆಲೆಯೇ ವಿಚಲನ ಶೀಲತಾ ಮಾಪಕ."

**ಎಚ್.ಈ. ಗ್ಯಾರೆಟ್‌ರವರ ಪ್ರಕಾರ:**

"ಅಂಕ ವಿತರಣೆಯ ಕೇಂದ್ರಿಯ ಪ್ರವೃತ್ತಿ ಮಾಪಕಗಳ ಸುತ್ತಲೂ, ಫಲಾಂಕಗಳ ಹರಡುವಿಕೆಯ ರೀತಿಯನ್ನು ವಿಚಲನಶೀಲತೆ ಎಂದು ಹೇಳಬಹುದು".

**ಲಿಂಡ್‌ಕ್ವಿಸ್ಟ್‌ರವರ ಪ್ರಕಾರ:**

"ಸರಾಸರಿಯ ಸುತ್ತಲೂ ಫಲಾಂಕಗಳ ಹರಡುವಿಕೆಯ ರೀತಿಯ ವ್ಯಾಪಕತೆಗೆ ವಿಚಲನಶೀಲತೆ ಎಂದೆನ್ನುತ್ತಾರೆ".

ಅಂಕಗಳ ಹರಹನ್ನು ಅಥವಾ ವಿಚಲನಶೀಲತೆಯನ್ನು ಅಳೆಯಲು ಲೆಕ್ಕಮಾಡುವ ಮಾಪನಗಳೆಂದರೆ, ವ್ಯಾಪಿ (Range), ಚತುರ್ಥಕ ವಿಚಲನ (Quartile Deviation or QD), ಮಾನಕ ವಿಚಲನ (Standard Deviation or SD),
ಸರಾಸರಿ ವಿಚಲನ (Average/Mean Deviation or AD).

**1. ವ್ಯಾಪ್ತಿ (Range):**

ಕೊಟ್ಟ ಫಲಾಂಕಗಳ ಅತಿ ಗರಿಷ್ಟ ಮತ್ತು ಕನಿಷ್ಟ ಅಂಕಗಳ ವ್ಯತ್ಯಾಸವೇ ವ್ಯಾಪ್ತಿಯಾಗಿದೆ. ಇದನ್ನು **R** ಅಥವಾ **W** ಎಂಬ ಸಂಕೇತದಿಂದ ಗುರ್ತಿಸುತ್ತಾರೆ.

ವ್ಯಾಪ್ತಿ=ಗರಿಷ್ಟ ಫಲಾಂಕ–ಕನಿಷ್ಟ ಫಲಾಂಕ.

**ವ್ಯಾಪ್ತಿಯ ಅನುಕೂಲಗಳು:**

1) ವಿಚಲನ ಮಾಪಕಗಳಲ್ಲಿ ಇದು ಸರಳವಾದುದಾಗಿದೆ.
2) ವ್ಯಾಪ್ತಿಯನ್ನು ಕಂಡು ಹಿಡಿಯುವುದು ಸುಲಭ.
3) ವ್ಯಾಪ್ತಿಯನ್ನು ಕಂಡು ಹಿಡಿಯಲು ವೇಳೆ ಅತಿ ಕಡಿಮೆ ಬೇಕು.
4) ಇದು ವಿಚಲನೆಯ ಸ್ಥೂಲ ಅಳತೆಯಾಗಿದೆ.
5) ಇದನ್ನು ಕೇವಲ ಗರಿಷ್ಟ, ಕನಿಷ್ಟ ಈ ಬೆಲೆಗಳಿಂದ ಕಂಡು ಹಿಡಿಯಬಹುದು.

**ಮಿತಿಗಳು:**

1) ವಿತರಣೆಯ ಪ್ರತಿಯೊಂದು ಅಂಕವನ್ನು ಇದು ಪರಿಗಣಿಸುವುದಿಲ್ಲ
2) ವಿತರಣೆಯ ಎರಡು ಚರಮ ಬೆಲೆಗಳ ನಡುವೆ ಇರಬಹುದಾದ ಇರುವ ವ್ಯತ್ಯಾಸ ಅಂಕಗಳ ವಿತರಣೆಯ ಯಾವುದೇ ವೈಶಿಷ್ಟತೆಯನ್ನು ಹೇಳಲಾರದು.
3) ಆವೃತ್ತಿ ವಿತರಣೆಗಳಿಗೆ ಇದು ಹೆಚ್ಚು ಅನ್ವಯವಾಗುವುದಿಲ್ಲ.

**2. ಚತುರ್ಥಕ ವಿಚಲನೆ (Quartile Deviation or QD):**

ಇದು ವ್ಯಾಪ್ತಿಯ ಮಾಪನಕ್ಕಿಂತಲೂ ಹೆಚ್ಚು ನಿಖರವಾದದು. ಚತುರ್ಥಾಂಕಗಳು ಎಲ್ಲಾ ಅಂಕಗಳನ್ನು ಅಂದರೆ ಅವುಗಳ ವಿತರಣೆಯನ್ನು ನಾಲ್ಕು ಸಮಾನ ಭಾಗಗಳನ್ನು ಪ್ರತಿನಿಧಿಸುವ ಬೆಲೆಗಳಾಗಿವೆ. ಒಟ್ಟು ವಿತರಣೆಯನ್ನು ನಾಲ್ಕು ಸಮಭಾಗ ಮಾಡಿದಾಗ, ನಾಲ್ಕು ಭಾಗಗಳು ಬರುತ್ತವೆ. ಇವುಗಳನ್ನು ಚತುರ್ಥಕಗಳು(Quartiles) ಎನ್ನುತ್ತಾರೆ. ಅವುಗಳನ್ನು $Q_1$, $Q_2$ ಮತ್ತು $Q_3$, $Q_4$ ಎಂದು ಸೂಚಿಸುತ್ತಾರೆ.

ಇಲ್ಲಿ $Q_1$ ವನ್ನು ಅತಿ ಕೆಳಗಿನ ಅಥವಾ ಪ್ರಥಮ ಚತುರ್ಥಕ ಎಂದು ಕರೆಯುತ್ತಾರೆ.

$Q_2$ ವನ್ನು ವಿತರಣೆಯ ದ್ವಿತೀಯ ಚತುರ್ಥಕ ಎಂದು ಕರೆಯುತ್ತಾರೆ.

$Q_3$ ವನ್ನು ತೃತೀಯ ಚತುರ್ಥಕ ಎಂದು ಕರೆಯುತ್ತಾರೆ.

$Q_4$ ವನ್ನು ಚತುರ್ಥ ಚತುರ್ಥಕ ಎಂದು ಕರೆಯುತ್ತಾರೆ.

ಒಂದು ವಿತರಣೆಯನ್ನು 100 ಸಮಭಾಗಗಳಾಗಿ ಮಾಡಿದರೆ, ಅವುಗಳಿಗೆ ಶತಾಂಶಗಳೆನ್ನುವರು. ಇವುಗಳಿಗೆ ಸಂಬಂಧಿಸಿದಂತೆ ಈ ನಾಲ್ಕು ಚತುರ್ಥಕಗಳಿಗೆ ಸಮಾನವಾದ ಶತಾಂಶ ಬಿಂದುಗಳು ಹೀಗಿವೆ–

$P_{25}$ - 25ನೇ ಶತಾಂಶ ಬಿಂದುವಿಗೆ $Q_1$ ಎಂತಲೂ,
$P_{50}$ - 50ನೇ ಶತಾಂಶ ಬಿಂದುವಿಗೆ $Q_2$ ಎಂತಲೂ,
$P_{75}$ - 75ನೇ ಶತಾಂಶ ಬಿಂದುವಿಗೆ $Q_3$ ಎಂತಲೂ,
$P_{100}$ - 50ನೇ ಶತಾಂಶ ಬಿಂದುವಿಗೆ $Q_4$ ಎಂತಲೂ ಹೇಳುತ್ತಾರೆ.

ಮೂರನೇ ಚತುರ್ಥಾಂಶ ($Q_3$) ಮತ್ತು ಮೊದಲನೇ ಚತುರ್ಥಾಂಕ($Q_1$)ಗೂ ಇರುವ ಅಂತರದ ಅರ್ಧದಷ್ಟನ್ನು ಚತುರ್ಥಕ ವಿಚಲನ(Quartile Deviation-QD) ಎಂದು ಕರೆಯುತ್ತಾರೆ. ಚತುರ್ಥಕ ವಿಚಲನ ಮಾಪಕವನ್ನು ಲೆಕ್ಕಾಚಾರ ಮಾಡುವಾಗ $Q_1$ ಮತ್ತು $Q_3$ಗಳನ್ನು ಕಂಡುಹಿಡಿದು, ನಂತರ ಅವುಗಳ ವ್ಯತ್ಯಾಸದ ಅರ್ಧವನ್ನು ಕಂಡುಹಿಡಿಯಬೇಕು. ಅದು ವಿಚಲನ ಮಾಪಕವಾಗುತ್ತದೆ.

ಇದರ ಸರಳ ಸೂತ್ರ $QD=\frac{Q_3-Q_1}{2}$ →

ಚತುರ್ಥಕ ವಿಚಲನ(QD)ಯನ್ನು ಕಂಡುಹಿಡಿಯಲು ಈ ಸೂತ್ರವನ್ನು ಉಪಯೋಗಿಸಲಾಗುತ್ತದೆ.

$$Q_1 = L_1 + \left[\frac{\frac{N}{4} - cf}{fm1}\right] xi$$

ಇಲ್ಲಿ $Q_1$ ಎಂದರೆ 25ನೇ ಶತಾಂಶ ಬಿಂದು ಅಂದರೆ ಒಟ್ಟು ಆವೃತ್ತಿಗಳ 4ನೇ ಒಂದು ಭಾಗ.

Digitised by Bharatavani, CIIL

ಫಲಾಂಕವು ಯಾವ ಸಂಚಿತಾವೃತ್ತಿಯಲ್ಲಿ ಬೀಳುತ್ತದೆ ಎಂಬುದನ್ನು ಕಂಡು ಹಿಡಿದು ಅದಕ್ಕೆ ಕ್ರಮವಾದ ವರ್ಗಾಂತರವನ್ನು ಗುರ್ತಿಸಬೇಕು. ಅದುವೇ ಪ್ರಥಮ ಚತುರ್ಥಾಂಕ ($Q_1$)ವಿರುವ ವರ್ಗಾಂತರ.

$L_1$= ಪ್ರಥಮ ಚತುರ್ಥಾಂಕವಿರುವ ವರ್ಗಾಂತರದ ನಿಜ ಕೆಳಮಿತಿ.

$\frac{N+1}{4}$ = ಒಟ್ಟು ಪ್ರಾಪ್ತಾಂಕಗಳ ನಾಲ್ಕನೇ ಒಂದು ಭಾಗವಷ್ಟು ಬೆಲೆ

$Fm_1$= ಪ್ರಥಮ ಚತುರ್ಥಾಂಕವಿರುವ ವರ್ಗಾಂತರದ ಆವೃತ್ತಿ ಸಂಖ್ಯೆ

c.f= ಪ್ರಥಮ ಚತುರ್ಥಾಂಕವಿರುವ ವರ್ಗಾಂತರದವರೆಗಿನ ಸಂಚಿತಾವೃತ್ತಿಗಳು.

i= ವರ್ಗಾಂತರದ ಗಾತ್ರ

ಇದೇ ರೀತಿ 3ನೇ ಚತುರ್ಥಕವನ್ನು ಲೆಕ್ಕಾಚಾರ ಮಾಡಬೇಕು. ಅದರ ಸೂತ್ರ ಹೀಗಿದೆ.

$$Q_3 = L_3 + \left[\frac{3N}{fm_3}\ C.f\right] xi$$

ಇಲ್ಲಿ $Q_3$=75ನೇ ಶತಾಂಶ ಬಿಂದು ಅಥವಾ ತೃತೀಯ ಚತುರ್ಥಾಂಕ ಅಂದರೆ ಒಟ್ಟು ಆವೃತ್ತಿಗಳ $\frac{3}{4}$ ಭಾಗ

$\frac{3N}{4}$ ಫಲಾಂಕವು ಯಾವ ಸಂಚಿತಾವೃತ್ತಿಯಲ್ಲಿ ಬೀಳುತ್ತದೆ ಎಂಬುದನ್ನು ಕಂಡು ಹಿಡಿದು ಅದಕ್ಕೆ ಕ್ರಮವಾದ ವರ್ಗಾತರವನ್ನು ಗುರ್ತಿಸಬೇಕು. ಅದುವೇ ತೃತೀಯ ಚತುರ್ಥಾಂಕ ($Q_3$)ವಿರುವ ವರ್ಗಾಂತರ.

$L_3$= $Q_3$ ಇರುವ ವರ್ಗಾಂತರದ ನಿಜ ಕೆಳಮಿತಿ

$\frac{3N}{4}$= ಒಟ್ಟು ಪ್ರಾಪ್ತಾಂಕಗಳ 4ನೇ ಮೂರು ಭಾಗ.

$fm_3$– $Q_3$ಇರುವ ವರ್ಗಾಂತರದ ಆವೃತ್ತಿ ಸಂಖ್ಯೆ.

c.f= $Q_3$ಇರುವ ವರ್ಗಾಂತರದವರೆಗಿನ ಸಂಚಿತಾವೃತ್ತಿಗಳು

i = ವರ್ಗಾಂತರದ ಗಾತ್ರ

ನಂತರ $Q_1$ ಮತ್ತು $Q_3$ ಗಳನ್ನು ಉಪಯೋಗಿಸಿ ಚತುರ್ಥಕ ವಿಚಲನವನ್ನು (QD) ಕಂಡು ಹಿಡಿಯಬೇಕು.

ಚತುರ್ಥಕ ವಿಚಲನ(Q.D) = $\frac{Q_3 - Q_1}{2}$

**ಚತುರ್ಥಾಂಕ ವಿಚಲನೆಯ ಅನುಕೂಲಗಳು:**

1) ವ್ಯಾಪ್ತಿಗಿಂತ ಇದು ಉಪಯೋಗವಾದದ್ದು ಏಕೆಂದರೆ ಇದರ ಗಣನೆಯ ವ್ಯಾಪ್ತಿಯಂತೆ ಕೇವಲ ಎರಡು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
2) ಚರಮ ಬೆಲೆಗಳು ಚತುರ್ಥಾಂಕ ವಿಚಲನೆಯ ಮೇಲೆ ಪರಿಣಾಮ ಬೀರುವುದಿಲ್ಲ.

**ಮಿತಿಗಳು:**

1) ಸರಣಿಯ ಎಲ್ಲ ವೀಕ್ಷಣೆಗಳ ಮೇಲೆ ಇದು ಅವಲಂಬಿಸಿಲ್ಲ.
2) ಶೇಕಡಾ 50%ರಷ್ಟು ಬೆಲೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

### 3. ಸರಾಸರಿ ವಿಚಲನೆ (Mean Deviation-M.D):

ಸರಾಸರಿ ವಿಚಲನೆ ಅಥವಾ ಮಧ್ಯಕ ವಿಚಲನೆಯು ಹರಡುವಿಕೆ ಮಾಪನದ ಮೂರನೆಯ ಮಾಪಕವಾಗಿದೆ.

"ಸರಾಸರಿ ವಿಚಲನೆಯು ವಿತರಣೆಯು ಸರಾಸರಿಯಿಂದ ತೆಗೆದುಕೊಂಡ ಎಲ್ಲ ಫಲಾಂಕಗಳ ವಿಚಲನೆಗಳ ಸರಾಸರಿಯಾಗಿರುತ್ತದೆ."

**–ಎಚ್.ಇ. ಗ್ಯಾರೆಟ್**

"ಸರಾಸರಿ ವಿಚಲನೆಯು ಬೀಜಗಣಿತೀಯ(+,–) ಚಿಹ್ನೆಗಳನ್ನು ತೊರೆದ ಎಲ್ಲ ವಿಚಲನೆಗಳ ಅಂಕಗಣಿತೀಯ ಸರಾಸರಿಯಾಗಿದೆ".

**– ಜೆ.ಪಿ. ಗುಯಿಲ್ ಫೋರ್ಡ್**

ಮೇಲಿನ ವಿವರಣೆಯ ಪ್ರಕಾರ ವಿಚಲನೆಯನ್ನು ಕಂಡು ಹಿಡಿಯಲು ಈ ಮುಂದಿನ ಸೂತ್ರವನ್ನು ಉಪಯೋಗಿಸಬೇಕು.

ಸರಾಸರಿ ವಿಚಲನೆಯನ್ನು ಸೂತ್ರವನ್ನು ಈ ಕೆಳಗಿನಂತೆ ನಿರೂಪಿಸಬಹುದು.

$$M.D = \frac{\sum(d)}{N}$$

ವರ್ಗೀಕೃತ ವಿತರಣೆಯಲ್ಲಿ ಸರಾಸರಿಯಿಂದ ಮೇಲೆ ಇರುವ ವಿಚಲನೆಗಳನ್ನು ಧನಾತ್ಮಕ (+vc) ವಿಚಲನೆಗಳೆಂದು ಪರಿಗಣಿಸಬೇಕು ಮತ್ತು ಸರಾಸರಿಯಿಂದ ಕೆಳಗೆ ಇರುವ ವಿಚಲನೆಗಳನ್ನು ಋಣಾತ್ಮಕ (–ve) ವಿಚಲನೆಗಳೆಂದು ಪರಿಗಣಿಸಬೇಕು. ಆದರೆ ಎಲ್ಲ ವಿಚಲನೆಗಳನ್ನು ಧನಾತ್ಮಕವೆಂದು ತಿಳಿದುಕೊಂಡು (ಬೀಜ ಗಣಿತೀಯವಾಗಿ)ಕೂಡಿಸಬೇಕು. ಎಲ್ಲವೂ ಧನಾತ್ಮಕ ಎಂದು ತಿಳಿದುಕೊಳ್ಳಲು ಮಾಡ್ಯುಲಸ್(Modulus) ಚಿಹ್ನೆಯನ್ನು ಉಪಯೋಗಿಸುವರು. $\sum(d)$ ಈ ಮೊತ್ತವನ್ನು ಒಟ್ಟು ಅಂಕಗಳಿಂದ (ಒಟ್ಟು ಆವೃತ್ತಿ) ಭಾಗಿಸಿದಾಗ ಸರಾಸರಿ ವಿಚಲನೆ ದೊರೆಯುತ್ತದೆ.

Digitised by Bharatavani, CIIL

4. **ಮಾನಕ ವಿಚಲನೆ**: ಮಾನಕ ವಿಚಲನೆ ವಿಚಲನ ಮಾಪಕಗಳಲ್ಲಿ ಅಂಕಗಳ ವಿಚಲನೆಯ ಪ್ರಮಾಣವನ್ನು ತೋರಿಸುವ ಅತ್ಯಂತ ಸ್ಥಿರವಾದ, ನಿಖರವಾದ ಮಾಪಕವಾಗಿದೆ. ಆದ್ದರಿಂದಲೇ ಪ್ರಾಯೋಗಿಕ ಅಧ್ಯಯನಗಳಲ್ಲಿ ಮತ್ತು ಇತರ ಸಂಶೋಧನ ಅಧ್ಯಯನಗಳಲ್ಲಿ ಇದನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ದತ್ತಾಂಶಗಳನ್ನು ವಿಶ್ಲೇಷಿಸಿ, ಪೂರ್ವಾನು ಮಾನ ಮಾಡುವಾಗ ಈ ಗುಣಾಂಕವನ್ನು ಆಧಾರವಾಗಿ ಉಪಯೋಗಿಸಲೇಬೇಕಾಗುತ್ತದೆ. ಮಾನಕ ವಿಚಲನಕ್ಕೂ ಸರಾಸರಿ ವಿಚಲನಕ್ಕೂ ವ್ಯತ್ಯಾಸವಿದೆ. ಮಾನಕ ವಿಚಲನವನ್ನು ಲೆಕ್ಕಿಸುವಾಗ ಸರಾಸರಿ ವಿಚಲನದಲ್ಲಿ ಮಾಡಿದಂತೆ ಸರಾಸರಿಯಿಂದ ಪ್ರತಿಯೊಂದು ಅಂಕದ ಅಥವಾ ಆವೃತ್ತಿ ವರ್ಗದ ಮಧ್ಯಬಿಂದುವಿನ ವಿಚಲನೆಯನ್ನು ಚಿಹ್ನೆಯ (+,–) ಸಹಿತ ಗುರ್ತಿಸಿ ಅವುಗಳನ್ನು ಚಿಹ್ನೆಯನ್ನು ಗಣನೆಗೆ ತೆಗೆದುಕೊಳ್ಳದೇ ಕೂಡಿ ಆ ಮೊತ್ತದ ಆಧಾರದ ಮೇಲೆ ಸರಾಸರಿ ವಿಚಲನೆಯನ್ನು ಕಂಡು ಹಿಡಿಯುತ್ತೇವೆ. ಆದರೆ ಮಾನಕ ವಿಚಲನೆಯನ್ನು(ಇದರ ಸಂಕೇತ ರೂಪ S-D ಅಥವಾ ಗ್ರೀಕ್ ಅಕ್ಷರ Σ–ಸಿಗ್ಮಾ) ಕಂಡು ಹಿಡಿಯುವಾಗ ಸರಾಸರಿಗೂ ಪ್ರತಿಯೊಂದು ಅಂಕ(ಆವೃತ್ತಿ) ವರ್ಗದ ಮಧ್ಯಬಿಂದುವಿಗೂ ಇರುವ ವ್ಯತ್ಯಾಸವನ್ನು ವಿಚಲನೆಯನ್ನು ಚಿನ್ಹೆ ಸಹಿತ ಗುರ್ತಿಸಿ, ಈ ವ್ಯತ್ಯಾಸಗಳನ್ನು ವರ್ಗವಾಗಿ ಪರಿವರ್ತಿಸಿ, ಅದನ್ನು ಆಯಾ ವರ್ಗಾಂತರದ ಆವೃತ್ತಿಯಿಂದ ಗುಣಿಸಿ ಅವುಗಳ ಮೊತ್ತದ ಆಧಾರದ ಮೇಲೆ ಮಾನಕ ವಿಚಲನೆಯನ್ನು ಕಂಡುಹಿಡಿಯುತ್ತೇವೆ. ಮಾನಕ ವಿಚಲನೆಯನ್ನು ಸರಾಸರಿಗೆ ಮಾತ್ರ ಸಂಬಂಧಿಸಿ ಲೆಕ್ಕಾಚಾರ ಮಾಡುತ್ತೇವೆ. ಈ ವ್ಯತ್ಯಾಸಗಳ ಅಂಕಗಳ ಸಂಖ್ಯೆಯಿಂದ (N) ಭಾಗಿಸಿ ಬರುವ ಭಾಗಲಬ್ಧದ ವರ್ಗಮೂಲವೇ ಮಾನಕ ವಿಚಲನವಾಗುತ್ತದೆ. ಆದ್ದರಿಂದ ಮಾನಕ ವಿಚಲನವನ್ನು ವಿಚಲನೆಗಳ ಮೊತ್ತದ ಸರಾಸರಿಯ ಮೂಲ (Root Mean Squared Deviation) ಎಂದೂ ಹೇಳುತ್ತಾರೆ.

**ಮಾನಕ ವಿಚಲನವನ್ನು ಕಂಡು ಹಿಡಿಯುವ ಕ್ರಮ:**

A) ಅವರ್ಗೀಕೃತ ದತ್ತಾಂಶ: ಉದಾಹರಣ ಲೆಕ್ಕ

| **ಅಂಕಗಳು(N)** | **ಸರಾಸರಿಯಿಂದ ವಿಚಲನೆ(x)** | **ವಿಚಲನೆಗಳ ವರ್ಗ** |
|---|---|---|
| 8 | 14–8=–6 | 36 |
| 10 | 14–10=–4 | 16 |
| 12 | 14–12=–2 | 4 |
| 14 | 14–14=0 | 0 |
| 16 | 14–16=+2 | 4 |
| 18 | 14–18=–4 | 16 |
| 20 | 14–20=+6 | 36 |
| 98 | | $\Sigma x^2$=112 |

ಸರಾಸರಿ $\frac{98}{7}$=14(M)

ಉಪಯೋಗಿ ಸಬೇಕಾದ ಸೂತ್ರ =

$$\sigma\,(SD)= \sqrt{\frac{\Sigma x_2}{N}}=\sqrt{\frac{112}{5}}=\sqrt{14}$$ **S.D = 3.14**

Σ= ಮಾನಕ ವಿಚಲನೆ
$\Sigma x^2$= ವಿಚಲನೆಗಳ ವರ್ಗಗಳ ಮೊತ್ತ
N = ಪ್ರಾಪ್ತಾಂಕಗಳ ಸಂಖ್ಯೆ

C) ವರ್ಗೀಕೃತ ದತ್ತಾಂಶಗಳಿಗೆ ಮಾನಕ ವಿಚಲನೆಯನ್ನು ಎರಡು ವಿಧಾನಗಳಿಂದ ಕಂಡು ಹಿಡಿಯಬಹುದು. ಇವುಗಳನ್ನು ದೀರ್ಘವಿಧಾನ ಮತ್ತು ಹ್ರಸ್ವ(ಲಘು) ವಿಧಾನವೆನ್ನುತ್ತೇವೆ. ಇವುಗಳಿಗೆ ಸ್ವಲ್ಪ ವ್ಯತ್ಯಾಸವಿರುವ ಪ್ರತ್ಯೇಕ ಸೂತ್ರಗಳಿವೆ. ವರ್ಗೀಕೃತ ದತ್ತಾಂಶಗಳ ವ್ಯವಸ್ಥೆಯಲ್ಲಿ ಅಂಕಗಳನ್ನು ಕನಿಷ್ಟ ಅಂತರದಿಂದ ಗರಿಷ್ಟ ಅಂಕದವರೆಗೆ ನಿರ್ದಿಷ್ಟ ಅಂಕಗಳ (5, 10) ಗುಂಪುಗಳ ಆವೃತ್ತಿ ವರ್ಗಾಂತರ (Class Interval) ಮತ್ತು ಪ್ರತಿಯೊಂದು ವರ್ಗಾಂತರದಲ್ಲಿ ಇರುವ ಅಂಕ ಆವೃತ್ತಿಗಳ (ಅಂಕಗಳ ಸಂಖ್ಯೆಯ) ರೂಪದಲ್ಲಿರುತ್ತದೆ. ಆದ್ದರಿಂದ ಸರಾಸರಿಯಿಂದ ವಿಚಲನೆಯನ್ನು ಕಂಡು ಹಿಡಿಯುವಾಗ ಪ್ರತಿ ಅಂಕಕ್ಕೆ ಬದಲಾಗಿ ಪ್ರತಿಯೊಂದು ಆವೃತ್ತಿ ವರ್ಗಾಂತರದ ಮಧ್ಯಬಿಂದುವನ್ನು ಉಪಯೋಗಿಸಲಾಗುತ್ತದೆ. ಈ ವಿಚಲನೆಗಳನ್ನು ವರ್ಗವಾಗಿ ಪರಿವರ್ತಿಸಿ ಆಯಾ ಆವೃತ್ತಿಯಿಂದ ಬರುವ ಮೊತ್ತದ ಆಧಾರದ ಮೇಲೆ ಮಾನಕ ವಿಚಲನೆಯನ್ನು ಕಂಡು ಹಿಡಿಯಬೇಕು.

Digitised by Bharatavani, CIIL

ದೀರ್ಘವಿಧಾನ – ಉದಾಹರಣೆಯ ಲೆಕ್ಕ:

| ವರ್ಗಾಂತರ | ಮಧ್ಯಬಿಂದು (x) | ಆವೃತ್ತಿ (f) | ಮಧ್ಯಬಿಂದು ಆವೃತ್ತಿ ಗುಣಕ (fx) | ವಿಚಲನೆ= ಮಧ್ಯಬಿಂದು– ಸರಾಸರಿ x= X–M | ವಿಚಲನೆ ಆವೃತ್ತಿ | ವರ್ಗ |
|---|---|---|---|---|---|---|
| 120–122 | 121 | 1 | 121 | 15.15 | 15.15 | 229 |
| 117–119 | 118 | 2 | 236 | 12.15 | 24.30 | 295 |
| 114–116 | 115 | 3 | 345 | 9.15 | 27.45 | 251 |
| 111–113 | 112 | 4 | 448 | 6.15 | 24.60 | 151 |
| 108–110 | 109 | 5 | 545 | 3.15 | 15.75 | 49 |
| 105–107 | 106 | 9 | 954 | 0.15 | 1.15 | 00 |
| 102–104 | 103 | 6 | 618 | –2.85 | –15.10 | 43. |
| 99–101 | 100 | 3 | 300 | –5.85 | 17.55 | 102 |
| 96–98 | 97 | 4 | 388 | –8.85 | 37.40 | 313 |
| 93–95 | 94 | 2 | 188 | –11.85 | –23.70 | 280.8 |
| 90–92 | 91 | 1 | 91 | –14.85 | 14.80 | 220 |
| | | N=40 | Σfx=4234 | | $\Sigma fx^2$= | 1937 |

ಮೇಲಿನ ಆವೃತ್ತಿ ವಿತರಣೆಯ ಸರಾಸರಿ=

$$\frac{\Sigma fx}{N} = \frac{4234}{40} = \mathbf{105.88}$$

ಮಾನಕ ವಿಚಲನಕ್ಕೆ ಬಳಸಬೇಕಾದ ಸೂತ್ರ

$$= \sigma\ (S.D) = \sqrt{\frac{\Sigma fx^2}{N}}$$

$\Sigma fx^2$ = ವಿಚಲನೆ ಮತ್ತು ಆವೃತ್ತಿ ಮತ್ತು ವಿಚಲನೆಗಳು ಗುಣಲಬ್ಧಗಳ ಮೊತ್ತ

$$SD = \sqrt{\frac{1937.36}{40}} = \sqrt{148.43}$$

ಮಾನಕ ವಿಚಲನೆ= (σ) = 6.967

**ಲಘು(ಹ್ರಸ್ವ)ವಿಧಾನ:** ಲಘು ವಿಧಾನ ದೀರ್ಘವಿಧಾನಕ್ಕಿಂತ ಎರಡು ಅಂಶಗಳಲ್ಲಿ ಬೇರೆ ರೀತಿಯದಾಗಿರುತ್ತದೆ.

1) ಲಘು ವಿಧಾನದಲ್ಲಿ ದೀರ್ಘವಿಧಾನದಲ್ಲಿ ಮಾಡಿದಂತೆ ಸರಾಸರಿಯನ್ನು ಕಂಡು ಹಿಡಿಯಬೇಕಾಗಿಲ್ಲ. ಸರಾಸರಿಯನ್ನು ಊಹಿಸಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಬೆಸಸಂಖ್ಯೆಯ ವರ್ಗಾಂತರಗಳಿದ್ದರೆ ಮಧ್ಯದ ವರ್ಗಾಂತರದ ಮಧ್ಯಬಿಂದು (N)ವನ್ನು ಅಥವಾ ಅತ್ಯಂತ ಹೆಚ್ಚು ಆವೃತ್ತಿಗಳಿರುವ(f) ವರ್ಗಾಂತರದ ಮಧ್ಯಬಿಂದುವನ್ನು ತಾತ್ಕಾಲಿಕವಾಗಿ ಸರಾಸರಿ ಎಂದು ಊಹಿಸಿಕೊಳ್ಳಲಾಗುತ್ತದೆ.

2) ದೀರ್ಘವಿಧಾನದಲ್ಲಿ ನಿಜವಾಗಿ ಕಂಡುಹಿಡಿದ ಸರಾಸರಿ ಪ್ರತಿಯೊಂದು ವರ್ಗಾಂತರದ ಮಧ್ಯಬಿಂದುವಿಗೂ () ಇರುವ ವ್ಯತ್ಯಾಸವನ್ನು ಚಿನ್ಹೆ (+,-) ರಹಿತ ವಿಚಲನೆಯಾಗಿ (x) ತೆಗೆದುಕೊಳ್ಳಲಾಗುತ್ತದೆ. ಆದರೆ ಲಘು ವಿಧಾನದಲ್ಲಿ ಊಹಿಸಿದ ಸರಾಸರಿಯಿಂದ (Assured Mean) ಮೇಲಕ್ಕೆ ಮತ್ತು ಕೆಳಕ್ಕೆ ಇರುವ ವರ್ಗಾಂತರಗಳಿಗೆ +1,+2ಮತ್ತು –1,–2 ಇತ್ಯಾದಿ ವ್ಯತ್ಯಾಸಗಳನ್ನು ವಿಚಲನೆಯನ್ನಾಗಿ (x) ತೆಗೆದುಕೊಳ್ಳಲಾಗುತ್ತದೆ.

ಈ ವಿಧಾನಕ್ಕೆ ಉಪಯೋಗಿಸಬೇಕಾದ ಸೂತ್ರ= SD(σ) =

$$i\sqrt{\frac{\Sigma fx^2}{N}} - C^2$$

ಈ ಸೂತ್ರದಲ್ಲಿ i = ವರ್ಗಾಂತರದ ಗಾತ್ರ

N = ಅಂಕಗಳ(ಆವೃತ್ತಿ)ಸಂಖ್ಯೆ

$fx^1$ = ಊಹಿಸಿದ ಸರಾಸರಿಯಿಂದ ವರ್ಗಾಂತರಗಳ ಸಂಖ್ಯೆಯಿಂದ ವಿಚಲನೆ ಮತ್ತು ಆಯಾ ವರ್ಗಾಂತರದ ಆವೃತ್ತಿಯ ಗುಣಕ.

$fx^2$ = $fx^1$ನ ವರ್ಗ.

$$C = \sqrt{\frac{\Sigma fx^1}{N}}$$ (+,– ಚಿನ್ಹೆಯೊಂದಿಗೆ)

Digitised by Bharatavani, CIIL

**ಉದಾಹರಣೆಯ ಲೆಕ್ಕ:**

| ವರ್ಗಾಂತರ | ಮಧ್ಯಬಿಂದು (x) | ಆವೃತ್ತಿ (f) | ವಿಚಲನೆ X–AM($x^1$) | ವಿಚಲನೆxಆವೃತ್ತಿ (fx) | $fx^1$ನ ವರ್ಗ ($fx^2$) |
|---|---|---|---|---|---|
| 120–122 | 121 | 1 | +5 | +5 | 25 |
| 117–119 | 118 | 2 | +4 | +8 | 32 |
| 114–116 | 115 | 3 | +3 | +9 | 27 |
| 111–113 | 112 | 4 | +2 | +8 | 16 |
| 108–110 | 109 | 5 | +1 | +5 | 5 |
| 105–107 | 106 | 9 | 0 | 0 | 0 |
| 102–104 | 103 | 6 | –1 | –6 | 6 |
| 99–101 | 100 | 3 | –2 | –6 | 12 |
| 96–98 | 97 | 4 | –3 | –12 | 36 |
| 93–95 | 94 | 2 | –4 | –8 | 32 |
| 90–92 | 91 | 1 | –5 | –5 | 25 |
| | | N=40 | | $\Sigma fx^1$ +35 -37 = -2 | $\Sigma fx^{1\,2}$=216 |

$$\sigma\,(S.D)= \sqrt[3]{\frac{216}{40} - \left(\frac{-2}{N}\right)^2} = \sqrt[5]{5.4-(0.05)^2} = \sqrt{5.4-0.0025}$$

$$\sqrt[3]{5.397} = 3x2.32 = 6.967.$$

**ಸೂಚನೆ:** ಲೆಕ್ಕಾಚಾರವನ್ನು ಸರಿಯಾಗಿ ಮಾಡಿದಲ್ಲಿ ದೀರ್ಘವಿಧಾನ ದಿಂದ ಮತ್ತು ಲಘು ವಿಧಾನದಿಂದ ಕಂಡು ಹಿಡಿದ ಮಾನಕ ವಿಚಲನ ಒಂದೇ ಆಗಿರುತ್ತದೆ.

5. **ವ್ಯತ್ಯಾಸ ಗುಣಾಂಕ:** ಚತುರ್ಥಕ ವಿಚಲನ, ಮಾರ್ಗವಿಚಲನದಂಥ ವಿಚಲನಶೀಲ ಮಾಪಕಗಳನ್ನು ಅವುಗಳ ಅವಶ್ಯಕತೆಯಿರುವುದರಿಂದ ಉಪಯೋಗಿಸಿದ ಪರೀಕ್ಷೆ ಅಥವಾ ಮಾಪನ ಅಳತೆಯ ಘಟಕಗಳ ರೂಪದಲ್ಲಿ ವ್ಯಕ್ತಪಡಿಸಬೇಕಾಗಿರುತ್ತದೆ. ಉದಾಹರಣೆಗೆ, ಒಂದು ಗುಂಪಿನ ಬುದ್ಧಿಶಕ್ತಿಯನ್ನು ಅಳತೆ I.Q ರೂಪದಲ್ಲಿ ಮಾಡಿದಾಗ SD I.Q ರೂಪದಲ್ಲಿ ವ್ಯಕ್ತವಾಗುತ್ತದೆ. ಒಂದು ಗುಂಪಿನ ಎತ್ತರವನ್ನು ಇಂಚುಗಳಲ್ಲಿ ಅಳತೆ ಮಾಡಿದಾಗ ವಿಚಲನಶೀಲತೆ ಮಾಪಕವು ಇಂಚುಗಳ ರೂಪದಲ್ಲಿರುತ್ತದೆ. ಎರಡು ಗುಣಾಂಕಗಳನ್ನು ಅಳತೆ ಮಾಡಿದಾಗ ಅವುಗಳ ಸರಾಸರಿ ಹೆಚ್ಚು ಕಡಿಮೆ ಒಂದೇ ಆಗಿದ್ದರೆ, ಆಗ ಯಾವ ಗುಂಪಿನಲ್ಲಿ ಅಂಕಗಳ ವಿತರಣೆ ಹೇಗಿದೆ ಎಂದು ತಿಳಿದುಕೊಳ್ಳಲು ಅವುಗಳ ಮಾನಕ ವಿಚಲನ()ಗಳನ್ನು ನೇರವಾಗಿ ತುಲನೆ ಮಾಡಬೇಕು. ಉದಾಹರಣೆಗೆ ಸರಾಸರಿಗಳು 62,61 ಇರುವ ಬಾಲಕ ಮತ್ತು ಬಾಲಕಿಯರ ಎರಡು ಗುಂಪುಗಳಲ್ಲಿ ಬಾಲಕರ ಗುಂಪಿನ ಮಾನಕ ವಿಚಲನೆ ಮತ್ತು ಮತ್ತೊಂದು ಬಾಲಕಿಯರ ಗುಂಪಿನದು 10 ಇದ್ದರೆ ಬಾಲಕಿಯರ ಗುಂಪಿನಲ್ಲಿ ಅಂಕಗಳ ವಿತರಣೆ ಬಾಲಕರ ಗುಂಪಿಗಿಂತ ಹೆಚ್ಚು ವ್ಯತ್ಯಾಸ ಹೊಂದಿವೆ ಎಂದು ಗೊತ್ತಾಗುತ್ತದೆ. ಎರಡು ಗುಂಪುಗಳ ಸರಾಸರಿಗಳು ಸಮವಲ್ಲದಿದ್ದರೆ ಮತ್ತು ಎರಡು ಪರೀಕ್ಷೆಗಳ ಅಳತೆಯ ಘಟಕಗಳು ಬೇರೆ ಬೇರೆಯಾಗಿದ್ದಾಗ, ಆ ಗುಂಪುಗಳ ವಿಚಲನಶೀಲತೆಗಳನ್ನು ಹೋಲಿಸಬೇಕಾಗುತ್ತದೆ. ಇದಕ್ಕಾಗಿ ವ್ಯತ್ಯಾಸ ಗುಣಾಂಕವನ್ನು (Co-efficient of Variation) ಉಪಯೋಗಿಸಲಾಗುತ್ತದೆ. ಇದನ್ನು ತಾರತಮ್ಯಾತ್ಮಕ ವಿಚಲನ ಗುಣಾಂಕ(Co-efficient of relative variability) ಎಂದೂ ಹೇಳುತ್ತಾರೆ.

ಇದನ್ನು ಲೆಕ್ಕಿಸುವ ಸೂತ್ರ= $V = \frac{100\,\sigma\,(SD)}{M}$

V = ವ್ಯತ್ಯಾಸ ಗುಣಾಂಕ

σ(SD) = ವಿಚಲನ ಮಾಪಕ

M = ಸರಾಸರಿ

ವ್ಯತ್ಯಾಸ ಗುಣಾಂಕ ಆ ಗುಂಪಿನ ಸರಾಸರಿಗೆ ಸಂಬಂಧಿಸಿದಂತೆ ವ್ಯತ್ಯಾಸದ ಪ್ರತಿಶತ(%)ವನ್ನು ತೋರಿಸುತ್ತದೆ. ಎರಡು ಗುಂಪುಗಳಿಗೂ ವ್ಯತ್ಯಾಸ ಗುಣಾಂಕಗಳನ್ನು ಕಂಡುಹಿಡಿದು ಅವುಗಳನ್ನು ಹೋಲಿಸಿದಾಗ ಎರಡು ಗುಂಪುಗಳ ಅಂಕಗಳಲ್ಲಿನ ವ್ಯತ್ಯಾಸಗಳ ಪ್ರಮಾಣ ತಿಳಿಯುತ್ತದೆ.

**ವಿವಿಧ ವಿಚಲನಶೀಲತೆ ಮಾಪಕಗಳ ಉಪಯೋಗಗಳು:** ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆ ವಿಚಲನಶೀಲತೆ ಮಾಪಕಗಳನ್ನು ಉಪಯೋಗಿಸಬೇಕಾಗುತ್ತದೆ.

1. **ವ್ಯಾಪ್ತಿ:**

(1) ದತ್ತಾಂಶಗಳ ಸಂಖ್ಯೆ ಕಡಿಮೆ ಇದ್ದಾಗ.

Digitised by Bharatavani, CIIL

(2) ಅಂಕ ವಿತರಣೆಯ ಬಗ್ಗೆ ಕನಿಷ್ಠ ಹಾಗೂ ಗರಿಷ್ಠ ಅಂಕಗಳು ಮಾತ್ರ ತಿಳಿದಿದ್ದಾಗ.

**2. ಚತುರ್ಥಕ ವಿಚಲನೆ:**

(1) ಮಧ್ಯಮಾಂಕ(Median) ಗುಂಪಿನ ಕೇಂದ್ರಿಯಪ್ರವೃತ್ತಿ ಮಾಪಕವಾಗಿದ್ದಾಗ.

(2) ವಿತರಣೆಯಲ್ಲಿ ಅಂಕಗಳ ವಿತರಣೆ ಅತಿಯಾಗಿದ್ದಾಗ ಅಥವಾ ಹೆಚ್ಚಿನ ಕನಿಷ್ಠ/ಗರಿಷ್ಠ ಅಂಕಗಳಿದ್ದಾಗ.

(3) ಮಧ್ಯಮಾಂಕದ ಸುತ್ತ ಅಂಕಗಳ ಕೇಂದ್ರೀಕರಣವನ್ನು ತಿಳಿಯಬೇಕಾದಾಗ.

**3. ಸರಾಸರಿ ವಿಚಲನೆ:**

(1) ಪ್ರತಿಯೊಂದು ಅಂಕವೂ ಅವುಗಳ ಗಾತ್ರಕ್ಕೆ ಸಂಖ್ಯೆ ಎಷ್ಟು ವಿಚಲಿತವಾಗಿದೆ ಎನ್ನುವುದರ ಅಂಕಭಾರವನ್ನು ತಿಳಿದುಕೊಳ್ಳಬೇಕಾದಾಗ.

(2) ಗರಿಷ್ಠ ಪ್ರಮಾಣದ ವಿಚಲನೆಗಳು/ಮಾನಕ ವಿಚಲನೆಯ ಮೇಲೆ ಪ್ರಭಾವ ಬೀರುತ್ತವೆ ಎಂದು ತಿಳಿದಾಗ.

**4. ಮಾನಕ ವಿಚಲನೆ:**

(1) ಹೆಚ್ಚು ನಿಖರವಾದ, ಸ್ಥಿರವಾದ ವಿಚಲನಶೀಲತೆ ಮಾಪಕದ ಅವಶ್ಯಕತೆಯಿದ್ದಾಗ.

(2) ಹೆಚ್ಚಿನ ಗರಿಷ್ಠ/ಕನಿಷ್ಠ ಅಂಕಗಳನ್ನು ವಿಚಲನಶೀಲತೆ ಮೇಲೆ ಪ್ರಭಾವ ಬೀರಬೇಕಾದಾಗ.

(3) ಸಹಸಂಬಂಧ ಗುಣಾಂಕ, t ಪರೀಕ್ಷೆ ಇತ್ಯಾದಿಗಳನ್ನು ಕಂಡು ಹಿಡಿದು ಹೋಲಿಸಬೇಕಾದಾಗ.

–ಡಾ. ಕೊಂಗವಾಡ ಎನ್. ಬಿ.

## ವಿಜ್ಞಾನ ವಸ್ತುಸಂಗ್ರಹಾಲಯ

### ವ್ಯಾಖ್ಯಾನ ಮತ್ತು ವ್ಯಾಪ್ತಿ:

ವಿಜ್ಞಾನ ವಸ್ತುಸಂಗ್ರಹಾಲಯ ಎಂಬುದು ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ವಸ್ತುವಿಷಯಗಳನ್ನು ಒಳಗೊಂಡಿರುವ ವಸ್ತುಸಂಗ್ರಹಾಲಯಗಳಿಗೆ ನೀಡಿರುವ ಜಾತಿವಾಚಕ ಹೆಸರು. ವಿಜ್ಞಾನ ವಸ್ತುಸಂಗ್ರಹಾಲಯಗಳಿಗೆ ಉದಾಹರಣೆಗಳು: ಆಕ್ಸ್‌ಫರ್ಡ್‌ನಲ್ಲಿರುವ ವಿಜ್ಞಾನ ತತ್ವಶಾಸ್ತ್ರದ ವಸ್ತು ಸಂಗ್ರಹಾಲಯ, ಮಾಸ್ಕೊ ಮತ್ತು ಸೊಫಿಯಾದಲ್ಲಿರುವ ಪಾಲಿಟೆಕ್ನಿಕ್ ವಸ್ತುಸಂಗ್ರಹಾಲಯ, ಡೆರ್‌ಬಾರ್ನ್, ಬರ್ಮಿಂಗಹ್ಯಾಮ್, ಮ್ಯಾಂಚೆಸ್ಟರ್, ಕೊಲ್ಕತ್ತಾ ಮತ್ತು ಬೆಂಗಳೂರುಗಳಲ್ಲಿ ಇರುವ ಕೈಗಾರಿಕೆ ಮತ್ತು ತಂತ್ರಜ್ಞಾನದ ವಸ್ತು ಸಂಗ್ರಹಾಲಯಗಳು, ಕೃಷಿ, ವಾಹನಗಳು, ವಾಯುಯಾನ, ಗಣಕಯಂತ್ರ, ಆರೋಗ್ಯ ಮತ್ತು ನೈರ್ಮಲ್ಯ, ಕಡಲುಸಂಬಂಧಿ ಚರಿತ್ರೆ ಮತ್ತು ತಂತ್ರಜ್ಞಾನ, ವೈದ್ಯಕೀಯ ವಿಜ್ಞಾನ, ರೇಡಿಯೊ, ದೂರಸಂಪರ್ಕ, ಸಾರಿಗೆ ಇತ್ಯಾದಿಗಳಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯಗಳು ಮತ್ತು ಒಂದೇ ಸೂರಿನ ಕೆಳಗೆ ವಿಜ್ಞಾನ ಮತ್ತು ತಂತ್ರಜ್ಞಾನದ ವಿಭಿನ್ನ ಶಾಖೆಗಳನ್ನು ಹೊಂದಿರುವ ಬಹು–ಶಿಸ್ತೀಯ ವಸ್ತು ಸಂಗ್ರಹಾಲಯಗಳು. ಲಂಡನ್, ಚಿಕಾಗೋ, ವಾಶಿಂಗಟನ್, ನವದೆಹಲಿ ಮತ್ತು ಇನ್ನೂ ಅನೇಕ ಪ್ರದೇಶಗಳಲ್ಲಿರುವ ಭೂ ವಿಜ್ಞಾನಗಳು ಮತ್ತು ಜೀವವಿಜ್ಞಾನಗಳಿಗೆ ಸಂಬಂಧಿಸಿದ ಪ್ರಾಕೃತಿಕ, ಐತಿಹಾಸಿಕ ವಸ್ತುಸಂಗ್ರಹಾಲಯಗಳನ್ನು ಕೂಡ ವಿಜ್ಞಾನ ವಸ್ತು ಸಂಗ್ರಹಾಲಯಗಳಾಗಿ ವರ್ಗೀಕರಿಸಲಾಗಿದೆ.

ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯದ ಪರಿಷತ್ತು(ಐಸಿಓಎಮ್) ತನ್ನ ಲಿಖಿತ ಶಾಸನದಲ್ಲಿ ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರದ ತೋಟಗಳು, ಪ್ರಾಣಿವನಗಳು, ಮೀನುತೊಟ್ಟಿಗಳು, ಪ್ರಕೃತಿ ಮೀಸಲು ಜಾಗಗಳು ಮತ್ತು ತಾರಾಲಯ(ಗ್ರಹವ್ಯೂಹ ವೀಕ್ಷಣಾಲಯ)ಗಳನ್ನು ವಸ್ತು ಸಂಗ್ರಹಾಲಯಗಳಾಗಿ ವರ್ಗೀಕರಿಸಿದರೂ ಸಾಮಾನ್ಯವಾಗಿ ಅವುಗಳನ್ನು ವಸ್ತು ಸಂಗ್ರಹಾಲಯಗಳಾಗಿ ಉಲ್ಲೇಖಿಸುವುದು ಕಡಿಮೆ. ಕೆಲವು ಪ್ರಮುಖ ವಿಜ್ಞಾನ ವಸ್ತುಸಂಗ್ರಹಾಲಯಗಳಲ್ಲಿ ಅವುಗಳ ಭಾಗವಾಗಿ ತಾರಾಲಯಗಳು ಇರುತ್ತವೆ, ಆದರೆ ಅಧಿಕ ಕಡೆಗಳಲ್ಲಿ ಲಂಡನ್, ಚಿಕಾಗೊ, ಮಾಸ್ಕೊ, ಕೊಲ್ಕತ್ತಾ, ದೆಹಲಿ, ಮುಂಬೈ, ಬೆಂಗಳೂರು ಇತ್ಯಾದಿ ಪ್ರದೇಶಗಳಲ್ಲಿ ತಾರಾಲಯಗಳು ತಮ್ಮದೇ ಆದ ಸೌಲಭ್ಯವನ್ನು ಹೊಂದಿ ಪ್ರತ್ಯೇಕ ಅಸ್ತಿತ್ವ ಪಡೆದಿರುತ್ತವೆ. ಬ್ರೂಕಲಿನ್, ಬೋಸ್ಟನ್ ಮತ್ತು ಇಂಡಿಯಾನಾಪೊಲಿಸ್‌ಗಳಲ್ಲಿರುವ ಮಕ್ಕಳ ವಸ್ತುಸಂಗ್ರಹಾಲಯಗಳಲ್ಲಿ ಮತ್ತು ಭಾರತದಲ್ಲಿರುವ ಬಾಲ ಭವನಗಳಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಪ್ರದರ್ಶನ ವಸ್ತುಗಳು ಮತ್ತು ಚಟುವಟಿಕೆಗಳು ಇವೆ. ಆದರೆ ಇವುಗಳನ್ನು ಮಕ್ಕಳ ವಸ್ತುಸಂಗ್ರಹಾಲಯವೆಂದು ವರ್ಗೀಕರಿಸಲಾಗಿದೆಯಲ್ಲದೆ, ವಿಜ್ಞಾನ ವಸ್ತುಸಂಗ್ರಹಾಲಯವಾಗಿ ಅಲ್ಲ.

ಜಗತ್ತಿನ ವಿವಿಧ ಭಾಗಗಳಲ್ಲಿ ಸಂಖ್ಯಾವೃದ್ಧಿ ಹೊಂದುತ್ತಿರುವ ಇತ್ತೀಚಿಗಿನ ಪರಸ್ಪರ ಶೈಕ್ಷಣಿಕ ಪ್ರದರ್ಶನ ವಸ್ತುಗಳನ್ನು ಹೊಂದಿರುವ ವಿಜ್ಞಾನ ಕೇಂದ್ರಗಳನ್ನು– ಇದರಲ್ಲಿ ಭಾರತದ ವಿಜ್ಞಾನ ಕೇಂದ್ರಗಳ ಬಹುದೊಡ್ಡ ಸರಪಳಿಯೂ ಸೇರಿದಂತೆ– (ಐಸಿಓಎಮ್) ವಿಜ್ಞಾನ ವಸ್ತುಸಂಗ್ರಹಾಲಯದ ಜಾತಿವಾಚಕವಾಗಿ ವರ್ಗೀಕರಿಸಲಾಗಿದೆ. ನಿಖರವಾಗಿ ಹೇಳುವುದಾದರೆ, ಇವು ವಸ್ತು–ಆಧಾರಿತ ವಸ್ತುಸಂಗ್ರಹಾಲಯಗಳಾಗಿರದೆ, ಕ್ರಿಯಾಕೇಂದ್ರಿತ ಸಂಸ್ಥೆಗಳಾಗಿದ್ದು, ಇವುಗಳಲ್ಲಿ ನಾಜೂಕಾಗಿ ವಿನ್ಯಾಸಗೊಳಿಸಿದ ಪ್ರದರ್ಶನವಸ್ತುಗಳ ಮೂಲಕ ವಿಜ್ಞಾನದ ಏನು, ಏಕೆ ಮತ್ತು ಹೇಗೆ ಉತ್ತರವನ್ನು ಕಂಡುಕೊಳ್ಳಲಾಗುತ್ತದೆ. ಈ ಪ್ರದರ್ಶನವಸ್ತುಗಳು ಅಗಾಧ ಸಂಖ್ಯೆಯ ಸಂದರ್ಶಕರ ಪಾಲುಗೊಳ್ಳುವಿಕೆಯಲ್ಲಿ ವೈಜ್ಞಾನಿಕ ತತ್ವಗಳನ್ನು ವಿವರಿಸುತ್ತವೆ ಅಥವಾ ಒಂದು ರಚನೆಯ ಅಥವಾ ಬಹು ಪರಿಹಾರಗಳನ್ನುಳ್ಳ ಯೋಜನೆಯ ಕಾರ್ಯಗಳನ್ನು

Digitised by Bharatavani, CIIL

ಪ್ರದರ್ಶಿಸುತ್ತವೆ. ಈ ವಿಧದ ವಿಜ್ಞಾನ ಕೇಂದ್ರಗಳನ್ನು ಸಹಜವಾಗಿಯೇ ವಿಜ್ಞಾನ ವಸ್ತುಸಂಗ್ರಹಾಲಯಗಳಿಂದ ಭಿನ್ನವಾಗಿ ಪರಿಗಣಿಸಲಾಗುತ್ತದೆ. ಪರಸ್ಪರ ಪ್ರತಿಕ್ರಿಯಾತ್ಮಕ ಪಥಕ್ರಮಣಗಳನ್ನು ರೂಪಿಸುವ ಮೂಲಕ ಪ್ರತಿಕ್ರಿಯಾತ್ಮಕ ಪ್ರದರ್ಶನವಸ್ತುಗಳ ಪ್ರದರ್ಶನ ಮಂದಿರಗಳನ್ನು(ಗ್ಯಾಲರಿ) ಬಯಸುವುದರ ಮೂಲಕ ವಿಜ್ಞಾನ ವಸ್ತುಸಂಗ್ರಹಾಲಯಗಳು ಮತ್ತು ವಿಜ್ಞಾನ ಕೇಂದ್ರಗಳ ನಡುವೆ ಇರುವಂತಹ ವ್ಯತ್ಯಾಸ ಕ್ರಮೇಣ ಮಾಯವಾಗುತ್ತಿದೆ. ಇದನ್ನು ಲಂಡನ್‌ನ ಸಾಂಪ್ರದಾಯಿಕ ವಸ್ತು–ಆಧಾರಿತ ವಿಜ್ಞಾನ ವಸ್ತುಸಂಗ್ರಹಾಲಯಗಳಲ್ಲಿ ಮತ್ತು ಫಿಲೆಡೆಲ್ಫಿಯಾದ ಫ್ರಾಂಕಲಿನ್ ಇನ್‌ಸ್ಟಿಟ್ಯೂಟ್, ಟೋಕಿಯೋದ ರಾಷ್ಟ್ರೀಯ ವಿಜ್ಞಾನ ವಸ್ತುಸಂಗ್ರಹಾಲಯ, ಸಿಡ್ನಿಯ ಪವರ್ ಹೌಸ್ ವಸ್ತುಸಂಗ್ರಹಾಲಯ ಮತ್ತು ಕೊಲ್ಕತ್ತಾ ಮತ್ತು ಬೆಂಗಳೂರಿನ ಕೈಗಾರಿಕೆ ಮತ್ತು ತಂತ್ರಜ್ಞಾನದ ವಸ್ತುಸಂಗ್ರಹಾಲಯ ಇತ್ಯಾದಿಗಳಲ್ಲಿ ಕಾಣಬಹುದು.

ಐಸಿಓಎಮ್ ತನ್ನ ಲಿಖಿತ ಶಾಸನದಲ್ಲಿ ನೀಡಿರುವ ವಸ್ತುಸಂಗ್ರಹಾಲಯದ ಕುರಿತಾದ ವ್ಯಾಖ್ಯಾನ ಹೀಗಿದೆ: 'ವಸ್ತುಸಂಗ್ರಹಾಲಯವು ಸಮಾಜದ ಸೇವೆಗಾಗಿ ಮತ್ತು ಅದರ ಬೆಳವಣಿಗೆ ಅಭಿವೃದ್ಧಿಗಾಗಿ ಇರುವ ಲಾಭರಹಿತ ಖಾಯಂ ಸಂಸ್ಥೆ. ಇಲ್ಲಿ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿರುತ್ತದೆ. ಸಾರ್ವಜನಿಕರ ಅಧ್ಯಯನ, ಶಿಕ್ಷಣ ಮತ್ತು ಮನರಂಜನೆ, ಜನರ ಮತ್ತು ಅವರ ಪರಿಸರದ ಭೌತಿಕ ನಿದರ್ಶನದ ಕಾರಣಗಳಿಗಾಗಿ ವಸ್ತುಸಂಗ್ರಹಾಲಯವು ಸಂಗ್ರಹ, ಸಂರಕ್ಷಣೆ, ಸಂಶೋಧನೆ, ಸಂವಹನ ಮತ್ತು ಪ್ರದರ್ಶನಗಳನ್ನು ನಡೆಸುತ್ತದೆ.' ಈ ನಿರ್ವಚನವು ವಸ್ತುಸಂಗ್ರಹಾಲಯಗಳನ್ನು ಶೈಕ್ಷಣಿಕ ಸಂಸ್ಥೆಗಳಾಗಿ ವರ್ಗೀಕರಿಸುತ್ತದೆ.

**ವಿಜ್ಞಾನ ವಸ್ತುಸಂಗ್ರಹಾಲಯಗಳ ಇತಿಹಾಸ:**

1794ರಲ್ಲಿ ಫ್ರಾನ್ಸ್ ದೇಶದ ಅನ್ವೇಷಕ ಮತ್ತು ಯಂತ್ರಜ್ಞ ಜ್ಯಾಕ್ಸ್ ದ ವೌಕನಸನ್ ತನ್ನ ಉಯಿಲಿನ ಮೂಲಕ ಬಿಟ್ಟು ಹೋದ ಆಸ್ತಿ ಕನ್ಸರವೇಟೌರ್ ನ್ಯಾಶನಲ್ ಡೆಸ್ ಆರ್ಟ್ಸ್ ಎಟ್ ಮೆಟರ್ಸ್‌ನೊಂದಿಗೆ ವಿಜ್ಞಾನ ವಸ್ತುಸಂಗ್ರಹಾಲಯದ ಚರಿತ್ರೆ ಪ್ರಾರಂಭಗೊಳ್ಳುತ್ತದೆ. ಇದರಲ್ಲಿ ಅತ್ಯಂತ ವ್ಯಾಪಕ ಸಂಖ್ಯೆಯ ಯಂತ್ರಗಳು, ಉಪಕರಣಗಳು ಮತ್ತು ಮಾದರಿಗಳನ್ನು ಸಂಗ್ರಹಿಸಿ ಇಡಲಾಗಿತ್ತು. ಪ್ರಾರಂಭದ ಅನೇಕ ವಿಜ್ಞಾನ ವಸ್ತುಸಂಗ್ರಹಾಲಯಗಳು ಕೆಲವು ಶ್ರೇಷ್ಠ ಕೈಗಾರಿಕಾ ಪ್ರದರ್ಶನವಸ್ತುಗಳ ಸಂತಾನಗಳೇ ಆಗಿದ್ದವು. ಕ್ರಿಸ್ಟಲ್ ಅರಮನೆಯ ಪ್ರದರ್ಶನದ(1851) ಯಂತ್ರಗಳು ಮತ್ತು ಉಪಕರಣಗಳು ಕೈಗಾರಿಕಾ ಕಲೆಯ ದಕ್ಷಿಣ ಕೆನ್ಸಿಂಗಟನ್ ವಸ್ತು ಸಂಗ್ರಹಾಲಯಕ್ಕೆ ಅಡಿಪಾಯವನ್ನು ರೂಪಿಸಿದವು. ಈ ವಸ್ತುಸಂಗ್ರಹಾಲಯಕ್ಕೆ ನಂತರ ವಿಕ್ಟೋರಿಯಾ ಆಂಡ್ ಅಲ್ಬರ್ಟ್ ವಸ್ತುಸಂಗ್ರಹಾಲಯವೆಂದು ಮರುನಾಮಕರಣ ಮಾಡಲಾಯಿತು. ಲಂಡನ್‌ನಲ್ಲಿ ವಿಜ್ಞಾನ ವಸ್ತುಸಂಗ್ರಹಾಲಯವನ್ನು ರೂಪಿಸುವ ಸಲುವಾಗಿ 1909ರಲ್ಲಿ ಒಟ್ಟು ಸಂಗ್ರಹದಿಂದ ಅಲಂಕಾರಿಕ ಕಲಾ ಸಂಗ್ರಹಗಳನ್ನು ಪ್ರತ್ಯೇಕಿಸಲಾಯಿತು. ಪೆರುಗ್ವೇಯಲ್ಲಿರುವ ಬೊಹೆಮಿಯನ್ ಕೈಗಾರಿಕಾ ವಸ್ತುಸಂಗ್ರಹಾಲಯವು 1862ರಲ್ಲಿ ಲಂಡನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಕೈಗಾರಿಕಾ ವಸ್ತುಪ್ರದರ್ಶನದಿಂದ ಪ್ರಭಾವಿತವಾಗಿದೆ. ಪೆರುಗ್ವೇಯ ಈ ವಸ್ತುಸಂಗ್ರಹಾಲಯವನ್ನು ಆಮೇಲೆ ರಾಷ್ಟ್ರೀಯ ತಾಂತ್ರಿಕ ವಸ್ತುಸಂಗ್ರಹಾಲಯವೆಂದು ಕರೆಯಲಾಯಿತು. ವಿಯೆನ್ನಾದ ಟೆಕ್ನಿಸ್‌ಚೆಸ್ ವಸ್ತುಸಂಗ್ರಹಾಲಯವು 1873ರ ಅಂತಾರಾಷ್ಟ್ರೀಯ ಕೈಗಾರಿಕಾ ವಸ್ತುಪ್ರದರ್ಶನ ಮತ್ತು 1908ರ ಆಸ್ಟ್ರೀಯಾದ ಕೈಗಾರಿಕಾ ವಸ್ತುಪ್ರದರ್ಶನದಿಂದ ರೂಪುಗೊಂಡಿತು. 1876ರ ಫಿಲಡೆಲ್ಫಿಯಾದ ಶತಮಾನದ ಅಂತಾರಾಷ್ಟ್ರೀಯ ಪ್ರದರ್ಶನವು ವಾಶಿಂಗ್‌ಟನ್ ಡಿಸಿಯ ಸ್ಮಿತ್‌ಸೋನಿಯನ್ ಸಂಸ್ಥೆಯಲ್ಲಿ ಕಲೆಗಳು ಮತ್ತು ಕೈಗಾರಿಕೆಗಳ ವಿಭಾಗ ರೂಪುಗೊಳ್ಳುವುದಕ್ಕೆ ನೆರವಾಗಿದೆ. 1882ರ ಜರ್ಮನ್ ಇಲೆಕ್ಟ್ರಿಕಲ್ ಪ್ರದರ್ಶನವು 1903–06ರಲ್ಲಿ ಮ್ಯೂನಿಕ್‌ನಲ್ಲಿ ಡ್ಯುಸ್ ವಸ್ತು ಸಂಗ್ರಹಾಲಯ ಪ್ರಾರಂಭಗೊಳ್ಳಲು ಅವಕಾಶ ಒದಗಿಸಿತು. 1937ರಲ್ಲಿ ಪ್ಯಾರಿಸ್‌ನಲ್ಲಿ ಪಲಾರಿಸ್ ಡೆ ಲ ಡೆಕೊವರ್ಟೆ ಸ್ಥಾಪನೆಯಾಗಲು 1937ರ ಅಂತಾರಾಷ್ಟ್ರೀಯ ಕೈಗಾರಿಕಾ ಪ್ರದರ್ಶನ ನೆರವು ನೀಡಿದೆ. ಸಿಯಾಟ್‌ಲ್(1962) ಮತ್ತು ನ್ಯೂಯಾರ್ಕ್(1964–65)ನ ಎರಡು ಜಾಗತಿಕ ಪ್ರದರ್ಶನಗಳು ಅನುಕ್ರಮವಾಗಿ ಪೆಸಿಫಿಕ್ ವಿಜ್ಞಾನ ಕೇಂದ್ರ ಮತ್ತು ನ್ಯೂಯಾರ್ಕ್‌ನ ವಿಜ್ಞಾನ ಸಭಾಂಗಣಕ್ಕೆ ವಿಜ್ಞಾನ ಪ್ರದರ್ಶನ ಮಂದಿರವನ್ನು ಒದಗಿಸಿವೆ.

ಯುರೋಪಿನ ಬೇರೆ ಕೆಲವು ಮುಖ್ಯ ವಿಜ್ಞಾನ ಸಂಗ್ರಹಾಲಯಗಳಲ್ಲಿ ಮಾಸ್ಕೊದ ಪಾಲಿಟೆಕ್ನಿಕ್ ವಸ್ತುಸಂಗ್ರಹಾಲಯವು ಒಂದು. ಅಟ್ಲಾಂಟಿಕ್‌ನಲ್ಲಿ ಮೊತ್ತಮೊದಲನೆಯ ಪ್ರಮುಖ ವಿಜ್ಞಾನ ಮತ್ತು ತಂತ್ರಜ್ಞಾನದ ವಸ್ತುಸಂಗ್ರಹಾಲಯ ಸ್ಥಾಪನೆಯಾದದ್ದು ಹೆನ್ರಿ ಫೋರ್ಡ್ ವಸ್ತುಸಂಗ್ರಹಾಲಯ. ಇದು 1929ರಲ್ಲಿ ಡೆರ್‌ಬಾರ್ನ್‌ನಲ್ಲಿ ಪ್ರಾರಂಭವಾಗಿದೆ. ಇದನ್ನು ಅನುಸರಿಸಿ 1930ರಲ್ಲಿ ನ್ಯೂಯಾರ್ಕ್‌ನ ವಿಜ್ಞಾನ ಮತ್ತು ಕೈಗಾರಿಕಾ ವಸ್ತುಸಂಗ್ರಹಾಲಯ (ಈಗ ಇದು ಅಸ್ತಿತ್ವದಲ್ಲಿ ಇಲ್ಲ) ಮತ್ತು 1933ರಲ್ಲಿ ಚಿಕಾಗೋದ ವಿಜ್ಞಾನ ಮತ್ತು ಕೈಗಾರಿಕಾ ವಸ್ತುಸಂಗ್ರಹಾಲಯ ಪ್ರಾರಂಭವಾದವು. ಜಪಾನಿನಲ್ಲಿ ಬಹಳ ಆಸಕ್ತಿದಾಯಕ ವಿಕಾಸ ನಡೆಯಿತು. 1877ರಲ್ಲಿ ಟೋಕಿಯೋದಲ್ಲಿ ಶಿಕ್ಷಣ ವಸ್ತುಸಂಗ್ರಹಾಲಯವಾಗಿ ಪ್ರಾರಂಭವಾಗಿದ್ದು, ಆನಂತರ ರಾಷ್ಟ್ರೀಯ ವಿಜ್ಞಾನ ವಸ್ತುಸಂಗ್ರಹಾಲಯವಾಯಿತು. ಇದು 1931ರಲ್ಲಿ ಪ್ರಾಕೃತಿಕ ಚರಿತ್ರೆ ವಸ್ತುಸಂಗ್ರಹಾಲಯವಾಗಿ ಪರಿವರ್ತನೆ ಹೊಂದಿತು. 1978ರಲ್ಲಿ ವ್ಯಾಪಕ ತಂತ್ರಜ್ಞಾನದ ಪ್ರದರ್ಶನವಸ್ತುಗಳನ್ನು ಇದಕ್ಕೆ ಸೇರಿಸಲಾಯಿತು. ಕ್ರಮೇಣ ವಿಜ್ಞಾನ ಕೇಂದ್ರಗಳಿಗೆ ಸೂಕ್ತವೆನಿಸುವ ಪರಸ್ಪರ ಪ್ರತಿಕ್ರಿಯಾತ್ಮಕ ಪ್ರದರ್ಶನವಸ್ತುಗಳ ಪ್ರದರ್ಶನ ಮಂದಿರವನ್ನು ತೆರೆಯಲಾಯಿತು. ಇದೇ ರೀತಿ ಲಾಸ್ ಏಂಜಲಿಸ್‌ನಲ್ಲಿದ್ದ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಯಾಲಿಫೋರ್ನಿಯಾ ವಸ್ತುಸಂಗ್ರಹಾಲಯವನ್ನು 1921ರಲ್ಲಿ ರಾಜ್ಯ ಕೃಷಿ ಪ್ರದರ್ಶನವಸ್ತುಗಳ ಸಭಾಂಗಣವಾಗಿ ಪ್ರಾರಂಭಿಸಲಾಯಿತು. ಇದು 1951ರಲ್ಲಿ ವಿಜ್ಞಾನ ಪ್ರದರ್ಶನಾಲಯವಾಗಿ ಬದಲಾವಣೆ ಹೊಂದಿತು. ಆಮೇಲೆ 1980ರಲ್ಲಿ ವ್ಯಾಪಕ ಪ್ರತಿಕ್ರಿಯಾತ್ಮಕ ಪ್ರದರ್ಶನವಸ್ತುಗಳನ್ನು ಇದಕ್ಕೆ ಸೇರಿಸಲಾಯಿತು. ಓಹಿಯೋದ ಕೊಲಂಬಸ್‌ನಲ್ಲಿರುವ ದಿ ಫ್ರಾಂಕಲಿನ್ ಕೌಂಟಿ ಹಿಸ್ಟಾರಿಕಲ್ ಸೊಸೈಟಿಯು ಪುಟ್ಟ ಚಾರಿತ್ರಿಕ

Digitised by Bharatavani, CIIL

ವಸ್ತುಸಂಗ್ರಹಾಲಯವನ್ನು 1964ರಲ್ಲಿ ಉನ್ನತದರ್ಜೆಯ ವಿಜ್ಞಾನ ಮತ್ತು ಕೈಗಾರಿಕಾ ಕೇಂದ್ರವಾಗಿ(ಸಿಐಎಸ್‌ಐ-ಸೆಂಟರ್ ಆಫ್ ಸಾಯನ್ಸ್ ಆಂಡ್ ಇಂಡಸ್ಟ್ರಿ) ಪರಿವರ್ತಿಸಿತು.

ಭಾರತದಲ್ಲಿ ದೆಹಲಿಯಲ್ಲಿರುವ ರಾಷ್ಟ್ರೀಯ ಭೌತಿಕ ಪ್ರಯೋಗಶಾಲೆಯ ಪುಟ್ಟ ಜಾಗದಲ್ಲಿ 1950ರ ಪ್ರಾರಂಭದಲ್ಲಿ ಒಂದು ಪುಟ್ಟ ವಿಜ್ಞಾನ ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸಲಾಯಿತು. ಸುಮಾರು ಇದೇ ಅವಧಿಯಲ್ಲಿ ರಾಜಸ್ಥಾನದ ಪಿಲಾನಿಯಲ್ಲಿ ಕೇಂದ್ರ ವಸ್ತುಸಂಗ್ರಹಾಲಯವನ್ನು(ಆನಂತರ ಇದಕ್ಕೆ ಬಿರ್ಲಾ ವಸ್ತುಸಂಗ್ರಹಾಲಯವೆಂದು ಕರೆಯಲಾಯಿತು) ಸ್ಥಾಪಿಸಲಾಯಿತು. ಇದರಲ್ಲಿ ಕಲೆ ಮತ್ತು ವಿಜ್ಞಾನದ ಪ್ರದರ್ಶನ ವಸ್ತುಗಳ ಮಿಶ್ರಣ ಇದೆ. 1956ರಲ್ಲಿ ಪಶ್ಚಿಮ ಬಂಗಾಲದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಾ. ಬಿಧನ್ ಚಂದ್ರ ರಾಯ್ ಅವರ ಆಣತಿಯ ಮೇರೆಗೆ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನೆಯ ಪರಿಷತ್ತು ಕಲ್ಕತ್ತಾದಲ್ಲಿ ಬಹು-ಶಿಸ್ತೀಯ ವಿಜ್ಞಾನ ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸುವ ನಿರ್ಧಾರವನ್ನು ಕೈಗೊಂಡಿತು. ಹೀಗೆ 1959ರಲ್ಲಿ ಬಿರ್ಲಾ ಇಂಡಸ್ಟ್ರಿಯಲ್ ಆಂಡ್ ಟೆಕ್ನಾಲಾಜಿಕಲ್ ಮ್ಯೂಸಿಯಂ(ಬಿಐಟಿಎಮ್) ಪ್ರಾರಂಭವಾಯಿತು. 1965ರಲ್ಲಿ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿರುವ ಇದೇ ರೀತಿಯ ವಸ್ತುಸಂಗ್ರಹಾಲಯವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಕೆಲವು ಸಮಯದವರೆಗೆ ಈ ವಸ್ತುಸಂಗ್ರಹಾಲಯವು ಗಮನವನ್ನು ಸೆಳೆಯುವಂತಿದ್ದು, ಆಮೇಲೆ ಎಂಭತ್ತರ ದಶಕದ ಬಳಿಕ ವಿಜ್ಞಾನ ವಸ್ತುಸಂಗ್ರಹಾಲಯ ಮತ್ತು ಕೇಂದ್ರಗಳ ದೊಡ್ಡ ಪ್ರಮಾಣದ ಸಂಖ್ಯಾಭಿವೃದ್ಧಿಯಾಯಿತು.

**ವಿಜ್ಞಾನ ಕೇಂದ್ರಗಳ ಪ್ರವೇಶ:**

ಪರಸ್ಪರ ಪ್ರಭಾವ ಬೀರುವ ಪ್ರದರ್ಶನ ವಸ್ತುಗಳ ಪರಿಕಲ್ಪನೆಯು ಪೂರ್ಣಪ್ರಮಾಣದ ಯಂತ್ರದ ಪ್ರತಿಕೃತಿಗಳು, ಕಾರ್ಯನಿರ್ವಹಣಾ ಮಾದರಿಗಳು, ವೈಜ್ಞಾನಿಕ ಪ್ರಾತ್ಯಕ್ಷಿಕೆಗಳು, ಗಣಿಯೊಳಗೆ ನಡೆಯುವುದು, ಮತ್ತು ಸಂದರ್ಶಕರು ಚಾಲನೆ ನೀಡಬಹುದಾದ ಪ್ರದರ್ಶನ ವಸ್ತುಗಳ ರೂಪದಲ್ಲಿ ಮ್ಯುನಿಕ್‌ನ ಡ್ಯೂಸ್ ವಸ್ತುಸಂಗ್ರಹಾಲಯದ (1903-1906) ಹೊಸ ಪ್ರದರ್ಶನವಸ್ತುಗಳ ತಾಂತ್ರಿಕತೆಗಳಲ್ಲಿ ಅಡಕವಾಗಿತ್ತು. ಈ ವಸ್ತುಸಂಗ್ರಹಾಲಯವು ಚಿಕಾಗೋವಿನ ವಿಜ್ಞಾನ ಮತ್ತು ಕೈಗಾರಿಕೆಯ ವಸ್ತುಸಂಗ್ರಹಾಲಯಕ್ಕೆ(1933) ಮಾದರಿಯಾಗಿತ್ತು. ಚಿಕಾಗೋ ವಸ್ತುಸಂಗ್ರಹಾಲಯದಲ್ಲಿ ಆಮೇಲೆ ಪ್ರದರ್ಶನ ವಸ್ತುಗಳಿಗೆ ಹೆಚ್ಚು ಒತ್ತನ್ನು ನೀಡದೆ, 1940ರಲ್ಲಿ ಕಾರ್ಯನಿರತ ಮಾದರಿಗಳನ್ನು ಬಹು ದೊಡ್ಡ ಸಂಖ್ಯೆಯಲ್ಲಿ ಬೆಳೆಸಿಕೊಳ್ಳಲಾಯಿತು. ಇದೇ ಸಮಯದಲ್ಲಿ ಪಲಾರಿಸ್ ಡೆ ಲ ಡೆಕೊವರ್ಟೆಯನ್ನು ಪ್ಯಾರಿಸ್‌ನಲ್ಲಿ 1937ರಲ್ಲಿ ಸ್ಥಾಪಿಸಲಾಯಿತು. ಪ್ರಾರಂಭದಲ್ಲಿ ಇದು ವೈಜ್ಞಾನಿಕ ಪ್ರಾತ್ಯಕ್ಷಿಕೆಗಳ ಶೈಕ್ಷಣಿಕ ಸಂಸ್ಥೆಯಾಗಿತ್ತು. ಜಪಾನಿನ ಮುನ್ಸಿಪಲ್ ವಿಜ್ಞಾನ ವಸ್ತುಸಂಗ್ರಹಾಲಯ(1962), ನೆದರಲ್ಯಾಂಡಿನ ಇಂದೊವೆನ್‌ನ ಎವೊಲೊನ್(1966), ಅಟ್ಲಾಂಟಾದ ಫರ್ನ್‌ಬ್ಯಾಂಕ್ ವಿಜ್ಞಾನ ಕೇಂದ್ರ(1967) ಮತ್ತು ಬರ್ಕಲೆಯ ಲಾರೆನ್ಸ್ ಹಾಲ್ ಆಫ್ ಸಾಯನ್ಸ್(1967) ಇವುಗಳನ್ನು ಚಾರಿತ್ರಿಕ ವಸ್ತುಗಳಿಗಿಂತ ಹೆಚ್ಚಾಗಿ ವಿಜ್ಞಾನದ ಶೈಕ್ಷಣಿಕ ಪ್ರದರ್ಶನ ವಸ್ತುಗಳಿಗೆ ಅಭಿವೃದ್ಧಿಪಡಿಸಲಾಯಿತು. 1969ರಲ್ಲಿ ಸನ್‌ಫ್ರಾನ್ಸಿಸ್ಕೊದಲ್ಲಿ ಎಕ್ಸ್‌ಪ್ಲೋರೇಟೋರಿಯಮ್ ಮತ್ತು ಕೆನಡಾದ ಟೊರೆಂಟೊದಲ್ಲಿ ಒಂಟೆರಿಯೊ ವಿಜ್ಞಾನ ಕೇಂದ್ರ ಪ್ರಾರಂಭಗೊಳ್ಳುವುದರೊಂದಿಗೆ ಬಹಳ ಮುಖ್ಯ ತಿರುವು ಸಂಭವಿಸಿತು. ಸಂದರ್ಶಕರಿಗೆ ಸನ್ನೆಕೋಲನ್ನು ಒತ್ತಲು, ಚಕ್ರವನ್ನು ತಿರುಗಿಸಲು, ಚೆಂಡನ್ನು ಉರುಳಿಸಲು, ಹಗ್ಗವನ್ನು ಎಳೆಯಲು, ರಂಧ್ರದೊಳಗೆ ವೀಕ್ಷಣೆ ನಡೆಸಲು ಮತ್ತು ಉಜ್ಜೀವಕ ಪ್ರದರ್ಶನ ವಸ್ತುಗಳೊಂದಿಗೆ ಮಾನಸಿಕವಾಗಿ ತೊಡಗಿಸಿಕೊಳ್ಳಲು ಪ್ರೋತ್ಸಾಹ ನೀಡಲಾಯಿತು. ಸಂದರ್ಶಕರ ಅಗಾಧ ಭಾಗವಹಿಸುವಿಕೆಯ ಕಾರಣವಾಗಿ ಈ ಹೊಸ ವರ್ಗದ ಈ ಪ್ರದರ್ಶನವಸ್ತುಗಳನ್ನು 'ಸಹಭಾಗಿ'ಗಳೆಂದು ಕರೆಯಲಾಯಿತು. ಅವುಗಳನ್ನು 'ಸ್ಪರ್ಶಿಸಬಲ್ಲ' ಅಥವಾ 'ಪರಸ್ಪರ ಪ್ರಭಾವಬೀರಬಲ್ಲ' ವಸ್ತುಗಳೆಂದು ಕೂಡ ಕರೆಯಲಾಯಿತು.

ಪರಸ್ಪರ ಕಾರ್ಯವೆಸಗುವ ಮತ್ತು ವ್ಯತಿರಿಕ್ತವಾಗಿ ಪರಸ್ಪರ ಕಾರ್ಯವೆಸಗದಿರುವ ಪ್ರಕ್ರಿಯೆಯು ಕಾರ್ಯಕ್ರಮವೊಂದರಲ್ಲಿ ತೊಡಗಿಸಿಕೊಂಡ ಎರಡು ಪಕ್ಷಗಳ ನಡುವಿನ ಸಂವಹನದ ರೀತಿಯನ್ನು ಆಧರಿಸಿ ಇರುತ್ತದೆ. ವಿಜ್ಞಾನ ಕೇಂದ್ರದ ಪ್ರದರ್ಶನ ವಸ್ತುಗಳಲ್ಲಿ ಪರಸ್ಪರ ಕಾರ್ಯವೆಸಗುವ ಪ್ರಕ್ರಿಯೆಯು ಈ ಕೆಳಗಿನ ವಿಧಾನಗಳನ್ನು ಒಳಗೊಂಡಿರುತ್ತದೆ: 1. ದ್ವಿಪಕ್ಷೀಯ ಸಂವಹನ, ಮತ್ತು/ಅಥವಾ 2. ಆಯ್ಕೆಗಳ ಬಾಹುಳ್ಯ, ದೃಗ್ಗೋಚರ ಅಥವಾ ಸ್ಪರ್ಶಜ್ಞಾನದ ಆದರೆ ಕಾರ್ಯನಿರತವಲ್ಲದ ಲಕ್ಷಣವಿರುವ ಪ್ರದರ್ಶನ ವಸ್ತುಗಳು 'ಜಡ/ನಿಷ್ಕ್ರಿಯ ಪ್ರದರ್ಶನ ವಸ್ತು'ಗಳಾಗಿರುತ್ತವೆ. ಇವುಗಳನ್ನು ಸಂಗ್ರಹ-ಆಧಾರಿತ ವಿಜ್ಞಾನ ವಸ್ತುಸಂಗ್ರಹಾಲಯಗಳಲ್ಲಿ ಕಾಣಬಹುದು. 'ಕ್ರಿಯಾತ್ಮಕ ಪ್ರದರ್ಶನ ವಸ್ತು'ಗಳೆಂದರೆ ಚಲನೆ ಅಥವಾ ಕಾರ್ಯವನ್ನು ನಡೆಸಬಲ್ಲವುಗಳಾಗಿವೆ. ಸಾಮಾನ್ಯವಾಗಿ ಗುಂಡಿ ಒತ್ತುವ ಮೂಲಕ ಪ್ರತಿಬಾರಿಯೂ ಇವುಗಳನ್ನು ಒಂದೇ ರೀತಿಯಿಂದ ನಡೆಸಿಕೊಳ್ಳಬಹುದಾಗಿದೆ. ಇಂತಹ ಪ್ರದರ್ಶನ ವಸ್ತುಗಳನ್ನು ಮ್ಯುನಿಕ್ ಮತ್ತು ಚಿಕಾಗೋದ ವಸ್ತುಸಂಗ್ರಹಾಲಯಗಳಲ್ಲಿ ಮೊದಲ ಬಾರಿ ರೂಪಿಸಲಾಯಿತು. ಸಂದರ್ಶಕರು ಕಾರ್ಯಾಚರಣೆ ನಡೆಸುವುದರ ಮೂಲಕ ಸಂದರ್ಶಕ-ಪ್ರದರ್ಶನ ವಸ್ತುಗಳ ನಡುವೆ ಸಂಪರ್ಕ ಬೆಳೆಸುವ ಉದ್ದೇಶದಲ್ಲಿ ರೂಪುಗೊಂಡಿರುವಂತಹವುಗಳೇ 'ಪರಸ್ಪರ ಕಾರ್ಯವೆಸಗುವ' ಪ್ರದರ್ಶನ ವಸ್ತುಗಳು. ಸಾಮಾನ್ಯವಾಗಿ ಇವು ಸ್ಪರ್ಶಕಾರಿ ವಸ್ತುಗಳಾಗಿರುತ್ತವೆ. ಶತಮಾನದ ಆರಂಭದಲ್ಲಿ 'ಮಾನಸಿಕವಾಗಿ ತೊಡಗಿಕೊಳ್ಳುವ' ಪ್ರದರ್ಶನ ವಸ್ತುಗಳ ಪರಿಕಲ್ಪನೆಯನ್ನು ಬೆಳೆಸಿಕೊಳ್ಳಲಾಯಿತು. ಇವುಗಳು ಸ್ಪರ್ಶಕಾರಿಯಾಗಿರಬಹುದು ಅಥವಾ ಸ್ಪರ್ಶಕಾರಿಯಾಗಿಲ್ಲದೆ ಇರಬಹುದು. ಇಲ್ಲಿ ಸಂದರ್ಶಕರು ತಮ್ಮಷ್ಟಕ್ಕೆ ತಾವೇ ಕಾರ್ಯವಿಧಾನವನ್ನು ಕಂಡುಕೊಳ್ಳುತ್ತಾರೆ ಅಥವಾ ಕೃತಕವಾದ ಸಂದರ್ಭವೊಂದರಲ್ಲಿ ಕಾಲ ಮತ್ತು ಅವಕಾಶದ ತಡೆಗಳನ್ನು ದಾಟುತ್ತಾರೆ.

ಸ್ಪರ್ಶಕಾರಿ ವಿಜ್ಞಾನ ಕೇಂದ್ರಗಳ ಪರಿಕಲ್ಪನೆಯು ಅತಿ

Digitised by Bharatavani, CIIL

ಶೀಘ್ರದಲ್ಲಿ ಜಗತ್ತಿನ ಎಲ್ಲೆಡೆ ಹರಡಿಕೊಂಡಿತು. ಸನ್‌ಫ್ರಾನ್ಸಿಸ್ಕೋದ ಎಕ್ಸ್‌ಪ್ಲೊರೆಟೋರಿಯಮ್‌ದ ಹೆಸರನ್ನು ಅನುಸರಿಸಿ ಅನೇಕ ವಿಜ್ಞಾನ ಕೇಂದ್ರಗಳು ಆಸಕ್ತಿ ಹುಟ್ಟಿಸುವ ಹೆಸರುಗಳನ್ನು ಬಳಸಲಾರಂಭಿಸಿದವು. ಉದಾಹರಣೆಗೆ ಇಂದೊವೆನ್‌ನ ಎವೊಲೊನ್, ಲಂಡನ್ ವಿಜ್ಞಾನ ವಸ್ತುಸಂಗ್ರಹಾಲಯದ ಲಾಂಚ್ ಪ್ಯಾಡ್, ಕಾರ್ಡಿಫ್‌ನ ಟೆಕ್ನಿಕ್ವೆಸ್ಟ್, ಬ್ರಿಸ್ಟಾಲ್‌ನ ಎಕ್ಸ್‌ಪ್ಲೊರೆಟರಿ, ಡೆನ್‌ಮಾರ್ಕ್‌ನ ಎಕ್ಸ್‌ಪರಿಮೆಂಟೇರಿಯಮ್, ಬೆಲ್ಜಿಯಮ್‌ನ ಟೆಕ್ನೊಪೊಲಿಸ್, ಫಿನ್‌ಲ್ಯಾಂಡಿನ ಹುರೆಕಾ, ಮ್ಯಾಕ್ಸಿಕೊದ ಯೂನಿವರ್ಸಮ್, ಅರ್ಕೊನಿನ ಇನ್‌ವೆಂಚರ್ ಪ್ಲೇಸ್ ಮತ್ತು ಕ್ಯಾನ್‌ಬೆರಾದ ಕ್ವೆಸ್ಟಾಕಾನ್. 1980ರಲ್ಲಿ ಸಿಟೆ ಡೆಸ್ ಸೈಯನ್ಸಸ್ ಎಟ್ ದೆ ಐ'ಇಂಡಸ್ಟ್ರಿ ಹೆಸರಿನ ಬಹುದೊಡ್ಡ ವಿಜ್ಞಾನ ಕೇಂದ್ರ ಪ್ಯಾರಿಸ್‌ನಲ್ಲಿ ತಲೆ ಎತ್ತಿತು. ಯುಎಸ್‌ಎಯು ದೊಡ್ಡ ಸಂಖ್ಯೆಯ ವಿಜ್ಞಾನ ಕೇಂದ್ರಗಳ ತವರೂರಾಗಿದ್ದರೂ ಕಳೆದ ಕೆಲವು ವರ್ಷಗಳಲ್ಲಿ ಬಹಳ ಮುಖ್ಯವಾದ ವಿಜ್ಞಾನ ಕೇಂದ್ರಗಳು ಬ್ಯಾಂಕಾಕ್, ಬೀಜಿಂಗ್, ಬ್ರಿಸ್‌ಬೇನ್, ಬುನೊಸ್, ಏರ್ಸ್, ಕೈರೊ, ಇಸ್ರೇಲ್, ಜಕರ್ತಾ, ಜೊಹಾನ್ಸ್‌ಬರ್ಗ್, ಕೌಲಾಲಂಪೂರ್, ಮೆಲ್ಬೋರ್ನ್, ಮ್ಯಾಕ್ಸಿಕೊ ಸಿಟಿ, ನಗೊಯಾ, ಸಾವೊ ಪೊಲೊ, ಸಿಯೊಲ್, ಸಿಂಗಾಪೂರ್, ಥೈವಾನ್, ಸುಕೊಬಾ, ಟುನಿಸ್ ಮತ್ತು ಇತರ ಪ್ರದೇಶಗಳಲ್ಲಿ ಪ್ರಾರಂಭವಾಗಿವೆ.

**ಭಾರತದಲ್ಲಿ ಜಾಲ:**

ಭಾರತದಲ್ಲಿ ವಿಜ್ಞಾನ ವಸ್ತುಸಂಗ್ರಹಾಲಯಗಳು ಈ ಪರಿವರ್ತನೆಯನ್ನು ತಾತ್ವಿಕ ವಿಕಾಸವಾದದ ಕಾರ್ಯವಿಧಾನದಲ್ಲಿ ನಡೆಸಿಕೊಂಡು ಬಂದಿವೆ. ಕೊಲ್ಕತ್ತಾದ ಬಿಐಟಿಎಮ್ ಮ್ಯುನಿಕ್‌ನ ಡ್ಯುಸ್ ವಸ್ತುಸಂಗ್ರಹಾಲಯದಿಂದ ಪ್ರೇರಣೆಯನ್ನು ಪಡೆದಿದೆ. ಆದುದರಿಂದ ಚಾರಿತ್ರಿಕ ವಸ್ತುಗಳು ಮತ್ತು ಕಾರ್ಯನಿರತ ಮಾದರಿಗಳೊಂದಿಗೆ ಈ ವಸ್ತುಸಂಗ್ರಹಾಲಯವನ್ನು 1959ರಲ್ಲಿ ಸ್ಥಾಪಿಸಲಾಯಿತು. ನಂತರದ ವಸ್ತುಸಂಗ್ರಹಾಲಯವಾದ ಬೆಂಗಳೂರಿನ ವಿಐಟಿಎಮ್‌ನ್ನು 1965ರಲ್ಲಿ ಇದೇ ಮಾದರಿಯಲ್ಲಿ ಸಾರ್ವಜನಿಕರಿಗಾಗಿ ಪ್ರಾರಂಭಿಸಲಾಯಿತು. 1974ರಲ್ಲಿ ಯೋಜನಾ ಆಯೋಗದ ಕಾರ್ಯಪಡೆಯು ದೂರದರ್ಶಿತ್ವದ ಒಂದು ಶಿಫಾರಸನ್ನು ಮಾಡಿತು. ಕಾರ್ಯಪಡೆಯು ಸಾಮಾಜಿಕ ಪರಿವರ್ತನೆಗೆ ಅಗತ್ಯವಾಗಿ ಬೇಕಾಗಿರುವ ವೈಜ್ಞಾನಿಕ ಮನೋಧರ್ಮವನ್ನು ಸೃಷ್ಟಿಸುವ ಬಹುಮುಖ್ಯ ವೇದಿಕೆಯಾಗಿ ವಿಜ್ಞಾನ ವಸ್ತುಸಂಗ್ರಹಾಲಯಗಳನ್ನು ಪರಿಗಣಿಸಿ, ದೇಶದಾದ್ಯಂತ ನಾಲ್ಕು ಅಂತಸ್ತುಗಳ ವಿಜ್ಞಾನ ವಸ್ತುಸಂಗ್ರಹಾಲಯಗಳ ಸರಪಣಿಯನ್ನು ಅಭಿವೃದ್ಧಿಪಡಿಸುವ ಶಿಫಾರಸನ್ನು ಮುಂದಿಟ್ಟಿತು: ನಾಲ್ಕು ಮಹಾನಗರಗಳಲ್ಲಿ ನಾಲ್ಕು ಬಹುದೊಡ್ಡ ಆಕಾರದ ವಿಜ್ಞಾನ ಸಂಗ್ರಹಾಲಯಗಳು, ಆಯ್ದ ರಾಜ್ಯಗಳ ರಾಜಧಾನಿಗಳಲ್ಲಿ ಮಧ್ಯಮ ಗಾತ್ರದ ಆರು ವಿಜ್ಞಾನ ಸಂಗ್ರಹಾಲಯಗಳು, ಇಪ್ಪತ್ತು ಜಿಲ್ಲಾ ವಿಜ್ಞಾನ ಸಂಗ್ರಹಾಲಯಗಳು ಮತ್ತು ದೇಶದ ಒಳಭಾಗವನ್ನು ಪ್ರವೇಶಿಸುವಂತಹ ಸಂಚಾಲಿತ ವಿಜ್ಞಾನ ಪ್ರದರ್ಶನದ ವಾಹನಗಳ ಪಡೆ(ಬಸ್). ಈ ಕಾರ್ಯಕ್ರಮದ ಸಹಯೋಗ ಮತ್ತು ಅನುಷ್ಠಾನಕ್ಕಾಗಿ ಕೇಂದ್ರದ ಆಶ್ರಯ ಪಡೆದ ಸಂಸ್ಥೆಯನ್ನು ಸೃಷ್ಟಿಸುವಂತೆ ಕಾರ್ಯಪಡೆ ಶಿಫಾರಸು ಮಾಡಿದೆ.

ಇದರ ಫಲವಾಗಿ 1978ರಲ್ಲಿ ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ಪರಿಷತ್ತನ್ನು(ಎನ್‌ಸಿಎಸ್‌ಎಮ್)ಸ್ಥಾಪಿಸಲಾಯಿತು. ಕಾರ್ಯಪಡೆಯ ಶಿಫಾರಸುಗಳನ್ನು ಅನುಷ್ಠಾನಗೊಳಿಸುವುದು ಇದರ ಜವಾಬ್ದಾರಿಯಾಗಿರುತ್ತದೆ. ಆಗ ಸನ್‌ಫ್ರಾನ್ಸಿಸ್ಕೊ ಮತ್ತು ಟೊರೆಂಟೊಗಳಲ್ಲಿ ಸ್ಥಾಪಿಸಲಾದ 'ಪರಸ್ಪರ ಪ್ರಭಾವ ಬೀರುವ' ವಿಜ್ಞಾನ ಕೇಂದ್ರಗಳ ಪ್ರಭಾವವನ್ನು ಗುರುತಿಸಿದ ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ಪರಿಷತ್ತು, ಇಡೀ ದೇಶದಾದ್ಯಂತ ಈ ರೀತಿಯ ವಿಜ್ಞಾನ ಕೇಂದ್ರಗಳನ್ನು ಸ್ಥಳೀಯ ಮಾದರಿಯಲ್ಲಿ ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ ಪ್ರದರ್ಶನ ವಸ್ತುಗಳೊಂದಿಗೆ ಪ್ರಾರಂಭಿಸುವ ವ್ಯಾಪಕ ಪ್ರಚಾರವನ್ನು ನಡೆಸಿತು. ಆನಂತರದ ಎರಡು ದಶಕಗಳಲ್ಲಿ ಈಗಾಗಲೇ ಕಲ್ಕತ್ತಾ ಮತ್ತು ಬೆಂಗಳೂರುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿಜ್ಞಾನ ಕೇಂದ್ರಗಳೊಂದಿಗೆ ರಾಷ್ಟ್ರಮಟ್ಟದ ಎರಡು ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅವುಗಳೆಂದರೆ ಬಾಂಬೆಯ ನೆಹರೂ ಸಾಯನ್ಸ್ ಸೆಂಟರ್ ಮತ್ತು ದೆಹಲಿಯ ನ್ಯಾಶನಲ್ ಸಾಯನ್ಸ್ ಸೆಂಟರ್. ಒಂಭತ್ತು ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಪಾಟ್ನಾ, ಭುವನೇಶ್ವರ, ಸಿಲಿಗುರಿ, ಗೌಹಾತಿ, ಲಕ್ನೋ, ಭೋಪಾಲ, ನಾಗಪುರ, ತಿರುಪತಿ ಮತ್ತು ಕ್ಯಾಲಿಕಟ್(ಕೊಝಿಕೊಡ್)ಗಳಲ್ಲಿ ಸ್ಥಾಪಿಸಲಾಯಿತು. ಎಂಟು ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಪುರುಲಿಯ(ಪಶ್ಚಿಮ ಬಂಗಾಲ), ಗುಲಬರ್ಗಾ(ಕರ್ನಾಟಕ), ಥರಮ್‌ಪುರ್(ಗುಜರಾತ್), ತಿರುನಲ್‌ವೆಲಿ(ತಮಿಳುನಾಡು),ದೆನ್‌ಕ'ನಲ್(ಒರಿಸ್ಸಾ), ಬರ್ದಮನ್(ಪಶ್ಚಿಮ ಬಂಗಾಲ), ದಿಘಾ(ಪಶ್ಚಿಮ ಬಂಗಾಲ), ಮತ್ತು ಗೋವಾದಲ್ಲಿ ಸ್ಥಾಪಿಸಲಾಯಿತು. ಎರಡು ಚಿಕ್ಕ ವಿಜ್ಞಾನ ಚಟುವಟಿಕೆ ಕೇಂದ್ರಗಳನ್ನು ಗ್ವಾಲಿಯರ್(ಮಧ್ಯ ಪ್ರದೇಶ) ಮತ್ತು ಸಿರ್ಸಾ(ಹರಿಯಾಣ)ದಲ್ಲಿ, ಮತ್ತು ಸಾಯನ್ಸ್ ಪಾರ್ಕ್‌ನ್ನು ಕಪಿಲೇಶ್(ಒರಿಸ್ಸಾ)ದಲ್ಲಿ ಪ್ರಾರಂಭಿಸಲಾಯಿತು.

ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ಪರಿಷತ್ತು 1997ರಲ್ಲಿ ಕೊಲ್ಕತ್ತಾದಲ್ಲಿ ಪ್ರಥಮ ಬೃಹತ್ ವಿಜ್ಞಾನ ನಗರವನ್ನು ಅಭಿವೃದ್ಧಿಪಡಿಸಿತು. ಇದು ಆಯಾ ರಾಜ್ಯದ ಸರಕಾರಗಳ ನೆರವಿನಿಂದ ಪ್ರಾರಂಭವಾಗಲಿರುವ ಕಪುರ್ತಲ(ಪಂಜಾಬ್) ಮತ್ತು ಅಹಮದಾಬಾದ್(ಗುಜರಾತ್) ಮತ್ತು ಇತರ ಪ್ರದೇಶಗಳ ವಿಜ್ಞಾನ ನಗರಗಳಿಗೆ ಮಾದರಿಯಾಯಿತು. ಮಾಸ್ಕೊದ ಬ್ಯಾಟಲ್ ಆಫ್ ಬೊರೊಡಿನೊ ಪನೊರಮಾ ಮ್ಯೂಸಿಯಮ್‌ನ ಮಾದರಿಯಲ್ಲಿ ಸರ್ವತೋಮುಖ ದೃಷ್ಟಿಯ ವಸ್ತುಸಂಗ್ರಹಾಲಯವೊಂದನ್ನು 2001ರಲ್ಲಿ ಪ್ರಾರಂಭಿಸಲಾಯಿತು. ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ಪರಿಷತ್ತಿನ ಕೇಂದ್ರ ಕಾರ್ಯಾಲಯದಿಂದ ರಾಷ್ಟ್ರವ್ಯಾಪಿ ಚಟುವಟಿಕೆಯನ್ನು ಯೋಜಿಸಿ, ವಿನ್ಯಾಸಗೊಳಿಸಿ ಸಂಯೋಜಿಸಲಾಯಿತು. ವಿಜ್ಞಾನ ಸಂವಹನ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯ ಸಂಶೋಧನೆಗಾಗಿ ಪರಿಷತ್ತಿನ ಕೇಂದ್ರೀಯ ಸಂಶೋಧನೆ ಮತ್ತು ತರಬೇತಿ ಪ್ರಯೋಗಾಲಯವು ಕೊಲ್ಕತ್ತಾದಲ್ಲಿ ಕಾರ್ಯನಿರ್ವಹಿಸುತ್ತಿದೆ.

Digitised by Bharatavani, CIIL

ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ಪರಿಷತ್ತಿನ ವ್ಯಾಪ್ತಿಯಿಂದ ಹೊರಗೆ ಸಮಾನಾಂತರ ಬೆಳವಣಿಗೆಗಳು ಕೂಡ ನಡೆದಿವೆ. ತಮಿಳುನಾಡು ಸರಕಾರವು ಬಿ.ಎಮ್. ಬಿರ್ಲಾ ಪ್ಲಾನೆಟೇರಿಯಮ್(1988) ಮತ್ತು ಪೆರಿಯಾರ್ ಸಾಯನ್ಸ್ ಆಂಡ್ ಟೆಕ್ನಾಲಾಜಿ ಕೇಂದ್ರ(1990)ವನ್ನು ಚೆನ್ನೈನಲ್ಲಿ ಮತ್ತು ಅಣ್ಣಾ ಸಾಯನ್ಸ್ ಸೆಂಟರ್ ಪ್ಲಾನೆಟೇರಿಯಮ್(1999)ನ್ನು ತಿರುಚಿರಾಪಳ್ಳಿಯಲ್ಲಿ ಸ್ಥಾಪಿಸಿದೆ. ಕೇರಳ ಸರಕಾರವೂ ತಿರುವನಂತಪುರದಲ್ಲಿ ವಿಜ್ಞಾನ ಕೇಂದ್ರವನ್ನು ಪ್ರಾರಂಭಿಸಿದೆ. ಖಾಸಗಿ ಆಶ್ರಯದಲ್ಲಿ ಹೈದ್ರಾಬಾದ್, ಜಯಪುರ ಮತ್ತು ಪಿಲಾನಿಯನ್ನು ಮೂರು ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಬೋಧನಾ ಸಾಮಗ್ರಿಗಳ ಅಭಿವೃದ್ಧಿ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಎರಡು ವಿಜ್ಞಾನ ಕೇಂದ್ರಗಳೆಂದರೆ ಅಹಮದಾಬಾದಿನ ವಿಕ್ರಮ್ ಸಾರಾಭಾಯಿ ಕಮ್ಯುನಿಟಿ ಸಾಯನ್ಸ್ ಸೆಂಟರ್ ಮತ್ತು ಮುಂಬೈಯಲ್ಲಿರುವ ಹೋಮಿ ಬಾಬಾ ಸೆಂಟರ್ ಫಾರ್ ಸಾಯನ್ಸ್ ಎಡ್ಯುಕೇಶನ್.

1814ರಲ್ಲಿ ಸ್ಥಾಪಿತವಾಗಿರುವ ಕೊಲ್ಕತ್ತಾದ ಇಂಡಿಯನ್ ಮ್ಯೂಸಿಯಂನಲ್ಲಿ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭೂಗರ್ಭಶಾಸ್ತ್ರ ಮತ್ತು ಮಾನವ ಶಾಸ್ತ್ರಗಳ ಪ್ರದರ್ಶನ ಮಂದಿರಗಳು ಇವೆ. ಪಶ್ಚಿಮ ಭಾರತದಲ್ಲಿರುವ ಮುಂಬೈನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ಮತ್ತು ಚೆನ್ನೈನ ಸರಕಾರಿ ವಸ್ತುಸಂಗ್ರಹಾಲಯಗಳಲ್ಲಿ ಪ್ರಾಣಿಶಾಸ್ತ್ರದ ಪ್ರದರ್ಶನ ಮಂದಿರಗಳು ಇವೆ. ಡಾರ್ಜಿಲಿಂಗ್‌ನಲ್ಲಿ ಪುಟ್ಟದಾದ ಒಂದು ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯವಿದೆ. 1972ರಲ್ಲಿ ಸ್ವಾತಂತ್ರ್ಯದ 25ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಭಾರತ ಸರಕಾರವು ಭೋಪಾಲದಲ್ಲಿ ನ್ಯಾಶನಲ್ ಮ್ಯೂಸಿಯಂ ಆಫ್ ಮ್ಯಾನ್ ಮತ್ತು ನವದೆಹಲಿಯಲ್ಲಿ ನ್ಯಾಶನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿಯನ್ನು(ಎನ್‌ಎಮ್‌ಎನ್‌ಹೆಚ್) ಪ್ರಾರಂಭಿಸಲು ಯೋಜಿಸಿತು. 1977ರಲ್ಲಿ ಸಾರ್ವಜನಿಕರಿಗಾಗಿ ತೆರೆಯಲ್ಪಟ್ಟ ಎನ್‌ಎಮ್‌ಎನ್‌ಹೆಚ್ ನಲ್ಲಿ ಅತ್ಯಂತ ಉನ್ನತ ಮಟ್ಟದ ಪ್ರದರ್ಶನ ವಸ್ತುಗಳಿವೆ. ಇದರ ನಂತರ ಪ್ರಾಕೃತಿಕ ಚರಿತ್ರೆಯ ಕುರಿತಾದ ಮೂರು ಪ್ರಾದೇಶಿಕ ವಸ್ತುಸಂಗ್ರಹಾಲಯಗಳನ್ನು ಮೈಸೂರು(1995), ಭೋಪಾಲ(1997) ಮತ್ತು ಭುವನೇಶ್ವರ(1998)ಗಳಲ್ಲಿ ಸ್ಥಾಪಿಸಲಾಯಿತು.

1972ರಲ್ಲಿ ಕೊಲ್ಕತ್ತಾದಲ್ಲಿ ಬಿಐಟಿಎಮ್ ಸಾರಿಗೆ ಪ್ರದರ್ಶನ ಮಂದಿರವನ್ನು ಪ್ರಾರಂಭಿಸಿತಾದರೂ ಪರಿಪೂರ್ಣ ರೀತಿಯ ಸಾರಿಗೆ ವಸ್ತುಸಂಗ್ರಹಾಲಯ ಕಾಣಿಸಿಕೊಂಡದ್ದು 1977ರಲ್ಲಿ, ರೈಲ್ವೇ ಮಂತ್ರಾಲಯದಿಂದ ದೆಹಲಿಯಲ್ಲಿ ರಾಷ್ಟ್ರೀಯ ರೈಲ್ವೇ ವಸ್ತುಸಂಗ್ರಹಾಲಯ ಸ್ಥಾಪನೆಯಾದಾಗಲೇ. ಮುಂಬೈ ಸಮೀಪದ ನ್ಹವಾದಲ್ಲಿ ಮೊದಲ ಬಾರಿಗೆ ಕಡಲು ಸಂಬಂಧಿ ವಸ್ತುಸಂಗ್ರಹಾಲಯವನ್ನು ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿ ಆಮೇಲೆ ಇದನ್ನು ವಿಸ್ತರಿಸಿಕೊಳ್ಳಲಾಯಿತು.

1962ರಲ್ಲಿ ಕೊಲ್ಕತ್ತಾದ ಬಿರ್ಲಾ ತಾರಾಲಯದಲ್ಲಿ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಯಿತು. ಮುಂಬೈನಲ್ಲಿ 1978ರಲ್ಲಿ ನೆಹರು ತಾರಾಲಯ ಪ್ರಾರಂಭವಾಯಿತು. ತಾರಾಲಯಗಳು ರಾಜ್ಯ ಸರಕಾರಗಳು, ನಗರಸಭೆಗಳು, ವಿಶ್ವವಿದ್ಯಾಲಯಗಳು ಅಥವಾ ಖಾಸಗಿ ಪ್ರತಿಷ್ಠಾನಗಳ ಆಶ್ರಯದಲ್ಲಿ ಅಹಮದಾಬಾದ್, ಬೆಂಗಳೂರು, ಬರ್ದಮನ್, ಭುವನೇಶ್ವರ್, ಗೌಹಾತಿ, ಲಕ್ನೋ, ಲುಧಿಯಾನಾ, ಮಣಿಪಾಲ, ನವದೆಹಲಿ, ಪಾಟ್ನಾ, ರಾಜಕೋಟ್, ವಡೋದರ, ವಾರಂಗಲ್ ಹಾಗೂ ಕೆಲವು ಸಣ್ಣಪುಟ್ಟ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೊಝಿಕೋಡ್, ಚೆನ್ನೈ, ಹೈದ್ರಾಬಾದ್, ಜಯಪುರ, ನಾಗಪುರ, ತಿರುಚಿರಾಪಳ್ಳಿ ಮತ್ತು ತಿರುವನಂತಪುರದ ತಾರಾಲಯಗಳು ಆಯಾ ಪ್ರದೇಶದ ಪ್ರಾದೇಶಿಕ ವಿಜ್ಞಾನ ಕೇಂದ್ರಗಳೊಂದಿಗೆ ಸಂಪರ್ಕ ಹೊಂದಿವೆ.

**ಪ್ರದರ್ಶನ ವಸ್ತುಗಳು:**

ಪ್ರಾರಂಭಿಕ ವರ್ಷಗಳಲ್ಲಿ, ಸಾಮಾನ್ಯವಾಗಿ ವಿಜ್ಞಾನ ವಸ್ತುಸಂಗ್ರಹಾಲಯಗಳನ್ನು ಕುರೂಪಿ ಬಾತುಕೋಳಿಯಂತೆ ಪರಿಗಣಿಸಲಾಗುತ್ತಿತ್ತು. ಏಕೆಂದರೆ ಬೇರೆ ವಸ್ತುಸಂಗ್ರಹಾಲಯಗಳಲ್ಲಿ ಇರುವ ಸೌಂದರ್ಯದ ಖನಿಗಳಾದ ವರ್ಣಚಿತ್ರಗಳು ಮತ್ತು ಅಲಂಕರಣಾ ಕಲೆಯ ವಸ್ತುಗಳಿಗೆ ಹೋಲಿಸಿದರೆ, ಇಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಬಹುಪಾಲು ವಸ್ತುಗಳು ಕೀಲಿಗಳು ಮತ್ತು ಮೊಳೆಗಳನ್ನೊಳಗೊಂಡಿರುವ ಹಳೆಯ ಯಂತ್ರಗಳು ಮತ್ತು ಯಾಂತ್ರಿಕ ಕೌಶಲ್ಯಗಳಾಗಿರುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ಉನ್ನತ ತಾಂತ್ರಿಕ ಸಂವಹನದ ಪ್ರಯತ್ನಗಳಿಂದಾಗಿ ಪರಸ್ಪರ ಪ್ರಭಾವ ಬೀರುವ ಪ್ರದರ್ಶನ ವಸ್ತುಗಳಿಂದಾಗಿ ವಿಜ್ಞಾನ ವಸ್ತು ಸಂಗ್ರಹಾಲಯಗಳು ಕುರೂಪಿ ಬಾತುಕೋಳಿಯಿಂದ ಸುಂದರವಾದ ಹಂಸವಾಗಿ ಮಾರ್ಪಟ್ಟು ದೊಡ್ಡ ಸಂಖ್ಯೆಯ ಸಂದರ್ಶಕರನ್ನು ಆಕರ್ಷಿಸುತ್ತಿವೆ. ಕೈಯಿಂದ ಸ್ಪರ್ಶಿಸಬಹುದಾದ ವಸ್ತುಗಳು ಆಟದ ಬಯಲಿನಂತಹ ಪರಿಸರವನ್ನು ಸೃಷ್ಟಿಸಿವೆ.

ವಸ್ತುಸಂಗ್ರಹಾಲಯದಲ್ಲಿ ಮಕ್ಕಳು ಉತ್ಸಾಹದಿಂದ ಜಿಗಿಯುತ್ತಾರೆ, ಚಪ್ಪಾಳೆ ತಟ್ಟುತ್ತಾರೆ. ವಿಶೇಷವಾಗಿ ವಿನ್ಯಾಸಗೊಳಿಸಿರುವ ವಸ್ತುಗಳು ಮೂಲತಃ ಶೈಕ್ಷಣಿಕ ಲಕ್ಷಣಗಳನ್ನು ಹೊಂದಿವೆ. ಐಸಿಓಎಮ್‌ನ ವಸ್ತುಸಂಗ್ರಹಾಲಯದ ವ್ಯಾಖ್ಯಾನದಲ್ಲಿ ಸೂಚಿಸಿದ ಹಾಗೆ ಇಲ್ಲಿ ದೊರೆಯುವ ಶಿಕ್ಷಣವು ಆನಂದದಾಯಕವಾಗಿರುತ್ತದೆ. ಖುಷಿಯ ಮೂಲಕ ಕಲಿಯಿರಿ ಎನ್ನುವುದು ವಿಜ್ಞಾನ ವಸ್ತುಸಂಗ್ರಹಾಲಯದ ಧ್ಯೇಯವಾಗಿರುತ್ತದೆ. ಇದಕ್ಕೆ ಹೊಸದಾಗಿ 'Edutainment' ಎಂಬ ಪದವನ್ನು ಕೂಡ ಸೇರಿಸಲಾಗಿದೆ.

ಸಂಗ್ರಹ ಆಧಾರಿತ ವಿಜ್ಞಾನ ವಸ್ತುಸಂಗ್ರಹಾಲಯಗಳು ಚಾರಿತ್ರಿಕ ವಸ್ತುಗಳಿಂದ ಪ್ರಾರಂಭವಾಗಿ? ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಪ್ರತಿಕೃತಿಗಳು, ನಿಜವಾದ ಅಳತೆಗಳ ಕ್ರಮಾಣಕ್ಕೆ ಅನುಗುಣವಾಗಿ ವರ್ಧಿಸಿದ ಅಥವಾ ಚಿಕ್ಕದಾದ ಅಥವಾ ವಸ್ತುವಿನ ಸಣ್ಣ ಅಥವಾ ದೊಡ್ಡ ಕಿರು ಮಾದರಿಗಳು ಮತ್ತು ಕತ್ತರಿಸಿದ ಭಾಗಗಳು ಕಾಣಿಸಿಕೊಳ್ಳಲಾರಂಭಿಸಿವೆ.

ಸಾಂಪ್ರದಾಯಿಕ ಸ್ಲೈಡ್ ಮತ್ತು ಫಿಲ್ಮ ಪ್ರೊಜೆಕ್ಟರ್‌ಗಳನ್ನು ವಿಡಿಯೋ ಕ್ಯಾಸೆಟ್ ಪ್ಲೇಯರ್‌ಗಳು ಸ್ಥಾನಾಂತರಗೊಳಿಸಿವೆ. ನಂತರದ ದಿನಗಳಲ್ಲಿ ವಿಡಿಯೋ ಕಾಂಪೆಕ್ಟ್ ಡಿಸ್ಕ್‌ಗಳು, ಡಿಜಿಟಲ್ ವಿಡಿಯೋ ಡಿಸ್ಕ್‌ಗಳು,

Digitised by Bharatavani, CIIL

ಮತ್ತು ಗಣಕಯಂತ್ರ ಬಹು–ಮಾಧ್ಯಮಗಳು ಕಾಣಿಸಿಕೊಂಡಿವೆ. ಗಣಕಯಂತ್ರಗಳನ್ನು ಪ್ರದರ್ಶನ ವಸ್ತುಗಳ ದಾಖಲೀಕರಣಕ್ಕಾಗಿ ಮತ್ತು ವಿನ್ಯಾಸದ ಪ್ರದರ್ಶನಕ್ಕಾಗಿ ಬಳಸುವುದಲ್ಲದೆ, ಪ್ರದರ್ಶನ ವಸ್ತುಗಳ ಕಾರ್ಯಗತ ವಸ್ತುಸ್ಥಿತಿ, ಉಜ್ಜೀವಕಗಳು ಹಾಗೂ ಇದೇ ರೀತಿಯವುಗಳಿಗೆ ಕೂಡ ಉಪಯೋಗಿಸಿಕೊಳ್ಳಲಾಗುತ್ತದೆ. ಹೊಸ ಪ್ರವೃತ್ತಿಗಳು ವಸ್ತುಸಂಗ್ರಹಾಲಯದ ಮೇಲ್ವಿಚಾರಣೆಯಲ್ಲಿ ಗುಣಮಟ್ಟದ ಬದಲಾವಣೆಯನ್ನು ತಂದಿವೆ. ವಸ್ತುಸಂಗ್ರಹದಲ್ಲಿ ಪಾಂಡಿತ್ಯಪೂರ್ಣ ಸಂಶೋಧನೆಗಳು ಕೆಲಸ ಮಾಡುವುದರಿಂದಾಗಿ ಶೈಕ್ಷಣಿಕ ಪ್ರದರ್ಶನ ವಸ್ತುಗಳಲ್ಲಿ ಸೃಜನಾತ್ಮಕ ವಿನ್ಯಾಸಗಳು ಮೂಡಿಬಂದಿವೆ. ಚರಿತ್ರೆಕಾರರನ್ನು ವಿಜ್ಞಾನಿಗಳು, ಇಂಜಿನಿಯರುಗಳು ಮತ್ತು ಶಿಕ್ಷಣತಜ್ಞರು ಸ್ಥಳಾಂತರಗೊಳಿಸಿದ್ದಾರೆ.

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಪ್ರದರ್ಶನದ ವಸ್ತುಗಳನ್ನು ಸ್ಥಳೀಯವಾಗಿಯೇ ತಯಾರಿಸಲಾಗುತ್ತದೆ ಅಥವಾ ಅನೇಕ ವಸ್ತುಸಂಗ್ರಹಾಲಯಗಳು ಪರಸ್ಪರ ಕೈಜೋಡಿಸಿಕೊಂಡು ಸಾಂಘಿಕವಾಗಿ ಇದನ್ನು ರೂಪಿಸುತ್ತವೆ. ಸ್ಥಳದಿಂದ ಸ್ಥಳಕ್ಕೆ ಕೊಂಡೊಯ್ಯಬಹುದಾದ ಪ್ರದರ್ಶನ ವಸ್ತುಗಳನ್ನು ವಿಭಿನ್ನ ಸಂಸ್ಥೆಗಳು ಬಾಡಿಗೆಗೆ ನೀಡುತ್ತವೆ. ಕೆಲವು ವಸ್ತುಸಂಗ್ರಹಾಲಯಗಳಲ್ಲಿ ಅವರದೇ ಆದ ಸ್ವಂತ ಮೂಲಭೂತ ಸೌಕರ್ಯಗಳು ಇರುವುದಿಲ್ಲ. ಆದುದರಿಂದ ಹೊರಗಿನ ಸಂಪನ್ಮೂಲಗಳಿಂದ ಅದನ್ನು ಅವರು ಪಡೆದುಕೊಳ್ಳುತ್ತಾರೆ. ಆದರೆ ಭಾರತದ ವಿಜ್ಞಾನ ವಸ್ತುಸಂಗ್ರಹಾಲಯಗಳು ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸುವುದರ ಮೂಲಕ ಪ್ರಶಂಸನೀಯ ಕಾರ್ಯಗಳನ್ನು ನಡೆಸಿವೆ. ವಸ್ತುಸಂಗ್ರಹಾಲಯವನ್ನು ವಿನ್ಯಾಸಗೊಳಿಸುವುದು, ಪ್ರದರ್ಶನಕ್ಕೆ ಇಡುವ ವಸ್ತುಗಳನ್ನು ಮತ್ತು ಬೋಧನಾ ಸಾಮಗ್ರಿಗಳನ್ನು ತಯಾರಿಸುವುದು ಇತ್ಯಾದಿಗಳನ್ನು ಭಾರತೀಯ ವಿಜ್ಞಾನ ಕೇಂದ್ರಗಳಿಗಾಗಿ ಮಾತ್ರವಲ್ಲ, ಬೇರೆ ದೇಶಗಳಿಗೆ ಉತ್ತೇಜಕ ಬೆಂಬಲ ನೀಡುವ ಸಲುವಾಗಿಯೂ ಅವು ತಯಾರಾಗುತ್ತಿವೆ. ಭಾರತದ ವಿಜ್ಞಾನ ಕೇಂದ್ರಗಳು ಪರಸ್ಪರ ಕಾರ್ಯ ನಡೆಸುವ ವಸ್ತುಗಳ ತಯಾರಿಯೊಂದಿಗೆ, ಚಲಿಸುವ ವಿಜ್ಞಾನ ಪ್ರದರ್ಶನಗಳು ಮತ್ತು ಹೊರಾಂಗಣ ವಿಜ್ಞಾನ ಪಾರ್ಕುಗಳ ಕ್ಷೇತ್ರದಲ್ಲಿ, ಈ ಎರಡು ಕ್ಷೇತ್ರಗಳಲ್ಲಿ ಉಲ್ಲೇಖನೀಯ ಕಾರ್ಯಗಳನ್ನು ನಡೆಸಿವೆ.

ವಿಜ್ಞಾನದ ಸಂದೇಶವನ್ನು ದೇಶದ ಅತ್ಯಂತ ಒಳಭಾಗಗಳಿಗೆ ತಲುಪಿಸುವ ಉದ್ದೇಶದಿಂದ ಕೊಲ್ಕತ್ತಾದ ಬಿಐಟಿಎಮ್ 1966ರಲ್ಲಿ ಮ್ಯುಸಿಯೊಬಸ್‌ನ್ನು ತಯಾರಿಸಿದೆ. ರಾಷ್ಟ್ರೀಯ ವಿಜ್ಞಾನ ವಸ್ತುಸಂಗ್ರಹಾಲಯ ಪರಿಷತ್ತಿನ ಅಧೀನದಲ್ಲಿ ಇರುವ ಎಲ್ಲಾ ವಸ್ತುಸಂಗ್ರಹಾಲಯಗಳು ಈ ರೀತಿಯ ಪ್ರವಾಸ ಪ್ರದರ್ಶನವನ್ನು ಅಳವಡಿಸಿಕೊಂಡಿವೆ. ಕಾಲಾನುಕ್ರಮದಲ್ಲಿ 25 ಪ್ರದರ್ಶನಕಾರಿ ಬಸ್‌ಗಳನ್ನು ರಸ್ತೆಸಂಚಾರಕ್ಕೆ ಬಿಡಲಾಗಿದೆ. ಸಾಮಾಜಿಕ ವಿಚಾರಗಳಿಗೆ ಸಂಬಂಧಿಸಿದ, ಉದಾಹರಣೆಗೆ ವಿದ್ಯುತ್ ಬಳಕೆ, ಶಕ್ತಿಯ ಪರಿವರ್ತನೆ, ಕೃಷಿ, ಆರೋಗ್ಯ ಮತ್ತು ಪೋಷಣೆ ಇತ್ಯಾದಿ ಪ್ರದರ್ಶನವಸ್ತುಗಳನ್ನು ಬಸ್ಸಿನಲ್ಲಿ ಅಳವಡಿಸಿಕೊಳ್ಳಲಾಗಿದೆ. ಒಂದು ಸ್ಥಳದಲ್ಲಿ ಮೂರು ದಿನಗಳ ಕಾಲ ಪ್ರದರ್ಶನವನ್ನು ನಡೆಸಲಾಗುತ್ತದೆ. ಈ ಬಸ್‌ಗಳು ಇಡೀ ವರ್ಷ ಮೂಲೆ ಮೂಲೆ ಪ್ರದೇಶಗಳಿಗೆ ಸಂಚಾರ ನಡೆಸುತ್ತವೆ. ವಿಜ್ಞಾನ ವಸ್ತುಸಂಗ್ರಹಾಲಯದ ಈ ವಿಧದ ಪ್ರಯೋಗವು ಎಷ್ಟು ಯಶಸ್ವಿಯಾಗಿದೆಯೆಂದರೆ, ದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯ ಮತ್ತು ಕೊಲ್ಕತ್ತಾದ ಭಾರತೀಯ ವಸ್ತುಸಂಗ್ರಹಾಲಯ ಇದೇ ರೀತಿಯ ಸಂಚಾರಿ ಪ್ರದರ್ಶನಗಳನ್ನು ಕಲೆ ಮತ್ತು ಪುರಾತತ್ವಗಳಲ್ಲಿ ನಡೆಸುತ್ತಿವೆ.

ಮುಂಬೈಯ ನೆಹರೂ ವಿಜ್ಞಾನ ಕೇಂದ್ರವು 1979ರಲ್ಲಿ ಹೊರಾಂಗಣದ ವಿಜ್ಞಾನ ಪಾರ್ಕನ್ನು ಸ್ಥಾಪಿಸಿದೆ. ಇದರಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಪ್ರದರ್ಶನ ವಸ್ತುಗಳು ಇವೆ. ಇವು ಅಪ್ಪಟ ಆಟದ ಬಯಲಿನಂತಹ ರಚನೆಯ ಮೂಲಕ ವೈಜ್ಞಾನಿಕ ತತ್ವಗಳನ್ನು ಪ್ರದರ್ಶಿಸುತ್ತಿವೆ. ಅತ್ಯುತ್ತಮ ಚಾರಿತ್ರಿಕ ಪ್ರದರ್ಶನ ಮಂದಿರಕ್ಕಾಗಿ ಯುಎಸ್‌ಎಯ ಸೊಸೈಟಿ ಆಫ್ ಹಿಸ್ಟರಿ ಆಫ್ ಟೆಕ್ನಾಲಾಜಿ ವತಿಯಿಂದ ದೆಹಲಿಯ ರಾಷ್ಟ್ರೀಯ ವಿಜ್ಞಾನ ಕೇಂದ್ರಕ್ಕೆ 1993ರಲ್ಲಿ ಡಿಬೆನೆರ್ ಬಹುಮಾನ ದೊರೆತಿದೆ.

ಭಾರತದ ಎನ್‌ಸಿಎಸ್‌ಎಮ್ ವಿಜ್ಞಾನ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸಲಾದ ಪರಿಕಲ್ಪನೆಗಳು ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಪರಸ್ಪರ ಕಾರ್ಯ ನಡೆಸತಕ್ಕಂತಹ ಶೈಕ್ಷಣಿಕ ಪ್ರದರ್ಶನ ವಸ್ತುಗಳು ಈಗ ಸಾಂಪ್ರದಾಯಿಕ ವಸ್ತುಸಂಗ್ರಹಾಲಯಗಳಲ್ಲಿ ಚರಿತ್ರೆಯನ್ನು ಅಭಿವ್ಯಕ್ತಿಸಲು ಅಪಾರ ನೆರವು ನೀಡುತ್ತಿವೆ. ಮೊದಲ ಯಶಸ್ವಿ ಪ್ರಯೋಗವನ್ನು 1985ರಲ್ಲಿ ವಿಜ್ಞಾನ–ಪ್ರದರ್ಶನ ಹಬ್ಬದಲ್ಲಿ ನಡೆಸಲಾಯಿತು. ನಂತರದ ದಶಕದಲ್ಲಿ ಇದನ್ನು ಯುಎಸ್‌ಎ, ಯುರೋಪು, ರಷ್ಯಾ, ಮತ್ತು ಚೀನಾದಾದ್ಯಂತ ಪ್ರವಾಸದ ರೂಪದಲ್ಲಿ ವ್ಯಾಪಕವಾಗಿ ಪ್ರದರ್ಶಿಸಲಾಯಿತು. ಭಾರತದ ಪ್ರಾಚೀನ ವಿಜ್ಞಾನ ತತ್ತ್ವಗಳನ್ನು ಮತ್ತು ಮಧ್ಯಕಾಲೀನ ತಂತ್ರಜ್ಞಾನವನ್ನು ವಿವರಿಸುವುದಕ್ಕಾಗಿ ಜೀವಂತವೆನಿಸುವ ಮತ್ತು ಸ್ಪರ್ಶಕಾರಿ ವಸ್ತುಗಳನ್ನು ತಯಾರಿಸಲಾಯಿತು. ದಶಮಾಂಶ ಸ್ಥಾನದ ಮೌಲ್ಯ ವ್ಯವಸ್ಥೆ, ರೇಖಾಗಣಿತ, ಬೀಜಗಣಿತ, ತನ್ಮಂತ್ರ, ಪಂಚಭೂತ, ವಸ್ತುವಿನ ಗುಣಲಕ್ಷಣಗಳು, ನಕ್ಷತ್ರ ಶಾಸ್ತ್ರ, ವೈದ್ಯಕೀಯ, ಶಸ್ತ್ರಚಿಕಿತ್ಸೆ, ರಸಾಯನಶಾಸ್ರ, ಲೋಹಶಾಸ್ತ್ರ, ಮತ್ತು ಕುಶಲ ಕಲೆಯ ತಂತ್ರಜ್ಞಾನ ಇವುಗಳ ಪರಿಕಲ್ಪನೆಯನ್ನು ಸ್ಪರ್ಶಕಾರಿ ವಸ್ತುಗಳ ಮೂಲಕ ಪ್ರದರ್ಶಿಸಲಾಯಿತು. ವಿಶಿಷ್ಟ ವಿಜ್ಞಾನ ಕೇಂದ್ರಗಳಲ್ಲಿ ಇರುವ ಹಾಗೆ, ಇತ್ತೀಚಿಗೆ ನಿರ್ಮಿಸಲಾದ ಕೊಲ್ಕತ್ತಾ ನಗರದ ಚರಿತ್ರೆಯ ಕಥೆ ಹೇಳುವ ವಸ್ತುಸಂಗ್ರಹಾಲಯದಲ್ಲಿ ಉನ್ನತ ಮಟ್ಟದ ಪ್ರದರ್ಶನವನ್ನು ಕಂಪ್ಯೂಟರ್ ಮಲ್ಟಿ ಮಿಡೀಯಾ, ಮಲ್ಟಿ–ಸ್ಕ್ರೀನ್ ಪನೋರಮಾ ಪ್ರೊಜೆಕ್ಷನ್, ದೃಗ್ಗೋಚರ ವಸ್ತುಸ್ಥಿತಿ, ಮತ್ತು ಉಜ್ಜೀವಕಗಳೊಂದಿಗೆ ನಡೆಸಲಾಯಿತು. ವಿಜ್ಞಾನ ಕೇಂದ್ರಗಳಲ್ಲಿ ಬಳಸಲಾಗುವ ಇದೇ ರೀತಿಯ ವಿಧಾನವನ್ನು ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸಿಖ್ ಸಮುದಾಯದ 500 ವರ್ಷಗಳ ಚರಿತ್ರೆಯ ಕುರಿತಾದ ಬಹು ದೊಡ್ಡ ಖಾಲ್ಸಾ ಹೆರಿಟೇಜ್ ವಸ್ತುಸಂಗ್ರಹಾಲಯ ನಿರ್ಮಾಣ ಹಂತದಲ್ಲಿದೆ.

Digitised by Bharatavani, CIIL

**ಚಟುವಟಿಕೆಗಳು:**

ಯಾವುದೇ ವೈಜ್ಞಾನಿಕ ಸಂಸ್ಥೆ, ವಸ್ತುಸಂಗ್ರಹಾಲಯ ಅಥವಾ ಇದೇ ರೀತಿಯವುಗಳ ಪ್ರಥಮ ಗುರಿಗಳು ಮುಖ್ಯವಾಗಿ ಯುವಪೀಳಿಗೆಯಲ್ಲಿ ಪ್ರಶ್ನೆ ಕೇಳುವ ಪ್ರಜ್ಞೆಯನ್ನು ಬೆಳೆಸುವುದು, ಕಲ್ಪನಾ ಸಾಮರ್ಥ್ಯವನ್ನು ಉದ್ದೀಪನಗೊಳಿಸುವುದು ಮತ್ತು ಸೃಜನಾತ್ಮಕ ಪ್ರತಿಭೆಯನ್ನು ಪೋಷಿಸುವುದಾಗಿರುತ್ತದೆ. ಈ ಗುರಿಗಳು ವಿಜ್ಞಾನದ ಮೂಲಭೂತ ಅರ್ಥೈಸುವಿಕೆಯ ತಳಹದಿಯ ಮೇಲೆ ನಿಂತಿರುತ್ತವೆ. ಇವುಗಳನ್ನು ಪ್ರದರ್ಶನ ವಸ್ತುಗಳ ಮೂಲಕ ಸಾಧಿಸಿಕೊಳ್ಳುವುದಷ್ಟೇ ಅಲ್ಲ ಬಹಳ ಉತ್ತಮ ರೀತಿಯಿಂದ ರೂಪಿಸಲಾದ ಬಹುದೂರದವರೆಗೆ ತಲುಪಬಹುದಾದ ಕಾರ್ಯಕ್ರಮಗಳಿಂದಲೂ ಸಾಧಿಸಲಾಗುತ್ತದೆ. ಪ್ರತಿವರ್ಷ ಇದರಲ್ಲಿ ಮಿಲಿಯದಷ್ಟು ಜನರು ಪಾಲುಗೊಳ್ಳುತ್ತಿದ್ದು, ಇದನ್ನು ಪ್ರಾವೀಣ್ಯತೆ ಪಡೆದ ಭಾರತದ ವಿಜ್ಞಾನ ವಸ್ತುಸಂಗ್ರಹಾಲಯಗಳು ಮತ್ತು ವಿಜ್ಞಾನ ಕೇಂದ್ರಗಳು ಬಹಳ ವರ್ಷಗಳಿಂದ ನಡೆಸುತ್ತಾ ಬಂದಿವೆ. ವರ್ಷದುದ್ದಕ್ಕೂ ಶಾಲೆಗಳು ಮತ್ತು ಸಮುದಾಯಕ್ಕಾಗಿ ಸುವ್ಯಕ್ತ–ಕೇಂದ್ರಿತ ಚಟುವಟಿಕೆಗಳನ್ನು ಸಂಘಟಿಸಲಾಗುತ್ತದೆ. ಸಾವಿರಾರು ಶಾಲಾ ಮಕ್ಕಳು ಶೋಧನಾ ಕೋಣೆಗಳು, ವಿಜ್ಞಾನ ಮೇಳಗಳು, ಗಣಕಯಂತ್ರ ಮೇಳಗಳು, ಪರಿಸರ ಶಿಬಿರಗಳು, ವಿಜ್ಞಾನ ವಿಚಾರಸಂಕಿರಣಗಳು, ವಿಜ್ಞಾನ ನಾಟಕಗಳು, ಹವ್ಯಾಸಿ ನಕ್ಷತ್ರ ವೀಕ್ಷಣೆ, ವಿಮಾನ–ಮಾದರಿ ರಚಿಸುವುದು, ಕ್ಷಿಪಣಿ ತಯಾರಿಕೆ, ವಿದ್ಯುನ್ಮಾನಗಳು ಮತ್ತು ಅನೇಕ ಇತರ ಹವ್ಯಾಸಗಳಲ್ಲಿ ತೊಡಗಿಕೊಂಡಿರುತ್ತಾರೆ. ಶಿಕ್ಷಕರು ಕಡಿಮೆ ಖರ್ಚಿನ ಬೋಧನಾ ಸಾಮಗ್ರಿಗಳು ಮತ್ತು ವಿಜ್ಞಾನ ಕಿಟ್‌ಗಳನ್ನು ತಯಾರಿಸುವಲ್ಲಿ ತೊಡಗಿಕೊಂಡಿರುತ್ತಾರೆ. ವೈವಿಧ್ಯಮಯ ಬದುಕಿನ ಜನರನ್ನು ತೊಡಗಿಸಿಕೊಂಡು ಅವರ ದೈನಂದಿನ ಬದುಕಿಗೆ ಸೂಕ್ತವೆನಿಸುವ ವಿಜ್ಞಾನ ಮತ್ತು ತಂತ್ರಜ್ಞಾನದ ಗ್ರಾಮೀಣ ಕಾರ್ಯಕ್ರಮಗಳನ್ನು ವ್ಯಾಪಕ ರೀತಿಯಿಂದ ಸಂಘಟಿಸಲಾಗುತ್ತದೆ. ವಿಜ್ಞಾನ ವಸ್ತುಸಂಗ್ರಹಾಲಯಗಳಲ್ಲಿ ಮತ್ತು ವಿಜ್ಞಾನ ಕೇಂದ್ರಗಳಲ್ಲಿ ವಿಜ್ಞಾನ ಸಾಕ್ಷರತಾ ಕಾರ್ಯಕ್ರಮಗಳು ನಿಧಾನವಾಗಿ ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. ಅನೇಕ ಸರಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಮೂಢನಂಬಿಕೆಗಳ ವಿರುದ್ಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಎನ್‌ಸಿಇಆರ್‌ಟಿ ಪ್ರಾರಂಭಿಸಿದ ರಾಷ್ಟ್ರೀಯ ವಿಜ್ಞಾನ ಮೇಳದಲ್ಲಿ ಹಿಮದ ಮೇಲೆ ಉರುಳಿಸಿದ ಹಿಮದ ಚೆಂಡಿನ ಪರಿಣಾಮ ಇತ್ತು. ರಾಷ್ಟ್ರೀಯ ವಿಜ್ಞಾನ ಮೇಳಕ್ಕೆ ಬರುವ ಮುನ್ನ ಎನ್‌ಸಿಎಸ್‌ಎಮ್ ಬೇರೆ ಬೇರೆ ರಾಜ್ಯ ಸರಕಾರಗಳ ಸಹಯೋಗದೊಂದಿಗೆ ಬ್ಲಾಕ್ ಮಟ್ಟಗಳಲ್ಲಿ, ಜಿಲ್ಲಾ ಮಟ್ಟದಲ್ಲಿ, ಮತ್ತು ರಾಜ್ಯ ಮಟ್ಟದಲ್ಲಿ ವಾರ್ಷಿಕ ವಿಜ್ಞಾನ ಮೇಳಗಳನ್ನು ನಡೆಸುತ್ತದೆ. ಪ್ರತಿವರ್ಷ ಪ್ರಚಲಿತ ವಿಷಯಕ್ಕೆ ಸಂಬಂಧಿಸಿದಂತೆ ಎನ್‌ಸಿಎಸ್‌ಎಮ್ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ವಿಚಾರಸಂಕಿರಣಗಳ ಸ್ಪರ್ಧೆಗಳನ್ನು ಆಯೋಜಿಸುತ್ತದೆ. ಉತ್ತಮ ರೀತಿಯಲ್ಲಿ ರೂಪಿಸಲಾದ ವಿಜ್ಞಾನ ಪ್ರಯೋಗಶಾಲೆಗಳು ಇಲ್ಲದ ಶಾಲೆಗಳಲ್ಲಿ ತರಗತಿ ಉಪನ್ಯಾಸಗಳನ್ನು ನಡೆಸುವ ಸಲುವಾಗಿ ಎನ್‌ಸಿಇಆರ್‌ಟಿಯು ಕಡಿಮೆ ವೆಚ್ಚದ ಬೋಧನಾ ಸಾಮಗ್ರಿಗಳನ್ನು ಉತ್ಪಾದಿಸಿದೆ. ಎನ್‌ಸಿಇಎಂ ಈ ಚಟುವಟಿಕೆಯನ್ನು ಕೈಗೆತ್ತಿಕೊಂಡಿದೆ. ನಿಮ್ಮ ಸ್ವಂತ ಪ್ರಯೋಗಶಾಲೆಯನ್ನು ನಿರ್ಮಿಸಿಕೊಳ್ಳಿ ಎಂಬ ಘೋಷಣೆಯೊಂದಿಗೆ ಎನ್‌ಸಿಎಸ್‌ಎಮ್‌ನ ಅಧೀನದಲ್ಲಿರುವ ವಿಜ್ಞಾನ ವಸ್ತುಸಂಗ್ರಹಾಯಲಗಳು ಮತ್ತು ಕೇಂದ್ರಗಳು ಶಾಲೆಯ ವ್ಯಾಸಂಗಕ್ರಮದ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚು ದುಬಾರಿಯಲ್ಲದ ಬೋಧನಾ ಸಾಮಗ್ರಿಗಳನ್ನು ಮತ್ತು ವಿಜ್ಞಾನ ಕಿಟ್‌ಗಳನ್ನು ತಯಾರಿಸಿದೆ; ಈ ವಿಧದ ಬೋಧನಾ ಸಾಮಗ್ರಿಗಳ ತಯಾರಿಕೆಯಲ್ಲಿ ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಿದೆ; ಹೀಗೆ ತರಬೇತಿ ಪಡೆದ ಶಿಕ್ಷಕರ ಮಾರ್ಗದರ್ಶನದಲ್ಲಿ ಶಾಲೆಯ ವಿದ್ಯಾರ್ಥಿಗಳು ಇಂತಹ ಕಿಟ್‌ಗಳನ್ನು ಮತ್ತು ಸಾಮಗ್ರಿಗಳನ್ನು ತಯಾರಿಸುತ್ತಾರೆ. ಈ ಕಾರ್ಯವು 'ಸೃಜನಾತ್ಮಕ ಸಾಮರ್ಥ್ಯಗಳ ಕೇಂದ್ರ'ಗಳಲ್ಲಿ ನಡೆಯುತ್ತದೆ.

ದೆಹಲಿಯಲ್ಲಿರುವ ನ್ಯಾಶನಲ್ ಮ್ಯುಸಿಯಂ ಆಫ್ ನ್ಯಾಚುರಲ್ ಹಿಸ್ಟರಿ(ಎನ್‌ಎಮ್‌ಎನ್‌ಹೆಚ್) ಯು ಮಕ್ಕಳ ಭಾಗವಹಿಸುವಿಕೆಗಾಗಿ ಸ್ಥಳೀಯವಾಗಿ ತಯಾರಿಸಲಾದ ಬೋಧನಾ ಸಾಮಗ್ರಿಗಳು ಮತ್ತು ಕಿಟ್‌ಗಳ ಬಹುದೊಡ್ಡ ಸಂಗ್ರಹವಿರುವ ಸಭಾಂಗಣವನ್ನು ನಿರ್ಮಿಸಿದೆ. ದೇಶದಾದ್ಯಂತ ಪ್ರಾಕೃತಿಕ ವಿಜ್ಞಾನಗಳು, ಪರಿಸರ ಮತ್ತು ಜೀವಿ ಪರಿಸ್ಥಿತಿಗೆ ಸಂಬಂಧಿಸಿದ ಅತ್ಯುನ್ನತ ಮಟ್ಟದ ಶೈಕ್ಷಣಿಕ ಚಟುವಟಿಕೆಗಳನ್ನು ಕೂಡ ಎನ್‌ಎಮ್‌ಎನ್‌ಹೆಚ್ ನಡೆಸಿದೆ.

ಜನವಿಜ್ಞಾನ ಚಳವಳಿಗಾಗಿ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಪರಿಷತ್ತು(ನ್ಯಾಶನಲ್ ಕೌನ್ಸಿಲ್ ಆಫ್ ಸಾಯನ್ಸ್ ಆಂಡ್ ಟೆಕ್ನಾಲಾಜಿ ಕಮ್ಯುನಿಕೇಶನ್–ಎನ್‌ಸಿಎಸ್‌ಟಿಸಿ) ವಿವಿಧ ಸರಕಾರೇತರ ಸಂಸ್ಥೆಗಳ ಜಾಲವನ್ನು ರೂಪಿಸುತ್ತಿದೆ. ಈ ರೀತಿಯ ಸಂಸ್ಥೆಗಳು ವಿಜ್ಞಾನ ವಸ್ತುಸಂಗ್ರಹಾಲಯಗಳ ವರ್ಗೀಕರಣದಲ್ಲಿ ಇಲ್ಲದಿದ್ದರೂ, ದೇಶದಾದ್ಯಂತ ವಿಜ್ಞಾನವನ್ನು ಜನಪ್ರಿಯಗೊಳಿಸುತ್ತಿವೆ, ವಿಜ್ಞಾನ ಸಂವಹನ, ಮತ್ತು ಅನೌಪಚಾರಿಕ ವಿಜ್ಞಾನ ಶಿಕ್ಷಣ ಕ್ಷೇತ್ರಕ್ಕಾಗಿ ಅತ್ಯುತ್ತಮ ಕಾರ್ಯಗಳನ್ನು ನಡೆಸುತ್ತಿವೆ. ಇವುಗಳಲ್ಲಿ ಗಮನಾರ್ಹ ಸಂಸ್ಥೆಗಳೆಂದರೆ ಅನೇಕ ರಾಜ್ಯಗಳ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತುಗಳು, ಗೌಹಾಟಿಯ ಅಸ್ಸಾಮ್ ಸಾಯನ್ಸ್ ಸೊಸೈಟಿ, ಮುಂಬೈಯ ಮರಾಠಿ ವಿಜ್ಞಾನ ಪರಿಷದ್, ಕೇರಳ ಶಶಿಯಾ ಸಾಹಿತ್ಯ ಪರಿಷದ್, ಹೊಶಂಗಾಬಾದ್‌ನ ಕಿಶೋರ್ ಭಾರತಿ, ಭೋಪಾಲದ ಏಕಲವ್ಯ, ಚೆನ್ನೈನ ತಮಿಳುನಾಡು ಸಾಯನ್ಸ್ ಫಾರಮ್, ಹಬ್ರಾದ ಗೊಬರ್ಡಂಗ ರಿನೈಸೆನ್ಸ್ ಇನ್‌ಸ್ಟಿಟ್ಯೂಟ್, ಕಲ್ಕತ್ತಾದ ಸಾಯನ್ಸ್ ಅಸೋಸಿಯೇಶನ್ ಆಫ್ ಬೆಂಗಾಲ್ ಹಾಗೂ ಇತರ ಸಂಸ್ಥೆಗಳು. ಭಾರತದ ಅನೇಕ ವಿಜ್ಞಾನ ವಸ್ತುಸಂಗ್ರಹಾಲಯಗಳು ಈ ಸರ್ಕಾರೇತರ ಸಂಸ್ಥೆಗಳೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸುತ್ತಿವೆ.

**ವಿಜ್ಞಾನ ವಸ್ತುಸಂಗ್ರಹಾಲಯಗಳ ಜಾಲ:**

ವಿಜ್ಞಾನ ವಸ್ತುಸಂಗ್ರಹಾಲಯಗಳ ಕೆಲಸವನ್ನು ಈಡೇರಿಸಿಕೊಳ್ಳಲು ಜಾಲದ ಅಗತ್ಯವನ್ನು ಪರಿಗಣಿಸಿಕೊಂಡು ಜಗತ್ತಿನ ವಿವಿಧ

Digitised by Bharatavani, CIIL

ಭಾಗಗಳಲ್ಲಿ ಅನೇಕ ಅಂತಾರಾಷ್ಟ್ರೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಜಾಲಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಬಹುಮುಖ್ಯ ಸಂಸ್ಥೆಯೆಂದರೆ,ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯಗಳ ಪರಿಷತ್ತಿಗೆ (ಐಸಿಒಎಮ್) ಸೇರಿದ ಅಂತಾರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತುಸಂಗ್ರಹಾಲಯಗಳ ಸಮಿತಿ (ಸಿಐಎಮ್‌ಯುಎಸ್ಇಟಿ). ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯಗಳ ಪರಿಷತ್ತು (ಇಂಟರ್‌ನ್ಯಾಶನಲ್ ಕೌನ್ಸಿಲ್ ಆಫ್ ಮ್ಯೂಸಿಯಮ್ಸ್) ಒಂದು ಸರಕಾರೇತರ ಸಂಸ್ಥೆಯಾಗಿದ್ದು (ಎನ್‌ಜಿಒ) ಇದನ್ನು ವಿಶ್ವಸಂಸ್ಥೆಯ ಆಣತಿಯಂತೆ 1946ರಲ್ಲಿ ಸ್ಥಾಪಿಸಲಾಗಿದೆ. ಇದರಲ್ಲಿ 150 ದೇಶಗಳ 15,000 ಸದಸ್ಯರಿದ್ದಾರೆ. ಇದರ ವಿಶೇಷ ಭಾಗವಾಗಿರುವ ಸಿಐಎಮ್‌ಯುಎಸ್ಇಟಿಯು ವಿಜ್ಞಾನ ವಸ್ತುಸಂಗ್ರಹಾಲಯಗಳ ಜಾಗತಿಕ ಬೆಳವಣಿಗೆಗೆ ಮೀಸಲಾಗಿದೆ.

1973ರಲ್ಲಿ ವಾಷಿಂಗ್‌ಟನ್ ಡಿಸಿಯಲ್ಲಿ ಸ್ಥಾಪಿಸಲಾದ ಅಸೋಸಿಯೇಶನ್ ಆಫ್ ಸಾಯನ್ಸ್ ಆಂಡ್ ಟೆಕ್ನಾಲಾಜಿ ಸೆಂಟರ್ಸ್ (ಎಎಸ್‌ಟಿಸಿ), ವಿಜ್ಞಾನ ಕೇಂದ್ರಗಳು ಮತ್ತು ವಸ್ತುಸಂಗ್ರಹಾಲಯಗಳ ಸಂಸ್ಥೆಯಾಗಿದ್ದು, ವಿಜ್ಞಾನದ ಕುರಿತು ಸಾರ್ವಜನಿಕರ ಅರ್ಥೈಸುವಿಕೆಯನ್ನು ಮುಂದುವರಿಸುವುದರಲ್ಲಿ ನಿರತವಾಗಿದೆ. ಎಎಸ್‌ಟಿಸಿ ಜಗತ್ತಿನ ಎಲ್ಲೆಡೆಗಳಲ್ಲಿ ಇರುವ 40 ದೇಶಗಳ 550 ಮಂದಿ ತನ್ನ ಸದಸ್ಯರನ್ನು ಪರಸ್ಪರ ಸಂಪರ್ಕದಲ್ಲಿಟ್ಟುಕೊಂಡು ಅವರ ಸಾಮಾನ್ಯ ಗುರಿಯ ನೆರವೇರಿಕೆಗಾಗಿ ಅನೌಪಚಾರಿಕ ವಿಜ್ಞಾನದ ಕಲಿಕೆಯಲ್ಲಿ ಅತ್ಯುನ್ನತ ಸಾಧನೆ ಮತ್ತು ಪರಿಶೋಧನೆಗೆ ಪ್ರೋತ್ಸಾಹ ನೀಡುತ್ತದೆ.

ಪ್ರತಿ ಮೂರು ವರ್ಷಗಳಿಗೊಮ್ಮೆ ವಿಜ್ಞಾನ ಕೇಂದ್ರಗಳ ವೃತ್ತಿಪರರ ಬೌದ್ಧಿಕ ಸ್ನೇಹಕೂಟವನ್ನು ಏರ್ಪಡಿಸುವುದರ ಮೂಲಕ ಪ್ರದರ್ಶನ ವಸ್ತುಗಳು ಮತ್ತು ಚಟುವಟಿಕೆಗಳನ್ನು ಹೊಸ ಪರಿಕಲ್ಪನೆಗಳನ್ನು ಬೆಳೆಸುವ ದೃಷ್ಟಿಯಿಂದ 1994ರಲ್ಲಿ ಸಾಯನ್ಸ್ ಸೆಂಟರ್ ವರ್ಲ್ಡ್ ಕಾಂಗ್ರೆಸ್(ಎಸ್‌ಸಿಡಬ್ಲ್ಯುಸಿ) ಹೆಸರಿನ ಇನ್ನೊಂದು ಅಂತಾರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಯುರೋಪಿನ ವಿಜ್ಞಾನ ಕೇಂದ್ರಗಳ ಜಾಲವನ್ನು ರೂಪಿಸುವ ಸಲುವಾಗಿ ಯುರೋಪಿಯನ್ ಕೊಲ್ಯಾಬೊರೇಟಿವ್ ಫಾರ್ ಸಾಯನ್ಸ್, ಇಂಡಸ್ಟ್ರಿ ಆಂಡ್ ಟೆಕ್ನಾಲಾಜಿ ಎಕ್ಸಿಬಿಶನ್ (ಇಸಿಎಸ್‌ಐಟಿಇ)ನ್ನು ರೂಪಿಸಲಾಗಿದೆ. ಇದೇ ರೀತಿಯ ಪ್ರಾದೇಶಿಕ ಜಾಲಗಳು ಜಗತ್ತಿನ ಬೇರೆ ಕೆಲವು ಭಾಗಗಳಲ್ಲಿ ಇವೆ. ಅವುಗಳೆಂದರೆ, ಏಷ್ಯಾ–ಫೆಸಿಫಿಕ್ ನೆಟ್‌ವರ್ಕ್ ಆಫ್ ಸಾಯನ್ಸ್ ಆಂಡ್ ಟೆಕ್ನಾಲಾಜಿ ಸೆಂಟರ್ಸ್(ಎಎಸ್‌ಪಿಎಸಿ), ಆಸ್ಟ್ರೇಲೆಶಿಯನ್ ಸಾಯನ್ಸ್ ಆಂಡ್ ಟೆಕ್ನಾಲಾಜಿ ಎಕ್ಸಿಬಿಟರ್ಸ್ ನೆಟ್‌ವರ್ಕ್(ಎಎಸ್‌ಟಿಇಎನ್), ಸದರ್ನ್ ಆಫ್ರಿಕನ್ ಅಸೋಸಿಯೇಶನ್ ಆಫ್ ಸಾಯನ್ಸ್ ಆಂಡ್ ಟೆಕ್ನಾಲಾಜಿ ಸೆಂಟರ್ಸ್(ಎಸ್‌ಎಎಸ್‌ಟಿಇಸಿ), ಮತ್ತು ಲ್ಯಾಟಿನ್ ಅಮೇರಿಕನ್ ನೆಟ್‌ವರ್ಕ್ ಆಫ್ ಸಾಯನ್ಸ್ ಆಂಡ್ ಟೆಕ್ನಾಲಾಜಿ ಸೆಂಟರ್ಸ್(ರೆಡ್ ಪಾಪ್).

ಭಾರತದಲ್ಲಿ ರಾಷ್ಟ್ರೀಯ ವಿಜ್ಞಾನ ವಸ್ತುಸಂಗ್ರಹಾಲಯಗಳ ಪರಿಷತ್ತು ಬಹಳ ವಿಶಿಷ್ಟವಾದ ರಾಷ್ಟ್ರೀಯ ಜಾಲವಾಗಿದೆ. ಅನೌಪಚಾರಿಕ ವಿಜ್ಞಾನ ಶಿಕ್ಷಣವನ್ನು ವಿಜ್ಞಾನ ವಸ್ತುಸಂಗ್ರಹಾಲಯಗಳ ಮೂಲಕ ಪುನರುತ್ಪತ್ತಿಸುವ ಸಲುವಾಗಿ ಭಾರತದ ಯೋಜನಾ ಆಯೋಗದ ದೂರದರ್ಶಿತ್ವದಿಂದ ಇದನ್ನು ಸೃಷ್ಟಿಸಲಾಗಿದೆ. ಎರಡು ದಶಕಗಳಿಗೂ ಕಡಿಮೆ ಅವಧಿಯಲ್ಲಿ 26 ವಿಜ್ಞಾನ ಕೇಂದ್ರಗಳು ಅಭಿವೃದ್ಧಿ ಸಾಧಿಸಲು ಕಾರಣವಾದ ಸಂಪನ್ಮೂಲಗಳ ಗರಿಷ್ಠ ಬಳಕೆ ಮತ್ತು ಪ್ರದರ್ಶನ ವಸ್ತುಗಳು ಮತ್ತು ಸಿಬ್ಬಂದಿಗಳ ಮುಕ್ತ ವಿನಿಮಯಕ್ಕಾಗಿ ಈ ಸೂತ್ರ ಸಂಸ್ಥೆಯನ್ನು ಸೃಷ್ಟಿಸಲಾಗಿದೆ. 1978–95ರ ಅವಧಿಯಲ್ಲಿ, ಶಿಕ್ಷಣ ಮತ್ತು ಸಂಸ್ಕೃತಿಯ ಇಂಡೊ–ಯುಎಸ್ ಉಪ ಆಯೋಗದ ಪ್ರಮುಖ ಪಾಲುದಾರನಾಗಿ ಎರಡೂ ದೇಶಗಳಲ್ಲಿ ವಿಜ್ಞಾನಕೇಂದ್ರ ವೃತ್ತಿಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಯುಎಸ್‌ಎಯ ಪ್ರಸಿದ್ಧ ವಿಜ್ಞಾನ ಕೇಂದ್ರಗಳೊಂದಿಗೆ ಬಹುದೊಡ್ಡ ಸಹಯೋಗ ಕಾರ್ಯಕ್ರಮವನ್ನು ಎನ್‌ಸಿಎಸ್‌ಎಮ್ ರೂಪಿಸಿದೆ. ಇದೇ ರೀತಿಯ ದ್ವಿಪಕ್ಷೀಯ ಕಾರ್ಯಕ್ರಮಗಳನ್ನು ಆಸ್ಟ್ರೇಲಿಯಾ ಮತ್ತು ಚೀನಾದೇಶಗಳೊಂದಿಗೆ ಕೂಡ ನಡೆಸಲಾಗಿದೆ. ಇದು ಆಯಾ ದೇಶಗಳಲ್ಲಿ ಹೊಸ ಪ್ರದರ್ಶನವಸ್ತುಗಳ ಪರಿಕಲ್ಪನೆಯ ಬೆಳವಣಿಗೆಗೆ ಸಹಕಾರಿಯಾಗಿದೆ.

**ಭವಿಷ್ಯದತ್ತ ನೋಟ:**

ತಂತ್ರಜ್ಞಾನದ ಅಗಾಧ ಪ್ರವೇಶವು ಪ್ರದರ್ಶನಾಲಯಗಳ ಮೇಲೆ ಬೀರುತ್ತಿರುವ ಬಹು ದೊಡ್ಡ ಪರಿಣಾಮದಿಂದ ವಿಜ್ಞಾನ ವಸ್ತುಸಂಗ್ರಹಾಲಯಗಳ ಸ್ವರೂಪ ಬದಲಾಗುತ್ತಿದೆ. ಪ್ರದರ್ಶನ ವಸ್ತುಗಳು ಚಾರಿತ್ರಿಕ ಸಂಗ್ರಹದಿಂದ ಕೈಗೆಟಕುವ ಶಿಕ್ಷಣಕ್ಕೆ ಬದಲಾವಣೆ ಹೊಂದಿ, ಕ್ರಮೇಣ ಮಾನಸಿಕವಾಗಿ ತೊಡಗಿಕೊಳ್ಳುವ ವಿಧಾನಕ್ಕೆ ಪರಿವರ್ತನೆ ಹೊಂದುತ್ತಿವೆ. ಇದನ್ನು 'ವಿಲೀನಗೊಳ್ಳುವ ವೀಕ್ಷಣೆ' ಎಂಬುದಾಗಿ ಕರೆಯಲಾಗುತ್ತದೆ. ಈಗ ಪ್ರದರ್ಶನ ವಸ್ತುಗಳ ದಾಖಲೀಕರಣವನ್ನು ವಿಡಿಯೊ ಸಿಡಿ ಮೂಲಕ ನಡೆಸಲಾಗುತ್ತದೆ; ವಸ್ತು ಸಂಗ್ರಹಾಲಯದ ಭದ್ರತೆಗೆ ಮಾನವ ಕಾವಲಿಗೆ ವಿದ್ಯುತ್ ಕಣ್ಣುಗಳು(ಕ್ಯಾಮರಾ ಕಾವಲು) ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆ; ಸಾಂಪ್ರದಾಯಿಕ ಧ್ವನಿ–ದೃಶ್ಯ ಕೌಶಲಗಳನ್ನು ಗಣಕೀಕೃತ ಎಲ್‌ಸಿಡಿ ಪ್ರಕ್ಷೇಪಕಗಳು ಸ್ಥಾನಾಂತರಗೊಳಿಸಿವೆ; ಸಂರಕ್ಷಣಾ ಪ್ರಯೋಗಶಾಲೆಗಳಲ್ಲಿ ಉನ್ನತ ಶಕ್ತಿಯ ವಿದ್ಯುತ್ ಚಾಲಿತ ಸೂಕ್ಷ್ಮದರ್ಶಕಗಳು ನೆರವಿಗೆ ಬರುತ್ತಿವೆ; ಕ್ಯಾಡ್‌ನಲ್ಲಿ ಪ್ರದರ್ಶನದ ವಿನ್ಯಾಸವನ್ನು ಮಾಡಲಾಗುತ್ತದೆ; ಮತ್ತು ಅಂತಿಮವಾಗಿ ಜಗತ್ತಿನ ಎಲ್ಲೆಡೆಗಳಲ್ಲಿ ಸೈಬರ್ ಸ್ಪೇಸ್‌ಗಳು ವಸ್ತುಸಂಗ್ರಹಾಲಯವನ್ನು ಸಂದರ್ಶಕರ ಮೇಜಿಗೆ ತರುತ್ತಿವೆ. ವಿಜ್ಞಾನ ವಸ್ತುಸಂಗ್ರಹಾಲಯಗಳು ಮತ್ತು ವಸ್ತುಸಂಗ್ರಹಾಲಯಗಳ ಕಾರ್ಯವೈಖರಿಯಲ್ಲಿ ನಡೆದಿರುವ ಈ ರೀತಿಯ ಬೆಳವಣಿಗೆಗಳು ವಿಭಿನ್ನ ವೃತ್ತಿಪರ ದೃಷ್ಟಿಕೋನವನ್ನು ನಿರೀಕ್ಷಿಸುತ್ತವೆ.

**ಮೂಲ: ಸರೋಜ್ ಘೋಸ್**

**ಅನು: ಡಾ. ಗೀತಾ ಶೆಣೈ**

Digitised by Bharatavani, CIIL

## ವೀಡಿಯೋ ಸುರುಳಿಗಳು

ವೀಡಿಯೋ ಸುರುಳಿಯು (Video Tape) ಲಿಖಿತ ಮಾಹಿತಿಯನ್ನು ಗ್ರಾಫಿಕ್ಸ್ ಮತ್ತು ಕಂಪ್ಯೂಟರ್ ಅನಿಮೇಶನ್ ಹಾಗೂ ಗಣಕಯಂತ್ರದ ಸಹಾಯದಿಂದ ಪ್ರಕ್ರಿಯೆಗೊಂಡ ಚಿತ್ರಗಳನ್ನು ಸಂಗ್ರಹಿಸುವ ಮತ್ತು ಬದಲಾವಣೆ ಮಾಡಲು ಬಳಸುವ ಒಂದು ಸಾಧನ.

ವಿದ್ಯುನ್ಮಾನ ತಂತ್ರಜ್ಞಾನದಲ್ಲಿ ಆಧುನಿಕತೆ ಬೆಳೆದಂತೆ ದೃಶ್ಯಗಳನ್ನು ನೋಡಲು ಕಪ್ಪು–ಬಿಳಿ ಮತ್ತು ವರ್ಣರಂಜಿತ ದೃಶ್ಯಾವಳಿಗಳು ಬೆಳಕಿಗೆ ಬಂದವು, ಇದರಿಂದ ಸಿನಿಮಾ–ಒಂದು ಪಾರದರ್ಶಕ, ಬೆಳಕಿನ ಛಾಯಾಚಿತ್ರ ಮಾಧ್ಯಮವಾಗಿ ಬೆಳಕಿಗೆ ಬಂದಿತು.

ವೀಡಿಯೋದಲ್ಲಿ ವಿದ್ಯುನ್ಮಾನ ಆಪ್ಟಿಕಲ್ ಛಾಯಾಚಿತ್ರ ಫೋಟೋಗ್ರಾಫಿಕ್ ಮಾಧ್ಯಮದಿಂದ ಉನ್ನತಮಟ್ಟದ ಬಣ್ಣದ ಚಿತ್ರಗಳನ್ನು ರಚಿಸಿ ಚಲಿಸುವಂತಹ ಚಿತ್ರಗಳನ್ನು ರಚಿಸಬಹುದು, ನಮಗೆ ಬೇಕಾದ ರೀತಿಯಲ್ಲಿ ಸ್ತಬ್ಧ ಅಥವಾ ಚಲಿಸುವ ಚಿತ್ರಗಳನ್ನು ತೆಗೆದುಕೊಳ್ಳಬಹುದು.

ಒಂದು ಸಲ ರೆಕಾರ್ಡ್ ಮಾಡಿದರೆ ಸಾಕು ನಮಗೆ ಬೇಕಾದ ತರಹ ಮಾಹಿತಿಯನ್ನು ನಿಧಾನಗತಿ ಅಥವಾ ರಭಸವಾಗಿ ಹೇಗೆ ಬೇಕೋ ಹಾಗೆ ಬದಲಾವಣೆ ಮಾಡಿ ವೀಡಿಯೋ ಕ್ಯಾಮೆರಾಗಳನ್ನು ಸೂಕ್ಷ್ಮದರ್ಶಕ, ದೂರದರ್ಶಕ ಮತ್ತು ಇನ್ನಿತರ ಪಾರದರ್ಶಕ ಸಾಧನಗಳಲ್ಲಿ ಜೋಡಿಸಿ ಇದರಿಂದ ನಿರಂತರವಾಗಿ ಪ್ರತಿಬಿಂಬಗಳನ್ನು ಪಡೆಯಲು ಮತ್ತು ಬದಲಾವಣೆಗಳನ್ನು ಮಾಡಲು ಬಳಸಬಹುದು, ಅಂದರೆ ಚಿತ್ರಗಳನ್ನು ಅತಿ ಹತ್ತಿರದಿಂದ ಅಥವಾ ದೂರದಿಂದ ತೆಗೆಯಬಹುದು.

ಇತ್ತೀಚೆಗೆ ಆಧುನಿಕ ಉನ್ನತ ಮಟ್ಟದ ವೀಡಿಯೋ ಕ್ಯಾಮೆರಾಗಳನ್ನು ಉಪಗ್ರಹಗಳಲ್ಲಿ, ಸಬ್‌ಮೆರಿನ್, ವಿಮಾನಗಳಲ್ಲಿ ಮತ್ತು ಹಡಗುಗುಳಲ್ಲಿ ಅಳವಡಿಸಿರುತ್ತಾರೆ. ಮಾನವರು ಎಲ್ಲಿ ತಲುಪಲು ಸಾಧ್ಯವಿಲ್ಲವೋ ಅಂತಹ ಸ್ಥಳಗಳು ಅಂದರೆ ಅಣುಸ್ಥಾವರ, ಉಕ್ಕಿನ ಕುಲುಮೆ, ಒಳಚರಂಡಿ, ಅಂತರಿಕ್ಷ ಹಾಗೂ ಅನ್ಯಗ್ರಹಗಳಿಗೆ ಉಡಾಯಿಸುವ ಯಂತ್ರಗಳಲ್ಲಿ ವೀಡಿಯೋ ಕ್ಯಾಮೆರಾಗಳನ್ನು ಬಳಸಲಾಗುತ್ತಿದೆ. ಸಣ್ಣ ಪೈಪಿನ ಸಹಾಯದಿಂದ ಮಾನವ ದೇಹದ ಒಳ ಅಂಗಾಂಗಗಳನ್ನು ನೋಡಿ ವೀಡಿಯೋ ಮಾಡಬಹುದಾಗಿದೆ, ಜೊತೆಗೆ ಅಂಗಾಂಗಗಳ ಶಸ್ತ್ರ ಚಿಕಿತ್ಸೆಯನ್ನು ಮಾಡಲು ಸಹ ಇದನ್ನು ಬಳಸಲಾಗುತ್ತಿದೆ.

ಪ್ರಪಂಚದಾದ್ಯಂತ ಮನರಂಜನೆಗಾಗಿ, ಕ್ರೀಡೆಗಳನ್ನು ವೀಕ್ಷಿಸಲು, ವ್ಯಾಪಾರ ವಹಿವಾಟು ಮಾಡಲು, ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಪರಿಚಯಕ್ಕಾಗಿ ವೀಡಿಯೋ ಸುರುಳಿಗಳನ್ನು ಬಳಸಬಹುದು. ಜನರಲ್ಲಿ ಜಾಗೃತಿಯನ್ನು ಮೂಡಿಸಲು, ಆಂದೋಲನಗಳನ್ನು ಆರಂಭಿಸಲು, ಮಾಹಿತಿಯ ವಿನಿಮಯಕ್ಕಾಗಿ, ಪ್ರಾತ್ಯಕ್ಷಿಕೆ, ನಿರ್ದೇಶನಗಳನ್ನು ನೀಡಲು, ಶಿಕ್ಷಣ ಮತ್ತು ತರಬೇತಿಗಳಲ್ಲಿ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ವೀಡಿಯೋ ಸುರಳಿಗಳನ್ನು ಬಳಸಬಹುದು.

ದೂರದರ್ಶನವು ಏಕಮುಖವಾದ ಪ್ರಕ್ರಿಯೆ ಆದ್ದರಿಂದ ಇದು ವೀಕ್ಷಕರಲ್ಲಿ ಜಡತ್ವವನ್ನುಂಟು ಮಾಡಿದರೆ, ವೀಡಿಯೋ ಸುರಳಿಗಳ ಬಳಕೆಯಿಂದ ವೀಕ್ಷಕರಲ್ಲಿ ಇದರ ನಿಯಂತ್ರಣದ ಮೂಲಕ ಅಂದರೆ ವೀಡಿಯೋ ಸುರಳಿಯ ಚಾಲನೆ, ಪುನ: ಕೇಳುವುದು(ತಿರುಗಿಸಿ), ಮುಂದಿನ ಮಾಹಿತಿಗೆ(ಫಾಸ್ಟ್ ಫಾರ್ವರ್ಡ್), ನಿಲುಗಡೆಗಳನ್ನು ಬಳಸಬಹುದು, ಇವುಗಳಿಂದ ಬೇರೆ ಬೇರೆ ನೋಡುಗರಿಗೆ ವಿವಿಧ ವಿನ್ಯಾಸಗಳಲ್ಲಿ ಮಾಹಿತಿಯನ್ನು ತಯಾರು ಮಾಡಲಾಗುತ್ತದೆ.

**ವೀಡಿಯೋ ಸುರಳಿಗಳಲ್ಲಿ ಬರಬಹುದಾದ ಕೆಲವು ಸಮಸ್ಯೆಗಳಿಗೆ ಈ ಕೆಳಗಿನಂತೆ ಪರಿಹಾರಗಳನ್ನು ಕಂಡುಕೊಳ್ಳಬಹುದು:**

- ಮಾಹಿತಿಯ ಸಾಂದ್ರತೆಯನ್ನು ಕಡಿಮೆ ಮಾಡುವುದು.
- ಕಾರ್ಯಕ್ರಮವನ್ನು ಚಿಕ್ಕ ಚಿಕ್ಕ ಸನ್ನಿವೇಶಗಳನ್ನಾಗಿ ಕ್ರಮಾನುಗತವಾಗಿ ಯೋಜಿಸುವುದು.
- ನಿಲುಗಡೆಯನ್ನು ಪ್ರತಿ ಸನ್ನಿವೇಶದ ನಂತರ ನೀಡುವುದು ಮತ್ತು ಪ್ರತಿ ಸನ್ನಿವೇಶದ ಸಾರಾಂಶವನ್ನು ನೀಡುವುದು.
- ವೀಡಿಯೋವನ್ನು ನೋಡುವುದಕ್ಕಿಂತ ಮೊದಲು ಪ್ರೇಕ್ಷಕರನ್ನು ಸಿದ್ಧಗೊಳಿಸುವುದು.
- ಪ್ರೇಕ್ಷಕರು ನೋಡುವ ಸಂದರ್ಭದ ಮಧ್ಯೆ ಅವರ ಜೊತೆಗೆ ಚರ್ಚೆಯನ್ನು ಏರ್ಪಡಿಸುವುದು.
- ವೀಡಿಯೋವನ್ನು ವೀಕ್ಷಿಸಿದ ನಂತರ ಅನಿಸಿಕೆ ಬಗ್ಗೆ ಪ್ರಶ್ನೆಗಳನ್ನು ಕೇಳುವುದು.
- ಪ್ರೇಕ್ಷಕರಿಂದ ಸಲಹೆಗಳನ್ನು ಪಡೆದು ಮುಂದಿನ ವೀಡಿಯೋ ಸುರಳಿಗಳ ರಚನೆಯಲ್ಲಿ ಬಳಸುವುದು.

**ವೀಡಿಯೋ ಸುರಳಿಗಳ ರಚನೆಯ ಹಂತಗಳು:**

**I. ವಿಷಯ ತಜ್ಞರ ಪಾತ್ರ.**

1. ಕಾರ್ಯಕ್ರಮದ ಕಲ್ಪನೆ.
2. ಕಾರ್ಯಕ್ರಮದ ಕರಡು ಪ್ರತಿಯ ರಚನೆ.
3. ವಿಷಯ ತಜ್ಞರು ಮತ್ತು ನಿರ್ದೇಶಕರ ಮಧ್ಯೆ ಚರ್ಚೆ.
4. ಶೈಕ್ಷಣಿಕ ಕರಡು ಪ್ರತಿ ರಚನೆ.

**II. ಸಿದ್ಧಪಡಿಸುವ ಸಿಬ್ಬಂದಿಗಳ ಪಾತ್ರ.**

1. ಪ್ರದರ್ಶನಾಭ್ಯಾಸ ಮಾಡುವುದು.
2. ವೀಡಿಯೋದ ಕರಡು ಪ್ರತಿ ರಚನೆ.

Digitised by Bharatavani, CIIL

3. ಸ್ಟೂಡಿಯೋದ ಸಿದ್ಧತೆ.

4. ವೀಡಿಯೋಗಳನ್ನು ರೆಕಾರ್ಡ ಮಾಡುವುದು.

**ವೀಡಿಯೋ ಸುರುಳಿಗಳ ಉಪಯೋಗಗಳು/ಅನುಕೂಲಗಳು:**

- ವೀಡಿಯೋ ಸುರಳಿಗಳು ಶಬ್ದ ಮತ್ತು ಚಿತ್ರ ಎರಡನ್ನೂ ಹೊಂದಿರುವುದರಿಂದ ಇದು ಒಂದು ಘಟನೆಯ ನೈಜತೆಯ ಅನುಭವವನ್ನು ಉಂಟುಮಾಡುತ್ತದೆ.
- ದೃಕ್ ಶ್ರವಣೋಪಕರಣ ಮತ್ತು ಬರವಣಿಗೆಗಳಿಗಿಂತ ವೀಡಿಯೋ ತುಂಬಾ ಪರಿಣಾಮಕಾರಿಯಾದ ಮಾಧ್ಯಮ, ಏಕೆಂದರೆ ವೀಕ್ಷಕರು ಮಾಹತಿಯನ್ನು ಆಸ್ವಾದಿಸುವಂತೆ ಅತ್ಯುನ್ನತವಾದ ತಂತ್ರಜ್ಞಾನದ ಮೂಲಕ ರಚಿಸಲಾಗಿದೆ.
- ಕಾರ್ಖಾನೆ ಅಥವಾ ಇತರೆ ಸನ್ನಿವೇಶಗಳನ್ನು ವೀಡಿಯೋ ಚಿತ್ರೀಕರಣದ ಮೂಲಕ ತರಗತಿಗೆ ತರಬಹುದು.
- ವೀಕ್ಷಕರಲ್ಲಿ ಆಸಕ್ತಿ ಹಾಗೂ ಪ್ರೇರಣೆಗಳನ್ನು ಉಂಟುಮಾಡುತ್ತದೆ.
- ಸಣ್ಣ ಘಟನೆ ಅಥವಾ ಮಾಹಿತಿಯನ್ನು ನೋಡಿ ಅದರ ಜೊತೆಗೆ ಪ್ರತಿಕ್ರಿಯೆಗೆ ಅವಕಾಶ ನೀಡುವುದರಿಂದ ನೋಡುಗರ ಜ್ಞಾನಾರ್ಜನೆ, ಮನೋಭಾವನೆಗಳಲ್ಲಿ ಬದಲಾವಣೆ ಉಂಟಾಗುತ್ತದೆ.
- ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ಸೂಕ್ಷ್ಮ ಬೋಧನೆಯ ಪಾಠಗಳನ್ನು ರೆಕಾರ್ಡ್ ಮಾಡಲು ಮತ್ತು ನೋಡಲು, ಅನಂತರ ಪ್ರಶಿಕ್ಷಣಾರ್ಥಿಗಳಲ್ಲಿ ಉತ್ತಮ ಸಂವಹನ ಕೌಶಲಗಳನ್ನು ಸುಧಾರಿಸಲು ಇದನ್ನು ಬಳಸಬಹುದಾಗಿದೆ.
- ವೀಡಿಯೋ ಕ್ಯಾಮೆರಾದ ಮೂಲಕ ವಿವಿಧ ಸ್ಥಳಗಳಲ್ಲಿ ಮತ್ತು ದೇಶ ವಿದೇಶಗಳಲ್ಲಿ ಪ್ರಸ್ತುತದಲ್ಲಿ ನಡೆಯುತ್ತಿರುವ ಘಟನೆಗಳ ಮಾಹಿತಿಯನ್ನು ಪಡೆಯಬಹುದು.
- ಶೈಕ್ಷಣಿಕ ಪ್ರವಾಸ, ಉಪನ್ಯಾಸ ಮಾಲಿಕೆ, ಸೆಮಿನಾರ್, ಕಾನ್ಫರೆನ್ಸ ಮತ್ತು ಸಾರ್ವಜನಿಕ ಸಭೆ ಸಮಾರಂಭ ಇತ್ಯಾದಿಗಳನ್ನು ನೋಡಲು ಮತ್ತು ದಾಖಲೆಗಳನ್ನು ನೈಜ ಚಿತ್ರಣಮಾಡಿ ಅವುಗಳನ್ನು ದಾಖಲುಮಾಡಲು ವೀಡಿಯೋ ತಂತ್ರಜ್ಞಾನ ತುಂಬಾ ಸಹಕಾರಿಯಗಿದೆ.
- ಸ್ವ-ಕಲಿಕೆಗೆ ಇದು ಸರಳ ಮಾಧ್ಯಮವಾಗಿದೆ.

ವೀಡಿಯೋ ಸುರುಳಿಯು ಶೈಕ್ಷಣಿಕ ತಂತ್ರಜ್ಞಾನದಲ್ಲಿ ತನ್ನದೆ ಆದ ಮೌಲ್ಯವನ್ನು ಹೊಂದಿದ್ದು, ಆಧುನಿಕ ಯುಗದಲ್ಲಿ ದೂರದರ್ಶನ, ಕಂಪ್ಯೂಟರ್, ಮೊಬೈಲ್, ಇ-ಕಲಿಕೆಗಳ ಸಹಾಯದಿಂದ ಕಲಿಕೆಯ ಮೇಲೆ ಅತಿ ಹೆಚ್ಚು ಪರಿಣಾಮವನ್ನುಂಟುಮಾಡುತ್ತದೆ. ನವೀನ ಮಾದರಿಯಲ್ಲಿ ತುಂಬಾಸರಳವಾಗಿ, ಸುಲಭವಾಗಿ ಅತಿ ಹೆಚ್ಚು ಖರ್ಚಿಲ್ಲದೆ ಆಯಾಯ ವಿಷಯಗಳಿಗೆ ಮತ್ತು ತರಗತಿಗಳಿಗೆ ಅನುಗುಣವಾಗಿ ವೀಡಿಯೋಸುರುಳಿಗಳನ್ನು ಒಮ್ಮೆ ರಚಿಸಿ ಮರು ಬಳಕೆ ಮಾಡುವ ಮೂಲಕ ತರಗತಿಯ ಬೋಧನಾ-ಕಲಿಕಾ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯ, ಅಂತೆಯೆ ಎಲ್ಲಾ ಹಂತದ ವಿದ್ಯಾರ್ಥಿಗಳಲ್ಲಿ ಈ ತಂತ್ರಜ್ಞಾನದಿಂದ ಉತ್ತಮಕಲಿಕೆ ಹಾಗೂ ಉತ್ತಮ ಫಲಿತಾಂಶಗಳನ್ನು ನಿರೀಕ್ಷಿಸಬಹುದು.

–ಡಾ. ನಾಗರಾಜ್ ಜಿ. ಯು.

## ವಿದೇಶಗಳಲ್ಲಿ ಭಾರತೀಯ ವಿದ್ಯಾರ್ಥಿಗಳು

**ಪ್ರಸ್ತಾವನೆ :** ವಿದೇಶದಲ್ಲಿ ಶಿಕ್ಷಣ ಪಡೆಯುವುದು ಅಥವಾ ತರಬೇತಿ ಪಡೆಯುವುದು ಉದಾರ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಗೌರವ ಎಂದು ಬಹುಕಾಲದವರೆಗೆ ಪರಿಗಣಿಸಲಾಗುತ್ತಿತ್ತು. ಆಕ್ಸ್‌ಫರ್ಡ್ ಮತ್ತು ಕ್ಯಾಂಬ್ರಿಡ್ಜ್‌ಗಳು ಫ್ರಾನ್ಸ್ ಹಾಗೂ ಇತರ ರಾಷ್ಟ್ರಗಳ ಕುಲೀನ ವರ್ಗದವರ ವಂಶಸ್ಥರ ನೆಚ್ಚಿನ ಶಿಕ್ಷಣ ಕೇಂದ್ರವಾಗಿತ್ತು. ನಮ್ಮ ದೇಶದ ಮೂವರು ಮಾಜಿ ಪ್ರಧಾನಿಗಳು ಈ ಎರಡು ವಿದೇಶಿ ವಿವಿಗಳಲ್ಲಿ ಕಲಿತವರಾಗಿದ್ದಾರೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಗಾಂಧೀಜಿ, ಜಿನ್ನಾ, ಅಂಬೇಡ್ಕರ್ ಮುಂತಾದ ಮುಖಂಡರು ವಿದೇಶದಲ್ಲಿ ಕಲಿತು ಬಂದವರಾಗಿದ್ದರು.

ದ್ವಿತೀಯ ಮಹಾಯುದ್ಧದ ಬಳಿಕ ವಿದೇಶಗಳಲ್ಲಿ ಕಲಿಯುವ ಪ್ರಕ್ರಿಯೆಗೆ ಹೆಚ್ಚಿನ ಆದ್ಯತೆ ದೊರಕಿತು. ಭಾರತದಂತಹ ಹಲವು ದೇಶಗಳು ಸ್ವಾತಂತ್ರ್ಯ ಪಡೆದ ಬಳಿಕ ಕ್ಷಿಪ್ರವಾಗಿ ಅಭಿವೃದ್ಧಿ ಹೊಂದುವ ಅಗತ್ಯವನ್ನು ಹೊಂದಿದ್ದು ವಿದೇಶಗಳಲ್ಲಿ ಶಿಕ್ಷಣ ಪಡೆಯುವುದು ಮಹತ್ವವನ್ನು ಪಡೆದುಕೊಂಡಿತು. ಕಳೆದೆರಡು ದಶಕಗಳಲ್ಲಿ ತೃತೀಯ ಹಂತದಲ್ಲಿ (ಕಾಲೇಜು/ ವಿವಿ ಶಿಕ್ಷಣ) ವಿದೇಶಗಳಲ್ಲಿ ಶಿಕ್ಷಣ ಪಡೆಯಲು ತೆರಳುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದೆ. 1970ರಲ್ಲಿ 5 ಲಕ್ಷವಾಗಿದ್ದರೆ, 1980ರಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಸಂಖ್ಯೆಯು 12 ಲಕ್ಷ ಹಾಗೂ 90ರ ದಶಕದ ಮಧ್ಯಭಾಗದಲ್ಲಿ 17 ಲಕ್ಷಕೇರಿದೆ. (ಪೊವಾರ್, 1997 ಪುಟ-1).

1990ರ ದಶಕದ ಮಧ್ಯಭಾಗದಲ್ಲಿ, 40 ಸಾವಿರಕ್ಕಿಂತಲೂ ಹೆಚ್ಚಿನ ಭಾರತೀಯ ವಿದ್ಯಾರ್ಥಿಗಳು ತೃತೀಯ ಹಂತದ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳಿದ್ದರು (ಯುನೆಸ್ಕೋ ಸ್ಟಾಟಿಸ್ಟಿಕಲ್ ಇಯರ್ ಬುಕ್ 1998). ಕಡಿಮೆ ಆದಾಯದ ರಾಷ್ಟ್ರಗಳಿಗೆ ಹೋಲಿಸಿದರೆ, ವಿದೇಶಗಳಲ್ಲಿ ಶಿಕ್ಷಣ ಪಡೆಯಲು ತೆರಳಿದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಭಾರತಕ್ಕೆ ಅಗ್ರಸ್ಥಾನ.

ವಿದೇಶದಲ್ಲಿ ಅಧ್ಯಯನ ನಡೆಸಲು ತೆರಳುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಲು ಪ್ರಮುಖ ಕಾರಣಗಳು : ಶಿಕ್ಷಣವು ವಿಶ್ವದಾದ್ಯಂತ ಹೆಚ್ಚಿನ ಬೇಡಿಕೆ ಪಡೆದಿರುವುದು, ಅನೇಕ ರಾಷ್ಟ್ರಗಳಲ್ಲಿ ಹೆಚ್ಚವರಿ ಶಿಕ್ಷಣದ ಸಾಮರ್ಥ್ಯವಿರುವುದು, ಕೋರ್ಸ್‌ಗಳಿಗೆ ಸೇರ್ಪಡೆಗೊಳಿಸುವ ವಿಧಾನ ಸರಳವಾಗಿರುವುದು, ಮಾಹಿತಿ ತಂತ್ರಜ್ಞಾನ, ಬಯೋ-ಮೆಡಿಕಲ್ ಇಂಜಿನಿಯರಿಂಗ್, ವೈದ್ಯಕೀಯ, ದಂತವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ವಿದೇಶದ ಪದವಿಗಳಿಗೆ ಹೆಚ್ಚಿನ ಉದ್ಯೋಗಾವಕಾಶವಿದೆ ಎಂಬ ಕಲ್ಪನೆ, ಕಿರು ಅವಧಿಯಲ್ಲಿ ತತ್ಸಮಾನ ಅರ್ಹತೆಯ ಪದವಿ/ಡಿಪ್ಲೊಮಾ ಪಡೆಯಲು ಅವಕಾಶ ಹಾಗೂ ಭಾರತದಲ್ಲಿ ಅರ್ಥವ್ಯವಸ್ಥೆಯನ್ನು ಉದಾರೀಕರಿಸಿರುವುದು.

**ವಿದೇಶಗಳಲ್ಲಿ ಭಾರತೀಯರ ಸಿಎಸ್‌ಐಆರ್‌ನ ನೋಂದಣಿ:**

ಅಧ್ಯಯನ ನಡೆಸಲು, ತರಬೇತಿ ಪಡೆಯಲು ಅಥವಾ

Digitised by Bharatavani, CIIL

ಉದ್ಯೋಗದ ಕಾರಣದಿಂದ ವಿದೇಶದಲ್ಲಿರುವ ಭಾರತೀಯರನ್ನು ಗುರುತಿಸುವ ಉದ್ದೇಶದಿಂದ 1958ರಲ್ಲಿ ವಿದೇಶದಲ್ಲಿರುವ ಭಾರತೀಯರ ನೋಂದಣಿ ಪುಸ್ತಕವನ್ನು, ವೈಜ್ಞಾನಿಕ ಮತ್ತು ತಾಂತ್ರಿಕ ಸಿಬ್ಬಂದಿಗಳ ರಾಷ್ಟ್ರೀಯ ದಾಖಲೆ ಪುಸ್ತಕದಲ್ಲಿ ಸೇರಿಸಲಾಗಿದ್ದು, ಈ ದಾಖಲೆ ಪುಸ್ತಕದ ನಿರ್ವಹಣೆ ಸಿಎಸ್ಐಆರ್ (ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನಾ ಸಮಿತಿಯ)ನ ಉಸ್ತುವಾರಿಯಲ್ಲಿದೆ. ವಿಜ್ಞಾನ, ಇಂಜಿನಿಯರಿಂಗ್, ತಂತ್ರಜ್ಞಾನ, ವೈದ್ಯಕೀಯ ಅಥವಾ ಉದ್ಯಮ ನಿರ್ವಹಣೆಯಲ್ಲಿ ಪದವಿ/ಡಿಪ್ಲೊಮಾ ಪಡೆದ ಭಾರತೀಯರು, ಪ್ರಸ್ತುತ ವಿದೇಶದಲ್ಲಿರುವವರು ಅಥವಾ 1957ರ ಬಳಿಕ ಭಾರತಕ್ಕೆ ಆಗಮಿಸಿದವರ ಹೆಸರು ಈ ನೋಂದಣಿ ಪುಸ್ತಕದಲ್ಲಿ ದಾಖಲಾಗಿರುತ್ತದೆ. ಈ ನೋಂದಣಿ ಪುಸ್ತಕದಲ್ಲಿ ಹೆಸರಿದ್ದವರ ಬಗ್ಗೆ ಪೂರ್ತಿ ವಿವರವನ್ನು 'ಇಂಡಿಯನ್ ಎಬ್ರಾಡ್ ಡೈರೆಕ್ಟರೀಸ್' ಎಂಬ ಹೆಸರಿನಲ್ಲಿ ನಿಯತವಾಗಿ ಮುದ್ರಿಸಿ ಪ್ರಸಾರ ಮಾಡಲಾಗುತ್ತದೆ. ಈ ವ್ಯಕ್ತಿಗಳಿಗೆ ಹೆಚ್ಚಿನ ಪ್ರಚಾರ ದೊರೆತು. ಇನ್ನಷ್ಟು ಅವಕಾಶ ದೊರೆಯಲಿ ಎಂಬ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ. ಭಾರತಕ್ಕೆ ಮರಳಿರುವ, ಉನ್ನತ ಅರ್ಹತೆಯಿದ್ದೂ ಆಶ್ವಾಸನೆಯಂತೆ ಉದ್ಯೋಗ ದೊರಕದೆ ಇರುವವರ ಹೆಸರುಗಳು ಸಹ ಈ ನಿಯತಕಾಲಿಕೆಯ 'ವಿಜ್ಞಾನಿಗಳು' ವಿಭಾಗದಲ್ಲಿ ತಾತ್ಕಾಲಿಕ ನಿಯೋಜನೆಗಾಗಿ ಕಾಣಿಸಿಕೊಳ್ಳುತ್ತದೆ.

**1965–75ರ ಅವಧಿಯಲ್ಲಿ ವಿದೇಶಕ್ಕೆ ತೆರಳಿದ ಭಾರತೀಯ ವಿದ್ಯಾರ್ಥಿಗಳು ಮತ್ತು ತರಬೇತಿ ಆಕಾಂಕ್ಷಿಗಳು:**

ಈ ಅವಧಿಯಲ್ಲಿ ಸುಮಾರು 47 ಸಾವಿರದಷ್ಟು ವಿದ್ಯಾರ್ಥಿಗಳು ಹಾಗೂ ತರಬೇತಿ ಆಕಾಂಕ್ಷಿಗಳು ವಿದೇಶಕ್ಕೆ ತೆರಳಿದ್ದಾರೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ 34,660 ಮಂದಿ, ಅಂದರೆ ಸುಮಾರು ಶೇ. 74ರಷ್ಟು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಸೇರಿದವರು. ಕಲೆ ಮತ್ತು ಮಾನವಶಾಸ್ತ್ರಕ್ಕೆ ಸಂಬಂಧಿಸಿದವರು 12,300 ಮಂದಿ, ಇವರು ಒಟ್ಟು ಸಂಖ್ಯೆಯ ಶೇ. 26 ಭಾಗಮಾತ್ರ. ಇಂಜಿನಿಯರಿಂಗ್ ವಿಭಾಗಕ್ಕೆ ಸೇರಿದವರದೇ ಅತಿ ದೊಡ್ಡಗುಂಪು ಇದು ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯ ಸುಮಾರು ಶೇ. 8.00 ಭಾಗ. ಉದ್ಯಮ ತಂತ್ರಜ್ಞಾನ ಕ್ಷೇತ್ರದವರು ಶೇ. 14, ವಿಜ್ಞಾನ ಮತ್ತು ತಂತ್ರಜ್ಞಾನದ ವಿದ್ಯಾರ್ಥಿಗಳು ಮತ್ತು ತರಬೇತಿ ಆಕಾಂಕ್ಷಿಗಳು ಶೇ. 51.4 ರಷ್ಟಿದ್ದರೆ, ವೈದ್ಯಕೀಯ ಶೇ. 4.5ರಷ್ಟು ನರ್ಸಿಂಗ್ ಶೇ. 2.7ರಷ್ಟಿದ್ದರೆ, ಕೃಷಿಯನ್ನು ಪ್ರತಿನಿಧಿಸುವವರು ಕೇವಲ ಶೇ. 1.5ರಷ್ಟು ಇದ್ದಾರೆ.

1965–75ರ ಅವಧಿಯಲ್ಲಿ ಭಾರತದಿಂದ ವಿದೇಶಕ್ಕೆ ತೆರಳಿದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಮಂದಿ ಯುಎಸ್ಎ., ಯು.ಕೆ., ಪಶ್ಚಿಮ ಜರ್ಮನಿ ಮತ್ತು ಕೆನಡಾವನ್ನು ಆರಿಸಿಕೊಂಡಿದ್ದರು. ಒಟ್ಟು 34,660 ವಿದ್ಯರ್ಥಿಗಳಲ್ಲಿ 20,476 ಜನ ಯುಎಸ್ಎಗೆ ತೆರಳಿದ್ದರು (ಅಂದರೆ ಐದನೇ ಮೂರಂಶ). ಉಳಿದಂತೆ ಯುಕೆ ಮತ್ತು ಪ.ಜರ್ಮನಿಗಳು ಅನುಕ್ರಮವಾಗಿ ಏಳನೇ ಒಂದು ಅಂಶ ಹಾಗೂ 12ನೇ ಒಂದು ಅಂಶ, ಕೆನಡಾ ಮತ್ತು ಇತರ ಪಶ್ಚಿಮ ಯುರೋಪ್ ರಾಷ್ಟ್ರಗಳು ಶೇ. 5ಕ್ಕಿಂತಲೂ ಕಡಿಮೆ, ಫ್ರಾನ್ಸ್, ಜಪಾನ್, ಯುಎಸ್ಎಸ್ಆರ್., ಪೂರ್ವ ಜರ್ಮನಿ ಮತ್ತು ಇತರ ಪೂರ್ವ ಯುರೋಪ್ ರಾಷ್ಟ್ರಗಳಿಗೆ ಶೇ. 2ಕ್ಕಿಂತಲೂ ಕಡಿಮೆ ಭಾರತೀಯ ವಿದ್ಯಾರ್ಥಿಗಳು ತೆರಳಿದ್ದರು.

1965–70ರಲ್ಲಿ ಹಾಗೂ 1970–75ರಲ್ಲಿ ವಿವಿಧ ವಿದೇಶಿ ರಾಷ್ಟ್ರಗಳಿಗೆ ತೆರಳಿದ ವಿದ್ಯಾರ್ಥಿಗಳು ಮತ್ತು ತರಬೇತಿ ಆಕಾಂಕ್ಷಿಗಳನ್ನು ಹೋಲಿಸಿದರೆ, ಯುಎಸ್ಎಗೆ ಹೋದವರಲ್ಲಿ 2,550 ಮಂದಿ ಕಡಿಮೆಯಾದರೆ, ಕೆನಡಾಕ್ಕೆ ಹೋದವರಲ್ಲಿ 850 ಮಂದಿ ಕಡಿಮೆ ಹಾಗೂ ಯುಕೆಗೆ 600 ಮಂದಿ ಕಡಿಮೆ ಹೋಗಿದ್ದರು. ಪಶ್ಚಿಮ ಜರ್ಮನಿ, ಯುಎಸ್ಎಸ್ಆರ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ಗೆ ತೆರಳುವವರ ಪ್ರಮಾಣ ಸ್ವಲ್ಪ ಹೆಚ್ಚಾಯಿತು. ಆದರೆ, 965–70ಕ್ಕೆ ಹೋಲಿಸಿದರೆ, 1970–750 ಪ್ರಮಾಣವು ಸ್ವಲ್ಪ ಇಳಿಮುಖವಾಗಿದೆ (ಬಿ.ಕೆ.ನಾಯರ್, ಸಿಆರ್ಎಸ್ ರಾವ್ ಮತ್ತು ಎಸ್.ಎಸ್. ಗುಪ್ತಾ, ಜರ್ನಲ್ ಆಫ್ ಹೈಯರ್ ಎಜುಕೇಶನ್, ಸಂಪುಟ 4, ನಂ. 2, 1978). ಒಟ್ಟು ಸಂಖ್ಯೆಯಲ್ಲಿ ಸುಮಾರು 4,500 ಕಡಿಮೆಯಾದರೂ, ರಾಷ್ಟ್ರಗಳ ತಲಾವಾರು ಹಂಚಿಕೆಯಲ್ಲಿ ವಿಶೇಷ ವ್ಯತ್ಯಾಸವೇನೂ ಆಗಲಿಲ್ಲ. (ಕೆನಡಾವು ಶೇ.4ರಷ್ಟು ಕಡಿಮೆ ಮತ್ತು ಪಶ್ಚಿಮ ಜರ್ಮನಿ ಶೇ. 3ರಷ್ಟು ಹೆಚ್ಚಿಗೆ ಪಡೆದುದನ್ನು ಹೊರತುಪಡಿಸಿ).

**ವಿದೇಶದಲ್ಲಿ ವಿದ್ಯಾರ್ಜನೆಯ ಅಥವಾ ತರಬೇತಿ ಕ್ಷೇತ್ರ (1965–75):**

1965–75ರ ಅವಧಿಯಲ್ಲಿ, ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿದೇಶಕ್ಕೆ ತೆರಳಿದ್ದ ಭಾರತದ 6,436 ಮಂದಿಯಲ್ಲಿ ಸುಮಾರು ಶೇ. 65ರಷ್ಟು ಮಂದಿ ಯುಎಸ್ಎಗೆ ತೆರಳಿದ್ದರೆ, ಶೇ. 14ರಷ್ಟು ಮಂದಿ ಯುಕೆ., ಶೇ. 75ರಷ್ಟು ಮಂದಿ ಕೆನಡಾಕ್ಕೆ ತೆರಳಿದ್ದರು. ವಿಜ್ಞಾನ ಕ್ಷೇತ್ರದ ವಿದ್ಯಾರ್ಥಿಗಳು ಮತ್ತು ತರಬೇತಿ ಆಕಾಂಕ್ಷಿಗಳಲ್ಲಿ ಶೇ. 86ರಷ್ಟು ಪಾಲನ್ನು ಈ ಮೂರು ರಾಷ್ಟ್ರಗಳು ಪಡೆದಿವೆ. ಪಶ್ಚಿಮ ಜರ್ಮನಿಯು ಕೇವಲ ಶೇ. 3 ಪಾಲು ಪಡೆದಿದೆ. ಕೃಷಿ ಕ್ಷೇತ್ರದಲ್ಲಿ ಯುಎಸ್ಎ ಮತ್ತು ಯುಕೆಗೆ ತೆರಳುವವರ ಸಂಖ್ಯೆ ಕ್ರಮವಾಗಿ ಶೇ. 46 ಮತ್ತು ಶೇ. 9.0 ಮಾತ್ರ. ಕೆನಡಾವು ಶೇ. 10ರಷ್ಟು ಜನರನ್ನು ಆಕರ್ಷಿಸಿದರೆ, ಪಶ್ಚಿಮ ಜರ್ಮನಿ ಶೇ. 6.5, ಜಪಾನ್ ಶೇ. 3.4 , ಫ್ರಾನ್ಸ್ ಶೇ. 33, ಯುಎಸ್ಎಸ್ಆರ್‌ಗೆ ಶೇ. 3.1 ರಷ್ಟು ಮಂದಿ ತೆರಳಿದ್ದಾರೆ.

ಇಂಜಿನಿಯರಿಂಗ್ ಕ್ಷೇತ್ರದ ಸ್ಥಿತಿಯೂ ಹೆಚ್ಚುಕಡಿಮೆ ವಿಜ್ಞಾನ ಕ್ಷೇತ್ರದ ರೀತಿಯಲ್ಲೇ ಇದೆ. ಇಂಜಿನಿಯರಿಂಗ್‌ನಲ್ಲಿ ಯುಎಸ್ಎ ಶೇ. 74, ಪಡೆದಿದ್ದು ಇದು ವಿಜ್ಞಾನಕ್ಕಿಂತ ಅಲ್ಪ ಹೆಚ್ಚಾಗಿದೆ. ಯುಕೆ ಶೇ. 10 ಪಾಲು ಪಡಡೆದಿದ್ದು ಇದು ವಿಜ್ಞಾನಕ್ಕಿಂತ ಅಲ್ಪ ಕಡಿಮೆಯಾಗಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಯುಎಸ್ಎ ಮತ್ತು ಯುಕೆಗಳು ತಲಾ ಶೇ. 26, ಜರ್ಮನಿ ಶೇ. 16 ಹಾಗೂ ಇತರ ಪಶ್ಚಿಮ ಯುರೋಪ್ ರಾಷ್ಟ್ರಗಳು ಶೇ. 10ರಷ್ಟು ಪಾಲು ಪಡೆದಿವೆ. ವೈದ್ಯಶಾಸ್ತ್ರದಲ್ಲಿ ಯುಕೆ

Digitised by Bharatavani, CIIL

ಶೇ. 30ರಷ್ಟು ಪಾಲು ಪಡೆದಿದ್ದು ಇದು ಇತರ ಕ್ಷೇತ್ರಗಳಿಗಿಂತ ಅಧಿಕವಾಗಿದೆ. ಯುಎಸ್‌ಎ ಶೇ. 50ರಷ್ಟು ಭಾರತೀ ವಿದ್ಯಾರ್ಥಿಗಳನ್ನು ಮತ್ತು ತರಬೇತಿ ಆಕಾಂಕ್ಷಿಗಳನ್ನು ಆಕರ್ಷಿಸಿದೆ. ಆದರೆ ನರ್ಸಿಂಗ್ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಶೇ. 80ರಷ್ಟು ಮಂದಿ ಪಶ್ಚಿಮ ಜರ್ಮನಿಗೆ ತೆರಳಿದ್ದರೆ, ಯುಎಸ್‌ಎ ಮತ್ತು ಯುಕೆಯ ಪಾಲು ಕ್ರಮವಾಗಿ ಶೇ. 8 ಮತ್ತು ಶೇ. 3 ಮಾತ್ರವಾಗಿದೆ.

ಒಟ್ಟಾರೆಯಾಗಿ, ವಿಜ್ಞಾನ, ಕೃಷಿ, ಇಂಜಿನಿಯರಿಂಗ್ ಹಾಗೂ ವೈದ್ಯಶಾಸ್ತ್ರದಲ್ಲಿ ಯುಎಸ್‌ಎ ಹೆಚ್ಚಿನ ಭಾರತೀಯ ವಿದ್ಯಾರ್ಥಿಗಳು/ತರಬೇತಿ ಆಕಾಕ್ಷಿಗಳನ್ನು ಹೊಂದಿದ್ದರೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಯುಎಸ್‌ಎ ಹಾಗೂ ಯುಕೆ ಬಹುತೇಕ ಸಮಪ್ರಮಾಣದ ಭಾರತೀಯ ವಿದ್ಯಾರ್ಥಿಗಳು/ತರಬೇತಿ ಆಕಾಂಕ್ಷಿಗಳನ್ನು ಹೊಂದಿವೆ. ಪಶ್ಚಿಮ ಜರ್ಮನಿಯು ನರ್ಸಿಂಗ್ ವಿದ್ಯಾರ್ಥಿಗಳು/ತರಬೇತಿ ಆಕಾಂಕ್ಷಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಆಕರ್ಷಿಸಿದೆ.

1000ಕ್ಕಿಂತ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಪ್ರತ್ಯೇಕ ಕ್ಷೇತ್ರಗಳಲ್ಲಿ ಪಡೆದಿರುವ ರಾಷ್ಟ್ರಗಳೆಂದರೆ ಇವುಗಳ ಜೊತೆಗೆ ಸುಮಾರು 900 ವಿದ್ಯಾರ್ಥಿಗಳು ವಿಜ್ಞಾನ ವಿಭಾಗಕ್ಕೆ ಯು.ಕೆ.ಯ ಸುಮಾರು 950 ವಿದ್ಯಾರ್ಥಿಗಳು ಇಂಜಿನಿಯರಿಂಗ್ ವಿಭಾಗಕ್ಕೆ ಕೆನಡಾಕ್ಕೂ, ಸುಮಾರು 975 ವಿದ್ಯಾರ್ಥಿಗಳು ನರ್ಸಿಂಗ್‌ಗಾಗಿ ಪಶ್ಚಿಮ ಜರ್ಮನಿಗೂ ತೆರಳಿದ್ದಾರೆ. ಯುಎಸ್‌ಎ 13,163 ಇಂಜಿನಿಯರಿಂಗ್ 4,175 ವಿಜ್ಞಾನ, 1657 ತಂತ್ರಜ್ಞಾನ ಹಾಗೂ 1061 ವೈದ್ಯಕೀಯ ಶಾಸ್ತ್ರದ ವಿದ್ಯಾರ್ಥಿಗಳನ್ನು ಆಕರ್ಷಿಸಿದರೆ, ಯುಕೆ 1694 ಇಂಜಿನಿಯರಿಂಗ್, 1662 ತಂತ್ರಜ್ಞಾನ ವಿದ್ಯಾರ್ಥಿಗಳನ್ನು, ಪಶ್ಚಿಮ ಜರ್ಮನಿಯು 1016 ತಂತ್ರಜ್ಞಾನ, ವಿದ್ಯಾರ್ಥಿಗಳನ್ನು ಆಕರ್ಷಿಸಿದೆ.

ದ್ವಿತೀಯ ಪಂಚವರ್ಷಕ್ಕೆ ಹೋಲಿಸಿದಲ್ಲಿ ಪ್ರಥಮ ಪಂಚವರ್ಷದಲ್ಲಿ (1965–70) ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವಿದೇಶಕ್ಕೆ ತೆರಳಿದವರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಳವಾಗಿದೆ (ನರ್ಸಿಂಗ್ ಕ್ಷೇತ್ರ ಹೊರತುಪಡಿಸಿ). ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ 1968–09 ರಲ್ಲಿ ಈ ಗರಿಷ್ಠವಾಗಿತ್ತು. ಒಟ್ಟಾರೆ ಹೇಳುವುದಾದೆ, ವೈದ್ಯಕೀಯ ಸಿಬ್ಬಂದಿಗಳನ್ನು ಹೊರತುಪಡಿಸಿ, ವರ್ಷದಿಂದ ವರ್ಷಕ್ಕೆ ವಿದೇಶಕ್ಕೆ ಹೋಗುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ವ್ಯಕ್ತಿಗಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಾ ಸಾಗುತ್ತಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಆದರೆ ವೈದ್ಯಕೀಯ ಸಿಬ್ಬಂದಿಯಲ್ಲಿ ಇದು ವ್ಯತಿರಿಕ್ತವಾಗಿದೆ.

ಹೀಗೆ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ವಿದ್ಯಾರ್ಥಿಗಳನ್ನು ತರಬೇತಿ ಆಕಾಂಕ್ಷಿಗಳನ್ನು ಆಕರ್ಷಿಸಿದ ರಾಷ್ಟ್ರಗಳೆಂದರೆ ಯುಎಸ್‌ಎ., ಯುಕೆ ಮತ್ತು ಪಶ್ಚಿಮ ಜರ್ಮನಿ. ಇದರಲ್ಲಿ ಯುಎಸ್‌ಎಯ ಪಾಲು ಐದರಲ್ಲಿ ಮೂರು, ಯುಕೆ ಏಳರಲ್ಲಿ ಒಂದು, ಪಶ್ಚಿಮ ಜರ್ಮನಿ ಹನ್ನೆರಡನೇ ಒಂದು. ದ್ವಿತೀಯ ಪಂಚವರ್ಷದ ಅವಧಿಯಲ್ಲಿ ಸ್ವಲ್ಪ ಮಟ್ಟಿನ ಇಳಿಮುಖವಾದರೂ ಈ ರಾಷ್ಟ್ರಗಳ ನಡುವಿನ ಸರಾಸರಿ ಹಂಚಿಕೆಯ ಅನುಪಾತ ಬಹುತೇಕ ಸಮವಾಗಿತ್ತು. ಯುಎಸ್‌ಎಯು ವಿಜ್ಞಾನ ಕೃಷಿ, ಇಂಜಿನಿಯರಿಂಗ್ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ಅತ್ಯಧಿಕ ಭಾರತೀಯ ವಿದ್ಯಾರ್ಥಿಗಳನ್ನು ಹೊಂದಿತ್ತು. ಯುಎಸ್‌ಎ ಮತ್ತು ಯುಕೆಗಳು ತಂತ್ರಜ್ಞಾನ ಕ್ಷೇತ್ರದಲ್ಲಿ ಸರಿಸುಮಾರು ಸಮಸಮಭಾಗ ಹೊಂದಿದ್ದವು. ಪಶ್ಚಿಮ ಜರ್ಮನಿಯು ನರ್ಸಿಂಗ್ ಕ್ಷೇತ್ರದಲ್ಲಿ ಗರಿಷ್ಠ ಶೇಕಡಾ ಪ್ರಮಾಣ ಹೊಂದಿತ್ತು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ವಿದ್ಯಾರ್ಥಿಗಳು/ತರಬೇತಿ ಆಕಾಂಕ್ಷಿಗಳಲ್ಲಿ 8 ಸಾವಿರಕ್ಕೂ ಹೆಚ್ಚು ಮಂದಿ ಮಹಾರಾಷ್ಟ್ರದಿಂದ, ಸುಮಾರು 5 ಸಾವಿರ ಮಂದಿ ಗುಜರಾತ್‌ನಿಂದ, 4 ಸಾವಿರ ಮಂದಿ ದಿಲ್ಲಿಯಿಂದ ಮತ್ತು ತಲಾ 1,500 ಮಂದಿ ಪ.ಬಂಗಾಲ, ತಮಿಳ್ನಾಡು ಆಂಧ್ರಪ್ರದೇಶ, ಕರ್ನಾಟಕ ಹಾಗೂ ಕೇರಳದಿಂದ ತೆರಳಿದ್ದಾರೆ. ಹಿಂದಿನ ಐದು ವರ್ಷಕ್ಕೆ ಹೋಲಿಸಿದರೆ, ಬಹುತೇಕ ರಾಜ್ಯಗಳು (ಗುಜರಾತ್ ಮತ್ತು ಕೇರಳ ಹೊರತುಪಡಿಸಿ) 1970–75ರ ಅವಧಿಯಲ್ಲಿ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳನ್ನು ವಿದೇಶಕ್ಕೆ ಕಳಿಸಿದ್ದವು. ವಿಜ್ಞಾನ, ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮಹಾರಾಷ್ಟ್ರದ ವಿದ್ಯಾರ್ಥಿಗಳು ಅತ್ಯಧಿಕವಾಗಿದ್ದರು. ದಿಲ್ಲಿ ಮತ್ತು ಆಂಧ್ರಪ್ರದೇಶದ ವಿದ್ಯಾರ್ಥಿಗಳು ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಿದ್ದಾರೆ. ವೈದ್ಯಕೀಯ ಶಾಸ್ತ್ರದಲ್ಲಿ ಮತ್ತು ನರ್ಸಿಂಗ್‌ನಲ್ಲಿ ಕೇರಳದ ವಿದ್ಯಾರ್ಥಿಗಳು ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

**1991–97 ಅವಧಿಯಲ್ಲಿ ವಿದೇಶಕ್ಕೆ ತೆರಳಿದ ಭಾರತೀಯ ವಿದ್ಯಾರ್ಥಿಗಳು ಮತ್ತು ತರಬೇತಿ ಆಕಾಂಕ್ಷಿಗಳು:**

1992ರಿಂದ 96–97ರ ಅವಧಿಯಲ್ಲಿ 28 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ವಿದೇಶಕ್ಕೆ ತೆರಳಿದ್ದಾರೆ ಎಂದು ವರದಿಗಳು ತಿಳಿಸುತ್ತವೆ. ಇವರಲ್ಲಿ ಶೇ. 71.4ರಷ್ಟು ಮಂದಿ ಅಮೇರಿಕಾಕ್ಕೆ, ಶೇ. 13.8 ಮಂದಿ ಓಶಿಯನ ರಾಷ್ಟ್ರಗಳಿಗೆ, ಶೇ. 12.2ರಷ್ಟು ಮಂದಿ ಯುರೋಪ್‌ಗೆ, ಶೇ. 1ರಷ್ಟು ಮಂದಿ ಏಷ್ಯಾದ ರಾಷ್ಟ್ರಗಳಿಗೆ ಮತ್ತು ಶೇ. 1.5 ರಷ್ಟು ಮಂದಿ ಇತರ ರಾಷ್ಟ್ರಗಳಿಗೆ ತೆರಳಿದ್ದರು.

ಈ ಅವಧಿಯಲ್ಲಿ ವಿದೇಶಗಳಿಗೆ ತೆರಳಿದವರಲ್ಲಿ ಶೇ. 70ಕ್ಕೂ ಹೆಚ್ಚಿನ ಮಂದಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರವನ್ನು, ಶೇ. 23ರಷ್ಟು ಮಂದಿ ವ್ಯವಹಾರ ಆಡಳಿತ ಮತ್ತು ವ್ಯವಸ್ಥಾಪನ (ಬಿಸಿನೆಸ್ ಮ್ಯಾನೇಜ್‌ಮೆಂಟ್ ಆಂಡ್ ಎಡ್ಮಿನಿಸ್ಟ್ರೇಷನ್) ಹಾಗೂ ಕೇವಲ ಶೇ. 7ರಷ್ಟು ಮಂದಿ ಕಲೆ ಮತ್ತು ಮಾನವಿಕ, ಕಾನೂನು, ಶಿಕ್ಷಣ, ಲಲಿತಕಲೆ, ಗ್ರಂಥಾಲಯ ವಿಜ್ಞಾನ ಇತ್ಯಾದಿ ಕ್ಷೇತ್ರಗಳನ್ನು ಆರಿಸಿಕೊಂಡಿದ್ದರು.

ಈ ಅವಧಿಯಲ್ಲಿ ವಿದೇಶಕ್ಕೆ ತೆರಳಿದವರ ಸರಾಸರಿ ಸಂಖ್ಯೆ 4700 ಆಗಿದ್ದರೂ, ವರ್ಷಂಪ್ರತಿ ಲೆಕ್ಕಾಚಾರ ಹಾಕಿದರೆ ವಿದೇಶಕ್ಕೆ ಹೋದವರ ಸಂಖ್ಯೆ, ಅವರು ಆರಿಸಿಕೊಂಡ ವಿಷಯ ಅಥವಾ ತೆರಳಿದ ರಾಷ್ಟ್ರದ ವಿಷಯದಲ್ಲಿ ಬಹಳಷ್ಟು ಏರುಪೇರುಗಳಿದ್ದವು.

ವಿದೇಶಕ್ಕೆ ತೆರಳಿದವರ ಸಂಖ್ಯೆ 1990–92ರ ಅವಧಿಯಲ್ಲಿ ಸುಮಾರು 6466 ಆಗಿತ್ತು. 1993–94ರಲ್ಲಿ ಈ ಸಂಖ್ಯೆ 2284ಕ್ಕೆ

Digitised by Bharatavani, CIIL

ಇಳಿಯಿತು. ಆದರೆ 1996–97ರಲ್ಲಿ ಮತ್ತೆ 6423ಕ್ಕೆ ಏರಿತು. ಅಮೆರಿಕಾಕ್ಕೆ ತೆರಳುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ 1991–92 ರಲ್ಲಿ ಶೇ. 92ರಷ್ಟಿದ್ದರೆ, ಮುಂದಿನ ಐದು ವರ್ಷಗಳ ಅವಧಿಯಲ್ಲಿ ಇದು ತೀವ್ರ ಕುಸಿತ ಕಂಡು ಶೇ. 47ಕ್ಕೆ ತಲುಪಿತು. ಇದೇ ವೇಳೆ ಯುರೋಪ್‌ಗೆ, ಅದರಲ್ಲೂ ಯುಕೆಗೆ ತೆರಳುವವರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡು ಬಂದು ಶೇ. 4.4ರಿಂದ ಶೇ. 21ಕ್ಕೆ ತಲುಪಿತು. 91–92ರಲ್ಲಿ ಓಶಿಯಾನಾ ರಾಷ್ಟ್ರಗಳ ಪಾಲು ಶೇ. 2.3 ಆಗಿದ್ದರೆ, 1996–97ರಲ್ಲಿ ಇದು ಶೇ. 25ಕ್ಕೆ ತಲುಪಿತು. ಕಲಿಕೆಯ ವಿಷಯದಲ್ಲೂ ಗಮನಾರ್ಹ ಬದಲಾವಣೆಗಳಾಗಿವೆ. 1991–92ರಲ್ಲಿ ಇಂಜಿನಿಯರಿಂಗ್ ವಿಷಯದ ಪಾಲು ಶೇ. 37 ಆಗಿದ್ದರೆ, 1996–97ರಲ್ಲಿ ಶೇ. 23ಕ್ಕೆ ತಲುಪಿತು. ಇದೇ ಅವಧಿಯಲ್ಲಿ ವಿಜ್ಞಾನ ವಿಷಯ ಕೂಡಾ ಶೇ. 21.4ರಿಂದ ಶೇ. 11ಕ್ಕೆ ತಲುಪಿತು. ಆಡಳಿತ ನಿರ್ವಹಣೆ ಮತ್ತು ವ್ಯವಸ್ಥಾಪನೆ 1991–92ರಲ್ಲಿ ಶೇ. 14–6 ಇದ್ದದ್ದೂ 1996–97ರಲ್ಲಿ ಶೇ. 27.7ಕ್ಕೆ ತಲುಪಿತು. ಕಲೆಯ ವಿಷಯವು 91–92ರಲ್ಲಿ ಶೇ. 3.2 ಆಗಿದ್ದರೆ, 93–94ರಲ್ಲಿ ಶೇ. 6ಕ್ಕೆ ತಲುಪಿತು. ಆದರೆ 1996–97ರಲ್ಲಿ ಶೇ. 3.7ಕ್ಕೆ ಇಳಿಯಿತು. 1996–97ರಲ್ಲಿ ಅಧ್ಯಯನಕ್ಕೆಂದು ವಿದೇಶಕ್ಕೆ ತೆರಳಿದ್ದ 6 ಸಾವಿರ ಭಾರತೀಯ ವಿದ್ಯಾರ್ಥಿಗಳಲ್ಲಿ (ಇವರಲ್ಲಿ ತರಬೇತಿಗೆಂದು ತೆರಳಿದ್ದ 258 ಮಂದಿ ಸೇರಿಲ್ಲ) ಸುಮಾರು 2880, ಅಂದರೆ ಶೇ. 46.7ರಷ್ಟು ಮಂದಿ ಯುಎಸ್‌ಎಗೆ, 1710 (ಶೇ. 27.7) ಮಂದಿ ಆಸ್ಟ್ರೇಲಿಯಾಕ್ಕೆ ತೆರಳಿದ್ದು ಇವೆರಡೂ ಸಂಖ್ಯೆಯನ್ನು ಒಟ್ಟುಗೂಡಿಸಿದರೆ ಸುಮಾರು ಶೇ. 75 ಆಗುತ್ತದೆ. ಸೋವಿಯಟ್ ರಷ್ಯಾಕ್ಕೆ ತೆರಳಿದವರ ಸಂಖ್ಯೆ 57.2, ಯುಕೆಗೆ 510, ಕೆನಡಾಕ್ಕೆ 109 ಮಂದಿ ತೆರಳಿದ್ದರೆ, 30ಕ್ಕೂ ಅಧಿಕ ಮಂದಿ ತೆರಳಿದ ರಾಷ್ಟ್ರಗಳೆಂದರೆ ಸ್ವಿಡ್‌ಝುರ್ಲ್ಯಾಂಡ್–70, ಫಿಲಿಫೈನ್ಸ್–55 ಮತ್ತು ಬೆಲ್ಜಿಯಂ–35, ಸ್ವಿಡ್‌ಝುರ್ಲ್ಯಾಂಢೀಗೆ ತೆರಳಿದವರಲ್ಲಿ 32 ಮಂದಿ, ಫೀಲಿಫೈನ್ಸ್‌ಗೆ ಹೋದವರಲ್ಲಿ 50 ಹಾಗೂ ಬೆಲ್ಜಿಯಂಗೆ ಹೋದವರಲ್ಲಿ 31 ಮಂದಿ ವ್ಯವಹಾರ ಆಡಳಿತ ಮತ್ತು ನಿರ್ವಹಣೆ ವಿಷಯವನ್ನು ಆರಿಸಿಕೊಂಡರೆ, ಈ ಅವಧಿಯಲ್ಲಿ ಅಂದರೆ 1996–97ರಲ್ಲಿ ಜರ್ಮನಿ, ಫ್ರಾನ್ಸ್, ಇಟಲಿ ಮತ್ತು ಸ್ಪೈನ್‌ಗೆ ತೆರಳಿದವರ ಒಟ್ಟು ಸಂಖ್ಯೆ 10ನ್ನು ತಲುಪಿಲ್ಲ.

ಈ ಅವಧಿಯಲ್ಲಿ ಆಂಧ್ರದಿಂದ ಅತಿ ಹೆಚ್ಚು ಮಂದಿ ತೆರಳಿದ್ದರೆ, ದಿಲ್ಲಿ, ತಮಿಳ್ನಾಡು, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳು ಆ ಬಳಿಕದ ಸ್ಥಾನ ಪಡೆದಿವೆ. 1996–67ರಲ್ಲಿ ದಿಲ್ಲಿಯ ಕಲೆ, ವಾಣಿಜ್ಯ, ವ್ಯವಹಾರ ಆಡಳಿತ ಮತ್ತು ಲಲಿತಕಲೆ ವಿಷಯದಲ್ಲಿ ಮೊದಲ ಸ್ಥಾನದಲ್ಲಿದ್ದರೆ, ತಮಿಳ್ನಾಡು ವಿಜ್ಞಾನ, ವೈದ್ಯಕೀಯ ಶಾಸ್ತ್ರ, ಫಾರ್ಮಸಿ ಮತ್ತು ಕೃಷಿಯಲ್ಲಿಯೂ, ಆಂಧ್ರ ಪ್ರದೇಶ ಇಂಜಿನಿಯರಿಂಗ್‌ನಲ್ಲಿಯೂ ಅಗ್ರಸ್ಥಾನ ಪಡೆದಿವೆ.

ಅಮೆರಿಕಾವನ್ನು ಈ ಹಿಂದೆ ವಿದೇಶಕ್ಕೆ ತೆರಳುವ ಭಾರತೀಯ ವಿದ್ಯಾರ್ಥಿಗಳ ನೆಚ್ಚಿನ ತಾಣ ಎಂದು ಕರೆಯಲಾಗುತ್ತಿತ್ತು. 1992–93ರಲ್ಲಿ ವಿದೇಶಕ್ಕೆ ತೆರಳಿದ ಶೇ. 90ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಆರಿಸಿಕೊಂಡಿದ್ದು ಅಮೆರಿಕಾವನ್ನು, ಆದರೆ 96–97ರ ವೇಳೆಗೆ ಈ ಪ್ರಮಾಣ ಶೇ. 50ಕ್ಕೂ ಕಡಿಮೆಗೆ ತಲುಪಿತು.

ಇಂಜಿನಿಯರಿಂಗ್ ವಿಷಯವು ಉನ್ನತ ಶಿಕ್ಷಣ ಆಕಾಂಕ್ಷಿಗಳ ನೆಚ್ಚಿನ ವಿಷಯ ಎಂಬ ಹೆಗ್ಗಳಿಕೆಯನ್ನು ಹೊಂದಿದ್ದು, ಈ ಹೆಗ್ಗಳಿಕೆಗೂ ಪೆಟ್ಟು ಬಿದ್ದಿತು. ಶೇ. 38ರಷ್ಟು ಮಂದಿ ವಿದೇಶದಲ್ಲಿ ಇಂಜಿನಿಯರಿಂಗ್ ಶಿಕ್ಷಣಕಾಂಕ್ಷಿಗಳಾಗಿ ತೆರಳಿದ್ದು ಇವರಲ್ಲಿ ಶೇ. 23 ರಷ್ಟು ಮಂದಿ ಅಮೆರಿಕಾಕ್ಕೆ ತೆರಳಿದ್ದರು. 1996–97ರ ವೇಳೆಗೆ ಇಂಜಿನಿಯರಿಂಗ್ ಶಿಕ್ಷಣಕ್ಕೆ ತೆರಳಿದವರ ಸಂಖ್ಯೆ ಶೇ. 23 ಆಗಿದ್ದರೆ, ಇವರಲ್ಲಿ ಅಮೆರಿಕಾಕ್ಕೆ ತೆರಳಿದವರ ಸಂಖ್ಯೆ ಕೇವಲ ಶೇ. 16 ಆಗಿತ್ತು. ಈ ಹಿಂದೆ ಇಂಜಿನಿಯರಿಂಗ್ ವಿಷಯವು ವಿಪುಲ ಉದ್ಯೋಗ ಅವಕಾಶದ ಚಿನ್ನದ ಗಣಿ ಎಂದು ಬಿಂಬಿತವಾಗಿದ್ದರೆ, ಕ್ರಮೇಣ ವ್ಯವಹಾರ ಆಡಳಿತ ನಿರ್ವಹಣೆ ವಿಷಯವು ಹೆಚ್ಚಿನ ಪ್ರಾಧಾನ್ಯ ಪಡೆದುಕೊಂಡಿತು.

1992–1993ರ ವೇಳೆಗೆ ವಿದೇಶದಲ್ಲಿದ್ದ ಸುಮಾರು 6500 ಮಂದಿಯಲ್ಲಿ ಐದನೇ ಎರಡಂಶದಷ್ಟು ಮಂದಿ ಇಂಜಿನಿಯರಿಂಗ್ ವಿಷಯವನ್ನು ಆರಿಸಿಕೊಂಡರೆ, ಕೇವಲ ಎಂಟನೇ ಒಂದು ಅಂಶದಷ್ಟು ಮಂದಿ ವ್ಯವಹಾರ ಆಡಳಿತ ನಿರ್ವಹಣೆ ವಿಷಯವನ್ನು ಆರಿಸಿಕೊಂಡಿದ್ದರು. 1996–97ರ ಅವಧಿಯಲ್ಲಿ ವಿದೇಶಕ್ಕೆ ತೆರಳಿದ ವಿದ್ಯಾರ್ಥಿಗಳ ಸಂಖ್ಯೆ 1500ಕ್ಕೂ ಅಧಿಕವಾಗಿತ್ತು. ಇವರಲ್ಲಿ ಕೇವಲ ಶೇ. 23ರಷ್ಟು ಮಂದಿ ಇಂಜಿನಿಯರಿಂಗ್ ವಿಷಯದತ್ತ ಆಸಕ್ತರಾದರೆ, ವ್ಯವಹಾರ ಆಡಳಿತ ನಿರ್ವಹಣೆಯತ್ತ (ಬಿಎಂ ಮತ್ತು ಎ) ಆಕರ್ಷಿತರಾದ ವಿದ್ಯಾರ್ಥಿಗಳ ಸಂಖ್ಯೆ ಶೇ. 28 ಆಗಿತ್ತು. ವ್ಯಹವಾರ ಆಡಳಿತ ನಿರ್ವಹಣೆಯನ್ನು ಇಷ್ಟಪಟ್ಟ ಒಟ್ಟು ವಿದ್ಯಾರ್ಥಿಗಳ ಶೇ. 80ರಷ್ಟು ಮಂದಿ ಮಾತ್ರ ಇಂಜಿನಿಯರಿಂಗ್‌ನತ್ತ ಆಕರ್ಷಿತರಾಗಿದ್ದರು.

**ಹೀಗಾಗಲು ಏನು ಕಾರಣ?**

ಹೀಗಾಗಲು ಎರಡು ಮುಖ್ಯ ಕಾರಣಗಳನ್ನು ಇಲ್ಲಿ ನೀಡಬಹುದು. ಮೊದಲನೆಯದಾಗಿ ಮಹಾತ್ವಾಕಾಂಕ್ಷೆಯುಳ್ಳ ಭಾರತೀಯ ವಿದ್ಯಾರ್ಥಿಗಳಲ್ಲಿ ಡಾಲರ್ ನಾಡಿನತ್ತ (ಅಮೆರಿಕಾ) ಆಕರ್ಷಣೆ ಕಡಿಮೆಯಾಗತೊಡಗಿತು. 92–93ರಲ್ಲಿ ವಿದೇಶಕ್ಕೆ ತೆರಳಿದ್ದ ಸುಮಾರು 6500 ಮಂದಿಯಲ್ಲಿ ಸುಮಾರು ಶೇ. 60ರಷ್ಟು ಮಂದಿ ಅಮೆರಿಕಾದತ್ತ ತೆರಳಿದ್ದರು. 96–97ರಲ್ಲಿ ಸರಿ ಸುಮಾರು ಇಷ್ಟೇ ಮಂದಿ ವಿದೇಶಕ್ಕೆ ತೆರಳಿದ್ದು ಇವರಲ್ಲಿ ಅರ್ಧಾಂಶದಷ್ಟು ಮಂದಿ ಅಮೆರಿಕಾಕ್ಕೆ ತೆರಳಿದ್ದರು. 93–94ರಲ್ಲಿ 2 ಸಾವಿರಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳು ಅಮೆರಿಕಾಕ್ಕೆ ತೆರಳಿದರು. ಜೊತೆಗೆ, ವಿದೇಶದಲ್ಲಿ ಇಂಜಿನಿಯರಿಂಗ್ ಕಲಿಕೆಗೆ ನೀಡುತ್ತಿದ್ದ ಆದ್ಯತೆ ಕ್ರಮೇಣ ಇಳಿಮುಖವಾಗುತ್ತಾ ಸಾಗಿತು. ಇನ್ನೊಂದು ಪ್ರಮುಖ ಕಾರಣವೆಂದರೆ, ಆಸ್ಟ್ರೇಲಿಯಾ, ಯುಕೆ ಮುಂತಾದ ದೇಶಗಳು ಹೆಚ್ಚಿನ ಶಿಕ್ಷಣ ವ್ಯವಸ್ಥೆ ಹಾಗೂ ಆಕರ್ಷಕ ಸಂಬಳದ ಉದ್ಯೋಗದ ಭರವಸೆ ನೀಡಿ ಭಾರತೀಯ ವಿದ್ಯಾರ್ಥಿಗಳನ್ನು ತಮ್ಮ ನಾಡಿನತ್ತ ಸೆಳೆಯಲು ಶಕ್ತರಾದರು. ಓಶಿಯಾನಾ ದೇಶಗಳಿಗೆ ತೆರಳಿದ್ದ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ 92–93ರಲ್ಲಿ 180 ಆಗಿದ್ದರೆ, ಇದು 96–97ರ ವೇಳೆಗೆ 1700ಕ್ಕೆ ತಲುಪಿತು. ಇವರಲ್ಲಿ

Digitised by Bharatavani, CIIL

ಸುಮಾರು 800 ಮಂದಿ ವ್ಯವಹಾರ ಆಡಳಿತ ನಿರ್ವಹಣೆ ವಿಷಯ ಆರಿಸಿಕೊಂಡರು. ಇದೇ ಅವಧಿಯಲ್ಲಿ ಯುರೋಪ್‌ಗೆ ಶಿಕ್ಷಣಕ್ಕಾಗಿ ತೆರಳಿದ ವಿದ್ಯಾರ್ಥಿಗಳ ಸಂಖ್ಯೆ 450ರಿಂದ 1400ಕ್ಕೆ ತಲುಪಿತು ಮತ್ತು ಇವರಲ್ಲಿ ನಾಲ್ಕನೇ ಒಂದು ಭಾಗದಷ್ಟು ವಿದ್ಯಾರ್ಥಿಗಳು ವ್ಯವಹಾರ ಆಡಳಿತ ವಿಷಯವನ್ನು ಆರಿಸಿಕೊಂಡರು.

1995ರಲ್ಲಿ ವಿದೇಶದಲ್ಲಿ ಕಲಿಯುತ್ತಿದ್ದ ಭಾರತೀಯ ವಿದ್ಯಾರ್ಥಿಗಳಲ್ಲಿ ಶೇ. 90ಕ್ಕೂ ಹೆಚ್ಚಿನ ಮಂದಿ ಇಂಗ್ಲಿಷ್ ಭಾಷೆ ಮಾತನಾಡುವ ರಾಷ್ಟ್ರದಲ್ಲಿದ್ದರು. ಯುಎಸ್‌ಎಯಲ್ಲಿ 31,743 ಮಂದಿ (ಶೆ. 74.4), ಯುಕೆಯಲ್ಲಿ 3232 ಮಂದಿ (ಶೇ. 8), ಕೆನಡಾದಲ್ಲಿ 1051 ಮಂದಿ (ಶೇ. 2.6), ಆಸ್ಟ್ರೇಲಿಯಾ–488 9ಶೇ. 1.2) (ಯುನೆಸ್ಕೋ ಸ್ಟಾಟಿಸ್ಟಿಕಲ್ ಇಯರ್‌ಬುಕ್ (1998). ಯುರೋಪ್‌ನ ಮುಂಚೂಣಿ ರಾಷ್ಟ್ರಗಳ ಪೈಕಿ ಜರ್ಮನಿ– 680 (ಶೇ. 1.7), ರಶಿಯನ್ ಒಕ್ಕೂಟ–573 (ಶೇ.1.4), ಫ್ರಾನ್ಸ್–199 (ಶೇ. 0.5) ಇಟಲಿ–72 ಮತ್ತು ಸ್ಪೇನ್–42. ವಿದ್ಯಾರ್ಥಿಗಳು ಇದ್ದರು.

ಏಷ್ಯಾದ ಪ್ರಮುಖ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿರುವ ಜಪಾನ್‌ಗೆ ತೆರಳಿದ್ದ ಭಾರತೀಯರ ಸಂಖ್ಯೆ ಕೇವಲ 175 (ಶೇ. 0.5ಕ್ಕಿಂತಲೂ ಕಡಿಮೆ). ಚೀನಾಕ್ಕೆ 47, ಕೊರಿಯಾ ಗಣರಾಜ್ಯಕ್ಕೆ 7 ಭಾರತೀಯ ವಿದ್ಯಾರ್ಥಿಗಳು ತೆರಳಿದ್ದರು. ಜಪಾನ್ ಮತ್ತು ಕೊರಿಯಾ ಗಣರಾಜ್ಯದ ಜೊತೆಗೆ ಭಾರತ ಪ್ರಮುಖ ಔದ್ಯೋಗಿಕ ಮತ್ತು ತಾಂತ್ರಿಕ ಸಹಯೋಗ ಹೊಂದಿದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಭಾರತದಲ್ಲಿ ಉನ್ನತ ಶಿಕ್ಷಣದ ಅವಧಿಯಲ್ಲಿ ವಿದೇಶಿ ಭಾಷೆಯನ್ನು ಅಧ್ಯಯನದ ಒಂದು ಭಾಗವಾಗಿ ಆರಿಸುವಲ್ಲಿ ನಿರ್ಲಕ್ಷ್ಯದ ಭಾವನೆಯಿದ್ದು ಈ ಭಾವನೆ ಬದಲಾಗಿಲ್ಲ. ಜಾಗತೀಕರಣದ ಈ ದಿನಗಳಲ್ಲಿ, ವಿದೇಶಕ್ಕೆ ಅಧ್ಯಯನಕ್ಕೆಂದು ತೆರಳಿದ ಭಾರತೀಯರಲ್ಲಿ (1996–97)ರಲ್ಲಿ ಸಾವಿರದಲ್ಲಿ ಒಬ್ಬ ವಿದ್ಯಾರ್ಥಿಯೂ ಜರ್ಮನಿ, ಫ್ರಾನ್ಸ್, ಇಟಲಿ ಅಥವಾ ಸ್ಪೇನ್ ಅನ್ನು ಆರಿಸಿಕೊಂಡಿಲ್ಲ ಎಂಬುದು ಇದಕ್ಕೆ ಪುಷ್ಟಿ ನೀಡುತ್ತದೆ.

ಇಲ್ಲಿ ಚೀನಾವು ನಮಗೆ ಮಾದರಿಯಾಗಿದೆ. ಚೀನಾವು ತನ್ನ ದೇಶದ ವಿದ್ಯಾರ್ಥಿಗಳನ್ನು ವಿವಿಧ ದೇಶಗಳಿಗೆ ಅಧ್ಯಯನಕ್ಕೆಂದು ಕಳಿಸುವ ಜೊತೆಯಲ್ಲೇ ಅಭಿವೃದ್ಧಿ ಹೊಂದಿದ ದೇಶಗಳಿಂದ ಗಮನಾರ್ಹ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ತನ್ನತ್ತ ಆಕರ್ಷಿಸುತ್ತಿದೆ. ಜಾಗತೀಕರಣದ ಪ್ರಭಾವ ಹೆಚ್ಚುತ್ತಿರುವ ಈ ದಿನಗಳಲ್ಲಿ ಭಾರತೀಯ ವಿದ್ಯಾರ್ಥಿಗಳು ವಿದೇಶದಲ್ಲಿ ವಿವಿಧ ಹಂತದಲ್ಲಿ ಅಮೂಲ್ಯ ಸಂಪರ್ಕ ಸಾಧಿಸುವ ಒಂದು ಪರಿಣಾಮಕಾರಿ ಮಾಧ್ಯಮವಾಗಿ ಸೇವೆ ಸಲ್ಲಿಸುವ ಅಗತ್ಯವಿದೆ.

**ವಿದೇಶದಲ್ಲಿ ಖರ್ಚು ವೆಚ್ಚಗಳು:**

ಅಮೆರಿಕಾ ಸಂಯುಕ್ತ ಸಂಸ್ಥಾನ (ಯುಎಸ್‌ಎ)ದಲ್ಲಿ ಅತ್ಯಂತ ಅಗ್ಗವಾಗಿರುವ 8 ಪ್ರಾಂತ್ಯಗಳಲ್ಲಿ ವರ್ಷವೊಂದಕ್ಕೆ ಟ್ಯೂಷನ್ ಫೀಸು ಹಾಗೂ ದೈನಂದಿನ ವೆಚ್ಚಗಳು ಒಟ್ಟು ಸುಮಾರು 20,000 ಡಾಲರ್ ಆಗಿರುತ್ತದೆ. ಅತ್ಯಂತ ದುಬಾರಿ ಎನಿಸಿರುವ 8 ಪ್ರಾಂತ್ಯಗಳಲ್ಲಿ ಇದು 36,000 ಡಾಲರ್‌ಗಿಂತ ಅಧಿಕವಾಗಿದೆ. ಮೆಸಾಚುಯೆಟ್ಸ್‌ನಲ್ಲಿ ಟ್ಯೂಷನ್ ಮತ್ತು ಫೀಸು ಸೇರಿ 19,000 ಡಾಲರ್ ಹಾಗೂ ದೈನಂದಿನ ವೆಚ್ಚ 25,000 ಡಾಲರ್‌ಗಳಷ್ಟು. ಆದರೂ ಈ ಪ್ರಾಂತ್ಯ 2000ರಲ್ಲಿ 28,000 ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸಿದ್ದು 96 ಕೋಟಿ ಡಾಲರ್‌ಗಳಿಗೂ ಮಿಗಿಲಾಗಿ ಗಳಿಸಿದೆ.

ಅಮೆರಿಕಾದ ಒಂದು ಉನ್ನತವಾದ ಬಿಸಿನೆಸ್ ಮ್ಯಾನೇಜ್‌ಮೆಂಟ್ ಶಾಲೆಯಲ್ಲಿ ಒಂದು ವರ್ಷದ ಶಿಕ್ಷಣದ ವೆಚ್ಚ 45,000 ಡಾಲರ್‌ಗಳಾಗಿವೆ. ಇದರರ್ಥ 2 ವರ್ಷದ ಶಿಕ್ಷಣಕ್ಕೆ 45 ಲಕ್ಷ ರೂ.ಗಳ ಮೊದಲ ಹೂಡಿಕೆ ಎಂದಾಯ್ತು. ವ್ಹಾರ್‌ಟನ್‌ನ ಬಿಜಿನೆಸ್ ಮ್ಯಾನೇಜ್‌ಮೆಂಟ್ ಶಾಲೆಯಲ್ಲಿ ಇದು 1,00,000 ಡಾಲರ್ ಆಗಿದೆ. ಯುಕೆಯ ಬಹುತೇಕ ಉದ್ಯಮಾಡಳಿತ ಕಾಲೇಜುಗಳಲ್ಲಿ 5 ಸಾವಿರದಿಂದ 10 ಸಾವಿರ ಪೌಂಡ್‌ಗಳವರೆಗೆ ಶುಲ್ಕವಿದೆ. ಒಂದೆರಡು ಕಾಲೇಜುಗಳು 20 ಸಾವಿರ ಪೌಂಡ್ ಶುಲ್ಕ ವಿಧಿಸುತ್ತದೆ. ಹೈದರಾಬಾದಿನಲ್ಲಿರುವ ಇಂಡಿಯನ್ ಬಿಸಿನೆಸ್ ಸ್ಕೂಲ್ (ಐಬಿಎಸ್) ವರ್ಷಕ್ಕೆ 20 ಸಾವಿರ ಟ್ಯೂಷನ್ ಫೀ ವಿಧಿಸುತ್ತದೆ ಎಂಬುದು ಇಲ್ಲಿ ಉಲ್ಲೇಖನೀಯ. ವಿದೇಶದಲ್ಲಿ ಶಿಕ್ಷಣ ಪಡೆಯುವ ಉದ್ದೇಶವುಳ್ಳ ಭಾರತೀಯ ವಿದ್ಯಾರ್ಥಿಗಳಿಗೆ ಅಲ್ಲಿಯ ಬ್ಯಾಂಕ್‌ಗಳು ಹಾಗೂ ಫೈನಾನ್ಸ್ ಸಂಸ್ಥೆಗಳು ಆಕರ್ಷಕ ಶೈಕ್ಷಣಿಕ ಸಾಲದ ಯೋಜನೆ ರೂಪಿಸಿವೆ. ಭಾರತದಲ್ಲೂ ತಕ್ಕಮಟ್ಟಿಗೆ ಶಿಕ್ಷಣ ಸಾಲವನ್ನು ನೀಡಲಾಗುತ್ತದೆ. 1996–97ರ ಸಾಲಿನಲ್ಲಿ ವಿದೇಶಕ್ಕೆ ಶಿಕ್ಷಣಾರ್ಥಿಗಳಾಗಿ ತೆರಳಿದವರಲ್ಲಿ ಮೂರನೇ ಎರಡರಷ್ಟು ಮಂದಿ ಶಿಕ್ಷಣ ವೆಚ್ಚ ಭರಿಸಲು ತಾವು ಪಡೆಯುವ ಆರ್ಥಿಕ ನೆರವಿನ ಮೂಲದ ಬಗ್ಗೆ ತಿಳಿಸಿಲ್ಲ. ಸುಮಾರು ಶೇ. 30ರಷ್ಟು ಮಂದಿ ಸ್ವಂತ ಮೂಲದಿಂದ ಪೂರ್ಣ ಅಥವಾ ಭಾಗಶಃ ಖರ್ಚು ವೆಚ್ಚ ಭರಿಸಿದ್ದರು. ಆ ಬಳಿಕದ ದಿನಗಳಲ್ಲಿ ಬ್ಯಾಂಕ್‌ಗಳ ಮೂಲಕ ಶೈಕ್ಷಣಿಕ ಸಾಲ ಪಡೆಯುವುದು ಹೆಚ್ಚು ಸರಳ ಹಾಗೂ ಸುಲಭ ಸಾಧ್ಯವಾಗಿದೆ. ಅಮೆರಿಕಾದಲ್ಲಿ ಶೇ. 50ಕ್ಕೂ ಹೆಚ್ಚಿನ ಸಂಶೋಧನಾ ವಿದ್ಯಾರ್ಥಿಗಳು, ಶೇ. 40ಕ್ಕೂ ಹೆಚ್ಚಿನ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಶೇ. 12ಕ್ಕೂ ಹೆಚ್ಚಿನ ಸ್ನಾತಕೋತ್ತರ ವಿದ್ಯಾರ್ಥಿಗಳು ಸಂಬಂಧಪಟ್ಟ ಕಾಲೇಜು ಅಥವಾ ವಿಶ್ವವಿದ್ಯಾಲಯದಿಂದ ಆರ್ಥಿಕ ನೆರವು ಪಡೆಯುತ್ತಾರೆ. ಈ ಆರ್ಥಿಕ ನೆರವಿನ ಹೊರತಾಗಿಯೂ, ಪ್ರತಿ ಭಾರತೀಯ ವಿದ್ಯಾರ್ಥಿಯ ಮೇಲಿನ ಸರಾಸರಿ ಖರ್ಚು ಸುಮಾರು 20 ಸಾವಿರವಾದರೆ, ಅಮೆರಿಕಾದ ಆರ್ಥಿಕತೆಗೆ ನೀಡುವ ಕೊಡುಗೆ 1 ಬಿಲಿಯನ್ ಡಾಲರ್ ಆಗಿದೆ.

ವಿದೇಶದಲ್ಲಿ ಪಠ್ಯವಿಷಯವನ್ನು ಸಮಗ್ರ ಮಾಹಿತಿ ದೊರಕುವ ರೀತಿಯಲ್ಲಿ ಕುಗ್ಗಿಸಿರುವ ಕಾರಣ ಇಲ್ಲಿ ಕೋರ್ಸ್‌ನ ಅವಧಿ ಕಡಿಮೆಯಾಗಿರುತ್ತದೆ. ಇದರಿಂದ ಕಡಿಮೆ ಅವಧಿಯಲ್ಲಿ ಕೋರ್ಸ್ ಪೂರ್ಣಗೊಳಿಸಲು ಸಾಧ್ಯವಾಗುತ್ತದೆ, ಪಾರ್ಟ್ ಟೈಂ ಕೆಲಸ ಮಾಡಿ ಆರ್ಥಿಕ ಆದಾಯ ಪಡೆಯುವ ವ್ಯವಸ್ಥೆಯಿದೆ. ಕಾಲೇಜಿನಲ್ಲಿ ವಿಶ್ವದ ವಿವಿಧೆಡೆಯ ವಿದ್ಯಾರ್ಥಿಗಳಿರುವ ಕಾರಣ

Digitised by Bharatavani, CIIL

ಅವರೊಂದಿಗೆ ಸಂವಾದ ನಡೆಸುವ ಮೂಲಕ ಸಂವಹನ ಕಲೆಯನ್ನು ಅಭಿವೃದ್ಧಿಗೊಳಿಸಬಹುದಾಗಿದೆ. ವಿಶ್ವದಾದ್ಯಂತ ಜನರ ಜೊತೆ ಸಂಪರ್ಕ ಹಾಗೂ ಸಹಕಾರ ಸಾಧಿಸುವ ಮೂಲಕ ವಿಜ್ಞಾನಿಗಳು ಹಾಗೂ ಸಂಘಗಳು... ವಿಶ್ವಮಟ್ಟದಲ್ಲಿ ವಿಜ್ಞಾನಿಗಳ ಹಾಗೂ ಸಂಸ್ಥೆಗಳ ಕಾರ್ಯಕ್ಕೆ ಪ್ರಾಮುಖ್ಯ ಮತ್ತು ಪ್ರಸ್ತುತತೆಯನ್ನು ದೊರಕಿಸಿಕೊಡಬಹುದು.

**ಪ್ರತಿಭಾ ಪಲಾಯನ:**

ಉನ್ನತ ಶಿಕ್ಷಣ ಅಥವಾ ತರಬೇತಿಯ ಹೆಸರಲ್ಲಿ ವಿದೇಶಗಳಿಗೆ ತೆರಳುವ ಬಹುತೇಕ ಭಾರತೀಯ ವಿದ್ಯಾರ್ಥಿಗಳು ಅಲ್ಲಿ ವಿವಿಧ ಕಾರಣಗಳಿಂದ ತಮ್ಮ ವಾಸದ ಅವಧಿಯನ್ನು ವಿಸ್ತರಿಸುತ್ತಾ ಇರುತ್ತಾರೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ ಪ್ರತಿಭಾವಂತರು ಹೀಗೆ ತೆರಳುವುದನ್ನು ಪ್ರತಿಭಾ ಪಲಾಯನ ಎಂದು ಕರೆಯಲಾಗುತ್ತದೆ. ಕೇವಲ ಸಂಬಳದ ದೃಷ್ಟಿಯಿಂದ ಮಾತ್ರವಲ್ಲ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ತಮ್ಮ ವೃತ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶ ಇರುತ್ತದೆ ಎಂಬುದಕ್ಕೂ ತಮ್ಮ ಜಾಣ್ಮೆ, ಪ್ರತಿಭೆಯ ಪ್ರದರ್ಶನಕ್ಕೆ ಹೆಚ್ಚಿನ ಅವಕಾಶವಿರುತ್ತದೆ ಎಂಬ ಕಾರಣಕ್ಕೂ ಪ್ರತಿಭಾ ಪಲಾಯನ ನಡೆಯುತ್ತದೆ. ಅರ್ಹತೆ ಹೆಚ್ಚಿದಷ್ಟೂ ವಿದೇಶದಲ್ಲಿ ಉಳಿದುಕೊಳ್ಳುವ ಬಗ್ಗೆ ಒಲವು ಹೆಚ್ಚುತ್ತದೆ.

ಯುನೆಟೆಡ್ ಸ್ಟೇಟ್ಸ್‌ನಲ್ಲಿ 1990ರ ಸಾಲಿನಲ್ಲಿ ಇಂಜಿನಿಯರಿಂಗ್ ವಿಭಾಗದಲ್ಲಿ ಶೇ. 6.2ರಷ್ಟು ಡಾಕ್ಟರೇಟ್ ಪದವಿಗಳನ್ನು ವಿದೇಶದ ವಿದ್ಯಾರ್ಥಿಗಳಿಗೆ ನೀಡಲಾಗಿದ್ದು ಇವರಲ್ಲಿ ಏಷ್ಯಾದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಗಣಿತ, ಕಂಪ್ಯೂಟರ ಸಯನ್ಸ್, ಫಿಸಿಕಲ್ ಸೈಯನ್ಸ್ ಮುಂತಾದ ವಿಷಯಗಳಲ್ಲೂ ಬಹುತೇಕ ಇದೇ ರೀತಿಯ ಅನುಪಾತವಿತ್ತು. ಪಿ.ಎಚ್.ಡಿ. ಪಡೆದಿರುವ ಶೇ. 70ಕ್ಕೂ ಹೆಚ್ಚು ಮಂದಿ ಅಮೆರಿಕಾದಲ್ಲಿ ನೆಲೆಸಿದ್ದು, ಇವರಲ್ಲಿ ಬಹಳಷ್ಟು ಮಂದಿ ಇಲ್ಲಿನ ಪೌರತ್ವ ಪಡೆದಿದ್ದಾರೆ. ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯರು ತಮ್ಮ ಪ್ರತಿಭೆ ಹಾಗೂ ಉನ್ನತ ಶೈಕ್ಷಣಿಕ ಅರ್ಹತೆಯಿಂದ ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ವಿದೇಶಿಯರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ರೀತಿಯ ಪ್ರತಿಭಾ ಹಲಾಯನದ ಕಾರಣದಿಂದ ಈಗ ಅಮೆರಿಕಾಕ್ಕೆ ತೆರಳಿರುವ ಹಲವಾರು ಭಾರತೀಯರು ಈಗ ಅಲ್ಲಿನ ಶೈಕ್ಷಣಿಕ ಕ್ಷೇತ್ರ, ಸಂಶೋಧನಾ ರಂಗ, ಉದ್ದಿಮೆ ಹಾಗೂ ಆಡಳಿತ ಕ್ಷೇತ್ರದ ಅಸಾಧಾರಣ ಮುಂದಾಳುಗಳೆನಿಸಿಕೊಂಡಿದ್ದಾರೆ. ಇವರಲ್ಲಿ ಅನೇಕರು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಮುಂಚೂಣಿಯ ಸಾಲಿನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅನೇಕರು ತಮ್ಮ ಮಾತೃವಿದ್ಯಾಸಂಸ್ಥೆಗೆ ಉದಾರ ದೇಣಿಗೆಗಳನ್ನು ನೀಡಿದ್ದಾರೆ. ವಿದೇಶದಲ್ಲಿರುವ ಭಾರತೀಯ ವಿದ್ಯಾರ್ಥಿಗಳನ್ನು ಭಾರತದ ಆಧುನೀಕರಣ ಪ್ರತಿಕ್ರಿಯೆ ದೀರ್ಘಾವಧಿಯ ಹೂಡಿಕೆ ಎಂಬುದಾಗಿ ಪರಿಗಣಿಸಬೇಕಾಗಿದೆ.

ಮೂಲ: ಕೃಷ್ಣಮೂರ್ತಿ

ಅನು: ಡಾ. ಗೀತಾ ಶೆಣೈ

## ವಿಪತ್ತು ನಿರ್ವಹಣೆ

ವಿಪತ್ತುಗಳು ಹಲವಾರು ರೀತಿಗಳ ಬೇರೆಬೇರೆ ತೀವ್ರತೆಯೊಂದಿಗೆ ಸಂಭವಿಸುತ್ತವೆ. ಇವು ಹಲವು ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತವೆ. ವಿಪತ್ತು ದಿನದ ಅಥವಾ ರಾತ್ರಿಯ ಯಾವುದೇ ಸಮಯದಲ್ಲಿ ಸಂಭವಿಸಬಹುದು. ಇವುಗಳಲ್ಲಿ ಹಲವನ್ನು ಮುಂಚಿತವಾಗಿ ಹೇಳಲಾಗುವುದಿಲ್ಲ. ವಿಪತ್ತುಗಳು ನೈಸರ್ಗಿಕವೂ ಆಗಿರಬಹುದು. ಮಾನವ ನಿರ್ಮಿತವೂ ಆಗಿರಬಹುದು. ಕೆಲವು ವಿಪತ್ತುಗಳು ಬೇರೆ ಕೆಲವು ವಿಪತ್ತುಗಳಿಗಿಂತ ಹೆಚ್ಚು ಸಂಭವಿಸುತ್ತಿರುತ್ತವೆ. ಕೆಲವುಗಳ ಅವಧಿ ಕಡಿಮೆಯದಾಗಿರಬಹುದು. ಆದರೆ ಇನ್ನು ಕೆಲವು ದೀರ್ಘಕಾಲದವರೆಗೆ ಸಂಭವಿಸುತ್ತಿರುತ್ತವೆ. ವಿಪತ್ತುಗಳು ಹರಡುವುದರ ಬಗ್ಗೆ ಹೇಳುವುದಾದರೆ ಕೆಲವು ತಕ್ಷಣವೇ ಸಂಭವಿಸಿದರೆ ಇನ್ನು ಕೆಲವುಗಳಿಗೆ ಅವುಗಳದೇ ಆದ ಅವಧಿಯಿರುತ್ತದೆ. ಪ್ರಾಯಃ ಗಂಟೆಗಳ ಅಥವಾ ದಿನಗಳ ಎಚ್ಚರಿಕೆಯನ್ನು ನೀಡುತ್ತವೆ. ಕೆಲವು ವಿಪತ್ತುಗಳು ಸಣ್ಣ ಪ್ರದೇಶಗಳ ಮೇಲೆ ಪರಿಣಾಮ ಬೀರಿದರೆ, ಇನ್ನು ಕೆಲವು ಮಗ್ಗುಲಲ್ಲಿರುವ ದೇಶಗಳ ಮೇಲೂ ಪರಿಣಾಮ ಬೀರಬಹುದು. ವಿಪತ್ತುಗಳು ನಷ್ಟವನ್ನುಂಟು ಮಾಡುತ್ತವೆಯೋ ಇಲ್ಲವೋ ಎನ್ನುವುದು. ವಿಪತ್ತಿನ ಸ್ವರೂಪವನ್ನು ಅವಲಂಬಿಸಿರುತ್ತದೆ. ಕೆಲವು ವಿಪತ್ತುಗಳಲ್ಲಿ ಮಾನವ ಸಂಪೂರ್ಣವಾಗಿ ಅಸಹಾಯಕನಾಗಿಬಿಡುತ್ತನಲ್ಲದೆ ಅವುಗಳು ಸಂಭವಿಸುವುದನ್ನು ತಡೆಯಲು ಏನನ್ನೂ ಮಾಡಲಾಗುವುದಿಲ್ಲ. ಆದರೆ ಇನ್ನು ಕೆಲವುಗಳಿಗೆ ಸಂಬಂಧಿಸಿದ ಹಾಗೆ ಮಾನವ ಅವುಗಳ ಪರಿಣಾಮವನ್ನು ಕಡಿಮೆಗೊಳಿಸಲು ಮಾತ್ರ ಏನಾದರೂ ಮಾಡಬಹುದಾಗಿದ್ದು ಸಂಭವಿಸದಂತೆ ಏನನ್ನೂ ಮಾಡಲಾರನು.

ನಿರ್ದಿಷ್ಟವಾಗಿ ಹೇಳುವುದಾದರೆ ವಿಶ್ವದ ವಿವಿಧ ಭಾಗಗಳಲ್ಲಿ ನೈಸರ್ಗಿಕ ವಿಪತ್ತುಗಳನ್ನು ವಿಶ್ಲೇಷಿಸಿದಾಗ ಅವೆಲ್ಲವೂ ಒಂದು ರೀತಿಯ ಸಾಮಾನ್ಯತೆಯನ್ನು ತೋರುತ್ತವೆ. ವಿಪತ್ತುಗಳು ಸಂಭವಿಸುವುದನ್ನು ವಿಪತ್ತು-ಮುಂಚಿನ, ವಿಪತ್ತಿನ ಅವಧಿಯ ಹಾಗೂ ವಿಪತ್ತಿನ ನಂತರದ ಎಂದು ಮೂರು ಹಂತಗಳಾಗಿ ವಿಂಗಡಿಸಬಹುದು. ಇತ್ತೀಚೆಗೆ ವಿಪತ್ತುಗಳಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಹಂತವು ಮಹತ್ವವನ್ನು ಪಡೆದುಕೊಂಡಿದೆ ಈ ಹಂತವನ್ನು ಎದುರಿಸಲು ವಿಪತ್ತು ಪೀಡಿತ ಪ್ರದೇಶಗಳಲ್ಲಿನ ಸಮುದಾಯವು ಸಜ್ಜಾಗಿರಬೇಕು. ಒಂದು ವೇಳೆ ವಿಪತ್ತುಗಳು ಈಗಾಗಲೇ ತನ್ನ ಘಟನೆಯಿಂದಾಗಿ ಹಾನಿಯನ್ನುಂಟುಮಾಡಿದ್ದಲ್ಲಿ ಅದರ ನಿವಾರಣೆಗೂ ಸ್ಪಷ್ಟವಾಗಿಯೇ ಹಂತಗಳಿವೆ. ವಿಪತ್ತುಗಳ ಅವಧಿಯಲ್ಲಿ ಹಾಗೂ ಚೇತರಿಕೆಯ ಹಂತದಲ್ಲಿ ಪರಿಹಾರ, ಮರುವಸತಿ ಹಾಗೂ ಪುನರ್‌ನಿರ್ಮಾಣಗಳು ಆತಂಕದ ಹಾಗೂ ಅನಿವಾರ್ಯತೆಯ ವಿಷಯಗಳಾಗುತ್ತವೆ. ಒಂದು ಪ್ರದೇಶದಲ್ಲಿನ ನೈಸರ್ಗಿಕ ವಿಪತ್ತಿಗೆ ಸಂಬಂಧಿಸಿದ ಅನುಭವವು ಮತ್ತೊಂದು ಸಂದರ್ಭದಲ್ಲಿ ಪ್ರಯೋಜನಕ್ಕೆ ಬರಬಹುದು. ಕೆಲವು ವಿಷಯಗಳಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಜ್ಞಾನದ ಪರಿಮಿತಿಯಿಂದಾಗಿ

Digitised by Bharatavani, CIIL

ಅಂತರವಿರಬಹುದು. ಆದ್ದರಿಂದ, ಯಾರೇ ಆಗಲಿ, ಹಾನಿಗೊಂಡ ಪರಿಸರಕ್ಕೆ ಸೂಕ್ತವಾದ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ನಿರ್ಮಾಣ ಮಾಡಲು ಹೊಸ ಪ್ರಯತ್ನಗಳನ್ನು ಮಾಡುವತ್ತ ಗಮನಹರಿಸಬೇಕು. ಈ ಸಾಲುಗಳು ವಿಶ್ವಸಂಸ್ಥೆಯ 90ರ ದಶಕದ ನೈಸರ್ಗಿಕ ವಿಪತ್ತು ಇಳಿಕೆಯ ಅಂತಾರಾಷ್ಟ್ರೀಯ ದಶಕ (ಇಂಟರ್ ನ್ಯಾಶನಲ್ ಡಿಕೇಡ್ ಫಾರ್ ನ್ಯಾಚುರಲ್ ಡಿಸಾಸ್ಟರ್ ರಿಡಕ್ಷನ್ – ಐಡಿಎನ್‌ಡಿಆರ್) ಎಂಬ ಘೋಷಣೆಯ ಹುಟ್ಟಿನ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುತ್ತವೆ. ಐಡಿಎನ್‌ಡಿಆರ್ ಪರಿಕಲ್ಪನೆಯ ಕರ್ತೃ ಪ್ರಖ್ಯಾತ ಭೂಕಂಪಶಾಸ್ತ್ರಜ್ಞ ಫ್ರ್ಯಾಂಕ್ ಪ್ರೆಸ್. ಈತ ಅಂದು ಯುಎಸ್ ನ್ಯಾಶನಲ್ ಅಕಾಡೆಮಿ ಆಫ್ ಸೈನ್ಸಸ್‌ನ ಅಧ್ಯಕ್ಷರಾಗಿದ್ದು ಇದರ ಆಶ್ರಯದಲ್ಲಿ ಇದನ್ನು ಆರಂಭಿಸಿದ. ವಿಪತ್ತು ಪೂರ್ವದ ಸನ್ನದ್ಧತೆಯನ್ನು ಆ ಕಾರಣಕ್ಕಾಗಿಯೇ ಐಡಿಎನ್‌ಡಿಆರ್‌ನ ಘೋಷಣೆಯ ಜೊತೆಗೆ ಸೇರಿಸಿ ಹೇಳಲಾಗುತ್ತದೆ (ಸಿನ್ಹ 1990ಎ ಮತ್ತು 2002).

ಪ್ರವಾಹಗಳು, ಬಿರುಗಾಳಿ, ಚಂಡಮಾರುತಗಳು, ಭೂಕಂಪಗಳು, ಕ್ಷಾಮಗಳು, ಜ್ವಾಲಾಮುಖಿಗಳು, ಸುನಾಮಿಗಳು ಹಾಗೂ ಭೂಕುಸಿತಗಳನ್ನು ನೈಸರ್ಗಿಕ ವಿಪತ್ತುಗಳಡಿಯಲ್ಲಿ ಸೇರಿಸಬಹುದಾಗಿದೆ. ಬಹಳಷ್ಟು ಸಂಸ್ಥೆಗಳು ಅದರಲ್ಲೂ ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆ, ಇಎಸ್‌ಸಿಎಪಿ, ಯುಎನ್ ಇಪಿ, ಡಿಎಚ್‌ಎ, ಇತ್ಯಾದಿ ಹಾಗೂ ಅನೇಕ ಸರ್ಕಾರೇತರ ಸಂಸ್ಥೆಗಳು ನೈಸರ್ಗಿಕ ವಿಪತ್ತುಗಳ ವಿವಾದಗಳು ಹಾಗೂ ಸಮಸ್ಯೆಗಳನ್ನು ಕುರಿತು ತೀವ್ರ ಕಾಳಜಿಯನ್ನು ಹೊಂದಿವೆ. ಭಾರತೀಯ ವಾಯುಮಾನ ಇಲಾಖೆಯು ಪ್ರವಾಹಗಳು, ಬಿರುಗಾಳಿ, ಚಂಡಮಾರುತಗಳು, ಭೂಕಂಪಗಳು ಹಾಗೂ ಭೂಕುಸಿತಗಳನ್ನು ಸಮರ್ಥವಾಗಿ ನಿರ್ವಹಿಸುವ ಪ್ರಾಥಮಿಕ ಸಂಸ್ಥೆಯಾಗಿದೆ. ಕೃಷಿ ಸಚಿವಾಲಯವು ಕ್ಷಾಮವನ್ನು ನೋಡಿಕೊಳ್ಳುತ್ತದೆ. ಇಲ್ಲಿಯವರೆಗೆ ಪ್ರಪಂಚದ ವಿವಿದೆಡೆ ಐಡಿಎನ್‌ಡಿಆರ್ ಅವಧಿಯಲ್ಲಿ ಮಧ್ಯಾವಧಿಯ ಭಾಗಶಃ ಹಾಗೂ ಮುಕ್ತಾಯದ ಚಟುವಟಿಕೆಗಳ ಭಾಗವಾಗಿ ಅನೇಕ ಸಭೆಗಳು, ವಿಚಾರಸಂಕಿರಣಗಳು, ಒಟ್ಟು ಕೂಟಗಳು, ಪ್ರಕಟಣೆಗಳು, ಮುಂತಾದವು ನಡೆದಿವೆ. ಪ್ರವಾಹ ನಿರ್ವಹಣೆಗೆ ಸಂಬಂಧಿಸಿದಂತೆ ಅಣೆಕಟ್ಟುಗಳ ಮೂಲಕ ನೀರನ್ನು ಬಿಡುವುದು ಸರಕಾರಿ ಏಜೆನ್ಸಿಗಳ ಪ್ರಯತ್ನಗಳಾಗಿ ಮುಂದುವರೆದಿವೆ. ಸೈಕ್ಲೋನ್‌ಗಳು ಸಂಭವಿಸುವ ಮುಂಚಿನ ಹಾಗೂ ಸಂಭವಿಸುವ ಸಂದರ್ಭದಲ್ಲಿ ಅದರಲ್ಲಿಯೂ ಮುನ್ನೆಚ್ಚರಿಕೆಯ ವ್ಯವಸ್ಥೆಯ ವಿಷಯವನ್ನು ಐಎಂಡಿಯು ನೋಡಿಕೊಳ್ಳುತ್ತದೆ. ವಿಶ್ವ ವಾಯುಗುಣ ಸಂಸ್ಥೆ (ವರ್ಲ್ಡ್ ಮೀಟಿಯಾರಲಾಜಿಕಲ್ ಆರ್ಗನೈಜೇಶನ್), ವಿಶ್ವ ಆರೋಗ್ಯ ಸಂಸ್ಥೆ (ವರ್ಲ್ಡ್ ಹೆಲ್ತ್ ಆರ್ಗನೈಜೇಶನ್) ಹಾಗೂ ಮಾನವೀಯ ನೆರವು ಇಲಾಖೆ (ಡಿಪಾರ್ಟ್‌ಮೆಂಟ್ ಆಫ್ ಹ್ಯುಮ್ಯಾನಿಟೇರಿಯನ್ ಅಸಿಸ್ಟೆನ್ಸ್), ಜಿನಿವಾದಲ್ಲಿನ ವಿಶ್ವಸಂಸ್ಥೆಯ ಈ ಸಂಸ್ಥೆಗಳು ವಿಪತ್ತುಗಳ ವಿರುದ್ಧ ಹೋರಾಡುವ ಒಟ್ಟು ಪ್ರಯತ್ನಗಳಿಗೆ ಕಾಣಿಕೆ ನೀಡುತ್ತವೆ. ಕೆಲವು ಪ್ರಮುಖ ಸರ್ಕಾರೇತರ ಹಾಗೂ ಸ್ವಯಂಸೇವಾ ಸಂಸ್ಥೆಗಳಾದ ರೆಡ್ ಕ್ರಾಸ್ ಸೊಸೈಟಿ, ಸೇಂಟ್ ಜಾನ್ಸ ಆಂಬುಲೆನ್ಸ್, ರಾಮಕೃಷ್ಣ ಮಿಶನ್, ಭಾರತ್ ಸೇವಾಶ್ರಮ ಸಂಘ, ಆಕ್ಸ್ಫಾಮ್, ಕೇರ್, ಸಿಎಎಸ್‌ಎ, ಮುಂತಾದವು ವಿವಿಧ ದೇಶಗಳಲ್ಲಿನ ತಮ್ಮ ಸಹಸಂಸ್ಥೆಗಳೊಂದಿಗೆ ವಿಪತ್ತಿನ ಅವಧಿಯ ಹಾಗೂ ನಂತರದ ಹಂತಗಳಲ್ಲಿ ಭಾಗವಹಿಸುತ್ತವೆ. ದಶಕಗಳಿಂದೀಚೆಗೆ ಐಡಿಎನ್‌ಡಿಆರ್ ರಾಷ್ಟ್ರೀಯ ಸಮಿತಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರಯತ್ನಗಳಿಂದಾಗಿ ನೈಸರ್ಗಿಕ ವಿಪತ್ತುಗಳ ಕುರಿತು ಸಾಕಷ್ಟು ಚಟುವಟಿಕೆಗಳು ಹಾಗೂ ಪ್ರಕಟಣೆಗಳು ನಡೆದಿವೆ.

ಸಮಕಾಲೀನ ಸಂದರ್ಭದಲ್ಲಿ ನೈಸರ್ಗಿಕ ವಿಪತ್ತುಗಳ ಭಾರತೀಯ ಸನ್ನಿವೇಶದ ಯಾವುದೇ ಚಿತ್ರಣವು ತುಂಬಾ ವಿಷಾದನೀಯವಾಗಿದೆ (ಸಿನ್ಹ, 1990ಬಿ, ಸಿನ್ಹ ಮತ್ತು ಮುಖರ್ಜಿ 1991). ಲಾಥೂರ್ ಮತ್ತು ಭುಜ್‌ನ ಭೂಕಂಪಗಳು, ಆಂಧ್ರಪ್ರದೇಶ ಮತ್ತು ಒರಿಸ್ಸಾದ ಸೈಕ್ಲೋನುಗಳು, ದೇಶದ ವಿವಿಧ ಭಾಗಗಳಲ್ಲಿ ಮರುಕಳಿಸುವ ಪ್ರವಾಹಗಳು ಹಾಗೂ ರಾಜಸ್ಥಾನದಲ್ಲಿನ, ಅದರಲ್ಲೂ ಪಲಮೌ, ಕಾಳಹಂದಿಯಲ್ಲಿನ ಬರಗಾಲ ಭಾರತೀಯ ಸಂದರ್ಭದಲ್ಲಿನ ನೈಸರ್ಗಿಕ ವಿಪತ್ತುಗಳ ಘಟನೆಯ ಬಗ್ಗೆ ಚಿತ್ರಣವನ್ನು ಒದಗಿಸುತ್ತವೆ. ಪರಿಹಾರ ಕಾರ್ಯಾಚರಣೆಗಳು ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಪ್ರಯತ್ನಗಳ ಜೊತೆಗೆ ಭಾರತ ಹಾಗೂ ವಿದೇಶಗಳಲ್ಲಿನ ಸಂಸ್ಥೆಗಳಲ್ಲಿನ ಸ್ಪಂದನೆಯು ಎಲ್ಲರಿಗೂ ತಿಳಿದಿರುವಂತಹದು (ವಿಶ್ವಭಾರತಿ 1990)

ವಿಪತ್ತುಗಳದ್ದು ಏನೇ ಎಡರುತೊಡರುಗಳು ಹಾಗೂ ಅಗಾಧತೆಯಿದ್ದರೂ ಕೇಂದ್ರ ಸರಕಾರವು ಇತ್ತೀಚೆಗೆ ವಿಪತ್ತು ನಿರ್ವಹಣಾ ತಂಡವೊಂದನ್ನು ರಚಿಸಿದೆ. ನೈಸರ್ಗಿಕ ವಿಪತ್ತುಗಳ ನಿರ್ವಹಣೆಯು ಸಂಕೀರ್ಣವಾದ ಸಾಹಸವಾಗಿದ್ದು ಮಾಹಿತಿ ಮತ್ತು ಸಂವಹನಾ ಮಾಧ್ಯಮಗಳಲ್ಲಿನ ಇತ್ತೀಚಿನ ಬೆಳವಣಿಗೆಗಳೂ ಸೇರಿದಂತೆ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಮಹತ್ತಾದುದನ್ನು ಸಾಧಿಸಲು ಪ್ರಯತ್ನಿಸುತ್ತದೆ. ನೈಸರ್ಗಿಕ ವಿಪತ್ತುಗಳ ನಿಯಂತ್ರಣಾ ನಿರ್ವಹಣೆಗೆ ನಾಗರಿಕ ರಕ್ಷಣೆ, ಪೋಲಿಸ್, ಸೇನೆ, ಮುಂತಾದವುಗಳನ್ನು ಬಳಸಿಕೊಳ್ಳಲು ನಿಯೋಜಿಸಲಾಗಿದೆ. ಇತ್ತೀಚಿನ ದಿನಗಳಲ್ಲಿನ ಅತ್ಯಂತ ಭೀಕರ ಪರಿಸರೀಯ ವಿಪತ್ತು ಎನಿಸಿಕೊಂಡಿರುವ ಭೋಪಾಲ್ ಕಥೆಯು ಎಲ್ಲರಿಗೂ ತಿಳಿದೇ ಇದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ವಿಪತ್ತುಗಳು ನೈಸರ್ಗಿಕವಾಗಿರಲಿ ಅಥವಾ ಬೇರಾವುದೇ ರೀತಿಯದಾಗಿರಲಿ, ಅವುಗಳನ್ನು ನಿರ್ವಹಿಸಲು ಅಂತಹ ಪ್ರಯತ್ನಗಳಲ್ಲಿ ಅವಶ್ಯಕವಾದ ಮಾನವೀಯ ಸ್ಪರ್ಶ ಹಾಗೆಯೇ, ಅಂತಹ ವಿಪತ್ತುಗಳಿಂದ ಹಾನಿಗೊಳಗಾದ ಮಾನವೀಯ ವರ್ತನೆಯನ್ನು ಮರೆಯದೆ ಸಮಗ್ರವಾದ ದೃಷ್ಟಿಕೋನವನ್ನು ಹೊಂದಿದ ಹಲವಾರು ತಂತ್ರಗಳು, ವಿಧಾನಗಳು ಮತ್ತು ವಿವಿಧ ಶೈಲಿಯ ತುರ್ತು ಹಾಗೂ ಆಪತ್ತು ನಿರ್ವಹಣೆಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಮಾಧ್ಯಮಗಳ ಮೂಲಕ ನೈಸರ್ಗಿಕ ವಿಪತ್ತುಗಳ ವರದಿಗಳ ಪ್ರಸಾರ ವ್ಯಾಪ್ತಿ ಹೆಚ್ಚಾಗಿರುವುದರಿಂದ, ಆ ಮೂಲಕ ಶಾಲಾ ವಿದ್ಯಾರ್ಥಿಗಳಲ್ಲಿ ನೈಸರ್ಗಿಕ ವಿಪತ್ತುಗಳಿಗೆ ಅರಿವು ಮೂಡಿಸುವುದು ಸಾಧ್ಯ ಎಂದು ಹೆಚ್ಚೆಚ್ಚು ಭಾವಿಸಲಾಗುತ್ತಿದೆ. ಇದು ಭೌತಿಕ, ರಾಸಾಯನಿಕ, ಜೈವಿಕ,

Digitised by Bharatavani, CIIL

ಗಣಿತದ ಹಾಗೂ ಸಮಾಜ ವಿಜ್ಞಾನಗಳ ಹಾಗೂ ಮಾನವಿಕಗಳಲ್ಲಿನ ಪ್ರಸ್ತುತವಾದ ವಿಷಯಗಳಿಗೆ ಸಂಬಂಧಿಸಿದಂತೆ ಆಸಕ್ತಿ ಮೂಡಿಸಲು ಅನೇಕ ಅವಕಾಶಗಳನ್ನು ಒದಗಿಸುತ್ತದೆ. ನೈಸರ್ಗಿಕ ವಿಪತ್ತುಗಳು ಶಾಲಾ ವಿದ್ಯಾರ್ಥಿಗಳಿಗೆ ಅತ್ಯಂತ ಆಸಕ್ತಿಯದು ಎನಿಸುವ ಹಾಗೆ ಗಮನ ಸೆಳೆಯಬೇಕು. ವಿಪತ್ತು ಶಿಕ್ಷಣವು ಸ್ಪಷ್ಟವಾಗಿಯೇ ಸರಳ ಹಾನಿಯಿಂದ ಆರಂಭಗೊಂಡು ಸಂಕೀರ್ಣ ಅತೀವ ಸಂಗತಿಗಳವರೆಗೆ ಮುಂದುವರಿಯುತ್ತದೆ. ವಿದ್ಯಾರ್ಥಿ ಹಾಗೂ ಇತರ ಸಮುದಾಯಗಳಲ್ಲಿ ವಿಪತ್ತುಗಳು ಸಂಭವಿಸಿದ ಸಂದರ್ಭದಲ್ಲಿ ತಡೆಯುವಿಕೆ, ಸಿದ್ಧವಾಗುವಿಕೆ, ಸ್ಪಂದಿಸುವಿಕೆ ಹಾಗೂ ಚೇತರಿಕೆಗಳಿಗೆ ವಿದ್ಯಾರ್ಥಿಗಳಲ್ಲಿ ಹೊಸ ವರ್ತನೆ ಹಾಗೂ ಕೌಶಲಗಳಿಗೆ ದಾರಿ ಮಾಡಿಕೊಡುವಂತಹ ಸೂಕ್ತ ಜ್ಞಾನ, ಮನೋಭಾವ ಹಾಗೂ ಕೌಶಲಗಳನ್ನು ತುಂಬಬೇಕು. ನೈಸರ್ಗಿಕ ವಿಪತ್ತುಗಳ ಸಂದರ್ಭಗಳಲ್ಲಿ ಶಿಕ್ಷಣ ಮತ್ತು ತರಬೇತಿಯು ಯಾವಾಗಲೂ ಸಮುದಾಯಗಳಲ್ಲಿನ ಅಸುರಕ್ಷಿತತೆಯನ್ನು ಕಡಿಮೆ ಮಾಡುತ್ತದೆ. ಪ್ರವಾಹಗಳು, ಬರಗಾಲಗಳು, ಭೂಕುಸಿತಗಳು, ಜ್ವಾಲಾಮುಖಿಗಳು, ಭೂಕಂಪನಗಳು ಹಾಗೂ ಚಂಡಮಾರುತಗಳಿಂದ ಉಂಟಾಗುವಂತಹ ವಿಪತ್ತುಗಳನ್ನು ತಗ್ಗಿಸುವ ನಿಟ್ಟಿನಲ್ಲಿ ಉತ್ತೇಜನ ನೀಡಲು ಶೈಕ್ಷಣಿಕ ವಲಯವು ಹಿಂದೆಂದಿಗಿಂತಲೂ ಇಂದು ಹೆಚ್ಚಿನ ಸಾಮರ್ಥ್ಯವನ್ನು ಹಾಗೂ ಜವಾಬ್ದಾರಿಯನ್ನು ಹೊಂದಿದೆ. ಕೆಲವು ಸಂಸ್ಥೆಗಳು, ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳು, ಸಮುದಾಯಗಳನ್ನು ಸೂಕ್ಷ್ಮವಾಗಿ ಸ್ಪಂದಿಸುವಂತೆ ಮಾಡುವ ಬಹುಮುಖ್ಯವಾಗಿ ಜಾಗೃತಿಯನ್ನು ಮೂಡಿಸುವ ಹೊಣೆಯನ್ನು ಹೊತ್ತಿವೆ. ಅದರ ಫಲವಾಗಿ ಸಮುದಾಯಗಳು ವಿಪತ್ತುಗಳ ನಾನಾ ಹಂತಗಳಲ್ಲಿನ ವಿಪತ್ತುಗಳನ್ನು ನಿರ್ವಹಿಸುವ, ಅದರಲ್ಲೂ ಪೂರ್ವ–ಹಂತದ ಮೇಲೆ ಹೆಚ್ಚಿನ ಮಹತ್ವವನ್ನು ನೀಡುವ ಸಾಮರ್ಥ್ಯ ಹೊಂದುವಂತೆ ಮಾಡುತ್ತವೆ ಎಂದು ಭಾವಿಸಲಾಗಿದೆ.

**ಮೂಲ: ಡಿ.ಕೆ. ಸಿನ್ಹಾ**

**ಅನು: ಶಶಿಕುಮಾರ್**

## ವಿಶೇಷ ಆರೋಗ್ಯ ಸಮಸ್ಯೆಗಳು

**ಅರ್ಥ:**

ಕನಿಷ್ಠ ಶಕ್ತಿ/ಬಲ, ಉತ್ಸಾಹ ಮತ್ತು ಕಡಿಮೆ ಏಕಾಗ್ರತೆಯಿಂದ ಇರುವ ಮಕ್ಕಳ ಗುಂಪನ್ನು ವಿಶೇಷ ಆರೋಗ್ಯ ಸಮಸ್ಯೆವುಳ್ಳ ಮಕ್ಕಳ ಪಂಗಡಕ್ಕೆ ಸೇರಿಸಲಾಗುತ್ತದೆ. ಮಕ್ಕಳ ಇಂತಹ ಶಾರೀರಿಕ ಹಾಗೂ ಮಾನಸಿಕ ಸ್ಥಿತಿ ಶಾಲೆಗಳಲ್ಲಿ ಉತ್ಕೃಷ್ಟ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಅಡ್ಡಿ ಉಂಟುಮಾಡುತ್ತದೆ.

**ಮಕ್ಕಳಿಗೆ ಇಂತಹ ಪರಿಸ್ಥಿತಿ ಉದ್ಭವವಾಗಲು ಕಾರಣಗಳು:**

- ಸೋಂಕು ರೋಗಗಳಿಂದ ಶಾಶ್ವತ ಊನತೆ ಉಂಟಾಗಬಹುದು.
- ದೀರ್ಘಕಾಲಿಕ ಅನಾರೋಗ್ಯದಿಂದ ಹಾಸಿಗೆ ಹಿಡಿಯುವುದರಿಂದ
- ನಿಧಾನವಾಗಿ ಚೇತರಿಸಿಕೊಳ್ಳುವಿಕೆಯಿಂದ ಅಥವಾ
- ಹುಟ್ಟಿನಿಂದಲೇ ಕಾಣಿಸಿಕೊಳ್ಳುವ ಕೆಲವು ಅಂಗವಿಕಲತೆಯು ಕೂಡ ಅದೇ ರೀತಿಯ ಸಮಸ್ಯೆಗಳು ಉಂಟಾಗಬಹುದು.

ಇತರೆ ಆರೋಗ್ಯ ಸಮಸ್ಯೆಗಳಾದ ಸಕ್ಕರೆ ರೋಗ, ಕ್ಯಾನ್ಸರ್, ಮತ್ತು ಶ್ವಾಸಕೋಶ ತೊಂದರೆ ಕೂಡ ಮಕ್ಕಳನ್ನು ದುರ್ಬಲರನ್ನಾಗಿಸಬಹುದು ಹಾಗೂ ಇಂತಹ ಮಕ್ಕಳನ್ನು ಕೂಡ ವಿಶೇಷ ಆರೋಗ್ಯ ಸಮಸ್ಯೆವುಳ್ಳ ಮಕ್ಕಳೆಂದು ಪರಿಗಣಿಸಬಹುದು.

**ವಿಶೇಷ ಆರೋಗ್ಯ ಸಮಸ್ಯೆಗಳು ಯಾವುವು?**

**ಕ್ಷಯರೋಗ (Tuberculosis-T.B.):** ಇದೊಂದು ಸಾಂಕ್ರಮಿಕ ರೋಗ, ಈ ರೋಗ ಮಕ್ಕಳಲ್ಲಿ ಅಷ್ಟೊಂದು ಕಂಡು ಬರುವುದಿಲ್ಲ. ಆದರೆ ಕಿಶೋರಾವಸ್ಥೆಯಲ್ಲಿರುವವರಲ್ಲಿ ಇದೊಂದು ದೊಡ್ಡ ಸಮಸ್ಯೆ. ಇವರಲ್ಲಿ ಈ ರೋಗ Tubercule Bacili ಎನ್ನುವ ಬ್ಯಾಕ್ಟೀರಿಯಾದಿಂದ ಹರಡುತ್ತದೆ.

ಬೆಳಗ್ಗೆ ಸಾಮಾನ್ಯವಾಗಿ ನಿಶಕ್ತಿಯ ಅನುಭವ, ದೈಹಿಕ ತೂಕ ಕಡಿಮೆ ಆಗುವ ಸಾಧ್ಯತೆ. ಕೆಮ್ಮು, ಅಜೀರ್ಣತೆ, ರಕ್ತ ಕಕ್ಕುವಿಕೆ, ಎದೆ ನೋವು, ಒಡಕಲು ಧ್ವನಿ ಇತ್ಯಾದಿ ಈ ರೋಗದ ಸಾಮಾನ್ಯ ಲಕ್ಷಣಗಳಾಗಿವೆ.

ವೈದ್ಯಕೀಯ ಶುಶ್ರೂಷೆ ಹಾಗೂ ನಿಯಮಿತವಾಗಿ ಔಷದಿ ತೆಗೆದುಕೊಳ್ಳುವುದರ ಜೊತೆಗೆ ವೈದ್ಯರು ಸಲಹೆ ನೀಡಿದಂತೆ ಇತರೆ ಎಚ್ಚರಿಕೆಯ ದಿನಚರಿ ಪಾಲಿಸುವುದರಿಂದ ಈ ರೋಗವನ್ನು ಗುಣಪಡಿಸಬಹುದು.

**ನೆಪ್ರಾಸಿಸ್ (Nephrosis):** ಮೂತ್ರಪಿಂಡದ ಸೋಂಕುಗಳು ಬ್ರಯಿಟ್ಸ್ (Brigths) ಖಾಯಿಲೆ– ಇದು ಕೂಡ ಒಂದು ರೀತಿಯ ಮೂತ್ರ ಪಿಂಡದ ಸೋಂಕು ರೋಗ. ಇದನ್ನು ನೆಪ್ರಾಟಿಸ್ ಎಂದು ಕರೆಯುತ್ತಾರೆ. ವಾಂತಿ, ಬೆನ್ನು ನೋವು, ಊತ, ತಲೆನೋವು, ಗಾಢಬಣ್ಣದ ಅಥವಾ ರಕ್ತ ಮಿಶ್ರಿತ ಮೂತ್ರ – ಇವೆಲ್ಲವೂ ಮೂತ್ರಪಿಂಡ ಸೋಂಕಿನ ರೋಗಿಗಳಲ್ಲಿ ಸಾಮಾನ್ಯವಾಗಿ ಕಾಣುವ ಲಕ್ಷಣಗಳು.

**ಪೌಷ್ಠಿಕಾಂಶದ ಕೊರತೆ ಇರುವ ಮಕ್ಕಳು:** ಅಪೌಷ್ಠಿಕ ಆಹಾರ ಸೇವಿಸುವ ಮಕ್ಕಳಲ್ಲಿ ಕೆಲವರು ಹೆಚ್ಚು ದೈಹಿಕ ತೂಕ ಹೊಂದಿರುತ್ತಾರೆ ಅಥವಾ ಕಡಿಮೆ ತೂಕ ಹೊಂದಿರುತ್ತಾರೆ. ಇಂತಹ ಮಕ್ಕಳು ಬಹಳ ಬೇಗ ಸುಸ್ತಾಗುತ್ತಾರೆ. ಶಾರೀರಿಕ ಹಾವಭಾವಗಳು ಬಹಳ ಕಳಪೆಯಾಗಿರುತ್ತದೆ. ಒಣ ಚರ್ಮ ಹೆಚ್ಚಾಗಿ ಕಾಣುಸುತ್ತದೆ. ಒಸಡುಗಳು ಬಹಳ ನಾಜೂಕಾಗಿರುತ್ತದೆ. ಸದಾ ಒತ್ತಡದಿಂದ ಇದು ಕಸಿಮಿಸಿಗೊಳ್ಳುತ್ತಾರೆ. ಸದಾ ಒಂದಲ್ಲ ಒಂದು ರೋಗಕ್ಕೆ ತುತ್ತಾಗುತ್ತಾರೆ. ಮೈಬಣ್ಣ ಬಹಳ ಕಳೆಹೀನವಾಗಿರುತ್ತದೆ ಮತ್ತು ಬಹಳ ಆಲಸಿಗಳಾಗಿರುತ್ತಾರೆ.

Digitised by Bharatavani, CIIL

ಇಂತಹ ಮಕ್ಕಳ ಶಾರೀರಿಕ ತೂಕದಲ್ಲಿ ಆಗುವ ವ್ಯತ್ಯಾಸಕ್ಕೆ ಮನೋವೈಜ್ಞಾನಿಕ ಸ್ಥಿತಿ ಕಾರಣವೇ ಅಥವಾ ದೈಹಿಕ ಆರೋಗ್ಯ ಕಾರಣವೇ ಎಂದು ಪತ್ತೆ ಹಚ್ಚಬೇಕು. ಇಂತಹ ಮಕ್ಕಳಿಗೆ ಸೂಕ್ತ ಪೌಷ್ಠಿಕಾಂಶ ಇರುವ ಆಹಾರ ತೆಗೆದುಕೊಳ್ಳುವಂತೆ ಸಲಹೆ ಸೂಚನೆ ನೀಡಬೇಕು ಹಾಗೂ ನಿಯಮಿತವಾಗಿ ವ್ಯಾಯಾಮ ಮಾಡುವಂತೆ ಸಲಹೆ ನೀಡಬೇಕು.

**ರಕ್ತದ ಕ್ಯಾನ್ಸರ್:** ರಕ್ತದ ಕ್ಯಾನ್ಸರ್ ಅಥವಾ ಇತರೆ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳಿಗೂ ವಿಶೇಷ ಶಿಕ್ಷಣದ ಸೇವೆಯ ಅಗತ್ಯವಿದೆ.

ಈ ರೋಗದಿಂದ ಬಳಲುತ್ತಿರುವ ಮಕ್ಕಳು ಈ ರೋಗದಿಂದ ಹುಟ್ಟಿನಿಂದಲೇ ಪೀಡಿತರಾಗಬಹುದು ಅಥವಾ ನಂತರದ ದಿನಗಳಲ್ಲಿ ಇದರಿಂದ ಬಳಲಬಹುದು. ಸಾಮಾನ್ಯರಿಗೆ ವಯಸ್ಕರಿಗೆ ಹೋಲಿಸಿದರೆ, ಮಕ್ಕಳಲ್ಲಿ ಈ ರೋಗ ಬಹಳ ತೀಕ್ಷ್ಣ ಸ್ವರೂಪ ತಾಳಿ ಬಹಳ ಬೇಗ ಉಲ್ಬಣ ಸ್ಥಿತಿ ತಲುಪುತ್ತದೆ. ಈ ರೋಗವನ್ನು ನಿವಾರಣೆ ಮಾಡಲು ಯಾವುದೇ ನಿರ್ದಿಷ್ಟವಾದ ಔಷಧಿಯನ್ನು ಇನ್ನೂ ಕಂಡು ಹಿಡಿದಲ್ಲಿ ಕೆಲವು ವೇಳೆ ಶಸ್ತ್ರಚಿಕಿತ್ಸೆಯಿಂದ ಇದನ್ನು ಗುಣಪಡಿಸಲು ಸಾಧ್ಯವಾದರೂ ಕೂಡ ಕೆಲವು ದಿನಗಳ ನಂತರ ಈ ರೋಗ ಮತ್ತೆ ಮರುಕಳಿಸಬಹುದು. ಇಂತಹ ರೋಗದಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆ ನೀಡುವ ಉದ್ದೇಶ– ಈ ಮಕ್ಕಳನ್ನು ಕ್ಷೇಮವಾಗಿ ಇಡಲು ಹಾಗೂ ಆ ಮಗು ತನ್ನ ಸುತ್ತಲಿನ ಪ್ರಪಂಚದ ಬಗ್ಗೆ ಆಸಕ್ತಿ ತೋರಿ ಲವಲವಕೆಯಿಂದ ಇದ್ದು ಆ ಮಗುವಿನ ಜೀವತಾವಧಿ ಹೆಚ್ಚು ಮಾಡುವುದಾಗಿದೆ.

ಈ ರೋಗದ ಚಿಹ್ನೆಗಳನ್ನು ಸ್ವರೂಪವನ್ನು ಪ್ರಾರಂಭಿಕ ಹಂತದಲ್ಲಿ ಸ್ಪಷ್ಟವಾಗಿ ಪತ್ತೆ ಹಚ್ಚಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಈ ರೋಗವನ್ನು ಮುಂದುವರೆದ ಹಂತದಲ್ಲೇ ಪತ್ತೆ ಹಚ್ಚಲು ಸಾಧ್ಯವಾಗುವುದು. ಇದರಿಂದಾಗಿ ಕ್ಯಾನ್ಸರ್ ಸಂಕೀರ್ಣ ಸಮಸ್ಯೆಯಾಗಿದೆ.

ಪ್ರಾರಂಭಿಕ ಹಂತದಲ್ಲೇ ಈ ರೋಗವನ್ನು ಪತ್ತೆ ಹಚ್ಚಲು ನಿಯಮಿತವಾಗಿ ವೈದ್ಯಕೀಯ ತಪಾಸಣೆಯನ್ನು ನಡೆಸಬೇಕಾಗುತ್ತದೆ. ಸಮಾಜ ಇಂತಹ ಮಕ್ಕಳ ಬಗ್ಗೆ ತೋರುವ ಉದಾಸೀನ ಧೋರಣೆ ಹಾಗೂ ಮಕ್ಕಳ ಆಸೆ ಆಕಾಂಕ್ಷೆಗಳು ಮತ್ತು ನಿರ್ವಹಿಸಬಲ್ಲ ಸಾಮರ್ಥ್ಯ ನಡುವೆ ಇರುವ ಕೆಲವು ಮಿತಿಗಳು ಈ ಮಕ್ಕಳ ರೋಗ ಉಲ್ಬಣವಾಗಲು ಕಾರಣವಾಗಿವೆ.

**ಶಿಕ್ಷಣ:** ಈ ರೋಗಗ್ರಸ್ತ ಬಹಳಷ್ಟು ಮಕ್ಕಳು ಸಾಮಾನ್ಯ ಮಕ್ಕಳಂತೇ ಬುದ್ಧಿಶಕ್ತಿ ಹೊಂದಿರುತ್ತಾರೆ ಹಾಗೂ ಕಲಿಕಾ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. (ಸೆರೆಬ್ರಲ್ ಪಾಲ್ಸಿ ಮತ್ತು ಮಿದುಳಿನ ಪೆಟ್ಟಾಗಿರುವ ಮಕ್ಕಳನ್ನು ಹೊರತು ಪಡಿಸಿ ಏಕೆಂದರೆ ಇಂತಹ ಮಕ್ಕಳಲ್ಲಿ ಕಲಿಕಾ ಮತ್ತು ಗ್ರಹಿಕೆಯ ತೊಂದರೆಗಳಿರುತ್ತವೆ.)

ಡರ್ಡ್‌ಸನ್ ಎಂಬ ಸಂಶೋಧಕರ ಪ್ರಕಾರ ಅಥವಾ ಅವರು ಸಲಹೆ ನೀಡಿರುವ ಹಾಗೆ ನರದೌರ್ಬಲ್ಯ ಇರುವ ಮತ್ತು ನಿಶ್ಯಕ್ತಿಯಿಂದ ಕೂಡಿರುವ ಮಕ್ಕಳ ಸಾಮಾನ್ಯ ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕದಿಂದ 10–15 ಅಂಶಗಳಷ್ಟು (Points) ಹಿಂದಿರಬಹುದು.

ಇದಕ್ಕೆ ಕಾರಣ ಇಂತಹ ಮಕ್ಕಳ ವೈಯಕ್ತಿಕ ಹಾಗೂ ಶಾಲಾ ಚಟುವಟಿಕೆಗಳಲ್ಲಿ ಶಾರೀರಿಕ ಅಂಗಾಂಗಗಳ ಚಲನವಲನಗಳು ಹಾಗೂ ಮಾನಸಿಕ ಅರ್ಥೈಸುವಿಕೆಗಳ ನಡುವೆ ಅಗತ್ಯವಿರುವ ಸಮನ್ವಯದ ಕೊರತೆ, ಅಷ್ಟೇ ಅಲ್ಲದೆ ಕಣ್ಣು ಮತ್ತು ಕೈಗಳ ನಡುವಿನ ಹೊಂದಾಣಿಕೆ ಕೊರತೆ, ಬರವಣಿಗೆ ಸಮಯದಲ್ಲಿ ದೈಹಿಕ ಅಂಗಾಂಗಳ ಸಹಕಾರದ ಕ್ಲಿಷ್ಟತೆ ಹಾಗೂ ಪುಸ್ತಕ ಹಿಡಿಯುವುದರಲ್ಲಿ ಹಾಗೂ ಹಾಳೆಗಳನ್ನು ತಿರುವುದರಲ್ಲಿ ಅನಾವಶ್ಯಕ ಶ್ರಮದ ವ್ಯಯ. ಇವೆಲ್ಲಾ ಕಾರಣಗಳಿಂದ ಇಂತಹ ಮಕ್ಕಳ ಶಾಲಾ ಪ್ರಗತಿ ಕುಂಠಿತವಾಗುತ್ತದೆ.

**ಸಾಮಾಜಿಕ ಹೊಂದಾಣಿಕೆ:**

ಇಂತಹ ಮಕ್ಕಳಲ್ಲಿ ಸಾಮಾಜಿಕ ಹೊಂದಾಣಿಕೆ ಒಂದು ಪ್ರಮುಖವಾದ ಸಮಸ್ಯೆ ಎಂದು ಡ್ರೀವರ್‌ರವರ ಅಧ್ಯಯನ ಸಾಬೀತು ಪಡಿಸಿದೆ. ಸುಮಾರು ಶೇಖಡವಾರು 35ರಿಂದ 58 ಮಕ್ಕಳಲ್ಲಿ ತೀವ್ರ ರೀತಿಯ ಮನೋವೈಜ್ಞಾನಿಕ ಸಮಸ್ಯೆಗಳನ್ನು ಕಾಣಬಹುದು. ಇಂಥ ಮಕ್ಕಳು ಸಾಮಾಜಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಭಯ ಹಾಗೂ ಸಂಕೋಚ, ಮೂಲಭದ್ರತೆಯ ಕೊರತೆ, ಸಾಮಾಜಿಕ ಸಂಬಂಧಗಳ ಕೊರತೆಯಿಂದ ಬಳಲುತ್ತಾರೆ. ಇತರರಿಂದ ಸುಲಭವಾಗಿ ಟೀಕೆಗೆ ಒಳಗಾಗುತ್ತಾರೆ. ನಿಂದನೆಗೂ ಕೂಡ ಒಳಗಾಗುತ್ತಾರೆ. ಈ ಎಲ್ಲಾ ಕಾರಣಗಳಿಂದ ಸಾಮಾಜಿಕವಾಗಿ ಆರೋಗ್ಯಕರ ಸಂಬಂಧಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಈ ಮಕ್ಕಳಿಗೆ ಕಷ್ಟ ಸಾಧ್ಯವಾಗಿದೆ.

**ಕೊಲೈಸ್ ಮತ್ತು ಇಲೈಟಿಸ್:**

ಕೋಲಿಟಿಸ್ (Colitis) ಎಂದರೆ ದೊಡ್ಡ ಕರುಳಿನ ಮುಖ್ಯಭಾಗವಾದ ಕೋಲನ್‌ನ ಉರಿಯೂತ ಇಲೈಟಿಸ್ (Ileitis) ಅಂದರೆ ಸಣ್ಣ ಕರುಳಿನ ತುದಿಯೂತ ಅಥವಾ ಕೊನೆಯ ಭಾಗದ ಉರಿಯೂತ. ಇಂತಹ ದೇಹಸ್ಥಿತಿ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಈ ಸೋಂಕಿನಿಂದ ಬಳಲುತ್ತಿರುವ ಮಕ್ಕಳ ನರದೌರ್ಬಲ್ಯ ಅಥವಾ ಪುಕ್ಕಲುತನದಿಂದ ಕೂಡಿರುತ್ತಾರೆ. ಸ್ವಕೇಂದ್ರೀಕೃತರಾಗಿರುತ್ತಾರೆ ಹಾಗೂ ಭಾಗಶಃ ನ್ಯೂರೆಸೇನಿಯಾದಿಂದ ಬಳಲುತ್ತಾರೆ. ಅಂದರೆ ದುರ್ಬಲ ಹಾಗೂ ನಿಶಕ್ತಿಯಿಂದ ಕೂಡಿದ ಸ್ಪಷ್ಟವಲ್ಲದ ಭಾವನೆಗಳನ್ನು ಹೊಂದಿರುತ್ತಾರೆ. ಇಂತಹ ಮಕ್ಕಳು ಹೆಚ್ಚು ಆಯಾಸ ಮಾಡಿಕೊಳ್ಳದೆ ವಿಶ್ರಾಂತಿ ತೆಗೆದುಕೊಳ್ಳಬೇಕು ಹಾಗೂ ಆಹಾರದಲ್ಲಿ ಪಥ್ಯ ಇರುವಂತೆ ಸಲಹೆ ಮಾಡಬೇಕು.

**ಹೆಪಿಟಾಯಿಟಿಸ್ (Hepatitis):** ಲಿವರ್‌ನ ಉರಿಯೂತಕ್ಕೆ ಈ ಹೆಸರಿದೆ. ಈ ರೋಗವು ಕೂಡ ಮಕ್ಕಳಲ್ಲಿ ಕಂಡುಬರುತ್ತದೆ. ಊಟ ಸೇರದಿರುವುದು, ಬಹಳ ನಿಶಕ್ತಿ, ದಿನದ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಹೀನತೆ ಈ ರೋಗದ ಲಕ್ಷಣಗಳಾಗಿವೆ. ಈ ಮಕ್ಕಳು ಆಹಾರದಲ್ಲಿ

Digitised by Bharatavani, CIIL

ಪಥ್ಯವನ್ನು ಪಾಲಿಸಬೇಕು ವೈದ್ಯರ ಸಲಹೆಯಂತೆ ಔಷಧಿಗಳನ್ನು ಸೇವಿಸಬೇಕು. ವಿಶ್ರಾಂತಿ ತೆಗೆದುಕೊಳ್ಳಬೇಕು.

**ಅಲರ್ಜಿಗಳು:**

ಕೆಲವೊಂದು ಆಹಾರ ಸೇವನೆಯಿಂದ, ವಾತಾವರಣದಲ್ಲಿನ ಪರಾಗದಿಂದ, ಹುಳುಕಡಿತ, ಚುಚ್ಚುಮದ್ದು, ಔಷಧ ಸೇವನೆ ಇತ್ಯಾದಿಗಳಿಂದ ಕೆಲವರಿಗೆ ಉಂಟಾಗುವ ನವೆ, ಉಬ್ಬಸ, ದಡಿಕೆ, ಗಂಧೆ ಮುಂತಾದ ಅಹಿತ ಪ್ರತಿಕ್ರಿಯೆ ಅತಿಸೂಕ್ಷ್ಮತೆ, ಅಸಹಿಷ್ಣುತೆಯ ದೇಹಸ್ಥಿತಿಗೆ ಅಲರ್ಜಿ(Allergy) ಎನ್ನುತ್ತಾರೆ.

ಇಂತಹ ಅಲರ್ಜಿಗಳು ನಿಯತಕಾಲಿಕವಾಗಿಯಾದರೂ ಕಾಣಿಸಿಕೊಳ್ಳಬಹುದು ಅಥವಾ ಪುನರಾವರ್ತಿಸಬಹುದು. ಇಂತಹ ಅಲರ್ಜಿಗಳಿಗೆ ಪ್ರಮುಖವಾದ ಮೂಲ ಕಾರಣ ಹೊರ/ಬಾಹ್ಯ ವಸ್ತುಗಳು. ಅವುಗಳೆಂದರೆ–ಆಹಾರ ಅಥವಾ ವಾತಾವರಣದ ಧೂಳು ಉಸಿರಾಟದಲ್ಲಿ ತೊಂದರೆ ಉಂಟು ಮಾಡಿ ಶ್ವಾಸಕೋಶದಲ್ಲಿ ಸೊಂಕು ಉಂಟುಮಾಡಬಹುದು.

ಆಯಾಸ, ಮಾನಸಿಕ ಅಸ್ವಸ್ಥತೆ ಅಥವಾ ಗ್ರಂಥಿಗಳ ಬದಲಾವಣೆ ಮುಂತಾದವುಗಳು ಅಲರ್ಜಿಗಳ ತೀವ್ರತೆ ಹಾಗೂ ಕಾಣಿಸಿಕೊಳ್ಳುವ ರೀತಿಯ ಮೇಲೆ ಬಹಳ ಪ್ರಭಾವ ಬೀರುತ್ತವೆ. ಹೇ ಜ್ವರ ಅಥವಾ ರೋಸ್ ಜ್ವರ ಸಾಮಾನ್ಯವಾಗಿ ಋತು ಆಧಾರಿತ ಅಲರ್ಜಿಗಳು ಉಸಿರಾಟದ ತೊಂದರೆ, ಅಸ್ತಮ ಇವುಗಳು ನಿಯತಕಾಲಿಕವಾಗಿರಬಹುದು ಅಥವಾ ಮತ್ತೆ ಮತ್ತೆ ಕಾಣಿಸಿಕೊಳ್ಳಬಹುದು. ಇಂತಹ ಅಲರ್ಜಿಗಳು ಜೀವಕ್ಕೆ ಬಹಳ ಅಪಾಯಕಾರಿಯಾಗಬಹುದು.

**ಹೈವ್ಸ್ (Hives):**

ಚರ್ಮದ ಮೇಲೇಳುವ ತುರುಚಿ ಮುಳ್ಳಿನಂಥ ಗುಳ್ಳೆಗಳು ಅಂದರೆ ತುರುಚಿ ದದ್ದು ಎಕಿಸ್ಸಿಮಾ(Eczema)–ಒಂದು ಬಗೆಯ ಚರ್ಮರೋಗ, ಚರ್ಮದ ಉರಿಯೂತ, ಚರ್ಮದ ಮೇಲೆ ನವೆ ಅಥವಾ ಗುಳ್ಳೆಗಳಿಂದ ಸ್ರಾವ; ಕರುಳುಬೇನೆ– ಈ ಎಲ್ಲಾ ಅಲರ್ಜಿಗಳು ನಿಯತಕಾಲಿಕವಾಗಿ ಕಾಣಿಸಿಕೊಳ್ಳಬಹುದು ಅಥವಾ ಕಾರಣಾಂಶಗಳಾದ ನಿರ್ದಿಷ್ಟ ಆಹಾರ ಪದಾರ್ಥಗಳ ಸೇವನೆ, ಉದ್ವಿಗ್ನ ಸನ್ನಿವೇಶಗಳನ್ನು ಎದುರಿಸುವಾಗ ಧೂಳಿಗೆ, ಕೂದಲಿಗೆ ಅಥವಾ ಇತರ ಚರ್ಮದ ಪದಾರ್ಥಗಳ ಇತ್ಯಾದಿಗಳ ಸ್ಪರ್ಶ ಅಥವಾ ಅವುಗಳ ಸಂಪರ್ಕದಿಂದ ಅಲರ್ಜಿಗಳು ಕಾಣಿಸಿಕೊಳ್ಳಬಹುದು.

ಅಲರ್ಜಿ ಪದಾರ್ಥಗಳ ಸೇವನೆ ಹಾಗೂ ಅಂತಹ ವಾತಾವರಣದಿಂದ ದೂರವಿರಬೇಕು ಅಥವಾ ಎಚ್ಚರಿಕೆ ವಹಿಸಬೇಕು. ಮುಂಜಾಗ್ರತೆ ವಹಿಸುವುದು ಬಹಳ ಮುಖ್ಯ. ಆಹಾರ ಪದಾರ್ಥಗಳನ್ನು ಪರೀಕ್ಷಿಸಿ ಸೇವಿಸಬೇಕು.

**ಡಯಾಬಿಟೀಸ್ (ಸಿಹಿ ಮೂತ್ರರೋಗ/ಮಧುಮೇಹ ರೋಗ):**

ಮಧುಮೇಹ (Diabetis) ರೋಗದಿಂದ ಬಳಲುತ್ತಿರುವ ಮಕ್ಕಳು ಸಾಮಾನ್ಯವಾಗಿ ಏಕಾಗ್ರತೆಯನ್ನು ಕಳೆದುಕೊಳ್ಳುತ್ತಾರೆ ಹಾಗೂ ದಿನನಿತ್ಯದ ಕಾರ್ಯದಲ್ಲಿ ಚೈತನ್ಯ ಮತ್ತು ಹುರುಪನ್ನು ಹೊಂದಿರುವುದಿಲ್ಲ.

ಮಧುಮೇಹ ರೋಗವನ್ನು ರೋಗವೆಂದು ಪರಿಗಣಿಸುವುದು ತಪ್ಪು. ಇದೊಂದು ಶರೀರದಲ್ಲಿನ ಕೊರತೆಯನ್ನು ಸೂಚಿಸುತ್ತದೆ. ಮೇದೋಜೀರಕ (ಪ್ಯಾನ್‌ಕ್ರಿಯಸ್) ಉತ್ಪಾದಿಸುವ ಇನ್‌ಸುಲಿನ್‌ನ ಕೊರತೆ ಇದಕ್ಕೆ ಕಾರಣ. ಇನ್‌ಸುಲಿನ್ ನಾವು ಸೇವಿಸುವ ಸಕ್ಕರೆ ಅಂಶವನ್ನು ಗ್ಲೂಕೋಸ್ ಆಗಿ ಪರಿವರ್ತಿಸಿ ರಕ್ತಕ್ಕೆ ಬಿಡುತ್ತದೆ. ಈ ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲ. ಆದರೆ ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ನಿಯಂತ್ರಿಸಬಹುದು. ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ನಿಯಮಿತವಾದ ಆಹಾರ ಸೇವನೆಯಿಂದ ಈ ಕೊರತೆಯನ್ನು ನಿಯಂತ್ರಿಸಬಹುದು. ಅನಿಯಂತ್ರಿತ ಮಧುಮೇಹದಿಂದ ಬಳಲುವ ಮಗು ಏಕಾಗ್ರತೆಯನ್ನು ಕಳೆದುಕೊಳ್ಳಬಹುದು. ವಿಶ್ರಾಂತಿರಹಿತನಾಬಹುದು ಹಾಗೂ ಸಿಡುಕಾಡುವ ಪ್ರವೃತ್ತಿ ಹೆಚ್ಚಾಗಬಹುದು. ಈ ಎಲ್ಲಾ ಲಕ್ಷಣಗಳಿಂದ ಮಗು ತನ್ನ ಸೋಮಾರಿತನ ಹೆಚ್ಚು ಮಾಡಿಕೊಂಡು ಶಿಕ್ಷಕರಿಂದ ನಿಂದನೆಗೆ ಒಳಪಡಬಹುದು.

ಈ ರೋಗದ ಪ್ರಾರಂಭಿಕ ಹಂತದಲ್ಲಿರುವ ಮಗುವಿಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಬೇಕು. ನಂತರ ಚಿಕಿತ್ಸೆಯನ್ನು ಮುಂದುವರಿಸಬೇಕು. ರಕ್ತದಲ್ಲಿನ ಸಕ್ಕರೆ ಪ್ರಮಾಣ ನಿಯಂತ್ರಣಕ್ಕೆ ಬರುವವರೆಗೆ ಆಸ್ಪತ್ರೆಯಲ್ಲೇ ಚಿಕಿತ್ಸೆ ಮುಂದುವರಿಸಬೇಕು. ಹೀಗೆ ಮಾಡುವುದರಿಂದ ಮಗು ತನ್ನ ದಿನನಿತ್ಯ ಚಟುವಟಿಕೆಗಳಲ್ಲಿ ಭಾಗವಹಿಸಬಹುದು ಹಾಗೂ ಶಾಲಾ ಕಾರ್ಯಗಳಲ್ಲಿ ಯಾವುದೇ ಅಡಚಣೆ ಇಲ್ಲದೆ ಪಾಲ್ಗೊಳ್ಳಬಹುದು. ಶಿಕ್ಷಕರಾದವರು ಈ ರೋಗದಿಂದ ಬಳಲುತ್ತಿರುವ ಮಕ್ಕಳು ನಿಯಮಿತವಾಗಿ ಇನ್‌ಸುಲಿನ್ ಚಿಕಿತ್ಸೆ ಪಡೆಯುತ್ತಿದ್ದಾರೆಯೇ ಹಾಗೂ ಆಹಾರ ಪಥ್ಯ ಪಾಲಿಸಿ, ವ್ಯಾಯಾಮ ಮಾಡುತ್ತಿದ್ದಾರೆಯೇ ಎಂದು ಗಮನಿಸುತ್ತಿರಬೇಕು.

ನಿಯಮಿತವಾಗಿ ರಕ್ತಪರೀಕ್ಷೆ ಮಾಡಿಸುವುದರಿಂದ ಈ ರೋಗವನ್ನು ಪ್ರಾರಂಭಿಕ ಹಂತದಲ್ಲೇ ಪತ್ತೆ ಹಚ್ಚಲು ಸಾಧ್ಯವಾಗುತ್ತದೆ.

**ಸಂಧಿವಾತ ಜ್ವರ:** ಕೀಲುಗಳಲ್ಲಿ ಉರಿಯೂತವೂ ನೋವೂ ಇರುವ, ಸಾಂಕ್ರಾಮಿಕವಲ್ಲದ ಜ್ವರವೇ ರುಮ್ಯಾಟಿಕ್ ಜ್ವರ (Rheumatic fever). ಈ ರೋಗದಿಂದ ಬಳಲುವ ಮಕ್ಕಳಿಗೆ ಹೃದಯದ ತೊಂದರೆ ಉಂಟಾಗಬಹುದು. ಇದು 5–6 ವರ್ಷ ವಯೋಮಿತಿಯ ಮಕ್ಕಳನ್ನು ಕಾಡಿಸಬಹುದು. ಇಂತಹ ಮಕ್ಕಳ ಹೃದಯ ಸರಿಯಾಗಿ ಕಾರ್ಯನಿರ್ವಹಿಸದಿರಬಹುದು. ಹೃದಯಘಾತವಾಗುವ ಸಂಭವಗಳಿವೆ. ಮೊದಲ ಸಲ ಹೃದಯಘಾತ ಆದ ಮೇಲೆ, ನಂತರದ ದಿನಗಳಲ್ಲಿ ಪದೇ ಪದೇ ಆಗುವುದು ಸಾಮಾನ್ಯವಾಗುತ್ತದೆ.

ಈ ರೋಗಕ್ಕೆ ನಿರ್ದಿಷ್ಟವಾದ ಕಾರಣ ತಿಳಿದುಬಂದಿಲ್ಲ. Hemolytic Strep Coccaಟಗೆ ಸೊಂಕು ತಗಲಿರುವುದನ್ನು ಗಮನಿಸಬಹುದು.

Digitised by Bharatavani, CIIL

ಶರೀರದ ತೂಕ ಇಳಿತ, ಮೂಗಿನಿಂದ ರಕ್ತ ಸೋರುವಿಕೆ, ಹಸಿವನ್ನು ಕಳೆದುಕೊಳ್ಳುವುದು, ಜ್ವರ ಕಾಣಿಸಿಕೊಳ್ಳುವುದು, ಮುದುಡಿದ/ಕಿವುಚಿದಂತೆ ಇರುವ ಮುಖಭಾವ, ಕೈಕಾಲುಗಳು, ಹೊಟ್ಟೆನೋವು, ಸಂಧಿಗಳಲ್ಲಿ ನೋವು, ಸಿಡುಕುತನ, ನರದೌರ್ಬಲ್ಯ, ತರಗತಿಯಲ್ಲಿ ಅಗತ್ಯವಿಲ್ಲದ ಶಾರೀರಿಕ ಸೆಳೆವು ಅಥವಾ ಕಂಪನಗಳು ಈ ರೋಗ ಲಕ್ಷಣಗಳಾಗಿವೆ. ಈ ರೋಗಕ್ಕೆ ಪ್ರಾರಂಭಿಕ ಹಂತದಲ್ಲೇ ಸೂಕ್ತ ವೈದ್ಯಕೀಯ ಚಿಕಿತ್ಸೆ ಮಾಡಿಸಬೇಕು.

**ಎಫಿಫೈಸಿಟಿಸ್ (Ephificitis):**

ಇದೊಂದು ಅಂಗವಿಕಲತೆಯ/ಕುಂಟು ಸ್ಥಿತಿ ಬಹಳಷ್ಟು ಮಕ್ಕಳು ಇದಕ್ಕೆ ಬಲಿಯಾಗುತ್ತಾರೆ. Slipped Epiphysis ಎಂಬುದು ಹೆಣ್ಣು ಮಕ್ಕಳಿಗಿಂತ ಗಂಡುಮಕ್ಕಳಲ್ಲಿ ಹೆಚ್ಚಾಗಿ ಕಾಣಬಹುದು. ಇಂತಹ ರೋಗ ಮಕ್ಕಳಿಗೆ ಓಡಾಡಲು ಅಡಚಣೆ ಉಂಟು ಮಾಡುತ್ತದೆ ಅಥವಾ ಕೆಲವೊಂದು ಸಂದರ್ಭದಲ್ಲಿ ಬದಲಾಗಿ ಊರುಗೋಲಿನ ಸಹಾಯದಿಂದ ನೇತಾಡುವಂತೆ ಇರುವ ಮತ್ತೊಂದು ಕಾಲಿಗೆ ಸಹಾಯಕವಾಗಿ ಬಳಸಿ ನಡೆಯಲು ಉತ್ತೇಜಿಸುವುದು ಸಹಜವಾಗಿದೆ. Perthe's ರೋಗ ಎಂಬುದು ಅಸ್ಥಿ ಪಂಜರದ ನ್ಯೂನತೆಯಿಂದಾಗಿ ಮೂಳೆಗಳಲ್ಲಿನ ರಚನೆಯಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಇದರಿಂದ ಮಕ್ಕಳಿಗೆ ಚಲನೆಯಲ್ಲಿ ತೊಂದರೆ ಉದ್ಭವಿಸುತ್ತದೆ.

**ಪ್ರಗತಿಶೀಲ ಮಾಂಸಖಂಡ ನಶಿಸುವಿಕೆ (Progressive Muscular Dystrophy)**

ಮಾಂಸಖಂಡಗಳು ಕ್ರಮೇಣ ನಶಿಸುವ ರೋಗವಾಗಿದೆ. ಹಲವಾರು ರೀತಿಯ ರೋಗಗಳಿಗೆ ಮಾಂಸಖಂಡದ ಬೆಳವಣಿಗೆಯಲ್ಲಿನ ದೋಷಗಳು ಎಂದು ಕರೆಯಬಹುದಾಗಿದೆ.

ಇದಕ್ಕೆ ನಿಖರವಾದ ಕಾರಣವೇನೆಂದು ಪತ್ತೆ ಆಗಿಲ್ಲ. ಊಹಿಸಬಹುದಾದ ಕಾರಣಗಳೆಂದರೆ ದೋಷಯುಕ್ತ ಚಯಾಪಚಯ ಕ್ರಿಯೆ. (ದೇಹದಲ್ಲಿಯ ಜೀವಕೋಶದಲ್ಲಿ ಪೋಷಕದ್ರವ್ಯಗಳು ಜೀವದ್ರವ್ಯವನ್ನು ರೂಪಿಸುವ ಮತ್ತು ಜೀವದ್ರವ್ಯವು ವಿಭಜನೆ ಹೊಂದಿ ಸರಳ ಪದಾರ್ಥಗಳಾಗುವ ಜೀವ ರಾಸಾಯನಿಕ ಕ್ರಿಯೆ) ಮಾಂಸಖಂಡಗಳಿಗೆ ತೊಂದರೆ, ಪೌಷ್ಠಿಕ ಆಹಾರದ ಕೊರತೆ, ಅಂತಃಸ್ರವ ಗ್ರಂಥಿಗಳ ಹಾಗೂ ಮಿದುಳಿನ ಪೆರಿಫೆರೆಲ್ ನರಗಳ ದೋಷ.

ಈ ರೋಗದಿಂದ ಬಳಲುವ ಮಕ್ಕಳ ಮಾಂಸಖಂಡಗಳು ಕ್ರಮೇಣ ಕ್ಷೀಣಿಸುತ್ತಾ ಹೋಗಿ ಕೆಲವು ಸಂದರ್ಭದಲ್ಲಿ ಸಾವನ್ನು ಕೂಡ ಉಂಟು ಮಾಡಬಹುದು.

ಆದರೆ ಇಂತಹ ಮಕ್ಕಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಾಮಾನ್ಯ ಮಕ್ಕಳಂತೆ ಎಲ್ಲ ತರಹದ ಚಟುವಟಿಕೆಗಳಲ್ಲಿ ಆದಷ್ಟು ಭಾಗವಹಿಸುವಂತೆ ಸಾಧ್ಯವಿದೆ ಹಾಗೂ ಶಾಲೆ ಮತ್ತು ಸಮಾಜ ಕೂಡ ಇದಕ್ಕೆ ಅನುವು ಮಾಡಿ ಕೊಡಬೇಕು.

**ಬಹ್ವಂಶ ನರಸಂಬಂಧ ಖಾಯಿಲೆ (Multiple Sclerosis):**

ಸ್ಲೇರೋಸಿಸ್ ಯಾವುದೇ ದೇಹಭಾಗದ ಊತದ ಅಪಸಾಮಾನ್ಯ ಗಡಸುಗಟ್ಟಿಕೆ ಪಾರ್ಶ್ವವಾಯು ಹಾಗೂ ದೋಷಯುಕ್ತ ಮಾತಿಗೆ ಎಡೆಮಾಡಿಕೊಡುವ ದೀರ್ಘಕಾಲೀನ ನರಸಂಬಂಧ ಖಾಯಿಲೆಯಾಗಿದೆ.

ಇದು ಕೂಡ ಮಾಂಸಖಂಡದ ಬೆಳವಣಿಗೆಯ ದೋಷದಂತೆ ಲಕ್ಷಣಗಳನ್ನು ಹೊಂದಿರುವ ರೋಗ. ಆದರೆ ಈ ರೋಗದಲ್ಲಿ ಆ ರೋಗದ ಲಕ್ಷಣಗಳು ಸೇರಿದಂತೆ ಇತರ ಲಕ್ಷಣಗಳಾದ ಮಾಂಸಖಂಡದ ತುಡಿತ, ನಡುಕ (tremrs), ಅಸಮತೋಲಿತ ನಡಿಗೆ (unsteady gait), ದೃಷ್ಟಿ ಮತ್ತು ಇತರೆ ಇಂದ್ರಿಯಗಳ ತೊಂದರೆಗಳು, ನರಗಳಿಗೆ ಉಂಟಾದ ತೊಂದರೆಯಿಂದ ಕಾಣಿಸಿಕೊಳ್ಳುತ್ತದೆ. ಇದರ ಗುರುತುಗಳು ಅಥವಾ ಕಲೆಗಳು ನರಮಂಡಲದ ವ್ಯವಸ್ಥೆಯಲ್ಲಿ ವ್ಯಾಪಕವಾಗಿ ಹರಡುತ್ತದೆ. (ಮಿದುಳುಗಳು, ಬೆನ್ನೆಲುಬು ಹಾಗೂ ಪಾರ್ಶಿಕ ನರಗಳನ್ನು ಒಳಗೊಂಡಂತೆ) ಇದಕ್ಕೆ ಯಾವುದೇ ರೀತಿಯ ಗುಣಪಡಿಸುವ ಚಿಕಿತ್ಸೆಯ ಕ್ರಮವಿಲ್ಲ. ತೀವ್ರ ಸ್ವರೂಪದ ನ್ಯೂನತೆ ಸಹಜವಾಗಿ ಉದ್ಭವಿಸಲೂಬಹುದು ಅಥವಾ ಭಾಗಶಃ ಗುಣವಾಗಲುಬಹುದು. ಈ ರೋಗ ಉತ್ತರ ಬಾಲ್ಯಾವಸ್ಥೆಯಲ್ಲಿ ಪ್ರಾರಂಭವಾಗಬಹುದು. ಆದರೆ ಹೆಚ್ಚಾಗಿ ವಯಸ್ಕರಲ್ಲಿ ಈ ರೋಗ ಕಾಣಿಸಿಕೊಳ್ಳುತ್ತದೆ.

**ಮೂಳೆಗೆಡ್ಡೆಗಳು ಅಥವಾ ದುರ್ಮಾಂಸದ ಬೆಳವಣಿಗೆ:**

ಮೂಳೆಗೆಡ್ಡೆಗಳು ಅಥವಾ ದುರ್ಮಾಂಸದ ಬೆಳವಣಿಗೆ ಕೂಡ ಅಂಗವಿಕಲತೆಗೆ ಕಾರಣವಾಗುತ್ತದೆ. ಮೂಳೆಗೆಡ್ಡೆಗಳು ಉದ್ದನೆಯ ಮೂಳೆಯ ತುದಿಯಲ್ಲಿ ನಿಧಾನವಾಗಿ ಬೆಳೆಯುವ ಒಂದು ರೀತಿಯ ವಿಚಿತ್ರವಾದ ದುರ್ಮಾಂಸ. ಈ ದುರ್ಮಾಂಸಗಳು ಅತೀ ಹಾನಿಕಾರಕ ಅಥವಾ ಹಾನಿಕಾರಕವಲ್ಲದ ಬೆಳವಣಿಗೆಗಳು. ಈ ಬೆಳವಣಿಗೆಯ ರೋಗಲಕ್ಷಣಗಳನ್ನು ಮುಂಚಿತವಾಗಿ ಗುರುತಿಸುವುದರಿಂದ ಹಾಗೂ ಚಿಕಿತ್ಸೆ ಪ್ರಾರಂಭಿಸುವುದರಿಂದ ಅದರಿಂದ ಆಗುವ ತೀವ್ರ ತೆರನಾದ ದುಷ್ಪರಿಣಾಮಗಳನ್ನು ತಡೆಯಬಹುದು.

**ರಕ್ತಹೀನತೆ:**

ರಕ್ತದಲ್ಲಿನ ಕೆಂಪು ಕಣಗಳ ಕೊರತೆಯಿಂದ ಬಳಲುವ ಮಕ್ಕಳಲ್ಲಿ ರಕ್ತಹೀನತೆಯನ್ನು (Anemia) ಕಾಣಬಹುದು. ಆಹಾರದಲ್ಲಿ ಪೌಷ್ಟಿಕಾಂಶದ ಕೊರತೆಯಿಂದಾಗಿ ಮಕ್ಕಳಲ್ಲಿ ರಕ್ತಹೀನತೆಯನ್ನು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಶರೀರದಲ್ಲಿನ ಕೆಲವು ಹಾನಿಕಾರಕ ಬ್ಯಾಕ್ಟೀರಿಯಾಗಳಿಂದಲೂ ರಕ್ತಹೀನತೆ ಕಾಣಬಹುದು. ಬಿಳುಚಿಕೊಂಡ ಮುಖ ಚಹರೆ, ನಿರಾಸಕ್ತಿ, ದುರ್ಬಲತೆ, ಚಟುವಟಿಕೆಗಳಲ್ಲಿ ಭಾಗವಹಿಸದಿರುವುದು, ಆಲಸಿತನ, ನಿದ್ರಾಹೀನತೆ, ಒಣಗಿದ ತುಟಿ, ಹೆಚ್ಚು ಬಾಯಾರಿಕೆ ಆಗುವುದು ಈ ರೋಗದ ಲಕ್ಷಣಗಳಾಗಿವೆ. ಮುಂಚಿತವಾಗಿ ಈ ರೋಗದ ಲಕ್ಷಣಗಳನ್ನು ಗುರುತಿಸಿ, ಚಿಕಿತ್ಸೆ ಪ್ರಾರಂಭಿಸಬೇಕು. ಪೌಷ್ಟಿಕಾಂಶವಿರುವ ಆಹಾರ ಸೇವನೆ, ಕಬ್ಬಿಣಾಂಶ ಇರುವ ಆಹಾರ ಪದಾರ್ಥಗಳನ್ನು ಹೇರಳವಾಗಿ

Digitised by Bharatavani, CIIL

ಸೇವಿಸುವುದು. ನಿಯಮಿತವಾಗಿ ರಕ್ತ ತಪಾಸಣೆ ಮಾಡಿಸಿ ರಕ್ತದ ಶೇಕಡಾವಾರು ತಿಳಿಯುವುದು.

**ಶಿಕ್ಷಣ:** ದೈಹಿಕ ಆರೋಗ್ಯದಲ್ಲಿ ತೀವ್ರಮಟ್ಟದ ನ್ಯೂನತೆಯುಳ್ಳ ಮಕ್ಕಳನ್ನು ಬಹಳ ಸುಲಭವಾಗಿ ಗುರುತಿಸಬಹುದು. ಆದರೆ ಇಂತಹ ವಿಶೇಷ ಆರೋಗ್ಯ ಸಮಸ್ಯೆಯುಳ್ಳ ಮಕ್ಕಳನ್ನು ಪ್ರಾರಂಭಿಕ ಹಂತದಲ್ಲೇ ಗುರುತಿಸಲು ಸ್ವಲ್ಪ ಕಷ್ಟಕರವಾದದ್ದು. ಸಾಮಾನ್ಯ ಶಾಲೆಗಳಲ್ಲಿ ಇಂತಹ ಮಕ್ಕಳು ಬಹಳಷ್ಟು ಇರಬಹುದಾದರೂ ಇವರನ್ನು ಗುರುತಿಸುವ ಇಲ್ಲವೆ ಗಮನಿಸುವ ಪ್ರಯತ್ನ ಮಾಡದಿರುವ ಕಾರಣ ಇವರಲ್ಲಿರುವ ಲೋಪದೋಷಗಳು ಗೋಚರವಾಗುವುದಿಲ್ಲ. ತಂದೆ-ತಾಯಿಯರ ಅಜ್ಞಾನ ಅಥವಾ ಅಜ್ಞಾತ ಭಯ ಕೂಡ ಮಕ್ಕಳ ನ್ಯೂನತೆಗಳು ಬೆಳಕಿಗೆ ಬರದಂತೆ ಮಾಡುತ್ತವೆ. ಪ್ರಾರಂಭದಲ್ಲಿ ಹೀಗೆ ಅಗೋಚರವಾಗಿ ಉಳಿದ ನ್ಯೂನತೆಗಳೇ ಮುಂದೆ ಉಲ್ಬಣವಾಗುವುದರ ಜೊತೆಗೆ ಅನೇಕ ಸಂಕೀರ್ಣ ಸಮಸ್ಯೆಗಳಿಗೆ ಕಾರಣವಾಗುತ್ತವೆ. ಅವರ ಶಿಕ್ಷಣದಲ್ಲೂ ತೊಂದರೆಯುಂಟಾಗುತ್ತದೆ. ಇದರಿಂದಾಗಿ ಅವರುಗಳ ವ್ಯಕ್ತಿತ್ವ ವಿಕಾಸವು ಕುಂಠಿತಗೊಳ್ಳುತ್ತದೆ. ಇದೆಲ್ಲವನ್ನೂ ಗಮನಿಸುವಾಗ ಮಕ್ಕಳ ಆರೋಗ್ಯದ ಸಮಸ್ಯೆಗಳನ್ನು ಮನೆಯಲ್ಲಿನ ಪೋಷಕರು ಹಾಗೂ ಶಾಲೆಯಲ್ಲಿನ ಶಿಕ್ಷಕರು ಪ್ರಾರಂಭಿಕ ದಿನಗಳಲ್ಲಿಯೇ ಗುರುತಿಸುವುದು ಅತ್ಯವಶ್ಯಕವೆನಿಸುತ್ತದೆ. ವಿಶೇಷ ಆರೋಗ್ಯವುಳ್ಳ ಮಕ್ಕಳ ಸಮಸ್ಯೆಗಳನ್ನು ಗುರುತಿಸುವಲ್ಲಿ ಪೋಷಕರ ಪಾತ್ರ ಹಾಗೂ ಸಹಕಾರ ಬಹಳ ಅತ್ಯವಶ್ಯಕ.

ಇಂತಹ ಮಕ್ಕಳಿಗೆ ಶಿಕ್ಷಣ ನೀಡಬಹುದಾದಂತಹ ಈ ಅಂಶಗಳನ್ನು ಗಮನಿಸಬೇಕು.

1) ಇಂತಹ ಮಕ್ಕಳಿಗೆ ಸಾಮಾನ್ಯ ಪಠ್ಯಕ್ರಮದಲ್ಲಿ ಗಣನೀಯವಾದ ಬದಲಾವಣೆ ಅಥವಾ ಸುಧಾರಣೆಯ ಅಗತ್ಯವಿಲ್ಲ. ಸಾಮಾನ್ಯ ಮಕ್ಕಳಿಗಿರುವ ಪಠ್ಯಕ್ರಮವನ್ನೇ ಉಪಯೋಗಿಸಬಹುದು.

2) ಇಂತಹ ಮಕ್ಕಳ ಗ್ರಹಣಶಕ್ತಿ, ಧಾರಣ ಶಕ್ತಿ, ಅರ್ಥೈಸುವಿಕೆಯ ಸಾಮರ್ಥ್ಯಗಳನ್ನು ಉತ್ತಮಪಡಿಸಲು ಸಹಕಾರಿಯಾಗಿರುವ ಬೋಧನಾ ಸಾಮಗ್ರಿಗಳನ್ನು ಅಳವಡಿಸಿ ಬಳಸಬೇಕು. ಕಲಿಯಲು ಅವರನ್ನು ಪ್ರೋತ್ಸಾಹಿಸಬೇಕು.

3) ಬೋಧನಾ ವಿಧಾನಗಳಲ್ಲಿ ಮಕ್ಕಳ ಅಗತ್ಯತೆಗಳಿಗನುಗುಣವಾಗಿ ವಿಶಿಷ್ಟ ಬೇಡಿಕೆಗಳನ್ನು ಪೂರೈಸಲು ಸಮರ್ಪಕವಾಗಿರುವಂತೆ ಎಚ್ಚರ ವಹಿಸಬೇಕು. ಇಂತಹ ಮಕ್ಕಳ ಗ್ರಾಹಕ (Receptive) ಸಂಯೋಜನಾ (intergrative) ಹಾಗೂ ಅಭಿವ್ಯಕ್ತೀಕರಣ (Expressing) ಪ್ರಕ್ರಿಯೆಗಳನ್ನು ಉತ್ತಮಪಡಿಸಲು ಸಹಾಯ ನೀಡಬೇಕು.

4) ಭೌತಿಕ ಸೌಲಭ್ಯಗಳು ಮಕ್ಕಳ ಅವಶ್ಯಕತೆಗನುಗುಣವಾಗಿ ರಬೇಕು. ದೈಹಿಕ ನ್ಯೂನತೆಯುಳ್ಳ ಮಕ್ಕಳು ತರಗತಿಯಲ್ಲಿ ಸರಾಗವಾಗಿ ಓಡಾಡಿಕೊಂಡು ಯಾವ ಅಡಚಣೆಗಳಿಲ್ಲದಂತೆ ಚಟುವಟಿಕೆಯಲ್ಲಿ ಭಾಗವಹಿಸುವುದು ಸುಗಮವಾಗುವಂತೆ ಪೀಠೋಪಕರಣಗಳನ್ನು ಜೋಡಿಸಬೇಕು.

5) ಇಂತಹ ಮಕ್ಕಳು ಇತರ ಸಾಮಾನ್ಯ ಮಕ್ಕಳೊಂದಿಗಿನ ನಡುವಿನ ಅಂತರವನ್ನು ಕಡಿಮೆ ಮಾಡಿ ಅವರೊಳಗೆ ಸಾಮಾಜಿಕ, ಭಾವನಾತ್ಮಕ ಐಕ್ಯತೆಯನ್ನು ಸಾಧಿಸಲು ಅನ್ಯೋನ್ಯವಾಗಿ ಬೆರೆಯಲು, ಅರ್ಥಪೂರ್ಣವಾಗಿ ವ್ಯವಹರಿಸಲು ವಿಚಾರ ವಿನಿಮಯ ಮಾಡಿಕೊಳ್ಳಲು ಸೂಕ್ತವಾದ ಅವಕಾಶಗಳನ್ನು ಒದಗಿಸಿಕೊಡಬೇಕು.

6) ಮಕ್ಕಳ ವಿಶೇಷ ಆರೋಗ್ಯ ಸಮಸ್ಯೆಗಳನ್ನು ಗುರುತಿಸುವುದು ಹಾಗೂ ಪರಿಹಾರ ಒದಗಿಸುವುದು ನಿಧಾನವಾದಂತೆಲ್ಲ ಅವರ ಆರೋಗ್ಯ ಸಮಸ್ಯೆಗಳಿಗೆ ಅನುಗುಣವಾಗಿ ಪಾಠ ಪ್ರವಚನಗಳಿಗೆ ಸಂಬಂಧಿಸಿದಂತೆ ನಾನಾ ರೀತಿಯ ತೊಂದರೆಗಳು ವಿವರವಾಗಿ ಅಭ್ಯಸಿಸುವುದು. ಶಿಕ್ಷಕರ ಆದ್ಯ ಕರ್ತವ್ಯವಾಗುತ್ತದೆ. ಇದಕ್ಕೆ ನೆರವಾಗುವಂತಹ ಪರೀಕ್ಷೆಗಳನ್ನು ಉಪಯೋಗಿಸಬೇಕು. ಈ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ನಿರಂತರವಾಗಿ ಗಮನಿಸುತ್ತಾ ಮಾಪನ ಮಾಡುತ್ತಾ ಅವರ ವಿಶಿಷ್ಟ ಶೈಕ್ಷಣಿಕ ತೊಂದರೆಗಳನ್ನು ನಿವಾರಿಸುತ್ತಿರಬೇಕು.

–ಡಾ. ಸವಿತಾ ಪಾಂಡೆ ಎಂ.

## ವಿಶೇಷ ಶಾಲೆಗಳು

ವಿಶೇಷ ಸವಾಲುಳ್ಳವರಿಗೆ ಕೊಡುವ ಶಿಕ್ಷಣ ದೈಹಿಕ ಹಾಗೂ ಮಾನಸಿಕವಾಗಿ ವಿಶೇಷ ಸವಾಲುಳ್ಳವರಿಗೆ ಸಮುದಾಯದ ಇತರರೊಡನೆ ಸಮಾನ, ಸಮಪಾಲುದಾರರಾಗುವಂತೆ ನೋಡಿಕೊಳ್ಳುವುದು ಹಾಗೂ ಜೀವನವನ್ನು ಧೈರ್ಯ ಮತ್ತು ವಿಶ್ವಾಸದಿಂದ ಎದುರಿಸುವಂತೆ ಮಾಡುವ ಉದ್ದೇಶ ಹೊಂದಿದೆ. 1986ರ ಹೊಸ ಶಿಕ್ಷಣ ನೀತಿ ಅನ್ವಯ ಅಸಮರ್ಥತೆಗಳುಳ್ಳ ಮಕ್ಕಳಿಗೆ ವಿಶೇಷ ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ ಇಂಥ ಮಕ್ಕಳಿಗೆ ವಿಶೇಷ ವಸತಿ ಗೃಹಗಳನ್ನೊಳಗೊಂಡ ಶಾಲೆಗಳನ್ನು ಸ್ಥಾಪಿಸಲಾಗಿದೆ. ವಿಶೇಷ ಸವಾಲುಳ್ಳ ಮಕ್ಕಳಿಗೆ ವೃತ್ತಿಪರ ತರಬೇತಿಯನ್ನು ಕೊಡಲು ಸಾಕಷ್ಟು ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅಸಮರ್ಥ ಮಕ್ಕಳನ್ನು ಸಾಮಾನ್ಯ ಶಾಲೆಯಲ್ಲಿ ಸೇರಿಸಿದ್ದಾಗಲೂ ತರಬೇತಿ ಕೊಡುವ ಉದ್ದೇಶದಿಂದ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನು ಈ ದಿಶೆಯಲ್ಲಿ ಪುನರ್ ವ್ಯವಸ್ಥೆಗೊಳಿಸಲಾಗಿದೆ.

ವಿಶೇಷ ಸವಾಲುಳ್ಳ ಮಕ್ಕಳಿಗೆ ಮುಖ್ಯವಾಗಿ ಎರಡು ವಿಧದ ಶಾಲೆಗಳಲ್ಲಿ ಶಿಕ್ಷಣ ನೀಡಬಹುದು. ವಿಶೇಷ ಸವಾಲುಳ್ಳ ಮಕ್ಕಳಿಗೆ ಅವರ ಅಸಮರ್ಥತೆಗೆ ಅನುಗುಣವಾದ ಶಿಕ್ಷಣವನ್ನು ಕೊಡಲು ಪ್ರತ್ಯೇಕ ಶಾಲೆಗಳನ್ನು ತೆರೆಯಲಾಗುತ್ತದೆ. ಆ ಶಾಲೆಗಳಿಗೆ ಆ ವರ್ಗದ ಮಕ್ಕಳ ವಿಶೇಷ ಅಗತ್ಯಗಳನ್ನು ಪೂರೈಸಲು ಬೇಕಾದ ಮೂಲಭೂತ ಸೌಕರ್ಯಗಳನ್ನು ಸಾಧನ-ಸಲಕರಣೆಗಳನ್ನು

Digitised by Bharatavani, CIIL

ಅಂಧಶಾಲೆ ಒಳಗೊಂಡಿರುತ್ತದೆ. ನಿರ್ದಿಷ್ಟ ಅಸಮರ್ಥತೆ ಇರುವ (ಉದಾಹರಣೆಗಳಿಗೆ ಅಂಧದೃಷ್ಟಿ ಸಮಸ್ಯೆ ಇರುವವರು, ಶ್ರವಣ ಸಮಸ್ಯೆ ಇರುವವರು ಇತ್ಯಾದಿ) ಮಕ್ಕಳ ಶಿಕ್ಷಣದಲ್ಲಿ ತರಬೇತಿ ಪಡೆದ ಅಂದರೆ ವಿಶೇಷ ಶಿಕ್ಷಣದಲ್ಲಿ (Special Education) ತರಬೇತಿ ಪಡೆದ ಶಿಕ್ಷಕರು ಆ ಮಕ್ಕಳಿಗೆ ವಿಶೇಷವಾಗಿ ರೂಪಿಸಿದ ಪಠ್ಯಕ್ರಮವನ್ನು ವಿಶಿಷ್ಟ ಬೋಧನಾ ವಿಧಾನಗಳಿಂದ ಬೋಧಿಸಿ ಸೂಕ್ತ ಮೌಲ್ಯಮಾಪನ ಮಾಡುತ್ತಾರೆ. ಇಂಥ ಶಾಲೆಗಳನ್ನು ವಿಶೇಷ ಶಾಲೆಗಳು ಎಂದು ಕರೆಯುತ್ತಾರೆ. ಹತ್ತೊಂಬತ್ತನೇ ಶತಮಾನದ ಅರ್ಧ ಭಾಗದವರೆಗು ಅಂದರೆ 1980ನೇ ದಶಕದವರೆಗೂ ಮುಂದುವರಿದ ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ಮತ್ತು ಅಮೇರಿಕಾ ದೇಶಗಳಲ್ಲಿ ಮತ್ತು ಭಾರತವೂ ಸೇರಿದಂತೆ ವಿಶ್ವದಾದ್ಯಂತ ಅಸಮರ್ಥತೆಯುಳ್ಳ ಮಕ್ಕಳಿಗೆ ವಿಶೇಷ ಶಾಲೆಗಳಲ್ಲಿ ಶಿಕ್ಷಣ ನೀಡುವುದು ವಾಡಿಕೆಯಾಗಿತ್ತು. ಸಾಮಾನ್ಯ ಶಾಲೆಗಳಿಗೆ ಅರ್ಧ ಮಕ್ಕಳನ್ನು ಸೇರಿಸಲು ಸಾಧ್ಯವಿಲ್ಲವೆಂದೂ, ಹಾಗೆ ಸೇರಿಸಿದರೂ ಆ ಮಕ್ಕಳಿಗೆ ಸಾಮಾನ್ಯ ಮಕ್ಕಳೊಂದಿಗೆ ಶಿಕ್ಷಣ ನೀಡಲು ಸಾಧ್ಯವಾಗುವುದಿಲ್ಲವೆಂಬ ಅಭಿಪ್ರಾಯ ಈ ಕ್ರಮಕ್ಕೆ ಆಧಾರವಾಗಿತ್ತು. ಆದರೆ ಕಾಲಕ್ರಮೇಣ ಇಂಥ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಸಮನ್ವಯಗೊಳಿಸಿ ಶಿಕ್ಷಣ ನೀಡುವುದರ ಬಗ್ಗೆ ನಡೆಸಿದ ಸಂಶೋಧನ ಅಧ್ಯಯನಗಳಿಂದ ಸಮನ್ವಯ ಶಿಕ್ಷಣದ ಬಗ್ಗೆ ಧನಾತ್ಮಕ ಫಲಿತಾಂಶಗಳು ದೊರಕಿದುದರ ಪರಿಣಾಮವಾಗಿ ಹಾಗೂ ಅಸಮರ್ಥತೆಯುಳ್ಳ ಮಕ್ಕಳ ಪೋಷಕರಿಗೆ ತಮ್ಮ ಮಕ್ಕಳು ವಿಶೇಷ ಶಾಲೆಗಳಲ್ಲಿ ಅಧ್ಯಯನ ಮಾಡುವುದು ಸಾಮಾಜಿಕ ದೃಷ್ಟಿಯಿಂದ ಅಪ್ರಿಯ ಅನುಭವವಾದುದರಿಂದ ಇಂಥ ಪೋಷಕರ ಸಮೂಹಗಳು ತಮ್ಮ ಸಂಘಗಳ ಮೂಲಕ ಸರ್ಕಾರಗಳ ಮೇಲೆ ಒತ್ತಡ ತಂದು ತಮ್ಮ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಸಮನ್ವಯಗೊಳಿಸಿ ಶಿಕ್ಷಣ ನೀಡಬೇಕೆಂದು ಆಂದೋಲನ ನಡೆಸತೊಡಗಿದರು. ಇದಕ್ಕೆ ಸಂಶೋಧನೆಗಳ ಸಕಾರಾತ್ಮಕ ಫಲಿತಾಂಶಗಳು ಬೆಂಬಲ ನೀಡಿದವು. ಇದೆಲ್ಲದರ ಪರಿಣಾಮವಾಗಿ ಮುಂದುವರಿದ ರಾಷ್ಟ್ರಗಳಲ್ಲಿ ಅಸಮರ್ಥತೆಗಳುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಸೇರಿಸಿ ಸಾಮಾನ್ಯ ಮಕ್ಕಳೊಂದಿಗೆ ಶಿಕ್ಷಣ, ನೀಡುವ ಕ್ರಮ ಆಚರಣೆಗೆ ಬಂದಿತು. ಇಂಥ ಶಿಕ್ಷಣ ಕ್ರಮವನ್ನು 'ಸಮನ್ವಯ ಶಿಕ್ಷಣ' (Inclusive Education) ಎಂದು ಕರೆಯಲಾಗಿದೆ.

ಸಮನ್ವಯ ಶಿಕ್ಷಣಕ್ರಮ ಹೆಚ್ಚಾಗಿ ಆಚರಣೆಗೆ ಬಂದಂತೆ ವಿಶೇಷ ಶಾಲೆಗಳ ಮಹತ್ವ ಕಡಿಮೆಯಾಗ ತೊಡಗಿತು. ಇತ್ತೀಚಿನ ದಶಕಗಳಲ್ಲಿ ಅಸಮರ್ಥತೆಯುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಸಮನ್ವಯಗೊಳಿಸುವುದರಿಂದ ಹೊಸದಾಗಿ ವಿಶೇಷ ಶಾಲೆಗಳನ್ನು ತೆರೆಯುವುದು ಅನವಶ್ಯಕವೆನಿದೆ. ಆದರೂ ವಿಶೇಷ ಶಿಕ್ಷಣ ವ್ಯವಸ್ಥೆಯಲ್ಲಿ ವಿಶೇಷ ಶಾಲೆಗಳನ್ನು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಾಗುವುದಿಲ್ಲ. ಏಕೆಂದರೆ ತೀವ್ರತರ ಅಸಮರ್ಥತೆಗಳುಳ್ಳ ಮಕ್ಕಳನ್ನು ಉದಾಹರಣೆಗೆ ತೀವ್ರ ಬುದ್ಧಿ ಮಾಂದ್ಯತೆ ಇರುವ ಮಕ್ಕಳು ತೀವ್ರರೂಪದ ಮೆದುಳಿನ ಪಾರ್ಶ್ವವಾಯು ಪೀಡಿತ (Cerebral Palsy Children) ಬಹು ಅಸಮರ್ಥತೆಗಳುಳ್ಳ ಮಕ್ಕಳು ಸಾಮಾನ್ಯ ಶಾಲೆಗೆ ಸಮನ್ವಯಗೊಳಿಸುವುದು ಕಷ್ಟವಾಗುತ್ತದೆ. ಅಂಥ ಮಕ್ಕಳಿಗೆ ವಿಶೇಷ ಶಾಲೆಗಳಲ್ಲಷ್ಟೇ ಶಿಕ್ಷಣ ಕೊಡಬೇಕಾಗುತ್ತದೆ. ಆದ್ದರಿಂದ ಸಮನ್ವಯ ಶಿಕ್ಷಣ ಕ್ರಮ ಜಾರಿಗೆ ಬಂದ ನಂತರವು ವಿಶೇಷ ಶಾಲೆಗಳನ್ನು ಮುಂದುವರಿಸಬೇಕಾಗುತ್ತದೆ.

ವಿಶೇಷ ಶಾಲೆಗಳ ಮತ್ತೊಂದು ಬದಲಾದ ವ್ಯವಸ್ಥೆಗೆ ವಿಶೇಷ ತರಗತಿ (Special Class) ಎಂದು ಹೇಳುತ್ತೇವೆ. ಒಂದು ದೊಡ್ಡ ಶಾಲೆಗೆ ಈ ರೀತಿಯ ವಿಶೇಷ ತರಗತಿ ಹೊಂದಿ ಕೊಂಡಿರುತ್ತದೆ. ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನು ಈ ವಿಶೇಷ ತರಗತಿಗೆ ದಾಖಲುಪಡಿಸಲಾಗುತ್ತದೆ. ಶಿಕ್ಷಣದ ಮುಖ್ಯ ಭಾಗ ಈ ಮಕ್ಕಳಿಗೆ ವಿಶೇಷ ತರಗತಿಯಲ್ಲಿ ದೊರೆಯುತ್ತದೆ ಈ ತರಗತಿಯನ್ನು ವಿಶೇಷ ಶಿಕ್ಷಣ ತರಬೇತಿ ಪಡೆದ ಶಿಕ್ಷಕರೇ ನೋಡಿಕೊಳ್ಳುತ್ತಾರೆ. ಈ ಮಕ್ಕಳು ಸಹ ಪಠ್ಯಚಟುವಟಿಕೆಗಳಿಗೆ, ಸಾಮಾಜಿಕ ರೂಪದ ಚಟುವಟಿಕೆಗಳಿಗೆ ಮುಖ್ಯ ಶಾಲೆಯ ಸಾಮಾನ್ಯ ಮಕ್ಕಳ ಜೊತೆಗೆ ಸೇರಿಕೊಳ್ಳುತ್ತಾರೆ. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮುಖ್ಯ ಧಾರೆಗೆ ಸಮನ್ವಯಗೊಳಿಸುವುದಕ್ಕೆ ಹಿಂದಿನ ಹಂತವೆಂದು ಪರಿಗಣಿಸಬಹುದು. ತೀವ್ರ ಅಸಮರ್ಥತೆಗಳುಳ್ಳ ಮಕ್ಕಳಿಗೆ ಈ ವ್ಯವಸ್ಥೆಯಲ್ಲಿ ವಿಶೇಷ ಶಿಕ್ಷಣ ಮತ್ತು ಆಗಾಗ್ಗೆ ಸಾಮಾನ್ಯ ಮಕ್ಕಳೊಂದಿಗೆ ಸಾಮಾಜಿಕ ಸಂಪರ್ಕಕ್ಕೆ ಅವಕಾಶವಿರುವುದರಿಂದ ಮಕ್ಕಳ ಸಾಮಾಜಿಕ ಸಂಯೋಗಾತ್ಮಕ ವಿಕಾಸಕ್ಕೆ ಅನುಕೂಲ ಪರಿಸ್ಥಿತಿಗಳು ಒದಗುತ್ತವೆ.

ವಿಶೇಷ ಶಾಲೆಗಳು ಇರುವ ಜಿಲ್ಲೆಗಳಲ್ಲಿ ಆ ಶಾಲೆಯ ಒಂದು ಭಾಗವಾಗಿ ಅಥವಾ ಅದರ ಅಧೀನದಲ್ಲಿ ಒಂದು ವೃತ್ತಿ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರವು ವಿಶೇಷ ಶಾಲೆಯಲ್ಲಿನ ಮಕ್ಕಳಿಗೆ ಮತ್ತು ತೀವ್ರ ಅಂಗವಿಕಲತೆಯುಳ್ಳ ಮಕ್ಕಳಿಗೆ ಉದ್ಯೋಗಕ್ಕಾಗಿ ವೃತ್ತಿ ತರಬೇತಿಯನ್ನು ಒದಗಿಸುವುದು. ಈಗಿನ ವಿಶೇಷ ಶಾಲೆಗಳ ಅಂಗವಿಕಲ ಮಕ್ಕಳ ಶಿಕ್ಷಣದಲ್ಲಿ ದುರ್ಬಲವಾದ ಕೊಂಡಿಯೊಂದಿಗೆ ವ್ಯವಸ್ಥೆಯ ಆಂತರಿಕ ಕಾರಣಗಳು ಸೃಷ್ಟಿಸಿರುವ ಉಸ್ತುವಾರಿಯ ಕೊರತೆಯಿಂದಾಗಿ ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಣದ ಗುಣಮಟ್ಟ ಕುಸಿದಿದೆ. ಜಿಲ್ಲಾ ಹಂತದಲ್ಲಿ (ಅಂಗವಿಕಲ) ವಿಶೇಷ ಸವಾಲುಳ್ಳ ಮಕ್ಕಳ ಶಿಕ್ಷಣದ ಉಸ್ತುವಾರಿ ಕಾರ್ಯಕೈಗೊಳ್ಳುವುದು ಅಗತ್ಯವಾಗಿದೆ.

ಭಾರತೀಯ ಸಾಮಾಜಿಕ ಸಾಂಸ್ಕೃತಿಕ ಸನ್ನಿವೇಶದ ಹಿನ್ನೆಲೆಯಲ್ಲಿ ವಿಶೇಷ ಮಕ್ಕಳ ಶಿಕ್ಷಣದ ಮೇಲೆ ಸಂಶೋಧನಾ ಕಾರ್ಯವನ್ನು ತುರ್ತಾಗಿ ಕೈಗೊಳ್ಳಲಾಗಿದೆ. ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ತು (NCERT) ವಿಶ್ವವಿದ್ಯಾಲಯ ಧನ ಸಹಾಯ ಆಯೋಗ, ರಾಷ್ಟ್ರೀಯ ಅಂಗವಿಕಲ ಸಂಸ್ಥೆಗಳು ಸಂಶೋಧನೆಗಳನ್ನು ಕೈಗೊಂಡಿವೆ. ವಿಶೇಷ ತೊಂದರೆಗಳಿಗೆ ಒಳಪಟ್ಟ ವಿಶೇಷ ಮಕ್ಕಳಿಗೆ ವಿಶೇಷ ತರಬೇತಿ ನೀಡುವ ಬಗ್ಗೆ ಸರ್ಕಾರ ವ್ಯಾಪಕ ರೀತಿಯಲ್ಲಿ ಕ್ರಮಕೈಗೊಂಡಿದೆ.

ವಿಶೇಷ ಸವಾಲುಳ್ಳ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸುತ್ತಿರುವ ವಿಶೇಷ ಶಾಲೆಗಳು ಈ ಕೆಳಕಂಡಂತಿವೆ.

Digitised by Bharatavani, CIIL

**1) ಅಂಧ ಮಕ್ಕಳ ಶಾಲೆಗಳು:**

ಭಾರತದಲ್ಲಿ ಬ್ರಿಟಿಷ್ ಆಡಳಿತದಲ್ಲಿ 1887 ರಲ್ಲಿ ಅಂಧ ಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯಲಾಯಿತು. ಅಂಧ ಮಕ್ಕಳ ಮೊದಲ ಶಾಲೆ ಅಮೃತಸರದಲ್ಲಿ ಪ್ರಾರಂಭವಾಯಿತು. ಮುಂದೆ ಅದನ್ನೇ ಡೆಹರಾಡೂನ್‌ಗೆ ವರ್ಗಾಯಿಸಲಾಯಿತು. ಕಲ್ಕತ್ತಾ ಮತ್ತು ಪಲಮ್ ಕೋಟಗಳಲ್ಲಿ ಸ್ಥಾಪಿತವಾದಂತ ಶಾಲೆಗಳು ಇಂದಿಗೂ ಪ್ರಸಿದ್ಧವಾಗಿವೆ. ನಂತರ 30ನೆಯ ಶತಮಾನದಲ್ಲಿ ಹೆಚ್ಚು ಸಂಸ್ಥೆಗಳು ಸ್ಥಾಪನೆಗೊಂಡಿವೆ. 1947ರಲ್ಲಿ 34 ಸಂಸ್ಥೆಗಳಿಗದ್ದರೆ, 1960 ರಲ್ಲಿ 60 ಸಂಸ್ಥೆಗಳಾದವು. ನಂತರ 1968ರಲ್ಲಿ 100 ಸಂಸ್ಥೆಗಳಿಗೆ ಮುಟ್ಟಿವೆ. ಇಂದು ರಾಷ್ಟ್ರದಲ್ಲಿ ಸುಮಾರು 135 ಅಂಧ ಮಕ್ಕಳ ವಿಶೇಷ ಶಾಲೆಗಳಿವೆ. ಕೊಠಾರಿ ಆಯೋಗದ ಪ್ರಕಾರ 5000 ಅಂಧ ಮಕ್ಕಳ ಮಕ್ಕಳು ಇವುಗಳ ಪ್ರಯೋಜನ ಪಡೆಯುತ್ತಿದ್ದಾರೆ.

ಅಹಮದಾಬಾದ್‌ನಲ್ಲಿರುವ ರಾಷ್ಟ್ರೀಯ ಗ್ರಂಥ ಭಂಡಾರವು ಅಂಧರಿಗಾಗಿಯೇ ಸ್ಥಾಪಿಸಲ್ಪಟ್ಟಿದೆ. ಈ ಗ್ರಂಥ ಭಂಡಾರದಲ್ಲಿ ದೇಶದ ಎಲ್ಲಾ ಭಾಷೆಗಳ ಪುಸ್ತಕಗಳು ಬ್ರೈಲ್ ಲಿಪಿಯಲ್ಲಿದ್ದು ಅಂಧರಿಗೆ ಓದಲು ಯೋಗ್ಯವಾಗಿದೆ. ಸ್ವತಃ ಕುರುಡನಾಗಿದ್ದ ಲೂಯಿಬ್ರೈಲ್ ಕುರುಡರ ಸಲುವಾಗಿ ಸುಲಭವಾಗಿ ಮೈಸೂರಿನಲ್ಲಿ ಶಿಕ್ಷಣ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಎ. ಶ್ರೀನಿವಾಸರಾವ್ 1901ರಲ್ಲಿ ಕುರುಡು ಮತ್ತು ಮೂಗ ಮಕ್ಕಳ ಶಾಲೆಯನ್ನು ಆರಂಭಿಸಿದರು. 1927ರಲ್ಲಿ ಮೈಸೂರು ಸರ್ಕಾರ ಈ ಶಾಲೆಯನ್ನು ವಹಿಸಿಕೊಂಡಿತು. ಸ್ವಾತಂತ್ರ್ಯನಂತರ ಇದನ್ನು ಕರ್ನಾಟಕ ಸರ್ಕಾರ ವಹಿಸಿಕೊಂಡಿದೆ. ನಂತರ ಬೆಳಗಾಂನಲ್ಲೂ ಮತ್ತೊಂದು ಅಂಧ ಅಂಧರು ಮಕ್ಕಳ ಸರ್ಕಾರಿ ಶಾಲೆ ಆರಂಭವಾಯಿತು. ಲೂಯಿ ಬ್ರೈಲ್ ಬರೆಯಲು, ಓದಲು ಆಗುವಂಥ ಲಿಪಿಯನ್ನು ಕಂಡುಹಿಡಿದನು. ಬರವಣಿಗೆಗೆ ಉಬ್ಬು ಅಕ್ಷರಗಳಿಂದ ಕೂಡಿದ್ದು ಅಂಧರು ಅವುಗಳನ್ನು ಸ್ಪರ್ಷಿಸುವುದರಿಂದ ಓದಲು ಸಾಧ್ಯವಾಗುತ್ತದೆ. ಅಂಧ ಮಕ್ಕಳಿಗೆ ಸೂಕ್ತ ಶಿಕ್ಷಣವನ್ನು ಈ ವಿಶೇಷ ಶಾಲೆಗಳ ಮೂಲಕ ನೀಡಲಾಗುತ್ತಿದೆ. ಅಂಧ ವಿದ್ಯಾರ್ಥಿಗಳಿಗೆ ಸಂಗೀತ, ಬುಟ್ಟಿ ಹೆಣೆಯುವಿಕೆ, ಕ್ರೀಡೆ, ಪಠ್ಯಕ್ರಮ ವಿಷಯಕ್ಕೆ ಸಂಬಂಧಿಸಿದಂತೆ ಕರಕುಶಲ ಕಲೆಗೆ ಸಂಬಂಧ ಪಟ್ಟಂತಹ ತರಬೇತಿಯನ್ನು ನೀಡಲಾಗುವುದು. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅಧೀನದಲ್ಲಿ ಈ ಶಾಲೆಗಳು ನಡೆಯುತ್ತಲಿವೆ. ಡೆಹರಾಡೂನ್‌ನಲ್ಲಿರುವ ರಾಷ್ಟ್ರೀಯ ಮಕ್ಕಳ ಸಂಸ್ಥೆ (National Institute for visually handicapped Nirh-1979) ಇಂಥ ಶಾಲೆಗಳಿಗೆ ಮಾರ್ಗದರ್ಶನ ನೀಡುತ್ತದೆ.

**2) ಶ್ರವಣ ನ್ಯೂನತೆ ಮಕ್ಕಳ ಶಾಲೆಗಳು:**

ಶ್ರವಣ ನ್ಯೂನತೆಯ ಮಕ್ಕಳಿಗಾಗಿ ದೇಶದ ನಾನಾ ಭಾಗದಲ್ಲಿ ಶಾಲೆಗಳು ಕಂಡುಬರುತ್ತವೆ. ಹೆಚ್ಚಾಗಿ ಪ್ರಾಥಮಿಕಶಿಕ್ಷಣ ಕೊಡುವ ಶಾಲೆಗಳಾಗಿವೆ. ಇವು ಬಹುತೇಕ ಖಾಸಗಿ ಶಾಲೆಗಳಾಗಿದ್ದು ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಲಿವೆ. ಈ ಶಾಲೆಗಳು ಮಕ್ಕಳಿಗೆ ವಾಸ್ತುಶಿಲ್ಪ ಹಾಗೂ ಉದ್ಯೋಗ ತರಬೇತಿ ನೀಡುತ್ತಲಿವೆ. ಮಕ್ಕಳಿಗೆ ಕಲಿಸಲು ವಿಶೇಷವಾಗಿ ತರಬೇತಿ ಹೊಂದಿದ ಶಿಕ್ಷಕರಿರುತ್ತಾರೆ.

ಮೈಸೂರಿನಲ್ಲಿರುವ ವಾಕ್ ಶ್ರವಣ ಸಂಸ್ಥೆಯು ಕಿವುಡ ಮಕ್ಕಳಿಗೆ ಉತ್ತಮ ಚಿಕಿತ್ಸೆ, ಭಾಷಾ ತರಬೇತಿ ಪೋಷಕರಿಗೆ ಮಕ್ಕಳ ಭಾಷಾ ಬೆಳವಣಿಗೆಯಲ್ಲಿ ಮಾರ್ಗದರ್ಶನ, ಶಸ್ತ್ರಚಿಕಿತ್ಸೆ, ಮಾರ್ಗದರ್ಶನ, ಶ್ರವಣ ನ್ಯೂನತೆಯ ಅಳತೆ ಮತ್ತು ವಿದ್ಯುನ್ಮಾನ ಶ್ರವಣ ಸಾಧನಗಳ ಪೂರೈಕೆ ಮುಂತಾದ ಸೇವೆಗಳನ್ನು ಒದಗಿಸುತ್ತಿದೆ. ಹೈದ್ರಾಬಾದ್‌ನಲ್ಲಿ ವಯಸ್ಕರ ಕಿವುಡ ಶಾಲೆಯಿದ್ದು ಇದು ಕಿವುಡ ಮಕ್ಕಳಿಗೆ ಹೊಲಿಗೆ, ವಿದ್ಯುತ್, ಬೆಸುಗೆ, ಎಲೆಕ್ಟ್ರಾನಿಕ್ ಮುಂತಾದ ವಿಷಯಗಳ ಬಗ್ಗೆ ವಿಶೇಷ ತರಬೇತಿಯನ್ನು ನೀಡುತ್ತದೆ. ಜೊತೆಗೆ ವಿಶೇಷವಾಗಿ ಸಿದ್ದಪಡಿಸಿದಂತಹ ಶ್ರವಣೋಪಕರಣಗಳನ್ನು ವಿವಿಧ ಹಂತದ ನ್ಯೂನತೆ ಹೊಂದಿರುವ ಮಕ್ಕಳಿಗೆ ನೀಡಿ, ಕಡಿಮೆ ನ್ಯೂನತೆ ಹೊಂದಿರುವ ಮಕ್ಕಳ ಶ್ರವಣ ನ್ಯೂನತೆಯನ್ನು ನಿವಾರಿಸುವ ಕಾರ್ಯಗಳನ್ನೂ ಈ ಕಿವುಡರ ಶಾಲೆಗಳು ಕೈಗೊಂಡಿವೆ. ಮುಂಬಯಿಯಲ್ಲಿರುವ ಅಲಿಯಾವರ್ ಜಂಗ್ ಶ್ರವಣದೋಷವುಳ್ಳ ಮಕ್ಕಳ ರಾಷ್ಟ್ರೀಯ ಸಂಸ್ಥೆ National Institute for Hearing (NIHH - 1983) ಇಂಥ ಶಾಲೆಗಳಿಗೆ ಮಾರ್ಗದರ್ಶನ ನೀಡುತ್ತದೆ.

ಮೈಸೂರಿನಲ್ಲಿ 1901ರಷ್ಟು ಹಿಂದೆಯೇ ಆರಂಭವಾಗಿದ್ದ ಅಂಧ ಮತ್ತು ಮೂಗರ ಶಾಲೆ ಈಗ ಸರ್ಕಾರಿ ಶಾಲೆಯಾಗಿ ಈ ನ್ಯೂನತೆಗಳುಳ್ಳ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ.

**3) ಅಂಗವಿಕಲ ಮಕ್ಕಳ ಶಾಲೆಗಳು:**

ದೈಹಿಕವಾಗಿ ನ್ಯೂನತೆ ಹೊಂದಿರುವವರು ಅಂದರೆ ಅಸ್ಥಿಪಂಜರ ಮತ್ತು ಮಾಂಸಖಂಡಗಳ ವ್ಯವಸ್ಥೆಗೆ ಸಂಬಂಧಿಸಿದ ನ್ಯೂನತೆಗಳಿರುವವರು ಕೈ–ಕಾಲು ನ್ಯೂನತೆಗಳಿರುವವರು ಶಾಲೆಯಲ್ಲಿರುತ್ತಾರೆ. ಇವರಿಗೆ ಪ್ರತ್ಯೇಕವಾದ ಶಾಲೆಗಳ ಅಗತ್ಯತೆಯಿಲ್ಲ ಸಾಮಾನ್ಯ ಶಾಲೆಗಳಲ್ಲೇ ಇವರು ಕಲಿಯಬಹುದಾಗಿದೆ. ಆದ್ದರಿಂದ ಇವರಿಗಾಗಿಯೇ ಇರುವ ವಿಶೇಷ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿಲ್ಲ. ಇವರಿಗೆ ನಡೆದಾಡಲು ಅಗತ್ಯವಾದ ಸಾಧನ ಸಲಕರಣೆ ಒದಗಿಸಿದರೆ ಹಾಗೂ ಶಾಲಾ ಸಂಸ್ಥೆಯವರು ಅಗತ್ಯವಾದ ಅನುಕೂಲತೆ ಮಾಡಿಕೊಟ್ಟರೆ ಸಾಕಾಗುವುದು. ಇದಕ್ಕೆ ಸಮಾಜ ಹಾಗೂ ಸರ್ಕಾರ ಹೆಚ್ಚು ಗಮನಹರಿಸಿದೆ. ಅಂಗವಿಕಲರ ಸಾಮರ್ಥ್ಯ ಮತ್ತು ಮನೋಧರ್ಮಗಳಿಗೆ ಅನುಗುಣವಾಗಿ ವೃತ್ತಿ ಶಿಕ್ಷಣ ನೀಡಲಾಗುವುದು. ಸಾಮಾನ್ಯವಾಗಿ ಸುಸಜ್ಜಿತವಾದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲ ಮಕ್ಕಳಿಗೆ ಚಿಕಿತ್ಸೆ ನೀಡುವ ಸಹಾಯಕ ಸಾಧನಗಳನ್ನು ಒದಗಿಸುವ ವ್ಯವಸ್ಥೆ ಇರುತ್ತದೆ.

ಬೆಂಗಳೂರಿನ ಸೇಂಟ್‌ಮಾರ್ಥಾ ಆಸ್ಪತ್ರೆಯಲ್ಲಿ ಅಂಗವಿಕಲರಿಗಾಗಿ ಕೃತಕ ಅಂಗಾಂಗಗಳನ್ನು ಜೋಡಿಸಲಾಗುವುದು. ಅಂಗವಿಕಲರಿಗಾಗಿ ವಿಶೇಷ ಸೈಕಲ್, ಮೋಟಾರ್, ಸೈಕಲ್ ಕಾರು ಒದಗಿಸಲಾಗುವುದು. ವಿಶ್ವಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ ಅಂಗವಿಕಲರಿಗಾಗಿ ಯೋಜನೆ ರೂಪಿಸಿದ್ದು ಅಂಗವಿಕಲರಿಗಾಗಿ ದುಡಿಯಬಯಸುವ ವೈದ್ಯರಿಗೆ ಮನಃಶಾಸ್ತ್ರಜ್ಞರಿಗೆ ದಾದಿಗಳಿಗೆ ತರಬೇತಿ ನೀಡಲಾಗುವುದು. ಕೋಲ್ಕಾತ್ತಾದಲ್ಲಿರುವ ಅಸ್ಥಿಪಂಜರ ವಿಕಲತೆಗಳಿರುವ ಮಕ್ಕಳ

Digitised by Bharatavani, CIIL

ರಾಷ್ಟ್ರೀಯ ಸಂಸ್ಥೆ National Institute for Orthopedically Handicaped) NIOH - 1976 ಇವು ಶಾಲೆಗಳಿಗೆ ಮಾರ್ಗದರ್ಶನ ನೀಡುತ್ತದೆ.

**4) ಬುದ್ಧಿ ಮಾಂದ್ಯ ಮಕ್ಕಳ ಶಾಲೆಗಳು** (NIOH-1979):

ಈ ಶಾಲೆಗಳಲ್ಲಿ ಕಲಿಯುವ ಮಕ್ಕಳು ಬೌದ್ಧಿಕ ವಿಕಾಸದಲ್ಲಿ ದೋಷಗಳನ್ನು ಹೊಂದಿರುತ್ತಾರೆ. ಇವರನ್ನು ಬುದ್ಧಿಮಾಂದ್ಯರು ಎಂದು ಕರೆಯುವವರು ಇವರು ಸಾಧಾರಣ ಮಟ್ಟದವರಿಗಿಂತ ಕಡಿಮೆ ಬುದ್ಧಿಮಟ್ಟದವರಾಗಿರುವರು. ಆದ್ದರಿಂದ ಇವರನ್ನು ಬುದ್ಧಿಮಾಂದ್ಯರು ಅಥವಾ ಇತ್ತೀಚೆಗೆ ಬೌದ್ಧಿಕ ಸವಾಲುಳ್ಳ ಮಕ್ಕಳು ಎಂದು ಕರೆಯಲಾಗುತ್ತದೆ. ಇವರನ್ನು ಅವರ ಬೌದ್ಧಿಕ ಕೊರತೆಯ ಮಟ್ಟದ ಆಧಾರದ ಮೇಲೆ ಈ ರೀತಿ ವರ್ಗೀಕರಿಸಲಾಗಿದೆ. ನಿಧಾನವಾಗಿ ಕಲಿಯುವವರು (Slow Learners), ಶಿಕ್ಷಣ ನೀಡಬಹುದಾದ ಮಕ್ಕಳು (Educable Retarded) ತರಬೇತಿ ನೀಡಬಹುದಾದ ಮಕ್ಕಳು (Trainable Retarde) ತೀವ್ರ ರೀತಿಯ ಬುದ್ಧಿಮಾಂದ್ಯರು (Severely Retarded) ಇವರಲ್ಲಿ ನಿಧಾನವಾಗಿ ಕಲಿಯುವವರಿಗೆ ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ನೀಡಬಹುದು ತೀವ್ರತರವಾದ ಬುದ್ಧಿ ಮಾಂದ್ಯವುಳ್ಳ ಮಕ್ಕಳಿಗೆ ಯಾವುದೇ ರೀತಿಯ ಔಪಚಾರಿಕ ಶಿಕ್ಷಣ ನೀಡಲು ಸಾಧ್ಯವಾಗುವುದಿಲ್ಲ ಅಂಥ ಮಕ್ಕಳನ್ನು ಆಶ್ರಯ ಗೃಹಗಳಲ್ಲಿ (Shelter Homes) ಸೇರಿಸಿ ನೋಡಿಕೊಳ್ಳಬೇಕಾಗುತ್ತದೆ ಶಿಕ್ಷಣಾರ್ಹ ಮತ್ತು ತರಬೇತಿ ನೀಡಬಹುದಾದ ಬುದ್ಧಿಮಾಂದ್ಯರಿಗೆ ವಿಶೇಷ ಶಾಲೆಯಲ್ಲಿ ಶಿಕ್ಷಣ/ ತರಬೇತಿ ನೀಡಬೇಕಾಗುತ್ತದೆ.

ಬುದ್ಧಿಮಾಂದ್ಯ ಮಕ್ಕಳ ಶಿಕ್ಷಣ ಮತ್ತು ತರಬೇತಿ ಪಾಲಕರಿಗೆ ಹಾಗೂ ಶಿಕ್ಷಕರಿಗೆ ಒಂದು ಸವಾಲಾಗಿದೆ. ಇದಕ್ಕೆ ಒಂದು ವಿಶೇಷ ಶಿಕ್ಷಣ ರೂಪಿಸಲಾಗಿದೆ. ಸಾಧಾರಣ ಪಠ್ಯವಸ್ತು ಕಲಿವಿನ ಪ್ರಗತಿಗೆ ವಿಶಿಷ್ಟ ರೀತಿಯ ತರಗತಿಯಾಗಲೀ ಪಾಠಶಾಲೆಗಳನ್ನಾಗಲೀ ಏರ್ಪಡಿಸುವುದುಂಟು. ಇಂತಹ ಶಾಲೆಗಳಲ್ಲಿ ಬುದ್ಧಿಮಾಂದ್ಯರ ಶಿಕ್ಷಣಕ್ಕಾಗಿ ಪೂರ್ವಯೋಜಿತ ಬೋಧನಾ ಸಾಮಗ್ರಿಗಳನ್ನು ಹೆಚ್ಚು ಹೆಚ್ಚು ಬಳಸಲಾಗುತ್ತದೆ. ಇಂತಹ ಸಾಮಗ್ರಿಗಳು ಇಂಥ ಮಕ್ಕಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿರುತ್ತವೆ.

ಆಂಧ್ರಪ್ರದೇಶದ ಸಿಕಂದರಾಬಾದ್‌ನಲ್ಲಿರುವ ಬುದ್ಧಿಶಕ್ತಿ ನ್ಯೂನತೆಯ ಮಕ್ಕಳ ರಾಷ್ಟ್ರೀಯ ಸಂಸ್ಥೆ (National Institute for mentally Handicapped (NIOM-1984) ಇಂಥ ಶಾಲೆಗಳಿಗೆ ಮಾರ್ಗದರ್ಶನ ಮತ್ತು ಶಿಕ್ಷಕರಿಗೆ ತರಬೇತಿ ನೀಡುತ್ತದೆ.

ಪ್ರಮುಖ ನಗರಗಳಾದ ಬೆಂಗಳೂರು, ದೆಹಲಿ, ಚೆನ್ನೈ, ಕಲ್ಕತ್ತ ಮುಂತಾದ ನಗರಗಳಲ್ಲಿ ಖಾಸಗಿ ಸಂಸ್ಥೆಗಳ ಅನೇಕ ಬುದ್ಧಿಮಾಂದ್ಯ ಮಕ್ಕಳ ಶಾಲೆಗಳು ನಡೆಯುತ್ತಿವೆ. ಮೈಸೂರಿನ ಅಖಿಲಭಾರತ ವಾಕ್ ಶ್ರವಣ ಸಂಸ್ಥೆ ಮತ್ತು ಬೆಂಗಳೂರಿನ ಮಾನಸಿಕ ಮತ್ತು ನರಕೋಶ ವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (National Institute of Mental and Neuro Sciences -NIMHANS) ಇಂಥ ಶಾಲೆಗಳಿಗೆ ಮಾರ್ಗದರ್ಶನ ನೀಡುತ್ತವೆ.

–ಡಾ. ಶೀಲಾ ಜಿ.

## ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆ

ತಕ್ಷಶಿಲಾ ಮತ್ತು ನಳಂದ ವಿಶ್ವವಿದ್ಯಾನಿಲಯಗಳಂಥ ಪುರಾತನ ವಿಶ್ವವಿದ್ಯಾನಿಲಯಗಳು ಪುರಾತನ ಭಾರತದಲ್ಲಿ ಅಸ್ತಿತ್ವದದಲ್ಲಿದ್ದವಾದರೂ ನಾವು ಇಂದು ಕಾಣುವ ವಿಶ್ವವಿದ್ಯಾನಿಲಯಗಳು ಹತ್ತೊಂಬತ್ತನೆ ಶತಮಾಣದಲ್ಲಿ ನಮ್ಮ ದೇಶಕ್ಕೆ ಹೊರದೇಶದಿಂದ ಬಂದವುಗಳು. ಭಾರತದಲ್ಲಿ 1857 ರಲ್ಲಿ ಮೂರು ವಿಶ್ವವಿದ್ಯಾನಿಲಯಗಳು (ಮದ್ರಾಸ್, ಬಾಂಬೆ, ಕಲ್ಕತ್ತಾದಲ್ಲಿ) ಸ್ಥಾಪನೆಗೊಂಡ ಸಮಯದಿಂದಲೂ ಸರ್ಕಾರ ಮತ್ತು ವಿಶ್ವವಿದ್ಯಾನಿಲಯಗಳಿಗಿರುವ ಅಧಿಕಾರ ವ್ಯಾಪ್ತಿ ಎಷ್ಟಿರಬೇಕು ಎಂಬ ವಿಷಯವನ್ನು ಕುರಿತ ತರ್ಕವೆದ್ದಿತು. ಇಂದಿರುವಂತೆ ಕುಲಪತಿಗಳನ್ನು ಸರ್ಕಾರ ಆಯ್ಕೆ ಮಾಡುತ್ತಿತ್ತು. ವಿಶ್ವವಿದ್ಯಾನಿಲಯಗಳ ಆಡಳಿತ ಅಂಗಗಳು ರೂಪಿಸಿದ ಕಾಯ್ದೆಗಳು, ನೀತಿ ನಿಯಮಗಳು ಸರ್ಕಾರ ಒಪ್ಪಿಗೆಯನ್ನು ನೀಡಿದ ನಂತರ ಅಥವಾ ಪರಿಗಣಿಸಿದ ನಂತರ ಜಾರಿಗೆ ಬರಬೇಕಿತ್ತು. ವಿಶ್ವವಿದ್ಯಾನಿಲಯಗಳ ಅಧಿಕಾರತಃ (Ex-officio) ಕುಲಾಧಿಪತಿಗಳಾಗುವ ಗವರ್ನರ್‌ಗಳಿಗೆ ವಿಶ್ವವಿದ್ಯಾನಿಲಯಗಳಿಗೆ ತನಿಖಾ ಭೇಟಿ (visitorial powers)ಯ ಅಧಿಕಾರವನ್ನು ಕೊಡಲಾಯಿತು. ಇನ್ನಿತರ ಶಿಕ್ಷಣ ಸಂಸ್ಥೆಗಳಲ್ಲಿದ್ದಂತೆ ಸರ್ಕಾರವೇ ವಿಶ್ವವಿದ್ಯಾನಿಲಯಗಳ ಖರ್ಚುವೆಚ್ಚದ ಪರೀಶೀಲನೆಯನ್ನು ಕೈಗೊಳ್ಳುತ್ತಿತ್ತಲ್ಲದೆ ದೈನಂದಿನ ಹಣಖರ್ಚಿನ ವಿಷಯದಲ್ಲಿ ಯಾವ ಹಸ್ತಕ್ಷೇಪವಿರಲಿಲ್ಲ.

1857ರ ಕಾನೂನಿನಲ್ಲಿ ಸರ್ಕಾರಕ್ಕೆ ಇರಬಹುದಾಗಿದ್ದ ಅಧಿಕಾರದ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಗಣನೀಯ ಲೋಪವಿದ್ದಿತು. ಶಿಕ್ಷಣ ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆ (affiliation)ಯಾಗಿಸಿಕೊಳ್ಳುವ ವಿಷಯದಲ್ಲಿ ಸರ್ಕಾರಕ್ಕೆ ಯಾವ ಅಧಿಕಾರವೂ ಇರಲಿಲ್ಲ. ಈ ಅಧಿಕಾರವು ಸಂಪೂರ್ಣವಾಗಿ ವಿಶ್ವವಿದ್ಯಾನಿಲಯಗಳಿಗೇ ಸೇರಿತ್ತು. ಈ ವಿಷಯದ ಬಗ್ಗೆ ವಾದವಿವಾದಗಳು ನಡೆದವಾದರೂ ಒಂದು ಅಂತಿಮ ನಿರ್ಧಾರಕ್ಕೆ ಬರಲಾಗಲಿಲ್ಲ. ಆದ್ದರಿಂದ, ವಿಶ್ವವಿದ್ಯಾನಿಲಯಗಳು ತಮ್ಮ ಈ ಅಧಿಕಾರವನ್ನು ಉಪಯೋಗಿಸುತ್ತಲೇ ಇದ್ದವು. ಅಲ್ಲದೆ ಹೆಚ್ಚು ಕಡಿಮೆ ಅವುಗಳು ತಮ್ಮ ಇಚ್ಛೆಯಂತೆ ಕಾರ್ಯೋನ್ಮುಖವಾಗಿದ್ದವು.

ಭಾರತೀಯ ವಿಶ್ವವಿದ್ಯಾನಿಲಯಗಳ ಕಾಯ್ದೆ, 1904 ರಲ್ಲಿ ಜಾರಿಗೊಂಡ ನಂತರ ಪ್ರಥಮ ಬಾರಿಗೆ ಸರ್ಕಾರ ಮತ್ತು ವಿಶ್ವವಿದ್ಯಾನಿಲಯಗಳ ನಡುವೆ ತೀವ್ರವಾದ ವಿರೋಧವುಂಟಾಯಿತು. ಈ ಕಾನೂನು ಸರ್ಕಾರಕ್ಕೆ ಗಣನೀಯವಾದ ಅಧಿಕಾರವನ್ನು ನೀಡಿತ್ತು. ಉದಾ: ಶಿಕ್ಷಣ ಸಂಸ್ಥೆ ಅಂಗ ಸಂಸ್ಥೆಯನ್ನಾಗಿ ಸೇರಿಸಿಕೊಳ್ಳುವ ಅಧಿಕಾರ ಸಂಪೂರ್ಣವಾಗಿ ಸರ್ಕಾರದ ಕೈಗೆ ಬಂದಿತ್ತು. ಇದಲ್ಲದೆ, ವಿವಿಧ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯ ನಿರ್ಧಾರ ಸರ್ಕಾರಕ್ಕೆ ನೀಡಲಾಗಿತ್ತು. ಅದೇನೆಂದರೆ, ಈ ಕಾನೂನು ಜಾರಿಗೆ ಬಂದ ಕೆಲವೇ ಸಮಯದ ನಂತರ ಬಂಗಾಳದ ವಿಭಜನೆಯಾಗಿ ಪರಿಸ್ಥಿತಿ ರಾಜಕೀಯ ಸ್ವರೂಪವನ್ನು ಪಡೆಯಿತು. ಸರ್ಕಾರ ಮತ್ತು ವಿಶ್ವವಿದ್ಯಾನಿಲಯಗಳ ನಡುವೆ ಒಂದು ರೀತಿಯ ಶೀತಲ

Digitised by Bharatavani, CIIL

ಸಮರ ಆರಂಭಗೊಂಡಿತಾದರೂ ಇದರಿಂದ ಯಾವ ನಿರ್ದಿಷ್ಟ ತೀರ್ಮಾನ ಹೊರಬರಲಿಲ್ಲ. ಕಡೆಗೆ, ಕಲ್ಕತ್ತಾ (ಈಗ ಕೋಲ್ಕೊತ) ವಿಶ್ವವಿದ್ಯಾನಿಲಯ ಆಯೋಗ 1917 ರಲ್ಲಿ ತನ್ನ ವರದಿಯನ್ನು ಒಪ್ಪಿಸಿದಾಗ ಆಯೋಗ ತನ್ನ ತೀರ್ಮಾನವನ್ನು ನೀಡಿತ್ತು.

ಈ ಆಯೋಗದ ಪ್ರಕಾರ "ಭಾರತೀಯ ವಿಶ್ವವಿದ್ಯಾನಿಲಯಗಳು ವಿಶ್ವದ ಸರ್ಕಾರಿ ವಿಶ್ವವಿದ್ಯಾನಿಲಯಗಳ ಪೈಕಿ ಸಂಪೂರ್ಣವಾಗಿ ಸರ್ಕಾರಿ ವಿಶ್ವವಿದ್ಯಾನಿಲಯಗಳಾಗಿವೆ". 1904ರ ವಿಶ್ವವಿದ್ಯಾನಿಲಯಗಳ ಕಾನೂನಿನಿಂದಾಗಿ ಈ ಪರಿಸ್ಥಿತಿ ಉಂಟಾಗಿತ್ತು. ಈ ಕಾಯ್ದೆ ಜಾರಿಗೆ ಬಂದ ನಂತರವಂತೂ ವಿಶ್ವವಿದ್ಯಾನಿಲಯಗಳ ಪರಿಸ್ಥಿತಿ ಗಣನೀಯವಾಗಿ ಸಂಕಷ್ಟಕರವಾಯಿತು. ಲಾರ್ಡ್ ಕರ್ಜನ್ ಬರುವುದಕ್ಕೆ ಮುಂಚೆ ಹತ್ತೊಂಭತ್ತನೇ ಶತಮಾನದ ಅಂತ್ಯಭಾಗದಲ್ಲಿ ಬಾಂಬೆ (ಈಗ ಮುಂಬೈ) ವಿಶ್ವವಿದ್ಯಾನಿಲಯದ ಕುಲಾಧಿಪತಿಯಾಗಿದ್ದ ಸರ್ ಬಾರ್ಟ್ಲೆ ಫ್ರೇರೆ ಸರ್ಕಾರದ ವಸಾಹತು ಶಾಹಿ ನಿಲುವನ್ನು ವ್ಯಕ್ತಪಡಿಸಿದ್ದ. ಆತ ಹೀಗೆ ನುಡಿದಿದ್ದ "ನಾನು ಸರ್ಕಾರಕ್ಕೆ ಬಂದಾಗಿನಿಂದ ಈ ವಿಶ್ವವಿದ್ಯಾನಿಲಯದ ದಕ್ಷತೆ ಮತ್ತು ಸ್ವಾತಂತ್ರ್ಯವನ್ನು ಹೆಚ್ಚಿಸಲು ನನ್ನ ಅಧಿಕಾರವ್ಯಾಪ್ತಿಯಲ್ಲಿ ಪ್ರಯತ್ನಿಸಿದ್ದೇನೆ. ಏಕೆಂದರೆ, ಈ ದಕ್ಷತೆ ಮತ್ತು ಸ್ವಾತಂತ್ರ್ಯವು ಇಂಗ್ಲೆಂಡ್ ಭಾರತಕ್ಕೆ ನೀಡಬಹುದಾದ ಅಮೂಲ್ಯ ಬಹುಮಾನಗಳನ್ನು ಬೀಜರೂಪದಲ್ಲಿ ತನ್ನಲ್ಲಿ ಅಡಗಿಸಿಕೊಂಡಿದೆ.... ವಿಶ್ವವಿದ್ಯಾನಿಲಯವನ್ನು ಕೇವಲ ಒಂದು ರಾಜ್ಯದ ಕಛೇರಿಯಂತೆ ಅಥವಾ ಇಲಾಖೆಯಂತೆ ಪರಿವರ್ತಿಸುವ ಪ್ರಯತ್ನಕ್ಕಿಂತ ಹೆಚ್ಚಿನ ತಪ್ಪನ್ನು ಈ ದೇಶದ ಆಡಳಿತ ಸರ್ಕಾರ ಮಾಡಲಾಗದು" (ಡಾಂಗರ್‌ಕೇರಿ 1967) ಎಂದು ಮುಂಬೈ ವಿಶ್ವವಿದ್ಯಾನಿಲಯದ ಸೆನೆಟ್ ಭಾಷಣದಲ್ಲಿ ಆತ ನುಡಿದಿದ್ದನು.

ಮೆಚ್ಚತಕ್ಕ ರೀತಿಯಲ್ಲಿ ಆತ ನುಡಿದಿದ್ದಾನೆ. ಆದರೆ ಲಾರ್ಡ್ ಕರ್ಜನ್ ತನ್ನದೇ ಆದ ನಿಲುವುಗಳನ್ನು ಹೊಂದಿದ್ದ ನಾದ್ದರಿಂದ 1904 ವಿಶ್ವವಿದ್ಯಾನಿಲಯ ಕಾಯ್ದೆ ಪರಿಸ್ಥಿತಿಯನ್ನು ತೀಕ್ಷ್ಣವಾಗಿ ಬದಲಾಯಿಸಿತ್ತು. ವಾಸ್ತವವಾಗಿ ಭಾರತದ ಆಂಗ್ಲ ಸರ್ಕಾರ ಅನುಮೋದಿಸಿದ್ದ ನಿಲುವನ್ನೇ ಮುಂಬೈನ ಗವರ್ನರ್ ವ್ಯಕ್ತಪಡಿಸಿದ್ದರೆ ಲಾರ್ಡ್ ಕರ್ಜನ್ ಮತ್ತೊಂದು ನಿಲುವನ್ನು ಹೊರಗೆಡಹಿದ್ದನು.

ಒಟ್ಟಾರೆ ಹತ್ತೊಂಬತ್ತನೆ ಶತಮಾನದ ಅಂತ್ಯ ಭಾಗದಲ್ಲಿ ಪರಿಸ್ಥಿತಿ ವಿಶ್ವವಿದ್ಯಾನಿಲಯದಿಂದ ವಿಶ್ವವಿದ್ಯಾನಿಲಯಕ್ಕೆ, ಅಧಿಕಾರಿಯಿಂದ ಅಧಿಕಾರಿಗೆ ವ್ಯತ್ಯಸ್ತಗೊಳ್ಳುತ್ತಲಿತ್ತು. ಇಪ್ಪತ್ತನೆ ಶತಮಾನದ ಆರಂಭದಲ್ಲಿ ದೇಶದ ಹಲವು ಕುಲ ಪತಿಗಳಲ್ಲಿ ಅತಿ ಶ್ರೇಷ್ಠರಾದವರೆಂದರೆ ಅಶೂತೋಶ್ ಮುಖರ್ಜಿ. ಇವರು ಕಲ್ಕತ್ತ ವಿಶ್ವವಿದ್ಯಾನಿಲಯವನ್ನು ಹಲವು ವರ್ಷಗಳ ಕಾಲ ತಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಸಿದರು. ದೂರದರ್ಶಿಗಳಾಗಿದ್ದ ಇವರು ಈ ವಿಶ್ವವಿದ್ಯಾ ನಿಲಯವನ್ನು ನಿಜಕ್ಕೂ ದೇಶದ ಒಂದು ಅತ್ಯುತ್ತಮ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸಿದರು. ಬಹಳಷ್ಟು ಸಂದರ್ಭಗಳಲ್ಲಿ ಸರ್ಕಾರದ ವಿರುದ್ಧ ಮುಖಾಮುಖಿಯಾಗಿ ನಿಂತ ಉದಾಹರಣೆಗಳಿದ್ದರೂ ಅವರಿಗೆ ಸಾರ್ವಜನಿಕರಿಂದ ಅಧಿಕ ಆದರ ಗೌರವಗಳನ್ನು ಸಂಪಾದಿಸಿದ್ದರು. ಒಂದೇ ಒಂದು ಸಂದರ್ಭದಲ್ಲಿಯೂ ಸರ್ಕಾರದ ಆಜ್ಞೆಗಳಿಗೆ ಅಧೀನರಾಗಲಿಲ್ಲ. ಬದಲಾಗಿ ಸರ್ಕಾರವನ್ನು ಒಂದೆರಡು ಸಂದರ್ಭಗಳಲ್ಲಿ ಎದುರಿಸಿ ಸಮರ್ಥವಾಗಿ ಜಯಶೀಲರಾದರು.

ಬಂಗಾಳದ ವಿಭಜನೆಯ ಹಿನ್ನೆಲೆಯಲ್ಲಿ ಉದಯಿಸಿ ಬೆಳೆದ ರಾಷ್ಟ್ರವಾದಿಗಳ ಹೋರಾಟ ಹಾಗೂ ರಾಜಕೀಯ ಶಕ್ತಿಯಾಗಿ ಬಂದ ಮಹಾತ್ಮ ಗಾಂಧಿಯವರ ಕಾರಣಗಳಿಂದಾಗಿ ಇಪ್ಪತ್ತು ಹಾಗೂ ಮೂವತ್ತರ ದಶಕದಲ್ಲಿ ಪರಿಸ್ಥಿತಿ ಗುಣಾತ್ಮಕವಾಗಿ ಬದಲಾವಣೆಗೊಂಡಿತು. ಬನಾರಸ್ ಹಿಂದೂ ವಿಶ್ವವಿದ್ಯಾಲಯ 1942 ರಲ್ಲಿ ಸಾಕಷ್ಟು ರಾಜಕೀಯ ಕ್ಷೋಭೆಗೆ ಸಿಲುಕಿತು. ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ॥ ಎಸ್ ರಾಧಾಕೃಷ್ಣನ್ ವಿಶ್ವವಿದ್ಯಾನಿಲಯವನ್ನು ಮುಚ್ಚಿ ಆಂಗ್ಲ ಸರ್ಕಾರದ ವಿರುದ್ಧ ಆಗಬಹುದಾಗಿದ್ದ ಮುಖಾಮುಖಿಯನ್ನು ತಪ್ಪಿಸಿಕೊಂಡರು. ಶಿಕ್ಷಣ ಆಯೋಗ (1964–66)ದಲ್ಲಿ ಸಮಗ್ರ ಪರಿಸ್ಥಿತಿಯನ್ನು ಯೋಗ್ಯವಾಗಿ ವಿವರಿಸಲಾಯಿತು. ಆಯೋಗವು ತನ್ನ ವರದಿಯಲ್ಲಿ ವಿಶ್ವವಿದ್ಯಾನಿಲಯದ ಸ್ವಾಯತ್ತತೆಯನ್ನು ಕುರಿತು ಚರ್ಚಿಸುವಾಗ ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಮತ್ತು ಶೈಕ್ಷಣಿಕ ಸ್ವಾತಂತ್ರ್ಯಗಳ ನಡುವೆ ಸ್ಪಷ್ಟ ಗೆರೆಯನ್ನು ಎಳೆಯಿತು. ಶೈಕ್ಷಣಿಕ ಸ್ವಾತಂತ್ರ್ಯದ ಬಗ್ಗೆ ವರದಿ ಹೀಗೆ ಹೇಳಿತು: "ತರಗತಿಯ ಒಳಗೆ ಮತ್ತು ಹೊರಗೆ ಬೋಧಕರಿಗೆ ತಮ್ಮ ನಿಲುವುಗಳನ್ನು, ಅದು ಎಷ್ಟೇ ತೀವ್ರ ಸುದಾರಣಾವಾದಿಯಾಗಿರಲಿ, ಎತ್ತಿ ಹಿಡಿಯಲು ಹಾಗೂ ವ್ಯಕ್ತಪಡಿಸಲು ಸ್ವಾತಂತ್ರ್ಯವಿರಬೇಕೆಂದು ನಾವು ಒತ್ತಿ ಹೇಳಲು ಇಷ್ಟಪಡುತ್ತೇವೆ. ಆದರೆ, ಒಂದು ಸಮಸ್ಯೆಯ ವಿವಿಧ ಮುಖಗಳನ್ನು ಪ್ರಸ್ತುತಪಡಿಸುವಾಗ ಅವರು ಎಚ್ಚರಿಕೆಯನ್ನು ವಹಿಸಿ ತಮ್ಮದೇ ಆದ ನಿರ್ದಿಷ್ಟ ನಿಲುವುಗಳನ್ನು ಮುಂದಿಡುವಾಗ ಬೋಧನೆಯನ್ನು ಗೊಂದಲಮಯವಾಗಿಸಬಾರದು ಎಂಬುದು ಅವಶ್ಯಕ".

1916 ರಲ್ಲಿ ಸ್ಥಾಪನೆಗೊಂಡ ಅಮೆರಿಕನ್ ಅಸೋಸಿಯೇಷನ್ ಆಫ್ ಯೂನಿವರ್ಸಿಟಿ ಪ್ರೊಫೆಸರ್ಸ್ (AAUP) ವ್ಯಕ್ತಗೊಳಿಸಿದ "1940 ತತ್ವಗಳ ನಿರೂಪಣೆ"ಗಿಂತ ಮೇಲಿನ ತತ್ವ ಅಷ್ಟೇನೂ ಭಿನ್ನವಾಗಿರಲಿಲ್ಲ. ಅಲ್ಲದೆ AAUP ವ್ಯಕ್ತಗೊಳಿಸಿದ ನಿಲುವು ಅಮೆರಿಕದಲ್ಲಿ ಪ್ರಬಲವಾದ ಶೈಕ್ಷಣಿಕ ಅಭಿಪ್ರಾಯವಾಗಿ ಪರಿಣಮಿಸಿತು. AAUP ತನ್ನ ಸೂತ್ರದಲ್ಲಿ ಒಂದೆಡೆ ಹೀಗೆ ಅಭಿಪ್ರಾಯಪಟ್ಟಿದೆ:

"ಶಿಕ್ಷಣ ಸಂಸ್ಥೆಯ ಅಥವಾ ವಿಶ್ವವಿದ್ಯಾನಿಲಯದ ಉಪಾಧ್ಯಾಯ ಒಬ್ಬ ಪ್ರಜೆ, ವಿದ್ವತ್ ವೃತ್ತಿಯ ಒಬ್ಬ ಸದಸ್ಯ ಹಾಗೂ ಶಿಕ್ಷಣ ಸಂಸ್ಥೆಯ ಅಧಿಕಾರಿ. ಆತ ಒಬ್ಬ ಪ್ರಜೆಯಾಗಿ ಮಾತನಾಡುವಾಗ ಅಥವಾ ಬರೆಯುವಾಗ ಯಾವುದೇ ಸಾಂಸ್ಥಿಕ ನಿಯಂತ್ರಣ ಅಥವಾ ನಿಯಮಗಳಿಂದ ಮುಕ್ತನಾಗಿರಬೇಕು ಆದರೆ ಅವನಿಗೆ ಸಮಾಜದಲ್ಲಿ ಶಿಕ್ಷಕನಿಗಿರುವ ವಿಶೇಷ ಸ್ಥಾನದಿಂದಾಗಿ ಕೆಲವು ವಿಶೇಷ ಬಾಧ್ಯತೆಗಳು ಸಹ ಇರುತ್ತವೆ. ವಿದ್ಯಾವಂತನಾಗಿ, ಶಿಕ್ಷಣ ಅಧಿಕಾರಿಯಾಗಿ ಸಾರ್ವಜನಿಕರು ಆತನ ನುಡಿಗಳಿಂದ ಆತನ ವೃತ್ತಿಯ, ಸಂಸ್ಥೆಯ ಬೆಲೆ ಕಟ್ಟುತ್ತಾರೆ ಎಂಬ ಅಂಶವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಆದ್ದರಿಂದ ಸರ್ವಕಾಲಗಳಲ್ಲಿಯೂ ತನ್ನ ನಿಲುವುಗಳನ್ನು

Digitised by Bharatavani, CIIL

ವ್ಯಕ್ತಪಡಿಸುವಾಗ ಸೂಕ್ತ ನಿಯಂತ್ರಣವನ್ನು ಇಟ್ಟುಕೊಳ್ಳಬೇಕಲ್ಲದೆ ಮತ್ತೊಬ್ಬರ ಅಭಿಪ್ರಾಯಗಳಿಗೂ ಮನ್ನಣೆಯನ್ನು ಕೊಡಬೇಕು. ತನ್ನ ಅಭಿಪ್ರಾಯಗಳನ್ನು ಸೂಚಿಸುವಾಗ ತಾನು ಒಂದು ಸಂಸ್ಥೆಯ ಪ್ರತಿನಿಧಿಯಲ್ಲ ಎಂಬಂತೆ ಮತ್ತೊಬ್ಬರಿಗೆ ತಿಳಿಸುವ ಪ್ರಯತ್ನ ಮಾಡಬೇಕು".

ಇಂಗ್ಲಿಷ್ ಭಾಷೆಯ ಕಾರಣದಿಂದ ಆಂಗ್ಲ ಹಾಗೂ ಅಮೆರಿಕನ್ ವಿಶ್ವವಿದ್ಯಾನಿಲಯಗಳ ನಿಕಟ ಸಂಬಂಧ ಭಾರತಕ್ಕೆ ಲಭ್ಯವಾದ್ದರಿಂದ ಯೂರೋಪ್ ಖಂಡದ ಇತರ ವಿಶ್ವವಿದ್ಯಾನಿಲಯಗಳಿಗಿಂತ ಹೆಚ್ಚಿನ ಕಾರ್ಯಸ್ವಾತಂತ್ರ ಭಾರತದ ವಿಶ್ವವಿದ್ಯಾನಿಲಯಗಳಿಗೆ ಲಭ್ಯವಾಗಿತ್ತು. ಉದಾ: ಬ್ರಿಟನ್ ದೇಶಕ್ಕೆ ಹೋಲಿಸಿದಾಗ ಫ್ರಾನ್ಸಿನ ವಿಶ್ವವಿದ್ಯಾನಿಲಯಗಳಲ್ಲಿ ಕೆಲಸಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಷಯದಲ್ಲಿ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವಿತ್ತು. ಭಾರತದಲ್ಲಿ ಅಭಿವೃದ್ಧಿ ಗೊಂಡ ವಿಶ್ವವಿದ್ಯಾನಿಲಯಗಳು ಇಂಗ್ಲೆಂಡಿನ ವಿಶ್ವವಿದ್ಯಾನಿಲಯಗಳ ಮಾದರಿಯನ್ನೇ ಹೆಚ್ಚಾಗಿ ಅನುಕರಿಸಿದವು.

ಭಾರತ 1947 ರಲ್ಲಿ ಸ್ವತಂತ್ರಗೊಂಡ ನಂತರ ವಿಶ್ವವಿದ್ಯಾನಿಲಯಗಳು ಬ್ರಿಟಿಷ್ ಆಳ್ವಿಕೆಯಡಿಯಲ್ಲಿ ಹೊಂದಿದ್ದ ಸ್ವಾತಂತ್ರ್ಯಕ್ಕಿಂತ ಹೆಚ್ಚನ ಸ್ವಾತಂತ್ರ್ಯವನ್ನು ಪಡೆಯಬೇಕಿತ್ತು. ವಿಡಂಬನೆಯೋ ಎಂಬಂತೆ ಇದಕ್ಕೆ ತದ್ವಿರುದ್ಧದ ಸನ್ನಿವೇಶ ಸೃಷ್ಟಿಯಾಯಿತು. ಇಂದು ಆಂಗ್ಲ ಆಳ್ವಿಕೆಯಲ್ಲಿದ್ದಷ್ಟು ಸ್ವತಂತ್ರವೂ ವಿಶ್ವವಿದ್ಯಾನಿಲಯಗಳಿಗೆ ಇದೆಯೆಂದು ಹೇಳಲಾಗದು. ಬ್ರಿಟನ್ನಿನಲ್ಲಿ, ಶತಮಾನಗಳು ಕಳೆದಂತೆ, ಹಾಗೂ ಅಲ್ಲಿನ ಪ್ರಜಾಪ್ರಭುತ್ವದ ನಿರಂತರ ಮುನ್ನಡೆಯಾದಂತೆ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಹೆಚ್ಚಿನ ಕಾರ್ಯ ಸ್ವಾತಂತ್ರವನ್ನು ನೀಡುತ್ತಾ ಬರಲಾಗಿತ್ತು. ಭಾರತದಲ್ಲಿ ಆಂಗ್ಲ ಪ್ರಭುಗಳು ಹೆಚ್ಚು ಕಡಿಮೆ ಅದೇ ರೀತಿ ಭಾರತೀಯ ವಿಶ್ವವಿದ್ಯಾನಿಲಯಗಳೊಡನೆ ವ್ಯವಹರಿಸಿದರು.

ಆದರೆ ನಮ್ಮ ಜನಗಳಿಗೆ ಅಧಿಕಾರ ಸೂತ್ರ ಕೈಗೆ ಬಂದ ನಂತರ ಸನ್ನಿವೇಶಗಳು ಬದಲಾವಣೆಗೊಂಡವು. ಈ ಹಂತದಲ್ಲಿ ವಿಷಯವನ್ನು ಪುನಃ ಸ್ಪಷ್ಟಪಡಿಸದರೆ ಸಹಾಯವಾಗುವುದು. ಮಧ್ಯ ಯುಗದಲ್ಲಿ ಯುರೋಪಿನಲ್ಲಿ ವಿಶ್ವ ವಿದ್ಯಾನಿಲಯಗಳು ಸ್ಥಾಪನೆಗೊಂಡಾಗ ಚರ್ಚಿಗೆ ಇವು ಒಂದು ರೀತಿಯ ಸವಾಲಾಗಿ ಪರಿಣಮಿಸಿದವು. ವಿಶ್ವವಿದ್ಯಾ ನಿಲಯಗಳು ಸಂಶೋಧನೆಯಲ್ಲಿ ನಂಬಿಕೆಯನ್ನಿಟ್ಟಿದ್ದರೆ ಚರ್ಚುಗಳು ಯಾರೂ ತಮ್ಮನ್ನು ಪ್ರಶ್ನಿಸಬಾರದೆಂಬ ಅಥವಾ ತಮ್ಮನ್ನು ಕೀಳಾಗಿ ಕಾಣಬಾರದೆಂಬ ಅಭಿಪ್ರಾಯದೊಡನೆ ತಮ್ಮದೇ ಆದ ಪವಿತ್ರ ಸಿದ್ಧಾಂತಗಳನ್ನು ಹೊಂದಿದ್ದವು. ಶತಮಾನಗಳು ಕಳೆದಂತೆ ಚರ್ಚುಗಳು ವಿಶ್ವವಿದ್ಯಾನಿಲಯಗಳ ಮೇಲಿನ ಹತೋಟಿಯನ್ನು ಕಳೆದುಕೊಳ್ಳುತ್ತಾ ಬಂದವು. ಹತ್ತೊಂಬತ್ತನೇ ಶತಮಾನದ ಮಧ್ಯಭಾಗದ ಹೊತ್ತಿಗೆ ವಿಶ್ವವಿದ್ಯಾನಿಲಯಗಳು ಸ್ವರಕ್ಷಣೆಯಲ್ಲಿ ತೊಡಗಬೇಕಾಗಲಿಲ್ಲ. ಇದಕ್ಕೆ ವಿರುದ್ಧವಾಗಿ ಚರ್ಚುಗಳು ನಿರ್ಣಾಯಕ ನಿಲುವನ್ನು ಹೊಂದಿದ್ದರಿಂದ ಕೆಲವು ವಿಷಯಗಳನ್ನೇ ಬುಡಮೇಲು ಮಾಡುವಂಥ ಕೆಲವು ಸಂಶೋಧನೆಗಳನ್ನೂ ವಿಶ್ವವಿದ್ಯಾನಿಲಯಗಳು ಕೈಗೊಂಡವು. ಅಷ್ಟೇ ಅಲ್ಲದೆ, ವಿಶ್ವವಿದ್ಯಾ ನಿಲಯಗಳಲ್ಲಿ ಮಾಡಲಾದ ಹೊಸ ಆವಿಷ್ಕಾರಗಳು ಹಾಗೂ ಸಾಮಾನ್ಯವಾಗಿ ನಂಬಿದ್ದ ಪದ್ಧತಿಗಳ ಮೇಲೆ ಅವುಗಳ ಪರಿಣಾಮ ಹೆಚ್ಚು ಪ್ರಾಧಾನ್ಯವುಳ್ಳದ್ದಾಯಿತು. ಹೀಗೆ, ಶೈಕ್ಷಣಿಕ ವ್ಯವಸ್ಥೆಯೆಂಬ ದೃಷ್ಟಿಕೋನದಿಂದ ಯುರೋಪಿನ ವಿಶ್ವವಿದ್ಯಾನಿಲಯಗಳು ವರ್ಷಗಳು ಕಳೆದಂತೆ ಚರ್ಚಿಗಿಂತ ಹೆಚ್ಚಿನ ಪ್ರಧಾನ್ಯವನ್ನು ಗಳಿಸುತ್ತಲೇ ಬಂದಿವೆ.

ಭಾರತವೂ ಸೇರಿದಂತೆ ಇತರ ದೇಶಗಳಲ್ಲಿ ವಿಶ್ವವಿದ್ಯಾನಿಲಯಗಳು ರೂಪುಗೊಂಡಾಗ ಸತ್ಯಾನ್ವೇಷಣೆಯಲ್ಲಿ ವಿಶ್ವವಿದ್ಯಾನಿಲಯಗಳು ತಮಗೆ ಅನುಕೂಲವಾಗುವಂತೆ ಕಾರ್ಯೋನ್ಮುಖವಾಗುವ ಸ್ವಾತಂತ್ರವನ್ನು ಹೊಂದಿದ್ದವು. ಭಾರತದಲ್ಲಿ ಧಾರ್ಮಿಕ ಸಂಸ್ಥೆಗಳಿಗೂ ವಿಶ್ವವಿದ್ಯಾನಿಲಯಗಳಿಗೂ ಯಾವ ತಾಕಲಾಟವೂ ಇರಲಿಲ್ಲ. ಭಾರತದಲ್ಲಿ ಪ್ರಮುಖವಾಗಿ ಹಿಂದೂ ಧರ್ಮ ಹಾಗೂ ಇಸ್ಲಾಂ ಧರ್ಮಗಳಿದ್ದವಲ್ಲದೆ ಇವೆರಡೂ ಧರ್ಮಗಳ ನಂಬಿಕೆಗಳು ಬೇರೆ ಬೇರೆಯಾಗಿದ್ದು ಪರಸ್ಪರ ವಿರುದ್ಧವಾಗಿದ್ದವು. ಆದ್ದರಿಂದ, ನಮ್ಮ ದೃಷ್ಟಿಕೋನದಿಂದ ನೋಡಿದಾಗ ಯಾವ ರೀತಿಯ ತಾಕಲಾಟಗಳಿಗೂ ಅವಕಾಶ ಇರಲಿಲ್ಲ ಎಂಬುದು ಸ್ಪಷ್ಟ. ಆಂಗ್ಲ ಪ್ರಭುಗಳಿಗೆ ಇದ್ದ ಒಂದೇ ಒಂದು ಆತಂಕವೆಂದರೆ ವಿಶ್ವವಿದ್ಯಾನಿಲಯಗಳು ರಾಜಕೀಯ ವಿದ್ರೋಹದ ಕೇಂದ್ರಗಳಾದಾವೆಂಬ ಅನುಮಾನ ಮಾತ್ರ. ಭಾರತೀಯ ರಾಷ್ಟ್ರೀಯ ಜಾಗೃತಿ ಪ್ರಾರಂಭಗೊಂಡು ತೀವ್ರಗತಿಯಲ್ಲಿ ಸಾಗಿದಾಗ ವಾಸ್ತವಿಕ ಪರಿಸ್ಥಿತಿ ಬದಲಾಗಲು ಆರಂಭವಾಯಿತು. ಆದಾಗ್ಯೂ, ಬ್ರಿಟಿಷ್ ಸರ್ಕಾರ ಮತ್ತು ವಿಶ್ವವಿದ್ಯಾನಿಲಯಗಳ ನಡುವೆ ಎಂದೂ ದೀರ್ಘಕಾಲದ ತೀವ್ರತರ ಅಥವಾ ದೀರ್ಘಕಾಲೀನ ತಾಕಲಾಟ ಉದ್ಭವವಾಗಲಿಲ್ಲ.

1947ರ ನಂತರ ಪರಿಸ್ಥಿತಿ ಗುಣಾತ್ಮಕವಾಗಿ ಮಾರ್ಪಾಟುಗೊಂಡಿತು. ವಿಶ್ವವಿದ್ಯಾನಿಲಯಗಳು ಧನಸಹಾಯವನ್ನು ಸರ್ಕಾರದಿಂದ ಪಡೆಯುವುದರಿಂದ ಅವುಗಳ ನಿರ್ದೇಶನ, ಆಡಳಿತ ಮತ್ತು ಕಾರ್ಯಕ್ರಮಗಳಲ್ಲಿ ತಮ್ಮ ಪಾತ್ರವಿರಬೇಕು ಎಂದು ಅಧಿಕಾರ ಸೂತ್ರವನ್ನು ಹಿಡಿದವರು ಅಭಿಪ್ರಾಯಪಟ್ಟರು. ಅರವತ್ತರ ದಶಕದ ಆರಂಭದಲ್ಲಿ ಬೇರೆ ಬೇರೆ ರಾಜ್ಯ ಸರ್ಕಾರಗಳು ವಿವಿಧ ಕಾಯ್ದೆಗಳನ್ನು ಜಾರಿಗೆ ತಂದು ಕುಲಪತಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ನಿಯಂತ್ರಿಸುವ ಪ್ರಯತ್ನ ಮಾಡಿದವು. ಇದಲ್ಲದೆ, ವಿಶ್ವವಿದ್ಯಾನಿಲಯಗಳಿಗೆ ನಿರ್ದೇಶನವನ್ನು (directives) ನೀಡುವ ಅಧಿಕಾರವನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸಿದವು. ಒಟ್ಟಾರೆ, ಸರ್ಕಾರದ ಆಜ್ಞೆಗಳಿಗೆ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳು ತಲೆಬಾಗುವಂತಾಗಬೇಕೆಂದು ಸರ್ಕಾರವು ಇಚ್ಛಿಸಿತು.

ಭಾರತೀಯ ವಿಶ್ವವಿದ್ಯಾನಿಲಯಗಳ ಒಕ್ಕೂಟ ಮಾರ್ಚ್ 18, 1966 ರಂದು ಪ್ರಧಾನಮಂತ್ರಿಗಳಿಗೆ ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆಗೆ ಸಂಬಂಧಿಸಿದ ವಕ್ತವ್ಯ (memorandum)ವೊಂದನ್ನು ಮನವಿಮಾಡಿತು. ಅದರಲ್ಲಿ ಹೀಗೆ ಹೇಳಲಾಗಿತ್ತು: "... ರಾಜ್ಯ ಅಥವಾ ಕೇಂದ್ರ ಸರ್ಕಾರ ಅನುದಾನವನ್ನು ನೀಡುತ್ತದೆಯೆಂಬ ಕಾರಣದಿಂದ ವಿಶ್ವವಿದ್ಯಾನಿಲಯಗಳ ರಚನೆ, ಕಾರ್ಯ ಹಾಗೂ ದಕ್ಷತೆಗಳನ್ನು ಬಹಳವಾಗಿ ಮಾರ್ಪಡಿಸುವಂಥ ಹಾಗೂ ಶೈಕ್ಷಣಿಕ

Digitised by Bharatavani, CIIL

ಪ್ರಪಂಚದ ದೃಷ್ಟಿಯಲ್ಲಿ ವಿಶ್ವವಿದ್ಯಾನಿಲಯಗಳು ಕೀಳಾಗಿ ಕಾಣುವಂತೆ ಮಾಡುವ ಬದಲಾವಣೆಗಳನ್ನು ತರುವುದು ನ್ಯಾಯವಾಗುವುದಿಲ್ಲ".

60ರ ದಶಕದ ಮಧ್ಯಭಾಗದಲ್ಲಿ ವಿವಿಧ ರಾಜ್ಯಗಳು ದಮನಕಾರಿ ಅಧಿಕಾರಗಳನ್ನು ವಹಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರಿಂದ ಇಂಥ ಹೇಳಿಕೆಗಳು ಆವಶ್ಯಕವಾಗಿದ್ದವು. ಇಂಥ ಒಂದು ಪ್ರಕ್ರಿಯೆಯನ್ನು ಸೂಚಿಸುವಂಥ ಕೇರಳ ರಾಜ್ಯದ ಕರಡು ಮಸೂದೆಯ ಎರಡು ಉಲ್ಲೇಖವನ್ನು ನಾವು ನೋಡಬಹುದು:

"ಈ ಕಾನೂನಿನ ಪ್ರಕಾರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ನೀಡುವ ನೀತಿನಿಯಮಗಳ ನಿರ್ದೇಶನಕ್ಕೆ ವಿಶ್ವವಿದ್ಯಾನಿಲಯಗಳು ತಮ್ಮ ಅಧೀಕಾರವನ್ನು ಉಪಯೋಗಿಸುವಲ್ಲಿ ಮತ್ತು ಕರ್ತವ್ಯ ನಿಭಾಯಿಸುವಲ್ಲಿ ಬದ್ಧವಾಗಿರಬೇಕು. ಕಾರ್ಯನೀತಿಯನ್ನು ಕುರಿತ ಪ್ರಶ್ನೆ ಉದ್ಭವಿಸಿ ಅದರ ಸಂಬಂಧವಾಗಿ ವಾದ ಅಥವಾ ಸಂಶಯ ಬಂದಾಗ ರಾಜ್ಯ ಸರ್ಕಾರದ ನಿರ್ಧಾರವೇ ಅಂತಿಮ ವಾಗಿರುತ್ತದೆ. ಕುಲಾಧಿಪತಿಗಳು ರಾಜ್ಯ ಸರ್ಕಾರದ ಸಲಹೆಯ ಮೇರೆಗೆ ಅಥವಾ ಮೂರನೇ ಎರಡು ಭಾಗದಷ್ಟು ಹಾಜರಿದ್ದು ಮತ ಚಲಾಯಿಸಿದ ಸದಸ್ಯರ ಬೆಂಬಲದೊಡನೆ ಆಡಳಿತ ಮಂಡಳಿ ನೀಡುವ ಸಲಹೆಯ ಮೇರೆಗೆ ಅಥವಾ ಆತನ ಅಭಿಪ್ರಾಯದಂತೆ, ಒಂದು ವೇಳೆ ಪ್ರಸ್ತುತ ಕುಲಪತಿಗಳ ದೆಸೆಯಿಂದ ವಿಶ್ವವಿದ್ಯಾನಿಲಯದ ಆಶೋತ್ತರ ಗಳಿಗೆ ಭಂಗವುಂಟಾಗುವುದೆಂದು ತೋರಿದಲ್ಲಿ ಕುಲಾಧಿಪತಿಗಳು ಕುಲಪತಿಗಳನ್ನು ಅಧಿಕಾರದಿಂದ ತೆಗೆದುಹಾಕಬಹುದು: ಆತನ ವಿರುದ್ಧ ಇಂಥ ಕ್ರಮವನ್ನು ತೆಗೆದುಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ಕುಲಪತಿಗಳಿಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಕಷ್ಟು ಸಮಯಾವಕಾಶವನ್ನು ನೀಡಿದ ನಂತರ ಮಾತ್ರವೇ ಅಧಿಕಾರದಿಂದ ತೆಗೆಯುವ ಆಜ್ಞೆಯನ್ನು ಹೊಡಿಸಬೇಕು".

ಬೇರೆ ಬೇರೆ ರಾಜ್ಯಗಳ ಶಾಸಕಾಂಗಗಳು ಸಿದ್ಧಪಡಿಸಿದ ಮಸೂದೆಗಳಲ್ಲೂ ಮೇಲೆ ಹೇಳಿದಂಥ ಹೇಳಿಕೆಗಳನ್ನು ಕಾಣಬಹುದಾಗಿದೆ. ಈ ಪ್ರತಿಯೊಂದು ಶಾಸನವೂ ರಾಜ್ಯ ಸರ್ಕಾರ ಅಥವಾ ಕುಲಾಧಿಪತಿಗಳ (ರಾಜ್ಯಪಾಲರ) ಆಜ್ಞೆಗಳನ್ನು ವಿಶ್ವವಿದ್ಯಾನಿಲಯದ ಅಧಿಪತಿಯಾದ ಕುಲಪತಿಯು ಪಾಲಿಸಬೇಕು ಎಂಬ ಗುರಿಯನ್ನಿಟ್ಟುಕೊಂಡಿದ್ದವು. ಆದರೆ 1947ರ ವರೆಗೆ ಇಂಥ ಪರಿಸ್ಥಿತಿ ಒದಗಿಬಂದಿರಲಿಲ್ಲ. ಪ್ರತಿಯೊಬ್ಬ ಕುಲಪತಿಯನ್ನು ವಿಶ್ವವಿದ್ಯಾನಿಲಯದ ಕಾರ್ಯ ಹಾಗೂ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದ ಉನ್ನತ ಅಧಿಕಾರಿಯಂತೆಯೇ ನೇಮಿಸಲಾಗುತ್ತಿತ್ತು. ಸರ್ಕಾರದಿಂದಾಗಲಿ ಅಥವಾ ಇನ್ನಾರಿಂದಲೇ ಆಗಲಿ ಅನುಮತಿಯ ಅವಶ್ಯಕತೆ ಇಲ್ಲದೆಯೆ ತನ್ನ ಕಾರ್ಯವ್ಯಾಪ್ತಿಯಲ್ಲಿ ಕಾನೂನಿಗೆ ಅನುಸಾರವಾಗಿ ಕಾರ್ಯಪ್ರವೃತ್ತನಾಗಲು ಕುಲಪತಿಗಳಿಗೆ ಸ್ವಾತಂತ್ರ್ಯವಿತ್ತು. ಆದರೆ, ಆಡಳಿತ ವ್ಯವಸ್ಥೆಯ ದಿಶೆ ಬದಲಾಗಗೊಡಗಿತ್ತು.

ಪ್ರತಿಯೊಂದು ರಾಜ್ಯದಲ್ಲೂ ಮಂತ್ರಿಗಳು ದಮನಕಾರಿ (overriding) ಅಧಿಕಾರವನ್ನು ತಮ್ಮದಾಗಿಸಿಕೊಳ್ಳಲು ನೋಡುತ್ತಿದ್ದರು. ಉದಾ: ಬಹಳಷ್ಟು ರಾಜ್ಯಗಳಲ್ಲಿ ಶಿಕ್ಷಣ ಮಂತ್ರಿಯು ತನ್ನ ಅಧಿಕಾರದಿಂದಾಗಿ ಸ್ವತಃ ವಿಶ್ವವಿದ್ಯಾ ನಿಲಯಗಳ ಉಪಕುಲಾಧಿಪತಿ (prochancelor)ಯಾಗುವನು. ಅಷ್ಟೇ ಅಲ್ಲ, ಮೂರು ದಶಕಗಳ ಹಿಂದೆ ಬೇರೆ ಬೇರೆ ರಾಜ್ಯಗಳು ಉನ್ನತ ಶಿಕ್ಷಣದ ರಾಜ್ಯ ಸಮಿತಿಗಳನ್ನು (State Council of Higher Education) ರಚಿಸಲಾರಂಭಿಸಿದವು. ಆಂಧ್ರಪ್ರದೇಶ ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾದ ಮೊದಲ ರಾಜ್ಯವಾಯಿತಾದರೂ ಇಂದು ಹಲವು ರಾಜ್ಯಗಳು ಇಂಥ ಸಮಿತಿಗಳನ್ನು ಅಸ್ತಿತ್ವಕ್ಕೆ ತಂದಿವೆ.

ರಾಜ್ಯ ಉನ್ನತ ಶಿಕ್ಷಣ ಸಮಿತಿಗಳ ಅಧಿಕಾರ ಹಾಗೂ ಕಾರ್ಯಗಳನ್ನು ಸ್ಪಷ್ಟಪಡಿಸಲು ವಿಶ್ವವಿದ್ಯಾನಿಲಯ ಅನುದಾನ ಆಯೋಗವು ಆಯೋಗದ ಮಾಜಿ ಅಧ್ಯಕ್ಷರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿಯ ನಿರ್ದೇಶನ (guideline) ದಲ್ಲಿ ರಾಜ್ಯ ಉನ್ನತ ಶಿಕ್ಷಣ ಸಮಿತಿಯ ಮುಖ್ಯ ಕಾರ್ಯಾಧ್ಯಕ್ಷರು (chief executive) ಶಿಕ್ಷಣಜ್ಞ (academician)ನಾಗಿರಬೇಕಲ್ಲದೆ ಆತನನ್ನು ರಾಜ್ಯ ಸರ್ಕಾರ ನೇಮಿಸಬೇಕು ಹಾಗೂ ರಾಜ್ಯ ಸರ್ಕಾರದ ನೇರ ನಿರ್ದೇಶನದಲ್ಲಿ ಆತನು ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ಮಾಡಲಾಗಿತ್ತು. ಬಹಳಷ್ಟು ರಾಜ್ಯಗಳು ಈ ಅಲ್ಪ ಮಿತಿಯ ಸ್ವಾಯತ್ತತೆಯನ್ನು ನೀಡಲು ಸಹ ಹಿಂಜರಿದವು. ಪ್ರತಿ ರಾಜ್ಯದಲ್ಲೂ, ಅಪವಾದ ವಿಲ್ಲದಂತೆ, ಉನ್ನತ ಶಿಕ್ಷಣ ಸಮಿತಿಯ ಅಧ್ಯಕ್ಷರು ಶಿಕ್ಷಣ ಮಂತ್ರಿಗಳೇ ಆಗಿದ್ದು ಉಪಾಧ್ಯಕ್ಷ ಪದವಿಗೆ ಮಾತ್ರ ಒಬ್ಬ ನುರಿತ ಶಿಕ್ಷಣಜ್ಞ ಅರ್ಹನಾಗಿದ್ದು ಕಾರ್ಯ ಪ್ರವೃತ್ತನಾಗಬಹುದು. ಯು.ಜಿ.ಸಿಯಂತೆ ರಾಜ್ಯ ಮಟ್ಟದಲ್ಲಿ ಕೆಲಸ ಮಾಡಬೇಕಿದ್ದು ತಮ್ಮ ಮೂಲ ಉದ್ದೇಶದಂತೆ ಕಾರ್ಯೋನ್ಮುಖವಾಗಬೇಕಿದ್ದ ಈ ಸಮಿತಿಗಳು ಆ ರೀತಿ ಕೆಲಸ ಮಾಡುತ್ತಿಲ್ಲವೆಂಬುದು ಮತ್ತೊಂದು ವಿಷಯ. ಸರಳವಾಗಿ ಹೇಳಬೇಕೆಂದರೆ, ಪ್ರತಿಯೊಂದು ರಾಜ್ಯವು ಉನ್ನತ ಶಿಕ್ಷಣ ಸಮಿತಿಗಳು ಅಸ್ತಿತ್ವಕ್ಕೆ ಬಾರದಂತೆ ಕ್ರಮ ಕೈಗೊಂಡಿವೆ ಇಲ್ಲವೆ ಅಸ್ತಿತ್ವಕ್ಕೆ ಬಂದಿರುವ ಸಮಿತಿಗಳನ್ನು ನಿಸ್ಸತ್ವಗೊಳಿಸಿವೆ.

ವಿಶ್ವವಿದ್ಯಾನಿಲಯಗಳ ಕಾರ್ಯ ವೈಖರಿಯನ್ನು ಕುಂಠಿತ ಗೊಳಿಸುವ ಸರ್ಕಾರ ಅನುಸರಿಸುತ್ತಾ ಬಂದಿರುವ ಮತ್ತೊಂದು ನಿರ್ಧಾರಿತ ಮಾರ್ಗವೆಂದರೆ ಅವುಗಳಿಗೆ ಸ್ವಲ್ಪ ಮಟ್ಟಿನ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸ್ವಾಯತ್ತತೆಯನ್ನು ನೀಡಿ ಅದರ ಕುಲಪತಿಗಳ ಆಯ್ಕೆಯ ವಿಷಯದಲ್ಲಿ ಮಾತ್ರ ಸರ್ಕಾರಕ್ಕೆ ಅನುಕೂಲಕರವಾಗಿರುವಂತೆ ನೋಡಿಕೊಳ್ಳುವುದು. ಪ್ರತಿಬಾರಿಯೂ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಬದಲಾವಣೆಗೊಂಡಾಗ ರಾಜ್ಯದ ವಿವಿಧ ವಿಶ್ವ ವಿದ್ಯಾನಿಲಯಗಳ ಕುಲಪತಿಗಳನ್ನು ಬದಲಾಯಿಸಲಾಯಿತು. ಇದು ಚುನಾಯಿತ ಸರ್ಕಾರ ತನ್ನ ನೀತಿಯಲ್ಲಿ ಅನುಸರಿಸಿದ ಮೊದಲನೆ ಮಾರ್ಗ. ಈ ವಿಷಯದಲ್ಲಿ ಬಿಹಾರ್ ರಾಜ್ಯ ಪ್ರಥಮ ಬಾರಿಗೆ ಕಾರ್ಯ ಪ್ರವೃತ್ತವಾಯಿತು. ಈ ಕ್ರಮದಿಂದಾಗಿ ಬಿಹಾರ್ ಎರಡು ಮೂರು ದಶಕಗಳ ಮುನ್ನ ರಾಜ್ಯ ಸಾಕಷ್ಟು ಅಸ್ಥಿರತೆಯನ್ನು ಕಂಡಿತು. ಅಲ್ಲಿ ಮುಖ್ಯಮಂತ್ರಿಗಳು ಬದಲಾದಂತೆ ಸಂಸ್ಥೆಗಳ ಮುಖ್ಯಸ್ಥರನ್ನು ಬದಲಾಯಿಸಲಾಯಿತು.

Digitised by Bharatavani, CIIL

ಪೋಲಿಸ್ ಮಹಾನಿರ್ದೇಶಕರು, ರಾಜ್ಯ ವಿದ್ಯುತ್ ಮಂಡಳಿಯ ಅಧ್ಯಕ್ಷರು ಇವರುಗಳ ಜೊತೆಗೆ ಕುಲಪತಿಗಳು ಬದಲಾದರು. ಈ ಅವಿವೇಕಯುತ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಬದಲಾವಣೆಯನ್ನು ಭಾರತೀಯ ವಿಶ್ವವಿದ್ಯಾನಿಲಯಗಳ ಒಕ್ಕೂಟ ವಿರೋಧಿಸಿತು. ಅಲ್ಲದೆ, ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳಿಗೆ ಈ ವಿಷಯವನ್ನು ಮನವಿ ಮಾಡಲು ಒಂದು ಉಪ ಸಮಿತಿಯನ್ನು ರಚಿಸಲಾಯಿತು. ಈ ಪ್ರಯತ್ನವನ್ನು ಬಹಳ ಗಂಭೀರವಾಗಿಯೇ ಮಾಡಲಾಯಿತು. ಆದರೂ ಇದರ ಫಲಿತಾಂಶ ತೃಪ್ತಿಕರವಾಗೇನೂ ಇಲ್ಲ. ಇದಕ್ಕೆ ಒಂದೆರಡು ಕಾರಣಗಳು ಸಹ ಇವೆ. ಮೊದಲನೆಯದಾಗಿ, ವಿಶ್ವವಿದ್ಯಾನಿಲಯಗಳ ಸಂಖ್ಯೆ ಇತ್ತೀಚೆಗೆ ಬಹಳವಾಗಿಯೇ ಹೆಚ್ಚಿದೆ. ಎರಡನೆಯದಾಗಿ, ಕುಲಪತಿಗಳ ಸಂಘಟಿತ ಅಂಗ (ಭಾರತೀಯ ವಿಶ್ವವಿದ್ಯಾನಿಲಯಗಳ ಒಕ್ಕೂಟ) ಮೊದಲಿನ ಪ್ರತಿಷ್ಠೆ ಗೌರವಗಳನ್ನು ಹೊಂದಿಲ್ಲ. ಆದ್ದರಿಂದ ಈ ಒಕ್ಕೂಟದ ಅಭಿಪ್ರಾಯಕ್ಕೆ ಮೊದಲು ಲಭ್ಯವಿದ್ದ ಮನ್ನಣೆ ಈಗ ಸಿಗುವುದಿಲ್ಲ.

ಏನೇ ಆಗಲಿ ಕುಲಪತಿಗಳ ಗುಣಮಟ್ಟ ವರ್ಷಗಳು ಕಳೆದಂತೆ ಕುಂದುತ್ತಾ ಬಂದಿರುವುದರಿಂದ ವಿಶ್ವವಿದ್ಯಾನಿಲಯಗಳು ಮೊದಲಿನ ಸಾರ್ವಜನಿಕ ಘನತೆ ಗೌರವವನ್ನು ಈಗ ಗಳಿಸುತ್ತಿಲ್ಲ. ಕೆಲವು ಸಾಮಾಜಕ ಅಂಶಗಳು ಈ ಬೆಳವಣಿಗೆಗೆ ಕಾರಣೀಭೂತವಾಗಿವೆ. ಯು.ಜಿ.ಸಿಯ ಒಂದು ಲೆಕ್ಕಾಚಾರದ ಪ್ರಕಾರ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಶೇ. 88ರಷ್ಟು ವಿದ್ಯಾರ್ಥಿಗಳು ಸ್ನಾತಕ ಪದವಿಯ ಮಟ್ಟದಲ್ಲಿ ದಾಖಲಾಗುತ್ತಾರೆ. ಸ್ನಾತಕೋತ್ತರ ಮಟ್ಟದಲ್ಲಿ ದಾಖಲಾಗುವ ವಿದ್ಯಾರ್ಥಿಗಳ ಅಂಕಿ ಅಂಶ ಶೇ.10ರಷ್ಟು ಸಹ ಇಲ್ಲ. ಆದ್ದರಿಂದ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ಅಧ್ಯಯನ ಹಾಗೂ ಸಂಶೋಧನೆಯಲ್ಲಿನ ಮುನ್ನೊಲವಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯಗಳ ಸ್ಥಾನಮಾನದ ಮೌಲ್ಯ ಇಳಿಮುಖವಾಗಿದೆ.

ಮೇಲೆ ಹೇಳಿದಂತೆ, ಭಾರತದ ಸನ್ನಿವೇಶದಲ್ಲಿ ಜ್ಞಾನಪಿಪಾಸುಗಳು ತಮ್ಮ ದೃಷ್ಟಿಕೋನದಂತೆ ಸತ್ಯಾನ್ವೇಷಣೆಯನ್ನು ಮಾಡಿ ಅದನ್ನು ಅವರಿಗೆ ತಿಳಿದಂತೆ ವ್ಯಕ್ತಪಡಿಸುವ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹಕ್ಕನ್ನು ಹೊಂದಿಲ್ಲ ಎಂಬುದು ಚರ್ಚೆಯ ಸಮಸ್ಯೆಯಾಗಿಲ್ಲ. ಬದಲಾಗಿ, ಜ್ಞಾನಪಿಪಾಸುಗಳು ತಮ್ಮ ದೃಷ್ಟಿಕೋನದ ವಿಷಯದಲ್ಲಿ ಸ್ವತಂತ್ರರೇ ಎಂಬ ವಿಷಯದಿಂದ ವಿಶ್ವವಿದ್ಯಾನಿಲಯವು ತನ್ನ ಕಾರ್ಯಗಳಲ್ಲಿ ಸ್ವತಂತ್ರವಾಗಿ ವರ್ತಿಸಬಹುದೇ ಅಥವಾ ಇದರ ಕಾರ್ಯಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಶೈಕ್ಷಣಿಕ ಹಿನ್ನಲೆಯಿಲ್ಲದಿರುವ ಅಂಶಗಳಿಂದ ನಿಯಂತ್ರಿಸಬಹುದೇ ಎಂಬ ವಷಯಕ್ಕೆ ಸಮಸ್ಯೆಯ ಗಮನಕೇಂದ್ರ ಪಲ್ಲಟವಾಗಿದೆ.

1947ರ ನಂತರ ವಿಶ್ವವಿದ್ಯಾನಿಲಯಗಳ ಮೇಲೆ ಹೆಚ್ಚಿನ ಹತೋಟಿಯನ್ನಿರಿಸಲು ಸರ್ಕಾರಗಳು ಕೆಲವು ಸಂದರ್ಭದಲ್ಲಿ ಅನುದಾನವನ್ನು ತಡೆಹಿಡಿದದ್ದುಂಟು. ಆದರೆ ಈಗ ಈ ಮಾರ್ಗಕ್ಕೆ ಬದಲಾಗಿ ವಿಶ್ವವಿದ್ಯಾನಿಲಯದ ಮುಖ್ಯ ಕಾರ್ಯಾಧ್ಯಕ್ಷನ (ಕುಲಪತಿ) ಸ್ಥಾನಕ್ಕೆ ಸರ್ಕಾರದ ವಿವಿಧ ಒತ್ತಡಗಳಿಗೆ ಬಗ್ಗುವಂಥವರನ್ನು ಆಯ್ಕೆ ಮಾಡಲಾಗುತ್ತಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಮ್ಮ ಭಾರತದ ಸನ್ನಿವೇಶದಲ್ಲಿ ಯೂರೋಪಿನಂಥಹ ವಿಶ್ವವಿದ್ಯಾನಿಲಯ ಸ್ವಾಯತ್ತತೆಯ ಪರಿಕಲ್ಪನೆ ಅನ್ವಯಿಸುವುದಿಲ್ಲ. ಹಣದ ನಿಯಂತ್ರಣ ಕೆಲಸ ಮಾಡದಿದ್ದಲ್ಲಿ ಅನುಕೂಲಕರ ಕುಲಪತಿಯ ನೇರ ಆಯ್ಕೆ ಕ್ರಮ ಹೆಚ್ಚು ಕಡಿಮೆ ಸರ್ಕಾರಕ್ಕೆ ಇಚ್ಛಿಸಿದ ಫಲಿತಾಂಶವನ್ನು ತಂದುಕೊಟ್ಟಿದೆ.

ಇದುವರೆಗೆ ಮಾಡಿದ ಚರ್ಚೆಗಳ ಸಾರವಿಷ್ಟೆ; ವಿಶ್ವವಿದ್ಯಾನಿಲಯವು ಶಿಕ್ಷಣ ಮಂತ್ರಿಯಿಂದ ನಡೆಸಲ್ಪಡಬೇಕೊ ಅಥವಾ ಅದಕ್ಕಾಗಿಯೇ ನೇಮಿಸಿದ ವೃತ್ತಿಪರರಿಂದ ನಡೆಸಲ್ಪಡಬೇಕೋ? ಸಿದ್ಧಾಂತ ರೀತ್ಯಾ ಬಹಳಷ್ಟು ಜನ ವಿಶ್ವವಿದ್ಯಾ ನಿಲಯದ ಆಡಳಿತಕ್ಕೆಂದು ನೇಮಿಸಿದವರಿಂದಲೇ ಅದು ನಡೆಸಲ್ಪಡಬೇಕು ಎಂಬುದನ್ನು ಒಪ್ಪುತ್ತಾರೆ. ಹೊರ ನೋಟಕ್ಕೆ ಹೆಚ್ಚು ಕಡಿಮೆ ಇದು ಇಂದು ಹೀಗೆ ನಡೆಯುತ್ತಲೂ ಇದೆ. ಆದರೆ, ಶೈಕ್ಷಣಿಕೇತರ ವಿಷಯಗಳು ಬಂದಾಗ ಅಥವಾ ರಾಜಕೀಯ ಆಶ್ರಯ ಸ್ವರೂಪವುಳ್ಳ ವಿಷಯಗಳು ಬಂದಾಗ, ಶಿಕ್ಷಕರ ಪರವಾಗಲಿ ಇಲ್ಲವೇ ವಿದ್ಯಾರ್ಥಿಗಳ ಪರವಾಗಲಿ ಮಂತ್ರಿಗಳು ತಮ್ಮ ಮಾತುಗಳೇ ನಡೆಯಬೇಕೆಂಬ ಸಾಮಾನ್ಯ ಭಾವನೆಯನ್ನು ಹೊಂದಿದ್ದಾರೆ. ಇಂದು, ಕೆಲವು ವಿಶ್ವವಿದ್ಯಾನಿಲಯಗಳನ್ನು ಬಿಟ್ಟರೆ, ಅವು ಕೂಡ ಒಂದು ಡಜನ್ನಿಗಿಂತ ಹೆಚ್ಚಿಲ್ಲ, ಇನ್ನೆಲ್ಲಾ ವಿಶ್ವವಿದ್ಯಾನಿಲಯಗಳು ಪ್ರತ್ಯಕ್ಷ ವಾಗಿಯೋ ಪರೋಕ್ಷವಾಗಿಯೋ ಮಂತ್ರಿಗಳ ನಿರ್ದೇಶನಕ್ಕೆ ತಲೆಬಾಗುತ್ತವೆ. ರಾಜಕೀಯ ನಾಯಕರ ಆಜ್ಞೆಯನ್ನು ಪಾಲಿಸುವಂಥ ವ್ಯಕ್ತಿಗಳನ್ನು ವಿಶ್ವವಿದ್ಯಾನಿಲಯಗಳನ್ನು ನಡೆಸಲು ಆಯ್ಕೆ ಮಾಡಿ ಇಚ್ಛಿತ ಗುರಿಯನ್ನು ಸಾಧಿಸಿಕೊಳ್ಳಲಾಗಿದೆ. ಬ್ರಿಟಿಷರು 1947 ರಲ್ಲಿ ಭಾರತವನ್ನು ಬಿಟ್ಟು ಹೋಗಿ ದೇಶ ಸ್ವಯಂ ಆಡಳಿತವನ್ನು ಆರಂಭಿಸಿದ ನಂತರ ಇದೊಂದು ಮಹತ್ತರ ಬದಲಾವಣೆಯಾಗಿದೆ.

ಆದಾಗ್ಯೂ, ಯಾವ ಯಾವ ವಿಶ್ವವಿದ್ಯಾನಿಲಯಗಳು ಅಲ್ಲಿಯ ಕಾರ್ಯಾಧ್ಯಕ್ಷರು (ಕುಲಪತಿಗಳು) ಹೇಳಿದಂತೆ ಕಾರ್ಯೋನ್ಮುಖವಾಗಿ ದೆಯೋ ಅಂಥ ವಿಶ್ವವಿದ್ಯಾನಿಲಯಗಳು ಚೆನ್ನಾಗಿ ನಡೆಯುತ್ತಿದ್ದು ಶ್ರೇಷ್ಠವೆಂದು ಹೇಳಬಹುದಾದ ಶೈಕ್ಷಣಿಕ ಮೌಲ್ಯವನ್ನು ಕಾಪಾಡಿಕೊಂಡು ಬಂದಿವೆ. ಐ.ಐ.ಟಿ ಹಾಗೂ ಐ.ಐ.ಎಮ್‌ಗಳನ್ನು ಹೊರತುಪಡಿಸಿ ಇನ್ನು ಕೆಲವು ವಿಶ್ವವಿದ್ಯಾನಿಲಯಗಳು ಇನ್ನಿತರ ದೇಶಗಳಲ್ಲಿರುವಂತೆ ಒಳ್ಳೆಯ ಗುಣಮಟ್ಟವನ್ನು ಸಾಧಿಸುತ್ತಲಿವೆ. ಸರಳವಾಗಿ ಹೇಳುವುದಾದರೆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಆಗುತ್ತಿರುವ ಈ ಘಟನಾವಳಿಗಳನ್ನು ತಮ್ಮಿಚ್ಛೆಯಂತೆಯೇ ಕೆಲಸವಾಗಬೇಕು ಎನ್ನುವವರೂ ಅರ್ಥಮಾಡಿಕೊಳ್ಳುವುದಿಲ್ಲ. ದಶಕಗಳ ಅನುಭವದಿಂದ ಒಂದು ವಿಶ್ವವಿದ್ಯಾ ನಿಲಯವು ಉತ್ತಮವಾಗಿ ನಡೆಯಬೇಕಾದರೆ ಅದರ ಕಾರ್ಯವೈಖರಿಗೆ ಅನನುಕೂಲವಾಗುವಂತೆ ಹೊರಗಿನವರ ಹಸ್ತ ಕ್ಷೇಪವಿರಬಾರದು ಎಂಬುದು ನಿಶ್ಚಯವಾಗಿ ತಿಳಿದುಬಂದಿದೆ.

ಐರಿಕ್ ಆಶ್‌ಬಿ 1976 ರಲ್ಲಿ ಸ್ವಾಯತ್ತತೆ ಮತ್ತು ಶೈಕ್ಷಣಿಕ ಸ್ವಾತಂತ್ರ್ಯದ ಬಗ್ಗೆ ಹೀಗೆ ಹೇಳಿದ್ದಾರೆ: "ಇದುವರೆಗೆ ನಮಗೆ

Digitised by Bharatavani, CIIL

ತಿಳಿದಂತೆ ಬ್ರಿಟಿಷ್ ಕಾನೂನಿನಲ್ಲಿ ಶೈಕ್ಷಣಿಕ ಸ್ವಾಯತ್ತತೆಯನ್ನು ವ್ಯಾಖ್ಯಾನಿಸಿಲ್ಲ. ಅಥವಾ ನಮಗೆ ತಿಳಿದಿರುವಂತೆ ಯಾವ ಬ್ರಿಟಿಷ್ ವಿಶ್ವವಿದ್ಯಾನಿಲಯವೂ ಅದರ ಸದಸ್ಯರಿಗೆ ಶೈಕ್ಷಣಿಕ ಸ್ವಾತಂತ್ರದ ಭರವಸೆ ನೀಡಿಲ್ಲ. ಸುಸಂಸ್ಕೃತ ದೇಶಗಳಲ್ಲಿ ವಿಶೇಷವಾಗಿ ರಕ್ಷಿಸಲ್ಪಟ್ಟ ಬೌದ್ಧಿಕ ಸ್ವಾತಂತ್ರ್ಯದ ಸ್ಥಳವೆಂಬಂತೆ ಈ ಸ್ವಾತಂತ್ರ್ಯ ಬೆಳೆದುಬಂದಿದೆ. ಇದು ಶೈಕ್ಷಣಿಕ ವರ್ಗದ ಸದಸ್ಯರು ತಮ್ಮ ವೈಯಕ್ತಿಕ ಹಕ್ಕು ಎಂದು ಸಾಧಿಸುವಂಥ ವಿಷಯವಲ್ಲ; ವಿದ್ಯಾವಂತರು ಸತ್ಯವನ್ನು ಕಾಣುವಂತೆ ಅದನ್ನು ಬೋಧಿಸಲು ಹಾಗೂ ಕಲಿಯಲು ಇದು ಅಗತ್ಯವೆಂದು ತಿಳಿದು ವೃತ್ತಿಯ ಸ್ಥಳದಲ್ಲಿ ಒದಗಿಸಿ ಕೊಟ್ಟಿರುವಂಥ ಒಂದು ಪರಿಸರ...."

ಬ್ರಿಟಿಷರು ಶತ ಶತಮಾನಗಳ ಅನುಭವದಿಂದ ಈ ಪಾಠವನ್ನು ಕಲಿತರು. ಭಾರತದಲ್ಲಿ ನಾವು ಈ ಪಾಠವನ್ನು ಕಲಿಯುವ ಪ್ರಕ್ರಿಯೆಯಲ್ಲಿದ್ದೇವೆಂದು ತೋರುತ್ತದೆ.

ಕಳೆದ ಶತಮಾನದ ಎರಡನೇ ಭಾಗದಲ್ಲಿ ಯು.ಜಿ.ಸಿಯಿಂದ ನಿಯೋಜಿಸಲ್ಪಟ್ಟ ಮೂರು ಆಯೋಗಗಳು ಆಶ್‌ಬಿಯವರು ಹೇಳಿದ್ದನ್ನೇ ಪುನರುಚ್ಚರಿಸಿದವು. ಡಾ॥ ಡಿ.ಎಸ್.ಕೊಠಾರಿ ಒಂದು ಆಯೋಗದ ಅಧ್ಯಕ್ಷರಾಗಿದ್ದು ಆಯೋಗದ ವರದಿ 60ರ ದಶಕದ ಆದಿಭಾಗದಲ್ಲಿ ಹೊರಬಿತ್ತು. ಎರಡನೇ ವರದಿ 1971 ರಲ್ಲಿ ಗಜೇಂದ್ರ ಗಡ್‌ಕರ್ ಅವರು ಸಲ್ಲಿಸಿದರೆ, ಮೂರನೇ ವರದಿ ಮೂರನೇ ಆಯೋಗದ ಅಧ್ಯಕ್ಷರಾದ ಪ್ರೊ.ವಿ.ಜ್ಞಾನಂ ಅವರಿಂದ 80ತ್ತರ ದಶಕದ ಅಂತ್ಯಭಾಗದಲ್ಲಿ ಸಲ್ಲಿಸಲ್ಪಟ್ಟಿತು.

ಇತ್ತಿಚೆಗೆ ಖಾಸಗಿ ವಿಶ್ವವಿದ್ಯಾನಿಲಯದ ಮಸೂದೆ ಜಾರಿಗೊಂಡಿರುವುದರಿಂದ ಭಾರತದಲ್ಲಿ ಇಂದು 40ಕ್ಕೂ ಹೆಚ್ಚು ಖಾಸಗಿ ವಿಶ್ವವಿದ್ಯಾನಿಲಯಗಳು ಅಸ್ಥಿತ್ವದಲ್ಲಿವೆ. ಇದರ ಸಂಬಂಧವಾಗಿ ಹೇಳಬಹುದಾದ ಮತ್ತೊಂದು ವಾಸ್ತವಾಂಶವೆಂದರೆ ನಮ್ಮ ದೇಶದಲ್ಲಿ ಖಾಸಗಿ ವಿಶ್ವವಿದ್ಯಾನಿಲಯಗಳು ಅಸ್ಥಿತ್ವದಲ್ಲಿ ಇಲ್ಲದಿರುವುದು. ಬ್ರಿಟನ್ನಿನಲ್ಲಿರುವಂತೆ ಭಾರತದಲ್ಲಿ ವಿಶ್ವವಿದ್ಯಾನಿಲಯಗಳು ಸರ್ಕಾರದಿಂದ ಅನುದಾನಿತವಾಗಿವೆ ಹಾಗೂ ಅದರ ಬೆಂಬಲದಿಂದ ನಡೆಯುತ್ತಲಿವೆ. ಬ್ರಿಟನ್ನಿನಲ್ಲಿ ಒಂದು ಖಾಸಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ; ಆದರೆ ಭಾರತದಲ್ಲಿ ಇದು ಇನ್ನೂ ಸಾಕಾರವಾಗಿಲ್ಲ. 90ರ ದಶಕದ ಆದಿ ಭಾಗದಲ್ಲಿ ಖಾಸಗಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಯನ್ನು ಅನುಮತಿಸುವ ಮಸೂದೆ ಒಂದನ್ನು ಮಂಡಿಸಲಾಯಿತು. ಮಸೂದೆ ಇನ್ನೂ ಅಂಗೀಕೃತವಾಗಬೇಕಾಗಿದೆ. ಮೂಲತಃ ಯಾವುದೇ ಖಾಸಗಿ ಮುಂದಾಳುತ್ವದಲ್ಲಿ ಶಾಸಕರಿಗಿರುವ ಅವಿಶ್ವಾಸವೇ ಇದಕ್ಕೆ ಕಾರಣ. ಸರಳವಾಗಿ ಹೇಳುವುದಾದರೆ ವರ್ಷಗಳು ಕಳೆದಂತೆ ವಿಶ್ವವಿದ್ಯಾನಿಲಯಗಳ ವ್ಯವಸ್ಥಾಪನ ಪದ್ಧತಿಯೂ ಮತ್ತು ಅವುಗಳ ಕಾರ್ಯಕ್ಷಮತೆಗಳ ನಡುವೆ ಸ್ಪಷ್ಟ ಹಾಗೂ ತರ್ಕಬದ್ಧ ಸಂಬಂಧವಿದೆ ಎಂಬ ವಿಷಯದಲ್ಲಿ ಯಾವ ಸಂಶಯವೂ ಇಲ್ಲ ಎಂಬುದು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಾ ಬಂದಿದೆ.

ಪ್ರೊ. ವಿ. ಜ್ಞಾನಂ ಅವರಿಂದ 80ರ ದಶಕದ ಅಂತ್ಯಭಾಗದಲ್ಲಿ ಸಲ್ಲಿಸಲ್ಪಟ್ಟಿತು. ಈ ವರದಿ ಕೇಂದ್ರ ಸರ್ಕಾರದಿಂದ ಚರ್ಚಿತಗೊಂಡು ಶಿಕ್ಷಣದ ಕೇಂದ್ರ ಸಲಹಾ ಸಮಿತಿಯಿಂದ ಧೃಡೀಕರಿಸಲ್ಪಟ್ಟಿತು.

ಇದುವರೆಗೆ ಹೇಳಿರುವುದಕ್ಕಿಂತ ಸ್ವಲ್ಪ ಮುಂದುವರೆದು ಹೇಳುವುದಾದರೆ, ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಸಮಾಜದ ಪ್ರಜಾಸತ್ತಾತ್ಮಕ ಕಾರ್ಯದ ಒಂದು ಆಯಾಮವಾಗಿದೆ.

ಭಾರತದ ಪ್ರಜಾಪ್ರಭುತ್ವ ಹಲವು ಸವಾಲುಗಳನ್ನು ಎದುರಿಸಿದಂತೆ ಭಾರತೀಯ ವಿಶ್ವವಿದ್ಯಾನಿಲಯಗಳು ಸಹ ಸವಾಲುಗಳನ್ನು ಎದುರಿಸಿವೆ. ಒಂದಕ್ಕೊಂದು ಸಮನಾಗಿ ನಡೆಯುವ ಕಾನೂನು ಮತ್ತು ಪ್ರಜಾಪ್ರಭುತ್ವ ಭಾರತದಲ್ಲಿ ನಡುರಂಗಸ್ಥಳಕ್ಕೆ ಬಂದಾಗ – ಹಾಗೂ ಅದು ಹಾಗೆ ಆಗಲೂ ಬೇಕು – ವಿಶ್ವವಿದ್ಯಾನಿಲಯದ ಸ್ವಾಯತ್ತತೆಯು ಸಾಕಾರವಾಗುತ್ತದೆ.

**ಮೂಲ: ಅಮರೀಕ್ ಸಿಂಗ್**
**ಅನು: ಚಂದ್ರಶೇಖರ್ ಬಿ. ಎಂ.**

## ವಿಶ್ವಸನೀಯತೆ

ಒಂದು ಉತ್ತಮ ಅಳತೆ ಮಾಪನಿಯು ಕೆಲವು ಗುಣಲಕ್ಷಣಗಳನ್ನು ಹೊಂದಿರಬೇಕು. ಅವುಗಳೆಂದರೆ ಸಿಂಧುತ್ವ, ವಿಶ್ವಸನೀಯತೆ, ವಸ್ತುನಿಷ್ಠತೆ, ವಿಭೇದಿಕರಣಶಕ್ತಿ ಮತ್ತು ಔಪಯೋಗಿಕತೆ.

ವಿಶ್ವಸನೀಯತೆಯು (Reliability) ಅಳತೆಯ ಸ್ಥಿರತೆಗೆ ಸಂಬಂಧಿಸಿದೆ. ಪರೀಕ್ಷೆ ನಡೆಸಿದ ನಂತರ ಪಡೆದ ಅಂಕಗಳಿಗೂ ಮತ್ತೊಮ್ಮೆ ಪರೀಕ್ಷೆ ನಡೆಸಿದ ಅಂಕಗಳಿಗೂ ಸ್ಥಿರತೆ ಇರಬೇಕು. ಉದಾ: ಒಬ್ಬ ಶಿಕ್ಷಕರು ಇಂದು ತನ್ನ ತರಗತಿಯ ವಿದ್ಯಾರ್ಥಿಗಳಿಗೆ ಸಾಧನಾ ಪರೀಕ್ಷೆಯನ್ನು ನೀಡಿರುತ್ತಾರೆ. ನಿನ್ನೆ ನಡೆಸಿದ ಸಾಧನಾ ಪರೀಕ್ಷೆಯ ಅಂಕಗಳು, ಇಂದು ನಡೆಸಿದ ಸಾಧನಾ ಪರೀಕ್ಷೆಯ ಅಂಕಗಳು, ನಾಳೆ ನಡೆಸುವ ಸಾಧನಾ ಪರೀಕ್ಷೆಯ ಅಂಕಗಳು, ಇವುಗಳ ಮಧ್ಯೆ ಏನಾದರೂ ಸಮಾನತೆ(similarity) ಇದೆಯೇ ಅಥವಾ ಎರಡು ಪರೀಕ್ಷೆಗಳ ಅಂಕಗಳಲ್ಲಿ ಏನಾದರೂ ವ್ಯತ್ಯಾಸಗಳು ಕಂಡುಬಂದಿದೆಯೇ ಎಂಬುದನ್ನು ತಿಳಿಯಲು ಶಿಕ್ಷಕ ಉತ್ಸುಕನಾಗಿರುತ್ತಾನೆ. ಎರಡು ಪರೀಕ್ಷೆಗಳ ನಡುವೆ ಸ್ಥಿರತೆಯಿದ್ದರೆ, ಅಂತಹ ಪರೀಕ್ಷಣ ವಿಶ್ವಸನೀಯತೆಯನ್ನು ಹೊಂದಿದೆ ಎಂದು ಹೇಳಬಹುದು. ಅಂದರೆ ಒಂದು ಅಳತೆ ಸಾಧನ ಯಾವುದನ್ನಾದರು ಅಳತೆ ಮಾಡುವಾಗ ಅದು ತೋರ್ಪಡಿಸುವ ನಿಖರತೆ ಅಥವಾ ಪಡೆದಿರುವ ಖಚಿತತೆಯ ಗುಣಕ್ಕೆ ವಿಶ್ವಸನೀಯತೆ ಎನ್ನುತ್ತೇವೆ.

Digitised by Bharatavani, CIIL

ಫ್ರೀಮನ್‌ರವರ ಪ್ರಕಾರ ವಿಶ್ವಸನೀಯತೆ ಎನ್ನುವ ಪದ "ಪರೀಕ್ಷೆ ಮತ್ತು ಪುನಃ ಪರೀಕ್ಷೆ ಮಾಡಿದಾಗ ಬರುವ ಫಲಿತಾಂಶದ ಸ್ಥಿರತೆಗೆ ಸಂಬಂಧಿಸಿರುತ್ತದೆ".

ಎಲ್.ಜಿ ಕ್ರೌನ್‌ಬ್ಲಾಕ್ ವಿಶ್ವಸನೀಯತೆಯನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ: "ಅಳತೆಯ ಅನುಕ್ರಮದಲ್ಲಿ ಸ್ಥಿರವಾದ ಅಂಕಗಳನ್ನು ಕೊಡುವ ಪರೀಕ್ಷಣ".

ಪರೀಕ್ಷಾ ಫಲಿತಾಂಶಗಳು ಸಂಪೂರ್ಣವಾಗಿ ಸ್ಥಿರತೆಯನ್ನು ಹೊಂದಿರಬೇಕು ಎಂಬ ನಿರೀಕ್ಷೆ ಇಟ್ಟುಕೊಳ್ಳಬಾರದು. ಕೆಲವು ಗುಣಲಕ್ಷಣಗಳನ್ನು ಅಳತೆಮಾಡುವಾಗ ಇತರೆ ಅನೇಕ ಅಂಶಗಳು ಪರೀಕ್ಷೆಯ ಅಂಕಗಳ ಮೇಲೆ ಪ್ರಭಾವ ಬೀರುತ್ತವೆ. ಉದಾ: ಒಂದೇ ಸಮೂಹದ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಎರಡು ಸಲ ಶೀಘ್ರ ಅನುಕ್ರಮದಲ್ಲಿ ನಡೆಸಿದರೆ, ವಿದ್ಯಾರ್ಥಿಗಳ ನೆನಪಿನಶಕ್ತಿ, ಆಸಕ್ತಿ, ಆಯಾಸ, ಮಾನಸಿಕ ಸ್ಥಿತಿ ಇತ್ಯಾದಿಗಳ ಬದಲಾವಣೆಯಿಂದ ಮಕ್ಕಳ ಅಂಕಗಳಲ್ಲಿ ಕೆಲವು ಬದಲಾವಣೆಗಳನ್ನು ಕಾಣಬಹುದು. ಎರಡು ಪರೀಕ್ಷೆಗಳ ನಡುವಿನ ಅವಧಿ ಹೆಚ್ಚಾದಾಗ ಕಲಿಕಾ ಅನುಭವಗಳು, ಆರೋಗ್ಯದಲ್ಲಿನ ಬದಲಾವಣೆ, ಮರೆವು ಇತ್ಯಾದಿ ಅಂಶಗಳು ಪರೀಕ್ಷೆ ಫಲಿತಾಂಶಗಳಲ್ಲಿನ ವ್ಯತ್ಯಾಸಗಳಿಗೆ ಕಾರಣವಾಗಬಹುದು.

ವಿಶ್ವಸನೀಯತೆಯು ಮೌಲ್ಯಮಾಪನ ತಂತ್ರದಿಂದ ಪಡೆದ ಫಲಿತಾಂಶಗಳಿಗೆ ಸಂಬಂಧಿಸಿದ್ದು, ಇದು ಮೌಲ್ಯಮಾಪನದ ತಂತ್ರ/ಪರೀಕ್ಷೆಗೆ ಅನ್ವಯವಾಗುವುದಿಲ್ಲ. ಇದು ಪರೀಕ್ಷೆಯ ಅಂಕಗಳಿಗೆ ಸಂಬಂಧಿಸಿರುತ್ತದೆ.

ವಿಶ್ವಸನೀಯತೆಯು ಯಾವಾಗಲೂ ನಿರ್ದಿಷ್ಟವಾದ ವಿಧದ ಸ್ಥಿರತೆಗೆ ಸಂಬಂಧಿಸಿರುತ್ತದೆ. ಒಂದು ಪರೀಕ್ಷೆ/ಪರೀಕ್ಷಣಕ್ಕೆ ವಿಶ್ವಸನೀಯತೆಯು ಅವಶ್ಯಕವಾಗಿರುತ್ತದೆ.

**ವಿಶ್ವಸನೀಯತೆಯನ್ನು ನಿರ್ಧರಿಸುವ ವಿಧಾನಗಳು:**

**1) ಪರೀಕ್ಷೆ–ಪುನರ್(ಮರು) ಪರೀಕ್ಷೆ ವಿಧಾನ:** ಈ ವಿಧಾನದಲ್ಲಿ ವಿಶ್ವಸನೀಯತೆಯನ್ನು ಕಂಡುಹಿಡಿಯಲು ಒಂದೇ ಪರೀಕ್ಷೆಯನ್ನು ಒಂದೇ ಸಮೂಹಕ್ಕೆ ಎರಡು ಸಲ ನಡೆಸಬೇಕು. ಪರೀಕ್ಷೆಗಳನ್ನು ನಡೆಸುವಾಗ ಎರಡು ಪರೀಕ್ಷೆಗಳ ನಡುವೆ ಸೂಕ್ತವಾದ ಸಮಯಾವಕಾಶವನ್ನು ನೀಡಬೇಕು. ಪಡೆದಂತಹ ಅಂಕಗಳಿಗೆ ಸಹಸಂಬಧವನ್ನು ಕಂಡುಹಿಡಿಯಬೇಕು ಮತ್ತು ಸಹಸಂಬಂಧ ಗುಣಾಂಕವು ಸ್ಥಿರತೆಯ ಅಳತೆಯನ್ನು ನೀಡುತ್ತದೆ. ಅಂದರೆ ಇದು ನಿರ್ದಿಷ್ಟ ಸಮಯಗಳಲ್ಲಿ ನಡೆಸಿದಾಗ ಅಂಕಗಳು ಹೇಗೆ ಸ್ಥಿರವಾಗಿರುತ್ತವೆ ಎಂಬುದನ್ನು ತಿಳಿಸುತ್ತದೆ. ಫಲಿತಾಂಶಗಳು ಸ್ಥಿರತೆ ಹೊಂದಿದ್ದರೆ ಮೊದಲ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿ ಎರಡನೇ ಪರೀಕ್ಷೆಯಲ್ಲಿಯೂ ಅತಿ ಹೆಚ್ಚು ಅಂಕಗಳನ್ನು ಗಳಿಸಬೇಕು. ಹಾಗೆಯೇ ಇತರೆ ವಿದ್ಯಾರ್ಥಿ/ಅಭ್ಯರ್ಥಿಗಳು ಸಹ ಅವರು ಮೊದಲ ಪರೀಕ್ಷೆಯಲ್ಲಿ ಯಾವ ಸ್ಥಾನದಲ್ಲಿರುತ್ತಾರೆಯೋ ಎರಡನೆಯ ಪರೀಕ್ಷೆಯಲ್ಲಿಯೂ ಸಹ ಅವರು ಅದೇ ಸ್ಥಾನದಲ್ಲಿರಬೇಕು. ಇಂತಹ ಸ್ಥಿರತೆಯನ್ನು ಒಂದು ಪರೀಕ್ಷೆ (ಪರೀಕ್ಷಣ) ಹೊಂದಿರಬೇಕಾದರೆ ಹೆಚ್ಚಿನ ಪ್ರಮಾಣದ ಸಹಸಂಬಂಧ ಗುಣಾಂಕವನ್ನು ಹೊಂದಿರಬೇಕು.

ಸಾಮಾನ್ಯವಾಗಿ ಪರಿಪೂರ್ಣ ಧನಾತ್ಮಕ ಸಂಬಂಧವನ್ನು 1.00 ಸಹಸಂಬಂಧ ಗುಣಾಂಕ ಸೂಚಿಸಿದರೆ, ಯಾವುದೇ ಸಂಬಂಧವಿಲ್ಲವೆಂಬುದನ್ನು $\pm 0.00$ ತೋರಿಸುತ್ತದೆ. ಮಾನಕೀಕೃತ ಅಭಿಕ್ಷಮತೆ ಮತ್ತು ಸಾಧನಾ ಪರೀಕ್ಷೆಗಳಿಗೆ ಸಾಮಾನ್ಯವಾಗಿ 0.80 ಮತ್ತು 0.90ರಷ್ಟು ಸಹಸಂಬಂಧ ಗುಣಾಂಕ ಇರಬೇಕು. ಸ್ಥಿರತೆಯ ಅಳತೆಯನ್ನು ಕಂಡುಹಿಡಿಯುವಾಗ ನಾವು ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶವೆಂದರೆ, ಪರೀಕ್ಷೆಗಳ ನಡುವಿನ ಅಂತರ. ಪರೀಕ್ಷೆಗಳ ನಡುವಿನ ಅಂತರ ಕಡಿಮೆ ಇದ್ದರೆ (ಉದಾಹರಣೆಗೆ ಒಂದು ಅಥವಾ ಎರಡು ದಿನಗಳು) ವಿದ್ಯಾರ್ಥಿಗಳು ಹಿಂದೆ ಉತ್ತರಿಸಿದ ಪರೀಕ್ಷೆಯ ಕೆಲವು ಉತ್ತರಗಳನ್ನು ನೆನಪಿನಲ್ಲಿಟ್ಟುಕೊಂಡಿರುತ್ತಾರೆ. ಇಲ್ಲಿ ಹೆಚ್ಚಿನ ಸ್ಥಿರತೆಯನ್ನು ಕಾಣಬಹುದು. ಎರಡು ಪರೀಕ್ಷೆಗಳ ನಡುವಿನ ಅಂತರ ಹೆಚ್ಚಿದಾಗ (ಉದಾಹರಣೆಗೆ ಒಂದು ವರ್ಷ) ಫಲಿತಾಂಶಗಳು ಅಸ್ಥಿರತೆಯನ್ನು ತೋರುವುದಲ್ಲದೆ ವಿದ್ಯಾರ್ಥಿಗಳ ವರ್ತನೆಗಳಲ್ಲಿ ಬದಲಾವಣೆಗಳನ್ನು ಕಾಣಬಹುದು.

**ಸಮಾನ ಪ್ರಶ್ನ ಪತ್ರಿಕೆಗಳ ವಿಧಾನ:** ಸಮಾನ ಪ್ರಶ್ನಪತ್ರಿಕೆಗಳ ವಿಧಾನದ ಮೂಲಕ ವಿಶ್ವಸನೀಯತೆಯನ್ನು ಕಂಡುಹಿಡಿಯಲು ಎರಡು ವಿಧದ ಪರೀಕ್ಷೆಗಳು ಅಂದರೆ ಸಮಾನ ಪರೀಕ್ಷೆಗಳನ್ನು ಬಳಸಬೇಕು. ಇವನ್ನು ಸಮಾನಾಂತರ(parallel) ಅಥವಾ ಪರ್ಯಾಯ(Alternative) ಪರೀಕ್ಷೆಗಳು ಎಂದು ಕರೆಯುತ್ತಾರೆ.

ಇಲ್ಲಿ ಎರಡು ಪರೀಕ್ಷೆಗಳನ್ನು ರಚಿಸುವಾಗ ಒಂದೇ ನೀಲನಕ್ಷೆ(blue print/table of specifications)ಗೆ ಅನುಗುಣವಾಗಿ ವಿಷಯವಸ್ತು, ಬೋಧನೋದ್ದೇಶಗಳು ಕ್ಲಿಷ್ಟತೆಯ ಮಟ್ಟವನ್ನು ಎರಡೂ ಪರೀಕ್ಷೆಗಳು ಹೊಂದಿರಬೇಕು.

ಎರಡು ಪ್ರಶ್ನಪತ್ರಿಕೆಗಳನ್ನು ಬಳಸಿ ಒಂದೇ ಸಮೂಹಕ್ಕೆ ಹತ್ತಿರದ ಅನುಕ್ರಮದಲ್ಲಿ(close succession) ಪರೀಕ್ಷೆಗಳನ್ನು ನಡೆಸಬೇಕು. ನಂತರ ಬಂದ ಅಂಕ(ಫಲಿತಾಂಶ)ಗಳಿಗೆ ಸಹಸಂಬಂಧ ಗುಣಾಂಕವನ್ನು ಕಂಡುಹಿಡಿಯಬೇಕು. ಈ ಸಹಸಂಬಂಧ ಗುಣಾಂಕವು ಸಮಾನತೆಯ ಅಳತೆಯನ್ನು ತಿಳಿಸುತ್ತದೆ.

ಸಮಾನತೆಯ ಅಳತೆ (Measures of equilance) ಅಂಶವು ಎರಡು ಪರೀಕ್ಷೆಗಳು ಒಂದು ವರ್ತನೆಗೆ ಸಂಬಂಧಿಸಿದ ಅಂಶಗಳನ್ನು ಯಾವ ಮಟ್ಟದಲ್ಲಿ ಅಳತೆ ಮಾಡುತ್ತದೆ ಎಂಬುದನ್ನು ತಿಳಿಸುತ್ತದೆ.

Digitised by Bharatavani, CIIL

ಸಮಾನ ಪರೀಕ್ಷೆಗಳ ವಿಧಾನದಲ್ಲಿ ವಿದ್ಯಾರ್ಥಿಗಳ ಗುಣಲಕ್ಷಣಗಳಲ್ಲಿನ ಸ್ಥಿರತೆಯನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಪರೀಕ್ಷಣವು ಅಳತೆ ಮಾಡಬೇಕಾದ ಪಠ್ಯವಸ್ತು/ಗುಣಲಕ್ಷಣಗಳನ್ನು ಎಷ್ಟು ಪ್ರಮಾಣದಲ್ಲಿ ಅಳತೆ ಮಾಡಿದೆ ಎಂಬುದನ್ನು ತಿಳಿಯಲು ಸಹಾಯಕವಾಗುತ್ತದೆ. ಉದಾ: ಒಂದು ಸಾಧನಾ ಪರೀಕ್ಷೆಯನ್ನು ನಡೆಸಬೇಕಾದಾಗ ಸಾವಿರಾರು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಆದರೆ ಸಮಯ ಹಾಗೂ ಇತರೆ ಅಂಶಗಳ ಅಭಾವದಿಂದ ನಿರ್ದಿಷ್ಟ ಸಂಭವನೀಯ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಪರೀಕ್ಷೆಯಲ್ಲಿನ ಪ್ರಶ್ನೆಗಳು ಅಳತೆ ಮಾಡಬೇಕಾದ ವಿಷಯವಸ್ತು/ಗುಣಲಕ್ಷಣಗಳ ಸಂಭವನೀಯ ಪ್ರಶ್ನೆಗಳಾಗಿರುತ್ತವೆ. ಫಲಿತಾಂಶಗಳನ್ನು ನೋಡಿದಾಗ ಹೆಚ್ಚಿನ ಸಹಸಂಬಂಧ ಗುಣಾಂಕವನ್ನು ಪರೀಕ್ಷೆಗಳು ಪಡೆದಿದ್ದರೆ ಒಂದೇ ವಿಷಯವಸ್ತುವನ್ನು ಅಳತೆ ಮಾಡುವ ಎರಡು ಪರೀಕ್ಷೆಗಳು ಉತ್ತಮ ವಿಶ್ವಸನೀಯತೆಯನ್ನು ಹೊಂದಿರುತ್ತವೆ ಎಂದು ತಿಳಿಯುತ್ತದೆ..

ಸಮಾನ ಪರೀಕ್ಷೆ ವಿಧಾನದ ಮೂಲಕ ವಿಶ್ವಸನೀಯತೆಯನ್ನು ಕಂಡುಹಿಡಿಯುವಾಗ ಕೆಲವು ಸಂದರ್ಭಗಳಲ್ಲಿ ಎರಡು ಪರೀಕ್ಷೆಗಳ ನಡುವೆ ಅಂತರವನ್ನು ನೀಡಿ ನಡೆಸುತ್ತೇವೆ. ಇಂತಹ ಸನ್ನಿವೇಶಗಳಲ್ಲಿ ಬರುವ ಸಹಸಂಬಂಧ ಗುಣಾಂಕವು ಸ್ಥಿರತೆ ಮತ್ತು ಸಮಾನತೆ(stability and equilance) ಎರಡನ್ನೂ ತಿಳಿಯಲು ಸಹಾಯಕವಾಗಿದೆ. ಈ ವಿಧಾನದಲ್ಲಿ ವಿದ್ಯಾರ್ಥಿಗಳ ಅಂಕಗಳಲ್ಲಿ ಬದಲಾವಣೆಗೆ ಸಾಧ್ಯತೆಯಿರುವುದರಿಂದ ಇದು ವಿಶ್ವಸನೀಯತೆಯ ಪರೀಕ್ಷೆಯಾಗಿದೆ. ಅಳತೆ ಕ್ರಮದಲ್ಲಿನ ಸ್ಥಿರತೆ, ವಿದ್ಯಾರ್ಥಿಗಳ ಗುಣಲಕ್ಷಣದಲ್ಲಿನ ಸ್ಥಿರತೆ(consistancy)ಯನ್ನು ಅಳತೆ ಮಾಡುವುದು, ಪರೀಕ್ಷೆಗಳಲ್ಲಿ ಸೇರಿರುವ ವಿಷಯವಸ್ತು/ಪಠ್ಯವಸ್ತು ಪರೀಕ್ಷಿಸಬೇಕಾದ ಒಟ್ಟು ಪಠ್ಯಕ್ರಮವನ್ನು ಪ್ರತಿನಿಧಿಸುವುದರಿಂದ ಎರಡು ಸಲ ಪರೀಕ್ಷೆ ನಡೆಸುವುದರಿಂದ ಇದು ವಿಶ್ವಸನೀಯತೆಯನ್ನು ಕಂಡುಹಿಡಿಯುವ ಅತ್ಯುತ್ತಮ (soundest method) ವಿಧಾನ ಎಂದು ಹೇಳಬಹುದು.

**ವಿಭಕ್ತಾರ್ಥ ವಿಧಾನ:** ಒಂದೇ ಪರೀಕ್ಷೆಯನ್ನು ಒಮ್ಮೆ ಮಾತ್ರ ನಡೆಸಿ ವಿಶ್ವಸನೀಯತೆಯನ್ನು ಕಂಡುಹಿಡಿಯಲು ವಿಭಕ್ತಾರ್ಥ ವಿಧಾನವು ಉತ್ತಮ ವಿಧಾನವಾಗಿದೆ. ಒಂದು ಸಮೂಹದ ವಿದ್ಯಾರ್ಥಿಗಳಿಗೆ ಸಾಮಾನ್ಯ ವಾತಾವರಣದಲ್ಲಿ ಒಂದು ಪರೀಕ್ಷೆಯನ್ನು ನಡೆಸಿ ಲೆಕ್ಕಾಚಾರ ಮಾಡುವುದಕ್ಕಾಗಿ ಪರೀಕ್ಷೆಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಒಂದು ಪರೀಕ್ಷೆಯನ್ನು ಎರಡು ಸಮಾನ ಭಾಗಗಳಾಗಿ ವಿಭಾಗಿಸಲು ಸಾಮಾನ್ಯವಾಗಿ ಸಮಸಂಖ್ಯೆ ಮತ್ತು ಬೆಸಸಂಖ್ಯೆ ಪ್ರಶ್ನೆಗಳನ್ನಾಗಿ ವಿಭಜಿಸುವುದು ಉತ್ತಮ ವಿಧಾನವಾಗಿದೆ. ಇದನ್ನು ಆಂತರಿಕ ಸ್ಥಿರತೆಯ ವಿಶ್ವಸನೀಯತೆಯನ್ನು (Reliability of Internal consistancy) ಕಂಡುಹಿಡಿಯಲು ಬಳಸಲಾಗುತ್ತದೆ. ಎರಡು ಅರ್ಧಗಳು ಎಷ್ಟರಮಟ್ಟಿಗೆ ಸಹಸಂಬಂಧಿಸಿವೆ ಎಂಬುದನ್ನು ತಿಳಿಯಲು ಈ ವಿಧಾನವನ್ನು ಬಳಸಲಾಗುತ್ತದೆ.

ಮೇಲೆ ತಿಳಿಸಿದಂತೆ ವಿಶ್ವಸನೀಯತೆಯ ಗುಣಾಂಕವನ್ನು ಕಂಡುಹಿಡಿಯಲು ಎರಡು ಅರ್ಧ ಪರೀಕ್ಷೆಗಳ ಅಂಕಗಳನ್ನು ಬಳಸಲಾಗುತ್ತದೆ. ಎರಡು ಅರ್ಧ ಪರೀಕ್ಷೆಗಳ ಮಟ್ಟವನ್ನು ಪೂರ್ಣ ಪರೀಕ್ಷೆಯಾಗಿ ಪರಿವರ್ತಿಸಲು ಸ್ಪಿಯರ್‌ಮೆನ್–ಬ್ರೌನ್ ನೀಡಿರುವ ಸೂತ್ರವನ್ನು ಬಳಸಬೇಕು.

$$\text{ಪೂರ್ಣ ಪರೀಕ್ಷೆಯ ವಿಶ್ವಸನೀಯತೆ} = \frac{2x\frac{1}{2}\ \text{ಪರೀಕ್ಷೆಯ ವಿಶ್ವಸನೀಯತೆ}}{2x\frac{1}{2}\ \text{ಪರೀಕ್ಷೆಯ ವಿಶ್ವಸನೀಯತೆ}}$$

ವಿಭಕ್ತಾರ್ಥ ವಿಧಾನವು ಸಮಾನ ಪ್ರಶ್ನಪತ್ರಿಕೆ ವಿಧಾನದಂತೆ ಇದೆ. ಎರಡು ಅರ್ಧಪರೀಕ್ಷೆಗಳ ನಡುವಿನ ಸಹಸಂಬಂಧ ಗುಣಾಂಕವು ಉತ್ತಮವಾಗಿದ್ದರೆ(ಹೆಚ್ಚಾಗಿದ್ದರೆ)ಎರಡು ಅರ್ಧ ಪರೀಕ್ಷೆಗಳು ಸಮಾನವಾಗಿದ್ದು, ಅವು ಪ್ರತಿನಿಧಿಸುವ ವಿಷಯವಸ್ತು ಸಮಂಜಸವಾಗಿದೆ ಎಂದು ಹೇಳಬಹುದು.

**ಕ್ಯೂಡರ್–ರಿಚರ್ಡ್ಸನ್ ವಿಧಾನ (Kuder-Richardson method):** ಒಂದು ಪರೀಕ್ಷೆಯನ್ನು ಒಂದು ಸಲ ವಿದ್ಯಾರ್ಥಿಗಳಿಗೆ ನೀಡಿ ಪರೀಕ್ಷೆ ನಡೆಸಿ, ಅದರ ಅಂಕಗಳ ಆಧಾರದ ಮೇಲೆ ವಿಶ್ವಸನೀಯತೆಯನ್ನು ಕಂಡುಹಿಡಿಯಲು ಕ್ಯೂಡರ್–ರಿಚರ್ಡ್ಸನ್ ಅವರು ಒಂದು ಸೂತ್ರವನ್ನು ನೀಡಿದ್ದಾರೆ. ಇದು ಆಂತರಿಕ ಸ್ಥಿರತೆಯನ್ನು ತಿಳಿಯಲು ಸಹಾಯ ಮಾಡುತ್ತದೆ. ಆದರೆ ಪರೀಕ್ಷೆಯನ್ನು ಎರಡು ಭಾಗಗಳಾಗಿ ವಿಂಗಡಿಸುವ ಅವಶ್ಯಕತೆ/ಅಗತ್ಯತೆ ಇಲ್ಲ. ಕ್ಯೂಡರ್–ರಿಚರ್ಡ್ಸನ್ ವಿಧಾನವು ಪ್ರತಿಯೊಂದು ಪರೀಕ್ಷೆಯ ಅಂಶದಲ್ಲಿ ಉತ್ತೀರ್ಣತೆಯನ್ನು ಹೊಂದಿರುವ ವಿದ್ಯಾರ್ಥಿಗಳು ಮತ್ತು ಒಟ್ಟು ಮೊತ್ತಕ್ಕೆ ಮಾನಕ ವಿಚಲನೆಯನ್ನು ಕಂಡುಹಿಡಿಯುವ ಮೂಲಕ ವಿಶ್ವಸನೀಯತೆಯನ್ನು ಕಂಡುಹಿಡಿಯಬೇಕು. ಒಂದು ಸರಳ ಸೂತ್ರವನ್ನು ಬಳಸಿ ವಿಶ್ವಸನೀಯತೆಯನ್ನು ಕಂಡುಹಿಡಿಯಹುದು.

$$KR = \frac{K}{K-1}\left[1 - \frac{M(K-M)}{Ks^2}\right]$$

K = ಪರೀಕ್ಷೆಯಲ್ಲಿನ ಒಟ್ಟು ಅಂಶಗಳು
M = ಪರೀಕ್ಷೆಯ ಅಂಕಗಳ ಸರಾಸರಿ
S = ಪರೀಕ್ಷೆಯ ಅಂಕಗಳ ಮಾನಕ ವಿಚಲನೆ

Digitised by Bharatavani, CIIL

ವಿಶ್ವಸನೀಯತೆಯನ್ನು ಲೆಕ್ಕಾಚಾರ ಮಾಡುವ ವಿಧಾನಗಳು:

**Methods of Determining reliability**

| ಪರೀಕ್ಷೆಯ ವಿಧ | ವಿಶ್ವಸನೀಯತೆಯ ವಿಧ | ಕ್ರಮ |
|---|---|---|
| ಪರೀಕ್ಷೆ–ಪುನಃ ಪರೀಕ್ಷೆ ವಿಧಾನ | ಸ್ಥಿರತೆಯನ್ನು ಅಳತೆ ಮಾಡುವುದು | ಒಂದು ಪ್ರಶ್ನಪತ್ರಿಕೆಯನ್ನು ಒಂದೇ ಸಮೂಹಕ್ಕೆ ನಿಗದಿತ ಸಮಯದ ಅಂತರದಲ್ಲಿ ಎರಡು ಸಲ ನಡೆಸುವುದು. |
| ಸಮಾನ ಪ್ರಶ್ನ ಪತ್ರಿಕೆ ವಿಧಾನ | ಸಮಾನತೆಯನ್ನು ಅಳತೆ ಮಾಡುವುದು | ಎರಡು ಪ್ರಶ್ನಪತ್ರಿಕೆಗಳನ್ನು ಒಂದೇ ಸಮೂಹಕ್ಕೆ ಸಮಯದ ಅಂತರದಲ್ಲಿ ನೀಡುವುದು |
| ವಿಭಕ್ತಾರ್ಧ ವಿಧಾನ | ಆಂತರಿಕ ಸ್ಥಿರತೆಯನ್ನು ಅಳತೆ ಮಾಡುವುದು | ಒಂದು ಪರೀಕ್ಷೆಯನ್ನು ಒಂದು ಸಮೂಹಕ್ಕೆ ಒಂದು ಸಲ ನಡೆಸಿ, ಒಂದು ಪರೀಕ್ಷೆಯನ್ನು ಎರಡು ಭಾಗಗಳಾಗಿ ವಿಂಗಡಿಸುವುದು. |
| ಕ್ಯೂಡರ್–ರಿಚರ್ಡ್ಸನ್ ವಿಧಾನ | ಆಂತರಿಕ ಸ್ಥಿರತೆಯನ್ನು ಅಳತೆ ಮಾಡುವುದು | ಪರೀಕ್ಷೆಯನ್ನು ಒಂದು ಸಮೂಹಕ್ಕೆ ಒಮ್ಮೆ ನಡೆಸಿ, ಒಟ್ಟು ಅಂಕಗಳನ್ನು ಕಂಡುಹಿಡಿದು ಕ್ಯೂಡರ್–ರಿಚರ್ಡ್ಸನ್ ಸೂತ್ರವನ್ನು ಬಳಸುವುದು. |

– ಡಾ. ಕೃಷ್ಣಪ್ಪ ಎನ್.

## ವಿಸ್ತರಣ ಶಿಕ್ಷಣ ಸೇವೆಗಳು

**ಚಾರಿತ್ರಿಕ ದೃಷ್ಟಿಕೋನ:** ವಿಸ್ತರಣಾ ಶಿಕ್ಷಣ ಮತ್ತು ವಿಸ್ತರಣ ಸೇವೆಗಳು ವಿಭಿನ್ನ ಮೂಲಗಳನ್ನು ಹೊಂದಿವೆ. ಶಿಕ್ಷಣವನ್ನು 1977ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ಕಾರ್ಯನೀತಿಯ ಚೌಕಟ್ಟಿನ ಘಟಕವಾಗಿ ಪರಿಗಣಿಸಲಾಯಿತು. ಮತ್ತು ಉನ್ನತ ಶಿಕ್ಷಣಕ್ಕೆ ಅಧ್ಯಾಪನ ಮತ್ತು ಸಂಶೋಧನೆಯ ಸಮಾನನೆಲೆಯಲ್ಲಿ ಮೂರನೆಯ ಆಯಾಮವಾಗಿ ಇದನ್ನು ಕಾಣಲಾಯಿತು. 1949ರಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ವಿಸ್ತರಣ ಸೇವೆಗಳನ್ನು ಶಾಲಾ ಶಿಕ್ಷಣಕ್ಕಾಗಿ ಸೇವಾನಿರತ ಶಿಕ್ಷಣ ತಂತ್ರವಾಗಿ ಭಾವಿಸಿತು. ಕೆಲವು ವಿಶ್ವವಿದ್ಯಾಲಯಗಳು 1970ರಲ್ಲಿಯೇ ನಿರಂತರ ಶಿಕ್ಷಣ ಕಾರ್ಯಕ್ರಮಗಳನ್ನು ಮತ್ತು ವಿಸ್ತರಣ ಕಾರ್ಯವನ್ನು ನಡೆಸುತ್ತಿದ್ದರೂ, ಕೇಂದ್ರ ಸರಕಾರದ ರಾಷ್ಟ್ರೀಯ ವಯಸ್ಕ ಶಿಕ್ಷಣ ಕಾರ್ಯಕ್ರಮಗಳಲ್ಲಿ (ಎನ್‌ಎಇಪಿ) ವಿಶ್ವವಿದ್ಯಾಲಯಗಳು ಗಣನೀಯ ರೀತಿಯಿಂದ ತೊಡಗಿಸಿಕೊಂಡದ್ದು 1978ರಲ್ಲಿಯೇ. 1978–80ರಲ್ಲಿ ಇದು ಗಮನಾರ್ಹ ವೇಗವನ್ನು ಪಡೆದುಕೊಂಡಿದ್ದರೆ, 1980–82ರಲ್ಲಿ ಎನ್‌ಎಇಪಿಯ ಇಡೀ ಕಾರ್ಯಕ್ರಮವು ಕೊಠಾರಿ ಆಯೋಗದ ಪರಿಶೀಲನೆಗೆ ಒಳಗಾದ ಸಂದರ್ಭದಲ್ಲಿ ಇದು ಸ್ಥಗಿತ ಹಂತವನ್ನು ತಲುಪಿತು.

**ಶಾಲಾ ಶಿಕ್ಷಕರಿಗೆ ಆಂತರಿಕ ಸೇವಾ ಶಿಕ್ಷಣ:** 1949ರಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ಶಾಲಾ ಶಿಕ್ಷಕರಿಗಾಗಿ ಸೇವಾ ನಿರತ ಶಿಕ್ಷಣದ ಅಗತ್ಯದ ಕುರಿತು ಬಲವಾದ ಶಿಫಾರಸ್ಸನ್ನು ಮಾಡಿದಾಗಲೇ ಇದರ ಅಗತ್ಯವನ್ನು ಕಾಣಲಾಗಿತ್ತು. ಮಾಧ್ಯಮಿಕ ಶಿಕ್ಷಣ ಆಯೋಗವು (1952–53) ಶಾಲಾ ಶಿಕ್ಷಕರಿಗಾಗಿ ಆಂತರಿಕ ಸೇವಾ ಶಿಕ್ಷಣದ ವ್ಯವಸ್ಥಿತವಾದ ಸಂಘಟಿತ ಕಾರ್ಯಕ್ರಮಗಳ ಅಗತ್ಯದ ಮೇಲೆ ಗಮನವನ್ನು ಕೇಂದ್ರೀಕರಿಸಿಕೊಂಡಿತ್ತು. 1955ರಲ್ಲಿ ಭಾರತ ಸರಕಾರವು ಮಾಧ್ಯಮಿಕ ಶಿಕ್ಷಣಕ್ಕಾಗಿ ಅಖಿಲ ಭಾರತ ಪರಿಷತ್ತನ್ನು (ಆಲ್ ಇಂಡಿಯಾ ಕೌನ್ಸಿಲ್ ಫಾರ್ ಸೆಕೆಂಡರಿ ಎಜ್ಯುಕೇಶನ್) ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಿತು. ಆ ಸಮಯದಲ್ಲಿ ವಿಸ್ತರಣಾ ಸೇವಾ ಕೇಂದ್ರಗಳನ್ನು ಮತ್ತು ಘಟಕಗಳನ್ನು ಸ್ಥಾಪಿಸಲು ಅಮೇರಿಕೆಯ ಫೋರ್ಡ್ ಪ್ರತಿಷ್ಠಾನದ ವತಿಯಿಂದ ಆರಂಭಿಕ ನೆರವು ದೊರೆಯಿತು. 1955–58ರ ನಡುವೆ 74 ಕೇಂದ್ರಗಳು ಮತ್ತು 23 ಘಟಕಗಳನ್ನು ಪದವಿ ತರಬೇತಿ ಮಹಾವಿದ್ಯಾಲಯಗಳಲ್ಲಿ ಸ್ಥಾಪಿಸಲಾಯಿತು. 1959ರಲ್ಲಿ ಪರಿಷತ್ತನ್ನು ಶಿಕ್ಷಣ ಮಂತ್ರಾಲಯವು ತನ್ನ ವಶಕ್ಕೆ ತೆಗೆದುಕೊಂಡಿತು. ನಂತರ ಇದನ್ನು ಸೇವಾ ನಿರತ ಶಿಕ್ಷಣ ಮತ್ತು ವಿಸ್ತರಣಾ ಸೇವೆಗಳಿಗೆ ಒತ್ತನ್ನು ನೀಡುವ ಮಾಧ್ಯಮಿಕ ಶಿಕ್ಷಣದ ವಿಸ್ತರಣಾ ಕಾರ್ಯಕ್ರಮಗಳ ನಿರ್ದೇಶನಾಲಯವಾಗಿ (ಡಿಇಪಿಎಸ್‌ಇ–ಡೈರೆಕ್ಟೋರೇಟ್ ಆಫ್ ಎಕ್ಸ್‌ಟೆನ್ಶನ್ ಪ್ರೋಗ್ರಾಮ್ಸ್ ಫಾರ್ ಸೆಕೆಂಡರಿ ಎಜ್ಯುಕೇಶನ್) ಬದಲಾಯಿಸಲಾಯಿತು. 1961ರಲ್ಲಿ

Digitised by Bharatavani, CIIL

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತನ್ನು (ಎನ್‌ಸಿಇಆರ್‌ಟಿ) ಸ್ಥಾಪಿಸಿ, ಶಾಲಾ ಶಿಕ್ಷಣದಲ್ಲಿ ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯದ ಜವಾಬ್ದಾರಿಯನ್ನು ಇದಕ್ಕೆ ವಹಿಸಿಕೊಡಲಾಯಿತು. ನಂತರ ಡಿಇಪಿಎಸ್‌ಇಯು (ಆಮೇಲೆ ಇದು ಕ್ಷೇತ್ರ ಸೇವೆಗಳ ವಿಭಾಗವೆಂದು ಕರೆಯಿಸಿಕೊಂಡಿತು) ಎನ್‌ಸಿಇಆರ್‌ಟಿಸಿಯ ಕೆಳಗೆ ಅದರ ನಿಯೋಜಕಗಳಲ್ಲಿ ಒಂದಾಗಿ ತನ್ನ ಬೆಳವಣಿಗೆಯನ್ನು ಮುಂದುವರಿಸಿತು. 1969ರಲ್ಲಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಕ್ಷೇತ್ರ ಸೇವೆಗಳ ವಿಭಾಗವನ್ನು (ಡಿಎಫ್‌ಎಸ್–ಡಿಪಾರ್ಟಮೆಂಟ್ ಆಫ್ ಫೀಲ್ಡ್ ಸರ್ವಿಸಸ್) ರದ್ದುಪಡಿಸಲಾಯಿತು. ಮತ್ತು ವಿಸ್ತರಣಾ ಶಿಕ್ಷಣ ಕಾರ್ಯವನ್ನು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ (ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್) ಎಲ್ಲಾ ವಿಭಾಗಗಳಿಗೆ ವರ್ಗಾಯಿಸಲಾಯಿತು.

ಸಾಮಾನ್ಯವಾಗಿ ವಿಸ್ತರಣ ಸೇವೆಗಳ ವಿಭಾಗವು ಯಾವ ಶಿಕ್ಷಕ ತರಬೇತಿ ಮಹಾವಿದ್ಯಾಲಯಕ್ಕೆ ಸೇರಿಕೊಳ್ಳುವುದೋ ಅದೇ ಮಹಾವಿದ್ಯಾಲಯದ ಆವರಣಗಳಲ್ಲಿ ನೆಲೆಗೊಂಡಿತು. ವಿಸ್ತರಣ ಸೇವೆಗಳ ವಿಭಾಗ, ಅದರ ಗ್ರಂಥಾಲಯ ಮತ್ತು ಶ್ರವ್ಯ–ದೃಶ್ಯ ಉಪಕರಣಗಳ ಬಳಕೆಗಾಗಿ ಒಂದು ಅಥವಾ ಎರಡು ಕೋಣೆಗಳನ್ನು, ಕೆಲವೊಂದು ಹೆಚ್ಚುವರಿ ಉಪಗೃಹವನ್ನು ಕಾಲೇಜಿನ ಕಟ್ಟಡದಲ್ಲಿಯೇ ಒದಗಿಸಲಾಯಿತು. ವಿಚಾರಸಂಕಿರಣಗಳು, ಅಧಿವೇಶನಗಳು ಮತ್ತು ಸಭೆಗಳನ್ನು ನಡೆಸಲು ತರಬೇತಿ ಕಾಲೇಜಿನಲ್ಲಿ ಲಭ್ಯವಿರುವ ಸೌಲಭ್ಯಗಳನ್ನೇ ಬಳಸಲಾಗುತ್ತಿತ್ತು.

**ವಿಸ್ತರಣ ಸೇವಾ ಕೇಂದ್ರಗಳು ಮತ್ತು ಘಟಕಗಳು:** ವಿಸ್ತರಣ ಸೇವಾ ಕೇಂದ್ರಗಳಿಗೆ ಮತ್ತು ಘಟಕಗಳಿಗೆ ಕೆಲವು ಮೂಲಭೂತ ವ್ಯವಸ್ಥೆಗಳೊಂದಿಗೆ ತಾಂತ್ರಿಕ ಮತ್ತು ಕಚೇರಿ ಸಿಬ್ಬಂದಿಗಳನ್ನು ಕೂಡಾ ಒದಗಿಸಲಾಗುತ್ತದೆ. ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ :

**ಸಿಬ್ಬಂದಿ:** ವಿಸ್ತರಣ ವಿಭಾಗವು ಯಾವ ತರಬೇತಿ ಮಹಾವಿದ್ಯಾಲಯದಲ್ಲಿ ಇರುವುದೋ ಆ ಮಹಾವಿದ್ಯಾಲಯದ ಪ್ರಾಂಶುಪಾಲರು ಆ ವಿಭಾಗದ ಗೌರವ ನಿರ್ದೇಶಕರಾಗಿ ಕಾರ್ಯನಿರ್ವಹಿಸುವರು. ಅವರು ವಿಭಾಗದ ಕಾರ್ಯಗಳಿಗೆ ಸಮಗ್ರ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ನೀಡುವರು. ಮತ್ತು ಅದರ ಚಟುವಟಿಕೆಗಳನ್ನು ತರಬೇತಿ ಮಹಾವಿದ್ಯಾಲಯದ ಕಾರ್ಯಕ್ರಮಗಳೊಂದಿಗೆ ಸುಸಂಘಟಿಸಲು ನೆರವಾಗುವರು.

ಪ್ರತಿಯೊಂದು ವಿಸ್ತರಣ ಸೇವಾ ವಿಭಾಗಕ್ಕೆ ಒಬ್ಬ ಸಮನ್ವಯಾಧಿಕಾರಿ (ಕೋಆರ್ಡಿನೇಟರ್) ಇರುತ್ತಾರೆ. ವಿಭಾಗದ ಗುಣಮಟ್ಟ ಮತ್ತು ಯಶಸ್ಸನ್ನು ನಿರ್ಧರಿಸುವುದರಲ್ಲಿ ಅವರು ಪ್ರಮುಖ ವ್ಯಕ್ತಿಯಾಗಿರುತ್ತಾರೆ. ವಿಸ್ತರಣ ಸೇವಾ ಕೇಂದ್ರಕ್ಕೆ ಪೂರ್ಣಾವಧಿಯ ಸಮನ್ವಯಾಧಿಕಾರಿ ಇದ್ದರೆ, ಸೇವಾ ಘಟಕಕ್ಕೆ ಅರೆಕಾಲಿಕ ಸಮನ್ವಯಾಧಿಕಾರಿ ಮಾತ್ರ ಇರುವರು. ಸಾಮಾನ್ಯವಾಗಿ ಮಹಾವಿದ್ಯಾಲಯದ ಸಿಬ್ಬಂದಿ ವರ್ಗದಲ್ಲಿ ಹಿರಿಯ ಅಧ್ಯಾಪಕರ ಮಟ್ಟದಲ್ಲಿ ಇರುವವರನ್ನು ಸಮನ್ವಯಾಧಿಕಾರಿಯಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಇವರು ತೊಡಗಿಸಿಕೊಳ್ಳುವ ಸಾಮರ್ಥ್ಯ, ಭಾವನಾಶಕ್ತಿ ಮತ್ತು ಬಿಚ್ಚು ಮನಸ್ಸನ್ನು ಹೊಂದಿರುವ ವ್ಯಕ್ತಿಯಾಗಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ತಪಾಸಣಾ ಅಧಿಕಾರಿಗಳೊಂದಿಗೆ ಕೆಲಸ ಮಾಡುವ ಮನೋಧರ್ಮವನ್ನು ಹೊಂದಿರಬೇಕು. ಈ ಸಂಯೋಜನೆಯನ್ನು ಹೊಂದಿರುವ ವ್ಯಕ್ತಿಗಳು ಸಿಗುವುದು ಕಷ್ಟ. ಸಮನ್ವಯಾಧಿಕಾರಿಯು ಅನೇಕ ಆಂತರಿಕ ಸೇವಾ ಚಟುವಟಿಕೆಗಳನ್ನು ಸಂಘಟಿಸುವರು, ಕಾರ್ಯಕ್ರಮಗಳನ್ನು ಸಂಯೋಜಿಸುವರು ಮತ್ತು ತರಬೇತಿ ಮಹಾವಿದ್ಯಾಲಯ ಮತ್ತು ಅದರೊಂದಿಗೆ ಸಮನ್ವಯಗೊಂಡಿರುವ ಶಾಲೆಗಳ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುವರು. ಸಮನ್ವಯಾಧಿಕಾರಿಯೊಂದಿಗೆ, ಪ್ರತಿಯೊಂದು ವಿಸ್ತರಣ ವಿಭಾಗವು ಸಹಾಯಕ ಆಡಳಿತಾತ್ಮಕ ಸಿಬ್ಬಂದಿಯನ್ನು ಹೊಂದಿರುತ್ತದೆ.

**ಉಪಕರಣಗಳು:** ವಿಸ್ತರಣ ಸೇವಾ ಕೇಂದ್ರಕ್ಕೆ ವಾಚನಾಲಯದ ಗ್ರಂಥಗಳು, ಶ್ರವ್ಯ–ದೃಶ್ಯ ಸಲಕರಣೆಗಳು, ಮತ್ತು ಸಾರಿಗೆ ವಾಹನವನ್ನು ಒದಗಿಸಲಾಗುತ್ತದೆ. ಇದರ ಒಟ್ಟು ಮೌಲ್ಯವು ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಇರುವುದು. ಹಿಂದಿನ ಮಾಧ್ಯಮಿಕ ಶಿಕ್ಷಣದ ಅಖಿಲ ಭಾರತ ಪರಿಷತ್ತು ಪ್ರಾರಂಭಿಸಿದ 54 ವಿಸ್ತರಣಾ ಸೇವಾ ಕೇಂದ್ರಗಳಿಗೆ ಉಪಕರಣಗಳ ಪೂರೈಕೆಯನ್ನು ಟಿಸಿಎಮ್‌ನ ಸಹಾಯ–ಕಾರ್ಯಕ್ರಮದ ಕೆಳಗೆ (ಈಗ ಯುಎಸ್‌ಎಐಡಿ ಹೆಸರಿನಲ್ಲಿರುವ) ಯುಎಸ್‌ಎ ಒದಗಿಸಿತ್ತು. ಮೂರನೆಯ ಯೋಜನಾ ಅವಧಿಯಲ್ಲಿ ಪ್ರಾರಂಭಿಸಲಾದ ಕೇಂದ್ರಗಳಿಗೆ ಉಪಕರಣಗಳ ಸಲುವಾಗಿ ಮಾಧ್ಯಮಿಕ ಶಿಕ್ಷಣ ವಿಸ್ತರಣ ಕಾರ್ಯಕ್ರಮಗಳ ನಿರ್ದೇಶನಾಲಯವು ಪ್ರತಿಯೊಂದು ಕೇಂದ್ರಕ್ಕೆ ಒಂದೇ ಬಾರಿ ನೀಡಲಾಗುವ 50,000 ರೂಪಾಯಿಗಳ ಧನಸಹಾಯವನ್ನು ಮಂಜೂರು ಮಾಡಲಾಯಿತು. ಸಾರಿಗೆ ವಾಹನವನ್ನು ಒದಗಿಸದಿರುವ ಕೇಂದ್ರಗಳಿಗೆ ಒಂದೇ ಬಾರಿ ನೀಡಲಾಗುವ ಹೆಚ್ಚುವರಿ 50,000 ವನ್ನು ಮಂಜೂರು ಮಾಡಲಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿಯೊಂದು ವಿಸ್ತರಣ ಸೇವಾ ಘಟಕಕ್ಕೆ 5000 ಮೌಲ್ಯದ ಉಪಕರಣವನ್ನು ಮಾತ್ರ ಒದಗಿಸಲಾಯಿತು ಮತ್ತು ವೆಚ್ಚವನ್ನು ಮಾಧ್ಯಮಿಕ ಶಿಕ್ಷಣದ ವಿಸ್ತರಣ ಕಾರ್ಯಕ್ರಮಗಳ ನಿರ್ದೇಶನಾಲಯ ಮತ್ತು ಸಂಬಂಧಪಟ್ಟ ಮಹಾವಿದ್ಯಾಲಯದ ಆಡಳಿತವು ಸಮಾನವಾಗಿ ಹಂಚಿಕೊಂಡಿತು.

ಕೇಂದ್ರಗಳ ಗ್ರಂಥಾಲಯಗಳಲ್ಲಿ ಸೇವಾನಿರತ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಾದ ಕಲಿಸುವ ಕ್ರಿಯಾತ್ಮಕ ವಿಧಾನಗಳು, ಶೈಕ್ಷಣಿಕ ಸಂಸ್ಥೆಗಳು, ಮಾಪನ ಮತ್ತು ಮೌಲ್ಯನಿರ್ಧಾರ, ಶ್ರವ್ಯ–ದೃಶ್ಯ ತಂತ್ರಜ್ಞಾನಗಳು, ಮಾರ್ಗದರ್ಶನಗಳು, ಇತ್ಯಾದಿಗಳಿಗೆ ಸಂಬಂಧಪಟ್ಟ ಗ್ರಂಥಗಳು ಇರುತ್ತವೆ. ಶ್ರವ್ಯ–ದೃಶ್ಯ ಉಪಕರಣಗಳಲ್ಲಿ 16 ಮಿಮಿ ಚಿತ್ರಯೋಜಕ (ಫಿಲ್ಮ್ ಪ್ರೊಜೆಕ್ಟರ್), ಜಾರು ಯೋಜಕ

Digitised by Bharatavani, CIIL

(Slide Projector) ಛಾಯಾಚಿತ್ರಗ್ರಾಹಕ ಉಪಕರಣ, ಫಿಲ್ಮ್‌ಗಳು, ಫಿಲ್ಮ್ ಪಟ್ಟಿಗಳು ಮತ್ತು ಜಾರಕಗಳು, ಧ್ವನಿಮುದ್ರಣ ಯಂತ್ರ, ಎಪಿಡೈಸ್ಕೋಪ್, ಜನರೇಟರ್, ದ್ವಿಪ್ರತಿಕಾರಕಗಳು, ನಕ್ಷೆಗಳು ಮತ್ತು ಭೂಪಟಗಳು ಇರುತ್ತವೆ. ವಿಸ್ತರಣ ಕೇಂದ್ರಗಳಿಗೆ ಅಗತ್ಯವಿರುವ ಕಚೇರಿ ಉಪಕರಣಗಳನ್ನು ಪೂರೈಕೆ ಮಾಡುವ ಜವಾಬ್ದಾರಿ ತರಬೇತಿ ಮಹಾವಿದ್ಯಾಲಯದ್ದಾಗಿರುತ್ತದೆ. ಕೇಂದ್ರಗಳಿಗೆ ಒದಗಿಸಲಾಗುವ ವಾಹನಗಳಿಂದ ಹೆಚ್ಚಿನ ಉಪಯೋಗವಿದೆ. ಕೇಂದ್ರಗಳು ತಮ್ಮ ವ್ಯಾಪ್ತಿಯಲ್ಲಿರುವ ಶಾಲೆಗಳಿಗೆ ನಿರಂತರವಾಗಿ ಮತ್ತು ಪದೇಪದೇ ಭೇಟಿ ನೀಡುವುದಕ್ಕೆ ಇದರಿಂದ ಅನುಕೂಲವಾಗಿದೆ.

**ಹಣಕಾಸು ಪೂರೈಕೆ:** ಪ್ರತಿಯೊಂದು ಕೇಂದ್ರಕ್ಕೆ ಎನ್‌ಸಿಇಆರ್‌ಟಿ ಆರ್ಥಿಕ ಸಹಾಯಧನವನ್ನು ಒದಗಿಸುತ್ತದೆ. ಈ ಹಣವನ್ನು ಅಧಿಕಾರಿಗಳ ಸಂಬಳ ಮತ್ತು ಭತ್ಯೆ, ಸಂಸ್ಥೆಯ ಶ್ರವ್ಯ-ದೃಶ್ಯ ಸೇವೆಗಳು, ಪ್ರದರ್ಶನಗಳು, ಮತ್ತು ಜಾತ್ರೆಗಳು, ಪ್ರಕಾಶನಗಳು, ಸಾರಿಗೆ, ಪ್ರಯಾಣ ಭತ್ಯೆ ಮತ್ತು ಸಂಪನ್ಮೂಲ ವ್ಯಕ್ತಿಗಳ ಸಂಭಾವನೆ, ಮತ್ತು ಇತರ ಸಂಭಾವ್ಯ ವೆಚ್ಚಗಳಿಗೆ ಖರ್ಚು ಮಾಡಲಾಗುತ್ತದೆ. ಈ ಮೊತ್ತದೊಂದಿಗೆ ರಾಜ್ಯ ಸರಕಾರವು ಪ್ರತಿವರ್ಷ ಕೇಂದ್ರ ಆಯೋಜಿಸುವ ಅನೇಕ ಸೇವಾನಿರತ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಗುವ ಸಹಭಾಗಿಗಳ ಪ್ರಮಾಣ ಮತ್ತು ದಿನನಿತ್ಯದ ಭತ್ಯೆಗಾಗಿ ಹಣವನ್ನು ನೀಡುತ್ತಿದೆ. ಘಟಕಗಳ ಎಲ್ಲಾ ಖರ್ಚಿನ ಬಾಬತ್ತನ್ನು ಎನ್‌ಸಿಇಆರ್‌ಟಿ ವಹಿಸಿಕೊಳ್ಳುತ್ತದೆ.

**ವ್ಯಾಪ್ತಿ ಪ್ರದೇಶ:** ಪ್ರಾರಂಭದಲ್ಲಿ ಪ್ರತಿಯೊಂದು ವಿಸ್ತರಣ ಸೇವಾ ಕೇಂದ್ರವು ತನ್ನ ಸುತ್ತುಮುತ್ತಲಿನ 50 ಮಾಧ್ಯಮಿಕ ಶಾಲೆಗಳನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡು ಪರಿಣಾಮಕಾರಿಯಾದ ಮತ್ತು ಪರಿಶ್ರಮದ ಕಾರ್ಯವನ್ನು ನಡೆಸುವಂತೆ ನಿರೀಕ್ಷಿಸಲಾಗುತ್ತಿತ್ತು. ಆದರೆ ಯೋಜನೆ ಬೆಳೆದಂತೆ, ರಾಜ್ಯದ ಶಿಕ್ಷಣ ಇಲಾಖೆಯು ಯಾವುದೇ ಜಿಲ್ಲೆ ಹೊರಗುಳಿಯದ ರೀತಿಯಿಂದ ರಾಜ್ಯದ ಎಲ್ಲಾ ಪ್ರದೇಶಗಳನ್ನು ಕೇಂದ್ರಗಳು ಮತ್ತು ಘಟಕಗಳ ನಡುವೆ ಹಂಚಿತು. ಈಗ ಪ್ರತಿಯೊಂದು ಕೇಂದ್ರದ ವ್ಯಾಪ್ತಿಯಲ್ಲಿರುವ ಶಾಲೆಗಳ ಸಂಖ್ಯೆ 100ರಿಂದ ಸುಮಾರು 400 ರಷ್ಟು ಇರುತ್ತದೆ. ಘಟಕಗಳು ಸಾಮಾನ್ಯವಾಗಿ ಐವತ್ತೇ ಶಾಲೆಗಳ ಅಗತ್ಯಗಳನ್ನು ನೋಡಿಕೊಳ್ಳುತ್ತವೆ. ಆದರೆ ಸಾಮಾನ್ಯವಾಗಿ ಪ್ರತಿಯೊಂದು ಕೇಂದ್ರಕ್ಕೆ ಐವತ್ತಕ್ಕಿಂತ ಹೆಚ್ಚು ಶಾಲೆಗಳಿಗೆ ಮತ್ತು ಪ್ರತಿಯೊಂದು ಘಟಕಕ್ಕೆ ಹದಿನೈದಕ್ಕಿಂತ ಹೆಚ್ಚು ಶಾಲೆಗಳಿಗೆ ಗಮನಾರ್ಹ ಕಾರ್ಯವನ್ನು ಒದಗಿಸುವುದು ಸಾಧ್ಯವಾಗುವುದಿಲ್ಲ. ಅಖಿಲ ಭಾರತ ಮಟ್ಟದಲ್ಲಿ 95 ಕೇಂದ್ರಗಳು ಮತ್ತು ಘಟಕಗಳು ದೇಶದಲ್ಲಿರುವ ಶೇಕಡಾ 20ರಿಂದ 25ರಷ್ಟು ಮಾಧ್ಯಮಿಕ ಶಾಲೆಗಳ ವ್ಯಾಪ್ತಿಯಲ್ಲಿ ಸಾಕಷ್ಟು ಪರಿಣಾಮಕಾರಿ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ನಾವು ಹೇಳಬಹುದು. ದೇಶದಲ್ಲಿ ಅಸ್ತಿತ್ವದಲ್ಲಿರುವ ಶೇಕಡಾ 40ರಷ್ಟು ತರಬೇತಿ ಮಹಾವಿದ್ಯಾಲಯಗಳಿಗೆ ಮಾತ್ರ ವಿಸ್ತರಣಾ ವಿಭಾಗಗಳನ್ನು ಒದಗಿಸಿರುವ ವಿಚಾರವನ್ನು ಪರಿಗಣಿಸಿದರೆ ಇದು ಉತ್ತಮ ಸಾಧನೆಯಾಗಿದೆ. ಈ ಸೀಮಿತ ವ್ಯಾಪ್ತಿ ಕೂಡಾ ಕೇಂದ್ರಗಳು ಮತ್ತು ಘಟಕಗಳು ಶಾಲೆಗಳಿಗೆ ನೀಡುವ ಸೇವೆಗಳಿಗೆ ಸಂಬಂಧಿಸಿದ ಗಮನವನ್ನು ಸಮಾನ ರೀತಿಯಲ್ಲಿ ಹಂಚಿಕೊಂಡಂತೆ ತೋರುವುದಿಲ್ಲ. ಕೆಲವು ಶಾಲೆಗಳಂತೂ ದೂರದ ಗ್ರಾಮೀಣ ಭಾಗಗಳಲ್ಲಿ ಇರುವುದರಿಂದ ಅವುಗಳಿಗೆ ಅಗತ್ಯವಿರುವಷ್ಟು ಗಮನವನ್ನು ನೀಡುವುದು ವಿಸ್ತರಣ ವಿಭಾಗಗಳಿಗೆ ಸಾಧ್ಯವಾಗುವುದಿಲ್ಲ. ಆದುದರಿಂದ ಪ್ರತಿಯೊಂದು ಕೇಂದ್ರ ಮತ್ತು ಘಟಕವು ಆಳವಾದ ಕಾರ್ಯವನ್ನು ನಡೆಸುವ ಸಲುವಾಗಿ ಕೆಲವು ಆಯ್ದ ಶಾಲೆಗಳಲ್ಲಿ ಕೇಂದ್ರೀಕೃತಗೊಳ್ಳಲು ಪ್ರಯತ್ನಿಸುತ್ತದೆ. ಇದುವರೆಗೆ ಸುಮಾರು 800 ಶಾಲೆಗಳನ್ನು ಈ ಗಾಢವಾದ ಸುಧಾರಣಾ ಕಾರ್ಯಯೋಜನೆಯಲ್ಲಿ ಪರಿಗಣಿಸಲಾಗಿದೆ.

**ಕ್ಷೇತ್ರ ಸೇವೆಗಳ ವಿಭಾಗ (ಡಿಪಾರ್ಟ್‌ಮೆಂಟ್ ಆಫ್ ಫೀಲ್ಡ್ ಸರ್ವಿಸಸ್, ಡಿಎಫ್‌ಎಸ್):**

1969ರವರೆಗೆ ಎನ್‌ಸಿಇಆರ್‌ಟಿಯ ಪ್ರತ್ಯೇಕ ವಿಭಾಗವಾಗಿದ್ದ ಡಿಎಫ್‌ಎಸ್ ತನ್ನ ಸ್ವಂತದ ಮತ್ತು ದೇಶದಲ್ಲಿರುವ ತರಬೇತಿ ಮಹಾವಿದ್ಯಾಲಯಗಳಲ್ಲಿ ನೆಲೆಗೊಂಡಿರುವ ಎಲ್ಲಾ ವಿಸ್ತರಣ ಸೇವೆಗಳ ಕೇಂದ್ರಗಳು/ಘಟಕಗಳ ಮೂಲಕ ನಡೆಸತಕ್ಕಂತಹ ಆಯೋಜನೆ, ಸಂಘಟನೆ ಮತ್ತು ವಿಸ್ತರಣ ಕಾರ್ಯಕ್ರಮಗಳ ಅನುಷ್ಠಾನಗಳಿಗೆ ಜವಾಬ್ದಾರಿಯಾಗಿರುತ್ತಿತ್ತು. ಡಿಎಫ್‌ಎಸ್‌ಗೆ ಒಬ್ಬ ಮುಖ್ಯಸ್ಥರು ಮತ್ತು ಆರು ಮಂದಿ ಕ್ಷೇತ್ರ ಸಲಹೆಗಾರರು ಇರುತ್ತಿದ್ದರು.

ಆಡಳಿತಾತ್ಮಕ ಅನುಕೂಲಗಳಿಗಾಗಿ, ದೇಶವನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಗಿತ್ತು. ರಾಜ್ಯಗಳನ್ನೊಳಗೊಂಡ ವಲಯಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಪ್ರತಿಯೊಂದು ರಾಜ್ಯದಲ್ಲಿರುವ ವಿಸ್ತರಣ ಸೇವಾ ಕೇಂದ್ರಗಳ /ಘಟಕಗಳ ಸಂಖ್ಯೆಯನ್ನು ಕಂಸದಲ್ಲಿ ನೀಡಲಾಗಿದೆ.

1. **ಉತ್ತರ ವಲಯ** (30)

   1. ದೆಹಲಿ(2)
   2. ಜಮ್ಮು ಮತ್ತು ಕಾಶ್ಮೀರ (2)
   3. ಪಂಜಾಬ್ ((4)
   4. ಚಂಡಿಘರ (4)
   5. ಹರಿಯಾಣ (2)
   6. ಹಿಮಾಚಲ ಪ್ರದೇಶ (1)
   7. ರಾಜಸ್ಥಾನ (5)
   8. ಉತ್ತರ ಪ್ರದೇಶ (10)

2. **ಪೂರ್ವ ವಲಯ** (19)

   1. ಅಸ್ಸಾಮ್ (2)

Digitised by Bharatavani, CIIL

2.ಬಿಹಾರ (4)

3.ಒರಿಸ್ಸಾ (3)

4.ಪಶ್ಚಿಮ ಬಂಗಾಲ (10)

**3. ಪಶ್ಚಿಮ ವಲಯ (20)**

1. ಗುಜರಾತ್ (6)

2.ಮಹಾರಾಷ್ಟ್ರ (4)

3.ಮಧ್ಯಪ್ರದೇಶ (10)

**4. ದಕ್ಷಿಣ ವಲಯ (29)**

1. ಆಂಧ್ರಪ್ರದೇಶ (7)

2.ಕೇರಳ (7)

3.ಮದ್ರಾಸು(7)

4.ಮೈಸೂರು/ಕರ್ನಾಟಕ(8)

ಪ್ರತಿಯೊಂದು ವಲಯದ ವಿಸ್ತರಣ ಸೇವಾಕೇಂದ್ರಗಳು ಮತ್ತು ಘಟಕಗಳು ಕ್ಷೇತ್ರ ಸಲಹೆಗಾರನ (ಫೀಲ್ಡ್ ಅಡ್ವೈಸರ್–ಎಫ್ಎ) ಅಧೀನದಲ್ಲಿರುತ್ತದೆ. ಕಾರ್ಯಯೋಜನೆಯ ಪ್ರಾಯೋಗಿಕ ಯೋಜನೆಗಳ ಉಸ್ತುವಾರಿ ಒಬ್ಬ ಕ್ಷೇತ್ರ ಸಲಹೆಗಾರನದ್ದಾಗಿದ್ದರೆ, ರಾಷ್ಟ್ರೀಯ ಮಟ್ಟದ ಅಧ್ಯಯನ ಗೋಷ್ಠಿ ವಾಚನ ಕಾರ್ಯಕ್ರಮಗಳ ಉಸ್ತುವಾರಿ ಮತ್ತೊಬ್ಬ ಕ್ಷೇತ್ರ ಸಲಹೆಗಾರನದ್ದಾಗಿರುತ್ತದೆ. ಅವರು ಹಿಂದಿನ ಡಿಎಫ್ಎಸ್‌ಗಳ ಕೆಲವು ಕ್ಷೇತ್ರ ಕಾರ್ಯಕ್ರಮಗಳ ಆಯೋಜನೆ ಮತ್ತು ಸಂಘಟನೆಗೆ ಕೂಡಾ ಜವಾಬ್ದಾರರಾಗಿರುತ್ತಾರೆ.

**ಮಾಧ್ಯಮಿಕ ಶಿಕ್ಷಣದ ವಿಸ್ತರಣ ಕಾರ್ಯಕ್ರಮಗಳ ನಿರ್ದೇಶನಾಲಯದ ಸೇವಾನಿರತ ಶಿಕ್ಷಣದ ಕಾರ್ಯಕ್ರಮಗಳು/ಡಿಎಫ್ಎಸ್:**

ಮೊದಲು ಮಾಧ್ಯಮಿಕ ಶಿಕ್ಷಣದ ವಿಸ್ತರಣ ಕಾರ್ಯಕ್ರಮಗಳ ನಿರ್ದೇಶನಾಲಯವಾಗಿದ್ದು ನಂತರ ಡಿಎಫ್ಎಸ್ ಎಂಬುದಾಗಿ ಕರೆಯಿಸಿಕೊಂಡ ಸಂಸ್ಥೆ ಇತ್ತೀಚೆಗಿನ ವರ್ಷಗಳಲ್ಲಿ ರಾಷ್ಟ್ರೀಯ, ಪ್ರಾಂತೀಯ ಮತ್ತು ರಾಜ್ಯ ಮಟ್ಟಗಳಲ್ಲಿ ಅನೇಕ ಸಂಖ್ಯೆಯಲ್ಲಿ ಸೇವಾ ನಿರತ ಶಿಕ್ಷಣ ವಿಸ್ತರಣ ಸೇವಾ ಕಾರ್ಯಕ್ರಮಗಳನ್ನು ಸಂಘಟಿಸಿದೆ. ಇವುಗಳಲ್ಲಿ ಕೆಲವು ಪ್ರಮುಖ ಕಾರ್ಯಕ್ರಮಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ :

**ಶಾಲೆಗಳಲ್ಲಿ ಪ್ರಾಯೋಗೀಕರಣ (ಪ್ರಯೋಗಪರೀಕ್ಷೆ):**

ಮಾಧ್ಯಮಿಕ ಶಾಲೆಗಳಲ್ಲಿ ಪ್ರಾಯೋಗೀಕರಣವನ್ನು ಪ್ರೋತ್ಸಾಹಿಸುವುದಕ್ಕಾಗಿ 1957ರಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಶಾಲೆಗಳಿಂದ ಪ್ರಸ್ತಾಪಗಳನ್ನು ತರಿಸಿಕೊಂಡು, ಅನುಮೋದನೆ ಪಡೆದ ಯೋಜನೆಗಳಿಗೆ ಹಣವನ್ನು ನೀಡಲಾಗುತ್ತಿತ್ತು. ಈ ಯೋಜನೆಗಳನ್ನು ವಿಸ್ತರಣ ಸೇವಾ ವಿಭಾಗಗಳ ಸಾಮಾನ್ಯ ಮಾರ್ಗದರ್ಶನದಲ್ಲಿ ಶಾಲೆಗಳು ಕಾರ್ಯಗತಗೊಳಿಸುತ್ತಿದ್ದವು. ಮಾಧ್ಯಮಿಕ ಶಾಲೆಗಳಲ್ಲಿ ಪ್ರಯೋಗದ ಯೋಜನೆಗಳ ನಿಯೋಜನೆ, ಅನುಷ್ಠಾನ ಮತ್ತು ಅನುಸರಣೆಯನ್ನು ನಡೆಸುವ ಸಲುವಾಗಿ, ವಿಸ್ತರಣ ಸೇವೆಗಳ ವಿಭಾಗಗಳ ಮೂಲಕ ಈ ರೀತಿಯ ಪ್ರಾಯೋಗಿಕರಣವನ್ನು ನಡೆಸುವ ಶಿಕ್ಷಕರಿಗಾಗಿ ವಿಚಾರಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ನಡೆಸಲಾಗುತ್ತಿತ್ತು. ಶಾಲೆಗಳಿಗೆ ಪ್ರಾಯೋಗೀಕರಣ ಯೋಜನೆಗಳ ಆಯೋಜನೆ ಮತ್ತು ಅನುಷ್ಠಾನಗಳನ್ನು ನಡೆಸಲು ಸಹಾಯ ನೀಡುವುದಕ್ಕಾಗಿ ವಿಸ್ತರಣ ಸೇವಾ ವಿಭಾಗಗಳು ಉಪಯೋಗಿಸಿಕೊಳ್ಳಬಹುದಾದ ಸಂಪನ್ಮೂಲ ವ್ಯಕ್ತಿಗಳಿಗೆ ಕಿರು ಅವಧಿಯ ತರಬೇತಿ ಪದ್ಧತಿ (ಕೋರ್ಸ್)ಗಳನ್ನು ಸಂಘಟಿಸುವುದು ಹಿಂದಿನ ಡಿಎಫ್ಎಸ್‌ನ ಕರ್ತವ್ಯಗಳಲ್ಲಿ ಒಂದಾಗಿರುತ್ತಿತ್ತು. 1969–70ರ ಅವಧಿಯಲ್ಲಿ ಸುಮಾರು 300 ಯೋಜನೆಗಳು ಅನುಮೋದನೆಯನ್ನು ಪಡೆದಿದ್ದವು. ವಿಭಿನ್ನ ಶಾಲಾ ವಿಷಯಗಳನ್ನು ಕಲಿಸುವ ಹೊಸ ವಿಧಾನಗಳನ್ನು ಬೆಳೆಸಿಕೊಳ್ಳುವುದು, ಬೋಧನಾ ಸಾಮಾಗ್ರಿಗಳನ್ನು ಪರೀಕ್ಷಿಸಿ ನೋಡುವುದು, ಮೌಲ್ಯಮಾಪನ ಕಾರ್ಯವಿಧಾನವನ್ನು ಸುಧಾರಿಸುವುದು, ಅಪವ್ಯಯ ಮತ್ತು ಕೂಳೆ, ಅಶಿಸ್ತು ಇತ್ಯಾದಿ ಸಮಸ್ಯೆಗಳೊಂದಿಗೆ ವ್ಯವಹರಿಸುವ ಗುರಿಯನ್ನು ಈ ಯೋಜನೆಗಳು ಹೊಂದಿದ್ದವು. ಇದರ ಫಲಿತಾಂಶವನ್ನು ದೇಶದಲ್ಲಿರುವ ಇತರ ಶಿಕ್ಷಕರಲ್ಲಿ ಪ್ರಸಾರಗೊಳಿಸುವುದಕ್ಕಾಗಿ ಉತ್ತಮ ಯೋಜನಾ ವರದಿಗಳನ್ನು ಎನ್‌ಸಿಇಆರ್‌ಟಿ ಸಂಪಾದಿಸಿ ಪ್ರಕಟಿಸುತ್ತಿತ್ತು.

**ಅಧ್ಯಯನ ಗೋಷ್ಠಿ ಪ್ರಬಂಧಗಳು:**

ಶಿಕ್ಷಕರು ಹೊಸ ವಿಚಾರಗಳನ್ನು ಪ್ರಯತ್ನಿಸುವುದಕ್ಕೆ ಪ್ರೋತ್ಸಾಹ ನೀಡಲು ಅವರ ಗಮನಾರ್ಹ ಅನುಭವವನ್ನು ವ್ಯಾಪಕವಾಗಿ ತಿಳಿಯುವುದಕ್ಕೆ 'ಸೆಮಿನಾರ್ ರೀಡಿಂಗ್' ಎಂಬ ಕಾರ್ಯಕ್ರಮವನ್ನು ಮೊತ್ತ ಮೊದಲಬಾರಿ 1962–63ರಲ್ಲಿ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದ ಕೆಳಗೆ, ಶಿಕ್ಷಕರನ್ನು ಆಹ್ವಾನಿಸಿ ಅವರ ಆಯ್ಕೆಯ ಕೆಲವು ವಿಷಯಗಳ ಕುರಿತು ಲೇಖನವನ್ನು ಬರೆಯುವಂತೆ ಕೇಳಲಾಯಿತು. ಈ ಲೇಖನಗಳನ್ನು ಮೊದಲು ವಿಸ್ತರಣ ಕೇಂದ್ರದಲ್ಲಿ, ನಂತರ ರಾಜ್ಯ ಮಟ್ಟದಲ್ಲಿ ಪರಿಶೀಲನೆ ಮತ್ತು ಚರ್ಚೆಗೆ ಒಳಪಡಿಸಲಾಗುತ್ತಿತ್ತು. ಅಂತಿಮ ಪರಿಶೀಲನೆಯು ರಾಷ್ಟ್ರಮಟ್ಟದಲ್ಲಿ ನಡೆಯುತ್ತಿತ್ತು. ನಂತರ ಆಯ್ಕೆಯಾದ ಲೇಖನಗಳ ಲೇಖಕರು ತಜ್ಞರ ನೆರವಿನಿಂದ ತಮ್ಮ ಪ್ರಬಂಧವನ್ನು ಸುಧಾರಣೆಗೆ ಒಳಪಡಿಸುವ ಆಶಯದಿಂದ ರಾಷ್ಟ್ರಮಟ್ಟದಲ್ಲಿ ತಮ್ಮ ಪ್ರಬಂಧದ ಚರ್ಚೆಯನ್ನು ನಡೆಸುವರು. ಅವರಿಗೆ ಅರ್ಹತಾ ಪತ್ರ ಮತ್ತು ನಗದು ಪ್ರಶಸ್ತಿಗಳನ್ನು ಕೂಡಾ ನೀಡಲಾಗುತ್ತದೆ. ಈ ಕಾರ್ಯಕ್ರಮವನ್ನು ಪ್ರತಿವರ್ಷ ಸಂಘಟಿಸಲಾಗುತ್ತದೆ. ಉತ್ತಮ ಪ್ರಬಂಧಗಳನ್ನು ದಿ ಟೀಚರ್ ಸ್ಪೀಕ್ಸ್ (ಶಿಕ್ಷಕ ಹೇಳುತ್ತಿದ್ದಾರೆ) ಎಂಬ ಶೀರ್ಷಿಕೆಯಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಲಾಗುತ್ತದೆ. ಇದುವರೆಗೆ ಇಂತಹ ಐದು ಸಂಪುಟಗಳು ಪ್ರಕಟವಾಗಿವೆ. ಈ ಸಂಪುಟಗಳ ಕೆಲವು ಆಸಕ್ತಿದಾಯಕ ಲೇಖನಗಳೆಂದರೆ, 'ಶಾಲೆಗಳಲ್ಲಿ ಮೌಲ್ಯಕೇಂದ್ರಿತ ಕಾರ್ಯಕ್ರಮ–ನೀತಿ ಶಿಕ್ಷಣಕ್ಕೆ ಒಂದು ಮನವಿ'; 'ತನ್ನಲ್ಲಿ ಚಿಂತನೆ

Digitised by Bharatavani, CIIL

ನಡೆಸಲು ವಿದ್ಯಾರ್ಥಿಗೆ ನೆರವು ನೀಡಿ'; 'ಪರ್ಯಾಲೋಚಿಸುವ ಅಂಶಗಳು–ತರಗತಿ ನಿರ್ವಹಣೆ', 'ಸಮಗ್ರ ಶಾಲಾ ಕಾರ್ಯಕ್ರಮಗಳ ಆಯೋಜನೆ' ಇತ್ಯಾದಿ.

**ಸಮನ್ವಯಾಧಿಕಾರಿಗಳಿಗೆ ತರಬೇತಿ ಪದ್ಧತಿಗಳು (ಕೋರ್ಸ್‌ಗಳು):**

ವಿಸ್ತರಣ ಸೇವೆಗಳ ವಿಭಾಗಗಳ ಸಮನ್ವಯಾಧಿಕಾರಿಗಳಲ್ಲಿ ಸೇವಾನಿರತ ಕಾರ್ಯಕ್ರಮಗಳು ಮತ್ತು ವಿಸ್ತರಣ ಸೇವಾ ಕಾರ್ಯದ ಆಯೋಜನೆ, ಸಂಘಟನೆ ಮತ್ತು ಅನುಷ್ಠಾನಕ್ಕೆ ಅಗತ್ಯವಿರುವ ಕೌಶಲ ಮತ್ತು ದಕ್ಷತೆಯನ್ನು ಸಜ್ಜುಗೊಳಿಸುವ ಸಲುವಾಗಿ ಅವರಿಗಾಗಿ ನಿಯಮಿತ ತರಬೇತಿ ಕೋರ್ಸ್‌ಗಳನ್ನು ಡಿಎಫ್‌ಎಸ್ ನಡೆಸುತ್ತಿದೆ. ಈ ರೀತಿಯ ಕೋರ್ಸಿನ ಅವಧಿಯು 2–4 ವಾರ ಆಗಿರುತ್ತದೆ.

**ರಾಜ್ಯಮಟ್ಟದ ಸಂಸ್ಥೆಗಳ ಉದ್ಯೋಗಿಗಳಿಗೆ ತರಬೇತಿ ಕೋರ್ಸ್‌ಗಳು:**

ರಾಜ್ಯದ ಶಿಕ್ಷಣ ಸಂಸ್ಥೆಗಳು ಮತ್ತು ಇತರ ರಾಜ್ಯಮಟ್ಟದ ಸಂಸ್ಥೆಗಳಲ್ಲಿ ಪ್ರಮುಖ ಜವಾಬ್ದಾರಿಗಳನ್ನು ಹೊಂದಿರುವ ಉದ್ಯೋಗಿಗಳ ಅಗತ್ಯವನ್ನು ಗುರುತಿಸಿಕೊಂಡು, 1968ರಲ್ಲಿ ಎರಡು ತಿಂಗಳ ಅವಧಿಯ ತರಬೇತಿ ಕೋರ್ಸನ್ನು ಪ್ರಾರಂಭಿಸಲಾಯಿತು. ವಿಸ್ತರಣೆಗೆ ಮುಖಂಡತ್ವವನ್ನು ಒದಗಿಸುವ ಪ್ರಮುಖ ಉದ್ಯೋಗಿಗಳಿಗೆ ತರಬೇತಿ ನೀಡುವ ಸಲುವಾಗಿ ಇದುವರೆಗೆ ಈ ರೀತಿಯ ಎರಡು ಕೋರ್ಸುಗಳನ್ನು ನಡೆಸಲಾಗಿದೆ.

**ಮಾಧ್ಯಮಿಕ ಶಾಲೆಗಳ ಗ್ರಂಥಾಲಯಗಳನ್ನು ಸದೃಢಗೊಳಿಸುವಿಕೆ:**

ಕೆಲವು ವರ್ಷಗಳ ಹಿಂದೆ, ಶಿಕ್ಷಣ ಮಂತ್ರಾಲಯವು ಶಾಲೆಗಳಿಗೆ ಗ್ರಂಥಪಾಲಕರನ್ನು ನೀಡುವ ಮೂಲಕ ಶಾಲಾ ಗ್ರಂಥಾಲಯಗಳನ್ನು ಬಲಪಡಿಸುವ ಪ್ರಮುಖ ಕಾರ್ಯಕ್ರಮವನ್ನು ಕೈಗೊಂಡಿತು. ಆದರೆ ಮಾಧ್ಯಮಿಕ ಶಾಲೆಗಳ ಗ್ರಂಥಪಾಲಕರಿಗೆ ತರಬೇತಿಯನ್ನು ನೀಡಲು ಸೂಕ್ತ ರೀತಿಯಲ್ಲಿ ತರಬೇತಿ ಪಡೆದಂತಹ ಸಂಪನ್ಮೂಲ ವ್ಯಕ್ತಿಗಳ ಅಗತ್ಯವಿತ್ತು. ಇಂತಹ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವ ಸಲುವಾಗಿ, ಡಿಎಫ್‌ಎಸ್ ಎರಡು ತರಬೇತಿ ಕೋರ್ಸ್‌ಗಳನ್ನು ನಡೆಸಿತು. ಈ ಕೋರ್ಸ್‌ಗಳಿಗೆ ಪರಿಣತ ಗ್ರಂಥಪಾಲಕರನ್ನು ಆಹ್ವಾನಿಸಲಾಯಿತು ಮತ್ತು ಶಾಲಾ ಗ್ರಂಥ ಪಾಲಕರಿಗೆ ತರಬೇತಿಯನ್ನು ನೀಡುವ ಸಂಪನ್ಮೂಲ ವ್ಯಕ್ತಿಗಳಾಗಲು ಇವರಿಗೆ ತರಬೇತಿಯನ್ನು ನೀಡಲಾಯಿತು. ಜೊತೆಗೆ, ಶಾಲಾ ಗ್ರಂಥಾಲಯಗಳಿಗೆ ಪೂರಕ ವಾಚನ ಸಾಮಗ್ರಿಯಾಗಿ ಶ್ರೇಣೀಕೃತ ಗ್ರಂಥಸೂಚಿಯನ್ನು ತಯಾರಿಸುವ ಸಲುವಾಗಿ ರಾಜ್ಯಮಟ್ಟದಲ್ಲಿ ಕಾರ್ಯಾಗಾರ ಸರಣಿಗಳಿಗೆ ಡಿಎಫ್‌ಎಸ್ ಪ್ರವರ್ತನೆ ನೀಡಿತು. ಈ ಕಾರ್ಯಾಗಾರಗಳನ್ನು ನಡೆಸಲು ರಾಜ್ಯಗಳಿಗೆ ಸಾಧ್ಯವಾಗಲು ಕಾರ್ಯಗುಂಪೊಂದನ್ನು ಸ್ಥಾಪಿಸಲಾಯಿತು. ಗ್ರಂಥಸೂಚಿಗಳನ್ನು ತಯಾರಿಸುವುದಕ್ಕಾಗಿ ಕಾರ್ಯಾಗಾರಗಳನ್ನು ಸಂಘಟಿಸುವ ತಂತ್ರಜ್ಞಾನದಲ್ಲಿ ತರಬೇತಿಯನ್ನು ಹೊಂದಿರುವ ಬೇರೆಬೇರೆ ರಾಜ್ಯಗಳ ಪ್ರತಿನಿಧಿಗಳು ಈ ಗುಂಪಿನಲ್ಲಿ ಇರುತ್ತಾರೆ.

**ಕೇಂದ್ರೀಯ ಶಾಲೆಗಳಿಗೆ ವಿಷಯ ವಸ್ತುಗಳ ಕೋರ್ಸ್‌ಗಳು:**

ಕೇಂದ್ರೀಯ ಶಾಲೆಗಳ ಸಂಘಟನೆಯ ಕೋರಿಕೆಯ ಮೇರೆಗೆ ಕೇಂದ್ರೀಯ ಶಾಲೆಗಳ ಶಿಕ್ಷಕರಿಗಾಗಿ ಡಿಎಫ್‌ಎಸ್ ವಿಭಿನ್ನ ವಿಷಯವಸ್ತುಗಳ ಅನೇಕ ಕಂಟೆಂಟ್ ಕೋರ್ಸ್‌ಗಳನ್ನು ನಡೆಸಿತು. ಈ ಕೋರ್ಸ್‌ಗಳ ಉದ್ದೇಶವು ಈ ಶಾಲೆಗಳ ಶಿಕ್ಷಕರ ವಿಷಯವಸ್ತು (ಕಂಟೆಂಟ್) ಜ್ಞಾನವನ್ನು ಹೆಚ್ಚಿಸಿ, ಅವರು ತಮ್ಮ ತಮ್ಮ ವಿಷಯಗಳಲ್ಲಿ ಹೆಚ್ಚು ಪರಿಣಾಮಕಾರಿ ಶಿಕ್ಷಕರಾಗುವುದಾಗಿದೆ.

**ವೃತ್ತಿಪರ ಸಂಘಟನೆಗಳೊಂದಿಗೆ ಕೆಲಸ ಮಾಡುವುದು:**

ಡಿಎಫ್‌ಎಸ್, ಇಂಡಿಯನ್ ಅಸೋಸಿಯೇಶನ್ ಆಫ್ ಟೀಚರ್ ಎಜ್ಯುಕೇಟರ್ಸ್ ಅವರೊಂದಿಗೆ (ಮೊದಲು ಆಲ್ ಇಂಡಿಯಾ ಅಸೋಸಿಯೇಶನ್ ಆಫ್ ಟ್ರೇನಿಂಗ್ ಕಾಲೇಜಸ್ ಎಂದು ಇದ್ದದ್ದು) ಬಹಳ ಹತ್ತಿರದ ಸಂಬಂಧವನ್ನು ಹೊಂದಿತ್ತು. ಮತ್ತು ಇದರ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಈ ನಿಟ್ಟಿನಲ್ಲಿ ಮಾಧ್ಯಮಿಕ ಶಿಕ್ಷಕರ ತರಬೇತಿಯನ್ನು ಅಧ್ಯಯನ ಮಾಡಲು ಮತ್ತು ಇಂಗ್ಲಿಷ್ ಹಾಗೂ ವಿಜ್ಞಾನದ ಶಿಕ್ಷಕರ ಬಿ.ಎಡ್. ಕಾರ್ಯಕ್ರಮಗಳನ್ನು ಮತ್ತು ಪ್ರಾಥಮಿಕ ಶಿಕ್ಷಣದ ಪ್ರಶಿಕ್ಷಕರನ್ನು ಹಾಗೂ ಪ್ರಾಥಮಿಕ ಶಾಲಾ ತನಿಖಾಧಿಕಾರಿಗಳ ತರಬೇತಿ ಕಾರ್ಯಕ್ರಮಗಳನ್ನು ಸಂಪುಷ್ಟಿಗೊಳಿಸಲು ರಚಿಸಲಾದ ಮೂರು ಕಾರ್ಯನಿರ್ವಹಿಸುವ ಗುಂಪುಗಳನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕಾಗುತ್ತದೆ.

**ಪ್ರಾಂತೀಯ ಮತ್ತು ರಾಜ್ಯಮಟ್ಟದ ಅಧಿವೇಶನಗಳು:** ಡಿಎಫ್‌ಎಸ್ ತೆಗೆದುಕೊಂಡ ಪ್ರಮುಖ ನಿರ್ಧಾರವೆಂದರೆ, ದೇಶದಾದ್ಯಂತ ಸೇವಾನಿರತ ಶಿಕ್ಷಣದ ಅನೇಕ ಕಾರ್ಯಕ್ರಮಗಳ ಆಯೋಜನೆ ಮತ್ತು ಅನುಷ್ಠಾನದಲ್ಲಿ ರಾಜ್ಯದ ಶಿಕ್ಷಣ ವಿಭಾಗಗಳೊಂದಿಗೆ ಹತ್ತಿರದ ಕಾರ್ಯಸಂಬಂಧವನ್ನು ಹೊಂದಿರುವುದು. ವಿಸ್ತರಣ ಸೇವೆಗಳ ವಿಭಾಗಗಳ ಗೌರವ ನಿರ್ದೇಶಕರು ಮತ್ತು ಸಮನ್ವಯಾಧಿಕಾರಿಗಳ ಪ್ರಾಂತೀಯ ಅಧಿವೇಶನಗಳನ್ನು ನಿಯಮಿತವಾಗಿ ಆಯೋಜಿಸಲಾಗಿತ್ತು. ಈ ಅಧಿವೇಶನದಲ್ಲಿ ರಾಜ್ಯದ ಶಿಕ್ಷಣ ವಿಭಾಗಗಳ ಪ್ರತಿನಿಧಿಗಳು ಕೂಡಾ ಭಾಗವಹಿಸುತ್ತಿದ್ದರು. 1964–65ರಿಂದ ರಾಜ್ಯ ಮಟ್ಟದ ಅಧಿವೇಶನಗಳು ಕೂಡಾ ನಿಯಮಿತವಾಗಿ ನಡೆಯತೊಡಗಿದವು. ಈ ಅಧಿವೇಶನಗಳನ್ನು ಎನ್‌ಸಿಆರ್‌ಟಿಯ ಶೈಕ್ಷಣಿಕ ನೆರವಿನೊಂದಿಗೆ ರಾಜ್ಯದ ಶಿಕ್ಷಣ ವಿಭಾಗಗಳಿಂದ ಅವರಿಗಾಗಿ ನಡೆಯುತ್ತಿದ್ದವು. ಈ ಅಧಿವೇಶನಗಳನ್ನು ವಿಸ್ತರಣ ಸೇವೆಗಳ ವಿಭಾಗಗಳ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಪುನರ್‌ಪರಿಶೀಲನೆಯನ್ನು ನಡೆಸಲಾಗುತ್ತಿತ್ತು. ಮತ್ತು ಮುಂದಿನ ವರ್ಷಗಳ ಕಾರ್ಯಕ್ರಮಗಳ ಗುಣಮಟ್ಟದ ಸುಧಾರಣೆಗಾಗಿ ಗಣನೀಯ ಪ್ರಮಾಣದ ಗಮನವನ್ನು ಹರಿಸಲಾಗುತ್ತಿತ್ತು. ಇದರಿಂದ ವಿಸ್ತರಣ ಸೇವಾ ವಿಭಾಗಗಳ ಸೇವಾನಿರತ ಕಾರ್ಯಕ್ರಮಗಳನ್ನು ರಾಜ್ಯದ ಅಗತ್ಯಗಳಿಗೆ ಅನುಗುಣವಾಗಿ ಸಮನ್ವಯಗೊಳಿಸಬಹುದಾಗಿತ್ತು. ಈ ವಿಧದ ಸಹಭಾಗಿತ್ವದಿಂದಾಗಿ ಶಿಕ್ಷಕರಿಗೆ ಮೌಲ್ಯಮಾಪನ, ಮತ್ತು

Digitised by Bharatavani, CIIL

ಸಂಚಿತ ದಾಖಲೆಗಳ ನಿರ್ವಹಣೆ ಮತ್ತು ಬಳಕೆ, ಮಾಧ್ಯಮಿಕ ತರಗತಿಯ ಶಿಕ್ಷಕರಿಗೆ ವಿಷಯಾಂಶ ಪಠ್ಯಕ್ರಮಗಳು, ಶೈಕ್ಷಣಿಕ ಮತ್ತು ವೃತ್ತಿಪರ ಮಾರ್ಗದರ್ಶನಗಳು ಇತ್ಯಾದಿಗಳು ಸಾಧ್ಯವಾದವು.

**ಪ್ರಕಟಣೆಗಳು:** ಮಾಧ್ಯಮಿಕ ಶಾಲಾ ಶಿಕ್ಷಕರು ಮತ್ತು ಮಾಧ್ಯಮಿಕ ತರಬೇತಿ ಮಹಾವಿದ್ಯಾಲಯಗಳ ಸಿಬ್ಬಂದಿಗಳ ಉಪಯುಕ್ತತೆಗಾಗಿ 'ಟೀಚರ್ ಎಜ್ಯುಕೇಶನ್' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಡಿಎಫ್‌ಎಸ್ ಪ್ರಕಟಿಸಿತ್ತು. ಈಗ ಈ ಪತ್ರಿಕೆಯ ಪ್ರಕಟಣೆಯನ್ನು ಇಂಡಿಯನ್ ಅಸೋಸಿಯೇಶನ್ ಆಫ್ ಟೀಚರ್ ಎಜ್ಯುಕೇಟರ್ಸ್ ಕೈಗೆತ್ತಿಕೊಂಡಿದೆ.

ಡಿಎಫ್‌ಎಸ್‌ನಲ್ಲಿ ಕೇಂದ್ರೀಕೃತ ಪ್ರಕಟಣೆಗಳ ಕಾರ್ಯಯೋಜನೆ ಕೂಡಾ ಇದ್ದು, ಇದರ ಕೆಳಗೆ ಮೌಲ್ಯಯುತ ಗ್ರಂಥಗಳ ಸುಮಾರು 25,000 ಪ್ರತಿಗಳನ್ನು ಅದು ಪ್ರಕಟಿಸಿ, ಶಿಕ್ಷಕರ ಬಳಕೆಗಾಗಿ ವಿಸ್ತರಣ ಸೇವೆಗಳ ವಿಭಾಗಗಳ ಮೂಲಕ ದೇಶದಲ್ಲಿರುವ ಎಲ್ಲ ಮಾಧ್ಯಮಿಕ ಶಾಲೆಗಳಿಗೆ ಅದನ್ನು ಸರಬರಾಜು ಮಾಡಿದೆ.

**ವಿಸ್ತರಣ ಸೇವೆಗಳ ವಿಭಾಗಗಳ ಕಾರ್ಯಕ್ರಮಗಳು ಮತು ಚಟುವಟಿಕೆಗಳು:**

ವಿಸ್ತರಣ ಯೋಜನೆಯನ್ನು ಪ್ರಾರಂಭಿಸುವ ಸಮಯದಲ್ಲಿ, ವಿಸ್ತರಣ ಕೇಂದ್ರಗಳ ಅಧಿಕಾರಿಗಳ ವಿಚಾರ ಸಂಕಿರಣದಲ್ಲಿ ಪ್ರತಿಯೊಂದು ಕೇಂದ್ರವು ಕೈಗೊಳ್ಳಬಹುದಾದ ಚಟುವಟಿಗಳ ಕಾರ್ಯಕ್ರಮಗಳ ಸಾಧ್ಯತೆಯನ್ನು ರೂಪಿಸಲಾಗಿತ್ತು. ಇದರಲ್ಲಿ ದೀರ್ಘಾವಧಿ, ಅಲ್ಪಾವಧಿ ಮತ್ತು ಅರೆಕಾಲಿಕ ಕೋರ್ಸುಗಳು, ಅಧಿವೇಶನಗಳು, ವಿಚಾರಸಂಕಿರಣಗಳು, ಕಾರ್ಯಾಗಾರಗಳು ಮತ್ತು ಶಿಬಿರಗಳು, ಚರ್ಚೆಯ ಗುಂಪುಗಳು, ಅಧ್ಯಯನ ವಲಯಗಳು, ಮತ್ತು ಕ್ಲಬ್‌ಗಳು, ಶ್ರವ್ಯ-ದೃಶ್ಯ ಮತ್ತು ಗ್ರಂಥಾಲಯ ಸೇವೆಗಳು, ಶೈಕ್ಷಣಿಕ ಪ್ರದರ್ಶನಗಳು ಮತ್ತು ಪ್ರಕಟಣೆಗಳು ಸೇರಿವೆ. ವಿಸ್ತರಣ ಕೇಂದ್ರಗಳು ಮತ್ತು ಘಟಕಗಳು ತಾವು ಸೇವೆ ಸಲ್ಲಿಸುತ್ತಿರುವ ಶಾಲೆಗಳ ಅಗತ್ಯಗಳು ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ಸುಮಾರಾಗಿ ಈ ಎಲ್ಲಾ ಅಂಶಗಳನ್ನು ಒಳಗೊಂಡಿರುವಂತೆ ಕಾರ್ಯಕ್ರಮಗಳನ್ನು ಸಂಘಟಿಸುತ್ತಿವೆ. ವಿಸ್ತರಣ ಸೇವೆಗಳ ವಿಭಾಗದ ಸೇವಾ ಆಯೋಜನೆಗೆ ರಾಜ್ಯದ ಶಿಕ್ಷಣ ವಿಭಾಗದ ಪ್ರತಿನಿಧಿಗಳು, ಪ್ರಾಂಶುಪಾಲರು, ಮತ್ತು ಮಾಧ್ಯಮಿಕ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಇತರ ಶಿಕ್ಷಣತಜ್ಞರನ್ನು ಒಳಗೊಂಡ ಸಲಹಾ ಸಮಿತಿಯು ನೆರವಾಗುತ್ತದೆ. ಸಮಿತಿಯು ವಿಭಾಗದ ವಾರ್ಷಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ ಮತ್ತು ಅದರ ಪ್ರಗತಿಯ ಪರಿಶೀಲನೆಗಾಗಿ ನಿಯಮಿತ ಸಭೆ ಸೇರುತ್ತದೆ ಮತ್ತು ಭವಿಷ್ಯದ ಪ್ರಯತ್ನಗಳಿಗೆ ಸಲಹೆ ನೀಡುತ್ತದೆ. ಈ ರೀತಿಯಾಗಿ ವಿಭಾಗವು ತಾನು ನೀಡುವ ಕಾರ್ಯಕ್ರಮಗಳು ನಿಜವಾದ ಮತ್ತು ತಿಳಿದುಕೊಂಡ ಅಗತ್ಯವನ್ನು ಪೂರೈಸಿದೆ ಎಂಬುದರ ಆಶ್ವಾಸನೆಯನ್ನು ಪಡೆಯುತ್ತದೆ.

ಸೇವಾನಿರತ ಪಠ್ಯಕ್ರಮಗಳಲ್ಲಿ ಮುಖ್ಯ ವಿಷಯಗಳೊಂದಿಗೆ ಚುನಾಯಿತ ವ್ಯಾಸಂಗ ಕ್ರಮಗಳು ಇರುತ್ತವೆ. ಇದರಲ್ಲಿ ವಿಷಯಾಂಶ ಮತ್ತು ವಿಧಾನಗಳು ಇರುತ್ತವೆ. ಹಿಂದೆ ಆರಿಸಿದ ವಿಷಯಗಳಿಗಿಂತ ವಿಧಾನ, ವಿಷಯಾಂಶ ಮತ್ತು ಮುಖ್ಯ ವಿಷಯಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿತ್ತು. ಈಗ ವಿಷಯಾಂಶವು ಹೆಚ್ಚಿನ ಗಮನವನ್ನು ಪಡೆಯುತ್ತದೆ. ಪ್ರಾಂತೀಯ ಶಿಕ್ಷಣ ಮಹಾವಿದ್ಯಾಲಯಗಳ ಸ್ಥಾಪನೆಯಿಂದಾಗಿ ಅನೇಕ ಸೇವಾನಿರತ ಕಾರ್ಯಕ್ರಮಗಳನ್ನು ಆರಿಸಲ್ಪಟ್ಟ ವಿಷಯಗಳನ್ನು (Electives) ಸೇರಿಸಲಾಗಿದೆ.

ಪಠ್ಯಕ್ರಮಗಳ ಅವಧಿಯು ಆಯ್ದುಕೊಂಡ ವಿಷಯ ಮತ್ತು ವರ್ಷದ ಕಾಲಾವಧಿಯನ್ನು ಅನುಸರಿಸಿ ವಿಭಿನ್ನವಾಗಿರುತ್ತದೆ. ರಜಾದಿನಗಳಲ್ಲಿ ದೀರ್ಘಾವಧಿಯ ಪಠ್ಯಕ್ರಮಗಳನ್ನು ಸಂಘಟಿಸುವುದು ಸುಲಭ. ಆದರೆ ಸಾಮಾನ್ಯವಾಗಿ ವರ್ಷದ ಇತರ ದಿನಗಳಲ್ಲಿ ಪಠ್ಯಕ್ರಮಗಳು ಅಲ್ಪಾವಧಿಗಳಲ್ಲಿ ಇರುವಂತೆ ನೋಡಿಕೊಳ್ಳುವುದು ಅಗತ್ಯವಾಗುತ್ತದೆ.

ಪಠ್ಯಕ್ರಮಗಳನ್ನು ವಿಭಿನ್ನ ಹಂತಗಳಲ್ಲಿ ಸಂಘಟಿಸಲಾಗುತ್ತದೆ. ಉದಾಹರಣೆಗೆ ಮುಖ್ಯೋಪಾಧ್ಯಾಯರು ಮತ್ತು ಆಡಳಿತ ಅಧಿಕಾರಿಗಳು, ವ್ಯಾಸಂಗ ವಿಷಯ ಶಿಕ್ಷಕರು ಮತ್ತು ವೃತ್ತಿ ಶಿಕ್ಷಕರು. ವಾಸ್ತವದಲ್ಲಿ ಪ್ರತಿಯೊಂದು ಚಟುವಟಿಕೆಯು ಶಾಲೆಗಳ ಮುಖ್ಯಸ್ಥರೊಂದಿಗೆ ಪ್ರಾರಂಭಗೊಳ್ಳಬೇಕಾಗುತ್ತದೆ. ಇದರಿಂದ ಸಾಂಪ್ರದಾಯಿಕ ವಿಧಾನಗಳಿಂದ ದೂರವಾಗಲು ಅವರ ಸಹಕಾರ ಮತ್ತು ಬೆಂಬಲ ದೊರೆಯುತ್ತದೆ. ಶಾಲೆಗಳ ಮುಖ್ಯಸ್ಥರೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳುವ ಖಾಯಂ ಏಜೆನ್ಸಿಗಳಾಗಿ ಅನೇಕ ವಿಸ್ತರಣ ಸೇವೆಗಳು ಮುಖ್ಯೋಪಾಧ್ಯಾಯರ ಚರ್ಚಾವೇದಿಕೆಗಳನ್ನು ರೂಪಿಸಿದೆ.

**ಸಂಪನ್ಮೂಲ ವ್ಯಕ್ತಿಗಳು:**

ಸೇವಾನಿರತ ಚಟುವಟಿಕೆಗಳಲ್ಲಿ ಕಳೆದ ಹದಿನೈದು ವರ್ಷಗಳಲ್ಲಿ ಪ್ರತಿಯೊಂದು ವಿಸ್ತರಣ ವಿಭಾಗವು ಅನುಭವಿ ವ್ಯಕ್ತಿಗಳ ಒಂದು ಸಂಸ್ಥೆಯನ್ನು ಕಟ್ಟಿಕೊಳ್ಳಲು ಸಮರ್ಥವಾಗಿದೆ. ಈ ವ್ಯಕ್ತಿಗಳು ವಿಸ್ತರಣ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಬಲ್ಲವರಾಗಿದ್ದಾರೆ. ಇದರೊಂದಿಗೆ, ಪ್ರತಿಯೊಂದು ಕೇಂದ್ರವು ರಾಜ್ಯದಲ್ಲಿ ಲಭ್ಯವಿರುವ ಮಾನವ ಶಕ್ತಿಯ ಸಂಪನ್ಮೂಲಗಳನ್ನು ವಿಶ್ವವಿದ್ಯಾಲಯಗಳು, ತರಬೇತಿ ಮಹಾವಿದ್ಯಾಲಯಗಳು, ಮಾಧ್ಯಮಿಕ ಶಾಲೆಗಳು, ರಾಜ್ಯದ ಶಿಕ್ಷಣ ವಿಭಾಗಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳಿಂದ ಪಡೆದುಕೊಳ್ಳುತ್ತವೆ. ವಿಸ್ತರಣ ಸೇವೆಗಳ ವಿಭಾಗಗಳ ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ (ಎನ್‌ಸಿಇಆರ್‌ಟಿ) ಅನೇಕ ವಿಭಾಗಗಳಲ್ಲಿ ಲಭ್ಯವಿರುವ ಸಂಪನ್ಮೂಲ ವ್ಯಕ್ತಿಗಳ ಸಮಿತಿಯೊಂದನ್ನು ಕೂಡಾ ಹಿಂದಿನ ಡಿಎಫ್‌ಎಸ್ ತಯಾರಿಸಿತ್ತು. ವಿಸ್ತರಣ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗಲು ವಿಸ್ತರಣ ಕಾರ್ಯದ ಕೌಶಲಗಳಲ್ಲಿ ಸಂಪನ್ಮೂಲ ವ್ಯಕ್ತಿಗಳ ವ್ಯವಸ್ಥಿತ ಹೊಂದಾಣಿಕೆಯ ಅಗತ್ಯವಿದೆಯೆಂಬುದನ್ನು ಈಗ ಗುರುತಿಸಲಾಗಿದೆ.

Digitised by Bharatavani, CIIL

**ಶ್ರವ್ಯ – ದೃಶ್ಯ ಸೇವೆಗಳು:** ಪ್ರತಿಯೊಂದು ವಿಸ್ತರಣ ವಿಭಾಗವು ತಮಗೆ ಪೂರೈಸಲಾದ ಶ್ರವ್ಯ–ದೃಶ್ಯ ಉಪಕರಣಗಳ ನೆರವಿನಿಂದ ಶಿಕ್ಷಕರಿಗಾಗಿ ಚಲನಚಿತ್ರ ಮತ್ತು ಚಲನಚಿತ್ರಭಾಗಗಳ ಪ್ರದರ್ಶನವನ್ನು ಶಾಲೆಗಳಲ್ಲಿ ಸಂಘಟಿಸುತ್ತದೆ. ವಾಸ್ತವವಾಗಿ, ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ವಿಚಾರಸಂಕಿರಣವೊಂದರಲ್ಲಿ ಅಥವಾ ಕಾರ್ಯಾಗಾರದಲ್ಲಿ ಒಟ್ಟು ಸೇರಿದ ಸಂದರ್ಭವನ್ನು ಶ್ರವ್ಯ–ದೃಶ್ಯ ಸೇವೆಗಳಿಗಾಗಿ ಉಪಯೋಗಿಸಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಶ್ರವ್ಯ–ದೃಶ್ಯ ಉಪಕರಣಗಳನ್ನು ಬಳಸುವ ಕೌಶಲ್ಯಗಳ ಸಲಹಾ ಕೂಡಾ ಸೇರಿವೆ. ಕೇಂದ್ರಗಳಿಗೆ ಪೂರೈಸಲಾಗುವ ಉಪಕರಣಗಳು ಸಾಧಾರಣವಾಗಿ ವಿಶೇಷ ರೀತಿಯದ್ದಾಗಿರುವುದರಿಂದ, ಸಮನ್ವಯಾಧಿಕಾರಿಗಳು ಮತ್ತು ವಿಸ್ತರಣ ವಿಭಾಗಗಳ ಇತರ ಸಿಬ್ಬಂದಿಗಳಿಗೆ ಅಗತ್ಯದ ತರಬೇತಿಯನ್ನು ನೀಡುವ ಸಲುವಾಗಿ ಇವರಿಗಾಗಿ ಡಿಎಫ್ಎಸ್ ನಿಯಮಿತಕಾಲದಲ್ಲಿ ಕಾರ್ಯಾಗಾರಗಳನ್ನು ನಡೆಸುತ್ತದೆ. ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ (ಈಗ ಸಿಐಇಟಿಯ ಘಟಕವಾಗಿರುವ) ಶ್ರವ್ಯ–ದೃಶ್ಯ ಶಿಕ್ಷಣ ವಿಭಾಗವು ಈ ಕಾರ್ಯಾಗಾರಗಳನ್ನು ಸಂಘಟಿಸುವುದರಿಂದ ತನ್ನ ಸಂಪನ್ಮೂಲಗಳು ಲಭ್ಯವಾಗಿಸಿದೆ. ಕೆಲವು ಕೇಂದ್ರಗಳು ಕಪ್ಪುಹಲಗೆ, ಶಾಲೆಯ ಪ್ರಸರಣಗಳು, ರೇಷ್ಮೆ (Silk screen) ಮತ್ತು ಇತರ ಶ್ರವ್ಯ–ದೃಶ್ಯ ಉಪಕರಣಗಳ ಬಳಕೆಯ ಕುರಿತು ವಿಶೇಷ ಅಧ್ಯಯನವನ್ನು ನಡೆಸಿವೆ.

**ಗ್ರಂಥಾಲಯ ಸೇವೆಗಳು:** ಇದು ನಿರ್ದಿಷ್ಟವಾಗಿ ಸಹ–ಸದಸ್ಯ ಶಾಲೆಗಳಿಗೆ ಉಪಯೋಗವಾಗುವ ಯೋಜನೆಯ ಇನ್ನೊಂದು ಅಂಶವಾಗಿದೆ. ಶಾಲೆಗಳಿಗೆ ಗ್ರಂಥಾಲಯದ ಸೇವೆಯನ್ನು ಒದಗಿಸಲು ಘಟಕಕ್ಕೆ ನೀಡಲಾದ ವಾಹನವನ್ನು ಬಳಸಲಾಗುತ್ತದೆ. ಜೊತೆಗೆ ಗ್ರಂಥಗಳ ಪರಾಮರ್ಶನಕ್ಕೆ ಅಥವಾ ಎರವಲು ಪಡೆಯುವುದಕ್ಕೆ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಇತರರು ಕೇಂದ್ರಗಳಿಗೆ ಭೇಟಿ ನೀಡುವರು. ಅನೇಕ ಕೇಂದ್ರಗಳು ಸಹ–ಸದಸ್ಯ ಶಾಲೆಗಳ ಗಮನಕ್ಕೆ ತರುವುದಕ್ಕಾಗಿ ಆಯ್ದ ಗ್ರಂಥಗಳ ನಿಯತಕಾಲಿಕ ಡೈಜೆಸ್ಟ್‌ಗಳನ್ನು ಮತ್ತು ವಿಮರ್ಶೆಗಳನ್ನು ಬೆಳಕಿಗೆ ತರುತ್ತವೆ. ವ್ಯಾಪಕ ಸಂಪರ್ಕ ಮತ್ತು ಗ್ರಂಥಾಲಯ ಸೇವೆಗಳ ಹೆಚ್ಚಿನ ಬೇಡಿಕೆಗಳನ್ನು ಉತ್ತೇಜಿಸಿರುವವರು ಜಿಲ್ಲೆಗಳಲ್ಲಿನ ಸೂಕ್ತ ಶಾಲೆಗಳಲ್ಲಿ ಗ್ರಂಥಾಲಯ ಬಾಹ್ಯಕಚೇರಿಗಳನ್ನು ಪ್ರಾರಂಭಿಸಿವೆ. ನೆರೆಹೊರೆಯ ಶಾಲೆಗಳ ನಡುವೆ ಪ್ರಸರಣಕ್ಕಾಗಿ ಪುಸ್ತಕಗಳ ಸಂಚಯಗಳನ್ನು ಮುಖ್ಯೋಪಾಧ್ಯಾಯರ ಸ್ವಾಧೀನದಲ್ಲಿ ಇಡಲಾಗುತ್ತದೆ.

ಹಾಗಿದ್ದರೂ, ವಿಸ್ತರಣ ಕಾರ್ಯಕ್ರಮಗಳಲ್ಲಿ ಗ್ರಂಥಾಲಯ ಸೇವೆಯು ಪೂರ್ಣ ರೀತಿಯಲ್ಲಿ ಯಶಸ್ವಿಯಾಗಿದೆ ಎಂದು ಸಾಧಿಸುವ ಹಾಗಿಲ್ಲ. ಮೊದಲನೆಯದಾಗಿ, ಗ್ರಂಥಾಲಯದ ಬೆಳವಣಿಗೆಯನ್ನು ಕಾಪಾಡಿಕೊಳ್ಳುವುದು ಅಗತ್ಯ. ರಾಜ್ಯದ ಶಿಕ್ಷಣ ವಿಭಾಗಗಳು ಮತ್ತು ತರಬೇತಿ ಮಹಾವಿದ್ಯಾಲಯಗಳು ನಿಯಮಿತವಾಗಿ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಸೇರಿಸಿಕೊಳ್ಳುವುದನ್ನು ನಿರೀಕ್ಷಿಸಬಹುದಾದರೂ, ಈ ನಿಟ್ಟಿನಲ್ಲಿ ಹೆಚ್ಚಿನದನ್ನು ನಡೆಸಲಾಗಿಲ್ಲ. ಅಗತ್ಯವಾಗಿ ಮಾಡಬೇಕಾಗಿರುವ ಇನ್ನೊಂದು ವಿಚಾರವೇನೆಂದರೆ, ಭಾರತೀಯ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತಹ ಭಾರತೀಯ ಲೇಖಕರು ಬರೆದಿರುವ ಗ್ರಂಥಗಳ ಪೂರೈಕೆಯನ್ನು ನೋಡಿಕೊಳ್ಳಬೇಕಾಗಿರುವುದು. ಈಗ ಇರುವಂತಹ ಬಹುಪಾಲು ಗ್ರಂಥಗಳು ವಿದೇಶಿ ಹಿನ್ನೆಲೆಯದ್ದಾಗಿದ್ದು, ಶಿಕ್ಷಕರು ತಮ್ಮ ಸನ್ನಿವೇಶ ಮತ್ತು ಅಗತ್ಯಗಳಿಗೆ ಅನುಗುಣವಾಗಿ ಬರೆದಂತಹ ಗ್ರಂಥಗಳನ್ನು ಬಯಸುವುದು ಅತ್ಯಂತ ಸಹಜವಾಗಿದೆ. ಆದುದರಿಂದ, ಭವಿಷ್ಯದಲ್ಲಿ ಲಭ್ಯವಿರುವಾಗಲೆಲ್ಲಾ ಈ ರೀತಿಯ ಗ್ರಂಥಗಳನ್ನು ಹೊಂದಲು ಅಗತ್ಯವಿರುವ ಹಣದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

**ಮಾರ್ಗದರ್ಶಕ ಸೇವೆಗಳು:** ವಿಸ್ತರಣ ವಿಭಾಗವು ಶಾಲೆಗಳಿಗೆ ಒದಗಿಸುವ ಮಾರ್ಗದರ್ಶಕ ಸೇವೆಗಳು ಅತ್ಯಂತ ಹೆಚ್ಚು ಉಪಯುಕ್ತವಾಗಿವೆ. ಕೇಂದ್ರ ಸಂಘಟಿಸುವ ಪ್ರತಿಯೊಂದು ಕಾರ್ಯಕ್ರಮವು ವಾಹಿನಿಯಾಗಿದ್ದು ಅದರ ಮೂಲಕ ಹೊಸ ಶೈಕ್ಷಣಿಕ ಪರಿಕಲ್ಪನೆಗಳು ಮತ್ತು ಪರಿಪಾಠಗಳು ಪರಿಚಯಿಸಲ್ಪಡುತ್ತವೆ. ಈ ವಿಧದ ಮಾರ್ಗದರ್ಶನವು ಕಾರ್ಯಕ್ರಮದಲ್ಲಿ ಅಂತರ್ಗತವಾಗಿದ್ದು, ಕೇಂದ್ರಗಳು ಪ್ರತ್ಯೇಕ ಶಾಲೆಗಳ ಅಥವಾ ಶಾಲೆಗಳ ಗುಂಪುಗಳ ಸಿಬ್ಬಂದಿಗಳೊಂದಿಗಿನ ಸಮಾಲೋಚನೆಗಳು, ಚರ್ಚೆಗಳು ಮತ್ತು ಅಧಿವೇಶನಗಳ ರೂಪದಲ್ಲಿ ಔಪಚಾರಿಕ ಮಾರ್ಗದರ್ಶನ ಸೇವೆಯನ್ನು ಒದಗಿಸುತ್ತವೆ. ಕೇಂದ್ರಗಳು ಮತ್ತು ಶಾಲೆಗಳ ನಡುವೆ ಔಪಚಾರಿಕ ಕೊಂಡಿಗಿಂತ ಹೆಚ್ಚಿನದನ್ನು ಈ ಸಂಪರ್ಕಗಳು ರೂಪಿಸಿವೆ. ತರಗತಿಗಳಲ್ಲಿ ಅವರು ಎದುರಿಸುವ ಸಮಸ್ಯೆಗಳಿಗೆ ಮಾರ್ಗದರ್ಶನ ಮತ್ತು ತಿಳಿವಳಿಕೆಯನ್ನು ಪಡೆಯುವ ಸಲುವಾಗಿ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಕೇಂದ್ರಗಳನ್ನು ಸಂದರ್ಶಿಸುವುದು ಅಪರೂಪವೇನಲ್ಲ.

**ಅಧ್ಯಯನ ವೃತ್ತಗಳು:** ಒಂದು ಗುಂಪಿನ ಜನರಲ್ಲಿ ಹೊಸ ಆಲೋಚನೆಯೊಂದು ಕೆನೆಕಟ್ಟಿದಾಗ, ಸದಸ್ಯರು ಹೊಸ ಆಲೋಚನೆಯ ಹಾದಿಯನ್ನು ಕ್ರಮಿಸುವ ರೀತಿಯಲ್ಲಿ ಅದು ಅವರ ನಡುವೆ ಸಂಯೋಜನೆಗೊಳ್ಳುತ್ತದೆ. ವಿಸ್ತರಣ ವಿಭಾಗಗಳಲ್ಲಿ ಕೂಡಾ ಇದು ವ್ಯಕ್ತವಾಗಿದೆ. ವಿಚಾರಸಂಕಿರಣಗಳು ಮತ್ತು ಗುಂಪು ಚರ್ಚೆಗಳು ಇಲ್ಲಿ ಅಧ್ಯಯನ ವೃತ್ತಗಳು, ಸಂಘಟನೆಗಳು ಮತ್ತು ಇದೇ ರೀತಿಯ ಸಂಸ್ಥೆಗಳ ಸ್ಥಾಪನೆಯಲ್ಲಿ ಫಲಿತವಾಗಿದೆ. ಈ ರೀತಿಯಾಗಿ ಅಧ್ಯಯನ ವೃತ್ತಗಳನ್ನು ಸಮಾಜಶಾಸ್ತ್ರ, ವಿಜ್ಞಾನ ಮತ್ತು ಇತರ ಶಾಲಾ ವಿಷಯಗಳಿಗೆ ಸ್ಥಾಪಿಸಲಾಗಿದೆ. ವಿಸ್ತರಣ ವಿಭಾಗಗಳಿಗೆ ನಿಯಮಿತವಾಗಿ ಭೇಟಿಯಾಗುವವರು, ತಮ್ಮ ವಿಷಯದ ಪ್ರದೇಶಗಳ ಕುರಿತು ಚರ್ಚೆಯನ್ನು ನಡೆಸುವವರು ಮತ್ತು ಕಲಿಸುವ ಹೊಸ ತಂತ್ರಜ್ಞಾನವನ್ನು ಹುಡುಕಿಕೊಳ್ಳುವವರು ಅಧ್ಯಯನ ವೃತ್ತದ ಸದಸ್ಯರಾಗಿರುತ್ತಾರೆ. ಅನುಭವದ ಮೂಲಕ ಈ ತ್ರಿವೃತ್ತಗಳನ್ನು ನಾವು ಬಲಪಡಿಸಲು ಸಮರ್ಥರಾಗುತ್ತೇವೆ ಎನ್ನುವುದು ನಮ್ಮ ನಂಬಿಕೆಯಾಗಿದೆ. ವಿವಿಧ ಹಂತಗಳಲ್ಲಿ ವ್ಯಾಸಂಗ ವಿಷಯ–ಶಿಕ್ಷಕರ ಸಂಘಟನೆಯ ಜಾಲವನ್ನು ಈ ದೇಶದಲ್ಲಿ ರೂಪಿಸುವುದು ಕೂಡಾ ಅಗತ್ಯವಾಗಿದೆ. ಕಲಿಸುವ ವೃತ್ತಿಯಲ್ಲಿ

Digitised by Bharatavani, CIIL

ಮಟ್ಟವನ್ನು ಕಾಪಾಡಿಕೊಳ್ಳುವುದರಲ್ಲಿ ಇದು ದೀರ್ಘಕಾಲಿಕ ಪರಿಣಾಮವನ್ನು ಉಂಟುಮಾಡುತ್ತದೆ ಎಂಬುದು ನಮ್ಮ ನಂಬಿಕೆ.

**ಪ್ರಕಟಣೆಗಳು:** ಮನುಷ್ಯನ ಮನಸ್ಸಿನ ಮೇಲೆ ಶಬ್ದದ ಪರಿಣಾಮ ಹೆಚ್ಚಿನದಾಗಿರುತ್ತದೆ. ಈ ಅನುಭವಕ್ಕೆ ವಿಸ್ತರಣ ವಿಭಾಗದ ಕಾರ್ಯವು ಹೊರತಾಗಿಲ್ಲ. ರಾಜ್ಯದಲ್ಲಿ ಮತ್ತು ಹೊರಭಾಗದಲ್ಲಿ ಶೈಕ್ಷಣಿಕ ಪ್ರಯತ್ನಗಳಿಗೆ ಸಂಬಂಧಿಸಿದಂತೆ ಕಾಳಜಿಯನ್ನು ಹೊಂದಿರುವವರಿಗೆ ಮುದ್ರಿತ ಸಾಮಗ್ರಿಯು ವಿಭಾಗದ ಸಾಧ್ಯತೆಗಳು ಮತ್ತು ಸಾಧನೆಗಳ ಪ್ರಸಾರಕ್ಕೆ ಪ್ರಾಯಶಃ ಅತ್ಯಂತ ಕ್ರಿಯಾಶೀಲ ಏಜೆನ್ಸಿಯಾಗಿದೆ. ಆದುದರಿಂದ, ಪ್ರತಿಯೊಂದು ವಿಭಾಗವು ತನ್ನ ವೈಯಕ್ತಿಕ ಅಗತ್ಯಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಪ್ರಕಟಣೆಯ ಕಾರ್ಯಕ್ರಮಗಳನ್ನು ಪಾಲಿಸಿಕೊಂಡು ಬಂದಿವೆ. ವಿಚಾರಸಂಕಿರಣಗಳು ಮತ್ತು ಸೇವಾನಿರತರ ಕಾರ್ಯಕ್ರಮಗಳು ಅನಿವಾರ್ಯವಾಗಿ ಕಾರ್ಯಕಲಾಪಗಳು ಮತ್ತು ಶಿಫಾರಸ್ಸುಗಳ ಕುರಿತಾದ ವರದಿಗಳನ್ನು ಜೊತೆಗೂಡಿಸಿಕೊಂಡು ಇರುತ್ತವೆ. ಸಂಚಿತ ವರದಿಗಳು, ಗ್ರಂಥ ಸಾರಸಂಗ್ರಹಗಳು, ಶಾಲೆಗಳಿಗೆ ಅಗತ್ಯವಿರುವ ಉಪಕರಣ ಅಥವಾ ಗ್ರಂಥಗಳ ಪಟ್ಟಿಗಳಂತಹ ವಿಷಯಗಳ ಕುರಿತಾದ ವಿಶೇಷ ಪ್ರಕಟಣೆಗಳು ಇಲ್ಲಿನ ವಿಶೇಷ ಅಂಶಗಳಾಗಿವೆ. ಹೆಚ್ಚು ಉದ್ಯಮಶೀಲತೆಯುಳ್ಳ ಕೆಲವು ಕೇಂದ್ರಗಳಲ್ಲಿ ಅವರು ಸೃಷ್ಟಿಸಿದಂತಹ ಉತ್ಸಾಹವು ಕೇಂದ್ರಗಳ ಪ್ರಕಟಣೆಗೆ ಕ್ರಿಯಾತ್ಮಕವಾಗಿ ಸಲ್ಲುವಂತೆ ಭಾಗವಹಿಸುವ ಅನೇಕ ಶಿಕ್ಷಕರಿಗೆ ಸ್ಫೂರ್ತಿ ನೀಡಿದೆ.

ಪ್ರತಿಯೊಂದು ಕೇಂದ್ರದಲ್ಲಿ ಪ್ರಕಟಣೆಗೆ ಮೀಸಲಾಗಿಡುವ ಹಣವು ಬಹಳ ಸೀಮಿತವಾಗಿರುತ್ತದೆ. ಆದುದರಿಂದ ಪ್ರಕಟಣೆಗೆ ಸಂಬಂಧಿಸಿದಂತೆ ಗರಿಷ್ಠ ಮೊತ್ತದ ವಿವೇಚನೆಯನ್ನು ಅನುಸರಿಸಬೇಕಾಗುತ್ತದೆ. ಇತ್ತೀಚೆಗೆ ರಾಜ್ಯದ ವಿಸ್ತರಣ ವಿಭಾಗಗಳ ನಡುವೆ ಪ್ರಕಟಣಾ ಕಾರ್ಯಕ್ರಮಗಳ ಸಂಯೋಜನೆಯನ್ನು ಮಾಡುವ ಪ್ರಯತ್ನವನ್ನು ನಡೆಸಲಾಗುತ್ತಿದೆ. ಇದರಿಂದ ಒಂದು ಇನ್ನೊಂದನ್ನು ಅತಿಕ್ರಮಿಸುವುದನ್ನು ಮತ್ತು ಅನಗತ್ಯವಾದ ಪುನರಾವರ್ತನೆಯನ್ನು ನಿವಾರಿಸಿದಂತಾಗುತ್ತದೆ.

ಈ ಪ್ರಕಟಣೆಗಳ ಇನ್ನೊಂದು ಆರೋಗ್ಯಕರ ಪರಿಣಾಮವೆಂದರೆ ಇವುಗಳು ರಾಜ್ಯದ ಶಿಕ್ಷಣ ಇಲಾಖೆ ಮತ್ತು ಇತರ ಏಜೆನ್ಸಿಗಳು ಸೂಕ್ತ ಅನುಸರಣಾ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ನೆರವಾಗುತ್ತವೆ.

**ಅನುಸರಣ ಕಾರ್ಯ:** ಸೇವಾನಿರತ ಕಾರ್ಯಕ್ರಮಗಳ ಯಶಸ್ಸು ಸಂಬಂಧಪಟ್ಟ ಅಧಿಕಾರಿಗಳ ಕೈಗೆ ತಲುಪುವ ಅವುಗಳ ಶಿಫಾರಸ್ಸುಗಳ ಅನುಸರಣಾ ಗಮನದ ಮಟ್ಟವನ್ನು ಆಧರಿಸಿರುತ್ತದೆ. ಈ ವಿಧದ ಅನುಸರಣೆಯ ಅನುಪಸ್ಥಿತಿಯಲ್ಲಿ, ವಿಚಾರಸಂಕಿರಣಗಳು, ಕಾರ್ಯಾಗಾರಗಳು ಮತ್ತು ಚರ್ಚೆಗಳು ಅಪ್ಪಟ ಪೂರ್ವಕಲ್ಪಿತ ಮತ್ತು ಅಪೇಕ್ಷಿತ ಹಂತದಲ್ಲಿಯೇ ಉಳಿದುಬಿಡುತ್ತವೆ. ಮತ್ತು ಇವುಗಳಲ್ಲಿ ಶಿಕ್ಷಕರಿಗೆ ಕ್ರಮೇಣ ಭರವಸೆ ಮತ್ತು ನಂಬಿಕೆ ಕಳೆದುಹೋಗುತ್ತದೆ. ಈ ಶಿಫಾರಸ್ಸುಗಳು ಸರಕಾರದ ಪ್ರಯತ್ನದೊಂದಿಗೆ ಸೂಕ್ತ ರೀತಿಯಲ್ಲಿ ಜೋಡಿಸಿಕೊಂಡಿರುವಂತೆ ವಿಸ್ತರಣ ಸೇವೆಗಳ ವಿಭಾಗಗಳು ಮತ್ತು ರಾಜ್ಯ ಶಿಕ್ಷಣ ವಿಭಾಗಗಳು ಅನೇಕ ಪ್ರಯತ್ನಗಳನ್ನು ನಡೆಸಿವೆ. ಶಾಲೆಗಳು ಮತ್ತು ತಪಾಸಣಾ ಅಧಿಕಾರಿಗಳು ವಿಸ್ತರಣ ಕೇಂದ್ರಗಳ ಕಾರ್ಯಕ್ರಮಗಳಿಗಾಗಿ ಅವರೊಂದಿಗೆ ಸಹಕರಿಸುವಂತೆ ಮತ್ತು ಅವುಗಳ ಸಂಸ್ಥೆಗಳಲ್ಲಿ ಸಾಧ್ಯವಾದಷ್ಟು ಸೂಚನೆಗಳನ್ನು ಅನುಷ್ಠಾನಗೊಳಿಸುವಂತೆ ಸಾರ್ವಜನಿಕ ಬೋಧನೆ/ಶಿಕ್ಷಣ ವಿಭಾಗದ ನಿರ್ದೇಶಕರು ಸೂಚನೆಗಳನ್ನು ನೀಡಿದ್ದಾರೆ. ಹಾಗಿದ್ದರೂ, ಕೆಲಸದ ಈ ಒಂದು ಅಂಶವು ಇನ್ನು ಹೆಚ್ಚು ಬಲಗೊಳಿಸಬೇಕಾದ ಹಂತದಲ್ಲಿ ಇದೆ.

**ವಿಸ್ತರಣ ಸೇವಾ ಕೇಂದ್ರಗಳ ಮೌಲ್ಯಮಾಪನ:** ಕೆಲವು ವಿಸ್ತರಣ ಸೇವಾ ಕೇಂದ್ರಗಳ ವ್ಯವಸ್ಥಿತ ಮೌಲ್ಯಮಾಪನ ನಡೆಸುವ ಪ್ರಯತ್ನವೊಂದನ್ನು 1958ರಲ್ಲಿ ಮಾಡಲಾಗಿತ್ತು. ಹಾಗಿದ್ದರೂ, 1964–65ರಲ್ಲಿ ಇನ್ನಷ್ಟು ವ್ಯಾಪಕ ನೆಲೆಯಿಂದ ಕೇಂದ್ರಗಳ ಮೌಲ್ಯಮಾಪನವನ್ನು ಆಯೋಜಿಸಿ ಕೈಗೊಳ್ಳಲಾಯಿತು. ಪ್ರತಿಯೊಂದು ರಾಜ್ಯದಲ್ಲಿ ಮೌಲ್ಯಮಾಪಕರ ತಂಡವನ್ನು ರೂಪಿಸಲಾಯಿತು. ಇದರಲ್ಲಿ ಸಾರ್ವಜನಿಕ ಶಿಕ್ಷಣ ಸಂಸ್ಥೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ, ಮಾಧ್ಯಮಿಕ ಶಿಕ್ಷಣದ ವಿಸ್ತರಣಾ ಕಾರ್ಯಕ್ರಮಗಳ ಕಾರ್ಯಕ್ರಮಗಳ ನಿರ್ದೇಶನಾಲಯದ ಆಗಿದ್ದ ಪ್ರತಿನಿಧಿ, ಎನ್‌ಸಿಇಆರ್‌ಟಿಯ ಪ್ರತಿನಿಧಿ, ಕೊಲಂಬಿಯಾ ವಿಶ್ವವಿದ್ಯಾಲಯದ ತಂಡದ ಶಿಕ್ಷಣ ಮಹಾವಿದ್ಯಾಲಯವ ಸದಸ್ಯರೊಬ್ಬರು, ಮತ್ತು ಪ್ರಸಿದ್ಧ ಶಿಕ್ಷಣತಜ್ಞರನ್ನೊಳಗೊಂಡ ಮೌಲ್ಯಮಾಪನ ತಂಡವನ್ನು ಪ್ರತಿಯೊಂದು ರಾಜ್ಯದಲ್ಲಿ ರೂಪಿಸಲಾಗಿತ್ತು. ಈ ತಂಡ ಕೇಂದ್ರಕ್ಕೆ ಭೇಟಿ ನೀಡಿ, ಅದರ ಚಟುವಟಿಕೆಗಳ ಅವಲೋಕನವನ್ನು ನಡೆಸಿ, ಮಹಾವಿದ್ಯಾಲಯದ ಅಧ್ಯಾಪಕ ವೃಂದ, ಸಹ–ಶಾಲೆಗಳ ಮುಖ್ಯಸ್ಥರು, ತಪಾಸಣಾ ಅಧಿಕಾರಿಗಳು ಮತ್ತು ಕೇಂದ್ರದ ಕಾರ್ಯದೊಂದಿಗೆ ಜೋಡಿಸಿಕೊಂಡ ಇತರರನ್ನು ಭೇಟಿಯಾಗಿದೆ. ಈ ಅವಲೋಕನಗಳು ಮತ್ತು ಚರ್ಚೆಗಳನ್ನು ಆಧರಿಸಿ ತಂಡವು ಕೇಂದ್ರಗಳ ಮೌಲ್ಯಮಾಪನವನ್ನು ನಡೆಸಿ, ಅವುಗಳ ಸುಧಾರಣೆಗಾಗಿ ಸೂಚನೆಗಳನ್ನು ನೀಡುವುದು.

1975ರಲ್ಲಿ ಸೀಮಿತ ಉದ್ದೇಶ ಮತ್ತು ಸುಮಾರಾಗಿ ಸೀಮಿತ ಪರಿಕಲ್ಪನೆಯಿಂದ ವಿಸ್ತರಣ ಯೋಜನೆಯನ್ನು ಪ್ರಾಯೋಗಿಕ ಪ್ರಯತ್ನವಾಗಿ ಪ್ರಾರಂಭಿಸಲಾಯಿತು. ವಿಸ್ತರಣ ಕಾರ್ಯವು ಶೈಕ್ಷಣಿಕ ಕಾರ್ಯವಿಧಾನದ ರೀತಿಯಷ್ಟೇ ವ್ಯಾಪಕವಾಗಿರುವುದನ್ನು ಅನುಭವ ತೋರಿಸಿಕೊಟ್ಟಿದೆ. ಶಾಲಾ ಸಂಸ್ಥೆಯ ಒಂದು ಭಾಗವನ್ನು ತಲುಪುವಂತಹ ಯಾವುದೇ ಕಾರ್ಯಕ್ರಮವು ಉಳಿದ ಎಲ್ಲಾ ಸಂಬಂಧಿತ ವಿಚಾರಗಳಲ್ಲಿ ಪ್ರವೇಶ ಪಡೆದು ಕ್ರಮೇಣ ಇಡೀ ಶಾಲೆಯನ್ನು ಆವರಿಸುವುದು. ಶೈಕ್ಷಣಿಕ ಮರುಸಂಘಟನೆಯ ಕಾರ್ಯಕ್ರಮದ ಅತ್ಯಂತ ಯಶಸ್ವಿ ಪ್ರಯತ್ನಗಳಲ್ಲಿ ವಿಸ್ತರಣ ಯೋಜನೆಯ ಒಂದೊಂದು ಆತ್ಮವಿಶ್ವಾಸದಿಂದ ಸಾಧಿಸಬಹುದಾಗಿದೆ. ಅತಿ ಕಡಿಮೆ ಮಾನವಶಕ್ತಿ ಹಾಗೂ ಹಣವನ್ನು ಹೂಡಿ ಸುಧಾರಣೆಯ ಅತಿ ಸಂಪದ್ಭರಿತ ಫಸಲನ್ನು ಪಡೆಯಲಾಗಿದೆ.

Digitised by Bharatavani, CIIL

**ಶಿಕ್ಷಕರ ಮೇಲೆ ಪ್ರಭಾವ:** ಯೋಜನೆಯ ಪ್ರಭಾವವು ಬಹುಪ್ರಕಾರದ್ದಾಗಿದೆ. ಅತ್ಯಂತ ಹೆಚ್ಚು ಸುಧಾರಣೆ ಕಂಡುಬಂದಿರುವುದು ಮಾಧ್ಯಮಿಕ ಶಾಲೆ ಮತ್ತು ಶಿಕ್ಷಕರಲ್ಲಿ. ಯೋಜನೆಯು ಶಿಕ್ಷಕರಲ್ಲಿ ಬದಲಾವಣೆಯ ಅಗತ್ಯದ ತೀವ್ರ ಅರಿವು ಮತ್ತು ಈ ಬದಲಾವಣೆಯನ್ನು ಮೂಡಿಸುವುದರಲ್ಲಿ ಅವರ ಅತ್ಯಂತ ಪಾತ್ರವನ್ನು ನಾಜೂಕಾದ ರೀತಿಯಲ್ಲಿ ಮೂಡಿಸಿದೆ. ಹಿಂದೆಂದೂ ಅನುಭವಿಸದ ರೀತಿಯಲ್ಲಿ ಹೊಸ ವಿಚಾರಗಳು, ತಂತ್ರಜ್ಞಾನಗಳು ಮತ್ತು ಸಂಪನ್ಮೂಲಗಳು ದೊರೆಯುವಂತೆ ಮಾಡಲಾಗಿದೆ. ಪ್ರತಿಯೊಂದು ಕೇಂದ್ರದಲ್ಲಿನ ಅನೇಕ ಪ್ರಯೋಗಗಳು ಮತ್ತು ತೀವ್ರ ವೇಗವನ್ನು ಪಡೆದಂತಹ ಪ್ರಕಟಣೆಯ ಚಟುವಟಿಕೆಗಳು ಈ ಹೊಸ ಆಸಕ್ತಿಯ ನಿದರ್ಶನಗಳಾಗಿವೆ.

**ಆಡಳಿತಗಾರರ ಮೇಲೆ ಪ್ರಭಾವ:** ಆಡಳಿತಗಾರರ ಮೇಲೆ ವಿಸ್ತರಣ ಕೇಂದ್ರವು ಆಳವಾದ ಪ್ರಭಾವ ಬೀರಿದಂತೆ ಕಂಡುಬಂದಿರುವುದಿಲ್ಲ. ಆಡಳಿತಗಾರರು ಇನ್ನೂ ಈ ಶೈಕ್ಷಣಿಕ ಚಟುವಟಿಕೆಯಿಂದ ತಕ್ಕಮಟ್ಟಿಗೆ ದೂರವಾಗಿ, ಪ್ರತ್ಯೇಕವಾಗಿ ಇದ್ದಾರೆ. ಇದೇ ಸಮದಯಲ್ಲಿ ಅವರ ಸಹಕಾರ ಮತ್ತು ಅರ್ಥೈಸುವಿಕೆಯು ಅನಿವಾರ್ಯವಾಗುತ್ತದೆ. ಇದು ಇಲ್ಲದೇ ಹೋದರೆ ಶಿಕ್ಷಕರು ಪ್ರಗತಿಪರ ಕ್ರಮಗಳನ್ನು ಅಳವಡಿಸಿಕೊಳ್ಳದಂತೆ ತಡೆದಂತಾಗುವುದಲ್ಲದೆ, ಅವರ ದಾರಿಯಲ್ಲಿ ಅಡ್ಡಿಗಳನ್ನು ಇಟ್ಟುಕೊಂಡು, ಕಾರ್ಯನಿರ್ವಹಣೆಗೆ ತಡೆಯುಂಟು ಮಾಡಿದಂತಾಗುತ್ತದೆ. ಹಾಗಿದ್ದರೂ ಕೆಲವು ಕೇಂದ್ರಗಳು ತಮ್ಮ ಕೆಲಸದೊಂದಿಗೆ ಆಡಳಿತಗಾರರನ್ನು ಸೇರಿಸಿಕೊಳ್ಳಲು ಸಮರ್ಥವಾಗಿವೆ. ಶಾಲೆಗಳ ಪ್ರತಿಕ್ರಿಯೆಗಳು ಉತ್ತಮವಾಗಿದ್ದ ಕಡೆಗಳಲ್ಲೆಲ್ಲಾ, ತಪಾಸಣಾ ಅಧಿಕಾರಿಗಳು ಮತ್ತು ಇತರ ಆಡಳಿತಗಾರರು ಈ ಕಾರ್ಯಕ್ರಮದಲ್ಲಿ ತೆಗೆದುಕೊಂಡ ಆಸಕ್ತಿಯಲ್ಲಿ ಅದನ್ನು ಗುರುತಿಸಬಹುದು.

**ತರಬೇತಿ ಮಹಾವಿದ್ಯಾಲಯಗಳ ಮೇಲೆ ಪ್ರಭಾವ:** ಶಾಲೆಯ ಮೇಲೆ ಆಗಿರುವ ಪ್ರಭಾವದಷ್ಟೇ ಕೇಂದ್ರದ ಪ್ರಭಾವವು ತರಬೇತಿ ಮಹಾವಿದ್ಯಾಲಯಗಳ ಮೇಲೆ ಪರಿಣಾಮಕಾರಿಯಾಗಿದೆ. ಮಹಾವಿದ್ಯಾಲಯದ ಮೇಲಿನ ಪ್ರಭಾವವು ಬಹುದೂರದ ಪರಿಣಾಮ ಮತ್ತು ಬಹುಕಾಲ ಅಸ್ತಿತ್ವದಲ್ಲಿರುವ ಸ್ವರೂಪದ್ದಾಗಿದೆ ಎಂದು ಸಾಧಿಸಬಹುದಾಗಿದೆ. ಸೇವಾವಲಯದಲ್ಲಿರುವ ಶಿಕ್ಷಕರೊಂದಿಗೆ ನೇರ ಸಂಪರ್ಕವನ್ನು ಇಟ್ಟುಕೊಳ್ಳುವುದರ ಮೂಲಕ ಶಿಕ್ಷಕರ ಶಿಕ್ಷಣ ಪದ್ಧತಿಗಳನ್ನು ಇನ್ನು ಮುಂದೆ ಸ್ಥಗಿತವಾಗಿ ಇಟ್ಟುಕೊಳ್ಳುವಂತಿಲ್ಲವೆಂದು ತರಬೇತಿ ಮಹಾವಿದ್ಯಾಲಯದ ಅಧ್ಯಾಪನ ವರ್ಗದವರಿಗೆ ಅರಿವಾಗಿದೆ. ಶಾಲಾ ಪದ್ಧತಿಗಳ ಮರುಸಂಘಟನೆಯನ್ನು ವಾಸ್ತವಗೊಳಿಸಬೇಕಾದರೆ, ಅವರು ಕ್ರಿಯಾತ್ಮಕ ರೀತಿಯಿಂದ ಬದಲಾವಣೆ, ಬೆಳವಣಿಗೆ ಮತ್ತು ಅಳವಡಿಸಿಕೊಳ್ಳುವಿಕೆಯನ್ನು ನಡೆಸಬೇಕಾಗುತ್ತದೆ. ತಮ್ಮ ಸಮಸ್ಯೆಗಳನ್ನು ಮತ್ತು ಅನುಭವಗಳನ್ನು ತೆಗೆದುಕೊಂಡು ವಿಸ್ತರಣ ಕೇಂದ್ರಗಳಲ್ಲಿ ಬಂದು ಸೇರುವ ಶಿಕ್ಷಕರು ಸೇವಾ-ಪೂರ್ವ ಹಂತದಲ್ಲಿ ಬದಲಾವಣೆಯ ಅಗತ್ಯವಿರುವುದನ್ನು ಒತ್ತಿಹೇಳಿದ್ದಾರೆ. ಶಿಕ್ಷಕರ ದಕ್ಷತೆಯ ಸುಧಾರಣೆಗೆ ಸೇವಾನಿರತ ತರಬೇತಿ ಉಪಯುಕ್ತ. ಆದರೆ ಸೇವಾನಿರತ ಕಾರ್ಯಕ್ರಮದಲ್ಲಿನ ಪರಿಷ್ಕರಣ ಮತ್ತು ಸುಧಾರಣೆಗಳಿಗೆ ಇದು ಬದಲಿಸಲಾಗಲಾರದು.

ವಿಸ್ತರಣ ಯೋಜನೆಯ ಸಮಾನ ದರ್ಜೆಯ ಪರಿಣಾಮಕಾರಿ ಪ್ರತಿಫಲವೆಂದರೆ ಇದು ಕೇಂದ್ರ ಮತ್ತು ರಾಜ್ಯ ಹಾಗೂ ರಾಜ್ಯ ಮತ್ತು ರಾಜ್ಯಗಳ ನಡುವೆ ಕಾರ್ಯನಿರ್ವಹಿಸುವ ಅತ್ಯುನ್ನತ ಪರಿಣಾಮಕಾರಿ ಸಂಪರ್ಕವಾಗಿ ಪರಿಣಮಿಸಿದೆ. ಕಳೆದ ಕೆಲವು ವರ್ಷಗಳಲ್ಲಿ ಶೈಕ್ಷಣಿಕ ಮರುರಚನೆ ಮತ್ತು ಸುಧಾರಣೆಯಲ್ಲಿ ಸಾಧಿಸಿದಂತಹ ಕೆಲವು ಪ್ರಗತಿಗೆ ವಿಸ್ತರಣ ಕೇಂದ್ರಗಳು ನೀಡಿದ ಸಹಾಯವು ಕಾರಣವಾಗಿದೆ. ಶಾಲೆಗಳಿಂದ ಮತ್ತು ಶಾಲೆಗಳಿಗೆ ಜ್ಞಾನವನ್ನು (ತಿಳಿವಳಿಕೆಯನ್ನು) ಕೊಂಡೊಯ್ಯುವ ಕ್ಷೇತ್ರ ಸಂಪರ್ಕದ ಏಜೆನ್ಸಿಗಳಾಗಿ ಇವು ಕಾರ್ಯನಿರ್ವಹಿಸಿವೆ.

ಮಾಧ್ಯಮಿಕ ಹಂತದಲ್ಲಿ ವಿಸ್ತರಣ ಯೋಜನೆಯ ಯಶಸ್ಸು ಎಷ್ಟು ಗುರುತರವಾಗಿದೆಯೆಂದರೆ, ಇದರ ಫಲವಾಗಿ 45 ಪ್ರಾಥಮಿಕ ತರಬೇತಿ ಸಂಸ್ಥೆಗಳಲ್ಲಿ ವಿಸ್ತರಣ ಸೇವೆಗಳ ವಿಭಾಗಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೆ, ಕೆಲವು ತರಬೇತಿ ಮಹಾವಿದ್ಯಾಲಯಗಳು ಸ್ವಂತ ಪ್ರೇರಣೆಯಿಂದ ತಮ್ಮ ಕಾರ್ಯಕ್ರಮಗಳಲ್ಲಿ ವಿಸ್ತರಣ ಚಟುವಟಿಕೆಗಳನ್ನು ಕೂಡಾ ಪರಿಚಯಿಸಿವೆ.

**ಬೇರೆ ಏಜೆನ್ಸಿಗಳಿಂದ ಸೇವಾನಿರತ ಶಿಕ್ಷಣ:**

**ರಾಜ್ಯ ಶಿಕ್ಷಣ ವಿಭಾಗಗಳು:** ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ರಾಜ್ಯ ಶಿಕ್ಷಣ ವಿಭಾಗಗಳಿಗೆ ಅವುಗಳ ಸ್ವಂತ ಏಜೆನ್ಸಿಗಳು ಇವೆ. ಈ ಏಜೆನ್ಸಿಗಳಲ್ಲಿ ಉಲ್ಲೇಖಿಸಬಹುದಾದುವುಗಳೆಂದರೆ, ಸ್ಟೇಟ್ ಬ್ಯುರೋ ಆಫ್ ಎಜ್ಯುಕೇಶನಲ್ ಆಂಡ್ ವೊಕೇಶನಲ್ ಗೈಡೆನ್ಸ್, ರಾಜ್ಯ ಮೌಲ್ಯಮಾಪನ ಘಟಕಗಳು, ರಾಜ್ಯ ವಿಜ್ಞಾನ ಸಂಸ್ಥೆಗಳು, ರಾಜ್ಯ ಶಿಕ್ಷಣ ಸಂಸ್ಥೆಗಳು, ಶೈಕ್ಷಣಿಕ ಸಂಶೋಧನಾ ಕಾರ್ಯಾಲಯ ಮತ್ತು ಶೈಕ್ಷಣಿಕ ಶ್ರವ್ಯ-ದೃಶ್ಯ ಕಾರ್ಯಾಲಯ.

**ವಿಶ್ವವಿದ್ಯಾಲಯ ಧನಸಹಾಯ ಆಯೋಗ:** ಮಾಧ್ಯಮಿಕ ಶಾಲೆಗಳ ಶಿಕ್ಷಕರಿಗೆ ಬೇಸಿಗೆ ವಿಜ್ಞಾನ ಸಂಸ್ಥೆಗಳ ಮೂಲಕ ಸೇವಾನಿರತ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಸಂಘಟಿಸುವ ಪ್ರಯತ್ನವನ್ನು ನಡೆಸಿರುವುದು ಇತ್ತೀಚೆಗಿನ ವರ್ಷಗಳ ಅತ್ಯಂತ ಪ್ರಮುಖ ಬೆಳವಣಿಗೆಯಾಗಿದೆ. ಇದು 1963ರಲ್ಲಿ ನಾಲ್ಕು ಬೇಸಿಗೆ ಶಿಬಿರಗಳೊಂದಿಗೆ ಪ್ರಾರಂಭವಾಯಿತು. ಇದರಲ್ಲಿ 154 ಶಿಕ್ಷಕರು ಮತ್ತು ಗಣಿತತಜ್ಞರ ನೋಂದಣಿಯನ್ನು ನಡೆಸಲಾಗಿತ್ತು. 1969ರವರೆಗೆ ಸುಮಾರು 11,300 ಶಿಕ್ಷಕರನ್ನು ಒಳಗೊಂಡ 290 ಶಿಬಿರಗಳನ್ನು ಸಂಘಟಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಸಹಯೋಗ ನೀಡುತ್ತಿರುವವರು ಎನ್‌ಸಿಇಆರ್‌ಟಿ, ಯುಎಸ್‌ಎಐಡಿ ಮತ್ತು ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ.

Digitised by Bharatavani, CIIL

**ರಾಜ್ಯ ಶಿಕ್ಷಣ ಸಂಸ್ಥೆಗಳು:** ಕೇಂದ್ರ ಸರಕಾರವು ಒದಗಿಸಿದ ನೆರವಿನಿಂದ ರಾಜ್ಯಗಳಲ್ಲಿ ಸ್ಥಾಪಿಸಲಾದ ರಾಜ್ಯ ಶಿಕ್ಷಣ ಸಂಸ್ಥೆಗಳು ಈಗ ಪ್ರಾಥಮಿಕ ಹಂತದಲ್ಲಿ ಸೇವಾನಿರತ ಕಾರ್ಯಕ್ರಮಗಳ ಕುರಿತು ಕಾಳಜಿಯನ್ನು ಹೊಂದಿವೆ. ಅವುಗಳು ಪ್ರಾಥಮಿಕ ಶಿಕ್ಷಕ ಪ್ರಶಿಕ್ಷಕರು ಮತ್ತು ತಪಾಸಣಾ ಅಧಿಕಾರಿಗಳಿಗಾಗಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಿವೆ. ರಾಜ್ಯ ಶಿಕ್ಷಣ ಸಂಸ್ಥೆಗಳು ಕ್ರಮೇಣ ಮಾಧ್ಯಮಿಕ ಹಂತದ ಸೇವಾನಿರತ ಶಿಕ್ಷಣ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ನಿರೀಕ್ಷಿಸಲಾಗಿದೆ.

**ಇಂಗ್ಲಿಷ್ ಮತ್ತು ಹಿಂದಿ ಸಂಸ್ಥೆಗಳು:** ಇಂಗ್ಲಿಷ್ ಶಿಕ್ಷಕರು ಮತ್ತು ಪ್ರಶಿಕ್ಷಕರು ಸೇವಾನಿರತ ಶಿಕ್ಷಣದೊಂದಿಗೆ ಕೂಡಾ ಕಾಳಜಿಯನ್ನು ಹೊಂದಿರುವ ಬೇರೆ ಏಜೆನ್ಸಿಗಳು ಕೂಡ ಇವೆ. ಅವುಗಳೆಂದರೆ, ಕೇಂದ್ರೀಯ ಇಂಗ್ಲಿಷ್ ಸಂಸ್ಥೆ, ಹೈದ್ರಾಬಾದ್, ಪ್ರಾಂತೀಯ ಇಂಗ್ಲಿಷ್ ಸಂಸ್ಥೆ, ಬೆಂಗಳೂರು ಮತ್ತು ರಾಜ್ಯ ಇಂಗ್ಲಿಷ್ ಸಂಸ್ಥೆ. ಇದರೊಂದಿಗೆ ಹಿಂದಿ ಶಿಕ್ಷಕರಿಗೆ ನಿಯತವಾಗಿ ತರಬೇತಿ ಪಠ್ಯಕ್ರಮವನ್ನು ಸಂಘಟಿಸುವ ಹಿಂದಿ ಸಂಸ್ಥೆಗಳು ಆಗ್ರಾದಲ್ಲಿ ಇದೆ.

**ಶಿಕ್ಷಕರ ಸಂಘಟನೆಗಳು:** ದೇಶದಾದ್ಯಂತ ರಾಷ್ಟ್ರ, ಪ್ರಾದೇಶಿಕ ಮತ್ತು ರಾಜ್ಯಮಟ್ಟದಲ್ಲಿ ಅನೇಕ ಶಿಕ್ಷಕರ ಸಂಘಟನೆಗಳು ಇವೆ. ಈ ಸಂಘಟನೆಗಳು ಕೂಡಾ ಸೇವಾ ನಿರತ ಶಿಕ್ಷಣ ಕಾರ್ಯಕ್ರಮಗಳನ್ನು ಸಾಂದರ್ಭಿಕವಾಗಿ ಕೈಗೆತ್ತಿಕ್ಕೊಳ್ಳುತ್ತವೆ. ಇದುವರೆಗೆ ಅವರ ಮುಖ್ಯ ಕಾಳಜಿಯು ಶಿಕ್ಷಕರ ಆರ್ಥಿಕ ಮಟ್ಟ ಮತ್ತು ಸೇವಾ ಸ್ಥಿತಿಗತಿಗಳನ್ನು ಸುಧಾರಿಸುವುದಾಗಿದೆ.

**ವಿದೇಶಿ ಮತ್ತು ಅಂತಾರಾಷ್ಟ್ರೀಯ ಏಜೆನ್ಸಿಗಳು:** ಭಾರತದಲ್ಲಿ ಸೇವಾನಿರತ ಶಿಕ್ಷಣಕ್ಕೆ ಅವಕಾಶಗಳನ್ನು ಒದಗಿಸುವ ಕೆಲವು ವಿದೇಶಿ ಏಜೆನ್ಸಿಗಳೆಂದರೆ ಯುಎಸ್‌ಎಐಡಿ, ದಿ ಯುನೈಟೆಡ್ ಸ್ಟೇಟ್ಸ್ ಎಜ್ಯುಕೇಶನಲ್ ಫೌಂಡೇಶನ್ ಇನ್ ಇಂಡಿಯಾ (ಯುಎಸ್‌ಇಎಫ್‌ಐ), ದಿ ಬ್ರಿಟಿಷ್ ಕೌನ್ಸಿಲ್ ಮತ್ತು ಯುನೆಸ್ಕೋ. ಈ ದಿಕ್ಕಿನಲ್ಲಿ ಉಲ್ಲೇಖಿಸಬಹುದಾದ ಕಾರ್ಯಕ್ರಮಗಳೆಂದರೆ, ಬ್ರಿಟಿಷ್ ಕೌನ್ಸಿಲ್ ಸಂಘಟಿಸಿದ ಇಂಗ್ಲಿಷಿನ ಸೇವಾನಿರತ ಕಾರ್ಯಕ್ರಮ, ಯುಎಸ್‌ಎಫ್‌ಐ ಸಂಘಟಿಸಿದ ವಿಚಾರಸಂಕಿರಣಗಳು ಮತ್ತು ಕಾರ್ಯಾಗಾರಗಳು, ದೆಹಲಿಯ ಏಶ್ಯಿಯನ್ ಇನ್ಸ್‌ಟಿಟ್ಯೂಟ್ ಆಫ್ ಎಜ್ಯುಕೇಶನಲ್ ಪ್ಲಾನಿಂಗ್ ಆಂಡ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಯುನೆಸ್ಕೋ ಒದಗಿಸಿದ ತರಬೇತಿ.

**ವಿಸ್ತರಣ ಸೇವೆಗಳ ಆಡಳಿತಾತ್ಮಕ ಮತ್ತು ಸಂಘಟನಾತ್ಮಕ ವಿಚಾರಗಳು (1971ರ ನಂತರ):**

ಮೊದಲ 23 ವಿಸ್ತರಣ ಸೇವಾ ಕೇಂದ್ರಗಳ ಗುಂಪನ್ನು ಅನುಸರಿಸಿ 1957 ಮತ್ತು 1958ರಲ್ಲಿ 31 ಕೇಂದ್ರಗಳ ಎರಡನೆಯ ಗುಂಪು ಬಂತು. ಇದರ ನಂತರ ಹೆಚ್ಚು ವಿಸ್ತರಣ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ವಿಸ್ತರಣ ಕಾರ್ಯವನ್ನು ಹೆಚ್ಚು ಹೆಚ್ಚು ತರಬೇತಿ ಮಹಾವಿದ್ಯಾಲಯಗಳು ನಡೆಸುವಂತೆ ಅವರಿಗೆ ಅವಕಾಶಗಳನ್ನು ಒದಗಿಸಲು ಮತ್ತು ಸೀಮಿತ ಹಣದಲ್ಲಿ ಈ ಕಾರ್ಯಗಳನ್ನು ಮಿತಿಯಲ್ಲಿ ನಡೆಸಬೇಕಾಗಿರುವುದರಿಂದ ವಿಸ್ತರಣ ಸೇವಾ ಘಟಕಗಳನ್ನು ಕೂಡಾ ಸ್ಥಾಪಿಸಲಾಗಿದೆ. 1971ರವರೆಗೆ ದೇಶದಲ್ಲಿ 70 ವಿಸ್ತರಣ ಸೇವಾ ಕೇಂದ್ರಗಳು ಮತ್ತು 25 ವಿಸ್ತರಣ ಸೇವಾ ಘಟಕಗಳು ಇದ್ದವು. ವಿಸ್ತರಣ ಸೇವೆಗಳ ವಿಭಾಗಗಳನ್ನು ಸ್ಥಾಪಿಸುವುದಕ್ಕಾಗಿ ಮಹಾವಿದ್ಯಾಲಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ, ಈ ಹೆಚ್ಚುವರಿ ಜವಾಬ್ದಾರಿಯನ್ನು ಕೈಗೊಳ್ಳಬಹುದಾದ ತರಬೇತಿ ಮಹಾವಿದ್ಯಾಲಯದ ಸಾಮರ್ಥ್ಯ ಮತ್ತು ಇದಕ್ಕೆ ಸಂಬಂಧಿಸಿದ ಬೇರೆ ಕೆಲಸವು ವಾಸ್ತವಾಂಶಗಳನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ.

1971–72ರಲ್ಲಿ ವರ್ಷದಿಂದ ವಿಸ್ತರಣ ಸೇವೆಗಳ ಕೇಂದ್ರಗಳು ಮತ್ತು ಘಟಕಗಳ ಜವಾಬ್ದಾರಿಯನ್ನು ಆಯಾ ರಾಜ್ಯದ ಸರಕಾರಗಳಿಗೆ ಒಪ್ಪಿಸಿಬಿಡುವ ನಿರ್ಧಾರವನ್ನು ಎನ್‌ಸಿಇಆರ್‌ಟಿ ಕೈಗೊಂಡು ಅದರಂತೆ ನಡೆದುಕೊಂಡಿದೆ. ಸಮನ್ವಯಾಧಿಕಾರಿ ಗುಮಾಸ್ತ, ಚಾಲಕ ಮತ್ತು ಕಚೇರಿ ಜವಾನನನ್ನು ಪೂರ್ಣಕಾಲಿಕ ಉದ್ಯೋಗಿಯಾಗಿ (ವೃತ್ತಿಪರರಲ್ಲದ ಸಿಬ್ಬಂದಿ) ಉಳಿಸಿಕೊಳ್ಳಲಾಗಿದೆ. ಅಕೌಂಟೆಂಟ್ ಮತ್ತು ಗ್ರಂಥಪಾಲಕನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯನ್ನು ಮತ್ತು ತಾಂತ್ರಿಕ ಸಹಾಯಕರನ್ನು ಅರೆಕಾಲಿಕ ಸಿಬ್ಬಂದಿಯಾಗಿ ನೇಮಿಸಲಾಗಿದೆ.

ರಾಜ್ಯದಲ್ಲಿ ವಿಸ್ತರಣ ಸೇವೆಗಳ ವಿಭಾಗಗಳು ಕೆಲಸ ಮಾಡತಕ್ಕಂತಹ ಭೌಗೋಳಿಕ ವ್ಯಾಪ್ತಿಯನ್ನು ಆಯಾ ರಾಜ್ಯ ಸರಕಾರಗಳು ನಿರ್ಧರಿಸುತ್ತವೆ. ಕಾರ್ಯಕ್ರಮದ ಕುರಿತು ಹೆಚ್ಚಿನ ರಾಜ್ಯ ಸರಕಾರಗಳಿಂದ ಆಸಕ್ತಿ ವ್ಯಕ್ತವಾಗಿಲ್ಲ. ಆದುದರಿಂದ ರಾಷ್ಟ್ರಮಟ್ಟದಲ್ಲಿ ಇದು ಕುಗ್ಗಿದ ಸ್ಥಿತಿಯಲ್ಲಿ ಇದೆ. ತಮಿಳುನಾಡಿನಲ್ಲಿ ಈ ಕೆಳಗಿನ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇವಲ ಮೂರು ವಿಸ್ತರಣ ಸೇವಾ ವಿಭಾಗಗಳು ಮಾತ್ರ ಇವೆ:

1. ಸೈಂಟ್ ಕ್ರಿಸ್ಟೋಫರ್ಸ್ ಕಾಲೇಜ್ ಆಫ್ ಎಜ್ಯುಕೇಶನ್
   ಇವಿಕೆ ಸಂಪತ್ ರಸ್ತೆ, ವೆಪೆರಿ ಚೆನ್ನೈ–600 007
2. ಮೆಸ್ಟನ್ ಕಾಲೇಜ್ ಆಫ್ ಎಜ್ಯುಕೇಶನ್
   ರಾಯಪೇಟಾ ಚೆನ್ನೈ–600 014
3. ರಾಮಕೃಷ್ಣ ಮಿಶನ್ ವಿದ್ಯಾಲಯ ಕಾಲೇಜ್ ಆಫ್
   ಎಜ್ಯುಕೇಶನ್ ಪೆರಿಯ ನಾಯಕನ್ ಪಾಳ್ಯಂ
   ಕೊಯಂಬತ್ತೂರು–641 020

(ಬೇರೆ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಸ್ತರಣ ಸೇವಾ ವಿಭಾಗಗಳ ಕುರಿತು ಮಾಹಿತಿ ಉಪಲಭ್ಯವಿಲ್ಲ)

**ಭವಿಷ್ಯದಲಿ ಸಾಧ್ಯವಿರುವ ಜಾಲಗಳು:**

1961ರಲ್ಲಿ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳನ್ನು ಮೈಸೂರು, ಅಜ್ಮೀರ್, ಭೋಪಾಲ್ ಮತ್ತು ಭುವನೇಶ್ವರದಲ್ಲಿ ಪ್ರಾದೇಶಿಕ ಹಂತದಲ್ಲಿ ಪ್ರಾರಂಭಿಸಲಾಯಿತು. ಇತ್ತೀಚೆಗೆ ಪ್ರಾದೇಶಿಕ ಮಹಾವಿದ್ಯಾಲಯಗಳನ್ನುಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯಗಳಾಗಿ ಪರಿವರ್ತಿಸಲಾಗಿದೆ. ಶಿಲ್ಲಾಂಗಿನಲ್ಲಿ ಒಂದನ್ನು ಪ್ರಾರಂಭಿಸಲಾಗಿದೆ.

Digitised by Bharatavani, CIIL

ರಾಜ್ಯ ಮಟ್ಟದಲ್ಲಿ ಎಸ್‌ಸಿಇಆರ್‌ಟಿಯನ್ನು ಅನೇಕ ರಾಜ್ಯಗಳಲ್ಲಿ ಪ್ರಾರಂಭಿಸಲಾಗಿದೆ. ಮತ್ತು ಅನೇಕ ಕಡೆಗಳಲ್ಲಿ ಎಸ್‌ಸಿಇಆರ್‌ಟಿಗಳ ಕಾರ್ಯವನ್ನು ರಾಜ್ಯ ಶಿಕ್ಷಣ ಸಂಸ್ಥೆಗಳು ನಡೆಸುತ್ತಿವೆ. ಜಿಲ್ಲಾ ಮಟ್ಟದಲ್ಲಿ, ಡಿಐಇಟಿಗಳನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಇವು ಶಿಕ್ಷಕರ ಪೂರ್ವ–ಸೇವೆ ಮತ್ತು ಸೇವಾನಿರತ ತರಬೇತಿಯಲ್ಲಿ ತೊಡಗಿಸಿಕೊಂಡಿವೆ.

ಹೀಗೆ, ಭವಿಷ್ಯದಲ್ಲಿ ಅನೇಕ ಸಂಸ್ಥೆಗಳು ಒದಗಿಸುವ ವಿಸ್ತರಣ ಸೇವೆಗಳ ಜಾಲ ಏರ್ಪಡುವ ಸಾಧ್ಯತೆ ಇದೆ. ನಮ್ಮ ದೇಶದಲ್ಲಿ ಶಾಲಾ ಶಿಕ್ಷಕರ (ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತಗಳು) ಸೇವಾನಿರತ/ವಿಸ್ತರಣ ಶಿಕ್ಷಣವು ರಾಷ್ಟ್ರಮಟ್ಟದಲ್ಲಿ ಎನ್‌ಸಿಇಆರ್‌ಟಿಯ ಮೂಲಕ ಎಮ್‌ಹೆಚ್‌ಆರ್‌ಡಿ ರೂಪಿಸಿದ ಸಮಿತಿಯಿಂದ ಪುನರಾವಲೋಕನಗೊಳ್ಳಬೇಕು ಎಂದು ಸೂಚಿಸಲಾಗಿದೆ. ವಿಸ್ತರಣ/ಸೇವಾನಿರತ ಶಾಲಾ ಶಿಕ್ಷಣದ ಕಾರ್ಯಕ್ರಮವನ್ನು ರಾಜ್ಯ/ಜಿಲ್ಲೆ/ತಾಲ್ಲೂಕು ಮಟ್ಟಗಳಲ್ಲಿ ಮರುಚೇತನಗೊಳಿಸುವ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗವು ರಾಮಲಾಲ್ ಪಾರೀಖ್ ಅವರ ಅಧ್ಯಕ್ಷತೆಯಲ್ಲಿ ವಯಸ್ಕ ಮತ್ತು ಮುಂದುವರಿದ ಶಿಕ್ಷಣದ ಪುನರಾವಲೋಕನ ಸಮಿತಿಯನ್ನು ನೇಮಿಸಿದೆ. 17 ಜನವರಿ, 1986ರಲ್ಲಿ ಯಜಿಸಿಗೆ ವರದಿಯನ್ನು ಸಲ್ಲಿಸಲಾಗಿದೆ. ಈ ವರದಿಯಲ್ಲಿ ಅನಕ್ಷರತೆಯ ನಿವಾರಣೆಯನ್ನು ವಯಸ್ಕ ಶಿಕ್ಷಣ, ಮುಂದುವರಿದ ಶಿಕ್ಷಣ, ಜನಸಂಖ್ಯಾ ಶಿಕ್ಷಣ, ಗ್ರಾಮೀಣ ಅಭಿವೃದ್ಧಿ ಇತ್ಯಾದಿಗಳ ಸ್ಥಾನಮಾನದ ಅಧ್ಯಯನದ ಮೂಲಕ ಪ್ರಸ್ತುತಪಡಿಸಲಾಗಿದೆ.

**ಮೂಲ: ಡಬ್ಲ್ಯು. ಎ.ಎಫ್. ಹೂಪರ್**

**ಅನು: ಡಾ. ಗೀತಾ ಶೆಣೈ**

## ವೃತ್ತಿಪರ ಶಿಕ್ಷಣ

ಕೈಗಾರಿಕಾ ಕ್ರಾಂತಿಯ ನಂತರ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಕಂಡು ಬಂದವು. ಭಾರತಕ್ಕೆ ಬ್ರಿಟಿಷರ ಆಗಮನವು ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಗೆ ಕಾರಣವಾಯಿತು. ಇದರ ಪರಿಣಾಮವಾಗಿ ಶಿಕ್ಷಣ ಕ್ಷೇತ್ರವೂ ವಿಸ್ತಾರಗೊಂಡಿತು. ಸ್ವಾತಂತ್ರ್ಯ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ವೈವಿಧ್ಯಮಯ ಶಿಕ್ಷಣ ನೀಡಲಾರಂಭಿಸಿದವು. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಪದವೀಧರ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿ ಇಂದು ದೇಶದ ಮುಂದೆ ನಿರುದ್ಯೋಗದ ಸಮಸ್ಯೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಇದಕ್ಕೆ ವಿದ್ಯಾರ್ಥಿಗಳು ಪಡೆಯುತ್ತಿರುವ ಸಾಮಾನ್ಯ ಶಿಕ್ಷಣವೇ ಕಾರಣವಾಗಿದೆ. ಒಂದು ಕಡೆ ಸಾಮಾನ್ಯ ಶಿಕ್ಷಣ ಪಡೆಯುತ್ತಿರುವುದರಿಂದ ಅವರ ಆಕಾಂಕ್ಷೆಗಳನ್ನಾಗಲಿ, ಸಮಾಜದ ಆಕಾಂಕ್ಷೆಗಳನ್ನಾಗಲಿ ಈಡೇರಿಸಲು ಸಾಧ್ಯವಾಗುತ್ತಿಲ್ಲ. ಮತ್ತೊಂದು ಕಡೆ ಪಡೆಯುತ್ತಿರುವ ಶಿಕ್ಷಣವೇ ಒಂದು ಮತ್ತು ಉದ್ಯೋಗ ಮಾಡುವುದೇ ಮತ್ತೊಂದಾಗಿದೆ. ಹೀಗಾಗಿ ಶಿಕ್ಷಣ ಜೀವನದಿಂದ ಬಹುದೂರವಾಗಿ ಉಳಿದುಬಿಟ್ಟಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮೊದಲಿಯಾರ್ ಆಯೋಗ, ಕೊಠಾರಿ ಆಯೋಗ ಮತ್ತು ಈಶ್ವರ ಬಾಯಿ ಪಟೇಲ್ ಸಮಿತಿಯು ಶಿಕ್ಷಣವನ್ನು "ವೃತ್ತಿಪರ ಶಿಕ್ಷಣ"ದ ಕಡೆಗೆ ಸರ್ಕಾರ ಗಮನವನ್ನು ಕೇಂದ್ರೀಕರಿಸಬೇಕೆಂದು ಸಲಹೆ ಮಾಡಿದೆ. ಇದರ ಉದ್ದೇಶ ವೃತ್ತಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಸ್ವತಂತ್ರ ವ್ಯಕ್ತಿಗಳಾಗಿ ಸ್ವಾವಲಂಬಿ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ.

'ಕಲಿಯುತ್ತಾ ಗಳಿಸು' ಎಂಬ ತತ್ತ್ವವನ್ನು ಅನುಸರಿಸಬೇಕು. ಆದ್ದರಿಂದಲೇ ವೃತ್ತಿ ಶಿಕ್ಷಣವನ್ನು ಜಾರಿಗೆ ತರಲಾಗಿದೆ. ಮಹಾತ್ಮ ಗಾಂಧಿಯವರೂ ತಮ್ಮ ಮೂಲ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಕೊಠಾರಿ ಆಯೋಗವು ಮಗು ತನ್ನ ಮನೆಯಲ್ಲಾಗಲೀ, ಶಾಲೆಯಲ್ಲಾಗಲೀ, ತೋಟದಲ್ಲಾಗಲೀ, ಕಾರ್ಯಾಗಾರದಲ್ಲಾಗಲೀ ಸಮಾಜಕ್ಕೆ ಮತ್ತು ತನಗೆ ಉಪಯುಕ್ತವಾಗುವಂತಹ ತನ್ನ ಕೈಲಾದ ಮಟ್ಟಿಗೆ ಉತ್ಪಾದನೆಯನ್ನು ಮಾಡಬೇಕು. ಇದು ಶಿಕ್ಷಣದ ಒಂದು ಭಾಗವಾಗಬೇಕು ಎಂದು ಅಭಿಪ್ರಾಯಪಟ್ಟಿದೆ.

"ಶಾಲಾ ಶಿಕ್ಷಣದ ಗುರಿ ವಿದ್ಯಾರ್ಥಿಯು ತನ್ನ ಮುಂದಿನ ಉದ್ಯೋಗವನ್ನು ದಕ್ಷತೆಯಿಂದ ಮಾಡುವಂತೆ ಮಾಡುವುದು" ಎಂದು ಸಾಮಾನ್ಯ ಮನುಷ್ಯರು ಹೇಳುವಂತೆ ರೇಮಾಂಟ್ ಎಂಬ ಶಿಕ್ಷಣದ ತಜ್ಞರು ಹೇಳಿದ್ದಾರೆ. ಹೊಲೆಯುವುದು, ತೋಟಗಾರಿಕೆ – ಇವು ಓದುವುದು ಮತ್ತು ಬರೆಯುವುದಕ್ಕಿಂತ ಹೆಚ್ಚು ಲಾಭ. ಇದರಲ್ಲಿ ಸ್ವಲ್ಪ ಸತ್ಯಾಂಶವಿದ್ದರೂ ಅದು ಸಂಪೂರ್ಣವಾದ ಗುರಿಯಲ್ಲ. ವ್ಯಾವಹಾರಿಕ ವಿಷಯಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿಯೂ ಮತ್ತು ವಿವಿಧೋದ್ದೇಶ ಪಠ್ಯಕ್ರಮವನ್ನು ಪ್ರೌಢಶಾಲೆಗಳಲ್ಲಿ ಆರಂಭಿಸಿದ್ದರೂ ಶಾಲಾಶಿಕ್ಷಣವು ಸಾಕ್ಷರತೆ ಮತ್ತು ಪಾಂಡಿತ್ಯ ಲಕ್ಷಣವನ್ನು ಮುಂದುವರೆಸಿಕೊಂಡು ಹೋಗಿದೆ.

ಕೊಠಾರಿ ಆಯೋಗವು "ಪ್ರಾಥಮಿಕ ಶಿಕ್ಷಣದ ಅಂತ್ಯದವೇಳೆಗೆ ಶೇಕಡ 50 ವಿದ್ಯಾರ್ಥಿಗಳನ್ನು ಔದ್ಯೋಗಿಕ ಶಿಕ್ಷಣ ಪಡೆಯುವಂತೆ ಮಾಡಬೇಕು" ಎಂದು ಹೇಳಿದೆ. ಔದ್ಯೋಗಿಕ ಶಿಕ್ಷಣವು ಅವರಿಗೆ ಉದ್ಯೋಗಗಳಲ್ಲಿ ತರಬೇತಿ ಕೊಟ್ಟು ಜೀವನೋಪಾಯಕ್ಕೆ ಸಹಾಯ ಮಾಡುತ್ತದೆ. ಆದರೆ ಈ ಶಿಫಾರಸ್ಸನ್ನು ಈ ವರೆಗೆ ಯಾವ ರಾಜ್ಯದಲ್ಲಿಯೂ ಜಾರಿಗೆ ತಂದಿಲ್ಲ. ಪಿ.ಯು.ಸಿ ಹಂತದಲ್ಲಿ ವೃತ್ತಿಪರ ಶಿಕ್ಷಣದ ಅಳವಡಿಕೆಯಾಗಿದ್ದರೂ ಅದರ ಪ್ರಗತಿ ಸಮರ್ಪಕವಾಗಿಲ್ಲ. "ವ್ಯಕ್ತಿಯ ಮತ್ತು ಅವನನ್ನು ಅವಲಂಬಿಸಿರುವವರ ಜೀವನೋಪಾಯಕ್ಕೆ ಸಿದ್ಧಮಾಡಲು, ಅವನ ಸಹ ಕೆಲಸಗಾರರೊಡನೆ ಸರಿಯಾದ ಸಂಬಂಧವನ್ನಿಟ್ಟುಕೊಳ್ಳಲು ಮತ್ತು ಆದಷ್ಟು ಮಟ್ಟಿಗೆ ತನ್ನ ಉದ್ಯೋಗದಲ್ಲಿ ಒಳ್ಳೆಯ ಬೆಳವಣಿಗೆಯನ್ನು ಸಾಧಿಸಲು ಉದ್ಯೋಗ ಶಿಕ್ಷಣವು ತಯಾರು ಮಾಡಬೇಕು". ವಿದ್ಯಾರ್ಥಿಯ ಸಾಮರ್ಥ್ಯ ಮತ್ತು ಒಲವುಗಳನ್ನು ಪರೀಕ್ಷಿಸಿ ಅವನು ಉದ್ಯೋಗವನ್ನು ಆರಿಸುವುದರಲ್ಲಿ

Digitised by Bharatavani, CIIL

ಸೂಕ್ತ ಸಲಹೆ ಕೊಡಬೇಕು. ವೃತ್ತಿಯ ಮಾರ್ಗದರ್ಶನದ ಬೃಹತ್ ಕಾರ್ಯಕ್ರಮವು ಪ್ರೌಢಶಾಲೆಗಳಲ್ಲಿ ಎಷ್ಟು ಅವಶ್ಯಕವೋ, ಪ್ರಾಥಮಿಕ ಶಾಲೆಗಳಲ್ಲೂ ಅಷ್ಟೇ ಅವಶ್ಯಕ.

ಸಂಪಾದನೆ ಮಾಡುವುದರಿಂದ ವ್ಯಕ್ತಿಯು ಆತ್ಮವಿಶ್ವಾಸ, ಸ್ವಸಹಾಯ ಮತ್ತು ಸಮಾಜ ಸೇವೆಯಂತಹ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ. ಪ್ರತಿಯೊಬ್ಬ ವ್ಯಕ್ತಯ ಶಿಕ್ಷಣದಿಂದ ಕೊನೇಪಕ್ಷ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ ಮತ್ತು ವಸತಿಯನ್ನು ಪಡೆಯುವಂತಾಗಬೇಕು. ಆದ್ದರಿಂದ ಪ್ರಾಥಮಿಕ ಶಾಲಾ ಶಿಕ್ಷಕರು ಮನಸ್ಸುಮಾಡಿದರೆ ವೃತ್ತಿ ಶಿಕ್ಷಣ ಅಭಿವೃದ್ಧಿ ಪಡಿಸಬಹುದು. ಕಲಿಯುವಾಗಲೇ ಕೆಲಸದ ಅನುಭವಗಳನ್ನು ಮಕ್ಕಳಿಗೆ ತಿಳಿಸಿ ತರಗತಿಯ ಅವಧಿಯಲ್ಲಿ ವಾರಕ್ಕೆ ಎರಡು ಅವಧಿಗಳನ್ನಾದರೂ ಕಾರ್ಯಾನುಭವದ ಅವಧಿಗಳನ್ನಾಗಿ ಮಾಡಿ ಆ ಅವಧಿಗಳಲ್ಲಿ ಕಾರ್ಯಾನುಭವದ ತರಬೇತಿ ನೀಡಿ ಕಡಿಮೆ ಖರ್ಚಿನಲ್ಲಿ ಉತ್ತಮ ವಸ್ತುಗಳನ್ನು ತಯಾರಿಸಿ ಬಳಸಿಕೊಳ್ಳುವ ವಿಧಾನಗಳನ್ನು ತಿಳಿಸಿ, ವಿವರಣೆ ಮೂಲಕ ಶಿಕ್ಷಣ ಕೊಡುವುದರ ಬದಲು ಕಾರ್ಯಾಗಾರದ ಮೂಲಕ ಕೊಡುವುದು.

**ಶಿಕ್ಷಣದ ಔದ್ಯೋಗಿಕ ಗುರಿ:** ವಿದ್ಯಾರ್ಥಿಯು ತಾನು ಯಾವುದಾದರೊಂದು ಉದ್ಯೋಗವನ್ನು ಮಾಡಿ ಅದರ ಮೂಲಕ ತನ್ನ ಜೀವನಾವಶ್ಯಕ ವಸ್ತುಗಳನ್ನು ಸಂಪಾದನೆ ಮಾಡುವ ಶಕ್ತಿ ಸಾಮರ್ಥ್ಯ, ಕೌಶಲ್ಯ, ಜ್ಞಾನ ಮತ್ತು ಪರಿಣತಿಯನ್ನು ಶಿಕ್ಷಣ ಬೆಳೆಸಬೇಕು. ಇದರ ಮೂಲಕ ಶಿಕ್ಷಣಾರ್ಥಿಯು ತನ್ನ ಕಾಲ ಮೇಲೆ ತಾನು ನಿಂತು ಕೊಳ್ಳಬೇಕು. ಪರಾವಲಂಬಿಯಾಗಬಾರದು. ಸ್ವತಂತ್ರ ಬಾಳುವೆಯನ್ನು ಯಾರ ಹಂಗೂ ಇಲ್ಲದಂತೆ ಮಾಡಬೇಕು. ನಾವು ನೀಡುವ ಶಿಕ್ಷಣ ವಿದ್ಯಾರ್ಥಿಗೆ ಈ ರೀತಿ ಸಹಾಯ ಮಾಡಬೇಕು. ಇದೇ ಔದ್ಯೋಗಿಕ ಶಿಕ್ಷಣದ ಗುರಿಯ ಅರ್ಥ.

**ಪ್ರಾಮುಖ್ಯ:** ವ್ಯಕ್ತಿಯ ಅಳಿವು ಅಥವಾ ಉಳಿವಿಗೆ ಔದ್ಯೋಗಿಕ ಶಕ್ತಿಯೇ ಆಧಾರ. ಯಾವುದೇ ವ್ಯಕ್ತಿ ಉದ್ಯೋಗ ಮಾಡದೆ ಸಂಪಾದನೆ ಮಾಡಲಾಗದೆ ಪರಾವಲಂಬಿಯಾದರೆ ಅವನಿಗೆ ಸಮಾಜದಲ್ಲಿ ಯಾವುದೇ ಗೌರವ ಅಥವಾ ಮಾನ್ಯತೆ ಬರುವುದಿಲ್ಲ. ಅವನ ವ್ಯಕ್ತಿತ್ವಕ್ಕೆ ಬೆಲೆಯೂ ಇರುವುದಿಲ್ಲ.

ಉದ್ಯೋಗ ಮಾಡುವ ಶಕ್ತಿ ಸಾಮರ್ಥ್ಯದಿಂದ ವ್ಯಕ್ತಿ ತನ್ನ ಜೀವನದಲ್ಲಿ ತನ್ನ ನೆಲೆಯನ್ನು ಕಂಡು ಕೊಳ್ಳಬಹುದು. ಅನಂತರ ವ್ಯಕ್ತಿಗತವಾದ ಆರ್ಥಿಕ ಪ್ರಗತಿ ಸಾಧಿಸಿ, ದೇಶದ ಆರ್ಥಿಕ ಪ್ರಗತಿಗೂ ತನ್ನ ಕಾಣಿಕೆ ನೀಡಬಹುದು. ಇದರಿಂದ ವ್ಯಕ್ತಿಯು, ಸಮಾಜದ ದೃಷ್ಟಿಯಿಂದ, ಉಪಯುಕ್ತನೂ ಕ್ರಿಯಾಶೀಲನೂ ಮತ್ತು ಉತ್ಪನ್ನಶೀಲನೂ ಆಗುತ್ತಾನೆ. ಇದರಿಂದ ಅವನಿಗೆ ಸಮಾಜದಲ್ಲಿ ಗೌರವ ಹಾಗೂ ಮಾನ್ಯತೆಯು ಬರುತ್ತದೆ. ದೇಶದ ಪ್ರಜಾತಂತ್ರ ವ್ಯವಸ್ಥೆಗೂ ಇದು ಅಪೇಕ್ಷಿತ.

ಇಂದು ಶಿಕ್ಷಣವು ಕೇವಲ ತಾತ್ತ್ವಿಕ ವಿಷಯಗಳಿಗೆ ಸೀಮಿತವಾಗಿದೆ, ಅದು ಅನುಪಯುಕ್ತ, ಎಂಬ ಆಪಾದನೆಗೆ ಒಳಗಾಗಿದೆ. ಔದ್ಯೋಗಿಕ ಗುರಿಯುಳ್ಳ ಶಿಕ್ಷಣವು ವ್ಯಕ್ತಿಯ ದೃಷ್ಟಿಯಿಂದ ಪ್ರಾಯೋಗಿಕವಾದದ್ದು ಮತ್ತು ಜೀವನಕ್ಕೆ ಉಪಯುಕ್ತವಾದದ್ದು ಎಂಬ ಹೆಗ್ಗಳಿಕೆಗೆ ಪಾತ್ರವಾಗುವುದು. ಶಾಲೆಯಲ್ಲಿ ಕಲಿತ ವಿಷಯ ಪ್ರಪಂಚದಲ್ಲಿ ವ್ಯವಹಾರಗಳಿಗೆ ಉಪಯುಕ್ತವಾಗುವುದು.

ಬಡಜನತೆಗೂ ಶಿಕ್ಷಣವೆಂದರೆ, ಅದು ಉದ್ಯೋಗ ಕಲ್ಪಿಸಿಕೊಡುವ ಕಲ್ಪವೃಕ್ಷ ಎಂಬ ಭಾವನೆ ಇದೆ. ಶಿಕ್ಷಣ ಇದನ್ನು ಈಡೇರಿಸುವುದರಲ್ಲಿ ಸಫಲವಾಗಬೇಕು. ಆಗ ಅವರು ಶಿಕ್ಷಣ ಪ್ರಕ್ರಿಯೆಯಲ್ಲಿ ತಮ್ಮನ್ನು ಆಳವಾಗಿ ತೊಡಗಿಸಿಕೊಳ್ಳುವರು. ಉದ್ಯೋಗ ಶಕ್ತಿಯನ್ನು ಈಡೇರಿಸದ ಶಿಕ್ಷಣ ಇವರಿಗೆ ಅರ್ಥಶೂನ್ಯ. ಹೀಗೆ ಯಾವುದೇ ದೃಷ್ಟಿಕೋನದಿಂದ ನೋಡಿದರೂ ಶಿಕ್ಷಣಕ್ಕೆ ಔದ್ಯೋಗಿಕ ಗುರಿ ಬಹಳ ಮುಖ್ಯ. ಇದನ್ನು ಶಿಕ್ಷಣದ ಒಂದು ಪ್ರಮುಖ ಗುರಿಯಾಗಿ ಪರಿಗಣಿಸಬೇಕೆಂದು ಅನೇಕ ಶಿಕ್ಷಣ ತಜ್ಞರ ಅಭಿಮತವಾಗಿದೆ. ಇಷ್ಟಾದರೂ ಈ ಗುರಿಯ ಮೇಲೂ ಕೆಲವು ಆಕ್ಷೇಪಣೆಗಳಿರುವುವು. ಅವು ಈ ರೀರಿ ಇವೆ:

ವೃತ್ತಿ ಬೆಳವಣಿಗೆಯ ಗುರಿಗೇ ಅತಿಯಾದ ಪ್ರಾಧಾನ್ಯತೆಯನ್ನು ನೀಡಿದಾಗ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ, ಸಮಗ್ರ ಹಾಗೂ ಸಮನ್ವಯ ವ್ಯಕ್ತಿತ್ವದ ಬೆಳವಣಿಗೆಗೆ ಆದ್ಯತೆ ಕಡಿಮೆಯಾಗುವ ಸಂಭವವಿದೆ. ವ್ಯಕ್ತಿ ತನ್ನ ಆಹಾರ ಸಂಪಾದನೆಯ ಶಕ್ತಿ ಗಳಿಸುವುದರ ಜೊತೆಗೆ, ಕುಟುಂಬ ಹಾಗೂ ಸಮಾಜದ ಉತ್ತಮ ಸದಸ್ಯ, ಪ್ರಜೆ ಹಾಗೂ ಮಾನವೀಯ ವ್ಯಕ್ತಿ ಮುಂತಾದ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಇವುಗಳನ್ನು ಕಡೆಗಣಿಸಿದ ಶಿಕ್ಷಣ ಕೆಳಮಟ್ಟದ ಶಿಕ್ಷಣವಾಗುವುದು.

ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಗತಿಯಿಂದ, ನಮ್ಮ ಸಾಮಾಜಿಕ ಜೀವನ ಬಹಳ ವೇಗವಾಗಿ ಬದಲಾವಣೆ ಹೊಂದುತ್ತಿದೆ. ಭವಿಷ್ಯ ಸಮಾಜ ಹಾಗೂ ಅದರ ಸ್ಥಿತಿಗತಿಗಳು ಹೇಗಿರುತ್ತವೆ ಎಂದು ಊಹಿಸುವುದು ಕಷ್ಟ. ಈ ಹಿನ್ನೆಲೆಯಲ್ಲಿ ಇಂದಿನ ವಿದ್ಯಾರ್ಥಿಗಳಿಗೆ ಇಂಥದೇ ಉದ್ಯೋಗ ಸರಿ ಎಂದು ತೀರ್ಮಾನಿಸಿ ಅದಕ್ಕೆ ಸೂಕ್ತ ಶಿಕ್ಷಣ ನೀಡುವುದು ಕಷ್ಟಕರ. ಆದುದರಿಂದ ಭವಿಷ್ಯದಲ್ಲಿ ಅವನಿಗೆ ದೊರಕಬಹುದಾದ ಯಾವುದೇ ಉದ್ಯೋಗವನ್ನು ದಕ್ಷತೆಯಿಂದ ನಿರ್ವಹಿಸಲು ಬೇಕಾದ ಸಾಮಾನ್ಯ ಶಕ್ತಿ, ಸಾಮರ್ಥ್ಯ, ಜ್ಞಾನ, ಅರಿವು ಹಾಗೂ ವೃತ್ತಿ ಕೌಶಲ್ಯಗಳನ್ನು ಅವನಲ್ಲಿ ಶಿಕ್ಷಣ ಬೆಳೆಸುವುದು ಸೂಕ್ತ.

ಶಿಕ್ಷಣವನ್ನು ಕೇವಲ ವೃತ್ತಿಪರ ತರಬೇತಿಗೇ ಸೀಮಿತಗೊಳಿಸಿದರೆ ಅದು ಸಂಕುಚಿತ ದೃಷ್ಟಿಕೋನದಿಂದ ಕೂಡಿ ಸಂಕುಚಿತ ವ್ಯಕ್ತಿಗಳ ನಿರ್ಮಾಣಕ್ಕೆ ಕಾರಣವಾಗುವುದು. ಇದು ಸಮಾಜದ ಹಿತದ ದೃಷ್ಟಿಯಿಂದ ಅಷ್ಟು ಉಚಿತವಲ್ಲ. ಪಂಡಿತರು, ಬುದ್ಧಿವಂತರು ಇಂತಹ ಶಿಕ್ಷಣವನ್ನು ಕೀಳು ದೃಷ್ಟಿಯಿಂದ ನೋಡುವ ಸಂಭವವೂ ಹೆಚ್ಚು. ವ್ಯಕ್ತಿತ್ವದ ಪೂರ್ಣ ಬೆಳವಣಿಗೆಗೆ ಇದು ಪೂರಕವೂ ಅಲ್ಲ. ವ್ಯಕ್ತಿಯನ್ನು ಇದು ಸಾಮಾನ್ಯ ಯಂತ್ರ ಮಾನವನನ್ನಾಗಿಸುವ ಅಥವಾ ಕೆಲಸ ಮಾಡುವ ಕೂಲಿಕಾರನ ಮಟ್ಟಕ್ಕೆ ಇಳಿಸುವ ಸಂಭವವೇ ಹೆಚ್ಚು.

Digitised by Bharatavani, CIIL

ವ್ಯಕ್ತಿಗೆ ಆರ್ಥಿಕ ಸ್ವಾತಂತ್ರ್ಯ ನೀಡಿ ಕೇವಲ ದುಡಿಯುವ ಯಂತ್ರವನ್ನಾಗಿ ಮಾಡುವ ಶಿಕ್ಷಣ ಉಪಯುಕ್ತವಲ್ಲ. ಜೀವನದಲ್ಲಿ ವ್ಯಕ್ತಿ ಅನೇಕ ಉಪಯುಕ್ತ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಬೇಕಾದ ಸರ್ವತೋಮುಖ ಬೆಳವಣಿಗೆಗೆ ಗಮನ ನೀಡುವುದು ಉತ್ತಮ. ಭೌತಿಕ, ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಇದರ ಜೊತೆಗೆ ಸಾಧಿಸಬೇಕು. ಪ್ರಜಾತಂತ್ರ ವ್ಯವಸ್ಥೆಗೆ ತಕ್ಕನಾದ ವ್ಯಕ್ತಿತ್ವ ರೂಪಿಸಿ ತಾನು ಸುಖದಿಂದಿದ್ದು, ಸಮಾಜವನ್ನೂ ಸುಖವಾಗಿಡಬಲ್ಲ ಶಿಕ್ಷಣವನ್ನು ನೀಡುವುದು ಹೆಚ್ಚು ಉಚಿತ. ಔದ್ಯೋಗಿಕ ಗುರಿಯನ್ನು ಸಾಧಿಸುವುದರ ಜೊತೆಗೆ ಸಮಗ್ರ ವ್ಯಕ್ತಿತ್ವವನ್ನು ಯೋಜಿಸುವುದು ಮುಖ್ಯ.

**ವೃತ್ತಿ ಶಿಕ್ಷಣ ಎಂದರೇನು?:** ವೃತ್ತಿ ಶಿಕ್ಷಣ ಎಂದರೆ ವಿದ್ಯಾರ್ಥಿಯೊಬ್ಬನು ಪಡೆಯುವ ಶಿಕ್ಷಣದ ಜೊತೆಗೆ ಯಾವುದಾದರೊಂದು ವೃತ್ತಿಯಲ್ಲಿ ಕರಕುಶಲ ಕೌಶಲ್ಯದೊಂದಿಗೆ ತರಬೇತಿ ಪಡೆದು ಆ ವೃತ್ತಿಯನ್ನು ಸ್ವತಂತ್ರವಾಗಿ ನಿರ್ವಹಿಸುವಂತಹ ಸಾಮರ್ಥ್ಯವನ್ನು, ದಕ್ಷತೆಯನ್ನು, ನೈಪುಣ್ಯ, ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದಕ್ಕೆ ವೃತ್ತಿ ಶಿಕ್ಷಣ ಎಂದು ಹೆಸರು.

ಶಿಕ್ಷಣ ವೃತ್ತೀಕರಣದ ಐತಿಹಾಸಿಕ ಹಿನ್ನೆಲೆ: ವೃತ್ತಿ ಶಿಕ್ಷಣದ ಅವಶ್ಯಕತೆಯನ್ನರಿತ 1854 ರ ವುಡ್‌ನ ಆಯೋಗವು ಅದನ್ನು ಗುರುತಿಸಿತು. ವಿವಿಧ ಆಯೋಗಗಳು ಮತ್ತು ವರದಿಗಳಿಂದ ವೃತ್ತಿ ಶಿಕ್ಷಣದ ಪರಿಕಲ್ಪನೆ ಬೆಳೆಯುತ್ತ ಬಂದಿತು. ವೃತ್ತಿ ಶಿಕ್ಷಣಕ್ಕೆ ಒಲವು ತೋರಿದ ಆಯೋಗಗಳು ಈ ಕೆಳಗಿನಂತಿವೆ

(1) **ಹಂಟರ್ ಆಯೋಗ (1882):** ಈ ಆಯೋಗವು ಪ್ರಸ್ತುತ ಪಠ್ಯ ಕ್ರಮದಲ್ಲಿ ವೃತ್ತಿಪರ ವಿಷಯಗಳನ್ನಿಡಬೇಕು ಎಂದು ಸಲಹೆ ಮಾಡಿತು. ಆದರೆ ಸರ್ಕಾರ ಈ ದಿಶೆಯಲ್ಲಿ ಯವುದೇ ಪ್ರಯತ್ನ ಮಾಡಲಿಲ್ಲ. (2) ಹರ್ಟಾಗ್ ಸಮಿತಿ (1929) – ಹರ್ಟಾಗ್ ಸಮಿತಿಯು ಮಿಡ್ಲ್ ಸ್ಕೂಲ್ ಮುಗಿದ ನಂತರ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಮತ್ತು ವಾಣಿಜ್ಯ ಕೋರ್ಸ್‌ಗಳನ್ನು ಅಭ್ಯಾಸ ಮಾಡುವ ಅವಕಾಶ ಒದಗಿಸಬೇಕೆಂದು ಸಲಹೆ ಮಾಡಿತು. (3) ಸಪ್ರು ಕಮಿಟಿ (1934) – ಈ ಆಯೋಗವು ಮಾಧ್ಯಮಿಕ ಶಾಲಾ ಹಂತದಲ್ಲಿ ವಿವಿಧ ವೃತ್ತಿ ಕೋರ್ಸುಗಳನ್ನು ಕಲಿಸಬೇಕೆಂದು ಸಲಹೆ ಮಾಡಿತು. (4) ಮೂಲ ಶಿಕ್ಷಣ–ವಾರ್ಧಾ ಶಿಕ್ಷಣ ಯೋಜನೆ (1936–37) – ಈ ವರದಿಯು ಮೂಲ ಶಿಕ್ಷಣವನ್ನು ಸಲಹೆ ಮಾಡಿತು. ಈ ಕಾರಣದಿಂದ ಅನೇಕ ಶಾಲೆಗಳು ತೆರೆಯಲ್ಪಟ್ಟವು. (5) ವುಡ್ ಮತ್ತು ಲೆಬಟ್ ಆಯೋಗ (1937–38) – ಈ ಆಯೋಗವು ವೃತ್ತಿ ಶಿಕ್ಷಣದ ಮೇಲೆ 1938 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿ ನಿರುದ್ಯೋಗವನ್ನು ತೊಡೆದು ಹಾಕಲು ಹಾಗೂ ವೃತ್ತಿ ತರಬೇತಿ ನೀಡುವುದಕ್ಕೆ ಹೆಚ್ಚು ಒತ್ತು ಕೊಟ್ಟಿತು. (6) ಸಾರ್ಜಂಟ್ ವರದಿ (1944) – ಸಾರ್ಜಂಟ್ ವರದಿಯು ಮೂಲ ಶಿಕ್ಷಣ ಮುಂದುವರಿಸಬೇಕು ಮತ್ತು ಸ್ಥಳೀಯ ಕರಕುಶಲ ಕೈಗಾರಿಕೆಗಳಿಗೆ ಹೆಚ್ಚು ಮಹತ್ವ ನೀಡಬೇಕೆಂದು ಹೇಳಿತು. ಸ್ವಾತಂತ್ರ್ಯ ಪೂರ್ವದಲ್ಲಿಯ ಆಯೋಗಗಳು ತಮ್ಮ ವರದಿಗಳಲ್ಲಿ ಸಲಹೆ ಮಾಡಿದರೂ, ಯಾವುದೇ ಶಿಫಾರಸುಗಳು ಪರಿಣಾಮಕಾರಿಯಾಗಿ ಕಾರ್ಯ ರೂಪಕ್ಕೆ ಬರಲಿಲ್ಲ. (7) ರಾಧಾಕೃಷ್ಣನ್ ಆಯೋಗ (1948) – ಈ ಆಯೋಗವು ಕೃಷಿ ಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತು ಶಿಕ್ಷಣವನ್ನು ಕುರಿತು ಸಲಹೆ ಮಾಡಿತು. (8) ಮೊದಲಿಯಾರ್ ಆಯೋಗ (1952–53) – ಮಾಧ್ಯಮಿಕ ಶಾಲಾ ಪಠ್ಯಕ್ರಮದಲ್ಲಿ ವೃತ್ತಿ ಕೋರ್ಸುಗಳಿರಬೇಕೆಂದು ಸಲಹೆ ಮಾಡಿತು. (9) ಕೊಠಾರಿ ಆಯೋಗ (1964–66) ಈ ಆಯೋಗವು ಶಿಕ್ಷಣವನ್ನು ವೃತ್ತೀಕರಣಗೊಳಿಸುವುದಕ್ಕೆ "ಕಾರ್ಯಾನುಭವ"ವನ್ನು ಶಿಫಾರಸು ಮಾಡಿತು. (10) ಈಶ್ವರ್ ಭಾಯಿ ಪಟೇಲ ಸಮಿತಿ (1926) – ಶಿಕ್ಷಣವನ್ನು ವೃತ್ತೀಕರಣಗೊಳಿಸುವುದಕ್ಕೆ ಸಮಾಜೋಪಯೋಗಿ ಉತ್ಪಾದನಾ ಕಾರ್ಯಗಳ ಕುರಿತು ಸಲಹೆ ಮಾಡಿತು.

ಹೀಗಾಗಿ ದೇಶದ ಸಂಪೂರ್ಣ ಸ್ಥಿತಿಗತಿಯನ್ನರಿತ ಭಾರತ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತರುವುದಕ್ಕೋಸ್ಕರ 1986ರ 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ'ಯನ್ನು ಹೊರಡಿಸಿತು. ಅದರಲ್ಲಿ ಸುವ್ಯವಸ್ಥಿತ, ಸಂಯೋಜಿತ ಹಾಗೂ ಪರಿಣಾಮಕಾರಿಯಾದ ಅನುಷ್ಠಾನಗೊಳಿಸುವಂತಹ ವೃತ್ತಿಪರ ಶಿಕ್ಷಣಗಳನ್ನು ಅಳವಡಿಸಬೇಕು ಹಾಗೂ ಯಾವುದೇ ನಿರ್ದಿಷ್ಟ ಆಸಕ್ತಿ ಅಥವಾ ಉದ್ದೇಶವಿಲ್ಲದೆ ಉನ್ನತ ಶಿಕ್ಷಣವನ್ನು ಅಪೇಕ್ಷಿಸುವ ಜನತೆಗೆ ಒಂದು ಪರ್ಯಾಯ ಮಾರ್ಗ ಸೂಚಿಸುವುದರ ಜೊತೆಗೆ ವೈಯಕ್ತಿಕ ಉದ್ಯೋಗವನ್ನು ಹೆಚ್ಚಿಸಿ ಬೇಡಿಕೆ ಹಾಗೂ ಪೂರೈಕೆಗಳ ಮಧ್ಯ ಇರುವ ಅಸಮಾನತೆಯನ್ನು ಕುಗ್ಗಿಸುವ ಉದ್ದೇಶವನ್ನೂ ವೃತ್ತಿ ಶಿಕ್ಷಣ ಹೊಂದಿರ ಬೇಕೆಂದು ತನ್ನ ವರದಿಯಲ್ಲಿ ಸೂಚಿಸಿದೆ.

**ವೃತ್ತಿ ಶಿಕ್ಷಣದ ಲಕ್ಷಣಗಳು:** (1) ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳ ಅಗತ್ಯತೆ ಮತ್ತು ಅವಶ್ಯಕತೆಗಳನ್ನು ಸಮೀಕ್ಷೆ ಮಾಡಿ, ಅದರಂತೆ ಅವಶ್ಯಕವಾದ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಅಥವಾ ತರಗತಿಗಳನ್ನು ಪ್ರಾರಂಭಿಸುವುದು, (2) ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಪಠ್ಯವಸ್ತುಗಳನ್ನು ರಚನೆ ಮಾಡುವುದು, (3) ವೃತ್ತಿ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದಕ್ಕೆ ಹಾಗು ಕಾಲಕಾಲಕ್ಕೆ ತಪಾಸಣೆ ಮತ್ತು ಮೇಲ್ವಿಚಾರಣೆ ನಡೆಸಲು ಅನುಕೂಲವಾಗುವಂತೆ ಜಿಲ್ಲೆ, ವಲಯ ಹಾಗೂ ರಾಜ್ಯ ಮಟ್ಟದಲ್ಲಿ ವೃತ್ತಿ ಶಿಕ್ಷಣ ನಿರ್ದೇಶನಾಲಯವನ್ನು ಪ್ರಾರಂಭಿಸುವುದು, (4) ಉತ್ಪಾದನೆಯಲ್ಲಿ ತೊಡಗಿಸುವ ತರಬೇತಿ ಕೇಂದ್ರಗಳ, ಸಂಘ ಸಂಸ್ಥೆಗಳ ನೆರವನ್ನು ಪಡೆದುಕೊಳ್ಳುವುದು, (5) ಉದ್ಯೋಗ ವಿನಿಮಯ ಕಛೇರಿಗಳ ಜೊತೆಗೆ ವೃತ್ತಿ ಶಿಕ್ಷಣ ಕೇಂದ್ರಗಳು ಸಂಪರ್ಕವನ್ನು ಇಟ್ಟುಕೊಳ್ಳುವುದು, (6) ವೃತ್ತಿ ತರಬೇತಿಗಾಗಿ ಕೈಗಾರಿಕೆ ಹಾಗೂ ತರಬೇತಿ ಕೇಂದ್ರಗಳಲ್ಲಿ ಅವಕಾಶ ಕಲ್ಪಸುವುದು, (7) ದೊಡ್ಡ ದೊಡ್ಡ ಕೈಗಾರಿಕೆ ಹಾಗೂ ಕಾರ್ಖಾನೆಗಳಲ್ಲಿ ಅಪ್ರೆಂಟಿಸ್‌ಷಿಪ್ ತರಬೇತಿಗೆ ಅವಕಾಶ ನೀಡುವುದು.

ವೃತ್ತಿ ಶಿಕ್ಷಣದ ಧ್ಯೇಯೋದ್ದೇಶಗಳು: ವೃತ್ತಿ ಶಿಕ್ಷಣದ ಧ್ಯೇಯೋದ್ದೇಶ ಅಥವಾ ಗುರಿಗಳನ್ನು ನಿರ್ದಿಷ್ಟವಾಗಿ ಹೇಳುವುದು ಸ್ವಲ್ಪ ಕಷ್ಟವಾದರೂ ವ್ಯಕ್ತಿಯನ್ನು ಸ್ವತಂತ್ರವಾಗಿ ಹಾಗೂ ಸ್ವಾವಲಂಬಿ

Digitised by Bharatavani, CIIL

ವ್ಯಕ್ತಿಯನ್ನಾಗಿ ಮುನ್ನಡೆಸುವುದೇ ವೃತ್ತಿ ಶಿಕ್ಷಣದ ಉದ್ದೇಶವಾಗಿದೆ. ಈ ದಿಸೆಯಲ್ಲಿ ವೃತ್ತಿ ಶಿಕ್ಷಣದ ಉದ್ದೇಶಗಳೆಂದರೆ:

1) ರಾಷ್ಟ್ರೀಯ ಗುರಿಯಾದ ಗ್ರಾಮೀಣಾಭಿವೃದ್ಧಿ ಹಾಗೂ ಅಲ್ಲಿನ ಬಡತನ ಹಾಗೂ ನಿರುದ್ಯೋಗ ಸಮಸ್ಯೆ ಯನ್ನು ನಿವಾರಿಸುವುದು, (2) ಸಾಮಾಜಿಕ ಬದಲಾವಣೆಗೆ ಆದ್ಯತೆ ನೀಡುವುದು, (3) ವಿದ್ಯಾರ್ಥಿಗಳಲ್ಲಿ ಸ್ವತಂತ್ರವಾಗಿ ಜೀವನ ನಡೆಸುವಂತಹ ಪ್ರಜ್ಞೆ ಬೆಳೆಯುವಂತೆ ಮಾಡುವುದು, (4) ಶಿಕ್ಷಣವನ್ನು ಉತ್ಪಾದನೆ, ರಾಷ್ಟ್ರಾಭಿವೃದ್ಧಿ ಹಾಗೂ ವ್ಯಕ್ತಿಯ ಭವಿಷ್ಯದೊಡನೆ ಸಂಬಂಧ ಕಲ್ಪಿಸುವುದು, (5) ಸೃಜನಶೀಲತೆ ಮತ್ತು ಕೌಶಲ ಗಳನ್ನು ಹೆಚ್ಚಿಸಿಕೊಂಡು ಸ್ವಾವಲಂಬಿಗಳಾಗುವಂತೆ ವಿದ್ಯಾರ್ಥಿಗಳನ್ನು ಉತ್ತೇಜಿಸುವುದು, (6) ಬೆಳೆಯುತ್ತಿರುವ ಆರ್ಥಿಕ ಕ್ಷೇತ್ರಕ್ಕೆ ಮಧ್ಯಮ ವರ್ಗದ ಜನರ ಶ್ರಮವನ್ನು ಬಳಸಿಕೊಳ್ಳುವುದು, (7) ವಿದ್ಯಾರ್ಥಿಗಳಲ್ಲಿ ಆಧುನಿಕ ತಂತ್ರ ಜ್ಞಾನಮಟ್ಟವನ್ನು ಹೆಚ್ಚಿಸುವುದು, (8) ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳನ್ನು ವೃತ್ತಿ ಶಿಕ್ಷಣದ ಕಡೆಗೆ ಆಕರ್ಷಿಸಲು ವೈವಿಧ್ಯಮಯ ಶಿಕ್ಷಣ ಕೋರ್ಸುಗಳನ್ನು ಪ್ರಾರಂಭಿಸುವುದು, (9) ವಂಶ ಪಾರಂಪರ್ಯವಾಗಿ ಬಂದಿರುವ ಕಸುಬು ಮತ್ತು ಉಪಕಸುಬು, ವೃತ್ತಿಗಳನ್ನು ಪುನಃಶ್ಚೇತನಗೊಳಿಸಿ ಅವುಗಳಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ನೆರವನ್ನು ನೀಡುವುದು, (10) ಸಾಮಾನ್ಯ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಹಂತಗಳಲ್ಲಿ ಕಂಡುಬರುತ್ತಿರುವ ವಿದ್ಯಾರ್ಥಿಗಳ ಅನವಶ್ಯಕ ಒತ್ತಡಗಳನ್ನು ಕಡಿಮೆ ಮಾಡುವುದು, (11) ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುವಂತಹ "ಕಲಿಕೆ-ಗಳಿಕೆ"ಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಉತ್ತೇಜಿಸುವುದು, (12) ವಿದ್ಯಾರ್ಥಿಗಳನ್ನು ಸ್ವಾವಲಂಬನೆ ಹಾಗೂ ಸ್ವಯಂ ಉದ್ಯೋಗದಲ್ಲಿ ತೊಡಗುವಂತೆ ಅನೇಕ ವೃತ್ತಿ ಅವಕಾಶಗಳನ್ನು ಹಾಗೂ ಸೌಲಭ್ಯಗಳನ್ನು ಒದಗಿಸುವುದು, (13) ಶಾರೀರಿಕ, ಸಾಮಾಜಿಕ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ಪರಸ್ಪರ ಅನ್ಯೋನ್ಯತೆಯಿಂದ ವೃತ್ತಿ ಭಾವನೆ ಬೆಳೆಸಿಕೊಳ್ಳುವಂತೆ ಉತ್ತೇಜಿಸುವುದು, (14) ಶಿಕ್ಷಣಕ್ಕೂ ಮತ್ತು ಜೀವನಕ್ಕೂ ಇರುವ ಅಂತರವನ್ನು ಕಡಿಮೆ ಮಾಡುವುದು, (15) ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆರ್ಥಿಕ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳುವುದು, (16) ಉದ್ದಿಮೆ-ಕೈಗಾರಿಕೆ-ಶಿಕ್ಷಣ ಇವುಗಳ ನಡುವೆ ಪರಸ್ಪರ ಸಂಪರ್ಕ ಕಲ್ಪಿಸುವುದು, (17) ರಾಷ್ಟ್ರೀಯ ಅಗತ್ಯತೆಗೆ ಪೂರಕವಾದ ತಂತ್ರಜ್ಞಾನದಲ್ಲಿ ತರಬೇತಿ ನೀಡುವುದು.

ಇವೇ ಮೊದಲಾದ ಉದ್ದೇಶಗಳನ್ನು ಈಡೇರಿಸಬೇಕಾದರೆ ಶಿಕ್ಷಣದ ವಿವಿಧ ಹಂತಗಳಲಿ ವೃತ್ತಿ ಶಿಕ್ಷಣವನ್ನು ಜಾರಿಗೆ ತಂದು ವಿದ್ಯಾರ್ಥಿಗಳ ಆಸೆ-ಆಕಾಂಕ್ಷೆ ಅವಶ್ಯಕತೆಗಳಿಗನುಸಾರವಾಗಿ ಸೂಕ್ತ ವೃತ್ತಿ ಮಾರ್ಗದರ್ಶನ ಸೇವಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

**ವೃತ್ತಿ ಶಿಕ್ಷಣದ ಹಂತಗಳು:** (1) ಐ.ಟಿ.ಐ ಗಳಲ್ಲಿರುವ ವಿವಿಧ ಶಿಕ್ಷಣ ಕೋರ್ಸ್‌ಗಳ ಮೂಲಕ ಅಗತ್ಯ ಸಾಮರ್ಥ್ಯ ಕೌಶಲಗಳನ್ನು ಬೆಳೆಸಲು ಸೂಕ್ತ ವೃತ್ತಿ ತರಬೇತಿ ನೀಡುವುದು, (2) ಪಾಲಿಟೆಕ್ನಿಕ್ ಹಂತದಲ್ಲಿ ಅಗತ್ಯ ತಂತ್ರಜ್ಞಾನ, ಕೌಶಲ, ಸಾಮರ್ಥ್ಯವನ್ನು ಬೆಳೆಸುವುದರ ಮೂಲಕ ದೇಶದ ಅಭಿವೃದ್ಧಿಗೆ ಪೂರಕವಾದ ಜ್ಞಾನವನ್ನು ಬೆಳೆಸಲು ಶಿಕ್ಷಣ ತರಬೇತಿ ನೀಡುವುದು, (3) ಶಿಕ್ಷಕ ವೃತ್ತಿ ಶಿಕ್ಷಣ ಕೋರ್ಸುಗಳ ಮೂಲಕ ಬೋಧನೆ ಕೌಶಲ ಬೆಳೆಸುವುದು, (4) ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಹಂತದಲ್ಲಿ ಶಿಕ್ಷಣ ತರಬೇತಿ ನೀಡುವುದು, (5) ಕಲೆ, ವಾಸ್ತುಶಿಲ್ಪ (6) ಆಭರಣ ತಯಾರಿ ಶಿಕ್ಷಣ ಮತ್ತು ಚರ್ಮ ಉತ್ಪಾದನ ಹಾಗೂ ಇತರೆ ಕ್ಷೇತ್ರಗಳಲ್ಲಿ ವೃತ್ತಿ ಶಿಕ್ಷಣವನ್ನು ನೀಡುವುದು.

1986ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಓಇಕ)ಗನುಸಾರವಾಗಿ ಕೇಂದ್ರ ಸರ್ಕಾರ ವೃತ್ತಿ ಶಿಕ್ಷಣಕ್ಕೆ ಇಂದು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದೆ. ಇದರ ಆಧಾರದ ಮೇಲೆ ಎಲ್ಲ ರಾಜ್ಯ ಸರ್ಕಾರಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಪ್ರೌಢಶಾಲಾ ಹಂತದಲ್ಲಿ +2 ಹಂತ (ಪದವಿ ಪೂರ್ವ ಶಿಕ್ಷಣ)ದಲ್ಲಿ, ಪದವಿ ಹಂತದಲ್ಲಿ ಅನೇಕ ವೃತ್ತಿ ಶಿಕ್ಷಣ ಕೋರ್ಸ್ (ಎಔಅ)ಗಳನ್ನು ಆರಂಭಿಸಿ ಶಿಕ್ಷಣವನ್ನು ವೃತ್ತಿಪರ ಶಿಕ್ಷಣವನ್ನಾಗಿ ನೀಡುವಲ್ಲಿ ಹೆಚ್ಚು ಒಲವನ್ನು ತೋರಿಸುತ್ತಿವೆ. ಹಾಗೆಯೇ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗ (ಗಉಅ) ವು ಸಹ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಅನೇಕ ಹೊಸ ಹೊಸ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಆರಂಭಿಸಲು ಪ್ರಯತ್ನಿಸುತ್ತಿದೆ.

**ವೃತ್ತಿ ಶಿಕ್ಷಣದ ಅವಕಾಶಗಳು:** ವೃತ್ತಿ ಶಿಕ್ಷಣವನ್ನು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸಬಹುದು. ಅವುಗಳಲ್ಲಿ ಮುಖ್ಯ ವಾದವುಗಳೆಂದರೆ: ಕೃಷಿ ಕ್ಷೇತ್ರ, ವಾಣಿಜ್ಯ ಕ್ಷೇತ್ರ, ಗೃಹವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ತಾಂತ್ರಿಕ (ಐ.ಟಿ.ಐ ಮತ್ತು ಪಾಲಿಟೆಕ್ನಿಕ್), ಸಹಕಾರ, ಮಾರುಕಟ್ಟೆ, ಜವಳಿ ಇತ್ಯಾದಿ.

ಕೊಠಾರಿ ಆಯೋಗವು ಇಡೀ ಶಿಕ್ಷಣ ಕ್ರಮವನ್ನು 10+2+3 ಎಂದು ವಿಂಗಡಿಸಿ ಸಾಮಾನ್ಯ ಶಿಕ್ಷಣ, ವೃತ್ತಿ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಹೀಗೆ ಮೂರು ರೀತಿಯಲ್ಲಿ ವಿಂಗಡಿಸಿತು. 1968 ರಲ್ಲಿ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ಕೊಠಾರಿ ಆಯೋಗದ ಶಿಫಾರಸ್ಸಿನ ಮೇರೆಗೆ ಪ್ರೌಢಶಾಲಾ ಹಂತದಲ್ಲಿಯೇ ವೃತ್ತಿ ಶಿಕ್ಷಣವನ್ನು ಜಾರಿಗೆ ತರಲು ಒಪ್ಪಿಕೊಂಡಿತು. 1976 ರಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ತರಬೇತಿ ಮಂಡಳಿ (NCERT) "ಎಜುಕೇಷನ್ ಅಂಡ್ ಇಟ್ಸ್ ವೆಕೇಷನಲೈಜೇಷನ್" ಎಂಬ ಗ್ರಂಥ ಪ್ರಕಟಿಸಿ ಅದರಲ್ಲಿ ವೃತ್ತಿ ಶೀಕ್ಷಣದ ವಿವಿಧ ಕೋರ್ಸುಗಳನ್ನು ತಿಳಿಸಿದೆ. ಶಿಕ್ಷಣ ಮತ್ತು ಉದ್ಯೋಗದ ನಡುವೆ ಇರುವ ಸಂಬಂಧ ಹಗೂ ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ವೃತ್ತಿಪರ ಶಿಕ್ಷಣದ ಅಗತ್ಯತೆಯನ್ನು ತಿಳಿಸುತ್ತದೆ.

ಕರ್ನಾಟಕದಲ್ಲಿ 1977-78 ರಲ್ಲಿ +2 ಹಂತ (ಪದವಿ ಪೂರ್ವ ಶಿಕ್ಷಣ)ದಲ್ಲಿ ವೃತ್ತಿ ಶಿಕ್ಷಣದ ಡಿಪ್ಲೊಮಾ ಕೋರ್ಸ್ (Job Oriented Vocational Diploma Course)ಅನ್ನು ಜಾರಿಗೆ ತರಲಾಯಿತು. ವೃತ್ತಿ ಶಿಕ್ಷಣದ ಪ್ರಗತಿಯನ್ನು ಕುರಿತು ಮೇಲ್ವಿಚಾರಣೆ ಮಾಡಲು ಸರ್ಕಾರ ರಾಜ್ಯ ವೃತ್ತಿ ಶಿಕ್ಷಣ ನಿರ್ದೇಶನಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದೆ.

Digitised by Bharatavani, CIIL

## ವೃತ್ತಿಪರ ಶಿಕ್ಷಣ

ವೃತ್ತಿ ಶಿಕ್ಷಣದ ಕಡೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ತರಗತಿಗಳಲ್ಲಿ ತೇರ್ಗಡೆ ಆದವರನ್ನು ವೃತ್ತಿ ಶಿಕ್ಷಣಕ್ಕೆ ಪ್ರವೇಶ ಮಾಡಿಕೊಳ್ಳಲಾಗುತ್ತಿದೆ, ಈ ಹಂತದಲ್ಲಿ ಕಲಿಕೆಯ ಶೇಕಡ 25 ರಷ್ಟು ಸಮಯವನ್ನು ಭಾಷಾ ಬೋಧನೆಗೂ ಶೇಕಡ 45 ರಷ್ಟು ಸಮಯವನ್ನು ವೃತ್ತಿ ಶಿಕ್ಷಣ ವಿಷಯಗಳ ಬೋಧನೆಗೆ ಸೀಮಿತವಾಗಿರುತ್ತವೆ. ಉಳಿದ ಶೇಕಡ 30 ರಷ್ಟು ಸಮಯವನ್ನು ಪ್ರಾಯೋಗಿಕ ಅನಭವಕ್ಕೆ ಗೊತ್ತುಪಡಿಸಲಾಗಿದೆ. +2 ಹಂತದ ವೃತ್ತಿ ಶಿಕ್ಷಣವನ್ನು ಪಡೆದು ಪದವಿ ತರಗತಿಯ ಕಲಾ, ವಾಣಿಜ್ಯ ವಿಭಾಗಕ್ಕೆ (ಬಿ.ಎ, ಬಿ.ಕಾಂ) ಪ್ರವೇಶ ಪಡೆದು ಶಿಕ್ಷಣವನ್ನು ಮುಂದುವರೆಸಬಹುದು.

### +2 ಹಂತದಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪಟ್ಟಿ:

| | | | |
|---|---|---|---|
| 1 | ಸಿವಿಲ್ ಕನ್‌ಸ್ಟ್ರಕ್ಷನ್ ಟೆಕ್ನಾಲಜಿ | 29 | ಅಕೌಂಟೆನ್ಸಿ ಅಂಡ್ ಟಾಕ್ಸೇಷನ್ |
| 2 | ಆಟೋಮೊಬೈಲ್ ಸರ್ವಿಸಿಂಗ್ | 30 | ಅಕೌಂಟೆನ್ಸಿ ಅಂಡ್ ಆಡಿಟಿಂಗ್ |
| 3 | ಟೂ ವೀಲರ್‍ಸ ಸರ್ವಿಸಿಂಗ್ | 31 | ಅಕೌಂಟೆನ್ಸಿ ಅಂಡ್ ಕಾಸ್ಟಿಂಗ್ |
| 4 | ಎಲೆಕ್ಟ್ರಿಕ್ ವೈರಿಂಗ್ | 32 | ಆಫೀಸ್ ಮ್ಯಾನೇಜ್‌ಮೆಂಟ್ |
| 5 | ಕ್ಲಾಕ್ ಅಂಡ್ ವಾಚ್ ರಿಪೇರ್ಸ್ | 33 | ಮಾರ್ಕೆಟಿಂಗ್ ಮತ್ತು ಸೇಲ್ಸ್‌ಮನ್‌ಷಿಪ್ |
| 6 | ಪೇಯಿಂಟಿಂಗ್ ಅಂಡ್ ಕಮರ್ಷಿಯಲ್ ಆರ್ಟ್ಸ್ | 34 | ಲೈಬ್ರರಿ ಅಂಡ್ ಇನ್‌ಫಾರ್ಮೇಷನ್ ಸೈನ್ಸ್ |
| 7 | ಪ್ರಿಂಟಿಂಗ್ ಅಂಡ್ ಬುಕ್ ಬೈಂಡಿಂಗ್ | 35 | ಸರ್ವೇಯಿಂಗ್ |
| 8 | ಕ್ಲಾಥಿಂಗ್ ಮತ್ತು ಎಂಬ್ರಾಯಿಡರಿ | 36 | ಪ್ರೀ ಸ್ಕೂಲ್ ಎಜುಕೇಷನ್ |
| 9 | ಟೆಕ್ಸ್‌ಟೈಲ್ ಟೆಕ್ನೀಷಿಯನ್ | 37 | ಸಿವಿಲ್ ಕನ್‌ಸ್ಟ್ರಕ್ಷನ್ ಟೆಕ್ನಾಲಜಿ |
| 10 | ಶುಗರ್ ಟಿಕ್ನಾಲಜಿ | 38 | ಎಲೆಕ್ಟ್ರಾನಿಕ್ ಟೆಕ್ನಾಲಜಿ |
| 11 | ಕಂಪ್ಯೂಟರ್ ಟೆಕ್ನಿಕ್ | 39 | ಹೆಲ್ತ್ ಕೇರ್ ಅಂಡ್ ಬ್ಯೂಟಿ ಕಲ್ಚರ್ |
| 12 | ಟಿ.ವಿ ಅಂಡ್ ರೇಡಿಯೋ ಸರ್ವಿಸಿಂಗ್ | 40 | ಹೆಲ್ತ್ ಅಂಡ್ ಬ್ಯೂಟಿ ಕೇರ್ |
| 13 | ಪೌಲ್ಟ್ರಿ ಸೈನ್ಸ್ | 41 | ಸ್ಟೆನೋಗ್ರಫಿ |
| 14 | ಡೈರಿಯಿಂಗ್ | 42 | ಕಮರ್ಷಿಯಲ್ ಆರ್ಟ್ಸ್ |
| 15 | ಸೆರಿಕಲ್ಚರ್ | 43 | ಗಾರ್‌ಮೆಂಟ್ ಮೇಕಿಂಗ್ |
| 16 | ಫಿಷರೀಸ್ | 44 | ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ ಮೇಕಿಂಗ್ |
| 17 | ಕೋ–ಆಪರೇಷನ್ | 45 | ಎಂಟರ್‌ಟೈನ್‌ಮೆಂಟ್ |
| 18 | ಅಗಿಕಲ್ಚರಲ್ ಕೆಮಿಕಲ್ಸ್ | 46 | ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ ಅಂಡ್ ಸರ್ವಿಸಿಂಗ್ |
| 19 | ಪ್ಲಾಂಟೇಷನ್ ಕ್ರಾಫ್ಟ್ ಅಂಡ್ ಮ್ಯಾನೇಜ್‌ಮೆಂಟ್ | 47 | ಮೆಕ್ಯಾನಿಕಲ್ ಸರ್ವಿಸಿಂಗ್ (ಆಟೋಮೊಬೈಲ್) |
| 20 | ಅಗಿಕಲ್ಚರಲ್ ಎಕನಾಮಿಕ್ಸ್ ಅಂಡ್ ಫಾರಂ ಮ್ಯಾನೇಜ್‌ಮೆಂಟ್ | 48 | ಕಮರ್ಷಿಯಲ್ ಗಾರ್ಮೆಂಟ್ ಡಿಸೈನಿಂಗ್ ಅಂಡ್ ಮೇಕಿಂಗ್ |
| 21 | ಹಾರ್ಟಿಕಲ್ಚರ್ | 49 | ಆಫೀಸ್ ಆಟೋಮೇಷನ್ |
| 22 | ಲ್ಯಾಬರೇಟರಿ ಟೆಕ್ನೀಷಿಯನ್ | 50 | ಪರ್ಸನಲ್ ಕಂಪ್ಯೂಟರ್ ಸರ್ವಿಸಿಂಗ್ |
| 23 | ಲ್ಯಾಂಡ್ ಅಂಡ್ ಸಿಟಿ ಸರ್ವೇ | 51 | ಇನ್‌ಸ್ಟ್ರುಮೆಂಟೇಷನ್ ಸರ್ವಿಸಿಂಗ್ |
| 24 | ಟೆಕ್ಸ್‌ಟೈಲ್ ಡಿಸೈನಿಂಗ್ | 52 | ರೂರಲ್ ವಾಟರ್ ಸಪ್ಲೈ ಅಂಡ್ ಟೆಸ್ಟಿಂಗ್ |
| 25 | ಆಡಿಯೋವಿಶುಯಲ್ ಟೆಕ್ನೀಷಿಯನ್ | 53 | ಮೆಯಿಂಟೆನೆನ್ಸ್, ರಿಪೈರ್ ಆಫ್ ಎಲೆಕ್ಟ್ರಿಕಲ್ ಡೊಮೆಸ್ಟಿಕ್ ಅಪ್ಲೈಯೆನ್ಸಸ್ |
| 26 | ಮೆಕ್ಯಾನಿಕಲ್ ಸರ್ವಿಸಿಂಗ್ (ಟೂ ವೀಲರ್ಸ್) | 54 | ರೆಫ್ರಿಜರೇಟರ್ ಅಂಡ್ ಏರ್‌ಕಂಡೀಷನಿಂಗ್ |
| 27 | ಬ್ಯಾಂಕಿಂಗ್ | 55 | ಪೌಲ್ಟ್ರಿ ಫಾರ್‌ಮಿಂಗ್ |
| 28 | ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಟೆಕ್ನಾಲಜಿ | 56 | ಮೆಷಿನಿಸ್ಟ್ |

Digitised by Bharatavani, CIIL

ಕೊಠಾರಿ ಆಯೋಗದ ಶಿಫಾರಸ್ಸು: "ಭವಿಷ್ಯದಲ್ಲಿ ಉತ್ತಮ ಉತ್ಪಾದನಾದಾರರು, ಉದ್ದಿಮೆದಾರರು, ವಾಣಿಜ್ಯ ತರಬೇತಿ ಪಡೆದ ವ್ಯಕ್ತಿಗಳನ್ನು ತಯಾರಿಸುವ ಪೂರ್ವತಯಾರಿಯೇ ವೃತ್ತಿಶಿಕ್ಷಣ". ಇದನ್ನು ಸಾಮಾನ್ಯ ಶಿಕ್ಷಣದೊಂದಿಗೆ ಪಠ್ಯಕ್ರಮದಲ್ಲಿ ಸೂಕ್ತವಾಗಿ ಹೆಣೆದು ಮುಂದುವರೆಸಬೇಕೆಂದು ಅಭಿಪ್ರಾಯಪಟ್ಟಿದೆ. ವೃತ್ತಿ ಶಿಕ್ಷಣವನ್ನು ಅನುಷ್ಠಾನಕ್ಕೆ ತರುವಾಗ ಈ ಕೆಳಕಂಡ ಹತ್ತು ಅಂಶಗಳನ್ನು ಗಮನಿಸಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕೊಠಾರಿ ಆಯೋಗವು ಶಿಫಾರಸ್ಸು ಮಾಡಿದೆ:

(1) ಸಮಾಜದ ಅವಶ್ಯಕತೆ ಮತ್ತು ಅಗತ್ಯತೆಗೆ ಅನುಗುಣವಾದಂತಹ ಹಾಗೂ ವಿದ್ಯಾರ್ಥಿಗಳ ಆಸೆ–ಆಕಾಂಕ್ಷೆ ಗಳನ್ನು ಈಡೇರಿಸುವಂತಹ ಶಿಕ್ಷಣದ ಕೋರ್ಸುಗಳನ್ನು ಆರಂಭಿಸಬೇಕು, (2) ವಿವಿಧ ರೀತಿಯ ವೃತ್ತಿಪರ ಶಿಕ್ಷಣ ಕೋರ್ಸುಗಳಿಗೆ ಸೂಕ್ತವಾದ ಅಭ್ಯರ್ಥಿಗಳ ಆಯ್ಕೆಗಾಗಿ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು, (3) ರಾಜ್ಯ ಸರ್ಕಾರಗಳು ವೃತ್ತಿ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿ ಕೊಂಡು ಬರುವ ಸಲುವಾಗಿ ವೃತ್ತಿ ಶಿಕ್ಷಣ ಮಂಡಳಿಯನ್ನು ತೆರೆದು ಅರ್ಹ ಸಿಬ್ಬಂದಿ ವರ್ಗವನ್ನು ನೇಮಕ ಮಾಡುವುದು, (4) ಪ್ರಾರಂಭಿಸಿದ ವಿವಿಧ ರೀತಿಯ ಶಿಕ್ಷಣ ಕೋರ್ಸ್‌ಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸಾಕಷ್ಟು ಆರ್ಥಿಕ ನೆರವನ್ನು ಒದಗಿಸಬೇಕು, (5) ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಕ್ಕೆ ಹೆಚ್ಚು ಉಪಯುಕ್ತವಾಗುವಂತಹ ಶಿಕ್ಷಣ ಕೋರ್ಸುಗಳನ್ನು ಆರಂಭಿಸಬೇಕು, (6) ಇಂದಿನ ಕೈಗಾರಿಕೆಗಳ ಅವಶ್ಯಕತೆಗನುಸಾರವಾಗಿ ಸದ್ಯದಲ್ಲಿರುವ ತರಬೇತಿ ಕೋರ್ಸುಗಳನ್ನು ಪರಿಷ್ಕರಿಸಿ ಅಗತ್ಯವಾದಂತವುಗಳನ್ನು ಹೊಸದಾಗಿ ಸೇರಿಸಬೇಕು, (7) ಪಾಲಿಟೆಕ್ನಿಕ್ ಗಳಲ್ಲಿ ಕಲಿಸುವ ಕೋರ್ಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು, (8) ಐ.ಟಿ.ಐ ಮತ್ತು ಪಾಲಿಟೆಕ್ನಿಕ್‌ಗಳಲ್ಲಿರುವ ಈಗಿನ ಸೌಲಭ್ಯಗಳನ್ನು ಮತ್ತಷ್ಟು ಹೆಚ್ಚಿಸಬೇಕು, (9) ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಹೆಣ್ಣುಮಕ್ಕಳಿಗೆ ಗೃಹ ವಿಜ್ಞಾನ, ನರ್ಸಿಂಗ್, ಟೈಲರಿಂಗ್ ಮುಂತಾದ ವಿಷಯಗಳನ್ನು ಸೇರಿಸುವುದು, (10) ವೃತ್ತಿ ಶಿಕ್ಷಣ ವಿಸ್ತರಣೆಯು ಮಾನವನ ಶಕ್ತಿಯ ಅವಶ್ಯಕತೆಗೆ ಅನುಸಾರವಾಗಿಬೇಕು.

ಈ ಶಿಫಾರಸ್ಸುಗಳನ್ನು ಅನುಸರಿಸುವುದರಿಂದ ವೃತ್ತಿ ಶಿಕ್ಷಣ ವಿಸ್ತರಣೆ ಆಗುವುದರ ಜೊತೆಗೆ ದೇಶದ ಆರ್ಥಿಕ ಪ್ರಗತಿಯೂ ಸುಧಾರಿಸುತ್ತದೆ ಎನ್ನಬಹುದು.

**ಶೈಕ್ಷಣಿಕ ಚಟುವಟಿಕೆಗಳು:** ಶಿಕ್ಷಣದ ಔದ್ಯೋಗಿಕ ಗುರಿಯನ್ನು ನಾವು ನೇರವಾದ ಶೈಕ್ಷಣಿಕ ಚಟುವಟಿಕೆಗಳಿಂದ ಸಾಧಿಸದೇ ಪರೋಕ್ಷವಾದ ಚಟುವಟಿಕೆಗಳಿಂದ ಸಾಧಿಸುವುದು ಉತ್ತಮ. ನಮ್ಮ ಶಾಲಾ ಪಠ್ಯಕ್ರಮವು ವಿಶಾಲ ವ್ಯಾಪ್ತಿಯುಳ್ಳ ವಿಷಯಗಳನ್ನು, ಶೈಕ್ಷಣಿಕ ಚಟುವಟಿಕೆಗಳನ್ನು ಹೊಂದಿರುವಂತೆ ಮಾಡಬೇಕು. ಸಾಮಾನ್ಯ ವಿಜ್ಞಾನ, ಸಮಾಜ ವಿಜ್ಞಾನ, ಸಂಸ್ಕೃತಿ, ಭಾಷೆ, ಗಣಿತ ಮುಂತಾದ ವಿಷಯದ ಜೊತೆ ವೃತ್ತಿ ಕೌಶಲಗಳನ್ನು ಬೆಳೆಸಲು ಸಹಾಯ ಮಾಡುವ ತೋಟಗಾರಿಕೆ, ಗೃಹ ವಿಜ್ಞಾನ, ಗೃಹ ಕೈಗಾರಿಕೆ, ಸರಳ ಕಸುಬುಗಳಿಗೆ ಸಂಬಂಧಿಸಿದ ತರಬೇತಿಯ ಚಟುವಟಿಕೆಗಳನ್ನು ಪಠ್ಯಕ್ರಮ ಹೊಂದಿರುವಂತೆ ಏರ್ಪಾಟು ಮಾಡುವುದು ಬಹಳ ಪ್ರಯೋಜನಕಾರಿ ಯಾಗುವುದು.

ಶಾಲಾ ಕಾಲೇಜುಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳಿಗೆ ಹಾಗೂ ಪ್ರಾಯೋಗಿಕ ಚಟುವಟಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡುವುದು ಉತ್ತಮ. ಈ ವಿಷಯಗಳು ಯಾವ ಯಾವ ರೀತಿಯ ವೃತ್ತಿ ಅವಕಾಶಗಳನ್ನು ತಂದು ಕೊಡಬಲ್ಲವು ಎಂಬ ಅರಿವನ್ನು ಬೋಧನಾ ಸಮಯದಲ್ಲಿ ಮೂಡಿಸಬೇಕು. ಅದಕ್ಕೆ ಪೂರಕವಾದ ಕೌಶಲಗಳನ್ನು ಪರೋಕ್ಷವಾಗಿ ಬೆಳೆಸುವಂತೆ ಏರ್ಪಾಟು ಮಾಡಬೇಕು. ಇದಕ್ಕೆ ಪ್ರಯೋಗ ಶಾಲಾ ಚಟುವಟಿಕೆ, ಮತ್ತು ಬೋಧನಾ ವಿಷಯಗಳಿಗೆ ಸಂಬಂಧಿಸಿದ ಯೋಜನಾ ಚಟುವಟಿಕೆಗಳು ಬಹಳ ಸಹಾಯ ಮಾಡುತ್ತವೆ. 'ಮಾಡಿ ಕಲಿ ಮತ್ತು ನೋಡಿ ಕಲಿ' ತತ್ತ್ವ ಆಧಾರಿತ ಕ್ರಮದಲ್ಲಿ ಕಲಿಕೆ ಸಾಗಬೇಕು.

ಶಾಲಾ ಕಾಲೇಜುಗಳಿಗೆ ಕಾರ್ಯಾನುಭವ ಚಟುವಟಿಕೆ, ಸಾಮಾಜಿಕ ಉಪಯುಕ್ತ ಹಾಗೂ ಉತ್ಪಾದಕ ಕಾರ್ಯ ಚಟುವಟಿಕೆಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಅವಶ್ಯ. ಈ ಚಟುವಟಿಕೆಗಳು ಅನೇಕ ವೃತ್ತಿಗಳಿಗೆ ಹಾಗೂ ಕಸುಬುಗಳಿಗೆ ಸಂಬಂಧಿಸಿದ ಕಾರ್ಯ ವಿಧಾನಗಳ ಬಗ್ಗೆ ಅರಿವನ್ನು ಮತ್ತು ಕೌಶಲಗಳನ್ನು ಬೆಳೆಸಬೇಕು. ಈ ರೀತಿಯ ಶಿಕ್ಷಣವು ಸೂಕ್ತವಾದ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಮುಂದೆ ವಿದ್ಯಾರ್ಥಿಗಳಿಗೆ ಸಹಾಯವಾಗಬಹುದು.

ಎಲ್ಲಾ ಶಾಲಾ ಕಾಲೇಜುಗಳಲ್ಲಿ ಉಪಯುಕ್ತ ಹಾಗೂ ಉತ್ಪಾದಕ ಚಟುವಟಿಕೆಗಳಿಗೆ ಸಾಕಷ್ಟು ಅವಕಾಶವಿರಬೇಕು. ಸೂಕ್ತವಾದ ಪ್ರಯೋಗ ಶಾಲೆಗಳನ್ನು, ಕಾರ್ಯಾಗಾರಗಳನ್ನು ಸ್ಥಾಪಿಸಿ ಪ್ರಾಯೋಗಿಕ ಚಟುವಟಿಕೆಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ತೋಟಗಾರಿಕೆ, ಮರಗೆಲಸ, ಕಸೂತಿ, ಆಭರಣ ತಯಾರಿಕೆ, ಚಿತ್ರಕಲೆ, ಸಂಗೀತ, ಗೃಹ ಕೈಗಾರಿಕೆ ಮುಂತಾದ ಕಸುಬುಗಳಿಗೆ ಸಂಬಂಧಿಸಿದ ವೃತ್ತಿ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು.

ಪ್ರೌಢಶಾಲಾ ಹಂತದಲ್ಲಿ ಶಿಕ್ಷಣವು ವೃತ್ತಿಪರ ಒಲವನ್ನೂ, ಉನ್ನತ ಶಿಕ್ಷಣ ಹಂತದಲ್ಲಿ ವ್ಯವಸಾಯ ಮತ್ತು ತಂತ್ರಜ್ಞಾನ ಪರ ಒಲವನ್ನೂ ಶಿಕ್ಷಣ ಹೊಂದಿರಬೇಕು. ಸೂಕ್ತ ವ್ಯಕ್ತಿ, ಸೂಕ್ತ ವೃತ್ತಿಯನ್ನು ಸೂಕ್ತ ಸಮಯದಲ್ಲಿ ಪಡೆಯುವಂತಾಬೇಕೆಂಬುದೇ ಇದರ ಪ್ರಮುಖ ತತ್ತ್ವ. ವೃತ್ತಿ ಮಾರ್ಗದರ್ಶನ ಕೇಂದ್ರಗಳನ್ನು ಶಾಲಾ ಕಾಲೇಜುಗಳಲ್ಲಿ ಸ್ಥಾಪಿಸಿ, ಅವುಗಳಿಂದಲೂ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಸಿಗುವಂತಾಗಬೇಕು.

ಕೈಗಾರಿಕೆ ಮತ್ತು ವೃತ್ತಿ ತರಬೇತಿ ಕೇಂದ್ರಗಳಿಗೆ ಆಗಾಗ್ಗೆ ಸಂದರ್ಶನಗಳನ್ನು ಏರ್ಪಾಟು ಮಾಡಿ ಅಲ್ಲಿ ಲಭ್ಯವಿರುವ ವೃತ್ತಿ ಅವಕಾಶಗಳು ಮತ್ತು ಅವುಗಳಿಗೆ ಅವಶ್ಯವಾಗಿ ಬೇಕಾಗುವ ವೃತ್ತಿ ಕೌಶಲಗಳ ಬಗ್ಗೆ ಜಾಗೃತಿ ಮೂಡಿಸಬಹುದು. ವೃತ್ತಿ ಶಿಕ್ಷಣವನ್ನು

Digitised by Bharatavani, CIIL

ನೀಡುವುದರ ಮೂಲಕ ಮಾನವ ಶಕ್ತಿಯನ್ನು ಹಾಗೂ ಪ್ರಚಲಿತ ತರಬೇತಿ ಸೌಕರ್ಯಗಳನ್ನು ಸದುಪಯೋಗ ಮಾಡಿಕೊಂಡು ಸರ್ಕಾರವು ಹೆಚ್ಚು ಹೆಚ್ಚು ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿ ಶಿಕ್ಷಣದಲ್ಲಿ ಅತ್ಯಂತ ಹೆಚ್ಚು ಸಾಮರಸ್ಯವನ್ನು ಉಂಟು ಮಾಡಬೇಕಾಗಿದೆ.

ಉದ್ಯೋಗ ಕ್ಷೇತ್ರದಲ್ಲಿ ಹೊಸ ಹೊಸ ಅವಕಾಶಗಳು, ವಿದ್ಯಾರ್ಥಿಗಳ ಮನೋಸಾಮರ್ಥ್ಯ, ಅವರ ಜೀವನದ ಗುರಿ ನಿರ್ಧಾರಗಳು, ಸ್ವಯಂ ಅವಲೋಕನ, ಮಾರ್ಗದರ್ಶನದ ತರಬೇತಿ, ಆತ್ಮವಿಶ್ವಾಸ, ಭಾಷಾ ಕೌಶಲ ಮುಂತಾದ ಜೀವನ ನಿರ್ವಹಣೆ ಮಾಡುವ ಕೌಶಲಗಳನ್ನು ವಿದ್ಯಾರ್ಥಿ ಶಿಕ್ಷಣದಲ್ಲಿ ಬೆಳೆಸಿಕೊಳ್ಳುವುದರ ಮೂಲಕ ಸ್ವಾವಲಂಬಿಯಾಗಿ ಜೀವನವನ್ನು ಮಾಡಲು ಈ ವೃತ್ತಿ ಶಿಕ್ಷಣಗಳು ನೆರವಾಗಬೇಕಾಗಿದೆ. ಭಾರತ ದೇಶದಲ್ಲಿ ಆರ್ಥಿಕತೆಯ ಹಿನ್ನೆಲೆಯಲ್ಲಿ ಜೀವನ ನಿರ್ವಹಣೆಗೆ ಈ ವೃತ್ತಿ ಶಿಕ್ಷಣಗಳ ಮೂಲಕ ಸಮತೋಲನ ವ್ಯವಸ್ಥೆಯಲ್ಲಿ ಜೀವಿಸಲು ವೃತ್ತಿ ಶಿಕ್ಷಣವು ನೆರವಾಗಬೇಕಾಗಿದೆ.

–ಡಾ. ಎರ್ರಿಸ್ವಾಮಿ ಎಂ.ಸಿ.

## ವೃತ್ತಿಯಾಗಿ ಬೋಧನೆ

**ಪೀಠಿಕೆ:** ಭಾರತವು ಶಿಕ್ಷಣದ ದೀರ್ಘ ಚಾರಿತ್ರಿಕ ಸಂಪ್ರದಾಯವನ್ನು ಹೊಂದಿದೆ. ಆದರೆ ಪುರಾತನ ಭಾರತದಲ್ಲಿ, ಬೋಧನೆಯನ್ನು ಹಣ ಗಳಿಕೆಗಾಗಿ ಕೈಗೊಳ್ಳುತ್ತಿರಲಿಲ್ಲ. ಹಾಗೆ ಮಾಡಿದ ಪಕ್ಷದಲ್ಲಿ ಅಂಥವರನ್ನು ಜ್ಞಾನದ ದಳ್ಳಾಳಿಗಳೆಂದು ಖಂಡಿಸುತ್ತಿದ್ದರು. (ತಂ ಜ್ಞಾನ ಪಣ್ಯಂ ವಣಿಜಂ ವದಂತಿ). ಇದು ವೃತ್ತಿಯಾಗಲಿ, ಕಸುಬಾಗಲಿ ಆಗಿರಲಿಲ್ಲ. ತದ್ವಿರುದ್ಧವಾಗಿ, ಇದು ಬ್ರಾಹ್ಮಣವರ್ಗದ ಸಹಜ ಕರ್ತವ್ಯ ಅಥವಾ ಧರ್ಮವಾಗಿದ್ದು ಆ ವರ್ಗದ ಜೀವನದ ಗುರಿಯಾಗಿತ್ತು. (ಅಧ್ಯಯನಂ ಅಧ್ಯಾಪನಂ ಚೈವ ಬ್ರಹ್ಮ ಕರ್ಮ ಸ್ವಭಾವಜಂ). (ಅಧ್ಯಯನಂ ಅಧ್ಯಾಪನಂ ಚೈವ ಬ್ರಹ್ಮ ಕರ್ಮ ಸ್ವಭಾವಜಂ). ಜ್ಞಾನ ಪ್ರಸಾರ ಅಥವಾ ವಿದ್ಯಾದಾನ ಅವರ ಸಾಮಾಜಿಕ ಮತ್ತು ನೈತಿಕ ಹೊಣೆಯಾಗಿತ್ತು. ಬ್ರಾಹ್ಮಣವರ್ಗ ಪ್ರಾರಂಭದಲ್ಲಿ ಒಂದು ಜಾತಿಯಾಗಿರದೆ ಒಬ್ಬ ವ್ಯಕ್ತಿಯು ತನ್ನ ಪ್ರಯತ್ನದಿಂದ ಗಳಿಸುವ ಸ್ಥಾನಮಾನವಾಗಿತ್ತು. (ಬ್ರಹ್ಮ ಜಾನೇತಿ ಬ್ರಾಹ್ಮಣಃ). ಕಾಲಾನಂತರ, ಇದು ಒಂದು ಜಾತಿಪದ್ಧತಿಯಾಗಿ ಹಿಂದೆ ಸರಿಯಿತು. ಆದರೆ, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೂ ಅತ್ಯುನ್ನತ ಜ್ಞಾನ ನೀಡುವ ಬೋಧಕರ ಪಾತ್ರ ವಹಿಸಿದ ನಿದರ್ಶನಗಳು ಉಂಟು. ಆದರೆ ಇಂತಹ ಉದಾಹರಣೆಗಳು ವಿರಳ.

ತದನಂತರದ ಸಾಮಾಜಿಕ ಬೆಳವಣಿಗೆಯ ಒಂದು ಹಂತದಲ್ಲಿ ಬ್ರಾಹ್ಮಣವರ್ಗ ಒಂದು ಜಾತಿಪದ್ಧತಿಯಾಗಿ ಪರಿಣಮಿಸಿ ವಂಶಾನುಗತವಾಯಿತಾದರೂ ವೃತ್ತಿಯನ್ನು ಮಾತ್ರ ಹಣಗಳಿಕೆಗೆಂದು ಕೈಗೊಳ್ಳುತ್ತಿರಲಿಲ್ಲ. ಬೋಧಕ ಸಮುದಾಯವನ್ನು ಪರಿಪಾಲಿಸುವುದು ಸಮಾಜದ ಕರ್ತವ್ಯವಾಗಿತ್ತು. ಈ ಸಂಪ್ರದಾಯವನ್ನು ಬೌದ್ಧ ಭಿಕ್ಷುಗಳು ಮತ್ತು ಜೈನ ಮುನಿಗಳು ತಮ್ಮ ಶಿಷ್ಯರ ಬಳಿ ಶುಲ್ಕವನ್ನು ಸ್ವೀಕರಿಸದೆ ಬೋಧನೆಯನ್ನು ಮುಂದುವರೆಸಿದರು. ಭಾರತಕ್ಕೆ ಮಧ್ಯಯುಗದಲ್ಲಿ ಇಸ್ಲಾಂ ಧರ್ಮವು ಪ್ರವೇಶಿಸಿ ಮುಸ್ಲಿಮರು ಪ್ರಭುಗಳಾದಾಗ ಉಲೇಮಾಗಳು ಅಥವಾ ಮತಧರ್ಮಶಾಸ್ತ್ರ ಪರಿಣತರು ಪ್ರತಿಯಾಗಿ ಏನನ್ನೂ ಸ್ವೀಕರಿಸದೆ ಪವಿತ್ರ ಶಿಕ್ಷಣವನ್ನು ತಮ್ಮ ವಿದ್ಯಾರ್ಥಿಗಳಿಗೆ (ತುಲ್ಬಾದ್) ಉಪದೇಶಿಸುತ್ತಿದ್ದರು.

ಪುರಾತನ ಕಾಲದಲ್ಲಿ, ಶಿಕ್ಷಕರ ಶಿಕ್ಷಣದ ಔಪಚಾರಿಕ ಕಾರ್ಯಕ್ರಮವಿರಲಿಲ್ಲ. ಈ ವೃತ್ತಿಯು ಬಹುಪಾಲು ಅನುವಂಶಿಕವಾಗಿದ್ದರಿಂದ ಪುತ್ರರು ಅಥವಾ ಯೋಗ್ಯ ಶಿಷ್ಯರು ತಮ್ಮ ತಂದೆಗೆ ಅಥವಾ ಗುರುಗಳಿಗೆ ವಿದ್ಯಾರ್ಥಿಗಳಿಗೆ ಬೋಧಿಸುವ ಕರ್ತವ್ಯದಲ್ಲಿ ಸಹಾಯ ನೀಡುತ್ತಿದ್ದರು. ಈ ಪ್ರಕ್ರಿಯೆಯಲ್ಲಿ ಅವರು ಈ ಕಲೆಯನ್ನು ಯಾವುದೇ ತರಬೇತಿ ಅಥವಾ ವೃತ್ತಿಪರ ಶಿಕ್ಷಣವಿಲ್ಲದೆಯೇ ತಮ್ಮದಾಗಿಸಿಕೊಳ್ಳುತ್ತಿದ್ದರು. ಕೆಲವು ಅಪವಾದಗಳನ್ನು ಹೊರತುಪಡಿಸಿ ಈ ಪದ್ಧತಿ ಬ್ರಿಟಿಷ್ ಸಾಮ್ರಾಜ್ಯದ ಕಾಲದವರೆಗೂ ನಡೆದುಕೊಂಡು ಬಂದು ಈ ವೇಳೆಗೆ ಬೋಧಕ ಸಮುದಾಯ ವಿಶಾಲವಾಗಿ ಇತರರನ್ನು ಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಯಿತು. ಬ್ರಿಟಿಷ್ ಆಡಳಿತವು ಅವರನ್ನು ರಾಜ್ಯದ, ಸ್ಥಳೀಯ ಸಂಸ್ಥೆಗಳ ಹಾಗೂ ಖಾಸಗಿ ದಾನಶೀಲ ವ್ಯಕ್ತಿಗಳ ನೌಕರರನ್ನಾಗಿ ಮಾಡಿತು. ಶಿಕ್ಷಕರ ವೃತ್ತಿಪರ ಶಿಕ್ಷಣದ ಕಾರ್ಯಕ್ರಮಗಳು ಬ್ರಿಟಿಷರಿಂದ ಪ್ರಾರಂಭಗೊಂಡವು. ಮತ್ತು ಸ್ವಾತಂತ್ರದ ನಂತರವೂ ಕೆಲವು ಬದಲಾವಣೆ ಹಾಗೂ ಸೇರ್ಪಡೆಯೊಂದಿಗೆ ಮುಂದುವರೆದವು. ವಿವಿಧ ಸ್ತರಗಳಿಗೆ ಮತ್ತು ಹಂತಗಳಿಗೆ ಬ್ರಿಟಿಷ್ ರಾಜ್ಯ ಶಿಕ್ಷಕರಿಗೆ ಶೈಕ್ಷಣಿಕ ಮತ್ತು ವೃತ್ತಿಪರ ಅರ್ಹತೆಗಳನ್ನು ವಿಧಿಸಿತು.

ಆದಾಗ್ಯೂ, ಚರಿತ್ರೆ ತನ್ನ ಪಾತ್ರವನ್ನು ಛದ್ಮವೇಷದಲ್ಲಿ ವಹಿಸಿತು. ಐತಿಹಾಸಿಕ ಕಾರಣಗಳಿಂದಲೇ ಸಮಾಜದಲ್ಲಿ, ಬೋಧಕ ಸಮುದಾಯದಲ್ಲಿ ಹುಟ್ಟಿನಿಂದಲೇ ಶಿಕ್ಷಕರಾಗಬೇಕೆ ಹೊರತು ಅವರನ್ನು ತಯಾರಿಸುವುದಿಲ್ಲ ಎಂಬ ನಂಬಿಕೆಯುಳ್ಳ ಬಹಳ ವ್ಯಕ್ತಿಗಳು ಇದ್ದಾರೆ. ಇಂಥವರಿಗೆ ಶಿಕ್ಷಕರಿಗಾಗಿ ಇರುವ ವೃತ್ತಿಪರ ಶಿಕ್ಷಣ ನಿರರ್ಥಕ ಚಟುವಟಿಕೆ ! ಇವರು ಶಿಕ್ಷಕರು ನೈತಿಕತೆ ಮತ್ತು ಸದ್ಗುಣಗಳ ಮೂರ್ತಿಯಂತಿರಬೇಕು ಎಂದು ನಿರೀಕ್ಷಿಸುತ್ತಾರೆ. ಸಾಮಾಜಿಕ – ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳು ಬದಲಾವಣೆ ಹೊಂದಿದ್ದಾಗ್ಯೂ ಇವರು ಆಧುನಿಕ ಅಧ್ಯಾಪಕರಲ್ಲಿ ಪುರಾತನ ಗುರುವಿನ ಮೂರ್ತಿಯನ್ನು ಕಲ್ಪಿಸಿಕೊಳ್ಳುತ್ತಾರೆ. ಸಮಾಜದಲ್ಲಿ ಹಾಗೂ ಬೋಧಕ ಸಮುದಾಯದಲ್ಲಿ ಸ್ಥಾನಮಾನ ಮತ್ತು ಪಾತ್ರನಿರ್ವಹಣೆ ನಡುವೆ ಹಾಗೂ ಸ್ವರೂಪ ಮತ್ತು ಕಾರ್ಯಗಳ ನಡುವೆ ಇರುವ ದ್ವಂದ್ವ ಗೋಚರವಾಗುತ್ತಿದ್ದು ಬೋಧಕ ಸಮುದಾಯ ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ದ್ವಂದ್ವದ ಮಧ್ಯದಲ್ಲಿ ವೃತ್ತಿಪರವಾದ ಸ್ಥಾನಮಾನವನ್ನು ಸಾಧಿಸಲು ತನ್ನ ಸ್ವಂತಿಕೆಯನ್ನು ಕಾಪಾಡಿಕೊಳ್ಳಲು ತೀವ್ರವಾಗಿ ಶ್ರಮಿಸುತ್ತಿದೆ.

Digitised by Bharatavani, CIIL

**ಒಂದು ವೃತ್ತಿಯ ಗುಣಲಕ್ಷಣಗಳು:**

ವೃತ್ತಿ ಎಂಬ ಪದವನ್ನು ವಿವಿಧ ಹಿನ್ನೆಲೆಗಳಲ್ಲಿ ಮತ್ತು ವೈವಿಧ್ಯಮಯ ಅರ್ಥಗಳೊಂದಿಗೆ ಬಳಸಲಾಗುತ್ತದೆ ಎಂದು ಶರತ್ ಚಂದ್ರ ಬಿಹಾರರು ಹೇಳುವಾಗ ಅವರು ಬಹುಪಾಲು ಸರಿಯಾಗಿಯೇ ಗುರುತಿಸಿದ್ದಾರೆ. ಕೆಲವು ವೇಳೆ ಇದು ಜೀವನೋಪಾಯಕ್ಕಾಗಿ ದುಡಿಯುವ ವಿಧಾನವನ್ನು ಸೂಚಿಸಿದರೆ ಇನ್ನು ಕೆಲವು ವೇಳೆ ನಿರ್ದಿಷ್ಟ ಲಕ್ಷಣಗಳನ್ನು ಉದ್ಯೋಗವನ್ನು ನಿರ್ದೇಶಿಸುತ್ತದೆ. ದಿ ಕಾಲಿನ್ಸ್ ಡಿಕ್ಷನರಿ ಆ್ಯಂಡ್ ಥೆಸಾರಸ್ 'ವೃತ್ತಿ' ಎಂಬುದನ್ನು ಹೀಗೆ ವ್ಯಾಖ್ಯಾನಿಸುತ್ತದೆ. "ಉದಾರ ಕಲೆ ಅಥವಾ ವಿಜ್ಞಾನಗಳಲ್ಲಿ, ವಿಶೇಷವಾಗಿ ಕಾನೂನು, ವ್ಯಾಕರಣ ಮತ್ತು ವೈದ್ಯಶಾಸ್ತ್ರ ಈ ಮೂರರಲ್ಲಿ ಒಂದು ವಿಷಯದಲ್ಲಿ, ವಿಶೇಷ ತರಬೇತಿಯ ಅಗತ್ಯವಿರುವ ಕಸಬು." ವೃತ್ತಿ ಸಂಬಂಧಿ ಸಮಾಜಶಾಸ್ತ್ರದಲ್ಲಿ ಪ್ರಸಿದ್ಧ ತಜ್ಞನಾದ ಅರ್ನೆಸ್ಟ್ ಗ್ರೀನ್‌ವುಡ್ ವ್ಯವಸ್ಥಿತ ಶಾಸ್ತ್ರ, ಅಧಿಕಾರ, ಸಮುದಾಯದ ಅನುಮೋದನೆ, ನೈತಿಕ ಸೂತ್ರ. ಮತ್ತು ನಿರ್ದಿಷ್ಟ ಸಂಸ್ಕೃತಿ ಇವೆಲ್ಲವೂ ವೃತ್ತಿಯೊಂದರ ಘಟಕಗಳು' ಎಂದು ಅಭಿಪ್ರಾಯಪಡುತ್ತಾನೆ. ಅಧಿಕೃತ ಏಜೆನ್ಸಿಯೊಂದರಿಂದ ಅನುಮೋದಿತಗೊಂಡ ಕಠಿಣ ಶಿಕ್ಷಣವನ್ನು ಸಾಕಷ್ಟು ಕಾಲಾವಧಿಯಲ್ಲಿ ಪಡೆದ ನಂತರ ಸಾಮಾಜಿಕವಾಗಿ ಉಪಯುಕ್ತವಾದ ವಿಶೇಷ ಜ್ಞಾನ ಮತ್ತು ತಜ್ಞತೆಗಳು ಒಂದು ವೃತ್ತಿಯ ಗುಣಲಕ್ಷಣಗಳು ಎಂದು ಟಾಲ್‌ಕೋಟ್ ಪಾರ್‌ಸನ್ಸ್ ವಿವರಿಸುತ್ತಾನೆ. ವೃತ್ತಿಪರ ವರ್ತನೆಯನ್ನು ನಿಯಂತ್ರಿಸಲು ಆತ ವರ್ತನೆಯ ಸೂತ್ರಗಳನ್ನು ಬಳಸುವಂತೆ ಹೇಳುತ್ತಾನಲ್ಲದೆ ಅವರು ತಮ್ಮ ಸೇವೆಗಳಿಗಾಗಿ ಶುಲ್ಕವನ್ನು ಪಡೆಯಬಹುದೆಂದು ಅಭಿಪ್ರಾಯಪಡುತ್ತಾನೆ.

ಈ ಹಿಂದಿನ ಚರ್ಚೆಯು ವೃತ್ತಿಯೊಂದು ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿರಬೇಕೆಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ:

- ಇದು ಜೀವನೋಪಾಯಕ್ಕೆಂದು ಮಾಡುವ ಕಸಬಾಗಿರಬೇಕು.
- ಈ ಕಸಬು ದೃಢ ಶಾಸ್ತ್ರೀಯ ಜ್ಞಾನವನ್ನು ಆಧರಿಸಿದ್ದು ಸಾಮಾಜಿಕವಾಗಿ ಉಪಯುಕ್ತವಾದ ಕುಶಲತೆಗಳನ್ನು ಬೆಳೆಸುವಂತಿರಬೇಕು.
- ಈ ಕುಶಲತೆಗಳನ್ನು ಅಧಿಕೃತ ಏಜೆನ್ಸಿಯೊಂದರಿಂದ ಅನುಮೋದಿತಗೊಂಡ ದೀರ್ಘಕಾಲದ ಕಠಿಣ ತರಬೇತಿಯ ನಂತರ ಪಡೆಯುವಂತಿರಬೇಕು.
- ಈ ಏಜೆನ್ಸಿಯು ವ್ಯಕ್ತಿಯ ಸದಸ್ಯರು ಅನುಸರಿಸಲೇಬೇಕಾದ ನೀತಿ ಸಂಹಿತೆಯನ್ನು ನಿರ್ದಿಷ್ಟಗೊಳಿಸಬೇಕು.
- ಅವಶ್ಯವಾದ ಅರ್ಹತೆ ಮತ್ತು ಸಾಮರ್ಥ್ಯಗಳನ್ನು ಹೊಂದಿದ ಎಲ್ಲರಿಗೂ ಈ ವೃತ್ತಿ ತೆರೆದಿರಬೇಕು.
- ಈ ದಕ್ಷತೆಗಳನು ವ್ಯಕ್ತಿ ಮತ್ತು ಸಮಾಜಕ್ಕೆಂದು ಶುಲ್ಕ ಇಲ್ಲವೇ ವೇತನವನ್ನು ಸ್ವೀಕರಿಸಿ ಉಪಯುಕ್ತ ಸೇವೆಗಾಗಿ ಉಪಯೋಗಿಸಬೇಕು.
- ಅವಶ್ಯವಾದ ಅರ್ಹತೆಗಳಿಲ್ಲದವರಿಗೆ ಆಯಾ ವೃತ್ತಿಯನ್ನು ಕೈಗೊಳ್ಳಲು ಅವಕಾಶ ನೀಡಬಾರದು.

**ಭಾರತದಲ್ಲಿ ಅಧ್ಯಾಪಕ ವೃತ್ತಿ:**

ಇಂದು ಭಾರತದಲ್ಲಿ ಬೋಧನೆ ತನ್ನ ಐತಿಹಾಸಿಕ ಬೇರುಗಳಿಂದ ಬೇರ್ಪಟ್ಟಿದೆ. ಇಂದು ಈ ವೃತ್ತಿ ತೆರೆದ ಉದ್ಯೋಗವಾಗಿದ್ದು ಬ್ರಾಹ್ಮಣವರ್ಗದ ವಿಶೇಷ ಹಕ್ಕು ಅಥವಾ ಅಧಿಕಾರವಾಗಿ ಉಳಿದಿಲ್ಲ. ಅವಶ್ಯದ ಶೈಕ್ಷಣಿಕ ಮತ್ತು ವೃತ್ತಿಪರ ಅರ್ಹತೆಯುಳ್ಳ ಯಾರೇ ಆದರೂ ಈ ವೃತ್ತಿಗೆ ಸೇರಬಹುದು ಮತ್ತು ಅಧ್ಯಾಪಕರು ರಾಜ್ಯದ ಮತ್ತು ಖಾಸಗಿ ಸಂಸ್ಥೆಗಳ ವೇತನ ಸಹಿತದ ನೌಕರರಾಗಿದ್ದಾರೆ. ಅಧ್ಯಾಪಕರ ವೃತ್ತಿಪರ ಶಿಕ್ಷಣಕ್ಕೆಂದು ವ್ಯವಸ್ಥೆಯನ್ನು ಮಾಡಲಾಗಿದೆ. ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಅಧ್ಯಾಪಕರ ಸೇವಾಕಾಲೀನ ಶಿಕ್ಷಣವನ್ನು ವಿಶ್ವವಿದ್ಯಾನಿಲಯ ಅನುದಾನ ಆಯೋಗವು ನೋಡಿಕೊಳ್ಳುತ್ತದೆ ಹಾಗೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರತವಾಗಿರುವ ಶಿಕ್ಷಕ ಸಂಘಗಳ ಸಹಯೋಗದೊಂದಿಗೆ ಅಧ್ಯಾಪಕರಿಗಾಗಿ ನೀತಿ ಸಂಹಿತೆಯನ್ನು ಸಿದ್ಧಪಡಿಸಿದೆ. ಆದರೆ, ಇದನ್ನು ಇನ್ನೂ ಜಾರಿಗೊಳಿಸಬೇಕಾಗಿದೆ. ಸ್ವತಃ ಯು.ಜಿ.ಸಿ., ವಿಶ್ವವಿದ್ಯಾನಿಲಯಗಳು ಮತ್ತು ಶಿಕ್ಷಕ ಸಂಘಗಳು ಈ ಬಗ್ಗೆ ಗಂಭೀರ ಆಸಕ್ತಿಯನ್ನು ಹೊಂದಿಲ್ಲ. ಅಧ್ಯಾಪಕರ ವೃತ್ತಿಪರ ಶಿಕ್ಷಣದ ಸಲುವಾಗಿ ಸಿದ್ಧತೆಗಳನ್ನು ವ್ಯವಸ್ಥಿತವಾಗಿಯಾಗಲಿ, ಉದ್ದೇಶಪೂರ್ವವಾಗಿಯಾಗಲೀ ಯೋಜಿಸಿಲ್ಲ. ಈ ಉದ್ದೇಶಕ್ಕೆಂದು ಸ್ಥಾಪಿತಗೊಂಡ ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು ಬಹುಪಾಲು ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲವಾಗಿವೆ.

ದಿ ಬಾರ್ ಕೌನ್ಸಿಲ್ ಆಫ್ ಇಂಡಿಯಾ, ಇಂಡಿಯನ್ ಕೌನ್ಸಿಲ್ ಆಫ್ ಟೆಕ್ನಿಕಲ್ ಎಜುಕೇಷನ್, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ, ನರ್ಸಿಂಗ್ ಕೌನ್ಸಿಲ್ ಆಫ್ ಇಂಡಿಯಾ ಇತ್ಯಾದಿ ಪರಿಷತ್‌ಗಳು ಆಯಾ ಕ್ಷೇತ್ರದ ವೃತ್ತಿಪರ ಶಿಕ್ಷಣವನ್ನು ನೋಡಿಕೊಳ್ಳುತ್ತವೆ. ಈ ಸಮಿತಿಗಳು ಶಿಕ್ಷಕರ ನೇಮಕಾತಿ, ಅಂತರ್-ಸಾಂಸ್ಥಿಕ ಸೌಲಭ್ಯಗಳು ಮತ್ತು ಸಂಸ್ಥೆಗಳ ಮಾನ್ಯತೆ ಇತ್ಯಾದಿಗಳನ್ನು ಕುರಿತಂತೆ ಮಾನದಂಡಗಳನ್ನು ನಿರ್ದಿಷ್ಟಪಡಿಸುತ್ತವೆ. ಇವುಗಳಲ್ಲಿ ಕೆಲವು ಅಂಗಗಳು ಪಠ್ಯಕ್ರಮ ವಿಕಾಸ ಶಿಕ್ಷಕರ ಸೇವಾಕಾಲೀನ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಪ್ರವೇಶ ಅರ್ಹತೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ವಿಧಿಸುತ್ತವೆ. ಆದರೆ ವೃತ್ತಿಗಾರರಿಗೆ ಇವು ನೀತಿಸಂಹಿತೆಯನ್ನು ವಿಧಿಸುತ್ತವೆಯಾದರೂ ಶಿಕ್ಷಕರಿಗೆ ಅಂಥ ನೀತಿಸಂಹಿತೆಯನ್ನು ನಿರ್ದಿಷ್ಟಗೊಳಿಸಿಲ್ಲ. ಇಷ್ಟೆಲ್ಲಾ ಸಮಿತಿಗಳಿದ್ದರೂ ಕಳಪೆ ದರ್ಜೆಯ ಸಂಸ್ಥೆಗಳೂ ಮಾನ್ಯತೆ ಪಡೆದಿವೆ. ಇಂತಹ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳು ವೃತ್ತಿಗಾರರಾಗಿ ಕೆಲಸ ಮಾಡಲು ಅಗತ್ಯವಾದ ಪರಿಣತಿಯನ್ನು ಹೊಂದಿರುವುದಿಲ್ಲ.

ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ತು (National Council of Teacher Education, NCTE) ಅಧಿಕೃತ ಸಂಸ್ಥೆಯಾಗಿದ್ದು

Digitised by Bharatavani, CIIL

ಅಧ್ಯಾಪಕರ ಸೇವಾಪೂರ್ವ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತಿದೆ. ಹಿರಿಯ ಮಧ್ಯಮಿಕ ಹಂತದವರೆಗಿನ ಅಧ್ಯಾಪಕರ ಶಿಕ್ಷಣ ನೀಡುವ ಸಂಸ್ಥೆಗಳ ಮಾನತೆಗಾಗಿ ಈ ಪರಿಷತ್ ಮಾನದಂಡಗಳನ್ನು ವಿಧಿಸುತ್ತದೆಯಲ್ಲದೆ ವಿದ್ಯಾರ್ಥಿಗಳ ಪ್ರವೇಶಾರ್ಹತೆಗಳನ್ನು ಸಹ ಸ್ಪಷ್ಟಪಡಿಸುತ್ತದೆ. ಈ ಸಮಿತಿಗೆ ಶಾಲಾ ಶಿಕ್ಷಕನ ಶೈಕ್ಷಣಿಕ ಹಾಗೂ ವೃತ್ತಿಪರ ಅರ್ಹತೆಯನ್ನು ನಿರ್ದಿಷ್ಟಪಡಿಸುವ ಅಧಿಕಾರವಿದೆಯಾದರೂ ಹೀಗೆ ಮಾಡುವುದರಲ್ಲಿ ಅದು ವಿಫಲವಾಗಿದೆ. ಕೆಲವು ಯೋಜನೆಗಳನ್ನು ಸಫಲಗೊಳಿಸಲು ವಿವಿಧ ಬಗೆಯ, ಸಾಧಾರಣ ಮಟ್ಟಕ್ಕೂ ಕೆಳಗಿರುವ ಅರೆಶಿಕ್ಷಕರ ನೇಮಕಾತಿಯಾಗುತ್ತಿರುವುದು ಇದರ ಪರಿಣಾಮವಾಗಿದೆ. ಅಧ್ಯಾಪಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪರಿಷತ್ತು ಕೆಲವು ಮೌಲ್ಯವುಳ್ಳ ಸಾಹಿತ್ಯವನ್ನು ಹೊರತಂದಿದೆ. ಪರಿಷತ್‌ಗೆ ತಿಳಿದಿರುವ ಕಾರಣಗಳಿಂದಾಗಿ ಕೆಲವು ಕ್ಷೇತ್ರಗಳಲ್ಲಿ ಅಧ್ಯಾಪಕರ ವೃತ್ತಿಪರ ವಿಕಾಸಕ್ಕೆ ಅನುಕೂಲಕರವಲ್ಲದ ತನ್ನ ಕೆಲವು ಮಾನದಂಡಗಳನ್ನು ಪರಿಷ್ಕರಿಸಿದೆ. ಇದು ಶಾಲಾ ಶಿಕ್ಷಕರಿಗಾಗಿ ನೀತಿ ಸಂಹಿತೆಯನ್ನು ನಿರ್ದಿಷ್ಟಪಡಿಸುವ ಗೊಡವೆಗೂ ಹೋಗಿಲ್ಲ.

ಶಾಲಾ ಶಿಕ್ಷಣದ ಅಭಿವೃದ್ಧಿ ಮತ್ತು ಶಿಕ್ಷಕರ ವೃತ್ತಿಪರ ವಿಕಾಸದ ಕಾಳಜಿಯನ್ನು ಮುಖ್ಯವಾಗಿ ಹೊಂದಿರುವ ಮತ್ತೊಂದು ಸ್ವಾಯತ್ತ ಸಂಸ್ಥೆಯೆಂದರೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ತು (The National Council of Educational Research and Training NCERT) ಇದು ಐದು ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದು ಅವುಗಳಲ್ಲಿ ಅಧ್ಯಾಪಕ ಶಿಕ್ಷಣದ ನವೀನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ವಿವಿಧ ರೀತಿಯ ಸೇವಾಕಾಲೀನ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮಗಳನ್ನು ಈ ಪರಿಷತ್ ಆಯೋಜಿಸುತ್ತದೆಯಲ್ಲದೆ ಹಲವು ಮೌಲ್ಯವುಳ್ಳ ಪ್ರಕರಣೆಗಳನ್ನು ಹೊರತಂದಿದೆ. ಇತ್ತೀಚೆಗೆ, ಇದು ಶಿಕ್ಷಕ ಸಂಘಗಳ ಸಹಯೋಗದೊಡನೆ ಶಾಲಾ ಶಿಕ್ಷಕರಿಗೆ ವೃತ್ತಿಪರವಾದ ನೈತಿಕ ಸೂತ್ರಗಳನ್ನು ವಿಕಾಸಗೊಳಿಸಿದೆ. ಆದರೆ ಇವುಗಳನ್ನು ಇನ್ನೂ ಆಚರಣೆಗೆ ತರಬೇಕಾಗಿದೆ. ಇದು ಶಾಸನಬದ್ಧ ಸಂಸ್ಥೆಯಲ್ಲವಾದ್ದರಿಂದ ಇದರ ಸಲಹೆಗಳು ಬಾಧ್ಯತೆಗಳಾಗುದಿಲ್ಲ. NCERT ಮತ್ತು NCTR - ಇವೆರಡೂ ಪರಿಷತ್‌ಗಳು ಉದ್ದೇಶಗಳನ್ನು ಸಾಧಿಸಲು ಪರಸ್ಪರ ಕೆಲಸ ಮಾಡಬಹುದು. ಶಿಕ್ಷಕರನ್ನು ವೃತ್ತಿಪರರನ್ನಾಗಿಸಲು ಮತ್ತು ಅಧ್ಯಾಪಕ ಶಿಕ್ಷಣದ ವೃತ್ತಿಪರ ಅಭಿವೃದ್ಧಿಗಾಗಿ ಮೇಲಿನ ಎರಡೂ ಪರಿಷತ್‌ಗಳು ಒಂದಾಗಿ ವಿಲೀನಗೊಂಡರೆ ಒಳಿತಾಗುವುದು.

**ಅಧ್ಯಾಪಕರ ವೃತ್ತಿಪರ ಶಿಕ್ಷಣ:**

ಅಧ್ಯಾಪಕ ವೃತ್ತಿಪರ ಶಿಕ್ಷಣವು ಭಾರತದಲ್ಲಿ ಬ್ರಿಟಿಷರಿಂದ ಪ್ರಾರಂಭಗೊಂಡಿತು. ಇದು ಒಂದಲ್ಲ ಒಂದು ಸ್ವರೂಪದಲ್ಲಿ ಮುಂದುವರೆಯುತ್ತಲೇ ಇದೆ. ಇಂದಿಗೂ ಇದು ತನ್ನನ್ನು ವಸಾಹತು ಪರಂಪರೆಯ ಸಂಪರ್ಕವನ್ನು ಸಂಪೂರ್ಣವಾಗಿ ಕಡಿದುಕೊಂಡಿಲ್ಲ. ಸ್ವಾತಂತ್ರ್ಯಾನಂತರದ ಕೆಲವು ದಶಕಗಳಲ್ಲಿ, ಇದು ಗ್ರೇಟ್ ಬ್ರಿಟನ್ನಿನ ಪ್ರಭಾವದಡಿಯಲ್ಲಿ ಕೆಲಸ ಮಾಡಿತು. ಈಗ ಅದು ಅಮೇರಿಕಾದ ಪ್ರಭಾವಕ್ಕೆ ಒಳಗಾಗಿದೆ. ಅಮೇರಿಕಾ ಮತ್ತು ಆಂಗ್ಲೋ ಸಾಕ್ಸನ್ ಪ್ರಾಟೆಸ್ಟೆಂಟ್ ದೇಶಗಳಲ್ಲಿ ಚಾಲ್ತಿಯಲ್ಲಿರುವ ಪರಿಕಲ್ಪನೆಗಳು, ಸಿದ್ಧಾಂತಗಳು, ವಿಧಾನಗಳು, ಮೌಲ್ಯಮಾಪನ ತಂತ್ರಗಳು ಮತ್ತು ಶೈಕ್ಷಣಿಕ ವಿಚಾರಗಳತ್ತ ವಿಶೇಷ ಆಕರ್ಷಣೆ ಹೊಂದಿರುವ ಅಧ್ಯಾಪಕ ಶಿಕ್ಷಕರು ಮತ್ತು ಆಡಳಿತಗಾರರು ಅವುಗಳನ್ನು ಭಾರತೀಯ ಅಧ್ಯಾಪಕ ಶಿಕ್ಷಣ ಕ್ಷೇತ್ರದಲ್ಲಿ ಹುಟ್ಟು ಹಾಕುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಇವರು ಈ ಪ್ರಯತ್ನದ ನಡುವೆ ಈ ದೇಶಗಳ ವಿಕಾಸದ ಸ್ತರದಲ್ಲಿರುವ ತಾರತಮ್ಯಗಳನ್ನು ಅವಲಕ್ಷಿಸಿದ್ದಾರೆ.

ಅಧ್ಯಾಪಕರ ಶಿಕ್ಷಣ ಸಾಂಸ್ಥಿಕ ಆಧಾರವುಳ್ಳದ್ದು. ಶಾಲೆಗಳಲ್ಲಿನ ಅಧ್ಯಯನದ ಕಾರ್ಯಕ್ರಮಗಳು ಮತ್ತು ಪ್ರಾಯೋಗಿಕ ಕಾರ್ಯಕ್ರಮಗಳು ಇವರ ಪ್ರಮುಖ ಕಾಳಜಿಯಾಗಿದೆ. ಪ್ರಾಯೋಗಿಕ ಕಾರ್ಯವನ್ನು ಅರೆ ಮನಸ್ಸಿನಿಂದ ಕೈಗೊಳ್ಳುತ್ತಾರಲ್ಲದೆ ಅದನ್ನೂ ಅವ್ಯವಸ್ಥಿತ ರೀತಿಯಲ್ಲಿ ನಡೆಸುತ್ತಾರೆ. ವೃತ್ತಿಪರ ಶಿಕ್ಷಣದ ಅವಿಭಾಜ್ಯ ಘಟಕವಾಗಿರುವ ಶಿಷ್ಯವೃತ್ತಿ ತರಬೇತಿ (Apprenticeship) ಅಥವಾ ಸಂಸ್ಥಾಗತ ತರಬೇತಿ (Internship) ಗಳನ್ನು ಕಾರ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ ಹಾಗೂ ಶಾಲೆಯ ಕಾರ್ಯವೈಖರಿಯ ಬಗ್ಗೆ ಪೂರ್ಣ ಅನುಭವ ಹೊಂದಿರುವುದಿಲ್ಲವಾದ್ದರಿಂದ ಅಧ್ಯಾಪಕರ ತರಬೇತಿ ಈಗಲೂ ಅಪರಿಪೂರ್ಣವಾಗೇ ಉಳಿದಿದೆ. ಅಧ್ಯಾಪಕನ ಸಂಸ್ಥೆಯ ಹೊರಗೆ ಕಾರ್ಯಪ್ರವೃತ್ತವಾಗಿರುವ ಅಂಶಗಳು ಮತ್ತು ಶಕ್ತಿಗಳು ಈ ದಿಶೆಯಲ್ಲಿ ಸಹಕಾರಿಯಾಗುವುದಿಲ್ಲ. ಇದರ ಸಾಮುದಾಯಿಕ ಆಧಾರದ ವಿಸ್ತಾರ ಅಲ್ಪವಾಗಿದೆ. ಇದರ ಅವಧಿ ಅಧ್ಯಾಪಕರಲ್ಲಿ ವೃತ್ತಿಪರತೆಯನ್ನು ಪ್ರೋತ್ಸಾಹಿಸಲಾಗುವಷ್ಟು ಅಲ್ಪವಾಗಿದೆ. ಆದ್ದರಿಂದ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮವು ಯಶಸ್ವಿ ವೃತ್ತಿಪರನಾಗಲು ಅವಶ್ಯಕವಾದ ದಕ್ಷತೆ ಮತ್ತು ನಿಷ್ಪಾದನಾ ಕುಶಲತೆಗಳನ್ನು ವಿಕಾಸಗೊಳಿಸುವಲ್ಲಿ ಸಫಲವಾಗಿಲ್ಲ. ತರಬೇತಿ ಪಡೆದ ಮತ್ತು ತರಬೇತಿ ಪಡೆಯದ ಶಿಕ್ಷಕರ ನಡುವೆ ಯಾವ ವ್ಯತ್ಯಾಸವೂ ಇಲ್ಲದಂತಾಗಿದೆ.

ಅಧ್ಯಾಪಕ ಶಿಕ್ಷಣದ ಸೈದ್ಧಾಂತಿಕ ಪಠ್ಯಕ್ರಮ ಅಸಂಗತವಾದ ಮಾಹಿತಿಗಳಿಂದ ತುಂಬಿಹೋಗಿದೆ. ಇದು ಹಳೆಯದೂ, ನಿಸ್ಸಾರವೂ ಹಾಗೂ ಹೆಚ್ಚು ಸಮಯ ತೆಗೆದುಕೊಳ್ಳುವ ಪಠ್ಯಕ್ರಮವಾಗಿದೆ. ಭಾವೀ ಹಾಗೂ ಸೇವಾಕಾಲೀನ ಅಧ್ಯಾಪಕರಿಗೆ ಕೆಲವು ಶಿಶು ಬೋಧನಶಾಸ್ತ್ರದ ಸಿದ್ಧಾಂತಗಳನ್ನೂ ಮತ್ತು ತತ್ವಗಳನ್ನು ಹೇಳಿಕೊಡಲಾಗುತ್ತದೆ. ಆದರೆ, ಇದು ಒಂದು ದೇಶಕ್ಕೆ ಸೂಕ್ತವಾದ ಸಂಸ್ಕೃತಿ ನಿರ್ದಿಷ್ಟ ಶಿಶುಬೋಧನ ಶಾಸ್ತ್ರವನ್ನು ವಿಕಸಿಸುವಲ್ಲಿ ಅಸಮರ್ಥವಾಗಿದೆ. ಪರಿಸ್ಥಿತಿಗಳನ್ನು ಸುಧಾರಿಸಲು ಪ್ರಯತ್ನಗಳು ನಡೆದಿವೆಯಾದರೂ ವಿಶ್ವವಿದ್ಯಾನಿಲಯಗಳು, ಅಧ್ಯಾಪಕ ಶಿಕ್ಷಕರು ಮತ್ತು ಅಧ್ಯಾಪಕರ ವೃತ್ತಿಪರ ಸಂಸ್ಥೆಗಳಿಂದ ನಗಣ್ಯ ಬೆಂಬಲವು ದೊರೆತಿದ್ದರಿಂದ ಈ ಪ್ರಯತ್ನಗಳು ಫಲಕಾರಿಯಾಗಿಲ್ಲ. ಕಾರ್ಯಕ್ರಮಕ್ಕೆ ಕಠಿಣ ಶ್ರಮದ ಅವಶ್ಯಕತೆ ಇಲ್ಲವಾದ್ದರಿಂದ ವೃತ್ತಿಪರವಾದ ಸ್ನಾತಕ ಪದವಿ ಅಥವಾ ಡಿಪ್ಲೊಮಾವನ್ನು ಗಳಿಸುವುದು ಸುಲಭದ ಕೆಲಸವಾಗಿದೆ. ಈ ಕೊರತೆಯನ್ನು ಸುಧಾರಿಸಲು NCTE ಮತ್ತು NCERT ಕೈಗೊಂಡ ಪ್ರಯತ್ನಗಳು ವಾಸ್ತವವಾಗಿ ಯಾವ ಫಲವನ್ನೂ ನೀಡಿಲ್ಲ.

Digitised by Bharatavani, CIIL

**ಕೆಲವು ಗಮನಾರ್ಹ ಲಕ್ಷಣಗಳು:**

ಐತಿಹಾಸಿಕ ಕಾರಣಗಳಿಂದಾಗಿ ಭಾರತದಲ್ಲಿ ಇಂದಿಗೂ ಅಧ್ಯಾಪಕ ಸಮುದಾಯದಲ್ಲಿ ಬ್ರಾಹ್ಮಣ ಮೌಲ್ಯಗಳು ಮತ್ತು ಸಂಸ್ಕೃತಿಗಳದೇ ಮೇಲುಗೈ ಆಗಿದೆ. ಈ ವೃತ್ತಿಗೆ ಸೇರಿದ ಯಾರೊಬ್ಬರಾದರೂ ವಿಭಿನ್ನ ಸಾಮಾಜಿಕ ಮೂಲದಿಂದ ಬಂದವರಾದರೂ ನವ ಬ್ರಾಹ್ಮಣರಾಗಿ ಬಿಡುತ್ತಾರೆ. ಈ ಸಮುದಾಯದಲ್ಲಿ ಮಧ್ಯಮ ವರ್ಗದವರೇ ಹೆಚ್ಚಾಗಿ ಇದ್ದರೂ ಸುಧಾರಿತ ವೇತನ ಮತ್ತು ಸೇವಾ ಪರಿಸರಗಳ ದೆಸೆಯಿಂದ ಮೇಲ್ವರ್ಗದವರೂ ಈ ವೃತ್ತಿಗೆ ಸೇರುವ ಒಲವನ್ನು ತೋರುತ್ತಾರೆ. ಬೋಧಕ ವೃತ್ತಿಯು ಇಂದಿಗೂ ಆಕರ್ಷಕ ಕಸುಬನ್ನು ಪಡೆಯಲಾಗದೆ ಹೋದ ಬಹುಪಾಲು ಹತಾಶ ಯುವ ಜನರನ್ನು ವಿಶೇಷಃ ಮಾಧ್ಯಮಿಕ ಮಟ್ಟದವರೆಗೆ, ತನ್ನೆಡೆಗೆ ಆಕರ್ಷಿಸುತ್ತದೆ. ತೃತೀಯ ಸ್ತರದಲ್ಲಿ ಪರಿಸ್ಥಿತಿಯು ಸ್ವಲ್ಪ ಉತ್ತಮವಾಗಿದೆ. ಇತ್ತೀಚಿನ ಬಡ್ತಿಗೆ ಸಂಬಂಧಿಸಿದ ನಿಯಮಗಳಿಂದಾಗಿ ಅಧ್ಯಾಪಕರು ಮೇಲೆ ಏರುತ್ತಾ ಹೋಗಲು ಸುಲಭ ಮಾರ್ಗ ದೊರೆತಂತಾಗಿದೆ. ಇದರ ಒಟ್ಟು ಪರಿಣಾಮವೆಂದರೆ, ಶೈಕ್ಷಣಿಕ ಮತ್ತು ವೃತ್ತಿಪರ ಮಾನದಂಡಗಳಲ್ಲಿ ಕುಸಿತ. ಇಂತಹ ಸನ್ನಿವೇಶಗಳು ಭ್ರಷ್ಟಾಚಾರ ಮತ್ತು ಆತಂಕಗಳನ್ನು ಸಮಾಜದಲ್ಲಿ ಹುಟ್ಟು ಹಾಕುತ್ತವೆ. ಈ ವೃತ್ತಿಯಲ್ಲಿ ಅಧಿಕ ಸಂಖ್ಯೆಯ ಮಧ್ಯಮ ವರ್ಗದ ಹಾಗೂ ಹತಾಶ ವ್ಯಕ್ತಿಗಳು ಅಸ್ತಿತ್ವದಲ್ಲಿರುವುದರಿಂದ ವೃತ್ತಿ ಸಂಘ, ತತ್ಪೂರ್ತತೆ, ಪ್ರತಿಕ್ರಿಯವಾದ, ದುಸ್ಸಾಹಸ ಮತ್ತು ತೀವ್ರಗಾಮಿತನ ಮುಂತಾದ ಯಾವುದೇ ವೃತ್ತಿಯ ಆರೋಗ್ಯಕ್ಕೆ ಸೂಕ್ತವಲ್ಲದ ಪರಿಣಾಮಗಳಿಗೆ ದಾರಿಮಾಡಿಕೊಟ್ಟಂತಾಗುತ್ತದೆ.

ಅಧ್ಯಾಪಕರು ನೀಡುವ ಸೇವೆಯ ಗುಣಮಟ್ಟ ಸಮಾಜದ ಅಪೇಕ್ಷೆಯ ಮಟ್ಟಕ್ಕೆ ಬರುವುದಿಲ್ಲ. ಬಹುಪಾಲು ಅಧ್ಯಾಪಕರು ತರಗತಿಗಳನ್ನು ತೆಗೆದುಕೊಳ್ಳದೆ ತಪ್ಪಿಸುತ್ತಾರೆ. ವಿಳಂಬವಾಗಿ ಬರುತ್ತಾರೆ ಮತ್ತು ತರಗತಿಗಾಗಿ ತಮ್ಮ ಪಾಠಗಳನ್ನು ಸಿದ್ಧಪಡಿಸಿಕೊಳ್ಳುವುದಿಲ್ಲ. ಕೆಲವರು ತಮ್ಮ ಜೀವಮಾನದಲ್ಲಿ ಪಾಠಗಳ ಸಿದ್ಧತೆ ಒಂದು ಬಾರಿ ಮಾತ್ರ ಮಾಡಿಕೊಳ್ಳುವರು. ಭಾರತೀಯ ಶಾಲಾ ತರಗತಿಗಳು ಏಕತಾನತೆಯುಳ್ಳ ಜೀವರಹಿತ ಸ್ಥಳಗಳು. ಮುಚ್ಚಿದ ಮನಸ್ಸಿನ ಅಧ್ಯಾಪಕರು ವಿದ್ಯಾರ್ಥಿಗಳ ನೋಟ್ ಪುಸ್ತಕಗಳನ್ನು ಮುಚ್ಚಿಡಲು ಯೋಗ್ಯ ಉಪನ್ಯಾಸಗಳನ್ನು ನೀಡುತ್ತಾರೆ. ಬೋಧನೆ ಸಂವಾದ ರೂಪದ ಸ್ಥಿತಿಯಿಂದ ಸ್ವಗತ ಭಾಷಣಕ್ಕೆ ಜಾರಿಬಿಡುತ್ತದೆ. ಬಹುಮಂದಿ ಅಧ್ಯಾಪಕರಿಂದ ಪ್ರಶ್ನೆ ಪರಿಪ್ರಶ್ನೆಗಳಿಗೆ ಪ್ರೋತ್ಸಾಹ ದೊರೆಯುವುದಿಲ್ಲ. ತಮ್ಮ ವೃತ್ತಿಗತ ಬೆಳವಣಿಗೆಗೆ ಅಧ್ಯಾಪಕರು ಮಾಡುವ ವೆಚ್ಚ ನಗಣ್ಯ. ಸಿಬ್ಬಂದಿ ಕೊಠಡಿಯಲ್ಲಿ ಚರ್ಚೆಯು ಶೈಕ್ಷಣಿಕವಲ್ಲದ ವಿಷಯಗಳತ್ತ ಕೇಂದ್ರೀಕೃತವಾಗಿರುತ್ತದೆ. ಒಳ್ಳೆಯ ಅಧ್ಯಾಪಕರು ವಿದ್ಯಾರ್ಥಿಗಳ ಮಾನಸಿಕ ಗುಣಮಟ್ಟವನ್ನು ಸುಧಾರಿಸುವ ಪ್ರಯತ್ನ ಕೈಗೊಳ್ಳುವ ಬದಲು ಜೀರ್ಣವಾಗಿರದ ಮಾಹಿತಿಗಳಿಂದ ಮನಸ್ಸಿಗೆ ತುಂಬಿಸಲು ಪ್ರಯತ್ನಿಸುತ್ತಾರೆ. ಈಗಲೂ ಅವರು "ಶಿಕ್ಷಣದ ಸಂಚಯನ ಪರಿಕಲ್ಪನೆ" (Banking concept of Education) ಯಲ್ಲೇ ವಿಶ್ವಾಸವಿಟ್ಟಿದ್ದಾರೆ. ಇದಕ್ಕೆ ಅಪವಾದಗಳು ಬಹು ವಿರಳ.

ಬ್ರಿಟಿಷ್ ಆಳ್ವಿಕೆಗೆ ಮುನ್ನ ಅತ್ಯುನ್ನತ ಸಾಮಾಜಿಕ ಸ್ಥಾನಮಾನ ಮತ್ತು ಸಮಾಜದಲ್ಲಿ ಗೌರವವನ್ನು ಹೊಂದಿದ್ದ ಬೋಧಕ ಸಮುದಾಯದ ಸೇವೆಯ ಪರಿಸ್ಥಿತಿಗಳು ಮತ್ತು ವೇತನಗಳಲ್ಲಿ ಸುಧಾರಣೆಯಾಗಿದ್ದರೂ ಕೂಡ ಸಾರ್ವಜನಿಕರ ದೃಷ್ಟಿಯಲ್ಲಿ ಕೆಳಮಟ್ಟಕ್ಕೆ ಇಳಿದಿದೆ. ಇಂತಹ ಪರಿಸ್ಥಿತಿಗೆ ಸ್ವತಃ ಅಧ್ಯಾಪಕರೇ ಕಾರಣರಲ್ಲದೆ ಬೇರಾರೂ ಅಲ್ಲ. ಸಮಾಜದಲ್ಲಿ ವ್ಯಕ್ತಿಯ ಸ್ಥಾನಮಾನ ಮತ್ತು ಗೌರವ ಆ ವ್ಯಕ್ತಿಯಿಂದ ಮತ್ತು ಅವನ ಸೇವೆಯಿಂದ ಗಳಿಸಲಾಗುತ್ತವೆ. ಅಧ್ಯಾಪಕರಿಗೆ ಅಲ್ಪ ವೇತನವನ್ನು ನೀಡುತ್ತಿದ್ದ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿಯೂ ಅವರಿಗೆ ಉನ್ನತ ಗೌರವವಿತ್ತು. ಅದರೀಗ, ಸ್ವಾತಂತ್ರದ ನಂತರ, ಪರಿಸ್ಥಿತಿ ಬದಲಾಯಿತು. ದೇಶದ ಕಲುಷಿತ ರಾಜಕೀಯ ವಾತಾವರಣ ಮತ್ತು ಸ್ವತಃ ಶಿಕ್ಷಕ ಸಮುದಾಯ ಈ ಪರಿಸ್ಥಿತಿಗೆ ಜವಾಬ್ದಾರರು.

**ಉಪಸಂಹಾರ:** ಭಾರತದಲ್ಲಿ ಬೋಧಕ ವೃತ್ತಿಯು ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ನಡುವೆ ಗಾಳಿಯಲ್ಲಿ ತೂಗಾಡುತ್ತಿದೆ. ಆಧುನಿಕ ಅಧ್ಯಾಪಕ ಪುರಾತನ ಕಾಲದ ಗುರುವಿನ ವರ್ತನೆಯ ಆದರ್ಶಗಳನ್ನು ಅನುಸರಿಸಬೇಕು ಎಂದು ಸಮಾಜ ಅಪೇಕ್ಷಿಸುತ್ತದೆ. ಬುದ್ಧಿಜೀವಿಗಳು ಮತ್ತು ಶೈಕ್ಷಣಿಕ ತಜ್ಞರು ಹಾಗಿರಲಿ ಸಮಾಜವೇ ಬೋಧನೆಯನ್ನು ಜೀವನ ಧ್ಯೇಯವೇ ಹೊರತು ವೃತ್ತಿಯಲ್ಲ ಎಂದು ಪರಿಗಣಿಸುತ್ತದೆ. ಇದನ್ನು ಒಂದು ವೃತ್ತಿಯಾಗಿ ಮಾರ್ಪಡಿಸಲು ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆಯಾದರೂ ಈ ನಿಟ್ಟಿನಲ್ಲಿನ ಸಫಲತೆ ಪ್ರೋತ್ಸಾಹದಾಯಕವಾಗಿಲ್ಲ. ಅಧ್ಯಾಪಕ ಸಮುದಾಯ ಸಂಪೂರ್ಣವಾದ ವೃತ್ತಿಯ ಸ್ಥಾನಮಾನವನ್ನು ಗಳಿಸಿಕೊಳ್ಳಬೇಕಾಗಿದೆ. ಹೆಚ್ಚೆಂದರೆ; ಇದು ವೃತ್ತಿಯಾಗ ಹೊರಟಿರುವ ಒಂದು ಕಸುಬು.

**ಮೂಲ: ಎಸ್.ಎನ್. ಸಿಂಗ್**

**ಅನು: ಚಂದ್ರಶೇಖರ್ ಬಿ.ಎಂ.**

## ವ್ಯಕ್ತಿತ್ವ – ಅರ್ಥ, ಸ್ವರೂಪ, ಸಿದ್ಧಾಂತಗಳು

**ಪೀಠಿಕೆ:**

ಪ್ರತಿಯೊಬ್ಬ ಮಾನವನೂ ತನ್ನನ್ನು ತಾನು ತಿಳಿದುಕೊಳ್ಳಲು ಇಷ್ಟಪಡುತ್ತಾನೆ. ಹಾಗಾಗಿ ಅದಕ್ಕೆ ಪ್ರಯತ್ನಿಸುತ್ತಾನೆ. ಹಾಗೆಯೇ ತನ್ನ ಸುತ್ತಮುತ್ತ ಇರುವವರು ಹೇಗಿದ್ದಾರೆ. ಅವರ ಸ್ವಭಾವವೇನು, ಪ್ರವೃತ್ತಿಗಳೇನು ಎನ್ನುವುದನ್ನು ತಿಳಿದುಕೊಳ್ಳಲು ಆಸಕ್ತಿ ಹೊಂದಿರುತ್ತಾನೆ. ಆದ್ದರಿಂದ ಬೇರೆಯವರನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ ಕೂಡ. ಪ್ರತಿಯೊಬ್ಬ ಮನುಷ್ಯನ ಎಲ್ಲಾ ಲಕ್ಷಣಗಳನ್ನು ಒಟ್ಟಾಗಿ ಸೇರಿಸಿ ಆ ಸಮಷ್ಟಿಯನ್ನೇ ವ್ಯಕ್ತಿತ್ವ ಎನ್ನುತ್ತೇವೆ. ವ್ಯಕ್ತಿತ್ವವನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿ ನಾಗರೀಕತೆಯಷ್ಟೇ ಪ್ರಾಚೀನವಾದುದು. ಬಹುಶಃ ಮಾನವ ಜೈವಿಕ ವಿಕಾಸದಲ್ಲಿ ಮುಂದುವರೆದು ಭಾಷೆಯನ್ನು ಬೆಳೆಸಿಕೊಂಡು ನಾಗರೀಕತೆಯ

Digitised by Bharatavani, CIIL

ಹೊಸ್ತಿಲಿಗೆ ಬಂದಕೂಡಲೇ ತನ್ನ ಮತ್ತು ತನ್ನ ಜೊತೆಯವರು ಹೇಗಿದ್ದಾರೆ, ಅವರ ಸ್ವಭಾವವೇನು ಎಂದು ತಿಳಿದುಕೊಳ್ಳುವ ಪ್ರಯತ್ನವನ್ನು ಆರಂಭಿಸಿರಬೇಕು. ನಾಗರೀಕತೆ ಮತ್ತು ಸಂಸ್ಕೃತಿಗಳು ವಿಕಾಸಗೊಂಡಂತೆ ಪ್ರಾಚೀನ ಕಾಲದಿಂದಲೂ ತತ್ವಜ್ಞಾನಿಗಳು ಮತ್ತು ಕವಿಗಳು ವ್ಯಕ್ತಿಗಳು ಒಬ್ಬರಂತೆ ಮತ್ತೊಬ್ಬರು ಏಕಿರುವುದಿಲ್ಲವೆಂಬುದರ ಬಗ್ಗೆ ಜಿಜ್ಞಾಸೆ ಮಾಡಲು ಆರಂಭಿಸಿರಬೇಕು. ವ್ಯಕ್ತಿತ್ವದ ಬಗ್ಗೆ ಗ್ರೀಕರೂ, ರೋಮನರು, ಭಾರತೀಯರು, ಚೀನಾ ದೇಶದವರು ಹಿಂದಿನಿಂದಲೂ ವ್ಯಕ್ತಿತ್ವದ ಬಗ್ಗೆ ಚಿಂತನೆ ಮಾಡಿದ್ದಾರೆ, ಬಹಳಷ್ಟು ಬರೆದಿದ್ದಾರೆ. ಇದರ ಜೊತೆ ಜೊತೆಗೆ ವ್ಯಕ್ತಿತ್ವದ ಬಗ್ಗೆ ಬಹಳಷ್ಟು ಮಿಥ್ಯಾಕಲ್ಪನೆಗಳೂ ಬೆಳೆದು ಬಂದಿವೆ. ವ್ಯಕ್ತಿತ್ವದ ಬಗ್ಗೆ ವೈಜ್ಞಾನಿಕ ರೀತಿಯ ಚಿಂತನೆ ಮನೋವಿಜ್ಞಾನದ ವೈಜ್ಞಾನಿಕ ಅಧ್ಯಯನ ಆರಂಭವಾದ ಮೇಲೆಯೇ ಅರಂಭವಾಯಿತು.

ವ್ಯಕ್ತಿತ್ವದ ಸ್ವರೂಪ, ವಿಕಾಸದ ಬಗ್ಗೆ ಮನೋವಿಜ್ಞಾನದ ಕ್ಷೇತ್ರದಲ್ಲಿ ವಿಪುಲವಾದ ಅಧ್ಯಯನಗಳು ನಡೆದು ಜ್ಞಾನ ಸಂಗ್ರಹವಾಗಿದೆ. ವ್ಯಕ್ತಿತ್ವದ ವಿಕಾಸದ ಬಗ್ಗೆ ಅನೇಕ ಸಿದ್ಧಾಂತಗಳು ಪ್ರತಿಪಾದಿತವಾಗಿವೆ. ವ್ಯಕ್ತಿತ್ವವನ್ನು ಅಳತೆ ಮಾಡುವ ಅನೇಕ ವಿಧಾನಗಳು/ತಂತ್ರಗಳು ವಿಕಾಸಗೊಂಡಿವೆ. ನಮ್ಮ ವ್ಯಕ್ತಿತ್ವವನ್ನು ನಾವೇ ತಿಳಿದುಕೊಳ್ಳುವುದು ಮತ್ತು ಬೇರೆಯವರ ವ್ಯಕ್ತಿತ್ವವನ್ನು ತಿಳಿದುಕೊಳ್ಳುವುದು ಸಮಾಯೋಜನೆ, ಸಾಮಾಜಿಕ ಅನ್ಯೋನ್ಯಕ್ರಿಯೆ, ವ್ಯಾವಹಾರಿಕ ಸಂಬಂಧಗಳು, ಸಾಮಾಜಿಕ ಹೊಂದಾಣಿಕೆ ಮುಂತಾದ ದೃಷ್ಟಿಗಳಾದ ಬಹಳಷ್ಟು ಪ್ರಯೋಜನಗಳನ್ನು ಹೊಂದಿದೆ. ಅಂತೆಯೇ ಮಕ್ಕಳ ವ್ಯಕ್ತಿತ್ವ ವಿಕಾಸ ಶಿಕ್ಷಣದ ಒಂದು ಮುಖ್ಯ ಉದ್ದೇಶವಾಗಿದೆ.

**ವ್ಯಕ್ತಿತ್ವದ ಅರ್ಥ, ಪರಿಭಾಷೆಗಳು:** ವ್ಯಕ್ತಿತ್ವ ಎಂದರೇನು? ವ್ಯಕ್ತಿತ್ವ ಪದದ ಪರ್ಯಾಯ ಸೂಚಿ ಪದವಾದ Personality ಲ್ಯಾಟಿನ್ ಭಾಷೆಯ Persona ಎಂಬ ಪದದಿಂದ ಬಂದಿದೆ. ಇದರ ಅರ್ಥ ಮುಖವಾಡ (Mask) ಎಂದಾಗುತ್ತದೆ. ಗ್ರೀಕರ ಕಾಲದಲ್ಲಿ ನಾಟಕದ ಪಾತ್ರಗಳು ಆಯಾ ಪಾತ್ರದ ಸ್ವಭಾವಕ್ಕೆ ತಕ್ಕಂತೆ ಮುಖವಾಡಗಳನ್ನು ಧರಿಸುತ್ತಿದ್ದರು. ನಮ್ಮ ದೇಶದ ಯಕ್ಷಗಾನದಲ್ಲೂ ಪಾತ್ರಧಾರಿಗಳು ವಿಧವಿಧವಾದ ವೇಷಗಳನ್ನು ಹಾಕಿಕೊಳ್ಳುತ್ತಾರೆ. ಈ ವೇಷಭೂಷಣಗಳು ಪಾತ್ರಗಳ ಸ್ವಭಾವವನ್ನು ಸೂಚಿಸುತ್ತವೆ. ಈ ಅರ್ಥದಲ್ಲಿ Personality ಅಥವಾ ವ್ಯಕ್ತಿತ್ವ ವ್ಯಕ್ತಿ ಸಮಾಜಕ್ಕೆ ತನ್ನನ್ನು ತೋರಿಸುವ ಮುಖ ಎಂದಾಗುತ್ತದೆ. ಈ ಪದದ ಇನ್ನೊಂದು ಅರ್ಥ ನಾಟಕದಲ್ಲಿನ ಪಾತ್ರ, ನಟ, ಎಂದೂ ಆಗುತ್ತದೆ. ಇನ್ನೊಂದು ವ್ಯುತ್ಪತ್ತಿಯ ಪ್ರಕಾರ Personality ಪದ ಲ್ಯಾಟಿನ್ ಪದಗಳಾದ Per sonere ಎಂಬ ಪದಗಳಿಂದ ಉಂಟಾಗಿದೆ ಎನ್ನುವ ಅಭಿಪ್ರಾಯವಿದೆ. ಈ ಪದಗಳ ಅರ್ಥ 'ಮಾತನಾಡಲು' ಅಥವಾ 'ಧ್ವನಿ ಹೊರಡಿಸಲು' (to sound through) ಎಂದಾಗುತ್ತದೆ. ಗ್ರೀಕರು ನಾಟಕಗಳಲ್ಲಿ ಮುಖವಾಡ ಧರಿಸುತ್ತಿದ್ದುದರಿಂದ ಮಾತನಾಡಲು ಸಾಧ್ಯವಾಗುವಂತೆ ಒಂದು ಸಾಧನವನ್ನು ಉಪಯೋಗಿಸ್ತುತ್ತಿದ್ದರಂತೆ. ಈ ಪದಗಳಿಂದ ನಂತರದಲ್ಲಿ Personality ಎನ್ನುವ ಪದ ಬಂದಿತು ಎನ್ನುತ್ತಾರೆ. ಸ್ವಲ್ಪ ಮಟ್ಟಿಗೆ ವ್ಯಕ್ತಿತ್ವ ನಾವು ಧರಿಸುವ ಒಂದು ಮುಖವಾಡವೇ ಆಗಿದೆ. ಈ ಎರಡೂ ಅರ್ಥಗಳು ವ್ಯಕ್ತಿತ್ವದ ಅರ್ಥವನ್ನು ಸಮರ್ಪಕವಾಗಿ ವಿವರಿಸುವುದಿಲ್ಲ.

ವ್ಯಕ್ತಿತ್ವ ಎಂದರೇನು? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ನೀಡಲು ಅಂದರೆ ಸಮರ್ಪಕವಾದ ಪರಿಭಾಷೆ ನೀಡಲು ಮನೋವಿಜ್ಞಾನಿಗಳು ಪ್ರಯತ್ನಿಸಿದ್ದಾರೆ. ಆಲ್‌ಪೋರ್ಟ್ ಎಂಬುವನು ಒಮ್ಮೆ ವ್ಯಕ್ತಿತ್ವದ ಸುಮಾರು 50 ಪರಿಭಾಷೆಗಳನ್ನು ಸಂಗ್ರಹಿಸಿ ಅವುಗಳನ್ನು ವಿಶ್ಲೇಷಿಸಿದನು. ಅವುಗಳಲ್ಲಿ ಕೆಲವು ಜೈವಿಕ ಲಕ್ಷಣಗಳ ದೃಷ್ಟಿಯಿಂದ ವ್ಯಕ್ತಿತ್ವವನ್ನು ವ್ಯಾಖ್ಯಾನಿಸಿದ್ದವು. ಕೆಲವು ವ್ಯಾಖ್ಯೆಗಳು ವ್ಯಕ್ತಿಗಳ ಸಾಮಾಜಿಕ ಲಕ್ಷಣಗಳು ಮತ್ತು ಅನ್ಯೋನ್ಯ ಕ್ರಿಯೆಗಳ ದೃಷ್ಟಿಯಿಂದ ವ್ಯಕ್ತಿತ್ವವನ್ನು ಅರ್ಥೈಸಿದ್ದವು. ಇದೇ ರೀತಿ ಬೇರೆ ಬೇರೆ ಪರಿಭಾಷೆಗಳು ವ್ಯಕ್ತಿತ್ವವನ್ನು ಲಕ್ಷಣಗಳ ಸಮಗ್ರತೆ ಅಥವಾ ಸಂಘಟನೆ, ಸಮಾಜಕ್ಕೆ ಸಮಾಯೋಜಿಸಿಕೊಳ್ಳುವಿಕೆ, ಅಪೂರ್ವತೆ, ವ್ಯಕ್ತಿಯ ಸಾರಭೂತ ಅಂಶ (Essense) ದೃಷ್ಟಿಯಿಂದ ವ್ಯಕ್ತಿತ್ವವನ್ನು ವಿವರಿಸಿದ್ದವು. ಕೆಲವು ಪರಿಭಾಷೆಗಳು ಬಹುಅಂಶಕ (Omnibus) ವ್ಯಾಖ್ಯೆಗಳಾಗಿದ್ದವು. ಅಂದರೆ ವ್ಯಕ್ತಿಯ ಎಲ್ಲಾ ಲಕ್ಷಣಗಳ ಸಮಷ್ಟಿಯೇ ವ್ಯಕ್ತಿತ್ವ ಎಂದು ವಿವರಿಸಿದ್ದವು. ವ್ಯಕ್ತಿತ್ವದ ಪರಿಭಾಷೆ ವ್ಯಾಖ್ಯಾನಿಸುವವನ ವ್ಯಕ್ತಿತ್ವ ಸಿದ್ಧಾಂತಿಕ ತತ್ವಗಳಿಂದಲೂ ಪ್ರಭಾವಿತಗೊಳ್ಳುತ್ತದೆ. ಹೀಗಾಗಿ ವ್ಯಕ್ತಿತ್ವಕ್ಕೆ ಸರ್ವಸಮ್ಮತವಾದ ನಿಖರವಾದ ಒಂದು ಪರಿಭಾಷೆಯನ್ನು ಕೊಡುವುದು ಸುಲಭವಾದ ಕಾರ್ಯವಾಗಿರಲಿಲ್ಲ. ಆದರೂ ಕೆಲವು ಪರಿಭಾಷೆಗಳನ್ನು ಉದಾಹರಣಾರ್ಥವಾಗಿ ಈ ಮುಂದೆ ಕೊಟ್ಟಿದೆ.

ಉಡ್‌ವರ್ಥನ ಪರಿಭಾಷೆ ಹೀಗಿದೆ, "ವ್ಯಕ್ತಿಯ ವಿಶಿಷ್ಟ ಯೋಚನೆ ಮತ್ತು ಅಭಿವ್ಯಕ್ತಿಯ ಅಭ್ಯಾಸಗಳು, ಅವನ/ಅವಳ ಮನೋಭಾವಗಳು ಮತ್ತು ಅಭಿರುಚಿಗಳು, ಅವನು/ಅವಳು ವರ್ತಿಸುವ ರೀತಿ ಮತ್ತು ಅವನ/ಅವಳ ಜೀವನ ದರ್ಶನದ ಮೂಲಕ ಅಭಿವ್ಯಕ್ತವಾದಂತೆ ಕಂಡು ಬರುವ ವ್ಯಕ್ತಿಯ ವರ್ತನೆಯ ಒಟ್ಟು ಲಕ್ಷಣವೇ ವ್ಯಕ್ತಿತ್ವ".

ವಾರೆನ್ನನ ಮನೋವಿಜ್ಞಾನ ಶಬ್ದಕೋಶ ವ್ಯಕ್ತಿತ್ವವನ್ನು – ಬೇರೆಯವರಿಗೆ ಹೋಲಿಸಿದಂತೆ ವ್ಯಕ್ತಗೊಳ್ಳುವ ವ್ಯಕ್ತಿಯ ಸಂಜ್ಞಾನಾತ್ಮಕ, ಸಂವೇಗಾತ್ಮಕ, ಕ್ರಿಯಾತ್ಮಕ ಮತ್ತು ದೈಹಿಕ ಲಕ್ಷಣಗಳ ಸಮಗ್ರ ಸಂಘಟನೆಯೇ 'ವ್ಯಕ್ತಿತ್ವ' ಎಂದು ವ್ಯಕ್ತಿತ್ವವನ್ನು ಪರಿಭಾಷಿಸಿದೆ.

ಐಸೆಂಕ್, ಆರ್ನಾಲ್ಡ್ ಮತ್ತು ಮೀಹಲ್ ಪ್ರಕಾರ "ಜೈವಿಕ ಚೋದನೆಗಳು (Drives) ಮತ್ತು ಸಾಮಾಜಿಕ ಮತ್ತು ಭೌತಿಕ ಪರಿಸರದೊಂದಿಗೆ ವ್ಯಕ್ತಿಯ ಅನ್ಯೋನ್ಯ ಕ್ರಿಯೆಗಳ ಪರಿಣಾಮವಾಗಿ ಉಂಟಾಗುವ ವ್ಯಕ್ತಿಯ ಅಭಿಪ್ರೇರಣಾತ್ಮಕ ಪ್ರವೃತ್ತಿಗಳ ಸಾಪೇಕ್ಷವಾಗಿ

Digitised by Bharatavani, CIIL

ಸ್ಥಿರವಾಗಿರುವ ಸಂಘಟನೆಯೇ ವ್ಯಕ್ತಿತ್ವ, ಸಾಮಾನ್ಯವಾಗಿ ವ್ಯಕ್ತಿತ್ವ ಮನುಷ್ಯನ ವಿಶಿಷ್ಟವಾದ ಅಥವಾ ಭಿನ್ನವಾದ ವರ್ತನೆ ಮತ್ತು ಯೋಚನೆಯನ್ನು ನಿರ್ಧರಿಸುವ ಸಂವೇಗಾತ್ಮಕ, ಕ್ರಿಯಾತ್ಮಕ ವಿಶಿಷ್ಟ ಲಕ್ಷಣಗಳು, ಸೆಂಟಿಮೆಂಟುಗಳು (ಭಾವನೆಗಳು), ಮನೋಭಾವಗಳು, ಮನೋಗ್ರಂಥಿಗಳು (Complexes) ಮತ್ತು ಸುಪ್ತ ಪ್ರಜ್ಞೆಯ ತಂತ್ರಗಳನ್ನು, ಆಸಕ್ತಿ ಮತ್ತು ವಿಚಾರಗಳನ್ನು ಮುಖ್ಯವಾಗಿ ಸೂಚಿಸುತ್ತದೆ.

ಎನ್.ಎಲ್. ಮನ್ ಪ್ರಕಾರ "ವ್ಯಕ್ತಿತ್ವ ಎಂದರೆ ವ್ಯಕ್ತಿಯ ಸಂರಚನೆಗಳ, ವರ್ತನೆಯ ರೀತಿಗಳ, ಆಸಕ್ತಿಗಳ, ಮನೋಭಾವಗಳ, ಸಾಮರ್ಥ್ಯಗಳ ಮತ್ತು ಅಭಿಸಾಮರ್ಥ್ಯಗಳ ಅತ್ಯಂತ ವಿಶಿಷ್ಟವಾದ ಸಮಗ್ರತೆಯಾಗಿದೆ – ಅದು ಬೇರೆಯವರು ನೋಡುವಂತೆ ಸಂಪೂರ್ಣ ವ್ಯಕ್ತಿಯನ್ನು ಸೂಚಿಸುತ್ತದೆ."

ಜಿ.ಡಬ್ಲ್ಯೂ, ಆಲ್‌ಪೋರ್ಟಿನ ಪರಿಭಾಷೆ ಹೀಗಿದೆ. "ಪರಿಸರಕ್ಕೆ ವ್ಯಕ್ತಿಯ ಅಪೂರ್ವ ಸಮಾಯೋಜನೆಯನ್ನು ನಿರ್ಧರಿಸುವ ವ್ಯಕ್ತಿಯಲ್ಲಿರುವ ಮನೋ–ಭೌತಿಕ ವ್ಯವಸ್ಥೆಗಳ ಗತಿಶೀಲಾತ್ಮಕ ಸಂಘಟನೆಯೆ ವ್ಯಕ್ತಿತ್ವ.."

ಜೆ.ಪಿ.ಗಿಲ್‌ಫರ್ಡ್ "ವ್ಯಕ್ತಿಯ ವಿಶೇಷಕಗಳ ಅಪೂರ್ವ ಸಂಘಟನೆಯೇ ವ್ಯಕ್ತಿತ್ವ. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗಿಂತ ಸಾಪೇಕ್ಷವಾಗಿ ಸ್ಥಿರವಾದ ರೀತಿಯಲ್ಲಿ ಭಿನ್ನವಾಗಿರುವಂತೆ ಮಾಡುವ ಯಾವುದೇ ವಿಶಿಷ್ಟವಾದ ರೀತಿಯ ಲಕ್ಷಣವೇ ವಿಶೇಷಕ ಎನ್ನಿಸುತ್ತದೆ" ಎಂದು ವ್ಯಕ್ತಿತ್ವವನ್ನು ವ್ಯಾಖ್ಯಾನಿಸಿದ್ದಾನೆ.

ಮೇಲಿನ ಪರಿಭಾಷೆಗಳನ್ನು ಮತ್ತು ಇದೇ ರೀತಿಯ ಎನ್ನೂ ಅನೇಕ ಪರಿಭಾಷೆಗಳನ್ನು ವಿಶ್ಲೇಷಿಸಿದಾಗ ಈ ಕೆಳಗಿನ ಅಂಶಗಳು ಸ್ಪಷ್ಟವಾಗಿರುತ್ತವೆ.

- ವ್ಯಕ್ತಿತ್ವ ಪ್ರತಿ ವ್ಯಕ್ತಿಗೂ ಅಪೂರ್ವವಾದುದು.
- ವ್ಯಕ್ತಿತ್ವ ಅನೇಕ ಲಕ್ಷಣಗಳ ಗತಿಶೀಲಾತ್ಮಕ ಸಂಘಟನೆ.
- ವ್ಯಕ್ತಿತ್ವ ವ್ಯಕ್ತಿಯ ಎಲ್ಲಾ ಲಕ್ಷಣಗಳನ್ನು ಒಳಗೊಳ್ಳುತ್ತದೆ.
- ವ್ಯಕ್ತಿತ್ವ ವ್ಯಕ್ತಿಯ ವರ್ತನೆಯನ್ನು ಯೋಚನೆಗಳನ್ನು ಮತ್ತು ಸಮಾಯೋಜನೆಯನ್ನು ನಿರ್ಧರಿಸುತ್ತದೆ.

ಮನೋವಿಜ್ಞಾನಿಗಳು ವ್ಯಕ್ತಿತ್ವವನ್ನು ವಿವಿಧ ರೀತಿಗಳಲ್ಲಿ ಪರಿಭಾವಿಸಿಕೊಂಡಿದ್ದಾರೆ. ಶಬ್ದದ ವ್ಯುತ್ಪತ್ತಿಯಿಂದ ವ್ಯಕ್ತಿತ್ವ ಒಂದು ಮುಖವಾಡವೆನಿಸುತ್ತದೆ. ಸೀಮಿತ ಸಾಮಾನ್ಯ ಜನರ ದೃಷ್ಟಿಯಲ್ಲಿ ಅದು ದೈಹಿಕ ರೂಪಕ್ಕೆ, ನೈತಿಕ ಲಕ್ಷಣಗಳಿಗೆ ಅನ್ವಯವಾಗುತ್ತದೆ. ಬೇರೆಯವರ ದೃಷ್ಟಿಯಿಂದ ವ್ಯಕ್ತಿತ್ವ ಅವರ ಮೇಲೆ ಪ್ರಭಾವ ಬೀರುವ ಪ್ರಚೋದನೆಯಾಗಬಹುದು. ವ್ಯಕ್ತಿ ಬೇರೆಯವರೊಡನೆ ಅನುಕ್ರಿಯಿಸುವ ದೃಷ್ಟಿಯಿಂದ ವ್ಯಕ್ತಿತ್ವ ಅನುಕ್ರಿಯೆಯೂ ಆಗುತ್ತದೆ. ಸಮಾಯೋಜನೆಯಲ್ಲಿ ವ್ಯಕ್ತಿಯ ವಿಶಿಷ್ಟತೆ ವ್ಯಕ್ತವಾಗುವುದರಿಂದ ವ್ಯಕ್ತಿತ್ವವನ್ನು ಸಮಾಯೋಜನೆಯಾಗಿಯೂ ಅರ್ಥೈಸಬಹುದು. ವ್ಯಕ್ತಿತ್ವವನ್ನು ಕೆಲವರು ವ್ಯಕ್ತಿಯ ಜೈವಿಕ ಮತ್ತು ಮಾನಸಿಕ ಅಂಶಗಳ ಮಧ್ಯೆ ಪ್ರವೇಶಿಸುವ ಮಾಧ್ಯವರ್ತಿ ಚಲಕವಾಗಿಯೂ (Intervening Variable) ಪರಿಭಾವಿಸಿದ್ದಾರೆ. ವ್ಯಕ್ತಿತ್ವವನ್ನು ಸುಪ್ತಚೇತನದ ಪ್ರೇರಣೆ ಮತ್ತು ಪ್ರವೃತ್ತಿಗಳ ರೂಪದಲ್ಲಿಯೂ ನೋಡುವವರಿದ್ದಾರೆ ಈ ವಿವಿಧ ದೃಷ್ಟಿಕೋನಗಳು ವ್ಯಕ್ತಿತ್ವದ ಪರಿಕಲ್ಪನೆಯ ಸಂಕೀರ್ಣತೆಯನ್ನು ತೋರಿಸುತ್ತವೆ.

ವ್ಯಕ್ತಿತ್ವದಲ್ಲಿ ವಿವಿಧ ಭಾಗಗಳನ್ನು ಗುರ್ತಿಸಬಹುದು.ವ್ಯಕ್ತಿಗೆ ಅಸ್ತಿತ್ವವನ್ನು ಕೊಡುವುದೇ ಜೈವಿಕ ಭಾಗ. ಇದು ಬಾಹ್ಯಗೋಚರವಾದ ದೈಹಿಕ ರೂಪವನ್ನು, ಆಂತರಿಕ ಅವಯವಗಳನ್ನೂ, ಜೈವ–ರಾಸಾಯನಿಕ ಮತ್ತು ಅನುವಂಶೀಯವಾಗಿ ಬರುವ ಲಕ್ಷಣಗಳನ್ನೂ ಒಳಗೊಳ್ಳುತ್ತದೆ. ಇದಕ್ಕೆ **ದೈಹಿಕ ರಚನೆ (Physique)** ಎನ್ನುತ್ತಾರೆ. ವ್ಯಕ್ತಿತ್ವದಲ್ಲಿ ನೈತಿಕತೆ ಮತ್ತು ಮೌಲ್ಯಗಳಿಗೆ ಸಂಬಂಧಿಸಿದ ಭಾಗವಿದೆ. ಇದನ್ನೇ **ಚಾರಿತ್ರ್ಯ (Character)** ಎನ್ನುತ್ತೇವೆ. ಸಾಮಾನ್ಯ ಜನರು ದೈಹಿಕ ರಚನೆ ಅಥವಾ ಚಾರಿತ್ರ್ಯವನ್ನೇ ವ್ಯಕ್ತಿತ್ವವೆಂದು ತಿಳಿಯುತ್ತಾರೆ. ವ್ಯಕ್ತಿತ್ವದ ಸಾಮಾಜಿಕ ಅಂಶ ಬೇರೆಯಾದರೊಡನೆ ವ್ಯಕ್ತಿ ಹೊಂದಿರುವ ಸಂಬಂಧಗಳು, ವರ್ತನೆಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿತ್ವದ ಮಾನಸಿಕ ಭಾಗದಲ್ಲಿ ವ್ಯಕ್ತಿಯ ಮನೋಭಾವಗಳು, ಆಸಕ್ತಿಗಳು, ಸಂವೇಗಗಳು, ಅಭಿಪ್ರೇರಣೆ, ಸಂವೇಗಗಳು, ಸಂವೇದನೆಗಳು, ಆಧ್ಯಾತ್ಮಿಕತೆ, ಧಾರ್ಮಿಕತೆಯ ಲಕ್ಷಣಗಳು ಸೇರುತ್ತವೆ. ವ್ಯಕ್ತಿಯ ಬೌದ್ಧಿಕ ಭಾಗದಲ್ಲಿ ಬುದ್ಧಿಶಕ್ತಿ, ಅಭಿಸಾಮರ್ಥ್ಯಗಳು ಮತ್ತು ಸೃಜನಾತ್ಮಕತೆ ಸೇರುತ್ತವೆ. ಈ ವಿವರಣೆಯಿಂದ ಈ ಎಲ್ಲಾ ಭಾಗಗಳು ಬೇರೆಬೇರೆಯಾಗಿ ಪರಸ್ಪರ ಸಂಬಂಧವಿಲ್ಲದಂತಿವೆ ಎಂದು ಅರ್ಥಮಾಡಿಕೊಳ್ಳಬಾರದು. ಈ ಭಾಗಗಳು ಪರಸ್ಪರ ಸಂಬಂಧವನ್ನು ಹೊಂದಿ, ಪಾರಸ್ಪರಿಕ ಪ್ರಭಾವಕ್ಕೆ ಒಳಗಾಗುತ್ತವೆ. ವ್ಯಕ್ತಿತ್ವ ಈ ಎಲ್ಲಾ ಅಂಶಗಳ ಅಥವಾ ಭಾಗಗಳ ವ್ಯವಸ್ಥಿತವಾದ ಸಂಘಟನೆಯಾಗಿದ್ದು ಅದನ್ನು ಇಡಿಯಾಗಿ ಪರಿಭಾವಿಸಬೇಕಾಗುತ್ತದೆ.

**ವ್ಯಕ್ತಿತ್ವ ಅಧ್ಯಯನದ ಉಪಕ್ರಮಗಳು:**

ವ್ಯಕ್ತಿತ್ವವನ್ನು ಅಧ್ಯಯನ ಮಾಡಲು ಅನೇಕ ಉಪಕ್ರಮಗಳಿವೆ. ಅತ್ಯಂತ ಹಳೆಯ ಉಪಕ್ರಮವೆಂದರೆ ಕೆಲವು ಲಕ್ಷಣ ಸಮೂಹಗಳ ಆಧಾರದ ಮೇಲೆ ವ್ಯಕ್ತಿತ್ವವನ್ನು ವರ್ಗೀಕರಿಸಿ ಪ್ರತಿ ವರ್ಗದ ಲಕ್ಷಣಗಳನ್ನು ವಿವರಿಸುವುದು. ಈ ಉಪಕ್ರಮಕ್ಕೆ **ಪ್ರರೂಪ ಉಪಕ್ರಮ (Type Approach)** ಎಂದು ಹೆಸರು. ದೈಹಿಕ ಮತ್ತು ಮಾನಸಿಕ ಲಕ್ಷಣಗಳ ಮೇಲೆ, ಜಾತಕದಲ್ಲಿ ಗ್ರಹಗಳ ಪ್ರಾಧಾನ್ಯದ ಮೇಲೆ, ಹಸ್ತರೇಖೆಗಳು, ಹಸ್ತಾಕ್ಷರದ ರೀತಿ ಇತ್ಯಾದಿಗಳ ಆಧಾರದ ಮೇಲೆ ವ್ಯಕ್ತಿತ್ವವನ್ನು ವರ್ಗೀಕರಿಸುವ ಪ್ರಯತ್ನಗಳು ನಡೆದಿವೆ. ಈ ಉಪಕ್ರಮ ಒಂದು ವ್ಯವಸ್ಥಿತ ಸಿದ್ಧಾಂತದ ರೂಪವನ್ನು ಪಡೆಯಲು

Digitised by Bharatavani, CIIL

ಸಾಧ್ಯವಾಗಿಲ್ಲ. ಪ್ರತಿಯೊಂದು ಗುಂಪಿನಲ್ಲಿ ಸೇರುವ ಎಲ್ಲಾ ವ್ಯಕ್ತಿಗಳಿಗೂ ಆ ಗುಂಪಿನ ಲಕ್ಷಣಗಳನ್ನು ಅನ್ವಯಿಸಬೇಕಾಗುತ್ತದೆ. ಆದರೆ ಪ್ರತಿಯೊಂದು ವ್ಯಕ್ತಿತ್ವವೂ ಅಪೂರ್ವವಾಗಿರುವುದರಿಂದ ಈ ಉಪಕ್ರಮದಿಂದ ವ್ಯಕ್ತಿತ್ವದಲ್ಲಿನ ವ್ಯಕ್ತಿ ವ್ಯತ್ಯಾಸಗಳನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ಒಂದು ವರ್ಗಕ್ಕೆ ಸೇರುವ ಎಲ್ಲಾ ವ್ಯಕ್ತಿಗಳು ಆ ವರ್ಗದ ವ್ಯಕ್ತಿತ್ವ ಲಕ್ಷಣವನ್ನು ಒಂದೇ ಪ್ರಮಾಣದಲ್ಲಿ ಹೊಂದಿರುವುದಿಲ್ಲ. ಮತ್ತೊಂದು ಸಮಸ್ಯೆಯೆಂದರೆ ಒಂದು ಪ್ರರೂಪದ ಗುಂಪಿಗೆ ಸೇರುವ ವ್ಯಕ್ತಿಗಳು ಬೇರೆ ಪ್ರರೂಪದ ಲಕ್ಷಣಗಳನ್ನು ತೋರಿಸಬಹುದು. ಆದ್ದರಿಂದ ಶುದ್ಧ ಪ್ರರೂಪಗಳು ಅಪರೂಪ. ಮಿಶ್ರ ಪ್ರರೂಪಗಳೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಆದ್ದರಿಂದ ಮನೋವಿಜ್ಞಾನಿಗಳು ಕಪಾಲದ, ಉಬ್ಬುತಗ್ಗುಗಳಿಂದ ವ್ಯಕ್ತಿತ್ವವನ್ನು ವಿವರಿಸುವ ಕಪಾಲಶಾಸ್ತ್ರ (Phrenology), ಗ್ರಹಗಳ ಪ್ರಧಾನ್ಯವನ್ನು ಆಧಾರವಾಗಿಟ್ಟುಕೊಳ್ಳುವ ಜೋತಿಷ್ಯಶಾಸ್ತ್ರ (Astrology), ಹಸ್ತಸಾಮುದ್ರಿಕೆ (Palmistry), ಹಸ್ತಲೇಖಾಶಾಸ್ತ್ರ (Graphology) ಮುಂತಾದವುಗಳ ವ್ಯಕ್ತಿತ್ವವನ್ನು ವಿವರಿಸುವ ವಿಧಾನಗಳನ್ನು ಮಿಥ್ಯಾ ವೈಜ್ಞಾನಿಕ (Psudo-Scientific) ವಿಧಾನಗಳೆಂದು ಪರಿಗಣಿಸಿದ್ದಾರೆ. ಆದರೂ ಪ್ರರೂಪ ಉಪಕ್ರಮವನ್ನು ನಾವು ಪೂರ್ತಿಯಾಗಿ ಅಲ್ಲಗೆಳೆಯಲು ಸಾಧ್ಯವಿಲ್ಲ. ಪ್ರರೂಪಗಳನ್ನು ವೈಜ್ಞಾನಿಕ ವಿಧಾನದಿಂದ ವರ್ಗೀಕರಿಸುವ ಪ್ರಯತ್ನವೂ ನಡೆದಿದೆ. ಈ ಉಪಕ್ರಮವನ್ನು ಜನಪ್ರಿಯ, ಸಾಮಾನ್ಯ ಜ್ಞಾನದ ಉಪಕ್ರಮವೆಂದು ಹೇಳಬಹುದು.

ಮನೋವಿಜ್ಞಾನಿಗಳು ವ್ಯಕ್ತಿತ್ವದ ನಿರ್ದಿಷ್ಟ ಲಕ್ಷಣಗಳನ್ನು ಅಥವಾ ವಿಶಿಷ್ಟ ಲಕ್ಷಣಗಳನ್ನು ವಿವರಿಸುವ ಕ್ರಮಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಈ ದಿಶೆಯಲ್ಲಿ ಅನೇಕ ಸಂಶೋಧನೆಗಳು ನಡೆದು ಸಿದ್ಧಾಂತಗಳು ಪ್ರತಿಪಾದಿತವಾಗಿವೆ. ಈ ಉಪಕ್ರಮಕ್ಕೆ **ವಿಶೇಷಕ ಉಪಕ್ರಮ (Trait Approach)** ಎಂದು ಹೆಸರು. ಉಡ್‌ವರ್ಥ್ ವಿಶೇಷಕವನ್ನೂ ಹೀಗೆ ಪರಿಭಾಷಿಸಿದ್ದಾನೆ – "ವ್ಯಕ್ತಿಯನ್ನು ಅವನ ಚಟುವಟಿಕೆಗಳ ವಿಸ್ತೃತ ವ್ಯಾಪ್ತಿಯಲ್ಲಿ ವರ್ಣಿಸುವ ಸಂತೋಷಚಿತ್ತತೆ ಅಥವಾ ಆತ್ಮನಿರ್ಭರತೆ ಮುಂತಾದ ವರ್ತನೆಗಳ ನಿರ್ದಿಷ್ಟ ಲಕ್ಷಣಗಳೇ ವಿಶೇಷಕಗಳೆನ್ನಿಸುತ್ತವೆ ಮತ್ತ ಇವು ದೀರ್ಘ ಅವಧಿಯವರೆಗೆ ಸ್ಥಿರತೆಯನ್ನು ಹೊಂದಿರುತ್ತವೆ". ಆಲ್‌ಪೋರ್ಡ್, ಗಿಲ್‌ಫರ್ಡ್, ಆರ್.ಬಿ. ಕೆಟ್ಟೆಲ್, ಎಚ್.ಜೆ. ಟ್ರಿಡೆಂಕ್ ಈ ಉಪಕ್ರಮದಿಂದ ವ್ಯಕ್ತಿತ್ವವನ್ನು ವಿಶ್ಲೇಷಿಸಿದ್ದಾರೆ. ಮಾನವನ ವ್ಯಕ್ತಿತ್ವವನ್ನು ಎಷ್ಟು ವಿಶೇಷಕಗಳಿಂದ ತೃಪ್ತಿಕರವಾಗಿ ವಿವರಿಸಬಹುದು ಎಂಬುದನ್ನು ನಿರ್ಧರಿಸುವುದು ಈ ಮನೋವಿಜ್ಞಾನಿಗಳ ಗುರಿಯಾಗಿದೆ. ಬಹಿರ್ಮುಖತೆ, ಅಂತರ್ಮುಖತೆ, ಸಾಮಾಜಿಕ ಪ್ರವೃತ್ತಿ, ಧೈರ್ಯ ಇವು ವಿಶೇಷಕಗಳ ಕೆಲವು ಉದಾಹರಣೆಗಳಾಗಿವೆ. ಎಷ್ಟು ವಿಶೇಷಕಗಳಿವೆ ಎಂಬುದರಲ್ಲಿ ಮನೋವಿಜ್ಞಾನಿಗಳಲ್ಲಿ ಒಮ್ಮತವಿಲ್ಲ. ಒಂದೆಡೆ ಆಲ್‌ಪೋರ್ಟ್ ಇಂಗ್ಲೀಷ್ ಭಾಷೆಯಲ್ಲಿ ವ್ಯಕ್ತಿತ್ವವನ್ನು ವಿವರಿಸುವ ಪದಗಳು 11,000ಕ್ಕೂ ಹೆಚ್ಚು ಇವೆ ಎಂದಿದ್ದಾನೆ. ಕೆಟ್ಟೆಲ್ 16 ಮುಖ್ಯ ವಿಶೇಷಕಗಳನ್ನು ಗುರ್ತಿಸಿದ್ದಾನೆ. ಇದೇ ರೀತಿ ಗಿಲ್‌ಫರ್ಡ್ ಮತ್ತು ಹೆಚ್.ಜೆ. ಐಸೆಂಕ್ ಎಂಬುವರು ವ್ಯಕ್ತಿತ್ವದ ಕೆಲವು ಆಯಾಮಗಳನ್ನು (Dimension) ಗುರ್ತಿಸಿದ್ದಾರೆ. ವ್ಯಕ್ತಿತ್ವ ಎಷ್ಟು ವಿಶೇಷಕಗಳಿಂದ ಕೂಡಿದೆ ಎನ್ನುವುದರಲ್ಲಿ ಮನೋವಿಜ್ಞಾನಿಗಳಲ್ಲಿ ಒಮ್ಮತವಿಲ್ಲದಿದ್ದರೂ, ವಿಶೇಷಕಗಳನ್ನು ವ್ಯಕ್ತಿ ವರ್ತನ ವಿನ್ಯಾಸಗಳನ್ನು ಸಾಧ್ಯವಾದಷ್ಟು ವಸ್ತುನಿಷ್ಟವಾಗಿ ಅಳತೆ ಮಾಡಲು ಪ್ರಶ್ನಾವಳಿಗಳನ್ನು ರೂಪಿಸುವುದರಲ್ಲಿ ಈ ಉಪಕ್ರಮವನ್ನು ಪ್ರತಿಪಾದಿಸುವ ಮನೋವಿಜ್ಞಾನಿಗಳು ಯಶಸ್ವಿಗಳಾಗಿದ್ದಾರೆ.

ಪ್ರಸಿದ್ಧ ಮನೋವಿಶ್ಲೇಷಣ ಸಿದ್ಧಾಂತದ ಪ್ರತಿಪಾದಕ ಸಿಗ್ಮಂಡ್ ಫ್ರಾಯ್ಡ್‌ನ ವಿಚಾರಗಳ ಆಧಾರದ ಮೇಲೆ ವ್ಯಕ್ತಿತ್ವವನ್ನು ಅಧ್ಯಯನ ಮಾಡುವ ಇನ್ನೊಂದು ಉಪಕ್ರಮವಿದೆ. ಈ ಉಪಕ್ರಮಕ್ಕೆ **ಪ್ರಕ್ಷೇಪಣ ಉಪಕ್ರಮ (Projective approach)** ಎಂದು ಹೆಸರು. ಈ ಉಪಕ್ರಮದ ಪ್ರಕಾರ ಮಾನವನ ವ್ಯಕ್ತಿತ್ವ ಅವನ ಸುಪ್ತ ಪ್ರಜ್ಞೆಯ (Unconscious) ಪ್ರೇರಣೆಗಳಿಂದ, ಒತ್ತಡಗಳಿಂದ ಪ್ರಭಾವಿತಗೊಳ್ಳುತ್ತ ವಿಕಾಸ ಹೊಂದುತ್ತದೆ ಎಂದು ಫ್ರಾಯ್ಡ್ ಹೇಳುತ್ತಾನೆ. ನಮ್ಮ ವ್ಯಕ್ತಿತ್ವದ ಬಹುತೇಕ ಲಕ್ಷಣಗಳು ಸುತ್ತ ಪ್ರಜ್ಞೆಯಿಂದ ನಿಯಂತ್ರಿತವಾಗುತ್ತವೆ. ನಿಜವಾದ ವ್ಯಕ್ತಿತ್ವದ ಕೇಂದ್ರ ಸುಪ್ತ ಪ್ರಜ್ಞೆಯ ಮಟ್ಟದಲ್ಲಿರುತ್ತದೆ. ಅನೇಕ ಮಾನಸಿಕ ತಂತ್ರಗಳ ಮೂಲಕ ನಮ್ಮ ವ್ಯಕ್ತಿತ್ವ ಗತಿಶೀಲವಾಗುತ್ತದೆ ಎಂಬುದು ಈ ಉಪಕ್ರಮದ ವಾದ. ಅಂಥ ತಂತ್ರಗಳಲ್ಲಿ ಪ್ರಕ್ಷೇಪಣವೂ (Projection) ಒಂದು. ಪ್ರಕ್ಷೇಪಣೆ ಎಂದರೆ ನಮಗೆ ಅರಿವಿಲ್ಲದಂತೆ ಸುಪ್ತ ಪ್ರಜ್ಞೆಯಿಂದ ಪ್ರೇರಿತರಾಗಿ ವರ್ತನೆಗಳನ್ನು ವ್ಯಕ್ತಪಡಿಸವುದು ಎಂದರ್ಥ. ಪ್ರಕ್ಷೇಪಣೆಯಲ್ಲಿ ವ್ಯಕ್ತಿ ತನ್ನ ಭಾವನೆಗಳನ್ನು ದೋಷಗಳನ್ನು ಅತೃಪ್ತಿಯನ್ನು ಬೇರೆಯವರ ಮೇಲೆ ಪ್ರಕ್ಷೇಪಿಸುತ್ತಾನೆ. ಆದ್ದರಿಂದ ನಾವು ವ್ಯಕ್ತಿತ್ವದ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕಾದರೆ ವ್ಯಕ್ತಿಯ ಪ್ರಕ್ಷೇಪಣೆಗಳ ಮೂಲಕವೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈ ಉಪಕ್ರಮದಲ್ಲಿ ಅಸ್ಪಷ್ಟ ಚಿತ್ರಗಳು, ಮಸಿಕಲೆಗಳ ಮೇಲೆ ತಮ್ಮ ಭಾವನೆಗಳನ್ನು ಪ್ರಕ್ಷೇಪಿಸಲು ಪ್ರೇರಿಸಲಾಗುತ್ತದೆ. ವ್ಯಕ್ತಿ ತನಗೆ ಅರಿವಿಲ್ಲದೆ ತನ್ನ ವ್ಯಕ್ತಿತ್ವ ಲಕ್ಷಣಗಳನ್ನು ವ್ಯಕ್ತಪಡಿಸುತ್ತಾನೆ. ಈ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸುವುದರ ಮೂಲಕ ವ್ಯಕ್ತಿತ್ವವನ್ನು ವಿಶ್ಲೇಷಿಸಲು ಸಾಧ್ಯವಿದೆ ಎನ್ನುವುದು ಈ ಉಪಕ್ರಮದ ಮುಖ್ಯ ಪ್ರತಿಪಾದನೆಯಾಗಿದೆ.

ವ್ಯಕ್ತಿತ್ವವನ್ನು ಜೈವಿಕವಾಗಿ ವಿಶ್ಲೇಷಿಸುವ ಪ್ರಯತ್ನವೂ ನಡೆದಿದೆ. ಇದೇ **ಜೈವಿಕ ಉಪಕ್ರಮ (Biological Approach).** ಮಾನವ ಜೀವ ವಿಕಾಸದ ಫಲವಾಗಿರುವುದರಿಂದ ಅವನ ಸ್ವರೂಪ ಮುಖ್ಯವಾಗಿ ಜೈವಿಕವಾದದ್ದೇ. ಅವನ ದೈಹಿಕ ಹಾಗೂ ಬಹಳಷ್ಟು ಮಾನಸಿಕ ಲಕ್ಷಣಗಳು ಜೈವಿಕವಾಗಿ (ಆನುವಂಶೀಯವಾಗಿ)

Digitised by Bharatavani, CIIL

ನಿರ್ಧಾರಗೊಳ್ಳುತ್ತವೆ. ಮಾನವನ ವರ್ತನೆಯನ್ನು ನಿಯಂತ್ರಿಸುವ ಕೇಂದ್ರ ನರಮಂಡಲ ಅದರಲ್ಲೂ ಮುಖ್ಯವಾಗಿ ಹೆಚ್ಚು ವಿಕಾಸಗೊಂಡಿರುವ ಮೆದುಳು ಜೈವಿಕವಾದದ್ದು. ಅನೇಕ ರಾಸಾಯನಿಕ ಪದಾರ್ಥಗಳು (ಎನ್ಝೈಮುಗಳು, ಹಾರ್ಮೋನುಗಳು, ಸೆರಿಟೋನಿನ್, ಪೆಪ್ಟಿನ್, ಡಿ.ಎನ್.ಎ. ಮತ್ತು ಆರ್.ಎನ್.ಎ ಎಂಬ ರಾಸಾಯನಿಕಗಳು ಮಾನವನ ವರ್ತನೆಯ ಮೇಲೆ ಪ್ರಭಾವ ಬೀರುತ್ತವೆ ಮತ್ತು ನಿಯಂತ್ರಿಸುತ್ತದೆ. ಆದ್ದರಿಂದ ಮಾನವನ ವ್ಯಕ್ತಿತ್ವವನ್ನು ಜೈವಿಕ ತತ್ವಗಳ/ನಿಯಮಗಳ ಮೂಲಕ ವಿಶ್ಲೇಷಿಸಬಹುದು ಎನ್ನುವುದು ಈ ಉಪಕ್ರಮದ ನಿಲುವಾಗಿದೆ.

ಸಾಮಾಜಿಕ ಮನೋವಿಜ್ಞಾನಿಗಳು (Social Psychologists) ಮಾನವನ ವ್ಯಕ್ತಿತ್ವ ಸಾಮಾಜಿಕ ಸಂದರ್ಭದಲ್ಲಿ ವಿಕಾಸಗೊಳ್ಳುವುದರಿಂದ ಅದರ ಸ್ವರೂಪ ಹೆಚ್ಚಾಗಿ ಸಾಮಾಜಿಕವಾಗಿ ನಿರ್ಧಾರಗೊಳ್ಳುತ್ತದೆ. ಜೈವಿಕ ಅಂಶಗಳ ಪ್ರಭಾವವನ್ನು ಸಂಪೂರ್ಣವಾಗಿ ಅಲ್ಲಗೆಳೆಯಲು ಸಾಧ್ಯವಿಲ್ಲವಾದರೂ ವ್ಯಕ್ತಿತ್ವದ ವಿಕಾಸದ ಮೇಲೆ ಸಾಮಾಜಿಕ ಅಂಶಗಳ ಪ್ರಭಾವವೇ ಹೆಚ್ಚಾಗಿರುತ್ತದೆ. ನಮ್ಮ ಮನೋಭಾವಗಳು, ಸಂವೇಗಗಳ ಅಭಿವ್ಯಕ್ತಿ ಹಾಗೂ ನಿಯಂತ್ರಣ, ಧರ್ಮ, ಸಾಮಾಜಿಕ ಕಟ್ಟುಪಾಡುಗಳು – ಇವೆಲ್ಲವು ನಮ್ಮ ಸಾಮಾಜಿಕ ಪರಿಸರದಿಂದಲೇ ಪ್ರಭಾವಿತಗೊಳ್ಳುತ್ತವೆ. ಇದರಿಂದ ಮಾನವನ ವ್ಯಕ್ತಿತ್ವಕ್ಕೆ ಸಾಮಾಜಿಕ ಲಕ್ಷಣ ಬರುತ್ತದೆ. ಅಡ್ಲೆರ್ ಮತ್ತು ಸಲ್ಲಿವನ್ ಎಂಬುವರು ಈ ಅಂಶಕ್ಕೆ ಮಹತ್ವ ಕೊಟ್ಟಿದ್ದಾರೆ. ಹೀಗಾಗಿ ಸಾಮಾಜಿಕ ದೃಷ್ಟಿಕೋನದಿಂದ ವ್ಯಕ್ತಿತ್ವವನ್ನು ಅಧ್ಯಯನ ಮಾಡಬೇಕೆಂದು ಕೆಲವರು ಪ್ರತಿಪಾದಿಸಿದ್ದಾರೆ. ಈ ಉಪಕ್ರಮಕ್ಕೆ **ಸಾಮಾಜಿಕ ಉಪಕ್ರಮ (Social Approach)** ಎಂದು ಹೆಸರು.

ಮೇಲೆ ವಿವರಿಸಿದ ಯಾವುದೇ ಉಪಕ್ರಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಹಾಯಕವಾಗುವುದಿಲ್ಲ. ಪ್ರತಿಯೊಂದು ಉಪಕ್ರಮವೂ ವ್ಯಕ್ತಿತ್ವದ ಬೇರೆ ಬೇರೆ ಮುಖಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಆದ್ದರಿಂದ ವ್ಯಕ್ತಿತ್ವವನ್ನು ಸಂಪೂರ್ಣವಾಗಿ, ಇಡಿಯಾಗಿ ವಿಶ್ಲೇಷಿಸಿ, ಅರ್ಥಮಾಡಿಕೊಳ್ಳಲು ಈ ಎಲ್ಲಾ ಉಪಕ್ರಮಗಳ ಮುಖ್ಯ ನಿಲುವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ವ್ಯಕ್ತಿತ್ವವನ್ನು ವಿಶ್ಲೇಷಿಸಿ, ವಿವರಿಸಿ ಅರ್ಥಮಾಡಿಕೊಳ್ಳಲು ಮತ್ತು ಅದನ್ನು ಮಾಪನ ಮಾಡುವ ವೈಜ್ಞಾನಿಕ ಕ್ರಮಗಳನ್ನು ರೂಪಿಸಲು ಮೇಲೆ ವಿವರಿಸಿದ ವ್ಯಕ್ತಿತ್ವ ಅಧ್ಯಯನದ ವಿವಿಧ ಉಪಕ್ರಮಗಳ ನಿಲುವುಗಳ ಆಧಾರದ ಮೇಲೆ ಮನೋವಿಜ್ಞಾನಿಗಳು ಅನೇಕ ವ್ಯಕ್ತಿತ್ವ ಸಿದ್ಧಾಂತಗಳನ್ನು ರೂಪಿಸಿ ಪ್ರತಿಪಾದಿಸಿದ್ದಾರೆ. ಒಂದು ಸಮಗ್ರ ರೀತಿಯ ಅಥವಾ ಪೂರ್ಣರೂಪದ ವ್ಯಕ್ತಿತ್ವ ಸಿದ್ಧಾಂತ ಸಾಮಾನ್ಯವಾಗಿ ವ್ಯಕ್ತಿತ್ವದ ಪರಿಭಾಷೆ, ಅದರ ಸಂರಚನೆ (Structure) ವ್ಯಕ್ತಿತ್ವ ಕಾರ್ಯ ನಿರ್ವಹಿಸುವ ಬಗೆ ಅಂದರೆ ಅದರ ಗತಿಶೀಲತೆ (Dynamics), ವ್ಯಕ್ತಿತ್ವ ವಿಕಾಸಗೊಳ್ಳುವ ರೀತಿ (Development) ಮತ್ತು ವ್ಯಕ್ತಿತ್ವವನ್ನು ಮಾಪನ (ಅಳತೆ) ಮಾಡುವ ಕ್ರಮಗಳು –ಇವುಗಳ ಬಗ್ಗೆ ವಿವರಿಸುತ್ತದೆ. ವ್ಯಕ್ತಿತ್ವದ ಪ್ರಮುಖ ಸಿದ್ಧಾಂತಗಳನ್ನು ಈ ಮುಂದೆ ವಿವರಿಸಲಾಗಿದೆ.

**ಪ್ರರೂಪ ಸಿದ್ಧಾಂತಗಳು:**

ಕೆಲವು ಮುಖ್ಯ ಅಂಶಗಳ ಅಥವಾ ಲಕ್ಷಣಗಳ ಸಮೂಹದ ಆಧಾರದ ಮೇಲೆ ವ್ಯಕ್ತಿತ್ವಗಳನ್ನು ವರ್ಗೀಕರಿಸುವ ಕ್ರಮ ಬಹಳ ಹಿಂದಿನಿಂದಲೂ ಕಂಡುಬರುವುದಲ್ಲದೆ ಅದೊಂದು ಸಾಮಾನ್ಯ ಜನರಿಗೆ ಹಿಡಿಸುವ ಕ್ರಮವಾಗಿದೆ. ಪ್ರರೂಪ ಸಿದ್ಧಾಂತಗಳನ್ನು 'ಸಿದ್ಧಾಂತ' (Theory) ಎಂದು ಹೆಸರಿಸುವುದು ಅಷ್ಟೊಂದು ಸರಿ ಎನಿಸುವುದಿಲ್ಲ. ಇದು ವ್ಯಕ್ತಿತ್ವಗಳನ್ನು ವರ್ಗೀಕರಿಸುವ ಒಂದು ಕ್ರಮ ಮಾತ್ರ. ಈ ರೀತಿ ಗುರ್ತಿಸಿದ ವರ್ಗಗಳ ವ್ಯಕ್ತಿತ್ವದ ಲಕ್ಷಣಗಳನ್ನು ವಿವರಿಸಲಾಗುತ್ತದೆ. ಬೇರಾವ ವೈಜ್ಞಾನಿಕ ಆಧಾರಗಳನ್ನಾಗಲಿ, ಮುಖ್ಯ ಆಧಾರ ಕಲ್ಪನೆಗಳಾಗಲಿ (Postulates), ತತ್ವಗಳಾಗಲಿ ಈ ಸಿದ್ಧಾಂತಗಳಿಗಿಲ್ಲ. ಪ್ರರೂಪ ಸಿದ್ಧಾಂತಗಳು ಗ್ರೀಕರಲ್ಲಿ, ಭಾರತದಲ್ಲಿ ಕಂಡು ಬರುತ್ತವೆ.

**ಗ್ಯಾಲೆನ್ನನ ಸಿದ್ಧಾಂತ:**

ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ನ ಶಿಷ್ಯ ಗ್ಯಾಲೆನ್ ಮಾನವ ದೇಹಗಳಲ್ಲಿ ಕೆಲವು ಬಗೆಯ ವರ್ಣದ ದ್ರವಗಳು ಇರುತ್ತವೆಯೆಂದು ಸಿದ್ಧಾಂತೀಕರಿಸಿದನು. ಈ ದ್ರವಗಳನ್ನು 'ಹ್ಯೂಮರ್ಸ್' ಎಂದು ಅವನು ಹೆಸರಿಸಿದ್ದಾನೆ. ರಕ್ತ (ಕೆಂಪುಬಣ್ಣದ), ಜಠರ ರಸ (ಹಳದಿ ಬಣ್ಣದ), ಕಫ (ಬಿಳಿ ಬಣ್ಣದ) ಮತ್ತು ಜಠರ ರಸ (ಕಪ್ಪು ಬಣ್ಣದ) ಇವೇ ಅವರ ಪ್ರಕಾರ ದೇಹಗಳಲ್ಲಿರುವ ದ್ರವಗಳು. ಇವುಗಳ ಆಧಾರದ ಮೇಲೆ ಗ್ಯಾಲೆನ್ ವ್ಯಕ್ತಿತ್ವಗಳನ್ನು ನಾಲ್ಕು ಪ್ರರೂಪಗಳಾಗಿ (ವಿಧಗಳಾಗಿ) (Types) ವರ್ಗೀಕರಿಸಿ ಅವುಗಳ ಲಕ್ಷಣಗಳನ್ನು ವಿವರಿಸಿದ್ದಾನೆ. ರಕ್ತವನ್ನು ಪ್ರಧಾನವಾಗಿ ಹೊಂದಿರುವ ವ್ಯಕ್ತಿತ್ವಕ್ಕೆ ಆಶಾವಾದಿ (Sanguin) ಎಂದು ಹೆಸರು. ಈ ವ್ಯಕ್ತಿತ್ವ ಉಳ್ಳವರು ಸಕ್ರಿಯವಾಗಿರುತ್ತಾರೆ. ಆಶಾವಾದಿಗಳಾಗಿರುತ್ತಾರೆ. ಭರವಸೆಯುಳ್ಳವರಾಗಿರುತ್ತಾರೆ. ಹಳದಿ, ಜಠರ ರಸದ ಪ್ರಾಧಾನ್ಯ ಇರುವವರಿಗೆ ಪಿತ್ತ ಪ್ರಕೃತಿಯವರು (Choleric) ಎಂದು ಹೆಸರು. ಇವರು ಶೀಘ್ರ ಕೋಪಿಗಳು, ಸುಲಭವಾಗಿ ಉತ್ತೇಜಿತರಾಗುವ ಪ್ರಕೃತಿಯವರು ಬಿಳಿ ದ್ರವ ಹೆಚ್ಚಾಗಿರುವವರು ಕಫ ಪ್ರಧಾನರು. ಇವರು ನಿಧಾನ ಪ್ರಕೃತಿಯವರು, ಮಂದ ಮನಃ ಸ್ವಭಾವದವರಾಗಿರುತ್ತಾರೆ. ಕಪ್ಪು ರಸ (ವಾತ) ಪ್ರಧಾನವಾಗಿರುವವರಿಗೆ ವಿಷಾದ ಪ್ರಕೃತಿಯವರು (Melon cholic) ಎಂದು ಹೆಸರು.ಇವರು ವಿಷಾದ ಮನಃಸ್ಥಿತಿಯವರಾಗಿದ್ದು, ನಿರಾಶವಾದಿಗಳಾಗಿರುತ್ತಾರೆ.

ಜರ್ಮನಿಯ ಮನೋಚಿಕಿತ್ಸಕ (Psychatrist) ಕ್ರೆಷ್ಮರ್

Digitised by Bharatavani, CIIL

ಎಂಬುವವನು ದೈಹಿಕ ಲಕ್ಷಣಗಳು ಮತ್ತು ಅವುಗಳಿಗೆ ಅನುರೂಪವಾದ ವ್ಯಕ್ತಿಗಳನ್ನು ಏಸ್ತನಿಕ್ (ತೆಳುವಾದ, ನಿರ್ಬಲ ದೇಹಿಗಳು), ಪಿಕ್‌ನಿಕ್ (ಕುಬ್ಜದೇಹಿಗಳು) ಮತ್ತು ಅಥ್ಲೆಟಿಕ್ (ಸಮ ಅನುಪಾತ ದೇಹಿಗಳು) ಎಂಬ ಮೂರು ಪ್ರರೂಪಗಳಾಗಿ ವರ್ಗೀಕರಿಸಿದ್ದಾನೆ. ಏಸ್ತನಿಕ್ ವ್ಯಕ್ತಿತ್ವ ಉಳ್ಳವರು ತೆಳುವಾದ, ದುರ್ಬಲವಾದ ದೇಹವುಳ್ಳವರಾಗಿದ್ದು ಹಿಂಜರಿಕೆಯ ಸ್ವಭಾವದಾಗಿರುತ್ತಾರೆ ಮತ್ತು ಅಸ್ಥಿರ ಮನಃಸ್ಥಿತಿಯವರಾಗಿರುತ್ತಾರೆ. ಪಿಕ್‌ನಿಕ್ ವ್ಯಕ್ತಿತ್ವ ಉಳ್ಳವರು ಗಿಡ್ಡ, ದಪ್ಪನಾದ ದೇಹದವರಾಗಿದ್ದು ಬಹಿರ್ಮುಖ ಸ್ವಭಾವದವರೂ, ಸಂತೋಷ ಪ್ರವೃತ್ತಿಯವರೂ ಆಗಿರುತ್ತಾರೆ. ಅಥ್ಲೆಟಿಕ್ ವ್ಯಕ್ತಿತ್ವ ಉಳ್ಳವರು ಬಲವಾದ, ದಷ್ಟಪುಷ್ಟವಾದ, ಸಮಪ್ರಮಾಣದ ದೇಹದವರಾಗಿದ್ದು ಉತ್ತಮ ಸಮಯೋಜಿತ ವ್ಯಕ್ತಿತ್ವವನ್ನು ಹೊಂದಿರುತ್ತಾರೆ.

ಅಮೇರಿಕಾದ ವಿಲಿಯಂ ಷೆಲ್ಡನ್ ಎಂಬ ಶಸ್ತ್ರ ಚಿಕಿತ್ಸಾ ತಜ್ಞ ಪ್ರಥಮ ಬಾರಿಗೆ ವ್ಯಕ್ತಿತ್ವ ಪ್ರರೂಪಗಳನ್ನು ನಿರ್ಣಯಿಸಲು ವೈಜ್ಞಾನಿಕ ವಿಧಾನವನ್ನು ಅನುಸರಿಸಿದರು. ಅವನು ಸಾವಿರಾರು ಅಮೆರಿಕನ್ ಸ್ತ್ರೀ/ಪುರುಷರ ಬೆತ್ತಲೆ ದೇಹಗಳ ಚಿತ್ರಗಳನ್ನು ಅವರ ಅನುಮತಿಯಿಂದ ತೆಗೆದುಕೊಂಡು ಅವುಗಳನ್ನು ಅಧ್ಯಯನ ಮಾಡಿ ಮೂರು ಗುಂಪುಗಳಾಗಿ ವಿಂಗಡಿಸಿದನು. ನಂತರ ಈ ಮೂರು ಪ್ರರೂಪಗಳಿಗೆ ಸೇರಿದ ವ್ಯಕ್ತಿಗಳನ್ನು ಪರೀಕ್ಷಿಸಿ ಅವರ ಪ್ರಧಾನ ಮಾನಸಿಕ ಲಕ್ಷಣಗಳು ಅಧ್ಯಯನ ಮಾಡಿದನು. ಶೆಲ್ಡನ್ ನಿರ್ಣಯಿಸಿದ ಮೂರು ದೈಹಿಕ ಪ್ರರೂಪಗಳಿಗೆ ಎಂಡೋ ಮಾರ್ಫಿ (ಸ್ಥೂಲ ದೇಹಿಗಳು), ಮೀಸೋ ಮಾರ್ಫಿ (ಮಧ್ಯಮ ದೇಹಿಗಳು) ಮತ್ತು ಎಕ್ಟೋ ಮಾರ್ಫಿ (ನೀಳ ದೇಹಿಗಳು) ಎಂಬ ಹೆಸರುಗಳನ್ನು ಕೊಡಲಾಗಿದೆ. (ಚಿತ್ರ ನೋಡಿ). ಸ್ಥೂಲದೇಹಿಗಳು ಗುಂಡಾದ, ದಪ್ಪನಾದ ಮತ್ತು ಮೃದುವಾದ ದೇಹದವರಾಗಿದ್ದು ದೈಹಿಕ ಸುಖಾಪೇಕ್ಷಿಗಳು, ಸಾಮಾಜಿಕ ಸ್ವಭಾವದವರೂ ಮತ್ತು ಪ್ರೀತಿತರರೂ ಆಗಿರುತ್ತಾರೆ. ಈ ಮಾನಸಿಕ ಪ್ರಕೃತಿಯನ್ನು ಶೆಲ್ಡನ್ ವಿಸೆರೋಟೇನಿಯಾ (ದೈಹಿಕ ಸುಖ ಪ್ರಕೃತಿ) ಎಂದು ಕರೆದಿದ್ದಾನೆ. ಮಧ್ಯಮದೇಹಿಗಳು ಭಾರವಾದ, ಸ್ಥೂಲವಾದ, ಮಾಂಸಖಂಡಗಳಿಂದ ರಚಿತವಾದ ದೇಹವನ್ನು ಹೊಂದಿದ್ದು ಸೊಮ್ಯಾಟೋ ಟೋನಿಯಾ ಎಂಬ ಹೆಸರಿನ ಮಾನಸಿಕ ಪ್ರಕೃತಿಯವರಾಗಿರುತ್ತಾರೆ. ಅಂದರೆ ಇವರು ಉತ್ಸಾಹಿಗಳಾಗಿದ್ದು ಮಾನಸಿಕ ಪ್ರಕೃತಿಯವರಾಗಿರುತ್ತಾರೆ. ಅಂದರೆ ಇವರು ಉತ್ಸಾಹಿಗಳಾಗಿರುತ್ತಾರೆ. ಹೆಚ್ಚಿನ ಆಕಾಂಕ್ಷೆಯುಳ್ಳವರೂ, ಅಧಿಕಾರ ನಡೆಸುವ ಸ್ವಭಾವದವರಾಗಿರುತ್ತಾರೆ. ಎಕ್ಟೋಮಾರ್ಫಿಗಳು ಅಂದರೆ ನೀಳದೇಹಿಗಳು ತೆಳುವಾದ, ನೀಳವಾದ ಮತ್ತು ಕ್ಷೀಣ ಮಾಂಸಖಂಡಗಳ ಬೆಳವಣಿಗೆಯಿರುವ ದೇಹದವರಾಗಿದ್ದು ನಿಯಂತ್ರಿತ ಸ್ವಭಾವದ, ಯೋಚನಾಪರವಾದ ಮತ್ತು ಹಿಂಜರಿಕೆಯ ಸ್ವಭಾವದ ಮಾನಸಿಕ ಪ್ರಕೃತಿಯನ್ನು ಹೊಂದಿರುತ್ತಾರೆ. ಈ ಪ್ರವೃತ್ತಿಯನ್ನು ಶೆಲ್ಡನ್ ಸೆರೆಬ್ರೋಟೋನಿಯಾ (ಮಸ್ತಿಷ್ಕ ಪ್ರಕೃತಿ) ಎಂದು ಕರೆದಿದ್ದಾನೆ. ಶೆಲ್ಡನ್ ಮತ್ತು ಕ್ರೆಷ್ಚಮರ್‌ನ ಪ್ರರೂಪ ವರ್ಗೀಕರದಲ್ಲಿ ಸ್ವಲ್ಪ ಮಟ್ಟಿನ ಸಮಾನ ಅಂಶಗಳನ್ನು ಗಮನಿಸಬಹುದು.

ಸ್ಪ್ಯಾಂಗರ್ ಎಂಬುವವನು ವ್ಯಕ್ತಿಗಳು ಹೊಂದಿರುವ, ಮಹತ್ವಕೊಡುವ ಮೌಲ್ಯಗಳ ಪ್ರಾಧಾನ್ಯದ ಆಧಾರದ ಮೇಲೆ ವ್ಯಕ್ತಿತ್ವಗಳನ್ನು ಸೈದ್ಧಾಂತಿಕ (ಬೌದ್ಧಿಕ ಪ್ರವೃತ್ತಿ, ಸತ್ಯಾನ್ವೇಷಣೆ), ಆರ್ಥಿಕ (ವ್ಯಾವಹಾರಿಕ, ಲೆಕ್ಕಾಚಾರ ಪ್ರವೃತ್ತಿ) ಕಲಾತ್ಮಕ (ಸೌಂದರ್ಯ ಪ್ರಜ್ಞೆ, ಕಲಾಸಕ್ತಿ), ಸಾಮಾಜಿಕ (ಮಾನವೀಯ ಸಂಬಂಧಗಳು, ಪರೋಪಕಾರ ಪ್ರವೃತ್ತಿ), ರಾಜಕೀಯ (ಅಧಿಕಾರ, ಪ್ರಭಾವಿಕತೆ) ಮತ್ತು ಧಾರ್ಮಿಕ (ಜೀವನದ ಅಂತಿಮ ಅರ್ಥಾನ್ವೇಷಣೆ, ಧಾರ್ಮಿಕ ಪ್ರವೃತ್ತಿ) ಎಂದು ಆರು ಪ್ರರೂಪಗಳಾಗಿ ವರ್ಗೀಕರಿಸಿದ್ದಾನೆ.

ಭಾರತೀಯ ತತ್ವಶಾಸ್ತ್ರದಲ್ಲಿಯೂ ವ್ಯಕ್ತಿತ್ವಗಳನ್ನು ವರ್ಗೀಕರಿಸುವ ಪ್ರಯತ್ನ ಮಾಡಲಾಗಿದೆ. ಭಗವದ್ಗೀತೆಯಲ್ಲಿ ಸತ್ಯ, ರಜಸ್, ಮತ್ತು ತಮಸ್ ಈ ಮೂರು ಪ್ರವೃತ್ತಿಗಳ ಪ್ರಧಾನ್ಯದ ಆಧಾರದ ಮೇಲೆ ವ್ಯಕ್ತಿಗಳನ್ನು ಸಾತ್ವಿಕ, ರಾಜಸಿಕ ಮತ್ತು ತಾಮಿಸಿಕ ವ್ಯಕ್ತಿತ್ವ ಉಳ್ಳವರೆಂದು ವರ್ಗೀಕರಿಸಲಾಗಿದೆ. ಸಾತ್ವಿಕ ವ್ಯಕ್ತಿತ್ವ ಉಳ್ಳವರು ಬೌದ್ಧಿಕ ಹಾಗೂ ಸಂವೇಗಾತ್ಮಕ ಸುಖವನ್ನೂ ಇಚ್ಛಿಸುತ್ತಾರೆ. ಅವರು ಶಾಂತ ಪ್ರಕೃತಿಯರೂ, ಪ್ರಶಾಂತ ಚಿತ್ತರೂ ಆಗಿರುತ್ತಾರೆ. ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುತ್ತಾರೆ. ಕ್ಷಮೆ, ತಾಳ್ಮೆ ಮುಂತಾದ ಉತ್ತಮ ಸಾತ್ವಿಕ ಗುಣಗಳನ್ನು ಹೊಂದಿರುತ್ತಾರೆ. ರಾಜಸಿಕ ವ್ಯಕ್ತಿತ್ವವುಳ್ಳವರು ಹೆಚ್ಚಿನ ಆಸೆಯುಳ್ಳವರು, ಹೆಚ್ಚು ಲೋಭ ಪ್ರವೃತ್ತಿಯುಳ್ಳವರು, ಹೆಚ್ಚಾಗಿ ಕರ್ಮದಲ್ಲಿ ತೊಡಗುವವರಾಗಿರುತ್ತಾರೆ. ಅಲ್ಪ ವಿಫಲತೆಯಾದರೂ ಕುಗ್ಗಿ ಹೋಗುತ್ತಾರೆ. ತಾಳ್ಮೆ ಇಲ್ಲದಿರುವುದು ಮನೋಚಾಂಚಲ್ಯ ಇವರ ಲಕ್ಷಣಗಳು. ತಮಸ್ಸು ಎಂದರೆ ಅಜ್ಞಾನ, ಅರಿವಿಲ್ಲದಿರುವಿಕೆ. ತಾಮಸ ಪ್ರವೃತ್ತಿಯ ವ್ಯಕ್ತಿತ್ವವುಳ್ಳವರಲ್ಲಿ ಜಡತೆ, ಅಜ್ಞಾನವಿರುತ್ತವೆ. ಸರಿ ತಪ್ಪುಗಳ ವಿವೇಚನೆ ಇವರಲ್ಲಿ ಇರುವುದಿಲ್ಲ. ತೀವ್ರ ಸುಖಾಪೇಕ್ಷಿಗಳಾಗಿರುತ್ತಾರೆ. ಇವರಲ್ಲಿ ಸೋಮಾರಿತನ ನಿದ್ರಾಸಕ್ತಿ, ಆಲಸ್ಯ ಪ್ರವೃತ್ತಿ ಹೆಚ್ಚಾಗಿ ಕಂಡು ಬರುತ್ತದೆ. ಈ ವ್ಯಕ್ತಿತ್ವಗಳು ಎಲ್ಲ ಲಕ್ಷಣಗಳನ್ನು ಗೀತೆಯಲ್ಲಿ ವಿವರಿಸಲಾಗಿದೆ. ವಾತ್ಸಾಯನ ಎಂಬುವವನು ಪುರುಷರನ್ನು ಮತ್ತು ಸ್ತ್ರೀಯರನ್ನು ಅವರ ದೈಹಿಕ ಲಕ್ಷಣಗಳು ಮತ್ತು ಲೈಂಗಿಕ ಪ್ರವೃತ್ತಿ ಆಧಾರದ ಮೇಲೆ ಕೆಲವು ಪ್ರರೂಪಗಳಾಗಿ ವರ್ಗೀಕರಿಸಿದ್ದಾನೆ.

ಪ್ರರೂಪ ಸಿದ್ಧಾಂತಗಳು ವೈಜ್ಞಾನಿಕ ಆಧಾರ ಹೊಂದಿಲ್ಲವೆಂದು ಟೀಕಿಸಲಾಗಿದೆ. ಯಾವುದೇ ಪ್ರರೂಪ ಮಿಶ್ರ ಗುಣಗಳ ಪ್ರರೂಪವಾಗಿರುತ್ತದೆಯೇ ಹೊರತು ಶುದ್ಧ ಪ್ರರೂಪವಾಗಿರುವುದಿಲ್ಲ. ಪ್ರರೂಪಗಳನ್ನು ವರ್ಗೀಕರಿಸುವ ಆಧಾರಾಂಶಗಳಿಗೆ ವೈಜ್ಞಾನಿಕ ವಿವರಣೆ ಕೊಡುವುದಿಲ್ಲ. ಇತ್ತೀಚೆಗೆ ಗಿಲ್‌ಫರ್ಡ್ ಮತ್ತು

Digitised by Bharatavani, CIIL

ಐಸೆಂಕ್ ಪ್ರರೂಪ ಸಿದ್ಧಾಂತಗಳಿಗೆ ವೈಜ್ಞಾನಿಕ ಆಧಾರ ಕೊಡಲು ಪ್ರಯತ್ನಿಸಿದ್ದಾರೆ.

**ವಿಶೇಷಕ ಸಿದ್ಧಾಂತಗಳು:**

ಈ ಗುಂಪಿನಲ್ಲಿ ಜಿ.ಡಬ್ಲೂ. ಆಲ್‌ಪೋರ್ಟ್, ರೇಮಂಡ್ ಕೆಟ್ಟಲ್, ಗಿಲ್‌ಫರ್ಡ್ ಸಿದ್ಧಾಂತಗಳು ಸೇರುತ್ತವೆ.

**ಆಲ್‌ಪೋರ್ಟಿನ ಸಿದ್ಧಾಂತ:**

ಜಿ.ಡಬ್ಲ್ಯೂ. ಆಲ್‌ಪೋರ್ಟ್ ಇಂಗ್ಲೀಷ್ ಭಾಷೆಯಲ್ಲಿ ವ್ಯಕ್ತಿತ್ವ ಲಕ್ಷಣಗಳನ್ನು ವಿವರಿಸಲು ಇರುವ ಸುಮಾರು 11,000 ಕ್ಕೂ ಹೆಚ್ಚು ಪದಗಳನ್ನು ಸಂಗ್ರಹಿಸಿ, ಅವುಗಳನ್ನು ಪರಿಷ್ಕರಿಸಿ ಅವುಗಳಿಂದ ವ್ಯಕ್ತಿತ್ವಗಳನ್ನು ವರ್ಣಿಸಬಹುದಾದ ಮುಖ್ಯ ಲಕ್ಷಣಗಳನ್ನು ಭಟ್ಟಿ ಇಳಿಸಿದನು. ಈ ಲಕ್ಷಣಗಳೇ ವ್ಯಕ್ತಿತ್ವ ವಿಶೇಷಕಗಳು (Personality Trait). ಇವುಗಳ ಸ್ವರೂಪದ ಬಗ್ಗೆ ಈ ಹಿಂದೆ ವಿವರಿಸಲಾಗಿದೆ. ಆಲ್‌ಪೋರ್ಟ್ ವಿಶೇಷಕಗಳನ್ನು ಸಾಮಾನ್ಯ ವಿಶೇಷಕಗಳು ಮತ್ತು ಅಪೂರ್ವ ವಿಶೇಷಕಗಳು ಎಂದು ವರ್ಗೀಕರಿಸಿದ್ದಾನೆ. ಸಾಮಾನ್ಯ ವಿಶೇಷಕಗಳು ಬೇರೆ ಬೇರೆ ಪ್ರಮಾಣದಲ್ಲಿ ಬೇರೆ ಬೇರೆ ವಿನ್ಯಾಸದಲ್ಲಿ ಎಲ್ಲಾ ವ್ಯಕ್ತಿಗಳಲ್ಲೂ ಇರುತ್ತವೆ. ಇವು ಮಾನವರ ಮೂಲಭೂತ ಲಕ್ಷಣಗಳನ್ನು (ದೈಹಿಕ, ಮಾನಸಿಕ) ಪ್ರತಿನಿಧಿಸುತ್ತವೆ. ಇವು ಎಲ್ಲಾ ಮಾನವರಲ್ಲಿಯೂ ಕಂಡುಬರುತ್ತವೆ. ಅಪೂರ್ವ ವಿಶೇಷಕಗಳು ಪ್ರತಿಯೊಬ್ಬ ವ್ಯಕ್ತಿತ್ವದಲ್ಲಿಯೂ ಇರುವ, ಕಂಡುಬರುವ ವಿಶಿಷ್ಟ ಲಕ್ಷಣಗಳಾಗಿದೆ. ಅವು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸ ಹೊಂದುತ್ತವೆ. ಇವೇ ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರತ್ಯೇಕವಾಗಿ ಗುರ್ತಿಸಲು ಸಹಾಯಕವಾಗುವ ಲಕ್ಷಣಗಳು.ಇವು ವ್ಯಕ್ತಿತ್ವವನ್ನು ವರ್ಣಿಸುವ ಲಕ್ಷಣಗಳಾಗಿದ್ದು ವ್ಯಕ್ತಿಗೆ ಅಪೂರ್ವವಾದವುಗಳಾಗಿರುತ್ತವೆ. ಇವುಗಳನ್ನು ವ್ಯಕ್ತಿಗತ ಪ್ರವೃತ್ತಿಗಳು (Personality Dispositions) ಎಂದು ಹೇಳುತ್ತಾರೆ.

ಅಪೂರ್ವ ವಿಶೇಷಕಗಳನ್ನು (Unique Trait) ಆಲ್‌ಪೋರ್ಟ್ ಪುನಃ ಪ್ರಧಾನ ವಿಶೇಷಕಗಳು (Cardinal Trait), ಕೇಂದ್ರೀಯ (Central) ವಿಶೇಷಕಗಳು ಮತ್ತು ಆನುಷಂಗಿಕ ಅಥವಾ ಗೌಣ (Secondary) ವಿಶೇಷಕಗಳು ಎಂದು ವರ್ಗೀಕರಿಸಿದ್ದಾನೆ. ಪ್ರಧಾನ ವಿಶೇಷಕ ವ್ಯಕ್ತಿತ್ವದ ಪ್ರಧಾನ ಲಕ್ಷಣವಾಗಿದ್ದು ಅದು ಆ ವ್ಯಕ್ತಿತ್ವವನ್ನು ವರ್ಣಿಸುತ್ತದೆ. ಉದಾಹರಣೆಗೆ ಝಾನ್ಸಿರಾಣಿಯ ಶೌರ್ಯ, ಧೈರ್ಯ, ಗಾಂಧೀಜಿಯವರ ಅಹಿಂಸೆ. ಪ್ರಧಾನ ಲಕ್ಷಣಗಳು ಒಂದು ಅಥವಾ ಎರಡು ಇರುತ್ತವೆ. ಈ ಲಕ್ಷಣ ಇಡೀ ವ್ಯಕ್ತಿತ್ವವನ್ನು ವ್ಯಾಪಿಸಿಕೊಂಡು ವ್ಯಕ್ತಿಯ ಎಲ್ಲಾ ಚಟುವಟಿಕೆಗಳಲ್ಲಿ ವ್ಯಕ್ತವಾಗುತ್ತದೆ. ಕೇಂದ್ರೀಯ ವಿಶೇಷಕಗಳು ವ್ಯಕ್ತಿತ್ವದ ಮುಖ್ಯ ಲಕ್ಷಣಗಳನ್ನು ಪ್ರತಿನಿಧಿಸುತ್ತವೆ. ಅವು ಪ್ರಧಾನ ವಿಶೇಷಕಗಳಷ್ಟು ಪ್ರಮುಖವಾದವುಗಳಲ್ಲಿವಾದರೂ, ಬಹುಮಟ್ಟಿಗೆ ಮುಖ್ಯವಾಗಿರುವ ಐದಾರು ಲಕ್ಷಣಗಳಾಗಿರುತ್ತವೆ. ಪ್ರಧಾನ ಮತ್ತು ಕೇಂದ್ರೀಯ ಲಕ್ಷಣಗಳು ಮುಖ್ಯವಾಗಿ ವ್ಯಕ್ತಿತ್ವವನ್ನು ವಿವರಿಸಲು ಸಹಾಯಕವಾಗುತ್ತವೆ. ಈ ಲಕ್ಷಣಗಳ ಜೊತೆಗೆ ವ್ಯಕ್ತಿಯಲ್ಲಿ ಇನ್ನೂ ಅನೇಕ ಆದರೆ ಮುಖ್ಯವಲ್ಲದ ನೂರಾರು ನಿರ್ದಿಷ್ಟ ಲಕ್ಷಣಗಳಾಗುತ್ತವೆ. ಇವೇ ಗೌಣ ಅಥವಾ ಆನುಷಂಗಿಕ ಲಕ್ಷಣಗಳು. ಇವು ದಿನನಿತ್ಯದ ವ್ಯಕ್ತಿತ್ವದ ಗತಿಶೀಲತೆಯನ್ನು ವರ್ತನೆಗಳನ್ನು, ಚಟುವಟಿಕೆಗಳನ್ನು ವಿವರಿಸುತ್ತವೆ.

ಆಲ್‌ಪೋರ್ಟ್‌ನ ಪ್ರಕಾರ ವ್ಯಕ್ತಿತ್ವ ವಿಕಾಸ ಆತ್ಮ (Self) ಪ್ರತ್ಯಯದ ವಿಕಾಸಕ್ಕೆ ಸಂಬಂಧಿಸಿದೆ. ಆತ್ಮ ಪ್ರತ್ಯಯಕ್ಕೆ ಅವನು ಪರಿಪೂರ್ಣತೆ (Proprium) ಎಂಬ ಪದವನ್ನು ಉಪಯೋಗಿಸಿದ್ದಾನೆ. ಇದು ವ್ಯಕ್ತಿತ್ವದ ಎಲ್ಲಾ ಅಂಶಗಳನ್ನು ಒಳಗೊಂಡು, ವ್ಯಕ್ತಿತ್ವದ ಕೇಂದ್ರವಾಗುತ್ತಾರೆ. ಪ್ರಾಪಿಯಂನ (ಪರಿಪೂರ್ಣತೆ, ಆತ್ಮ) ವಿಕಾಸ ಎಂಟು ಹಂತಗಳಲ್ಲಿ ಆಗುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಆತ್ಮ ಕೆಲವು ಲಕ್ಷಣಗಳನ್ನು ಹೊಂದಿದ್ದು ಕೆಲವು ಕಾರ್ಯಗಳನ್ನು ಮಾಡುತ್ತದೆ. ಮೊದಲನೆ ವರ್ಷದಲ್ಲಿ ಆತ್ಮನ ಸ್ವರೂಪ ದೈಹಿಕವಾದುದದಾಗಿರುತ್ತದೆ. ದೈಹಿಕ ಸಂವೇದನೆಗಳು, ನೋವು, ನಲಿವುಗಳನ್ನು ಅನುಭವಿಸುವುದು ಅದರ ಕಾರ್ಯವಾಗಿರುತ್ತದೆ. ಎರಡನೇ ವರ್ಷದಲ್ಲಿ ಮಗುವಿಗೆ ತನ್ನತನದ, ತಾದಾತ್ಮ್ಯತೆಯ ಅಥವಾ ಅನನ್ಯತೆಯ (Self Identity) ಭಾವನೆ ಮೂಡುತ್ತದೆ. ತಾನು ಬೇರೆಯವರಿಗಿಂತ ಪ್ರತ್ಯೇಕವಾಗಿದ್ದೇನೆ ಎಂಬ ಅರಿವು ಮೂಡುತ್ತದೆ. ಭಾಷಾ ವಿಕಾಸವಾಗುತ್ತದೆ. ಇದರಿಂದಾಗಿ ತನಗೆ ಮುಂದುವರಿಯುತ್ತಿರುವ ಅಸ್ತಿತ್ವವಿದೆ ಎಂಬ ಅರಿವು ಮೂಡುತ್ತದೆ. ಮೂರನೇ ವರ್ಷದಲ್ಲಿ ತನ್ನ ಸಾಧನೆಗಳ ಬಗ್ಗೆ ಹೆಮ್ಮೆ, ಸ್ವಾತಂತ್ರ್ಯ ಪ್ರವೃತ್ತಿ, ನಕಾರಾತ್ಮಕತೆ ಮುಂತಾದ ಲಕ್ಷಣಗಳು ಕಂಡುಬರುತ್ತವೆ. ನಾಲ್ಕರಿಂದ ಆರು ವರ್ಷಗಳ ಅವಧಿಯ ನಾಲ್ಕನೇ ಹಂತದಲ್ಲಿ ಆತ್ಮನ ವಿಸ್ತಾರ (Self Extension) ಆಗುತ್ತದೆ. ಅಂದರೆ ತಾನು ಇತರರಿಗೆ (ತಾಯಿ, ತಂದೆ ಇತ್ಯಾದಿ) ಸಂಬಂಧಿಸಿದ್ದೇನೆ ಎನ್ನುವ ಅರಿವು ಮೂಡುತ್ತದೆ. ಇದು ಸತತವಾಗಿ ವಿಸ್ತಾರವಾಗುತ್ತಾ ಹೋಗುತ್ತದೆ. ‘ನನ್ನದು’ ಬೇರೆಯವರದು ಎನ್ನುವ ಭಾವನೆ, ಸ್ವಂತಿಕೆಯ ಭಾವನೆ ಮೂಡುತ್ತವೆ. ಐದನೇ ಹಂತವಾದ ಇದೇ ಅವಧಿಯಲ್ಲಿ (4ರಿಂದ 6 ವರ್ಷ) ಆತ್ಮ ಬಿಂಬದ (Self Image) ಪರಿಕಲ್ಪನೆ ಅಂದರೆ ನಾನು ಯಾರು, ಏನಾಗಿದ್ದೇನೆ ಎಂಬುದರ ಪರಿಕಲ್ಪನೆ ಮೂಡುತ್ತದೆ. ಈ ಅವಧಿಯಲ್ಲಿ ವ್ಯಕ್ತಿ ಹೊಗಳಿಕೆ, ತೆಗಳಿಕೆಗೆ ಸ್ಪಂದಿಸುತ್ತಾನೆ. ಒಳ್ಳೆಯ ಅಥವಾ ಕೀಟಲೆ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳಬಹುದು. ಆರನೇ ಹಂತವಾದ 6ರಿಂದ 12 ವರ್ಷದ ಅವಧಿಯಲ್ಲಿ ಸಮಸ್ಯೆಗಳನ್ನು ನಿಭಾಯಿಸುವ ತಾರ್ಕಿಕ ನಿರ್ವಾಹಕನ ರೂಪದಲ್ಲಿ ಆತ್ಮ (Self as a Rational Coper) ವಿಕಾಸಗೊಳ್ಳುತ್ತದೆ. ವ್ಯಕ್ತಿ ಜೀವನದ ಕಾರ್ಯಗಳನ್ನು ವಾಸ್ತವಿಕ ರೀತಿಗಳಲ್ಲಿ ಮಾಡುವ ಸಾಮರ್ಥ್ಯ ಪಡೆದುಕೊಳ್ಳುತ್ತಾನೆ. ತನ್ನ ಪ್ರೇರಣೆಗಳು, ಅಗತ್ಯಗಳು

Digitised by Bharatavani, CIIL

ಮತ್ತು ವಾಸ್ತವಿಕತೆಯ ನಡುವೆ ಹೊಂದಾಣಿಕೆ ಮಾಡಿಕೊಳ್ಳಲು ಸಮರ್ಥನಾಗುತ್ತಾನೆ. ಏಳನೇ ಹಂತವಾದ 12ರಿಂದ 20 ವರ್ಷಗಳ ತಾರುಣ್ಯಾವಸ್ಥೆಯಲ್ಲಿ ಆತ್ಮ ಪರಿಪೂರ್ಣತೆಗಾಗಿ ಪ್ರಯತ್ನಿಸುತ್ತದೆ (Propriate Striving). ವ್ಯಕ್ತಿ ತನ್ನ ಕ್ಷೇತ್ರದಲ್ಲಿನ ಚಟುವಟಿಕೆಗಳ ದಿಶೆಯಲ್ಲಿ ಮುಂದುವರಿಯುತ್ತಾನೆ. ಎಂಟನೇ ಹಂತವಾದ ವಯಸ್ಕಾವಸ್ಥೆಯಲ್ಲಿ ಆತ್ಮ ಜ್ಞಾನವನ್ನು ಪಡೆಯುವ ಜ್ಞಾತನಾಗಿ (Self as knowner) ವಿಕಾಸಗೊಳ್ಳುತ್ತದೆ. ಈ ಹಂತದಲ್ಲಿ ಹಿಂದಿನ ಏಳೂ ಹಂತಗಳ ಕಾರ್ಯಗಳು ಸಮಗ್ರಗೊಂಡು ಇಡಿಯಾದ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಈ ಹಂತವೇ ಪರಿಪೂರ್ಣತೆಯ (Proprium) ಹಂತವಾಗಿದೆ. 4ರಿಂದ 6 ವರ್ಷದ ಅವಧಿಯಲ್ಲಿ ವಿವೇಕ (Consciene) ಮೂಡಿಬರುತ್ತದೆ. ಆಲ್‌ಪೋರ್ಟ್ ಮಾಡ ಬೇಕು. (Must) ಮತ್ತು ಮಾಡಲೇ ಬೇಕು (Ought) ಎಂಬ ಎರಡು ರೀತಿಯ ವಿವೇಕದ ನಡುವೆ ವ್ಯತ್ಯಾಸವನ್ನು ಗುರ್ತಿಸಿದ್ದಾರೆ. ಮೊದಲನೆಯದು ನಿರಂಕುಶ ಪ್ರವೃತ್ತಿಗೆ ಸಂಬಂಧಿಸಿದ್ದರೆ, ಎರಡನೆಯದು ಆಂತರಿಕ ನಿಯಂತ್ರಣಕ್ಕೆ ಮಾನವೀಯತೆಗೆ ಸಂಬಂಧಿಸಿದೆ.

ವ್ಯಕ್ತಿತ್ವದ ಪ್ರೇರಣೆಗಳನ್ನು ಆಲ್‌ಪೋ opriate Motives) ಎಂದು ಎರಡು ಗುಂಪುಗಳಾಗಿ ಗುರ್ತಿಸಿದ್ದಾನೆ. ಪಾರ್ಶ್ವಿಕ (Peripheral) ಪ್ರೇರಣೆಗಳು ನಮ್ಮ ಜನ್ಮಜಾತ ಪ್ರವೃತ್ತಿಗಳಿಗೆ, ಚೋದನೆಗಳಿಗೆ, ತತ್‌ಕ್ಷಣದ ಅಗತ್ಯಗಳ ತೃಪ್ತಿಗೆ ಬೇಕಾದ ಹಸಿವು, ಬಾಯಾರಿಕೆ ಮುಂತಾದವುಗಳಿಗೆ ಸಂಬಂಧಿಸಿವೆ. ಇವು ವ್ಯಕ್ತಿಯ ಉದ್ವೇಗವನ್ನು ಕಡಿಮೆ ಮಾಡುತ್ತವೆ. ಆದರೆ ಪರಿಪೂರ್ಣತೆ ಪ್ರೇರಣೆಗಳು ಉದ್ವೇಗವನ್ನು ಹೆಚ್ಚಿಸುತ್ತವೆ. ಜೀವನದ ಮುಖ್ಯ ಗುರಿಗಳ ಸಾಧನೆಯ ಕಡೆಗೆ ಪ್ರವೃತ್ತರನ್ನಾಗಿಸಲು ಪ್ರಚೋದನೆ ನೀಡುತ್ತವೆ.

**ಕಾರ್ಯಾತ್ಮಕ ಸ್ವಾಯತ್ತತೆ:**

ಕಾರ್ಯಾತ್ಮಕ ಸ್ವಾಯತ್ತತೆ (Functional Autonomy) ವ್ಯಕ್ತಿತ್ವದ ಪ್ರೇರಣೆ ವ್ಯವಸ್ಥೆಗೆ ಸಂಬಂಧಿಸಿದ ಪೋರ್ಟನ ಒಂದು ವಿನೂತನ ಪರಿಕಲ್ಪನೆಯಾಗಿದೆ. ಯಾವುದಾದರೂ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಉದ್ವೇಗ ಉಂಟಾದಾಗ ಅದನ್ನು ಕಡಿಮೆ ಮಾಡಿಕೊಳ್ಳಲು ಪ್ರೇರಕವಾದ ಕಲಿತುಕೊಂಡ ವರ್ತನೆ, ಅಭ್ಯಾಸ ಅಥವಾ ಚಟುವಟಿಕೆಗಳು ನಂತರದಲ್ಲಿ ಉದ್ಭವಿಸುವ ಅದೇ ರೀತಿಯ ಉದ್ವೇಗ ಸ್ಥಿತಿಗಳಲ್ಲಿ ಪುನಃ ಉಂಟಾದಾಗ ಮೂಲದಲ್ಲಿದ್ದ ಪ್ರೇರಣೆ ಇಲ್ಲದಿದ್ದರೂ ಮುಂದುವರಿಯುತ್ತವೆ. ಈ ಪ್ರವೃತ್ತಿಯನ್ನು ಕಾರ್ಯಾತ್ಮಕ ಸ್ವಾಯತ್ತತೆ ಎಂದು ಕರೆಯಲಾಗಿದೆ. ಉದಾಹರಣೆಗೆ ಹಣ ಸಂಪಾದಿಸುವ ಪ್ರೇರಣೆಯಿಂದ ಆರಂಭಿಸಿದ ಕೆಲಸ ನಂತರದಲ್ಲಿ ಅದೇ ಒಂದು ಗುರಿಯಾಗಿ ವ್ಯಕ್ತಿತ್ವವನ್ನು ನಿಯಂತ್ರಿಸುತ್ತದೆ. ವ್ಯಕ್ತಿ ಆ ಕಾರ್ಯದಲ್ಲಿಯೇ ಪರಿಪೂರ್ಣತೆಯನ್ನು (Proprium) ಸಾಧಿಸಲು ಪ್ರಯತ್ನಿಸುತ್ತಾನೆ. ವ್ಯಕ್ತಿ ವಿಕಾಸಗೊಂಡಂತೆಲ್ಲಾ ಬೇರೆ ಬೇರೆ ವಿಶೇಷಕಗಳು ವ್ಯಕ್ತಿತ್ವವನ್ನು ನಿಯಂತ್ರಿಸತೊಡಗುತ್ತವೆ. ಆದರೆ ವಯಾಸ್ಕಾವಸ್ಥೆಯಲ್ಲಿ ವರ್ತನೆಗಳ ನಿಯಂತ್ರಣದಲ್ಲಿ ಕಾರ್ಯಾತ್ಮಕ ಸ್ವಾಯತ್ತತೆ ಮೂಡುವುದರಿಂದ, ಪರಿಪಕ್ವ ವ್ಯಕ್ತಿತ್ವ ವಿಕಾಸ ಹೊಂದುತ್ತದೆ.

**ಕೆಟ್ಟೆಲ್ಲನ ಸಿದ್ಧಾಂತ:**

ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದು ನಂತರ ಅಮೇರಿಕಾದ ಟೀಚರ್ಸ್ ಕಾಲೇಜ್, ಕೊಲಂಬಿಯಾದಲ್ಲಿ ಸೇವೆ ಸಲ್ಲಿಸಿದ ರೇಮಂಡ್ ಬಿ.ಕೆಟ್ಟೆಲ್ ವಿಶೇಷಕ ಸಿದ್ಧಾಂತದ ಮತ್ತೊಬ್ಬ ಪ್ರಮುಖ ಪ್ರತಿಪಾದಕನಾಗಿದ್ದಾನೆ. ಇವನು ವಿಶೇಷಕಗಳನ್ನು ಅಧ್ಯಯನ ಮಾಡಲು ಕಾರಕ ವಿಶ್ಲೇಷಣೆ (Factor Andysis) ಎಂಬ ಸಂಖ್ಯಾಶಾಸ್ತ್ರೀಯ ತಂತ್ರವನ್ನೂ ರೂಪಿಸಿದ್ದಾನೆ. ಇದರ ಆಧಾರದ ಮೇಲೆ ವ್ಯಕ್ತಿತ್ವದ ವಿಶೇಷಕಗಳನ್ನು ಗುರ್ತಿಸಿ ವರ್ಣಿಸಿರುವುದಲ್ಲದೆ, ಅವುಗಳನ್ನು ಅಳತೆ ಮಾಡಲು ತನ್ನದೇ ಆದ '16 P.F' ಎಂಬ ಪ್ರಶ್ನಾವಳಿಯನ್ನು ರೂಪಿಸಿದ್ದಾನೆ. ಇವನು 'ಆತಂಕಿತ', 'ಸ್ನೇಹಪರ', 'ದಬ್ಬಾಳಿಕೆಯ' 'ಸಾಮಾಜಿಕ ಪ್ರವೃತ್ತಿ' ಮುಂತಾದ 171 ವ್ಯಕ್ತಿತ್ವದ ಮುಖ್ಯ ಲಕ್ಷಣಗಳನ್ನು ನಿರ್ಧಾರಣ ಮಾಪನಿಯಲ್ಲಿ ನಿರ್ಧಾರಣ ಮಾಡುವಂತೆ ಅನೇಕ ನಿರ್ಧಾರಕರನ್ನು ಕೇಳಿದ. ಅವರು ಮಾಡಿದ ನಿರ್ಧಾರಣಗಳನ್ನು ಕಾರಕ ವಿಶ್ಲೇಷಣೆಗೆ ಅಳವಡಿಸಿ ವ್ಯಕ್ತಿತ್ವದ 16 ಪ್ರಧಾನ ವಿಶೇಷಕಗಳನ್ನು ಗುರ್ತಿಸಿದ್ದಾನೆ.

ಕೆಟ್ಟೆಲ್ ವಿಶೇಷಕಗಳನ್ನು ಮೂಲ ವಿಶೇಷಕಗಳು (Source Trait) ಮತ್ತು ಮೇಲ್ಮೈ ವಿಶೇಷಕ (Surface Trait) ಎಂದು ವರ್ಗೀಕರಿಸಿದ್ದಾನೆ. ಮೂಲ ವಿಶೇಷಕಗಳು ವ್ಯಕ್ತಿತ್ವದ ಸ್ಥಾಯಿ ಲಕ್ಷಣಗಳಾಗಿದ್ದು, ವ್ಯಕ್ತಿತ್ವದ ಆಳದಲ್ಲಿರುತ್ತವೆ. ಮೇಲ್ಮೈ ವಿಶೇಷಕಗಳು ಮೂಲ ವಿಶೇಷಕಗಳಿಂದ ವಿಕಾಸಗೊಂಡು ಹೊರನೋಟಕ್ಕೆ ನಿಲುಕುವ ವರ್ತನೆಯ ಲಕ್ಷಣಗಳಾಗಿವೆ. ಕೆಟ್ಟೆಲ್ಲನ ಪ್ರಕಾರ ಮೂಲ ವಿಶೇಷಕಗಳು ಮಹತ್ವಪೂರ್ಣವಾದವುಗಳಾಗಿದ್ದು ಕಡಿಮೆ ಲಕ್ಷಣಗಳಿಂದ (ಉಳಿತಾಯದಿಂದ) ಇಡೀ ವ್ಯಕ್ತಿತ್ವವನ್ನು ವರ್ಣಿಸಲು ಸಹಾಯಕವಾಗುತ್ತವೆ. ಮೇಲ್ಮೈ ಲಕ್ಷಣಗಳು ಆರ್ಜಿತವಾದವುಗಳಾಗಿದ್ದು, ಕಡಿಮೆ ಸ್ಥಿರತೆಯನ್ನು ಹೊಂದಿದವು. ಇವು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸಗೊಳ್ಳುತ್ತವೆ. ಬುದ್ಧಿಶಕ್ತಿ, ಮುಕ್ತ ಮನಸ್ಕತೆ, ವಿಶ್ವಾಸಾರ್ಹತೆ, ಸುಲಭ ಪ್ರವೃತ್ತಿ ಮುಂತಾದವು ಮೂಲ ವಿಶೇಷಕಗಳ ಉದಾಹರಣೆಗಳಾಗಿವೆ. ಧೈರ್ಯ, ಸ್ವತಂತ್ರ ಪ್ರವೃತ್ತಿ, ಸಂವೇದನಶೀಲತೆ, ಸಂವೇಗಾತ್ಮಕ ಪ್ರಬುದ್ಧತೆ ಮುಂತಾದವು ಮೇಲ್ಮೈ ವಿಶೇಷಕಗಳ ಉದಾಹರಣೆಗಳಾಗಿವೆ. ಕೆಟ್ಟೆಲ್ ವಿಶೇಷಕಗಳು ದ್ವಿಧ್ರುವೀಯ (Biprlar) ಆಗಿರುತ್ತವೆ ಎಂದು ಹೇಳುತ್ತಾನೆ. ಅಂದರೆ ಅವುಗಳು ಧನಾತ್ಮಕ ಲಕ್ಷಣದಿಂದ ಋಣಾತ್ಮಕ ಲಕ್ಷಣದ ಆಯಾಮದಲ್ಲಿ ವ್ಯತ್ಯಾಸಗೊಳ್ಳುತ್ತವೆ.

Digitised by Bharatavani, CIIL

ಕೆಟ್ಟೆಲ್ ಗುರ್ತಿಸಿದ ವ್ಯಕ್ತಿತ್ವದ 16 ದ್ವಧ್ರುವೀಯ ವಿಶೇಷಕಗಳನ್ನು ಈ ಕೆಳಗಿನ ತಾಲಿಕೆ ತೋರಿಸುತ್ತದೆ.

| ವಿಶೇಷಕ | ಕನಿಷ್ಠತೆ (–) | ಗರಿಷ್ಠತೆ (+) |
|---|---|---|
| **A** | ಸಂಕೋಚ ಪ್ರವೃತ್ತಿ, ತಣ್ಣಗಿನ ಪ್ರವೃತ್ತಿ, ಪ್ರತ್ಯೇಕತೆ | ಬೆಚ್ಚನೆಯ ಪ್ರವೃತ್ತಿ, ಬಾಹ್ಯ ಪ್ರವೃತ್ತಿ |
| B | ಕಡಿಮೆ ಬುದ್ಧಿಶಕ್ತಿ, ಮೂರ್ತ ಚಿಂತನೆ | ಹೆಚ್ಚು ಬುದ್ಧಿಶಕ್ತಿ, ಅಮೂರ್ತ ಚಿಂತನೆ |
| C | ಭಾವನೆಗಳಿಂದ ಪ್ರಭಾವಿತ, ಅಸ್ಥಿರ ಸ್ವಭಾವ | ಸಂವೇಗಾತ್ಮಕ ಸ್ಥಿರತೆ, ಶಾಂತ ಪಕ್ವ |
| E | ವಿಧೇಯ, ನಮ್ರತೆ, ಅವಕಾಶ ಮಾಡಿಕೊಡುವ | ಸಮರ್ಥಿಸಿಕೊಳ್ಳುವ, ದಬಾವಣೆ ಮಾಡುವ, ಸ್ಪರ್ಧಿಸುವ |
| F | ಶಾಂತ, ಜಾಗರೂಕ, ಗಂಭೀರ ಪ್ರವೃತ್ತಿಯ | ಸಂಕೋಚ, ಪ್ರವೃತ್ತಿಯ, ಆವೇಗ ಪ್ರವೃತ್ತಿಯ |
| G | ಕಾರ್ಯಸಾಧಕತೆ, ನಿಯಮಗಳನ್ನು ಗೌರವಿಸುವಿಕೆ | ವಿವೇಕಶೀಲತೆ, ಪಟ್ಟು ಹಿಡಿಯುವಿಕೆ |
| H | ನಾಚಿಕೆ, ಹಿಂಜರಿಕೆ ಪ್ರವೃತ್ತಿ | ಸಾಹಸ ಪ್ರವೃತ್ತಿ, ಅವರೋಧ ರಹಿತತೆ |
| I | ಕಠಿಣ ಮನಸ್ಕತೆ, ವಾಸ್ತವಿಕ ದೃಷ್ಟಿ | ಮೃದು ಮನಸ್ಕತೆ, ಸಂವೇದನ ಶೀಲತೆ |
| L | ನಂಬಿಕೆ ಸ್ವಭಾವ, ಹೊಂದಿಕೊಳ್ಳುವ | ಸಂಶಯ ಪ್ರವೃತ್ತಿ, ಸ್ವ–ಅಭಿಪ್ರಾಯವುಳ್ಳ |
| M | ವ್ಯಾವಹಾರಿಕ, ಸಾಂಪ್ರದಾಯಿಕ | ಕಲ್ಪನಾಶೀಲ |
| N | ನೇರ ಸ್ವಭಾವದ, ಕೃತ್ರಿಯವಲ್ಲದ | ಚತುರತೆ ಸ್ವಭಾವ, ಲೆಕ್ಕಾಚಾರದ ಸ್ವಭಾವ |
| O | ಸ್ವಯಂ ಭರವಸೆಯುಳ್ಳ, ಆತ್ಮವಿಶ್ವಾಸವುಳ್ಳ | ಆತಂಕಿತ, ಗೊಂದಲ ಸ್ವಭಾವದ |
| Q1 | ಸಂಪ್ರದಾಯವಾದಿ, ಸಹಿಷ್ಣುತೆಯುಳ್ಳ | ಪ್ರಾಯೋಗಿಕ, ಉದಾರಸ್ವಭಾವಿ |
| Q2 | ಸಮೂಹ ಅವಲಂಬಿ | ಸ್ವಯಂ ಪರಿಪೂರ್ಣ |
| Q3 | ಶಿಸ್ತಿಲ್ಲದ, ಉಢಾಫೆ ಸ್ವಭಾವದ | ನಿಯಂತ್ರಿತ |
| Q4 | ಪರಿಮಾರ್ಜಿತ, ಪ್ರಶಾಂತ | ಬಿಗುವಿನಿಂದ ಕೂಡಿದ, ಆಶಾಭಂಗಕ್ಕೆ ಒಳಗಾದ |

ಕೆಟ್ಟೆಲ್ ರೂಪಿಸಿರುವ 16 ಪಿ.ಎಫ್ ವ್ಯಕ್ತಿತ್ವ ಪ್ರಶ್ನಾವಳಿ ಮೇಲಿನ 16 ದ್ವಿ–ಧ್ರುವೀಯ ವ್ಯಕ್ತಿತ್ವ ವಿಶೇಷಕಗಳನ್ನು ಅಳತೆ ಮಾಡುತ್ತದೆ. ಈ ವಿಶೇಷಕಗಳಿಗೆ ವ್ಯಕ್ತಿ ಪಡೆಯುವ ಅಂಕಗಳ ಶ್ರೇಣಿ ಹಾಗೂ ದಿಶೆಯ (ಕನಿಷ್ಟ–ಗರಿಷ್ಟ ದಿಶೆ) ಆಧಾರದ ಮೇಲೆ ವ್ಯಕ್ತಿತ್ವವನ್ನು ವರ್ಣಿಸಲಾಗುತ್ತದೆ. ಈ ಪ್ರಶ್ನಾವಳಿ ವ್ಯಕ್ತಿತ್ವ ಸಂಶೋಧನೆಗಳಲ್ಲಿ, ವ್ಯಕ್ತಿತ್ವದ ಮಾಪನದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ.

ಕೆಟ್ಟೆಲ್ ವ್ಯಕ್ತಿತ್ವದ ಪ್ರೇರಣೆಗಳನ್ನು "ಎರ್ಗ್" ಎಂದು ಕರೆದಿದ್ದಾನೆ. ಕೆಲವು "ಎರ್ಗ್‌ಗಳು" ಜೈವಿಕ ಕಾರ್ಯವನ್ನು ಹೊಂದಿದ್ದರೆ ಇನ್ನು ಕೆಲವು ವ್ಯಕ್ತಿತ್ವ ವಿಕಾಸಕ್ಕೆ ಪ್ರೇರಣೆ ನೀಡುತ್ತವೆ. ಕೆಟ್ಟೆಲ್ ಈ 16 ವಿಶೇಷಕಗಳನ್ನು (ಕಾರಕಗಳನ್ನು) ಪುನಃ ಕಾರಕ ವಿಶ್ಲೇಷಣೆಗೆ ಒಳಪಡಿಸಿ ದ್ವಿತೀಯ ಸ್ತರದ ಕೆಲವು ವ್ಯಾಪಕ ಕಾರಕಗಳನ್ನು ಗುರ್ತಿಸಿದ್ದಾನೆ.

**ಗಿಲ್‌ಫರ್ಡ್‌ನ ಸಿದ್ಧಾಂತ:**

ಬುದ್ಧಿಶಕ್ತಿಯ ತ್ರಿ–ಆಯಾಮ ಮಾದರಿ, (ಮೊದಲನೇ ಸಂಪುಟದ ಬುದ್ಧಿಶಕ್ತಿ ಸಿದ್ಧಾಂತಗಳು ಲೇಖನ ನೋಡಿ) ಸೃಜನಶೀಲತೆ ಕ್ಷೇತ್ರಗಳಲ್ಲಿ ತನ್ನ ಸಂಶೋಧನೆಗಳಿಗೆ ಪ್ರಸಿದ್ಧನಾದ ಜೆ.ಪಿ.ಗಿಲ್‌ಫರ್ಡ್ ಕಾರಕ ವಿಶ್ಲೇಷಣೆ ತಂತ್ರದ ಸಹಾಯದಿಂದ ವ್ಯಕ್ತಿತ್ವದ ವಿಶೇಷಕಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾನೆ. ಇವನು ವ್ಯಕ್ತಿತ್ವದ ಬಗ್ಗೆ ಪೂರ್ಣ ಪ್ರಮಾಣದ ಸಿದ್ಧಾಂತವನ್ನು ರೂಪಿಸಿಲ್ಲವಾದರೂ ವಿಶೇಷಕ ಸಿದ್ಧಾಂತಗಳ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ್ದಾನೆ. ಇವನು ಅದುವರೆಗೆ ಒಂದೇ ವಿಶೇಷಕವೆಂದು ತಿಳಿದಿದ್ದ ಅಂತರ್ಮುಖತೆ – ಬಹಿರ್ಮುಖತೆ ವಿಶೇಷಕವನ್ನು ಕಾರಕ ವಿಶ್ಲೇಷಣೆ ಮಾಡಿ ಅದು ನಾಚಿಕೆ, ವಿಷಾದ ಸ್ಥಿತಿ, ಸಂವೇಗಗಳಲ್ಲಿ ಸ್ಥಿರತೆಗೆ ಬದಲಾಗಿ ಮನಃಸ್ಥಿತಿಗಳ ಬದಲಾವಣೆ ಮತ್ತು 'ರಿಧ್ಮಿಯಾ' ಅಂದರೆ ಚಿಂತಾಮುಕ್ತ, ಆರಾಮ ಪ್ರವೃತ್ತಿ ಎಂಬ ನಾಲ್ಕು ನಿರ್ದಿಷ್ಟ ಕಾರಕಗಳನ್ನು ಹೊಂದಿದೆ ಎಂದು ತೋರಿಸಿದನು. ಇದರ ಆಧಾರದ ಮೇಲೆ ಇವನು ಗಿಲ್ಫರ್ಡ್ – ಜಿಮ್ಮರ್‌ಮನ್ ಟೆಂಪರ್‌ಮೆಂಟಲ್ ಸರ್ವೆ' ಎಂಬ ಪ್ರಶ್ನಾವಳಿಯನ್ನು ರೂಪಿಸಿದ್ದಾನೆ.

ಗಿಲ್‌ಫರ್ಡ್ ವ್ಯಕ್ತಿತ್ವದಲ್ಲಿ ವಿಶೇಷಕಗಳ ನಾಲ್ಕು ಗುಂಪುಗಳನ್ನು ಗುರ್ತಿಸಿದ್ದಾನೆ. ಪ್ರತಿಯೊಂದು ಗುಂಪಿನಲ್ಲೂ ಅನೇಕ ನಿರ್ದಿಷ್ಟ ವಿಶೇಷಕಗಳಿವೆ. ವ್ಯಕ್ತಿತ್ವ ಪ್ರಕೃತಿಯ ಈ ನಾಲ್ಕು ಆಯಾಮ ಹೀಗಿವೆ – (1) ಸಾಮರ್ಥ್ಯ (Ability) ಆಯಾಮ – ಇದು ಬುದ್ಧಿಶಕ್ತಿ, ಸೃಜನಶೀಲತೆ ಮತ್ತು ಮೂರ್ತ–ಅಮೂರ್ತ ಚಿಂತನ ಕೌಶಲಗಳಿಗೆ ಸಂಬಂಧಿಸಿದೆ. (2) ಚಿತ್ರ ಪ್ರಕೃತಿ (Temperment) ಆಯಾಮ – ಇದರಲ್ಲಿ ಸಂವೇಗ ಪ್ರವೃತ್ತಿಗಳು, ಮನೋಭಾವಗಳು, ಮೌಲ್ಯಗಳು ಸೇರುತ್ತದೆ. (3) ಪ್ರೇರಣಾತ್ಮಕ (Hormetic) ಆಯಾಮ – ಇದರಲ್ಲಿ ಜೈವಿಕ ಪ್ರವೃತ್ತಿಗಳು, ಪ್ರೇರಣೆಗಳು, ಅರ್ಜಿತ ಪ್ರೇರಣೆಗಳು ಸೇರುತ್ತವೆ. (4) ದೈಹಿಕ (Somatic) ಆಯಾಮ – ಇದರಲ್ಲಿ

Digitised by Bharatavani, CIIL

ದೇಹದ ಬಾಹ್ಯ ಮತ್ತು ಆಂತರಿಕ ಲಕ್ಷಣಗಳು ಸೇರುತ್ತವೆ. ಇವುಗಳಲ್ಲಿದೆ ವ್ಯಕ್ತಿತ್ವ ಅವ್ಯವಸ್ಥೆಗೆ ಕಾರಣವಾಗಬಹುದಾದಂಥ ರೋಗಾತ್ಮಕ (Pathological) ಆಯಾಮವು ಇದೆ.

ಗಿಲ್‌ಫರ್ಡ್ ವ್ಯಕ್ತಿತ್ವದ ಸಂರಚನೆಯನ್ನು ವಿವರಿಸಲು ಪ್ರಯತ್ನಿಸಿದ್ದಾನೆ. ಇದರಲ್ಲಿ ಅವನು ವ್ಯಕ್ತಿತ್ವ ಸಂರಚನೆಯ ಪ್ರರೂಪ ನಿಲುವನ್ನೂ, ವಿಶೇಷಕ ನಿಲುವನ್ನೂ ಸಮಗ್ರಗೊಳಿಸಲು ಪ್ರಯತ್ನಿಸಿದ್ದಾನೆ. ಅತ್ಯಂತ ಮೇಲ್ಮಟ್ಟದಲ್ಲಿ ವ್ಯಾಪಕ ಸ್ವರೂಪದ ವ್ಯಕ್ತಿತ್ವ ಪ್ರರೂಪಗಳಿರುತ್ತವೆ. ಅವುಗಳಿಂದ ಕೆಳಗೆ ಮೂಲಭೂತ (Primary) ವಿಶೇಷಕಗಳಿವೆ. ಇವುಗಳ ಕೆಳಗೆ ಒಂದೊಂದು ವಿಶೇಷಕದಲ್ಲಿಯೂ ಅಭ್ಯಾಸ, ನಿರ್ದಿಷ್ಟ ವರ್ತನೆಯಂಥ ನಿರ್ದಿಷ್ಟ ಪ್ರವೃತ್ತಿಗಳಿವೆ. ಈ ಮಟ್ಟವನ್ನು ಗಿಲ್‌ಫರ್ಡ್ 'ಹೆಕ್ಸಿಸ್' ಮಟ್ಟ ಎಂದಿದ್ದಾನೆ. ಇವು ಸ್ಥೂಲವಾಗಿ ಗುರ್ತಿಸಬಹುದಾದ ವ್ಯಕ್ತಿತ್ವ ಲಕ್ಷಣಗಳಾಗಿವೆ. ಇವುಗಳಿಗಿಂತ ಕೆಳಗೆ ನಿರ್ದಿಷ್ಟ ವರ್ತನ ಲಕ್ಷಣಗಳು ಕಂಡು ಬರುತ್ತವೆ. ಇವುಗಳು ವ್ಯಕ್ತಿತ್ವ ಕ್ರಿಯಾಶೀಲವಾದಾಗ ವ್ಯಕ್ತಗೊಂಡು, ಗೋಚರವಾಗುತ್ತವೆ. ಈ ಎಲ್ಲಾ ಮಟ್ಟಗಳು ಒಂದಕ್ಕೊಂದು ಸಮಗ್ರಗೊಂಡು ಇಡೀ ವ್ಯಕ್ತಿತ್ವ ವಿನ್ಯಾಸ ರೂಪುಗೊಳ್ಳುತ್ತದೆ.

**ಆಯಾಮ ಸಿದ್ಧಾಂತಗಳು**

**ಐಸೆಂಕ್‌ನ ಸಿದ್ಧಾಂತ:**

ಯೂನಿವರ್ಸಿಟಿ ಆಫ್ ಲಂಡನ್‌ನಲ್ಲಿ ಶಿಕ್ಷಣ ಪಡೆದು ಅಲ್ಲಿಯ ಆಸ್ಪತ್ರೆಯೊಂದರಲ್ಲಿ ಸಂಶೋಧನ ಮನೋವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಹ್ಯಾನ್ಸ್ ಜರಗೆನ್ ಐಸೆಂಕ್ ವಿಶೇಷಕ ಸೈದ್ಧಾಂತಿಕ ನಿಲುವಿನಿಂದ ಮುಂದುವರಿದು ಆಯಾಮ ಸಿದ್ಧಾಂತವನ್ನು ರೂಪಿಸಿದನು. ಅವನು 'ಆಯಾಮ' (Dimension) ಪದವನ್ನು 'ವಿಶೇಷಕ' (Trait) ಪದಕ್ಕೆ ಪರ್ಯಾಯವಾಗಿ ಉಪಯೋಗಿಸುತ್ತಾನೆ. "ಒಂದು ಅವಲೋಕಿತ ವಿಶೇಷಕಗಳ ಸಮೂಹ ಅಥವಾ ವಿಶೇಷಕಗಳ ಲಕ್ಷಣ ಸಮೂಹವೇ ಆಯಾಮ" ಎಂದು ಅವನು ಅಯಾಮದ ಪರಿಕಲ್ಪನೆಯನ್ನು ವ್ಯಾಖ್ಯಾನಿಸಿದ್ದಾನೆ. ಗಿಲ್‌ಫರ್ಡ್‌ನಂತೆ ಐಸೆಂಕ್ ಸಹ ಪ್ರರೂಪ ಮತ್ತು ವಿಶೇಷಕ ನಿಲುವುಗಳನ್ನು ಸಮಗ್ರಗೊಳಿಸಲು ಪ್ರಯತ್ನಿಸಿದ್ದಾನೆ. ಕೆಟ್ಟೆಲ್‌ನ ಸಿದ್ಧಾಂತದಲ್ಲಿಯೂ ವಿಶೇಷಕಗಳನ್ನು ಗುಂಪುಗಳಾಗಿ ಪರಿಗಣಿಸುವ ನಿಲುವನ್ನು ಕಾಣಬಹುದು. ಐಸೆಂಕ್ ತನ್ನದು ಪೂರ್ಣಪ್ರಮಾಣದ ವ್ಯಕ್ತಿತ್ವ ಸಿದ್ಧಾಂತವೆಂದು ಹೇಳುವುದಿಲ್ಲ. ಅವನು ವ್ಯಕ್ತಿತ್ವದ ಗತಿಶೀಲತೆ (Dynamics) ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದಾನೆ.

ಮೊದಲಿಗೆ ಐಸೆಂಕ್ ವ್ಯಕ್ತಿತ್ವದ ಅಂತರ್ಮುಖತೆ – ಬಹಿರ್ಮುಖತೆ ಮತ್ತು ನರಸ್ತಾಪಕತೆ (Neuroticism) – ಸಂವೇಗಾತ್ಮಕ ಸ್ಥಿರತೆ ಎಂಬ ವ್ಯಕ್ತಿತ್ವದ ಎರಡು ಆಯಾಮಗಳನ್ನು ಗುರ್ತಿಸಿದನು. ನಂತರ ಮನಸ್ತಾಪಕತೆ (Psychoticism) – ಅಹಂಶಕ್ತಿ ಎಂಬ ಮೂರನೇ ಆಯಾಮವನ್ನು ಗುರ್ತಿಸಿ ಈ ಆಯಾಮಗಳ ನಿರ್ದಿಷ್ಟ ಪ್ರವೃತ್ತಿಗಳನ್ನು, ವರ್ತನ ಲಕ್ಷಣಗಳನ್ನು ವಿವರಿಸಿದನು.ಈ ಮೂರೂ ಆಯಾಮಗಳನ್ನು ದ್ವಿ–ಧೃವೀಯ (Bipolar) ಆಯಾಮಗಳೆಂದು ಪರಿಗಣಿಸಿದ್ದಾನೆ. ಅಂತರ್ಮುಖತೆ – ಬಹಿರ್ಮುಖತೆ ಆಯಾಮ ಸಾಮಾಜಿಕ ಸಂಬಂಧಗಳಿಗೆ, ಸಾಮಾಜಿಕ ಅನ್ಯೋನ್ಯ ಕ್ರಿಯೆಗಳಿಗೆ ಸಂಬಂಧಿಸಿದೆ. ಅಂತರ್ಮುಖತೆ ಸ್ವಭಾವದ ವ್ಯಕ್ತಿ ಜನಗಳಿಂದ ದೂರ ಸರಿದರೆ, ಬಹಿರ್ಮುಖತೆ ಸ್ವಭಾವದ ವ್ಯಕ್ತಿ ಸಮಾಜದ ಕಡೆಗೆ ಪ್ರವೃತ್ತಿಸುತ್ತಾನೆ, ನರಸ್ತಾಪಕತೆ – ಸಂವೇಗಾತ್ಮಕ ಸ್ಥಿರತೆಯ ಆಯಾಮ ವ್ಯಕ್ತಿಯ ಅಂತರಿಕ ಸಂವೇಗಾತ್ಮಕ ಪ್ರವೃತ್ತಿಗೆ ಸಂಬಂಧಿಸಿದೆ.ನರಸ್ವಾಪಕತೆ ಸ್ವಭಾವದ ವ್ಯಕ್ತಿ ಆತಂಕ, ದ್ವಂದ್ವಗಳನ್ನು ಅನುಭವಿಸಿದರೆ, ಸಂವೇಗಾತ್ಮಕ ಸ್ಥಿರತೆಯುಳ್ಳ ವ್ಯಕ್ತಿ ಸಂವೇಗಾತ್ಮಕವಾಗಿ ಸಮತೋಲಿತ ಸ್ವಭಾವದವನಾಗಿರುತ್ತಾನೆ. ಮೂರನೇ ಆಯಾಮವಾದ ಮನಸ್ತಾಪಕತೆ – ಅಹಂಶಕ್ತಿ ಆಯಾಮ ವ್ಯಕ್ತಿತ್ವದ ಸಮಗ್ರತೆಗೆ ಸಂಬಂಧಿಸಿದೆ. ಮನಸ್ತಾಪಕತೆ ಸ್ವಭಾವದ ವ್ಯಕ್ತಿತ್ವದಲ್ಲಿ ಸಮಗ್ರತೆಯ ಕೊರತೆ ಕಂಡು ಬಂದು ಬಹಳ ಸುಲಭವಾಗಿ ಮನೋರೋಗಗಳಿಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಅಹಂಶಕ್ತಿಯುಳ್ಳ ವ್ಯಕ್ತಿ ಸಮಗ್ರ ವ್ಯಕ್ತಿತ್ವವನ್ನು ಹೊಂದಿದ್ದು, ಚೆನ್ನಾಗಿ ಪರಿಸರಕ್ಕೆ ಸಮಾಯೋಜನೆ ಮಾಡಿಕೊಳ್ಳುವ ಆತ್ಮವಿಶ್ವಾಸ ಮತ್ತು ಮನೋಶಕ್ತಿಯನ್ನು ಹೊಂದಿರುತ್ತಾನೆ.

ಐಸೆಂಕ್ ಪ್ರರೂಪ ನಿಲುವು ಮತ್ತು ತನ್ನ ಆಯಾಮ ನಿಲುವನ್ನು ಸಮಗ್ರಗೊಳಿಸಿ ವ್ಯಕ್ತಿತ್ವದ ಸಂರಚನೆಯನ್ನು ವಿವರಿಸಿದ್ದಾನೆ. ಅತ್ಯಂತ ಮೇಲ್ಮಟ್ಟ ಪ್ರರೂಪದ್ದಾಗಿದೆ. ಇದು ಒಂದು ಪ್ರಮುಖ ಆಯಾಮದ ಧನಾತ್ಮಕ ಅಥವಾ ಋಣಾತ್ಮಕ ಲಕ್ಷಣಗಳನ್ನು ಹೊಂದಿರುತ್ತದೆ. ಈ ಮಟ್ಟದಲ್ಲಿ ಅಂತರ್ಮುಖಿ, ಬಹಿರ್ಮುಖಿ, ಅಸ್ಥಿರ, ಸ್ಥಿರ ಎಂದು ನಾಲ್ಕು ಪ್ರರೂಪಗಳನ್ನು ಐಸೆಂಕ್ ಗುರ್ತಿಸಿ ಅವುಗಳ ಲಕ್ಷಣಗಳನ್ನು ವರ್ಣಿಸಿದ್ದಾನೆ. ಇದಕ್ಕಿಂತ ಕೆಳಗೆ ವಿಶೇಷಕ ಮಟ್ಟವಿದೆ. ಪ್ರತಿಯೊಂದು ವಿಶೇಷಕ ಕೆಲವು ನಿರ್ದಿಷ್ಟ ಲಕ್ಷಣಗಳನ್ನು ಹೊಂದಿದೆ.ಇದಕ್ಕಿಂತ ಕೆಳಗಿನದು ಅಭ್ಯಾಸಗತ ಅನುಕ್ರಿಯಾ ಮಟ್ಟ. ಇದು ವ್ಯಕ್ತಿ ತನ್ನ ಅನುಭವ, ಕಲಿಕೆಯಿಂದ ರೂಢಿಸಿಕೊಂಡ ವರ್ತನೆಗಳನ್ನು ತೋರಿಸುತ್ತದೆ.ಅತ್ಯಂತ ಕೆಳಗಿನ ಮಟ್ಟ ವ್ಯಕ್ತಿ ತೋರಿಸುವ ನಿರ್ದಿಷ್ಟ ಅನುಕ್ರಿಯೆಗಳನ್ನು ತೋರಿಸುತ್ತದೆ.ಈ ಕೆಳಗಿನ ನಕ್ಷೆ ಈ ಸಂರಚನೆಯನ್ನು ತೋರಿಸುತ್ತದೆ.




ಐಸೆಂಕ್ ತನ್ನ ಸಿದ್ಧಾಂತದ ಚಿಕಿತ್ಸಾತ್ಮಕ (Clinical) ನಿಹಿತಾರ್ಥಗಳನ್ನು ವಿವರಿಸಿದ್ದಾನೆ. ನರಸ್ತಾಪ (Neurosis)

Digitised by Bharatavani, CIIL

ಮತ್ತು ಮನಸ್ತಾಪ (Phychosis) ರೋಗ ಲಕ್ಷಣಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಐಸೆಂಕ್ ಕೊಡುಗೆ ನೀಡಿದ್ದಾನೆ. ಇವನು ರೂಪಿಸಿದ ಐಸೆಂಕ್ ಪರ್ಸಾನಾಲಿಟಿ ಇನ್‌ವೆಂಟರಿಯನ್ನು ಸಂಶೋಧನೆಗಳಲ್ಲಿ ಮತ್ತು ವ್ಯಕ್ತಿತ್ವ ಮಾಪನದಲ್ಲಿ ವ್ಯಾಪಕವಾಗಿ ಉಪಯೋಗಿಸಲಾಗುತ್ತಿದೆ.

**5 ಪ್ರಮುಖ ಕಾರಕಗಳ ಸಿದ್ಧಾಂತ:**

ವ್ಯಕ್ತಿತ್ವದಲ್ಲಿ ವಾಸ್ತವವಾಗಿ ಎಷ್ಟು ವಿಶೇಷಕಗಳು ಅಥವಾ ಆಯಾಮಗಳು ಅಥವಾ ಕಾರಕಗಳು (Factors) ಇವೆ ಎನ್ನುವುದನ್ನು ನಿರ್ಧರಿಸಲು ಆಲ್‌ಪೋರ್ಟ್ ಮುಂತಾದವರುಗಳ ನಂತರವೂ ಕಳೆದ 20 ವರ್ಷಗಳಲ್ಲಿ ಅನೇಕ ಸಂಶೋಧನೆಗಳು ನಡೆದಿವೆ. ಅಮೇರಿಕಾದ ಕೋಸ್ಟ ಮತ್ತು ಮಾಕ್ರೆ (1994), ಜುಕರ್‌ಮನ್ (1994) ಮುಂತಾದವರು ತಮ್ಮ ಅಧ್ಯಯನಗಳ ಆಧಾರದ ಮೇಲೆ ವ್ಯಕ್ತಿತ್ವದಲ್ಲಿ 5 ಪ್ರಮುಖ ಆಯಾಮಗಳು/ಕಾರಕಗಳು ಇವೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇವುಗಳನ್ನು 5 ಪ್ರಮುಖ ಕಾರಕಗಳು (Big 5 Factors) ಎಂದು ಕರೆದಿದ್ದಾರೆ. ಇವು ದ್ವ–ಧೃವೀಯ ಕಾರಕಗಳಾಗಿವೆ. ಅವುಗಳನ್ನು ಈ ಕೆಳಗೆ ವಿವರಿಸಲಾಗಿದೆ.

1. **ಬಹಿರ್ಮುಖತೆ:** ಇದು ಧನಾತ್ಮಕ ದಿಶೆಯಲ್ಲಿ ಶಕ್ತಿಪೂರ್ಣತೆ, ಉತ್ಸಾಹಿತ, ಸಮಾಜ ಸ್ನೇಹಿ ಮತ್ತು ವಾಚಾಳತ್ವದಿಂದ ಆರಂಭವಾಗಿ ಋಣಾತ್ಮಕ ಹಿಂಜರಿಕೆ, ಶಾಂತ, ಸಂಕೋಚ ಸ್ವಭಾವ, ಮೌನ, ಜಾಗರೂಕತೆ ಈ ಲಕ್ಷಣಗಳಲ್ಲಿ ಕೊನೆಗೊಳ್ಳುತ್ತದೆ.

2. **ಪ್ರಿಯವಾಗುವಿಕೆ:** ಇದು ಒಳ್ಳೆ ಸ್ವಭಾವ, ಸಹಕಾರ, ವಿಶ್ವಾಸಾರ್ಹತೆ, ಸಹಾಯ ಪ್ರವೃತ್ತಿಯಿಂದ ಆರಂಭವಾಗಿ ಸಿಡುಕುತನ, ಸಂಶಯ, ಅಸಹಕಾರಿ ಪ್ರವೃತ್ತಿಯಲ್ಲಿ ಕೊನೆಗೊಳ್ಳುತ್ತದೆ.

3. **ಆತ್ಮಸಾಕ್ಷಿಕತೆ:** ಧನಾತ್ಮಕ ದಿಶೆಯಲ್ಲಿ ಸುಸಂಘಟಿತ, ಸ್ವಯಂಶಿಸ್ತು, ಜವಾಬ್ದಾರಿಯುಳ್ಳ, ನಿಖರತೆಯುಳ್ಳ ಈ ಲಕ್ಷಣಗಳನ್ನು ಹೊಂದಿದೆ. ಋಣಾತ್ಮಕ ದಿಶೆಯಲ್ಲಿ ಅವ್ಯವಸ್ಥತೆ, ಹಠಾತ್ ಪ್ರವೃತ್ತಿ, ಅಜಾಗರೂತೆ, ಭರವಸೆಗೆ ಯೋಗ್ಯವಲ್ಲದಿರುವಿಕೆ ಈ ಲಕ್ಷಣಗಳನ್ನು ಹೊಂದಿದೆ.

4. **ಸಂವೇಗಾತ್ಮಕ ಸ್ಥಿರತೆ:** ಕೆಲವು ವೇಳೆ ಇದನ್ನು ನರಸ್ತಾಪಕತೆ (Neuroticism) ಎಂದೂ ಕರೆಯಲಾಗುತ್ತದೆ. ಈ ಕಾರಕ ಧನಾತ್ಮಕ ದಿಶೆಯಲ್ಲಿ ಸಂತುಲಿತ ಸ್ವಭಾವ, ಶಾಂತ, ಮಾನಸಿಕವಾಗಿ ಸುವ್ಯವಸ್ಥಿತ, ತನ್ನ ದೇಹದ ಬಗ್ಗೆ ದುಃಶ್ಚಿಚಿಂತೆ ಇಲ್ಲದಿರುವಿಕೆ (Not Hypocondriaeal) ಈ ಲಕ್ಷಣಗಳಿಂದ ಆರಂಭವಾಗಿ ಋಣಾತ್ಮಕ ದಿಶೆಯಲ್ಲಿ ಅಧೀರತೆ ಅಥವಾ ಗಾಬರಿ (Nervous), ಆತಂಕಿತ, ಅತಿ ಸಂವೇದನ ಶೀಲತೆ, ತನ್ನ ದೇಹದ ಬಗ್ಗೆ ದುಃಶ್ಚಿಂತೆ ಪಡುವಿಕೆ (Hypocondriaeal) ಈ ಲಕ್ಷಣಗಳಲ್ಲಿ ಕೊನೆಗೊಳ್ಳುತ್ತದೆ.

5. **ಅನುಭವಗಳಿಗೆ ಮುಕ್ತವಾಗಿರುವಿಕೆ:** ಧನಾತ್ಮಕ ದಿಶೆಯಲ್ಲಿ ಕಲ್ಪನಾಶೀಲತೆ, ವಾಕ್‌ಚತುರತೆ, ವಿಸ್ತೃತ ಆಸಕ್ತಿಗಳನ್ನು ಹೊಂದಿರುವುದು – ಈ ಲಕ್ಷಣಗಳಿರುತ್ತವೆ. ಋಣಾತ್ಮಕ ದಿಶೆಯಲ್ಲಿ – ವ್ಯಾವಹಾರಿಕತೆ, ಸರಳ ಸ್ವಭಾವ, ಸೀಮಿತ ಆಸಕ್ತಿಗಳು ಈ ಲಕ್ಷಣಗಳಿರುತ್ತವೆ.

ಆರೋಗ್ಯಕ್ಕೂ ವ್ಯಕ್ತಿತ್ವ ವರ್ತನ ವಿನ್ಯಾಸಕ್ಕೂ ಸಂಬಂಧವಿದೆ ಎಂಬುದನ್ನು ಮೇಯರ್ ಫ್ರೈಡ್‌ಮನ್ ಮತ್ತು ರೇ ರೋಸ್‌ಮನ್ (1974) ಎಂಬ ಈರ್ವರು ಹೃದಯತಜ್ಞ ವೈದ್ಯರು ತಮ್ಮ ಕ್ಲಿನಿಕ್‌ಗೆ ಬರುತ್ತಿದ್ದ ಹೃದಯ ರೋಗಿಗಳನ್ನು ಅಧ್ಯಯನ ಮಾಡಿ ಕಂಡುಹಿಡಿದಿದ್ದಾರೆ. ತಮ್ಮ ರೋಗಿಗಳ ವರ್ತನ ವಿನ್ಯಾಸಗಳ ಆಧಾರದ ಮೇಲೆ ಎರಡು ರೀತಿಯ ವ್ಯಕ್ತಿತ್ವ ವಿನ್ಯಾಸಗಳನ್ನು ಗುರ್ತಿಸಿ ಅವುಗಳನ್ನು ಪ್ರರೂಪ ಂ ವಿನ್ಯಾಸದ ವ್ಯಕ್ತಿತ್ವ (Type A Personality Pattern) ಮತ್ತು B ವಿನ್ಯಾಸದ ವ್ಯಕ್ತಿತ್ವ (Type B Personality Pattern) ಎಂದು ಕರೆದು ಅವುಗಳ ಲಕ್ಷಣಗಳನ್ನು ಈ ವೈದ್ಯರುಗಳು ವಿವರಿಸಿದ್ದಾರೆ. Type A ವ್ಯಕ್ತಿತ್ವವುಳ್ಳವರಲ್ಲಿ ಹೃದಯಾಘಾತದ ಸಾಧ್ಯತೆ ಹೆಚ್ಚಾಗಿ ಕಂಡು ಬಂದಿತು. ಇವರುಗಳು ಹೆಚ್ಚಾಗಿ ಒತ್ತಡಕ್ಕೆ ಒಳಗಾಗುತ್ತಾರೆ. ಬೇರೆಯವರಿಗಿಂತ ಹೆಚ್ಚಿನ ಜವಾಬ್ದಾರಿಗಳನ್ನು, ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ. ಕೆಲಸದ ನಂತರ ವಿಶ್ರಾಂತಿ ತೆಗೆದು ಕೊಳ್ಳುವುದನ್ನು ಅಲಕ್ಷಿಸುತ್ತಾರೆ. ಒತ್ತಡಕ್ಕೆ ಒಳಗಾದಾಗ ತೀವ್ರ ಶಾರೀರಿಕ ಬದಲಾವಣೆಗಳನ್ನು ತೋರಿಸುತ್ತಾರೆ. ಎಲ್ಲರನ್ನೂ ನಿಂದಿಸುವುದು, ಸಂಶಯ, ಕೋಪ, ಮನಸ್ತಾಪ, ಬೇರೆಯವರಲ್ಲಿ ಅಪನಂಬಿಕೆ ಮುಂತಾದ ಲಕ್ಷಣಗಳನ್ನು ಹೊಂದಿರುತ್ತಾರೆ. Type B ವ್ಯಕ್ತಿತ್ವ ಉಳ್ಳವರು ಇವುಗಳಿಗೆ ತದ್ವಿರುದ್ಧವಾದ ಲಕ್ಷಣಗಳನ್ನು ಹೊಂದಿರುತ್ತಾರೆ. ಇಂಥ ವ್ಯಕ್ತಿತ್ವ ಉಳ್ಳವರು ಹೃದಯಾಘಾತಗಳಿಗೆ ಒಳಗಾಗುವ ಸಾಧ್ಯತೆ ಕಡಿಮೆಯಾಗಿರುತ್ತದೆ.

**ಮನೋ–ವಿಶ್ಲೇಷಣಾತ್ಮಕ ಸಿದ್ಧಾಂತಗಳು:**

ಈ ಗುಂಪಿನಲ್ಲಿ ಅನೇಕ ಸಿದ್ಧಾಂತಗಳಿವೆ. ಸಿಗ್ಮಂಡ್ ಫ್ರಾಯ್ಡ್ ಮನೋವಿಶ್ಲೇಷಣಾತ್ಮಕ ಸಿದ್ಧಾಂತಗಳ ಮೂಲಪುರುಷನೆಂದು ಪ್ರಸಿದ್ಧನಾಗಿದ್ದಾನೆ. 19ನೇ ಶತಮಾನದಲ್ಲಿ ತಮ್ಮ ಕ್ಷೇತ್ರದಲ್ಲಿನ ಸಂಶೋಧನೆಗಳು ಮತ್ತು ತಮ್ಮ ವಿಚಾರಗಳಿಂದ ಬೇರೆ ಕ್ಷೇತ್ರಗಳ ಮೇಲೂ ವ್ಯಾಪಕ ಪ್ರಭಾವ ಬೀರಿದ ಮೂವರು ಪ್ರಸಿದ್ಧ ಚಿಂತಕರಾದ ಆಲ್ಬರ್ಟ್ ಐನ್‌ಸ್ಟೈನ್, ಕಾರ್ಲ್‌ಮಾರ್ಕ್ಸ್ ಜೊತೆಗೆ ಸಿಗ್ಮಂಡ್ ಫ್ರಾಯ್ಡನನ್ನು ಒಬ್ಬನೆಂದು ಗುರ್ತಿಸಲಾಗಿದೆ. ಫ್ರಾಯ್ಡನ ವಿಚಾರಗಳು ಮತ್ತು ಪರಿಕಲ್ಪನೆಗಳು ಮನೋವಿಜ್ಞಾನ ಕ್ಷೇತ್ರದಲ್ಲಿ ಅದರಲ್ಲೂ ಅಪಸಾಮಾನ್ಯ ಮನೋವಿಜ್ಞಾನದಲ್ಲಿ ಮಹತ್ತರವಾದ ಪ್ರಭಾವಬೀರಿರುವುದಲ್ಲದೆ ಸಾಹಿತ್ಯ, ಚಲನಚಿತ್ರ, ಕಲೆ, ಮನೋರೋಗ ಚಿಕಿತ್ಸೆ, ಈ ಕ್ಷೇತ್ರಗಳ ಮೇಲೂ ಪ್ರಭಾವ ಬೀರಿದವು. ಫ್ರಾಯ್ಡ್ ಮೊದಲಿಗೆ ಪ್ರತಿಪಾದಿಸಿದ ಸಿದ್ಧಾಂತವನ್ನು ಅಭಿಜಾತ್ಯ ಮನೋವಿಶ್ಲೇಷಣಾ ಸಿದ್ಧಾಂತ (Classical Psycho Analyfical Theory) ಎಂದು ಕರೆಯಲಾಗಿದೆ. ಸಿಗ್ಮಂಡ್ ಫ್ರಾಯ್ಡ್ 1896ರಲ್ಲಿ ಮನೋವಿಶ್ಲೇಷಣೆ (Psycho Analysis) ಎಂಬ ಪದವನ್ನು ಮೊಟ್ಟಮೊದಲಿಗೆ ಉಪಯೋಗಿಸಿದನು. ಈಗ ಈ ಪದವನ್ನು

Digitised by Bharatavani, CIIL

ಮೂರು ಅರ್ಥಗಳಲ್ಲಿ ಬಳಸಲಾಗುತ್ತಿದೆ. ಮೊದಲಿಗೆ ಇದು ಫ್ರಾಯ್ಡ್ ರೂಪಿಸಿದ ವ್ಯಕ್ತಿತ್ವ ಸಿದ್ಧಾಂತವನ್ನು ಸೂಚಿಸುತ್ತದೆ. ಎರಡನೆಯದಾಗಿ, ಇದು ಮನಸ್ಸನ್ನು ವಿಶ್ಲೇಷಿಸಲು ಫ್ರಾಯ್ಡ್ ವಿಕಾಸಗೊಳಿಸಿದ ತಂತ್ರವನ್ನು ಸೂಚಿಸುತ್ತದೆ. ಮೂರನೆಯದಾಗಿ, ಫ್ರಾಯ್ಡ್‌ನ ನಂತರ ಅಡ್ಲೆರ್, ಯೂಂಗ್ ಮುಂತಾದವರು ಪ್ರತಿಪಾದಿಸಿದ ಸಿದ್ಧಾಂತಗಳಿಗೂ ಈ ಪದವನ್ನು ಉಪಯೋಗಿಸಲಾಗುತ್ತದೆ. ಈ ಸಿದ್ಧಾಂತದ ಮೂಲ ನಿಲುವುಗಳೇ ನಂತರದ ಮನೋವಿಶ್ಲೇಷವಾದಿ ವ್ಯಕ್ತಿತ್ವ ಸಿದ್ಧಾಂತಗಳಿಗೆ ಆಧಾರವಾಗಿದೆ. ಫ್ರಾಯ್ಡ್‌ನ ಶಿಷ್ಯರಾಗಿದ್ದು ನಂತರದಲ್ಲಿ ಅವನೊಂದಿಗಿನ ಅಭಿಪ್ರಾಯ ಭೇದದಿಂದಾಗಿ ಅಡ್ಲೆರ್ ತನ್ನದೇ ಆದ ವ್ಯಕ್ತಿಗತ ಮನೋವಿಜ್ಞಾನ ಸಿದ್ಧಾಂತವನ್ನು ಪ್ರತಿಪಾದಿಸಿದನು. ಮತ್ತೊಬ್ಬ ಶಿಷ್ಯನಾಗಿದ್ದ ಯೂಂಗ್ (Jung) ತನ್ನದೇ ಆದ ವಿಶ್ಲೇಷಣಾತ್ಮಕ ಮನೋವಿಜ್ಞಾನ ಸಿದ್ಧಾಂತವನ್ನು ಪ್ರತಿಪಾದಿಸಿದನು. ನಂತರದಲ್ಲಿ ಬಂದ ಫ್ರಾಯ್ಡ್‌ನ ನಿಲುವುಗಳಾದ ಸಮರ್ಥಕರಾಗಿದ್ದ ಎರಿಕ್ ಎರಿಕ್‌ಸನ್, ಕಾರೆನ್ ಹಾರ್ನೈ, ಸ್ಟ್ಯಾಕ್ ಸಲ್ಲಿವನ್ ಮತ್ತು ಎರಿಚ್ ಫ್ರಾಮ್ ತಮ್ಮದೇ ಆದ ವ್ಯಕ್ತಿತ್ವ ಸಿದ್ಧಾಂತಗಳನ್ನುಪ್ರತಿಪಾದಿಸಿದ್ದಾರೆ. ಇವರನ್ನುನವಫ್ರಾಯ್ಡ್‌ವಾದಿಗಳು ಎನ್ನುತ್ತಾರೆ. ಈ ಎಲ್ಲಾ ಸಿದ್ಧಾಂತಗಳ ಸಂಕ್ಷಿಪ್ತ ಪರಿಚಯವನ್ನು ಮುಂದೆ ಮಾಡಿಕೊಡಲಾಗಿದೆ.

**ಸಿಗ್ಮಂಡ್ ಫ್ರಾಯ್ಡ್‌ನ ಸಿದ್ಧಾಂತ:**

ಜೆಕೋಸ್ಲೋವಾಕಿಯಾದ ಪಟ್ಟಣ ಬಂದರಲ್ಲಿ 1856ರಲ್ಲಿ ಜ್ಯೂ (ಯಹೂದಿ) ಕುಟುಂಬದಲ್ಲಿ ಜನಿಸಿದ ಸಿಗ್ಮಂಡ್ ಫ್ರಾಯ್ಡ್ ನಂತರ ಆಸ್ಟ್ರಾಯಾದ ವಿಯನ್ನಾದಲ್ಲಿ ಬೆಳೆದು ಅಲ್ಲಿಯೇ ಶಿಕ್ಷಣ ಪಡೆದನು. ವೈದ್ಯ ಶಾಸ್ತ್ರದಲ್ಲಿ ಪದವಿ ಪಡೆದು ನಂತರ ಮನೋ ಚಿಕಿತ್ಸಾ ಶಾಸ್ತ್ರದಲ್ಲಿ (Psychiatrist) ಪರಿಣತಿಯನ್ನು ಪಡೆದನು. ನಂತರ ಆಗ ಮನೋಚಿಕಿತ್ಸಾ, ತಜ್ಞರೆನಿಸಿದ್ದ ಶಾಕೋ (Chariot) ಮತ್ತು ಜೋಸೆಫ್ ಬ್ರೂಯರ್‌ರವರಲ್ಲಿ ಶಿಷ್ಯ ವೃತ್ತಿ ಕೈಗೊಂಡು ಅನುಭವ ಪಡೆದು ತನ್ನ ಮನೋವಿಶ್ಲೇಷಣ ಸಿದ್ಧಾಂತವನ್ನು ವಿಕಾಸಗೊಳಿಸಿದನು. ಈ ಸಿದ್ಧಾಂತ ಅವನಿಗೆ ಬಹುಬೇಗ ಪ್ರಸಿದ್ಧಿಯನ್ನು ತಂದುಕೊಟ್ಟಿತು. ತನ್ನ ಜೀವನದ ಅಂತಿಮ ಅವಧಿಯಲ್ಲಿ ಅವನು ಜ್ಯೂ ಆಗಿದ್ದುದರಿಂದ ಹಿಟ್ಲರ್‌ನ ತೊಂದರೆಗಳಿಂದ ತಪ್ಪಿಸಿಕೊಳ್ಳಲು ಲಂಡನ್‌ಗೆ ಹೋಗಿ ಅಲ್ಲಿಯೇ 1939ರಲ್ಲಿ ನಿಧನ ಹೊಂದಿದನು.

ಫ್ರಾಯ್ಡ್‌ನ ಸಿದ್ಧಾಂತವನ್ನು ಒಂದೇ ಸಿದ್ಧಾಂತವೆಂದು ಹೇಳುವಂತಿಲ್ಲ. ಏಕೆಂದರೆ ಅವನು ತನ್ನ ಜೀವಿತಾವಧಿಯ ಬೇರೆ ಬೇರೆ ಹಂತಗಳಲ್ಲಿ ತನ್ನ ವಿಚಾರಗಳನ್ನು ಬದಲಿಸಿ ಬೇರೆ ಬೇರೆ ಸಿದ್ಧಾಂತಗಳನ್ನು ಪ್ರತಿಪಾದಿಸಿದ, ಕೆಲವನ್ನು ಮಾರ್ಪಾಡು ಮಾಡಿದ. ಈ ಎಲ್ಲಾ ಸಿದ್ಧಾಂತಗಳನ್ನು, ಅವನ ಪ್ರಮುಖ ಪರಿಕಲ್ಪನೆಗಳನ್ನು ಒಟ್ಟಾಗಿ ಸೇರಿಸಿ ಮನೋವಿಶ್ಲೇಷಣ ಸಿದ್ಧಾಂತ ಎಂದು ಹೇಳಬಹುದು. ಫ್ರಾಯ್ಡ್ ತಾನು ಬರೆದ ಲೇಖನಗಳು, ಪುಸ್ತಕಗಳ ಮೂಲಕ ತನ್ನ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. The Interpreparation of Dreams (1900) ಮತ್ತು Psycho-Pathology of Everyday Life (1901) ಫ್ರಾಯ್ಡ್‌ನ ಪ್ರಸಿದ್ಧ ಗ್ರಂಥಗಳೆನಿಸಿವೆ.

ಫ್ರಾಯ್ಡ್‌ನ ಸಿದ್ಧಾಂತವನ್ನು ಮೂರು ಭಾಗಗಳಲ್ಲಿ ವಿವರಿಸಬಹುದು. ಮೊದಲನೆ ಭಾಗ ಅವನ ಮಾನವನ, ಮಾನವನ ಪ್ರೇರಣೆಗಳ ಕಲ್ಪನೆ, ಮನಸ್ಸಿನ ಸ್ವರೂಪ, ಸಂರಚನೆ, ಮತ್ತು ವಿಕಾಸದ ವಿಚಾರಗಳನ್ನು ಒಳಗೊಳ್ಳುತ್ತದೆ. ಎರಡನೆ ಭಾಗ ವ್ಯಕ್ತಿತ್ವದ ಗತಿಶೀಲತೆ, ಮತ್ತು ಸಂರಚನೆ ಮತ್ತು ಸಮಾಯೋಜನೆ – ಅಪಸಮಾಯೋಜನೆಯ ಪರಿಕಲ್ಪನೆಗಳನ್ನು ಒಳಗೊಳ್ಳುತ್ತದೆ. ಮೂರನೇ ಭಾಗದಲ್ಲಿ ಅವನ ಚಿಕಿತ್ಸಾ ಕ್ರಮಗಳು ಸೇರಿವೆ. ಫ್ರಾಯ್ಡ್ ಗ್ರೀಕ್ ಪುರಾಣಗಳಿಂದ ಪ್ರಭಾವಿತನಾಗಿದ್ದನೆಂದು ತೋರುತ್ತದೆ. ಆದ್ದರಿಂದಲೇ ಅವನು ತನ್ನ ಸಿದ್ಧಾಂತದಲ್ಲಿ ಗ್ರೀಕ್ ಪುರಾಣದ ಅನೇಕ ಘಟನೆಗಳನ್ನೂ ಹೆಸರುಗಳನ್ನೂ ಉಪಯೋಗಿಸಿದ್ದಾನೆ. ಫ್ರಾಯ್ಡ್‌ನ ದೃಷ್ಟಿಯಲ್ಲಿ ಯಾವ ವರ್ತನೆಯೂ ಮನಸ್ಸಿನ ಆಳದಲ್ಲಿ ಹುದುಗಿರುವ ಪ್ರೇರಣೆ, ಅನುಭವ, ನೆನಪು, ಭಾವನೆ, ಕ್ರಿಯೆಗಳ ಕಾರಣವಿಲ್ಲದೆ ಉಂಟಾಗುವುದಿಲ್ಲ. ಈ ನಿಲುವನ್ನು ಮನೋ ನಿರ್ಧಾರಣವಾದ (Psychic Determinism) ಎಂದು ಹೇಳುತ್ತಾರೆ.

ಫ್ರಾಯ್ಡನ ದೃಷ್ಟಿಯಲ್ಲಿ ಮಾನವನಿಗೆ ದೈವೀಕ ಸ್ವರೂಪವಿಲ್ಲ. ಮಾನವ ಪ್ರಾಣಿಗಳಿಂದಲೇ ವಿಕಾಸಗೊಳ್ಳುತ್ತಾ ವಿಕಾಸ ತುದಿಯನ್ನು ತಲುಪಿಸಿದ್ದಾನೆ. ಆದರೂ ಜೈವಿಕವಾಗಿ ಅವನಲ್ಲಿ ಇನ್ನೂ ಮೃಗೀಯ ಪ್ರೇರಣೆಗಳು ಇದ್ದು ಅವನನ್ನು ನಿಯಂತ್ರಿಸುತ್ತಿವೆ. ಅವನು ಪ್ರಯತ್ನ ಪೂರ್ವಕವಾಗಿ ಈ ಮೃಗೀಯ ಸ್ಥಿತಿಯಿಂದ ಮಾನವ ಸ್ಥಿತಿಗೆ ಏರಬೇಕಾಗಿದೆ. ಮಾನವನಲ್ಲಿ ಇರುವ ಮಾನಸಿಕ ಶಕ್ತಿಯನ್ನು ಫ್ರಾಯ್ಡ್ ಲಿಬಿಡೋ ಎಂದು ಕರೆದಿದ್ದಾನೆ. ಇದು ಲಿಬಿಡೋ ಲೈಂಗಿಕ ಸ್ವರೂಪದ್ದೆಂದು ಫ್ರಾಯ್ಡ್ ನಂಬಿದ್ದನು. ಈರೋಸ್ (ಜೀವಪ್ರೇರಣೆ) ಮತ್ತು ಥೆನೆಟಾಸ್ (ಮರಣ ಪ್ರೇರಣೆ) ಎಂಬ ಎರಡು ಮೂಲ ಪ್ರೇರಣೆಗಳ ಮೂಲಕ ವ್ಯಕ್ತವಾಗಬಹುದು. ಮಾನವನ ಜನ್ಮಜಾತ ಪ್ರೇರಣೆಗಳು (Instircts), ಬೆಳವಣಿಗೆಯ ಪ್ರಕ್ರಿಯೆ 'ಲಿಬಿಡೋ'ನ ಶಕ್ತಿ ಮೂಲಗಳಾಗಿವೆ. ಈರೋಸ್ ಮೂಲಕ ಲಿಬಿಡೋ ವ್ಯಕ್ತವಾದಾಗ ಬೆಳವಣಿಗೆ ಉಂಟಾಗುತ್ತದೆ. ಮಾನವನ ಮಾನಸಿಕ ಶಕ್ತಿ ರಚನಾತ್ಮಕ, ಸೃಜನಾತ್ಮಕ ಕಾರ್ಯಗಳಲ್ಲಿ ತೊಡಗುತ್ತದೆ. ಮಾನವ ಕುಲದ ಎಲ್ಲಾ ಸಾಧನೆಗಳಿಗೆ, ಕಲಾತ್ಮಕ, ರಚನಾತ್ಮಕ ಸಾಧನೆಗಳಿಗೆ ಲಿಬೋಡೋವಿನ ಅಭಿವ್ಯಕ್ತಿ ಕಾರಣವಾಗಿದೆ ಎಂದು ಫ್ರಾಯ್ಡ್ ನಂಬುತ್ತಾನೆ. ಲಿಬಿಡೋ ಥೆನೆಟಾಸ್ ಪ್ರೇರಣೆಯ ಮೂಲಕ ವ್ಯಕ್ತಾವಾದಾಗ ಮನುಷ್ಯ ವಿನಾಶಕಾರಿ, ವಿಧ್ವಂಸಕ ಕಾರ್ಯಗಳಲ್ಲಿ ತೊಡಗುವಂತೆ ಮಾಡುತ್ತದೆ. ಈ ಪ್ರೇರಣೆ ಬೇರೆಯವರ ಮೇಲೆ ಅದು ಆಕ್ರಮಣ ಮಾಡುವುದು, ನಾಶ ಮಾಡುವುದರ ಕಡೆಗೆ ಮನುಷ್ಯನನ್ನು ತಿರುಗಿಸಬಹುದು. ಕಡೆಗೆ ವ್ಯಕ್ತಿಯ ಕಡೆಗೇ ತಿರುಗಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಬಹುದು. ಮನುಷ್ಯನ ಒಳ್ಳೆಯ ಹಾಗೂ ವಿಕ್ಷಿಪ್ತ ವರ್ತನೆಗಳನ್ನು ಈ ಎರಡು ಪ್ರೇರಣೆಗಳು ಪ್ರಬಲವಾಗಿ ನಿಯಂತ್ರಿಸುತ್ತವೆ. ಜೀವ ಪ್ರೇರಣೆ ಸುಖವನ್ನು ಅನುಭವಿಸುವುದರ ಕಡೆಗೆ, ಹಸಿವು, ಬಾಯಾರಿಕೆ, ಲೈಂಗಿಕ ತೃಷೆ ಮುಂತಾದ ಜೈವಿಕ ಪ್ರೇರಣೆಗಳ ತೃಪ್ತಿಯ ಕಡೆಗೆ ಮನುಷ್ಯ ಪ್ರವರ್ತಿಸುವಂತೆ ಮಾಡಿದರೆ, ಮರಣ ಪೇರಣೆ ಬೇರೆಯವರನ್ನು, ಬೇರೆಯವರದನ್ನು ನಾಶ ಮಾಡುವುದು. ಆಕ್ರಮಣ ಮಾಡುವುದು,

Digitised by Bharatavani, CIIL

ಹಿಂಸಿಸುವುದು, ಕಡೆಗೆ ತನ್ನನ್ನೇ ನಾಶಮಾಡಿಕೊಳ್ಳುವುದರ ಕಡೆಗೆ ಪ್ರವರ್ತಿಸುವಂತೆ ಮಾಡುತ್ತದೆ.

**ಮನಸ್ಸಿನ ಪದರಗಳು:**

ಫ್ರಾಯ್ಡ್‌ನ ಮಾನವನ ಮನಸ್ಸಿನ ಪರಿಕಲ್ಪನೆ ಆಗಿನ ಕಾಲಕ್ಕೆ ವಿನೂತನವಾಗಿದ್ದುದಲ್ಲದೆ, ಕ್ರಾಂತಿಕಾರಕವಾಗಿದ್ದು ಆದ ಪ್ರಚಲಿತವಾಗಿದ್ದ ಮಾನವನ ಸ್ವರೂಪದ ದೈವಿಕವಾದ, ಒಳ್ಳೆತನದ ಪರಿಕಲ್ಪನೆಗೆ ವಿರೋಧವಾದುದಾಗಿತ್ತು. ಫ್ರಾಯ್ಡ್ ಮಾನವನ ಮನಸ್ಸಿನಲ್ಲಿ ಮೂರು ಪದರಗಳನ್ನು ಗುರ್ತಿಸಿದ್ದಾನೆ. ಕೆಳಗಿನ ಚಿತ್ರ ಮನಸ್ಸಿನ ಪದರಗಳನ್ನು ತೋರಿಸುತ್ತದೆ.

ಮನಸ್ಸಿನ ಮೇಲಿನ ಸ್ವಲ್ಪ ಭಾಗವೇ ಚೇತನಾವಸ್ಥೆಯ ಮನಸ್ಸು (Consciousness). ಇದು ಪ್ರಸ್ತುತದಲ್ಲಿ ಪರಿಸರದ ಬಗ್ಗೆ ವ್ಯಕ್ತಿಗಿರುವ ಅರಿವು, ಪ್ರಜ್ಞಾಪೂರ್ವಕವಾದ ಯೋಚನೆಗಳು, ಪ್ರತ್ಯಕ್ಷಾನುಭವಗಳು ಮತ್ತು ಭಾವನೆಗಳನ್ನು ಒಳಗೊಳ್ಳುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ ಮನಸ್ಸಿನ ಸ್ವಲ್ಪ ಭಾಗ ಮಾತ್ರ ಚೇತನಾವಸ್ಥೆಯನ್ನು ಪ್ರತಿನಿಧಿಸುತ್ತದೆ. ಇದರಾಚೆಗಿನ ಮನಸ್ಸಿನ ಸ್ವಲ್ಪ ಭಾಗ ಇತ್ತೀಚಿನ ನೆನಪಿಸಿಕೊಳ್ಳಬಹುದಾದ ಸ್ಮರಣೆಗಳು, ಅರ್ಜಿಸಿದ ಜ್ಞಾನ ಇತ್ತೀಚಿನ ಅನುಭವಗಳು ಮತ್ತು ಭಾವನೆಗಳನ್ನು ಒಳಗೊಳ್ಳುತ್ತದೆ. ಈ ಭಾಗವೇ ಪೂರ್ವ–ಪ್ರಜ್ಞಾವಸ್ಥೆಯ (Pre-consciousness) ಪದರವಾಗಿದೆ. ಇದರಾಚೆಗೆ ಇರುವ ಮನಸ್ಸಿನ ದೊಡ್ಡದಾದ ಭಾಗವನ್ನೇ ಫ್ರಾಯ್ಡ್ ಸುಪ್ತಚೇತನಾವಸ್ಥೆ ಮತ್ತು ಅಚೇತನಾವಸ್ಥೆ (Unconsciousness) ಎಂದು ಕರೆದಿದ್ದಾರೆ. ಇದು ಮನೋವಿಶ್ಲೇಷಣ ಸಿದ್ಧಾಂತದ ಮುಖ್ಯ ಪರಿಕಲ್ಪನೆಯಾಗಿದೆ. ಇದು ಎಲ್ಲಾ ನಕಾರಾತ್ಮಕ ಅಂಶಗಳನ್ನು ಒಳಗೊಂಡಿದೆ. ಸುಪ್ತಚೇತನದಲ್ಲಿ ಭಯಗಳು (ಹೆಚ್ಚಾಗಿ ಅತಾರ್ಕಿಕವಾದವುಗಳು), ವಿಧ್ವಂಸಕ ಪ್ರೇರಣೆಗಳು, ಅತಾರ್ಕಿಕ ಬಯಕೆಗಳು, ಅನೈತಿಕ ಪ್ರೇರಣೆಗಳು, ಅಸ್ವೀಕೃತವಾದ ಲೈಂಗಿಕ ಬಯಕೆಗಳು, ಮನೋಗ್ರಂಥಿಗಳು (Complexes) ಸ್ವಾರ್ಥಪರ ಅಗತ್ಯಗಳು ಮತು ಅವಮಾನದ ಅನುಭವಗಳನ್ನು ಒಳಗೊಳ್ಳುತ್ತದೆ. ಇವಲ್ಲದೆ, ಜನ್ಮಜಾತವಾದ ಜೈವಿಕ ಮೃಗೀಯ ಪ್ರೇರಣೆಗಳನ್ನು, ಜೀವ ಮರಣ ಪ್ರೇರಣೆಗಳನ್ನೂ ಸುಪ್ತಚೇತನ ಒಳಗೊಳ್ಳುತ್ತದೆ. ಸುಪ್ತ ಚೇತನದ ಪ್ರೇರಣೆಗಳು ವ್ಯಕ್ತಿಯ ಅರಿವಿಗೆ ನಿಲುಕುವುದಿಲ್ಲ. ಇವುಗಳು ಮಾನಸಿಕ ಶಕ್ತಿಯಿಂದ ಪ್ರೇರಿತವಾಗಿ ಗತಿಶೀಲಾತ್ಮಕವಾಗಿದ್ದು, ಚೇತನಾವಸ್ಥೆಗೆ ಪ್ರವೇಶಿಸಲು ಪ್ರಯತ್ನಿಸುತ್ತಿರುತ್ತವೆ. ಇವುಗಳನ್ನು ಹಾಗೆ ಪ್ರವೇಶಿಸಿದಂತೆ ತಡೆಯಲಾಗುತ್ತದೆ. ಪೂರ್ವ–ಚೇತನಾವಸ್ಥೆಯಲ್ಲಿ 'ಸೆನ್ಸಾರ್' ಎಂಬ ಪರಿಕಲ್ಪನೆ ಎಂಬುದನ್ನು ವಿವರಿಸಲು ಫ್ರಾಯ್ಡ್ ಪರಿಭಾವಿಸಬೇಕಾಯಿತು. ಈ ಎಲ್ಲಾ ಪರಿಕಲ್ಪನೆಗಳು ಮಾನವನ ಮೆದುಳಿನಲ್ಲಿ (ಮನಸ್ಸಿನಲ್ಲಿ) ಮೂರ್ತಾತ್ಮಕ ರೂಪದಲ್ಲಿ ಇವೆ ಎಂದು ತಿಳಿಯಬಾರದು. ಇವು ಮನಸ್ಸಿನ ಕ್ರಿಯೆಗಳನ್ನು ವಿವರಿಸಲು ಫ್ರಾಯ್ಡ ಕಲ್ಪಿಸಿದ ಮಾನಸಿಕ ಸಂರಚನೆ (Mental Constracts) ಗಳಾಗಿವೆ. ಮನಸ್ಸಿನ ಪದರಗಳ ಈ ಕಲ್ಪನೆಯನ್ನು ಸಮುದ್ರದಲ್ಲಿ ಮುಳುಗಿರುವ ಹಿಮಖಂಡಕ್ಕೆ (Iceburg) ಹೋಲಿಸಬಹುದು. ಅದರ ಸ್ವಲ್ಪ ಭಾಗ ಮಾತ್ರ ಗೋಚರವಾಗುತ್ತದೆ. ಉಳಿದ ಬಹುಭಾಗ ಮುಳುಗಿದ್ದು ಹಡಗುಗಳಿಗೆ ಅಪಾಯವುಂಟು ಮಾಡುತ್ತದೆ. ಇದೇ ರೀತಿ ಮನಸ್ಸಿನ ಸ್ವಲ್ಪ ಭಾಗ ಅರಿವಿಗೆ ನಿಲುಕಿ, ಉಳಿದ ಬಹುಭಾಗ ಅರಿವಿಗೆ ನಿಲುಕುವುದಿಲ್ಲ. ಆದರೆ ಈ ಭಾಗವೇ ಮನುಷ್ಯನ ವರ್ತನೆಗಳನ್ನು ನಿಯಂತ್ರಿಸುತ್ತದೆ ಎಂದು ಫ್ರಾಯ್ಡ್ ಹೇಳುತ್ತಾನೆ.

**ವ್ಯಕ್ತಿತ್ವದ ಸಂರಚನೆ:**

ಆಗ ತಾನೆ ಜನ್ಮ ಪಡೆದ ಮಾನವ ಶಿಶು ಪೂರ್ಣತಃ, ಜೈವಿಕ ಸ್ವರೂಪದ್ದಾಗಿರುತ್ತದೆ. ಕೇವಲ ಜೈವಿಕ ಪ್ರೇರಣೆಗಳನ್ನು, ಅಗತ್ಯಗಳನ್ನು ಹೊಂದಿರುತ್ತದೆ. ಈ ಅಗತ್ಯಗಳ ಪೂರೈಕೆಯಿಂದ ಸುಖವನ್ನು ಪಡೆದುಕೊಂಡು ದೈಹಿಕವಾಗಿ ಸಮತೋಲಿತವಾಗುತ್ತದೆ, ಈ ಸ್ಥಿತಿಯಲ್ಲಿ ಮಗುವಿಗೆ ಬೇಕು–ಬೇಡಗಳ ವಿವೇಚನೆ ಇರುವುದಿಲ್ಲ. ಇದು ವ್ಯಕ್ತಿತ್ವ ಸಂರಚನೆಯ ಮಟ್ಟದ ಮೊದಲಿನ ಭಾಗ. ಫ್ರಾಯ್ಡ್ ಇದನ್ನು ಇದ್ (Idd) ಎಂದು ಕರೆದಿದ್ದಾನೆ. 'ಇದ್' ಪೂರ್ಣತಃ ಸುಪ್ತಚೇತನಾವಸ್ಥೆಯ ಮಟ್ಟದಲ್ಲಿರುತ್ತದೆ. ಇದು ಸುಖಾಪೇಕ್ಷೆಯ (Plesure Principle) ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ. ಜೈವಿಕ ಬೇಡಿಕೆಗಳಿಂದ (ಹಸಿವು ಇತ್ಯಾದಿ) ದೈಹಿಕ ಅಸಂತುಲಿತ ಸ್ಥಿತಿ ಉಂಟಾದಾಗ ಇದ್ ಸಕ್ರಿಯವಾಗಿ ಚಟುವಟಿಕೆಯಲ್ಲಿ ತೊಡಗಿ ತನ್ನ ಬೇಡಿಕೆಗಳನ್ನು ನೇರವಾಗಿ, ತತ್‌ಕ್ಷಣದಲ್ಲಿ ತೃಪ್ತಿ ಪಡಿಸಿಕೊಳ್ಳುತ್ತದೆ. ಈ ಕ್ರಿಯೆಯನ್ನು ಪ್ರಾಥಮಿಕ ಪ್ರಕ್ರಿಯೆ (Primary Principle) ಎಂದು ಕರೆಯಲಾಗಿದೆ. ಶೈಶವಾವಸ್ಥೆಯಲ್ಲಿ ಈ ಬೇಡಿಕೆಗಳ ತೃಪ್ತಿ, ಪೋಷಕರಿಂದ ನೇರವಾಗಿ ದೊರೆಯುತ್ತದೆ. ಆದರೆ ಬೆಳವಣಿಗೆ ಮುಂದುವರಿದಂತೆ ಹೊರಗಣ ಪರಿಸರದಿಂದ ಮುಖ್ಯವಾಗಿ ಸಾಮಾಜಿಕ ಪರಿಸರದಿಂದ ಅಡೆತಡೆಗಳು ಉಂಟಾಗುತ್ತವೆ. 'ಇದ್'ಗೆ ನೇರವಾದ ತತ್‌ಕ್ಷಣದ ತೃಪ್ತಿ ದೊರೆಯುವುದು ಕ್ರಮೇಣ ಕಷ್ಟವಾಗುತ್ತದೆ. ಆಗ ವ್ಯಕ್ತಿತ್ವದ ಮತ್ತೊಂದು ಭಾಗ ವಿಕಾಸಗೊಳ್ಳುತ್ತದೆ. ಇದನ್ನು 'ಅಹಂ' (ಈಗೋ) ಎನ್ನುತ್ತಾರೆ. 'ಅಹಂ' ಸಹ ಸುಖಾಪೇಕ್ಷೆಯಾದರೂ ಅದು ಸಮಾಜಕ್ಕೆ (ಪರಿಸರಕ್ಕೆ) ಹೊಂದಿಕೊಳ್ಳುವ ವಿವೇಚನೆಯನ್ನು ಹೊಂದಿದೆ. ಆದ್ದರಿಂದ ಅದು ವಾಸ್ತವಿಕತೆಯ ತತ್ವದ (Reality Principle) ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಅಂದರೆ ಇದ್‌ನ ಬೇಡಿಕೆಗಳು ಉದ್ಭವಿಸಿದಾಗ ಹೊರಗಣ ವಾಸ್ತವಿಕ ಪರಿಸ್ಥಿತಿಯನ್ನು ಪರೀಕ್ಷಿಸಿ ಸಾಧ್ಯವಿದ್ದಲ್ಲಿ ನೇರವಾಗಿಯೇ ತತ್‌ಕ್ಷಣದಲ್ಲಿಯೇ ತೃಪ್ತಿಪಡಿಸಲು ಈಗೋ ಪ್ರಯತ್ನಿಸುತ್ತದೆ. ಹಾಗೆ ಸಾಧ್ಯವಿಲ್ಲದಿದ್ದಲ್ಲಿ ಪರೋಕ್ಷವಾಗಿ, ಸಾಂಕೇತಿಕವಾಗಿ ತೃಪ್ತಿಪಡಿಸಲು ಅಥವಾ ಅದನ್ನು ಮುಂದೂಡಲು ಕಾರ್ಯ ಪ್ರವೃತ್ತವಾಗುತ್ತದೆ. ಇದನ್ನು ಆನುಷಂಗಿಕ ಪ್ರಕ್ರಿಯೆ(Secondary Process) ಎಂದು ಕರೆಯಲಾಗಿದೆ. ಈ ಪ್ರಕ್ರಿಯೆಗೆ ವಾಸ್ತವಿಕತೆಯ ಪರೀಕ್ಷೆ (Reality Testing) ಎಂದು ಹೆಸರು. ಅಹಂ ಇದ್‌ನ ಬೇಡಿಕೆಗಳಿಗೂ, ಸಾಮಾಜಿಕ ಬೇಡಿಕೆಗಳಿಗೂ ಹೊಂದಾಣಿಕೆ ಮಾಡಬೇಕಾಗುತ್ತದೆ. ಹೀಗೆ ಇವೆರಡರ ನಡುವೆ ದ್ವಂದ್ವ ಉಂಟಾದಾಗ ಆತಂಕ ಸ್ಥಿತಿ ಉಂಟಾಗುತ್ತದೆ. ಈ ಆತಂಕವನ್ನು ಕಡಿಮೆ ಮಾಡಿಕೊಳ್ಳಲು, ಅಗತ್ಯಗಳನ್ನು ಪೂರೈಸಿಕೊಳ್ಳಲು ಅಹಂ ಅನೇಕ ತಂತ್ರಗಳನ್ನು ರೂಪಿಸಿಕೊಂಡು ತನ್ನ ಆತಂಕ ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತದೆ.

Digitised by Bharatavani, CIIL

ಈ ಆತಂಕ ಸಂಪೂರ್ಣವಾಗಿ ನಿವಾರಣೆಯಾಗುವುದಿಲ್ಲ. ಏಕೆಂದರೆ ಮಾನವನ ಬಯಕೆಗಳ ಸಂಪೂರ್ಣವಾಗಿ ತೃಪ್ತಿಯಾಗುವುದಿಲ್ಲ. ಹೀಗಾಗಿ ಬಯಕೆಗಳು ತೃಪ್ತಿಯಾದರೂ ಸ್ವಲ್ಪ ಆತಂಕ ಸ್ಥಿತಿ ಅಧೀರತೆ, ಅಶಾಂತಿ ರೂಪದಲ್ಲಿ ವ್ಯಕ್ತವಾಗುತ್ತದೆ. ಈ ಸ್ಥಿತಿ ನಾಗರೀಕತೆಗಾಗಿ ಮಾನವ ಕೊಟ್ಟ ಬೆಲೆಯಾಗಿದೆ ಎಂದು ಫ್ರಾಯ್ಡ್ ಹೇಳುತ್ತಾನೆ. ಅಹಂನ ಈ ತಂತ್ರಗಳಿಗೆ ಮಾನಸಿಕ ತಂತ್ರಗಳು (Mental Mechanisms) ಅಥವಾ ಅಹಂ ರಕ್ಷಣಾ ತಂತ್ರಗಳು (Ego-Defence Mechanisms) ಎಂದು ಹೆಸರು. ಫ್ರಾಯ್ಡ್ ಈ ರೀತಿಯ ಅನೇಕ ತಂತ್ರಗಳನ್ನು ವಿವರಿಸಿದ್ದಾನೆ. ಇವುಗಳಲ್ಲಿ ಕೆಲವು ಪಲಾಯನ ಸ್ವರೂಪದವುಗಳು, ಕೆಲವು ರಕ್ಷಣಾತ್ಮಕವಾದವುದು. ಇನ್ನು ಕೆಲವು ಸಾಂಕೇತಿಕ ಸ್ವರೂಪದವುಗಳಾಗಿವೆ. ಅತೃಪ್ತ ಬಯಕೆಯನ್ನು ದಮನ ಮಾಡುವುದು, ಬೇರೆಯವರಿಗೆ ದೋಷ ಆರೋಪಿಸುವುದು, ಆಕ್ರಮಣ, ವ್ಯಕ್ತಿತ್ವದ ಮಿತಿಯನ್ನು ಸಾಂಕೇತಿಕವಾಗಿ ನಿವಾರಿಸಿಕೊಳ್ಳುವುದು, ಬಾಲಿಶ ವರ್ತನೆಗೆ ಮರಳುವುದು, ತನ್ನನ್ನೇ ದಂಡಿಸಿಕೊಳ್ಳುವುದು, ಸಾಮಾಜಿಕ ಸಮ್ಮತವಾದ ರಚನಾತ್ಮಕ ಕ್ರಿಯೆಯಲ್ಲಿ ತೊಡಗುವುದು – ಇವು ಮಾನಸಿಕ ತಂತ್ರಗಳ ವಿಧಗಳಾಗಿವೆ. (ಮಾನಸಿಕ ತಂತ್ರಗಳ ಪರಿಕಲ್ಪನೆಗಳು ಮತ್ತು ವಿವರಗಳಿಗೆ ಮೊದಲನೇ ಸಂಪುಟದ 'ಮಾನಸಿಕ ತಂತ್ರಗಳು' ಲೇಖನ ಓದಿ). ಅಹಂ ಸಹ ಸುಖಾಪೇಕ್ಷೆಯಾದುದರಿಂದ ಅದು ತನಗೆ ಇಷ್ಟವಾದುದನ್ನೇ ಮಾಡಲು ಪ್ರಯತ್ನಿಸುತ್ತದೆ. ಅದು ಒಳಿತು–ಕೆಟ್ಟದ್ದು ಎಂಬುದನ್ನು ಹೊಗಳಿಕೆ, ತೆಗಳಿಕೆ, ದಂಡನೆ ಮಾನದಂಡದಿಂದ ಗುರ್ತಿಸುತ್ತದೆ. ಪೂರ್ವ–ಬಾಲ್ಯಾವಸ್ಥೆಯವರೆಗೂ ಈ ಸ್ಥಿತಿ ಇರುತ್ತದೆ.

ಉತ್ತರ ಬಾಲ್ಯಾವಸ್ಥೆ ಆರಂಭವಾಗಿ ತಾರುಣ್ಯಾವಸ್ಥೆಗೆ ಬರುವುದರಲ್ಲಿ ವ್ಯಕ್ತಿತ್ವದ ಮೂರನೆಯ ಭಾಗ ಉದ್ಭವವಾಗುತ್ತದೆ. ಇದೇ ಅಧಿ ಅಹಂ (Super Ego). ಇದು ಮಾನವನ ಮನಸ್ಸಿನ ನೈತಿಕ ಭಾಗವನ್ನು ಪ್ರತಿನಿಧಿಸುತ್ತದೆ. ಇದರ ಬಹುಭಾಗ ಚೇತನಾವಸ್ಥೆಯಲ್ಲಿದ್ದರೂ ಸ್ವಲ್ಪ ಭಾಗ ಸುಪ್ತಚೇತನದಲ್ಲಿರುತ್ತದೆ. ವ್ಯಕ್ತಿ ಬೆಳೆದಂತೆಲ್ಲಾ ಪೋಷಕರ ಮಾರ್ಗದರ್ಶನದಿಂದ, ಬೇಕು–ಬೇಡಗಳ ವ್ಯತ್ಯಾಸದ ಅರಿವಿನಿಂದ, ಪಡೆಯುವ ಬಹುಮಾನ–ದಂಡನೆಗಳಿಂದ ವಿವೇಚನೆ ಬೆಳೆದು ನೈತಿಕ ವಿಕಾಸವಾಗುತ್ತದೆ.(ಈ ಸಂಪುಟದ 'ನೈತಿಕ ವಿಕಾಸದ ಸಿದ್ಧಾಂತಗಳು' ಲೇಖನ ನೋಡಿ) ವ್ಯಕ್ತಿ ಹೊರಗಣ ನೈತಿಕ ನಿಯಮಗಳನ್ನು ತನ್ನಲ್ಲೇ ಅಂತರೀಕರಣ (Introjection) ಮಾಡಿಕೊಳ್ಳುವುದರಿಂದ ಮನಸ್ಸಿನಲ್ಲಿ ಒಂದು ನೈತಿಕ ಪ್ರಾಧಿಕಾರ (Moral Authority) ರೂಪಕೊಂಡು ವಿವೇಕ (Conscienc) ಮೂಡಿಬರುತ್ತದೆ. ಇದೇ ಅಧಿ–ಅಹಂ. ಇದು ವ್ಯಕ್ತಿಯಲ್ಲಿದ್ದುಕೊಂಡು ಇದ್ ಮತ್ತು ಅಹಂಗಳನ್ನು ನಿಯಂತ್ರಿಸುವುದರ ಮೂಲಕ ವರ್ತನೆಯನ್ನು ನಿಯಂತ್ರಿಸುತ್ತದೆ. ಈ ಅಹಂ ಇದ್ ಮತ್ತು ಅಹಂನ ನಡುವಣ, ಅಧಿ ಅಹಂ–ಇದ್‌ನ ನಡುವಣ ದ್ವಂದ್ವಗಳನ್ನು ನಿಭಾಯಿಸಬೇಕಾಗುತ್ತದೆ. ಅಧಿ–ಅಹಂ ಸ್ವರೂಪ ವ್ಯಕ್ತಿ ಬೆಳೆಯುತ್ತಿರುವ ನೈತಿಕ ನಿಯಮಗಳನ್ನು ಆಧರಿಸಿರುತ್ತದೆ. ಅಧಿ–ಅಹಂ ವ್ಯಕ್ತಿ ಸಮಾಜಿಕ ವ್ಯವಸ್ಥೆಗೆ, ನೈತಿಕ ನಿಯಮಗಳಿಗೆ ಅನುಗುಣವಾಗಿ ವರ್ತಿಸಲು ಮಾರ್ಗದರ್ಶನ ಮಾಡುತ್ತದೆ. ಅಧಿ–ಅಹಂ ಸುಸ್ಪಷ್ಟ ಆದೇಶಗಳ (Categorical Imperative) ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ. ಇದು ಸಾಮಾನ್ಯವಾಗಿ ಅಹಂ ಇದ್‌ನೊಂದಿಗೆ, ತನ್ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ನೀಡುವುದಿಲ್ಲ.

**ವಿಕಾಸದ ಮನೋ–ಲೈಂಗಿಕ ಹಂತಗಳು:** ವ್ಯಕ್ತಿತ್ವ ಶೈಶವಾವಸ್ಥೆಯಿಂದ ಬಾಲ್ಯಾವಸ್ಥೆಯಿಂದ ಕಿಶೋರಾವಸ್ಥೆಗೆ, ಕಿಶೋರಾವಸ್ಥೆಯಿಂದ ವಯಸ್ಕಾವಸ್ಥೆಗೆ ಅಗತ್ಯಗಳ ತೃಪ್ತಿಯ ನಿರ್ದಿಷ್ಟ ವಿಧಗಳ ಮೂಲಕ ನಿರ್ದಿಷ್ಟ ಹಂತಗಳಲ್ಲಿ ವಿಕಾಸ ಹೊಂದುತ್ತದೆ. ಪ್ರತಿಯೊಂದು ಹಂತದಲ್ಲೂ ಲಿಬಿಡೋ ದೇಹದ ನಿರ್ದಿಷ್ಟ ಅಂಗದೊಂದಿಗೆ ಸಂಲಗ್ನಗೊಂಡು ನಿರ್ದಿಷ್ಟ ವರ್ತನೆಗಳ ರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಲಿಬಿಡೋ ಲೈಂಗಿಕ ಸ್ವರೂಪವಾದ್ದಾಗಿರುವುದರಿಂದ ಫ್ರಾಯ್ಡ್ ಈ ವಿಕಾಸದ ಹಂತಗಳನ್ನು ಮನೋ ಲೈಂಗಿಕ (Psycho-Sexual) ಹಂತಗಳೆಂದು ಕರೆದಿದ್ದಾನೆ. ಈ ರೀತಿ ಲಿಬಿಡೋವಿನ ಶಕ್ತಿ ಒಂದು ವಸ್ತುವಿಗೆ/ಅಂಗಕ್ಕೆ/ಚಟುವಟಿಕೆಗೆ ಸಂಲಗ್ನಗೊಳ್ಳುವುದನ್ನು (Getting Attached) 'ಕೆಥೆಕ್ಸಿಸ್' ಎಂದು ಹೇಳಲಾಗಿದೆ.ವ್ಯಕ್ತಿ ವಿಕಾಸದ ಪ್ರತಿ ಹಂತದಲ್ಲಿ ಲಿಬಿಡೋ ನಿರ್ದಿಷ್ಟ ಅಂಗಕ್ಕೆ ಸಂಲಗ್ನಗೊಂಡು ಆ ಅಂಗಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೃಪ್ತಿಪಡೆಯುತ್ತವೆ. ಪರಿಣಾಮವಾಗಿ ವ್ಯಕ್ತಿತ್ವದ ಕೆಲವು ಲಕ್ಷಣಗಳು ಮೂಡುತ್ತವೆ. ವ್ಯಕ್ತಿ ಬೆಳೆದಂತೆ ಲಿಬಿಡೋ ಮುಂದಿನ ಅಂಗಕ್ಕೆ ಪಲ್ಲಟಗೊಂಡು ಅದರಲ್ಲಿ ಸಂಲಗ್ನಗೊಳ್ಳುತ್ತದೆ. ಕೆಲವು ವೇಳೆ ಲಿಬಿಡೋ ಈ ರೀತಿ ಪಲ್ಲಟಗೊಳ್ಳದೆ ಅದೇ ಅಂಗದಲ್ಲಿ ನಿಂತು ಬಿಡುತ್ತದೆ. ದೈಹಿಕ ಬೆಳವಣಿಗೆ ಮುಂದುವರಿದರೂ ಮಾನಸಿಕವಾಗಿ ವ್ಯಕ್ತಿ ಆ ಹಂತದಲ್ಲಿಯೇ ಉಳಿದುಬಿಡುತ್ತಾನೆ. ಈ ಸ್ಥಿತಿಗೆ ಸ್ಥಿರೀಕರಣ (Fixation) ಎಂದು ಹೆಸರು. ಹೀಗಾದಾಗ ಕೆಲವು ಅನಪೇಕ್ಷಣೀಯ ವ್ಯಕ್ತಿತ್ವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮನೋ–ಲೈಂಗಿಕ ಹಂತಗಳು ಹೀಗಿವೆ.–

1. **ಮೌಖಿಕ ಹಂತ (Oral Stage):** ಈ ಹಂತ ಹುಟ್ಟಿನಿಂದ ಒಂದು ವರ್ಷದವರೆಗೆ ಇರುತ್ತದೆ. ಈ ಹಂತದಲ್ಲಿ ಲಿಬಿಡೋ ಮೌಖಿಕ ಚಟುವಟಿಕೆಗಳಿಗೆ (ಚೀರುವುದು, ನುಂಗುವುದು) ಸಂಲಗ್ನಗೊಳ್ಳುತ್ತದೆ. ಮಗು ಈ ಕ್ರಿಯೆಗಳ ಮೂಲಕ ತೃಪ್ತಿ ಪಡೆಯುತ್ತದೆ. ಈ ಪ್ರಕ್ರಿಯೆ ಮಗುವಿನ ಬೆಳವಣಿಗೆಗೂ ಸಹಾಯಕವಾಗುತ್ತದೆ. ಈ ಹಂತದಲ್ಲಿ ಸ್ಥಿರೀಕರಣ ಉಂಟಾದರೆ ವಯಸ್ಕಾವಸ್ಥೆಯಲ್ಲಿ ಉಗುರು ಕಚ್ಚುವುದು, ಧೂಮಪಾನ, ಅತಿಯಾಗಿ ತಿನ್ನುವುದು, ಮುಂತಾದ ಲಕ್ಷಣಗಳು ತಲೆದೋರುತ್ತವೆ. ಮೌಖಿಕ ಚಟುವಟಿಕೆಗಳ್ಲಿ ಸಹಜವಾದ ಆಸಕ್ತಿ ಸಾಮಾನ್ಯವಾಗಿ ಎಲ್ಲರಲ್ಲೂ ಉಳಿದಿರುತ್ತದೆ.

2. **ಗುದ ಹಂತ (Anal Stage):** ಈ ಹಂತ 1ರಿಂದ 3 ವರ್ಷದವರೆಗಿರುತ್ತದೆ. ಈ ಅವಧಿಯಲ್ಲಿ ಲಿಬಿಡೋ ಮಲ ವಿಸರ್ಜನೆಯ ಅಂಗದೊಂದಿಗೆ (ಗುದ) ಸಂಲಗ್ನಗೊಂಡು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳ ಮೂಲಕ ತೃಪ್ತಿ ಪಡೆಯುತ್ತದೆ. ಈ ವಯಸ್ಸಿನ ಮಕ್ಕಳು ಮಲ–ಮೂತ್ರ ವಿಸರ್ಜನೆಯಲ್ಲಿ ಖುಷಿಪಡುವುದು ಸರ್ವೇಸಾಮಾನ್ಯ. ಈ ಹಂತದಲ್ಲಿ ತಂದೆ–ತಾಯಿ ಮಲ–ಮೂತ್ರ

Digitised by Bharatavani, CIIL

ವಿಸರ್ಜನೆಯಲ್ಲಿ ನಿಯಂತ್ರಣವನ್ನು ಕಲಿಸಲು ಪ್ರಸಾಧನ ತರಬೇತಿ (Toilet Training) ಆರಂಭಿಸುವುದರಿಂದ ಮಗುವಿನ ತೃಪ್ತಿಗೆ ಅಡಚಣೆ ಉಂಟಾಗಿ ಹಠಮಾರಿತನ, ಮಲ–ಮೂತ್ರ ವಿಸರ್ಜನೆ ತಡೆಹಿಡಿಯುವುದು, ಹಾಸಿಗೆಯಲ್ಲಿಯೇ ಮಲ ಮೂತ್ರ ವಿಸರ್ಜನೆ ಮಾಡುವುದು ಮುಂತಾದ ಸಮಸ್ಯೆಗಳು ಉಂಟಾಗುತ್ತವೆ. ಈ ಹಂತದಲ್ಲಿ ಸ್ಥಿರೀಕರಣ ಉಂಟಾದರೆ ವ್ಯಕ್ತಿತ್ವದಲ್ಲಿ ವಾಚಾಳಿತನ, ಜಿಪುಣತನ, ಸಂಗ್ರಹ ಪ್ರವೃತ್ತಿ, ಅತಿಯಾಗಿ ವ್ಯವಸ್ಥೆಗೆ ಗಮನ ನೀಡುವುದು ಮುಂತಾದ ಲಕ್ಷಣಗಳು ಮೂಡುತ್ತವೆ.

3. **ಲಿಂಗ ಹಂತ (Phallic Stage):** ಈ ಹಂತದಲ್ಲಿ ಲಿಬಿಡೋ ಲಿಂಗ ಸ್ಥಾನಕ್ಕೆ ಮತ್ತು ಇತರ ಕಾಮೋತ್ತೇಜಕ ಸ್ಥಾನಗಳಿಗೆ ಪಲ್ಲಟಗೊಳಗಾಗುತ್ತದೆ. ಹುಡುಗರು ಲಿಂಗವನ್ನು, ಹುಡುಗಿಯರು ಯೋನಿಯನ್ನು ಪ್ರಚೋದಿಸಿಕೊಂಡು ಆನಂದ ಪಡೆಯುತ್ತಾರೆ. ಈ ಹಂತದಲ್ಲಿ ವಿರುದ್ಧ ಲಿಂಗದ ಪೋಷಕರ (ತಂದೆ ಅಥವಾ ತಾಯಿ) ಕಡೆಗೆ ತೀವ್ರವಾಗಿ ಆಕರ್ಷಿತರಾಗುತ್ತಾರೆ. ಹುಡುಗ (ಮಗ) ತಾಯಿಯ ಗಮನವನ್ನು, ಹುಡುಗಿ (ಮಗಳು) ತಂದೆಯ ಗಮನವನ್ನು ಪಡೆಯಲು ಅಪ್ರಜ್ಞಾಪೂರ್ವಕವಾಗಿ ಆಶಿಸುತ್ತಾರೆ. ತಂದೆ–ತಾಯಿ ಒಟ್ಟಿಗಿರುವುದನ್ನು ನೋಡಿ ಅಸೂಯೆ ಉಂಟಾಗುತ್ತದೆ. ಇದು ಸುಪ್ತಚೇತನದ ಈಡಿಪಸ್ (ಹುಡುಗಿಯರಲ್ಲಿ ಎಲೆಕ್ಟ್ರಾ) ಮನೋಗ್ರಂಥಿಯ ಪ್ರೇರಣೆಯಿಂದ ಆಗುತ್ತದೆ ಎಂದು ಫ್ರಾಯ್ಡ್ ಹೇಳುತ್ತಾನೆ. (ಗ್ರೀಕ್ ಪುರಾಣದಲ್ಲಿ ಈಡಿಪಸ್ ಅರಿವಿಲ್ಲದೆ ತನ್ನ ತಂದೆತಾಯಿಯೊಂದಿಗೆ ಮದುವೆಯಾಗುವುದು, ಎಲೆಕ್ಟ್ರಾ ಎಂಬುವಳು ಅರಿವಿಲ್ಲದೆ ತನ್ನ ತಂದೆಯೊಂದಿಗೆ ಲೈಂಗಿಕ ಸಂಬಂಧ ಹೊಂದುವ ಕಥೆಗಳಿಂದ ಫ್ರಾಯ್ಡ್ ಈ ಪದಗಳನ್ನು ತೆಗೆದುಕೊಂಡಿದ್ದಾನೆ). ಆದರೆ ಇದು ಸಮಾಜ ಸಮ್ಮತವಾದುದಲ್ಲದುದರಿಂದ ಹುಡುಗ, ಹುಡುಗಿಯಲ್ಲಿ ದ್ವಂದ್ವ ಉಂಟಾಗುತ್ತದೆ. ಈ ಅವಧಿಯಲ್ಲಿ ಈ ದ್ವಂದ್ವವನ್ನು ಪರಿಹರಿಸಿಕೊಳ್ಳಬೇಕು. ಪೋಷಕರೂ ಇದಕ್ಕೆ ನೆರವಾಗದಿದ್ದರೆ ಈ ದ್ವಂದ್ವ ಪರಿಹಾರವಾಗದೆ, ಸ್ಥಿರೀಕರಣ ಉಂಟಾದರೆ ತಂದೆ–ಮಗನ ನಡುವೆ, ತಾಯಿ–ಮಗಳ ನಡುವೆ ಹೊಂದಾಣಿಕೆ ಇಲ್ಲದಂತಾಗಬಹುದು. ಈ ಹಂತದಲ್ಲಿಯೇ ಹುಡುಗನನ್ನು ತನ್ನ ಶಿಶ್ನದ ಶಕ್ತಿಯನ್ನು ಕಳೆದುಕೊಳ್ಳುವ ಭಯ (ಕ್ಯಾಸ್ಟ್ರೇಷನ್ ಕಾಂಪ್ಲೆಕ್ಸ್) ಮತ್ತು ಹುಡುಗಿಯಲ್ಲಿ ತನಗೆ ಹುಡುಗನಿಗಿರುವ ಶಿಶ್ನವಿಲ್ಲದಿರುವಿಕೆಗೆ ಅಸೂಯೆ (ಪ್ರೀನಿಸ್ ಎನ್ವಿ) ಅಪ್ರಜ್ಞಾಪೂರ್ವಕವಾಗಿ ಕಾಡುತ್ತವೆ. ಆದೆ ಈ ಸಮಸ್ಯೆಗಳು ಬೆಳವಣಿಗೆ ಮುಂದುವರಿದಂತೆ ನಿವಾರಣೆಗೊಳ್ಳುತ್ತವೆ.

ಮೇಲಿನ ನಾಲ್ಕು ಹಂತಗಳನ್ನು ಒಟ್ಟಾಗಿ ಸೇರಿಸಿ ಲೈಂಗಿಕ ಪೂರ್ವ ಹಂತ (Pre-genital Stage) ಎಂದು ಕರೆಯಲಾಗಿದೆ.ಈ ಅವಧಿಯಲ್ಲಿ ಮಗುವಿಗೆ ಸ್ವಾರ್ಥತೆಯ ನಿಲುವಿದ್ದು ತನ್ನ ಬಗ್ಗೆಯೇ ಗಮನ ನೀಡುತ್ತದೆ. ಮಗು ಮಾನಸಿಕವಾಗಿ ಅಹಂ ಕೇಂದ್ರಿತ (Ego-Cenfic) ಮನೋಭಾವವನ್ನು ಹೊಂದಿರುತ್ತದೆ. ಸ್ವಪ್ರಶಂಸೆಯ ನಿಲುವನ್ನು ಹೊಂದಿರುತ್ತದೆ (ತನ್ನ ಸೌಂದರ್ಯದಲ್ಲೇ ತಲ್ಲೀನನಾಗಿದ್ದ ಗ್ರೀಕ್ ಪುರಾಣದ ನಾರ್ಸಿಸಸ್ ಎಂಬ ರಾಜಕುಮಾರನಂತೆ).

**ಸುಪ್ತತೆಯ ಹಂತ (Latency Peroid):** 5ರಿಂದ 12 ವರ್ಷಗಳವರೆಗಿನ ಈ ಅವಧಿಯಲ್ಲಿ ಲಿಬಿಡೋ ಸುಪ್ತವಾಗಿರುತ್ತದೆ. ಲೈಂಗಿಕ ಆಸಕ್ತಿ ತಾತ್ಕಾಲಿಕವಾಗಿ ಸ್ಥಗಿತಗೊಳ್ಳುತ್ತದೆ. ಸಾಮಾಜೀಕರಣ ಪ್ರಕ್ರಿಯೆ (Socialifation) ಆಗಲೇ ಆರಂಭವಾಗಿರುವುದರಿಂದ ಮಗುವಿನ ಆಸಕ್ತಿಗಳು ವಿಸ್ತರಿಸತೊಡಗುತ್ತವೆ. ಕ್ರೀಡೆ, ಆಟಗಳ ಮೂಲಕ ಲೈಂಗಿಕ ಪ್ರೇರಣೆ ಉದಾತ್ತೀಕರಣಕೊಂಡು ಸಮಾಜ ಸಮ್ಮತವಾದ ರಚನಾತ್ಮಕ ಚಟುಟಿಕೆಗಳ ಮೂಲಕ ವ್ಯಕ್ತವಾಗತೊಡಗುತ್ತದೆ.

**ಲೈಂಗಿಕ ಹಂತ:** ಈ ಹಂತ 12 ರಿಂದ 18 ಮತ್ತು ಮುಂದಕ್ಕೆ ಇರುತ್ತದೆ. ಹುಡುಗ, ಹುಡುಗಿಯರಲ್ಲಿ ಜೈವಿಕ ಪರಿಪಕ್ವತೆಯ ಪರಿಣಾಮವಾಗಿ, ಹಾರ್ಮೋನುಗಳ ಪ್ರಭಾವದಿಂದ ಲೈಂಗಿಕ ಅಂಗಗಳು ಪಕ್ವಗೊಂಡು, ಆನುಷಂಗಿಕ ಲೈಂಗಿಕ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಹುಡುಗ, ಹುಡುಗಿಯರಲ್ಲಿ ಪ್ರತಿ–ಲಿಂಗೀಯ ಆಕರ್ಷಣೆ (Hetero-sexual Attraction) ಉಂಟಾಗತೊಡಗುತ್ತದೆ. ಸಹಜವಾದ ಸ್ತ್ರೀ–ಪುರುಷ ಲೈಂಗಿಕ ಸಂಬಂಧಕ್ಕೆ ಹುಡುಗ–ಹುಡುಗಿ ಜೈವಿಕವಾಗಿ, ಮಾನಸಿಕವಾಗಿ ಸಿದ್ಧರಾಗುತ್ತಾರೆ. ಪೋಷಕರ ಮಾರ್ಗದರ್ಶನವೂ ಇದಕ್ಕೆ ಸಹಾಯ ಮಾಡುತ್ತಾರೆ. ಈ ಅವಧಿಯಲ್ಲಿ ಮಾನಸಿಕವಾಗಿ ದ್ವಂದ್ವಗಳು, ಆಶಾಭಂಗಗಳು, ಅಸಜವಾದ ಲೈಂಗಿಕ ಸಮಸ್ಯೆಗಳು (ಮುಷ್ಟಿ ಮೈಥುನ, ಗುದ ರತಿ, ಸಲಿಂಗ ರತಿ, ನಪುಂಸಕತೆ ಮುಂತಾದವು) ಕಾಣಿಸಿಕೊಳ್ಳಬಹುದು.

ವ್ಯಕ್ತಿ ತನ್ನ ಬೇಡಿಕೆಗಳಿಗೂ, ಸಮಾಜದ, ಪರಿಸರದ ಬೇಡಿಕೆಗಳಿಗೂ ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆಯೇ ಸಮಾಯೋಜನೆ (Adjustment), ಫ್ರಾಯ್ಡ್‌ನ ಪ್ರಕಾರ ವ್ಯಕ್ತಿ ಇದ್ ಮತ್ತು ಸೂಪರ್ ಈಗೋಗಳ ಬೇಡಿಕೆಗಳು, ಅಹಂ (ಈಗೋ) ಅವುಗಳನ್ನು ತೃಪ್ತಿಗೊಳಿಸಲು ಮಾಡುವ ಪ್ರಯತ್ನಗಳಿಗೂ ಮತ್ತು ಸಮಾಜದ ಸಾಮಾಜಿಕ ಹಾಗೂ ನೈತಿಕ ನಿಯಮಗಳಿಗೂ ಹೊಂದಾಣಿಕೆ ಮಾಡಿಕೊಳ್ಳುವುದೇ ಸಮಾಯೋಜನೆ. ಇದ್ ಮತ್ತು ಸೂಪರ್ ಈಗೋ ನಡುವೆ, ಈಗೋ–ಇದ್ ನಡುವೆ ಮತ್ತು ಈಗೂ–ಸೂಪರ್ ಈಗೋ ನಡುವೆ ಉಂಟಾಗುವ ಸಂಘರ್ಷಗಳಿಂದ ಆತಂಕ ಸ್ಥಿತಿ, ದ್ವಂದ್ವ ಸ್ಥಿತಿ, ಉಂಟಾಗುತ್ತದೆ. ಹಾಗೆಯೇ ಸಾಮಾಜಿಕ ಒತ್ತಡದಿಂದಾಗಿ ದ್ವಂದ್ವಗಳು, ಆಶಾಭಂಗಗಳು ಉಂಟಾಗುತ್ತದೆ. ಆಗ ವ್ಯಕ್ತಿಯ ಮಾನಸಿಕ ಸಮತೋಲಿನ ಅಸ್ತವ್ಯಸ್ತಗೊಳ್ಳುತ್ತದೆ. ಈ ಸ್ಥಿತಿಯೇ ಅಪಸಮಾಯೋಜನೆ (Mal-adjustment). ಇದನ್ನು ನಿವಾರಿಸಿಕೊಳ್ಳಲು ಈಗೋ ಮಾನಸಿಕ ತಂತ್ರಗಳ ಮೂಲಿಕ, ವಾಸ್ತವಿಕ ಕಾರ್ಯೋನ್ಮುಖ (Task-Oriented) ಪ್ರಯತ್ನಗಳ ಮೂಲಕ ಪ್ರಯತ್ನಿಸುತ್ತದೆ. ಈ ಪ್ರಯತ್ನಗಳು ವಿಫಲವಾಗಿ ಒತ್ತಡ, ಆತಂಕ ಸ್ಥಿತಿ ಹೆಚ್ಚಾದಾಗ ಮನೋರೋಗಗಳು ಉಂಟಾಗುತ್ತವೆ. (ಮನೋರೋಗಗಳ ವಿವರಗಳಿಗೆ ಮೊದಲನೇ ಸಂಪುಟದಲ್ಲಿನ 'ಮನೋರೋಗಗಳು' ಲೇಖನ ನೋಡಿ)

ಫ್ರಾಯ್ಡ್ ಸುಪ್ತಚೇತನದ ಸ್ವರೂಪವನ್ನು, ಪ್ರೇರಣೆಗಳನ್ನು

Digitised by Bharatavani, CIIL

ಅಧ್ಯಯನ ಮಾಡಲು ಅನೇಕ ತಂತ್ರಗಳನ್ನು ಉಪಯೋಗಿಸಿದ್ದಲ್ಲದೆ ಸಮಾಯೋಜಿತ ವ್ಯಕ್ತಿಗಳಿಗೆ ಚಿಕಿತ್ಸೆ ನೀಡಲು ತನ್ನದೇ ಆದ ಚಿಕಿತ್ಸಾ ಕ್ರಮವನ್ನು ರೂಪಿಸಿದನು. ಈ ಮನೋಚಿಕಿತ್ಸೆಗೆ (Psycho-Therapy) ಮನೋವಿಶ್ಲೇಷಣ ತಂತ್ರ (Psycho-analytical Technique) ಎಂದು ಹೆಸರು. ವ್ಯಕ್ತಿ ಒಂದು ಮಲಗು–ಕುರ್ಚಿಯಲ್ಲಿ (Couch) ವಿಶ್ರಮಿಸುತ್ತಾ ತನ್ನ ಮನಸ್ಸಿನಲ್ಲಿ ಮುಕ್ತವಾಗಿ ಬರುವ ಯೋಚನೆಗಳನ್ನು ಹೇಳುವಂತೆ ಸೂಚಿಸಲಾಗುತ್ತದೆ. ಮಧ್ಯೆ–ಮಧ್ಯೆ ಚಿಕಿತ್ಸಕ ಸೂಚನೆಗಳನ್ನು ಕೊಡುತ್ತಾ ವ್ಯಕ್ತಿಯ ಮನೋಗ್ರಂಥಿಗಳನ್ನು, ಪ್ರೇರಣೆಗಳನ್ನು ತಿಳಿದುಕೊಂಡು ಅವುಗಳನ್ನು ವಿಶ್ಲೇಷಿಸಿ ಸಮಾಲೋಚನೆಯ ಮೂಲಕ ಸಹಾಯ ಮಾಡುತ್ತಾನೆ.

ಫ್ರಾಯ್ಡ್ ಸುಪ್ತಚೇತನದ ಪ್ರೇರಣೆಗಳನ್ನು ತಿಳಿದುಕೊಳ್ಳಲು ಮುಕ್ತ ಸಾಹಚರ್ಯ, ಕನಸುಗಳ ವಿಶ್ಲೇಷಣೆ, ವ್ಯಾಖ್ಯಾನದ ತಂತ್ರಗಳನ್ನು ಉಪಯೋಗಿಸಿದ್ದಾನೆ. ಮುಕ್ತ ಸಾಹಚರ್ಯದಲ್ಲಿ ಆಯ್ದ ಸಂವೇಗಾತ್ಮಕ ಪದಗಳಿಗೆ ತತ್‌ಕ್ಷಣದಲ್ಲಿ ಮನಸ್ಸಿಗೆ ಬರುವ ಪದಗಳನ್ನು ಹೇಳುವಂತೆ ಕೇಳಲಾಗುತ್ತದೆ. ಈ ಅನುಕ್ರಿಯೆಗಳನ್ನು ವಿಶ್ಲೇಷಿಸಲಾಗುತ್ತದೆ. ಸ್ವಪ್ನಗಳನ್ನು ದಾಖಲು ಮಾಡಿಕೊಂಡು ಅವುಗಳನ್ನು ಫ್ರಾಯ್ಡ್ ಸೂಚಿಸಿರುವ ಸಂಕೇತಗಳ ಮೂಲಕ ವಿಶ್ಲೇಷಿಸಿ ಅವುಗಳನ್ನು ವ್ಯಾಖ್ಯಾನಿಸಲಾಗುತ್ತದೆ. ತನ್ನ ಆರಂಭಿಕ ವರ್ಷಗಳಲ್ಲಿ ಫ್ರಾಯ್ಡ್ ಸಮ್ಮೋಹನಗೊಳಿಸುವ (Hypnosis) ತಂತ್ರವನ್ನೂ ಉಪಯೋಗಿಸುತ್ತಿದ್ದನು.

ಫ್ರಾಯ್ಡ್‌ನ ಅನೇಕ ಪರಿಕಲ್ಪನೆಗಳು, ತತ್ವಗಳು ಇಡಿಯಾಗಿ ಅವನ ಸಿದ್ಧಾಂತ ಮನೋವಿಜ್ಞಾನ ಕ್ಷೇತ್ರದಲ್ಲಿ ತೀವ್ರ ಟೀಕೆಗೆ ಒಳಗಾಯಿತು. ಸ್ವತಃ ಫ್ರಾಯ್ಡ್‌ನೇ ನಂತರದ ವರ್ಷಗಳಲ್ಲಿ ತನ್ನ ಸಿದ್ಧಾಂತಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡನು. ಅವನ ಬಹುತೇಕ ಪರಿಕಲ್ಪನೆಗಳು ಊಹಾತ್ಮಕ ಸಂರಚನೆ (construet) ಗಳಾಗಿರುವುದರಿಂದ ಅವುಗಳಿಗೆ ಪ್ರಾಯೋಗಿಕ ಆಧಾರವಿಲ್ಲವೆಂಬ ತೀವ್ರ ಟೀಕೆ ಇದೆ. ಎಲ್ಲಾ ವರ್ತನೆಗಳಿಗೂ ಸುಪ್ತಚೇತನ ಪ್ರೇರಣೆಗಳೇ ಕಾರಣ ಎಂಬ ಫ್ರಾಯ್ಡ್‌ನ ನಿಲುವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದರೆ ಅವನ ಸಿದ್ಧಾಂತ ಮನೋವೈಜ್ಞಾನಿಕ ಚಿಂತನೆಗಳ ಮೇಲೆ ತೀವ್ರ ಪ್ರಭಾವ ಬೀರಿತು ಎನ್ನುವುದು ನಿರ್ವಿವಾದ ತಥ್ಯವಾಗಿದೆ.

**ಯೂಂಗ್‌ನ ಸಿದ್ಧಾಂತ:**

ಕಾರ್ಲ್ ಗುಸ್ಟಾಫ್ ಯೂಂಗ್ (Jung) 1875ರಲ್ಲಿ ಸ್ವಿಡ್ವಜರ್‌ಲೆಂಡಿನಲ್ಲಿ ಲೂಥೇರಿಯನ್ ಕ್ರಿಶ್ಚಿಯನ್ ಕುಟುಂಬದಲ್ಲಿ ಜನಿಸಿದನು.ಅವನ ತಂದೆ – ತಾಯಿ ತೀವ್ರ ಧಾರ್ಮಿಕ ಸ್ವಭಾವದವರಾಗಿದ್ದುದು ಯೂಂಗ್ ಧರ್ಮ ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಆಸಕ್ತಿ ತಳೆಯುವಂತೆ ಮಾಡಿತು. ತನ್ನ ವೈದ್ಯಕೀಯ ಪದವಿಯನ್ನು ಪಡೆದ ನಂತರ ಯೂಂಗ್ ಮನೋವಿಜ್ಞಾನ ಮತ್ತು ಮನೋರೋಗ ಶಾಸ್ತ್ರದಲ್ಲಿ ಪರಿಣತಿ ಪಡೆಯಲು ನಿರ್ಧರಿಸಿದನು. ಜ್ಯೂರಿಚ್‌ನ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡಿದ ನಂತರ, ಪ್ರಸಿದ್ಧ ಮನೋಚಿಕಿತ್ಸಕನಾಗಿದ್ದ ಬ್ಲೂಯ್ಲರನೊಂದಿಗೆ ಕೆಲಸ ಮಾಡಿದನು. ಈ ಅವಧಿಯಲ್ಲಿಯೇ ಆಗಾಗಲೇ ಪ್ರತಿಪಾದಿತವಾಗಿದ್ದ ಫ್ರಾಯ್ಡ್‌ನ ಮನೋವಿಶ್ಲೇಷಣ ಸಿದ್ಧಾಂತದ ತೀವ್ರ ಪ್ರಭಾವಕ್ಕೆ ಒಳಗಾದನು. ಅವನ ಸಿದ್ಧಾಂತವನ್ನು ಯೂಂಗ್ ಎಷ್ಟು ಗಾಢವಾಗಿ ಸ್ವೀಕರಿಸಿದನೆಂದರೆ, ಅವನು ಫ್ರಾಯ್ಡ್‌ನ ಮೆಚ್ಚಿನ ಹಿಂಬಾಲಕನಾದನು. ಫ್ರಾಯ್ಡ್ ತನ್ನ ನಂತರ ಯೂಂಗನೇ ತನ್ನ ಪಂಥದ ಮುಂದಾಳು ಎಂದು ಹೇಳಿದ್ದನು. 1913ರಲ್ಲಿ ಯೂಂಗ್, ಜೂರಿಚ್ ವಿಶ್ವವಿದ್ಯಾನಿಲಯದಲ್ಲಿ ಬೋಧಕನಾಗಿ ಸೇರಿ ಕಡೆಯವರೆಗೂ ಅಲ್ಲಿ ಸೇವೆ ಸಲ್ಲಿಸುತ್ತಾ ತನ್ನ ಮನೋಚಿಕಿತ್ಸಕ ವೃತ್ತಿಯನ್ನು ಮುಂದುವರಿಸಿದನು. ಯೂಂಗ್ ತನ್ನ ಮುಂದುವರಿದ ಚಿಂತನೆಗಳ ಪರಿಣಾಮವಾಗಿ ಫ್ರಾಯ್ಡ್‌ನ ಕೆಲವು ನಿಲುವುಗಳನ್ನು ಪ್ರಶ್ನಿಸತೊಡಗಿದನು. 1912ರಲ್ಲಿ ಪ್ರಕಟಿಸಿದ ತನ್ನ Symbols of Trasformation ಎಂಬ ಪುಸ್ತಕದಲ್ಲಿ ಯೂಂಗ್ ಫ್ರಾಯ್ಡ್ ಹೇಳುವಂತೆ ಲಿಬಿಡೋ (ಮಾನಸಿಕ ಶಕ್ತಿ) ಲೈಂಗಿಕ ರೂಪದಲ್ಲವೆಂದೂ ಅದು ಸಾಮಾನ್ನೀಕೃತ (Generalized) ಮಾನಸಿಕ ಶಕ್ತಿಯೆಂದು, ಅದು ಬೇರೆ ಬೇರೆ ರೂಪಗಳಲ್ಲಿ ವ್ಯಕ್ತವಾಗಬಹುದೆಂದೂ ವಾದಿಸಿದನು. ಎಲ್ಲಾ ಮನೋರೋಗಗಳ ಮೂಲ ಕಾರಣ ಲೈಂಗಿಕ ಸಮಸ್ಯೆಗಳಲ್ಲಿರುತ್ತದೆ ಎನ್ನುವ ಫ್ರಾಯ್ಡ್‌ನ ನಿಲುವನ್ನು ಇವನು ಒಪ್ಪಿಕೊಳ್ಳಲಿಲ್ಲ. ಇದರಿಂದಾಗಿ ಫ್ರಾಯ್ಡ್ ಮತ್ತು ಯೂಂಗ್ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ಅವರು ಪರಸ್ಪರ ದೂರವಾದರು. ಯೂಂಗ್ ತನ್ನ ಪ್ರತ್ಯೇಕ ವ್ಯಕ್ತಿತ್ವ ಸಿದ್ಧಾಂತವನ್ನು ಪ್ರತಿಪಾದಿಸಿ ಅದನ್ನು ವಿಶ್ಲೇಷಣಾತ್ಮಕ ಮನೋವಿಜ್ಞಾನ (Analytical Psychology) ಎಂದು ಹೆಸರಿಸಿದನು.

**ಮಾನವನ ಪ್ರಕೃತಿ:** ಯೂಂಗ್‌ನ ಪ್ರಕಾರ ಮಾನವನ ಪ್ರಕೃತಿ ಪ್ರಗತಿಶೀಲ ಧನಾತ್ಮಕತೆಯದ್ದಾಗಿದೆ. ಅಂದರೆ ಮಾನವ ಯಾವಾಗಲೂ ಬೆಳವಣಿಗೆಯತ್ತ, ವಿಕಾಸದತ್ತ ಮತ್ತು ಉತ್ತಮಿಕೆಯತ್ತ ಸಾಗಲು ಪ್ರಯತ್ನಿಸುತ್ತಿರುತ್ತಾನೆ. ಅವನ ಗುರಿ ವ್ಯಕ್ತೀಯತೆ (Individuation) ಅಥವಾ ಸ್ವಯಂತನವನ್ನು ಪಡೆದುಕೊಂಡು ಆತ್ಮ–ವಾಸ್ತವೀಕರಣವನ್ನು ಅಥವಾ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದಾಗಿದೆ. ಅಂದರೆ ತನ್ನ ಅಂತಃಸ್ಸತ್ವಗಳನ್ನು ಗರಿಷ್ಠ ಮಟ್ಟದಲ್ಲಿ ಅಭಿವ್ಯಕ್ತಿಗೊಳಿಸುವುದಾಗಿದೆ. ಎಲ್ಲದಕ್ಕೂ ಒಂದು ಕಾರಣವಿರುತ್ತದೆ ಎಂಬ ಕಾರಣತೆಯನ್ನು (Casuality) ಮತ್ತು ಪ್ರತಿಯೊಂದಕ್ಕೂ ಒಂದು ಅಂತಿಮ ಗುರಿ ಇದೆ.ಎಂಬ ಉದ್ದೇಶ ವಾದವನ್ನು (Teleloogy) ಯೂಂಗ್ ಒಪ್ಪುತ್ತಾನೆ. ವ್ಯಕ್ತಿಯ ಸಮಸ್ಯೆಗಳಿಗೆ ಕಾರಣಗಳನ್ನು ಅವನ ಗತಕಾಲದಲ್ಲಿ ನೋಡಬೇಕು ಮತ್ತು ಅವನ ಇಂದಿನ ಜೀವನವನ್ನು ಅವನ ಭವಿಷ್ಯ ನಿರ್ಧರಿಸುತ್ತದೆ ಎಂಬುದು ಇವನ ವಾದ. ಮಾನವನ ವ್ಯಕ್ತಿತ್ವ ಬಹು ಆಯಾಮಗಳಿಂದ ಕೂಡಿದೆ. ಮಾನವನ ಸ್ವಭಾವ ಉನ್ನತ ಚೇತನ (Spirit) ನೊಂದಿಗೆ ದಾನವೀಯತೆಯನ್ನು (Demonism) ಒಳಗೊಂಡಿದೆ.

**ವ್ಯಕ್ತಿತ್ವದ ಸಂರಚನೆ:** ಯೂಂಗ್ ವ್ಯಕ್ತಿತ್ವಕ್ಕೆ 'ಸೈಕಿ' (Psyche) ಎಂಬ ಪದವನ್ನು ಉಪಯೋಗಿಸಿದ್ದಾನೆ. ಗ್ರೀಕ್ ಭಾಷೆಯ ಈ ಪದದ ಮೂಲ ಅರ್ಥ ಆತ್ಮ, ಚೈತನ್ಯ, ಚಿತ್ತ ಎಂದಾಗುತ್ತದೆ. ಆದರೆ ಅದನ್ನು ನಂತರದಲ್ಲಿ ಮನಸ್ಸಿಗೆ ಪರ್ಯಾಯ ಪದವಾಗಿ ಬಳಸಲಾಗುತ್ತಿದೆ. ಈ

Digitised by Bharatavani, CIIL

ಪರಿಕಲ್ಪನೆ ವ್ಯಕ್ತಿಯ ಎಲ್ಲಾ ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ ಯೋಚನೆಗಳನ್ನು, ಭಾವನೆಗಳನ್ನು, ಭಾವಗಳನ್ನು ಮತ್ತು ವರ್ತನೆಗಳನ್ನು ವಿವರಿಸುತ್ತದೆ. ಸಂಪೂರ್ಣ ವ್ಯಕ್ತಿತ್ವ ಅಥವಾ ಸೈಕಿ ಮಾನವನ ಎಲ್ಲಾ ವರ್ತನೆಗಳನ್ನು ವಿವರಿಸುತ್ತದೆ. ಸಂಪೂರ್ಣ ವ್ಯಕ್ತಿತ್ವ ಅಥವಾ ಸೈಕಿ ಅನೇಕ ಪಾರಸ್ಪರಿಕವಾಗಿ ಸಂಬಂಧವುಳ್ಳ ವ್ಯವಸ್ಥೆಗಳನ್ನು ಹೊಂದಿದೆ.

**ಚೇತನಾವಸ್ಥೆ (Conscousness):** ವ್ಯಕ್ತಿ ನೇರವಾಗಿ ತಿಳಿದುಕೊಳ್ಳಬಹುದಾದ, ಅರಿವಿಗೆ ನಿಲುಕುವ ವ್ಯವಸ್ಥೆ ಇದೊಂದೇ. ಹುಟ್ಟಿದ ಕೂಡಲೇ ಇದು ಜೀವಿಯ ಅರಿವಿಗೆ ಬರುತ್ತದೆ. ಚೇತನಾವಸ್ಥೆ (ಪ್ರಜ್ಞೆ) ಮನಸ್ಸಿನ ನಾಲ್ಕು ಮೂಲ ಕಾರ್ಯಗಳ ಮೂಲಕ ಸತತವಾಗಿ ವಿಕಾಸಗೊಳ್ಳುತ್ತದೆ.

(i) ಯೋಚಿಸುವಿಕೆ–ವಿಚಾರಗಳನ್ನು ಒಂದಕ್ಕೊಂದು ಸಂಬಂಧಿಸುವುದು, ಪರಿಕಲ್ಪನೆಗಳನ್ನು (Concept) ರೂಪಿಸಿಕೊಳ್ಳುವುದು

(ii) ಭಾವಿಸುವಿಕೆ–ಭಾವನೆ ಅಥವಾ ವಿಚಾರವನ್ನು ಪ್ರಿಯ–ಅಪ್ರಿಯವೆಂದು ಮೌಲ್ಯಮಾಪನ ಮಾಡುವುದು.

(iii) ಸಂವೇದಿಸುವಿಕೆ – ಸಂವೇದನಾಂಗಗಳಿಂದ ಪ್ರತ್ಯಕ್ಷಾನುಭವಿಸುವಿಕೆ

(iv) ಅಂತರ್ಜ್ಞಾನ (Intution): ಒಳಗಿನಿಂದ ತನ್ನಂತೆ ತಾನೇ ಉದ್ಭವಿಸುವ ವಿಚಾರ, ನಂಬಿಕೆ, ಊಹೆ ಅಥವಾ ಪ್ರವೃತ್ತಿ. ಇವುಗಳ ಮೂಲ ಗೊತ್ತಾಗುವುದಿಲ್ಲ. ಇವುಗಳಲ್ಲಿ ತೀರ್ಮಾನಕ್ಕೆ ಸ್ಥಾನವಿರುವುದಿಲ್ಲ.

ಈ ನಾಲ್ಕು ಕಾರ್ಯಗಳಲ್ಲಿ ಯೋಚಿಸುವಿಕೆ ಮತ್ತು ಭಾವಿಸುವಿಕೆಯನ್ನು ಅವುಗಳಿಗೆ ತರ್ಕ, ತೀರ್ಮಾನ, ಮೌಲ್ಯಮಾಪನ ಆಧಾರವಾಗಿರುವುದರಿಂದ ಅವುಗಳನ್ನು ತಾರ್ಕಿಕ ಕಾರ್ಯಗಳೆಂದು ಪರಿಗಣಿಸಲಾಗಿದೆ. ಸಂವೇದನೆಯಿಂದ ವಸ್ತುಗಳ ಅಸ್ತಿತ್ವ ಗೊತ್ತಾಗುತ್ತದೆ. ಭಾವಿಸುವಿಕೆಯಿಂದ ಏನಾದರೂ ನಮಗೆ ಪ್ರಿಯ ಅಥವಾ ಅಪ್ರಿಯವೆ ಎನ್ನುವುದು ತಿಳಿಯುತ್ತದೆ. ಯೋಚಿಸುವಿಕೆ ವಸ್ತು/ವಿಚಾರಗಳ ಸ್ವರೂಪವನ್ನು ತಿಳಿಸುತ್ತದೆ. ಅಂತರ್ಜ್ಞಾನದಿಂದ ಹೊಸ ವಿಚಾರಗಳು, ಸಮಸ್ಯ ಪರಿಹಾರಗಳು ಸ್ಪಂದಿಸುತ್ತವೆ.

**ಸುಪ್ತಚೇತನಾವಸ್ಥೆ (Unconsciousness):** ಯಾಂಗ್‌ನ ಸುಪ್ತಚೇತನದ ಪರಿಕಲ್ಪನೆ ಫ್ರಾಯ್ಡ್‌ನ ಪರಿಕಲ್ಪನೆಯನ್ನು ದಾಟಿ ಮುಂದಕ್ಕೆ ಹೋಗಿದೆ. ಯೂಂಗ್ ಸುಪ್ತಚೇತನದಲ್ಲಿ ಎರಡು ಭಾಗಗಳನ್ನು ಗುರ್ತಿಸಿದ್ದಾನೆ.

**1. ವೈಯಕ್ತಿಕ ಸುಪ್ತಚೇತನ (Personal Unconsciousness):** ಇದು ಮೊದಲ ಚೇತನಾವಸ್ಥೆಯಲ್ಲಿದ್ದು ಈಗ ಪ್ರಜ್ಞಾಪೂರ್ವಕವಾಗಿಯಾಗಲೀ, ಅಪ್ರಜ್ಞಾ ಪೂರ್ವಕವಾಗಿಯಾಗಲಿ ದಮನ (Suppression and Repression) ಮಾಡಿರುವ ಉಪಯೋಗವಿಲ್ಲದ, ಮರೆತು ಹೋಗಿರುವ, ದುರ್ಬಲವಾಗಿರುವ ಅನುಭವಗಳನ್ನು ಒಳಗೊಂಡಿರುತ್ತದೆ. ಈ ಅನುಭವಗಳು ಪ್ರಜ್ಞೆಯ ನಿಲುಕಿಗೆ ದೊರಕುತ್ತವೆ. ಯಾವುದಾದರೊಂದು ಮುಖ್ಯ ಸಂವೇಗಾತ್ಮಕ ವಿಚಾರಕ್ಕೆ ಸಂಬಂಧಿಸಿದ ಭಾವಗಳು, ಸಂವೇಗಗಳು, ಅನುಭವಗಳು, ಪ್ರತ್ಯಕ್ಷಾನುಭವಗಳು, ಬೇಕು–ಬೇಡಗಳು ಪರಸ್ಪರ ಸಂಪರ್ಕಗೊಂಡು ಮನೋಗ್ರಂಥಿಗಳಾಗುತ್ತವೆ. (Complexes) ಇವು ಸ್ವಾಯತ್ತವಾಗಿದ್ದುಕೊಂಡು, ಗತಿಶೀಲಾತ್ಮಕವಾಗಿದ್ದು ವ್ಯಕ್ತಿಯ ಯೋಚನೆ/ವರ್ತನೆಗಳನ್ನು ನಿಯಂತ್ರಿಸುತ್ತವೆ. ಉದಾಹರಣೆಗೆ ಅಧಿಕಾರ, ಸೌಂದರ್ಯ, ಸಾಧನೆ, ತಾಯಿ–ತಂದೆ, ಮೇಲರಿಮೆ–ಕೀಳರಿಮೆ' ಮುಂತಾದವುಗಳಿಗೆ ಸಂಬಂಧಿಸಿದ ಮನೋಗ್ರಂಥಿಗಳು.

**2. ಸಾಮೂಹಿಕ ಸುಪ್ತಚೇತನ (Collective Unconsciousness):** ಇದು ಯೂಂಗ್‌ನ ವಿನೂತನ ಪರಿಕಲ್ಪನೆಯಾಗಿದೆ. ಇದು ಮಾನವನ ವಿಕಾಸಾವಧಿಯ ಬೇರೆ ಬೇರೆ ಹಂತಗಳಲ್ಲಿ ಮಾನವನಾದ ನಂತರದ ಹಿಂದಿನ ಪೀಳಿಗೆಗಳ ಪುನರಾವರ್ತಿತ ಅನುಭವಗಳ ಘನೀಕೃತ ಸಂಗ್ರಹವಾಗಿದೆ. ಅಂದರೆ ಪ್ರತಿಯೊಬ್ಬ ವ್ಯಕ್ತಿಯ ಸಾಮೂಹಿಕ ಸುಪ್ತಚೇತನದಲ್ಲಿ ಮಾನವಕುಲದ ಅಷ್ಟೇಕೆ ಅದಕ್ಕೂ ಹಿಂದಿನ ಹಂತಗಳ ಎಲ್ಲಾ ಅನುಭವಳು ಹುದುಗಿವೆ ಎಂದು ಯೂಂಗ್ ಹೇಳುತ್ತಾನೆ. (ಈ ಪರಿಕಲ್ಪನೆ ಹಿಂದೂ ಧರ್ಮದ ಸಂಸ್ಕಾರಗಳ ಪರಿಕಲ್ಪನೆಯಂತಿದೆಯಲ್ಲವೆ?) ಇದರಿಂದಾಗಿಯೇ ಕೆಲವು ವೇಳೆ ಕನಸಿನಲ್ಲಿ ನಮ್ಮ ಜೀವನದಲ್ಲಿ ಆಗದೇ ಇರುವ ವಿಚಿತ್ರ ಅನುಭವಗಳು ಉಂಟಾಗುತ್ತವೆ. ಸುಪ್ತ ಚೇತನದ ಈ ಭಾಗದ ಪ್ರೇರಣೆಗಳನ್ನು ಉಪೇಕ್ಷಿಸುವುದು ಒಳ್ಳೆಯದಲ್ಲವೆಂದು ಯೂಂಗ್ ಹೇಳುತ್ತಾನೆ. ಇವುಗಳಲ್ಲಿ ರಚನಾತ್ಮಕ, ಸೃಜನಾತ್ಮಕ ಸಾಧ್ಯತೆಗಳಿರುತ್ತವೆ. ಇವುಗಳನ್ನು ಚೇತನಾವಸ್ಥೆ ಉಪೇಕ್ಷಿಸಿದರೆ ಅವು ವ್ಯಕ್ತಿಯ ತಾರ್ಕಿಕ ಪ್ರಕ್ರಿಯೆಗಳನ್ನು ಗೊಂದಲಗೊಳಿಸುತ್ತವೆ. ಆಗ ಅತಾರ್ಕಿಕ ಯೋಚನೆಗಳು, ಅತಿಯಾದ ಭಯ, ವಿಭ್ರಮೆಗಳು (Delusions), ಆಂತಕ ಮುಂತಾದ ವರ್ತನ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಸಾಮೂಹಿಕ ಸುಪ್ತಚೇತನ ಎಲ್ಲಾ ಕಾಲಕ್ಕೂ ಎಲ್ಲಾ ಮಾನವರಿಗೂ ಸಾಮಾನ್ಯವಾಗಿರುವ ಸಾಮೂಹಿಕ ಬಿಂಬ ವಿನ್ಯಾಸಗಳನ್ನು, ಪುರಾತನ ಬಿಂಬಗಳನ್ನೂ ಒಳಗೊಂಡಿದೆ.ಇವುಗಳನ್ನು **ಪ್ರಾಚೀನ ಬಿಂಬಗಳು, ಪ್ರರೂಪಗಳು/ಮೂಲ ಪ್ರರೂಪಗಳು (Arche types)** ಎಂದು ಕರೆಯಲಾಗಿದೆ. ಇವು ಮಾನವ ಕುಲದ ಪುನರಾವರ್ತಿತ ಅನುಭವಗಳ ಸಂಗ್ರಹಗಳಾಗಿವೆ. ಇವುಗಳನ್ನು ಎಲ್ಲಾ ಮಾನವರೂ ಅನುಭವಿಸಬಲ್ಲರು. ಮುಖ್ಯ ಪ್ರಾಗ್ರೂಪಗಳು ಹೀಗಿವೆ.

i. **ಪರ್ಸೋನ:** ಇದು ಸಾಮಾಜಿಕ ಜೀವನಕ್ಕೆ ಹೊಂದಿಕೊಳ್ಳಲು ವ್ಯಕ್ತಿಗಳು 'ಧರಿಸುವ' (ತೋರಿಸುವ ವ್ಯಕ್ತಿತ್ವದ ಮುಖವಾಡವಾಗಿದೆ. ಇದು ನಿಜವಾದ ವ್ಯಕ್ತಿತ್ವವನ್ನು (ಸೈಕಿಯನ್ನು) ಮುಚ್ಚಿಡುತ್ತದೆ. ಸಮಾಜದಲ್ಲಿ ವ್ಯಕ್ತಿಯ ಉಳಿವಿಗೆ ಇದು ಅಗತ್ಯವಾಗಿದೆ. ಎಷ್ಟೋ ವೇಳೆ ವ್ಯಕ್ತಿ ತನ್ನ ಸೈಕಿಗೆ ಹೊಂದದ ಪಾತ್ರವನ್ನು ವಹಿಸಬೇಕಾಗುತ್ತದೆ, ವೃತ್ತಿಯನ್ನು

Digitised by Bharatavani, CIIL

ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ.

ii. **ಆನಿಮಾ:** ಇದು ಪುರುಷನಲ್ಲಿ ಇರುವ ಸ್ತ್ರೀತ್ವದ ಪ್ರಾಗ್ರೂಪ. ಪುರುಷರಲ್ಲಿ ಕಂಡುಬರುವ ಸ್ತ್ರೀತ್ವದ ಕೆಲವು ಲಕ್ಷಣಗಳಿಗೆ ಇದು ಕಾರಣವಾಗಿದೆ.

iii. **ಆನಿಮಸ್:** ಇದು ಸ್ತ್ರೀಯರಲ್ಲಿರುವ ಪುರುಷತ್ವದ ಪ್ರಾಗ್ರೂಪವಾಗಿದೆ. ಸ್ತ್ರೀಯರಲ್ಲಿ ಕಂಡುಬರುವ ಪುರುಷತ್ವದ ಕೆಲವು ಲಕ್ಷಣಗಳಿಗೆ ಇದು ಕಾರಣವಾಗಿದೆ. ಆನಿಮಾ ಮತ್ತು ಆನಿಮಸ್ ಪ್ರಾಗ್ರೂಪಗಳು ಲೈಂಗಿಕ ಕ್ರೋಮೋ ಸೋಮಗಳಿಂದ (ವರ್ಣತಂತುಗಳು) ಮತ್ತು ಲೈಂಗಿಕ ಹಾರ್ಮೋನುಗಳಿಂದ ನಿರ್ಧಾರಿತವಾದವುಗಳಲ್ಲ. ಸ್ತ್ರೀ–ಪುರುಷರು ದೀರ್ಘ ಕಾಲದಿಂದ ಒಟ್ಟಿಗೆ ಜೀವಿಸುದುದರ ಪರಿಣಾಮವಾಗಿ ಈ ವಿರುದ್ಧ ಲಕ್ಷಣಗಳು ಈ ಪ್ರಾಗ್ರೂಪಗಳಾಗಿ ಮಾರ್ಪಟ್ಟಿವೆ ಎಂದು ಯೂಂಗ್ ವಿವರಿಸಿದ್ದಾನೆ. (ಹಿಂದೂ ಧರ್ಮದಲ್ಲಿರುವ ಶಿವನ ಅರ್ಧನಾರೀಶ್ವರ ಕಲ್ಪನೆಯನ್ನು ಹೋಲಿಸಿ ನೋಡಿ).

iv. **ನೆರಳು** (Shadow): ಈ ಪ್ರಾಗ್ರೂಪ ವ್ಯಕ್ತಿಯ ಲಿಂಗತ್ವವನ್ನು ಪ್ರತಿನಿಧಿಸುತ್ತದೆ. ಇದು ಆದಿಮ, ಮೃಗೀಯ ಸ್ವರೂಪದ್ದಾಗಿದ್ದು ಹೆಚ್ಚು ಶಕ್ತಿಯುತವಾಗಿದೆ. ಇದು ಜನಗಳೊಂದಿಗೆ ವ್ಯಕ್ತಿಯ ಅತಿ ಒಳ್ಳೆಯ ಅಥವಾ ಅತಿ ಕೆಡುಕಾದ ಸಂಬಂಧಗಳನ್ನು ನಿರ್ಧರಿಸುತ್ತದೆ. ವ್ಯಕ್ತಿ ಪರ್ಸೋನಾದಿಂದ ಇದನ್ನು ಪಳಗಿಸುವ ಅಥವಾ ದಮನ ಮಾಡುವ ಪ್ರಯತ್ನ ಮಾಡುತ್ತಾನೆ. ಆದರೆ ಇದನ್ನು ದಮನ ಮಾಡುವುದು, ಸೃಜನಾತ್ಮಕತೆಯನ್ನು, ಸಹಜ ಸ್ಫೂರ್ತಿಯನ್ನು, ಸತ್ವವನ್ನು, ಅಂತಃಸ್ಫೂರ್ತಿಯನ್ನು ಉಪೇಕ್ಷಿಸಿದಂತೆ. ಇದನ್ನು ಸಮಾಜ ಸಮ್ಮತ ರೀತಿಯಲ್ಲಿ ಅಭಿವ್ಯಕ್ತಗೊಳಿಸುವುದು ಒಳ್ಳೆಯದು.

v. **ಸ್ವಯಂ** (The Self): ಇದು ವ್ಯಕ್ತಿತ್ವದ ಕೇಂದ್ರ ಬಿಂದು. ವ್ಯಕ್ತಿತ್ವದ ಎಲಾ ವ್ಯವಸ್ಥೆಗಳು ಇದರೊಂದಿಗೆ ಸಮಗ್ರಗೊಳ್ಳುತ್ತವೆ. ಇದು ವ್ಯಕ್ತಿತ್ವಕ್ಕೆ ಐಕ್ಯತೆಯನ್ನು, ಸಮತೋಲನವನ್ನು ಮತ್ತು ಸ್ಥಿರತೆಯನ್ನು ತಂದು ಕೊಡುತ್ತದೆ. ಇದು ಮಾನವನ್ನು ಧರ್ಮ ಒದಗಿಸುವ ಮಾರ್ಗಗಳ ಮೂಲಕ ಪರಿಪೂರ್ಣತೆಯನ್ನು ಪಡೆಯಲು ಪ್ರಯತ್ನಿಸುವಂತೆ ಪ್ರೇರಣೆ ನೀಡುತ್ತದೆ. ಸ್ವಯಂನ ಅರಿವಿನಿಂದ ವ್ಯಕ್ತಿ ಆತ್ಮ–ವಾಸ್ತವೀಕರಣದ ಗುರಿಯತ್ತ ಮುಂದುವರಿಯುತ್ತಾನೆ.

vi. **ಅಹಂ** (Ego): ಇದು ಚೇತನಾವಸ್ಥೆಯ ದ್ವಾರಪಾಲಕನ ಕಾರ್ಯವನ್ನು ನಿರ್ವಹಿಸುತ್ತದೆ. ಈ ಪ್ರಾಗ್ರೂಪ ಸಾಮೂಹಿಕ ಸುಪ್ತಚೇತನದಿಂದಲೇ ಉದ್ಭವಿಸುತ್ತದೆ. 'ನಾನು' ಎನ್ನುವ ಭಾವನೆಯೇ ಅಹಂ. ಇದು ಸಾಮೂಹಿಕ ಸುಪ್ತಚೇತನದಿಂದ ಕ್ರಮೇಣ ಚೇತನಾವಸ್ಥೆಗೆ ಬರುತ್ತದೆ. ನಂತರ ತನ್ನದೇ ಆದ ಅನುಭವಗಳನ್ನು, ಸ್ಮರಣೆಗಳನ್ನು ಹೊಂದುತ್ತದೆ. ಇದು ವ್ಯವಸ್ಥಿತ ಜೀವನವನ್ನು, ಬೆದರಿಕೆಗಳಿಂದ ಸಂರಕ್ಷಣೆಯನ್ನು ಬಯಸುತ್ತದೆ. ಅದು ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಲು ವಿವರಣೆ ನೀಡ ಬಯಸುತ್ತದೆ.

**ವ್ಯಕ್ತಿತ್ವ ಪ್ರರೂಪಗಳು:** ಯೂಂಗ್ ವ್ಯಕ್ತಿಗಳನ್ನು ಅಂತರ್ಮುಖಿಗಳು (Intreverts) ಮತ್ತು ಬಹಿರ್ಮುಖಿಗಳು (Extroverts) ಎಂದು ಎರಡು ಪ್ರರೂಪಗಳಾಗಿ ವರ್ಗೀಕರಿಸಿದ್ದಾನೆ. ಯೂಂಗ್‌ನ ಈ ವರ್ಗೀಕರಣ ಸಾಕಷ್ಟು ಮಹತ್ವವನ್ನು ಪಡೆದು ಅನೇಕ ಸಂಶೋಧನೆಗಳ ವಿಷಯವಾಯಿತು. ಲಿಬಿಡೋ (ಮಾನಸಿಕ ಶಕ್ತಿ) ಒಳಮುಖವಾಗಿ ಪ್ರವರ್ತಿಸತೊಡಗಿದರೆ ವ್ಯಕ್ತಿಯಲ್ಲಿ ಅಂತರ್ಮುಖತೆಯ ಲಕ್ಷಣಗಳು ಉಂಟಾಗುತ್ತದೆ. ಅದು ಬಹಿರ್ಮುಖವಾಗಿ ಅಂದರೆ ಸಮಾಜದ/ಪರಿಸರದ ಕಡೆಗೆ ಪ್ರವೃತ್ತವಾದರೆ ಬಹಿರ್ಮುಖತೆಯ ವರ್ತನೆಗಳು ವಿಕಾಸಗೊಳ್ಳುತ್ತವೆ. ಅನೇಕರ ವ್ಯಕ್ತಿತ್ವದಲ್ಲಿ ಅಂತರ್ಮುಖತೆ ಮತ್ತು ಬಹಿರ್ಮುಖತೆಯ ಲಕ್ಷಣಗಳು ಒಟ್ಟಿಗೆ ಕಂಡು ಬರುತ್ತದೆ. ಅಂಥವರನ್ನು ಉಭಮುಖಿಗಳು (Ambiverts) ಎನ್ನುತ್ತಾರೆ.

**ವಿಶ್ಲೇಷಣ ತಂತ್ರಗಳು:** ಸುಪ್ತಚೇತನದ ಪ್ರೇರಣೆಗಳನ್ನು ವಿಶ್ಲೇಷಿಸಲು ಯೂಂಗ್ ಪದ–ಸಹಚರ್ಯ ಪರೀಕ್ಷೆಯನ್ನು ಸಲಹೆ ಮಾಡುತ್ತಾನೆ. ಈ ತಂತ್ರದಲ್ಲಿ ವ್ಯಕ್ತಿ ಪದಪಟ್ಟಿಯ ಪ್ರತಿಯೊಂದು ಪದಕ್ಕೂ ತನ್ನ ಮನಸ್ಸಿಗೆ ಮೊದಲು ಬರುವ ಪದವನ್ನು ಹೇಳುತ್ತಾನೆ. ಈ ಪದಗಳನ್ನು ಚಿಕಿತ್ಸಾತ್ಮಕವಾಗಿ (Clinically) ವಿಶ್ಲೇಷಿಸಲಾಗುತ್ತದೆ. ಜೀವನ ಚರಿತ್ರೆಯನ್ನು ರೂಪಿಸಿ ವಿಶ್ಲೇಷಿಸುವುದು, ಸ್ವಪ್ನಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು ಯೂಂಗ್‌ನ ಇತರ ತಂತ್ರಗಳಾಗಿವೆ.

**ಅಡ್ಲೆರ್‌ನ ಸಿದ್ಧಾಂತ:**

ಆಲ್‌ಫ್ರಡ್ ಅಡ್ಲೆರ್ ವಿಯನ್ನಾದ ಮಧ್ಯಮ ವರ್ಗದ ಜ್ಯೂ (ಯಹೂದಿ) ಕುಟುಂಬದಲ್ಲಿ 1870ರಲ್ಲಿ ಜನಿಸಿದನು. ವಿಯನ್ನಾ ವಿಶ್ವವಿದ್ಯಾನಿಲಯದಿಂದ ವೈದ್ಯಕೀಯ ಪದವಿಯನ್ನು ಪಡೆದ ನಂತರ ಕಣ್ಣಿನ ಚಿಕಿತ್ಸೆಯಲ್ಲಿ, ನಂತರ ಸಾಮಾನ್ಯ ಔಷಧಿಗಳ ಕ್ಷೇತ್ರದಲ್ಲಿ ವೈದ್ಯನಾಗಿ ಸೇವೆ ಸಲ್ಲಿಸಿ, ತದನಂತರ ನರಕೋಶ ಶಾಸ್ತ್ರ (Neurology) ಮತ್ತು ಮನೋಚಿಕಿತ್ಸೆ (Psychiatry) ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಆರಂಭಿಸಿದನು. 1902ರಲ್ಲಿ ಫ್ರಾಯ್ಡ್‌ನ ಸಿದ್ಧಾಂತಗಳ ಪ್ರಭಾವಕ್ಕೆ ಒಳಗಾಗಿ ಅವನ ಅನುಯಾಯಿಯಾದನು. ಫ್ರಾಯ್ಡ್ ಅವನನ್ನು ಶೀಘ್ರದಲ್ಲಿಯೇ ವಿಯನ್ನಾ ಮನೋವಿಶ್ಲೇಷಣ ಸಂಘಕ್ಕೆ ಅಧ್ಯಕ್ಷನನ್ನಾಗಿ ಮಾಡಿದನು. ಇದಾದ ಕೇವಲ ಒಂದು ವರ್ಷದ ನಂತರ ಅಡ್ಲರ್ ಫ್ರಾಯ್ಡ್‌ನ ಲೈಂಗಿಕ ಪ್ರೇರಣೆಯ ಸರ್ವವ್ಯಾಪಕತೆಯನ್ನು ವರ್ತನೆಯ ಮೇಲೆ ಸುಪ್ತಚೇತನದ ಸಾರ್ವಭೌಮಿಕ ಪ್ರಭಾವದ ವಿಚಾರಗಳನ್ನು ಒಪ್ಪಿಕೊಳ್ಳದೆ ಹೋದುದುರಿಂದ ಭಿನ್ನಾಭಿಪ್ರಾಯ ಉಂಟಾಗಿ ಫ್ರಾಯ್ಡ್‌ನಿಂದ ದೂರವಾದನು. 1912ರಲ್ಲಿ ಅಡ್ಲೆರ್ ತನ್ನ ಪ್ರತ್ಯೇಕ ಸಿದ್ಧಾಂತವಾದ ವೈಯಕ್ತಿಕ ಮನೋವಿಜ್ಞಾನವನ್ನು (Individual Psychology) ಆರಂಭಿಸಿದನು. 1934ರ ಹೊತ್ತಿಗೆ ಜರ್ಮನಿಯಲ್ಲಿ ಹಿಟ್ಲರ್‌ನ ನಾಜಿಸಂನ ಪ್ರಭಾವ (ಅದು ಜ್ಯೂಗಳಿಗೆ ವಿರೋಧವಾದುದಾಗಿತ್ತು) ಹೆಚ್ಚಾದುದರಿಂದ ಅದರಿಂದ ತಪ್ಪಿಸಿಕೊಳ್ಳಲು ಅಡ್ಲೆರ್ ಮೊದಲು

Digitised by Bharatavani, CIIL

ಯೂರೋಪ್‌ಗೆ ನಂತರ ಅಮೇರಿಕಾದ ನ್ಯೂಯಾರ್ಕ್‌ಗೆ ವಲಸೆ ಹೋಗಿ 1937ರಲ್ಲಿ ನಿಧನ ಹೊಂದಿದನು.

**ಮಾನವನ ಸ್ವಭಾವ:** ಮಾನವನ ವಯಸ್ಕ ಜೀವನ ಮೊದಲ ಆರು ವರ್ಷಗಳ ಜೀವನದಿಂದ ಬಹುಮಟ್ಟಿಗೆ ಪ್ರಭಾವಿತವಾಗುತ್ತದೆ ಎಂದು ಅಡ್ಲೆರ್ ನಂಬುತ್ತಾನೆ. ಜೀವನದ ಗತಕಾಲದ ಘಟನೆಗಳ ಅನುಭವಗಳ ಜೊತೆಗೆ ವ್ಯಕ್ತಿ ಅವುಗಳನ್ನು ಹೇಗೆ ಪ್ರತ್ಯಕ್ಷಾನುಭವಿಸುತ್ತಾನೆ, ಹೇಗೆ ಅರ್ಥೈಸುತ್ತಾನೆ ಎಂಬುದು ಅವನ ಜೀವನವನ್ನು ನಿರಂತರವಾಗಿ ಪ್ರಭಾವಿಸುತ್ತದೆ. ಅಡ್ಲೆರ್ ಮಾನವನ ವರ್ತನೆ ಉದ್ದೇಶಪೂರ್ಣವಾದುದೆಂದೂ ಧ್ಯೇಯ ಮುಖಿಯಾದುದೆಂದೂ ಮಾನವನ ವರ್ತನೆಯನ್ನು ಲೈಂಗಿಕ ಪ್ರೇರಣೆಗಳು ಪ್ರೇರಿತಗೊಳ್ಳದೆ, ಸಾಮಾಜಿಕ ಪ್ರೇರಣೆಗಳು ಪ್ರೇರಿತಗೊಳಿಸುತ್ತವೆಯೆಂದೂ, ಈ ಸಾಮಾಜಿಕ ಪ್ರೇರಣೆಗಳು ಜನ್ಮಜಾತವಾದವುಗಳೆಂದೂ ಅಡ್ಲೆರ್ ಪರಿಗಣಿಸಿದ್ದಾನೆ. ಇವನ ವ್ಯಕ್ತಿತ್ವದ ಕೇಂದ್ರ ಸುಪ್ತಚೇತನವಾಗಿದೆಯೇ ಹೊರತು ಫ್ರಾಯ್ಡ್ ಹೇಳುವಂತೆ ಸುಪ್ತ ಚೇತನವಲ್ಲ. ಅಡ್ಲೆರ್ ಸುಪ್ತ ಚೇತನಕ್ಕೆ ಗತಿಶೀಲಾತ್ಮಕ ಲಕ್ಷಣವನ್ನು ಆರೋಪಿಸಿದೆ. ಅದಕ್ಕೆ ವ್ಯಕ್ತಿತ್ವ ರೂಪಣೆಯಲ್ಲಿ ಮಹತ್ವದ ಪಾತ್ರವನ್ನು ಕೊಡುವುದಿಲ್ಲ. ಅದು ಅನಾವಶ್ಯಕ, ಮಹತ್ವವಿಲ್ಲದ, ಮರೆತು ಹೋದ, ಅಲಕ್ಷಿಸದ ವ್ಯಕ್ತಿಯ ಅನುಭವಗಳನ್ನು ಒಳಗೊಂಡಿರುವ ಮನಸ್ಸಿನ ಒಂದು ಭಾಗ ಮಾತ್ರವಾಗಿದೆ.

ಮಾನವನ ವ್ಯಕ್ತಿತ್ವ ಅನುವಂಶೀಯತೆ ಮತ್ತು ಪರಿಸರದ ಪ್ರಭಾವಗಳಿಂದ ನಿರ್ಧಾರಗೊಳ್ಳುವುದಲ್ಲದೆ, ಘಟನೆಗಳನ್ನು ಸೃಷ್ಟಿಸುವ, ಪ್ರಭಾವಗೊಳಿಸುವ ವ್ಯಾಖ್ಯಾನಿಸುವ ಮಾನವನ ಸಾಮರ್ಥ್ಯದಿಂದಲೂ ನಿರ್ಧಾರಿತವಾಗುತ್ತದೆ.

**ಕೀಳರಿಮೆಯ ಭಾವನೆ (Inferiority Complex):** ಇದು ಅಡ್ಲೆರ್‌ನ ಸಿದ್ಧಾಂತದ ಕೇಂದ್ರೀಯ ಪರಿಕಲ್ಪನೆಯಾಗಿದೆ. ಜನ್ಮಜಾತವಾದ ಈ ಪ್ರವೃತ್ತಿ (ಭಾವನೆ) ಮಾನವನ ಎಲ್ಲಾ ಪ್ರಯತ್ನಗಳ ಮೂಲ ಸ್ರೋತವಾಗಿದ್ದು ಎಲ್ಲಾ ಮಾನವರಲ್ಲೂ ಕಂಡು ಬರುತ್ತದೆ. ಅಡ್ಲೆರ್‌ನ ಅಭಿಪ್ರಾಯದಲ್ಲಿ ಕೀಳರಿಮೆಯನ್ನು ದುರ್ಬಲತೆಯ ಚಿಹ್ನೆಯಾಗಿ ಪರಿಗಣಿಸುವುದಕ್ಕಿಂತ ಸೃಜನಶೀಲತೆಯ, ನಾವೀನ್ಯತೆಯ, ಪ್ರಭುತ್ವದ, ಸಫಲತೆಯ ಪ್ರೇರಣೆಯ, ಅಂತಿಮವಾಗಿ ಪರಿಪೂರ್ಣತೆಯ ಮೂಲ ಪ್ರೇರಣೆಯ ರೂಪದಲ್ಲಿ ಪರಿಗಣಿಸಬೇಕು. ಏಕೆಂದರೆ ನಾವು ಕೀಳರಿಮೆಯಿಂದ ಪ್ರಚೋದಿತರಾಗಿ ಅದನ್ನು ನಿವಾರಿಸಿಕೊಳ್ಳಲು ಮೇಲರಿಮೆ ಅಂದರೆ ವಿಕಾಸದ ಮೇಲಿನ ಮಟ್ಟಗಳಿಗೆ ತಲುಪಲು ನಿರಂತರವಾಗಿ ಪ್ರಯತ್ನಿಸತೊಡಗುತ್ತೇವೆ.

**ವ್ಯಕ್ತಿತ್ವದ ವಿನ್ಯಾಸ:** ವ್ಯಕ್ತಿತ್ವವನ್ನು ಇಡಿಯಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕೆಂಬುದು ವ್ಯಕ್ತಿಗತ ಮನೋವಿಜ್ಞಾನದ ಕೇಂದ್ರ ನಿಲುವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಒಂದು ನಿರ್ದಿಷ್ಟ ಪರಿಚಿತ, ಸಾಮಾಜಿಕ-ಸಾಂಸ್ಕೃತಿಕ ಸಂದರ್ಭದಲ್ಲಿ ಹುಟ್ಟಿ, ಪೋಷಿಸಲ್ಪಟ್ಟು ವಿಕಾಸ ಹೊಂದುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯೂ ಸಾಮಾಜಿಕ, ಸೃಜನಾತ್ಮಕ ಹಾಗೂ ತೀರ್ಮಾನ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದು ಒಂದು ಉದ್ದೇಶವನ್ನು ಹೊಂದಿರುತ್ತಾನೆ. ಅದನ್ನು ಅವನ ಸಂದರ್ಭಕ್ಕೆ ಸಂಬಂಧಿಸಿದಂತೆಯೇ ಅರ್ಥಮಾಡಿಕೊಳ್ಳಬೇಕು. ವ್ಯಕ್ತಿಯ ಅಪೂರ್ವತೆ ಅವನ ಜೀವನದ ಯೋಜನೆಯನ್ನು ಪ್ರತಿಬಿಂಬಿಸುತ್ತದೆ. ಇಷ್ಟಾದರೂ ಅವನು ಒಂದು ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಭಾಗವಾಗಿರುತ್ತಾನೆ. ಮಾನವನ ವರ್ತನೆ ಉದ್ದೇಶ ಪೂರ್ವಕವಾಗಿದ್ದು ಆ ಉದ್ದೇಶವನ್ನು ಅವನೇ ನಿರ್ಧರಿಸಿಕೊಳ್ಳುತ್ತಾನೆ. ಇದು ವ್ಯಕ್ತಿಯೇ ಕಲ್ಪಿಸಿಕೊಂಡಿರುವ ಊಹಿಸಿಕೊಂಡಿರುವ ಗುರಿಯಾಗಿದೆ. ವ್ಯಕ್ತಿ ಈ ಅಂತಿಮ ಗುರಿಯನ್ನು ತಲುಪಲು ಸತತ ಪ್ರಯತ್ನಶೀಲನಾಗಿರುತ್ತಾನೆ. ಈ ಪ್ರವೃತ್ತಿಯನ್ನು ಅಡ್ಲೆರ್ 'ಊಹಾತ್ಮಕ ಅಂತಿಮತೆವಾದ' (Fictional Finalism) ಎಂದು ಕರೆದಿದ್ದಾನೆ.

**ಮೇಲರಿಮೆ (Superiority Complex)ಯ ಮಹತ್ವ:**

ಪರಿಪೂರ್ಣತೆಗಾಗಿ ಪ್ರಯತ್ನಿಸುವುದು ಮತ್ತು ಪ್ರಾವೀಣ್ಯತೆಯನ್ನು, ದಕ್ಷತೆಯನ್ನು ಸಾಧಿಸುವುದರ ಮೂಲಕ ಕೀಳರಿಮೆಯನ್ನು ಎದುರಿಸುವ ಪ್ರವೃತ್ತಿ ಜನ್ಮಜಾತವಾದುದು ಎಂದು ಅಡ್ಲೆರ್ ಸಮರ್ಥಿಸುತ್ತಾನೆ. ಮಾನವ ತನ್ನಲ್ಲಿರುವ ಮಿತಿಗಳ ರೂಪದಲ್ಲಿರುವ ಕೀಳರಿಮೆಯನ್ನು ಬೇರೊಂದು ದಿಶೆಯಲ್ಲಿ, ಕಾರ್ಯದಲ್ಲಿ ಪ್ರಯತ್ನಿಸಿ ಅದರಲ್ಲಿ ಪ್ರಾವೀಣ್ಯತೆಯನ್ನು ಪಡೆದು ತನ್ನ ಮಿತಿಯನ್ನು ಪೂರ್ತಿಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಮಾನಸಿಕ ತಂತ್ರವನ್ನು ಕ್ಷತಿ ಪೂರ್ತಿ (Compensation) ಎಂದು ಹೇಳುತ್ತಾರೆ. ಈ ಪ್ರಕ್ರಿಯೆ ಪ್ರಜ್ಞಾಪೂರ್ವಕವಾಗಿಯಾಗಲಿ ಅಥವಾ ಅಪ್ರಜ್ಞಾಪೂರ್ವಕವಾಗಿಯಾಗಲಿ ನಡೆಯಬಹುದು. ಅಡ್ಲೆರ್‌ನ ದೃಷ್ಟಿಯಲ್ಲಿ ಮೇಲರಿಮೆಗೆ ಪ್ರಯತ್ನಿಸುವುದು ಬೇರೆಯವರನ್ನು ಮೀರಿಸುವುದು ಎನ್ನುವುದಲ್ಲ. ಅದು ವ್ಯಕ್ತಿ ಪ್ರತ್ಯಾಕ್ಷಾನುಭವಿಸಿದ ತನ್ನ ಜೀವನದ ಕೆಳಮಟ್ಟದ ಸ್ಥಿತಿಯಿಂದ, ತಾನು ಪ್ರತ್ಯಕ್ಷಾನುಭವಿಸಿರುವ ಅಥವಾ ಕಲ್ಪಿಸಿಕೊಂಡಿರುವ ಮೇಲಿನ ಮಟ್ಟದ ಸ್ಥಿತಿಯನ್ನು ಸಾಧಿಸುವುದಾಗಿದೆ. ವ್ಯಕ್ತಿ ತನ್ನ ದೌರ್ಬಲ್ಯವನ್ನು ಶಕ್ತಿಯಾಗಿ ಪರಿವರ್ತಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

**ಜೀವಿತ ಶೈಲಿ (Life Style):** ಕೀಳರಿಮೆಯನ್ನು ಮೀರಿ ಮೇಲರಿಮೆಯನ್ನು ಸಾಧಿಸುವ ಪ್ರಯತ್ನಗಳ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ಜೀವನದ ಬಗ್ಗೆ ಒಂದು ನಿಲುವನ್ನು ತಳೆದು ತನ್ನ ಜೀವನಕ್ಕೆ ಒಂದು ಯೋಜನೆಯನ್ನು ಒಂದು ವ್ಯವಸ್ಥೆಯನ್ನು, ರೂಪಿಸಿಕೊಳ್ಳುತ್ತಾನೆ. ಇದೇ ಅವನ ಜೀವಿತ ಶೈಲಿಯಾಗುತ್ತದೆ. ಇದು ಅವನ ಜೀವನದ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ನಿರ್ದೇಶಿಸುತ್ತದೆ. ಪ್ರತಿಯೊಬ್ಬರೂ ತಮ್ಮದೇ ಆದ ಬೇರೆ ಬೇರೆ ಜೀವಿತ ಶೈಲಿಯನ್ನು ರೂಪಿಸಿಕೊಳ್ಳುತ್ತಾರೆ. ಬೌದ್ಧಿಕ ಜೀವಿತ ಶೈಲಿ, ಕಲಾತ್ಮಕ ಜೀವಿತ ಶೈಲಿ, ದೈಹಿಕ ಕೌಶಲಗಳ ಜೀವಿತ ಶೈಲಿ ಇತ್ಯಾದಿ.

**ಸಾಮಾಜಿಕ ಆಸಕ್ತಿ (Social Interest):** ಇದು ಅಡ್ಲೆರ್‌ನ ಸಿದ್ಧಾಂತದ ಮತ್ತೊಂದು ಮುಖ್ಯ ಪರಿಕಲ್ಪನೆ. ಇದು ವ್ಯಕ್ತಿ ಮಾನವ

Digitised by Bharatavani, CIIL

ಕುಲದೊಂದಿಗೆ ತಾದಾತ್ಮ್ಯತೆ ಹೊಂದಬೇಕೆಂಬ, ತಾನು ಮಾನವ ಕುಲದ ಒಂದ ಭಾಗವಾಗಬೇಕೆಂಬ ಆಸಕ್ತಿಗಳಿಗೆ, ಸಾಮಾಜಿಕ ಪರಿಸರದೊಂದಿಗೆ ಹೊಂದಿಕೊಳ್ಳುವ ವ್ಯಕ್ತಿಯ ಮನೋಭಾವಗಳಿಗೆ ಸಂಬಂಧಿಸಿದೆ. ಇದು ವ್ಯಕ್ತಿ ಮಾನವೀಯತೆಯ ಉತ್ತಮ ಭವಿಷ್ಯಕ್ಕೆ ಪ್ರಯತ್ನಿಸುವುದಾಗಿದೆ. ಸಾಮಾಜಿಕ ಆಸಕ್ತಿ ಬೇರೆಯವರೊಂದಿಗಿನ ತಾದಾತ್ಮಕತೆಯ ಭಾವಕ್ಕೆ ಮತ್ತು ಸಹಾನುಭೂತಿಗೆ ಪರ್ಯಾಯ ವಾಚಕವಾಗಿದೆ.

**ಜನ್ಮದ ಸ್ಥಾನಕ್ರಮ:** ಮಗುವಿನ ಜನ್ಮದ ಸ್ಥಾನಕ್ರಮ (Birth Order) ಅದರ ವ್ಯಕ್ತಿತ್ವ ವಿಕಾಸವನ್ನು ಪ್ರಭಾವಗೊಳಿಸುವುದಲ್ಲದೆ, ಸೋದರ–ಸೋದರಿ ಸಂಬಂಧಗಳನ್ನು ನಿರ್ಧರಿಸುತ್ತದೆ ಎಂದು ಅಡ್ಲೆರ್ ಹೇಳುತ್ತಾನೆ. ಮಗುವಿನ ವಾಸ್ತವಿಕ ಜನ್ಮ ಸ್ಥಾನ ಕ್ರಮಕ್ಕಿಂತ ತಂದೆ–ತಾಯಿ ತನ್ನನ್ನು ಯಾವ ರೀತಿ ಬೆಳೆಸುತ್ತಿದ್ದಾರೆ, ಯಾವ ರೀತಿ ನನ್ನ ಬಗ್ಗೆ ನಡೆದುಕೊಳ್ಳುತ್ತಾರೆ ಎನ್ನುವುದನ್ನು ಮಗು ಪ್ರತ್ಯಕ್ಷಾನುಭವಿಸುವುದು ಈ ವಿಷಯದಲ್ಲಿ ಮುಖ್ಯವಾಗುತ್ತದೆ. ಅಡ್ಲೆರ್ ಮೊದಲನೇ, ಎರಡನೇ, ಮಧ್ಯದಲ್ಲಿ, ಕೊನೆಯಲ್ಲಿ ಹುಟ್ಟಿದ ಹಾಗೂ ಒಂದೇ ಮಗುವಾಗಿ ಹುಟ್ಟಿದ ಮಕ್ಕಳ ವ್ಯಕ್ತಿತ್ವ ವಿಕಾಸ ವಿನ್ಯಾಸ ಹೇಗಿರುತ್ತದೆ ಎಂಬುದನ್ನು ವಿವರಿಸಿದ್ದಾನೆ. ಒಂಟಿಯಾಗಿ ಹುಟ್ಟಿದ ಮಗು ಸಮಸ್ಯಾತ್ಮಕವಾಗುವ ಸಾಧ್ಯತೆ ಇರುತ್ತದೆ. ಮೊದಲು ಹುಟ್ಟಿದ ಮಗು ಹೆಚ್ಚಿನ ಗಮನ ಪಡೆಯುವುದರಿಂದ ಸ್ವಾರ್ಥಿಯಾಗಿ ಬೆಳೆಯಬಹುದು. ಮತ್ತೊಂದು ಮಗು ಹುಟ್ಟಿದಾಗ ಸೋದರ (ಸೋದರಿ) ಅಸೂಯೆಯ ಸಮಸ್ಯೆಯನ್ನು ಹೊಂದಬಹುದು. ಕಡೆಯಲ್ಲಿ ಹುಟ್ಟಿದ ಮಗು ಕೆಲವು ವೇಳೆ ಉಪೇಕ್ಷಿಸಲ್ಪಟ್ಟು ತಿರಸ್ಕೃತತೆಯ ಭಾವನೆಯನ್ನು ಬೆಳೆಸಿಕೊಳ್ಳಬಹುದು.

**ಮನೋಚಿಕಿತ್ಸಾ ತಂತ್ರ:** ಅಡ್ಲೆರ್‌ನ ಸಿದ್ಧಾಂತದಲ್ಲಿ ಮನೋರೋಗಿ (ಗ್ರಾಹಕ– Client) ಮತ್ತು ಚಿಕಿತ್ಸಕನ ಸಂಬಂಧ ಸಹಕಾರಾತ್ಮಕವಾದುದಾಗಿರುತ್ತದೆ. ಚಿಕಿತ್ಸಾ ಕ್ರಮದಲ್ಲಿ ತಪ್ಪಾಗಿ ತಿಳಿದಿರುವ ಗುರಿಗಳನ್ನು ಮತ್ತು ದೋಷಯುಕ್ತ ಊಹೆಗಳನ್ನು ಗುರ್ತಿಸಿ, ಸರಿಪಡಿಸುವುದು, ಪುನರ್‌ಶಿಕ್ಷಣ ನೀಡುವುದು ಸೇರಿವೆ. ಮನೋಚಿಕಿತ್ಸೆಯ ಗುರಿ ಗ್ರಾಹಕದ ಸ್ವಅರಿವನ್ನು ಹೆಚ್ಚಿಸುವುದು ದೋಷಯುಕ್ತ ಮೂಲಭೂತ ಆಧಾರ ಕಲ್ಪನೆಗಳನ್ನು, ಗುರಿಗಳನ್ನು ಸವಾಲಾಗಿ ಸ್ವೀಕರಿಸುವಂತೆ ಮಾಡುವುದಾಗಿದೆ. ಅಡ್ಲೆರ್‌ನ ಹಿಂಬಾಲಕರು ಸಮಸ್ಯೆಯುಳ್ಳ ವ್ಯಕ್ತಿಯನ್ನು 'ರೋಗಿ' ಎಂದು ಪರಿಗಣಿಸಿ ಅವನನ್ನು/ಅವಳನ್ನು 'ಗುಣಪಡಿಸಬೇಕು' ಎಂದು ಭಾವಿಸುವುದಕ್ಕಿಂತ ಅವರಿಗೆ ಮಾರ್ಗದರ್ಶನದ ನೀಡಿ ಅವರು ಸಮಾಜದಲ್ಲಿ ಸರಿಯಾಗಿ ಜೀವಿಸುವಂತೆ ಮಾಡುವುದು ಮುಖ್ಯವಾಗುತ್ತದೆ ಎಂದು ಪರಿಗಣಿಸುತ್ತಾರೆ.

**ಕ್ಯಾರೆನ್ ಹಾರ್ನೈ ಸಿದ್ಧಾಂತ:** ಕ್ಯಾರೆನ್ ಹಾರ್ನೈ ಜರ್ಮನಿಯ ಹ್ಯಾಂಬರ್ಗ್ ನಗರದಲ್ಲಿ 1885ರಲ್ಲಿ ಜನಿಸಿ, 1952ರಲ್ಲಿ ನ್ಯೂಯಾರ್ಕ್‌ನಲ್ಲಿ ಮರಣ ಹೊಂದಿದಳು. ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ತನ್ನ ವೈದ್ಯಕೀಯ ಪದವಿಯನ್ನು ಪಡೆದ ನಂತರ ಈಕೆ 1918ರಿಂದ 1932ರವರೆಗೆ ಬರ್ಲಿನ್ ಸೈಕೋ ಅನಲಿಟಿಕ್ ಸೊಸೈಟಿಯ ಸಂಪರ್ಕದಲ್ಲಿದ್ದಳು. ಆಗ ಪ್ರಸಿದ್ಧ ಮನೋವಿಶ್ಲೇಷಕರಾಗಿದ್ದ ಕಾಲ್ ಅಬ್ರಹಾಂ ಮತ್ತು ಹ್ಯಾನ್ಸ್ ಸ್ಯಾಷ್‌ರವರಿಂದ ತನ್ನ ಮನೋವಿಶ್ಲೇಷಣೆಯನ್ನು ಮಾಡಿಸಿಕೊಂಡಿದ್ದಳು. ನಂತರ ಅಮೇರಿಕಾಕ್ಕೆ ವಲಸೆ ಹೋಗಿ ಷಿಕಾಗೋ ಸೈಕೋ ಅನಲಿಟಿಕ್ ಸೊಸೈಟಿಯೊಂದಿಗಿದ್ದು ಮನೋ ವಿಶ್ಲೇಷಣೆಯನ್ನು ವೃತ್ತಿಯಾಗಿ ಮಾಡಿಕೊಂಡಿದ್ದಳು. ಇವಳ ಬಹಳಷ್ಟು ವಿಚಾರಗಳು ಫ್ರಾಯ್ಡ್‌ನ ಪ್ರಭಾವದಿಂದಾಗಿ ಅವನ ಸಿದ್ಧಾಂತದ ಮುಖ್ಯ ಚೌಕಟ್ಟಿನ ಪರಿಧಿಯಲ್ಲಿ ಬಂದರೂ, ಈಕೆ ಅವನ ಕೆಲವು ಪರಿಕಲ್ಪನೆಗಳನ್ನು ಉದಾಹರಣೆಗೆ ಅವನ ತೀವ್ರವಾದ ಜೈವಿಕ ನಿಲುವು, ಸ್ತ್ರೀಯರ ಮನೋವಿಜ್ಞಾನದಲ್ಲಿ ಶಿಶ್ನ ಅಸೂಯೆ (Denis envy) ಮನೋಗ್ರಂಥಿಯ ಪಾತ್ರವನ್ನು ಒಪ್ಪಿಕೊಳ್ಳಲಿಲ್ಲ.

**ಮೂಲಭೂತ ಆತಂಕ (Basic Anxiety):** ಇದು ಹಾರ್ನೈ ಸಿದ್ಧಾಂತದ ಕೇಂದ್ರೀಯ ಪರಿಕಲ್ಪನೆಯಾಗಿದೆ. ಮಗು ತಾನು ಪ್ರತ್ಯೇಕಗೊಳ್ಳುವುದರಿಂದ, ಅಸಹಾಯಕ ಸ್ಥಿತಿಯಿಂದ, ಪರಿಸರದಲ್ಲಿ ಅಸುರಕ್ಷತೆಯ ಭಾವನೆಯಿಂದ, ತಂದೆ–ತಾಯಿಯ ನೇರವಾದ/ಪರೋಕ್ಷವಾದ ದಬ್ಬಾಳಿಕೆಯಿಂದ, ಅಗತ್ಯಗಳ ಉಪೇಕ್ಷೆಯಿಂದ, ಪ್ರೀತಿ, ಬಿಸಿಯಪ್ಪುಗೆ (Warmth) ಕೊರತೆಯಿಂದ, ಜವಾಬ್ದಾರಿ ಕೊರತೆಯಿಂದ, ಅತಿ ಮಮತೆಯಿಂದ, ನಿರಾಕರಣೆ, ಅನ್ಯಾಯ ವರ್ತನೆಗಳಿಂದಾಗಿ ಆತಂಕವನ್ನು ಬೆಳೆಸಿಕೊಳ್ಳುತ್ತದೆ. ಇದೇ ಮೂಲಭೂತ ಆತಂಕ. ಇದು ಮಗು ವಿಕಾಸಗೊಂಡಂತೆಲ್ಲಾ ಅದರ ವ್ಯಕ್ತಿತ್ವ ವಿಕಾಸವನ್ನು ತೀವ್ರವಾಗಿ ಪ್ರಭಾವಗೊಳಿಸುತ್ತದೆ. ಮಗು ಈ ಆತಂಕವನ್ನು ಕಡಿಮೆ ಮಾಡಿಕೊಳ್ಳಲು ಅನೇಕ ತಂತ್ರಗಳನ್ನು ಆಶ್ರಯಿಸ ತೊಡಗುತ್ತದೆ. ತನ್ನ ಬಗ್ಗೆ ಅವಾಸ್ತವಿಕವಾದ ಭಾವನೆಗಳನ್ನು ಬೆಳೆಸಿಕೊಳ್ಳುತ್ತದೆ. ತನ್ನ ಕೀಳರಿಮೆಯನ್ನು ಗೆಲ್ಲಲು ಕ್ಷತಿ ಪೂರ್ತಿ (Compensation) ಯನ್ನು ಮಾಡಿಕೊಳ್ಳುತ್ತದೆ. ಆಕ್ರಮಣ ವರ್ತನೆಯನ್ನು ಬೆಳೆಸಿಕೊಳ್ಳಲೂ ಬಹುದು. ಅತಿಯಾದ ಸ್ಪರ್ಧಾತ್ಮಕ ಮನೋಭಾವ ತಲೆದೋರುತ್ತದೆ.

**ನರಸ್ತಾಪೀಯ ಅಗತ್ಯಗಳು (Neurotic Needs):** ಗೊಂದಲಗೊಂಡ ಮಾನವ ಸಂಬಂಧಗಳನ್ನು ಪರಿಹರಿಸಿಕೊಳ್ಳಲು ವ್ಯಕ್ತಿಯಲ್ಲಿ ಕ್ರಮೇಣ ಕೆಲವು ಅಗತ್ಯಗಳು ಉಂಟಾಗುತ್ತವೆ. ಈ ಅಗತ್ಯಗಳಿಗೆ ಕಂಡುಕೊಳ್ಳುವ ಪರಿಹಾರಗಳು ಅವಾಸ್ತವಿಕ, ಅತಾರ್ಕಿಕ ಸ್ವರೂಪದವುಗಳಾಗಿರುವುದರಿಂದ ಹಾರ್ನೈ ಅವುಗಳನ್ನು 'ನರಸ್ತಾಪೀಯ' ಅಗತ್ಯಗಳು ಎಂದು ಕರೆದಿದ್ದಾಳೆ. ಅವು ಹೀಗಿವೆ.

- ಪ್ರೀತಿ ಮತ್ತು ಒಪ್ಪಿಗೆಯ ನರಸ್ತಾಪೀಯ ಅಗತ್ಯ.
- ತನ್ನ ಜೀವನದ ಜವಾಬ್ದಾರಿ ತೆಗೆದುಕೊಳ್ಳುವ 'ಸಹಭಾಗಿ'ಯ ನರಸ್ತಾಪೀಯ ಅಗತ್ಯ.
- ಸೀಮಿತ ಪರಿಧಿ ತನ್ನ ಜೀವನವನ್ನು ಸೀಮಿತಗೊಳಿಸಿಕೊಳ್ಳುವ ನರಸ್ತಾಪೀಯ ಅಗತ್ಯ.
- ಅಧಿಕಾರ, ಶಕ್ತಿಯ ನರಸ್ತಾಪೀಯ ಅಗತ್ಯ.
- ಬೇರೆಯವರನ್ನು ಶೋಷಣೆ ಮಾಡಬೇಕೆಂಬ ನರಸ್ತಾಪೀಯ

Digitised by Bharatavani, CIIL

ಅಗತ್ಯ.

- ಘನತೆ, ಗೌರವ ಪಡೆಯಬೇಕೆಂಬುದರ ನರಸ್ವಾಪೀಯ ಅಗತ್ಯ.
- ಆತ್ಮ ಪ್ರಶಂಸೆಯ ನರಸ್ವಾಪೀಯ ಅಗತ್ಯ.
- ವೈಯಕ್ತಿಕ ಸಾಧನೆ ಮಾಡಬೇಕೆಂಬ ಆಕಾಂಕ್ಷೆಯ ನರಸ್ವಾಪೀಯ ಅಗತ್ಯ.
- ಆತ್ಮ–ಪ್ರರ್ಯಾಪ್ತತೆ ಮತ್ತು ಸ್ವಾತಂತ್ರ್ಯದ ನರಸ್ವಾಪೀಯ ಅಗತ್ಯ.
- ಪರಿಪೂರ್ಣತೆ ಮತ್ತು ಅಪರಾಜಿತತೆಯ ನರಸ್ವಾಪೀಯ ಅಗತ್ಯ.

ನಂತರದ ತನ್ನ ಬರವಣಿಗೆಗಳಲ್ಲಿ ಈ ಹತ್ತು ನರಸ್ವಾಪೀಯ ಅಗತ್ಯಗಳನ್ನು ಹಾರ್ನೆ ಮೂರು ಪ್ರವೃತ್ತಿಗಳಡಿಯಲ್ಲಿ ವರ್ಗೀಕರಿಸಿದಳು.

1) ಜನಗಳ (ಸಮಾಜದ) ಕಡೆಗೆ ಪ್ರವೃತ್ತಿಸುವುದು – ಜನರನ್ನು ಪ್ರೀತಿಸುವುದು, ಅವರೊಂದಿಗೆ ಬೆರೆಯುವುದು, ಸಮಾಜದ ನಿಯಮಗಳಿಗೆ, ಆದರ್ಶಗಳಿಗೆ ಅನುಗುಣವಾಗಿ ವರ್ತಿಸುವುದು.

2) ಜನರಿಂದ (ಸಮಾಜದಿಂದ) ದೂರ ಸರಿಯುವ ಪ್ರವೃತ್ತಿ – ಏಕಾಂತವಾಗಿರುವುದು ಸಮಾಜದೊಂದಿಗೆ ಬೆರೆಯದಿರುವುದು, ಕನಿಷ್ಠ ಸಂಖ್ಯೆಯ ಸಾಮಾಜಿಕ ಸಂಬಂಧಗಳನ್ನು ಹೊಂದಿರುವುದು, ಸ್ವಾತಂತ್ರ್ಯತೆ ಬಯಸುವುದು.

3) ಜನರಿಗೆ (ಸಮಾಜಕ್ಕೆ) ವಿರೋಧವಾಗಿ ಪ್ರವೃತ್ತಿಸುವುದು – ಸಮಾಜವನ್ನು ಟೀಕಿಸುವುದು/ ವಿರೋಧಿಸುವುದು, ಅಧಿಕಾರ ಬಯಸುವುದು, ತನ್ನನ್ನೇ ಸಮರ್ಥಿಸಿಕೊಳ್ಳುವುದು, ಸಂಘರ್ಷ/ ಆಕ್ರಮಣ ಪ್ರವೃತ್ತಿ, ಸಮಾಜಕ್ಕೆ ಹೊಂದಿಕೊಳ್ಳದಿರುವುದು.

**ಸಲ್ಲಿವನ್ನನ ಸಿದ್ಧಾಂತ:** ಹ್ಯಾರಿ ಸ್ಟ್ಯಾಕ್ ಸಲ್ಲಿವನ್ 1892ರಲ್ಲಿ ನ್ಯೂಯಾರ್ಕ್‌ನ ನಾರ್‌ವಿಚ್ ಎಂಬಲ್ಲಿ ಜನಿಸಿದನು. ಷಿಕಾಗೋ ಕಾಲೇಜಿನಿಂದ ವೈದ್ಯಕೀಯ ಪದವಿ ಪಡೆದ ಸಲಿವನ್ ಮೊದಲನೆ ವಿಶ್ವಸಮರದ ಸಮಯದಲ್ಲಿ ಸೇನೆಯಲ್ಲಿ ಸೇವೆ ಸಲ್ಲಿಸಿದನು. ಬೇರೆ ಬೇರೆ ನಗರಗಳಲ್ಲಿ ಮನೋಚಿಕಿತ್ಸಾ (Psychiatry) ಕ್ಷೇತ್ರದಲ್ಲಿನ ತನ್ನ ಅನುಭವಗಳ ಆಧಾರದ ಮೇಲೆ ಸಲ್ಲಿವನ್ ವ್ಯಕ್ತಿತ್ವ ಸಿದ್ಧಾಂತವನ್ನು ರೂಪಿಸಿದನು. ಫ್ರಾಯ್ಡ್‌ನಿಂದ ಪ್ರಭಾವಿತನಾದರೂ ಸಲ್ಲಿವನ್ ಅಂತರವ್ಯಕ್ತ್ಯಾತ್ಮಕ ಸಂಬಂಧಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದಾನೆ. ಸಲ್ಲಿವನ್ 1949ರಲ್ಲಿ ಪ್ಯಾರಿಸ್‌ನಲ್ಲಿ ನಿಧನ ಹೊಂದಿದನು.

**ವ್ಯಕ್ತಿತ್ವದ ಸಂರಚನೆ:** 'ವ್ಯಕ್ತಿತ್ವ' ಎನ್ನುವುದು ಪೂರ್ಣತಃ ಒಂದು ಊಹಾತ್ಮಕ ಅಸ್ತಿತ್ವವಾಗಿದೆ ಎಂದು ಸಲ್ಲಿವನ್ ಸಮರ್ಥಿಸುತ್ತಾನೆ. ಅದನ್ನು ಅಂತರ ವ್ಯಕ್ತ್ಯಾತ್ಮಕ ಸನ್ನಿವೇಶಗಳಿಂದ ಹೊರತುಪಡಿಸಿ ವೀಕ್ಷಿಸಲು, ಅಧ್ಯಯನ ಮಾಡಲು ಸಾಧ್ಯವಾಗುವುದಿಲ್ಲ. ವ್ಯಕ್ತಿಯಲ್ಲಿ ಅವನ/ಅವಳ ವ್ಯಕ್ತಿತ್ವದ ಸಂಘಟನೆ ಅಂತರ ವ್ಯಕ್ತ್ಯಾತ್ಮಕ ಘಟನೆಗಳನ್ನು ಒಳಗೊಂಡಿದೆಯೆ ಹೊರತು ಅಂತರ್–ಮಾನಸಿಕ (Intra-Psychic) ಘಟನೆಗಳನ್ನಲ್ಲ. ವ್ಯಕ್ತಿ ಒಬ್ಬ ಅಥವಾ ಹೆಚ್ಚಿನ ವ್ಯಕ್ತಿಗಳೊಂದಿಗೆ ವರ್ತಿಸುತ್ತಿರುವಾಗ ಮಾತ್ರ ವ್ಯಕ್ತಿತ್ವ ಅಭಿವ್ಯಕ್ತಗೊಳ್ಳುತ್ತದೆ. ಆದ್ದರಿಂದಲೇ ವ್ಯಕ್ತಿತ್ವ ಸಂಘಟನೆಯಲ್ಲಿ ಅಂತರ ವ್ಯಕ್ತ್ಯಾತ್ಮಕ ಸಂಬಂಧಗಳು ಪ್ರಮುಖ ಪಾತ್ರ ವಹಿಸುತ್ತವೆ. ವ್ಯಕ್ತಿತ್ವದ ಸಂರಚನೆ ಮೂರು ಮುಖ್ಯ ಪ್ರಕ್ರಿಯೆಗಳನ್ನು ಒಳಗೊಂಡಿದೆ. ಗತಿಶೀಲಾತ್ಮಕತೆ (Dynamism), ಮೂರ್ತೀಕರಣ (Personification), ಸಂಜ್ಞಾನಾತ್ಮಕ ಪ್ರಕ್ರಿಯೆಗಳು (Cognitive Processes) ಮತ್ತು ಸ್ವಯಂ ವ್ಯವಸ್ಥೆಯನ್ನು (Self System) ಹೊಂದಿದೆ.

**ಗತಿಶೀಲಾತ್ಮಕತೆಗಳು (Dynamisus):** ಮಾನವನನ್ನು ಒಂದು ಜೀವಿಯ ಲಕ್ಷಣಕ್ಕೆ ಕಾರಣವಾಗಿಸುವ ಶಕ್ತಿಯ ರೂಪಾಂತರಣದ ಒಂದು ಸ್ಥಿರವಾದ ವಿನ್ಯಾಸವನ್ನು ಸಲ್ಲಿವನ್ ಗತಿಶೀಲಾತ್ಮಕತೆ ಎಂದು ಕರೆದಿದ್ದಾನೆ. ಇದು ವ್ಯಕ್ತಿತ್ವ ಅಧ್ಯಯನದ ಮೂಲ ಘಟಕವಾಗುತ್ತದೆ. ಈ ಶಕ್ತಿ ರೂಪಾಂತರಣ ವರ್ತನೆಯ ಒಂದು ರೂಪವಾಗಿದೆ. ಅದು ಮಾತನಾಡುವುದು, ಆಟವಾಡುವುದು, ಅಳುವುದು ಮುಂತಾದ ಬಾಹ್ಯರೂಪದ ವರ್ತನೆಗಳಾಗಿರಬಹುದು ಅಥವಾ ಯೋಚಿಸುವುದು, ಕಲ್ಪಿಸುವುದು, ಭಾವಿಸುವುದು ಮುಂತಾದ ಆಂತರಿಕ ವರ್ತನೆಗಳಾಗಿರಬಹುದು. ಎಲ್ಲಾ ಮಾನವರು ಒಂದೇ ರೀತಿಯ ಗತಿಶೀಲಾತ್ಮಕತೆಗಳನ್ನು ಹೊಂದಿರುತ್ತಾರೆ. ಆದರೆ ಅವುಗಳ ಅಭಿವ್ಯಕ್ತಿಯಲ್ಲಿ ವ್ಯಕ್ತಿ ವ್ಯತ್ಯಾಸಗಳಿರುತ್ತವೆ. ಏಕೆಂದರೆ ಇವುಗಳು ಅಂತರ ವ್ಯಕ್ತ್ಯಾತ್ಮಕ ಸಂಬಂಧಗಳನ್ನು ಅವಲಂಭಿಸಿವೆ. ಗತಿಶೀಲಾತ್ಮಕತೆಗಳು ವ್ಯಕ್ತಿಗೆ ತನ್ನ ಮೂಲಭೂತ ಅಗತ್ಯಗಳನ್ನು (ಹಸಿವು, ನೀರಡಿಕೆ, ಲೈಂಗಿಕ ತೃಷೆ) ಪೂರೈಸಿಕೊಳ್ಳಲು ಸಹಾಯ ಮಾಡುತ್ತವೆ.

**ಸ್ವಯಂ ವ್ಯವಸ್ಥೆ:** ಇದು ಸಮಾಜದ ಸಂಪರ್ಕದಿಂದ ವ್ಯಕ್ತಿಯಲ್ಲಿ ಉಂಟಾಗುವ ಆತಂಕದ ಅನುಭವಗಳಿಂದ ವಿಕಾಸಗೊಳ್ಳುತ್ತದೆ. ಇದೂ ಒಂದು ಗತಿಶೀಲಾತ್ಮಕತೆಯೇ, ವ್ಯಕ್ತಿ ನಿರಂತರವಾಗಿ ಸ್ವಯಂನ ಆತಂಕವನ್ನು ಕಡಿಮೆ ಮಾಡಲು ಪ್ರಯತ್ನ ಶೀಲನಾಗುತ್ತಾನೆ. ಈ ಕಾರ್ಯವನ್ನು ಮೂರು ರೀತಿಗಳಲ್ಲಿ ಮಾಡಲಾಗುತ್ತದೆ. (1) ತನಗೆ ತೃಪ್ತಿಯನ್ನು ಕೊಡುವ ಹಾಗೂ ಸಮಾಜಕ್ಕೆ ಸಮ್ಮತವಾದ ವರ್ತನ ವಿನ್ಯಾಸಗಳನ್ನು ಒಪ್ಪಿಕೊಳ್ಳುವುದು. ಇದು 'ನಾನು ಒಳ್ಳೆಯವನು' ಎಂಬ ಭಾವನೆಯನ್ನು ದೃಢಗೊಳಿಸುತ್ತದೆ. (2) ಸ್ವಯಂಗೆ ಬೆದರಿಕೆಯನ್ನುಂಟು ಮಾಡುವ, ಸಮಾಜ ಸಮ್ಮತವಲ್ಲದ ವರ್ತನ ವಿನ್ಯಾಸಗಳನ್ನು ದಮನ ಮಾಡುವುದು. 'ನಾನು ಕೆಟ್ಟವನು' ಎಂಬ ಭಾವನೆಯನ್ನು ಇದು ನಿವಾರಿಸುತ್ತದೆ. (3) ತೀರಾ ಕೆಟ್ಟದಾಗಿ, ಸಹಿಸಿಕೊಳ್ಳಲಾಗದ ವರ್ತನೆಗಳನ್ನು/ಭಾವನೆಗಳನ್ನು ತೆಗೆದು ಹಾಕುವುದು. 'ಇದು ನಾನಲ್ಲ' ಎಂಬ ಭಾವನೆಯನ್ನು ಇದು ದೃಢಪಡಿಸುತ್ತದೆ.ವ್ಯಕ್ತಿ ಸ್ವಯಂನ ಆತಂಕವನ್ನು ನಿವಾರಿಸಿಕೊಳ್ಳಲು ತೀವ್ರವಾಗಿ ಪ್ರಯತ್ನಿಸಿದರೆ ಸ್ವಾರ್ಥ ಭಾವನೆ ಹೆಚ್ಚಾಗುತ್ತದೆ. ಅವಾಸ್ತವಿಕ ಆತ್ಮ ಪ್ರತ್ಯಯ ರೂಪುಗೊಳ್ಳುತ್ತದೆ.

Digitised by Bharatavani, CIIL

**ಮೂರ್ತೀಕರಣ (Peronification):** ವ್ಯಕ್ತಿ ತನ್ನ ಬಗ್ಗೆ ಮತ್ತು ಇತರ ವ್ಯಕ್ತಿಗಳ ಬಗ್ಗೆ ಹೊಂದಿರುವ ಬಿಂಬಗಳೇ ಮೂರ್ತೀಕರಣಗಳು. ಈ ಪ್ರಕ್ರಿಯೆ ಅಂತರ್‌ವ್ಯಕ್ತ್ಯಾತ್ಮಕ ಸಂಬಂಧಗಳಿಂದ ರೂಪುಗೊಳ್ಳುತ್ತದೆ. ಮೂರ್ತೀಕರಣಗಳು ವಿಕಾಸಾತ್ಮಕ ಸ್ವರೂಪದವುಗಳು. ಮಗು ಮೊದಲು ಒಳ್ಳೆತನ ಕೆಟ್ಟತನಗಳ ರೂಪದಲ್ಲಿ ತನ್ನನ್ನು ತಾನೇ ಮೂರ್ತೀಕರಿಸಿಕೊಳ್ಳುತ್ತದೆ. ಇದಕ್ಕೆ ಸಂಬಂಧಿಸಿದಂತೆ ಬೇರೆಯವರ ವರ್ತನೆಯನ್ನು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ಅರ್ಥೈಸತೊಡಗುತ್ತದೆ. ವ್ಯಕ್ತಿಯ ಅನುಭವಗಳ ಆಧಾರದ ಮೇಲೆ ಮೂರ್ತೀಕರಣಗಳು ಆಗುವುದರಿಂದ ಅವು ಸಂಕೀರ್ಣ ರೂಪಗಳನ್ನು ಪಡೆಯಬಹುದು.ಕೆಲವು ವೇಳೆ ವಿರೂಪಗೊಳ್ಳಬಹುದು. ಅತಿ ರಂಜಿತವೂ ಆಗಬಹುದು. ಹೀಗಾಗಿ ವ್ಯಕ್ತಿ ಯಾವುದೇ ವಾಸ್ತವಿಕ ಆಧಾರವಿಲ್ಲದೆ ಕೆಲವರನ್ನು ಅಪಾಯಕಾರಿಯಾದವರೆಂದೂ, ಕೆಲವರನ್ನೂ ಮುಗ್ಧ ಸ್ವಭಾವದವರೆಂದೂ ತೀರ್ಮಾನಿಸಬಹುದು. ಮೂರ್ತೀಕರಣಗಳು ವಾಸ್ತವಿಕ, ತಾರ್ಕಿಕ ಆಧಾರದ ಮೇಲೆ ರೂಪುಗೊಂಡರೆ ಒಳ್ಳೆಯದು ಎಂದು ಸಲ್ಲಿವನ್ ಅಭಿಪ್ರಾಯ ಪಡುತ್ತಾನೆ.

**ಸಂಜ್ಞಾನಾತ್ಮಕ ಪ್ರಕ್ರಿಯೆಗಳು (Cognitive Processess):** ವ್ಯಕ್ತಿತ್ವ ವಿಕಾಸದಲ್ಲಿ ಕೆಲವು ಸಂಜ್ಞಾನಾತ್ಮಕ ಪ್ರಕ್ರಿಯೆಗಳು ಪಾತ್ರ ವಹಿಸುತ್ತವೆ. ಸಲ್ಲಿವನ್ ಮೂರು ರೀತಿಯ ಪ್ರಕ್ರಿಯೆಗಳನ್ನು ಗುರ್ತಿಸಿದ್ದಾನೆ.

(1) **ಪ್ರೋಟೋ ಟ್ಯಾಕ್ಸಿಕ್ ಅನುಭವಗಳು:** ಇವು ಮನಸ್ಸಿನ ಮೂಲಕ ಹಾದು ಹೋಗುವ ಭಾವಗಳು, ಸಂವೇದನೆಗಳು ಮತ್ತು ಬಿಂಬಗಳಾಗಿವೆ. ಇವುಗಳನ್ನು ಒಟ್ಟಾಗಿ ಪ್ರಜ್ಞಾ ಪ್ರವಾಹ Steam of Consciousness ಎಂದು ಹೇಳಬಹುದು. ಜನ್ಮದ ನಂತರ ಕೆಲವು ವರ್ಷಗಳವರೆಗೆ ಈ ಅನುಭವಗಳು ಉಂಟಾಗುತ್ತವೆ. ಇವು ಮೂಲ ಸ್ವರೂಪದವುಗಳಾಗಿದ್ದು, ಮುಂದಿನ ಅನುಭವಗಳಿಗೆ ಆಧಾರವಾಗುತ್ತವೆ.

(2) **ಪ್ಯಾರಾ ಟ್ಯಾಕ್ಸಿಕ್ ಅನುಭವಗಳು:** ಇವು ಒಂದೇ ಕಾಲದಲ್ಲಿ ಘಟಿಸುವ ಘಟನೆಗಳ ನಡುವೆ ಸಂಬಂಧ ಕಲ್ಪಿಸುವ ಅನುಭವಗಳಾಗಿವೆ. ಘಟನೆಗಳು ತಾರ್ಕಿಕವಾಗಿ ಸಂಬಂಧಿಸಿರಬಹುದು ಅಥವಾ ಅವುಗಳ ನಡುವೆ ಯಾವುದೇ ತಾರ್ಕಿಕ ಸಂಬಂಧವಿಲ್ಲದಿರಬಹುದು. ಸಲ್ಲಿವನ್ನನ ಪ್ರಕಾರ ಮೂಢನಂಬಿಕೆಗಳು ಈ ಪ್ರಕ್ರಿಯೆಯಿಂದ ಉಂಟಾಗುತ್ತವೆ. ಬಹಳ ಮಂದಿಯ ಸಂಜ್ಞಾನಾತ್ಮಕ ಅನುಭವಗಳು ಈ ಮಟ್ಟದಲ್ಲಿಯೇ ಉಳಿದುಬಿಡುತ್ತವೆ ಎಂದು ಸಲ್ಲಿವನ್ ಹೇಳುತ್ತಾನೆ. ಮನಸ್ತಾಪೀಯ ರೋಗಿಗಳಲ್ಲಿ ಕಂಡುಬರುವ ವಿಭ್ರಮೆಗಳು (Hallucinations) ಮತ್ತು ಅತಾರ್ಕಿಕ ನಂಬಿಕೆಗಳು (Delusions) ಈ ಪ್ರಕ್ರಿಯೆಯ ಮನೋರೋಗಾತ್ಮಕ ಲಕ್ಷಣಗಳ ಉದಾಹರಣೆಗಳಾಗಿವೆ.

(3) **ಸಿಂಟ್ಯಾಕ್ಸಿಕ್ (ಅರ್ಥಾತ್ಮಕ) ಅನುಭವಗಳು:** ಈ ಅನುಭವಗಳು ಅರ್ಥಪೂರ್ಣ ಶಬ್ದಗಳು ಮತ್ತು ಅಂಕೆಗಳನ್ನು ಸಂಕೇತಗಳಾಗಿ ಉಪಯೋಗಿಸುವುದಕ್ಕೆ ಸಂಬಂಧಿಸಿವೆ. ಈ ಸಂಕೇತಗಳು ಸಮಾಜದಲ್ಲಿ ಅದರ ಸದಸ್ಯರು ಪರಸ್ಪರ ಒಪ್ಪಿಗೆಯಿಂದ ಸ್ವೀಕರಿಸಿರುವ ಸಂಕೇತಗಳಾಗಿವೆ. ಇವು ಪಾರಸ್ಪರಿಕ ಸಂವಹನವನ್ನು ಸುಗಮಗೊಳಿಸುತ್ತದೆ. ಅಂತರ ವ್ಯಕ್ತ್ಯಾತ್ಮಕ ಸಂಬಂಧಗಳನ್ನು ವ್ಯಾಖ್ಯಾನಿಸಲು ಸಹಾಯಕವಾಗುತ್ತವೆ. ಈ ಪ್ರಕ್ರಿಯೆ ವ್ಯಕ್ತಿತ್ವ ವಿಕಾಸದಲ್ಲಿ ಅತ್ಯಂತ ಮೇಲ್ಮಟ್ಟದ ಯೋಚನಾ ಪ್ರಕ್ರಿಯೆಯಾಗಿದೆ.

ಸಲ್ಲಿವನ್ ವ್ಯಕ್ತಿತ್ವ ವಿಕಾಸದಲ್ಲಿ ಶೈಶವಾವಸ್ಥೆ (1–18 ತಿಂಗಳು) ಬಾಲ್ಯಾವಸ್ಥೆ (18 ತಿಂಗಳಿಂದ 5 ವರ್ಷ), ಕೌಮಾರ್ಯಾವಸ್ಥೆ (6–11 ವರ್ಷ), ಪೂರ್ವ–ತಾರುಣ್ಯಾವಸ್ಥೆ (11–13 ವರ್ಷ), ಆರಂಭಿಕ ತಾರುಣ್ಯಾವಸ್ಥೆ (12–18 ವರ್ಷ) ಉತ್ತರ ತಾರುಣ್ಯಾವಸ್ಥೆ (17–19 ವರ್ಷ) ಮತ್ತು ವಯಸ್ಕಾವಸ್ಥೆ (20 ವರ್ಷದಿಂದ – ಮುಂದೆ) ಎಂಬ ಹಂತಗಳನ್ನು ಗುರ್ತಿಸಿದ್ದಾನೆ.

**ಎರಿಚ್ ಫ್ರಾಮ್‌ನ ಸಿದ್ಧಾಂತ:** ಎರಿಚ್ ಫ್ರಾಮ್, 1900ರಲ್ಲಿ ಜರ್ಮನಿಯ ಫ್ರಾಂಕ್‌ಫರ್ಟ್ ನಗರದಲ್ಲಿ ಜನಿಸಿದನು. ಹೈಡಲ್‌ಬರ್ಗ್, ಫ್ರಾಂಕ್‌ಫರ್ಟ್ ಮತ್ತು ಮ್ಯೂನಿಚ್ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಿದನು. ಮ್ಯೂನಿಚ್‌ನಲ್ಲಿ ಮನೋವಿಶ್ಲೇಷಣೆಯಲ್ಲಿ ತರಬೇತಿ ಪಡೆದುದಲ್ಲದೆ, ಬರ್ಲಿನ್ ಸೈಕೋ ಅನಲಿಟಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ತನ್ನನ್ನು ಮನೋವಿಶ್ಲೇಷಣೆಗೆ ಒಳಪಡಿಸಿಕೊಂಡನು. 1933ರಲ್ಲಿ ಅಮೇರಿಕಾಕ್ಕೆ ಬಂದ ಫ್ರಾಮ್ ಷಿಕಾಗೋ ಸೈಕೋ ಅನಲಿಟಿಕಲ್ ಇನ್ಸಿಟ್ಯೂಟ್‌ನಲ್ಲಿ ಉಪನ್ಯಾಸಕನಾಗಿ ಸೇರಿಕೊಂಡನು. ನಂತರದಲ್ಲಿ ನ್ಯೂಯಾರ್ಕ್ ನಗರದಲ್ಲಿ ತನ್ನ ಮನೋಚಿಕಿತ್ಸಕ ವೃತ್ತಿಯನ್ನು ಆರಂಭಿಸಿದನು. ತನ್ನ ಕಡೇ ವರ್ಷಗಳಲ್ಲಿ ಇವನು ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ನೆಲೆಸಿದನು. ಫ್ರಾಮ್ ಪ್ರಕಟಿಸಿದ ಪುಸ್ತಕಗಳಲ್ಲಿ Escape from Freedom ಎನ್ನುವ ಪುಸ್ತಕ ವ್ಯಾಪಕವಾದ ಪ್ರಸಿದ್ಧಿ ಪಡೆದುಕೊಂಡಿತು. ಫ್ರಾಮ್ ಸಮಾಜವಾದಿ ಕಾರ್ಲ್‌ಮಾರ್ಕ್ಸ್‌ನ ಬರಹಗಳಿಂದಲೂ ಪ್ರಭಾವಿತನಾಗಿದ್ದಾನೆ.

**ಮಾನವನ ಸ್ವಭಾವ:** ಮಾನವ ಮೃಗೀಯ ಸ್ವಭಾವವನ್ನು ಹೊಂದಿದ್ದಾನೆ ಎಂದು ಫ್ರಾಮ್ ಪರಿಗಣಿಸುತ್ತಾನೆ. ಮಾನವನಿಗೆ ತೃಪ್ತಿಪಡಿಸಿ ಕೊಳ್ಳಲೇಬೇಕಾದ ಕೆಲವು ಅಗತ್ಯಗಳಿವೆ. ಫ್ರಾಮ್ ಮಾನವ ಮೂಲಭೂತವಾಗಿ ಕೆಟ್ಟವನು ಎಂದು ನಂಬುವುದಿಲ್ಲ. ಮೂಲಭೂತ ಅಗತ್ಯಗಳ ಜೊತೆಗೆ ಮಾನವ ಸಾಮಾಜಿಕ ಪ್ರಕ್ರಿಯೆಗಳ ಫಲವಾಗಿ ಪ್ರೀತಿ, ದ್ವೇಷ, ಅಸೂಯೆ, ಅಧಿಕಾರ, ದಾಹ, ಇನ್ನೊಬ್ಬರಿಗೆ ಅಡಿಯಾಳಾಗಿರಬೇಕೆಂಬ ಅಪೇಕ್ಷೆ, ಸ್ಪರ್ಧೆ, ಸಹಕಾರ ಮುಂತಾದ ಲಕ್ಷಣಗಳನ್ನೂ ಹೊಂದಿದ್ದಾನೆ. ಒಮ್ಮೆಗೇ ಮೃಗವಾಗಿ ಮತ್ತು ಮನುಷ್ಯನಾಗಿ ಇರಬೇಕಾದ ಅಸ್ತಿತ್ವವನ್ನು ಮಾನವ ಹೊಂದಿದ್ದಾನೆ. ಜೈವಿಕ ಆಧಾರಗಳಿದ್ದರೂ, ಮಾನವೀಯ ಸ್ವಭಾವವನ್ನು ಅಂದರೆ ಮಾನಸಿಕ ಲಕ್ಷಣಗಳು ಮತ್ತು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ವಿಕಾಸಗೊಳ್ಳುವ ಮಾನವ ಲಕ್ಷಣಗಳನ್ನು ಹೊಂದಿರುವ ಜೀವಿ ಮಾನವನೊಬ್ಬನೇ. ಉಳಿದ ಜೀವಿಗಳಲ್ಲಿ ಈ ಲಕ್ಷಣಗಳಿಲ್ಲ. ಮಾನವ ತನ್ನ ಅಗತ್ಯಗಳನ್ನು ಸಾಮಾಜಿಕವಾಗಿಯೂ, ಸಾಂಸ್ಕೃತಿಕವಾಗಿಯೂ ತೃಪ್ತಿ ಪಡಿಸಿಕೊಳ್ಳಬೇಕು. ಫ್ರಾಮ್‌ನ ಪ್ರಕಾರ ಮಾನವ ಮೃಗೀಯ ಅಸ್ತಿತ್ವದಿಂದ ಮಾನವ ಸ್ವಭಾವದ ಕಡೆಗೆ ಮುಂದುವರಿಯುವ ಪ್ರವೃತ್ತಿಯನ್ನು ತೋರಿಸುತ್ತಾನೆ. ಪ್ರಕೃತಿಯಿಂದ ಮತ್ತು ಅನುವರ್ತನೆ

Digitised by Bharatavani, CIIL

(Conformity) ಯಿಂದ ಮುಕ್ತಿಯನ್ನು ಪಡೆಯಲು ಪ್ರಯತ್ನಿಸುತ್ತಾನೆ. ಇದು ಮಾನವ ತನ್ನನ್ನು ತಾನು ಕಂಡುಕೊಳ್ಳಲು, ಪ್ರಪಂಚದಲ್ಲಿ ವಿಶಿಷ್ಟ ಜೀವಿಯಾಗಲು ಮಾಡಿದ ಪ್ರಯತ್ನವಾಗಿದೆ. ಹಿಮ್ಮುಖವಾಗಿ ಬದಲಾಯಿಸಲು ಆಗದ ಈ ಪ್ರಕ್ರಿಯೆಯನ್ನು ಫ್ರಾಮ್ 'ವ್ಯಕ್ತೀಕರಣ' (Individuation) ಎಂದು ಕರೆದಿದ್ದಾನೆ.

**ಮಾನವನ ಉಭಯಸಂಕಟದ ಸ್ಥಿತಿ:** ತನ್ನ ದೀರ್ಘಕಾಲದ ಸಾಮಾಜಿಕ ಸಾಂಸ್ಕೃತಿಯ ಫಲವಾದ ನಾಗರೀಕತೆಯಿಂದ ಮಾಡಿದ ಸಾಧನೆಗಳಿಂದ, ವೈಜ್ಞಾನಿಕ ಮುನ್ನಡೆಗಳಿಂದ ಮಾನವ ಪ್ರಕೃತಿಯಿಂದ ಮುಕ್ತಿ ಪಡೆಯುವುದರಲ್ಲಿ ಊಹಾತೀತ ಸಾಧನೆಯನ್ನು ಮಾಡಿದ್ದಾನೆ. ಪ್ರಕೃತಿಯನ್ನು ಬಹುಮಟ್ಟಿಗೆ ನಿಯಂತ್ರಿಸಿ ಅದರಿಂದ ಸ್ವಾತಂತ್ರ್ಯವನ್ನು ಪಡೆದಿದ್ದಾನೆ. ಆದರೆ ನಾಗರೀಕತೆ ಮುಂದುವರಿದಂತೆ ಮಾನವ ಪ್ರಕೃತಿಯಿಂದ ಪಡೆದ ಸ್ವಾತಂತ್ರ್ಯ ಅವನಿಗೆ ನಗರೀಕರಣ, ಬಡತನ, ಅತಿಯಾದ ವ್ಯಕ್ತೀಕರಣದಿಂದಾಗಿ ಏಕಾಂಗಿತನ, ಅನಾಥ ಪ್ರಜ್ಞೆ(Alieanation), ಕಲುಷಿತ ಪರಿಸರ ಮುಂತಾದ ಸಮಸ್ಯೆಗಳು ಎದುರಾಗಿ ಆತಂಕ ಸ್ಥಿತಿಯನ್ನು ಅನುಭವಿಸುವಂತೆ ಮಾಡಿವೆ. ಇದರಿಂದಾಗಿ ಅವನು ಉಭಯ ಸಂಕಟ ಸ್ಥಿತಿಗೆ ಸಿಲುಕಿದ್ದಾನೆ. ಇವೆಲ್ಲಾ ಅವನು ಬಯಸಿದ್ದ ಸ್ವಾತಂತ್ರ್ಯದ ದುಷ್ಪಲಗಳಾಗಿ ಪರಿಣಮಿಸಿವೆ. ಅದರಿಂದ ಈ ಸಮಸ್ಯೆಗಳನ್ನು ಪರಿಹರಿಸಿಕೊಂಡು ತನ್ನನ್ನು ತಾನು ಸಮಾಜಕ್ಕೆ ಪ್ರಕೃತಿಗೆ ಸಂಬಂಧಿಸಿಕೊಳ್ಳಲು ಈ ಅತಿಯಾದ ಸ್ವಾತಂತ್ರ್ಯದಿಂದ ತಪ್ಪಿಸಿಕೊಳ್ಳಲು(Escape from Freedom) ಬಯಸುತ್ತಿದ್ದಾನೆ.

**ಮಾನವನ ಅಸ್ತಿತ್ವದ ಅಗತ್ಯಗಳು:** ಮಾನವನ ಅಸ್ತಿತ್ವದ ಪರಿಸ್ಥಿತಿಗಳಿಂದ ಕೆಲವು ನಿರ್ದಿಷ್ಟ ಅಗತ್ಯಗಳು ಉದ್ಭವಿಸುತ್ತವೆ ಎಂದು ಫ್ರಾಮ್ ಹೇಳುತ್ತಾನೆ. ಈ ಅಗತ್ಯಗಳು ಹೀಗಿವೆ.

1) **ಸಂಬಂಧಿಸಿಕೊಳ್ಳುವ ಅಗತ್ಯ (Need for Relatedness):** ಮಾನವ ಮೊದಲಿಗೆ ಪ್ರಕೃತಿಯೊಂದಿಗೆ ಪ್ರಾಣಿಗಳಂತೆಯೇ ನಿಕಟ ಸಂಬಂಧವನ್ನು ಹೊಂದಿದ್ದ. ಆದರೆ ತನ್ನ ತರ್ಕಿಸುವಿಕೆ ಮತ್ತು ಕಲ್ಪಿಸುವಿಕೆಯ ಸಾಮರ್ಥ್ಯಗಳಿಂದಾಗಿ ಮಾನವ ಪ್ರಕೃತಿಯಿಂದ ದೂರಸರಿದು ಅದರ ನಿಕಟ ಸಂಬಂಧವನ್ನು ಕಳೆದುಕೊಂಡಿದ್ದಾನೆ. ಹೀಗಾಗಿ ಅವನು ತನ್ನ ಸಹಜೀವಿಗಳೊಂದಿಗೆ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವ ಅಗತ್ಯ ಉಂಟಾಗಿದೆ. ಇದರ ಫಲವೇ ಮಾನವ ರೂಪಿಸಿಕೊಂಡಿರುವ ಸಾಮಾಜಿಕ ಸಂಬಂಧಗಳು. ಪ್ರೀತಿ, ಮಮತೆಗಳನ್ನು ನೀಡುವ ಉತ್ಪಾದಕ ಪ್ರೀತಿಯ(Producative love) ಸಂಬಂಧಗಳು (ತಾಯಿ–ಮಗು, ತಂದೆ–ಮಗು, ಸೋದರ–ಸೋದರಿಯರು, ಪತಿ–ಪತ್ನಿ, ಗುರು–ಶಿಷ್ಯ, ಸ್ನೇಹ) ಅತ್ಯಂತ ಮುಖ್ಯವಾಗಿ ವ್ಯಕ್ತಿತ್ವವನ್ನು ರೂಪಿಸುತ್ತವೆ. ಉತ್ಪಾದಕ ಪ್ರೀತಿ ಪಾರಸ್ಪರಿಕ ಲಕ್ಷ್ಯಿಸುವಿಕೆ, ಜವಾಬ್ದಾರಿ, ಗೌರವ ಮತ್ತು ಅರ್ಥಮಾಡಿಕೊಳ್ಳುವಿಕೆಯನ್ನು ಸೂಚಿಸುತ್ತದೆ.

2) **ಅತಿಕ್ರಮಿಸುವಿಕೆಯ (ಉತ್ಕರ್ಷಿಸುವ) ಅಗತ್ಯ (Need for Transcendence):** ಇದು ಮಾನವ ತನ್ನ ಮೃಗೀಯ ಸ್ವಭಾವದಿಂದ ಮೇಲೇರಬೇಕೆಂಬ, ಉತ್ಕರ್ಷ ಪಡೆಯಬೇಕೆಂಬ ಅಗತ್ಯಕ್ಕೆ ಸಂಬಂಧಿಸಿದೆ. ಮೃಗೀಯ ಅಗತ್ಯಗಳನ್ನು (ಹಸಿವು ಇತ್ಯಾದಿ) ತೀರಾ ಉಪೇಕ್ಷಿಸಿದರೆ ಅವು ಆತಂಕವನ್ನು ಉಂಟು ಮಾಡಿ ವಿನಾಶಕಾರಿಯಾಗುತ್ತವೆ. ಆದ್ದರಿಂದ ಅವುಗಳನ್ನು ಸಮತೋಲಿತ ರೀತಿಯಲ್ಲಿ ತೃಪ್ತಿಗೊಳಿಸುತ್ತಾ ಅವುಗಳ ಹಿಡಿತದಿಂದ ಮೇಲೇರಬೇಕು.

3) **ಬೇರೂರಿರುವಿಕೆಯ ಅಥವಾ ನೆಲೆಗೊಂಡಿರುವ ಅಗತ್ಯ (Need for Rootedness):** ಮಾನವ ಜೀವಿಗಳು ತಮಗೆ ಸ್ವಾಭಾವಿಕವಾದ ಒಂದು ನೆಲೆ (ಬೇರು) ಇರಬೇಕೆಂದು ಅಪೇಕ್ಷಿಸುತ್ತಾರೆ. ಪ್ರಪಂಚದೊಂದಿಗೆ ಅವಿಭಾಜ್ಯ ಅಂಗವಾಗಿದ್ದುಕೊಂಡು, ತಾವು ಒಂದು ನೆಲೆಯ ವ್ಯವಸ್ಥೆಯ ಅಂದರೆ ಸಮಾಜದ ಒಂದು ಭಾಗವಾಗಿದ್ದೇವೆ ಎಂಬ ತೃಪ್ತಿಯನ್ನು ಹೊಂದಲು ಬಯಸುತ್ತಾರೆ. ತಂದೆ–ತಾಯಿ, ಸೋದರಿಕೆ ಸಂಬಂಧ, ಜಾತಿ, ಧರ್ಮ, ಸಂಸ್ಕೃತಿ, ಭಾಷಾ ಗುಂಪುಗಳು, ಊರು, ನಗರ, ದೇಶ – ಇವೆಲ್ಲವೂ ಮಾನವನಿಗೆ ಈ ರೀತಿಯ ನೆಲೆಯನ್ನು ಒದಗಿಸುತ್ತವೆ.

4) **ಅನನ್ಯತೆಯ ಅಗತ್ಯ (Need for Identity):** ವ್ಯಕ್ತಿ ಸಮಾಜದ ಒಂದು ಭಾಗವಾಗಿರುವುದಲ್ಲದೆ, ತನ್ನದೆ ಆದ ಅನನ್ಯತೆಯನ್ನೂ, ವಿಶಿಷ್ಟತೆಯನ್ನು ಉಳಿಸಿಕೊಳ್ಳಲು ಸಹ ಇಚ್ಛಿಸುತ್ತಾನೆ. ಇದು ಅವನ ವ್ಯಕ್ತಿತ್ವದ ಅಪೂರ್ವತೆಗೆ (Uniqueness) ಸಂಬಂಧಿಸಿದೆ. ಅನನ್ಯತೆ ಅಥವಾ ವಿಶಿಷ್ಟತೆಯ ಜೊತೆಗೆ ಯಾವುದಾದರೂ ವಿಚಾರ, ವ್ಯಕ್ತಿ, ಧರ್ಮ ಮುಂತಾದ ವ್ಯವಸ್ಥೆಗಳೊಂದಿಗೆ ತಾದಾತ್ಮ್ಯತೆಯನ್ನು(ಅನನ್ಯತೆಯನ್ನು) ಹೊಂದಲು ಅಂದರೆ ತನ್ನನ್ನು ಸಂಬಂಧಿಸಿಕೊಳ್ಳಲು ಇಚ್ಛಿಸುತ್ತಾನೆ.

5) **ಆಧಾರ ಚೌಕಟ್ಟಿನ ಅಗತ್ಯ (Need for France of Reference):** ಮಾನವನಿಗೆ ಪ್ರಪಂಚವನ್ನು ಅದರ ಘಟನೆಗಳನ್ನು ಪ್ರತ್ಯಕ್ಷಾನುಭವಗಳ ಮೂಲಕ ಅರ್ಥಮಾಡಿಕೊಳ್ಳಲು ಒಂದು ಸ್ಥಿರವಾದ ಮತ್ತು ನಿರಂತರವಾದ ಆಧಾರ ಚೌಕಟ್ಟು ಬೇಕಾಗುತ್ತದೆ. ಇದು ಸಮಾಜದಿಂದ ಮುಖ್ಯವಾಗಿ ವಿಕಾಸವಾಗಿರುತ್ತದೆ. ವ್ಯಕ್ತಿಯ ಅನುಭವಗಳೂ ಇದಕ್ಕೆ ಕೊಡುಗೆ ನೀಡುತ್ತವೆ.

**ಸಾಮಾಜಿಕ ಸ್ವಭಾವ ಚಿತ್ರಣಗಳು (Social Characters):** ಎರಿಚ್ ಫ್ರಾಮ್ ತನ್ನ ಸಿದ್ಧಾಂತವನ್ನು ಒರೆಹಚ್ಚಲು ಮೆಕ್ಸಿಕೋದ ಒಂದು ಹಳ್ಳಿಯಲ್ಲಿ ಮಾಡಿದ ಅಧ್ಯಯನದ ಆಧಾರದ ಮೇಲೆ 5 ವ್ಯಕ್ತಿತ್ವ ಸ್ವಭಾವ ಚಿತ್ರಣಗಳನ್ನು ವಿವರಿಸಿದ್ದಾನೆ. ಸಾಮಾಜಿಕ ಸಂರಚನೆ ಮತ್ತು ಪ್ರಕ್ರಿಯೆಗಳಿಂದ ರೂಪುಗೊಳ್ಳುವ ವ್ಯಕ್ತಿತ್ವದ ಒಂದು ಸಾಮಾನ್ಯ ವಿನ್ಯಾಸವನ್ನು ಸಾಮಾಜಿಕ ಸ್ವಭಾವ ಚಿತ್ರಣ ಎಂದು ಹೇಳಬಹುದು. ಇವುಗಳು ಬೇರೆ ಬೇರೆ ವಿನ್ಯಾಸಗಳನ್ನು ಪಡೆದುಕೊಳ್ಳಬಹುದು. ಫ್ರಾಮ್ ಗುರ್ತಿಸಿರುವ ಸಾಮಾಜಿಕ ಸ್ವಭಾವ ಚಿತ್ರಣಗಳು ಪ್ರರೂಪಗಳು ಹೀಗಿವೆ:

1) **ಸ್ವೀಕಾರಾತ್ಮಕ ಪ್ರರೂಪ (Receptive Type):** ಈ ರೀತಿಯ ವ್ಯಕ್ತಿತ್ವ ಉಳ್ಳವರು ಒಳ್ಳೆಯದೆಲ್ಲವೂ ಬಾಹ್ಯದಲ್ಲಿದೆಯೆಂದೂ,

Digitised by Bharatavani, CIIL

ತಾನು ಬಯಸುವುದನ್ನು ಪಡೆಯಬೇಕಾದರೆ ಹೊರಗಡೆಯಿಂದಲೇ ಪಡೆಯಬೇಕು ಎಂದು ನಂಬುತ್ತಾರೆ. ಇವರು ಎಲ್ಲರಿಗೂ ವಿಧೇಯರಾಗಿರುತ್ತಾರೆ. ತಮಗೆ ಸಹಾಯ ಮಾಡಿದವರಿಗೆ ಕೃತಜ್ಞರಾಗಿರುತ್ತಾರೆ. ಬಂದುದನ್ನು ಒಪ್ಪಿಕೊಳ್ಳುವ ಸ್ವೀಕಾರ ಪ್ರವೃತ್ತಿಯವರಾಗಿರುತ್ತಾರೆ. ಒಟ್ಟಿನಲ್ಲಿ ಇವರು ಸ್ನೇಹಪರರೂ, ಆಶಾವಾದಿಗಳು ಆಗಿರುತ್ತಾರೆ.

2) **ಶೋಷಕ ಪ್ರರೂಪ (Exploitative Type):** ಇವರು ಸಹ ಎಲ್ಲಾ ಒಳ್ಳೆತನವೂ ಹೊರಗಡೆ ಇದೆ ಎಂದು ನಂಬುತ್ತಾರೆ. ತಾವೇ ಏನನ್ನೂ ಉತ್ಪತ್ತಿ ಮಾಡಲು ಸಾಧ್ಯವಿಲ್ಲ ಎಂದು ತಿಳಿದಿರುತ್ತಾರೆ. ತನಗೆ ಬೇಕಾದುದನ್ನು ಯುಕ್ತಿಯಿಂದ, ಬಲದಿಂದ ಪಡೆದುಕೊಳ್ಳುವ ಪ್ರವೃತ್ತಿಯವರಾಗುವುದರಿಂದ ಇವರಲ್ಲಿ ಸಮಾಜವನ್ನು ಶೋಷಣೆ ಮಾಡುವ ಪ್ರವೃತ್ತಿ ಬೆಳೆಯುತ್ತದೆ.

3) **ಸಂಗ್ರಾಹಕ ಪ್ರರೂಪ (Hoarding Type):** ಇವರಲ್ಲಿ ನವೀನವಾದುದುದೆಲ್ಲವನ್ನು ಸಂಶಯ ದೃಷ್ಟಿಯಿಂದ ನೋಡುವ ಪ್ರವೃತ್ತಿ ಇರುತ್ತದೆ. ಭವಿಷ್ಯದ ಸುರಕ್ಷತೆಯ ಬಗ್ಗೆ ತೀವ್ರವಾದ ಕಾಳಜಿ ಹೊಂದಿರುತ್ತಾರೆ. ಆದ್ದರಿಂದ ಹಣ ಉಳಿತಾಯದ ಮೂಲಕ ಮತ್ತು ವಸ್ತುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದರ ಮೂಲಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇವರಲ್ಲಿ ಸ್ವಾರ್ಥ ಭಾವನೆ, ಅಸೂಯೆ ಹೆಚ್ಚಾಗಿರುತ್ತವೆ. ಹಿಂಜರಿಕೆ ಮನೋಭಾವವುಳ್ಳವರಾಗಿರುತ್ತಾರೆ.

4) **ಮಾರುಕಟ್ಟೆ ಪ್ರರೂಪ (Marketing Type):** ತಾನು ತನ್ನನ್ನು ಎಷ್ಟು ಚೆನ್ನಾಗಿ 'ಮಾರಿಕೊಳ್ಳಬಲ್ಲೆ' (ಪ್ರಸ್ತುತಪಡಿಸಬಲ್ಲೆ) ಎನ್ನುವುದರ ಮೇಲೆ ಸಫಲತೆ ಬಹಳಷ್ಟು ಮಟ್ಟಿಗೆ ಲಭಿಸುತ್ತದೆ ಎಂದು ಇವರು ತಿಳಿಯುತ್ತಾರೆ. ಸಂತೋಷಚಿತ್ತತೆ, ಆಕ್ರಮಣಕಾರಿ ವರ್ತನೆ, ಮಹತ್ವಾಕಾಂಕ್ಷೆ ಮುಂತಾದ ಲಕ್ಷಣಗಳು ಇವರಲ್ಲಿ ಪ್ರಧಾನವಾಗಿ ಕಂಡು ಬರುತ್ತವೆ. ತಾನು ಸಫಲನಾಗಿದ್ದರೆ ಮಾತ್ರ ಗೌರವ ಉಳಿಯುತ್ತದೆ. ಎಂದು ತಿಳಿದು ಅದಕ್ಕಾಗಿ ಸತತ ಪ್ರಯತ್ನಶೀಲರಾಗಿರುತ್ತಾರೆ. ತಮ್ಮ ವಸ್ತುಗಳನ್ನು ವಿಚಾರಗಳನ್ನು ಬೇರೆಯವರಿಗೆ "ಮಾರಲು" (ತಲುಪಿಸಲು) ಹೇಗಾದರೂ ಪ್ರಯತ್ನಿಸುತ್ತಾರೆ. ಉಡುಪು, ಶೃಂಗಾರಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ.

5) **ಉತ್ಪಾದಕ ಪ್ರರೂಪ (Productive Type):** ಫ್ರಾಮ್ ಪ್ರಕಾರ ಇದು ಆದರ್ಶಾತ್ಮಕ ವ್ಯಕ್ತಿತ್ವ ಚಿತ್ರಣವಾಗಿದೆ. ಈ ರೀತಿಯ ವ್ಯಕ್ತಿತ್ವ ಚಿತ್ರಣ ಉಳ್ಳವರು ಎಲ್ಲಾ ಮಾನವ ಅನುಭವಗಳೊಂದಿಗೆ ಸಂಬಂಧ ಹೊಂದಿರುತ್ತಾರೆ. ತನ್ನ ಬಗ್ಗೆ, ಇತರರ ಬಗ್ಗೆ ಒಳ್ಳೆಯ ಮಾನಸಿಕ, ಸಾಮಾಜಿಕ, ಸಂವೇಗಾತ್ಮಕ ಸಂಬಂಧವನ್ನು ಹೊಂದಿರುತ್ತಾರೆ. ತಮ್ಮ ಅಂತಃಸತ್ವಗಳನ್ನು, ದೈಹಿಕ ಹಾಗೂ ಸೃಜನಾತ್ಮಕ ಸಾಮರ್ಥ್ಯಗಳನ್ನು ಸಮಾಜದ ಒಳಿತಿಗಾಗಿ ಗರಿಷ್ಠ ಮಟ್ಟದಲ್ಲಿ ಅಭಿವ್ಯಕ್ತಗೊಳಿಸಲು ಪ್ರಯತ್ನಿಸುತ್ತಾರೆ.

ಎರಿಚ್ ಫ್ರಾಮ್ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳಿಂದ ಪ್ರಭಾವಿತನಾದುದರಿಂದ ಸಮಾಜವಾದಿ ಸಮಾಜದ ಕಡೆಗೆ ಒಲವು ತೋರಿಸಿದ್ದಾನೆ. ತನ್ನ ಕಲ್ಪನೆಯ ಪರಿಪೂರ್ಣ ಸಮಾಜದ ವ್ಯವಸ್ಥೆಯನ್ನು ಅವನು ಮಾನವತಾವಾದಿ ಸಾಮುದಾಯಿಕ ಸಮಾಜವಾದ (Humanistic Communistic Socialism) ಎಂಬ ಹೆಸರನ್ನು ಕೊಟ್ಟಿದ್ದಾನೆ.

**ಇತರ ಫ್ರಾಯ್ಡ್‌ವಾದಿಗಳು:** ಮೇಲೆ ವಿವರಿಸಿದ ಫ್ರಾಯ್ಡ್‌ನ ನಂತರ ತಮ್ಮ ಪ್ರತ್ಯೇಕ ವಾದವನ್ನು ಪ್ರತಿಪಾದಿಸಿದ ಮನೋವಿಜ್ಞಾನಿಗಳ ಜೊತೆಗೂ ಇನ್ನೂ ಕೆಲವರಿದ್ದಾರೆ. ಅವರಲ್ಲಿ ಕೆಲವರು ಪ್ರಸಿದ್ಧಿ ಪಡೆದಿದ್ದಾರೆ. ಎರಿಕ್‌ಸನ್ ಫ್ರಾಯ್ಡ್‌ನ ಮನೋ ಲೈಂಗಿಕ ವಿಕಾಸ ಹಂತಗಳ ಮುಖ್ಯ ಅಂಶಗಳನ್ನು ತೆಗೆದುಕೊಂಡು ತನ್ನದೇ ಆದ ಮನೋ–ಸಾಮಾಜಿಕ ವಿಕಾಸದ ಎಂಟು ಹಂತಗಳನ್ನು ವಿವರಿಸಿದ್ದಾನೆ. (ವಿವರಗಳಿಗೆ ಮೊದಲನೇ ಸಂಪುಟದ ವಿಕಾಸದ ಸಿದ್ಧಾಂತಗಳು 'ಲೇಖನ ನೋಡಿ). ಒಟ್ಟೋ ರ್‍ಯಾಂಕ್ ಎಂಬುವನು ಜನನ ಅಥವಾ ಪ್ರಸವ ಆಘಾತಾನುಭವಕ್ಕೆ (Birth Trauma) ಮಹತ್ವ ನೀಡಿ ಅದು ವ್ಯಕ್ತಿತ್ವ ವಿಕಾಸವನ್ನು ಪ್ರಭಾವಗೊಳಿಸುತ್ತದೆ. ಎಂದು ರೂಪಿಸಿದ್ದಾನೆ. ಫ್ರಾಯ್ಡ್‌ನ ಪುತ್ರಿಯಾದ ಅನ್ನಫ್ರಾಯ್ಡ್ ಮತ್ತು ಫ್ರಾಯ್ಡ್‌ನ ಹಿಂಬಾಲಿಕ ಕಾರ್ಡಿನರ್ ಅಬ್ರಹಾಮ್ ಸಹ ಮನೋವಿಶ್ಲೇಷಣೆ ಬಗ್ಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.

**ಮಾನವತಾವಾದಿ ಸಿದ್ಧಾಂತಗಳು (Humanistic Theories):** ಇಪ್ಪತ್ತನೆ ಶತಮಾನದ ಪೂರ್ವಾರ್ಧದಲ್ಲಿ ಮನುಷ್ಯನ ವ್ಯಕ್ತಿತ್ವವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದ ಮನೋವಿಶ್ಲೇಷಣವಾದಿ ಸಿದ್ಧಾಂತಗಳು ಮನುಷ್ಯನ ಸ್ವಭಾವದ ನಿರಾಶಾದಾಯಕ ಚಿತ್ರವನ್ನು ನೀಡಿದ್ದವು. ಮನೋವಿಜ್ಞಾನಿ ಸ್ಕಿನ್ನರ್ ತನ್ನ ಕ್ರಿಯಾ ಪ್ರಸೂತ ಅನುಬಂಧನದ(Operant Conditioning) ಮೂಲಕ ಯಾವ ವರ್ತನೆಯನ್ನಾದರೂ ಪರಿಸರದ ಬದಲಾವಣೆ ಮೂಲಕ ರೂಪಿಸಬಹುದೆಂದು ಹೇಳಿ ಮಾನವನನ್ನು ಪರಿಸರದ ಬದಲಾವಣೆ ಮೂಲಕ ರೂಪಿಸಬಹುದೆಂದು ಹೇಳಿ ಮಾನವನನ್ನು ಪರಿಸರದ ಕೈಗೊಂಬೆಯಾಗಿ ಮಾಡಿದನು. ಈ ನಿಲುವು ಸಹ ನಿರಾಶಾದಾಯಕವಾಗಿತ್ತು. ಈ ಎರಡು ಪ್ರಯತ್ನಗಳು ಸಹ ಮಾನವನ ವ್ಯಕ್ತಿತ್ವ ವಿಕಾಸದಲ್ಲಿ ಬೆಳವಣಿಗೆ, ಘನತೆ, ಆತ್ಮಗೌರವ, ಮೌಲ್ಯಗಳು, ಆತ್ಮನಿರ್ಧಾರ, ಆತ್ಮವಿಕಾಸ ಮುಂತಾದವುಗಳಿಗೆ ಕೊಡುವ ಪ್ರಯತ್ನಗಳಿಗೆ ಮಹತ್ವ ನೀಡಲಿಲ್ಲ. ಇದರಿಂದಾಗಿ ಅನೇಕ ಮನೋವಿಜ್ಞಾನಿಗಳು ಮುಖ್ಯವಾಗಿ ಅಮೇರಿಕಾದಲ್ಲಿ ಈ ನಿಲುವುಗಳನ್ನು ತೀವ್ರವಾಗಿ ವಿರೋಧಿಸಿ ಮಾನವೀಯ ಮೌಲ್ಯಗಳಿಗೆ ಮಹತ್ವ ನೀಡುವ ಪಂಥವನ್ನು ಪ್ರತಿಪಾದಿಸಿದರು. ಇದೇ ಮಾನವತಾವಾದಿ ಮನೋವಿಜ್ಞಾನ ಪಂಥ. ಅಬ್ರಹಾಂ ಮಾಸ್ಲೋ, ಗೋಲ್ಡ್‌ಸ್ಟೈನ್, ಕಾರ್ಲ್ ರೋಜರ್ಸ್ ಈ ಪಂಥದ ಪ್ರಮುಖ ಪ್ರತಿಪಾದಕರಾದರು. ಇವರುಗಳು ಮಾನವತಾವಾದಿ ದೃಷ್ಟಿಕೋನದಿಂದ ವ್ಯಕ್ತಿತ್ವ ವಿಕಾಸವನ್ನು ವಿವರಿಸುವ ಮಾನವತಾವಾದಿ

Digitised by Bharatavani, CIIL

ಸಿದ್ಧಾಂತಗಳನ್ನು ಪ್ರತಿಪಾದಿಸಿದರು.ಈ ಸಿದ್ಧಾಂತಗಳು 1970–80ರ ದಶಕದಲ್ಲಿ ಪ್ರಸಿದ್ಧಿಗೆ ಬಂದವು.

ಮಾನವತಾವಾದಿ ವ್ಯಕ್ತಿತ್ವ ಸಿದ್ಧಾಂತಗಳು ಮುಖ್ಯವಾಗಿ ನಾಲ್ಕು ತತ್ವಗಳನ್ನು ಪ್ರತಿಪಾದಿಸುತ್ತವೆ. ಮೊದಲಿಗೆ ಮಾನವ ಜವಾಬ್ದಾರಿಯುತನಾಗಿದ್ದಾನೆ. ಮಾನವ ಸುಪ್ತಚೇತನದ ಪ್ರೇರಣೆಗಳಿಂದ ಅಥವಾ ಪರಿಸರದ ಕಾರಕಗಳಿಂದ ಸಂಪೂರ್ಣವಾಗಿ ನಿಯಂತ್ರಿತರಾಗುವ ಜೀವಿಯಲ್ಲ, ತನ್ನ ಜೀವನವನ್ನು ರೂಪಿಸಿಕೊಳ್ಳುವ ಜವಾಬ್ದಾರಿ ಅವನಿಗಿದೆ. ಎರಡನೆಯದಾಗಿ ಈ ಸಿದ್ಧಾಂತಗಳು ವ್ಯಕ್ತಿತ್ವ ರೂಪಣೆಯಲ್ಲಿ ಗತಕಾಲದ ಅನುಭವಗಳ ಪ್ರಭಾವವನ್ನು ಅಲ್ಲಗೆಳೆಯುವುದಿಲ್ಲವಾದರೂ ವರ್ತಮಾನದಲ್ಲಿ ಆಗುವ ಅನುಭವಗಳಿಗೆ ಹೆಚ್ಚಿನ ಮಹತ್ವ ನೀಡುತ್ತವೆ. ಮೂರನೆಯದಾಗಿ, ಈ ಸಿದ್ಧಾಂತಗಳು ವೈಯಕ್ತಿಕ ವಿಕಾಸಕ್ಕೆ ಒತ್ತು ನೀಡುತ್ತವೆ. ಮಾನವರು ತಮ್ಮ ದಿನನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳುವುದರಿಂದ ಮಾತ್ರ ತೃಪ್ತರಾಗುವುದಿಲ್ಲ. ಮೇಲ್ಮಟ್ಟದ ಗುರಿಗಳತ್ತ, ಮೌಲ್ಯ, ಆದರ್ಶಗಳತ್ತ ಮುಂದುವರಿದು ವ್ಯಕ್ತಿತ್ವ ವಿಕಾಸದಲ್ಲಿ ಮೇಲ್ಮಟ್ಟಗಳನ್ನು ಸಾಧಿಸಲು ತಮ್ಮ ಅಂತಃಸತ್ವಗಳನ್ನು ಗರಿಷ್ಠ ಮಟ್ಟದಲ್ಲಿ ಅಭಿವ್ಯಕ್ತಗೊಳಿಸಲು ಪ್ರಯತ್ನಶೀಲರಾಗುತ್ತಾರೆ. ನಾಲ್ಕನೆಯದಾಗಿ, ಮೌಲ್ಯಗಳು, ಆದರ್ಶಗಳು, ಭವಿಷ್ಯದ ಯೋಜನೆಗಳು ವ್ಯಕ್ತಿತ್ವ ವಿಕಾಸವನ್ನು ನಿರ್ದೇಶಿಸುತ್ತವೆ.

**ಕಾರ್ಲ್ ರೇಜರ್ಸ್‌ನ ಸಿದ್ಧಾಂತ:** ಕಾರ್ಲ್ ರ್ಯಾನ್‌ಸಮ್ ರೇಜರ್ಸ್ 1902ರಲ್ಲಿ ಇಲ್ಲಿನಾಯ್ಸ್‌ನ(Illincis) ವಿಸ್ಕಾನ್ಸಿನ್‌ನಲ್ಲಿ ಜನಿಸಿದನು. ಇಲ್ಲಿನಾಯ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿ ಮುಗಿಸಿದ ನಂತರ ರೋಚೆಸ್ಟರ್ ಹೈಡೆನ್ಸ್ ಸೆಂಟರಿನ ಮೊದಲ ನಿರ್ದೇಶಕನಾದನು. 1945 ರಿಂದ 1963ರವರೆಗೆ ಓಹಾಯೋ ಮತ್ತು ವಿಸ್ಕಾನ್‌ಸಿನ್ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸಿದನು. ಅಲ್ಲಿಂದ ರೋಜರ್ಸ್ ಕ್ಯಾಲಿಫೋರ್ನಿಯಾದ (Behavioural Scene Institute) ಸೇರಿಕೊಂಡನು. ರೋಜರ್ಸ್‌ನ ಸಿದ್ಧಾಂತವನ್ನು ಆತ್ಮ ಸಿದ್ಧಾಂತ (Self Theory) ಎನ್ನುತ್ತಾರೆ. ತನ್ನ ಸಮಾಲೋಚನೆ ಕ್ಷೇತ್ರದ ಅನುಭವಗಳಿಂದ ರೋಜರ್ಸ್ ಅನಿರ್ದೇಶಿತ ಸಮಾಲೋಚನ ವಿಧಾನವನ್ನು (Non-directive) ವಿಕಾಸಗೊಳಿಸಿದ. ನಂತರ ಸಮಾಲೋಚನೆಯಲ್ಲಿ ಗ್ರಾಹಕನಿಗೆ ಹೆಚ್ಚಿನ ಸ್ಥಾನವನ್ನು ನೀಡಿ ಈ ವಿಧಾನವನ್ನು ಗ್ರಾಹಕ–ಕೇಂದ್ರಿತ ಸಮಾಲೋಚನೆ (Client Centered) ಎಂದು ಕರೆದ. ಇದನ್ನು ವ್ಯಕ್ತಿ ಕೇಂದ್ರಿತ ಸಮಾಲೋಚನೆ(Person concered counselling) ಎಂದೂ ಹೇಳಬಹುದು.

**ಮಾನವನ ಸ್ವಭಾವ:** ರೋಜರ್ಸ್‌ನ ದೃಷ್ಟಿಯಲ್ಲಿ ಮಾನವನೇ ತನ್ನ ಭವಿಷ್ಯದ ನಿರ್ಮಾಪಕ. ಮಾನವ ಸಾಮಾಜಿಕ ಜೀವಿ, ಮುಂದಿನ ದೃಷ್ಟಿಯುಳ್ಳವನು, ತಾರ್ಕಿಕ ಸ್ವಭಾವದವನು, ವಾಸ್ತವಿಕ ದೃಷ್ಟಿಯುಳ್ಳವನು. ಆದಾಗ್ಯೂ ಆಶಾವಾದಿ ಅವನು ತನ್ನನ್ನು ತಾನು ವಾಸ್ತವೀಕರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಸಾಮಾಜಿಕ ಸಂದರ್ಭದಲ್ಲಿಯೇ ತನ್ನನ್ನು ತಾನು ಕಂಡುಕೊಳ್ಳಲು ಅವನಿಗೆ ಸಾಧ್ಯವಾಗುತ್ತದೆ. ಅವನಿಗೆ ರಚನಾತ್ಮಕ ನಿರ್ಣಯಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವಿದೆ. ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ತನ್ನ ಸಮಸ್ಯೆಗಳನ್ನು ತಾನೇ ಪರಿಹರಿಸಿಕೊಳ್ಳಬಲ್ಲ. ಮನುಷ್ಯನಲ್ಲಿ ಸ್ವಾಭಾವಿಕವಾಗಿಯೇ ಒಳ್ಳೆತನ, ಕೆಟ್ಟತನ ಎರಡೂ ಇರುತ್ತವೆ. ಸಮಾಜವೇ ಅವನ ಕೆಟ್ಟತನಕ್ಕೆ ಪ್ರಚೋದನೆ ನೀಡುತ್ತದೆ. ಮಾನವ ನಂಬಿಕೆಗೆ ಅರ್ಹ. ತನ್ನದೇ ಆದ ಅಭಿಪ್ರಾಯಗಳನ್ನು, ನಂಬಿಕೆಗಳನ್ನು ಹೊಂದಿರುವ ಹಕ್ಕು ಅವನಿಗಿದೆ.

**ವ್ಯಕ್ತಿತ್ವದ ಪರಿಕಲ್ಪನೆ:** ರೋಜರ್ಸ್ ವ್ಯಕ್ತಿತ್ವದ ಸಂರಚನೆಯ ಬಗ್ಗೆ ಸ್ಪಷ್ಟವಾಗಿ ಹೆಚ್ಚಿಗೆ ಹೇಳುವುದಿಲ್ಲ. ಆದರೆ 'ಸ್ವಯಂ' (Self) ಇವನು ಹೆಚ್ಚಗೆ ಮಹತ್ವ ನೀಡಿದ್ದಾನೆ. ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ರೋಜರ್ಸ್ 19 ತರ್ಕ ವಾಕ್ಯಗಳನ್ನು (Propositions) ರೂಪಿಸಿದ್ದಾನೆ. ಅವುಗಳಲ್ಲಿ ಮುಖ್ಯವಾದ ಕೆಲವು ಹೀಗಿವೆ.–

- ಜೀವಿ (ವ್ಯಕ್ತಿ) ತನ್ನ ಘಟನಾತ್ಮಕ ಕ್ಷೇತ್ರಕ್ಕೆ (Phenomenal World) ಇಡಿಯಾಗಿ ಪ್ರತಿಕ್ರಿಯಿಸುತ್ತಾನೆ. ಆದ್ದರಿಂದ ವ್ಯಕ್ತಿತ್ವವನ್ನು ಇಡಿಯಾಗಿಯೇ ಪರಿಗಣಿಸಬೇಕು.
- ಪ್ರತಿಯೊಬ್ಬ ವ್ಯಕ್ತಿಯೂ ತಾನೇ ಕೇಂದ್ರವಾಗಿರುವ ಬದಲಾವಣೆಗೊಳ್ಳುವ ಅನುಭವಗಳ ಪ್ರಪಂಚದಲ್ಲಿ ಇರುತ್ತಾನೆ.
- ಪ್ರತಿಯೊಬ್ಬ ವ್ಯಕ್ತಿಯೂ ಆತ್ಮ–ವಾಸ್ತವೀಕರಣಕ್ಕೆ ಅಥವಾ ಆತ್ಮಸಾಕ್ಷಾತ್ಕಾರಕ್ಕೆ (Self-Actualisation) ಪ್ರಯತ್ನಿಸುವ, ಅದನ್ನು ಅನುಭವಿಸುವ ಜೀವಿಯಾಗಿ ಅದನ್ನು ಹೆಚ್ಚಿಸಿಕೊಳ್ಳುವ, ಉಳಿಸಿಕೊಳ್ಳುವ ಮೂಲಭೂತ ಪ್ರವೃತ್ತಿಯನ್ನು ಹೊಂದಿದ್ದಾನೆ.
- ವ್ಯಕ್ತಿಯ ಸಂಪೂರ್ಣ ಪ್ರತ್ಯಕ್ಷಾನುಭವ ಕ್ಷೇತ್ರದ ಒಂದು ಭಾಗ ಸ್ವಯಂ (Self) ಆಗಿ ಪ್ರತ್ಯೇಕಿಸಲ್ಪಡುತ್ತದೆ.
- ವ್ಯಕ್ತಿ ಮಹತ್ವಪೂರ್ಣ ಸಂವೇದನಾತ್ಮಕ ಮತ್ತು ಒಳಾಂಗಗಳ (Visceral) ಅನುಭವಗಳನ್ನು ಪ್ರಜ್ಞೆಗೆ ಬರದಿರುವಂತೆ ಉಪೇಕ್ಷಿಸಿದಾಗ ಹಾಗೂ ಅವುಗಳನ್ನು ಸಂಕೇತೀಕರಣಗೊಳಿಸಿ ಸ್ವಯಂನ ಒಟ್ಟು ಸಂರಚನೆಯೊಂದಿಗೆ ಸಮಗ್ರಗೊಳಿಸದಿದ್ದಾಗ ಅವು ಮೂಲಭೂತವಾದ ಮಾನಸಿಕ ಉದ್ವೇಗ ಸ್ಥಿತಿಯನ್ನುಂಟು ಮಾಡುತ್ತವೆ. ಇದು ಅಪಸಮಾಯೋಜನೆಗೆ ಕಾರಣವಾಗುತ್ತಾನೆ.
- ಇದಕ್ಕೆ ಪ್ರತಿಯಾಗಿ ಎಲ್ಲಾ ಸಂವೇದನಾತ್ಮಕವಾದ ಮತ್ತು ಒಳಾಂಗಗಳ ಅನುಭವಗಳನ್ನು ನೇರವಾಗಿ ಅಥವಾ ಸಾಂಕೇತಿಕವಾಗಿ ಸ್ವಾಂಗೀಕರಣ ಮಾಡಿಕೊಂಡು ಸ್ವಯಂನೊಂದಿಗೆ ಸಮಗ್ರಗೊಳಿಸಿದಾಗ ವ್ಯಕ್ತಿ ಸಮಾಯೋಜನ ಸ್ಥಿತಿಯನ್ನು ಹೊಂದುತ್ತಾನೆ.

**ಸ್ವಯಂನ (Self) ಪರಿಕಲ್ಪನೆ:** ಈ ಪರಿಕಲ್ಪನೆ ರೋಜರ್ಸ್‌ನ ಸಿದ್ಧಾಂತದಲ್ಲಿ ಎಷ್ಟು ಮುಖ್ಯವಾಗಿದೆ ಎಂದರೆ ಅವನ ಸಿದ್ಧಾಂತವನ್ನು

Digitised by Bharatavani, CIIL

ಸ್ವಯಂ ಸಿದ್ಧಾಂತ ಎಂದೇ ಕರೆಯಲಾಗಿದೆ. ವ್ಯಕ್ತಿಯ ಸಂಪೂರ್ಣ ಪ್ರತ್ಯಕ್ಷಾನುಭವ ಕ್ಷೇತ್ರದ ಒಂದು ಭಾಗ ಕ್ರಮೇಣ ಪ್ರತ್ಯೇಕಿಸಲ್ಪಟ್ಟ 'ಸ್ವಯಂ' ಅಗಿ ರೂಪುಗೊಳ್ಳುತ್ತದೆ. ಇದು ಸ್ಥಿರವಾಗಿರುವುದಿಲ್ಲ. ಆಗಾಗ್ಯೆ ಬದಲಾವಣೆಗೆ ಒಳಗೊಳ್ಳುತ್ತದೆ. ಸ್ವಯಂ ವಾಸ್ತವಿಕ ಸ್ವಯಂ (Actual Self) ಮತ್ತು ಆದರ್ಶಾತ್ಮಕ ಸ್ವಯಂ (Ideal Self) ಎಂದು ಎರಡು ರೂಪಗಳನ್ನು ಹೊಂದಿದೆ. ವ್ಯಕ್ತಿ ವಾಸ್ತವದಲ್ಲಿ ತನ್ನ ಸ್ವಭಾವದ ಪ್ರಕಾರ ಏನಾಗಿದ್ದಾನೆಯೋ ಅದು ವಾಸ್ತವಿಕ ಸ್ವಯಂ. ವ್ಯಕ್ತಿ ತಾನು ಏನಾಗಬೇಕೆಂದು ಕಲ್ಪಿಸಿಕೊಂಡಿದ್ದಾನೆಯೋ ಅದು ಆದರ್ಶಾತ್ಮಕ ಸ್ವಯಂ. ಇದು ವ್ಯಕ್ತಿಯ ಅನುಭವಗಳು, ಆದರ್ಶ ವ್ಯಕ್ತಿಗಳ ನಮೂನೀಕರಣ (ಅನುಕರಣೆ), ತಂದೆ–ತಾಯಿಯ ಮಾರ್ಗದರ್ಶನ ಶಿಕ್ಷಣ ಮುಂತಾದ ಅಂಶಗಳ ಪ್ರಭಾವಗಳಿಂದ ರೂಪುಗೊಳ್ಳುತ್ತದೆ. ವ್ಯಕ್ತಿ ತನ್ನ ಅನುಭವಗಳನ್ನು, ಸಂವೇಗಗಳನ್ನು, ಅನ್ನಿಸಿಕೆಗಳನ್ನು, ಅರಿವನ್ನು ಅಭಿವ್ಯಕ್ತಿಗಳನ್ನು ಮುಚ್ಚಿಡದೆ, ಮಾರ್ಪಾಡುಗೊಳಿಸದೆ ಅಭಿವ್ಯಕ್ತಗೊಳಿಸಬೇಕೆಂದು ರೋಜರ್ಸ್ ಹೇಳುತ್ತಾನೆ. ಇವೆಲ್ಲವೂ ಹೊರಗಣ ಪರಿಸ್ಥಿತಿಗಳಿಗೆ ಹೊಂದಿಕೊಂಡಂತೆ ಇದ್ದಾಗ ಸಾಮಂಜಸ್ಯದ (Congruence) ಸ್ಥಿತಿ ಉಂಟಾಗುತ್ತದೆ. ಅನುಭವ, ಅರಿವು ಅನಿಸಿಕೆ, ಸಂವೇಗಗಳಿಗೂ ಮತ್ತು ಅವುಗಳ ಅಭಿವ್ಯಕ್ತಿಗೂ (ಸಂವಹನ) ಹೊಂದಾಣಿಕೆ ಇಲ್ಲದಿದ್ದಾಗ ಅಸಾಮಂಜಸ್ಯದ (Incongrance) ಸ್ಥಿತಿ ಉಂಟಾಗಿ ಉದ್ವೇಗ ಸ್ಥಿತಿಗೆ ಕಾರಣವಾಗುತ್ತದೆ. ಒಂದು ಘಟನೆ, ಸಂಬಂಧ ಅಥವಾ ವಿಚಾರದ ಬಗ್ಗೆ ವ್ಯಕ್ತಿಯ ಪ್ರತ್ಯಾಕ್ಷಾನುಭವಕ್ಕೂ, ಬೇರೆಯವರ ಪ್ರತ್ಯಾಕ್ಷನುಭವಕ್ಕೂ ಏಕರೂಪತೆ ಇದ್ದಾಗ ಸಾಮಂಜಸ್ಯ ಸ್ಥಿತಿ ಉಂಟಾಗುತ್ತದೆ. ಅದಿಲ್ಲದಾಗ ಅಸಾಮಂಜಸ್ಯ ಸ್ಥಿತಿ ಉಂಟಾಗುತ್ತದೆ. ಇದು ಭಿನ್ನಾಭಿಪ್ರಾಯಗಳಿಗೆ, ವಿರುದ್ಧ ಮನೋಭಾವಗಳಿಗೆ, ಅನ್ನಿಸಿಕೆಗಳಿಗೆ ಕಾರಣವಾಗಿ ಪಾರಸ್ಪರಿಕ ಸಾಮಾಜಿಕ ಸಂಬಂಧಗಳು ಹದಗೆಡುತ್ತವೆ.

**ಮಾನಸಿಕ ಬೆಳವಣಿಗೆ (Psychological Growth):** ಶಾರೀರಿಕ(Phisiological) ಮತ್ತು ದೈಹಿಕ ಬೆಳವಣಿಗೆಗಳು ಸ್ಪಷ್ಟ ರೂಪದವುಗಳಾಗಿದ್ದು ಸುಲಭವಾಗಿ ನಿಯಂತ್ರಣಕ್ಕೆ ಒಳಪಡುತ್ತವೆ. ಆದರೆ ವ್ಯಕ್ತಿಯ ವೈಯಕ್ತಿಕ ವಿಕಾಸಕ್ಕೆ ಸಂಬಂಧಿಸಿದ ಮಾನಸಿಕ ಬೆಳವಣಿಗೆ ಬೇರೆಯವರಿಗೆ ಗೋಚರವಾಗುವುದಿಲ್ಲ. ಅದು ಸಂಕೀರ್ಣವಾದುದು. ಸೂಕ್ಷ್ಮ ಸ್ವರೂಪವುಳ್ಳದ್ದು. ಇದು ವ್ಯಕ್ತಿಯ ಅರಿವಿಗೆ ಮಾತ್ರ ಬರುತ್ತದೆ. ವ್ಯಕ್ತಿ ತನ್ನಲ್ಲಿ ಉಂಟಾಗುವ ಅಸಾಮಂಜಸ್ಯದ ಸ್ಥಿತಿಯನ್ನು ತಿಳಿದುಕೊಂಡು ಅದನ್ನು ಸಾಮಂಜಸ್ಯದ ಸ್ಥಿತಿಗೆ ಪರಿವರ್ತಿಸಿಕೊಳ್ಳುವ್ವದರಿಂದ ತನ್ನ ತುಮುಲಗಳನ್ನು, ದ್ವಂದ್ವಗಳನ್ನು ಆಶಾಭಂಗಗಳನ್ನು ನಿವಾರಿಸಿಕೊಳ್ಳಬಹುದು. ಇದಕ್ಕಾಗಿ ರೋಜರ್ಸ್ ಕೆಲವು ಮಹತ್ವಪೂರ್ಣ ಕಲಿಕೆಗಳನ್ನು ಸಲಹೆ ಮಾಡಿದ್ದಾನೆ. ಶ್ರದ್ಧೆಯಿಂದ ಕೇಳುವುದು, ಮೊದಲು ತಾನಿರುವಂತೆ ತನ್ನನ್ನು ಒಪ್ಪಿಕೊಳ್ಳುವುದು, ಬೇರೆಯವರನ್ನು ಅವರಿದ್ದಂತೆ ಸ್ವೀಕರಿಸುವುದು, ಬೇರೆಯವರ ಭಾವನೆಗಳಿಗೆ, ಅಸ್ತಿತ್ವಗಳಿಗೆ ಅವಕಾಶ ನೀಡುವುದು ಇವು ಕೆಲವು ಮಹತ್ವಪೂರ್ಣ ಕಲಿಕೆಗಳಾಗಿವೆ.

**ಗ್ರಾಹಕ/ವ್ಯಕ್ತಿ ಕೇಂದ್ರಿತ ಸಮಾಲೋಚನ ತಂತ್ರ (Client/Person Centered Counselling Technique):** ರೋಜರ್ಸ್ ಮಾನಸಿಕ ಗೊಂದಲಗಳಿಗೆ ಒಳಗಾದ ವ್ಯಕ್ತಿಗಳಿಗೆ ಸಮಾಲೋಚನೆ ನೀಡಿದ ಅನುಭವಗಳ ಆಧಾರದ ಮೇಲೆ ಈ ತಂತ್ರವನ್ನು ರೂಪಿಸಿದ. ಸಮಾಲೋಚನ ಮನೋವಿಜ್ಞಾನ (Counselling Psychology) ಕ್ಷೇತ್ರಕ್ಕೆ ಇದು ಅವನ ಮಹತ್ವಪೂರ್ಣ ಕೊಡುಗೆಯಾಗಿದೆ. ಮೊದಲಿಗೆ ಈ ತಂತ್ರವನ್ನು ಅವನು ಅನಿರ್ದೇಶಿತ ಸಮಾಲೋಚನೆ (Non-Directive Counselling) ಎಂದು ಕರೆದಿದ್ದನು. ನಂತರದಲ್ಲಿ ಸಮಾಲೋಚನ ಪ್ರಕ್ರಿಯೆಯಲ್ಲಿ ವ್ಯಕ್ತಿಗೆ/ಗ್ರಾಹಕನಿಗೆ ಕೇಂದ್ರ ಸ್ಥಾನ ನೀಡಬೇಕೆಂಬ ತೀರ್ಮಾನಕ್ಕೆ ಬಂದು ಅದನ್ನು ವ್ಯಕ್ತಿ/ಗ್ರಾಹಕ ಕೇಂದ್ರಿತ ಸಮಾಲೋಚನೆ ಎಂದು ಕರೆದನು. ಇದನ್ನು ಒಂದು ಮನೋ–ಚಿಕಿತ್ಸಕ (Psycho-Theraputic) ತಂತ್ರವಾಗಿಯೂ ಪರಿಗಣಿಸಲಾಗಿದೆ. ಚಿಕಿತ್ಸಕ ತಾನಾಗಿ ಹೆಚ್ಚಿಗೆ ಮಾತನಾಡದೆ ವ್ಯಕ್ತಿಯೇ ತನ್ನ ಭಾವನೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಗೊಳಿಸಲು ಪ್ರೇರಣೆ ನೀಡುತ್ತಾನೆ. ವ್ಯಕ್ತಿ ಪ್ರತ್ಯಕ್ಷಾನುಭವಗಳಲ್ಲಿ ಇರುವ ಅಸಂಗತೆಗಳನ್ನು, ಸಮಸ್ಯೆಗಳನ್ನು, ಅಸಮಂಜಸತೆಗಳನ್ನು ವ್ಯಕ್ತಿಯ ಅರಿವಿಗೆ ತಂದು, ಅವನೇ ಅವುಗಳನ್ನು ಪರಿಹರಿಸಿಕೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ. ವ್ಯಕ್ತಿ ಈ ರೀತಿ ತನ್ನ ಸಮಸ್ಯೆಗಳನ್ನು ದ್ವಂದ್ವಗಳನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು, ಕೌಶಲಗಳನ್ನು ಸಹಜವಾಗಿಯೇ ಹೊಂದಿದ್ದಾನೆ ಎಂಬ ಗ್ರಹಿಕೆಯೇ ಈ ತಂತ್ರದ ಮೂಲ ಆಧಾರವಾಗಿದೆ.

ಅನೇಕ ಹಂತಗಳನ್ನು ಒಳಗೊಂಡಿರುವ ರೋಜರ್ಸ್‌ನ ವ್ಯಕ್ತಿ ಕೇಂದ್ರದ ಸಮಾಲೋಚನೆ ಮುಖ್ಯ ತತ್ವಗಳು ಹೀಗಿವೆ:

- ವ್ಯಕ್ತಿಯೊಂದಿಗೆ ಚಿಕಿತ್ಸಕನ ಒಳ್ಳೆಯ ಹೊಂದಾಣಿಕೆ, ಉದ್ದೇಶದ ನೈಜತೆ, ಬದ್ಧತೆ
- ವ್ಯಕ್ತಿಯನ್ನು ಒಪ್ಪಿಕೊಳ್ಳುವುದು, ಬೆಲೆ ಕೊಡುವುದು, ಸಂರಕ್ಷಿಸುವುದು ಅಥವಾ ಷರತ್ತಿಲ್ಲದ ಧನಾತ್ಮಕ ಗೌರವ(Unconditional positive Regard) ತೋರಿಸುವಿಕೆ
- ನಿಖರವಾಗಿ, ಸಂವೇದನಾತ್ಮಕವಾಗಿ ಗ್ರಾಹಕನನ್ನು ಅರ್ಥಮಾಡಿಕೊಳ್ಳಬೇಕು.
- ಚಿಕಿತ್ಸಕ ಮತ್ತು ಗ್ರಾಹಕ ನಿಜವಾದ ಮಾನಸಿಕ ಸಂಪರ್ಕದಲ್ಲಿರಬೇಕು.
- ತೀವ್ರ ಅಸಾಮಂಜಸ್ಯ ಸ್ಥಿತಿಗೆ ಬಂದಾಗ ವ್ಯಕ್ತಿ ದುರ್ಬಲನಾಗಬಹುದು, ಆತಂಕಿತನಾಗಬಹುದು. ಆ ಸ್ಥಿತಿಯನ್ನು ನಿವಾರಿಸಬೇಕು.
- ಚಿಕಿತ್ಸಕ ತನ್ನನ್ನು ಹೇಗೆ ನೋಡುತ್ತಾನೆ, ಭಾವಿಸುತ್ತಾನೆ ಎನ್ನುವುದನ್ನು ವ್ಯಕ್ತಿ/ಗ್ರಾಹಕ ತಿಳಿದುಕೊಳ್ಳುವ ಸಾಧ್ಯತೆ ಇರುತ್ತದೆ.

Digitised by Bharatavani, CIIL

ಸಮಾಲೋಚನೆ ಸಫಲ ರೀತಿಯಲ್ಲಿ ಮುಗಿದಾಗ ವ್ಯಕ್ತಿ/ಗ್ರಾಹಕ ತನ್ನನ್ನು ತಾನು ಬೇರೆ ರೀತಿಯಲ್ಲಿ ನೋಡತೊಡಗುತ್ತಾನೆ. ತನ್ನ ಭಾವನೆಯನ್ನು ಒಪ್ಪಿಕೊಳ್ಳತೊಡಗುತ್ತಾನೆ, ಆತ್ಮ–ವಿಶ್ವಾಸ, ಆತ್ಮನಿರ್ದೇಶನಗಳನ್ನು ಬೆಳೆಸಿಕೊಳ್ಳುತ್ತಾನೆ. ಅವನ ಸ್ವಭಾವದಲ್ಲಿ ಹೆಚ್ಚಿನ ನಮ್ಯತೆ, ಉಂಟಾಗುತ್ತದೆ. ಹೆಚ್ಚು ವಾಸ್ತವಿಕವಾದ ಗುರಿಗಳನ್ನು ರೂಪಿಸಿಕೊಳ್ಳುತ್ತಾನೆ. ಬೇರೆಯವರಿಗೆ ಹೆಚ್ಚು ಸ್ವೀಕಾರಾರ್ಹನಾಗುತ್ತಾನೆ. ಘಟನೆಗಳ ಪ್ರತ್ಯಾಕ್ಷಾನುಭವದಲ್ಲಿ ಹೆಚ್ಚು ಮುಕ್ತತೆ ಹೊಂದಿ, ರಚನಾತ್ಮಕ ರೀತಿಗಳಲ್ಲಿ ತನ್ನ ವ್ಯಕ್ತಿತ್ವ ಲಕ್ಷಣಗಳನ್ನು ಬದಲಾಯಿಸಿಕೊಳ್ಳತೊಡಗುತ್ತಾನೆ.

**ಅಬ್ರಹಾಂ ಮ್ಯಾಸ್ಲೋ ಸಿದ್ಧಾಂತ:** ಅಬ್ರಹಾಂ ಮ್ಯಾಸ್ಲೋ 1908ರಲ್ಲಿ ಅಮೇರಿಕಾಕ್ಕೆ ವಲಸೆ ಬಂದಿದ್ದ ಒಂದು ಜ್ಯೂ(ಯಹೂದಿ) ಕುಟುಂಬದಲ್ಲಿ ನ್ಯೂಯಾರ್ಕ್ ನಗರದಲ್ಲಿ ಜನಿಸಿದನು. ವಿಸ್ಕಾನ್‌ಸಿನ್ ವಿಶ್ವವಿದ್ಯಾನಿಲಯದಲ್ಲಿ ತನ್ನ ಅಧ್ಯಯನವನ್ನು ಮುಗಿಸಿದ ನಂತರ ಕೋತಿಗಳ ವರ್ತನೆಯ ಬಗ್ಗೆ ಹ್ಯಾರಿ ಹಾರ್ಲೋ ಬಳಿ ಮತ್ತು ವರ್ತನವಾದದ ಬಗ್ಗೆ ಕ್ಲಾರ್ಕ್ ಹಲ್ ಬಳಿ ಅಧ್ಯಯನ ಮಾಡಿದನು.ಗೆಸ್ಟಾಲ್ ಮನೋವಿಜ್ಞಾನದಿಂದ ಮ್ಯಾಸ್ಲೋ ಪ್ರಭಾವಿತನಾದನು. ಮನುಷ್ಯನ ವರ್ತನೆಯ ಬಗ್ಗೆ ವರ್ತನವಾದಿಗಳ (ಮುಖ್ಯವಾಗಿ ಸ್ಕಿನ್ನರ್) ಅನುಬಂಧ ಕಲಿಕಾ ನಿಲುವನ್ನು ಮತ್ತು ಸಿಗ್ಮಂಡ್ ಫ್ರಾಯ್ಡ್ ಮತ್ತು ಅವನ ಗುಂಪಿನವರ ಸುಪ್ತಚೇತನದ ಪ್ರಭಾವಕ್ಕೆ ಒತ್ತುಕೊಡುವ ಮಾನಸಿಕ ನಿರ್ಧಾರಣ ವಾದವನ್ನು (Psychic Determinism) ಮತ್ತು ಈ ಎರಡೂ ಪಂಥದವರು ಮಾನವನ ವ್ಯಕ್ತಿತ್ವ ವಿಕಾಸದಲ್ಲಿ ಮಾನವೀಯತೆಯ ಅಂಶಗಳ ಪ್ರಭಾವಗಳನ್ನು ಉಪೇಕ್ಷಿಸಿದುದ್ದನ್ನು ಮ್ಯಾಸ್ಲೋ ಒಪ್ಪಲಿಲ್ಲ. ಕಾರ್ಲ್ ರೋಜರ್ಸ್‌ನಂತೆ ಮಾನವನ ವರ್ತನೆಯ ಮೇಲೆ ಮೌಲ್ಯ, ಆದರ್ಶ ಇತ್ಯಾದಿ ಮಾನವೀಯ ಅಂಶಗಳ ಪ್ರಭಾವಕ್ಕೆ ಒತ್ತು ನೀಡುವ ಮಾನವತಾವಾದಿ ಮನೋವಿಜ್ಞಾನದ ಪ್ರವರ್ತಕರಲ್ಲಿ ಒಬ್ಬನೆನಿಸಿದನು. ಮ್ಯಾಸ್ಲೋ ಮಾನವನ ಅಭಿಪ್ರೇರಣಾ ವ್ಯವಸ್ಥೆಯ ಬಗ್ಗೆ ಹೆಚ್ಚು ಗಮನ ನೀಡಿ ಅಭಿಪ್ರೇರಣೆಯ ಒಂದು ಮಾದರಿಯನ್ನೇ ವಿಕಾಸಗೊಳಿಸಿರುವುದರಿಂದ ಇವನ ಸಿದ್ಧಾಂತವನ್ನು ವ್ಯಕ್ತಿತ್ವ ಸಿದ್ಧಾಂತ ಎಂದು ಹೇಳುವುದು ಸೂಕ್ತವೆನಿಸುವುದಿಲ್ಲ. ಆದಾಗ್ಯೂ, ಮ್ಯಾಸ್ಲೋ ಮಾನವನ ವ್ಯಕ್ತಿತ್ವ ರೂಪಣೆಯಲ್ಲಿ ಮೇಲ್ಮಟ್ಟದ, ಆಧ್ಯಾತ್ಮಿಕ ಸ್ವರೂಪದ ಅನುಭವಗಳಿಗೆ ಮಹತ್ವ ನೀಡಿದ್ದಾನೆ.

ಮ್ಯಾಸ್ಲೋ ಮಾನವನ ಪ್ರೇರಣೆಗಳನ್ನು ಅಭಾವಗಳ ಪ್ರೇರಣೆಗಳು (Deficiency Motives – D -Motive) ಮತ್ತು ಸಂಭವನ ಪ್ರೇರಣೆಗಳು (Becoming Motives – B – Motives) ಎಂದು ವರ್ಗೀಕರಿಸಿ ಅವುಗಳ ಒಂದು ಶ್ರೇಣಿಯನ್ನು ವಿವರಿಸಿದ್ದಾನೆ. ಶಾರೀರಿಕ ಅಗತ್ಯಗಳು, ಸುರಕ್ಷತೆಯ ಅಗತ್ಯಗಳು, ಪ್ರೀತಿ ಮತ್ತು ಸಂಬಂಧಿಸಿರುವಿಕೆ – ಇವು ಕೆಳವರ್ಗದ ಆ – ಅಗತ್ಯಗಳು. ಇವು ಮನುಷ್ಯನ ಉಳಿವಿಗೆ ಬೇಕು. ಇವು ಎಲ್ಲರಿಗೂ ಒಂದೇ ಆಗಿರುತ್ತವೆ. ಗೌರವದ ಅಗತ್ಯ, ಸೌಂದರ್ಯ, ಪ್ರಜ್ಞೆ ಅಗತ್ಯ, ಆತ್ಮ ವಾಸ್ತವೀಕರಣದ (ಸಾಕ್ಷಾತ್ಕಾರದ) ಅಗತ್ಯ, ಜ್ಞಾನಾರ್ಜನೆ ಅಗತ್ಯ. ಇವು B – ಪ್ರೇರಣೆಗಳು. ಇವು ವ್ಯಕ್ತಿತ್ವ ವಿಕಾಸದಲ್ಲಿ ಅಗತ್ಯವಾಗುತ್ತವೆ. (ಮ್ಯಾಸ್ಲೋವಿನ ಅಗತ್ಯಗಳ ಶ್ರೇಣಿ ಮಾದರಿಯ ವಿವರಗಳಿಗೆ ಈ ಸಂಪುಟದ 'ಅಭಿಪ್ರೇರಣೆಗಳು' ಲೇಖನ ನೋಡಿ.)

ಮ್ಯಾಸ್ಲೋ ತನ್ನ ವ್ಯಕ್ತಿತ್ವ ಅಧ್ಯಯನಕ್ಕೆ ಮಾನಸಿಕವಾಗಿ ಸಮಾಯೋಜಿತರಾಗಿರುವವರ ವ್ಯಕ್ತಿತ್ವಗಳನ್ನು ಮೂಲ ಘಟಕಗಳಾಗಿ ಪರಿಗಣಿಸಿದನು. ತಮ್ಮ ಜೀವನದಲ್ಲಿ ಸಫಲತೆಯನ್ನು ಹೊಂದಿ, ತಮ್ಮನ್ನು ತಾವು ವಾಸ್ತವೀಕರಣಗೊಳಿಸಿ(Actualize) ಕೊಂಡಿದ್ದಾರೆಂದು ಪರಿಗಣಿಸಬಹುದಾದ 15 ಪ್ರಸಿದ್ಧ ವ್ಯಕ್ತಿಗಳನ್ನು(ಡೇವಿಡ್ ಥೊರೋ, ಎರುರ್ಸನ್, ವಾಲ್ಟ್ ವಿಟ್‌ಮನ್, ಆಲ್ಬರ್ಟ್ ಸ್ವೆಟ್ಜರ್ ಮುಂತಾದವರು ಇವರಲ್ಲಿ ಸೇರಿದ್ದಾರೆ) ಆಯ್ಕೆ ಮಾಡಿಕೊಂಡು ಮ್ಯಾಸ್ಲೋ ಅವರನ್ನು ಆತ್ಮ ವಾಸ್ತವೀಕರಣ ಮಾಡಿಕೊಂಡಿರುವವರು, ಪರಿಪಕ್ವ ವ್ಯಕ್ತಿತ್ವ ಉಳ್ಳವರು, ಸಂಪೂರ್ಣ ಕಾರ್ಯರತ ವ್ಯಕ್ತಿಗಳು (Fully Functioning Persons) ಮತ್ತು ಉತ್ತಮ ರೀತಿಯ ಸಮಾಯೋಜಿತರು ಎಂದು ಪರಿಗಣಿಸಿ ಅಂಥ ವ್ಯಕ್ತಿತ್ವದ 15 ಲಕ್ಷಣಗಳನ್ನು ವಿವರಿಸಿದ್ದಾನೆ. (ಈ ಲಕ್ಷಣಗಳ ವಿವರಗಳಿಗೆ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಂಪುಟ ಒಂದರಲ್ಲಿ 'ಸಮಯೋಜಿತ, ವ್ಯಕ್ತಿತ್ವ' ಲೇಖನ ನೋಡಿ). ಈ ಲಕ್ಷಣಗಳಿಗೂ ಭಗವದ್ಗೀತೆಯಲ್ಲಿ ಕೃಷ್ಣ ವರ್ಣಿಸಿರುವ ಸ್ಥಿತ ಪ್ರಜ್ಞನ ಲಕ್ಷಣಗಳಿಗೆ ಬಹಳ ಸಾಮ್ಯತೆ ಇದೆ. (ನೋಡಿ ಭಗವದ್ಗೀತೆಯ ಎರಡನೇ ಅಧ್ಯಾಯ 'ಸಾಂಖ್ಯ ಯೋಗ'ದಲ್ಲಿ ಶ್ಲೋಕ 54ರಿಂದ 72)

ಜೀವನದಲ್ಲಿ ಒಮ್ಮೊಮ್ಮೆ ಉಂಟಾಗುವ ಮೇಲ್ಮಟ್ಟದ, ಅಹಂ ಅನ್ನು ಮೀರಿ ಘಟಿಸುವ ಆನಂದಾತಿರೇಕದ, ಉತ್ತೇಜಕವಾದ ಸಂದರ್ಭಗಳ ಅನುಭವಗಳನ್ನು ಶಿಖರಾನುಭವಗಳು (Peak Experiences) ಎಂದು ಮ್ಯಾಸ್ಲೋ ಪರಿಗಣಿಸಿದ್ದಾನೆ. ಈ ಅನುಭವಗಳು ಒಂದು ಬಗೆಯ ಇಂದ್ರಿಯಾತೀತವಾದ, ರಹಸ್ಯಾತ್ಮಕವಾದ, ಆಧ್ಯಾತ್ಮಕವಾದ ಸ್ಥಿತಿಗೆ ವ್ಯಕ್ತಿಯನ್ನು ಕೊಂಡೊಯ್ದು ಯಾವುದೋ ಒಂದು, ಅನಿರ್ವಚನೀಯವಾದ, ಗಹನವಾದ ಸ್ಥಿತಿ ಇದೆ ಎಂಬುದರ ಬಗ್ಗೆ ಅಂತರ್ದೃಷ್ಟಿಯನ್ನು ನೀಡುತ್ತವೆ. ಈ ಅನುಭವಗಳನ್ನೇ ಭಾರತೀಯ ಆಧ್ಯಾತ್ಮಿಕತೆಯಲ್ಲಿ ಅನುಭಾವಗಳು (Mystic Experiences) ಎಂದು ಪರಿಗಣಿಸಲಾಗಿದೆ. ಇವು ವ್ಯಕ್ತಿಯ ವ್ಯಕ್ತಿತ್ವವನ್ನು ಪರಿಮಾರ್ಜಿತಗೊಳಿಸುತ್ತವೆ. ಕಲೆ, ಸಾಹಿತ್ಯ, ನೃತ್ಯ, ಸಂಗೀತಗಳಿಗೆ ಈ ಅನುಭವವನ್ನು ನೀಡುವ ಸತ್ವವಿದೆ. ಶಿಖರಾನುಭವಗಳ ನಂತರ ದೀರ್ಘಕಾಲ ನೆನಪಿನಲ್ಲಿ ಉಳಿಯುವ ಅನುಭವಗಳನ್ನು ಮ್ಯಾಸ್ಲೋ ಪ್ರಸ್ಥಭೂಮಿ (ಕೆಳಸ್ತರದ) ಅನುಭವಗಳು (Plateau Experiences) ಎಂದು ಕರೆದಿದ್ದಾನೆ.

**ಸಾಮಾಜಿಕ ಕಲಿಕಾ ಸಿದ್ಧಾಂತ:** ವ್ಯಕ್ತಿತ್ವ ಸಾಮಾಜಿಕ ಪ್ರಭಾವಗಳಿಂದ ವಿಕಾಸವಾಗುತ್ತದೆ ಎಂದು ಈ ಸಿದ್ಧಾಂತ ಪ್ರತಿಪಾದಿಸುತ್ತದೆ. ಆಲ್ಬರ್ಟ್ ಬಾಂಡುರ ಈ ಸಿದ್ಧಾಂತದ ಮುಖ್ಯ ಪ್ರವರ್ತಕನಾಗಿದ್ದಾನೆ. ಮಗು ಬೇರೆಯವರ ವರ್ತನ ವಿನ್ಯಾಸಗಳನ್ನು ಅನುಕರಣೆ ಮಾಡಿ, ತನ್ನ ವರ್ತನೆಗಳನ್ನು ಕಲಿತುಕೊಳ್ಳುತ್ತದೆ. ತಂದೆ–ತಾಯಿ, ಪ್ರಸಿದ್ಧ ವ್ಯಕ್ತಿಗಳನ್ನು

Digitised by Bharatavani, CIIL

ಮಾದರಿಯಾಗಿ (Models) ಅವಲೋಕಿಸಿ ಸ್ವೀಕರಿಸಿ ಅವರೊಂದಿಗೆ ತಾದಾತ್ಮಕತೆ ಹೊಂದಿ ಅವರ ವರ್ತನೆಯನ್ನು ಕಲಿಯುವುದರಿಂದ ಈ ಪ್ರಕ್ರಿಯೆಯನ್ನು ಅವಲೋಕನ ಕಲಿಕೆ (Observational Learning) ಮತ್ತು ನಮೂನೀಕರಣ (Modelling) ಎಂದು ಹೇಳಲಾಗುತ್ತದೆ. (ಈ ಸಿದ್ಧಾಂತದ ವಿವರಗಳಿಗೆ ಈ ಸಂಪುಟದ 'ಕಲಿಕೆಯ ಸಿದ್ಧಾಂತಗಳು' ಲೇಖನ ನೋಡಿ).

–ಪ್ರೊ. ಮಂಜುನಾಥಯ್ಯ ಬಿ. ಎನ್.

## ವ್ಯಕ್ತಿತ್ವ ಮಾಪನ ವಿಧಾನಗಳು

ವ್ಯಕ್ತಿತ್ವದ ಸ್ವರೂಪವು ಸಂಕೀರ್ಣವಾಗಿರುವುದರಿಂದ, ಅದನ್ನು ತೃಪ್ತಿಕರವಾಗಿ ಅಳತೆ ಮಾಡುವುದು ಕ್ಲಿಷ್ಟಕರವಾಗಿದೆ. ಯಾವುದೇ ಒಂದು ಅಳತೆ ಮಾಪನಿಯು, ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಮತ್ತು ಸಮರ್ಥವಾಗಿ ಅಳತೆ ಮಾಡುವುದಿಲ್ಲ. ಏಕೆಂದರೆ, ವ್ಯಕ್ತಿತ್ವವು ಅನೇಕ ವಿಶೇಷಕಗಳ ಒಂದು ಒಟ್ಟು ಮೊತ್ತವಾಗಿದೆ. ಈ ವಿಶೇಷಕಗಳು ಪ್ರತಿ ಒಬ್ಬರಲ್ಲಿಯೂ ಸುಸಂಬದ್ಧವಾಗಿ ಸಮ್ಮಿಳಿತವಾಗಿರುವ ಸಂಯೋಜನೆಗಳಾಗಿದ್ದು ಪ್ರತಿಯೊಂದು ವ್ಯಕ್ತಿತ್ವವು ಅದ್ವಿತೀಯವಾಗಿರುತ್ತದೆ. ವಿವಿಧ ವಿಶೇಷಕಗಳನ್ನು ಪ್ರತ್ಯೇಕವಾಗಿ ಹಾಗೂ ಒಟ್ಟಾರೆಯಾಗಿ ಏಕಕಾಲದಲ್ಲಿ ಪರೀಕ್ಷಿಸಿದಾಗ ಮಾತ್ರ ವ್ಯಕ್ತಿತ್ವದ ಪರಿಪೂರ್ಣವಾದ ಅರಿವು ಉಂಟಾಗಲು ಸಾಧ್ಯ. ಆದರೆ, ಹೀಗೆ ಮಾಡುವುದು ಕಷ್ಟಸಾಧ್ಯವಾದ ಕಾರ್ಯವಾಗಿದೆ.

ವ್ಯಕ್ತಿತ್ವವನ್ನು ಮಾಪನ ಮಾಡಲು ಅನೇಕ ವಿಧಾನಗಳನ್ನು/ತಂತ್ರಗಳನ್ನು ರೂಪಿಸಲಾಗಿದೆ. ಇವುಗಳನ್ನು ಅವಲೋಕನ ತಂತ್ರಗಳು, ಸ್ವ–ವರದಿ ತಂತ್ರಗಳು, ಪ್ರಕ್ಷೇಪಣ ತಂತ್ರಗಳು, ಸಮಾಜ–ಮಿತಿ ತಂತ್ರಗಳು ಎಂದು ವರ್ಗೀಕರಿಸಬಹುದು.

**ಅವಲೋಕನ ತಂತ್ರಗಳು:**

ವಿವಿಧ ಸನ್ನಿವೇಶಗಳಲ್ಲಿ ವ್ಯಕ್ತಿಯೊಬ್ಬನ ವರ್ತನೆಯನ್ನು ಅವಲೋಕಿಸಿ ಅವನ ವರ್ತನೆಯನ್ನು ಕುರಿತು ವಿವರವಾದ ಮಾಹಿತಿಯನ್ನು ಪಡೆಯಬಹುದಾಗಿದೆ. ಇಂತಹ ಅವಲೋಕನ ಅಥವಾ ವೀಕ್ಷಣೆಯನ್ನು ವ್ಯಕ್ತಿಗೆ ಸಂಬಂಧಿಸಿದವರು ಅಂದರೆ, ಕುಟುಂಬದ ಸದಸ್ಯರು, ನೆರೆ–ಹೊರೆಯವರು, ಸ್ನೇಹಿತರು, ಸಹೋದ್ಯೋಗಿಗಳು, ವೈದ್ಯರು, ಹೀಗೆ ಯಾರಾದರೂ ಮಾಡಬಹುದಾಗಿದೆ. ಈ ರೀತಿಯ ವೀಕ್ಷಣೆ ವ್ಯವಸ್ಥಿತವಾಗಿದ್ದು, ವೈಜ್ಞಾನಿಕವಾಗಿ ತರ್ಕಬದ್ಧವಾಗಿರಬೇಕು. ಅವಲೋಕನ ನೇರವಾಗಿದ್ದು, ನಿರ್ದಿಷ್ಟವಾಗಿರಬೇಕು. ವಸ್ತುನಿಷ್ಠವಾಗಿರಬೇಕು ಮತ್ತು ಸ್ಪಷ್ಟವಾಗಿರಬೇಕು.

ಅವಲೋಕನ ತಂತ್ರಗಳನ್ನು ಬಳಸುವುದು ಸುಲಭ ಹಾಗೂ ಸರಳವಾಗಿ ಕಂಡರೂ ಅವು ದೋಷರಹಿತವಾಗಿಲ್ಲ. ಇಂತಹ ತಂತ್ರಗಳ ಉನ್ನತ ಮಟ್ಟದ ವಿಶ್ವಾರ್ಹತೆಯನ್ನು ಹೊಂದಿರುವುದಿಲ್ಲ. ಅವಲೋಕಿಸುವವರು ಅವರ ದೃಷ್ಟಿಕೋನದಿಂದ ವೀಕ್ಷಿಸಿ, ನೀಡುವ ಮಾಹಿತಿಯು ಅಪೂರ್ಣವಾಗಿರುವ ಸಾಧ್ಯತೆ ಇರುತ್ತದೆ. ವೀಕ್ಷಿಸುವವನ ಪರಿಕಲ್ಪನೆಗಳು, ಆಸಕ್ತಿಗಳು, ಪ್ರೇರಣೆಗಳು, ಮಾನಸಿಕ ಸ್ಥಿತಿ, ಮೌಲ್ಯಗಳು, ಪೂರ್ವಗ್ರಹಗಳು, ಪಕ್ಷಪಾತ ಮುಂತಾದವುಗಳು ವೀಕ್ಷಣೆಯ ಮೇಲೆ ಪ್ರಭಾವ ಬೀರುತ್ತವೆ. ಇಷ್ಟೇ ಅಲ್ಲದೆ ಅವಲೋಕಿಸಲ್ಪಡುವವನು ಸ್ವಾಭಾವಿಕ ವರ್ತನೆಯನ್ನು ತೋರಿಸದೆ ಹೋದಾಗ ಮಾಹಿತಿಯು ತಪ್ಪಾಗಿ ಅರ್ಥೈಸಲ್ಪಟ್ಟ ವ್ಯಕ್ತಿತ್ವವನ್ನು ಸರಿಯಾಗಿ ಅಳತೆ ಮಾಡಲು ಸಾಧ್ಯವಾಗುವುದಿಲ್ಲ. ಅವಲೋಕನ ತಂತ್ರಗಳಲ್ಲಿ, ದರ್ಜಾಮಾಪನಿಗಳು, ತಪಶೀಲು ಪಟ್ಟಿಗಳನ್ನು ಉಪಯೋಗಿಸಬಹುದು.

**ದರ್ಜಾ ಮಾಪನಿಗಳು:**

ವ್ಯಕ್ತಿಯ ವರ್ತನೆಯನ್ನು ಒಂದು ಸನ್ನಿವೇಶದಲ್ಲಿ ಗಮನಿಸಿ, ತಮ್ಮ ಅಭಿಪ್ರಾಯಗಳನ್ನು/ವೀಕ್ಷಣೆಯ ವಿವರಗಳನ್ನು ವ್ಯಕ್ತಪಡಿಸುವ ಸಾಧನಗಳಾಗಿವೆ. ಇದರಿಂದ ವ್ಯಕ್ತಿಯಲ್ಲಿರುವ ವಿವಿಧ ವಿಶೇಷಕಗಳ ಇರುವಿಕೆ ಹಾಗೂ ಅವುಗಳ ಮಟ್ಟವನ್ನು ಮಾಪನ ಮಾಡಲು ಸಾಧ್ಯವಾಗುತ್ತದೆ. ಪ್ರಕ್ರಿಯೆಗಳನ್ನು ಹಾಗೂ ಅದರಿಂದ ದೊರೆತ ಉತ್ಪನ್ನಗಳನ್ನು ಮೌಲ್ಯಮಾಪನ ಮಾಡಲು ಉಪಯೋಗಿಸಬಹುದಾಗಿದೆ. ವ್ಯಕ್ತಿಯ ದಕ್ಷತೆಯ ಮಟ್ಟವನ್ನು ಗುರುತಿಸಲು ಸಾಧ್ಯವಾಗುತ್ತದೆ.

ವಿವಿಧ ವಿಧದ ದರ್ಜಾಮಾಪನಿಗಳನ್ನು ಅಧ್ಯಯನದ ಉದ್ದೇಶ ಮತ್ತು ಅಗತ್ಯತೆಗೆ ಅನುಗುಣವಾಗಿ ತಯಾರಿಸಿ ಬಳಸಲಾಗುತ್ತದೆ. ಅವುಗಳಲ್ಲಿ ಸಾಂಖ್ಯಿಕ, ವರ್ಣನಾತ್ಮಕ ಮತ್ತು ಆಲೇಖೀಯ ದರ್ಜಾಮಾಪನಿಗಳು ಹೆಚ್ಚು ಜನಪ್ರಿಯವಾಗಿವೆ. ದರ್ಜಾಮಾಪನಿಯ ಬಗ್ಗೆ ಹೆಚ್ಚಿನ ವಿವರಣೆಗೆ 'ದರ್ಜಾಮಾಪನಿಗಳು (ಸಂಪುಟ–1) ಲೇಖನ ನೋಡಿ.

**ತಾಳೆಪಟ್ಟಿಗಳು:**

ತಾಳೆಪಟ್ಟಿಗಳು ವರ್ತನೆಯ ಲಕ್ಷಣಗಳನ್ನು ನೇರವಾಗಿ ಗುರುತಿಸಲು ಸಾಧ್ಯವಾಗುವಂತಹ ಸಾಧನಗಳಾಗಿವೆ. ವ್ಯಕ್ತಿಯಲ್ಲಿ ಕೆಲವು ಗುಣಲಕ್ಷಣಗಳು 'ಇವೆಯೇ' ಅಥವಾ 'ಇಲ್ಲವೇ' ಎಂದು ಮಾತ್ರ ತಿಳಿದುಕೊಳ್ಳುವುದು ಇವುಗಳ ಉದ್ದೇಶ. ಇದರಿಂದ ವ್ಯಕ್ತಿಯಲ್ಲಿರುವ ವಿಶೇಷಕದ ಗುಣಮಟ್ಟವನ್ನು ಅರಿಯಲು ಸಾಧ್ಯವಾಗುವುದಿಲ್ಲ. ತಾಳೆಪಟ್ಟಿಗಳು ವ್ಯಕ್ತಿಯಲ್ಲಿರುವ ಆಂತರಿಕ ಪ್ರವೃತ್ತಿಗಳ ಬಗ್ಗೆ ಮಾಹಿತಿ ನೀಡುವುದಿಲ್ಲ. ವ್ಯಕ್ತಿಯ ನಿರ್ದಿಷ್ಟ ಲಕ್ಷಣಗಳ ಬಗ್ಗೆ ಸ್ಪಷ್ಟವಾದ ಮತ್ತು ನಿಖರವಾದ ಮಾಹಿತಿಯ ಅಗತ್ಯವಿದ್ದಾಗ ತಾಳೆಪಟ್ಟಿಗಳು ಉಪಯುಕ್ತವೆನಿಸುತ್ತವೆ.

ತಾಳೆಪಟ್ಟಿಗಳಲ್ಲಿ ಅಗತ್ಯವಾದ ಮಾಹಿತಿಗೆ ಸಂಬಂಧಿಸಿದಂತೆ ಹೇಳಿಕೆಗಳ ಒಂದು ಪಟ್ಟಿ ಇರುತ್ತವೆ. ಪ್ರತಿ ಒಂದು ಹೇಳಿಕೆಯ ಎದುರಿಗೆ ಬಿಟ್ಟ ಸ್ಥಳದಲ್ಲಿ ವೀಕ್ಷಕನು ಹೇಳಿಕೆಗೆ ಸಂಬಂಧಿಸಿದಂತೆ

Digitised by Bharatavani, CIIL

'ಹೌದು' ಅಥವಾ 'ಇಲ್ಲ' ಎಂದು ಸೂಚಿಸಬೇಕಾಗುತ್ತದೆ. ಇದರಿಂದ ಬೇಕಾದ ಮಾಹಿತಿಯನ್ನು ವ್ಯವಸ್ಥಿತವಾಗಿ, ನೇರವಾಗಿ ದಾಖಲಿಸಲು ಸಾಧ್ಯವಾಗುತ್ತದೆ. ಹೆಚ್ಚಿನ ಮಾಹಿತಿಗೆ 'ತಾಳೆಪಟ್ಟಿಗಳು' ಲೇಖನ ನೋಡಿ ಸಂಪುಟ-1.

**ದೃಷ್ಟಾಂತ ದಾಖಲೆಗಳು:**

ಅರ್ಥಪೂರ್ಣವಾದ ಮತ್ತು ಮುಖ್ಯವಾದ ಸನ್ನಿವೇಶಗಳಲ್ಲಿ ವ್ಯಕ್ತಿಯ ವರ್ತನೆಯ ಸತ್ಯಾಂಶಗಳ ವರದಿಯನ್ನು ವೀಕ್ಷಕನೊಬ್ಬನು ದಾಖಲಿಸಿರುವುದನ್ನು ದೃಷ್ಟಾಂತ ದಾಖಲೆ ಎನ್ನುತ್ತಾರೆ. ಈ ವರದಿಯು ಸನ್ನಿವೇಶದ ಸಂಪೂರ್ಣವಾದ ವಸ್ತುನಿಷ್ಠವಾದ ವಿವರಣೆಗಳಿಂದ ಕೂಡಿರುತ್ತದೆ ಮತ್ತು ಘಟನೆಯು ಘಟಿಸಿದ ತರುವಾಯ ದಾಖಲಿಸಲ್ಪಟ್ಟಿರುತ್ತದೆ. ಇದು ಅನೌಪಚಾರಿಕ ಸನ್ನಿವೇಶಗಳಲ್ಲಿ ವ್ಯಕ್ತಿಯ ವರ್ತನೆಗಳ ನೈಜವಾದ ಮತ್ತು ಸಹಜವಾದ ವರ್ಣನೆಯಾಗಿರುತ್ತದೆ. ವ್ಯಕ್ತಿತ್ವದ ಮಾಪನದ ಕ್ಷೇತ್ರದಲ್ಲಿ ಇದು ಒಂದು ಸರಳವಾದ ಮತ್ತು ಅನುಕೂಲಕರವಾದ ವಿಧಾನವಾಗಿದೆ. ಇಂತಹ ಅವಲೋಕನದಿಂದ ವ್ಯಕ್ತಿಯ ವಿವಿಧ ಸನ್ನಿವೇಶಗಳಲ್ಲಿ ಹೇಗೆ ವರ್ತಿಸುತ್ತಾನೆ ಎಂದು ತಿಳಿಯಬಹುದಾಗಿದೆ.

ಈ ಕೆಳಗೆ ನಮೂದಿಸಿದ ಹಲವು ಮುನ್ನೆಚ್ಚರಿಕೆಗಳನ್ನು ವಹಿಸಿದಾಗ ದೃಷ್ಟಾಂತ ದಾಖಲೆ ವಿಧಾನದಿಂದ ಉತ್ತಮ ಫಲಿತಾಂಶಗಳನ್ನು ಪಡೆಯಬಹುದು.

- ಪ್ರತಿ ಒಂದು ದೃಷ್ಟಾಂತವನ್ನು ಒಂದು ನಿರ್ದಿಷ್ಟ ಘಟನೆಗೆ ಮಿತಿಗೊಳಿಸಿಕೊಳ್ಳಬೇಕು.
- ವೀಕ್ಷಿಸಬೇಕಾದ ವರ್ತನೆಯನ್ನು ಮೊದಲೇ ನಿರ್ಧರಿಸಿರಬೇಕು.
- ಅರ್ಥೈಸಲು ಸಾಧ್ಯವಿರುವಂತಹ ಸನ್ನಿವೇಶಗಳನ್ನು/ ವರ್ತನೆಗಳನ್ನು ಮಾತ್ರ ಪರಿಗಣಿಸಬೇಕು.
- ವರ್ತನೆಯನ್ನು ವೀಕ್ಷಿಸಿದ ತಕ್ಷಣವೇ ಅದನ್ನು ದಾಖಲಿಸಬೇಕು. ಹೀಗೆ ಮಾಡದೆ ಹೋದರೆ, ವಿಷಯವು ತಿರುಚಿ ಅಪಾರ್ಥವಾಗುವ ಸಂಭವ ಇರುತ್ತದೆ.
- ವರ್ತನೆಯ ವಿವರಗಳು ಸಾಧ್ಯವಾದಷ್ಟು ನಿಖರವಾಗಿ ಮತ್ತು ವಸ್ತುನಿಷ್ಠವಾಗಿರಬೇಕು.
- ವರ್ತನೆಗಳನ್ನು ಅರ್ಥೈಸುವಾಗ, ಅವು ನೈಜವಾಗಿರಲಿ, ಅಂದರೆ ನಿಮ್ಮ (ವೀಕ್ಷಕ) ಸ್ವಂತ ಅಭಿಪ್ರಾಯ ಅಥವಾ ಅನುಭವಗಳು ಯಾವುದೇ ಪ್ರಭಾವ ಬೀರದಂತೆ ಗಮನ ನೀಡಿ.
- ಧನಾತ್ಮಕ ಹಾಗೂ ಋಣಾತ್ಮಕ ವರ್ತನೆಗಳನ್ನು ತಾರತಮ್ಯವಿಲ್ಲದಂತೆ ದಾಖಲಿಸಬೇಕು.
- ವಿವಿಧ ದೃಷ್ಟಿಕೋನಗಳಿಂದ ಸನ್ನಿವೇಶ ಮತ್ತು ವರ್ತನೆಯನ್ನು ವಿಶ್ಲೇಷಿಸಿ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವುದು ಒಳ್ಳೆಯದು.

**ಸ್ವ-ವರದಿ ತಂತ್ರಗಳು:**

ಪ್ರತಿ ಒಬ್ಬ ವ್ಯಕ್ತಿಯೂ ತನ್ನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಲು ಶಕ್ತನಾಗಿರುತ್ತಾನೆ. ಮಹತ್ವವಾದ ಮಾಹಿತಿಯನ್ನು ನೇರವಾಗಿ ಅವನಿಂದಲೇ ಪಡೆಯಬಹುದಾಗಿದೆ. ಅಂತರಾವಲೋಕನದಿಂದ ವ್ಯಕ್ತಿ ತನ್ನನ್ನು ತಾನು ಮಾಪನ ಮಾಡಿಕೊಳ್ಳುವುದು ಬಹಳ ಹಿಂದಿನಿಂದಲೂ ಬಳಕೆಯಲ್ಲಿದೆ. 'ಸಂದರ್ಶನ' ಹಾಗೂ 'ಪ್ರಶ್ನಾವಳಿ'ಗಳನ್ನು ನೀಡುವುದರ ಮೂಲಕ ಇಂತಹ ಮಾಹಿತಿಯನ್ನು ಪಡೆಯಬಹುದಾಗಿದೆ. ವ್ಯಕ್ತಿತ್ವದ ಮಾಪನದಲ್ಲಿ ಇವು ಮಹತ್ವದ ಕೊಡುಗೆಯನ್ನು ನೀಡಿದರೂ, ಇವು ಉತ್ಪ್ರೇಕ್ಷೆಯಿಂದ ಕೂಡಿರುವ ಸಾಧ್ಯತೆ ಇರುತ್ತದೆ.

**ಸಂದರ್ಶನ:**

ಸಂದರ್ಶನವು ಬಹಳ ಕಾಲದಿಂದಲೂ ಜನಪ್ರಿಯವಾಗಿ ಬಳಕೆಯಲ್ಲಿ ಇರುವ ಸ್ವ-ವರದಿಯ ತಂತ್ರವಾಗಿದೆ. ಈ ತಂತ್ರದಲ್ಲಿ ಅಗತ್ಯವಾದ ಮಾಹಿತಿಯನ್ನು ನೇರವಾಗಿ, ಮುಖಾಮುಖಿಯಾಗಿ, ಶಾಬ್ದಿಕವಾಗಿ, ಅನ್ಯೋನ್ಯಕ್ರಿಯೆಯ ಮೂಲಕ ವ್ಯಕ್ತಿಯಿಂದಲೇ ಪಡೆಯಲಾಗುತ್ತದೆ. ಈ ಅನ್ಯೋನ್ಯ ಕ್ರಿಯೆಯು ಉದ್ದೇಶಪೂರ್ವಕವಾಗಿದ್ದು, ವ್ಯಕ್ತಿಯ ವ್ಯಕ್ತಿತ್ವದ ಆಳವಾದ ಒಳನೋಟವನ್ನು ದೊರಕಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಸಂದರ್ಶನದಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ, ಕೂಡಲೇ ಅಲ್ಲಿಯೇ ವಿಷಯಗಳನ್ನು ಸ್ಪಷ್ಟಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಾಕಷ್ಟು ನಮ್ಯತೆ ಇರುವುದರಿಂದ ಸಂದರ್ಶನ ಮಾಡುವವರಿಗೂ ಮತ್ತು ಸಂದರ್ಶನಕ್ಕೆ ಒಳಪಡುವವರಿಗೂ ಇದು ಹೆಚ್ಚಿನ ಹೊರೆಯಾಗುವುದಿಲ್ಲ. ಸಂದರ್ಶನ ಮಾಡುವಾಗ, ಸಂದರ್ಶನಕಾರನು ಸಂದರ್ಶನಾರ್ಥಿಯ ಆಂಗಿಕ ಹಾವ, ಭಾವ, ಮುಖಚರ್ಯೆ, ಮಾತಿನ ವರಸೆ/ರೀತಿಯನ್ನು ಗಮನಿಸಿ, ಅನೇಕ ವಿಷಯಗಳನ್ನು ಗ್ರಹಿಸಿಕೊಳ್ಳಬಹುದು.

**ಸಂದರ್ಶನದ ವಿಧಗಳು:**

ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಗಳಿಗೆ ಅನುಗುಣವಾಗಿ ಸಂದರ್ಶನದಲ್ಲಿ ವಿವಿಧ ವಿಧಾನಗಳನ್ನು ಗುರುತಿಸಬಹುದು–

**ವೈಯಕ್ತಿಕ ಮತ್ತು ಸಮೂಹ ಸಂದರ್ಶನ:**

ವೈಯಕ್ತಿಕ ಸಂದರ್ಶನದಲ್ಲಿ ಒಂದು ಬಾರಿಗೆ ಒಬ್ಬ ಸಂದರ್ಶಕನು, ಒಬ್ಬ ವ್ಯಕ್ತಿಯನ್ನು ಮಾತ್ರ ಸಂದರ್ಶನ ಮಾಡಬಹುದು. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯು ಯಾವ ಉದ್ವೇಗ, ಸಂಕೋಚ ಇಲ್ಲದೆ ತನ್ನ ಅನಿಸಿಕೆಗಳನ್ನು

Digitised by Bharatavani, CIIL

ಸಂದರ್ಶನಕಾರನಿಗೆ ತಿಳಿಸುತ್ತಾನೆ.

ಸಮೂಹ ಸಂದರ್ಶನದಲ್ಲಿ ಅನೇಕರನ್ನು ಏಕಕಾಲದಲ್ಲಿ ಸಂದರ್ಶನ ಮಾಡಲಾಗುತ್ತದೆ. ಇಂತಹ ಸಂದರ್ಭದಲ್ಲಿ ಸಂದರ್ಶನಾರ್ಥಿಗಳು ಸಂಕೋಚದಿಂದ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ವ್ಯಕ್ತಪಡಿಸದೆ ಇರುವ ಸಾಧ್ಯತೆ ಇರುತ್ತದೆ. ಸಮೂಹ, ಸಂದರ್ಶನದಲ್ಲಿ 10 ರಿಂದ 12 ವ್ಯಕ್ತಿಗಳಿಗಷ್ಟೇ ಅವಕಾಶ ಇರುವುದಲ್ಲದೆ, ಸಮೂಹವು ಏಕರೂಪವಾಗಿರುವ ಅವಶ್ಯಕತೆ ಇದೆ.

ಸಂದರ್ಶನಕಾರರು ಒಬ್ಬರೇ ಇರಬಹುದು ಅಥವಾ ಹಲವು ಸಂದರ್ಶನಕಾರರ ಮಂಡಲಿಯು ಸಂದರ್ಶನವನ್ನು ಮಾಡಬಹುದು.

**ಸಂರಚಿತ ಮತ್ತು ಸಂರಚಿತವಲ್ಲದ ಸಂದರ್ಶನ:**

ಸಂರಚಿತ ಸಂದರ್ಶನದಲ್ಲಿ ಬಳಸಬೇಕಾದ ಅಥವಾ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಅಮೂಲಾಗ್ರವಾಗಿ ಪೂರ್ವಭಾವಿಯಾಗಿ ಯೋಜಿಸಲಾಗುತ್ತದೆ. ವ್ಯಕ್ತಿಗೆ, ಸಂದರ್ಶನಕಾರನು ಪೂರ್ವನಿರ್ಧಾರಿತ ಪ್ರಶ್ನೆಗಳನ್ನು, ಸೂಚಿಸಿದ ಕ್ರಮಾನುಗತಿಯಲ್ಲಿ, ಸೂಚನೆಗಳಿಗೆ ಅನುಸಾರವಾಗಿ ತಪ್ಪದೆ ಪ್ರಸ್ತುತಪಡಿಸುತ್ತಾನೆ. ಪ್ರಶ್ನೆಗಳನ್ನು ಪ್ರಮಾಣೀಕೃತಗೊಳಿಸಬಹುದಾಗಿದೆ. ಇಂತಹ ಸಂದರ್ಶನದ ಪ್ರಕ್ರಿಯೆಗಳಲ್ಲಿ, ಸಂದರ್ಶನಕಾರನಿಗೆ, ಹೆಚ್ಚಿನದನ್ನು ಸೇರಿಸುವ, ಇರುವುದನ್ನು ತೆಗೆದು ಹಾಕುವ ಅಥವಾ ಬದಲಾಯಿಸುವ ಸ್ವಾತಂತ್ರ್ಯವಿರುವುದಿಲ್ಲ. ಇಂತಹ ಸಂದರ್ಶನಗಳಲ್ಲಿ ಬಿಗುವಿನ ವಾತಾವರಣವಿದ್ದು, ವ್ಯಕ್ತಿಯು ತನ್ನ ಅನಿಸಿಕೆಗಳನ್ನು ಮುಕ್ತವಾಗಿ ತಿಳಿಸಲು ಸಾಧ್ಯವಾಗದೆ ಹೋಗುವ ಸಂದರ್ಭ ಇರುತ್ತದೆ. ಇಂತಹ ಸಂದರ್ಶನಗಳಿಂದ ದೊರೆತ ಫಲಿತಾಂಶಗಳನ್ನು ಪರಿಮಾಣಾತ್ಮಕವಾಗಿ ಕಂಡು ಹಿಡಿದು, ಗಣಿತಾತ್ಮಕವಾಗಿ ವ್ಯತ್ಯಾಸೀಕರಿಸಬಹುದು. ಇಂತಹ ಸಂದರ್ಶನಗಳಿಂದ ವ್ಯಕ್ತಿತ್ವದ ಅರಿವನ್ನು ಸುಲಭವಾಗಿ ಪಡೆಯುವುದು ಸಾಧ್ಯ.

ಸಂರಚಿತವಲ್ಲದ ಸಂದರ್ಶನಗಳು ಹೆಚ್ಚಿನ ನಮ್ಯತೆಯನ್ನು ಹೊಂದಿರುತ್ತದೆ. ಪ್ರಶ್ನೆಗಳು, ಸಮಯ, ಕ್ರಮಾನುಗತಿ, ಪ್ರಕ್ರಿಯೆ, ಪ್ರಸ್ತುತೀಕರಣ, ಸೂಚನೆಗಳು ಇತ್ಯಾದಿಗಳನ್ನು ಪೂರ್ವಭಾವಿಯಾಗಿ ನಿರ್ಧರಿಸಿದ್ದರೂ, ಇಂತಹ ಸಂದರ್ಶನಗಳಲ್ಲಿ ಸಂದರ್ಶನಕಾರನಿಗೆ ಇವೆಲ್ಲವುಗಳಲ್ಲಿ ತನಗೆ ಅನುಕೂಲಕರವಾಗುವಂತೆ ಬದಲಾವಣೆಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯ ಇರುತ್ತದೆ.

'ಅನಿರ್ದೇಶಿತ', 'ಗಹನ'(depth) ಸಂದರ್ಶನಗಳು, ಸಂರಚಿತವಲ್ಲದ ಸಂದರ್ಶನಗಳಾಗಿವೆ. 'ಕೇಂದ್ರಿಕೃತ' ಸಂದರ್ಶನದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ಗುಣಲಕ್ಷಣ, ಘಟನೆ ಅಥವಾ ಅನುಭವವನ್ನು ಕೇಂದ್ರವಾಗಿಟ್ಟುಕೊಂಡು ಸಂದರ್ಶನವನ್ನು ಕೈಗೊಳ್ಳಲಾಗುತ್ತದೆ. 'ಅನಿರ್ದೇಶಿತ' ಸಂದರ್ಶನದಲ್ಲಿ ಸಂದರ್ಶಕನು ವ್ಯಕ್ತಿಗೆ ತನ್ನ ಅನಿಸಿಕೆಗಳನ್ನು ಪ್ರಕಟಪಡಿಸಲು ಹೆಚ್ಚಿನ ಆದ್ಯತೆ ಮತ್ತು ಸ್ವಾತಂತ್ರ್ಯವನ್ನು ನೀಡುತ್ತಾನೆ. ಮತ್ತು ತಾನು ಇಡೀ ಪ್ರಕ್ರಿಯೆಯನ್ನು ನಿರ್ದೇಶಿಸುತ್ತಾನೆ ಅಂದರೆ ಸಂದರ್ಶನವನ್ನು ಸೂಕ್ತವಾಗಿ, ಸುಗಮವಾಗಿ ಸಾಗುವಂತೆ ಪ್ರೇರೇಪಿಸುತ್ತಾನೆ. 'ಗಹನ' ಸಂದರ್ಶನದಲ್ಲಿ ವ್ಯಕ್ತಿಯ ಮಾನಸಿಕ ಹಾಗೂ ಸಂವೇಗಾತ್ಮಕ ಅಂಶಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಗಹನ ಸಂದರ್ಶನ ಸಮಸ್ಯೆಯ ಆಳವಾದ ಮತ್ತು ವಿಸ್ತಾರವಾದ ಅಧ್ಯಯನ ಮಾಡುವುದರತ್ತ ಹೆಚ್ಚಿನ ಒಲವು ತೋರುತ್ತದೆ.

**ಸಂದರ್ಶನ ತಂತ್ರದ ಹಂತಗಳು:**

ಸಂದರ್ಶನವನ್ನು ಕೈಗೊಳ್ಳುವಾಗ ಈ ಕೆಳಗಿನ ಹಂತಗಳನ್ನು ಅನುಸರಿಸಬೇಕು.

**ಸಂದರ್ಶನಕ್ಕೆ ಪೂರ್ವಸಿದ್ಧತೆ:**

ಸಂದರ್ಶನವು ಫಲಕಾರಿಯಾಗಿ ಸರಿಯಾದ ಮಾಹಿತಿಯು ದೊರೆಯಬೇಕಾದರೆ, ಪೂರ್ವಸಿದ್ಧತೆಯ ಅಗತ್ಯವಿದೆ. ಮೊದಲಿಗೆ ಸಂದರ್ಶನದ ಉದ್ದೇಶಗಳು ಸ್ಪಷ್ಟವಾಗಿರಬೇಕು ಹಾಗೂ ಯಾವ ರೀತಿಯ ಮಾಹಿತಿಯ ಅಗತ್ಯವಿದೆ ಎಂಬ ಅರಿವು ಇರಬೇಕು. ನಂತರ ಸಂದರ್ಶನದಲ್ಲಿ ಕೇಳಬೇಕಾದ ಪ್ರಶ್ನೆಗಳ ರೂಪುರೇಷೆಗಳ ಸಿದ್ಧತೆ ಮಾಡಬೇಕು. ಇವುಗಳ ಕುರಿತು ಒಂದು ಪೂರ್ವಭಾವಿ ಅಧ್ಯಯನ ಕೈಗೊಂಡರೆ ದೋಷಗಳನ್ನು ದೂರವಿಡಲು ಸಾಧ್ಯವಾಗುತ್ತದೆ. ಇಡೀ ಪ್ರಕ್ರಿಯೆಯನ್ನು ದಾಖಲಿಸಲು ಸಾಧ್ಯವಾಗುವಂತೆ ಸೂಕ್ತವಾದ ಸಾಧನಗಳನ್ನು ಅಂದರೆ, ಟೇಪ್ ರೆಕಾರ್ಡರ್, ಕ್ಯಾಮೆರಾ, ವಿಡಿಯೋ ಇತ್ಯಾದಿಗಳನ್ನು ಸೂಕ್ತವಾದ ಸ್ಥಳದಲ್ಲಿ ಸ್ಥಾಪಿಸಬೇಕು. ಸಂದರ್ಶಕರಿಗೆ. ಸಂದರ್ಶನಾರ್ಥಿಯ ಆಂಗಿಕ ಭಾಷೆಯನ್ನು ವಿವಿಧ ದೃಷ್ಟಿಕೋನಗಳಿಂದ ಅವಲೋಕಿಸಲು ಸಾಧ್ಯವಾಗುವಂತೆ ಪೀಠೋಪಕರಣಗಳ ವ್ಯವಸ್ಥೆ ಇರಬೇಕು.

**ಸೌಹಾರ್ದತಾ ಸ್ಥಾಪನೆ:**

ಸಂದರ್ಶನಕಾರರು,ಸಂದರ್ಶನಾರ್ಥಿಯೊಂದಿಗ ಸೌಹಾರ್ದ ಯುತ ಸಂಬಂಧವನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ಇದರಿಂದ ಸಂದರ್ಶನಾರ್ಥಿಗೆ ನಿರಾಳವಾದ ಭಾವನೆ ಉಂಟಾಗಿ, ಅವರು ಸಂದರ್ಶನದಲ್ಲಿ ಸಂಪೂರ್ಣವಾಗಿ ಭಾಗಿಯಾಗಿ ಬಯಸಿದ ಮಾಹಿತಿ ನೀಡಲು ಸಾಧ್ಯತೆ ಹೆಚ್ಚಾಗಿರುತ್ತದೆ.

ಸೌಹಾರ್ದಯುತ ಪರಿಸರವನ್ನು ಸ್ಥಾಪಿಸಿದ ತರುವಾಯ ಸಂದರ್ಶನವನ್ನು ಪ್ರಾರಂಭ ಮಾಡಬೇಕು. ಒಂದು ಸಲ ಒಂದೇ ಪ್ರಶ್ನೆಯನ್ನು ಕೇಳಿ, ಉತ್ತರವನ್ನು ಪಡೆದ ತರುವಾಯ ಮುಂದಿನ ಪ್ರಶ್ನೆಯನ್ನು ಕೇಳಬೇಕು. ಅಗತ್ಯವಿದ್ದರೆ ಪ್ರಶ್ನೆಯನ್ನು ಪುನರುಚ್ಚರಿಸಬೇಕು ಮತ್ತು ಸ್ಪಷ್ಟತೆ ನೀಡಬೇಕು. ತಾಳ್ಮೆಯಿಂದ ಹಾಗೂ ಎಚ್ಚರಿಕೆಯಿಂದ ಉತ್ತರವನ್ನು ಕೇಳಿಸಿಕೊಳ್ಳಬೇಕು.

Digitised by Bharatavani, CIIL

ಇದರೊಂದಿಗೆ ಅವರ ಆಂಗಿಕ ಭಾಷೆಯನ್ನು ಗಮನಿಸಬೇಕು. ಅವರಿಗೆ ಅಗತ್ಯವಾದಷ್ಟು ಸಮಯ ನೀಡಬೇಕು. ಅಲ್ಲದೆ ಅವರಿಗೆ ಬೇಸರವಾಗುವಂತೆ ವರ್ತಿಸಬಾರದು. ಸಂದರ್ಶಕರು ತಮ್ಮ ಯಾವುದೇ ಭಾವನೆ ಅಥವಾ ಅಭಿಪ್ರಾಯಗಳನ್ನು ಹೊರಗೆಡವದೆ ಇರುವುದು ಉತ್ತಮ. ಇಲ್ಲದೇ ಹೋದರೆ, ವ್ಯಕ್ತಿಯು ಸರಿಯಾದ ಉತ್ತರಗಳನ್ನು ನೀಡದೇ ಹೋಗುವ ಸಂಭವವಿರುತ್ತದೆ. ಸಂದರ್ಶಕರು, ಸಂದರ್ಶನಾರ್ಥಿಗೆ ಹೆಚ್ಚಿನ ಅವಕಾಶ ನೀಡುವುದರಿಂದ ಹೆಚ್ಚಿನ ಮಾಹಿತಿ ಪಡೆಯಬಹುದು. ಒಟ್ಟಾರೆ ಸಂದರ್ಶಕರು ತಮ್ಮ ಜಾಣ್ಮೆ ಮತ್ತು ಸಮಯ ಪ್ರಜ್ಞೆಯನ್ನು ಉಪಯೋಗಿಸುವ ಅಗತ್ಯ ಇರುತ್ತದೆ. ಅಂತಿಮವಾಗಿ ಸಂದರ್ಶನಾರ್ಥಿಗೆ ದಣಿವು ಅಥವಾ ಬೇಸರವಾಗುವ ಮುನ್ನ ಸಂದರ್ಶನವನ್ನು ಮುಕ್ತಾಯಗೊಳಿಸುವುದು ಸೂಕ್ತ.

**ದಾಖಲಿಸುವಿಕೆ:**

ದಾಖಲಿಸುವಿಕೆಯು ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಇದನ್ನು ಎಚ್ಚರಿಕೆಯಿಂದ ಆದಷ್ಟು ಕ್ಷಿಪ್ರಗತಿಯಲ್ಲಿ ನಿಖರವಾಗಿ ಮಾಡಬೇಕು. ಸಂದರ್ಶಕರು, ಪ್ರತಿಕ್ರಿಯೆಗಳನ್ನು ದಾಖಲಿಸಲು ಮೊದಲೇ ಮುದ್ರಿತವಾದ/ತಯಾರಿಸಿದ ಪ್ರಶ್ನೆಗಳ ನಮೂನೆಯಲ್ಲಿ ಪ್ರತಿಕ್ರಿಯೆಗಳನ್ನು ನೇರವಾಗಿ ದಾಖಲಿಸಬಹುದು. ಅಥವಾ ಇತರ ಇಲೆಕ್ಟ್ರಾನಿಕ್ ಸಾಧನಗಳನ್ನು ಬಳಸಬಹುದು. ಇದರಿಂದ ಮಾಹಿತಿಯನ್ನು ತಿರುಚುವ, ಬಿಟ್ಟುಬಿಡುವ, ಅನಗತ್ಯವಾಗಿ ನುಸುಳುವ ಅಥವಾ ಬದಲಾಗುವುದನ್ನು ದೂರವಿಡಬಹುದು. ಇದರಿಂದ ಸಮಯದ ಉಳಿತಾಯವೂ ಆಗುತ್ತದೆ. ಅಂತಿಮವಾಗಿ ಮಾಹಿತಿಯನ್ನು ಒರೆಹಚ್ಚಿ ನೋಡಬೇಕಾದಾಗ ಪ್ರಯೋಜನಕಾರಿಯಾಗುತ್ತೆ.

**ಅರ್ಥೈಸುವಿಕೆ:**

ದಾಖಲೆಗಳಿಂದ ದೊರೆತ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸಿದಾಗ ವ್ಯಕ್ತಿಯ ವ್ಯಕ್ತಿತ್ವದ ಅರಿವು ಉಂಟಾಗುತ್ತದೆ .

**ಸಂದರ್ಶನದ ಗುಣಗಳು:**

ಸಂದರ್ಶನವು ಈ ಕೆಳಗಿನ ಗುಣಗಳನ್ನು ಹೊಂದಿದೆ.

- ವ್ಯಕ್ತಿಯ ಕುರಿತು ಆಳವಾದ ಮತ್ತು ವಿವರವಾದ ಮಾಹಿತಿ ದೊರೆಯುತ್ತದೆ.
- ವ್ಯಕ್ತಿಯಿಂದ ನೇರವಾಗಿ ಮಾಹಿತಿಯನ್ನು ಪಡೆಯ ಬಹುದು.
- ಗೊಂದಲಗಳನ್ನು ತಕ್ಷಣ ದೂರಮಾಡಿ ಸ್ಪಷ್ಟನೆ ನೀಡಲು ಸಾಧ್ಯವಾಗುತ್ತದೆ. ಇದರಿಂದ ಮಾಹಿತಿಯು ದೋಷಪೂರಿತವಾಗಿರುವುದಿಲ್ಲ.
- ಸಂದರ್ಶನಗಳನ್ನು, ನಿರಕ್ಷರರು, ಚಿಕ್ಕ ಮಕ್ಕಳು ಮತ್ತು ಮಾನಸಿಕವಾಗಿ ಅಸ್ವಸ್ಥರಾಗಿರುವವರಿಗೆ ಕೈಗೊಳ್ಳಬಹುದು.
- ಸಂದರ್ಶನಾರ್ಥಿಗಳು ವ್ಯಕ್ತಪಡಿಸುವ ಮಾಹಿತಿಯೊಂದಿಗೆ ಅವರ ಹಾವಭಾವಗಳನ್ನು, ಚಲನವಲನಗಳನ್ನು, ಸ್ವರದ ಏರಿಳಿತಗಳನ್ನು ಅಂದರೆ, ಅವರ ಆಂಗಿಕಭಾಷೆಯ ಮೂಲಕ ವಿಷಯವನ್ನು ಸಂಗ್ರಹಿಸುವ ಅನುಕೂಲ ಇರುತ್ತದೆ.

**ಸಂದರ್ಶನದ ಮಿತಿಗಳು:**

- ಸಂದರ್ಶನಕ್ಕೆ ಹೆಚ್ಚು ಸಮಯದ ಅಗತ್ಯವಿದೆ.
- ಸಂದರ್ಶನದ ಯಶಸ್ಸು ಸಂದರ್ಶನಕಾರರ ಜಾಣ್ಮೆ, ನೈಪುಣ್ಯತೆ, ತಾಳ್ಮೆ, ಸಮಯಪ್ರಜ್ಞೆ, ಆಸಕ್ತಿ, ಅವಲೋಕನ ಸಾಮರ್ಥ್ಯ, ಇತ್ಯಾದಿಗಳ ಮೇಲೆ ಅವಲಂಬಿತವಾಗಿರುವುದಲ್ಲದೆ, ಅವರ ವೈಯಕ್ತಿಕ ಪೂರ್ವಾಗ್ರಹಗಳು, ಸ್ವಂತ ಅನುಭವಗಳು, ಆಸಕ್ತಿಗಳು ಅವಲೋಕನದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುತ್ತದೆ.
- ಸಂದರ್ಶನಾರ್ಥಿಯು ಸ್ಪಷ್ಟವಾದ ಅಭಿಪ್ರಾಯದ ಕುರಿತು ಕೊರತೆಯಿಂದ ತಪ್ಪು ಅಭಿಪ್ರಾಯಗಳನ್ನು ನೀಡುವ ಸಾಧ್ಯತೆ ಇದೆ. ಇವು ಅರ್ಥೈಸುವಿಕೆಯ ದಾರಿ ತಪ್ಪಿಸುವ ಸಾಧ್ಯತೆ ಇದೆ.
- ದೊರೆತ ಮಾಹಿತಿಯನ್ನು ಅರ್ಥೈಸುವುದರಲ್ಲಿ ತಪ್ಪಾಗುವ ಸಂಭವವಿದೆ.
- ನಾಚಿಕೆ ಸ್ವಭಾವದವರು, ಕಿವುಡರು ಹಾಗೂ ಪ್ರಾಣಿಗಳಿಂದ ಮಾಹಿತಿಯನ್ನು ಪಡೆಯಲಾಗುವುದಿಲ್ಲ.

**ಪ್ರಶ್ನಾವಳಿಗಳು:**

ಸ್ವವರದಿ ತಂತ್ರಗಳಲ್ಲಿ ಪ್ರಶ್ನಾವಳಿಗಳು ಪ್ರಮುಖವಾಗಿವೆ. ಇದರಿಂದ, ಅಗತ್ಯವಾದ ಮಾಹಿತಿಯನ್ನು ವ್ಯಕ್ತಿಯಿಂದ ನೇರವಾಗಿ ಪಡೆಯಬಹುದು. ಇದರಲ್ಲಿ ಪ್ರಶ್ನೆಗಳನ್ನು ಒಂದರ ತರುವಾಯ ಒಂದರಂತೆ ವ್ಯವಸ್ಥಿತಗೊಳಿಸಿರುತ್ತದೆ ಮತ್ತು ಅದೇ ಕ್ರಮಾನುಗತಿಯಲ್ಲಿ ಉತ್ತರಗಳನ್ನು ಅಪೇಕ್ಷಿಸಲಾಗುತ್ತದೆ. ಇದನ್ನು ಹೆಚ್ಚಾಗಿ ಅನಿಸಿಕೆ, ಅಭಿಪ್ರಾಯ, ಮನೋಭಾವಗಳನ್ನು ಗುರುತಿಸಲು ಬಳಸಲಾಗುತ್ತದೆ. ಇವುಗಳಲ್ಲಿ ನಮ್ಯತೆ ಇದ್ದು ಪರಿಮಾಣಾತ್ಮಕವಾಗಿ ಮಾಹಿತಿಯು ಬೇಕಾದಾಗ ಉಪಯುಕ್ತವಾಗಿದೆ. ಇದನ್ನು ಒಬ್ಬ ವ್ಯಕ್ತಿಗೆ, ಒಂದು ಸಮೂಹಕ್ಕೆ ಏಕಕಾಲದಲ್ಲಿ ನೀಡಬಹುದಾಗಿದೆ. ಅಲ್ಲದೆ ಇದನ್ನು ವೈಯಕ್ತಿಕವಾಗಿ ಅಥವಾ ಅಂಚೆಯ ಮೂಲಕವೂ ಸಂಗ್ರಹಿಸುವ ಅನುಕೂಲತೆ ಇದೆ.

ಪ್ರಶ್ನಾವಳಿಗಳಲ್ಲಿಯ ಪ್ರಶ್ನೆಗಳು ಮುಕ್ತವಾಗಿರಬಹುದು

Digitised by Bharatavani, CIIL

ಅಥವಾ ಮುಕ್ತವಾಗಿಲ್ಲದೆ ಇರಬಹುದು. ಅಂದರೆ ಮುಕ್ತವಲ್ಲದ ನಮೂನೆಯು ಕೇವಲ 'ಹೌದು' ಅಥವಾ 'ಇಲ್ಲ' ಎನ್ನುವ ಪ್ರತಿಕ್ರಿಯೆ ನೀಡಬಹುದು ಅಥವಾ ಅಲ್ಲಿ ನೀಡಿದ ಯಾವುದಾದರೂ ಒಂದು ಪ್ರತಿಕ್ರಿಯೆಯನ್ನು 'ಸರಿ' ಅಥವಾ 'ಇಲ್ಲ' ಎಂದು ಗುರುತಿಸಬಹುದು. ಮುಕ್ತ ಪ್ರಶ್ನೆಗಳಿಗೆ ವ್ಯಕ್ತಿ ತನ್ನದೇ ಆದ ಪ್ರತಿಕ್ರಿಯೆಗಳನ್ನು ನೀಡುತ್ತಾನೆ. ಇಂತಹ ಪ್ರಶ್ನೆಗಳಿಗೆ ಯಾವುದೇ ಸುಳಿವನ್ನು ನೀಡಿರುವುದಿಲ್ಲ. ಒಂದು ಪ್ರಶ್ನಾವಳಿಯಲ್ಲಿ ಅಗತ್ಯವಿದ್ದರೆ ಮುಕ್ತ ಹಾಗೂ ಮುಕ್ತವಲ್ಲದ ಎರಡೂ ರೀತಿಯ ಪ್ರಶ್ನೆಗಳನ್ನು ಸೇರಿಸಬಹುದು.

**ಪ್ರಶ್ನಾವಳಿಯ ತಯಾರಿಕೆ:**

ಪ್ರಶ್ನಾವಳಿಯಲ್ಲಿಯ ಪ್ರಶ್ನೆಗಳನ್ನು ಬಹಳ ಎಚ್ಚರಿಕೆಯಿಂದ ತಯಾರಿಸುವ ಅಗತ್ಯವಿದೆ. ತಯಾರಿಕೆಯಲ್ಲಿ ಈ ಕೆಳಕಂಡ ಕೆಲವು ಅಂಶಗಳನ್ನು ಗಮನದಲ್ಲಿಟ್ಟರೆ ಉತ್ತಮವಾದ ಪ್ರಶ್ನಾವಳಿಯನ್ನು ತಯಾರಿಸಲು ಅನುಕೂಲವಾಗುತ್ತದೆ.

1. ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಗೊಳಿಸಿಕೊಳ್ಳಬೇಕು. ನಂತರ ಅದಕ್ಕೆ ಅನುಗುಣವಾಗಿ ಪರೀಕ್ಷಾಂಶಗಳನ್ನು/ಪ್ರಶ್ನೆಗಳನ್ನು ತಯಾರಿಸಬೇಕು.
2. ಪರೀಕ್ಷಾಂಶಗಳು, ಪರೀಕ್ಷಾರ್ಥಿಗಳು ಸರಿಯಾದ ಪ್ರತಿಕ್ರಿಯೆಗಳನ್ನು ನೀಡುವುದಕ್ಕೆ ಉತ್ತೇಜಿಸುವಂತೆ ಇರಬೇಕು.
3. ಮೊದಲಿಗೆ ಅಗತ್ಯವಿರುವುದಕ್ಕಿಂತ ಹೆಚ್ಚು ಪರೀಕ್ಷಾಂಶಗಳನ್ನು ತಯಾರಿಸಿ, ಅವುಗಳನ್ನು ಪರಿಣತರಿಗೆ ನೀಡಿ ಅವರ ಸಲಹೆಗೆ ಅನುಸಾರವಾಗಿ ಅಗತ್ಯವಿದ್ದರೆ, ಪುನರ್ ವ್ಯವಸ್ಥೆಗೊಳಿಸಿ, ಬದಲಾಯಿಸಿ, ತೆಗೆದು ಹಾಕುವಂತಿದ್ದರೆ ತೆಗೆದು ಹಾಕಿ ಸರಿಯಾದ ಪ್ರಶ್ನೆಗಳನ್ನು ಮಾತ್ರ ಉಳಿಸಿಕೊಳ್ಳಬೇಕು.
4. ಪರೀಕ್ಷಾಂಶಗಳಿಗೆ ಬಳಸಿರುವ ಭಾಷೆಯು ಪರೀಕ್ಷಾರ್ಥಿಗೆ ಅರ್ಥವಾಗುವಂತಿದ್ದಾಗ ಮಾತ್ರ ಸರಿಯಾದ ಪ್ರತಿಕ್ರಿಯೆ ದೊರೆಯುವ ಸಾಧ್ಯತೆ ಇರುತ್ತದೆ. ಅನಗತ್ಯ ಪದಗಳಿಂದ ಹೆಚ್ಚು ಉದ್ದವಾಗಿರದೆ, ತೀರ ಚಿಕ್ಕದೂ ಆಗಿರದೆ, ಸೂಕ್ತವಾದ ಪರೀಕ್ಷಾಂಶಗಳ ಆಯ್ಕೆಯನ್ನು ಮಾಡಬೇಕು.
5. ದ್ವಂದ್ವಾರ್ಥಗಳಿರುವ ಮತ್ತು ಊಹೆಗಳಿಗೆ ಅವಕಾಶವಿರುವ ಪದಗಳನ್ನು ದೂರವಿಡಬೇಕು.
6. ಪರೀಕ್ಷಾಂಶಗಳು ಪೂರ್ಣವಾಗಿರಬೇಕು.
7. ಅಂಕ ನಿರ್ಧಾರವು ಸುಲಲಿತವಾಗುವಂತಹ ಪ್ರಶ್ನೆಗಳಿರಬೇಕು.
8. ಪರೀಕ್ಷಾಂಶಗಳು ವಸ್ತುನಿಷ್ಠವಾಗಿರಬೇಕು.
9. ಪರೀಕ್ಷಾಂಶಗಳನ್ನು ಕ್ರಮಬದ್ಧವಾಗಿ ಮತ್ತು ತರ್ಕಬದ್ಧವಾಗಿ ವ್ಯವಸ್ಥೆಗೊಳಿಸಿರಬೇಕು.
10. ಸೂಕ್ತವಾದ ಸೂಚನೆಗಳನ್ನು ಮೊದಲಿಗೆ ಮತ್ತು ಅಗತ್ಯವಾದಲ್ಲಿ ನೀಡಬೇಕು.
11. ಪ್ರಶ್ನೆಗಳಿಗೆ ಬಳಸಿದ ಭಾಷೆ ಸರಳವಾಗಿರಬೇಕು.

**ಅರ್ಥೈಸುವಿಕೆ:**

ಪ್ರಶ್ನಾವಳಿಯಿಂದ ದೊರೆತ ಪ್ರತಿಕ್ರಿಯೆಗಳನ್ನು ಅರ್ಥೈಸುವುದು ಅತ್ಯಂತ ಕ್ಲಿಷ್ಟವಾದ ಕಾರ್ಯ. ಸಾಂಖ್ಯಿಕವಾಗಿ ನೀಡಿದ ಪ್ರತಿಕ್ರಿಯೆಗಳನ್ನು ಸಂಖ್ಯಾಶಾಸ್ತ್ರೀಯವಾಗಿ ಲೆಕ್ಕಾಚಾರ ಮಾಡಬಹುದು. ಆದರೆ ವಿವರಣಾತ್ಮಕ ಮಾಹಿತಿಯನ್ನು ವಿಶ್ಲೇಷಿಸಿ, ಅರ್ಥೈಸುವುದಕ್ಕೆ ಪರಿಣಿತರ ಅಗತ್ಯವಿದೆ. ಈ ವಿವರಗಳನ್ನು ಸಂಕ್ಷಿಪ್ತಗೊಳಿಸಿ, ವರ್ಗೀಕರಿಸಿ, ಅಂತಿಮ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ.

**ಪ್ರಶ್ನಾವಳಿಯ ಕೆಲವು ದೋಷಗಳು:**

1. ಪ್ರಶ್ನಾವಳಿಗಳ ಹೆಚ್ಚು ಸಿಂಧುತ್ವ ಹಾಗೂ ವಿಶ್ವಾಸನೀಯತೆಯನ್ನು ಹೊಂದಿರುವುದಿಲ್ಲ.
2. ಪ್ರಶ್ನಾವಳಿಗಳನ್ನು ಅನಕ್ಷರಸ್ಥರಿಗೆ, ಚಿಕ್ಕವರಿಗೆ, ಮಾನಸಿಕ ಅಸ್ವಸ್ಥರಿಗೆ ಬಳಸಲು ಸಾಧ್ಯವಾಗುವುದಿಲ್ಲ.
3. ಪ್ರತಿಕ್ರಿಯೆಗಳು ಸತ್ಯದಿಂದ ದೂರವಾಗಿರುವ ಸಾಧ್ಯತೆಗಳಿರುತ್ತವೆ.
4. ಪ್ರಶ್ನಾವಳಿಗೆ ಉತ್ತರಿಸುವಾಗ ವ್ಯಕ್ತಿ ಸಾಮಾಜಿಕವಾಗಿ ಒಪ್ಪಿತವಾಗುವ ಉತ್ತರವನ್ನು ಗುರ್ತಿಸುವ ಸಾಧ್ಯತೆ ಇದೆ.

**ಪ್ರಕ್ಷೇಪಣ ತಂತ್ರಗಳು:**

ವ್ಯಕ್ತಿಯ ಆಂತರಿಕ ಭಾವನೆಗಳನ್ನು ತಿಳಿದುಕೊಳ್ಳುವಲ್ಲಿ ಪ್ರಕ್ಷೇಪಣ ತಂತ್ರಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತವೆ. ಇತರ ತಂತ್ರಗಳಿಂದ ಪಡೆಯಲಾಗದ ವೈಯಕ್ತಿಕ ಮಾಹಿತಿಯನ್ನು ಇವುಗಳಿಂದ ಪಡೆಯಬಹುದಾಗಿದೆ. ಈ ತಂತ್ರಗಳಲ್ಲಿ, ಪರೀಕ್ಷಾರ್ಥಿಗೆ ತಾನು ಪರೀಕ್ಷೆಗೆ ಒಳಪಡುತ್ತಿರುವ ಅರಿವು ಇಲ್ಲದೆ ಇರುವುದರಿಂದ, ಅವನ ಪ್ರತಿಕ್ರಿಯೆಗಳು ನೈಜವಾಗಿ ಮತ್ತು ಸಹಜವಾಗಿರುತ್ತವೆ. ಇವು ಸರಳವಾದ ತಂತ್ರಗಳಾಗಿದ್ದು, ಪ್ರಚೋದನೆಗೆ ಅಂದರೆ, ಅವು ಚಿತ್ರಗಳು, ಅಪೂರ್ಣ ವಾಕ್ಯಗಳು, ಘಟನೆಗಳ ವಿವರ ಇತ್ಯಾದಿಗಳಿಗೆ ನೀಡುವ ಸಹಜ ಪ್ರತಿಕ್ರಿಯೆಗಳಾಗಿರುತ್ತವೆ. ಈ ಪ್ರತಿಕ್ರಿಯೆಗಳು ವ್ಯಕ್ತಿಯ ವ್ಯಕ್ತಿತ್ವದ ವಿವಿಧ ಮುಖಗಳನ್ನು ಹೊರಗೆಡವುತ್ತವೆ.

ಪ್ರಕ್ಷೇಪಣ ತಂತ್ರಗಳಲ್ಲಿ, ಕೆಲವು ತಂತ್ರಗಳನ್ನು ಪ್ರಮಾಣೀಕೃತಗೊಳಿಸಲಾಗಿದೆ. ಇವುಗಳ ಪ್ರಸ್ತುತೀಕರಣ ಮತ್ತು ಅಂಕ ನಿರ್ಧಾರಗಳ ಕುರಿತಾದ ವಿವರಗಳು ಲಭ್ಯವಿರುತ್ತವೆ. ಹೀಗಿದ್ದರೂ ಪ್ರಕ್ಷೇಪಣ ತಂತ್ರಗಳಿಂದ ದೊರೆತ ಪ್ರತಿಕ್ರಿಯೆಗಳನ್ನು ಅರ್ಥೈಸುವುದು ಸುಲಭ ಸಾಧ್ಯವಲ್ಲ. ಇದಕ್ಕೆ ಹೆಚ್ಚಿನ ಜಾಣ್ಮೆ,

Digitised by Bharatavani, CIIL

ನೈಪುಣ್ಯ, ತರಬೇತಿ ಮತ್ತು ಅನುಭವದ ಅಗತ್ಯ ಇದೆ.

ಪ್ರಕ್ಷೇಪಣ ತಂತ್ರಗಳಲ್ಲಿ ರೋಷಾಕನ ಮಸಿ ಗುರುತಿನ ಪರೀಕ್ಷಣ, ಪ್ರಸಂಗ ಅನುಬೋಧ ಪರೀಕ್ಷಣ (TAT ಮತ್ತು CAT)ಗಳು ಜನಪ್ರಿಯವಾಗಿವೆ.

**ಪ್ರಕ್ಷೇಪಣ ತಂತ್ರದ ಗುಣಗಳು:**

ಪ್ರಕ್ಷೇಪಣ ತಂತ್ರಗಳು ಈ ಕೆಳಗಿನ ಗುಣಗಳನ್ನು ಹೊಂದಿವೆ.

- ವ್ಯಕ್ತಿಯ ಪ್ರತಿಕ್ರಿಯೆಗಳು ಒತ್ತಡವಿಲ್ಲದೆ, ಸ್ವತಂತ್ರವಾಗಿ, ಸಹಜವಾಗಿ ಇರುತ್ತವೆ.
- ಪ್ರತಿಕ್ರಿಯಿಸಲು ಸಾಕಷ್ಟು ಸಮಯವನ್ನು ನೀಡಲಾಗುತ್ತದೆ.
- ವ್ಯಕ್ತಿಗೆ ತಾನು ಪರೀಕ್ಷೆಗೆ ಒಳಗಾಗುತ್ತಿದ್ದೇನೆ ಎಂಬ ಅರಿವು ಇಲ್ಲದೆ ಇರುವುದರಿಂದ ಅವನ ಪ್ರತಿಕ್ರಿಯೆಗಳು ನೈಜವಾಗಿರುತ್ತವೆ.
- ಚಿಕ್ಕಮಕ್ಕಳಿಗೆ, ಅನಕ್ಷರಸ್ಥರಿಗೆ ಹಾಗೂ ಮಾನಸಿಕ ಅಸ್ವಸ್ಥರಿಗೆ ಈ ಪರೀಕ್ಷೆಗಳನ್ನು ನೀಡಬಹುದು.
- ಪ್ರಕ್ಷೇಪಣ ತಂತ್ರಗಳು ವ್ಯಕ್ತಿತ್ವದ ಸಂಪೂರ್ಣವಾದ ಚಿತ್ರಣವನ್ನು ನೀಡುತ್ತಿವೆ.
- ಪರೀಕ್ಷಣಗಳು ಸಂರಚಿತವಲ್ಲದೆ ಇರುವುದರಿಂದ ವ್ಯಕ್ತಿಯು ವಿಶ್ವಾಸಾರ್ಹವಾದ ಮಾಹಿತಿಯನ್ನು ನೀಡುತ್ತಾನೆ.

**ಪ್ರಕ್ಷೇಪಣ ತಂತ್ರದ ದೋಷಗಳು:**

- ಪ್ರಕ್ಷೇಪಣ ತಂತ್ರಗಳು ವ್ಯಕ್ತಿನಿಷ್ಠವಾಗಿರುತ್ತವೆ.
- ಈ ತಂತ್ರಗಳಲ್ಲಿ ಹೆಚ್ಚಿನ ಸಮಯದ ವ್ಯಯವಾಗುವ ಸಂಭವ ಇದೆ.
- ಈ ತಂತ್ರಗಳನ್ನು ಪ್ರಮಾಣೀಕರಿಸುವುದು ಕಷ್ಟಸಾಧ್ಯವಾದ ಕಾರ್ಯ.
- ಪ್ರಕ್ಷೇಪಣ ತಂತ್ರಗಳನ್ನು ತಯಾರಿಸಲು, ಪ್ರಸ್ತುತಪಡಿಸಲು ಹಾಗೂ ಅರ್ಥೈಸಲು ತರಬೇತಿ ಪಡೆದ ಬುದ್ಧಿವಂತ, ಅನುಭವ ಇರುವ ಪರಿಣತರ ಅಗತ್ಯ ಇದೆ.

ಪ್ರಕ್ಷೇಪಣ ತಂತ್ರಗಳು ವ್ಯಕ್ತಿಯ ಸಹಜವಾದ ಪ್ರತಿಕ್ರಿಯೆಗಳನ್ನು ಪಡೆಯಲು ಅನುವು ಮಾಡಿಕೊಡುವುದರಿಂದ, ವ್ಯಕ್ತಿಯ ಸಂವೇಗಗಳು,ವಿಚಾರಗಳು,ನಂಬಿಕೆಗಳು,ಆಸೆಗಳು,ದ್ವಂದ್ವಗಳು, ನಿರಾಸೆಗಳು ಇತ್ಯಾದಿಗಳ ವಿವರ ದೊರೆಯುವುದಲ್ಲದೆ, ಅದಕ್ಕೆ ಕಾರಣಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

**ಪ್ರದೇಶ ಆಧಾರಿತ ಪರೀಕ್ಷೆಗಳು:**

ಹೆಸರೇ ಸೂಚಿಸುವಂತೆ ಇವು ಸನ್ನಿವೇಶಗಳನ್ನು ಆಧಾರವಾಗಿಟ್ಟುಕೊಂಡು ಕೈಗೊಳ್ಳುವ ಪರೀಕ್ಷೆಗಳಾಗಿವೆ. ಸನ್ನಿವೇಶ ಆಧಾರಿತ ಪರೀಕ್ಷೆಗಳನ್ನು ಇತ್ತೀಚೆಗೆ ಅಭಿವೃದ್ಧಿ ಪಡಿಸಲಾಗಿದೆ. ಇಂತಹ ಪರೀಕ್ಷಣಗಳಲ್ಲಿ ನಿರ್ದಿಷ್ಟವಾದ, ನೈಜವಾದ ಸನ್ನಿವೇಶಗಳನ್ನು ಸೃಷ್ಟಿಸಿ, ವ್ಯಕ್ತಿಯ ವರ್ತನೆಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ. ವ್ಯಕ್ತಿಯು ನಿಜವಾದ ಜೀವನ ಸನ್ನಿವೇಶಗಳಲ್ಲಿ ತನ್ನ ಆಂತರಿಕ ಭಾವನೆಗಳನ್ನು, ಸಂವೇಗಗಳನ್ನು, ದ್ವಂದ್ವಗಳನ್ನು, ಆಸೆ ಆಕಾಂಕ್ಷೆಗಳನ್ನು, ನಿರಾಸೆಗಳನ್ನು, ವಿವಿಧ ಚಟುವಟಿಕೆಗಳ ಮೂಲಕ ಹೊರಹಾಕುತ್ತಾನೆ. ಇಂತಹ ಪರೀಕ್ಷೆಗಳಲ್ಲಿ ಮುಖ್ಯವಾದದ್ದು 'ಮನೋನಾಟಕ' ಮತ್ತು 'ಸಮಾಜೋನಾಟಕ' ಇವು ಮನೋವೈಜ್ಞಾನಿಕ ತಳಹದಿಯನ್ನು ಹೊಂದಿರುವುದಲ್ಲದೆ, ವ್ಯವಸ್ಥಿತವಾಗಿದೆ ಇಂತಹ ಪರೀಕ್ಷೆಗಳಲ್ಲಿ, ವ್ಯಕ್ತಿಗೆ ಇರುವ ಸಮಸ್ಯೆಗೆ ಆಧಾರಿತವಾಗಿ ಅಗತ್ಯವಿದ್ದಷ್ಟು ಇತರರನ್ನು ಒಳಗೊಂಡಂತಹ ಸನ್ನಿವೇಶಗಳನ್ನು ಎಚ್ಚರಿಕೆಯಿಂದ ನಿರ್ಮಿಸಲಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ವ್ಯಕ್ತಿತ್ವವನ್ನು ಮಾಪನ ಮಾಡಬೇಕಾದ ವ್ಯಕ್ತಿಯು ಹೇಗೆ ವರ್ತಿಸುತ್ತಾನೆ ಎಂದು ಗಮನಿಸಿ, ಅವುಗಳನ್ನು ಅರ್ಥೈಸಲಾಗುತ್ತದೆ. ವೈದ್ಯಕೀಯ ಚಿಕಿತ್ಸೆಗಳಲ್ಲಿ ಇವುಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

**ಸನ್ನಿವೇಶ ಆಧಾರಿತ ಪರೀಕ್ಷಣಗಳ ಅನುಕೂಲಗಳು:**

- ಸನ್ನಿವೇಶ ಆಧಾರಿತ ಪರೀಕ್ಷಣಗಳು ವ್ಯಕ್ತಿಯ ಆಳವಾದ ಅಧ್ಯಯನವನ್ನು ಮಾಡುತ್ತವೆ.
- ನೈಜ ಸನ್ನಿವೇಶಗಳಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗುತ್ತದೆ.
- ಮನೋವೈಜ್ಞಾನಿಕ ಆಧಾರಿತವಾಗಿದ್ದು, ವ್ಯವಸ್ಥಿತವಾಗಿದೆ.
- ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ನೋಟವನ್ನು ನೀಡುತ್ತದೆ.
  - ವ್ಯಕ್ತಿಯ ಸಮಸ್ಯೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

–ಡಾ. ಉಷಾ ಹೆಚ್.ಬಿ.

# ಶ

## ಶಕ್ತಿ (ಊರ್ಜ್ವಾ) ಶಿಕ್ಷಣ

**ಪೀಠಿಕೆ:** ಮುಂಬರುವ ಕೆಲವೇ ದಶಕಗಳಲ್ಲಿ ನಾವು ಅನುಭವಿಸಬೇಕಾಗಿರುವ ಸಾಂಪ್ರದಾಯಿಕ ಶಕ್ತಿಮೂಲಗಳ ಕೊರತೆಗೆ ಸಂಬಂಧಿಸಿದ ಒಂದು ಹೊಸ ಸವಾಲು ಉದ್ಭವಿಸಿ ಇತ್ತೀಚಿನ ವರ್ಷಗಳಲ್ಲಿ ಎಲ್ಲರ ಗಮನವನ್ನು ತನ್ನತ್ತ ಕೇಂದ್ರೀಕರಿಸುವಂತೆ

Digitised by Bharatavani, CIIL

ಮಾಡಿದ ಜೀವಗಳ ಪಳೆಯುಳಿಕೆ ಇಂಧನ (Fossil fuel ) ಗಳಿಂದ ದೊರಕುವ ಶಕ್ತಿಯ ಅತಿಯಾದ ಬಳಕೆಯನ್ನು ಅವಲಂಬಿಸಿದ ಆರ್ಥಿಕ ವಿಕಾಸದ ಮಾದರಿಯನ್ನು ಇಂದು ನಾವು ಅನುಸರಿಸುತ್ತಿದ್ದೇವೆ. ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ ಮಧ್ಯಪೂರ್ವ ದೇಶಗಳು ಹೇರಿದ ಪೆಟ್ರೋಲಿಯಂ ದರಗಳ ಹೆಚ್ಚಳ ಇಡೀ ವಿಶ್ವದಲ್ಲಿ ಎಲ್ಲಾ ದೇಶಗಳ ಆರ್ಥಿಕ ಚಟುವಟಿಕೆಗಳನ್ನು ಅಸಂತುಲಿತ ಸ್ಥಿತಿಗೆ ತಳ್ಳಿತು. ಕಾರಣ, ಈ ದೇಶಗಳು ಇತರ ದೇಶಗಳಿಂದ ಆಮದಾಗುವ ಪೆಟ್ರೋಲಿಯಂ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅತಿಯಾಗಿ ಅವಲಂಬಿಸಿದ್ದವು. ವೇಗದ ಆರ್ಥಿಕ ಬೆಳವಣಿಗೆಯಿಂದಾಗಿ ಮನುಕುಲವು ಎದುರಿಸಬೇಕಾದ ಗ್ಲೋಬಲ್ ವಾರ್ಮಿಂಗ್, (ಜಾಗತಿಕ ಉಷ್ಣತೆ ಏರಿಕೆ) ಹೆಚ್ಚುತ್ತಿರುವ ಸಮುದ್ರಮಟ್ಟ ಹೆಚ್ಚುತ್ತಿರುವ ವಾತಾವರಣ ಪ್ರದೂಷಣೆಯಿಂದ ಆಗುತ್ತಿರುವ ಹವಾಮಾನ ಬದಲಾವಣೆ ಒಝೋನ್ ಪದರದುರ್ಬಲವಾಗುವಿಕೆ ಮುಂತಾದ ಸವಾಲುಗಳು ಉದ್ಭವವಾಗಿವೆ. ಮುಂದುವರೆಯುತ್ತಿರುವ ದೇಶಗಳಲ್ಲಿ ಇಂಧನಗಳಿಂದ ಅಧಿಕಾರಿಕ ಶಕ್ತಿ ಉತ್ಪನ್ನದಿಂದ ಉಂಟಾಗುವ ಅನಿಲಗಳೇ ಈ ಸಮಸ್ಯೆಗಳಿಗೆ ಕಾರಣ. ಸಾಂಪ್ರದಾಯಿಕ ಇಂಧನಗಳನ್ನು ಅವಲಂಬಿಸಿ ಆರ್ಥಿಕ ಪ್ರಗತಿಯ ಪ್ರಕ್ರಿಯೆಯನ್ನು ಹೆಚ್ಚು ಕಾಲ ಮುಂದುವರೆಸಲು ಸಧ್ಯವಾಗುವುದಿಲ್ಲವೆಂದು ನಮ್ಮ ಅರಿವಿಗೆ ಬಂದಿದೆ. ಅಲ್ಲದೆ, ಸದ್ಯದ ವಿಶ್ವದ ಬಳಕೆಯ ದರವನ್ನು ಗಮನದಲ್ಲಿಟ್ಟುಕೊಂಡರೆ ಸಾಂಪ್ರದಾಯಿಕ ಇಂಧನಗಳು ಇನ್ನು ಕೆಲವೇ ದಶಕಗಳಲ್ಲಿ ಬರಿದಾಗಿ ಹೋಗಬಹುದು. ಆದ್ದರಿಂದ, ಸತತವೂ ಅಧಿಕವಾಗುತ್ತಿರುವ ಜನಸಂಖ್ಯೆಯ ಹೆಚ್ಚುತ್ತಿರುವ ಇಂಧನದ ಅಗತ್ಯವನ್ನು ಪೂರೈಸಲು ಸಾಂಪ್ರದಾಯಿಕವಲ್ಲದ ಹಾಗೂ ಪುನರ್ನವೀಕರಿಸಬಹುದಾದ ಇಂಧನದ ಮೂಲಗಳಿಗೆ ಬದಲಾಯಿಸಿಕೊಳ್ಳುವ ಅವಶ್ಯಕತೆ ಉದ್ಭವವಾಗುತ್ತದೆ. ಕಾಲಮಿಂಚುವುದರೊಳಗೆ ಈ ವಿಷಯದ ಬಗ್ಗೆ ಪರ್ಯಾಲೋಚಿಸಬೇಕಾಗಿದೆಯಲ್ಲದೆ ಅದಕ್ಕೆ ಸೂಕ್ತ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

**ಪರ್ಯಾಯ ಶಕ್ತಿ ಮೂಲಗಳ ವಿಕಾಸ :** ಇದರ ಅರಿವು ಈ ಶತಮಾನದ ಪ್ರಾರಂಭದಲ್ಲಿ ಪುನರ್ನವೀಕರಿಸಬಹುದಾದ ಶಕ್ತಿಮೂಲಗಳನ್ನು ಕುರಿತಂತೆ ಸಕಾರಾತ್ಮಕ ಬೆಳವಣಿಗೆಗೆ ದಾರಿಮಾಡಿಕೊಟ್ಟಿತಲ್ಲದೆ ಈ ಬೆಳವಣಿಗೆ ಜೀವಂತ ವಿಕಾಸ (Sustainable development) ದ ಗುರಿ ಸಾಧ್ಯವಿದೆ ಎಂಬ ವಿಶ್ವಾಸವನ್ನು ಸ್ವಲ್ಪ ಮಟ್ಟಿಗಾದರೂ ಮೂಡಿಸುವಲ್ಲಿ ಪ್ರೇರಕವಾಗಬೇಕು. ಪುನರ್ನವೀಕರಿಸಬಹುದಾದ ಶಕ್ತಿಮೂಲಗಳನ್ನು ಕುರಿತಂತೆ ನೀತಿ ಮತ್ತು ಯೋಜನೆ ರೂಪಿಸುವವರ ಚಿಂತನೆಯಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ ಮೇಲೆ ಹೇಳಿದ ಪರಿಸರದ ಸಮಸ್ಯೆಗಳು ಶಕ್ತಿಯ ಅಗತ್ಯಗಳನ್ನು ಪೂರೈಸುವಲ್ಲಿ ಪುನರ್ನವೀಕರಿಸಿದ ಶಕ್ತಿಮೂಲಗಳ ಪಾಲನ್ನು ಹೆಚ್ಚಿನ ಪ್ರಯತ್ನದಿಂದ ಈ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿದೆಯೆಂದು ಮುಂದುವರೆದ ರಾಷ್ಟ್ರಗಳು ಆಲೋಚಿಸುವಂತೆ ಮಾಡಿದೆ. ವಾಸ್ತವವಾಗಿ, 'ಗ್ರೀನ್‌ಹೌಸ್' ಅನಿಲ ವಿಸರ್ಜನಾ ಮಟ್ಟವನ್ನು ಕಡಿಮೆ ಮಾಡಲು ವಿಶ್ವಮಟ್ಟದ ಕರಾರೊಂದು ಅಸ್ತಿತ್ವದಲ್ಲಿದೆ. ವಿಶ್ವಬ್ಯಾಂಕ್, ಏಷ್ಯನ್ ಡೆವೆಲಪ್‌ಮೆಂಟ್ ಬ್ಯಾಂಕ್, ಗ್ಲೋಬಲ್ ಎನ್ವಿರಾನ್‌ಮೆಂಟಲ್ ಫೆಸಿಲಿಟಿ ಮುಂತಾದ ನಿಯೋಗಗಳು ಪ್ರತ್ಯೇಕ ರಾಷ್ಟ್ರಗಳಲ್ಲಿನ ನಿಯೋಗಗಳಿಗೆ ಧನಸಹಾಯ ನೀಡುವುದರ ಜೊತೆಗೆ ಅಂತರರಾಷ್ಟ್ರೀಯ ನೆಲೆಯಲ್ಲಿ ಪುನರ್ನವೀಕರಣ ಶಕ್ತಿ ಯೋಜನೆಗಳಿಗೆ ಧನ ಸಹಾಯ ಮಾಡಲಾರಂಭಿಸಿವೆ. ನಮ್ಮ ದೇಶದಲ್ಲೂ ಭಾರತ ಸರ್ಕಾರದ ಅಸಂಪ್ರದಾಯಿಕ ಶಕ್ತಿಮೂಲಗಳ ಇಲಾಖೆ ಮತ್ತು ಇತರ ನಿಯೋಗಗಳು ಪುನರ್ನವೀಕರಿಸಬಹುದಾದ ಶಕ್ತಿಗೆ ಪ್ರಾಯೋಜನೆಗಳಿಗೆ ಅಧಿಕ ಪ್ರಮಾಣದಲ್ಲಿ ಧನಸಹಾಯ ನೀಡುತ್ತಿವೆ. ಈ ಬೆಳವಣಿಗೆಗಳು ವಿಶ್ವ ಮಟ್ಟದಲ್ಲಿ ಹೆಚ್ಚಿನ ಮಹತ್ವವುಳ್ಳದ್ದಾಗಿವೆ.

ಪುನರ್ನವೀಕರಿಸಬಹುದಾದ ಶಕ್ತಿಮೂಲಗಳನ್ನು ಕುರಿತ ಸಂಶೋಧನೆಗೆ, ಶಕ್ತಿಶಿಕ್ಷಣ ಮತ್ತು ಅನ್ವೇಷಣೆಗಳನ್ನು ಬೆಂಬಲಿಸಲು ಅಸಂಪ್ರದಾಯಿಕ ಶಕ್ತಿಮೂಲಗಳ ಇಲಾಖೆಯೊಂದನ್ನು ಆರಂಭಿಸಿದ ಏಕಮೇವ ರಾಷ್ಟ್ರ ಬಹುಶಃ ಭಾರತವೊಂದೆ. ನಮ್ಮ ದೇಶವು ಉಷ್ಣವಲಯದ ದೇಶವಾಗಿರುವುದರಿಂದ ಕೃಷಿ ಉತ್ಪನ್ನಗಳನ್ನು ಮತ್ತು ಬಟ್ಟೆಗಳನ್ನು ಒಣಗಿಸಲು ಕ್ರಿಮಿಕೀಟಗಳು ಬ್ಯಾಕ್ಟೀರಿಯಗಳು ಮುಂತಾದ ರೋಗಾಣುಗಳಿಂದ ಮನೆಯನ್ನು ಸಂರಕ್ಷಿಸಲು ಹಾಗೂ ಶೀತದಿಂದ ರಕ್ಷಿಸಿಕೊಳ್ಳಲು ನಾವು ಯುಗಗಳಿಂದ ಸೂರ್ಯನ ತಾಪವನ್ನು ಉಪಯೋಗಿಸುತ್ತಾ ಬಂದಿದ್ದೇವೆ. ಗಾಳಿಯಂತ್ರಗಳ ಮುಖಾಂತರ ವಾಯುಶಕ್ತಿಯನ್ನು ನೀರನ್ನೆತ್ತಲು ಉಪಯೋಗಿಸಲಾಯಿತು. ಪುನರ್ನವೀಕರಿಸಬಹುದಾದ ಶಕ್ತಿಮೂಲಗಳ ಇಲಾಖೆಯನ್ನು ಸ್ಥಾಪಿಸಿದ ನಂತರ ಅಡುಗೆ ಮಾಡಲು, ನೀರುಕಾಯಿಸಲು, ನೀರನ್ನೆತ್ತಲು ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸೌರಶಕ್ತಿಯನ್ನು ಬಳಸುವ ಬಗ್ಗೆ ಆಲೋಚಿಸಲು ಪ್ರಾರಂಭಿಸಿದೆವು. ಪ್ರಾರಂಭಿಕ ಉಪಕರಣಗಳು ಸಾಂಪ್ರದಾಯಿಕ ಉಪಕರಣಗಳಿಗಿಂತ ದುಬಾರಿಯಾಗಿದ್ದವು. ತೈಲಗಳ ಬೆಲೆಯಲ್ಲಿ ಆಗುತ್ತಿರುವ ವಿಪರೀತ ಹೆಚ್ಚಳ ಸಾಂಪ್ರದಾಯಿಕ ಶಕ್ತಿಮೂಲಗಳನ್ನಾಧರಿಸಿದ ಉಪಕರಣಗಳ ಹೋಲಿಕೆಯಲ್ಲಿ ಪರ್ಯಾಯ ಶಕ್ತಿಮೂಲಗಳನ್ನಾಧರಿಸಿದ ಉಪಕರಣಗಳನ್ನು ಬಳಸಬಹುದೆಂದು ಭರವಸೆಯನ್ನು ಮೂಡಿಸಿದೆಯಲ್ಲದೆ ಅಂಥ ಉಪಕರಣಗಳು ಆರ್ಥಿಕ ನೆಲೆಯಲ್ಲಿಯೂ ಪರಿಣಾಮಕಾರಿಯೆಂದು ಕಂಡುಬಂದಿದೆ.

ಇತ್ತೀಚಿನ ದಿನಗಳಲ್ಲಿ, ಪುನರ್ನವೀಕರಿಸಬಹುದಾದ ಶಕ್ತಿಮೂಲ ಸಂಪೂರ್ಣ ವ್ಯಾಪ್ತಿಯನ್ನು ಕುರಿತ ವಿಸ್ತೃತ ಆಧಾರದ ಕಾರ್ಯಕ್ರಮವನ್ನು ಅನೇಕ ರಾಷ್ಟ್ರಗಳು ಸಕ್ರಿಯವಾಗಿ ಪರಿಗಣಿಸಿವೆಯಲ್ಲದೆ ಅಂಥ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುತ್ತಲಿವೆ. ಈ ಕಾರ್ಯಕ್ರಮಗಳು ಬಗೆಹರಿಸುವ ಸಮಸ್ಯೆಗಳು ಇಂತಿವೆ:

1. ವಿದ್ಯುತ್ ಜಾಲದಲ್ಲಿ (ಪವರ್ ಗ್ರೀಡ್) ಸ್ಥಾಪಿಸಲಾದ ಒಟ್ಟುಶಕ್ತಿ ಕ್ಷಮತೆಯಲ್ಲಿ ಪರ್ಯಾಯ ಶಕ್ತಿ ಮೂಲಗಳ ಪಾಲನ್ನು ಹೆಚ್ಚಿಸುವುದು.

Digitised by Bharatavani, CIIL

2. ಸಾಕಷ್ಟು ಪ್ರಮಾಣದಲ್ಲಿ ಸಾಂಪ್ರದಾಯಿಕ ಶಕ್ತಿಮೂಲಗಳನ್ನು ಬಳಸದೆ ಇರುವ ಗ್ರಾಮೀಣ, ದೂರಸ್ಥ ಮತ್ತು ಬೆಟ್ಟಗುಡ್ಡಗಳ ಪ್ರದೇಶಗಳ ಅಗತ್ಯವನ್ನು ಪೂರೈಸುವುದು.

3. ಧೂಮವನ್ನು ಹೊರಸೂಸುವ ಬೆಂಕಿಯ ಒಲೆಯಿಂದಾಗುವ ಆರೋಗ್ಯಹಾನಿ ಮತ್ತು ಮಹಿಳೆಯರು ಕಟ್ಟಿಗೆಗಾಗಿ ಬಹಳ ದೂರ ನಡೆದುಹೋಗುವುದನ್ನು ತಪ್ಪಿಸುವುದು.

4. ಕೈಗಾರಿಕೆ ಮತ್ತು ನಗರಗಳ ಕಸ, ಹಾಗೂ ರಾಸಾಯನಿಕ, ಸಾಗರ ಮತ್ತು ಭೂಉಷ್ಣ ಮೂಲಗಳಿಂದ ಶಕ್ತಿ ಉತ್ಪಾದಿಸಿ ವಾತಾವರಣವನ್ನು ಸುಧಾರಿಸುವುದು.

ನಮ್ಮ ಮುಖ್ಯ ಗುರಿ ಪೂರಕವಾಗಿಸುವುದೇ ಹೊರತು ಬದಲಾಯಿಸುವುದಲ್ಲ. ಶಕ್ತಿ ಉತ್ಪಾದನೆಯ ಸಾಮರ್ಥ್ಯದಲ್ಲಿ ಪುನರ್ನವೀಕರಿಸಬಹುದಾದ ಶಕ್ತಿ ಮೂಲಗಳಿಂದ ಪಡೆದ ಶಕ್ತಿಯ ಪಾಲನ್ನು ಹೆಚ್ಚಿಸುವ ಹಲವು ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಇಸವಿ 2000 ಡಿಸೆಂಬರ್‌ವರೆಗಿನ ಲಭ್ಯವಿರುವ ದತ್ತಾಂಶಗಳ ಪ್ರಕಾರ ಒಟ್ಟು ಗ್ರಿಡ್ ಸಾಮರ್ಥ್ಯಕ್ಕೆ ಪರ್ಯಾಯ ಮೂಲಗಳಿಂದ ಉತ್ಪನ್ನಗೊಂಡ ಶಕ್ತಿಯ ಕೊಡುಗೆ ಸುಮಾರು ಶೇಕಡಾ 2ರಷ್ಟಿತ್ತು. ಸೌರಶಕ್ತಿ, ವಾಯು, ಜೈವಿಕಪದಾರ್ಥ, ಜೈವಿಕ ಅನಿಲ, ಸಮುದ್ರದ ಅಲೆಯನ್ನಾಧರಿಸಿದ ಶಕ್ತಿಸ್ಥಾವರ ನಗರ ಮತ್ತು ಕೈಗಾರಿಕಾ ಮೂಲದ ಕಸಗಳ ನಿರ್ವಹಣೆ ಮತ್ತು ಜಲವಿದ್ಯುತ್ ಸ್ಥಾವರಗಳು – ಈ ಎಲ್ಲಾ ಮೂಲಗಳಿಂದ ಉಂಟಾದ ಶಕ್ತಿಯಿಂದ ಈ ಕೊಡುಗೆ ಸಾಧ್ಯವಾಗಿದೆ. ಸೌರಶಕ್ತಿಯನ್ನು ನೇರವಾಗಿ ಶಕ್ತಿಯನ್ನಾಗಿ ಪರಿವರ್ತಿಸುವುದು ಅಂದರೆ ಸಿಲಿಕಾನ್‌ನಂತಹ ಅರೆವಾಹಕ (Semiconducting) ಬಿಲ್ಲೆ (Chip) ಯನ್ನು ಸೌರಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸಲು ಸಿಲಿಕಾನ್‌ನಂಥ ಅರೆವಾಹಕ ಬಿಲ್ಲೆ (Semiconducting chip) ಯನ್ನು ಬಳಸಿಕೊಳ್ಳುವ ಸೌರುಷ್ಣೀಯ ಮತ್ತು ಸೌರ ಪ್ರಕಾಶ ವಿದ್ಯುಜ್ಜನಕಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಸತ್ವಯುತ ಪ್ರಾಯೋಜನೆಗಳು ಹೀಗಿವೆ :

1) ಜೈವಾನಿಲ ಸ್ಥಾವರ
2 ಸುಧಾರಿತ ಒಲೆಗಳು
3) ನೀರು ಕಾಯಿಸುವುದು ಮತ್ತು ನೀರನ್ನೆತ್ತುವುದು
4) ವಾತಾವರಣ ಸ್ನೇಹಿ ಕಟ್ಟಡಗಳು
5) ವಾಯು ಮತ್ತು ಸಾಗರದ ಅಲೆಗಳಿಂದ ಶಕ್ತಿ
6) ಸಣ್ಣ ಜಲವಿದ್ಯುತ್ ಯೋಜನೆಗಳು
7) ಜೈವಾನಿಲ ಮತ್ತು ಜೈವಿಕ ಪದಾರ್ಥ
8) ಸೌರ ದ್ಯುತಿವಿದ್ಯುತ್ ಶಕ್ತಿ
9) ನಿರುಪಯುಕ್ತ ವಸ್ತುಗಳ ನಿರ್ವಹಣೆ

ಗ್ರಾಮೀಣ ಜನರ ಶಕ್ತಿಯ ಅಗತ್ಯಗಳನ್ನು ಪೂರೈಸುವಲ್ಲಿ ಪಶುಗಳ ಸಗಣಿ, ಮಾನವ ಮತ್ತು ಪಶು ಮತ್ತು ಜೈವಿಕ ಮೂಲದಿಂದ ಬರುವ ನಿರುಪಯುಕ್ತ ಪದಾರ್ಥಗಳಿಂದ ಶಕ್ತಿ ಉತ್ಪಾದನೆ ಗ್ರಾಮೀಣ ಜನರ ಶಕ್ತಿಯ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಕೈಗೊಂಡ ಪ್ರಾರಂಭಿಕ ಕಾರ್ಯಕ್ರಮಗಳಾಗಿದ್ದವು. ಈ ಪ್ರಕ್ರಿಯೆಯಲ್ಲಿ ಗೊಬ್ಬರದ ಮೌಲ್ಯ ನಷ್ಟವಾಗುವುದಿಲ್ಲ; ಜೈವಿಕ ಪದಾರ್ಥವನ್ನು ಯಾವುದೇ ವಾಯುಮಾಲಿನ್ಯವಿಲ್ಲದೆ ಬಳಸಲಾಗಿದೆ. ಹಳ್ಳಿಗಳಲ್ಲಿ ಶಕ್ತಿಯ ಅಗತ್ಯಗಳನ್ನು ಅಗ್ಗದಲ್ಲಿ ಪೂರೈಸಲು ಸಮಗ್ರ ಗ್ರಾಮೀಣ ಶಕ್ತಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ. ಬೆಲೆಯನ್ನು ಕಡಿಮೆ ಮಾಡುವ ಉದ್ದೇಶವನ್ನಿಟ್ಟುಕೊಂಡು ಸೂರ್ಯನಶಕ್ತಿ ಉಪಯೋಗಿಸಿಕೊಳ್ಳುವ ಸೌರುಷ್ಣೀಯ ಮತ್ತು ಸೌರಪ್ರಕಾಶ ವಿದ್ಯುಜ್ಜನಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆಯಲ್ಲದೆ ಸಾಂಪ್ರದಾಯಿಕ ಮೂಲಗಳಿಂದ ದೊರೆಯುವ ಶಕ್ತಿಯ ಬೆಲೆಗೆ ಇವನ್ನು ಸಮನಾಗಿಸುವ ಪ್ರಯತ್ನ ನಡೆದಿದೆ.

ವಾತಾವರಣ ಸ್ನೇಹಿ ಕಟ್ಟಡಗಳ ನಿರ್ಮಾಣಕ್ಕೆ ಬೇಕಾದ ವಿದ್ಯುಚ್ಛಕ್ತಿ ಉತ್ಪಾದನೆ, ನೀರನ್ನು ಕಾಯಿಸುವುದು, ಅಡುಗೆ, ಒಣಗಿಸುವುದು, ಭಟ್ಟಿಯಿಳಿಸುವಿಕೆ ಇವೇ ಮುಂತಾದುವುಗಳಲ್ಲಿ ಸೌರಶಕ್ತಿಯನ್ನು ಬಳಸಿಕೊಳ್ಳಲಾಗಿದೆ. ಅಡುಗೆ ಮನೆಗಳಲ್ಲಿ ಸೌರಕುಕ್ಕರ್‌ಗಳು ಬಹಳ ಜನಪ್ರಿಯವಾಗಿವೆ. ಆರೋಗ್ಯಕರ ಪರಿಸ್ಥಿತಿಗಳಲ್ಲಿ ಕೃಷಿ ಉತ್ಪನ್ನಗಳನ್ನು ಒಣಗಿಸಲು ಸೌರಉಷ್ಣವನ್ನು ಬಳಸಿಕೊಳ್ಳಲಾಗುತ್ತಿದೆ. ಜೈವಿಕ ಪದಾರ್ಥಗಳು ಹೇರಳವಾಗಿ ದೊರೆಯುವುದರಿಂದ ಜೈವಿಕ ಪದಾರ್ಥ ಶಕ್ತಿ ಉತ್ಪಾದನೆಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಜೈವಿಕ ಪದಾರ್ಥಗಳಿಂದ ಉತ್ಪನ್ನಗೊಂಡ ಅನಿಲಗಳನ್ನು ಉಷ್ಣೀಯ ಪ್ರಯೋಗಗಳಲ್ಲಿ ನೇರವಾಗಿ ಬಳಸಿಕೊಳ್ಳಲಾಗಿದೆ. ಇದನ್ನು ಇಂಧನ ಎಂಜಿನ್‌ಗಳಲ್ಲಿ ಡೀಸೆಲ್ ತೈಲಕ್ಕೆ ಬದಲಾಗಿ ಬಳಸಿಕೊಳ್ಳಬಹುದು. ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಜಲವಿದ್ಯುತ್ ಯೋಜನೆಗಳು ಪ್ರಾರಂಭಗೊಂಡಿವೆ. ಕೈಗಾರೀಕೀಕರಣ ಮತ್ತು ನಗರೀಕರಣ ಪ್ರಕ್ರಿಯೆಗಳು ಬಹುವೇಗದಿಂದ ಸಾಗುತ್ತಲಿದ್ದು ಶಕ್ತಿಯ ಶ್ರೀಮಂತ ಮೂಲಗಳಾಗಿರುವ ನಿರುಪಯುಕ್ತ ವಸ್ತುಗಳನ್ನು ಅಪಾರ ಪ್ರಮಾಣದಲ್ಲಿ ಉತ್ಪಾದಿಸುತ್ತಿವೆ. ಹಲವಾರು ಪರ್ಯಾಯ ಶಕ್ತಿ ಮೂಲಗಳು ಇನ್ನೂ ಸಂಶೋಧನೆ ಮತ್ತು ವಿಕಾಸದ ಹಂತದಲ್ಲಿವೆ. ಇಂಧನಕೋಶಗಳು, ಜಲಜನಕ ಶಕ್ತಿ, ಭೂಉಷ್ಣೀಯ ಮತ್ತು ಸಾಗರ ಶಕ್ತಿ ಇತ್ಯಾದಿ, ಇಂಧನಕೋಶ (Fuel cell) ತಂತ್ರಜ್ಞಾನ, ಉಲಜನಕ ಶಕ್ತಿ, ಬ್ಯಾಟರಿ ಚಾಲಿ ವಾಹನಗಳು ಮತ್ತು ಭೂಉಷ್ಣೀಯ ಶಕ್ತಿ ಪ್ರಾಯೋಜನೆಗಳನ್ನು ಕೈಗೊಳ್ಳಲಾಗಿದೆ.

**ಪುನರ್ನವೀಕರಿಸಬಹುದಾದ ಶಕ್ತಿ ಪ್ರಾಯೋಜನೆಗಳು:**

ಮೇಲೆ ಉಲ್ಲೇಖಿಸಿದ ಕಾರ್ಯಕ್ರಮಗಳಿಗೆ ಪ್ರಬಲ ಸಂಶೋಧನೆ ಮತ್ತು ಅಭಿವೃದ್ಧಿ ಅಂಗದ ಅವಶ್ಯಕತೆಯಿದೆ. ಸಂಶೋಧನೆ ಮತ್ತು ವಿಕಾಸ ಪ್ರಾಯೋಜನೆಗಳನ್ನು ಕೈಗೆತ್ತಿಕೊಳ್ಳಲು ಮತ್ತು ಬೋಧನೆ ಹಾಗೂ ತರಬೇತಿಗಳನ್ನು ನೀಡಲು ಹಲವಾರು ಸಂಶೋಧನಾ ಸಂಸ್ಥೆಗಳು ಆರಂಭಗೊಂಡಿವೆ. ಈ ಸಂಸ್ಥೆಗಳು ಪರ್ಯಾಯ ಶಕ್ತಿಮೂಲಗಳ ವಿಕಾಸಕ್ಕೆ ಬೇಕಾದ ಕುಶಲ ಮಾನವ ಸಂಪನ್ಮೂಲವನ್ನು ತಯಾರು ಮಾಡುತ್ತವೆ. ವಿವಿಧ ರಾಷ್ಟ್ರಗಳೊಡನೆ ಮತ್ತು ಅಂತರರಾಷ್ಟ್ರೀಯ ನಿಯೋಗಗಳೊಂದಿಗೆ ನಿಕಟ ಸಹಕಾರವನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಸಹ ಮಾಡಲಾಗಿದೆ. ಈ ಪ್ರಾಯೋಜನೆಗಳ

Digitised by Bharatavani, CIIL

ಮತ್ತು ಉಪಯೋಗಿಸಲಾದ ವಿಭಿನ್ನ ಉಪಕರಣಗಳ ಸಾಮರ್ಥ್ಯದ ಇದುವರೆಗಿನ ಸ್ಥಿತಿಗತಿಗಳಿಗೆ ಮಾಹಿತಿ ವಿತರಣೆಯ ಮತ್ತು ಸಾರ್ವಜನಿಕ ಜಾಗೃತಿಯ ಅಗತ್ಯವಿದೆ. ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮ ಬೀದಿ ಪೋಸ್ಟರ್‌ಗಳು ಚಲನ ಹಾಗೂ ಸ್ಥಾಯಿ ಪ್ರದರ್ಶನಗಳು ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ 'ಎನರ್ಜಿಪಾರ್ಕ್'ಗಳ ಸೃಷ್ಟಿ ಇವೇ ಮುಂತಾದುವುಗಳನ್ನು ಪರ್ಯಾಯ ಶಕ್ತಿಮೂಲಗಳನ್ನು ಪ್ರದರ್ಶಿಸಿ, ಅವುಗಳ ಕಾರ್ಯವೈಖರಿಯನ್ನು ಪ್ರತ್ಯಕ್ಷವಾಗಿ ತೋರಿಸಿ ವಿವರಿಸುವ ಸಂದರ್ಭಗಳಲ್ಲಿ ಬಳಸಿಕೊಳ್ಳಲಾಗಿದೆ. ಕ್ರಮಶಃ ಪರ್ಯಾಯ ಶಕ್ತಿಮೂಲಗಳನ್ನು ಜನಪ್ರಿಯವಾಗಿಸಲಾಗುತ್ತಿದೆ. ಈ ಎಲ್ಲಾ ಪ್ರಯತ್ನಗಳ ಪರಿಣಾಮಗಳು ಹೀಗಿವೆ :

1. ಗ್ರಾಮೀಣ ಜೀವನವನ್ನು ಪರಿವರ್ತಿಸಲು ಜೈವಾನಿಲವನ್ನು ಪ್ರಭಾವಯುತವಾಗಿ ಬಳಸಿಕೊಳ್ಳಲಾಗಿದೆ. ಭಾರತದಲ್ಲಿ ಮೂರು ದಶಲಕ್ಷಕ್ಕೂ ಹೆಚ್ಚು ಜೈವಾನಿಲ ಸ್ಥಾವರಗಳಿವೆ.

2. ಹೊಗೆ ಹೊರಸೂಸುವ ಒಲೆಗಳ ಬದಲಿಯಾಗಿ ಸೌರ ಒಲೆಗಳು ಬಳಕೆಯಾಗುತ್ತಿವೆ. ಮನೆಯೊಳಗಿನ ವಾಯುಮಾಲಿನ್ಯವನ್ನು ಇದು ತಡೆಗಟ್ಟುತ್ತದೆಯಲ್ಲದೆ ಆರೋಗ್ಯದ ಅಪಾಯಗಳಿಂದ, ಮುಖ್ಯತಃ ಕಣ್ಣು ಮತ್ತು ಶ್ವಾಸಕೋಶಗಳನ್ನು ರಕ್ಷಿಸುತ್ತದೆ.

3. ಗ್ರಾಮೀಣ ಮತ್ತು ದೂರಸ್ಥ ಪ್ರದೇಶಗಳನ್ನು ಪ್ರಕಾಶಗೊಳಿಸಲು ಸೌರಶಕ್ತಿಯನ್ನು ಬಳಸಲಾಗಿದೆ. ಸೌರಲಾಂದ್ರಗಳು ಬೀದಿಗಳನ್ನು, ಮನೆಗಳನ್ನು ಪ್ರಕಾಶಗೊಳಿಸುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಗ್ರಿಡ್ ಸಂಪರ್ಕವಿಲ್ಲದೆ ಗ್ರಾಮವಾಸಿಗಳು ದೂರದರ್ಶನ ವೀಕ್ಷಿಸುವುದನ್ನು ಕಾಣಬಹುದು. ಗ್ರಾಮೀಣ ಟೆಲಿಫೋನ್‌ಗಳು, ಬ್ಯಾಟರಿ ಛಾರ್ಜಿಂಗ್, ನೀರು ಸರಬರಾಜು, ರಸ್ತೆ ಮತ್ತು ರೈಲ್ವೇ ಸಿಗ್ನಲ್‌ಗಳು ಮತ್ತು ಅಲ್ಪಶಕ್ತಿಯುಳ್ಳ ಟ್ರಾನ್ಸ್‌ಮಿಟರ್‌ಗಳು ಇತ್ಯಾದಿಗಳಿಗೆ ಸೌರ ದ್ಯುತಿವಿದ್ಯುತ್ತನ್ನು ಬಳಸಲಾಗಿದೆ. ಗ್ರಾಮಾಂತರ ಪ್ರದೇಶಗಳ ದೂರಸ್ಥ ಹಳ್ಳಿಗಳ ವಿದ್ಯುದೀಕರಣವನ್ನೂ ಕೈಗೊಳ್ಳಲಾಗಿದೆ.

4. ಸಣ್ಣ ದ್ವೀಪಗಳಲ್ಲಿ ಕುಡಿಯುವ ಜಲ ಮತ್ತು ವಿದ್ಯುಚ್ಛಕ್ತಿ ಸರಬರಾಜು ಘಟಕಗಳನ್ನು ಸ್ಥಾಪಿಸಲು ಸೌರದ್ಯುತಿವಿದ್ಯುಜ್ಜನಕ ಶಕ್ತಿ ಸ್ಥಾವರಗಳು ಸಹಾಯ ಮಾಡುತ್ತವೆ. ಈ ಪ್ರಾಯೋಜನೆಗಳು ಡೀಸೆಲ್ ಬಳಕೆಯನ್ನು ಕಡಿಮೆಮಾಡಿ ನೀರಿನಲ್ಲಿ ಡೀಸೆಲ್ ಹೊರಚೆಲ್ಲುವಿಕೆಯನ್ನು ತಪ್ಪಿಸುವುದರ ಮೂಲಕ ದ್ವೀಪದ ಪರಿಸರವನ್ನು ಸುಧಾರಿಸುತ್ತದೆ. ಕುಡಿಯುವ ಶುದ್ಧ ನೀರನ್ನೂ ಒದಗಿಸುತ್ತದೆ.

5. ವಾಯುವಿನಿಂದ ಶಕ್ತಿ ಉತ್ಪಾದನೆಯನ್ನು ಕೈಗೊಳ್ಳಲಾಗಿದೆ. ತೀರಪ್ರದೇಶಗಳಲ್ಲಿ ಶಕ್ತಿ ಉತ್ಪಾದನೆಗೆ ವಾಯು ಶಕ್ತಿ ಸೂಕ್ತವಾಗಿದೆ.

6. ಜೈವಿಕ ಪದಾರ್ಥದಿಂದ ಶಕ್ತಿ ಉತ್ಪಾದನೆಯ ನಿಟ್ಟಿನಲ್ಲಿ ಪ್ರಗತಿ ಸಾಧಿಸಲಾಗಿದೆ. ಜೈವಿಕ ಪದಾರ್ಥದ ಮೂಲಕ ಶಕ್ತಿಯನ್ನು ಅನಿಲರೂಪದಲ್ಲಿ ಉಪಯೋಗಿಸಬಹುದಲ್ಲದೆ ಗ್ರಾಮಗಳ ವಿದ್ಯುದೀಕರಣಕ್ಕೆ ಇದು ಸಹಕಾರಿಯಾಗಿದ್ದು ಇನ್ನೂ ಅನೇಕ ಕಡೆಗಳಲ್ಲಿ ಇದು ಬಳಕೆಗೆ ಬರುತ್ತದೆ. ಹೀಗೆ ಉತ್ಪಾದಿಸಿದ ಶಕ್ತಿಯನ್ನು ಸಮುದಾಯ ಅಡುಗೆ ಮನೆ, ಹೋಟೆಲ್ ಮತ್ತು ಲೋಹ ಸಂಸ್ಕರಣಾ ಕೈಗಾರಿಕೆ, ಹಾಲು ಉತ್ಪಾದನೆ, ಆಹಾರ ಮತ್ತು ಇತರ ಕೃಷಿ ಹಾಗೂ ರಾಸಾಯನಿಕ ಪ್ರಾಯೋಜನೆ ಇತ್ಯಾದಿಗಳಲ್ಲಿ ಬಳಸಲಾಗುತ್ತದೆ.

7. ತ್ಯಾಜ್ಯ ವಸ್ತುಗಳು (waste) ತೀವ್ರ ಪರಿಸರ ಮಾಲಿನ್ಯವನ್ನು ಉಂಟುಮಾಡಿದೆ. ಈ ತ್ಯಾಜ್ಯ ಪದಾರ್ಥಗಳನ್ನು ಶಕ್ತಿಯಾಗಿ ಪರಿವರ್ತಿಸುವ ಹೊಸ ತಂತ್ರಜ್ಞಾನಗಳ ವಿಕಾಸದಿಂದ ಈಗ ಪರಿಸ್ಥಿತಿ ಬದಲಾಗುತ್ತಿದೆ.

**ಶಕ್ತಿ ಶಿಕ್ಷಣದ ಗುರಿಗಳು:**

1. ಸದ್ಯದ ಶಕ್ತಿಯ ಬಿಕ್ಕಟ್ಟಿನ ಬಗ್ಗೆ ಅರಿವನ್ನು ಹೊಂದುವುದು.

2. ಪುನರ್ನವೀಕರಿಸಲಾಗದ ಮತ್ತು ಪುನರ್ನವೀಕರಿಸಬಹುದಾದ ವಿಭಿನ್ನ ಶಕ್ತಿ ಮೂಲಗಳನ್ನು ಕುರಿತ, ಅವುಗಳನ್ನು ಪಡೆಯುವ ತಂತ್ರಜ್ಞಾನ ಅವುಗಳ ಖರ್ಚುವೆಚ್ಚ, ಅವುಗಳಿಂದ ಪಡೆಯಬಹುದಾದ ಶಕ್ತಿ, ಸಾಮಾಜಿಕ-ಸಾಂಸ್ಕೃತಿಕ ಹಾಗೂ ಪರಿಸರ ಸಂಬಂಧಿ ಮುಂತಾದ ವಿಷಯಗಳನ್ನು ಕುರಿತ ಜ್ಞಾನಾರ್ಜನೆ.

3. ನೀತಿ ನಿರೂಪಕರು ಹಾಗೂ ಸರ್ಕಾರಿ ನಿಯೋಗಗಳು ಕೈಗೊಂಡ ಶಕ್ತಿ ಸಂಬಂಧಿ ಕ್ರಮಗಳ ಪರಿಣಾಮಗಳ ಬಗ್ಗೆ ತಿಳಿಯುವುದು.

4. ವಿದ್ಯಾರ್ಥಿಗಳು ಶಕ್ತಿಯ ಬಿಕ್ಕಟ್ಟನ್ನು ಪರಿಹರಿಸಲು ಸೂಚಿಸುವಂತೆ ಮಾಡುವುದು. ಮತ್ತು ಜೀವನದ ಗುಣಮಟ್ಟವನ್ನು ಉತ್ತಮಗೊಳಿಸಲು ಬೇಕಾದ ಹೆಚ್ಚಿನ ಶಕ್ತಿ ದೊರಕಿಸಿಕೊಳ್ಳಲು ಬೇಕಾದ ತಂತ್ರಗಳನ್ನು ಸಲಹೆ ಮಾಡಲು ಅವರನ್ನು ಸಮರ್ಥರನ್ನಾಗಿಸುವುದು.

5. **ಶಕ್ತಿ ಶಿಕ್ಷಣದ ವಿನ್ಯಾಸ:** ಸಾಂಪ್ರದಾಯಿಕ ಇಂಧನದ ಸರಬರಾಜಿನ ಕೊರತೆ ಹೆಚ್ಚುತ್ತಿರುವುದು, ಅದರ ಅಧಿಕವಾಗುತ್ತಿರುವ ಬೆಲೆ ಹಾಗೂ ಅದರಿಂದ ಉಂಟಾಗುತ್ತಿರುವ ತೀವ್ರ ಮಾಲಿನ್ಯದ ಅಪಾಯಗಳ ಬಗ್ಗೆ ನಾವು ಚರ್ಚಿಸಿದ್ದೇವೆ. ಇದು ಪರಿಷ್ಕೃತ ತಂತ್ರಜ್ಞಾನದೊಂದಿಗೆ ಹೊಸ ಹಾಗೂ ಪುನರ್ನವೀಕರಿಸಬಹುದಾದ ಶಕ್ತಿಮೂಲಗಳನ್ನು ನಾವು ಉಪಯೋಗಿಸುವಂತೆ ಮಾಡಿದೆ. ಇವೆಲ್ಲಕ್ಕೂ ತರಬೇತಿ ಪಡೆದ ಮಾನವ ಸಂಪನ್ಮೂಲ, ಶಕ್ತಿಮೌಲ್ಯಮಾಪನ, ತಂತ್ರಜ್ಞಾನ ವಿಕಾಸ, ಯೋಜನೆ ಹಾಗೂ ಮಾಹಿತಿ ಸಂಸ್ಕರಣೆ ಮತ್ತು ದಕ್ಷಯುತ ಶಕ್ತಿಸ್ಥಾವರಗಳ ಅಭಿವೃದ್ಧಿ ಇವುಗಳನ್ನು ಕೈಗೊಳ್ಳಲು ಸುಪ್ರಶಿಕ್ಷಿತ ಹಾಗೂ ಸಮರ್ಥ ಮಾನವ ಸಂಪನ್ಮೂಲ ಅತ್ಯಗತ್ಯ. ಆದ್ದರಿಂದ, ಈ ಕ್ಷೇತ್ರದಲ್ಲಿ ಶಿಕ್ಷಣ ಮತ್ತು ತರಬೇತಿ ಅತಿಪ್ರಮುಖವಾಗಿದ್ದು ಇದಕ್ಕೆ ವಿಶ್ವಮಟ್ಟದ ಪ್ರಯತ್ನ ಅವಶ್ಯಕ.

Digitised by Bharatavani, CIIL

ಶಕ್ತಿ ನಿರ್ವಹಣೆಗೆ ಸಮಸ್ಯೆಗಳು, ಲೆಕ್ಕಪರೀಕ್ಷೆ (Audit), ಸಂರಕ್ಷಣೆ, ವಿತರಣೆ, ಸಂಗ್ರಹಣೆ ಮತ್ತು ಆರ್ಥಿಕತೆ –ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ. ಪುನರ್ನವೀಕರಿಸಬಹುದಾದ ಶಕ್ತಿತಂತ್ರಜ್ಞಾನದ ವಿಕಾಸ ಮತ್ತು ಬಳಕೆಗಾಗಿ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆಯಾದರೂ ಈ ತಂತ್ರಜ್ಞಾನಗಳ ಬಳಕೆ ಮುಂದುವರೆಯುತ್ತಿರುವ ರಾಷ್ಟ್ರಗಳ ಶಕ್ತಿ ಅಗತ್ಯಗಳನ್ನು ಪೂರೈಸಲಾರದು. ಪುನರ್ನವೀಕರಿಸಬಹುದಾದ ಶಕ್ತಿತಂತ್ರಜ್ಞಾನಗಳ ಅಪರ್ಯಾಪ್ತ ಬಳಕೆ, ಅವುಗಳ ಆರ್ಥಿಕತೆ ಮತ್ತು ಸಂಬಂಧಿತ ಸಮಸ್ಯೆಗಳನ್ನು ನಿರ್ಲಕ್ಷಿಸಲಾಗಿದೆ. ಈ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಪ್ರಯೋಗಶಾಲೆಯಲ್ಲಿ ಕೈಗೊಂಡ ಪ್ರಯೋಗಗಳು ಸಫಲವಾಗಿರುವುದು ಕಂಡುಬಂದಿದೆ; ತರಬೇತಿ ಪಡೆದ ಮತ್ತು ಸಮರ್ಥ ಮಾನವ ಸಂಪನ್ಮೂಲದ ಕೊರತೆಯಿಂದಾಗಿ ದೊಡ್ಡ ಪ್ರಮಾಣದ ಸ್ಥಾವರಗಳು ಸಫಲವಾಗಿಲ್ಲ. ಶಕ್ತಿಯ ಬಳಕೆದಾರರಿಗೆ ಮಾಹಿತಿಯನ್ನು ನೀಡುವುದರ ಮೂಲಕ ಶಕ್ತಿಗೆ ಸಂಬಂಧಿಸಿದ ವಿಭಿನ್ನ ವಿಷಯಳ ಬಗ್ಗೆ ಅರಿವು ಮೂಡಿಸಿ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಲಭ್ಯವಿರುವ ವೈಜ್ಞಾನಿಕ ಜ್ಞಾನ ಮತ್ತು ಅದರ ಉಪಯೋಗದ ವಿಸ್ತಾರವು ಹೆಚ್ಚು ಮಹತ್ವವುಳ್ಳದ್ದು. ಈ ವಿಷಯದ ಬಗ್ಗೆ ವಿಶಾಲವಾದ, ಸುದೃಢ ತಳಹದಿಯನ್ನು ಪಡೆಯಲು ಮತ್ತು ವಿವೇಚನಾತ್ಮಕ ಮೌಲ್ಯಮಾಪನದ ಕೌಶಲಗಳನ್ನು ಬೆಳೆಸಿಕೊಳ್ಳಲು ವಿಶ್ಲೇಷಣೆ ಮತ್ತು ಸುಧಾರಣೆ (Upgradation)ಗಳು ಅಗತ್ಯ. ವೃದ್ಧಿಸುತ್ತಿರುವ ಜನಸಂಖ್ಯೆ ಮತ್ತು ಕುಂದುತ್ತಿರುವ ಜೀವಪಳೆಯುಳಿಕೆ ಇಂಧನಗಳ ಹಿನ್ನೆಲೆಯಲ್ಲಿ ಶಕ್ತಿಶಿಕ್ಷಣ ಇಂದಿನ ಜೀವನದ ಮುಖ್ಯ ಅಂಗವಾಗಿದೆ. ಆದ್ದರಿಂದ, ಮನುಕುಲಕ್ಕೆ ದಕ್ಷ ಶಕ್ತಿ ಉತ್ಪಾದನಾ ತಂತ್ರಜ್ಞಾನಗಳನ್ನು ವಿಕಾಸಗೊಳಿಸಿ ಅದರಿಂದ ವಂಚಿತರಾದ ಸಮಾಜದ ವರ್ಗಗಳಿಗೆ ಅದನ್ನು ತಲುಪಿಸುವ ಜವಾಬ್ದಾರಿಯಿದೆ. ಕೇವಲ ಇಂಥ ತಂತ್ರಜ್ಞಾನಗಳ ವಿತರಣೆ ಮಾತ್ರ ಈ ಶಕ್ತಿಬಿಕ್ಕಟ್ಟಿಗೆ ಸಮಾಧಾನವಾಗಿರದೆ ಪರಿಸರ ಮಾಲಿನ್ಯ, ಅರಣ್ಯನಾಶ, ಆರೋಗ್ಯಹಾನಿ ಇತ್ಯಾದಿ ಸಮಸ್ಯೆಗಳಿಗೂ ಗಮನಹರಿಸುವುದಾಗಿದೆ. ಈ ಕಾರಣದಿಂದ ಪುನರ್ನವೀಕರಿಸಬಹುದಾದ ಶಕ್ತಿವ್ಯವಸ್ಥೆಗೆ ಸಂಬಂಧಿಸಿದ ಶಕ್ತಿಶಿಕ್ಷಣ ಮತ್ತು ತರಬೇತಿ ಪರಮಾವಶ್ಯಕವಾಗಿದೆ.

ಸುವ್ಯವಸ್ಥಿತ ಕಾರ್ಯಕ್ರಮ ಪಠ್ಯಕ್ರಮದೊಂದಿಗೆ ಶಕ್ತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಸ್ನಾತಕೋತ್ತರ ಮಟ್ಟದ ಬೋಧನೆ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ನೆಲೆಗೊಳಿಸುವ ನಿಟ್ಟಿನಲ್ಲಿ ಮಹತ್ವಪೂರ್ಣ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಬೋಧಕ ಮತ್ತು ವಿದ್ಯಾರ್ಥಿಗಳ ನಡುವಿನ ಅನ್ಯೋನ್ಯ ಕ್ರಿಯೆಯನ್ನು ಪರಿಣಾಮಕಾರಿಯಾಗಿಸಲು ವಿವಿಧ ಸಾಧನೆಗಳನ್ನು ಬಳಸಬಹುದು. ಪಠ್ಯಪುಸ್ತಕಗಳು, ಪ್ರಯೋಗಶಾಲೆಯ ಕೈಪಿಡಿಗಳು, ಓವರ್‌ಹೆಡ್ ಪಾರದರ್ಶಕಗಳು, ಕಂಪ್ಯೂಟರ್ ಸಾಫ್ಟ್‌ವೇರ್, ವೀಡಿಯೋಟೇಪ್‌ಗಳು ಇತ್ಯಾದಿ ಅಂಥ ಅನ್ಯೋನ್ಯಕ್ರಿಯೆಯಲ್ಲಿ ಸಹಕಾರಿಯಾಗುವುವು. ಶಕ್ತಿ ಇಂಜಿನಿಯರಿಂಗ್ ಪಠ್ಯಕ್ರಮಗಳ ಪರಿಣಾಮಕಾರಿ ಪ್ರಯೋಗಶಾಲೆಯ ಅಂಗವನ್ನು ಹೊಂದಿರಬೇಕು. ಪ್ರಯೋಗಗಳ ಪಟ್ಟಿಯಲ್ಲಿ ಆನ್ವಯಿಕ ವಿಜ್ಞಾನಗಳು ಹಾಗೂ ಇಂಜಿನಿಯರಿಂಗ್ ವಿಷಯಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ಸೇರಿಸಬೇಕು. ಶಕ್ತಿ ಉತ್ಪಾದನೆಯ ವಿವಿಧ ವೈಜ್ಞಾನಿಕ ಹಾಗೂ ಇಂಜಿನಿಯರಿಂಗ್ ನಿಯಮಗಳನ್ನು ಸಿದ್ಧತೆಪಡಿಸುವ ಸಾಧನಗಳನ್ನು ಉಪಯೋಗಿಸಬೇಕು. ಮುಂದುವರೆದ ಕಾರ್ಯಕ್ರಮಗಳಲ್ಲಿನ ಕೆಲವು ಪ್ರಯೋಗಗಳು ಮತ್ತು ಪ್ರಾವೀಣ್ಯಕ್ಕೆ ಅವಕಾಶಗಳು ಶಕ್ತಿಶಿಕ್ಷಣದ ಪ್ರಮುಖ ಘಟಕಗಳಾಗಿರಬೇಕು.

ಶಕ್ತಿಶಿಕ್ಷಣ ಊರ್ಜಿತವಾಗಬಲ್ಲ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತದೆಯಲ್ಲದೆ ಪರಿಸರ ಸಂಬಂಧಿ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಅರಿತುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಶಕ್ತಿ ನಿರ್ವಹಣೆ ಜೀವಪಳೆಯುಳಿಕೆ ಇಂಧನಗಳನ್ನು ಅತ್ಯುತ್ತಮ ಬಳಕೆ ಮತ್ತು ಪುನರ್ನವೀಕರಿಸಬಹುದಾದ ಶಕ್ತಿ ಮೂಲಗಳಿಂದ ಬೃಹತ್ ಪ್ರಮಾಣದ ಶಕ್ತಿ ಉತ್ಪಾದನೆಗಳಿಗೆ ಸಂಬಂಧಿಸಿದ ಬಹುತೇಕ ಕಾರ್ಯಕ್ರಮಗಳಲ್ಲಿ ಸಮರ್ಥ ಮಾನವ ಸಂಪನ್ಮೂಲದ ಕೊರತೆಯಿರುತ್ತದೆ. ಈ ಕ್ಷೇತ್ರಗಳಲ್ಲಿ ಶಿಕ್ಷಣ ಮತ್ತು ಪ್ರಶಿಕ್ಷಣ ಅತ್ಯಂತ ಪ್ರಮುಖವಾಗಿದೆ. ಈ ತಂತ್ರಜ್ಞಾನಗಳ ಮತ್ತು ವ್ಯವಸ್ಥೆಗಳ ನೈಜ ಬೆಳವಣಿಗೆ ಮತ್ತು ಅನುರಕ್ಷಣೆ (Maintainance) ಈ ಕ್ಷೇತ್ರದಲ್ಲಿ ಲಭ್ಯವಿರುವ ಇಂಜಿನಿಯರ್‌ಗಳು ತಂತ್ರಜ್ಞರು ಮತ್ತು ಯಂತ್ರಕುಶಲಿಗಳ ಸಂಖ್ಯೆಯನ್ನು ಅವಲಂಬಿಸಿದೆ. ಅದೇ ರೀತಿ, ಸಾರ್ವಜನಿಕರು ಯಾವುದೇ ನವತಂತ್ರಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ಅಂಗೀಕರಿಸಬೇಕಾದರೆ ಸಂಗತ ಪರಿಕಲ್ಪನೆಗಳನ್ನು ಶಾಲಾ ಪಠ್ಯಕ್ರಮವು ಹೊಂದಿರಬೇಕು. ಸಮಾಜದ ಸರ್ವ ಮಟ್ಟಗಳನ್ನು ತಲುಪಬೇಕಾದರೆ ಶಕ್ತಿಶಿಕ್ಷಣ ಮತ್ತು ನಮ್ಯ (Flexible), ಹೆಚ್ಚು ಖರ್ಚಿಲ್ಲದ ಮತ್ತು ವಿಶಾಲ ಆಧಾರವುಳ್ಳದ್ದಾಗಿರಬೇಕು. ವಿದ್ಯಾರ್ಥಿಗಳಿಗೆ ಸಮುದಾಯದ ಅವಶ್ಯಕತೆಗಳು, ಅವರ ಸ್ಥಾನೀಯ ಸಾಮಾಜಿಕ–ಸಾಂಸ್ಕೃತಿಕ ಪರಿಸರ ಮತ್ತು ಆರ್ಥಿಕತೆಗಳ ಬಗ್ಗೆ ಶಕ್ತಿಶಿಕ್ಷಣದ ಮುಖಾಂತರ ಅರಿವನ್ನು ಮೂಡಿಸಬೇಕು.

ಇಂಜಿನಿಯರಿಂಗ್ ಶಿಕ್ಷಣ ಸಮಾಜದ ಪ್ರತಿಯೊಂದು ವರ್ಗವನ್ನು ಪ್ರಭಾವಿಸುತ್ತದೆ ಹಾಗೂ ಪ್ರಸಕ್ತ ಶಿಕ್ಷಣ ಮತ್ತು ಅನುಭವಗಳು ಪರ್ಯಾಪ್ತವಲ್ಲವೆಂದು ಸಾರ್ವಜನಿಕರು ಭಾವಿಸುತ್ತಾರೆ. ಉನ್ನತ ಮಟ್ಟದ ನೀತಿ ರೂಪಿಸುವವರು (Policy Makers) ಹಾಗೂ ಯೋಜಕರು ಶ್ರೀಸಾಮಾನ್ಯರ ನಿರೀಕ್ಷೆಗೆ ತಕ್ಕಂತೆ ತಮ್ಮ ಜ್ಞಾನವನ್ನು ನವೀಕರಿಸಿಕೊಳ್ಳಬೇಕಾಗುತ್ತದೆ.

ಇಂಜಿನಿಯರಿಂಗ್ ಶಿಕ್ಷಣ ಮತ್ತು ಪ್ರಶಿಕ್ಷಣ ದೀರ್ಘಕಾಲೀನ ಮತ್ತು ಲಘುಕಾಲೀನ ಗುರಿಗಳನ್ನು ಹೊಂದಿರಬೇಕು. ಎಲ್ಲಾ ಮಟ್ಟಗಳಲ್ಲಿ ವಿಶೇಷತಜ್ಞರು ಸೇರಿದಂತೆ ಶಿಕ್ಷಿತ ಮತ್ತು ಕುಶಲ ಮಾನವ ಸಂಪನ್ಮೂಲಗಳನ್ನು ವಿಕಾಸಗೊಳಿಸುವುದು ದೀರ್ಘಕಾಲೀನ ಗುರಿಯಾಗಬೇಕು. ನೀತಿ ರೂಪಿಸುವವರು, ಯೋಜಕರು ಶಿಕ್ಷಕರು ಹಾಗೂ ಪ್ರಶಿಕ್ಷಕರು, ತಂತ್ರಜ್ಞರು, ಕ್ಷೇತ್ರಕಾರ್ಯಕರ್ತರು, ಕೈಗಾರಿಕಾ ಮತ್ತು ವ್ಯಾಪಾರಿ ಸಿಬ್ಬಂದಿ, ಕೃಷಿಕರು, ವೃತ್ತಿಪರರು ಮತ್ತು ವೃತ್ತಿಪರರಲ್ಲದವರು ಇವರೆಲ್ಲರನ್ನೂ ಒಳಗೊಂಡಂತೆ ವಿಶೇಷಜ್ಞರಿಗೆ

Digitised by Bharatavani, CIIL

ಪುನರ್ಶಿಕ್ಷಣ ನೀಡುವುದು ಅಲ್ಪಕಾಲೀನ ಗುರಿಯಾಗಿದೆ.

**ಪರಿಣತಿ:** ಶಕ್ತಿಕ್ಷೇತ್ರದಲ್ಲಿ ಪರಿಣತಿಯ ಬೇಡಿಕೆಯನ್ನು ಸ್ಥೂಲವಾಗಿ ಈ ಕೆಳಗಿನ ಮೂರು ವಿಧಗಳಾಗಿ ವಿಂಗಡಿಸಬಹುದು :

1. ಸಮಾಜದ ಅಗತ್ಯಗಳನ್ನು ಪೂರೈಸುವ ಹೆಚ್ಚುವರಿ ಶಕ್ತಿ ಮೂಲಗಳನ್ನು ಪತ್ತೆಹಚ್ಚುವುದು.
2. ಜೀವಪಳೆಯುಳಿಕೆ ಇಂಧನಗಳನ್ನು ಹೆಚ್ಚು ದಕ್ಷವಾಗಿ ಬಳಸಬಲ್ಲ ದಕ್ಷ ಹಾಗೂ ಪರಿಷ್ಕೃತ ತಂತ್ರಜ್ಞಾನಗಳನ್ನು ವಿಕಸಿಸುವುದು.
3. ಬೃಹತ್ ಪ್ರಮಾಣದಲ್ಲಿ ಶಕ್ತಿ ಉತ್ಪಾದನೆ, ಪರಿವರ್ತನೆ ಹಾಗೂ ಬಳಕೆ.

**ಶಕ್ತಿ ಇಂಜಿನಿಯರ್ (Energy Engineer) ಗಳ ಪ್ರಶಿಕ್ಷಣ:**

ಶಿಕ್ಷಣ ಮತ್ತು ಪ್ರಶಿಕ್ಷಣವನ್ನು ನೀಡಲಾಗುವ ಹಾದಿ ಪ್ರಾಥಮಿಕ ಶಾಲೆಯಿಂದ ಪ್ರಾರಂಭಗೊಂಡು ಪ್ರೌಢಶಾಲೆ, ತಾಂತ್ರಿಕ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳ ಶಿಕ್ಷಣ ಪ್ರಕ್ರಿಯೆಯ ಮೂಲಕ ಸಾಗುತ್ತದೆ. ಶಿಕ್ಷಕರ ಗುರುತಿಸುವಿಕೆ ಹಾಗೂ ತರಬೇತಿ ಮತ್ತು ಬೋಧನ ಸಾಮಗ್ರಿಗಳ ಸಿದ್ಧತೆ ಈ ಪ್ರಕ್ರಿಯೆಯ ಸಾರಭೂತ ಅಂಶಗಳಾಗಿವೆ. ಸೌರಒಲೆಗಳು ಬೆಳೆ ಒಣಗಿಸುವಿಕೆ ಮತ್ತು ಇತರ ಶಕ್ತಿ ಉಪಕರಣಗಳ ಬಗ್ಗೆ ಸಾಮಾನ್ಯಜನರ ಅರಿವನ್ನು ಸುಧಾರಿಸುವ ಶಿಕ್ಷಣವನ್ನು ಗ್ರಾಮೀಣ ಪ್ರಾಥಮಿಕ ಶಾಲೆಗಳ ಮಕ್ಕಳು ಪಡೆಯುತ್ತಾರೆ.

ಮಾಧ್ಯಮಿಕ ಹಂತದಲ್ಲಿ ನಿಯಮಿತ ಕಾರ್ಯಕ್ರಮಗಳ ಜೊತೆಗೆ ಶಿಕ್ಷಣವು ವೃತ್ತಿಪರ ಕೌಶಲಗಳಲ್ಲಿ ತರಬೇತಿಯನ್ನು ಒದಗಿಸುತ್ತದೆ. ಸರಳ ಶಕ್ತಿ ಉಪಕರಣಗಳ ಅನುರಕ್ಷಣೆ (Maintainace) ಸಾಧ್ಯ. ವಿಶ್ವವಿದ್ಯಾಲಯದ ಸ್ತರದಲ್ಲಿ ಪುನರ್ನವೀಕರಿಸಬಹುದಾದ ಶಕ್ತಿಯ ಚಿತ್ರಣವನ್ನು ಸಮಗ್ರ ಶಕ್ತಿ ಸನ್ನಿವೇಶದ ಭಾಗವಾಗಿ ಪ್ರಸ್ತುತಪಡಿಸಬಹುದಾಗಿದ್ದು ಸಾಮಾನ್ಯತಃ ಶಕ್ತಿಪರಿಗಣನೆಯನ್ನು ಇನ್ನೂ ಉನ್ನತ ಕಾರ್ಯಕ್ರಮಗಳಲ್ಲಿ ಅಳವಡಿಸಬೇಕಾಗಿದೆ. ಪುನರ್ನವೀಕರಿಸಬಹುದಾದ ಶಕ್ತಿತಂತ್ರಜ್ಞಾನಗಳ ಪ್ರಸಾರಕ್ಕಿರುವ ಬಹುತೇಕ ಸಾಮಾಜಿಕ – ಸಾಂಸ್ಕೃತಿಕ ನಿರ್ಬಂಧಗಳನ್ನು ಅತಿಕ್ರಮಿಸಬೇಕು; ಇದರಿಂದ ಸಮಾಜದ ಬಹಳಷ್ಟು ವರ್ಗಗಳು ಶಕ್ತಿಉಪಕರಣಗಳ ಮತ್ತು ಸಂಬಂಧಿತ ವಿಷಯಗಳ ಲಾಭವನ್ನು ಪಡೆಯಲು ಸಹಕಾರಿಯಾಗುವುದು.

**ಶಕ್ತಿ ಶಿಕ್ಷಣದ ಹಂತಗಳು:**

ಶಕ್ತಿಶಿಕ್ಷಣವನ್ನು ನೀಡಲು ಈ ಕೆಳಗಿನ ಹಂತಗಳನ್ನು ಸೂಚಿಸಲಾಗಿದೆ.

(i) ಪ್ರಾಥಮಿಕ ತರಗತಿಯಿಂದಲೇ ಶಕ್ತಿ–ಸಂಬಂಧಿತ ಪರಿಕಲ್ಪನೆಗಳನ್ನು ಹಾಗೂ ಮೂಲಗಳನ್ನು ಪರಿಚಯಿಸಬೇಕು.

(ii) ಎಲ್ಲಾ ವಿಧದ ಶಕ್ತಿ ಸಂಬಂಧಿತ ಬೋಧನೆ / ತರಬೇತಿಗಳಿಗೆ ಕ್ರಮಬದ್ಧ ಕಾರ್ಯಕ್ರಮ–ಪಠ್ಯಗಳನ್ನು ಸಿದ್ಧಪಡಿಸಿ ಪ್ರೌಢಶಾಲೆಯಿಂದ ಸ್ನಾತಕ ಪದವಿ ಮಟ್ಟದವರೆಗೂ ಅದನ್ನು ಕಡ್ಡಾಯ ಮಾಡಬೇಕು.

(iii) ಶೈಕ್ಷಣಿಕ ತರಬೇತಿ, ಸಂವಹನೆಯನ್ನು ಅನುಕರಣೆ/ ಅನುರೂಪಣೆ (Simulation) ಅತ್ಯಾಧುನಿಕ ತಂತ್ರಜ್ಞಾನಗಳು, ಕಾರ್ಯಸಮರ್ಥ ವ್ಯವಸ್ಥೆಗಳ ಪ್ರಾಯೋಗಿಕ ನಿರೂಪಣೆ, ಕ್ಷೇತ್ರ ಸಂದರ್ಶನಗಳು ಮತ್ತು ಅತ್ಯಾಧುನಿಕ ಕಾರ್ಯಸಮರ್ಥ ವ್ಯವಸ್ಥೆಗಳು ಇವೆಲ್ಲದರ ಸಮ್ಮಿಶ್ರಣದ ಶಕ್ತಿಶಿಕ್ಷಣ ಕಾರ್ಯಕ್ರಮಗಳನ್ನು ಸ್ನಾತಕೋತ್ತರ ಹಾಗೂ ಬಿ.ಟೆಕ್., ಇಂಜಿನಿಯರಿಂಗ್ ಕೋರ್ಸುಗಳಲ್ಲಿ ಅಳವಡಿಸಬೇಕು. ಶಕ್ತಿನಿರ್ವಹಣೆ ಮತ್ತು ಲೆಕ್ಕಪರೀಕ್ಷಣೆಯೊಂದಿಗೆ ಆರ್ಥಿಕತೆ, ಸಂರಕ್ಷಣೆ, ಸಂಚಯನ ಮತ್ತು ವಿತರಣೆ ಇತ್ಯಾದಿ ಸಂಬಂಧಿತ ವಿಷಯಗಳು ವ್ಯಾಪಕ ಹಿನ್ನೆಲೆಯ ಪಠ್ಯಕ್ರಮದಲ್ಲಿರಬೇಕು.

(iv) ಎಲ್ಲಾ ಸ್ತರಗಳಲ್ಲಿಯೂ ಪಠ್ಯಪುಸ್ತಕ, ಪ್ರಯೋಗಶಾಲಾ ಕೈಪಿಡಿ ಶಿಕ್ಷಕ ಮಾರ್ಗದರ್ಶಿಗಳು ಸಿದ್ಧವಾಗಲು ಮತ್ತು ಇತರ ಬೋಧನೆ ಕಲಿಕೆಯ ಸಾಮಗ್ರಿಗಳ ವಿಕಸನವಾಗಬೇಕು. ಸಂವಹನೆ ಮತ್ತು ಮಾಹಿತಿ ಸಂಸ್ಕರಣೆಗಳ ಆಧುನಿಕ ತಂತ್ರಗಳು ಹಾಗೂ ಕಂಪ್ಯೂಟರ್ ಸಹಾಯಿತ ಶಿಕ್ಷಣ ಇಂಜಿನಿಯರಿಂಗ್ ಪಠ್ಯಕ್ರಮದಲ್ಲಿ ಅಡಕಗೊಳ್ಳಬೇಕು.

(v) ದಕ್ಷ ಶಕ್ತಿಯ ಬಳಕೆ ಮತ್ತು ವಿವಿಧ ಶಕ್ತಿ ಮೂಲಗಳ ಆಯ್ಕೆಯ ಅವಕಾಶವನ್ನು ಕುರಿತು ಸಮಾಜದ ಸರ್ವಸದಸ್ಯರನ್ನು ಬೋಧಾನ್ವಿತರನ್ನಾಗಿಸುವ ಪ್ರಯತ್ನಗಳನ್ನು ಕೈಗೊಳ್ಳಬೇಕು. ಸಂವಹನ ಮಾಧ್ಯಮಗಳು, ಪ್ರದರ್ಶನಗಳ ಸಂಘಟನೆ, ವಾಣಿಜ್ಯ ಪ್ರದರ್ಶನಗಳು ಇತ್ಯಾದಿಗಳ ಮೂಲಕ ಇದು ಸಾಧ್ಯವಾಗಬಲ್ಲದು. ಸಮುದಾಯ ಸೇವೆಗಳು ಮತ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನೂ ಬಳಸಿಕೊಳ್ಳಬೇಕು.

(vi) ಪುನರ್ ಪ್ರಶಿಕ್ಷಣ ಕಾರ್ಯಕ್ರಮಗಳ ರೂಪದಲ್ಲಿ ನೀತಿರೂಪಿಸುವವರಿಗೆ ಹಾಗೂ ಆಡಳಿತಾತ್ಮಕ ಸಿಬ್ಬಂದಿಗಳಿಗೆ ಮೂಲಭೂತ ಮಾಹಿತಿ/ಸಂಭಾರ (input) ಗಳನ್ನು ಒದಗಿಸಲು ಅಲ್ಪಕಾಲಿಕ ಪುನಶ್ಚೇತನ ಕಾರ್ಯಕ್ರಮ/ಕಾರ್ಯಾಗಾರಗಳನ್ನು ನಡೆಸುವುದು ಅವಶ್ಯಕ.

(vii) ಸದ್ಯದಲ್ಲಿರುವ ಶಿಕ್ಷಕರ ವೃತ್ತಿನಿರತ (In-service) ಪ್ರಶಿಕ್ಷಣಕ್ಕೆ ಬೇಕಾದ ಸೌಲಭ್ಯಗಳು ದೊರಕುವಂತೆ ಮಾಡಬೇಕು.

(viii) ಉದ್ಯೋಗಮಂಡಲಿಗಳು, ಕೈಗಾರಿಕೆಗಳು ಮತ್ತು ಕಾರ್ಪೊರೇಟ್ ಹೌಸ್‌ಗಳಿಗೆ ಬೋಧಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವ ರೀತಿಯಲ್ಲಿ ಸ್ನಾತಕೋತ್ತರ ಮತ್ತು ಬಿ.ಟೆಕ್ ಬೋಧನೆ/ಪ್ರಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸಬೇಕು.

(ix) ಪರಿಣಾಮಕಾರಿ ಯೋಜನೆ ಮತ್ತು ಆಡಳಿತದಲ್ಲಿ ಸಹಕಾರಿಯಾಗಬಲ್ಲ ಶಕ್ತಿ ಕಾರ್ಯಕ್ರಮಗಳ ಶಿಕ್ಷಕರು

Digitised by Bharatavani, CIIL

ಸಂಶೋಧಕರು ಮತ್ತು ಪಥಪ್ರದರ್ಶಕರನ್ನು ನಿರ್ಮಾಣ–ಮಾಡುವ ಗುರಿಯನ್ನಿಟ್ಟುಕೊಂಡು ಎಂ.ಟೆಕ್ ಮತ್ತು ಪಿ.ಎಚ್.ಡಿ. ಸ್ತರಗಳಲ್ಲಿ ಪಠ್ಯಕ್ರಮದ ವಿಷಯಗಳನ್ನು ರಚಿಸಬೇಕು.

ನವದೆಹಲಿಯಲ್ಲಿ 1995ರಲ್ಲಿ ಜರುಗಿದ ಯುನೆಸ್ಕೊ ಸಂಸ್ಥೆಯ ಪುನರ್ನವೀಕರಿಸಬಹುದಾದ ಶಕ್ತಿ ಇಂಜಿನಿಯರಿಂಗ್ ಶಿಕ್ಷಣದ ಮೇಲಣ ಪ್ರಾದೇಶಿಕ ಕಾರ್ಯಾಗಾರ ಈ ಕೆಳಗಿನ ಸಲಹೆಗಳನ್ನು ಮಾಡಿತು (ಕಂದಪಾಲ್ ಮತ್ತು ಗರ್ಗ್, 1996)

(i) ಈ ಕ್ಷೇತ್ರದ ಉತ್ತಮ ಅನುಭವ ಹಂಚಿಕೆ ಹಾಗೂ ಜ್ಞಾನ ವಿನಿಮಯಗಳನ್ನು ಸುಗಮಗೊಳಿಸಲು ಪುನರ್ನವೀಕರಿಸಬಹುದಾದ ಶಕ್ತಿ ಇಂಜಿನಿಯರಿಂಗ್ ಶಿಕ್ಷಣದ ಕ್ಷೇತ್ರದಲ್ಲಿ ಪ್ರಾದೇಶಿಕ ಸಹಕಾರ ಹೆಚ್ಚಾಗಬೇಕು.

(ii) ಸಾಮಾನ್ಯತಃ ಶಕ್ತಿಶಿಕ್ಷಣವನ್ನು ಮತ್ತು ಪ್ರಮುಖತಃ ಪುನರ್ನವೀಕರಿಸಬಹುದಾದ ಶಕ್ತಿಶಿಕ್ಷಣವನ್ನು ಎಲ್ಲಾ ಸ್ತರಗಳಲ್ಲಿಯೂ ಒದಗಿಸಬೇಕು.

(iii) ಪುನರ್ನವೀಕರಿಸಬಹುದಾದ ಶಕ್ತಿ ಇಂಜಿನಿಯರಿಂಗ್ ಕ್ಷೇತ್ರದಲ್ಲಿನ ವಿಶ್ವವಿದ್ಯಾಲಯ ಸ್ತರದ ಬೋಧನಾ ಕಾರ್ಯಕ್ರಮಗಳಿಗೆ ಅತಿ ಹೆಚ್ಚಿನ ಆದ್ಯತೆ ನೀಡಬೇಕು. ಕಾರ್ಯಕ್ರಮದ ಸಂರಚನೆ ಮತ್ತು ಈ ಕಾರ್ಯಕ್ರಮಗಳ ವಸ್ತುಗಳನ್ನು ಕಾರ್ಯಕ್ರಮದ ಆರ್ಥಿಕತೆ, ದಕ್ಷತೆ ಮತ್ತು ಪರಿಣಾಮಕಾರಿತ್ವಗಳನ್ನು ನಿಶ್ಚಿತಗೊಳಿಸುವ ರೀತಿಯಲ್ಲಿ ರೂಪುಗೊಳಿಸಬೇಕು.

(iv) ಪರಿಣಾಮಕಾರಿ ಪುನರ್ನವೀಕರಿಸಬಹುದಾದ ಶಕ್ತಿ ಇಂಜಿನಿಯರಿಂಗ್ ಶಿಕ್ಷಣಕ್ಕೆ ಸೂಕ್ತ ಬೋಧನ ಸಾಮಗ್ರಿಗಳ ವಿಕಾಸ ನಿರ್ಣಾಯಕವಾದುದು.

(v) ಪುನರ್ನವೀಕರಿಸಬಹುದಾದ ಶಕ್ತಿ ಇಂಜಿನಿಯರಿಂಗ್ ಬೋಧನೆ/ಪ್ರಶಿಕ್ಷಣ ಕಾರ್ಯಕ್ರಮಗಳ ಪ್ರಯೋಗಾಲಯದ ಘಟಕವನ್ನು ಯೋಗ್ಯರೀತಿಯಲ್ಲಿ ಸಂರಚಿಸಿ ವಿಕಾಸಗೊಳಿಸಬೇಕು.

(vi) ಈ ಕ್ಷೇತ್ರದಲ್ಲಿರುವ ವ್ಯಕ್ತಿಗಳು ಎಲ್ಲಾ ಪ್ರಸಕ್ತ ವಿಷಯಗಳನ್ನು ಚರ್ಚಿಸಲು, ಅನುಭವಗಳನ್ನು ಹಂಚಿಕೊಳ್ಳಲು ಪುನರ್ನವೀಕರಿಸಬಹುದಾದ ಶಕ್ತಿ ಕ್ಷೇತ್ರದಲ್ಲಿ ಕಾರ್ಯಾಗಾರಗಳು/ವಿಚಾರಗೋಷ್ಠಿಗಳು/ಸಮ್ಮೇಳನಗಳನ್ನು ಸಂಘಟಿಸುವುದು ಅತಿ ಮುಖ್ಯ.

**ಆದ್ಯತೆಯ ಕ್ಷೇತ್ರಗಳು:**

ಶಕ್ತಿಶಿಕ್ಷಣದಲ್ಲಿ ನವ ಶೈಕ್ಷಣಿಕ ಪ್ರಕ್ರಿಯೆಯನ್ನು ವಿಕಸನಗೊಳಿಸಬೇಕಾದರೆ ಆದ್ಯತೆ ನೀಡಬೇಕಾದ ಕ್ಷೇತ್ರಗಳು ಈ ಕೆಳಗಿನಂತಿವೆ:

1. ವಿಭಿನ್ನ ಶಕ್ತಿಕ್ಷೇತ್ರಗಳಲ್ಲಿ ನಿರ್ದಿಷ್ಟ ಶಿಕ್ಷಣ ಮತ್ತು ತರಬೇತಿ ಅಗತ್ಯಗಳ ಮೌಲ್ಯಮಾಪನ.
2. ಹೊಸ ಬೋಧನಾ ವಿಧಾನಗಳು ಮುಕ್ತ ಹಾಗೂ ನಮ್ಮ ವಿಧಿವಿಧಾನಗಳು ಅಗ್ಗದ ಬೋಧಕ ಮತ್ತು ಪ್ರಯೋಗಶಾಲಾ ಸಾಮಗ್ರಿಗಳ ಬಳಕೆ ಇತ್ಯಾದಿಗಳ ಮುಖಾಂತರ ಶಿಕ್ಷಣಕಾರ್ಯಕ್ರಮಗಳ ಆಳವಾದ ಮರ್ಮಬೇಧಕತೆ/ವ್ಯಾಪಕತೆಯ ಮತ್ತು ಅವುಗಳ ಗುರಿಸಾಧನೆಗಳ ಉಸ್ತುವಾರಿ ನಡೆಯಬೇಕು.
3. ಈ ಕೆಳಗಿನವುಗಳಿಗೆ ಪುನಃಶ್ಚೇತನ ಕಾರ್ಯಕ್ರಮಗಳು, ಕಾರ್ಯಾಗಾರಗಳು ಇತ್ಯಾದಿಗಳ ಸಹಾಯದಿಂದ ಶೈಕ್ಷಣಿಕ ಸಿಬ್ಬಂದಿಗಳಿಗಾಗಿ ಪ್ರಶಿಕ್ಷಣ ಹಾಗೂ ಪುನರ್‌ಪ್ರಶಿಕ್ಷಣಗಳನ್ನು ಆಯೋಜಿಸಬೇಕು.

(a) ನೀತಿರೂಪಿಸುವವರು ಮತ್ತು ಶಕ್ತಿ–ಯೋಜನಾ ವಿಶೇಷಜ್ಞರು.

(b) ಇಂಜಿನಿಯರ್‌ಗಳು, ವಿಜ್ಞಾನಿಗಳು, ತಂತ್ರಜ್ಞರು, ಕ್ಷೇತ್ರ ಮತ್ತು ವಿಸ್ತರಣ ಕಾರ್ಯಕರ್ತರು ಮತ್ತು ಸ್ಥಳೀಯ ಆಡಳಿತಗಾರರು ಮುಂತಾದ ತಾಂತ್ರಿಕ ವಿಶೇಷಜ್ಞರು; ಮತ್ತು

(c) ಎಲ್ಲಾ ಸ್ತರಗಳಲ್ಲಿಯೂ ಶಿಕ್ಷಕರ ತರಬೇತಿ.

ಶಕ್ತಿಶಿಕ್ಷಣದ ಸುಧಾರಣೆಗೆ ಈ ಕೆಳಗಿನ ಕ್ರಮಗಳನ್ನು ಸೂಚಿಸಲಾಗಿದೆ;

(i) ಸಾರ್ವಜನಿಕರಲ್ಲಿ ಅರಿವನ್ನು ಪ್ರೋತ್ಸಾಹಿಸಲು ಹಾಗೂ ಉತ್ತಮಗೊಳಿಸಲು ಕಾರ್ಯಕ್ರಮಗಳನ್ನು ನಡೆಸುವುದು.

(ii) ದೇಶ ಮತ್ತು ವಿದೇಶಗಳಲ್ಲಿನ ಅಧ್ಯಯನಕ್ಕಾಗಿ ವಿದ್ಯಾರ್ಥಿವೇತನ ಮತ್ತು ಸ್ನಾತಕೋತ್ತರ ವಿದ್ಯಾರ್ಥಿವೇತನಗಳನ್ನು ನೀಡುವುದು.

(iii) ಅಭಿವೃದ್ಧಿ ಹೊಂದಿರುವ ಮತ್ತು ಅಷ್ಟೇನೂ ಅಭಿವೃದ್ಧಿ ಹೊಂದಿಲ್ಲದ ಶಕ್ತಿಶಿಕ್ಷಣ ಸಂಸ್ಥೆಗಳ ನಡುವೆ ವಿದ್ಯಾರ್ಥಿಗಳು ಮತ್ತು ಶಿಕ್ಷಕವರ್ಗದ ವಿನಿಮಯ.

(iv) ಪ್ರಾಯೋಗಿಕವಾಗಿ ಬಳಕೆಗೆ ಬರುವ ಅಲ್ಪವೆಚ್ಚದ ಉಪಕರಣಗಳ ವಿಕಾಸ ಮತ್ತು ಅನುರಕ್ಷಣೆ.

(v) ಶಕ್ತಿ ಶಿಕ್ಷಣವನ್ನು ಕುರಿತ ಯಾವುದೇ ಉನ್ನತ ಕಾರ್ಯಕ್ರಮದಲ್ಲಿ ಶಕ್ತಿ ಸಂರಕ್ಷಣೆ ಮತ್ತು ನಿರ್ವಹಣೆಗೆ, ಒಂದು ವ್ಯವಸ್ಥೆಗೆ ಬೇಕಾದ ಶಕ್ತಿಯ ಲೆಕ್ಕಾಚಾರ, ಶಕ್ತಿ ಆರ್ಥಿಕತೆ (Energy Economics) ವಿತರಣೆ ಮತ್ತು ಸಂಚಯನ, ಶಕ್ತಿಯ ರೂಪಾಂತರ, ಅಪಕರ್ಷ ಇತ್ಯಾದಿ ವಿಷಯಗಳ ಮೇಲೆ ಕೋರ್ಸುಗಳನ್ನು ಅಳವಡಿಸಬೇಕು.

**ಉಪಸಂಹಾರ:** ಕುಸಿಯುತ್ತಿರುವ ಜೀವಿಪಳೆಯುಳಿಕೆ ಇಂಧನಗಳು ಮತ್ತು ತೀವ್ರಗತಿಯಲ್ಲಿ ವೃದ್ಧಿಸುತ್ತಿರುವ ತೈಲಬೆಲೆಗಳ ಹಿನ್ನೆಲೆಯಲ್ಲಿ ವ್ಯಾಪಕ ಶಕ್ತಿಶಿಕ್ಷಣ ಇಂದಿನ ಅನಿವಾರ್ಯತೆಯಾಗಿದೆ. ಜೈವಿಕ ಪದಾರ್ಥ ಮತ್ತು ಜೈವಾನಿಲ ಕಾರ್ಯಕ್ರಮಗಳ ಮುಖಾಂತರ ಮಾಲಿನ್ಯ–ಮುಕ್ತ ಶಕ್ತಿಯನ್ನು ನಿರುಪಯುಕ್ತ ವಸ್ತುಗಳಿಂದ ಹಾಗೂ ಕಸದಿಂದ ಉತ್ಪಾದಿಸುವ ಕಡೆಗೆ ಹೆಚ್ಚಿನ ಗಮನಹರಿಸಬೇಕು. ಪ್ರಶಿಕ್ಷಿತ

Digitised by Bharatavani, CIIL

ಸಿಬ್ಬಂದಿಯ ಲಭ್ಯತೆ ಜ್ಞಾನದ ವಿಕಾಸ, ವಿತರಣೆ ಹಾಗೂ ಸಾರ್ವಜನಿಕ ಅರಿವಿನ ಪ್ರಕ್ರಿಯೆಗಳಿಗೆ ಚಾಲನೆ ನೀಡುತ್ತದೆ. ಸಾಂಪ್ರದಾಯಿಕ ಹಾಗೂ ಹೊಸದಾಗಿ ಆವಿರ್ಭವಿಸುತ್ತಿರುವ ವಿದ್ಯುನ್ಮಾನ ಮಾಧ್ಯಮಗಳು, ದೇಶದ ವಿವಿದೆಡೆಗಳಲ್ಲಿನ ಪ್ರದರ್ಶನಗಳು ಮತ್ತು ಸಾರ್ವಜನಿಕ ಸಭೆಗಳು ಸರ್ವರಿಗೂ ಶಕ್ತಿಪ್ರಜ್ಞೆಯ ಸಂದೇಶವನ್ನು ತಲುಪಿಸುವುವು. ಬೋಧನೆ–ಕಲಿಕೆಯ ಪ್ರಕ್ರಿಯೆಯನ್ನು ನವೀಕರಿಸುತ್ತಿರಬೇಕಾದ ಮುಖ್ಯ ತಾಣಗಳೆಂದರೆ ಶಕ್ತಿಶಿಕ್ಷಣವನ್ನು ನೀಡುತ್ತಿರುವ ಪ್ರಮುಖ ಸಂಸ್ಥೆಗಳು ಶಕ್ತಿಶಿಕ್ಷಣ ಸಂಬಂಧವಾಗಿ ಲಭ್ಯವಿರುವ ದತ್ತಾಂಶಗಳನ್ನು ಹೊಂದಿರುವ ವ್ಯಾಪಕ ಗ್ರಂಥಗಳ ಉಲ್ಲೇಖ ವಿದ್ಯಾರ್ಥಿ ಮತ್ತು ಸಂಶೋಧಕರಿಗೆ ಸಹಕಾರಿಯಾದೀತು. ಇವೆಲ್ಲವೂ ಜಾರಿಯಲ್ಲಿರುವ ಸಿಬ್ಬಂದಿ ಪ್ರಶಿಕ್ಷಣವನ್ನು ಮತ್ತು ಶಕ್ತಿಶಿಕ್ಷಣವನ್ನು ಸಬಲೀಕರಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ.

**ಮೂಲ: ಡಿ.ಪಿ. ತಿವಾರಿ**
**ಅನು: ಚಂದ್ರಶೇಖರ್ ಬಿ.ಎಂ.**

## ಶಾಂತಿಗಾಗಿ ಶಿಕ್ಷಣ

ಹತ್ತೊಂಬತ್ತನೆ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನಗಳ ಅವಧಿ ಹಿಂದೆಂದೂ ಕಾಣದಂಥ ಅಶಾಂತಿ, ಗುಂಪು ಘರ್ಷಣೆಗಳು ಮತ್ತು ಹಿಂಸಾಚರಗಳಿಂದ ತುಂಬಿಹೋಗಿತ್ತು. ಹಿಂದಿನ ಎರಡು ಶತಮಾನಗಳ ಅವಧಿಯಲ್ಲಿ ಈ ಹೇಳಿಕೆ ಭಾರತಕ್ಕೂ ಸ್ವಲ್ಪ ಮಟ್ಟಿಗೆ ಅನ್ವಯಿಸುತ್ತದೆ. ನಾವು ವಿಜ್ಞಾನ ಮತ್ತು ತಂತ್ರ ಜ್ಞಾನದಲ್ಲಿ ಆಗಿರುವ ಅತಿ ವೇಗದ ಅಭಿವೃದ್ಧಿಯನ್ನು ಕಂಡಿದ್ದೇವೆ. ಈ ಅವಧಿಯಲ್ಲಿ ಅದ್ಭುತ ಸಂಶೋಧನೆಗಳು ಹಾಗೂ ಆವಿಷ್ಕಾರಗಳೂ ಸಹ ಆಗಿವೆ. ವಿರೋಧಾಭಾಸವೆಂಬಂತೆ ಇದೇ ಕಾಲಾವಧಿಯಲ್ಲಿ ಎರಡು ವಿಶ್ವ ಸಮರಗಳನ್ನೂ ಅನುಭವಿಸಿದ್ದೇವೆ ಮತ್ತು ಜೀವಹಾನಿ, ಆಸ್ತಿ ನಷ್ಟಕ್ಕೆ ಕಾರಣವಾದ ವಿಸ್ತೃತ ಹಾಗೂ ತೀವ್ರ ಹಿಂಸಾಚಾರಗಳಿಗೆ ದಾರಿ ಮಾಡಿಕೊಟ್ಟ ಹಲವು ಸಣ್ಣಪುಟ್ಟ ಅಂತರರಾಷ್ಟ್ರೀಯ ವಿವಾದಗಳನ್ನು ನಾವು ಕಂಡಿದ್ದೇವೆ. ಅಣುಬಾಂಬ್, ಫೈಟರ್ ಪ್ಲೇನ್ ಹಾಗೂ ಹಂತಕ ಮಿಲಿಟರಿ ಆಯುಧಗಳ ಆವಿಷ್ಕಾರ ದೊಡ್ಡ ದೊಡ್ಡ ರಾಷ್ಟ್ರಗಳಿಗೆ ವಿವಾದಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಸಹಾಯ ಮಾಡಲಿಲ್ಲ; ಬದಲಾಗಿ ಅವು ಆತಂಕ, ಉದ್ವೇಗ, ಯುದ್ಧ ಭಯ ಮುಂತಾದುವುಗಳು ಹೆಚ್ಚುವುದಕ್ಕೆ ಕಾರಣವಾಗಿ ಮಾನವ ಜೀವನದ ಶಾಂತಿಯನ್ನೇ ಕಿತ್ತುಕೊಂಡವು. ಆರ್ಥಿಕ ವಿಕಾಸ, ಸುಧಾರಿಸಿದ ಜೀವನದ ಭೌತಿಕ ಮಟ್ಟ, ವೇಗದ ಸಂಚಾರ ಸಾಧನಗಳಿಂದ ದೂರದ ಅಂತರದ ಮೇಲೆ ಗೆಲುವು, ಹಲವು ಎಲೆಕ್ಟ್ರಾನಿಕ್ ಸಾಧನಗಳ ಸಹಾಯದಿಂದ ಚುರುಕಿನ ಸಂಪರ್ಕ, ಜ್ಞಾನಸ್ಫೋಟ – ಇವಾವುವು ಮಾನವತೆಗೆ ಶಾಂತಿಯನ್ನು ತಂದುಕೊಡಲಿಲ್ಲ. ತದ್ವಿರುದ್ಧವಾಗಿ, ಈ ಎಲ್ಲಾ ಮನುಷ್ಯನ ಭೌತಿಕ ಸ್ತರದ ಸಾಧನೆಗಳು ವ್ಯಕ್ತಿಯ ಮಟ್ಟದಿಂದ ಹಿಡಿದು ಅಂತರರಾಷ್ಟ್ರೀಯ ಮಟ್ಟದವರೆಗೆ ಮನುಷ್ಯನ ಜೀವನದ ಎಲ್ಲಾ ಮಟ್ಟದಲ್ಲಿಯೂ ಶಾಂತ ಜೀವನವನ್ನು ಕಸಿದುಕೊಂಡವು. ಕೇವಲ ವ್ಯಕ್ತಿಗಳು ಮಾತ್ರವಲ್ಲ, ಸಮುದಾಯಗಳು, ಸಮಾಜಗಳು ಮತ್ತು ರಾಷ್ಟ್ರಗಳು ಯಾವುದೋ ಅವರಿಂದ ಶಾಂತಿಯನ್ನು ಹೇಗೋ ಅಪಹರಿಸಿದೆ ಎಂಬ ಸತ್ಯವನ್ನು ಮಾತ್ರ ಮನಗಂಡಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಭೂತಪೂರ್ವ ಅಭಿವೃದ್ಧಿಗಳು ಆಗಿದ್ದರೂ ಹೊಸ ಸಮಸ್ಯೆಗಳು ಉದ್ಭವವಾಗುತ್ತಲೇ ಇವೆ. ಜನಸಂಖ್ಯಾಸ್ಫೋಟ, ಮಾಲಿನ್ಯ ಹಾಗೂ ಪರಿಸರ ನಾಶ, ನಗರೀಕರಣ, ಹೊಸ ರೋಗಗಳು, ಅಪೌಷ್ಟಿಕತೆ, ದೇಶಗಳ ನಡುವಿನ ಸಂಪತ್ತಿನ ಹಾಗೂ ಸಂಪನ್ಮೂಲಗಳ ಹಂಚಿಕೆಯಲ್ಲಿ ಅಸಮಾನತೆ, ಅಪರಾಧ ಹಾಗೂ ಹಿಂಸಾಚಾರಗಳಲ್ಲಿ ಏರಿಕೆ, ಮೌಲ್ಯಗಳ ಕುಸಿತ ಇತ್ಯಾದಿ ಸಮಸ್ಯೆಗಳು ಮಾನವತೆಗೆ ಅಪಾರ ಭೀತಿಯನ್ನುಂಟು ಮಾಡುತ್ತಿವೆ. ಈ ಎಲ್ಲಾ ಜಾಗತಿಕ ಹಿನ್ನೆಲೆಯ ಕಾರಣದಿಂದಲೇ ಮಾನವನು ಶಾಂತಿಯ ಅವಶ್ಯಕತೆ ಮತ್ತು ಮಹತ್ವಗಳನ್ನು ಅರಿತುಕೊಂಡಿದ್ದಾನೆ. ಮಾನವಕುಲವನ್ನು ಶಾಂತಿಯೆಡೆಗೆ ತಿರುಗಿಸುವ, ಶಾಂತಿ ಎಂದರೇನು ಎಂದು ಅರ್ಥಮಾಡಿಕೊಳ್ಳುವ ಲಕ್ಷ್ಯದತ್ತ ಶಿಕ್ಷಣದ ಗುರಿಗಳಿಗೆ ಪುನರ್‌ಪರಿಭಾಷೆಯನ್ನು ನೀಡುವ ಹಾಗೂ ಶಾಂತಿಯುತ ಜೀವನವನ್ನು ಪ್ರಾರಂಭಿಸಬೇಕಾಗಿರುವ ತುರ್ತಾದ ಅಗತ್ಯವಿದೆಯೆಂದು ಚಿಂತಕರು ಮತ್ತು ಶಿಕ್ಷಣತಜ್ಞರು ಅರ್ಥಮಾಡಿಕೊಂಡಿದ್ದಾರೆ. ಈ ಬದಲಾದ ರಾಷ್ಟ್ರೀಯ ಹಾಗೂ ಜಾಗತಿಕ ಹಿನ್ನೆಲೆಯಲ್ಲಿ ಶಾಂತಿ ಶಿಕ್ಷಣವನ್ನು ಪಠ್ಯಕ್ರಮದ ಎಲ್ಲಾ ಸ್ತರಗಳಲ್ಲಿಯೂ, ವಿಶೇಷವಾಗಿ ಶಿಕ್ಷಕ ತರಬೇತಿ ಕಾರ್ಯಕ್ರಮಗಳಲ್ಲಿ, ಅಳವಡಿಸಬೇಕಾದ ಅಗತ್ಯವಿದೆ. ಕಾರಣ, ಶಾಂತಿಗಾಗಿ ಶಿಕ್ಷಣವನ್ನು ಬೋಧಿಸುವಲ್ಲಿ ಅಧ್ಯಾಪಕರು ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ.

**ಮಾನವ ಇತಿಹಾಸದ ಹಿಂಸಾತ್ಮಕ ಲಕ್ಷಣ:** ಪ್ರಪಂಚದ ಹಾಗೂ ಭಾರತದ ಇತಿಹಾಸಗಳ ಕೂಲಂಕುಷ ಅಧ್ಯಯನ ಮಾನವ ಇತಿಹಾಸದ ಹಿಂಸಾತ್ಮಕ ಲಕ್ಷಣವನ್ನು ಮತ್ತು ಯುದ್ಧ, ಕ್ರಾಂತಿ ಹಾಗೂ ಹಿಂಸೆಯ ಮಾಧ್ಯಮದಿಂದ ಉಂಟಾದ ಶಾಂತಿಯ ಅವಧಿಯನ್ನು ತೋರಿಸಿಕೊಡುತ್ತದೆ. ಮಾನವಕುಲದ ದೀರ್ಘ ಇತಿಹಾಸದಲ್ಲಿ ಮಾನವ ಸಮಾಜದ ಶಾಂತಿಯುತ ಅಸ್ತಿತ್ವ ಅತಿ ವಿರಳ. ಯುದ್ಧಗಳು, ಕ್ರಾಂತಿಗಳು, ಹತ್ಯಾಕಾಂಡಗಳು ಹಾಗೂ ಸಂಸ್ಕೃತಿಗಳ ವಿನಾಶ ಇವುಗಳಿಂದ ಇತಿಹಾಸ ತುಂಬಿಹೋಗಿದೆ. ಧರ್ಮಗಳು, ದೇವಮಾನವರು ಹಾಗೂ ಪ್ರವಾದಿಗಳಿಗೆ ಹಿಂಸೆಯಿಂದ ಮಾನವನ ಗಮನವನ್ನು ದೂರಸೆಳೆಯಲು ಸಾಧ್ಯವಾಗಲಿಲ್ಲ. ವಾಸ್ತವವಾಗಿ, ಧರ್ಮಗಳೇ ಯುದ್ಧ ಮತ್ತು ಸಾಮೂಹಿಕ ನಾಶಕ್ಕೆ ಕಾರಣವಾಗಿರುವ ಉದಾಹರಣೆಗಳೂ ಇವೆ.ಕಳೆದ ಐದು ಶತಮಾನಗಳಲ್ಲಿ ಮಾನವಕುಲ 26000 ಬಾರಿ ಯುದ್ಧದಲ್ಲಿ ತೊಡಗಿದೆ ಎಂದು ಅಂದಾಜು ಮಾಡಲಾಗಿದೆ. ಇತ್ತೀಚೆಗೂ ಇತಿಹಾಸ ಪುನಃ ಅಪಾಯಕಾರಿಯಾಗಿ ಮರುಕಳಿಸಿದೆ. 20ನೇ ಶತಮಾನದುದ್ದಕ್ಕೂ ಜಾಗತಿಕ ಜನಸಂಖ್ಯೆಯ ಶೇಕಡಾ 97ರಷ್ಟನ್ನು ಪ್ರತಿನಿಧಿಸುವ ಪ್ರಪಂಚದ ಮೂರನೆ ಎರಡರಷ್ಟು ದೇಶಗಳು ಕನಿಷ್ಠ ಒಂದು ಯುದ್ಧದಲ್ಲಿ ತೊಡಗಿದ್ದವು. ಮೊದಲ 85 ವರ್ಷಗಳಲ್ಲಿ ಸುಮಾರು

Digitised by Bharatavani, CIIL

78ಮಿಲಿಯನ್ ಜೀವಗಳನ್ನು ಬಲಿ ತೆಗೆದುಕೊಂಡ 207 ಯುದ್ಧಗಳು ನಡೆದವು (ಸುಶೀಲಾ ಭಾನ್). ಎರಡು ವಿಶ್ವ ಸಮರಗಳಲ್ಲಿ ಹಾಗೂ ವಿಯಟ್ನಾಂ ಯುದ್ಧ, ಝೆಕ್ ಯುದ್ಧ, ಇಂಡೋ–ಪಾಕ್ ಯುದ್ಧ, ಗಲ್ಫ್ ಯುದ್ಧ ಇತ್ಯಾದಿ ಹೆಸರಿಸಬಹುದಾದ ಸಣ್ಣ ಪ್ರಮಾಣದ ಸಮರಗಳಲ್ಲಿ ಮಿಲಿಯಾಂತರ ಅಮಾಯಕ ಪ್ರಜೆಗಳು ತಮ್ಮ ಆಸ್ತಿಯನ್ನು, ಜೀವವನ್ನು ಕಳೆದುಕೊಂಡರು. ಹಿರೋಶಿಮ ಮತ್ತು ನಾಗಸಾಕಿ ನಗರಗಳನ್ನು ಸಂಪೂರ್ಣ ನಾಶಪಡಿಸುವ ಮೂಲಕ ಅಣುಬಾಂಬ್‌ಗಳ ಉಪಯೋಗ ಮಾನವನ ಅಸ್ತಿತ್ವಕ್ಕೆ ಈ "ಹಂತಕ ಉಪಕರಣ"ಗಳಲ್ಲಿ ಅಡಗಿರುವ ಅಪಾಯವನ್ನು ಸಾರಿದಂತಾಯಿತು. ಹಿಂದಿನ ಎರಡು ಶತಮಾನಗಳಲ್ಲಿ ರಾಷ್ಟ್ರರಾಜ್ಯಗಳ (Nation-State) ಉದ್ಭವದಿಂದ ಉಂಟಾಗಿರುವ ರಾಷ್ಟಾಭಿಮಾನ ಮತ್ತು ದೇಶಭಕ್ತಿ, ಸುಧಾರಿತ ಮಿಲಿಟರಿ ಆಯುಧಗಳ ಆವಿಷ್ಕಾರ, ವಿಚಾರಗಳ ಪ್ರಚಾರವನ್ನು ಆಧರಿಸಿದ ಪ್ರಭುತ್ವಕ್ಕಾಗಿ ಹೋರಾಟ, ಸಮಾಜವಾದ ಮತ್ತು ಬಂಡವಾಳ ಶಾಹಿಗಳ ನಡುವಿನ ಸಂಘರ್ಷ, ಲೋಭಕ್ಕೆ ಕಾರಣವಾಗಿರುವ ಗ್ರಾಹಕ ಮನೋಭಾವ, ಕೈಗಾರಿಕಾ ಕಲಹ ಮತ್ತು ಸಾಂಸ್ಕೃತಿಕ ಕಲಹ ಇತ್ಯಾದಿಗಳು ಮಾನವ ಸಮೂಹಗಳ ನಡುವಿನ ಹಾಗೂ ರಾಷ್ಟ್ರಗಳ ನಡುವಿನ ಸಂಘರ್ಷಗಳಿಗೆ ಕಾರಣವಾಗಿವೆ. ಇಂಥ ಸಂಘರ್ಷಗಳನ್ನು ಪರಿಹರಿಸಲು ಹಲವು ಪ್ರಯತ್ನಗಳನ್ನು ಮಾಡಲಾಯಿತು.ಆದರೆ ಅಂಥ ಎಲ್ಲಾ ಪ್ರಯತ್ನಗಳು ನಿಷ್ಫಲವಾದುವುಗಳೆಂದು ಸಾಬೀತಾಗಿದೆ. ಬದಲಾಗಿ, ಈ ಪ್ರಯತ್ನಗಳು ಇಂಥ ಸಂಘರ್ಷಗಳನ್ನು ಮೇಲ್ನೋಟಕ್ಕೆ ತಾತ್ಕಾಲಿಕ ಪರಿಹಾರ ನೀಡಿದಂತೆ ಕಂಡುಬಂದಿವೆ ಇಲ್ಲವೇ ಸಂಪೂರ್ಣ ವಿಫಲವಾಗಿವೆ. ಹಲವು ಬಾರಿ ಸಮಸ್ಯೆಯು ಸುಪ್ತವಾಗಿದ್ದು ನಂತರ ಬೇರೊಂದು ರೀತಿಯಲ್ಲಿ ಸ್ಫೋಟಗೊಂಡಿದೆ ಅಥವಾ ಅಪ್ರತ್ಯಕ್ಷ ಶೀತ ಸಮರಕ್ಕೆ ಕಾರಣವಾಗಿದೆ. ಇದರಿಂದಾಗಿ ಮಾನವ ಸಮರದ ನಿಷ್ಪ್ರಯೋಜಕತೆಯನ್ನು ಅರಿತಿದ್ದಾನೆ ಹಾಗೂ ಮಾನವ ಜಾತಿಯ ಬಗ್ಗೆ ಕಾಳಜಿ ಇರುವವರು ಸಂಘರ್ಷಗಳನ್ನು ಶಾಂತಿಯುತವಾಗಿ ಪರಿಹರಿಸುವ ದಿಕ್ಕಿನಲ್ಲಿ ತಮ್ಮ ಗಮನವನ್ನು ಹರಿಸಿದ್ದಾರೆ.

ಸಂಘರ್ಷ, ಹಿಂಸಾಚಾರ, ಭಯೋತ್ಪಾದನೆ, ಯುದ್ಧ ಹಾಗೂ ಅದರ ಭಯಂಕರ ಪರಿಣಾಮಗಳು, ಬಡತನ, ಪರಿಸರ ನಾಶ, ಇತ್ಯಾದಿಗಳು 21ನೇ ಶತಮಾನದಲ್ಲಿ ಮಾನವನು ಎದುರಿಸಬೇಕಾದ ದೊಡ್ಡ ಸವಾಲುಗಳು. ಈ ಸವಾಲುಗಳು ಕುಟುಂಬ, ಶಾಲೆ, ಸಮುದಾಯ, ಸಮಾಜ ಹಾಗೂ ವಿಶ್ವದಲ್ಲಿ ವಿವಿಧ ಸ್ತರಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಇಂಥ ಸವಾಲುಗಳನ್ನು ಎದುರಿಸಲು ಸಾಕಷ್ಟು ಸಂಪನ್ಮೂಲಗಳನ್ನು ವಿನಿಯೋಗಿಸಲಾಗುತ್ತಿದೆಯಾದರೂ ಶಾಂತಿಯ ತತ್ತ್ವಗಳನ್ನು ಪ್ರತಿಬಿಂಬಿಸುವ, ಮಕ್ಕಳು ಮತ್ತು ಯುವಕರಿಗೆ ಶಿಕ್ಷಣವನ್ನು ನೀಡುವ, ಸಮುದಾಯ ನಿರ್ಮಾಣ ಮಾಡುವ ಸತತವಾದ, ವ್ಯವಸ್ಥಿತವಾದ ಕಾರ್ಯನೀತಿಗಳು ವಿರಳ.

ಮೇಲೆ ಹೇಳಿರುವ ವಿಷಯ ಜಾಗತಿಕವಾಗಿಯೂ ಹಾಗೂ ಭಾರತಕ್ಕೆ ಸಂಬಂಧಿಸಿದಂತೆಯೂ ಸತ್ಯವಾಗಿದೆ. ಶಾಂತಿ ಮತ್ತು ಶಿಕ್ಷಣ ಒಂದು ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ಯಾವುದೇ ಸಂಸ್ಕೃತಿ ಶಿಕ್ಷಣವಿಲ್ಲದೆ ನಿಜವಾದ ಪ್ರಗತಿಯನ್ನು ಹೊಂದಲಾರದು. ಹಾಗೆಯೇ ಯಾವುದೇ ಶಿಕ್ಷಣ ವ್ಯವಸ್ಥೆ ಸಾರ್ವತ್ರಿಕ ತತ್ತ್ವವಾದ ಶಾಂತಿಯ ಆಧಾರವಿಲ್ಲದೆ ಸಭ್ಯ ಸಂಸ್ಕೃತಿಯನ್ನು ನೀಡಲಾರದು.

ಶಾಂತಿಯ ಬಗ್ಗೆ ಬೋಧಿಸುವುದು, ಶಾಂತಿ ಎಂದರೇನು, ಅದು ಇಂದಿನ ಪರಿಸ್ಥಿತಿಯಲ್ಲಿ ಏಕೆ ಇಲ್ಲವಾಗಿದೆ, ಅದನ್ನು ಸಾಧಿಸುವುದು ಹೇಗೆ–ಇವೆಲ್ಲವೂ ಶಾಂತಿಗಾಗಿ ಶಿಕ್ಷಣದಲ್ಲಿ ಒಳಗೊಳ್ಳುವುದು. ಶಾಂತಿ ಶಿಕ್ಷಣ ಎಲ್ಲಾ ವಿಧದ ಕೌಶಲ ಹಾಗೂ ಪ್ರಕ್ರಿಯೆಗಳನ್ನು ಒಳಗೊಂಡಿರುವಂಥ, ನಮ್ಮ ಜೀವನಕ್ಕೆ ಸರಿಯಾದ ಮಾರ್ಗದರ್ಶನವನ್ನು ನೀಡುವ ಮನೋಭಾವನೆಗಳ ಸಮೂಹ, ಜೀವನ ದರ್ಶನ.

ಶಾಂತಿಗಾಗಿ ಶಿಕ್ಷಣದಲ್ಲಿ ಶಾಂತ ವಾತಾವರಣಗಳ ಹಾಗೂ ಅಂಥ ವಾತಾವರಣವನ್ನು ಸೃಷ್ಟಿಸುವ ಪ್ರಕ್ರಿಯೆಯ ಬಗೆಗಿನ ತಿಳಿವನ್ನು ನೀಡಲಾಗುವುದು.ಸಂಘರ್ಷ, ದ್ವಂದ್ವಗಳು ಎದುರಾದಾಗ ಜನರು ಶಾಂತಿಯುತವಾಗಿ ಇರುವಂತೆ ಶಾಂತಿಯ ಉಪಮಾನಗಳನ್ನು, ಮಾದರಿಗಳನ್ನು ತಿಳಿಸುವುದು ಶಾಂತಿ ಶಿಕ್ಷಣದ ಮುಖ್ಯಗುರಿ. ಹಿಂಸೆಗೆ ಪ್ರತಿಯಾಗಿ ಶಾಂತಿಯ ಪರ್ಯಾಯಗಳೂ ಸಾಧ್ಯವಿದೆ ಎಂದು ವಿದ್ಯಾರ್ಥಿಗಳು ಅರಿಯುವಂತೆ ಮಾಡಬೇಕು. ಸಮಾಜದಲ್ಲಿ ಹಿಂಸೆಯ ಸಮಸ್ಯೆಗಳಿವೆಯೆಂದು ತೋರಿಸಿ ಅದರ ಪರಿಹಾರ ಕೇವಲ ಶಾಂತಿಯುತ ಕ್ರಮಗಳಿಂದ ಮಾತ್ರ ಸಾಧ್ಯ ಎಂಬ ಅಂಶವನ್ನು ಅವರಿಗೆ ಮನದಟ್ಟು ಮಾಡಬೇಕು.

**ಪರಿಕಲ್ಪನೆಯ ಸ್ಪಷ್ಟೀಕರಣ:**

ಪ್ರಪಂಚದಾದ್ಯಂತ ಶಾಂತಿಗಾಗಿನ ಹುಡುಕಾಟ ಹಾಗೂ ಶಾಂತಿಪೂರ್ಣ ಜೀವನವನ್ನು ಅರಸುವೆಡೆಗೆ ನಮ್ಮ ಆಲೋಚನಾ ಧಾಟಿ, ಜೀವನ ಶೈಲಿ, ನಮ್ಮ ಸಂಬಂಧಗಳು ಮತ್ತು ಶಿಕ್ಷಣ ವ್ಯವಸ್ಥೆಗಳನ್ನು ಪುನರ್‌ನಿರ್ದೇಶಿಸುವ ಪ್ರಯತ್ನಗಳು ಶಾಂತಿ ಆಂದೋಳನಗಳಿಗೆ, ಶಾಂತಿಯ ಲಕ್ಷಣಗಳ ಬಗೆಗಿನ ಜ್ಞಾನ ಕ್ಷೇತ್ರಗಳ ಉದ್ಭವಕ್ಕೆ ಮತ್ತು ಶಾಂತಿಯನ್ನು ಕುರಿತ ಸಂಶೋಧನೆಗಳಿಗೆ ದಾರಿಮಾಡಿಕೊಟ್ಟಿವೆ. ಈ ಎಲ್ಲವುಗಳ ಫಲಸ್ವರೂಪವಾಗಿ ಹಲವು ಹೊಸ ಪಾರಿಭಾಷಿಕ ಶಬ್ದಗಳು ಬಳಕೆಗೆ ಬಂದಿವೆ

ಶಾಂತಿ ಶಿಕ್ಷಣವನ್ನು ಶಾಂತಿಯ ಸ್ವರೂಪದ ವೈಜ್ಞಾನಿಕ ಅಧ್ಯಯನ ಎಂದು ವ್ಯಾಖ್ಯಾನಿಸಲಾಗಿದೆ. ಮಾನವಜಾತಿ ಹಾಗೂ ಭೂಮಿಯ ಉಳಿವು ಹಾಗೂ ಸಂರಕ್ಷಣೆಗಾಗಿ ಶಾಂತಿಪೂರ್ಣ ಜೀವನದ ಗುರಿಯನ್ನು ಸಾಧಿಸುವುದು ಇದರ ಉದ್ದೇಶವಾಗಿದೆ ಹಾಗೂ ಈ ಭೂಮಿಯ ಮೇಲೆ ವಾಸಿಸುತ್ತಿರುವ ಸರ್ವಜನರ ಗೌರವಯುತ ಅಸ್ತಿತ್ವವೂ ಇದರ ಗುರಿಯಾಗಿದೆ. ಇದು ಶಾಂತಿಯನ್ನು ಒಂದು ಸತತ ಮಾನವ ಚಟುವಟಿಕೆ ಎಂಬಂತೆ ಪರಿಭಾವಿಸುತ್ತದೆ. ರಾಜಕೀಯ ಮತ್ತು ಸಾಮಾಜಿಕ–ಆರ್ಥಿಕ ರಚನೆಗಳನ್ನು ಹಾಗೂ ಅಹಿಂಸೆ ಮತ್ತು ಸಾಮಾಜಿಕ ನ್ಯಾಯಗಳಂಥ ಸಾರಭೂತ ಮೌಲ್ಯಗಳನ್ನು ಶಾಂತಿಗೆ ನಿರ್ಣಾಯಕ ಅಂಶಗಳೆಂದು ಇಲ್ಲಿ ಪರಿಗಣಿಸಲಾಗುತ್ತದೆ. ವ್ಯಕ್ತಿಗಳ ಹಾಗೂ ಸಂಸ್ಥೆಗಳ ಸಮಸ್ಯೆಗಳು ಮತ್ತು ಸಂಬಂಧಗಳನ್ನು ಇದು ಪರೀಕ್ಷಿಸುತ್ತದೆ.

Digitised by Bharatavani, CIIL

ಲೆನ್ನಾರ್ಟ್ ವ್ರೇನ್ಸ್ ಮತ್ತು ರಾಬರ್ಟ್ ಅಸ್ಪೋಸ್ಲಾ ಶಾಂತಿ ಶಿಕ್ಷಣದ ಪರಿಭಾಷೆಯನ್ನು ಹೀಗೆ ನೀಡಿದ್ದಾರೆ: "ಶಾಂತಿಯಲ್ಲಿ ಹುದುಗಿರುವ ಮಾನದಂಡ ಹಾಗೂ ಮೌಲ್ಯಗಳಿಂದ ಉದ್ಭವವಾದ, ದಯಾಮಯ, ಶಾಂತಿಮಯ ವಿಶ್ವವನ್ನು ಸಾಕಾರಗೊಳಿಸುವತ್ತ ನಿರ್ದೇಶಿತಗೊಂಡಿರುವ ಜ್ಞಾನ, ಅಂತರ್ದೃಷ್ಟಿ ಮತ್ತು ಕೌಶಲಗಳ ವಿಕಾಸ ಹಾಗೂ ಅಭಿಪ್ರಾಯಗಳ, ಮನೋಭಾವಗಳ ನಿರ್ಮಾಣವನ್ನು ಶಾಂತಿ ಶಿಕ್ಷಣ ಒಳಗೊಳ್ಳುತ್ತದೆ."

ಒಕಮೊಟೊ ಶಾಂತಿ ಶಿಕ್ಷಣದ ನಾಲ್ಕು ತೆರನ ವರ್ಗೀಕರಣವನ್ನು ನೀಡುತ್ತಾನೆ.:

1. ಸಮರವನ್ನು ದೋಷಪೂರಿತವೆಂದೆಣಿಸುವ ಶಾಂತಿ ಶಿಕ್ಷಣ.
2. ಮಾನವ ಹಕ್ಕುಗಳು ಹಾಗೂ ಅನಕ್ಷರತೆಯ ಸಮಸ್ಯೆ, ಬಡತನ, ನ್ಯೂನಪೋಷಣೆ (Malnutrition), ರೋಗಗಳು, ಮತ್ತು ಯಾವುದೇ ಆಧಾರದ ಮೇಲೆ ಆಗುವ ಎಲ್ಲಾ ವಿಧದ ಶೋಷಣೆ ಹಾಗೂ ಭೇದಭಾವ– ಇವುಗಳಿಗೆ ಸಂಬಂಧಿಸಿದ ಸ್ವಾತಂತ್ರ್ಯದಂತೆ ಶಾಂತಿ ಶಿಕ್ಷಣ.
3. ಶಾಂತಿಯನ್ನು ಕುರಿತು ಬೋಧಿಸದ ಆದರೆ ಶಾಂತಿಯನ್ನೇ ಹೇಳಿಕೊಡುವ, ನಿರಂಕುಶ ಸ್ವರೂಪದ ಬೋಧನೆಯನ್ನು ವಿರೋಧಿಸುವ ಮತ್ತು ಸಹನೆ, ಕಲ್ಪನಾಶಕ್ತಿ, ವಿಧಿ, ವಿಮರ್ಶಾತ್ಮಕತೆ ಮತ್ತು ಪುನಃಚೈತನ್ಯಶಕ್ತಿ ಇತ್ಯಾದಿ ಗುಣಗಳನ್ನು ಬೆಳೆಸುವ ಕಲಿಕಾ ಪ್ರಕ್ರಿಯೆಯಾಗಿ ಶಾಂತಿ ಶಿಕ್ಷಣ.
4. ವಿಕಾಸಶೀಲ ರಾಷ್ಟ್ರಗಳಿಗೆ ನಷ್ಟವನ್ನುಂಟುಮಾಡುವ ಮುಂದುವರಿದ ರಾಷ್ಟ್ರಗಳ ಅಧಿಕೋತ್ಪನ್ನ ಹಾಗೂ ಅಧಿಕಗ್ರಾಹಕ ಮನೋಭಾವಗಳಿಂದ ಉಂಟಾಗುವ ವಿಪತ್ತುಗಳ ಬಗ್ಗೆ ಅರಿವನ್ನುಂಟುಮಾಡುವ ಹಾಗೂ ಸರಳ ಜೀವನ, ದೃಢ ನಿರ್ಧಾರ, ಜೀವಪರಿಸರ ವಿಜ್ಞಾನದ ಅರಿವು ಮತ್ತು ವ್ಯಕ್ತಿಗತ ಬೆಳವಣಿಗೆಗಳಂಥ ಮೌಲ್ಯಗಳನ್ನು ಪ್ರೋತ್ಸಾಹಿಸುವ ಜೀವನಶೈಲಿಯ ಆಂದೋಳನದಂತೆ ಶಾಂತಿ ಶಿಕ್ಷಣ.

ಶಾಂತಿ ಅಧ್ಯಯನವನ್ನು ಸಮರದ ಕಾರಣಗಳ ಹಾಗೂ ಶಾಂತಿಗೆ ಅನುಕೂಲಕರವಾದ ಪರಿಸ್ಥಿತಿಗಳ ಬಗೆಗಿನ ವೈಜ್ಞಾನಿಕ ಅಧ್ಯಯನವೆಂದು ವ್ಯಾಖ್ಯಾನಿಸಲಾಗಿದೆ. ನೀತಿಗಳನ್ನು ರೂಪಿಸುವಲ್ಲಿ ಯುದ್ಧ ಮತ್ತು ಶಾಂತಿಯ ಬಗ್ಗೆ ಇದುವರೆಗೆ ಸಂಗ್ರಹವಾಗಿರುವ ಜ್ಞಾನವನ್ನು ಬಳಸುವ ಹಾಗೂ ಅದನ್ನು ವ್ಯಾಪಕ ಸಮಾಜದಲ್ಲಿ ಪ್ರಚಾರ ಮಾಡುವ ವಿಷಯಕ್ಕೆ ಶಾಂತಿ ಆಧ್ಯಯನ ಸಂಬಂಧಪಡುತ್ತದೆ. ಇಂಥ ಪ್ರಸಾರ ಪ್ರಕ್ರಿಯೆಗೆ ಸಂಬಂಧಿಸಿದ ಶಾಂತಿ ಶಿಕ್ಷಣ ಶಾಂತಿಯಲ್ಲಿ ಬೋಧಿಸುವ ಕಲೆಗೆ ಹಾಗೂ ಶಾಂತಿಗೆ ಮಹತ್ವವನ್ನು ನೀಡುತ್ತದೆ.

ಶಾಂತಿಗಾಗಿ ಶಿಕ್ಷಣ ಹಾಗೂ ಶಾಂತಿ ಶಿಕ್ಷಣದಲ್ಲಿ ವ್ಯತ್ಯಾಸವಿದೆ. ಶಾಂತಿ ಶಿಕ್ಷಣದಲ್ಲಿ ಶಾಂತಿಯೇ ಅಧ್ಯಯನದ ವಿಷಯವಾಗುವುದು. ಶಾಂತಿಯ ಸ್ವರೂಪ, ಶಾಂತಿಗೆ ಅಗತ್ಯವಾದ ಪೂರ್ವಾಪೇಕ್ಷಿತ ಅಂಶಗಳು, ಸ್ವತಃ ಪರಮೋಚ್ಛ ಮೌಲ್ಯವಾದ ಶಾಂತಿಯನ್ನು ಸಾಧಿಸಲು ಅವಶ್ಯವಾದ ಮೌಲ್ಯಗಳು, ಶಾಂತಿಯನ್ನು ಪ್ರಭಾವಿಸುವ ಅಥವಾ ಬಾಧಿಸುವ ಅಂಶಗಳು ಮತ್ತು ಶಾಂತಿಯ ಸಾಧನೆಗೆ ಉಪಕ್ರಮಗಳು– ಇವು ಶಾಂತಿ ಶಿಕ್ಷಣದ ವಿಷಯ ವಸ್ತು.

ಶಾಂತಿಗಾಗಿ ಶಿಕ್ಷಣವೆಂದರೆ ಶಾಂತಿ ಸಾಧನೆಯೆಡೆಗೆ ಮುಂದುವರೆಯಲು ಅಗತ್ಯವಾದ ಉಪಕ್ರಮಗಳು ಹಾಗೂ ವಿಧಿವಿಧಾನಗಳು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಶಾಂತಿಗಾಗಿ ಶಿಕ್ಷಣವೆಂದರೆ ಶಿಕ್ಷಣದ ದರ್ಶನದ ನಿರ್ಮಿಸುವುದು. ಇದು ಕೇವಲ ಜೀವನ ನಿರ್ವಹಣೆಗಾಗಿ ಶಿಕ್ಷಣವಾಗಿರದೆ ಸಮಸ್ತ ಜೀವನಕ್ಕಾಗಿ ಶಿಕ್ಷಣವಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) (National Curriculum Framework-NCF) ರ ಪ್ರಕಾರ "ವ್ಯಕ್ತಿಗಳನ್ನು ಮೌಲ್ಯಗಳು, ಕೌಶಲಗಳು ಹಾಗೂ ಮನೋಪ್ರವೃತ್ತಿಗಳಿಂದ ಸುಸಜ್ಜಿಸತರನ್ನಾಗಿಸಬೇಕಾದರೆ ಅವರು ಮಿಕ್ಕುಳಿದವರೊಡನೆ ಸಾಮರಸ್ಯದಿಂದ ಇರಬೇಕಲ್ಲದೆ ಜವಾಬ್ದಾರಿಯುತ ಪ್ರಜೆಗಳೂ ಆಗಿರಬೇಕು. ಇದನ್ನು ಸಾಧಿಸುವುದು ಶಾಂತಿಗಾಗಿ ಶಿಕ್ಷಣದ ಗುರಿಯಾಗಿದೆ". ಇದಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ಪ್ರಾಧಾನ್ಯತೆಯಲ್ಲಿ ಸಂಪೂರ್ಣ ಬದಲಾವಣೆಯಾಗಬೇಕಾಗುತ್ತದೆ. ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ಒತ್ತು ಮುಖ್ಯವಾಗಿ "ಮಾರುಕಟ್ಟೆಯ ಬೇಡಿಕೆ"ಯತ್ತ ನಿರ್ದೇಶಿತವಾಗಿದೆ. ಇದು ಇಂದು ಪರಿಪೂರ್ಣ ಜೀವನವನ್ನು ಸಾಧಿಸುವತ್ತ ನಿರ್ದೇಶಿತಗೊಳ್ಳಬೇಕು. ವರ್ತಮಾನದ ಪಠ್ಯಕ್ರಮದ ನಿರಂಕುಶ ಕಾರ್ಯಕಲಾಪಗಳು,ಬೋಧನೆ–ಕಲಿಕಾ ಪ್ರಕ್ರಿಯೆಯಲ್ಲಿನ ಏಕಮುಖ ಸಂಪರ್ಕ, ಶಿಕ್ಷಣವೂ ಸೇರಿದಂತೆ ಜೀವನದ ಎಲ್ಲಾ ವಿಷಯಗಳಲ್ಲೂ ಹಿಂಸೆಯ ಸೂಕ್ಷ್ಮ ರೀತಿಯ ವ್ಯಾಪಕತೆ, ನೈತಿಕ ಮೌಲ್ಯಗಳ ಪತನ, ಭಾರತೀಯ ಸಾಂಸ್ಕೃತಿಕ ಆಚಾರಗಳ ಕಡೆಗಣಿಕೆ– ಇವೆಲ್ಲವೂ ಬದಲಾಗಬೇಕಾಗಿದೆ.

**"ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು"** (2005) ಹೀಗೆ ಹೇಳುತ್ತದೆ; "ಕಲಿಕೆಯು ಶಾಲಾ ಕೊಠಡಿಯ ಪರಿಮಿತಿಯಿಂದ ಬಿಡುಗಡೆ ಹೊಂದಿ ಅನ್ವೇಷಣೆಯ ಆನಂದದಿಂದ ಸಜೀವಗೊಂಡ ಅರಿವಿನ ಉತ್ಸವವಾಗಿ ಮಾರ್ಪಾಡಾದಾಗ ಶಾಂತಿಗಾಗಿ ಶಿಕ್ಷಣ ಸಾಧ್ಯ".

ಶಾಂತಿಗಾಗಿ ಶಿಕ್ಷಣ ನೈತಿಕ ಶಿಕ್ಷಣ ಅಥವಾ ಮೌಲ್ಯ ಶಿಕ್ಷಣವನ್ನು ಒಳಗೊಳ್ಳುವ ಒಂದು ವ್ಯಾಪಕ ಪಾರಿಭಾಷಿಕ ಶಬ್ದ. ನೈತಿಕ ಹಾಗೂ ಅನ್ಯ ಮೌಲ್ಯಗಳು ಶಾಂತಿಗೆ ಪೂರ್ವಾಪೇಕ್ಷಿತವಾದುವುಗಳು ಮತ್ತು ಅವು ಶಾಂತಿಸಾಧನೆ ಯಲ್ಲಿ ನಿಮಿತ್ತಗಳಾಗುತ್ತವೆ. ಶಾಂತಿಯು ಮೌಲ್ಯಗಳ ಉದ್ದೇಶವನ್ನು ಸಾಕಾರಗೊಳಿಸುತ್ತದೆಯಲ್ಲದೆ ಯಾವುದೇ ಆಧಾರ ಚೌಕಟ್ಟಿಲ್ಲದೆ ಅವುಗಳನ್ನು ಆಂತರಿಕಗೊಳಿಸುತ್ತದೆ; ಕಲಿಕಾ ಪ್ರಕ್ರಿಯೆಯಲ್ಲಿ ಮೌಲ್ಯಗಳನ್ನು ಸಮಗ್ರಗೊಳಿಸುವ ಕೆಲಸ ಇನ್ನೂ ಆಗಬೇಕಾಗಿದೆ.

ಶಾಂತಿ ಎನ್ನುವುದು ಪ್ರಶಾಂತತೆ, ಸಮತ್ವ ಮತ್ತು ಸಮತೋಲನ ಮನಸ್ಸಿನ ಒಂದು ಸ್ಥಿತಿ. ಇದು ಕೇವಲ ಬಿಗುವು,ಸಂಘರ್ಷ ಮತ್ತು ಆಶಾಭಂಗಗಳಿಲ್ಲದ ಒಂದು ಸ್ಥಿತಿಯಲ್ಲ. ಇದಕ್ಕಿಂತಲೂ

Digitised by Bharatavani, CIIL

ಹೆಚ್ಚಿನದು. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಆಂತರಿಕ ಶಾಂತಿಯನ್ನು ಹೀಗೆ ವ್ಯಾಖ್ಯಾನಿಸಿದೆ; "ಆವಶ್ಯಕತೆಗಳಿಗೆ ಮತ್ತು ನೋವಿಗೆ ನ್ಯಾಯಯುತವಾಗಿ, ಖಂಡಿತವಾಗಿ ಸ್ಪಂದಿಸುವ ಕ್ಷಮತೆ ಆಂತರಿಕ ಶಾಂತಿಯ ಪ್ರಮಾಣಕ ಮುದ್ರೆಯಾಗಿದೆ" ಇದೇ ರೀತಿ ಬಾಹ್ಯದಲ್ಲಿ ಕಾಣುವ ಶಾಂತಿ ಹಿಂಸೆಯ ರಾಹಿತ್ಯವನ್ನು ಸೂಚಿಸುವುದಿಲ್ಲ, ಏಕೆಂದರೆ ಹಿಂಸಾರಾಹಿತ್ಯ ಯಾವಾಗಲೂ ಚಿರಶಾಂತಿಯ ಕುರುಹು ಆಗಿರುವುದಿಲ್ಲ. ಕೆಲವು ವೇಳೆ ಸೂಕ್ಷ್ಮ ಶೋಷಣೆ, ಅಧಿಕಾರದಿಂದ ಆಗಬಹುದಾದ ದಂಡನೆಯ ಭಯ, ಕೆಲವೊಮ್ಮೆ, ಭಾರತದಲ್ಲಿ ಇರುವ ಹಾಗೆ, ಕರ್ಮ ಅಥವಾ ವಿಧಿಯಲ್ಲಿನ ನಂಬಿಕೆಯಿಂದ ಪ್ರೇರಿತವಾದ ಶೋಷಿತ ವ್ಯಕ್ತಿಯ ವಿನಮ್ರ ಒಪ್ಪಿಗೆ – ಇವುಗಳಿಂದಲೂ ಹಿಂಸಾರಾಹಿತ್ಯ ಕಂಡುಬರುತ್ತದೆ. ಆದ್ದರಿಂದ, ಸೂಕ್ಷ್ಮ ಅಥವಾ ಸ್ಥೂಲ ರೀತಿಯ ಯಾವುದೇ ತೆರನ ಶೋಷಣೆಯಿಂದ ಬಿಡುಗಡೆ ಹಾಗೂ ಕ್ಷಮತೆಗಳನ್ನು ಯಥಾರ್ಥಗೊಳಿಸಲು ಮತ್ತು ಆಂತರಿಕ ಶಾಂತಿಯನ್ನು ಪಡೆಯಲು ಸೂಕ್ತವಾದ ವಾತಾವರಣ ಇವುಗಳು ಒಬ್ಬ ವ್ಯಕ್ತಿಯ ಅಥವಾ ಗುಂಪಿನ ಬಾಹ್ಯ ಶಾಂತಿಯ ಸ್ವರೂಪವಾಗಿರುತ್ತವೆ.

ಶಾಂತಿಯನ್ನು ವ್ಯಾಖ್ಯಾನಿಸುವಲ್ಲಿ ತಜ್ಞರಲ್ಲಿ ಮತಭೇದವಿದೆ. ಶಾಂತಿಯನ್ನು ಹಿಂಸಾರಾಹಿತ್ಯವೆಂದು ಹೇಳುವವರನ್ನು **"ವಸ್ತುನಿಷ್ಠರು"** (Objectivist) ಎಂದು ಕರೆಯತ್ತಾರೆ. ರಕ್ತಗತವಾದ ಕುರುಡುನಂಬಿಕೆಯಿಂದ ಜನಿಸುವ ಬಲಹೀನತೆ ಹಾಗೂ ಸಾಮಾಜಿಕ ನಂಬಿಕೆಗಳು, ಸಂಪ್ರದಾಯಗಳು, ಪದ್ಧತಿಗಳಿಂದುಂಟಾಗುವ ಯಾವುದೇ ರೀತಿಯ "ವ್ಯವಸ್ಥೆಯೊಳಗಿನ" ಹಿಂಸೆ ಮತ್ತು ಶೋಷಣೆಗಳನ್ನು "ಸಕಾರತ್ಮಕ ಶಾಂತಿ"ಯ ಮೂಲಕ ನಿವಾರಿಸಬಹುದು. ವಸ್ತನಿಷ್ಠರು ಪ್ರತಿಪಾದಿಸುವ ಶಾಂತಿಯನ್ನು ಮೇಲಿನ ಅಭಿಪ್ರಾಯುಳ್ಳವರು ನಕಾರಾತ್ಮಕ ಶಾಂತಿ ಎಂದು ಟೀಕಿಸಿದ್ದಾರೆ. ಸಕಾರಾತ್ಮಕ ಶಾಂತಿಯನ್ನು ಮೇಲೆ ಹೇಳಿದ ಪರಿಮಿತಿಗಳನ್ನು ನಿವಾರಿಸುವ ಮೂಲಕ ಸಾಧಿಸಬಹುದು. ಹೀಗೆ ವಾದಿಸುವವರನ್ನು **'ವ್ಯಕ್ತಿನಿಷ್ಠರು' (Subjectivist)** ಎಂದು ಕರೆಯುತ್ತಾರೆ. ಶಾಂತಿ ಸಮಗ್ರ ಸ್ವರೂಪವುಳ್ಳದ್ದು. ಜೀವನದ ಎಲ್ಲಾ ಆಯಾಮಗಳನ್ನು ಇದು ಒಳಗೊಳ್ಳುವುದು ಎಂದು ಇದರ ಅರ್ಥ. ಶಾಂತಿ ಎಂದರೆ ಪ್ರೇಮ, ವಾತ್ಸಲ್ಯ, ಸ್ವಾತಂತ್ರ್ಯ, ಕರುಣೆ ಮತ್ತು ಸಹಕಾರಗಳ ಪರಸ್ಪರ ವಿನಿಮಯ. ಶಾಂತಿಯ ಅಸ್ತಿತ್ವ ಒಬ್ಬನನ್ನು ಹಿಂಸೆಗೆ ಬದಲಾಗಿ ಶಾಂತಿಯ ಪಥವನ್ನು ಆರಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಶಾಂತಿಯು ಅಧ್ಯಾಪಕ ಮತ್ತು ವಿದ್ಯಾರ್ಥಿಗಳನ್ನು ಗ್ರಾಹಕರ ಪಾತ್ರದಿಂದ ಶಾಂತಿಯ ವಿನಿಮಯ ಮಾಡಿಕೊಳ್ಳುವವರನ್ನಾಗಿ ಪರಿವರ್ತಿಸುತ್ತದೆ.

ಶಾಂತಿಯನ್ನುಹಿಂಸಾರಾಹಿತ್ಯದಸ್ಥಿತಿಎಂದುವ್ಯಾಖ್ಯಾನಿಸಬಹುದು. ಗಾಂಧೀಜಿ ತಮ್ಮ ಅಹಿಂಸಾ ತತ್ವಕ್ಕೆ ಅನುಗುಣವಾಗಿ ಶಾಂತಿಯನ್ನು ಸೂಕ್ಷ್ಮ ಅಥವಾ ಸ್ಥೂಲ ಮಟ್ಟದಲ್ಲಿನ ಯಾವುದೇ ವಿಧದ ಭೌತಿಕ ಅಥವಾ ಮಾನಸಿಕ ಹಿಂಸಾರಾಹಿತ್ಯ ಮತ್ತು ತತ್ಫಲವಾಗಿ ಸಾಮಾಜಿಕ ಅಥವಾ ರಾಜಕೀಯ ವ್ಯವಸ್ಥೆಯಲ್ಲಿನ ದೋಷರಾಹಿತ್ಯವನ್ನು ಶಾಂತಿ ಎಂದು ಹೇಳಿದ್ದಾರೆ. ಅವರ ಪ್ರಕಾರ ಶಾಂತಿಯ ಪರಿಕಲ್ಪನೆ ಈ ಕೆಳಗಿನವುಗಳನ್ನು ಒಳಗೊಳ್ಳುತ್ತದೆ.

1. ಹಿಂಸೆ, ಸಂಘರ್ಷ ಮತ್ತು ಆತಂಕಗಳ ರಾಹಿತ್ಯ. ಅಹಿಂಸಾತ್ಮಕ ಮಾರ್ಗದಿಂದ ದ್ವಂದ್ವ ಪರಿಹಾರ, ಪರಸ್ಪರ ಒಪ್ಪಂದ, ಭೇದವಿರುವಲ್ಲಿ ಪರಸ್ಪರ ಸಹಾನುಭೂತಿ ಮತ್ತು ಸಹನೆ – ಇವುಗಳ ಮೂಲಕ ಇದನ್ನು ಸಾಧಿಸಬಹುದು.

2. ಸಾಮಾಜಿಕ, ಆರ್ಥಿಕ ಹಾಗೂ ರಾಜನೈತಿಕ ನ್ಯಾಯ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ – ಈ ಸ್ವರೂಪವುಳ್ಳ ಅಹಿಂಸಾತ್ಮಕ ಸಾಮಾಜಿಕ ವ್ಯವಸ್ಥೆಯ ಸೃಷ್ಟಿ.

3. ಯಾವುದೇ ವಿಧದ ಶೋಷಣೆ ಮತ್ತು ಅನ್ಯಾಯಗಳ ನಿರ್ಮೂಲನ.

4. ಸ್ನೇಹ, ಅನ್ಯೋನ್ಯತೆ,ಶಾಂತಿಯುತ ರಾಜಕೀಯ ಸಂಬಂಧಗಳು ಹಾಗೂ ಪಾರಸ್ಪರಿಕ ವಿನಿಮಯಗಳ ಮೇಲೆ ಆಧಾರಗೊಂಡ ಅಂತರರಾಷ್ಟೀಯ ಸಹಕಾರ ಮತ್ತು ಒಡಂಬಡಿಕೆ.

5. ಜೀವ ಪರಿಸರದಲ್ಲಿ ಸಮತೋಲನ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆ.

6. ಶಾಂತಿಯುತ ಅಸ್ತಿತ್ವದ ಹಾಗೂ ಮನೋಅಧ್ಯಾತ್ಮದ (Psycho-Spiritual) ಸಾರವಾದ ಮನಶ್ಶಾಂತಿ.

ಬಾಹ್ಯ ಹಾಗೂ ಆಂತರಿಕ ಶಾಂತಿಯನ್ನು ನಾವು ಹೇಗೆ ಸಾಧಿಬಹುದು? ಇದನ್ನು ಸಾಧಿಸಲು ಕೆಲವು ಪೂರ್ವಾಪೇಕ್ಷಿತ ಅವಶ್ಯಕ ಪರಿಸ್ಥಿತಿಗಳಿವೆ. ಈ ಕೆಳಗಿನವುಗಳು ಶಾಂತಿ ಸಾಧನೆಗೆ ಪೂರ್ವಾಪೇಕ್ಷಿತಗಳು.

1. ಭಯ, ಉದ್ವೇಗ ಆತಂಕಗಳಲ್ಲಿ ಪರ್ಯವಸಾನವಾಗುವ ಸಮರಗಳು, ಕ್ರಾಂತಿಗಳು, ಗುಂಪುಘರ್ಷಣೆಗಳು ಇಲ್ಲದಿರುವಿಕೆ. ಸೌಹಾರ್ದವಾಗಿ, ಸಾಂಘಿಕವಾಗಿ ನಾವು ಬದುಕಲು ಕಲಿತರೆ ಮಾತ್ರ ಇದು ಸಾಧ್ಯ.

2. ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಯ ಹಾಗೂ ಒಂದು ಗುಂಪಿನಿಂದ ಮತ್ತೊಂದು ಗುಂಪಿನ ಯಾವುದೇ ತೆರನ ಶೋಷಣೆಗಳ ರಾಹಿತ್ಯ, ಸಾಮಾಜಿಕ ನಿಯಂತ್ರಣ ಹೊಂದಿರುವ ಯಾವುದೇ ಧರ್ಮ, ರಾಜ್ಯ ಅಥವಾ ಸಂಸ್ಥೆಗಳಿಂದ ಉದ್ಭವಿಸುವ ಅಧಿಕಾರದಿಂದ ವ್ಯಕ್ತಿಗಳ ಅಥವಾ ಗುಂಪಿನ ಶೋಷಣೆಯ ರಾಹಿತ್ಯ. ಶೋಷಣೆಯು ಸಾಮಾಜಿಕ, ಆರ್ಥಿಕ ಅಥವಾ ರಾಜನೈತಿಕ ಮುಂತಾದ ತೆರನದ್ದಾಗಿರಬಹುದು. ಗಾಂಧೀಜಿ ಈ ಸ್ಥಿತಿಗೆ ತಮ್ಮ ಶಾಂತಿಯ ಪರಿಕಲ್ಪನೆಯಲ್ಲಿ ಒತ್ತನ್ನು ನೀಡುತ್ತಾರೆ.

3. ಪರಸ್ಪರ ಸಹಕಾರ, ಪರಸ್ಪರ ವಿಶ್ವಾಸ ಹಾಗೂ ಕೊಡುಕೊಳ್ಳುವ ಅನ್ಯೋನ್ಯತೆಯಿಂದೊಡಗೂಡಿದ ಸಹಬಾಳ್ವೆ. ಇತರರನ್ನು ನಾವು ಅರ್ಥಮಾಡಿಕೊಂಡು ಅವರೂ ಸಹ ತಮ್ಮದೇ ಆದ ಹಕ್ಕು,

Digitised by Bharatavani, CIIL

ಸ್ವಾತಂತ್ರ್ಯ, ಆಸೆ ಆಕಾಂಕ್ಷೆಗಳನ್ನು ಹೊಂದಿರುವ ವ್ಯಕ್ತಿಗಳು ಎಂದು ಪರಿಗಣಿಸಿದಾಗ ಮಾತ್ರ ಇದು ಸಾಧ್ಯ. ಈ ಪರಸ್ಪರ ಅರ್ಥಮಾಡಿಕೊಳ್ಳುವಿಕೆ ಪ್ರಜಾಸತ್ತಾತ್ಮಕ ಬಾಳ್ವೆಯ ಆಧಾರ ಸ್ತಂಭ.

4. ನೈತಿಕ, ಮತ್ತು ಇತರ ಸಾಮಾಜಿಕ ಮೌಲ್ಯಗಳಲ್ಲಿ ಅಡಗಿರುವ ತತ್ವಗಳನ್ನು ಮತ್ತು ಆಶಯಗಳನ್ನು ಅರ್ಥಮಾಡಿಕೊಂಡು ಆ ಮೌಲ್ಯಗಳಿಗೆ ಬದ್ಧರಾಗಿರುವುದು. ಆದರೆ ಇಂಥ ಮೌಲ್ಯಗಳು ಮಾನವೀಯ ಪರಿಗಣನೆ ಮತ್ತು ನ್ಯಾಯಗಳನ್ನು ಎಂದು ಜ್ಞಾಪಕದಲ್ಲಿಡಬೇಕು.

5. ಮನಸ್ಸಿನ ಆಂತರಿಕ ಪ್ರಶಾಂತ ಸ್ಥಿತಿ. ಇದಿಲ್ಲದೆ ಶಾಂತಿಯ ಬಾಹ್ಯ ಪೂರ್ವಾಪೇಕ್ಷಿತಗಳು ನಿಷ್ಪ್ರಯೋಜಕವಾಗುವುವು. ಸಾಂಘಿಕ ಶಾಂತಿಯ ಸಾರವೇ ಆಂತರಿಕ ಶಾಂತಿ. ಇತರರ ಕಾರ್ಯಗಳ ಹಿಂದೆ ಸದುದ್ದೇಶವನ್ನು ಕಾಣುವುದು, ಮಾನವ ಸ್ವಭಾವದ ಶ್ರೇಷ್ಠತೆಯಲ್ಲಿ ವಿಶ್ವಾಸವನ್ನಿಡುವುದು, ಅನ್ಯರೊಡನೆ ಸಮತ್ವ ಮನೋಭಾವವನ್ನು ಹೊಂದುವುದು ಹಾಗೂ ಅನ್ಯರ ಸ್ವಾತಂತ್ರ್ಯವನ್ನು ಗೌರವಿಸುವುದು– ಇವುಗಳಿಂದ ಆಂತರಿಕ ಶಾಂತಿ ಸಾಧ್ಯ. ಆಂತರಿಕ ಶಾಂತಿಯನ್ನು ಅನುಭವಿಸುತ್ತಿರುವ ವ್ಯಕ್ತಿಗೆ ಈ ಎಲ್ಲಾ ವರ್ತನೆಗಳು ಸಾಧ್ಯವಿದೆ. ಆಂತರಿಕ ಶಾಂತಿಯಿಲ್ಲದವನು ಭೌತಿಕ ಶ್ರೀಮಂತಿಕೆಯ ಮಧ್ಯದಲ್ಲಿದ್ದರೂ ಶಾಂತನಾಗಿ ಬದುಕಲಾರನು. ಆದರೆ ಆಂತರಿಕ ಶಾಂತಿಯುಳ್ಳವ ಸಂಕಷ್ಟ ಸವಾಲುಗಳ ನಡುವೆಯೂ ಶಾಂತನಾಗಿ ಬದುಕಬಲ್ಲ. ಆಂತರಿಕ ಶಾಂತಿ ಅಥವಾ ಸಮಾಧಾನವಿರುವ ವ್ಯಕ್ತಿ ಶೀಘ್ರವಾಗಿ ಮಾನಸಿಕ ಸಮತೆಯನ್ನು ಸಾಧಿಸುವನು ಎಂದು ಭಗವದ್ಗೀತೆ ಹೇಳುತ್ತದೆ.

6. ತೃಪ್ತಿ ಶಾಂತಿಯ ಮತ್ತೊಂದು ಪೂರ್ವಾಪೇಕ್ಷಿತ. ಮನುಷ್ಯನಿಗೆ ಆಸೆಯಿರಬೇಕು ಆದರೆ ಪರಿಮಿತಿಯಲ್ಲಿರಬೇಕು. ಅವು ಲೋಭಕ್ಕೆ ದಾರಿಮಾಡಬಾರದು. ಅಪರಿಮಿತ, ಅನಿಯಂತ್ರಿತ ಆಸೆಗಳು ಆಧುನಿಕ ಮಾನವನನ್ನು ಲೋಭಿ, ಸ್ವಾರ್ಥಿಯನ್ನಾಗಿಸಿದೆಯಲ್ಲದೆ ಅನ್ಯರ ಯೋಗಕ್ಷೇಮದ ಬಗ್ಗೆ ಅಸಹನೆಯನ್ನು ತೋರುವಂತೆ ಮಾಡಿದೆ. ಅಂಥ ಲೋಭ ಅನ್ಯರನ್ನು ಶೋಷಿಸುವಂತೆ ಕೆಲವರನ್ನು ಪ್ರೇರೇಪಿಸುತ್ತದೆ. ಅಂಥ ಕೆಲಸಗಳು ಮಾನವನ ಆಂತರಿಕ ಶಾಂತಿಯನ್ನು ಅಪಹರಿಸಿವೆ. ನಮ್ಮ ಆಸೆ ಮತ್ತು ಬೇಡಿಕೆಗಳ ನಡುವೆ ಒಂದು ಗೆರೆಯನ್ನು ಎಳೆಯಬೇಕಾಗಿದೆ. ತೃಪ್ತ ಮಾನವನು ಅನವಶ್ಯ ಉದ್ವೇಗವಿಲ್ಲದೆ ಜೀವಿಸಬಲ್ಲನಲ್ಲದೆ ಆಂತರಿಕ ಶಾಂತಿಯನ್ನು ಸಾಧಿಸಬಲ್ಲನು. ಭಗವದ್ಗೀತೆಯು ಹೀಗೆ ಘೋಷಿಸುತ್ತದೆ; "ಪೂರ್ಣವಾಗಿಯೂ, ಅಚಲವಾಗಿಯೂ ಇರುವ ಸಮುದ್ರವನ್ನು ನದಿಗಳ ನೀರು ಹರಿದು ಸೇರುವಂತೆ ಯಾರಲ್ಲಿ ಸಮಸ್ತ ಬಯಕೆಗಳು ಪ್ರವೇಶಿಸಿ ಲಯವಾಗಿಬಿಡುತ್ತವೋ ಅಂಥವನು ಶಾಂತಿಯನ್ನು ಹೊಂದುವನು. ಆಸೆಗಳನ್ನು ಬಯಸುವವನು ಶಾಂತಿಯನ್ನು ಹೊಂದಲಾರ".(2–70)

7. ಶಾಂತಿಗೆ ಅನ್ಯಧರ್ಮಗಳ ಸಹಾನುಭೂತಿಯಿಂದೊಡಗೂಡಿದ ಅರಿವು, ವಿಶೇಷವಾಗಿ ಭಾರತೀಯ ಬಹುಧರ್ಮೀಯ ಹಿನ್ನೆಲೆಯಲ್ಲಿ ಅವಶ್ಯಕ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2000) ಯುಕ್ತವಾಗಿಯೇ ಹೀಗೆ ಹೇಳಿದೆ; "ಈಗ ಅವಶ್ಯವಿರುವುದು ಧಾರ್ಮಿಕ ಶಿಕ್ಷಣವಲ್ಲ ಆದರೆ ವಿವಿಧ ಧರ್ಮಗಳ, ಅವುಗಳ ಮೂಲತತ್ವಗಳ, ಅವುಗಳ ಅಂತರ್ನಿಹಿತ ಮೌಲ್ಯಗಳ ಬಗೆಗಿನ ಶಿಕ್ಷಣ ಹಾಗೂ ಸಕಲ ಧರ್ಮಗಳ ತಾತ್ವಿಕತೆಯ ತುಲನಾತ್ಮಕ ಅಧ್ಯಯನ". ಒಂದು ನಿರ್ದಿಷ್ಟ ಧಾರ್ಮಿಕ ಗುಂಪಿನ ದೃಷ್ಟಿಕೋನದಿಂದ ಧಾರ್ಮಿಕ ಶಿಕ್ಷಣ ಅಗತ್ಯವಾಗಿದೆ. ಆದರೆ, ಅಂಥ ಧಾರ್ಮಿಕ ಶಿಕ್ಷಣ ಇತರ ಧರ್ಮಗಳ ಸಾರದ ಅರಿವಿನೊಡನೆ ಮೇಳೈಸದಿದ್ದರೆ, ಮನುಷ್ಯ ಮತ್ತು ದೈವದ ಅಥವಾ ಪರಮಸತ್ಯದ ನಡುವೆ ಸಂಬಂಧವನ್ನು ಕಲ್ಪಿಸುವ ಒಂದೇ ಉದ್ದೇಶವನ್ನು ಹಾಗೂ ಆತ್ಮಬೋಧದ ಒಂದೇ ಗುರಿಗೆ ತಲುಪಿಸುವ ಉದ್ದೇಶವನ್ನು ಸರ್ವಧರ್ಮಗಳು ಹೊಂದಿವೆ ಎಂಬ ಸತ್ಯವನ್ನು ವಿದ್ಯಾರ್ಥಿಗಳಿಗೆ ಮನಸ್ಸಿಗೆ ನಾಟುವಂತೆ ಹೇಳದಿದ್ದರೆ ಧರ್ಮಾಂಧತೆಯು ಬೆಳೆದು,ಅನ್ಯಧರ್ಮಗಳ ಬಗ್ಗೆ ತಪ್ಪು ತಿಳುವಳಿಕೆಯುಂಟಾಗಿ ಇತರ ಧಾರ್ಮಿಕ ಗುಂಪಿನ ಬಗ್ಗೆ ಅಸಹನೆಯು ವೃದ್ಧಿಯಾಗುವ ಸಂಭವವಿದೆ. ಇದರಿಂದ ಕೋಮು ಗಲಭೆಗಳು ಉಂಟಾಗಬಹುದು, ಆದರೆ ಧರ್ಮಗಳ ಬಗೆಗಿನ ಶಿಕ್ಷಣವು ಪರಸ್ಪರ ಧಾರ್ಮಿಕ ಸಹನೆ, ಇತರ ಧರ್ಮಗಳ ಆಚರಣೆ , ನಂಬಿಕೆ ಮತ್ತು ಆಚರಣೆಗಳನ್ನು ಕುರಿತ ಗೌರವ ಹಾಗೂ ಭಾರತದಲ್ಲಿ ಅಗತ್ಯವಾದ ಧರ್ಮನಿರಪೇಕ್ಷತೆಯ ಮನೋಭಾವ ಇತ್ಯಾದಿಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ನಿಜವಾದ ಅರ್ಥದಲ್ಲಿ ಧರ್ಮನಿರಪೇಕ್ಷತೆ ಸರ್ವಧರ್ಮಾವಲಂಬಿಗಳ ಶಾಂತಿಯುತ ಅಸ್ತಿತ್ವಕ್ಕೆ ದಾರಿಮಾಡಿಕೊಡುವುದು.

8. ಭಾರತದಲ್ಲಿ ಕಾಣುವ ಹಾಗೆ ವಿವಿಧ ಸಂಸ್ಕೃತಿ, ಭಾಷೆ, ಜಾತಿ ಪದ್ಧತಿ ಮತ್ತು ಸಂಪ್ರದಾಯ ಜನಿತ ಗುಂಪುಗಳಲ್ಲಿನ ಭಿನ್ನತೆಗಳನ್ನು ಗೌರವಿಸುವುದು, ಒಪ್ಪಿಕೊಳ್ಳುವುದು ಮತ್ತು ಮಾನ್ಯ ಮಾಡುವುದೂ ಸಹ ಶಾಂತಿಯುತ ಬಾಳ್ವೆಗೆ ಅವಶ್ಯಕ. ಅನ್ಯ ಗುಂಪಿಗೆ ಸೇರಿದವರನ್ನು ಭಾರತದ ಪ್ರಜೆಗಳು ಎಂದು ಭಾವಿಸಿ ಅವರ ಮಾನವ ಹಕ್ಕುಗಳನ್ನು ಗೌರವಿಸಿ ಅವರನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಈ ಗುರಿಯನ್ನು ಸಾಧಿಸಬಹುದು. ಹಲವು ಬಾರಿ ಪ್ರಾಂತೀಯತೆ, ಪ್ರಾಂತೀಯ ಭಾಷೆ, ಜಾತಿ, ಧರ್ಮ ಹಾಗೂ ಉಪ ಸಂಸ್ಕೃತಿಗಳ ಬಗೆಗಿನ ಅತಿಯಾದ ಪ್ರೇಮ ನಮ್ಮ ದೇಶದಲ್ಲಿ ಗುಂಪುಘರ್ಷಣೆಗಳಿಗೆ ದಾರಿಮಾಡಿ ತತ್ಫಲವಾಗಿ ಸಮಾಜದಲ್ಲಿ ಅಶಾಂತಿ ಉಂಟಾಗಿದೆ. ಅಂತರರಾಷ್ಟ್ರೀಯ ಅರಿವಿಂದೊಡಗೂಡಿದ ದೇಶಭಕ್ತಿಯನ್ನು ಮೈಗೂಡಿಸಿಕೊಳ್ಳುವುದರಿಂದ ಈ ಅಪಾಯವನ್ನು ತಪ್ಪಿಸಬಹುದು.

9. ಪ್ರಜಾಸತ್ತಾತ್ಮಕ ಮನೋಭಾವ ಮತ್ತು ಪ್ರಜಾಸತ್ತಾತ್ಮಕ

Digitised by Bharatavani, CIIL

ಮೌಲ್ಯಗಳು ಶಾಂತಿಪಾಲನೆಗೆ ಸಹಾಯಕ. ಸಂಘರ್ಷಗಳನ್ನು ಅನ್ಯೋನ್ಯತೆಯಿಂದ ಪರಿಹರಿಸಲು ಪ್ರಜಾಸತ್ತಾತ್ಮಕ ಉಪಕ್ರಮ ಸರ್ವೋತ್ತಮವಾದುದು. ಅಸಮ್ಮತಿಯನ್ನು ಸಮ್ಮತಿಸಲು, ಅನ್ಯರ ನಿರ್ಣಯ ಮತ್ತು ದೃಷ್ಟಿಕೋನವನ್ನು ಗೌರವಿಸಲು ಇದು ಸಹಾಯ ಮಾಡುತ್ತದೆ. ದ್ವಂದ್ವ ಪರಿಹಾರದ ಈ ಉಪಕ್ರಮ ಹಿಂಸಾಮಾರ್ಗವನ್ನವಂಬಿಸದೆ ಒಮ್ಮತಕ್ಕೆ ಬರಲು ನೆರವು ನೀಡುತ್ತದೆ. ಆದ್ದರಿಂದ , ದ್ವಂದ್ವ ಪರಿಹಾರದ ಪ್ರಜಾಸತ್ತಾತ್ಮಕ ಮಾರ್ಗ ಶಾಂತಿಗೆ ಅವಶ್ಯಕ.

10. ವ್ಯಕ್ತಿ ಮತ್ತು ಸಮೂಹಗಳ ಸ್ತರದಲ್ಲಿ ಶಾಂತಿಯ ಭರವಸೆ ನೀಡಲು ಅವಶ್ಯಕವಾದ ಕೆಲವು ನಿಶ್ಚಿತ ಜ್ಞಾನ, ಕೌಶಲ್ಯಗಳು ಮತ್ತು ಮನೋಭಾವಗಳು ಅವಶ್ಯಕವಾದುವುಗಳನ್ನು ಆಧ್ಯಾಪಕರಲ್ಲಿ ಬೆಳೆಸಬೇಕಾದ ಅಗತ್ಯವಿದೆ.

11. ಅಂತರರಾಷ್ಟ್ರೀಯ ಸಹಾನುಭೂತಿ, ಮಾನವಹಕ್ಕು ಮತ್ತು ಮಕ್ಕಳ ಹಕ್ಕುಗಳಿಗೆ ಗೌರವ, ಅನ್ಯದೇಶ ಹಾಗೂ ಸಾಂಸ್ಕೃತಿಕ ಸಮೂಹಗಳನ್ನು **"ಜಾಗತಿಕ ಸಮುದಾಯ"**ದ ಸದಸ್ಯರಂತೆ ಕಾಣುವುದು– ಇವೆಲ್ಲವೂ ಜಾಗತಿಕ ಮಟ್ಟದ ಶಾಂತಿಗೆ ಮುಖ್ಯವಾಗಿವೆ.

ಅಸಂಖ್ಯ ಸಸ್ಯ ಹಾಗೂ ಪ್ರಾಣಿಗಳನ್ನು ಒಳಗೊಂಡಿರುವ ಪರಿಸರದ ಜಾಗೃತಿ ಹಾಗೂ ಅದನ್ನು ಸಂರಕ್ಷಿಸಲು ವಚನಬದ್ಧ ಕಾರ್ಯ– ಇವುಗಳೂ ಸಹ ಅಗತ್ಯವಿದೆ. ನಮ್ಮ ಆಂತರಿಕ ಹಾಗೂ ಬಾಹ್ಯ ಶಾಂತಿಗಳು ಮಿತಿಮೀರಿದ ಶಬ್ದಮಾಲಿನ್ಯ, ವಾಯು ಮಾಲಿನ್ಯ ಮತ್ತು ಜಲಮಾಲಿನ್ಯಗಳಿಂದ ಕಲಕಿಹೋಗುತ್ತವೆ. ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆಯಿಂದಾಗಿ ಜೀವಪರಿಸರ ಮತ್ತು ಮನಃಶಾಂತಿಗಳ ಸಮತೋಲನ ತಪ್ಪಿದೆ. ಮಾನವರು ಹಾಗೂ ಪ್ರಾಣಿಗಳು ಉಪದ್ರವವಿಲ್ಲದೆ ಸಹಜೀವನ ನಡೆಸುವ ಸಮತೋಲನದ ಪರಿಸರದಲ್ಲಿ ಶಾಂತಿಯುತ ಜೀವನ ಸಾಧ್ಯ.

**ಶಾಂತಿಗಾಗಿ ಶಿಕ್ಷಣಕ್ಕಾಗಿ ಕಾರ್ಯ ನೀತಿಗಳು:** ಶಾಂತಿಗಾಗಿ ಶಿಕ್ಷಣಕ್ಕಾಗಿ ಎರಡು ಉಪಕ್ರಮಗಳಿವೆ. ಒಂದು ಪ್ರತ್ಯೇಕ ವಿಷಯಾತ್ಮಕ ಉಪಕ್ರಮವಾದರೆ ಮತ್ತೊಂದು ಸಮಗ್ರ ರೂಪದ ಉಪಕ್ರಮ. ಪ್ರತ್ಯೇಕ ವಿಷಯಾತ್ಮಕ ಉಪಕ್ರಮದಲ್ಲಿ ಶಾಂತಿ ಶಿಕ್ಷಣವನ್ನು ಪಠ್ಯಕ್ರಮದ ಒಂದು ಬೇರೆ ವಿಷಯವಾಗಿ ಅಳವಡಿಸಿ ಪ್ರತ್ಯೇಕವಾಗಿ ಬೋಧಿಸಲಾಗುವುದು. ಸಮಗ್ರ ಸ್ವರೂಪದ ಉಪಕ್ರಮದಲ್ಲಿ ಶಾಂತಿ ಶಿಕ್ಷಣದ ವಿಷಯವಸ್ತುವನ್ನು ಸಮಸ್ತ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಮಗ್ರ ಗೊಳಿಸಲಾಗುವುದು. ಎನ್.ಸಿ.ಎಫ್ (2005) ಸಮಗ್ರ ಉಪಕ್ರಮವನ್ನು ಸೂಕ್ತವಾದುದೆಂದು ಭಾವಿಸಿದೆ. ಸಮಗ್ರಗೊಳಿಸುವ ಪ್ರಕ್ರಿಯೆಯನ್ನು ಕುರಿತು ಎನ್.ಸಿ.ಎಫ್. ಈ ಸಲಹೆಯನ್ನು ನೀಡಿದೆ "ಸಮಗ್ರ ಉಪಕ್ರಮವನ್ನು ಎರಡು ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಬೇಕು. ವಿಸ್ತೃತ ಸ್ತರದಲ್ಲಿ, ಶಾಲೆಯಲ್ಲಿ ಎಲ್ಲಾ ಪಠ್ಯ ಹಾಗೂ ಸಹಪಠ್ಯ ಕ್ರಮ ಚಟುವಟಿಕೆಗಳು ಶಾಂತಿ ಶಿಕ್ಷಣದೆಡೆಗೆ ನಿರ್ದೇಶಿತವಾದಾಗ ಈ ಸಮಗ್ರಗೊಳಿಸುವ ಪ್ರಕ್ರಿಯೆ ನಡೆಯುವುದು. ತರಗತಿಯ ಮಟ್ಟದಲ್ಲಿ ಶಾಂತಿಯ ಆಯಾಮಗಳನ್ನು ಪಾಠಗಳ ವಿಷಯವಸ್ತುವಿನ ಜೊತೆಗೆ ಹೆಣೆದು ಅವುಗಳನ್ನು ವಿದ್ಯಾರ್ಥಿಗಳಲ್ಲಿ ಶಾಂತಿಯ ಮೌಲ್ಯಗಳನ್ನು ರಕ್ತಗತಮಾಡಿಕೊಳ್ಳಲು ಒಂದು ಮಾಧ್ಯಮವೆಂಬಂತೆ ಪರಿಗಣಿಸಲಾಗುತ್ತದೆ. ಕೇವಲ ಜ್ಞಾನ ಸಂಗ್ರಹಣೆ ಮಾತ್ರವಾಗಿರದೆ ಶಾಂತಿಸಾಧನೆಗೆ ಅವಶ್ಯವಾದ ಪ್ರಕ್ರಿಯೆಯ ಮೇಲೂ ಇಲ್ಲಿ ಒತ್ತು ನೀಡಲಾಗುತ್ತದೆ". (ಎನ್.ಸಿ.ಎಫ್. 2005)

ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಕ್ಕಳಿಗೆ ಶಾಂತಿ ಶಿಕ್ಷಣದ ಸಮಗ್ರ ಸ್ವರೂಪದ ಉಪಕ್ರಮ ಸರ್ವೋತ್ತಮವಾದುದು. ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಮಟ್ಟದ ಮಕ್ಕಳಿಗೆ ದೃಷ್ಟಾಂತಗಳು, ಮನುಷ್ಯ ಪ್ರಾಣಿಗಳ ಕಥೆಗಳು, ದಂತಕಥೆಗಳು, ಮಾದರಿ ವರ್ತನೆಗಳನ್ನು ತೋರಿಸಿ ಕಲಿಸುವುದು– ಇವುಗಳ ಮುಖಾಂತರ ಶಾಂತಿಯ ಅವಶ್ಯಕತೆಯ ಬಗ್ಗೆ ಬೋಧಿಸಬಹುದು. ಈ ಮಟ್ಟಗಳಲ್ಲಿ ಕೆಲವು ಅನುಕೂಲತೆಗಳಿವೆ. ಈ ಅವಧಿ ಮಗುವಿನ ವ್ಯಕ್ತಿತ್ವದ ವಿಕಾಸದ ಸಮಯ.ಅಲ್ಲದೆ ಈ ಮಟ್ಟದಲ್ಲಿ ಅಧಿಕ ಸಂಖ್ಯೆಯ ಮಕ್ಕಳಿಗೆ ಶಾಂತಿಯನ್ನು ಕುರಿತು ಹೇಳಬಹುದು ಮತ್ತು ಶಾಂತಿಯ ಭದ್ರ ಬುನಾದಿಯನ್ನು ಹಾಕಬಹುದು. ಅವರ ಮಾನಸಿಕ ವಿಕಾಸದ ಸುನಮ್ಯತೆಯು ಜ್ಞಾನದ ಸರಾಗ ಆತ್ಮ ಸ್ವಾಂಗೀಕರಣ ಮತ್ತು ವಿಚಾರಗಳ ಘನೀಕರಣಗಳಿಗೆ ಸಹಾಯ ಮಾಡುತ್ತದೆ. ಪಂಚತಂತ್ರ, ಹಿತೋಪದೇಶ ಮತ್ತು ಈಸೋಪನ ಕಥೆಗಳು, ಬೈಬಲ್, ಬೌದ್ಧಗ್ರಂಥಗಳು ಹಾಗೂ ಮತ್ತಿತರ ಧಾರ್ಮಿಕ ಗ್ರಂಥಗಳಲ್ಲಿ ಸಿಗುವ ದೃಷ್ಟಾಂತಗಳು, ಹಿಂದೂ ಪುರಾಣಗಳು ಮತ್ತು ಗ್ರೀಕ್ ಪುರಾಣ ಕಥೆಗಳು ಇತ್ಯಾದಿಗಳನ್ನು ಸೂಕ್ತರೀತಿಯಲ್ಲಿ ಆಯ್ದು ಶಾಂತಿಗಾಗಿ ಶಿಕ್ಷಣದಲ್ಲಿ ಉಪಯೋಗಿಸಬಹುದು.

ಪ್ರೌಢಶಾಲಾ ಮತ್ತು ಉನ್ನತ ಪ್ರೌಢಶಾಲೆ ಮಟ್ಟಗಳಲ್ಲಿ ಬೋಧಿಸುವ ವಿಷಯಗಳೊಂದಿಗೆ ಮತ್ತು ಸಹಪಠ್ಯ ಚಟುವಟಿಕೆಗಳೊಂದಿಗೆ ಶಾಂತಿ ಶಿಕ್ಷಣವನ್ನು ಅರ್ಥಪೂರ್ಣವಾಗಿ ಸಮಗ್ರಗೊಳಿಸಬಹುದು. ಸಮಾಜವಿಜ್ಞಾನ, ವಿಶೇಷವಾಗಿ ಚರಿತ್ರೆ(ಭಾರತೀಯ ಹಾಗೂ ವಿಶ್ವ ಚರಿತ್ರೆಗಳು) ಮತ್ತು ಭಾಷೆ ಮೌಲ್ಯಗಳನ್ನು ವಿಶದೀಕರಿಸಲು ಹಾಗೂ ಶಾಂತಿಯ ಅಗತ್ಯದ ಬಗ್ಗೆ ತಿಳಿಹೇಳಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತವೆ. ಪಾಠಗಳಲ್ಲಿ ಸೋದಾಹರಣೆಯಾಗಿ ವಿವರಿಸಲಾಗುವ ಶಾಂತಿಯುತ ಅಸ್ತಿತ್ವದ ಗುರಿಗೆ ತಲುಪಿಸುವ ನೈತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳಿಗೆ ಒತ್ತನ್ನು ನೀಡಬೇಕು. ಸಹಕಾರ, ಪರಸ್ಪರ ವಿನಿಮಯ, ಸಮಾಜಪರವಾದ ವರ್ತನೆ,ವಿವಾದ ಭೇದಗಳ ಶಾಂತಿಸೌಹಾರ್ದಯುತ ಪರಿಹಾರ– ಈ ಎಲ್ಲಾ ತತ್ತ್ವಗಳನ್ನು ಗಮನದಲ್ಲಿಟ್ಟುಕೊಂಡು ಸಹಪಠ್ಯ ಚಟುವಟಿಕೆಗಳನ್ನು ಯೋಜಿಸಬೇಕು.ಮೌಲ್ಯ ಶಿಕ್ಷಣದ ಬಗ್ಗೆ ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸಬಹುದು. "ಪ್ರಶ್ನೆಗಳು, ಕಥೆ, ದೃಷ್ಟಾಂತ, ಆಟಗಳು, ಪ್ರಯೋಗಗಳು, ಚರ್ಚೆ, ಸಂವಾದ, ಮೌಲ್ಯಸ್ಪಷ್ಟೀಕರಣ, ಉದಹರಣೆಗಳು, ಉಪಮೆಗಳು, ರೂಪಕಗಳು, ಪಾತ್ರ ನಿರ್ವಹಣೆ, ಮತ್ತು ಪಾತ್ರಾಭಿನಯಗಳು ಬೋಧನೆ–ಕಲಿಕೆಯ ಮೂಲಕ ಶಾಂತಿಯ ಪ್ರೋತ್ಸಾಹಕ್ಕೆ ಸಹಕಾರಿಗಳು".

Digitised by Bharatavani, CIIL

(ಎನ್.ಸಿ.ಎಫ್ ವರದಿ) ಈ ಮಟ್ಟದಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಮೌಲ್ಯ ಶಿಕ್ಷಣ ಮತ್ತು ಶಾಂತಿಗಾಗಿ ಶಿಕ್ಷಣಗಳಿಗೆ ಸಂಬಂಧಿಸಿದ ಸಣ್ಣ ಪ್ರಾಯೋಜನೆಗಳನ್ನು ಕೈಗೆತ್ತಿಕೊಳ್ಳುವಂತೆ ಪ್ರೋತ್ಸಾಹಿಸಬಹುದು. ಉದಾಹರಣೆಗೆ, ಸಮುದಾಯದ ಶಾಂತಿಯನ್ನು ಕದಡಿದ ಘಟನೆಯ ಬಗ್ಗೆ ಸಮುದಾಯದ ಸದಸ್ಯರ ಅಭಿಪ್ರಾಯಗಳ ಮಾದರಿ ಸಮೀಕ್ಷೆಯನ್ನು ಕೈಗೆತ್ತಿಕೊಳ್ಳಬಹುದು. ಕೋಮು ಗಲಭೆಗಳನ್ನು ತಪ್ಪಿಸುವ ಮಾರ್ಗಗಳನ್ನು ಸೂಚಿಸುವಂತೆ ಸಾರ್ವಜನಿಕರ ಸಂದರ್ಶನ ಮಾಡಬಹುದು. ವಿದ್ಯಾರ್ಥಿಗಳು ಶಾಂತಿಯುತ ಸಹಬಾಳ್ವೆಯ ಘೋಷಣೆಯೊಂದಿಗೆ ಸಮುದಾಯಗಳಲ್ಲಿ ಜಾಥಾಗಳನ್ನು ಆಯೋಜಿಸಬಹುದು. ಆಗಾಗ್ಗೆ, ಶಾಲೆಗಳು ವಿವಿಧ ಧರ್ಮದ ಹಾಗೂ ಜಾತಿಗಳ ಸದಸ್ಯರನ್ನು ಶಾಂತಿಯ ಬಾಳ್ವೆಯ ದಿಕ್ಕಿಗೆ ಅವರನ್ನು ತಿರುಗಿಸಲು "ಸೌಹಾರ್ದ ಸಭೆಗಳಲ್ಲಿ" ಭಾಗವಹಿಸಲು ಆಮಂತ್ರಿಸಬಹುದು. ಮೌಲ್ಯ ಶಿಕ್ಷಣ ಹಾಗೂ ಶಾಂತಿ ಶಿಕ್ಷಣ ಸಂಬಂಧಿತ ಪ್ರಬಂಧ ಅಥವಾ ಕಥಾ ಸ್ಪರ್ಧೆಗಳನ್ನು ಏರ್ಪಡಿಸಬಹುದು.

**ಶಾಂತಿಗಾಗಿ ಶಿಕ್ಷಣದಲ್ಲಿ ಶಿಕ್ಷಕರ ಪಾತ್ರ:** ಅಧ್ಯಾಪಕರು ಶಿಕ್ಷಣದ ಸಂಪೂರ್ಣ ಪ್ರಕ್ರಿಯೆಯಲ್ಲಿ ಮಹತ್ವಪೂರ್ಣ ಪಾತ್ರ ವಹಿಸುತ್ತಾರೆ. ವಿಷಯ ಬೋಧನೆ ಅಧ್ಯಾಪಕರ ಬಹುಮುಖಿ ಪಾತ್ರದ ಕೇವಲ ಒಂದು ಅಯಾಮ ಮಾತ್ರವಾದರೂ ಜ್ಞಾನ ಸಂವಾಹಕರಾಗಿ ಅವರ ಮಹತ್ವವನ್ನು ನಿರಾಕರಿಸಲಾಗದು. ಈ ಪಾತ್ರಕ್ಕಿಂತಲೂ ಮಿಗಿಲಾಗಿ ವಿದ್ಯಾರ್ಥಿಗಳಿಗೆ ಮಾದರಿಯಾಗುವ ಪಾತ್ರವು ಅತ್ಯಂತ ಮಹತ್ವವುಳ್ಳದ್ದು. ವಿದ್ಯಾಥಿಗಳು, ವಿಶೇಷವಾಗಿ ಶಾಲಾಮಟ್ಟದಲ್ಲಿ ಅರಿತು ಅಥವಾ ಕೆಲವೊಮ್ಮೆ ಅರಿಯದೆಯೂ ತಮ್ಮ ಉಪಾಧ್ಯಾಯರನ್ನು ಅನುಕರಣೀಯ ವ್ಯಕ್ತಿಯಾಗಿ ಸ್ವೀಕರಿಸುತ್ತಾರೆ. ವಿದ್ಯಾರ್ಥಿಗಳು ತಮ್ಮ ನಂತರದ ಜೀವನ ಘಟ್ಟಗಳಲ್ಲಿ ಅವರ ವ್ಯಕ್ತಿತ್ವವನ್ನು ಪ್ರಭಾವಿಸಿದ ಉಪಾಧ್ಯಾಯರನ್ನು ಸ್ಮರಿಸುತ್ತಾರೆ. ಮಾದರಿ ವ್ಯಕ್ತಿಗಳಾಗಿ ಶಿಕ್ಷಕರು ಮಕ್ಕಳ ಮನೋಭಾವ, ಮೌಲ್ಯ, ನಂಬಿಕೆ, ಕೆಲವೊಮ್ಮೆ ವರ್ತನ ವಿನ್ಯಾಸಗಳ ವಿಕಾಸವನ್ನೂ ಪ್ರಭಾವಿಸುತ್ತಾರೆ. ಶಿಕ್ಷಕರ ಈ ಮಾದರಿಯ ಪ್ರಭಾವ ಶಾಂತಿಗಾಗಿ ಶಿಕ್ಷಣದಲ್ಲಿ ಪ್ರಭಾವಯುತವಾಗುವುದು.ಎನ್.ಸಿ.ಎಫ್. 2005 ಶಾಂತಿಗಾಗಿ ಶಿಕ್ಷಣದ ಪ್ರಕ್ರಿಯೆಯಲ್ಲಿ ಅಧ್ಯಾಪಕರ ಪಾತ್ರವನ್ನು ಯುಕ್ತವಾಗಿಯೇ ಒತ್ತಿ ಹೇಳಿದೆ. "ಶಿಕ್ಷಣದ ಸ್ವರಮೇಳವನ್ನು ನಡೆಸುವವರು ಶಿಕ್ಷಕರು. ಯಾವುದೇ ಇತರ ವಿಷಯ ಅಥವಾ ಶೈಕ್ಷಣಿಕ ಗುರಿಗಿಂತ ಮಿಗಿಲಾಗಿ, ಶಾಂತಿಗಾಗಿ ಶಿಕ್ಷಣವು ಶಿಕ್ಷಕರ ಅರ್ಹತಾ ಭಾವನೆ ಹಾಗೂ ಅವರು ವರ್ತಿಸುವ ರೀತಿಗಳ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಶಾಂತಿಗಾಗಿ ಶಿಕ್ಷಣದ ಪ್ರಯತ್ನದ ಸಫಲತೆ ಮುಖ್ಯವಾಗಿ ಅಧ್ಯಾಪಕರ ದೂರದೃಷ್ಟಿ, ಪ್ರೇರಣಾಶಕ್ತಿ, ಕೌಶಲ್ಯಗಳು ಮತ್ತು ಅರಿವುಗಳ ಮೇಲೆ ಆಧಾರಿತವಾಗಿದೆ ಎಂಬುದು ಸುಸ್ಪಷ್ಟ. ಶಾಂತಿಗಾಗಿ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತಿರುವ ಅಧ್ಯಾಪಕರು ಶಾಂತಿಯ ಮೌಲ್ಯಗಳನ್ನು ಆದರಿಸಬೇಕು, ಸಮಾನ ಮನೋಭಾವಗಳನ್ನು ಹೊಂದಿರಬೇಕು, ಹಾಗೂ ಸಮಾನ ವರ್ತನಾತ್ಮಕ ಪ್ರವೃತ್ತಿಗಳನ್ನು ಪ್ರದರ್ಶಿಸಬೇಕು". (ಎನ್.ಸಿ.ಎಫ್. ವರದಿ 2005). ದುರದೃಷ್ಟವಶಾತ್ ಇಂದು ಅಧ್ಯಾಪಕರು ತಮ್ಮ ಆದರ್ಶ, ಮೌಲ್ಯ ಹಾಗೂ ಆದರ್ಶಪ್ರಾಯ ವರ್ತನೆಗಳಿಂದ ತಮ್ಮ ವಿದ್ಯಾರ್ಥಿಗಳನ್ನು ಪ್ರಭಾವಿಸುವುದರಲ್ಲಿ ವಿಫಲರಾಗಿದ್ದಾರೆ. ಅಧ್ಯಾಪಕ ವೃತ್ತಿಯನ್ನು ಪ್ರವೇಶಿಸುವ ಬಹುತೇಕ ವ್ಯಕ್ತಿಗಳು ಮಕ್ಕಳ ಮೇಲಿನ ಪ್ರೀತಿ ಅಥವಾ ಅಧ್ಯಾಪಕ ವೃತ್ತಿಯ ಮೇಲಿನ ಪ್ರೇಮದಿಂದ ಹಾಗೆ ಮಾಡಿರುವುದಿಲ್ಲ. ಬದಲಾಗಿ, ಆರ್ಥಿಕ ಪರಿಗಣನೆಯಿಂದ ಈ ಆಯ್ಕೆಯನ್ನು ಮಾಡಿರುತ್ತಾರೆ. ವಿದ್ಯಾರ್ಥಿಗಳು ಅನುಕರಿಸಬಹುದಾದ ಆದರ್ಶಪ್ರಾಯ ವ್ಯಕ್ತಿತ್ವ ಅವರಲ್ಲಿರುವುದಿಲ್ಲ. ಬೋಧನೆಯೆಡೆಗೆ ಅವರಿಗಿರುವ ಮನೋಭಾವ, ದೃಷ್ಟಿಕೋನಗಳು ಇಂದಿಗೂ ನಿರಂಕುಶ ಸ್ವರೂಪವುಳ್ಳದ್ದು ಎಂದು ಕಂಡುಬರುತ್ತಿದೆ. ಮಕ್ಕಳನ್ನು ದಂಡಿಸುವುದು, ಮಿತಿಮೀರಿದ ಗೃಹಕಾರ್ಯದ ಹೊರೆ ಹೊರಿಸುವುದು, ಶೈಕ್ಷಣಿಕ ಸಾಧನೆಗೆ ಅತಿಯಾದ ಒತ್ತು ನೀಡುವುದು, ಕಠೋರ ಶಿಸ್ತಿನ ಕ್ರಮ ಕೈಗೊಳ್ಳುವುದು – ಇದ್ಯಾವುದು ಶಾಲೆಯನ್ನು ಸುಖದಾಯಕ ತಾಣವನ್ನಾಗಿಸುವುದಿಲ್ಲ. ಒಂದು ರೀತಿಯ ಸೂಕ್ಷ್ಮ ಹಿಂಸೆ ಮತ್ತು ಶೋಷಣೆ ಶಾಲಾ ವಾತಾವರಣವನ್ನು ಕಲುಷಿತಗೊಳಿಸುವುವು. ವಿದ್ಯಾರ್ಥಿಗಳು ಅಧ್ಯಾಪಕರ ನಕಾರಾತ್ಮಕ ಗುಣಗಳನ್ನು ಅನುಕರಿಸುವರು. ಬಹುತೇಕ ಶಿಕ್ಷಕರು ಸಂಸ್ಕೃತಿ, ಧರ್ಮ,ಜಾತಿ ಮತ್ತು ಭಾಷೆಗಳಿಗೆ ಸಂಬಂಧಿಸಿದ ತಮ್ಮ ಪೂರ್ವಾಗ್ರಹಗಳನ್ನು ಮೀರಲಾರರು.ಅವರು ಅಸಹನೆಯುಳ್ಳವರು, ಸಂಕುಚಿತ ಮನೋಭಾವದವರು ಮತ್ತು ತಮ್ಮ ಗುರಿಗಳನ್ನು ಸಾಧಿಸಿಕೊಳ್ಳಲು ಹಿಂಸಾತ್ಮಕ ಮಾರ್ಗಗಳನ್ನೂ ಸಹ ಹಿಡಿಯುವವರಾಗಿ ಕಂಡುಬರುತ್ತಿದ್ದಾರೆ. ಅಂಥ ಆಧ್ಯಾಪಕರು ಮಕ್ಕಳಿಗೆ ಶಾಂತಿಯ ಬಗ್ಗೆ ಶಿಕ್ಷಣವನ್ನು ನೀಡಲು ಅಸಮರ್ಥರು.

ಭಾವಿ ಶಿಕ್ಷಕರಿಗೆ ತಮ್ಮ ವೃತ್ತಿಯಲ್ಲಿ ಸಿಗಬಹುದಾದ ಅವಕಾಶಗಳನ್ನು ನವೀನತೆ ಮತ್ತು ಕಲ್ಪನಾ ಶಕ್ತಿಗಳನ್ನು ಪ್ರಯೋಗಿಸಿ ಉಪಯೋಗಿಸಿಕೊಳ್ಳುವ ಸಾಮರ್ಥ್ಯವನ್ನು ಇಂದಿನ ಅಧ್ಯಾಪಕರ ಶಿಕ್ಷಣ ನೀಡದಿರುವುದು ತರಬೇತಿಯ ತೀವ್ರ ದೋಷವಾಗಿದೆ. ಶಾಂತಿಗಾಗಿ ಶಿಕ್ಷಣದ ಅಗತ್ಯಗಳಿಗೆ ಸಂಬಂಧಿಸಿದಂತೆ ಇಂದಿನ ಅಧ್ಯಾಪಕ ಪ್ರಶಿಕ್ಷಣ ಶೈಕ್ಷಣಿಕ ಸಿದ್ಧತೆ ಅಥವಾ ಅಭಿಪ್ರೇರಣೆಗೆ ಬದಲಾಗಿ ಕೇವಲ "ಪ್ರಶಿಕ್ಷಿತ ಅಸಾಮರ್ಥ್ಯತೆ"ಯನ್ನು ಪ್ರೋತ್ಸಾಹಿಸುತ್ತಿದೆ.

ಹೀಗಾಗಿ, ಶಾಂತಿಗಾಗಿ ಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು ಅಧ್ಯಾಪಕ ಶಿಕ್ಷಣವನ್ನು ಎಲ್ಲಾ ಸ್ತರಗಳಲ್ಲೂ ವಿಳಂಬವಿಲ್ಲದೆ ಪುನರ್ವಿನ್ಯಾಸಗೊಳಿಸಬೇಕಾದ ಅಗತ್ಯವಿದೆ." ಇದು ರಾಷ್ಟ್ರೀಯ ಗಮನ ಕೇಂದ್ರಿತ ಸಮೂಹದ (Focus Group) ಅನಿಸಿಕೆ. ತಮ್ಮ ವಿದ್ಯಾರ್ಥಿಗಳಿಗೆ ಶಾಂತಿಯ ಸಂಸ್ಕೃತಿಯ ಮಾದರಿ ಮನುಷ್ಯರಾಗುವಂತೆ ಅಧ್ಯಾಪಕರನ್ನು ಶಾಂತಿಯ ಪ್ರೇಮಿಗಳು ಹಾಗೂ ಪ್ರೋತ್ಸಾಹಕರನ್ನಾಗಿ ಮಾರ್ಪಡಿಸಬೇಕಿದೆ. ಈ ಕೆಲಸವನ್ನು ಈ ಕೆಳಗಿನ ರೂಪುರೇಖೆಗಳಿಗೆ ಅನುಸಾರವಾಗಿ ಮಾಡಬಹುದಾಗಿದೆ.

1. ಶಾಂತಿ ಶಿಕ್ಷಣದ ಒಂದು ಘಟಕವನ್ನು ಪ್ರತ್ಯೇಕ ಪಠ್ಯಕ್ರಮದಂತೆ ಆಳವಡಿಸಬಹುದು ಇಲ್ಲವೇ ಶೈಕ್ಷಣಿಕ ಮನೋವಿಜ್ಞಾನ ಮತ್ತು ಶೈಕ್ಷಣಿಕ ತತ್ತ್ವಶಾಸ್ತ್ರಗಳ ಪಠ್ಯಕ್ರಮದ ಭಾಗವಾಗಿ ಇಡಬಹುದು.

Digitised by Bharatavani, CIIL

2. ಶಾಂತಿ ಶಿಕ್ಷಣವನ್ನು ವಿಧಾನ ಶಾಸ್ತ್ರದಲ್ಲಿ, ವಿಶೇಷವಾಗಿ ಭಾಷೆ, ಸಾಮಾಜಿಕ ವಿಜ್ಞಾನಗಳು (ಇತಿಹಾಸ, ಪೌರನೀತಿ, ಭೂಗೋಳ) ಮತ್ತು ಜೀವ ವಿಜ್ಞಾನಗಳ ಬೋಧನೆಯಲ್ಲಿ ಸಮಗ್ರಗೊಳಿಸಬಹುದು.
3. ಶಾಲಾ ಆಧಾರಿತ ಪ್ರಾಯೋಗಿಕ ಶಿಕ್ಷಣ ಅವಧಿಯ ಕಾರ್ಯಕ್ರಮದಲ್ಲಿ ತರಬೇತಿ ಪಡೆಯುತ್ತಿರುವ ಶಿಕ್ಷಕರಿಗೆ ಮಕ್ಕಳಿಗೆ ಶಾಂತಿಯ ಮಹತ್ತ್ವ ಮತ್ತು ಅದರ ಬಗ್ಗೆ ಬೋಧಿಸಲು ಅವಕಾಶಗಳನ್ನು ಒದಗಿಸಬಹುದಾಗಿದೆ.
4. ಶಿಕ್ಷಕ ತರಬೇತಿ ಸಂಸ್ಥೆಗಳು ಈ ಕೆಳಗಿನವುಗಳನ್ನು ಕುರಿತ ಪ್ರಾಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು

ಗುಂಪು ಕಲಹಗಳ ಅಧ್ಯಯನ, ಸಂಸ್ಕೃತಿ ಹಾಗೂ ಧರ್ಮದ ಬಗೆಗಿನ ಮನೋಭಾವಗಳ ತುಲನಾತ್ಮಕ ಅಧ್ಯಯನ, ಸಂಘರ್ಷ ಪರಿಹಾರಕ್ಕಾಗಿ ಸ್ವೀಕೃತವಾದ ಕ್ರಮಗಳ ವಿಶ್ಲೇಷಣೆ, ಐತಿಹಾಸಿಕ ಮತ್ತು ವರ್ತಮಾನದ ಶಾಂತಿ ಆಂದೋಳನಗಳು, ಶಾಂತಿಯ ಬಾಳ್ವೆಗೆ ತಮ್ಮನ್ನು ಸಮರ್ಪಿಸಿಕೊಂಡ ವ್ಯಕ್ತಿ, ಸಮೂಹ ಮತ್ತು ಸಂಸ್ಥೆಗಳ ಮಾದರಿ ಅಧ್ಯಯನಗಳು, ಚರ್ಚೆ, ಉಪನ್ಯಾಸ, ಶಿಕ್ಷಕರ ದಿನ,ಮಾನವ ಹಕ್ಕು ದಿನ ಮುಂತಾದ ವಿಶೇಷ ದಿನಗಳ ಆಚರಣೆ,ಶಾಂತಿ ಶಿಕ್ಷಣದ ವಿಷಯದ ಬಗೆಗಿನ ಪ್ರದರ್ಶನಗಳ ಆಯೋಜನೆ ಇತ್ಯಾದಿ.

**ಉಪಸಂಹಾರ:** ಸ್ವಾಮಿ ರಂಗನಾಥನಂದ ಅವರು ತಮ್ಮ **"ಪರಿವರ್ತನ ಶೀಲ ಸಮಾಜಕ್ಕಾಗಿ ಶಾಶ್ವತ ಮೌಲ್ಯಗಳು" (ನಾಲ್ಕನೇ ಭಾಗ; ಮಾನವನ ಪರಿಪೂರ್ಣಸಿದ್ಧಿಗಾಗಿ ಪ್ರಜಾಸತ್ತೆ)** ಎಂಬ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ– "ಇಂದು ಭಾರತದ ಕಂಠ ಶಾಂತಿ ಹಾಗೂ ಮಾನವೀಯ ಮೈತ್ರಿಯ ಬಗ್ಗೆ ನುಡಿಯುತ್ತಿದ್ದರೆ ಅದರ ಸನಾತನ ಸಂಸ್ಕೃತಿ ಮತ್ತು ದರ್ಶನಗಳಲ್ಲಿ ಕರುಣೆ ಮತ್ತು ಮಾನವೀಯ ಉತ್ತರದಾಯಿತ್ತ್ವಗಳ ಮೇಳೈಸುವಿಕೆಯೇ ಅದಕ್ಕೆ ಕಾರಣ. ಅಂತೆಯೇ ಅದು ಬಲಹೀನತೆಯ ಧ್ವನಿ ಆಗಿರದೆ ಶಕ್ತಿಯ ಧ್ವನಿಯಾಗಿದೆ" ನಮ್ಮ ಉಪನಿಷತ್ಕಾಲದ ಋಷಿಗಳು ತಮ್ಮ ತಾತ್ತ್ವಿಕ ಉಪದೇಶದ ಆದಿ ಮತ್ತು ಅಂತ್ಯದಲ್ಲಿ "ಓಂ ಶಾಂತಿ" ಎಂದು ಮೂರಾವರ್ತಿ ಉಚ್ಚರಿಸುತ್ತಿದ್ದರು. ಮೂರು ಬಾರಿ ಆವರ್ತನ ಕ್ರಮಶಃ ಬಾಹ್ಯ, ಮಾನಸಿಕ ಮತ್ತು ಆಂತರಿಕ ಶಾಂತಿಗಾಗಿ ಆಗಿತ್ತು. ನಮ್ಮ ಗುರಿ ಎಂದೆಂದಿನಿಂದಲೂ **"ಸರ್ವೇ ಜನಾಃ ಸುಖಿನೋ ಭವಂತು"** (ಅಂದರೆ ಎಲ್ಲರೂ ಸುಖಶಾಂತಿಯಿಂದ ಜೀವಿಸಲಿ) ಎನ್ನುವುದೇ ಆಗಿದೆ. ನಮ್ಮ ಇಂದಿನ ಆತಂಕ, ಉದ್ವೇಗ, ಚಿಂತೆ ಹಾಗೂ ಸಂಕಷ್ಟಗಳ ಮೂಲ ನಮ್ಮ ಮೌಲ್ಯ ವ್ಯವಸ್ಥೆಯಲ್ಲಿನ ಅವನತಿ. ನಮ್ಮ ಸಂಪ್ರದಾಯ, ಸಂಸ್ಕೃತಿ ಮತ್ತು ಪವಿತ್ರ ಗ್ರಂಥಗಳಲ್ಲಿ ನೆಲೆಗೊಂಡಿರುವ ಶಾಂತಿಯುತ ಜೀವನದ ಆದರ್ಶಗಳನ್ನು ನಾವು ಮರೆತುಬಿಟ್ಟಿದ್ದೇವೆ. ನಾವು ವಿಶ್ವಾಸವಿಟ್ಟಿರುವ ಶಾಶ್ವತ ಮೌಲ್ಯಗಳ ದಿಕ್ಕಿನಲ್ಲಿ ಇಂದು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಅಭಿಮುಖಗೊಳಿಸಬೇಕಾದ ಅವಶ್ಯಕತೆಯಿದೆ.

**–ಪ್ರೊ. ಮಂಜುನಾಥಯ್ಯ ಬಿ. ಎನ್.**

## ಶಾಂತಿನಿಕೇತನ

ಶಾಂತಿನಿಕೇತನದ ಹೆಸರು ನಮ್ಮಲ್ಲಿ ಹಿಂದಿನ ಸ್ಮೃತಿಗಳನ್ನು, ಕಥೆಗಳನ್ನು ಇತಿಹಾಸವನ್ನು ನೆನಪಿಗೆ ತರುವುದು. ಹಲವು ಅರ್ಥಗಳ ಸಂಕೇತದಂತಿದೆ ಈ ಹೆಸರು. "ಶಾಂತಿನಿಕೇತನ" ಎಂದರೆ ಶಾಂತಿಯ ನಿವಾಸ ಎಂದರ್ಥ. "ಶಾಂತಿನಿಕೇತನ" ವೆಂಬ ಪದವನ್ನು ಇಂದು ವಿವಿಧ ಸ್ಥಳಗಳನ್ನು ಸೂಚಿಸಲು ಹಾಗೂ ವಿವಿಧ ಸಂದರ್ಭಗಳಲ್ಲಿ ವೇದಿಕೆಗಳಲ್ಲಿಯೂ ಬಳಸಲಾಗುತ್ತಿದೆ. ಆದರೆ ಸಾಮಾನ್ಯವಾಗಿ ಈ ಪದ ರವೀಂದ್ರನಾಥ ಠಾಗೂರರ ಕಾಲದಲ್ಲಿ ಪ್ರಾರಂಭಗೊಂಡ ಸಂಸ್ಕೃತಿ ಮತ್ತು ಒಂದು ವ್ಯವಸ್ಥೆಯನ್ನು ಹೊಂದಿರುವ "ಶಾಂತಿನಿಕೇತನ"ವನ್ನೇ ನಮ್ಮ ಸ್ಮರಣೆಗೆ ತರುವುದು. ಐತಿಹಾಸಿಕವಾಗಿ, ಶಾಂತಿನಿಕೇತನದ ಹುಟ್ಟಿನ ನಿಖರತೆ ಬಗ್ಗೆ ಸಂಶಯವಿದೆಯಾದರೂ ಇದು ಹತ್ತೊಂಬತ್ತನೆಯ ಶತಮಾನದ ದಶಕದಲ್ಲಿ ಜನ್ಮತಾಳಿತೆಂದು ಹೇಳಬಹುದು. ರವೀಂದ್ರನಾಥ ಠಾಗೂರರು ರಾಯಪುರದ ಸಿನ್ಹ ಕುಟುಂಬದವರಿಂದ ಬೋಲ್‌ಪುರ್ ಎಂಬಲ್ಲಿ ಜಮೀನನ್ನು ಕೊಂಡರು ಎಂಬ ಅಂಶ ಎಲ್ಲರಿಗೂ ತಿಳಿದಿರುವುದು. ಈ ಘಟನೆ ರವೀಂದ್ರನಾಥ ಠಾಗೂರರು ಹುಟ್ಟಿದ ಎರಡು ವರ್ಷಗಳ ನಂತರ ನಡೆದಿದೆಯೆಂದು ಊಹಿಸಲಾಗಿದೆ.

ಕೆಲವು ದಶಕಗಳ ನಂತರ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಪ್ರಾರ್ಥನೆ ಮತ್ತು ಧ್ಯಾನಗಳ ಸ್ಥಳವಾದ 'ಮಂದಿರ್' ಮತ್ತು 'ಚಾತಿಂತಾಲಾ' ಆಶ್ರಮದ ಬಳಿ ಶಾಂತಿನಿಕೇತನವೆಂಬ ಮನೆಯನ್ನು ಕಟ್ಟಲಾಗಿದೆ. ಈ ಹಂತದಿಂದ "ಶಾಂತಿನಿಕೇತನ"ವು ಬೆಳೆಯಿತು. ಪ್ರಥಮತಃ ಧರ್ಮ (ಬ್ರಹ್ಮಸಮಾಜ)ದ ಎಲ್ಲೆಡೆಯೂ ಹರಡಲು ಶಾಲೆಯೊಂದನ್ನು ಇಲ್ಲಿ ಪ್ರಾರಂಭಿಸಲಾಯಿತು. ಈ ಬ್ರಹ್ಮವಿದ್ಯಾಲಯ ಠಾಗೂರರ ಪ್ರತಿಭಾವಂತ ಸೋದರ ಸಂಬಂಧಿ ಬಲೇಂದ್ರನಾಥ ಠಾಗೂರರ ಸ್ಮರಣೆಯೊಡನೆ ಸಂಬಂಧಿಸಿದೆ. ಶಾಂತಿನಿಕೇತನವು ಬ್ರಹ್ಮ ಬಂಧಬ್ ಉಪಾಧ್ಯಾಯ ಅವರ ನೇತೃತ್ವದಲ್ಲಿ ಆರಂಭವಾದ ಶಾಲೆಯ ನಂತರದ ಸ್ವರೂಪಕ್ಕೆ ತಾಣವಾಯಿತು. ಈ ಶಾಲೆಯು ರವೀಂದ್ರನಾಥ ಠಾಗೂರರ ಔಪಚಾರಿಕ ಮಾರ್ಗದರ್ಶನದಲ್ಲಿ ಆರಂಭಗೊಂಡ 'ಶಾಂತಿನಿಕೇತನದ ಶಾಲೆ'ಗೆ ದಾರಿ ಮಾಡಿಕೊಟ್ಟಿತು. ಶಾಂತಿನಿಕೇತನದ ಕಾರ್ಯಕ್ಷೇತ್ರ ಬಿರ್‌ಭುಮ್ ಜಿಲ್ಲೆಯ ಬೋಲ್‌ಪುರ್‌ವಾಗಿದ್ದರೂ, ಶತಮಾನದ ಸಾಂಸ್ಕೃತಿಕ ವಿಕಾಸದ ಇತಿಹಾಸದಲ್ಲಿ ಪಶ್ಚಿಮ ಬಂಗಾಳ ತನ್ನ ಪ್ರಭಾವವನ್ನು ಬೀರುತ್ತಲೇ ಇತ್ತು. ವಾಸ್ತವವಾಗಿ ಪ್ರಾರಂಭದಲ್ಲಿ ಕಲಾಭವನ ಮತ್ತು ಸಂಗೀತಭವನ ಜೊತಜೊತೆಯಲ್ಲೆ ಇದ್ದು, ಇವುಗಳ ಮೂಲ ಶಾಂತಿನಿಕೇತನದಲ್ಲೇ ಇದ್ದದ್ದು, ಕಂಡುಬರುವುದು. ಶಾಂತಿನಿಕೇತನದ ಪಾಂಡಿತ್ಯ ಮತ್ತು ಜ್ಞಾನಸಂಪಾದನೆಗಳ ಸಂಪ್ರದಾಯದೊಡನೆ ವಿದ್ಯಾಭವನವನ್ನೂ ಗುರುತಿಸಲಾಗಿದೆ.

ಔಪಚಾರಿಕವಾಗಿ 1921ರಲ್ಲಿ ಶಾಂತಿನಿಕೇತನದಲ್ಲಿ ಪ್ರಾರಂಭಗೊಂಡ ವಿಶ್ವಭಾರತಿಯು ವಿಶ್ವವೇ ಒಂದು ಗೂಡಿನಲ್ಲಿ ಭೇಟಿಮಾಡುವ ಸ್ಥಳ (ಯತ್ರ ವಿಶ್ವಂ ಭಾವತೀತ್ವೆಕ್ಕೆ ನಿರಂ)

Digitised by Bharatavani, CIIL

ಎಂಬ ಪ್ರಾಚೀನ ಉಲ್ಲೇಖದ ಮೂರ್ತಿಸ್ವರೂಪದಂತಿದೆ ಎಂದು ಶಾಂತಿನಿಕೇತನದ ಪ್ರಸಿದ್ಧ ವ್ಯಕ್ತಿಗಳಾದ ಬಿದುಶೇಖರ ಶಾಸ್ತ್ರಿಯವರು ವಿಶ್ವಭಾರತಿಯ ಉದ್ಘಾಟನೆಯ ಸಂದರ್ಭದಲ್ಲಿ ಹೇಳಿದರು. ಈ ಉಲ್ಲೇಖ ಉಪನಿಷತ್ತಿನಲ್ಲಿ ದೊರೆಯುವುದು. ಅಂದಿನಿಂದಲೂ ಶಾಂತಿನಿಕೇತನದ ಪ್ರಕೃತಿಯು ವಿಕಾಸಗೊಳ್ಳುತ್ತಲೇ ಬಂದಿದೆ. ವಿದೇಶಗಳಿಂದಲೂ ಹಾಗೂ ಭಾರತದ ವಿವಿಧ ಸ್ಥಳಗಳಿಂದಲೂ ಶಾಂತಿನಿಕೇತನಕ್ಕೆ ಹಲವಾರು ಪ್ರಸಿದ್ಧ ವ್ಯಕ್ತಿಗಳು ಭೇಟಿ ನೀಡಿದ್ದಾರೆ. ಉದಾಹರಣೆಗೆ ಮಹಾತ್ಮಾ ಗಾಂಧಿ, ಸಿ.ಎಫ್. ಆಂಡ್ರ್ಯೂಸ್, ಎಲ್. ಎನ್. ಎಲ್ಮ್‌ಹಿರನ್, ಜವಹರಲಾಲ್ ನೆಹರು ಹಾಗೂ ಹಲವು ಇತರ ಗಣ್ಯವ್ಯಕ್ತಿಗಳು. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ನೆಲೆಗಳಲ್ಲಿ ಉಂಟಾದ ಹಲವು ಅನ್ಯೋನ್ಯಕ್ರಿಯೆಗಳ ಪರಿಣಾಮವಾಗಿ ಶಾಂತಿನಿಕೇತನವು ಬೆಳೆದಿದೆ. ಟ್ಯಾಗೂರರು ವಿಭಿನ್ನ ಚಟುವಟಿಕೆಗಳ ಹಾಗೂ ಕಾರ್ಯಕ್ರಮಗಳ ಮೂಲಕ ಶಾಂತಿನಿಕೇತನದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಗುಂಪುಗಳ ಮೂಲಕ ಶಾಂತಿನಿಕೇತನದ ಎಲ್ಲೆಡೆ ಕೊಂಡೊಯ್ದರು.

ಭೌತಿಕವಾಗಿ ಕಲ್ಕತ್ತೆಯಿಂದ ಲಭ್ಯವಾಗುತ್ತಿದ್ದರೂ, ಸಹ ಪ್ರಕಾಶನಗಳು ಮುಖ್ಯತಃ ಠಾಗೂರರ ಕೃತಿಗಳು, ತಮ್ಮ ಮೂಲವನ್ನು ಶಾಂತಿನಿಕೇತನವು ಹತ್ತಾರು ದಶಕಗಳಿಂದ ಪ್ರತಿನಿಧಿಸುತ್ತಿರುವ ಸತ್ವ ಹಾಗೂ ಸಂಸ್ಕೃತಿಗಳಲ್ಲಿ ಹೊಂದಿವೆ. 'ಶಾಂತಿನಿಕೇತನ', 'ವಿಶ್ವಭಾರತಿ', ಮತ್ತು 'ಶಿಕ್ಷಾ' ಗುರುದೇವ ಠಾಗೂರರಿಂದ ರಚಿಸಲ್ಪಟ್ಟ ಪುಸ್ತಕಗಳು ಮೂಲತತ್ವಗಳನ್ನು ಹೊಂದಿವೆ. ವಿಶ್ವಭಾರತಿ, ಶಾಂತಿನಿಕೇತನಗಳಲ್ಲಿ ಶಿಕ್ಷಣವು ಹೇಗಿರಬೇಕು ಎಂಬುದರ ಬಗ್ಗೆ ಗುರುದೇವರ ಕಲ್ಪನೆ ಏನಿತ್ತು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾದರೆ ಮೇಲಿನ ಮೂರು ಪುಸ್ತಕಗಳ ಅಧ್ಯಯನ ಪ್ರಥಮ ಹಂತವಾಗಿದೆ. ಇಂದಿಗೂ ಶಾಂತಿನಿಕೇತನದ ಪ್ರಕಾಶನಗಳು ಅಧಿಕಾಧಿಕವಾಗಿ ಹೊರಬರುತ್ತಲಿವೆ. "ಶಾಂತಿನಿಕೇತನದ ತೀರ್ಥಯಾತ್ರೆ" ಎಂಬ ಗಾಂಧೀಜಿಯವರ ಪುಸ್ತಕ ಅಮೂಲ್ಯವಾದ ಕೊಡುಗೆಯಾಗಿದೆ.

ಶ್ರೀನಿಕೇತನ ವಿಶ್ವಭಾರತಿಯ ಗ್ರಾಮೀಣ ಆಯಾಮಗಳನ್ನು ಒದಗಿಸುತ್ತದೆಯಾದರೂ, ಅಲ್ಲಿ ಸಂಸ್ಕೃತಿಯನ್ನು ಕುರಿತು ಯಾವುದೇ ಕಾರ್ಯ ಶಾಂತಿನಿಕೇತನದ ಕಲಾತ್ಮಕತೆಯಿಂದ ಪ್ರಭಾವಿತವಾಗದೆಯಿರದು. ಉಪಕ್ರಮ ಮತ್ತು ದೃಷ್ಟಿಕೋನಗಳಲ್ಲಿ ವಿಶ್ವಭಾರತಿಯ ಅಂಗಗಳಾದ ಶ್ರೀನಿಕೇತನ ಮತ್ತು ಶಾಂತಿನಿಕೇತನ ಒಂದಕ್ಕೊಂದು ಪೂರಕವಾಗಿವೆ. ಶ್ರೀನಿಕೇತನದ ಉತ್ಪಾದನೆಗಳು ಶಾಂತಿನಿಕೇತನದ ಮುಂದುವರೆಯುತ್ತಿರುವ ಶೈಲಿಯ ಅಚ್ಚನ್ನು ಹೊಂದಿರುತ್ತವೆ.

ಶಾಂತಿನಿಕೇತನದ ಆರಂಭದ ದಿನಗಳಲ್ಲಿ ಅದು ಹೊಂದಿದ್ದ ಗುರಿ ಮತ್ತು ಉದ್ದೇಶಗಳನ್ನು ಸಡಿಲಗೊಳಿಸದೆ ವಿಶ್ವಭಾರತಿ 1951ರಲ್ಲಿ ಕೇಂದ್ರಿಯ ವಿಶ್ವವಿದ್ಯಾನಿಲಯವಾಗಿ ಪರಿವರ್ತಿತವಾಯಿತು. ವಿಶ್ವಭಾರತಿ ಮತ್ತೊಂದರ ಪ್ರತಿಕೃತಿಯಾಗದೆ ಪ್ರತಿಕೃತಿಗಳಿಗೆ ಮಾದರಿಯಾಗಿ ಉಳಿದುಕೊಂಡು ಮುಂದುವರೆಯುತ್ತಿದೆ. ವಿಶ್ವವಿದ್ಯಾನಿಲಯದ ಕಾನೂನು ಹಾಗೂ ಅಧಿನಿಯಮಗಳಲ್ಲಿ ಹುದುಗಿರುವ ದರ್ಶನಕ್ಕೆ ಅನುಸಾರವಾಗಿ ಹಲವಾರು ವರ್ಷಗಳ ಅವಧಿಯಲ್ಲಿ ವಿಭಾಗಗಳು ಹಾಗೂ ಭವನಗಳ ಸ್ವರೂಪದಲ್ಲಿ ಹಲವಾರು ನವ ಆಯಾಮಗಳು ಉದಯಿಸಿವೆ.

ಆಮ್ರಕುಂಜ, ಪಥಭವನ, ಮಂದಿರ, ಚತಿಂತಾಲ, ಸಾಲ್–ಬಿಥಿ, ಘಂತತಾಲ ಇವೆಲ್ಲವೂ ಶಾಂತಿನಿಕೇತನದ ಸಂಸ್ಕೃತಿಯ ವಿವಿಧ ಮುಖಗಳನ್ನು ವ್ಯಕ್ತಪಡಿಸುವ ಹಬ್ಬ (ಪರ್ವ)ಗಳ ತಾಣಗಳಾಗಿವೆ. ಶಾಂತಿನಿಕೇತನದಲ್ಲಿ ಜರುಗುವ ಸಮಾರಂಭಗಳ ಅಂತ್ಯದಲ್ಲಿ ಹಾಡಲಾಗುವ "ನಮ್ಮ ಶಾಂತಿನಿಕೇತನ" ಎಂಬ ಬಂಗಾಳಿ ಗಾನದ ಮೊದಲನೆಯ ಸಾಲು ಶಾಂತಿನಿಕೇತನದ ಸಾರಸರ್ವಸ್ವವಾಗಿದೆ. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿರುತ್ತಿದ್ದ ಜೀವಂತ ಹಾಗೂ ಅನುರಣನೀಯ ಸನ್ನಿವೇಶವನ್ನು ಇಂದಿಗೂ ಸಹ ಶಾಂತಿನಿಕೇತನವು ಒದಗಿಸಿಕೊಡುತ್ತಿದೆ. ಶಾಂತಿನಿಕೇತನದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಅಂತಃಸತ್ವಗಳು, ಜಾಗತಿಕ ಅಪೇಕ್ಷೆಯೊಂದಿಗೆ ವಿಶ್ವಭಾರತಿಯ ಮುಖ್ಯ ಶಕ್ತಿ ಕೇಂದ್ರಗಳಾಗಿವೆ.

**ಮೂಲ: ದಿಲೀಪ್ ಕುಮಾರ್ ಸಿನ್ಹಾ**
**ಅನು: ಚಂದ್ರಶೇಖರ್ ಬಿ. ಎಂ.**

## ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ

'ಮಗು' ಅಥವಾ 'ವ್ಯಕ್ತಿಯ' ವರ್ತನೆಯಲ್ಲಿ ಪರಿವರ್ತನೆಯನ್ನು ತರಬಲ್ಲ ಹಾಗೂ 'ಸಮಾಜದ ಉನ್ನತಿಯ' ರಾಮಬಾಣವೇ 'ಶಿಕ್ಷಣ'ವಾಗಿದೆ. ಈ ದಿಶೆಯಲ್ಲಿ ಶಿಕ್ಷಣದ ಮಹತ್ವವನ್ನು ಮನಗಂಡ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳಿಗೆ ಕೈಹಾಕಿದೆ. ಅಂತೆಯೇ ಶಾಲಾ ಅಭಿವೃದ್ಧಿಗಾಗಿ ಸ್ಥಳೀಯ ಮಟ್ಟದಲ್ಲಿ ಹಲವಾರು ಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಶಾಲಾ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ.

**ಶಾಲಾ ಅಭಿವೃದ್ಧಿಯ ಅರ್ಥ :** ಒಂದು ಶೈಕ್ಷಣಿಕ ಸಂಸ್ಥೆ ಅಥವಾ ಶಾಲೆಯ ಅಭಿವೃದ್ಧಿ ಎಂದರೆ ಯಾವುದೇ ಒಂದೇ ಒಂದು ವಿಭಾಗದ ಅಭಿವೃದ್ಧಿಯಲ್ಲದೇ ಶಾಲೆಯ ಸರ್ವಾಂಗೀಣ ಬೆಳವಣಿಗೆಯೇ ಶಾಲಾ ಅಭಿವೃದ್ಧಿಯಾಗಿದೆ. ಶಾಲಾ ಅಭಿವೃದ್ಧಿಯ ಕಾರ್ಯಕ್ಕಾಗಿಯೇ ಸರ್ಕಾರವು 'ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ' (ಎಸ್.ಡಿ.ಎಮ್.ಸಿ)ಯನ್ನು ರೂಪಿಸಿದೆ.

ಸಂವಿಧಾನದ '45ನೇ ಕಲಂ'ನಲ್ಲಿ ಸಂವಿಧಾನ ಜಾರಿಗೆ ಬಂದ 10 ವರ್ಷದೊಳಗೆ 6–14 ವರ್ಷದ ಎಲ್ಲ ಮಕ್ಕಳಿಗೆ 'ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು' ಎಂಬುದು ಇನ್ನೂ ಮರೀಚಿಕೆಯಾಗಿಯೇ ಉಳಿದಿದ್ದು ಅದನ್ನು ಸಾಕಾರಗೊಳಿಸಲು ಸರ್ಕಾರ ಹಲವಾರು ಶೈಕ್ಷಣಿಕ ಯೋಜನೆಗಳನ್ನು ಹಾಕಿಕೊಂಡಿದೆ ಮತ್ತು ಹಾಕಿಕೊಳ್ಳುತ್ತಿದೆ.

Digitised by Bharatavani, CIIL

ಉದಾ: ಸರ್ವಶಿಕ್ಷಣ ಅಭಿಯಾನ (2001–2010) ಕೂಲಿಯಿಂದ ಶಾಲೆಗೆ, ಬಾ ಮರಳಿ ಶಾಲೆಗೆ, ಚಿಣ್ಣರ ಅಂಗಳ, ಸಮುದಾಯದತ್ತ ಶಾಲೆ, ಮಧ್ಯಾಹ್ನದ ಬಿಸಿಯೂಟ, ಚೈತನ್ಯ ಮತ್ತು ನಲಿ–ಕಲಿ.

ಹೀಗೆ ಈ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಿಂದಾಗಿ ಅವುಗಳನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಲೋಸುಗ ಡಾ. ರಾಜಾರಾಮಣ್ಣನವರ ವರದಿಯ ಶಿಫಾರಸ್ಸಿನಂತೆ ಜಾರಿಗೆ ಬಂದಂತಹ ಒಂದು ಸಮಿತಿಯೇ 'ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ'ಯಾಗಿದೆ (School Devlopment and Monitoring Committee- SDMC). ಶಾಲಾ ಶಿಕ್ಷಕರ ಹೊರೆಯನ್ನು ಕಡಿಮೆ ಮಾಡಿ, ಶಾಲೆಯನ್ನು ಅಭಿವೃದ್ಧಿ ಪಥದ ಮೇಲೆ ಕೊಂಡೊಯ್ಯಲು ಸಮುದಾಯದ ಸಹಭಾಗಿತ್ವದೊಂದಿಗೆ ರಚಿತವಾದಂತಹ ಸಮಿತಿಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳೆಂದು ಕರೆಯುತ್ತಾರೆ.

ಈ ಹಿಂದೆ ಇದ್ದ ಶಾಲಾ ಸುಧಾರಣಾ ಸಮಿತಿಗಳನ್ನು ರದ್ದು ಪಡಿಸಿ ಶಾಲಾ ಮಟ್ಟದಲ್ಲಯೇ ಪಾಲಕರು, ಶಿಕ್ಷಕರು ಮತ್ತು ಸಮುದಾಯದ ಸದಸ್ಯರನ್ನು ಒಳಗೊಂಡ ಸಮಿತಿಗಳ ರಚನೆಗೆ ಒಲವು ತೋರಿತು ಮತ್ತು ಅದರಿಂದಾಗಬಹುದಾದ ಶೈಕ್ಷಣಿಕ ಲಾಭಗಳ ಬಗ್ಗೆ ತನ್ನ ವರದಿಯನ್ನು ಶಿಫಾರಸ್ಸು ಮಾಡಿತು.

**ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ರಚನೆ:** ಗ್ರಾಮ ಶಿಕ್ಷಣ ಸಮಿತಿಗಳು ಹಾಗೂ ಶಾಲಾ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ ಶಾಲಾ ಮಟ್ಟದಲ್ಲಿ ಎಸ್.ಡಿ.ಎಮ್.ಸಿ.ಗಳನ್ನು ರಚಿಸಲು ಸರಕಾರ ತನ್ನ ಆದೇಶ ಸಂಖ್ಯೆ: ಸ.ಆ.ಸ. ಇಡಿ/ಪಿ.ಬಿ.ಎಸ್/2001 ಬೆಂಗಳೂರು, ದಿನಾಂಕ 27.4.2001 ಮೂಲಕ ನಿರ್ದೇಶನ ನೀಡಿದೆ. ಅದರ ಪ್ರಕಾರ ಎಸ್.ಡಿ.ಎಮ್.ಸಿ.ಯು ಈ ಕೆಳಕಂಡ ಸದಸ್ಯ ಸಮೂಹವನ್ನು ಒಳಗೊಂಡಿರುತ್ತದೆ:

**ಅ) ಪೋಷಕ ಪ್ರತಿನಿಧಿಗಳು (9 ಜನ):**

ಎಸ್.ಡಿ.ಎಮ್.ಸಿ ಯನ್ನು ರಚಿಸುವ ಸಲುವಾಗಿ ಆಯಾ ಶಾಲೆಯ ಮುಖ್ಯೋಪಾಧ್ಯಾಪಕರು, ಊರಿನ (ಗ್ರಾಮದ) ಪ್ರಮುಖರು ಹಾಗೂ ಶಾಲಾ ಪೋಷಕರೆಲ್ಲರೂ ಒಂದೆಡೆ ಸಭೆ ಸೇರಿ 9 ಜನ ಪೋಷಕ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಇವರಲ್ಲಿ ಇಬ್ಬರು ಎಸ್.ಸಿ/ಎಸ್.ಟಿ, 3 ಜನ ಮಹಿಳೆಯರು ಮತ್ತು ಒಬ್ಬರು ಅಲ್ಪಸಂಖ್ಯಾತ ವರ್ಗದವರಿರಬೇಕು. ಒಂದು ಪಕ್ಷ ಈ ಮೇಲ್ಕಾಣಿಸಿದ ಪ್ರತಿನಿಧಿಗಳಲ್ಲಿ ಎಸ್.ಸಿ/ಎಸ್.ಟಿ ಮತ್ತು ಅಲ್ಪಸಂಖ್ಯಾತರ ಪ್ರತಿನಿಧಿಗಳು ಲಭ್ಯವಿರದಿದ್ದಲ್ಲಿ ಬೇರೆಯವರಿಂದ ಭರ್ತಿಮಾಡಬಹುದು. ಆದರೆ ಯಾವುದೇ ಪೋಷಕರು ಒಂದೇ ಕಾಲದಲ್ಲಿ (ಒಂದೇ ಅವಧಿಯಲ್ಲಿ) ಎರಡು ಅಥವಾ ಎರಡಕ್ಕಿಂತ ಹೆಚ್ಚು ಎಸ್.ಡಿ.ಎಮ್.ಸಿ ಗಳ ಪ್ರತಿನಿಧಿ (ಸದಸ್ಯ)ಗಳಾಗಿರಬಾರದು.

**ಆ) ಪದನಿಮಿತ್ತ ಸದಸ್ಯರು:** ಎಸ್.ಡಿ.ಎಮ್.ಸಿ ಯು ಈ ಕೆಳಗಿನಂತೆ ಪದ ನಿಮಿತ್ತ ಸದಸ್ಯರನ್ನು ಒಳಗೊಂಡಿರಬೇಕು:

- ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳು (ಇವರುಗಳು ಶಾಲೆಯಿರುವ ಕ್ಷೇತ್ರವನ್ನು ಪ್ರತಿನಿಧಿಸುತ್ತಿರಬೇಕು) ಆರೋಗ್ಯ ಕಾರ್ಯಕರ್ತರು ಶಾಲಾ ಮುಖ್ಯೋಪಾಧ್ಯಾಪಕರು ನಾಮ ನಿರ್ದೇಶಿತ ಸದಸ್ಯರು (ಇವರಿಗೆ ಮತದಾನದ ಹಕ್ಕು ಇರುವುದಿಲ್ಲ) ಶಾಲೆಗೆ ಭೂಮಿಯನ್ನು ದಾನ ಮಾಡಿದವರು ಶಾಲೆಗೆ ಕಟ್ಟಡವನ್ನು ಕಟ್ಟಿಸಿಕೊಟ್ಟವರು ಶಾಲೆಯನ್ನು ದತ್ತು ತೆಗೆದುಕೊಂಡ ಮಹಾನುಭಾವರು ಆ ಕ್ಷೇತ್ರದಲ್ಲಿ ವಾಸಮಾಡುತ್ತಿರುವ ನಿವೃತ್ತ ಶಿಕ್ಷಕರು ಸ್ಥಳೀಯ ಸೇವಾ ಸಂಸ್ಥೆಯ ಇಬ್ಬರು ಜನ ಶಿಕ್ಷಣ ಆಸಕ್ತ ಸದಸ್ಯರು ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು

ಇವರೆಲ್ಲರೂ ಒಟ್ಟುಗೂಡಿ ಶಾಲಾ ಅಭಿವೃದ್ಧಿಯ ಕಾರ್ಯಗಳತ್ತ ಗಮನ ಹರಿಸಬೇಕಾಗುತ್ತದೆ.

**ಎಸ್.ಡಿ.ಎಮ್.ಸಿ. ಯ ಕರ್ತವ್ಯಗಳು/ಕಾರ್ಯಗಳು:**

- ಶಾಲಾ ಕಟ್ಟಡದ ನಿರ್ಮಾಣವನ್ನು/ನಿರ್ವಹಣೆಯನ್ನು ಮಾಡುವುದು
- ಶಾಲೆಗೆ ಬೇಕಾಗಬಹುದಾದಂತಹ ಸಂಪನ್ಮೂಲಗಳನ್ನು, ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದ
- ವರ್ಷದಲ್ಲಿ ಕನಿಷ್ಠ ಮೂರು ಬಾರಿಯಾದರೂ ಪೋಷಕ ಸಭೆಗಳನ್ನು ಏರ್ಪಡಿಸುವುದು
- ವರ್ಷಕ್ಕೆ ಸ್ಥಳೀಯ ರಜೆಗಳು ನಾಲ್ಕಕ್ಕೆ ಮೀರದಂತೆ ಎಚ್ಚರವಹಿಸುವುದು
- ಶಾಲಾ ಮುಖ್ಯೋಪಾಧ್ಯಾಪಕರಿಗೆ ನಿರ್ಬಂದಿತ ರಜೆಗಳನ್ನು ನಿರ್ಧರಿಸುವುದು
- ಶಾಲೆಯ ಹಣಕಾಸಿನ ಮೂಲಗಳ ಹಾಗೂ ಹಣಕಾಸಿನ ನಿರ್ವಹಣೆಯ ದಾಖಲೆಗಳನ್ನು ಆಗಾಗ ಪರಿಶೀಲಿಸುವುದು
- ಶಿಕ್ಷಕರ ದಿನವಹಿ ಹಾಜರಾತಿಯನ್ನು ಪರಿಶೀಲಿಸುವುದು
- ಶಾಲೆಯು ದಿನ ನಿತ್ಯ ಹೇಗೆ ನಡೆಯುತ್ತಿದೆ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಎಸ್.ಡಿ.ಎಮ್.ಸಿ ಸದಸ್ಯರು ಆಗಾಗ ಶಾಲೆಗಳಿಗೆ ಭೇಟಿಕೊಟ್ಟು ಶಿಕ್ಷಕರ ಹಾಜರಾತಿ ಪುಸ್ತಕವನ್ನು ಅವಲೋಕಿಸುವುದು
- ಶಾಲೆಯ ಕ್ರಮಬದ್ಧ ಅಭಿವೃದ್ಧಿಗಾಗಿ ಸಮರ್ಪಕ ಯೋಜನೆಗಳನ್ನು ಸಿದ್ಧಪಡಿಸುವುದು
- ಶಾಲೆಯ ಸುಧಾರಣೆಯ ನಿಟ್ಟಿನಲ್ಲಿ ಆವಶ್ಯವಾದ ರಚನಾತ್ಮಕ ಸಲಹೆ–ಸೂಚನೆಗಳನ್ನು ನೀಡುವುದು
- ಸಂಸ್ಥೆಯ ಉಳಿವು – ಬೆಳವಣಿಗೆಗಾಗಿ ದಾನಿಗಳಿಂದ ಕಾಣಿಕೆಗಳನ್ನು ಸಂಗ್ರಹಿಸುವುದು.

**–ಡಾ. ಶೈಲಜಾ ಹೆಚ್.ಎಂ.**

Digitised by Bharatavani, CIIL

## ಶಾಲಾ ಕ್ಯಾಲೆಂಡರ್

ಶಾಲಾ ಕ್ಯಾಲೆಂಡರ್ ಪ್ರತಿಯೊಂದು ಶಾಲೆಯಲ್ಲಿಯೂ ಶಾಲೆಯು ಆರಂಭವಾಗುವ ದಿನದಿಂದ ಹಿಡಿದು ಶಾಲೆಯಲ್ಲಿನ ವಿದ್ಯಾರ್ಥಿಗಳ ಫಲಿತಾಂಶಗಳನ್ನು ಪ್ರಕಟಿಸುವವರೆಗೆ ನಡೆಯುವ ಚಟುವಟಿಕೆಗಳ ಒಂದು ಸ್ಪಷ್ಟ ಚಿತ್ರವನ್ನು ನೀಡುತ್ತದೆ. ಶಾಲೆಯ ಪ್ರಾರಂಭದ ಅವಧಿ, ಮುಕ್ತಾಯದ ಅವಧಿಗಳ ನಡುವೆ ಜರಗುವ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳನ್ನು ಕುರಿತು ತಿಳಿಸುತ್ತದೆ. ಇದು ಕೆಲಸದ ಅವಧಿಯನ್ನು, ಬೋಧಿಸಲ್ಪಡುವ ವಿಷಯಗಳು, ಬೋಧಿಸುತ್ತಿರುವ ಶಿಕ್ಷಕರು, ವಿರಾಮವಿರುವ ಶಿಕ್ಷಕರು, ಆಟದ ಅವಧಿ, ಬೋಧನೆಗೆ ಕೊಠಡಿಗಳ ಹಂಚಿಕೆ, ಶಾಲೆಯಲ್ಲಿ ಹಮ್ಮಿಕೊಳ್ಳುವ ಚಟುವಟಿಕೆಗಳು, ರಾಷ್ಟ್ರೀಯ ಹಬ್ಬಗಳು, ಸ್ಥಳೀಯ ಹಬ್ಬಗಳಿಗೆ ಸಂಬಂಧಿಸಿದ ರಜೆಗಳು ಮುಂತಾದ ಅಂಶಗಳ ವಿವರಗಳನ್ನು ಶಾಲಾ ಕ್ಯಾಲೆಂಡರ್ ನೀಡುತ್ತದೆ. ಉತ್ತಮ ರೀತಿಯಲ್ಲಿ ರಚಿಸಿದ ಕ್ಯಾಲೆಂಡರ್ ಶಾಲೆಯು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತದೆ. ಶಾಲಾ ಕ್ಯಾಲೆಂಡರ್ ಶಾಲಾ ಕಾರ್ಯಕ್ರಮಗಳು ಸುಗಮವಾಗಿ ಸಾಗಲು ಒಂದು ಚೌಕಟ್ಟನ್ನು ಒದಗಿಸುತ್ತದೆ. ಶಿಕ್ಷಣದ ಉದ್ದೇಶಗಳು ಕಾರ್ಯರೂಪಕ್ಕೆ ಬರಲು ಇದೊಂದು ಉಪಕರಣವಾಗಿದೆ.

**ಶಾಲಾ ಕ್ಯಾಲೆಂಡರ್‌ನ ಮಹತ್ವ:**

1. ಸಮಯ ಮತ್ತು ಶ್ರಮದ ಅಪವ್ಯಯವನ್ನು ತಪ್ಪಿಸುತ್ತದೆ.
2. ಬೋಧನಾ ಕಾರ್ಯ ಹಾಗೂ ಸಹಪಠ್ಯ ಚಟುವಟಿಕೆಗಳಿಗೆ ಅಗತ್ಯ ಗಮನ ನೀಡುತ್ತದೆ
3. ಎಲ್ಲಾ ಚಟುವಟಿಕೆಗಳಿಗೂ ಸೂಕ್ತ ಗಮನ ಹಾಗೂ ಕಾಲಾವಕಾಶ ಒದಗಿಸುವುದರಿಂದ ಶಾಲಾ ಕಾರ್ಯ ವ್ಯವಸ್ಥಿತವಾಗಿ ನಡೆಯುತ್ತದೆ
4. ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಕಾರ್ಯ ಶಿಸ್ತನ್ನು ಬೆಳೆಸುತ್ತದೆ
5. ಶಿಕ್ಷಣದ ಉದ್ದೇಶಗಳನ್ನು ಸಾಧಿಸಲು ನೆರವು ನೀಡುತ್ತದೆ
6. ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಸಮಯಪ್ರಜ್ಞೆಯನ್ನು ಬೆಳೆಸುತ್ತದೆ
7. ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲು ನೆರವಾಗುತ್ತದೆ
8. ಉತ್ತಮ ಹವ್ಯಾಸಗಳನ್ನು ಬೆಳೆಸುತ್ತದೆ
9. ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನೆರವಾಗುತ್ತದೆ

**ಶಾಲಾ ಕ್ಯಾಲೆಂಡರ್‌ನ ರಚನಾ ತತ್ವಗಳು:**

ಶಾಲಾ ಕ್ಯಾಲೆಂಡರ್‌ನ ರಚನೆಯು ಕೌಶಲ್ಯದ ಕಾರ್ಯವಾಗಿದೆ. ರಚನೆಯ ಸಂದರ್ಭದಲ್ಲಿ ಹಲವಾರು ತತ್ವಗಳನ್ನು ಹಾಗೂ ಅಂಶಗಳನ್ನು ಪರಿಗಣಿಸಿ ಶಾಲಾ ಕ್ಯಾಲೆಂಡರನ್ನು ರಚಿಸಬೇಕು.

1. **ಶಾಲಾ ವಿಧ:** ಹಲವಾರು ಬಗೆಯ ಶಾಲೆಗಳನ್ನು ಕಾಣುತ್ತೇವೆ. ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಗ್ರಾಮಾಂತರ ಶಾಲೆ, ನಗರ ಶಾಲೆ, ಬಾಲಕರ ಶಾಲೆ, ಬಾಲಕಿಯರ ಶಾಲೆ, ಮಾದರಿ ಶಾಲೆ, ಸಾಮಾನ್ಯ ಶಾಲೆ ಇನ್ನು ಮುಂತಾದವು. ಇವುಗಳ ಕಾರ್ಯಭಾರ, ಕಾರ್ಯಚಟುವಟಿಕೆಗಳಲ್ಲಿ ಭಿನ್ನತೆಯಿರುತ್ತದೆ. ಏಕಪಾಳಿಯ ಶಾಲೆಗಳಿಗಿಂತ ಎರಡು ಪಾಳಿಯ (ಶಿಫ್ಟ್) ಶಾಲೆಗಳಿದ್ದರೆ ದೊರೆಯುವ ಅವಧಿ ಕಡಿಮೆಯಿರುತ್ತದೆ. ಏಕೋಪಾಧ್ಯಾಯ ಶಾಲೆಗಳ ಸ್ವರೂಪವೇ ಬೇರೆಯಿರುತ್ತದೆ. ಪ್ರೌಢಶಾಲೆಗಳ ಅವಧಿ ಪ್ರಾಥಮಿಕ ಶಾಲೆಗಳಿಗಿಂತ ಹೆಚ್ಚಿನದಾಗಿರುತ್ತದೆ. ಈ ಶಾಲಾ ಮಾದರಿಗಳಿಗೆ ಅನುಗುಣವಾಗಿ ಶಾಲಾ ಕ್ಯಾಲೆಂಡರ್‌ನ್ನು ರಚಿಸಬೇಕಾಗುವುದು.

2. **ಇಲಾಖೆಯ ನಿಯಮಾವಳಿಗಳು:** ಶಿಕ್ಷಣ ಇಲಾಖೆಯ ನಿಯಮಾವಳಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಶಾಲಾ ಕ್ಯಾಲೆಂಡರನ್ನು ರಚಿಸಬೇಕಾಗುತ್ತದೆ.

3. **ದೊರೆಯುವ ಒಟ್ಟು ಕಾಲಾವಧಿ:** ವಿವಿಧ ಚಟುವಟಿಕೆಗಳು, ಸಹಪಠ್ಯ ಚಟುವಟಿಕೆಗಳು, ರಾಷ್ಟ್ರೀಯ ದಿನಗಳು, ಬೋಧನಾ ಕಾರ್ಯಕ್ಕೆ ಪೂರಕವಾದ ಚಟುವಟಿಕೆಗಳಿಗೆ ದೊರೆಯುವ ಒಟ್ಟು ಕಾಲಾವಧಿಗೆ ಸೂಕ್ತ ರೀತಿಯಲ್ಲಿ ಅವಕಾಶ ಕಲ್ಪಿಸಬೇಕಾಗುತ್ತದೆ.

4. **ಚಟುವಟಿಕೆಗಳ ಸಾಪೇಕ್ಷ ಮಹತ್ವ:** ವಿವಿಧ ಚಟುವಟಿಕೆಗಳ ಸಾಪೇಕ್ಷ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಶಾಲಾ ಕ್ಯಾಲೆಂಡರ್‌ನಲ್ಲಿ ಅವುಗಳಿಗೆ ಅವಕಾಶ ಕಲ್ಪಿಸಬೇಕು.

5. **ವೈವಿಧ್ಯತೆ:** ಶಾಲಾ ಕ್ಯಾಲೆಂಡರ್ ವೈವಿಧ್ಯತೆಯಿಂದ ಕೂಡಿದ ಚಟುವಟಿಕೆಗಳನ್ನು ಒಳಗೊಂಡಿರಬೇಕು.

6. **ನಮ್ಯತೆ:** ಶಾಲೆಯ ಅಗತ್ಯಗಳನ್ನು ಆಧರಿಸಿ ಶಾಲಾ ಕ್ಯಾಲೆಂಡರ್‌ನಲ್ಲಿ ಅಲ್ಪಸ್ವಲ್ಪ ಬದಲಾವಣೆಯನ್ನುಂಟು ಮಾಡಲು ಅವಕಾಶವಿರಬೇಕು. ಅಂದರೆ ಅದು ನಮ್ಯತೆಯ ಲಕ್ಷಣವನ್ನು ಹೊಂದಿರಬೇಕು.

7. **ಸಿಬ್ಬಂದಿ, ಉಪಕರಣಗಳು ಮತ್ತು ಕಟ್ಟಡ:** ಎಲ್ಲಾ ಶಾಲೆಗಳೂ ಸಮರ್ಪಕವಾದ ಸಂಪನ್ಮೂಲಗಳನ್ನು ಹೊಂದಿರುವುದಿಲ್ಲ. ಶಾಲೆಯಲ್ಲಿ ದೊರೆಯುವ ಶಿಕ್ಷಕರು, ಉಪಕರಣಗಳು, ವರ್ಗಕೋಣೆ ಮುಂತಾದುವುಗಳನ್ನು ಗಮನದಲ್ಲಿಟ್ಟುಕೊಂಡು ಶಾಲಾ ಕ್ಯಾಲೆಂಡರನ್ನು ರಚಿಸಬೇಕಾಗುವುದು.

8. **ಆಟ ಮತ್ತು ಮನರಂಜನೆ ಚಟುವಟಿಕೆಗಳು:** ದೈಹಿಕ ಚಟುವಟಿಕೆಗಳು ಕಲಿಕೆಯಲ್ಲಿ ಆಸಕ್ತಿ ಮೂಡಿಸುವುವು. ಕೇವಲ ವಿಷಯಗಳ ಬೋಧನೆಗೆ ಮಾತ್ರ ಅವಕಾಶ ಕಲ್ಪಿಸದೆ ಶಾಲಾ ಕ್ಯಾಲೆಂಡರ್‌ನಲ್ಲಿ ಆಟ ಮತ್ತು ಮನರಂಜನೆ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಬೇಕು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಆಟಗಳು ಮತ್ತು ಮನರಂಜನಾ ಕಾರ್ಯಕ್ರಮಗಳು ಸಹಾಯಕವಾಗುತ್ತವೆ.

Digitised by Bharatavani, CIIL

9. **ಹವಾಗುಣ ಅಂಶಗಳು**: ಒಂದೇ ರೀತಿಯಾದ ಶಾಲಾ ಕ್ಯಾಲೆಂಡರ್ ಎಲ್ಲಾ ಋತುಮಾನಕ್ಕೂ ಸಮರ್ಪಕವಾಗಿರುವುದಿಲ್ಲ. ಬೇಸಿಗೆಯ ಕ್ಯಾಲೆಂಡರ್ ಮಳೆಗಾಲದಲ್ಲಿ ಹಾಗೂ ಬಿತ್ತನೆ ಮತ್ತು ಸುಗ್ಗಿಯ ಕಾಲದಲ್ಲಿ ಗ್ರಾಮೀಣ ವಿದ್ಯಾರ್ಥಿಗಳನ್ನು ಪೋಷಕರು ತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಆ ಅವಧಿಯಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ಕಡಿಮೆಯಾಗುವುದು. ಇಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಾಲಾ ಕ್ಯಾಲೆಂಡರನ್ನು ರಚಿಸಬೇಕು.

**ಶಾಲಾ ಕ್ಯಾಲೆಂಡರ್ ರಚನೆಯಲ್ಲಿನ ಸಮಸ್ಯೆಗಳು:**

ಶಾಲಾ ಕ್ಯಾಲೆಂಡರ್ ರಚನೆಯ ತತ್ವಗಳನ್ನೆಲ್ಲ ಅನುಸರಿಸಿ ಪರಿಪೂರ್ಣ ಮತ್ತು ಸಮರ್ಪಕವಾದ ಶಾಲಾ ಕ್ಯಾಲೆಂಡರ್‌ನ್ನು ರಚನೆ ಮಾಡುವುದು ಕಷ್ಟಕರವಾದುದು. ರಚನೆಯ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತವೆ, ಅವುಗಳೆಂದರೆ;

1. ಶಾಲಾ ಕ್ಯಾಲೆಂಡರ್ ರಚಿಸುವಾಗ ಶಿಕ್ಷಕರು ನಿರಾಸಕ್ತಿಯನ್ನು ತೋರಿಸುವುದು.
2. ವಿದ್ಯಾರ್ಥಿಗಳು ಶಾಲಾ ಶಿಕ್ಷಕರು ಮತ್ತು ಸಿಬ್ಬಂದಿಯನ್ನು ಏಕರೀತಿಯಲ್ಲಿ ತೃಪ್ತಿಪಡಿಸಲು ಸಾಧ್ಯವಿಲ್ಲ.
3. ಸಂಪನ್ಮೂಲಗಳ ಕೊರತೆಯಿದ್ದರೆ ಸಮರ್ಪಕವಾದ ಶಾಲಾ ಕ್ಯಾಲೆಂಡರ್ ತಯಾರಿಸುವುದು ಕಷ್ಟವಾಗುತ್ತದೆ.
4. ಪಠ್ಯಮತ್ತುಸಹಪಠ್ಯಚಟುವಟಿಕೆಗಳನ್ನುಕ್ಯಾಲೆಂಡರ್‌ನಲ್ಲಿರುವಂತೆ ಸಮರ್ಪಕ ರೀತಿಯಲ್ಲಿ ವ್ಯವಸ್ಥಿತಗೊಳಿಸುವುದು ಕೆಲವು ವೇಳೆ ಕಷ್ಟವಾಗುತ್ತದೆ.

–**ಡಾ. ಶರಣಮ್ಮ ಆರ್.**

## ಶಾಲಾಪೂರ್ವ ಶಿಕ್ಷಣದಲ್ಲಿ ಪಿಯಾಜ್ಞೆಯ ಉಪಕ್ರಮ

ಜೀನ್ ಪಿಯಾಜ್ಞೆ (Jean Piaget) ಸ್ವಿಜ್ಜರ್‌ಲೆಂಡಿನ ನ್ಯೂಕ್ಚಟೆಲ್ ಎನ್ನುವ ನಗರದಲ್ಲಿ ಆಗಸ್ಟ್ 9, 1896ರಂದು ಜನಿಸಿದರು. ತಂದೆ ಸಾಹಿತ್ಯ ಪ್ರಾಧ್ಯಾಪಕ ಆರ್ಥರ್, ತಾಯಿ ರೆಬೆಕ್ಕಾ ಜಾನ್ ಸನ್. ಪಿಯಾಜ್ಞೆಗೆ ಬಾಲ್ಯದಿಂದಲೂ ಇದ್ದ ವಿಜ್ಞಾನದ ಬಗ್ಗೆ ಆಸಕ್ತಿಯನ್ನು ಒಂದು ವಿಚಿತ್ರ ಮಾನಸಿಕ ಪ್ರವೃತ್ತಿ ಎಂದು ತಾಯಿ ಪರಿಗಣಿಸಿದಳು. ಆದರೆ ಅವನ ತಂದೆ ಪಿಯಾಜ್ಞೆಗೆ ಬಾಲ್ಯದಿಂದಲೇ ಅಧ್ಯಯನದ ಬಗ್ಗೆ ತೀವ್ರ ಆಸಕ್ತಿಯನ್ನು ಬೆಳೆಸಿಕೊಳ್ಳಲು ಮಾದರಿಯಾಗಿದ್ದನು. ಹತ್ತು ವರ್ಷದವನಾಗಿದ್ದಾಗಲೆ ಪಿಯಾಜ್ಞೆಯ ಆಸಕ್ತಿ ಸ್ಥಳೀಯ ಪ್ರಾಕೃತಿಕ ಇತಿಹಾಸದ ವಸ್ತು ಪ್ರದರ್ಶನದಲ್ಲಿ ನೋಡಿದ ಮೃದ್ವಂಗಿ–ಬಸವನಹುಳುಗಳ (Molleske) ಕಡೆಗೆ ಆಕರ್ಷಿತನಾಗಿ ಗಂಟೆಗಟ್ಟಲೆ ಅವುಗಳನ್ನು ವೀಕ್ಷಿಸತೊಡಗಿದನು. 11ನೇ ವರ್ಷದಲ್ಲಿ ನ್ಯೂಕ್ಚೆಟೆಲ್‌ನ ಲ್ಯಾಟಿನ್ ಹೈಸ್ಕೂಲ್‌ನಲ್ಲಿ ಅಧ್ಯಯನ ಮಾಡುತ್ತಿದ್ದಾಗ ಪಿಯಾಜ್ಞೆ ಬಿಳಿ ಗುಬ್ಬಚ್ಚಿಗಳ (Albino Sparow) ಬಗ್ಗೆ ಒಂದು ಸಣ್ಣ ವೈಜ್ಞಾನಿಕ ಲೇಖನವನ್ನು ಬರೆದನು. 20 ವರ್ಷ ತುಂಬುವುದರಲ್ಲಿ ಪಿಯಾಜ್ಞೆ ಮೃದ್ವಂಗಿಗಳ ಬಗ್ಗೆ ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದ್ದನು. ಅವನ ನಿಜವಾದ ವಯಸ್ಸು ತಿಳಿಯದಿದ್ದ ಅವನ ಓದುಗರು ಮೃದಂಗಿಗಳ ವಿಷಯದಲ್ಲಿ ಅವನು ಒಬ್ಬ ತಜ್ಞ ಎಂದು ತಿಳಿದುಕೊಂಡಿದ್ದರು. ಹೈಸ್ಕೂಲ್ ನಂತರ ಪಿಯಾಜ್ಞೆ ನ್ಯೂಕ್ಚೆಟೆಲ್ ವಿಶ್ವವಿದ್ಯಾಲಯದಲ್ಲಿ ಪ್ರಾಣಿಶಾಸ್ತ್ರ ಅಧ್ಯಯನ ಮಾಡಿ 1918ರಲ್ಲಿ ಪಿ.ಎಚ್.ಡಿ. ಪದವಿ ಪಡೆದನು. ನಂತರ ಜ್ಯುರಿಜ್ ವಿಶ್ವವಿದ್ಯಾನಿಲಯದಲ್ಲಿ ಒಂದು ಸೆಮಿಸ್ಟರ್‌ವರೆಗೆ ಕಾರ್ಲ್‌ಯೂಂಗ್ ಮತ್ತು ಪಾಲ್ ಯೂಜಿನ್ ಬ್ಲೂಯವರ್ ಅಧೀನದಲ್ಲಿ ಮನೋವಿಜ್ಞಾನವನ್ನು ಅಧ್ಯಯನ ಮಾಡಿದನು. ಇಲ್ಲಿಯೂ ಅವನಿಗೆ ಸಿಗ್ಮಂಡ್ ಫ್ರಾಯ್ಡನ್ ಮನೋವಿಶ್ಲೇಷಣ ಸಿದ್ಧಾಂತದಲ್ಲಿ ಗಹನವಾದ ಆಸಕ್ತಿ ಉಂಟಾಯಿತು. ನಂತರದಲ್ಲಿ ಪಿಯಾಜ್ಞೆ ಪ್ಯಾರಿಸ್‌ನ ಸಾರ್‌ಬಾನ್ ವಿಶ್ವವಿದ್ಯಾನಿಲಯದಲ್ಲಿ ಅಪಸಾಮಾನ್ಯ ಮನೋವಿಜ್ಞಾನವನ್ನು ಅಧ್ಯಯನ ಮಾಡಿದನು.

1920ರಲ್ಲಿ ಪಿಯಾಜ್ಞೆಗೆ ಥಿಯೋಡರ್ ಸೈಮನ್ ಮತ್ತು ಆಲ್ಫ್ರೆಡ್ ಬೀನೆಯವರ ಬುದ್ಧಿಶಕ್ತಿ ಪರೀಕ್ಷೆ ಫಲಿತಾಂಶಗಳ ಬಗ್ಗೆ ಆಸಕ್ತಿ ಉಂಟಾಯಿತು. ವಿಶೇಷವಾಗಿ ಮಕ್ಕಳು ಆ ಪರೀಕ್ಷೆಯಲ್ಲಿ ಉತ್ತರ ನೀಡುವಾಗ ಮಾಡಿದ್ದ ತಪ್ಪುಗಳನ್ನು ವಿಶ್ಲೇಷಿಸಿ ಪಿಯಾಜ್ಞೆ ಮಕ್ಕಳು ತಮ್ಮದೇ ಆದ ತರ್ಕದಿಂದ ಯೋಚಿಸುವುದರಿಂದ ಈ ತಪ್ಪುಗಳಾಗುತ್ತವೆ ಎಂಬ ತೀರ್ಮಾನಕ್ಕೆ ಬಂದರು. ಹೀಗಾಗಿ ಮಾನವನಲ್ಲಿ ಅದರಲ್ಲೂ ಬಾಲ್ಯಾವಸ್ಥೆಯಲ್ಲಿ ಸಂಜ್ಞಾನಾತ್ಮಕ (ಬೌದ್ಧಿಕ) ವಿಕಾಸ ಯಾವ ದಿಶೆಯಲ್ಲಿ ಉಂಟಾಗುತ್ತದೆ ಎಂಬುದನ್ನು ಪಿಯಾಜ್ಞೆ ತಮ್ಮದೇ ವೀಕ್ಷಣೆ ಆಧಾರಿತ ಚಿಕಿತ್ಸಕ ವಿಧಾನ (Clinical Method) ಮೂಲಕ ಮಕ್ಕಳ ವರ್ತನೆಯನ್ನು ಅಧ್ಯಯನ ಮಾಡಿ ಈಗ ಪ್ರಸಿದ್ಧವಾಗಿರುವ ಸಂಜ್ಞಾನಾತ್ಮಕ ಸಿದ್ಧಾಂತವನ್ನು ವಿಕಾಸಗೊಳಿಸಿದನು. ಪಿಯಾಜ್ಞೆ ತನ್ನ 84ನೇ ವಯಸ್ಸಿನಲ್ಲಿ ಸೆಪ್ಟೆಂಬರ್ 6, 1980ರಂದು ಸ್ವಿಟ್ಜರ್‌ಲೆಂಡಿನ ಜೀನಿವಾದಲ್ಲಿ ಮೃತನಾದನು.

ದ

ಮಗುವಿನ ಮೊದಲ ವರ್ಷಗಳು ಅತಿ ಶೀಘ್ರವಾಗಿ ಕಲಿಯುವ ಒಂದು ಅವಧಿ. ಅನೇಕ ಮನೋವಿಜ್ಞಾನಿಗಳು ಶಿಕ್ಷಣತಜ್ಞರೂ ಮಗುವಿನ ಬೌದ್ಧಿಕ ವಿಕಾಸವನ್ನು ಕುರಿತು ಸಂಶೋಧನೆಗಳ ಆಧಾರದ ಮೇಲೆ ಶಿಕ್ಷಕರಿಗೆ ಸಾಕಷ್ಟು ಮಾಹಿತಿ ನೀಡಿದ್ದಾರೆ. ಮಕ್ಕಳಲ್ಲಿರುವ ಮೂಲ ಸಾಮರ್ಥ್ಯಗಳನ್ನು ಗರಿಷ್ಠ ಮಟ್ಟದಲ್ಲಿ ವಿಕಾಸಗೊಳಿಸುವ ಶಿಕ್ಷಣದ ಉದ್ದೇಶದಲ್ಲಿ ಮಗುವಿನ ಮೊದಲ ಐದಾರು ವರ್ಷಗಳ ಬೆಳವಣಿಗೆಯ ಮಹತ್ವವನ್ನು ಸಾರಿ ಹೇಳಿದ್ದಾರೆ. ವಿಶೇಷವಾಗಿ ಫ್ರೊಬೆಲ್ ಮಾಂಟೆಸೋರಿ, ಜೀನ್ ಪಿಯಾಜ್ಞೆ, ಬ್ರೂನರ್ ಇವರೆಲ್ಲ ಮಕ್ಕಳ ಮೇಲೆ ಸ್ವತಃ ಅನೇಕ ಪ್ರಯೋಗಗಳನ್ನು ನಡೆಸಿ ಅವರಲ್ಲಿ ಬೌದ್ಧಿಕ ಕ್ರಿಯೆಗಳನ್ನು ವಿಕಾಸಗೊಳಿಸುವ ತತ್ವಗಳನ್ನು ಅವರದೇ ಆದ

Digitised by Bharatavani, CIIL

ರೀತಿಯಲ್ಲಿ ಹೇಳಿ ಬೇರೆ ಬೇರೆ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಸಿದ್ಧಾಂತಗಳು ಬೇರೆ ಬೇರೆಯಾದರೂ ಮಗುವಿನ ಬುದ್ಧಿಶಕ್ತಿಯನ್ನು ಅದರ ಮೊದಲ ವರ್ಷಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಪ್ರಚೋದಿಸಬಹುದು, ಹಾಗೂ ಈ ಪ್ರಚೋದನೆಯಿಂದ ಮಗುವಿನ ಬೌದ್ಧಿಕ ಕ್ರಿಯೆಗಳು ಸಮರ್ಪಕವಾಗಿ ವಿಕಾಸಗೊಳ್ಳುತ್ತವೆ ಎಂಬ ಅಂಶವನ್ನು ಎಲ್ಲಾ ಮನೋವಿಜ್ಞಾನಿಗಳು, ಶಿಕ್ಷಣ ತಜ್ಞರೂ ಒಪ್ಪುತ್ತಾರೆ.

ಶಾಲಾಪೂರ್ವ ಹಂತದಿಂದಲೇ ಮಕ್ಕಳಿಗೆ ಸೂಕ್ತ ಅನುಭವಗಳನ್ನು ನೀಡಿ ಅವರ ಮುಂದಿನ ಔಪಚಾರಿಕ ಪ್ರಾಥಮಿಕ ಶಿಕ್ಷಣಕ್ಕೆ ಸಿದ್ಧತೆ ಮಾಡುವುದು ಶಾಲಾಪೂರ್ವ ಶಿಕ್ಷಣದ ಒಂದು ಮುಖ್ಯ ಹೊಣೆಯಾಗಿದೆ. ವಿದ್ಯಾರ್ಥಿಗಳಲ್ಲಿ ತಾರ್ಕಿಕ ಆಲೋಚನೆಗಳು, ವಿಮರ್ಶಾತ್ಮಕ ದೃಷ್ಟಿಕೋನ, ಸ್ವಯಂ ನಿರ್ಣಯದ ಕೌಶಲಗಳನ್ನು ಬೆಳೆಸುವುದು ಶಿಕ್ಷಣದ ಒಂದು ಮುಖ್ಯ ಗುರಿಯೂ ಹೌದು. ಇದಕ್ಕೆ ಅವಶ್ಯಕವಾದ ಅಡಿಗಲ್ಲು – ಮಕ್ಕಳ ಗ್ರಹಣಶಕ್ತಿಯ ವಿಕಾಸ ಅರ್ಥಾತ್ ಸಂಜ್ಞಾನಾತ್ಮಕ ವಿಕಾಸ (Cognitive Development) ಸಂಜ್ಞಾನಾತ್ಮಕ ವಿಕಾಸವು ಶಾಲೆಯ ಒಳಗಿನ ಮತ್ತು ಹೊರಗಿನ ಎಲ್ಲಾ ವಿಷಯಗಳ ಕಲಿಕೆಗೂ ಬುನಾದಿಯಾಗುತ್ತದೆ.

**ಪಿಯಾಜೆಯವರ ಹಿನ್ನೆಲೆ**

**ಪಿಯಾಜೆಯವರ ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತ:**

ಜೀನ್ ಪಿಯಾಜೆರವರ ಸಂಜ್ಞಾತ್ಮ ವಿಕಾಸ ಸಿದ್ಧಾಂತವು ಅನೇಕ ದಶಕಗಳ ಸಂಶೋಧನೆಯಿಂದ ವಿಕಸಿತವಾಗಿದೆ. ಬುದ್ಧಿಶಕ್ತಿ ಪರೀಕ್ಷಣವನ್ನು ಉಪಯೋಗಿಸುವ ಅನುಭವದಲ್ಲಿ ಪಿಯಾಜೆ ಮಕ್ಕಳ ಬುದ್ಧಿಶಕ್ತಿ ಮಟ್ಟವನ್ನು ಅಳೆಯುವುದಕ್ಕಿಂತ ಅವರು ಮಾಡುವ ತಪ್ಪುಗಳ ಮೇಲೆ ಕುತೂಹಲ ಉಂಟಾಗಿ, ಮಕ್ಕಳ ಉತ್ತರಗಳಲ್ಲಿ ಗೋಚರಿಸುವ ದೋಷ (Errors) ಗಳ ಬಗ್ಗೆ ಹೆಚ್ಚು ವಿಶ್ಲೇಷಿಸತೊಡಗಿದರು. ಪ್ರಶ್ನೋತ್ತರದ ಮೂಲಕ ಮಕ್ಕಳ ಉತ್ತರಗಳಲ್ಲಿ ದೋಷಗಳು ಉಂಟಾದ ಕಾರಣಗಳನ್ನು ಪತ್ತೆಹಚ್ಚಲು ತಮ್ಮದೇ ಒಂದು 'ಚಿಕಿತ್ಸಾತ್ಮಕ ವಿಧಾನ' ರೂಢಿಸಿಕೊಂಡರು. (Clinical method). ಹೀಗೆ ಜ್ಞಾನೋತ್ಪತ್ತಿ (Epistemology) ಬಗ್ಗೆ ಅವರ ಕುತೂಹಲ ಬೆಳೆಯುತ್ತಲೇ ಹೋಯಿತು.

ಹುಟ್ಟಿನಿಂದ ಮಾನವನಲ್ಲಿ ಗ್ರಹಣಶಕ್ತಿ ವಿಕಾಸದ ಬಗ್ಗೆ ಅರಿಯಲು ತಮ್ಮ ಸ್ವಂತ ಮೂರು ಮಕ್ಕಳ ಹಾಗೂ ಇತರ ಮಕ್ಕಳ ಬೆಳವಣಿಗೆಯನ್ನು ಅವರ ಹುಟ್ಟಿನಿಂದಲೇ ಅವಲೋಕಿಸಿ ಅವರಲ್ಲಿ ಯೋಚನಾ ಕ್ರಿಯೆಗಳು (Mental Operations) ಮೂಡಿಬಂದ ವಿವರಗಳನ್ನು ಪಿಯಾಜೆ ಕೂಲಂಕಷವಾಗಿ ದಾಖಲಿಸಿದರು. ಅವರ ಈ ದೀರ್ಘಾವಧಿ ಗುಣಾತ್ಮಕ ಸಂಶೋಧನೆಯ ಫಲವಾಗಿ ಈ ದಿನ ವಿಶ್ವದಾದ್ಯಂತ ಪ್ರಚಲಿತದಲ್ಲಿರುವ ಪಿಯಾಜೆಯವರ ಸಂಜ್ಞಾನಾತ್ಮಕ ವಿಕಾಸದ ಹಂತ ಸಿದ್ಧಾಂತ (Stage Theory) ರೂಪುಗೊಂಡಿತು. ಮಗುವಿನಲ್ಲಿ ವಿಕಾಸವಾಗುವ ಅನೇಕ ಪರಿಕಲ್ಪನೆಗಳ ಪ್ರಕ್ರಿಯೆಗಳನ್ನು ವಿಶದವಾಗಿ ಅನೇಕ ಪುಸ್ತಕಗಳಲ್ಲಿ ಪ್ರಕಟಿದರು. ತನ್ನ 80ನೆಯ ವಯಸ್ಸಿನಲ್ಲಿ ಹಲವಾರು ಅಂತರರಾಷ್ಟ್ರೀಯ ಸಂಸ್ಥೆಗಳ ನಿರ್ದೇಶಕರಾಗಿ ಸಂಶೋಧನೆಯಲ್ಲಿ ತೊಡಗಿದ್ದ ಪಿಯಾಜೆ ಜ್ಞಾನೋತ್ಪತ್ತಿಶಾಸ್ತ್ರದ ತಜ್ಞರೆಂದು ಗುರುತಿಸಿಕೊಂಡರೇ ಹೊರತು ಯಾವತ್ತೂ ತಮ್ಮನ್ನು ತಾವು ಒಬ್ಬ ಶಿಕ್ಷಣ ತಜ್ಞನನ್ನಾಗಿ ಗುರಿತಿಸಿಕೊಳ್ಳಲೇ ಇಲ್ಲ. ಆದರೆ ಅವರ ಸಿದ್ಧಾಂತದ ಶೈಕ್ಷಣಿಕ ಕೊಡುಗೆಗಳನ್ನು ಜಗತ್ತಿನಾದ್ಯಂತ ಅನೇಕ ಶಿಕ್ಷಣತಜ್ಞರು ಇಂದಿಗೂ ಬಳಸುತ್ತಿರುವುದು ಗಮನಾರ್ಹ. ಬಹುಶಃ ಮಕ್ಕಳ ಆಲೋಚನೆಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ ವಿಶ್ವದ ಮೊದಲ ಮನೋವಿಜ್ಞಾನಿ ಪಿಯಾಜೆ ಎಂದರೆ ತಪ್ಪಾಗಲಾರದು.

**ಸಂಜ್ಞಾನಾತ್ಮಕ ವಿಕಾಸದ ಅರ್ಥ ಮತ್ತು ಸ್ವರೂಪ:**

(ಹೆಚ್ಚಿನ ವಿವರಗಳಿಗೆ ನೋಡಿ : ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತಗಳು, ವಿಶ್ವಕೋಶ ಸಂಪುಟ 1, ಪುಟ 823)

1. ಗ್ರಹಿಕೆಯ ವಿಷಯವಸ್ತು (Cognitive content)
2. ಗ್ರಹಿಕೆಯ ಕಾರ್ಯಾಚರಣೆ (Cognitive function)
3. ಗ್ರಹಿಕೆಯ ಸಂರಚನೆಗಳು (Cognitive structures)

ಗ್ರಹಿಕೆಯ ಸಂರಚನೆಗಳಲ್ಲಿ ಆಗುವ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಬದಲಾಣೆಗಳಿಂದ ವ್ಯಕ್ತಿಯಲ್ಲಿ ಸಂಜ್ಞಾನಾತ್ಮಕ ವಿಕಾಸವಾಗುತ್ತದೆ. ಈ ಬದಲಾವಣೆಗೆ ಗ್ರಹಿಕೆಯ ವಿಷಯವಸ್ತುಗಳ ಅರ್ಥೈಸುವಿಕೆಯ ಕಾರ್ಯಾಚರಣೆಯೇ ಮೂಲ ಕಾರಣ. ಇದು ಎರಡು ರೀತಿಯಲ್ಲಿ ಸಾಧ್ಯ ಒಂದು ವಿಷಯವಸ್ತುವನ್ನು ಮಾರ್ಪಡಿಸದೆ ಇರುವ ಹಾಗೆಯೇ ಒಪ್ಪಿಕೊಳ್ಳುವುದು (ಸ್ವೀಕರಿಸುವುದು) ಇದನ್ನು ಗಿಣಿಪಾಠದ ಕಲಿಕೆ ಅಥವಾ ಉರುಹಚ್ಚಿ ಕಲಿಯುವುದು ಎನ್ನಬಹುದು. ಇದನ್ನು ಪಿಯಾಜೆ 'ಪ್ರತಿರೂಪಾತ್ಮಕ ಆಲೋಚನೆ' (Figurative thinking) ಎಂದು ಕರೆದಿದ್ದಾರೆ. ಇನ್ನೊಂದು –ವಿಷಯವಸ್ತುವನ್ನು ತಾರ್ಕಿಕ ಆಲೋಚನೆಯಿಂದ ವಿಶ್ಲೇಷಿಸಿ ಒಪ್ಪಿಕೊಳ್ಳುವುದು. ಇದನ್ನು ಅರ್ಥಪೂರ್ಣ ಕಲಿಕೆ ಎನ್ನಬಹುದು. ಇದನ್ನು ಪಿಯಾಜೆ 'ಸಂಕ್ರಿಯಾತ್ಮಕ ಆಲೋಚನೆ' (Operative thinking) ಎಂದು ಕರೆದಿದ್ದಾರೆ. ಈ ಎರಡೂ ರೀತಿಯ ಆಲೋಚನೆಗಳಿಂದ ಗ್ರಹಿಕೆಯ ಸಂರಚನೆಗಳಲ್ಲಿ ಬದಲಾವಣೆಗಾಗಿ ಗ್ರಹಣಶಕ್ತಿ ವಿಕಾಸಕ್ಕೆ ದಾರಿಯಾಗುತ್ತದೆ. ಅಂದರೆ ವ್ಯಕ್ತಿಯು ಪರಿಸರದ ಪ್ರಚೋದನೆಗಳಿಂದ ಹೊಸ ವಿಷಯವನ್ನು ಗ್ರಹಿಸಿ ಅರ್ಥೈಸಲು 'ಸ್ವಾಂಗೀಕರಣ' (Arrimilation) ಮತ್ತು ಅನುಕೂಲನ (Accomodation) ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಲಿರುತ್ತವೆ. ಎಂದರೆ, ಯಾವುದೇ ಹೊಸ ಜ್ಞಾನವನ್ನು ತಿಳಿಯಲು ವ್ಯಕ್ತಿಯು ವಸ್ತುವಿನೊಂದಿಗೆ ಪ್ರತಿಕ್ರಿಯಿಸಬೇಕಾಗುತ್ತದೆ. ಮತ್ತು ಅರ್ಥಮಾಡಿಕೊಂಡು ತನ್ನದನ್ನಾಗಿಸಿಕೊಂಡು ಇಂದು

Digitised by Bharatavani, CIIL

ಸ್ವಾಂಗೀಕರಣ ಪ್ರತಿಕ್ರಿಯಿಸಿದಾಗ ತನ್ನಲ್ಲಿ ಈಗಾಗಲೇ ಇರುವ ಸಂಜ್ಞಾನಾತ್ಮಕ ಸಂರಚನೆಗಳನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ಇದು ಅನುಕೂಲನ. ಈ ಎರಡೂ ಪ್ರಕ್ರಿಯೆಗಳಿಂದ ವ್ಯಕ್ತಿಯು ತನ್ನ ಜ್ಞಾನವನ್ನು ರಚಿಸಿಕೊಳ್ಳುತ್ತಾನೆ. ಇತರ ಜೈವಿಕ ಕ್ರಿಯೆಗಳಲ್ಲಿ ಒಂದು 'ಸಮಸ್ಥಿತಿ' ಸಮತೋಲನ (Equilibrium) ಕಾಪಾಡಿಕೊಳ್ಳುವಂತೆ ಈ ಬೌದ್ಧಿಕ ಪ್ರಕ್ರಿಯೆಯಲ್ಲೂ ಸಮಸ್ಥಿತಿಯನ್ನು ಕಾಪಾಡಿಕೊಳ್ಳುತ್ತಾನೆ. ಈ ವಿವರಣೆಯಿಂದ ಸಂಜ್ಞಾನಾತ್ಮಕ ವಿಕಾಸವು ಅಥವಾ ಗ್ರಹಣಶಕಿ ವಿಕಾಸವು ವ್ಯಕ್ತಿಯ ಪರಿಪಕ್ವತೆ ಮತ್ತು ಪರಿಸರದ ಪ್ರಚೋದನೆಯಿಂದ ಪ್ರಭಾವಿತವಾಗುತ್ತದೆ ಎಂದು ತಿಳಿಯುತ್ತದೆ. ಹೀಗೆ ಪರಿಸರದ ಪ್ರಚೋದನೆಯಿಂದ ತನ್ನ ಪರಿಪಕ್ವತೆಯ ಮಟ್ಟಕ್ಕನುಗುಣವಾಗಿ ವ್ಯಕ್ತಿಯು ವಿಷಯಗಳನ್ನು 'ಗ್ರಹಿಸುತ್ತಾ' ಅವನ್ನು ಪುನಃ ಪುನಃ ಮಾರ್ಪಡಿಸುತ್ತಾ ತನ್ನ ಜ್ಞಾನವನ್ನು ವಿಕಾಸಗೊಳಿಸಿಕೊಳ್ಳುತ್ತಾನೆ. ಗ್ರಹಿಸಿದ ವಿಷಯಗಳ ಪರಸ್ಪರ ಸಂಬಂಧೀಕರಣದಿಂದ ಅವನ ಜ್ಞಾನದ ಮಟ್ಟ ಗುಣಾತ್ಮಕವಾಗಿ ವಿಸ್ತರಿಸುತ್ತ ಮುಂದುವರೆಯುತ್ತದೆ. ಹೀಗಾದಾಗ ವ್ಯಕ್ತಿಯ ಗ್ರಹಣಶಕ್ತಿಯು ವಿಕಾಸಗೊಳ್ಳುತ್ತಾ ಹೋಗುತ್ತದೆ.

**ಗ್ರಹಣಶಕ್ತಿ ವಿಕಾಸದ ಪ್ರಮುಖ ಹಂತಗಳು:**

ಮಗು ಹುಟ್ಟಿನಿಂದಾಗಿನಿಂದ ತನ್ನ ಪರಿಸರವನ್ನು 'ಗ್ರಹಿಸಲು' ತೊಡಗಿ ಅದು ಬಳಸುವ ಗುಣಾತ್ಮಕವಾಗಿ ವ್ಯತ್ಯಾಸವಿರುವ ವಿವಿಧ ರೀತಿಯ ಬೌದ್ಧಿಕ ಕ್ರಿಯೆಗಳ ಆಧಾರದ ಮೇಲೆ ಪಿಯಾಜ್ಞೆ ಗ್ರಹಣಶಕ್ತಿ ವಿಕಾಸದಲ್ಲಿ ನಾಲ್ಕು ಪ್ರಮುಖ ಹಂತಗಳನ್ನು ಗುರುತಿಸಿದ್ದಾನೆ. ಒಬ್ಬ ವ್ಯಕ್ತಿ ತನ್ನ ಗ್ರಹಣಶಕ್ತಿ ವಿಕಾಸದಲ್ಲಿ ಈ ಹಂತಗಳನ್ನು ಕ್ರಮಾನುಗತವಾಗಿ ದಾಟುತ್ತ ಕಡೆಗೆ ಉನ್ನತ ಮಟ್ಟದ ಜ್ಞಾನವನ್ನು ವೈಜ್ಞಾನಿಕ ರೀತಿಯಲ್ಲಿ ಅರಿಯಲು ಸಮರ್ಥನಾಗುತ್ತಾನೆ.

ಹಂತ 1 : ಗತಿ ಸಂವೇದನಾತ್ಮಕ ಹಂತ (Sensory Motor stage) 0-2 ವರ್ಷಗಳು.

ಹಂತ 2 : ಪೂರ್ವಸಂಕ್ರಿಯಾತ್ಮಕ ಹಂತ (Pre-operational stage) 2 ರಿಂದ 7 ವರ್ಷಗಳು.

ಅ) ಪೂರ್ವಪರಿಕಲ್ಪನಾ ಅವಧಿ (Pre-operational stage) 2 ರಿಂದ 4 ವರ್ಷಗಳು.

ಆ) ಅಂತಃಸ್ಫುರಣೆಯ ಅವಧಿ (Intutive period) 4 ರಿಂದ 6–7 ವರ್ಷಗಳು.

ಹಂತ 3 : ಮೂರ್ತಸಂಕ್ರಿಯಾತ್ಮಕ ಹಂತ (Concrete Operational stage) 7–8ರಿಂದ 11–12 ವರ್ಷಗಳು.

ಹಂತ 4 : ತರ್ಕಬದ್ಧ (ಔಪಚಾರಿಕ) ಸಂಕ್ರಿಯಾತ್ಮಕ ಹಂತ (Formal operatinal stage) 11–12 ವರ್ಷಗಳು ಮುಂದಕ್ಕೆ

ಈ ಮೇಲಿನ ಹಂತಗಳನ್ನು ದಾಟುವ ವಯಸ್ಸಿನಲ್ಲಿ ಮಗುವಿನ 'ವಿಕಾಸದ ಗತಿ'ಯನ್ನು ಅಧರಿಸಿ ವ್ಯತ್ಯಾಸಗಳು ಕಂಡುಬಂದರೂ ಈ ಹಂತಗಳನ್ನು ಇದೇ ಕ್ರಮದಲ್ಲಿ ಪ್ರತಿವ್ಯಕ್ತಿಯೂ ದಾಟುವುದನ್ನು ಸಾಕಷ್ಟು ಸಂಶೋಧನೆಗಳು ದೃಢೀಕರಿಸಿವೆ.

**ಶಾಲಾಪೂರ್ವ ಶಿಕ್ಷಣದಲ್ಲಿ ಮಗುವಿನ ಗ್ರಹಣಶಕ್ತಿ ವಿಕಾಸದ ಹಂತ**

ಈ ಮೇಲಿನ ಹಂತಗಳನ್ನು ಗಮನಿಸಿದಾಗ ಎರಡನೆಯ ಹಂತವಾದ ಪೂರ್ವ ಸಂಕ್ರಿಯಾತ್ಮಕ ಹಂತವು (2ರಿಂದ 7 ವರ್ಷಗಳು) ಶಾಲಾಪೂರ್ವ ಶಿಕ್ಷಣಕ್ಕೆ ಮಕ್ಕಳು ಪ್ರಥಮವಾಗಿ ಕಾಲಿರಿಸಿ ಮುಂದೆ ಪ್ರಾಥಮಿಕ ಶಾಲೆಗೆ ಸಿದ್ಧರಾಗುವ ಮಹತ್ವದ ಅವಧಿಯೆಂದು ತಿಳಿಯುತ್ತದೆ.

**ಅ) ಪೂರ್ವಪರಿಕಲ್ಪನಾ ಅವಧಿ :** (2–4 ವರ್ಷಗಳು) (Preconceptual period) ಈ ಅವಧಿಯಲ್ಲಿ ಮಗುವು ವಸ್ತುಗಳ ಬಗ್ಗೆ ಸಾಂಕೇತಿಕವಾಗಿ ಪ್ರತಿಕ್ರಿಯಿಸಲು ತೊಡಗುತ್ತದೆ. ಉದಾ: ಕೆಲವು ವಸ್ತುಗಳ ಹೆಸರನ್ನು ಸೂಚಿಸಲು ಪರಿಚಯಿಸಿದ ಭಾಷೆಯ ಪದಗಳನ್ನು ಬಳಸುತ್ತದೆ. ಯೋಚನಾಕ್ರಿಯೆಗಳು ಒಂದು ನಿರ್ದಿಷ್ಟ ರೀತಿಯಲ್ಲಿರುತ್ತವೆ. ಈ ನಿರ್ದಿಷ್ಟ ಯೋಚನಾ ಕ್ರಿಯೆಗಳಲ್ಲಿ ತಾರ್ಕಿಕ ಸಂಬಂಧವಿರುವುದಿಲ್ಲ. ಅದರಿಂದ ಮಗುವಿಗೆ ಒಂದು ಪರಿಕಲ್ಪನೆಯ ಬಗ್ಗೆ ಸಾಮಾನ್ಯೀಕರಿಸುವ ಸಾಮರ್ಥ್ಯವಿರುವುದಿಲ್ಲ. ಆದ್ದರಿಂದಲೇ ಇದನ್ನು ಪೂರ್ವಪರಿಕಲ್ಪನಾ ಅವಧಿ ಎನ್ನುತ್ತಾರೆ. ಈ ಯೋಚನಾ ಪ್ರಕ್ರಿಯೆಯನ್ನು ಪಿಯಾಜ್ಞೆ ಅಂತರಾಗಮನ ಯೋಚನೆ ಕ್ರಿಯೆಗಳೆಂದು ಕರೆದಿದ್ದಾರೆ. Transductive thinking from particular to particular. ಹೀಗೆ ಈ ಅವಧಿಯಲ್ಲಿ ಮಕ್ಕಳ ಯೋಚನಾ ಕ್ರಿಯೆಗಳು ವಯಸ್ಕರ ಯೋಚನಾ ಕ್ರಿಯೆಗಳಿಗಿಂತ ಭಿನ್ನವಾಗಿರುತ್ತವೆ.

ಆ) **ಅಂತಃಸ್ಫುರಣೆಯ ಅವಧಿ:** 4 ರಿಂದ 6–7 ವರ್ಷಗಳು (Intuitive period)

ಈ ಅವಧಿಯಲ್ಲಿ ಪೂರ್ವಪರಿಕಲ್ಪನಾ ಅವಧಿಯ ಜಡವಾದ, ಸ್ಥಿರವಾದ ಬದಲಾಯಿಸದ ನಿರ್ದಿಷ್ಟ ಯೋಚನಾಕ್ರಿಯೆಗಳು ಕ್ರಮೇಣ ಕಡಿಮೆಯಾಗಿ, ಬದಲಾಯಿಸಬಹುದಾದ ಮತ್ತು ಹಿಮ್ಮುಖ ಪ್ರಕ್ರಿಯೆಗಳಿಂದ (Reversibility process) ಕೂಡಿದ ಅಂತಃಸ್ಫುರಿತ ಯೋಜನಾ ಕ್ರಿಯೆಗಳು (Intuitive thought) ವಿಕಾಸಗೊಳ್ಳುತ್ತವೆ.

ಇಲ್ಲಿ ಮಗುವು ಪೂರ್ವ ಸಂಕ್ರಿಯಾತ್ಮಕ ಹಂತದಿಂದ ಸಂಕ್ರಿಯಾತ್ಮಕ ಹಂತಕ್ಕೆ ವರ್ಗಾವಣೆಹೊಂದುವ ಸ್ಥಿತಿಯಲ್ಲಿರುತ್ತದೆ. ಈ ವರ್ಗಾವಣೆಯಲ್ಲಿ ಒಂದು ಪರಿಕಲ್ಪನೆಯ ವಿಕಾಸಕ್ಕೆ ಅಗತ್ಯವಾದ ಯೋಚನಾಕ್ರಿಯೆಗಳು ಹೋಲಿಕೆ, ಹೊಂದಿಸುವಿಕೆ, ವ್ಯತ್ಯಾಸ ಗುರುತಿಸುವಿಕೆ, ವರ್ಗೀಕರಣ, ಅನುಕ್ರಮಣಿಕೆ, ಶ್ರೇಣೀಕರಣ, ವಿಕೇಂದ್ರೀಕರಣ, ಸಂಬಂಧೀಕರಣ, ಸ್ಥಾಯಿಕ Sequencing, seriation, decentration, relating, conservation. ಇತ್ಯಾದಿ, ಕಾಣಿಸಿಕೊಳ್ಳ ತೊಡಗಿ, ಮಗು ಹಂತ ಹಂತವಾಗಿ ಸಂಕ್ರಿಯಾತ್ಮಕ

Digitised by Bharatavani, CIIL

ಹಂತವನ್ನು ತಲುಪುತ್ತದೆ. ಈ ವರ್ಗಾವಣೆಯ ಹಂತದಲ್ಲಿ (ಎಂದರೆ ಮಗು 4ರಿಂದ 7 ವರ್ಷಗಳನ್ನು ಮುಗಿಸುವಷ್ಟರಲ್ಲಿ) ಅನೇಕ ಯೋಚನಾ ಕ್ರಿಯೆಗಳ ಆಚರಣೆಯಿಂದ ಹಲವಾರು ಮೂಲಪರಿಕಲ್ಪನೆಗಳು – ಉದ್ದ, ವರ್ಗ, ವಿಸ್ತೀರ್ಣ, ಪರಿಮಾಣ, ಗಾತ್ರ, ತೂಕ, ಕಾಲ, ಸಂಖ್ಯೆ ಇತ್ಯಾದಿಗಳ ವಿಕಾಸವಾಗುತ್ತದೆ. ಇದೊಂದು ಮಹತ್ವದ ನಿಷ್ಕರ್ಷಕ ಹಂತ, ಈ ಮೂಲ ಪರಿಕಲ್ಪನೆಗಳ ಸ್ಥಾಯಿತ್ವ (Conservation) ಗ್ರಹಿಕೆಯಲ್ಲಿ ಅಸ್ಥಾಯಿತ್ವ, ವರ್ಗಾವಣೆ ಸ್ಥಿತಿ ಮತ್ತು ಸ್ಥಾಯಿತ್ವ (Non-conservation, Transition, Conservation) ಎಂಬ ಮೂರು ಹಂತಗಳನ್ನೂ ಪಿಯಾಜೆ ಗುರುತಿಸಿದ್ದಾರೆ. ಈ ಸ್ಥಾಯಿತ್ವದ ಮಟ್ಟವನ್ನು ತಲುಪಲು ಮಕ್ಕಳು ಬಳಸುವ ವಿವಿಧ ಮಟ್ಟದ ಯೋಚನಾಕ್ರಿಯೆಗಳನ್ನು ಪರೀಕ್ಷಿಸಲು ಪಿಯಾಜೆ ಅನೇಕ ಮಕ್ಕಳ ಮೇಲೆ ಪ್ರಯೋಗಿಸಿದ ವಿಶಿಷ್ಟ ಚಟುವಟಿಕೆಗಳು ಬಹಳ ಕುತೂಹಲಕಾರಿಯಾಗಬಹುದು ಚಾತುರ್ಯದಿಂದ ಕಲ್ಪಿಸಿದಂತಹವೂ ಆಗಿವೆ. ಈ ಚಟುವಟಿಕೆಗಳನ್ನು ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣದಲ್ಲಿ ಅಳವಡಿಸಿ ಅವರಲ್ಲಿ ಸೂಕ್ತ ಯೋಚನಾಕ್ರಿಯೆಗಳ ವಿಕಾಸಕ್ಕೆ ಅನುವು ಮಾಡಿಕೊಡಲು ಬಹಳ ಸೂಕ್ತವಾಗಿವೆ.

ಕ್ರಮೇಣ ಸುಮಾರು 7 ವರ್ಷದವನಾಗುವ ವೇಳೆಗೆ ವಿವಿಧ ಯೋಚನಾ ಕ್ರಿಯೆಗಳು ಸಂಘಟಿತವಾಗಿ ಅನೇಕ ಪರಿಕಲ್ಪನೆಗಳ ಒಂದು ಸಂಜ್ಞಾನಾತ್ಮಕ ವ್ಯವಸ್ಥೆಯು ಮಗುವಿಗೆ ಲಭ್ಯವಾಗಿ ಅದು ಮೂರ್ತ ಸಂಕ್ರಿಯಾತ್ಮಕ ಹಂತವನ್ನು ತಲಪುತ್ತದೆ.

**ಪೂರ್ವಸಂಕ್ರಿಯಾತ್ಮಕ ಹಂತದಲ್ಲಿ ಪರಿಕಲ್ಪನೆಗಳು ಮತ್ತು ಯೋಚನಾಕ್ರಿಯೆಗಳು:**

ಒಂದಕ್ಕೊಂದು ಸಂಬಂಧವಿರುವ ಮಾಹಿತಿಗಳನ್ನು ಸಾಮಾನ್ಯೀಕರಿಸಿ ಅರ್ಥೈಸುವುದು ಒಂದು ಪರಿಕಲ್ಪನೆಯಾಗುತ್ತದೆ. ನಿರ್ದಿಷ್ಟ ಪ್ರಚೋದನೆಗಳನ್ನು ಒಂದು ವಿಶಿಷ್ಟ ರೀತಿಯಲ್ಲಿ ಯೋಚಿಸುವುದು ಮತ್ತು ಪ್ರತಿಕ್ರಿಯಿಸುವುದು ಇದರಿಂದ ಸಾಧ್ಯವಾಗುತ್ತದೆ.

'ಯೋಚನೆ' ಎಂದರೆ ಒಂದು ನಿರ್ದಿಷ್ಟ ಗುರಿಯೆಡೆಗೆ ಹರಿಯುವ ಪರಸ್ಪರ ಸಂಬಂಧಿತ ವಿಚಾರಗಳು ಎಂದು ಹೇಳಬಹುದು. ಪಿಯಾಜೆಯ ಪ್ರಕಾರ ಯೋಚನೆಯು 'ವಸ್ತುಕ್ರಿಯೆ' (action on objects) ಯಿಂದ ಉಂಟಾಗುತ್ತದೆ. ಮಗು ತನ್ನ ಗ್ರಹಣಶಕ್ತಿ ವಿಕಾಸದ ಮಟ್ಟಕ್ಕೆ ಅನುಗುಣವಾಗಿ ತನಗೆ ಲಭ್ಯವಿರುವ ವಸ್ತುಗಳನ್ನು ಕೆಲವು 'ಕ್ರಿಯೆ'ಗಳಿಗೆ ಒಳಪಡಿಸುತ್ತದೆ. ಹೀಗೆ ವಸ್ತುಗಳ ಮೇಲೆ ನಡೆಸುವ 'ಆಚರಣೆ' ಗಳಿಂದ ಪರಿಕಲ್ಪನೆಗಳ ವಿಕಾಸವಾಗುವುದೇ ಹೊರತು, ಬರಿಯ ವಸ್ತುಗಳಿಂದಲೇ ಅಲ್ಲ. ಮಗುವು ಕೆಲಸವನ್ನು ಮಾಡುವ ಮೊದಲೇ ಅದನ್ನು ಹೇಗೆ ಮಾಡಬೇಕೆಂಬುದನ್ನು ಯೋಚಿಸಿ ಕೆಲಸಕ್ಕೆ ತೊಡಗಿ ಆ ಆಚರಣೆಯನ್ನು ಅಂತರ್ಗತ ಮಾಡಿಕೊಳ್ಳುವುದು (Internalising the action) 'ನಿಜವಾದ ಆಲೋಚನೆ' (True thoght) ಯಾಗುತ್ತದೆ.

ಪರಿಕಲ್ಪನೆಗಳ ವಿಕಾಸಕ್ಕೆ ಬೇಕಾದ ಯೋಚನಾ ಕ್ರಿಯೆಗಳು ಗುಣಾತ್ಮಕವಾಗಿ ಬದಲಾಗುತ್ತ ಹೋಗುತ್ತವೆ. ಶಾಲಾಪೂರ್ವ ಮಕ್ಕಳಲ್ಲಿ ಪರಿಕಲ್ಪನೆಗಳು ಇನ್ನೂ ಪ್ರಾರಂಭಾವಸ್ಥೆಯಲ್ಲಿದ್ದು ಬಿಡಿಬಿಡಿಯ ತುಣುಕುಗಳಾಗಿ (Fragmentary) ಇರುತ್ತವೆ; ಯಾವುದೇ ವಸ್ತುವನ್ನು ಒಂದು ವರ್ಗಕ್ಕೆ ಸೇರಿರುವುದೆಂದು ಪರಿಗಣಿಸುವುದಿಲ್ಲ. ಆ ವರ್ಗದ ಗುಣಲಕ್ಷಣಗಳನ್ನು ವಸ್ತುವಿನಲ್ಲಿ ಸಾಮ್ಯತೆ – ವ್ಯತ್ಯಾಸ ಯೋಚನಾಕ್ರಿಯೆಗಳಿಂದ ಗುರುತಿಸುವ ಸಾಧ್ಯತೆ ಇದ್ದರೂ ಒಂದು ವರ್ಗದ ಪರಿಕಲ್ಪನೆಯ ವಿಕಾಸ ಪೂರ್ಣವಾಗಿರುವುದಿಲ್ಲ. ಮಗು ಒಂದು ವಸ್ತುವಿನ ಬಗ್ಗೆ ತಾನು ನೋಡಿರುವ ನಿರ್ದಿಷ್ಟ ಸನ್ನಿವೇಶದ ಚೌಕಟ್ಟಿನಲ್ಲಿಯೇ ಯೋಚಿಸಲು ತೊಡಗುತ್ತದೆ. ಉದಾಹರಣೆಗೆ 2 ವರ್ಷದ ಮಗು 'ಬಟ್ಟಲು ಹಾಲು ಕುಡಿಯಲು ಇದೆ' ಅಥವಾ 'ಕುಪ್ಪಸ ತೊಟ್ಟವಳು ತಾಯಿ' ಇತ್ಯಾದಿ ರೀತಿಯಲ್ಲಿ ಯೋಚಿಸುತ್ತದೆ. ಪರಿಕಲ್ಪನೆಗಳು ವಿಕಾಸವಾದಂತೆಲ್ಲ ಮಗುವು ಪ್ರತ್ಯೇಕ ಅನುಭವಗಳನ್ನು ಬಿಟ್ಟು ಸಾಮಾನ್ಯೀಕರಿಸಲು ತೊಡಗುತ್ತದೆ.

ಪಿಯಾಜೆಯ ಪ್ರಕಾರ ಒಂದೇ ಪರಿಕಲ್ಪನೆಯ ವಿಕಾಸಕ್ಕೆ ಮಗುವಿಗೆ ವಿವಿಧ ತಾರ್ಕಿಕ ಆಲೋಚನೆಗಳ ಸಂಬಂಧೀಕರಣದ ಅಗತ್ಯವಿದೆ. ಉದಾಹರಣೆಗೆ ಒಂದು ಲೋಟದಲ್ಲಿ ಇರುವ ನೀರಿನ 'ಪರಿಮಾಣದ ಸ್ಥಾಯಿತ್ವ'ದ ಪರಿಕಲ್ಪನೆ ಪೂರ್ಣವಾಗಿ ಮೂಡಬೇಕಾದರೆ ಅದೇ ನೀರು ಬೇರೆ ಆಕಾರ/ಅಳತೆಯ ಪಾತ್ರೆ ಅಥವಾ ಲೋಟದಲ್ಲಿದ್ದರೂ ಅದರ ಪರಿಮಾಣ ಬದಲಾಗುವುದಿಲ್ಲ ಎಂಬ 'ಸಮಪ್ರಮಾಣದ ಯೋಚನಾಕ್ರಿಯೆ' (Equivalence mental operation) ಅವಶ್ಯಕ. ಸಾಮಾನ್ಯವಾಗಿ 4–5 ವರ್ಷದ ಮಗು ನೀರಿನ ಪರಿಮಾಣವನ್ನು ಅರ್ಥೈಸಲು ತನ್ನ ಗಮನವನ್ನು ಲೋಟದ ಎತ್ತರ ಅಥವಾ ನೀರಿನ ಮಟ್ಟಕ್ಕೆ ಕೇಂದ್ರೀಕರಿಸುತ್ತದೆ. ಅದೇ ನೀರನ್ನು ಅಗಲಬಾಯಿಯ ಬಟ್ಟಲಿಗೆ ಸುರಿದಾಗ ನೀರಿನ ಮಟ್ಟ ಕಡಿಮೆಯಾಗಿ ತೋರುವುದರಿಂದ ಅದರಲ್ಲಿ ನೀರಿನ ಪರಿಮಾಣ 'ಕಡಿಮೆ' ಎಂತಲೂ ಎತ್ತರದ ಚಿಕ್ಕ ಗಾತ್ರದ ಲೋಟದ 'ತುಂಬ' ನೀರು ಕಾಣಿಸುವಾಗ ನೀರಿನ ಪರಿಮಾಣ 'ಹೆಚ್ಚು' ಎಂದೂ ಪರಿಗಣಿಸುತ್ತದೆ. ಈ ರೀತಿಯ ಮಗವಿನ 'ಗ್ರಹಿಕೆಯ ದ್ವಂದ್ವ (Cognitive conflicts) ಗಳನ್ನು ನಿವಾರಿಸಲು ಸೂಕ್ತ ವಸ್ತು ಕ್ರಿಯೆಯ ಸಾಕಷ್ಟು ಅನುಭಗಳು ಅಗತ್ಯವಾಗುತ್ತವೆ. ಪದ್ಮಿನಿ ಶಾಲಾ ಪೂರ್ವ ಮಕ್ಕಳ ಸಂಜ್ಞಾನಾಕಾತ್ಮಕ ವಿಕಾಸದ ಮೇಲೆ ಮಾಡಿದ ಸಂಶೋಧನೆಯಿಂದ ಸ್ಥಾಯಿತ್ವ ಪಡೆದ ಮಕ್ಕಳ ಪ್ರಶ್ನೋತ್ತರದಲ್ಲಿ ನೀಡುವ ತಾರ್ಕಿಕ ವಿವರಣೆಗಳು ವಿಭಿನ್ನ ರೀತಿಯಾಗಿರುತ್ತವೆ ಎಂದು ಕಂಡುಬಂದಿದೆ. ವಿವಿಧ ವಿವರಣೆಗಳು ಗಮನಾರ್ಹ.

Digitised by Bharatavani, CIIL

**ಪರಿಕಲ್ಪನೆ: ದ್ರವದ ಪರಿಮಾಣ**
**ಪ್ರಶ್ನೋತ್ತರದಿಂದ ಮಕ್ಕಳಿಂದ ಹೊರ ಬಂದ ತಾರ್ಕಿಕ ಉತ್ತರಗಳು**

| **ಸ್ಥಾಯಿತ್ವದ ಯೋಚನಾ ಕ್ರಿಯೆಗಳು** | **ವಿವರಣೆ** |
|---|---|
| 1. ಸಮಪ್ರಮಾಣದ ಯೋಚನೆ Equivalence Thinking | "ನೀರಿನ ಪರಿಮಾಣ ಎರಡರಲ್ಲೂ ಒಂದೇ ಲೋಟದ ನೀರು ಹಾಗೆಯೇ ಇದೆ. ಅದನ್ನೇ ಇನ್ನೊಂದು ಬಟ್ಟಲಿಗೆ ಸುರಿದಿದೆ, **ಹೊಸದಾಗಿ ಏನೂ ಸೇರಿಸಿಲ್ಲ. ಅಥವಾ ತೆಗೆದಿಲ್ಲ** ಲೋಟಗಳು ಬೇರೆ ಬೇರೆ ಅಷ್ಟೇ ಹಾಗಾಗಿ ಅವೆರಡೂ ಸಮ" |
| 2. ವಿಕೇಂದ್ರೀಕರಣ ಯೋಚನೆ (Compensation or Decentration Thinking | "ಒಂದು ಲೋಟ ಎತ್ತರ, ಆದರೆ ಅಗಲ ಚಿಕ್ಕದು. ಇನ್ನೊಂದು ಲೋಟ ಅಗಲ, ಆದರೆ ಎತ್ತರ ಚಿಕ್ಕದು. ಆದ್ದರಿಂದ **ನೀರಿನ ಮಟ್ಟ ಬೇರೆ ಬೇರೆ ಕಾಣುತ್ತೆ** ನೀರಿನ ಪರಿಮಾಣ ಒಂದೇ". |
| 3. ಹಿಮ್ಮುಖ ಯೋಚನೆ (Reversibilty thinking) | ಅಗಲ ಬಾಯಿಯ ಬಟ್ಟಲ ನೀರನ್ನು **ಮತ್ತೆ ಎತ್ತರದ ಲೋಟಕ್ಕೆ ಸುರಿದರೆ** ನೀರಿನ ಮಟ್ಟ ಮೊದಲಿನಷ್ಟೇ ಆಗುತ್ತದೆ. ಆದ್ದರಿಂದ ನೀರು ಎರಡರಲ್ಲೂ ಸಮ. |

ಇತರ ಪರಿಕಲ್ಪನೆಗಳ ಸ್ಥಾಯಿತ್ವದ ಹಂತದಲ್ಲೂ ಈ ಮೂರೂ ರೀತಿಯ ತಾರ್ಕಿಕ ಸಮರ್ಥನೆಗಳು ಕಂಡುಬಂದಿರುವುದು ಗಮನಾರ್ಹ. ಪಿಯಾಜೆಯ ಪ್ರಕಾರ 'ಹಿಮ್ಮುಖ ಯೋಚನೆ' ಯಿಂದ ತೀರ್ಮಾನಿಸುವ ಉತ್ತರವು ಗುಣಾತ್ಮಕವಾಗಿ ಹೆಚ್ಚಿನ ಮಟ್ಟದ್ದು; ಏಕೆಂದರೆ ಇದರಲ್ಲಿ ಕಂಡುಬರುವ 'ಪ್ರಾಕ್ಕಲ್ಪನಾ–ನಿಗಮನ ಯೋಚನೆ'ಯ (Hypothetica - deductive reasoning) ತಾರ್ಕಿಕತೆಯು ಅಮೂರ್ತ ಆಲೋಚನೆಯ ಕುರುಹಾಗಿದೆ. ಹೀಗೆ ಒಂದು ಮಗುವು ವಿವಿಧ ಪರಿಕಲ್ಪನೆಗಳ ಸ್ಥಾಯಿತ್ವದ ಹಂತ ತಲುಪುವುದೇ ಅವನು 'ಮೂರ್ತ ಸಂಕ್ರಿಯಾತ್ಮಕ ಹಂತ'ವನ್ನು ತಲಪಿದ್ದಾನೆಂದು ಸೂಚಿಸುವ ಅಂಶ. ಹಾಗೂ ಈ ಸ್ಥಾಯಿತ್ವದ ಸಂರಚನೆಗಳು ಮುಂದಿನ ಹಂತದ ವಿಕಾಸಕ್ಕೆ ಅಡಿಪಾಯವಾಗುತ್ತದೆ.

**ಶೈಕ್ಷಣಕ ನಿಹಿತಾರ್ಥಗಳು:**

ಪಿಯಾಜೆಯ ಸುದೀರ್ಘ ಆಳವಾದ, ಜ್ಞಾನವಿಕಸನದ ಸಂಶೋಧನಾಧಾರಿತ ಸಿದ್ಧಾಂತದಿಂದ ಅನೇಕ ಶೈಕ್ಷಣಿಕ ನಿಹಿತಾರ್ಥಗಳು ಕಂಡುಬರುತ್ತವೆ. ಅವುಗಳಲ್ಲಿ ಶಾಲಾಪೂರ್ವ ಶಿಕ್ಷಣದ ಹಂತಕ್ಕೆ ಸೂಕ್ತವಾದುವು ಪ್ರಧಾನವಾಗಿ ಎರಡು.

**1. ಶಾಲಾಪೂರ್ವ–ಶಿಕ್ಷಣಕ್ಕೆ ವಿಕಾಸ ಸೂಕ್ತ ಪಠ್ಯಕ್ರಮ (Developmentally Appropriate Curriculum):**

ಮಕ್ಕಳ ವಯೋಮಾನದ ಆಧಾರದ ಮೇಲೆ ರಚಿಸುವ ಪಠ್ಯಕ್ರಮಕ್ಕಿಂತ ಭಿನ್ನವಾಗಿರುವ ಪ್ರತಿ ಮಗುವಿನ ವಿಕಾಸದ ಮಟ್ಟವನ್ನು ಆಧರಿಸುವ 'ವಿಕಾಸ ಸೂಕ್ತ ಪಠ್ಯಕ್ರಮ' ಶಾಲಾಪೂರ್ವ ಶಿಕ್ಷಣಕ್ಕೆ ಅತ್ಯಗತ್ಯವಾಗಿದೆ. ಪಿಯಾಜೆಯ ಉಪಕ್ರಮದಲ್ಲಿ ಮಕ್ಕಳ ಗ್ರಹಣಶಕ್ತಿಯ ಮಟ್ಟಕ್ಕನುಗುಣವಾಗಿ ಪಠ್ಯ ವಸ್ತು ವಿಷಯ. ಇವುಗಳನ್ನು ಬೋಧಿಸಲು ಸಾಧ್ಯವಾಗುವ ಚಟುವಟಿಕೆಗಳು, ಚಟುವಟಿಕೆಗಳಲ್ಲಿ ವಸ್ತು ಕ್ರಿಯೆಗೆ ಸಾಮಗ್ರಿಗಳು, ಅನುಭವಗಳು, ಯೋಚನಾಕ್ರಿಯೆಗಳು ಕ್ರಮಾಗತವಾಗಿ ಅಳವಡಿಸುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಪಿಯಾಜೆಯ ವಿಕಾಸ ಹಂತಗಳು ಪಠ್ಯಕ್ರಮ ರಚನೆಗೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ಒದಗಿಸುತ್ತವೆ ಎಂದು ಹೇಳಬಹುದು.

**2. ಶೈಕ್ಷಣಿಕ ಗುರಿಗಳಿಗೆ ಪಿಯಾಜೆಯ ಜ್ಞಾನರಚನೆಯ ಮಾರ್ಗದ ಔಚಿತ್ಯ:**

ತಾರ್ಕಿಕ ಆಲೋಚನಾ ಸಾಮರ್ಥ್ಯದ ಗುರಿ ವಿಜ್ಞಾನ ಮತ್ತು ಗಣಿತ ಕ್ಷೇತ್ರಗಳಷ್ಟೇ ಸೀಮಿತವಾದುದಲ್ಲ; ಪ್ರತಿ ವ್ಯಕ್ತಿಗೂ, ಪ್ರತಿ ಕ್ಷೇತ್ರದಲ್ಲೂ ಅತ್ಯಂತ ಅವಶ್ಯಕವಾದುದು. ಶಾಲಾಪೂರ್ವ ಶಿಕ್ಷಣದ ಹಂತದಿಂದಲೇ ಮಕ್ಕಳಿಗೆ ಸ್ವತಂತ್ರ ಆಲೋಚನಾ ವಿಕಾಸಕ್ಕೆ ಬುನಾದಿ ಹಾಕಿಕೊಡುವ 'ಪಿಯಾಜೆ ಉಪಕ್ರಮ'ದ ಜ್ಞಾನ ರಚನೆಯ ಪ್ರಕ್ರಿಯೆಗಳು ಮಕ್ಕಳನ್ನು ಮುಂದೆ ಶ್ರೇಷ್ಠ ಚಿಂತಕರು ಮತ್ತು ಸೃಜನಶೀಲರನ್ನಾಗಿ ರೂಪಿಸುವ ಶೈಕ್ಷಣಿಕ ಗುರಿಗಳಿಗೆ ಔಚಿತ್ಯಪೂರ್ಣ.

**ಶಾಲಾಪೂರ್ವ ಪಠ್ಯಕ್ರಮದ ಕ್ಷೇತ್ರಗಳು:**

ಶಾಲಾಪಠ್ಯ ಕ್ರಮದಲ್ಲಿ ಮಕ್ಕಳ ಗ್ರಹಣಶಕ್ತಿ ವಿಕಾಸಕ್ಕಾಗಿ ಪ್ರಚೋದಿಸುವ ಅನುಭವಗಳನ್ನು ಪ್ರಮುಖವಾಗಿ ನಾಲ್ಕು ಕ್ಷೇತ್ರಗಳಾಗಿ ವ್ಯವಸ್ಥೆಗೊಳಿಸಬಹುದೆಂದು ಪಿಯಾಜೆ ಸಲಹಿಸಿದ್ದಾರೆ.

1. ಭೌತಿಕಜ್ಞಾನ (Physical knowledge)
2. ತಾರ್ಕಿಕ ಗಣಿತ ಜ್ಞಾನ (Logico-mathematical knowledge)

Digitised by Bharatavani, CIIL

3. ಸಾಮಾಜಿಕ ಜ್ಞಾನ (Social knowledge)

4. ಪ್ರಾತಿನಿಧ್ಯತೆ (Representation)

**1. ಭೌತಿಕ ಜ್ಞಾನ:** ಭೌತಿಕ ಜ್ಞಾನವೆಂದರೆ ವಸ್ತುಗಳ ಇಂದ್ರಿಯಗೋಚರವಾಗುವಂತಹ ಭೌತಿಕ ಗುಣಲಕ್ಷಣಗಳು ಮತ್ತು ಬಾಹ್ಯಕ್ರಿಯೆಗಳ ಅರಿವು ಪಡೆಯುವುದು. ಪ್ರಕೃತಿಯಲ್ಲಿರುವ ವಸ್ತುಗಳೊಡನೆ ಪ್ರತಿಕ್ರಿಯಿಸುವಿಕೆ, ಪ್ರಯೋಗ, ವೀಕ್ಷಣೆ, ಮುಂತಾದ ಅನುಭವಗಳು ವಿವಿಧ ವಸ್ತುಗಳ ಬಾಹ್ಯಲಕ್ಷಣಗಳನ್ನು ನೇರವಾಗಿ ಕಂಡುಕೊಳ್ಳಲು ಸಹಾಯಕ.

**2. ತಾರ್ಕಿಕಗಣಿತ ಜ್ಞಾನ:** ಇದರ ಪ್ರಮುಖ ಯೋಚನಾಕ್ರಿಯೆಗಳಾದ ವರ್ಗೀಕರಣ ಮತ್ತು ಶ್ರೇಣೀಕರಣಗಳಿಂದ ಮೂಲ ಪರಿಕಲ್ಪನೆಗಳು ವಿಕಾಸಕ್ಕೆ ರಚಿತ ಚಟುವಟಿಕೆಗಳಲ್ಲಿ ತೊಡಗಿಸುವುದು. ಉದ್ದ, ಸುತ್ತಳತೆ, ಎತ್ತರ, ವಿಸ್ತೀರ್ಣ, ತೂಕ, ಗಾತ್ರ, ಪರಿಮಾಣ, ಕಾಲ, ಅವಕಾಶೀಯ ಸಂಬಂಧಗಳು, ಸಂಖ್ಯೆ ಮುಂತಾದ ಪರಿಕಲ್ಪನೆಗಳ ವಿಕಾಸಕ್ಕೆ 'ಅಸ್ಥಾಯಿತ್ವ'ದಿಂದ ಕ್ರಮೇಣ 'ಸ್ಥಾಯಿತ್ವ' ಪಡೆದುಕೊಳ್ಳಲು ತಾರ್ಕಿಕ ಗಣಿತ ಜ್ಞಾನವೇ ಆಧಾರ.

**3. ಸಾಮಾಜಿಕ ಜ್ಞಾನ:** ಮಕ್ಕಳಲ್ಲಿ ಸಾಮಾಜಿಕ ನಡೆ–ನುಡಿ ಮತ್ತು ಪಾತ್ರಗಳ ಜ್ಞಾನವನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡುವುದು. ಶಿಕ್ಷಕಿಯರ 'ನೇರ ಬೋಧನೆ' ಗಿಂತ ಗೆಳೆಯರ ಗುಂಪಿನಲ್ಲಿ ಚಟುವಟಿಕೆಯಲ್ಲಿ ತೊಡಗಿ ಪರಸ್ಪರ ವೀಕ್ಷಣೆ ದೋಷಗಳು ತಿದ್ದುವಿಕೆ, ಪ್ರಾತ್ಯಕ್ಷಿಕೆ, ಪ್ರಶ್ನೋತ್ತರಕ್ಕೆ ಅವಕಾಶ, ಮುಂತಾದ ಸಹಕಾರಾತ್ಮಕ ಕಲಿಕೆ (Cooperative learning)ಗೆ ಒತ್ತುಕೊಡುವುದರಿಂದ ಮಕ್ಕಳಲ್ಲಿ ಸಾಮಾಜಿಕ ಜ್ಞಾನ ಮೂಡಿಸಬೇಕು.

**4. ಪ್ರಾತಿನಿಧ್ಯತೆ:** ಮಕ್ಕಳು ಸಂಕೇತಗಳನ್ನು ಬಳಸಲು ತೊಡಗಿದಾಗ (ಉದಾ: ಭಾಷೆಯಲ್ಲಿ ಅಕ್ಷರಗಳು, ಸಂಖ್ಯೆಗಳ ಬರಹ, ಹೆಸರಿಸುವಿಕೆ ಇತ್ಯಾದಿ) ಪ್ರಾತಿನಿಧ್ಯಾತ್ಮಕ ಯೋಚನಾಕ್ರಿಯೆಗಳು ಮೂಡುವುದರಿಂದ, ಪ್ರತಿಕ್ರಿಯೆ, ವರ್ಣನೆ, ವಿವರಣೆ, ವಿಶ್ಲೇಷಣೆ, ತೀರ್ಮಾನ, ಸಮರ್ಥನೆ, ಅಭಿಪ್ರಾಯ ವ್ಯಕ್ತಪಡಿಸುವಿಕೆ ಮುಂತಾದ ಕ್ರಿಯೆಗಳನ್ನು ಉತ್ತೇಜಿಸಬೇಕು. ಇಂದ್ರಿಯಾನುಭವಗಳು ಹೆಚ್ಚಾದಷ್ಟೂ ಮಗುವಿಗೆ ಹೆಚ್ಚು ಹೆಚ್ಚು ಮಾಹಿತಿಗಳ ಪ್ರತಿನಿಧಿಸುವಿಕೆ ಸಾಧ್ಯ. ಚಿತ್ರಕಲೆ, ಸೃಜನಶೀಲ ವಿನ್ಯಾಸಗಳ ಚಟುವಟಿಕೆಗಳೂ ಪ್ರಾತಿನಿಧ್ಯತೆಯನ್ನು ಸಬಲಗೊಳಿಸುತ್ತವೆ.

**ಗ್ರಹಣಶಕ್ತಿಯ ವಿಕಾಸಕ್ಕೆ ಚಟುವಟಿಕೆಯ ಮಹತ್ವ:** ಮಗುವಿಗೆ ನೇರ ಅನುಭವಗಳನ್ನು ನೀಡಲು ರಚಿಸುವ ಸನ್ನಿವೇಶವು ಒಂದು ಚಟುವಟಿಕೆಯಾಗುತ್ತದೆ. ಚಟುವಟಿಕೆಗಳನ್ನು ಸಂರಚಿಕ, ಆಂಶಿಕ ರಚಿತ ಮತ್ತು ಸಂರಚಿತ ಚಟುವಟಿಕೆಗಳಾಗಿ ವಿಂಗಡಿಸಿಕೊಳ್ಳಬಹುದು. ಅರಚಿತ ಚಟುವಟಿಕೆಗಳು ಪ್ರಾರಂಭದ ಆಟದ ರೂಪದಲ್ಲಿದ್ದು, ರಚಿತ ಚಟುವಟಿಕೆಗಳು ನಿರ್ದಿಷ್ಟ ಪರಿಕಲ್ಪನಾ ವಿಕಾಸದ ಗುರಿಯನ್ನು ಹೊಂದಿರುತ್ತವೆ. ಶಾಲಾಪೂರ್ವ ಶಿಕ್ಷಣದ ಒಂದು ಮುಖ್ಯ ಗುರಿಯಾಗಿರುವ ಗ್ರಹಣಶಕ್ತಿ ವಿಕಾಸಕ್ಕೆ ಚಟುವಟಿಕೆ ಆಧಾರಿತ ಪಠ್ಯಕ್ರಮ ಪಿಯಾಜೆಯ ಉಪಕ್ರಮಕ್ಕೆ ಅತ್ಯಗತ್ಯ.

**ಅ. ಚಟುವಟಿಕೆಯ ತತ್ವಗಳು:** ಚಟುವಟಿಕೆಗಳನ್ನು ಯೋಜಿಸುವಾಗ ಈ ಮುಂದಿನ ತತ್ವಗಳನ್ನು ಗಮನದಲ್ಲಿಡಬೇಕು.

- ಮಗುವಿಗೆ ತನ್ನ ಪರಿಸರದಲ್ಲೇ ಸಿಗುವ ಸಾಧನ–ಸಾಮಗ್ರಿಗಳಿಂದ ಪ್ರಚೋದನೆ.
- ಪ್ರತಿಮಗುವಿಗೂ ಪ್ರತ್ಯೇಕ ಸಾಮಗ್ರಿ ನೀಡಿ 'ವಸ್ತು ಕ್ರಿಯೆ'ಗೆ ಅವಕಾಶ.
- ಶಾಬ್ದಿಕ ವರ್ಣನೆ ಪ್ರಾಸಂಗಿಕ; ಭಾಷಾ ಬೆಳವಣಿಗೆಗಿಂತ ('ಸರಿ ಉತ್ತರ' ಹೇಳುವ ಗಿಣಿಪಠದ ಕಲಿಕೆಗಿಂತ) ನೇರ ಅನುಭವಕ್ಕೆ ಹೆಚ್ಚು ಮಹತ್ವ.
- ವೈಯಕ್ತಿಕ ಚಟುವಟಿಕೆ/ಜೋಡಿ ಮಕ್ಕಳು/ ಸಣ್ಣ ಅಥವಾ ದೊಡ್ಡ ಗುಂಪಿನಲ್ಲಿ ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಚಟುವಟಿಕೆಯ ಆಯ್ಕೆ.
- ಗುಂಪಿನ ಚಟುವಟಿಕೆಗಳಲ್ಲಿ ಸಾಮಾಜಿಕ ಹೊಂದಾಣಿಕೆಗೆ ಗಮನ.
- ಮಾಹಿತಿ ನೀಡುವ ಕ್ರಮಕ್ಕಿಂತ 'ಮಾಡಿಕಲಿ' ಸೂತ್ರದ ಆಧಾರದಿಂದ ಗ್ರಹಿಕೆಯ ಸಾಮರ್ಥ್ಯ ಮತ್ತು ಪ್ರಕ್ರಿಯೆಗಳ ಪ್ರಚೋದನೆ.
- ಒಂದೇ ಪರಿಕಲ್ಪನೆಯ ವಿಕಾಸಕ್ಕೆ ವಿವಿಧ ಸಾಮಗ್ರಿ ಮತ್ತು ಸನ್ನಿವೇಶಗಳು.
- ಪ್ರಾರಂಭದಲ್ಲಿ ಚಟುವಟಿಕೆಗಳು ಪೂರ್ವ ಜ್ಞಾನದ ಆಧಾರಿತವಾಗಿದ್ದರೂ ನಂತರದ ಅವಧಿಗಳಲ್ಲಿ ವಿವಿಧ ಬೌದ್ಧಿಕ ಕ್ರಿಯೆಗಳಿಗೆ ಅವಕಾಶ.

**ಆ) ಚಟುವಟಿಕೆಯ ವಿಧಗಳು:**

ಶಾಲಾಪೂರ್ವ ಶಿಕ್ಷಣದ 'ಆಟ–ಚಟುವಟಿಕೆ'ಯ ಪಠ್ಯಕ್ರಮದಲ್ಲಿ ವಿವಿಧ ರೀತಿಯ ಚಟುವಟಿಕೆಗಳು ಸಾಧ್ಯ. ಪಿಯಾಜೆಯ ಉಪಕ್ರಮದ ಚಟುವಟಿಕೆ ಅಳವಡಿಕೆಗೆ ಕೆಳಗಿನ ವಿಧಗಳು ಸೂಕ್ತ.

**1. ಪ್ರಾರಂಭಿಕ ಚಟುವಟಿಕೆಗಳು:**

ಇವು ಆಟದ ರೂಪದಲ್ಲಿ ಸಂಚಿತ ಚಟುವಟಿಕೆಗಳಾಗಿರುತ್ತವೆ; ಇವು ಮುಂದಿನ ರಚಿತ ಚಟುವಟಿಕೆಗಳಿಗೆ ಮಕ್ಕಳನ್ನು ಅಣಿಮಾಡುತ್ತವೆ. ಗುಂಪಿನಲ್ಲಿ ಭಾಗವಹಿಸುವ ರೀತಿಗಳನ್ನು ತಿಳಿಸಲು (ಸಹಕಾರ, ಸರತಿಪಾಲನೆ, ಪರಸ್ಪರ ವಿನಿಮಯ ಇತ್ಯಾದಿ), ಸಾಮಗ್ರಿ ಪರಿಚಯ ಮಾಡಿಸಲು (ಕಲೆ ಹಾಕುವಿಕೆ, ಶೇಖರಿಸುವಿಕೆ, ತಯಾರಿಕೆ, ಹಂಚಿಕೊಳ್ಳುವಿಕೆ, ಇತ್ಯಾದಿ) ಮತ್ತು ಮಕ್ಕಳ ಆಸಕ್ತಿ–ಕುತೂಹಲಗಳನ್ನು ಉತ್ತೇಜಿಸಲು ಇವುಗಳು ಸೂಕ್ತ.

**2. ಪೂರ್ವ–ಪರಿಕಲ್ಪನಾ ಚಟುವಟಿಕೆಗಳು** (Pre-conceptual activities):

Digitised by Bharatavani, CIIL

ಇವುಗಳು ಮಕ್ಕಳು ಮೂಲ ಪರಿಕಲ್ಪನೆಗಳ ವಿಕಾಸಕ್ಕೆ ಅವಶ್ಯಕವಾಗುವ ಪೂರ್ವಜ್ಞಾನಕ್ಕೆ ಒತ್ತು ಕೊಡುವ ಅರೆ ರಚಿತ ಚಟುವಟಿಕೆಗಳು. ವಿವಿಧ ಪರಿಕಲ್ಪನೆಗಳ ವಿಕಾಸದ (ಉದಾ: ಹೆಚ್ಚು–ಕಡಿಮೆ; ದೊಡ್ಡದು–ಚಿಕ್ಕದು, ಮೇಲೆ ಕೆಳಗೆ, ಮಧ್ಯೆ–ಸುತ್ತಲೂ, ಉದ್ದ–ಗಿಡ್ಡ, ಭಾರ–ಹಗುರ, ಬೇಗ–ನಿದಾನ, ಸಮ–ಅಸಮ, ವಸ್ತುಗಳ ವಿವಿಧ ಆಯಾಮಗಳು=ಉದ್ದ–ಅಗಲ–ಎತ್ತರ ಇತ್ಯಾದಿ)ಮೂಲ ಯೋಚನಾ ಕ್ರಿಯೆಗಳಾಗಿ ಹೋಲಿಕೆ – ವ್ಯತ್ಯಾಸಗಳನ್ನು ವಸ್ತುಕ್ತಿಯೆ ಅನುಭವಗಳ ಮೂಲಕ ನೀಡಬೇಕು. ಹಿಂದೆ ಹೇಳುವಂತೆ ಮೂರ್ತರೂಪದ, ಪ್ರಕೃತಿಯಲ್ಲೇ ಸಿಗುವ ವಿವಿಧ ಸಾಮಗ್ರಿಗಳು ಬಳಕೆ, ಒಳಾಂಗಣ–ಹೊರಾಂಗಣ ಆಟಗಳು, ಸೂಕ್ತ ಪ್ರಶ್ನೋತ್ತರಗಳಿಗೆ ಒತ್ತು ನೀಡಬೇಕಾದುದು ಮುಖ್ಯ.

3. **ಪರಿಕಲ್ಪನಾ ವಿಕಾಸ ಚಟುವಟಿಕೆಗಳು:**

ಇವು ಸಂರಚಿತ ಚಟುವಟಿಕೆಗಳು ನಿರ್ದಿಷ್ಟ ಪರಿಕಲ್ಪನೆಯ ವಿಕಾಸದ ಗುರಿ ಇದ್ದು, ಮಗುವಿಗೆ ಸೂಕ್ತವಾದ ಗ್ರಹಿಕೆಯ ಪ್ರಚೋದನೆಗೆ ಮೊದಲೇ ಯೋಜಿಸಿಕೊಳ್ಳಬೇಕು. ಇವು ವೈಯಕ್ತಿಕವಾಗಿ, ಜೋಡಿ ಮಕ್ಕಳಿಗಾಗಿ ಅಥವಾ ಸಣ್ಣ ಗುಂಪಿಗೆ 'ಮಾಡುವ' ಚಟುವಟಿಕೆಗಳಾಗಿ ನೀಡಬೇಕು. ಈ ಸಂರಚಿತ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಲು ಕೆಳಗೆ ನೀಡಿರುವ ಅಂಶಗಳು ಸಹಾಯಕ.

i) **ಸ್ವಾಭಾವಿಕವಾಗಿ ಪ್ರತಿಕ್ರಿಯಿಸುವ ಸಾಮಗ್ರಿಗಳ ನೀಡುವಿಕೆ:** ಮಕ್ಕಳು ಸಲಹೆ ಇಲ್ಲದೆಯೇ ಈ ಸಾಮಗ್ರಿಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆಂದು ಅವಲೋಕಿಸುತ್ತ ಶಿಕ್ಷಕಿಯು ಚಟುವಟಿಕೆಯ ಗುರಿಯನ್ನು ಪರಿಚಯಿಸಲು ಸೂಕ್ತ ಸಮಯವನ್ನು ನಿರ್ಧರಿಸಬಹುದು. ಮುಕ್ತ ಆಟ, (Free play) ಭಯ ನಾಚಿಕೆ ದೂರಮಾಡುತ್ತದೆ.

ii) **ಅನೇಕ ರೀತಿಯ ಕ್ರಿಯೆಗಳು ಸಾಧ್ಯವಿರುವ ಸಾಮಗ್ರಿ ನೀಡುವಿಕೆ:** ಇವುಗಳಿಂದ ನೀವೇನು ಮಾಡಬಹುದು ನೋಡಿ' ಎಂದು ಮಕ್ಕಳಿಗೆ ಸ್ವಾತಂತ್ರ್ಯ ನೀಡಿ (ಉದಾ: ಗುಂಡಿ, ಗುಲಗಂಜಿ, ಮಣಿ, ಬೀಜಗಳು ಇತ್ಯಾದಿ ನೀಡಿದಾಗ–ಮಕ್ಕಳು ಅದನ್ನು ವರ್ಗೀಕರಣ, ವಿನ್ಯಾಸ ರಚನೆ, ಎಣಿಕೆ, ಅಥವಾ ಮಣಿ ಪೋಣಿಸುವಿಕೆ ಇತ್ಯಾದಿ) ಕ್ರಮೇಣ ಸಂರಚಿತ ಚಟುವಟಿಕೆಯ ಗುರಿಯತ್ತ ಸಾಗಬಹುದು.

iii) **ನಿರೀಕ್ಷಿತ ಪರಿಣಾಮ ಉಂಟುಮಾಡಲು ಸೂಚಿಸಿ ಸಾಮಗ್ರಿ ನೀಡುವಿಕೆ:** 'ಹೀಗೆ ಮಾಡಲು ಸಾಧ್ಯವಾ? ಪ್ರಯತ್ನಿಸಿ'ಎನ್ನುತ್ತಾ ಸಾಮಗ್ರಿ ನೀಡುವಾಗಲೇ ಚಟುವಟಿಕೆಯ ಉದ್ದೇಶವನ್ನು ಹೇಳಬಹುದು. ಇಲ್ಲಿ ಮಕ್ಕಳು ಕೊಟ್ಟ ಸಾಮಗ್ರಿಗಳಿಂದ ನಿರೀಕ್ಷಿತ ಆಚರಣೆಯನ್ನು ಮಾಡಿತೋರಿಸಲು ಪ್ರಚೋದಿಸಬೇಕು. (ಸಮಗಣಗಳ ಹೊಂದಿಸುವಿಕೆ, ಉದ್ದ, ಭಾರ, ಗಾತ್ರಗಳ ಶ್ರೇಣೀಕರಣ, ವಿವಿಧ ಆಯಾಮಗಳ ವರ್ಗೀಕರಣ ಇತ್ಯಾದಿ) ಸಣ್ಣ ಗುಂಪಿನಲ್ಲಿ ವಿವಿಧ ಆಯಾಮಗಳ ವರ್ಗೀಕರಣ ಇತ್ಯಾದಿ). ಸಣ್ಣ ಗುಂಪಿನಲ್ಲಿ ಪರಸ್ಪರ ಅವಲೋಕನ, ಪ್ರಶ್ನೋತ್ತರ ವಿವರಣೆಗೆ ಆದ್ಯತೆ ನೀಡಬೇಕು.

ಮೇಲೆ ಹೇಳಿದ ಮೂರೂ ರೀತಿಯ ಚಟುವಟಿಕೆಗಳ ಪೂರ್ವ ನಿಯೋಜನೆ/ಸೂಕ್ತ ಸಾಮಗ್ರಿಗಳ ಸಿದ್ಧತೆ, ಅವಧಿಗಳ ಸಂಯೋಜನೆ ಮತ್ತು ಪ್ರತಿ ಮಗುವಿನ ವಿಕಾಸದ / ಕಲಿಕೆಯ ಗತಿಯ ಗುರುತಿಸುವಿಕೆಯಿಂದ ಚಟುವಟಿಕೆ ಆಧಾರಿತ ಪಠ್ಯಕ್ರಮ ಫಲಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ಶಾಲಾಪೂರ್ವ ಶಿಕ್ಷಣವು ಒಂದು ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯಾಗಿದ್ದು (ಪ್ರಾಥಮಿಕ ಶಾಲೆಯ ಪ್ರವೇಶಾತಿಗೆ ಶಾಲಾಪೂರ್ವ ಶಿಕ್ಷಣದ ಕಡ್ಡಾಯವೇನಿಲ್ಲ) ಅನೇಕ ಖಾಸಗಿ ವಿದ್ಯಾಸಂಸ್ಥೆಗಳು, ಶಿಶುವಿಹಾರಗಳು, ಅಂಗನವಾಡಿ, ಬಾಲವಾಡಿ ಕೇಂದ್ರಗಳಲ್ಲಿ ಸೂಕ್ತ ರೀತಿಯ ಒಂದು ನಿರ್ದಿಷ್ಟ ಪಠ್ಯಕ್ರಮ ಕಂಡುಬರುವುದಿಲ್ಲ. ಗ್ರಹಣಶಕ್ತಿ ವಿಕಾಸಕ್ಕೆ ಉತ್ತೇಜನ ನೀಡುವ ಕಾರ್ಯಕ್ರಮಗಳು ಬೆರಳೆಣಿಕೆಯಷ್ಟೇ. ಹೆಚ್ಚಾಗಿ ವಯೋಮಾನದ ಆಧಾರದ ಮೇಲೆ ಓದು–ಬರಹ, ಸಂಖ್ಯಾಜ್ಞಾನವನ್ನು ಯಾಂತ್ರಿಕವಾಗಿ ಕಲಿಸುವ ಗುರಿ (ಕೇವಲ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಒಂದನೆಯ ತರಗತಿಗೆ ಪ್ರವೇಶ ಪಡೆಯುವ ಗುರಿ)ಯ ಪ್ರಚಲಿತ ಶುಷ್ಕ ಪದ್ಧತಿಯ ಬದಲಾವಣೆಗೆ ಪಿಯಾಜ್ಞೆಯ ಉಪಕ್ರಮದ ಔಚಿತ್ಯತೆಯು ಶಾಲಾಪೂರ್ವ ಶಿಕ್ಷಣದ ಪಠ್ಯತಜ್ಞರು, ಶಿಕ್ಷಕರು ಮತ್ತು ಮಕ್ಕಳ ಪೋಷಕರಿಗೂ ಮನವರಿಕೆಯಾಗಬೇಕಾದ ಅಗತ್ಯ ಎದ್ದು ಕಾಣುತ್ತದೆ.

**–ಡಾ. ಪದ್ಮಿನಿ ಟಿ.**

## ಶಾಲಾ ವೇಳಾ ಪತ್ರಿಕೆ

ವಿವಿಧ ಬೋಧನಾ ವಿಷಯಗಳ ಚಟುವಟಿಕೆಗಳು ಹಾಗೂ ತರಗತಿಗಳಿಗೆ ದೈನಂದಿನ ಕಾಲ ಹಂಚಿಕೆಯನ್ನು ತೋರಿಸುವ ಪೂರ್ವಯೋಜಿತ ನಕ್ಷೆ ಅಥವಾ ಪಟ್ಟಿಯೇ ಶಾಲಾ ವೇಳಾ ಪತ್ರಿಕೆ. ಶಾಲೆ ಮತ್ತು ತರಗತಿಗಳ ಅವಧಿ, ಬೋಧಿಸಲ್ಪಡುತ್ತಿರುವ ವಿಷಯಗಳು, ಬೋಧಿಸುತ್ತಿರುವ ಶಿಕ್ಷಕರು, ವಿಶ್ರಾಂತಿಯಲ್ಲಿರುವ ಶಿಕ್ಷಕರು, ಒಂದು ನಿರ್ದಿಷ್ಟ ಅವಧಿಯಲ್ಲಿ ಬಳಕೆ ಆಗುತ್ತಿರುವ ಕೊಠಡಿಗಳು, ಕ್ರೀಡಾ ಸಮಯ, ಬೆಳಗಿನ ಪ್ರಾರ್ಥನಾ ಸಮಯ, ಹಾಜರಿ ಸಮಯ, ಕವಾಯಿತು ಸಮಯ, ಆಟ ಮತ್ತು ಇತರ ಸಹಪಠ್ಯ ಚಟುವಟಿಕೆಗಳ ಸಮಯ ಮತ್ತು ಶಾಲೆಯ ವಿಶ್ರಾಂತಿಯ ಸಮಯ ಇತ್ಯಾದಿಗಳನ್ನು ವೇಳಾ ಪತ್ರಿಕೆ ಪ್ರತಿಬಿಂಬಿಸುತ್ತದೆ.

**ಹೆಚ್.ಜಿ.ಸ್ಟೆಡ್** ಅವರ ಪ್ರಕಾರ "ಶಾಲಾ ಕಾರ್ಯ ಸುಗಮವಾಗಿ ಸಾಗಲು ವೇಳಾಪತ್ರಿಕೆ ಚೌಕಟ್ಟನ್ನು ಒದಗಿಸುತ್ತದೆ. ಶಾಲೆಯ ಉದ್ದೇಶವು ಕಾರ್ಯರೂಪಕ್ಕೆ ಇಳಿಯಲು ಇದೊಂದು ಉಪಕರಣವಾಗಿದೆ".

**ಎನ್.ಎಸ್.ವೀರಪ್ಪ** ಅವರ ಪ್ರಕಾರ "ವಾರದ ಎಲ್ಲಾ ದಿನಗಳಿಗೆ ಸಂಬಂಧಿಸಿದಂತೆ ಶಾಲೆಯಲ್ಲಿ ಪ್ರತಿನಿತ್ಯ ವಿವಿಧ ಅವಧಿಗಳಲ್ಲಿ

Digitised by Bharatavani, CIIL

ಪೂರ್ವಯೋಜಿತವಾಗಿ ನಿಗದಿಯಾದಂತೆ ಪಾಠ–ಪ್ರವಚನಗಳನ್ನು ಸವಿವರವಾಗಿ ತಿಳಿಸುವ ಪಟ್ಟಿಯೇ ಶಾಲಾ ವೇಳಾಪಟ್ಟಿ".

**ವೇಳಾಪತ್ರಿಕೆಯ ಮಹತ್ವ:**

1. **ಸಮಯ ಮತ್ತು ಶ್ರಮದ ಅಪವ್ಯಯ ತಪ್ಪಿಸುತ್ತದೆ:** ಯಾವುದೇ ಯೋಜಿತ ಚಟುವಟಿಕೆಯು ಸಮಯ, ಶ್ರಮದ ಅಪವ್ಯಯ ತಪ್ಪಿಸುತ್ತದೆ. ಇದು ಚಟುವಟಿಕೆಗಳ ಪುನರಾವರ್ತನೆ, ಅನಗತ್ಯ ಗೊಂದಲ, ಅವೈಜ್ಞಾನಿಕ ಕಾರ್ಯದ ಒತ್ತಡಗಳನ್ನು ತಡೆಗಟ್ಟುತ್ತದೆ.

2. **ಪ್ರತಿಯೊಂದು ವಿಷಯ ಹಾಗೂ ಚಟುವಟಿಕೆಗೆ ಅಗತ್ಯ ಗಮನ:** ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ಅವುಗಳ ಮಹತ್ವ ಹಾಗೂ ಕಾಠಿಣ್ಯತೆಗೆ ಅನುಗುಣವಾಗಿ ಆದ್ಯತೆಯ ಕಾಲಹಂಚಿಕೆ ಮಾಡಲಾಗುತ್ತದೆ. ನ್ಯಾಯಯುತ ಹಂಚಿಕೆ ಉತ್ತಮ ವೇಳಾ ಪತ್ರಿಕೆಯ ಲಕ್ಷಣವಾಗಿದೆ.

3. **ನಿಯಮಿತ ಮತ್ತು ಸಮಾನ ಪ್ರಗತಿ:** ಎಲ್ಲಾ ಚಟುವಟಿಕೆಗಳಿಗೂ ಸೂಕ್ತ ಗಮನ ಹಾಗೂ ಕಾಲಾವಕಾಶ ಒದಗಿಸುವುದರಿಂದ ಉತ್ತಮ ಪ್ರಗತಿ ಸಾಧ್ಯ.

4. **ಕಾರ್ಯದ ನ್ಯಾಯಯುತ ಹಂಚಿಕೆ:** ವಿವಿಧ ವಿಷಯ ಹಾಗೂ ಚಟುವಟಿಕೆಗಳನ್ನು ಬೇರೆ ಬೇರೆ ಶಿಕ್ಷಕರಿಗೆ ನ್ಯಾಯಯುತವಾಗಿ ಹಂಚಲಾಗುತ್ತದೆ.

5. **ಶಾಲಾ ಜೀವನದಲ್ಲಿ ಸುವ್ಯವಸ್ಥೆ:** ವೇಳಾ ಪತ್ರಿಕೆಯು ವಿದ್ಯಾರ್ಥಿಗಳಿಗೆ ಸಮಯಬದ್ಧ ಚಟುವಟಿಕೆಗಳನ್ನು ಹಂಚಿಕೊಟ್ಟು ಅವುಗಳನ್ನು ಕ್ರಿಯಾಶೀಲಗೊಳಿಸುತ್ತದೆ. ಸೋಮಾರಿತನಕ್ಕೆ ಅವಕಾಶವಿಲ್ಲ. ಶಿಸ್ತು ಉಂಟಾಗುತ್ತದೆ. ಇಲ್ಲದಿದ್ದರೆ ಗೊಂದಲ, ಅವ್ಯವಸ್ಥೆ ನಿರ್ಮಾಣವಾಗಬಲ್ಲದು.

6. **ಉತ್ತಮ ಅಭ್ಯಾಸಗಳ ಬೆಳವಣಿಗೆ:** ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಸಮಯಪಾಲನೆ ಹಾಗೂ ಕ್ರಮಬದ್ಧತೆಯ ಪ್ರಜ್ಞೆ ಉಂಟುಮಾಡುತ್ತದೆ. ಇದರ ಮೂಲಕ ಅವರಿಗೂ ತಮ್ಮ ವೈಯಕ್ತಿಕ ಕಾರ್ಯಗಳನ್ನು ಯೋಚಿಸಿ, ಸಮಯಬದ್ಧವಾಗಿ ಕಾರ್ಯರೂಪಕ್ಕೆ ತರಲು ಅನುಕೂಲವಾಗುತ್ತದೆ.

7. **ನೈತಿಕ ಮೌಲ್ಯದ ಅಭಿವೃದ್ಧಿ:** ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ಹೊಣೆಗಾರಿಕೆ ಹಾಗೂ ಸಮಯಬದ್ಧತೆಗೆ ನಿಷ್ಠರಾಗಿ ನೈತಿಕ ಮೌಲ್ಯ ಬೆಳೆಸಿಕೊಳ್ಳಬಲ್ಲರು.

8. **ಮನೋವೈಜ್ಞಾನಿಕ ಮೌಲ್ಯ:** ವೇಳಾ ಪತ್ರಿಕೆಗೆ ಮನೋವೈಜ್ಞಾನಿಕ ಮೌಲ್ಯವಿದೆ. ಉತ್ತಮ ವೇಳಾ ಪತ್ರಿಕೆಯು ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಉಂಟಾಗುವ ಮಾನಸಿಕ ಅಥವಾ ದೈಹಿಕ ದಣಿವನ್ನು ದೃಷ್ಟಿಯಲ್ಲಿ ಇಟ್ಟು ಕೊಂಡು ಸಮಯ ಮತ್ತು ಕಾರ್ಯ ಹಂಚಿಕೆ ಮಾಡುತ್ತದೆ.

9. **ಮುಂಗಡ ಯೋಜನೆಗೆ ಅವಕಾಶ:** ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ದೈನಂದಿನ ಚಟುವಟಿಕೆಗಳನ್ನು ವೇಳಾ ಪತ್ರಿಕೆಗೆ ಅನುಗುಣವಾಗಿ ಮುಂಚಿತವಾಗಿಯೇ ವ್ಯವಸ್ಥಿತವಾಗಿ ಯೋಜಿಸಲು ವೇಳಾ ಪತ್ರಿಕೆ ಪರೋಕ್ಷವಾಗಿ ನೆರವಾಗುತ್ತದೆ. ಉತ್ತಮ ವೇಳಾ ಪತ್ರಿಕೆಯು ಕೆಲಸದ ಹಂಚಿಕೆಗೆ ಮಾತ್ರವಲ್ಲ ಕೆಲಸದ ದಕ್ಷತೆಗೂ ಸಹಾಯ ಗೈಯುತ್ತದೆ. ಇದು ಶಾಲಾ ಜೀವನದ ಸೂತ್ರಧಾರ.

**ವೇಳಾ ಪತ್ರಿಕೆ ರಚನೆಯ ತತ್ವಗಳು:**

1. **ಶಾಲೆಯ ವಿಧ:** ಬಾಲಕರ ಅಥವಾ ಬಾಲಕಿಯರ ಶಾಲೆ, ನಗರ ಅಥವಾ ಗ್ರಾಮೀಣ ಶಾಲೆ, ಸಾಮಾನ್ಯ ಅಥವಾ ಪಬ್ಲಿಕ್ ಶಾಲೆ ಮೊದಲಾದ ವಿಧಗಳನ್ನು ಆಧರಿಸಿ ಅಲ್ಲಿಯ ಚಟುವಟಿಕೆಗಳ ಸ್ವರೂಪಕ್ಕೆ ಅನುಗುಣವಾಗಿ ವೇಳಾ ಪತ್ರಿಕೆಯನ್ನು ಸಿದ್ಧಪಡಿಸಬೇಕು. ಎರಡು ಪಾಳಿಯ ಶಾಲೆಗಳಿದ್ದರೆ ಶಾಲಾ ಅವಧಿ ಕಡಿಮೆ ಆಗಬಹುದು. ಏಕೋಪಾಧ್ಯಾಯ ಶಾಲೆಗಳ ಹಾಗೂ ಸಹ ಶಿಕ್ಷಣದ ಶಾಲೆಗಳ ಅಗತ್ಯತೆ ಭಿನ್ನವಾಗಿರುತ್ತದೆ.

2. **ಸಮಯ ಲಭ್ಯತೆ:** ಪ್ರತಿಯೊಂದು ವಿಷಯ ಅಥವಾ ಚಟುವಟಿಕೆಗೆ ಕೊಡಬೇಕಾದ ಸಮಯದ ಪ್ರಮಾಣವು ಶಾಲೆಯಲ್ಲಿ ಲಭ್ಯವಾಗುವ ಒಟ್ಟು ಸಮಯವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಉನ್ನತದರ್ಜೆಯ ಶಾಲೆಯಲ್ಲಿ ಕಾರ್ಯದ ಅವಧಿ ದೀರ್ಘವಾಗಿರುತ್ತದೆ. ವೇಳಾ ಪತ್ರಿಕೆಯ ರಚನೆಯಲ್ಲಿ ಇಲಾಖೆಯ ನಿಯಮಾವಳಿ ಗಳನ್ನು ಪಾಲಿಸಬೇಕು. ಎರಡು ಪಾಳಿ ಶಾಲೆಗಳಲ್ಲಿ ಶಾಲಾ ಅವಧಿ ಕಡಿಮೆ ಇರುತ್ತದೆ.

3. **ವಿಷಯಗಳ ಕ್ಲಿಷ್ಟತೆ ಹಾಗೂ ಸಾಪೇಕ್ಷ ಮಹತ್ವ:** ಕೆಲವು ವಿಷಯಗಳು ವಿದ್ಯಾರ್ಥಿಗಳಿಗೆ ಕ್ಲಿಷ್ಟ ಎನ್ನಿಸಬಹುದು. ಉದಾ: ಇಂಗ್ಲಿಷ್, ಗಣಿತ ಮುಂತಾದವುಗಳು. ಇಂತಹ ಕ್ಲಿಷ್ಟವಾದ ಹಾಗೂ ಮಹತ್ವದ ವಿಷಯಗಳ ಕಲಿಕೆಗೆ ವೇಳಾ ಪತ್ರಿಕೆಯಲ್ಲಿ ಕೆಲವು ಹೆಚ್ಚಿನ ಅವಧಿಗಳನ್ನು ಕಲ್ಪಿಸಬೇಕಾಗಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಮತ್ತು ತೋಟಗಾರಿಕೆ ಕಲಿಕೆಗೆ ತುಲನಾತ್ಮಕವಾಗಿ ಕೆಲವು ಹೆಚ್ಚಿನ ಅವಧಿಗಳನ್ನು ಮೀಸಲಾಗಿಡಬೇಕು. ಕೆಳಗಿನ ತರಗತಿಗಳಲ್ಲಿ ಓದು, ಬರಹ, ಲೆಕ್ಕಗಳ ಕಲಿಕೆಗೆ ಹೆಚ್ಚಿನ ಆದ್ಯತೆಯುಳ್ಳ ವೇಳಾ ಪತ್ರಿಕೆ ರಚನೆಯಾಗಬೇಕು.

4. **ದಣಿವು:** ದಣಿವು ಎರಡು ಬಗೆ – (ಅ) ಭೌತಿಕ ಅಥವಾ ಸ್ನಾಯು ದಣಿವು, (ಆ) ಮಾನಸಿಕ ದಣಿವು. ದಣಿವು ಅವಧಾನವನ್ನು, ಗ್ರಹಣಶಕ್ತಿಯನ್ನು ಕಡಿಮೆಗೊಳಿಸುತ್ತದೆ. ಸ್ವಾಭಾವಿಕವಾಗಿ ಕೆಲಸದ ವೇಗ ಕಡಿಮೆ ಗೊಳ್ಳುತ್ತದೆ. ಕಲಿಕೆಯಲ್ಲಿ ಕೆಲವು ವಿಷಯಗಳು ಇತರ ವಿಷಯಗಳಿಗಿಂತ ಅಧಿಕ ದಣಿವು ಉಂಟುಮಾಡುತ್ತದೆ. ವಾರದ 3ನೇ ಹಾಗೂ 4ನೇ ದಿನಗಳಲ್ಲಿ ಕಲಿಕೆಯ ತೀವ್ರತೆ ಹೆಚ್ಚಾಗಿರುವುದಾಗಿ ತಿಳಿದಿದೆ. ಕಲಿಕೆಗೆ ಸೋಮವಾರವು ಏರಿಕೆಯ ದಿನವಾದರೆ ಶನಿವಾರವು ಬೇಜಾರು ಉಂಟುಮಾಡುವ ದಿನ. ಋತುಮಾನ,

Digitised by Bharatavani, CIIL

ವಯಸ್ಸು ಹಾಗೂ ದೇಹಸ್ಥಿತಿಗೆ ತಕ್ಕಂತೆ ಅವಧಿಗಳನ್ನು ಬದಲಾಯಿಸಬೇಕು. ಬೇಸಿಗೆಯಲ್ಲಿ ಕಡಿಮೆ ಅವಧಿ ಹಾಗೂ ಚಳಿಗಾಲದಲ್ಲಿ ದೀರ್ಘಾವಧಿ ಇರುವುದು ಸೂಕ್ತ. ಮಕ್ಕಳಿಗೆ ಬೇಗ ದಣಿವು ಉಂಟಾಗುವುದರಿಂದ ಪ್ರಾಥಮಿಕ ಶಾಲೆಗಳಲ್ಲಿ ಕಡಿಮೆ ಸಮಯದ ಅವಧಿಗಳಿರಬೇಕು. ದಣಿವು ಉಂಟುಮಾಡುವ ಎರಡು, ಮೂರು ವಿಷಯಗಳನ್ನು ನಿರಂತರವಾಗಿ ಬೋಧಿಸಕೂಡದು. ಉದಾ: ವಿದೇಶಿ ಭಾಷೆ ಅಥವಾ ಆಂಗ್ಲ ಭಾಷೆ ಕಲಿತ ಮರು ಅವಧಿಯಲ್ಲಿಯೇ ಗಣಿತ ಇರಕೂಡದು.

5. **ನ್ಯಾಯದ ತತ್ವ:** ವೇಳಾ ಪಟ್ಟಿಯಲ್ಲಿ ಕಾರ್ಯವು ಎಲ್ಲ ಶಿಕ್ಷಕರ ಮಧ್ಯ ನ್ಯಾಯಯುತವಾಗಿ ಹಂಚಲ್ಪಡಬೇಕು. ಕೆಲಸದ ಅಸಮಾನ ವಿತರಣೆಯು ಸಿಬ್ಬಂದಿ ಸದಸ್ಯರಲ್ಲಿ ಬೇಸರ ನಿರ್ಮಿಸಿ ಪ್ರಗತಿಗೆ ಕಂಟಕಪ್ರಾಯವಾಗುತ್ತದೆ ಮತ್ತು ವಿವಿಧ ವಿಷಯ ಅಥವಾ ಚಟುವಟಿಕೆಗೆ ಅವುಗಳ ಪ್ರಾಮುಖ್ಯಕ್ಕೆ ಅನುಗುಣವಾಗಿ ಸಮಯ ಅಥವಾ ಅವಧಿಗಳನ್ನು ಹಂಚಬೇಕು. ವೇಳಾ ಪತ್ರಿಕೆ ಸಿದ್ಧಪಡಿಸುವವನು ಕೆಲವರಿಗೆ ಅನುಕೂಲ ಒದಗಿಸಿ, ಕೆಲವರಿಗೆ ತೊಂದರೆ ಉಂಟುಮಾಡುವ ಬುದ್ಧಿ ತೋರಬಾರದು. ಗುಂಪುಗಾರಿಕೆ, ವೈರತ್ವಗಳು ವೇಳಾ ಪತ್ರಿಕೆಯಲ್ಲಿ ನುಸುಳ ಬಾರದು. ವೇಳಾ ಪತ್ರಿಕೆಯ ಪ್ರಾಚಾರ್ಯರು, ಶಿಕ್ಷಕರು, ವಿದ್ಯಾರ್ಥಿಗಳು, ಶಿಕ್ಷಕೇತರರು ಹಾಗೂ ಸಮುದಾಯ ಎಲ್ಲರಿಗೂ ನ್ಯಾಯ ಒದಗಿಸುವಂತಿರಬೇಕು.

6. **ವೈವಿಧ್ಯತೆಯ ತತ್ವ:** ಉತ್ತಮ ಪತ್ರಕೆಯು ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿರಬೇಕು. ಒಂದು ವಿದ್ಯಾರ್ಥಿಗಳ ಗುಂಪು ಅಥವಾ ತರಗತಿಯನ್ನು ಒಂದೇ ಕೋಣೆಯಲ್ಲಿ ಬಿಟ್ಟುಬಿಡದೆ, ಎರಡು ಅಥವಾ ಮೂರು ಅವಧಿಗಳನ್ನು ಒಬ್ಬನೇ ಶಿಕ್ಷಕ ಬೋಧಿಸುವಂತೆ ಇರಬಾರದು. ಒಂದು ನಿರ್ದಿಷ್ಟ ಅವಧಿ ಪೂರ್ಣಗೊಂಡ ನಂತರ ವಿಷಯ, ಶಿಕ್ಷಕ ಹಾಗೂ ಶಕ್ಯವಿದ್ದರೆ ಕೋಣೆಯ ಬದಲಾವಣೆ ಅಗತ್ಯ. ವೇಳಾ ಪತ್ರಿಕೆಯಲ್ಲಿ ಏಕತಾನತೆ ಇದ್ದರೆ ವಿದ್ಯಾರ್ಥಿಗಳಲ್ಲಿ ಬೇಸರ ಹಾಗೂ ದಣಿವು ಉಂಟಾಗುತ್ತದೆ.

7. **ಸ್ಥಿತಿ ಸ್ಥಾಪಕತ್ವ:** ವೇಳಾ ಪತ್ರಿಕೆಯು ಕಠಿಣವಾಗಿರದೆ ನಮ್ಯತೆ ಗುಣ ಹೊಂದಿರಬೇಕು. ಒಂದು ಬಾರಿ ವೇಳಾ ಪತ್ರಿಕೆ ಸಿದ್ಧವಾದರೆ ಅದು ಪರಿವರ್ತನಾತೀತ ಎಂದು ಭಾವಿಸಕೂಡದು. ಶಿಕ್ಷಕರ ವರ್ಗಾವಣೆ, ಋತುಮಾನದ ಬದಲಾವಣೆ ಇತ್ಯಾದಿ ಕಾರಣಗಳಿಂದ ವೇಳಾ ಪತ್ರಿಕೆಯಲ್ಲಿ ಸೂಕ್ತ ಬದಲಾವಣೆ ತರಬೇಕಾಗಬಹುದು. ವೇಳಾ ಪತ್ರಿಕೆ ಮಾಲಿಕನಲ್ಲ, ಶಿಕ್ಷಕರು ಗುಲಾಮರಲ್ಲ. ಅದು ಶಿಕ್ಷಕರ ಹಾಗೂ ಒಟ್ಟು ಶಾಲೆಯ ಕಾರ್ಯ ನಿರ್ವಹಣೆಗೆ ನೆರವಾಗುವ ಉತ್ತಮ ಉಪಕರಣ. ಅಗತ್ಯಾನುಸಾರ ವೇಳಾ ಪತ್ರಿಕೆಯಲ್ಲಿ ಮಾರ್ಪಾಡು ಹಾಗೂ ಬದಲಾವಣೆ ಗಳನ್ನು ಉಂಟುಮಾಡಬಹುದು.

8. **ಸಿಬ್ಬಂದಿ, ಶಾಲಾ ಕಟ್ಟಡ ಮತ್ತು ಉಪಕರಣಗಳು:** ಶಿಕ್ಷಕರ ಸಂಖ್ಯೆ ಹಾಗೂ ವಿದ್ಯಾರ್ಹತೆ, ತರಗತಿಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ, ತರಗತಿ ಕೊಠಡಿಗಳ ಸ್ಥಳಾವಕಾಶ ಮತ್ತು ಉಪಕರಣಗಳು ಈ ಮೊದಲಾದವುಗಳನ್ನು ಗಮನದಲ್ಲಿಟ್ಟುಕೊಂಡು ಲಭ್ಯವಿದ್ದ ಸೌಲಭ್ಯಗಳಿಗೆ ಅನುಗುಣವಾಗಿ ವೇಳಾ ಪತ್ರಿಕೆ ಸಿದ್ಧಪಡಿಸಬೇಕು.

9. **ಶಿಕ್ಷಕರಿಗೆ ವಿರಾಮ ಅವಧಿಗಳು:** ಶಿಕ್ಷಕ ನಿರಂತರ ಕಾರ್ಯ ನಿರ್ವಹಿಸುವ ಯಂತ್ರವಲ್ಲ. ಕಾರ್ಯದ ಮಧ್ಯದಲ್ಲಿನ ಔಚಿತ್ಯಪೂರ್ಣ ವಿರಾಮವು ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಶಿಕ್ಷಕರಿಗೆ ಒಟ್ಟಿಗೆ ಪಿರಿಯಡುಗಳು ಇರಕೂಡದು. ಆಯಾಸ ತಪ್ಪಿಸಲು ಕನಿಷ್ಠ ಎರಡು ವಿರಾಮದ ಅವಧಿಗಳಿರಬೇಕೆಂದು ಹೇಳಲಾಗಿದೆ. ಇದು ದಣಿವನ್ನು ಹೋಗಲಾಡಿಸಲು ಹಾಗೂ ವಿದ್ಯಾರ್ಥಿಗಳು ಬರೆದಿರುವುದನ್ನು ಸರಿಪಡಿಸಲು ಅಗತ್ಯ.

10. **ಕ್ರೀಡೆ ಮತ್ತು ಮನೋರಂಜನೆ:** ಎಲ್ಲ ಕಾರ್ಯಗಳಿದ್ದು ಕ್ರೀಡೆ ಇಲ್ಲವಾದರೆ ವಿದ್ಯಾರ್ಥಿ ಬಡವಾತ್ತಾನೆ. ಮಗುವಿನ ಸರ್ವತೋಮುಖ ಅಭಿವೃದ್ಧಿಯು ಶಾಲೆಯ ಹೊಣೆಗಾರಿಕೆ ಆಗಿದೆ. ಪಠ್ಯಕ್ರಮ ಹಾಗೂ ವೇಳಾ ಪತ್ರಿಕೆಯಲ್ಲಿ ಕ್ರೀಡೆ ಹಾಗೂ ಸಹಪಠ್ಯ ಚಟುವಟಿಕೆಗಳು ಸೂಕ್ತ ಸ್ಥಾನ ಪಡೆಯಬೇಕು. ಇವುಗಳಿಂದ ಶಾಲಾ ಚಟುವಟಿಕೆಗಳಲ್ಲಿ ವೈವಿಧ್ಯತೆ ಉಂಟಾಗುವುದಲ್ಲದೆ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಕೆಲಸದಲ್ಲಿ ಏಕತಾನತೆ ತಪ್ಪುತ್ತದೆ.

11. **ಇಲಾಖೆಯ ನಿಯಮಾವಳಿಗಳು:** ಶಿಕ್ಷಣ ಇಲಾಖೆಯು ಶಾಲಾ ಶೈಕ್ಷಣಿಕ ವರ್ಷದ ಅವಧಿ, ಶಾಲಾ ದಿನದ ಅವಧಿ, ಪ್ರತಿ ಪಿರಿಯಡ್ಡಿನ ಅವಧಿ ಮತ್ತು ಪ್ರತಿಯೊಂದು ಬೋಧನೆಯ ವಿಷಯದ ಪಿರಿಯಡ್‌ಗಳ ಸಂಖ್ಯೆಯನ್ನು ಗೊತ್ತುಪಡಿಸಿ ಶಿಕ್ಷಣ ಸಂಸ್ಥೆಗಳಿಗೆ ತಿಳಿಯಪಡಿಸುತ್ತದೆ. ವೇಳಾ ಪತ್ರಿಕೆ ತಯಾರಿಕೆಯಲ್ಲಿನ ಅನೇಕ ತತ್ವಗಳನ್ನು ಆಧರಿಸಿ ಈ ನಿಯಮಾವಳಿಗಳು ರೂಪುಗೊಳ್ಳುತ್ತವೆ. ಇಲಾಖೆಯ ನಿಯಮಗಳ ಚೌಕಟ್ಟಿನಲ್ಲಿ, ಮೇಲಿನ ತತ್ವ ಗಳನ್ನು ಆಧರಿಸಿ, ವೇಳಾ ಪತ್ರಿಕೆ ರಚಿಸಬೇಕು.

12. **ಋತುಮಾನ ಅಥವಾ ಹವಾಮಾನದ ಅಂಶಗಳು:** ಒಂದೇ ವೇಳಾ ಪತ್ರಿಕೆ ಎಲ್ಲ ಋತುಮಾನಗಳಿಗೆ ಸಮರ್ಪಕವಲ್ಲ. ಬೇಸಿಗೆ ಕಾಲ ಹಾಗೂ ಚಳಿಗಾಲದಲ್ಲಿ ಕಾರ್ಯದ ಅವಧಿಗಳಲ್ಲಿ ಬದಲಾವಣೆಗಳಾಗಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸುಗ್ಗಿ ಕಾಲದಲ್ಲಿ ಮಕ್ಕಳು ತಂದೆ-ತಾಯಿಗಳ ಕಾರ್ಯದಲ್ಲಿ ಸಹಾಯ ಮಾಡ ಬೇಕಾಗುವುದರಿಂದ ಇಂತಹ ಸ್ಥಳೀಯ ಅಂಶಗಳನ್ನು ವೇಳಾ ಪತ್ರಿಕೆ ಗಮನದಲ್ಲಿಟ್ಟುಕೊಳ್ಳಬೇಕು. ಗುಡ್ಡಗಾಡು ಪ್ರದೇಶದಲ್ಲಿ ಭಿನ್ನವಾದ ವೇಳಾ ಪತ್ರಿಕೆಯೇ ಬೇಕು. ಆದ್ದರಿಂದ, ಒಂದೇ ಮಾದರಿ ವೇಳಾ ಪತ್ರಿಕೆ ಎಲ್ಲ ಪ್ರದೇಶಗಳಿಗೂ ಎಲ್ಲ ಕಾಲಕ್ಕೂ ಯೋಗ್ಯವಾಗಲಾರದು.

Digitised by Bharatavani, CIIL

ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಬದಲಾಗಬೇಕಾಗುತ್ತದೆ. ವೇಳಾ ಪತ್ರಿಕೆ ಒಂದು ಸಾಧನವೇ ಹೊರತು ಯಜಮಾನನಲ್ಲ. ವೇಳಾ ಪತ್ರಿಕೆ ಸಿದ್ಧಪಡಿಸುವಾಗ ಕೆಲವು ಬಾರಿ ತತ್ವಗಳನ್ನು ಮೀರಬಹುದಾದ ಸ್ಥಳೀಯ ಒತ್ತಡಗಳು, ಅನನುಕೂಲಗಳು ಎದುರಾಗಬಹುದು. ಶಕ್ಯವಿದ್ದಷ್ಟು ಮಾರ್ಗದರ್ಶಕ ತತ್ವಗಳನ್ನು ಆಧರಿಸಿ ವೇಳಾ ಪತ್ರಿಕೆ ರಚಿಸಲು ಶಕ್ತಿಮೀರಿ ಪ್ರಯತ್ನಿಸಬೇಕು.

**ವೇಳಾ ಪತ್ರಿಕೆಯ ವಿಧಗಳು:** (1) ಕ್ರೋಢೀಕೃತ ವೇಳಾ ಪತ್ರಿಕೆ, (2) ತರಗತಿ ವೇಳಾ ಪತ್ರಿಕೆ, (3) ಉಪಾಧ್ಯಾಯರ ವೇಳಾ ಪತ್ರಿಕೆ, (4) ಶಿಕ್ಷಕರ ವಿರಾಮ ಅವಧಿಗಳ ವೇಳಾ ಪತ್ರಿಕೆ, (5) ಕ್ರೀಡಾ ವೇಳಾ ಪತ್ರಿಕೆ, (6) ವಿಷಯ ವೇಳಾ ಪತ್ರಿಕೆ, (7) ಸಹಪಠ್ಯ ಚಟುವಟಿಕೆಗಳ ವೇಳಾ ಪತ್ರಿಕೆ, (8) ಗೃಹಪಾಠದ ವೇಳಾ ಪತ್ರಿಕೆ.

(1) **ಕ್ರೋಢೀಕೃತ ವೇಳಾ ಪತ್ರಿಕೆ:** ಇದು ಶಾಲೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಸೂಚಿಸುವ ವೇಳಾ ಪತ್ರಿಕೆಯಾಗಿದ್ದು ಎಲ್ಲರಿಂದಲೂ ಮನ್ನಣೆಯನ್ನು ಗಳಿಸಿದೆ. ಇದು ಆಯಾ ತರಗತಿವಾರು ಹಾಗೂ ವಿಷಯವಾರು ಹಂಚಿಕೆಯಾಗಿರುವ, ಸಂಪೂರ್ಣ ಚಿತ್ರಣವನ್ನು ಕೊಡುತ್ತದೆ. ಇಂತಹ ವೇಳಾ ಪತ್ರಿಕೆಯನ್ನು ಶಾಲೆಯ ಕೈಗನ್ನಡಿ ಎಂದು ಕರೆಯುವುದುಂಟು. ದಿನ ನಿತ್ಯ ಶಾಲೆಯ ಪ್ರತಿ ಶಿಕ್ಷಕನು ಕೈಗೊಳ್ಳಬೇಕಾದ ವಿವಿಧ ಕಾರ್ಯಗಳ ಬಗ್ಗೆ ಈ ವೇಳಾ ಪತ್ರಿಕೆಯು ಮಾಹಿತಿ ನೀಡುವುದು. ಒಟ್ಟಾರೆ ಇದು ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಅವಕಾಶ ನೀಡುವುದು.

(2) **ತರಗತಿ ವೇಳಾ ಪತ್ರಿಕೆ:** ಈ ಬಗೆಯ ವೇಳಾ ಪತ್ರಿಕೆಯನ್ನು ಒಂದು ನಿರ್ದಿಷ್ಟ ತರಗತಿಯನ್ನು ಆಧರಿಸಿದಂತೆ ರಚಿಸಲಾಗುವುದು. ಇದು ಮೂಲತಃ ಆಯಾ ತರಗತಿಯ ವಿದ್ಯಾರ್ಥಿಗಳನ್ನು ಆಧರಿಸಿದಂತಿರುವುದು. ವಿವಿಧ ಶಿಕ್ಷಕರು ಬೋಧಿಸುವ ವಿಷಯಗಳನ್ನು ಅವಧಿಗಳಿಗನುಗುಣವಾಗಿ ನಮೂದಿಸಲಾಗುವುದು. ಇಂತಹ ಅವಧಿಗಳ ನಡುವೆ ಪಠ್ಯೇತರ ಚಟುವಟಿಕೆಗಳನ್ನು ಸಂಘಟಿಸುವ ಸಲುವಾಗಿ ಇತರೆ ಅವಧಿಗಳನ್ನು ಬಳಸಿಕೊಳ್ಳಲಾಗುವುದು. ಈ ಬಗೆಯ ವೇಳಾ ಪತ್ರಿಕೆಯ ಒಂದು ಪ್ರತಿಯನ್ನು ಆಯಾ ತರಗತಿಯ ಕೋಣೆಯಲ್ಲಿ ಎಲ್ಲರಿಗೂ ಕಾಣುವಂತೆ ತೂಗುಹಾಕಲಾಗುವುದು.

(3) **ಉಪಾಧ್ಯಾಯರ ವೇಳಾ ಪತ್ರಿಕೆ:** ಈ ವಿಧದ ವೇಳಾ ಪತ್ರಿಕೆಯು ನಿರ್ದಿಷ್ಟ ಪಡಿಸಿದ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರಿಗೆ ಸಂಬಂಧಿಸಿದುದಾಗಿದೆ. ಈ ವೇಳಾ ಪತ್ರಿಕೆಯನ್ನು ಒಟ್ಟು ಮೂರು ಪ್ರತಿಗಳಲ್ಲಿ ತಯಾರಿಸಿ ಶಿಕ್ಷಕರಿಗೆ ಮತ್ತು ಮುಖ್ಯ ಶಿಕ್ಷಕರಿಗೆ ಎರಡನ್ನು ವಿತರಿಸಿ ಮತ್ತೊಂದನ್ನು ಶಾಲಾ ದಾಖಲಾತಿಯಾಗಿ ಸಂರಕ್ಷಿಸಲಾಗುವುದು. ಕ್ರೋಢೀಕರಿಸಿದ ಶಿಕ್ಷಕರ ವೇಳಾ ಪತ್ರಿಕೆಯಿರುವುದರಿಂದ ಮುಖ್ಯ ಶಿಕ್ಷಕರು ಪ್ರತಿ ಶಿಕ್ಷಕನ ಕಾರ್ಯವನ್ನು ಯಶಸ್ವಿಯಾಗಿ ಮೇಲ್ವಿಚಾರಣೆ ಮಾಡಲು ಸಹಾಯ ಮಾಡಲಾಗುವುದು.

(4) **ಶಿಕ್ಷಕರ ವಿರಾಮ ಅವಧಿಗಳ ವೇಳಾ ಪತ್ರಿಕೆ:** ಶಿಕ್ಷಕರು ವಿರಾಮವಿಲ್ಲದೇ ಪಾಠ ಮಾಡಿದರೆ ಅವರಿಗೆ ಮಾನಸಿಕ ದಣಿವು ಮತ್ತು ದೈಹಿಕ ದಣಿವು ಎರಡೂ ಉಂಟಾಗುತ್ತದೆ. ಅವರಿಗೂ ಮುಂದಿನ ತರಗತಿಗಳಿಗೆ ತಯಾರಿ ಮಾಡಿಕೊಳ್ಳಲು ವಿರಾಮ ವೇಳೆ ಬೇಕಾಗುವುದು. ಇದರಿಂದ ಅವರಲ್ಲಿ ಮನಶ್ಚೇತನ ಉಂಟಾಗುತ್ತದೆ.

(5) **ಕ್ರಿಡಾ ವೇಳಾ ಪತ್ರಿಕೆ:** ಆಯಾದಿನ ತರಗತಿವಾರು ಆಟಕ್ಕೆ ಯಾವ ಯಾವ ಅವಧಿಗಳನ್ನು ಮೀಸಲಿಡಲಾಗಿದೆ ಎಂಬುದನ್ನು ಈ ಬಗೆಯ ವೇಳಾ ಪತ್ರಿಕೆಯಿಂದ ತಿಳಿಯಬಹುದು. ಇಲ್ಲಿ ಕ್ರೀಡೆಗಳಿಗೆ ತಂಡಗಳನ್ನು ತರಗತಿಗನುಗುಣವಾಗಿ ಆಯ್ಕೆ ಮಾಡಿರುವುದಿಲ್ಲ. ಆದರೆ ನಿರ್ದಿಷ್ಟ ಕ್ರಿಡೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಹೊಂದಿರುವ ಸಾಮರ್ಥ್ಯ, ಆಸಕ್ತಿ ಮತ್ತು ವಯಸ್ಸಿನ ಆಧಾರದ ಮೇಲೆ ಆಟಕ್ಕೆ ನಿಗದಿಪಡಿಸಿದ ಅವಧಿಗಳನ್ನು ಆಯ್ಕೆ ಮಾಡಲಾಗುವುದು.

(6) **ವಿಷಯ ವೇಳಾ ಪತ್ರಿಕೆ:** ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವೇಳಾ ಪತ್ರಿಕೆಯನ್ನು ತಯಾರಿಸಬೇಕು. ಇದರಿಂದ ಮುಖ್ಯೋಪಾಧ್ಯಾಯರು ವಿಷಯ ಯಾವ ಯಾವ ತರಗತಿಯಲ್ಲಿ ನಿಗದಿತ ಅವಧಿಯಲ್ಲಿ ಬೋಧಿಸಲ್ಪಡುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ. ಇದು ಪ್ರತಿಯೊಂದು ವಿಷಯಕ್ಕೆ ಬೇರೆ ಬೇರೆಯಾಗಿ ತಯಾರಿಸಲ್ಪಡುತ್ತದೆ.

(7) **ಸಹಪಠ್ಯ ಚಟುವಟಿಕೆಗಳ ವೇಳಾ ಪತ್ರಿಕೆ:** ಸಹಪಠ್ಯ ಚಟುವಟಿಕೆಗಳು ಮತ್ತು ಪಠ್ಯಪೂರಕ ಚಟುವಟಿಕೆಗಳು ಶಾಲೆಯ ಎರಡು ಕಣ್ಣುಗಳಿದ್ದಂತೆ. ಪಠ್ಯಪೂರಕ ಮತ್ತು ಸಹಪಠ್ಯ ಚಟುವಟಿಕೆಗಳನ್ನು ಎಲ್ಲಾ ಶಾಲೆಗಳಲ್ಲಿ ಸಂಘಟಿಸುವುದುಂಟು. ಆದ್ದರಿಂದ ಪಠ್ಯೇತರ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಸಂಘಟಿಸಲು ಪ್ರತ್ಯೇಕವಾಗಿ ವೇಳಾ ಪತ್ರಿಕೆಯನ್ನು ತಯಾರಿಸಬೇಕು. ಇದನ್ನು ಸಾಮಾನ್ಯವಾಗಿ ಶಾಲೆಯು ಪುನರಾರಂಭಗೊಳ್ಳುವ ಸಂದರ್ಭದಲ್ಲಿ ತಯಾರಿಸಲಾಗುವುದು. ಈ ವೇಳಾ ಪತ್ರಿಕೆಯಲ್ಲಿ ವಿವಿಧ ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದಂತಹ ವಿವರಗಳು, ಯಾವ ಶಿಕ್ಷಕರು ಯಾವ ಸಮಯದಲ್ಲಿ, ಎಂತಹ ಚಟುವಟಿಕೆಯನ್ನು ಸಂಘಟಿಸಬೇಕೆಂಬುದರ ಮಾಹಿತಿಯನ್ನು ನಮೂದಿಸಲಾಗುವುದು.

(8) **ಗೃಹ ಪಾಠದ ವೇಳಾ ಪತ್ರಿಕೆ:** ತರಗತಿಯಲ್ಲಿ ಕಲಿತ ಜ್ಞಾನವನ್ನು ಸ್ಥಿರೀಕರಿಸಿಕೊಳ್ಳಲು ಗೃಹಕಾರ್ಯವನ್ನು ವಿದ್ಯಾರ್ಥಿಗಳಿಗೆ ಕೊಡುವುದು ಉಚಿತ. ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಗೃಹಕಾರ್ಯವನ್ನು ನೀಡಿ, ಅವುಗಳನ್ನು ವಿದ್ಯಾರ್ಥಿಗಳಿಂದ ಪಡೆದು, ಮೌಲ್ಯಮಾಪನ ಮಾಡಿ ಅದನ್ನು ವಿದ್ಯಾರ್ಥಿಗಳಿಗೆ ಹಿಂತಿರುಗಿಸುವುದನ್ನು ಗೃಹಕಾರ್ಯ ವೇಳಾ ಪತ್ರಿಕೆಯಲ್ಲಿ ತೋರಿಸಲಾಗುವುದು.

**ವೇಳಾ ಪತ್ರಿಕೆ ರಚಿಸುವಲ್ಲಿ ಉಂಟಾಗುವ ಸಮಸ್ಯೆಗಳು:** ವೇಳಾ ಪತ್ರಿಕೆಯನ್ನು ರಚಿಸುವಾಗ ಕೆಲವೊಂದು ಪ್ರಾಯೋಗಿಕ ಸಮಸ್ಯೆಗಳನ್ನು ಶಿಕ್ಷಕರು ಎದುರಿಸಬೇಕಾಗುವುದು. ಅಂತಹ

Digitised by Bharatavani, CIIL

ಪ್ರಮುಖ ಸಮಸ್ಯೆಗಳೆಂದರೆ:

1. ಶಿಕ್ಷಕ ಮತ್ತು ವಿದ್ಯಾರ್ಥಿ ಅನುಪಾತ ಸರಿಯಾಗಿ ಇಲ್ಲದಿರುವಾಗ ಉತ್ತಮವಾದ ವೇಳಾ ಪತ್ರಿಕೆ ರಚಿಸಲು ಆಗದು.
2. ಶಿಕ್ಷಕ ವಿದ್ಯಾರ್ಥಿಗಳಿಗೆ ಅನುಕೂಲಕ್ಕೆ ತಕ್ಕಂತೆ ಇದನ್ನು ರಚಿಸಲು ಆಗದು.
3. ಶಾಲೆಗಳಲ್ಲಿ ಆಸನ ಸಾಮಗ್ರಿಗಳ ಕೊರತೆ ಇದ್ದಾಗ ಉತ್ತಮ ವೇಳಾ ಪತ್ರಿಕೆಯನ್ನು ರಚಿಸಲು ಆಗದು.
4. ಅರೆಕಾಲಿಕ ಶಿಕ್ಷಕರನ್ನು ನೇನಿಸಿಕೊಂಡು, ಅವರ ಸಮಯಕ್ಕೆ ತಕ್ಕಂತೆ ವೇಳಾ ಪತ್ರಿಕೆಯನ್ನು ರಚಿಸಿದರೆ ಹಲವು ದೈನಂದಿನ ಕೆಲಸಗಳಿಗೆ ಅಡ್ಡಿಯಾಗುವುದು.
5. ತರಗತಿ ಕೊಠಡಿಗಳು ಅಗತ್ಯಕ್ಕಿಂತ ಕಡಿಮೆ ಇದ್ದಲ್ಲಿ ವೇಳಾ ಪತ್ರಿಕೆಯನ್ನು ತಯಾರಿಸಲು ತೊಂದರೆ ಉಂಟಾಗುವುದು.
6. ಶಾಲಾ ದಿನಗಳ ಮಧ್ಯದಲ್ಲಿ ಶಿಕ್ಷಕರು ವರ್ಗಾವಣೆ ಬಯಸಿ ಬೇರೆಡೆಗೆ ಹೋದಾಗ ಉತ್ತಮ ವೇಳಾ ಪತ್ರಿಕೆಯನ್ನು ರಚಿಸಲಾಗದು.

–ಪ್ರೊ. ಶಿವಲಿಂಗಪ್ಪ ಎಸ್.ಜಿ.

## ಶಾಲಾ ಶಿಕ್ಷಕರ ಸೇವಾ ಷರತ್ತುಗಳು

**ಪೀಠಿಕೆ:**

ಶಿಕ್ಷಕರ ಸೇವಾ ಷರತ್ತುಗಳು ಹೇಗಿರಬೇಕೆಂದರೆ, ಅದು ಅವರಿಗೆ ಉದ್ಯೋಗದ ಸ್ಥಿರತೆ, ಭದ್ರತೆ, ಪದೋನ್ನತಿ ಮತ್ತು ಪ್ರಗತಿಯನ್ನು ನೀಡುವಂತಿರಬೇಕು ಮತ್ತು ಎಲ್ಲಕಿಂತ ಹೆಚ್ಚಾಗಿ ಉದ್ಯೋಗದಲ್ಲಿ ಸಂತೃಪ್ತಿಯನ್ನು ದೊರಕಿಸುವಂತಿರಬೇಕು. ಈ ಷರತ್ತುಗಳನ್ನು ವಿಭಿನ್ನ ಆಡಳಿತಗಳ ಕೆಳಗೆ ಕೆಲಸ ಮಾಡುವ ವಿಭಿನ್ನ ವಿಭಾಗಗಳ ಶಿಕ್ಷಕರಿಗೆ ವಿಧಿಬದ್ಧಗೊಳಿಸಲಾಗಿದೆ. ಸರಕಾರಿ ಶಾಲೆಗಳ ಶಿಕ್ಷಕರು ತಮ್ಮ ನೇಮಕಾತಿ, ಪರೀಕ್ಷಣಾವಧಿ, ಸ್ಥಿರೀಕರಣ, ಹಿರಿತನ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ನಾಗರಿಕ ಸೇವಾ ನಿಯಮಗಳ ನಿಬಂಧನೆಗಳ ನಿಯಂತ್ರಣದಲ್ಲಿ ಇರುತ್ತಾರೆ. ಕಾಲಾನುಕ್ರಮದಲ್ಲಿ ರಾಜ್ಯ ಶಿಕ್ಷಣ ಇಲಾಖೆಗಳು ಈ ನಿಯಮಗಳ ಪರಿಶೀಲನೆ ಮತ್ತು ತಿದ್ದುಪಡಿಗಳನ್ನು ನಡೆಸುತ್ತವೆ. ಇತರ ವಿಷಯಗಳಿಗೆ ಸಂಬಂಧಿಸಿದಂತೆ, ವಿಶೇಷವಾಗಿ ಬಡ್ತಿ, ನಿಯೋಗ, ರಜೆ, ಇತ್ಯಾದಿಗಳಿಗೆ ಮೂಲಭೂತ ನಿಯಮಗಳನ್ನು ಅನುಸರಿಸಲಾಗುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಶಿಕ್ಷಕರು ಸಾಮಾನ್ಯವಾಗಿ ಸರಕಾರಿ ಸೇವಾ ವಿನ್ಯಾಸದಲ್ಲಿ ನಿಯಂತ್ರಿಸಲ್ಪಡುತ್ತಾರೆ. ಖಾಸಗಿ ಅನುದಾನಿತ ಶಾಲೆಗಳ ಶಿಕ್ಷಕರು ಸಂಹಿತೆ ಅಥವಾ ಮಸೂದೆಗಳಿಂದ ನಿಯಂತ್ರಿಸಲ್ಪಡುತ್ತಾರೆ. ಈ ಸಂಹಿತೆ ಅಥವಾ ಮಸೂದೆಗಳು ಅವರ ಸೇವಾ ಷರತ್ತುಗಳನ್ನು ವಿವರಿಸುತ್ತವೆ. ಇದರೊಂದಿಗೆ, ಮಾಧ್ಯಮಿಕ ಶಿಕ್ಷಣ ಮಂಡಳಿಯು ಶಾಲೆಗಳ ಅಂಗೀಕಾರಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ಸಂಯೋಜಿಸಿಕೊಂಡಿರುತ್ತದೆ. ಇದರಲ್ಲಿ ಸೇವಾ ನಿಯಮಗಳು ಸೇರಿರುತ್ತವೆ. ಅಂಗೀಕೃತವಲ್ಲದ ಖಾಸಗಿ ಶಾಲೆಗಳ ಶಿಕ್ಷಕರಿಗೆ ಯಾವುದೇ ಸಾಮಾನ್ಯ ನಿಯಮಗಳು ಅನ್ವಯಿಸುವುದಿಲ್ಲ. ಈ ರೀತಿಯ ಶಾಲೆಗಳು ತಮ್ಮ ಸ್ವಂತ ಸೇವಾ ನಿಯಮಗಳನ್ನು ಹೊಂದಿರುತ್ತವೆ. ಇದರಲ್ಲಿ ವೇತನಶ್ರೇಣಿ/ವರಮಾನಗಳು ಸೇರಿರುತ್ತವೆ.

**ಸೇವೆಯ ಸಾಮಾನ್ಯ ಸ್ಥಿತಿಗತಿಗಳು:**

**ಕನಿಷ್ಠ ಶೈಕ್ಷಣಿಕ ಅರ್ಹತೆಗಳು:** ಭಾರತದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಾಮಾನ್ಯವಾಗಿ ಕನಿಷ್ಠ ಮಾಧ್ಯಮಿಕ ಅಥವಾ ಹಿರಿಯ ಮಾಧ್ಯಮಿಕ ಶಿಕ್ಷಣದ ಅರ್ಹತೆ ಮತ್ತು ವೃತ್ತಿಪರ ಬೋಧನಾ ತರಬೇತಿ ಇರಬೇಕು. ಹಾಗಿದ್ದರೂ ಇದರಲ್ಲಿ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಿರುತ್ತದೆ. ಪ್ರಾಥಮಿಕ ಹಂತದಲ್ಲಿ ಶಿಕ್ಷಕರು........,ಕೆಲವೆಡೆಗಳಲ್ಲಿ ಕನಿಷ್ಠ ವಿದ್ಯಾರ್ಹತೆ ಇರುವ ಶಿಕ್ಷಕರು ಕೂಡ ಲಭ್ಯವಿರುವುದಿಲ್ಲ. ಹೀಗಾಗಿ.............ಶಿಕ್ಷಕರ ಸೇವೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಬಹುಪಾಲು ಈಶಾನ್ಯ ರಾಜ್ಯಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಲು....ಕನಿಷ್ಠ ವಿದ್ಯಾರ್ಹತೆಯಾಗಿರುತ್ತದೆ. ಹಾಗಿದ್ದರೂ, ಮಣಿಪುರದಲ್ಲಿ ಮೆಟ್ರಿಕ್ ಮುಗಿಸದವರು ಕೂಡ ಪ್ರಾಥಮಿಕ ಶಿಕ್ಷಕರಾಗಬಹುದು.......ಬೇರೆ ರಾಜ್ಯಗಳ ಶಿಕ್ಷಕರಿಗೆ ಹೋಲಿಸಿದರೆ, ಈಶಾನ್ಯ ಪ್ರದೇಶದಲ್ಲಿರುವ ತರಬೇತಿ ಹೊಂದಿದ ಶಿಕ್ಷಕರ ಶೇಕಡಾವಾರು ಕಡಿಮೆ. ಮತ್ತೊಂದು ಕಡೆ ಉತ್ತರ ಪ್ರದೇಶದ ಉದಾಹರಣೆಯನ್ನು ತೆಗೆದುಕೊಂಡರೆ, ಅಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಕನಿಷ್ಠ ವಿದ್ಯಾರ್ಹತೆಯನ್ನು ಪದವಿಯೊಂದಿಗೆ ಬಿಟಿಸಿ ತರಬೇತಿಗೆ ಹೆಚ್ಚಿಸಲಾಗಿದೆ ಮತ್ತು ಹಿರಿಯ ಪ್ರಾಥಮಿಕ ಹಂತದ ಶಿಕ್ಷಕರ ಕನಿಷ್ಠ ವಿದ್ಯಾರ್ಹತೆಯು ಪದವಿಯೊಂದಿಗೆ ಬಿಎಡ್ ಅಥವಾ ಎಲ್‌ಟಿಯಾಗಿರುತ್ತದೆ.

ಹಿರಿಯ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲಾ ಶಿಕ್ಷಕರ ವಿದ್ಯಾರ್ಹತೆಯು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಕೆಲವು ರಾಜ್ಯಗಳಲ್ಲಿ ನೇಮಕಾತಿಗೆ ಪದವಿಯೊಂದಿಗೆ ಬಿಎಡ್ ಅಗತ್ಯದ ವಿದ್ಯಾರ್ಹತೆಯಾಗಿರುತ್ತದೆ; ಆದರೆ ಕೆಲವೆಡೆಗಳಲ್ಲಿ ಕನಿಷ್ಠ ವಿದ್ಯಾರ್ಹತೆಯು ಮಾಧ್ಯಮಿಕ/ಹಿರಿಯ ಮಾಧ್ಯಮಿಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿ ಪ್ರಮಾಣಪತ್ರ ಅಥವಾ ಡಿಪ್ಲೊಮಾ ಆಗಿರುತ್ತದೆ.

ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾಧ್ಯಮಿಕ ಶಾಲೆಗಳ ಸಹ ಶಿಕ್ಷಕರಿಗಾಗಿ ಗೊತ್ತುಪಡಿಸಿರುವ ಕನಿಷ್ಠ ಶೈಕ್ಷಣಿಕ ಅರ್ಹತೆಯು ಪದವಿಯೊಂದಿಗೆ ಬಿ.ಎಡ್. ಆಗಿದೆ. ಆದರೆ ಅಸ್ಸಾಮಿನಲ್ಲಿ ಬಿಎಡ್ ಪದವಿ ಹೊಂದಿರುವ ಶಿಕ್ಷಕರಿಗೆ ಆರ್ಹತೆ ನೀಡುವವರಾದರೂ, ಅದು ಅವಶ್ಯಕವಿರುವುದಿಲ್ಲ. ಬಹುಪಾಲು ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಉನ್ನತ ಅಥವಾ ಹಿರಿಯ ಮಾಧ್ಯಮಿಕ (10+2) ಶಾಲೆಯ ಶಿಕ್ಷಕರ ನೇಮಕಾತಿಯಲ್ಲಿ ಕನಿಷ್ಠ ಶೈಕ್ಷಣಿಕ ಅರ್ಹತೆಯು ಆಯಾ ವಿಷಯದ

Digitised by Bharatavani, CIIL

ಸ್ನಾತಕೋತ್ತರ ಪದವಿಯೊಂದಿಗೆ ಬಿಎಡ್ ಪದವಿಯಾಗಿರುತ್ತದೆ. ಅಸ್ಸಾಂ, ಹರಿಯಾಣ, ಹಿಮಾಚಲ ಪ್ರದೇಶ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಪಂಜಾಬ್, ಉತ್ತರ ಪ್ರದೇಶ ಮತ್ತು ಅರುಣಾಚಲ ಪ್ರದೇಶಗಳಲ್ಲಿ ವೃತ್ತಿಪರ ಶಿಕ್ಷಣಾರ್ಹತೆಯಿಲ್ಲದೆ ಸ್ನಾತಕೋತ್ತರ ಪದವೀಧರರನ್ನು ಉನ್ನತ ಅಥವಾ ಹಿರಿಯ ಮಾಧ್ಯಮಿಕ ಶಾಲೆಗಳಲ್ಲಿ ಉಪನ್ಯಾಸಕರಾಗಿ ನೇಮಿಸಲಾಗುತ್ತದೆ.

ಬಹಳ ಕಡಿಮೆ ರಾಜ್ಯಗಳು ಬೋಧನಾ ವೃತ್ತಿಗೆ ಪ್ರವೇಶ ಪಡೆಯಲು ಕನಿಷ್ಠ ಶೇಕಡಾ ಅಂಕಗಳನ್ನು ಗೊತ್ತುಪಡಿಸಿವೆ. ನೇಮಕಾತಿ ನಿಯಮಗಳಲ್ಲಿ ಶಿಕ್ಷಕರ ಬೇರೆಬೇರೆ ವಿಭಾಗಗಳಿಗೆ ನಿಶ್ಚಿತ ವಯೋಮಿತಿಯ ಅಗತ್ಯವನ್ನು ತಪ್ಪದೆ ಉಲ್ಲೇಖಿಸಲಾಗಿದೆ.

ಶಿಕ್ಷಕರ ನೇಮಕಾತಿಯಲ್ಲಿ ಎಲ್ಲ ರಾಜ್ಯಗಳು ಸಮಾಜದ ದುರ್ಬಲ ವರ್ಗದವರಿಗಾಗಿ ಮೀಸಲಾತಿ ನಿಯಮವನ್ನು ಅನುಸರಿಸುತ್ತವೆ. ಆದರೆ, ಪರಿಶಿಷ್ಟ ಜಾತಿ ಮತ್ತು ವರ್ಗಗಳು ಮತ್ತು ಸಮಾಜದ ಇತರ ದುರ್ಬಲ ವರ್ಗಗಳಿಗೆ ಸೇರಿದವರಿಗಾಗಿ ಮೀಸಲಿಡುವ ಸ್ಥಾನಗಳ ಶೇಕಡಾವಾರು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಉದಾಹರಣೆಗೆ ಹರಿಯಾಣ ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ 20% ಹುದ್ದೆಗಳು ಮೀಸಲಾಗಿದ್ದರೆ, ಹಿಂದುಳಿದ ವರ್ಗಗಳಿಗೆ 10% ಮಾಜಿ ಯೋಧರಿಗೆ 5% ಮತ್ತು ದೈಹಿಕ ಅಂಗವಿಕಲರಿಗೆ 3% ಮೀಸಲಾತಿ ಇರುತ್ತದೆ. ಕೇರಳ ಶಿಕ್ಷಣ ನಿಯಮಗಳ ಪ್ರಕಾರ ಹಿಂದುಳಿದ ಜಾತಿ/ವರ್ಗಗಳಿಗಾಗಿ ವಿಶೇಷ ನೇಮಕಾತಿ ಕಾರ್ಯಕ್ರಮಗಳನ್ನು ಜಾರಿತೆ ತರಲಾಗಿದೆ. ಇದರಲ್ಲಿ ಶಿಕ್ಷಕರ 4700 ಹುದ್ದೆಗಳನ್ನು ಹಿಂದುಳಿದ ಜಾತಿ/ವರ್ಗಗಳ ಅಭ್ಯರ್ಥಿಗಳ ವಿಶೇಷ ನೇಮಕಾತಿಗೆ ಮೀಸಲಾಗಿಡಲಾಗಿದ. ಮತ್ತು ಈ ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆ ಮತ್ತು ವಯಸ್ಸಿನಲ್ಲಿಯೂ ಸಡಿಲತೆಯನ್ನು ಒದಗಿಸಲಾಗಿದೆ. ಬೇರೆ ರಾಜ್ಯಗಳಲ್ಲಿ ಕೂಡ ಇದೇ ರೀತಿಯ ಮೀಸಲಾತಿ ನಿಯಮಗಳು ಹಿಂದುಳಿದ ಜಾತಿ/ವರ್ಗಗಳ ಅಭ್ಯರ್ಥಿಗಳಿಗೆ ಇವೆ. ಉತ್ತರ ಪ್ರದೇಶ, ಬಿಹಾರ, ದೆಹಲಿ, ಕರ್ನಾಟಕ, ಮಧ್ಯಪ್ರದೇಶ ಇತ್ಯಾದಿ ರಾಜ್ಯಗಳು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿಯಲ್ಲಿ ಸರಕಾರ ಗೊತ್ತುಪಡಿಸಿದ ಮೀಸಲಾತಿ ನಿಯಮಗಳನ್ನು ಅನುಸರಿಸುತ್ತವೆ. ಹಿಂದುಳಿದ ಜಾತಿ/ವರ್ಗಗಳ ಶಿಕ್ಷಕರ ವಿಶೇಷ ನೇಮಕಾತಿಯ ಮೂಲಕ ಕಾಲಾನುಕ್ರಮದಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಪ್ರಯತ್ನವನ್ನು ಕೂಡ ಬೇರೆಬೇರೆ ರಾಜ್ಯಗಳು ನಡೆಸುತ್ತಾ ಬಂದಿವೆ. ತಮಿಳುನಾಡಿನಲ್ಲಿ ಹಿಂದುಳಿದ ಜಾತಿ/ವರ್ಗಗಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಅವರಿಗಾಗಿ ಮೀಸಲಾಗಿಟ್ಟ ಖಾಲಿ ಸ್ಥಾನಗಳನ್ನು ಆ ಸಮುದಾಯಗಳ ಅಭ್ಯರ್ಥಿಗಳನ್ನು ಉದ್ಯೋಗ ವಿನಿಮಯ ಕಚೇರಿಯು ಪ್ರಾಯೋಜಿಸುವವರೆಗೆ ಅದೇ ರೀತಿ ಕಾದಿರಿಸಿಕೊಳ್ಳಲಾಗುವುದು (ಬ್ಯಾಕ್‌ಲಾಗ್). ಬಿಸಿ/ಎಮ್‌ಬಿಸಿಗಳಿಗಾಗಿ ಮತ್ತು ಈ ಸಮುದಾಯಗಳಿಗೆ ಸೇರುವ ಪರಿತ್ಯಕ್ತ ವಿಧವೆಯರಿಗೆ ಮೀಸಲಾತಿ ಒದಗಿಸುವ ಅವಕಾಶ ಕೂಡ ರಾಜ್ಯ ಸರಕಾರದಲ್ಲಿದೆ. ಬೋಧನಾ ವೃತ್ತಿಯಲ್ಲಿ ಅವರ ಪ್ರಾತಿನಿಧಿತ್ವವನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಅಭ್ಯರ್ಥಿಗಳ ಆಯ್ಕೆಯಲ್ಲಿ ಸಾಕಷ್ಟು ವಿನಾಯತಿಯನ್ನು ಕಲ್ಪಿಸಿ ಕೊಡಲಾಗಿದೆ. ಉದಾಹರಣೆಗೆ, ತಮಿಳುನಾಡಿನಲ್ಲಿ ಮಾಧ್ಯಮಿಕ ಮಟ್ಟದ ಶಿಕ್ಷಕರ ಹುದ್ದೆಗೆ ಶೈಕ್ಷಣಿಕ ಅರ್ಹತೆಯು ಹನ್ನೆರಡನೆಯ ತರಗತಿಯಲ್ಲಿ ಕನಿಷ್ಠ 50% ಅಂಕಗಳೊಂದಿಗೆ ತೇರ್ಗಡೆ ಹೊಂದಿರುವುದು ಮತ್ತು ಶೇಕಡ 50 ಅಂಕಗಳೊಂದಿಗೆ ಶಿಕ್ಷಕ ಶಿಕ್ಷಣದ ಡಿಪ್ಲೊಮಾ ಹೊಂದಿರುವುದು. ಇದನ್ನು ಪ್ರತಿಯೊಂದು ವಿಷಯಗಳಲ್ಲಿ ಮತ್ತು ಒಟ್ಟಾರೆಯಾಗಿಯೂ ಪಡೆದಿರಬೇಕಾಗುತ್ತದೆ. ಆದಾಗ್ಯೂ ಪರಿಶಿಷ್ಟ ಜಾತಿ/ಪಂಗಡಗಳ ಅಭ್ಯರ್ಥಿಗಳಿಗೆ ಕೇವಲ ಹನ್ನೆರಡನೆಯ ತರಗತಿಯಲ್ಲಿ ತೇರ್ಗಡೆ ಹೊಂದಿರುವುದು ಮತ್ತು 50% ಅಂಕಗಳನ್ನು ಪಡೆದಿರುವ ಶಿಕ್ಷಕ ಶಿಕ್ಷಣದ ಡಿಪ್ಲೊಮಾ ಸಾಕಾಗುತ್ತದೆ.

ಸಮಾಜದ ದುರ್ಬಲ ವರ್ಗಕ್ಕೆ ಸೇರಿದವರಿಗಾಗಿ ಇರುವಂತಹ ಮೀಸಲಾತಿ ನಿಯಮವು ಶಿಕ್ಷಕ ಬಲದಲ್ಲಿ ಅವರ ಪ್ರಾತಿನಿಧ್ಯ ಹೆಚ್ಚಲು ನೆರವಾಗಿದೆ. ಆದಾಗ್ಯೂ ಪರಿಶಿಷ್ಟ ಜಾತಿ/ಪಂಗಡಗಳ ಶಿಕ್ಷಕರ ಪ್ರಾತಿನಿಧ್ಯವು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗಿರುತ್ತದೆ. NCERT ಯ ಆರನೆಯ ಅಖಿಲ ಭಾರತ ಶೈಕ್ಷಣಿಕ ಸಮೀಕ್ಷೆ (1999)ಯ ಪ್ರಕಾರ ವಿವಿಧ ರಾಜ್ಯಗಳಲ್ಲಿ ಇರುವ ಪರಿಶಿಷ್ಟ ಜಾತಿಗೆ ಸೇರಿದ ಶಿಕ್ಷಕರ ಸಂಖ್ಯೆ ಹೀಗಿದೆ: ತಮಿಳುನಾಡು 12.67%, ಮಹಾರಾಷ್ಟ್ರ 11.60%, ಕರ್ನಾಟಕ 10.85%, ಪಂಜಾಬ್ 10.60%, ಹಿಮಾಚಲ ಪ್ರದೇಶ 10.47%, ಪಶ್ಚಿಮ ಬಂಗಾಲ 10.28%, ಆಂದ್ರಪ್ರದೇಶ 9.2%, ಮತ್ತು ಗುಜರಾತ್ 9.07% ಇವುಗಳು ರಾಷ್ಟ್ರಮಟ್ಟದ ಸರಾಸರಿ (8.99%)ಗಿಂತ ಹೆಚ್ಚಾಗಿವೆ. ಆದರೆ ಅರುಣಾಚಲ ಪ್ರದೇಶ 1.04%, ಗೋವಾ 0.72%, ಮಣಿಪುರ 1.91%, ಮೇಘಾಲಯ 1.65%, ಮತ್ತು ಮಿಜೋರಮ್ 1.04% ಆಗಿದ್ದು ಇದು 1993ರ ಪರಿಶಿಷ್ಟ ಜಾತಿಯ ಶಿಕ್ಷಕರ ಪ್ರಾತಿನಿಧ್ಯಕ್ಕಿಂತ 2% ಕಡಿಮೆಯಾಗಿದೆ. ದೇಶದಲ್ಲಿ ಪರಿಶಿಷ್ಟ ಪಂಗಡ ವಿಭಾಗಕ್ಕೆ ಸೇರಿದ ಶಿಕ್ಷಕರ ಪ್ರಾತಿನಿಧ್ಯವು 5.74 ಆಗಿರುತ್ತದೆ. ವಿವಿಧ ರಾಜ್ಯಗಳಲ್ಲಿ ಹೀಗಿದೆ : ಮೇಘಾಲಯ 80.41%, ಮಿಜೋರಾಮ್ 95.97%, ನಾಗಾಲ್ಯಾಂಡ್ 77.86%, ಮತ್ತು ಲಕ್ಷದ್ವೀಪ 78.97% ಆಗಿದ್ದು ಶಿಕ್ಷಕ ಬಲದಲ್ಲಿ ಅವರ ಪ್ರಾತಿನಿಧ್ಯವು ನಾಲ್ಕನೇ ಮೂರಕ್ಕಿಂತ ಹೆಚ್ಚು ಇದೆ. ಆದರೆ ಹರಿಯಾಣ, ಪಂಜಾಬ್ ಮತ್ತು ಚಂಡೀಘರದಲ್ಲಿ ಪರಿಶಿಷ್ಟ ವರ್ಗದ ಶಿಕ್ಷಕರು ಇಲ್ಲವೇ ಇಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಶಿಕ್ಷಕರ ಅತಿ ಹೆಚ್ಚು ಶೇಕಡಾವಾರು ಇರುವುದು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳಲ್ಲಿ. ಸ್ವಾತಂತ್ರ್ಯೋತ್ತರ ಕಾಲದ ಮೊದಲ ಎರಡು ದಶಕಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಶಿಕ್ಷಕರ ಪ್ರಾತಿನಿಧ್ಯವು ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಹಂತಗಳಲ್ಲಿ ಶೂನ್ಯ ಪ್ರಮಾಣದ್ದಾಗಿದ್ದರೆ, ನಂತರ 1993ರಲ್ಲಿ ಅದು ಅನುಕ್ರಮವಾಗಿ ಮಾಧ್ಯಮಿಕ ಹಂತಗಳಲ್ಲಿ ಶೂನ್ಯ ಪ್ರಮಾಣದ್ದಾಗಿದ್ದರೆ, ನಂತರ 1993 ರಲ್ಲಿ ಅದು ಅನುಕ್ರಮವಾಗಿ ಮಾಧ್ಯಮಿಕ ಹಂತದಲ್ಲಿ ಶೇಕಡಾ 6.46 ಮತ್ತು 3.57, ಹಿರಿಯ ಮಾಧ್ಯಮಿಕ ಹಂತದಲ್ಲಿ 6.26 ಮತ್ತು 2.37 ಆಗಿದೆ. ಹೀಗಿದ್ದರೂ ಅವರ ಪ್ರಾತಿನಿಧ್ಯವು ವಿವಿಧ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಒದಗಿಸಲಾದ 15% ಮೀಸಲಾತಿಯ

Digitised by Bharatavani, CIIL

ಹಂತವನ್ನು ತಲುಪಲು ವಿಫಲವಾಗಿದೆ.

ಶಿಕ್ಷಣದ ಎಲ್ಲ ಹಂತಗಳಲ್ಲಿ ಮಹಿಳಾ ಶಿಕ್ಷಕಿಯರು ಪಾಲುಗೊಳ್ಳುವುದನ್ನು ಪ್ರೋತ್ಸಾಹಿಸುವ ಸಲುವಾಗಿ ವಿವಿಧ ರಾಜ್ಯಗಳು ತಮ್ಮ ಆಯ್ಕೆ, ನೇಮಕಾತಿ ಮತ್ತು ವರ್ಗಾವಣೆಯಲ್ಲಿ ವಿಶೇಷ ಕ್ರಮಗಳನ್ನು ಜಾರಿಯಲ್ಲಿರಿಸಿವೆ. ಕೆಲವು ರಾಜ್ಯಗಳು ಮಹಿಳೆಯರಿಗಾಗಿಯೇ ನಿರ್ದಿಷ್ಟ ಸರಾಸರಿ ಸಂಖ್ಯೆಯಲ್ಲಿ ಹುದ್ದೆಗಳನ್ನು ಕಾದಿರಿಸಿದರೆ, ಇನ್ನು ಕೆಲವು ರಾಜ್ಯಗಳಲ್ಲಿ ಶಿಕ್ಷಕಿಯರನ್ನು ದೂರದ ಪ್ರದೇಶಗಳಿಗೆ ಕಳಿಸುತ್ತಿಲ್ಲ. ಇನ್ನು ಕೆಲವು ರಾಜ್ಯಗಳಲ್ಲಿ ವಿಧವೆಯರು, ಅನಾಥೆಯರು ಮತ್ತು ಅವಿವಾಹಿತ ಮಹಿಳೆಯರ ನೇಮಕಾತಿ ಮತ್ತು ವರ್ಗಾವಣೆಗಳಲ್ಲಿ ಸಂದರ್ಭಕ್ಕೆ ಹೊಂದಿಕೊಳ್ಳುವ ನಿಯಮಗಳನ್ನು ರೂಪಿಸಿದೆ. ಉದಾಹರಣೆಗೆ ಗೋವಾದಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಶೇಕಡಾ 70ರಷ್ಟು ಇರುವುದರಿಂದ ನಗರ ಪ್ರದೇಶದಲ್ಲಿ ಅವರ ನೇಮಕಾತಿಗೆ ವಿಶೇಷ ಸೌಕರ್ಯವನ್ನು ನೀಡಲಾಗದಿದ್ದರೂ, ಬೇರೆಡೆ ಶಿಕ್ಷಕಿಯರ ನೇಮಕಾತಿ ನಡೆಸುವ ಸಂದರ್ಭದಲ್ಲಿ ಅವರು ಸ್ಥಳೀಯ ಸಾರಿಗೆಯನ್ನು ಅವಲಂಬಿಸಿ ಸುಲಭವಾಗಿ ಪ್ರಯಾಣಿಸ ಬಹುದಾದ ಪ್ರದೇಶಗಳಲ್ಲಿ ಅವರ ನೇಮಕಾತಿ ನಡೆಯುವಂತೆ ಎಲ್ಲ ಕಾಳಜಿಯನ್ನು ವಹಿಸಲಾಗುತ್ತದೆ. ರಾಜಸ್ಥಾನವು ವರ್ಗಾವಣೆಯಲ್ಲಿ ಬೇರೆಬೇರೆ ವಿಭಾಗಗಳ ಶಿಕ್ಷಕಿಯರಿಗೆ ಆದ್ಯತೆಯನ್ನು ನೀಡುತ್ತದೆ. ತಮಿಳುನಾಡಿನಲ್ಲಿ ಶಿಕ್ಷಕಿಯರ ನೇಮಕಾತಿ ಮತ್ತು ವರ್ಗಾವಣೆಗಳಲ್ಲಿ ನಿರ್ದಿಷ್ಟ ಸೌಕರ್ಯಗಳನ್ನು ಒದಗಿಸಲಾಗಿದೆ. ಇವುಗಳೊಂದಿಗೆ, ಶಿಕ್ಷಣ ಕಾನೂನು ಶಿಕ್ಷಕಿಯರಿಗಾಗಿ ನಿರ್ದಿಷ್ಟ ಮಾರ್ಗದರ್ಶಕ ಸೂತ್ರಗಳನ್ನು ಒದಗಿಸುತ್ತದೆ. ಇದೇ ರೀತಿಯ ಇನ್ನು ಹಲವಾರು ಕಾನೂನುಗಳು ಶೈಕ್ಷಣಿಕ ಸಂಸ್ಥೆಗಳ ಮಹಿಳಾ ಉದ್ಯೋಗಿಗಳ ಮೇಲೆ ಪ್ರಭಾವ ಬೀರುವ ರೀತಿಯದ್ದಾಗಿವೆ. ಪ್ರಸೂತಿ ಸೌಕರ್ಯ ಅಧಿನಿಯಮ 1961 ಮತ್ತು ಸಮಾನ ವೇತನ ಅಧಿನಿಯಮ, 1976 ಇತ್ಯಾದಿ. ಹೀಗೆ ಅಂಗವೈಕಲ್ಯ ಅಧಿನಿಯಮ, 1993ದಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಬೋಧನಾ ಕ್ಷೇತ್ರವೂ ಸೇರಿದಂತೆ ಎಲ್ಲ ಉದ್ಯೋಗಗಳಲ್ಲಿ ಮೀಸಲಾತಿ ಸೌಕರ್ಯವನ್ನು ಒದಗಿಸಲಾಗಿದೆ. ಈ ಎಲ್ಲ ಅವಕಾಶಗಳ ಪರಿಣಾಮವಾಗಿ ಸಮಾಜದ ಅವಕಾಶ ವಂಚಿತ ವಿಭಾಗದವರ ಪ್ರಾತಿನಿಧ್ಯವು ಗಮನಾರ್ಹ ರೀತಿಯಲ್ಲಿ ಹೆಚ್ಚಿದೆ. ವಿಶೇಷವಾಗಿ ಹೆಚ್ಚು ಹೆಚ್ಚು ಮಹಿಳೆಯರು ಬೋಧನಾ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

**ನೌಕರಿಭರ್ತಿ ಕಾರ್ಯವಿಧಾನ:** ಶಾಲಾ ಶಿಕ್ಷಕರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಕಾರ್ಯವಿಧಾನವು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ ಮತ್ತು ರಾಜ್ಯದೊಳಗೆ ಆಡಳಿತವರ್ಗದಿಂದ ಆಡಳಿತವರ್ಗಕ್ಕೆ ಭಿನ್ನವಾಗಿದೆ. ಬಹುಪಾಲು ರಾಜ್ಯಗಳಲ್ಲಿ ಸರಕಾರಿ ಶಾಲೆಗಳ ಪ್ರಾಥಮಿಕ ಶಿಕ್ಷಕರ ನೇಮಕಾತಿಯು ಸಂಪೂರ್ಣವಾಗಿ ಜಿಲ್ಲಾ ಶಿಕ್ಷಣ ಅಧಿಕಾರಿಗಳು ಅಥವಾ ಜಿಲ್ಲಾಮಟ್ಟದ ಆಯ್ಕೆ ಸಮಿತಿಗಳ ವಶದಲ್ಲಿ ಇರುತ್ತದೆ. ಆದರೆ ಕೆಲವು ರಾಜ್ಯಗಳಲ್ಲಿ ಅದು ಕೇಂದ್ರೀಕೃತವಿರುತ್ತದೆ. ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ ನೇಮಕಾತಿಯನ್ನು ಆಯ್ಕೆ ಸಮಿತಿಯು ನಡೆಸುತ್ತದೆ. ಈ ಸಮಿತಿಯನ್ನು ಆಯುಕ್ತರು ಅಥವಾ ನಗರಸಭಾ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿ ರಚಿಸುತ್ತಾರೆ. ಉದ್ಯೋಗ ವಿನಿಮಯ ಕೇಂದ್ರಗಳಿಂದ ಅಭ್ಯರ್ಥಿಗಳ ಹೆಸರುಗಳನ್ನು ಆಹ್ವಾನಿಸಲಾಗುತ್ತದೆ. ನಂತರ ಆಯ್ಕೆ ಸಮಿತಿಯಿಂದ ಅಭ್ಯರ್ಥಿಗಳ ಸಂದರ್ಶನ ನಡೆಯುತ್ತದೆ. ಅವರ ಆಯ್ಕೆಯು ಅರ್ಹತೆಯನ್ನು ಆಧರಿಸಿ ನಡೆಯುತ್ತದೆ. ಪಂಚಾಯತ್ ಶಾಲೆಗಳಿಗೆ ಶೈಕ್ಷಣಿಕ ಅರ್ಹತೆಯುಳ್ಳವರ ನೇಮಕಾತಿ ಕಾರ್ಯನಿರ್ವಾಹಕ ಅಧಿಕಾರಿಯಿಂದ ನಡೆದರೆ, ನಗರಸಭೆ ಮತ್ತು ಮಹಾನಗರ ಪಾಲಿಕೆಯ ಶಾಲೆಗಳಿಗೆ ಆಯುಕ್ತರಿಂದ ನೇಮಕಾತಿ ನಡೆಯುತ್ತದೆ. ಖಾಸಗಿ ಅನುದಾನಿತ ಶಾಲೆಗಳ ಶಿಕ್ಷಕರ ನೇಮಕಾತಿಯು ಶಿಕ್ಷಣ ಇಲಾಖೆಯ ಅನುಮೋದನೆಯಿಂದ ಸಂಬಂಧಪಟ್ಟ ಆಡಳಿತವರ್ಗದವರಿಂದ ನಡೆಯುತ್ತದೆ.

ಸರಕಾರಿ ಮಾಧ್ಯಮಿಕ ಮತ್ತು ಉನ್ನತ/ಹಿರಿಯ ಮಾಧ್ಯಮಿಕ ಶಾಲೆಗಳ ಶಿಕ್ಷಕರ ನೇಮಕಾತಿಯನ್ನು ಸಾರ್ವಜನಿಕ ಸೇವಾ ಆಯೋಗ ಅಥವಾ ವಿಶೇಷ ಸಿಬ್ಬಂದಿ ಆಯ್ಕೆ ಸಮಿತಿಗಳು/ ಮಂಡಳಿಗಳ ಮೂಲಕ ನಡೆಸಲಾಗುತ್ತದೆ. ಇಲ್ಲಿ ನೇಮಕಾತಿಗಳನ್ನು ನೇರ ಉದ್ಯೋಗ ಭರ್ತಿಗಳ ಮೂಲಕ ಮತ್ತು ಬಡ್ತಿ (ಪದನ್ನೋತಿಯ) ಮೂಲಕ ಕೂಡ ನಡೆಸಲಾಗುತ್ತದೆ. ಆದರೆ ಶಿಕ್ಷಕರ ನೇರ ನೇಮಕಾತಿಯ ಅನುಪಾತವು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಅದು ಶೇಕಡಾ 50ರಿಂದ ಶೇಕಡಾ 90ರಷ್ಟು ಇರುತ್ತದೆ. ಸ್ಥಳೀಯ ಸಂಸ್ಥೆಗಳು ತಮ್ಮ ಜಿಲ್ಲಾ ಮತ್ತು ಸ್ಥಳೀಯ ಶಿಕ್ಷಣ ಸಮಿತಿಗಳ ಮೂಲಕ ಶಿಕ್ಷಕರನ್ನು ನೇಮಿಸಿಕೊಳ್ಳುತ್ತವೆ. ಖಾಸಗಿ ಶಾಲೆಗಳಲ್ಲಿ, ನೇಮಕಾತಿಯು ಸಂಬಂಧಪಟ್ಟ ಆಡಳಿತ ಸಮಿತಿಗಳ ಮೂಲಕ ಶಿಕ್ಷಣ ಇಲಾಖೆಯ ಅನುಮೋದನೆಯೊಂದಿಗೆ ನಡೆಯುತ್ತದೆ. ಅವರು ರಾಜ್ಯ ಸರಕಾರ ರೂಪಿಸಿರುವ ಶಿಕ್ಷಕರ ಶೈಕ್ಷಣಿಕ ಅರ್ಹತೆ ಮತ್ತು ಅನುಭವಗಳನ್ನು ಆಧರಿಸಿದ ನಿಯಮಾವಳಿಗಳನ್ನು ಅನುಸರಿಸಬೇಕಾಗುತ್ತದೆ. ದೇಶದಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ವಿವಿಧ ರಾಜ್ಯಗಳು ವಿಭಿನ್ನ ಆಯ್ಕೆ ಕಾರ್ಯವಿಧಾನಗಳನ್ನು ಮತ್ತು ಮಾನದಂಡಗಳನ್ನು ಅಳವಡಿಸಿಕೊಂಡಿವೆ. ಅತ್ಯಂತ ಪ್ರಚಲಿತವಾಗಿರುವ ತಂತ್ರವೆಂದರೆ ವಿಷಯ ತಜ್ಞರನ್ನು ಒಳಗೊಂಡಿರುವ ಆಯ್ಕೆ ಸಮಿತಿಯು ಅಭ್ಯರ್ಥಿಯೊಂದಿಗೆ ಮುಖಾಮುಖಿಯಾಗಿ ಮಾತುಕತೆ ನಡೆಸುವುದು ಇನ್ನೊಂದು ತಂತ್ರವೆಂದರೆ, ಸಾಧನಾ ಪರೀಕ್ಷೆ ಮತ್ತು ಅದನ್ನು ಅನುಸರಿಸಿ ನಡೆಸಿದ ಸಂದರ್ಶನವನ್ನು ಆಧರಿಸಿ ಅಭ್ಯರ್ಥಿಯ ಕಾರ್ಯಸಾಮರ್ಥ್ಯವನ್ನು ಆಧರಿಸಿ ಅವರನ್ನು ಆಯ್ಕೆಯ ಕಿರುಪಟ್ಟಿಯಲ್ಲಿ ಸೇರಿಸುವುದು. ಮೂರನೆಯ ತಂತ್ರವು ಬೇರೆಬೇರೆ ಸಾರ್ವಜನಿಕ ಪರೀಕ್ಷೆಗಳಲ್ಲಿ ಅಭ್ಯರ್ಥಿ ಸಾಮರ್ಥ್ಯವನ್ನು ಆಧರಿಸಿ ಅಭ್ಯರ್ಥಿಯ ಅರ್ಹತೆಯನ್ನು ನಿರ್ಧರಿಸುವುದನ್ನು ಒಳಗೊಳ್ಳುತ್ತದೆ.

**ನೇಮಕಾತಿ:** ಸಾಮಾನ್ಯವಾಗಿ ಶಿಕ್ಷಕರ ಹುದ್ದೆಗೆ ಆಯ್ಕೆಯಾದ ಪ್ರತಿಯೊಬ್ಬ ಅಭ್ಯರ್ಥಿಗೆ ನೇಮಕಾತಿ ಪತ್ರವನ್ನು ನೀಡಲಾಗುತ್ತದೆ. ಈ ಪತ್ರದಲ್ಲಿ ನೇಮಕಾತಿಯ ನಿಬಂಧನೆಗಳನ್ನು, ಅದರಲ್ಲಿಯೂ ವಿಶೇಷವಾಗಿ ಹುದ್ದೆಯು ತಾತ್ಕಾಲಿಕ, ಕಾರ್ಯವಾಹಿ ಅಥವಾ ಕಾಯಂ ಎನ್ನುವುದನ್ನು ಉಲ್ಲೇಖಿಸಲಾಗುತ್ತದೆ. ಅದರಲ್ಲಿ ಹುದ್ದೆಗೆ

Digitised by Bharatavani, CIIL

ಲಭ್ಯವಿರುವ ವೇತನ ಶ್ರೇಣಿಗಳನ್ನು ಕೂಡ ಸೂಚಿಸಲಾಗುತ್ತದೆ.

ಖಾಸಗಿ ಆಡಳಿತದಿಂದ ಆಯ್ಕೆಯಾದ ಶಿಕ್ಷಕರು ನಿಗದಿತ ನಮೂನೆಯಲ್ಲಿ ಶಾಲಾ ಆಡಳಿತದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಬೇಕಾಗುತ್ತದೆ. ಈ ಒಪ್ಪಂದದಲ್ಲಿ ಶಿಕ್ಷಕರ ನೇಮಕಾತಿಯ ಸ್ಪಷ್ಟ ಕರಾರುಗಳು ಇರುತ್ತವೆ. ಜೊತೆಗೆ ಇದರಲ್ಲಿ ಒಪ್ಪಂದದಲ್ಲಿರುವ ಕರಾರಿನ ಹೊರತಾಗಿಯೂ, ಸೂಚಿತ ನಿಯಮಗಳನ್ನು ಅನುಸರಿಸಿದಲ್ಲದೆ ಶಿಕ್ಷಕರ ಸೇವೆಯನ್ನು ಕೊನೆಗೊಳಿಸಲಾಗುವುದಿಲ್ಲ ಎಂಬುದನ್ನು ಸೂಚಿಸುವ ವಾಕ್ಯಾಂಗ ಇರುತ್ತದೆ. ಶಿಕ್ಷಕರು ಮತ್ತು ಆಡಳಿತವರ್ಗಕ್ಕೆ ಸಂಬಂಧಿಸಿದ ಎಲ್ಲಾ ವಿವಾದಗಳನ್ನು ಮಧ್ಯಸ್ಥ ಮಂಡಳಿಗಳಿಗೆ ಒಪ್ಪಿಸಲಾಗುತ್ತದೆ. ಈ ಮಂಡಳಿಗಳ ಸಂಯೋಜನೆಯನ್ನು ಸಂಬಂಧಿಸಿದ ನಿಯಮಗಳಿಂದ ಸೂಚಿಸಲಾಗುತ್ತದೆ. ಈ ನಿಯಮಗಳು ಸಹಾಯಾನುದಾನ ವಿಧಿಗಳು ಅಥವಾ ಶಿಕ್ಷಣ ಮಂಡಳಿಯ ನಿಯಮಾವಳಿಗಳದ್ದಾಗಿರುತ್ತವೆ. ಸರಕಾರಿ ಮತ್ತು ಸ್ಥಳೀಯ ಸಂಸ್ಥೆಗಳಿಂದ ನೇಮಕಗೊಂಡ ಶಿಕ್ಷಕರು ಈ ರೀತಿಯ ಒಪ್ಪಂದಗಳಿಗೆ ಸಹಿ ಹಾಕಬೇಕಾಗಿಲ್ಲ. ಏಕೆಂದರೆ ಅವರು ನಿಗದಿಪಡಿಸಿದ ಸೇವಾ ನಿಯಮಗಳಿಗೆ ಅನುಗುಣವಾಗಿ ಕೆಲಸ ಮಾಡಬೇಕಾಗುತ್ತದೆ. ಈ ನಿಯಮಗಳಲ್ಲಿ ಶಿಸ್ತು, ಶಿಕ್ಷೆ ಮತ್ತು ಮೇಲ್ ಮನವಿ ಇರುತ್ತದೆ. ಪ್ರತಿಯೊಬ್ಬ ಶಿಕ್ಷಕ/ಶಿಕ್ಷಕಿಯು ತನ್ನ ನೇಮಕಾತಿ ನಡೆದ ಮೂರು ತಿಂಗಳೊಳಗೆ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ವೈದ್ಯಕೀಯ ಪರೀಕ್ಷೆಯ ವೆಚ್ಚವನ್ನು, ನೇಮಕಾತಿಯನ್ನು ಅನುಸರಿಸಿ ಸರಕಾರ ಅಥವಾ ಸಂಬಂಧಪಟ್ಟ ಆಡಳಿತವು ಭರಿಸುತ್ತದೆ. ಅರ್ಹತಾ ಪ್ರಮಾಣಪತ್ರವನ್ನು ಒಪ್ಪಿಸುವವರೆಗೆ ನೇಮಕಾತಿಯು ಷರತ್ತು ಬದ್ಧವಾಗಿರುತ್ತದೆ. ಪ್ರಮಾಣಪತ್ರದಲ್ಲಿ ಅಭ್ಯರ್ಥಿಯು ಯಾವುದೇ ಅಂಟುಜಾಡ್ಯದಿಂದ ಮುಕ್ತರಾಗಿರುವುದನ್ನು ಮತ್ತು ದೈಹಿಕವಾಗಿ ನೇಮಕಾತಿಗೆ ಅರ್ಹರಾಗಿ ಇರುವುದನ್ನು ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ.

**ಪರೀಕ್ಷಾವಧಿ ಮತ್ತು ಸ್ಥಿರೀಕರಣ:** ಶಿಕ್ಷಕನಾಗಿ ನೇಮಕಗೊಂಡ ಪ್ರತಿಯೊಬ್ಬ ಅರ್ಹ ವ್ಯಕ್ತಿಯನ್ನು ಕೆಲವು ಕಾಲಾವಧಿಗೆ ಪರೀಕ್ಷಣೆಯಲ್ಲಿ ಇಡಲಾಗುತ್ತದೆ. ಈ ಅವಧಿಯು ಸಾಮಾನ್ಯವಾಗಿ ಒಂದು ವರ್ಷ ಅಥವಾ ಎರಡು ವರ್ಷಗಳವರೆಗೆ ಇರುತ್ತದೆ. ಈ ಅವಧಿಯಲ್ಲಿ ಅಭ್ಯರ್ಥಿಯ ಕೆಲಸ ಮತ್ತು ನಡತೆಯನ್ನು ಗಮನಿಸಲಾಗುತ್ತದೆ. ಮತ್ತು ಅದು ತೃಪ್ತಿದಾಯಕವೆಂದು ಕಂಡುಬಂದರೆ ನೇಮಕಾತಿ ಅಧಿಕಾರಿಯು ಅಭ್ಯರ್ಥಿಯ ಸೇವೆಯನ್ನು ಲಭ್ಯವಿರುವ ನಿಯಮಿತ ಖಾಲಿ ಹುದ್ದೆಯಲ್ಲಿ ದೃಢೀಕರಿಸುತ್ತಾರೆ. ಇಲ್ಲದಿದ್ದರೆ, ಒಂದು ತಿಂಗಳ ಸೂಚನಾ ಪತ್ರ ನೀಡಿ ಸೇವೆಯನ್ನು ಕೊನೆಗೊಳಿಸಲಾಗುತ್ತದೆ ಅಥವಾ ಪರೀಕ್ಷಣಾ ಅವಧಿಯನ್ನು ಮುಂದುವರಿಸಲಾಗುತ್ತದೆ.

**ಸೇವಾ ಭದ್ರತೆ:** ಸರಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳಲ್ಲಿ ಸೇವಾ ಭದ್ರತೆ ಇರುತ್ತದೆ. ಸರಕಾರಿ ಶಾಲಾ ಶಿಕ್ಷಕರ ಸೇವೆಯು ನಾಗರಿಕ ಸೇವಾ ನಿಯಮಾವಳಿಗಳಿಂದ ಆಶ್ವಾಸನೆ ಪಡೆದುಕೊಂಡಿದ್ದರೆ, ಖಾಸಗಿ ಶಿಕ್ಷಕರದು ಮಾಧ್ಯಮಿಕ ಶಿಕ್ಷಣಾ ಮಂಡಳಿಯ ನಿಯಮಾವಳಿಗಳಿಂದ ಆಶ್ವಾಸನೆಯನ್ನು ಪಡೆದುಕೊಳ್ಳುತ್ತದೆ. ರಾಜ್ಯ ಶಿಕ್ಷಣ ಕಾನೂನು ಮತ್ತು ನಿಯಮಗಳ ಪ್ರಕಾರ ಮಾನ್ಯತೆ ಪಡೆದ ಖಾಸಗಿ ಶಾಲೆಯ ಯಾವುದೇ ಶಿಕ್ಷಕರ ವಜಾ, ಉಚ್ಚಾಟನೆ, ಶ್ರೇಣಿ ಕಡಿತ ಅಥವಾ ಸೇವೆಯನ್ನು ನಿರ್ಲಕ್ಷಿಸುವುದನ್ನು ಶಿಕ್ಷಣ ನಿರ್ದೇಶಕರು ಅಥವಾ ಸೂಕ್ತ ಅಧಿಕಾರಿಗಳ ಪೂರ್ವ ಅನುಮತಿಯಿಲ್ಲದೆ ಮಾಡುವಂತಿಲ್ಲ.

ಈ ಎಲ್ಲ ಅಧಿನಿಯಮಗಳ ವ್ಯಾಪ್ತಿಯಲ್ಲಿ ಅನುದಾನಿತ ಮತ್ತು ಮಾನ್ಯತೆ ಪಡೆದ ಶಾಲೆಗಳು ಮಾತ್ರ ಇರುತ್ತವೆ. ಮಾನ್ಯತೆ ಪಡೆಯದ ಶಾಲೆಗಳು ಶಿಕ್ಷಕರ ಸೇವಾ ನಿಯಮಗಳಿಗೆ ಸಂಬಂಧಿಸಿದ ಅನೇಕ ಕ್ರಮದೋಷಗಳನ್ನು ನಡೆಸುತ್ತಿದ್ದು ಇವುಗಳು ಈ ಅಧಿನಿಯಮಗಳ ವ್ಯಾಪ್ತಿಯೊಳಗೆ ಬರುವುದಿಲ್ಲ. ಇದರ ಪರಿಣಾಮವಾಗಿ ಮಾನ್ಯತೆ ಪಡೆಯದ ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರು ಸರಕಾರಿ ಶಾಲೆಗಳಲ್ಲಿ ಕೆಲಸ ಮಾಡುವ ತಮ್ಮ ಸಹೋದ್ಯೋಗಿಗಳಿಗಿಂತ, ಹೆಚ್ಚಿನ ಸಂದರ್ಭಗಳಲ್ಲಿ ಅನೇಕ ಅನಾನುಕೂಲತೆಗಳನ್ನು ಎದುರಿಸುತ್ತಾರೆ.

**ಸೇವಾ ಹಿರಿತನ:** ಸರಕಾರದ, ಸ್ಥಳೀಯ ಸಂಸ್ಥೆಗಳ ಮತ್ತು ಅನುದಾನಿತ ಶಾಲೆಗಳ ಶಿಕ್ಷಕರ ಹಿರಿತನವನ್ನು ಅವರು ಹುದ್ದೆಯೊಂದರಲ್ಲಿ ನಿರ್ವಹಿಸಿದ ನಿರಂತರ ಸೇವೆಯ ಕಾಲಾವಧಿಯಿಂದ ನಿರ್ಧರಿಸಲಾಗುತ್ತದೆ. ಸೇವೆಯಲ್ಲಿ ಬೇರೆ ಬೇರೆ ವರ್ಗಗಳಿದ್ದರೆ, ಪ್ರತಿಯೊಂದು ವರ್ಗಕ್ಕೆ ಹಿರಿತನವನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುತ್ತದೆ. ನೇರವಾಗಿ ನೇಮಕಾತಿ ಪಡೆದ ಶಿಕ್ಷಕರ ವಿಚಾರದಲ್ಲಿ ಅರ್ಹತೆಯ ಕ್ರಮವನ್ನು ನಿರ್ಧರಿಸಿದ ಆಯ್ಕೆ ಸಮಿತಿಯು ಅವರ ಹಿರಿತನವನ್ನು ನಿರ್ಧರಿಸುತ್ತದೆ. ಸರಕಾರಿ ಶಾಲಾ ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ಮತ್ತು ಪ್ರಾಂಶುಪಾಲರನ್ನೂ ಸೇರಿಸಿ ಹಿರಿತನದ ಪಟ್ಟಿಯನ್ನು ಶಿಕ್ಷಣ ಇಲಾಖೆಯು ತಯಾರಿಸಿ ತನ್ನ ಸುಪರ್ದಿಯಲ್ಲಿ ಇಟ್ಟುಕೊಂಡಿರುತ್ತದೆ. ಖಾಸಗಿ ಅನುದಾನಿತ ಶಾಲೆಗಳ ಶಿಕ್ಷಕರ ವಿಚಾರದಲ್ಲಿ, ಅದನ್ನು ಸಂಬಂಧಪಟ್ಟ ಆಡಳಿತ ಮಂಡಳಿಯು ಅದರ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ. ಈ ರೀತಿ ತಯಾರಿಸಲಾದ ಹಿರಿತನದ ಪಟ್ಟಿಯನ್ನು ಸಂಬಂಧಪಟ್ಟ ಸಿಬ್ಬಂದಿ ಸದಸ್ಯರಿಗೆ ನೀಡಿ, ಅದರ ಪ್ರತಿಯನ್ನು ಸ್ವೀಕರಿಸಿದ್ದಕ್ಕಾಗಿ ಅವರಿಂದ ಸಹಿಯನ್ನು ಪಡೆಯಲಾಗುತ್ತದೆ. ಹಿರಿತನದ ಪಟ್ಟಿಗೆ ಸಂಬಂಧಿಸಿದಂತೆ ಅಥವಾ ಅದರಲ್ಲಿರುವ ಬದಲಾವಣೆಗಳ ಕುರಿತು ಆಕ್ಷೇಪವಿದ್ದರೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳು/ ಆಡಳಿತವರ್ಗದವರು ಪರಿಗಣಿಸುತ್ತಾರೆ. ಹಿರಿತನದ ದೃಢೀಕರಣದ ಕುರಿತು ಯಾವುದೇ ವಿವಾದವಿದ್ದರೆ, ಅದನ್ನು ಜಿಲ್ಲಾ ಶಿಕ್ಷಣ ಅಧಿಕಾರಿ ನಿರ್ಧರಿಸುತ್ತಾರೆ. ನಿರ್ಧಾರ ತೆಗೆದುಕೊಂಡವರ ವಿರುದ್ಧ ಮನವಿ ಮಾಡುವುದಿದ್ದರೆ ಅದನ್ನು ಶಿಕ್ಷಣದ ನಿರ್ದೇಶಕರಿಗೆ ಮಾಡಬೇಕಾಗುತ್ತದೆ.

**ನಿವೃತ್ತಿ ವಯೋಮಿತಿ:** ಸರಕಾರಿ ಶಾಲೆಯ ಶಿಕ್ಷಕರ ನಿವೃತ್ತಿ ವಯಸ್ಸು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ. ಬಹುಪಾಲು ರಾಜ್ಯಗಳಲ್ಲಿ ಅದಿ 58 ವರ್ಷಗಳಾಗಿದೆ. ಬಿಹಾರ, ಮಧ್ಯಪ್ರದೇಶ, ಒರಿಸ್ಸಾ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ದೆಹಲಿಯಲ್ಲಿ ಶಿಕ್ಷಕರ ನಿವೃತ್ತಿ ವಯಸ್ಸು 60 ಹೆಚ್ಚು ಕಡಿಮೆ ಇದೇ ನಿಯಮವು ಬೇರೆ ಬೇರೆ ರಾಜ್ಯಗಳ ಸ್ಥಳೀಯ ಸಂಸ್ಥೆಗಳು ಮತ್ತು ಖಾಸಗಿ ಅನುದಾನಿತ

Digitised by Bharatavani, CIIL

ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಅನ್ವಯಗೊಳ್ಳುತ್ತದೆ.

ಬಹುಪಾಲು ರಾಜ್ಯಗಳಲ್ಲಿ ಖಾಸಗಿ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗಾವಧಿ ನಡುವೆ ನಿವೃತ್ತಿಯ ವಯಸ್ಸನ್ನೇ ಮುಟ್ಟುವ ಶಿಕ್ಷಕರಿಗೆ ಆ ವ್ಯಾಸಂಗಾವಧಿಯ ಕೊನೆಯವರೆಗೆ ಅವರ ಸೇವೆಯನ್ನು ವಿಸ್ತರಿಸಲಾಗುತ್ತದೆ. ಇದರಿಂದ ಶೈಕ್ಷಣಿಕ ವರ್ಷದ ಬೋಧನಾ ಕಾರ್ಯವು ಯಾವುದೇ ರೀತಿಯಿಂದ ತೊಂದರೆಗೆ ಒಳಪಡುವುದಿಲ್ಲ. ಸರಕಾರಿ ಶಾಲಾ ಶಿಕ್ಷಕರ ವಿಚಾರದಲ್ಲಿ ತಿಂಗಳ ಮಧ್ಯದಲ್ಲಿ ನಿವೃತ್ತರಾಗಬೇಕಾದ ಶಿಕ್ಷಕರನ್ನು ಆ ತಿಂಗಳ ಅಂತ್ಯದವರೆಗೆ ಮುಂದುವರೆಸಲಾಗುತ್ತದೆ.

**ಸೇವಾ ಸಮಾಪ್ತಿ:** ಖಾಯಂ ಉದ್ಯೋಗಿಯ ಸೇವೆಯನ್ನು ಈ ಕಾರಣಗಳಿಂದ ಮಾತ್ರ ಕೊನೆಗೊಳಿಸಬಹುದು: ಸೇವೆಯಲ್ಲಿ ಉಳಿಸಿಕೊಳ್ಳಲು ಸೂಕ್ತವಲ್ಲದ ಕಣ್ಣಿಗೆ ಕಾಣುವಂತಹ ಅವಿಧೇಯತೆ, ಕರ್ತವ್ಯದ ಸ್ವಚ್ಛಂಧ ಉಪೇಕ್ಷೆ, ಅನೈತಿಕ ನಡತೆ ಅಥವಾ ಬೇರೆ ಕಾರಣ ಅಥವಾ ಕಾರಣಗಳು. ಆಂಧ್ರಪ್ರದೇಶದ, ಬಿಹಾರ, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ಒರಿಸ್ಸಾ, ಉತ್ತರ ಪ್ರದೇಶ, ಗೋವಾ, ದಾಮನ್ ಮತ್ತು ದ್ಯು ಮತ್ತು ದೆಹಲಿಯಲ್ಲಿ ಶಿಕ್ಷಕರ ಸೇವೆಯನ್ನು ಸಮಾಪ್ತಗೊಳಿಸುವ ಮೂರು ತಿಂಗಳ ಮೊದಲು ಎಚ್ಚರಿಕೆ ಪತ್ರವನ್ನುಅವರಿಗೆ ನೀಡಲಾಗುತ್ತದೆ. ಅವರಿಗೆ ಐದು ವರ್ಷಗಳು ಅಥವಾ ಐದು ವರ್ಷಗಳಿಗಿಂತ ಹೆಚ್ಚು ಸೇವಾವಧಿ ಇದ್ದರೆ, ಇದರ ಸ್ಥಾನದಲ್ಲಿ ಅವರು 6 ತಿಂಗಳ ವೇತನ ಪರಿಹಾರವನ್ನು ಪಡೆಯಲು ಅರ್ಹರಾಗಿದ್ದಾರೆ. ಆಂಧ್ರಪ್ರದೇಶ, ಒರಿಸ್ಸಾ, ಪಶ್ಚಿಮ ಬಂಗಾಲ ಮತ್ತು ದೆಹಲಿಯಲ್ಲಿ ಪರಿಹಾರವನ್ನು ಮೂರು ತಿಂಗಳ ವೇತನಕ್ಕೆ ಸಮಾನವಾಗಿ ನೀಡಲಾಗುತ್ತದೆ. ಮಹಾರಾಷ್ಟ್ರ, ಗೋವಾ, ಮತ್ತು ದಿಯು, ದಾಮನ್‌ಗಳಲ್ಲಿ ಶಿಕ್ಷಕರು 10 ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲಾವಧಿಗೆ ಸೇವೆ ಸಲ್ಲಿಸಿದ್ದರೆ, ಅವರು 12 ತಿಂಗಳ ವೇತನ ಪರಿಹಾರ ಪಡೆಯಲು ಅರ್ಹರಾಗಿದ್ದಾರೆ.

ಅನುದಾನಿತ ಶಾಲೆಯ ಆಡಳಿತವರ್ಗವು ಯುಕ್ತವಾದ ಅಧಿಕಾರಿಯ ಪೂರ್ವ ಅನುಮೋದನೆಯಿಲ್ಲದೆ ಯಾವುದೇ ಶಿಕ್ಷಕರನ್ನು ಕೆಲಸದಿಂದ ತೆಗೆಯುವುದಾಗಲೀ ಅಥವಾ ಅವರ ಸೇವೆಯನ್ನು ಕೊನೆಗೊಳಿಸುವುದಾಗಲೀ ಮಾಡುವಂತಿಲ್ಲ. ಶಿಕ್ಷಕರ ಸೇವೆಯನ್ನು ಸಮಾಪ್ತಿಗೊಳಿಸುವ ಮೊದಲು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳಲು ವಿಚಾರಣಾ ಸಮಿತಿಯನ್ನು ನೇಮಿಸಿಕೊಳ್ಳಲಾಗುತ್ತದೆ. ಆಡಳಿತವು ಆಪಾದಿತ 'ಕರ್ತವ್ಯ ಚ್ಯುತಿ' ಮಾಡಿದ ಶಿಕ್ಷಕನ ವಿರುದ್ಧ ದೋಷಾರೋಪಗಳನ್ನು ರೂಪಿಸುತ್ತದೆ. ಮತ್ತು ಅವರಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ನೀಡುತ್ತದೆ. ಈ ಪತ್ರದಲ್ಲಿ ಅವರ ಸೇವೆಯನ್ನು ಕೊನೆಗೊಳಿಸಲು ತೆಗೆದುಕೊಂಡ ನಿರ್ಧಾರದ ಆಧಾರವನ್ನು ತಿಳಿಯಪಡಿಸಲಾಗುತ್ತದೆ. ನಿರ್ದಿಷ್ಟ ಸಮಯದಲ್ಲಿ ಆಡಳಿತವರ್ಗಕೆ ತನ್ನ ವಿವರಣೆಯನ್ನು ನೀಡಲು ಶಿಕ್ಷಕರಿಗೆ ಅವಕಾಶವನ್ನು ನೀಡಲಾಗುತ್ತದೆ. ಅವನು/ಅವಳು ಖುದ್ದಾಗಿ ಹಾಜರಿದ್ದು ವಿವರಣೆ ನೀಡಲು ಬಯಸುವುದಾದರೆ ಅದನ್ನು ಸೂಚಿಸುವಂತೆ ತಿಳಿಸಲಾಗುತ್ತದೆ. ಅವನು/ಅವಳು ಹಾಜರಿದ್ದು ಅವನ/ಅವಳ ವಿರುದ್ಧ ರೂಪಿಸಲಾದ ದೋಷಾರೋಪಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ. ಒಂದು ವೇಳೆ ಸೂಚನಾಪತ್ರ ನೀಡಿದ ನಂತರ ವಿಚಾರಣಾ ಸಮಿತಿಯ ಮುಂದೆ ಉದ್ಯೋಗಿಯು ಸ್ವತಃ ಕಾಣಿಸಿಕೊಳ್ಳದಿದ್ದರೆ, ಅವನ/ಅವಳ ಮೇಲೆ ಏಕಪಕ್ಷೀಯ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ. ಈ ನಿರ್ಧಾರವನ್ನು ಅವನು/ಅವಳು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಯಾವುದೇ ಉದ್ಯೋಗಿಗೆ, ಅವರು ತಾತ್ಕಾಲಿಕ ಉದ್ಯೋಗಿಯಾಗಿದ್ದರೂ, ಒಂದು ತಿಂಗಳ ಸೂಚನೆಯನ್ನು ಅಥವಾ ಒಂದು ತಿಂಗಳ ವೇತನವನ್ನು ಅವರಿಗೆ ನೀಡದೆ ಸೇವೆಯನ್ನು ಕೊನೆಗೊಳಿಸುವ ಪತ್ರವನ್ನು ಹೊರಡಿಸುವ ಹಾಗಿಲ್ಲ.

**ಪದನ್ನೋತಿಯ (ಬಡ್ತಿ) ರಹದಾರಿಗಳು:** ಬಹುಪಾಲು ರಾಜ್ಯಗಳಲ್ಲಿ ಮತ್ತು ಕೇಂದ್ರ ಆಡಳಿತ ಪ್ರದೇಶಗಳಲ್ಲಿ ಸರಕಾರಿ ಶಾಲೆಗಳ ಶಿಕ್ಷಕರ ಪದೋನ್ನತಿಯು ಅವರ ಸೇವಾ ಹಿರಿತನವನ್ನು ಆಧರಿಸಿ ಇರುತ್ತದೆ ಅಥವಾ ಹಿರಿತನ ಮತ್ತು ಅರ್ಹತೆಯನ್ನು (ಮೆರಿಟ್) ಆಧರಿಸಿ ಇರುತ್ತದೆ. ಉನ್ನತ ಶೈಕ್ಷಣಿಕ ಅರ್ಹತೆಯನ್ನು ಪಡೆದುಕೊಳ್ಳುವುದು ಕೂಡ ಪದನ್ನೋತಿಗೆ ನೆರವಾಗಬಲ್ಲದು. ಆದರೆ ಇಂತಹ ಸಂದರ್ಭದಲ್ಲಿ ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಗೆ ಹೊಂದಿಕೊಳ್ಳುವ ಖಾಲಿ ಹುದ್ದೆ ವಿಭಾಗದಲ್ಲಿ ಇರಬೇಕಾಗುತ್ತದೆ. ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರಾಗಲು ಹಿರಿತನ ಮತ್ತು ಅರ್ಹತೆ ಇವೆರಡೂ ಅಂಶಗಳನ್ನು ಪರಿಗಣಿಸಲಾಗುತ್ತದೆ. ಕೆಲವು ರಾಜ್ಯಗಳಲ್ಲಿ, ಉದಾಹರಣೆಗೆ ಗುಜರಾತ್, ಒರಿಸ್ಸಾ, ತಮಿಳುನಾಡು, ದಾದ್ರಾ ಮತ್ತು ನಗರ್ ಹವೇಲಿಗಳಲ್ಲಿ ಪದನ್ನೋತಿಯನ್ನು ಕಟ್ಟುನಿಟ್ಟಾಗಿ ಅರ್ಹತೆ ಮತ್ತು ಸಾಮರ್ಥ್ಯವನ್ನು ಆಧರಿಸಿಯೇ ನಡೆಸಲಾಗುತ್ತದೆ. ಅರ್ಹತೆ ಮತ್ತು ಸಾಮರ್ಥ್ಯ ಸಮಾನವಾಗಿದ್ದಾಗ ಹಿರಿತನವನ್ನು ಪರಿಗಣಿಸಲಾಗುತ್ತದೆ.

ಖಾಸಗಿ ಅನುದಾನಿತ ಶಾಲೆಗಳ ಶಿಕ್ಷಕರ ವಿಚಾರದಲ್ಲಿ, ಒಂದು ಅಥವಾ ಎರಡು ಸಂಸ್ಥೆಗಳು ಒಂದೇ ಆಡಳಿತವರ್ಗದ ನಿರ್ವಹಣೆಯಲ್ಲಿ ಇದ್ದಾಗ ಪದೋನ್ನತಿ ಮತ್ತು ಮುನ್ನಡೆ ಬಹಳ ಅಪರೂಪದ್ದಾಗಿರುತ್ತದೆ. ಆದುದರಿಂದ ಒಬ್ಬಿಬ್ಬರು ಮಾತ್ರ ತಮ್ಮ ನಿವೃತ್ತಿಗಿಂತ ಮೊದಲು ಮುಖ್ಯೋಪಾಧ್ಯಾಯ ಅಥವಾ ಪ್ರಾಂಶುಪಾಲರ ಹಂತವನ್ನು ತಲುಪುವುದು ಸಾಧ್ಯವಾಗುತ್ತದೆ. ಇದೇ ರೀತಿ ಖಾಸಗಿ ಶಾಲೆಯ ಶಿಕ್ಷಕನು ತನ್ನ ಉದ್ಯೋಗಾವಧಿಯುದ್ದಕ್ಕೂ ತನ್ನ ಹುದ್ದೆಯಲ್ಲಿಯೇ ಮುಂದುವರಿಯುತ್ತಿರುತ್ತಾನೆ. ಹೆಚ್ಚೆಂದರೆ ಅವನು/ಅವಳು ಹಿರಿಯ ಮಾಧ್ಯಮಿಕ ಶಾಲೆಯ ಸ್ನಾತಕೋತ್ತರ ಶಿಕ್ಷಕನಾಗಬಹುದು (ಪಿಜಿಟಿ). ಈ ಸಂದರ್ಭದಲ್ಲಿ ಕೂಡ ಅವನು/ಅವಳು ಶೈಕ್ಷಣಿಕವಾಗಿ ಹೆಚ್ಚಿನ ಅರ್ಹತೆಯನ್ನು ಪಡೆದು ಆ ಹುದ್ದೆಗೆ ಅರ್ಹರಾಗಿರಬೇಕು ಮತ್ತು ಅಂತಹ ಹುದ್ದೆ ಶಾಲೆಯಲ್ಲಿ ಇರಬೇಕು. ಇಲ್ಲದಿದ್ದರೆ ಬಹಳಷ್ಟು ಸಂದರ್ಭಗಳಲ್ಲಿ ಖಾಸಗಿ ಶಾಲೆಯ ಅಥವಾ ಖಾಸಗಿಯಾಗಿ ನಿರ್ವಹಣೆ ಹೊಂದಿರುವ ಮಾನ್ಯತೆ ಪಡೆದ ಶಾಲೆಯ ಅಥವಾ ಸಾರ್ವಜನಿಕ ಶಾಲೆಯ ಶಿಕ್ಷಕನು ತಾನು ಕೆಲಸಕ್ಕೆ ಸೇರಿದಂದಿನಿಂದ ತನ್ನ ಸೇವಾವಧಿಯುದ್ದಕ್ಕೂ, ಅಂದರೆ 30ರಿಂದ

Digitised by Bharatavani, CIIL

25 ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿ ಇರುತ್ತಾನೆ.

ಸರಕಾರಿ ಶಾಲೆಗಳ ಶಿಕ್ಷಕರು ಶಿಕ್ಷಣ ಇಲಾಖೆಯಲ್ಲಿ ಉನ್ನತ ಆಡಳಿತ ಹುದ್ದೆಗಳನ್ನು ಬಯಸಬಹುದು. ಉದಾಹರಣೆಗೆ ಆಸ್ಸಾಂ ಮತ್ತು ಮಹಾರಾಷ್ಟ್ರಗಳಲ್ಲಿ ಸಹ ಶಿಕ್ಷಕನೊಬ್ಬನು ತನ್ನ ಹಿರಿತನ ಮತ್ತು ಅರ್ಹತೆಯಿಂದ ಶಿಕ್ಷಣ ಅಧಿಕಾರಿಯ ಶ್ರೇಣಿಯವರೆಗೆ ತಲುಪಬಹುದು. ಹರಿಯಾಣ, ರಾಜಸ್ಥಾನ, ಅರುಣಾಚಲ ಪ್ರದೇಶ ಮತ್ತು ದೆಹಲಿಯಲ್ಲಿ ಶಿಕ್ಷಕನು ಇಲಾಖೆಯ ಪದನ್ನೋತಿಯ ಹಾದಿಯ ಮೂಲಕ, ಅಗತ್ಯವಿರುವ ಶೈಕ್ಷಣಿಕ ಅರ್ಹತೆಗಳು ಮತ್ತು ಅನುಭವಗಳು ಇದ್ದಲ್ಲಿ ಶಿಕ್ಷಣ ಇಲಾಖೆಯು ಸಹ ನಿರ್ದೇಶಕ ಅಥವಾ ಹೆಚ್ಚುವರಿ (ಅಡಿಷನಲ್) ನಿರ್ದೇಶಕನ ಶ್ರೇಣಿಯವರೆಗೆ ತಲುಪಬಹುದು. ಆದರೆ ವಾಸ್ತವವಾಗಿ ಶಿಕ್ಷಕರು ಆ ಹಂತವನ್ನು ತಲುಪುವುದು ಬಹಳ ಅಪರೂಪ (ಚೋಪ್ರಾ, 1993).

**ಖಾಸಗಿ ಮನೆಪಾಠಗಳು:** ಶಾಲೆಯ ಕಾಲಾವಧಿಯ ಹೊರಗೆ ವಿಶೇಷ ಅಥವಾ ಹೆಚ್ಚುವರಿ ಶಿಕ್ಷಣವನ್ನು ನೀಡುವ ಕಾರ್ಯದಲ್ಲಿ ತೊಡಗಿಸಿಕೊಂಡ ಶಿಕ್ಷಕರಿಗೆ ಹೆತ್ತವರು ಸಂಭಾವನೆಯನ್ನು ನೀಡುತ್ತಾರೆ. ಖಾಸಗಿ ಮನೆಪಾಠಗಳನ್ನು ನಿಯಮಿತಗೊಳಿಸುವ ಸಲುವಾಗಿ ರಾಜ್ಯ ಶಿಕ್ಷಣ ಇಲಾಖೆಗಳು ಕೆಲವು ಸಾಮಾನ್ಯ ನಿಯಮಗಳನ್ನು ರೂಪಿಸಿವೆ. ಅವು ಈ ಕೆಳಗಿನಂತಿವೆ:

- ಶಿಕ್ಷಕರು ಸಾಮಾನ್ಯವಾಗಿ ಸಂಸ್ಥೆಯ ಮುಖ್ಯಸ್ಥರ ಅಥವಾ ಶಿಕ್ಷಣಾಧಿಕಾರಿಯ ಅಥವಾ ಒಬ್ಬ ಯುಕ್ತವಾದ ಅಧಿಕಾರಿಯ ಪೂರ್ವ ಅನುಮತಿಯಿಲ್ಲದೆ ಮನೆಪಾಠಗಳನ್ನು ಕೈಗೊಳ್ಳುವಂತಿಲ್ಲ.
- ಯಾವುದೇ ಶಿಕ್ಷಕ ಶಾಲೆಯ ಆವರಣದೊಳಗೆ ಶಾಲೆಯ ಕಾಲಾವಧಿಯಲ್ಲಿ ಖಾಸಗಿ ಪಾಠವನ್ನು ಕೈಗೊಳ್ಳುವಂತಿಲ್ಲ.
- ವಿದ್ಯಾರ್ಥಿಯ ಪೋಷಕರು ಸಂಸ್ಥೆಯ ಮುಖ್ಯಸ್ಥರಲ್ಲಿ ಖಾಸಗಿ ಶಿಕ್ಷಕರ ಅಗತ್ಯದ ಕಾರಣಗಳನ್ನು ಬರೆಹದ ಮೂಲಕ ವಿನಂತಿಸಿಕೊಳ್ಳಬೇಕಾಗುತ್ತದೆ. ಮುಖ್ಯಸ್ಥರು ಮನೆಪಾಠದ ವ್ಯವಸ್ಥೆ ಮಾಡಿ ಸಂಭಾವನೆಯನ್ನು ಗೊತ್ತುಪಡಿಸಿ ಸಮಯವನ್ನು ನಿರ್ಧರಿಸುತ್ತಾರೆ.
- ಕೆಲವು ಸಂದರ್ಭಗಳಲ್ಲಿ ಅರ್ಜಿಯನ್ನು ಸಂಬಂಧಪಟ್ಟ ಜಿಲ್ಲಾ ಶಿಕ್ಷಣಾಧಿಕಾರಿಗೆ ಮಂಜೂರಾತಿಗಾಗಿ ಕಳುಹಿಸಬೇಕಾಗುತ್ತದೆ.
- ಖಾಸಗಿ ಮನೆಪಾಠದ ಅವಧಿಯು ಶಾಲಾ ಕಾಲಾವಧಿಯ ನಂತರ ಒಂದು ಗಂಟೆಯಿಂದ ಎರಡು ಗಂಟೆಯವರೆಗೆ ಇರುತ್ತದೆ.
- ಉನ್ನತ ಮಾಧ್ಯಮಿಕ ವಿದ್ಯಾರ್ಥಿಗಳ ವಿಚಾರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎರಡಕ್ಕಿಂತ ಹೆಚ್ಚು ಇರಬಾರದು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳ ವಿಚಾರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಮೂರರಿಂದ ಐದು ಇರಬಹುದು.
- ಶಾಲೆಯ ಮುಖ್ಯಸ್ಥರು ಮನೆಪಾಠಗಳನ್ನು ನಡೆಸುವಂತಿಲ್ಲ.
- ಶಿಕ್ಷಕರು ಆಂತರಿಕ ಅಥವಾ ಬಾಹ್ಯ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರಿಸುವ ತರಬೇತಿ ತರಗತಿಗಳೊಂದಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಸಂಬಂಧವನ್ನು ಹೊಂದಿರುವ ಹಾಗಿಲ್ಲ.
- ಹೆಣ್ಣು ಮಕ್ಕಳ ಶಿಕ್ಷಣ ಸೌಲಭ್ಯಗಳು ಲಭ್ಯವಿರುವಾಗ ಪುರುಷ ಶಿಕ್ಷಕರು ಹೆಣ್ಣುಮಕ್ಕಳಿಗೆ ಖಾಸಗಿ ಮನೆಪಾಠಗಳನ್ನು ನೀಡುವುದನ್ನು ಸಾಮಾನ್ಯವಾಗಿ ಒಪ್ಪಲಾಗುವುದಿಲ್ಲ.
- ಶಾಲಾ ಕೆಲಸಕ್ಕೆ ಧಕ್ಕೆ ಬಾರದ ನಿಬಂಧನೆಯೊಂದಿಗೆ ಖಾಸಗಿ ಮನೆಪಾಠಗಳಿಗೆ ಅನುಮತಿಯನ್ನು ಆಡಳಿತ ವರ್ಗ ಅಥವಾ ಸಂಬಂಧಪಟ್ಟ ಅಧಿಕಾರಿಗಳು ನೀಡುತ್ತಾರೆ.

ಈ ನಿಯಮಗಳನ್ನು ರಾಜ್ಯ ಶಿಕ್ಷಣ ಇಲಾಖೆಗಳು ರೂಪಿಸಿದ್ದರೂ, ಇದರಲ್ಲಿ ಬಹಳಷ್ಟು ನಿಯಮಗಳು ತತ್ವ ರೂಪದಲ್ಲಿ ಉಳಿದಿವೆಯೇ ಹೊರತು, ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ವಾಸ್ತವದಲ್ಲಿ, ಶಿಕ್ಷಕರು ಹೆಚ್ಚುವರಿ ವರಮಾನಕ್ಕಾಗಿ ಶಾಲಾವಧಿಯ ನಂತರ ಖಾಸಗಿ ಮನೆಪಾಠಗಳನ್ನು ಕೈಗೊಳ್ಳುತ್ತಾರೆ. ಆದರೆ ಅವರು ಸಂಬಂಧಪಟ್ಟ ಅಧಿಕಾರಿಗಳಿಂದ ಬರೆಹದಲ್ಲಿ ಅನುಮತಿಯನ್ನು ಪಡೆದಿರುವುದಿಲ್ಲ. ಅವರು ಎಷ್ಟು ಸಂಖ್ಯೆಯಲ್ಲಿ ಮನೆಪಾಠಗಳನ್ನು, ಎಷ್ಟು ವಿದ್ಯಾರ್ಥಿಗಳಿಗೆ ನೀಡುತ್ತಾರೆ, ಎಷ್ಟು ಸಂಭಾವನೆಯನ್ನು ಪಡೆಯುತ್ತಾರೆ ಎಂಬುದರ ವಿಚಾರದಲ್ಲಿ ಅವರನ್ನು ಪ್ರತಿಬಂಧಿಸುವ ಕ್ರಮ ಇಲ್ಲ.

**ಶಿಕ್ಷೆ ಮತ್ತು ಮೇಲ್‌ಮನವಿ :**

ಬೇರೆ ಬೇರೆ ರಾಜ್ಯಗಳಲ್ಲಿ ಶಿಕ್ಷಣ ಅಧಿನಿಯಮಗಳು ಮತ್ತು ನಿಯಮಗಳನ್ನು ಜಾರಿಗೆ ತಂದ ಕಾರಣದಿಂದಾಗಿ ಯಾವುದೇ ಶಿಕ್ಷಕನ ಮೇಲೆ ಕ್ರಮ ಕೈಗೊಳ್ಳುವ ಮೊದಲು ಅವನಿಗೆ/ಅವಳಿಗೆ ತನ್ನ ವಿವರಣೆಗಳನ್ನು ನೀಡುವ ಸೂಕ್ತ ಅವಕಾಶಗಳನ್ನು ಒದಗಿಸದೆ ಯಾವುದೇ ಶಿಕ್ಷೆಯನ್ನು ನೀಡುವಂತಿಲ್ಲ. ವಿಚಾರಣೆಯ ಸರಿಯಾದ ಕಾರ್ಯವಿಧಾನವನ್ನು ಅನುಸರಿಸಿದ ಬಳಿಕ ಮತ್ತು ಶಿಕ್ಷಕನ ವಿರುದ್ಧ ಗುರಿಪಡಿಸಲಾದ ದೋಷಾರೋಪಗಳು ಸಾಬೀತುಪಟ್ಟ ನಂತರ ಮಾತ್ರ ದಂಡವನ್ನು ಹಾಕಬಹುದು. ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೂಕ್ತ ಅಧಿಕಾರಿಯ ಅನುಮೋದನೆಗಿಂತ ಮೊದಲು ಶಿಕ್ಷಕರನ್ನು ಕೆಲಸದಿಂದ ವಜಾ ಮಾಡುವುದು ಅಥವಾ ತೆಗೆದು ಹಾಕುವುದು ಶ್ರೇಣಿಯನ್ನು ಕಡಿಮೆ ಮಾಡುವುದು ಅಥವಾ ಅವನ/ಅವಳ ಸೇವೆಯನ್ನು ಕೊನೆಗೊಳಿಸುವುದು ಇತ್ಯಾದಿ ಮಾಡುವಂತಿಲ್ಲ.

**ದಂಡಗಳಲ್ಲಿ ಎರಡು ವಿಧಗಳಿವೆ. (ಮೈನರ್) ಮತ್ತು ಪ್ರಧಾನ (ಮೇಜರ್). ಅಪ್ರಧಾನ ದಂಡಗಳು:**

1. ತಪ್ಪುದಂಡ.

Digitised by Bharatavani, CIIL

2. ಎಚ್ಚರಿಕೆ –ವಾಗ್ದಂಡನೆ ಅಥವಾ ಖಂಡನೆ.
3. ವೇತನದಲ್ಲಿನ ಏರಿಕೆಗಳನ್ನು ಅಥವಾ ಬಡ್ತಿಯನ್ನು ತಡೆಹಿಡಿಯುವುದು.
4. ಸಂಸ್ಥೆಗೆ ಸಂಭವಿಸಿರಬಹುದಾದ ಯಾವುದೇ ಆರ್ಥಿಕ ಹಾನಿಯನ್ನು ವೇತನದಿಂದ ವಸೂಲಿ ಮಾಡುವುದು ಮತ್ತು
5. ಅಮಾನತ್ತಿನಲ್ಲಿಡುವುದು.

**ಪ್ರಧಾನ ದಂಡಗಳು:**

1. ಹಿರಿತನದ ಪಟ್ಟಿಯಲ್ಲಿ ಕೆಳಗಿನ ಶ್ರೇಣಿಗೆ ಇಳಿಸುವುದು.
2. ಹುದ್ದೆಯ ಕೆಳಶ್ರೇಣಿಗೆ ಅಥವಾ ಕಾಲಿಕ ಶ್ರೇಣಿಯನ್ನು ಇಳಿಸುವುದು.
3. ಅದಕ್ಷತೆಗಾಗಿ ಕಡ್ಡಾಯ ನಿವೃತ್ತಿ.
4. ಸೇವೆಯಿಂದ ತೆಗೆದು ಹಾಕುವುದು. ಆದರೆ ಇದರಿಂದ ಮುಂದೆ ಉದ್ಯೋಗ ಕೈಗೊಳ್ಳಲು ವ್ಯಕ್ತಿ ಅನರ್ಹನಾಗುವುದಿಲ್ಲ.
5. ಸೇವೆಯಿಂದ ವಜಾಗೊಳಿಸುವುದು. ಇದರಿಂದ ಮುಂದೆ ಉದ್ಯೋಗ ಕೈಗೊಳ್ಳಲು ವ್ಯಕ್ತಿ ಅನರ್ಹನಾಗುತ್ತಾನೆ.
6. ನಿವೃತ್ತಿ ವೇತನದಲ್ಲಿ ಕಡಿತ.
7. ವರ್ಗಾವಣೆ.

ಉದ್ಯೋಗಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಸದಾಚಾರ ಸಂಹಿತೆ ಮತ್ತು ಜಾಗೃತಿ ಕೈಪಿಡಿಗಳು ಯಾವುದೇ ಸ್ವೇಚ್ಛಾನುಸಾರ ಶಿಸ್ತು ಕ್ರಮದ ವಿರುದ್ಧ ರಕ್ಷಣೆಗಳನ್ನು ಒದಗಿಸುತ್ತವೆ. ಈ ಕೈಪಿಡಿಗಳು ಉದ್ಯೋಗಿಗೆ ತನ್ನನ್ನು ಸಮರ್ಥಿಸಿಕೊಳ್ಳುವ ನ್ಯಾಯ ಸಮ್ಮತ ಅವಕಾಶಗಳನ್ನು ಒದಗಿಸಿಕೊಡುತ್ತವೆ.

ಎಲ್ಲ ಪ್ರಧಾನ ದಂಡಗಳ ಸಂದರ್ಭಗಳಲ್ಲಿ ವಿಚಾರಣೆಯ ಕಾರ್ಯವಿಧಾನವನ್ನು ಅನುಸರಿಸಲಾಗುತ್ತದೆ. ಸರಕಾರಿ ಉದ್ಯೋಗಿಯ ವಿರುದ್ಧ ಶಿಸ್ತುಕ್ರಮವನ್ನು ಪ್ರಾರಂಭಿಸುವ ಮೊದಲು, ಆಪಾದಿತನ ವಿರುದ್ಧ ಪ್ರಬಲ ಮೊಕದ್ದಮೆಯನ್ನು ಹೂಡುವ ಸಲುವಾಗಿ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗುತ್ತದೆ. ಅದರ ನಂತರ ಓರ್ವ ನಿಷ್ಪಕ್ಷಪಾತಿ ಮತ್ತು ವಿವಾದಾಸ್ಪದನಲ್ಲದ ವಿಚಾರಣಾ ಅಧಿಕಾರಿಯನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಈ ಅಧಿಕಾರಿಯು ಅವನ/ಅವಳ ವಿರುದ್ಧ ಆರೋಪ ಪಟ್ಟಿಯನ್ನು (ಚಾರ್ಜ್‌ಶೀಟ್) ರೂಪಿಸುತ್ತಾನೆ. ಅದರಲ್ಲಿ ಪ್ರತಿಯೊಂದು ಆರೋಪದ ಆಧಾರದ ಸೂಚಿಸಲಾಗುತ್ತದೆ. ಅಪಾದಿತನಿಗೆ ತನ್ನ ಪ್ರತಿರಕ್ಷಣೆಗೆ ಲಿಖಿತ ಹೇಳಿಕೆಯನ್ನು ತಯಾರಿಸಲು ನ್ಯಾಯ ಸಮ್ಮತ ಅವಧಿ ಸಮಯವನ್ನು ನೀಡಲಾಗುತ್ತದೆ. ವಿಚಾರಣಾ ಅಧಿಕಾರಿಯು ಆಪಾದಿತನಿಂದ ಮುಖತಃ ಹೇಳಿಕೆಯನ್ನು ಕೇಳಿಸಿಕೊಳ್ಳಲು ಮತ್ತು ಆಡಳಿತವು ಪುರಾವೆಗಾಗಿ ಕರೆಯಿಸಿದ ಸಾಕ್ಷಿಯ ಪಾಟಿಸವಾಲನ್ನು ನಡೆಸುವುದಕ್ಕೆ ಕಡತ ಅಥವಾ ದಾಖಲೆಯ ತಪಾಸಣೆಯನ್ನು ಜವಾಬ್ದಾರಿಯುತ ಸರಕಾರಿ ಅಧಿಕಾರಿಯಿಂದ ಉದ್ಯೋಗಿಯ ಮುಂದೆ ನಡೆಸಲಾಗುವುದು. ಇದರಿಂದ ಕಡತ ಅಥವಾ ದಾಖಲೆಯಲ್ಲಿ ಹಸ್ತಕ್ಷೇಪ ನಡೆಯದಂತೆ ನೋಡಿಕೊಳ್ಳಬಹುದು. ವಿಚಾರಣೆ ಮುಗಿದ ಬಳಿ ವಿಚಾರಣಾ ಅಧಿಕಾರಿಯು ಅವನ/ಅವಳ ಪ್ರತಿಯೊಂದು ದೋಷಾರೋಪಣೆಯ ಕಾರಣಗಳ ವರದಿಯನ್ನು ಸಂಬಂಧಪಟ್ಟ ನೇಮಕಾಧಿರಿಗೆ ಒಪ್ಪಿಸುವನು. ಆನಂತರ ಸಂಬಂಧಪಟ್ಟ ಅಧಿಕಾರಿಯು ವಿಧಿಸಬೇಕಾಗಿರುವ ಶಿಕ್ಷೆಯ ಆದೇಶವನ್ನು ಹೊರಡಿಸುವರು. ಅಮಾನತ್ತಿನ ಸಂದರ್ಭದಲಿ ಕೂಡ ಶಿಕ್ಷಕನಿಗೆ ಜೀವನಾಧಾರ ಭತ್ಯವನ್ನು ನೀಡಲಾಗುತ್ತದೆ. ಇದು ಇತರ ಸರಕಾರಿ ನೌಕರರಿಗೆ ಸಲ್ಲತಕ್ಕಂತಹ ದರದಲ್ಲಿ ಇರುತ್ತದೆ.

ಸರಕಾರಿ ಶಾಲೆಗಳ ಶಿಕ್ಷಕರಿಗೆ ರೂಪಿಸಲಾದ ಕಾರ್ಯವಿಧಾನವನ್ನು ಖಾಸಗಿ ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಯ ಶಾಲೆಗಳ ಶಿಕ್ಷಕರಿಗೂ ಗಣನೀಯ ಪ್ರಮಾಣದಲ್ಲಿ ಅನುಸರಿಸಲಾಗುತ್ತದೆ. ಖಾಸಗಿ ಶಾಲೆಗಳ ಆಡಳಿತ ಸಮಿತಿಯವರು ಈ ಅಧಿಕಾರವನ್ನು ಶಿಕ್ಷಕರನ್ನು ಶೋಷಿಸಲು ಅಥವಾ ಬಲಿಪಶುವನ್ನಾಗಿಸಲು ತಪ್ಪು ಬಳಕೆ ಮಾಡದಿರುವಂತೆ ಅನೇಕ ರಾಜ್ಯಗಳಲ್ಲಿ ಮೇಲ್ವಿಚಾರಣೆಯು ಶಿಕ್ಷಕ ಇಲಾಖೆಯು ಪೂರ್ವ ಅನುಮತಿಯನ್ನು ಪಡೆಯುವ ಅಗತ್ಯವನ್ನು ಹೊಂದಿರುತ್ತದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಫ್ರಾಂಕ್ ಆಂಟೊನಿ ಪಬ್ಲಿಕ್ ಸ್ಕೂಲ್‌ನ ಮೊಕದ್ದಮೆಯಲ್ಲಿ ಶಿಕ್ಷಣ ಇಲಾಖೆಯು ಅನುಮೋದನೆಗೆ ಸಂಬಂಧಿಸಿದ ಅವಕಾಶವನ್ನು ಎತ್ತಿ ಹಿಡಿದಿದೆ. ಆಡಳಿತ ಸಮಿತಿಗಳು ಶಿಕ್ಷಕರ ವಿರುದ್ಧ ಅನಗತ್ಯ ಸೇಡಿನ ಕ್ರಮಗಳನ್ನು ಕೈಗೊಳ್ಳದಂತೆ ಈ ಅವಕಾಶವು ಅವರನ್ನು ಪರಿಣಾಮಕಾರಿಯಾಗಿ ತಡೆಯುತ್ತದೆ.

ಶಿಕ್ಷಕರು ತಮಗೆ ವಿಧಿಸಲಾದ ಯಾವುದೇ ಶಿಕ್ಷಾಕ್ರಮದ ವಿರುದ್ಧ ಸೂಕ್ತ ಅಧಿಕಾರಕ್ಕೆ ಮೇಲ್ ಮನವಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ. ಅನೇಕ ರಾಜ್ಯಗಳು ಶಿಕ್ಷಕರ ದೂರು ಪರಿಹಾರಕ್ಕಾಗಿ ಸೂಕ್ತ ಕ್ರಮಗಳನ್ನು ಅಳವಡಿಸಿಕೊಂಡಿವೆ. ಉದಾಹರಣೆಗೆ ಕೇರಳದ ಶಿಕ್ಷಣ ಅಧಿನಿಯಮ ಮತ್ತು ನಿಯಮಗಳಲ್ಲಿ ದೂರು ಪರಿಹಾರಕ್ಕಾಗಿ ಯಾರ ಬಳಿಸಾರಬೇಕೆಂದು ತಿಳಿಸಲಾಗಿದೆ. ಶಿಕ್ಷಕರು ಕೆಳದರ್ಜೆಯ ಅಧಿಕಾರಿಯ ನಿರ್ಧಾರದಿಂದ ಸಂತೃಪ್ತರಾಗದಿದ್ದರೆ ಅವನು/ಅವಳು ಅನಂತರದ ಹಿರಿಯ ಅಧಿಕಾರಿಗೆ ಮೇಲ್ ಮನವಿ ಸಲ್ಲಿಸಬಹುದು. ಶಿಕ್ಷಕರು ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ನಿರ್ಧಾರದ ವಿರುದ್ಧ ಸರಕಾರದ ಬಳಿ ಹೋಗಬಹುದು ಮತ್ತು ಸಾರ್ವಜನಿಕ ಶಿಕ್ಷಣ ನಿರ್ದೇಶಕರ ನಿರ್ಧಾರದಿಂದ ತೃಪ್ತಿ ಹೊಂದದಿದ್ದರೆ ನ್ಯಾಯಾಲಯದ ಕದವನ್ನು ಕೂಡ ತಟ್ಟಬಹುದು. ಇದೇ ರೀತಿ ದೆಹಲಿ ಶಾಲಾ ಶಿಕ್ಷಣ ಅಧಿನಿಯಮ, 1973ರ ಪ್ರಕಾರ ಮಾನ್ಯತೆ ಪಡೆದ ಖಾಸಗಿ ಶಾಲೆಯ ಯಾವುದೇ ಉದ್ಯೋಗಿಯು ಕೆಲಸದಿಂದ ವಜಾಗೊಂಡರೆ, ಉಚ್ಚಾಟಿಸಲ್ಪಟ್ಟರೆ, ಅಥವಾ ಕೆಳಶ್ರೇಣಿಗೆ ತಳ್ಳಲ್ಪಟ್ಟರೆ, ಈ ಕ್ರಮದ ವಿರುದ್ಧ ದೆಹಲಿ ಶಾಲಾ ನ್ಯಾಯಮಂಡಳಿಗೆ ಮೇಲ್ ಮನವಿ ಸಲ್ಲಿಸಬಹುದು. ಇತ್ತೀಚೆಗೆ ದೆಹಲಿಯ ಜಿಲ್ಲೆಗಳ, ಮರುಸಂಘಟನೆಯ ಪರಿಣಾಮವಾಗಿ ದೆಹಲಿ ಸರಕಾರವು ವಿವಿಧ

Digitised by Bharatavani, CIIL

ಜಿಲ್ಲೆಗಳ ಉಪಆಯುಕ್ತರಿಗೆ ಶಾಲೆಗೆ ಸಂಬಂಧಿಸಿದ ಆಡಳಿತ ಅಧಿಕಾರಗಳನ್ನು ನೀಡಿದೆ. ಆದರೆ ಅಗಾಧ ಸಂಖ್ಯೆಯ ಶಿಕ್ಷಕರು ಇನ್ನೂ ತಮ್ಮ ದೂರಿಗೆ ಪರಿಹಾರವನ್ನು ಪಡೆಯುವುದಕ್ಕಾಗಿ ನ್ಯಾಯಾಲಯದ ಬಾಗಿಲನ್ನು ತಟ್ಟುತ್ತಿದ್ದಾರೆ.

ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು (1997) ಮಾರ್ಗದರ್ಶಕ ಸೂತ್ರಗಳನ್ನು ರೂಪಿಸುವುದಕ್ಕಾಗಿ ಕಾರ್ಯಪಡೆಯನ್ನು ಸಜ್ಜುಗೊಳಿಸಿದೆ. ರಾಜ್ಯಗಳ ಶಿಕ್ಷಣ ಇಲಾಖೆಗಳು ಖಾಸಗಿ ಶಾಲೆಗಳ ಆಡಳಿತಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಸೇವಾ ನಿಯಮಗಳು ಮತ್ತು ಕಾರ್ಯನೀತಿಗಳನ್ನು ಅಭಿವೃದ್ಧಿಪಡಿಸುವಾಗ ಅದನ್ನು ಪರಿಗಣಿಸಬಹುದು. ಇದರಲ್ಲಿ ಸರಕಾರಿ ಮತ್ತು ಸರಕಾರೇತರ ಶಾಲೆಗಳಲ್ಲಿ ಕೆಲಸ ಮಾಡುವ ಎಲ್ಲ ಶಿಕ್ಷಕರಿಗೆ ಅನ್ವಯವಾಗುವಂತ ದೂರಿನ ಪರಿಹಾರ ಕ್ರಮಗಳೂ ಇರುತ್ತವೆ.

**ರಜೆ:** ಬೇರೆ ಸರಕಾರಿ ಉದ್ಯೋಗಿಗಳಿಗೆ ಇರುವಂತೆ ಶಿಕ್ಷಕರಿಗೆ ಕೂಡ ಎಲ್ಲ ರಾಜ್ಯಗಳಲ್ಲಿ ವಿವಿಧ ರಜೆಗಳು ಹಕ್ಕಿನದ್ದಾಗಿ ಇರುತ್ತವೆ.......ರಜೆ, ವೈದ್ಯಕೀಯ ರಜೆ, ಅರ್ಧ ವೇತನ ರಜೆ, ಅಧ್ಯಯನ ರಜೆ, ಪ್ರಸೂತಿ ರಜೆ, ವಿಶೇಷ ರಜೆ ಇತ್ಯಾದಿ.

ಶಿಕ್ಷಕರು ಅನಿರೀಕ್ಷಿತ ಮತ್ತು ತುರ್ತು ಸಂಗತಿಗಳನ್ನು ಎದುರಿಸಬೇಕಾದ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥರಿಂದ ಸಾಂದರ್ಭಿಕ ರಜೆ ಮಂಜೂರಾಗುತ್ತದೆ. ಬಹಳಷ್ಟು ರಾಜ್ಯಗಳಲ್ಲಿ ಇದು ವಾರ್ಷಿಕ 8 ದಿನಗಳ ಅವಧಿಯಾಗಿರುತ್ತದೆ.

ವೈದ್ಯಕೀಯ ರಜೆಯನ್ನು ಸರಕಾರಿ ಆಸ್ಪತ್ರೆ ಅಥವಾ ನೊಂದಾಯಿತ ವೈದ್ಯರಿಂದ ಪ್ರಮಾಣಪತ್ರದಿಂದ ಪಡೆಯಬಹುದು. ಇದು ವರ್ಷಕ್ಕೆ ಅರ್ಧ ವೇತನದ 20 ದಿನಗಳ ಅವಧಿಯಾಗಿರುತ್ತದೆ. ರಜೆ ಮುಗಿದು ಕೆಲಸಕ್ಕೆ ಸೇರಬೇಕಾದರೆ ಅರ್ಹತಾ ಪ್ರಮಾಣಪತ್ರ ನೀಡಬೇಕಾಗುತ್ತದೆ.

ಪ್ರಸೂತಿ ರಜೆಯನ್ನು ಒಂದು ವರ್ಷದ ಸೇವಾವಧಿಯನ್ನು ಪೂರೈಸಿರುವ ಶಿಕ್ಷಕಿಯರಿಗೆ ನೀಡಲಾಗುತ್ತದೆ. ಇದನ್ನು ಹಕ್ಕಿನ ರಜೆಯಾಗಿ ಪಡೆಯಬಹುದು. ಇದರ ಅವಧಿಯು ಸರಕಾರಿ ಪೂರ್ಣ ವೇತನದಲ್ಲಿ ಪ್ರಾರಂಭದಿಂದ 4.5 ತಿಂಗಳುಗಳು ಇರುತ್ತದೆ. ಆದರೆ ಪಂಜಾಬ್ ಮತ್ತು ಹರಿಯಾಣದಲ್ಲಿ ಈ ವಿಧದ ರಜೆಯ ಅವಧಿ 6 ತಿಂಗಳು.

ಬೇರೆ ಯಾವುದೇ ಬಗೆಯ ರಜೆ ಇಲ್ಲದ ವಿಶೇಷ ಸಂದರ್ಭಗಳಲ್ಲಿ ಖಾಯಂ ಉದ್ಯೋಗಿಯು ಅಸಾಧಾರಣ ರಜೆಯನ್ನು ಪಡೆಯಬಹುದು. ಇದು ಯಾವಾಗಲೂ ವೇತನರಹಿತವಾಗಿರುತ್ತದೆ ಮತ್ತು ಯಾವುದೇ ಸಂದರ್ಭದಲ್ಲಿ ಇದು 3 ವರ್ಷಗಳ ಅವಧಿಯನ್ನು ಮೀರುವಂತಿಲ್ಲ. ಕೇರಳದಲ್ಲಿ ವಿಧಾನಸಭೆಯ ಸದಸ್ಯರಾಗಿರುವ ಶಿಕ್ಷಕರಿಗೆ ಸಭಾ ಕಲಾಪದಲ್ಲಿ ಭಾಗವಹಿಸಲು ವೇತನರಹಿತ ಅಸಾಧಾರಣ ರಜೆಯನ್ನು ಮಂಜೂರು ಮಾಡಲಾಗುತ್ತದೆ ಇವರು ತಮ್ಮ ಚುನಾವಣಾ ಕ್ಷೇತ್ರದಲ್ಲಿ ಕೆಲಸ ಮಾಡಲು ಒಂದುಬಾರಿ ಇಡೀ ಒಂದು ವರ್ಷದ ರಜೆಯನ್ನು ನೀಡಲಾಗುತ್ತದೆ ಅಥವಾ ಅವರು ವಿಧಾನಸಭೆಯ ಸದಸ್ಯರಾಗಿರುವ ಇಡೀ ಅವಧಿಗೆ ರಜೆಯನ್ನು ನೀಡಲಾಗುತ್ತದೆ. ಈ ರಜೆಯ ಅವಧಿಗಳನ್ನು ವೇತನ ಹೆಚ್ಚಳ, ಉನ್ನತ ವೇತನ ಶ್ರೇಣಿ ಮತ್ತು ನಿವೃತ್ತಿಯಲ್ಲಿ ಪರಿಗಣಿಸಲಾಗುತ್ತದೆ.

ಅರ್ಧ ವೇತನ ರಜೆಯನ್ನು ಕೆಲವು ಖಾಸಗಿ ಕಾರಣಗಳಿಗೆ ಮಂಜೂರು ಮಾಡಲಾಗುತ್ತದೆ. ಶಿಕ್ಷಕರ ಇಡೀ ಸೇವಾವಧಿಯಲ್ಲಿ ಈ ರಜೆಯ ಗರಿಷ್ಠ ಮಿತಿ 18 ತಿಂಗಳು.

ಐದು ಮತ್ತು ಐದಕ್ಕಿಂತ ಹೆಚ್ಚು ವರ್ಷಗಳ ಸೇವೆಯನ್ನು ಸಲ್ಲಿಸಿದ ಶಿಕ್ಷಕರು ಅವನ/ಅವಳ ಶೈಕ್ಷಣಿಕ ಅರ್ಹತೆಯನ್ನು ಹೆಚ್ಚಿಸಿಕೊಳ್ಳಲು ವಿಶೇಷ ಕೋರ್ಸ್ ಕಲಿಯುವುದಿದ್ದರೆ ಅವರಿಗೆ ಅಧ್ಯಯನ ರಜೆ ದೊರೆಯುತ್ತದೆ. ಯಾವುದೇ ಸಮಯದಲ್ಲಿ ಒಂದು ಬಾರಿ ತೆಗೆದುಕೊಳ್ಳಬಹುದಾದ ಅಧ್ಯಯನ ರಜೆಯ ಗರಿಷ್ಠ ಅವಧಿಯು 12 ತಿಂಗಳು ಮತ್ತು ಇಡೀ ಸೇವಾವಧಿಯಲ್ಲಿ 2 ವರ್ಷಗಳು. ರಜೆಯ ತೆಗೆದುಕೊಳ್ಳುವ ಮೊದಲು ಅವನು ಅಥವಾ ಅವಳು ಒಂದು ಒಪ್ಪಂದಕ್ಕೆ ಸಹಿ ಹಾಕಬೇಕಾಗುತ್ತದೆ. ರಜೆಯ ನಂತರ ಕೆಲಸಕ್ಕೆ ಹಾಜರಾಗಿ ಕನಿಷ್ಠ 3 ವರ್ಷಗಳ ಕಾಲ ಮುಂದುವರಿಯುವುದು ಮತ್ತು ಕರಾರನ್ನು ಉಲ್ಲಂಘಿಸಿದರೆ ಅವನು/ ಅವಳು ಅಧ್ಯಯನ ರಜೆಯ ಖರ್ಚನ್ನು ಭರಿಸುವುದು ಒಪ್ಪಂದದಲ್ಲಿ ಇರುತ್ತದೆ.

ಗಳಿಕೆ ರಜೆಗೆ ಶಾಲೆಗಳ ಮುಖ್ಯಸ್ಥರು ಮಾತ್ರ ಅರ್ಹರಿರುತ್ತಾರೆ. ಏಕೆಂದರೆ ಸುದೀರ್ಘ ಬೇಸಿಗೆ ರಜೆಯ ಕಾಲದಲ್ಲಿ ಕೆಲಸದ ಒತ್ತಡ ಹೆಚ್ಚು ಇರುವುದರಿಂದ ಅವರು ಬೇಸಿಗೆ ರಜೆಯನ್ನು ಪಡೆಯುವ ಹಾಗಿಲ್ಲ. ಕರ್ತವ್ಯದಲ್ಲಿ ಕಳೆದ ಅವಧಿಯ ಹನ್ನೊಂದನೆಯ ಒಂದರಷ್ಟು ಪ್ರಮಾಣದಲ್ಲಿ ಪೂರ್ಣ ಸರಾಸರಿ ವೇತನದ ಗಳಿಕೆ ರಜೆ ಇರುತ್ತದೆ. ಇದನ್ನು 300 ದಿನಗಳಿಗಿಂತ ಹೆಚ್ಚು ಶೇಖರಿಸಿಡುವ ಹಾಗಿಲ್ಲ.

ಕಡು ಬೇಸಿಗೆ ಮತ್ತು ಕಡು ಚಳಿಗಾಲದ ಕಾಲದಲ್ಲಿ ಶಾಲೆಯು ಎಂದಿನಂತೆ ಕಾರ್ಯನಿರ್ವಹಿಸುವುದು ಸಾಧ್ಯವಿಲ್ಲದ ಕಾರಣ ಈ ಸಂದರ್ಭಗಳಲ್ಲಿ ರಜೆಯನ್ನು ಮಂಜೂರು ಮಾಡಲಾಗುತ್ತದೆ. ಪರ್ವತ ಪ್ರದೇಶಗಳಲ್ಲಿ ಚಳಿಯ ಕಾರಣವಾಗಿ ಮತ್ತು ಬಹುತೇಕ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬೇಸಿಗೆಕಾಲದಲ್ಲಿ ನೀಡಲಾಗುವ ಈ ರಜೆ ಅವಧಿ ಸಾಮಾನ್ಯವಾಗಿ 6 ರಿಂದ 8 ವಾರಗಳು.

**ವರ್ಗಾವಣೆಗಳು:** ಶಿಕ್ಷಕರ ವರ್ಗಾವಣೆ ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ನಡೆಯುವುದು ಸರಕಾರಿ ಶಾಲೆಗಳಲ್ಲಿ ಮತ್ತು ಸ್ಥಳೀಯ ಆಡಳಿತದಲ್ಲಿ ಹೆಚ್ಚು ಸಂಖ್ಯೆಯ ಶಾಲೆಗಳಿರುವ ಸಂದರ್ಭಗಳಲ್ಲಿ ಮಾತ್ರ. ಖಾಸಗಿ ಅನುದಾನಿತ ಶಾಲೆಗಳಲ್ಲಿ ಮತ್ತು ಒಂದು ಆಡಳಿತದಲ್ಲಿ ಒಂದೇ ಶಾಲೆ ಇರುವ ಸಂದರ್ಭದಲ್ಲಿ ವರ್ಗಾವಣೆಗೆ ಅವಕಾಶ ಇರುವುದಿಲ್ಲ. ಕೆಲವು ಕಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳ ಆಡಳಿತ ಒಂದೇ ಆಗಿರುವಲ್ಲಿ ಮಾತ್ರ

Digitised by Bharatavani, CIIL

ವರ್ಗಾವಣೆಗೆ ಅವಕಾಶವಿರುತ್ತದೆ.

**ಸಾಮಾನ್ಯವಾಗಿ ಶಿಕ್ಷಕರ ವರ್ಗಾವಣೆಗಳು ಈ ಕೆಳಗಿನ ಕಾರಣಗಳಿಗಾಗಿ ನಡೆಯುತ್ತವೆ:**

1. ಶಾಲೆಯಲ್ಲಿನ ಖಾಲಿ ಸ್ಥಾನವನ್ನು ತುಂಬಿಸುವುದಕ್ಕಾಗಿ;
2. ಬಡ್ತಿ;
3. ದೂರಗಳು; ಮತ್ತು
4. ಅನುಕಂಪದ ಆಧಾರದಲ್ಲಿ

ಸರಕಾರಿ ಶಿಕ್ಷಕರ ವರ್ಗಾವಣೆಯನ್ನು ಜಿಲ್ಲಾ ಶಿಕ್ಷಣ ಅಧಿಕಾರಿಗಳು ನಡೆಸುತ್ತಾರೆ. ಸ್ಥಳೀಯ ಸಂಸ್ಥೆಗಳಿಂದ ನಡೆಯುವ ಶಾಲೆಗಳಲ್ಲಿ, ಉದಾಹರಣೆಗೆ ಜಿಲ್ಲಾ ಮಂಡಳಿಗಳು, ನಗರಸಭೆಗಳು ಮತ್ತು ಸ್ಥಳೀಯ ಮಂಡಳಿಗಳ ಶಾಲೆಗಳಲ್ಲಿ ಉದ್ಯೋಗಿಯಾಗಿರುವ ಶಿಕ್ಷಕರ ವರ್ಗಾವಣೆಯನ್ನು ಪರೀಕ್ಷಕ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿದ ನಂತರ ನಡೆಸಲಾಗುತ್ತದೆ. ಖಾಸಗಿ ಅನುದಾನಿತ ಶಾಲೆಗಳಲ್ಲಿ ಆಡಳಿತವರ್ಗದವರೇ ಶಿಕ್ಷಕರ ವರ್ಗಾವಣೆಯನ್ನು ನಡೆಸುತ್ತಾರೆ.

ವರ್ಗಾವಣೆ ಆಜ್ಞೆಯನ್ನು ಹೊರಡಿಸುವುದರಲ್ಲಿ ರಾಜ್ಯ ಶಿಕ್ಷಣ ಇಲಾಖೆಗಳು ಕೆಲವು ತತ್ವಗಳು ಮತ್ತು ಕಾರ್ಯನೀತಿಗಳನ್ನು ಅನುಸರಿಸುತ್ತವೆ. ಸಾಮಾನ್ಯವಾಗಿ ವರ್ಗಾವಣೆಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ನಡೆಸಲಾಗುತ್ತದೆ. ವರ್ಷದ ನಡುವೆ ವರ್ಗಾವಣೆ ನಡೆಯುವುದನ್ನು ಸಾಧ್ಯವಾದಷ್ಟು ತಪ್ಪಿಸಲಾಗುತ್ತದೆ. ಒಂದೇ ಪ್ರದೇಶದಲ್ಲಿ ಕೆಲಸ ಮಾಡುವ ಗಂಡ ಮತ್ತು ಹೆಂಡತಿಯನ್ನು ಅವರ ಕೋರಿಕೆಯ ಮೇರೆಗೆ ಇತರ ಪ್ರದೇಶಕ್ಕೆ ಒಟ್ಟಿಗೆ ವರ್ಗಾಯಿಸಲಾಗುತ್ತದೆ. ಶಿಕ್ಷಕರ ವೈಯಕ್ತಿಕ ಸುಖಸಂತೋಷ ಮತ್ತು ಕಾರ್ಯಸಮರ್ಥತೆಯನ್ನು ಗಮನದಲ್ಲಿ ಇಟ್ಟುಕೊಂಡು ಸಾಧ್ಯವಾದಷ್ಟು ರೀತಿಯಲ್ಲಿ ಶಿಕ್ಷಕರಿಗೆ ಅವರ ಸ್ವಂತ ಊರು/ಹಳ್ಳಿಗಳ ಸಮೀಪ ವರ್ಗಾವಣೆ ಮಾಡಲಾಗುತ್ತದೆ. ಆದರೆ ಬೇರೆ ಬೇರೆ ರಾಜ್ಯಗಳಲ್ಲಿ ಶಿಕ್ಷಕರ ವರ್ಗಾವಣೆ ನೀತಿಗಳಲ್ಲಿ ವ್ಯತ್ಯಾಸವಿರುತ್ತದೆ. ಉದಾಹರಣೆಗೆ, ಬಿಹಾರದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಹೊಸದಾಗಿ ಆಯ್ಕೆಯಾದ ಶಿಕ್ಷಕರನ್ನು ಅವರ ಮನೆಯ ಸಮೀಪ ಮತ್ತು ಅವರ ಸ್ವಂತ ಊರಿನ 8 ಕಿಮೀ. ವ್ಯಾಸದ ವ್ಯಾಪ್ತಿ ಪ್ರದೇಶದಲ್ಲಿ ಉದ್ಯೋಗ ನೇಮಕಾತಿ ಮಾಡುವುದಿಲ್ಲ. ಹರಿಯಾಣದಲ್ಲಿ ಶಿಕ್ಷಕರನ್ನು ಅವರ ವಾಸಸ್ಥಾನದ 20 ಕಿಮೀ. ವ್ಯಾಪ್ತಿ ಪ್ರದೇಶದಲಿ ಉದ್ಯೋಗಕ್ಕೆ ನೇಮಿಸದಿರುವ ಕಾರ್ಯ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಕರ್ನಾಟಕ ಮತ್ತು ಉತ್ತರ ಪ್ರದೇಶಗಳಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಕರಿಗೆ ಸಧ್ಯವಾದಷ್ಟು ಅವರ ಸ್ವಂತ ತಾಲ್ಲೂಕು ಅಥವಾ ಜಿಲ್ಲೆಯಲ್ಲಿಯೇ ಕೆಲಸದ ಅವಕಾಶವನ್ನು ನೀಡಲಾಗುತ್ತದೆ. ಮಧ್ಯಪ್ರದೇಶ ಕೂಡ ಕರ್ನಾಟಕ ಮತ್ತು ಉತ್ತರಪ್ರದೇಶದ ವಿನ್ಯಾಸವನ್ನು ಅನುಸರಿಸಿ, ಸಾಧ್ಯವಾದಷ್ಟು ಅವರ ಸ್ವಂತ ಜಿಲ್ಲೆಯಲ್ಲಿಯೇ ಶಿಕ್ಷಕರಿಗೆ ಉದ್ಯೋಗ ನೇಮಕಾತಿಯನ್ನು ನೀಡುತ್ತದೆ. ರಾಜಾಸ್ಥಾನವು 1994ರಲ್ಲಿ ವ್ಯಾಪಕ ವರ್ಗಾವಣಾ ಕಾರ್ಯನೀತಿಯನ್ನು ರೂಪಿಸಿದೆ. ಇದರ ಪ್ರಕಾರ ಹೊಸದಾಗಿ ಆಯ್ಕೆಯಾಗಿರುವ ಎಲ್ಲ ಶಿಕ್ಷಕರನ್ನು ಕಡ್ಡಾಯವಾಗಿ ಗ್ರಾಮೀಣ ಪ್ರದೇಶಗಳಿಗೆ ಕಳುಹಿಸಲಾಗುತ್ತದೆ. ಅರುಣಾಚಲ ಪ್ರದೇಶವು ಶಿಕ್ಷಕರ ವರ್ಗಾವಣೆ ಮತ್ತು ನೇಮಕಕ್ಕೆ ಇನ್ನೂ ಹೆಚ್ಚು ಪರಿಣಾಮಕಾರಿಯಾದ ಕಾರ್ಯನೀತಿಯನ್ನು ಅಳವಡಿಸಿಕೊಂಡಿದೆ. ಈ ಇಡೀ ರಾಜ್ಯವನ್ನು 3 ಭಾಗಗಳಾಗಿ ವಿಂಗಡಿಸಲಾಗಿದೆ; ಸುಲಭ, ಮಧ್ಯಮ ಮತ್ತು ಕಷ್ಟಕರ. ಈ ಪ್ರತಿಯೊಂದು ಭಾಗಕ್ಕೆ ಶಿಕ್ಷಕರನ್ನು ಸರದಿಯಲ್ಲಿ ವರ್ಗಾವಣೆ ಮಾಡಲಾಗುತ್ತದೆ.

ನೇಮಕಾತಿ ಮತ್ತು ವರ್ಗಾವಣೆಯನ್ನು ನಡೆಸುವ ಇಷ್ಟೆಲ್ಲಾ ನಿಯಮಗಳು ಇದ್ದರೂ ಸಾಮಾನ್ಯವಾಗಿ ಶಿಕ್ಷಕರು ಬಹುದೂರದ, ಹಿಂದುಳಿದ ಮತ್ತು ಗ್ರಾಮೀಣ ಪ್ರದೇಶಗಳಿಗೆ ನೇಮಕಗೊಳ್ಳುವುದನ್ನು ತಪ್ಪಿಸಿಕೊಳ್ಳಲು ಸಾಮಾನ್ಯವಾಗಿ ಪ್ರಯತ್ನಿಸುತ್ತಾರೆ. ದೇಶದ ಬುಡಕಟ್ಟು ಪ್ರದೇಶಗಳು ಅತಿ ದೂರದ ಪ್ರದೇಶಗಳು ಶಿಕ್ಷಕರ ಕೊರತೆಯ ಸಮಸ್ಯೆಯಿಂದ ಬಳಲುತ್ತವೆ.

**ಕ್ಷೇಮಾಭಿವೃದ್ಧಿ ಕಾರ್ಯಯೋಜನೆಗಳು:**

ಎಲ್ಲ ರಾಜ್ಯಗಳು ಶಿಕ್ಷಕರ ಕ್ಷೇಮಾಭಿವೃದ್ಧಿಗಾಗಿ ಆಕರ್ಷಕ ಅವಕಾಶಗಳನ್ನು ಮಾಡಿವೆ. ಇದು ಶಿಕ್ಷಕರಿಗೆ ಉದ್ಯೋಗ ಭದ್ರತೆ ಸಿಗಲು ನೆರವಾಗಿದೆ ಮತ್ತು ಬೋಧನಾ ವೃತ್ತಿಯನ್ನು ಹೆಚ್ಚು ಆಕರ್ಷಕವಾಗಿ ಮಾಡಿದೆ. ಉದಾಹರಣೆಗೆ ಎಲ್ಲ ರಾಜ್ಯಗಳಲ್ಲಿ ಬೇರೆ ಬೇರೆ ಆಡಳಿತದಲ್ಲಿರುವ ಶಾಲೆಗಳ ಶಿಕ್ಷಕರ ವೇತನವು ಸಾಮಾನ್ಯವಾಗಿ ಬೇರೆ ಸರಕಾರಿ ಉದ್ಯೋಗಿಗಳ ವೇತನಕ್ಕೆ ಸಮಾನವಾಗಿದೆ. ಖಾಸಗಿ ಮಾನ್ಯತೆ ಪಡೆದ ಶಾಲೆಗಳ ಶಿಕ್ಷಕರು ಸರಕಾರಿ ಶಾಲೆಗಳ ಅವರ ಸಹೋದ್ಯೋಗಿಗಳ ವರಮಾನಕ್ಕೆ ಸಮಾನವಾಗಿರುವುದನ್ನು ಪಡೆಯಲು ಅರ್ಹರಿರುತ್ತಾರೆ. ಬೇರೆ ಸರಕಾರಿ ಉದ್ಯೋಗಿಗಳಿಗೆ ಲಭ್ಯವಿರುವ ಎಲ್ಲಾ ಅನುಕೂಲತೆಗಳಿಗೆ ಇವರು ಕೂಡ ಅರ್ಹರಾಗಿರುತ್ತಾರೆ. ಉದಾಹರಣೆಗೆ ವೈದ್ಯಕೀಯ ನೆರವು, ತನ್ನ ಮತ್ತು ತನ್ನ ಅವಲಂಬಿತರ ವೈದ್ಯಕೀಯ ಖರ್ಚುವೆಚ್ಚದ ಮರುಪಾವತಿ, ರಜಾ ಸೌಲಭ್ಯಗಳು, ಎಲ್‌ಟಿಸಿ ಸೌಲಭ್ಯಗಳು, ಮುಂಗಡಗಳು, ಸಾಲಗಳು, ಉಪದಾನ, ಮತ್ತು ನಿವೃತ್ತಿ ಸೌಲಭ್ಯಗಳು. ಕೆಲವು ರಾಜ್ಯಗಳಲ್ಲಿ ಶಿಕ್ಷಕರ ಮಕ್ಕಳಿಗೆ ಫ್ರೀಶಿಪ್ ಇದ್ದರೆ, ಬೇರೆ ರಾಜ್ಯಗಳಲ್ಲಿ ಅವರು ಪಾವತಿಸಿದ ಶುಲ್ಕವನ್ನು ಸರಕಾರಿ ದರದಲ್ಲಿ ಅವರಿಗೆ ಮರುಪಾವತಿಸಲಾಗುತ್ತದೆ. ಈ ಸೌಲಭ್ಯವು ಕೆಲವು ರಾಜ್ಯಗಳಲ್ಲಿ ಶಾಲಾ ಮಟ್ಟದವರೆಗೆ ಇದ್ದರೆ, ಕೆಲವು ರಾಜ್ಯಗಳಲ್ಲಿ ಬೋಧನಾ ಶುಲ್ಕವನ್ನು ಶಿಕ್ಷಣದ ಎಲ್ಲ ಹಂತಗಳಲ್ಲಿ ಮರುಪಾವತಿಸಲಾಗುತ್ತದೆ. ಕೆಲವು ಅಧಿನಿಯಮಗಳಲ್ಲಿ ವಸತಿ ಸೌಕರ್ಯದ ಪ್ರಸ್ತಾಪವಿರುವುದಾದರೂ, ವಾಸ್ತವದಲ್ಲಿ ಯಾವುದೇ ರಾಜ್ಯ ಶಿಕ್ಷಕರಿಗೆ ಈ ಸೌಕರ್ಯವನ್ನು ಒದಗಿಸಲು ಸಮರ್ಥವಾಗಿಲ್ಲ. ಆದರೆ ಶಿಕ್ಷಕರು ರಾಜ್ಯದ ಕಾನೂನಿನ ಪ್ರಕಾರ ಮನೆಬಾಡಿಗೆ ಭತ್ಯೆಯನ್ನು ಪಡೆಯಲು ಅರ್ಹರಾಗಿದ್ದಾರೆ. ಮನೆ ಸೌಕರ್ಯದ ಕೊರತೆ ಶಿಕ್ಷಕರಿಗೆ ತೊಂದರೆಯನ್ನು

Digitised by Bharatavani, CIIL

ಉಂಟು ಮಾಡುತ್ತದೆ, ಅದರಲ್ಲಿಯೂ ವಿಶೇಷವಾಗಿ ದೂರದ ಪ್ರದೇಶಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇರುವವರಿಗೆ ಈ ತೊಂದರೆ ಇರುವುದರಿಂದಲೇ ಈ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆಯ ಸಮಸ್ಯೆ ಉಂಟಾಗಿದೆ. ಕೆಲವು ರಾಜ್ಯಗಳಲ್ಲಿ ಶಿಕ್ಷಕರ ಕ್ಷೇಮಾಭಿವೃದ್ಧಿ ಕಾರ್ಯಯೋಜನೆಗಳು ಇವೆ. ಇದು ಸರಕಾರಿ, ಖಾಸಗಿ ಮತ್ತು ಸ್ಥಳೀಯ ಸಂಸ್ಥೆಯ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಅಗತ್ಯಗಳನ್ನು ಶಿಕ್ಷಕರ ಅವಲಂಬಿತರು ಕೂಡ ನೆರವು ಪಡೆಯಬಹುದಾಗಿದೆ.

ಮೇಲೆ ಉಲ್ಲೇಖಿಸಿದ ವಾಸ್ತವಾಂಶಗಳಿಂದ ಸರಕಾರಿ, ಸ್ಥಳೀಯ ಸಂಸ್ಥೆ ಮತ್ತು ಖಾಸಗಿ ಅನುದಾನಿತ ಶಾಲೆಗಳಲ್ಲಿ ಸಮಾನ ಸೇವಾ ನಿಬಂಧನೆಗಳು ಮತ್ತು ನಿಯಮಗಳನ್ನು ಅನುಸರಿಸಲಾಗುತ್ತದೆ ಎಂಬುದು ವ್ಯಕ್ತವಾಗುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ಶಿಕ್ಷಣ ಅಧಿನಿಯಮಗಳನ್ನು ಮತ್ತು ನಿಯಮಗಳನ್ನು ಜಾರಿಗೊಳಿಸಿದ ಕಾರಣದಿಂದ ಎಲ್ಲ ಆಡಳಿತದ ಶಾಲೆಗಳ ಶಿಕ್ಷಕರ ಸೇವೆಯು ಈಗ ಹೆಚ್ಚು ಸುರಕ್ಷಿತವಾಗಿದೆ. ಶಿಕ್ಷಣ ನಿರ್ದೇಶಕರು ಅಥವಾ ಸೂಕ್ತ ಅಧಿಕಾರಿಯ ಪೂರ್ವ ಅನುಮೋದನೆಯಿಲ್ಲದೆ ಯಾವುದೇ ಶಿಕ್ಷಕರನ್ನು ಕೆಲಸದಿಂದ ವಜಾಗೊಳಿಸುವುದು, ತೆಗೆದುಬಿಡುವುದು ಅಥವಾ ಅವರ ಶ್ರೇಣಿಯನ್ನು ಕಡಿಮೆ ಮಾಡುವುದು ಅಥವಾ ಅವರ ಸೇವೆಯನ್ನು ಕೊನೆಗೊಳಿಸುವುದು ಇವುಗಳನ್ನು ಮಾಡುವಂತಿಲ್ಲ. ಬೇರೆ ಸರಕಾರಿ ನೌಕರರ ಹಾಗೆ ತಮ್ಮ ಮೇಲೆ ವಿಧಿಸಲಾದ ಯಾವುದೇ ಶಿಕ್ಷಾ ಕ್ರಮದ ವಿರುದ್ಧ ಮೇಲ್‌ಮನವಿ ಸಲ್ಲಿಸಲು ಅವರು ಅರ್ಹರಿರುತ್ತಾರೆ. ಬಹುಪಾಲು ರಾಜ್ಯಗಳಲ್ಲಿ ಅವರ ನಿವೃತ್ತಿ ವಯಸ್ಸು ಬೇರೆ ರಾಜ್ಯ ಸರಕಾರಿ ಉದ್ಯೋಗಿಗಳಿಗೆ ಸಮಾನವಾಗಿರುತ್ತದೆ. ಅವರು ವಿವಿಧ ರೀತಿಯ ರಜಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ. ಆದರೆ ಮುಂಬಡ್ತಿ ಮತ್ತು ಪದೋನ್ನತಿಯ ವಿಚಾರದಲ್ಲಿ ಮಾತ್ರ ಬೇರೆ ಸರಕಾರಿ ಸೇವೆಗಳು, ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರಿ ಕ್ಷೇತ್ರಗಳಿಗೆ ಹೋಲಿಸಿದರೆ ಅಂತಹ ರಹದಾರಿಗಳು ಬೋಧನಾ ವೃತ್ತಿಯಲ್ಲಿ ಹೆಚ್ಚು ಸೀಮಿತವೆಂದು ಹೇಳಬಹುದು. ಈ ಕಾರಣದಿಂದಾಗಿ ಉನ್ನತ ಸಾಮರ್ಥ್ಯವುಳ್ಳವರಲ್ಲಿ ಹೆಚ್ಚು ಮಂದಿ ಬೋಧನಾ ವೃತ್ತಿಯತ್ತ ಆಕರ್ಷಿತರಾಗಿಲ್ಲ.

**ಮೂಲ: ರವಿಕಾಂತ ಚೋಪ್ರಾ**
**ಅನು: ಡಾ. ಗೀತಾ ಶೆಣೈ**

## ಶಾಲಾ ಸಂಕೀರ್ಣ

ಒಂದು ಮುಖ್ಯವಾದ/ದೊಡ್ಡದಾದ ಪ್ರೌಢಶಾಲೆ/ಹಿರಿಯ ಪ್ರಾಥಮಿಕ ಶಾಲೆಯ ಸುತ್ತ ಇರುವ ಹಿರಿಯ/ಕಿರಿಯ ಪ್ರಾಥಮಿಕ ಶಾಲೆಗಳನ್ನು ಸೇರಿಸಿ ಅದರ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಸಾಧ್ಯವಾಗಬಹುದಾದಷ್ಟು ಶೈಕ್ಷಣಿಕ ಸುಧಾರಣೆ ತರಲು ಪರಸ್ಪರ ಸಹಕಾರದಿಂದ ಸೃಷ್ಟಿಸಿಕೊಂಡ ಶಾಲೆಗಳ ಒಕ್ಕೂಟವೇ "ಶಾಲಾ ಸಂಕೀರ್ಣ" (School Complex).

ಶಾಲಾ ಸಂಕೀರ್ಣದ ಪರಿಕಲ್ಪನೆಯನ್ನು ಡಾ॥ಕೊಠಾರಿಯವರ ಅಧ್ಯಕ್ಷತೆಯ ರಾಷ್ಟ್ರೀಯ ಶಿಕ್ಷಣ ಆಯೋಗವು (1964–66) ಶಿಫಾರಸ್ಸು ಮಾಡಿತು. ಶಿಕ್ಷಣದ ಸಾರ್ವತ್ರೀಕರಣ ಗುರಿ ಸಾಧಿಸಲು ಗಣನೀಯ ಮಟ್ಟದಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ಎಲ್ಲ ಶಾಲೆಗಳಿಗೂ ಅಗತ್ಯವಾದ ಸೌಲಭ್ಯಗಳನ್ನು ಹಾಗೂ ಉಪಕರಣಗಳನ್ನು ತತ್‌ಕ್ಷಣದಲ್ಲಿ ಒದಗಿಸಲು ಕಷ್ಟಸಾಧ್ಯ. ಆದುದರಿಂದ ಕೇಂದ್ರ ಶಾಲೆಗೆ ಈ ಎಲ್ಲ ಸೌಲಭ್ಯಗಳನ್ನು ಹಾಗೂ ಉಪಕರಣಗಳನ್ನು ಒದಗಿಸಿದಲ್ಲಿ ಆ ಶಾಲಾ ಸಂಕೀರ್ಣದ ಇತರೆ ಶಾಲೆಗಳು ಅವುಗಳ ಉಪಯೋಗವನ್ನು ಪಡೆಯಬಹುದಾಗಿದೆ.

### 1. ಶಾಲಾ ಸಂಕೀರ್ಣದ ಉದ್ದೇಶಗಳು:

- ಶಿಕ್ಷಣದ ವಿವಿಧ ಹಂತಗಳಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಿಸುವುದು.
- ಶಾಲಾ ಆಡಳಿತವನ್ನು ವಿಕೇಂದ್ರೀಕರಣಗೊಳಿಸುವುದು.
- ಶಾಲಾ ಕಾರ್ಯ ನಿರ್ವಹಣೆಯಲ್ಲಿ ಶಾಲಾ ಸಂಕೀರ್ಣದ ಎಲ್ಲಾ ಶಾಲೆಗಳ ಮುಖ್ಯಸ್ಥರು ಪರಿಣಾಮಕಾರಿಯಾಗಿ ಭಾಗವಹಿಸುವುದು.
- ಶಾಲೆಗಳಲ್ಲಿ ಬೋಧನಾ ತಂತ್ರಗಳ ಪ್ರಯೋಗ, ಅನುಷ್ಠಾನ, ಮಾರ್ಪಾಡುಗಳನ್ನು ಸುಗಮಗೊಳಿಸುವುದು.
- ಸಂಕೀರ್ಣದಲ್ಲಿ ಬರುವ ಶಾಲಾ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವುದು.

### 2. ಕಾರ್ಯಗಳು:

ಪ್ರತಿಯೊಂದು ಶಾಲಾ ಸಂಕೀರ್ಣವು ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸಬೇಕೆಂದು ನಿರೀಕ್ಷಿಸಲಾಗಿತ್ತು.

- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸುವುದು.
- ಔಪಚಾರಿಕ ಶಿಕ್ಷಣ ಕೇಂದ್ರಗಳೊಡನೆ ಸಹಭಾಗಿತ್ವ ಸಂಬಂಧವನ್ನು ಸ್ಥಾಪಿಸುವುದು.
- ಸಂಕೀರ್ಣದ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಮೇಲ್ವಿಚಾರಣೆ ಮಾಡುವುದು.
- ಆಡಳಿತಾತ್ಮಕ ಸುಧಾರಣೆಗಾಗಿ ಶಾಲೆಗಳ ಮುಖ್ಯಸ್ಥರಿಗೆ ಮಾರ್ಗದರ್ಶನ ನೀಡುವುದು.
- ಶಿಕ್ಷಕರ ಅವಶ್ಯಕತೆಗಳ ಪಟ್ಟಿ ತಯಾರಿಸುವುದು.
- ಶೈಕ್ಷಣಿಕ ಕಾರ್ಯಕ್ರಮಗಳ ಪಟ್ಟಿ ತಯಾರಿಸಿ ಅನುಷ್ಠಾನಗೊಳಿಸುವುದು.
- ಶೈಕ್ಷಣಿಕ ಸಂಪನ್ಮೂಲಗಳ, ಸಾಮಗ್ರಿಗಳ ಬಳಕೆ

Digitised by Bharatavani, CIIL

- ಶಿಕ್ಷಕರಿಗೆ ಮಾರ್ಗದರ್ಶಿ ಸೂಚಿಯನ್ನು ತಯಾರಿಸುವುದು.
- ಭೌತಿಕ ಸೌಲಭ್ಯಗಳನ್ನು ಪಡೆಯಲು ಸಮುದಾಯದಲ್ಲಿರುವ ಸಂಸ್ಥೆಗಳ, ವ್ಯಕ್ತಿಗಳ ಸಹಕಾರ ಪಡೆಯುವುದು.

**3. ಶಾಲಾ ಸಂಕೀರ್ಣದ ಸ್ವರೂಪ:**

- ಒಂದು ಶಾಲಾ ಸಂಕೀರ್ಣದಲ್ಲಿ 5ರಿಂದ 10 ಶಾಲೆಗಳಿರುತ್ತವೆ.
- ಶಾಲಾ ಸಂಕೀರ್ಣದಲ್ಲಿ ಪ್ರೌಢ ಶಾಲೆ/ಹಿರಿಯ ಪ್ರಾಥಮಿಕ ಶಾಲೆ ಕೇಂದ್ರ ಶಾಲೆಯಾಗಿರುತ್ತದೆ. ಉಳಿದವು ಸದಸ್ಯ ಶಾಲೆಗಳಾಗಿರುತ್ತವೆ.
- ಸಂಕೀರ್ಣದ ಚಟುವಟಿಕೆಗಳನ್ನು ಕೇಂದ್ರ ಶಾಲೆಯಲ್ಲಿ ಸಾಮಾನ್ಯವಾಗಿ ಹಮ್ಮಿಕೊಳ್ಳಲಾಗುತ್ತದೆ.
- ಪ್ರೌಢಶಾಲೆ ಕೇಂದ್ರ ಶಾಲೆಯಾಗಿದ್ದಲ್ಲಿ ಆ ಶಾಲೆಯ ಮುಖ್ಯೋಪಾಧ್ಯಾಯರು ಶಾಲಾ ಸಂಕೀರ್ಣದ ಅಧ್ಯಕ್ಷರಾಗಿರುತ್ತಾರೆ ಮತ್ತು ಸ್ಥಳೀಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಕಾರ್ಯದರ್ಶಿಯಾಗಿರುತ್ತಾರೆ ಹಾಗೂ ಉಳಿದ ಸದಸ್ಯ ಶಾಲೆಗಳ ಮುಖ್ಯ ಶಿಕ್ಷಕರು ಸದಸ್ಯರಾಗಿರುತ್ತಾರೆ.
- ಶಾಲಾ ಸಂಕೀರ್ಣ ಅರ್ಥಪೂರ್ಣವಾಗಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಮುದಾಯದ ಸಹಕಾರವನ್ನು ಪಡೆದುಕೊಳ್ಳಬಹುದು.

**4. ಪ್ರಯೋಜನಗಳು:**

- ವೃತ್ತಿ ದಕ್ಷತೆಗೆ ಅನುಕೂಲವಾಗುತ್ತದೆ. ಶಾಲೆಗಳ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ.
- ಶೈಕ್ಷಣಿಕ ಸಂಪನ್ಮೂಲಗಳ, ಸೌಲಭ್ಯಗಳ ಹಂಚಿಕೆ ಸೂಕ್ತ ರೀತಿಯಲ್ಲಿ ಆಗುತ್ತದೆ.
- ಶಿಕ್ಷಕರ ಸಭೆ, ಕಾರ್ಯಾಗಾರ, ಪ್ರದರ್ಶನ ಪಾಠ, ವಿಚಾರಗೋಷ್ಠಿ, ಅನುಭವ ವಿನಿಮಯ, ವಸ್ತು ಪ್ರದರ್ಶನ ಇತ್ಯಾದಿಗಳಲ್ಲಿ ಸಂಕೀರ್ಣದ ಎಲ್ಲಾ ಶಾಲೆಗಳ ಶಿಕ್ಷಕರು ಭಾಗವಹಿಸುವ ಅವಕಾಶ ದೊರೆಯುತ್ತದೆ.
- ಶೈಕ್ಷಣಿಕ ನಾಯಕತ್ವಕ್ಕೆ ಅವಕಾಶ ದೊರೆಯುತ್ತದೆ. ಕಲಿಕಾ ಪ್ರಯೋಗಗಳ ಫಲಿತಾಂಶಗಳ ವಿನಿಮಯ, ಕ್ರಿಯಾ ಸಂಶೋಧನೆಗೆ ಅವಕಾಶ ದೊರೆಯುತ್ತದೆ.
- ಶಾಲೆಗಳ ಪ್ರಗತಿಗೆ ಎಲ್ಲರೂ ಸಹಕಾರಾತ್ಮಕವಾಗಿ ಪ್ರಯತ್ನಿಸಲು ಸಾಧ್ಯವಾಗುತ್ತದೆ.
- ಶೈಕ್ಷಣಿಕ ಜವಾಬ್ದಾರಿಯ ಹಂಚಿಕೆಯಾಗುತ್ತದೆ.
- ಪರೀಕ್ಷೆ ನಡೆಸುವಲ್ಲಿ ಸಹಭಾಗಿತ್ವ, ಸಹಕಾರಕ್ಕೆ ಸಾಧ್ಯವಾಗುತ್ತದೆ.
- ವಿದ್ಯಾರ್ಥಿಗಳಿಗೆ ಸಂಕೀರ್ಣದ ಇತರೆ ಶಾಲೆಗಳ ಉತ್ತಮ ಅನುಭವಿ, ದಕ್ಷ ಶಿಕ್ಷಕರಿಂದ ಮಾರ್ಗದರ್ಶನದ ಅವಕಾಶ ದೊರಕುತ್ತದೆ.
- ಸಂಪನ್ಮೂಲಗಳ ಪರಸ್ಪರ ಹಂಚಿಕೆ, ಬಳಕೆ ಸಾಧ್ಯವಾಗುತ್ತದೆ.
- ಪ್ರಾಥಮಿಕ ಶಾಲಾ ಶಿಕ್ಷಕರ, ಪ್ರೌಢ ಶಾಲಾ ಶಿಕ್ಷಕರ ನಡುವೆ ಉತ್ತಮ ಬಾಂಧವ್ಯ ನಿರ್ಮಾಣವಾಗುತ್ತದೆ.
- ಬೇರೆ ಬೇರೆ ಶಾಲೆಗಳ ವಿದ್ಯಾರ್ಥಿಗಳ ನಡುವೆ ಉತ್ತಮ ಸ್ನೇಹ ಸಂಬಂಧಗಳು ಉಂಟಾಗುತ್ತದೆ.

ಕೊಠಾರಿ ಆಯೋಗದ ಶಿಫಾರಸ್ಸಿನಂತೆ ದೇಶದಾದ್ಯಂತ ಅನೇಕ ಶಾಲಾ ಸಂಕೀರ್ಣಗಳನ್ನು ಆರಂಭಿಸಲಾಯಿತು. ಈ ಸಂಕೀರ್ಣಗಳು ಕೆಲವು ವರ್ಷಗಳವರೆಗೆ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಿದವು. ಆದರೆ ನಂತರದ ವರ್ಷಗಳಲ್ಲಿ ಸಂಕೀರ್ಣದ ಶಾಲೆಗಳ ನಡುವೆ ಸೂಕ್ತ ಸಹಕಾರದ ಕೊರತೆ, ಸಂಪನ್ಮೂಲಗಳ ಹಂಚಿಕೆಯಲ್ಲಿ ನಿಷ್ಪಕ್ಷಪಾತ ಇಲ್ಲದೆ ಹೋದುದು, ಶಿಕ್ಷಕರ ನಡುವೆ ಸಹಕಾರ ಇಲ್ಲದೆ ಹೋದುದು ಇತ್ಯಾದಿ ಕೊರತೆಗಳಿಂದಾಗಿ ಶಾಲಾ ಸಂಕೀರ್ಣಗಳು ತಮ್ಮ ಕಾರ್ಯವನ್ನು ನಡೆಸದೆ ಹೋದವು. ಹೊಸ ಶಿಕ್ಷಣ ನೀತಿಯನ್ನು 1986ರಲ್ಲಿ ರೂಪಿಸುವ ವೇಳೆಗೆ ಶಾಲಾ ಸಂಕೀರ್ಣಗಳ ಕಾರ್ಯ ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬುದು ಗಮನಕ್ಕೆ ಬಂದಿತು. ಆದ್ದರಿಂದ 1986ರ ಹೊಸ ಶಿಕ್ಷಣ ನೀತಿ ಶಾಲಾ ಸಂಕೀರ್ಣಗಳನ್ನು ತೆಗೆದು ಹಾಕಿ ಅವುಗಳ ಕಾರ್ಯಗಳನ್ನು ನಿರ್ವಹಿಸಲು ಬ್ಲಾಕ್ ಸಂಪನ್ಮೂಲ ಕೇಂದ್ರ, ಮತ್ತು ಸಂಕುಲ ಸಂಪನ್ಮೂಲ ಕೇಂದ್ರ ಎಂದು ಎರಡು ಆಡಳಿತಾತ್ಮಕ ಸಂರಚನೆಗಳ ಸ್ಥಾಪನೆಗೆ ಶಿಫಾರಸು ಮಾಡಿತು. ಶಿಕ್ಷಣ ಇಲಾಖೆಯ ಅಧಿಕಾರಿಗಳೇ ನಿರ್ವಹಿಸುವ ಈ ಕೇಂದ್ರಗಳು ಆಡಳಿತಾತ್ಮಕ ಅಧಿಕಾರವನ್ನು ಹೊಂದಿವೆ.

**–ಡಾ. ಶೈಲಜ ಎಚ್.ಎಮ್.**

## ಶಾಲಾ ಸಿದ್ಧತೆ

ಶಾಲಾಪೂರ್ವ ಅನುಭವಗಳು ಮಗುವಿನ ವಿಕಾಸದ ಪ್ರತಿಯೊಂದು ಕ್ಷೇತ್ರದ ಕಲಿಕೆಗೆ ಅಸ್ತಿಭಾರ ಹಾಕುತ್ತವೆ. ಈ ಅನುಭವಗಳು ಚಿತ್ರಗಳು, ಪುಸ್ತಕಗಳು, ಮರ/ಪ್ಲಾಸ್ಟಿಕ್ ಬ್ಲಾಕ್‌ಗಳನ್ನು ಉಪಯೋಗಿಸುವ ವೈವಿಧ್ಯಮಯವಾದ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಆನಂದ, ಸವಾಲುಗಳು, ದೃಷ್ಟಿ ಸಂವೇದನೆ ಮತ್ತು ಸ್ಪರ್ಶ ಸಂವೇದನೆಗಳನ್ನು ಒದಗಿಸುತ್ತವೆ. ಒಂದು ಒಳ್ಳೆಯ ಶಾಲಾಪೂರ್ವ ಸಂಸ್ಥೆ ಒದಗಿಸಬಹುದಾದ ಅಭಿವ್ಯಕ್ತಿಯ ಮತ್ತು ವಿಕಾಸಾತ್ಮಕ ಅವಕಾಶಗಳಿಗೆ ಮಿತಿಯಿಲ್ಲ. ಈ ಸಂಸ್ಥೆಗಳು ಆತ್ಮಗೌರವವನ್ನು ಮತ್ತು ವೈಯಕ್ತಿಕ ದಕ್ಷತೆಯ ಭಾವನೆಯನ್ನು ಬೆಳೆಸುತ್ತವೆ. ಶಾಲಾ ಸಿದ್ಧತೆಯ ಚಟುವಟಿಕೆಗಳು ಮಗುವನ್ನು

Digitised by Bharatavani, CIIL

ಒತ್ತಾಯಪಡಿಸದ ರೀತಿಯಲ್ಲಿ ಸೃಜನಾತ್ಮಕವಾದ ಮತ್ತು ಬಹು ಆಯಾಮಗಳ ದೈಹಿಕ, ಸಾಮಾಜಿಕ, ಸಂವೇಗಾತ್ಮಕ, ಕಲಾತ್ಮಕ ಮತ್ತು ಸಂಜ್ಞಾನಾತ್ಮಕ ಚಟುವಟಿಕೆಗಳಲ್ಲಿ ಮಗುವನ್ನು ಪೂರ್ಣರೂಪದಲ್ಲಿ ತೊಡಗಿಸಿಕೊಳ್ಳುತ್ತವೆ. ಶಾಲಾ ಸಿದ್ಧತೆಯ ಕಾರ್ಯಗಳು ಮತ್ತು ಓದು, ಬರಹ ಮತ್ತು ಅಂಕಿಗಳ ಚಟುವಟಿಕೆಗಳನ್ನು ಕಲಿತುಕೊಳ್ಳುವಂತೆ ಮಾಡುತ್ತವೆ. ಹಾಗೂ ಕ್ರೀಡೆಗಳನ್ನು ಆಧರಿಸಿದ ಚಟುವಟಿಕೆಗಳ ಮೂಲಕ ಪರಿಕಲ್ಪನೆಗಳನ್ನು ಕಲಿತುಕೊಳ್ಳುವಂತೆ ಮಾಡುತ್ತವೆ. ಆದಾಗ್ಯೂ ಎಲ್ಲಾ ಶಾಲಾಪೂರ್ವ ಸಂಸ್ಥೆಗಳಲ್ಲಿ ಶಾಲಾ ಸಿದ್ಧತೆ ಕಾರ್ಯಕ್ರಮವಿರುವುದಿಲ್ಲ. ಹೆಚ್ಚಿನ ಶಾಲಾಪೂರ್ವ ಸಂಸ್ಥೆಗಳು ಬ್ಲಾಕ್‌ಗಳನ್ನು, ನಕ್ಷೆ (ಚಾರ್ಟ್)ಗಳನ್ನು ಒಮ್ಮೊಮ್ಮೆ ಕೆಲವು ಚಿತ್ರಪುಸ್ತಕಗಳನ್ನು ಸಿದ್ಧತೆಯ ಸಾಮಾನ್ಯ ಸಾಧನಗಳಾಗಿ ಉಪಯೋಗಿಸುತ್ತವೆ. ಚಂದ್ರಮತಿ ಮತ್ತು ಜಯಂತಿ (1972) ಕೈಗೊಂಡ ಅಧ್ಯಯನವು ಶಾಲಾ–ಪೂರ್ವ ಸಂಸ್ಥೆಗಳಲ್ಲಿ ಸಿದ್ಧತಾ ಕಾರ್ಯಕ್ರಮದ ಅಗತ್ಯತೆಯ ಬಗ್ಗೆ ಅರಿವಿದ್ದರೂ ಬಹಳ ಮಂದಿ ಶಾಲಾ–ಪೂರ್ವ ಶಿಕ್ಷಕರು ಔಪಚಾರಿಕ ಬೋಧನಾ ಕ್ರಮವನ್ನು ಅನುಸರಿಸುತ್ತಾರೆ ಎಂದು ತೋರಿಸಿದೆ.

ಮಕ್ಕಳು ಸ್ವಭಾವತಃ ಬಹುಮುಖಿ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಅವರು ಕುತೂಹಲಪೂರ್ಣ ವೀಕ್ಷಕರು, ವೇಗವಾಗಿ ಕಲಿತುಕೊಳ್ಳುವವರು, ಹೆಚ್ಚಿನ ಅವಧಾನ ವ್ಯಾಪ್ತಿಯುಳ್ಳವರು, ಆಳವಾದ ಸ್ಮರಣೆಯುಳ್ಳವರು, ಯಾವಾಗಲೂ ಸಕ್ರಿಯವಾಗಿರುವವರು, ಕುತೂಹಲಿಗಳು ಮತ್ತು ಅನುಕರಣೆಯಲ್ಲಿ, ಬೇರೆಯವರ ಮಾದರಿಯನ್ನು ಅನುಸರಿಸುವುದರಲ್ಲಿ ಆಸಕ್ತಿಯುಳ್ಳವರೂ ಆಗಿರುತ್ತಾರೆ.

ಮಕ್ಕಳನ್ನು ಪ್ರಚೋದಿಸಿ ಅವರ ಸಾಮರ್ಥ್ಯಗಳನ್ನು ವೈವಿಧ್ಯ ರೀತಿಗಳಲ್ಲಿ ಉಪಯೋಗಿಸಿಕೊಳ್ಳಲು ಹಾಗೂ ಓದು, ಬರಹ ಮತ್ತು ಲೆಕ್ಕಾಚಾರದ ಚಟುವಟಿಕೆಗಳನ್ನು ಒಳಗೊಳ್ಳುವ ಔಪಚಾರಿಕ ಶಾಲಾ ಜೀವನದ ಮುಂದಿನ ಹಂತಕ್ಕೆ ಸಿದ್ಧರಾಗಿರುವಂತೆ ಅವರನ್ನು ಸಿದ್ಧಗೊಳಿಸಲು ಶಾಲಾಪೂರ್ವ ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಯೋಜಿಸಬೇಕಾದ ಅಗತ್ಯವಿದೆ. ಮಕ್ಕಳು ಕೆಲಸ ಮಾಡಲು, ವಿಶ್ರಾಂತಿ ಪಡೆಯಲು, ಆಟವಾಡಲು, ಯೋಚಿಸಲು, ತಮ್ಮ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ತಮ್ಮ ಕಲಿಕೆಯನ್ನು ಆನಂದಿಸಲು ಸಹಾಯ ಮಾಡುವಾಗ ಮಕ್ಕಳ ಸಾಮರ್ಥ್ಯಗಳನ್ನು /ಪ್ರತಿಭೆಗಳನ್ನು ಗರಿಷ್ಠ ಮಟ್ಟದಲ್ಲಿ ಉಪಯೋಗಿಸಿಕೊಳ್ಳಬೇಕು.

**ಶಾಲಾ ಸಿದ್ಧತೆ ಎಂದರೇನು?**

**ಶಾಲಾ ಸಿದ್ಧತೆ ಚಟುವಟಿಕೆಗಳ ಸಂಘಟನೆಗೆ ಇರುವ ತತ್ವಾಧಾರಗಳು ಹೀಗಿವೆ:**

- ಶಾಲಾಪೂರ್ವ ಹಂತದಿಂದ ಪ್ರಾಥಮಿಕ ಶಾಲೆಗೆ ಮಕ್ಕಳನ್ನು ಸುಲಲಿತವಾಗಿ ಸ್ಥಿತ್ಯಂತರಗೊಳ್ಳಲು ಸಮರ್ಥರನ್ನಾಗಿಸುವುದು.
- ಕಲಿಕೆ ಮಕ್ಕಳಿಗೆ ಹೊರೆಯಾಗುವುದನ್ನು ಮತ್ತು ಒತ್ತಡ ತರುವುದನ್ನು ತಪ್ಪಿಸುವುದು.
- ಕ್ರೀಡಾ ಚಟುವಟಿಕೆಗಳ ಮೂಲಕ ಬೋಧಿಸಿ ಕಲಿಕೆಯನ್ನು ಸಂತೋಷಪೂರ್ಣ ಅನುಭವವಾಗಿಸುವುದು.
- ಶಾಲಾಪೂರ್ವ ಶಿಕ್ಷಣವನ್ನು ಶಿಶುಪರವಾಗಿ ಶಿಶುಸ್ನೇಹಿಯಾಗಿ ಮತ್ತು ಶಿಶುವಿನ ಬಗ್ಗೆ ನಿರ್ದೇಶಿತವಾದುದನ್ನಾಗಿ ಮಾಡುವುದು.
- ಕಲಿಕೆಯನ್ನು ಸ್ವಾಭಾವಿಕವಾದುದನ್ನಾಗಿ ಮತ್ತು ಅರ್ಥಪೂರ್ಣ ಪ್ರಕ್ರಿಯೆಯನ್ನಾಗಿ ಮಾಡುವುದು.
- ಮಕ್ಕಳು ತಮ್ಮ ಬಾಲ್ಯಾವಸ್ಥೆಯ ಅವಧಿಯಲ್ಲಿ ಸಂತೋಷದಿಂದ ಜೀವಿಸಲು ಸಹಾಯ ಮಾಡುವುದು.
- ಅಂತಿಮವಾಗಿ ಮಕ್ಕಳನ್ನು ಆರೋಗ್ಯಕರ ವಿಕಾಸದ ಗುರಿಯತ್ತ ಕೊಂಡೊಯ್ಯುವುದು.

**ಶಾಲಾ ಸಿದ್ಧತೆಯ ಚಟುವಟಿಕೆಗಳು:**

ಶಾಲಾ ಸಿದ್ಧತೆ ಚಟುವಟಿಕೆಗಳು (i) ಕೇಳುವಿಕೆ (ಶ್ರವಣ), (ii) ಮಾತನಾಡುವಿಕೆ (iii) ಓದುವಿಕೆ (iv) ಬರೆಯುವಿಕೆ (v) ಅಂಕಿಗಳ ಕಾರ್ಯಗಳು (vi) ಮತ್ತು ಇತರ ಸಂಜ್ಞಾನಾತ್ಮಕ ಮತ್ತು ಪರಿಕಲ್ಪನಾತ್ಮಕ ಕೌಶಲಗಳ ಸಾಮರ್ಥ್ಯಗಳನ್ನು ಹೆಚ್ಚಿಸುವಂಥ ಚಟುವಟಿಕೆಗಳನ್ನು ಒಳಗೊಳ್ಳುತ್ತವೆ.

ಇವುಗಳಲ್ಲಿ ಇಂದಿನ ಸಂದರ್ಭದಲ್ಲಿ ಭಾಷೆಗೆ ಸಂಬಂಧಿಸಿದ ಅಂಶಗಳು (ಶ್ರವಣ, ಮಾತನಾಡುವಿಕೆ ಓದುವಿಕೆ ಬರೆಯುವಿಕೆ) ಸಿದ್ಧತೆಯ ಇತರ ಅಂಶಗಳಿಗೆ ಹೋಲಿಸಿದಂತೆ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿವೆ. ಇವುಗಳನ್ನು ಇತರ ಕೌಶಲಗಳಿಗೆ ಪೂರ್ವಾವಶ್ಯಕವಾದುವುಗಳೆಂದು ಪರಿಗಣಿಸಲಾಗಿದೆ. ಸಾಕ್ಷರತೆಯ ಮಾರ್ಗದಲ್ಲಿ ಈ ಸರಳ, ಸ್ವಾಭಾವಿಕ ಆರಂಭದ ಮಹತ್ವವನ್ನು ಒತ್ತಿ ಹೇಳಬೇಕಾಗಿಲ್ಲ. ಜನನದಿಂದ ಶಾಲಾಪೂರ್ವ ಹಂತದವರೆಗೂ ಮಗುವಿನ ಅನೇಕ ಚಟುವಟಿಕೆಗಳಿಗೆ ಮತ್ತು ಅನುಭವಳಿಗೆ ಭಾಷೆ ಆಧಾರವಾಗಿರುತ್ತದೆ. ಬೇರೆಯವರೊಡನೆ ಸಂಭಾಷಣೆ ಮಾಡಲು ಸ್ನೇಹಿತರೊಡನೆ ಸ್ನೇಹ ಬಾಂಧವ್ಯ ಬೆಳೆಸಿಕೊಳ್ಳಲು, ಕೇಳುವಿಕೆ ಮತ್ತು ಮಾತನಾಡುವಿಕೆ ಪೂರ್ವಾವಶ್ಯಕಗಳಾಗುತ್ತವೆ. ಹೊಸ ಮಾಹಿತಿಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಬೇರೆಯವರೊಡನೆ ಗ್ರಹಿಕೆಗಳನ್ನು ಮತ್ತು ಸ್ವಂತ ವಿಚಾರಗಳನ್ನು ಹಂಚಿಕೊಳ್ಳಲು ಓದು ಮತ್ತು ಬರಹ ಮೂಲಭೂತ ಸಾಧನಗಳಾಗುತ್ತವೆ.

ಮಕ್ಕಳು ಭಾಷೆಯ ಬಗ್ಗೆ ಯಾವ ಭಾವನೆಯನ್ನು ಹೊಂದಿರುತ್ತಾರೆ, ಎಷ್ಟು ಚೆನ್ನಾಗಿ ಭಾಷೆಯನ್ನು ಉಪಯೋಗಿಸುತ್ತಾರೆ, ಬರವಣಿಗೆ, ಮಾತನಾಡುವಿಕೆ ಮತ್ತು ಅಂಕಿಗಳನ್ನು ಉಪಯೋಗಿಸುವಿಕೆ, ಬೇರೆಯವರ ವಿಚಾರಗಳನ್ನು ಹಾಗೂ ಬೇರೆಯವರು ಅಭಿವ್ಯಕ್ತಿಗೊಳಿಸಿದ ಸಂವೇಗಗಳನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆ ಎನ್ನುವ ಅಂಶಗಳು ಬಹಳಷ್ಟು ಸಲ ಶಾಲೆಯಲ್ಲಿ ಸಾಮಾಜಿಕ

Digitised by Bharatavani, CIIL

ಸಂಬಂಧಗಳಲ್ಲಿ ಮತ್ತು ಜೀವನದಲ್ಲಿ ಸಫಲರಾಗುತ್ತಾರೆ ಎಂಬುದನ್ನು ಪೂರ್ವಾನುಮಾನ ಮಾಡಬಹುದಾದ ಅಂಶಗಳಾಗುತ್ತವೆ.

ಭಾಷೆ ಮಗುವಿನ ವಿಕಾಸದ ಎಲ್ಲಾ ಕ್ಷೇತ್ರಗಳಲ್ಲಿಯೂ ಬೆಳವಣಿಗೆಯನ್ನು ಪೋಷಿಸುವ ಅದ್ಭುತ ಸಾಮರ್ಥ್ಯ ಹೊಂದಿದೆ. ಮಗುವಿನ ಮೌಖಿಕ ಮತ್ತು ಬರವಣಿಗೆಯ ಭಾಷೆ ಅಭಿವೃದ್ಧಿ ಹೊಂದಿದಂತೆಲ್ಲಾ ಅದು ಮಗುವಿನ ದೈಹಿಕ ಸಾಮಾಜಿಕ ಸಂವೇಗಾತ್ಮಕ ಮತ್ತು ಸಂಜ್ಞಾನಾತ್ಮಕ ವಿಕಾಸವನ್ನು ವರ್ಧಿಸುತ್ತದೆ.

**ದೈಹಿಕವಾಗಿ:**

ವಿನ್ಯಾಸಗಳನ್ನು, ಚಿತ್ರಗಳನ್ನು ವೃತ್ತಗಳನ್ನು ಮತ್ತು ಕಚ್ಚಾ ಅಕ್ಷರಗಳ್ನನೂ ಬರೆಯುವುದರಿಂದ (ಗೀಚುವುದರಿಂದ) ಮಗುವಿನ ಸೂಕ್ಷ್ಮ ಗತ್ಯಾತ್ಮಕ ಕೌಶಲಗಳು ಅಭಿವೃದ್ಧಿ ಹೊಂದಿ ಮಗು ಬರಹದ ಅಕ್ಷರಗಳನ್ನು ಕಲಿತುಕೊಳ್ಳುತ್ತದೆ. ಸೂಕ್ಷ್ಮ ಗತ್ಯಾತ್ಮಕ ಕೌಶಲಗಳ ವಿಕಾಸಗೊಂಡಂತೆ ಆಸಕ್ತಿ ಇರುವ ಓದುಗರು ಪುಸ್ತಕದ ಹಾಳೆಗಳನ್ನು ಮಗಚಲು ಶಕ್ತರಾಗುತ್ತಾರೆ. ಸ್ಥೂಲ ಗತ್ಯಾತ್ಮಕ ಕೌಶಲಗಳು ಕಥೆಗಳ ಪಾತ್ರಗಳನ್ನು ಅಭಿನಂದಿಸುವ ನಾಟಕ ಕ್ರೀಡೆಯಲ್ಲಿ ಭಾಗವಹಿಸಲು ಅಭಿನಯದಿಂದ ಹಾಡುಗಳನ್ನು ಹಾಡಲು ಮತ್ತು ಸಂಗೀತ ಹಾಗೂ ಚಲನೆಯ ಕ್ರೀಡೆಗಳಲ್ಲಿ ಭಾಗವಹಿಸಲು ಸಹಾಯ ಮಾಡುತ್ತವೆ.

**ಸಂಜ್ಞಾನಾತ್ಮಕವಾಗಿ:**

ಚಿತ್ರಗಳನ್ನು ಗೀಚುವಾಗ ಅಥವಾ ಬರೆಯುವಾಗ ಮತ್ತು ತಮ್ಮ ಕಲಾಕಾರ್ಯವನ್ನು ವರ್ಣಿಸುವಾಗ ಸಂಜ್ಞಾನಾತ್ಮಕವಾಗಿ ಕಲಿತುಕೊಳ್ಳುತ್ತಾರೆ. ಮಕ್ಕಳು ಭಾಷೆಯನ್ನು ಉಪಯೋಗಿಸಿ ಸಮಸ್ಯೆಗಳನ್ನು ಬಿಡಿಸುತ್ತಾರೆ, ಪ್ರಶ್ನೆಗಳನ್ನು ಕೇಳುತ್ತಾರೆ. ಮತ್ತು ವಿಚಾರಗಳನ್ನು ಹಂಚಿಕೊಳ್ಳುತ್ತಾರೆ ಕಥೆಗಳನ್ನು ಓದುವುದು, ಪ್ರಾಸಗಳನ್ನು ಅಥವಾ ಪುನರಾವೃತ್ತಿಗೊಳ್ಳುವ ಪದಪುಂಜಗಳನ್ನು ಕಲಿತುಕೊಳ್ಳತೊಡಗಿದಾಗ ಮುಂದೆ ಏನಾಗುತ್ತದೆ ಎನ್ನುವುದನ್ನು ನಿರೀಕ್ಷಿಸಲು ಸಹಾಯಕವಾಗುತ್ತದೆ.

ಬಹಳ ಚಿಕ್ಕಮಕ್ಕಳು ವಸ್ತುಗಳನ್ನು ಏನು ಎಂದು ತಿಳಿದುಕೊಳ್ಳಲು ಅವುಗಳನ್ನು ತೋರಿಸುತ್ತಾರೆ ಮತ್ತು ಸನ್ನೆಮಾಡುತ್ತಾರೆ. ವಸ್ತುಗಳನ್ನು ವರ್ಗೀಕರಿಸಲು, ಬೇರೆಬೇರೆ ಮಾಡಲು, ತುಲನೆ ಮಾಡಲು ಮಕ್ಕಳು ಇಷ್ಟಪಡುತ್ತಾರೆ. ಹಾಗೆಯೇ ಯಾವ ವಸ್ತುಗಳು ಒಟ್ಟಿಗಿರುತ್ತವೆ ಮತ್ತು ಏಕೆ ಎಂದು ಹೇಳುವ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ. ಭಾಷೆ ಮಕ್ಕಳ ಸಂಜ್ಞಾನಾತ್ಮಕ ಪ್ರಪಂಚದ ಸತತ ಸಹಾಯಕ ಮತ್ತು ಅರ್ಥಪೂರ್ಣ ಭಾಗವಾಗುತ್ತವೆ.

**ಸಾಮಾಜಿಕವಾಗಿ:**

ಭಾಷೆ ಮಕ್ಕಳು ಪಿಸುಗುಟ್ಟಲು, ಅಭಿನಯ ಕ್ರೀಡೆಗಳಲ್ಲಿ ಕಲ್ಪನಾತ್ಮಕ ಪಾತ್ರಗಳಿಗೆ ಧ್ವನಿ (ಮಾತು) ಕೊಡಲು ಸಹಾಯ ಮಾಡುತ್ತದೆ ಮತ್ತು ಕಿಂಡರ್ ಕಾರ್ಟನ್ ಮಕ್ಕಳನ್ನು ದೀರ್ಘ ಮಾತುಕತೆಯಲ್ಲಿ ಪಾಲ್ಗೊಳ್ಳಲು ಸಮರ್ಥರನ್ನಾಗಿಸುತ್ತದೆ. ಭಾಷಾ ಕೌಶಲ್ಯಗಳು ಹೆಚ್ಚಿದಂತೆಲ್ಲಾ ತಮ್ಮ ಸಹಕಾರಾತ್ಮಕ ಆಟಗಳಲ್ಲಿ ಉಂಟಾಗುವ ಸಂಘರ್ಷಗಳನ್ನು ನಿವಾರಿಸಿಕೊಳ್ಳಲು ಮಕ್ಕಳು ಶಕ್ತರಾಗುತ್ತಾರೆ.

**ಸಂವೇಗಾತ್ಮಕವಾಗಿ:**

ಮಕ್ಕಳು ತಮ್ಮ ಹೆದರಿಕೆ, ಸಂತೋಷ ಪ್ರೀತಿ ಮುಂತಾದ ಭಾವಗಳನ್ನು ವ್ಯಕ್ತಪಡಿಸಲು ಭಾಷೆಯನ್ನು ಉಪಯೋಗಿಸುತ್ತಾರೆ. ನಾಟಕೀಯ ಕ್ರೀಡೆಯ ಮೂಲಕ ಯಾವುದೋ ಪುಸ್ತಕದ ಪಾತ್ರವನ್ನಾಗಲಿ ಅಥವಾ ಕಲ್ಪನೆಯ ಪಾತ್ರವನ್ನಾಗಲಿ ನಟಿಸುವಾಗ ತಮ್ಮ ಭಾವ (ಸಂವೇಗ)ಗಳನ್ನು ಅಭಿವ್ಯಕ್ತಿಗೊಳಿಸಲು ಭಾಷೆ ಸಹಾಯಕವಾಗುತ್ತದೆ.

**ಭಾಷಾ ವಿಕಾಸದ ಅಂಗಗಳು:**

ಭಾಷೆಯು ಕೇಳುವಿಕೆ (ಶ್ರವಣ), ಮಾತನಾಡುವಿಕೆ, ಬರೆಯುವಿಕೆ ಮತ್ತು ಓದುವಿಕೆ ಎಂಬ ನಾಲ್ಕು ಮುಖ್ಯ ಕಾರ್ಯಗಳನ್ನು ಹೊಂದಿದೆ. ಕೇಳುವಿಕೆ ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆ ಮಗುವಿನ ದೈಹಿಕ ಚಲನೆಗಳ ಭಾಗವೇ ಆಗಿರುತ್ತವೆ.

**ಕೇಳುವಿಕೆ (ಶ್ರವಣ):**

ಜೀವನದ ಮೊದಲನೇ ತಿಂಗಳಿನಿಂದಲೇ ಶಿಶುಗಳು ತಮ್ಮ ಸಂರಕ್ಷಕರ ಧ್ವನಿಗಳನ್ನು ಕೇಳುವುದನ್ನು ಕಲಿತುಕೊಳ್ಳುತ್ತವೆ ಮತ್ತು ಆ ಧ್ವನಿಗಳಿಂದ ಸೂಚನೆ ಪಡೆದುಕೊಳ್ಳುತ್ತವೆ. ನಂತರ ಪೂರ್ವ ಬಾಲ್ಯಾವಸ್ಥೆಯಲ್ಲಿ ಮತ್ತು ಶಾಲಾ–ಪೂರ್ವ ಅವಧಿಯಲ್ಲಿ ಮಕ್ಕಳು ಮಾಹಿತಿಯನ್ನು ಪಡೆಯಲು ಮತ್ತು ಆನಂದಿಸುವುದಕ್ಕಾಗಿ ಶ್ರವಣ ಕೌಶಲಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

ಕೇಳುವುದರಲ್ಲಿ ಅನೇಕ ಮಾರ್ಗಗಳಿವೆ. ಮಕ್ಕಳು ತಮ್ಮ ಚಟುವಟಿಕೆಗಳಲ್ಲಿ ತೊಡಗುವಾಗ ಬೇರೆಯವರ ಧ್ವನಿಗಳನ್ನು, ಕೋರಿಕೆಗಳನ್ನು ಕೇಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ. ಮಾಹಿತಿಗಳನ್ನು ಕೇಳಲು, ಸಂತೋಷಪಡೆಯಲು ಮತ್ತು ತಾವು ಕೇಳುವ ಧ್ವನಿಗಳನ್ನು ವಿಶ್ಲೇಷಿಸಲು ಮಕ್ಕಳು ಕೇಳುವಿಕೆ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ.

**ಮಾತನಾಡುವಿಕೆ:**

ಹುಟ್ಟಿನಿಂದಲೂ ಮಕ್ಕಳು ಧ್ವನಿಗಳನ್ನು ಉತ್ಪಾದಿಸಲು, ನಂತರ ಯಾದೃಚ್ಛಿಕವಾಗಿ ಶಬ್ದಗಳನ್ನುಉಚ್ಚರಿಸಲು ತೊಡಗುತ್ತಾರೆ. ಒಂದು ಅಥವಾ ಎರಡು ವರ್ಷದಿಂದ ಮಕ್ಕಳು ಅನೇಕ ವೇಳೆ ಒಂದು ಶಬ್ದದ ವಾಕ್ಯವನ್ನು, ಆದೇಶಗಳನ್ನು ಮಾತನಾಡುತ್ತಾರೆ. ಎರಡು ಅಥವಾ ಮೂರು ವರ್ಷಗಳಿಂದ ಮಕ್ಕಳು ಸಾಮಾನ್ಯವಾಗಿ ಎರಡು–ಮೂರು ಪದಪುಂಜಗಳನ್ನು ಮಾತನಾಡುತ್ತಾರೆ. ಮೂರು ವರ್ಷದ ನಂತರ ಬಹಳ ಮಕ್ಕಳು ಪೂರ್ಣ ಭಾಷಾ ವಿನ್ಯಾಸವನ್ನು ಬೆಳೆಸಿಕೊಳ್ಳುತ್ತಾರೆ. ಮಾತನಾಡುವ ಕೌಶಲವನ್ನು ಬೆಳೆಸಿಕೊಂಡ ನಂತರ ಯಾವ ಭಾಷೆಯನ್ನು ಯಾವ ಸಂದರ್ಭಗಳಲ್ಲಿ ಹೇಗೆ ಉಪಯೋಗಿಸಬೇಕು ಎನ್ನುವುದರ ಅಲಿಖಿತ ನಿಯಮಗಳನ್ನು

Digitised by Bharatavani, CIIL

ಕಲಿತುಕೊಳ್ಳುತ್ತಾರೆ ಹಾಗೆಯೇ ಹೆಚ್ಚು ಹೆಚ್ಚು ಶಬ್ದಗಳನ್ನು ಮತ್ತು ಹೆಸರುಗಳನ್ನು ಹೇಳುವುದನ್ನು ಅಭ್ಯಾಸಮಾಡಿಕೊಳ್ಳುತ್ತಾರೆ.

**ಓದುವಿಕೆ:**

ಓದುಗಾರಿಕೆ ಒಂದು ಹೊಸ ಪ್ರಪಂಚವನ್ನೇ ಮಕ್ಕಳು ಪ್ರವೇಶಿಸುವಂತೆ ಮಾಡುತ್ತದೆ ಯಾವ ಮಗುವೂ ಓದುವ ಕ್ರಿಯೆಗೆ ಯಾವಾಗಲೂ ಚಿಕ್ಕವನಾಗಿ/ಳಾಗಿ ಇರುವುದಿಲ್ಲ. ಮಕ್ಕಳು ಆದಷ್ಟು ಬೇಗ ಓದುವುದನ್ನು ಕಲಿತುಕೊಳ್ಳುತ್ತಾರೆ. ಮಕ್ಕಳು ಓದುವುದಕ್ಕೆ ಸಿದ್ಧರಾದಂತೆ ಹಾಳೆಗಳ ಮೇಲೆ ಬರೆದಿರುವ ಗುರುತು (ಚಿಹ್ನೆ) ಗಳು ವಿಶೇಷ ಅರ್ಥ ಹೊಂದಿವೆ ಎಂದು ಅರ್ಥ ಮಾಡಿಕೊಳ್ಳತೊಡಗುತ್ತಾರೆ. ಮುದ್ರಿತ ಸಾಮಗ್ರಿ ಸಮೃದ್ಧವಾಗಿರುವ ಪರಿಸರದಲ್ಲಿ ಈ ಗುರುತುಗಳು ವಿಶೇಷ ಧ್ವನಿಗಳನ್ನು ಹೊಂದಿರುವ ಅಕ್ಷರಗಳು ಎಂದು ಗುರ್ತಿಸುತ್ತಾರೆ. ಕೊನೆಗೆ ಮಗು ತಾನೇ ಅಕ್ಷರಗಳನ್ನು ಬರೆಯಲು ತೊಡಗುತ್ತದೆ. ಅವುಗಳನ್ನು ಓದುತ್ತದೆ ಮತ್ತು ಪುಸ್ತಕಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಶಬ್ದಗಳನ್ನು ಗುರ್ತಿಸಲು ಮತ್ತು ಓದಲು ಮುಂದುವರಿಯುತ್ತದೆ.

**ಬರೆಯುವಿಕೆ:**

ಕಾಗದದ ಮೇಲೆ ನಿರ್ದಿಷ್ಟ ಗುರುತುಗಳನ್ನು (ಅಕ್ಷರಗಳನ್ನು) ಮಾಡಿ ಮಕ್ಕಳು ತಮ್ಮ ಭಾವಗಳನ್ನು ಮತ್ತು ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಪ್ರಕ್ರಿಯೆಯೇ ಬರೆಯುವಿಕೆ. 15 ತಿಂಗಳು ವಯಸ್ಸಿನಲ್ಲಿ ಬಹಳಷ್ಟು ಮಕ್ಕಳು ಕಾಗದದ ಮೇಲೆ ಅಥವಾ ಯಾವುದಾದರೂ ಮೇಲ್ಮೈ ಮೇಲೆ ಮನಸ್ಸಿಗೆ ಬಂದಂತೆ ಗೀಚುವುದರಲ್ಲಿ ಆಸಕ್ತಿ ತೋರಿಸುತ್ತಾರೆ. ಶಾಲಾಪೂರ್ವ ವಯಸ್ಸಿಗೆ ಬರುವ ವೇಳೆಗೆ ಮಕ್ಕಳ ಗೀಚುವ ಪ್ರಕ್ರಿಯೆ ಹೆಚ್ಚು ನಿಯಂತ್ರಿತವಾಗುತ್ತದೆ ಮತ್ತು ಅವರಿಂದ ಪ್ರಯತ್ನಪೂರ್ವವಾದ ರೇಖಾಚಿತ್ರಗಳು ಮತ್ತು ವಿನ್ಯಾಸಗಳು ಹೊರಹೊಮ್ಮುತ್ತವೆ. ಕ್ರಮೇಣ, ಮಕ್ಕಳು ಅಕ್ಷರದಂತೆ ಕಾಣುವ ಆಕೃತಿಗಳನ್ನು ಬರೆಯಲು ಪ್ರಯತ್ನಿಸುತ್ತಾರೆ. ಮತ್ತು ಕಿಂಡರ್ ಗಾರ್ಟನ್ ಹಂತಕ್ಕೆ ಬರುವ ಹೊತ್ತಿಗೆ ಬಹಳಷ್ಟು ಮಕ್ಕಳು ಅಕ್ಷರಗಳನ್ನು ಸ್ಥೂಲ ರೂಪದಲ್ಲಿ ಬರೆಯಲು ಆರಂಭಿಸುತ್ತಾರೆ.

ಶಾಲಾಪೂರ್ವ ಮಕ್ಕಳೊಂದಿಗೆ ಪಡೆದಿರುವ ಕಾರ್ಯಾನುಭವದಿಂದ ಮಕ್ಕಳು ಸೂಕ್ತ ವಯಸ್ಸಿನ ಮಟ್ಟಗಳಲ್ಲಿ ನಿರ್ದಿಷ್ಟ ಸಂವಹನ ಕೌಶಲಗಳನ್ನು ಕಲಿತುಕೊಳ್ಳಲು ಸಿದ್ಧರಾಗುತ್ತಾರೆ ಎಂಬುದು ತಿಳಿದು ಬಂದಿದೆ. 3 ವರ್ಷಗಳವರೆಗೆ ಮಕ್ಕಳು ಕೇಳುವುದನ್ನು ಮತ್ತು ಮಾತನಾಡುವುದನ್ನು ಕಲಿಯುತ್ತಾರೆ. 4ನೇ ವರ್ಷದಲ್ಲಿ ಓದಲು ಆರಂಭಿಸುತ್ತಾರೆ ಮತ್ತು 5ನೇ ವರ್ಷದಲ್ಲಿ ಬರವಣಿಗೆ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾರೆ. ಈ ಸೂಕ್ತ ವಯೋಮಾನಗಳಿಗೆ ಮುಂಚೆಯೆ ಈ ಕೌಶಲಗಳನ್ನು ಕಲಿಯಲು ಪ್ರಯತ್ನಿಸಿದರೆ ಆ ಕೌಶಲಗಳನ್ನು ಕಲಿಯಲು ಮಕ್ಕಳು ಅಗತ್ಯಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ.

**ಶಾಲಾಪೂರ್ವ ಸಂಸ್ಥೆಯಲ್ಲಿ ಶಾಲಾ ಸಿದ್ಧತಾ ಚಟುವಟಿಕೆಗಳು : ಕೇಳುವಿಕೆಯ ಸಿದ್ಧತೆ:**

ತಮ್ಮ ಸುತ್ತ ಉಂಟಾಗುವ ಸಂವಹನಾತ್ಮಕ ಅಭಿವ್ಯಕ್ತಿಗಳನ್ನು ಕೇವಲ ಕೇಳುವುದರಿಂದ ಬೇರೆಯವರ ಸಂವಹನಾತ್ಮಕ ಅಭಿವ್ಯಕ್ತಿಗಳನ್ನು ಉದ್ದೇಶಪೂರ್ವಕವಾಗಿ ಕೇಳಿ ಅವುಗಳನ್ನು ಅರ್ಥಮಾಡಿಕೊಳ್ಳುವುದರತ್ತ ಮುಂದುವರಿಯುವುದೇ ಕೇಳುವಿಕೆಯ ಸಿದ್ಧತೆ.

ಮಾಹಿತಿ ಪಡೆದುಕೊಳ್ಳಲು, ಭೌತಿಕ ಪ್ರಚೋದನೆಗಳಿಗೆ ಪ್ರತಿಕ್ರಿಯೆ ತೋರಿಸಲು, ಸೂಚನೆಗಳನ್ನು ಅನುಸರಿಸುವುದನ್ನು ಕಲಿಯಲು, ಚಟುವಟಿಕೆಗಳಲ್ಲಿ ತೊಡಗಲು, ಕಥೆಗಳನ್ನು ಪ್ರಾಸಗೀತೆಗಳನ್ನು ಕೇಳುವಂಥ ಭಾಷಾಚಟುವಟಿಕೆಗಳನ್ನು ಆನಂದಿಸಲು, ತಮ್ಮ ಭಾಷಾ ವಾಕ್ಯರಚನೆಯನ್ನು ಉತ್ತಮಪಡಿಸಿಕೊಳ್ಳಲು ಮತ್ತು ಪದಗಳ ಸರಿಯಾದ ಉಚ್ಚಾರಣೆ ಮತ್ತು ಧ್ವನಿಯ ಏರಿಳಿತವನ್ನು ಅನುಕರಣೆ ಮಾಡಿ ಕಲಿತುಕೊಳ್ಳಲು ಪ್ರಶಂಸಾಪೂರ್ವಕವಾಗಿ ಮತ್ತು ವಿಮರ್ಶಾತ್ಮಕವಾಗಿ ಕೇಳಿಸಿಕೊಳ್ಳಲು, ಈ ಹಿಂದೆ ಕೇಳಿದ್ದ ಮಾಹಿತಿಗಳನ್ನು ಪುನಃ ಸ್ಮರಣೆ ಮಾಡಿಕೊಳ್ಳಲು ಮತ್ತು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡುವುದೇ ಕೇಳುವಿಕೆ ಸಿದ್ಧತಾ ಚಟುವಟಿಕೆಗಳ ಉದ್ದೇಶ.

**ಶ್ರವಣ (ಕೇಳುವಿಕೆ) ಕೌಶಲಗಳನ್ನು ವಿಕಾಸಗೊಳಿಸಲು ಮಕ್ಕಳಿಗೆ ಸಹಾಯ ಮಾಡುವುದು:**

- ಮೊದಲಿಗೆ, ಮಕ್ಕಳಿಗೆ ವೈವಿಧ್ಯಪೂರ್ಣವಾದ ಶಬ್ದಗಳನ್ನು ಮತ್ತು ಪ್ರಾಸಗಳನ್ನು ಕೇಳಿಸಬೇಕು. ಉದಾಹರಣೆಗೆ ಡ್ರಮ್ ಬಾರಿಸುವುದು, ಗಂಟೆಗಳನ್ನು ಬಾರಿಸುವುದು, ಹಾಡುವುದು, ಮಳೆಯಲ್ಲಿ ಉಂಟಾಗುವ ಪರಿಚಿತ ಶಬ್ದಗಳು, ಹಕ್ಕಿಗಳು ಚಿಲಿಪಿಲಿಗುಟ್ಟುವಿಕೆ ಇತ್ಯಾದಿ ವೈವಿಧ್ಯಪೂರ್ಣ ಧ್ವನಿಗಳನ್ನು ಮಕ್ಕಳಿಗೆ ಕೇಳಿಸಬೇಕು.
- ಮಕ್ಕಳೊಡನೆ ಮಾತನಾಡುವಾಗ ಅರ್ಥಪೂರ್ಣ ವಾಕ್ಯಗಳಲ್ಲೇ ಮಾತನಾಡಬೇಕು. (ತೊದಲು ನುಡಿಗಳಲ್ಲಿ ಮಾತನಾಡಬೇಕಾಗಿಲ್ಲ).
- ಮಕ್ಕಳು ಕೇಳಲು ಸಹಾಯವಾಗುವಂಥ ಧ್ವನಿಯಲ್ಲಿ ಮಾತನಾಡಿ ನಿಧಾನವಾಗಿ, ಮೃದುವಾಗಿ ಮಾತನಾಡಲು ಪ್ರಯತ್ನಿಸಿ, ಸರಳವಾದ ವಿವರಣೆಗಳನ್ನು ಸೂಚನೆಗಳನ್ನು ಕೊಡಬೇಕು. ಮಕ್ಕಳ ಪೂರ್ಣ ಗಮನಪಡೆಯಲು ಅವರ ಹೆಸರುಗಳನ್ನು ಉಪಯೋಗಿಸಿ ಸಂಬೋಧಿಸಿ.
- ಮಕ್ಕಳಿಗೆ ಕಥೆಗಳನ್ನು ಹೇಳಿ, ಪ್ರಾಸಗಳನ್ನು ಕಲಿಸಿ ಅರ್ಥಪೂರ್ಣ ರೀತಿಯಲ್ಲಿ ಸಂಭಾಷಣೆ ಮಾಡಿ, ಏಕರೀತಿಯ ಪುನರಾವರ್ತಿತ ಶಬ್ದಗಳನ್ನು ವಾಕ್ಯಗಳನ್ನು ಬಿಡಿ.
- ಕಲಿತ ಶಬ್ದಗಳನ್ನು ರೋಚಕ ರೀತಿಯಲ್ಲಿ ಪುನರಾವರ್ತಿಸಿ ಮತ್ತು ಹೊಸ ಶಬ್ದಗಳನ್ನು ಪರಿಚಯಿಸುತ್ತಾ ಮಕ್ಕಳ ಶಬ್ದ ಭಂಡಾರದ ವ್ಯಾಪ್ತಿಯನ್ನು ವಿಸ್ತರಿಸಿ.
- 'ಇಡೀ ತರಗತಿಗೆ ಬೋಧನೆ' ಮಾಡುವುದಕ್ಕಿಂತ ಮಕ್ಕಳ ಸಣ್ಣಸಣ್ಣ

Digitised by Bharatavani, CIIL

ಗುಂಪುಗಳೊಂದಿಗೆ ಕೆಲಸ ಮಾಡಿ ಮಕ್ಕಳು ಒಬ್ಬರಿಗೊಬ್ಬರು ಕಲಿಯುತ್ತಾರೆ. ಆದ್ದರಿಂದ ತಮ್ಮ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳಲು ಅವರಿಗೆ ಅವಕಾಶ ಕೊಡಿ.

- ಉತ್ತಮ ಶ್ರವಣ ಕೌಶಲಗಳನ್ನು ಮಾದರಿಯಾಗಿ ತೋರಿಸಿ/ಕೇಳಿಸಿ. ಮಕ್ಕಳು ಮಾತನಾಡುವಾಗ ಅವರಿಗೆ ನಿಮ್ಮ ಪೂರ್ಣ ಗಮನಕೊಡಿ. ಅವರ ದೃಷ್ಟಿಯೊಂದಿಗೆ ಸಂಪರ್ಕಿಸಲು ಬಗ್ಗಿ ಮಾತನಾಡಿ, ನೀವು ಕೇಳುತ್ತಿದ್ದಿರಿ ಎನ್ನುವುದನ್ನು ಪುನರ್ಬಲನಗೊಳಿಸಲು ನಗೆ ಅಥವಾ ತಲೆಯಲ್ಲಾಡಿಸಿ ಶಾಂತವಾಗಿರಿ.

- ಶಬ್ದಗಳನ್ನು ಮತ್ತು ಕ್ರಿಯೆಗಳನ್ನು ಜೋಡಿಸಿ ಮಕ್ಕಳು ನೀವು ಏನು ಮಾಡುತ್ತಿದ್ದೀರೆಂದು ನೋಡಿ, ತಿಳಿದುಕೊಳ್ಳಲು ನೀವು ಮಾಡುತ್ತಿರುವುದರ ಬಗ್ಗೆ ಮಾತನಾಡುತ್ತಿರಿ. ಉದಾಹರಣೆಗೆ ನೀವು ಕ್ಯಾರೆಟ್ ಅನ್ನು ಕತ್ತರಿಸುತ್ತಿರುವಾಗ ನಿಮ್ಮ ಕ್ರಿಯೆಯನ್ನು ವಿವರಿಸಿ ಉದಾ : "ನಾನು ಸಲಾಡ್ ಮಾಡಲು ಕ್ಯಾರೆಟ್ ಕತ್ತರಿಸುತ್ತಿದ್ದೇನೆ"

- ಶಬ್ದದ ಬಗ್ಗೆ ಅರಿವು ಮೂಡಿಸಲು ಶ್ರವಣ ಕ್ರೀಡೆಗಳ ಕ್ಯಾಸೆಟ್/ಸಿಡಿಗಳನ್ನು ಕೇಳಿಸಿ ಪರಿಸರದಲ್ಲಿನ ಧ್ವನಿಗಳನ್ನು ಕೇಳುವಂತೆ ಊಹಿಸುವಂತೆ ಪಕ್ಷಿಗಳ, ವಾಹನಗಳ, ನೀರು ತೊಟ್ಟಿಕ್ಕುವಿಕೆ ಇತ್ಯಾದಿಗಳ ಶಬ್ದಗಳನ್ನು ಅನುಕರಣೆ ಮಾಡಿಸಿ ಕೇಳುವಿಕೆಯ ಚಟುವಟಿಕೆಗಳು ಸಂಕ್ಷಿಪ್ತವಾಗಿರಲಿ. ಮಕ್ಕಳು ಆಸಕ್ತಿ ಕಳೆದುಕೊಳ್ಳುವುದಕ್ಕೆ ಮುಂಚೆ ಅವುಗಳನ್ನು ನಿಲ್ಲಿಸಿ.

- ಮಕ್ಕಳ ಪ್ರಾಸಗಳನ್ನು, ಉಚ್ಚಾರಣೆಗಳನ್ನು ಗೀತೆಗಳನ್ನು ಮತ್ತು ಕೈಚಳಕದ ಆಟಗಳನ್ನು ಕೇಳಿ ಪ್ರತಿದಿನವೂ ಅವರೊಡನೆ ಕಥೆಗಳನ್ನು ಓದಿ ಮಕ್ಕಳು ಸಂತೋಷಪಡುವ ಚಟುವಟಿಕೆಗಳು ಕೇಳುವ ಆಸೆಗೆ ಪ್ರೇರಣೆ ನೀಡುತ್ತವೆ. ರೋಚಕ ಕಥೆಗಳು ಪದ್ಯಗಳು ಮತ್ತು ಗೀತೆಗಳು ದಿನನಿತ್ಯದ ಚಟುವಟಿಕೆಗಳ ಭಾಗವಾಗಿರಲಿ.

- ಆರಾಮದಾಯಕ ಪರಿಸರವನ್ನು ಒದಗಿಸಿ ನಿಮ್ಮ ಮನೆಯ/ತರಗತಿಯ ವಾತಾವರಣ ಸುಖಕರವಾಗಿ, ಆರಾಮದಾಯಕವಾಗಿರಲಿ. ಹಿತಕರವಾದ/ಬೆಚ್ಚನೆಯ ಸ್ಥಳದಲ್ಲಿ ಕುಳಿತು ಮೆದುವಾಗಿ ಹರಟೆ ಹೊಡೆಯುವುದು, ಕೇಳುವಿಕೆ ಬಗ್ಗೆ ಕಲಿತುಕೊಳ್ಳಲು ಒಂದು ಒಳ್ಳೆಯ ಮಾರ್ಗ.

**ಮಾತನಾಡುವಿಕೆ ಸಿದ್ಧತೆ:**

ತಮ್ಮ ಪರಿಸರದಲ್ಲಿ ಉಂಟಾಗುವ ಮಾತನಾಡುವಿಕೆ ಸಿದ್ಧತೆ ಪಡೆದಾಗ ಮಕ್ಕಳು ಧ್ವನಿಗಳ ಮತ್ತು ಪದಗಳ ಯಾವುದೇ ಉದ್ದೇಶವಿಲ್ಲದೆ ಕೇವಲ ಅನುಕರಿಸುವಿಕೆ ಬದಲಾಗಿ ಶಬ್ದ (ಪದ) ಗಳನ್ನು ಅರ್ಥಪೂರ್ಣವಾಗಿ ಉಪಯೋಗಿಸಲು ಮತ್ತು ತಮ್ಮ ಮೂಲಭೂತ ಅಗತ್ಯಗಳನ್ನು ತೃಪ್ತಿಪಡಿಸಿಕೊಳ್ಳಲು ಮತ್ತು ತಮ್ಮ ಸುತ್ತಲಿರುವ ವ್ಯಕ್ತಿಗಳೊಂದಿಗೆ ಸಂಬಂಧಗಳನ್ನು ಪೋಷಿಸಿಕೊಂಡು ತನ್ಮೂಲಕ ಆರೋಗ್ಯಕರ ಜೀವನಕ್ಕೆ ಪ್ರವೇಶಿಸುವಂತಾಗಲು, ತಮ್ಮ ಅಪೇಕ್ಷೆಗಳನ್ನು ಮತ್ತು ಭಾವಗಳನ್ನು ಶಬ್ದಗಳ ಮೂಲಕ ಅಭಿವ್ಯಕ್ತಿಗೊಳಿಸಲು ಸಿದ್ಧರಾಗುತ್ತಾರೆ. ಮಕ್ಕಳನ್ನು ತಮ್ಮ ಯೋಚನೆಗಳನ್ನು ಮತ್ತು ಭಾವಗಳನ್ನು ವ್ಯಕ್ತಗೊಳಿಸಲು ಸಿದ್ಧರನ್ನಾಗಿಸುವುದು; ಅನುಭವಗಳನ್ನು ಹಂಚಿಕೊಳ್ಳುವಂತೆ ಮಾಡುವುದು; ಅಂತರ್‌ವ್ಯಕ್ತ್ಯಾತ್ಮಕ ಅನ್ಯೋನ್ಯಕ್ರಿಯೆಯನ್ನು ಬೆಳೆಸುವುದು; ಮಾಹಿತಿಗಳನ್ನು ತಿಳಿಸುವುದು; ವಿಚಾರಗಳನ್ನು ಬೋಧಿಸುವುದು ಮತ್ತು ಬೇರೆಯವರೊಡನೆ ಸಂವಹಿಸುವಂತೆ ಮಾಡುವುದು ಮಾತನಾಡುವಿಕೆ ಸಿದ್ಧತೆಯ ಉದ್ದೇಶಗಳಾಗಿವೆ.

**ಸ್ಪಷ್ಟವಾಗಿ ಮಾತನಾಡಲು ಮಕ್ಕಳಿಗೆ ಸಹಾಯ ಮಾಡುವುದು:**

- ಒಂದು ಪೂರ್ವಾವಶ್ಯಕವಾಗಿ ಮಕ್ಕಳಿಗೆ ಶುದ್ಧವಾಗಿ ಮಾತನಾಡುವ ಭಾಷೆಯನ್ನು ಕೇಳುವ ಅವಕಾಶಗಳನ್ನು ಒದಗಿಸಿ, ಮಾತನಾಡುವಾಗ ಪೂರ್ಣ ವಾಕ್ಯಗಳಲ್ಲಿ ಮಾತನಾಡಿ ಮಕ್ಕಳಿಗೆ ಅಪರಿಚಿತ ವಸ್ತುಗಳ ಹೆಸರುಗಳನ್ನು ಹೇಳಿ ಅಥವಾ ವಿಶೇಷ ಆಸಕ್ತಿಗೆ ಸಂಬಂಧಿಸಿದ ಹೊಸ ಶಬ್ದಗಳನ್ನು ಹೇಳಿ.

- ಶಾಬ್ದಿಕ ಭಾಷೆಯನ್ನು ವಿಸ್ತರಿಸಲು ಅನುಭವಗಳನ್ನು ಒದಗಿಸಿ ಮಕ್ಕಳು ಹಿಡಿದಾಡಲು ಅನೇಕ ವಸ್ತುಗಳನ್ನು ಕೊಟ್ಟು ಅವುಗಳ ಹೆಸರನ್ನು ಹೇಳಿ, ಉಡುಪು ಧರಿಸುವುದು, ಊಟಮಾಡುವುದು ಮುಂತಾದ ದಿನನಿತ್ಯದ ಕ್ರಿಯೆಗಳನ್ನು ಮಾಡುವಾಗ ಆ ಕ್ರಿಯೆ ಮತ್ತು ಉಪಯೋಗಿಸುವ ವಸ್ತುಗಳ ಬಗ್ಗೆ ಚರ್ಚಿಸಿ ಬೆರಳು ಕ್ರೀಡೆಗಳನ್ನು, ನರ್ಸರಿ ಪ್ರಾಸಗಳನ್ನು ಮತ್ತು ಹಾಡುಗಳನ್ನು ಮಕ್ಕಳೊಂದಿಗೆ ಪುನರುಚ್ಚರಿಸಿ ಇಷ್ಟಪಡುವ ಕಥೆಗಳನ್ನು ಅಭಿನಯ ಮಾಡುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ ಮಕ್ಕಳಿಗೆ ಮಾರ್ಗದರ್ಶಿತ್ವ ಅನುಭವಗಳನ್ನು ಒದಗಿಸಿ ಅದರಿಂದ ಭಾಷೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಪರಿಪೂರ್ಣವಾಗಿ ಶಬ್ದಗಳನ್ನು ಉಚ್ಚರಿಸಲು ಅವರಿಗೆ ಸಾಧ್ಯವಾಗುತ್ತದೆ. ಉದಾಹರಣೆಗೆ, ಒಂದು ಗುಲಾಬಿಯನ್ನು ಕೇವಲ ಚಿತ್ರದಲ್ಲಿ ಹೆಸರಿಸಿದರೆ ಸಾಕಾಗುವುದಿಲ್ಲ. ಮಕ್ಕಳು ನಿಜವಾದ ಗುಲಾಬಿಯ ಹೂವನ್ನು ನೋಡಲಿ, ವಾಸನೆ ನೋಡಲಿ, ಸ್ಪರ್ಶಿಸಲಿ, ಮಕ್ಕಳು ಗುಲಾಬಿ ಗಿಡದ ಕಾಂಡವನ್ನು ಹೂವಿನ ದಳಗಳನ್ನು ಮುಳ್ಳುಗಳನ್ನು ಮತ್ತು ಹೂಗಳ ವರ್ಣ ವೈವಿಧ್ಯವನ್ನು ನೋಡಲಿ, ಹೀಗೆ ಮಾಡುವಾಗ ಮಕ್ಕಳಿಗೆ ಅವುಗಳ ಶಬ್ದಗಳನ್ನು ಹೇಳಿ ಇದು ಒಂದು ಸಂಪೂರ್ಣ ಅನುಭವವನ್ನು ಒದಗಿಸುವುದರಿಂದ ನಂತರದಲ್ಲಿ ಆ ವಿಷಯದ ಬಗ್ಗೆ ಹೆಚ್ಚು ದಕ್ಷತೆಯಿಂದ ಮಾತನಾಡಲು ಮಕ್ಕಳಿಗೆ ಸಾಧ್ಯವಾಗುತ್ತದೆ.

- ಮಕ್ಕಳನ್ನು ಒಪ್ಪಿಕೊಳ್ಳುವ ಮತ್ತು ಟೀಕೆಮಾಡದ ದೊಡ್ಡವರೆದುರಿಗೆ ತಮ್ಮ ಭಾವನೆಗಳನ್ನು, ಸಂವೇದನೆಗಳನ್ನು ಅಭಿವ್ಯಕ್ತಿಗೊಳಿಸಲು ಪ್ರೋತ್ಸಾಹಿಸಿ, ಸಹಾಯಮಾಡಿ ಒಳ್ಳೆಯ ಕೇಳುಗರಾಗಿರಿ ಮತ್ತು ಮಕ್ಕಳನ್ನು ಮಾತನಾಡಲು ಪ್ರೋತ್ಸಾಹಿಸಿ ಮಕ್ಕಳು ಏನು ಹೇಳುತ್ತಿದ್ದಾರೆಂಬುದನ್ನು ಕೇಳಲು ನಿಮಗೆ ಆಸಕ್ತಿ ಇದೆ ಎಂಬುದನ್ನು ಅವರಿಗೆ ತೋರಿಸಿ.

Digitised by Bharatavani, CIIL

• ಮಕ್ಕಳು ಏನು ಮಾಡುತ್ತಿದ್ದರೆಂಬುದನ್ನು ವಿಮರ್ಶಿಸುವಾಗ ಮಕ್ಕಳು ಮಾತಗಳನ್ನು ಮುಂದುವರಿಸುವಂತೆ ಮಾಡಿ ದೃಷ್ಟಿ ಸಂಪರ್ಕ ಮಾಡಿ, ಅವರ ಉಕ್ತಿಗಳ ಬಗ್ಗೆ ವಿಮರ್ಶೆಮಾಡಿ.

• ಸಂಭಾಷಣೆ ಮೂಲಕ ಮೌಖಿಕ ಭಾಷೆಯನ್ನು ಅಭಿವೃದ್ಧಿಗೊಳಿಸಿ ಬೇರೆ ಮಕ್ಕಳೊಂದಿಗೆ ಸಂವಹನ ಮಾಡಲು ಮಕ್ಕಳನ್ನು ಪ್ರೋತ್ಸಾಹಿಸಿ ಮಕ್ಕಳು ಒಬ್ಬೊಬ್ಬರೆ ಬೇರೆ ಮಕ್ಕಳೊಂದಿಗೆ ಮಾತನಾಡಲು ಮತ್ತು ಸಣ್ಣ ಹಾಗೂ ದೊಡ್ಡ ಗುಂಪುಗಳಲ್ಲಿ ಮಾತನಾಡಲು ಸಾಕಷ್ಟು ಅವಕಾಶಗಳನ್ನು ಒದಗಿಸಿ ನಿಮ್ಮೊಂದಿಗೂ ತಮ್ಮ ಯೋಚನೆಗಳು ಮತ್ತು ಭಾವಗಳನ್ನು ಚರ್ಚಿಸಲು ಮಕ್ಕಳನ್ನು ಪ್ರೋತ್ಸಾಹಿಸಿ.

• ಶಾಬ್ದಿಕ ಪ್ರತಿಕ್ರಿಯೆಗಳನ್ನು ಪಡೆಯಲು "ಹೀಗಾದರೆ ಏನಾಗುತ್ತದೆ" ಎನ್ನುವಂಥ ಮುಕ್ತ ಪ್ರಶ್ನೆಗಳನ್ನು ಕೇಳಿ ಅನೇಕ ಉತ್ತರಗಳ ಸಾಧ್ಯತೆಯಿರುವಂಥ ಸೃಜನಾತ್ಮಕ ಯೋಚನೆಗೆ ಮತ್ತು ಚರ್ಚೆಗೆ ಪ್ರೋತ್ಸಾಹ ನೀಡುವಂಥ ಪ್ರಶ್ನೆಗಳನ್ನು ಕೇಳಿ.

• ಮಾತುಗಾರಿಕೆ ವಿಕಾಸವನ್ನು ವೃದ್ಧಿಸುವ ಸಾಮಗ್ರಿಗಳನ್ನು ಒದಗಿಸಿ, ನಿಮ್ಮ ಪರಿಸರದ ಪ್ರತಿಯೊಂದು ಕ್ಷೇತ್ರದಿಂದಲೂ ಸರಿಯಾಗಿ ಆಯ್ಕೆ ಮಾಡಿದ ಸಾಮಗ್ರಿಗಳು ವರ್ಣನಾತ್ಮಕ ಭಾಷೆಯನ್ನು ಮತ್ತು ಸಂಭಾಷಣೆಯನ್ನು ಪ್ರೋತ್ಸಾಹಿಸುತ್ತವೆ. ಬೊಂಬೆಗಳು ತಮಗೆ ಇಷ್ಟವಾದ ಕಥೆಗಳನ್ನು ಪುನಃಸ್ಮರಣೆ ಮಾಡಿಕೊಳ್ಳಲು ಅಥವಾ ತಮ್ಮದೇ ಆದ ಕಥೆಯನ್ನು ಹೇಳಲು ಮಕ್ಕಳಿಗೆ ಪ್ರೋತ್ಸಾಹ ನೀಡುತ್ತವೆ. ನಾಟಕಾಭಿನಯದ ನಿರ್ದೇಶಗಳು ತಮ್ಮ ಜೀವನದಲ್ಲಿನ ಮಹತ್ವಪೂರ್ಣ ವ್ಯಕ್ತಿಗಳ ಪಾತ್ರಾನುಕರಣೆ ಮಾಡಲು, ಅವರ ಬಾಷೆಯನ್ನು ಕಲಿಯಲು ಸಹಾಯ ಮಾಡುತ್ತವೆ. ಮರಳು, ನೀರು ಮುಂತಾದ ಸಂವೇದನಾತ್ಮಕ ವಸ್ತುಗಳು ಪ್ರಯೋಗಶೀಲತೆಯನ್ನು ಪ್ರೋತ್ಸಾಹಿಸಿ, ಏನಾಯಿತು ಮತ್ತು ಹೇಗಾಯಿತು ಎಂಬುದರ ಬಗ್ಗೆ ಮಾತನಾಡುವಂತೆ ಮಾಡುತ್ತವೆ.

• ಒಟ್ಟೊಟ್ಟಿಗೆ ಭಾಷಾ ಆಟಗಳನ್ನು ಆಡಿ ಅನೇಕ ಸಾಂಪ್ರದಾಯಿಕ ಮತ್ತು ದೀರ್ಘಕಾಲದಿಂದ ಮೆಚ್ಚಿಗೆ ಪಡೆದಿರುವ ಆಟಗಳು ಕಲ್ಪನಾತ್ಮಕ ಮಾರ್ಗಗಳಿಂದ ಮಕ್ಕಳು ಪಾಲ್ಗೊಳ್ಳುವಂತೆ ಮಾಡುತ್ತವೆ. 'ಚಿತ್ರಸಂಭಾಷಣೆ ಮತ್ತು ಸಮಯವನ್ನು ಹಂಚಿಕೊಳ್ಳುವುದು' ಮುಂತಾದ ಆಟಗಳನ್ನು ಸಂಘಟಿಸಿ ಇವುಗಳ ಮೂಲಕ ಒಂದು ಚಿತ್ರದ ಬಗ್ಗೆ ಅಥವಾ ಆಟಿಕೆಯ ಬಗ್ಗೆ ಅಥವಾ ತಮ್ಮ ವೈಯಕ್ತಿಕ ಅನುಭವದ ಬಗ್ಗೆ ಮಕ್ಕಳು ಮಾತನಾಡುವಂತೆ ಮಾಡಬಹುದು.

• ಮಕ್ಕಳ ಸಂವಹನ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಹೊಸ ಪದಗಳನ್ನು ಅರ್ಥಮಾಡಿಸಲು ಕಥೆಗಳನ್ನು ಸಾಧನವಾಗಿ ಉಪಯೋಗಿಸಿ ನಂತರದಲ್ಲಿ ಮಕ್ಕಳೇ ಕಥೆ ಹೇಳಲು ಪ್ರೋತ್ಸಾಹಿಸಿ.

• ಮಾತುಗಾರಿಕೆ ಚಟುವಟಿಕೆಗಳಲ್ಲಿ ಹಾಡುಗಳನ್ನು ಮತ್ತು ಪ್ರಾಸಬದ್ಧ ಗೀತೆಗಳನ್ನು ಸೇರಿಸಿಕೊಳ್ಳುವುದು ಆಸಕ್ತಿ ಮತ್ತು ಪ್ರೇರಣೆಯನ್ನು ಉಂಟುಮಾಡುವುದಲ್ಲದೆ, ತಾವು ಕಲಿತುದನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯಮಾಡುತ್ತದೆ. ಅವಕಾಶ ದೊರೆತಾಗಲೆಲ್ಲಾ ಪ್ರಾಸಗಳನ್ನು ಉಪಯೋಗಿಸಿ ಇವುಗಳನ್ನು ಹಾಡಿನ ಅವಧಿಗೆ ಮಾತ್ರ ಸೀಮಿತಗೊಳಿಸಬೇಡಿ.

**ಓದುಗಾರಿಕೆ ಸಿದ್ಧತೆ:**

**ಓದುಗಾರಿಕೆಯ ವಿವಿಧ ಅಂಶಗಳು ಹೀಗಿವೆ:**

**(i) ದೈಹಿಕ ವಿಕಾಸ:** ದೊಡ್ಡ ಮಾಂಸಖಂಡಗಳ ನಿಯಂತ್ರಣವನ್ನು ಇನ್ನೂ ಪಡೆಯದಿರುವ ಮಗುವಿಗೆ ಓದುವುದಕ್ಕೆ ಬೇಕಾಗುವ ಆಕೃತಿಗಳನ್ನು ಹೋಲಿಸುವುದು ಮತ್ತು ವಿಕಾಸಗಳನ್ನು ಗುರ್ತಿಸುವಂಥ ಸೂಕ್ಷ್ಮ ಕೌಶಲಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಣ್ಣು ಮತ್ತು ಕೈಗಳ ಸಂಯೋಜನೆಯೂ ಮುಖ್ಯವಾಗುತ್ತದೆ.

**(ii) ಬೌದ್ಧಿಕ ಪಕ್ವತೆ:** ಸಾಕಷ್ಟು ಬೌದ್ಧಿಕ ಪಕ್ವತೆ ಅತ್ಯಾವಶ್ಯಕವಾಗುತ್ತದೆ. ಇದು ಪಕ್ವತೆಗೆ ಬೇಕಾಗುವ ಸಮಯ ಮತ್ತು ಮಗುವಿನ ವಿಕಾಸದ ಸ್ವಾಭಾವಿಕ ವೇಗವನ್ನು ಅವಲಂಬಿಸಿರುತ್ತದೆ.

ಓದು ಒಂದು ಆನಂದದಾಯಕ ಅನುಭವವಾಗಬೇಕಾದರೆ ಮಕ್ಕಳಿಗೆ ನಿರ್ದಿಷ್ಟ ಮಟ್ಟದ ದೈಹಿಕ, ಮಾನಸಿಕ, ಮತ್ತು ಸಂವೇಗಾತ್ಮಕ ಪಕ್ವತೆ ಬೇಕಾಗುತ್ತದೆ ಮಕ್ಕಳು ದೈಹಿಕವಾಗಿ, ಬೌದ್ಧಿಕವಾಗಿ ಮತ್ತು ಸಂವೇಗಾತ್ಮಕವಾಗಿ ಸಿದ್ಧರಾಗಿಲ್ಲದಾಗ ಓದಲು ಅವರನ್ನು ಬಲವಂತ ಮಾಡಿದರೆ ಓದು ಒಂದು ಹೊರೆಯಾಗುತ್ತದೆ. ಬೌದ್ಧಿಕ ಪರಿಪಕ್ವತೆಯನ್ನು ಪಡೆಯಲು ಮಗು ಒಳ್ಳೆಯ ಸಾಮಾನ್ಯ ಆರೋಗ್ಯ ಹೊಂದಿರಬೇಕು. ವಾಕ್ ಇಂದ್ರಿಯಗಳು ಸಾಮಾನ್ಯ ಮಟ್ಟದಲ್ಲಿರಬೇಕು ಎರಡು ಕಣ್ಣುಗಳ ದೃಷ್ಟಿ ಹಾಗೂ ಸಾಮಾನ್ಯ ಶ್ರವಣ ಚಟುವಟಿಕೆ ಹೊಂದಿರಬೇಕು.

**(iii) ದೃಷ್ಟಿ ವಿಭೇದೀಕರಣ:** ದೃಷ್ಟಿ ವಿಭೇದೀಕರಣ ಆಕೃತಿ–ಹಿನ್ನೆಲೆ ವಿನ್ಯಾಸವನ್ನು ಒಳಗೊಳ್ಳುತ್ತದೆ. ವಸ್ತುಗಳ ಆಯಾಮ ಮತ್ತು ದ್ವಿಆಯಾಮದ ಪ್ರತಿನಿಧೀಕರಣಗಳ ಬಗ್ಗೆ ಮಕ್ಕಳು ಅರಿವು ಮೂಡಿಸಿಕೊಳ್ಳಬೇಕು.

**(iv) ಪರಿಸರದೊಂದಿಗೆ ಸಂಯೋಜನೆ:** ಮಗು ಶಾಲೆಯನ್ನು ಪ್ರವೇಶಿಸುವಾಗ ಅನೇಕ ಹೊಸ ಸನ್ನಿವೇಶಗಳಿಗೆ ಎದುರಾಗುತ್ತದೆ. ಈ ಪರಿಸ್ಥಿತಿಗಳಿಗೆ ಮಗು ಸರಿಯಾಗಿ ಸಮಾಯೋಜನೆ ಮಾಡಿಕೊಳ್ಳದಿದ್ದರೆ ಅಂಥ ಮಗು ಓದುಗಾರಿಕೆಯಲ್ಲಿ ಹೆಚ್ಚಿನ ಪ್ರಗತಿ ಹೊಂದುವುದು ಕಷ್ಟ ಸಾಧ್ಯವೇ ಸರಿ.

**(v) ಭಾಷಾ ವಿಕಾಸ:** ಮಗು ಯಾವ ಮಟ್ಟದಲ್ಲಿ ಓದಬೇಕೋ ಆ ಮಟ್ಟದ ಮಕ್ಕಳ ಭಾಷೆಗೆ ಸಮನಾಗಿ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಮಾತನಾಡುವಷ್ಟು ಮೌಖಿಕ ಭಾಷಾ ವಿಕಾಸ ಹೊಂದಿರಬೇಕು.

**(vi) ಶ್ರವಣ ವಿಭೇದೀಕರಣ:** ಇದು ಸ್ವರದ (ಧ್ವನಿಯ) ಸ್ಥಾಯಿ, ಗತಿಶೀಲತೆ ಮತ್ತು ಧ್ವನಿಯನ್ನು ಒಳಗೊಳ್ಳುತ್ತದೆ. ವಿಸ್ತೃತಗೊಳ್ಳುತ್ತಿರುವ ಶಬ್ದ ಭಂಡಾರವೂ ಅಗತ್ಯವಾಗುತ್ತದೆ.

Digitised by Bharatavani, CIIL

**ಓದುಗಾರಿಕೆ ಸಿದ್ಧತೆಯನ್ನು ಪೋಷಿಸಲು ಮಕ್ಕಳಿಗೆ ಸಹಾಯ ಮಾಡುವುದು:**

• ಒಂದು ಪೂರ್ವಾವಶ್ಯಕವಾಗಿ, ಮಕ್ಕಳು ಓದಲು ಸಿದ್ಧರಾದಾಗ ಹೆಚ್ಚು ಸಂತೋಷದಿಂದ ಓದುವುದನ್ನು ಕಲಿತುಕೊಳ್ಳುತ್ತಾರೆ ಎನ್ನುವುದನ್ನೂ ಅರ್ಥಮಾಡಿಕೊಳ್ಳಲು ಶಾಲೆ ಪೋಷಕರಿಗೆ ಸಹಾಯ ಮಾಡಬೇಕು. ಈ ದಿಶೆಯಲ್ಲಿ ಸೂಕ್ತ ವಯಸ್ಸಿಗೆ ಮುಂಚೆ ಓದು ಕಲಿಸಲು ಪ್ರಯತ್ನಿಸುವುದು ಅಹಿತಕರ ಅನುಭವಗಳಲ್ಲಿ ಅಂತ್ಯಗೊಂಡು ಆ ಮೇಲೆ ಮಗು ಓದುವುದನ್ನು ದೂರಮಾಡಬಹುದು.

• ಓದುವುದಕ್ಕೆ ಬೇಕಾದ ಗತ್ಯಾತ್ಮಕ ಕೌಶಲಗಳನ್ನು ಅಭ್ಯಾಸ ಮಾಡಲು ಅವಕಾಶ ಒದಗಿಸಿ ಉದಾಹರಣೆಗೆ ಮಣಿಗಳನ್ನು ಪೋಣಿಸುವಾಗ ಮತ್ತು ಪೆಗ್ ಬೋರ್ಡ್‌ನಲ್ಲಿ ಮೋಳೆಗಳನ್ನಿಟ್ಟು ವಿನ್ಯಾಸಗಳನ್ನು ರಚಿಸುವಾಗ ಮಗು ಕಣ್ಣು–ಕೈಗಳ ಸಂಯೋಜನೆಯನ್ನು ಬೆಳೆಸಿಕೊಳ್ಳುತ್ತದೆ.

• ಓದಿಗೆ ಬೇಕಾದ ದೃಷ್ಟಿ ವಿಭೇದೀಕರಣದ ಕೌಶಲವನ್ನು ಬೆಳೆಸಿಕೊಳ್ಳುವ ಅನುಭವವನ್ನು ಕೊಡಿ ಉದಾಹರಣೆಗೆ, ಆಕೃತಿಗಳ ಸಮಾನತೆ ಮತ್ತು ವಿಷಮತೆಗಳನ್ನು ಹೋಲಿಸುವುದು, ಅಕ್ಷರಗಳನ್ನು ಗುರ್ತಿಸಲು ಮಕ್ಕಳು ಹೊಂದಿಸುವುದು ಮತ್ತು ವಿನ್ಯಾಸಗೊಳಿಸುವ ಕೌಶಲಗಳನ್ನು ಪಡೆದುಕೊಳ್ಳಬೇಕು.

• ಕಥೆಗಳನ್ನು ಓದುವುದನ್ನು ಕೇಳಿದಾಗ ಮತ್ತು ದೊಡ್ಡವರು ಓದುವುದನ್ನು ಕೇಳಿದಾಗ ಮಕ್ಕಳು ಓದುಗಾರಿಕೆಗೆ ಬೇಕಾದ ಸಿದ್ಧತೆಯನ್ನು, ಅಭಿರುಚಿಯನ್ನು ಬೆಳೆಸಿಕೊಳ್ಳುತ್ತಾರೆ.

• ಓದುಗಾರಿಕೆಯಲ್ಲಿ ಆಸಕ್ತಿ ಮೂಡಿಸುವ ಆಕರ್ಷಕ ಪರಿಸರ ಒದಗಿಸಿ, ಓದಲು ಅವಕಾಶಗಳನ್ನು ಉಂಟುಮಾಡಿ, ಆಕರ್ಷಕ ಪರಿಸರ ಪುಸ್ತಕಗಳೊಂದಿಗೆ ಮತ್ತು ಇತರ ಮಾತಿನ ಸಾಮಗ್ರಿಗಳೊಂದಿಗೆ ಅನುಕೂಲಕರವಾಗಿ ಕೆಲಸ ಮಾಡುವಂತೆ ಮಾಡುತ್ತದೆ.

• ಓದುಗಾರಿಕೆಗೆ ಮಕ್ಕಳನ್ನು ಅವರ ಕಲಿಕಾ ಅಭಿಸಾಮರ್ಥ್ಯ ಮತ್ತು ಸಿದ್ಧತೆಯ ಬಗ್ಗೆ ಅತ್ಯಂತ ವಿಶ್ವಾಸನೀಯವಾದ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಗುಂಪುಗಳನ್ನಾಗಿ ವಿಂಗಡಿಸಬೇಕು.

• ರೋಚಕವಾದ ಪದಗಳನ್ನು ಓದುವುದನ್ನು ಮಕ್ಕಳಿಗೆ ಮಾಡಲು ಪರಿಚಯಿಸಿ ಉದಾಹರಣೆಗೆ ಮಕ್ಕಳದೇ ಹೆಸರುಗಳು, ಸ್ನೇಹಿತರ, ತಂದೆ, ತಾಯಿಯ ಹೆಸರುಗಳು ಇತ್ಯಾದಿ. ಮಕ್ಕಳು ಆರಾಮದಾಯಕ ಮತ್ತು ಪ್ರೋತ್ಸಾಹಕ ವಾತಾವರಣದಲ್ಲಿ ಇವುಗಳನ್ನು ಓದಿದ ನಂತರ ಮಕ್ಕಳು ಓದಿದ ಮೊದಲ ಹಂತವಾದ ಪದಗಳ ನಡುವೆ ವ್ಯತ್ಯಾಸ ಕಲ್ಪಿಸುವ 'ದೃಷ್ಟಿ ವಿಭೇದೀಕರಣ'ದ ಪ್ರವೀಣ್ಯ ಪಡೆದಿದ್ದಾರೆ ಎಂದರ್ಥವಾಗುತ್ತದೆ.

• ಇಡೀ ಪದವನ್ನು ಗುರ್ತಿಸುವುದರಿಂದ ಆರಂಭಿಸಿ ಮಕ್ಕಳು ಈ ಕಾರ್ಯದ ಬಗ್ಗೆ ಸಾಕಷ್ಟು ಪ್ರಾವೀಣ್ಯ ಪಡೆದ ನಂತರ ಅವರಿಗೆ ವರ್ಣಮಾಲೆಯನ್ನು ಕಲಿಸಿ ಈಗ ಅವರು ಪದಗಳನ್ನು ರಚಿಸಲು ಅಕ್ಷರಗಳ ಅವಶ್ಯಕತೆ ಇದೆ ಎಂಬುದನ್ನು ತಿಳಿದುಕೊಳ್ಳುತ್ತಾರೆ (ವಾಸ್ತವವಾಗಿ ಅಕ್ಷರಗಳು ಕೇವಲ ಸಂಕೇತಗಳು.)

• ಮುದ್ರಣ, ಭಾಷೆ ಮತ್ತು ಅನುಭವಗಳ ನಡುವಣ ಸಂಬಂಧವನ್ನು ತಿಳಿಯಲು ಸಹಾಯವಾಗಲು ಮತ್ತು ಸಾಂದರ್ಭಿಕ ಕಲಿಕೆಗೆ ಪ್ರೋತ್ಸಾಹಕವಾಗಲು ಅನುಕೂಲಕರವಾದ ಸಣ್ಣ ಮಕ್ಕಳ ಸಾಮಾನ್ಯ ಅಭಿರುಚಿಗಳು ಮತ್ತು ಚಟುವಟಿಕೆಗಳಿಗೆ ಅನುಗುಣವಾದ ಸಹಜವಾದ ಹಾಗೂ ಅರ್ಥಪೂರ್ಣ ವಿಧಾನಗಳ ಮೂಲಕ ಓದುವಿಕೆಯನ್ನು ಕಲಿಸಬೇಕು.

• ಮಕ್ಕಳಿಗೆ ಅರ್ಥಪೂರ್ಣ ವಾಕ್ಯಗಳನ್ನು ಪರಿಚಯಿಸಿ, ಉದಾಹರಣೆಗೆ 'ನಾನು ಇಷ್ಟಪಡುವುದು...' 'ನನಗೆ ಬೇಕಾದುದು....' ಇತ್ಯಾದಿ ವಾಕ್ಯಗಳನ್ನು ಓದಲು ಮಕ್ಕಳು ಇಷ್ಟಪಡುತ್ತಾರೆ ಈ ರೀತಿ ಚಟುವಟಿಕೆಯಲ್ಲಿ ಸಾಧನೆಯ ಭಾವನೆಯನ್ನು ಹೊಂದುತ್ತಾರೆ.

• ಮಕ್ಕಳಿಗೆ ಪುಸ್ತಕಗಳ ಪರಿಚಯ ಮಾಡಿ ದಪ್ಪ ಅಕ್ಷರಗಳಲ್ಲಿ ಮುದ್ರಿಸಿದ, ವರ್ಣರಂಜಿತ ಚಿತ್ರಗಳಿರುವ ಪುಸ್ತಕಗಳು ಮಾತನಾಡುವ ಪದಗಳ ಮತ್ತು ಬರೆದ (ಮುದ್ರಿಸಿದ) ಪದಗಳ ನಡುವೆ ಇರುವ ಸಂಬಂಧವನ್ನು ಮಕ್ಕಳು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಪದಗಳು ಇಲ್ಲದ ಚಿತ್ರ ಪುಸ್ತಕಗಳು ಮಕ್ಕಳು ತಮ್ಮದೇ ಆದ ಕಥೆಗಳನ್ನು ಹೇಳಲು, ಕಲ್ಪನೆ ಮಾಡಲು ಮಕ್ಕಳಿಗೆ ಪ್ರೋತ್ಸಾಹ ನೀಡುತ್ತವೆ.

• ಮಕ್ಕಳು ಓದುವುದನ್ನು ಪ್ರೋತ್ಸಾಹಿಸಲು ಮತ್ತು ಆ ಕಾರ್ಯವನ್ನು ಸುಲಭವಾಗಿಸಲು ಅವರಿಗೆ ಆಗಾಗ್ಗೆ ಸೂಚಕಗಳನ್ನು ಕೊಡಿ, ಸೂಚಕಗಳು (Cues) ಎರಡು ವಿಧಾನಗಳಲ್ಲಿರಬಹುದು. ಚಿತ್ರಸೂಚಕಗಳು, ಪದ ಸೂಚಕಗಳು, ಚಿತ್ರಸೂಚಕಗಳ ಸಹಿತ ಇರುವ ಓದಿನ ಸಾಮಗ್ರಿಗಳು ಚಿತ್ರಸೂಚಕಗಳಿಲ್ಲದ ಓದಿನ ಸಾಮಗ್ರಿಗಿಂತ ಹೆಚ್ಚು ಸಾಂದರ್ಭಿಕವಾದ ವಿಚಾರಗಳನ್ನು ಕೊಡುತ್ತವೆ. ಮುದ್ರಿತ ವಿಷಯ ವಸ್ತುವಿಗೆ ಚಿತ್ರಗಳು ಉತ್ತಮವಾದ ಸೂಚಕಗಳನ್ನು ಒದಗಿಸಬಹುದು ಉದಾಹರಣೆಗೆ ಅದು ಒಂದು ಕಥೆಯಾಗಿರಬಹುದು. ಚಿತ್ರಗಳು ಅನೇಕ ವೇಳೆ ಕಥೆಯಲ್ಲಿನ ಪಾತ್ರಗಳು ಕ್ರಿಯೆಯಲ್ಲಿ ತೊಡಗಿರುವುದನ್ನು ತೋರಿಸುತ್ತವೆ. ವಿಷಯ ವಸ್ತುವಿನ ಸೂಚಕಗಳಿಂದ ಒಂದು ಪದದ ಅಥವಾ ಪದ ಸಮೂಹದ ಅರ್ಥವನ್ನು ಆ ಪದಗಳಿಗೂ ಮತ್ತು ಇತರ ವಾಕ್ಯಗಳಿಗೂ ನಡುವೆ ಇರುವ ಸಂಬಂಧದಿಂದ ತಿಳಿದುಕೊಳ್ಳುತ್ತಾರೆ. ಇವು ಓದಿದುದರ ಗ್ರಹಿಕೆಗೂ ಪೂರಕವಾಗುತ್ತವೆ. ಉದಾಹರಣೆಗೆ 'ನನಗೆ ಐಸ್‌ಕ್ರೀಂ ಇಷ್ಟವಾಗುತ್ತದೆ'. ವಾಕ್ಯದ ವಿಷಯ ವಾಕ್ಯದಲ್ಲಿರಬೇಕಾದ ಶಬ್ದ ಯಾವುದಿರಬಹುದು ಎಂಬುದಕ್ಕೆ ಸೂಚನೆ ನೀಡುತ್ತದೆ.

• ನಾಟಕಾಭಿನಯಕ್ಕೆ ಅವಕಾಶ ಒದಗಿಸಿ ಮಕ್ಕಳು ಪರಸ್ಪರ ಸೇರಿಕೊಂಡು ಓದಿ, ಆಟವಾಡಿದರೆ ಅವರ ಶಬ್ದ ಸಂಪತ್ತು ಹೆಚ್ಚುತ್ತದೆ. ನಾಟಕಾಭಿನಯದ ಮೂಲಕ ತಾವು ಈಚೆಗೆ ಹೊಸದಾಗಿ ಕಲಿತುಕೊಂಡಿರುವ ಶಬ್ದಗಳನ್ನು ಅಭ್ಯಾಸ ಮಾಡಿಕೊಳ್ಳಲು

Digitised by Bharatavani, CIIL

ಮತ್ತು ವಿಚಾರಗಳನ್ನು ಹಂಚಿಕೊಳ್ಳಲು ಮಕ್ಕಳಿಗೆ ಅವಕಾಶ ದೊರೆಯುವುದಲ್ಲದೆ, ಅವರು ತಮ್ಮ ಭಾಷೆಯ ಉಪಯೋಗದಲ್ಲಿ ಹೆಚ್ಚು ಪರಿಣತರಾಗಲು ಸಾಧ್ಯವಾಗುತ್ತದೆ.

• ನೀವೇ ಮಕ್ಕಳಿಗೆ ಓದುವುದರ ಮಾದರಿಯನ್ನು ಒದಗಿಸಿ ಮುದ್ರಿತ ಸಾಮಗ್ರಿಯ ಮಹತ್ವವನ್ನು ಮತ್ತು ಉಪಯೋಗವನ್ನು ತೋರಿಸಿ, ತಿರುಗಾಟಕ್ಕೆ (Walk) ಹೋದಾಗ ಬೀದಿಗಳ, ಅಂಗಡಿಗಳ ಬೋರ್ಡ್‌ಗಳನ್ನು ಓದಿ ಉಪಯೋಗಕ್ಕೆ ಬರದ ಅಂಚೆಪತ್ರಗಳನ್ನು ಮಕ್ಕಳಿಗೆ ಕೊಟ್ಟು ಓದಲು ಹೇಳಿ.

• ಓದಬೇಕೆನ್ನುವುದಕ್ಕೆ ಪೂರಕವಾಗುವಂಥ ಮುದ್ರಿತ ಸಾಮಗ್ರಿಗಳು (ಪುಸ್ತಕಗಳು, ಪತ್ರಿಕೆಗಳು) ಸಮೃದ್ಧವಾಗಿರುವ ಪರಿಸರವನ್ನು ಉಂಟುಮಾಡಿ. ಮನೆಯ/ಶಾಲೆಯ ಒಂದು ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯನ್ನಿಟ್ಟು ಅದರಲ್ಲಿ ಕರಪತ್ರಗಳು, ಬಿಲ್‌ಗಳು ಮುಂತಾದವುಗಳನ್ನು ಓದಲು ಇಡಿ.

• ಬರವಣಿಗೆ ಮೂಲಕ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಮಕ್ಕಳನ್ನು ಪ್ರೋತ್ಸಾಹಿಸಿ, ಗೀಚುವಿಕೆ, ನಂತರ ಅಕ್ಷರಗಳು ಕೊನೆಯಲ್ಲಿ ಅರ್ಥಗಳನ್ನು ಹೊಂದಿರುವ ಪದಗಳ ನಡುವೆ ವ್ಯತಾಸವನ್ನು ತಿಳಿದುಕೊಳ್ಳಲು ಕಾಗದ, ಕ್ರೆಯಾನ್, ಪೆನ್ಸಿಲ್/ಪೆನ್, ಮ್ಯಾಗ್ನೆಟಿಕ್ ಅಕ್ಷರಗಳು ಮುಂತಾದ ಬರವಣಿಗೆ ಸಾಮಗ್ರಿಗಳನ್ನು ಒದಗಿಸಿ ಸಹಾಯ ಮಾಡಿ.

• ಮಕ್ಕಳ ಓದುವ ಅನುಭವಗಳನ್ನು ವಿಸ್ತಾರಗೊಳಿಸಿ, ನೀವು ಮಕ್ಕಳಿಗೆ ಓದುವ ಕಥೆಗಳ ಬಗ್ಗೆ ಪ್ರಶ್ನೆ ಕೇಳಲು, ಅವುಗಳಿಗೆ ಉತ್ತರ ಹೇಳಲು ಸಾಕಷ್ಟು ಸಮಯ ಕೊಡಿ. ಕಥೆಗಳ ಪಾತ್ರಗಳ ಕ್ರಿಯೆಗಳು ಮತ್ತು ಸಂಯೋಗಗಳನ್ನು ಚರ್ಚಿಸಿ ಮತ್ತು ಕಥೆಗಳ ಸನ್ನಿವೇಶಗಳನ್ನು, ಘಟನೆಗಳನ್ನು ತಮ್ಮ ಅನುಭಗಳಿಗೆ ಸಂಬಂಧಿಸಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡಿ ಫ್ಲಾನಲ್ ಬೋರ್ಡ್ ಅಕ್ಷರಗಳ ಮೂಲಕ ತಮ್ಮದೇ ಶಬ್ದಗಳಲ್ಲಿ ಕಥೆಗಳನ್ನು ಹೇಳುವುದು ಬೊಂಬೆಗಳೊಡನೆ ನಾಟಕಾಭಿನಯ ಮಾಡುವುದು ಅಥವಾ ಪುಸ್ತಕಗಳಲ್ಲಿ ಓದಿದುದನ್ನು ಹಂಚಿಕೊಳ್ಳುವುದು ಮುಂತಾದ ಅನುಸರಣ ಕಾರ್ಯಗಳನ್ನು ಪ್ರೋತ್ಸಾಹಿಸಿ ಹಳೆಯ ಜನಪ್ರಿಯ ಪುಸ್ತಕಗಳು ಮತ್ತು ಹೊಸ ಪುಸ್ತಕಗಳು ಸೇರಿದಂತೆ ಯಾವಾಗಲೂ ಪುಸ್ತಕಗಳು ದೊರಕುವಂತೆ ಮಾಡಿ.

**ಬರವಣಿಗೆಯ ಸಿದ್ಧತೆ:**

ಅಕ್ಷರಗಳು ಅಂಕೆಗಳು, ಇತರ ಸಂಕೇತಗಳು ಮತ್ತು ರೇಖಾಚಿತ್ರಗಳನ್ನು ಅರ್ಥಪೂರ್ಣವಾಗಿ ಹಾಗೂ ಉದ್ದೇಶಪೂರ್ವಕವಾಗಿ ಬರವಣಿಗೆಯ ಮೂಲಕ ಉಂಟುಮಾಡಲು ಅಗತ್ಯ ದೈಹಿಕ ಮತ್ತು ಸಂಜ್ಞಾನಾತ್ಮಕ ದಕ್ಷತೆಗಳನ್ನು ಬೆಳೆಸುವ ಪ್ರಕ್ರಿಯೆಯೆ ಬರವಣಿಗೆಯ ಸಿದ್ಧತೆ ಎನಿಸುತ್ತದೆ. ಶಾಲೆಯನ್ನು ಪ್ರವೇಶಿಸುವ ಮಗು ಓದುಗರ ಜೊತೆಗೆ ಬರೆಯಲೂ ಉತ್ಸುಕವಾಗಿರುತ್ತದೆ. ಶಿಕ್ಷಕರು ಮಕ್ಕಳಿಗೆ ಬರವಣಿಗೆಯನ್ನು ಅವರಿಗೆ ಸಂಬಂಧಿಸಿದ ಆಸಕ್ತಿಕರವಾದ ವಿಷಯಗಳ ಬಗ್ಗೆ ಮಾತನಾಡುವ ಮೂಲಕ ಬರವಣಿಗೆಯನ್ನು ಪರಿಚಯಿಸಬೇಕು. ನಂತರದಲ್ಲಿ ಈ ಅನ್ಯೋನ್ಯಕ್ರಿಯೆಗಳನ್ನು ಸರಳವಾದ, ಸುಲಭವಾದ ಬರವಣಿಗೆ ರೂಪದಲ್ಲಿ ಸಂಗ್ರಹಿಸಿಡಬಹುದು. ಜೊತೆಗೆ ಸರಳವಾದ ರೇಖಾಚಿತ್ರಗಳು, 'ಸ್ಪೀಚ್' ಬಲೂನ್‌ಗಳು ಮಕ್ಕಳನ್ನು ಪ್ರೇರೇಪಿಸಲು ಸಹಾಯ ಮಾಡುತ್ತವೆ.

ಯಾವುದೇ ಭಾಷೆಯನ್ನು ಬರೆಯುವುದೆಂದರೆ ಕಾಗದದ ಮೇಲೆ ಸಂಕೀರ್ಣವಾದ ಆಕೃತಿಗಳನ್ನು ಮೂಡಿಸುವುದು. ಇದಕ್ಕೆ ವರ್ಣಮಾಲೆಯ ಅಕ್ಷರಗಳ ಸಣ್ಣ ಸಣ್ಣ ಆಕೃತಿಗಳ ನಡುವೆ ಇರುವ ಸೂಕ್ಷ್ಮ ವ್ಯತ್ಯಾಸಗಳ ಪ್ರತ್ಯಕ್ಷಾನುಭವಿಸುವ ಸೂಕ್ಷ್ಮತೆ ಮತ್ತು ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಸ್ಮರಣ ಸಾಮರ್ಥ್ಯ ಬೇಕಾಗುತ್ತದೆ. ಅಮೂರ್ತ ಸಂಕೇತಗಳನ್ನು ವಿಚಾರಗಳನ್ನು ಅಥವಾ ಭಾವಗಳನ್ನು ಅಭಿವ್ಯಕ್ತಗೊಳಿಸುವ ಸಾಮರ್ಥ್ಯವೂ ಇದಕ್ಕೆ ಬೇಕಾಗುತ್ತದೆ. ವರ್ಣಮಾಲೆಯ ಅಕ್ಷರಗಳು ಅಮೂರ್ತ ಸಂಕೇತಗಳು ಇವು ಎಷ್ಟರ ಮಟ್ಟಿನ ಅಮೂರ್ತ ಸ್ವರೂಪವೆಂದರೆ ಅವುಗಳು ತಿಳಿಸುವ ಧ್ವನಿಗಳಿಗೂ ಮತ್ತು ಅವುಗಳಿಗೂ ನಡುವೆ ಯಾವುದೇ ಚಿತ್ರರೂಪ ಸಮಾನತೆಯಿಲ್ಲ.

**ಬರವಣಿಗೆಯ ವಿಕಾಸದಲ್ಲಿ ಮಕ್ಕಳಿಗೆ ಸಹಾಯ ಮಾಡುವುದು:**

ಬರವಣಿಗೆಯ ಸಿದ್ಧತೆಗೆ ತಯಾರು ಮಾಡುವುದು ಕೈಗಳ ಚಲನೆಗೆ ಬೇಕಾದ ಕೆಲವು ಚಟುವಟಿಕೆಗಳಿಂದ ಆರಂಭವಾಗುತ್ತದೆ. ಅವು: ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ನೀರು ಸುರಿಯುವುದು. ಬೀಜ, ಮಣಿ ಮುಂತಾದವುಗಳನ್ನು ವಿಂಗಡಿಸುವುದು. ವಸ್ತುಗಳನ್ನು ಎತ್ತುವುದು. ವಸ್ತುಗಳ ಆಕೃತಿಯನ್ನು ಅನುಭವಿಸುವುದು.

ಈ ಸಾಮರ್ಥ್ಯಗಳನ್ನು ಬೆಳೆಸಲು ಅತ್ಯುತ್ತಮ ಮಾರ್ಗ ಎಂದರೆ ಮಕ್ಕಳಿಗೆ ಕಾಗದದ ಮೇಲೆ ರೇಖಾಚಿತ್ರಗಳನ್ನು ಬರೆಯುವ ಮತ್ತು ಬಣ್ಣ ಹಾಕುವ ಅವಕಾಶಗಳನ್ನು ಒದಗಿಸುವುದು ರೇಖಾಚಿತ್ರಗಳನ್ನು ಬರೆಯುವುದು. ಮತ್ತು ಬಣ್ಣ ಹಚ್ಚುವುದು ಈ ಮಾಧ್ಯಮಗಳನ್ನು ತಾವೇ ಅನ್ವೇಷಿಸಲು ಅವರನ್ನೇ ಸ್ವತಂತ್ರವಾಗಿ ಬಿಟ್ಟಿದೆ ಮಕ್ಕಳ ಸಮಗ್ರ ವಿಕಾಸಕ್ಕೆ ಅದರಲ್ಲೂ ಮುಖ್ಯವಾಗಿ ಅವರ ಭಾಷೆಯ ಉಪಯೋಗಕ್ಕೆ ಮತ್ತು ಅವರನ್ನು ಬರಹಗಾರರಾಗಿ ರೂಪಿಸಲು ಕೊಡುಗೆಯನ್ನು ನೀಡುತ್ತವೆ ಮಕ್ಕಳು ಬರೆಯುವುದಕ್ಕೆ ಸಮರ್ಥರಾಗುವುದಕ್ಕೆ ಮೊದಲು ಈ ಕೆಳಗಿನ ಚಟುವಟಿಕೆಗಳನ್ನು ಮಾಡಲು ಅವರನ್ನು ಬಿಡಿ.

– **ಯಾದೃಚ್ಛಿಕ ಸ್ವಯಂ ಪ್ರೇರಿತ ಚಲನೆಗಳು:** ಎರಡು ವರ್ಷಗಳ ಮಕ್ಕಳು ಸಾಮಾನ್ಯವಾಗಿ ಯಾವುದೇ ನೇರ ಪ್ರಯತ್ನವಿಲ್ಲದೆ ಕಾಗದದ ಮೇಲೆ ಸಂಬಂಧವಿಲ್ಲದೆ ಗೀಚಲು ಇಷ್ಟಪಡುತ್ತಾರೆ.

– **ಉದ್ದೇಶಪೂರ್ವಕವಾಗಿ ಗೀಚುವುದು:** ನರ್ಸರಿ ವಯಸ್ಸಿನ ಅನೇಕ ಮಕ್ಕಳು ಗೀಚುವ ಪ್ರಬಲ ಅಪೇಕ್ಷೆ ಹೊಂದಿರುತ್ತಾರೆ. ಅವರನ್ನು ಹಾಗೆ ಮಾಡಲು ಬಿಡದಿದ್ದರ ಗೋಡೆಯ ಮೇಲೆ, ನೆಲದ ಮೇಲೆ, ಅಥವಾ ಮನೆಯಲ್ಲಿ ಅಥವಾ ತರಗತಿಯಲ್ಲಿ ಕೈಗೆ ಸಿಗುವ ಪುಸ್ತಕದ ಹಾಳೆಗಳ ಮೇಲೆ ಗೀಚತೊಡಗುತ್ತಾರೆ.

Digitised by Bharatavani, CIIL

– **ನಿಯಂತ್ರಿತವಾಗಿ ಪುನರಾವರ್ತಿತವಾಗಿ ಗೀಚುವುದು:** ಇಂಥ ಗೆರೆಗಳು ಅನೇಕ ವೇಳೆ ಒಂದು ಸಂದೇಶವನ್ನು ತಿಳಿಸುತ್ತವೆ ಉದಾಹರಣೆಗೆ ಹಾಗೆ ಬರೆದು ಮಗು ನಾನು ಬೆಟ್ಟದ ಬುಡ ಬರೆದಿದ್ದೇನೆ', 'ಇದು ಅಜ್ಜಿಗೆ ನನ್ನ ಕಾಗದ'.

– ಬರೆದ ಪದಗಳ ಬಗ್ಗೆ ಮಕ್ಕಳು ಹೆಚ್ಚು ಆಸಕ್ತಿ ತೋರಿಸಲು ಆರಂಭಿಸಿದರೆ ಬರೆಯಬೇಕೆನ್ನುವ ಅವರ ಆಸೆಯೂ ಹೆಚ್ಚುತ್ತದೆ. ಅವರು ಬರೆಯುವ ವಿನ್ಯಾಸಗಳಿಗೆ ಹೆಚ್ಚಿನ ರೂಪ ಬರುತ್ತದೆ. ಅವರು ಈಗ ಹೂಗಳ ತೊಟ್ಟಿಗಳು, ಇಲಿಯ ಬಾಲ, ಛತ್ರಿಯ ಹಿಡಿ ಮುಂತಾದ ನಿರ್ದೇಶಿತ ಗೆರೆಗಳನ್ನು ಬರೆಯಲು ಆರಂಭಿಸುತ್ತಾರೆ. ಅವರು ಬರೆಯಲು ಆನಂದಿಸುವ, ಪದೇಪದೇ ಎಳೆಯಲು ಬಯಸುವ ಗೆರೆಗಳನ್ನು ಬಣ್ಣ ಹಾಕಲು ಇಷ್ಟಪಡುವ ಚಿತ್ರಗಳು ಇರುತ್ತವೆ. ಪೂರ್ಣತಃ ಸರಿಯಿಲ್ಲದಿದ್ದರೂ ಕೆಲವು ಅಕ್ಷರಗಳನ್ನು ಮಕ್ಕಳು ಕಾಪಿ ಮಾಡಬಲ್ಲರು.

– ಮೇಲಿನ ಈ ಎಲ್ಲಾ ಹಂತಗಳಲ್ಲಿ ಮಕ್ಕಳಿಗೆ ದಪ್ಪನಾದ ಕಾಗದದ ಹಾಳೆಗಳನ್ನು ಮತ್ತು ದಪ್ಪ ಕ್ರೆಯಾನ್ ಅಥವಾ ಪೆನ್ಸಿಲ್‌ಗಳನ್ನು ಒದಗಿಸಬೇಕು. ಕೇವಲ ನೋಟ್ ಬುಕ್ಕಿನಲ್ಲೆ ಬರೆಯಬೇಕೆಂದು ಅವರನ್ನು ನಿರ್ಬಂಧಪಡಿಸಬೇಡಿ.

– ಬಣ್ಣಗಳನ್ನು ಉಪಯೋಗಿಸಿ ಚಿತ್ರಗಳನ್ನು ಬರೆಯುವುದು ಮತ್ತೊಂದು ತಯಾರಿ ಚಟುವಟಿಕೆಯಾಗಿದೆ.

–ಕಾಗದದ ಮೇಲೆ ಬರೆಯುವುದನ್ನು ಕಲಿಸುವುದಕ್ಕೆ ಮೊದಲು ಅಕ್ಷರಗಳೊಂದಿಗೆ ಕೆಲಸ ಮಾಡುವುದನ್ನು ಮಾಡಲು ಅವರಿಗೆ ಪರಿಚಯಿಸಿ.

– **ಬೆರಳಚ್ಚು ತಿದ್ದುವುದು:** ಮರಳಿನ ಮೇಲೆ ಅಥವಾ ಬಣ್ಣ /ಹೂ (ಗೋಂದು) ಮೇಲೆ ಬೆರಳುಗಳಿಂದ ತಿದ್ದುವುದು ಒಳ್ಳೆಯದು. ಬೆರಳಲ್ಲಿ ತಿದ್ದುವಾಗ ಬೆರಳಿನ ಚಲನೆಗಳು ಸುಲಲಿತವಾಗಿಯೂ ದಪ್ಪನಾಗಿಯೂ ಮತ್ತು ಏಕಪ್ರವಾಹಿತಕವಾಗಿಯೂ ಇರಬೇಕು. ಇದರಿಂದ ಮಗುವಿಗೆ ಅಕ್ಷರಗಳ ಸಂಪೂರ್ಣ ರೂಪದ ಸಂವೇದನೆಯನ್ನು ಪಡೆಯಲು ಬೆಳೆಯುವ ಪರಿಸರವನ್ನು ಆನಂದಿಸಲು ಸಾಧ್ಯವಾಗುತ್ತದೆ.

– ಕತ್ತರಿಸಿದ ಅಕ್ಷರಗಳ ಆಕೃತಿಗಳನ್ನು ರಟ್ಟಿನ ಮೇಲೆ ಅಂಟಿಸಿ ಅಥವಾ ಸ್ಪಷ್ಟವಾಗಿ ಫ಼್ಲೆಲ್ಟ್ ಪೆನ್ನಿನಿಂದ ದಪ್ಪನಾಗಿ ಬರೆದ ಅಕ್ಷರಗಳನ್ನು ತಿದ್ದುವುದು ಒಳ್ಳೆಯದು, ತಿದ್ದುವಿಕೆಯನ್ನು ತೋರುಬೆರಳಿಂದ ಮಾಡಬೇಕು.

– **ಅಕ್ಷರಗಳ ಮೇಲೆ ಪದೇ ಪದೇ ಬರೆಯುವುದು ಮತ್ತು ಕಾಪಿ ಮಾಡುವುದು:** ಅಕ್ಷರಗಳನ್ನು ತಿದ್ದಿದ ನಂತರದಲ್ಲಿ ಮಕ್ಕಳಿಗೆ ಅಕ್ಷರಗಳ ಮೇಲೆ ಪದೇ ಪದೇ ಬರೆಯುವ ಕೆಲಸ ಕೊಡಬೇಕು. ಮಕ್ಕಳಿಗೆ ಸೇರಿದ ವಸ್ತುಗಳ ಅಥವಾ ಅವರ ಪರಿಸರದಲ್ಲಿರುವ ವಸ್ತುಗಳ ಮೇಲಿರುವ ಲೇಬಲ್ (ಗುರುತು ಪಟ್ಟಿ)ಗಳ ಮೇಲೆ ಮಕ್ಕಳು ಪದೇ ಪದೇ ಬರೆಯಬಹುದು. ಮಕ್ಕಳು ಪುನರಾವರ್ತಿಸುವ ಕೆಲಸಗಳನ್ನು ಇಷ್ಟಪಡುತ್ತಾರೆ.

–ಬರವಣಿಗೆ ಕಲಿಸಲು ಮಕ್ಕಳನ್ನು ಸಿದ್ಧಪಡಿಸುವುದಕ್ಕೆ ಮುಂಚೆ ಮಕ್ಕಳಿಗೆ ಈ ಕೆಳಗಿನ ಚಟುವಟಿಕೆಗಳನ್ನು ಮಾಡಲು ಸಾಧ್ಯವಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಿ–

ಕೈ ಆದ್ಯತೆ (ಬಲ ಅಥವಾ ಎಡ)ಯನ್ನು ಹೊಂದಿದ್ದಾರೆ.

- ಬೆರಳು ಮತ್ತು ಮುಂಗೈ ಚಲನೆಗಳಲ್ಲಿ ಕೈಚಳಕ ತೋರಿಸುತ್ತಾರೆ. ವಸ್ತುಗಳನ್ನು ಹಿಡಿದಾಡುವ ಚಟುವಟಿಕೆಗಳೆಲ್ಲ ಸಣ್ಣ ಮಾಂಸಖಂಡಗಳನ್ನು ಬೆಳೆಸಿಕೊಂಡಿದ್ದಾರೆ.
- ಚಿತ್ರಗಳ ಕಡೆ ನೋಡುವಾಗ ಅಥವಾ ಕೆಲವು ಅಕ್ಷರಗಳನ್ನು /ಚಿತ್ರಗಳನ್ನು ಬರೆಯುವಾಗ ಎಡದಿಂದ ಬಲಕ್ಕೆ ದೃಷ್ಟಿ ತಿರುಗಿಸಬಲ್ಲರು.
- ಚಿತ್ರ ಬರೆಯುವ ಅಥವಾ ರಚನೆಗಳನ್ನು ಮಾಡುವಾಗ ಗಾತ್ರ ಆಕೃತಿ ಮತ್ತು ಅವರ್ಣೀಯ ಸಂಬಂಧಗಳ ಅರಿವು ಹೊಂದಿದ್ದಾರೆ.
- ನೇರ, ದುಂಡನೆಯ, ಮಧ್ಯೆ, ದೊಡ್ಡದಾದ, ಗಿಡ್ಡವಾದ ಮುಂತಾದ ಪದಗಳ ಪರಿಕಲ್ಪನಾತ್ಮಕ ಗ್ರಹಿಕೆಯನ್ನು ಹೊಂದಿದ್ದಾರೆ. ಇದರಿಂದ ಸೂಚನೆಗಳನ್ನು ಅನುಸರಿಸುವುದು ಸಾಧ್ಯವಾಗುತ್ತದೆ.
- ಬರೆಯುವ ಸಾಧನವನ್ನು (ಪೆನ್ಸಿಲ್, ಪೆನ್) ಸರಿಯಾಗಿ, ಆರಾಮವಾಗಿ ಹಿಡಿದುಗೊಳ್ಳಬಲ್ಲರು.
- ತಮ್ಮ ಹೆಸರುಗಳನ್ನು ಗುರ್ತಿಸಬಲ್ಲರು ಮತ್ತು ಇತರ ಕೆಲವು ಪದಗಳನ್ನು ಗುರ್ತಿಸಬಲ್ಲರು.
- ಬರವಣಿಗೆ ಯೋಚನೆಗಳನ್ನು ತಿಳಿಸುತ್ತದೆ ಎಂಬುದರ ಅರಿವು ಹೊಂದಿದ್ದಾರೆ.
- ಮಕ್ಕಳು ಲೇಬಲ್‌ಗಳನ್ನು ಮತ್ತು ಇತರರು ಲೇಬಲ್‌ಗಳನ್ನು ಬರೆಯುವುದನ್ನು ನೋಡಲಿ, ಪ್ರಾಣಿಗಳ ಬೆಚ್ಚನೆಯ ಸ್ಥಳಗಳು, ಬಿಸ್ಕೆಟ್ ಪೆಟ್ಟಿಗೆಗಳು ಮುಂತಾದವುಗಳ ಮೇಲಿರುವ ಮತ್ತು ಮಕ್ಕಳ ಜೀವನಕ್ಕೆ ಸಂಬಂಧಿಸಿದ ಲೇಬಲ್‌ಗಳು/ಬರಹಗಳು ಮಕ್ಕಳು ಬರವಣಗೆಯನ್ನು ಅನುಕರಣೆ ಮಾಡಲು ಪ್ರೋತ್ಸಾಹಿಸುತ್ತವೆ.
- ಮಕ್ಕಳು ಮೊದಮೊದಲು ಬರೆಯುವ/ಗೀಚುವ ಬರಹಗಳು ಹೇಗಿದ್ದರೂ ಒಪ್ಪಿಕೊಳ್ಳಿ. ಪ್ರೋತ್ಸಾಹ ದೊರೆತಂತೆ, ಸಮಯ ಕಳೆದಂತೆ ಮಕ್ಕಳ ಅಂಕುಡೊಂಕಾದ ಗೀಚುಗಳು ಮಕ್ಕಳ ತಮ್ಮ ಬೆರಳುಗಳ ಮೇಲೆ ನಿಯಂತ್ರಣ ಪಡೆದಂತೆ ಗೆರೆಗಳಾಗಿ, ವೃತ್ತಗಳಾಗಿ ಕಡೆಗೆ ಅಕ್ಷರಗಳಾಗಿ ಮಾರ್ಪಡುತ್ತವೆ.
- ಮಕ್ಕಳಿಗೆ ವಿವಿಧ ಮಾಧ್ಯಮಗಳೊಂದಿಗೆ ಪ್ರಯೋಗ ಮಾಡಲು ಅವಕಾಶಗಳನ್ನು ಕೂಡಿ ಬೆರಳುಗಳಿಂದ ಬಣ್ಣ ಹಚ್ಚುವುದು, ಕ್ರಯಾನ್‌ಗಳಿಂದ ಬರೆಯುವುದು, ಜೇಡಿ ಮಣ್ಣಿನಿಂದ ಮಾದರಿ ಮಾಡುವುದು ಈ ಎಲ್ಲಾ ಚಟುವಟಿಕೆಗಳು ಕಣ್ಣು–ಕೈ ಸಂಯೋಜನೆ ಸುಧಾರಿಸಿಕೊಳ್ಳಲು, ಸೂಕ್ಷ್ಮ ಗತ್ಯಾತ್ಮಕ ಬರವಣಿಗೆಗೆ ಅಗತ್ಯವಾದ ಕೌಶಲಗಳನ್ನು ಉತ್ತಮಪಡಿಸಿಕೊಳ್ಳಲು

Digitised by Bharatavani, CIIL

ಸಹಾಯ ಮಾಡುತ್ತವೆ.

- ಮಕ್ಕಳಿಗೆ ಪದಗಳು ಮತ್ತು ಸಂಕೇತಗಳೊಂದಿಗಿನ ಅನುಭವವನ್ನು ಮುಂದುವರಿಸಿಕೊಂಡು ಹೋಗಿ ಪುಸ್ತಕಗಳು, ಪತ್ರಿಕೆಗಳು, ದಿನಪತ್ರಿಕೆಗಳು ಮುಂತಾದವುಗಳ ರೂಪದಲ್ಲಿ ದಿನನಿತ್ಯದ ಮುದ್ರಣದ ಉದಾಹರಣೆಗಳನ್ನು ಒದಗಿಸಿ.
- ಮಾರ್ಕರ್ ಮತ್ತು ಬಣ್ಣದ ಮೂಲಕ ಮಕ್ಕಳು ಕಾಗದದ ಮೇಲೆ ಬರೆಯುವಂತೆ ಮಾಡಿ.
- ಅರ್ಥಪೂರ್ಣವಾದ, ಸಮಗ್ರಗೊಂಡ ಅನುಭವಗಳು ಉಂಟಾಗುವಂತೆ ವ್ಯವಸ್ಥೆ ಮಾಡಿ ತಮಗೆ ಅರ್ಥಪೂರ್ಣವೆನಿಸುವ ಬರವಣಿಗೆ ಅನುಭಗಳಲ್ಲಿ ಪಾಲ್ಗೊಳ್ಳಲು ಮಕ್ಕಳಿಗೆ ಕಾರಣಗಳು ಬೇಕು. ಆದ್ದರಿಂದ ಉದಾಹರಣೆಗೆ, ವಿಮಾನ ನಿಲ್ದಾಣಕ್ಕೆ ಒಂದು ಕ್ಷೇತ್ರ ಭೇಟಿ ನೀಡಿದ ನಂತರ ಮಕ್ಕಳು ಒಂದು ಏರ್‌ಟರ್ಮಿನಲ್ ಸೆಂಟರ್‌ನ್ನು ರಚಿಸಿ, ಅದರ ಕೌಂಟರ್ ಮೇಲೆ "ಟಿಕೆಟ್ಟುಗಳು" ಎಂದು ಬರೆಯಲು ಇಚ್ಛಿಸಬಹುದು.
- ಆಗಾಗ್ಗೆ ಬರೆಯುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ ವಂದನೆಗಳು, ಆಹಾರದ ಹೆಸರುಗಳು ಮತ್ತು ತಮ್ಮದೇ ಆದ ವಸ್ತುಗಳ ಹೆಸರುಗಳನ್ನು ಬರೆಯಲು ಮಕ್ಕಳನ್ನು ತೊಡಗಿಸಿ.
- ತನ್ನ ಶಾಲಾಜೀವನದ ಮೊದಲನೇ ವರ್ಷದಲ್ಲಿ ತಾನು ಬರೆಯಬೇಕಾದ ಪದಗಳ 'ಸ್ಪೆಲಿಂಗ್'ಅನ್ನು ಮಗು ಕಲಿತುಕೊಳ್ಳುತ್ತದೆ. ಇದು ಶಾಲೆಗೆ ಪ್ರವೇಶ ಮಾಡಿದಾಗಿನಿಂದ ಬರವಣಿಗೆ ಬಗ್ಗೆ ಮಗುವಿನ ಕುತೂಹಲವನ್ನು ಜೀವಂತವಾಗಿಡುತ್ತದೆ. ಮೊದಮೊದಲು ಮಕ್ಕಳು ಕೆಲವು ಪದಗಳನ್ನು ಗುರ್ತಿಸುವುದರ ಮೂಲಕ ಓದಲು ಕಲಿಯುತ್ತಾರೆ. ನಂತರದಲ್ಲಿ 'ಸ್ಪೆಲಿಂಗ್'ನ ಕೆಲವು ವಿನ್ಯಾಸಗಳ ಪರಿಚಯವನ್ನು ಕ್ರಮೇಣ ಮಾಡಿಕೊಳ್ಳುತ್ತಾರೆ.
- ಹಸ್ತ ಲಿಖಿತ ಅಕ್ಷರಗಳನ್ನು ಬರೆಯುವುದು ಮುದ್ರಿತ ಅಕ್ಷರ ಬರೆಯಲು ಪ್ರಯತ್ನಿಸುವುದಕ್ಕಿಂತ ಬೇಗನೆ ಬರವಣಿಗೆ ಕಲಿಕೆ ಬಗ್ಗೆ ಆತ್ಮವಿಶ್ವಾಸ ಮೂಡಿಸುತ್ತದೆ. ಏಕೆಂದರೆ ಈ ಕ್ರಿಯೆ ಮಗುವಿನ ಅಪಕ್ವ ಮಾಂಸಖಂಡಗಳ ಮೇಲೆ ಕಡಿಮೆ ಒತ್ತಡವನ್ನು ಉಂಟು ಮಾಡುತ್ತದೆ. ಹಸ್ತ ಲಿಖಿತ ಮತ್ತು ಮುದ್ರಿತ ವರ್ಣಮಾಲೆ ನಡುವಣ ಸಮಾನತೆ ಎಂದರೆ ಓದಲು ಮತ್ತು ಬರೆಯಲು ಎರಡು ರೀತಿಯ ವರ್ಣಮಾಲೆಯನ್ನು ಇಟ್ಟುಕೊಳ್ಳುವುದಕಿಂತ ಸುಲಭಗೊಳಿಸುವುದಾಗಿದೆ ಹಸ್ತಲಿಖಿತ ಅಕ್ಷರಗಳನ್ನು ಓದಲು ಕಡಿಮೆ ಕಣ್ಣಿನ ಒತ್ತಡ ಉಂಟಾಗುವುದರಿಂದ ಅವುಗಳನ್ನು ಸುಲಭವಾಗಿ ಓದಬಹುದು.
- ಮಕ್ಕಳಿಗೆ ನಿಮ್ಮ ಸಹಾಯ ಬೇಕಾದಾಗ ಅದಕ್ಕೆ ನೀವು ಸಿದ್ಧವಾಗಿರಬೇಕು. ಒಂದು ಅಕ್ಷರವನ್ನು /ಪದವನ್ನು ಹೇಗೆ ಬರೆಯಬೇಕು ಎಂದು ಮಗು ಕೇಳಬಹುದು. ಮಕ್ಕಳು ತಮ್ಮ ವಿಚಾರಗಳನ್ನು ರೂಪಿಸಿಕೊಳ್ಳಲು ಕಷ್ಟಪಡುತ್ತಿರುವಾಗ ಮತ್ತು ಅಕ್ಷರಗಳ ಆಕೃತಿಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ ನೀವು ನೀಡುವ ಸಹಾಯ ಪ್ರತಿದಿನ ಬರೆಯುವುದನ್ನು ಮುಂದುವರಿಸಲು ಮಕ್ಕಳಿಗೆ ಪ್ರೋತ್ಸಾಹ ನೀಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**ಅಂಕಿಗಳ ಸಿದ್ಧತೆ:**

ಅಂಕಿಗಳು ಪರಿಮಾಣಾತ್ಮಕ ಯೋಚನೆಯ ಸಾಮಾಜಿಕ ಅಥವಾ ವೈಜ್ಞಾನಿಕ ಅಂಶಗಳಿಗೆ ಸಂಬಂಧಿಸಿವೆ ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳುವುದಕ್ಕೇ ಸಂಬಂಧಿಸಿವೆ. ಮಗು ಶಾಲೆಯನ್ನು ಪ್ರವೇಶಿಸುವುದಕ್ಕೆ ಮುಂಚೆ ಪರಿಮಾಣದ ಬಗ್ಗೆ ಸಾಕಷ್ಟು ಅನುಭವವನ್ನು ಪಡೆದಿರುತ್ತದೆ.

ಮಕ್ಕಳು ಅಂಕಿಗಳನ್ನು ಅರ್ಥಮಾಡಿಕೊಳ್ಳಲು ಸಿದ್ಧರಾದಾಗ, ಅದಕ್ಕಿಂತ ಮೊದಲು ಅಂಕಿಗಳಿಗೆ ಸಂಬಂಧಿಸಿದ ಅನುಭಗಳನ್ನು ಒದಗಿಸುವುದು ಅಂಕಿಗಳ ಸಿದ್ಧತೆ ಕಾರ್ಯಕ್ರಮದ ಉದ್ದೇಶವಾಗಿದೆ. ಮಕ್ಕಳು ಶಾಲಾಪೂರ್ವ ಸಂಸ್ಥೆಯನ್ನು ಪ್ರವೇಶಿಸಿದಾಗ ಅಂಕಿಗಳಿಗೆ ಸಂಬಂಧಿಸಿದ ಅವರ ಅನುಭವಗಳಲ್ಲಿ ಬಹಳಷ್ಟು ವ್ಯತ್ಯಾಸವಿರುತ್ತದೆ. ಆದ್ದರಿಂದ ನಿಗದಿತ ಸಮಯದೊಳಗೆ ಎಲ್ಲಾ ಮಕ್ಕಳಲ್ಲಿ ಒಂದೇ ಮಟ್ಟದ ಅಂಕಿಗಳ ಸಿದ್ಧತೆಯನ್ನು ಮೂಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವ್ಯಕ್ತಿ ವ್ಯತ್ಯಾಸಗಳಿಗೆ ಅವಕಾಶ ಕಲ್ಪಿಸಿಕೊಳ್ಳಬೇಕು.

ಗಣಿತ ಕಲಿಕೆ ಬಹಳಷ್ಟು ಅರ್ಥವನ್ನು ಅವಲಂಬಿಸುವುದರಿಂದ, ಭಾಷೆ ಬಹಳ ಮುಖ್ಯವಾಗುತ್ತದೆ. ಏಕೆಂದರೆ ಪರಿಮಾಣಾತ್ಮಕ ವಿಚಾರಗಳನ್ನು ಮತ್ತು ಸಂಬಂಧಗಳನ್ನು ತಿಳಿಸಲು ಭಾಷೆಯನ್ನು ಉಪಯೋಗಿಸಬೇಕಾಗುತ್ತದೆ. ಅಂಕಿಗಳೊಂದಿಗೆ ಲೆಕ್ಕಾ ಮಾಡುವುದಕ್ಕೆ ಸಮರ್ಥರಾಗುವುದಕ್ಕೆ ಮುಂಚೆ ಮಕ್ಕಳು ಸಂಖ್ಯಾ ಪರಿಕಲ್ಪನೆಗಳನ್ನು ಓದುವುದನ್ನು ಮತ್ತು ಅವುಗಳ ನಡುವಣ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬೇಕು. ಗಣಿತದ ಅರ್ಥಗಳನ್ನು ಅರ್ಥಮಾಡಿಕೊಳ್ಳಲು ಕ್ರಮಾಗತ ಹಂತಗಳನ್ನು ಒದಗಿಸುವ ಸಂಖ್ಯಾಕಾರ್ಯ ಪುಸ್ತಕಗಳು ಮಕ್ಕಳು ಮತ್ತು ಶಿಕ್ಷಕರು ಈ ಇಬ್ಬರಿಗೂ ಸಹಾಯಕವಾಗುತ್ತವೆ.

**ಅಂಕಿಗಳ ಶಬ್ದಭಂಡಾರ:**

ಗಣಿತೀಯ ಪದಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಮಕ್ಕಳ ಗ್ರಹಿಕೆಗೆ ಬಹಳ ಮುಖ್ಯ. ಶಬ್ದಗಳನ್ನು ಅನುಭವಗಳಿಗೆ ಸಂಬಂಧಿಸಿದಂತೆ ಉಪಯೋಗಿಸಿದಾಗ ಅವು ಮಕ್ಕಳಿಗೆ ಅರ್ಥಪೂರ್ಣವಾಗುತ್ತವೆ. ಚಟುವಟಿಕೆಗಳನ್ನು ವಿವರಿಸುವಾಗ, ವಸ್ತುಗಳನ್ನು ಗುರ್ತಿಸುವಾಗ, ಮಕ್ಕಳೊಡನೆ ಮಾತನಾಡುವಾಗ, ಹಾಡುಗಳನ್ನು ಹಾಡುವಾಗ, ಕಥೆಗಳನ್ನು ಹೇಳುವಾಗ ಮತ್ತು ಪ್ರಶ್ನೆಗಳನ್ನು ಕೇಳುವಾಗ ಆಗಾಗ್ಗೆ ಉಪಯೋಗಿಸುವ ಅನೇಕ ಪದಗಳಿವೆ. ಉದಾಹರಣೆಗಳನ್ನು ಈ ಮುಂದೆ ಪಟ್ಟಿಮಾಡಲಾಗಿದೆ.

**ಸಮಯ:** ದಿನಾಂಕ (ತಾರೀಖು), ಗಡಿಯಾರ, ಕ್ಯಾಲೆಂಡರ್, ಸೆಕೆಂಡ್, ಮಿನಿಟ್ (ನಿಮಿಷ), ಘಂಟೆ, ದಿನ, ವಾರ, ತಿಂಗಳು, ವರ್ಷ, ಇವತ್ತು, ನೆನ್ನೆ, ನಾಳೆ.

Digitised by Bharatavani, CIIL

**ಅಳತೆಗಳು:** ಇಂಚು (ಅಂಗುಲ), ಅಡಿ, ಮೈಲಿ, ತಕ್ಕಡಿ, ಡಿಗ್ರಿ, ಮೀಟರ್

**ಗಾತ್ರ:** ದೊಡ್ಡದು, ಸಣ್ಣದು, ಚಿಕ್ಕದು, ದಪ್ಪ, ತಳ್ಳನೆಯ ಎತ್ತರವಾದ, ಗಿಡ್ಡನಾದ, ಉದ್ದನಾದ, ಭಾರವಾದ, ತುಂಬಿದ, ಖಾಲಿಯಾದ, ಎಲ್ಲ, ಕೆಲವು.

**ಸ್ಥಾನ:** ಮೇಲೆ, ಕೆಳಗೆ, ಇಲ್ಲಿ, ಅಲ್ಲಿ, ಮೇಲ್ಭಾಗ, ಕೆಳಭಾಗ, ದೂರ, ಸಮೀಪ, ಬಲ, ಎಡ, ಒಳಗೆ, ಮೊದಲನೆಯ, ಕೊನೆಯ, ಮಧ್ಯದ

**ಪ್ರಮಾಣ:** ಒಬ್ಬರೆ, ಇಬ್ಬರು ಗುಂಪು, ಒಂದು ಎರಡು, ಮೂರು, ಜೋಡಿ, ಡಜನ್, ಅರ್ಧ, ಭರ್ತಿ.

ಮೂಲಾಂಕನಗಳನ್ನು ಮತ್ತು ಶ್ರೇಣಿ ಅಂಕಗಳನ್ನು ಅರ್ಥಮಾಡಿಕೊಳ್ಳುವುದು ಗಾತ್ರ, ಅವಕಾಶ ಮತ್ತು ಪರಿಮಾಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳೊಂದಿಗೆ ಪಡೆಯುವ ಅನುಭವಗಳೊಂದಿಗೆ ಆರಂಭವಾಗುತ್ತದೆ. ಈ ಕೆಳಗಿನ ಪದಗಳ ಪಟ್ಟಿ ಶಾಲಾಪೂರ್ವ ವರ್ಷಗಳಲ್ಲಿ ಮಕ್ಕಳಿಗೆ ಪರಿಚಯವಾಗಿರಬೇಕಾದ ಮತ್ತು ಪ್ರಾಥಮಿಕ ತರಗತಿಗಳಲ್ಲಿ ಸಂಖ್ಯಾಕಾರ್ಯಗಳಿಗೆ ಪೂರ್ವಾವಶ್ಯಕವಾಗಿರುವ ಪರಿಕಲ್ಪನಾ ಪದಗಳನ್ನು ತಿಳಿಸುತ್ತದೆ.

| | | | |
|---|---|---|---|
| ಎತ್ತರವಾದ | ಗಿಡ್ಡವಾದ | ಉದ್ದವಾದ | ಇಕ್ಕಟ್ಟಾದ |
| ದಪ್ಪನಾದ | ತೆಳುವಾದ | ಅಗಲವಾದ | ಕೆಳಗೆ |
| ಎತ್ತರದಲ್ಲಿರುವ | ಕೆಳಗಿನ | ಮೇಲೆ | ಹೊರಗೆ |
| ಮೇಲಿರುವ | ಅಡಿಯಲ್ಲಿರುವ | ಒಳಗೆ | ಹಿಂದೆ |
| ಹತ್ತಿರದಲ್ಲಿರುವ | ದೂರದ | ಮುಂದುಗಡೆ | ನಾಲ್ಕನೆಯ |
| ಸುತ್ತಲಿರುವ | ಮೂಲಕ | ನಡುವೆ | ಕೆಲವು |
| ಮೊದಲಿರುವ | ನಂತರದಲ್ಲಿ | ಪಕ್ಕದಲ್ಲಿ | ನಿಧಾನ |
| ಮೇಲುಗಡೆ ಇರುವ | ಕೆಳಭಾಗ | ಒಂದೇ ತೂಕ | ಪಿಸುಗುಟ್ಟುವ |
| ಹಿಂಭಾಗ | ಮುಂದೆ | ಮಧ್ಯ | ರಾತ್ರಿ |
| ಎಡ | ಬಲ | ಮೂರನೆಯ | ಹೋಗು |
| ಹಗುರವಾದ | ಭಾರವಾದ | ಅನೇಕ | |
| ಮೊದಲಿನ | ಕೊನೆಯ | ಒಂದೇ ಮಟ್ಟ | |
| ಒಂದನೆಯ | ಎರಡನೆಯ | ವೇಗವಾದ | |
| ಹೆಚ್ಚಾದ | ಕಡಿಮೆಯಾದ | ಕಿರುಚುವ | ಸ್ವಲ್ಪ ಬೆಚ್ಚನೆಯ |
| ಅದೇ | ಬೇರೆಯಾದ | ಸಾಯಂಕಾಲ | |
| ತುಂಬಿದ | ಖಾಲಿಯಾದ | ನಿಲ್ಲು | |
| ದೀರ್ಘಕಾಲ | ಅಲ್ಪಕಾಲ | | |
| ಜೋರಾದ | ಮೆದುವಾದ | | |
| ಬೆಳಗ್ಗೆ | ಮಧ್ಯಾಹ್ನ | | |
| ತಳ್ಳು | ಎಳೆ | | |
| ಶೀತ | ಬಿಸಿ | | |

ಪದಗಳ ಪರಿಕಲ್ಪನೆಗಳನ್ನು ಕೇವಲ ಅವುಗಳ ಬಗ್ಗೆ ಮಾತನಾಡುವುದರಿಂದ ಅಥವಾ ಮಕ್ಕಳು ಅವುಗಳ ಗಿಳಿಪಾಠ ಮಾಡುವಂತೆ ಮಾಡುವುದರಿಂದ ಕಲಿಸಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಮಕ್ಕಳು ಅನುಭವಗಳ ಮೂಲಕ ಕಲಿತುಕೊಳ್ಳುತ್ತಾರೆ. ಉದಾಹರಣೆಗೆ ಮಕ್ಕಳು 'ಮುಳುಗು' ಅಥವಾ 'ತೇಲು' ಎನ್ನುವ ಪದ ಪರಿಕಲ್ಪನೆಗಳನ್ನು ವಸ್ತುಗಳನ್ನು ನಿಜವಾಗಿಯೂ ನೀರಿನಲ್ಲಿ ಹಾಕಿದಾಗ ಕೆಲವು ವಸ್ತುಗಳು ನೀರನ್ನು ಹೀರಿಕೊಂಡು ಮುಳುಗುತ್ತವೆ. ಕೆಲವು ತೇಲುತ್ತವೆ ಎನ್ನುವುದನ್ನು ವೀಕ್ಷಿಸಿ ಅರ್ಥಮಾಡಿಕೊಳ್ಳುತ್ತಾರೆ. ಈ ಪದಗಳನ್ನು ಆಟಗಳು, ಕಥೆಗಳು ಮತ್ತು ಕ್ಷೇತ್ರ ಪ್ರವಾಸಗಳ ಮೂಲಕ ಮಕ್ಕಳು ಅರ್ಥಮಾಡಿಕೊಳ್ಳುವಂತೆ ಶಿಕ್ಷಕರು ಸಹಾಯ ಮಾಡಬಹುದು.

Digitised by Bharatavani, CIIL

ಅಳತೆ ಮಾಡುವುದು, ಹೊಂದಿಸುವುದು, ಎಲೆಗಳ ಆಕೃತಿ, ದಳಗಳ ಆಕೃತಿಗಳನ್ನು ವರ್ಗೀಕರಿಸುವುದು, ಬೀಜಗಳು/ಎಲೆಗಳು/ಕಲ್ಲುಗಳು ಮುಂತಾದವುಗಳನ್ನು ಎಣಿಸುವುದು, ಬೀಜಗಳು ಚಿಪ್ಪುಗಳು ಮುಂತಾದವನ್ನು ಜೋಡಿಸುವುದು ಗಿಡಗಳು, ಮರಗಳ ಪಜಲ್ಸ್ ಮುಂತಾದ ಅಂಕಿಗಳ ಸಿದ್ಧತೆ ಚಟುವಟಿಕೆಗಳ ಮೂಲಕ ಶಿಕ್ಷಕರು ಮಕ್ಕಳಿಗೆ ಸಂಖ್ಯಾ ಪರಿಕಲ್ಪನೆಗಳ ಮೂರ್ತ ಸೂಚಕಗಳನ್ನು ಒದಗಿಸಬಹುದು. ಮಕ್ಕಳು ವಸ್ತುಗಳನ್ನು ನೋಡಿ, ಸ್ಪರ್ಶಿಸಿ, ಮತ್ತು ಮಾತನಾಡಿ ತಮ್ಮ ಯೋಚನೆಗಳನ್ನು ವ್ಯಕ್ತಪಡಿಸಬೇಕು. ದೃಷ್ಟಿಸೂಚಕಗಳು ಪರಿಕಲ್ಪನೆಗಳನ್ನು ಪ್ರತಿನಿಧಿಸುವ ಉದಾಹರಣೆಗಳು ಅಥವಾ ಚಿತ್ರಗಳನ್ನು ಮಕ್ಕಳಿಗೆ ಪರಿಚಯಿಸಬೇಕು. ಉದಾಹರಣೆಗೆ ನಾಲ್ಕು ಅಂಕಿಗಳ ಗುಂಪನ್ನು ತೋರಿಸುವ ಕಾರ್ಡ್.

**ಸಂಜ್ಞಾನಾತ್ಮಕ ಮತ್ತು ಪರಿಕಲ್ಪನಾತ್ಮಕ ಸಿದ್ಧತೆ:**

ಶಾಲಾ-ಪೂರ್ವ ಹಂತದ ಮಗು ಅನೇಕ ಹೊಸ ಪರಿಕಲ್ಪನೆಗಳನ್ನು ಕಲಿತುಕೊಳ್ಳುತ್ತದೆ ಮಗುವಿನ ಸೀಮಿತ ಶಬ್ದಭಂಡಾರದಿಂದಾಗಿ ಮತ್ತು ಜನಗಳು ಮತ್ತು ವಸ್ತುಗಳೊಂದಿಗಿನ ಸೀಮಿತ ಅನುಭವಗಳಿಂದಾಗಿ ಮಗುವಿನ ಅನೇಕ ಪರಿಕಲ್ಪನೆಗಳು ಅಪೂರ್ಣವಾಗಿ, ದೋಷಯುಕ್ತವಾಗಿ ಅಥವಾ ವಾಸ್ತವದಲ್ಲಿ ತಪ್ಪಾಗಿಯೂ ಇರಬಹುದು. ಅದೂ ಅಲ್ಲದೆ, ಪರಿಕಲ್ಪನೆಗಳು ಸಂವೇಗಾತ್ಮಕ ಅಂಶಗಳಿಂದ ಅತಿಯಾಗಿ ಸಂವೇಗಾತ್ಮಕ ಸ್ವರೂಪದವುಗಳಾಗಿದ್ದರೆ ಹೊಸ ಮಾಹಿತಿಗಳು ಮೊದಲಾದವು ತಪ್ಪಾದ ಪರಿಕಲ್ಪನೆ ನಿಖರತೆಯನ್ನು ಹೆಚ್ಚಿಸುವಂತಿದ್ದರೂ ಅವುಗಳನ್ನು ಬದಲಾಯಿಸಿಕೊಳ್ಳಲು ಮಕ್ಕಳಲ್ಲಿ ಪ್ರತಿರೋಧ ಉಂಟಾಗುತ್ತದೆ.

ಆರಂಭಿಕ ಬಾಲ್ಯಾವಸ್ಥೆಯಲ್ಲಿ ವಿಕಾಸವಾಗುವ ಅತಿ ಸಾಮಾನ್ಯ ಪರಿಕಲ್ಪನೆಗಳೆಂದರೆ ಸಂಖ್ಯೆಗಳು, ಸಮಯ, ತೂಕ, ಅವಕಾಶ, ಅಹಂ ಪ್ರತ್ಯಯ, ಗಾತ್ರ ಮತ್ತು ಆಕಾರ, ಹುಟ್ಟು ಮತ್ತು ಸಾವು, ಸಂಬಂಧಗಳು, ಸಂಗೀತ, ಸೌಂದರ್ಯ ಪ್ರಜ್ಞೆ ಪರಿಕಲ್ಪನೆಗಳು, ಸಾಮಾಜಿಕ ಪರಿಕಲ್ಪನೆಗಳು, ಘಟನೆಗಳು, ಸಜೀವಿಗಳು ಮತ್ತು ನಿರ್ಜೀವ ವಸ್ತುಗಳು.

ಮಕ್ಕಳಲ್ಲಿ ಸಂಜ್ಞಾನಾತ್ಮಕ ವಿಕಾಸವನ್ನು ಗುರ್ತಿಸುತಾ ಪಿಯಾಜೆ ಶಾಲಾ-ಪೂರ್ವ ವಯಸ್ಸಿನ ಮಕ್ಕಳು ಸಂಪೂರ್ಣವಾಗಿ ತಮ್ಮದೇ ಆದ ದೃಷ್ಟಿಕೋನದಿಂದ ವಸ್ತುಗಳನ್ನು/ಸಂಬಂಧಗಳನ್ನು/ಘಟನೆಗಳನ್ನು ನೋಡುತ್ತಾರೆ ಎಂದು ಹೇಳುತ್ತಾರೆ. ಶಾಲಾಪೂರ್ವ ವಯಸ್ಸಿನ ಮಕ್ಕಳು ವಯಸ್ಕರೂ ತಾವು ಮಾಡಿದಂತೆ ಘಟನೆಗಳನ್ನು ಮತ್ತು ಕ್ರಿಯೆಗಳನ್ನು ನೋಡುತ್ತಾರೆ. ಗ್ರಹಿಸುತ್ತಾರೆ ಮತ್ತು ಅರ್ಥೈಸುತ್ತಾರೆ ಎಂದು ಭಾವಿಸುತ್ತಾರೆ. ತಮ್ಮಂತೆಯೇ ಬೇರೆಯವರು ಸಹ ನೋಡುತ್ತಾರೆ. ಕೇಳುತ್ತಾರೆ ಮತ್ತು ಭಾವಿಸುತ್ತಾರೆ ಎಂದು ಊಹಿಸಿಕೊಳ್ಳುತ್ತಾರೆ. ತಾವು ಏನನ್ನು ಮಾಡಲು ಸಾಧ್ಯವಾಗುತ್ತದೆಯೋ ಅದೆಲ್ಲವನ್ನು ಬೇರೆಯವರೂ ಮಾಡಬಲ್ಲರು ಎಂದು ಯೋಚಿಸುತ್ತಾರೆ. ತಾವು ಸಂತೋಷದ ಅನುಭವ ಪಡೆಯುತ್ತಿದ್ದರೆ ಬೇರೆಯವರೂ ಅದೇ ಅನುಭವ ಪಡೆಯಬೇಕೆಂದು ಭಾವಿಸುತ್ತಾರೆ. ಅವರು ಕಣ್ಣುಮುಚ್ಚಿಕೊಂಡಾಗ ಏನೂ ಕಾಣಿಸದಿದ್ದಲ್ಲಿ, ಅದೇ ಸಮಯದಲ್ಲಿ ಕೊಠಡಿಯಲ್ಲಿರುವ ಬೇರೆಯವರಿಗೂ ಏನು ಕಾಣಿಸುವುದಿಲ್ಲವೆಂದು ಊಹಿಸಿಕೊಳ್ಳುತ್ತಾರೆ. ಮಕ್ಕಳ ಈ ಮಾನಸಿಕ ಲಕ್ಷಣವನ್ನು ಪಿಯಾಜೆ 'ಅಹಂ ಕೇಂದ್ರಿತ್ವ' (Ego centrisim) ಎಂದು ಕರೆದಿದ್ದಾರೆ ಶಾಲಾಪೂರ್ವ ವಯಸ್ಸಿನ ಮಕ್ಕಳಿಗೆ ಬೇರೆಯವರು ಒಂದು ವಸ್ತುಕ್ರಿಯೆ/ಘಟನೆಯ ಬಗ್ಗೆ ಬೇರೆ ರೀತಿಯಲ್ಲಿ ನೋಡಬಲ್ಲರು ಮತ್ತು ಬೇರೆ ತೀರ್ಮಾನಗಳಿಗೆ ಬರಬಲ್ಲರು ಎಂಬುದನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ. ಶಾಲಾಪೂರ್ವ ಸಂಸ್ಥೆಯಲ್ಲಿ ಸಿದ್ಧತಾ ತರಬೇತಿ ಸಮಯದಲ್ಲಿ ಮಕ್ಕಳು ಪಡೆದುಕೊಳ್ಳಲು ಸಹಾಯ ಕೊಡಬೇಕಾದ ಸಂಜ್ಞಾನಾತ್ಮಕ ಸಾಮರ್ಥ್ಯಗಳು ಈ ಕೆಳಕಂಡಂತಿವೆ:

**(i) ಜೋಡಿಸುವ ಸಾಮರ್ಥ್ಯ:**

ಮೂರು ಮತ್ತು ನಾಲ್ಕು ವರ್ಷದ ಮಕ್ಕಳಿಗೆ ವಸ್ತುಗಳ ಸಂಗ್ರಹವನ್ನು ಕೊಟ್ಟಾಗ ಎರಡು ವಸ್ತುಗಳು ಸರಿಜೋಡಿಯಾಗಿದ್ದು ಬೇರೆ ವಸ್ತುಗಳು ಬೇರೆಬೇರೆಯಾಗಿದ್ದಲ್ಲಿ ಆ ಸರಿಜೋಡಿ ವಸ್ತುಗಳನ್ನು ಗುರ್ತಿಸಬಲ್ಲರು. ಇದೇ ರೀತಿ, ಒಂದು ವಸ್ತುವನ್ನು ಹೊರತುಪಡಿಸಿ ಉಳಿದ ಎಲ್ಲಾ ವಸ್ತುಗಳೂ ಒಂದೇ ರೀತಿಯದಾಗಿರುವ ಸಂಗ್ರಹದಲ್ಲಿ ಈ ವಯಸ್ಸಿನ ಮಕ್ಕಳು ಬೇರೆಯಾಗಿರುವ ವಸ್ತುವನ್ನು ತೋರಿಸಬಲ್ಲರು.

**(ii) ಸಾಮಾನ್ಯ ಸಂಬಂಧಗಳನ್ನು ಗುರ್ತಿಸುವುದು:**

ಶಾಲಾಪೂರ್ವ ಮಕ್ಕಳು ಸಮಾನವಲ್ಲದ ಎರಡು ವಸ್ತುಗಳ ನಡುವೆ ಇರುವ ಸಾಮಾನ್ಯ ಲಕ್ಷಣಗಳನ್ನು ಅಥವಾ ಸಂಬಂಧವನ್ನು ಗುರ್ತಿಸಬಲ್ಲರು.ಈ ಕ್ರಿಯೆ ಜೋಡಿಸುವುದಕ್ಕಿಂತ ಭಿನ್ನವಾದುದು. ಜೋಡಿಸುವುದರಲ್ಲಿ ಯಾವಾಗಲೂ ಸಮಾನವಾಗಿರುವ ಜೊತೆಗಳನ್ನು ಗುರ್ತಿಸಬೇಕಾಗುತ್ತದೆ. ಆದರೆ ಸಾಮಾನ್ಯ ಸಂಬಂಧ ಗುರ್ತಿಸುವುದರಲ್ಲಿ ಸಮಾನವಲ್ಲದ ಜೊತೆಗಳು ಇರುತ್ತವೆ. ಸಾಮಾನ್ಯ ಸಂಬಂಧಗಳ ಆಧಾರದ ಮೇಲೆ ವಸ್ತುಗಳನ್ನು ಜೋಡಿಸುವುದನ್ನು ಕಲಿಯುವುದು ಮುಂದಿನ ವಸ್ತುಗಳಲ್ಲಿ ಸಂಖ್ಯೆ/ಗಣಿತದ ಪರಿಕಲ್ಪನೆಗಳ ಗ್ರಹಿಕೆಗೆ ಅಗತ್ಯವಾದ ಒಂದಕ್ಕೆ ಒಂದು ಸರಿಸಂಬಂಧವನ್ನು ಗ್ರಹಿಸಿಕೊಳ್ಳಲು ಸಹಾಯ ಮಾಡುತ್ತದೆ.

**(iii) ಅನುಕ್ರಮಗೊಳಿಸವಿಕೆ:**

ಅನುಕ್ರಮಗೊಳಿಸುವಿಕೆ ಎಂದರೆ ವಸ್ತುಗಳನ್ನು ಗಾತ್ರದ ಆಧಾರದ ಮೇಲೆ ಶ್ರೇಣಿಬದ್ಧವಾಗಿ ಇಡುವುದು. ಅಂದರೆ ವಸ್ತುಗಳನ್ನು ಆರೋಹಣ ಅಥವಾ ಅವರೋಹಣ ಕ್ರಮದಲ್ಲಿ ಇಡುವುದು ಅನುಕ್ರಮಗೊಳಿಸುವ ಸಾಮರ್ಥ್ಯದ ಹಿಂದೆ ದೊಡ್ಡದು ಅತಿದೊಡ್ಡದು ಅತ್ಯಂತ ದೊಡ್ಡದು. ಸಣ್ಣದು-ಅತಿಸಣ್ಣದು-ಅತ್ಯಂತ ಸಣ್ಣದು ಇತ್ಯಾದಿ ಪರಿಕಲ್ಪನೆಯ ಗ್ರಹಿಕೆ ಇರಬೇಕಾಗುತ್ತದೆ. ಶಾಲಾ-ಪೂರ್ವ ಅವಧಿಯಲ್ಲಿ ಮಕ್ಕಳು ವಸ್ತುಗಳನ್ನು ಸರಿಯಾಗಿ, ಮತ್ತು ಸ್ಥಿರವಾಗಿ ಅನುಕ್ರಮವಾಗಿ ಇಡಲು ಶಕ್ತರಾಗಬೇಕು.

Digitised by Bharatavani, CIIL

**(iv) ಕಾರಣ ಮತ್ತು ಪರಿಣಾಮ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು:**

ಕಾರಣ ಮತ್ತು ಪರಿಣಾಮ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಎಲ್ಲಾ ವೈಜ್ಞಾನಿಕ ಅನ್ವೇಷಣೆಗಳಿಗೆ ಮೂಲವಾದುದು. ಕಾರಣ ಪರಿಣಾಮ ಸಂಬಂಧದ ಗ್ರಹಿಕೆ ಮಗುವಿಗೆ ವಸ್ತುಗಳ ನಡುವೆ ಒಂದು ವ್ಯವಸ್ಥೆ (ಕ್ರಮ) ಇದೆ ಎಂಬುದನ್ನು ತಿಳಿಸುತ್ತದೆ. ಕಾರಣ ಪರಿಣಾಮ ಸಂಬಂಧಗಳನ್ನು ಗ್ರಹಿಸಲು ಶಾಲಾ–ಪೂರ್ವ ಮಕ್ಕಳಿಗೆ ಸಹಾಯ ಮಾಡಬೇಕು. ಮತ್ತು ತಾವು ವಸ್ತುಗಳ ಮೇಲೆ ಪರಿಣಾಮ ಬೀರಿ, ಘಟನೆಗಳುಂಟಾಗುವಂತೆ ಮಾಡಬಲ್ಲೆವು ಎಂಬುದನ್ನು ತಿಳಿದುಕೊಳ್ಳಲು ಮಕ್ಕಳಿಗೆ ಸಹಾಯ ಮಾಡಬೇಕು.

**ಶಾಲಾ ಸಿದ್ಧತೆಗೆ ಸಿದ್ಧಪಡಿಸುವಲ್ಲಿ ವಯಸ್ಕರ ಪಾತ್ರ:**

**ವೀಕ್ಷಕ:** ನೀವು ವೀಕ್ಷಕರಾಗಿದ್ದಲ್ಲಿ ಮಗುವಿನ ಶಬ್ದ ಭಂಡಾರದ ಬೆಳವಣಿಗೆ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು, ಮಗುವಿನ ಭಾಷಾ ವಿಕಾಸವನ್ನು ವಿಸ್ತರಿಸಲು, ತನ್ನ ಕೋಪ/ಭಯ ಇತ್ಯಾದಿಗಳನ್ನು ವ್ಯಕ್ತಗೊಳಿಸಲು ಶಬ್ದ(ಪದ)ಗಳನ್ನು ಉಪಯೋಗಿಸಲು ಮಗುವನ್ನು ಪ್ರೋತ್ಸಾಹಿಸುವುದನ್ನು ಕಲಿತುಕೊಳ್ಳಬಹುದು.

**ಸಹಭಾಗಿ:** ವಯಸ್ಕರು ಮಗುವಿನ ಚಟುವಟಿಕೆಗಳಲ್ಲಿ ನೇರವಾಗಿ ಪಾಲ್ಗೊಳ್ಳುವುದು ಮಕ್ಕಳ ಭಾಷೆಯನ್ನು ವೃದ್ಧಿಸುವುದೇ ಅಲ್ಲದೆ, ಅವರ ಕ್ರೀಡೆಯ ಮಟ್ಟವನ್ನು ಹೆಚ್ಚಿಸುತ್ತದೆ. ಆದರೆ ದೀರ್ಘಕಾಲ ಮಗುವಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಡಿ. ಇದರಿಂದ ನೀವು ಅವರ ಆಟಗಳ ಮೇಲೆ ಅಗತ್ಯಕ್ಕಿಂತ ಹೆಚ್ಚು ಪರಿಣಾಮ ಬೀರುವ ಅಪಾಯವಿದೆ.

**ತಪಸೀಲುದಾರ:** ಮಗುವಿನ ದಿನನಿತ್ಯದ ಚಟುವಟಿಕೆಗಳ ದಿನಚರಿ ಭಾಷಾ ವಿಕಾಸದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ಮಕ್ಕಳು ಆತುರತೆ ಅನುಭವ ಪಡೆದರೆ ಅವರ ಊಹಾಸಾಮರ್ಥ್ಯ ಮತ್ತು ಭಾಷೆಯನ್ನು ಉಪಯೋಗಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಮಧ್ಯೆ ಮಧ್ಯೆ ದೀರ್ಘ ಅವಧಿಗಳ ಸಮಯಕ್ಕೆ ಅವಕಾಶ ಕಲ್ಪಿಸಿ ಸಂಗೀತದ ಸಮಯದ ನಂತರ ಒಳಾಂಗಣ ಆಟಗಳನ್ನು ಆಡಬಲ್ಲರು ಎಂದು ತಿಳಿದುಕೊಳ್ಳುವಂತೆ ತಪಸೀಲನ್ನು ಸಿದ್ಧಪಡಿಸಿ ಆಗಾಗ್ಗೆ ತಪಸೀಲಿನ (ವೇಳಾಪಟ್ಟಿ) ಬಗ್ಗೆ ಮಕ್ಕಳಿಗೆ ತಿಳಿಸುತ್ತಿರಿ.

**ಪುನರ್ಬಲನಕರ್ತ:** ಮಕ್ಕಳು ಭಾಷೆಯನ್ನು ಉಪಯೋಗಿಸಲು ಪ್ರಯತ್ನ ಮಾಡಿದಾಗಲೆಲ್ಲಾ ಅವರಿಗೆ ಪುನರ್ಬಲನ ಕೊಡಿ, ಮೂರು ವರ್ಷದ ಒಂದು ಮಗು ತನ್ನ ಷರ್ಟ್ ಕೊಳೆಯಾಗಿದೆ ಎಂದು ಹೇಳಿದರೆ, ಅದರ ಪ್ರಯತ್ನವನ್ನು ಒಪ್ಪಿಕೊಂಡು 'ಹೌದು, ಅದನ್ನು ವಾಶ್ ಮಾಡಿದರೆ ಶುಭ್ರವಾಗುತ್ತದೆ' ಎಂದು ಹೇಳಿ.

**ಮಾರ್ಗದರ್ಶಕ:** ಒಬ್ಬ ಯಶಸ್ವಿ ಮಾರ್ಗದರ್ಶಕರಾಗಬೇಕಾಗಿದ್ದಲ್ಲಿ ಮಕ್ಕಳ ಇಂಗಿತಗಳನ್ನು ಅರ್ಥ ಮಾಡಿಕೊಳ್ಳಿ ಅವರ ಆಸಕ್ತಿಗಳನ್ನು ಬೆಳೆಸಿ. ಮಕ್ಕಳ ಸಾಮರ್ಥ್ಯಗಳಿಗೆ ನಿಮ್ಮನ್ನು ಹೊಂದಿಸಿಕೊಳ್ಳಿ. ಇದರಿಂದ ಅವರು ತೆಗೆದುಕೊಳ್ಳಬಹುದಾದಂಥ ಸವಾಲುಗಳನ್ನು ನೀವು ಅವರಿಗೆ ಕೊಡಲು ಸಾಧ್ಯವಾಗುತ್ತದೆ ಮತ್ತು ಇದರಿಂದ ಮಕ್ಕಳ ಆತ್ಮಗೌರವವನ್ನು ಹೆಚ್ಚಿಸಲು ಸಹಾಯಕವಾಗುತ್ತದೆ.

**ಮಾಹಿತಿ ಕೊಡುವವ:** ಮಾಹಿತಿ ಕೊಡುವುದು ಭಾಷೆಯ ಕಾರ್ಯಗಳಲ್ಲಿ ಬಹು ಮುಖ್ಯವಾದುದು. ರಾಜು ನಿಮ್ಮನ್ನು 'ಪಾರ್ಕಿಗೆ ಹೋಗುವುದು ಹೇಗೆ?' ಎಂದು ಕೇಳಿದಾಗ, ನೀವು ಶಾಬ್ದಿಕವಾಗಿ ನಾವು ಬಸ್ಸಿನಲ್ಲಿ ಹೋಗುತ್ತಿದ್ದೇವೆ' ಎಂದು ಉತ್ತರಿಸಿ. ಸಂಕೇತಗಳ ಒಂದು ಭೂಪಟ ಮಾಡಿ ಪಾರ್ಕಿನ ಒಳಗಡೆ ನೀವು ಕರೆದುಕೊಂಡು ಹೋಗುವ ಮಾರ್ಗವನ್ನು ಮಕ್ಕಳಿಗೆ ತೋರಿಸಿ ಬರವಣಿಗೆಯ ಮೂಲಕವೂ ಅದನ್ನು ತೋರಿಸಿ ಇದು ಮಕ್ಕಳಿಗೆ ಉಪಯುಕ್ತ ಮಾಹಿತಿಯ ಮೂಲವಾಗುತ್ತದೆ.

**ನಿರ್ವಾಹಕ:** ಕೇಂದ್ರಗಳನ್ನು ಮತ್ತು ಸಾಮಗ್ರಿಗಳನ್ನು ಸಂಘಟಿಸುವಾಗ ಹೆಚ್ಚು ಹೆಚ್ಚು ನಿಮಗೂ ಮಕ್ಕಳಿಗೂ ನಡುವೆ ಸಂಭಾಷಣೆಯನ್ನು ಪ್ರೋತ್ಸಾಹಿಸುವಂಥ ಸಣ್ಣ ಗುಂಪುಗಳ ಮತ್ತು ಒಂದಕ್ಕೆ ಒಂದರ ಚಟುವಟಿಕೆಗಳನ್ನು ಏರ್ಪಡಿಸಿ ಉತ್ಪನ್ನಕ್ಕಿಂತ ಪ್ರಕ್ರಿಯೆಗೆ ಹೆಚ್ಚು ಒತ್ತು ಕೊಡಿ.

**ಮೌಲ್ಯಮಾಪನ ಕರ್ತ:**

ನೀವು ಮಗುವನ್ನು ವೀಕ್ಷಣೆ ಮಾಡಿದ್ದರೆ, ನೀವು ನೋಡಿದುದನ್ನು ವಿಶ್ಲೇಷಿಸಿ ಏಕೆಂದರೆ ನಿಮ್ಮ ನಾಲ್ಕು ವರ್ಷದ ಮಗುವಿಗೆ ಗಮನ ಕೇಂದ್ರೀಕರಿಸುವುದು ಕಷ್ಟವಾಗುತ್ತಿದೆ ಎಂಬುದು ಮಗುವನ್ನು ಸ್ವಲ್ಪ ಕಾಲ ವೀಕ್ಷಿಸಿದ ನಂತರ ನಮಗೆ ತಿಳಿಯುತ್ತದೆ. ಆಗ ನೀವು ಮಗುವಿನ ಶ್ರವಣ ಮತ್ತು ಅವಧಾನ ಕೌಶಲಗಳನ್ನು ಹೆಚ್ಚಿಸಲು ಒಂದು ಆಟವನ್ನು ರೂಪಿಸಬಹುದು ಉದಾಹರಣೆಗೆ ಒಂದು ರ್‍ಯಾಟ್ಲರನ್ನು ನಿಧಾನವಾಗಿ ತಿರುಗಿಸುವುದು, ನಂತರ ಜೋರಾಗಿ ಅಥವಾ ಬೇಗಬೇಗ ಅಥವಾ ನಿಧಾನವಾಗಿ ತಿರುಗಿಸುವುದು.

ಮಕ್ಕಳಿಗೆ ಗಹನವಾದ ರೀತಿಯಲ್ಲಿ, ಅರ್ಥಪೂರ್ಣ ರೀತಿಯಲ್ಲಿ ಸಿದ್ಧತಾ ಅನುಭವಗಳನ್ನು ಅವುಗಳ ಎಲ್ಲಾ ಲಕ್ಷಣಗಳೊಂದಿಗೆ ಒದಗಿಸುವುದು ಶಾಲಾಪೂರ್ವ ಹಂತದ ಸಿದ್ಧತಾ ತರಬೇತಿಯ ನಂತರ ಔಪಚಾರಿಕ ಶಾಲಾಶಿಕ್ಷಣಕ್ಕೆ ಸುಲಲಿತವಾಗಿ ಸ್ಥಿತ್ಯಂತರಗೊಳ್ಳಲು ಸಹಾಯ ಮಾಡುತ್ತದೆ. ಮತ್ತು ಮುಂಬರುವ ವರ್ಷಗಳಲ್ಲಿ ಕಲಿಕೆಯನ್ನು ಹಾಗೂ ಜೀವನವನ್ನು ಆನಂದಿಸಲು ಸಹಾಯಮಾಡುತ್ತದೆ.

**ಮೂಲ: ರಾಜಮ್ಮಾಳ್ ಪಿ.ದೇವದಾಸ್, ಎನ್. ಜಯ**

**ಅನು: ಪ್ರೊ. ಮಂಜುನಾಥಯ್ಯ ಬಿ.ಎನ್.**

Digitised by Bharatavani, CIIL

## ಶಾಲೆಯ ವಾತಾವರಣದ ಪರಿಕಲ್ಪನೆ

**ಪೀಠಿಕೆ:** ಯಾರಾದರೂ ಎರಡಕ್ಕಿಂತ ಹೆಚ್ಚು ಶಾಲೆಗಳಿಗೆ ಭೇಟ್ಟಿ ಕೊಟ್ಟಾಗ ತಮ್ಮ ಅನುಭವದ ಮೇಲೆ ಆ ಶಾಲೆಗಳು ಹೇಗೆ ಒಂದರಿಂದ ಮತ್ತೊಂದು ಭಿನ್ನವಾಗಿದೆ ಎಂಬುದನ್ನು ತಿಳಿಸುವರು. ಒಂದು ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರ ನಡುವೆ ಅತ್ಯಂತ ಮಧುರ ಸಂಬಂಧವಿರುತ್ತದೆ ಮತ್ತು ಒಬ್ಬರಲ್ಲಿ ಮತ್ತೊಬ್ಬರು ವಿಶ್ವಾಸವನ್ನು ಹೊಂದಿರುತ್ತಾರೆ. ಅಲ್ಲದೆ ಅರು ಆತ್ಮವಿಶ್ವಾಸದಿಂದ ಕೆಲಸ ಮಾಡುವರು. ಒಬ್ಬರಿಗೊಬ್ಬರು ಕೂಡಿಕೊಂಡು ಕೆಲಸ ಮಾದುವುದರಲ್ಲಿ ಸಂಗೋಷವನ್ನು ಹೊಂದಿರುತ್ತಾರೆ. ಈ ಸಂತೋಷ ಕರವಾದ ವಾತಾವರಣವು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿ ಅವರು ತಮ್ಮ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ತೋರುವರು. ಒಟ್ಟಿನಲ್ಲಿ ಶಾಲಾ ವಾತಾವರಣವು ಸಂತೋಷದಾಯಕವಾಗಿರುತ್ತದೆ. ಇನ್ನೊಂದು ಶಾಲೆಯಲ್ಲಿ ಶಿಕ್ಷಕರು ಅತೃಪ್ತಿ ಹೊಂದಿರುತ್ತಾರೆ. ಮುಖ್ಯೋಪಾಧ್ಯಾಯ ತನ್ನ ಅಸಮರ್ಥತೆಯನ್ನು ಗೌಪ್ಯವಾಗಿಡಲು ಪ್ರಯತ್ನಿಸುತ್ತಾನೆ. ಶಿಕ್ಷಕರಿಗೆ ಸರಿಯಾದ ನಿರ್ದೇಶನವನ್ನು ಮತ್ತು ಮಾರ್ಗದರ್ಶನವನ್ನು ಕೊಡುವದಿಲ್ಲ. ಈ ರೀತಿಯ ವಾತಾವರಣವು ಮಕ್ಕಳ ಮೇಲೆ ಪ್ರಭಾವ ಬೀರಿ, ಅವರು ಅಸಂತುಷ್ಟರಾಗುವಂತೆ ಮಾಡುತ್ತದೆ. ಇದರಿಂದ ಶಿಕ್ಷಕರು ಅಸಂತುಷ್ಟರಾಗುತ್ತಾರೆ. ಮೂರನೆ ಶಾಲೆಯು ಸಂತೋಷಕರವಾದ ವಾತಾವರಣವನ್ನು ಹೊಂದಿರುವುದಿಲ್ಲ. ಆದರೆ ಎಲ್ಲರೂ ಶಾಲೆಯ ಸಂಪ್ರದಾಯ, ನೀತಿ–ನಿಯಮಾವಳಿಗೆ ಅನುಗುಣವಾಗಿ ಕೆಲಸ ಮಾಡುತ್ತಿರುತ್ತಾರೆ. ಹೀಗೆ ಒಂದು ಶಾಲೆಯು ಮತ್ತೊಂದು ಶಾಲೆಯಿಂದ ಭಿನ್ನವಾಗಿರುತ್ತದೆ. ಪ್ರತಿಯೊಂದು ಶಾಲೆಯು ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿರುತ್ತದೆ. ಈ ವ್ಯಕ್ತಿತ್ವವನ್ನು ತಜ್ಞರು 'ಶಾಲಾ ಸಂಘಟನಾ ವಾತಾವರಣ' ಎಂದು ಕರೆದಿರುತ್ತಾರೆ.

ಈ ರೀತಿಯಾಗಿ ಶಾಲೆಗಳಿಗೆ ಭೆಟ್ಟಿ ಕೊಟ್ಟು ಶಾಲಾ ಸಂಘಟನಾ ವಾತಾವರಣವನ್ನು ವೀಕ್ಷಿಸಿ ಅದನ್ನು ಸಂಶೋಧನಾ ಅಧ್ಯಯನ ವಿಷಯವನ್ನಾಗಿ ಅನೇಕ ತಜ್ಞರು ಆಯ್ಕೆ ಮಾಡಿಕೊಂಡಿರುತ್ತಾರೆ. ಶಾಲಾ ಸಂಘಟನಾ ವಾತಾವರಣವನ್ನು ಆಳವಾಗಿ ಅಧ್ಯಯನ ಮಾಡಿದಾಗ ನಮಗೆ ಅದರ ವಿವಿಧ ಮುಖಗಳ ಪರಿಚಯ ಆಗುವುದುಂಟು. ಆಳವಾದ ಆಧ್ಯಯನದಿಂದ ಅದರಲ್ಲಿ ಕಂಡುಬರುವ ಕುಂದುಕೊರತೆಗಳನ್ನು ನಿವಾರಿಸಲು ನಮಗೆ ಸಾಧ್ಯವಾಗುತ್ತದೆ. ಶಾಲಾ ವಾತಾವರಣವನ್ನು ಈ ಕೆಳಗೆ ನಮೂದಿಸಿದ 8 ಅಳತೆ ಪ್ರಮಾಣಗಳಿಂದ ಅಧ್ಯಯನ ಮಾಡಬಹುದು:

1) ಸ್ವತಂತ್ರತೆ, 2) ತೊಂದರೆ, 3) ವೃತ್ತಿ ಸಂತೃಪ್ತಿ, 4) ಅನ್ಯೋನ್ಯತೆ, 5) ಏಕಾಂಗಿಯಾಗಿರುವುದು, 6) ಉತ್ಪಾದನಾ ಉದ್ದೇಶಪೂರಿತವಾದುದು, 7) ನಂಬಿಕೆ, 8) ಗೌರವ ಭಾವನೆ.

ಸಂಶೋಧಕರ ಸಂಶೋಧನೆಯ ಫಲಶ್ರುತಿಯಾಗಿ ಶಾಲಾ ವಾತಾವರಣದಲ್ಲಿ 6 ವಿಧಗಳು ಕಂಡುಬರುತ್ತವೆ:

1). ಮುಕ್ತ ವಾತಾವರಣ, 2) ಸ್ವತಂತ್ರ ವಾತಾವರಣ, 3) ನಿರ್ಬಂಧ ವಾತಾವರಣ, 4) ಸಲಿಗೆಯ ವಾತಾವರಣ, 5) ಪಿತೃವಿನ ವಾತಾವರಣ, 6) ಮುಚ್ಚಲ್ಪಟ್ಟ ವಾತಾವರಣ.

**ಶಾಲಾ ವಾತಾವರಣದ ವಿಧಗಳು:**

**1) ಮುಕ್ತ ವಾತವರಣ:** ಈ ರೀತಿಯ ಶಾಲಾ ವಾತಾವರಣದಲ್ಲಿ ಶಿಕ್ಷಕರು ಅತಿ ಹೆಚ್ಚಿನ ವೃತ್ತಿ ಸಂತೃಪ್ತಿಯನ್ನು ಹೊಂದಿರುತ್ತಾರೆ. ಎಲ್ಲ ಶಿಕ್ಷಕರು ಒಗ್ಗೂಡಿಕೊಂಡು ಸ್ವತಂತ್ರವಾಗಿ ಕೆಲಸ ಮಾಡುವರು. ಶಾಲಾ ಆಡಳಿತ ನಿರ್ವಹಣೆಯ ಪ್ರತಿನಿತ್ಯದ ಕೆಲಸಗಳಿಂದ ಮುಕ್ತರಾಗಿರುತ್ತಾರೆ. ಮುಖ್ಯೋಪಾಧ್ಯಾಯರ ನಿಯಮಾವಳಿಗಳು ಸಹ ಶಿಕ್ಷಕರು ತಮ್ಮ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸಹಾಯಕವಾಗಿರುತ್ತವೆ. ಎಲ್ಲ ಶಿಕ್ಷಕರು ಸ್ನೇಹಿತರಂತೆ ಕೆಲಸ ಮಾಡುತ್ತಿರುತ್ತಾರೆ. ಆದರೆ ಅವರಲ್ಲಿ ಅತಿಯಾದ ಸಲಿಗೆ ಇರಕೂಡದೆಂಬುದು ಅವರ ಭಾವನೆ. ಶಿಕ್ಷಕರು ವೃತ್ತಿಯಲ್ಲಿ ಸಂತೃಪ್ತಿಯನ್ನು ಹೊಂದಿರುತ್ತಾರೆ. ಎದುರಾದ ಸಮಸ್ಯೆಗಳನ್ನು ಸಲೀಸಾಗಿ ಬಗೆಹರಿಸಿಕೊಳ್ಳುವಲ್ಲಿ ಸಾಕಷ್ಟು ಪ್ರೇರಣೆಯನ್ನು ಪಡೆದಿರುತ್ತಾರೆ. ಕೆಲಸ ಮಾಡಲು ಪ್ರೇರಣೆಯನ್ನು ಪಡೆದಿರುತ್ತಾರೆ. ಶಾಲೆಯ ಸಂಘಟನೆಯು ಸದಾ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವರು. ಶಾಲೆಯ ಬಗೆಗೆ ಅಭಿಮಾನ ಮತ್ತು ಗೌರವ ಭಾವನೆ ಹೊಂದಿರುತ್ತಾರೆ.

ಮುಖ್ಯೋಪಾಧ್ಯಾಯರು ತಮ್ಮ ವ್ಯಕ್ತಿತ್ವ ಮತ್ತು ತಾವು ನಿರ್ವಹಿಸಬೇಕಾದ ಕಾರ್ಯಗಳಲ್ಲಿ ಹೊಂದಾಣಿಕೆ ಮಾಡಿಕೊಂಡಿರುತ್ತಾರೆ, ಈ ದೃಷ್ಟಿಯಿಂದ ನಿಜವಾದ ವ್ಯಕ್ತಿತ್ವವನ್ನು ಮುಖ್ಯೋಪಾಧ್ಯಾಯರು ಹೊಂದಿರುತ್ತಾರೆ. ಮುಖ್ಯೋಪಾಧ್ಯಾಯರು ತಾವೇ ಸ್ವತಃ ಕಷ್ಟಪಟ್ಟು ಕೆಲಸ ಮಾಡಿ ಬೇರೆಯವರಿಗೆ ಮಾದರಿಯಾಗುತ್ತಾರೆ. ಕೆಲವು ಸಲ ಸಂದರ್ಭಕ್ಕೆ ಅನುಗುಣವಾಗಿ ಶಿಕ್ಷಕರನ್ನು ಟೀಕೆ ಮಾಡುವದುಂಟು ಮತ್ತು ಕೆಲವು ಸಲ ತಾವೇ ಶಿಕ್ಷಕರ ಬಗೆಗೆ ಗೌರವ ಭಾವನೆ ತಾಳಿ ಅವರಿಗೆ ಹೆಚ್ಚಿನ ಸಹಾಯ ಮಾಡುವುದುಂಟು. ಮುಖ್ಯೋಪಾಧ್ಯಾಯರ ವ್ಯಕ್ತಿತ್ವವು ಸಂದರ್ಭಕ್ಕೆ ಅನುಗುಣವಾಗಿ ಹೊಂದಿಕೊಂಡು ಹೋಗುವವದಾಗಿರುತ್ತದೆ. ಕೆಲವು ಸಲ ಶಿಕ್ಷಕರ ಕಾರ್ಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾರೆ ಮತ್ತೆ ಕೆಲವು ಶಿಕ್ಷಕರ ಅವಶ್ಯಕತೆಗಳನ್ನು ಪೂರೈಸುವಲ್ಲಿ ಸಹಾನುಭೂತಿ ಹೊಂದಿದವರಾಗಿರುತ್ತಾರೆ. ಈ ಮುಖ್ಯೋಪಾಧ್ಯಾಯರು ಶಿಕ್ಷಕರಿಂದ ದೂರವಿರುವದಿಲ್ಲ ಮತ್ತು ಅವರು ರೂಪಿಸಿದ ನಿಯಮಾವಳಿಗಳು ಸಂದರ್ಭಕ್ಕೆ ತಕ್ಕಂತೆ ಬದಲಾಗುವಂತಿರುತ್ತವೆ. ಶಿಕ್ಷಕರು ಉತ್ಪಾದನಾ ಕಾರ್ಯದಲ್ಲಿ ತೊಡಗಬೇಕೆಂಬುದನ್ನು ಅವರಿಗೆ ಒತ್ತಾಯ ಮಾಡುವುದಿಲ್ಲ. ಅಲ್ಲದೆ ಅವರ ಎಲ್ಲ ಕಾರ್ಯಗಳಿಗೆ ನಾಯಕರಾಗಿ ಮಾರ್ಗದರ್ಶನವನ್ನು ಮಾಡುವುದಿಲ್ಲ. ಏಕೆಂದರೆ ಶಿಕ್ಷಕರೇ ಎಲ್ಲ ಕಾರ್ಯವನ್ನು ಸರಿಯಾಗಿ ಮಾಡಿ ಪೂರೈಸುವರು. ಅಲ್ಲದೆ ಮುಖ್ಯೋಪಾಧ್ಯಾಯರೇ ಎಲ್ಲ ಕಾರ್ಯವನ್ನು ಮಾಡುವುದಿಲ್ಲ. ಆದರೆ ಶಿಕ್ಷಕರು ತಾವೇ ಮುಂದಾಳತ್ವವನ್ನು ವಹಿಸಿ ಕೆಲಸ ಮಾಡಲು ಅವಕಾಶವನ್ನು ಒದಗಿಸಿ ಕೊಡುವರು. ಮೇಲಾಗಿ ಶಾಲೆಯ ಎಲ್ಲ ಕಾರ್ಯಗಳ ಮೇಲೆ ಮುಖ್ಯೋಪಾಧ್ಯಾಯರಿಗೆ ಸಂಪೂರ್ಣ

Digitised by Bharatavani, CIIL

ಹಿಡಿತವಿರುತ್ತದೆ ಮತ್ತು ಶಿಕ್ಷಕರಿಗೆ ಉತ್ತಮ ನಾಯಕತ್ವವನ್ನು ಒದಗಿಸಿಕೊಡುವರು.

**1) ಸ್ವತಂತ್ರ ವಾತಾವರಣ:** ಈ ವಾತಾವರಣದ ಪ್ರಮುಖ ಲಕ್ಷಣವೆಂದರೆ ಮುಖ್ಯೋಪಾಧ್ಯಾಯ ಶಿಕ್ಷಕರಿಗೆ ಸಂಪೂರ್ಣ ಸ್ವತಂತ್ರತೆಯನ್ನು ಕೊಟ್ಟಿರುತ್ತಾರೆ. ಇದರಿಂದ ಶಿಕ್ಷಕರು ತಮ್ಮಲ್ಲಯೇ ಉತ್ತಮ ಸಂಬಂಧವನ್ನು ಏರ್ಪಡಿಸಿಕೊಂಡು ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಾರೆ. ಇದರಲ್ಲಿ ಕಾರ್ಯಸಾಧನೆ ಸಾಮಾಜಿಕ ಬೇಡಿಕೆಗಳ ಸಂತೃಪ್ತಿಗೆ ಹೆಚ್ಚಿನ ಗಮನವನ್ನು ಕೊಡಲಾಗುತ್ತದೆ. ಶಿಕ್ಷಕರು ಕೆಲಸ ನಿರ್ವಹಣೆಯಲ್ಲಿ ನಿರತರಾದಾಗ ಎಲ್ಲರೂ ಕೂಡಿಕೊಂಡು ಗುರಿಗಳನ್ನು ಸುಲಭವಾಗಿ ಮುಟ್ಟುವರು. ಶಿಕ್ಷಕರಲ್ಲಿಯೂ ಕೆಲವು ಅಲ್ಪಸಂಖ್ಯಾತ ಶಿಕ್ಷಕರಿರುತ್ತಾರೆ. ಶಿಕ್ಷಕರಲ್ಲಿ ಯಾವುದೇ ಗುಂಪುಗಳಿದ್ದರೂ ಗುಂಪಿನ ಸದಸ್ಯರು ಎಲ್ಲರೂ ಕೂಡಿಕೊಂಡು ಉತ್ತಮವಾಗಿ ಕೆಲಸ ಮಾಡಲು ಯಾವುದೇ ರೀತಿಯ ತೊಂದರೆ ಕೊಡುವದಿಲ್ಲ. ಇಲ್ಲಿ ಪ್ರಮುಖವಾದ ವಿಷಯವೆಂದರೆ ಶಿಕ್ಷಕರು ಉತ್ತಮವಾಗಿ ಕೆಲಸ ಮಾಡಿ ಶಾಲಾ ಸಂಘಟನೆಯ ಕಾರ್ಯಗಳನ್ನು ಪೂರೈಸುವರು.

ಶಿಕ್ಷಕರು ಶಾಲಾ ಆಡಳಿತ ನಿರ್ವಹಣೆಯ ದಿನನಿತ್ಯದ ಕಾಗದ ಪತ್ರಗಳ ಕೆಲಸಗಳಿಂದ ತೊಂದರೆಪಡುವುದಿಲ್ಲ. ಅಲ್ಲದೆ ಕಾಗದಪತ್ರಗಳ ಕೆಲಸವನ್ನು ಶಿಕ್ಷಕರೇ ಮಾಡಬೇಕೆಂಬ ನಿರ್ಬಂಧವಿರುವುದಿಲ್ಲ. ಮುಖ್ಯೋಪಾಧ್ಯಾಯರು ಶಿಕ್ಷಕರ ಕೆಲಸಗಳ ಸಹಾಯಕ್ಕಾಗಿ ನಿಯಮಗಳನ್ನು ಮತ್ತು ಪದ್ಧತಿಯನ್ನು ರೂಪಿಸಬೇಕಾಗುತ್ತದೆ. ಸಾಮಾನ್ಯವಾಗಿ ಶಿಕ್ಷಕರ ವೃತ್ತಿ ಸಂತೃಪ್ತಿಯು ಉತ್ತಮವಾಗಿರುತ್ತದೆ. ಆದರೆ ಮುಕ್ತ ವಾತವರಣದಲ್ಲಿ ಇರುವಷ್ಟು ವೃತ್ತಿ ಸಂತೃಪ್ತಿಯು ಇರುವುದಿಲ್ಲ. ಶಿಕ್ಷಕರ ಸಾಮಾಜಿಕ ಬೇಡಿಕೆಗಳು ಪೂರೈಕೆಯಾದಾಗ ವೃತ್ತಿ ಸಂತೃಪ್ತಿ ಉಂಟಾಗುತ್ತದೆ.

ಮುಖ್ಯೋಪಾಧ್ಯಾಯರು ಶಿಕ್ಷಕರಿಂದ ದೂರವಿದ್ದು ಸಂಘಟನೆಯ ಕಾರ್ಯಗಳನ್ನು ವ್ಯವಹಾರಿಕ ರೀತಿಯಲ್ಲಿ ನಡೆಸಿಕೊಂಡು ಹೋಗುವರು. ಶಿಕ್ಷಕರ ನಾಯಕರಾಗಿ ರೂಪಿಸಿದ ನಿಯಮಾವಳಿಗಳಿಗೆ ಬದ್ಧರಾಗಿರುತ್ತಾರೆ ಮತ್ತು ಶಿಕ್ಷಕರು ಅವುಗಳನ್ನು ಅನುಸರಿಸಲು ಮಾರ್ಗದರ್ಶನ ಒದಗಿಸುತ್ತಾರೆ. ಆದರೆ ವೈಯಕ್ತಕವಾಗಿ ತಾವೇ ಶಿಕ್ಷಕರು ಕೆಲಸ ಕಾರ್ಯಗಳನ್ನು ಮಾಡಿರುವರೋ ಹೇಗೋ ಎಂಬುದನ್ನು ನೋಡುವದಿಲ್ಲ. ಶಿಕ್ಷಕರಿಗೆ ಶೈಕ್ಷಣಿಕ ಸಲಕರಣೆಗಳ ಉತ್ಪಾದನೆ ಮಾಡಲು ಮುಖ್ಯೋಪಾಧ್ಯಾಯರು ಒತ್ತಾಯ ಮಾಡುವದಿಲ್ಲ. ಅಲ್ಲದೆ ಎಲ್ಲರೂ ಕಷ್ಟಪಟ್ಟು ಹೆಚ್ಚು ಕೆಲಸ ಮಾಡಬೇಕೆಂಬುದನ್ನು ತಿಳಿಸುವದಿಲ್ಲ. ಇದರ ಬದಲಾಗಿ ಶಿಕ್ಷಕರು ತಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡಲು ಬಿಡುವರು ಮತ್ತು ಅವರ ಕಾರ್ಯಗಳಿಗೆ ಅಲ್ಪನಾಯಕತ್ವ ಒದಗಿಸುವರು. ಒಟ್ಟಿನಲ್ಲಿ ಶಿಕ್ಷಕ ಚಿಂತಕರಾಗಿರುತ್ತಾರೆ. ಅಲ್ಲದೆ ಶಿಕ್ಷಕರ ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸಲು ಪ್ರಯತ್ನಿಸುತ್ತಾರೆ.

ಮುಖ್ಯೋಪಾಧ್ಯಾಯರು ಸ್ವತಃ ತಾವೇ ಕಷ್ಟಪಟ್ಟು ಕೆಲಸ ಮಾಡಿ ಉಳಿದ ಶಿಕ್ಷಕರಿಗೆ ಮಾದರಿಯಾಗುತ್ತಾರೆ. ಶಿಕ್ಷಕರನ್ನು ನಿಯಂತ್ರಿಸುವಲ್ಲಿ ಮತ್ತು ಅವರ ವೈಯಕ್ತಿಕ ಪ್ರಗತಿಯನ್ನು ನೋಡುವಲ್ಲಿ ತುಂಬ ಮೃದುವಾಗಿರುತ್ತಾರೆ. ಇವರು ಮೃದುವಾಗಿದ್ದರೂ ಇವರ ಆಡಳಿತಾತ್ಮಕ ವರ್ತನೆಯು ಮುಕ್ತ ವಾತಾವರಣದ ಮುಖ್ಯೋಪಾಧ್ಯಾಯರ ಆಡಳಿತಾತ್ಮಕ ವರ್ತನೆಗೆ ಹೋಲಿಸಿದಾಗ ಸ್ವಲ್ಪ ನಿರ್ಬಂಧದಿಂದ ಕೂಡಿದ ವರ್ತನೆ ಎನಿಸುತ್ತದೆ.

**2) ನಿರ್ಬಂಧ ವಾತಾವರಣ:** ಈ ರೀತಿಯ ವಾತಾವರಣದಲ್ಲಿ ಸಾಧನೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗುತ್ತದೆ. ಬೇರೆಯವರ ಸಾಮಾಜಿಕ ಅವಶ್ಯಕತೆಗಳನ್ನು ಕಡೆಗಣಿಸಿಯೂ ಸಾಧನೆಗೆ ಹೆಚ್ಚಿನ ಗಮನ ಕೊಡಲಾಗುತ್ತದೆ. ಪ್ರತಿಯೊಬ್ಬರು ಶ್ರಮಜೀವಿಗಳಾಗುತ್ತಾರೆ. ಅಲ್ಲದೆ ಬೇರೆಯವರೊಂದಿಗೆ ಸ್ನೇಹಮಯವಾದ ಸಂಬಂಧ ಬೆಳೆಸಿಕೊಳ್ಳಲು ಅತಿ ಕಡಿಮೆ ವೇಳೆ ಇರುತ್ತದೆ. ಸಾಮಾಜಿಕ ಅವಶ್ಯಕತೆಗಳ ಪೂರೈಕೆಗಿಂತ ಇಲ್ಲಿ ಕಾರ್ಯಸಾಧನೆಗೆ ಹೆಚ್ಚಿನ ಮಹತ್ವ ಕೊಡಲಾಗುತ್ತದೆ. ಆದ್ದರಿಂದ ವೃತ್ತಿ ಸಂತೃಪ್ತಿಯೂ ಉನ್ನತವಾಗಿರುತ್ತದೆ.

ಶಿಕ್ಷಕರು ಮುಖ್ಯೋಪಾಧ್ಯಾಯರು ಹೇಳಿದ ರೀತಿಯಲ್ಲಯೇ ಕೆಲಸ ಮಾಡುತ್ತಾರೆ. ಮತ್ತು ಯಾವಾಗಲೂ ತಮ್ಮ ಕೆಲಸಗಳಲ್ಲಿಯೇ ನಿರತರಾಗಿರುತ್ತಾರೆ. ಅವರಿತೆ ಕೆಲಸವನ್ನು ಹೇಗೆ ಮಾಡಬೇಕೆಂಬುದನ್ನು ವೈಯಕ್ತಿಕವಾಗಿ ಹೇಳಲಾಗುತ್ತದೆ. ಕೆಲಸ ನಿರ್ವಹಿಸುವದಕ್ಕಾಗಿಯೇ ಅವರು ಇರುತ್ತಾರೆ. ಪ್ರತಿನಿತ್ಯವೂ ಆಡಳಿತಾತ್ಮಕ ಕಾಗದ–ಪತ್ರಗಳ ಕಾರ್ಯವನ್ನು ಶಿಕ್ಷಕರು ನಿರ್ವಹಿಸಬೇಕಾಗುತ್ತದೆ. ಈ ಕೆಲಸದಲ್ಲಿಯೆ ಶಿಕ್ಷಕರು ಪೂರ್ಣ ನಿರತರಾಗಿ ಶಿಕ್ಷಕರ ಕಾರ್ಯನಿರ್ವಹಣೆಯ ಸಾಧನೆಯಲ್ಲಿ ಅವರಿಗೆ ತೊಂದರೆ ಉಂಟಾಗುತ್ತದೆ. ಇಲ್ಲಿ ಆಡಳಿತಾತ್ಮಕ ಕಾರ್ಯಗಳು ಶಿಕ್ಷಕರ ಕಾರ್ಯಗಳನ್ನು ಸುಲಭ ಮಾಡುವ ಬದಲು ಆ ಕಾರ್ಯಗಳು ಅವರನ್ನು ಸದಾ ಕೆಲಸದಲ್ಲಿ ಇರುವಂತೆ ಮಾಡುತ್ತವೆ. ಶಿಕ್ಷಕರು ಒಬ್ಬರಿಗೊಬ್ಬರು ಸ್ನೇಹಿತರಾಗಿ ಉತ್ತಮ ಸಂಬಂಧ ಏರ್ಪಡಿಸಿಕೊಳ್ಳಲು ವೇಳೆಯೇ ಅವರಿಗೆ ಸಿಗುವದಿಲ್ಲ. ಇದರಿಂದ ಅವರಲ್ಲಿ ಅನ್ಯೋನ್ಯತೆ ಇರುವದಿಲ್ಲ. ಸಾಮಾನ್ಯವಾಗಿ ಶಿಕ್ಷಕರು ತಮ್ಮಷ್ಟಕ್ಕೆ ತಾವೇ ಕೆಲಸ ಮಾಡುತ್ತಿರುತ್ತಾರೆ ಮತ್ತು ಬೇರೆಯವರೊಂದಿಗೆ ಸಂಬಂಧ ಏರ್ಪಡಿಸಿಕೊಳ್ಳುವದಿಲ್ಲ. ನಿಜವಾಗಿಯೂ ಸಾಮಾಜಿಕವಾಗಿ ಏಕಾಂಗಿಯಾಗಿರುತ್ತಾರೆ. ಅತಿ ಕಡಿಮೆ ಶಿಕ್ಷಕರು ನಿಜವಾದ ಉತ್ತಮ ಸಂಬಂಧ ಹೊಂದಿರುತ್ತಾರೆ. ಈ ವಾತಾವರಣದಲ್ಲಿ ವೃತ್ತಿ ಸಂತೃಪ್ತಿಯು ಕಾರ್ಯಗಳನ್ನು ಯಶಸ್ವಿಯಾಗಿ ಕೈಗೊಳ್ಳುವುದರಿಂದ ಉದ್ಭವವಾಗಿರುತ್ತದೆಯೇ ಹೊರತು ಸಾಮಾಜಿಕ ಅವಶ್ಯಕತೆಗಳ ಸಂತೃಪ್ತಿಯಿಂದಲ್ಲ.

ಮುಖ್ಯೋಪಾಧ್ಯಾಯ ಸರ್ವಾಧಿಕಾರಿಯಾಗಿರುತ್ತಾನೆ ಹಾಗೂ ನಿರ್ದೇಶಕನಾಗಿರುತ್ತಾನೆ. ಆತ ಯಾವುದೇ ಕೆಲಸದ ಬದಲಾವಣೆಗೆ ಹೆಚ್ಚಿನ ಅವಕಾಶ ಕೊಡುವುದಿಲ್ಲ. ಪ್ರತಿಯೊಂದು ಕೆಲಸವು ಆತ ಹೇಳಿದಂತೆಯೇ ನಡೆಯಬೇಕು. ಮುಖ್ಯೋಪಾಧ್ಯಾಯ ಇಲ್ಲಿ ಒಂದು ರೀತಿಯಿಂದ ಏಕಾಂಗಿಯೇ ಆಗಿರುತ್ತಾನೆ. ಇಲ್ಲಿ ಸಾಧನೆ ಮತ್ತು ಗುರಿಗಳನ್ನು ಮೊದಲೇ ನಿರ್ಧರಿಸಲಾಗಿರುತ್ತದೆ. ಶಿಕ್ಷಕರು ಮುಖ್ಯೋಪಾಧ್ಯಾಯನ ಅಭಿಪ್ರಾಯಗಳಿಗೆ ಹೊಂದಾಣಿಕೆ ಮಾಡಿಕೊಳ್ಳದಿದ್ದರೆ ಆತ ಸರ್ವಾಧಿಕಾರಿಯಂತೆ, ಅಹಂಕಾರಿಯಂತೆ

Digitised by Bharatavani, CIIL

ವರ್ತಿಸುತ್ತಾನೆ. ಈ ವರ್ತನೆ ಯಿಂದ ತನ್ನ ಬಗೆಗೆ ಬೇರೆಯವರು ಏನು ತಿಳಿದುಕೊಂಡಾರೆಂಬ ಬಗೆಗೆ ಗಮನವನ್ನೇ ಮುಖ್ಯೋಪಾಧ್ಯಾಯ ಕೊಡುವದಿಲ್ಲ. ಆತನ ಮುಖ್ಯ ಕಾರ್ಯವೆಂದರೆ ತನ್ನ ಇಚ್ಛೆಯ ಪ್ರಕಾರ ಶಿಕ್ಷಕರಿಂದ ಕಾರ್ಯಗಳನ್ನು ಮಾಡಿಸಿ ಕೊಳ್ಳುವದು. ಅದಕ್ಕೆ ಅನುಗುಣವಾಗಿಯೆ ಶಿಕ್ಷಕರ ಸಾಮಾಜಿಕ ಅವಶ್ಯಕತೆಗಳ ಪೂರೈಕೆಗೆ ಪ್ರಯತ್ನಿಸುವದಿಲ್ಲ. ಮುಖ್ಯೋಪಾಧ್ಯಾಯ ಸ್ವತಃ ಪರಿಶ್ರಮದಿಂದ ಕೆಲಸ ಮಾಡುವರು. ಅವರೇ ಸ್ವತಃ ಎಲ್ಲವೂ ಸರಿಯಾಗಿ ನಡೆಯುತ್ತಿದೆಯೋ ಹೇಗೋ ಎಂಬುದನ್ನು ವೀಕ್ಷಿಸುವರು.

**3) ಸಲಿಗೆಯ ವಾತಾವರಣ:** ಈ ವಾತಾವರಣದ ಮುಖ್ಯ ಲಕ್ಷಣವೇನೆಂದರೆ ಮುಖ್ಯೋಪಾಧ್ಯಾಯ ಮತ್ತು ಶಿಕ್ಷಕರಲ್ಲಿ ಸ್ನೇಹಿತರಲ್ಲಿರುವ ಸಂಬಂಧವಿರುತ್ತದೆ. ಅಂದರೆ ಅನ್ಯೋನ್ಯ ಸಂಬಂಧವಿರುತ್ತದೆ. ಶಿಕ್ಷಕರ ಸಾಮಾಜಿಕ ಅವಶ್ಯಕತೆಗಳು ಅತಿಯಾಗಿ ಪೂರೈಸಲ್ಪಡುತ್ತವೆ. ಆದರೆ ಗುರಿಸಾಧನೆಗೆ ಸಂಬಂಧಿಸಿದಂತೆ ಶಿಕ್ಷಕರ ಚಟುವಟಿಕೆಗಳನ್ನು ನಿಯಂತ್ರಣದಲ್ಲಿಡುವಲ್ಲಿ ಅಲ್ಪ ಪ್ರಯತ್ನವಿರುತ್ತದೆ. ಶಿಕ್ಷಕರು ಕೆಲಸವನ್ನು ಅತಿ ಸುಲಭವಾಗಿ ಪರಿಗಣಿಸುವರು. ಜವಾಬ್ದಾರಿ ಕೆಲಸಗಳನ್ನೂ ಅಲ್ಪ ಪ್ರಮಾಣದಲ್ಲಿ ಮಾಡುವರು. ಕಾರಣ ಮುಖ್ಯೋಪಾಧ್ಯಾಯರು ಅವರ ಕಾರ್ಯಗಳಿಗೆ ಸಂಬಂಧಿಸಿದಂತೆ ನಿರ್ದೇಶನ ಕೊಡುವಲ್ಲಿ ಅಲ್ಪಹತೋಟಿಯನ್ನು ಹೊಂದಿರುತ್ತಾರೆ. ಅಲ್ಲದೆ ಕೆಲಸಗಳು ಹೇಗೆ ನಡೆಯಬೇಕೆಂಬುದನ್ನು ತಿಳಿಸಲು ಅನೇಕ ವ್ಯಕ್ತಿಗಳಿರುತ್ತಾರೆ. ಮುಖ್ಯೋಪಾಧ್ಯಾಯ ಪ್ರತಿನಿತ್ಯ ಶಾಲಾ ಆಡಳಿತ ನಿರ್ವಹಣೆಯ ಕೆಲಸಗಳನ್ನು ನಿರ್ವಹಿಸು ಶಿಕ್ಷಕರಿಗೆ ಹಚ್ಚುವದಿಲ್ಲ. ಬದಲಾಗಿ ಸುಲಭವಾಗಿ ಅವರ ಕೆಲಸ ಮಾಡಲು ಸಹಾಯ ಮಾಡುವರು. ಶಿಕ್ಷಕರಲ್ಲಯೇ ಅನ್ಯೋನ್ಯತೆ ಇರುತ್ತದೆ. ಪ್ರತಿಯೊಬ್ಬರು ಅವಿಭಕ್ತ ಕುಟುಂಬದಲ್ಲಿ ಒಗ್ಗೂಡಿಕೊಂಡು ಕೆಲಸ ಮಾಡುವಂತೆ ಕೆಲಸ ಮಾಡುವರು. ಇಲ್ಲಿ ವೃತ್ತಿ ಸಂತೃಪ್ತಿಯು ಸಾಧಾರಣವಾಗಿರುತ್ತದೆ.

ಮುಖ್ಯೋಪಾಧ್ಯಾಯರ ಅಭಿಪ್ರಾಯವೇನೆಂರೆ ಎಲ್ಲರೂ ಸಂತೋಷಕರವಾದ ಕುಟುಂಬದಲ್ಲಿ ಇರುವ ಸದಸ್ಯರಂತೆ ಸಂತೋಷವಾಗಿರುವದು. ಮುಖ್ಯೋಪಾಧ್ಯಾಯರ ಭಾವನೆ ಏನೆಂದರೆ ತಾವು ಶಿಕ್ಷಕ ಸಮುದಾಯದಲ್ಲಿ ಒಬ್ಬ ಸದಸ್ಯರು, ಅವರಿಂದ ಯಾವುದರಲ್ಲಿ ತಾನು ಭಿನ್ನವಿಲ್ಲ. ಮುಖ್ಯೋಪಾಧ್ಯಾಯರು ಶಿಕ್ಷಕರಿಂದ ಏಕಾಂಗಿ ಯಾಗಿರುವುದಿಲ್ಲ. ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಕೆಲವು ಕಾಯಿದೆ ಕಾನೂನುಗಳನ್ನು ರಚಿಸುವರು ಮತ್ತು ಶಿಕ್ಷಕರ ಕೆಲಸದದಲ್ಲಿ ಮಾರ್ಗದರ್ಶನ ಒದಗಿಸುವರು. ಮುಖ್ಯೋಪಾಧ್ಯಾಯ ಶಿಕ್ಷಕರು ಉತ್ಪಾದನಾ ಕೆಲಸದಲ್ಲಿ ತೊಡಗಬೇಕೆಂಬುದನ್ನು ಒತ್ತಾಯಿಸುವುದಿಲ್ಲ ಮತ್ತು ಶಿಕ್ಷಕರು ಉತ್ತಮವಾಗಿ ಕೆಲಸ ಮಾಡುವರೋ ಅಥವಾ ಇಲ್ಲವೋ ಎಂಬುದನ್ನು ಸಹ ನೋಡುವದಿಲ್ಲ. ಯಾರೂ ತಮ್ಮ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸ ಮಾಡುವದಿಲ್ಲ. ಸಾಧನೆಯ ಕಾರ್ಯದಲ್ಲಿ ಶಿಕ್ಷಕರ ಕೆಲಸವನ್ನು ಯಾರೂ ಟೀಕಿಸುವುದಿಲ್ಲ. ಶಿಕ್ಷಕರ ಕಾರ್ಯ ಸಾಧನೆಯನ್ನು ಅಳೆಯಲು ಯಾರೂ ಪ್ರಯತ್ನಿಸುವುದಿಲ್ಲ. ಇದರಿಂದ ಶಿಕ್ಷಕರು ಮುಖ್ಯೋಪಾಧ್ಯಾಯರು ತಮ್ಮ ಕೆಲಸ ಕಾರ್ಯಗಳನ್ನು ಪೂರೈಸಲು ಇರುವ ವ್ಯಕ್ತಿ ಎಂಬ ಭಾವನೆ ತಳೆಯುವರು.

**5) ಪಿತೃವಿನ ವಾತಾವರಣ (ಪ್ಯಾಟರ್ನಲ್ ವಾತಾವರಣ):** ಈ ವಾತಾವರಣದ ಪ್ರಮುಖ ಲಕ್ಷಣವೇನೆಂದರೆ ಮುಖ್ಯೋಪಾಧ್ಯಾಯ ಶಿಕ್ಷಕರನ್ನು ಹತೋಟಿಯಲ್ಲಿಟ್ಟುಕೊಳ್ಳುವಲ್ಲಿ ಮತ್ತು ಅವರ ಬೇಡಿಕೆಗಳನ್ನು ಪೂರೈಸುವಲ್ಲಿ ವಿಫಲನಾಗುತ್ತಾನೆ. ಶಿಕ್ಷಕರ ಪ್ರಕಾರ ಮುಖ್ಯೋಪಾಧ್ಯಾಯ ಅವರಿಗೆ ಪ್ರೇರಣೆ ಕೊಡುವಲ್ಲಿ ಅಸಫಲನಾಗಿರುತ್ತಾನೆ ಮತ್ತು ನಿಜವಾದ ವ್ಯಕ್ತಿತ್ವವನ್ನು ಹೊಂದಿರುವುದಿಲ್ಲ. ಈ ವಾತಾವರಣವು ಸುಮಾರು ಮುಚ್ಚಲ್ಪಟ್ಟ ವಾತಾ ವರಣವಾಗಿದೆ.

ಶಿಕ್ಷಕರು ಒಗ್ಗೂಡಿಕೊಂಡು ಉತ್ತಮವಾಗಿ ಕೆಲಸ ಮಾಡುವದಿಲ್ಲ. ಅವರಲ್ಲಿಯೇ ಗುಂಪುಗಳಿರುತ್ತವೆ. ಮುಖ್ಯೋಪಾಧ್ಯಾಯರು ಶಿಕ್ಷಕರ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ವಿಫಲರಾಗಿರುತ್ತಾರೆ. ಆಡಳಿತಾತ್ಮಕ ಕೆಲಸಗಳು ಅವರ ಶೈಕ್ಷಣಿಕ ಕೆಸಲದಲ್ಲಿ ತೊಂದರೆಯನ್ನುಂಟು ಮಾಡುತ್ತದೆ. ಶಿಕ್ಷಕರಲ್ಲಿಯೇ ಆತ್ಮೀಯ ಸಂಬಂಧವಿರುವುದಿಲ್ಲ. ಮುಖ್ಯೋಪಾಧ್ಯಾಯರೇ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸಲಿ ಎಂದು ತಿಳಿದು ಶಿಕ್ಷಕರು ಸುಮ್ಮನಿರುತ್ತಾರೆ. ಇದರಲ್ಲಿ ಶಿಕ್ಷಕರು ವೃತ್ತಿ ಸಂತೃಪ್ತಿ ಕೆಲಸಗಳ ಸಾಧನೆ ಮತ್ತು ಸಾಮಾಜಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ.

ಮುಖ್ಯೋಪಾಧ್ಯಾಯ ಇಲ್ಲ ಏಕಾಂಗಿಯಾಗಿರುವದಿಲ್ಲ. ಶಾಲೆಯ ಎಲ್ಲ ಕಡೆಗೂ ಮುಖ್ಯೋಪಾಧ್ಯಾಯರು ಹೋಗಿ ಎಲ್ಲರ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವರು ಮತ್ತು ಕೆಲಸವನ್ನು ಹೇಗೆ ಮಾಡಬೇಕೆಂಬುದರ ಬಗೆಗೆ ಸಲಹೆ ಸೂಚನೆಗಳನ್ನು ಕೊಡುವರು. ತಾನು ಹೇಳಿದ ಎಲ್ಲ ಕೆಲಸಗಳು ನಿರ್ವಹಿಸಲ್ಪಡಬೇಕೆಂಬುದನ್ನು ಮೇಲಿಂದ ಮೇಲೆ ಎಲ್ಲರಿಗೂ ಹೇಳುವರು. ಆದರೆ ಯಾವ ಕೆಲಸವೂ ಕಾರ್ಯರೂಪಕ್ಕೆ ಬರುವುದಿಲ್ಲ. ಶಾಲೆ ಮತ್ತು ಕೆಲಸಗಳಿಗೆ ಹೆಚ್ಚಿನ ಆದ್ಯತೆಯನ್ನು ಮುಖ್ಯೋಪಾಧ್ಯಾಯರು ಕೊಡುವರು. ತಮ್ಮ ಸಾಮಾಜಿಕ ಅವಶ್ಯಕತೆಗಳ ಪೂರೈಕೆಗೂ ಹೆಚ್ಚಿನ ಗಮನವನ್ನು ಕೊಡುವುದಿಲ್ಲ. ಮುಖ್ಯೋಪಾಧ್ಯಾಯರು ಶಿಕ್ಷಕರ ಬಗೆಗೆ ಗೌರವ ಭಾವನೆಯನ್ನು ಹೊಂದಿರುತ್ತಾರೆ. ಆದರೆ ಅವರ ಸಾಮಾಜಿಕ ಅವಶ್ಯಕತೆಗಳ ಪೂರೈಕೆಯ ಬಗೆಗೆ ಹೆಚ್ಚಿನ ಗಮನವನ್ನು ಕೊಡುವುದಿಲ್ಲ. ಮುಖ್ಯೋಪಾಧ್ಯಾಯರ ಮುಖ್ಯ ಉದ್ದೇಶ ಶಾಲಾ ಸಂಘಟನೆಯ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗುವದು, ಶಿಕ್ಷಕರು ಅವರ ಕಾರ್ಯಗಳನ್ನು ನಿರ್ವಹಿಸಲು ಪ್ರೇರಣೆಯನ್ನು ನೀಡುವದು.

**6) ಮುಚ್ಚಲ್ಪಟ್ಟ ವಾತಾವರಣ:** ಈ ವಾತಾವರಣದ ಮುಖ್ಯ ಲಕ್ಷಣವೇನೆಂದರೆ ಶಿಕ್ಷಕರು ತಮ್ಮ ಕಾರ್ಯ ಸಾಧನೆಯಲ್ಲಿ ಮತ್ತು ಸಾಮಾಜಿಕ ಅವಶ್ಯಕತೆಗಳ ಪೂರೈಕೆಯಲ್ಲಿ ಅಲ್ಪ ತೃಪ್ತಿಯನ್ನು ಪಡೆದಿರುತ್ತಾರೆ. ಮುಖ್ಯೋಪಾಧ್ಯಾಯರು ಶಿಕ್ಷಕರ ಕಾರ್ಯಗಳಲ್ಲಿ ನಿರ್ದೇಶನ ಕೊಡುವಲ್ಲಿ ಅಸಮರ್ಥರಾಗಿರುತ್ತಾರೆ. ಅದೇ ಸಂದರ್ಭದಲ್ಲಿ ವೈಯಕ್ತಿಕ ಪ್ರಗತಿಯನ್ನು ಗಮನಿಸುವಲ್ಲಿಯೂ

Digitised by Bharatavani, CIIL

ವಿಫಲರಾಗಿರುತ್ತಾರೆ. ಈ ವಾತಾವರಣ ಸಂಪೂರ್ಣ ವಾಗಿ ಮುಚ್ಚಲ್ಪಟ್ಟಿರುತ್ತದೆ ಮತ್ತು ಕೃತ್ರಿಮವಾಗಿರುತ್ತದೆ.

ಶಿಕ್ಷಕರು ಒಗ್ಗೂಡಿಕೊಂಡು ಕೆಲಸ ಮಾಡುವದಿಲ್ಲ. ಇದರಿಂದ ಗುಂಪು ಸಾಧನೆಯು ವಿಫಲಗೊಳ್ಳುತ್ತದೆ. ಶಿಕ್ಷಕರು ಮುಕ್ತವಾಗಿರುತ್ತಾರೆ. ಕೆಲವು ಕಾರ್ಯಗಳನ್ನು ಸಾಧಿಸಲು ಶಿಕ್ಷಕರು ಕೆಲವು ವರದಿಗಳನ್ನು ಭರ್ತಿ ಮಾಡುವರು ಮತ್ತು ಕೆಲವು ಕಾರ್ಯಗಳನ್ನು ಮಾತ್ರ ನಿರ್ವಹಿಸುವರು. ಮುಖ್ಯೋಪಾಧ್ಯಾಯರು ಶಿಕ್ಷಕರಿಗೆ ಕಾರ್ಯ ನಿರ್ವಹಿಸಲು ಯಾವುದೇ ರೀತಿಯ ಸೌಲಭ್ಯಗಳನ್ನು ಒದಗಿಸುವುದಿಲ್ಲ. ಶಿಕ್ಷಕರಿಗೆ ವೃತ್ತಿಯಲ್ಲಿ ಸಂತೃಪ್ತಿ ಇರುವುದಿಲ್ಲ ಮತ್ತು ಸಾಮಾಜಿಕ ಬೇಡಿಕೆಗಳು ಸಹ ಪೂರೈಸಲ್ಪಡುವುದಿಲ್ಲ. ಶಿಕ್ಷಕರಲ್ಲಿ ಅನ್ಯೋನ್ಯತೆ ಅಷ್ಟಕ್ಕಷ್ಟೇ ಇರುತ್ತದೆ. ಇದರಿಂದ ಅವರಿಗೆ ಅಲ್ಪತೃಪ್ತಿ ಲಭಿಸುತ್ತದೆ.

ಮುಖ್ಯೋಪಾಧ್ಯಾಯರು ಹೆಚ್ಚಾಗಿ ಏಕಾಂಗಿಯಾಗಿರುತ್ತಾರೆ. ಶಿಕ್ಷಕರ ಕಾರ್ಯಗಳನ್ನು ನಿರ್ದೇಶಿಸುವಲ್ಲಿ ಉತ್ಪಾದನಾ ಕೆಲಸಕ್ಕೆ ಹೆಚ್ಚಿನ ಗಮನ ಕೊಡುವರು. ಯಾವಾಗಲೂ ಶ್ರಮವಹಿಸಿ ಕೆಲಸ ಮಾಡುವದಕ್ಕೆ ಪ್ರಾಶಸ್ತ್ಯ ಕೊಡುವರು. ಕೆಲಸಗಳನ್ನು ಹೇಗೆ ಮಾಡಿ ಮುಗಿಸಬೇಕೆಂಬುದಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರಚಿಸುವರು. ಆದರೆ ಮುಖ್ಯೋಪಾಧ್ಯಾಯರೇ ಸ್ವತಃ ಮಾಡದ ವ್ಯಕ್ತಯಾದ್ದರಿಂದ ಇವರ ಮಾತಿಗೆ ಬೆಲೆಯೇ ಸಿಕ್ಕುವದಿಲ್ಲ. ಮುಖ್ಯೋಪಾಧ್ಯಾಯರ ವ್ಯಕ್ತಿತ್ವ ಶಿಕ್ಷಕರಿಗೆ ಮಾದರಿಯಾಗುವುದಿಲ್ಲ. ಇದರಿಂದ ಇವರು ಕಾರ್ಯ ನಿರ್ವಹಿಸುವಲ್ಲಿ ನಿಜವಾದ ವ್ಯಕ್ತಿಯಾಗಿರುವದಿಲ್ಲ. ಶಿಕ್ಷಕರ ಸಾಮಾಜಿಕ ಬೇಡಿಕೆಗಳ ಬಗೆಗೆ ಗಮನವನ್ನೇ ಕೊಡುವುದಿಲ್ಲ. ಮುಖ್ಯೋಪಾಧ್ಯಾಯರ ಪ್ರಕಾರ ಎಲ್ಲರೂ ಕೆಲಸ ಮಾಡಬೇಕು. ಆದರೆ ಶಿಕ್ಷಕರಿಗೆ ಕೆಲಸ ಮಾಡುವಲ್ಲಿ ಸ್ವಾತಂತ್ರ್ಯ ಮತ್ತು ನಾಯಕತ್ವವನ್ನು ಒದಗಿಸುವುದಿಲ್ಲ. ಆದ್ದರಿಂದ ಶಿಕ್ಷಕರು ಈತ ನಿಜವಾದ ವ್ಯಕ್ತಿತ್ವ ಹೊಂದಿದ ವ್ಯಕ್ತಿ ಎಂದು ಪರಿಗಣಿಸುವುದಿಲ್ಲ.

ಹೀಗೆ ಶಾಲಾ ವಾತಾವರಣವು ಮಕ್ಕಳ ಶಿಕ್ಷಣ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಕ್ಕಳ ಶೈಕ್ಷಣಿಕ ಪ್ರಗತಿಯ ನಿರ್ಧಾರಕವೂ ಹೌದು. ಶಾಲೆಯ ಆಡಳಿತದಲ್ಲಿ ಶಾಲಾ ವಾತಾವರಣಕ್ಕೆ ಮೊದಲ ಆದ್ಯತೆ ಕೊಡುವುದು ಅವಶ್ಯಕ. ನೀತಿವಂತ, ಆದರ್ಶಪ್ರಾಯ ಹಾಗೂ ಉತ್ತಮ ನಾಗರಿಕರಾಗಲು ಪೂರಕ ಶಾಲಾ ವಾತಾವರಣ ಇರಲೇ ಬೇಕು.

**–ಪ್ರೊ. ಬಸವಂತರಾಯ ಎ. ಪಾಟೀಲ್**

## ಶಿಕ್ಷಕ ಪ್ರಶಸ್ತಿಗಳು

ಶಿಕ್ಷಕರ ಮಹೋನ್ನತ ಬೋಧನೆಗಷ್ಟೇ ಅಲ್ಲ, ಸಮಾಜಕ್ಕೆ ಅವರಿಂದ ಪ್ರಶಂಸನೀಯವಾಗಿ ಸಲ್ಲುವ ಸೇವೆಯ ಗುರುತಿಸುವಿಕೆ ಮತ್ತು ಗೌರವದ ಪ್ರತೀಕವೂ ಆಗಿವೆ. ಶಿಕ್ಷಕರು ತಮ್ಮ ಕಾರ್ಯಸಾಧನೆಯಲ್ಲಿ ಉತ್ತಮ ಪ್ರಯತ್ನಗಳನ್ನು ಅಳವಡಿಸಿಕೊಳ್ಳಲು ಪ್ರಶಸ್ತಿಗಳು ಪ್ರೇರಣೆ ನೀಡುತ್ತವೆ. ಅವರಿಗೆ ಈ ಪ್ರಶಸ್ತಿಗಳು ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟಗಳಲ್ಲಿ ನೀಡಲಾಗುತ್ತದೆ.

**ರಾಷ್ಟ್ರ ಪ್ರಶಸ್ತಿಗಳು:** ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯವು ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ತಮ್ಮ ಶ್ರೇಷ್ಠತೆಯಿಂದ ಎದ್ದು ಕಾಣುವ ಶಿಕ್ಷಕರ ಘನತೆಯನ್ನು ಹೆಚ್ಚಿಸುವ ಸಲುವಾಗಿ ಮತ್ತು ಅವರಿಗೆ ಸಾರ್ವಜನಿಕ ಮಾನ್ಯತೆ ಒದಗಿಸುವುದಕ್ಕಾಗಿ 1958–59ರಲ್ಲಿ ರಾಷ್ಟ್ರೀಯ ಪ್ರಶಸ್ತಿಗಳ ಕಾರ್ಯಯೋಜನೆಯೊಂದನ್ನು ಪ್ರಾರಂಭಿಸಿ, ಪ್ರತಿಭಾವಂತ ಮತ್ತು ದಕ್ಷ ಶಾಲಾ ಶಿಕ್ಷಕರಿಗೆ ಯೋಗ್ಯತಾ ಪ್ರಮಾಣ ಪತ್ರ ಮತ್ತು ಎರಡೂವರೆ ಸಾವಿರ ರೂಪಾಯಿ ನಗದು ಮೊತ್ತವನ್ನು ನೀಡಿ ಗೌರವಿಸಿತ್ತು. ಈ ಕಾರ್ಯಯೋಜನೆಯ ವ್ಯಾಪ್ತಿಯನ್ನು 1967–68ರಲ್ಲಿ ವಿಸ್ತರಿಸಿ, ಇದರಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ನಡೆಯುವಂತಹ ಸಂಸ್ಕೃತ ಪಾಠಶಾಲೆ, ಟೋಲ್ಸ್ ಇತ್ಯಾದಿ ಸಂಸ್ಥೆಗಳ ಶಿಕ್ಷಕರು ಕೂಡಾ ಒಳಗೊಳ್ಳುವಂತೆ ಮಾಡಲಾಯಿತು. ಇದರ ವ್ಯಾಪ್ತಿಯನ್ನು 1993ರಲ್ಲಿ ಇನ್ನಷ್ಟು ಹೆಚ್ಚಿಸಿ ಸೈನಿಕ ಶಾಲೆಗಳು, ನವೋದಯ ವಿದ್ಯಾಲಯಗಳು ಮತ್ತು ಅಣುಶಕ್ತಿ ಶಿಕ್ಷಣ ಸಂಘ ನಡೆಸುವ ಶಾಲೆಗಳ ಶಿಕ್ಷಕರು ಕೂಡಾ ಒಳಗೊಳ್ಳುವಂತೆ ಮಾಡಲಾಯಿತು. ಸಾರ್ವಜನಿಕ ವಿದ್ಯಾಶಾಲೆಗಳ ಶಿಕ್ಷಕರಿಗಾಗಿ ಸಿಬಿಎಸ್‌ಸಿಗೆ ಹತ್ತು ಪ್ರಶಸ್ತಿಗಳನ್ನು ನಿಯತಗೊಳಿಸಲಾಗಿದೆ. ಇದರಲ್ಲಿ ಪ್ರತಿಯೊಂದು ವಲಯಕ್ಕೆ ತಲಾ ಎರಡು ಪ್ರಶಸ್ತಿಗಳಿರುತ್ತವೆ. ಪ್ರಶಸ್ತಿಯು ಯೋಗ್ಯತಾ ಪ್ರಮಾಣಪತ್ರ, ಇಪ್ಪತ್ತೈದು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕವೊಂದನ್ನು ಒಳಗೊಂಡಿರುತ್ತದೆ. ಹೆಚ್ಚಿಸಿದ ಮೊತ್ತವನ್ನು ರಾಷ್ಟ್ರಪ್ರಶಸ್ತಿ ವಿಜೇತರಿಗೆ 1999ರಿಂದ ನೀಡಲಾಗುತ್ತಿದೆ.

2000–2001ರಿಂದ ಪ್ರಶಸ್ತಿಗಳ ಒಟ್ಟು ಸಂಖ್ಯೆಯನ್ನು 302ರಿಂದ 350ಕ್ಕೆ ಏರಿಸಲಾಗಿದೆ. ಪ್ರಶಸ್ತಿ ಹಂಚುವಿಕೆಯು ಈ ಕೆಳಗಿನಂತಿದೆ.

1. ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರಶಸ್ತಿಗಳಿಗೆ, ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು, ಅಣುಶಕ್ತಿ ಶೈಕ್ಷಣಿಕ ಸಂಘಗಳು, ಸೈನಿಕ ಶಾಲೆಗಳು, ಸಂಸ್ಕೃತ ಮತ್ತು ಅರೇಬಿಕ್ /ಪರ್ಶಿಯನ್ ಶಾಲೆಗಳ ಶಿಕ್ಷಕರಿಗೆ 202 ಪ್ರಶಸ್ತಿಗಳು
2. ಐಸಿಎಸ್‌ಇಗೆ 5 ಪ್ರಶಸ್ತಿಗಳು
3. ಸಿಬಿಎಸ್‌ಗೆ 10 ಪ್ರಶಸ್ತಿಗಳು, ಸಿಬಿಎಸ್‌ಸಿಗೆ ಸೇರುವ ಸಾರ್ವಜನಿಕ ಶಾಲೆಗಳ ಶಿಕ್ಷಕರಿಗೆ ನೀಡುವ ರಾಷ್ಟ್ರೀಯ

Digitised by Bharatavani, CIIL

ಪ್ರಶಸ್ತಿಗಳಲ್ಲಿ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಮತ್ತು ಈಶಾನ್ಯ ವಲಯಗಳ ಇಬ್ಬಿಬ್ಬರು ಶಿಕ್ಷಕರಿಗೆ ನೀಡಲಾಗುತ್ತದೆ.

4. ಶಾಲೆಗಳಲ್ಲಿ ಏಕೀಕೃತ ಅಂತರ್ಗತ ಶಿಕ್ಷಣವನ್ನು (ಐಇ–ಇಂಟಗ್ರೇಟೆಡ್ ಇನ್‌ಕ್ಲೂಸಿವ್) ಪ್ರೋತ್ಸಾಹಿಸುವ ಶಿಕ್ಷಕರಿಗೆ 33 ಪ್ರಶಸ್ತಿಗಳು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮತ್ತು ಇತರ ಶಾಲಾ ವ್ಯವಸ್ಥೆಗಳು ನಡೆಸುವಂತಹ ನಿಯಮಿತ ಶಾಲೆಗಳಲ್ಲಿ ಅಂಗವಿಕಲ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ಶಿಕ್ಷಕರಿಗೆ ಈ ವಿಶೇಷ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

**ಪ್ರಶಸ್ತಿಗಳಿಗೆ ಇರುವ ಅರ್ಹತಾ ನಿರ್ಬಂಧನೆಗಳು:**

- ಕನಿಷ್ಠ 15 ವರ್ಷಗಳ ನಿಯತ ತರಗತಿ ಬೋಧನೆಯ ಅನುಭವವುಳ್ಳ ಶಿಕ್ಷಕರು ಮತ್ತು 20 ವರ್ಷಗಳ ಅನುಭವವುಳ್ಳ ಮುಖ್ಯೋಪಾಧ್ಯಾಯರು ಮತ್ತು ಮಾನ್ಯತೆಯುಳ್ಳ ಪ್ರಾಥಮಿಕ/ಮಾಧ್ಯಮಿಕ/ಹಿರಿಯ ಮಾಧ್ಯಮಿಕ/ಪ್ರೌಢ ಶಾಲೆಗಳಲ್ಲಿ ವಾಸ್ತವವಾಗಿ ಶಿಕ್ಷಕರಾಗಿ/ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡುವವರನ್ನು ಮಾತ್ರ ಪರಿಗಣಿಸಲಾಗುವುದು. ಪ್ರಾಥಮಿಕ ಶಾಲೆಯ ಶಿಕ್ಷಕರ ವಿಭಾಗದಲ್ಲಿ ಎಂಟನೆಯ ತರಗತಿಯವರೆಗೆ ಕಲಿಸುವ ಶಿಕ್ಷಕರನ್ನು ಮತ್ತು ಒಂಭತ್ತರಿಂದ ಹನ್ನೆರಡರವರೆಗಿನ ತರಗತಿಗಳಲ್ಲಿ ಕಲಿಸುವವರನ್ನು ಪ್ರೌಢಶಾಲಾ ಶಿಕ್ಷಕರ ವಿಭಾಗದಲ್ಲಿ ಪರಿಗಣಿಸಲಾಗುತ್ತದೆ. ಏಕೀಕೃತ ಅಂತರ್ಗತ ಶಿಕ್ಷಣವನ್ನು ಪ್ರೋತ್ಸಾಹಿಸುವ ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರಿಗೆ ಅರ್ಹತಾ ಮಟ್ಟವನ್ನು ಅನುಕ್ರಮವಾಗಿ 15 ವರ್ಷಗಳಿಂದ ಮತ್ತು ಬೋಧನಾ ಅನುಭವವನ್ನು 20 ವರ್ಷದಿಂದ 10 ವರ್ಷಗಳಿಗೆ ಮತ್ತು 15 ವರ್ಷಗಳಿಗೆ ಇಳಿಸಲಾಗಿದೆ.

- ಪ್ರಶಸ್ತಿಗೆ ನಿವೃತ್ತ ಶಿಕ್ಷಕರು ಅರ್ಹರಾಗುವುದಿಲ್ಲ. ಆದರೆ ರಾಷ್ಟ್ರಪ್ರಶಸ್ತಿಗೆ ಸಂಬಂಧಿಸಿದ ವರ್ಷದಲ್ಲಿ ಏಪ್ರಿಲ್ 30ರವರೆಗಿನ ನಾಲ್ಕು ತಿಂಗಳು ಕೆಲಸ ಮಾಡಿದ ಶಿಕ್ಷಕರು ಬೇರೆ ಎಲ್ಲಾ ನಿಬಂಧನೆಗಳನ್ನು ಪೂರೈಸಿದ್ದರೆ, ಅವರನ್ನು ಪ್ರಶಸ್ತಿಗೆ ಪರಿಗಣಿಸಬಹುದಾಗಿದೆ.

- ಕಳೆದ ವರ್ಷ ಅಥವಾ ಅದಕ್ಕಿಂತ ಮೊದಲು ಹೆಸರು ಸೂಚಿತವಾಗಿದ್ದು, ಇನ್ನೂ ಅರ್ಹತೆಯನ್ನು ಹೊಂದಿಕೊಂಡಿರುವಂತಹ ಮತ್ತು ರಾಜ್ಯ ಸರಕಾರ/ಕೇಂದ್ರಾಡಳಿತ ಪ್ರದೇಶಗಳಿಂದ ಶಿಫಾರಸ್ಸನ್ನು ಪಡೆದಂತಹ ಶಿಕ್ಷಕರನ್ನು ಮತ್ತೊಮ್ಮೆ ಪರಿಗಣಿಸಬಹುದಾಗಿದೆ.

- ಈ ಪ್ರಶಸ್ತಿಗೆ ಶೈಕ್ಷಣಿಕ ಆಡಳಿತಗಾರರು, ಶಾಲೆಗಳ ಪರಿಶೀಲನಾಧಿಕಾರಿಗಳು, ಮತ್ತು ತರಬೇತಿ ಮಹಾವಿದ್ಯಾಲಯಗಳ ಸಿಬ್ಬಂದಿ ವರ್ಗದವರು ಅರ್ಹರಾಗುವುದಿಲ್ಲ.

**ಆಯ್ಕೆಯ ಮಾನದಂಡ:** ಈ ಪ್ರಶಸ್ತಿಗಾಗಿ ವಿಭಿನ್ನ ಹಂತಗಳಲ್ಲಿನ ಶಿಕ್ಷಕರ ಆಯ್ಕೆಯು ಸ್ಥಳೀಯ ಸಮುದಾಯದಲ್ಲಿ ಅವನ/ಅವಳ ಜನಪ್ರಿಯತೆ, ಅವನ/ಅವಳ ಶೈಕ್ಷಣಿಕ ದಾಖಲೆ, ಅವನ/ಅವಳ ನೈಜ ಆಸಕ್ತಿ ಮತ್ತು ಮಕ್ಕಳ ಕುರಿತಾದ ಪ್ರೀತಿ, ಸಮುದಾಯದ ಸಾಮಾಜಿಕ ಬದುಕಿನಲ್ಲಿ ಅವನ/ಅವಳ ತೊಡಗಿಸಿಕೊಳ್ಳುವಿಕೆ, ಅವನ/ಅವಳ ಉತ್ತಮ ಸೇವಾ ದಾಖಲೆ ಮತ್ತು ಋಜುತ್ವ ಇವುಗಳನ್ನು ಆಧರಿಸಿ ಇರುತ್ತದೆ.

**ಆಯ್ಕೆಯ ಕಾರ್ಯವಿಧಾನ:** ಈ ಪ್ರಶಸ್ತಿಯ ಆಯ್ಕೆಯು ರಾಜ್ಯದಲ್ಲಿ ಎರಡು ಹಂತಗಳಲ್ಲಿ ನಡೆಯುತ್ತದೆ: ಜಿಲ್ಲಾ ಹಂತ ಮತ್ತು ರಾಜ್ಯ ಹಂತ. ಪ್ರಥಮ ಆಯ್ಕೆಯನ್ನು ಜಿಲ್ಲಾ ಸಮಿತಿಯು ಜಿಲ್ಲಾ ಹಂತದಲ್ಲಿ ನಡೆಸುತ್ತದೆ. ಇದರಲ್ಲಿ ಜಿಲ್ಲಾ ಶಿಕ್ಷಣ ಅಧಿಕಾರಿ (ಡಿಇಒ), ಶಾಲೆಗಳ ಜಿಲ್ಲಾ ಪರಿಶೀಲನಾಧಿಕಾರಿ ಅಥವಾ ನಗರಪಾಲಿಕೆ, ಪಂಚಾಯತ್ ಇತ್ಯಾದಿ ಇದೆ ರೀತಿಯ ಸ್ಥಳೀಯ ಅಧಿಕಾರಿವರ್ಗ ಶಿಫಾರಸು ಮಾಡಿದ ಹೆಸರುಗಳಿಂದ ಆಯ್ಕೆ ನಡೆಯುತ್ತದೆ. ಈ ಸಂಸ್ಥೆಗಳನ್ನು ರಾಜ್ಯ ಸರಕಾರವು ಸ್ಥಳೀಯ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ನಿರ್ಧರಿಸಬಹುದಾಗಿದೆ. ಯಾವುದೇ ಶಿಕ್ಷಕರು ಪ್ರಶಸ್ತಿಗೆ ಮನವಿ ಸಲ್ಲಿಸಲು ಅವಕಾಶವಿಲ್ಲ. ಜಿಲ್ಲಾ ಶಿಕ್ಷಣ ಅಧಿಕಾರಿಗಳು ಮತ್ತು ಇತರರು ಸೂಚಿಸುವ ಹೆಸರುಗಳು ಆಯಾ ಶಿಕ್ಷಕರ ದಾಖಲೆ ಅಥವಾ ಅವರ ಕಾರ್ಯನಿರ್ವಹಣೆಯನ್ನು ಆಧರಿಸಿ ಇರುತ್ತದೆ. ಜಿಲ್ಲಾ ಹಂತದಲ್ಲಿ ಪ್ರತಿಯೊಂದು ಜಿಲ್ಲಾ ಸಮಿತಿಯು ರಾಜ್ಯ ಶಿಕ್ಷಣ ಅಧಿಕಾರಿವರ್ಗದವರಿಗೆ ತನ್ನ ವ್ಯಾಪ್ತಿಯಲ್ಲಿನ ಎರಡು ಹೆಸರುಗಳನ್ನು ಸೂಚಿಸುತ್ತದೆ. ಇವರಲ್ಲಿ ಒಬ್ಬರು ಪ್ರಾಥಮಿಕ ಶಿಕ್ಷಕರಾಗಿದ್ದರೆ, ಇನ್ನೊಬ್ಬರು ಪ್ರೌಢಶಾಲಾ ಶಿಕ್ಷಕರು ಆಗಿರುತ್ತಾರೆ. ನಂತರ ರಾಜ್ಯ ಆಯ್ಕೆ ಸಮಿತಿಯು ಪ್ರತಿಯೊಂದು ಪ್ರಶಸ್ತಿಗೆ ಎರಡು ಹೆಸರುಗಳನ್ನು ರಾಜ್ಯ ಸರಕಾರಕ್ಕೆ ಶಿಫಾರಸು ಮಾಡುತ್ತದೆ. ಸಂಸ್ಕೃತ/ಅರೇಬಿಕ್ ಶಿಕ್ಷಕರಲ್ಲಿ ಸೂಕ್ತರೆಂದು ಕಂಡುಬಂದ ಒಂದು ಅಥವಾ ಎರಡು ಹೆಸರುಗಳನ್ನು ಸೂಚಿಸಲಾಗುತ್ತದೆ. ರಾಜ್ಯ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಶಿಕ್ಷಕರ ಹೆಸರುಗಳನ್ನು ರಾಜ್ಯ ಸರಕಾರಕ್ಕೆ ಶಿಫಾರಸ್ಸು ಮಾಡುವ ಮೊದಲು ಅರ್ಹತೆಗೆ ಅನುಗುಣವಾಗಿ ಪಟ್ಟಿ ಮಾಡಲಾಗುತ್ತದೆ. ನಂತರ ರಾಜ್ಯ ಸರಕಾರವು ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದು. ಇದರೊಂದಿಗೆ ಶಿಕ್ಷಣ ಕಾರ್ಯದರ್ಶಿ ರುಜು ಮಾಡಿರುವ ಶಿಕ್ಷಕರ ಹಿಂದಿನ ದೋಷರಹಿತ ಚರಿತ್ರೆ ಮತ್ತು ನಿರ್ಬಂಧರಹಿತ ಪ್ರಾಮಾಣಿಕತೆಯ ಪ್ರಮಾಣಪತ್ರವನ್ನು ಕೂಡಾ ಲಗತ್ತಿಸಲಾಗುತ್ತದೆ.

ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳ ಶಾಲಾ ವ್ಯವಸ್ಥೆಯು 'ವಿಶೇಷ ಪ್ರಶಸ್ತಿ'ಗಳ ವಿಭಾಗದಲ್ಲಿ ಕನಿಷ್ಠ ಸೂಚಿತ ಸಂಖ್ಯೆಯ ಪ್ರಶಸ್ತಿಗಳನ್ನು ಶಿಫಾರಸ್ಸು ಮಾಡುತ್ತದೆ. ಒಂದು ವೇಳೆ ಈ ವಿಭಾಗದಲ್ಲಿ ಅಗತ್ಯ ಸಂಖ್ಯೆಯ ಶಿಕ್ಷಕರು ಸಿಗದೇ ಹೋದರೆ ಪ್ರಶಸ್ತಿಯನ್ನು ಶಿಫಾರಸ್ಸು ಮಾಡಲಾಗುವುದಿಲ್ಲ. ಆದರೆ ಅಂತಹ ಪರಿಸ್ಥಿತಿಯಲ್ಲಿ ವಿಶೇಷ ವಿಭಾಗಕ್ಕೆ ನಿಯತಗೊಳಿಸಿದ ಸಂಖ್ಯೆಯಷ್ಟು ಪ್ರಶಸ್ತಿಗಳನ್ನು ಸಾಮಾನ್ಯ ವಿಭಾಗಕ್ಕೆ ವರ್ಗಾಯಿಸಲಾಗುವುದಿಲ್ಲ.

ಜಿಲ್ಲೆ ಮತ್ತು ರಾಜ್ಯ ಮಟ್ಟದ ಸಮಿತಿಯ ನಿರ್ದಿಷ್ಟ ಸಂಯೋಜನೆಯು ರಾಜ್ಯ ಸರಕಾರಗಳಿಗೆ ಸೇರಿದ್ದಾಗಿದೆ. ಹಾಗಿದ್ದರೂ, ಆಯ್ಕೆಯ ನಿಯಮಗಳಲ್ಲಿ ಏಕರೂಪತೆಯನ್ನು ಕಾಪಾಡಿಕೊಂಡು ಬರುವ ಸಲುವಾಗಿ ಈ ಸಮಿತಿಗಳಲ್ಲಿ

Digitised by Bharatavani, CIIL

ಸಾಮಾನ್ಯವಾಗಿ ಮೂರು ಮಂದಿ ಇರುತ್ತಾರೆ. ಜಿಲ್ಲಾ ಸಮಿತಿಯಲ್ಲಿ ಶಾಲೆಗಳ ಜಿಲ್ಲಾ ಶಿಕ್ಷಣ ಅಧಿಕಾರಿ (ಡಿಇಒ) ಯ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಯ ಮುಖ್ಯೋಪಾಧ್ಯಾಯರು ಮತ್ತು ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಸದಸ್ಯರಾಗಿ ಇರುತ್ತಾರೆ. ರಾಜ್ಯ ಸಮಿತಿಯಲ್ಲಿ ಶಿಕ್ಷಣ ನಿರ್ದೇಶಕರು/ಸಾರ್ವಜನಿಕ ಶಿಕ್ಷಣ ನಿರ್ದೇಶಕರು/ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ಶಿಕ್ಷಕ ತರಬೇತಿ ಮಹಾವಿದ್ಯಾಲಯದ ಪ್ರಾಂಶುಪಾಲರು ಮತ್ತು ರಾಜ್ಯದ ಕ್ಷೇತ್ರ ಸಲಹಾಗಾರರು (ಎನ್‌ಸಿಇಆರ್‌ಟಿ) ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಮಂತ್ರಾಲಯದ ಸ್ಥಾಯಿ ನಾಮಾಂಕಿತ ಸದಸ್ಯರಾಗಿ ಇರುತ್ತಾರೆ.

ಕೇಂದ್ರ ಆಯ್ಕೆ ಸಮಿತಿಯು ರಾಜ್ಯ ಸರಕಾರಗಳ ಶಿಫಾರಸುಗಳನ್ನು ಆಧರಿಸಿ ಅಂತಿಮ ಆಯ್ಕೆಯನ್ನು ನಡೆಸುತ್ತದೆ. ಸಾಮಾನ್ಯವಾಗಿ ಈ ಆಯ್ಕೆ ಸಮಿತಿಯಲ್ಲಿ ಮಾನವ ಸಂಪನ್ಮೂಲ ಮಂತ್ರಾಲಯದ ಕೇಂದ್ರ ಸರಕಾರದ ಕಾರ್ಯದರ್ಶಿ ಮತ್ತು ಕೇಂದ್ರ ಶಿಕ್ಷಣ ಮಂತ್ರಿಯವರು ನಾಮಾಂಕಿತಗೊಳಿಸಿದ ಇಬ್ಬರು ಉನ್ನತ ಶಿಕ್ಷಣತಜ್ಞರು ಮತ್ತು ಲೋಕಸಭೆಯ ಓರ್ವ ಸದಸ್ಯರು ಇರುತ್ತಾರೆ.

ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಪ್ರತಿವರ್ಷ ನವದೆಹಲಿಯಲ್ಲಿ ಆಯೋಜಿಸುವ ವಿಶೇಷ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಾರತ ದೇಶದ ರಾಷ್ಟ್ರಾಧ್ಯಕ್ಷರು ನಿರ್ವಹಿಸಿ ಪ್ರಶಸ್ತಿಯನ್ನು ನೀಡುತ್ತಾರೆ. ಪ್ರಶಸ್ತಿಯು ಪದಕ, ಯೋಗ್ಯತಾ ಪ್ರಮಾಣಪತ್ರ ಮತ್ತು ಹತ್ತು ಸಾವಿರ ರೂಪಾಯಿ ಪ್ರಶಸ್ತಿಮೊತ್ತವನ್ನು ಒಳಗೊಂಡಿರುತ್ತದೆ. ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ಪ್ರಶಸ್ತಿ ಪುರಸ್ಕೃತರ ಸನ್ಮಾನ ಪತ್ರದ ಪಠಣವನ್ನು ನಡೆಸಲಾಗುತ್ತದೆ. ಈ ಪ್ರಶಸ್ತಿಯನ್ನು ಉತ್ಕೃಷ್ಟ ಕಾರ್ಯಕ್ಕಾಗಿ ನೀಡಲಾಗುತ್ತಿದೆ ಎನ್ನುವುದನ್ನು ಸಾರ್ವಜನಿಕವಾಗಿ ಘೋಷಿಸುವ ಉದ್ದೇಶದಿಂದ ಇದನ್ನು ನಡೆಸಲಾಗುತ್ತದೆ. ಸನ್ಮಾನ ಪತ್ರವನ್ನು ಸ್ವೀಕರಿಸಿದ ಶಿಕ್ಷಕರು ಅನೇಕ ವಿಧದ ಪ್ರಾಯೋಗಿಕ ಬೋಧನಾ ತಂತ್ರಗಾರಿಕೆಯನ್ನು ಶೋಧಿಸಿದವರಾಗಿದ್ದು, ತಮ್ಮ ಬೋಧನೆಯನ್ನು ಆಸಕ್ತಿದಾಯಕವಾಗಿಸಲು ಇದನ್ನು ಅನ್ವಯಿಸಿಕೊಂಡವರಾಗಿರುತ್ತಾರೆ. ಇವರಲ್ಲಿ ಕೆಲವರು ಅನೇಕ ಜನಪ್ರಿಯ ಗ್ರಂಥಗಳನ್ನು, ಕಲಿಕಾ ಸಾಧನಗಳನ್ನು, ಬೋಧನಾ ಸಹಕಾರಿಗಳನ್ನು ತಯಾರಿಸಿದವರು ಮತ್ತು ಅನೇಕ ಸಮಿತಿಗಳ ಸಂಸ್ಥಾಪಕರಾಗಿದ್ದು, ಇದರ ಸೇವೆಯಲ್ಲಿ ತಮ್ಮ ಇಡೀ ಜೀವನವನ್ನು ಕಳೆದ ಅಸಾಧಾರಣ ಶಿಕ್ಷಕರು. ಇನ್ನು ಕೆಲವರು ಸ್ಥಳೀಯ ಮತ್ತು ಜಿಲ್ಲಾಮಟ್ಟಗಳಲ್ಲಿ ಶಿಕ್ಷಕರ ಸಂಘಟನೆಗಳಿಗಾಗಿ ಗಮನಾರ್ಹ ಸೇವೆಯನ್ನು ಸಲ್ಲಿಸಿದವರು ಜೊತೆಗೆ ಇವರಲ್ಲಿ ಅನೇಕರು ತಮ್ಮ ಸುತ್ತಮುತ್ತಲಿನ ಪ್ರದೇಶಗಳು ಮತ್ತು ಗ್ರಾಮಗಳಲ್ಲಿ ಅನೇಕ ಸಾಮಾಜಿಕ ಕಲ್ಯಾಣ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿದವರಾಗಿರುತ್ತಾರೆ. ಕೆಲವರು ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಪೂರೈಸಲು ನೆರವು ನೀಡಿದವರಾಗಿದ್ದಾರೆ. ಕೆಲವು ಪ್ರಶಸ್ತಿ ಪುರಸ್ಕೃತರು ಹಿಂದುಳಿದ ಮತ್ತು ಬುಡಕಟ್ಟು ಪ್ರದೇಶಗಳಂತಹ ಸಂಕಷ್ಟದ ಪರಿಸ್ಥಿತಿಗಳಲ್ಲಿ ಕೆಲಸ ಮಾಡಿದವರಾಗಿರುತ್ತಾರೆ ಪ್ರಶಸ್ತಿ ವಿಜೇತರಲ್ಲಿ ನಿಯತ ಶಾಲೆಗಳಲ್ಲಿ ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ ಕೆಲ ಶಿಕ್ಷಕರು ಇರುತ್ತಾರೆ. ಇನ್ನು ಕೆಲವರು ಸಾಕ್ಷರತಾ ಪ್ರಚಾರ ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ, ರಾಷ್ಟ್ರೀಯ ಸಮನ್ವಯ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ತಮ್ಮ ಶಾಲೆಗಳಲ್ಲಿ ಮತ್ತು ತಮ್ಮ ಸಮುದಾಯದಲ್ಲಿ ಆಟ ಮತ್ತು ಕ್ರೀಡೆಗಳನ್ನು ಮತ್ತು ದೈಹಿಕ ಶಿಕ್ಷಣ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿದವರಾಗಿರುತ್ತಾರೆ.

**ರಾಜ್ಯ ಪ್ರಶಸ್ತಿಗಳು:** ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಉತ್ತಮ ಗೌರವ, ಪ್ರತಿಷ್ಠೆಯನ್ನು ಹೊಂದಿರುವ ಪ್ರಾಥಮಿಕ, ಮಾಧ್ಯಮಿಕ, ಹಿರಿಯ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಅಸಾಧಾರಣ, ವಿಶಿಷ್ಟ, ಸೃಜನಶೀಲ ಮತ್ತು ದಕ್ಷ ಶಿಕ್ಷಕರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಈಗ ಬಹುತೇಕ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮದೇ ಆದ ರಾಜ್ಯ ಪ್ರಶಸ್ತಿಗಳನ್ನು ಸ್ಥಾಪಿಸಿವೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಜ್ಯ ಪ್ರಶಸ್ತಿಗಳಿಗೆ ಇರುವಂತಹ ಅರ್ಹತಾ ನಿರ್ಬಂಧನೆಗಳು ಮತ್ತು ಆಯ್ಕೆಯ ಮಾನದಂಡಗಳು ಕೇಂದ್ರ ಪ್ರಶಸ್ತಿಗಳಿಗೆ ಇರುವ ರೀತಿಯದೇ ಆಗಿವೆ. ಕೆಲವು ರಾಜ್ಯಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸಗಳಿವೆ. ಉದಾಹರಣೆಗೆ ಅರುಣಾಚಲ ಪ್ರದೇಶದಲ್ಲಿ ಶಿಕ್ಷಕರಿಗೆ ಮಾನ್ಯತೆ ಹೊಂದಿರುವ ಪಾಥಮಿಕ/ಮಾಧ್ಯಮಿಕ/ಪ್ರೌಢ ಶಾಲೆಗಳಲ್ಲಿ 15 ವರ್ಷಗಳ ಕ್ರಮಬದ್ಧ ಬೋಧನಾ ಅನುಭವದ ಸ್ಥಾನದಲ್ಲಿ ಕನಿಷ್ಟ 20 ವರ್ಷಗಳ ಕ್ರಮಬದ್ಧ ಬೋಧನಾ ಅನುಭವವಿರಬೇಕಾಗುತ್ತದೆ. ಸರಕಾರೇತರ ಸಂಸ್ಥೆಗಳು (ಎನ್‌ಜಿಒ) ನಡೆಸುವ ಮಾನ್ಯತೆ ಪಡೆದಿರುವ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರೂ ಪ್ರಶಸ್ತಿಗೆ ಅರ್ಹರಿರುತ್ತಾರೆ. ರಾಜಸ್ಥಾನದಲ್ಲಿ ಎಲ್ಲಾ ವಿಭಾಗಗಳ ಶಿಕ್ಷಕರು ಪ್ರಶಸ್ತಿಗೆ ಅರ್ಹರಿರುತ್ತಾರೆ. ಇವರಲ್ಲಿ ವಿಭಿನ್ನ ಮಟ್ಟಗಳ ಶಾಲೆಗಳು, ಶಿಕ್ಷಕ ತರಬೇತಿ ಸಂಸ್ಥೆಗಳ, ವಿಶೇಷ ಸಂಸ್ಥೆಗಳ ಮುಖ್ಯೋಪಾಧ್ಯಾಯರು, ರಾಜ್ಯದಲ್ಲಿ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಗೆ ಸಮಾನ ಹುದ್ದೆಯಲ್ಲಿರುವ ಆಡಳಿತಾಧಿಕಾರಿಗಳು ಪ್ರಶಸ್ತಿಗೆ ಅರ್ಹರು.

ಪ್ರಶಸ್ತಿಯ ಆಯ್ಕೆಯನ್ನು ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ಆಯ್ಕೆ ಸಮಿತಿಗಳು ನಡೆಸುತ್ತವೆ. ಜಿಲ್ಲೆ ಮತ್ತು ರಾಜ್ಯ ಮಟ್ಟದ ಸಮಿತಿಗಳ ನಿರ್ದಿಷ್ಟ ಸಂಯೋಜನೆಯು ರಾಜ್ಯ ಸರಕಾರಕ್ಕೆ ಸೇರಿದ್ದಾಗಿದೆ. ಸಾಮಾನ್ಯವಾಗಿ ಈ ಸಮಿತಿಗಳಲ್ಲಿ ಮೂರು/ನಾಲ್ಕು ಮಂದಿ ಇರುತ್ತಾರೆ. ಪ್ರಾಥಮಿಕ ಆಯ್ಕೆಯು ಜಿಲ್ಲಾ ಅಧಿಕಾರಿ (ಡಿಇಒ) ಇರುತ್ತಾರೆ. ಸಮಿತಿಯ ಮೂರು ಮಂದಿ ಸದಸ್ಯರಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು (ಡಿಐಇಟಿ), ಜಿಲ್ಲಾ ಹಿರಿಯ ಉಪ ಶಿಕ್ಷಣಾಧಿಕಾರಿ ಮತ್ತು ಜಿಲ್ಲಾ ಶಿಕ್ಷಣಾಧಿಕಾರಿ ನಾಮಾಂಕಿತಗೊಳಿಸಿರುವ ಪ್ರಾಥಮಿಕ/ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರು ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಶ್ರೇಷ್ಠತೆಯಿಂದ ಎದ್ದು ಕಾಣುವ ಮತ್ತು ಗೌರವ, ಪ್ರತಿಷ್ಠೆಯನ್ನು ಹೊಂದಿರುವ ಶಿಕ್ಷಕರ ಪಟ್ಟಿಗಳನ್ನು ಪರಿಶೀಲನಾ ಸಮಿತಿಯು

Digitised by Bharatavani, CIIL

ಅನೇಕ ತಳಸ್ಪರ್ಶಿ ಮೂಲಗಳನ್ನು ಆಧರಿಸಿ ತಯಾರಿಸುತ್ತದೆ. ಈ ತಳಸ್ಪರ್ಶಿ ಮೂಲಗಳು ಯಾವುವೆಂದರೆ, ಶಿಕ್ಷಕರ ದಿನಚರಿ, ಅವರ ಶೈಕ್ಷಣಿಕ ದಾಖಲೆ, ಪರಿಶೀಲನಾ ವರದಿ, ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು ಇಟ್ಟುಕೊಂಡಿರುವ ದಾಖಲೆಗಳು, ಕಳೆದ ಐದು ವರ್ಷಗಳ ಪರೀಕ್ಷಾ ಫಲಿತಾಂಶಗಳು/ಸಾಧನೆಗಳು, ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದರಲ್ಲಿ ಅವರ ಕೊಡುಗೆ, ಗುಪ್ತವರದಿ, ಸೇವಾ ಪುಸ್ತಕ ಇತ್ಯಾದಿ. ಯೋಗ್ಯತೆಗೆ ಅನುಗುಣವಾಗಿ ಜಿಲ್ಲಾ ಆಯ್ಕೆ ಸಮಿತಿಯು ಶಿಫಾರಸು ಮಾಡಿದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಹೆಸರುಗಳನ್ನು ಅದಕ್ಕೆ ಸಂಬಂಧಿಸಿದ ಮಂಡಲದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಉಪ ನಿರ್ದೇಶಕರಿಗೆ ಕಳುಹಿಸಲಾಗುವುದು. ಇದರೊಂದಿಗೆ ಸಂಬಂಧಿಸಿದ ಉಪ ಶಿಕ್ಷಣಾಧಿಕಾರಿಯ ಸಹಿ ಇರುವ ವಿಷಯಕ್ಕೆ ಸಂಬಂಧಿಸಿದ ದಾಖಲೆಪತ್ರಗಳನ್ನು ಕೂಡಾ ಕಳುಹಿಸಲಾಗುವುದು. ಇದನ್ನು ರಾಜ್ಯಮಟ್ಟದ ಆಯ್ಕೆ ಸಮಿತಿಗೆ ಕಳುಹಿಸಿಕೊಡುವುದಕ್ಕಿಂತ ಮೊದಲು ನಿರ್ದೇಶನಾಲಯದ ಮಟ್ಟದಲ್ಲಿ ಪರಿಶೀಲನಾ ಸಮಿತಿಯು ಶಿಫಾರಸು ಮಾಡಿರುವ ಹೆಸರುಗಳನ್ನು ಪರೀಕ್ಷಿಸುವುದು. ರಾಜ್ಯ ಆಯ್ಕೆ ಸಮಿತಿಯಿಂದ ಅಂತಿಮ ಆಯ್ಕೆ ನಡೆಯುತ್ತದೆ. ಸಾಮಾನ್ಯವಾಗಿ ಶಿಕ್ಷಣ ನಿರ್ದೇಶಕರು/ಸಾರ್ವಜನಿಕ ಶಿಕ್ಷಣ ನಿರ್ದೇಶಕರು ಈ ಸಮಿತಿಯ ಅಧ್ಯಕ್ಷರಾಗಿಯೂ, ಇಬ್ಬರು ಸದಸ್ಯರು ತರಬೇತಿ ಮಹಾವಿದ್ಯಾಲಯದ ಪ್ರಾಂಶುಪಾಲರು ಮತ್ತು ಭಾರತ ಸರಕಾರದ ಪ್ರತಿನಿಧಿಯಾಗಿರುವ ಹೆಸರುವಾಸಿ ಶಿಕ್ಷಣತಜ್ಞರು ಇರುತ್ತಾರೆ. ಸಮಿತಿಯ ಶಿಫಾರಸುಗಳನ್ನು ಯೋಗ್ಯತಾ ಕ್ರಮದಲ್ಲಿ (ಎಮ್‌ಎಚ್‌ಆರ್‌ಡಿ) ರಾಜ್ಯ ಸರಕಾರಕ್ಕೆ ಕಳುಹಿಸಲಾಗುತ್ತದೆ. ಶಿಕ್ಷಕರ ದಿನದಂದು ಆಯ್ಕೆಯಾದ ಶಿಕ್ಷಕರಿಗೆ ಸಾಮಾನ್ಯವಾಗಿ ಐದು ಸಾವಿರ ರೂಪಾಯಿ ನಗದು, ಮತ್ತು ಯೋಗ್ಯತಾ ಪ್ರಮಾಣ ಪತ್ರವನ್ನು ರಾಜ್ಯದ ಮುಖ್ಯಸ್ಥರಿಂದ ಅಥವಾ ಮುಖ್ಯಮಂತ್ರಿಗಳಿಂದ ಅಥವಾ ವಿಶೇಷ ಮನ್ನಣೆ ಇರುವ ವ್ಯಕ್ತಿಗಳಿಂದ ನೀಡಲಾಗುತ್ತದೆ. ಕೆಲವು ರಾಜ್ಯಗಳು ನಗದು ಮತ್ತು ಯೋಗ್ಯತಾ ಪ್ರಮಾಣ ಪತ್ರದೊಂದಿಗೆ ಬೆಳ್ಳಿಪದಕ ಅಥವಾ ಅಂಗವಸ್ತ್ರವನ್ನು (ಶಾಲು) ಕೂಡಾ ನೀಡುತ್ತವೆ (ಚೋಪ್ರಾ, 1993).

ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳಲ್ಲದೆ ರಾಜ್ಯದಲ್ಲಿನ ಅನೇಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸ್ವಯಂಸೇವಾ ಸಂಸ್ಥೆಗಳು ಕೂಡಾ ಪ್ರತಿಭಾವಂತ ಶಿಕ್ಷಕರಿಗೆ ಅನೇಕ ಪ್ರಶಸ್ತಿಗಳನ್ನು ನೀಡುತ್ತಿವೆ. ಯೋಗ್ಯ ಶಿಕ್ಷಕರು ಶಿಕ್ಷಣ ಕ್ಷೇತ್ರಕ್ಕೆ ಮತ್ತು ಸಮುದಾಯದ ಕಲ್ಯಾಣಕ್ಕೆ ನೀಡಿರುವ ಶ್ರೇಷ್ಠ ಸೇವೆಗಾಗಿ ಚಂಡೀಘಡ, ದೆಹಲಿ ಮತ್ತು ಪಂಜಾಬ್‌ಗಳಲ್ಲಿ ಲಯನ್ಸ್ ಕ್ಲಬ್ ಪ್ರಶಸ್ತಿ, ಪಾಂಡಿಚೇರಿಯಲ್ಲಿ ಪ್ರೊಫೆಸರ ಡಿ.ಸಿ. ಶರ್ಮಾ ನೆನಪಿನ ಪ್ರಶಸ್ತಿ, ಮತ್ತು ದಾದ್ರಾ ಮತ್ತು ನಗರ ಹೂವೇಲಿಯಲ್ಲಿ ಡಿ.ಡಿ. ಮೋದಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಕೆಲವು ರಾಜ್ಯಗಳಲ್ಲಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಶಿಕ್ಷಕರಿಗೆ ಎರಡು ವರ್ಷ ಅವಧಿಯ ಸೇವಾ ವಿಸ್ತರಣೆಯೂ ಇದೆ. (ಚೋಪ್ರಾ 1993)

**ಪ್ರಾಯೋಗಿಕ ಮತ್ತು ನಾವೀನ್ಯತೆಗಾಗಿ ಎನ್‌ಸಿಇಆರ್‌ಟಿಯ ಪ್ರಶಸ್ತಿಗಳು:**

ಶಿಕ್ಷಣದ ಗುಣಮಟ್ಟದ ಸುಧಾರಣೆಗಾಗಿ ನಡೆಸುವ ಪ್ರಯೋಗಗಳು ಮತ್ತು ಹೊಸ ಅನ್ವೇಷಣೆಗಳಿಗಾಗಿ ಕೂಡಾ ಶಿಕ್ಷಕರಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

ಈ ನಿಟ್ಟಿನಲ್ಲಿ ಎನ್‌ಸಿಇಆರ್‌ಟಿಯ ವಿಸ್ತರಣಾ ಕಾರ್ಯಕ್ರಮಗಳ ನಿರ್ದೇಶನಾಲಯವು ಪ್ರೌಢ ಶಾಲಾ ಶಿಕ್ಷಕರಿಗಾಗಿ ಅಧ್ಯಯನ ಗೋಷ್ಠಿ ವಾಚನಗಳ ಅಖಿಲ ಭಾರತ ಸ್ಪರ್ಧೆಯನ್ನು 1962–63ರಲ್ಲಿ ಪ್ರಾರಂಭಿಸಿತು. ಇದರ ಮುಖ್ಯ ಉದ್ದೇಶವು ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ತಮ್ಮ ಸೃಜನಶೀಲ ಚಿಂತನೆ, ಅನ್ವೇಷಣಾ ತಂತ್ರಗಳು ಮತ್ತು ಬೋಧನಾ ಕಾರ್ಯವಿಧಾನ ಮತ್ತು ತಾಂತ್ರಿಕತೆಯ ಕುರಿತಾದ ಸೃಜನಶೀಲ ಚಿಂತನೆ, ಅನ್ವೇಷಣಾ ತಂತ್ರಗಳು ಮತ್ತು ಬೋಧನಾ ಕಾರ್ಯವಿಧಾನ ಮತ್ತು ತಾಂತ್ರಿಕತೆಯ ಕುರಿತಾದ ಪ್ರಾಯೋಗಿಕ ಫಲಿತಾಂಶಗಳನ್ನು ಆಧರಿಸಿ ಪ್ರಬಂಧಗಳನ್ನು ಬರೆಯಲು ಪ್ರೋತ್ಸಾಹ ನೀಡುವುದಾಗಿದೆ. ದೇಶದಾದ್ಯಂತ ದೊಡ್ಡ ಸಂಖ್ಯೆಯ ಪ್ರೌಢಶಾಲಾ ಶಿಕ್ಷಕರ ನಡುವೆ ಹೊಸ ವಿಚಾರಗಳು ಮತ್ತು ಅನುಭವಗಳು ಪರಸ್ಪರ ಹಂಚಿಕೊಳ್ಳಬೇಕೆಂಬ ಉದ್ದೇಶದಿಂದ ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ಆಯೋಜಿಸಲಾಗುವ ವಿಶೇಷ ವಿಚಾರಸಂಕಿರಣಗಳಲ್ಲಿ ಈ ಪ್ರಬಂಧಗಳನ್ನು ಮಂಡನೆ ಮಾಡಿ ಚರ್ಚಿಸಲಾಗುತ್ತಿತ್ತು. ಈ ಕಾರ್ಯಕ್ರಮಕ್ಕೆ ಅಧ್ಯಯನ ಗೋಷ್ಠಿ ವಾಚನಗಳು (Seminar Reading) ಎಂಬ ಶೀರ್ಷಿಕೆಯನ್ನು ಮೊದಲು ನೀಡಿದ್ದು ಇದೇ ಕಾರಣಕ್ಕಾಗಿ.

ಪ್ರಬಂಧಗಳು ಇಂಗ್ಲಿಷ್ ಅಥವಾ ಯಾವುದೇ ಆಧುನಿಕ ಭಾರತೀಯ ಭಾಷೆಯಲ್ಲಿ ಇರುತ್ತವೆ. ಮೊದಲು ಈ ಪ್ರಬಂಧಗಳನ್ನು ಪ್ರೌಢಶಾಲಾ ಶಿಕ್ಷಕ ತರಬೇತಿ ಮಹಾವಿದ್ಯಾಲಯಗಳಿಗೆ ಸೇರಿದ ವಿಸ್ತರಣಾ ಸೇವಾ ವಿಭಾಗಗಳಿಗೆ ಸಲ್ಲಿಸಲಾಗುತ್ತಿತ್ತು. ಇವುಗಳಲ್ಲಿ ಹತ್ತು ಉತ್ತಮ ಪ್ರಬಂಧಗಳನ್ನು ಆಯ್ಕೆ ಮಾಡಲು ಪ್ರತಿಯೊಂದು ವಿಸ್ತರಣ ಕೇಂದ್ರವು ಮೂರು ತೀರ್ಪುಗಾರರನ್ನು ನೇಮಿಸುತ್ತಿತ್ತು. ನಂತರ ಅವುಗಳನ್ನು ರಾಜ್ಯ ಶಿಕ್ಷಣ ವಿಭಾಗಗಳಿಗೆ ಕಳುಹಿಸಿಕೊಡಲಾಗುತ್ತಿತ್ತು. ಅಲ್ಲಿ ರಾಜ್ಯ ಮಟ್ಟದ ಸ್ಪರ್ಧೆಗಾಗಿ ಮೂರು ತೀರ್ಪುಗಾರರ ತಂಡದ ನೆರವಿನಿಂದ ಹತ್ತು ಅತ್ಯುತ್ತಮ ಪ್ರಬಂಧಗಳನ್ನು ಆಯ್ಕೆ ಮಾಡಿ, ಹೀಗೆ ಆಯ್ಕೆಯಾದ ಪ್ರಬಂಧಗಳನ್ನು ಪ್ರತಿಯೊಂದು ರಾಜ್ಯದಿಂದ ಅಖಿಲ ಭಾರತ ಸ್ಪರ್ಧೆಗಾಗಿ ಎನ್‌ಸಿಇಆರ್‌ಟಿಗೆ ಕಳುಹಿಸಿಕೊಡಲಾಗುತ್ತಿತ್ತು. ವಿವಿಧ ರಾಜ್ಯಗಳಿಂದ ಸ್ವೀಕೃತವಾಗಿರುವ ಪ್ರಬಂಧಗಳಲ್ಲಿ ಅಂತಿಮವಾಗಿ ರಾಷ್ಟ್ರಪ್ರಶಸ್ತಿಗಾಗಿ ಗರಿಷ್ಠ ಮೂವತ್ತು ಪ್ರಬಂಧಗಳನ್ನು ಆಯ್ಕೆ ಮಾಡಲಾಗುತ್ತಿತ್ತು. ಪ್ರಶಸ್ತಿಯು ಐನೂರು ರೂ.ಗಳ ನಗದು ಬಹುಮಾನ ಮತ್ತು ಯೋಗ್ಯತಾ ಪ್ರಮಾಣ ಪತ್ರವನ್ನು ಒಳಗೊಂಡಿರುತ್ತಿತ್ತು. ಇದನ್ನು ಅನುಸರಿಸಿ ಸಂಸ್ಥೆಯು ರಾಷ್ಟ್ರಮಟ್ಟದ ಸಭೆಯನ್ನು ನಡೆಸಿ ಕ್ಷೇತ್ರತಜ್ಞರ ಸಮ್ಮುಖದಲ್ಲಿ ಉತ್ತಮವೆಂದು ಆಯ್ಕೆಯಾದ ಪ್ರಬಂಧಗಳ ವಾಚನ ಮತ್ತು ಚರ್ಚೆಯನ್ನು ನಡೆಸಲು ಪ್ರಬಂಧಗಳ ಲೇಖಕರನ್ನು ಆಹ್ವಾನಿಸಲಾಗುತ್ತಿತ್ತು.

Digitised by Bharatavani, CIIL

ಕಾಲಾನುಕ್ರಮದಲ್ಲಿ ಈ ಕಾರ್ಯಯೋಜನೆಯಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಅವುಗಳ ಪರಿಭಾಷೆ, ಭಾಗವಹಿಸುವವರ ಸ್ವರೂಪ, ಪ್ರಶಸ್ತಿಗಳ ಸಂಖ್ಯೆ, ನಗದು ಬಹುಮಾನದ ಮೊತ್ತ, ಪ್ರಬಂಧ ಸಲ್ಲಿಕೆಯ ಕಾರ್ಯವಿಧಾನ, ನಗದು ಬಹುಮಾನದ ಅರ್ಹತೆ ಇತ್ಯಾದಿಗಳಿಗೆ ಕುರಿತಂತೆ ಇದರ ವ್ಯಾಪ್ತಿಯನ್ನು ಹಿಗ್ಗಿಸಲಾಗಿದೆ.

1974–75ರಲ್ಲಿ ಈ ಕಾರ್ಯಕ್ರಮಕ್ಕೆ ವ್ಯಾಪ್ತಿ ವಿಸ್ತರಣದೊಂದಿಗೆ ಹೊಸ ಹೆಸರನ್ನು ನೀಡಲಾಯಿತು. ಈ ಕಾರ್ಯಕ್ರಮವನ್ನು 'ಅಧ್ಯಯನ ಗೋಷ್ಠಿವಾಚನಗಳ ಶಾಲೆಗಳಲ್ಲಿ ನವೀನತೆಗಳು; ಶಾಲೆಗಳಲ್ಲಿ ಹೊಸ ಕಲ್ಪನೆಗಳು' ಎಂದು ಕರೆಯಲಾಯಿತು. ಇದನ್ನು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗಾಗಿ ಆಯೋಜಿಸಲಾಗುತ್ತಿತ್ತು. ಇದರಲ್ಲಿ ಮುಖ್ಯೋಪಾಧ್ಯಾಯರು ಮತ್ತು ಪ್ರಾಂಶುಪಾಲರು ಕೂಡಾ ಸೇರುತ್ತಾರೆ. ಇದರಲ್ಲಿ ಭಾಗವಹಿಸುವ ಪ್ರತಿಯೊಬ್ಬ ಶಿಕ್ಷಕ/ಶಿಕ್ಷಕಿಯು ತಾನು ನಡೆಸಿದ ನಾವೀನ್ಯದ ವರದಿಯನ್ನು ರಾಜ್ಯಮಟ್ಟದ ಪರಿಶೀಲನೆಗಾಗಿ ಸಂಬಂಧಿಸಿದ ಎಸ್‌ಸಿಇಆರ್‌ಟಿ/ಎಸ್‌ಐಇಗೆ ಕಳುಹಿಸಿಕೊಡುತ್ತಿದ್ದರು. ಈ ಸ್ಪರ್ಧೆಗಾಗಿ ಅರ್ಹತೆಯನ್ನು ಪರಿಶೀಲಿಸಿದ ಬಳಿಕ ಪ್ರತಿಯೊಂದು ಎಸ್‌ಸಿಇಆರ್‌ಟಿ/ಎಸ್‌ಐಇಯು ಉತ್ತಮ ಪ್ರಬಂಧಗಳನ್ನು ಆಯ್ಕೆ ಮಾಡಿಕೊಳ್ಳುವ ಸಲುವಾಗಿ ಪರೀಕ್ಷಕರ ತಂಡವನ್ನು ನೇಮಿಸಿಕೊಳ್ಳುತ್ತಿತ್ತು. ರಾಜ್ಯಮಟ್ಟದಲ್ಲಿ ಆಯ್ಕೆಯಾದ ಪ್ರಬಂಧಗಳನ್ನು (ಪ್ರಾಂತೀಯ ಭಾಷೆಗಳಲ್ಲಿ ಅಥವಾ ಹಿಂದಿಯಲ್ಲಿ ಬರೆದವು ಇಂಗ್ಲಿಷ್ ಭಾಷೆಗೆ ಅನುವಾದಿಸಿ ರಾಷ್ಟ್ರಮಟ್ಟದ ಪರಿಶೀಲನೆಗಾಗಿ ಆಯ್ಕೆಯಾದ ಪ್ರತಿ ಪ್ರಬಂಧವನ್ನು ಎನ್‌ಸಿಇಆರ್‌ಟಿಗೆ ಕಳುಹಿಸಿಕೊಡಲಾಗುತ್ತದೆ. ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಯ ಸಂಖ್ಯೆಯನ್ನು ಕೂಡಾ 30 ರಿಂದ 50ಕ್ಕೆ ಏರಿಸಲಾಗಿದೆ. ಈ 50 ಪ್ರಶಸ್ತಿಗಳಲ್ಲಿ 30 ಪ್ರಶಸ್ತಿಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು 20 ಪ್ರಶಸ್ತಿಗಳನ್ನು ಪ್ರೌಢಶಾಲಾ ಶಿಕ್ಷಕರಿಗೆ ನಿಗದಿಪಡಿಸಲಾಗಿದೆ.

1975–76ರಲ್ಲಿ ಎನ್‌ಸಿಇಆರ್‌ಟಿಯು ಇದೇ ರೀತಿಯ ಅಧ್ಯಯನ ಗೋಷ್ಠಿ ವಾಚನಗಳ ಕಾರ್ಯಕ್ರಮಗಳನ್ನು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪ್ರಶಿಕ್ಷರಿಗಾಗಿ ಪ್ರಾರಂಭಿಸಿತು. ಈ ಕಾರ್ಯಕ್ರಮದ ಉದ್ದೇಶ ಶಿಕ್ಷಕರ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಸುಧಾರಣೆಯನ್ನು ತರುವ ಸಲುವಾಗಿ ಸಂಶೋಧನೆ ಮತ್ತು ಪ್ರಾಯೋಗಿಕತೆಯನ್ನು ಕೈಗೊಳ್ಳುವುದು ಮತ್ತು ಅವರಲ್ಲಿ ಹೊಸ ಪರಿವರ್ತನಾಶೀಲ ವಿಚಾರಗಳು ಮತ್ತು ಪ್ರಯೋಗಗಳನ್ನು ಪ್ರಶಿಕ್ಷಕರ ಪ್ರೋತ್ಸಾಹಿಸುವುದಾಗಿದೆ. ರಾಜ್ಯ ಮತ್ತು ರಾಷ್ಟ್ರ ಹಂತಗಳಲ್ಲಿ ಪ್ರಶಿಕ್ಷಕರ ಪ್ರಬಂಧಗಳ ಪರಿಶೀಲನೆಯ ಕಾರ್ಯವಿಧಾನ ಮತ್ತು ಪರೀಕ್ಷಾ ಪ್ರಮಾಣವನ್ನು ಶಾಲಾ ಶಿಕ್ಷಕರ ರೀತಿಯಲ್ಲಿಯೇ ಕಾಪಾಡಿಕೊಂದು ಬರಲಾಗಿದೆ. ಪ್ರಶಸ್ತಿಗಳ ಸಂಖ್ಯೆಯು 30–20 ಪಾಥಮಿಕ ಶಿಕ್ಷಣ ಪ್ರಶಿಕ್ಷಕರಿಗೆ, ಮತ್ತು ಪ್ರೌಢ ಶಿಕ್ಷಕ ಪ್ರಶಿಕ್ಷಕರಿಗೆ 10 ಇರುತ್ತಿತ್ತು.

1985–86 ರಲ್ಲಿ ಶಾಲಾ ಶಿಕ್ಷಕರಿಗೆ ಮತ್ತು ಶಿಕ್ಷಕ ಶಿಕ್ಷಣಗಾರರಿಗೆ ನೀಡುವಂತಹ ಪ್ರಶಸ್ತಿಯ ನಗದು ಮೊತ್ತವನ್ನು 500 ರೂಪಾಯಿಯಿಂದ 1000 ರೂಪಾಯಿಗಳಿಗೆ ಏರಿಸಲಾಯಿತು.

1989–60ರಲ್ಲಿ ಈ ಕಾರ್ಯಕ್ರಮದ ಹೆಸರನ್ನೇ ಮತ್ತೆ ಬದಲಾಯಿಸಲಾಯಿತು ಮತ್ತು ಅದರ ವ್ಯಾಪ್ತಿಯನ್ನು ಇನ್ನಷ್ಟು ಹಿಗ್ಗಿಸಲಾಯಿತು. ಈ ಕಾರ್ಯಕ್ರಮವನ್ನು "ಅನ್ವೇಷಣಾ ಪರಿಪಾಠಗಳು ಮತ್ತು ಪ್ರಯೋಗಗಳ ಕುರಿತು ಶಾಲಾ ಶಿಕ್ಷಕರು ಮತ್ತು ಪ್ರಶಿಕ್ಷಕ ಅಖಿಲ ಭಾರತ ಸ್ಪರ್ಧೆ" ಎಂದು ಕರೆಯಲಾಯಿತು. ಈ ಕಾರ್ಯಕ್ರಮದ ವತಿಯಿಂದ ಪ್ರತಿವರ್ಷ ಎನ್‌ಸಿಇಆರ್‌ಟಿಯು ಶಾಲಾ ಶಿಕ್ಷಕರಿಗೆ ಮತ್ತು ಶಿಕ್ಷಕರಿಗಾಗಿ ತಲಾ ಒಂದೊಂದು ಅಖಿಲ ಭಾರತ ಸ್ಪರ್ಧೆಯನ್ನು ನಡೆಸುತ್ತದೆ. ಶಾಲಾ ಶಿಕ್ಷಕರಿಗಾಗಿ ಇರುವ ಅಖಿಲ ಭಾರತ ಸ್ಪರ್ಧೆಯ ವ್ಯಾಪ್ತಿಯಲ್ಲಿ ಬರುವವರೆಂದರೆ ಮುಖ್ಯ ಶಿಕ್ಷಕರು, ಪ್ರಾಂಶುಪಾಲರು, ಶಾಲೆಗಳ ಪರಿಶೀಲನಾಧಿಕಾರಿಗಳು, ಶಿಕ್ಷಣ ಅಧಿಕಾರಿಗಳು ಮತ್ತು ನಿವೃತ್ತ ಶಾಲಾ ಪ್ರಶಿಕ್ಷಕರು ಪ್ರಶಿಕ್ಷಕ ತರಬೇತಿ ಮಹಾವಿದ್ಯಾಲಯಗಳಲ್ಲಿ ಮತ್ತು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಕೆಲಸ ಮಾಡುವ ಶಿಕ್ಷಕರು, ಎಸ್‌ಸಿಇಆರ್‌ಟಿ/ಎಸ್‌ಐಇಗಳ ಸಿಬ್ಬಂದಿವರ್ಗ ಮತ್ತು ನಿವೃತ್ತ ಪ್ರಶಿಕ್ಷಕರು.

ಇತ್ತೀಚಿಗೆ ಎನ್‌ಸಿಇಆರ್‌ಟಿ ಪ್ರಶಸ್ತಿಗಾಗಿ ಆಯ್ಕೆಯಾದ ಪ್ರಬಂಧಗಳ ಪರಿಶೀಲನಾ ಕಾರ್ಯವಿಧಾನ, ಸ್ಪರ್ಧೆಯಲ್ಲಿ ಭಾಗವಹಿಸಲು ಇದ್ದಂತಹ ನಿರ್ಣಾಯಕ ಅಂಶ ಮತ್ತು ನಗದು ಪ್ರಶಸ್ತಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಪ್ರತಿಯೊಂದು ಪ್ರಬಂಧದ ಮೌಲ್ಯಮಾಪನವನ್ನು ಎರಡು ಹಂತಗಳಲ್ಲಿ ಮೊದಲು ಪ್ರಾದೇಶಿಕ ಮಟ್ಟದಲ್ಲಿ ಆಮೇಲೆ ರಾಷ್ಟ್ರಮಟ್ಟದಲ್ಲಿ ನಡೆಸಲಾಗುತ್ತದೆ. ಶಿಕ್ಷಕರು ಮತ್ತು ಪ್ರಶಿಕ್ಷಕರು ತಮ್ಮ ಪ್ರಬಂಧದ ಮೂರು ಬೆರಳಚ್ಚು ಪ್ರತಿಗಳನ್ನು ತಮ್ಮ ಪ್ರದೇಶದ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ (ಆರ್‌ಐಇ) ಪ್ರಾಂಶುಪಾಲರಿಗೆ ನೇರವಾಗಿ ಕಳುಹಿಸಬೇಕು. ಶಿಕ್ಷಕರ ಮತ್ತು ಪ್ರಶಿಕ್ಷಕ ಪ್ರಬಂಧಗಳನ್ನು ಮೌಲ್ಯಮಾಪಕರ ಪ್ರತ್ಯೇಕ ತಂಡಗಳು ಪ್ರತ್ಯೇಕವಾಗಿ ಮೌಲ್ಯಮಾಪನವನ್ನು ನಡೆಸುತ್ತವೆ. ಈ ಮೌಲ್ಯಮಾಪನವು ಪ್ರಬಂಧದ ವಸ್ತುವಿನ ಮೂಲ ಅಭಿವ್ಯಕ್ತಿ, ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರತಕ್ಕಂತಹ ಪರಿಣಾಮಕತ್ವ ಮತ್ತು ಪ್ರತಿಪಾದನೆಯನ್ನು ಆಧರಿಸಿ ಇರುತ್ತದೆ. ಪ್ರಾದೇಶಿಕ ಶಿಕ್ಷಣ ಸಂಸ್ಥೆಯ (ಆರ್‌ಐಇ) ಹಂತದ ಮೌಲ್ಯಮಾಪನದಲ್ಲಿ ಶೇಕಡಾ 50 ರಷ್ಟು ಅಂಕಗಳನ್ನು ಪಡೆಯುವ ಪ್ರಬಂಧಗಳು ಮಾತ್ರ ಎನ್‌ಸಿಇಆರ್‌ಟಿಯ ಅಖಿಲ ಭಾರತ ಹಂತದ ಮೌಲ್ಯಮಾಪನಕ್ಕೆ ಅರ್ಹವೆನಿಸುತ್ತವೆ. ಪ್ರಾದೇಶಿಕ ಶಿಕ್ಷಣ ಸಂಸ್ಥೆಯ (ಆರ್‌ಐಇ) ಪ್ರಾಂಶುಪಾಲರಿಂದ ಸ್ವೀಕೃತವಾಗಿರುವ ಎಲ್ಲಾ ಪ್ರಬಂಧಗಳು ರಾಷ್ಟ್ರಮಟ್ಟದಲ್ಲಿ ಮೂರು ಮಂದಿ ತಜ್ಞರ ತಂಡದಿಂದ ಮೌಲ್ಯಮಾಪನಗೊಳ್ಳುತ್ತವೆ. ನಿಶ್ಚಿತಗೊಳಿಸಿದ ನಿರ್ದಿಷ್ಟ ಶೇಕಡಕ್ಕಿಂತ ಹೆಚ್ಚು ಅಂಕವನ್ನು ಪಡೆದಂತಹ ಪ್ರಬಂಧ ಲೇಖಕರನ್ನು ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಪ್ರಬಂಧ ಮಂಡನೆಗಾಗಿ ಆಹ್ವಾನಿಸಲಾಗುತ್ತದೆ. ಮೂವರು ತಜ್ಞರ ಗುಂಪಿನಿಂದ ಅಖಿಲ ಭಾರತ ಮಟ್ಟದ ಮೌಲ್ಯಮಾಪನ ಮತ್ತು ರಾಷ್ಟ್ರೀಯ

Digitised by Bharatavani, CIIL

ವಿಚಾರಸಂಕಿರಣದಲ್ಲಿ ಲೇಖಕರು ಮಂಡಿಸುವ ಪ್ರಬಂಧದ ಮೌಲ್ಯಮಾಪನವು ನಡೆಯುವುದು. ಪ್ರಬಂಧಗಳ ಮೌಲ್ಯಮಾಪನ ಮತ್ತು ಅವುಗಳ ಮಂಡನೆಯನ್ನು ಆಧರಿಸಿ ಪ್ರಶಸ್ತಿಯ ಕೊನೆಯ ಆಯ್ಕೆ ನಡೆಯುತ್ತದೆ (ಎನ್‌ಸಿಇಆರ್‌ಟಿ, 2001).

ಈಗ ಇರುವ ಪ್ರಕಾರ, ಒಂದು ನಿರ್ದಿಷ್ಟ ವರ್ಷದಲ್ಲಿ ಪ್ರಶಸ್ತಿಯನ್ನು ಪಡೆದ ಅಭ್ಯರ್ಥಿಯು ನಂತರದ ಎರಡು ವರ್ಷಗಳಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಅವರ ಪ್ರಬಂಧವು ಆಯ್ಕೆಯಾಗಿದ್ದರೆ, ಅವರು ಪ್ರಮಾಣಪತ್ರವನ್ನು ಮಾತ್ರ ಪಡೆಯಬಹುದೇ ವಿನಹ ಪ್ರಶಸ್ತಿಯ ನಗದು ಮೊತ್ತವನ್ನು ಸ್ವೀಕರಿಸಲು ಅರ್ಹರಾಗುವುದಿಲ್ಲ.

1997–1998ರಿಂದ ಪ್ರಶಸ್ತಿಯ ಸಂಖ್ಯೆಯನ್ನು ಕೂಡಾ 80ರಿಂದ 100 ಕ್ಕೇರಿಸಲಾಗಿದೆ. ಇದರಲ್ಲಿ ಶಾಲಾ ಶಿಕ್ಷಕರಿಗೆ 70 ಮತ್ತು ಪ್ರಶಿಕ್ಷಕರಿಗೆ 30 ಇರುತ್ತವೆ. ರಾಷ್ಟ್ರಮಟ್ಟದಲ್ಲಿ ಆಯ್ಕೆಯಾಗಿರುವ ಪ್ರಬಂಧಗಳಿಗೆ ಪ್ರಮಾಣಪತ್ರದೊಂದಿಗೆ ಪ್ರಾಥಮಿಕ ಪೂರ್ವ ಮತ್ತು ಪ್ರಾಥಮಿಕ ಹಂತಗಳಲ್ಲಿ ಗರಿಷ್ಠ 50 ನಗದು ಬಹುಮಾನಗಳು, ಮತ್ತು ಮಾಧ್ಯಮಿಕ, ಹಿರಿಯ ಮಾಧ್ಯಮಿಕ, ಮತ್ತು ಪ್ರೌಢ ಶಾಲಾ ಹಂತಗಳಲ್ಲಿ 20 ನಗದು ಬಹುಮಾನಗಳು ಇರುತ್ತವೆ. ಪ್ರಶಿಕ್ಷಕ ನಿಗದಿಪಡಿಸಲಾದ 30 ಪ್ರಶಸ್ತಿಗಳಲ್ಲಿ 20 ಪ್ರಾಥಮಿಕ ಶಿಕ್ಷಕ ಪ್ರಶಿಕ್ಷಕರಿಗೆ ಮತ್ತು 10 ಪ್ರೌಢಶಾಲಾ ಪ್ರಶಿಕ್ಷಕರಿಗೆ ಇರುತ್ತವೆ. ಪ್ರತಿಯೊಂದು ನಗದು ಬಹುಮಾನದ ಮೊತ್ತವು 2000 ರೂಪಾಯಿಗಳಾಗಿರುತ್ತದೆ. ರಾಷ್ಟ್ರೀಯ ವಿಚಾರಸಂಕಿರಣದ ಮೌಲ್ಯಮಾಪನದ ಕೊನೆಯ ದಿನ ಪ್ರಶಸ್ತಿಯನ್ನು ವಿತರಿಸಲಾಗುತ್ತದೆ (ಎನ್‌ಸಿಇಆರ್‌ಟಿ, 2001).

ಎನ್‌ಸಿಇಆರ್‌ಟಿಯ ರಾಷ್ಟ್ರೀಯ ಅರಿವಿನ ಕಾರ್ಯಯೋಜನೆಗೆ ಪತ್ರಿಕೆಗಳ ಮೂಲಕ ಮತ್ತು ವಿದ್ಯುತ್ ಮಾಧ್ಯಮಗಳಾದ ಬಾನುಲಿ, ದೂರದರ್ಶನ (ಜ್ಞಾನವಾಣಿ ಮತ್ತು ಜ್ಞಾನದರ್ಶನ) ಮತ್ತು ಅಂತರ್‌ಜಾಲದ ಮೂಲಕ ವ್ಯಾಪಕ ಪ್ರಚಾರವನ್ನು ನೀಡಲಾಗುತ್ತದೆ. ಪ್ರಾಥಮಿಕ ಶಿಕ್ಷಕರ ಬಹುಮಾನ ಪಡೆದ ಪ್ರಬಂಧವು ಉದ್ದೇಶಿತ ಗುಂಪಿನಲ್ಲಿ ವ್ಯಾಪಕ ಪ್ರಸಾರವನ್ನು ಪಡೆಯುವ ಪ್ರಯತ್ನವನ್ನು ಕೂಡಾ ನಡೆಸಲಾಗುತ್ತದೆ. 2000–01 ಎನ್‌ಸಿಇಆರ್‌ಟಿಯ ಎರಡು ಪತ್ರಿಕೆಗಳಾದ ಪ್ರೈಮರಿ ಶಿಕ್ಷಕ (ಏಪ್ರಿಲ್, 2001) ಮತ್ತು ಪ್ರೈಮರಿ ಟೀಚರ್ (ಫೆಬ್ರವರಿ, 2000)ನ ಎರಡು ವಿಶೇಷ ಸಂಚಿಕೆಗಳಲ್ಲಿ ಈ ಪ್ರಬಂಧಗಳನ್ನು ಪ್ರಕಟಿಸಲಾಗಿದೆ. ಈ ವಿಶೇಷ ಸಂಚಿಕೆಗಳಿಂದಾಗಿ ಪತ್ರಿಕೆಯ ಚಂದಾಸಂಖ್ಯೆ ಕೂಡಾ ಹೆಚ್ಚಿದೆ.

ಪ್ರಶಸ್ತಿ ಪುರಸ್ಕೃತ ಶಿಕ್ಷಕರ ಪ್ರಬಂಧಗಳು ಶಾಲೆಗಳ ಪರಿಣಾಮಕಾರತ್ವದ ಮೇಲೆ ಪ್ರಭಾವ ಬೀರುತ್ತವೆ. ಪರಿವರ್ತನಾಶೀಲ ಶಿಕ್ಷಕರ ನಿರ್ದಿಷ್ಟ ಸಂಗತಿ ಅಧ್ಯಯನಗಳು (ಸಬ್ಬರವಾಲ್ ಮತ್ತು ನಾಗಪಾಲ್, 2000) ಶಿಕ್ಷಕರ ಪ್ರಬಂಧಗಳ ಧೋರಣಾ ವರದಿಗಳು ಮತ್ತು ಪ್ರಶಸ್ತಿ ವಿಜೇತ ಪ್ರಬಂಧಗಳ ಪರಿವರ್ತನಾಶೀಲ ವಿಶ್ಲೇಷಣೆಯನ್ನು (ಸಬ್ಬರವಾಲ್, 1999) ಆಧರಿಸಿ ಪ್ರಶಸ್ತಿ ಪುರಸ್ಕೃತ ಶಿಕ್ಷಕರು ಪಠ್ಯಕ್ರಮ ಪರಿಶೋಧಕರು, ಕಠಿಣ ಪರಿಶ್ರಮಿಗಳು, ಬದ್ಧರು ಮತ್ತು ಸಮುದಾಯವು ಯುಇಇ, ಎನ್‌ಎಲ್‌ಎಮ್ ಮತ್ತು ಎಸ್‌ಎಸ್‌ಗಳನ್ನು ಹೊಂದಲು ಸಂಪನ್ಮೂಲರಾಗಿದ್ದಾರೆ ಎಂಬ ತೀರ್ಮಾನಕ್ಕೆ ಬರಲಾಗಿದೆ. ಅವರು ಶಿಕ್ಷಣಕ್ಕಾಗಿ ಸಮುದಾಯ ಸಂಪನ್ಮೂಲ ಚಲನೆಯ ಕಾರ್ಯವಿಧಾನಕ್ಕೆ ಯೋಗ್ಯರಾಗಿದ್ದಾರೆ. ಅವರು ಕ್ರಿಯಾಮಾಲೆಯ ರೂಪಾಂತರಕ್ಕೆ ಅಗತ್ಯವೆಂದು ಪರಿಗಣಿಸಲಾಗುವ ಬೋಧಕವೃತ್ತಿಯಲ್ಲಿ ಸುಧಾರಣೆಗಳನ್ನು ತರಲು ಯೋಗ್ಯರಾಗಿದ್ದಾರೆ. ಅವರು ಸಮಾನಸ್ಕಂದ ಸಾಮರ್ಥ್ಯವನ್ನು ಕಟ್ಟಿಕೊಡುವುದರಲ್ಲಿ ಮುಖಂಡತ್ವದ ಲಕ್ಷಣಗಳನ್ನು ಪ್ರದರ್ಶಿಸುತ್ತಾರೆ. ತಮ್ಮ ವೃತ್ತಿಪರ ಬೆಳವಣಿಗೆಗೆ ಅವಕಾಶಗಳನ್ನು ಬಲವಂತವಾಗಿಯಾದರೂ ಪಡೆದುಕೊಳ್ಳುತ್ತಾರೆ ಮತ್ತು ಸೃಜನಶೀಲ ಕಾರ್ಯದಲ್ಲಿ ಬಹಳ ಸಮಯವನ್ನು ವ್ಯಯಗೊಳಿಸುತ್ತಾರೆ. ಅವರು ವಿಚಾರಪರ ಚಿಂತಕರು, ಆತ್ಮ–ಪರಿಶೋಧನೆ ಮತ್ತು ಸ್ವಂತ ಗಳಿಕೆಯ ತಿಳಿವಳಿಕೆಯ ಮೂಲಕ ನಿಶ್ಚಿತ ಗುರಿಯನ್ನು ಸಾಧಿಸುತ್ತಾರೆ.

ಅವರು ತಮ್ಮ ಮಾನಸಿಕ ಸೃಜನಶೀಲ ಪ್ರವೃತ್ತಿಯಿಂದಾಗಿ ಪರಿವರ್ತನಾಶೀಲ ಕಾರ್ಯಗಳನ್ನು ನಡೆಸುತ್ತಲೇ ಇರುತ್ತಾರೆ. ಇವರಲ್ಲಿ ಕೆಲವರು ಎನ್‌ಸಿಇಆರ್‌ಟಿಯ ಪ್ರಶಸ್ತಿಯನ್ನು ಮಾತ್ರವಲ್ಲ, ರಾಷ್ಟ್ರಪತಿ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು, ಜಿಲ್ಲಾ ಪ್ರಶಸ್ತಿಗಳೊಂದಿಗೆ ಸ್ಥಳೀಯ ಪ್ರಶಸ್ತಿಗಳನ್ನು ಕೂಡಾ ಪಡೆದವರಾಗಿದ್ದಾರೆ.

ಈ ಪರಿಶೋಧನೆಗಳು ದೂರಗಾಮಿತ್ವದ ಶೈಕ್ಷಣಿಕ ಮತ್ತು ಕಾರ್ಯನೀತಿ ಪರಿಣಾಮಗಳನ್ನು ಹೊಂದಿವೆ. ತರಗತಿಗಳಲ್ಲಿ ಪಠ್ಯಕ್ರಮದ ಕಾರ್ಯನಿರ್ವಹಣೆಯಲ್ಲಿ ಅನೇಕ ವಿಧದ ಬೋಧನೆಯ ಮತ್ತು ಕಲಿಕೆಯ ಕಾರ್ಯವಿಧಾನಗಳ ಮೂಲಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಪರಿಶೋಧಕರು ಪ್ರಯತ್ನಿಸಿದ್ದಾರೆ ಎಂಬುದನ್ನು ಇವುಗಳು ಅಭಿವ್ಯಕ್ತಿಸುತ್ತವೆ. ವಿವಿಧ ವಿಷಯಗಳನ್ನು ಕಲಿಸುವುದರ ಮೂಲಕ ಏಕಮೂಲದ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಅವರು ಒತ್ತಾಯಿಸಿದ್ದಾರೆ. ನಾವು ಇಲ್ಲಿ ಕೇವಲ ಮಾಹಿತಿಯನ್ನು ನೀಡುವುದಕ್ಕಿಂತ ಮಾಹಿತಿಯನ್ನು ಪಡೆಯುವ ಪ್ರಕ್ರಿಯೆಯನ್ನು ಕಾಣುತ್ತೇವೆ. ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಅನುಸಂಧಾನ, ಚಟುವಟಿಕೆಯನ್ನು ಆಧರಿಸಿದ ತಂತ್ರಜ್ಞಾನ, ಶೈಕ್ಷಣಿಕ ಆಟಗಳ ಬಳಕೆ, ಜಾನಪದ ಹಾಡುಗಳನ್ನು ಆಧರಿಸಿದ ಆಟಗಳು, ಸನ್ನಿವೇಶಕ್ಕನುಗುಣವಾದ ಸರಳ ಮತ್ತು ಸೀಮಿತ ಖರ್ಚಿನ ಬೋಧನಾ ಸಾಧನಗಳ ಬಳಕೆ, ಸಹಭಾಗಿತ್ವದ ಕ್ರಮಾನುಸರಣೆ, ಗುಂಪು ಕಾರ್ಯ ಮತ್ತು ಸ್ವಯಂಕಲಿಕೆಯ ಚಟುವಟಿಕೆಗಳು ತರಗತಿಯನ್ನು ಸಂತೋಷದಾಯಕ ಸ್ಥಳವನ್ನಾಗಿ ಮಾಡುತ್ತವೆ. ಪೋಷಕತ್ವದ ಕಲಿಕೆಯ ಉತ್ತಮ ಕಾರ್ಯಾಚರಣೆಯನ್ನು ಮತ್ತು ವಿವಿಧ ವಿಷಯಗಳಿಗೆ ಸಂಬಂಧಿಸಿದ ಸೌಹಾರ್ದಯುತ ಧೋರಣೆಯನ್ನು ಬೆಳೆಸುತ್ತದೆ.

ಶಿಕ್ಷಕ ಪ್ರಶಸ್ತಿಗಳ ಕುರಿತಾದ ಮೇಲಿನ ವಿವರಣೆಯಿಂದ ವ್ಯಕ್ತಗೊಳ್ಳುವ ವಿಚಾರಗಳೆಂದರೆ, ಭಾರತ ಸರಕಾರ ಮತ್ತು ರಾಜ್ಯ ಸರ್ಕಾರಗಳು ಯೋಗ್ಯ ಮತ್ತು ಪ್ರತಿಭಾವಂತ ಶಿಕ್ಷಕರಿಗಾಗಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪರಿಚಯಿಸಿದರೂ ದೇಶದಲ್ಲಿರುವ ಶಿಕ್ಷಕರ ಸಂಖ್ಯೆಯನ್ನು ಗಮನದಲ್ಲಿಟ್ಟು ನೋಡಿದಾಗ ಇವುಗಳ ಸಂಖ್ಯೆ ಬಹಳ

Digitised by Bharatavani, CIIL

ಕಡಿಮೆ ಇರುವುದು ತಿಳಿದುಬರುತ್ತದೆ. ಬೇರೆಬೇರೆ ವರ್ಗಗಳ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಪ್ರಶಸ್ತಿಯ ಸಂಖ್ಯೆಯನ್ನು ಹೆಚ್ಚಿಸುವುದು ಸೂಕ್ತವಾಗಿದೆ. ಇದರಿಂದ ಸಮಾಜದಲ್ಲಿ ಶಿಕ್ಷಕರ ಮಟ್ಟ ಮತ್ತು ಪ್ರತಿಷ್ಠೆ ಹೆಚ್ಚುತ್ತದೆ. ಇದು ಅವರು ತುಂಬು ಮನಸ್ಸಿನಿಂದ ಕೆಲಸ ಮಾಡುವುದಕ್ಕೆ ಪ್ರೇರಣೆಯಾಗುತ್ತದೆ ಮತ್ತು ತಮ್ಮ ವೃತ್ತಿಯ ಕುರಿತು ಹೆಮ್ಮೆಯ ಭಾವನೆಯನ್ನು ಹೊಂದುವುದಕ್ಕೆ ಕಾರಣವಾಗುತ್ತದೆ.

ಮೂಲ: ರವಿ ಕಾಂತ ಚೋಪ್ರಾ

ಅನು: ಡಾ. ಗೀತಾ ಶೆಣೈ

## ಶಿಕ್ಷಕರ ಅರ್ಹತೆಗಳು

ಹೆಚ್ಚುತ್ತಿರುವ ಕಠಿಣ ಪರಿಸ್ಥಿತಿಯಲ್ಲಿ ಸವಾಲುಗಳನ್ನು ಎದುರಿಸಲು ಶಿಕ್ಷಕರನ್ನು ಸಿದ್ಧಗೊಳಿಸುವುದು ಅತಿ ಮುಖ್ಯ. 'ಶಿಕ್ಷಕರು ಹೇಗೆ ಇರುತ್ತಾರೆ ಶಿಕ್ಷಣದ ಮಟ್ಟವೂ ಹಾಗೆಯೇ ಇರುತ್ತದೆ'. ಎಂಬುದು ಚಾಲ್ತಿಯಲ್ಲಿರುವ ಮಾತು. ಆದುದರಿಂದ ಮುಂದಿನ ಜನಾಂಗವನ್ನು ರೂಪಿಸುವ ಶಿಕ್ಷಕರ ತರಬೇತಿಗೆ ಪ್ರಾಮುಖ್ಯತೆ ಇದೆ. ಇದನ್ನು ರ್‍ಯಾನ್ಸ್ (1960) ಸ್ಪಷ್ಟ ಮಾತುಗಳಲ್ಲಿ ತಿಳಿಸುತ್ತಾರೆ, 'ದಕ್ಷ ಶಿಕ್ಷಕರು ಸಿಗುವುದು ಸಾಧ್ಯವಿದ್ದರೆ ಉದ್ದೇಶಿತ ಶೈಕ್ಷಣಿಕ ಫಲಿತಾಂಶವನ್ನು ಪಡೆಯುವುದು ವಾಸ್ತವಿಕ ಸಂಗತಿಯಾಗುತ್ತದೆ. ಶಾಲೆಗಳು ಉತ್ಕೃಷ್ಟ ಸಂಪನ್ಮೂಲಗಳ ರೂಪದಲ್ಲಿ ಉಪಕರಣಗಳು, ಕಟ್ಟಡಗಳು ಮತ್ತು ಪಠ್ಯಪುಸ್ತಕಗಳನ್ನು ಹೊಂದಿರಬಹುದು. ಸಮುದಾಯದ ಅಗತ್ಯಗಳಿಗೆ ಅನುಗುಣವಾಗಿ ಸೂಕ್ತ ರೀತಿಯ ಪಠ್ಯಕ್ರಮವನ್ನು ಅಳವಡಿಸಿಕೊಂಡಿರಬಹುದು. ಆದರೆ ಶಿಕ್ಷಕರು ಅಪಾತ್ರರಾಗಿದ್ದರೆ ಅಥವಾ ಅವರು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸದೆ ತಟಸ್ಥರಾಗಿದ್ದರೆ ಇಡೀ ವ್ಯವಸ್ಥೆ ಪರಿಣಾಮಕಾರಿಯಾಗದೆ ನಿಷ್ಪ್ರಯೋಜಕವಾಗುವುದು.'ಅರ್ಹತೆಯುಳ್ಳ ಶಿಕ್ಷಕರಿಗೆ ಬದಲಿ ಇರುವುದು ಸಾಧ್ಯವಿಲ್ಲ. ಶಿಕ್ಷಣದ ಗುಣಮಟ್ಟವು ಶಿಕ್ಷಕರ ಗುಣಮಟ್ಟವನ್ನು ಆಧರಿಸಿರುತ್ತದೆ. ಇದು ಇನ್ನೊಂದು ವಿಧದಲ್ಲಿ ಶಿಕ್ಷಕರ ಶಿಕ್ಷಣದ (ತರಬೇತಿ) ಕಾರ್ಯಕ್ರಮಗಳ ಗುಣಮಟ್ಟವನ್ನು ಆಧರಿಸಿ ಇರುತ್ತದೆ. ಇಂತಹ ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿಯೇ ಅರ್ಹತೆ ಮತ್ತು ಬದ್ಧತೆಯುಳ್ಳ ಶಿಕ್ಷಕರು ರೂಪುಗೊಳ್ಳುತ್ತಾರೆ. ಶಿಕ್ಷಕರಿಗೆ ತರಬೇತಿ ನೀಡುವ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿ ಸಾಮಾನ್ಯ ವ್ಯಕ್ತಿಯಾಗಿರುತ್ತಾನೆ. ಅಲ್ಲಿ ಅವನು/ಅವಳು ಪರಿವರ್ತನೆಯನ್ನು ಹೊಂದಬೇಕು. ಅವನನ್ನು/ಅವಳನ್ನು ಸಮರ್ಥರಾಗಿ ಬದ್ಧತೆಯನ್ನು ಹೊಂದಿದವರಾಗಿ ಉತ್ತಮ ಕಾರ್ಯನಿರ್ವಹಣೆಯನ್ನು ಆಧರಿಸಿದ ಭಾವೀ ಶಿಕ್ಷಕರಾಗಿ ಮಾಡಲು ಪ್ರಯತ್ನವನ್ನು ನಡೆಸಲಾಗುತ್ತದೆ.

ಮಾಧ್ಯಮಿಕ ಶಿಕ್ಷಣ ಆಯೋಗ (1952–53) ತಿಳಿಸುವುದೇನೆಂದರೆ, "ಉದ್ದೇಶಿತ ಶೈಕ್ಷಣಿಕ ಮರುರಚನೆಯಲ್ಲಿ ಶಿಕ್ಷಕ ಬಹಳ ಮುಖ್ಯವಾದ ಅಂಶವೆನ್ನುವುದು ನಮಗೆ ಮನವರಿಕೆಯಾಗಿದೆ. ಅವನ ವೈಯಕ್ತಿಕ ಗುಣಲಕ್ಷಣಗಳು, ಅವನ ಶೈಕ್ಷಣಿಕ ಅರ್ಹತೆಗಳು, ಅವನ ವೃತ್ತಿಪರ ತರಬೇತಿ ಮತ್ತು ಶಾಲೆ ಹಾಗೂ ಸಮುದಾಯದಲ್ಲಿ ಅವನು ಹೊಂದಿರುವ ಸ್ಥಾನ ಮುಖ್ಯವಾಗುತ್ತವೆ. ಶಾಲೆಯ ಪ್ರತಿಷ್ಠೆ ಮತ್ತು ಸಮುದಾಯದ ಮೇಲಿನ ಅದರ ಪ್ರಭಾವವು ಆ ಶಾಲೆಯಲ್ಲಿ ಯಾವ ರೀತಿಯ ಶಿಕ್ಷಕರು ಕೆಲಸ ಮಾಡುತ್ತಾರೆ ಎನ್ನುವುದನ್ನು ಆಧರಿಸಿ ಇರುತ್ತದೆ.

ಉತ್ತಮ ಶಿಕ್ಷಕ ಯಾರು? ಅರ್ಹತೆಯುಳ್ಳ ಶಿಕ್ಷಕರ ಗುಣಲಕ್ಷಣಗಳೇನು? ಶಾಲೆಗಳಿಗೆ ಯಾವ ವಿಧದ ಶಿಕ್ಷಕರ ಅಗತ್ಯವಿದೆ? ಈ ರೀತಿಯ ಪ್ರಶ್ನೆಗಳು ಆಗಾಗ ಮನಸ್ಸಿನಲ್ಲಿ ಹುಟ್ಟಿಕೊಳ್ಳುತ್ತವೆ. ಉತ್ತಮ ಶಿಕ್ಷಕನ ಲಕ್ಷಣ ನಿರೂಪಿಸುವ ಕೆಲವು ಪ್ರಯತ್ನಗಳು ನಡೆದಿವೆ. ಉದಾಹರಣೆಗೆ, ಅವನು/ಅವಳು ಮಕ್ಕಳಿಂದ ಅಪೇಕ್ಷಿಸಲ್ಪಡುವವರಾಗಿಯೂ, ಅವರಿಗೆ ಪ್ರೀತಿಪಾತ್ರರಾಗಿಯೂ ಇರಬೇಕು. ಮಾದರಿಯಾಗಿರಬೇಕು; ಸ್ನೇಹಿತ, ಮಾರ್ಗದರ್ಶಕರಾಗಿರಬೇಕು; ಸಂಯಮ ಮತ್ತು ಅವರನ್ನು ಅರ್ಥಮಾಡಿಕೊಳ್ಳುವವರಾಗಿ ಇರಬೇಕು. ಬೋಧನಾ ವಿಷಯದ ಮೇಲೆ ಪ್ರಭುತ್ವ ಹೊಂದಿರಬೇಕು ಮತ್ತು ಕಲಿಕೆಯನ್ನು ಸಂತೋಷದಾಯಕವಾಗಿ ಮಾಡಬೇಕು ಇತ್ಯಾದಿ. ಉತ್ತಮ ಶಿಕ್ಷಕರ ಬಗ್ಗೆ ಮಕ್ಕಳ ಗ್ರಹಿಕೆಯನ್ನು ಕುರಿತು ಸಮೀಕ್ಷೆ ನಡೆಸಿರುವ ಥಾಮಸ್ ಮೊಂಟೊಮೆರಿ (1998) ಯು ಏಳು ವರ್ಷದಷ್ಟು ಕಿರಿವಯಸ್ಸಿನ ಮಕ್ಕಳು ಕೂಡಾ ತಮ್ಮ ಸೂಚನೆಗಳಲ್ಲಿ ಮುಕ್ತತೆ ಮತ್ತು ಸ್ಪಷ್ಟತೆ ಹೊಂದಿರುವುದನ್ನು ಕಂಡುಕೊಂಡಿದ್ದಾರೆ. ಅವರ ಕೆಲವು ಸೂಚನೆಗಳು ಹೀಗಿವೆ: ಶಿಕ್ಷಕರು ಪ್ರತಿಯೊಬ್ಬರಿಗೂ ಒಂದೇ ರೀತಿಯ ಗಮನವನ್ನು ನೀಡಬೇಕು, ಪ್ರೀತಿಯ ಮನೋಭಾವವನ್ನು ಹೊಂದಿರಬೇಕು; ಅವರಲ್ಲಿ ಹಾಸ್ಯಪ್ರಜ್ಞೆ, ಕೇಳುವ ಇಚ್ಛೆ ಮತ್ತು ಪ್ರಾಮಾಣಿಕತೆ ಸಾಮರ್ಥ್ಯವಿರಬೇಕು. 1998ರಲ್ಲಿ ಯುನೆಸ್ಕೊ ಆಯೋಜಿಸಿದ ಅಂತರಾಷ್ಟ್ರೀಯ ಮಕ್ಕಳ ಸ್ಪರ್ಧೆಯಲ್ಲಿ ಸಣ್ಣಮಕ್ಕಳು ಉತ್ತಮ ಶಿಕ್ಷಕರ ಲಕ್ಷಣ ನಿರೂಪಿಸಲು ಪ್ರಯತ್ನಿಸಿದ್ದಾರೆ. ಇದರಲ್ಲಿ ಕೆಲವು ಅನ್ವಯಕಗಳು ಹೀಗಿವೆ: ಶಿಕ್ಷಕರು ದಯಾಳು, ನಂಬಿಕೆಗೆ ಅರ್ಹರು ಆಗಿರಬೇಕು; ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸಮಾನ ರೀತಿಯಿಂದ ನೋಡಿಕೊಳ್ಳಬೇಕು, ಎಂದಿಗೂ ತಾಳ್ಮೆಯನ್ನು ಕಳೆದುಕೊಳ್ಳಬಾರದು ಇತ್ಯಾದಿ.

### ವಿಭಾಗ 1

### ಉತ್ತಮ ಶಿಕ್ಷಕರ ಲಕ್ಷಣಗಳೇನು? ಮಕ್ಕಳು ಹೇಳುತ್ತಾರೆ: ಉತ್ತಮ ಶಿಕ್ಷಕನೆಂದರೆ ಅವನೊಬ್ಬ ಸ್ನೇಹಿತ ....

'ನೀನು ನನ್ನ ವಿಚಾರದಲ್ಲಿ ದಯೆ, ನಂಬಿಕೆ ಮತ್ತು ಸ್ನೇಹಭಾವ ಹೊಂದಿರಬೇಕು....ನೀನು ನಮ್ಮೆಲ್ಲರ ಮಾತನ್ನು ಆಲಿಸಬೇಕು ಮತ್ತು ನಮ್ಮನ್ನು ಅರ್ಥಮಾಡಿಕೊಳ್ಳಬೇಕು...ಯಾವತ್ತೂ ತಾಳ್ಮೆ ಕಳೆದುಕೊಳ್ಳಬಾರದು.' ನ್ಯೂಜಿಲ್ಯಾಂಡ್‌ನ ಒಂಭತ್ತು ವರ್ಷದ ವಿದ್ಯಾರ್ಥಿ.

Digitised by Bharatavani, CIIL

ನಮ್ಮೆಲ್ಲರನ್ನೂ ಸಮಾನವಾಗಿ ನಡೆಸಿಕೊಳ್ಳಿ ಮತ್ತು ನಮ್ಮಲ್ಲಿ ಪ್ರತಿಯೊಬ್ಬರ ಭಾವನೆಗಳು, ಆಕಾಂಕ್ಷೆಗಳು ಮತ್ತು ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಿ.

ವಿಯೆಟ್ನಾಮಿನ ಒಂಭತ್ತು ವರ್ಷದ ವಿದ್ಯಾರ್ಥಿ.

**ಉತ್ತಮ ಶಿಕ್ಷಕನಾಗಿರುವವನು ಆಲಿಸುತ್ತಾನೆ...**

ಉತ್ತಮ ಶಿಕ್ಷಕನಾಗಲು ನೀವು ಮಕ್ಕಳಿಗೆ ಕಲಿಸುವುದು ಮಾತ್ರವಲ್ಲ ಅವರಿಂದ ಕಲಿಯಲೂ ಬೇಕು.

ಜಮೈಕಾದ ಹನ್ನೆರಡು ವರ್ಷದ ವಿದ್ಯಾರ್ಥಿ

ನನಗೆ ಆಲೋಚಿಸಲು ನೆರವಾಗುವ ಮತು ನಾನು ನನ್ನಷ್ಟಕ್ಕೆ ಉತ್ತರವನ್ನು ಕಂಡುಕೊಳ್ಳಲು ನೆರವಾಗುವ ಶಿಕ್ಷಕನನ್ನು ಇಷ್ಟಪಡುತ್ತೇನೆ.

ಜಿಂಬಾವ್ವೆ ದೇಶದ ಒಂಭತ್ತು ವರ್ಷದ ವಿದ್ಯಾರ್ಥಿ.

**ಉತ್ತಮ ಶಿಕ್ಷಕನೆಂದರೆ ಮಾದರಿ ವ್ಯಕ್ತಿ...**

ಉತ್ತಮ ಶಿಕ್ಷಕ ಎಂದರೆ ಭವಿಷ್ಯದ ಜನಾಂಗಕ್ಕೆ, ಅವಳ ಸಂಸ್ಕೃತಿಗೆ ಅವಳ ಸಂಸ್ಕೃತಿಗೆ ಮತ್ತು ಅವಳ ಶಿಕ್ಷಣಕ್ಕೆ ಅತ್ಯಮೂಲ್ಯವೆನಿಸುವುದನ್ನು ರವಾನಿಸುವ ವ್ಯಕ್ತಿ.

ಮೊರಕ್ಕೊ ದೇಶದ ಹನ್ನೆರಡು ವರ್ಷದ ವಿದ್ಯಾರ್ಥಿ.

ಶಿಕ್ಷಕ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು. ಏಕೆಂದರೆ ಮಕ್ಕಳು ಅವನನ್ನು ಅನುಕರಿಸುತ್ತಾರೆ.

ಘಾನಾ ದೇಶದ ಹನ್ನೆರಡು ವರ್ಷದ ವಿದ್ಯಾರ್ಥಿ.

**ನಾವು ಬೆಳೆಯಲು ಮತ್ತು ಅಭಿವೃದ್ಧಿ ಹೊಂದಲು ಉತ್ತಮ ಶಿಕ್ಷಕ ನೆರವಾಗುತ್ತಾನೆ.**

ವಿದ್ಯಾರ್ಥಿಗಳನ್ನು ಸ್ವಾವಲಂಬಿಗಳನ್ನಾಗಿ ಮತ್ತು ವಯಸ್ಕರಾಗಿ ಮಾಡುವುದು ಹೇಗೆಂಬುದನ್ನು ಶಿಕ್ಷಕರು ತಿಳಿದುಕೊಂಡಿರಬೇಕು ಮತ್ತು ವಯಸ್ಕರಾಗಲು ನೆರವಾಗಬೇಕು.

...ಇಟಲಿ ದೇಶದ ಹನ್ನೆರಡು ವರ್ಷದ ವಿದ್ಯಾರ್ಥಿ.

ನಮ್ಮ ಗುರಿಯನ್ನು ತಲುಪಲು ಸರಿಯಾದ ಮಾರ್ಗದಲ್ಲಿ ಸಾಗಲು ಉತ್ತಮ ಶಿಕ್ಷಕನು ನಮಗೆ ಮಾರ್ಗದರ್ಶನ ನೀಡುತ್ತಾನೆ.

ಮೆಕ್ಸಿಕೊ ದೇಶದ ಹನ್ನೆರಡು ವರ್ಷದ ವಿದ್ಯಾರ್ಥಿ.

(ಆಕರ : ಯುನೆಸ್ಕೊ ಆಯೋಜಿಸಿರುವ ಅಂತರಾಷ್ಟ್ರೀಯ ಮಕ್ಕಳ ಸ್ಪರ್ಧೆಯ ಮಾಹಿತಿ ಕೈಪಿಡಿ.)

1978 ಮತ್ತು 1988ರಲ್ಲಿ NCERT ಹೊರ ಹೊರತಂದಿರುವ ಪಠ್ಯಕ್ರಮದ ಚೌಕಟ್ಟಿನ ಶಿಕ್ಷಕರ ವ್ಯಕ್ತಿಚಿತ್ರ ನೀಡುವ ಪ್ರಯತ್ನವನ್ನು ನಡೆಸಲಾಗಿದೆ. ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು 1998ರಲ್ಲಿ ಪ್ರಸ್ತುತಪಡಿಸಿದ ತನ್ 'ಗುಣಮಟ್ಟದ ಶಿಕ್ಷಕರ ಶಿಕ್ಷಣದ ಪಠ್ಯಕ್ರಮದ ಚೌಕಟ್ಟು' ಶೀರ್ಷಿಕೆಯ ದಾಖಲೆ ಪತ್ರದಲ್ಲಿ ಶಿಕ್ಷಕರ ವೃತ್ತಿಚಿತ್ರವನ್ನು ಈ ಕೆಳಗಿನಂತೆ ಎತ್ತಿ ತೋರಿಸಿದೆ :

- ವೃತ್ತಿಪರ ಅರ್ಹತೆ, ವೃತ್ತಿಪರ ಬದ್ಧತೆ ಮತ್ತು ವೃತ್ತಿಪರ ನೀತಿಸಂಹಿತೆಗಳ ಅಂತರಿಕ ಮತ್ತು ಬಾಹ್ಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವುದು;
- ತಿಳಿವಳಿಕೆಯನ್ನು ಸೃಷ್ಟಿಸುವುದು ಮತ್ತು ಮರುಸಂರಚಿಸುವುದು;
- ಕಲಿಕೆಯ ಸಂಪನ್ಮೂಲಗಳನ್ನು ಆಯ್ದುಕೊಳ್ಳುವುದು, ಸಂಘಟಿಸುವುದು ಮತ್ತು ಬಳಸುವುದು;
- ಪಠ್ಯಕ್ರಮವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು, ವಿಶೇಷ ಅಗತ್ಯಗಳನ್ನು ಹೊಂದಿದ ಕಲಿಕಾರ್ಥಿಗಳಿಗಾಗಿ ಶೈಕ್ಷಣಿಕ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಸಂಘಟಿಸುವುದು;
- ಮಾಧ್ಯಮ ಮತ್ತು ಸೂಕ್ತ ಬೋಧನಾ ತಂತ್ರಜ್ಞಾನಗಳನ್ನು ಬಳಸುವುದು;
- ಪರಿಣಾಮಕಾರಿ ಸಂವಹನವನ್ನು ನಡೆಸುವುದು; ನಿರಂತರತೆ ಮತ್ತು ಬದಲಾವಣೆಯ ಸವಾಲುಗಳಿಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದು;
- ವ್ಯಕ್ತಿತ್ವ ವಿಕಸನ, ಹೊಂದಾಣಿಕೆ ಮತ್ತು ಕಲಿಕೆಯನ್ನು ತಮ್ಮದನ್ನಾಗಿಸಿಕೊಳ್ಳಲು ವಿದ್ಯಾರ್ಥಿಗಳೊಂದಿಗೆ ಸಮಾಲೋಚಿಸುವುದು.
- ಸಂಶೋಧನೆಯನ್ನು ನಡೆಸುವುದು, ಅದರಲ್ಲಿಯೂ ವಿಶೇಷವಾಗಿ ಕಾರ್ಯಶೀಲ ಸಂಶೋಧನೆ ಮತ್ತು ಹೊಸತನದ ಅಭ್ಯಾಸಗಳನ್ನು ಪ್ರಾರಂಭಿಸುವುದು;
- ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಸಂಘಟಿಸುವುದು;
- ಮೌಲ್ಯ ನಿರ್ಣಯ, ಮೌಲ್ಯ ಬದ್ಧತೆ, ಮತ್ತು ಮೌಲ್ಯ ಪ್ರಸಾರ ಪ್ರಜ್ಞೆಯನ್ನು ರೂಢಿಗತಮಾಡಿರುವುದು;
- 'ಸಂಸ್ಕೃತಿ ಮತ್ತು ಶಿಕ್ಷಣ' ಮತ್ತು 'ಸಂಸ್ಕೃತಿ ಮತ್ತು ವ್ಯಕ್ತಿತ್ವ'ಗಳ ನಡುವಿನ ಆಂತರಿಕ ಸಂಬಂಧದ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳುವುದು;
- ಬದುಕಿನುದ್ದದ ಕಲಿಕೆಯಲ್ಲಿ ಆಸಕ್ತಿಯನ್ನು ಬೆಳೆಸುವುದು;
- ಸಮುದಾಯದ ಆಕಾಂಕ್ಷೆಗಳು ಮತ್ತು ನಿರೀಕ್ಷೆಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಶಾಲೆ ಮತ್ತು ಸಮುದಾಯದ ನಡುವೆ ಪರಸ್ಪರ ಒತ್ತಾಸೆ ನೀಡುವ ಸಂಪರ್ಕಗಳನ್ನು ಸ್ಥಾಪಿಸುವುದು; ಮತ್ತು
- ಆಧುನೀಕರಣ ಮತ್ತು ಅಭಿವೃದ್ಧಿಗೆ ಪರಿವರ್ತನಾ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸುವುದು.

Digitised by Bharatavani, CIIL

ಮೇಲೆ ಉಲ್ಲೇಖಿಸಿದವುಗಳೊಂದಿಗೆ ಶಿಕ್ಷಕರ ವ್ಯಕ್ತಿಚಿತ್ರವನ್ನು ಬಲಪಡಿಸುವುದರಲ್ಲಿ ಮಕ್ಕಳ ಗ್ರಹಿಕೆಗಳು ಕೂಡಾ ಸಾಕಷ್ಟ ಕಾಣಿಕೆಯನ್ನು ನೀಡಬಲ್ಲವು. ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಶಿಕ್ಷಕರು ತಮ್ಮ ಮೊಟ್ಟಮೊದಲ ಜವಾಬ್ದಾರಿಯನ್ನು ವಿದ್ಯಾರ್ಥಿಗಳೊಂದಿಗಿನ ಕಾಳಜಿ ಸಂಬಂಧವನ್ನು ಕಟ್ಟಿಕೊಳ್ಳುವುದರ ಮೂಲಕ ಹೆಚ್ಚಿಸಬಹುದೆಂದು ಡೆರೊ (1996) ಸೂಚಿಸುತ್ತಾರೆ. ಶಾಲೆಗಳು ಮಕ್ಕಳ ಕಾಳಜಿಯಲ್ಲಿ ಸಾಮಾಜಿಕ/ಭಾವನಾತ್ಮಕ ಅಗತ್ಯಗಳ ಮೇಲೆ ಗಮನವನ್ನು ಕೇಂದ್ರೀಕೃತಗೊಳಿಸಿದಾಗ ಶೈಕ್ಷಣಿಕ ಯಶಸ್ಸು ಸಹಜವಾಗಿ ಸಂಭವಿಸುವುದೆಂದು ನಾಡಿಂಗ್ಸ್ (1992) ತಿಳಿಸುತ್ತಾರೆ. ಶಿಕ್ಷಕರು ಹೊಂದಿರಬೇಕಾದ 18 ವಿಶಿಷ್ಟ ಬೋಧನಾ ಕೌಶಲಗಳಿಗೆ ನೀಡಲಾದ ಪ್ರಾಮುಖ್ಯತೆಯ ಮಟ್ಟವನ್ನು ವಿಭಾಗ 2ರಲ್ಲಿ ತೋರಿಸಲಾಗಿದೆ.

ಮಕ್ಕಳ ಭಾವನಾತ್ಮಕ ಅಗತ್ಯಗಳಿಗೆ ಶಿಕ್ಷಕರು ಸ್ಪಂದಿಸಬೇಕಾಗುವ ಮಹತ್ವವನ್ನು ಆವಿಷ್ಕಾರಗಳು ಸೂಚಿಸುತ್ತವೆ. ಬಹುಶಃ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಶಿಕ್ಷಕರು ಮಾನವೀಯ ಅಂಶಗಳಿಗೆ ಪ್ರತಿಕ್ರಿಸುವಂತೆ ಅವರನ್ನು ತಯಾರು ಮಾಡುವ ಅಗತ್ಯಗಳನ್ನು ಎತ್ತಿ ಹಿಡಿಯಬೇಕು.

### ವಿಭಾಗ : 2

### ಬೋಧನಾ ಕೌಶಲ್ಯಗಳ ಪ್ರಾಮುಖ್ಯತೆಯ ಕುರಿತಾದ ಅಭಿಪ್ರಾಯಗಳು

| | | ಪ್ರಾಮುಖ್ಯತೆ | |
|---|---|---|---|
| | | ಮಧ್ಯಕ (Medium) | ಕ್ಯೂ (Q) |
| 1 | ಗುಣಾತ್ಮಕ ತರಗತಿ ವಾತಾವರಣದ ಸ್ಥಾಪನೆ | 5.00 | .000 |
| 2 | ವಿದ್ಯಾರ್ಥಿಗಳೊಂದಿಗೆ ಸಾಮರಸ್ಯವನ್ನು | 5.00 | .250 |
| | ಉಂಟುಮಾಡಿಕೊಳ್ಳುವುದು/ಪಾಲಿಸುವುದು | 5.00 | .000 |
| 3 | ತರಗತಿ ನಿರ್ವಹಣೆ/ಶಿಸ್ತು | 5.00 | .250 |
| 4 | ವೈಯಕ್ತಿಕ ಗುಣ ಲಕ್ಷಣಗಳು (ಉದಾ: ಸ್ವಜನಾತ್ಮಕತೆ) | 5.00 | .500 |
| 5 | ಸಂವಹನ/ಅಂತರ್ ವೈಯಕ್ತಿಕ ಕೌಶಲಗಳ ಬಳಕೆ | 5.00 | .500 |
| 6 | ಬೋಧನೆಗೆ ಯೋಜನೆ/ಸಿದ್ಧತೆ | 5.00 | .500 |
| 7 | ಹೆತ್ತವರು/ಸಮುದಾಯ ಇವರೊಂದಿಗೆ | 5.00 | .500 |
| | ಸಾಮರಸ್ಯ ಕಾಪಾಡುವುದು | 5.00 | .500 |
| 8 | ಬೋಧನಾ ವಿಧಾನಗಳನ್ನು / ಕಾರ್ಯವಿಧಾನಗಳನ್ನು/ ಬಳಸುವುದು | 5.00 | .500 |
| 9 | ಸಿಬ್ಬಂದಿಗಳೊಂದಿಗೆ ಸಾಮರಸ್ಯ ಉಂಟುಮಾಡಿಕೊಳ್ಳುವುದು/ ನಿರ್ವಹಿಸುವುದು | 4.00 | .500 |
| 10 | ಬೋಧನಾ ಕೌಶಲಗಳನ್ನು ಬಳಕೆಮಾಡುವುದು (ಉದಾ: ವಿವರಿಸುವುದು) | 4.00 | .500 |
| 11 | ವಿಷಯ ವಸ್ತುವಿನ ತಿಳಿವಳಿಕೆ | 4.00 | .000 |
| 12 | ಮೌಲ್ಯಮಾಪನ/ಬೆಲೆ ಕಟ್ಟುವಿಕೆಯ ಕಾರ್ಯವಿಧಾನಗಳನ್ನು ಬಳಸುವುದು | 4.00 | .500 |
| 13 | ಪಠ್ಯೇತರ ಕಾರ್ಯಗಳು | 4.00 | .000 |
| 14 | ವೃತ್ತಿಪರ ಬೆಳವಣಿಗೆ | 4.00 | .000 |
| 15 | ಪಠ್ಯಕ್ರಮದ ತಿಳಿವಳಿಕೆ | 4.00 | .500 |
| 16 | ದಾಖಲೆ ಇಡುವುದು/ವರದಿ ಮಾಡುವುದು | 3.00 | .500 |
| 17 | ಬಹು/ಅನ್ಯ ಸಾಂಸ್ಕೃತಿಕ ಪ್ರಜ್ಞೆ | 3.00 | .500 |
| 18 | ಕಂಪ್ಯೂಟರ್‌ಗಳ /ಇ–ಅಂಚೆಯ ಬಳಕೆ | 4.00 | .250 |

### ಕಲಿಕೆಯ ಕನಿಷ್ಠ ಮಟ್ಟಗಳು:

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳ (ಎಮ್.ಎಲ್.ಎಲ್.) ಪರಿಕಲ್ಪನೆಯನ್ನು ಸೇರಿಸಿದ ಬಳಿಕ ಸಾಮರ್ಥ್ಯವನ್ನು ಗುರುತಿಸುವುದು ಹೆಚ್ಚಾಯಿತು. ಇದರಿಂದಾಗಿ ಶಾಲಾ ಶಿಕ್ಷಣದ ಪ್ರತಿಯೊಂದು ಹಂತದಲ್ಲಿ ಕಲಿಕೆಯ ಕನಿಷ್ಠ ಹಂತಗಳನ್ನು ಗುರುತಿಸುವುದರ ಅಗತ್ಯಕ್ಕೆ ಹೆಚ್ಚು ಒತ್ತು ಬಿತ್ತು. ಇದನ್ನು ಅನುಸರಿಸಿ ಭಾರತ ಸರಕಾರವು ಪ್ರೊಫೆಸರ್ ಆರ್.ಹೆಚ್. ದವೆ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ 1990ರಲ್ಲಿ ಈ ಕೆಳಗಿನ ವಿಚಾರಗಳಿಗೆ ಅವಕಾಶಗಳನ್ನು ಒದಗಿಸಿತು:

- ಪ್ರಾಥಮಿಕ ಹಂತದಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳನ್ನು ಗುರುತಿಸುವುದು.
- ಅಭ್ಯಾಸಿಯ ವ್ಯಾಪಕವಾದ ಮೌಲ್ಯಮಾಪನ ಮತ್ತು ಮೌಲ್ಯನಿರ್ಧಾರಗಳಿಗಾಗಿ ಕಾರ್ಯವಿಧಾನವನ್ನು ಶಿಫಾರಸ್ಸು ಮಾಡುವುದು.
- ಕಲಿಕೆಯ ಜ್ಞಾನಾತ್ಮಕವಲ್ಲದ ಕ್ಷೇತ್ರಗಳನ್ನು ಗಮನಿಸುವುದು ಮತ್ತು ಈ ಕ್ಷೇತ್ರಗಳ ಬೋಧನೆಯನ್ನು ಸುಧಾರಿಸುವುದು ನಿರ್ದಿಷ್ಟ ವಿಧಾನ ಸೂಚಿಸುವುದು.

ಕಲಿಕೆಯ ಕನಿಷ್ಠ ಮಟ್ಟಗಳನ್ನು ಸ್ಥಾಪಿಸಿಕೊಳ್ಳುವುದೆಂದರೆ ವ್ಯವಸ್ಥೆಯಲ್ಲಿ ಗುಣಮಟ್ಟದ ಹೆಚ್ಚಳ ಮತ್ತು ನಿರ್ದೇಶನದ ಪ್ರಜ್ಞೆ ಮತ್ತು ಹೊಣೆಯನ್ನು ಹೊರುವುದರ ಕಡೆಗಿನ ಕ್ರಮವಾಗುತ್ತದೆ. ಜೊತೆಗೆ ಕಲಿಕೆಯ ಕನಿಷ್ಠ ಮಟ್ಟಗಳು ಶಾಲೆಯ ಸುಧಾರಣೆಗಾಗಿ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಪರಿಣಾಮಕಾರಿಯಾದ

Digitised by Bharatavani, CIIL

ಸಾಧನವನ್ನು ಒದಗಿಸುತ್ತವೆ ಎಂಬುದಾಗಿ ನಿರೀಕ್ಷೆ ಮಾಡಲಾಗುತ್ತದೆ ಮತ್ತು ಪರಿಹಾರಾತ್ಮಕ ಸಾಧನಗಳ ಮೂಲಕ ಕಲಿಕೆಯ ಒಂದು ಮಟ್ಟವನ್ನು ಖಚಿತಪಡಿಸುತ್ತವೆ. ಹೀಗೆ ಈ ಕ್ರಮದ ಅಂತರಾರ್ಥವಾದರೆ ಪಠ್ಯಕ್ರಮದ ಹೊರೆಯನ್ನು ಮತ್ತು ಅನಗತ್ಯ ಕಂಠಪಾಠ ಮತ್ತು ಅಪ್ರಸ್ತುತ ವಿಚಾರಗಳ ಭಾರವನ್ನು ಕೂಡಾ ಹಗುರಗೊಳಿಸುವುದಾಗಿದೆ. ಇದರಿಂದ ಶಿಕ್ಷಕನಿಗೆ ಪಠ್ಯಪುಸ್ತಕದ ಮಾಹಿತಿ ಮತ್ತು ವಸ್ತುನಿಷ್ಠ ವಾಸ್ತವಿಕತೆಯೊಂದಿಗೆ ಸಂಪರ್ಕವಿರಿಸಿಕೊಳ್ಳುವುದು ಸಾಧ್ಯವಾಗುತ್ತದೆ ಮೂಲಭೂತ ಕಾರ್ಯಕ್ಷಮತೆ ಮತ್ತು ಕೌಶಲಗಳನ್ನು ತಾಳಿಕೆಯ ಮಟ್ಟದಲ್ಲಿ ಪಡೆಯುವುದರ ಭರವಸೆ ದೊರೆಯುತ್ತದೆ; ಸುಲಭವಾಗಿ ನಿರಕ್ಷರತೆ ಮರುಕಳಿಸದಂತೆ ನೋಡಿಕೊಳ್ಳಲಾಗುತ್ತದೆ; ಪ್ರತಿಭಾವಂತ ವಿದ್ಯಾರ್ಥಿಗಳು ಮಾತ್ರವಲ್ಲ ಮೊದಲ ಪೀಳಿಗೆಯ ಕಲಿಕಾರ್ಥಿಗಳನ್ನೂ ಸೇರಿಸಿ ಎಲ್ಲ ಮಕ್ಕಳು ಪರಿಣತಿಯನ್ನು ಹೊಂದುವುದಕ್ಕೆ ಇದು ಅವಕಾಶವನ್ನು ಒದಗಿಸುತ್ತದೆ. ಕಾಲಾನುಕ್ರಮದಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳು ಪ್ರೋತ್ಸಾಹದಾಯಕ ಫಲಿತಾಂಶಗಳನ್ನು ತೋರಿಸಿಕೊಟ್ಟಿವೆ. ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿ ಪರಿಣತ ಮಟ್ಟದವರೆಗೆ ಕಲಿಯುವಂತೆ ಮಾಡಲು ಶಿಕ್ಷಕರಿಗೆ ಇದು ಆಸಕ್ತಿದಾಯಕವಾಗಿ ಮತ್ತು ಪಂಥಾಹ್ವಾನವಾಗಿ ಕಂಡಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿ ಪಠ್ಯಪುಸ್ತಕಗಳು ಮತ್ತು ಇತರ ಬೋಧನಾ-ಕಲಿಕಾ ಸಾಮಗ್ರಿಗಳ ಬದಲಾವಣೆಯ ಅಗತ್ಯ ಕಂಡುಬಂದಿಲ್ಲ. ಎರಡು ವರ್ಷಗಳಲ್ಲಿ ಕಲಿಕೆಯ ಸಿದ್ಧಿಯು ಶೇಕಡಾ 20ರಿಂದ 30ರಷು ಏರಿಕೆ ಎಂಬುದನ್ನು ಸಮೀಕ್ಷೆಯೊಂದು ತಿಳಿಸಿದೆ. ಆದರೆ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಪ್ರಾಥಮಿಕ ಹಂತದಲ್ಲಿ ಮಕ್ಕಳ ಸಾಧನೆಯ ಮಟ್ಟಗಳು ಇನ್ನೂ ನಿರಾಶದಾಯಕ ಮಟ್ಟದಲಿಯೇ ಉಳಿದಿವೆ. ಕಳಪೆ ಸಾಧನೆ ಮತ್ತು ಪ್ರೋತ್ಸಾಹದ ಕೊರತೆಯಿಂದ ವ್ಯವಸ್ಥೆಯನ್ನು ಬಿಟ್ಟು ಹೋಗುವ ಮಕ್ಕಳ ಸಂಖ್ಯೆ ಗಮನಾರ್ಹವಾಗಿ ಹೆಚ್ಚಾಗಿದೆ. ಇದು ಶಿಕ್ಷಕರ ಕಾರ್ಯಸಾಧನೆಯಲ್ಲಿನ ಕೊರತೆಯನ್ನು ಸೂಚಿಸುತ್ತದೆ.

ಶಿಕ್ಷಕರ ಶಿಕ್ಷಣ (ತರಬೇತಿ) ವ್ಯವಸ್ಥೆಯು ಬಹು ವಿಧದಲ್ಲಿ ವಿಸ್ತರಿಸಿದೆ. ಆದರೆ ದುರದೃಷ್ಟವಶಾತ್ ವಿಸ್ತರಣೆಯ ಕಾರ್ಯಗತಿಯಲ್ಲಿ ಗುಣಮಟ್ಟ ಕಡಿಮೆಯಾಗದೆ. ಶಿಕ್ಷಕರ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಸಮಿತಿಯು (ಎನ್.ಸಿ.ಟಿ.ಇ.) ದಕ್ಷತೆಯನ್ನು ಆಧರಿಸಿದ ಮತ್ತು ಬದ್ಧತೆಯನ್ನು ಕೇಂದ್ರವಾಗುಳ್ಳ ಶಿಕ್ಷಕ ಶಿಕ್ಷಣವನ್ನು ಅಭಿವೃದ್ಧಿಪಡಿಸಿದೆ. 'ದಕ್ಷತೆ'ಯ ನಿಷ್ಕೃಷ್ಟವಾದ ಸ್ವರೂಪ ನಿರೂಪಣೆ ಏನು? ಈ ಪದದ ಅರ್ಥ'ಸಮರ್ಥ', 'ನಿಪುಣ', 'ಯೋಗ್ಯ', 'ಸೂಕ್ತರೀತಿಯಲ್ಲಿ ಅರ್ಹತೆ ಹೊಂದಿರುವ', 'ಅರ್ಹ' ಇತ್ಯಾದಿ. ಆಚರಣೆಯನ್ನು ಆಧರಿಸಿದ ಶಿಕ್ಷಕ ಶಿಕ್ಷಣವೆಂಬ ಪದವನ್ನು ಕೂಡಾ ಅರ್ಹತೆಯನ್ನು ಆಧರಿಸಿದ ಶಿಕ್ಷಕ ಶಿಕ್ಷಣವನ್ನು ಸೂಚಿಸಲು ಬಳಸಬಹುದಾಗಿದೆ.

ಪ್ರಶಿಕ್ಷಕನು ತನ್ನದಾಗಿಸಿಕೊಳ್ಳುವ ಸಮರ್ಥತೆಯು ಶಿಕ್ಷಕನ ನಿರೀಕ್ಷಿತ ಪಾತ್ರದ ಫಲಿತಾಂಶವಾಗಿರಬಹುದು. ಅದು ಕ್ರಿಯಾಶೀಲ ಪಾತ್ರವಾಗಿರಬಹುದು. ಶಿಕ್ಷಕರ ಪಾತ್ರವು ಬಹು ಆಯಾಮಗಳನ್ನು ಮತ್ತು ಬೇಡಿಕೆಯನ್ನು ಹೊಂದಿದ್ದು, ಸಮಾಜದಿಂದ ಹೆಚ್ಚಿನ

ನಿರೀಕ್ಷಿತ ಪಾತ್ರದ ಫಲಿತಾಂಶವಾಗಿರಬಹುದು. ಅದು ಕ್ರಿಯಾಶೀಲ ಪಾತ್ರವಾಗಿರಬಹುದು. ಶಿಕ್ಷಕರ ಪಾತ್ರವು ಬಹು ಆಯಾಮಗಳನ್ನು ಮತ್ತು ಬೇಡಿಕೆಯನ್ನು ಹೊಂದಿದ್ದು, ಸಮಾಜದಿಂದ ಹೆಚ್ಚಿನ ನಿರೀಕ್ಷೆಗಳನ್ನು ಹುಟ್ಟಿಸಿದೆ. ಕೇವಲ ವಿಷಯವಸ್ತುವನ್ನು ಮತ್ತು ಸಂವಹನ ತಂತ್ರಗಳನ್ನು ತನ್ನದಾಗಿಸಿಕೊಂಡಿರುವುದು ಈಗ ಸಾಕಾಗುವುದಿಲ್ಲ. ಎನ್.ಸಿ.ಟಿ.ಇ.ಯು. ಹತ್ತು ಅರ್ಹತಾ ಕ್ಷೇತ್ರಗಳನ್ನು ಗುರುತಿಸಿದೆ. ಇವುಗಳೆಂದರೆ: ಸಂದರ್ಭೋಚಿತ, ಭಾವನಾತ್ಮಕ, ವಿಷಯಾಂಶಿಕ, ವ್ಯವಹಾರಿಕ, ಇತರ ಶೈಕ್ಷಣಿಕ ಚಟುವಟಿಕೆಗಳು, ಬೋಧನೆ/ ಕಲಿಕೆಯ ಸಾಮಗ್ರಿಗಳ ಅಭಿವೃದ್ಧಿ, ಮೌಲ್ಯಮಾಪನ, ನಿರ್ವಹಣೆ, ಹೆತ್ತವರೊಂದಿಗೆ ಕೆಲಸ ಮಾಡುವುದು, ಸಮುದಾಯದೊಂದಿಗೆ ಕೆಲಸ ಮಾಡುವುದು. ಇವು ಶಿಕ್ಷಕ ತಯಾರಿಗೆ ನಿರ್ಣಾಯಕವಾಗಿದೆ.

**ಅರ್ಹತಾ ಕ್ಷೇತ್ರಗಳು:**

**ಸಂದರ್ಭೋಚಿತ:** ಶಿಕ್ಷಕ್ಷರು ತಮ್ಮ ಬೋಧನೆಯ ವಿಷಯವನ್ನು ತಿಳಿದುಕೊಳ್ಳುವುದು ಮತ್ತು ಅದನ್ನು ನಿರ್ವಹಿಸುವುದಷ್ಟೇ ಸಾಕಾಗುವುದಿಲ್ಲ. ಅವರು ಸಮಾಜೋ-ಆರ್ಥಿಕ-ಸಾಮಾಜಿಕ ಸಂದರ್ಭವನ್ನು ಅರ್ಥಮಾಡಿಕೊಳ್ಳುವುದು ಕೂಡಾ ಅಗತ್ಯ. ಭಾರತೀಯ ಸಮಾಜವು ಭೌಗೋಳಿಕವಾಗಿ ವೈವಿಧ್ಯತೆಯನ್ನು ಹೊಂದಿರುವುದರೊಂದಿಗೆ ಬಹು ಆಯಾಮಗಳನ್ನು ಕೂಡಾ ಪಡೆದಿದೆ. ಪ್ರತೀಕ್ಷೆಯುಳ್ಳ ಭಾವೀ ಶಿಕ್ಷಕರು ಅಭ್ಯಾಸಿಗಳ (ಕಲಿಯುವವರ) ಹಿನ್ನೆಲೆ, ಅವರ ಅಗತ್ಯಗಳು, ಸಮಸ್ಯೆಗಳು ಮತ್ತು ಆಕಾಂಕ್ಷೆಗಳು, ಶಾಲೆಗೆ ಸೇರಿಕೊಳ್ಳಲು ಆಗದ ಕಾರಣಗಳು, ಹೆಚ್ಚಿನ ಸಂಖ್ಯೆಯವರು ಶಿಕ್ಷಣವನ್ನು ಅರ್ಧದಲ್ಲಿ ನಿಲ್ಲಿಸುವುದು, ಆಧುನೀಕರಣ, ನಗರೀಕರಣ, ಬಡತನ, ದೊಂಬಿ, ಹಿಂಸೆ. ಭಯೋತ್ಪಾದಕತೆ, ಸಮುದಾಯ ಘರ್ಷಣೆ ಇತ್ಯಾದಿ ಸಮಸ್ಯೆಗಳು, ಯುಇಇಯ ಪ್ರಾಮುಖ್ಯತೆ, ಶೈಕ್ಷಣಿಕ ಧೋರಣೆಗಳು, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಸಾಂಸ್ಥಿಕ ಸಂಪರ್ಕಸಾಧನ ಇತ್ಯಾದಿಗಳನ್ನು ತಿಳಿದುಕೊಂಟಡಿರುವ ಅಗತ್ಯವಿದೆ. ಇದನ್ನು ಸಾಧಿಸಲು ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಭಾವೀ ಶಿಕ್ಷಕರ ಕುರಿತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು:

- ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕತೆಯ ಸಮಸ್ಯೆಗಳನ್ನ ಅರ್ಥ ಮಾಡಿಕೊಳ್ಳುವುದು.
- ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡದಿರುವುದಕ್ಕೆ ಮತ್ತು ವಿದ್ಯಾಭ್ಯಾಸವನ್ನ ಅರ್ಧದಲ್ಲಿಯೇ ನಿಲ್ಲಿಸುವುದಕ್ಕೆ ಕಾರಣಗಳನ್ನು ಹುಡುಕಿಕೊಳ್ಳುವುದು.
- ಯುಇಇಗೆ ಸಂಬಂಧಿಸಿದಂತೆ ಅನೌಪಚಾರಿಕ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು.
- ಬಹು-ಮಟ್ಟದ ಮತ್ತು ಬಹು-ಹಂತದ ಬೋಧನೆಯ ಅರಿವು ಹೊಂದಿರುವುದು.

Digitised by Bharatavani, CIIL

- ಶೈಕ್ಷಣಿಕ ಧೋರಣೆಗಳು, ಶಿಕ್ಷಣದ ಕುರಿತಾದ ಆಯೋಗಗಳು ಮತ್ತು ಸಮಿತಿಗಳ ಕುರಿತು ತಿಳಿದುಕೊಂದಿರುವುದು.

**ಕಲ್ಪನಾತ್ಮಕ:**

ಶಿಕ್ಷಕರಿಗೆ ನೀಡುವ ಯಾವುದೇ ಶಿಕ್ಷಕ ಶಿಕ್ಷಣ ಕಾರ್ಯಕ್ರಮದ ಉದ್ದೇಶವು ಈ ಕಾರ್ಯಕ್ರಮದಲ್ಲಿ ಪ್ರವೇಶ ಪಡೆದ ಸಾಮಾನ್ಯ ಪ್ರವೇಶವನ್ನು ಬದ್ಧತೆಯನ್ನುಳ್ಳ, ದಕ್ಷ ಮತ್ತು ಕಾರ್ಯಸಾಧನೆಯನ್ನು ಆಧರಿಸಿದ ಶಿಕ್ಷಕನನ್ನಾಗಿ ರೂಪಿಸುವುದಾಗಿದೆ. ಇದಕ್ಕೆ ತಿಳಿವಳಿಕೆ ಮತ್ತು ಕೌಶಲಗಳನ್ನು ಬೆಳೆಸುವುದು ಅಗತ್ಯವಿರುತ್ತದೆ. ಪ್ರಶಿಕ್ಷಕರು ಶಿಕ್ಷಣದ ನಿಯಮಗಳು, ಶಿಕ್ಷಣಶಾಸ್ತ್ರ, ಮಕ್ಕಳ ಮನಶಾಸ್ತ್ರ, ಬೆಳವಣಿಗೆ ಮತ್ತು ಅಭಿವೃದ್ಧಿ, ದೈಹಿಕ ನ್ಯೂನತೆಯುಳ್ಳವರ ವಿಶೇಷ ಅಗತ್ಯಗಳು ಮತ್ತು ಇದಕ್ಕೆ ಸಂಬಂಧಿಸಿದ ವಿಚಾರಗಳನ್ನು ತಿಳಿದುಕೊಂಡಿರಬೇಕಾಗುತ್ತದೆ. ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಪ್ರಶಿಕ್ಷಕರ ಕುರಿತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು:

- ಅಭ್ಯಾಸಿಗಳ (ಕಲಿಯುವವರ) ಸಮಸ್ಯೆಗಳು, ಅಗತ್ಯಗಳು, ಆಕಾಂಕ್ಷೆಗಳು ಮನಸ್ಥಿತಿಯ ವಿಶ್ಲೇಷಣೆ ನಡೆಸುವುದು.
- ದೈಹಿಕ ನ್ಯೂನತೆ ಹೊಂದಿದವರ ವಿಶೇಷ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವುದು.
- ಅವಕಾಶ ವಂಚಿತರು ಮತ್ತು ಅನಾನುಕೂಲತೆ ಇರುವ ಮಕ್ಕಳಿಗಾಗಿ ಇರುವ ಸರಕಾರಿ ಮತ್ತು ಸರಕಾರೇತರ ಉಪಯುಕ್ತ ಕಾರ್ಯಯೋಜನೆಗಳ ಕುರಿತು ಮಾಹಿತಿಯನ್ನು ಸಂಗ್ರಹಿಸುವುದು.
- ಶಿಕ್ಷಣದ ಬದಲಿ ವಿಧಾನಗಳ ಕುರಿತು ಪರಿಚಯ ಮಾಡಿಕೊಳ್ಳುವುದು.

**ವಿಷಯಾಂಶಿಕ:**

ಭಾವೀ ಶಿಕ್ಷಕರು ಎಷ್ಟೋ ಸಂದರ್ಭಗಳಲ್ಲಿ ತಮ್ಮ ವಿಷಯದ ವಸ್ತುವಿಗೆ ಸಂಬಂಧಿಸಿದಂತೆ ದುರ್ಬಲರಾಗಿರುವುದು ಕಂಡುಬಂದಿದೆ. ತಾನು ಕಲಿಸುವ ವಿಷಯದ ಮೇಲೆ ಸಂಪೂರ್ಣ ಪ್ರಭುತ್ವವನ್ನು ಸಾಧಿಸುವುದು ಶಿಕ್ಷಕನಿಗೆ ಅತಿ ಮುಖ್ಯ. ತಾನು ಕಲಿಸುವ ವಿಷಯದ ಮೇಲೆ ಅವನು/ಅವಳು ದಕ್ಷತೆಯನ್ನು ಹೊಂದುವವರೆಗೆ ತರಬೇತಿಯಲ್ಲಿ ಅವನು ಆತ್ಮವಿಶ್ವಾಸವನ್ನು ಹೊಂದುವುದು ಸಾಧ್ಯವಾಗುವುದಿಲ್ಲ. ಪ್ರೌಢಶಾಲೆಯಲ್ಲಿ ಶೇಕಡಾ 75 ಅಂಕಗಳನ್ನು ಪಡೆದ ಪ್ರಶಿಕ್ಷಕರು ಪ್ರಾಥಮಿಕ ಶಾಲಾ ವಿಷಯಾಂಶ ಪರೀಕ್ಷೆಯಲ್ಲಿ ಶೇಕಡಾ 30ಕ್ಕಿಂತ ಕಡಿಮೆ ಅಂಕ ಪಡೆದಿರುವುದು ಒಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಇದು ತೋರಿಸುವುದೇನೆಂದರೆ ಪ್ರಶಿಕ್ಷಕರು, ಶಿಕ್ಷಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ತಮ್ಮ ವಿಷಯಾಂಶಗಳ ಕುರಿತು ಪರಿಣತಿಯನ್ನು ಸಾಧಿಸಬೇಕಾ ಗುತ್ತದೆ. ಶಿಕ್ಷಕನು ವಿಷಯದ (ಪಠ್ಯದ) ರಚನೆಯನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು ಮತ್ತು ಅದನ್ನು ಸಂಬಂಧಪಟ್ಟ ವಾಸ್ತವಾಂಶಗಳು, ಪರಿಕಲ್ಪನೆಗಳು ಮತ್ತು ನಿಯಮಗಳಾಗಿ ವಿಶ್ಲೇಷಿಸಲು ಸಮರ್ಥರಾಗಿರಬೇಕು ಮತ್ತು ಬೋಧನೆ-ಕಲಿಕೆಯ ಸಾಮಗ್ರಿಗಳನ್ನು ಸಾಮರ್ಥ್ಯಗಳ ದೃಷ್ಟಿಯಿಂದ ವಿಶ್ಲೇಷಿಸಲು ಸಮರ್ಥರಾಗಿರಬೇಕು. ಇದನ್ನು ಸಾಧಿಸಲು ಭಾವೀ ಶಿಕ್ಷಕರ ಕುರಿತಾದ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು:

- ವಿಷಯಾಂಶಗಳ ವಿಶ್ಲೇಷಣೆ ನಡೆಸುವುದು.
- ಪಠ್ಯಪುಸ್ತಕಗಳಲ್ಲಿ ಬಿಟ್ಟು ಹೋಗಿರುವ ಭಾಗಗಳನ್ನು ಗುರುತಿಸುವುದು ಮತ್ತು ಪೂರಕ ಸಾಮಗ್ರಿಗಳನ್ನು ತಯಾರಿಸುವುದು.
- ಅಭ್ಯಾಸಿಗಳ ಕಲಿಕಾ ಕಷ್ಟಗಳನ್ನು ವಿಶ್ಲೇಷಿಸುವುದು ಮತ್ತು ಪರಿಹಾರ ಬೋಧನೆಯನ್ನು ಒದಗಿಸುವುದು.
- ಆಹ್ಲಾದಕರ ಕಲಿಕೆಗೆ ಒದಗಬಲ್ಲ ವಿಚಾರಗಳನ್ನು ಗುರುತಿಸುವುದು.
- ಪಠ್ಯಪುಸ್ತಕಗಳಲ್ಲಿ ಪುನರಾವರ್ತನೆ ಹೊಂದಿರುವ ಪರಿಕಲ್ಪನೆಗಳು ಮತ್ತು ವಸ್ತು ವಿಷಯಗಳನ್ನು ಪಟ್ಟಿಮಾಡುವುದು.

**ವ್ಯವಹಾರಿಕ:**

ಅಭ್ಯಾಸಿಗಳ ಕೆಳಮಟ್ಟದ ಸಾಧನೆ ಮತ್ತು ಅವರು ಅರ್ಧದಲ್ಲಿಯೇ ವಿದ್ಯಾಭ್ಯಾಸ ನಿಲ್ಲಿಸಿ ಶಾಲೆ ಬಿಟ್ಟು ಹೋಗುವುದಕ್ಕೆ ಬಹುಮುಖ್ಯ ಕಾರಣ ದುರ್ಬಲ ಪಠ್ಯಕ್ರಮದ ನಿರ್ವಹಣೆಯಾಗಿದೆ. ಅಭ್ಯಾಸಿಗಳ ತೊಂದರೆಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುವುದರಲ್ಲಿ ಶಿಕ್ಷಕರು ತಕ್ಷಣ ಪ್ರವೃತ್ತರಾಗಿರಬೇಕು ಮತ್ತು ಅದಕ್ಕೆ ಪರಿಹಾರ ಬೋಧನೆಯನ್ನು ಒದಗಿಸಬೇಕು. ಪಠ್ಯಕ್ರಮವನ್ನು ಅನುಸರಿಸುವಾಗ ಶಿಕ್ಷಕರು ಹೊಸ ತಂತ್ರಜ್ಞಾನಗಳು ಮತ್ತು ಬೋಧನಾ ಸಾಧನಗಳನ್ನು ಬಳಸುವ ಮೂಲಕ ಬೋಧನೆ ಮತ್ತು ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು. ಶಿಕ್ಷಕ ತರಬೇತಿ ಸಂಸ್ಥೆಗಳು ವಿದ್ಯಾರ್ಥಿ-ಶಿಕ್ಷಕರನ್ನು ತಯಾರಿಸುವಾಗ ಅನೇಕ ನಿರ್ವಹಣಾ ವಿಧಾನಗಳಿಗೆ ಒತ್ತನ್ನು ನೀಡುತ್ತಾರೆ. ಆದರೆ ದುರದೃಷ್ಟವಶಾತ್ ಪ್ರಶಿಕ್ಷಕರು ಮಾತ್ರ ತಾವು ಶಿಕ್ಷಕರಾದಾಗ ಈ ನಿರ್ವಹಣಾ ಕಾರ್ಯವಿಧಾನಗಳನ್ನು ಬಳಸುವುದೇ ಇಲ್ಲ. ಶಿಕ್ಷಕರು ನಿರ್ವಹಣಾ ಕಾರ್ಯವಿಧಾನಗಳ ಗರಿಷ್ಠ ಮಟ್ಟವನ್ನು ಬಳಸಬೇಕು. ಇದನ್ನು ಸಾಧಿಸಲು ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಭಾವೀ ಶಿಕ್ಷಕರಿಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು:

- ಪಠ್ಯಕ್ರಮದ ಪರಿಣಾಮಕಾರಿ ನಿರ್ವಹಣೆಗಾಗಿ ವಿಭಿನ್ನ ಬೋಧನಾ ವಿಧಾನಗಳು, ಹೊಸ ತಂತ್ರಜ್ಞಾನಗಳು ಮತ್ತು ಬೋಧನಾ ಸಾಧನಗಳನ್ನು ಬಳಸುವುದರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು.
- ಕಲಿಕೆಯ ಕ್ಲಿಷ್ಟ ಜಾಗಗಳನ್ನು ಗುರುತಿಸುವುದು ಮತ್ತು ಸೂಕ್ತ ಬೋಧನಾ ವಿಧಾನವನ್ನು ಅಳವಡಿಸಿಕೊಳ್ಳುವುದು.

Digitised by Bharatavani, CIIL

- ವಿಧಾನವಾಗಿ ಕಲಿಯುವವರನ್ನು ಗುರುತಿಸುವುದು ಮತ್ತು ಅವರಿಗೆ ಹೆಚ್ಚಿನ ಸಹಾಯವನ್ನು ಒದಗಿಸುವುದು.
- ಗುಂಪು ಕಲಿಕೆ ಮತ್ತು ಸಮಾನಸ್ಕಂದರು ಒಟ್ಟು ಸೇರಿ ಕಲಿಯುವುದಕ್ಕೆ ಪ್ರೋತ್ಸಾಹ ನೀಡುವುದು.
- ಶಿಕ್ಷಕ-ವಿದ್ಯಾರ್ಥಿಗಳ ಪರಸ್ಪರ ಪ್ರತಿಕ್ರಿಯೆಯನ್ನು ವಿಶ್ಲೇಷಿಸುವುದು.

**ಇತರ ಶೈಕ್ಷಣಿಕ ಚಟುವಟಿಕೆಗಳು:**

ಮಗುವಿನ ಸಮಗ್ರ ವ್ಯಕ್ತಿತ್ವದ ಬೆಳವಣಿಗೆ ಮುಖ್ಯ ಎನ್ನುವುದನ್ನು ಹೆಚ್ಚು ಹೆಚ್ಚು ತಿಳಿಯಲಾಗಿದೆ. ಅದು ಗ್ರಹಿಕೆಯ ಕ್ಷೇತ್ರ ಮಾತ್ರವಲ್ಲ, ಗ್ರಹಿಕೆಯಲ್ಲದ ಕ್ಷೇತ್ರವೂ ಆಗಿದ್ದು ಅದನ್ನು ನಿರ್ಲಕ್ಷಿಸುವ ಹಾಗಿಲ್ಲ. ಶಿಕ್ಷಕರು ಮೌಲ್ಯಗಳನ್ನು ಬಿತ್ತಬೇಕು ಮತ್ತು ಮಕ್ಕಳ ಆರೋಗ್ಯಕರ ನಡತೆಯನ್ನು ಬೆಳೆಸಬೇಕು. ಚರ್ಚೆಗಳು, ರಸಪ್ರಶ್ನೆ, ನಾಟಕಗಳು, ಪ್ರದರ್ಶನಗಳು, ಹಬ್ಬಗಳು, ಕ್ಷೇತ್ರ ಭೇಟಿಗಳು ಮತು ಈ ರೀತಿಯ ಇತರ ಚಟುವಟಿಕೆಗಳನ್ನು ಅವರು ಆಗಾಗ ನಡೆಸಬೇಕು. ಈ ಕಾರ್ಯಸಾಧನೆಗಾಗಿ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಭಾವೀ ಶಿಕ್ಷಕರ ಕುರಿತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು :

- ಸಹಪಠ್ಯ ಚಟುವಟಿಕೆಗಳ ಪ್ರಾಮುಖ್ಯತೆಯನ್ನು ತಿಳಿದು ಕೊಳ್ಳಬೇಕು.
- ಕಲಿಯುವವರ ಆರೋಗ್ಯಪೂರ್ಣ ಬೆಳವಣಿಗೆಯ ಅಗತ್ಯವನ್ನು ತಿಳಿದುಕೊಳ್ಳಬೇಕು.
- ಶೈಕ್ಷಣಿಕ ಪ್ರವಾಸಗಳನ್ನು ಬಹಳ ಎಚ್ಚರಿಕೆಯಿಂದ ಸಂಘಟಿಸಬೇಕು.

**ಬೋಧನೆ-ಕಲಿಕೆ ಸಾಮಗ್ರಿಯ ಅಭಿವೃದ್ಧಿ:**

ಶಿಕ್ಷಕರು ಪರಿಣಾಮಕಾರಿ ಬೋಧನೆಗೆ ಗೊತ್ತುಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಆಧರಿಸಿಕೊಂಡಿರುವುದು ಸಾಧ್ಯವಿಲ್ಲ. ಪಠ್ಯಪುಸ್ತಕಗಳ ಜೊತೆಯಲ್ಲಿ, ಬೋಧನೆ-ಕಲಿಕೆಗೆ ಸೂಕ್ತವೆನಿಸುವ ಸಾಮಗ್ರಿಗಳನ್ನು ತಯಾರಿಸುವ ಇತರ ಮೂಲಗಳಿಂದ ಸಂಪನ್ಮೂಲಕ ಸಾಮಗ್ರಿಗಳನ್ನು ಸಂಗ್ರಹಿಸುವ ಮತ್ತು ಆಯಾ ವಿಷಯದ ಅಗತ್ಯಕ್ಕನುಗುಣವಾಗಿ ಬೋಧನೆ-ಕಲಿಕೆಯ ಸಾಮಗ್ರಿಗಳನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದ ಶಿಕ್ಷಕರು ತಯಾರಿರಬೇಕು. ಈ ಕಾರ್ಯಸಾಧನೆಗಾಗಿ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಭಾವೀ ಶಿಕ್ಷಕರ ಕುರಿತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು :

- ಹೆಚ್ಚುವರಿ ಮತ್ತು ಸೂಕ್ತರೀತಿಯ ಬೋಧನೆಯ ಮತ್ತು ಕಲಿಕೆಯ ಸಾಮಗ್ರಿಗಳ ತಯಾರಿಕೆಯ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕು.
- ವೆಚ್ಚವಿಲ್ಲದ ಅಥವಾ ಕಡಿಮೆ ವೆಚ್ಚದ ಬೋಧನೆಯ ಮತ್ತು ಕಲಿಕೆಯ ಸಾಮಗ್ರಿಗಳನ್ನು ತಯಾರಿಸುವ ಅಗತ್ಯವನ್ನು ಕಂಡುಕೊಳ್ಳಬೇಕು.
- ಬೋಧನೆ-ಕಲಿಕೆ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸುವಾಗ ತರಗತಿಯ ಗಾತ್ರ, ವಯೋಗುಂಪು ಇತ್ಯಾದಿ ವಿಚಾರಗಳನ್ನು ಪರಿಗಣಿಸಬೇಕು.

**ಮೌಲ್ಯಮಾಪನ:**

ಪ್ರಸಕ್ತ ಇರುವ ಮೌಲ್ಯಮಾಪನ ವ್ಯವಸ್ಥೆಯು ವಿದ್ಯಾರ್ಥಿ ಸ್ನೇಹಿಯಲ್ಲ. ಇದು ಕಲಿಯುವವರಿಗೆ ಹೆಚ್ಚು ನೋವು ಮತ್ತು ಸಂತಾಪವನ್ನು ಕೊಟ್ಟಿದೆ. ದೋಷಪೂರ್ಣ ಪರೀಕ್ಷಾ ವ್ಯವಸ್ಥೆಯಿಂದಾಗಿ ಪ್ರತಿವರ್ಷ ಆತ್ಮಹತ್ಯೆಗಳು ಹೆಚ್ಚುತ್ತಾ ಹೋಗುತ್ತಿವೆ. ಪರಿಹಾರ ಬೋಧನೆಗಾಗಿಯೇ ಮೌಲ್ಯಮಾಪನ ಇರಬೇಕು. ಶಿಕ್ಷಕರು ಬಳಸುವ ಮೌಲ್ಯಮಾಪನ ವಿಧಾನಗಳು ಕಲಿಯುವವರಲ್ಲಿ ಉತ್ತೇಜನವನ್ನು ಉಂಟುಮಾಡಬೇಕಲ್ಲದೆ ಅವರನ್ನು ನಿಸ್ತೇಜನಗೊಳಿಸುವಂತಿರಬಾರದು. ಮೌಲ್ಯಮಾಪನದ ಉದ್ದೇಶವು ವಿಶ್ಲೇಷಣಾತ್ಮಕ ಮತ್ತು ಭವಿಷ್ಯ ಸೂಚಕವಾಗುವುದರೊಂದಿಗೆ ವಸ್ತುನಿಷ್ಠವಾಗಿಯೂ ಮತ್ತು ನಿರಂತರವಾಗಿಯೂ ವ್ಯಾಪಕವಾಗಿಯೂ ಇರಬೇಕು. ಅಂಕಗಳ ಸ್ಥಾನದಲ್ಲಿ ಗುಣಾತ್ಮಕ(ಶ್ರೇಣಿ/ಗ್ರೇಡ್)ಗಳು ಇರಬೇಕು. ಈ ಕಾರ್ಯಸಾಧನೆಗಾಗಿ ಶಿಕ್ಷಕ ತರಬೇತಿ ಕಾರ್ಯಕ್ರಮಗಳು ಭಾವಿ ಶಿಕ್ಷಕರನ್ನು ಈ ಕೆಳಗಿನಂತೆ ಸಿದ್ಧಪಡಿಸಬೇಕು:

- ವಿದ್ಯಾರ್ಥಿಗಳ ಸಾಧನೆ ಉತ್ತಮಗೊಳ್ಳಲು ಬೇಕಾದ ಪರಿಹಾರಾತ್ಮಕ ಕ್ರಮಗಳನ್ನು ಗುರುತಿಸಬೇಕು.
- ಮೌಲ್ಯಮಾಪನದ ವಿಭಿನ್ನ ವಿಧಾನ ಮತ್ತು ತಂತ್ರಗಳ ಗುಣ ಮತ್ತು ಅವಗುಣಗಳನ್ನು ತಿಳಿದುಕೊಳ್ಳಬೇಕು.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ವಿಭಿನ್ನ ತಂತ್ರಗಳು ಮತ್ತು ವಿಧಾನಗಳನ್ನು ಗುರುತಿಸಬೇಕು.

**ನಿರ್ವಹಣೆ:**

ಶಿಕ್ಷಕರ ವಿಕೇಂದ್ರೀಕರಣ ಮತ್ತು ಸಶಕ್ತೀಕರಣದ ಕುರಿತು ಅನುಷ್ಠಾನದ ಮಟ್ಟದಲ್ಲಿ ಹೆಚ್ಚಿನ ಕಾರ್ಯಗಳು ನಡೆದಿಲ್ಲ. ಶಿಕ್ಷಕರಿಗೆ ಶೈಕ್ಷಣಿಕ ನಿರ್ವಹಣಾ ಕ್ಷೇತ್ರದಲ್ಲಿನ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳ ಕುರಿತು ಬಹುತೇಕ ಗೊತ್ತಿಲ್ಲ. ಶಿಕ್ಷಕರು ಶಾಲೆಯಲ್ಲಿ ಮತ್ತು ಶಾಲೆಯ ಹೊರಗೆ ನಿರ್ವಹಿಸಬೇಕಾದ ನಾನಾಬಗೆಯ ಕೆಲಸಗಳನ್ನು ಪರಿಗಣಿಸುವಾಗ ಅವರು ನಿರ್ವಹಣಾ ಕೌಶಲವನ್ನು ತಿಳಿದುಕೊಳ್ಳುವುದು ಅವಶ್ಯಕ. ಈ ಕಾರ್ಯಸಾಧನೆಗಾಗಿ ಶಿಕ್ಷಕ ತರಬೇತಿ ಕಾರ್ಯಕ್ರಮಗಳು ಭಾವಿ ಶಿಕ್ಷಕರನ್ನು ಈ ಕೆಳಗಿನಂತೆ ಸಿದ್ಧಪಡಿಸಬೇಕು:

- ನಿರ್ವಹಣಾ ಕೌಶಲಗಳ ಪ್ರಾಮುಖ್ಯವನ್ನು ಅರ್ಥ ಮಾಡಿಕೊಳ್ಳುವುದು.
- ತನ್ನ ಮತ್ತು ವಿದ್ಯಾರ್ಥಿಗಳ ಸಮಯವನ್ನು ಪರಿಣಾಮ ಕಾರಿಯಾಗಿ ನಿರ್ವಹಿಸುವುದು.
- ಕಿಕ್ಕಿರಿದ ತರಗತಿಗಳನ್ನು ಮತ್ತು ಬಹು-ವರ್ಗ ಬೋಧನೆಯನ್ನು ನಿರ್ವಹಿಸುವುದು.

Digitised by Bharatavani, CIIL

**ಹೆತ್ತವರೊಂದಿಗೆ ಕೆಲಸ ಮಾಡುವುದು:**

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಹೆತ್ತವರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಮಕ್ಕಳ ದಾಖಲಾತಿ ಮತ್ತು ಅವರನ್ನು ಉಳಿಸಿಕೊಳ್ಳುವುದರಲ್ಲಿ ಹೆತ್ತವರೊಂದಿಗೆ ಶಿಕ್ಷಕರು ಸಹಕಾರವನ್ನು ಪಡೆಯುವುದು ಅತಿ ಮುಖ್ಯ. ಹೆತ್ತವರು ಮತ್ತು ಶಿಕ್ಷಕರ ನಡುವಿನ ನಿಯಮಿತ ಸಂಪರ್ಕವು ಮಗುವಿನ ಶೈಕ್ಷಣಿಕ ಸಾಧನೆ ಮತ್ತು ಸಮಗ್ರ ಬೆಳವಣಿಗೆ ಹಾಗೂ ಅಭಿವೃದ್ಧಿ ನೆರವಾಗುತ್ತದೆ. ಈ ಕಾರ್ಯಸಾಧನೆಗಾಗಿ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಭಾವೀ ಶಿಕ್ಷಕರ ಕುರಿತುಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು:

- ವಿದ್ಯಾರ್ಥಿಯ ಪ್ರಗತಿಗೆ ಹೆತ್ತವರು–ಶಿಕ್ಷಕರ ನಡುವೆ ಕ್ರಮಬದ್ಧವಾದ ಪರಸ್ಪರ ಪ್ರತಿಕ್ರಿಯೆ ಇರುವುದು ಮುಖ್ಯವೆಂಬುದನ್ನು ಅರ್ಥಮಾಡಿಕೊಳ್ಳುವುದು.
- ವಿದ್ಯಾರ್ಥಿಯ ಸಮಾಜೋ–ಆರ್ಥಿಕ ಹಿನ್ನೆಲೆ ಮತ್ತು ಸಮಸ್ಯೆಗಳ ನಿಕಟ ಪರಿಚಯವಿರುವುದು.
- ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ಜಾರಿಗೊಳಿಸುವಲ್ಲಿ ಹೆತ್ತವರನ್ನು ಸೇರಿಸಿಕೊಳ್ಳುವುದು.

**ಸಮುದಾಯ ಮತ್ತು ಇತರ ಕಾರ್ಯಸಂಸ್ಥೆಗಳೊಂದಿಗೆ ಕೆಲಸ ನಡೆಸುವುದು:**

ಶಾಲೆಗಳು ಸಮುದಾಯ ಮತ್ತು ಇತರ ಕಾರ್ಯಸಂಸ್ಥೆಗಳಿಂದ ದೂರ ಒಂಟಿಯಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ಶಾಲೆಯ ಗುಣಮಟ್ಟದ ಸುಧಾರಣೆ ಮತ್ತು ಶಾಲೆಗಾಗಿ ಸಂಪನ್ಮೂಲಗಳ ಸಂಗ್ರಹಣೆಗಾಗಿ ಶಿಕ್ಷಕರು ಅವರ ಸಹಕಾರವನ್ನು ಪಡೆಯಬೇಕಾಗುತ್ತದೆ. ಸಮುದಾಯದೊಂದಿಗಿನ ನಿಕಟ ಬಾಂಧವ್ಯವು ಆ ಪ್ರದೇಶದ ಆರ್ಥಿಕ, ಸಾಮಾಜಿಕ, ಮತ್ತು ಪರಿಸರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನೆರವಾಗುತ್ತದೆ. ಒಟ್ಟಾರೆ ಸುಧಾರಣೆಗಾಗಿ ಶಾಲೆ ಮತ್ತು ಸಮುದಾಯದ ನಡುವೆ ಪರಸ್ಪರ ಕ್ರಿಯೆಯನ್ನು ನಡೆಸುವುದರಲ್ಲಿ ಶಿಕ್ಷಕರು ಮುಖ್ಯ ಪಾತ್ರವನ್ನು ನಿರ್ವಹಿಸಬಹುದು. ಈ ಕಾರ್ಯಸಾಧನೆಗಾಗಿ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಭಾವೀ ಶಿಕ್ಷಕರ ಕುರಿತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು:

- ಶಾಲೆಯ ಒಟ್ಟಾರೆ ಬೆಳವಣಗೆಗೆ ಸಮುದಾಯ ಮತ್ತು ಇತರ ಕಾರ್ಯಸಂಸ್ಥೆಗಳ ಕಾಣಿಕೆಯ ಪ್ರಾಮುಖ್ಯತೆಯನ್ನು ಮೆಚ್ಚುವುದು.
- ಶಾಲೆಗಾಗಿ ಸಮುದಾಯದ ಸಂಪನ್ಮೂಲಗಳನ್ನು ಒಟ್ಟು ಮಾಡುವುದು.
- ಸಮುದಾಯದ ನಂಬಿಕೆಗಳು ಜಾನಪದ ಮತ್ತು ಸಂಪನ್ಮೂಲಗಳ ಮಹತ್ವವನ್ನು ಕಂಡುಕೊಳ್ಳುವುದು.
- ಸರಕಾರಿ ಮತ್ತು ಸ್ವಯಂಸೇವಾ ಕಾರ್ಯಸಂಸ್ಥೆಗಳ ಅನೇಕ ರೀತಿಯಲಾಭದಾಯಕ ಕಾರ್ಯಯೋಜನೆಗಳು ಗರಿಷ್ಠ ಉಪಯೋಗವಾಗುವಂತೆ ಅವುಗಳು ಸಮುದಾಯಕ್ಕೆ ಗೊತ್ತಾಗುವಂತೆ ಮಾಡುವುದು.

ಅರ್ಹತೆಯನ್ನು ಆಧರಿಸಿದ ಕಾರ್ಯ ವಿಧಾನವು ಶಿಕ್ಷಕರ ವೃತ್ತಿಪರತೆಯನ್ನು ಹೆಚ್ಚಿಸುವ ಒಂದು ಪ್ರಯತ್ನ ಕೂಡಾ ಆಗಿದೆ. ಇದು ಗುಣಮಟ್ಟದ ಶಿಕ್ಷಣಕ್ಕೆ ಅತ್ಯವಶ್ಯ. ಇವುಗಳಿಗೆ ಶಿಕ್ಷಕರ ಬದ್ಧತೆ ಮತ್ತು ಕಾರ್ಯಸಾಧನೆಗಳು ಬೆಂಬಲವಾಗಿ ಮತ್ತು ಪೂರಕವಾಗಿ ನಿಂತುಕೊಂಡರೆ ಮಾತ್ರ ಕಾರ್ಯಕ್ಷಮತೆ ಪರಿಣಾಮಕಾರಿಯಾಗುತ್ತವೆ. ಬದ್ಧತೆಯ ಪ್ರಮುಖ ಕ್ಷೇತ್ರಗಳೆಂದರೆ ಅಭ್ಯಾಸಿ, ಸಮಾಜ, ವೃತ್ತಿ, ವೃತ್ತಿಯ ಶ್ರೇಷ್ಠತೆ ಮತ್ತು ಮೂಲಭೂತ ಮೌಲ್ಯಗಳಿಗೆ ಬದ್ಧತೆ. ಕಾರ್ಯಸಾಧನೆಯ ಕ್ಷೇತ್ರಗಳೆಂದರೆ: ತರಗತಿಯ ಕಾರ್ಯಸಾಧನೆ, ಶಾಲಾ ಮಟ್ಟ, ಶಾಲೆಯಿಂದ ಹೊರಗೆ, ಹೆತ್ತವರಿಗೆ ಸಂಬಂಧಿಸಿದ ಮತ್ತು ಸಮುದಾಯಕ್ಕೆ ಸಂಬಂಧಿಸಿದ ಕಾರ್ಯಸಾಧನೆಗಳು. ಈ ಎಲ್ಲ ಪ್ರಮುಖ ಸಮೂಹಗಳು ಶಿಕ್ಷಕರ ವೃತ್ತಿಪರತೆಯನ್ನು ಹೆಚ್ಚಿಸುವ ವ್ಯಾಪಕ ಹಂತಗಳಾಗಿವೆ. ಪ್ರಾಥಮಿಕ ಹಂತದಲ್ಲಿ ಕ್ಷಮತೆಯನ್ನು ಆಧರಿಸಿದ ಮತ್ತು ಬದ್ಧತೆಯನ್ನು ಕೇಂದ್ರೀಕೃತವಾಗಿಸಿದ ಕ್ರಮದ ಪರಿಪಾಲನೆಯ ಕಲಿಕಾರ್ಥಿಯ ಸಾಧನೆಯನ್ನು ಹೆಚ್ಚಿಸುವುದರಲ್ಲಿ ನೆರವಾಗುತ್ತದೆ.

**ಮೂಲ: ವಾಲಿಯಾ**

**ಅನು: ಡಾ. ಗೀತಾ ಶೆಣೈ**

## ಶಿಕ್ಷಕರ ದಿನ

**ಪ್ರಸ್ತಾವನೆ:** ಭಾರತದಲ್ಲಿ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ರಾಷ್ಟ್ರವು ಅಂದು ಶಿಕ್ಷಕರಿಗೆ ಗೌರವವನ್ನು ಸೂಚಿಸುತ್ತದೆ. ಅಧ್ಯಯನ ಪ್ರಜ್ಞೆಯ ಆಚರಣೆಯನ್ನು ನಡೆಸುತ್ತದೆ. ಅದು ಶಿಕ್ಷಕರಿಗಾಗಿ ಮತ್ತು ಶಿಕ್ಷಕರ ಕುರಿತಾದ ದಿನವಾಗಿದೆ. ಅಂದು ಭಾರತದ ಎಲ್ಲೆಡೆಗಳ ವಿದ್ಯಾರ್ಥಿಗಳು ತಮ್ಮನ್ನು ಸ್ವತಃ ತಿಳಿದುಕೊಳ್ಳುವಂತೆ ಮಾಡಿದ ಶಿಕ್ಷಕರಿಗಾಗಿ ತಮ್ಮ ಸಮಯವನ್ನು ಮೀಸಲಿಡುತ್ತಾರೆ. ಇಡೀ ದೇಶದಲ್ಲಿ ಶಿಕ್ಷಕರ ದಿನವನ್ನು ಸಂಭ್ರಮ ಮತ್ತು ಉಲ್ಲಾಸದಿಂದ ಆಚರಿಸಲಾಗುತ್ತದೆ. ಕೇಂದ್ರ, ರಾಜ್ಯ, ಜಿಲ್ಲೆ, ಉಪ–ಜಿಲ್ಲೆಗಳು ಮತ್ತು ಶಾಲಾ ಮಟ್ಟದಲ್ಲಿ ಕೂಡಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಯುವಜನಾಂಗದ ಮೇಲೆ ಶಿಕ್ಷಕರಿಗೆ ಇರುವಂತಹ ಅಧಿಕಾರವು ಸುಸಂಬಂಧ ರೀತಿಯದ್ದಾಗಿದೆ. ಕೆಲವು ಸಂದರ್ಭಗಳಲ್ಲಿ ವ್ಯಕ್ತಿಯ ಬದುಕಿನ ಮುಖ್ಯ ತಿರುವಿಗೆ, ಅವನಲ್ಲಿ ಹೊಸ ಅರಿವನ್ನು ಮೂಡಿಸುವುದಕ್ಕೆ ಶಿಕ್ಷಕ ಕಾರಣನಾಗುವುದೂ ಇದೆ. ಶಿಕ್ಷಕರು ನಮ್ಮ ಕನಸುಗಳನ್ನು ಪೋಷಿಸುತ್ತಾರೆ, ನಮ್ಮ ಕೌಶಲ್ಯಗಳನ್ನು ಬೆಳೆಸುತ್ತಾರೆ, ನಾವು ನಮ್ಮ ಗುರಿಗಳನ್ನು ತಲುಪುವ ಸಲುವಾಗಿ ನಮ್ಮ ಮಹತ್ವಾಕಾಂಕ್ಷೆಗಳನ್ನು ನೆರವೇರಿಸಿಕೊಳ್ಳಲು ಬಹಳ ನೆರವಾಗುತ್ತಾರೆ. ನಮ್ಮ ಕಾಲದ ಅತ್ಯಂತ ಪವಿತ್ರ ವೃತ್ತಿಗಳಲ್ಲಿ ಒಂದಾಗಿರುವ ಶಿಕ್ಷಕವೃತ್ತಿಗಾಗಿ ಜಗತ್ತಿನಾದ್ಯಂತ

Digitised by Bharatavani, CIIL

ಅನೇಕ ರಾಷ್ಟ್ರಗಳು ಒಂದು ದಿನವನ್ನು ಮೀಸಲಾಗಿ ಇಟ್ಟಿರುವುದರಲ್ಲಿ ಯಾವ ಅಚ್ಚರಿಯೂ ಇಲ್ಲ.

**ಚಾರಿತ್ರಿಕ ದೃಷ್ಟಿಕೋನ:** ಪ್ರಾಚೀನ ಭಾರತದಲ್ಲಿ ಶಿಕ್ಷಕರ ದಿನಾಚರಣೆಯು ಚಾಲ್ತಿಯಲ್ಲಿ ಇತ್ತು. ಅಂದಿನ ಸಮಾಜದಲ್ಲಿ ಗುರುಗಳನ್ನು ಗೌರವ, ಮರ್ಯಾದೆ ಮತ್ತು ಪೂಜ್ಯಭಾವನೆಯಿಂದ ಕಾಣುವಂತೆ ಆ ದಿನವನ್ನು ಆಚರಿಸಲಾಗುತ್ತಿತ್ತು. ಸಾಂಪ್ರದಾಯಿಕವಾಗಿ ಭಾರತೀಯ ಸಮಾಜವು ಯಾವಾಗಲೂ ಗುರುವನ್ನು ಗೌರವಪೂರ್ವಕವಾಗಿ ಕಂಡಿದೆ. ಗುರು ಮತ್ತು ವಿದ್ಯಾರ್ಥಿಗಳ ನಡುವೆ ಅವಿನಾಭಾವದ ಸಂಬಂಧವಿರುತ್ತದೆ. ನಾವು ಗುರು–ಶಿಷ್ಯ ಪರಂಪರೆಯಲ್ಲಿ ನಿಷ್ಠಾವಂತ ವಿದ್ಯಾರ್ಥಿಗಳನ್ನು ಕಾಣಲು ಸಾಧ್ಯವಿದೆ. ಸಾಂಸ್ಕೃತಿಕವಾಗಿ ಅನೇಕ ಶಿಷ್ಯಂದಿರು ತಮ್ಮ ಗುರುವಿನ ಹೆಸರಿನಿಂದ ಗುರುತಿಸಿಕೊಂಡಿದ್ದಾರೆ. ಗುರು, ಆಚಾರ್ಯ ಅಥವಾ ಶಿಕ್ಷಕನು ರಾಜರಿಂದ, ಹೆತ್ತವರಿಂದ ಮತ್ತು ಶಿಷ್ಯರಿಂದ ಗೌರವಿಸಲ್ಪಡುತ್ತಾನೆ ಎನ್ನುವುದು ಪ್ರಾಚೀನ ಸಾಹಿತ್ಯದಿಂದ ತಿಳಿದುಬರುತ್ತದೆ. ಆ ಕಾಲದಲ್ಲಿ ಆಶ್ರಮ ಅಥವಾ ಶಾಲೆಯಲ್ಲಿ ಶಿಕ್ಷಣವನ್ನು ಮುಗಿಸಿದ ಬಳಿಕ ಗುರುವು ಪದವಿ ಪ್ರದಾನ ಕಾರ್ಯಕ್ರಮವೊಂದನ್ನು ಆಯೋಜಿಸುತ್ತಿದ್ದನು. ಇದರಲ್ಲಿ ಪದವಿ ಪ್ರದಾನ ನುಡಿವಚನಗಳನ್ನು ಓದಿ ಹೇಳಲಾಗುತ್ತಿತ್ತು. ವಿದ್ಯಾರ್ಥಿಗಳು ಇದಕ್ಕೆ ಸಮ್ಮತಿಸಿ, ಗೌರವವನ್ನು ಸೂಚಿಸಿ, ಈ ಆಜ್ಞೆಗಳನ್ನು ಅಥವಾ ವಚನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕಾಗಿ ಮಾತು ಕೊಡುತ್ತಿದ್ದರು. ಈ ಸಂಪ್ರದಾಯದಿಂದಲೇ ಇವತ್ತಿನ ಶಿಕ್ಷಕರ ದಿನದ ಆಚರಣೆ ಪ್ರಾರಂಭವಾಯಿತು ಎಂದು ಹೇಳಬಹುದು.

ಸೆಪ್ಟೆಂಬರ್ 5ನ್ನು ಶಿಕ್ಷಕರ ದಿನವೆಂದು ಪರಿಗಣಿಸುವುದಕ್ಕೆ ಒಂದು ಹಿನ್ನೆಲೆ ಇದೆ. ಅದು ಭಾರತದ ಮಾಜಿ ರಾಷ್ಟ್ರಾಧ್ಯಕ್ಷ ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅವರು ಹುಟ್ಟಿದ ದಿನವಾಗಿದೆ. ಸರ್ವಪಳ್ಳಿ ರಾಧಾಕೃಷ್ಣನ್ (1888–1987) ಅವರು ಶಿಕ್ಷಕರ ಸ್ಥಾನದಿಂದ ರಾಷ್ಟ್ರಾಧ್ಯಕ್ಷ ಪದವಿಯ ಹಂತವನ್ನೇರಿದವರು. ಅವರು 1909ರಲ್ಲಿ ಮದ್ರಾಸ್ ಪ್ರಾಂತೀಯ ಶಿಕ್ಷಣ ಸೇವಾ ಕ್ಷೇತ್ರವನ್ನು ಪ್ರವೇಶಿಸಿ, ತಮ್ಮ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿದರು. 1911ರಲ್ಲಿ ಎಲ್.ಟಿ. (ಲೈಸೆನ್‌ಶಿಯೇಟ್ ಇನ್ ಟೀಚಿಂಗ್)ಗಾಗಿ ಮದ್ರಾಸಿನ (ಈಗಿನ ಚೆನ್ನೈ) ಸೈದಪೇಟೆಯ ಶಿಕ್ಷಕ ಮಹಾವಿದ್ಯಾಲಯವನ್ನು ಸೇರಿದರು. ಅಲ್ಲಿ ಅವರಿಗೆ ಮಾನಸಿಕ ಮತ್ತು ನೀತಿವಿಜ್ಞಾನದ ಸಹ–ಪ್ರಾಧ್ಯಾಪಕರ ಖಾಯಂ ಹುದ್ದೆ ದೊರೆಯಿತು. 1916ರಲ್ಲಿ ಭಡ್ತಿ ನೀಡಿ ಆಂಧ್ರಪ್ರದೇಶದ ರಾಜಮುಂದ್ರಿಯ ಸರಕಾರಿ ಕಲಾ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಳಿಸಲಾಯಿತು. ಜುಲೈ 1918ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜು ಸೇರಿದರು. ಶೈಕ್ಷಣಿಕ ಸಾಮರ್ಥ್ಯವನ್ನು ಪೋಷಿಸಿ ಬೆಳೆಸಲು ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಉತ್ಕೃಷ್ಟ ಪರಿಸರವನ್ನು ಕಲ್ಪಿಸಿಕೊಟ್ಟಿತು. ಭಾರತೀಯ ತತ್ವಜ್ಞಾನದ ಕೈಬರಹದ ರೂಪವನ್ನು ಸಂಪುಷ್ಟಿಗೊಳಿಸಿ ಈ ಚಿರಸ್ಥಾಯಿ ಕೃತಿಯ ಮುಯರ್‌ಹೆಡ್‌ರವರು ಸಂಪಾದಿಸಿದ ಲೈಬ್ರರಿ ಫಿಲಾಸಫಿಯಲ್ಲಿ 1923ರಲ್ಲಿ ಲಂಡನ್‌ನಿಂದ ಪ್ರಕಟವಾಯಿತು. ಈ ಪ್ರಕಟಣೆಯು ರಾಧಾಕೃಷ್ಣನ್ ಅವರಿಗೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿತು. ಅವರನ್ನು ಯುನೈಟೆಡ್ ಕಿಂಗ್‌ಡಮ್‌ನ ಆಕ್ಸ್‌ಫರ್ಡ್ ಮ್ಯಾಂಚೆಸ್ಟರ್ ಮಹಾವಿದ್ಯಾಲಯದಲ್ಲಿ ಅಪ್‌ಟನ್ ಅಧ್ಯಾಪಕರಾಗಿ ಉಪನ್ಯಾಸಗಳನ್ನು ನೀಡುವಂತೆ ಆಹ್ವಾನಿಸಲಾಯಿತು. ಅವರು ಅಮೇರಿಕೆಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ಹಿಂದುತ್ವ ಮತ್ತು ಆಧುನಿಕ ತಾತ್ವಿಕ ಒಲವುಗಳ ಕುರಿತು ಉಪನ್ಯಾಸಗಳನ್ನು ಕೂಡಾ ನೀಡಿದ್ದಾರೆ. ಅವರ ಅಂತಾರಾಷ್ಟ್ರೀಯ ಖ್ಯಾತಿಯಿಂದಾಗಿ ಅವರ ಹೆಸರನ್ನು ಅಂದಿನ ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರು ನೈಟ್‌ಹುಡ್‌ಗೆ ಸೂಚಿಸುವಂತೆ ಮಾಡಿತು. ಅವರಿಗೆ 1931ರಲ್ಲಿ ನೈಟ್‌ಹುಡ್ ಗೌರವವನ್ನು ನೀಡಲಾಯಿತು.

ರಾಧಾಕೃಷ್ಣನ್ ಅವರು ಆಂಧ್ರ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಮೇ 1, 1931ರಲ್ಲಿ ಅಧಿಕಾರ ಸ್ವೀಕರಿಸಿದರು. ಆಕ್ಸಫರ್ಡ್‌ನ ಪಾಶ್ಚಿಮಾತ್ಯ ಧಾರ್ಮಿಕ ಮತ್ತು ನೀತಿತತ್ವ (ಈಸ್ಟರ್ನ್ ರೆಲಿಜಿಯಸ್ ಅಂಡ್ ಎಥಿಕ್ಸ್) ಸಂಸ್ಥೆಯ ಪ್ರಧಾನ ಹುದ್ದೆಯನ್ನು (ಛೇರಮನ್) ಸ್ವೀಕರಿಸುವಂತೆ ಅವರನ್ನು ಕೇಳಿಕೊಳ್ಳಲಾಗಿತ್ತು. ಅವರು 24, ಸೆಪ್ಟೆಂಬರ್, 1939ರಲ್ಲಿ ಕುಲಪತಿಗಳಾಗಿ ಬನಾರಸ್ ವಿಶ್ವವಿದ್ಯಾನಿಲಯವನ್ನು ಸೇರಿದರು. ಬನಾರಸ್ ವಿಶ್ವವಿದ್ಯಾಲಯದ ಬೆಳ್ಳಿಹಬ್ಬವನ್ನು 21 ಜನವರಿ, 1942ರಲ್ಲಿ ಆಚರಿಸಲಾಯಿತು. ಇಲ್ಲಿನ ವಿಶೇಷ ಪದವಿಪ್ರದಾನ ಸಮಾರಂಭದಲ್ಲಿ ಭಾಗವಹಿಸಲು ರಾಧಾಕೃಷ್ಣನ್ ಅವರು ಗಾಂಧೀಜಿಯವರನ್ನು ಆಹ್ವಾನಿಸಿದ್ದರು. ಈ ಕಾರ್ಯಕ್ರಮದಲ್ಲಿ ರಾಜೇಂದ್ರ ಪ್ರಸಾದ್, ಜವಾಹರಲಾಲ್ ನೆಹರೂ, ಗೋವಿಂದ ಬಲ್ಲಭ ಪಂತ, ಶ್ಯಾಮಪ್ರಸಾದ ಮುಖರ್ಜಿ, ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮತ್ತು ಜುಗಲ್ ಕಿಶೋರ್ ಬಿರ್ಲಾ ಅವರಂತಹ ಅನೇಕ ಗಣ್ಯಾತಿಗಣ್ಯ ವ್ಯಕ್ತಿಗಳು ಭಾಗವಹಿಸಿದ್ದರು. ಇವರ ಅಧ್ಯಕ್ಷಸ್ಥಾನದಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವು (1948–49) ತನ್ನ ವರದಿಯನ್ನು ಸಲ್ಲಿಸಿದೆ. ನಮ್ಮನ್ನು ಅಜ್ಞಾನ, ಪೂರ್ವಗ್ರಹ ಮತ್ತು ಆಧಾರರಹಿತ ನಂಬಿಕೆಯ ಬಿಗಿಮುಷ್ಟಿಯಿಂದ ಮುಕ್ತಗೊಳಿಸುವುದು ಶಿಕ್ಷಣದ ಉದ್ದೇಶ ಎಂಬುದನ್ನು ಈ ವರದಿಯಲ್ಲಿ ಎತ್ತಿ ಹಿಡಿಯಲಾಗಿದೆ. ರಾಧಾಕೃಷ್ಣನ್ ಅವರನ್ನು 1952ರಲ್ಲಿ ಭಾರತದ ಉಪರಾಷ್ಟ್ರಪತಿಯಾಗಿ ಚುನಾಯಿಸಲಾಯಿತು. ಅವರು ಮೇ 13, 1962ರಲ್ಲಿ ಭಾರತದ ರಾಷ್ಟ್ರಪತಿಗಳಾಗಿ ಅಧಿಕಾರ ಸ್ವೀಕರಿಸಿದರು.

ಶಿಕ್ಷಕರಾಗಿದ್ದು ನಂತರ ಭಾರತೀಯ ಪ್ರಜಾತಂತ್ರದ ಅಧ್ಯಕ್ಷರಾಗುವವರೆಗಿನ ರಾಧಾಕೃಷ್ಣನ್ ಅವರ ಪ್ರಯಾಣವು ಗಮನ ಸೆಳೆಯುವಂತಹದು. ಅವರ ಸೇವೆಗಳನ್ನು ಗುರುತಿಸಿದ ರಾಷ್ಟ್ರವು ಅವರು ಹುಟ್ಟಿದ ದಿನವನ್ನು ಶಿಕ್ಷಕರ ದಿನವಾಗಿ ಆಚರಿಸುತ್ತಿದೆ. ನವದೆಹಲಿಯ ಎನ್‌ಸಿಇಆರ್‌ಟಿಯ ಕೇಂದ್ರ ಕಾರ್ಯಾಲಯದಲ್ಲಿ 30 ಆಗಸ್ಟ್, 1962ರಂದು, ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಹೊಸ ಕಟ್ಟಡದ ಶಂಕುಸ್ಥಾಪನೆಯ ಸಂದರ್ಭದಲ್ಲಿ ಡಾ. ಎಸ್. ರಾಧಾಕೃಷ್ಣನ್ ಅವರು ನೀಡಿದ ಭಾಷಣವು ಶಿಕ್ಷಕರ ಗುಣಲಕ್ಷಣಗಳನ್ನು ವ್ಯಕ್ತಪಡಿಸಿದೆ. ಓರ್ವ ಶಿಕ್ಷಕನು ಮನುಕುಲದ ಭವಿಷ್ಯದ ನಿಷ್ಠೆಗೆ, ಮಾನವೀಯತೆ,

Digitised by Bharatavani, CIIL

ರಾಷ್ಟ್ರ ಮತ್ತು ಜಗತ್ತಿನ ಭವಿಷ್ಯಕ್ಕೆ ಬದ್ಧನಾಗಿರಬೇಕಾಗುತ್ತದೆ. ಮಕ್ಕಳ ಭವಿಷ್ಯವನ್ನು ರೂಪಿಸುವುದರಲ್ಲಿ ಶಿಕ್ಷಕರು ಜವಾಬ್ದಾರರಾಗಿರುತ್ತಾರೆ. ಆದುದರಿಂದ ಅವರ ನಡತೆಯು ವಿದ್ಯಾರ್ಥಿಗಳನ್ನು ಪ್ರಭಾವಿಸಬೇಕು. ವಿದ್ಯಾರ್ಥಿಗಳ ಮುಂದೆ ಅಭಿವ್ಯಕ್ತಿಸಲಾದ ಉತ್ತಮ ನಡತೆಯು ಭವಿಷ್ಯದ ವರ್ತನೆಗಳಿಗೆ ತಳಹದಿಯನ್ನು ರೂಪಿಸುತ್ತದೆ. ಹೀಗಾಗಿ ಶಿಕ್ಷಕರ ನಡತೆಯಲ್ಲಿ ಆತ್ಮಸಂಯಮವು ಅವಿಭಾಜ್ಯ ಅಂಗವಾಗಿ ಇರಬೇಕಾದುದು ಸಹಜ.

ಶಿಕ್ಷಣವನ್ನು ವೈಯಕ್ತಿಕ ಮತ್ತು ದೇಶದ ಬೆಳವಣಿಗೆಯ ಉಪಕರಣವಾಗಿ ಗ್ರಹಿಸಲಾಗಿದೆ. ಓರ್ವ ಶಿಕ್ಷಕ ತನ್ನ ಸಂಪರ್ಕಕ್ಕೆ ಬರುವ ವ್ಯಕ್ತಿಗಳನ್ನು ಮೇಲಕ್ಕೆತ್ತುವ (ಉದ್ಧಾರ ಮಾಡುವ) ಜವಾಬ್ದಾರಿಯನ್ನು ಪೂರೈಸಬೇಕಾಗುತ್ತದೆ. ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ಪ್ರಜಾತಂತ್ರದಲ್ಲಿನ ನಂಬಿಕೆಯ ಪಾತ್ರವನ್ನು ಎತ್ತಿಹಿಡಿದಿದೆ. 'ಪ್ರಜಾತಂತ್ರವು ಮನುಷ್ಯರ ಬದುಕಿನ ವೈಯಕ್ತಿಕ ಘನತೆಯ ಅಂತರ್ಗತ ಯೋಗ್ಯತೆ ಮತ್ತು ಮೌಲ್ಯದ ನಂಬಿಕೆಯನ್ನು ಆಧರಿಸಿದೆ'. ಶಿಕ್ಷಕನು ಪ್ರತಿಯೊಬ್ಬ ವ್ಯಕ್ತಿಯ ವಿಶಿಷ್ಟ ಸ್ವಭಾವದೊಂದಿಗೆ ಆತನ ದೇಹ, ಮನಸ್ಸು ಮತ್ತು ಪ್ರಜ್ಞೆಯ ಅಭಿವೃದ್ಧಿಗಾಗಿ ದುಡಿಯಬೇಕಾಗಿರುವುದು ಸಹಜವೇ ಆಗಿದೆ. ಶಿಕ್ಷಣ ಮತ್ತು ಸಂಸ್ಕೃತಿ ಕ್ಷೇತ್ರಕ್ಕೆ ಡಾ. ರಾಧಾಕೃಷ್ಣನ್ ಅವರ ಕೊಡುಗೆಯು ಗಮನಾರ್ಹವಾಗಿದೆ. ಭಾರತೀಯ ಶಿಕ್ಷಣ ಪದ್ಧತಿಯ ಮೇಲಿನ ಅವರ ಪ್ರಭಾವವು ಶಿಕ್ಷಕರ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿದೆ. ಶಿಕ್ಷಕರ ಕುರಿತಾದ ರಾಷ್ಟ್ರೀಯ ಆಯೋಗ – 1 (1983–85) ತನ್ನ ವರದಿ 'ಶಿಕ್ಷಕ ಮತ್ತು ಸಮಾಜ' (ದಿ ಟೀಚರ್ ಆಂಡ್ ಸೊಸೈಟಿ) ದಲ್ಲಿ ಶಿಕ್ಷಕರ ಮಟ್ಟವನ್ನು ಸುಧಾರಣೆಗೆ ಒಳಪಡಿಸುವುದನ್ನು ಪ್ರತಿಪಾದಿಸಿದೆ. ಶಿಕ್ಷಕರ ಮಟ್ಟದ ಸುಧಾರಣೆಗಾಗಿ ಗುರುತಿಸಲಾದ ನಿರ್ಣಾಯಕ ಅಂಶಗಳೆಂದರೆ ಉತ್ತಮ ವೇತನ, ಭಡ್ತಿಯ ಅವಕಾಶಗಳು, ವೃತ್ತಿಪರ ಮಟ್ಟ ಮತ್ತು ಕೆಲಸದ ನಿರ್ವಹಣೆ. ಶಿಕ್ಷಕರ ಶೈಕ್ಷಣಿಕ ಮತ್ತು ವೃತ್ತಿಪರ ವಿದ್ಯಾರ್ಹತೆಯನ್ನು ಶಿಕ್ಷಣದ ಅನೇಕ ಹಂತಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಸ್ವಾತಂತ್ರ್ಯ ದೊರೆತ ನಂತರದ ಅವಧಿಯಲ್ಲಿ ಜ್ಞಾನದ ಉನ್ನತೀಕರಣವನ್ನು ನಿರಂತರವಾಗಿ ಸಾಧಿಸುವ ಅವಕಾಶಗಳಿಗಾಗಿ ಆಂತರಿಕಸೇವೆ ಮತ್ತು ದೂರಕ್ರಮಗಳನ್ನು ಕೂಡಾ ಹೆಚ್ಚಿಸಲಾಗಿದೆ. ಈ ಕಾರ್ಯಗತಿಯಲ್ಲಿ ತಂತ್ರಜ್ಞಾನದ ಕ್ರಾಂತಿಯು ತನ್ನ ಕೊಡುಗೆಯನ್ನು ನೀಡಿದೆ. ಶಿಕ್ಷಕರ ಕಠಿಣ ಪರಿಶ್ರಮ ಮತ್ತು ಶಿಸ್ತುಬದ್ಧ ಬದುಕಿನ ಮೂಲಕ ತಮ್ಮ ದಕ್ಷತೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಸಮಾಜವು ಶಿಕ್ಷಕರ ದಿನದಂದು ಕಾರ್ಯಗಳನ್ನು ಶ್ಲಾಘಿಸುತ್ತದೆ. ಮಕ್ಕಳ ಭವಿಷ್ಯವನ್ನು ರೂಪಿಸುವುದರಲ್ಲಿ ಅವರ ಕಾರ್ಯದ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ.

ಸಮಾಜದ ಸಮಾಜೋ–ಸಾಂಸ್ಕೃತಿಕ ಮೌಲ್ಯಸಂಚಯಗಳಲ್ಲಿ ಶಿಕ್ಷಕರ ಮಟ್ಟವು ಪ್ರತಿಫಲಿತವಾಗುತ್ತದೆ. ಭಾರತೀಯ ಆಚಾರ್ಯ ಮತ್ತು ಗುರು ಪರಂಪರೆಗೆ ಇವತ್ತಿಗೂ ಸಮಾಜದಲ್ಲಿ ಗೌರವವಿದೆ. 1992ರಲ್ಲಿ ತಿದ್ದುಪಡಿಯನ್ನು ಅಳವಡಿಸಲಾದ 1986ರ ರಾಷ್ಟ್ರೀಯ ಶಿಕ್ಷಣನೀತಿಯು, "ಯಾವುದೇ ದೇಶವು ತನ್ನ ಶಿಕ್ಷಕರ ಮಟ್ಟಕ್ಕಿಂತ ಮೇಲೆ ಏರಲಾರದು" (ಪುಟ: 43) ಎಂಬ ಸಂವೃದ್ಧ ಹೇಳಿಕೆಯ ಮೂಲಕ ಬಹಳ ಜಾಗರೂಕತೆಯಿಂದ ದೇಶವನ್ನು ಎಚ್ಚರಿಸಿದೆ.

ಶಾಲಾ ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡುವ ಕಾರ್ಯಯೋಜನೆಯ ಮುಖ್ಯ ಉದ್ದೇಶವು ಅಸಾಧಾರಣ ಕಾರ್ಯವನ್ನು ನಡೆಸಿದಂತಹ ಶಾಲಾ ಶಿಕ್ಷಕರಿಗೆ ಮಾನ್ಯತೆ ನೀಡುವುದು ಮತ್ತು ಶಿಕ್ಷಕ ವೃತ್ತಿಯ ಮಟ್ಟವನ್ನು ಎತ್ತರಕ್ಕೇರಿಸಲು ನೆರವಾಗುವುದು ಎಂಬುದಾಗಿ ಶಿಕ್ಷಣ ಆಯೋಗವು (1944–66) ದೃಢೀಕರಿಸಿದೆ.

**ಪ್ರಾಚೀನ ಪದ್ಧತಿ:** ಪ್ರಾಚೀನ ಭಾರತದಲ್ಲಿ ವೈದಿಕ ಕಾಲಮಾನದ ಪ್ರಕಾರ ಆಷಾಢ ಮಾಸದ ಮಳೆಗಾಲದ ಹುಣ್ಣಿಮೆಯ ದಿನವನ್ನು 'ಗುರು ಪೂರ್ಣಿಮಾ' ಎಂದು ಆಚರಿಸಲಾಗುತ್ತಿತ್ತು. ಗುರು ಪೂರ್ಣಿಮವನ್ನು 'ವ್ಯಾಸ ಪೂರ್ಣಿಮ'ವೆಂದು ಕೂಡಾ ಕರೆಯಲಾಗುತ್ತದೆ. ಕೃಷ್ಣ ದ್ವೈಪಾಯನ ಎಂಬ ನಿಜನಾಮಧೇಯವನ್ನು ಹೊಂದಿರುವಂತಹ ಮಹರ್ಷಿ ವ್ಯಾಸರು ತಮ್ಮ ಪ್ರಥಮ ಗ್ರಂಥ 'ಬ್ರಹ್ಮಸೂತ್ರ'ವನ್ನು ಬರೆದು ಮುಗಿಸಿದ್ದು ಆಷಾಢ ಹುಣ್ಣಿಮೆಯಂದು. ವೇದವ್ಯಾಸರ ತಿಳಿವಳಿಕೆಯನ್ನು ವೇದಗಳ ರೂಪದಲ್ಲಿ ಬ್ರಹ್ಮಜ್ಞಾನವಾಗಿ ಗುರುತಿಸಲಾಗುತ್ತದೆ. ಅವರು ಆ ಕಾಲದಲ್ಲಿ ಚಲಾವಣೆಯಲ್ಲಿ ಇದ್ದಂತಹ ಸಂಪೂರ್ಣ ತಿಳಿವಳಿಕೆ ಅಥವಾ ಜ್ಞಾನವನ್ನು ವರ್ಗೀಕರಿಸಿ ಋಗ್ವೇದ, ಯಜುರ್‌ವೇದ, ಸಾಮವೇದ, ಅಥರ್ವವೇದ ಎಂದು ನಾಲ್ಕು ವೇದಗಳಲ್ಲಿ ಅದನ್ನು ಕ್ರಮಬದ್ಧವಾಗಿ ಜೋಡಿಸಿದ್ದಾರೆ. ಮಹರ್ಷಿ ವ್ಯಾಸರು ಸಮಾಜಕ್ಕಾಗಿ ಸ್ವಾಧ್ಯಾಯದ ಮೂಲದ್ರವ್ಯಗಳನ್ನು ಸೃಷ್ಟಿಸಿದ್ದಾರೆ. ವೇದದ ಅನೇಕ ಘಟಕಾಂಶಗಳ ವಿಶ್ಲೇಷಣೆಯನ್ನು ಮಂತ್ರಗಳು, ಬ್ರಾಹ್ಮಣಗಳು, ಅರಣ್ಯಕಗಳು, ಮತ್ತು ಉಪನಿಷತ್ತಿನ ರೂಪದಲ್ಲಿ ಸೃಷ್ಟಿಸಲಾಗಿದೆ. ಪ್ರಾಚೀನ ಜ್ಞಾನವನ್ನು ಹದಿನೆಂಟು ಪುರಾಣಗಳನ್ನು ಸಂಕಲಿಸಲಾಗಿದೆ. ಮಹರ್ಷಿ ವೇದವ್ಯಾಸರು ಮಹಾಭಾರತವನ್ನು ಕೂಡಾ ಬರೆದಿದ್ದಾರೆ.

ಮನುಷ್ಯರೆಲ್ಲರೂ ಸಮಾನರು, ಅವರೆಲ್ಲರೂ ಸಹಕಾರದಿಂದ ಒಟ್ಟಿಗೇ ಬಾಳಬೇಕು. ಒಬ್ಬರು ಇನ್ನೊಬ್ಬರೊಂದಿಗೆ ಸ್ನೇಹಪೂರ್ವಕವಾಗಿ ಮಾತನಾಡಿಕೊಳ್ಳಬೇಕು ಮತ್ತು ಬದುಕಿನಲ್ಲಿ ಸಮಾನ ರೀತಿಯ ಆದರ್ಶಗಳನ್ನು ಹೊಂದಿ ಜ್ಞಾನವನ್ನು ಸಂಪಾದಿಸಬೇಕೆಂದು ಋಗ್ವೇದ ತಿಳಿಸುತ್ತದೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಯು ಜ್ಞಾನವನ್ನು ಸಂಪಾದಿಸುವುದು ಮತ್ತು ಕೂಡಿ ಬಾಳುವುದನ್ನು ಕಲ್ಪಿಸಲಾಗಿದೆ (ಋಗ್ವೇದ:ಮಂಡಲ 10, ಸೂಕ್ತ 191, ಮಂತ್ರ 4). ಇನ್ನೂ ಮುಂದುವರಿದು ನಿಮ್ಮ ನಿರ್ಧಾರದಲ್ಲಿ, ಹೃದಯಗಳಲ್ಲಿ ಮತ್ತು ಮನಸ್ಸುಗಳಲ್ಲಿ ಏಕರೂಪತೆ ಇರುವುದು ಸಾಧ್ಯವೆಂದು ಸ್ಪಷ್ಟಪಡಿಸಲಾಗಿದೆ. ಎಲ್ಲರೂ ಪರಸ್ಪರ ಸಹಕಾರದಿಂದ ಬಾಳಬೇಕು. ವೇದಗಳಲ್ಲಿ ದೇವರು, ಮಾತಾಪಿತರು ಮತ್ತು ಶಿಕ್ಷಕರು ಕುರಿತಾದ ಶ್ರದ್ಧಾಪೂರ್ವಕ ಋಣಭಾರವನ್ನು (ಕರ್ತವ್ಯಗಳನ್ನು) ತಿಳಿಸಲಾಗಿದೆ. ಮಹರ್ಷಿ ವೇದವ್ಯಾಸರು ಬರೆದಂತಹ ಮಹಾಭಾರತದಲ್ಲಿ ಈ ಋಣವನ್ನು ಮತ್ತಷ್ಟು ವಿವರವಾಗಿ, ಸ್ಪಷ್ಟವಾಗಿ ತಿಳಿಸಲಾಗಿದೆ.

Digitised by Bharatavani, CIIL

ಮಹಾಭಾರತದ ಆದಿಪರ್ವದಲ್ಲಿ ಪ್ರಸ್ತುತಪಡಿಸಿರುವಂತೆ ವ್ಯಕ್ತಿಗಳು ಅವರ ದೇವರು (ದೇವ ಋಣ), ಮಾತಾಪಿತರು (ಪಿತೃಋಣ), ಶಿಕ್ಷಕರು (ಋಷಿ ಋಣ) ಮತ್ತು ಮನುಷ್ಯಕುಲ (ಮಾನವ ಋಣ) ದ ಋಣಗಳನ್ನು ತೀರಿಸಬೇಕು. ಋಷಿ ಋಣ ಅಥವಾ ಆಚಾರ್ಯ ಋಣವನ್ನು ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರದ ಮೂಲಕ ತೀರಿಸಬಹುದಾಗಿದೆ. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯು ಜ್ಞಾನದ ಅಧ್ಯಯನ ಮತ್ತು ಸಂಪಾದನೆಯನ್ನು ಮಾಡಬೇಕಾಗಿದೆ. ಈ ಜ್ಞಾನವನ್ನು ಮಾನವ ಕಲ್ಯಾಣಕ್ಕಾಗಿ ಬಳಸಬೇಕು ಮತ್ತು ಸಮಾಜದ ಸದಸ್ಯರಿಗೆ ಪ್ರಸಾರ ಮಾಡಬೇಕು ಮತ್ತು ಅದಕ್ಕೆ ಉಪಯುಕ್ತತೆಯನ್ನು ಸೇರಿಸಬೇಕು ಮತ್ತು ಸಮಾಜದ ಸದಸ್ಯರಿಗೆ ಪ್ರಸಾರ ಮಾಡಬೇಕು ಮತ್ತು ಅದಕ್ಕೆ ಉಪಯುಕ್ತತೆಯನ್ನು ಸೇರಿಸಬೇಕು. ವ್ಯಕ್ತಿಯು ತನ್ನ ಪೂರ್ವಜರಿಂದ ಜ್ಞಾನವನ್ನು ಪಡೆದಿರುತ್ತಾರೆ. ಗುರುವು ಈ ಜ್ಞಾನ ಅಥವಾ ತಿಳಿವಳಿಕೆಯನ್ನು ಉಳಿಸಿ, ಹೆಚ್ಚಿಸಿ, ವಿಸ್ತರಿಸಿ ಮುಂದಿನ ಜನಾಂಗಕ್ಕೆ ಸಾಗಿಸುತ್ತಾನೆ. ಈ ಕಾರ್ಯವಿಧಾನವು ಈಗಲೂ ಮುಂದುವರಿಯುತ್ತಿದೆ.

ತೈತ್ತರೇಯ ಉಪನಿಷತ್ತಿನ ಶಿಕ್ಷಾವಳಿಯಲ್ಲಿ ಹೇಳಿರುವಂತೆ ವಿದ್ಯಾರ್ಥಿಯು ಗುರುವನ್ನು ದೇವರಿಗೆ ಸಮಾನವಾಗಿ ಗೌರವಿಸಬೇಕು. ಗುರುವು ಸೃಷ್ಟಿಕರ್ತ (ಬ್ರಹ್ಮ) ಮತ್ತು ಪಾಲಕ (ವಿಷ್ಣು) ನಾಗಿದ್ದಾನೆ. ಅವನು ಕಲ್ಯಾಣ (ಶಿವ) ಮತ್ತು ಪಾಲನೆ (ಪರಮ ಬ್ರಹ್ಮ) ಯನ್ನು ಮಾಡತಕ್ಕಂತಹವನು. ಶ್ರೇಷ್ಠ ಲೇಖಕ, ದಿವ್ಯಜ್ಞಾನಿ, ತತ್ವಜ್ಞಾನಿ, ಮತ್ತು ಗುರುವಿಗೆ ಗೌರವದ ಸಲ್ಲಿಕೆಯಾಗಿ ಸಮಾಜವು ಹುಣ್ಣಿಮೆಯಂದು ಶಿಕ್ಷಕರ ದಿನವನ್ನು ಆಚರಿಸುತ್ತಿದೆ.

ಭಾರತೀಯ ಸಾಹಿತ್ಯವು ಗುರುಗಳ ಬಣ್ಣನೆಯಿಂದ ತುಂಬಿಹೋಗಿದೆ. ಭಕ್ತಿ ಚಳವಳಿಯ ಕವಿಗಳು ತಮ್ಮ ಗುರುಗಳ ವಂದನೆಯನ್ನು ಯಾವಾಗಲೂ ಮಾಡಿರುವುದುಂಟು. ಅವರು ತಮ್ಮ ಗುರುಗಳ ಪಾದಗಳನ್ನು ಪೂಜಿಸಿ, ಅದನ್ನು ತಮ್ಮ ಸ್ಫೂರ್ತಿಯ ಮೂಲಕ್ಕೆ ಹೋಲಿಸಿದ್ದಾರೆ. ತಮ್ಮ ಬದುಕಿನಲ್ಲಿ ಗುರುವಿನ ಕೊಡುಗೆಯನ್ನು ಸ್ಮರಿಸಿದ್ದಾರೆ. ಪ್ರಸಿದ್ಧ ಸೂಫಿ ಸಂತ ಕಬೀರರು ಗುರುವಿನ ಪ್ರಾಮುಖ್ಯತೆ ಮತ್ತು ಮೌಲ್ಯವನ್ನು ಎತ್ತಿಹಿಡಿದಿದ್ದಾರೆ. ದೇವರು ಮತ್ತು ಗುರುವಿನ ಹೋಲಿಕೆಯಲ್ಲಿ, ತಮ್ಮನ್ನು ದೇವರೆಡೆಗೆ ಕೊಂಡೊಯ್ದ ಗುರುವಿಗಾಗಿ ತಾನು ಎಲ್ಲವನ್ನು ತ್ಯಾಗ ಮಾಡಲು ಸಿದ್ಧನಿದೇನೆ ಎಂದು ಕಬೀರರು ಹೇಳಿದ್ದಾರೆ. ಶಿಕ್ಷಣವು ವಿದ್ಯಾರ್ಥಿಗಳ ನಡತೆಯನ್ನು ರೂಪಿಸಬೇಕು. ನಡತೆಯ ರೂಪಣೆಯಲ್ಲಿ ಗುರುಗಳು ಮುಖ್ಯ ಪಾತ್ರವನ್ನು ನಿರ್ವಹಿಸುತ್ತಾರೆ. ಕಲ್ಯಾಣ ಸಮಾಜದ ಉತ್ಪಾದಕ ಸದಸ್ಯರಾಗಲು ಅಗತ್ಯವಿರುವ ಮೌಲ್ಯಗಳನ್ನು ಅವರು ಪ್ರೋತ್ಸಾಹಿಸುತ್ತಾರೆ. ಅವರು ಕೌಶಲ್ಯ ಮತ್ತು ಯೋಗ್ಯತೆಯನ್ನು ಅಭಿವೃದ್ಧಿಪಡಿಸುವ ಪಥವನ್ನು ತೋರಿಸಿಕೊಡುತ್ತಾರೆ. ವಿದ್ಯಾರ್ಥಿಗಳು (ಶಿಷ್ಯರು) ತಮ್ಮ ಬದುಕಿನಲ್ಲಿ ಗುರುವಿನ ಪಾತ್ರವನ್ನು ಗುರುತಿಸಿಕೊಳ್ಳಬೇಕು.

**ಶಿಕ್ಷಕರ ದಿನದ ಆಚರಣೆಗಳು:**

ಪ್ರಾಥಮಿಕ, ಮಾಧ್ಯಮಿಕ, ಮತ್ತು ಹಿರಿಯ ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಗಮನಾರ್ಹ ಶಿಕ್ಷಕರ ಅಧಿಕ ಗುಣಮಟ್ಟದ ಸೇವೆಗಳನ್ನು ಗುರುತಿಸಿ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡುವ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಕಾರ್ಯಯೋಜನೆಯನ್ನು 1958–59ರಲ್ಲಿ ಪ್ರಾರಂಭಿಸಲಾಗಿದೆ. ಶಿಕ್ಷಕರ ಸೇವೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವುದರ ಮೂಲಕ ಶಿಕ್ಷಕ ವೃತ್ತಿಯ ಘನತೆ ಮತ್ತು ಮಟ್ಟವನ್ನು ಎತ್ತರಿಸಿಕೊಳ್ಳುವುದು ಸಾಧ್ಯವಾಗಿದೆ ಎಂದು ತಿಳಿಸಲಾಗಿದೆ. ರಾಷ್ಟ್ರಪ್ರಶಸ್ತಿಗೆ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳುವಾಗ ಗಮನದಲ್ಲಿ ಇಟ್ಟುಕೊಳ್ಳಲಾಗುವ ಅಂಶಗಳೆಂದರೆ; ಸ್ಥಳೀಯ ಸಮುದಾಯದಲ್ಲಿ ಅವರು ಹೊಂದಿರತಕ್ಕಂತಹ ಪ್ರತಿಷ್ಠೆ, ಗೌರವಗಳು, ಅವರ ಶೈಕ್ಷಣಿಕ ಅರ್ಹತೆ, ಮತ್ತು ಅದರ ಸುಧಾರಣೆಯ ಕುರಿತಾದ ಬಯಕೆ, ಮಕ್ಕಳ ಕುರಿತಾದ ಅಪ್ಪಟ ಆಸಕ್ತಿ ಮತ್ತು ಪ್ರೀತಿ, ಮತ್ತು ಸಮುದಾಯದ ಸಾಮಾಜಿಕ ಜೀವನದಲ್ಲಿ ಅವರ ತೊಡಗಿಸಿಕೊಳ್ಳುವಿಕೆ. ಶಿಕ್ಷಕರ ದಿನದಂದು ಹದಿನೈದು ವರ್ಷಗಳ ನಿಯಮಿತ ಬೋಧನಾ ಅನುಭವವಿರುವ ಮುಖ್ಯ ಶಿಕ್ಷಕರಿಗೆ ಪ್ರಶಸ್ತಿಯನ್ನು ನೀಡಲಾಗುತ್ತದೆ. ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಶಾಲೆಗಳು, ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು, ಅಣುಶಕ್ತಿ ಶೈಕ್ಷಣಿಕ ಸಂಘ, ಸೈನಿಕ್ ಶಾಲೆಗಳು, ಸಂಸ್ಕೃತ, ಅರೇಬಿಕ್ ಅಥವಾ ಪರ್ಶಿಯನ್ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ಮತ್ತು ಮುಖ್ಯ ಶಿಕ್ಷಕರನ್ನು ರಾಷ್ಟ್ರಮಟ್ಟದಲ್ಲಿ ಆಯ್ಕೆ ಮಾಡಲಾಗುತ್ತದೆ. ಇದೇ ರೀತಿ ಭಾರತೀಯ ಶಾಲಾ ಪ್ರಮಾಣಪತ್ರ ಮಂಡಳಿ(ಐಸಿಎಸ್‌ಇ) ನೋಂದಾಯಿಸಲ್ಪಟ್ಟ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರು ಮತ್ತು ಮುಖ್ಯಶಿಕ್ಷಕರನ್ನು ಕೂಡಾ ಶಿಕ್ಷಕರ ದಿನದ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಪ್ರೌಢಶಿಕ್ಷಣದ ಕೇಂದ್ರ ಮಂಡಳಿ (ಸಿಬಿಎಸ್‌ಇ) ಕೂಡಾ ಉತ್ತರ, ದಕ್ಷಿಣ, ಪೂರ್ವ, ಮತ್ತು ಈಶಾನ್ಯ ವಲಯಗಳ ನೋಂದಾಯಿತ ಶಾಲೆಗಳ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರನ್ನು ಶಿಕ್ಷಕರ ದಿನದ ಪ್ರಶಸ್ತಿಗಾಗಿ ಶಿಫಾರಸ್ಸು ಮಾಡುತ್ತದೆ. ನಿಯಮಿತ ಶಾಲೆಗಳಲ್ಲಿ ಅಂಗವಿಕಲ ಮಕ್ಕಳಿಗಾಗಿ ಸಮಗ್ರ ಮತ್ತು ಆದ್ಯಂತ ಶಿಕ್ಷಣವನ್ನು ಪ್ರೋತ್ಸಾಹಿಸುವ ಶಿಕ್ಷಕರನ್ನು ಕೂಡಾ ರಾಷ್ಟ್ರಮಟ್ಟದ ಗುರುತಿಸುವಿಕೆಗಾಗಿ ಪರಿಗಣಿಸಲಾಗುತ್ತದೆ. ನಿಯಮಿತ ಶಾಲೆಗಳಲ್ಲಿ ಕೆಲಸ ಮಾಡುವ ಅಂಗವಿಕಲ ಶಿಕ್ಷಕರು, ಮತ್ತು ವಿಶೇಷ ಶಿಕ್ಷಕರು ಅಥವಾ ಆದ್ಯಂತ ಶಿಕ್ಷಣಕ್ಕಾಗಿ ಅಸಾಧಾರಣ ಕೆಲಸ ಮಾಡಿರುವಂತಹ ತರಬೇತಿ ಹೊಂದಿರುವ ನಿಯಮಿತ ಶಿಕ್ಷಕರು, ಇವರುಗಳಿಗೆ ಕೂಡಾ ಶಿಕ್ಷಕರ ದಿನಾಚರಣೆಯಿಂದ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಶಿಕ್ಷಕರ ದಿನದ ಪ್ರಶಸ್ತಿ ಪುರಸ್ಕೃತರ ಆಯ್ಕೆಯ ವ್ಯವಸ್ಥಿತ, ಸ್ತರೀಕೃತ ಮತ್ತು ಕಠಿಣವಾದ ಆಯ್ಕೆ ಕಾರ್ಯವಿಧಾನವನ್ನು ಆಧರಿಸಿ ಇರುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳುವಾಗ, ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕತೆಯನ್ನು ಸಾಧಿಸುವ ನಿಟ್ಟಿನಲ್ಲಿ ನೊಂದಾವಣೆಯನ್ನು ಹೆಚ್ಚಿಸುವುದಕ್ಕಾಗಿ

Digitised by Bharatavani, CIIL

ಕೈಗೊಂಡ ನಿರ್ದಿಷ್ಟ ಕ್ರಮಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಥಮಿಕ ಶಾಲಾ ಶಿಕ್ಷಕರನ್ನು ಗುರುತಿಸಲಾಗುತ್ತದೆ. ಪ್ರೌಢಶಾಲಾ ಶಿಕ್ಷಕರನ್ನು ಪರಿಗಣಿಸುವಾಗ ಮಂಡಳಿ ಪರೀಕ್ಷೆಯ ಫಲಿತಾಂಶಗಳನ್ನು ಪರಿಗಣಿಸಲಾಗುತ್ತದೆ. ಶಿಕ್ಷಕರ ಕೊಡುಗೆಯನ್ನು ತೀರ್ಮಾನಿಸುವಾಗ ಶಾಲೆಯ ಭೌತಿಕ ಬೆಳವಣಿಗೆಗಾಗಿ ಚಲಾವಣೆಗೆ ತರತಕ್ಕಂತಹ ಗುಣಾತ್ಮಕ ಸಾಮುದಾಯಿಕ ಸಂಪನ್ಮೂಲಗಳನ್ನು ಕೂಡಾ ಆಧರಿಸಲಾಗುತ್ತದೆ. ಶಿಕ್ಷಕರಿಂದ ಮಕ್ಕಳಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಪ್ರೋತ್ಸಾಹಿಸುವುದನ್ನು ನಿರೀಕ್ಷಿಸಲಾಗುತ್ತದೆ. ರಾಷ್ಟ್ರೀಯ ಮಟ್ಟದ ಗುರುತಿಸುವಿಕೆಯಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಕೈಕೊಂಡ ನಿರ್ದಿಷ್ಟ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಸಮೂಹ ಮಾಧ್ಯಮ, ವಿಶೇಷ ಮತ್ತು ದುರ್ಬಲ ವಿದ್ಯಾರ್ಥಿಗಳಿಗಾಗಿ ನೀಡತಕ್ಕಂತಹ ವಿಶೇಷ ಗಮನವನ್ನೊಳಗೊಂಡ ಬೋಧನಾ ಕ್ರಮಗಳ ಬಳಕೆಯನ್ನು ಕೂಡಾ ಪರಿಗಣಿಸಲಾಗುತ್ತದೆ. ಮಕ್ಕಳ ಬೋಧನೆಯಲ್ಲಿ ವಿಶೇಷ ಪ್ರಭಾವ ಬೀರುವುದಕ್ಕಾಗಿ ನಾವೀನ್ಯವುಂಟು ಮಾಡುವ, ಹೊಸತನ ತರುವ ಪ್ರಾಯೋಗಿಕತೆಯನ್ನು ಪ್ರೋತ್ಸಾಯಿಸುವಿಕೆಯ ಪ್ರಶಸ್ತಿಗಾಗಿ ಇರತಕ್ಕಂತಹ ಒಂದು ಘಟಕವಾಗಿದೆ.

ರಾಜ್ಯಮಟ್ಟದಲ್ಲಿ, ರಾಜ್ಯವು ನಗದು ಮತ್ತು ಯೋಗ್ಯತಾಪತ್ರಗಳ ರೂಪದಲ್ಲಿ ಶಿಕ್ಷಕರಿಗೆ ಪ್ರಶಸ್ತಿಯನ್ನು ನೀಡುತ್ತದೆ. ಇದೇ ಕ್ರಮಗಳನ್ನು ಜಿಲ್ಲೆ ಮತ್ತು ವಿಭಾಗಗಳ ಮಟ್ಟದಲ್ಲಿ ಕೂಡಾ ಅನುಸರಿಸಲಾಗುತ್ತದೆ. ನಗರ ನಿಗಮ, ನಗರ ಸಭೆ, ನಗರಪಾಲಿಕೆ ಮೊದಲಾದ ಸ್ವಾಯತ್ತ ಸಂಸ್ಥೆಗಳು ಕೂಡಾ ಶಿಕ್ಷಕರನ್ನು ಗೌರವಿಸುವುದರ ಮೂಲಕ ಶಿಕ್ಷಕರ ದಿನವನ್ನು ಆಚರಿಸುತ್ತವೆ.

ನಮ್ಮ ದೇಶದಲ್ಲಿ ಖಾಸಗಿ ಆಡಳಿತ ಸಮಿತಿಗಳು ಅಪಾರ ಸಂಖ್ಯೆಯ ಶಾಲೆಗಳನ್ನು ನಡೆಸುತ್ತಿವೆ. ಈ ಶಾಲೆಗಳ ಆಡಳಿತ ಸಮಿತಿಗಳು ಕೂಡಾ ಶಿಕ್ಷಕರ ದಿನವನ್ನು ಆಚರಿಸುತ್ತವೆ. ತಮ್ಮ ನಿಯಂತ್ರಣದಲ್ಲಿರುವ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಸೇವೆಗಳನ್ನು ಗುರುತಿಸುವುದಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಉದಾಹರಣೆಗೆ "ಡಿಎವಿ" ಶಾಲಾ ಆಡಳಿತವು ತನ್ನ ಶಾಲೆಯ ಶಿಕ್ಷಕರನ್ನು ಸನ್ಮಾನಿಸಿ ಅಭಿನಂದಿಸುತ್ತದೆ.

ಶಿಕ್ಷಕರ ಸಂಘಗಳು ಶಿಕ್ಷಕರ ದಿನದ ಆಚಾರಣೆಗಳಲ್ಲಿ ಕ್ರಿಯಾಶೀಲವಾಗಿ ಪಾಲುಗೊಳ್ಳುತ್ತವೆ. ಬಹುತೇಕ ಶಿಕ್ಷಕರ ಸಂಘಗಳು ಅವುಗಳ ಸದಸ್ಯರ ಮಟ್ಟದಿಂದ ಪರಿಗಣಿಸಲ್ಪಡುತ್ತವೆ. ಈ ಸಂಘಗಳು ಬೋಧನೆಯ ವೃತ್ತಿ ಪರಿಗಣನೆ, ಸೇವಾ ಸ್ಥಿತಿಗತಿಗಳ ಸುಧಾರಣೆ, ಭೌತಿಕ ಸ್ಥಿತಿಗತಿಗಳ ಸುಧಾರಣೆ, ಸೌಲಭ್ಯಗಳು ಮತ್ತು ಆರ್ಥಿಕ ಲಾಭಗಳಿಗಾಗಿ ಕಾರ್ಯನಿರ್ವಹಿಸುತ್ತವೆ. ಈ ಸಂಘಗಳು ಅಧಿವೇಶನ ಮತ್ತು ವಿಚಾರಸಂಕಿರಣಗಳಂತಹ ವೃತ್ತಿಪರ ಚಟುವಟಿಕೆಗಳನ್ನು ಕೂಡಾ ನಡೆಸುತ್ತವೆ. ಶಿಕ್ಷಕರ ದಿನದಂದು ಶಿಕ್ಷಣದ ಗುಣಮಟ್ಟಗಳಂತಹ ವಿಚಾರಗಳ ಚರ್ಚೆಗಳಾಗಿ ವಿಚಾರಸಂಕಿರಣಗಳನ್ನು ಆಯೋಜಿಸಲಾಗುತ್ತದೆ. ಶಿಕ್ಷಕರ ಸ್ಥಾನಮಾನ, ಮಟ್ಟ ಮತ್ತು ಸಮಸ್ಯೆಗಳ ಕುರಿತು ಸಮಾಜದ ಮತ್ತು ರಾಜ್ಯದ ಗಮನವನ್ನು ಸೆಳೆಯುವುದಕ್ಕಾಗಿ ಈ ಸಂದರ್ಭವನ್ನು ಬಳಸಲಾಗುತ್ತದೆ.

ಶಿಕ್ಷಕರ ದಿನದ ಆಚರಣೆಯಲ್ಲಿ ಶಾಲೆಗಳು ಅನುಸರಿಸುವ ಕೆಲವು ಪದ್ಧತಿಗಳನ್ನು ಈ ಕೆಳಗೆ ನೀಡಲಾಗಿದೆ :

1. ಶಿಕ್ಷಕರನ್ನು ಅವರ ಗೌರವಾರ್ಥವಾಗಿ ಪ್ರಸಿದ್ಧ ಮತ್ತು ಘನತೆಯ ಸ್ಥಳಗಳಲ್ಲಿ, ಉಪಹಾರ ಗೃಹಗಳಲ್ಲಿ ಅಥವಾ ವಿಹಾರಸಂಘಗಳಲ್ಲಿ (ಕ್ಲಬ್‌ಗಳಲ್ಲಿ) ನಡೆಸುವ ಭೋಜನಕ್ಕೆ ಆಹ್ವಾನಿಸುವುದು.
2. ಸಮಾಜದ ಸದಸ್ಯರ ಸೇವೆಗಾಗಿ ಉಚಿತ ವೈದ್ಯಕೀಯ ಶಿಬಿರಗಳನ್ನು ಸಂಘಟಿಸುವುದು. ಈ ಶಿಬಿರಗಳಲ್ಲಿ ವಿಶೇಷವಾಗಿ ಶಿಕ್ಷಕರ ಕುಟುಂಬದ ಸದಸ್ಯರನ್ನು ಆಹ್ವಾನಿಸುವುದು.
3. ಮರಗಳ ಬೆಳೆಸುವಿಕೆಯ ಚಳವಳಿಯಯನ್ನು ಸಂಘಟಿಸುವುದು. ಶಾಲೆಯ ಆವರಣದಲ್ಲಿ ಮತ್ತು ಅದರ ಸುತ್ತಮುತ್ತ ಮರಗಳನ್ನು ಬೆಳೆಸುವುದು.
4. ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.
5. ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ಕಾಳಜಿಗಳನ್ನು ಚರ್ಚಿಸಲು ಶಿಕ್ಷಕರು ಸಮಾಜದ ಸದಸ್ಯರೊಂದಿಗೆ ಸಾರ್ವಜನಿಕ ಸಭೆಯನ್ನು ಸಂಘಟಿಸುವುದು.
6. ಭಾರತ ಮಾಜಿ ಅಧ್ಯಕ್ಷರಾದ ಡಾ. ರಾಧಾಕೃಷ್ಣನ್ ಅವರು ತೋರಿಸಿದ ಮಾರ್ಗವನ್ನು ಅನುಸರಿಸುವಂತೆ ವಿದ್ಯಾರ್ಥಿಗಳಿಗೆ ಉಪದೇಶ ನೀಡುವುದು.
7. ಭಾರತೀಯ ಸಂಪ್ರದಾಯದಂತೆ ಅಂಗವಸ್ತ್ರ(ಶಾಲು), ಶ್ರೀಫಲ (ತೆಂಗಿನಕಾಯಿ) ಮತ್ತು ಹೂಮಾಲೆಗಳೊಂದಿಗೆ ಶಿಕ್ಷಕರನ್ನು ಸನ್ಮಾನಿಸುವುದು.
8. ಶಿಕ್ಷಕರಿಗೆ ನಗದು, ಉಡುಗೊರೆಗಳು ಮತ್ತು ಪ್ರಶಂಸಾಪತ್ರಗಳನ್ನು ನೀಡಲಾಗುವುದು. ಅವರ ಕೊಡುಗೆಯನ್ನು ನೆನಪಿಸಿಕೊಳ್ಳುವುದು.
9. ಶಿಕ್ಷಕರ ಅನುಭವವನ್ನು ನೇರವಾಗಿ ಪಡೆಯಲು ವಿದ್ಯಾರ್ಥಿಗಳು ಶಿಕ್ಷಕರಂತೆ ನಟಿಸುವುದು.

ಹೀಗೆ ಶಿಕ್ಷಕರ ದಿನವನ್ನು ಶಾಲೆಯಲ್ಲಿ ಆಚರಿಸಲು ಅನೇಕ ಕಾರ್ಯವಿಧಾನಗಳನ್ನು ಅನುಸರಿಸಲಾಗುತ್ತದೆ. ಪ್ರತಿಯೊಂದು ಶಾಲೆಯು ಶಿಕ್ಷಕರ ಗೌರವಾರ್ಥವಾಗಿ ತನ್ನದೇ ಆದ ಸ್ವಂತ ಪ್ರಯತ್ನಗಳನ್ನು ಮತ್ತು ವಿನ್ಯಾಸಗಳನ್ನು ರೂಪಿಸುತ್ತದೆ. ಸಾಮಾನ್ಯವಾಗಿ ಆ ದಿನ ಶಾಲೆಯನ್ನು ವಿದ್ಯಾರ್ಥಿಗಳ ವಶಕ್ಕೆ ಒಪ್ಪಿಸಲಾಗುತ್ತದೆ. ಓರ್ವ ವಿದ್ಯಾರ್ಥಿ ಶಾಲೆಯ ಮುಖ್ಯಸ್ಥ ಅಥವಾ ಪ್ರಾಂಶುಪಾಲನಾಗಿ ನಟಿಸುತ್ತಾನೆ. ಹಿರಿಯ ತರಗತಿಗಳ ವಿದ್ಯಾರ್ಥಿಗಳು ಶಿಕ್ಷಕರ ಪಾತ್ರವನ್ನು ನಿರ್ವಹಿಸಿ ತಮ್ಮ ಶಿಕ್ಷಕರಿಗೆ ಅವರ ದೈನಂದಿನ

Digitised by Bharatavani, CIIL

ಪಾಠಪ್ರವಚನಗಳಿಂದ ಮುಕ್ತಗೊಳಿಸುತ್ತಾರೆ. ಮುಂಜಾನೆಯ ಸಭೆಯ ಪ್ರಾರ್ಥನೆಯೊಂದಿಗೆ ಶಾಲೆಯ ದಿನ ಪ್ರಾರಂಭಗೊಳ್ಳುತ್ತದೆ. ಬೆಳಗಿನ ಸಭೆಯನ್ನು ನಡೆಸುವ ಮತ್ತು ಸಂಘಟಿಸುವ ಇಡೀ ಜವಾಬ್ದಾರಿಯನ್ನು ವಿದ್ಯಾರ್ಥಿಗಳು ನಿರ್ವಹಿಸುತ್ತಾರೆ. ಎಂದಿನಂತೆ ತರಗತಿಗಳನ್ನು ನಡೆಸಲಾಗುತ್ತದೆ. ಶಾಲೆಯ ವಿದ್ಯಾರ್ಥಿಯಾಗಿರುವ ದೈಹಿಕ ಶಿಕ್ಷಣದ ಶಿಕ್ಷಕರು ಆಟೋಟಗಳನ್ನು ಸಂಘಟಿಸುತ್ತಾರೆ. ಶಿಕ್ಷಕರ ಗೌರವಾರ್ಥವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಇದರಲ್ಲಿ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ನೋಟವನ್ನು ಪ್ರಸ್ತುತಪಡಿಸಲಾಗುತ್ತದೆ. ಕವನಗಳು, ದೋಹಾಗಳು ಇತ್ಯಾದಿಗಳ ಗಾಯನದ ಮೂಲಕವೂ ವಿದ್ಯಾರ್ಥಿಗಳು ಶಿಕ್ಷಕರ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತಾರೆ. ಅವರು ಶಿಸ್ತಿನಿಂದ ಕೂಡಿದವರಾಗಿಯೂ ಮತ್ತು ಶಿಕ್ಷಕರಿಗೆ ನಮ್ರರೀತಿಯಿಂದ ನಡೆದುಕೊಳ್ಳುವ ವಚನವನ್ನು ನೀಡುತ್ತಾರೆ.

ಭಾರತೀಯ ಶೈಲಿಯಲ್ಲಿ ಸೀರೆಯುಟ್ಟ ಹುಡುಗಿ ಅಥವಾ ಸೂಟ್ ಧರಿಸಿದ ಹುಡುಗನು ಸಮವಸ್ತ್ರ ಧರಿಸಿದ ವಿದ್ಯಾರ್ಥಿಗಳ ನಡುವೆ ಭಿನ್ನವಾಗಿ ಕಾಣುತ್ತಾರೆ. ಈ ಸಂದರ್ಭವು ವಿದ್ಯಾರ್ಥಿಗಳಿಗೆ ಶಿಕ್ಷಕರ ವೃತ್ತಿಯ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವ ಅವಕಾಶವನ್ನು ಕೂಡಾ ಒದಗಿಸಿಕೊಡುತ್ತದೆ. ಸಾಮಾಜಿಕ ಕಾರ್ಯಕ್ರಮವು ಶಾಲೆಯಲ್ಲಿ ಸಹಕಾರದ ವಾತಾವರಣವೊಂದನ್ನು ಸೃಷ್ಟಿಸುತ್ತದೆ. ಶಿಕ್ಷಕರ ಕಾಲಿಗೆ ವಂದಿಸುವುದರ ಮೂಲಕ ಮತ್ತು ಅವರ ಕೈಕುಲುಕುವುದರ ಮೂಲಕ ವಿದ್ಯಾರ್ಥಿಗಳು ಅವರ ಆಶೀರ್ವಾದವನ್ನು ಪಡೆಯುತ್ತಾರೆ. ಶಾಲೆಯು ಮುಕ್ತಮನೆಯಾಗಿ ಪರಿವರ್ತನೆ ಹೊಂದುತ್ತದೆ. ವಿದ್ಯಾರ್ಥಿಗಳು ಶಿಕ್ಷಕರನ್ನು ಮುಕ್ತವಾಗಿ ಭೇಟಿಯಾಗುವುದಕ್ಕೆ ಮತ್ತ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಸ್ವತಂತ್ರರಾಗಿದ್ದಾರೆ.

ಶಾಲೆಯಲ್ಲಿ ಕೆಲವು ಮಕ್ಕಳು ತುಂಟರಾಗಿ ಇರುತ್ತಾರೆ. ಅವರಿಗೆ ಈ ದಿನವು ಆತ್ಮನಿರೀಕ್ಷೆಗೆ ಅವಕಾಶವನ್ನು ಒದಗಿಸುತ್ತದೆ. ತಮ್ಮ ಸ್ನೇಹಿತರನ್ನು ಶಿಕ್ಷಕರಾಗಿ ಕಾಣುವಾಗ ಅವರಿಗೆ ಶಿಕ್ಷಕನು ಎದುರಿಸುವ ತೊಂದರೆಗಳ ಅರಿವು ಉಂಟಾಗುತ್ತದೆ. ಅವರು ಸರಿಯಾದ ಕ್ರಮದಲ್ಲಿ ನಡೆದುಕೊಳ್ಳುವ ವಿಧಾನವನ್ನು ಅರ್ಥಮಾಡಿಕೊಂಡು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಅಂತಹ ವಿದ್ಯಾರ್ಥಿಗಳು ಶಿಕ್ಷಕರನ್ನು ಭೇಟಿಯಾಗಿ ತಾವು ನಡೆಸಿದ ತಪ್ಪುಗಳ ಕುರಿತು ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಬೇರೆಯವರಿಗೆ ತೊಂದರೆ ನೀಡದೆ ತಾವು ಗೌರವಪೂರ್ವಕವಾಗಿ ವರ್ತಿಸುವುದಾಗಿ ಮಾತು ನೀಡುತ್ತಾರೆ.

**ಜಾಗತಿಕ ಶಿಕ್ಷಕರ ದಿನ:**

ಜಾಗತಿಕ ಶಿಕ್ಷಕರ ದಿನವನ್ನು ಕೂಡಾ ಆಚರಿಸಲಾಗುತ್ತದೆ. ಪ್ರಥಮ ಜಾಗತಿಕ ಶಿಕ್ಷಕರ ದಿನವನ್ನು 5 ಅಕ್ಟೋಬರ್, 1994ರಲ್ಲಿ ಆಚರಿಸಲಾಗಿದೆ. ಜಾಗತಿಕ ಶಿಕ್ಷಕರ ದಿನದ ಆಚರಣೆಯ ಶಿಫಾರಸ್ಸನ್ನು 1966ರ ವಿಶೇಷ ಆಂತರಿಕ ಸರಕಾರಿ ಅಧಿವೇಶನದಲ್ಲಿ ಅಳವಡಿಸಲಾಗಿತ್ತು. ಶಿಕ್ಷಕರ ಮಟ್ಟದ ಶಿಫಾರಸ್ಸಿನ ಅನ್ವಯತೆಯ ಕುರಿತಾದ ತಜ್ಞರ ಸಮಿತಿಯು (ಸಿಇಎಆರ್‌ಟಿ) ಜುಲೈ 1994ರಲ್ಲಿ 1966ರ ಶಿಫಾರಸ್ಸಿನ ಪ್ರಸ್ತುತತೆಯನ್ನು ಗ್ರಹಿಸಿತು. ಶಿಕ್ಷಕರ ಕೇಂದ್ರ ಪಾತ್ರವನ್ನು ಗುರುತಿಸುವುದು ಶಿಕ್ಷಕರ ದಿನದ ಉದ್ದೇಶವಾಗಿದೆ. ಶಿಕ್ಷಕರ ಶಿಕ್ಷಣದ ಗುಣಮಟ್ಟ, ವೇತನ ಮತ್ತು ಕೆಲಸದ ಸ್ಥಿತಿಗತಿಗಳು ಇವುಗಳ ಕುರಿತು ಸಮಾಜವು ಹೆಚ್ಚು ಹೆಚ್ಚು ಕಾಳಜಿಯನ್ನು ಹೊಂದಿದೆ ಎನ್ನುವುದನ್ನು ಸಿಇಎಆರ್‌ಟಿಯು ಗಮನಿಸಿದೆ. ಶಿಕ್ಷಕರು ನಿರ್ಣಯ ತೆಗೆದುಕೊಳ್ಳುವ ಕಾರ್ಯವಿಧಾನದಲ್ಲಿ ಭಾಗವಹಿಸಬೇಕು. ಪ್ರಜಾತಂತ್ರವು ಬೋಧನೆಯ ಸುಧಾರಣೆ ಮತ್ತು ಬೋಧಕರ ಮಟ್ಟದ ಸುಧಾರಣೆಯನ್ನು ಆಧರಿಸಿಕೊಂಡಿದೆ ಎಂಬುದನ್ನು ಸಮಿತಿ ಮನಗಂಡಿದೆ.

ಹೀಗೆ ಶಿಕ್ಷಕರನ್ನು ಪೂಜ್ಯಭಾವನೆಯಿಂದ ಕಾಣುವ ಪ್ರಾಚೀನ ಪದ್ಧತಿಯು ಸ್ವತಂತ್ರ ಭಾರತದಲ್ಲಿ ಶಿಕ್ಷಕರ ದಿನದ ರೂಪದಲ್ಲಿ ಚಲಾವಣೆಗೆ ಬಂದಿದೆ. ಅಂತಾರಾಷ್ಟ್ರೀಯ ಸಮಿತಿಯು ಶಿಕ್ಷಕರ ಮತ್ತು ಜಾಗತಿಕ ಶಿಕ್ಷಕರ ದಿನಾಚರಣೆಯ ಪ್ರಾಮುಖ್ಯತೆಯನ್ನು ಕಂಡುಕೊಂಡಿದೆ.

**ಮೂಲ: ಕೆ.ಎಂ. ಗುಪ್ತಾ**
**ಅನು: ಡಾ. ಗೀತಾ ಶೆಣೈ**

## ಶಿಕ್ಷಕರ ಪಾತ್ರ

**ಬದಲಾಗುತ್ತಿರುವ ಗ್ರಹಿಕೆಗಳು:** ಬೋಧನಾ ವೃತ್ತಿಗೆ ಬಹು ಚೈತನ್ಯಶಾಲಿಯಾಗಿರುವ ಮತ್ತು ಸವಾಲಾಗಿ ಪರಿಣಮಿಸಿರುವ ಅವಧಿಯ ಮೂಲಕ ನಾವು ಈಗ ಮುಂದುವರಿಯುತ್ತಿದ್ದೇವೆ. ಸುಲ್ತಾನಾ (2001) ಅವರು ಸೂಚಿಸಿರುವುದೇನೆಂದರೆ,

"ಒಂದು ಹಂತದಲ್ಲಿ ಎಲ್ಲಾ ಕಡೆಗಳಲ್ಲಿ ಶಿಕ್ಷಕರ ಹೆಚ್ಚಿನ ಹೊರೆಗೆ ಕಾರಣವಾಗಿರುವುದು ಸಾಮಾಜಿಕ ಬದಲಾವಣೆ ಮತ್ತು ಕೌಟುಂಬಿಕ ಪರಿವರ್ತನೆ. ಶಿಕ್ಷಕರು ತರಗತಿಗಳಲ್ಲಿ ಬೋಧಕರಾಗಿ ಇರುವುದು ಮಾತ್ರವಲ್ಲ, ಅವರು, ಹೆತ್ತವರು, ಸಮಾಲೋಚಕರು, ಶೂಶ್ರೂಷಕರು, ಹಾಗೂ ಪೋಲೀಸರು ಕೂಡಾ ಆಗಬೇಕಾಗಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಅವರು ತಮ್ಮ ಕೌಶಲಗಳನ್ನು ನಿಜವಾಗಿಯೂ ಧೈರ್ಯಗೆಡಿಸುವ ಹಂತದವರೆಗೆ ವಿಸ್ತರಿಸಿಕೊಳ್ಳಬೇಕಾಗಿ ಬಂದಿದೆ. ತಮ್ಮನ್ನು 'ಸಬಲೀಕರಣ'ಗೊಳಿಸವ ಹಾದಿಯಲ್ಲಿ ಬೋಧನಾ ಸಾಮಗ್ರಿಗಳ ಆಯ್ಕೆ ಮತ್ತು ಅಭಿವೃದ್ಧಿ, ಶಾಲಾ ಅಭಿವೃದ್ಧಿ ನಕ್ಷೆಗೆ ಸ್ಪಷ್ಟತೆ ಬರುವಂತಹ ಕೊಡುಗೆ ನೀಡುವಿಕೆ ಮತ್ತು ಹೆತ್ತವರು ಮತ್ತು ಸಮುದಾಯದೊಂದಿಗೆ ಸಹಭಾಗಿತ್ವದ ರೂಪಣೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಇದರಿಂದ ಅವರ ಬೋಧನೆಯು ವೈವಿಧ್ಯತೆಯನ್ನು ಹೊಂದಿ, ಅದು ವಿಭಿನ್ನ ಕಲಿಕಾ ಶೈಲಿಗಳನ್ನು ಮಿಶ್ರ ಸಾಮರ್ಥ್ಯದ ಪರಿಸರದಲ್ಲಿ ಕೈಗೊಳ್ಳುವುದು ಸಾಧ್ಯವಾಗಬೇಕು. ಪರಿಚಯಾತ್ಮಕ ವ್ಯವಸ್ಥೆಗಳ ಮೂಲಕ ಸಾಧನೆಯನ್ನು ತೀರಾ ಹತ್ತಿರದಿಂದ ಗಮನಿಸುವಂತೆ ಮತ್ತು

Digitised by Bharatavani, CIIL

ನಿರಂತರವಾಗಿ ಹಾಗೂ ನಿಯಮಿತವಾಗಿ ಪ್ರಸ್ತುತವಾಗುವಂತೆ ನೋಡಿಕೊಳ್ಳಬಹುದು". (ಪುಟ 8–9)

ಮೇಲೆ ಉಲ್ಲೇಖಿಸಿದ ವಿಚಾರಗಳಿಗೆ ವ್ಯತಿರಿಕ್ತವಾಗಿ ಬೌದ್ಧ ಶೈಕ್ಷಣಿಕ ತತ್ವಜ್ಞಾನವು ಶಿಕ್ಷಕರಿಂದ ಈ ಕೆಳಗಿನ ಸಾಂಪ್ರದಾಯಿಕ ಪಾತ್ರಗಳನ್ನು ಮತ್ತು ಗುಣಶೀಲಗಳನ್ನು ಅಪೇಕ್ಷಿಸುತ್ತದೆ:

'ಮಿಥಿಲಾ ವಿದ್ಯಾಪೀಠ ಪ್ರಕಟಿಸಿದ ಗ್ರಂಥದ ಪ್ರಕಾರ ಶಿಕ್ಷಕನಾದವನಿಗೆ (ಗುರುವಿಗೆ) ತನ್ನ ಆಲೋಚನೆಗಳ/ಮಾತುಗಳ ಮೇಲೆ ನಿಯಂತ್ರಣವಿರಲೇಬೇಕು. ತನ್ನಲ್ಲಿರುವ ಸಂಘರ್ಷವನ್ನು ಮೀರುವ ಆಧ್ಯಾತ್ಮಿಕತೆ ಅವನಲ್ಲಿ ಇರಬೇಕು; ಬೇರೆಯವರಿಗೆ ಹೋಲಿಸಿದರೆ ಅವನು ಹೆಚ್ಚು ಗುಣಶೀಲಗಳನ್ನು/ತಿಳಿವಳಿಕೆಯನ್ನು ಹೊಂದಿರಬೇಕು; ತಟಸ್ಥವಾಗಿ ಅಥವಾ ನಿಷ್ಕ್ರಿಯವಾಗಿ ಇರದೆ ಧೈರ್ಯಶಾಲಿಯಾಗಿ ಇರಬೇಕು; ಸಾಕಷ್ಟು ಪ್ರಮಾಣದ ಸಾಹಸಿಯೂ ಉದ್ಯಮಶೀಲನೂ ಆಗಿರಬೇಕು; ತನ್ನ ಆಲೋಚನೆಗಳ ಮೇಲೆ ನಿಯಂತ್ರಣವನ್ನು ಹೊಂದುವುದರ ಮೂಲಕ ಸಂಪೂರ್ಣ ಏಕಾಗ್ರತೆಯನ್ನು ಪಡೆಯಬಹುದು. ಮಧುರವಾದ ಮನೋವೃತ್ತಿಯ ಬೆಳವಣಿಗೆಯಿಂದ ಸಹೃದಯಿ ವ್ಯಕ್ತಿಯಾಗುವುದು ಸಾಧ್ಯವಿದೆ. ಇದನ್ನು ಕಾರ್ಯಗತಗೊಳಿಸಲು ಅವನು ಹಿಂತೆಗೆಯಲಾರ; ನಾಚಿಕೆಪಡಲಾರ.

**ಶಿಕ್ಷಕನ ಪಾತ್ರಗಳು:**

**ಶ್ರೀ ಅರಬಿಂದೊ:** ವಿಲಿಯಮ್ ಕೆಂಕರ್ (1976) ಪ್ರಕಾರ ಶ್ರೀ ಅರಬಿಂದೋ ಅವರು ಶಿಕ್ಷಕರಿಗಾಗಿ ಐದು ಪಾತ್ರಗಳನ್ನು ಗುರುತಿಸಿದ್ದಾರೆ:

- ಶಿಕ್ಷಕನು ವಿದ್ಯಾರ್ಥಿಗೆ ಜ್ಞಾನವನ್ನು ನೀಡುವುದಿಲ್ಲ. ಆದರೆ ಅದನ್ನು ಹೇಗೆ ಪಡೆಯುವುದು ಎಂಬುದನ್ನು ಮಾತ್ರ ತೋರಿಸಿಕೊಡುತ್ತಾನೆ.
- ಶಿಕ್ಷಕನು ವಿದ್ಯಾರ್ಥಿಯ ಅಗತ್ಯಗಳನ್ನು ಪೂರೈಸಲು ಅಗತ್ಯವಾದ ಪರಿಸರವನ್ನು ರೂಪಿಸಬೇಕಾಗುತ್ತದೆ. ಈ ಪಾತ್ರದಲ್ಲಿ ಶಿಕ್ಷಕನು ತನ್ನ ವೈಯಕ್ತಿಕ ಉದಾಹರಣೆಯ ಮೂಲಕ ಪ್ರಭಾವ ಬೀರಲು ಪ್ರಾರಂಭಿಸುತ್ತಾನೆ.
- ವಿದ್ಯಾರ್ಥಿ–ಶಿಕ್ಷಕನ ಸಂಬಂಧವು ಉತ್ತಮ ಸತ್ಸಂಗದ ರೀತಿಯದ್ದಾಗಿದೆ. ಶಿಕ್ಷಕನು ತಾನು ವಿದ್ಯಾರ್ಥಿಗಳ ಮುಂದೆ ಪ್ರಸ್ತುತಪಡಿಸುವ ಶ್ರೇಷ್ಠ ವಿಚಾರಗಳನ್ನು ತಾನೇ ಮೈಗೂಡಿಸಿಕೊಂಡಿದ್ದರೆ ಅದು ಉತ್ತಮ ಪ್ರಭಾವವನ್ನು ಬೀರುತ್ತದೆ. ಶಿಕ್ಷಕನಿಗೆ ತನ್ನ ಅಧ್ಯಾಪನದ ಕುರಿತು ಮರುಪಾವತಿ ದೊರೆತಾಗ ಅವನ ವರ್ತನೆ ರೂಪುಗೊಳ್ಳುತ್ತದೆ.
- ಒಬ್ಬ ವ್ಯಕ್ತಿ ಉತ್ತಮ ಶಿಕ್ಷಕನಾಗಿರಬೇಕಾದರೆ ಆತ ಸಂತ ಹಾಗೂ ನಾಯಕನಾಗಿ ಇರಬೇಕು. ಉತ್ತಮ ಶಿಕ್ಷಕನಾಗಲು ಶ್ರೇಷ್ಠ ಯೋಗಿಯಾಗಿರಬೇಕು.
- ಶಿಕ್ಷಕನು ಯಜಮಾನ(ಗುರು). ಅವನು ತಿಳಿಸುವುದನ್ನು ವಿದ್ಯಾರ್ಥಿ ಜೀರ್ಣಿಸಿಕೊಳ್ಳುತ್ತಾನೆ. ಪ್ರೀತಿ, ಜ್ಞಾನ, ಅಧಿಕಾರ ಮತ್ತು ಸೌಂದರ್ಯಗಳೆಂಬ ನಾಲ್ಕು ತಪಶ್ಚರ್ಯೆಗಳ ಸಂವಹನಕ್ಕೆ ಶಿಕ್ಷಕನು ವಾಹಕನಾಗಿರುತ್ತಾನೆ.

**ಗಾಂಧಿ:** ಶಿಕ್ಷಕನ ಪಾತ್ರವು ತಾಯಿಯ ಪಾತ್ರದ ಹಾಗೆ ಇರಬೇಕು. ಗಾಂಧೀಜಿಯವರು ತಮ್ಮ ಪ್ರಬಂಧ 'ಮೈ ವ್ಯೂಸ್ ಆನ್ ಎಡ್ಯುಕೇಶನ್'ದಲ್ಲಿ 'ತಾಯಿಯ ಸ್ಥಾನವನ್ನು ಹೊಂದಲಾಗದ ವ್ಯಕ್ತಿ ಶಿಕ್ಷಕನಾಗುವುದು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಕನದು ತಾಯಿಯ ಪಾತ್ರವಾಗಿರುತ್ತದೆ. ಶಿಕ್ಷಕನು ವಿದ್ಯಾರ್ಥಿಯನ್ನು ಪೋಷಿಸಬೇಕು, ಅವನೊಂದಿಗೆ ಕಾಲಕಳೆಯಬೇಕು ಮತ್ತು ಅವನನ್ನು ಉನ್ನತ ಹಂತದ ಪರಿಪಕ್ವತೆಗೆ ಕೊಂಡೊಯ್ಯಬೇಕು. ಗಾಂಧೀಜಿಯವರು 'ಯಂಗ್ ಇಂಡಿಯಾ'ದಲ್ಲಿ (4 ಏಪ್ರಿಲ್, 1929) ಬರೆಯುತ್ತಾ "ಶಿಕ್ಷಕನು ನಿರ್ದಿಷ್ಟವಾಗಿ ಹೃದಯದ ಶಿಕ್ಷಣಕ್ಕೆ ಪ್ರಸ್ತುತನಾಗುತ್ತಾನೆ. ಇದು ಗುರುವಿನ ಪ್ರೀತಿಯ ಸ್ಪರ್ಶದಿಂದ ಸಾಧ್ಯವಾಗುತ್ತದೆ," ಎಂದು ಶಿಕ್ಷಕರು ತಮ್ಮ ಸ್ವಂತದ ಫಲಪ್ರದ ಬದುಕನ್ನು ರೂಪಿಸಿಕೊಳ್ಳಬೇಕು ಮತ್ತು ಹೃದಯದ ಸಂಪರ್ಕದ ಮೂಲಕ ವಿದ್ಯಾರ್ಥಿಗಳನ್ನು ಎದುರಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

**ಚಾರಿತ್ರಿಕ ದೃಷ್ಟಿಕೋನದಲ್ಲಿ ಭಾರತೀಯ ಶಿಕ್ಷಕ:**

ಭಾರತೀಯ ಶಿಕ್ಷಕನಿಗೆ ಪಠ್ಯಕ್ರಮದ ಯೋಜನೆ ಮತ್ತು ಕಲಿಕಾ ಸಾಮಗ್ರಿಗಳ ಆಯ್ಕೆಯಲ್ಲಿ ಯಾವುದೇ ಪಾತ್ರವಿಲ್ಲವೆಂದು ಕ್ರಿಶನ್ ಕುಮಾರ್ (1990) ಸೂಚಿಸುತ್ತಾರೆ. ಅವರಿಗೆ ಇರುವುದು ಬರಿಯ ವೃತ್ತಿಪರ ಅಧಿಕಾರ ಮಾತ್ರ. ಅವರು ತರಗತಿಯಲ್ಲಿ ಸರ್ವಾಧಿಕಾರಿಯಂತೆ ವರ್ತಿಸಲು ಇದರ ಕೊಡುಗೆಯೂ ಇದೆ. ಕ್ರಿಶನ್ ಕುಮಾರ್ ಅವರ ಮಾತಿನಲ್ಲಿಯೇ ಹೇಳುವುದಾದರೆ, "ತಮ್ಮ ಶಿಕ್ಷಕನು ಪಠ್ಯಕ್ರಮಗಳನ್ನು ರೂಪಿಸುವ ಮತ್ತು ಪಠ್ಯಪುಸ್ತಕಗಳನ್ನು ಗೊತ್ತುಪಡಿಸುವ ಅಧಿಕಾರಿಗಳ ಕೈಕೆಳಗಿನ ದುರ್ಬಲ ಆಳು ಎನ್ನುವುದು ವಿದ್ಯಾರ್ಥಿಗಳಿಗೆ ತಿಳಿದಿಲ್ಲ. ಅವರು ಶಿಕ್ಷಕನನ್ನು ಬರಿ ಬಟವಾಡೆ ಮನುಷ್ಯ ಎಂದಾಗಿಯೂ ಭಾವಿಸಿಲ್ಲ. ಅವರಿಗೆ ಶಿಕ್ಷಕನೆಂದರೆ ಆ ಕ್ಷಣದಲ್ಲಿ ತನಗೆ ಇಷ್ಟಬಂದ ಹಾಗೆ ನಾವು (ವಿದ್ಯಾರ್ಥಿಗಳು) ವರ್ತಿಸುವಂತೆ ಮಾಡಬಲ್ಲ ಜಗತ್ತಿನ ಎಲ್ಲಾ ಅಧಿಕಾರಗಳನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿ. ತಾವು ಮಾಡಬೇಕಾಗಿರುವುದನ್ನು ಒತ್ತಾಯಿಸುತ್ತಿರುವುದು ಆತನ ಅಪೇಕ್ಷೆಯಲ್ಲ. ಆದರೆ ಅವರು ಕಲಿಯಲು ಆತನು ಅದನ್ನು ಮಾಡಬೇಕಾಗಿದೆ ಎಂಬುದು ಅವರಿಗೆ ತಿಳಿದಿಲ್ಲ." (ಪುಟ 15)

**ಅನೌಪಚಾರಿಕ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು:**

**ಅನೌಪಚಾರಿಕ ಶಿಕ್ಷಣದಲ್ಲಿ ಶಿಕ್ಷಕನ ಪಾತ್ರಗಳು:**

ಫಿಲಿಪ್ ಹೆಚ್. ಕೂಂಬ್ಸ್ ಮತ್ತು ಅವರ ಸಹಚರರು 1973ರಲ್ಲಿ ಪ್ರಕಟಿಸಿದ 'ನ್ಯೂ ಪಾಥ್ಸ್ ಟು ಲರ್ನಿಂಗ್' ಎಂಬ ಶೀರ್ಷಿಕೆಯ ಅತ್ಯುತ್ಕೃಷ್ಟ ವರದಿಯಲ್ಲಿ ಶಿಕ್ಷಣದ ಪರ್ಯಾಯ ಕ್ರಮವನ್ನು

Digitised by Bharatavani, CIIL

ಸೂಚಿಸಲಾಗಿದೆ. ಇದು 'ಅನೌಪಚಾರಿಕ ಶಿಕ್ಷಣ' (ನಾನ್ ಫಾರ್ಮಲ್ ಎಡ್ಯುಕೇಶನ್ –ಎನ್ಎಫ್ಇ) ಎಂಬ ಹೆಸರಿನಲ್ಲಿ ಜನಪ್ರಿಯವಾಗಿದೆ. ಈ ಎನ್ಎಫ್ಇ ಪದ್ಧತಿಯು ಔಪಚಾರಿಕ ಶಾಲೆಗಳಿಗೆ ಸೇರಲಾಗದ ಗ್ರಾಮೀಣ ಮಕ್ಕಳು ಮತ್ತು ಯುವಜನರಿಗೆ ಸೂಕ್ತವಾಗಬಹುದೆಂದು ಸೂಚಿಸಲಾಗಿದೆ. ಗ್ರಾಮೀಣ ಮಕ್ಕಳು ಮತ್ತು ಯುವಜನತೆಗೆ ಎನ್ಎಫ್ಇ ಯೋಜನೆಯು ಹೊಸ ವಿಧದ ಕಲಿಕೆಯಾಗಬಹುದೆಂದು ಈ ಲೇಖಕರು ಪ್ರಸ್ತಾಪಿಸಿದ್ದಾರೆ ಮತ್ತು 'ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯ ಅಗತ್ಯಗಳ' ಪೂರೈಕೆಯನ್ನು ನಡೆಸುವುದರಲ್ಲಿ ಶಿಕ್ಷಕರ ಹೊಸ ಪಾತ್ರವನ್ನು ಗುರುತಿಸಿದ್ದಾರೆ. 'ಎನ್ಎಫ್ಇ ಪದ್ಧತಿಯ ಪ್ರತಿಪಾದಕರು ಹೇಳುವ ಪ್ರಕಾರ ತಾಂತ್ರಿಕ ವಿಶೇಷಜ್ಞರು (ಔಪಚಾರಿಕ ವ್ಯವಸ್ಥೆಯ ಶಿಕ್ಷಕರು) "ಯುವಜನತೆಯನ್ನು ಅವರು ಸಧ್ಯದಲ್ಲಿ ನಿರ್ವಹಿಸಲಿರುವ ವಯಸ್ಕ ಪಾತ್ರಕ್ಕೆ ಸಿದ್ಧಗೊಳಿಸುವ ಅವಧಾರಣೆಗೆ ಅಗತ್ಯವಿರುವ ಗ್ರಾಮೀಣಾಭಿವೃದ್ಧಿಯ ದೀರ್ಘಾವಧಿಯ ಪ್ರೇರಕ ಶಕ್ತಿಗಳಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡುತ್ತಿಲ್ಲ." ಅವರು ಎಲ್ಲರ ವೈವಿಧ್ಯಮಯ ಪಾತ್ರಗಳನ್ನು ಶಿಕ್ಷಕರದೂ ಸೇರಿ, ಗ್ರಹಿಸಿಕೊಳ್ಳುತ್ತಾರೆ. ಇದರ ಮುಖ್ಯ ಉದ್ದೇಶ ಶಾಲೆಯಿಂದ ಹೊರಗೆ ಇರುವ ಯುವಜನತೆಯ ಭೌತಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಾತಾವರಣವನ್ನು ಅರ್ಥೈಸಿಕೊಳ್ಳುವುದು; ಉದ್ಯೋಗ, ಮನೆವಾಳ್ತೆಯ ಆಡಳಿತ, ಕೌಟುಂಬಿಕ ಜವಾಬ್ದಾರಿಗಳು ಮತ್ತು ಸಾಮುದಾಯಿಕ ಭಾಗವಹಿಸುವಿಕೆಗೆ ಅಗತ್ಯವಿರುವ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವಂತೆ ಅವರನ್ನು ಸಿದ್ಧಗೊಳಿಸುವುದು. ಈ ಎಲ್ಲಾ ಅಗತ್ಯಗಳ ಪೂರೈಕೆಯನ್ನು ಅನೌಪಚಾರಿಕ ಮತ್ತು ವಿಧ್ಯುಕ್ತವಾಗಿರದ ಕಲಿಕಾ ವಿಧಾನಗಳ ಸೂಕ್ತ ಸಂಯೋಜನೆಯ ಮೂಲಕ ಪಡೆಯಬಹುದಾಗಿದೆ. ಈ ಚಳವಳಿಯು ಜಗತ್ತಿನಾದ್ಯಂತ ಗಮನವನ್ನು ಪಡೆದು ಬೋಧನೆ (ಅಧ್ಯಾಪನ) ಮತ್ತು ಕಲಿಕೆಯ ಸಾಂಪ್ರದಾಯಿಕ ವಿಧಾನಕ್ಕೆ ಪೂರಕವಾಗಿ ಪರಿಗಣಿಸಲ್ಪಡುವ ಅನೌಪಚಾರಿಕ ವಿಧಾನದ ಮೂಲಕ ಶಿಕ್ಷಣ ನೀಡುವುದರಲ್ಲಿ ಶಿಕ್ಷಕರು ಭಾಗವಹಿಸುವುದರ ಮೂಲಕ ಅವರ ಸಾಂಪ್ರದಾಯಿಕ ಪಾತ್ರಗಳು ವಿಸ್ತಾರಗೊಂಡಿವೆ.

ರೈತರ ಕಲಿಕಾ ಕೇಂದ್ರಗಳು; ಶಿಷ್ಯವೃತ್ತಿಯ ರೂಪರೇಷೆಗಳು ಸಮುದಾಯ ಅಭಿವೃದ್ಧಿ ಕೇಂದ್ರಗಳ ಸಂಘಟನೆ; ಸಾಕ್ಷರತಾ ತರಬೇತಿ ಮತ್ತು ಶಾಲಾ ಸಂವಾದಿ ಕಾರ್ಯಕ್ರಮಗಳಂತಹ ಚಟುವಟಿಕೆಗಳಲ್ಲಿ ಹೊಸ ವಿಧದ ಮುಖ್ಯ ಪಾತ್ರಗಳನ್ನು ನಿರ್ವಹಿಸುವುದಕ್ಕಾಗಿ ಅನೌಪಚಾರಿಕ ಶಿಕ್ಷಣತಜ್ಞರ ಹೊಸ ಪೀಳಿಗೆಯ ಅಗತ್ಯವಿದೆ.

ಎನ್ಎಫ್ಇ ಕಾರ್ಯಕ್ರಮಗಳು ಔಪಚಾರಿಕ ಶಾಲಾ ವಿಧಾನದ ಮೇಲೆ ವ್ಯಾಪಕ ಪ್ರಭಾವವನ್ನು ಬೀರಿವೆ. ಅಲ್ಲಿಂದಲೇ ಈ ಕಾರ್ಯಕ್ರಮಗಳು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳ ಕೆಳಗೆ ಸಾರ್ವಕಾಲಿಕ ಮರುಸಾರ್ವತ್ರಿಕತೆಯನ್ನು ಪಡೆಯುವಂತೆ ಮಾಡಲಾಗಿದೆ. ಶಿಕ್ಷಕರಿಗೆ ಮರು ತರಬೇತಿಯನ್ನು ನೀಡಲಾಗುತ್ತಿದೆ. ಅವರಿಗೆಂದು ಗುರುತಿಸಲಾದ ಹೊಸ ಪಾತ್ರಗಳನ್ನು ನೀಡಲಾಗುತ್ತಿದೆ. ಶೈಕ್ಷಣಿಕ ಯೋಜನೆಯಲ್ಲಿನ ದೊಡ್ಡ ಅಧ್ಯಯನಗಳನ್ನು 'ಸ್ಕೂಲ್ ಮ್ಯಾಪಿಂಗ್'ನಂತಹ ಸೂಕ್ಷ್ಮ ಹಂತದ ಅಧ್ಯಯನಗಳು ಸ್ಥಾನಾಂತರಗೊಳಿಸಿವೆ. ಸರಕಾರೇತರ ಕಾರ್ಯಯೋಜನೆಗಳಾದ ಲೋಕ್ ಜಂಬಿಶ್ ಮತ್ತು ಹೋಶಂಗಾಬಾದ್ ವಿಜ್ಞಾನ ಅಧ್ಯಾಪನ ಯೋಜನೆ (ಎಚ್ಎಸ್‌ಟಿವ್ರೊ) ಗಳು ನಿರ್ದಿಷ್ಟ ರೀತಿಯ ಹೊಸ ಶಿಕ್ಷಕರ (ಉದಾ: ಶಿಕ್ಷಾ ಕರ್ಮಿಗಳು, ಗ್ರಾಮೀಣ ಶಿಕ್ಷಣ ಸಮಿತಿಗಳ ಸದಸ್ಯರು) ನೇಮಕಾತಿಗೆ ದಾರಿ ಮಾಡಿಕೊಟ್ಟಿವೆ.

ಔಪಚಾರಿಕ ಕ್ರಮದಲ್ಲಿ ತಮ್ಮ ಶಿಕ್ಷಣವನ್ನು ಮುಂದುವರೆಸುವುದಕ್ಕೆ ಸಾಧ್ಯವಾಗದವರಿಗೂ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮದಲ್ಲಿ ದೂರಶಿಕ್ಷಣ ಅಥವಾ ಮುಕ್ತ ಶಿಕ್ಷಣ ವಿಧಾನದಲ್ಲಿ "ಮುಂದುವರಿಕೆ ಶಿಕ್ಷಣ" ಪಡೆಯಲು ಇದು ನೆರವಾಗುತ್ತದೆ.

**ಶಾಲೆಯನ್ನು ಗುರುತಿಸುವುದರಲ್ಲಿ ಶಿಕ್ಷಕರ ಪಾತ್ರ (ಸ್ಕೂಲ್ ಮ್ಯಾಪಿಂಗ್; ಎಸ್ಎಮ್):**

ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಹೋಗುವ ವಯೋಮಿತಿಯ(5–14) ಮಕ್ಕಳನ್ನು ಗುರುತಿಸುವ ಶಾಲೆಗೆ ಸಲುವಾಗಿ ಲೊಕ್ ಜಂಬಿಶ್ ಸ್ಕೂಲ್ ಮ್ಯಾಪಿಂಗ್ ತಂತ್ರಜ್ಞಾನವನ್ನು ಗ್ರಾಮೀಣ ಹಂತದಲ್ಲಿ ಅನ್ವಯಿಸಲಾಗಿದೆ. ಸ್ಕೂಲ್ ಮ್ಯಾಪಿಂಗ್‌ನಲ್ಲಿ ಗೋವಿಂದ ಅವರು ರೂಪಿಸಿರುವ (ಯುನೆಸ್ಕೊ, 1999) ಪ್ರಮುಖ ಹೆಜ್ಜೆಗಳೆಂದರೆ :

- ಗ್ರಾಮದಲ್ಲಿ ಪರಿಸರವನ್ನು ನಿರ್ಮಿಸುವುದು;
- ಗ್ರಾಮ ಸಮಿತಿಗಳನ್ನು ರೂಪಿಸುವುದು (ಪ್ರೇರಕ ದಳ ಮತ್ತು ಮಹಿಳಾ ಸಮೂಹ)
- ಗ್ರಾಮ ಸಮಿತಿಯ ಸದಸ್ಯರಿಗೆ ತರಬೇತಿ ನೀಡುವುದು;
- ಗ್ರಾಮದ ಸರಿಸುಮಾರಾದ ನಕ್ಷೆಯನ್ನು ತಯಾರಿಸುವುದು;
- ಮನೆ ಮನೆ ಸಮೀಕ್ಷೆ ನಡೆಸುವುದು;
- ಸಮೀಕ್ಷೆಗಳ ವಿವರಗಳಿರುವ ಅಂತಿಮ ಶಾಲಾ–ನಕ್ಷೆಯನ್ನು ತಯಾರಿಸುವುದು.
- ಶಾಲೆಗಳಿಂದ ಮಾಹಿತಿ ಸಂಗ್ರಹಿಸುವುದು;
- ಗ್ರಾಮದ ಶೈಕ್ಷಣಿಕ ದಾಖಲೆಗಳ ಪುಸ್ತಕ ಮತ್ತು ಅಂಕಿಅಂಶಗಳ ಸಂಗ್ರಹವನ್ನು ತಯಾರಿಸುವುದು;
- ಗ್ರಾಮದ ಜನರಿಗೆ ವಿಶ್ಲೇಷಣೆಯನ್ನು ಪ್ರಸ್ತುತಪಡಿಸುವುದು;
- ಸುಧಾರಿತ ಶೈಕ್ಷಣಿಕ ಸೌಲಭ್ಯಗಳ ಕುರಿತಾಗಿ ಸಮಿತಿಯ ಅವಗಾಹನೆಗಾಗಿ ಪ್ರಸ್ತಾಪವನ್ನು ತಯಾರಿಸುವುದು.
- ನಿರ್ಧಾರಗಳ ಅನುಷ್ಠಾನಕ್ಕಾಗಿ ಅನುಸರಣ ಕಾರ್ಯಗಳನ್ನು ನಡೆಸುವುದು;
- ದಾಖಲಾತಿ ಮತ್ತು ಹಾಜರಾತಿಯ ಪ್ರಗತಿಯನ್ನು ಗಮನಿಸುವುದು.

Digitised by Bharatavani, CIIL

ಸ್ಕೂಲ್ ಮ್ಯಾಪಿಂಗ್‌ನ ಮೂಲಕ ಸಂಗ್ರಹಿಸಿದ ದತ್ತಾಂಶಗಳನ್ನು ಎಲ್‌ಜೆ(ಲೋಕ್ ಜಂಬಿಶ್) ಯೋಜನೆಯಲ್ಲಿ ಬಳಸಲಾಯಿತು. ಹಿಂದೆ ಸಾಂಪ್ರದಾಯಿಕ ಶಾಲೆಗಳ ಶಿಕ್ಷಕರು ಮಾಹಿತಿ ಸಂಗ್ರಹಿಸಿ ಅವುಗಳ ಪರಿಷ್ಕರಣಕ್ಕಾಗಿ ಹಿರಿಯ ಅಧಿಕಾರಿಗಳಿಗೆ ರವಾನಿಸುತ್ತಿದ್ದರು ಅಥವಾ ಕೆಲವೊಮ್ಮೆ ಅವು ಕಡತದಲ್ಲಿಯೇ ಉಳಿಯುತ್ತಿದ್ದವು. ತಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕಾಗಿ ಅದನ್ನು ಬಳಸುತ್ತಿರಲಿಲ್ಲ. ಸ್ಕೂಲ್ ಮ್ಯಾಪಿಂಗ್‌ನಿಂದ ಸಂಗ್ರಹಿಸಲಾದ ಮಾಹಿತಿಯನ್ನು ಮೂರು ಕಡತಗಳಲ್ಲಿ ಸಂಕಲಿಸಲಾಗುತ್ತದೆ. ಅವುಗಳೆಂದರೆ ಗ್ರಾಮ ಶಿಕ್ಷಣ ದಾಖಲೆ ಪುಸ್ತಕ (ವಿಲೇಜ್ ಎಡ್ಯುಕೇಶನ್ ರಿಜಿಸ್ಟರ್–ವಿಇಆರ್), ಸಂಖ್ಯಾ ಸಂಗ್ರಹಣ ಸಾರಾಂಶ (ಸ್ಟೇಟಿಸ್ಟಿಕಲ್ ಅಬ್‌ಸ್ಟ್ರೇಕ್ಟ್–ಎಸ್‌ಎ) ಮತ್ತು ಪ್ರತಿಧಾರಣ ದಾಖಲೆ ಪುಸ್ತಕ (ವಿಲೇಜ್ ರಿಟೆನ್ಶನ್ ರಿಜಿಸ್ಟರ್–ವಿಆರ್‌ಆರ್). ಈ ದಾಖಲೆಗಳನ್ನು ಎಲ್‌ಜೆಯು ತನ್ನ ಶಾಲೆಗಳಲ್ಲಿ ಶಿಕ್ಷಣದ ಎಲ್ಲ ಮೂರು ವಿಧಾನಗಳಲ್ಲಿ ಬಳಸಿತು. ಅವುಗಳೆಂದರೆ ಸಾಂಪ್ರದಾಯಿಕ ಪ್ರಾಥಮಿಕ ಶಾಲೆ (ಎಫ್‌ಪಿಎಸ್), ಶಿಕ್ಷಾಕರ್ಮಿ ಶಾಲೆ( ಎಸ್‌ಕೆಎಸ್) ಮತ್ತು ಸಹಜ್ ಶಿಕ್ಷಾ ಕೇಂದ್ರ (ಎಸ್‌ಎಸ್‌ಕೆ). ಸಹಜ ಶಿಕ್ಷಾ ಕೇಂದ್ರವು ಎನ್‌ಎಫ್‌ಇ ಕೇಂದ್ರದ ಒಂದು ಮಾದರಿ.

ಇದು ಗ್ರಾಮದಲ್ಲಿ ಲಭ್ಯವಿರುವ ಮಕ್ಕಳ ಸಂಖ್ಯೆಯನ್ನು ಆಧರಿಸಿ ಮೇಲೆ ಉಲ್ಲೇಖಿಸಲಾದ ಮೂರು ವಿಧದ ಶಾಲಾ ಸೌಲಭ್ಯಗಳನ್ನು ಸ್ಥಾಪಿಸುವ ಪ್ರಮಾಣದ ಕಡೆಗೆ ಶಿಕ್ಷಕರನ್ನು ಅನುಗೊಳಿಸಲಾಗುತ್ತದೆ. ಉದಾಹರಣೆಗೆ 250 ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಮಕ್ಕಳಿಗಾಗಿ ಪ್ರಾಥಮಿಕ ಶಾಲೆ; 150ರಿಂದ 250 ಮಕ್ಕಳಿಗಾಗಿ 'ಎಸ್.ಕೆ.ಎಸ್.'; ಮತ್ತು 100 ರಿಂದ 150 ಮಕ್ಕಳಿಗಾಗಿ 'ಎಸ್‌ಎಸ್‌ಕೆ'. ಎಲ್.ಜೆ. ಪರಿಕಲ್ಪನೆಯು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು (ಯೂನಿವರ್ಸಲ್ ಪ್ರೈಮರಿ ಎಡ್ಯುಕೇಶನ್–ಯುಪಿಇ) ಒದಗಿಸುವ ಶಿಕ್ಷಕರ ಹೊಸ ಪಾತ್ರಗಳ ಸ್ಪಷ್ಟ ಉದಾಹರಣೆಯಾಗಿದೆ. ಎನ್‌ಎಫ್‌ಇಯನ್ನು ಔಪಚಾರಿಕ ವ್ಯವಸ್ಥೆಯ ಪೂರಕ ಘಟಕವಾಗಿ ಅದರ ಪರವಾದ ಧೋರಣೆಯನ್ನು ಹೊಂದಿರುತ್ತಾರೆ. ಹಾಗಿದ್ದರೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಒಪ್ಪಿತ ವಿಧಾನವಾಗಿ ಬೇರೆ ಯಾವುದೇ ಪೂರಕ ತಾಂತ್ರಿಕ ವ್ಯವಸ್ಥೆಯನ್ನು ನಿರ್ದಿಷ್ಟ ರೀತಿಯಲ್ಲಿ ಕಾಣಲು ಕೆಲವು ಸ್ವಪಕ್ಷ–ಪ್ರತಿಪಾದಕರಿಗೆ ಕಷ್ಟವೆನಿಸುತ್ತಿದೆ. ಎರಡನೆಯದಾಗಿ ಎನ್‌ಎಫ್‌ಇ ವಿಭಾಗದ ಹಿಂದಿನ ಕಾರ್ಯಾಚರಣೆಯು ಹೆಚ್ಚು ಪ್ರೋತ್ಸಾಹದಾಯಕವಾಗಿ ಇಲ್ಲ. ಆದಾಗ್ಯೂ ಎನ್‌ಎಫ್‌ಇಯು ಶಿಕ್ಷಣದ ಪರ್ಯಾಯ ವಿಧಾನವಾಗಿ ಮತ್ತು ಶಿಕ್ಷಕರ ಪಾತ್ರಗಳಿಗೆ ಅನುರೂಪವಾಗಿ ಸ್ಥಿರಗೊಳ್ಳುವುದನ್ನು ಪ್ರಾರಂಭಿಸಿದೆ.

**ವೈವಿಧ್ಯತೆಯೊಂದಿಗೆ ಸಮರ್ಥವಾಗಿ ನಿರ್ವಹಿಸುವ ಶಿಕ್ಷಕರ ಪಾತ್ರ:**

ಅಂತರಾಷ್ಟ್ರೀಯ ಅಪೂರ್ವ ಒಮ್ಮತದ ಪ್ರಕಾರ ಕೊನೆಯ ಹಂತದವರೆಗೆ ಗ್ರಾಹ್ಯವೆನಿಸುವ ರಚನೆಗಳ ಒಳಗಿನ ವೈವಿಧ್ಯತೆಗಳೊಂದಿಗೆ ವ್ಯವಹರಿಸುವ ಸಲುವಾಗಿ ಕಲಿಯುವವರನ್ನು ಸಾಧ್ಯವಾದಷ್ಟು ಮಟ್ಟಿಗೆ ಸಾಧ್ಯವಾದಷ್ಟು ಅವಧಿಯವರೆಗೆ ಒಟ್ಟಿಗೆ ಇಟ್ಟುಕೊಳ್ಳುವುದು ನಿರ್ಣಾಯಕವಾಗಿ ಮುಖ್ಯವಾಗಿರುತ್ತದೆ. ಶಿಕ್ಷಕರ ಮುಖ್ಯ ಸವಾಲೆಂದರೆ ವೈವಿಧ್ಯತೆಯನ್ನು ಪ್ರಸಿದ್ಧಿಗೊಳಿಸಲು ಸಮರ್ಥರಾಗುವುದು. ಇದಕ್ಕಾಗಿಯೇ ಯುವಪ್ರಜೆಗಳಿಗೆ ಒಟ್ಟಿಗೆ ಇರಲು ಅನುಕೂಲಕರವಾದ ಕೌಶಲ್ಯಗಳನ್ನು ಕಲಿಸುವುದು (ಶಿಕ್ಷಕರಿಂದ) ಮುಖ್ಯ ಎಂಬುದಾಗಿ ಯುನೆಸ್ಕೋ ವರದಿ ಎಡ್ಯುಕೇಶನ್–ದಿ ಟ್ರೆಶರ್ ವಿದಿನ್ ಸೂಚಿಸುತ್ತದೆ. ಚಲನಶೀಲ ಜಗತ್ತಿನಲ್ಲಿ ಬದುಕುಳಿಯಲು ಇದು ಮುಖ್ಯ ಕೌಶಲವಾಗಿದೆ.

**ಶಿಕ್ಷಕರ ಪಾತ್ರಗಳ ಬೆಳವಣಿಗೆಯ ಸಂಕೀರ್ಣತೆ:**

ತೊಂಬತ್ತರ ದಶಕದಲ್ಲಿ 'ಶಾಲೆಗಳಲ್ಲಿ ಕಾರ್ಯಾಚರಣೆಯ ನಿರ್ವಹಣಾ ವಿಧಾನ'ವನ್ನು ಅಳವಡಿಸಿಕೊಳ್ಳುವ ಪ್ರಯತ್ನದ ಒಂದು ಭಾಗವಾಗಿ ಶಾಲೆಯ ಪರಿಣಾಮ ಕೌಶಲ್ಯ ಕುರಿತು ಆಸಕ್ತಿ ಗೋಚರಿಸಿತು (ಡೆನ್ನಿ, 1992)ಈಗ ಶಾಲೆಯ ಕಾರ್ಯಾಚರಣೆಗಳನ್ನು 'ಮಿತವ್ಯಯ ದಕ್ಷತೆ' ಮತ್ತು ಪರಿಣಾಮಕಾರಿತ್ವಗಳಲ್ಲಿ ನಿರ್ಣಯಿಸುವುದು ಪ್ರಾರಂಭವಾಗಿದೆ. ಸಾರ್ವಜನಿಕ ವಲಯದುದ್ದಕ್ಕೂ ಇವು ಚಿರಪರಿಚಿತ ಪದಗಳಾಗಿವೆ. ಶಿಕ್ಷಣ ವಲಯದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಅನುಷ್ಠಾನಗೊಳಿಸಲಾಗುವ ದಾನಿ–ನೆರವಿನ ಯೋಜನೆಗಳೊಂದಿಗೆ (ಉದಾಹರಣೆಗೆ ಡಿಪಿಇಪಿ) ಈ ವಿಧಾನವನ್ನು ಅಳವಡಿಸುವುದು ಪ್ರಾರಂಭವಾಗಿದೆ. ಶಿಕ್ಷಕರು ಸಾಮಾಜಿಕ ಕಾರ್ಯವನ್ನು ನಡೆಸುವ ನಿರೀಕ್ಷೆ ಇರುವುದರಿಂದ ಮೇಲೆ ಉಲ್ಲೇಖಿಸಲಾದ ಮೂರು ವಿಚಾರಗಳೊಂದಿಗೆ, 'ಸರ್ವಸಮತೆ' ಎಂಬ ನಾಲ್ಕನೆಯ ಅಂಶವನ್ನು ಜೋಡಿಸಿಕೊಂಡರೆ, ಅವುಗಳು ಶಾಲೆಗಳ ಮತ್ತು ಅಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಸಾಂಸ್ಥಿಕ ಕಾರ್ಯಾಚರಣೆಯನ್ನು ಅಳೆಯಲು ಮುಖ್ಯ ಅಳತೆಗೋಲಾಗಿ ಕಾರ್ಯನಿರ್ವಹಿಸಬಲ್ಲವು ಎಂದು ಡೆನ್ನಿ ಸೂಚಿಸುತ್ತಾರೆ. ಶಿಕ್ಷಣವು ಹೇಗೆ ಸಂಘಟಿತವಾಗಿದೆ ಮತ್ತು ಶಿಕ್ಷಣದ ಫಲಿತಾಂಶ ಏನು ಎಂಬುದರ ಕುರಿತು ಶಿಕ್ಷಕರಿಗೆ ಉತ್ತಮ ಮಾಹಿತಿಯನ್ನು ಒದಗಿಸಬೇಕು. ಶೈಕ್ಷಣಿಕ ದತ್ತಾಂಶವನ್ನು ಅರ್ಥೈಸಿಕೊಳ್ಳುವ ಅವರ ಕೌಶಲ್ಯವನ್ನು ಕೂಡಾ ಸುಧಾರಿಸಬೇಕಾಗುತ್ತದೆ. ಇದೇ ನಿಟ್ಟಿನಲ್ಲಿ ಬೇರರ್ ಮತ್ತು ಇತರರು (1989) ಶಾಲಾ ನಿರ್ವಹಣೆಯ ನಿರ್ಣಯದಲ್ಲಿ ಪರಿಣಾಮಕಾರಿತ್ವ ದಕ್ಷತೆ ಸರ್ವಸಮತೆ ಮತ್ತು ಉತ್ಕೃಷ್ಟತೆಗಳನ್ನು 4E ಗಳಿಂದ ಪರಿಗಣಿಸುತ್ತಾರೆ. ಅವರು ಇನ್ನೂ ಮುಂದುವರಿದು ಸೂಚಿಸುವುದೇನೆಂದರೆ, ಈ ಕಾರ್ಯಾಚರಣೆಯ ನಿರ್ವಹಣಾ ಪರಿಕಲ್ಪನೆಗಳ ಪ್ರಭಾವವು ಶಾಲೆಗಳ ಪಾತ್ರ ಮತ್ತು ಕಾರ್ಯಗಳಲ್ಲಿ ಮತ್ತು ಶಿಕ್ಷಕರ ತೊಡಗಿಸಿಕೊಳ್ಳುವುದರಲ್ಲಿ ಬದಲಾವಣೆಯನ್ನು ಉಂಟು ಮಾಡುವುದಾಗಿದೆ. ಅಧ್ಯಾಪನಾ ವೃತ್ತಿಯು ಕಲಿಸುವಿಕೆ ಮತ್ತು ಕಲಿಯುವಿಕೆಯ ಮೂಲ ಅಂಶಗಳ ಕುರಿತು ಮಾತ್ರ ಕಾಳಜಿಯನ್ನು ಹೊಂದಿರುವಂತಹದಲ್ಲ, ಅದರ ಶಿಕ್ಷಕರು ಮತ್ತು ಶಾಲೆಗಳ ಪರಿಣಾಮಕಾರಿ ನಿರ್ವಹಣೆ ಮತ್ತು ಕಾರ್ಯಾಚರಣೆಯ ಕುರಿತು ಕೂಡಾ ಕಾಳಜಿಯನ್ನು ಹೊಂದಿರಬೇಕಾಗುತ್ತದೆ ಎಂಬುದಾಗಿ ಈಗ ನಂಬಲಾಗಿದೆ. ನಮ್ಮ ವಸ್ತುಸ್ಥಿತಿಯಲ್ಲಿ ಶಿಕ್ಷಕರು ಬೋಧನೆಗಿಂತ ಬೋಧನೇತರ ಪಾತ್ರಗಳಲ್ಲಿ ಭಾಗವಹಿಸಬೇಕಾದ

Digitised by Bharatavani, CIIL

ಅಗತ್ಯದ ಕುರಿತು ಸಾಮಾನ್ಯವಾದ ದೂರು ಇದೆ. ರಾಬ್ ಹಾಲ್ಸಲ್ ತನ್ನ ಇತ್ತೀಚಿಗಿನ ಗ್ರಂಥವಾದ ಟೀಚರ್ಸ್ ರಿಸರ್ಚ್ ಆಂಡ್ ಸ್ಕೂಲ್ ಇಂಪ್ರೂವ್‌ಮೆಂಟ್ (1998) ನಲ್ಲಿ ಶಿಕ್ಷಕರ ಕಾರ್ಯನಿರ್ವಹಣಾ ಕಾರ್ಯಗಳೊಂದಿಗೆ ಬದಲಾಗುತ್ತಿರುವ ಅವರ ಪಾತ್ರಗಳ ಕುರಿತಾಗಿ ಕೂಡಾ ಪ್ರಸ್ತಾಪಿಸಿದ್ದಾರೆ.

ಶಿಕ್ಷಕರ ಪಾತ್ರದ ಮೇಲೆ ಇತ್ತೀಚಿನ ಶೈಕ್ಷಣಿಕ ಸುಧಾರಣೆಯ ಪ್ರಭಾವವನ್ನು ಪರಿಗಣಿಸುವಾಗ, 4E ಅಂಶಗಳ ನೇರ ಪ್ರಭಾವವನ್ನು ಶಿಕ್ಷಕರ ದೈನಂದಿನ ಕೆಲಸದ ಬದುಕಿನಲ್ಲಿ ಗುರುತಿಸಬಹುದಾಗಿದೆ ಮತ್ತು ಶಾಲಾ ನಿರ್ವಹಣೆ ಮತ್ತು ಸಂಘಟನೆಯಲ್ಲಿ 3R ಗಳ ಜೊತೆಯಲ್ಲಿ ಕೇಂದ್ರ ಪರಿಕಲ್ಪನೆಗಳಾಗಿ ವೃದ್ಧಿಸುವ ಸೂಚನೆಗೆ ಬೆಂಬಲವನ್ನು ಸೂಚಿಸಲಾಗುತ್ತದೆ. ಶಾಲೆಗಳಲ್ಲಿನ ಈ ನಿರ್ವಹಣಾತ್ಮಕ ಹೊಸಯುಗಕ್ಕೆ ಸಂಬಂಧಿಸಿದ ಇತ್ತೀಚಿಗಿನ ಬೆಳವಣಿಗೆಗಳನ್ನು ಶಿಕ್ಷಕರ ಪಾತ್ರದ ಪರಿಕಲ್ಪನೆಯಲ್ಲಿ ಬದಲಾವಣೆಯನ್ನು ಪ್ರೋತ್ಸಾಹಿಸಿದೆ. ಶಿಕ್ಷಕರ ಪಾತ್ರದಲ್ಲಿನ ಹೊಸ ವ್ಯಾಖ್ಯಾನಿತ ಅಂಶಗಳನ್ನು ಹೆಚ್ಚಿಸುವ ಸಲುವಾಗಿ, ಶಿಕ್ಷಕರ ಪಾತ್ರವು ತರಗತಿಗಳ ವಿಚಾರಗಳಿಗೆ ಸೀಮಿತವಾಗಿರುವುದಕ್ಕಿಂತ ಇಡೀ ಶಾಲೆಯ ಕುರಿತಾಗಿ ಕೇಂದ್ರ ಕಾಳಜಿಯನ್ನು ಹೊಂದುವ ಸಲುವಾಗಿ ಧೋರಣೆಗಳಲ್ಲಿ ಬದಲಾವಣೆಯಾಗುವುದು ಅತ್ಯಗತ್ಯ.

ಕೆಲವು ಶಿಕ್ಷಕರು ತಮಗೆ ವಹಿಸಿಕೊಡಲಾದ ಬೋಧನಾ ಕಾರ್ಯದೊಂದಿಗೆ ಕಾರ್ಯನಿರ್ವಹಣಾ ಪಾತ್ರಗಳನ್ನು ನಿರ್ವಹಿಸುವುದರಲ್ಲಿ ಹೆಚ್ಚು ಸಂತುಷ್ಟರಾಗಿಲ್ಲವೆನ್ನುವುದು ಖಚಿತ. ಈ ಪಾತ್ರಗಳು ತರಗತಿಯ ಮಟ್ಟದಲ್ಲಿ ರೂಢಿಯನ್ನು ಸುಧಾರಿಸಿಕೊಳ್ಳುವ ಉದ್ದೇಶಕ್ಕಿಂತ ಹೊರತಾದ ಪರಿಧಿಯಲ್ಲಿ ಇವೆ ಎಂಬುದು ಅವರ ಭಾವನೆ. ಪ್ರಾಥಮಿಕ ಶಾಲಾ ಶಿಕ್ಷಕರ ಬದಲಾಗುತ್ತಿರುವ ಪಾತ್ರಗಳ ಕುರಿತು ವಿವರಗಳಿರುವ ವೆಬ್‌ನ ಸಂಶೋಧನೆಯಲ್ಲಿ (1999) ಈ ಕೆಳಗಿನ ಅಂಶವನ್ನು ಎತ್ತಿ ಹಿಡಿಯಲಾಗಿದೆ:

"ಇತ್ತೀಚಿನ ಪ್ರಾಥಮಿಕ ಶಿಕ್ಷಕರ ಕಾರ್ಯವು ಹೊರಗೆ ನಾಟಕೀಯವಾಗಿ ಬದಲಾವಣೆಯನ್ನು ಹೊಂದಿದೆ. ಅನೇಕ ಬಾರಿ ತರಗತಿಯೊಂದಿಗೆ ಇದು ಪರೋಕ್ಷವಾಗಿ ಮಾತ್ರ ಸಂಬಂಧಿಸಿರುತ್ತದೆ. ಒಂದು ವಿಧದಲ್ಲಿ ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಕೊಡುಗೆಯನ್ನು ನೀಡಿವೆ; ಇನ್ನೊಂದು ವಿಧದಲ್ಲಿ ವಿದ್ಯಾರ್ಥಿಗಳ ಕಲಿಯುವಿಕೆಯಲ್ಲಿ ಗಮನವನ್ನು ಕೇಂದ್ರೀಕರಿಸಬೇಕಾಗಿರುವ ಅವರ ಲಭ್ಯ ಸಮಯವನ್ನು ಮತ್ತು ಪ್ರಯತ್ನವನ್ನು ಕಡಿತಗೊಳಿಸಿದೆ ಮತ್ತು ಅವರ ಶಕ್ತಿಯನ್ನು ವ್ಯರ್ಥಗೊಳಿಸಿದೆ(ಪು: 6)."

ನಾವು ಬರಿ ಶಿಕ್ಷಕರಾಗಿ ಮಾತ್ರ ಏಕೆ ಇರಬಾರದು ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾ ಶಿಕ್ಷಕರು ಕೂಡಾ ಪ್ರಶ್ನೆ ಕೇಳಲು ಪ್ರಾರಂಭಿಸಿದ್ದಾರೆ. ಶಾಲೆಯ ಒಳಗಿನ ಮತ್ತು ಹೊರಗಿನ ತಮ್ಮ ಜವಾಬ್ದಾರಿಗಳ ಮೇಲೆ ಹೆಚ್ಚುತ್ತಿರುವ ಒತ್ತು ತರಗತಿಯಲ್ಲಿನ ತಮ್ಮ ಪರಿಣಾಮಕಾರಿತ್ವವನ್ನು ಪೋಲು ಮಾಡುತ್ತಿದೆ ಎನ್ನುತ್ತಾರೆ. ಸಧ್ಯದ ಸಂದರ್ಭದಲ್ಲಿ ಶಿಕ್ಷಕರು ಅನೇಕ ವಿಧದ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಉದಾಹರಣೆಗೆ ಜನಗಣತಿಯ ಕೆಲಸಗಳು, ಚುನಾವಣಾ ಕಾರ್ಯಗಳು, ಆರೋಗ್ಯ ಮತ್ತು ಜನಸಂಖ್ಯಾ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಚಾರಗಳು ಮತ್ತು ಇನ್ನೂ ಅನೇಕ ವಿಧದ ಕರ್ತವ್ಯಗಳು. ಒಂದು ರಾಜ್ಯದಲ್ಲಿಯೂ ಜಿಲ್ಲಾಧಿಕಾರಿಗಳು ಮದ್ಯ ಮಾರಾಟದ ಹೆಚ್ಚುವರಿ ಜವಾಬ್ದಾರಿಯನ್ನು ಶಿಕ್ಷಕರಿಗೆ ವಹಿಸಿದ್ದು, ಮಾಧ್ಯಮಗಳ ಪ್ರವೇಶದಿಂದ ಅದನ್ನು ಹಿಂತೆಗೆದುಕೊಳ್ಳಲಾಯಿತು. ಕೆಲವು ಕ್ಲಿಷ್ಟ ಪಾತ್ರಗಳ ನಿರ್ವಹಣೆಯಲ್ಲಿ ಮತ್ತು ಹೆಚ್ಚುವರಿ ಹೊರೆಯ ಪಾತ್ರಗಳ ಸಂದರ್ಭಗಳಲ್ಲಿ ಶಿಕ್ಷಕರು ತಮ್ಮ ಪ್ರಾಶಸ್ತ್ಯದ ಕುರಿತು ಪ್ರಶ್ನೆ ಮಾಡಲು ಪ್ರಾರಂಭಿಸಿದ್ದಾರೆ.

ಆದರೂ ತ್ವರಿತ ಗತಿಯಲ್ಲಿ ಬದಲಾಗುತ್ತಿರುವ ಜಗತ್ತಿನಲ್ಲಿ ಶಿಕ್ಷಕರು ತಮ್ಮ ಪಾತ್ರವನ್ನು ವ್ಯಾಪಕ ವಿಧದ ಕಾರ್ಯನಿರ್ವಹಕ ದೃಷ್ಟಿಕೋನದಿಂದ ನೋಡಬೇಕಾಗುತ್ತದೆ. ಒಂದು ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಓದು ಬರಹ ತಿಳಿದ ಏಕಮಾತ್ರ ವ್ಯಕ್ತಿ ಶಾಲಾಶಿಕ್ಷಕನಾಗಿದ್ದು ಆತ ಅನೇಕ ವಿಧದ ಕೆಲಸಗಳನ್ನು ಮಾಡಬೇಕಾಗಿರುತ್ತಿತ್ತು. ಅದರಲ್ಲಿ ಹಳ್ಳಿಗರ ಸಂಬಂಧಿಕರಿಗೆ ಪತ್ರವನ್ನು ಬರೆಯುವುದು, ಅವರ ಲೆಕ್ಕಪತ್ರಗಳನ್ನು ನೋಡುವುದು ಇತ್ಯಾದಿಗಳು ಇರುತ್ತಿದ್ದವು.

ಸಧ್ಯದ ಪರಿಸ್ಥಿತಿಯಲ್ಲಿ ವ್ಯವಸ್ಥಾಪಕತ್ವದ ಕಡೆಗೆ ಗಮನಹರಿದಿದೆ. ಈ ಪಲ್ಲಟದಲ್ಲಿನ ಪ್ರಮುಖ ಗ್ರಹಿಕೆಗಳೆಂದರೆ ಮೂಲಭೂತ ವ್ಯವಸ್ಥಾಪಕತ್ವದ ಬಹುತೇಕ ಕಾರ್ಯಗತಿಗಳಾದ ಯೋಜನೆ, ಸಂಘಟನೆ, ಉತ್ತೇಜಕತೆ, ಮುನ್ನೆಚ್ಚರಿಕೆ ವಹಿಸುವುದು ಮತ್ತು ನಿಯಂತ್ರಿಸುವುದು ಮೊದಲಾದುವುಗಳು ಸಾರ್ವತ್ರಿಕವಾಗಿವೆ. ಆದರೆ ಇಲ್ಲಿರುವ ಪ್ರಶ್ನೆ ಏನೆಂದರೆ, ಶಿಕ್ಷಕರಿಗೆ ಕೆಲಸಕ್ಕೆ ಸೇರುವ ಮೊದಲು ಮತ್ತು ನಂತರ ನೀಡಲಾಗುವ ತರಬೇತಿಯಲ್ಲಿ ಈ ಹೊಸ ಪರಿಕಲ್ಪನೆಗಳನ್ನು ಪರಿಚಯಿಸಲಾಗುವುದೇ ಇಲ್ಲ. ಡಯಟ್‌ಗಳು ಪ್ರಾಯೋಗಿಕ ಕ್ಷೇತ್ರಗಳಲ್ಲಿ ಈ ಹೊಸ ಬಗೆಯ ಕಾರ್ಯಕ್ರಮಗಳನ್ನು ಪರಿಚಯ ಮಾಡಿಕೊಡಬೇಕೆಂದು ಉದ್ದೇಶಿಸಲಾಗಿತ್ತು. ಇದೇ ರೀತಿ ಶಿಕ್ಷಕ ಶಿಕ್ಷಣದ ಮಾಧ್ಯಮಿಕ ಮಹಾವಿದ್ಯಾಲಯಗಳು ಸಧ್ಯದ ಅಗತ್ಯಗಳಿಗೆ ಹೊಂದುವ ಸೇವಾನಿರತ ಪಠ್ಯಕ್ರಮಗಳನ್ನು ವಿನ್ಯಾಸಗೊಳಿಸಬೇಕಾಗಿದೆ. ಶಿಕ್ಷಕರ ಕಾರ್ಯನಿರ್ವಾಹಕ ಪಾತ್ರಗಳ ಕುರಿತಂತೆ ಶಿಕ್ಷಕರ ಪರಿಣಾಮಕಾರಿತ್ವ, ಕಾರ್ಯಸಾಮರ್ಥ್ಯ ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದಂತೆ ತಲೆಎತ್ತಿರುವ ಶಾಲಾ ಪರಿಣಾಮಕಾರಿತ್ವ ಚಳವಳಿಯು ಶಿಕ್ಷಕ ತರಬೇತಿಯಲ್ಲಿ ಹೊಸ ಅಗತ್ಯಗಳನ್ನು ನಿರೀಕ್ಷಿಸುತ್ತದೆ. ಶಾಲೆಗೆ ಬಾರದ ವಿದ್ಯಾರ್ಥಿಗಳ ಕುರಿತು ಶಿಕ್ಷಕರು ಈಗ ಗಮನವನ್ನು ಹರಿಸುತ್ತಿಲ್ಲ. ದ ನ್ಯೂ ಟೀಚರ್ಸ್, ಟೀಚರ್ಸ್ ಕ್ವಾಲಿಟಿ, ಟೀಚರ್ಸ್, ಬೆಟರ್ ಸ್ಕೂಲ್ಸ್, ಎಜುಕೇಶನ್ ಅಬ್ಸರವ್ಡ್ ಮತ್ತು ಗುಡ್ ಟೀಚರ್ಸ್ ಮೊದಲಾದ ಪ್ರಕಾಶಿತ ವರದಿಗಳ ಶ್ರೇಣಿಯೇ ಇದೆ. ಶಿಕ್ಷಕರ ವೈಯಕ್ತಿಕ ಗುಣಮಟ್ಟಗಳ ಮೇಲೆ ಹೆಚ್ಚಿನ ಒತ್ತನ್ನು ನೀಡಿ ಅಧ್ಯಾಪನದ ಮಾದರಿಯನ್ನು ಕಟ್ಟಿಕೊಟ್ಟಂತಹ ಅನೇಕ ವರದಿಗಳು ಬ್ರಿಟನ್ನಿನಲ್ಲಿ ಪ್ರಕಟವಾಗಿವೆ.

Digitised by Bharatavani, CIIL

**ಶಿಕ್ಷಕರ ವೃತ್ತಿಪರತೆ–ಪಾತ್ರ ವಿಸ್ತರಣೆ:**

ಬಹುತೇಕ ವ್ಯವಸ್ಥಾಪಕ ಮತ್ತು ಆಡಳಿತಾತ್ಮಕ ಸ್ವರೂಪದ ಹೆಚ್ಚಿನ ವ್ಯಾಪ್ತಿಯ ಕಾರ್ಯಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಶಿಕ್ಷಕರ ಪಾತ್ರವನ್ನು ವಿಸ್ತರಿಸಲಾಗಿದೆ. ಈ ಪಲ್ಲಟವನ್ನು ಹರ್‌ಗ್ರೀವ್ಸ್ (1994) ಅವರು ಮರುವೃತ್ತಿಪರತ್ವವೆಂದು ಕರೆಯುತ್ತಾರೆ. ಇದು ಸೇವಾನಿರತ ವ್ಯಾಸಂಗ ಕ್ರಮದ ಮೂಲಕ ಮಾತ್ರ ಸಾಧ್ಯವಾಗುತ್ತದೆ. ವಿವರಣಾತ್ಮಕ ಮತ್ತು ಸೂಚಿತ ಕಲಿಕಾ ಪರಿಣಾಮಗಳ ಮೇಲೆ ಹೆಚ್ಚಿನ ಅವಲಂಬನೆ ಇದೆ. ನಾವು ಶಿಕ್ಷಕರಲ್ಲಿ ಸಾಮಾಜಿಕ ನ್ಯಾಯದ ಕುರಿತಾದ ಕಾಳಜಿಗೆ ಸಂಬಂಧಿಸಿದಂತೆ ಅರಿವು ಇರುವಂತೆ ನೋಡಿಕೊಳ್ಳಬೇಕು. ಶಿಕ್ಷಕ ವೃತ್ತಿಪರತೆಯ ಕುರಿತು ಹೊಸ ನಿರ್ವಚನಗಳು ಹುಟ್ಟಿಕೊಳ್ಳುತ್ತಿರುವಂತೆ ಕಂಡುಬರುತ್ತದೆ. ಇವುಗಳನ್ನು ಗ್ರೀನ್ (1998) ಅವರು ಹೀಗೆ ವರ್ಗೀಕರಿಸುತ್ತಾರೆ. ನಮ್ಯ, ಪ್ರಾಯೋಗಿಕ, ವಿಸ್ತರಿತ ಮತ್ತು ಸಂಕೀರ್ಣ ವೃತ್ತಿಪರತೆ.

- ನಮ್ಯ, ವೃತ್ತಿಪರತೆಯು ಸ್ಥಳೀಯ ವೃತ್ತಿಪರ ಸಮುದಾಯಗಳಾದ ಯೋಜನಾ ಗುಂಪುಗಳು, ವಿಭಾಗಗಳು ಮತ್ತು ಶಾಲೆಗಳ ಬೋಧನೆ ಮತ್ತು ಕಲಿಕೆಯಲ್ಲಿನ ಸುಧಾರಣೆಗಳ ಮೂಲಕ ಹುಟ್ಟಿಕೊಳ್ಳುತ್ತದೆ.

- ಪ್ರಾಯೋಗಿಕ ವೃತ್ತಿಪರತೆಯು ತಮ್ಮ ಸ್ವಂತ ಅನುಭವಗಳನ್ನು ಮತ್ತು ಇತರರ ಅನುಭವಗಳನ್ನು ಹಂಚಿಕೊಳ್ಳುವ ಶಿಕ್ಷಕರಲ್ಲಿ ಹುಟ್ಟಿಕೊಳ್ಳುತ್ತದೆ. ಅವರು ತಮ್ಮ ಕೆಲಸದಲ್ಲಿನ ಅನಿಶ್ಚಿತತೆಯನ್ನು ವಿವರಿಸುತ್ತಾರೆ ಮತ್ತು ಬೇರೆಯವರೊಂದಿಗೆ ಇದನ್ನು ಮರುವ್ಯಾಖ್ಯಾನಿಸುತ್ತಾರೆ. ಈ ರೀತಿಯ ಪರ್ಯಾಲೋಚನೆಗಳು ಆಂತರಿಕ ಸಭೆಗಳಲ್ಲಿ ಮತ್ತು ವೃತ್ತಿಪರ ಪ್ರಬಂಧಗಳಲ್ಲಿ ನಡೆಯುತ್ತವೆ.

- ವಿಸ್ತರಿತ ವೃತ್ತಿಪರತೆಯು ಸರಕಾರದ ಸುಧಾರಣೆಗಳ ಫಲವಾಗಿ ಶಿಕ್ಷಕರಿಂದ ಹೆಚ್ಚಿನ ಬೇಡಿಕೆಗಳು ಉಂಟಾಗುವುದನ್ನು ಇದು ಗುರುತಿಸುತ್ತದೆ. ಶಿಕ್ಷಕರು ಹೆಚ್ಚುವರಿ ವ್ಯವಸ್ಥಾಪಕ ಮತ್ತು ಆಡಳಿತಾತ್ಮಕ ಕರ್ತವ್ಯಗಳನ್ನು ನಿಭಾಯಿಸಬೇಕಾಗುತ್ತದೆ. ಇದರಿಂದ ಹೆಚ್ಚಿನ ದುಡಿಮೆ ಇರುತ್ತದೆ. ಈ ಮಾದರಿಯನ್ನು ಅನುದ್ದೇಶಿತ ವೃತ್ತಿಪರತೆ ಎಂಬುದಾಗಿ ವಿವರಿಸಲಾಗಿದೆ. ಇದು ಹೆಚ್ಚುವರಿ ಕಾರ್ಯಹೊರೆ ಮತ್ತು ಶಿಕ್ಷಕರ ಒತ್ತಡವನ್ನು ಸೂಚಿಸುತ್ತದೆ.

- ಸಂಕೀರ್ಣ ವೃತ್ತಿಪರತೆ ಸೂಚಿಸುವುದೇನೆಂದರೆ ಸಮಾಜ ಮತ್ತು ಶಿಕ್ಷಣದ ಹೆಚ್ಚುವರಿ ಅಗತ್ಯಗಳಿಗೆ ಪ್ರತಿಕ್ರಿಯಾತ್ಮಕವಾಗಿ ಉನ್ನತ ಕೌಶಲ್ಯಗಳನ್ನು ಪರಿಚಯಿಸಲಾಗಿರುವುದರಿಂದ ಶಾಲೆಯ ಕೆಲಸವು ಇನ್ನಷ್ಟು ಸಂಕೀರ್ಣದ್ದಾಗಿ ಹೋಗಿದೆ.

**ಮಕ್ಕಳ ವಿಶೇಷ ಅಗತ್ಯಗಳ ಕಾರ್ಯನಿರ್ದೇಶಕರಾಗಿ ಶಿಕ್ಷಕರು:**

ಇತ್ತೀಚಿನ ದಿನಗಳಲ್ಲಿ ಶಾಲೆಗಳು ಅಂಕಗಣಿತದ ಪರಿಹಾರ ಬೋಧನೆ, ಓದುವ ಕೌಶಲ್ಯಗಳ ವರ್ಧನೆಯ ಮೂಲಕ ಸಾಕ್ಷರತೆಯನ್ನು ಅಭಿವೃದ್ಧಿಪಡಿಸುವಿಕೆ ಮತ್ತು ಅನಾರೋಗ್ಯ ಹಾಗೂ ಇತರ ಕಾರಣಗಳಿಂದ ಶಾಲೆ ತಪ್ಪಿಸಿದ ವಿದ್ಯಾರ್ಥಿಗಳಿಗೆ ನೆರವಾಗುವಿಕೆ ಮೊದಲಾದ ಮಕ್ಕಳ ವಿಶೇಷ ಅಗತ್ಯಗಳನ್ನು ಪೂರೈಸುವಂತೆ ನಿರೀಕ್ಷಿಸಲಾಗುತ್ತದೆ. ಈ ಹೊಸ ಪಾತ್ರದ ನಿದರ್ಶನವನ್ನು 'ಏಳನೆಯ ತರಗತಿಯ ವಿದ್ಯಾರ್ಥಿಗಳ ಓದು ಮಟ್ಟ'ದ ಕುರಿತಾಗಿ ಶಾಲಾ ಶಿಕ್ಷಕರು ಕೈಗೊಂಡಿರುವ ಕ್ರಿಯಾತ್ಮಕ ಸಂಶೋಧನಾ ಯೋಜನೆಯಾಗಬಹುದು. ಈ ಓದು ಯೋಜನೆಯು 'ಬಡ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳು ಮಕ್ಕಳಲ್ಲಿ ಓದುವ ಸಾಮಗ್ರಿಗಳ ಕೊರತೆಯನ್ನು ಉಂಟು ಮಾಡಬಹುದು, ಆದ್ದರಿಂದ ಅವರಿಗೆ ವಾಚನ ಸಾಮಗ್ರಿಗಳನ್ನು ಪಡೆಯುವ ಅವಕಾಶವನ್ನು ಒದಗಿಸಬೇಕು' ಎನ್ನುವ ಗ್ರಹಿಕೆಯನ್ನು ಆಧರಿಸಿಕೊಂಡಿತ್ತು. ಊಟದ ಬಿಡುವಿನ ವೇಳೆಯ ವಾಚನ ಕ್ಲಬ್‌ನ್ನು ಸ್ಥಾಪಿಸಿ ಮಕ್ಕಳಿಗೆ ಈ ಕ್ಲಬ್‌ನ್ನು ಸೇರಿಕೊಳ್ಳುವಂತೆ ತಿಳಿಸಲಾಗಿತ್ತು. 'ವಾಚನ ಸಮಸ್ಯೆ'ಗಳಿರುವ ವಿದ್ಯಾರ್ಥಿಗಳಿಗೆ ಓದಿನ ಅವಶ್ಯಕತೆಯ ಪೂರಕ ಸಾಧನಗಳನ್ನು (ನಾಟಕಗಳು, ಸಣ್ಣಕತೆಗಳು) ಒದಗಿಸಲಾಗಿತ್ತು. ಸಾಕಷ್ಟು ಸಂಖ್ಯೆಯ ವಿದ್ಯಾರ್ಥಿಗಳು ಇದನ್ನು ಸೇರಿ ಪುಸ್ತಕಗಳನ್ನು ಬಹಳ ಖುಷಿಯಿಂದ ಓದಿಕೊಂಡರು. ವಿಶಿಷ್ಟ ಓದು ಗುಂಪುಗಳನ್ನು ಕೂಡಾ ರೂಪಿಸಬಹುದು. ಶೈಕ್ಷಣಿಕ ಅವಧಿಯೊಂದಕ್ಕೆ 'ವಿಶೇಷ ಅಗತ್ಯಗಳ ಕಾರ್ಯ ನಿರ್ದೇಶಕರಾಗಿ ನಾಮಾಂಕಿತರಾದ ಶಿಕ್ಷಕರು ಬೇರೆ ಚಟುವಟಿಕೆಗಳನ್ನು ಕೂಡಾ ಸಂಘಟಿಸಬಹುದು. ಬೇರೆ ಶಿಕ್ಷಕರು ಕೂಡಾ ತಮ್ಮ ಸರದಿ ಬಂದಾಗ ಈ ಪಾತ್ರವನ್ನು ನಿರ್ವಹಿಸಬಹುದು.

**ಒತ್ತಡ ಮತ್ತು ಶಿಕ್ಷಕರ ಪಾತ್ರ:**

ಶಿಕ್ಷಕರು ನಿರ್ವಹಿಸಬೇಕಾದ ಸಂಘರ್ಷಣಾತ್ಮಕ ಪಾತ್ರಗಳ ಕಾರಣವಾಗಿ ಶಿಕ್ಷಕರಲ್ಲಿ ಉಂಟಾಗುವ ಮಾನಸಿಕ ಒತ್ತಡದ ಕಡೆಗೆ ಪೀಟರ್ ವೂಡ್ಸ್ (ಕೋಲ್, 1989) ನಮ್ಮ ಗಮನವನ್ನು ಸೆಳೆಯುತ್ತಾರೆ. ಶಿಕ್ಷಕ (ಅಧ್ಯಾಪನ ಮತ್ತು ಶಿಸ್ತು), ಹೆತ್ತವರು ಮತ್ತು ಸ್ನೇಹಿತನ ಕಾರ್ಯಗಳನ್ನು ಒಟ್ಟಾಗಿ ನಿರ್ವಹಿಸಬೇಕಾದ ಶಾಲಾ ಶಿಕ್ಷಕರ ಪಾತ್ರದಲ್ಲಿ ಸ್ವಾಭಾವಿಕ ಘರ್ಷಣೆ ಇರುತ್ತದೆ. ವಿದ್ಯಾರ್ಥಿಗಳು ಕೂಡಾ ಶಿಕ್ಷಕರ ಹೊಸ ವಿಚಾರಗಳಿಗೆ ಒಂದು ವಿಧದ ಪ್ರತಿರೋಧವನ್ನು ಬೆಳೆಸಿಕೊಂಡಿದ್ದಾರೆ. ಶಿಕ್ಷಕರಿಂದಾಗಿ ಬಲಿಪಶುಗಳಾಗಿದ್ದೇವೆ ಎಂಬ ಭಾವನೆ ಅವರಲ್ಲಿ ಇದೆ. ಇನ್ನೊಂದು ದಿಕ್ಕಿನಲ್ಲಿ ಪಾತ್ರದ ಇಲಾಖಾ ನಿಯಮಗಳು, ನಿಬಂಧನೆಗಳು ಮತ್ತು ನಿರೀಕ್ಷೆಗಳಿಂದ ಶಿಕ್ಷಕರು ಕೈಕಟ್ಟಿದವರಾಗಿದ್ದಾರೆ. ಅವರಿಗೆ ವಿದ್ಯಾರ್ಥಿಗಳೊಂದಿಗೆ ಸಂವಹನದ ದಾರಿಯನ್ನು ಸ್ಥಾಪಿಸಲು ಕಷ್ಟವಾಗುತ್ತಿದೆ.

**ಹೊಸ ಪಾತ್ರಗಳಿಗೆ ಶಿಕ್ಷಕರನ್ನು ತರಬೇತುಗೊಳಿಸುವುದು**

**ವೀಕ್ಷಕನ ಪಾತ್ರದಲ್ಲಿ ಶಿಕ್ಷಕ:** ತರಗತಿಯಲ್ಲಿ ಶಿಕ್ಷಕನು ಸದಾ ಒಬ್ಬ ವೀಕ್ಷಕ ಮತ್ತು ಕಲಿಯುವವನಾಗಿರಬೇಕು. ತರಗತಿಯಲ್ಲಿ ನಡೆಯುತ್ತಿರುವುದರಿಂದ ಕಲಿತುಕೊಳ್ಳುವ ಶಿಕ್ಷಕನ ಅವಶ್ಯಕತೆ ಪೂರ್ವ ನಿಯಾಮಕ ಮತ್ತು ಪ್ರತಿಫಲಿತ ಬೋಧನೆಯಲ್ಲಿ ಇರುತ್ತದೆ. ಅದರಲ್ಲಿಯೂ ವಿಶೇಷವಾಗಿ ಬೋಧನೆ–

Digitised by Bharatavani, CIIL

ಕಲಿಕೆಯಕಾರ್ಯವಿಧಾನದಲ್ಲಿ ಅವರ ಪಾತ್ರದಲ್ಲಿ ಇರುತ್ತದೆ. ಶಿಕ್ಷಕರು ಕಲಿಕಾ ಪರಿಸರದ ವೀಕ್ಷಕರಾಗಬಹುದು. ಈ ಕಲಿಕಾ ಪರಿಸರದಲ್ಲಿ ಇರುವಂತಹದು ಸ್ಥಳಾವಕಾಶದ ಬಳಕೆ, ಮಕ್ಕಳ ಚಲನೆಗಳು, ಕಲಿಯುವುದಕ್ಕಾಗಿ ಶಿಕ್ಷಕರು ಮತ್ತು ಮಕ್ಕಳ ಪರಸ್ಪರ ಕಾರ್ಯಗಳು, ಶಿಕ್ಷಕರ ಅಧ್ಯಾಪನ ಶೈಲಿಗಳು (ನೇರ, ನೇರವಲ್ಲದ) ಮತ್ತು ಮಕ್ಕಳು ಮತ್ತು ಅವರ ಸಮಸ್ಯೆಗಳ ಕುರಿತು ಶಿಕ್ಷಕರಲ್ಲಿ ಇರುವ ಸ್ವಂತ ಜ್ಞಾನ. ವೀಕ್ಷಣೆಯ ತರಬೇತಿಯನ್ನು ಪ್ರಾಯೋಗಿಕ ಅಧ್ಯಾಪನದ ಕಾಲದಲ್ಲಿ 'ಶಾಲಾ ಜೋಡಣೆಯ ಕಾರ್ಯಕ್ರಮ'ದ ಮೂಲಕ ನೀಡಬೇಕು ಮಕ್ಕಳು ಕಲಿಕೆಯ ಸಮೀಪ ಹೇಗೆ ಬರುತ್ತಾರೆ ಎಂಬುದನ್ನು ನಿರ್ಧರಿಸುವಲ್ಲಿ ಬುದ್ಧಿಶಕ್ತಿ ಮತ್ತು ಸಾಮಾಜಿಕ ವರ್ಗಗಳು ವ್ಯಕ್ತಿತ್ವಕ್ಕಿಂತ ಕಡಿಮೆ ಪ್ರಾಶಸ್ತ್ಯ ಹೊಂದಿರುತ್ತವೆ ಎಂಬುದನ್ನು ಶಿಕ್ಷಕರು ಅರಿಯುತ್ತಾರೆ ಎಂಬುದಾಗಿಯೂ ಶಿಕ್ಷಕರು ಶಿಕ್ಷಕರ ವೈಯಕ್ತಿಕ ಗುಣಲಕ್ಷಣಗಳ ಕಡೆ ಗಮನನೀಡಬೇಕು ಎಂಬುದಾಗಿಯೂ ಕೆಲವು ಮನಶ್ಶಾಸ್ತ್ರಜ್ಞರು ಭಾವಿಸುತ್ತಾರೆ. ಸಮಾನ ವ್ಯಕ್ತಿತ್ವ ಹೊಂದಿಲ್ಲದ ಮಕ್ಕಳು ಉದಾಹರಣೆಗೆ ಕುತೂಹಲಿಗಳು ಅಥವಾ ಕುತೂಹಲಿಗಳಲ್ಲದವರು ಕಲಿಕೆಯನ್ನು ಉತ್ಪಾದಿಸಲು ಉತ್ತಮ ರೀತಿಯಿಂದ ಕೆಲಸ ಮಾಡುತ್ತಾರೆ ಎಂಬುದನ್ನು ಕೂಡಾ ಸಂಶೋಧಕರು ಕಂಡುಕೊಂಡಿದ್ದಾರೆ.

**ಪಾತ್ರನಿರ್ವಹಣೆಯಲ್ಲಿರುವ ವಿಷಯಾಂಶಗಳು:**

ಶಿಕ್ಷಕರು ತಮ್ಮ ಪಾತ್ರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಗಮನ ನೀಡಬಹುದಾದ ಕೆಲವು ವಿಷಯಾಂಶಗಳನ್ನು ಮೊಯೆಲ್ಸ್ (1997) ಗುರುತಿಸಿದ್ದಾರೆ.

- ಸಮಾನ ರೀತಿಯಲ್ಲಿ ಪ್ರತಿಯೊಬ್ಬ ಮಗುವಿನ ಬಳಿಬರುವುದು; ಮಕ್ಕಳು ವಾರದ ಅವಧಿಯಲ್ಲಿ ಒಂದೇ ಪ್ರಮಾಣದ ಸಮಯವನ್ನು ಪಡೆಯುವುದು; ಪಠ್ಯಕ್ರಮದ ವಿಭಿನ್ನ ಮಗ್ಗಲುಗಳಲ್ಲಿ ಕೆಲಸ ಮಾಡುವುದು; ಲಿಂಗ, ಜನಾಂಗ, ವಯಸ್ಸು, ಸಾಮರ್ಥ್ಯ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಮಕ್ಕಳನ್ನು ಸಮಾನ ರೀತಿಯಲ್ಲಿ ನಡೆಸಿಕೊಳ್ಳುವುದು.
- ತರಗತಿಯಲ್ಲಿ ಶಿಕ್ಷಕರು ಪ್ರಸ್ತುತಪಡಿಸುವ ಮಾದರಿ; ನಿರ್ದಿಷ್ಟ ಗುಂಪುಗಳ ಕುರಿತಾದ ಸಾಮಾನ್ಯವಾಗಿ ಇರತಕ್ಕಂತಹ ಪರಿಭಾವನೆಯನ್ನು ದೂರವಿಡುವುದು.
- ಶಿಕ್ಷಕರು ತಮ್ಮ ಪಾಲಿನ ಎಲ್ಲಾ ಪಠ್ಯವಸ್ತು ವಿಷಯಗಳಿಗೆ ಸಾಕಷ್ಟು ಗಮನವನ್ನು ನೀಡುವುದು (ಉದಾ: ಕೆಲವು ಶಿಕ್ಷಕರು ಕಲೆ/ವಿನ್ಯಾಸ ಮತ್ತು ಪ್ರಾಯೋಗಿಕ ವಿಜ್ಞಾನ ವಿಷಯಗಳನ್ನು ನಿರ್ಲಕ್ಷಿಸುತ್ತಾರೆ).
- ಶಿಕ್ಷಕರು ಪ್ರತಿಯೊಬ್ಬ ವಿದ್ಯಾರ್ಥಿಯೊಂದಿಗೆ ನಿಯಮಿತವಾಗಿ ಸಂಪರ್ಕವನ್ನು ಇಟ್ಟುಕೊಳ್ಳುವುದು.
- ದಾಖಲೆಗಳ ಉಪಯೋಗವನ್ನು ಪಡೆಯುವುದು, ಪ್ರಗತಿ ಮತ್ತು ಸಾಧನೆಗಳನ್ನು ನಿಯಮಿತವಾಗಿ ತಿಳಿದುಕೊಳ್ಳುವುದು.
- ಶಿಕ್ಷಕರು ಕಂಡದ್ದರ ಮತ್ತು ಕೇಳಿದ್ದರ ಕುರಿತು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕೇ ವಿನಃ ಅವುಗಳ ವ್ಯಾಖ್ಯಾನಗಳನ್ನು ಕುರಿತು ಅಲ್ಲ. ಇದು ಅವರ ಮನಸ್ಸಿನ ಪೂರ್ವಗ್ರಹಗಳನ್ನು ಹೋಗಲಾಡಿಸಲು ಅಗತ್ಯವಿರುತ್ತದೆ.
- ಅಧ್ಯಯನಗಳು ಮಕ್ಕಳ ಮತ್ತು ಶಿಕ್ಷಕರ ಕೈಗೆಟಕುವಂತಿರುವುದು.

**ಮಕ್ಕಳಿಂದ ಕಲಿಕೆ : ಹೊಸ ಶಿಕ್ಷಣ ಮಾದರಿ:**

ಕಳೆದ ಮೂರು ಅಥವಾ ನಾಲ್ಕು ದಶಕಗಳಲ್ಲಿ ಮಕ್ಕಳ ಕಲಿಕೆಗೆ ಸಂಬಂಧಿಸಿದಂತೆ ಶೈಕ್ಷಣಿಕ ಪರಿಪಾಠಗಳಲ್ಲಿನ ಸಮಕಾಲೀನ ಚಿಂತನೆಯ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿದ ಅನೇಕ ಸಿದ್ಧಾಂತಗಳ ಸಾಧನೆಯನ್ನು ಅಂಗೀಕರಿಸಲಾಗಿದೆ ಎಂದು ಮೊಯೆಲ್ಸ್ (1997) ತಿಳಿಸುತ್ತಾರೆ. ತರಗತಿಯ ವಾತಾವರಣದಲ್ಲಿ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಪ್ರೋತ್ಸಾಹ ನೀಡಬಲ್ಲ ವಿಧಾನಗಳಾಗಿರುವ ವಿಭಿನ್ನ ಬುದ್ಧಿಶಕ್ತಿಗಳನ್ನು ಪರಿಗಣಿಸಿದಾಗ ಮೂಲಸ್ವರೂಪದಲ್ಲಿರುವ ಬುದ್ಧಿಶಕ್ತಿಯ ಕಲ್ಪನೆಯು ಕಡಿಮೆ ಉಪಯುಕ್ತವೆನಿಸಿದೆ. ಶಿಕ್ಷಕರ ಪಾತ್ರದ ಕೇಂದ್ರವಾಗಿರುವ ಎರಡು ಕಲಿಕಾ ವಿಷಯಾಂಶಗಳೆಂದರೆ ಸಂಗ್ರಹಣಶೀಲತೆ (ಜ್ಞಾನಾರ್ಜನೆ)ಯ ಪರಿಕಲ್ಪನೆ ಕೌಶಲಗಳ ಬೆಳವಣಗೆ.

**ಪರಿಕಲ್ಪನೆಗಳ ಸಂಗ್ರಹಣೆ:**

ಜ್ಞಾನಗ್ರಹಣದ ಸಂಪನ್ಮೂಲಗಳಲ್ಲಿ ಇರುವುದು ತಿಳಿವಳಿಕೆ, ಅರ್ಥೈಸುವಿಕೆ ಮತ್ತು ಪರಿಕಲ್ಪನೆಗಳನ್ನು ಗ್ರಹಿಸುವುದು. ಪರಿಕಲ್ಪನೆಗಳ ಅರ್ಥಪೂರ್ಣ ಗ್ರಹಿಕೆ ಬರುವುದು ಕಲಿಕಾ ಸಾಧನಗಳ ಗುಣಮಟ್ಟ ಮತ್ತು ಪ್ರಮಾಣದ ಮೂಲಕ. ಗುಣಮಟ್ಟದ ಕುರಿತಾಗಿ ಹೇಳುವುದಾದರೆ, ಮಕ್ಕಳು ಹೊಸ ವಿಚಾರಗಳನ್ನು ತಿಳಿದುಕೊಂಡು ಅದನ್ನು ತಾವು ಈಗಾಗಲೇ ತಿಳಿದುಕೊಂಡಿರುವ ವಿಚಾರಗಳೊಂದಿಗೆ ಜೋಡಿಸಿಕೊಳ್ಳುವುದು ಅತಿ ಮುಖ್ಯ. ಇದು 'ಆಳವಾದ' ಮತ್ತು 'ಅರ್ಥಪೂರ್ಣ' ಕಾರ್ಯವಿಧಾನವೆಂದು ಕರೆಯಲ್ಪಡುತ್ತದೆ. ಅರ್ಥ ಮಾಡಿಕೊಂಡ ಬಳಿಕ ಸಂಗ್ರಹಿಸಲಾದ ವಿಚಾರಗಳು ದೀರ್ಘ ಕಾಲಾವಧಿಗೆ ಉಳಿಯುವಂತಹವುಗಳು. ಇನ್ನು ಬರಿಯ ಬಾಯಿಪಾಠದಿಂದ ಕಲಿತವುಗಳು (ಉದಾ: ಬರಿ ಪದಗಳು ಮತ್ತು ಧ್ವನಿಗಳಿಂದ) ಬಹಳ ಸುಲಭವಾಗಿ ಕಳೆದು ಹೋಗುವಂತಹವು. ಕಲಿಯುವ ವ್ಯಕ್ತಿ ಎಷ್ಟು ಆಯ್ದುಕೊಳ್ಳುತ್ತಾನೆ ಎಂಬುದನ್ನು ಪ್ರಮಾಣ ಸೂಚಿಸುತ್ತದೆ. ಸಣ್ಣಮಗುವಿನಲ್ಲಿ ಕಾರ್ಯಾಗತ ನೆನಪಿನ ಶಕ್ತಿಯು ಪರಿಮಿತವಾಗಿರುತ್ತದೆ. ಅಭ್ಯಾಸ ಅಥವಾ ಪುನರಾವೃತ್ತಿ (ಬಾಯಿಪಾಠ) ಯು ವಿಚಾರಗಳ ಮತ್ತು ಆಸಕ್ತಿ(ಪ್ರಭಾವ, ವೈಯಕ್ತಿಕ ಪ್ರಾಮುಖ್ಯತೆ, ಹೊಸತನ) ಯ ದೀರ್ಘಾವಧಿ ಸಂಗ್ರಹವನ್ನು ಮತ್ತು ಆಸಕ್ತಿಯನ್ನು ಬಲಪಡಿಸುತ್ತದೆ ಮತ್ತು ಪರಿಕಲ್ಪನೆ ಸಂಗ್ರಹಣೆಯಲ್ಲಿ ಕೂಡಾ ನೆರವಾಗುತ್ತದೆ.

Digitised by Bharatavani, CIIL

**ಕೌಶಲ ಬೆಳವಣಿಗೆ:**

ಪ್ರಸಿದ್ಧ ರಷ್ಯಾದ ಮಾನವಶಾಸ್ತ್ರಜ್ಞ ಎಲ್.ಎಸ್. ವಿಗೊತಸ್ಕಿಯು ಬಹುಪಾಲು ಮಾನವ ಸಾಮರ್ಥ್ಯಗಳು ಒಂಟಿಯಾಗಿ ತಿಳಿದುಕೊಂಡವುಗಳಲ್ಲ, ಬೇರೆಯವರ ನೆರವಿನಿಂದ ಕಲಿತವುಗಳಾಗಿವೆ ಎಂದು ಸೂಚಿಸಿದ್ದಾನೆ. ಇವರು ಕಲಿಯುವವನಿಗೆ ಅರ್ಥಪೂರ್ಣವಾದ ಪ್ರತಿಪೂರ್ಣವಾದ ಪ್ರತಿಫಲದ ಶೋಧನೆಯ ಕಾರ್ಯಗಳನ್ನು ನಿರ್ವಹಿಸಲು ನೆರವಾಗುತ್ತಾರೆ. ನಾವು ದಿನನಿತ್ಯದ ಬದುಕಿನಲ್ಲಿ ಬೋಧನೆ ಅಥವಾ ಕೌಶಲ ಬೆಳವಣಿಗೆಯ ಈ ವೀಕ್ಷಣೆಯನ್ನು ಮಾಡುವುದರ ಮೂಲಕ ಕಲಿಕೆಗೆ ನೆರವಾಗುವುದು' ಎಂಬುದಾಗಿ ಅಳವಡಿಸಿಕೊಳ್ಳಬಹುದಾಗಿದೆ. ಅಂತಿಮವಾಗಿ, ಹೊಸ ಶಿಕ್ಷಣ ಮಾದರಿಯು ವಿದ್ಯಾರ್ಥಿ ಮತ್ತು ಶಿಕ್ಷಕರ ಕುರಿತು ವಿಭಿನ್ನ ದೃಷ್ಟಿಯನ್ನು ನೀಡುತ್ತದೆ. ವಿದ್ಯಾರ್ಥಿಗಳು ಕಲಿಯುವ ವಿಧಾನ ಮತ್ತು ಸಾಮರ್ಥ್ಯದ ಕುರಿತಾದ ಸಾಂಪ್ರದಾಯಿಕ ಅವಲೋಕನ ಇವುಗಳ ಕುರಿತಾದ ನಮ್ಮ ಅರ್ಥೈಸುವಿಕೆಯಲ್ಲಿ ವಿಗೊತಸ್ಕಿಯ ಬೋಧನಾ ಕಲೆ, ರಚನಾತ್ಮಕತೆ ಮತ್ತು ಹಾವರ್ಡ್ ಗಾರ್ಡನರ್ ಅವರು ಪ್ರೋತ್ಸಾಹಿಸಿರುವ ಬಹ್ವಂಶ ಬುದ್ಧಿಮತ್ತೆಗಳ ಹೊಸ ಸಿದ್ಧಾಂತಗಳು ಅಮೂಲಾಗ್ರ ಬದಲಾವಣೆಯನ್ನು ಉಂಟು ಮಾಡಿವೆ.

**ಮಾಹಿತಿ ತಂತ್ರಜ್ಞಾನ (ಐಟಿ) ಕೌಶಲಗಳ ಸಂಗ್ರಹಣೆ :**

ಇದನ್ನು ಶಾಲಾ ವ್ಯಾಸಂಗಕ್ರಮದಲ್ಲಿ ತುಂಬಬೇಕಾಗುತ್ತದೆ. ಮಾಹಿತಿ ತಂತ್ರಜ್ಞಾನದ ಕುರಿತು ಶಿಕ್ಷಕರ ಪಾತ್ರ ಹೀಗಿರಬೇಕಾಗುತ್ತದೆ:

* ಮೂಲಭೂತ ಮಾಹಿತಿ ತಂತ್ರಜ್ಞಾನವನ್ನು ಹೊಂದಿರುವುದು.
* ಕಲಿಕಾ ಉದ್ದೇಶಗಳ ನೆರವೇರಿಕೆಗೆ ಅನೇಕ ವಿಧದ ನಿರ್ವಹಣಾ ಚಾತುರ್ಯ.
* ಮಾಹಿತಿ ತಂತ್ರಜ್ಞಾನವನ್ನು ಆಧರಿಸಿದ ಕಲಿಕಾ ಚಟುವಟಿಕೆಗಳನ್ನು ವಿನ್ಯಾಸಗೊಳಿಸುವುದರಲ್ಲಿ ಬೋಧನಾ ವೃತ್ತಿಯ ನಿಯಮಗಳನ್ನು ಅನ್ವಯಿಸುವುದು.
* ಅಭ್ಯಾಸಿಗಳ ಉನ್ನತ ಮಟ್ಟದ ಆಲೋಚನಾ ಕೌಶಲಗಳು ಸೃಜನಾತ್ಮಕತೆ ಮತ್ತು ಸಂವಹನ ಕೌಶಲಗಳನ್ನು ಬೆಳೆಸಲು ತಂತ್ರಜ್ಞಾನವನ್ನು ಬಳಸುವುದು.

**ಶಿಕ್ಷಕರು ಆಪ್ತ ಸಲಹಾಕಾರರಾಗಿ :**

ಹೊಸ ಶಿಕ್ಷಕರಿಗೆಂದು ಶಾಲೆಯಲ್ಲಿ ನಿಯುಕ್ತರಾದ ಆಪ್ತ ಸಲಹಾಕಾರರು ಇರಬೇಕಾಗುತ್ತದೆ. ಇದರಿಂದ ಶಿಕ್ಷಕರು ಇವರೊಂದಿಗೆ ಸಂದರ್ಭೋಚಿತವಾಗಿ ಪ್ರಗತಿ ಅಥವಾ ತೊಂದರೆ ಕೊಡುವ ವಿದ್ಯಾರ್ಥಿಗಳೊಂದಿಗಿನ ವ್ಯವಹಾರ, ತರಗತಿಯ ಸಂಘಟನೆ ಮತ್ತು ಆಡಳಿತಾತ್ಮಕ ವಿಚಾರಗಳು ಅಥವಾ ಸಾಮಾನ್ಯ ವೃತ್ತಿಪರ ಬೆಳವಣಿಗೆ ಇತ್ಯಾದಿಗಳ ಕುರಿತು ಮಾತುಕತೆ ನಡೆಸಬಹುದು. ಟಾಮ್‌ಲಿನ್‌ಸನ್ ಅವರು 1995ರಲ್ಲಿ ಪ್ರಕಟಿಸಿದ ತಮ್ಮ ಗ್ರಂಥ ಅಂಡರ್‌ಸ್ಟಾಂಡಿಂಗ್ ಮೆಂಟರಿಂಗ್‌ನಲ್ಲಿ ಶಾಲಾ ಆಧಾರಿತ ಶಿಕ್ಷಕ ತಯಾರಿಗಾಗಿ ಪರ್ಯಾಲೋಚನೆಯ ತಂತ್ರಗಳನ್ನು ನೀಡಿದ್ದಾರೆ. ಬ್ರಿಟನ್‌ನಂತಹ ಕೆಲವು ದೇಶಗಳಲ್ಲಿ, ಸರಕಾರವು ಶಾಲಾ ಆಧರಿತ ಶಿಕ್ಷಕ ತರಬೇತಿಗಳ ನಿಯಮವನ್ನು ಜಾರಿಗೊಳಿಸಿದೆ. ಅಲ್ಲಿ ಶಾಲಾ ಶಿಕ್ಷಕರು ಆಪ್ತಸಲಹೆಗಾರರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಪ್ರಾಯೋಗಿಕ ಚಟುವಟಿಕೆಯಾಗಿ ಬೋಧನಾ ಅಭ್ಯಾಸದಲ್ಲಿ ತೊಡಗಿಕೊಳ್ಳುವುದರ ಮೂಲಕ ಬೋಧನೆಯನ್ನು ಕಲಿಯುವ ಅಗತ್ಯವಿರುತ್ತದೆ. ಶಿಕ್ಷಕರು ನಂತರ ತಮ್ಮ ವೃತ್ತಿಯಲ್ಲಿ ಎಲ್ಲವನ್ನೂ ತಮ್ಮ ಸ್ವಂತ ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯ ಆಧರಿತ ಪಠ್ಯಕ್ರಮಗಳಿಗೆ ನಿವೇದಿಸಿಕೊಳ್ಳುತ್ತಾರೆ. ದುರದೃಷ್ಟವಶಾತ್ ನಮ್ಮ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಶಿಕ್ಷಕರ ತರಬೇತಿಯಲ್ಲಿ ಶಾಲಾ ಶಿಕ್ಷಕರನ್ನು ತೊಡಗಿಸಿಕೊಳ್ಳುವಿಕೆಯು ಬಹಳ ಕಡಿಮೆ. ಶಿಕ್ಷಾರ್ಥಿಗಳು ಯಾವಾಗಲೂ ತರಬೇತಿ ಮಹಾವಿದ್ಯಾಲಯದ ಮೇಲ್ವಿಚಾರರ ಕಡೆಗೆ ನೋಡುತ್ತಿದ್ದಾರೆ. ಈ ಮೇಲ್ವಿಚಾರಕರು ತಮ್ಮ ಪಾಠಗಳ ಮೇಲ್ವಿಚಾರಣೆಯನ್ನು ನಡೆಸಬಹುದು ಅಥವಾ ನಡೆಸದೇ ಇರಬಹುದು. 'ಆಪ್ತ ಸಲಹೆ'ಯ ಪರಿಕಲ್ಪನೆಯು ಶಿಕ್ಷಕ ತರಬೇತಿ ಮಾದರಿಯಲ್ಲಿ 'ಸಹಕರಿಸುವ ಶಿಕ್ಷಕರು'ಗಳ ಪಾತ್ರವನ್ನು ಹೋಲುತ್ತದೆ. ಈ ಅನುಸಂಧಾನದಲ್ಲಿ ಶಿಕ್ಷಕರು ಶಾಲೆಯಲ್ಲಿ ಪೂರ್ಣಾವಧಿಯ ಉದ್ಯೋಗಿಗಳಾಗಿರುತ್ತಾರೆ ಮತ್ತು ವ್ಯಾಪಕ ವಿಧದ ಶಿಕ್ಷಕ ಪಾತ್ರಗಳಿಗಾಗಿ ತರಬೇತಿಯನ್ನು ಪಡೆಯುತ್ತಾರೆ.

ವಿದ್ಯಾರ್ಥಿ-ಶಿಕ್ಷಕರಿಗೆ ಆಪ್ತ ಸಲಹೆಯು ಕ್ರಿಯಾಶೀಲ ನೆರವನ್ನು ನೀಡುತ್ತದೆ. ಇದರಲ್ಲಿ ಈ ಕೆಳಗಿನ ಮೂಲಭೂತ ಕಾರ್ಯಗಳನ್ನು ನಡೆಸಲಾಗುತ್ತದೆ:

* ಬೋಧನೆಗೆ ಸಂಬಂಧಿಸಿದ ಅರಿವು ಮತ್ತು ವಿಧಾನಗಳನ್ನು ಕಂಡುಕೊಳ್ಳುವುದು.
* ಬೋಧನಾ ವೃತ್ತವನ್ನು ಹೊಂದಿರುವ ಬೋಧನಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು:

ಯೋಜನೆ/ಪ್ರತಿಫಲಿತ ಬೋಧನೆ/ಪ್ರಯತ್ನ-ಕಾರ್ಯನಿರ್ವಹಣೆ ಮೇಲುಸ್ತುವಾರಿ/ ಫಲಿತಾಂಶ.

* ಈ ಚಟುವಟಿಕೆಗಳನ್ನು ಮತ್ತು ಇದರ ಪರಿಣಾಮಗಳನ್ನು ಎಚ್ಚರಿಕೆಯಿಂದ ಗಮನಿಸುವುದು.
* ಪ್ರತಿಫಲನದ ಬೆಳಕಿನಲ್ಲಿ ತಂತ್ರಗಳನ್ನು ಮತ್ತು ಅರಿವನ್ನು ಅಳವಡಿಸಿಕೊಳ್ಳುವುದು.

**ಪರಿಣಾಮಕಾರಿ ಶಿಕ್ಷಕರ ಪಾತ್ರಗಳು ಕೆಲವು ಗುಣಲಕ್ಷಣಗಳು :**

ಮೊಯಿಲ್ಸ್ (1997) ನ್ನು ಪರಿಣಾಮಕಾರಿ ಶಿಕ್ಷಕರ ಕೆಲವು ವಿಶಿಷ್ಟ ಗುಣಲಕ್ಷಣಗಳು ಮತ್ತು ಪಾತ್ರಗಳನ್ನು ಗುರುತಿಸಿದ್ದಾನೆ.

* ಧನಾತ್ಮಕವಾದ ಮತ್ತು ಏಕರೂಪತೆಯನ್ನು ಹೊಂದಿರುವ ಅಭ್ಯಾಸಕ್ಕೆ ಸೂಕ್ತವೆನಿಸುವ ವಾತಾವರಣ (ಪರಿಸರ)ವನ್ನು

Digitised by Bharatavani, CIIL

ಸೃಷ್ಟಿಸುವುದು.

- ಪ್ರಗತಿಪರತ್ವವನ್ನು ಹೊಂದಿರುವ ಪಠ್ಯಕ್ರಮವನ್ನು ಚೌಕಟ್ಟನ್ನು ತಯಾರಿಸುವುದು.
- ಸಂಪನ್ಮೂಲಗಳು ಮತ್ತು ಆವಶ್ಯಕ ವಸ್ತುಗಳ ವ್ಯವಸ್ಥಿತ ಸಂಘಟನೆ.
- ಪಠ್ಯಕ್ರಮದ ಅಗತ್ಯಗಳಿಗೆ ಅನುಗುಣವಾದ ತರಗತಿ ಕೋಣೆ ಮತ್ತು ಉತ್ತಮ ರೀತಿಯಿಂದ ರೂಪಿಸಲಾದ ತರಗತಿ ವೇಳಾಪಟ್ಟಿಗಳ ವ್ಯವಸ್ಥೀಕರಣ.
- ವಿಧಿಸಲಾದ ಕಾರ್ಯಗಳು ಮತ್ತು ಚಟುವಟಿಕೆಗಳ ಬಹು ವಿಧದ ಪ್ರದರ್ಶನ.
- ಸಮಯದ ಪರಿಣಾಮಕಾರಿ ಬಳಕೆ.
- ತನ್ನನ್ನು ಮತ್ತು ತರಗತಿಯನ್ನು ಉನ್ನತಮಟ್ಟದಲ್ಲಿ ಪ್ರಸ್ತುತಪಡಿಸುವುದು.
- ಉದ್ದೇಶಗಳಲ್ಲಿ ಮತ್ತು ಮಕ್ಕಳೊಂದಿಗೆ ಹಂಚಿಕೊಳ್ಳುವುದರಲ್ಲಿ ನಿಚ್ಚಳತೆ.
- ಮಕ್ಕಳಿಗೆ ಅವರ ಕಲಿಕೆಯ ಕುರಿತು ಉಪಯುಕ್ತ ಮರು ತಿಳಿವಳಿಕೆಯನ್ನು ಪ್ರತ್ಯಾದಾನವನ್ನು ನೀಡುವುದು ಮತ್ತು ಮಕ್ಕಳ ಸ್ವ-ಮೌಲ್ಯಮಾಪನದಲ್ಲಿ ನೆರವಾಗುವುದು.
- ಮಕ್ಕಳಿಗೆ ಸ್ವಾವಲಂಬಿಯಾಗಲು ಮತ್ತು ಅವರ ಅಂತರಂಗದ ಪ್ರೇರಣೆಗೆ ಪ್ರೋತ್ಸಾಹ ನೀಡುವುದು.
- ಚಟುವಟಿಕೆಗಳು ಮತ್ತು ನಡವಳಿಕೆಗೆ ಸಂಬಂಧಿಸಿದಂತೆ ಎಲ್ಲ ಮಕ್ಕಳ ಬಗ್ಗೆ ಉನ್ನತ ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು.
- ಮಕ್ಕಳ ಅಗತ್ಯಗಳಿಗೆ ಅನುಗುಣವಾದ ಕಲಿಕೆ.
- ಬೋಧನೆ-ಕಲಿಕೆಯ ಸಿದ್ಧಾಂತಗಳನ್ನು ಮತ್ತು ತರಗತಿಯ ಕಾರ್ಯಾಚರಣೆಗಳನ್ನು ಸಮನ್ವಯಗೊಳಿಸುವುದು ಮತ್ತು ವಿಶ್ಲೇಷಿಸುವುದು.
- ಬೋಧನೆ ಮತ್ತು ಕಲಿಕಾ ವಾತಾವರಣದ ನಿಯಮಿತ ಮೌಲ್ಯಮಾಪನ.

ಮೇಲೆ ಉಲ್ಲೇಖಿಸಿದ ಗುಣಲಕ್ಷಣಗಳು ಮತ್ತು ರೀತಿಯಲ್ಲಿ ಶಿಕ್ಷಕರ ಪಾತ್ರಗಳೇ ಆಗಿವೆ. ಇವು ಸಂದರ್ಭೋಚಿತ ಎನ್ನುವುದಕ್ಕಿಂತ ಸಾರ್ವತ್ರಿಕವಾಗಿವೆ. ಆದುದರಿಂದ ಇವು ನಮ್ಮ ಪರಿಸ್ಥಿತಿಗೆ ಸಮಾನ ರೀತಿಯಿಂದ ಉತ್ತಮವಾಗಿ ಅನ್ವಯಿಸುತ್ತವೆ.

ಭಾರತೀಯ ಶಿಕ್ಷಕರು ನಿರ್ವಹಿಸುವ ಪಾತ್ರಗಳಿಗೆ ವಿಶಿಷ್ಟವೆನಿಸುವ ಕೆಲವು ಪಾರಿಭಾಷಿಕ ಪದಗಳನ್ನು ಈ ಕೆಳಗಿನ ವಿಭಾಗದಲ್ಲಿ ನೀಡಲಾಗಿದೆ.

ಶಿಕ್ಷಕರ ಕೆಲವು ವರ್ಷಗಳಲ್ಲಿ ಶಿಕ್ಷಕರ ಪಾತ್ರಗಳು ಪರಿವರ್ತನೆಗೆ ಒಳಪಟ್ಟಿದೆ. ಇದಕ್ಕೆ ಕಾರಣ –ಶಿಕ್ಷಕರು ಹೊಸ ಕಾರ್ಯನೀತಿಗಳಿಗೆ, ಅಗತ್ಯಗಳಿಗೆ ಮತ್ತು ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಂಡಿರುವುದು. ಈ ವಿಭಾಗದಲ್ಲಿ ಐದು ಉಪವಿಭಾಗಗಳು ಇವೆ ಇವುಗಳನ್ನು ಈ ಕೆಳಗಿನ ಅಧ್ಯಯನ ಶೀರ್ಷಿಕೆಗಳಲ್ಲಿ ವಿಷಯಾಂಶಗಳೊಂದಿಗೆ ಪ್ರಸ್ತಾಪಿಸಲಾಗಿದೆ:

ಶಿಕ್ಷಕರು: ಉದ್ಯೋಗ ಶೀರ್ಷಿಕೆಗಳು/ಹುದ್ದೆಗಳ ಹೆಸರುಗಳು

ಶಾಲೆಗಳು: ಹೆಸರುಗಳು/ಶಿರೋನಾಮೆಗಳು

ಶಿಕ್ಷಕರು: ಪಾತ್ರಗಳು/ಕಾರ್ಯಗಳು

ಶಿಕ್ಷಕರ ಶಿಕ್ಷಣ: ಸಂಸ್ಥೆಗಳು, ರಚನೆಗಳು

ಕಲಿಕಾ ವಸ್ತುಗಳು: ಗ್ರಂಥಗಳು/ಬೋಧನಾ ಸಾಮಗ್ರಿಗಳು ಇತ್ಯಾದಿ.

**1. ಶಿಕ್ಷಕರು: ಉದ್ಯೋಗ ಶೀರ್ಷಿಕೆಗಳು/ಹುದ್ದೆಗಳ/ಹೆಸರುಗಳ:**

ಬಾಲವಾಡಿ/ಅಂಗನವಾಡಿ ಕಾರ್ಯಕರ್ತರು; ಶಿಶುವಿಹಾರದ ಶಿಕ್ಷಕರು; ಪ್ರಾಥಮಿಕ ಶಿಕ್ಷಕ; ಸಹಾಯಕ ಶಿಕ್ಷಕ; ತರಬೇತಿ ಹೊಂದಿದ ಪದವೀಧರ ವೃತ್ತಿಪರ ಪದವಿ ಶಿಕ್ಷಕ; ವೃತ್ತಿಪರ ಮಾರ್ಗದರ್ಶಕ ಶಿಕ್ಷಕ; ಸ್ನಾತಕೋತ್ತರ ಶಿಕ್ಷಕ; ಮಾಸ್ತರರು/ಮಾಸ್ತರಿಣಿಯರು; ಅನೌಪಚಾರಿಕ ಶಿಕ್ಷಣ ಬೋಧಕ; ಸಹಜ್ ಶಿಕ್ಷಾ ಕೇಂದ್ರದ ಶಿಕ್ಷಕ; ಶಿಕ್ಷಾ ಕರ್ಮಿ; ವಿಶೇಷ ಶಿಕ್ಷಕ; ದೃಶ್ಯ ಕಲೆಗಳು(ಕಲೆ/ಚಿತ್ರಕಲೆ/ವರ್ಣಕಲೆ); ಪ್ರದರ್ಶನ ಕಲೆಗಳು (ನೃತ್ಯ, ನಾಟಕ, ಸಮುದಾಯಿಕ ಹಾಡುಗಾರಿಕೆ); ದೈಹಿಕ ಶಿಕ್ಷಣ ಶಿಕ್ಷಕ; ಕರಕುಶಲ/ಕಾರ್ಯಾನುಭವಿ ಶಿಕ್ಷಕ; ಸಹಕಾರ ನೀಡುವ ಶಿಕ್ಷಕ; ಸಹಕಾರ ನೀಡುವ ಮುಖ್ಯೋಪಾಧ್ಯಾಯ/ಪ್ರಾಂಶುಪಾಲ ಇತ್ಯಾದಿ.

**2. ಶಾಲೆಗಳು: ಹೆಸರುಗಳು/ಶಿರೋನಾಮೆಗಳು:**

ನರ್ಸರಿ ಶಾಲೆ, ಕಿಂಡರ್‌ಗಾರ್ಟನ್ ಶಾಲೆ; ಬಾಲವಾಡಿ; ಅಂಗನವಾಡಿ; ಬುನಾದಿ ಪೂರ್ವ ಶಾಲೆ; ಸಾರ್ವಜನಿಕ ಶಿಶು ಸಂರಕ್ಷಣಾಲಯ (ಕ್ರೇಶ್); ಪ್ರಾಥಮಿಕ ಶಾಲೆ; ಮೂಲಶಿಕ್ಷಣ ಶಾಲೆ; ಆಂಗ್ಲ ಹಾಗೂ ಪ್ರಾಥಮಿಕ ಭಾಷಾ ಶಾಲೆ; ಮಾಧ್ಯಮಿಕ ಶಾಲೆ; ಬಾಲಮಂದಿರ; ಶಿಶು ವಿಹಾರ ಕೇಂದ್ರ; ಪ್ರೌಢ ಶಾಲೆ; ಉನ್ನತ ಮಾಧ್ಯಮಿಕ ಶಾಲೆ; ಬಹು ಉದ್ದೇಶದ ಶಾಲೆ; ಹಿರಿಯ ಮಾಧ್ಯಮಿಕ ಶಾಲೆ; ಡೆಮಾನ್‌ಸ್ಟ್ರೇಷನ್ ಶಾಲೆ; ವೃತ್ತಿಪರ ಹಿರಿಯ ಮಾಧ್ಯಮಿಕ ಶಾಲೆ; ಕೇಂದ್ರೀಯ ವಿದ್ಯಾಲಯ; ನವೋದಯ ವಿದ್ಯಾಲಯ; ರಾಷ್ಟ್ರೀಯ ಮುಕ್ತ ಶಾಲೆ; ಸೈನಿಕ ಶಾಲೆ ಇತ್ಯಾದಿ.

**3. ಶಿಕ್ಷಕರು: ಪಾತ್ರಗಳು/ಕಾರ್ಯಗಳು:**

ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಬೋಧನೆ; ಬಹುಶ್ರೇಣಿಯ ಏಕಶಿಕ್ಷಕ ಶಾಲಾ ಬೋಧನೆ; ಸುಗಮಗೊಳಿಸುವ ಕಲಿಕೆ; ಸಹಭಾಗಿತ್ವ ಮತ್ತು ಪ್ರತಿಕ್ರಿಯಾತ್ಮಕ ಗುಂಪುಗಳ ಬೋಧನೆ; ಎನ್‌ಎಫಿ/ಸಹಜ್ ಶಿಕ್ಷಾ ಕೇಂದ್ರ ಬೋಧನೆ; ಶಿಕ್ಷಾ ಕರ್ಮಿ ಬೋಧನೆ; ಮಾರ್ಗದರ್ಶನದ ಸಂಘಟನೆ/ಕಸಬು ಶಿಕ್ಷಣ ಚಟುವಟಿಕೆಗಳು; ಬೆಳಗಿನ ಸಭೆಯನ್ನು ಸಂಘಟಿಸುವುದು/ಸಾಮುದಾಯಿಕ ಹಾಡುಗಾರಿಕೆ; ಹುಡುಗರ

Digitised by Bharatavani, CIIL

ಸ್ಕೌಟ್ (ಚಮೂ) ಹುಡುಗಿಯರ ಗೈಡ್ (ಮಾರ್ಗದರ್ಶಿ) ಚಟುವಟಿಕೆಗಳು : ವಿಶೇಷ ಅಗತ್ಯಗಳನ್ನುಳ್ಳ ಮಕ್ಕಳ ಸಮಾಲೋಚನೆ; ಗಣಕಯಂತ್ರ ಆಧಾರಿತ ಅಧ್ಯಯನವನ್ನು ಏರ್ಪಡಿಸುವುದು; ಸಾಕ್ಷರತಾ ಕೌಶಲಗಳನ್ನು ತಿಳಿಸಿಕೊಡುವುದು (ಎನ್‌ಎಫ್‌ಇ/ಎಇ); ಪ್ರಶಿಕ್ಷಣಾರ್ಥಿಗಳ ಮೇಲ್ವಿಚಾರಣೆ ನಡೆಸುವುದು; ಪಿಇಸಿ/ಪಿಟಿಎ ಚಟುವಟಿಕೆಗಳ ಮೂಲಕ ಸಮುದಾಯ ಮತ್ತು ಹೆತ್ತವರೊಂದಿಗೆ ಸಂಬಂಧ ಏರ್ಪಡಿಸುವುದು; ನೀತಿ/ಮೌಲ್ಯ ಶಿಕ್ಷಣ ಚಟುವಟಿಕೆಗಳನ್ನು ಸಂಘಟಿಸುವುದು; ಜನಸಂಖ್ಯಾ ಶಿಕ್ಷಣ/ಪರಿಸರ ನೈರ್ಮಲ್ಯ ಚಟುವಟಿಕೆಗಳನ್ನು ನಡೆಸುವುದು; ವಿಶೇಷ ವ್ಯವಸ್ಥಿತ ಪ್ರಯತ್ನ (ಆರೋಗ್ಯ, ಸಾಕ್ಷರತೆ) ಸ್ವಾತಂತ್ರ್ಯ ಗಣರಾಜ್ಯ ದಿನ ಇತ್ಯಾದಿಗಳ ಕಾರ್ಯಕ್ರಮಗಳನ್ನು ಸಂಘಟಿಸುವುದು; ಎನ್‌ಸಿಸಿ/ಎನ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸುವುದು; ತುರ್ತುಪರಿಸ್ಥಿತಿಯಲ್ಲಿ ಪರಿಹಾರ ಕಾರ್ಯವನ್ನು ಸಂಘಟಿಸುವುದು; ಚುನಾವಣೆ ಮತ್ತು ಜನಗಣತಿ ಕಾರ್ಯಾಚರಣೆಗಳಲ್ಲಿ ಭಾಗವಹಿಸುವುದು.

**ಶಿಕ್ಷಕರ ಶಿಕ್ಷಣ: ಸಂಸ್ಥೆಗಳು/ರಚನೆಗಳು:**

ನಾರ್ಮಲ್ ಶಾಲೆಗಳು; ಮೂಲಶಿಕ್ಷಣ ತರಬೇತಿ ಸಂಸ್ಥೆಗಳು/ಶಾಲೆಗಳು; ಡಯಟ್‌ಗಳು; (Diet) ಶಿಕ್ಷಣ ಮಹಾವಿದ್ಯಾಲಯಗಳು; ಪೂರ್ವ ಪ್ರಾಥಮಿಕ ತರಬೇತಿ ಶಾಲೆಗಳು; ಶಿಕ್ಷಕ ಶಿಕ್ಷಣ ಮಾಧ್ಯಮಿಕ ಕಾಲೇಜುಗಳು (ಎಸ್‌ಟಿಸಿಇಗಳು); ವಿಶ್ವವಿದ್ಯಾಲಯ ಮಹಾವಿದ್ಯಾಲಯಗಳು/ಶಿಕ್ಷಣ ವಿಭಾಗಗಳು; ಶಿಕ್ಷಣದ ಉನ್ನತ ಅಧ್ಯಯನಗಳ ಸಂಸ್ಥೆಗಳು(ಐಎಎಸ್‌ಇಗಳು) ಶಿಕ್ಷಣದ ಉನ್ನತ ಅಧ್ಯಯನಗಳ ಕೇಂದ್ರ (ಸಿಎಎಸ್‌ಇ); ವಿಚಾರಸಂಕಿರಣಗಳು, ಅಧಿವೇಶನಗಳು; ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ತರಬೇತಿಯ ಕ್ಯಾಸ್ಕೇಡ್ ಮಾದರಿ ತರಬೇತಿ ಶಿಕ್ಷಕರ ಸೇವಾ ಪೂರ್ವ ತರಬೇತಿ ಶಿಕ್ಷಕರ ಸೇವಾನಿರತ ತರಬೇತಿ, ಕಾರ್ಯಕ್ರಮಗಳು (ಪಿಎಮ್‌ಒಎಸ್‌ಟಿ) ಮಾಧ್ಯಮಿಕ ಶಿಕ್ಷಕರ ವಿಶೇಷ ಮನೋಭಾವದ (ಎಸ್‌ಒಪಿಟಿ), ವಿಶೇಷ ಶಿಕ್ಷಕ/ಕಾರ್ಯಕ್ರಮಗಳು, ಒಟ್ಟಾರೆ ಶಿಕ್ಷಕರ ಸಮೂಹ ಮನೋಭಾವ ಶಿಕ್ಷಣ ಇತ್ಯಾದಿ.

**ಕಲಿಕಾ ವಸ್ತುಗಳು: ಗ್ರಂಥಗಳು/ಬೋಧನಾ ಸಾಮಗ್ರಿಗಳು:**

ಪಠ್ಯಪುಸ್ತಕಗಳು; ಶಿಕ್ಷಕರ ಮಾರ್ಗದರ್ಶಿಗಳು; ಪೂರಕ ವಾಚನ ಸಾಮಗ್ರಿಗಳು; ಧ್ವನಿ–ದೃಶ್ಯ ಸಹಾಯಕಗಳು; ಪಾಠ ನೋಟ್‌ಪುಸ್ತಕ; ಮೇಲ್ವಿಚಾರಣೆಯ ನೋಟ್‌ಪುಸ್ತಕ; ದೂರ–ಸಮಾಲೋಚನೆ; ಸ್ವಕಲಿಕಾ ಸಾಮಗ್ರಿಗಳು; ಶಿಕ್ಷಣ ಘಟಕಗಳು; ಪಠ್ಯಕ್ರಮದ ಚೌಕಟ್ಟು ಇತ್ಯಾದಿ.

**ಮೂಲ: ಜೆ.ಎಸ್. ಗ್ರೆವಾಲ್**
**ಅನು: ಡಾ. ಗೀತಾ ಶೆಣೈ**

## ಶಿಕ್ಷಕರಿಗೆ ವೃತ್ತಿಪರ ನೀತಿತತ್ವಗಳು (ಸುವ್ಯವಹಾರ ನಿಯಮಗಳು)

**ಪ್ರವೇಶ:**

ಪ್ರತಿಯೊಂದು ವೃತ್ತಿಯು ಅದರ ಸದಸ್ಯರ ನಡತೆ ಮತ್ತು ವರ್ತನೆಗೆ ಮಾರ್ಗದರ್ಶನ ನೀಡಬಲ್ಲ ನೈತಿಕ ನಿಯಮಗಳ ವ್ಯವಸ್ಥೆ ಹೊಂದಿರುವುದನ್ನು ನಿರೀಕ್ಷಿಸಲಾಗುತ್ತದೆ. ಈ ನೈತಿಕ ನಿಯಮಗಳು ಅಪೇಕ್ಷಿತ ಮತ್ತು ಅನಪೇಕ್ಷಿತ ವೃತ್ತಿಪರ ನಡತೆ ಅಥವಾ ವರ್ತನೆಯ ನಡುವೆ ವ್ಯತ್ಯಾಸ ಕಾಣಲು ತಳಹದಿಯನ್ನು ಒದಗಿಸುತ್ತದೆ. ನೈತಿಕತೆಯು ನೀತಿ ನಿಯಮಗಳನ್ನು ಉದ್ದೇಶಿಸಿ ಇರುತ್ತದೆ. ಸಾಮಾನ್ಯವಾಗಿ ಇದು ವ್ಯಕ್ತಿ ಅಥವಾ ಗುಂಪಿನಿಂದ ಸ್ವಯಂ ಪ್ರೇರಿತವಾಗಿ ಸ್ವೀಕೃತವಾಗುತ್ತದೆ. ವೃತ್ತಿಪರ ನೀತಿತತ್ವಗಳ ಸಂಹಿತೆಯೆಂದರೆ ವೃತ್ತಿಯಲ್ಲಿ ಉತ್ಕೃಷ್ಟತೆಯನ್ನು ಮತ್ತು ಸಂತೃಪ್ತಿಯನ್ನು ಸಾಧಿಸಲು ಅಗತ್ಯವಿರುವ ಸ್ವಯಂ ಆರೋಪಿತ ವೃತ್ತಿಪರ ಆದರ್ಶ ಧ್ಯೇಯಗಳು ಮತ್ತು ನಿಯಮಗಳ ಸಮಷ್ಟಿ ಎಂದು ವ್ಯಾಖ್ಯಾನಿಸಬಹುದು. ಸಾಮಾನ್ಯವಾಗಿ ವೃತ್ತಿಪರ ನೀತಿತತ್ವಗಳ ಸಂಹಿತೆಯು ಎರಡು ನಿಯಮಗಳನ್ನು ಆಧರಿಸಿ ಇರುತ್ತದೆ. ಅವೆಂದರೆ ವೃತ್ತಿಪರ ಪ್ರಾಮಾಣಿಕತೆ ಮತ್ತು ಸಮಾಜಕ್ಕೆ ಸೇವೆ ಸಲ್ಲಿಸುವ ಆದರ್ಶ.

**ಶಿಕ್ಷಕರ ಪಾತ್ರಗಳು ಮತ್ತು ಜವಾಬ್ದಾರಿಗಳು:**
**ಚಾರಿತ್ರಿಕ ದೃಷ್ಟಿಕೋನ:**

ಪ್ರಾಚೀನ ಭಾರತದಲ್ಲಿ ಗುರುವಿಗೆ ಅತ್ಯಂತ ಉನ್ನತ ಮಟ್ಟ ಮತ್ತು ಸ್ಥಾನಮಾನಗಳಿದ್ದವು. ಗುರುವಿನಲ್ಲಿರುವ ಬೌದ್ಧಿಕತೆ ಮತ್ತು ಅಧ್ಯಾತ್ಮಿಕ ಗುಣಲಕ್ಷಣಗಳಿಂದ ಗುರುವನ್ನು ತ್ರಿಮೂರ್ತಿಗಳಿಗೆ ಸಮಾನವಾಗಿ ಗುರುತಿಸಿರುವುದನ್ನು ಈ ಕೆಳಗಿನ ಶ್ಲೋಕ ತೋರಿಸಿಕೊಡುತ್ತದೆ:

**ಗುರು ಬ್ರಹ್ಮಃ ಗುರುರ್ವಿಷ್ಣು: ಗುರುದೇವೋ ಮಹೇಶ್ವರಃ**

**ಗುರುಸಾಕ್ಷಾತ್ ಪರಬ್ರಹ್ಮಃ ತಸ್ಮೈ ಶ್ರೀ ಗುರವೇ ನಮಃ**

ಗುರುವು ಮುಖ್ಯವಾಗಿ ಆಧ್ಯಾತ್ಮಿಕ ವ್ಯಕ್ತಿ. ಆತ ನಿಜವಾಗಿಯೂ ಅತ್ಯುನ್ನತ ಬ್ರಹ್ಮನ್ ಮತ್ತು ಪರಮಸುಖವನ್ನು ಮೈದಾಳಿದವನು. ಹೀಗಾಗಿ ಸಾಮಾನ್ಯವಾಗಿ ಬ್ರಹ್ಮನಿಗೆ, ವಿಷ್ಣುವಿಗೆ ಮತ್ತು ಶಿವನಿಗೆ ಮೀಸಲಾಗಿರುವ ವಂದನೆಗಳು ಗುರುವಿಗೆ ಸಲ್ಲುತ್ತವೆ.

ಪ್ರಾಚೀನ ಕಾಲದ ಭಾರತದಲ್ಲಿ ಗುರುಗಳಿಗೆ ಮೀಸಲಾದ ವಿಶೇಷ ನಡವಳಿಕೆಯ ಔಪಚಾರಿಕ ಲಿಖಿತ ಸಂಕೇತ ಇರಲಿಲ್ಲ. ಆದರೆ ಅನೇಕ ಪ್ರಾಚೀನ ಗ್ರಂಥಗಳಲ್ಲಿ ಶಿಕ್ಷಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಕಾಣಲು ಸಿಗುತ್ತವೆ. ಮನುಸ್ಮೃತಿಯಲ್ಲಿ ವರ್ಣಿಸಲಾದ ಬ್ರಾಹ್ಮಣನ(ಗುರುವಿನ) ಆರು ಕರ್ತವ್ಯಗಳೆಂದರೆ: ವೇದಗಳನ್ನು ಕಲಿಯುವುದು, ವೇದಗಳನ್ನು ಕಲಿಸುವುದು, ಯಜ್ಞವನ್ನು ನೆರವೇರಿಸುವುದು, ಬೇರೆಯವರು ಯಜ್ಞ ನಡೆಸುವುದಕ್ಕೆ ಮಾರ್ಗದರ್ಶನ ಮಾಡುವುದು, ದಾನ ನೀಡುವುದು ಮತ್ತು ದಾನ

Digitised by Bharatavani, CIIL

ಸ್ವೀಕರಿಸುವುದು. ಬ್ರಾಹ್ಮಣನಲ್ಲಿರುವ ಶ್ರೇಷ್ಠ ವರ್ತನೆ, ನಡತೆ ಮತ್ತು ಉತ್ತಮ ಸಂಸ್ಕಾರಗಳಿಂದ ಎಲ್ಲಾ ವರ್ಣಗಳಲ್ಲಿ ಬ್ರಾಹ್ಮಣ ಶ್ರೇಷ್ಠನೆಂದು ಅದರಲ್ಲಿ ಹೇಳಲಾಗಿದೆ. ಗುರುವು ವಿದ್ಯಾರ್ಥಿಗಳಿಗೆ ಅನುಭೂತಿ ಮತ್ತು ತನ್ನ ಸ್ವಂತ ಉದಾಹರಣೆಯ ಮೂಲಕ ಕಲಿಸುತ್ತಿದ್ದನು. ನಮ್ರತೆ ಮತ್ತು ಸರಳತೆ ಅವನ ಅತ್ಯುತ್ತಮ ಗುಣಗಳಾಗಿದ್ದವು.

ಗುರುವಿಗೆ ಪವಿತ್ರ ಜ್ಞಾನದ (ಶ್ರೋತ್ರೀಯ) ಅರಿವು ಚೆನ್ನಾಗಿರಬೇಕು ಎಂದು ಮುಂಡಕ ಉಪನಿಷತ್ತಿನಲ್ಲಿ ತಿಳಿಸಲಾಗಿದೆ. ಏಕೀಭಾವದ ತಿಳಿವಳಿಕೆಯನ್ನು ಆಧರಿಸಿ ಗುರು ತನ್ನ ವಿದ್ಯಾರ್ಥಿಗಳಿಗೆ ಜ್ಞಾನೋದಯ ಉಂಟು ಮಾಡಬೇಕು. ಇಲ್ಲದಿದ್ದರೆ ಕುರುಡನು ಮತ್ತೊಬ್ಬ ಕುರುಡನನ್ನು ನಡೆಸಿಕೊಂಡು ಹೋದಂತಾಗುತ್ತದೆ. ಬೋಧನಾ ಕಲೆಯಲ್ಲಿ ಗುರುವು ತನ್ನ ಹೃದಯ ಮತ್ತು ಆತ್ಮವನ್ನು ತೊಡಗಿಸಿಕೊಳ್ಳಬೇಕು ಎಂದು ತೈತ್ರೀಯ ಅರಣ್ಯಕದಲ್ಲಿ ತಿಳಿಸಲಾಗಿದೆ. ಯಾವುದೇ ಪರಿಸ್ಥಿತಿಯಲ್ಲಿ ತನ್ನೊಂದಿಗೆ ಇರುವ ವಿದ್ಯಾರ್ಥಿಗೆ ಸಕಲವನ್ನು ಹೇಳಿ ಕೊಡಲೇಬೇಕಾದುದು ಗುರುವಿನ ಕರ್ತವ್ಯವೆಂದು ಶತಪಥ ಬ್ರಾಹ್ಮಣದಲ್ಲಿ ಹೇಳಿದೆ. ಗುರು ಹೊಂದಿರಬೇಕೆಂದು ನಿರೀಕ್ಷಿಸಲಾದ ಅತ್ಯಗತ್ಯದ ಗುಣಲಕ್ಷಣಗಳ ಆವಶ್ಯಕತೆಗೆ (ಕಠೋಪನಿಷತ್‌ನಲ್ಲಿ) ವಿಶೇಷ ಒತ್ತನ್ನು ನೀಡಲಾಗಿದೆ. ಅವುಗಳೆಂದರೆ: ಗಾಢವಾದ ವಿದ್ವತ್ತು, ಅತೀಂದ್ರಿಯ ದೃಷ್ಟಿ, ಮತ್ತು ಬೌದ್ಧಿಕ ಸಂಸ್ಕರಣ. ಗುರುವನ್ನು ಸಮಾಜದ ನಿರ್ಮಾಪಕ, ಮಾರ್ಗದರ್ಶಕ ಮತ್ತು ಮುಖಂಡನೆಂದು ಪರಿಗಣಿಸಲಾಗುತ್ತಿತ್ತು. ವಿದ್ಯಾರಂಭದ ಕಾರ್ಯಕ್ರಮ ಮುಗಿದ ಬಳಿಕ ಗುರುವು ಶಿಷ್ಯನನ್ನು ಸ್ವಂತ ಮಗನ ಹಾಗೆ ನೋಡಿಕೊಳ್ಳುತ್ತಿದ್ದನು; ತನ್ನ ಶಿಷ್ಯಂದಿರಿಗೆ ಉನ್ನತ ಮಟ್ಟದ ಬೌದ್ಧಿಕ ಮತ್ತು ಅಧ್ಯಾತ್ಮಿಕ ಶಿಕ್ಷಣವನ್ನು ನೀಡುವುದು ತನ್ನ ಪವಿತ್ರ ಕರ್ತವ್ಯವೆಂದು ಪರಿಗಣಿಸುತ್ತಿದ್ದನು. ತನ್ನ ಶಿಷ್ಯಂದಿರಿಂದ ಗೌರವ ಪಡೆಯಲು ಗುರುವು ಉನ್ನತ ಕಲಿಕೆಯ ಆದರ್ಶ ಮತ್ತು ಅತ್ಯುತ್ಕೃಷ್ಟ ನೈತಿಕ ನಡತೆಯನ್ನು ಪ್ರದರ್ಶಿಸಬೇಕಿತ್ತು.

ಮಧ್ಯಕಾಲೀನ ಭಾರತದಲ್ಲಿ ಮದ್ರಸಾಗಳ ಮತ್ತು ಪಾಠಶಾಲೆಗಳ ಗುರುಗಳೂ ಉನ್ನತಮಟ್ಟದ ಸಾಮಾಜಿಕ ಸ್ಥಾನಮಾನವನ್ನು ಹೊಂದಿರುತ್ತಿದ್ದರು; ತಮ್ಮಲ್ಲಿ ಇರುವಂತಹ ಧಾರ್ಮಿಕ ಪಠ್ಯಗಳ ತಿಳಿವಳಿಕೆ ಮತ್ತು ಆದರ್ಶ ವ್ಯಕ್ತಿತ್ವದಿಂದ ಅವರು ಶಿಷ್ಯರ ಗೌರವವನ್ನು ಸಂಪಾದಿಸಿದ್ದರು. ಆನಂತರ ಬ್ರಿಟಿಷರ ಕಾಲದಲ್ಲಿ ಶಿಕ್ಷಕರ ಸ್ಥಾನವು ನಿಧಾನವಾಗಿ ಅವನತಿ ಹೊಂದಲಾರಂಭಿಸಿತು. ಇದಕ್ಕೆ ಮುಖ್ಯ ಕಾರಣ ಭಾರತೀಯರ ಶಿಕ್ಷಣದ ಕುರಿತು ಈಸ್ಟ್ ಇಂಡಿಯಾ ಕಂಪನಿ ಮತ್ತು ಬ್ರಿಟಿಷ್ ಸಿಂಹಾಸನ ತೋರಿದ ತಾತ್ಸಾರದ ಧೋರಣೆ ಮತ್ತು ಅವರ ದೋಷಪೂರಿತ ಶೈಕ್ಷಣಿಕ ಕಾರ್ಯನೀತಿಗಳು. ಶಿಕ್ಷಕರನ್ನು ಕೆಳಮಟ್ಟದ ವೇತನ ಪಡೆಯುವ ಸರಕಾರಿ ಉದ್ಯೋಗಿಗಳೆಂದು ಪರಿಗಣಿಸಲಾಯಿತು. ಹೀಗಾಗಿ ಅವರಿಗೆ ಗೌರವಾನ್ವಿತ ಸೇವೆಯನ್ನು ಮತ್ತು ಕೆಲಸದ ಉತ್ತಮ ಸ್ಥಿತಿಗತಿಗಳನ್ನು ಒದಗಿಸಲಿಲ್ಲ.

ಆಧುನಿಕ ಭಾರತದಲ್ಲಿ ಶಿಕ್ಷಕರ ಪಾತ್ರ ಮತ್ತು ಜವಾಬ್ದಾರಿಗಳ ಕುರಿತು ಅನೇಕ ಚಿಂತಕರು ಮತ್ತು ಶಿಕ್ಷಣತಜ್ಞರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸ್ವಾಮಿ ವಿವೇಕಾನಂದರ ಪ್ರಕಾರ, "ಯಾರು ವಿದ್ಯಾರ್ಥಿಗಳ ಮಟ್ಟಕ್ಕೆ ತಕ್ಷಣವೇ ಇಳಿಯಬಲ್ಲರೋ ಮತ್ತು ತಮ್ಮ ಆತ್ಮವನ್ನು ವಿದ್ಯಾರ್ಥಿಯ ಆತ್ಮಕ್ಕೆ ವರ್ಗಾಯಿಸಬಲ್ಲರೋ ಮತ್ತು ವಿದ್ಯಾರ್ಥಿಯ ಕಣ್ಣಿನ ಮೂಲಕ ಕಾಣಬಲ್ಲರೋ ಮತ್ತು ಆತನ ಕಿವಿಯ ಮೂಲಕ ಕೇಳಬಲ್ಲರೋ ಮತ್ತು ಅವನ ಮನಸ್ಸಿನ ಮೂಲಕ ಅರ್ಥ ಮಾಡಿಕೊಳ್ಳಬಲ್ಲರೋ ಅವರೇ ನಿಜವಾದ ಗುರು. ಅವರು ಮಾತ್ರ ನಿಜವಾಗಿಯೂ ಕಲಿಸಬಲ್ಲರು, ಬೇರೆ ಯಾರೂ ಅಲ್ಲ.' ಎಲ್ಲಕ್ಕಿಂತ ಮುಖ್ಯವಾಗಿ ಶಿಕ್ಷಕರ ಕೆಲಸವು ಪ್ರೀತಿಯಿಂದ ನಡೆಯಬೇಕಲ್ಲದೆ ಯಾವುದೇ ಸ್ವಾರ್ಥ ಉದ್ದೇಶದಿಂದ ಅಲ್ಲ, ಉದಾಹರಣೆಗೆ ಹಣ ಅಥವಾ ಹೆಸರು ಅಥವಾ ಕೀರ್ತಿಯ ಬಯಕೆಯಿಂದ ಅಲ್ಲ. ಶಿಕ್ಷಕನು ತನ್ನ ಉತ್ತಮ ನಡತೆ ಮತ್ತು ಆದರ್ಶ ವರ್ತನೆಯಿಂದ ತನ್ನ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಣೆ ಮತ್ತು ಚಾರಿತ್ರ್ಯದ ಬೆಳವಣಿಗೆಗೆ ಅನುಕೂಲವಾಗುವ ಶಿಕ್ಷಣವನ್ನು ಒದಗಿಸಬೇಕು.

ಠಾಕೂರರು ಹೇಳುತ್ತಾರೆ, 'ಶಿಕ್ಷಕನು ಸ್ವತಃ ತಾನು ಕಲಿತುಕೊಳ್ಳುತ್ತಾ ಇರದಿದ್ದಲ್ಲಿ ಅವನು ನಿಜವಾಗಿ ಕಲಿಸಲು ಸಾಧ್ಯವೇ ಇಲ್ಲ. ದೀಪವು ತನ್ನ ಜ್ವಾಲೆಯಿಂದ ಉರಿಯುತ್ತಿರುವವರೆಗೆ ಮಾತ್ರ ಇನ್ನೊಂದು ದೀಪವನ್ನು ಬೆಳಗಬಲ್ಲದು. ಶಿಕ್ಷಕನು ತನ್ನ ವಿಷಯದ ಕೊನೆಯನ್ನು ತಲುಪಿ, ತನ್ನ ವಿದ್ಯಾರ್ಥಿಗಳೊಂದಿಗೆ ಸಜೀವ ಸಂಚಲನವನ್ನು ಹೊಂದಿಲ್ಲದಿದ್ದರೆ, ಅವರ ಮನಸ್ಸಿನಲ್ಲಿ ಹೊರೆ ತುಂಬುವುದಕ್ಕೆ ಸಮರ್ಥನಾಗುತ್ತಾನೆಯೇ ವಿನಃ ಅವರಲ್ಲಿ ಸ್ಫೂರ್ತಿ/ಜೀವ ತುಂಬಲಾರನು, ಅವನು ಅವರನ್ನು ಚುರುಕುಗೊಳಿಸಲಾರನು. ಮಹಾತ್ಮ ಗಾಂಧಿಯವರು ಹೇಳಿದ್ದೇನೆಂದರೆ (ಯಂಗ್ ಇಂಡಿಯಾ, 24, ಜನವರಿ, 1925), 'ವಿದ್ಯಾರ್ಥಿಗಳಲ್ಲಿ ತಾನು ಕಾಣಲು ಬಯಸುವ ಗುಣಲಕ್ಷಣಗಳನ್ನು ಸ್ವತಃ ಶಿಕ್ಷಕನೇ ಹೊಂದಿರಬೇಕಾಗುತ್ತದೆ. ಇದರರ್ಥ ಶಿಕ್ಷಕನು ತನ್ನಲ್ಲಿ ಈ ಗುಣಲಕ್ಷಣಗಳನ್ನು ಅನುಷ್ಠಾನ ಮಾಡಬೇಕು. ಇಲ್ಲದಿದ್ದರೆ ಅವನ ಮಾತುಗಳು ಯಾವ ಪರಿಣಾಮವನ್ನೂ ಬೀರಲಾರವು.' ಮತ್ತೂ ಮುಂದುವರಿದು ಅವರು ಹೇಳಿದ್ದೇನೆಂದರೆ(ಯಂಗ್ ಇಂಡಿಯಾ, ಏಪ್ರಿಲ್ 1929), 'ಶಿಕ್ಷಕನು ವಿದ್ಯಾರ್ಥಿಗಳೊಂದಿಗೆ ಹೃದಯದ ಸಂಪರ್ಕವನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾಗಬೇಕು..' ಶಿಕ್ಷಕ ಮತ್ತು ವಿದ್ಯಾರ್ಥಿ ನಿರಂತರವಾಗಿ ಪರಸ್ಪರ ಸಂಪರ್ಕದಲ್ಲಿ ಇರಬೇಕು. ಶಿಕ್ಷಕರು ವಿದ್ಯಾರ್ಥಿಗಳ ಹೃದಯಗಳನ್ನು ರೂಪಿಸಬೇಕಲ್ಲದೆ, ಅವರ ಮಿದುಳುಗಳನ್ನು ಅಲ್ಲ. ಶಿಕ್ಷಕರ ನೈತಿಕ ಕರ್ತವ್ಯಗಳ ಕುರಿತು ಶ್ರೀ ಅರಬಿಂದೊ ಹೇಳಿರುವುದು ಹೀಗಿದೆ: "ಶಿಕ್ಷಕನು ಬೋಧಕ ಅಥವಾ ಕೆಲಸವನ್ನು ಮಾಡಿಸುವ ವ್ಯಕ್ತಿ ಅಲ್ಲ. ಅವನು ಸಹಾಯಕ ಮತ್ತು ಮಾರ್ಗದರ್ಶಕ. ಅವನ ಕೆಲಸ ಸೂಚಿಸುವುದು ಮಾತ್ರ, ಹೇರುವುದಲ್ಲ.. ಅವನು ಜ್ಞಾನವನ್ನು ತಲುಪಿಸುವುದಿಲ್ಲ. ಆದರೆ ಅದನ್ನು ತಾನೇ ಹೇಗೆ ಪಡೆದುಕೊಳ್ಳುವುದೆಂದು ಸ್ವತಃ ತೋರಿಸಿಕೊಡುತ್ತಾನೆ. ಅವನು ಒಳಗಿರುವ ಜ್ಞಾನವನ್ನು ಹೊರಗೆ ಕರೆಯಿಸಿಕೊಳ್ಳುವುದಿಲ್ಲ, ಅದು ಎಲ್ಲಿ ಇದೆ ಎಂಬುದನ್ನು ಮಾತ್ರ ತೋರಿಸುತ್ತಾನೆ ಮತ್ತು ಅದು ಮೂಡಿಬರಲು ಮಾಡಬೇಕಾದ ಅಭ್ಯಾಸಗಳನ್ನು ತೋರಿಸಿಕೊಡುತ್ತಾನೆ.

Digitised by Bharatavani, CIIL

**ವೃತ್ತಿಯಾಗಿ ಬೋಧನೆಯ ಸ್ಥಾನಮಾನ:**

ಒಂದು ಕಸಬು ವೃತ್ತಿಯ ಸ್ಥಾನಮಾನವನ್ನು ಪಡೆಯಬೇಕಾದರೆ ಅದರಲ್ಲಿ ವ್ಯಾಪಕವಾದ ವ್ಯಕ್ತಿ, ವಿಷಯ, ವಸ್ತುಗಳನ್ನು ಕುರಿತು ಅನುಭವದಿಂದ ಪಡೆದ ಅರಿವು ಇರಬೇಕು ಮತ್ತು ಅದರ ಸದಸ್ಯರಿಗೆ ಸಾಕಷ್ಟು ದೀರ್ಘಾವಧಿಯ ಸಿದ್ಧತೆಯ ಅಗತ್ಯವಿರುತ್ತದೆ. ವೃತ್ತಿಯು ಹತೋಟಿಯ ಆಂತರಿಕ ನೆಲೆಯನ್ನು ಹೊಂದಿದ್ದು, ಸ್ವ–ನಿಯಂತ್ರಿತವಾಗಿರುತ್ತದೆ. ವೃತ್ತಿಯಲ್ಲಿ ಮಾರ್ಗದರ್ಶಕ ಸೂತ್ರಗಳು ಅಳವಡಿಕೆಯಾಗಿರುತ್ತವೆ. ಇವು ಕೆಲಸವನ್ನು ಮತ್ತು ಅದರ ಸದಸ್ಯರ ನಡತೆಯನ್ನು ನಿಯಂತ್ರಿಸಲು ಆನ್ವಯಕ ಅಂಶಗಳಾಗಿ ಕಾರ್ಯನಿರ್ವಹಿಸುತ್ತವೆ.

ಭಾರತದಲ್ಲಿ ಬೋಧನೆಯು ವೃತ್ತಿಯಾಗುವ ಹಾದಿಯಲ್ಲಿ ಸಾಗುತ್ತಿದೆ ಎಂಬ ಬಹುಮತಾಭಿಪ್ರಾಯವು ಕಳೆದ ಕೆಲವು ದಶಕಗಳಲ್ಲಿ ಎದ್ದು ಕಾಣಿಸಿದೆ. ಓರ್ವ ಶಿಕ್ಷಕನಲ್ಲಿ ತನ್ನ ವಿಷಯದ ಒಳಾಂಶಗಳ ಕುರಿತು ಮತ್ತು ಶಿಕ್ಷಣ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಅಪಾರ ತಿಳಿವಳಿಕೆ ಇರಬೇಕು. ಸಾಮಾನ್ಯವಾಗಿ ಅವನಲ್ಲಿ ದೀರ್ಘಾವಧಿಯ ಶಿಕ್ಷಣ ಮತ್ತು ಇದನ್ನು ಅನುಸರಿಸಿ ವೃತ್ತಿಪರ ತರಬೇತಿ ಇರಬೇಕು. ಅವನು ತನ್ನ ಜೀವನದುದ್ದಕ್ಕೂ ತನ್ನ ಜ್ಞಾನ ಮತ್ತು ಕೌಶಲ್ಯಗಳನ್ನು ನಿರಂತರವಾಗಿ ಬೆಳೆಸಿಕೊಳ್ಳಬೇಕು ಮತ್ತು ಅಭಿವೃದ್ಧಿ ಪಡಿಸಿಕೊಳ್ಳಬೇಕು. ಶಿಕ್ಷಕರಿಗಾಗಿ ವೃತ್ತಿಪರ ನಡವಳಿಕೆ ನಿಯಮಗಳ ನಿಬಂಧನೆಗಳನ್ನು ರೂಪಿಸುವ ಅಗತ್ಯವು ಇದನ್ನು ಸ್ವಯಂ ನಿಯಂತ್ರಿತ ವೃತ್ತಿಯನ್ನಾಗಿ ಸಲುಬೇಕು ಎಂಬುದನ್ನು ಶಿಕ್ಷಣದ ವಿವಿಧ ಆಯೋಗಗಳೂ ಸಮಿತಿಗಳೂ ಪದೇ ಪದೇ ಸ್ಪಷ್ಟವಾಗಿ, ಸ್ಫುಟವಾಗಿ ಉಚ್ಚರಿಸಿವೆ.

ಶಿಕ್ಷಣದ ರಾಷ್ಟ್ರೀಯ ನೀತಿಯ(1986, 1992) ಶಿಫಾರಸುಗಳನ್ನು ಅನುಸರಿಸಿ ಎನ್‌ಸಿಇಆರ್‌ಟಿ ಮತ್ತು ಅಖಿಲ ಭಾರತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ಸಂಸ್ಥೆಗಳ ಸಂಯುಕ್ತ ಕೂಟವು ಶಿಕ್ಷಕರಿಗಾಗಿ ವೃತ್ತಿಪರ ನೀತಿ ನಿಯಮಗಳ ಸಂಹಿತೆಯೊಂದನ್ನು ಜಂಟಿಯಾಗಿ ರೂಪಿಸಿದೆ. ಈ ಸಂಹಿತೆಯ ಪೀಠಿಕೆಯು ದೇಶದ ಶಿಕ್ಷಕರ ನಿರ್ಣಯವನ್ನು ಒತ್ತಿ ಹೇಳಿದೆ. ಈ ನಿರ್ಣಯ ಯಾವುದೆಂದರೆ, ಅವರ(ಶಿಕ್ಷಕರ) ವೃತ್ತಿಪರ ನಿಯತ್ತನ್ನು ಎತ್ತಿಹಿಡಿಯುವುದು, ವೃತ್ತಿಯ ಘನತೆಯನ್ನು ಹೆಚ್ಚಿಸಲು ಪ್ರಯತ್ನಪಡುವುದು, ಮತ್ತು ವೃತ್ತಿಪರ ದುರ್ನಡತೆಯನ್ನು ಮಟ್ಟಹಾಕಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು. ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಶಿಕ್ಷಕರ ವೃತ್ತಿಪರ ಕರ್ತವ್ಯಗಳನ್ನು ಸಂಹಿತೆಯಲ್ಲಿ ಸೇರಿಸಿಕೊಳ್ಳಲಾಗಿದೆ:

1. ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಶಿಕ್ಷಕ,
2. ಹೆತ್ತವರು ಮತ್ತು ಪೋಷಕರಿಗೆ ಸಂಬಂಧಿಸಿದಂತೆ ಶಿಕ್ಷಕ,
3. ಸಮಾಜ ಮತ್ತು ದೇಶಕ್ಕೆ ಸಂಬಂಧಿಸಿದಂತೆ ಶಿಕ್ಷಕ,
4. ವೃತ್ತಿ, ಸಹೋದ್ಯೋಗಿಗಳು ಮತ್ತು ವೃತ್ತಿಪರ ಸಂಘಟನೆಗಳಿಗೆ ಸಂಬಂಧಿಸಿದಂತೆ ಶಿಕ್ಷಕ, ಮತ್ತು
5. ನಿರ್ವಹಣೆ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಶಿಕ್ಷಕ.

ಶಿಕ್ಷಕರ ಕೆಲಸದ ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೂವತ್ತು ನಿಯಮಗಳು ಶಿಕ್ಷಕರ ಗುಣನಡತೆಗೆ ಮಾರ್ಗದರ್ಶಕ ಸೂತ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ನಿಯಮಗಳ ಮೂಲ ಆಕರವು ನಮ್ಮ ಪ್ರಜಾಸತ್ತೆಯ ಸಂವಿಧಾನ ಪ್ರಜ್ಞೆಯಾಗಿದೆ. ಹಾಗಿದ್ದರೂ ಪ್ರಾಚೀನ ಮತ್ತು ಮಧ್ಯಕಾಲೀನ ಗ್ರಂಥಗಳಲ್ಲಿ ಪ್ರತಿಪಾದಿಸಲಾದ ಶಿಕ್ಷಕರ ಕರ್ತವ್ಯಗಳು, ಶೈಕ್ಷಣಿಕ ಚಿಂತಕರ ಅಭಿಪ್ರಾಯಗಳು ಮತ್ತು ಅನೇಕ ಶೈಕ್ಷಣಿಕ ಆಯೋಗಗಳು ಮತ್ತು ಸಮಿತಿಗಳ ಆಲೋಚನೆಗಳು ಸಂಹಿತೆಯ ವಿಷಯಾಂಶವನ್ನು ನಿರ್ದೇಶಿಸಿದೆ.

ಶಿಕ್ಷಕನು ವಿದ್ಯಾರ್ಥಿಗಳ ಗ್ರಹಿಕೆಯ ಅಭಿವೃದ್ಧಿಗೆ ತಿಳಿವಳಿಕೆಯನ್ನು ಸಾಗಿಸುವ ಸರಬರಾಯಿಗಾರ ಮಾತ್ರವಲ್ಲ, ಅವನೊಬ್ಬ ಪ್ರಜಾಪ್ರಭುತ್ವವಾದಿ ಮತ್ತು ಸಾಮಾಜೀಕೃತ ಏಜೆಂಟ್ ಕೂಡ ಆಗಿದ್ದಾನೆ. ಮಕ್ಕಳು ಸಾಮಾಜಿಕ ಮತ್ತು ಭಾವನಾತ್ಮಕ ಪಕ್ವತೆಯನ್ನು ಸಾಧಿಸಲು ಮತ್ತು ಉಪಯುಕ್ತ ಮತ್ತು ಸ್ವಬೆಂಬಲಿತ ಪ್ರಜೆಗಳಾಗಲು ನೆರವಾಗುವುದಕ್ಕೆ ಅವನು ಜವಾಬ್ದಾರನೂ ಆಗಿದ್ದಾನೆ. ಅವನು ಕೂಲಂಕಷ ಸಿದ್ಧತೆಯನ್ನು ನಡೆಸಿದ ಬಳಿಕ ವಿದ್ಯಾರ್ಥಿಗಳಿಗೆ ಕಲಿಸುವುದನ್ನು ನಿರೀಕ್ಷಿಸಲಾಗುತ್ತದೆ. ತನ್ನ ಸ್ವಂತ ವಿದ್ಯಾರ್ಥಿಗಳಿಗೆ ಕಲಿಸಲು ಅಥವಾ ಖಾಸಗಿಯಾಗಿ ಹೇಳಿಕೊಡಲು ಹಣ ಪಡೆಯುವುದನ್ನು ನಿರ್ಬಂಧಿಸಲಾಗಿದೆ. ಅವನು(ಶಿಕ್ಷಕ) ತನ್ನ ಎಲ್ಲಾ ವಿದ್ಯಾರ್ಥಿಗಳೊಂದಿಗೆ, ಅವರ ಜಾತಿ, ಮತ, ಸ್ಥಾನಮಾನ, ಧರ್ಮ, ಭಾಷೆ ಮತ್ತು ಹುಟ್ಟಿದ ಸ್ಥಳವನ್ನು ಗಮನಕ್ಕೆ ತಂದುಕೊಳ್ಳದೆ ನ್ಯಾಯಬದ್ಧವಾಗಿ ಮತ್ತು ನಿಷ್ಪಕ್ಷಪಾತಿಯಾಗಿ ಇರಬೇಕು. ತನ್ನ ವೇಷಭೂಷಣ, ಮಾತು ಮತ್ತು ವರ್ತನೆಯಿಂದ ವಿದ್ಯಾರ್ಥಿಗಳಿಗೆ ಮಾದರಿಯಾಗಿರಬೇಕು; ವಿದ್ಯಾರ್ಥಿಗಳ ಹೆತ್ತವರು ಮತ್ತು ಪೋಷಕರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕು; ಅನುಸೂಚಿತ ನಿಬಂಧನೆಗಳಿಗೆ ಅನುಗುಣವಾಗಿ ಸಂಸ್ಥೆ ನಿರಾಯಾಸವಾಗಿ ನಡೆಯುವಂತೆ ಸಂಸ್ಥೆಯ ಮುಖ್ಯಸ್ಥರು ಮತ್ತು ಆಡಳಿತವರ್ಗದವರೊಂದಿಗೆ ಸಹಕರಿಸಬೇಕು; ಸಹೋದ್ಯೋಗಿಗಳು, ಮಕ್ಕಳು ಮತ್ತು ಅವರ ಹೆತ್ತವರ ಕುರಿತು ಅವಹೇಳನಾತ್ಮಕ ಮಾತುಗಳನ್ನು ಆಡುವುದನ್ನು ತಪ್ಪಿಸಬೇಕು; ವಿಭಿನ್ನ ಸಮುದಾಯಗಳು, ಧರ್ಮಗಳು ಅಥವಾ ಭಾಷಾಗುಂಪುಗಳಲ್ಲಿ ಹಗೆಯ ಭಾವನೆ ಅಥವಾ ಅತೃಪ್ತಿಯನ್ನು ಹರಡುವ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು.

ಶಿಕ್ಷಕರು ನೀತಿಸಂಹಿತೆಯನ್ನು ಅನುಸರಿಸಲು ಶಿಕ್ಷಕಸಂಸ್ಥೆಗಳು ಕೂಡ ಸೂಕ್ತ ಕ್ರಮವನ್ನು ಅಳವಡಿಸಿಕೊಳ್ಳುವಂತೆ ರಾಷ್ಟ್ರೀಯ ಶಿಕ್ಷಣ ನೀತಿಯು(1986, 1992) ಆಲೋಚನೆ ನಡೆಸಿದೆ. ಶಿಕ್ಷಕ ಸಂಸ್ಥೆಗಳಿಂದ ಸಂಘಟಿತವಾದ ಸಭೆಗಳು, ವಿಚಾರಸಂಕಿರಣಗಳು, ಕಾರ್ಯಾಗಾರಗಳಲ್ಲಿ ಸಂಹಿತೆಯ ಕುರಿತು ಚರ್ಚೆಗಳು ನಡೆದು ಅದನ್ನು ಈ ಸಂಘಗಳು ಔಪಚಾರಿಕವಾಗಿ ಅಳವಡಿಸಿಕೊಂಡಿರುವ ವರದಿಗಳು ಇವೆ. ಆದರೆ ಅದರ ಅನುಸರಣೆಗೆ ಸೂಕ್ತ ವಿಧಾನಗಳು ಇನ್ನೂ ಕಾಣಿಸಿಕೊಳ್ಳಬೇಕಷ್ಟೇ. ಇದಕ್ಕಾಗಿ ಎನ್‌ಸಿಇಆರ್‌ಟಿಯು ಶಿಕ್ಷಕ ಸಂಸ್ಥೆಗಳಿಗೆ ವೃತ್ತಿಪರ ನೆರವು ಮತ್ತು ವ್ಯವಸ್ಥಿತ ಬೆಂಬಲವನ್ನು ಒದಗಿಸುತ್ತಿದೆ.

Digitised by Bharatavani, CIIL

ವಿಶ್ವವಿದ್ಯಾಲಯ ಅನುದಾನ ಆಯೋಗವು(ಯುಜಿಸಿ) ಅಖಿಲ ಭಾರತ ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯ ಶಿಕ್ಷಕ ಸಂಸ್ಥೆಯ ಒಕ್ಕೂಟದ ಸಹಯೋಗದೊಂದಿಗೆ ಕಾರ್ಯಪಡೆಯನ್ನು ರೂಪಿಸಿದೆ. ಈ ಕಾರ್ಯಪಡೆಯು ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯದ ಶಿಕ್ಷಕರಿಗಾಗಿ ವೃತ್ತಿಪರ ನೀತಿನಿಯಮಗಳ ಸಂಹಿತೆಯನ್ನು ತಯಾರಿಸಿದೆ(ಯುಜಿಸಿ, 1989). ಆಯೋಗದಿಂದ ಅಳವಡಿಕೆಯಾಗಿರುವ ಕಾರ್ಯಪಡೆಯ ವರದಿಯನ್ನು ಜಾರಿಗೆ ತರುವ ಸಲುವಾಗಿ ಅದನ್ನು ಎಲ್ಲಾ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳಿಗೆ ಮತ್ತು ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಕಳುಹಿಸಿಕೊಡಲಾಗಿದೆ. ಸಂಹಿತೆಯ ಪೀಠಿಕೆಯು ಒತ್ತಿ ಹೇಳುವುದೇನೆಂದರೆ, ನಮ್ಮ ದೇಶದ ಉನ್ನತ ಶಿಕ್ಷಣದ ಗುರಿಯು ಸಮಾಜದ ನಾಯಕರನ್ನು ಮತ್ತು ಬಹುವಿಧದ ಚಟುವಟಿಕೆಗಳ ಎಲ್ಲಾ ಕ್ಷೇತ್ರಗಳಲ್ಲಿ ಆರ್ಥಿಕತೆಯನ್ನು ಉತ್ಪಾದಿಸುವುದಾಗಿದೆ. ಈ ಗುರಿಗೆ ದೇಶಭಕ್ತಿ, ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾಜವಾದ ಮತ್ತು ಶಾಂತಿಯ ಬದ್ಧತೆ ಇರುತ್ತದೆ. ಉನ್ನತಶಿಕ್ಷಣವು ಪಾಂಡಿತ್ಯದ ಉತ್ಕೃಷ್ಟತೆಗೆ ಮತ್ತು ಕಲೆಗಳು ಹಾಗೂ ವಿಜ್ಞಾನದ ಪ್ರಗತಿಗಾಗಿ ಪ್ರಯತ್ನ ಪಡಬೇಕು. ಈ ದೃಷ್ಟಿಯಲ್ಲಿ, ಶಿಕ್ಷಕರ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಸಂಹಿತೆಯಲ್ಲಿ ಉಲ್ಲೇಖಿಸಲಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರ ವೃತ್ತಿಪರ ಕರ್ತವ್ಯಗಳನ್ನು ಏಳು ಭಾಗಗಳಲ್ಲಿ ಪಟ್ಟಿ ಮಾಡಲಾಗಿದೆ:

1. ಶಿಕ್ಷಕರು ಮತ್ತು ಅವರ ಜವಾಬ್ದಾರಿಗಳು;
2. ಶಿಕ್ಷಕರು ಮತ್ತು ವಿದ್ಯಾರ್ಥಿಗಳು;
3. ಶಿಕ್ಷಕರು ಮತ್ತು ಸಹೋದ್ಯೋಗಿಗಳು;
4. ಶಿಕ್ಷಕರು ಮತ್ತು ಅಧಿಕಾರಿಗಳು;
5. ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗಳು;
6. ಶಿಕ್ಷಕರು ಮತ್ತು ಪೋಷಕರು; ಮತ್ತು
7. ಶಿಕ್ಷಕರು ಮತ್ತು ಸಮಾಜ.

ಶಿಕ್ಷಕರ ಕೆಲಸದ ಈ ಕ್ಷೇತ್ರಗಳಿಗೆ ಸಂಬಂಧಿಸಿದ ಮೂವತ್ತೆಂಟು ಆದರ್ಶಗಳು ಶಿಕ್ಷಕರ ವೃತ್ತಿಪರ ವರ್ತನೆಗೆ ಮಾರ್ಗದರ್ಶಕ ಸೂತ್ರಗಳಾಗಿ ಕಾರ್ಯ ನಿರ್ವಹಿಸುತ್ತವೆ.

ಶಾಲೆ, ವಿಶ್ವವಿದ್ಯಾನಿಲಯ ಮತ್ತು ಮಹಾವಿದ್ಯಾಲಯಗಳ ಶಿಕ್ಷಕರಿಗಾಗಿ ತಯಾರಿಸಲಾದ ವೃತ್ತಿಪರ ನೀತಿ ನಿಯಮಗಳು ಭಾರತೀಯ ಸಮಾಜಕ್ಕೆ ಶಿಕ್ಷಕ ಸಮುದಾಯದಿಂದ ಇರುವ ನಿರೀಕ್ಷೆಗಳ ಘನೀಕೃತ ರೂಪವಾಗಿದೆ. ವೃತ್ತಿಪರ ವರ್ತನೆಯು ಶಿಕ್ಷಕರು ತಮ್ಮ ಪಾತ್ರಗಳಿಗೆ ಮತ್ತು ಜವಾಬ್ದಾರಿಗಳಿಗೆ ನ್ಯಾಯವನ್ನು ಒದಗಿಸುವುದಕ್ಕಾಗಿ ಮತ್ತು ಅಧಿಕಾರಿಗಳು, ಆಡಳಿತವರ್ಗ ಹಾಗೂ ಸಮಾಜದ ಅನುಚಿತ ಮತ್ತು ಅನ್ಯಾಯದ ನಡವಳಿಕೆಯಿಂದ ರಕ್ಷಣೆಯನ್ನು ಪಡೆಯುವ ನಿರೀಕ್ಷೆಯನ್ನು ಹೊಂದಿದೆ.

**ಮೂಲ: ಜಿ.ಎಲ್. ಅರೋರಾ ಮತ್ತು ರವಿ ಕಾಂತ ಚೋಪ್ರಾ**

**ಅನು: ಡಾ. ಗೀತಾ ಶೆಣೈ**

## ಶಿಕ್ಷಣ ಒಂದು ಶಾಸ್ತ್ರವಾಗಿ

**ಶಾಸ್ತ್ರದ ಅರ್ಥ:** ಡಿಸಿಪ್ಲಿನ್ (Discipline) ಎಂಬ ಪದವು ಡಿಸಿಪ್ಲಿನ (disciplina) ಎಂಬ ಲ್ಯಾಟಿನ್ ಪದದಿಂದ ನಿಷ್ಪತ್ತಿಯಾಗಿದೆ. ಅದರ ಅರ್ಥ 'ಕಲಿಸುವುದು, ಕಲಿಯುವುದು'. ಫ್ರೆಂಚ್ ಪದ ಡಿಸೈಪಲ್ (disciples) ಎಂದರೆ ವಿದ್ಯಾರ್ಥಿ ಎಂದು ಅರ್ಥವಿದೆ. ಸಮಗ್ರ ದೃಷ್ಟಿಯಿಂದ 'ಡಿಸಿಪ್ಲಿನ್' ಎಂದರೆ ಬೋಧನೆ– ಒಂದು ವಿಷಯವನ್ನು ಕಲಿಸುವುದು; ಒಂದು ಅಧ್ಯಯನ ಕ್ಷೇತ್ರ; ಡಿಸಿಪ್ಲಿನ್ ಎಂದರೆ ತಿದ್ದುವುದು (ರೂಪಿಸುವುದು), ಎರಕ ಹೊಯ್ಯುವುದು ಅಥವಾ ನೈತಿಕ ನಡೆವಳಿಕೆ ಅಥವಾ ಮಾನಸಿಕ ವಿಭಾಗವನ್ನು ಪರಿಪೂರ್ಣಗೊಳಿಸುವುದು ಎಂದೂ ಅರ್ಥವಿದೆ.

ಪ್ರತಿಯೊಂದು ಶಾಸ್ತ್ರಕ್ಕೂ ಹಲವು ವಿಶಿಷ್ಟ ಲಕ್ಷಣಗಳಿದ್ದು, ಅವು ಇತರ ಶಾಸ್ತ್ರಗಳಿಂದ ಅದನ್ನು ಪ್ರತ್ಯೇಕಗೊಳಿಸುತ್ತವೆ. ಪ್ರತಿ ಶಾಸ್ತ್ರವೂ ವಿವಿಧ ಹಂತಗಳಿಗೆ ವಿಶೇಷವಾಗಿ ರಚಿಸಲ್ಪಟ್ಟ ತನ್ನದೇ ಆದ ಸ್ವಂತ ವಿಷಯವಸ್ತುವನ್ನು ಸುಸ್ಪಷ್ಟವಾಗಿ ಒಳಗೊಂಡಿರುತ್ತದೆ. ಅದು ಕೆಲವು ವೃತ್ತಿಪರ ಮತ್ತು ಸಾಮಾಜಿಕ ಚಟುವಟಿಕೆಗೆ ಸಂಬಂಧಿಸಿರುತ್ತದೆ. ಉದಾ: ವೈದ್ಯ ಶಾಸ್ತ್ರವು ಗುಣಪಡಿಸುವ ಕಲೆಯ ಸುತ್ತ ಬೆಳೆದಿರುತ್ತದೆ. ಕೃಷಿ ಶಾಸ್ತ್ರವು ರೈತರಿಗೆ ಕೃಷಿ ವಿಧಾನವನ್ನು ಕಲಿಯುವಲ್ಲಿ ನೆರವಾಗುತ್ತದೆ. ಮತ್ತು ಶಿಕ್ಷಣ ಶಾಸ್ತ್ರವು ಶಿಕ್ಷಕರಿಗೆ ಬೋಧನಾ ಕಲೆಯನ್ನು ಕಲಿಯಲು ಸಹಾಯಕವಾಗುತ್ತದೆ. ಪ್ರತಿಯೊಂದು ಶಾಸ್ತ್ರವೂ ತನ್ನದೇ ಸ್ವಂತ ಅಧ್ಯಯನ ವಿಧಾನವನ್ನು ಹೊಂದಿದೆ. ರಸಾಯನ ಶಾಸ್ತ್ರವು ವಸ್ತುವಿಗೆ ಸಂಬಂಧಿಸಿದ ವಿವಿಧ ಪರಿಮಾಣಗಳನ್ನು ಮತ್ತು ತತ್ವಗಳನ್ನು ಅಧ್ಯಯನ ಮಾಡಲು ಪ್ರಯೋಗಶಾಲೆ ಮತ್ತು ಪ್ರಯೋಗ ವಿಧಾನಗಳನ್ನು ಉಪಯೋಗಿಸುತ್ತದೆ. ಒಂದು ಶಾಸ್ತ್ರವು ತನ್ನದೇ ಆದ ವಿಶಿಷ್ಟ ವ್ಯವಸ್ಥೆಯುಳ್ಳ ಮೌಲ್ಯಗಳಿಂದ ತನ್ನದೇ ಸ್ವಂತ ಸಂಶೋಧನಾ ಕ್ಷೇತ್ರವನ್ನು ಒಳಗೊಂಡಿರುತ್ತದೆ. ಉದಾ: ಸಸ್ಯಶಾಸ್ತ್ರವು ಸಸ್ಯಗಳಿಗೆ ಸಂಬಂಧಿಸಿರುತ್ತದೆ, ಪ್ರಾಣಿಶಾಸ್ತ್ರವು ಪ್ರಾಣಿಗಳಿಗೂ, ರಸಾಯನಶಾಸ್ತ್ರವು ರಾಸಾಯನಿಕ ವಸ್ತುವಿಗೂ ಮತ್ತು ಮನೋವಿಜ್ಞಾನವು ಮಾನವನ ವರ್ತನೆಗೆ ಸಂಬಂಧಿಸಿರುತ್ತದೆ. ಒಂದು ಶಾಸ್ತ್ರವು ನಮ್ಮ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಭಾಗವನ್ನು ರೂಪಿಸುತ್ತದೆ ಮತ್ತು ಮಾನವ ಮನಸ್ಸಿನ ವಿಶಿಷ್ಟ ಸಮೃದ್ಧತೆಯನ್ನು ಅದರ ಫಲಿತಾಂಶಗಳಲ್ಲಿ ತಿಳಿಸಲು ಪ್ರಯತ್ನಿಸುತ್ತದೆ. ಪ್ರತಿಯೊಂದು ಶಾಸ್ತ್ರದಲ್ಲಿಯೂ ಆ ವಿಭಾಗದ ವಿಷಯಗಳನ್ನು ಸಂರಕ್ಷಿಸಲಾಗುವುದು ಮತ್ತು ಸಂವಹನ ಗೊಳಿಸಲಾಗುತ್ತದೆ. ನಿರಂತರ ಮತ್ತು ಪ್ರಜ್ಞಾಪೂರ್ವಕ ಸಂಶೋಧನಾ ಕಾರ್ಯಗಳ ಮೂಲಕ ಅದನ್ನು ಸಮೃದ್ಧ ಗೊಳಿಸಲಾಗುತ್ತದೆ. ಮಾನವನ ಜೀವಿತದ ಹೋರಾಟದಿಂದ ಮತ್ತು ಪರಿಸರದಿಂದ ಅಥವಾ ಅವನ ಕ್ರಿಯಾತ್ಮಕ ಚಟುವಟುಕೆಗಳಿಂದ ಹೊಸ ಚಿಂತನೆಯ ಆಯಾಮಗಳು ಹೊಮ್ಮುತ್ತವೆ. ಮತ್ತು ಕಾಲಕ್ರಮೇಣ ಒಂದು ಮಟ್ಟದ ಸ್ಥಿರತೆಯನ್ನು ಅದು ಸಂಪಾದಿಸಿಕೊಂಡಾಗ ಒಂದು ಹೊಸ ಶಾಸ್ತ್ರವು ಹೊರಹೊಮ್ಮುತ್ತದೆ. ಆದಾಗ್ಯೂ ಆರಂಭಿಕ ಹಂತದಲ್ಲಿ, ಹೊಸದಾಗಿ

Digitised by Bharatavani, CIIL

ಸೃಷ್ಟಿಯಾದ ಶಾಸ್ತ್ರವು ಚೆನ್ನಾಗಿ ಸ್ಥಾಪಿತಗೊಂಡ ಶಾಸ್ತ್ರದಮೇಲೆ ಅಧಿಕವಾಗಿ ವಾಲುತ್ತದೆ ಮತ್ತು ಕ್ರಮೇಣ ಅದು ತನ್ನದೇ ವಿಶಿಷ್ಟ ಲಕ್ಷಣಗಳನ್ನು ರೂಪಿಸಿಕೊಳ್ಳುತ್ತದೆ.

**ಒಂದು ಶಾಸ್ತ್ರವಾಗಿ ಶಿಕ್ಷಣದ ಸ್ವರೂಪ:** ವಿವಿಧ ವ್ಯಕ್ತಿಗಳು ಶಿಕ್ಷಣಕ್ಕೆ ವಿವಿಧ ಅರ್ಥಗಳನ್ನು ನೀಡಿರುತ್ತಾರೆ. ಕೆಲವರಿಗೆ ಶಾಲಾ ಮತ್ತು ಕಾಲೇಜುಗಳಲ್ಲಿ ಏನನ್ನು ಕಲಿಸಲಾಗುವುದೋ ಅದೇ ಶಿಕ್ಷಣ. ಹಲವರಿಗೆ ವ್ಯಕ್ತಿಗಳನ್ನು ತಯಾರು ಮಾಡುವುದು ಎಂಬ ಅರ್ಥದ್ದಾಗಿದೆ. ಇನ್ನು ಕೆಲವರಿಗೆ ಹೊಸ ಜನಾಂಗಕ್ಕೆ ಜ್ಞಾನವನ್ನು ತಿಳಿಸಲು ಇರುವ ಒಂದು ವಿಧವಾದ ಕೌಶಲ ತರಬೇತಿಯಾಗಿದ್ದರೆ, ಇನ್ನೂ ಹಲವರು ಅದನ್ನು ಒಂದು ಶಾಸ್ತ್ರವೆಂದು ಕರೆದರೆ ಉಳಿದವರು ಅದನ್ನು ಬೋಧನ ಶಾಸ್ತ್ರದೊಡನೆ (pedagogy) ಸಮೀಕರಿಸಿದರು.

'ಶಿಕ್ಷಣ' ಎಂಬ ಪದವು ಲ್ಯಾಟಿನ್ ಮೂಲದಿಂದ ತನ್ನ ಪದಶಃ ಉಗಮವನ್ನು ಪಡೆದುಕೊಂಡಿದೆ. 'Educare' ಮತ್ತು 'Educere' ಎಂದರೆ ಮಾರ್ಗದರ್ಶಿಸು ಅಥವಾ ಬೆಳೆಸು ಅಥವಾ ಮುಂದೆ ತರುವುದು ಎಂಬ ಅರ್ಥಗಳಿವೆ. ವ್ಯವಸ್ಥಿತವಾದ ಪ್ರಶ್ನಿಸುವಿಕೆ, ಜ್ಞಾನ, ಅರಿವು ಮತ್ತು ಮಕ್ಕಳ ಸಾಮರ್ಥ್ಯಗಳನ್ನು ಮುಂದೆ ತರುವುದು ಮುಂತಾದವು ಗಳಿಗೆ ಅದು ಒತ್ತು ನೀಡುತ್ತದೆ. ಗಾಂಧೀಜಿ "ಮಗು ಮತ್ತು ಮಾನವ ದೇಹ, ಮನಸ್ಸು ಮತ್ತು ಅಂತರಂಗ–ದಲ್ಲಿರುವ ಅತ್ಯುತ್ತಮವಾದುವನ್ನು ಹೊರಕ್ಕೆ ಎಳೆಯುವುದೇ ಶಿಕ್ಷಣ" ಎಂದಿದ್ದಾರೆ. ಸ್ವಾಮಿ ವಿವೇಕಾನಂದರು ಶಿಕ್ಷಣವೆಂದರೆ "ಮನುಷ್ಯನಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯನ್ನು ಪ್ರದರ್ಶಿಸುವುದೇ ಆಗಿದೆ". ಅರವಿಂದರ ಶಿಕ್ಷಣ ಪರಿಕಲ್ಪನೆ ಎಂದರೆ "ಬೆಳೆಯುತ್ತಿರುವ ಆತ್ಮವು ತನ್ನೊಳಗೆ ಇರುವುದನ್ನು ಹೊರಕ್ಕೆ ಎಳೆಯುವುದಕ್ಕೆ ಸಹಾಯ ಮಾಡುವುದು". ಟಾಗೂರರೂ ಹೆಚ್ಚು ಕಡಿಮೆ ಇದನ್ನೇ ಹೋಲುವ ಅಭಿಪ್ರಾಯವನ್ನು ಹೊಂದಿದ್ದಾರೆ. ಅವರು ಶಿಕ್ಷಣವೆಂದರೆ "ಧೂಳಿನ ಬಂಧನದಿಂದ ಬಿಡುಗಡೆಗೊಳಿಸಿಕೊಂಡ ಆತ್ಮವು ಅಂತಿಮ ಸತ್ಯವನ್ನು ಕಂಡು ಹಿಡಿಯುವುದಕ್ಕೆ ಪ್ರೋತ್ಸಾಹಿಸುವುದು ಮತ್ತು ನಮಗೆ ವಸ್ತುಮೂಲ ಸಂಪತ್ತನ್ನಷ್ಟೇ ಅಲ್ಲದೆ ಆಂತರಿಕ ಬೆಳಕನ್ನೂ, ಅಧಿಕಾರವನ್ನಷ್ಟೇ ಅಲ್ಲದೆ ಪ್ರೀತಿಯನ್ನೂ, ಸತ್ಯವನ್ನೂ ತನ್ನದಾಗಿಸಿಕೊಂಡು ಅದಕ್ಕೆ ಅಭಿವ್ಯಕ್ತಿಯನ್ನು ಕೊಡುವುದೇ ಆಗಿದೆ".

ಡಾ॥ ರಾಧಾಕೃಷ್ಣನ್ "ಶಿಕ್ಷಣವೆಂದರೆ ವ್ಯಕ್ತಿಗಳು ತಮ್ಮೊಳಗೆ ಬೌದ್ಧಿಕತೆಗಿಂತಲೂ ಆಳವಾದ ಮತ್ತೇನನ್ನೋ ಒಳಗೊಳ್ಳುವಂಥದು. ಅದನ್ನೇ ನೀವು ಇಷ್ಟ ಪಡುವ ಅಂತಸ್ಸತ್ವ ಅಥವಾ ಸ್ಫೂರ್ತಿ ಎಂದಾದರೂ ಕರೆಯಿರಿ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಜೆ.ಕೃಷ್ಣಮೂರ್ತಿಯವರು "ಶಿಕ್ಷಣವು ಕೇವಲ ಜ್ಞಾನವನ್ನು ಸಂಪಾದಿಸುವುದು ವಿಷಯಗಳನ್ನು ಕಲೆ ಹಾಕುವುದು ಮತ್ತು ಸಂಬಂಧವೇರ್ಪಡಿಸುವುದು ಮಾತ್ರವಲ್ಲ. ಜೀವನದ ಪ್ರಾಮುಖ್ಯತೆಯನ್ನು ಸಮಗ್ರವಾಗಿ ನೋಡುವುದೂ ಸಹಾ ಆಗಿದೆ" ಎಂದಿದ್ದಾರೆ.

ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವು (1948–49) ಭಾರತೀಯ ಸಂಪ್ರದಾಯದಲ್ಲಿ ಶಿಕ್ಷಣವು ಬದುಕುವುದಕ್ಕಾಗಿ ಸಂಪಾದಿಸುವ ಒಂದು ಮಾರ್ಗವಷ್ಟೇ ಅಲ್ಲದೆ ಅದು ಒಂದು ಚಿಂತನೆಯ ಸ್ಥಳ ಅಥವಾ ಪೌರತ್ವಕ್ಕಾಗಿ ಒಂದು ಶಾಲೆ ಅಲ್ಲ. ಶಿಕ್ಷಣ ಮಾನವ ಆತ್ಮವು ಸತ್ಯದ ಅನ್ವೇಷಣೆಯಲ್ಲಿ ಮತ್ತು ಸದ್ಗುಣಗಳ ಆಚರಣೆಯಲ್ಲಿ ಜೀವನದ ಸ್ಫೂರ್ತಿಗೆ ಪ್ರೋತ್ಸಾಹ ಪಡೆಯುವ ತರಬೇತಿಯೇ ಆಗಿದೆ.

ಪಾಶ್ಚಾತ್ಯ ಚಿಂತಕರು ಇದೇ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಪೆಸ್ಟಾಲೋಜ್ಜಿಯು ಶಿಕ್ಷಣವನ್ನು ಸಹಜವಾದ, ಸುಸಂಗತವಾದ ಮತ್ತು ಪ್ರಗತಿಪರ ಬೆಳವಣಿಗೆಯ ಮಾನವರ ಶಕ್ತಿಗಳು ಎಂದು ವ್ಯಾಖ್ಯಾನಿಸಿದ್ದಾನೆ. ಕಾಂಟ್ ಸಹಾ ಶಿಕ್ಷಣದಿಂದಲೇ ಮನುಷ್ಯನು ಮನುಷ್ಯನಾಗಬಲ್ಲ ಎಂದು ಪ್ರತಿಪಾದಿಸಿದ್ದಾನೆ. ಮಾನವ ಏನೂ ಅಲ್ಲ ಆದರೆ ಅವನನ್ನು ಶಿಕ್ಷಣವು ಏನನ್ನಾಗಿ ಮಾಡುತ್ತದೋ ಅದೇ ಆಗುತ್ತಾನೆ. ಫ್ರೊಬೆಲ್‌ನ ಪ್ರಕಾರ ಶಿಕ್ಷಣವು ಒಬ್ಬ ಮನುಷ್ಯನನ್ನು ಚಿಂತಿಸುವ, ಬುದ್ಧಿವಂತನಾಗಿ ಆತ್ಮ ಜಾಗೃತಿಯುಳ್ಳವನಾಗಿ ಬೆಳೆಸುವ, ಪವಿತ್ರವೂ, ಮಲಿನವಾಗದ, ಜಾಗೃತ ಮತ್ತು ಒಳ ಕಾನೂನಿನ ದೈವತ್ವದ, ಐಕ್ಯತೆಯ ಸ್ವತಂತ್ರ ಪ್ರತಿನಿಧಿಯಾಗಲು ಮತ್ತು ಅಲ್ಲಿಗೆ ಮಾರ್ಗ ಮತ್ತು ಗುರಿಗಳನ್ನು ಅವನಿಗೆ ಕಲಿಸುವುದನ್ನು ಒಳಗೊಳ್ಳುತ್ತದೆ.

ಪೌಂಡ್ಸ್ ಮತ್ತು ಗ್ಯಾರೆಟ್‌ಸನ್ (1962)ರ ಪ್ರಕಾರ ವ್ಯಕ್ತಿಯು ಪಡೆದುಕೊಳ್ಳುವ ಅನುಭವದ ಫಲವಾಗಿ ಅವನಲ್ಲಿ ಉಂಟಾಗುವ ನಡೆವಳಿಕೆಯಲ್ಲಿನ ಬದಲಾವಣೆಗಳ ವಿಧಾನವೇ ಶಿಕ್ಷಣವಾಗಿದೆ. ಅದಷ್ಟೇ ಅಲ್ಲ, ಅರ್ಥಪೂರ್ಣವಾದ ಜೀವನದ ಚಟುವಟಿಕೆಗಳಿಗಾಗಿ ವ್ಯಕ್ತಿಗೆ ಸರಿಯಾದ ಮಾರ್ಗದಲ್ಲಿ ಹೋಗಲು ಮತ್ತು ವ್ಯವಸ್ಥಿತವಾಗಿ ಬದುಕಲು ಅಗತ್ಯವಾದ ಅನುಭವಗಳನ್ನು ಪಡೆಯಲು ಶಿಕ್ಷಣ ನೆರವನ್ನೀಯುತ್ತದೆ. ಈ ಚಟುವಟಿಕೆಗಳೇ ಪ್ರತಿಯಾಗಿ ವ್ಯಕ್ತಿಗೆ ಮಾರ್ಗದರ್ಶನಗಳಾಗಿ ಅವನ ಜೀವನದ ವಿವಿಧ ಆಯಾಮಗಳನ್ನೂ ಮತ್ತು ಜೀವನ ವಿನ್ಯಾಸವನ್ನು ರೂಪಿಸುತ್ತವೆ. ಆಧುನಿಕ ಪರಿಭಾಷೆಯ ಪ್ರಕಾರ ಶಿಕ್ಷಣವನ್ನು ಒಂದು ಶಕ್ತಿಯುತವಾದ ಸಾಧನವಾಗಿ ಮಾನವನಲ್ಲಿ ಅಧಿಕ ಮಟ್ಟದ ಸುಧಾರಣೆಗಳನ್ನು ತರುವಲ್ಲಿ ಮತ್ತು ವೈವಿಧ್ಯಮಯವಾದ ಚಿಂತನಾ ವಿಧಾನಗಳನ್ನು ಮತ್ತು ಅವರ ಸಾರ್ವಜನಿಕ ಘೋಷಣೆ ಎಂದು ಪರಿಗಣಿಸಲಾಗಿದೆ. ನಿರ್ದಿಷ್ಟ ಸಮಾಜವೊಂದರಲ್ಲಿ ಅಂದಿಗೆ ಪ್ರಸ್ತುತವಾಗಿದ್ದ ಗುರಿಗಳನ್ನು ಮತ್ತು ಅವುಗಳ ಚಟುವಟಿಕೆಗಳಿಂದ ಆವೃತಗೊಂಡ ಪ್ರಾಚೀನ ಶಿಕ್ಷಣದ ಮಾದರಿಗಳನ್ನು ನಮ್ಮಿಂದ ಬಹು ದೂರದವರೆಗೆ ಒಯ್ದರೂ ಎಲ್ಲರಿಂದಲೂ ಅದು ಸರ್ವಸಮ್ಮತವಾಗಿ ಸ್ವೀಕೃತಗೊಂಡಿದೆ. ಉದಾ: ಚೈನಾದ ಮಾದರಿಯ ಶಿಕ್ಷಣವು ಪರಿಪೂರ್ಣ ಸದ್ಗುಣದ ಒಬ್ಬ ಮನುಷ್ಯನನ್ನಾಗಿ ವ್ಯಕ್ತಿಯನ್ನು ಮಾರ್ಗದರ್ಶಿಸುವುದು ಮತ್ತು ಸಮಾಜದಲ್ಲಿ ಒಂದು ನೈತಿಕ ತಳಹದಿಯನ್ನು ನಿರ್ಮಿಸುವುದೇ ಪ್ರಮುಖ ಗುರಿಯಾಗುಳ್ಳ ಚಟುವಟಿಕೆ ಎಂದು ಪರಿಗಣಿಸಿದೆ.

Digitised by Bharatavani, CIIL

(ಕನ್‌ಫ್ಯೂಶಿಯಸ್ 551–479 ಕ್ರಿ.ಪೂ) ಅದು 'ಪರೀಕ್ಷಿತ ವಿದ್ವತ್ಪೂರ್ಣವಾದ ಅಧಿಕಾರತ್ವದ ಮಾದರಿ' (tested scholarly officialdom model)ಯಾಗಿತ್ತು. ಇದು ಅಥೇನಿಯನ್ ಮತ್ತು ಸ್ಪಾರ್ಟನ್ ಮಾದರಿಗಳಾದ 'ಹೋಮರಿಕ್ ಶಿವರ್ಲಿ' (ಸರ್ಕಾರದ ಜವಾಬ್ದಾರಿಗಳನ್ನು ಹೊರಲು ಬೇಕಾದ ಕೌಶಲಗಳಾದ ತರ್ಕ, ಚರ್ಚೆ ಮತ್ತು ಸಂವಾದಗಳಿಂದ ಸ್ವತಂತ್ರ ಮನುಜರ ಮಕ್ಕಳಿಗೆ ತರಬೇತಿ ನೀಡುವುದಾಗಿತ್ತು) ಮತ್ತು 'ರಾಷ್ಟ್ರದ ಮಿಲಿಟರಿ ಮಾದರಿ' ಗಳಾಗಿ ಕ್ರಮವಾಗಿ ಅನುಸರಿಸಲ್ಪಟ್ಟಿತ್ತು.

ಆಡ್ಲರ್ ಮತ್ತು ಮೇಯರ್ (1958) ಗುರುತಿಸಿದಂತಹ ಒಂದು ಮಾದರಿಯು ಗ್ರೀಸ್‌ನಲ್ಲಿ ಉಗಮವಾಗಿದ್ದು ಸುಮಾರು 2500 ವರ್ಷಗಳವರೆಗೂ 'ಪಾಶ್ಚಾತ್ಯ ಉದಾರವಾದ ಕಲೆಗಳ ಮಾದರಿ' (Western liberal arts model)ಯೆನಿಸಿ ಪ್ರಚುರವಾಗಿತ್ತು. ಅದರ ಪ್ರಮುಖ ವೈಲಕ್ಷಣ್ಯಗಳೆಂದರೆ ಸೌಲಭ್ಯವುಳ್ಳ ಕೆಲವರಿಗೆ ಮಾತ್ರ ಶಾಲೆಯನ್ನು ನಡೆಸುವುದು, ಹೆಚ್ಚು ಜನರಿಗಲ್ಲ. ಕಲಿತವರಾಗಿ ಅವರನ್ನು ಮೊದಲಿಗೆ ಸಿದ್ಧಗೊಳಿಸುವುದು. ಅನಂತರ ಪವಿತ್ರವಾದ ಉದ್ಯೋಗಗಳಿಗೆ ಮತ್ತು ಅನಂತರ ಉನ್ನತ ಶ್ರೇಣಿಯ ವಾಣಿಜ್ಯ ಮತ್ತು ಸರ್ಕಾರಗಳಿಗೆ ಮತ್ತು ಕಡೆಯದಾಗಿ ಸಮಾಜದ ಸೇವೆಗಾಗಿ ಒಳ್ಳೆಯ ಮನುಷ್ಯನನ್ನಾಗಿ ರೂಪಿಸುವುದು. ಬ್ರಿಟಿಷ್ ಮಾದರಿಯು (ಆಂಗ್ಲ ಪಬ್ಲಿಕ್ ಶಾಲಾ ಮಾದರಿ) ಮತ್ತೆ ಶ್ರೀಮಂತ, ಸೌಲಭ್ಯವುಳ್ಳ ಕೆಲವರನ್ನು ಕೇಂದ್ರೀಕರಿಸಿತ್ತು ಮತ್ತು ಅದು 'ವೈಭವೋಪೇತ ಸಾಮ್ರಾಜ್ಯ ಮಾದರಿ' (Aristocratic Empire Model) ಎಂದು ಪ್ರಸಿದ್ಧವಾಯಿತು. ವೈಟ್ ಮತ್ತು ಡಕ್ಕರ್ (1973) ಪ್ರಕಾರ ಈ ಮಾದರಿಗಳನ್ನು ಪ್ರಜಾಪ್ರಭುತ್ವರಹಿತ ಕೈಗಾರಿಕಾರಹಿತ ಮತ್ತು ವಿಜ್ಞಾನಪೂರ್ವ ಸಮಾಜಕ್ಕಾಗಿ ವಿನ್ಯಾಸಗೊಳಿಸಿದೆ.

ಕಡೆಯ ಐತಿಹಾಸಿಕ ಮಾದರಿಯಾದ ಪ್ರಜಾಪ್ರಭುತ್ವೀಯ ಸಾರ್ವಜನಿಕ ಶಿಕ್ಷಣ ಮಾದರಿ (Democratic Universal Education Model) ನಾವಿಂದು ಶಿಕ್ಷಣ ಪಡೆಯುತ್ತಿರುವ ಅಮೇರಿಕನ್ ಶಿಕ್ಷಣದ ಮಾದರಿ ಪ್ರಚಲಿತವಾದ ಮಾದರಿಯಾಗಿದೆ. 'ಶಿಕ್ಷಣದ ಸಾರ್ವತ್ರೀಕರಣ', 'ಎಲ್ಲರಿಗೂ ಶಿಕ್ಷಣ' ಮತ್ತು 'ಅನುಕೂಲವಂಚಿತ ಗುಂಪುಗಳಿಗೆ ಶಿಕ್ಷಣ' ಎಂಬಿತ್ಯಾದಿ ಪರಿಕಲ್ಪನೆಗಳು ಸಾರ್ವತ್ರಿಕ ಶಿಕ್ಷಣದ ಮಾದರಿಯ ಉತ್ಪನ್ನಗಳೇ ಆಗಿವೆ.

ಬಹುಪಾಲು ಎಲ್ಲಾ ವ್ಯಾಖ್ಯಾನಗಳು ಮತ್ತು ಅಭಿಪ್ರಾಯಗಳು ಶಿಕ್ಷಣವೆಂದರೆ ಬರಿಯ ಜ್ಞಾನವನ್ನು ತಿಳಿಸುವು ದಕ್ಕಿಂತಲೂ ಮತ್ತೂ ಅಧಿಕವಾಗಿದೆ ಎಂದು ಪ್ರಮುಖವಾಗಿ ಗುರುತಿಸಿವೆ. ಅವು ಶಿಕ್ಷಣವನ್ನು ವಿವಿಧ ಅಧ್ಯಯನ ಕ್ಷೇತ್ರಗಳಿಗೆ ಅದರ ದ್ವಿಮುಖ ಉದ್ದೇಶ (ಅ) ಅವರನ್ನು ಸಾಕ್ಷರರನ್ನಾಗಿಸುವುದು; ಮತ್ತು (ಆ) ಅವರಿಗೆ ನಿರ್ದಿಷ್ಟ ಕ್ಷೇತ್ರದಲ್ಲಿ ವಿಶಿಷ್ಟ ಪರಿಣತಿಯನ್ನು ಒದಗಿಸುವ ಮೂಲಕ ಅವರು ತಮ್ಮ ಉದ್ದೇಶವನ್ನು ಹುಡುಕಿಕೊಳ್ಳಬಲ್ಲಂತಹ ಶಿಕ್ಷಣವನ್ನು ಪಡೆಯುವ ವಿಧಾನವನ್ನು ಅಂಥವರಿಗೆ ಮಾಹಿತಿಗಳ ಮೂಲಕ ಕಲಿಸುವುದನ್ನು ಒಳಗೊಂಡಿರುತ್ತದೆ ಎಂದು ಗುರ್ತಿಸುತ್ತವೆ. ಹೀಗೆ ಶಿಕ್ಷಣವು ಮೂರು 'R' ಗಳನ್ನೂ (ಓದುವುದು, ಬರೆಯುವುದು, ಲೆಕ್ಕಾಚಾರ) ಜ್ಞಾನವನ್ನೂ ಸಹಾ ನಿರ್ದಿಷ್ಟ ರೀತಿಯ ಕೌಶಲಗಳನ್ನೂ ಒಬ್ಬ ವ್ಯಕ್ತಿಯು ರೂಢಿಸಿಕೊಳ್ಳುವತ್ತ ಮಾರ್ಗದರ್ಶಿಸುತ್ತದೆ. ಕೌಶಲ ಮತ್ತು ಪರಿಣತಿಯನ್ನು ಗಳಿಸಿಕೊಳ್ಳುವಂಥದ್ದು ಜೀವಮಾನದ ಸಂಪತ್ತಾಗಬಲ್ಲುದು ಮತ್ತು ಹೀಗೆ ಜೀವಿನವನ್ನು ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ಮಾಡಿಕೊಳ್ಳಬಹುದು. ಭಾರತದಲ್ಲಿ +2 ಹಂತದಲ್ಲಿರುವ ಶಿಕ್ಷಣದ ವೃತ್ತೀಕರಣವು ವಿದ್ಯಾರ್ಥಿಗಳು ಕೌಶಲಗಳನ್ನು ನಿರ್ಮಿಸಿಕೊಳ್ಳಲು ಮತ್ತು ಸ್ಪರ್ಧಾತ್ಮಕವಾಗಿ ರೂಪುಗೊಳ್ಳಲು ಅಳವಡಿಸಿರುವುದು ಈ ಪರಿಕಲ್ಪನೆಯ ಸಾಕ್ಷಿಯಾಗಿದೆ.

ಶಿಕ್ಷಣವು ಕೇವಲ ಜ್ಞಾನ ಸಂಪಾದನೆಗಾಗಿ ಮಾತ್ರವಲ್ಲದೆ ಬದುಕಿಗಾಗಿ ಅಗತ್ಯವಾದ ಭೌತಿಕ ಮತ್ತು ಮನೋ–ಸಾಮಾಜಿಕವಾದ ಕೌಶಲ್ಯಗಳನ್ನು ಗಳಿಸಿಕೊಳ್ಳಲೆಂದೇ ಇರದೆ ಮತ್ತೂ ವಿಶಾಲವಾಗಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸುತ್ತಲೂ ಸಂಭವಿಸುತ್ತಿರುವುದರಿಂದ ಜ್ಞಾನದ ಬೆಳಕನ್ನು ಪಡೆಯಬಹುದಾದ ಅವಶ್ಯಕತೆಯಿದೆ. ಅವುಗಳೆಲ್ಲವೂ ಅದರ ಅರ್ಥ, ಕಾರ್ಯ ಮತ್ತು ಉದ್ದೇಶ ಮತ್ತು ಅದರಲ್ಲೇ ತನ್ನ ಪಾತ್ರವನ್ನೂ ಸೂಚಿಸುತ್ತದೆ. ಚೌಧರಿಯವರ (1995) ಪ್ರಕಾರ ಇವೆಲ್ಲವೂ, ಜೀವನಕ್ಕಾಗಿಯೇ ಅಗತ್ಯವಾದ ಪುನರ್‌ನವೀಕರಣವನ್ನು ಒದಗಿಸುತ್ತದೆ. ಆದ್ದರಿಂದ ಶಿಕ್ಷಣವು ಮಾಹಿತಿ ಮತ್ತು ಜ್ಞಾನಗಳ ಮಾಧ್ಯಮವಾಗಿಯಷ್ಟೇ ಅಲ್ಲದೆ ಜೀವನಕ್ಕಾಗಿ ತರಬೇತಿಯ ಮೂಲವಾಗಿದ್ದು, ಅದಕ್ಕೆ ಅರ್ಥವನ್ನು ಒದಗಿಸುತ್ತದೆ.

'ಶಿಕ್ಷಣವು ಒಂದು ಶಾಸ್ತ್ರವೆ?' ಎಂಬ ಪ್ರಶ್ನೆಯು ಎರಡು ಗುಂಪುಗಳ ಶಿಕ್ಷಣ ತಜ್ಞರುಗಳಲ್ಲಿ ವಿರುದ್ಧ ದೃಷ್ಟಿಕೋನಗಳ ವ್ಯಾಪಕವಾದ ಚರ್ಚೆಗಳಿಗೆ ಆಸ್ಪದವಿತ್ತಿದೆ. ಯಾದವ್ ಮತ್ತು ಲಕ್ಷ್ಮಿ (1995) ಶಿಕ್ಷಣವನ್ನು ಒಂದು ಶಾಸ್ತ್ರ ವಿಭಾಗವೆಂದು ರುಜುವಾತುಪಡಿಸಲು ಅದು ಇತರ ಸಾಮಾಜಿಕ ವಿಜ್ಞಾನ ಶಾಸ್ತ್ರಗಳ ಮಿತಿಗಳನ್ನು ಪ್ರಾಮಾಣೀಕರಿಸುವ ಮಟ್ಟಕ್ಕೆ ಹೋಗುವಷ್ಟು ಒಂದು ಶಾಸ್ತ್ರದ ಎಲ್ಲಾ ವೈಶಿಷ್ಟ್ಯಗಳನ್ನೂ ಶಿಕ್ಷಣವು ಒಳಗೊಂಡಿದೆ ಎಂಬ ಅಭಿಪ್ರಾಯದ ಸಮರ್ಥನೆ ಮಾಡಿದ್ದಾರೆ. ಬೇರೆ ಗುಂಪಿನ ಅಭಿಪ್ರಾಯ ಅಂಶಗಳು ಶಿಕ್ಷಣವನ್ನು ಸಮಾಜದ ಒಂದು ಸಂಕ್ರಿಯಾತ್ಮಕ (operational) ರೂಪವಾಗಿ ನೋಡುತ್ತದೆ. ಮತ್ತು ಅದರ ಎಲ್ಲೆಕಟ್ಟನ್ನು ಬಹು ಸ್ಪಷ್ಟವಾಗಿ ಗುರುತಿಸಲಾಗದು ಮತ್ತು ಅದನ್ನು ಒಂದು ನಿರ್ದಿಷ್ಟ ಶಾಸ್ತ್ರದ ಸ್ಥಾನವಿಲ್ಲದ ಆನ್ವಯಿಕ ಕ್ಷೇತ್ರವೆಂದು ಗುರುತಿಸಿದೆ.

ಆಕ್ಸ್‌ಫರ್ಡ್ ನಿಘಂಟುವಿನ ಪ್ರಕಾರ ಶಾಸ್ತ್ರಕ್ಕೆ (discipline) 'ಒಂದು ಬೋಧನೆಯ ಶಾಖೆ' ಎಂಬ ಅರ್ಥ ಕೊಡುತ್ತದೆ. ನಾವು ಶಿಕ್ಷಣವನ್ನು ಒಂದು ಶಾಸ್ತ್ರ ಎಂದು ಹೇಳಿದಾಗ, ಅದನ್ನು ಒಂದು ಬೋಧನೆಯ ಶಾಖೆಯಾಗಿ ಅದು ಕೆಳಕಂಡ ಲಕ್ಷಣಗಳನ್ನು ಪೂರೈಸುತ್ತದೆ ಎಂದು ಮಾನ್ಯ ಮಾಡಬಹುದು:

1. ಇತರ ಶಾಸ್ತ್ರಗಳ ವಸ್ತುವಿಷಯಗಳಿಂದ

Digitised by Bharatavani, CIIL

ಪ್ರತ್ಯೇಕಗೊಳಿಸಬಹುದಾದಂಥ ತನ್ನದೇ ಸ್ವಂತ ವಸ್ತುವಿಷಯ ಹೊಂದಿರುತ್ತದೆ. (2) ತಾರ್ಕಿಕವಾಗಿ ಪೂರ್ಣ ಸುಸಂಬದ್ಧವಾದ ಜ್ಞಾನಾಂಶವನ್ನು ಒದಗಿಸುತ್ತದೆ, (3) ಸಂಶೋಧನೆಗೆ ಪ್ರಚೋದನೆ ನೀಡುತ್ತದೆ ಮತ್ತು (4) ಅದಕ್ಕೆ ಆನ್ವಯಿಕ ಮೌಲ್ಯವಿರುತ್ತದೆ.

1. **ಶಿಕ್ಷಣದ ವಿಷಯವಸ್ತು:** ಶಿಕ್ಷಣವು ತನ್ನದೇ ಆದ ಸ್ವಂತ ವಿಷಯವಸ್ತುವನ್ನು ಹೊಂದಿದೆ. ಅದರ ಪರಿಕಲ್ಪನೆಗಳು ವಿಶಾಲವಾಗಿ, ಇತರ ಸಂಬಂಧಪಟ್ಟ ಅಧ್ಯಯನ ವಿಭಾಗಗಳ ವಿಸ್ತೃತಗೊಂಡಿದ್ದರೂ ಸ್ವಂತಿಕೆಯಿಂದ ಅದು ತತ್ವಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇನ್ನೂ ಇತರ ಹಲವು ಶಾಸ್ತ್ರಗಳಲ್ಲಿ ತನ್ನದೇ ತಳಹದಿಯನ್ನು ಹೊಂದಿದೆ. ಶಿಕ್ಷಣವು ಇತರ ಶಾಸ್ತ್ರಗಳಿಂದ ಹೆಚ್ಚು ವಿಷಯಗಳನ್ನು ಸೆಳೆದುಕೊಂಡಿದೆ. ಆದ್ದರಿಂದ ಅದನ್ನು ಒಂದು ಶಾಸ್ತ್ರ ಎಂದು ಪರಿಗಣಿಸಲಾಗದು ಎಂದೂ ಆಗಾಗ್ಯೆ ಹೇಳುವುದುಂಟು. ಮಾಥುರ್ (1955) ಅವರು ಈ ದೃಷ್ಟಿಕೋನವು ಪರಿಗಣನಾರ್ಹವಲ್ಲ ಎಂದು ಅಭಿಪ್ರಾಯಪಡುತ್ತಾರೆ. ಶಿಕ್ಷಣವು ಇತರ ಅಧ್ಯಯನ ವಿಭಾಗಗಳಿಂದ ವಿಷಯಗಳನ್ನು ಸೆಳೆದಿದ್ದರೂ, ಆ ವಿಷಯಗಳ ಸಂವಿಧಾನದ ಒಟ್ಟು ಸ್ವರೂಪದಲ್ಲಿ ವಿಭಿನ್ನತೆಯಿರುವಂತೆ ಅದರ ವಸ್ತು ವಿಷಯಗಳನ್ನು ಹೊಸದಾಗಿ ಚೆನ್ನಾಗಿ ಸಮಗ್ರವಾಗಿ ರೂಪಿಸಲಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಇತರ ಶಾಸ್ತ್ರಗಳಿಂದ ಶಿಕ್ಷಣಶಾಸ್ತ್ರ ತನ್ನ ಸ್ವರೂಪವನ್ನು ಹೇಗೆ ಏನು ಎಂದು ತಿಳಿಯುವಂತೆ ಉತ್ಪಾದಿಸಿಕೊಂಡಿದ್ದರೂ ಶಿಕ್ಷಣವು ಸುಸಂಬದ್ಧವಾದ ಮತ್ತು ಸುವ್ಯವಸ್ಥಿತವಾದ ಜ್ಞಾನ. ಅದು ತನ್ನ ಜ್ಞಾನ ವಿಧಾನದಲ್ಲಿ ಶಿಕ್ಷಣ ವಿಜ್ಞಾನ ಮತ್ತು ಶಿಕ್ಷಣ ಕಲೆ ಎಂಬ ಎರಡು ದೃಷ್ಟಿಗಳನ್ನು ಅಳವಡಿಸಿಕೊಂಡಿದೆ. ಶಿಕ್ಷಣ ವಿಜ್ಞಾನವು ಜ್ಞಾನ ತಳಹದಿ (K-base) ಹೊಂದಿದೆ. ಅದು ವಿಶಾಲವಾಗಿ ಶಿಕ್ಷಣವನ್ನು ಕಲೆಯಾಗಿ ಹೆಚ್ಚು ಪರಿಣಾಮಕಾರಿಯಾಗಿ ಮಾಡುವಲ್ಲಿ ಹೆಚ್ಚು ಜವಾಬ್ದಾರಿಯುತವಾಗಿದೆ. ಜ್ಞಾನ ತಳಹದಿಯು ಹೆಚ್ಚು ತತ್ವಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಮತ್ತು ಇತರ ಹಲವು ಸಂಬಂಧಪಟ್ಟ ವಿಜ್ಞಾನಗಳನ್ನು ಮತ್ತು ಬೋಧನ ಶಾಖೆಗಳನ್ನು ಅವಲಂಬಿಸಿದೆ. ಶಿಕ್ಷಣದ ಸಂದರ್ಭವನ್ನು ನಿರ್ಧರಿಸುವಲ್ಲಿ ಹಾಗೂ ಶಾಲೆ ಮತ್ತು ಉನ್ನತ ಹಂತಗಳಲ್ಲಿ ಬೋಧನೆಯ ಕಲೆಯನ್ನು ವಿವರಿಸುತ್ತಾ ಮತ್ತು ಕಲಿಸುತ್ತಾ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಶಿಕ್ಷಣವನ್ನು ತತ್ವಶಾಸ್ತ್ರದ ಗತಿಶೀಲಾತ್ಮಕ ಮುಖವಾಗಿ ಮತ್ತು ತತ್ವಶಾಸ್ತ್ರೀಯ ನಂಬಿಕೆಯ ಸಕ್ರಿಯ ವಿಷಯ ಎಂದು ಕರೆಯುತ್ತಾರೆ. ಅದರ ಸಿದ್ಧಾಂತ ಮತ್ತು ಅಭ್ಯಾಸವು ಜೀವನಕ್ಕೆ ವ್ಯಾಪಕವಾದ ದೃಷ್ಟಿಕೋನದಿಂದ ಗುರುತಿಸಲ್ಪಡುವ ತತ್ವಶಾಸ್ತ್ರದ ಸುದೃಢ ಹೆಜ್ಜೆಗಳನ್ನು ಆಧರಿಸದೇ ಹೋದರೆ, ತತ್ವಶಾಸ್ತ್ರವು ಪ್ರಪಂಚ ಮತ್ತು ಮಾನವ ಅನುಭವದ ಪ್ರಮುಖ ಕ್ಷೇತ್ರಗಳಿಗೆ ಎಲ್ಲಕ್ಕೂ ನಿಕಟವಾದ ಸಂಬಂಧ ಹೊಂದದೆ ಹೋದರೆ ಅದು ಎಂದಿಗೂ ಪರಿಪೂರ್ಣತೆಯನ್ನು ಪಡೆಯುವುದಿಲ್ಲ. ಟೈಟಸ್‌ನ (1968) ಪ್ರಕಾರ ತತ್ವಶಾಸ್ತ್ರವು ಜೀವನ ಮತ್ತು ವಿಶ್ವದ ಕಡೆಗೆ ವೈಯಕ್ತಿಕ ಧೋರಣೆಯಾಗಿದೆ. ಒಂದು ಸಮಸ್ಯೆಯ ಕುರಿತು ಹುಡುಕುವುದು ಮತ್ತು ವಿಮರ್ಶಾತ್ಮಕ ಧೋರಣೆ, ತೆರೆದ ಮನಸ್ಸು ಮತ್ತು ಸಹನಾಪರ ಧೋರಣೆ ಮತ್ತು ಅದರ ಎಲ್ಲಾ ಪಾರ್ಶ್ವಗಳನ್ನು ಕುರಿತಂತೆ ಇಚ್ಛಾಪೂರ್ವಕವಾಗಿ ನೋಡುವುದು ಪ್ರಬುದ್ಧತೆಯ ಧೋರಣೆಯಾಗಿದೆ. ಇದು ಕಷ್ಟಕರವಾದ ಮತ್ತು ಪರಿಹರಿಸಲಾಗದ ಸಮಸ್ಯೆಗಳನ್ನು ಎದುರಿಸುವಲ್ಲಿ ಮುದುಡದೆ ಇರುವ ಊಹಾತ್ಮಕ ಧೋರಣೆಯಾಗಿರುತ್ತದೆ. ಶಿಕ್ಷಣದ ನಿಜವಾದ ಅರ್ಥದಲ್ಲಿ ಶಿಕ್ಷಿತನಾಗುವ ಬಯಕೆ ಇರುವವರಲ್ಲಿ ಈ ಬಗೆಯ ಧೋರಣೆಯನ್ನು ಶಿಕ್ಷಣವು ಬೆಳೆಸಬೇಕಾಗಿದೆ. ಚರ್ಚಾತ್ಮಕ ಚಟುವಟಿಕೆ (Discussive activity) ಮತ್ತು ಜೀವನದ ವಿವಿಧ ಪರಿಸ್ಥಿತಿಗಳಲ್ಲಿ ಮತ್ತು ಸಂದರ್ಭಗಳಲ್ಲಿ ವೈಚಾರಿಕ ಚಿಂತನೆಯ ಹವ್ಯಾಸವನ್ನು ಬೆಳೆಸಬೇಕಾಗಿರುವ ವಿಷಯ ಶಿಕ್ಷಣದ ವ್ಯಾಪ್ತಿಯೊಳಗೆ ಬರುತ್ತದೆ. (ಚೌಧರಿ, 1995) ಹೀಗೆ ಶಿಕ್ಷಣದ ವಿಷಯವಸ್ತು ಒಬ್ಬ ವೈಚಾರಿಕ ಮನುಷ್ಯನಾಗಿ ಅವನ ಜೈವಿಕ ಅಸ್ತಿತ್ವ, ಅವನ ಸಾಮಾಜಿಕ ಅಹಂ ಮತ್ತು ನೈತಿಕ ಮತ್ತು ಆಧ್ಯಾತ್ಮಿಕವಾಗಿ ಅವನ ಇರವನ್ನು ಕುರಿತ ಸಂಗತಿಗಳು, ವ್ಯಕ್ತಿಯು ಬದುಕುತ್ತಿರುವಲ್ಲಿ ಸಂಭವಿಸುವ ಎಲ್ಲಾ ಘಟನೆಗಳನ್ನು ಸುಸಂಗತಗೊಳಿಸುತ್ತದೆ.

ವೈವಿಧ್ಯಮಯವಾದ ತತ್ವಶಾಸ್ತ್ರೀಯ ಆಯಾಮಗಳಲ್ಲಿ, ತರ್ಕಶಾಸ್ತ್ರ ಆಯಾಮಗಳು ಶೈಕ್ಷಣಿಕ ಪರಿಕಲ್ಪನೆಗಳನ್ನು ರೂಪಿಸುವಲ್ಲಿ ಸಾಮಾನ್ಯೀಕರಣಗಳು ಮತ್ತು ಸಾದೃಶಗಳು ಶೈಕ್ಷಣಿಕ ಅನುಮಾನಗಳನ್ನು ಹೊರಸೆಳೆಯುವಲ್ಲಿ ತರ್ಕ ಶಾಸ್ತ್ರವು ನಿರ್ವಹಿಸಬಹುದಾದ ವಿವಿಧ ಪ್ರಮುಖ ಪಾತ್ರಗಳನ್ನು ಪ್ರಕಟಪಡಿಸುತ್ತದೆ. ತರ್ಕಶಾಸ್ತ್ರವು ಪಠ್ಯ ರೂಪಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಕಲಿಸುವ–ಕಲಿಯುವ ಪ್ರಕ್ರಿಯೆಗಳ ಬಹು ಮೂಲಭೂತ ಆಧಾರವನ್ನು ಒದಗಿಸುತ್ತದೆ.

ನೀತಿನಿಯಮಗಳ ಮತ್ತು ಜ್ಞಾನ ಮೀಮಾಂಸೆ ವಿಚಾರಗಳು ಶಿಕ್ಷಣದ ಬಹಳಷ್ಟು ಸಾಮಾನ್ಯ ಹಂತಗಳಲ್ಲಿ ಶಿಕ್ಷಣದ ಸಿದ್ಧಾಂತವನ್ನು ರೂಪಿಸುವಲ್ಲಿ ಸಹಾಯಕವಾಗಿವೆ. ಶಿಕ್ಷಣದ ಸಾಮಾನ್ಯ ಮತ್ತು ವಿಶಿಷ್ಟ ಗುರಿಯನ್ನು ಪರೀಕ್ಷಿಸುವಲ್ಲಿ ಕಲಿಯುವ ಪ್ರೇರಣೆಗಳನ್ನು ಅಥವಾ ಅದರ ಫಲಿತಾಂಶಗಳ ಮಾಪನಗಳನ್ನು ಅನುಸರಿಸಿದಾಗ ನೀತಿನಿಯಮಗಳ ಸಮಸ್ಯೆಗಳ ಬಗ್ಗೆ ತೊಡಗಿದಾಗ ಮೌಲ್ಯಗಳ ಸಮಸ್ಯೆಗಳು ಉಂಟಾಗುತ್ತವೆ. ಶೈಕ್ಷಣಿಕ ವಿಧಾನದ ಸಾಮಾಜಿಕ ಅಥವಾ ರಾಜಕೀಯ ವ್ಯವಸ್ಥೆಯನ್ನು ಪರೀಕ್ಷಿಸುವಾಗ ತಡೆಯೊಡ್ಡಲಾಗದಂತೆ ನೀತಿನಿಯಮಗಳ ಪಾಲನೆಯ ಪರಿಶೀಲನೆಯು ಮುಂದಾಗುತ್ತದೆ. ಪಠ್ಯದಲ್ಲಿ ಯಾವ ಅಧ್ಯಯನಗಳು ಅಥವಾ ವಿಷಯಗಳನ್ನು ಸೇರಿಸಬೇಕು ಎಂಬ ಆಯ್ಕೆಯಲ್ಲಿ ಮೌಲ್ಯಗಳು ಮುಖ್ಯವಾಗಿ ಪರಿಗಣನೆಗೆ ಬರುತ್ತವೆ. ಪಠ್ಯ ವಿಷಯಗಳು ಸಹಾ ಬಹು ಮುಖ್ಯವಾದ ಜ್ಞಾನ ಮೀಮಾಂಸೆ ಪ್ರಮೇಯಗಳ ಪ್ರಶ್ನೆಗಳನ್ನು ಎತ್ತಿ ಹಿಡಿಯುತ್ತವೆ. ವಿದ್ಯಾರ್ಥಿಗಳಿಗೆ ಜ್ಞಾನ ದೃಷ್ಟಿಕೋನದ ಪಥವಾಗಿ ಇರುವ ಪಠ್ಯಕ್ರಮವು ನಾವೂ ಜ್ಞಾನದ ಸ್ವರೂಪವನ್ನು ಗ್ರಹಿಸುವಂತೆ ಮಾಡುತ್ತದೆ. ಜ್ಞಾನದ ಸ್ವರೂಪವು ಪಠ್ಯಕ್ರಮ ಯಾವ ರೀತಿ ವ್ಯವಸ್ಥಿತವಾಗಿದೆ ಎಂಬುದರ ಮೇಲೆ ಪ್ರಭಾವ ಬೀರುವುದಷ್ಟೇ ಅಲ್ಲದೆ

Digitised by Bharatavani, CIIL

ಅದು ಕಲಿಸುವ ಮತ್ತು ಕಲಿಕೆಯ ಸ್ವರೂಪವನ್ನು ತೀರ್ಮಾನಿಸುವಲ್ಲಿ ಕಲಿಯುವ ವಿಧಾನಗಳಿಗೆ ಸಹಾಯಕವಾಗಿದೆ.

ಭಾರತೀಯ ಸಂದರ್ಭದಲ್ಲಿ, ವ್ಯಾಸ ಮತ್ತು ವಾಲ್ಮೀಕಿ, ಬುದ್ಧ, ಶಂಕರಾಚಾರ್ಯ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದರು, ರವೀಂದ್ರನಾಥ ಠಾಕೂರ್, ಜೆ.ಕೃಷ್ಣಮೂರ್ತಿ, ಆನಿಬೆಸೆಂಟ್ ಮತ್ತು ಮಾಹಾತ್ಮ ಗಾಂಧಿ ಅವರುಗಳ ಸೂಕ್ತಿಗಳ ಅಧ್ಯಯನ ಶಿಕ್ಷಣದ ವಿಷಯವಸ್ತುವಿನ ಬಗ್ಗೆ ಅಗಾಧವಾದ ತಾತ್ವಿಕ ಆಲೋಚನೆಗಳನ್ನು ಒದಗಿಸುತ್ತದೆ. ಇವುಗಳು (ಅ) ಆತ್ಮ (ಮಾಯೆ, ಆಕಾಶ ಮತ್ತು ಕಾಲ, ಕಾರ್ಯ–ಕಾರಣ); (ಆ) ಮನಸ್ಸು (ಮಾನಸ್, ದೇಹ, ಅಹಂ ಮತ್ತು ಬುದ್ಧಿ); (ಇ) ಸತ್ಯ (ಜ್ಞಾನ ಮತ್ತು ಸತ್ಯ); (ಈ) ಸೌಂದರ್ಯ; (ಉ) ಒಳ್ಳೆಯತನ ಮತ್ತು (ಋ) ಆತ್ಮ ಸಾಕ್ಷಾತ್ಕಾರದ ಪರಮ ಮೌಲ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಒಳಗೊಳ್ಳುತ್ತದೆ.

ಒಂದು ಶಾಸ್ತ್ರವಾಗಿ ಶಿಕ್ಷಣವನ್ನು ಪರಿಭಾವಿಸುವ ಸಂದರ್ಭದಲ್ಲಿ ತಾತ್ವಿಕ ಆಧಾರಗಳಾಗಿ ಸಮಾನತೆ, ಜೀವನ ಪೂರ್ತಿ ಶಿಕ್ಷಣ, ನವೋದಯ ಶಾಲೆಗಳು, ಸಾಮಾಜಿಕವಾಗಿ ಉಪಯುಕ್ತ ಉತ್ಪಾದನೆಯ ಕೆಲಸ ಮತ್ತು ಶಿಕ್ಷಣದ ವೃತ್ತಿ ಶಿಕ್ಷಣೀಕರಣ, ಜಾತ್ಯತೀತ ಶಿಕ್ಷಣ ಮತ್ತು ಎಲ್ಲಾ ಮತಗಳವರಿಗೂ ಶಿಕ್ಷಣ, ಮೌಲ್ಯ ಬೆಳವಣಿಗೆಯ ಶಿಕ್ಷಣ, ಉನ್ನತ ಕಲಿಕೆಯ ಸಂಸ್ಥೆಯಲ್ಲಿ ಮೀಸಲಾತಿಗಳು, ಅರ್ಹತೆ ಆಧಾರದ ಪ್ರವೇಶಗಳು ಮತ್ತು ಉನ್ನತಿಗಾಗಿ ಶಿಕ್ಷಣ, ಸಾಮಾನ್ಯ ಶಾಲಾ ವ್ಯವಸ್ಥೆ ಮತ್ತು ಉದಾರ ಶಿಕ್ಷಣದ ವಿಚಾರಗಳು ಅರ್ಥಪೂರ್ಣವಾಗಿರುತ್ತದೆ.

ತತ್ವಶಾಸ್ತ್ರದ ವಿಷಯವಸ್ತುವಿಗೆ ಶೈಕ್ಷಣಿಕ ಜ್ಞಾನವಿಷಯದೊಡನೆ ನಿಕಟ ಸಂಬಂಧವಿದೆ. ತತ್ವಶಾಸ್ತ್ರೀಯ ಸಿದ್ಧಾಂತಗಳು ಶೈಕ್ಷಣಿಕ ಪ್ರಕ್ರಿಯೆಗಳನ್ನು ಅರಿಯುವಲ್ಲಿ ಮತ್ತು ಅವುಗಳ ನಿರ್ಮಾಣ ಮತ್ತು ಸಂಸ್ಥೆಗಳಿಗೆ ಸಂಬಂಧಿಸಿದಂತೆ ಇತರ ಕಾಳಜಿಗಳು ಸಹಾಯಕವಾಗುತ್ತವೆ. ಶಿಕ್ಷಣ ಕಲಿಯುವ ಮತ್ತು ಬೋಧಿಸುವ ವಿಧಾನವನ್ನು ಮತ್ತು ವ್ಯವಸ್ಥಿತವಾಗಿ ತತ್ವ ಶಾಸ್ತ್ರದ ಸಿದ್ಧಾಂತಗಳನ್ನು ಬಳಸುವುದನ್ನು ಉತ್ತಮವಾಗಿ ಅರಿತುಕೊಂಡಿದೆ. ಶಿಕ್ಷಕನು ತಾನು ಕಲಿಸುವ ಮಗುವನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಬೋಧನಾತ್ಮಕವಾದ ಪರಿಣಾಮ ತೀವ್ರತೆಯನ್ನು ಮತ್ತು ಸಮಾಜೋ ಸಾಂಸ್ಕೃತಿಕ ಬಲಗಳು ಮತ್ತು ಶಾಲೆಗಳಲ್ಲಿ ಪರಿಣಾಮಕಾರಿ ಕಲಿಕೆಯನ್ನುಂಟುಮಾಡಲು, ಕಲಿಕೆಯ ಪರಿಸ್ಥಿತಿಗಳನ್ನು ವಿನ್ಯಾಸ ಗೊಳಿಸಲು, ಕಲಿಯುವಿಕೆಯ ವಿವಿಧ ಸಿದ್ಧಾಂತಗಳ ಉಪಯುಕ್ತತೆಯ ಶಿಕ್ಷಣಕ್ಕೆ ಅರ್ಥಪೂರ್ಣ ವಿಷಯವನ್ನು ಒದಗಿಸುತ್ತದೆ. ಬಹಳಷ್ಟು ಕಲಿಯುವ ಸಿದ್ಧಾಂತಗಳು ತತ್ವಶಾಸ್ತ್ರದ ಪ್ರಯೋಗಾಲಯದ ಸಂಶೋಧನೆಗಳಿಂದ ಉಗಮ ವಾಗಿದ್ದರೂ ಅವುಗಳ ಆನ್ವಯಿಕತೆ ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕಲಿಸುತ್ತಿರುವಾಗ ತರಗತಿಯ ಕೊಠಡಿಗಳಲ್ಲಿ ಈ ಸಿದ್ಧಾಂತಳು ಪರೀಕ್ಷಿಸಲ್ಪಡುತ್ತವೆ. ಪರಿಣಾಮಕಾರಿ ಕಲಿಯುವಿಕೆಗೆ ಸಹಾಯವಾಗುವ ಪರಿಸ್ಥಿತಿಗಳು, ಸ್ಮರಣ ಶಕ್ತಿಯನ್ನು ಉತ್ತೇಜಿಸುವ ಸಹಾಯಕ ಅಂಶಗಳು, ಬುದ್ಧಿವಂತಿಕೆಯ ಪಾತ್ರ, ಅಭಿರುಚಿಗಳು, ಸೃಜನಶೀಲತೆ ಮತ್ತು ಶೈಕ್ಷಣಿಕ ಸಾಧನೆಯನ್ನು ಉತ್ತಮಪಡಿಸಲು ಪ್ರೇರಣೆಗಳು ಶಿಕ್ಷಣದ ಮುಖ್ಯ ಕ್ಷೇತ್ರಗಳಾಗಿ ಪ್ರಮುಖವಾಗಿವೆ. ಮನೆಯ ವಿವಿಧ ಪ್ರಭಾವಗಳು, ನೆರೆಹೊರೆಯವರು, ಬರಿಯ ಸಂಬಂಧಗಳು ಮತ್ತು ಇತರ ಸಾಮಾಜಿಕ ಸಂಬಂಧಗಳು ಮಗುವಿನ ಬೆಳವಣಿಗೆ, ಅಭಿವೃದ್ಧಿ ಮತ್ತು ಕಲಿಯುವಿಕೆಯು ಶಿಕ್ಷಣದ ಎಲ್ಲೆಯನ್ನು ವಿಸ್ತರಿಸುತ್ತವೆ. ಶಿಕ್ಷಣವು ವಿಶೇಷ ಅಗತ್ಯಗಳೊಡಗೂಡಿ ನಾಯಕತ್ವದ ಶೈಲಿಗಳು, ಕಲಿಕೆಯ ಕನಿಷ್ಠ ಮಟ್ಟಗಳ ಪರಿಕಲ್ಪನೆ (MLLS) ವಿದ್ಯಾರ್ಥಿ ಕ್ರಿಯಾಶೀಲತೆ, ಆತಂಕ ಮತ್ತು ಆಯಾಸ, ವಿವಿಧ ಬೋಧನೆಯ ಫಲಿತಗಳು, ಕಲಿಕೆ ಮತ್ತು ಮೌಲ್ಯಮಾಪನವು ಪರಿಣಾಮಕಾರಿ ಪತ್ತೆ ಹಚ್ಚಲು ನಡುವೆ ಬರುವ ಮತ್ತು ನಿಗದಿಪಡಿಸುವ ವಿಧಾನಗಳನ್ನು ಸುಭದ್ರಗೊಳಿಸುವುದು. ಶಿಶು ಕೇಂದ್ರಿತ ಮತ್ತು ಚಟುವಟಿಕೆಯಾಧಾರಿತ ಕಲಿಸುವಿಕೆ, ನಿರಂತರವಾದ ಮತ್ತು ಸಂಯೋಜಿತ ಮೌಲ್ಯಮಾಪನ, ಮತ್ತು ಶೀಲ (ಚಾರಿತ್ರ್ಯ) ದೋಷಗಳನ್ನು ಪತ್ತೆ ಹಚ್ಚುವ ಮತ್ತು ಪರಿಹಾರಾತ್ಮಕ ಬೋಧನೆಯು ಶಿಕ್ಷಣದ ವಿಷಯಸತ್ವವನ್ನು ಸಮೃದ್ಧಗೊಳಿಸುವಲ್ಲಿ ಕೊಡುಗೆ ನೀಡಿವೆ.

ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ವಿಷಯಗಳು ಶೈಕ್ಷಣಿಕ ಚಿಂತನೆ ಮತ್ತು ಅಭ್ಯಾಸಗಳ ಮೇಲೆ ಪ್ರಮುಖ ಪ್ರಭಾವ ಬೀರಿವೆ. ಶಾಲೆಯ ಪಾತ್ರ ಮತ್ತು ಕಾರ್ಯಗಳು ವಿಶಿಷ್ಟ ಸಮುದಾಯ ಹಿನ್ನೆಲೆಯ ಅಗತ್ಯಗಳ ಮೇಲೆ ನಿರ್ಧರಿತವಾಗುತ್ತವೆ. ಶಿಕ್ಷಣದ ಅಧ್ಯಯನದಲ್ಲಿ ಪ್ರಮುಖವಾದ ಅಂತಃಸತ್ವಗಳಾಗಿ ಬಾಲಾಪರಾಧ ಸಮಸ್ಯೆ, ಸಮುದಾಯದ ಸಾಮಾಜಿಕ ಸಂಗತಿಗಳು ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಅಧ್ಯಯನ, ಬುಡಕಟ್ಟು ಸಂಸ್ಕೃತಿಗೆ ಸಂಬಂಧಿಸಿದ ಸಮಸ್ಯೆಗಳು, ಗ್ರಾಮೀಣ ಸಮುದಾಯ, ಸಮುದಾಯದ ಅಭಿವೃದ್ಧಿ, ಕೈಗಾರಿಕೀಕರಣ, ನಗರೀಕರಣ, ಅಪರಾಧ ಮತ್ತು ಕುಟುಂಬವು ಪ್ರಮುಖವಾಗಿವೆ. ಶೈಕ್ಷಣಿಕ ಗುರಿಗಳು, ಪಠ್ಯದ ವಿಷಯಗಳು ಮತ್ತು ತಂತ್ರಗಳು, ಕಲಿಸುವಿಕೆ ಮತ್ತು ಕಲಿಯುವಿಕೆಯ ವಿಧಾನ ಕಾಲಕಾಲಕ್ಕೆ ದೇಶದ ಸಮಾಜೋ ಆರ್ಥಿಕ ರಾಜಕೀಯ ಸಾಂಸ್ಕೃತಿಕ ಪರಿಸ್ಥಿತಗಳಿಗೆ ಅನುಕೂಲಕರವಾದ ಸಾಮಾಜಿಕ ಬದಲಾವಣೆ ಮತ್ತು ಆಧುನೀಕರಣ, ಶಿಕ್ಷಕರ ನೈತಿಕತೆ, ಶಾಲೆಗಳಲ್ಲಿ ಮಕ್ಕಳ ಪ್ರವೇಶ ಮತ್ತು ಶೈಕ್ಷಣಿಕ ಸಾಧನೆಯ ಮೇಲೆ ಜನಸಂಖ್ಯಾಸ್ಫೋಟದ ಪ್ರಭಾವ, ಶಾಲಾ ಮಕ್ಕಳ ಶೈಕ್ಷಣಿಕ ಅರ್ಹತೆಯನ್ನು ನಿರ್ಧರಿಸುವ ಸಾಮಾಜಿಕ ಅಂಶಗಳು, ಕುಟುಂಬ ಕಲ್ಯಾಣ ಹಾಗೂ ಜನಸಂಖ್ಯಾ ನಿಯಂತ್ರಣದ ಬಗ್ಗೆ ಶಿಕ್ಷಣದ ಪಾತ್ರ, ಶಾಲಾ ಮತ್ತು ಉನ್ನತ ಹಂತಗಳ ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ, ಜಾತ್ಯತೀತ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸುವಲ್ಲಿ ಇರುವ ವಿವಿಧ ಬುಡಕಟ್ಟುಗಳ ಸಮಾಜಶಾಸ್ತ್ರ ಮತ್ತು ಸಾಮಾಜಿಕ ಅಡೆತಡೆಗಳು, ಮತದೊಡನೆ ಶಿಕ್ಷಣದ ಸಂಬಂಧ, ಆರ್ಥಿಕತೆ ಮತ್ತು ರಾಜನೀತಿ, ಶೈಕ್ಷಣಿಕ ಪ್ರೇರಣೆಗಳಲ್ಲಿ ಸಮಾನ ಮನಸ್ಕ ಗುಂಪು ಮತು ಮತಗಳ ಮೇಲೆ ಪ್ರಭಾವ, ವಿವಿಧ ಸಾಮಾಜಿಕ ಗುಂಪುಗಳ ವಿದ್ಯಾರ್ಥಿಗಳ ಹೆಗ್ಗುರಿ ಮತ್ತು ಸಾಧನೆಗಳು, ತರಗತಿ ಕೊಠಡಿಗಳು ಒಂದು ಸಾಮಾಜಿಕ ವ್ಯವಸ್ಥೆಯಾಗಿ, ಶಿಕ್ಷಣದ ಪರಸ್ಪರ ಪ್ರತಿಕ್ರಿಯೆಗಳನ್ನು ಸಾಮಾಜಿಕ, ಮಾನವಶಾಸ್ತ್ರೀಯ, ರಾಜಕೀಯ ಮತ್ತು ಆರ್ಥಿಕ

Digitised by Bharatavani, CIIL

ವಿಷಯಗಳು ಮತ್ತು ಕ್ಷೇತ್ರಗಳ ವಿಷಯಗಳನ್ನು ಒಳಗೊಂಡು ಶಿಕ್ಷಣದ ಜ್ಞಾನ ಘಟಕವನ್ನು ವೃದ್ಧಿಗೊಳಿಸಿವೆ.

1. **ಶಿಕ್ಷಣದ ಪ್ರಕ್ರಿಯೆ:** ಶಿಕ್ಷಣವು ಜನರ ದೃಷ್ಟಿಕೋನಗಳಲ್ಲಿ, ನಂಬಿಕೆಗಳಲ್ಲಿ ಮತ್ತು ಮೌಲ್ಯಾಧಾರಿತವಾದ ಬದಲಾವಣೆಯನ್ನು ತರಲು ಪ್ರಯತ್ನಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಶಾಲೆಗಳು ಅಥವಾ ಶಿಕ್ಷಣ ಸಂಸ್ಥೆಗಳು ಸೃಷ್ಟಿಸುವ ಪ್ರಕ್ರಿಯೆಗಳಿಗೆ ಮಾತ್ರ ಶಿಕ್ಷಣವು ಸೀಮಿತಗೊಳ್ಳುವುದಿಲ್ಲ. ಸರ್ಕಾರ ಮತ್ತು ಇತರ ನಿಯೋಗಗಳು ಬೆಂಬಲಿಸುವ ವೈವಿಧ್ಯತೆಯ ಸಂಘಟನಾತ್ಮಕ ರಚನೆಗಳ ಮೂಲಕ ನಾನಾ ರೂಪಗಳಲ್ಲಿ ಅದು ಹರಡುತ್ತದೆ. ನಿದರ್ಶನಕ್ಕಾಗಿ, ರೈತರು ಗೊಬ್ಬರಗಳನ್ನು, ಕೀಟ ನಾಶಕಗಳನ್ನು, ನೀರನ್ನು ವಿದ್ಯುಚ್ಛಕ್ತಿಯಿಂದ ನಿರ್ವಹಿಸುವ ಕೊಳವೆ ಬಾವಿಗಳಿಂದ ಹೊರಗೆ ತೆಗೆಯುವುದು ಮುಂತಾದವುಗಳನ್ನು ಬಳಸುತ್ತಿದ್ದರೂ, ಇವುಗಳ ಉಪಯೋಗದ ಬಗ್ಗೆ ಆರಂಭದಲ್ಲಿ ಇವುಗಳ ಬಳಕೆಯನ್ನು ಏಕೋ ಇಷ್ಟಪಡದ ಹಾಗೂ ನೈತಿಕವಲ್ಲದ್ದು ಎಂದು ಅಭಿಪ್ರಾಯ ಅವರಲ್ಲಿತ್ತು. ವಿವಿಧ ಮತಧರ್ಮದ ಬಗ್ಗೆ ನಂಬಿಕೆಯುಳ್ಳ ಜನರು ಮತ್ತು ಮೌಲ್ಯಾಧಾರಿತ ಅಭಿಪ್ರಾಯಗಳುಳ್ಳವರು ಶಸ್ತ್ರಕ್ರಿಯೆಯನ್ನು ಒಪ್ಪಿದ್ದ ಕುಟುಂಬ ಯೋಜನೆ ಸಾಧನಗಳು ಅಗತ್ಯ ಶಿಕ್ಷಣದ ಕೊರತೆಯಿದ್ದುದರಿಂದ ಇಂದಿಗೂ ಅದೇ ಬಗೆಯ ಸ್ವೀಕಾರ ಮಟ್ಟವನ್ನು ಪ್ರತಿಬಿಂಬಿಸುವುದಿಲ್ಲ ಎಂದು ಸುಲಭವಾಗಿ ಪತ್ತೆ ಹಚ್ಚಬಹುದು. ನಡೆವಳಿಕೆಗಳ ಬದಲಾವಣೆಗಳ ಈ ಸಾಧನೆಗಳು ಕೇವಲ ರಾಜಕೀಯ ರಹದಾರಿಗಳಿಂದಾಗಲೀ ಮತ್ತು ಬೆಂಬಲಿತ ಶಾಸನಾಧಾರದಿಂದಾಗಲಿ ಅಥವಾ ಯಾವುದೇ ಇತರ ಸರ್ಕಾರಿ ಪ್ರತಿಕ್ರಿಯೆ ಗಳಿಂದಾಗಲೀ, ಆರ್ಥಿಕ ಉತ್ತೇಜನಗಳ ಆಮಿಷಗಳಿಂದಾಗಲೀ ಸಾಧ್ಯವಾಗುತ್ತಿರಲಿಲ್ಲ. ದಿನನಿತ್ಯದ ಜೀವನವನ್ನು ಜ್ಞಾನದ ಬಹು ಆನ್ವಯಿಕಗಳು, ಗೃಹಕೃತ್ಯದ ಪರಿಸ್ಥಿತಿಗಳಲ್ಲಿನ ಆನ್ವಯಿಕ ಅಥವಾ ವಿಶಾಲ ಸಮುದಾಯಮಟ್ಟದ ಆನ್ವಯಿಕಗಳು ವಿಶೇಷ ಜಾಗೃತಿಯನ್ನು ಸೃಷ್ಟಿಸಿದವು ಮತ್ತು ಪ್ರಾಚೀನ ಕಾಲದ ತಾರತಮ್ಯಗಳು ಮತ್ತು ಸಾಮಾಜಿಕ ಕೆಡುಕುಗಳ ನಿರ್ಮೂಲನಗೈವಲ್ಲಿ ಸಹಾಯಕವಾದವು. ಆಧುನಿಕ ಸ್ನಾನದ ಕೊಠಡಿಗಳು, ಅವುಗಳ ಉಪಕರಣಗಳು, ವೈಜ್ಞಾನಿಕ ಜ್ಞಾನದ ಉತ್ಪನ್ನಗಳು ಮತ್ತು ಬಹುಕಾಲದಿಂದ ರೂಢಿಯಲ್ಲಿರುವ ಅಸ್ಪೃಶ್ಯತೆಯ ಆಚರಣೆಯನ್ನು ಕಡಿಮೆಗೊಳಿಸುವಲ್ಲಿ ಅವುಗಳನ್ನು ಶುಚಿಗೊಳಿಸುವ ಮಾರ್ಗವು ತನ್ನದೇ ಆದ ಕೊಡುಗೆಯನ್ನಿತ್ತಿದೆ. ಮತ್ತು ಈ ವಿಷಯದಲ್ಲಿ ಶಾಸನವೊಂದೇ ಅದನ್ನು ವಿಶಿಷ್ಟವಾಗಿ ಮೊಂಡನ್ನು ಹರಿತಗೊಳಿಸಲು ಸಾಕಾಗುವುದಿಲ್ಲ. (ಯಾದವ್ ಮತ್ತು ಲಕ್ಷ್ಮಿ, 1993)

ಇದರಿಂದ ಶಿಕ್ಷಣವು ಇತರ ಉಪವ್ಯವಸ್ಥೆಗಳನ್ನು ಅಗತ್ಯವಾಗಿ ಅವಲಂಬಿಸಿಲ್ಲ ಎಂಬುದನ್ನು ಹೊರಹೊಮ್ಮಿಸದೆ ಅದು ತನ್ನದೇ ಆದ ಮಾರ್ಗದಲ್ಲಿ ಸಾಗುತ್ತಿದೆ. ಆದಾಗ್ಯೂ, ಉಪವ್ಯವಸ್ಥೆಗಳು ಅಭಿವೃದ್ಧಿಯ ವಿಶಾಲತರವಾದ ಗುರಿಗಳನ್ನು ಸಾಧಿಸಲು ಶಿಕ್ಷಣವನ್ನು ಅವಲಂಬಿಸಿವೆ. ಶಿಕ್ಷಣವು ಒಂದು ಪರಿಣಾಮಕಾರಿ ಪ್ರಕ್ರಿಯೆಯಾಗಿ, ಅದರ ಸಾರ ಸತ್ವವನ್ನು ಇತರ ಉಪವ್ಯವಸ್ಥೆಗಳಿಂದ ಸೆಳೆದುಕೊಂಡಿದೆ. ಮತ್ತು ಅದನ್ನು ಸಮೀಕರಿಸಿ, ಸುಭದ್ರಗೊಳಿಸಲು ಕೆಲವು ತಂತ್ರವಿಧಾನಗಳನ್ನು ಅಸ್ತಿತ್ವಕ್ಕೆ ತಂದಿದೆ.

ಶಿಕ್ಷಣವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾಜಿಕ ಪ್ರಕ್ರಿಯೆಯಾಗಿ ಜನರು ಹೆಚ್ಚು ಸಂತೋಷದಿಂದ ವ್ಯಕ್ತಿಗಳಾಗಿ, ಆಪ್ತ ಹಿತೈಷಿಗಳಾಗಿ ಅಥವಾ ಸಾಮಾಜಿಕ ಗುಂಪುಗಳಾಗಿ ಬಾಳಲು ನೆರವಾಗಿದೆ. ಶಿಕ್ಷಣದ ಪ್ರಕ್ರಿಯೆಯ ಮೇಲೆ ಸಮಾಜದಲ್ಲಿ ಏನಾಗುತ್ತಿದೆ ಎಂಬುದು ಪ್ರಮುಖ ಪರಿಣಾಮ ಬೀರುತ್ತದೆ. ಚೌಧರಿಯವರು (1995) ಗುರುತಿಸಿರುವಂತೆ ಶಿಕ್ಷಣದ ಪರವಾದ ಆಂದೋಲನವು ಇಂಗ್ಲೆಂಡಿನ ಎಲ್ಲಾ ಮಕ್ಕಳನ್ನು ಕಾರ್ಖಾನೆಗಳಿಂದ ವಿಮುಕ್ತ ಗೊಳಿಸುವತ್ತ ಮುನ್ನಡೆಯಿತು. ಅದು ಮತ್ತೂ ಮುಂದುವರೆದು ಮಗುವಿನ ಬಗ್ಗೆ ವೈಜ್ಞಾನಿಕ ಅಧ್ಯಯನದ ಜೊತೆಗೆ ವರ್ತಮಾನದ ಮೇಲೆ ಬೆಳಕು ಚೆಲ್ಲುವ ಶಿಕ್ಷಣದ ಬಗ್ಗೆ ಆಸಕ್ತಿಗೆ ಎಡೆ ನೀಡಿತು. ರೂಸೋವಿನಿಂದ ವ್ಯಕ್ತಿ ಮತ್ತು ಮಗು-ಕುರಿತ ಅಧ್ಯಯನ ಎತ್ತಿ ಹಿಡಿಯಲ್ಪಟ್ಟಿತು ಮತ್ತು ಅದನ್ನು ಪೆಸ್ಟಾಲೋಜಿ ಮತ್ತು ಫ್ರೊಬೆಲ್ ಪರಿಷ್ಕರಿಸಿ ಜಾರಿಗೆ ತಂದದ್ದರಿಂದ ಇಪ್ಪತ್ತನೆಯ ಶತಮಾನದ ಮಗು-ಕುರಿತ ಸಮಗ್ರ ಅಧ್ಯಯನ ಆಂದೋಲನಕ್ಕೆ ಮಾರ್ಗ ತೋರಿತು. ಜಾನ್ ಡ್ಯೂಯಿ ಅವರ ಆಲೋಚನೆಯಲ್ಲಿ ಪೋಷಿಸಲ್ಪಟ್ಟ ವಿಶಿಷ್ಟ ವ್ಯಕ್ತಿಯು ಸಮಾಜದಲ್ಲಿ ಇತರರೊಡನೆ, ಶಾಲೆಯು ಸಮಾಜದೊಡನೆ, ವ್ಯಕ್ತಿಯು ಸಮಾಜದ ಜೊತೆಗೆ ಸಂಬಂಧ ಬೆಸೆಯುವ ಕೊಂಡಿಗಳಾದದ್ದು ಮತ್ತೂ ಸಾಕ್ಷ್ಯಾಧಾರವಾದವು.

ಜೆಫ್ರಿಯವರ (1976) ಪ್ರಕಾರ ಶಾಲೆಯ ಬಹು ಮುಖ್ಯ ಕಾರ್ಯವೆಂದರೆ ಸಮಾಜದ ಕನೂನುಬದ್ಧ ಹಕ್ಕುಗಳನ್ನು ವ್ಯಕ್ತಿಯ ಅಗತ್ಯಗಳಾಗಿ ಸಂಬಂಧ ರೂಪಿಸಲು ಏನನ್ನು ಒಳಗೊಳ್ಳಬೇಕು ಎಂಬುದನ್ನು ಬಾಲಕರು ಮತ್ತು ಬಾಲಕಿಯರು ಕಂಡುಹಿಡಿಯಲು ಸಮರ್ಥರಾಗುವಂತೆ ಮಾಡುವುದು. ಶಿಕ್ಷಣವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಿಂದ ಮಕ್ಕಳು ಸಾಮಾಜಿಕವಾಗಿ ಕಲಿಯುತ್ತಾರೆ ಮತ್ತು ಬಹಳಷ್ಟನ್ನು ಗಳಿಸಿಕೊಳ್ಳುವರು. ಅವರು ರಚನಾತ್ಮಕ ಅವುಭವಗಳ ಮೂಲಕ ಕಲಿಯುತ್ತಾರೆ ಮತ್ತು 'ಒಬ್ಬರು ಎಲ್ಲರಿಗಾಗಿ ಮತ್ತು ಎಲ್ಲರೂ ಒಬ್ಬರಿಗಾಗಿ' ಎಂಬ ತತ್ವವನ್ನು ಅನುಭವಿಸಿ ಅಳವಡಿಸಿಕೊಳ್ಳುತ್ತಾರೆ. ಪುಷ್ಪ ಚೌಧರಿ (1995)ಯವರ ದೃಷ್ಟಿಯಲ್ಲಿ ಈ ತತ್ವವು ಅವರ ಜೀವನವಿಡೀ ಅವರೊಡನೆ ಉಳಿದುಕೊಳ್ಳುತ್ತದೆ ಮತ್ತು ಸರಿಯಾದ ಧೋರಣೆಗಳುಳ್ಳ ಯುವ ಪೌರರಾಗುವಂತೆ ಅವರನ್ನು ಮಾರ್ಪಡಿಸುತ್ತದೆ. ಶಾಲಾ ಜೀವನವು ಸಾಮಾಜಿಕ ಸಂಬಂಧಗಳ ಮೇಲೆ ಪ್ರತಿಬಿಂಬಿತವಾಗುವಂತಹ ಮತ್ತು ತನ್ನನ್ನು ಮತ್ತು ತಾನು ಒಳಗೊಳ್ಳುವ ಸಮುದಾಯವನ್ನೂ ಸೇರಿದಂತೆ ಕಟ್ಟುವ ಸಾಮರ್ಥ್ಯವನ್ನು ಸಮತೋಲನಗೊಳಿಸಿಕೊಳ್ಳುವ ದಕ್ಷತೆಯನ್ನು ತೋರುವ ಅವಕಾಶಗಳನ್ನು ಒದಗಿಸುತ್ತವೆ ಎಂದು ಆಕೆ ವಾದಿಸುತ್ತಾರೆ. ಸಾಮಾಜಿಕವಾಗಿ ಪರಸ್ಪರ ಪ್ರತಿಕ್ರಿಯೆಗಳ ಮೂಲಕ ಒಬ್ಬನು ತನ್ನತನವನ್ನು ಪಡೆದುಕೊಂಡು ಮತ್ತು 'ಬದುಕಿನಲ್ಲಿ ವ್ಯಕ್ತಿತ್ವ' ಎಂಬ ಜೀವನದ ಗುರಿಯನ್ನು ಸಾಧಿಸುತ್ತಾನೆ. ಸಾಮಾಜಿವಾಗಿ ಪರಸ್ಪರ ಪ್ರತಿಕ್ರಿಯೆಗಳು ಮನುಷ್ಯನನ್ನು ವ್ಯಕ್ತಿಯಾಗಿ ಸಮೃದ್ಧಗೊಳಿಸುತ್ತದೆ.

Digitised by Bharatavani, CIIL

ಬೆಳವಣಿಗೆ ಮತ್ತು ಸೃಜನಶೀಲತೆಗೆ ಅಗತ್ಯವಾದ ಆತಂಕಗಳನ್ನು ಅವನಲ್ಲಿ ಹುಟ್ಟುಹಾಕುತ್ತದೆ.

ಸಮುದಾಯ ಶಾಲೆಯು ಸಾಮಾಜೀಕರಣದಲ್ಲಿ ಶಿಕ್ಷಣದ ಪಾತ್ರ ಮತ್ತು ಉಪಯುಕ್ತತೆಗಳನ್ನು ಎತ್ತಿ ಹಿಡಿದು ನಿದರ್ಶಿಸುತ್ತದೆ. ಇಲ್ಲಿ ಪರಿಣಾಮಕಾರಿ ಪ್ರಜಾಪ್ರಭುತ್ವದ ಭಾಗವಹಿಸುವಿಕೆಯ ವಿಶಿಷ್ಟ ಕೌಶಲಗಳನ್ನು ವಿದ್ಯಾರ್ಥಿಯು ಕಲಿಯುತ್ತಾನೆ. ಸಮುದಾಯ ಶಾಲೆಯು ಜೀವನ ಕೇಂದ್ರಿತವಾಗಿದ್ದು, ಸಮುದಾಯವನ್ನು ಕಲಿಕೆಗಾಗಿ ಒಂದು ಪ್ರಯೋಗಶಾಲೆಯಾಗಿ ಬಳಸಿಕೊಳ್ಳುತ್ತದೆ. ಅದು ಬದುಕಿನ ಮೂಲಭೂತ ಸಮಸ್ಯೆಗಳ ಸುತ್ತ ಪಠ್ಯಗಳನ್ನು ವ್ಯವಸ್ಥೆಗೊಳಿಸುತ್ತದೆ. ಇಪ್ಪತ್ತನೆಯ ಶತಮಾನದ ಮೊದಲ ಐದು ದಶಕಗಳಲ್ಲಿ ಸಮುದಾಯ ಶಾಲೆಯ ಚಿಂತನೆಯ ಪ್ರಗತಿಯು ಪಠ್ಯಕೇಂದ್ರಿತದಿಂದ ಮಗುಕೇಂದ್ರಿತವಾಗಿ, ಜೀವನಕೇಂದ್ರಿತವಾದ ಮಾನವ ಅಗತ್ಯಗಳಿಗೆ ಒತ್ತು ನೀಡುವತ್ತ ಶಾಲೆಗಳನ್ನು ಹೊಂದುವ ಕಡೆಗೆ ಗಮನ ಹರಿಸಿತು (ಓಲ್ಸನ್, 1961). ಶಿಕ್ಷಣವು ಅಧ್ಯಯನ ಕ್ಷೇತ್ರಗಳಾದ ಸಮಾಜಶಾಸ್ತ್ರ, ಸಮುದಾಯ ಮನಃಶಾಸ್ತ್ರ, ಸಾಮಾಜಿಕ ಪುನರ್ರಚನೆ ಮತ್ತು ಸಮಾಜಕಾರ್ಯಗಳೊಡನೆ ನಿಕಟ ಸಂಬಂಧ. ಸಂಪರ್ಕ ಹೊಂದಿರುವುದನ್ನು ಇದು ಸರಿಯಾಗಿಯೇ ಪ್ರದರ್ಶಿಸಿತು.

ಜೆಫ್ರಿಯವರ ಪ್ರಕಾರ (1976) ವಿಜ್ಞಾನವು ಅಂತರ್‌ದೃಷ್ಟಿ, ಕಲ್ಪನೆ ಮತ್ತು ಸ್ವಂತ ಭಾಗವಹಿಸುವಿಕೆಗಳನ್ನು ಒಳ ಗೊಳ್ಳುತ್ತದೆ. ಮೌಲ್ಯ ನಿರ್ಣಯಗಳು ವಿಷಯಾಧಾರಗಳನ್ನು ಒಳಗೊಳ್ಳುತ್ತದೆ. ಆದಾಗ್ಯೂ, ಎಲ್ಲಾ ಮಾನಸಿಕ ಚಟುವಟಿಕೆಗಳಲ್ಲಿ, ವೈಜ್ಞಾನಿಕ ಶೋಧನೆಯಲ್ಲಿ, ಕಲಾತ್ಮಕ ಸೃಷ್ಟಿಯಲ್ಲಿ ಅಥವಾ ಆಧ್ಯಾತ್ಮಿಕ ಅನುಭವಗಳಲ್ಲಿ ವ್ಯಕ್ತಿ ಸಂಪೂರ್ಣವಾಗಿ ಒಳಗೊಂಡಿರುತ್ತಾನೆ. ಶಿಕ್ಷಣವು 'ವ್ಯಕ್ತಿಸಂಪೂರ್ಣತೆ'ಯನ್ನು ಸಮಗ್ರವಾಗಿ ಸೇರಿಸಿಕೊಳ್ಳುತ್ತದೆ. ಅವನು ಇರುವಂತೆಯೇ ಅವನನ್ನು ಒಬ್ಬ 'ವ್ಯಕ್ತಿ'ಯಾಗಿ ನಿರ್ಮಾಣ ಮಾಡಲು ಮತ್ತು ಅವರ ಎಲ್ಲಾ ಸಾಧ್ಯವಿರುವ ಆಯಾಮಗಳನ್ನೂ ಸಮೃದ್ಧಗೊಳಿಸುವ ಗುರಿ ಹೊಂದಿದೆ.

ಶಿಕ್ಷಣವು ಒಂದು ಪ್ರಕ್ರಿಯೆಯಾಗಿ ಪೀಳಿಗೆಯಿಂದ ಪೀಳಿಗೆಗೆ ಸಾಂಸ್ಕೃತಿಕ ಪರಂಪರೆಯನ್ನು ರವಾನಿಸುತ್ತದೆ. ಸಾಂಸ್ಕೃತಿಕ ಮೌಲ್ಯಗಳು, ನಡೆವಳಿಕೆಯ ಸಂಹಿತೆಗಳು ಮತ್ತು ನಡೆವಳಿಕೆಯ ನಿಯಮಗಳು, ಸಂಪ್ರದಾಯಗಳು ಮತ್ತು ಅನುಭವಗಳು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಪ್ರಗತಿರೂಪಗಳು, ಇಂದಿನ ಎಲ್ಲಾ ಚಟುವಟಿಕೆಗಳು ಮತ್ತು ಸಾಧನೆಗಳನ್ನು ಒಳಗೊಂಡ ಸಂಸ್ಕೃತಿಯನ್ನು ಮಗುವಿಗೆ ಕುಟುಂಬದ ಮೂಲಕ ಅದು ಸೇರಿದ ಸಾಮಾಜಿಕ ಫಲಕಗಳ, ನೆರೆಹೊರೆಯ, ಸಮುದಾಯದ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಶಿಕ್ಷಣದಿಂದ ಔಪಚಾರಿಕ ಮತ್ತು ಅನೌಪಚಾರಿಕ ಪರಿಸ್ಥಿತಿಗಳಲ್ಲಿ ರವಾನೆಗೊಳ್ಳುತ್ತವೆ.

ಶಿಕ್ಷಣವನ್ನು ಸಮತಲೀಯ ಹಾಗೂ ಲಂಬೀಯ ರೀತಿಯ ವಿವಿಧ ಹಂತಗಳನ್ನು ಮತ್ತು ಕ್ಷೇತ್ರಗಳನ್ನು ಒಳ ಗೊಳ್ಳುವ ವಿಧಾನವಾಗಿ ಸಹಾ ಪರಿಗಣಿಸಬಹುದಾಗಿದೆ. ಇವುಗಳು ಪ್ರಾಥಮಿಕ ಪೂರ್ವ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವು, ಶಿಕ್ಷಣ ಪ್ರಶಿಕ್ಷಣವೂ ಸೇರಿದಂತೆ ಅನೌಪಚಾರಿಕ ಶಿಕ್ಷಣ ಮತ್ತು ಮುಕ್ತ ಮತ್ತು ದೂರ ಶಿಕ್ಷಣ– ಮುಂತಾದವನ್ನು ಒಳಗೊಂಡಿದೆ. ಪ್ರತಿಯೊಂದು ಹಂತದ ಮತ್ತು ಕ್ಷೇತ್ರದ ವಿಶಾಲವಾದ ಗುರಿಗಳು ಮತ್ತು ವಿಶಿಷ್ಟ ಉದ್ದೇಶಗಳು ಶಿಕ್ಷಣದ ಪ್ರಕ್ರಿಯೆಯ ಪ್ರಮುಖ ಕಾಳಜಿಗಳಾಗಿವೆ. ಯಾವ ಜ್ಞಾನ ಮತ್ತು ಕೌಶಲಗಳನ್ನು ಪ್ರತಿ ಹಂತದ/ ಕ್ಷೇತ್ರಕ್ಕೆ ಪ್ರಾಥಮಿಕದಿಂದ ಪ್ರೌಢಶಾಲೆವರೆಗೆ, ತೃತೀಯ/ವೃತ್ತಿಪರ– ಪಠ್ಯ ನಿರ್ವಹಣೆಗಳು ಮತ್ತು ಮೌಲ್ಯಮಾಪನ, ತಾಂತ್ರಿಕತೆಗಳು ಸೇರಿದಂತೆ ಪಠ್ಯವಿನ್ಯಾಸಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತುತ್ತಾ ಶಿಕ್ಷಣ ಇತರ ಅಧ್ಯಯನ ಕ್ಷೇತ್ರಗಳ ಪರಿಕಲ್ಪನೆಯನ್ನು, ಆಚರಣೆಗಳನ್ನು ಮತ್ತು ವಿಧಾನಗಳನ್ನು ವ್ಯಕ್ತಿ ಬೆಳವಣಿಗೆ ಮತ್ತು ಸಾಮಾಜಿಕ ಪ್ರಗತಿಗಾಗಿ ಉಪಯೋಗಿಸಿಕೊಂಡಿದೆ. ಈ ಸಂದರ್ಭದಲ್ಲಿ ಒಬ್ಬ ಅಭ್ಯಾಸನಿರತನಿಗೆ ಅಗತ್ಯವಾದ ಇತರ ಬೋಧನಾಶಾಖೆಗಳ ಮತ್ತು ತಿಳುವಳಿಕೆ ಬಗ್ಗೆ ಬೇಕಾದ ಸಾಮಗ್ರಿಗಳನ್ನು ಹವಣಿಸುವುದರಿಂದ ಒಬ್ಬ ಶೈಕ್ಷಣಿಕ ಸಿಬ್ಬಂದಿಯಾಗಿ ಯಶಸ್ವಿಯಾಗಲು ಸಮರ್ಥನಾಗುತ್ತಾನೆ. ಶೈಕ್ಷಣಿಕ ಸಿಬ್ಬಂದಿಗೆ ಅವಶ್ಯವಾಗಿ ಬಹುಮುಖ ಬೋಧನಾ ಶಿಸ್ತುಗಳ ಪುನರ್ ನವೀಕರಣವನ್ನು ದೊರಕಿಸುವುದರಿಂದ ಇದು ಸಾಧ್ಯವಾಗುತ್ತದೆ. ಶಿಕ್ಷಣದ ಪರಿ ಕಲ್ಪನೆಯಲ್ಲಿ ಕಲಿಸುವುದು, ಪಠ್ಯವಿಷಯಗಳು, ನಿಗದಿತ ಪಠ್ಯಗಳು, ಪಠ್ಯಪುಸ್ತಕಗಳು, ತರಗತಿ, ಪರೀಕ್ಷೆ, ಕಾರ್ಯದ ಅನುಭವಗಳು, ಕಲಿಸುವುದು, ಕಲಿಯುವುದು, ಬೋಧನೆ, ಶಾಲೆ ಬಿಟ್ಟು ಹೋಗುವವರು, ಸಾಕ್ಷರತೆ, ಸಂಖ್ಯಾಬಲ ಇತ್ಯಾದಿಗಳನ್ನು ಆಗಾಗ್ಗೆ ಶಿಕ್ಷಣದ ವಿವಿಧ ಹಂತಗಳಲ್ಲಿ, ಮಟ್ಟಗಳಲ್ಲಿ ಬಳಸಲ್ಪಡುತ್ತಿರುವುದರಿಂದ ಇವುಗಳೆಲ್ಲವೂ ಶಿಕ್ಷಣದಿಂದಲೇ ವಿಶಿಷ್ಟವಾಗಿ ಹೊರಹೊಮ್ಮಿರುವಂತೆ ಕಾಣಬರುತ್ತದೆ. ಅನೇಕ ಪರಿಕಲ್ಪನೆಗಳು ಉದಾ: ಕಲಿಯುವಿಕೆ, ಪ್ರಚೋದನೆ, ವ್ಯಕ್ತಿಗತ ತಾರತಮ್ಯಗಳು, ಸಾಂಸ್ಕೃತಿಕ ಪರಂಪರೆ, ವ್ಯವಸ್ಥಿತ ದೃಷ್ಟಿಕೋನ, ಸಾಮಾಜಿಕ ನ್ಯಾಯ, ಸಂವಿಧಾನಾತ್ಮಕ ನಿರ್ದೇಶನಗಳು, ಅರ್ಹತೆ, ಅಭಿರುಚಿ, ಅವಕಾಶ ವೆಚ್ಚ, ಲೆಕ್ಕ ಕೊಡುವುದು ಇತ್ಯಾದಿಗಳನ್ನೂ ಸಹ ಶಿಕ್ಷಣದಲ್ಲಿ ಬಳಸಲಾಗುತ್ತಿದೆ. ಇವುಗಳಲ್ಲಿ ಹಲವು 'ಶೈಕ್ಷಣಿಕ' ಎಂಬ ವಿಶೇಷಣದಿಂದ ಬಳಸಲ್ಪಡುತ್ತಿವೆ. ಇಲ್ಲವಾದರೆ ಅವುಗಳನ್ನು ಬಿಡಿಯಾಗಿ ಬಳಸಿದಾಗ ಶೈಕ್ಷಣಿಕ ಸಂದರ್ಭಗಳನ್ನು ಅವಶ್ಯವಾಗಿಯೂ ಸೂಚಿಸುವಂತೆ ಕಂಡು ಬರುವುದಿಲ್ಲ. ಏಕೆಂದರೆ ಅವು ಅನುರೂಪವಾದ ಸಂಬಂಧಿತ ಅಧ್ಯಯನ ಕ್ಷೇತ್ರಗಳಿಂದ ಜನ್ಯವಾಗಿವೆ. ಶಿಕ್ಷಣದಲ್ಲಿನ ವಿವಿಧ ಪರಿಕಲ್ಪನೆಗಳು ವೈವಿಧ್ಯಮಯ ಮಹತ್ವದ ಲಕ್ಷಣಗಳನ್ನು ಹೊಂದಿವೆ ಎಂಬುದನ್ನು ಮೆಚ್ಚಬೇಕಾದುದು ಅಗತ್ಯವಾಗಿದೆ. ಅವುಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಅವು ಉದ್ದೇಶಪೂರ್ವಕವಾಗಿ ಮತ್ತು ಪೂರ್ಣವಾಗಿ ಶಿಕ್ಷಣದಲ್ಲಿ ಅವುಗಳ ಯಥೋಚಿತ ಪರಿಕಲ್ಪನೆಯು ಹೊರಹೊಮ್ಮಿ ಶಿಕ್ಷಣದ ವಸ್ತುವನ್ನು ಚೆನ್ನಾದ ವಿಭಿನ್ನಾತ್ಮಕ ಮತ್ತು ಒಳಾರ್ಥಗಳ ರೂಪದಲ್ಲಿ ಹರಿತಗೊಳಿಸುತ್ತದೆ. ಆದ್ದರಿಂದ ಶಿಕ್ಷಣದಲ್ಲಿ ಪರಿಕಲ್ಪಿಸುವ ವಿಧಾನವನ್ನು

Digitised by Bharatavani, CIIL

ಎಷ್ಟು ಸಾಧ್ಯವೋ ಅಷ್ಟು ವ್ಯಾಪಕವಾಗಿರುವಂತೆ ಇಟ್ಟುಕೊಳ್ಳುವುದು ಅಗತ್ಯ. ವಸ್ತು ಸಂಬಂಧಿತ ಅರ್ಥಗಳನ್ನು ಆಳವಾಗಿ ಪರೀಕ್ಷಿಸಿ ವಿಭಿನ್ನತೆಗಳನ್ನು ತೋರಲು ಮತ್ತು ಸಾಕಷ್ಟು ಪ್ರಬಲತೆಯಿಂದ ಮತ್ತು ಅಧಿಕೃತತೆಯಿಂದ ಕೂಡಿದ ಪ್ರಕ್ರಿಯೆಯನ್ನಾಗಿ ಶೈಕ್ಷಣಿಕ ಪ್ರಕ್ರಿಯೆಯನ್ನು ತೆಗೆದುಕೊಂಡು ಹೋಗುವ ಎರಡೂ ದೃಷ್ಟಿಗಳಿಂದ ಇದು ಅತ್ಯಗತ್ಯವಾಗಿದೆ. (ಯಾದವ್ ಮತ್ತು ಪಾಂಡಾ, 2001)

ಕಾಲ ಕಳೆದಂತೆಲ್ಲಾ ಪರಿಕಲ್ಪನೆಗಳು ಶಿಕ್ಷಣಾತ್ಮಕ ಪ್ರಕ್ರಿಯೆಗಳನ್ನು ಮತ್ತು ಆಚರಣೆಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಸರಿಸಮನಾದ ಬದಲಾವಣೆಗಳಿಗೆ ಒಳಗಾಗುತ್ತವೆ. ಇದರಿಂದ ಹೊಸ ಪರಿಕಲ್ಪನೆಗಳು ವಿಕಾಸಗೊಳ್ಳುತ್ತವೆ.

2. **ಶಿಕ್ಷಣದ ಸಂಶೋಧನಾ ವಿಧಾನಗಳು:** ಶಿಕ್ಷಣವು ತನ್ನದೇ ಸ್ವಂತ ಸಂಶೋಧನೆಯ ಕ್ಷೇತ್ರಗಳನ್ನು ಹೊಂದಿದ ಅದರ ಜ್ಞಾಣವನ್ನು ಉತ್ಪಾದಿಸುವ ಶಿಕ್ಷಣವಿಧಾನಶಾಸ್ತ್ರವನ್ನು ರೂಪಿಸಿಕೊಂಡಿದೆ. ಅದನ್ನು 'ಶೈಕ್ಷಣಿಕ'ವೆಂದು ಕರೆಯಬಹುದು. ಈ ಶಿಕ್ಷಣವಿಧಾನಶಾಸ್ತ್ರವು ಇತರ ಸಾಮಾಜಿಕ ವಿಜ್ಞಾನಗಳಂತೆಯೇ ತನ್ನ ಮಾರ್ಗದ ಅಭಿವೃದ್ಧಿಯಲ್ಲಿ 'ವೈಜ್ಞಾನಿಕ ಪದ್ಧತಿ'ಯನ್ನು, ಹಂತಗಳನ್ನು ಅನುಸರಿಸುತ್ತಾ ಸಾಮ್ಯತೆಗಳನ್ನು ಅಳವಡಿಸಿಕೊಂಡಿದೆ. ಶಿಕ್ಷಣದಲ್ಲಿ ಸಂಶೋಧನೆಯ ಪ್ರಶ್ನಾತೀತವಾದ, ಊಹನಾತ್ಮಕ ಅನುಮಾನದ ಶಿಕ್ಷಣವಿಧಾನಶಾಸ್ತ್ರವು ಶಿಕ್ಷಣಶಾಸ್ತ್ರದ ಮೇಲೆ ಪ್ರಾಬಲ್ಯ ಹೊಂದಿ ಪರಿಮಾಣಾತ್ಮಕ ಮಾಪನದ ಪ್ರಯೋಗಾತ್ಮಕ ವಿನ್ಯಾಸಗಳ ಮತ್ತು ಬಹುಸಂಖ್ಯೆಯ ವೈವಿಧ್ಯತೆಗಳುಳ್ಳ ಅಂಕಿ–ಅಂಶಗಳ ಅಳತೆಗೋಲಿನ ವಿನ್ಯಾಸದಿಂದ ಶೈಕ್ಷಣಿಕ ಸಂಶೋಧನೆಯನ್ನು ನಡೆಸುತ್ತಿದೆ. ಊಹನಾತ್ಮಕ ಹಂತವು ಪ್ರಮುಖವಾದ ಘಟ್ಟವಾಗಿದೆ.. ಶೈಕ್ಷಣಿಕ ಸಂಶೋಧನೆ ಶಿಕ್ಷಣವಿಧಾನಶಾಸ್ತ್ರವಾಗಿದೆ. ಅನುಭವಸಿದ್ಧವಾದ ಇದು ಸಂಶೋಧನೆಯ ಪ್ರಮೇಯಗಳನ್ನು ರೂಪಿಸಿದ್ದರೂ ಅಂಕಿ–ಅಂಶಗಳ ತಂತ್ರವನ್ನು ಗಣಿತಶಾಸ್ತ್ರದ ಮಾದರಿಗಳನ್ನು ಆಧರಿಸಿ ಪರೀಕ್ಷಿಸುತ್ತದೆ. ವಿವಿಧ ಮಟ್ಟಗಳ ನಂಬಿಕೆಯನ್ನು ಬಳಸಿ ಈ ಪ್ರಮೇಯಗಳನ್ನು ಸ್ವೀಕರಿಸಬಹುದು ಅಥವಾ ನಿರಾಕರಿಸಬಹುದಾಗಿದೆ. ಶಿಕ್ಷಣದಲ್ಲಿ ಸಂಶೋಧನೆಯ ಉತ್ಪನ್ನಗಳು ಮತ್ತು ಆ ಮೂಲಕ ಜನ್ಯವಾದ ಜ್ಞಾನವು ಅದರ ಸ್ವರೂಪದಲ್ಲಿ ಸಮಗ್ರವಾಗಿಲ್ಲದಿದ್ದರೂ ಸಂಭವನೀಯಾತ್ಮಕವಾಗಿದೆ.

ಶಿಕ್ಷಣದಲ್ಲಿ ಸಂಶೋಧನೆಗಳನ್ನು ನಾನಾ ಪರಿಣಾಮಗಳ ನಡುವೆ ಕೈಗೊಳ್ಳಲಾಗುತ್ತಿದೆ. ವೈಜ್ಞಾನಿಕ ಪದ್ಧತಿಯನ್ನು ಅನ್ವಯಿಸಿಕೊಂಡಿದ್ದರೂ ಮತ್ತು ಸಂಶೋಧನಾ ತಂತ್ರಗಳಲ್ಲಿ ಸುಧಾರಣೆಗಳಾಗಿದ್ದರೂ, ಸಾಮಗ್ರಿಗಳು ಮತ್ತು ವಿನ್ಯಾಸಗಳು, ಶಿಕ್ಷಣದಲ್ಲಿ ಸಂಶೋಧನೆ ಪರಿಪೂರ್ಣತೆ ಪಡೆಯಲಾಗಿಲ್ಲ. ಮತ್ತು ಭೌತಿಕಶಾಸ್ತ್ರದ ಸಂಶೋಧನೆಗಳಂತೆ ಸ್ಥಾನವನ್ನು ಗಳಿಸಲಾಗಿಲ್ಲ. ಅದರ ವಿವರಣಾ ವ್ಯಾಪ್ತಿ, ಭವಿಷ್ಯ ನುಡಿ ಮತ್ತು ನಿಯಂತ್ರಣಗಳ ಭೌತಿಕಶಾಸ್ತ್ರಗಳ ಸಿದ್ಧಾಂತಗಳಿಗೆ ಸಮನಾಗಿ ಸಾಮಾನ್ಯೀಕರಣವನ್ನು ಸ್ಥಾಪಿಸಲು ಸಮರ್ಥವಾಗಿರುವುದಿಲ್ಲ. ಆಗಾಗ್ಗೆ ಸಂಶೋಧಕರಲ್ಲಿ ಅಂಗೀಕರಿಸಿದ ವಿಷಯಗಳ ಬಗ್ಗೆ ಯಾವುದು ಸಿದ್ಧಗೊಂಡ ವಿಷಯಗಳು ಅಥವಾ ಯಾವ ವಿವರಣೆಗಳು ಸಮಂಜಸವಾಗಿವೆ ಎಂಬ ಬಗ್ಗೆ ಸಹಮತಗಳಿಲ್ಲದಿರುವ ಕೊರತೆಯು ಕಂಡುಬರುತ್ತದೆ. (ಆದಿ ಮತ್ತು ಇತರರು, 1972). ಶಿಕ್ಷಣದಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅನ್ವಯಿಸಲು ಹಲವು ಪರಿಮಿತಿಗಳನ್ನು ಒಳಗೊಂಡಿದೆ ಎಂಬುದನ್ನು ಗುರುತಿಸಿದ್ದಾರೆ. ಈ ಪರಿಮಿತಿಗಳಿಂದಾಗಿ ಶಿಕ್ಷಣವು ಇತರ ಸಾಮಾಜಿಕ ವಿಜ್ಞಾನಗಳಂತೆ ವಿಜ್ಞಾನದ ಉದ್ದೇಶಗಳನ್ನು ಭೌತಿಕ ವಿಜ್ಞಾನಗಳಷ್ಟು ಸಂಪೂರ್ಣವಾಗಿ ತಿಳಿಯಲು ಕಷ್ಟವಾಗಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಶಿಕ್ಷಣದಲ್ಲಿ ಸಂಶೋಧಕರು ಮಾನವ ವಿಷಯಗಳ ಸಂಕೀರ್ಣ ಸ್ವರೂಪವನ್ನು ಕುರಿತು ಅಧ್ಯಯನ ಮಾಡುತ್ತಾರೆ. ಭೌತಿಕ ಅಥವಾ ಜೈವಿಕ ಘಟನೆಗಳನ್ನು ಕುರಿತಂತೆ ಒಬ್ಬ ವಿಜ್ಞಾನಿಯು ಸಂದರ್ಭಕ್ಕಿಂತ ಈ ಸಂಶೋಧಕನಿಗೆ ಶಿಕ್ಷಣವು ಸೀಮಿತ ಸಂಖ್ಯೆಯ ವೈರುಧ್ಯಗಳನ್ನು ಕುರಿತು ಅಧ್ಯಯನವಾಗಿರುವುದಿಲ್ಲ. ಮಾನವ ಸ್ವಭಾವಗಳ ಸಂಕೀರ್ಣ ಸ್ವರೂಪವನ್ನು ಅರಿಯಲು (ಶಿಕ್ಷಕರು, ವಿದ್ಯಾರ್ಥಿಗಳು, ಸಮುದಾಯದ ಸದಸ್ಯರು, ಪೋಷಕರು ಇತ್ಯಾದಿ) ಆತನು ಅಸಂಖ್ಯ ವೈರುಧ್ಯಗಳನ್ನು ಕುರಿತು ಸ್ವತಂತ್ರವಾಗಿ ಮತ್ತು ಪರಸ್ಪರ ಪ್ರತಿಕ್ರಿಯೆಗಳಲ್ಲಿ ಪ್ರವರ್ತಿಸಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಆತನ/ಅವಳ ಸಮಗ್ರ ವ್ಯಕ್ತಿತ್ವದಲ್ಲಿ ಮತ್ತು ಅವನ/ಅವಳ ಮಾನಸಿಕ, ಸಾಮಾಜಿಕ ಮತ್ತು ಭಾವನಾತ್ಮಕ ನಡೆವಳಿಕೆಯಲ್ಲಿ ತನ್ನದೇ ಆದ ರೀತಿಯಲ್ಲಿ ವಿಶಿಷ್ಟನಾಗಿರುತ್ತಾನೆ (ಕೌಲ್, 1997, ಪು.18). ಆದ್ದರಿಂದ ಶಿಕ್ಷಣ ವಿಭಾಗದ ಸಂಶೋಧಕನು ವ್ಯಕ್ತಿಯನ್ನು ಗುಂಪುಗಳಲ್ಲಿ ಮತ್ತು ಒಬ್ಬ ವ್ಯಕ್ತಿಯ ಮೇಲೆ ಗುಂಪಿನ ಸದಸ್ಯರುಗಳ ನಡೆವಳಿಕೆಯ ಪರಿಣಾಮವನ್ನು ಕುರಿತು ಅಧ್ಯಯನ ಮಾಡಬೇಕಾಗುತ್ತದೆ.

ಮಾನವನ ವರ್ತನೆಯ ಅಧ್ಯಯನದಲ್ಲಿ ವೀಕ್ಷಣೆಯನ್ನು ಒಂದು ತಂತ್ರವಾಗಿ ಉಪಯೋಗಿಸುವಲ್ಲಿ ಹಲವು ತೊಂದರೆಗಳು ಕಂಡುಬರುತ್ತವೆ. ಭೌತಿಕ ಅಥವಾ ಜೈವಿಕ ಘಟನೆಗಳ ವೀಕ್ಷಣೆಗಿಂತಲೂ ಇದು ಹೆಚ್ಚು ವಸ್ತುನಿಷ್ಠ ವಾಗಿರುತ್ತದೆ. ಪರಿಶೀಲಕನ ವಸ್ತುನಿಷ್ಠತೆಯ ಪಾತ್ರವು ಶೈಕ್ಷಣಿಕ ಸಂದರ್ಭವೊಂದರಲ್ಲಿ ವ್ಯಾಖ್ಯಾನ ಮತ್ತು ಶೋಧನೆಗಳನ್ನು ಆಧರಿಸಿದ್ದು ತೀರ್ಮಾನದ ಮೇಲೆ ನೇರ ಪರಿಣಾಮ ಬೀರುತ್ತದೆ.

ಒಬ್ಬ ಭೌತಶಾಸ್ತ್ರಜ್ಞನು ಪ್ರಯೋಗ ಶಾಲೆಯಲ್ಲಿ ಒಂದು ತಂತಿಯ ನಿರೋಧಕತೆಯನ್ನುವಸ್ತುನಿಷ್ಠವಾಗಿಮತ್ತುನಿಖರವಾಗಿಕಂಡುಹಿಡಿಯ ಬಲ್ಲನು. ಅವನು ತನ್ನ ಶೋಧನೆಗಳನ್ನು ವರದಿ ಮಾಡಬಹುದು ಮತ್ತು ಪ್ರಯೋಗವನ್ನು ಸುಲಭವಾಗಿ ಪುನರಾವರ್ತಿಸಿ ತೋರಿಸ ಬಲ್ಲನು. ಇದು ಶಿಕ್ಷಣದಲ್ಲಿ ಸುಲಭಸಾಧ್ಯವಲ್ಲ. ಶೈಕ್ಷಣಿಕ ಘಟನೆಗಳು ಏಕಾಂಗಿ ಘಟನೆ/ಸಂಗತಿಗಳಾಗಿದ್ದು ಅವುಗಳನ್ನು ವಸ್ತುನಿಷ್ಠತೆಯ ಉದ್ದೇಶಗಳಿಗಾಗಿ ಯಥಾವತ್ತಾಗಿ ಪುನರಾವರ್ತಿಸಲು ಸಾಧ್ಯವಿಲ್ಲ.

ಭೌತಿಕ ಅಥವಾ ಜೈವಿಕ ವಿಜ್ಞಾನಗಳ ಪ್ರಯೋಗಾಲಯಗಳಲ್ಲಿ ಪ್ರಯೋಗಾತ್ಮಕ ಪರಿಸ್ಥಿತಿಗಳನ್ನು ಕಠಿಣವಾಗಿ ನಿಯಂತ್ರಿಸಲು ಸಾಧ್ಯವಿರುತ್ತದೆ. ಶೈಕ್ಷಣಿಕ ಸಂಶೋಧಕನು ಮಾನವರ ವಿಷಯಗಳಲ್ಲಿ ಒಂದರ ನಂತರ ಒಂದಾಗಿ ಹಲವು ವೈರುಧ್ಯಗಳನ್ನು ಕುರಿತು

Digitised by Bharatavani, CIIL

ಶೋಧಿಸುವಾಗ ಶೈಕ್ಷಣಿಕ ಅಧ್ಯಯನಗಳಲ್ಲಿ ಪ್ರಯೋಗಾತ್ಮಕ ವಿನ್ಯಾಸಗಳನ್ನು ಬಳಸುವುದು ಅಸಾಧ್ಯ. ಅದೂ ಅಲ್ಲದೆ ಭೌತಶಾಸ್ತ್ರಜ್ಞರು ಬಳಸುವ ಸಾಮಗ್ರಿಗಳಿಗಿಂತಲೂ ಇಲ್ಲಿ ದತ್ತಾಂಶ ಸಂಗ್ರಹಣೆಗೆ ಅಳತೆ ಸಾಧನೆಗಳು ಕಡಿಮೆ ಸಿಂಧುತ್ವ ಮತ್ತು ವಿಶ್ವಾಸನೀಯತೆ ಉಳ್ಳವುಗಳಾಗಿರುತ್ತವೆ.

ಶೈಕ್ಷಣಿಕ ಘಟನೆಗಳ ಅಧ್ಯಯನದಲ್ಲಿ ವಿವರಣಾತ್ಮಕ ಸಮೀಕ್ಷೆಗಳನ್ನು ಸಂದರ್ಭದ ಅಧ್ಯಯನಗಳು ಮತ್ತು ಪ್ರಯೋಗಾತ್ಮಕ ಅಧ್ಯಯನಗಳನ್ನು ಆಗಾಗ್ಗೆ ಉಪಯೋಗಿಸಲಾಗುತ್ತದೆ. ಬೋಧನೆ ಕಲಿಕೆಗಳ ನಡುವಣ ಸಂಬಂಧವನ್ನು ಅರಿಯುವಲ್ಲಿ ವಿವಿಧ ವಿಷಯಗಳು ನಿರ್ವಹಿಸುತ್ತಿರುವ ವಿಧಾನ, ವಿಶಿಷ್ಟ ಕಲಿಕಾ ಸಂದರ್ಭಗಳ ನಿರ್ದಿಷ್ಟ ಬೋಧನಾ ವಿಧಾನಗಳ ಸಾಮರ್ಥ್ಯದ ಅಂದಾಜು, ಮಟ್ಟಗಳು, ವಸ್ತುವಿಷಯ, ಪ್ರಚೋದನಾ ವಿಷಯಗಳು, ವ್ಯಕ್ತಿತ್ವದ ವಿಶಿಷ್ಟತೆಗಳು ಮತ್ತು ಇತ್ಯಾದಿ ಸಮೃದ್ಧ ಜ್ಞಾನನಿಧಿಯ ಈ ಅಧ್ಯಯನಗಳ ಉತ್ಪನ್ನಗಳು ಒದಗಿಸುತ್ತವೆ. ಯಾದವ್ ಮತ್ತು ಲಕ್ಷ್ಮೀ (1995) ಪ್ರಕಾರ ವಿಧಾನಶಾಸ್ತ್ರವು ಅಂತಹ ಅಧ್ಯಯನಗಳು ಹಲವು ವಿಧದ ಸಮೀಕ್ಷೆಗಳಾಗಿ, ಪ್ರಯೋಗಾತ್ಮಕ ವಿನ್ಯಾಸ ಗಳಾಗಿ ವಿಭಜಿತಗೊಳ್ಳುತ್ತವೆ. ಪ್ರತಿಯೊಂದು ವೈವಿಧ್ಯಮಯ ಮಾದರಿಗಳನ್ನು, ತಂತ್ರಗಳನ್ನು, ಅಂಕಿ–ಅಂಶಗಳ ಸಂಗ್ರಹಣಾ ಸಾಮಗ್ರಿಗಳನ್ನು ಮತ್ತು ವಿಶ್ಲೇಷಣೆಯನ್ನೂ ಅಳವಡಿಸಿಕೊಂಡಿದೆ. ಇದೂ ಕೂಡಾ ಪರಕಲ್ಪನೆಗಳು ಮತ್ತು ಪದ್ಧತಿಗಳಿಗೆ ವಿನೂತನ ಒಳಾರ್ಥಗಳಲ್ಲಿ ವಿಕಾಸವಾಗಿ ಫಲಿತವಾಗುತ್ತದೆ. ಉದಾ: ವ್ಯಕ್ತಿ ಅಧ್ಯಯನವನ್ನು ವ್ಯಕ್ತಿಯ ಮಾನಸಿಕ ಸಮಸ್ಯೆಗಳನ್ನು ಮೂಲತಃ ಅರಿಯಲು ಮತ್ತು ರೋಗ ಲಕ್ಷಣಗಳ ಅಧ್ಯಯನಕ್ಕಾಗಿ ಮನಃಶಾಸ್ತ್ರದ ವಿಧಾನ ಶಾಸ್ತ್ರದಿಂದ ಗುರುತಿಸಲು ಅಳವಡಿಸಿಕೊಳ್ಳಲಾಗಿದೆ. ವ್ಯಕ್ತಿ ಅಧ್ಯಯನ ಆಳವಾದ ಮತ್ತು ಅಂತರ್ ದೃಷ್ಟಿಯಿಂದ ಕೂಡಿದ ವಿಶಿಷ್ಟ ಘಟಕಗಳ–ವ್ಯಕ್ತಿ ಅಥವಾ ಸಂಸ್ಥೆ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ರೋಗ ಲಕ್ಷಣ ಶಾಸ್ತ್ರದಲ್ಲಿ ವಿಶಿಷ್ಟ ನಡೆವಳಿಕೆಯನ್ನೇ ಅಲ್ಲದೆ ಸಹಜ ಲಕ್ಷಣಗಳ ಒಳಹೊಕ್ಕು ಸೂಕ್ಷ್ಮವಾಗಿ ಪರಿಶೀಲಿಸಿ ತದನಂತರ ಪರಿಹಾರಾತ್ಮಕ ಕಾರ್ಯ ವಿಧಾನಗಳನ್ನು ಸಲಹೆ ಮಾಡುವತ್ತ ಸಾಗುತ್ತದೆ.

ಸಂಕೀರ್ಣ ಶೈಕ್ಷಣಿಕ ಅಭ್ಯಾಸಗಳನ್ನು ಗಣನೀಯ ಪ್ರಮಾಣದಲ್ಲಿ ಗ್ರಹಿಸುವ ಉದ್ದೇಶದಿಂದ ಕ್ರಮೇಣ ಸಂಶೋಧಕರಿಗೆ ವಿಧಾನ ಶಾಸ್ತ್ರವು ವಿಧಿಸಿರುವ ಕಠಿಣ ನಿಯಂತ್ರಣಗಳು ಊಹಾತ್ಮಕ ಪ್ರಮೇಯಗಳ ಶಿಕ್ಷಣ ಶಾಸ್ತ್ರದಲ್ಲಿ ಪ್ರಾಬಲ್ಯದಿಂದ ಮಿತಿಮೀರಿರುವುದನ್ನು ಹಿಂದಿರುಗಿ ನೋಡಲೇಬೇಕಾದ ಅವಶ್ಯಕತೆಯು ಕಂಡುಬಂದಿದೆ. ಇದರಿಂದ ನಿಜವಾದ ವಿಶಿಷ್ಟ ಪರಿಸ್ಥಿತಿ–ಸಂದರ್ಭಗಳ ಅಡಿಯಲ್ಲಿ ಯೋಜನೆ ಮತ್ತು ಶೈಕ್ಷಣಿಕ ಘಟನೆಗಳ ಬಗ್ಗೆ ಅಧ್ಯಯನ ಮಾಡುವ ಕ್ರಮ ಮೊದಲಾಯಿತು. ವೈಜ್ಞಾನಿಕ ಪದ್ಧತಿಯ ಕಠಿಣವಾದ ಎರಕದಲ್ಲಿನ ಶೈಕ್ಷಣಿಕ ವಿಧಾನಶಾಸ್ತ್ರ ಭವಿಷ್ಯವನ್ನು ನಿರ್ಧರಿಸುವುದಕ್ಕಿಂತ ಶಿಕ್ಷಣವನ್ನು ಸಾಮಾಜಿಕ ಅಭಿವೃದ್ಧಿಯ ವಿಶಾಲವಾದ ಪ್ರಕ್ರಿಯೆಗಳಲ್ಲಿ ಆಳವಾದ ತಂತ್ರಾಂಶಗಳನ್ನು, ತೆರೆದ ಮನಸ್ಸಿನ ಸಂದರ್ಶನಗಳನ್ನು ಮತ್ತು ಭಾಗವಹಿಸಿದವರ ಪರಿಶೀಲನೆಯನ್ನೂ ಬಳಸಿಕೊಳ್ಳುವ ಪ್ರಯತ್ನ ಮಾಡಿತು. ಈ ಪರ್ಯಾಯವಾದ ಶಿಕ್ಷಣವಿಧಾನಶಾಸ್ತ್ರ ಪರಿಕಲ್ಪನಾ ಚೌಕಟ್ಟು (paradigm) ಗುಣಾತ್ಮಕವಾದ ಅಂಕಿ–ಅಂಶ, ಮಾನವಕುಲ ಅಧ್ಯಯನಶಾಸ್ತ್ರ, ಅರ್ಥವಿವರಣಶಾಸ್ತ್ರ (hermeneutics) ವ್ಯವಸ್ಥಾ ಉಪಕ್ರಮ, ಸೈಬರ್ ನೆಟಿಕ್ಸ್ ಇಡಿಯಾದ (holistic) ವಿಶ್ಲೇಷಣೆ ಮತ್ತು ಅಧ್ಯಯನದ ಗುರಿಯ ಜೊತೆಗೆ ನಿಕಟ ಸಂಬಂಧವನ್ನು ವಿಭಜಿಸಿದ ವಿವಿರವಾದ ವ್ಯಾಖ್ಯಾನಗಳ ಮೇಲೆ ಅವಲಂಬಿತವಾಗಿದೆ. ಶಿಕ್ಷಣ ವಸ್ತುವಿಷಯದಲ್ಲಿ ಹೆಚ್ಚಿನ ವಿಭಿನ್ನತೆಗಳು ಆಯಾಮಗಳಿಂದ ಶಿಕ್ಷಣವಿಧಾನಶಾಸ್ತ್ರದ ಬಹುಮುಖ ವಿಧಾನಗಳ ದೃಷ್ಟಿಕೋನವನ್ನು ಶಿಕ್ಷಣ ಸಂಶೋಧನೆಗಳು ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ.

**ಮುಕ್ತಾಯ:** ಶಿಕ್ಷಣವು ಒಂದು ಬೋಧನ ಶಾಖೆಯಾಗಿ ವೈವಿಧ್ಯಮಯ ಕಾಳಜಿಯುಳ್ಳ ವಿಶಾಲ ತಳಹದಿಯನ್ನು ಹೊಂದಿದೆ. ಅದರ ಜ್ಞಾನಾಧಾರವು (ಕೆ–ಬೇಸ್) ಶೈಕ್ಷಣಿಕ ಘಟನೆಗಳ ನೈಜ ಅರಿವಿಗೆ ಮತ್ತು ಸಾಮಾಜಿಕ ಅಗತ್ಯಗಳಿಗೆ ಮತ್ತು ಕಾಳಜಿಗಳಿಗೆ ಜೊತೆಗೆ ಶಿಕ್ಷಣ ಪ್ರಕ್ರಿಯೆಗಳಿಗೆ ಸಂಬಂಧಿಸಿದೆ. ಶಿಕ್ಷಣವು ಮೂಲಭೂತವಾಗಿ, 'ಉದ್ದೇಶಪೂರ್ವಕ'ವಾದದ್ದು, ಮತ್ತು ಸಮಾಜದಿಂದ ಒಂದು ವಿಧದಲ್ಲಿ ಸಾಮಾಜಿಕ ಕ್ರಿಯೆಯು ಸಾಂಸ್ಥೀಕರಣಗೊಂಡದ್ದು. ಸಮಾಜದ ಬಹುಮುಖ ಸಂದರ್ಭಗಳಲ್ಲಿ ತಳಮಟ್ಟದ ಸೂಕ್ಷ್ಮ ಗುಂಪುಗಳಿಂದ ಹಿಡಿದು ಸಮಾಜದ ವಿಸ್ತೃತಗೊಂಡ ಶ್ರೇಣಿಯವರೆಗೂ ಶಿಕ್ಷಣ ಯಾವಾಗಲೂ ಕಾರ್ಯನಿರ್ವಹಿಸುತ್ತದೆ. ಎಲ್ಲಾ ಸಾಮಾಜಿಕ ಸಂದರ್ಭಗಳಲ್ಲಿ 'ಪ್ರಸ್ತುತತೆ', 'ಸಮಾನತೆ' ಮತ್ತು 'ಅತ್ಯುನ್ನತಿ' ಶಿಕ್ಷಣವು ತೃಪ್ತಿಗೊಳಿಸಬೇಕಾದ ನಿರೀಕ್ಷಿತ ನಿರ್ಧಾರಕ ಲಕ್ಷಣಗಳಾಗಿ ಪ್ರಮುಖವಾಗಿವೆ.

ಶಿಕ್ಷಣದ ವಿಷಯವಸ್ತು ಅದರ ಪ್ರಕ್ರಿಯೆಗಳು ಮತ್ತು ಅಭ್ಯಾಸಗಳಲ್ಲಿ ಸ್ವದೇಶೀಯವೂ ಮತ್ತು ಸಾಂಸ್ಕೃತಿಕ ವಿಶಿಷ್ಟವೂ ಆದ ರಾಷ್ಟ್ರೀಯ ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿರಬೇಕು. ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಸ್ವಂತ ಶೈಕ್ಷಣಿಕ ವ್ಯವಸ್ಥೆಯು ಅದರ ಚಿಂತನೆ ಮತ್ತು ಅಭ್ಯಾಸದಲ್ಲಿ ನಿರ್ಮಿತಗೊಳ್ಳುವುದು ಅವಶ್ಯವಾಗಿದೆ. ಭಾರತೀಯ ಸಂದರ್ಭದಲ್ಲಿ 1910ರ ವರ್ಷದಲ್ಲಿ ಶ್ರೀ ಅರವಿಂದರು ಮೊತ್ತ ಮೊದಲಿಗೆ ಒಂದು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ದರ್ಶಿಸಿದರು. ಒಂದಾದ ಮೇಲೊಂದರಂತೆ ಇರುವ ಸ್ವರೂಪ ಮತ್ತು ನಿರಂತರ ಕಲಿಸುತ್ತಿರುವಂಥ ಮತ್ತು ಬೌದ್ಧಿಕ ಮತ್ತು ತಾರ್ಕಿಕ ವಿಷಯಗಳ ತರಬೇತಿಯನ್ನು ಪಡೆದ ಮಾನವ ಮನಸ್ಸು ಮತ್ತು ಸ್ವರೂಪದ ಮೇಲೆ ಒತ್ತು ನೀಡುವಂಥದ್ದೆಂದು ಪ್ರತಿ ಪಾದಿಸಿದರು. ಗಾಂಧೀಜಿಯವರು ಬುನಿಯಾದಿ ತಾಲೀಮ್ ಎಂದರೆ ಮೂಲಭೂತ ಶಿಕ್ಷಣವನ್ನು ವಾರ್ಧಾ ಯೋಜನೆಯಲ್ಲಿ ಪ್ರತಿಪಾದಿಸಿದ್ದು ಮತ್ತೊಂದು ಶಕ್ತಿಯುತವಾದ ಸ್ವದೇಶಿ ಮಾದರಿಯು ಭದ್ರವಾಗಿ ಭಾರತದ ಮಣ್ಣಿನಲ್ಲಿ ಬೇರುಬಿಟ್ಟಂಥ ಶಿಕ್ಷಣ ವ್ಯವಸ್ಥೆಯಾಗಿದೆ. 1968ರ ರಾಷ್ಟ್ರೀಯ ಶಿಕ್ಷಣ ನೀತಿಯ ದಾಖಲೆ ಶಿಕ್ಷಣದ ಬಗ್ಗೆ ಹಲವು ಆಯೋಗಗಳ ಶಿಫಾರಸುಗಳನ್ನು ಆಧರಿಸಿ ರೂಪಿತವಾಗಿದ್ದು, ಜನರು ಜೀವನಕ್ಕೆ ಅತಿ ನಿಕಟವಾಗಿ ಸಂಬಂಧಿಸಿದ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವ ಎಲ್ಲಾ

Digitised by Bharatavani, CIIL

ಹಂತಗಳಲ್ಲೂ ಶಿಕ್ಷಣದ ಗುಣಮಟ್ಟವನ್ನು ಏರಿಸಲು ತೀವ್ರವಾದ ನಿರಂತರ ಪ್ರಯತ್ನಗಳಿಂದ ಒಂದು ಶಿಕ್ಷಣ ವ್ಯವಸ್ಥೆಯ ತೀವ್ರಗಾಮಿ ಪರಿವರ್ತನೆಯನ್ನು ಸಲಹೆ ಮಾಡಿದೆ. ಅದು 1986 ಮತ್ತು 1992ರ ರಾಷ್ಟ್ರೀಯ ಶಿಕ್ಷಣ ನೀತಿಗಳಲ್ಲಿ ಮುಂದುವರಿದಿದೆ ಮತ್ತು ದೇಶದ ಸಾಮಾಜಿಕ–ಸಾಂಸ್ಕೃತಿಕ ಸಂದರ್ಭದ ಪ್ರತಿಕ್ರಿಯೆಯಾಗಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ರೂಪಿತವಾಗಬೇಕಾದ ಅವಶ್ಯಕತೆಯನ್ನು ದೃಢಪಡಿಸಿದೆ. ಶಿಕ್ಷಣವು ಒಂದು ಅಧ್ಯಯನ ವಿಭಾಗವಾಗಿ, ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಪ್ರಸ್ತುತವಾಗುವಂತೆ ವಿವಿಧ ಅಧ್ಯಯನ ಕ್ಷೇತ್ರಗಳಲ್ಲಿ ಅದರ ವಸ್ತು ವಿಷಯ ಮತ್ತು ಶಿಕ್ಷಣದ ವಿಷಯ ವಸ್ತು ಮತ್ತು ವಿಧಾನಶಾಸ್ತ್ರವನ್ನು ಸೇರ್ಪಡೆಗೊಳಿಸಿ ಅವುಗಳನ್ನು ಸಾಮಾಜಿಕ ಕಾರ್ಯಕ್ಷೇತ್ರಗಳಿಗೆ ಮತ್ತು ಅರಿವಿನ ಕಾಣಿಕೆಯನ್ನು ಸಂಬಂಧಗೊಳಿಸುವ ಘಟಕಾಂಶಗಳನ್ನು ಹೊಂದಿವೆ.

**ಮೂಲ: ಲೋಕೇಶ್ ಕೌಲ್**
**ಅನು: ಪ್ರೊ. ರತ್ನಮ್ಮ ಕೆ. ಎಸ್.**

## ಶಿಕ್ಷಣ ಮತ್ತು ಅಭಿವೃದ್ಧಿ

ಶಿಕ್ಷಣದ ಬಗ್ಗೆ ಮಾತನಡುವುದೆಂದರೆ ಜ್ಞಾನದ ಅಸ್ತಿತ್ವವನ್ನು ಕುರಿತು ಮಾತನಾಡುವುದು. ಜ್ಞಾನವೇ ಶಕ್ತಿ. ಜನರನ್ನು ಶಿಕ್ಷಿತರನ್ನಾಗಿ ಮಾಡುವುದೆಂದರೆ ಅವರನ್ನು ಸಬಲರನ್ನಾಗಿಸಿದಂತೆ. ಸಬಲೀಕರಣ, ಅಭಿವೃದ್ಧಿಯ ಸೂಚ್ಯಾಂಕ. ಹೀಗೆ ಶಿಕ್ಷಣವು ಅಗತ್ಯವಾಗಿದೆ. ಸಮಾಜ ಮತ್ತು ಸಂಸ್ಕೃತಿಯ ಜ್ಞಾನವು ಇತರರೊಡನೆ ಪರಸ್ಪರ ಪ್ರತಿಕ್ರಯಿಸಲು ಮತ್ತು ಸಂಸ್ಕೃತಿ ಹಾಗೂ ಸಮಾಜ ರಚನೆಯಲ್ಲಿ ಬದಲಾವಣೆಯನ್ನು ತರಲು ಸಹಾ ಅವಶ್ಯಕವಾಗಿದೆ. ಶಿಕ್ಷಣವು ಹೀಗೆ "ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮೂಲಭೂತವಾಗಿ ಒಂದರೊಡನೊಂದು ಬಿಡಿಸಲಾಗದಂತೆ ಹೆಣೆದುಕೊಂಡಿದೆ ಮತ್ತು ಸಂಪ್ರದಾಯದ ಆಧುನೀಕರಣದ ಸಾಧನವಾಗಿದೆ." [ಮೂನಿಸ್ ರಜಾ 1900:1]. ಆರ್ಜಿಸಿಕೊಂಡ ಜ್ಞಾನದ ಪ್ರಸಾರ, ಹೊಸ ಜ್ಞಾನದ ಆವಿಷ್ಕಾರ ಮತ್ತು ಸಾಮಾಜಿಕ ಸಾಂಸ್ಕೃತಿಕ ಪರಿಸರದಲ್ಲಿ ಉತ್ತಮ ಹೊಂದಾಣಿಕೆಗಾಗಿ ಮತ್ತು ಅದನ್ನು ಉತ್ತಮಪಡಿಸುವುದಕ್ಕಾಗಿ ಜ್ಞಾನದ ಬಳಕೆ ಮತ್ತು ಜ್ಞಾನದ ಕ್ಷೇತ್ರದಲ್ಲಿನ ಬದಲಾವಣೆಯ ಮೂರು ಅಂತರ್ ಸಂಬಂಧವಿರುವ ಪ್ರಕ್ರಿಯೆಗಳಾಗಿವೆ. ಹೀಗೆ ಎಲ್ಲ ಸಾಂಪ್ರದಾಯಿಕ ಸಮಾಜಗಳು, ಅವು ಆದಿಮ ಅಥವಾ ಆಧುನಿಕವಿರಲಿ, ಈ ಮೂರು ಕಾರ್ಯವಿಧಾನಗಳಲ್ಲಿ ತೊಡಗಿವೆ. ಆದರೆ ಪ್ರಾಧಾನ್ಯದ ದೃಷ್ಟಿಯಲ್ಲಿ ಪ್ರತಿಯೊಂದಕ್ಕೂ ವ್ಯತ್ಯಾಸವಿದೆ. ಹೀಗೆ ಬದಲಾವಣೆಯಿಲ್ಲದ ಸಂಸ್ಕೃತಿಗಳು ಎಂದು ಪರಿಗಣಿಸುವ ಸಾಂಪ್ರದಾಯಿಕ ಸಮಾಜಗಳು ಹೊಸ ಜ್ಞಾನದ ಉತ್ಪಾದನೆಗಿಂತ ಹೆಚ್ಚಾಗಿ ಅಂಥ ಜ್ಞಾನದ ಪ್ರಸಾರದ ಕಡೆಗೆ ಗಮನ ಕೇಂದ್ರೀಕರಿಸುತ್ತಿವೆ. ಇಂಥ ಸಮಾಜಗಳು ಹೊರಗಣ ಸಂಸ್ಕೃತಿಯ ಪ್ರಸಾರದಿಂದ ತಮ್ಮನ್ನು ಪ್ರತ್ಯೇಕಗೊಳಿಸಿಕೊಳ್ಳುತ್ತಿವೆ. ಆದರೆ ಬದಲಾವಣೆ ಕೇಂದ್ರಿತವಾದ ಸಮಾಜಗಳು ಸಂಶೋಧನೆ ಮತ್ತು ಪ್ರಯೋಗಗಳ ಮೂಲಕ ಜ್ಞಾನ ಆವಿಷ್ಕಾರದ ಸಾಧನಗಳನ್ನು, ಅವುಗಳು ಸಾಭಾವಿಕ ವಾಗಿ ರೂಢಿಗತ ನಂಬಿಕೆಗಳನ್ನು ಮತ್ತು ಆಚರಣೆಗಳನ್ನು ಪ್ರಶ್ನಿಸುತ್ತಿವೆ. ಒಳಗಿನಿಂದ ಮತ್ತು ಹೊರಗಿನಿಂದ ಶೋಧನೆ ಗಳನ್ನು ಪರಿಚಯಿಸುವ ಸ್ಥಿತಿಗಳನ್ನುಂಟುಮಾಡಿ ಪ್ರೋತ್ಸಾಹಿಸುತ್ತಿವೆ.

ಸಮಾಜದ ಹಿರಿಯರಿಂದ ಕಿರಿಯರಿಗೆ ದೊರಕುವ ಜ್ಞಾನ ಪ್ರಸಾರ ಕಾರ್ಯವನ್ನು ಸಾಮಾಜೀಕರಣ ಅಥವಾ ಸಂಸ್ಕೃತೀಕರಣ ಎಂದು ಕರೆಯುತ್ತಾರೆ. ಶಿಕ್ಷಣದ ವಿಸ್ತೃತ ಪರಿಕಲ್ಪನೆಯು ಮೂರು ಕಾರ್ಯ ವಿಧಾನಗಳನ್ನು ಒಳಗೊಂಡಿದೆ. ಅಭಿವೃದ್ಧಿ ಯೆನಿಸುವ ದಿಕ್ಕಿನಲ್ಲಿ ಬದಲಾವಣೆ ತರುವುದು ಅಪೇಕ್ಷಿತ. ಇದರಲ್ಲಿ ಶಿಕ್ಷಣದ ವ್ಯಾಪಕ ಪಾತ್ರವು ಅಂಗೀಕೃತವಾಗಿದೆ. ಶಿಕ್ಷಣವು ಕಲಿಯುವಿಕೆಯ ಸಮಗ್ರ ವಿಧಾನ. ಇದು ವ್ಯಕ್ತಿಯೊಬ್ಬನ ಅರಿವಿನ ದಿಗಂತಗಳನ್ನು ವಿಸ್ತಾರಗೊಳಿಸುತ್ತದೆ. ಅದು ವ್ಯಕ್ತಿಯಲ್ಲಿ ಆಯ್ಕೆ ಮಾಡುವ, ಮೌಲ್ಯಮಾಪನ ಮಾಡುವ ಮತ್ತು ಇರುವ ಜ್ಞಾನದ ಭಂಡಾರವನ್ನು ಬೆಳೆಸುವ ಕೌಶಲಗಳನ್ನು ಬೆಳೆಸುತ್ತದೆ. ಅಸ್ತಿತ್ವದಲ್ಲಿರುವ ಅನುಭವ ಮತ್ತು ಜ್ಞಾನದ ಭಂಡಾರವನ್ನು ಕೇವಲ ಪ್ರಸಾರ ಮಡುವುದಲ್ಲ. ಆದರೆ ಅದು ಹೊಸ ಜ್ಞಾನದ ಆವಿಷ್ಕಾರವನ್ನು ಸಾಮಾಜಿಕ ಒಳಿತಿಗೆ ಮತ್ತು ವಿಸ್ತರಣೆಗೆ ಅದರ ಬಳಕೆ ಸಹಾ ಆಗಿರುತ್ತದೆ.

ಶಿಕ್ಷಣ ಮತ್ತು ಅಭಿವೃದ್ಧಿಯ ಬಗ್ಗೆ ಮಾತನಾಡುವುದಾದರೆ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ವಿಶದಪಡಿಸಿ ಮಾತನಾಡುವ ಪ್ರವೃತ್ತಿಯಿದೆ. ಅಷ್ಟೇ ಪ್ರಮುಖವಾದ ವಿಚಾರ ಶಿಕ್ಷಣವನ್ನೂ ಪ್ರಭಾವಗೊಳಿಸುವುದರಲ್ಲಿ ಶಿಕ್ಷಣದ ಪಾತ್ರ ಅಭಿವೃದ್ಧಿಯ ಮೇಲಿನ ಚರ್ಚೆಯು ಈ ಕೆಳಗಿನ ಅಂಶಗಳನ್ನು ಒಳಗೊಳ್ಳುತ್ತದೆ

1) ಸಾಮಾಜೀಕರಣ ಮತ್ತು ಔಪಚಾರಿಕ ಶಿಕ್ಷಣದ ಮೂಲಕ ವ್ಯಕ್ತಿಯ ವ್ಯಕ್ತಿತ್ವದ ವಿಕಾಸ, (2) ಶಿಕ್ಷಣ ವ್ಯವಸ್ಥೆಯ ವಿಕಾಸ, (3) ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ, (4) ಶಿಕ್ಷಣದ ಮೇಲೆ ಅಭಿವೃದ್ಧಿಯ ಪ್ರಭಾವ.

**ವ್ಯಕ್ತಿಯ ಸಾಮಾಜೀಕರಣವಾಗಿ ಶಿಕ್ಷಣ:** ತಾವು ಹುಟ್ಟಿರುವ ಸಮಾಜದ ಸದಸ್ಯರಾಗಿ ಬಹುಪಾಲು ನಡೆವಳಿಕೆಯನ್ನು ಕಲಿಯುವುದು ಮಾನವರ ವಿಶೇಷ ಲಕ್ಷಣವೇ ಆಗಿದೆ. ಸಮಾಜದ ಹಿರಿಯರು ಜೈವಿಕವಾಗಿ ಪಶುಪ್ರಾಯವಾಗಿದ್ದ ಒಂದು ಮಾನವ ಶಿಶುವನ್ನು ಸಾಮಾಜಿಕ ಪ್ರಾಣಿಯಾಗಿ ಪರಿವರ್ತಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ. ಎಲ್ಲಾ ಸಮಾಜಗಳಲ್ಲಿಯೂ ಸಾರ್ವತ್ರಿಕವಾಗಿ ಹುಟ್ಟಿನ ಮೂಲಕ ಸಮಾಜಕ್ಕೆ ಹೊಸ ಪ್ರವೇಶವನ್ನು ಮಾಡುವವನಿಗೆ ಪರಸ್ಪರ ಇತರರೊಡನೆ ಬೆರೆತು ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಸಂಸ್ಕೃತಿಯನ್ನು ಸಂಪಾದಿಸುಕೊಳ್ಳುವ ಮೂಲಕ ಆತನ ಕಲಿಯುವ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುವದು ಸಾರ್ವತ್ರಿಕವಾದ ಅಂಶವಾಗಿದೆ. ಇದನ್ನು ಪಾರಿಭಾಷಿಕವಾಗಿ ಸಾಮಾಜೀಕರಣ ಅಥವಾ ಸಂಸ್ಕೃತೀಕರಣ ಎನ್ನುತ್ತಾರೆ. ಇದರ ಮೂಲಕ ಸದಸ್ಯನು

Digitised by Bharatavani, CIIL

ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಲು ಕಲಿಯುತ್ತಾನೆ ಮತ್ತು ಒಂದು ಸಮಾಜದ ನೀತಿನಿಯಮಗಳನ್ನು, ಮೌಲ್ಯಗಳನ್ನು ರೂಢಿಸಿಕೊಳ್ಳುತ್ತಾನೆ. ವ್ಯಕ್ತಿಯ ನಡತೆಯ ಮನೋಧರ್ಮವು ಹೀಗೆ ಸಾಮಾಜಿಕ ರಚನೆಯ ಅಗತ್ಯಗಳೊಡನೆ ಬೆರೆಯುತ್ತದೆ.

ಮಗು ಸಮಾಜದ ಜ್ಞಾನವೆಂಬ ನದಿಯ ಹರಹನ್ನು ತನ್ನ ಪೂರ್ವಜರಿಂದ ಪಡೆಯುತ್ತದೆ. ಮತ್ತು ಸಾಮಾಜಿಕೀಕೃತ ನಡೆವಳಿಕೆಯ ನೀತಿನಿಯಮಗಳಾಗಿ ಅದನ್ನು ಅನುಸರಿಸುತ್ತದೆ. ಆದರೆ ಎಲ್ಲಾ ಕಲಿಕೆಯು ಅವಶ್ಯವಾಗಿ ಸಾಮಾಜೀಕರಣವಾಗುವುದಿಲ್ಲ ಮತ್ತು ಸಾಮಾಜೀಕರಣವು ಎಲ್ಲಾ ಕಲಿಕೆಯನ್ನು ಒಳಗೊಳ್ಳುವುದಿಲ್ಲ. ಒಂದು ರೀತಿಯಲ್ಲಿ ಸಾಮಾಜೀಕರಣವು ಕಲಿಕಾರ್ಥಿ ಪ್ರಮುಖವಾಗಿ ಸ್ವೀಕರಿಸುವವನಾಗಿರುವ ವ್ಯಕ್ತಿತ್ವದ ಬೋಧನೆಯಾಗಿರುತ್ತದೆ.

ಅದರ ವ್ಯಾಪಕಾರ್ಥದಲ್ಲಿ ಆಗಿನ ಪ್ರಪಂಚದಲ್ಲಿ ಶಿಕ್ಷಣದ ಪರಿಕಲ್ಪನೆಯ ಅಸ್ತಿತ್ವವೇ ಇರಲಿಲ್ಲ. ಶಿಕ್ಷಣವು ಆ ಸಂದರ್ಭದಲ್ಲಿ ಸಾಮಾಜೀಕರಣಕ್ಕೆ ಮತ್ತೊಂದು ಹೆಸರಾಗಿತ್ತು ಮತ್ತು ಸಂಸ್ಕೃತಿಯ ಮರು ಉತ್ಪಾದನೆಗೆ ಸಂಸ್ಕೃತೀ ಕರಣವನ್ನು ವಿನ್ಯಾಸಗೊಳಸಲಾಗಿತ್ತು. ಹೊಸದಾಗಿ ಬಂದವರಿಗೆ ಕುಟುಂಬ ಮತ್ತು ಸ್ಥಳೀಯ ಸಮುದಾಯವು ಶಾಲೆಯ ಕಾರ್ಯವನ್ನು ನಿರ್ವಹಿಸುತ್ತಿತ್ತು. ಮಕ್ಕಳಿಗೆ ಸಂಸ್ಕೃತಿಯನ್ನು ಪರಿಚಯಿಸುತ್ತಿದ್ದವು. ಮೂಲಭೂತವಾಗಿ ಈ ಕಾರ್ಯದ ವಾಹಕ ಕಾರ್ಯವಾಗಿತ್ತು. ಸಾಂಸ್ಕೃತಿಕವಾಗಿ ಕಲಿತ ನಡೆವಳಿಕೆಯನ್ನು, ಮೌಲ್ಯಗಳನ್ನು ಮತ್ತು ನೀತಿನಿಯಮಗಳನ್ನು, ಭಾಷೆಯನ್ನು ಮತ್ತು ಕೆಲಸದ ಮಾರ್ಗಗಳನ್ನು ಯುವ ಪೀಳಿಗೆಗೆ ಸಾಗಿಸಲಾಗುತ್ತಿತ್ತು. ಮಕ್ಕಳ ಪೋಷಣೆ, ಕಲಿಯುವಿಕೆ ಮತ್ತು ಕೆಲಸದ ಸ್ಥಳ ಮನೆಯಾಗಿತ್ತು. ಸಾಮಾಜೀಕರಣವು ಮಕ್ಕಳನ್ನು ಸಂಸ್ಕೃತಿಗೆ ಮತ್ತು ಕೆಲಸದ ಜಗತ್ತಿಗೆ ಪ್ರವೇಶಿಸಲು ಸ್ಥಿರಪಡಿಸುತ್ತಿತ್ತು. ಆದಿಮಾನವನ (ವಾಲ್ಟೆಲ್ ಶಂಗ್ – ಜರ್ಮನ್) ವಿಶ್ವದ ವ್ಯಾಪಕ ಪರಿಕಲ್ಪನೆ ಆತನ ತತ್‌ಕ್ಷಣದ ಸಾಂಸ್ಕೃತಿಕ ಪರಿಸರಕ್ಕೆ ಸೀಮಿತವಾಗಿದ್ದಿತು.

**ಸಾಮಾಜೀಕರಣದಿಂದ ಶಾಲೆಯೆಡೆಗೆ: ಶಿಕ್ಷಣದ ವಿಸ್ತೃತ ಪರದೆ:** ಸಮಾಜದಲ್ಲಿ ಬೆಳೆಯುತ್ತಿರುವ ತಾರತಮ್ಯಗಳೊಡನೆ ಕುಟುಂಬ ಮತ್ತು ಕೆಲಸದ ಸ್ಥಳವೂ ಪ್ರತ್ಯೇಕಗೊಂಡವು. ಅತ್ಯಂತ ಪ್ರಬುದ್ಧವಾದ ಪ್ರಾಚೀನ ಸಮಾಜಗಳಲ್ಲಿ ಒಂದಾದ ಭಾರತದಲ್ಲಿ ಆಶ್ರಮಗಳ ಪರ್ಣಕುಟೀಗಳಲ್ಲಿ ಋಷಿಗಳು ವಾಸಿಸುತ್ತ ಧ್ಯಾನ ಮಾಡುತ್ತಾ ಶಾಲೆಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ಅಲ್ಲಿಯೂ ಕಲಿಕೆಯು ಮೂಲಭೂತವಾಗಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ವರೂಪದ್ದು ಅಥವಾ ಯುದ್ಧ ಕಲೆಯನ್ನು ಕಲಿಸುವ ಕಾರ್ಯವಾಗಿತ್ತು. ಆ ಕಾಲದಲ್ಲಿ ಸುದೀರ್ಘ ಶಿಕ್ಷಣವನ್ನು ಶ್ರೀಮಂತರ ವೈಭೋಗವೆಂದೆ ಪರಿಗಣಿಸಿದ್ದುದನ್ನು ಮುಖ್ಯವಾಗಿ ಗಮನಿಸಬಹುದು. ಪ್ರಾಸಂಗಿಕವಾಗಿ 'School' (ಶಾಲೆ) ಎಂಬ ಇಂಗ್ಲಿಷ್ ಪದವು ಗ್ರೀಕ್ ಪದವೊಂದರಿಂದ ನಿಷ್ಪತ್ತಿಯಾಗಿದ್ದು 'leisure' (ವಿರಾಮ) ಎಂಬ ಅರ್ಥವನ್ನು ಹೊಂದಿದೆ. ಇಪ್ಪತ್ತನೆಯ ಶತಮಾನದಲ್ಲಿ ಶಾಲಾ ಬೋಧನೆ/ಶಾಲಾ ಶಿಕ್ಷಣ ಅಧಿಕ ಪ್ರಾಮುಖ್ಯವನ್ನು ಪಡೆದುದನ್ನು ಕುರಿತು ಪೀಟರ್ ಡ್ರಕರ್ "ಈ ಪ್ರವೃತ್ತಿ ಮನುಷ್ಯನ ಇತಿಹಾಸದ ಸಂಪೂರ್ಣ ವಿರುದ್ಧಗತಿ. ಇಪ್ಪತ್ತನೆಯ ಶತಮಾನದವರೆಗೂ ಯಾವುದೇ ಸಮಾಜದಲ್ಲಿಯೂ ಕೇವಲ ಬೆರಳೆಣಿಕೆಗಿಂತ ಹೆಚ್ಚು ಶಿಕ್ಷಣ ಪಡೆದ ಜನರು ಇರಲೇಇಲ್ಲ. ಯುಗ ಗಳಿಂದಲೂ ಶಿಕ್ಷಿತನಾಗುವುದು ಎಂದರೆ ಅನುತ್ಪಾದಕನೆಂಬ ಭಾವನೆ ಇತ್ತು" ಎಂದಿದ್ದಾನೆ. 1959 ರಲ್ಲಿ ಡ್ರಕರ್ ಹೀಗೆ ಹೇಳಿದ್ದಾನೆ – "ಇಂದು ವಸಾಹತುಶಾಹಿ ಪ್ರದೇಶಗಳಲ್ಲಿ ಶಿಕ್ಷಣದ ಕೊರತೆಯು ವಸಾಹತುಶಾಹಿಯಿಂದ ಜನರು ಯಥೋಚಿತವಾದ ದಂಡನೆಗೊಳಗಾಗುವ ಅಸಹಾಯಕ ಸ್ಥಿತಿಯನ್ನುಂಟು ಮಾಡಿತ್ತು ಮತ್ತು ಸಾರ್ವಭೌಮಾ ಧಿಕಾರಿಗಳ ಕ್ರೂರತನದ ಸಾಕ್ಷಿಯಾಗಿತ್ತು. ಐವತ್ತು ವರ್ಷಗಳ ಹಿಂದೆ ಕೂಡಾ ಶಿಕ್ಷಣವು ಸಾಮಾಜಿಕ ಅಗತ್ಯದ ಅಳತೆಗೋಲಿನಲ್ಲಿ ಮುಖ್ಯ ಸ್ಥಾನವನ್ನು ಪಡೆದುಕೊಂಡಿರಲಿಲ್ಲ. ನೆರೆ ನಿಯಂತ್ರಣ, ಪ್ರಾದೇಶಿಕವಾಗಿ ಸರಹದ್ದುಗಳು, ಸಮಾನವಾದ ತೆರಿಗೆ, ಸುಧಾರಿತ ಕೃಷಿ, ರೈಲುಮಾರ್ಗಗಳು ಮತ್ತು ಭ್ರಷ್ಟಾಚಾರ ರಹಿತ ನ್ಯಾಯಾಧೀಶರು– ಇವೆಲ್ಲವೂ ಅತ್ಯಧಿಕ ಶ್ರೇಣಿ ಪಡೆದಿದ್ದವು. ಒಂದುವೇಳೆ ಆಗ ವಸಾಹತುಶಾಹಿ ಅಧಿಕಾರವನ್ನು ಶಿಕ್ಷಣದ ಮಾನದಂಡದಿಂದ ವಿಮರ್ಶಿಸಿದ್ದರೆ, ಶಿಕ್ಷಣವನ್ನು ಬಹಳಷ್ಟು ಮಂದಿಗೆ ಬಲಾತ್ಕಾರವಾಗಿ ಹೇರಿ ದೇಶಿ ಸಂಸ್ಕೃತಿಯನ್ನು ಆ ಮೂಲಕ ನಾಶಪಡಿಸುತ್ತಿವೆ ಮತ್ತು ಅಧಿಕ ಶಿಕ್ಷಣದಿಂದ ಕೂಡಿದ ನಿರುದ್ಯೋಗಸ್ಥ ಕೂಲಿಕಾರರನ್ನು ಸೃಷ್ಟಿಸುವ ಕಾರ್ಯವೆಂದು ಪರಿಗಣಿಸಲಾಗುತ್ತಿತ್ತು. ಆಗಲೂ ಶಿಕ್ಷಿತ ವ್ಯಕ್ತಿಯೆಂದರೆ ಒಂದು ಅವಶ್ಯಕತೆಗಿಂತ ಶ್ರೀಮಂತಿಕೆಯಾಗಿತ್ತು. ಶಿಕ್ಷಣವು ಉತ್ಪಾದಕ ಕೆಲಸಕ್ಕಾಗಿ ಎಂಬುದಕ್ಕಿಂತ ಘನತೆಯುಳ್ಳ ವಿರಾಮಕ್ಕೆ ಸಿದ್ಧಪಡಿಸುವುದು ಎಂಬುದಾಗಿತ್ತು."

ಶಾಲೆಯ ಪರಿಕಲ್ಪನೆಯು ಇಂದಿನ ಅರ್ಥದಲ್ಲಿ ಅಭಿವೃದ್ಧಿಪರ ಪ್ರಪಂಚಕ್ಕೆ ಪಶ್ಚಿಮದ (ಈಗ ಉತ್ತರವೆಂದು ಅಮೇರಿಕಾ ದೇಶವನ್ನು ಕರೆಯಲಾಗುತ್ತಿದೆ.) ಸಂಪರ್ಕದ ನಂತರ ಪರಿಚಯವಾಯಿತು. ವಸಾಹತುಶಾಯಿಗಳು (ಅಮೇರಿಕಾ ದೇಶ) ಸಾಮಾಜೀಕರಣಕ್ಕೆ ಹೊಸ ಆಯಾಮ ಸೇರಿಸುವಂತೆ, ಅಸಾಂಪ್ರದಾಯಿಕ ಜ್ಞಾನದಲ್ಲಿ ಜನರಿಗೆ ತರಬೇತಿ ನೀಡಲು ಶಾಲೆಗಳನ್ನು ತೆರೆದವು. ಅಕ್ಷರವಿಲ್ಲದ ಪ್ರಾಚೀನ ಸಮಾಜಗಳು ಅವುಗಳ ಮುಚ್ಚಿದ ಜಗತ್ತಿನ ದೃಷ್ಟಿಕೋನಗಳು ಮತ್ತು ಆಧುನಿಕ ಸಂಗತಿಗಳ ಅದರಲ್ಲೂ ಪಾಶ್ಚಾತ್ಯರ ಬಗ್ಗೆ ಅಜ್ಞಾನಗಳಿಂದ ಆಗ ಅನಕ್ಷರಸ್ಥವೆಂದೂ ವರ್ಣಿಸಲ್ಪಟ್ಟವು. ಆಗ ಸಾಮಾಜೀಕರಣವೆಂಬುದರ ಅರ್ಥ ಭೂತಕಾಲದ ಜ್ಞಾನವನ್ನು ರವಾನಿಸುವುದು ಎಂದಿತ್ತು. ಶಿಕ್ಷಣವೆಂದರೆ ವಿದೇಶದ ಜ್ಞಾನದ ರವಾನೆಯ ವಾಹಕವೆಂದು ವಿವರಿಸಲಾಯಿತು.

ವಸಾಹತುಶಾಹಿಗಳಿಂದ ಒದಗಿಸಿದ ಆಧುನಿಕ ಶಿಕ್ಷಣದ ಉದ್ದೇಶವು ಏನಾಗಿತ್ತೆಂಬುದನ್ನು ಆಗಾಗ್ಗೆ ಉಲ್ಲೇಖಿಸಲಾಗುವ ಲಾರ್ಡ್ ಮಕಾಲೆಯ ಈ ಕೆಳಗಿನ ವಾಕ್ಯಗಳು ಅಭಿವ್ಯಕ್ತಿಗೊಳಿಸುತ್ತವೆ:

"ಪ್ರಸ್ತುತದಲ್ಲಿ ನಾವು ಆಳುತ್ತಿರುವ ಮಿಲಿಯಾಂತರ ಜನರಿಗೂ ಮತ್ತು ನಮಗೂ ನಡುವೆ ವ್ಯಾಖ್ಯಾನಕಾರರಾಗಿ ರಕ್ತದಲ್ಲಿ

Digitised by Bharatavani, CIIL

ಮತ್ತು ಬಣ್ಣದಲ್ಲಿ ಭಾರತೀಯರಾಗಿರುವ, ಆದರೆ ಅಭಿರುಚಿ, ಅಭಿಪ್ರಾಯಗಳಲ್ಲಿ, ನಡೆವಳಿಕೆಯಲ್ಲಿ ಮತ್ತು ಬುದ್ಧಿವಂತಿಕೆಯಲ್ಲಿ ಆಂಗ್ಲರಾಗಿರುವ ಒಂದು ವರ್ಗವನ್ನು ರೂಪಿಸಬೇಕಾಗಿದೆ. ಆ ವರ್ಗದ ಜನರಿಗೆ ನಾವು ದೇಶದ ದೇಶೀಯ ಭಾಷೆಗಳನ್ನು, ಉಪಭಾಷೆಗಳನ್ನು ಶುದ್ಧೀಕರಿಸಿಕೊಳ್ಳಲು ಬಿಡಬೇಕು. ಆ ಭಾಷೆಗಳನ್ನು ಪಾಶ್ಚಾತ್ಯ ಪಾರಿಭಾಷಿಕವಾದ ವಿಜ್ಞಾನದ ಪದಗಳಿಂದ ಸಂಪದ್ಭರಿತಗೊಳಿಸಬೇಕಾಗಿದೆ ಮತ್ತು ಅತಿದೊಡ್ಡ ಜನ ಸಮೂಹಕ್ಕೆ ಈ ಜ್ಞಾನವನ್ನು ತಲುಪಿಸುವ ಯೋಗ್ಯ ವಾಹಕರಾಗಲು ಅಗತ್ಯ ಪದವಿಗಳಿಂದ ಅವರನ್ನು ಸಿದ್ಧಪಡಿಸಬೇಕಾಗಿದೆ."

ಈ ಪರಿವರ್ತನೆಯ ಹಂತದಲ್ಲಿ ಸಾಂಪ್ರದಾಯಿಕ ಕಲಿಕೆಯ ಕೇಂದ್ರಗಳಲ್ಲಿ ಕಲಿತವರು ಮತ್ತು ಅನಕ್ಷರಸ್ಥರುಗಳನ್ನು 'ಅವಿದ್ಯಾವಂತರು' ಎಂಬ ಶ್ರೇಣಿಗಳಿಗೆ ವರ್ಗಾಯಿಸುತ್ತಾ ಮತ್ತು ಹೊಸ ಶಾಲಾ ಸಂಸ್ಥೆಗಳ ಮೂಲಕ ಆಧುನಿಕ ಶಿಕ್ಷಣ ಪಡೆದವರು ಅಕ್ಷರಸ್ಥರು ಎಂದು ಅವರನ್ನು ಬುದ್ಧಿವಂತರ ವರ್ಗವೆಂದು ಗುರುತಿಸಲಾಯಿತು. ಆದ್ದರಿಂದ ಅವರ ಸಂಖ್ಯೆ ಕಡಿಮೆಯಿದ್ದು ಕೌಶಲ ಪಡೆದವರು ಸೀಮಿತವಾಗಿದ್ದರು. ಆಗ ಯಾವುದೇ ವ್ಯತ್ಯಾಸಗಳನ್ನು ಬುದ್ಧಿವಂತರಿಗೂ ಮತ್ತು ಬುದ್ಧಿವಂತಿಕೆಗಳ ನಡುವೆ ಮಾಡಲಾಗಲಿಲ್ಲ. ಶಾಲೆಗಳು ಬೆಳೆದಂತೆ ಮತ್ತು ಉನ್ನತ ಶಿಕ್ಷಣವನ್ನು ಆರಂಭಿಸಿದ ಹಾಗೆಲ್ಲ ಅಂತಹ ವ್ಯತ್ಯಾಸಗಳು ಅರ್ಥಪೂರ್ಣವಾದವು. ವಸಾಹತುಶಾಹಿ ಕಾಲದಲ್ಲಿ ಶಿಕ್ಷಣವು ವಿದೇಶದಿಂದ ಆಮದಾದ ವಸ್ತುಗಳನ್ನು ಒಳಹಾಕಿಕೊಂಡ 'ಪುನರ್‌ನವೀಕರಣವು' ನಿಸ್ಸಂದೇಹವಾಗಿ ಪ್ರಮುಖ ಬದಲಾವಣೆಯನ್ನು ತಂದಿತು. ಆದರೆ ಆಯ್ಕೆ ಮಾಡಿದ ಕೆಲವರನ್ನು ವಸಾಹತುಶಾಹಿ ಸಂಸ್ಕೃತಿಯ ಉಪದೇಶ ನೀಡಿ ರಾಷ್ಟ್ರದ ಸಾರ್ವಭೌಮ ಆಳ್ವಿಕೆಗೆ, ಆಡಳಿತಕ್ಕೆ ನೆರವಾಗುವಂತೆ ಮಾಡುವುದು ಗುರಿಯಾಗಿತ್ತು. ಹೊರ ಜಗತ್ತಿಗೆ ತೆರೆದುಕೊಳ್ಳುವ ಮತ್ತು ಅಭಿವೃದ್ಧಿಯ ಮೂಲಕ ಹಂಬಲಿಸುವವರಿಂದ ಬದಲಾವಣೆಗೆ ಖಂಡಿತವಾಗಿ ಆಧುನಿಕ ಶಿಕ್ಷಣದ ಅನುದ್ದೇಶಿತ ಪರಿಣಾಮಗಳು ಸ್ವಾತಂತ್ರ್ಯ ಹೋರಾಟಕ್ಕೆ ಮತ್ತು ವಿದೇಶಿ ಆಡಳಿತದಿಂದ ಅಂತಿಮವಾಗಿ ಸ್ವಾತಂತ್ರ್ಯ ಗಳಿಸಲು ಮಾರ್ಗ ನಿರ್ಮಿಸಿದವು.

**ಅಭಿವೃದ್ಧಿಯ ಗುರಿಯಾಗಿ ಶಿಕ್ಷಣ:** ಎರಡನೆಯ ಮಹಾ ಯುದ್ಧದ ನಂತರ ವಸಾಹತುಶಾಹಿಗಳು ಹಿಂದೆ ಸರಿದಂತೆ, ಹಳೆಯ ವಸಾಹತುಶಾಹಿಗಳು ಹೊಸ ರಾಷ್ಟ್ರವಾಗಲು ಆರಂಭಿಸಿದ್ದವು. ಅವರು ಅಭಿವೃದ್ಧಿಯ ಪ್ರಕ್ರಿಯೆಯನ್ನು ತ್ವರಿತ ಗೊಳಿಸಲು ಉತ್ಸಾಹದಿಂದ ಯುಕ್ತಿಗಳಿಂದ ಅದನ್ನು ಅಳವಡಿಸಿಕೊಂಡರು. ಯೂರೋಪಿನ ಉತ್ತರ ದೇಶಗಳನ್ನು ಧನಾತ್ಮಕ ಆಧಾರ ದೇಶಗಳಾಗಿ ಪರಿಗಣಿಸಲಾಯಿತು.

ಆ ಸಮಯದಲ್ಲಿ ಉತ್ತರದಲ್ಲಿ ಯುದ್ಧದಲ್ಲಿ ನಾಶವಾಗಿದ್ದನ್ನು ಪುನರ್ ನಿರ್ಮಿಸಿಕೊಳ್ಳುತ್ತಿದ್ದ ಕಾಲ. ಹೀಗಾಗಿ ಅದು ಉತ್ತದಲ್ಲಿ ಪುನರ್ ನಿರ್ಮಾಣದ, ಹಾಗೆಯೇ ದಕ್ಷಿಣದಲ್ಲಿ ಅಭಿವೃದ್ಧಿಯ ಕಾಲಘಟ್ಟವಾಗಿತ್ತು. ಈ ಎರಡೂ ಪರಿಸ್ಥಿತಿಗಳಲ್ಲಿ ಶಿಕ್ಷಣವು ಸಾಂಸ್ಕೃತಿಕ ಪುನರ್‌ರಚನೆಯ ಕಾರ್ಯಕ್ರಮವಾಗಿ ಮಹತ್ವ ಪಡೆಯಿತು. ಆಕ್ರಮಣಕಾರರಿಂದ ಯುದ್ಧದಲ್ಲಿ ನಾಶವಾಗಿದ್ದ ಶಿಕ್ಷಣ ಸಂಸ್ಥೆಗಳನ್ನು ಉತ್ತರದಲ್ಲಿ ಪುನರ್ ನಿರ್ಮಾಣ ಮಾಡಬೇಕಾಯಿತು. ಅಭಿವೃದ್ಧಿಯ ಗುರಿಯಾಗಿ ದಕ್ಷಿಣದಲ್ಲಿ ಮೂರು 'ಖ' ಗಳನ್ನು (ಓದು, ಬರಹ ಮತ್ತು ಲಕ್ಕಾಚಾರ) ಕಲಿಯುವತ್ತ ತನ್ನ ಸಾಕ್ಷರತೆಯ ಸ್ವಚಿತ್ರಣವನ್ನು ಉತ್ತಮ ಪಡಿಸಿಕೊಳ್ಳಬೇಕಾಗಿತ್ತು.

ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ಮುಂಚಿನ ಹಲವು ವಿದ್ವಾಂಸರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದನ್ನು ಹೇಳಲೇಬೇಕಾಗಿದೆ. ಪ್ಲೇಟೊ ಸಮಾಜದ ಆರ್ಥಿಕ ಆರೋಗ್ಯಕ್ಕೆ ಶಿಕ್ಷಣವು ಅನಿವಾರ್ಯವಾದುದು ಎಂದು ತಿಳಿದು ಶಿಕ್ಷಣಕ್ಕಾಗಿ ಸಮುದಾಯದ ಸಂಪತ್ತನ್ನು ವೆಚ್ಚ ಮಾಡಬೇಕೆಂದು ಉಪದೇಶಿಸಿದ್ದಾನೆ. ಈ ನಿಟ್ಟಿನ ವಾದವನ್ನು ಆಡಮ್ ಸ್ಮಿತ್ತನ್ನು ಒಳಗೊಂಡಂತೆ ಅನೇಕ ಅರ್ಥಶಾಸ್ತ್ರಜ್ಞರು ಅನುಸರಿಸಿದರು. ಆಲ್‌ಫ್ರೆಡ್ ಮಾರ್ಶಲ್ 'ಅತ್ಯಂತ ಮೌಲ್ಯಿಕ ಬಂಡವಾಳವೆಂದರೆ ಮಾನವ ಜೀವಿಗಳಿಗಾಗಿ ವೆಚ್ಚ ಮಾಡಿದಂಥದ್ದು' ಎಂದು ಹೇಳುವ ಮಟ್ಟಕ್ಕೆ ಹೋಗುತ್ತಾನೆ. 1980 ರಲ್ಲಿ ಅಭಿವೃದ್ಧಿಯ ವ್ಯಾಖ್ಯಾನದಲ್ಲಿ ನಿರ್ದಿಷ್ಟವಾದ ಬದಲಾವಣೆ ಸಂಭವಿಸಿದಾಗ ಆರ್ಥಿಕತೆಯಿಂದ ಮಾನವ ಸಂಪನ್ಮೂಲ ಅಭಿವೃದ್ಧಿಗೆ (Human Resource Development) ವರ್ಗಾವಣೆಯಾದಾಗ ಶಿಕ್ಷಣವು ಮಧ್ಯವೇದಿಕೆಗೆ ಬಂದಿತು. ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮಗಳು (United Nations Development Programmes) ಮಾನವ ಸಂಪನ್ಮೂಲ ಅಭಿವೃದ್ಧಿಯ ಐದು 'ಉತ್ಸಾಹವರ್ಧಕ'ಗಳನ್ನಾಗಿ ಶಿಕ್ಷಣ, ಅರೋಗ್ಯ ಮತ್ತು ಪೋಷಣೆ, ಪರಿಸರ, ಉದ್ಯೋಗ ಮತ್ತು ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯವನ್ನು ಗುರುತಿಸಿತು. ಇವುಗಳೆಲ್ಲವೂ ಪರಸ್ಪರ ಸಂಬಂಧ ಮತ್ತು ಪರಸ್ಪರ ಅವಲಂಬನೆಗಳನ್ನು ಹೊಂದಿದ್ದಾಗ್ಗೆಯೂ, ಶಿಕ್ಷಣವನ್ನು ಇವುಗಳೆಲ್ಲಕ್ಕೂ ತಳಹದಿಯಾಗಿ ಪರಿಗಣಿಸಲಾಗಿದೆ ಮತ್ತು ಅದನ್ನು ಮಾನವ ಹಕ್ಕು ಮತ್ತು ಆರ್ಥಿಕ ಅಭಿವೃದ್ಧಿಯ ವೆಚ್ಚವೆಂದು ಎರಡೂ ವಿಧವಾಗಿ ಪರಿಗಣನೆ ಮಾಡಿದೆ.

ಶಿಕ್ಷಣವು ಹೀಗೆ ಅಭಿವೃದ್ಧಿಯೊಡನೆ ನಿಕಟ ಸಂಬಂಧ ಹೊಂದಿದೆ. ಅಭಿವೃದ್ಧಿಗೆ ಇದು ಗುರಿ ಹಾಗೂ ಮಾರ್ಗ ಗಳೆರಡೂ ಆಗಿದೆ. ಅಭಿವೃದ್ಧಿಯ ವಿವಿಧ ಅಳತೆಗಳಲ್ಲಿ ಶಿಕ್ಷಣವು ಸೂಚಿಸುವ ಕೀಲಿಕೈ ಆಗಿದೆ. ಮಾನವ ಅಭಿವೃದ್ಧಿಯ ವರದಿಗಳನ್ನು UNDP ಯಿಂದ 1990 ರಿಂದ ವಾರ್ಷಿಕವಾಗಿ ಹೊರತರಲಾಗಿದೆ. ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ಪರಿಚಯಿಸುತ್ತಾ ಅದು ಮೂರು ಸೂಚಕಗಳನ್ನು ಆಧರಿಸಿದೆ– ದೀರ್ಘಕಾಲಿನ ಜೀವನ, ಶೈಕ್ಷಣಿಕ ಸಾಧನೆ ಮತ್ತು ಜೀವನ ಮಟ್ಟ. ಶೈಕ್ಷಣಿಕ ಸಾಧನೆಯನ್ನು ಈ ಸೂಚ್ಯಾಂಕವು ವಯಸ್ಕರ ಶಿಕ್ಷಣ ಪ್ರಮಾಣ ($^2/_3$ ಅಂಕ) ಮತ್ತು ಇದು ಪ್ರಮುಖ ಪ್ರೌಢ ಹಾಗೂ ತೃತೀಯ ದಾಖಲಾತಿ ಪ್ರಮಾಣಗಳ ಸ್ಥೂಲ ಸಮಿಶ್ರವಾಗಿ ಅಳೆಯುತ್ತದೆ. ವಿಶ್ವದ ವಿವಿಧ ದೇಶಗಳ ಮಾನವ ಅಭಿವೃದ್ಧಿ ಚಿತ್ರಣವನ್ನು ತುಲನೆ ಮಾಡಲು ಈ ಸೂಚ್ಯಾಂಕದ ಬಳಕೆಯಾಗುತ್ತಿದೆ. ಅಭಿವೃದ್ಧಿಯ ಒಂದು

Digitised by Bharatavani, CIIL

ಅಳತೆಗೋಲಾಗಿ ಶಿಕ್ಷಣವನ್ನು ಸೇರಿಸಿರುವುದು ಸರ್ವಾಂಗೀಣ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಗೆ ಶಿಕ್ಷಣ ಕೊಡುಗೆ ನೀಡುತ್ತದೆ ಎಂಬ ಆಧಾರ ಹೇಳಿಕೆಯನ್ನು ಅವಲಂಬಿಸಿದೆ.

ಯೋಜನೆ ರೂಪಿಸುವವರು ಮತ್ತು ನೀತಿ ನಿರೂಪಣೆ ಪ್ರಪಂಚದಾದ್ಯಂತ ಆಧುನೀಕರಣದ ಗುರಿಯ ಸಾಧನೆ ಶಿಕ್ಷಣವನ್ನು ಉತ್ತಮಪಡಿಸುವುದು ಮತ್ತು ವಿಸ್ತರಿಸುವುದರಿಂದ ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ. ತಾಂತ್ರಿಕ ಮತ್ತು ಆರ್ಥಿಕ ಪ್ರಗತಿಯನ್ನು ಪಡೆಯಲು ಶಿಕ್ಷಣವು ಮೂಲಭೂತ ಅಗತ್ಯವೇ ಆಗಿದೆ. ರಾಷ್ಟ್ರೀಯ ಐಕ್ಯತೆಗೂ ಅನಕ್ಷರತೆ ಪ್ರಮುಖ ಅಡ್ಡಗೋಡೆಯಾಗಿರುವುದನ್ನು ಕಾಣಬಹುದು. ಅದಕ್ಕಿಂತ ಹೆಚ್ಚಾಗಿ, ಬಹು ದೊಡ್ಡ ರಾಜಕೀಯ ರಾಷ್ಟ್ರದ ಆಡಳಿತದ ಅಗತ್ಯವನ್ನು ನೆರವೇರಿಸಲು ಶಿಕ್ಷಿತ ಸಿಬ್ಬಂದಿಗಳ ಅಗತ್ಯವಿದೆ. ಹೀಗೆ, ಅಭಿವೃದ್ಧಿಯ ಕಾರ್ಯಸೂಚಿಯಲ್ಲಿ ತರಬೇತಿ ಪಡೆದ ಮಾನವಶಕ್ತಿಗೆ ಶಿಕ್ಷಣವು ಆದ್ಯತೆಯ ಅಗತ್ಯವಾಗಿದೆ.

ಅಂತಹ ನಂಬಿಕೆಗಳಿಂದ ಮಾರ್ಗದರ್ಶನ ಪಡೆದ ಅಭಿವೃದ್ಧಿಪರ ರಾಷ್ಟ್ರಗಳು, ಸರ್ಕಾರಗಳು ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮುಂತಾದ ಎಲ್ಲ ಅಭಿವೃದ್ಧಿಗೆ ಶಿಕ್ಷಣವನ್ನು ಪ್ರಮುಖ ಕೀಲಿಕೈ ಎಂದು ಪ್ರತಿಪಾದಿಸಿವೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಯೋಜಿತ ಬದಲಾವಣೆಗಳು ಅವರಿಂದ ಉತ್ತೇಜಿತಗೊಂಡಿವೆ. ಮತ್ತು ಅಭಿವೃದ್ಧಿ ಹೊಂದಿದ ದೇಶಗಳಿಂದ ಬಲವಾಗಿ ಬೆಂಬಲ ಪಡೆದಿವೆ. ಶಿಕ್ಷಣಕ್ಕೆ ಸಂಯುಕ್ತ ರಾಷ್ಟ್ರಗಳ ಪ್ರತಿನಿಧಿಗಳ ವ್ಯವಸ್ಥೆಯು ಉನ್ನತ ಆದ್ಯತೆಯನ್ನು ನೀಡಿದೆ. ಭಾರತವು ಸೇರಿದಂತೆ (ಬ್ರಿಟಿಷರ ವಸಾಹತುಶಾಹಿ ಆಳ್ವಿಕೆ ಯಿಂದ ದೇಶವು ತನ್ನ ಸ್ವಾತಂತ್ರ್ಯವನ್ನು 1947ರಲ್ಲಿ ಪಡೆದಾಗ ಅದು ಸುಮಾರು ಶೇಕಡ 14 ರಷ್ಟಿತ್ತು) ತೃತೀಯ ಜಗತ್ತಿನ ಬಹುಪಾಲು ದೇಶಗಳಲ್ಲಿ ಸಾಕ್ಷರತೆಯ ಪ್ರಮಾಣವು ಗಮನಾರ್ಹವಾಗಿ ಕಡಿಮೆಯಾಗಿದ್ದು, ಅನಕ್ಷರತೆಯ ನಿರ್ಮೂಲನೆ ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತೀಕರಣವು ಪ್ರಮುಖ ಅಭಿವೃದ್ಧಿಯ ಗುರಿಗಳಾಗಿ ಪರಿಣಮಿಸಿದವು.

ಶಿಕ್ಷಣದ ಅಭಿವೃದ್ಧಿಯ ಅಂತಾರಾಷ್ಟ್ರೀಯ ಆಯೋಗವು 1971 ರಲ್ಲಿ ಯುನೆಸ್ಕೊ ನೇಮಕ ಮಾಡಿದ್ದು ಎಡ್ಗರ್ ಫೌವರ್‌ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ ವರದಿಯ ಪ್ರಸ್ತಾವನೆ ಹೀಗೆ ಹೇಳುತ್ತದೆ:

"ಆಧುನಿಕ ಮಾನವನ ಶಿಕ್ಷಣವು ಅಪವಾದಾತ್ಮಕವಾಗಿ ಕಷ್ಟಕರ ಸಮಸ್ಯೆಯೆಂದು ಬಹಳಷ್ಟು ದೇಶಗಳು ತಿಳಿದಿವೆ ಮತ್ತು ಎಲ್ಲ ದೇಶಗಳು ಅದೊಂದು ಹೆಚ್ಚಿನ ಪ್ರಾಮುಖ್ಯತೆಗಳಲ್ಲಿ ಒಂದೆಂದು ತಿಳಿದಿವೆ. ವಿಶ್ವವನ್ನು ಇಂದು ಒಂದು ಉತ್ತಮ ಸ್ಥಳವಾಗಿ ಮಾಡುವಲ್ಲಿ ಆಸಕ್ತರಾದ ಎಲ್ಲರಗೂ ಮತ್ತು ಭವಿಷ್ಯದ ಸಿದ್ಧತೆಗಾಗಿ ಶಿಕ್ಷಣವು ಒಂದು ಬಂಡವಾಳ, ಸಾರ್ವತ್ರಿಕ ವಿಷಯವಾಗಿದೆ. " (ಪು. XIX)

**ಇನ್ನೊಂದೆಡೆ ವರದಿಯ ಹೀಗೆ ಹೇಳಿದೆ:**

"ಮೊದಲಿಗೆ, ಹಿಂದಿಗಿಂತ ಇಂದು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಉದ್ದೇಶಗಳನ್ನು ಪಡೆಯಲು ಶಿಕ್ಷಣದಲ್ಲಿ ಸುಧಾರಣೆಯು ಅತ್ಯಂತವಾಗಿ ಅವಶ್ಯವಿದೆ."

ಎರಡನೆಯದಾಗಿ, ಶಿಕ್ಷಣದಲ್ಲಿ ಪುನರ್ ನವೀಕರಣವಲ್ಲದೆ ಸಾಮಾಜಿಕ ಅಭಿವೃದ್ಧಿಯನ್ನು ಕಲ್ಪಿಸಿಕೊಳ್ಳುವುದು ಕಠಿಣವೇ ಆಗಿದೆ. ಯಾವುದೇ ವಿಧದ ಸಮಾಜವಿರಲಿ, ಯಾವುದೇ ವಿಧವಾದ ಮುಖ್ಯವಾದ ಸಿದ್ಧಾಂತವಿರಲಿ ಮತ್ತು ಭವಿಷ್ಯವನ್ನು ಸುಧಾರಕರಾಗಲಿ ಅಥವಾ ಕ್ರಾಂತಿಕಾರಿಗಳಾಗಲಿ ಹೇಗೇ ಒತ್ತಾಯ ಪಡಿಸಲಿ ಎಲ್ಲ ಸಮಾಜಗಳಿಗೂ ಇದು ನಿಜವಾದುದಾಗಿದೆ. (ಪು. 61)

ಪ್ರಪಂಚದ ಬಹುಪಾಲು ಅಭಿವೃದ್ಧಿಪರ ರಾಷ್ಟ್ರಗಳಲ್ಲಿ ಅನಕ್ಷರತೆಯು ದೊಡ್ಡ ಪ್ರಮಾಣದಲ್ಲಿದ್ದುದರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಅದರ ಸಂಪೂರ್ಣ ನಿರ್ಮೂಲನೆಗಾಗಿ ಗಮನ ನೀಡಿದವು. ಅಭಿವೃದ್ಧಿಯಲ್ಲಿ ಶಿಕ್ಷಣದ ಪ್ರಾಮುಖ್ಯತೆಗೆ ನಿರಾತಂಕವಾಗಿ ಒತ್ತು ನೀಡಿದ್ದರಿಂದ ಎಲ್ಲ ಪ್ರಯತ್ನಗಳು, ಕಾರ್ಯಕ್ರಮಗಳು, ಅದರ ಯೋಜನಾ ದಾಖಲೆಗಳು ಶಿಕ್ಷಣದ ಪರಿಪ್ರಮಾಣಾತ್ಮಕವಾದ ವಿಸ್ತರಣೆಯಲ್ಲಿ ತೊಡಗಿದವು. ಆದರೆ ಒಬ್ಬ ಶಿಕ್ಷಿತ ಮನುಷ್ಯನೆಂದರೆ ಪರಿಣಾಮದಲ್ಲಿ ಅಕ್ಷರಸ್ಥನೆಂದೂ, ತಮ್ಮ ಹೆಸರನ್ನು ಸಹಿ ಮಾಡಲು ಮತ್ತು ಪ್ರಾಥಮಿಕ ಶಾಲೆಯ ಪಠ್ಯಪುಸ್ತಕವನ್ನು ಓದ ಬಲ್ಲವನೆಂದೂ– ಆತನೇ ಅಭಿವೃದ್ಧಿಗೆ ಕೊಡುಗೆ ನೀಡುವನೆಂದು ಭಾವಿಸಲಾಗಿತ್ತು. ಕಳೆದ ಐದು ದಶಕಗಳಲ್ಲಿ ಶಿಕ್ಷಣವನ್ನು ಕುರಿತು ಸಾಹಿತ್ಯವು– ಅದು ಅಭಿವೃದ್ಧಿ ದಶಕಗಳಾಗಿದೆ– ಸಾಕ್ಷರತೆಗೆ ಸಂಬಂಧಿಸಿದ ಮತ್ತು ವಿವಿಧ ಹಂತಗಳ ನೋಂದಣಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನೂ, ಶಿಕ್ಷಣದ ವ್ಯವಸ್ಥೆಯೊಳಗೆ ಆಗುತ್ತಿರುವ ಬದಲಾವಣೆಗಳನ್ನು ಒಳಗೊಂಡಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಶಿಕ್ಷಣದ ಅಭಿವೃದ್ಧಿಗೆ ಒತ್ತು ನೀಡಿದೆ. ಶಿಕ್ಷಣವನ್ನು ಅಭಿವೃದ್ಧಿಗಾಗಿ ಬಳಸುವ ವಿಷಯವು ಅದು ಹೇಗೋ ಕಡಿಮೆ ಆದ್ಯತೆಗೆ ವರ್ಗಾಯಿಸಲಾಯಿತು. ಮೂಲಭೂತ ಶಿಕ್ಷಣವನ್ನು ಜೀವನಕ್ಕಾಗಿ 'ಪಾಸ್‌ಪೋರ್ಟ್' ಎಂದು ಉನ್ನತಿಗೇರಿಸಲಾಯಿತು.

ಅಭಿವೃದ್ಧಿಯ ಆರಂಭದ ಹಂತದಲ್ಲಿ ಅನಕ್ಷರತೆಯ ನಿವಾರಣೆಯ ಹೆಚ್ಚಾಗಿದ್ದು 1950 ರಲ್ಲಿದ್ದಂತೆ ಪ್ರಪಂಚದ ಜನಸಂಖ್ಯೆಯಲ್ಲಿ ಶೇಕಡ 44.3 ರಷ್ಟು ಎಂದರೆ 700 ಮಿಲಿಯನ್ ಅನಕ್ಷರಸ್ಥರ ಭಾರಿ ಗಾತ್ರವನ್ನು ನಾವು ನೋಡ ಬಹುದು. 1960 ರಲ್ಲಿ ಈ ಗಾತ್ರವು ಶೇಕಡ 39.3 ಕ್ಕೆ, 1970 ರಲ್ಲಿ ಶೇಕಡ 34.2 ರಷ್ಟಾಗಿ ಇಳಿಮುಖವಾಯಿತು. ಈ ಶೇಕಡವಾರು ಅಂಕಿಗಳಿಂದ ಶೇಕಡವಾರು ಇಳಿಮುಖತೆಯಲ್ಲಿ ಮುಂದುವರಿಯಬೇಕಾಗಿದ್ದ ಅನಕ್ಷರಸ್ಥರ ಸಂಖ್ಯೆಯು ಆದಾಗ್ಯೂ ಏರುತ್ತಲೇ ಹೋದದ್ದು – 1950 ರಲ್ಲಿ 700 ಮಿಲಿಯನ್ ಇದ್ದರು, 1970 ರಲ್ಲಿ 783 ಮಿಲಿಯನ್ ಆಗಿದ್ದರು – ಏಕೆಂಬುದನ್ನು ಸ್ಪಷ್ಟವಾಗಿ ತಿಳಿಯಲಾಗುತ್ತಿಲ್ಲ. ಮತ್ತು ಅದೇ ಪರಿಸ್ಥಿತಿಯು ಇಂದಿಗೂ ಮುಂದಿವರಿದೇ ಇದೆ. ವಿಶ್ವದ ಈ ಅಂಕಿಅಂಶಗಳನ್ನು ಪ್ರಾಂತೀಯ ಪರಿಸ್ಥಿತಿಗಳಿಗೆ ತುಲನೆ ಮಾಡಿದಾಗ ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಇದನ್ನು ಫೌವರ್ ವರದಿ ಹೀಗೆ ಸೂಚಿಸುತ್ತದೆ:

Digitised by Bharatavani, CIIL

"1970 ರ ಅಂದಾಜಿನಂತೆ ಆಫ್ರಿಕಾ ಮತ್ತು ಅರಬ್ ರಾಷ್ಟ್ರಗಳಲ್ಲಿ ನಾಲ್ಕರಲ್ಲಿ ಒಬ್ಬ ವಯಸ್ಕ ಮಾತ್ರ ಓದಲು ಮತ್ತು ಬರೆಯಲು ಬಲ್ಲವನಾಗಿದ್ದನು. ಅದೇ ವೇಳೆಗೆ ಏಶಿಯದಲ್ಲಿ ಹೆಚ್ಚೆಂದರೆ ಅರ್ಧದಷ್ಟು ವಯಸ್ಕ ಜನಸಂಖ್ಯೆಯು ಸಾಕ್ಷರರಾಗಿದ್ದರು. ನಿಖರವಾದ ಅಂಶಗಳಲ್ಲಿ, ಲ್ಯಾಟಿನ್ ಅಮೇರಿಕದಲ್ಲಿ 40 ಮಿಲಿಯನ್ ಅನಕ್ಷರಸ್ಥರಿದ್ದರೆ, ಏಶಿಯದಲ್ಲಿ ಅನಕ್ಷರಸ್ಥರು 500 ಮಿಲಿಯನ್‌ಗಿಂತಲೂ ಅಧಿಕವಾಗಿದ್ದರು." (ಫೌವರ್ 1972:39)

1990 ರ 'ಎಲ್ಲರಿಗೂ ಶಿಕ್ಷಣ'ದ ಬಗ್ಗೆ ವಿಶ್ವ ಸಮಾವೇಶವು ಥಾಯ್ಲೆಂಡ್‌ನ ಜೊಮ್ಟೀನ್‌ನಲ್ಲಿ ವಿಶ್ವಬ್ಯಾಂಕ್, ಯುಎನ್‌ಡಿಪಿ ಯುನೊಸ್ಕೋ ಮತ್ತು ಯುನಿಸೆಫ್‌ಗಳಿಂದ ಪ್ರಾಯೋಜಿತವಾಗಿತ್ತು. ಅದು ಎರಡನೆಯ ವಿಶ್ವಯುದ್ಧದಂದಿನಿಂದ ಶಿಕ್ಷಣವು ಹರಡಿದ್ದುದರಿಂದ ಆಗಿರುವ ಪ್ರಗತಿಯ ಮೌಲ್ಯಮಾಪನ ಮಾಡುವ ಉದ್ದೇಶ ಹೊಂದಿತ್ತು ಮತ್ತು ಅಭಿವೃದ್ಧಿಯನ್ನು ಉತ್ತೇಜಿಸಲು ಶಿಕ್ಷಣದ ಪ್ರಾಮುಖ್ಯತೆಯನ್ನು ದೃಢೀಕರಿಸಿತು. ನಂತರ 1993 ರ ಡಿಸೆಂಬರ್‌ನಲ್ಲಿ ಜೊಮ್ಟೀನ್‌ನಲ್ಲಿ ನಡೆದ ಸಮಾವೇಶದ ಅನುಸರಣ ಕಾರ್ಯವಾಗಿ ಜೊಮ್ಟೀನ್ ಸಮಾವೇಶದಲ್ಲಿ ನಿಗದಿತವಾದ ಗುರಿಗಳನ್ನು ಈಡೇರಿಸುವುದಕ್ಕೆ ಗಮನ ಹರಿಸಲು ತಮ್ಮ ಬದ್ಧತೆಯನ್ನು ದೃಢಪಡಿಸುವಂತೆ ಭಾರತವು ವಿಶ್ವದ 9 ಅತ್ಯಂತ ಪ್ರಸಿದ್ಧ ದೇಶಗಳಿಂದ ಕೂಡಿದ ಸಮಾವೇಶವನ್ನು ಏರ್ಪಡಿಸಿತ್ತು. ದೇಶಗಳ ಆಶೋತ್ತರಗಳು ಮತ್ತು ಅಭಿವೃದ್ಧಿಯ ಗುರಿಗಳನ್ನು ಈಡೇರಿಸಲು ಶಿಕ್ಷಣವನ್ನು ನಮ್ಮ ಎಲ್ಲ ಜನರಿಗೂ ಸಿಗುವ ಭರವಸೆಯನ್ನೂ, ಪ್ರತಿ ದೇಶಗಳ ಕಾನೂನುಗಳನ್ನು ಮತ್ತು ಸಾಂಸ್ಕೃತಿಕ ಹಾಗೂ ಮಾನವ ಹಕ್ಕುಗಳ ಘೋಷಣೆ ಇರುವ ಈ ಎರಡರ ಸರಿಯಾದ ಭರವಸೆಯನ್ನು ನಾಯಕರು ಮಾನ್ಯಮಾಡಿದರು. ಅವರು ಸರ್ವೋತ್ಕೃಷ್ಟ ಸಾರ್ವತ್ರಿಕ ಮಾನವ ಮೌಲ್ಯಗಳನ್ನು, ಮಾನವ ಸಂಪನ್ಮೂಲಗಳ ಗುಣವನ್ನು ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ಗೌರವವನ್ನು ಉತ್ತೇಜಿಸಲು ಶಿಕ್ಷಣವನ್ನು ಪರಿಗಣಿಸಿದರು. ನೋಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್ "ಎಲ್ಲಾ ಸಮಾಜಗಳಲ್ಲಿ ಅವುಗಳ ಪರಿಹಾರ ದೇಶದ ಅಭಿವೃದ್ಧಿಗೆ ಅಥವಾ ಜನಸಂಖ್ಯೆಗೆ ಸಮಬಂಧಿಸಿದ್ದೇ ಇರಲಿ ಅದು ಶಿಕ್ಷಣವನ್ನೇ ಆಧರಿಸಿದೆ" ಎಂದಿದ್ದಾರೆ.

ವಿಶ್ವದ ಅನಕ್ಷರತೆಯ ಚಿತ್ರಣ ಅಕ್ಷರಸ್ಥರ ಏರಿಕೆಯು ಶೇಕಡವಾರು ಹೆಚ್ಚಿದರೂ ಇನ್ನೂ ವಿಷಾದನೀಯ ಸ್ಥಿತಿಯಲ್ಲಿ ಉಳಿದಿದೆ. 1993 ರಲ್ಲಿ ಜಾಕ್ವೂಸ್ ಡೆಲೋರ್ಸ್‌ನ ಅಧ್ಯಕ್ಷತೆಯಲ್ಲಿ ಯುನೆಸ್ಕೋದಿಂದ ನೇಮಕವಾದ ಎರಡನೆಯ ಶಿಕ್ಷಣ ಆಯೋಗದ ವರದಿಯು ಅಕ್ಷರಸ್ಥ ವಯಸ್ಕರು ಸುಮಾರು ಮೂರುಪಟ್ಟು ಹೆಚ್ಚಿದ್ದಾರೆ . . . ಅಂದಾಜಿನಂತೆ ಈ ಪ್ರಮಾಣ 1960 ರಲ್ಲಿ 1000 ಮಿಲಿಯನ್‌ರಿಂದ ಇಂದಿನವರೆಗೆ 2700 ಮಿಲಿಯನ್ ಆಗಿದೆ. ಹೀಗಿದ್ದರೂ 885 ಮಿಲಿಯನ್ ವಯಸ್ಕರಲ್ಲಿ ಐವರು ಮಹಿಳೆಯರಲ್ಲಿ ಇಬ್ಬರು ಮತ್ತು ಐವರು ಪುರುಷರಲ್ಲಿ ಒಬ್ಬರಂತೆ (1996:117) ಒಬ್ಬರಂತೆ ಅನಕ್ಷರಸ್ಥರು ಪ್ರಪಂಚದಲ್ಲಿದ್ದಾರೆ. ಪೀಠೋಪಕರಣಗಳನ್ನು ಬಲಪಡಿಸುವ ಪರಿಮಾಣಾತ್ಮಕ ಮತ್ತು ಅನಕ್ಷರತೆಯ ನಿರ್ಮೂಲನೆ ಮತ್ತು ಪರಿಣಾಮಕಾರಿ ತಂತ್ರಗಳ ಮೂಲಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳ ಮೂಲಕ ಶಿಕ್ಷಣದ ನಿರಂತರ ಪರಿಣಾತ್ಮಕ ಬೆಳವಣಿಗೆಯನ್ನು ವಿವರಿಸುತ್ತದೆ. ಜೊಮ್ಟೀನ್ ಸಮಾವೇಶವನ್ನು ಅನುಸರಿಸಿ ಯುನೆಸ್ಕೋ ಅಪೀಲ್ ಕಾರ್ಯಕ್ರಮವನ್ನು ಏಶಿಯಾ ಪೆಸಿಫಿಕ್ ಪ್ರಾಂತ್ಯಕ್ಕೆ ಘೋಷಿಸಿದೆ. ಅಪೀಲ್ ೦ಕಕಇ೦ಬ ಎಂದರೆ ಏಶಿಯಾ ಪೆಸಿಫಿಕ್ ಪ್ರೋಗ್ರಾಮ್ ಆಫ್ ಎಜುಕೇಷನ್ ಫಾರ್ ಆಲ್ ಎಂಬುದಾಗಿದೆ.

**ಶಿಕ್ಷಣದ ಬೆಳವಣಿಗೆ:** ಸಾಕ್ಷರತೆ ಹಾಗೂ ಶಿಕ್ಷಣದ ಅಭಾವ ಮತ್ತು ಅಭಿವೃದ್ಧಿಯ ಎಲ್ಲಾ ಸಮಸ್ಯೆಗಳಿಗೂ ಶಿಕ್ಷಣವು ಪ್ರಮುಖವೆಂದು ಪರಿಗಣಿಸುತ್ತಾ ದಕ್ಷಿಣದ ಎಲ್ಲಾ ದೇಶಗಳು ಶಿಕ್ಷಣಕ್ಕೆ ಆದ್ಯತೆ ನೀಡಿದವು. ಮತ್ತು ಶಿಕ್ಷಣದ ವ್ಯವಸ್ಥೆಯನ್ನು ವಿಸ್ತರಿಸಲು ಕಾರ್ಯಗಳನ್ನು ಹಮ್ಮಿಕೊಂಡು ಮತ್ತು ಅದನ್ನು ಆಧುನೀಕರಣಗೊಳಿಸಲು ಆದ್ಯತೆಯನ್ನು ನೀಡಿದವು. ಶಿಕ್ಷಣದ ಅಭಿವೃದ್ಧಿಯ ಅರ್ಥ ಅದರ ವಿಸ್ತರಣೆ ಹಾಗೂ ಉತ್ತಮಪಡಿಸುವುದು ಎಂದು ತೆಗೆದುಕೊಳ್ಳ ಬೇಕಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಯ ಯೋಜನೆಗಳಿಗೆ ಧನ ಸಹಾಯಕರಾದ ವಿಶ್ವ ಬ್ಯಾಂಕ್ ಮತ್ತು ಯುನೆಸ್ಕೋ ಯೋಜನೆಗಳನ್ನು ಜಾರಿಗೆ ತರುವ ಪರಿಣಿತ ಮಾಧ್ಯಮವಾಗಿ – ಈ ವಿಷಯಗಳಲ್ಲಿ ಸರ್ಕಾರಕ್ಕೆ ನೆರವು ನೀಡಲಾಗಿದೆ. ಯುನೆಸ್ಕೋ ತನ್ನ ಬಜೆಟ್‌ನ ಪ್ರಮುಖ ಭಾಗವನ್ನು ಶಿಕ್ಷಣ ಕ್ಷೇತ್ರಕ್ಕೆ ವ್ಯಯಮಾಡಿದೆ. ಇದರ ಪರಿಣಾಮ ಯುನೆಸ್ಕೋ ಮತ್ತು ಶಿಕ್ಷಣ ಎರಡೂ ಬಹುಪಾಲು ಒಂದೇ ಆಗಿ ಪರಿಣಮಿಸಿದಂತಿದೆ. 1963 ರಲ್ಲಿ ವಿಶ್ವ ಬ್ಯಾಂಕ್ ಶೈಕ್ಷಣಿಕ ಯೋಜನೆಗಳಿಗೆ ಸಾಲವನ್ನು ನೀಡಲು ಆರಂಭಿಸಿತು. ಮತ್ತು ಆ ವರ್ಷಕ್ಕೆ ಅಂದಾಜಿನ ಪ್ರಕಾರ ಯು.ಎಸ್. ಡಾಲರ್ ಎರಡು ಬಿಲಿಯನ್‌ರಷ್ಟು ಶಿಕ್ಷಣಕ್ಕಾಗಿ ನೀಡುವ ಏಕೈಕ ಆರ್ಥಿಕ ಬೆಂಬಲವಾಗಿತ್ತು, ಅದು ಒಟ್ಟಾರೆ ಬಾಹ್ಯ ಬೆಂಬಲದ ಶೇಕಡಾ 25 ರಷ್ಟು ಆಗಿತ್ತು. ಆದರೆ ಈ ಹಣ ಸರ್ಕಾರಗಳು ಮತ್ತು ಅಭಿವೃದ್ಧಿಪರ ದೇಶಗಳ ನಾಗರಿಕ ಸಮಾಜವು ಶಿಕ್ಷಣಕ್ಕಾಗಿ ವೆಚ್ಚ ಮಾಡಿರುವ ಒಟ್ಟು ಹಣದ ಮೊತ್ತದ ಕೇವಲ 0.75 ರಷ್ಟು ಆಗಿತ್ತು. 1995 ರಲ್ಲಿ ಅಮೆರಿಕಾ 270 ಬಿಲಿಯನ್ ಡಾಲರ್‌ನಷ್ಟು ಶಿಕ್ಷಣಕ್ಕಾಗಿ ವ್ಯಯಿಸಿತ್ತು.

ಅಭಿವೃದ್ಧಿಪರ ದೇಶಗಳು ಶಿಕ್ಷಣಕ್ಕೆ ಉನ್ನತ ಆದ್ಯತೆಯನ್ನು ನೀಡಿವೆ. ಎಲ್ಲರಿಗೂ ಶಿಕ್ಷಣ (Education for All) ಎಂಬ ಗುರಿಯನ್ನು ಸಾಧಿಸಲು ಸಾಕಷ್ಟು ನಿಧಿಯನ್ನು ಒದಗಿಸುವಲ್ಲಿ ಅವರು ವಿಫಲರಾಗಿದ್ದರು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಒಟ್ಟು ವಾರ್ಷಿಕ ಆದಾಯದ (ಜಿಎನ್‌ಪಿಯ) ಸುಮಾರ 6 ರಷ್ಟನ್ನು ಶಿಕ್ಷಣದ ಮೇಲೆ 1970 ರಲ್ಲಿ ವ್ಯಯಿಸಲಾಗಿದೆ. ಅಭಿವೃದ್ಧಿಪರ ದೇಶಗಳಲ್ಲಿ ಕೇವಲ ಶೇಕಡ 2.9 ರಷ್ಟು, ಪೂರ್ವ ಏಶಿಯಾದಲ್ಲಿ ಮತ್ತು ಪೆಸಿಫಿಕ್‌ನಲ್ಲಿ ಈ ಭಾಗವು ಶೇಕಡ 1.9 ರಷ್ಟು ಕಡಿಮೆ ಇದೆ. ಮತ್ತು ದಕ್ಷಿಣ ಏಶಿಯಾದಲ್ಲಿ ಶೇಕಡ 2.6 ರಷ್ಟಿತ್ತು. ಭಾರತದಲ್ಲಿ 1980 ರಲ್ಲಿ ಅದು ಶೇಕಡ 2.8 ರಷ್ಟು ಮತ್ತು 1998–99 ರಲ್ಲಿ ಅದು ಶೇಕಡ 3.7 ರಷ್ಟು ಇದ್ದಿತು.

Digitised by Bharatavani, CIIL

**ಭಾರತದಲ್ಲಿ ಶಿಕ್ಷಣದ ಬೆಳವಣಿಗೆ:** ಮೊದಲೇ ತಿಳಿಸಿದಂತೆ, ಸ್ವತಂತ್ರ ಭಾರತವು ತನ್ನ ಪ್ರಯಾಣವನ್ನು ಶಿಕ್ಷಣದಲ್ಲಿ ಬಹಳ ದುರ್ಬಲ ಚಿತ್ರಣದೊಡನೆ ಆರಂಭಿಸಿದೆ. ಜೆ.ಪಿ.ನಾಯಕ್ ಉಲ್ಲೇಖಿಸಿರುವಂತೆ:

"ಆಧುನಿಕ ಶಿಕ್ಷಣದ ವ್ಯವಸ್ಥೆಯು ಸುಮಾರು 1880 ರಲ್ಲಿ ಆರಂಭವಾಗಿ ಬ್ರಿಟಿಷರ ಆಳ್ವಿಕೆಯ ಮುಕ್ತಾಯದವರೆಗೂ ಹೆಚ್ಚು ಪ್ರಗತಿಯನ್ನು ಮಾಡಲಿಲ್ಲ. 1947 ರಲ್ಲಿ ಒಟ್ಟಾರೆ ಭಾರತದ ಸಾಕ್ಷರತೆಯು ಸುಮಾರು .ಶೇ.14 ರಷ್ಟಿತ್ತು. ಪ್ರಾಥಮಿಕ ಶಿಕ್ಷಣದಲ್ಲಿ ಒಟ್ಟು ದಾಖಲಾತಿ 14.11 ಮಿಲಿಯನ್ ಎಂದರೆ 3 ಮಕ್ಕಳಲ್ಲಿ ಕೇವಲ ಒಂದು ಮಗು ಮಾತ್ರ ಶಾಲೆಯಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ . . . ಒಟ್ಟು ದಾಖಲಾತಿಯು 2.04 ಮಿಲಿಯನ್ ಎಂದರೆ 11 ಮಕ್ಕಳಲ್ಲಿ ಕೇವಲ ಒಂದೇ ಒಂದು ಮಗು ದಾಖಲಾಗಿರುತ್ತಿತ್ತು. ಉಳಿಯುವಿಕೆ ಮತ್ತು ಅಪವ್ಯಯ ಪ್ರಮಾಣವು ಬಹು ಅಧಿಕವಾಗಿತ್ತು. ಪಠ್ಯಕ್ರಮದ ಉದ್ದೇಶ ಮಗುವನ್ನು ಕೇವಲ ಸೆಕೆಂಡರಿ ಶಾಲೆಗೆ ಪ್ರವೇಶ ಪಡೆಯುವಂತೆ ಸಿದ್ಧ ಪಡಿಸುವುದಾಗಿದ್ದು ಅದು ತತ್‌ಕ್ಷಣದ ಪರಿಸರಕ್ಕೆ ಹೆಚ್ಚು ಸಂಬಂಧ ಹೊಂದಿರಲಿಲ್ಲ. ಸೆಕೆಂಡರಿ ಶಾಲೆಗಳ ಸಂಖ್ಯೆಯು 5297 ಮತ್ತು ಸೆಕೆಂಡರಿ ಹಂತಕ್ಕೆ ದಾಖಲಾತಿ 8,70,000 ಅಥವಾ 14 ಮತ್ತು 17 ರ ವಯಸ್ಸಿನ ಗುಂಪಿನವರು ಕೇವಲ ಶೇಕಡ 3.0 ಮಾತ್ರ . . . 19 ವಿಶ್ವವಿದ್ಯಾನಿಲಯಗಳು ಮತ್ತು 636 ಎಲ್ಲಾ ವಿಧದ ಕಾಲೇಜುಗಳು ವಿಶ್ವವಿದ್ಯಾನಿಲಯದ ಹಂತದಲ್ಲಿ 2,56,000 ಮಾತ್ರ ದಾಖಲಾತಿಯಾಗಿತ್ತು. ಈ ವ್ಯವಸ್ಥೆಯ ಪ್ರಮುಖ ಅನುಕೂಲ ಪಡೆದವರು ನಗರದ ಮೇಲ್ದರ್ಜೆ ಮತ್ತು ಮಧ್ಯಮ ವರ್ಗದವರು. ಗ್ರಾಮೀಣ ಪ್ರದೇಶಗಳ ಮತ್ತು ಬಡಜನರು ಕೇವಲ ಅಂಚಿನಲ್ಲಿ ಮಾತ್ರ ಅನುಕೂಲ ಪಡೆದರು." (ನಾಯಕ್ 1977:241)

ಸರ್ಕಾರವು ಪರಂಪರೆಯ ಸಂರಚನೆಯನ್ನು ಬದಲಾಯಿಸುವ ಕಾರ್ಯ ಹೊಂದಿತ್ತು. ಸ್ಪಷ್ಟವಾಗಿ ವ್ಯವಸ್ಥೆಯನ್ನು ನಾಶಪಡಿಸದಿದ್ದರೂ, ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ಪ್ರಯತ್ನಗಳಾದವು. ಉತ್ತಮ ದಾಖಲಾತಿ ಪ್ರಮಾಣ, ಸಾಮಾಜಿಕ ಆರ್ಥಿಕ ತಳಹದಿಯನ್ನು ವಿಸ್ತರಿಸುವುದು ಪ್ರಾದೇಶಿಕ ಅಸಮತೆಯನ್ನು ಇಳಿಮುಖಗೊಳಿಸುವುದು. ವಿವಿಧ ಹಂತಗಳ ಶಿಕ್ಷಣದ ನಡುವೆ ಅಪೇಕ್ಷಿತ ಬದಲಾವಣೆಯನ್ನು ಮಿಶ್ರಗೊಳಿಸುವುದು, ಬೋಧನೆಯಿಂದ ಕಲಿಕೆಯತ್ತ ಸಂವಹನದ ವ್ಯವಸ್ಥೆಯನ್ನು ಬದಲಾಯಿಸಿ ಉತ್ತಮಪಡಿಸುವುದು, ರಾಷ್ಟ್ರೀಯ ಐಕ್ಯತೆ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿ ಶಿಕ್ಷಣದ ಕೊಡುಗೆಯನ್ನು ಉತ್ತಮಪಡಿಸುವ ಭರವಸೆಯಿಂದ ಇವೆಲ್ಲವನ್ನು ಹೆಚ್ಚು ಪರಿಮಾಣದಲ್ಲಿ ವಿಸ್ತರಿಸುವ ತುರ್ತಿನ ಕಾರ್ಯಗಳಾಗಿದ್ದವು. ಶಿಕ್ಷಣ ಮತ್ತು ಅಭಿವೃದ್ಧಿಯ ನಡುವಣ ಸಂಬಂಧವನ್ನು ಕುರಿತು ಭಾರತೀಯ ಸಂದರ್ಭದಲ್ಲಿ ಹಾಗೂ ಇತರ ಅಭಿವೃದ್ಧಿಪರ ರಾಷ್ಟ್ರಗಳಲ್ಲಿ ಈ ಮೂರು ಲಕ್ಷಣಗಳನ್ನು ನಾವು ಕಾಣಬಹುದು: (1) ಜನಾಂಗದ ಶೈಕ್ಷಣಿಕ ಚಿತ್ರಣವನ್ನು ಉತ್ತಮಪಡಿಸುವುದು–ಅನಕ್ಷರತೆಯ ನಿರ್ಮೂಲನ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಕೌಶಲವುಳ್ಳ ಮಾನವ ಶಕ್ತಿಯ ಉತ್ಪಾದನೆ, (2) ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಶೈಕ್ಷಣಿಕ ಉಪವ್ಯವಸ್ಥೆಯ ಸುಧಾರಣೆ, (3) ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ. ಆದಾಗ್ಯೂ ಮೂರನೆಯ ಲಕ್ಷಣವನ್ನು ಗಮನದಲ್ಲಿರಿಸಿಕೊಂಡು ಮೊದಲೆರಡನೆಯ ಸಂಗತಿಗಳನ್ನು ಬಿಂಬಿಸುವುದು ಎಂದು ಅಭಿಪ್ರಾಯಪಡಲಾಯಿತು. ಸಾಮಾಜಿಕ ಶಾಸ್ತ್ರೀಯ ದೃಷ್ಟಿಯಿಂದ ಈ ಎಲ್ಲಾ ಕ್ರಿಯೆಗಳು ಶಿಕ್ಷಣವನ್ನು ಒಂದು ಸ್ವತಂತ್ರ ಬದಲಾವಣೆಯ ಅಭಿವೃದ್ಧಿ ಎಂದು ತಿಳಿಯಲಾಗಿದೆ. ಶಿಕ್ಷಣ ಮತ್ತು ಅಭಿವೃದ್ಧಿಯ ನಡುವಣ ಸಂಬಂಧದಲ್ಲಿ ಆವರ್ತ ರೂಪದ್ದು ಎಂಬ ಅಂಶ ಬಿಟ್ಟುಹೋಯಿತು. ಅಭಿವೃದ್ಧಿಯನ್ನು ಶಿಕ್ಷಣವೊಂದೇ ಪ್ರಭಾವಗೊಳಿಸುವುದಿಲ್ಲ. ಆದರೆ ಅಭಿವೃದ್ಧಿ ಕೂಡ ಶಿಕ್ಷಣವನ್ನು ಪ್ರಭಾವಗೊಳಿಸುತ್ತದೆ.

1964 ರಲ್ಲಿ ಭಾರತ ಸರ್ಕಾರದಿಂದ ಸ್ವಾತಂತ್ರ ಪಡೆದ 17 ವರ್ಷಗಳ ನಂತರ ಪ್ರೊ.ಡಿ.ಎಸ್.ಕೊಠಾರಿಯವರ ಅಧ್ಯಕ್ಷತೆಯಲ್ಲಿ ನೇಮಕವಾದ ಮೂರನೆಯ ಶಿಕ್ಷಣ ಆಯೋಗ ಆಗಿರುವ ಪ್ರಗತಿಯನ್ನು ಪರಾಮರ್ಶಿಸಿ ಸುಧಾರಣೆಯ ಅಪೇಕ್ಷಿತ ಕಾರ್ಯಗಳನ್ನು ಸಲಹೆ ಮಾಡಿದೆ. 1966 ರಲ್ಲಿ ಮಂಡಿಸಲ್ಪಟ್ಟ ಈ ವರದಿಗೆ ಶಿಕ್ಷಣ ಮತ್ತು ರಾಷ್ಟ್ರೀಯ ಅಭಿವೃದ್ಧಿ ಎಂದು ಸರಿಯಾದ ಶೀರ್ಷಿಕೆ ನೀಡಲಾಗಿದೆ. ಈ ವರದಿಯು ಜನಪ್ರಿಯವಾಗಿ ತಿಳಿದಿರುವಂತೆ ಕೊಠಾರಿ ಆಯೋಗದ ವರದಿ ಎಂದು ರಾಷ್ಟ್ರದ ಅಭಿವೃದ್ಧಿಗೆ ನಾಲ್ಕು ಸಮಸ್ಯೆಗಳನ್ನು ಗುರ್ತಿಸಿದೆ. ಆಹಾರದಲ್ಲಿ ಸ್ವಯಂಪೂರ್ಣತೆ, ಆರ್ಥಿಕ ಬೆಳವಣಿಗೆ ಮತ್ತು ಸಂಪೂರ್ಣ ಉದ್ಯೋಗ, ಸಾಮಾಜಿಕ ಮತ್ತು ರಾಷ್ಟ್ರೀಯ ಐಕ್ಯತೆ ಮತ್ತು ರಾಜಕೀಯ ಅಭಿವೃದ್ಧಿ. ಈ ವರದಿಯು ಎಲ್ಲಾ ಕ್ಷೇತ್ರಗಳಲ್ಲೂ ಒಂದೇ ಕಾಲಕ್ಕೆ ಎರಡು ಪ್ರಮುಖ ಕಾರ್ಯಕ್ರಮಗಳಾದ ಭೌತಿಕ ಸಂಪನ್ಮೂಲಗಳ ಅಭಿವೃದ್ಧಿಯನ್ನು ಕ್ಷಿಪ್ರ ಕೈಗಾರಿಕೀಕರಣ ಮತ್ತು ಕೃಷಿಯ ಆಧುನಿಕೀಕರಣಗಳ ಮತ್ತು ಮಾನವ ಸಂಪನ್ಮೂಲಗಳನ್ನು ಒಂದು ಸರಿಯಾದ ವ್ಯವಸ್ಥಿತ ಶಿಕ್ಷಣ ಕಾರ್ಯಕ್ರಮದ ಮೂಲಕ ಆಕ್ರಮಣ ನಡೆಸಬೇಕೆಂದು ವಾದಿಸಿತು. (ಪು. 4) ಶಿಕ್ಷಣವು ಎರಡನೆಯದರಲ್ಲಿ ಹೆಚ್ಚು ನಿಷ್ಪಷ್ಟವಾಗಿ ಬದಲಾವಣೆಯ ಸಾಧನವಾಗಿದೆ ಎಂದು ಆಯೋಗವು ಅಭಿಪ್ರಾಯಪಡುತ್ತಾ ಪ್ರಸ್ತುತದ ಶಿಕ್ಷಣ ವ್ಯವಸ್ಥೆಯು ಅಧಿಕಾರಶಾಹಿ ಮತ್ತು ಸಾಂಪ್ರದಾಯಿಕ ಸಮಾಜ ಹಾಕಿದ ಮಿತಿಗಳ ಒಳಗೆ ಸಾಮ್ರಾಜ್ಯದ ಆಡಳಿತದ ಅಗತ್ಯಗಳನ್ನು ನೆರವೇರಿಸುವಂತೆ ವಿನ್ಯಾಸಗೊಳಿಸಿದ್ದು, ಒಂದು ವೇಳೆ ಅದು ಆಧುನಿಕೀಕರಣಗೊಂಡ ಪ್ರಜಾಪ್ರಭುತ್ವದ ಮತ್ತು ಸಮಾಜವಾದಿ ಸಮಾಜದ ಉದ್ದೇಶಗಳನ್ನು ನೆರವೇರಿಸಲು ಆಯ್ಕೆಯಲ್ಲಿ ಮತ್ತು ಸಂಸ್ಥೆಗಳಲ್ಲಿ ಮತ್ತು ಶಿಕ್ಷಕರ ವೃತ್ತಿಪರ ಸಿದ್ಧತೆಗಳಲ್ಲಿ ವಿದ್ಯಾರ್ಥಿ ಸಮೂಹದ ಗಾತ್ರ ಮತ್ತು ಸಂರಚನೆಯಲ್ಲಿ, ಕಾರ್ಯಕ್ರಮಗಳಲ್ಲಿ, ಬೋಧನಾ ಪದ್ಧತಿಗಳಲ್ಲಿ, ವಸ್ತುವಿನ ಸತ್ವದಲ್ಲಿ, ಉದ್ದೇಶಗಳಲ್ಲಿ ಬದಲಾವಣೆಯನ್ನು ತರುವ ಮೂಲಕ ಕ್ಷಿಪ್ರ ಬದಲಾವಣೆಗಳ ಅಗತ್ಯವಿದೆ.

ಪ್ರಸ್ತುತದ ಶೈಕ್ಷಣಿಕ ವ್ಯವಸ್ಥೆಯನ್ನು ಪರಾಮರ್ಶಿಸಿದ ಆಯೋಗವು ಅದು ಜೀವನಕ್ಕೆ ಬಹಳಷ್ಟು ಸಂಬಂಧವಿಲ್ಲದೆ ಇರುವಂಥದು ಮತ್ತು ರಾಷ್ಟ್ರದ ಅಭಿವೃದ್ಧಿಯ ಕಾಳಜಿ ಮತ್ತು ವಸ್ತುವಿನ ತಿರುಳು ಮತ್ತು ಉದ್ದೇಶಗಳ ನಡುವೆ ವ್ಯಾಪಕವಾದ ಕಂದಕವಿದೆ ಎಂದು

Digitised by Bharatavani, CIIL

ಗುರ್ತಿಸಿದೆ. ನಿರ್ದಿಷ್ಟ ರೂಪದಲ್ಲಿ (1) ಶಿಕ್ಷಣ ವ್ಯವಸ್ಥೆಯು ದೃಷ್ಟಿಯ ಪರಮೋಚ್ಚ ಪ್ರಾಮುಖ್ಯತೆಯನ್ನು ಪ್ರತಿಫಲಿಸುತ್ತಿಲ್ಲ, (2) ಕ್ಷಿಪ್ರ ಆರ್ಥಿಕ ಅಭಿವೃದ್ಧಿಯನ್ನು ಸುಭದ್ರಗೊಳಿಸಲು ಶಿಕ್ಷಣಕ್ಕೆ ಉತ್ಪಾದನೆ ಯೊಡನೆ ಸಂಬಂಧವೇರ್ಪಡಿಸಬೇಕು, (3) ಸಾಮಾಜಿಕ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಹೆಚ್ಚಿಸುವ ಬದಲು ರಾಷ್ಟ್ರೀಯ ಜಾಗೃತಿಯನ್ನು ಹೆಚ್ಚಿಸಲು ಕ್ರಿಯಾತ್ಮಕವಾದ ಪ್ರಯತ್ನವನ್ನು ಮಾಡಬೇಕು. ಶಿಕ್ಷಣ ವ್ಯವಸ್ಥೆಯ ಹಲವು ಲಕ್ಷಣಗಳು ವಿಭಜಿತ ಪ್ರವೃತ್ತಿಗಳನ್ನು ಉತ್ತೇಜಿಸಿ, ಜಾತೀಯ ನಿಷ್ಠೆಗಳನ್ನು ಪ್ರೋತ್ಸಾಹಿಸಬೇಕು. ಶ್ರೀಮಂತರು ಮತ್ತು ಬಡವರನ್ನು ಪ್ರತ್ಯೇಕಗೊಳಿಸಬೇಕು, (4) ನಡೆವಳಿಕೆಯ ರೂಪುಗೊಳ್ಳುವುದನ್ನು ಮತ್ತು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕೃಷಿಗೈಯಲು ಸ್ವಲ್ಪ ಪ್ರಯತ್ನ ಮಾಡಬೇಕು. ವಿಶೇಷವಾಗಿ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಸಮಾಜದ ಆಸಕ್ತಿಗಳು, ಮನೋಧರ್ಮಗಳು ಮತ್ತು ಮೌಲ್ಯಗಳನ್ನು ಬೆಳೆಸಬೇಕಾದ ಅಗತ್ಯವಿದೆ ಎಂದು ವರದಿ ಹೇಳಿತು. (ಪು. 5, 6) ಅದು ಶೈಕ್ಷಣಿಕ ವ್ಯವಸ್ಥೆಯ ಸುಧಾರಣೆಗೆ ಹಲವು ಶಿಫಾರಸುಗಳನ್ನು ಮಾಡಿತು. ಈ ವರದಿಯು ಶೈಕ್ಷಣಿಕ ಪುನರ್‌ರಚನೆಯ ಪ್ರಸ್ತಾಪದ ಕಾರ್ಯಕ್ರಮಗಳನ್ನು ಒಳಗೊಂಡಿದೆ.

- ಜೀವನದ ಅಗತ್ಯಗಳನ್ನು ಮತ್ತು ರಾಷ್ಟ್ರದ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ಶಿಕ್ಷಣ ವ್ಯವಸ್ಥೆಯ ಆಂತರಿಕ ಪರಿವರ್ತನೆಯ ಅಗತ್ಯತೆ.
- ಶಿಕ್ಷಣದ ಗುಣಾತ್ಮಕ ಉನ್ನತಿಯಲ್ಲಿ ಗುಣಮಟ್ಟವನ್ನು ಸರಿಯಾಗಿ ಸಾಧಿಸುವುದು ನಿರಂತರವಾಗಿ ಏರುತ್ತಿರುವಂತೆ ಕೆಲವು ಕ್ಷೇತ್ರಗಳಲ್ಲಿ ಕಡೇ ಪಕ್ಷ ಅಂತರ ರಾಷ್ಟ್ರೀಯ ಮಟ್ಟವನ್ನು ಸಾಧಿಸುವುದು.
- ಶೈಕ್ಷಣಿಕ ಸೌಲಭ್ಯಗಳನ್ನು ಸ್ಥೂಲವಾಗಿ ಮಾನವ ಶಕ್ತಿಯ ಅಗತ್ಯಗಳ ಮತ್ತು ಶೈಕ್ಷಣಿಕ ಅವಕಾಶಗಳ ಸಮಾನತೆಯ ಆಧಾರದ ಮೇಲೆ ಪ್ರಧಾನವಾಗಿ ವಿಸ್ತರಿಸುವುದು.

1968 ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಕೊಠಾರಿ ಆಯೋಗದ ಶಿಫಾರಸನ್ನು ಆಧರಿಸಿದೆ. ನೀತಿಯು ಹೀಗೆ ಘೋಷಿಸಿದೆ:

"ರಾಷ್ಟ್ರದ ಐಕ್ಯತೆಗಾಗಿ ಮತ್ತು ಸಮಾಜವಾದಿ ನಮೂನೆಯ ಸಮಾಜದ ಆದರ್ಶಗಳನ್ನು ಅರಿಯಲು ಮತ್ತು ಶಿಕ್ಷಣ ಆಯೋಗವು ಮಾಡುವ ಸ್ಥೂಲ ಮಾರ್ಗದರ್ಶಕ ಸೂತ್ರಗಳ ಶಿಫಾರಸ್ಸು ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ, ರಾಷ್ಟ್ರೀಯ ಭಾವೈಕ್ಯತೆಗೆ ಮತ್ತು ಸಮಾಜವಾದಿ ವಿನ್ಯಾಸದ ಸಮಾಜದ ಆದರ್ಶವನ್ನು ಸಾಧಿಸಲು ಅತ್ಯವಶ್ಯಕ ಎಂದು ಭಾರತ ದೇಶಕ್ಕೆ ಮನವರಿಕೆಯಾಗಿದೆ. ಇದಕ್ಕಾಗಿ ಜನಜೀವನಕ್ಕೆ ಶಿಕ್ಷಣವನ್ನು ಹತ್ತಿರವಾಗಿಸುವ, ನಿರಂತರವಾಗಿ ಶಿಕ್ಷಣದ ಅವಕಾಶವನ್ನು ವಿಸ್ತರಿಸುವ, ಎಲ್ಲಾ ಹಂತಗಳಲ್ಲಿಯೂ ಶಿಕ್ಷಣದ ಗುಣಮಟ್ಟವನ್ನು ಏರಿಸುವ, ಮುಂದುವರಿದ ಮತ್ತು ತೀವ್ರತರವಾಗಿ ಪ್ರಯತ್ನಿಸುವ; ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸುವ (1968: ಪ್ಯಾರಾ 3) ಮುಂತಾದವುಗಳನ್ನೆಲ್ಲಾ ಒಳಗೊಂಡಂತೆ ಶಿಕ್ಷಣ ವ್ಯವಸ್ಥೆಯನ್ನು ಪುನರ್ ರೂಪಿಸುವ ಅವಶ್ಯಕತೆಯಿದೆ."

ಅನಂತರ 1977 ರಲ್ಲಿ ಜನತಾ ಪಕ್ಷವು ಅಧಿಕಾರಕ್ಕೆ ಬಂದಾಗ ಮತ್ತೊಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು 1979 ರಲ್ಲಿ ಸಿದ್ಧಪಡಿಸಲಾಯಿತು. ಈ ನೀತಿಯು ಆದ್ಯತೆಗಳನ್ನು ಮರುವ್ಯಾಖ್ಯಾನಿಸಿತು ಮತ್ತು 'ಸಮಾಜವಾದಿ ವಿನ್ಯಾಸದ ಸಮಾಜ' ಎಂಬುದಕ್ಕೆ ಸಂಬಂದಿಸಿದ ವಿವರಗಳನ್ನು ತೆಗೆದುಹಾಕಲಾಯಿತು. ಅದು ವಯಸ್ಕರ ಶಿಕ್ಷಣಕ್ಕೆ ಅಧಿಕ ಒತ್ತು ನೀಡಿತಲ್ಲದೆ ಉನ್ನತ ಶಿಕ್ಷಣಕ್ಕೆ ಹಂಚಿಕೆಯಾಗುವ ಅನುದಾನವನ್ನು ಇಳಿಸಿತು. ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬಂದಮೇಲೆ ರಾಜೀವ್ ಗಾಂಧಿ ಪ್ರಧಾನಮಂತ್ರಿಯಾದಾಗ ಮೊದಲ ಆದ್ಯತೆಯನ್ನು ಹೊಸ ಶಿಕ್ಷಣ ನೀತಿಯ ಪುನರ್ರಚನೆಗೆ ನೀಡಲಾಯಿತು. ಆ ನೀತಿಯ ಕರಡು ರಚನೆಯ ವ್ಯಾಪಕವಾಗಿ, ವಿವಿಧ ಮೂಲಗಳಿಂದ ಸಲಹೆಗಳನ್ನು ಸ್ವೀಕರಿಸಲಾಯಿತು, ಸರ್ಕಾರವು ಕಾರ್ಯರೂಪಕ್ಕೆ ತರುವ ದಾಖಲೆಗಳನ್ನು ಸುತ್ತೋಲೆ ಮಾಡಿ ಕಳುಹಿಸಿತು ಮತ್ತು ದೇಶದಾದ್ಯಂತ ಅದರ ಬಗ್ಗೆ ಚರ್ಚೆ ಮತ್ತು ಸಂವಾದಗಳನ್ನು ಏರ್ಪಡಿಸಿತು. ಇದರಿಂದ ಪ್ರವೇಶ ಗುಣಮಟ್ಟ, ಪ್ರಮಾಣ ಉಪಯುಕ್ತತೆ ಮತ್ತು ಆರ್ಥಿಕ ವೆಚ್ಚ ಮುಂತಾದ ನಿರಂತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ 1968 ರ ನೀತಿಯನ್ನು ಜಾರಿಗೆ ತರುವಲ್ಲಿನ ಕೊರತೆಗಳನ್ನು ಗುರುತಿಸಲಾಯಿತು. ಹೊಸ ನೀತಿಯು ರಾಷ್ಟ್ರದ ಪ್ರಗತಿ ಹಾಗೂ ರಾಷ್ಟ್ರದ ಐಕ್ಯತೆಯನ್ನು ಬಲಪಡಿಸುವ ದೃಷ್ಟಿಯಿಂದ ಪೌರತ್ವದ ಪ್ರಜ್ಞೆಯನ್ನು ಸಂಸ್ಕೃತಿಯನ್ನು ಬೆಳೆಸುವುದರತ್ತ ಹೆಚ್ಚು ಒತ್ತನ್ನು ನೀಡಿತು. ಮಾನವರೂ ಸಹ ಸಂಪನ್ಮೂಲ ಎಂದು ಸೂಚಿಸುವಂತೆ ಶಿಕ್ಷಣ ಸಚಿವಾಲಯವನ್ನು ಸಹ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಎಂದು ಮರುನಾಮಕರಣ ಮಾಡಲಾಯಿತು ಮತ್ತು ಶಿಕ್ಷಣ ಪಾತ್ರವು ದೇಶದ ಅಭಿವೃದ್ಧಿಗಾಗಿ ಈ ಸಂಪನ್ಮೂಲವನ್ನು ಬೆಳೆಸುವುದೇ ಆಗಿದೆ. ಹೊಸ ಪಾಲಿಸಿಯು ನವೋದಯ ವಿದ್ಯಾಲಯ ಪರಿಕಲ್ಪನೆಯನ್ನು (ಪ್ರತಿಭಾವಂತ ಮಕ್ಕಳಿಗೆ ಹೊಸ ಶಾಲೆಗಳು) ಮತ್ತು ಉನ್ನತ ಶಿಕ್ಷಣದಲ್ಲಿ ಅತ್ಯುನ್ನತಿಯ ಕೇಂದ್ರಗಳ ಪ್ರಸ್ತಾವನೆ ಸಲ್ಲಿಸಿತು. ದೇಶದಲ್ಲಿ ಕಂಪ್ಯೂಟರ್ ಸಂಸ್ಕೃತಿಯನ್ನು ಪರಿಚಯಿಸು ಕ್ಷಿಪ್ರ ಪರಿವರ್ತನೆ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಉತ್ತೇಜನ ನೀಡುತ್ತ ತಂತ್ರಜ್ಞಾನದ ಕ್ರಾಂತಿಗೆ ದೇಶ ತೊಡಗಿತು.

ಶಿಕ್ಷಣದ ಸಂಪನ್ಮೂಲವನ್ನು ಹೆಚ್ಚಿಸುವ ಬದ್ಧತೆಯಿಂದ ಅಭಿವೃದ್ಧಿಯ ಸೂಚಕವಾಗಿ ಶೈಕ್ಷಣಿಕ ಚಿತ್ರಣವನ್ನು ಉತ್ತಮ ಪಡಿಸುವುದು ಸರ್ಕಾರದ ಕಾಳಜಿಯಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣದ ಯೋಜನೆಯ ವೆಚ್ಚವು ಕನಿಷ್ಠ ರೂ.153 ಕೋಟಿಯಿಂದ (ಒಂದು ಕೋಟಿಯು ಹತ್ತು ಮಿಲಿಯನ್‌ಗೆ ಸಮ) ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ರೂ.19,600 ಕೋಟಿಯವರೆಗೆ ಹೆಚ್ಚಾಗಿದೆ. ಶಿಕ್ಷಣದ ಮೇಲಿನ ವೆಚ್ಚವು ಪ್ರತಿ ಶೇಕಡವಾರು ಜಿಡಿಪಿಯಿಂದ 0.7 (1951–52 ರಲ್ಲಿ), 1998–99 ರಲ್ಲಿ 3.8 ಅಧಿಕವಾಗಿದೆ ಎಂದು ಅರ್ಥ. ಈ ಒಟ್ಟು ಮೊತ್ತದ ಅಧಿಕ ಭಾಗ (62.1%) ಪ್ರಾಥಮಿಕ ಶಿಕ್ಷಣದ ಮೇಲೆ ವ್ಯಯಿಸಲಾಗಿದೆ. ಒಂಬತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣದ ಮೇಲೆ ಹೂಡುವ ವೆಚ್ಚವು ಜಿಡಿಪಿಯ ಸುಮಾರು ಶೇಕಡ 6 ರಲ್ಲಿ ಶೇ.50

Digitised by Bharatavani, CIIL

ಭಾಗವನ್ನು ಪ್ರಾಥಮಿಕ ಶಿಕ್ಷಣಕ್ಕೆ ಹೂಡಲಾಗಿದೆ. ಲಿಂಗ ಮತ್ತು ಸಾಮಾಜಿಕ ವ್ಯತ್ಯಯಗಳ ಸೇತುವಾಗುವಂತೆ ಸರ್ಕಾರದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು, ಶೇಕಡ ಹತ್ತಕ್ಕೂ ಕಡಿಮೆಯಾಗುವಂತೆ ಶಾಲೆಯನ್ನು ಬಿಡುವ ಮಕ್ಕಳ ಪ್ರಮಾಣವನ್ನು ಇಳಿಸುವುದು, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಕಲಿಯುವಿಕೆಯ ಸಾಧನೆಯನ್ನು ಕ್ರಮೇಣ ಶೇಕಡ 25ಕ್ಕೆ ಹೆಚ್ಚಿಸುವ ಭರವಸೆ ಹೊಂದಿದೆ. ಇದರ ಜೊತೆಗೆ 1988 ರಲ್ಲಿ ರಾಷ್ಟ್ರೀಯ ಶಿಕ್ಷಣ ಮಿಷನ್‌ನ್ನು 15 ರಿಂದ 35 ರವರೆಗಿನ ವಯಸ್ಸಿನ ವಯಸ್ಕ ಅನಕ್ಷರಸ್ಥರ ಗುಂಪಿಗೆ ಕಾರ್ಯಾತ್ಮಕ ಸಾಕ್ಷರತೆಯನ್ನು ಕಲಿಸುವ ಗುರಿಯನ್ನು ಹೊಂದಿದೆ.

ಶೇಕಡ 6 ರಷ್ಟು ಜಿಡಿಪಿಯನ್ನು ಶಿಕ್ಷಣಕ್ಕೆ ವಿತರಿಸುವ ಪ್ರಮಾಣ ವಚನವು ಈಡೇರಸದೆ ಉಳಿದುಹೋಗಿದೆ. ವಾಸ್ತವ ವೆಚ್ಚವು ಆ ಸಂಖ್ಯೆಗಿಂತಲೂ ಇನ್ನೂ ಕೆಳಗೆ ಉಳಿದಿದೆ. 1980–81 ರಲ್ಲಿ ಮಾತ್ರ ಅದು ಶೇಕಡ 4 ರ ಸಂಖ್ಯೆಯನ್ನು ತಲುಪಿದೆ ಮತ್ತು 1998–99 ರಲ್ಲಿ 3.7 ರಷ್ಟು ಕೆಳಗಿಳಿಯಿತು. ಶಿಕ್ಷಣದ ಪ್ರಾಮುಖ್ಯವನ್ನು ಎತ್ತರಕ್ಕೆ ಒಯ್ಯುವ ಉದ್ದೇಶದ ಹೊರತು ಕಡಿಮೆ ಹೂಡಿಕೆಯ ಕ್ಷೇತ್ರ ಇದಾಗಿದೆ. ಶೇಕಡ 6ರ ಜಿಡಿಪಿ ಶಿಕ್ಷಣದ ವೆಚ್ಚವು ಬಹು ದೂರದ ಗುರಿಯಾಗಿಯೇ ಉಳಿದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಹಲವು ಸಾಧನೆಗಳನ್ನು ತಳ್ಳಿಹಾಕುವಂತಿಲ್ಲ. ಪ್ರಾಥಮಿಕ ಶಿಕ್ಷಣವು 1950 ರಿಂದ 1994 ರವರೆಗೆ 5 ಪಟ್ಟು ದಾಖಲಾತಿಯನ್ನು ಹೊಂದಿ– 19.2 ಮಿಲಿಯನ್‌ಗಳಿಂದ 108 ಮಿಲಿಯನ್; ಮಾಧ್ಯಮಿಕ ಶಿಕ್ಷಣದಲ್ಲಿ– 15 ಪಟ್ಟು– 4.6 ಮಿಲಿಯನ್‌ಗಳಿಂದ 60.8 ಮಿಲಿಯನ್; ಉನ್ನತ ಶಿಕ್ಷಣದಲ್ಲಿ– 14 ಪಟ್ಟು– 0.36 ಮಿಲಿಯನ್‌ಗಳಿಂದ 5 ಮಿಲಿಯನ್‌ವರೆಗೆ ಬೆಳವಣಿಗೆ ಹೊಂದಿದೆ. ಆದರೆ ಅದೇ ಅವಧಿಯಲ್ಲಿ ಏರುತ್ತಿದ್ದ ಭಾರತೀಯ ಜನಸಂಖ್ಯೆಯ ಈ ಮೂರು ಪಟ್ಟು ಅಧಿಕವಾಗಿ ಬೆಳೆದ ಗಾತ್ರಕ್ಕೆ ಅನುಸಾರವಾಗಿ ಈ ಸಂಖ್ಯೆಯನ್ನು ಕಾಣಬಹುದು. ಹಲವು ಸಾರಿ ವೃದ್ಧಿಯಾದಂತೆ ಕಂಡರೂ ಒಟ್ಟಾರೆಯಾಗಿ ನೋಡುವಾಗ ಶೇಕಡಾವಾರು ಕಡಿಮೆ ಏರಿಕೆಯಾಗಿಯೇ ಇರುತ್ತಿತ್ತು. ಸ್ವಾತಂತ್ರ್ಯದ ಸಮಯದಲ್ಲಿ ಶೈಕ್ಷಣಿಕ ತಳಹದಿಯು ಬಹು ಕಡಿಮೆಯಾಗಿತ್ತು. ಸಾಕ್ಷರತೆಯನ್ನು ಗಮನಿಸಿದರೆ, ಅಂಕಿ ಅಂಶಗಳು ವಿಭಿನ್ನವಾದ ವಿನ್ಯಾಸವನ್ನು ಬಹಿರಂಗಪಡಿಸುತ್ತದೆ. ಈಗಲೂ ಸಾಕ್ಷರತೆಯ ಶೇಕಡಾವಾರು (2001 ರ ಜನಗಣತಿಯ ತಾತ್ಕಾಲಿಕ ಅಂದಾಜನ್ನು ಆಧರಿಸಿ) 70 ರಷ್ಟು ಮಟ್ಟವನ್ನು ಮೀರಿದ್ದರೂ ದೇಶದಲ್ಲಿ ಅನಕ್ಷರಸ್ಥರ ಸಂಖ್ಯೆಯು 300 ಮಿಲಿಯನ್‌ನಷ್ಟು ಬೃಹತ್ ಗಾತ್ರದಲ್ಲಿಯೇ ಉಳಿದಿದೆ. ಇದು ದೇಶದ ವಿಭಜನೆಯ ಸಂದರ್ಭದಲ್ಲಿದ್ದ ಒಟ್ಟು ಜನಸಂಖ್ಯೆಯ 50 ಮಿಲಿಯನ್‌ಗಿಂತಲೂ ಕಡಿಮೆಯೇ ಆಗಿರುತ್ತದೆ. ಆದ್ದರಿಂದ ಅನಕ್ಷರತೆಯ ನಿರ್ಮೂಲನೆಯ ಗುರಿಯು 1947 ರಲ್ಲಿ ಇದ್ದುದಕ್ಕಿಂತಲೂ ಅಧಿಕವಾಗಿದೆ. ಭಾರತ ದೇಶವು ಪ್ರಾಥಮಿಕ ಶಿಕ್ಷಣದ ಸಂಪೂರ್ಣ ಸಾರ್ವತ್ರೀಕರಣ ಗುರಿಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಪರಿಶಿಷ್ಟ ಜಾತಿ/ಬುಡಕಟ್ಟು, ಹಿಂದುಳಿದ ಗುಂಪುಗಳು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಶಾಲೆಯಿಂದ ದೂರವಾಗಿ ಉಳಿದವರು ಅಧಿಕ ಸಂಖ್ಯೆಯಲ್ಲಿದ್ದು, ಮಕ್ಕಳನ್ನು ಉಳಿಸಿಕೊಳ್ಳುವ ಪ್ರಮಾಣವು ದುರ್ಬಲವಾಗಿಯೇ ಉಳಿದಿದೆ. ಭಾರತ ಒಕ್ಕೂಟದ ಎಲ್ಲ ರಾಜ್ಯಗಳು ಉಚಿತ ಅಥವಾ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಇನ್ನೂ ಅಳವಡಿಸಿ ಕೊಂಡಿಲ್ಲ. ಪ್ರವೇಶಾವಕಾಶದಲ್ಲಿ ಅಸಮಾನತೆಯು ಗಾಬರಿ ಹುಟ್ಟಿಸುತ್ತದೆ ಮತ್ತು ನಮ್ಮ ವೈಜ್ಞಾನಿಕ ಮತ್ತು ತಾಂತ್ರಿಕ ಮಾನವ ಶಕ್ತಿ ಗುಣಮಟ್ಟವು ಕಡಿಮೆಯಿರುವುದರಿಂದ ಪ್ರೌಢ ಮತ್ತು ತೃತೀಯ ಹಂತದ ಶಿಕ್ಷಣವು ಕುಸಿತಗೊಂಡಿದೆ. ಏಕೆಂದರೆ ಪ್ರತಿಭಾ ಪಲಾಯನ ಮತ್ತು ಉನ್ನತ ಶಿಕ್ಷಣದ ನಮ್ಮ ಸಂಸ್ಥೆಗಳು ಏರುತ್ತಿರುವ ವಿದ್ಯಾರ್ಥಿ ಸಂಖ್ಯೆಯನ್ನು ಪ್ರವೇಶಕ್ಕೆ ಸೇರಿಸಿಕೊಳ್ಳುವಲ್ಲಿ ಕೇವಲ ಶೇಕಡ 6 ರಷ್ಟು ಸರಿಯಾದ ವಯೋಮಾನದವರೆಗೆ ಅಲ್ಲಿ ಸ್ಥಳ ಲಭಿಸುತ್ತದೆ ಎಂಬುದನ್ನು ಬಿಟ್ಟರೆ ಸಂಸ್ಥೆಗಳ ಸಾಮರ್ಥ್ಯವು ದುರ್ಬಲವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಅಗಾಧವಾದ ಹಿನ್ನಡೆ ಇದೆ. ಪ್ರಚಲಿತ ವ್ಯವಸ್ಥೆಯು ಏರುತ್ತಿರುವ ಶಿಕ್ಷಣದ ಬೇಡಿಕೆಯನ್ನು ಈಡೇರಿಸುವಲ್ಲಿ ಅಸಮರ್ಥವಾಗಿದೆ. ಇಂದು ಶೈಕ್ಷಣಿಕ ವ್ಯವಸ್ಥೆಯು ನಾಲ್ಕು ವಿಧದ ಸ್ಫೋಟಗಳಿಗೆ ಪ್ರತಿಕ್ರಿಯಿಸ ಬೇಕಾಗಿದೆ– ಜನಸಂಖ್ಯೆ, ಜ್ಞಾನ, ತಾಂತ್ರಿಕ ವಿಜ್ಞಾನ ಮತ್ತು ಹೊಸ ಕೌಶಲಗಳನ್ನು ಕಲಿಯುವ ಬೇಡಿಕೆಗಳು. ಜನಸಂಖ್ಯೆಯ ಬದಲಾಗುತ್ತಿರುವ ಶೈಕ್ಷಣಿಕ ಚಿತ್ರಣದಲ್ಲಿ ನಮ್ಮ ಆದ್ಯತೆಗಳ ಪುನರ್ ನಿರ್ಧಾರಣದ ಅಗತ್ಯವಿದೆ. ಹೆಚ್ಚು ಕಾಲ ನಾವು ಅನಕ್ಷರತೆಯ ನಿರ್ಮೂಲನ ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಬಗ್ಗೆ ಮಾತ್ರ ನಿರಂತರವಾಗಿ ಗಮನ ಹರಿಸಲು ಆಗಲಾರದು. ಸಾಕ್ಷರತೆಯ ಪ್ರಮಾಣದ ಏರಿಕೆ ಮತ್ತು ಪ್ರಾಥಮಿಕ ಶಾಲೆಗಳನ್ನು ಮುಗಿಸಿ ಹೊರ ಬರುತ್ತಿರುವ ಮಕ್ಕಳ ಕಾರಣದಿಂದ ಹೊಸ ಬೇಡಿಕೆಗಳು ಉಂಟಾಗಿ ಅವುಗಳನ್ನು ಜಗರೂಕತೆಯಿಂದ ಗಮನ ಹರಿಸ ಬೇಕಾಗಿದೆ. ಉನ್ನತ ಶಿಕ್ಷಣಕ್ಕೆ ಕಡಿಮೆ ಆದ್ಯತೆಯನ್ನು ನೀಡುವ ಹಳೆಯ ಉಪಾಯವು ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಪ್ರಚಲಿತವಿರುವ ಔಪಚಾರಿಕ ಸಂಸ್ಥೆಗಳು ಮತ್ತು ಅನೌಪಚಾರಿಕ ಶಿಕ್ಷಣದ ಕಾರ್ಯಕ್ರಮಗಳ ಜೊತೆಗೆ (ಸಾಂದರ್ಭಿಕವಾಗಿ ಅದೂ ಸಹ 'ಔಪಚಾರಿಕ'ವೇ ಆಗಿ ಪರಿಣಮಿಸಿದೆ, ಎಂದರೆ ಮಾಮೂಲಾಗಿಬಿಟ್ಟಿದೆ), ಬಾಡಿಗೆ ಸಂಸ್ಥೆಗಳು (ಔಪಚಾರಿಕ ಮತ್ತು ಅನೌಪಚಾರಿಕವೆರಡೂ) ಮತ್ತು ಅಂತರ್ಜಾಲದ ವಿವಿದ ಸೈಟ್‌ಗಳ ರೂಪದಲ್ಲಿ ಪರ್ಯಾಯವಾಗಿ ಕಲಿಯುವ ಸೈಟ್‌ಗಳು ಅಭಿವೃದ್ಧಿಗೊಂಡಿವೆ. ಹಲವು ಸಾಮಗ್ರಿ, ಉಪಕರಣಗಳು ಮತ್ತು ರಾಜ್ಯದ ಬೊಕ್ಕಸದ ಒತ್ತಡವನ್ನು ಕಡಿಮೆಗೊಳಿಸುವಂತಜ ವಿವಿಧ ನಿಧಿಯ ಸಂಪನ್ಮೂಲಗಳು ಇದ್ದು– ಇವುಗಳು ಶಿಕ್ಷಣದ ಉಪ ವ್ಯವಸ್ಥೆಯಾಗಿ ಹೆಚ್ಚು ತೆರೆದುಕೊಳ್ಳುತ್ತಿವೆ. ತಂತ್ರಜ್ಞಾನ ಮತ್ತು ಮಾಹಿತಿಗಳ ಕ್ಷೇತ್ರದಲ್ಲಿನ ಕ್ರಾಂತಿಯು ಹೊಸ ಬಗೆಯ ಅನಕ್ಷರತೆಯನ್ನು ಸೃಷ್ಟಿಸುತ್ತಿದೆ. ಉದಾ: ಕಂಪ್ಯೂಟರ್ ಅನಕ್ಷರತೆ (ಅಜ್ಞಾನ) (Incomputeracy); ಈ ಬೇಡಿಕೆಗಳ ಪೂರೈಕೆಗಾಗಿ ನಿರಂತರ ಶಿಕ್ಷಣದ ವಿಷಯಗಳಾಗಿ ಹೊಸ ಸಾಕ್ಷರತೆಯ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.

Digitised by Bharatavani, CIIL

**ಶಿಕ್ಷಣ ಮತ್ತು ಅಭಿವೃದ್ಧಿಯ ನಡುವಣ ಸಂಬಂಧ:** ಶಿಕ್ಷಣತಜ್ಞರು ಮತ್ತು ಅರ್ಥಶಾಸ್ತ್ರಜ್ಞರು ಸಾಮಾನ್ಯವಾಗಿ ದೇಶದ ಅಭಿವೃದ್ಧಿಯಲ್ಲಿ ಅದರ ನಿರೀಕ್ಷಿತ ಪಾತ್ರದ ಕಾರಣಕ್ಕಾಗಿ ಶಿಕ್ಷಣಕ್ಕಾಗಿ ಅಧಿಕ ಹಣವನ್ನು ಹೂಡಬೇಕೆಂದು ಉಪದೇಶಿಸುತ್ತಾರೆ. ಉದಾ: ಜಂಧ್ಯಾಲ ಬಿ.ಜಿ.ತಿಲಕ್‌ರು 'ಪೌರ್ವಾತ್ಯ ಏಶಿಯಾ ದೇಶಗಳಲ್ಲಿ ಶಿಕ್ಷಣವು ಆರ್ಥಿಕ ಅರ್ಥದಲ್ಲಿ ಪಾತ್ರವಹಿಸಿದೆ. ಅದೇ ರೀತಿಯಲ್ಲಿ, ದಕ್ಷಿಣ ಏಶಿಯಾ ರಾಷ್ಟ್ರಗಳಲ್ಲಿ ಕಡಿಮೆ ಪ್ರಮಾಣದ ಸಾಕ್ಷರತೆಯಿಂದಾಗಿ ಬಡತನವು ಅಧಿಕಗೊಂಡಿದೆ' ಎಂದು ದೃಢಪಡಿಸುತ್ತಾರೆ. ಏಶಿಯಾದ ದೇಶಗಳಲ್ಲಿನ ಅಭಿವೃದ್ಧಿಯಲ್ಲಿ ಶಿಕ್ಷಣವು ವಹಿಸಿದ ಪಾತ್ರದ ಬಗ್ಗೆ ತಮ್ಮ ವಿಮರ್ಶೆಯನ್ನು ಆಧರಿಸಿ ಅವರು ಈ ಕೆಳಕಂಡ ತೀರ್ಮಾನಗಳಿಗೆ ಬಂದಿದ್ದಾರೆ:

- ಶಿಕ್ಷಣವು ಭೌತಿಕ ಬಂಡವಾಳದ ಹೂಡಿಕೆಗಿಂತ ಹೆಚ್ಚಾಗದಿರುವಂತೆ ಶಿಕ್ಷಣದ ಪ್ರತಿಫಲವು ನ್ಯಾಯಯುತವಾಗಿ ಹೋಲಿಕೆಯಾಗುವಂತೆ ಶಿಕ್ಷಣವು ಏಶಿಯಾ ದೇಶಗಳಲ್ಲಿ ಆರ್ಥಿಕ ಬೆಳವಣಿಗೆಗೆ ಹೆಚ್ಚು ಮಹತ್ವದ ಕೊಡುಗೆಗಳನ್ನಿತ್ತಿದೆ.
- ಬಡತನವನ್ನು ಕಡಿಮೆಗೊಳಿಸುವಲ್ಲಿ ಮತ್ತು ಆದಾಯ ಹಂಚಿಕೆಯನ್ನು ಉತ್ತಮಪಡಿಸುವಲ್ಲಿ ಶಿಕ್ಷಣದ ಕೊಡುಗೆಯು ಸಹಾ ಮಹತ್ವದ್ದಾಗಿದೆ, ಕೆಲವು ವೇಳೆ ಉನ್ನತ ಆದಾಯ ಗುಂಪುಗಳಿಂದ ಕಡಿಮೆ ಆದಾಯ ಗುಂಪುಗಳಿಗೆ ಸಂಪನ್ಮೂಲಗಳನ್ನು ವರ್ಗಾಯಿಸಲಾಗುತ್ತಿದೆ.
- ಬೆಳವಣಿಗೆ ಮತ್ತು ಆದಾಯ ವಿತರಣೆಗಳೆರಡಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಿಕ್ಷಣದ ಕೊಡುಗೆಯು ಶಿಕ್ಷಣದ ಉನ್ನತ ಹಂತಗಳಿಗಿಂತ ಹೆಚ್ಚು ಮಹತ್ವದ್ದಾಗಿದೆ.
- ಕಡೆಗೆ ಆರ್ಥಿಕೇತರ ಸಂದರ್ಭಗಳ ಎಂದರೆ ಭೌತಿಕ ಉತ್ಪಾದಕತೆಯ ಸಂದರ್ಭಗಳಿಂದ ಆಳತೆ ಮಾಡಿದರೆ ಕೃಷಿಯಲ್ಲಿ ಹೇಳುವುದಾದರೆ ಶಿಕ್ಷಣ ಮತ್ತು ಬೆಳವಣಿಗೆಯ ನಡುವಣ ಸಂಬಂಧಗಳು ಧನಾತ್ಮಕ ಹಾಗೂ ಮಹತ್ವ ಪೂರ್ಣವಾಗಿದೆ.
- ಪ್ರಜಾಪ್ರಭುತ್ವವನ್ನು ಬಲಪಡಿಸಲು ಮತ್ತು ರಾಜಕೀಯ ಸುಭದ್ರತೆಯನ್ನು, ಜನಸಂಖ್ಯೆಉ ಅಭಿವೃದ್ಧಿ, ಆರೋಗ್ಯ ಮತ್ತು ಪೋಷಕಾಂಶ ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಉತ್ತಮವಾಗಿಸಲು ಶಿಕ್ಷಣದ ಕೊಡುಗೆಯ ಮಹತ್ವದ್ದಾಗಿದೆ.
- ಜನಸಂಖ್ಯೆಯಲ್ಲಿ ಪುರುಷರು ಮತ್ತು ಮೇಲ್ವರ್ಗದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಶಿಕ್ಷಣಕ್ಕೆ ಹೂಡಿರುವ ವೆಚ್ಚವನ್ನು ಹೋಲಿಸಿದರೆ ಮಹಿಳೆಯರು ಮತ್ತು ದುರ್ಬಲ ವರ್ಗದವರ ಶಿಕ್ಷಣಕ್ಕೆ ಮಾಡುರುವ ವೆಚ್ಚವು ಅಧಿಕವಾಗಿದೆ. (ತಿಲಕ್ 1992:182)

ಆದಾಗ್ಯೂ ತಿಲಕ್‌ರು ಮಾಡಿರುವ ವಾದವು ಬಹುಪಾಲು ಯೋಗ್ಯವಾಗಿದ್ದು, ಅನೇಕ ವಿದ್ವಾಂಸರು ಮತ್ತು ಯೋಜಕರು ಶಿಕ್ಷಣವನ್ನು ಕುರಿತು ಪುನರ್‌ಯೋಚಿಸಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯ ಪಡುತ್ತಾರೆ. ಐವಾನ್ ಇಲ್ಲಿಷ್ 1970 ರಲ್ಲಿಯೇ ತನ್ನ 'ಸಮಾಜವನ್ನು 'ಶಾಲಾರಹಿತಗೊಳಿಸುವುದು' (Deschooling Society)ಎಂಬ ಹೆಸರಿನ ಗ್ರಂಥದಲ್ಲಿ ಪರಕಾಷ್ಠೆಯ ಅಭಿಪ್ರಾಯವನ್ನು ಹೊಂದಿದ್ದಾನೆ. ಪುಸ್ತಕದ ಶೀರ್ಷಿಕೆಯು ಸೂಚಿಸುವಂತೆ ಶಾಲಾ ವ್ಯವಸ್ಥೆಯ ಸ್ಥಾಪನೆಯನ್ನು ನಿಲ್ಲಿಸುವತ್ತ ಅವರು ಆಸಕ್ತಿ ತೋರಿದ್ದಾರೆ. ಏಕೆಂದರೆ ಶಾಲೆಯಲ್ಲಿರುವ ವಿದ್ಯಾರ್ಥಿಗಳು ಕಲಿಯುವಿಕೆ ಮತ್ತು ಬೋಧನೆ, ಶಿಕ್ಷಣ ಮತ್ತು ಗ್ರೇಡ್ ಮುಂಬಡ್ತಿ, ಸ್ಪರ್ಧಾತ್ಮಕವಾದ ಡಿಪ್ಲೊಮಾ ಮತ್ತು ಯಾವುದಾದರೂ ಹೊಸತನ್ನು ಸಮರ್ಥವಾಗಿ ಹೇಳುವ ನಿರರ್ಗಳತೆಯ ಕಲಿಕೆ ಇವುಗಳ ನಡುವಣ ಗೊಂದಲಕ್ಕೆ ಒಳಗಾಗಿದ್ದಾರೆ. ಇಲ್ಲಿಷ್‌ರ ಕಲ್ಪನೆಯ ಶಾಲಾವಸ್ಥೆಯು "ಮೌಲ್ಯದ ಸ್ಥಳದಲ್ಲಿ ಸೇವೆಯನ್ನು ಮಾನ್ಯಮಾಡುತ್ತದೆ, ಆರೋಗ್ಯ ರಕ್ಷಣೆ ಎಂದರೆ ವೈದ್ಯಕೀಯ ಉಪಚಾರವೆಂದು, ಸಮುದಾಯ ಜೀವನದ ಉನ್ನತಿ ಎಂದರೆ ಸಮಾಜಸೇವೆ ಎಂದು, ಸುರಕ್ಷತೆ ಎಂದರೆ ಪೋಲೀಸರ ರಕ್ಷಣೆ ಎಂದು, ದೇಶದ ಸುಭದ್ರತೆ ಎಂದರೆ ಮಿಲಿಟರಿ ಸಮತೋಲನ ಎಂದು ತಪ್ಪಾಗಿ ತಿಳಿಯಲಾಗಿದೆ. ಉತ್ಪಾದಕ ಕೆಲಸಕ್ಕಾಗಿ ತೀವ್ರ ಓಟ ನಡೆಯುತ್ತಿದೆ." (ಇಲ್ಲಿಷ್ 1973:9)

ಭೌತಿಕ ಮಾಲಿನ್ಯವು ಅನಿವಾರ್ಯವಾಗಿ ಮೌಲ್ಯಗಳ ಸಾಂಸ್ಥೀಕರಣ, ಸಾಮಾಜಿಕ ಧ್ರುವೀಕರಣ ಮತ್ತು ಮನಶ್ಶಾಸ್ತ್ರೀಯ ನಿರ್ವೀರ್ಯತೆ; ಆಧುನೀಕೃತ ದುಃಖ ಮತ್ತು ವಿಶ್ವದ ಅವನತಿಯ ವಿಧಾನದ ಮೂರು ಆಯಾಮಗಳಾಗಿವೆ ಎಂದು ಇಲ್ಲಿಷ್ ಅಭಿಪ್ರಾಯ ಹೊಂದಿದ್ದಾರೆ. ಅಭಿವೃದ್ಧಿಗಾಗಿ ಬಳಕೆಯಲ್ಲಿರುವ ಯುಕ್ತಿಗಳಲ್ಲಿ ಅನುತ್ಪಾದಕತೆಯ ಪಾತ್ರವನ್ನು ವ್ಯಾಖ್ಯಾನಿಸುತ್ತಾ ಇಲ್ಲಿಷ್ ಮುಂದುವರಿದು ಹೇಳುತ್ತಾರೆ: "ಸಾಂಸ್ಥಿಕ ಉತ್ಪನ್ನಗಳಿಗೆ ನಿರಂತರವಾಗಿ ಸಾಂಸ್ಥಿಕ ಗುರಿಗಳು ವಿರುದ್ಧವಾಗಿ, ಅಡ್ಡಿಯಾಗಿ, ಬಡತನ ಕಾರ್ಯಕ್ರಮಗಳು ಹೆಚ್ಚು ಬಡತನವನ್ನು ಉತ್ಪಾದಿಸುತ್ತವೆ. ಏಶಿಯಾದ ವಿಯೆಟ್‌ಕಾಂಗ್‌ನ ಯುದ್ಧ, ಅನಭಿವೃದ್ಧಿಗೆ ತಾಂತ್ರಿಕ ಹೆಚ್ಚು ಸಹಾಯ, ಜನನ ನಿಯಂತ್ರಣ ಕ್ಲಿನಿಕ್‌ಗಳು ಉಳಿಯುವಿಕೆಯ ಪ್ರಮಾಣವನ್ನು ವೃದ್ಧಿಸುತ್ತವೆ. ಮತ್ತು ಜನಸಂಖ್ಯೆಯನ್ನಿ ವೃದ್ಧಿಗೊಳಿಸುತ್ತದೆ. ಶಾಲೆಗಳು ಹೆಚ್ಚು ಶಾಲೆಯನ್ನು ಬಿಡುವವರನ್ನು ಉತ್ಪಾದಿಸುತ್ತದೆ. ಮತ್ತು ಒಂದು ವಿಧವಾದ ಮಾಲಿನ್ಯದ ನಿವಾರಣೆಯು ಸಾಮಾನ್ಯವಾಗಿ ಮತ್ತೊಂದನ್ನು ವೃದ್ಧಿಸುತ್ತದೆ." (ಇಲ್ಲಿಷ್ 1973:112)

ಸುರೇಶ್‌ಚಂದ್ರ ಶುಕ್ಲಾ ಮತ್ತು ರೇಖಾ ಕೌಲ್ ಅವರು ಶೈಕ್ಷಣಿಕ ವಿಕಾಸ ಮತ್ತು ಅಪವಿಕಾಸ (Education Development and Under development) ಎಂಬ ಸಂಪುಟದ ಮುನ್ನುಡಿಯಲ್ಲಿ ಇದೇ ಬಗೆಯ ಕಾಳಜಿಯನ್ನು ತೋರಿಸಿದ್ದಾರೆ. ಅವರು ಹೀಗೆ ಬರೆಯುತ್ತಾರೆ:

"1970ರ ಪೂರ್ವದಲ್ಲಿ ಸಮಾನತೆಯ ಆಲೋಚನೆಯು ಒಂದು ಸಾಮಾಜಿಕ ಗುರಿಯಾಗಿ ವ್ಯಾಪಕವಾಗಿ ಅಂಗೀಕೃತವಾಯಿತು. ಶಿಕ್ಷಣದ ಮೇಲಿನ ಈ ನಂಬಿಕೆಯು ನಿಯಮಾನುಸಾರವಾದ

Digitised by Bharatavani, CIIL

ಯಥಾದೃಷ್ಟಿಯಿಂದ ಕೂಲಂಕಶ ಪರಿಶೀಲನೆಗೆ ಒಳಗಾಯಿತು. ಮತ್ತು ಅದು ಅಸಮಾನತೆಯನ್ನು ಬೆಳೆಸುತ್ತದೆ ಎಂಬ ಅಭಿಪ್ರಾಯವೂ ಬೆಳೆಯಿತು. ಆಗ ಸಾಮಾಜಿಕ ಪರಿವರ್ತನೆಯ ವೇಗವರ್ಧಕವಾಗಿ ಶಿಕ್ಷಣದ ಪರಿಕಲ್ಪನೆಯನ್ನೂ ಗಂಭೀರವಾಗಿ ಪ್ರಶ್ನಿಸಲಾಯಿತು; ಭಾಗವಹಿಸಲಾಗುವ ಸಂರಚನೆಗಳನ್ನು ಹೊಂದುವ, ಬಿಡುಗಡೆಯನ್ನು ಸಾಧಿಸುವ ಮತ್ತು ದಮನವನ್ನು ನಿರ್ಮೂಲನ ಮಾಡುವುದಕ್ಕೆ ಶಿಕ್ಷಣ ನೇರವಾಗಿ ಸಂಬಂಧಿಸಿದೆ ಎಂಬ ಅಭಿಪ್ರಾಯವನ್ನು ಹೊಂದುವ ಅಗತ್ಯವಿಲ್ಲ ಎಂದು ತಿಳಿಯುವಲ್ಲಿ ಹೆಚ್ಚು ಕಾಲ ಹಿಡಿಯಲಿಲ್ಲ." (ಶುಕ್ಲಾ ಮತ್ತು ಕೌಲ್ 1998:12)

ಆರ್ಥಿಕ ಅಭಿವೃದ್ಧಿ ಅಥವಾ ರಾಜಕೀಯ ಅಭಿವೃದ್ಧಿಗೆ ಶಿಕ್ಷಣವು ಅತ್ಯವಶ್ಯ ಎಂಬ ವಿಷಯ ವಿವಾದಕ್ಕೆ ಒಳಪಟ್ಟಿದೆ. ಉದಾ: ಸಂಯುಕ್ತ ರಾಷ್ಟ್ರಗಳ ವಿಷಯವನ್ನೆ ತೆಗೆದುಕೊಳ್ಳಿ. 1890 ರಲ್ಲಿ ಶೇಕಡ ಐದಕ್ಕಿಂತ ಕಡಿಮೆ ಅಮೇರಿಕನ್ ತರುಣರು ಸೆಕೆಂಡರಿ ಸ್ಕೂಲ್ ವಿದ್ಯೆಯನ್ನು ಮುಗಿಸಿದರು. ಆದರೂ ಅಂದಿನಿಂದಲೂ ಅದು ಅಧಿಕ ಆದಾಯದ ಮತ್ತು ಆಧುನಿಕ ರಾಷ್ಟ್ರಗಳಲ್ಲಿ ಒಂದಾಗಿದೆ. ಮತ್ತೊಂದು ಉದಾ: 1959 ರಲ್ಲಿ ರಶಿಯಾದ ಕೆಲಸಗಾರನೊಬ್ಬನ ಸಾಮಾನ್ಯ ಸರಾಸರಿ ಶಾಲಾ ಶಿಕ್ಷಣದ ಅವಧಿ ಕೇವಲ 4 ವರ್ಷಗಳಾಗಿದ್ದರಷ್ಟೇ ಸಾಕಾಗಿತ್ತು. ಆದಾಗ್ಯೂ ಭಾರತಕ್ಕಿಂತ ರಶಿಯಾದಲ್ಲಿ ಕೈಗಾರಿಕೀಕರಣದ ದರ್ಜೆಯು ಅಧಿಕವಾಗಿತ್ತು. ಪೌರ್ವಾತ್ಯ ಯುರೋಪಿನಲ್ಲಿ ಕಮ್ಯೂನಿಸಂನ ಅವನತಿಯ ನಂತರ ಬಡತನವು ತಕ್ಷಣ ಅಧಿಕಗೊಂಡಿತು. ಆ ಪ್ರಾಂತ್ಯದ ಒಂದು ಅಧ್ಯಯನ ಸೂಚಿಸಿರುವಂತೆ "ತೃತೀಯ ಜಗತ್ತಿನ ದೇಶಗಳಂತೆ ಅಲ್ಲದೆ ವಾಸ್ತವವಾಗಿ ಸ್ಥಿತ್ಯಂತರದಲ್ಲಿರುವ ದೇಶಗಳಲ್ಲಿ ಉದ್ಯೋಗಸ್ಥ ರಾಗಿರುವವರನ್ನು ಬಡತನವು ಪ್ರಭಾವಗೊಳಿಸಿದೆ. ಈ ದೇಶಗಳಲ್ಲಿನ ಹೊಸ ಬಡವರ ಸಂಖ್ಯೆಯು ಮೊಳಕೆಯೊಡೆಯ ಲಾರಂಭಿಸಿತ್ತು. ಅವರೆಲ್ಲಾ ನಿರುದ್ಯೋಗಿಗಳೂ ಅಲ್ಲ ಎಲ್ಲರೂ ಅನಕ್ಷರಸ್ಥರೂ ಅಲ್ಲ. ಈ ಎರಡೂ ವೈಲಕ್ಷಣಗಳು ಬಡತನದೊಡನೆ ಬೆಸುಗೆ ಹಾಕಿಕೊಂಡಿವೆ. ಬಡತನದ ಬಗ್ಗೆ ಇರುವ ಸಾಮಾನ್ಯ ಸಿದ್ಧಾಂತಗಳು ಅಂತಹ ಚಿತ್ರಣವು ಪೋಷಿಸಿಕೊಂಡಿರುವ ವಿಧಿನಿಯಮಗಳನ್ನು, ಬಡವರನ್ನು ಶಿಕ್ಷಿತರನ್ನಾಗಿಸುವುದಕ್ಕೆ ಉದ್ಯೋಗವನ್ನು ನಿರ್ಮಿಸುವುದಕ್ಕೆ ಸವಾಲುಗಳನ್ನು ಹಾಕುತ್ತದೆ." (ಅಟಿಲ್ 1999:26, 27)

ಈ ವಿಷಯಗಳು ಶಿಕ್ಷಣದ ಮಹತ್ವವನ್ನು ನಿರಾಕರಿಸುವುದಿಲ್ಲ. ಅವುಗಳು ಬಡತನ ಮತ್ತು ಶಿಕ್ಷಣ, ಬಡತನ ಮತ್ತು ನಿರುದ್ಯೋಗ ಹಾಗೂ ಶಿಕ್ಷಣ ಮತ್ತು ನಿರುದ್ಯೋಗಗಳ ನಡುವೆ ಇರುವ ಆರೋಪಿತ ಸಂಬಂಧದ ಬಗ್ಗೆ ಸವಾಲು ಹಾಕುತ್ತವೆ. ಈ ಸಂಬಂಧಗಳನ್ನು ಹೆಚ್ಚು ಕಾಲ ಪರಿಗಣಿಸಲು ಸಾಧ್ಯವಿಲ್ಲ. ರಾಜಕೀಯ ಭಾಗವಹಿಸುವಿಕೆಯ ಬಗ್ಗೆ ಅದನ್ನೇ ಹೇಳುವಲ್ಲಿ ಅದನ್ನು ರಾಜಕೀಯ ಅಭಿವೃದ್ಧಿಯ ಸೂಚನೆ ಎಂದು ಹೇಳಬಹುದು. ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನವು ಶೇಕಡವಾರು ಸಂಖ್ಯೆಯು ಇದಕ್ಕೆ ಉತ್ತಮ ನಿದರ್ಶನವಾಗಿ ಕಂಡು ಬರುತ್ತದೆ. 1952 ರ ಚುನಾವಣೆಯಲ್ಲಿ 45.7 ರಷ್ಟು ಅಧಿಕವಾಗಿದೆ, 1961–62 ರಲ್ಲಿ ನಗರೀಕರಣವು 18% ರಷ್ಟು ಇದ್ದಾಗ, ಸಾಕ್ಷರತೆಯು 24%, ಪತ್ರಿಕೆಗಳನ್ನು ಓದುವವರು ಶೇಕಡ 1.20 ಮತ್ತು ಸ್ವಂತ ರೇಡಿಯೋ ಹೊಂದಿರುವವರು ಶೇಕಡ 0.46, ಮತದಾನದಲ್ಲಿ ಭಾಗವಹಿಸದ ಮತದಾರರು ಒಟ್ಟು 55.4% (ಅತಲ್ 1981:209). ಇದಕ್ಕೆ ಹೋಲಿಸಿದರೆ ಸಂಯುಕ್ತ ರಾಷ್ಟ್ರಗಳ ಅಧಿಕ ಶಿಕ್ಷಿತರಿರುವ ಸಮಾಜದಲ್ಲಿ ಮತದಾನವು ಶೇಕಡ 50ಕ್ಕೂ ಕಡಿಮೆಯಾಗಿರುತ್ತದೆ. ಸಂವಹನ ತಂತ್ರಜ್ಞಾನವು ಬಂದಾರಭ್ಯ ಕಲಿಯುವಿಕೆಯು ಅಕ್ಷರಗಳ ಜ್ಞಾನವಿಲ್ಲದಿದ್ದರೂ ಸಾಧ್ಯವಿದೆ ಎಂದು ಹೇಳಬಹುದು. ಪ್ರಸ್ತುತ ದಿನಮಾನಗಳ ಸಂದರ್ಭದಲ್ಲಿ ಸಾಕ್ಷರತೆಯು ಇತರೆ ಎಲ್ಲಾ ಕ್ಷೇತ್ರಗಳಿಗೂ ಸಂಬಂಧಿಸಿದಂತೆ ಕಂಪ್ಯೂಟರೀಕರಣ ಮತ್ತು ಅಕ್ಷರಗಳನ್ನು ತಿಳಿಯುವುದರಿಂದ ಕಲಿಯುವಿಕೆಯನ್ನು ಬೇರ್ಪಡಿಸುವು ದನ್ನು ಒಳಗೊಂಡಂತೆ ಇರುವುದರಿಂದ ಮರುವ್ಯಾಖ್ಯಾನದ ಅಗತ್ಯವಿದೆ.

ವಿಶ್ವಾದ್ಯಂತ ಶಿಕ್ಷಣದ ಅಭಿವೃದ್ಧಿಯ ಜೊತೆಜೊತೆಗೆ ಸಾಮಾನ್ಯವಾಗಿ ನೈತಿಕ ಮೌಲ್ಯಗಳು ಕ್ಷೀಣಿಸುತ್ತಿರುವುದನ್ನು ಹೇಳಲೇ ಬೇಕಾಗಿದೆ. ಹಿಂಸೆಯು ಅಧಿಕಗೊಳ್ಳುತ್ತಿರುವುದು, ಧಾರ್ಮಿಕ ಮೂಲಭೂತವಾದವು ಏರುತ್ತಿರುವುದು, ಎಲ್ಲ ವಿಧವಾದ ಪ್ರಾಂತೀಯ ಅನನ್ಯತೆಗಳ ಪುನರುಜ್ಜೀವನ ಪುನರುತ್ಪನ್ನಗೊಂಡು ತಲೆಯೆತ್ತಿರುವುದು, ನೈತಿಕ ಮೌಲ್ಯಗಳಲ್ಲಿ ಕುಸಿತವಾಗಿರುವುದನ್ನು, ಮುಖ್ಯವಾಗಿ ತಿಳಿಸಬೇಕಾಗಿದೆ. ಈ ಎಲ್ಲಾ ಪ್ರಕರಣಗಳಲ್ಲಿ ಪ್ರಮುಖವಾಗಿ ಪಾತ್ರ ವಹಿಸುತ್ತಿರುವವರೂ ಶಿಕ್ಷಕರೇ ಆಗಿರುವಿದರಿಂದ ಈ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡುವಲ್ಲಿ ಶಿಕ್ಷಣದ ಪ್ರಸ್ತುತತೆಯ ವಿಷಯ ಮತ್ತೆ ಏಳುತ್ತದೆ. ಪುನಃ ಇದಕ್ಕೆ ಉತ್ತರವು ಶಿಕ್ಷಣದ ನಿರಾಕರಣವಲ್ಲ. ಆದರೆ ಅದರ ಪಾತ್ರದ ಮೌಲ್ಯಮಾಪನವೇ ಆಗಿರುತ್ತದೆ.

1996 ರಲ್ಲಿ ಆಂಡರ್‌ಸನ್ ಬರೆಯುತ್ತಾ ಈ ಕೆಳಗಿನಂತೆ ಪ್ರಸ್ತಾಪಿಸಿದ್ದಾನೆ:

"ಯಾವುದೇ ದೇಶವು ರಭಸವಾಗಿ ಅಥವಾ ವೇಗವಾಗಿ ಬಡತನದಿಂದ ಶ್ರೀಮಂತಿಕೆಯೆಡೆಗೆ ಅಥವಾ ಹಿಂದುಳಿದಿರುವಿಕೆಯಿಂದ ಆಧುನೀಕರಣದೆಡೆಗೆ ಚಲಿಸಲಾಗುವುದಿಲ್ಲ. ಒಂದು ದೇಶವು ಒಂದು ಆರ್ಥಿಕ ಮಟ್ಟದಿಂದ ಮುಂದಿನದಕ್ಕೆ ಚಿಕ್ಕದಾಗಿ, (ನಿಂತು ಹತ್ತುತ್ತ ಮೆಟ್ಟಿಲುಗಳಗೆ) (ಹಂತಹಂತವಾಗಿ) ನೆಗೆಯುತ್ತದೆ. ದೀರ್ಘವಾದ ಅಭಿವೃದ್ಧಿ ಸಣ್ಣ ಸಣ್ಣ ಹಂತಗಳ ಒಂದು ಮಾಲಿಕೆಯಾಗಿದೆ. ಪ್ರತಿ ಅಲ್ಪಾವಧಿಯಲ್ಲಿಯೂ ಶಿಕ್ಷಣವು ಆದಾಯ ಮಟ್ಟದಲ್ಲಿ ಏರುವಿಕೆಗೆ ಕಾರಣವಾಗುತ್ತದೆಂದು ಅಥವಾ ಆದಾಯ ಏರಿಕೆಯ ನಂತರ ಬರುತ್ತದೆಯೆ? ಎಂಬ ಪ್ರಶ್ನೆ ಇದೆ. ಆದಾಯದಲ್ಲಿ ಅಧಿಕವಾಗುವಿಕೆಯು ಶಾಲೆಗಳಲ್ಲಿ ಅಧಿಕವಾಗುವಿಕೆಯನ್ನು ಅನುಸರಿಸುತ್ತಿದೆ ಎಂಬ ಉತ್ತರವು ಕಾಣ ಬರುತ್ತಲಿದೆ. ಆದರೆ ಒಂದು ಮತ್ತೊಂದನ್ನು ಪ್ರಭಾವಗೊಳಿಸುತ್ತದೆ. ನಾವು ಬದಲಾವಣೆಯ ವಿಧಾನವನ್ನು ಎಲ್ಲಿಂದ ನೋಡಬೇಕೆಂಬುದರ ಆರಂಭದಲ್ಲಿ ನೋಡುವುದಾದರೆ ಶಾಲಾವಸ್ಥೆಯೇ ಕಾರಣ ಅಥವಾ ಫಲಿತಾಂಶ ಎಂದು ಕಾಣ ಬಹುದಾಗಿದೆ." (ಆಂಡರ್‌ಸನ್ 1966:76–77)

Digitised by Bharatavani, CIIL

"ಶಾಲೆಯಲ್ಲಿ ಕಲಿಯುವುದು ಆಧುನೀಕರಣಕ್ಕೆ ಅಗತ್ಯವಾದ ಒಟ್ಟು ಶಿಕ್ಷಣದ ಕೇವಲ ಒಂದು ಭಾಗ ಮಾತ್ರವಾಗಿದೆ." (ಅದೇ 78). ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸುವಾಗ ಕಲಿಯುವಿಕೆಯ ಇತರ ರೂಪಗಳನ್ನು ಗುರುತಿಸಬೇಕಾದ ಅಗತ್ಯವಿದೆ. ಜಾಗತೀಕರಣದ ಹೊಸ ಸಂದರ್ಭಗಳಲ್ಲಿ ಶಿಕ್ಷಣ ವ್ಯವಸ್ಥೆಯು ಉತ್ತರಿಸುವಂತೆ ಹೊಸಹೊಸದಾದ ಬೇಡಿಕೆಗಳು ಉದ್ಭವವಾಗಲಿವೆ. ಅಂತಹ ಬೇಡಿಕೆಗಳು ಬದಲಾಣೆಯನ್ನುಂಟು ಮಾಡುತ್ತವೆ ಮತ್ತು ಶಿಕ್ಷಣದ ಅಭಿವೃದ್ಧಿಗೆ ಪ್ರಭಾವ ಬೀರುತ್ತವೆ. ಮತ್ತು ಬೇಡಿಕೆಗಳನ್ನು ಪೂರೈಸಲು ವಿದ್ಯಾಸಂಸ್ಥೆಗಳಿಂದ ಪದವಿಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ನಿರಂತರವಾಗಿ ತಮ್ಮ ಕೌಶಲಗಳನ್ನು ನವೀಕರಿಸಿಕೊಳ್ಳಬೇಕಾದ ಹಾಗೂ ಹೊಸ ಜ್ಞಾನದ ಉತ್ಪಾದನೆಯ ವಿಧಾನದಲ್ಲಿ ಭಾಗವಹಿಸಬೇಕಾದ ಸವಾಲನ್ನು ಎದುರಿಸಲಿದ್ದಾರೆ.

ಶಿಕ್ಷಣವು ವಿಶ್ವಾದ್ಯಂತ ಆಸಕ್ತಿಯ ವಿಷಯವಾಗುತ್ತಿದೆ ಮತ್ತು ವಿಮರ್ಶಾತ್ಮಕ ಪರಿಶೋಧನೆಯ ಶೈಕ್ಷಣಿಕ ತತ್ವಶಾಸ್ತ್ರ ಮತ್ತು ಮೌಲ್ಯಗಳೆರಡರ ನಡುವೆ ವಿವಾದಗಳಿವೆ. ಶೈಕ್ಷಣಿಕ ವ್ಯವಸ್ಥೆಯ ಪರಿಣಾಮಶೀಲತೆಯು ಪ್ರಶ್ನಾರ್ಹವಾಗಿದೆ. ವಾಸ್ತವವಾಗಿ ನಂಬಿಕೆಯ ಸಂದಿಗ್ಧತೆಯ ಸಮಸ್ಯೆ ಇದೆ. ಶಿಕ್ಷಣವು ನಿರ್ವಹಿಸುಬಹುದಾದ 'ಕಾರ್ಯಗಳ' ಬಗ್ಗೆ ಪ್ರಶ್ನಾರ್ಥಕ ಚಿಹ್ನೆಗಳನ್ನು ಇಡುತ್ತಿದ್ದರೂ ಶಿಕ್ಷಣದ ಅವಶ್ಯಕತೆಯ ಬಗ್ಗೆ ಯಾರಿಗೂ ವಿವಾದವಿಲ್ಲ.

**ಮೂಲ: ಯೋಗೇಶ್ ಅಟಲ್**

**ಅನು: ಪ್ರೊ. ರತ್ನಮ್ಮ ಕೆ. ಎಸ್.**

## ಶಿಕ್ಷಣ ಮತ್ತು ಆರ್ಥಿಕ ವ್ಯವಸ್ಥೆ

ಅರ್ಥ ವ್ಯವಸ್ಥೆಯ ಕಡೆಗೆ ಬೆಳಕು ಚೆಲ್ಲುವ ತತ್ವಗಳು ಮತ್ತು ತಂತ್ರಗಳ ಒಂದು ಗುಂಪನ್ನು ಆರ್ಥಿಕ ವ್ಯವಸ್ಥೆ ಎನ್ನಬಹುದಾಗಿದೆ. ಇಂತಹ ವ್ಯವಸ್ಥೆಯು ಅನೇಕ ವ್ಯಕ್ತಿಗಳನ್ನು ಮತ್ತು ಸಂಸ್ಥೆಗಳನ್ನು ಒಳಗೊಂಡಿದ್ದು, ಅವರುಗಳು ಉತ್ಪಾದಿಸುವಂತಹ ಸಂಪನ್ಮೂಲಗಳೊಂದಿಗೆ ಇವರುಗಳ ಸಂಬಂಧವನ್ನು ತಿಳಿಯಪಡಿಸುತ್ತದೆ.

ಈ ರೀತಿಯ ಸಮಕಾಲೀನ ಆರ್ಥಿಕ ವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆ, ಸಮಾಜವಾದೀ ವ್ಯವಸ್ಥೆ ಮತ್ತು ಮಿಶ್ರ ಆರ್ಥಿಕತೆಯನ್ನು ಒಳಗೊಂಡಿರುತ್ತದೆ. ಆರ್ಥಿಕ ವ್ಯವಸ್ಥೆ ಎನ್ನುವುದು ಈ ಪ್ರಕಾರದ ವ್ಯವಸ್ಥೆಗಳ ಸಮಗ್ರ ಅಧ್ಯಯನವನ್ನು ಮಾಡುತ್ತದೆ.

ಮನುಷ್ಯರ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಒಂದು ನಿರ್ದಿಷ್ಟ ಸಮಾಜವು ಸಂಘಟಿಸುವ ಮತ್ತು ನಿರ್ಧರಿಸುವ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಕಾರ್ಯವಿಧಾನಗಳು ಮತ್ತು ವ್ಯವಸ್ಥೆಯನ್ನು ಆರ್ಥಿಕ ವ್ಯವಸ್ಥೆ ಎನ್ನುತ್ತೇವೆ.

ಇರುವ ಒಂದು ಆರ್ಥಿಕ ವ್ಯವಸ್ಥೆಯನ್ನು ಬದಲಾವಣೆ ಮಾಡುವ ಸಂದರ್ಭದಲ್ಲಿ ಪ್ರತಿಯೊಂದು ಸಮಾಜವೂ ಬೇರೆಯ ಉದ್ದೇಶಗಳನ್ನು ಹೊಂದುವುದರ ಜೊತೆಗೆ ಪರ್ಯಾಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಮುಂದಾಗುತ್ತದೆ. ಆ ಉದ್ದೇಶಗಳು ಅಪೇಕ್ಷಿತವಾದುವುಗಳಾಗಿರಬಹುದು. ಅವುಗಳೆಂದರೆ ಬೆಳವಣಿಗೆ, ಸಾಮರ್ಥ್ಯ ಬೆಳವಣಿಗೆ, ಆರ್ಥಿಕ ಸಮಾನತೆ ಮತ್ತು ಆರ್ಥಿಕ ಸ್ವಾತಂತ್ರ್ಯ.

ಆರ್ಥಿಕ ವ್ಯವಸ್ಥೆಯು ಸಮಾಜದ ಒಂದು ಅವಿಭಾಜ್ಯ ಅಂಗವೆಂದು ಪರಿಗಣಿಸಲ್ಪಡುತ್ತದೆ. ಆರ್ಥಿಕ ವ್ಯವಸ್ಥೆಗೂ ಇತರ ವ್ಯವಸ್ಥೆಗಳಾದ ಸಾಮಾಜಿಕ ವ್ಯವಸ್ಥೆ, ಕಾನೂನು ವ್ಯವಸ್ಥೆ, ರಾಜಕೀಯ ವ್ಯವಸ್ಥೆಗಳಿಗೂ ನಿಕಟ ಸಂಬಂಧವಿರುತ್ತದೆ.

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಆರ್ಥಿಕ ವ್ಯವಸ್ಥೆಗಳಿಗೆ ಇವುಗಳಲ್ಲಿ ಈ ಕೆಳಗಿನ ವಿಧಗಳನ್ನು ಗುರುತಿಸಬಹುದು.

- ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆ (ಬಂಡವಾಳಶಾಹಿ)
- ಮಿಶ್ರ ಆರ್ಥಿಕ ವ್ಯವಸ್ಥೆ (ಬಂಡವಾಳಶಾಹಿ ಮತ್ತು ಯೋಜಿತ ವಿಧಾನ)
- ಯೋಜಿತ ಆರ್ಥಿಕತೆ (ಸಮಾಜವಾದೀ ಧೋರಣೆ)
- ಸಾಂಪ್ರದಾಯಿಕ ಆರ್ಥಿಕ ವ್ಯವಸ್ಥೆ (ಅತ್ಯಂತ ಪುರಾತನವಾದ ಆರ್ಥಿಕ ವ್ಯವಸ್ಥೆ)
- ಸಮನ್ವಯ ಪ್ರಜಾಪ್ರಭುತ್ವದ ತತ್ವಗಳ ಆಧಾರಿತವಾದ ಆರ್ಥಿಕ ವ್ಯವಸ್ಥೆ (ಸಾಮಾಜಿಕ – ಪ್ರಜಾಸತ್ತಾತ್ಮಕ ಆರ್ಥಿಕ ವ್ಯವಸ್ಥೆ)

ಆರ್ಥಿಕ ವ್ಯವಸ್ಥೆಯು ಎರಡು ರೀತಿಯ ನಿಯಂತ್ರಣಗಳನ್ನು ಹೊಂದಿರುತ್ತವೆ.

- ವ್ಯವಸ್ಥೆಯ ಒಳಗಿನ ನಿಯಂತ್ರಣ
- ವ್ಯವಸ್ಥೆಯ ಹೊರಗಿನ ನಿಯಂತ್ರಣ

ಆರ್ಥಿಕ ವ್ಯವಸ್ಥೆಯ ಒಳಗಿನ ನಿಯಂತ್ರಣ ಸಮಾಜ ಅಥವಾ ಆಯಾ ಸರ್ಕಾರಗಳಿಗೆ ಕಾಲ ಕಾಲಕ್ಕೆ ನಿರೂಪಿಸುವ ಆರ್ಥಿಕ ನೀತಿ ಮತ್ತು ಹಣಕಾಸಿಗೆ ಸಂಬಂಧಿಸಿದ ಕಾನೂನುಗಳಿಂದ ಆಗುತ್ತದೆ.

ಯಾವುದೇ ಆರ್ಥಿಕ ವ್ಯವಸ್ಥೆಯಲ್ಲಿ ಮೂರು ಭಾಗಗಳನ್ನು ಗುರ್ತಿಸಬಹುದು (1) ರಾಜ್ಯದ ಸ್ವಾಮಿತ್ವ (2) ಖಾಸಗಿ ವ್ಯಕ್ತಿಗಳ ಸ್ವಾಮಿತ್ವ ಮತ್ತು (3) ಸಮುದಾಯದ ಸ್ವಾಮಿತ್ವ, ಖಾಸಗಿ ಮತ್ತು ಸಮುದಾಯದ ಸ್ವಾಮಿತ್ವವೂ ರಾಜ್ಯ ಆರ್ಥಿಕ ಕಾನೂನುಗಳಿಗೆ ಒಳಪಡಿಸಬೇಕಾಗುತ್ತದೆ. ಆರ್ಥಿಕ ವ್ಯವಸ್ಥೆಯ ಹೊರಗಡೆ ನಿಯಂತ್ರಣ, ಸರ್ಕಾರದ ಕಾನೂನು ವ್ಯಾಪ್ತಿಗೆ ಬರುವುದಿಲ್ಲ. ಮಾರುಕಟ್ಟೆಯಲ್ಲಿ ಪೂರೈಕೆ ಮತ್ತು ಬೇಡಿಕೆಗಳ ವ್ಯತ್ಯಾಸದಿಂದ ಆಗುವ ಬದಲಾವಣೆಗಳು ಆರ್ಥಿಕ ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸುತ್ತವೆ.

Digitised by Bharatavani, CIIL

- ಖಾಸಗೀ ಒಡೆತನದ ಸಂಸ್ಥೆಗಳು ತಮ್ಮ ಅನುಕೂಲಕ್ಕಾಗಿ ಆರ್ಥಿಕ ವ್ಯವಸ್ಥೆಯ ಮೇಲೆ ಹಿಡಿತವನ್ನು ಸಾಧಿಸುತ್ತವೆ.
- ರಾಜ್ಯ ಆರ್ಥಿಕ ಯೋಜನೆಗಳ ಮೂಲಕ ರಾಜ್ಯಗಳು ಇಡೀ ಆರ್ಥಿಕ ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸುವುದರ ಜೊತೆಗೆ ನಿರ್ದೇಶನಗಳನ್ನು ನೀಡುತ್ತವೆ.
- ಸಾಮುದಾಯ ಆರ್ಥಿಕ ವ್ಯವಸ್ಥೆಯು ಬೃಹತ್ತಾದ ಉಪ ವ್ಯವಸ್ಥೆಯಾಗಿದ್ದು ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ

**ಖಾಸಗಿ ಆರ್ಥಿಕ ವ್ಯವಸ್ಥೆ:** ಇಡೀ ಮಾರುಕಟ್ಟೆ ವ್ಯವಸ್ಥೆಯ/ಆರ್ಥಿಕ ವ್ಯವಸ್ಥೆಯ ತತ್ವಗಳ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಇಲ್ಲಿನ ಆರ್ಥಿಕ ವ್ಯವಹಾರ ಖಾಸಗಿಯಾಗಿ ಆಡಳಿತದ ಕೇಂದ್ರೀಕರಣಕ್ಕೆ ಒಳಪಟ್ಟಿರುತ್ತದೆ.

**ರಾಜ್ಯ ಅರ್ಥಿಕ ವ್ಯವಸ್ಥೆ:** ಸರ್ಕಾರದ ವ್ಯವಸ್ಥಿತ ಯೋಜನೆಗಳೊಂದಿಗೆ ಅಥವಾ ಯಾವುದೇ ಯೋಜನೆಯಿಲ್ಲದೆಯೇ, ರಾಜ್ಯವೇ ನಡೆಸುವ ಅರ್ಥಿಕ ವ್ಯವಹಾರವಾಗಿದ್ದು ಅದು ತನ್ನ ಸಂಪನ್ಮೂಲಗಳನ್ನು ತಾನೇ ನಿರ್ವಹಿಸುತ್ತದೆ. ಜೊತೆಗೆ ಇದರಲ್ಲಿ ಅತ್ಯಂತ ಕಡಿಮೆ ಪ್ರಮಾಣದ ನಿಯಮಾವಳಿಗಳಿರುವುದು ಕಂಡು ಬರುತ್ತದೆ.

**ಸಾಮುದಾಯಿಕ ಆರ್ಥಿಕ ವ್ಯವಸ್ಥೆ:** ವಿಕೇಂದ್ರೀಕರಣ ಗುಣಲಕ್ಷಣಗಳನ್ನು ಆಧರಿಸಿ ರೂಪಿಸಲ್ಪಟ್ಟ ಇಡೀ ಸಮುದಾಯದ ಸಹಭಾಗಿತ್ವವಿರುವ ಮತ್ತು ಒಟ್ಟಾರೆಯಾಗಿ ಯೋಜನೆಗಳನ್ನು ರೂಪಿಸುವ ರೀತಿಯ ಆರ್ಥಿಕ ವ್ಯವಸ್ಥೆಯಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯಾನಂತರದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆ ಇದೆ. ಅಂದರೆ ಅದು ಪೂರ್ಣತಃ ಬಂಡವಾಳವಾದಿ ಆರ್ಥಿಕ ವ್ಯವಸ್ಥೆಯೂ ಅಲ್ಲ ಅಥವಾ ಪೂರ್ಣತಃ ಸಮಾಜವಾದಿ ಆರ್ಥಿಕ ವ್ಯವಸ್ಥೆಯೂ ಅಲ್ಲ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಬಂಡವಾಳ ಹೂಡುವ ಶ್ರೀಮಂತರೂ ಇದ್ದಾರೆ. ಬಡತನದ ರೇಖೆಯಿಂದ ಕೆಳಗಿನ ಮಟ್ಟದಲ್ಲಿ ಜೀವನ ನಡೆಸುತ್ತಿರುವ ಬಡ ಕುಟುಂಬಗಳೂ ಇವೆ. ಅಂತಹ ಕುಟುಂಬಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ದುರದೃಷ್ಟಕರ ಸಂಗತಿಯಾಗಿದೆ. ಇದರಿಂದ ಭಾರತೀಯ ಸಮಾಜದಲ್ಲಿ ಶ್ರೀಮಂತರ (ಉಳ್ಳವರ) ಮತ್ತು ಬಡವರ (ಉಳ್ಳದಿಲ್ಲದವರ)ನಡುವಣ ಅಂತರ ಹೆಚ್ಚಾಗುತ್ತಲೇ ಸಾಗಿದೆ. ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಭಾರತದಲ್ಲಿ ಸ್ವಾತಂತ್ರ್ಯಾನಂತರದಲ್ಲಿ ಸಮಾಜವಾದಿ ವಿನ್ಯಾಸದ ಸಮಾಜವನ್ನು ರೂಪಿಸಬೇಕೆಂದು ಹೇಳಿದ್ದರು. ಅವರ ಪ್ರಕಾರ ಸಮಾಜವಾದಿ ವಿನ್ಯಾಸದ ಸಮಾಜ (Socialistic Pattern of Society) ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಆರ್ಥಿಕ ಮಟ್ಟದಲ್ಲಿರುವ ತೀವ್ರ ವ್ಯತ್ಯಾಸಗಳನ್ನು ಕಡಿಮೆ ಮಾಡುವುದು ಸರ್ಕಾರದ ಕರ್ತವ್ಯವಾಗಬೇಕೆಂದು ನೆಹರು ನಂಬಿದ್ದರು. ಆದರೆ ದುರದೃಷ್ಟವಶಾತ್ ನಂತರದ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಈ ದಿಶೆಯಲ್ಲಿ ತೀವ್ರ ಪ್ರಯತ್ನಗಳನ್ನು ಮಾಡದೇ ಇದ್ದುದರಿಂದ ಆರ್ಥಿಕ ಅಸಮಾನತೆಯ ಪ್ರಮಾಣ ಹೆಚ್ಚಾಗಿದ್ದು ಅದೇ ಪರಿಸ್ಥಿತಿ ಮುಂದುವರಿಯುತ್ತಿದೆ. ಸಮಾಜದ ಹಿಂದುಳಿದ ಉಪೇಕ್ಷಿತ ವರ್ಗಗಳಿಗೆ ನೀಡಿರುವ ಮೀಸಲಾತಿ ಹಾಗೂ ಆರ್ಥಿಕ ಸವಲತ್ತುಗಳು ಈ ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದರಲ್ಲಿ ವಿಫಲವಾಗಿವೆ. ಸಮಾಜವಾದಿ ವಿನ್ಯಾಸದ ಸಮಾಜ ಬಂಡವಾಳವಾದಿ ಮತ್ತು ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಲಕ್ಷಣಗಳನ್ನು ಸಮತೋಲಿತ ಪ್ರಮಾಣದಲ್ಲಿ ಹೊಂದಿರುತ್ತದೆ ಎಂದು ನೆಹರು ಹೇಳಿದ್ದರು.

ಆರ್ಥಿಕ ವ್ಯವಸ್ಥೆಗೂ ಶಿಕ್ಷಣಕ್ಕೂ ನಿಕಟ ಸಂಬಂಧವಿದೆ. ಭಾರತದಂತಹ ಅನಕ್ಷರತೆ, ಬಡತನ ಮುಂತಾದ ಸಾಮಾಜಿಕ ಸಮಸ್ಯೆಗಳೊಂದಿಗೆ ಹೋರಾಡುತ್ತಿರುವ ಮುಂದುವರಿಯುತ್ತಿರುವ ದೇಶದಲ್ಲಂತೂ ಈ ಹೇಳಿಕೆ ಹೆಚ್ಚಿನ ನಿಹಿತಾರ್ಥಗಳನ್ನು ಹೊಂದಿದೆ.

ಶಿಕ್ಷಣಕ್ಕೂ ಆರ್ಥಿಕ ವ್ಯವಸ್ಥೆಗೂ ಸಂಬಂಧ ಕಲ್ಪಿಸುವ ಪ್ರವೃತ್ತಿ ಇತ್ತೀಚಿನ ದಶಕಗಳಲ್ಲಿ ಕಂಡು ಬಂದಿದೆ. "ಶಿಕ್ಷಣಕ್ಕಾಗಿ ಶಿಕ್ಷಣ" ಎನ್ನುವ ಹಳೆಯ ಕಾಲದ ಪರಿಕಲ್ಪನೆ ಈಗ ಮರೆಯಾಗಿದೆ. ಶಿಕ್ಷಣ ಮಕ್ಕಳ ದೈಹಿಕ, ಮಾನಸಿಕ, ನೈತಿಕ ಹಾಗೂ ಆಧ್ಯಾತ್ಮಿಕ ವಿಕಾಸವನ್ನು ಪ್ರೋತ್ಸಾಹಿಸುವುದನ್ನು ತನ್ನ ಮುಖ್ಯ ಉದ್ದೇಶವಾಗಿ ಹೊಂದಿದೆ ಎಂದು ಈ ಹಿಂದೆ ಭಾವಿಸಲಾಗಿತ್ತು. ಆದ್ದರಿಂದ ಶಿಕ್ಷಣವನ್ನು ಕೇವಲ ವೆಚ್ಚದ ಅಂಶವೆಂದು ಪರಿಗಣಿಸಲಾಗುತ್ತಿತ್ತು. ಆದ್ದರಿಂದಲೇ ದೇಶದ/ರಾಜ್ಯದ ಆಯ-ವ್ಯಯ ಅಂದಾಜಿನಲ್ಲಿ ಏನಾದರೂ ಹಣದ ಕಡಿತಗಳನ್ನು ಮಾಡಬೇಕಾಗಿ ಬಂದರೆ ಹಿಂದು ಮುಂದೆ ನೋಡದೆ, ವಿವೇಚನಾ ರಹಿತವಾಗಿ ಶಿಕ್ಷಣಕ್ಕೆ ವಿನಿಯೋಗಿಸಲು ಮಾಡುವ ಹಣದಲ್ಲಿ ಕಡಿತವನ್ನು ಮಾಡಲಾಗುತ್ತಿತ್ತು. ಆದರೆ ಈ ನಿಲುವು ಈಗ ಬದಲಾಯಿಸಿದೆ. ಆಧುನಿಕ ಯುಗದಲ್ಲಿ ಅಂದರೆ 20ನೇ ಶತಮಾನದಲ್ಲಿ ಉತ್ಪಾದಕತೆಯನ್ನು ಹೆಚ್ಚು ಮಾಡಿ ಸಮಾಜದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಲು ಮತ್ತು ಸಮಾಜದ ಎಲ್ಲಾ ವರ್ಗಗಳ ಯೋಗಕ್ಷೇಮದ ಗುರಿಯನ್ನು ಸಾಧಿಸಲು ಎಲ್ಲಾ ವರ್ಗದ ತಜ್ಞರ, ಕುಶಲಕರ್ಮಿಗಳ, ಅರ್ಧಕುಶಲಿಗಳ ಜ್ಞಾನ, ಕೌಶಲಗಳನ್ನು ಮತ್ತು ಕಾರ್ಯದಕ್ಷತೆಯನ್ನು ಹೆಚ್ಚಿಸಲು ಶಿಕ್ಷಣಕ್ಕಾಗಿ ಮಾಡುವ ವೆಚ್ಚ ಒಂದು ಉತ್ತಮ ಬಂಡವಾಳ ಹೂಡಿಕೆಯಾಗುತ್ತದೆ ಎಂದು ಶಿಕ್ಷಣ ತಜ್ಞರು ಮತ್ತು ಅರ್ಥಶಾಸ್ತ್ರಜ್ಞರು ಯೋಚಿಸತೊಡಗಿದುದರ ಪರಿಣಾಮವಾಗಿ ಶೈಕ್ಷಣಿಕ ಅರ್ಥಶಾಸ್ತ್ರ ಎಂಬ ಒಂದು ಹೊಸ ಶಾಖೆಯೇ ರೂಪುಗೊಂಡು ಶಿಕ್ಷಣ ಮತ್ತು ಅರ್ಥಶಾಸ್ತ್ರಗಳೆರಡರಲ್ಲೂ ಶೈಕ್ಷಣಿಕ ಅರ್ಥಶಾಸ್ತ್ರವನ್ನು ಅಧ್ಯಯನ ಮಾಡಲು ಆರಂಭಿಸಿದರು. ಶಿಕ್ಷಣ ಒಂದು ಬಂಡವಾಳ, ಅದೊಂದು ಬಂಡವಾಳ ಹೂಡಿಕೆ ಎಂಬ ಪರಿಕಲ್ಪನೆಗಳು ಚಾಲನೆಗೆ ಬಂದವು. ಈ ಹಿನ್ನೆಲೆಯ ಪರಿಣಾಮವಾಗಿ ಆರ್ಥಿಕ ವ್ಯವಸ್ಥೆ ಮತ್ತು ಶಿಕ್ಷಣದ ನಡುವಣ ನಿಕಟ ಸಂಬಂಧ ಸ್ಪಷ್ಟವಾಯಿತು.

19ನೇ ಶತಮಾನದಲ್ಲಿದ್ದ ಅರ್ಥಶಾಸ್ತ್ರಜ್ಞ ಆಡಂ ಸ್ಮಿತ್ ಅರ್ಥಶಾಸ್ತ್ರವನ್ನು ಸಂಪತ್ತಿನ ವಿಜ್ಞಾನವೆಂದು ಪರಿಗಣಿಸಿದ್ದ. ಆದರೆ ನಂತರದ ಎಲ್ಲಾ ಆಧುನಿಕ ಅರ್ಥಶಾಸ್ತ್ರಜ್ಞರು ಅರ್ಥಶಾಸ್ತ್ರವನ್ನು

Digitised by Bharatavani, CIIL

ಸಂಪತ್ತಿನ ಉತ್ಪಾದನೆ, ಉಪಭೋಗ, ವಿನಿಮಯ ಮತ್ತು ವಿತರಣೆಯನ್ನು ಒಳಗೊಂಡ ಮಾನವನ ಎಲ್ಲಾ ಈ ರೀತಿಯ ಚಟುವಟಿಕೆಗಳಿಗೆ ಜೈವಿಕವಾಗಿ ಮತ್ತು ಮಹತ್ವಪೂರ್ಣವಾಗಿ ಸಂಬಂಧಿಸಿದ ಸಂಪತ್ತಿನ ವಿಜ್ಞಾನವೆಂದು ವ್ಯಾಖ್ಯಾನಿಸಿದರು. ಅರ್ಥಶಾಸ್ತ್ರಜ್ಞ ಆಲ್ಫ್ರೆಡ್ ಮಾರ್ಷನ್ ಅರ್ಥಶಾಸ್ತ್ರವನ್ನು ಮಾನವ ಸಮಾಜದ ಯೋಗಕ್ಷೇಮಕ್ಕೆ ಸಂಬಂಧಿಸಿದ ಸಂಪತ್ತಿನ ವಿಜ್ಞಾನವೆಂದು ಪರಿಗಣಿಸಿದನು. ಹೀಗೆ ಅರ್ಥಶಾಸ್ತ್ರದ ವ್ಯಾಪ್ತಿ ವಿಸ್ತಾರಗೊಂಡು ಮಾನವ ಚಟುವಟಿಕೆಗಳನ್ನು ನಿರ್ದೇಶನ ಮಾಡುವ, ಪರಿವರ್ತಿಸುವ, ಮಾರ್ಗದರ್ಶನ ಮಾಡುವುದರ ಮೂಲಕ ಮಾನವನ ಮಾನಸಿಕ ಸಾಮರ್ಥ್ಯಗಳನ್ನು, ಚಿಂತನ ಶೀಲತೆಯನ್ನು ಯೋಜಿಸುವಿಕೆಯನ್ನು, ಜ್ಞಾನ–ಕೌಶಲಗಳನ್ನು, ಮನೋಭಾವ–ಮೌಲ್ಯಗಳನ್ನು ವಿಕಾಸಗೊಳಿಸುವುದರ ಮೂಲಕ ಸಾಮಾಜಿಕ ಯೋಗಕ್ಷೇಮವನ್ನು, ಪ್ರಗತಿಯನ್ನು ಪ್ರೋತ್ಸಾಹಿಸುವ ಶಿಕ್ಷಣವನ್ನು ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿತು. ಶಿಕ್ಷಣಕ್ಕೂ ಅರ್ಥಶಾಸ್ತ್ರದ ಸಹಯೋಗ ಬೇಕಾಗುತ್ತದೆ. ಉತ್ತಮ ಶೈಕ್ಷಣಿಕ ವ್ಯವಸ್ಥೆಯನ್ನು ವಿಕಾಸಗೊಳಿಸಲು ಹೇರಳವಾಗಿ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಶಾಲೆ–ಕಾಲೇಜುಗಳ ನಿರ್ಮಾಣ, ಶಿಕ್ಷಕರ ನೇಮಕ ಹಾಗೂ ತರಬೇತಿ, ಕಟ್ಟಡ ಮುಂತಾದ ಮೂಲಭೂತ ಸೌಲಭ್ಯಗಳ ನಿರ್ಮಾಣ, ಬೋಧನ ಸಾಮಗ್ರಿಗಳು – ಪಠ್ಯಪುಸ್ತಕ, ದೃಶ್ಯ, ಶ್ರವ್ಯ ಸಾಧನಗಳು, ಇತರ ಬೋಧನಾ ಸಾಮಗ್ರಿಗಳು, ಆಧುನಿಕ ಶೈಕ್ಷಣಿಕ ತಂತ್ರಜ್ಞಾನದ ಅನುಕೂಲಗಳು, ಬಡ ಮಕ್ಕಳಿಗೆ ಆರ್ಥಿಕ ಸವಲತ್ತುಗಳ ನೀಡಿಕೆ, ಈ ಎಲ್ಲಕ್ಕೂ ಹಣ ಬೇಕಾಗುತ್ತದೆ. ಯೋಜನೆ ರೂಪಿಸುವವರು, ಅಯ–ವ್ಯಯ ಅಂದಾಜು ಮಾಡುವವರು ಇದಕ್ಕೆ ಧಾರಾಳವಾಗಿ ಸಹಕರಿಸಬೇಕು. ಇದಕ್ಕೆ ಪ್ರತಿಯಾಗಿ ಶಿಕ್ಷಣ ದೇಶದ ಆರ್ಥಿಕ ಉತ್ಪಾದನೆಯನ್ನು ಹೆಚ್ಚಿಸಲು ದಕ್ಷತೆಯಿಂದ ಕೂಡಿದ ಮಾನವ ಸಂಪನ್ಮೂಲವನ್ನು ಒದಗಿಸುವ ಶಿಕ್ಷಣವನ್ನು ನೀಡಬೇಕು.

–ಡಾ. ಎಂ.ಎಸ್. ತಳವಾರ್

## ಶಿಕ್ಷಣ ಮತ್ತು ಜಾತ್ಯತೀತತೆ

ಭಾರತದ ವಿವಿಧ ಗುಂಪುಗಳು ಮತ್ತು ಸಮುದಾಯಗಳು ಜೊತೆಜೊತೆಯಾಗಿ ನಂಬಿಕೆ ಮತ್ತು ವಿಶ್ವಾಸಗಳಿಂದ ಚೆನ್ನಾಗಿ ಬಾಳಿ ಸಮೃದ್ಧಗೊಳ್ಳುವಂಥ ವಿವಿದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಗಳು ಸ್ವತಂತ್ರವಾಗಿ ಬೆಳೆಯುವಂತೆ ಮತ್ತು ಎಲ್ಲಾ ನಾಗರಿಕರು ತಮ್ಮ ಸಾಮರ್ಥ್ಯಗಳನ್ನು ವೈಯಕ್ತಿಕವಾಗಿ ಮತ್ತು ಸಾಮಾಜಿಕ ಪ್ರಗತಿಗಾಗಿ ಅತ್ಯುತ್ತಮವಾಗಿ ಬಳಸಿಕೊಂಡು ಚೆನ್ನಾಗಿ ಬಾಳುವಂಥ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಪ್ರಜಾಪ್ರಭುತ್ವ ಸಮಾಜವಾಗಿ ನಿರ್ಮಾಣಗೊಳ್ಳಲು ಆಯ್ಕೆ ಮಾಡಿಕೊಂಡಿದೆ. ಜಾತ್ಯತೀತತೆಯ ಮುಖ್ಯ ತತ್ವವೆಂದರೆ, ಪರಸ್ಪರ ಗೌರವ ಸೂಚಿಸುವುದು. ಭಾರತದಂತಹ ಬಹುಧರ್ಮೀಯ ಹಾಗೂ ಬಹುಮುಖೀ ಸಾಸ್ಕೃತಿಕ ಸಮಾಜದಲ್ಲಿ ಪ್ರಜಾಪ್ರಭುತ್ವವು ಜಾತ್ಯತೀತ ಚೌಕಟ್ಟಿನಲ್ಲಿ ಮಾತ್ರ ಬೆಳೆಯಬಲ್ಲುದು. ಅದೇ ರೀತಿ ಭಾರತದಲ್ಲಿ ಜಾತ್ಯತೀತತೆಯು ಪ್ರಜಾಸತ್ತೆಯನ್ನು ಪೂರ್ವಭಾವಿಯಾಗಿ ಊಹಿಸಿಕೊಳ್ಳುತ್ತಿದೆ.

'ಜಾತ್ಯತೀತ' ಎಂಬ ಪರಿಕಲ್ಪನೆಯನ್ನು ವಿವರಿಸುವುದು ಸಮಂಜಸವೇ ಆಗಿದೆ. ಏಕೆಂದರೆ ಭಾರತೀಯರ ಗ್ರಹಿಕೆಯು ಮತ್ತು ಪದದ ಬಳಕೆಯು ಪಾಶ್ಚಾತ್ಯರ ನಿಲುವಿಗಿಂತ ಬಹಳ ವಿಭಿನ್ನವಾಗಿದೆ. ಆಕ್ಸ್‌ಫರ್ಡ್ ನಿಘಂಟುವಿನ ಪ್ರಕಾರ 'ಜಾತ್ಯತೀತ' ಎಂಬ ಪದದ ಅರ್ಥವೆಂದರೆ, 'ದೈವನಂಬಿಕೆಯನ್ನು ಕುರಿತ ಎಲ್ಲಾ ಪರಿಗಣನೆಗಳನ್ನು ಹೊರತುಪಡಿಸಿ ಅಥವಾ ಹೊರತಾಗಿಸಿ, ಇಂದಿನ ಮನುಕುಲದ ಜೀವನದ ಕ್ಷೇಮ ಚಿಂತನೆಯನ್ನು ಮಾಡುವ ನೀತಿನಿಯಮಗಳನ್ನು ಆಧರಿಸಿದ ಸಿದ್ಧಾಂತ'. ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟುವಿನ ಪರಿಷ್ಕೃತ ಆವೃತ್ತಿಯಲ್ಲಿ 'ಜಾತ್ಯತೀತ ಪದದ ಅರ್ಥ 'ಧಾರ್ಮಿಕ ಅವಕಾಶವನ್ನು ಸಂದೇಹದಿಂದ ನೋಡುವ ಅಥವಾ ನಂಬದಿರುವುದು ಅಥವಾ ಧಾರ್ಮಿಕ ಶಿಕ್ಷಣವನ್ನು ವಿರೋಧಿಸುವುದು'. ಚೇಂಬರ್ಸ್ ನಿಘಂಟುವಿನಲ್ಲಿ ಜಾತ್ಯತೀತತೆಯನ್ನು 'ರಾಜ್ಯ, ನೀತಿಗಳು, ಶಿಕ್ಷಣ ಇತ್ಯಾದಿ ಮತಧರ್ಮದಿಂದ ಮುಕ್ತವಾಗಿರುವುದು' ಎಂದು ವ್ಯಾಖ್ಯಾನಿಸಿದೆ. ಹಾಗೆಯೇ ವೆಬ್‌ಸ್ಟರ್ ನಿಘಂಟು 'ಜಾತ್ಯತೀತತೆಯು ಮತ ಮತ್ತು ಧಾರ್ಮಿಕ ಆಚರಣೆಗಳು ರಾಜ್ಯದ ನಿರ್ವಹಣೆಗಳಲ್ಲಿ ಪ್ರವೇಶಿಸಬಾರದು' ಎಂಬ ನಂಬಿಕೆ ಎಂದು ಹೇಳುತ್ತದೆ. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ಜಾತ್ಯತೀತ ಪದಕ್ಕೆ ಎರಡು ಅರ್ಥಗಳನ್ನು ಕೊಡುತ್ತದೆ – (ಅ) ಸುದೀರ್ಘವಾದ, ಅನಿಶ್ಚಿತ ಸಮಯ ಮತ್ತು (ಆ) ಮತ ಧರ್ಮ, ಆಧ್ಯಾತ್ಮ ವಿಷಯಗಳಲ್ಲಿ ಕಾಳಜಿಯಿಲ್ಲದಿರುವ ಆಧ್ಯಾತ್ಮಿಕತೆ.

ಹೀಗೆ ಜಾತ್ಯತೀತತೆಯು ಪಾಶ್ಚಾತ್ಯ ಯುರೋಪಿನಲ್ಲಿ ಗ್ರಹಿಸಿರುವಂತೆ ಮತ್ತು ಅಮೇರಿಕದ ಅನುಭವದ ಪ್ರಕಾರ ರಾಷ್ಟ್ರ ಮತ್ತು ಚರ್ಚ್ ಎರಡೂ ಒಂದೇ ಸಮಾಜದಲ್ಲಿದ್ದೂ, ಪರಸ್ಪರ ಯಾವುದೇ ರೀತಿಯ ಸಂಪರ್ಕವಿಲ್ಲದೇ ಇರುವಂಥದ್ದು. ಆದರೆ ಭಾರತದ ರಾಜ್ಯನೀತಿಯು ಜಾತ್ಯತೀತತೆಯನ್ನು 'ಸರ್ವಧರ್ಮ ಸಮಭಾವ', ಎಲ್ಲಾ ಮತ ಧರ್ಮಗಳಲ್ಲಿ ಸಮಾನತೆಯ ಅರಿವು ಮತ್ತು ಸಹಿಷ್ಣುತೆಯ ದೃಷ್ಟಿಕೋನ ಎಂಬುದಾಗಿ ಪ್ರತಿಪಾದಿಸಿದೆ. ಭಾರತದಲ್ಲಿ ರಾಜ್ಯ ಮತ್ತು ಧಾರ್ಮಿಕ ಸಂಸ್ಥೆಗಳ ನಿಯೋಗಗಳು ಪರಸ್ಪರ ಪ್ರತ್ಯೇಕವಾಗಿರುವಂಥವುಗಳು. ಆದರೆ ಮತಧರ್ಮ ಸಂಸ್ಥೆಗಳು ರಾಜಕೀಯವನ್ನು ಪ್ರಭಾವಗೊಳಿಸಬಹುದಾಗಿದೆ ಮತ್ತು ಸರ್ಕಾರವು ಮತಧರ್ಮ ಸಂಸ್ಥೆಗಳನ್ನು ಜಾತ್ಯಾತೀತಯ ತತ್ವಗಳು ಮತ್ತು ನಿಯಮಗಳ ಪ್ರಕಾರ ನಿರ್ಬಂಧಿಸಬಹುದಾಗಿದೆ. ಭಾರತದ ಜಾತ್ಯಾತೀತಯ ಪರಿಕಲ್ಪನೆಯ ಪ್ರಕಾರ ರಾಷ್ಟ್ರಕ್ಕೆ ಯಾವುದೇ ನಿರ್ದಿಷ್ಟ ಮತ ಧರ್ಮವು ಇರುವುದಿಲ್ಲ ಮತ್ತು ರಾಷ್ಟ್ರವು ಎಲ್ಲಾ ಮತ ಧರ್ಮಗಳನ್ನೂ ಸಮಾನವಾಗಿ ಪರಿಗಣಿಸಬೇಕು ಎಂದು ಬಯಸುತ್ತದೆ. ಮಾಹಾತ್ಮಗಾಂಧಿಯು ಬೇರೆಯವರ ನಂಬಿಕೆಗಳಷ್ಟು ನನ್ನದೇ ಸ್ವಂತ ನಂಬಿಕೆಯು ಗೌರವಾರ್ಹ ಎಂದಿದ್ದಾರೆ. ಜವಾಹರಲಾಲ ನೆಹರು ಅವರಿಗೆ ಭಾರತ ದೇಶವು ಜಾತ್ಯಾತೀತತೆಯ ಬಲದಿಂದಲೇ ಉಳಿದು ಬಂದಿದೆ ಎಂಬುದು

Digitised by Bharatavani, CIIL

ಸ್ಪಷ್ಟ ನಿಲುವು. ಅಸಂಖ್ಯ ತಲೆಮಾರುಗಳ ಅನುಯಾಯಿಗಳನ್ನು ಹೊಂದಿರುವ ಹಲವು ಮತಧರ್ಮಗಳಿರುವ ಭಾರತದಂತಹ ದೇಶದ ಸರ್ಕಾರವು ಆಧುನಿಕ ಯುಗದಲ್ಲಿ ಜಾತ್ಯಾತೀತ ತಳಹದಿಯಿಲ್ಲದೆ ತೃಪ್ತಿಕರವಾಗಿ ಕಾರ್ಯನಿರ್ವಹಿಸುವುದು ಅಸಾಧ್ಯ. ವ್ಯಕ್ತಿ ಹಾಗೂ ಸಂಸ್ಥಾ ರೂಪದ ಮತಧರ್ಮದ ಸ್ವಾತಂತ್ರ್ಯವನ್ನು ಖಚಿತಪಡಿಸುವ, ಮತಧರ್ಮ ಯಾವುದೇ ಇರಲಿ ವ್ಯಕ್ತಿಯನ್ನು ಪ್ರಜೆಯೆಂದು ಪರಿಗಣಿಸುವುದು, ನಿರ್ದಿಷ್ಟ ಮತಧರ್ಮಕ್ಕೆ ಸಂವಿಧಾನಿಕವಾಗಿ ಸಂಬಂಧ ಪಡದೆ ಇರುವುದು ಅಥವಾ ಮತಧರ್ಮದೊಡನೆ ಸೇರದ ಅಥವಾ ಉತ್ತೇಜಿಸದಿರುವ ಸ್ಥಿತಿಯೇ ಜಾತ್ಯಾತೀತ ರಾಷ್ಟ್ರ ಪ್ರಜೆಗಳಿಗೆ ಅನುಕೂಲಗಳನ್ನು ಒದಗಿಸುವಲ್ಲಿ ಪಕ್ಷಪಾತವಿಲ್ಲದ ಅಥವಾ ತಟಸ್ಥವಾಗಿರುವಂಥದ್ದೇ ಜಾತ್ಯಾತೀತ ರಾಜ್ಯ. ಅದು ಎಲ್ಲಾ ಮತ ಧರ್ಮಗಳನ್ನೂ ಸಮಾನವಾಗಿ ಒಂದೇ ವಿಧವಾಗಿ ನಡೆಸೊಕೊಳ್ಳುತ್ತದೆ ಅಥವಾ ಎಲ್ಲಾ ಮತಧರ್ಮಗಳಿಗೂ ಸಮಾನ ಗೌರವವನ್ನು ನೀಡುತ್ತದೆ. ಜನಸಂಖ್ಯೆಯ ಬಹುಪಾಲು ಜನರು ಆದ್ಯತೆಯ ಗಮನಿಸುವಿಕೆಯನ್ನು ಅನುಭವಿಸದ ಮತ್ತು ಅಲ್ಪಸಂಖ್ಯಾತರುಗಳ ಧಾರ್ಮಿಕ ಹಕ್ಕುಗಳನ್ನು ಸರಿಯಾಗಿ ರಕ್ಷಿಸುವುದನ್ನು ಜಾತ್ಯಾತೀತ ಚೌಕಟ್ಟು ಪ್ರತಿಪಾದಿಸುತ್ತದೆ. ಈ ಅರ್ಥದಲ್ಲಿ ಭಾರತವು ನಿಜವಾಗಿಯೂ ಒಂದು ಜಾತ್ಯಾತೀತ ರಾಷ್ಟ್ರ. ಹಾಗಿದ್ದರೂ ಕೆಲವು ವಿಸಂಗತಿಗಳು ನಡೆಯುತ್ತಿರುತ್ತವೆ ಎಂದರೆ ಸಾಂದರ್ಭಿಕವಾಗಿ ಕೋಮು ದ್ವೇಷದ ಸ್ಫೋಟ ವಿಶೇಷವಾಗಿ ಚುನಾವಣೆಗಳ ಸಂದರ್ಭದಲ್ಲಿ ಇತ್ಯಾದಿಯನ್ನು ಕಾಲ ಕಾಲಕ್ಕೆ ನಿಗ್ರಹಿಸಬಹುದಾಗಿದೆ.

ಮತಧರ್ಮಕ್ಕೆ ಜಾತ್ಯತೀತ ರಾಷ್ಟ್ರವು ಸಾರಭೂತವಾಗಿ ಪ್ರತಿಕೂಲವಾಗಿಲ್ಲವೇ ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ಅದಕ್ಕೆ ಖಚಿತವಾದ ಉತ್ತರ 'ಇಲ್ಲ' ಎಂದೇ ಇದೆ. ರಾಜ್ಯ ಮತ್ತು ಮತಧರ್ಮ ಪ್ರತ್ಯೇಕ ಮತ್ತು ಸ್ವತಂತ್ರ ಅಸ್ತಿತ್ವ ವುಳ್ಳಂಥವುಗಳು ಎಂಬ ಪರಿಭಾಷೆಯನ್ನು ಭಾರತೀಯ ಜಾತ್ಯಾತೀತತೆಯು ಪ್ರತಿಪಾದಿಸುತ್ತದೆ ಏಕೆಂದರೆ ಇವೆರಡೂ ಪರಸ್ಪರ ಬೇರೆ ಬೇರೆ ಕ್ಷೇತ್ರಗಳ ಕಾಳಜಿ ಮತ್ತು ಚಟುವಟಿಕೆಗಳನ್ನು ಹೊಂದಿವೆ. ಭಾರತವು ಜಾತ್ಯಾತೀತ ರಾಷ್ಟ್ರವಾಗಿ, ಯಾವುದೇ ರೀತಿಯಲ್ಲೂ ಮತಧರ್ಮಕ್ಕೆ ಹೊರತಾಗಿಲ್ಲ. ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳಿಗೆ ಅದರ ಮತ ಧರ್ಮಾತೀತವಾದ ದೃಷ್ಟಿಕೋನದಿಂದ ಅದನ್ನು ಮತಧರ್ಮದ ಬಗ್ಗೆ ಕೀಳಾಗಿ ಕಾಣುವಂತೆಯೂ ಮಾಡಿರುವುದಿಲ್ಲ. ಭಾರತೀಯ ಜಾತ್ಯಾತೀತತೆಯು ಮತಧರ್ಮವನ್ನು ತುಚ್ಛ ಅಥವಾ ಕೀಳಾಗಿ ಪರಿಗಣಿಸಿಲ್ಲ. ಮತಧರ್ಮ ಮತ್ತು ರಾಜ ಕಾರಣಗಳನ್ನು ದೂರಾಗಿರುವಂತೆ ಅದು ತಿಳಿಯಪಡಿಸುತ್ತದೆ. ಭಾರತದ ಮಾಜಿ ರಾಷ್ಟ್ರಾಧ್ಯಕ್ಷರಾಗಿದ್ದ ಡಾ॥ ಎಸ್.ರಾಧಾ ಕೃಷ್ಣನ್ ಅವರು ಭಾರತೀಯ ಎಂದರೆ ಜಾತ್ಯಾತೀತ ಎಂದು ಪ್ರತಿಪಾದಿಸಿದ್ದಾರೆ. ಅದರಿಂದಾಗಿ ನಿಜವಾದ ಧಾರ್ಮಿಕ ವ್ಯಕ್ತಿಯು ಪ್ರಜಾಪ್ರಭುತ್ವದ ಜಾತ್ಯಾತೀತ ರಾಷ್ಟ್ರದಲ್ಲಿ ಕಳೆದುಹೋಗುವುದಿಲ್ಲ.

**ಜಾತ್ಯತೀತತೆ ಮತ್ತು ಭಾರತದ ಸಂವಿಧಾನ:** ವ್ಯಕ್ತಿ ಮತ್ತು ಧರ್ಮಗಳ ನಡುವೆ, ಧರ್ಮ ಮತ್ತು ಮತಧರ್ಮಗಳ ನಡುವೆ, ಮತಧರ್ಮ ಮತ್ತು ರಾಷ್ಟ್ರಗಳ ನಡುವಣ ಇಚ್ಛಾಪೂರ್ವಕ ಅಪೇಕ್ಷಿತ ಸಂಬಂಧದ ಅರಿವಿನ ಸ್ಪಷ್ಟ ಗ್ರಹಿಕೆಯ ಆಧಾರದ ಮೇಲೆ ಭಾರತದ ಸಂವಿಧಾನವು ವಿಶಿಷ್ಟವಾಗಿ ಜಾತ್ಯತೀತತೆಗೆ ತನ್ನ ಬದ್ಧತೆಯನ್ನು ನಿರೂಪಿಸಿದೆ. ಭಾರತ ಸಂವಿಧಾನದ ಅನುಚ್ಛೇದ 25(1) ರಲ್ಲಿರುವಂತೆ ಎಲ್ಲಾ ಪ್ರಜೆಗಳಿಗೂ ಕರ್ತವ್ಯಜ್ಞಾನದ ಹಕ್ಕು ಮತ್ತು ವಾಕ್ ಸ್ವಾತಂತ್ರ್ಯದ ಹಕ್ಕು ಧರ್ಮದ ಆಚರಣೆ ಮತ್ತು ಪ್ರಚಾರದ ಹಕ್ಕುಗಳು ಸಮಾನವಾಗಿದೆ. ಆದಾಗ್ಯೂ, ಕರ್ತವ್ಯದ ಹಕ್ಕು ಶ್ರೇಷ್ಠ ವಾದುದು. ಧಾರ್ಮಿಕ ಆಚರಣೆಗಳ ಹಕ್ಕು ಐಕ್ಯತೆ, ಶಾಂತಿ, ಸಾರ್ವಜನಿಕ ಶಿಸ್ತು, ನೈತಿಕತೆ ಮತ್ತು ಆರೋಗ್ಯಗಳಿಗೆ ಸಂಬಂಧಿಸಿದಂತೆ ನಿರ್ಬಂಧಗಳಿಗೆ ಒಳಗಾಗುತ್ತದೆ. ಪುನಃ ಧಾರ್ಮಿಕ ಹಕ್ಕು ಸಂವಿಧಾನ ಭಾಗ III ರ ಇತರ ನಿಯಮ ಗಳಿಗೆ ಅನುಸಾರವಾಗಿ, ಅಸ್ಪೃಶ್ಯತೆಯ ನಿರ್ಮೂಲನೆಯಂತಹ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಬಂಧಗಳಿವೆ. ಪರಿಚ್ಛೇದ 25(2)(ಚಿ) ರಲ್ಲಿರುವಂತೆ, ಧಾರ್ಮಿಕ ಆಚರಣೆಗಳ ಜೊತೆಯಲ್ಲಿಯೇ ಬರುವ ಯಾವುದೇ ಆರ್ಥಿಕ, ವಿತ್ತೀಯ, ರಾಜಕೀಯ ಅಥವಾ ಇತರ ಸಾಮಾಜಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರವು ಧಾರ್ಮಿಕ ಹಕ್ಕನ್ನು ನಿಯಂತ್ರಿಸುವಲ್ಲಿ ಅಥವಾ ನಿರ್ಬಂಧಿಸುವಲ್ಲಿ ಮಧ್ಯೆ ಪ್ರವೇಶಿಸಬಹುದಾಗಿದೆ. ಮತಧರ್ಮದ ಅವಿಭಾಜ್ಯ ಭಾಗಕ್ಕೆ ಸಂಬಂಧಿಸಿದ ಧಾರ್ಮಿಕ ಆಚರಣೆಗಳನ್ನು ನಿಯಂತ್ರಿಸುವ ಅಥವಾ ನಿರ್ಬಂಧಿಸುವ ಸಂಬಂಧದಲ್ಲಿ ಧಾರ್ಮಿಕ ಹಕ್ಕುಗಳಿಗೆ ಬಾಧೆಯಾಗದಂತೆ, ಅನುಸರಿಸಬೇಕೆಂಬುದನ್ನು ಹೊರತುಪಡಿಸಿ ಉಳಿದುದನ್ನು ನಿಷೇಧಿಸಬಹುದೆಂಬುದನ್ನು ಮುಖ್ಯವಾಗಿ ಗಮನಿಸಬೇಕು. ಮತಧರ್ಮದ ಆಚರಣೆಯ ಸಮಗ್ರ ಭಾಗವಾಗಿ ಆಚರಣೆಗಳು ಅಥವಾ ಸಂಪ್ರದಾಯದ ನಿಯಮಗಳು ಮತ್ತು ಪೂಜಾವಿಧಾನದ ರೀತಿಗಳು, ಮತಸಂಬಂಧ ಸಂಪ್ರದಾಯ ಪಾಲನೆಗಳನ್ನು ಗುರುತಿಸಲಾಗಿದೆ.

ಒಂದು ನಿರ್ದಿಷ್ಟ ಆಚರಣೆಯು ಒಂದು ಮತಧರ್ಮದ ಅವಶ್ಯ ಭಾಗವಾಗಿರುತ್ತದೆಯೋ ಇಲ್ಲವೋ ಎನ್ನುವುದು ಮತಧರ್ಮದ ವಿಧಿನಿಯಮಗಳ ಕಟ್ಟಳೆಗಳ ಅತ್ಯುತ್ತಮ ವ್ಯಾಖ್ಯಾನಗಳ ಮತ್ತು ವೈಯಕ್ತಿಕ ಮತ್ತು ಸಾಮಾಜಿಕ ಒಳಿತಿಗಾಗಿ ಅನ್ವಯ ಅಂತಿಮವಾಗಿ ನ್ಯಾಯಾಲಯದ ನಿಯಮಾನುಸಾರ ತೀರ್ಮಾನವಾಗಬೇಕಾಗಿದೆ.

ಪರಿಚ್ಛೇದ 26ರಲ್ಲಿ ಧಾರ್ಮಿಕ ವಿಷಯಗಳ ನಿರ್ವಹಣಾ ಸ್ವಾತಂತ್ರ್ಯದ ಸೌಲಭ್ಯವಿದೆ. ಪರಿಚ್ಛೇದ 27ರ ಅನುಸಾರ ಯಾವುದೇ ನಿರ್ದಿಷ್ಟ ಮತಧರ್ಮದ ನಿರ್ವಹಣೆ ಅಥವಾ ಧಾರ್ಮಿಕ ಮಾಹಿತಿಯ ನಿರ್ವಹಣೆಗಾಗಿ ಯಾವ ವ್ಯಕ್ತಿಯನ್ನಾಗಲಿ ಯಾವುದೇ ತೆರಿಗೆಯನ್ನು ಪಾವತಿಸಲು ಒತ್ತಾಯ ಪಡಿಸುವಂತಿಲ್ಲ. ಪರಿಚ್ಛೇದ 28 ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಪೂಜೆ ಅಥವಾ ಧಾರ್ಮಿಕ ಬೋಧನೆಗೆ ಹಾಜರಾತಿಯ ಸೌಲಭ್ಯಗಳನ್ನು ಒದಗಿಸಿದೆ. 16, 17 ಮತ್ತು 29ನೆ ಪರಿಚ್ಛೇದದ ವಿಷಯಗಳಲ್ಲಿ ಸಮಾನ ಅವಕಾಶ ಮತ್ತು ತಾರತಮ್ಯದ ವಿರುದ್ಧ ಸಂರಕ್ಷಣೆಯನ್ನು ಖಚಿತಪಡಿಸುತ್ತದೆ.

Digitised by Bharatavani, CIIL

1976 ರಲ್ಲಿ ಸಂವಿಧಾನದ ಭಾಗ IV-ಎ ಮೂಲಭೂತ ಕರ್ತವ್ಯಗಳ ಪಟ್ಟಿಯನ್ನು ಪರಿಚಯಿಸಿದೆ. ಪರಿಚ್ಛೇದ 51-ಎ ಇತರೇ ವಿಷಯಗಳಿಗೆ ಸಂಬಂಧಿಸಿದಂತೆ ಧಾರ್ಮಿಕ, ಭಾಷಿಕ ಮತ್ತು ಪ್ರಾಂತೀಯ ಅಥವಾ ವಿಭಜಿತ ವೈವಿಧ್ಯತೆಗಳಿದ್ದರೂ ಸಾಮಾನ್ಯ ಸೋದರಭಾವದ ಸ್ಫೂರ್ತಿಯನ್ನು ಮತ್ತು ಐಕ್ಯತೆಯನ್ನು ಉತ್ತೇಜಿಸುವುದು ಭಾರತೀಯ ಪ್ರತಿ ಪ್ರಜೆಯ ಹಕ್ಕು ಎಂಬುದನ್ನು ಸೂಚಿಸುತ್ತದೆ. ಜೊತೆಗೆ, ಮಹಿಳೆಯರನ್ನು ಕೀಳಾಗಿ, ತಿರಸ್ಕಾರದಿಂದ ಕಾಣುವ ಬದಲಿಗೆ ಅವರಿಗೆ ಗೌರವ ನೀಡುವ ನಮ್ಮ ಸಂಕೀರ್ಣ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ರಕ್ಷಿಸುವ ಮತ್ತು ಗೌರವಿಸುವ, ವೈಜ್ಞಾನಿಕ ಮನೋಧರ್ಮ, ಮಾನವೀಯತೆ ಮತ್ತು ಪ್ರಶ್ನಿಸುವ ಮನೋಧರ್ಮ ಮತ್ತು ಸುಧಾರಣೆಯನ್ನು ಉತ್ತೇಜಿಸಬೇಕು. 1977ರಲ್ಲಿ ಭಾರತ ಸಂವಿಧಾನದ ಪ್ರಸ್ತಾವನೆಯು ಪರಿಷ್ಕೃತಗೊಂಡು ಭಾರತವನ್ನು ಸ್ವತಂತ್ರ ಸಮಾಜವಾದಿ ಜಾತ್ಯಾತೀತ ಪ್ರಜಾಪ್ರಭುತ್ವಾದಿ ಗಣರಾಜ್ಯವೆಂದು ಘೋಷಿಸಿದೆ. ಮೂಲ ರಚನೆಗೆ ಸಮಾಜವಾದಿ ಮತ್ತು ಜಾತ್ಯಾತೀತ ಪದಗಳನ್ನು ಸೇರಿಸಲಾಗಿದೆ.

**ಶಿಕ್ಷಣ ಮತ್ತು ಜಾತ್ಯತೀತತೆ:** ಭಾರತೀಯ ಸಮಾಜವು ಬಹುತ್ವವನ್ನು ನಂಬುತ್ತದೆ– ಎಲ್ಲಾ ವ್ಯಕ್ತಿಗಳನ್ನು ಮತ್ತು ಗುಂಪುಗಳ ಸಮಾನತೆಯನ್ನು ಗ್ರಹಿಸುವ ಮತ್ತು ಗೌರವಿಸುವ ದೃಷ್ಟಿಕೋನವಾಗಿದೆ. ಈ ದೃಷ್ಟಿಕೋನ ಅಲ್ಪ ಸಂಖ್ಯಾತ ಗುಂಪುಗಳಿಗೆ ಮತ್ತು ಮತಧರ್ಮಗಳಿಗೆ ಅದು ಅಗತ್ಯ ಗೌರವವನ್ನು ಕೊಡುವುದಲ್ಲದೆ, ಅಧಿಕ ಸಹಿಷ್ಣುತೆಯದಾಗಿದೆ. ಈ ದೃಷ್ಟಿಕೋನವು ಭಾರತೀಯ ಸಮಾಜದ ವೈವಿಧ್ಯ ಪದ್ಧತಿಗಳ ನಂಬಿಕೆಗಳನ್ನು ಪೋಷಿಸುತ್ತ, ಜೀರ್ಣಿಸಿ ಕೊಂಡಿರುವುದರಿಂದ ಉಂಟಾಗಿದೆ. ಭಾರತ ಸಂವಿಧಾನದ ಪರಿಚ್ಛೇದ 30 ಧಾರ್ಮಿಕ ಮತ್ತು ಅಲ್ಪ ಸಂಖ್ಯಾತ ಭಾಷಿಕರಿಗೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಆಡಳಿತ ನಿರ್ವಹಿಸುವ ಹಕ್ಕನ್ನು ನೀಡಿದೆ. ಪರಿಚ್ಛೇದ 30(1) ಅಲ್ಪ ಸಂಖ್ಯಾತ ಸಮುದಾಯದ ಯಾವುದೇ ಶಿಕ್ಷಣ ಸಂಸ್ಥೆಗೆ ನ್ಯಾಯಸಮ್ಮತಿ ನೀಡಿದೆ. ಪರಿಚ್ಛೇದ 30(1ಎ) ಅಲ್ಪ ಸಂಖ್ಯಾತರಿಂದ ಸ್ಥಾಪಿತವಾಗಿ ಆಡಳಿತ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಯು ಯಾವುದೇ ಆಸ್ತಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಲು ಕಾನೂನು ಮಾಡಿದಾಗ ಕಲಂ ೧ಠ ಪ್ರಕಾರ ಅಂತಹ ಕಾನೂನು ಅಂತಹ ಆಸ್ತಿಯನ್ನು ತೆಗೆದು ಕೊಳ್ಳುವಾಗ ಅಡ್ಡಿಗಳನ್ನಾಗಲೀ ಅಥವಾ ಕಲಂನಲ್ಲಿ ಸೂಚಿತವಾಗಿರುವ ಹಕ್ಕಿಗೆ ಚ್ಯುತಿ ಉಂಟಾಗುವಂತಾಗಲೀ ಮಾಡದೆ ರಾಜ್ಯ ಅಥವಾ ರಾಷ್ಟ್ರವು ಅದರ ಮೊತ್ತವನ್ನು ನಿಗದಿಪಡಿಸುವ ಅಥವಾ ತೀರ್ಮಾನಿಸುವ ಅಂಥ ಸಂಸ್ಥೆಯ ಹಕ್ಕನ್ನು ಕಾಪಾಡಬೇಕು. ಹೀಗೆ ಅಲ್ಪಸಂಖ್ಯಾತರ ಶಿಕ್ಷಣದ ಆಸಕ್ತಿಗಳನ್ನು ಸಂವಿಧಾನಬದ್ಧವಾಗಿ ಸಂರಕ್ಷಿಸಬೇಕು.

ಸಂವಿಧಾನದಲ್ಲಿ ಸೂಚಿತವಾಗಿರುವಂತೆ ಭಾರತದಲ್ಲಿ ಶಿಕ್ಷಣವು ಸಮವರ್ತಿ ವಿಷಯವಾಗಿದ್ದೂ ರಾಷ್ಟ್ರದ ಮತ್ತು ರಾಜ್ಯಗಳ ಶಾಸಕಾಂಗಗಳು ಅದರ ಬಗ್ಗೆ ಕಾನೂನು ಮಾಡುವ ಅವಕಾಶವಿದೆ. ಅಂದರೆ ರೂಪಿತವಾಗಿರುವ ರಾಷ್ಟ್ರೀಯ ನೀತಿಗಳ ಬಗ್ಗೆ ಸಂಸತ್ತಿನಲ್ಲಿ ಕಾನೂನುಗಳು ಜಾರಿಗೆ ಬರುತ್ತವೆ.

ಕಾಲಕಾಲಕ್ಕೆ ಜಾರಿಯಲ್ಲಿರುವ ಶೈಕ್ಷಣಿಕ ನೀತಿಗಳನ್ನು ವಿಮರ್ಶಿಸುವ ಮತ್ತು ಅಭಿವೃದ್ಧಿಗಾಗಿ ಶಿಫಾರಸುಗಳನ್ನು ಮಾಡುವಂತೆ ರಾಷ್ಟ್ರ ಮಟ್ಟದ ಆಯೋಗಗಳನ್ನು ಮತ್ತು ಸಮಿತಿಗಳನ್ನು ಕೇಂದ್ರ ಸರ್ಕಾರವು ನೇಮಕ ಮಾಡುತ್ತಿರುತ್ತದೆ. ಎಲ್ಲಾ ಆಯೋಗಗಳು ಮತ್ತು ಸಮಿತಿಗಳು ಇದೂವರೆಗೂ ಭಾರತೀಯ ಶಿಕ್ಷಣದಲ್ಲಿ ಜಾತ್ಯಾತೀತ ಮೌಲ್ಯಗಳ ಪ್ರಾಮುಖ್ಯವನ್ನು ಒತ್ತಿ ಹೇಳುತ್ತವೆ.

ಶಿಕ್ಷಕರುಗಳ ರಾಷ್ಟ್ರೀಯ ಆಯೋಗವು (1983–85) ರಾಷ್ಟ್ರೀಯ ಶೈಕ್ಷಣಿಕ ಗುರಿಗಳನ್ನು ಪ್ರಮುಖವಾಗಿ ಈ ಕೆಳಕಂಡಂತೆ ಗುರುತಿಸಿದೆ:

1. ಒಂದು ಏಕೀಕೃತ ಜಾತ್ಯಾತೀತ ಭಾರತ, (2) ಒಂದು ಆಧುನಿಕ ರಾಷ್ಟ್ರ, (3) ಒಂದು ಉತ್ಪಾದಕ ಜನ ಸಮೂಹ ಮತ್ತು (4) ಒಂದು ಮಾನವೀಯ ಮತ್ತು ರಕ್ಷಕ ಸಮಾಜ. ಆಯೋಗವು 'ನಮ್ಮ (ಮನಸ್ಸಿನಲ್ಲಿರುವ) ಗಮನದಲ್ಲಿರುವ ಒಬ್ಬ ಹೊಸ ಶಿಕ್ಷಕ'ನೆಂದರೆ ರಾಷ್ಟ್ರೀಯ ಗುರಿಗಳನ್ನು ಶೈಕ್ಷಣಿಕ ಕ್ರಿಯೆಗಳನ್ನಾಗಿ ಪರಿವರ್ತಿಸುವಂಥವನು ಎಂದು ಪ್ರತಿಪಾದಿಸುತ್ತದೆ. ಅವನು ತನ್ನ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸಮಗ್ರತೆ ಮತ್ತು ಐಕ್ಯತೆ, ವೈಜ್ಞಾನಿಕ ಮನೋಧರ್ಮದ ಅವಶ್ಯಕತೆ; ಕಾರ್ಯದಲ್ಲಿ ಒಂದು ಬದ್ಧತೆಯುಳ್ಳ ಉನ್ನತಿ ಮತ್ತು ಉತ್ತಮ ಮಟ್ಟಗಳು ಮತ್ತು ಸಮಾಜದ ಬಗ್ಗೆ ಕ್ರಿಯೆ ಮತ್ತು ಕಾಳಜಿಗಳ ಮಹತ್ವವನ್ನು ತಿಳಿಸಿಕೊಡಬೇಕು. ಅವನು ಈ ಮೌಲ್ಯಗಳಿಗೆ ಬದ್ಧನಾಗಿಲ್ಲದಿದ್ದರೆ ಹಾಗೆ ಮಾಡಲು ಆಗುವುದಿಲ್ಲ.

ಭಾರತದ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಮೌಲ್ಯಾಭಿವೃದ್ಧಿಗಾಗಿ ಶಿಕ್ಷಣವನ್ನು ಪ್ರತಿಪಾದಿಸಿದೆ. ಯೋಗ್ಯವಾದ ಮೌಲ್ಯಗಳು, ಮಾನವ ಹಕ್ಕುಗಳು ಮತ್ತು ನಾಗರಿಕರ ಮೂಲಭೂತ ಹಕ್ಕುಗಳ ಹೆಣಿಗೆಯ ಅಗತ್ಯವನ್ನು ಒತ್ತಿ ಹೇಳಿದೆ. ಪಠ್ಯಕ್ರಮ ಉಪಕ್ರಮ ಪ್ರತಿಯೊಬ್ಬ ಶಿಕ್ಷಕನೂ ಮೌಲ್ಯಗಳ ಶಿಕ್ಷಕನಾಗಿರಬೇಕು ಮತ್ತು ವೈಯಕ್ತಿಕ ಉದಾಹರಣೆಗಳು ಮತ್ತು ಮನೋಧರ್ಮದ ಬೆಳವಣಿಗೆ ಮತ್ತು ವ್ಯಸ್ಥಾಪಕ ಚಟುವಟಿಕೆಗಳ ಕೌಶಲಗಳು ಮತ್ತು ಕ್ರಿಯಾಯೋಜನೆಯ ಪಠ್ಯ ಚಟುವಟಿಕೆಗಳ ವ್ಯವಹಾರವಾಗಿ ಸಮಗ್ರ ಭಾಗವಾಗಿರಬೇಕೆಂದೂ ಇದು ಮೌಲ್ಯಾಧಾರಿತ ಪ್ರಶಿಕ್ಷಣದಲ್ಲಿ ಕಲಿಯುವವರ ಬಗ್ಗೆ ಎರಡೂ ಕಡೆಯಿಂದಲೂ ಸ್ಪಷ್ಟವಾದ ದೂರದರ್ಶಿತ್ವವಿರುವ ಒಬ್ಬ ಶಿಕ್ಷಕನ ಪಾತ್ರವು ಮಹತ್ವದ್ದಾಗಿರಬೇಕೆಂದು ನಿರೀಕ್ಷಿಸುತ್ತದೆ. ಶಿಕ್ಷಣದ ನೀತಿಗಳು ಮತ್ತು ಕಾರ್ಯಕ್ರಮಗಳ ದಿಶಾ ನಿರ್ದೇಶನ ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಇರಬಹುದಾದ ಧಾರ್ಮಿಕ ಮತ್ತು ಸಾಮಾಜಿಕ– ಸಾಂಸ್ಕೃತಿಕ ಪಕ್ಷಪಾತಗಳನ್ನು ನಿರ್ಮೂಲನ ಮಾಡಬೇಕು ಮತ್ತು ಸಹನೆ ವಿಶ್ವಭ್ರಾತೃತ್ವ, ನ್ಯಾಯ, ಸಮಾನತೆ ಇತ್ಯಾದಿ ಮೌಲ್ಯ ಗಳನ್ನು ಉತ್ತೇಜಿಸುವಂತಿರಬೇಕು. ಈ ಗುರಿಯೆಡೆಗೆ ಭಾರತೀಯ ಶೈಕ್ಷಣಿಕ ನೀತಿ ಯೋಜಕರು, ಸಂಶೋಧಕ ವಿದ್ವಾಂಸರು, ಶೈಕ್ಷಣಿಕ ವ್ಯವಸ್ಥಾಪಕರು ಮತ್ತು ಶಿಕ್ಷಕರು ಸರಿಯಾದ ಕಾರ್ಯಕ್ರಮಗಳನ್ನು ಮತ್ತು ವಿಧಾನಗಳನ್ನು ರೂಪಿಸಿದ್ದಾರೆ. ಪಠ್ಯವಸ್ತು ಮತ್ತು ಪಠ್ಯ ಪುಸ್ತಕಗಳು ಶಿಕ್ಷಣದ ಮೂಲಕ ಎಲ್ಲಾ ಮತಗಳನ್ನು ಗೌರವಿಸುವ,

Digitised by Bharatavani, CIIL

ಪೂಜಿಸುವ, ಸ್ವಾತಂತ್ರ್ಯ ಮತ್ತು ಮತಧರ್ಮವನ್ನು ಪರಿಗಣಿಸದೆ ಪ್ರಜೆಗಳಿಗೆ ಸಂಬಂಧಿಸಿದ ವಿಷಯಗಳನ್ನು ನೋಡುವುದು ಮತ್ತು ನಿರ್ವಹಿಸುವುದಕ್ಕೆ ಸಿದ್ಧವಾಗಿರುವುದು ಮುಂತಾದ ಜಾತ್ಯಾತೀತತೆಯ ತತ್ವಗಳನ್ನು ಎತ್ತಿ ಹಿಡಿಯುವಂತೆ ಯೋಗ್ಯವಾಗಿ ಸಿದ್ಧಪಡಿಸಲಾಗಿದೆ. ಸ್ವಾತಂತ್ರ್ಯವನ್ನು ಗಳಿಸಿದಾಗಿನಿಂದಲೂ ಜಾತ್ಯಾತೀತತೆಯ ಜೊತೆಗೆ ಪ್ರಜಾಪ್ರಭುತ್ವದ ಮೌಲ್ಯಗಳ ಸಂಬಂಧಿಸಿದಂತೆ ತತ್ವಗಳನ್ನು ವ್ಯಾಪಕವಾಗಿ ಪ್ರತಿಪಾದಿಸಲಾಗಿದೆ. ಇವುಗಳು ಶಿಕ್ಷಣದ ಆಚರಣೆ ಮತ್ತು ತತ್ವಗಳನ್ನು ದೃಢಪಡಿಸುವುದೇ ಅಲ್ಲದೆ ಎಲ್ಲಾ ವ್ಯಕ್ತಿಗಳ ಜೀವನ ಮತ್ತು ಸಾಮಾಜಿಕ ಕಾರ್ಯ ನಿರ್ವಹಣೆಯನ್ನು ಮಾರ್ಗದರ್ಶಿಸುವಂತೆ ಅವುಗಳು ಪ್ರಯೋಜನಕ್ಕೆ ಬರುವ ಹಾಗೂ ದಿನನಿತ್ಯದ ಕಾರ್ಯಗಳನ್ನು ಅವಲಂಬಿಸುವ ಸಾಧನವಾಗಿವೆ.

ಮೇಲ್ಕಂಡ ಎಲ್ಲದರ ಪ್ರಮುಖ ಫಲಿತಾಂಶಗಳಲ್ಲಿ ಒಂದೆಂದರೆ ಅದು ವಿಜ್ಞಾನದ ಬೆಳವಣಿಗೆ, ಕಲೆ, ತತ್ವಶಾಸ್ತ್ರ ಮತ್ತು ಕಡೆಗೆ ಮತಧರ್ಮವೂ ಸೇರಿದಂತೆ ಬೆಳವಣಿಗೆಯನ್ನು ಪ್ರತಿಫಲಿಸುವಂತಹ ಆರೋಗ್ಯಕರವಾದ ಬಹುಮುಖೀ ದೃಷ್ಟಿಕೋನದ ಉಗಮವಾಗಿರುವುದು. ಪ್ರಜಾಪ್ರಭುತ್ವದ ಬಹುಮುಖ್ಯ ಸಾರವೇ ಬಹುಮುಖೀ ದೃಷ್ಟಿಕೋನ. ಭಾರತದಲ್ಲಿ ಜಾತ್ಯಾತೀತ ದೃಷ್ಟಿಕೋನವು ಜೀವನದಲ್ಲಿ ಆವಿರ್ಭವಿಸಿದೆ. ಪುನಃ ಒಂದು ಮೂಲಭೂತ ಸಮಸ್ಯೆಯೆಂದರೆ ಅಂಧ ವಿಶ್ವಾಸದ ಬಿಗಿ ಹಿಡಿತಗಳಿಂದ ವ್ಯಕ್ತಿಯನ್ನು ಮುಕ್ತಗೊಳಿಸುವ ತನ್ಮೂಲಕ ಜಾತ್ಯಾತೀತತೆಗೆ ಉತ್ತೇಜನ ನೀಡುವ ತಳಹದಿಯನ್ನು ಒದಗಿಸುವುದೇ ಆದಿಯಾಗಿ ವೈಜ್ಞಾನಿಕ ಮನೋಭಾವವನ್ನು ಬಲಪಡಿಸುವುದು. ವೈಜ್ಞಾನಿಕ ಮನೋ ಭಾವವು ಮುಕ್ತವಾಗಿ ಪ್ರಶ್ನಿಸುವ ಮನೋಧರ್ಮ, ವಿಷಯಗಳನ್ನು ತಾರ್ಕಿಕವಾಗಿ ಮತ್ತು ವಸ್ತುನಿಷ್ಠವಾಗಿ ನೋಡುವ ಮನೋಧರ್ಮ, ಬೆನ್ನು ಹತ್ತಿರುವ ಭೂತಕಾಲದಿಂದ ಸ್ವತಂತ್ರವಾಗುವುದು, ತನ್ನ ಇತಿಹಾಸ ಮತ್ತು ಸಾಧನೆಗಳ ಕಡೆಗೆ ವಿನಮ್ರವಾಗಿ ನೋಡುವ ಮನೋಧರ್ಮವನ್ನು ಅಭಿವ್ಯಕ್ತ ಪಡಿಸುತ್ತದೆ. ಸಹಿಷ್ಣುತೆ ಮತ್ತು ಕರುಣೆಗಳಂತಹ ಮಾನವೀಯ ಮೌಲ್ಯಗಳಷ್ಟೇ ಅಲ್ಲದೆ ಜಾತ್ಯಾತೀತತೆಯು ಅಂತಹುದೇ ವೈಜ್ಞಾನಿಕ ಮೌಲ್ಯಗಳನ್ನು ತಾರ್ಕಿಕತೆ, ವಸ್ತುನಿಷ್ಠತೆ ಮತ್ತು ಮುಕ್ತ ಮನಸ್ಸಿನಿಂದ ಉತ್ತೇಜಿಸುತ್ತದೆ.

ರಾಜಕೀಯ ಸಂಸ್ಥೆಗಳಿಂದ ಮತಧರ್ಮವನ್ನು ಬೇರ್ಪಡಿಸುವುದರಲ್ಲಿ ಅದರ ತಾರ್ಕಿಕತೆಯ ಪರಾಕಾಷ್ಠೆಯು ವಿದಿತವಾಗುತ್ತದೆ. ಮತಧರ್ಮವು ತನ್ನ ಕಠಿಣ ಮೌಲ್ಯಗಳು ಮತ್ತು ಸಾಮಾಜಿಕ ಸಂರಚನೆಗಳಿಂದ ಆಗಾಗ್ಗೆ ಸಾಮಾಜಿಕ ಪರವರ್ತನೆಯನ್ನು ಅಡ್ಡಿಪಡಿಸುತ್ತದೆ ಮತ್ತು ವೈಜ್ಞಾನಿಕ ಮತ್ತು ತಾರ್ಕಿಕ ಚಿಂತನೆಗಳನ್ನು ಬೆಂಬಲಿಸುವುದಿಲ್ಲ. ಭಾರತದಲ್ಲಿ ಜಾತ್ಯಾತೀತತೆಯ ಜಾತಿ ಮತ್ತು ಪಂಥಗಳ ಅನಾರೋಗ್ಯಕರ ಪ್ರಭಾವಕ್ಕೆ ಒಳಗಾಗದಂಥ ಸ್ವರೂಪವನ್ನು ಪ್ರತ್ಯೇಕಿಸಲು ಅವಕಾಶ ಒದಗಿದೆ. ಸರಿಯೋ ತಪ್ಪೋ ಆಗಿ ವಿವಿಧ ಮತಧರ್ಮಗಳಲ್ಲಿ ಸೇರಿರುವ ವಿವಿಧ ಐತಿಹ್ಯಗಳು, ನಂಬಿಕೆಗಳು ಮತ್ತು ಅಂಧಾಚರಣೆಗಳು ಬದಲಾವಣೆ ಮತ್ತು ಪ್ರಗತಿಯ ಹಾದಿಗೆ ಅಡ್ಡಿಯಾಗಿವೆ. ಲೌಕಿಕ ಮತ್ತು ಆಧ್ಯಾತ್ಮಿಕಗಳ ನಡುವೆ ಆರೋಗ್ಯಕರ ಸಮತೋಲನ ಕಾಪಾಡಲು ಜಾತ್ಯಾತೀತತೆ ಪರಿಣಾಮ ಬೀರಿ ಸಹಾಯಕವಾಗಿದೆ.

**ಭಾರತದಲ್ಲಿ ಜೀವನವನ್ನು ಉತ್ತಮಗೊಳಿಸಲು ಜಾತ್ಯತೀತತೆಯು ಹೇಗೆ ಸಹಾಯಕವಾಗಿದೆ?:** ಭಾರತವು ಬಹುಜಾತಿಗಳ–ಮತಗಳ ದೇಶ. ಪ್ರಜಾಪ್ರಭುತ್ವದ ತಳಹದಿಯನ್ನು ಬಲಪಡಿಸುವ ಉದ್ದೇಶ್ಯದಿಂದ ಅದು ಜಾತ್ಯಾತೀತ ರಾಷ್ಟ್ರವನ್ನು ಆಯ್ಕೆ ಮಾಡಿಕೊಂಡಿದೆ. ನೆಹರೂ ಅವರ ದೂರದರ್ಶಿತ್ವದ ಪರಿಕಲ್ಪನೆಯ ಭಾರತಕ್ಕಾಗಿ–ಕಲ್ಯಾಣ ರಾಜ್ಯ–ಉತ್ತಮ ಸಮಾಜದ ಆಲೋಚನೆಯೊಡನೆ ಜಾತ್ಯಾತೀತತೆಯು ಬೆಸುಗೆ ಹೊಂದಿದೆ. ಅನೇಕ ವೇಳೆ ಜಾತ್ಯಾತೀತತೆ ಅಲ್ಪ ಸಂಖ್ಯಾತ ಧಾರ್ಮಿಕ ಗುಂಪುಗಳಿಗೆ ಸುಭದ್ರತೆಯ ಭರವಸೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಧಿಕೃತವಾದ ಮತಧರ್ಮದ ಗೈರುಹಾಜರಿಯನ್ನು ಸೂಚಿಸುವುದಕ್ಕಿಂತ ಹೆಚ್ಚಿನದಲ್ಲ ಎಂದು ತಿಳಿಯಲಾಗುತ್ತದೆ. ಆದರೆ ಇದು ಸಂಕುಚಿತ ದೃಷ್ಟಿಯಾಗಿದೆ. ನೆಹರೂ ಅವರ ಅಭಿಪ್ರಾಯದಲ್ಲಿ ಅವರು ಅದನ್ನು ಒಂದು ಅತ್ಯಾವಶ್ಯಕ ಮೂಲಾಂಶವಾಗಿ ಮತ್ತು ಭಾರತೀಯ ಪ್ರಜಾಪ್ರಭುತ್ವದ ಸಾಧನವಾಗಿ ಎಲ್ಲ ವಿಧದಲ್ಲಿಯೂ ಬೆಳೆಸಬೇಕೆಂದಿದ್ದರು. ಮತಧರ್ಮದ ಕಂದಾಚಾರಗಳ ಅಡೆತಡೆಗಳಿಂದ ನಮ್ಮ ಮನಸ್ಸನ್ನು ಮುಕ್ತಗೊಳಿಸುವುದು ಅವರ ಮುಖ್ಯ ಧೋರಣೆಯಾಗಿತ್ತು. ಅವರ ಜಾತ್ಯತೀತತೆಯ ಮತಧರ್ಮಗಳ ದೃಷ್ಟಿಗಳ ಫಲಿತಾಂಶ ಮತ್ತು ಜೀವನದ ಬಗೆಗಿನ ದೃಷ್ಟಕೋನ ಅದರಲ್ಲಿ ಅಡಕವಾಗಿದೆ. ಅವರ ಈ ದೃಷ್ಟಿಕೋನವನ್ನು ವ್ಯಾಪಕವಾಗಿ ಮಾನವಪರ ಎಂದು ವಿವರಿಸಬಹುದು. ಅದು ಹಲವು ಮೂಲಭೂತ ಮಾನವೀಯ ಮೌಲ್ಯಗಳನ್ನು ಆಧರಿಸಿದೆ. ವಿಜ್ಞಾನವು ಕೇವಲ ಲೌಕಿಕ ಪ್ರಗತಿಯ ಒಂದು ಮಧ್ಯ ಮಾರ್ಗವಷ್ಟೇ ಅಗಿರದೆ ಅದನ್ನು ಸತ್ಯದ ಅನ್ವೇಷಣೆ ಎಂದೂ ನೋಡಲಾಗಿದೆ.

ಸ್ವಾತಂತ್ರ್ಯ ಪಡೆದಾಗಿನಿಂದ ಆಳವಾಗಿ ಮತ್ತು ವಿಸ್ತಾರವಾಗಿಸುವ ನಿಟ್ಟಿನಲ್ಲಿ ಆರಂಭವಾದ ಜಾತ್ಯತೀತೀಕರಣವನ್ನು ಈಗಲೂ ಅಳವಡಿಸುತ್ತಲೇ ಇರುವುದಕ್ಕೆ ನಿದರ್ಶನಗಳು ಕಂಡುಬರುತ್ತವೆ. ಅವುಗಳೆಂದರೆ, ಕಾನೂನಿನ ಇದಿರು ಎಲ್ಲಾ ನಾಗರಿಕರೂ ಸಮಾನರೆಂಬ ಸಂವಿಧಾನಿಕ ಮಾನ್ಯತೆ, ಸಾರ್ವತ್ರಿವಾಗಿ ವಯಸ್ಕರು ಮತದಾನದ ಮೂಲಕ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ, ಅಭಿವೃದ್ಧಿಯ ಆಯೋಜಿತ ಒಂದು ಕ್ರಿಯಾ ಯೋಜನೆಯನ್ನು ಕೈಗೊಳ್ಳುವುದು, ಕಡೆಗೆ ಸಮಗ್ರ ಅಭಿವೃದ್ಧಿಗಾಗಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣವನ್ನು ಸಾಮಾನ್ಯ ಮಾರ್ಗವೆಂದು ಅಂಗೀಕರಿಸುವುದು. ಇತ್ತೀಚಿನ ದಶಕಗಳಲ್ಲಿ ಭಾರತೀಯರು ಹೇಗೆ ಜಾತ್ಯತೀತವಾದಿಗಳಾಗಿದ್ದಾರೆ ಎಂಬುದರ ಹಾಗೂ ಭಾರತದ ಜನರು ಜಾತ್ಯತೀತತೆಯಿಂದ ಹೇಗೆ ಸಹಾಯ ಪಡೆದಿದ್ದಾರೆ ಎಂಬ ಮಾರ್ಗವನ್ನು ಕುರಿತು ಸಾಕ್ಷ್ಯಾಧಾರ ಪಟ್ಟಿಯನ್ನು ಯಾರಾದರೂ ಮಾಡಬಹುದಾಗಿದೆ. ಹಿಂದೂಗಳಲ್ಲಿರುವ ಪ್ರಾಚೀನ ಕಾಲದ ಅಸ್ಪೃಶ್ಯತೆಯ ಆಚರಣೆಯನ್ನು ದುರ್ಬಲಗೊಳಿಸುವುದು, ಮತಧರ್ಮಗಳ ಮತ್ತು ಸಾಮಾಜಿಕ ಆಚರಣೆಗಳಲ್ಲಿ ಅನಾಸಕ್ತಿಯ ಬೆಳವಣಿಗೆ, ಪುರೋಹಿತ

Digitised by Bharatavani, CIIL

ವರ್ಗಗಳ ಅಧಿಕೃತತೆಯನ್ನು ನಾಶಪಡಿಸುವುದು, ಅಂತರ್ಜಾತೀಯ ವಿವಾಹಗಳನ್ನು ಹೆಚ್ಚಿಸುವುದು, ಕೋಮುವಾದದ ಬಗ್ಗೆ ವ್ಯಾಪಕ ವಿಮರ್ಶೆಯನ್ನು ವ್ಯಕ್ತಗೊಳಿಸುವುದು ಮತ್ತು ರಾಜಕೀಯ ಪಕ್ಷಗಳಿಗೆ ಬಹುಮತೀಯ ಸದಸ್ಯತ್ವವನ್ನು ಮಾಡಿಸುವುದು–ಮುಂತಾದವು ಜಾತ್ಯಾತೀತತೆಯ ಮಹತ್ವದ ಕೊಡುಗೆಗಳಾಗಿವೆ. ದೇವಾಲಯಗಳು, ಮಸೀದಿಗಳು, ಚರ್ಚುಗಳು ಮತ್ತು ಗುರುದ್ವಾರಾಗಳು ಪಕ್ಕ ಪಕ್ಕದಲ್ಲೇ ನಿರ್ಮಾಣವಾಗುತ್ತಿರುವುದು, ತಮ್ಮದೇ ಆದ ರೀತಿಯಲ್ಲಿ ತಮಗೆ ಹೊಂದಿಕೆಯಾಗುವ ಪೂಜಾಸ್ಥಳಗಳಲ್ಲಿ ಗಮನ ಸೆಳೆಯುವಂತೆ ಪೂಜಾಚರಣೆಗಳನ್ನು ಮಾಡುವುದರಿಂದ ಧಾರ್ಮಿಕ ಐಕ್ಯತೆಯ ದೃಷ್ಟಿಯಿಂದ ಉತ್ತಮ ಫಲಿತಾಂಶವಾಗಿದೆ. ವಾಸ್ತವವಾಗಿ ವಿವಿಧ ನಂಬಿಕೆಗಳ ಜನರು ಒಂದೇ ರಸ್ತೆ ಒಂದೇ ಹಳ್ಳಿಯಲ್ಲಿ ವಾಸಿಸುತ್ತ ತಮ್ಮ ಕೆಲಸಗಳನ್ನು ಶಾಂತಿಯಿಂದ ಮತ್ತು ಐಕ್ಯತೆಯಿಂದ ಅನುಸರಿಸುವುದರಿಂದ ಎಲ್ಲರಿಂದಲೂ ಜಾತ್ಯಾತೀತ ಮೌಲ್ಯಗಳಿಗೆ ಸಮಗ್ರವಾದ ಅಂಗೀಕಾರವಾಗಿರುವುದು ವ್ಯಕ್ತಗೊಳ್ಳುತ್ತದೆ.

ಜಾತ್ಯತೀತ ಅನುಭವ ಮತ್ತು ಮಾನವೀಯ ಚಿಂತನೆಗಳು ಭಾರತೀಯ ಸಾಮಾನ್ಯ ಪರಂಪರೆಯ ಸಮಗ್ರ ಭಾಗವಾಗಿ ವಿನ್ಯಾಸಗೊಂಡಿವೆ. ಜಾತ್ಯತೀತತೆಯು ಭಾರತೀಯ ನೈತಿಕಾಚರಣೆಯಲ್ಲಿ ಪ್ರಜೆಗಳ ದಿನನಿತ್ಯದ ಜೀವನ ಮತ್ತು ಆಚರಣೆಗಳಲ್ಲಿ ಪೋಷಿಸಲ್ಪಡಬೇಕಾದ ವಿಷಯವಾಗಿದೆ. ಭಾರತೀಯ ರಾಜ್ಯಾಡಳಿತದ ಪ್ರಮುಖ ವೈಲಕ್ಷಣಗಳಲ್ಲಿ ಒಂದಾಗಿರುವ ಇದು ಭಾರತ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಮನುಕುಲಕ್ಕೆ ಉತ್ತಮ ಭವಿಷ್ಯ ಮಾರ್ಗವನ್ನು ಸೂಚಿಸುತ್ತಿರುವ ಈ ಭಾವನೆ ಎಲ್ಲಾ ಜನರಿಗೂ ಮತ್ತು ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಒಂದು ಸಂದೇಶವನ್ನು ಬೀರುತ್ತದೆ.

**ಮೂಲ: ಸಿ. ಎಲ್. ಆನಂದ್**
**ಅನು: ಪ್ರೊ. ರತ್ನಮ್ಮ ಕೆ. ಎಸ್.**

## ಶಿಕ್ಷಣಕ್ಕೆ ಔದ್ಯೋಗಿಕ ನೆಲೆ

**ಪೀಠಿಕೆ:**

ಪ್ರಾರಂಭದಲ್ಲಿಯೇ ಈ ಲೇಖನದ ವ್ಯಾಪ್ತಿಯನ್ನು ತಿಳಿಯಪಡಿಸುವುದು. ಅಪೇಕ್ಷಣೀಯ. ಇದು ಶಾಲೆ ಮತ್ತು ವಿಶ್ವವಿದ್ಯಾನಿಲಯಗಳ ಸ್ತರದಲ್ಲಿ ಸಾಮಾನ್ಯ ಶಿಕ್ಷಣವ್ಯವಸ್ಥೆಯಲ್ಲಿ ಉದ್ಯೋಗಪರತೆಯ ನೆಲೆಯನ್ನು (Orientation) ಪರಿಗಣಿಸುತ್ತದೆ. ಸಂಸ್ಥೆಗಳಲ್ಲಿ ವಿಶೇಷ ಉದ್ದೇಶವನ್ನಿಟ್ಟುಕೊಂಡಿರುವ ಪೂರ್ಣರೂಪದ ಉದ್ಯೋಗಪರ ಶೈಕ್ಷಣಿಕ ಕಾರ್ಯಕ್ರಮಗಳು ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಉದ್ಯೋಗಪರ ಶಿಕ್ಷಣದ ಪರಿಕಲ್ಪನೆ ಸ್ವತಃ ಶಿಕ್ಷಣದಂತೆಯೇ ವಿಕಾಸದ ದೀರ್ಘ ಪ್ರಕ್ರಿಯೆಗೆ ಒಳಗಾಗಿದೆ. ಪುರಾತನ ಭಾರತದಲ್ಲಿ ಜ್ಞಾನಾರ್ಜನೆಯಾಗಲಿ ಅಥವಾ ಕುಶಲತೆಗಳ ಸಂಪಾದನೆಯಾಗಲಿ ಗುರುಕುಲ ವ್ಯವಸ್ಥೆಯ ಮುಖಾಂತರವೇ ಸಾಧ್ಯವಾಗುತ್ತಿತ್ತು. ಕುಟುಂಬದ ಪರಿಸರವೇ ಶಾಲೆಯಂತಿತ್ತು. ತಂದೆತಾಯಿಗಳೇ, ಬಹುತೇಕ ತಂದೆಯೇ ಶಿಕ್ಷಕನಾಗಿರುತ್ತಿದ್ದನು. ಕೃಷಿ ಆರ್ಥಿಕ ವ್ಯವಸ್ಥೆಗೆ ಬೇಕಾದ ಮಾನವ ಬಲಕ್ಕೆ ಈ ವ್ಯವಸ್ಥೆ ಪರ್ಯಾಪ್ತವಾಗಿತ್ತು. ಇಂದಿಗೂ, ಈ ವ್ಯವಸ್ಥೆ ಇಳಿಮುಖವಾಗುತ್ತಿದ್ದರೂ ಸಹ ಗ್ರಾಮೀಣ ಆರ್ಥಿಕತೆಯನ್ನು ಮುನ್ನೆಡೆಸುತ್ತಿರುವ ಬಡಗಿ, ಗಾರೆ ಕೆಲಸದವ, ರೈತ, ಕಮ್ಮಾರ ಮತ್ತು ಅಸಂಖ್ಯ ಇನ್ನಿತರ ಕಸುಬುದಾರರಂತಹ ಕರಕುಶಲಗಾರರ ಅತ್ಯಧಿಕ ಮೂಲವಾಗಿದೆ. ಇಂದಿಗೂ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳನ್ನು ಬಹುತೇಕ ಗುರು–ಶಿಷ್ಯ ಸಂಪ್ರದಾಯದ ಮೂಲಕವೇ ಕಲಿಯಲಾಗುತ್ತಿದೆ. ಇಂತಹ ಆಚರಣೆಗಳು ಉದ್ದೇಶದೊಂದಿಗೆ ಸ್ಥಾಪಿತವಾದ ಸಂಸ್ಥೆಗಳಲ್ಲಿನ ಔಪಚಾರಿಕ ತರಬೇತಿಗೆ ಜಾಗ ಮಾಡಿಕೊಡಲು ಕೆಲವು ಕಾಲ ಬೇಕಷ್ಟೇ.

ಕೈಗಾರಿಕೆಯ ಸಂಸ್ಕೃತಿಯ ಮುನ್ನಡೆಯೊಂದಿಗೆ ತಂತ್ರಜ್ಞಾನವು ಕರಕುಶಲತೆಯನ್ನು ಕ್ರಮೇಣ ಸ್ಥಾನಪಲ್ಲಟಗೊಳಿಸಿದೆ. ಈಗಲೂ ಸ್ಥಾನಪಲ್ಲಟಗೊಳಿಸುತ್ತಾ ಇದೆ. ಈ ಮಾರ್ಪಾಡಿಗೆ ಸಂಪೂರ್ಣ ಹೊಸವರ್ಗದ ಕರಕುಶಲಗಾರರು ಮತ್ತು ತಂತ್ರಜ್ಞರ ಅವಶ್ಯಕತೆಯಿದೆ. ವೈವಿಧ್ಯಮಯ ಉದ್ಯೋಗಗಳಿಗೆ ಅವಶ್ಯವಿರುವ ಸಂಖ್ಯೆ ಮತ್ತು ತರಬೇತಿ ಇವೆರಡನ್ನೂ ಪೂರೈಸುವ ಕೆಲಸ 'ಗುರುಕುಲ' ವ್ಯವಸ್ಥೆಗೆ ನಿಲುಕದ್ದು. ವಿವಿಧ ನಾಮಧೇಯಗಳಡಿಯಲ್ಲಿ ಪ್ರಾರಂಭಗೊಂಡ ಔದ್ಯೋಗಿಕ ಶಾಲೆಗಳಿಗೆ ನಾವು ಸಾಕ್ಷಿಯಾಗಿದ್ದೇವೆ ಹಾಗೂ ಇವುಗಳು ಸಾಮಾನ್ಯ ಶಾಲಾ ವ್ಯವಸ್ಥೆಯಿಂದ ಹೊರಗಿದ್ದವು ಮತ್ತು ಈಗಲೂ ಇವೆಯಲ್ಲದೆ ಶ್ರಮಿಕ ವಿಭಾಗದ ಭಾಗಗಳಾಗಿವೆ.

ಸಾಂಪ್ರದಾಯಿಕವಾಗಿ, ಔದ್ಯೋಗಿಕವೆಂದರೆ ವಿಶ್ವವಿದ್ಯಾನಿಲಯ ಸ್ತರಕ್ಕೆ ಕೆಳಗಿನ ಶಿಕ್ಷಣ ಮತ್ತು ತರಬೇತಿಯಾಗಿದ್ದು, ಪ್ರಾಥಮಿಕ ಮತ್ತು ಮಾಧ್ಯಮಿಕ ವಯೋಮಾನ ಮಟ್ಟದಲ್ಲಿ ಕೈಕೆಲಸ ಅಥವಾ ಕುಶಲತೆಯ ಸಂಪಾದನೆ ಎಂದಾಗಿತ್ತು. ಆದರೆ, ಈ ಪರಿಕಲ್ಪನೆ ಪ್ರಗತಿಶೀಲ ವಿಕಾಸವನ್ನು ಹೊಂದಿದ್ದು, ಈ ನುಡಿಗಟ್ಟು ಒಂದೆಡೆ ಮಾಧ್ಯಮಿಕ ಶಾಲೆ ಮತ್ತು ಇದಕ್ಕೆ ಕೆಳಗಿನ ಮಟ್ಟದಿಂದ ಮತ್ತೊಂದೆಡೆ ಸಾಧಾರಣವಾಗಿ ವೃತ್ತಿಕುಶಲತೆಯ ಅಭಿವೃದ್ಧಿಯನ್ನು ಒಳಗೊಳ್ಳುವ ಕಾರ್ಯಕ್ರಮಗಳಾಗಿರುವ ವಿಶ್ವವಿದ್ಯಾನಿಲಯದ ಪದವಿಯವರೆಗಿನದನ್ನು ಸೂಚಿಸುತ್ತದೆ.

**ಐತಿಹಾಸಿಕ ಪುನರಾವಲೋಕನ:**

ವುಡ್ಸ್‌ನ ವರದಿ (1854–Wood's Dispatch) ಎಂದು ಹೆಸರಾಗಿರುವ ವರದಿಯಲ್ಲಿ ಜೀವನಕ್ಕೆ ಸಿದ್ಧತೆಯ ರೂಪದಲ್ಲಿರುವ ವಿಷಯಗಳನ್ನು ಔಪಚಾರಿಕ ಶಾಲಾಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಬೇಕು ಎನ್ನುವುದರ ಬಗ್ಗೆ ಪ್ರಮುಖ ಉಲ್ಲೇಖವಿದೆ. ಈ ವರದಿ "ಮಾಧ್ಯಮಿಕ ಶಾಲೆಯ ಬೋಧನೆ ಭಾರತೀಯರಿಗೆ ಅವರ ವಿವಿಧ ಜೀವನಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಉಪಯುಕ್ತವಾಗಿರಬೇಕು" ಎಂದು ಖಚಿತವಾಗಿ ಹೇಳಿತು. ಪ್ರಸ್ತಾವಿತ ಶಾಲೆಗಳು ಈಗಿರುವುದಕ್ಕಿಂತಲೂ ಹೆಚ್ಚಿನ ಅವಕಾಶಗಳನ್ನು

Digitised by Bharatavani, CIIL

ಒದಗಿಸಿಕೊಡಬೇಕಲ್ಲದೆ ಅಂತಹ ಸುಧಾರಿತ ಶಿಕ್ಷಣದ ಗಳಿಕೆ, ಈಗಾಗಲೇ ಅದನ್ನು ಹೊಂದಿರುವವರನ್ನು ಬಾಳಿನ ಪ್ರತಿಯೊಂದು ಸ್ಥಿತಿಯಲ್ಲಿಯೂ ಸಹ ಸಮಾಜದ ಉಪಯುಕ್ತ ಸದಸ್ಯರನ್ನಾಗಿಸುವಂತೆ ಇರಬೇಕು ಎಂದು ವರದಿ ಇಚ್ಛೆ ವ್ಯಕ್ತಪಡಿಸಿತು. ಬಹುಶಃ ಮಾಧ್ಯಮಿಕ ಸ್ತರದಲ್ಲಿ ಔದ್ಯೋಗಿಕ ವಿಷಯದ ಬೋಧನೆಯನ್ನು ಒದಗಿಸುವ ಬಗ್ಗೆ ಇದು ಚಿಂತಿಸಿದ್ದಿರಬೇಕು. ಇದು ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಉದ್ಯೋಗಪರತೆಯ ನೆಲೆಗಟ್ಟಿಗಾಗಿ ಸಲಹೆಗಳು ಪ್ರಾರಂಭವಾದ ಘಟ್ಟವೆಂದು ತಿಳಿಯಬಹುದು. ಆದಾಗ್ಯೂ ನಂತರದ ಆಡಳಿತಗಾರರಿಂದ ಈ ಹಿತಕರ ಸಲಹೆಗೆ ಸಿಗಬೇಕಾದ ಗಮನ ದೊರಕಲಿಲ್ಲ.

ಹಂಟರ್ ನೇತೃತ್ವದ ಶಿಕ್ಷಣ ಆಯೋಗ (1882–83) ಉನ್ನತ ಮಾಧ್ಯಮಿಕ ಘಟ್ಟದಲ್ಲಿ ಔದ್ಯೋಗಿಕ ಕಾರ್ಯಕ್ರಮಗಳಿಗೆ ಅವಕಾಶವಿರಬೇಕು ಎನ್ನುವುದಕ್ಕೆ ಗಣನೀಯ ಗಮನವನ್ನು ನೀಡಿ ಮಾಧ್ಯಮಿಕ ಕಾರ್ಯಕ್ರಮಗಳನ್ನು ಎರಡಾಗಿ ವಿಭಾಗಿಸಿತು. ಒಂದು ಭಾಗವು ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಗೆ ದಾರಿಮಾಡಿ ಮತ್ತೊಂದು ಭಾಗವು ಹೆಚ್ಚಿನ ಪ್ರಾಯೋಗಿಕತೆಯ ಲಕ್ಷಣವುಳ್ಳದಾಗಿದ್ದು, ವಾಣಿಜ್ಯ ಅಥವಾ ಸಾಹಿತ್ಯೇತರ ಉದ್ಯೋಗಕ್ಕೆ ಹೋಗುವ ಯುವಕರಿಗೆ ಉದ್ದೇಶಿತವಾಗಿತ್ತು. ಈ ಸಲಹೆಯನ್ನು ಒಪ್ಪಿಕೊಳ್ಳಲಾಗಿ ಎಲ್ಲ ಪ್ರಾಂತ್ಯಗಳಲ್ಲಿಯೂ ಅನುಷಿಸಲಾಯಿತು. ಆದಾಗ್ಯೂ 1901–02ರ ಪುನರಾವಲೋಕನವು ಔದ್ಯೋಗಿಕ ವಿಷಯಗಳಿಗೆ ಅತ್ಯಲ್ಪ ಬೆಂಬಲ ಲಭ್ಯವಾಗಿದೆಯೆಂದು ತೋರಿಸಿಕೊಟ್ಟಿತು.

**ಸ್ವಾತಂತ್ರ್ಯ ಪೂರ್ವದ ಸುಧಾರಣೆಗಳು:**

ಇಪ್ಪತ್ತನೆಯ ಶತಮಾನದ ಸ್ವಾತಂತ್ರಪೂರ್ವದ ವರ್ಷಗಳಲ್ಲಿ ಕೈಗೊಂಡ ಪ್ರಯತ್ನಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು ದ್ವಿಪ್ರಭುತ್ವ (1921–37) ಕಾಲದಲ್ಲಿಯದು ಹಾಗೂ ಮತ್ತೊಂದು ಪ್ರಾಂತೀಯ ಸ್ವಾಯತ್ತತೆ (1937–47)ಯ ಕಾಲದಲ್ಲಿ ಆದದ್ದು. ದ್ವಿಪ್ರಭುತ್ವ ಕಾಲದ ಈ ಕೆಳಗಿನ ಸಮಿತಿಗಳು ಉಲ್ಲೇಖಾರ್ಹವಾದವು.

- ಮಾಧ್ಯಮಿಕ ಹಾಗೂ ಸೆಕೆಂಡರಿ ಸ್ತರಗಳೆರಡರಲ್ಲಿಯೂ ವಿವಿಧತೆಯನ್ನು ತರುವಂತೆ ಶಿಫಾರಸ್ಸು ಮಾಡಿದ ಹ್ಯಾರ್‌ಟೋಗ್ ಪುನರಾವಲೋಕನ ಸಮಿತಿ (1929)
- ಸಪ್ರು ಅವರ ನೇತೃತ್ವದ ವಿಚಾರಣಾ ಸಮಿತಿ (1934)
- ಪಾಲಿಟೆಕ್ನಿಕ್‌ಗಳ ಜಾಲಬಂಧದ ನಿರ್ಮಾಣಕ್ಕಾಗಿ ಶಿಫಾರಸ್ಸು ಮಾಡಿದ ಅಬಟ್–ವುಡ್ ಸಮಿತಿ (1937)

  ಪ್ರಾಂತೀಯ ಸ್ವಾಯತ್ತತೆಯ ಅವಧಿಯಲ್ಲಿ ನೀಡಲಾದ ಈ ಕೆಳಗಿನ ಸಲಹೆಗಳು ಉಲ್ಲೇಖನಾರ್ಹ.

- ಜೆ. ಸಾರ್ಜೆಂಟ್ ನೇತೃತ್ವದ ಕೇಂದ್ರಿಯ ಶಿಕ್ಷಣ ಸಲಹಾ ಮಂಡಳಿಯ (Central Advisory Board of Education) ವರದಿ.

ಈ ಎಲ್ಲಾ ಪ್ರಯತ್ನಗಳಿಂದ ಮಾಧ್ಯಮಿಕ ಶಾಲಾ ಶಿಕ್ಷಣ ಮಹತ್ತರ ಬದಲಾವಣೆಗಳನ್ನು ತರಲಿಲ್ಲವಾದರೂ ನಲ್ವತ್ತರ ದಶಕದಲ್ಲಿ ನಿಯಮಿತ ಶಾಲಾ ವ್ಯವಸ್ಥೆಯ ಹೊರಗೆ ಕರಕುಶಲಕಲೆಯ ಬೋಧನೆ, ವಾಣಿಜ್ಯ ಮತ್ತು ಕಛೇರಿಯ ಕೆಲಸಗಳಿಗಾಗಿ ಔದ್ಯೋಗಿಕ ಶಿಕ್ಷಣ ಹಾಗೂ ಪ್ರಶಿಕ್ಷಣ ಮತ್ತು ಸಿದ್ಧತೆಗಳಿಗೆ ಅವಕಾಶ ಮಾಡಿಕೊಡುವಲ್ಲಿ ಕೆಲವು ಮಹತ್ತರ ಬೆಳವಣಿಗೆಗಳು ಕಂಡು ಬಂದವು. ಮಾಧ್ಯಮಿಕ ಸ್ತರದಲ್ಲಿ ಔದ್ಯೋಗಿಕ ಶಿಕ್ಷಣಕ್ಕಾಗಿ ಸೌಲಭ್ಯಗಳು ಗಣನೀಯವಾಗಿ ಅಧಿಕಗೊಂಡವು ಮತ್ತು ಕೆಲವು ಬೆಳವಣಿಗೆಗಳು ಈ ಕೆಳಗಿನವುಗಳನ್ನು ಒಳಗೊಂಡಂತಿದ್ದವು: ತಂತ್ರಜ್ಞರಿಗೆ ತರಬೇತಿ ನೀಡಲು ಪಾಲಿಟೆಕ್ನಿಕ್‌ಗಳು; ಕುಶಲತೆಯುಳ್ಳ ಕಾರ್ಮಿಕರ ತರಬೇತಿಗಾಗಿ ಸಂಸ್ಥೆಗಳು; ಕಾರ್ಯಾಲಯ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು: ವೈದ್ಯಕೀಯ ಸಿಬ್ಬಂದಿಯ ತರಬೇತಿಗಾಗಿ ಧನಸಹಾಯದ ಒದಗಣೆ: ಕೃಷಿಕ್ಷೇತ್ರದ ಮಾಧ್ಯಮಸ್ತರದ ಕೆಲಸಗಾರರ ತರಬೇತಿಗಾಗಿ ಕಾರ್ಯಕ್ರಮ.

ಈ ಔದ್ಯೋಗಿಕ ಕಾರ್ಯಕ್ರಮಗಳಲ್ಲಿನ ದಾಖಲಾತಿ ಮಟ್ಟವು ಮಾಧ್ಯಮಿಕ ಸ್ತರದ ಒಟ್ಟು ದಾಖಲಾತಿಯ ಶೇ.10ರಷ್ಟು ತಲುಪಿತು. ಬಹುಪಾಲು ಮಾಧ್ಯಮಿಕ ಶಾಲಾ ಶಿಕ್ಷಣದ ಪರಿಸ್ಥಿತಿಯು ಹಿಂದಿನಂತೆಯೇ ಮುಂದುವರೆಯುತ್ತಿದೆ. ವೈವಿಧ್ಯತೆಗಾಗಿ ನೀಡಿದ ಸಲಹೆಗಳನ್ನು ಅನುಷ್ಠಿಸಲಿಲ್ಲ. ಇಲ್ಲವೇ ಅನುಷ್ಠಿಸಿದ ಪಕ್ಷದಲ್ಲಿ ಅದು ಬಹಳ ಕಾಲ ಮುಂದುವರೆಯಲಿಲ್ಲ. ಸ್ವತಂತ್ರ ಭಾರತವು 1947ರಲ್ಲಿ ಪಡೆದುಕೊಂಡಿದ್ದು ಮೂಲತಃ ಏಕಪಥ ವ್ಯವಸ್ಥೆಯೇ ಆಗಿತ್ತು.

**ಸ್ವಾತಂತ್ರ್ಯೋತ್ತರದ ಕಾಲ:**

ಸ್ವಾತಂತ್ರಾನಂತರ ಡಾ॥ ಎಸ್. ರಾಧಾಕೃಷ್ಣನ್ ಅವರ ನೇತೃತ್ವದಲ್ಲಿನ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವು (1948–49) ವೈವಿಧ್ಯತೆಯ ಶಿಫಾರಸ್ಸು ಮಾಡಿತು. "ಕಾರ್ಯಕ್ರಮಗಳಿಗೆ ಔದ್ಯೋಗಿಕ ಹಿನ್ನೆಲೆಯನ್ನು ನೀಡಿ ನಮ್ಮ ಯುವ ಸ್ತ್ರೀಪುರುಷರ ವಿವಿಧ ಅವಶ್ಯಕತೆಗಳನ್ನು ಪೂರೈಸಲು ವೈವಿಧ್ಯತೆ ಅವಶ್ಯವಿದ್ದು, ಸಮಯದಲ್ಲಿ ವಿಶ್ವವಿದ್ಯಾನಿಲಯದ ಕೋರ್ಸುಗಳಿಗೆ ಸಿದ್ಧತೆಯ ರೂಪದ ಸಾಮಾನ್ಯ ಶಿಕ್ಷಣಕ್ಕೆ ಈ ಕಾರ್ಯಕ್ರಮಗಳ ಸಹಕಾರದ ಮೌಲ್ಯವನ್ನು ಉಳಿಸಿಕೊಳ್ಳಬೇಕು". ಡಾ॥ ಎ.ಎಲ್. ಮೊದಲಿಯಾರ್ (1952–53) ರವರ ನೇತೃತ್ವದ ಮಾಧ್ಯಮಿಕ ಶಿಕ್ಷಣ ಆಯೋಗ ವಿದ್ಯಾರ್ಥಿಯು ಒಂದು ಪಕ್ಷ ಇಚ್ಛಿಸಿದಲ್ಲಿ ಮಾಧ್ಯಮಿಕ ಘಟ್ಟದ ನಂತರ ಜೀವನವನ್ನು ಪ್ರವೇಶಿಸಿ ಯಾವುದಾದರೂ ಕಸುಬನ್ನು ಕೈಗೆತ್ತಿಕೊಳ್ಳುವ ಎಂದು ಅಭಿಪ್ರಾಯ ವ್ಯಕ್ತಪಡಿಸಿತು. ಈ ಸಲಹೆಗಳಿಗೆ ಸ್ಪಂದಿಸುತ್ತಾ ದೇಶದಾದ್ಯಂತ ಬಹೂದ್ದೇಶಿತ ಶಾಲೆಗಳ ಸರಣಿಯೇ ಸ್ಥಾಪನೆಗೊಂಡಿತು. ಆದಾಗ್ಯೂ ಈ ಸುಧಾರಣೆಗಳು ಬಲವನ್ನು ಪಡೆಯಲಿಲ್ಲ; ಸುಧಾರಣೆಗಳನ್ನು ತಂದ ಗತಿಯು ಕ್ರಮೇಣ ನಿಧಾನಗೊಂಡು ವ್ಯವಸ್ಥೆಯು ಬಹುಪಾಲು ಹಿಂದಿನ ಸ್ಥಿತಿಗೆ ತೆರಳಿತು.

Digitised by Bharatavani, CIIL

ಸ್ವತಂತ್ರ ಭಾರತದಲ್ಲಿ ಮಹತ್ವಪೂರ್ಣ ಹೆಜ್ಜೆಯನ್ನು ಪ್ರತಿನಿಧಿಸುವ ಪ್ರೊ. ಕೊಠಾರಿ ಅವರ ನೇತೃತ್ವದಲ್ಲಿ ಶಿಕ್ಷಣ ಆಯೋಗವನ್ನು ರಚಿಸಲಾಯಿತು. ದೇಶದ ವಿಭಿನ್ನತೆ, ರಚನೆಗಳು ಹಾಗೂ ಅಭ್ಯಾಸಗಳ ಹಿನ್ನೆಲೆಯಲ್ಲಿ ಶಿಕ್ಷಣದ ಸಮಗ್ರ ದೃಷ್ಟಿಕೋನವನ್ನು ಹೊಂದಲು ಮತ್ತು ರಾಷ್ಟ್ರೀಯ ಮಾದರಿ ಎನ್ನಬಹುದಾದ ಮಾದರಿಯೊಂದನ್ನು ವಿಕಾಸಗೊಳಿಸಲು ರಾಷ್ಟ್ರದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಗುರಿಗಳು ಹಾಗೂ ಆಕಾಂಕ್ಷೆಗಳಿಗೆ ಸಂಬಂಧಿಸಿದಂತೆ ಖಚಿತವಾಗಿ ಗುರಿಗಳನ್ನು ವ್ಯಾಖ್ಯಾನಿಸಲು ಈ ಆಯೋಗವನ್ನು ರಚಿಸಲಾಯಿತು. ಒಂದು ವಿಧದಲ್ಲಿ ಆಯೋಗದ ಸಲಹೆಗಳ ಗಮನ ಕೇಂದ್ರ ಅಭಿವೃದ್ಧಿಗಾಗಿ ಶಿಕ್ಷಣದ ಕಡೆಗೆ ಇತ್ತು.

**ಕೊಠಾರಿ ಆಯೋಗದ ಸಲಹೆಗಳು:**

ಔದ್ಯೋಗಿಕರಣಕ್ಕೆ ಸಂಬಂಧಿಸಿದಂತೆ ಎಪ್ಪತ್ತು ಮತ್ತು ಎಂಭತ್ತರ ದಶಕಗಳಲ್ಲಿ ನಮ್ಮ ಎಲ್ಲಾ ಪ್ರಯತ್ನಗಳಿಗೆ ಕೊಠಾರಿ ಶಿಕ್ಷಣ ಆಯೋಗದ ಸಲಹೆಗಳೇ ಆಧಾರವಾಗಿವೆ. ವರದಿಯ ಮುಖ್ಯ ಸೂಚನೆಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ಅವು ಇಂತಿವೆ.

ಈ ಕೆಳಗಿನವುಗಳನ್ನು ವ್ಯಾಪ್ತಿಯಲ್ಲಿ ತರುವ ನಮ್ಮ ಶೈಕ್ಷಣಿಕ ಸಂರಚನೆಯನ್ನು ನಾವು ದರ್ಶಿಸುತ್ತೇವೆ.

- ಒಂದರಿಂದ ಮೂರು ವರ್ಷಗಳ ಶಾಲಾಪೂರ್ವ ಘಟ್ಟ
- ನಾಲ್ಕು ಅಥವಾ ಐದು ವರ್ಷಗಳ ಕಿರಿಯ ಪ್ರಾಥಮಿಕ ಘಟ್ಟ ಮತ್ತು ಮೂರು ವರ್ಷಗಳ ಹಿರಿಯ ಪ್ರಾಥಮಿಕ ಘಟ್ಟಗಳೆಂಬ ಎರಡು ಉಪ–ಘಟಕಗಳಾಗಿ ವಿಭಾಜಿತಗೊಂಡ ಏಳು ಅಥವಾ ಎಂಟು ವರ್ಷಗಳ ಪ್ರಾಥಮಿಕ ಘಟ್ಟ.
- ಸಾಮಾನ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೂರರಿಂದ ಎರಡು ವರ್ಷಗಳ ಕಿರಿಯ ಪ್ರಾಥಮಿಕ ಅಥವಾ ಪ್ರೌಢಶಾಲಾ ಘಟ್ಟ ಅಥವಾ ಮೂರು ವರ್ಷದ ಔದ್ಯೋಗಿಕ ಶಿಕ್ಷಣ.
- ಮೊದಲನೆಯ ಸ್ನಾತಕ ಪದವಿಗಾಗಿ ಮೂರು ವರ್ಷ ಅಥವಾ ಹೆಚ್ಚಿನ ಅವಧಿಯುಳ್ಳ ಉನ್ನತ ಶಿಕ್ಷಣ ಹಾಗೂ ಇದರ ನಂತರ ಎರಡನೆಯ ಸ್ನಾತಕ ಪದವಿ ಅಥವಾ ವಿಭಿನ್ನ ಅವಧಿಯ ಸಂಶೋಧನಾ ಪದವಿ (ಪಿ.ಎಚ್.ಡಿ) ನಾವು ದರ್ಶಿಸುವುದು ಹೀಗೆ–
- ಪ್ರಾಥಮಿಕ ಘಟ್ಟದ ಅಂತ್ಯದಲ್ಲಿ ವಿದ್ಯಾರ್ಥಿಗಳಲ್ಲಿ ಕೆಲವು ಭಾಗ ಶಾಲಾ ವ್ಯವಸ್ಥೆಯಿಂದ ಹೊರಗೆ ಹೋಗಿ ಔದ್ಯೋಗಿಕ ಜೀವನವನ್ನು ಹಿಡಿಯುವರು (ಸುಮಾರು 20%); ಮತ್ತಷ್ಟು ಭಾಗ ಸಾಮಾನ್ಯ ಶಿಕ್ಷಣದ ಮುಖ್ಯ ಪ್ರವಾಹದಿಂದ ಒಂದರಿಂದ ಮೂರು ವರ್ಷದ ವಿವಿಧ ಔದ್ಯೋಗಿಕ ಕಾರ್ಯಕ್ರಮಗಳಿಗೆ ಸೇರುತ್ತಾರೆ (ಸುಮಾರು 20%); ಮತ್ತು ಉಳಿದವರು ಸಾಮಾನ್ಯ ಶಿಕ್ಷಣದ ಪ್ರವಾಹದಲ್ಲಿಯೇ ಮುಂದುವರೆಯುತ್ತಾರೆ (ಸುಮಾರು 60%);
- ಹತ್ತು ವರ್ಷದ ಶಾಲಾ ಶಿಕ್ಷಣದ ನಂತರ ಒಂದು ಬಾಹ್ಯ ಪರೀಕ್ಷೆಯಿರುವುದು.
- ಹತ್ತು ವರ್ಷದ ಅಂತ್ಯದಲ್ಲಿನ ದರ್ಜೆ (Standard)ಯು ಪಠ್ಯಕ್ರಮ ಮತ್ತು ಈ ಘಟ್ಟದ ಕೊನೆಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ರಾಷ್ಟ್ರೀಯ ದರ್ಜೆಯ ಸ್ತರಗಳಿಗೆ ಹೋಲಿಸುವಂತಿದೆ;
- ಹತ್ತು ವರ್ಷದ ಶಾಲಾ ಶಿಕ್ಷಣದ ಕೊನೆಯಲ್ಲಿ, ವಿದ್ಯಾರ್ಥಿಗಳಲ್ಲಿ ಕೆಲವು ಭಾಗ ಶಾಲಾವ್ಯವಸ್ಥೆಯಿಂದ ಹೊರಗೆ ನಡೆದು ಔದ್ಯೋಗಿಕ ಜೀವನವನ್ನು ಪ್ರವೇಶಿಸುತ್ತಾರೆ (ಸುಮಾರು 40%); ಮತ್ತಷ್ಟು ಭಾಗ ಸಾಮಾನ್ಯ ಶಿಕ್ಷಣದ ಪ್ರವಾಹದಿಂದ ಹೊರಗೆ ಬಂದು ಒಂದರಿಂದ ಮೂರು ವರ್ಷ ಅವಧಿಯ ಔದ್ಯೋಗಿಕ ಕಾರ್ಯಕ್ರಮಗಳಿಗೆ ಸೇರುತ್ತಾರೆ (ಸುಮಾರು 30%); ಮತ್ತು ಉಳಿದವರು ಒಂದು ಮತ್ತು ಅಂತಿಮವಾಗಿ ಎರಡು ವರ್ಷಗಳ ಅವಧಿಯ ಸಾಮಾನ್ಯ ಶಿಕ್ಷಣದ ಪ್ರವಾಹದಲ್ಲಿ ಮುಂದುವರೆಯುವರು (ಸುಮಾರು 30%);

ಔದ್ಯೋಗಿಕ ಸಂಸ್ಥೆಗಳಲ್ಲಿ ಮತ್ತು ಔದ್ಯೋಗಿಕ ಶಾಲೆಗಳಲ್ಲಿ 8+ ಮತ್ತು 10+ ದರ್ಜೆಗಳ ನಂತರದಲ್ಲಿ ಆಯೋಗವು ಪೂರ್ಣಪ್ರಮಾಣದ ಔದ್ಯೋಗಿಕ ಶಿಕ್ಷಣಕ್ಕೆ ಮಹತ್ತರವಾದ ಒತ್ತನ್ನು ನೀಡಿದೆ ಎಂಬುದನ್ನು ಈ ಮೇಲಿನವುಗಳಿಂದ ತಿಳಿಯಬಹುದು. ಪ್ರಥಮ ದರ್ಜೆಯನ್ನು ಪ್ರವೇಶಿಸಿದ ಕೇವಲ ಶೇ. 18%ರಷ್ಟು ವಿದ್ಯಾರ್ಥಿಗಳು ಮಾತ್ರ ಹಿರಿಯ ಪ್ರಾಥಮಿಕ ಸಾಮಾನ್ಯ ಪ್ರವಾಹ ಅಂದರೆ +2ಗೆ ಪ್ರವೇಶಿಸುತ್ತಾರೆ. ಆದಾಗ್ಯೂ ಈ ಮೇಲಿನ ಸಲಹೆಗಳು ಸಾಮಾನ್ಯ ಶಿಕ್ಷಣದ +2 ಸ್ತರದ ಔದ್ಯೋಗಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶದವಾಗಿದೆಯೆಂದು ತೋರುವುದಿಲ್ಲ. ತದನಂತರ ಎಲ್ಲಾ ವರದಿಗಳ ಗ್ರಹಿಕೆ ಸಾಮಾನ್ಯ ಶಿಕ್ಷಣ ವ್ಯವಸ್ಥೆಯಲ್ಲಿನ +2 ಅನ್ನು ಔದ್ಯೋಗೀಕರಣಗೊಳಿಸುವಿಕೆ ಆಯೋಗದ ಸಲಹೆ ಎಂದೇ ತೋರುತ್ತದೆ.

**ರಾಷ್ಟ್ರೀಯ ಶಿಕ್ಷಣ ನೀತಿ 1968:**

ಕೊಠಾರಿ ಆಯೋಗದ ವರದಿಯನ್ನು ಕುರಿತ ರಾಷ್ಟ್ರವ್ಯಾಪಿ ಚರ್ಚೆಯ ಪರಿಣಾಮವಾಗಿ ಸಂಸತ್ತು 1968ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಳಗೊಳ್ಳುವ ಶಿಕ್ಷಣವನ್ನು ಕುರಿತ ಗೊತ್ತುವಳಿಯನ್ನು ಅಂಗೀಕರಿಸಿತು. ಈ ನೀತಿಯು 10+2 ಮಾದರಿ ಹಾಗೂ +2 ಔದ್ಯೋಗೀಕರಣವನ್ನು ಶಿಫಾರಸ್ಸು ಮಾಡಿತು.

**ಕೇಂದ್ರಿಯ ಶಿಕ್ಷಣ ಸಲಹಾ ಸಮಿತಿಯ (CABE) ಶಿಫಾರಸ್ಸುಗಳು, 1975:**

ಕೇಂದ್ರಿಯ ಶಿಕ್ಷಣ ಸಲಹಾ ಸಮಿತಿ (central Advising Board of Education) ಔದ್ಯೋಗಿಕರಣದಲ್ಲಿ ಪ್ರಮುಖ ಹೆಜ್ಜೆಯನ್ನಿಟ್ಟಿತಲ್ಲದೆ ರಾಷ್ಟ್ರೀಯ ನೀತಿ ಗೊತ್ತುವಳಿಯನ್ನು 975ರಲ್ಲಿ ತನ್ನ 38ನೆಯ ಸಭೆಯಲ್ಲಿ ಸಮ್ಮತಿಸಿ +2 ಘಟ್ಟವನ್ನು ಕಾಲೇಜಿಗೆ ಕೇವಲ ಸಿದ್ಧತೆಯೆಂಬಂತೆ ಮಾತ್ರ ಪರಿಗಣಿಸದೆ, ಶಾಲೆಯನ್ನು ಬಿಟ್ಟುಹೋಗುವ ಅಧಿಕ ಸಂಖ್ಯೆಂಕವನ್ನು ಜೀವನದಲ್ಲಿನ

Digitised by Bharatavani, CIIL

ವಿಭಿನ್ನ ಉದ್ಯೋಗಗಳ ಅವಧಿಯೆಂಬಂತೆ ಕಾಣಬೇಕು ಎಂದು ನಿಗದಿಪಡಿಸಿತು.

ಕೇಂದ್ರಿಯ ಶಿಕ್ಷಣ ಸಲಹಾ ಸಮಿತಿಯ ಸಲಹೆಗಳನ್ನು ಶಿಕ್ಷಣ ಆಯೋಗದ ಸಲಹೆಗಳೊಂದಿಗೆ ಮತ್ತು ರಾಷ್ಟ್ರೀಯ ನೀತಿ ಗೊತ್ತುವಳಿಯೊಂದಿಗೆ (1968) ಸೇರಿಸಿದಾಗ ಔದ್ಯೋಗಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮೂರು ಘಟಕಗಳು ಕಂಡುಬರುವುವು.

(i) 8+ ಘಟ್ಟದಲ್ಲಿ ವಿದ್ಯಾರ್ಥಿಗಳನ್ನು ಪೂರ್ಣ ಪ್ರಮಾಣದ ಔದ್ಯೋಗಿಕ ಶಾಲೆಗಳತ್ತ ತಿರುಗಿಸುವುದು.

(ii) 10+ ಘಟ್ಟದಲ್ಲಿ ವಿದ್ಯಾರ್ಥಿಗಳನ್ನು ಐಟಿಐ ಮತ್ತು ಪಾಲಿಟೆಕ್ನಿಕ್‌ಗಳಂತಹ ಔದ್ಯೋಗಿಕ ಸಂಸ್ಥೆಗಳತ್ತ ಹಾಗೂ ಇತರ ಉದ್ಯೋಗಗಳಿಗೆ ಸಂಬಂಧಿಸಿದ ಸಮನಾದ ಸಂಸ್ಥೆಗಳಿಗೆ ಹೋಗುವಂತೆ ಮಾಡುವುದು.

(iii) ಸಾಮಾನ್ಯ ಶಿಕ್ಷಣ ಪ್ರವಾಹದಲ್ಲಿಯೇ 10+ ಘಟ್ಟದ ವಿದ್ಯಾರ್ಥಿಗಳನ್ನು ಔದ್ಯೋಗಿಕ ಅಥವಾ ಔದ್ಯೋಗೀಕರಣಗೊಳಿಸಿದ ಪ್ರವಾಹದತ್ತ ತಿರುಗಿಸುವುದು (ಇದು ಮುಖ್ಯವಾಗಿ CABE ಸಲಹೆಗಳಿಂದ ಪ್ರೇರಿತವಾಗಿದೆ).

(i) ಮತ್ತು (ii) ನೆಯ ಅಂಶಗಳು ಈಗಾಗಲೇ ಅಸ್ತಿತ್ವದಲ್ಲಿದ್ದು, ಗಣನೀಯವಾಗಿ ಅವುಗಳನ್ನು ವಿಸ್ತರಿಸಿ ವಿವಿಧೀಕರಿಸಬೇಕಾಗಿದೆ.

(iii) ನೆಯ ಅಂಶ ಹೊಸತಾಗಿದ್ದು, ಪ್ರಸ್ತುತ ಲೇಖನದಲ್ಲಿ ಇತರ ವಿಧಗಳ ಔದ್ಯೋಗಿಕ ಶಿಕ್ಷಣವನ್ನು ಚರ್ಚಿಸಿದೆಯಾದರೂ ಇಲ್ಲಿನ ಔದ್ಯೋಗಿಕ ನೆಲೆಯ ಚರ್ಚೆ ಪ್ರಮುಖವಾಗಿ ಇದೇ ಅಂಶವನ್ನು ಕುರಿತದ್ದಾಗಿದೆ.

**ಎನ್.ಸಿ.ಇ.ಆರ್.ಟಿ ದಸ್ತಾವೇಜು:**

ಕೇಂದ್ರಿಯ ಶಿಕ್ಷಣ ಸಲಹಾ ಸಮಿತಿಯು ರಾಜ್ಯಗಳಿಗೆ ಔದ್ಯೋಗೀಕರಣದ ಬಗ್ಗೆ ಸಲಹೆ ನೀಡುವ ಕೆಲಸವನ್ನು ಎನ್.ಸಿ.ಇ.ಆರ್.ಟಿ ಸಂಸ್ಥೆಗೆ ಒಪ್ಪಿಸಿತು. NCERT ಸಂಸ್ಥೆಯು ಹಿರಿಯ ಮಾಧ್ಯಮಿಕ ಶಿಕ್ಷಣ ಮತ್ತು ಇದರ ಔದ್ಯೋಗೀಕರಣ(1976) ಎಂಬ ಶೀರ್ಷಿಕೆಯಡಿ ಮಾರ್ಗದರ್ಶಕ ದಸ್ತಾವೇಜನ್ನು ಸಿದ್ಧಪಡಿಸಿತು. ರಾಷ್ಟ್ರೀಯ ದಸ್ತಾವೇಜು ಎಂದು ಕರೆಯಲಾಗುವ ಈ ವರದಿ ಹಿರಿಯ ಮಾಧ್ಯಮಿಕ ಶಿಕ್ಷಣದ ಔದ್ಯೋಗೀಕರಣಕ್ಕೆ ಸಂಬಂಧಿಸಿದಂತೆ ಪ್ರಮಾಣಭೂತ ಪರಾಮರ್ಶನ ಸಾಮಗ್ರಿಯಾಗಿ ಪರಿಣಮಿಸಿದೆ. ಈ ದಸ್ತಾವೇಜಿನ ಪರಿಣಾಮವಾಗಿ ಸಾಮಾನ್ಯ ಶಾಲಾವ್ಯವಸ್ಥೆಯಲ್ಲಿ ಔದ್ಯೋಗಿಕ ಶಿಕ್ಷಣದ ಮೇಲಿನ ಒತ್ತು ಎಂದರೆ ಹಿರಿಯ ಮಾಧ್ಯಮಿಕ ಶಿಕ್ಷಣ ಔದ್ಯೋಗಿಕರಣ ಎಂದೇ ತಿಳಿಯಲಾಗಿದೆ. ಈ ದಸ್ತಾವೇಜು ಸುನಿಶ್ಚಿತವಾದ ಸಲಹೆಗಳನ್ನು ಮಾಡಿದೆ ಮತ್ತು +2ರ ಘಟ್ಟದಲ್ಲಿ 'ಶೈಕ್ಷಣಿಕ ಪ್ರವಾಹ' ಮತ್ತು 'ಔದ್ಯೋಗಿಕ ಪ್ರವಾಹ'ಗಳನ್ನು ಪ್ರಾರಂಭಿಸಲು ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಿದೆ. ಮಂತ್ರಾಲಯ 1977ರಲ್ಲಿ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಭಾರತ ಸರ್ಕಾರ, ಪಿ. ಸಭಾನಾಯಗಂರವರ ನೇತೃತ್ವದಲ್ಲಿ ಔದ್ಯೋಗಿಕರಣವನ್ನು ಕುರಿತ ಕಾರ್ಯತಂಡವೊಂದನ್ನು ರಚಿಸಿತು. ಈ ಸಮಿತಿಯು 1978ರಲ್ಲಿ ಅನುಷ್ಠಾನದ ನೀತಿ ಮತ್ತು ಆರ್ಥಿಕ ನಿಹಿತಾರ್ಥಗಳನ್ನು ಒಳಗೊಂಡ ತನ್ನ ವರದಿಯನ್ನು ಒಪ್ಪಿಸಿತು.

ಮ್ಯಾಲ್ಕಮ್ ಆದಿಶೇಷಯ್ಯ (1978)ಅವರ ನೇತೃತ್ವದಲ್ಲಿ ರಾಷ್ಟ್ರೀಯ ಪುನರ್ ಪರಿಶೀಲನಾ ಸಮಿತಿಯೊಂದನ್ನು ಭಾರತ ಸರ್ಕಾರ ನೇಮಕ ಮಾಡಿತು. ರಾಷ್ಟ್ರೀಯ ದಸ್ತಾವೇಜನ್ನು ಆಧಾರವಾಗಿಟ್ಟುಕೊಂಡು ಸಮಿತಿಯು ಪಠ್ಯಕ್ರಮ, ಸಾಂಸ್ಥಿಕ ಅವಶ್ಯಕತೆಗಳು, ಮಾನವ ಬಲದ ಸಿದ್ಧತೆ ಮತ್ತು ಅನುಷ್ಠಾನದ ಸಲುವಾಗಿ ದತ್ತಾಂಶಗಳ ಸಂಗ್ರಹಣೆ ಇತ್ಯಾದಿಗಳನ್ನು ಸೂಚಿಸಿತು. ಆದಾಗ್ಯೂ ಸಮಿತಿಯು ರಾಷ್ಟ್ರೀಯ ದಸ್ತಾವೇಜಿನಲ್ಲಿ ಕೆಲವು ಮಾರ್ಪಾಡನ್ನು ಸೂಚಿಸಿತು.

ಕೊಠಾರಿ ಆಯೋಗವು ಪ್ರಾರಂಭಿಕ ಅಧ್ಯಯನಗಳಿಗಾಗಿ ನಾಲ್ಕನೇ ಯೋಜನೆಯ ಅವಧಿಯನ್ನು ಮತ್ತು ಕಾರ್ಯಕ್ರಮದ ಪ್ರಾರಂಭಕ್ಕಾಗಿ ಐದನೆಯ ಯೋಜನೆಯ ಅವಧಿಯನ್ನು ಸಲಹೆ ಮಾಡಿ ಆರನೇ ಯೋಜನೆಯ ಅವಧಿಯ ಅಂತ್ಯದಲ್ಲಿ 10+2ನೆಯ ಘಟ್ಟದಲ್ಲಿ ಶೇ. 50ರಷ್ಟನ್ನು ಔದ್ಯೋಗಿಕ ಪ್ರವಾಹದತ್ತ ತಿರುಗಿಸುವ ಸಾಧನೆಯಾಗುವುದು ಎಂದು ದರ್ಶಿಸಿತು. ಶೇ. 50ರಷ್ಟು ಎಂಬ ಸೂಚನೆ ಬಹುಶಃ ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಪ್ರವೇಶಿಸುವವರನ್ನೂ ಸಹ ಒಳಗೊಳ್ಳುವುದು ಎಂದು ತೋರುವುದು. ಆದಾಗ್ಯೂ ಭಾರತ ಸರ್ಕಾರದ ಪರವಾಗಿ ಸಿದ್ಧಪಡಿಸಲಾಗಿರುವ ಎಲ್ಲಾ ವರದಿಗಳು ಸಾಮಾನ್ಯ ಶಿಕ್ಷಣದ +2ರ ಸ್ತರದಲ್ಲಿನ ಶೇ. 50ರಷ್ಟು ವಿದ್ಯಾರ್ಥಿಗಳನ್ನು ಔದ್ಯೋಗಿಕ ಪ್ರವಾಹದೆಡೆಗೆ ತಿರುಗಿಸಬೇಕು ಎಂಬ ಅರಿವಿನಿಂದ ಕೂಡಿದ್ದಾಗಿದೆ. 1976–77ರಿಂದ ಮೊದಲುಗೊಂಡು ಕೆಲವು ರಾಜ್ಯಗಳು ಯಾವುದೇ ಪ್ರಾರಂಭಿಕ ಅಧ್ಯಯನ ಕೈಗೊಳ್ಳದೆ ಎನ್.ಸಿ.ಇ.ಆರ್.ಟಿ ದಸ್ತಾವೇಜು ಒದಗಿಸಿರುವ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿ ಔದ್ಯೋಗೀಕರಣವನ್ನು ಪ್ರಾರಂಭಿಸಿದವು. ಪ್ರಗತಿ ಮಂದಗತಿಯದಾಗಿತ್ತಾದರೂ, ಇನ್ನೂ ಅಧಿಕ ರಾಜ್ಯಗಳು ಇದೇ ದಾರಿ ಅನುಸರಿಸಿದವು. 1992ರ ವೇಳೆಗೆ ಈ ಯೋಜನೆ 24 ರಾಜ್ಯಗಳು ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆರಂಭವಾಗಿತ್ತು.

**ರಾಷ್ಟ್ರೀಯ ಕಾರ್ಯ ತಂಡ, 1985:**

ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೊಸ ರಾಷ್ಟ್ರೀಯ ನೀತಿಯನ್ನು ರೂಪಿಸಲಾಗುವುದು ಎಂಬ ಪ್ರಧಾನಮಂತ್ರಿಗಳ ಘೋಷಣೆಯ ಪರಿಣಾಮವಾಗಿ ಶಿಕ್ಷಣ ಮಂತ್ರಾಲಯವು ಶಿಕ್ಷಣದ ವಿವಿಧ ಮುಖಗಳನ್ನು ಪರೀಕ್ಷಿಸಲು ಹಲವಾರು ಸಮಿತಿಗಳನ್ನು ಏರ್ಪಡಿಸಿತು. ಅಣ್ಣಾ ವಿಶ್ವವಿದ್ಯಾನಿಲಯದ ಅಂದಿನ ಉಪಕುಲಪತಿಗಳಾದ ಡಾ॥ ವಿ.ಸಿ. ಕುಳಂದೈಸ್ವಾಮಿ ಅವರ ನೇತೃತ್ವದಲ್ಲಿ ಶಿಕ್ಷಣದಲ್ಲಿ ಔದ್ಯೋಗೀಕರಣವನ್ನು ಕುರಿತ ರಾಷ್ಟ್ರೀಯ ಕಾರ್ಯತಂಡವನ್ನು 1985ರಲ್ಲಿ ರೂಪಿಸಲಾಯಿತು. ಈ ಕಾರ್ಯತಂಡವು ಈ ಹಿಂದಿನ

Digitised by Bharatavani, CIIL

ವರದಿಗಳ ಅಂತರ್ವಸ್ತುಗಳನ್ನು ಉಪಯೋಗಿಸಿ ವಿವಿಧ ರಾಜ್ಯಗಳು ಅನುಷ್ಠಿಸಿದ ಕಾರ್ಯಕ್ರಮಗಳ ಪುನರಾವಲೋಕನ ಅಧ್ಯಯನ ಮಾಡಿ, ಅವುಗಳಲ್ಲಿ ಗುರುತಿಸಲಾದ ಲೋಪದೋಷಗಳನ್ನು ಹಾಗೂ ಎದುರಿಸಲಾದ ಸಮಸ್ಯೆಗಳನ್ನು ಪರೀಕ್ಷಿಸಿ ಏಳನೆಯ ಯೋಜನೆಯಲ್ಲಿ ಅನುಷ್ಠಿಸಬಹುದಾದ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಿತು. ಈ ಸಲಹೆಗಳನ್ನು ದೀರ್ಘವಾಗಿ ಚರ್ಚಿಸಲಾಗಿದೆ. ಏಕೆಂದರೆ ಈ ಸಲಹೆಗಳು ಔದ್ಯೋಗೀಕರಣಕ್ಕೆ ಸಂಬಂಧಿಸಿದ ರಾಷ್ಟ್ರೀಯ ಶಿಕ್ಷಣ ನೀತಿ (1986)ಯಲ್ಲಿರುವ ಪ್ರಾವಧಾನಗಳನ್ನು ಅನುಷ್ಠಾನಕ್ಕೆ ತರಲು ಇವು ಆಧಾರವಾಗಿ ಪರಿಣಮಿಸಿದವು.

ಕಾರ್ಯ ತಂಡವು ಹಿಂದಿನವುಗಳಿಗಿಂತ ಕೆಲವು ವಿಷಯಗಳಲ್ಲಿ ವಿಭಿನ್ನವಾದ ದಾರಿ ಹಿಡಿಯಿತು.

(i) ಔಪಚಾರಿಕ ಮತ್ತು ಅನೌಪಚಾರಿಕ ಕಾರ್ಯಕ್ರಮಗಳೆ ರಡರಲ್ಲಿಯೂ ಪ್ರಾಥಮಿಕ ಶಿಕ್ಷಣ ನಂತರದಿಂದ ತೃತೀಯ ಸ್ತರದವರೆಗಿನ ಎಲ್ಲ ಘಟ್ಟಗಳಲ್ಲಿ ಶಿಕ್ಷಣ ಮತ್ತು ಕೌಶಲ ವಿಕಸನಗಳನ್ನು ಒಳಗೊಳ್ಳುವಂತೆ 'ಔದ್ಯೋಗಿಕ ಶಿಕ್ಷಣ' ಎಂಬ ಪದಗುಚ್ಛವನ್ನು ವಿಶಾಲ ಅರ್ಥದಲ್ಲಿ ಈ ಕಾರ್ಯತಂಡವು ಉಪಯೋಗಿಸಿತು. ಇಂಜಿನಿಯರಿಂಗ್, ವೈದ್ಯ, ಕೃಷಿ ಮತ್ತು ಕಾನೂನು ಮುಂತಾದ ಜ್ಞಾನಕ್ಷೇತ್ರಗಳನ್ನು ವೃತ್ತಿಕ್ಷೇತ್ರಗಳೆಂದು ಪರಿಗಣಿಸಲಾಯಿತಾದರೂ ಈ ಎಲ್ಲಾ ವೃತ್ತಿಗಳ ದ್ವಿತೀಯ ಮತ್ತು ತೃತೀಯ ಸ್ತರಗಳಲ್ಲಿನ ಉಪ-ವೃತ್ತೀಯ ಮಾನವ ಸಂಪನ್ಮೂಲದ ಅವಶ್ಯಕತೆಗಳನ್ನು ಪೂರೈಸುವ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮವನ್ನು ಔದ್ಯೋಗಿಕ ಶಿಕ್ಷಣವೆಂದು ಪರಿಗಣಿಸಲಾಗಿದೆ.

(ii) ಕಾರ್ಯತಂಡವು ಔದ್ಯೋಗಿಕ ಶಿಕ್ಷಣ ಮತ್ತು ಶಾಲಾಶಿಕ್ಷಣದ ಎಲ್ಲಾ ಸ್ತರಗಳಲ್ಲಿನ ಶಾಲಾಮಕ್ಕಳ ತರಬೇತಿ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಒಳಗೊಳ್ಳುವಂತೆ ಪರಿಗಣನೆಯ ಅಂಶಗಳನ್ನು (Terms of Reference) ವ್ಯಾಖ್ಯಾನಿಸಿತು. ಪ್ರಾಥಮಿಕ ಶಾಲಾಸಿದ್ಧತೆಯಿಂದ ಹಿಡಿದು ಹಿರಿಯ ಮಾಧ್ಯಮಿಕ ಶಾಲೆಯವರೆಗೆ ವಿವಿಧ ಮಟ್ಟದ ಶಿಕ್ಷಣ ಹಾಗೂ ತರಬೇತಿ ಪಡೆದು ಔಪಚಾರಿಕ ಶಿಕ್ಷಣವನ್ನು ಬಿಟ್ಟು ಔದ್ಯೋಗಿಕ ಪ್ರಪಂಚವನ್ನು ಪ್ರವೇಶಿಸುವ ಸರ್ವರಿಗೂ ಶಾಲಾವ್ಯವಸ್ಥೆಯಲ್ಲಿ ನೀಡಲಾಗಿರುವ ಶಿಕ್ಷಣ ಮತ್ತು ತರಬೇತಿಗಳನ್ನು ಈ ವ್ಯಾಖ್ಯಾನ ಪರಿಗಣಿಸಬೇಕಾಗುವುದು. ತದನುಸಾರವಾಗಿ, ಈ ಕೆಳಗಿನ ಲಕ್ಷ್ಯ ಸಮೂಹಗಳನ್ನು ಗುರುತಿಸಲಾಯಿತು.

i ಒಂದರಿಂದ ಹತ್ತನೇ ತರಗತಿಯವರೆಗಿನ ಶಾಲಾ ಮಕ್ಕಳು

ii +2 ಘಟ್ಟದ ಶಾಲಾ ಮಕ್ಕಳು

iii ಸಾಮಾನ್ಯ ಶಾಲಾವ್ಯವಸ್ಥೆಯ ಹೊರಗುಳಿದಿರುವ ಸಮೂಹ

a) 5ರಿಂದ 10ನೇ ತರಗತಿಯವರೆಗಿನ ಶಾಲೆಯಿಂದ ಹೊರಗುಳಿದವರು.

b) 8+ ಮತ್ತು 10+ ಘಟ್ಟದಲ್ಲಿ ಶಾಲಾ ಶಿಕ್ಷಣವ್ಯವಸ್ಥೆಯನ್ನು ತ್ಯಜಿಸಿ ಸರ್ಟಿಫಿಕೇಟ್ ಮತ್ತು ಡಿಪ್ಲೋಮ ಸ್ತರಗಳಲ್ಲಿ ಔದ್ಯೋಗಿಕ/ ತಾಂತ್ರಿಕ ಅಧ್ಯಯನಗಳನ್ನು ಕೈಗೊಳ್ಳುವ ಸಮೂಹ.

c) ಅತಿ ಭಿನ್ನ ಶೈಕ್ಷಣಿಕ ಸಿದ್ಧತೆಯೊಂದಿಗಿನ ಪೂರ್ಣರೂಪದ ಉದ್ಯೋಗಸ್ಥರು, ಭಾಗಶಃ ಉದ್ಯೋಗಸ್ಥರು ಮತ್ತು ನಿರುದ್ಯೋಗಿಗಳನ್ನು ಒಳಗೊಳ್ಳುವ ಶ್ರಮಿಕ ಗುಂಪು.

iv ಔದ್ಯೋಗಿಕ ಪ್ರವಾಹದಲ್ಲಿ ಮತ್ತಷ್ಟು ಶಿಕ್ಷಣದ ಅವಕಾಶಗಳನ್ನು ಅರಸಿಹೋಗುವ ತೃತೀಯ ಸ್ತರದ ಗುಂಪು.

ಮೇಲೆ ಹೇಳಿರುವ ಲಕ್ಷಿತ ಸಮೂಹಗಳಲ್ಲಿ ಕಾರ್ಯತಂಡವು ಶಾಲಾವ್ಯವಸ್ಥೆ +2 ಘಟ್ಟದವರೆಗಿನ ಹಾಗೂ +2 ಸೇರಿದಂತೆ ಲಕ್ಷಿತ ಸಮೂಹವನ್ನು ಕುರಿತಂತೆ ಔದ್ಯೋಗಿಕ ಶಿಕ್ಷಣವನ್ನು ವಿಸ್ತೃತವಾಗಿ ಪರಿಗಣಿಸಲಾಗಿದೆ.

ತಂಡವು ಇತರ ದಸ್ತಾವೇಜುಗಳಲ್ಲಿ ಗುರುತಿಸಲಾಗಿರುವ ಔದ್ಯೋಗಿಕ ಕ್ಷೇತ್ರಗಳನ್ನು ಹಾಗೂ ಔದ್ಯೋಗಿಕರಣ ಕಾರ್ಯಕ್ರಮವನ್ನು ಪ್ರಾರಂಭಿಸಿರುವ ವಿವಿಧ ರಾಜ್ಯಗಳು ಪಟ್ಟಿ ಮಾಡಿರುವ ಕ್ಷೇತ್ರಗಳನ್ನು ವಿಸ್ತಾರವಾಗಿ ಪರಿಗಣಿಸಿ ಈ ಕೆಳಗಿನ ವರ್ಗೀಕರಣವನ್ನು ಸಲಹೆ ಮಾಡಿತು.

ಕೃಷಿ, ವ್ಯಾಪಾರ ಮತ್ತು ವಾಣಿಜ್ಯ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ; ಆರೋಗ್ಯ ಮತ್ತು ಅರೆ-ವೈದ್ಯಕೀಯ ಸೇವೆಗಳು; ಗೃಹಶಿಕ್ಷಣ; ಮಾನವಿಕ ಕ್ಷೇತ್ರಗಳು; ಹಾಗೂ ಇತರೆ.

ಕಾರ್ಯತಂಡದ ಶಿಫಾರಸ್ಸುಗಳು ಈ ಕೆಳಗಿನಂತಿವೆ.

(i)1ರಿಂದ 10ನೆಯ ತರಗತಿಗಳವರೆಗಿನ ಎಲ್ಲಾ ವಿದ್ಯಾರ್ಥಿಗಳು ಶೇ. 20ರಷ್ಟು ಸಮಯವನ್ನು ಸಾಮಾಜಿಕವಾಗಿ ಉಪಯುಕ್ತವಾದ ಉತ್ಪಾದಕ ಕಾರ್ಯ/ ಕಾರ್ಯಾನುಭವಗಳಲ್ಲಿ (SUPW, WE) ಕಳೆಯಬೇಕು.

(ii) 11 ಮತ್ತು 12ನೆಯ ತರಗತಿಗಳು (ಅಂದರೆ +2) ದಸ್ತಾವೇಜಿನಲ್ಲಿ ಸಲಹೆ ಮಾಡಿರುವಂತೆ ಶೈಕ್ಷಣಿಕ ಪ್ರವಾಹ ಮತ್ತು ಔದ್ಯೋಗಿಕ ಪ್ರವಾಹಗಳನ್ನು ಹೊಂದಿರಬೇಕು. ಶೈಕ್ಷಣಿಕ ವಾಹಿನಿಯ ವಿದ್ಯಾರ್ಥಿಗಳು ಶೇ.20ರಷ್ಟು ಕಾಲದಲ್ಲಿ SUPW ಅಥವಾ ಕಾರ್ಯಾನುಭವವನ್ನು (Work Experience) ಹೊಂದಿರಬೇಕು.

(iii) ಆರೋಗ್ಯ ಮತ್ತು ಸ್ವಾಸ್ಥ್ಯಗಳಂತಹ ಮೂಲಭೂತವಾಗಿ ಅಗತ್ಯವಿರುವ ಕ್ಷೇತ್ರಗಳಿಂದ ಕಲಿಕಾ ಅನುಭವದ ಶೇ. 80ರಷ್ಟನ್ನು ಆಯ್ಕೆ ಮಾಡಿಕೊಳ್ಳುವುದು ಎಂದು ಸೂಚಿಸಲಾಗಿದೆ. ಸ್ಥಳೀಯ ಪರಿಸ್ಥಿತಿಗಳಿಗೆ ತಕ್ಕುದಾದ ಐಚ್ಛಿಕ ಕಾರ್ಯವು ಕಲಿಕಾ ಅನುಭವಗಳ ಶೇ. 20ಕ್ಕಿಂತ ಕಡಿಮೆ ಇರಬೇಕು.

Digitised by Bharatavani, CIIL

ಮಧ್ಯಮ ಸ್ತರದಲ್ಲಿ, ಅಂದರೆ 6ರಿಂದ 8ನೆ ತರಗತಿಯವರೆಗೆ SUPW, WE ಪಠ್ಯಕ್ರಮದ ಅಂತರ್ವಸ್ತು ಸಾಕಷ್ಟು ವಿಶ್ವಾಸ ಮೂಡಿಸುವ ಗುರಿಯನ್ನು ಹೊಂದಿರಬೇಕು. ಈ ಸ್ತರದಲ್ಲಿ ಎಲ್ಲಾ ಪರಿಸ್ಥಿತಿಗಳಲ್ಲಿಯೂ ಕೈಗೊಳ್ಳಲು ಸಾಧ್ಯವಿರುವಂತಹ ಆಹಾರ ಮತ್ತು ಕೃಷಿ, ಆರೋಗ್ಯ ಮತ್ತು ಸ್ವಾಸ್ಥ್ಯ ಹಾಗೂ ಸಾಮಾಜಿಕ ಸೇವೆ ಇತ್ಯಾದಿಗಳಿಗೆ ಸಂಬಂಧಿಸಿದ ಚಟುವಟಿಕೆಗಳು ಒಟ್ಟು ಸಮುದಾಯದ ಶೇ. 50ರಷ್ಟು ಇರಬೇಕು. ಉಳಿದ ಸಮಯವನ್ನು ಆಯಾ ಸ್ಥಳಕ್ಕೆ ಸಂಬಂಧಿಸಿದ ಉತ್ಪಾದನಾಪರ ಪ್ರಾಯೋಜನೆಗಳಿಗೆ ವಿನಿಯೋಗಿಸಬೇಕು.

ಮಾಧ್ಯಮಿಕ ಘಟ್ಟವನ್ನು ಅಂದರೆ 9–10ನೆಯ ತರಗತಿಗಳು, ಮಾಧ್ಯಮಿಕ ಘಟ್ಟಕ್ಕೆ ಸಲಹೆ ಮಾಡಲಾಗಿರುವ ಕಾರ್ಯಕ್ರಮಗಳ ನೇರ ವಿಸ್ತರಣೆಯೆಂದು ಭಾವಿಸಬಹುದು. ಮಾಧ್ಯಮಿಕ ಸ್ತರದಲ್ಲಿನ SUPW/Work Experience ಚಟುವಟಿಕೆಗಳಿಗೆ ಲಭ್ಯವಿರುವ ಸಮಯವನ್ನು ಉತ್ಪಾದಕಪರವಾದ, ಉದ್ಯೋಗ ಪೂರ್ವಕ್ಷೇತ್ರಗಳಿಗೆ ಮತ್ತು ಸೇವಾಪರವಾದ ಇತರ ಕ್ಷೇತ್ರಗಳಿಗೆ 80:20ರ ಅನುಪಾತದಲ್ಲಿ ಹಂಚಬೇಕೆಂದು ಸಲಹೆ ಮಾಡಲಾಗಿದೆ. ಈ ಚಟುವಟಿಕೆಗಳು 10+2 ಘಟ್ಟದ ಔದ್ಯೋಗಿಕ ಕಾರ್ಯಕ್ರಮಗಳಿಗೆ ಸಂಬಂಧಪಡುವುದು ಸೂಕ್ತವೆಂದು ಪರಿಗಣಿಸಲಾಗಿತ್ತು.

(iv) +2 ಘಟ್ಟದ ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮದ ಪಠ್ಯಕ್ರಮ ಘಟಕಗಳು ಇಂತಿದ್ದವು:

(i) ಭಾಷೆ(ಗಳು)

(ii) ಸಂಬಂಧಪಟ್ಟ ವಿಷಯಗಳು ಮತ್ತು ಆಧಾರಭೂತ ಕಾರ್ಯಕ್ರಮಗಳು

(iii) ಔದ್ಯೋಗಿಕ ಸಿದ್ಧಾಂತ ಮತ್ತು ಅದರ ಆಚರಣೆ.

(v) ಆಯ್ಕೆ ಮಾಡಲಾದ ಕಾರ್ಯಕ್ರಮಗಳು ಪ್ರದೇಶದ ಆರ್ಥಿಕ ಜೀವನಕ್ಕೆ ಸಂಬಂಧಪಟ್ಟಂತೆ ಇರಬೇಕಿದ್ದು, ಸಮಂಜಸ ರೀತಿಯಲ್ಲಿ ಕೈಗೊಳ್ಳಲಾದ ಸರ್ವೇಕ್ಷಣೆಯ ಆಧಾರದ ಮೇಲೆ ಗುರುತಿಸಲ್ಪಟ್ಟಿರಬೇಕು.

(vi) ಔದ್ಯೋಗಿಕ ಪ್ರವಾಹದಿಂದ ಹೊರಬರುವ ವಿದ್ಯಾರ್ಥಿಗಳ ಲಂಬಚಲನೆ (Vertical Mobility) ಯ ವಿವಾದಾಂಶವು ಗಣನೀಯವಾಗಿ ಗಮನವನ್ನು ಸೆಳೆಯುವುದರ ಜೊತೆಗೆ ವಿವಾದದ ವಿಷಯವಾಗಿತ್ತು. ಸಾಮಾನ್ಯವಾಗಿ ತೃತೀಯ ಸ್ತರದ ಶಿಕ್ಷಣಕ್ಕೆ ಅವಕಾಶಗಳನ್ನು ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿತ್ತು. ಹಲವು ರಾಜ್ಯಗಳಲ್ಲಿ ಈಗ ಅಸ್ತಿತ್ವದಲ್ಲಿರುವ ಪದವಿ ಮಟ್ಟದ ಕಾರ್ಯಕ್ರಮಗಳಲ್ಲಿ ಔದ್ಯೋಗಿಕ ಪ್ರವಾಹದಿಂದ ಬರುವ ವಿದ್ಯಾರ್ಥಿಗಳಿಗೆ ಅವಕಾಶವಿದೆ. ಈ ಅವಕಾಶವನ್ನು ಮುಂದುವರೆಸಬಹುದು. ಔದ್ಯೋಗಿಕ ಕಾರ್ಯಕ್ರಮಗಳನ್ನು ಇನ್ನೂ ಪ್ರಾರಂಭಿಸಬೇಕಾದಂಥ ರಾಜ್ಯಗಳಲ್ಲಿ ಇಂತಹ ಸೌಲಭ್ಯಗಳಿಗೆ ಅವಕಾಶ ಮಾಡಿಕೊಡಬಹುದು. ಔದ್ಯೋಗಿಕ ಪ್ರವಾಹದ ವಿದ್ಯಾರ್ಥಿಗಳು ಹೊಂದಿರುವ ಕೊರತೆಗಳನ್ನು ನೀಗಿಸಿ ಉನ್ನತ ಶಿಕ್ಷಣದ ಪ್ರವಾಹಗಳಿಗೆ ನೇರವಾಗಿ ಪ್ರವೇಶಿಸಲು ಸಾಧ್ಯವಾಗುವಂತೆ ಸೇತು ಕಾರ್ಯಕ್ರಮಗಳನ್ನು (Bridge Programmes) ವಿನ್ಯಾಸಗೊಳಿಸಿ ಪ್ರಾರಂಭಿಸಬೇಕು.

ಸಂಪೂರ್ಣ ಶೈಕ್ಷಣಿಕ ವಾಹಿನಿ ಮತ್ತು ಸಂಪೂರ್ಣವಾಗಿ ಔದ್ಯೋಗಿಕ ವಾಹಿನಿಯೊಂದಿಗೆ ಅವುಗಳ ವ್ಯಾಪ್ತಿಯ ಕೊನೆಯಲ್ಲಿ ಶೈಕ್ಷಣಿಕ ಮತ್ತು ಔದ್ಯೋಗಿಕ ವಿಷಯಗಳ ಜೋಡಣೆಯನ್ನು ಅಂದರೆ ಎರಡೂ ವಾಹಿನಿಗಳ ನಡುವೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬಹುದು ಎಂಬ ಸಲಹೆಯನ್ನು NCERTಯ ಶಿಕ್ಷಣ ತಜ್ಞರಾಗಲಿ ಅಥವಾ ಭಾರತ ಸರ್ಕಾರದ ಅಧಿಕಾರಿಗಳಾಗಲಿ ಒಪ್ಪಿಕೊಳ್ಳಲಿಲ್ಲ.

(vii) ವಿಶ್ವವಿದ್ಯಾನಿಲಯಗಳು +2 ಘಟ್ಟದ ಔದ್ಯೋಗಿಕ ಕಾರ್ಯಕ್ರಮದ ವಿಸ್ತರಣೆಯ ರೂಪದ ಕೋರ್ಸುಗಳನ್ನು ಪದವಿ ಮಟ್ಟದಲ್ಲಿ ಪ್ರಾರಂಭಿಸಬೇಕು. ಈ ಸೌಲಭ್ಯ ಔದ್ಯೋಗಿಕ ಪ್ರವಾಹದ ಶೇ. 10ರಿಂದ 15ರಷ್ಟು ವಿದ್ಯಾರ್ಥಿಗಳನ್ನು ವ್ಯಾಪ್ತಿಯಲ್ಲಿ ತರುವುದು.

(viii) ಕಾರ್ಯತಂಡವು ಕೇಂದ್ರದಿಂದ ಜಿಲ್ಲೆಯವರೆಗೂ ಸಾಂಸ್ಥಿಕ ಸಂರಚನೆ ಮತ್ತು ವ್ಯವಸ್ಥಾಪನೆಯನ್ನು ಸಾಕಷ್ಟು ಬಲಪಡಿಸುವಂತೆ ಸಲಹೆ ಮಾಡಿತು. ಪ್ರಮುಖ ಸಲಹೆಗಳು ಇಂತಿವೆ.

ಎ) ಕೇಂದ್ರದಲ್ಲಿ ಔದ್ಯೋಗಿಕ ಶಿಕ್ಷಣದ ಜಂಟಿ ಸಮಿತಿ.

ಬಿ) ಕೇಂದ್ರದಲ್ಲಿ ಔದ್ಯೋಗಿಕ ಶಿಕ್ಷಣದ ವಿಭಾಗ ಅಥವಾ ಬ್ಯೂರೋ.

ಸಿ) ಔದ್ಯೋಗಿಕ ಶಿಕ್ಷಣಕ್ಕಾಗಿ ರಾಜ್ಯಸಮಿತಿ

ಡಿ) ರಾಜ್ಯ ಸಮಿತಿಗಾಗಿ ಕಾರ್ಯನಿರ್ವಹಿಸುವ ಸಚಿವಾಲಯದಂತೆ ಶೈಕ್ಷಣಿಕ ಶಿಕ್ಷಣ ವಿಭಾಗ

ಇ) ಔದ್ಯೋಗಿಕ ಶಿಕ್ಷಣ ಮತ್ತು ತರಬೇತಿಯ ಸಲುವಾಗಿ ಜಿಲ್ಲಾಮಟ್ಟದ ಸಂಯೋಜನಾ/ಸಲಹಾ ಸಮಿತಿ.

ಎಫ್) ಸಂಕ್ಷಿಪ್ತವಾಗಿ ಹೇಳುವುದಾದರೆ, ವ್ಯವಸ್ಥಾಪನೆಯ ಐದು ಸ್ತರದ ಶ್ರೇಣಿಗಳನ್ನು ಹಾಗೂ ಕಾರ್ಯಕ್ಷೇತ್ರದ ಆಧಾರದ ಮೇಲೆ ನಾಲ್ಕು ಘಟಕಗಳನ್ನು – ರಾಷ್ಟ್ರೀಯ, ಪ್ರಾದೇಶಿಕ, ರಾಜ್ಯ, ಜಿಲ್ಲೆ ಮತ್ತು ಸಾಂಸ್ಥಿಕ ಹೊಂದಬಹುದಾಗಿದೆ.

ಕಾರ್ಯವನ್ನು ಆಧರಿಸಿದ ನಾಲ್ಕು ಘಟಕಗಳು ಇವುಗಳನ್ನು ಒಳಗೊಳ್ಳುತ್ತವೆ. ನೀತಿರೂಪಕ ಮತ್ತು ಸಂಯೋಜಕ ಅಂಗಗಳು; ಸಂಶೋಧನೆ, ಬೆಳವಣಿಗೆ ಮತ್ತು ಶಿಕ್ಷಕ ತರಬೇತಿ ಸಂಸ್ಥೆಗಳು; ಸಂಪೂರ್ಣ ಆಡಳಿತಕ್ಕಾಗಿ ಮಂತ್ರಾಲಯಗಳು ಮತ್ತು ನಿರ್ದೇಶನಾಲಯಗಳು ಮತ್ತು ಪರೀಕ್ಷಾ ಬೋರ್ಡುಗಳು (ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ)

Digitised by Bharatavani, CIIL

**ರಾಷ್ಟ್ರೀಯ ಶಿಕ್ಷಣ ನೀತಿ 1986:**

ರಾಷ್ಟ್ರೀಯ ಶಿಕ್ಷಣ ನೀತಿ 1986, ಇತರ ವಿಷಯಗಳ ಜೊತೆ ಈ ಕೆಳಗಿನವುಗಳನ್ನು ಹೇಳುವುದು:

5.16 ಪ್ರಸ್ತಾಪಿಸಲಾಗಿರುವ ಶೈಕ್ಷಣಿಕ ಪುನರ್ರಚನೆಗೆ ವ್ಯವಸ್ಥಿತ, ಸುಯೋಜಿತ ಮತ್ತು ಕಠಿಣವಾಗಿ ಅನುಷ್ಠಾನಕ್ಕೆ ತರಲಾಗುವ ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸುವುದು ಅತ್ಯಾವಶ್ಯಕ. ಕುಶಲ ಮಾನವಶಕ್ತಿಯ ಬೇಡಿಕೆ ಮತ್ತು ಪೂರೈಕೆಯ ನಡುವಿನ ತಾರತಮ್ಯವನ್ನು ಕಡಿಮೆ ಮಾಡಲು ವೈಯಕ್ತಿಕ ಔದ್ಯೋಗಿಕ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ನಿರ್ದಿಷ್ಟ ಆಸಕ್ತಿ ಅಥವಾ ಉದ್ದೇಶವಿಲ್ಲದೆ ಉನ್ನತ ಶಿಕ್ಷಣವನ್ನು ಪಡೆಯುತ್ತಿರುವವರಿಗೆ ಪರ್ಯಾಯವನ್ನು ಒದಗಿಸಲು ಈ ಘಟಕಗಳು ಅವಶ್ಯವಾಗಿವೆ.

5.22 ಶೈಕ್ಷಣಿಕ ಪ್ರವಾಹದ ಮಾಧ್ಯಮಿಕ ಕಾರ್ಯಕ್ರಮಗಳಿಂದ ಪದವಿ ಪಡೆಯುವ ಹಾಗೂ ಔದ್ಯೋಗಿಕ ಕಾರ್ಯಕ್ರಮಗಳ ಅವಶ್ಯಕತೆ ಬೀಳುವ ಸಂಭವವಿರುವ ಯುವ ವಿದ್ಯಾರ್ಥಿಗಳಿಗೆ ತೃತೀಯ ಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

5.23 ಔದ್ಯೋಗಿಕ ಕಾರ್ಯಕ್ರಮಗಳು 1990ರ ವೇಳೆಗೆ ಶೇ. 10ರಷ್ಟು ಹಾಗೂ 1995ರ ವೇಳೆಗೆ ಶೇ. 25ರಷ್ಟು ವಿದ್ಯಾರ್ಥಿಗಳನ್ನು ವ್ಯಾಪ್ತಿಗೆ ತರುವುದು ಎಂದು ಪ್ರಸ್ತಾಪಿಸಲಾಗಿದೆ. ಪ್ರಾರಂಭಿಸಿರುವ ಕಾರ್ಯಕ್ರಮಗಳ ಪುನರಾವಲೋಕನವನ್ನು ನಿಯಮಿತವಾಗಿ ಕೈಗೊಳ್ಳಲಾಗುವುದು. ಮಾಧ್ಯಮಿಕ ಸ್ತರದಲ್ಲಿ ವೈವಿಧ್ಯತೆಯನ್ನು ಪ್ರೋತ್ಸಾಹಿಸಲು ಸರ್ಕಾರವೂ ಸಹ ತನ್ನ ನೇಮಕಾತಿ ನೀತಿಯನ್ನು ಪರಿಶೀಲಿಸುವುದು.

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಔದ್ಯೋಗೀಕರಣವನ್ನು ಕುರಿತು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (1986) ನಿರೂಪಿಸಲಾಗಿರುವ ನೀತಿಗಳನ್ನು ಅನುಷ್ಠಿಸಲು ಶಕ್ತಿಯುತವಾದ ಕಾರ್ಯಕ್ರಮವನ್ನು ಪ್ರಾರಂಭಿಸಿತು ಹಾಗೂ ಕೇಂದ್ರ, ರಾಜ್ಯ ಮತ್ತು ಜಿಲ್ಲಾ ಸ್ತರಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ವಿವರವಾಗಿ ಹೇಳಿತು. ಮಂತ್ರಾಲಯವು 'ಕಾರ್ಯಕ್ರಮ'ವೆಂಬ ದಸ್ತಾವೇಜನ್ನು ಸಿದ್ಧಪಡಿಸಿತು. ಈ ದಸ್ತಾವೇಜು +2 ಸ್ತರದಲ್ಲಿನ ಔದ್ಯೋಗೀಕರಣವನ್ನು ವಿವರವಾಗಿ ಚರ್ಚಿಸುವುದಲ್ಲದೆ +8 ಮತ್ತು 10+ ವಿದ್ಯಾರ್ಥಿಗಳಿಗಾಗಿ ಇರುವ ಪೂರ್ಣಪ್ರಮಾಣದ ಔದ್ಯೋಗಿಕ ಶಿಕ್ಷಣ, ಶಾಲೆಯಿಂದ ಹೊರಗುಳಿದವರ ಮತ್ತು ಉದ್ಯೋಗಸ್ಥರ ಅನೌಪಚಾರಿಕ ಔದ್ಯೋಗಿಕ ಶಿಕ್ಷಣ ಹಾಗೂ ವಿಕಲಚೇತನರ ವಿಶೇಷ ಕಾರ್ಯಕ್ರಮ ಇವೆಲ್ಲವನ್ನೂ ಒಳಗೊಂಡಂತೆ ಇತರ ಔದ್ಯೋಗಿಕ ಶಿಕ್ಷಣವನ್ನು ಚರ್ಚಿಸುವುದು.

ರಾಷ್ಟ್ರೀಯ ಶಿಕ್ಷಣ ನೀತಿ(1986)ಯಲ್ಲಿ ಹೀಗೆ ಹೇಳಲಾಗಿದೆ: ಒಂದು ಕಡೆ ಡಾ॥ ಕುಳೆಂದೈಸ್ವಾಮಿಯವರ ಅಧ್ಯಕ್ಷತೆಯ ಕಾರ್ಯತಂಡದ ವರದಿಯು ಸೂಕ್ತವರದಿಯನ್ನು ಮತ್ತೊಂದು ಕಡೆ ಆಯಾ ರಾಜ್ಯಗಳ ಅಗತ್ಯಗಳಿಗೆ ಒದಗಿಸಿದರೆ ಹೊಂದಿಕೊಳ್ಳುವಂತೆ ನಮ್ಯತೆಯ ತತ್ವವನ್ನು ಅನುಸರಿಸಲಾಗುವುದು, ವಿಷಯವನ್ನು ಕಾರ್ಯಾಚರಣೆಗಾಗಿ ಈ ಕೆಳಗಿನ ನಾಲ್ಕು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

(i) ವ್ಯವಸ್ಥೆಯ ಬೆಳವಣಿಗೆ

(ii) ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮ

(iii) ವಿಶೇಷ ಗುಂಪುಗಳಿಗಾಗಿ ಕಾರ್ಯಕ್ರಮಗಳು

(iv) ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗುಂಪು

ಈ ಹಿಂದೆ ಉಲ್ಲೇಖಿಸಿದಂತೆ ಈ ಲೇಖನವು 9ಮತ್ತು 10ನೆ ತರಗತಿಗಳಲ್ಲಿ +2 ಔದ್ಯೋಗಿಕ ಪೂರ್ವಶಿಕ್ಷಣದ ಔದ್ಯೋಗೀಕರಣಕ್ಕೆ ಹಾಗೂ ಸಾಮಾನ್ಯವಾಗಿ ಶಾಲಾಪಠ್ಯಕ್ರಮದಲ್ಲಿನ ಕಾರ್ಯಾನುಭವಕ್ಕೆ ಸೀಮಿತವಾಗಿದೆ.

ಸಮಿತಿಗಳು ಮತ್ತು ಕಾರ್ಯತಂಡಗಳು ಔದ್ಯೋಗಿಕ ಪ್ರವಾಹದ ಅಂತರ್ವಸ್ತುವನ್ನು ಕುರಿತಂತೆ ಹಲವು ಸಲಹೆಗಳನ್ನು ಮಾಡಿವೆ. ಈ ಸಲಹೆಗಳಲ್ಲಿ ಈ ಘಟಕಗಳಿಗೆ ನೀಡಿರುವ ಮೌಲ್ಯಗಳಲ್ಲಿ ಅಲ್ಪ ವ್ಯತ್ಯಾಸಗಳಿವೆ. ಸೂಚಿಸಲಾಗಿರುವ ಮೌಲ್ಯಗಳು ಈ ಕೆಳಗಿನ ವ್ಯಾಪ್ತಿಯಲ್ಲಿ ಬರುತ್ತವೆ.

(i) ಭಾಷೆಗಳು ಶೇ.15ರಿಂದ ಶೇ.20

(ii) ಸಂಬಂಧಿತ ವಿಷಯಗಳು ಶೇ.15ರಿಂದ ಶೇ.25

(iii) ಔದ್ಯೋಗಿಕ ತತ್ವ ಮತ್ತು ಅದರ ಆಚರಣೆ ಶೇ.50ರಿಂದ ಶೇ.70 ಪ್ರತಿಯೊಂದು ರಾಜ್ಯವು ತನ್ನದೇ ಆದ ಮೌಲ್ಯಗಳನ್ನು ತನ್ನದಾಗಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ NCERT, MHRD ಇಲಾಖೆಯ ಬೆಂಬಲದೊಂದಿಗೆ ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಪ್ರಾರಂಭಿಸಿತಲ್ಲದೆ ವಿಷಯಗಳ ಈ ಮೂರು ಗುಂಪಿನ ನಡುವಣ ಅನುಪಾತವನ್ನು ನಿರ್ದಿಷ್ಟಪಡಿಸಿತು.

**ರಾಷ್ಟ್ರೀಯ ಶಿಕ್ಷಣ ನೀತಿ 1986 ಯ ಪುನರಾವಲೋಕನ:**

ರಾಷ್ಟ್ರೀಯ ನೀತಿ ದಸ್ತಾವೇಜು ಎರಡು ಪುನರ್ವಿಮರ್ಶೆಗಳನ್ನು ಕಂಡಿತು.

(i) ಆಚಾರ್ಯ ರಾಮಮೂರ್ತಿ ಸಮಿತಿ ಮಾಡಿರುವ ಪುನರ್ವಿಮರ್ಶೆ 1990 (NEPRC)

(ii) ಜನಾರ್ದನ ರೆಡ್ಡಿ ಸಮಿತಿ ಕೈಗೊಂಡಿರುವ ಪುನರ್ವಿಮರ್ಶೆ 1992 (CABE ಸಮಿತಿಯ ನೀತಿಯ ಮೇಲಿನ ವರದಿ)

ರಾಮಮೂರ್ತಿ ಸಮಿತಿಯ ಕೆಲವು ಪ್ರಮುಖ ಟಿಪ್ಪಣಿಗಳು ಈ ಕೆಳಗಿನಂತಿವೆ:

ಭಾರತ ಸರ್ಕಾರದ ತೀವ್ರತರ ಪ್ರಯತ್ನಗಳು ಮತ್ತು ಪರ್ಯಾಪ್ತ ಧನರಾಶಿಗಳು ಇದ್ದರೂ ಸಹ ಔದ್ಯೋಗೀಕರಣ ಯೋಜನೆ ತೃಪ್ತಿಕರ ಪ್ರಗತಿಯನ್ನು ಸಾಧಿಸಿಲ್ಲ ಎಂದು ಸಮಿತಿ ಟಿಪ್ಪಣಿ ಮಾಡಿತು. ಏಳನೇ

Digitised by Bharatavani, CIIL

ಯೋಜನೆಯ ಅಂತ್ಯದಲ್ಲಿ 5000 ಶಾಲೆಗಳ ಲಕ್ಷ್ಯವನ್ನಿಟ್ಟುಕೊಂಡು ಸಹ ಈ ಯೋಜನೆಯನ್ನು ಕೇವಲ 2745 ಶಾಲೆಗಳಲ್ಲಿ ಪ್ರಾರಂಭಿಸಲಾಯಿತು. ಸಮಿತಿಯ ಪ್ರಕಾರ ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮದ ಕಳಪೆ ಕಾರ್ಯಕ್ಷಮತೆಗೆ ಮೂಲ ಕಾರಣಗಳು ಹೀಗಿವೆ: ಸಾಂಪ್ರದಾಯಿಕ ವರ್ಗ/ಜಾತಿ ಆಧಾರಿತ ಸಾಮಾಜಿಕ ಮನೋಭಾವನೆಗಳು ಕಾರ್ಯಕ್ರಮಗಳಿಗೆ ಸಾಮಾಜಿಕ–ಆರ್ಥಿಕ ಸುಸಂಗತಿ ಇಲ್ಲದಿರುವುದು; ತಾಂತ್ರಿಕ ಶಿಕ್ಷಣ ವ್ಯವಸ್ಥೆಯಲ್ಲಿ ದೋಷ ಮತ್ತು ಔದ್ಯೋಗಿಕ ಹಾಗೂ ತಾಂತ್ರಿಕ ಶಿಕ್ಷಣಗಳ ನಡುವಣ ಸಂಬಂಧದ ಕೊರತೆ.

ರಾಷ್ಟ್ರೀಯ ಶಿಕ್ಷಣ ನೀತಿ (1986) ದರ್ಶಿಸಲಾಗಿರುವ ಎರಡು ಪ್ರವಾಹಗಳಿಗಾಗಿ ಶಿಕ್ಷಣದ ದ್ವಿವ್ಯವಸ್ಥೆ ಉಂಟಾಗಿದ್ದು ಔದ್ಯೋಗಿಕ ಶಿಕ್ಷಣವನ್ನು ಬಡಮನುಷ್ಯನ ಪ್ರವಾಹವೆಂದು ಕಾಣುವಂತಾಗಿದೆ ಎಂದು ಸಹ ಸಮಿತಿ ಅಭಿಪ್ರಾಯಪಟ್ಟಿತು. ಈಶ್ವರಭಾಯಿ ಪಟೇಲ್ ಪುನರಾವಲೋಕನ ಸಮಿತಿ (1978)ಯ ಆಧಾರದ ಮೇಲೆ ರಾಷ್ಟ್ರೀಯ ಶಿಕ್ಷಣ ನೀತಿ ಸಲಹೆ ಮಾಡಿದ ಸಾಮಾಜಿಕವಾಗಿ ಉಪಯುಕ್ತ ಉತ್ಪಾದಕ ಕಾರ್ಯ (SUPW)ದ ಯೋಜನೆಯನ್ನು ಸಹ ಸಮಿತಿಯು ಒಪ್ಪಿಕೊಂಡಿತು. ರಾಮಮೂರ್ತಿ ಸಮಿತಿಯ ಕೆಳಗಿನ ಈ ಎರಡು ಸಲಹೆಗಳು ಪ್ರಮುಖವಾದವುಗಳು:

1) ಅಂತರ್ವಸ್ತು ಮತ್ತು ಬೋಧನಶಾಸ್ತ್ರ– ಇವೆರಡೂ ಮಟ್ಟಗಳಲ್ಲಿ ಕಾರ್ಯಾನುಭವ/ಸಾಮಾಜಿಕವಾಗಿ ಉಪಯುಕ್ತ ಉತ್ಪಾದಕ ಕಾರ್ಯವನ್ನು ಸಮಗ್ರವಾಗಿ ವಿವಿಧ ವಿಷಯಗಳೊಂದಿಗೆ ಜೋಡಿಸಬೇಕು.

2) 9ರಿಂದ 12ನೇ ತರಗತಿಯವರೆಗೆ ನಡೆಸಬೇಕಾದ ಔದ್ಯೋಗಿಕ ಶಿಕ್ಷಣದ ಸಮಗ್ರ ವಿನ್ಯಾಸವನ್ನು ಈ ಕೆಳಗಿನ ಮಾದರಿಯನ್ನು ಅನುಸರಿಸಿ ಸ್ಥಾಪಿಸಬಹುದು. ಸಾಮಾನ್ಯ ವಿಷಯ ಮತ್ತು ಔದ್ಯೋಗಿಕ ವಿಷಯ ಹಾಗೂ ಶೈಕ್ಷಣಿಕ ಮತ್ತು ಔದ್ಯೋಗಿಕ ವಿಷಯಗಳ ಮಿಶ್ರಣ.

**ತರಗತಿ 9ರಿಂದ 1**

| ಕಡ್ಡಾಯ | ಸಾಮಾನ್ಯ ವಿಷಯ/ಔದ್ಯೋಗಿಕ ವಿಷಯ | | | |
|---|---|---|---|---|
| ಐಚ್ಛಿಕ ಸಮೂಹಗಳು | ಶೈಕ್ಷಣಿಕ | ಔದ್ಯೋಗಿಕ | ಶೈಕ್ಷಣಿಕ | ಶೈಕ್ಷಣಿಕ |
| | ಶೈಕ್ಷಣಿಕ | ಔದ್ಯೋಗಿಕ | ಶೈಕ್ಷಣಿಕ | ಔದ್ಯೋಗಿಕ |
| | ಶೈಕ್ಷಣಿಕ | ಔದ್ಯೋಗಿಕ | ಔದ್ಯೋಗಿಕ | ಔದ್ಯೋಗಿಕ |

ಮೇಲೆ ಹೇಳಿರುವ ಮಾದರಿಗೆ ಅನುಸಾರವಾಗಿ ಮಕ್ಕಳಿಗೆ ವಿಭಿನ್ನ ಶೈಕ್ಷಣಿಕ ಮತ್ತು ಔದ್ಯೋಗಿಕ ವಿಷಯಗಳ ಮಿಶ್ರಣವನ್ನು ಆಯ್ಕೆ ಮಾಡಿಕೊಳ್ಳಲು ನಮ್ಯತೆಯನ್ನು ಒದಗಿಸಬೇಕು. ದೇಶದಾದ್ಯಂತ ಈಗಾಗಲೇ ಅಳವಡಿಸಿಕೊಂಡಿದ್ದ 10+2 ಮಾದರಿಯ ಬದಲಾಗಿ 8+4 ಮಾದರಿಗೆ ಬದಲಾಯಿಸಿಕೊಳ್ಳಲು ಸಮಿತಿಯು ಇಚ್ಛಿಸಿತ್ತು ಎಂಬ ಅಂಶವನ್ನು ಇಲ್ಲಿ ಉಲ್ಲೇಖಿಸಬೇಕು. ಕೇಂದ್ರ ಶಿಕ್ಷಣ ಸಲಹಾ ಮಂಡಳಿ (CABE) ಮಾರ್ಚ್ 1991ರ ತನ್ನ ಸಭೆಯೊಂದರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 1986ರ ಪುನರ್ ಪರಿಶೀಲನಾ ಸಮಿತಿಯ (NEPRC) ವರದಿಯನ್ನು ಪರಿಗಣಿಸಿ ಅಧ್ಯಕ್ಷರಿಂದ ಅಂದರೆ ಕೇಂದ್ರ ಮಾನವ ಸಂಪನ್ಮೂಲ ವಿಕಾಸ ಮಂತ್ರಿಗಳಿಂದ NEPRC ಸಮಿತಿಯ ಸಲಹೆಗಳನ್ನು ಪರಿಗಣಿಸಲು CABE ಸಮಿತಿಯನ್ನು ರಚಿಸಬೇಕು ಎಂದು ನಿರ್ಧರಿಸಿತು. ಹೀಗೆ ಸೂಚಿಸಲಾದ ಸಮಿತಿಯೊಂದನ್ನು ಅಂದಿಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಜನಾರ್ದನ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು.

ಈ ಸಮಿತಿಯನ್ನು ಕುರಿತ ನೀತಿಯನ್ನು CABE ಸಮಿತಿ ನೀತಿ ಎಂದು ಕರೆಯಲಾಗುವುದು. ಈ ಸಮಿತಿ ಬಹುತೇಕ ರಾಷ್ಟ್ರೀಯ ಶಿಕ್ಷಣ ನೀತಿ (1986)ಯ ಸಲಹೆಗಳನ್ನೇ ಪುನರುಚ್ಚರಿಸಿತು ಹಾಗೂ NPERC 8+4 ಮಾದರಿಯನ್ನು ಅಳವಡಿಸಿಕೊಳ್ಳಬೇಕೆಂಬ ಸಲಹೆಯನ್ನು ತಿರಸ್ಕರಿಸಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ 9ನೆಯ ತರಗತಿಯಿಂದ ಔದ್ಯೋಗಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಬೇಕೆಂದು ಸೂಚಿಸಿತು. ಅಲ್ಲದೆ, ಸಾಮಾನ್ಯರೂಪದ ಔದ್ಯೋಗಿಕ ಕಾರ್ಯಕ್ರಮವನ್ನು ಶೇ. 10ರಷ್ಟು ಶಾಲೆಗಳಲ್ಲಿ ಪ್ರಯತ್ನಿಸಿ ನೋಡಬೇಕೆಂದು ಸಮಿತಿ ಸೂಚಿಸಿತು. NPERC ಯ ಸಲಹೆಯ ಪರಿಣಾಮವಾಗಿ 8ನೇ ತರಗಿತಿಯವರೆಗಿನ ಎಲ್ಲಾ ತರಗತಿಗಳಲ್ಲಿ SUPW ಘಟಕವು ಅಸ್ತಿತ್ವದಲ್ಲಿದ್ದು ಶೇ. 12.5ರಿಂದ 20ರಷ್ಟು ಕಾರ್ಯಾನುಭಾವ ಸಮಯವು ಇದಕ್ಕೆ ಮೀಸಲಾಗಿರುವುದು ಮತ್ತು 9ರಿಂದ 12ನೇ ತರಗತಿಯವರೆಗಿನ ಶೈಕ್ಷಣಿಕ ಪ್ರವಾಹದಲ್ಲಿ ಕಾರ್ಯಾನುಭವ (Work Experience) ಔದ್ಯೋಗಿಕ ಪೂರ್ವ ಕಾರ್ಯಕ್ರಮಗಳಿರುವುವು.

**ಔದ್ಯೋಗಿಕ ಶಿಕ್ಷಣ ನೀತಿಯ ಪುನರ್ ಪರಿಶೀಲನೆ:**

ಭಾರತ ಸರ್ಕಾರದ ಮಾನವ ಸಂಪನ್ಮೂಲ ವಿಕಾಸ ಮಂತ್ರಾಲಯವು 'ಮಾಧ್ಯಮಿಕ ಶಿಕ್ಷಣದ ಔದ್ಯೋಗೀಕರಣದ ನೀತಿ' ಎಂಬ ಶೀರ್ಷಿಕೆಯಡಿ ಪುನರ್ ಪರಿಶೀಲನಾ ಸಮಿತಿಯೊಂದನ್ನು 1993ರಲ್ಲಿ ನೇಮಿಸಿತು. ವ್ಯವಸ್ಥೆಯು ಹಿಂದಿನ ವರ್ಷಗಳಲ್ಲಿ ಪಡೆದ ಅನುಭವದ ಆಧಾರದ ಮೇಲೆ ಇತರ ವಿಷಯಗಳಲ್ಲದೆ ಯೋಜನೆಯ ವ್ಯಾಪ್ತಿ, ಇದರ ಘಟಕಗಳು, ನಿರ್ವಹಣಾ ಸಂರಚನೆ, ಮಾನವಶಕ್ತಿಯ ಅಂದಾಜು, ಪಠ್ಯಕ್ರಮ, ಪ್ರಮಾಣೀಕರಣ, ಮೌಲ್ಯಮಾಪನ ಮತ್ತು ಧನಸಹಾಯದ ಮಂಜೂರಾತಿಗೆ ಷರತ್ತುಗಳು ಇತ್ಯಾದಿಗಳನ್ನು ಸರ್ಕಾರವು ವರದಿಯಲ್ಲಿ ಪರಿಭಾಷಿಸಿತು.

ಔದ್ಯೋಗಿಕ ಶಿಕ್ಷಣದ ಜಂಟಿ ಸಮಿತಿಯು ಫೆಬ್ರವರಿ 1994ರಲ್ಲಿ ನಡೆದ ಮೂರನೆಯ ಸಭೆಯಲ್ಲಿ ಪ್ರಸ್ತುತಪಡಿಸಲಾದ ಪ್ರಗತಿಯ ಪುನರಾವಲೋಕನವು ಈ ಕೆಳಗಿನವುಗಳನ್ನು ತಿಳಿಯಪಡಿಸಿತು:

- 1993–94ರ ಕೊನೆಯಲ್ಲಿ ಕಾರ್ಯಕ್ರಮವನ್ನು 25 ರಾಜ್ಯಗಳಲ್ಲಿ, 6 ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಾರಂಭಿಸಲಾಗಿದ್ದು, 5,451 ಶಾಲೆಗಳನ್ನು ಹಾಗೂ 15,579 ವಿಭಾಗಗಳನ್ನು ಕಾರ್ಯಕ್ರಮದ ವ್ಯಾಪ್ತಿಗೆ ತರಲಾಗಿದೆ.

Digitised by Bharatavani, CIIL

- 1991–91ರ ವೇಳೆಗೆ 0.63 ದಶಲಕ್ಷ (ಒಟ್ಟು ಜನಸಂಖ್ಯೆಯ ಶೇ. 9ರಷ್ಟು) ವಿದ್ಯಾರ್ಥಿಗಳಿಗೆ ಪೂರೈಕೆಯಾಗುವಷ್ಟು ಸಾಮರ್ಥ್ಯವನ್ನು ನಿರ್ಮಿಸಲಾಯಿತಾದರೂ ಕೇವಲ 0.33 ದಶಲಕ್ಷ (4.5%) ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು. ಈ ಸಂಖ್ಯೆಯೂ ಸಹ ಕೆಲವೇ ರಾಜ್ಯಗಳಲ್ಲಿ ಕೇಂದ್ರೀಕೃತಗೊಂಡದ್ದಾಗಿದೆ.
- ರಾಜ್ಯ ನಿರ್ದೇಶನಾಲಯಗಳು, SCERT, ಜಿಲ್ಲೆ ಮತ್ತು ಶಾಲೆ ಈ ಸ್ತರಗಳಲ್ಲಿ ಅನುಮತಿ ನೀಡಲಾದ ಹುದ್ದೆಗಳನ್ನು ಪೂರ್ಣವಾಗಿ ಉಪಯೋಗಿಸಲಿಲ್ಲ.

ಅಪರೇಷನ್ಸ್ ರಿಸರ್ಚ್ ಗ್ರೂಪ್ ಎಂಬ ತಂಡವು 1996ರಲ್ಲಿ ಈ ಯೋಜನೆಯ ಮೌಲ್ಯಮಾಪನೆಯನ್ನು ಕೈಗೊಂಡಿತು. ಇದರ ಸ್ಥಿತಿಗತಿಯ ವರದಿ ಈ ಕೆಳಗಿನಂತಿತ್ತು:

- ಯೋಜನೆಗೆ ಅವಕಾಶ ನೀಡಿರುವ ಸಂಸ್ಥೆಗಳು 6,.476
- ಔದ್ಯೋಗಿಕ ಕಾರ್ಯಕ್ರಮಗಳು 160
- ಔದ್ಯೋಗಿಕ ವಿಭಾಗಗಳು 18,709
- ಒಟ್ಟು ಸಂಖ್ಯೆಯ ಶೇಕಡಾ ರೂಪದಲ್ಲಿ ಸ್ಥಾಪಿಸಲಾದ ವಿದ್ಯಾರ್ಥಿಗಳ ಸ್ಥಾನ 11.0
- ಶೇಕಡಾವಾರು ವಾಸ್ತವ ನೇಮಕಾತಿ 4.8
- ಔದ್ಯೋಗಿಕ ಪ್ರವಾಹದಿಂದ ಸಫಲರಾಗಿ ಹೊರಬಂದವರಲ್ಲಿ ಉದ್ಯೋಗನಿರತರ/ಸ್ವಯಂ ಉದ್ಯೋಗ ನಡೆಸುತ್ತಿರುವವರು ಶೇಕಡಾವಾರು 28.0
- ಔದ್ಯೋಗಿಕ ಪ್ರವಾಹದಲ್ಲಿ +2 ಪೂರ್ಣಗೊಳಿಸಿದವರಲ್ಲಿ ಉನ್ನತ ಅಧ್ಯಯನ ನಡೆಸುತ್ತಿರುವವರು ಶೇಕಡಾವಾರು 38.3

ಈ ಫಲಿತಾಂಶವು ಪುನಃ ನಿರುತ್ಸಾಹದಾಯಕವಾಗಿದೆ. ಅಪರೇಷನ್ ರಿಸರ್ಚ್ ಗ್ರೂಪ್ ತಂಡವು ಹೀಗೆ ಸಲಹೆ ಮಾಡಿದೆ: . . . ಮಾಧ್ಯಮಿಕ ಶಿಕ್ಷಣದ ಔದ್ಯೋಗೀಕರಣದ ಯೋಜನೆಯನ್ನು ಅದರ ಇಂದಿನ ವ್ಯಾಪ್ತಿ ಮತ್ತು ಅಂತರ್ವಸ್ತುವಿನೊಂದಿಗೆ ಮುಂದುವರೆಸಲು ಸಾಧ್ಯವಿಲ್ಲ ಹಾಗೂ ಮುಂದುವರೆಸಲೂಬಾರದು'.

**ಔದ್ಯೋಗಿಕ ಶಿಕ್ಷಣ ನೀತಿಯನ್ನು ಕುರಿತಂತೆ ಕಾರ್ಯತಂಡ:**

ರಾಜ್ಯಸರ್ಕಾರಗಳ ಶಿಕ್ಷಣ ಕಾರ್ಯದರ್ಶಿ (Education Secretary)ಗಳೊಂದಿಗಿನ ಪುನರ್‌ಪರಿಶೀಲನ ಸಭೆಯನ್ನು ಆಧರಿಸಿ ಜುಲೈ/ಆಗಸ್ಟ್ 1996ರಲ್ಲಿ ಯೋಜನೆಯನ್ನು ರಾಜ್ಯಗಳಿಗೆ ವರ್ಗಾಯಿಸಲು ನಿರ್ಧರಿಸಲಾಯಿತು. ಆದಾಗ್ಯೂ ಈ ನಿರ್ಧಾರವನ್ನು ರಾಷ್ಟ್ರೀಯ ವಿಕಾಸ ಸಮಿತಿಯು ಬೆಂಬಲಿಸಲಿಲ್ಲ.

MHRD ಇಲಾಖೆ, ಭಾರತ ಸರ್ಕಾರ, ಯೋಜನೆಯನ್ನು ಸಮಗ್ರವಾಗಿ ಪುನರ್ ಪರಿಶೀಲಿಸಲು ಮತ್ತು ಹಿಂದಿನ ಅನುಭವಗಳ ಬೆಳಕಿನಲ್ಲಿ ಆಮೂಲಾಗ್ರವಾದ ಪರಿಷ್ಕರಣವನ್ನು ಸೂಚಿಸಿ ಇದನ್ನು ಕೇಂದ್ರ ಪ್ರಾಯೋಜಿತ ಯೋಜನೆಯಾಗಿಯೇ ಮುಂದುವರೆಸಬಹುದೆ ಎಂದು ತಿಳಿಸಲು ಪ್ರೊ॥ ಎ.ಕೆ. ಶರ್ಮ ಅವರ ಅಧ್ಯಕ್ಷತೆಯಲ್ಲಿ 1998ರಲ್ಲಿ ಕಾರ್ಯತಂಡವೊಂದನ್ನು ನೇಮಕಮಾಡಿತು. ಕಾರ್ಯತಂಡವು (1998) ಯೋಜನೆಯ ಕಾರ್ಯವೈಖರಿಯ ವಿಸ್ತೃತ ಅಧ್ಯಯನವನ್ನು ಕೈಗೊಂಡಿತಲ್ಲದೆ ಆಪರೇಷನ್ ರಿಸರ್ಚ್ ಗ್ರೂಪಿನ ವರದಿಯನ್ನು ಪರಿಗಣಿಸಿ ಕೆಲವು ಸಲಹೆಗಳನ್ನು ಮುಂದಿಟ್ಟಿತು. ಅವುಗಳಲ್ಲಿ ಕೆಲವು ಪ್ರಮುಖವಾದವುಗಳು ಈ ಕೆಳಗಿನಂತಿವೆ.

- ಕಾರ್ಯಕ್ರಮಗಳ ಸಂಚಯೀಕರಣ ಮತ್ತು ಸೆಮಿಸ್ಟರ್‌ಪದ್ಧತಿ ಹಾಗೂ ಕ್ರೆಡಿಟ್ ವ್ಯವಸ್ಥೆಯ ಮೌಲ್ಯಮಾಪನ ಇವುಗಳಿಂದ ಸಾಧ್ಯವಾಗುವ ನಮ್ಯತೆಯ ಔದ್ಯೋಗಿಕ ಶಿಕ್ಷಣ ನೀತಿಗೆ ತೀರ ಅಗತ್ಯವಿದೆ.
- ಕಲೆ, ವಿಜ್ಞಾನ ಮತ್ತು ಕಾಮರ್ಸ್ ಪ್ರವಾಹದಂತೆ ಔದ್ಯೋಗಿಕ ಪ್ರವಾಹವನ್ನು ಪರಿಗಣಿಸಬೇಕು ಮತ್ತು +2 ಘಟ್ಟದ ಔದ್ಯೋಗಿಕ ವಿದ್ಯಾರ್ಥಿಗಳಿಗೆ ಸಂಬಂಧಿತ ಶಾಖೆಯ ತೃತೀಯ ಸ್ತರಕ್ಕೆ ನೇರ ಅವಕಾಶವಿರಬೇಕು. ಎಲ್ಲೆಲ್ಲಿ ಅಗತ್ಯವೋ ಅಲ್ಲಲ್ಲಿ ವಿಶ್ವವಿದ್ಯಾನಿಲಯ ಇಲ್ಲವೇ ಮುಕ್ತ ಕಲಿಕಾವ್ಯವಸ್ಥೆಯು ಇವರಿಗೆ ಸೇತು ಕಾರ್ಯಕ್ರಮಗಳನ್ನು ನಡೆಸಿ, ಕೊರತೆಗಳನ್ನು ನೀಗಿಸಲು ಸಹಾಯ ಹಸ್ತ ನೀಡಬೇಕು.
- ಪೂರ್ಣರೂಪದ ಮೂಲಭೂತ ಸೌಲಭ್ಯಗಳಿರುವ ಬ್ಲಾಕ್ ಸ್ತರದ ಔದ್ಯೋಗಿಕ ಸಂಸ್ಥೆಗಳನ್ನು (ಔಪಚಾರಿಕ ಮತ್ತು ಅನೌಪಚಾರಿಕ ಎರಡೂ ರೀತಿಯ ಸಕಲ ವಿಧ ಪ್ರಶಿಕ್ಷಣ ಅಗತ್ಯಗಳನ್ನು ಪೂರೈಸಲು) ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸುವ ಅಗತ್ಯವಿದೆ. ಸೀಮಿತ ಸಂಖ್ಯೆಯ ಬ್ಲಾಕ್‌ಗಳಲ್ಲಿ ಕೇಂದ್ರಸರ್ಕಾರ/NCERTಯ ನೇರ ಆಡಳಿತಕ್ಕೆ ಒಳಪಡುವ ಕೇಂದ್ರ ವಲಯ ಯೋಜನೆಯ ರೂಪದಲ್ಲಿ ಇದನ್ನು ಒಂದು ಪ್ರಾರಂಭಿಕ ಯೋಜನೆಯಂತೆ ಸ್ಥಾಪಿಸಬಹುದು. ಇವು ನವೋದಯ ವಿದ್ಯಾಲಯಗಳಂತೆಯೇ ಇರುವುವು.
- ಔಪಚಾರಿಕ ವ್ಯವಸ್ಥೆಯ ಹೊರಗೆ NGO ಹಾಗೂ ಇನ್ನಿತರ ಮಾರ್ಗಗಳಿಂದ ಗಳಿಸಿಕೊಂಡ ಕುಶಲತೆಗಳಿಗೆ ಮಾನ್ಯತೆ ಮತ್ತು ಪ್ರಮಾಣೀಕರಣಗಳ ಒದಗಣೆ ಇರಬೇಕು. ಈ ನಿಟ್ಟಿನಲ್ಲಿ ಸಾಗಲು ಔಪಚಾರಿಕ ಮತ್ತು ಅನೌಪಚಾರಿಕ ಕಾರ್ಯಕ್ರಮಗಳ ಪರೀಕ್ಷೆ ಮತ್ತು ಪ್ರಮಾಣೀಕರಣಗಳ ಸಲುವಾಗಿ ರಾಷ್ಟ್ರೀಯ ಔದ್ಯೋಗಿಕ ಅರ್ಹತಾ (National Vocational Qualification, NVQ) ವ್ಯವಸ್ಥೆಯೊಂದನ್ನು ಸ್ಥಾಪಿಸಬೇಕು. ಸಾಂವೈದಾನಿಕ ಅಧಿಕಾರ ಮತ್ತು ಮಾನ್ಯತಾ ಬೋರ್ಡ್‌ಗಳೊಂದಿಗೆ ರಾಷ್ಟ್ರೀಯ ಔದ್ಯೋಗಿಕ ಪ್ರಾಧಿಕಾರ (National Vocational Authority, NVA)ವನ್ನು ಸ್ಥಾಪಿಸಬೇಕು. NVA ಸ್ಥಾಪನೆಯಾದರೆ, TCVE ಯನ್ನು ರದ್ದುಗೊಳಿಸಬಹುದು.
- ಸದ್ಯದ NCERT ಸಂಸ್ಥೆಯ ಐದು ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕ ಪ್ರಶಿಕ್ಷಣ ಮತ್ತು ಸಂಶೋಧನೆ ಮತ್ತು ವಿಕಾಸ (R&D) ಕಾರ್ಯಗಳ ಸಲುವಾಗಿ ಪ್ರಾದೇಶಿಕ/ಔದ್ಯೋಗಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬೇಕು.

Digitised by Bharatavani, CIIL

- ರಾಜ್ಯಮಟ್ಟದಲ್ಲಿ, ಪ್ರತ್ಯೇಕ ಔದ್ಯೋಗಿಕ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಬೇಕು. ಆಗ, SIVE ಅಂದರೆ ರಾಜ್ಯ ಔದ್ಯೋಗಿಕ ಶಿಕ್ಷಣ ಸಂಸ್ಥೆಯನ್ನು ಅಂದರೆ SCERTಯ ಔದ್ಯೋಗಿಕ ಅಂಗವನ್ನು ರದ್ದುಗೊಳಿಸಬಹುದು.
- ಎಲ್ಲಾ ಔದ್ಯೋಗಿಕ ಕಾರ್ಯಕ್ರಮಗಳನ್ನು ಅಭ್ಯಾಸಿ ಕಾಯ್ದೆ (1961) ಅಡಿಯಲ್ಲಿ ತರಬೇಕು. ರಾಜ್ಯದಲ್ಲಿ ಹುದ್ದೆ ಭರ್ತಿಮಾಡುವ ಜವಾಬ್ದಾರಿಯನ್ನು ಔದ್ಯೋಗಿಕ ಶಿಕ್ಷಣ ನಿರ್ದೇಶನಾಲಯಕ್ಕೆ ನೀಡುವಂತೆ ಕಾನೂನು ತಿದ್ದುಪಡಿ ಮಾಡಬೇಕು.
- ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮದ ಗಮನ ಕೇಂದ್ರ ಸ್ವಯಂ ಉದ್ಯೋಗದತ್ತವೇ ಇರುವುದು ಎಂದು ಸಮಿತಿ ಘೋಷಿಸಿದೆ.

**ತೃತೀಯ ಸ್ತರದಲ್ಲಿ ಔದ್ಯೋಗಿಕ ಶಿಕ್ಷಣ ನೀತಿ:**

ಹೊಸ ಶಿಕ್ಷಣ ನೀತಿ (1986) ಸಾಮಾನ್ಯ ಶಿಫಾರಸ್ಸುಗಳಿಗೆ ಅನುಸಾರವಾಗಿ ತೃತೀಯ ಸ್ತರದಲ್ಲಿ ಔದ್ಯೋಗಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಕಾಯಪ್ರಣಾಲಿಗೆ ಅವಕಾಶಗಳನ್ನು ಒದಗಿಸುವ ದಿಶೆಯಲ್ಲಿ ಚಿಂತಿಸುತ್ತದೆ. ಒಂದೆಡೆ ಹೀಗೆ ಹೇಳಲಾಗಿದೆ.

"ಪ್ರಯೋಜನಕಾರಿ ಉದ್ಯೋಗದ ತಕ್ಕಮಟ್ಟಿನ ಅವಕಾಶ ಅಥವಾ ಔದ್ಯೋಗಿಕ ಇಲ್ಲವೇ ಸಾಮಾನ್ಯ ಶಿಕ್ಷಣ ಕಾರ್ಯಕ್ರಮದತ್ತ ಮುಂದುವರೆಯುವ ಅವಕಾಶ/ಅನುಕೂಲತೆಗಳನ್ನು ಒದಗಿಸದ ಹೊರತು ಇಂದು ಔದ್ಯೋಗಿಕ ಶಿಕ್ಷಣವನ್ನು ಕುರಿತ ಪೂರ್ವಾಗ್ರಹಗಳು ಮರೆಯಾಗುವುದಿಲ್ಲ ... ಅಂತಹ ಕಾರ್ಯಕ್ರಮಗಳೆಂದರೆ ಡಿಪ್ಲೊಮ, ವಿಶೇಷ ಡಿಗ್ರಿ ಕಾರ್ಯಕ್ರಮಗಳು, ಸಾಮಾನ್ಯ ಡಿಗ್ರಿ ಕಾರ್ಯಕ್ರಮಗಳು, ವೃತ್ತಿಪರ ಡಿಗ್ರಿ ಕಾರ್ಯಕ್ರಮಗಳು ಇತ್ಯಾದಿ..."

ಯು.ಜಿ.ಸಿ.ಯು ಬಿ.ಎ, ಬಿ.ಕಾಂ, ಬಿ.ಎಸ್.ಸಿ ಡಿಗ್ರಿ ಕಾರ್ಯಕ್ರಮಗಳ ಮೂರನೆಯ ಭಾಗದಲ್ಲಿ ಐಚ್ಛಿಕ ವಿಷಯಗಳಲ್ಲಿ ಒಂದು ಔದ್ಯೋಗಿಕ ವಿಷಯವನ್ನು ಪ್ರಾರಂಭಿಸಲಾಗಿದೆ.. ಇದುವರೆಗೆ ಯುಜಿಸಿಯಿಂದ ಅಂಗೀಕೃತಗೊಂಡ (1994–95) 1673 ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳ ವಿಭಾಗಗಳಲ್ಲಿ 39 ವಿಷಯಗಳನ್ನು ಪ್ರಾರಂಭಿಸಲಾಗಿದೆ. ಈ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನಕ್ಕೆಂದು ಧನಸಹಾಯವನ್ನು ಒದಗಿಸಲಾಗಿದೆ. ಈ ಯೋಜನೆಯ ಅನುಷ್ಠಾನ ಮತ್ತು ಉಸ್ತುವಾರಿಗಾಗಿ ಸಲಹೆಗಳನ್ನು ಸೂಚಿಸಲು ಯುಜಿಸಿ ಔದ್ಯೋಗಿಕ ಶಿಕ್ಷಣ ಸ್ಥಾಯಿ ಸಮಿತಿಯನ್ನು ಸಂಘಟಿಸಿದೆ. ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯಲ್ಲಿ ಡಿಗ್ರಿ/ ಡಿಪ್ಲೊಮ ಕಾರ್ಯಕ್ರಮಗಳು ಔದ್ಯೋಗಿಕ ವಿಷಯಕ್ಕೆ ಸಂಬಂಧಿಸಿದಂತೆ ಲಭ್ಯವಿದೆ. ಆದರೆ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ಕೇವಲ ಒಂದು ಔದ್ಯೋಗಿಕ ವಿಷಯವನ್ನು ಮಾತ್ರ ಭಾಗ 3ರಲ್ಲಿ ಪ್ರಾರಂಭಿಸಿವೆ.

**ಪ್ರಸ್ತುತ ಸ್ಥಿತಿಗತಿ:**

ಹೊಸ ಶಿಕ್ಷಣ ನೀತಿ (1986)ರ ಶಿಫಾರಸ್ಸುಗಳಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಣದ ಔದ್ಯೋಗೀಕರಣ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ. NPE 1986ಕ್ಕೆ ಮುನ್ನ ಹಾಗೂ ನಂತರ ಸಮಿತಿಗಳ ಸರಣಿಯೇ ಈ ವಿಷಯದ ಮೇಲೆ ಕೆಲಸ ಮಾಡಿದೆ. ಕಾರ್ಯಕ್ರಮವನ್ನು ಕೊಠಾರಿ ಆಯೋಗ 8+ ಹಾಗೂ 10+ ನಂತರ ವಿದ್ಯಾರ್ಥಿಗಳನ್ನು ಔದ್ಯೋಗಿಕ ಶಿಕ್ಷಣ ಮತ್ತು ಈ ಉದ್ದೇಶಕ್ಕಾಗಿ ಇರುವ ಸಂಸ್ಥೆಗಳತ್ತ ತಿರುಗಿಸಬೇಕಾದ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ (1968) ಶಿಫಾರಸ್ಸುಗಳನ್ನು ಆಧರಿಸಿ ಪ್ರಾರಂಭಿಸಲಾಯಿತಾದರೂ, ಚರ್ಚೆಯ ವಿಷಯವಾಗಿರುವ, ಅಂದರೆ ಉನ್ನತ ಮಾಧ್ಯಮಿಕ ಶಿಕ್ಷಣದ ಔದ್ಯೋಗಿಕರಣ ಮೂಲತಃ CABE ತನ್ನ 38ನೇ ಸಭೆಯಲ್ಲಿ (1975) ಮಾಡಿದ ಸಲಹೆಗಳು ಹಾಗೂ "ಉನ್ನತ ಮಾಧ್ಯಮಿಕ ಶಿಕ್ಷಣ ಮತ್ತು ಇದರ ಔದ್ಯೋಗಿಕರಣ"ವೆಂಬ ಶೀರ್ಷಿಕೆಯ ದಸ್ತಾವೇಜುಗಳನ್ನು (1976) ಆಧರಿಸಿದೆ.

ಒಂದಕ್ಕಿಂತ ಹೆಚ್ಚು ಬಾರಿ ಲಕ್ಷ್ಯಗಳನ್ನು ಪರಿಷ್ಕರಿಸಲಾಗಿದೆ; ಆದರೆ ಅಂತಿಮವಾಗಿ 1995ರ ವೇಳೆಗೆ +2 ಘಟ್ಟದಲ್ಲಿ ಒಟ್ಟು ಸಂಖ್ಯೆಯ ಶೇ. 10 ಹಾಗೂ 2000ದ ವೇಳೆಗೆ ಶೇ. 25 ಎಂಬ ಲಕ್ಷ್ಯವನ್ನು ನಿರ್ಧರಿಸಲಾಯಿತು. ಈ ಲಕ್ಷ್ಯವನ್ನು ಸಾಧಿಸಿಲ್ಲವಾದರೂ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿದೆ ಹಾಗೂ ಉನ್ನತ ಮಾಧ್ಯಮಿಕ ಶಿಕ್ಷಣದ ಭಾಗವಾಗಿ ಭದ್ರವಾಗಿ ಸ್ಥಾಪನೆಗೊಂಡಿದೆ. ಇಂದು ಒಟ್ಟು ಸಂಖ್ಯೆಯ ಶೇ. 11ರಷ್ಟಾಗುವ 9.35 ಲಕ್ಷ ವಿದ್ಯಾರ್ಥಿಗಳ ಸಾಮರ್ಥ್ಯವಿರುವ 6476 (1996–97) ಶಾಲೆಗಳಿವೆ. ಆದರೆ ಬಳಕೆಯಾದ ಸೀಟುಗಳು 4.8%ರಷ್ಟು ಮಾತ್ರವಿದ್ದು, ಅನುಮೋದಿತಗೊಂಡ ಸಂಖ್ಯೆಯ ಶೇ. 50ಕ್ಕಿಂತಲೂ ಕಡಿಮೆಯಾಗಿದೆ.

ಆರು ಮುಖ್ಯ ಕ್ಷೇತ್ರಗಳಲ್ಲಿ ಅಂದರೆ ಕೃಷಿ, ವ್ಯಾಪಾರ ಮತ್ತು ವಾಣಿಜ್ಯ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ; ಆರೋಗ್ಯ ಮತ್ತು ಅರೆವೈದ್ಯಕೀಯ ಸೇವೆಗಳು; ಗೃಹವಿಜ್ಞಾನ; ಮಾನವಿಕ ವಿಷಯಗಳು ಮತ್ತು ಇತರ ಕ್ಷೇತ್ರಗಳಲ್ಲಿ 150 ಔದ್ಯೋಗಿಕ ಕೋರ್ಸುಗಳಿವೆ.

ಕಾರ್ಯಕ್ರಮಕ್ಕೆ ಪಂಡಿತ್ ಸುಂದರಲಾಲ್ ಶರ್ಮ ಕೇಂದ್ರಿಯ ಔದ್ಯೋಗಿಕ ಶಿಕ್ಷಣ ಸಂಸ್ಥೆ ಪಠ್ಯಕ್ರಮ ಈ ಕೆಳಗಿನಂತಿವೆ.

(i) ಭಾಷೆಗಳು 15%

(ii) ಸಾಮಾನ್ಯ ಮೂಲಭೂತ ಕಾರ್ಯಕ್ರಮಗಳು

a) ಉದ್ಯೋಗಶೀಲತೆ ಅಭಿವೃದ್ಧಿ

b) ಪರಿಸರ ಶಿಕ್ಷಣ 15%

c) ಗ್ರಾಮೀಣ ವಿಕಾಸ

(iii) ಔದ್ಯೋಗಿಕ ತತ್ವ ಮತ್ತು ಅಭ್ಯಾಸ 70%

ವೃತ್ತಿ ನಿರತರಾಗಿರುವಾಗಲೇ ತರಬೇತಿ ಸೇರಿದಂತೆ ಪ್ರಸ್ತುತ ಇದರ ದಾಖಲಾತಿ ಸ್ತರದಲ್ಲಿಯೂ ಸಹ, ಇದು ದೇಶದ ಏಕಮೇವ ಬಹುದೊಡ್ಡ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಹಿರಿಯ ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಇದು ಒಂದು ಪರ್ಯಾಯ ಪಥವಾಗಿ ಪರಿಣಮಿಸಿದೆ.

Digitised by Bharatavani, CIIL

ರಾಷ್ಟ್ರಮಟ್ಟದಲ್ಲಿ ನೀತಿ ರೂಪಿಸುವ ಮತ್ತು ನಿರ್ಧಾರಕೈಗೊಳ್ಳುವ ಅಂಗವೆಂದರೆ ಜಂಟಿ ಔದ್ಯೋಗಿಕ ಶಿಕ್ಷಣ ಸಮಿತಿ. ರಾಷ್ಟ್ರಮಟ್ಟದಲ್ಲಿ ಅನುಷ್ಠಾನ ನಿಯೋಗವೆಂದರೆ ಕೇಂದ್ರಿಯ ಔದ್ಯೋಗಿಕ ಶಿಕ್ಷಣ ಸಂಸ್ಥೆ, ಭೂಪಾಲ್, ಲಕ್ಷದ್ವೀಪವನ್ನು ಹೊರತುಪಡಿಸಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿವೆ. ಬಹಳಷ್ಟು ರಾಜ್ಯಗಳು ರಾಜ್ಯ ಔದ್ಯೋಗಿಕ ಶಿಕ್ಷಣ ಸಮಿತಿಯನ್ನು ಮತ್ತು ಔದ್ಯೋಗಿಕ ಶಿಕ್ಷಣ ನಿರ್ದೇಶನಾಲಯ ಅಥವಾ ಶಾಲಾ ಶಿಕ್ಷಣ ನಿರ್ದೇಶನಾಲಯದಲ್ಲಿ ಒಂದು ಅಂಗವನ್ನು ಹೊಂದಿವೆ. ಕಾರ್ಯಕ್ರಮದ ನಿರ್ವಹಣೆ ಮತ್ತು ಆಡಳಿತಕ್ಕೆಂದು ಜಿಲ್ಲೆ ಮತ್ತು ಶಾಲಾ ಮಟ್ಟಗಳಲ್ಲಿ ಅವಶ್ಯಕವಾದ ಆಡಳಿತ ಯಂತ್ರವನ್ನು ಅಸ್ತಿತ್ವಕ್ಕೆ ತರಲಾಗಿದೆ. ಬಹಳಷ್ಟು ರಾಜ್ಯಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಮುನ್ನ ಔದ್ಯೋಗಿಕ ಸರ್ವೇಕ್ಷಣೆಗಳನ್ನು ಕೈಗೊಳ್ಳಲಾಗಿದೆ. ಕೇಂದ್ರದಿಂದ ಪ್ರಾಯೋಜಿತವಾದ ಕಾರ್ಯಕ್ರಮಗಳಿಗೆ ಭೂಪಾಲಿನ ಸಂಸ್ಥೆಯು ಪಠ್ಯಕ್ರಮ ಮತ್ತು ಪಠ್ಯವಸ್ತುಗಳನ್ನು ಒದಗಿಸುತ್ತಿದೆ. ಕೆಲವು ರಾಜ್ಯಗಳು ಇದರ ಜೊತೆಗೆ ತಮ್ಮದೇ ಆದ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಅವುಗಳಿಗೆ ಪಠ್ಯಕ್ರಮ ಮತ್ತು ಪಠ್ಯವಸ್ತುವನ್ನು ಸಹ ಸಿದ್ಧಪಡಿಸುತ್ತವೆ.

ಪದವಿ ಮಟ್ಟದಲ್ಲಿ ವಿದ್ಯಾರ್ಥಿಗಳು ಔದ್ಯೋಗಿಕ ಪ್ರವಾಹವನ್ನು ತೆಗೆದುಕೊಳ್ಳಲು ಸಾಧ್ಯವಾಗುವಂತೆ ವಿಶ್ವವಿದ್ಯಾನಿಲಯಗಳು ಔದ್ಯೋಗಿಕ ಪದವಿ ಕಾರ್ಯಕ್ರಮಗಳನ್ನು ಪ್ರಾರಂಬಿಸುವುವು ಎಂದು ಚಿಂತಿಸಲಾಗಿತ್ತು. ಆದರೆ ಇದು ಘಟಿಸಲಿಲ್ಲ. ಆದಾಗ್ಯೂ ಯುಜಿಸಿ ಹಲವಾರು ಕಾಲೇಜುಗಳಲ್ಲಿ ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ ಒಂದು ಔದ್ಯೋಗಿಕ ವಿಷಯಕ್ಕೆ ಅವಕಾಶ ಮಾಡಿಕೊಟ್ಟಿದೆ. ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯು ಔದ್ಯೋಗಿಕ ಪರವಾದ ಡಿಪ್ಲೊಮ ಮತ್ತು ಡಿಗ್ರಿ ಕಾರ್ಯಕ್ರಮಗಳನ್ನು ಹೊಂದಿದೆ.

**ಉಪಸಂಹಾರ:**

ಭಾರತವು ಕೃಷಿಸಮಾಜದಿಂದ ಕೈಗಾರಿಕಾ ಸಮಾಜವಾಗಿ, ಮುಂದುವರೆಯುತ್ತಿರುವ ದೇಶದಿಂದ ಮುಂದುವರೆದ ದೇಶವಾಗಿ ತನ್ನನ್ನು ತಾನು ಮಾರ್ಪಡಿಸಿಕೊಳ್ಳುತ್ತಿರುವ ಪ್ರಕ್ರಿಯೆಯಲ್ಲಿದೆ. ಪಾಶ್ಚಾತ್ಯ ದೇಶಗಳ ಸಾಮಾಜಿಕ–ಆರ್ಥಿಕ ವಿಕಾಸದ ಮಾದರಿಯು ಸಂಪತ್ತು ಅದರ ಬಳಕೆ ಮತ್ತು ಜೀವನದ ಗುಣಮಟ್ಟಗಳಲ್ಲಿ ಜಾಗತಿಕ ವ್ಯತ್ಯಾಸಗಳನ್ನು ಬಹಳವಾಗಿ ಅಧಿಕಗೊಳಿಸಿದೆ. ಹಲವು ಪ್ರದೇಶಗಳಲ್ಲಿ ಇವು ಭೂಮಿಯ ಹೊರುವ ಸಾಮರ್ಥ್ಯವನ್ನು ಮೀರಿ ಜೈವಿಕ ಪರಿಸರದಲ್ಲಿ ಒತ್ತಡವನ್ನು ಉಂಟುಮಾಡಿವೆ. ಜೈವಿಕ ಪರಿಸರದ ಸಮತೋಲನ ಮತ್ತು ಆರ್ಥಿಕ ನ್ಯಾಯಗಳನ್ನು ಖಚಿತಪಡಿಸುವ ವಿಕಾಸದ ಮಾದರಿಯನ್ನು ನಾವು ಅವಶ್ಯಕವಾಗಿ ಅನುಸರಿಸಬೇಕಾಗಿದೆ. ಭಾರತೀಯ ವಾತಾವರಣಕ್ಕೆ ಆಧುನೀಕರಿಸಿದ ಕೃಷಿ, ಕೃಷಿ ಆಧಾರದ ಕೈಗಾರಿಕೆಗಳು ಮತ್ತು ಸಮಗ್ರ ರೂಪದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒತ್ತನ್ನು ನೀಡಬೇಕಿದ್ದು ಇದರ ಜೊತೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಭಾರೀ ಕೈಗಾರಿಕೆಗಳಿಗೂ ಒತ್ತನ್ನು ನೀಡಬೇಕಾಗಿದೆ.

ಅಂತಿಮವಾಗಿ ಆಯ್ಕೆಮಾಡಿಕೊಂಡ ಮಾದರಿ ಯಾವುದಾದರೂ ಆಗಿರಲಿ, ಸಾಕಷ್ಟು ಕುಶಲ ಮಾನವಬಲದ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಅವಶ್ಯಕ. ಸದ್ಯದ ಒಟ್ಟು ಮಾನವ ಬಲ 36ಕೋಟಿಯಷ್ಟಿದ್ದು, ಇದರಲ್ಲಿ 11% ವ್ಯವಸ್ಥಿತ ವಲಯದಲ್ಲಿದೆ. ಉಳಿದಿದ್ದು ಅಲ್ಪ ಉತ್ಪಾದನೆಯ ಬಹುತೇಕ ಅಕುಶಲ ಶ್ರಮಿಕರನ್ನು ಒಳಗೊಳ್ಳುವ ಮಾನವ ಬಲವನ್ನು ಹೊಂದಿರುವ ವ್ಯವಸ್ಥಾರಹಿತ ವಲಯದಲ್ಲಿದೆ.

8+, 10+ ಮತ್ತು 12+ ಘಟ್ಟವನ್ನು ಮುಗಿಸಿರುವ ಮತ್ತು ಶಾಲಾಶಿಕ್ಷಣದ ವಿವಿಧ ಸ್ತರಗಳಿಂದ ಹೋಗಿರುವ ಅಭ್ಯರ್ಥಿಗಳನ್ನು ವ್ಯವಸ್ಥಾರಹಿತ ವಲಯದಲ್ಲಿ ನಾವು ಕಾಣುತ್ತೇವೆ. ಈ ವ್ಯಕ್ತಿಗಳು ಕಾರ್ಯಕ್ಷೇತ್ರವನ್ನು ಬಹುಮಟ್ಟಿಗೆ ಯಾವ ತರಬೇತಿ ಇಲ್ಲದೆ ಪ್ರವೇಶಿಸಿರುವವರು. ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಅದರಿಂದ ರಾಷ್ಟ್ರಸಂಪತ್ತನ್ನು ವೃದ್ಧಿಸಲು ಔದ್ಯೋಗಿಕ ಶಿಕ್ಷಣ ಮತ್ತು ಪ್ರಶಿಕ್ಷಣದ ಬೃಹತ್ ಕಾರ್ಯಕ್ರಮದ ಅಗತ್ಯವಿದೆ. ಶಾಲಾ ವ್ಯವಸ್ಥೆಯ ಒಳಗೆ ವಿದ್ಯಾರ್ಥಿಗಳಿಗಾಗಿ ಆಯೋಜಿಸಬೇಕಾದ ಕಾರ್ಯಕ್ರಮಗಳೆಂದರೆ 8ನೇ ತರಗತಿಯವರೆಗೂ ಉಪಯುಕ್ತ ಉತ್ಪಾದಕ ಕಾರ್ಯ ಮತ್ತು ಕಾರ್ಯಾನುಭವ, 9, 10ನೇ ತರಗತಿಗಳಲ್ಲಿ ಔದ್ಯೋಗಿಕ ಪೂರ್ವ ಕಾರ್ಯಕ್ರಮ ಮತ್ತು ಕಾರ್ಯನುಭವ (a) ಶೈಕ್ಷಣಿಕ ಪ್ರವಾಹ 9 ಮತ್ತು 10ನೇ ತರಗತಿಯಲ್ಲಿ ಮುಖ್ಯ ಔದ್ಯೋಗಿಕ ವಿಷಯಗಳು ಅಥವಾ ಸಾಮಾನ್ಯ ಔದ್ಯೋಗಿಕ ಕಾರ್ಯಕ್ರಮ ಮತ್ತು (b) 11 ಮತ್ತು 12ಬೇ ತರಗತಿಗಳಲ್ಲಿ ಔದ್ಯೋಗಿಕ ಪ್ರವಾಹ

(i), (ii) ಮತ್ತು iii (a)ಗೆ ಸಂಬಂಧಿಸಿದಂತೆ ದೃಷ್ಟಿಕೋನದಲ್ಲಿ ಯಾವ ತಾಕಲಾಟಗಳು ಕಂಡುಬರುವುದಿಲ್ಲ. ಅವುಗಳನ್ನು ಸೂಕ್ತರೀತಿಯಲ್ಲಿ ಅನುಷ್ಠಾನಕ್ಕೆ ತರಬೇಕಷ್ಟೆ. 9ಮತ್ತು 10ನೇ ತರಗತಿಯಲ್ಲಿನ ಔದ್ಯೋಗಿಕ ಪ್ರವಾಹವನ್ನು ಪರಿಗಣಿಸಿದಾಗ, ವಿಭಿನ್ನ ಸಮಿತಿಗಳು ನೀಡಿರುವ ಒತ್ತುಗಳಲ್ಲಿ ವ್ಯತ್ಯಾಸವಿದೆ ಮತ್ತು ಆಚಾರ್ಯ ರಾಮಮೂರ್ತಿ ಸಮಿತಿಯ ವಿಷಯದಲ್ಲಿರುವಂತೆ ಪರಿಕಲ್ಪನೆಯಲ್ಲೇ ತಾಕಲಾಟಗಳು ಕಂಡುಬಂದಿವೆ.

ಈ ವಿವಾದಾಂಶವನ್ನು ಎರಡು ದಶಕಗಳ ಅನುಭವದ ಬೆಳಕಿನಲ್ಲಿ ಪುನರ್ ಪರಿಶೀಲಿಸಬೇಕಾದ ಅಗತ್ಯವಿದೆ. ಇದಕ್ಕೆ ಆಳವೂ ಗ್ರಹಣಪೂರ್ವಕವೂ ಆದ ಪರಿಗಣನೆಯ ಅಗತ್ಯವಿದೆ. ಈ ಕಾರ್ಯಕ್ರಮವನ್ನು 1978ರಷ್ಟು ಹಿಂದೆಯೇ ಪ್ರಾರಂಭಿಸಲಾಯಿತು. ಹೊಸ ಶಿಕ್ಷಣ ನೀತಿಯ (1986) ನಂತರ ಇದಕ್ಕೆ ಅತ್ಯಂತ ಹೆಚ್ಚಿನ ಪ್ರಾಮುಖ್ಯವನ್ನು ನೀಡಲಾಯಿತು. 1988ರಿಂದ MHRD ಮಂತ್ರಾಲಯವು ಉದಾರ ಹಣಕಾಸಿನ ಬೆಂಬಲವನ್ನು ಮತ್ತು ಬೃಹತ್ ಪ್ರಮಾಣದ ಧನಸಹಾಯವನ್ನು ಒದಗಿಸಿತು. ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಉದ್ಯೋಗಕ್ಕೆ ಕುಶಲ ಮಾನವಬಲ ಮತ್ತು ಸರ್ವವಿದಿತ ಪೂರ್ವಾಗ್ರಹಗಳಿಂದಾಗಿ ಅವಕಾಶಗಳು ಇರಬೇಕು ಎಂಬುದು ನಿಸ್ಸಂಶಯ. ಆದರೆ ಹಲವು ವರ್ಷಗಳಿಂದ ದೊರೆತಿರುವ ಪ್ರತಿಕ್ರಿಯೆಯನ್ನು ಅಲ್ಲಗಳೆಯಲಾಗದು.

Digitised by Bharatavani, CIIL

ಯೋಜನೆಯ ಸೂತ್ರೀಕರಣ ಮತ್ತು ಅನುಷ್ಠಾನದ ಬಗೆಗಳಲ್ಲಿ ಆಂತರಿಕ ದೋಷಗಳು ಮತ್ತು ಕೆಲವು ನಿರುತ್ಸಾಹಕರ ಅಂಶಗಳು ಇರುವುದೆಂದು ತೋರುವುದು. ಈ ಕೆಳಗಿನ ಅಂಶಗಳು ಗಮನಾರ್ಹವಾದುದು.

(i) ವಿದ್ಯಾರ್ಥಿಗಳು ಎರಡು ಪ್ರತ್ಯೇಕ ವರ್ಗಗಳಾಗಿ ವಿಭಾಗಗೊಂಡಿದ್ದಾರೆ; ಶೈಕ್ಷಣಿಕ ಪ್ರವಾಹ ಮತ್ತು ಔದ್ಯೋಗಿಕ ಪ್ರವಾಹ ಎಂಬ ಶೈಕ್ಷಣಿಕ ಪ್ರವಾಹವು ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಹಾಗೂ ಅವರು ನಂತರ ಉನ್ನತ ಶಿಕ್ಷಣಕ್ಕಾಗಿ ಸುಲಭವಾಗಿ ಹೋಗಬಹುದು ಎಂಬ ಅಸ್ಪಷ್ಟ ಭಾವನೆ ಇದೆ.

(ii) ನೇರ ಚಲನೆಯನ್ನು ಕುರಿತಂತೆ ಭರವಸೆ ಏನೇ ಇದ್ದರೂ ಕೆಲವು ಸಂದರ್ಭಗಳಲ್ಲಿ ಔದ್ಯೋಗಿಕ ಪ್ರವಾಹದ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾನಿಲಯಗಳಲ್ಲಿ ಸೇತು ಕಾರ್ಯಕ್ರಮಗಳ ಲಭ್ಯತೆಯನ್ನು ಈ ಭರವಸೆ ಅವಲಂಬಿಸಿರುವುದರಿಂದ ಇದನ್ನು ಕುರಿತ ಅನಿಶ್ಚಿತತೆ ಇದ್ದೇ ಇದೆ.

(iii) ಯಾವುದೇ ಸುಧಾರಣೆ ಕೆಲವು ನಿರ್ದಿಷ್ಟ ಪರಿಮಿತಿಗಳು ಮತ್ತು ಅನುಕೂಲಗಳನ್ನು ಹೊಂದಿರುತ್ತವೆ. ನಮ್ಮ ಆಡಳಿತ ಸಂಸ್ಕೃತಿಯಲ್ಲಿ ಪರಿಮಿತಿಗಳು ಘೋಷಣೆಯ ದಿನಾಂಕದಿಂದಲೇ ಅನ್ವಯಿಸಲ್ಪಡುವುವು; ಆದರೆ ಅನುಕೂಲಗಳು ನಿಧಾನಿಸಿ ಕೈಸೇರುವುವು. ಉದಾಹರಣೆಗೆ ಉದ್ಯೋಗದ ಅವಕಾಶಗಳು ಅನಿಶ್ಚಿತವಾಗಿದ್ದವು. ಆದರೆ ಅವುಗಳ ಅಂತಿಮ ಸ್ವರೂಪ ಮುಂತಾದ ಪರಿಮಿತಿಗಳನ್ನು ಮಾರ್ಪಡಿಸಲಾಯಿತಾದರೂ ಪ್ರಾರಂಭದಲ್ಲೇ ಸ್ಪಷ್ಟಪಡಿಸಲಾಗಿತ್ತು.

(iv) ಶಾಲೆಗಳ ವಾತಾವರಣವು ಕೆಲವು ಔದ್ಯೋಗಿಕ ವಿಷಯಗಳನ್ನು ಬೋಧಿಸಲು ಅನುಕೂಲವಾಗಿದ್ದರೂ ಬಹುಶಃ ವ್ಯಾಪಾರ ಮತ್ತು ವಾಣಿಜ್ಯ ಸೆಕ್ರೆಟೇರಿಯಟ್ ಪ್ರಾಕ್ಟಿಸ್, ಗೃಹವಿಜ್ಞಾನ ಮತ್ತು ಶಾಲೆ ಕೃಷಿ ಪರಿಸರದಲ್ಲಿ ಕೆಲವು ಕೃಷಿ ವಿಷಯಗಳನ್ನು ಹೊರತುಪಡಿಸಿ ಪೂರ್ಣರೂಪದ ಔದ್ಯೋಗಿಕ ಕಾರ್ಯಕ್ರಮಗಳನ್ನು ಬೋಧಿಸಲು ಅನುಕೂಲಕರವಾಗಿರಲಿಲ್ಲ.

(v) ಪ್ರತಿಯೊಂದು ಸಮಿತಿಯೂ ನಮ್ಯತೆಯನ್ನು ಒತ್ತಿ ಹೇಳಿದ್ದರೂ ಸಹ ಅನುಷ್ಠಾನದ ವಿಷಯಕ್ಕೆ ಬಂದಾಗ ಅದಕ್ಕೆ ಉದಾರ ಪ್ರೋತ್ಸಾಹ ದೊರಕಲಿಲ್ಲ.

(vi) ಒಂದಕ್ಕಿಂತ ಹೆಚ್ಚು ಸಮಿತಿಗಳು ಕ್ರೆಡಿಟ್‌ವ್ಯವಸ್ಥೆ, ಸೆಮಿಸ್ಟರ್ ಪದ್ಧತಿ ಮತ್ತು ವಿಕೇಂದ್ರೀಕರಣಗಳನ್ನು ಶಿಫಾರಸ್ಸು ಮಾಡಿದ್ದರೂ ಸಹ ಇವುಗಳನ್ನು ಅನುಷ್ಠಾನಕ್ಕೆ ತರಲಿಲ್ಲ.

(vii) ಡಾ॥ ಮ್ಯಾಲ್ಕೊಮ್, ಎಸ್. ಆದಿಶೇಷಯ್ಯ ಅವರ ಅಧ್ಯಕ್ಷತೆಯ ಪುನರ್ ಪರಿಶೀಲನಾ ಸಮಿತಿ (1978)ಯ ಈ ಕೆಳಗಿನ ಶಿಫಾರಸ್ಸುಗಳು ಪರಿಗಣನಾರ್ಹವಾದವುಗಳು. "ವಿದ್ಯಾರ್ಥಿಗಳಿಗೆ ಸಾಮಾನ್ಯ ಹಾಗೂ ಔದ್ಯೋಗಿಕ ಪ್ರವಾಹವನ್ನು ಅಥವಾ ಅವೆರಡರ ಬೆರಕೆಯನ್ನು ಆಯ್ಕೆ ಮಾಡುವ ಸ್ವಾತಂತ್ರದೊಂದಿಗೆ ಕಾರ್ಯಕ್ರಮಗಳ ಪ್ರವಾಹಗಳಲ್ಲಿ ನಮ್ಯತೆಯನ್ನು ಒದಗಿಸುವ ಅಗತ್ಯವಿದೆ".

(viii) ಶೈಕ್ಷಣಿಕ ಪ್ರವಾಹವನ್ನು ಒಂದೆಡೆ ಇಟ್ಟುಕೊಂಡು ಔದ್ಯೋಗಿಕ ಪ್ರವಾಹವನ್ನು ಮತ್ತೊಂದೆಡೆ ಇಟ್ಟು ಮಧ್ಯದಲ್ಲಿ ಕಾರ್ಯಕ್ರಮಗಳ ಬೆರಕೆಯನ್ನು ಒದಗಿಸಿ ಕಾರ್ಯಕ್ರಮಗಳ ಮಿಶ್ರಣದ ವ್ಯಾಪ್ತಿಯೊಂದರ ಪ್ರಾರಂಭ ವಾಂಛನೀಯ. ಕಾರ್ಯಕ್ರಮಗಳ ಸಮ್ಮಿಲನ ಈ ಕೆಳಗಿನಂತಿರಬಹುದಾಗಿದೆ.

- ಎಲ್ಲಾ ಶೈಕ್ಷಣಿಯ ಕಾರ್ಯಕ್ರಮಗಳು
- ಎಲ್ಲಾ ಔದ್ಯೋಗಿಕ ಕಾರ್ಯಕ್ರಮಗಳು
- ಶೈಕ್ಷಣಿಕ ಮತ್ತು ಔದ್ಯೋಗಿಕ ಕಾರ್ಯಕ್ರಮಗಳ ಸಮ್ಮಿಳನ.

ಈ ಸರಳ ಕ್ರಮ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಪ್ರವಾಹದ ಬಗ್ಗೆ ಇರುವ ಮನೋಭಾವನೆಯಲ್ಲಿ ಮಹತ್ತರ ಬದಲಾವಣೆಯನ್ನು ತರುವುದು. ಈ ಹೆಚ್ಚುವರಿ ಅವಕಾಶವು ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮದ ಗುರಿಯಿಂದ ವಿಚಲಿತವಾಗುವುದಿಲ್ಲ.

(ix) ಅಧಿಕಾಧಿಕ ಸಂಖ್ಯೆಯಿಂದ ಬಾಲಕ ಬಾಲಕಿಯರು ಉನ್ನತ ಮಾಧ್ಯಮಿಕ ಶಿಕ್ಷಣಕ್ಕೆ ಪ್ರವೇಶವನ್ನು ಪಡೆಯುತ್ತಿದ್ದಾರೆ. ಅವರೆಲ್ಲರೂ ತೃತೀಯ ಘಟ್ಟದ ಶಿಕ್ಷಣವನ್ನು ಪ್ರವೇಶಿಸುವುದಿಲ್ಲ. ಕೃಷಿ ಕುಟುಂಬದಿಂದ ಅಥವಾ ಗ್ರಾಮಗಳಿಂದ ಬರುವವರು ಮತ್ತು ಗ್ರಾಮಗಳಿಗೆ ಹಿಂತಿರುಗಲು ಇಚ್ಛಿಸುವವರು ಚರಿತ್ರೆ, ಅರ್ಥಶಾಸ್ತ್ರ ಮತ್ತು ಜೇನುಸಾಕಣೆ ಅಥವಾ ಪಂಪ್ ರಿಪೇರಿ ಎಂಬೀ ಸಂಯುಕ್ತ ವಿಷಯಗಳನ್ನು ಓದಿಲಿಚ್ಛಿಸಿದ್ದಲ್ಲಿ ಅಂಥವರಿಗೆ ಶಾಲೆಯು ಈ ವಿಷಯಗಳನ್ನು ಒದಗಿಸಿದರೆ ಈ ಸಮ್ಮಿಳಿತ ವಿಷಯಗಳಿಗೆ ಅವಕಾಶ ಮಾಡಿಕೊಡುವುದರಲ್ಲಿ ಯಾವ ತಪ್ಪು ಇಲ್ಲ.

+2 ಘಟ್ಟದಲ್ಲಿ ಶಾಲಾವ್ಯವಸ್ಥೆಯು ವಿಜ್ಞಾನ ಮತ್ತು ತಂತ್ರಜ್ಞಾನದತ್ತ ಒಲುವ ವಿಷಯಗಳ ಗ್ರಹಿಕೆ ಮತ್ತು ಅವುಗಳನ್ನು ಪ್ರಶಂಸಿಸುವಂಥ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕು. ವ್ಯವಸ್ಥಾರಹಿತ ವಲಯವನ್ನು ಆಧುನೀಕರಿಸಲು ಇಂಥವರು ಅಪಾರ ಸಂಖ್ಯೆಯಲ್ಲಿ ಬೇಕು. ಸಮಂಜಸ ರೀತಿಯಲ್ಲಿ ಶಿಕ್ಷಿತರಾದ ಶಾಲಾ ಶಿಕ್ಷಣದ ನಂತರ ಗ್ರಾಮದಲ್ಲಿ ನೆಲೆಸುವ ಯುವ ಪುರುಷರು ಹಾಗೂ ಮಹಿಳೆಯರ ಬೃಹತ್ ಜನಸಂಖ್ಯೆಯಿಂದ ಮಾತ್ರ ಗ್ರಾಮೀಣ ಜೀವನದ ಪುನರುಜ್ಜೀವನ ಸಾಧ್ಯವಾಗುವುದು.

(x) ಐ.ಟಿ.ಐ.ಗಳು ಅಥವಾ ಪಾಲಿಟೆಕ್ನಿಕ್‌ಗಳು ಅಥವಾ ಇವಕ್ಕೆ ಸಮನಾದ ಇತರ ಔದ್ಯೋಗಿಕ ಸಂಸ್ಥೆಗಳಲ್ಲಿ ಲಭ್ಯವಾಗುವ ಬೋಧನೆ ಮತ್ತು ತರಬೇತಿಗಳನ್ನು ನಕಲು ಮಾಡುವ ಉದ್ದೇಶವನ್ನು ಔದ್ಯೋಗಿಕ ಪ್ರವಾಹವು ಹೊಂದಿಲ್ಲವೆಂದು ಎಲ್ಲಾ ದಸ್ತಾವೇಜುಗಳಲ್ಲಿಯೂ ಸ್ಪಷ್ಟಪಡಿಸಲಾಗಿದೆ. ಉನ್ನತ ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯಲ್ಲಿನ ಔದ್ಯೋಗಿಕ ಶಿಕ್ಷಣ ವ್ಯವಸ್ಥೆಯು ಔದ್ಯೋಗಿಕ ಸಂಸ್ಥೆಗಳ ನಿಯಮಿತ ಔದ್ಯೋಗಿಕ ಶಿಕ್ಷಣ ಮತ್ತು ತರಬೇತಿಗೆ ಪರ್ಯಾಯವಾಗಿರಬೇಕು ಎಂಬ ಉದ್ದೇಶವಿಲ್ಲ. ಆದಾಗ್ಯೂ ಕೆಲವು ಶಾಲೆಗಳು ಒಂದು ವೇಳೆ ಒಂದು ಕೈಗಾರಿಕೆಯನ್ನು ಸ್ಥಾಪಿಸಿ ಇಲ್ಲವೇ ಕೈಗಾರಿಕೆಯೊಂದಿಗೆ ಕರಾರು ಮಾಡಿಕೊಂಡು ತಮ್ಮನ್ನು ತಾವು ಔದ್ಯೋಗಿಕ ಶಾಲೆಗಳಾಗಿ

Digitised by Bharatavani, CIIL

ಪರಿವರ್ತಿಸಿಕೊಂಡರೆ ಅದು ಬೇರೊಂದು ಸಂದರ್ಭವಾಗುವುದು ಎಂದು ಇಲ್ಲಿ ಉಲ್ಲೇಖಿಸಬಹುದು.

(xi) ಶಾಲಾವ್ಯವಸ್ಥೆಯಲ್ಲಿ ಸಾಮಾನ್ಯ ಮತ್ತು ಔದ್ಯೋಗಿಕ ಶಿಕ್ಷಣಗಳನ್ನು ಸಂಯುಕ್ತಗೊಳಿಸಲು ಶೈಕ್ಷಣಿಕ ಕಾರ್ಯಕ್ರಮವನ್ನು ವಿನ್ಯಾಸಗೊಳಿಸದಾಗಲೆಲ್ಲಾ ಶಾಲಾ ಶಿಕ್ಷಣದಿಂದ ಹೊರಬರುವ ವಿದ್ಯಾರ್ಥಿಗಳು ಯಾವುದಾದರೊಂದು ರೀತಿಯ ಉತ್ಪಾದಕ ಕಾರ್ಯ ಮತ್ತು ಶೈಕ್ಷಣಿಕ ಅಧ್ಯಯನಗಳಲ್ಲಿ ತೊಡಗುವ ಒಂದೇ ಸಮನಾದ ಅರ್ಹತೆಯನ್ನು ಪಡೆದವರಾಗಿರಬೇಕು ಎಂಬ ವಿಚಾರವನ್ನು ಗಮನದಲ್ಲಿಡಬೇಕಾಗುತ್ತದೆ. ಶಾಲೆಯಲ್ಲಿ ಔದ್ಯೋಗಿಕ ಒಲವನ್ನು ಪರಿಚಯಿಸಿದ ಮಾತ್ರಕ್ಕೆ ಅವರಿಗೆ ಉದ್ಯೋಗವನ್ನೇ ಹಿಡಿಯಬೇಕೆಂಬ ಅರ್ಥವಲ್ಲ. ಬದಲಾಗಿ ಅವರಿಗೆ ಪ್ರಾಯೋಗಿಕ ಕಾರ್ಯವನ್ನು ಪರಿಚಯಿಸುವಲ್ಲಿ ಇದು ಸಹಾಯಕವಾಗಿದೆಯೆಂದು ತಿಳಿಯಬೇಕು. ಔದ್ಯೋಗಿಕ ವಿಷಯಗಳನ್ನು ಪೂರ್ಣಪ್ರಮಾಣದಲ್ಲಿ ಆಯ್ಕೆ ಮಾಡಿಕೊಂಡವರು ಔದ್ಯೋಗಿಕ ಅರ್ಹತೆಯನ್ನು ಪಡೆದುಕೊಳ್ಳಬಹುದು.

(xii)ಈ ಸ್ಮಧಾರಣೆಯನ್ನು ಕುರಿತಂತೆ ನಮ್ಮ ಆಲೋಚನೆಗಳು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಾ ಹೋದಂತೆ, ‘ಔದ್ಯೋಗಿಕರಿಸಿದ ಪ್ರವಾಹ’ ಎಂಬ ಪದಗುಚ್ಛ ಬಹುತೇಕ ಕಾರ್ಯಕ್ರಮದ ಪರಿಕಲ್ಪನೆಯನ್ನು ‘ಔದ್ಯೋಗಿಕ ಪ್ರವಾಹ’ ಎಂಬ ಪದಗುಚ್ಛಕ್ಕಿಂತ ಹೆಚ್ಚು ತೃಪ್ತಿಕರವಾಗಿ ಪ್ರತಿನಿಧಿಸುತ್ತದೆ ಎಂದು ನಾವು ಒಪ್ಪಿಕೊಳ್ಳಬಹುದು.

**ಮೂಲ: ವಿ.ಸಿ. ಕುಲಂದೈಸ್ವಾಮಿ**
**ಅನು: ಚಂದ್ರಶೇಖರ ಬಿ.ಎಂ.**

## ಶಿಕ್ಷಣಕ್ಕೆ ಸಂವಿಧಾನಾತ್ಮಕ ಅವಕಾಶಗಳು

ಭಾರತವು 1947ರಲ್ಲಿ ಸ್ವಾತಂತ್ರ್ಯವನ್ನು ಪಡೆಯಿತು. ಇದು 1950ರಲ್ಲಿ ತನ್ನ ಸಂವಿಧಾನವನ್ನು ರಚಿಸಿಕೊಂಡಿತು. ಶಿಕ್ಷಣದ ಬಗ್ಗೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಸಂಬಂಧವಿರುವ ಅನೇಕ ಮಹತ್ವದ ಉಲ್ಲೇಖಗಳನ್ನು ಘಟನೆಯಲ್ಲಿ ನಮೂದಿಸಲಾಗಿದೆ. ಭಾರತದ ಶೈಕ್ಷಣಿಕ ಹೊಣೆಯನ್ನು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಹಂಚಿದೆ. ಈ ಸಂವಿಧಾನವು ಶಿಕ್ಷಣವನ್ನು ರಾಜ್ಯದ ವಿಷಯವನ್ನಾಗಿ ಮಾಡಿದೆ. ಇದರಲ್ಲಿ ಕೇಂದ್ರ ಪ್ರದೇಶ ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಹೊರತು ಪಡಿಸಲಾಗಿದೆ. ಇವುಗಳು ಕೇಂದ್ರ ಸರ್ಕಾರದ ನೇರವಾದ ಹೊಣೆಗಾರಿಕೆಯಲ್ಲಿ ಬರುವುವು. ಸಂವಿಧಾನವು ಶಿಕ್ಷಣಕ್ಕೆ ಹಲವಾರು ಅವಕಾಶಗಳನ್ನು ಕೊಡಮಾಡಿದೆ. ಅವುಗಳಲ್ಲಿ ಈ ಕೆಳಗಿನ ಪ್ರಮುಖ ಅವಕಾಶಗಳನ್ನು ಚರ್ಚಿಸಬಹುದು:

1) ದೇಶದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ 2) ಅಲ್ಪ ಸಂಖ್ಯಾತ ವರ್ಗದವರ ಶಿಕ್ಷಣ 3) ಧಾರ್ಮಿಕ ಶಿಕ್ಷಣ 4) ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರ ಶಿಕ್ಷಣ 5) ಸ್ತ್ರೀ-ಶಿಕ್ಷಣ 6) ಆಂಗ್ಲೋ-ಇಂಡಿಯನ್ ಶಿಕ್ಷಣ 7) ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಪಾತ್ರ

ಶಾಸನಾದಿಗಳನ್ನು ವಿತರಣೆ ಮಾಡುವಾಗ ಸಂವಿಧಾನವು 3 ಪಟ್ಟಿಗಳನ್ನು ಮಾಡಿದೆ. ಅವುಗಳೆಂದರೆ ಕೇಂದ್ರದ ಕರ್ತವ್ಯಗಳ ಪಟ್ಟಿ, ರಾಜ್ಯ ಕರ್ತವ್ಯಗಳ ಪಟ್ಟಿ ಮತ್ತು ಸಮಾನ ಅಥವಾ ಸಮವರ್ತಿ ಪಟ್ಟಿ. ಇವುಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯ ತಿಳಿಯಬಹುದು. ಕೇಂದ್ರದ ಕರ್ತವ್ಯಗಳ ಪಟ್ಟಿಯಲ್ಲಿ 96 ಕಲಮುಗಳಿವೆ. ಇದು ಮೊದಲ ಪಟ್ಟಿಯಾಗಿದ್ದು, ಇಲ್ಲಿ ಕಾನೂನುಗಳನ್ನು ಮಾಡಲು ಸಂಸತ್ತಿಗೆ ಸಂಪೂರ್ಣ ಅಧಿಕಾರವಿರುತ್ತದೆ. ರಾಜ್ಯ ಕರ್ತವ್ಯಗಳ ಪಟ್ಟಿಯಲ್ಲಿ 67 ಕಲಮುಗಳಿವೆ. ವಿಷಯಗಳಿಗೆ ಕಾನೂನು ಮಾಡಲು ಸಂಪೂರ್ಣ ಅಧಿಕಾರವನ್ನು ಶಾಸಕಾಂಗಗಳಿಗೆ ನೀಡಲಾಗಿದೆ. ಮೂರನೆಯದಾಗಿ ಸಮವರ್ತಿ ಕರ್ತವ್ಯಗಳ ಪಟ್ಟಿಯನ್ನು ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳೆರಡೂ ಕಾನೂನುಗಳನ್ನು ಮಾಡುವ ಅಧಿಕಾರವನ್ನು ಪಡೆದಿರುತ್ತವೆ.

**ಕೇಂದ್ರದ ಕರ್ತವ್ಯಗಳ ಪಟ್ಟಿ:**

ಈ ಪಟ್ಟಿಯಲ್ಲಿ ಅನುಕ್ರಮವಾಗಿ 63, 64, 65 ಹಾಗೂ 66 ವಿಧಿಗಳು ಒಳಗೊಂಡಿವೆ.

**ವಿಧಿ 63:** ಆರಂಭದಲ್ಲಿಯೇ ಇದ್ದ ಬನಾರಸ ಹಿಂದೂ ವಿಶ್ವವಿದ್ಯಾನಿಲಯ, ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ, ದಿಲ್ಲಿ ವಿಶ್ವವಿದ್ಯಾನಿಲಯ ಹಾಗೂ ಪಾರ್ಲಿಮೆಂಟಿನಿಂದ ಕಾನೂನು ಬದ್ಧವಾಗಿ ಘೋಷಿಸಲ್ಪಟ್ಟ ರಾಷ್ಟ್ರೀಯವಾಗಿ ಮಹತ್ವವೆನಿಸಿದ ಇತರ ಯಾವುದೇ ಸಂಸ್ಥೆ.

**ವಿಧಿ 64:** ಭಾರತದ ಸರಕಾರದಿಂದ ಇಡಿಯಾಗಿ ಇಲ್ಲವೆ ಅಂಶತಃ ಆರ್ಥಿಕ ಸಹಾಯವನ್ನು ಪಡೆಯುವ ಮತ್ತು ಪಾರ್ಲಿಮೆಂಟಿನಿಂದ ಕಾನೂನ ಬದ್ಧವಾಗಿ ರಾಷ್ಟ್ರೀಯ ಮಹತ್ವದ ಸಂಸ್ಥೆಗಳಿಂದ ಘೋಷಿಸಲ್ಪಟ್ಟ ವಿಜ್ಞಾನ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು.

**ವಿಧಿ 65:** (ಅ) ಪೋಲೀಸ್ ಆಧಿಕಾರಿಗಳ ತರಬೇತಿಯನ್ನೊಳಗೊಂಡ ಉದ್ಯಮ, ವ್ಯಕ್ತಿ ಇಲ್ಲವೆ ತಾಂತ್ರಿಕ ತರಬೇತಿಯ ಸಲುವಾಗಿ, (ಬ) ವಿಶೇಷ ಅಭ್ಯಾಸಗಳು ಇಲ್ಲವೆ ಸಂಶೋಧನೆ (ಕ) ಅಪರಾಧಗಳ ಸಂಶೋಧನೆ ಇಲ್ಲವೆ ಗೊತ್ತುಪಡಿಸುವಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ಸಹಾಯದ ಸಲುವಾಗಿ ಭಾರತ ಒಕ್ಕೂಟದ ಸಂಘ ಸಂಸ್ಥೆಗಳು.

**ವಿಧಿ 66:** ಉಚ್ಚ ಶಿಕ್ಷಣ ಇಲ್ಲವೆ ಸಂಶೋಧನೆ ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳಲ್ಲಿಯ ಮಟ್ಟಗಳನ್ನು ಕ್ರೋಢೀಕರಿಸುವುದು ಹಾಗೂ ನಿರ್ಧರಿಸುವುದು.

**ವಿಧಿ 45:** ರಾಜ್ಯ ನೀತಿಯ ನೇರ ತಾತ್ವಿಕ ಸಂಹಿತೆಯ ಮೇರೆಗೆ ಹೇಳುವಂತೆ ಈ ಸಂವಿಧಾನವು ಜಾರಿಗೆ ಬಂದ ದಿನದಿಂದ ಮುಂದಿನ 10 ವರ್ಷಗಳವರೆಗೆ ಭಾರತದಲ್ಲಿ ಎಲ್ಲಾ 6 ರಿಂದ 14 ವರ್ಷಗಳವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯದ ಶಿಕ್ಷಣವನ್ನು ರಾಜ್ಯ ಸರ್ಕಾರಗಳು ಕೊಡುವ ವ್ಯವಸ್ಥೆಯನ್ನು ಮಾಡಬೇಕು.

Digitised by Bharatavani, CIIL

ಇಲ್ಲಿ ಸರ್ಕಾರಗಳು ಎಂದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು. ಕೇಂದ್ರಾಡಳಿತ ಪ್ರದೇಶಗಳ ಸ್ಥಾನಿಕ ಆಡಳಿತಗಳು ಮತ್ತು ಇತರ ಆಡಳಿತಗಳೂ ಕೇಂದ್ರ ಸರಕಾರದ ಆಡಳಿತದಲ್ಲಿರುವುವು. ಇದರಿಂದ ಪ್ರಾಥಮಿಕ ಶಿಕ್ಷಣದ ಪ್ರಸಾರದ ಹೊಣೆಗಾರಿಕೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡರ ಕೆಳಗೆ ಇದ್ದು ಇವುಗಳನ್ನು ಸರ್ಕಾರ, ಅರೆ ಸರ್ಕಾರ, ಖಾಸಗಿ ಸಂಸ್ಥೆಗಳ ಕಡೆಯಿಂದ ಪೂರೈಸಬೇಕು. ಶಿಕ್ಷಣವು ರಾಜ್ಯದ ವಿಷಯವಾಗಿದ್ದು, ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಜವಾಬ್ದಾರಿಯುತವಾಗಿ ಹೊಣೆಗಾರಿಕೆಯನ್ನು ಹೊತ್ತುಕೊಂಡು ಪ್ರಚಲಿತ ಗೊಳಿಸಬೇಕು.

**ರಾಜ್ಯ ಕರ್ತವ್ಯಗಳ ಪಟ್ಟಿ:**

ಪಟ್ಟಿ 1ರಲ್ಲಿ ವಿಧಿ 63, 64, 65, 66ನೆಯ ನಮೂದನೆಗಳಲ್ಲಿರುವ ಸಂಗತಿಗಳಿಗೆ ಒಳಪಟ್ಟು ವಿಶ್ವವಿದ್ಯಾಲಯ ಗಳನ್ನೊಳಗೊಂಡ ಶಿಕ್ಷಣ.

**ಸಮವರ್ತಿ ಕರ್ತವ್ಯಗಳ ಪಟ್ಟಿ:**

**ವಿಧಿ 25:** ಶ್ರಮದಾಯಕ ವೃತ್ತಿ ಹಾಗೂ ತಾಂತ್ರಿಕ ತರಬೇತಿ.

ಸಂವಿಧಾನದಲ್ಲಿ ಶಿಕ್ಷಣಕ್ಕೆ ಸಂಬಂದ ಪಟ್ಟ ಅನೇಕ ವಿಧಿಗಳು ಕಂಡುಬರುತ್ತವೆ. ಇವುಗಳು ಶಿಕ್ಷಣ ವಿಷಯವಾಗಿ ಈ ಕೆಳಗೆ ಸೂಚಿಸಿದ ಅಂಶಗಳನ್ನು ಒಳಗೊಂಡಿವೆ:

1) ಶಿಕ್ಷಣವು ರಾಜ್ಯದ ಹೊಣೆಗಾರಿಕೆ 2) ಕೇಂದ್ರ ಸರ್ಕಾರವು ಅಪ್ರತ್ಯಕ್ಷ ಹಾಗೂ ಮಹತ್ವದ ಜವಾಬ್ದಾರಿಯನ್ನು ಶಿಕ್ಷಣದ ಬಗೆಗೆ ಹೊಂದಿದೆ 3) ಉಚಿತ ಹಾಗೂ ಕಡ್ಡಾಯದ ಪ್ರಾಥಮಿಕ ಶಿಕ್ಷಣ 4) ಅಲ್ಪಸಂಖ್ಯಾತರ ಹಕ್ಕುಗಳನ್ನು ಸ್ಥಾಪಿಸುವುದು 5) ಕೆಲವು ಶಿಕ್ಷಣ ಸಂಸ್ಥೆಗಳಿಗೆ ಧಾರ್ಮಿಕ ಸೇವೆಗೆ ಸ್ವಾತಂತ್ರ್ಯ 6) ಸಮಾಜಿಕ ಹಿಂದುಳಿದ ವರ್ಗಗಳ ಹಾಗೂ ಹೆಣ್ಣು ಮಕ್ಕಳ ಶಿಕ್ಷಣ.

ಸಂವಿಧಾನಾತ್ಮಕ ಶೈಕ್ಷಣಿಕ ಅವಕಾಶಗಳ ವಿವರಣೆ ಸಂವಿಧಾನದಲ್ಲಿ ಶಿಕ್ಷಣದ ಅವಕಾಶಗಳನ್ನು ಕೆಳಗಿನಂತೆ ವರ್ಗೀಕರಿಸಬಹುದು:

1. **ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಿಕ್ಷಣ:** ಕೇಂದ್ರದ ಅಧೀನದಲ್ಲಿರುವ ಎಲ್ಲ ಶೈಕ್ಷಣಿಕ ಸಂಸ್ಥೆಗಳ ನೇರ ಆಡಳಿವನ್ನು ನೋಡಿಕೊಳ್ಳುವುದು ಅವುಗಳನ್ನು ನಿಯಂತ್ರಿಸುವುದು ಹಾಗೂ ಮೇಲ್ವಿಚಾರಣೆಯನ್ನು ಕೈಕೊಳ್ಳುವುದು ಕೇಂದ್ರ ಸರ್ಕಾರದ ಹೊಣೆಗಾರಕೆಯಾಗಿದೆ ಎಂದು ಸಂವಿಧಾನವು ಸೂಚಿಸುತ್ತದೆ. ಈ ಶೈಕ್ಷಣಿಕ ಸಂಸ್ಥೆಗಳ ಶಿಕ್ಷಣದ ಆಡಳಿತವನ್ನು ರಾಷ್ಟ್ರಾಧ್ಯಕ್ಷರು ಶಿಕ್ಷಣದ ಆಡಳಿತಾಧಿಕಾರಿಗಳ ಮುಖಾಂತರ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಸಂವಿಧಾನವು ನೀಡಿದೆ.

2. **ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉಚಿತ ಹಾಗೂ ಕಡ್ಡಾಯದ ವ್ಯವಸ್ಥೆ: 45ನೇ ವಿಧಿ:** ಪ್ರಜಾಪ್ರಭುತ್ವದ ಸೂಕ್ತವಾದ ವಿಕಾಸದ ಸಲುವಾಗಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ಅರಿತು ರಾಷ್ಟ್ರೀಯ ಧೋರಣೆಯ ನಿರ್ದೇಶಿತ ತತ್ತ್ವವಾದ ಘಟನೆಯ 45ನೆಯ ವಿಭಾಗವು ಈ ರೀತಿಯಾಗಿ ವಿವರಣೆ ನೀಡುವುದು– "ರಾಷ್ಟ್ರವು ಈ ಘಟನೆಯು ಪ್ರಾರಂಭವಾದ ಹತ್ತು ವರ್ಷಗಳಲ್ಲಿ ಎಲ್ಲ ಮಕ್ಕಳಿಗೆ ಅವರು 14ನೆಯ ವರ್ಷವನ್ನು ಮುಗಿಸುವವರೆಗೆ ಉಚಿತ ಹಾಗೂ ಕಡ್ಡಾಯದ ಶಿಕ್ಷಣವನ್ನು ಒದಗಿಸಲು ಯತ್ನಿಸಬೇಕೆಂದು ಘೋಷಿಸುತ್ತದೆ."

3. **ಸಮಾನತೆ: 14ನೆಯ ವಿಧಿ:** ಇದು ಎಲ್ಲ ಭಾರತೀಯ ನಾಗರಿಕರಿಗೆ ಕಾಯಿದೆ ದೃಷ್ಟಿಯಿಂದ ಸಮಾನತೆಯನ್ನು ಉಚಿತಗೊಳಿಸುತ್ತದೆ. ಧರ್ಮ, ಜನಾಂಗ, ಜಾತಿ, ಲಿಂಗ ಇಲ್ಲವೆ ಜನ್ಮಸ್ಥಳ ಇವುಗಳ ಆಧಾರದಿಂದ ಇರುವ ತಾರತಮ್ಯವನ್ನು ಪ್ರತಿಬಂಧಿಸುತ್ತದೆ. ಇದರ ವಿವರಣೆ ಹೀಗೆ ಇರುವುದು– "ಭಾರತದ ರಾಜ್ಯಕ್ಷೇತ್ರದಲ್ಲಿ ಯಾವ ವ್ಯಕ್ತಿಗೂ ವಿಧಿ ಸಮಕ್ಷಮ ಸಮತೆಯನ್ನು ಅಥವಾ ವಿಧಿಗಳಿಂದ ಸಮಾನ ಸಂರಕ್ಷಣೆಯನ್ನು ರಾಜ್ಯವು ನಿರಾಕರಿಸತಕ್ಕದ್ದಲ್ಲ."

**15ನೆಯ ವಿಧಿ:** ಇದು ಸಾರ್ವಜನಿಕ ಸೇವೆ ಇಲ್ಲವೆ ನೌಕರಿಯಲ್ಲಿ ಸಮಾನಾವಕಾಶಗಳನ್ನು ಖಚಿತಗೊಳಿಸುತ್ತದೆ. ಇದರ ವಿವರಣೆ ಹೀಗೆ ಉಂಟು: "ರಾಜ್ಯ ಯಾವನೊಬ್ಬ ನಾಗರಿಕನ ವಿರುದ್ಧವಾಗಿ ಮತ, ಮೂಲ ವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದೊಂದರ ಆಧಾರದ ಮೇಲೆ ಮಾತ್ರವೇ ಯಾವ ತಾರತಮ್ಯವನ್ನು ಮಾಡತಕ್ಕದ್ದಲ್ಲ."

4. **ಭಾಷಾ ಅಲ್ಪ ಸಂಖ್ಯಾತರಿಗೆ ಸವಲತ್ತುಗಳು: 350(ಅ) ವಿಧಿ:** ಇದು ಪ್ರತಿಯೊಂದು ರಾಜ್ಯವು ಮತ್ತು ಸ್ಥಾನಿಕ ಸರ್ಕಾರವು ಭಾಷಾ ಅಲ್ಪ ಸಂಖ್ಯಾತ ವರ್ಗಗಳ ಜನರಿಗೆ ನೀಡುವ ಸಲುವಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲಿಕ್ಕೆ ಪ್ರಯತ್ನಿಸಬೇಕೆಂದು ಸಾರಿ ಹೇಳುತ್ತದೆ. ಇದರ ವಿವರಣೆ ಹೀಗೆ ಉಂಟು: "ಭಾಷಾ ಅಲ್ಪ ಸಂಖ್ಯಾತರ ಗುಂಪುಗಳಿಗೆ ಸೇರಿದ ಮಕ್ಕಳ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮಾತೃಭಾಷೆಯಲ್ಲಿ ಬೋಧನೆಗಾಗಿ ಸೂಕ್ತ ಸೌಲಭ್ಯಗಳನ್ನೊದಗಿಸುವುದು ರಾಜ್ಯದ ಪ್ರಯತ್ನವಾಗಿದೆ."

**29(1)ನೆಯ ವಿಧಿ:** ಇದು ಭಾಷಾ ಅಲ್ಪ ಸಂಖ್ಯಾತರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಮಹತ್ವದ ಅಂಶವನ್ನು ಒಳಗೊಂಡಿದೆ. ಇದರ ವಿವರಣೆ ಹೀಗಿದೆ: "ತನ್ನದೇ ಆದ ಒಂದು ನಿರ್ದಿಷ್ಟ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಪಡೆದ, ಭಾರತದ ಪ್ರದೇಶದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ವಾಸಿಸುವ ಯಾವುದೇ ನಾಗರಿಕರ ಗುಂಪುಗಳು ಅವುಗಳನ್ನು ಉಳಿಸಿಕೊಳ್ಳುವ ಹಕ್ಕನ್ನು ಪಡೆದುಕೊಂಡಿರುತ್ತವೆ."

5. **ಧಾರ್ಮಿಕ ಶಿಕ್ಷಣ: 28ನೆಯ ವಿಧಿ:** ಇದು ಧರ್ಮ ಸ್ವಾತಂತ್ರ್ಯವನ್ನು ಖಚಿತಪಡಿಸುತ್ತದೆ. ಇದರ ವಿವರಣೆಯನ್ನು ಹೀಗೆ ನೀಡಬಹುದು: 1. "ರಾಜ್ಯ ನಿಧಿಗಳಿಂದ ಸಂಪೂರ್ಣವಾಗಿ ಪೋಷಿತವಾದ ಯಾವುದೇ ವಿದ್ಯಾಸಂಸ್ಥೆಯಲ್ಲಿ ಯಾವ ಮತೀಯ ಶಿಕ್ಷಣವನ್ನು ಕೊಡತಕ್ಕದ್ದಲ್ಲ." 2. "ಯಾವುದಾದರೊಂದು ವಿದ್ಯಾ ಸಂಸ್ಥೆಯು ರಾಜ್ಯ ಸರ್ಕಾರದಿಂದ ಘೋಷಿತವಾದಾಗ್ಯೂ ಅಂತಹ

Digitised by Bharatavani, CIIL

ಸಂಸ್ಥೆಗೆ 28(1) ವಿಧಿ ಅನ್ವಯಿಸುವುದಿಲ್ಲ." 3. "ಸಹಾಯಧನವನ್ನು ಪಡೆದುಕೊಳ್ಳುವ ಯಾವುದೇ ಶಿಕ್ಷಣ ಸಂಸ್ಥೆಗೆ ಹಾಜರಾಗುವ ಯಾವ ವ್ಯಕ್ತಿಯೂ ಇಂತಹ ಸಂಸ್ಥೆಗಳು ನೀಡಲಾಗುವ ಯಾವುದೇ ಧಾರ್ಮಿಕ ಬೋಧನೆಯಲ್ಲಿ ಭಾಗವಹಿಸುವಂತೆ ಅಗತ್ಯಗೊಳಿಸತಕ್ಕದ್ದಲ್ಲ."

6. **ಹಿಂದಿ ಭಾಷೆಯ ಸ್ಥಾನಮಾನ: 351ನೆಯ ವಿಧಿ:** ಸಂವಿಧಾನವು ರಾಜ್ಯಗಳಿಗೆ ಹಿಂದಿ ಭಾಷೆಯನ್ನಾಗಲಿ ಇಲ್ಲವೆ ಇತರ ಯಾವುದೇ ಆಧುನಿಕ ಭಾರತೀಯ ಭಾಷೆಯನ್ನಾಗಲಿ ಸರ್ಕಾರಿ ಭಾಷೆಯೆಂದು ಅನುಸರಿಸಲು ಅಧಿಕಾರ ನೀಡುತ್ತದೆ. ಇದರ ವಿವರಣೆ ಹೀಗುಂಟು: "ಹಿಂದಿ ಭಾಷೆಯನ್ನು ಅಭಿವೃದ್ಧಿಗೊಳಿಸುವುದು ಒಕ್ಕೂಟದ ಕರ್ತವ್ಯವಾಗಿದೆ, ಮತ್ತು ಭಾರತದ ಮಿಶ್ರ ಸಂಸ್ಕೃತಿಯ ಎಲ್ಲ ಅಂಶಗಳನ್ನು ಅಭಿವೃದ್ಧಿಗೊಳಿಸುವ ಮಾಧ್ಯಮವಾಗುವಂತೆ ಅದನ್ನು ಸಮೃದ್ಧಿಯುತ ಮಾಡುವುದು ಹಾಗೂ ಮಾತುಗಳನ್ನು ಅದರ ಕ್ರಿಯೆಯೊಡನೆ ತೊಡಕಾಗದಂತೆ ನೋಡಿಕೊಂಡು, ಅರಗಿಸಿ ಅದರ ಶ್ರೀಮಂತಿಕೆಯನ್ನು ಸಾಧಿಸುವುದು ಸಹ ಒಕ್ಕೂಟದ ಕಾರ್ಯವಾಗಿದೆ." ಇದಲ್ಲದೆ ಈ ಸಂವಿಧಾನವು ಜಾರಿಗೆ ಬಂದ 15 ವರ್ಷಗಳಲ್ಲಿ ಹಿಂದಿಯೇ ಎಲ್ಲ ಹಂತಗಳಲ್ಲಿಯೂ ಇಂಗ್ಲೀಷಿಗೆ ಬದಲಾಗಿ ಕೇಂದ್ರದ ಆಡಳಿತ ಭಾಷೆಯಾಗಬೇಕು ಎಂಬುದನ್ನು ಸಂವಿಧಾನವು ಸೂಚಿಸಿದೆ.

7. **ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರಿಗೆ ಶಿಕ್ಷಣ:** 15 (3)ನೆಯ ವಿಧಿ: ಈ ವಿಧಿಯು ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ಇಲ್ಲವೆ ಅವುಗಳಲ್ಲಿ ಯಾವುದೊಂದರ ಆಧಾರದ ಮೇಲೆ ನಾಗರಿಕರಲ್ಲಿ ತಾರತಮ್ಯವನ್ನು ಪ್ರತಿಬಂಧಿಸುತ್ತದೆ. ಇದರ ವಿವರಣೆಯನ್ನು ಹೀಗೆ ನೀಡಬಹುದು: "ಸ್ತ್ರೀಯರು ಹಾಗೂ ಮಕ್ಕಳಿಗೆ ಯಾವುದೇ ವಿಶೇಷ ಸೌಲಭ್ಯವನ್ನೊದಗಿಸಲು ಅಡ್ಡಿ ಆತಂಕಗಳು ಇರತಕ್ಕದ್ದಲ್ಲ. ಸ್ತ್ರೀಯರು ಹಾಗೂ ಮಕ್ಕಳು ದುರ್ಬಲ ವರ್ಗಕ್ಕೆ ಸೇರಿರುತ್ತಾರೆ ಕಾರಣ ಅವರಿಗಾಗಿ ಏರ್ಪಡಿಸುವ ವಿಶೇಷ ಸೌಲಭ್ಯಗಳಲ್ಲಿ ಶಿಕ್ಷಣವೂ ಒಂದಾಗಬೇಕು."

**46ನೇ ವಿಧಿ:** ಇದು ಸರ್ಕಾರದ ಧೋರಣೆಯ ನಿರ್ದೇಶಕ ತತ್ವವಾಗಿದೆ. ಇದರ ವಿವರಣೆಯನ್ನು ಹೀಗೆ ನೀಡಬಹುದು: "ದುರ್ಬಲ ವರ್ಗಗಳ ಜನರ, ವಿಶೇಷವಾಗಿ ಹರಿಜನರ, ಗಿರಿಜನರ ಶೈಕ್ಷಣಿಕ ಹಾಗೂ ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಆಸ್ಥೆಯಿಂದ ಸರ್ಕಾರವು ಇಲ್ಲವೆ ದೇಶವು ಮುಂದುವರಿಸುವುದೆಂದು ಹಾಗೂ ಅವರನ್ನು ಸಾಮಾಜಿಕ ಅನ್ಯಾಯದಿಂದ ಮತ್ತು ಎಲ್ಲ ಬಗೆಯ ಶೋಷಣೆಗಳಿಂದ ರಕ್ಷಿಸುವುದೆಂದು ಘೋಶಿಸುತ್ತದೆ."

**339ನೆಯ ವಿಧಿ:** ಇದು ಗಿರಿಜನರ ಕಲ್ಯಾಣವನ್ನು ಸಾಧಿಸಲು ಯತ್ನಿಸುತ್ತದೆ. ಇದರ ವಿವರಣೆ ಹೀಗಿದೆ: "ಸಂವಿಧಾನವು ಪ್ರಾರಂಭವಾದ ಹತ್ತು ವರ್ಷಗಳಲ್ಲಿ ಹರಿಜನ ಕ್ಷೇತ್ರದ ಆಡಳಿತ ಹಾಗೂ ಗಿರಿಜನರ ಕ್ಷೇಮಾಭಿವೃದ್ಧಿ ಇವುಗಳ ಸಲುವಾಗಿ ಒಂದು ಆಯೋಗವನ್ನು ನೇಮಿಸತಕ್ಕದ್ದು."

**340ನೆಯ ವಿಧಿ:** ಇದು ಹಿಂದುಳಿದ ಜನಾಂಗಗಳ ಸ್ಥಿತಿಗತಿಗಳನ್ನು ಸುಧಾರಿಸಲು ಪ್ರಯತ್ನಿಸುತ್ತದೆ. ಇದರ ವಿವರಣೆ ಹೀಗಿದೆ: "ಹಿಂದುಳಿದ ಜನಾಂಗಗಳ ಸ್ಥಿತಿಗತಿಗಳನ್ನು ಶೋಧಿಸುವುದಕ್ಕಾಗಿ ಒಂದು ಆಯೋಗವನ್ನು ನೇಮಿಸಬೇಕು."

**17ನೆಯ ವಿಧಿ:** ಇದು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಉದ್ದೇಶಿಸಿದೆ. ಇದರ ವಿವರಣೆಯನ್ನು ಹೀಗೆ ನೀಡಬಹುದು: "ಅಸ್ಪೃಶ್ಯತೆಯಿಂದ ಉದಯಿಸುವ ಯಾವುದೇ ಅಸಾಮರ್ಥ್ಯವನ್ನು ಕಾರ್ಯಗತಗೊಳಿಸುವುದು ಕಾನೂನಿನನ್ವಯ ಶಿಕ್ಷಾರ್ಹವಾದ ಅಪರಾಧವಾಗುತ್ತದೆ."

8. **ಸ್ತ್ರೀ ಶಿಕ್ಷಣ:** ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಸ್ತ್ರೀಯರ ಶೈಕ್ಷಣಿಕ ಹಿನ್ನಡೆಯನ್ನು ಹೋಗಲಾಡಿಸಲು ಸಂವಿಧಾನವು ಈ ಕೆಳಗಿನ ಅವಕಾಶಗಳನ್ನು ನೀಡಿದೆ:

**ವಿಧಿ 15(1):** ಕೇವಲ ಲಿಂಗಗಳ ಆಧಾರದ ಮೇಲೆ ಸರ್ಕಾರವು ಸೌಲಭ್ಯವನ್ನು ನೀಡುವಲ್ಲಿ ಯಾವುದೇ ತಾರತಮ್ಯವನ್ನು ಮಾಡಬಾರದು.

9. **ಆಂಗ್ಲೋ–ಇಂಡಿಯನ್ನರ ಶಿಕ್ಷಣ: ವಿಧಿ 337:** ಆಂಗ್ಲೋ–ಇಂಡಿಯನ್ ಸಮುದಾಯದ ಕಲ್ಯಾಣಕ್ಕಾಗಿ ವಿಶೇಷ ಶೈಕ್ಷಣಿಕ ಧನಸಹಾಯವನ್ನು ಒದಗಿಸಬೇಕಲ್ಲದೆ, ಸರ್ಕಾರಿ ಅನುದಾನವನ್ನು ಪಡೆಯುವಂತಹ ಶಾಲೆ–ಕಾಲೇಜುಗಳಲ್ಲಿ ಪ್ರತಿಶತ 40 ರಷ್ಟು ಪ್ರವೇಶಾವಕಾಶಗಳು ಆಂಗ್ಲೋ–ಇಂಡಿಯನ್ ಸಮುದಾಯದವರಿಗೆ ಬಿಟ್ಟು ಇತರೇ ಸಮುದಾಯಗಳ ಸದಸ್ಯರಿಗೆ ಕೊಡಲ್ಪಡಬೇಕು.

**ಉಪಸಂಹಾರ:** ಭಾರತದ ಸಂವಿಧಾನವು ಮೇಲ್ಕಾಣಿಸಿದ ಶಿಕ್ಷಣಕ್ಕೆ ಸಂಬಂಧಪಟ್ಟ ಸದವಕಾಶಗಳನ್ನು ನೀಡಿ ಜನತೆಯ ಕಲ್ಯಾಣವನ್ನು ಸಾಧಿಸುವ ಪ್ರಯತ್ನಪಟ್ಟಿದೆ. ಇದು ಸ್ವಾತಂತ್ರ್ಯೋತ್ತರ ಅವಧಿಯಲ್ಲಿಯ ಶಿಕ್ಷಣದ ವಿಕಾಸಕ್ಕೆ ನಾಂದಿಯಾಗಿ ಪರಿಣಮಿಸಿದೆ.

–ಡಾ. ನರಸಿಂಹಮೂರ್ತಿ ಆರ್. ನ

## ಶಿಕ್ಷಣದ ಅನೌಪಚಾರಿಕ ನಿಯೋಗಗಳು

### ನಿಯೋಗದ ಅರ್ಥ:

ಒಂದು ನಿಗದಿತ ಕಾರ್ಯವನ್ನು ನಿರ್ವಹಿಸುವ ಪ್ರತಿನಿಧಿಯನ್ನು ನಿಯೋಗವೆನ್ನುವರು. ಆಂಗ್ಲಭಾಷೆಯಲ್ಲಿ ಏಜೆನ್ಸೀಸ್ ಎಂದು (Agencies) ಕರೆಯಲ್ಪಡುವ ಈ ನಿಯೋಗಗಳು 'ಒಂದು ಕಾರ್ಯವನ್ನು ಒಬ್ಬ ವ್ಯಕ್ತಿ ಅಥವಾ ಸಮೂಹ ಅಥವಾ ಒಂದು ಶಕ್ತಿಯು' ನಿರ್ವಹಿಸಬಹುದಾಗಿದೆ. ಶಿಕ್ಷಣದ ಪರವಾಗಿ ಕಾರ್ಯ ನಿರ್ವಹಿಸುವ ಪ್ರಾತಿನಿಧಿಕ ಸಂಸ್ಥೆಗಳನ್ನು ಶೈಕ್ಷಣಿಕ ನಿಯೋಗಗಳು ಎಂದು ಹೇಳಲಾಗುವುದು. ಶಿಕ್ಷಣದ ಮೂಲ ಆಧಾರವೇ ಈ ನಿಯೋಗಗಳು.

Digitised by Bharatavani, CIIL

ಈ ನಿಯೋಗಗಳಲ್ಲಿ ನಾವು ಅನೇಕ ವಿಧದ ವರ್ಗೀಕರಣ ವನ್ನು ಕಾಣುತ್ತೇವೆ.

**ನಿಯೋಗಗಳ ವರ್ಗೀಕರಣ**

| ಔಪಚಾರಿಕ ಶಿಕ್ಷಣದ ನಿಯೋಗಗಳು | ಅನೌಪಚಾರಿಕ ನಿಯೋಗಗಳು |
|---|---|
| ಶಾಲೆ, ವ್ಯವಸ್ಥಿತ ಮನೋರಂಜನಾ ಕೇಂದ್ರ, ಗ್ರಂಥಾಲಯ, ಸಿನಿಮಾ ಹಾಲ್‌ಗಳು, ಕ್ರೀಡೆ, ಚಿತ್ರ ಗ್ಯಾಲರಿ, ಆಡಿಯೋ, ದೂರದರ್ಶನಗಳ ಶೈಕ್ಷಣಿಕ ಕಾರ್ಯಕ್ರಮಗಳು | ಕುಟುಂಬ, ಸಮುದಾಯ, ಧರ್ಮ, ಮುಕ್ತ ಆಟ, ಮಾರ್ಕೆಟ್, ಸಂತೆ, ಜಾತ್ರೆ, ಪ್ರದರ್ಶನಗಳು |

**ಅನೌಪಚಾರಿಕ ಶಿಕ್ಷಣ:**

ಎಲ್ಲಾ ರೀತಿಯ ಔಪಚಾರಿಕ ನಿಯಮಗಳಿಂದ ಮುಕ್ತವಾದ ಶಿಕ್ಷಣವೇ ಅನೌಪಚಾರಿಕ ಶಿಕ್ಷಣ. ಇದನ್ನು ಅವಿದ್ಯುಕ್ತ ಶಿಕ್ಷಣವೆಂತಲೂ ಗುರುತಿಸುತ್ತಾರೆ. ಯಾವ ಶಿಕ್ಷಣದ ಅನುಭವಗಳು ನಿರ್ದಿಷ್ಟ ರೀತಿಯಲ್ಲಿ ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟವಾದ ಅನುಭವ ಹೊಂದಿದ ವ್ಯಕ್ತಿಯಿಂದ ದೊರೆಯದೆ ಆಕಸ್ಮಿಕವಾಗಿ ಯಾವುದೇ ನಿರ್ದಿಷ್ಟ ಮಾನದಂಡಗಳಿಲ್ಲದೆ ದೊರೆಯುತ್ತದೆ. ನಮ್ಮ ದೇಶದಲ್ಲಿ 1974ರಲ್ಲಿ ಈ ರೀತಿಯ ಶಿಕ್ಷಣಕ್ಕೆ ಮಾನ್ಯತೆ ದೊರೆತು ಸೂಕ್ತವಾದ ಕ್ರಮಬದ್ಧತೆ ದೊರೆಯಿತು.

ನಾವು ಅನೌಪಚಾರಿಕ ಶಿಕ್ಷಣವನ್ನು (Informal Education) ಅನೇಕ ನಿಯೋಗಗಳಿಂದ ಪಡೆಯುತ್ತೇವೆ. ಈ ನಿಯೋಗಗಳನ್ನು ಈ ಕೆಳಗೆ ವಿವರಿಸಲಾಗಿದೆ.

**ಕುಟುಂಬ:**

ಅತ್ಯಂತ ಪ್ರಾಚೀನವಾದ, ಅತ್ಯಂತ ಪ್ರಮುಖವಾದ ಸಮಾಜದ ಅತ್ಯಂತ ಚಿಕ್ಕ ಘಟಕವೇ ಕುಟುಂಬ, ಮಗುವು ಗರ್ಭಾವಸ್ಥೆಯಿಂದ ಮೊದಲ್ಗೊಂಡು ಆತನ ಜೀವನ ಪರ್ಯಂತ ಜೊತೆಗೂಡಿ ಆತನೊಂದಿಗೆ ಸಮಾಗಮಗೊಂಡ ಸಾಮಾಜಿಕ ಘಟಕ. ಸಮಾಜದ ಅಂಗ ಸಂಸ್ಥೆಯೇ ಈ ಕುಟುಂಬವಾಗಿದೆ. ಪುರಾತನ ಕಾಲದಿಂದಲೂ ಕುಟುಂಬಕ್ಕೆ ಒಂದು ಗೌರವಸ್ಥಾನವಿದೆ ಹಾಗೂ ತಾಯಿಗೆ ಗುರುವಿನ ಸ್ಥಾನ ನೀಡುವ ಮೂಲಕ ಮನೆಯು ಮೊದಲ ಪಾಠಶಾಲೆ ಎಂದೆನಿಸಿಕೊಂಡಿದೆ.

ಭಾರತೀಯ ತತ್ವಜ್ಞಾನವು "ಮಾತೃದೇವೋಭವ, ಪಿತೃದೇವೋಭವ" ಎಂದೂ ನಂತರ ಆಚಾರ್ಯ ದೇವೋಭವ ಎಂದಿದೆ, ತನ್ಮೂಲಕ ತಾಯಿ/ತಂದೆ ಮೊದಲು ಕಲಿಸುವ ಗುರುಗಳು ದೇವರಿಗೆ ಸಮಾನ ಎನ್ನುತ್ತದೆ. ಕುಟುಂಬವು ಅನೇಕರ ಜೀವನದ ಮಹತ್ವದ ಘಟಕವಾಗಿದೆ. ಜೈವಿಕವಾಗಿ, ಅನುವಂಶೀಯವಾಗಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ, ಭಾಷಾ ಬೆಳವಣಿಗೆಯ ಸೂತ್ರವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಮನೋವೈಜ್ಞಾನಿಕವಾಗಿ ಇದು ವ್ಯಕ್ತಿಯನ್ನು ಪೋಷಿಸುತ್ತದೆ. ಉತ್ತಮ ನಾಗರೀಕರು/ಪೌರರು ಹೊರಹೊಮ್ಮುವುದೇ ಈ ಕುಟುಂಬದ ಮೂಸೆಯಿಂದ. ಕುಟುಂಬ ಭದ್ರವಾಗಿದ್ದಷ್ಟೂ, ವ್ಯಕ್ತಿತ್ವಕ್ಕೆ ಭದ್ರಬುನಾದಿ ಒದಗಿಸುತ್ತದೆ. ಅನೇಕ ಗಣ್ಯರ ಜೀವನದಲ್ಲಿ ಕುಟುಂಬವೇ ಸೂಕ್ತ ಅಡಿಪಾಯವನ್ನು ಹಾಕುತ್ತಾ ಬೆಳೆಸಿದ್ದಕ್ಕೆ ಇತಿಹಾಸ ಸಾಕ್ಷಿಯಾಗಿದೆ.

ಕುಟುಂಬವು ಮನೆಯೇ ಆದರೂ, ಮನೆಯನ್ನು ನಿರ್ಜೀವ ಇಟ್ಟಿಗೆ, ಮಣ್ಣು, ಸಿಮೆಂಟು, ಮರಳಿಂದ ಕಟ್ಟಿದರೆ, ಕುಟುಂಬವು ತ್ಯಾಗ, ಪ್ರೀತಿ,, ಸಹಕಾರ, ಕರುಣೆ, ಸಹಬಾಳ್ವೆ ಎಂಬಂತಹ ಮಾನವೀಯ ಮೌಲ್ಯಗಳಿಂದ ರಚಿತವಾಗಿರುತ್ತದೆ.

ಇಂತಹ ಕುಟುಂಬವು ತನ್ನ ಸದಸ್ಯರುಗಳಿಗೆ ಮಾದರಿಯಾದ ರೀತಿ, ನೀತಿ, ನಡೆನುಡಿಗಳನ್ನು ನೀಡಬೇಕು. ಎಲ್ಲರಿಗೂ ಸಮಾನ ಪ್ರೀತಿ, ಕಾಳಜಿಯನ್ನು ನೀಡಿ ವಾತ್ಸಲ್ಯದಿಂದ ಬಂಧಿಸಿ ಅವರಲ್ಲಿನ ಸುಪ್ತ ಪ್ರತಿಭೆಗೆ ನೀರೆರೆದು ಪೋಷಿಸಬೇಕಾಗುತ್ತದೆ.

ಕುಟುಂಬದಲ್ಲಿಯೇ ಮಗು ಸ್ನೇಹ, ತ್ಯಾಗ, ಸಹಕಾರ ಮುಂತಾದ ಅಂಶಗಳನ್ನು ಪರಿಚಯಿಸಿಕೊಳ್ಳುತ್ತದೆ. ಕುಟುಂಬದಲ್ಲಿ ಮಗು/ ವ್ಯಕ್ತಿ ನಿರ್ವಹಿಸುವ ಕಾರ್ಯಗಳೇ ನಾಳೆ ಅದು ಸಮಾಜದಲ್ಲಿ ನಿರ್ವಹಿಸುತ್ತದೆ. ಆದ್ದರಿಂದ ಪ್ರತಿ ಮಗುವನ್ನು ಭಾವೀ ಸಮಾಜದ ಪ್ರಜೆ ಎಂದು ಭಾವಿಸಬೇಕು.

- ಅನೇಕ ದೈಹಿಕ, ಆಂಗಿಕ ವರ್ತನೆಗಳನ್ನು ಮಗು ಮನೆಯಲ್ಲಿಯೇ ಇತರರನ್ನು ನೋಡಿ ಕಲಿಯುತ್ತದೆ. ಇದು ಸಮಾಜಕ್ಕೆ ಅಪೇಕ್ಷಿತ ರೀತಿಯಲ್ಲಿರುವಂತೆ ನೋಡಿಕೊಳ್ಳಬೇಕು. (ಹಿರಿಯರ ದೈಹಿಕ ಸೇವೆಗಳು)

- ಅನೇಕ ಅಭ್ಯಾಸಗಳಾದ ತಿನ್ನುವ, ಕುಡಿಯುವ, ವಿಶ್ರಾಂತಿಗೈಯುವ, ಕುಳಿತುಕೊಳ್ಳುವ, ನಿಲ್ಲುವ, ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸುವ ರೀತಿಗಳು ಕುಟುಂಬದಲ್ಲಿ ಕಲಿತು ಮುಂದೆ ಸಮಾಜದಲ್ಲಿ ಅಭಿವ್ಯಕ್ತವಾಗುತ್ತವೆ.

- ಸಮಾಜದ ಬೇರೆ ಬೇರೆ ಸಂದರ್ಭಗಳಲ್ಲಿನ ನಡಾವಳಿಗಳು, ಸಂಪ್ರದಾಯಗಳು, ಮಕ್ಕಳಿಗೆ ಪರಿಚಯವಿರಬೇಕು. ಜನನ, ಮರಣ, ರೋಗ, ಸಂತೆ, ಸುಗ್ಗಿ, ಮದುವೆ, ನಾಮಕರಣ, ದೀಕ್ಷೆ, ಸಮಾರಂಭ, ತೇರು, ಜಾತ್ರೆ, ಜನಪದ ಮೇಳ ಮುಂತಾದ ಸಂದರ್ಭಗಳಲ್ಲಿ ನಮ್ಮ ದಿರಿಸು, ವರ್ತನೆ, ಹೇಗಿರಬೇಕೆಂಬ ಪ್ರಾಥಮಿಕ ಮಾಹಿತಿ ಕುಟುಂಬದಲ್ಲಿ ಲಭ್ಯವಿರಬೇಕು.

- ಸಂಪ್ರದಾಯಗಳು,ಕಟ್ಟಳೆಗಳು,ನಂಬಿಕೆಗಳು,ನುಡಿಗಟ್ಟುಗಳು, ವ್ಯಕ್ತಿಗಳು ಮುಂತಾದವುಗಳ ಕಿರುಪರಿಚಯವನ್ನಾದರೂ ಕುಟುಂಬ ನೀಡಬೇಕು. ಇದು ಸ್ಥಳಕ್ಕೆ ಭೇಟಿ ಮಾಡುವ ಮೂಲಕ, ಪಾಲ್ಗೊಳ್ಳುವ ಮೂಲಕ, ಕ್ರಿಯಾಶೀಲವಾಗಿ ಭಾಗವಹಿಸುವ ಮೂಲಕ ಸಾಧ್ಯ. ಇದಕ್ಕೆ ಕುಟುಂಬದ ಆಸರೆ ಅವಶ್ಯಕ.

Digitised by Bharatavani, CIIL

**ಸಮುದಾಯ:**

ಸಮಾಜದ ಚಿಕ್ಕ ಉಪಘಟಕವನ್ನು ನಾವು ಸಮುದಾಯ ಎನ್ನಬಹುದು. ಸಮಾಜ ಹಾಗೂ ಸಮುದಾಯ ಎನ್ನುವ ಪರಿಕಲ್ಪನೆಗಳು ಅನೇಕ ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ಒಳಗೊಂಡಿವೆ. ಮಾನವ ಸಮಾಜ ಜೀವಿ. ಸಮಾಜ ಹೊರತಾಗಿ ಮಾನವನ ಅಸ್ತಿತ್ವವಾಗಲಿ ಜೀವನವಾಗಲಿ ಅಸಂಭವ ಎನ್ನುವಂತಹ ಮಾತುಗಳು ಮಾನವನಿಗೆ ಸಮಾಜದ ಮಹತ್ವನ್ನು ಸಾರುತ್ತವೆ. ಆದರೆ, ಮಾನವ ಹತ್ತಿರವಾಗಿ ಜೀವಿಸುವುದು ಸಮುದಾಯದೊಂದಿಗೆ. ಈ ಸಮುದಾಯವು ಅನೌಪಚಾರಿಕ ಶಿಕ್ಷಣದ ಪ್ರಭಾವಶಾಲಿಯಾದ ಪ್ರತಿನಿಧಿ. ವ್ಯಕ್ತಿಯ ಮೇಲೆ ಸಮಾಜ ಪ್ರಭಾವ ಬೀರುತ್ತದೆ, ಸಮುದಾಯದ ಮೇಲೆ ವ್ಯಕ್ತಿ ಪ್ರಭಾವ ಬೀರುತ್ತಾನೆ. ಸಮಾಜದಲ್ಲಿ ವ್ಯಕ್ತಿ ಬದುಕುತ್ತಿದ್ದರೂ ಸಮುದಾಯಕ್ಕೆ ಆತ ಹತ್ತಿರವಾಗಿರುತ್ತಾನೆ.

ಸಮುದಾಯವು ಮಾನವನ ಭಿತ್ತಿಯಲ್ಲಿ "ನಾವು" ಎನ್ನುವ 'ಸಾಂಘಿಕ' ಭಾವವನ್ನು ಮೂಡಿಸುತ್ತದೆ. ಒಂದು ಪರಂಪರೆ, ಏಕರೀತಿ ಉದ್ದೇಶ, ಸಾರ್ವಜನಿಕ ಆಸಕ್ತಿ ಮುಂತಾದ ಮೂರು ಅಂಶಗಳು ಮೂಲವಾಗಿ ಕಂಡುಬರುತ್ತವೆ. ಹಲವಾರು ಕುಟುಂಬಗಳು ನೆಲೆ ಕಂಡು ಸಹಬಾಳ್ವೆ ಮಾಡುವಂತಹ ನೆಲೆಗೆ ಸಮುದಾಯ ಎನ್ನಬಹುದು. ಇಲ್ಲಿ ಏಕರೀತಿಯ ಆಚಾರ–ವಿಚಾರ, ವಿಷಯ, ಮೌಲ್ಯ ಹಾಗೂ ಸಂಸ್ಕೃತಿಯನ್ನು ಕಾಣಬಹುದು. ಹಾಗೆಯೇ ಇದು ಒಂದು ಸೀಮಿತ ಎಲ್ಲೆಯನ್ನು ಹೊಂದಿರುತ್ತದೆ. ಸಹ ಚಿಂತನೆ, ಸಹಕಾರ, ಸಹಸ್ಪಂದನೆ ಇಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತವೆ.

**ಶಿಕ್ಷಣದ ನಿಯೋಗವಾಗಿ ಸಮುದಾಯ:**

1. ಶಿಕ್ಷಣ ಕ್ಷೇತ್ರದ ಮೇಲೆ ಸಮುದಾಯ ಬಹಳಷ್ಟು ಪ್ರಭಾವ ಬೀರುತ್ತದೆ. ಬಹುತೇಕ ಶೈಕ್ಷಣಿಕ ಸಂಸ್ಥೆಗಳಾದ ಅಂಗನವಾಡಿಗಳು, ಶಿಶುವಿಹಾರಗಳು, ಡೇ–ಕೇರ್ ಕೇಂದ್ರಗಳು, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳು, ಪದವಿ ಪೂರ್ವ ಹಾಗೂ ಪದವಿ ಮಹಾವಿದ್ಯಾಲಯಗಳು ಸೇರಿದಂತೆ ವಿಶ್ವವಿದ್ಯಾಲಯ, ತಾಂತ್ರಿಕ ಮಹಾವಿದ್ಯಾಲಯ, ಐ.ಟಿ.ಐಗಳು, ವೃತ್ತಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಅದು ಉತ್ತಮ ನಿಯೋಗವಾಗಬಲ್ಲದು.
2. ವೈಯಕ್ತಿಕ ಹಾಗೂ ಸಮುದಾಯ ಎರಡರ ಅಭಿವೃದ್ಧಿಯನ್ನು ಸಮದೂಗಿಸುತ್ತದೆ.
3. ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮೌಲ್ಯಗಳನ್ನು ಸದಸ್ಯರಲ್ಲಿ ಬೆಳೆಸಿ ಉತ್ತಮ ಸಮಾಜದ ನಿರ್ಮಾಣ ಕೈಗೊಳ್ಳುವುದು.
4. ಸಮಾಜವು ಯಾವಾಗಲೂ ಬದಲಾವಣೆಗೆ ಒಳಪಡುತ್ತಿರುತ್ತದೆ. ಅಂತೆಯೇ ಸಮಾಜದ ಅಂಗವಾದ ಸಮುದಾಯವೂ ಸಹ. ಇದಕ್ಕೆ ಅನುಗುಣವಾಗಿ ಶಿಕ್ಷಣವು ಸಾಮಾಜಿಕ ಬದಲಾವಣೆಯನ್ನೂ ಜವಾಬ್ದಾರಿಯಾಗಿ ನಿರ್ವಹಿಸಿದಾಗ ಸಮುದಾಯದ ಅಭಿವೃದ್ಧಿಯಾಗಬಲ್ಲದು
5. ಶಿಕ್ಷಣಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಬೆಂಬಲ ನೀಡುವ ಮೂಲಕ ಸಮುದಾಯ ಅಭಿವೃದ್ಧಿಯ ಪಥದೆಡೆಗೆ ಸಾಗುವುದು.

**ವಸ್ತು ಸಂಗ್ರಹಾಲಯ ಮೌಲ್ಯಗಳು:**

ಎಡ್ಗರ್ ಡೇಲ್ ಸೂಚಿಸುವಂತೆ ವಸ್ತು ಸಂಗ್ರಹಾಲಯವು ಅತ್ಯಂತ ಉಪಯುಕ್ತವಾದ ಅನೌಪಚಾರಿಕ ಕಲಿಕಾ ಮಾಧ್ಯಮ. ಇದಕ್ಕೆ ತನ್ನದೇ ಆದ ಶೈಕ್ಷಣಿಕ ಮಹತ್ವ ಹಾಗೂ ಮೌಲ್ಯಗಳಿವೆ.

1. ಇದೊಂದು ನಿರಂತರವಾದ ಕಲಿಕಾ ಸಂಪನ್ಮೂಲವಾಗಿದೆ.
2. ಸಹಜವಾಗಿ ಕಲಿಕೆಗೆ ಪ್ರೇರಣೆ ನೀಡುತ್ತದೆ.
3. ದೃಶ್ಯ ಮಾಧ್ಯಮವಾಗಿರುವುದರಿಂದ ದೀರ್ಘಕಾಲ ನಮ್ಮ ಸ್ಮೃತಿಪಟಲದಲ್ಲಿರುತ್ತದೆ.
4. ವಸ್ತುಗಳನ್ನು ವ್ಯವಸ್ಥಿತ ಕ್ರಮದಲ್ಲಿ ಸೂಕ್ತವಾಗಿ ವರ್ಗೀಕರಿಸುವುದರಿಂದ ಆಯಾ ವಸ್ತುಗಳ ಮೂಲ ವಿಭಾಗದ ಅರಿವು ಸಹಜವಾಗಿ ದೊರೆಯುತ್ತದೆ.
5. ಯಾವುದೇ ವಯೋಮಿತಿ ಇಲ್ಲದೆ ಅಬಾಲವೃದ್ಧರಾದಿಯಾಗಿ ಎಲ್ಲರೂ ಭೇಟಿ ನೀಡಿ ಜ್ಞಾನ ಪಡೆಯುವಂತಹ ನಿಯೋಗ ಇದಾಗಿದೆ.
6. ಅನೇಕ ಅಳಿದ ವಸ್ತುಗಳ ಕುರಿತ ಮಾಹಿತಿ, ಅರಿವು ವಿಶ್ಲೇಷಣೆಗೆ ಸಹಕಾರಿ.
7. ಕೆಲವು ವಸ್ತುಸಂಗ್ರಹಾಲಯಗಳಲ್ಲಿ ಮೂಲ ಕೃತಿಯ ಪ್ರತಿಕೃತಿಗಳನ್ನು ಇಟ್ಟಿರುತ್ತಾರೆ. ಇದು ಪ್ರತಿಕೃತಿ ತಯಾರಿಕೆಯ ಕೌಶಲಕ್ಕೆ ಚಿಂತನೆ ನೀಡುತ್ತದೆ.
8. ಸಂಶೋಧನಾತ್ಮಕ ಮನೋಭಾವನೆ ಬೆಳೆಯುತ್ತದೆ.
9. ಪ್ರಶ್ನಿಸುವ, ಕುತೂಹಲ ತಣಿಯುವ ಕ್ರಿಯೆಗಳು ಉಂಟಾಗುತ್ತವೆ.
10. ಸೃಜನಾತ್ಮಕ ಅಭಿವ್ಯಕ್ತಿಗೆ ಪ್ರೇರಣೆ ನೀಡುತ್ತದೆ.

**ಸಮೂಹ ಮಾಧ್ಯಮಗಳು:**

ಜ್ಞಾನವನ್ನು ಸರ್ವರಿಗೂ ತಲುಪಿಸುವ ಸಲುವಾಗಿ ಅನೇಕ ಸಮೂಹ ಮಾಧ್ಯಮಗಳು ನಮಗೆ ಲಭ್ಯವಿವೆ. ಈ ಮಾಧ್ಯಮಗಳು ಅನೇಕ ರೂಪಧಾರಣೆ ಮಾಡಿ ಶಾಬ್ದಿಕವಾಗಿ, ಅಶಾಬ್ದಿಕವಾಗಿ ಸಾಂಕೇತಿಕವಾಗಿ, ದೃಶ್ಯವಾಹಿನಿಯ ಮೂಲಕ, ಶ್ರವಣ ಮಾಧ್ಯಮದ ಮೂಲಕ ಸಮೂಹವನ್ನು ತಲುಪುವ ಕಾರ್ಯವನ್ನು ಕೈಗೊಂಡು ಅನೇಕ ರೀತಿಯಲ್ಲಿ ಜನಸಾಮಾನ್ಯರನ್ನು ಜಾಗೃತಿಗೊಳಿಸುತ್ತಿವೆ.

ಸಮೂಹ ಮಾಧ್ಯಮಗಳೆಂದರೆ, ಯಾವ ಮಾಧ್ಯಮಗಳು ಒಂದು ಸಂದೇಶವನ್ನು/ಮಾಹಿತಿಯನ್ನು ಒಬ್ಬ ವ್ಯಕ್ತಿ ಅಥವಾ ಒಂದು ನಿರ್ದಿಷ್ಟ ಗುಂಪಿನಿಂದ ಬೃಹತ್ ಸಮೂಹಕ್ಕೆ ತಲುಪಿಸಲು ಸಹಾಯ ಮಾಡುವ ಮಾಧ್ಯಮಗಳನ್ನು ಸಮೂಹ ಮಾಧ್ಯಮಗಳೆಂದು ಗುರುತಿಸುತ್ತೇವೆ.

Digitised by Bharatavani, CIIL

ಸಮೂಹ ಮಾಧ್ಯಮಗಳು ಸಂದೇಶ ಅಥವಾ ಮಾಹಿತಿಯನ್ನು ವಿಸ್ತರಿತ ಕ್ಷೇತ್ರದ ವ್ಯಾಪ್ತಿಗೆ ಬರುವವರಿಗೆಲ್ಲಾ ತಲುಪಿಸುವ ಸಾಧನೆಗಳಾಗಿವೆ. ಸಮೂಹ ಮಾಧ್ಯಮಗಳಲ್ಲಿ ಈ ಮುಂದಿನವು ಮುಖ್ಯವಾದವುಗಳಾಗಿವೆ.

1. ಮುದ್ರಿತ ಮಾಧ್ಯಮಗಳು
2. ದೃಕ್–ಶ್ರವಣ ಮಾಧ್ಯಮಗಳು
3. ಮನೋರಂಜನಾತ್ಮಕ ಮಾಧ್ಯಮಗಳು
4. ತಾಂತ್ರಿಕ ಮಾಧ್ಯಮಗಳು

**ಮುದ್ರಿತ ಮಾಧ್ಯಮಗಳು:**

ಯಾವ ಮಾಧ್ಯಮಗಳು ಮುದ್ರಿತಗೊಂಡು ಬಿತ್ತರಗೊಳ್ಳುತ್ತವೆಯೋ ಅಂತಹ ಎಲ್ಲಾ ಮಾಧ್ಯಮಗಳು ಮುದ್ರಿತ ಮಾಧ್ಯಮಗಳೆಂದು ಕರೆಯಲ್ಪಡುತ್ತವೆ. ಅವುಗಳಲ್ಲಿ ನಿಯತಕಾಲಿಕೆಗಳು, ಭಿತ್ತಿಪತ್ರಗಳು, ಕರಪತ್ರಗಳು, ಪುಸ್ತಕಗಳು, ಮಾಹಿತಿ ಪತ್ರಗಳು ಸೇರುತ್ತವೆ.

ನಿಗದಿತ ಸಮಯ ಹಾಗೂ ಅಂತರವನ್ನು ಕಾಯ್ದುಕೊಂಡು ಮುದ್ರಣಗೊಳ್ಳುವ ಸಮೂಹ ಮಾಧ್ಯಮವೇ ನಿಯತ ಕಾಲಿಕೆಗಳೆಂದು ಕರೆಯಲ್ಪಟ್ಟಿವೆ. ಇವುಗಳು ನಿಗದಿತ ಕಾಲಾವಧಿಯಲ್ಲಿ (ದೈನಿಕ, ವಾರಪತ್ರಿಕೆ, ಪಾಕ್ಷಿಕ, ಮಾಸಿಕ ಇತ್ಯಾದಿ) ಪ್ರಕಟಗೊಳ್ಳುತ್ತವೆ.

ನಿಯತ ಕಾಲಿಕೆಗಳು, ಸಮಾಚಾರಗಳು, ಜಾಹಿರಾತುಗಳು, ಸಂದೇಶಗಳು, ಕಥೆ–ಕವನಗಳೇ ಅಲ್ಲದೆ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಒಳಗೊಂಡಿರುತ್ತವೆ. ಇವುಗಳಿಂದ ನಾವು ಶೈಕ್ಷಣಿಕವಾಗಿ ಅನೇಕ ವಿಚಾರಗಳನ್ನು ಪಡೆದುಕೊಳ್ಳುತ್ತೇವೆ.

**ಭಿತ್ತಿಪತ್ರಗಳು (ಕರಪತ್ರಗಳು):**

ಮುದ್ರಿತ ರಂಗದಲ್ಲಿ ಅನೇಕ ಕ್ರಾಂತಿಗಳಾಗಿ ಭಿತ್ತಿಪತ್ರಗಳು ಸಹ ಸಂಪರ್ಕ ಮಾಧ್ಯಮಕ್ಷೇತ್ರವನ್ನು ಪ್ರವೇಶ ಮಾಡಿ ಇಂದು ಇವುಗಳು ಸಹ ಪರೋಕ್ಷವಾಗಿ ಶಿಕ್ಷಣ ಮಾಧ್ಯಮವಾಗಿ ಗುರುತಿಸಿಕೊಂಡಿವೆ.

ಮಾಹಿತಿ ಅಥವಾ ಸಂದೇಶವನ್ನು ಶಾಬ್ದಿಕವಾಗಿ ಹಾಗೂ ಅಶಾಬ್ದಿಕವಾಗಿ ಅಂದರೆ ಸಂಕೇತಗಳಿಂದ, ಚಿತ್ರಗಳಿಂದ, ಛಾಯಾಚಿತ್ರಗಳಿಂದ ರಚಿಸಿ ದೊಡ್ಡ ಗಾತ್ರದಲ್ಲಿ ಮುದ್ರಿಸಿ ಭಿತ್ತಿ (ಗೋಡೆ) ಫಲಕ (Hoardings), ಬೋರ್ಡ್‌ಗಳ (Board), ಮೇಲೆ ಅಂಟಿಸಿ ತನ್ಮೂಲಕ ಜನರಿಗೆ ಮಾಹಿತಿ ಅಥವಾ ಸೂಚನೆ ನೀಡುವ ಪತ್ರಗಳು ಮುಂತಾದವುಗಳಿಗೆ ಭಿತ್ತಿಪತ್ರಗಳು ಎನ್ನುತ್ತಾರೆ.

ಇವುಗಳು ನೀಡುವ ಮಾಹಿತಿ ಎರಡು ರೀತಿಯಲ್ಲಿವೆ. ತಾತ್ಕಾಲಿಕ ಹಾಗೂ ಶಾಶ್ವತವಾದವುಗಳು. ತಾತ್ಕಾಲಿಕ ಭಿತ್ತಿಪತ್ರಗಳೆಂದರೆ, ಚಲನಚಿತ್ರ, ನಾಟಕ ಪ್ರದರ್ಶನ, ಸರ್ಕಸ್ಸು, ಮತ ಯಾಚಿಸುವ ಪತ್ರ, ರಥೋತ್ಸವ, ಜಾತ್ರೆಗಳು, ಸಾಮೂಹಿಕ ಹಬ್ಬ, ಸಮಾರಂಭಗಳು, ಕ್ರೀಡೋತ್ಸವ, ಸಂಗೀತೋತ್ಸವ, ನೃತ್ಯ ಕಾರ್ಯಕ್ರಮ, ಧಾರ್ಮಿಕ ಕಾರ್ಯಗಳು ಮುಂತಾದವುಗಳ ಬಗ್ಗೆ ಮಾಹಿತಿ ನೀಡುವ ಭಿತ್ತಿ ಪತ್ರಗಳು. ಆಯಾ ಕಾರ್ಯಕ್ರಮಗಳು ಮುಗಿದ ನಂತರ ಭಿತ್ತಿ ಪತ್ರಗಳು ಉಪಯೋಗಕ್ಕೆ ಬಾರವು.

ಹಾಗೆಯೇ ಶಾಶ್ವತ ಭಿತ್ತಿಪತ್ರಗಳೆಂದರೆ ಅವು ಶಾಶ್ವತವಾಗಿ ಸದಾಕಾಲ ಹಲವು ಮಾಹಿತಿ/ಸೂಚನೆ ನೀಡುತ್ತವೆ. ಉದಾ:– ಸಿಗರೇಟು, ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕಾರಕ. ರಕ್ತದಾನ ಮಹಾದಾನ, ಸಾಕ್ಷರತೆಯ ಮಹತ್ವ, ಕಲೆ, ಸಂಸ್ಕೃತಿಯ ಪ್ರತೀಕಗಳು, ಪರಿಸರ ಸಂರಕ್ಷಣೆ ಸೂಚನೆಗಳು, ಪ್ರದೇಶದ ಮಹತ್ವ ಸಾರುವ ಫಲಕಗಳು ಸದಾಕಾಲ ಮೌಲ್ಯಯುತವಾಗಿರುತ್ತದೆ.

**ಶೈಕ್ಷಣಿಕ ಮೌಲ್ಯಗಳು:**

- ಓದು/ಬರಹ ಬಾರದವರಿಗೂ ಮಾಹಿತಿ ದೊರೆಯುತ್ತದೆ.
- ಹಲವರ ಮನಪರಿವರ್ತನೆಗೂ ನಾಂದಿಯಾಗುತ್ತವೆ. ಉದಾಹರಣೆ– "ಬಾಲಕಿಗೂ ಶಿಕ್ಷಣ ನೀಡಿ", ಮದ್ಯಪಾನ ಬಿಡಿರಿ, "ಮತಚಲಾವಣೆ ನಿರ್ಭೀತವಾಗಿ ಕೈಗೊಳ್ಳಿರಿ" ಇತ್ಯಾದಿ.
- ಜಾಗೃತಿ ಉಂಟು ಮಾಡುವುದು – ಸ್ತ್ರೀಯರ ಕುರಿತಾದ ಸಮಾನತೆ, ಸಬಲೀಕರಣ,
- ಹಲವು ಅನುಕೂಲಗಳ ಮಾಹಿತಿ – ಶಿಕ್ಷಣ ಸಾಲ, ವಸತಿ ಸೌಲಭ್ಯ ಅವಕಾಶಗಳು, ಹಲವು ಹಕ್ಕುಗಳ ಕುರಿತ ಮಾಹಿತಿ.
- ಕರ್ತವ್ಯಗಳ ಕುರಿತು ಎಚ್ಚರಿಕೆ – ಆದಾಯ ತೆರಿಗೆ ಪಾವತಿ, ಜನನ ಮರಣ ದಾಖಲೆ.
- ಸೌಲಭ್ಯಗಳ ಕುರಿತು ಮಾಹಿತಿ–ಉಚಿತ ಶಿಕ್ಷಣ, ಉಚಿತ ಆಸ್ಪತ್ರೆ ಸೌಲಭ್ಯ, ಉಚಿತ ವಿತರಣೆ ಇತ್ಯಾದಿ.
- ಸಮಾಜದಲ್ಲಿ ನಡೆಯಲಿರುವ ಕಾರ್ಯಕ್ರಮಗಳ ಕುರಿತು ಮಾಹಿತಿ ದೊರೆತು ಪಾಲ್ಗೊಳ್ಳುವ ಮೂಲಕ ಅನುಭವದ ಸಂಪಾದನೆ ಇತ್ಯಾದಿ.

ಕರಪತ್ರಗಳು, ಭಿತ್ತಿಪತ್ರಗಳ ಚಿಕ್ಕರೂಪ ಹಾಗೂ ಹಲವುಬಾರಿ ವಿಸ್ತೃತ ರೂಪದವುಗಳಾಗಿವೆ. ಇವು ಸಹ ಶಾಬ್ದಿಕ, ಸಾಂಕೇತಿಕ, ಚಿತ್ರದ ರೂಪದಲ್ಲಿರುತ್ತವೆ. ಇವು ಸಹ ಶಾಬ್ದಿಕ, ಸಾಂಕೇತಿಕ, ಚಿತ್ರದ ರೂಪದಲ್ಲಿರುತ್ತವೆ. ಇವು ಸಹ ಶಾಶ್ವತ ಅಥವಾ ತಾತ್ಕಾಲಿಕವಾಗಿರಬಹುದು. ಭಿತ್ತಿಪತ್ರದಂತೆ ಒಂದು ಸ್ಥಳದಲ್ಲೇ ಸ್ಥಿರವಾಗಿರದೆ, ಕೈಯಲ್ಲಿ ಹಿಡಿದು ಯಾವಾಗ ಬೇಕಾದರೂ ಓದಬಹುದಾದ ಸೌಲಭ್ಯ ಇವಕ್ಕಿದೆ. ಸಾಮಾನ್ಯವಾಗಿ ಇವು ಸಾಕ್ಷರರಿಗೆ ಉಪಯೋಗವಾಗಬಲ್ಲವು. ಬೇಕಾದಂತೆ ಇದನ್ನು ತಯಾರಿಸಿ ಮನೆಮನೆಗೆ ಹಂಚಲಾಗುತ್ತದೆ. ಮೌಲ್ಯಗಳು ಭಿತ್ತಿಪತ್ರಗಳಷ್ಟೇ ಎಂದು ಗುರುತಿಸಬಹುದು.

**ಪುಸ್ತಕಗಳು:**

ಎಲ್ಲರಿಗೂ ತಿಳಿದಿರುವಂತೆ ಪುಸ್ತಕಗಳು ಉತ್ತಮ ಸ್ನೇಹಿತನಂತೆ ಉತ್ತಮ ಸಂಗಾತಿಗಳು. ಜ್ಞಾನ, ಅನುಭವ, ವಿಶ್ಲೇಷಣೆ, ಕಲ್ಪನೆ,

Digitised by Bharatavani, CIIL

ಊಹೆ, ಮಧುರ ಭಾವನೆ ಇತ್ಯಾದಿಗಳನ್ನು ಅರಳಿಸಿ ವ್ಯಕ್ತಿತ್ವ ನಿರ್ಮಾಣದಲ್ಲಿ ಹೆಚ್ಚಿನ ಪ್ರಭಾವಬೀರುತ್ತವೆ.

ಇವು ಸಾಕ್ಷರರಿಗಾಗಿ, ಉನ್ನತ ಅಧ್ಯಯನ ಕೈಗೊಂಡವರಿಗೆ ಮಾಹಿತಿ ನೀಡಲು ಬಳಕೆಯಾಗುತ್ತವೆ. ಅಕ್ಷರ ಬಾರದವರು ಬಂದವರಿಂದ ಓದಿಸಿ ಕೇಳಿಸಿಕೊಳ್ಳಬಹುದು.

**ದೃಕ್-ಶ್ರವಣ ಮಾಧ್ಯಮಗಳು:**

ದೃಶ್ಯ ಹಾಗೂ ಶ್ರವಣದ ಮೂಲಕ ಮಾಹಿತಿಗಳನ್ನು ಸಮೂಹಕ್ಕೆ ಪ್ರಸಾರ ಮಾಡಲು ಸಹಾಯ ನೀಡುವ ಸಾಧನಗಳನ್ನು ದೃಕ್-ಶ್ರವಣ ಮಾಧ್ಯಮಗಳು ಎನ್ನುತ್ತೇವೆ. ಈ ವರ್ಗದಲ್ಲಿ ರೇಡಿಯೋ, ದೂರದರ್ಶನ, ಅಂತರ್‌ಜಾಲ (Internet) ಸೇರುತ್ತವೆ.

**ಬಾನುಲಿ/ಆಕಾಶವಾಣಿ:**

ಹೆಸರೇ ಸೂಚಿಸುವಂತೆ ಬಾನು ಉಲಿಯುವಂತಹ, ಆಕಾಶವಾಣಿಯೆಂದು ಕರೆಸಿಕೊಳ್ಳುವ ರೇಡಿಯೋ ಈ ಮಾಧ್ಯಮವಾಗಿದೆ.

ರೇಡಿಯೋ ಅನೇಕ ಶೈಕ್ಷಣಿಕ ಮೌಲ್ಯಗಳನ್ನು ಹೊಂದಿದೆ.

- ಓದು ಬರಹ ಬಾರದ ಅನಕ್ಷರಸ್ಥರನ್ನು ಶಿಕ್ಷಿತರನ್ನಾಗಿ ಮಾಡಲು ಬಹು ಉಪಯೋಗಿ.
- ವೈವಿಧ್ಯಮಯ ಕಾರ್ಯಕ್ರಮಗಳು, ಸ್ತ್ರೀಯರಿಗಾಗಿ, ವೃದ್ಧರಿಗಾಗಿ, ರೈತರಿಗಾಗಿ, ವಿದ್ಯಾರ್ಥಿಗಳಾಗಿ, ಗೃಹಿಣಿಯರಿಗಾಗಿ, ಜನಸಾಮಾನ್ಯರಿಗಾಗಿ ಎಂದು ಪ್ರತ್ಯೇಕವಾಗಿ ಕಾರ್ಯಕ್ರಮ ಪ್ರಸಾರ ಮಾಡುವುದರಿಂದ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸಿಕೊಳ್ಳಬಹುದು.
- ಶ್ರವಣ ಮಾಧ್ಯಮವಾಗಿದ್ದರಿಂದ ದೈಹಿಕವಾಗಿ ಕೆಲಸದಲ್ಲಿ ತೊಡಗಿಕೊಂಡೇ ಕೇಳುತ್ತಾ ಬೇರೆ ಬೇರೆ ಕೆಲಸದಲ್ಲಿ ಇರಬಹುದು.
- ಶಾಲೆಯ ವೇಳಾಪಟ್ಟಿಯೊಂದಿಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬಹುದು.
- ವಿದ್ಯಾರ್ಥಿಗಳೂ ಕಾರ್ಯಕ್ರಮ ನೀಡಿ ಆಲಿಸಬಹುದು.
- ಸಂವಾದ, ನೇರ ಪ್ರಸಾರ, ಕಾಮೆಂಟರಿ ಇತ್ಯಾದಿಗಳೂ ಸಹ ವಿಭಿನ್ನವಾದಂತಹ ಅನುಭವ ನೀಡುತ್ತವೆ.
- ಕಣ್ಣಿಲ್ಲದ, ದೈಹಿಕವಾಗಿ ಅಂಗವೈಕಲ್ಯ ಹೊಂದಿದವರಿಗೆ ಇದು ನಿರಂತರ ಸಂಗಾತಿ.
- ಹ್ಯಾಮ್ ರೇಡಿಯೋಗಳು, ಮೊಬೈಲ್‌ಗಳಲ್ಲಿ ಎಫ್. ಎಮ್‌ಗಳು ಒಂದು ಅತ್ಯಂತ ಜನಪ್ರಿಯ ಹವ್ಯಾಸವಾಗಿ ಯುವಜನತೆಯಲ್ಲೂ ಇದು ಅನಿವಾರ್ಯ ಜೊತೆಗಾರನಂತೆ ವಿಷಯವನ್ನು ತಲುಪಿಸುತ್ತಿವೆ.

**ದೂರದರ್ಶನ:**

ಕೇವಲ ಆಲಿಸುವಿಕೆ ಒಂದು ಕೊರತೆಯಾಗಿ ದೃಶ್ಯವಿದ್ದರೆ ಉತ್ತಮ ಎಂದು ಮಾನವನಿಗೆ ಎಂದೋ ಅನ್ನಿಸಿ ಅಂತಹ ನೂತನ ತಂತ್ರಜ್ಞಾನದ ಆವಿಷ್ಕಾರಕ್ಕಾಗಿ ಪ್ರಯತ್ನಗಳು ಕೈಗೊಂಡು "ಮಾಯಾಪೆಟ್ಟಿಗೆ" ಎಂಬಂತಹ "ದೂರದರ್ಶನ"ವನ್ನು ಜೆ.ಎಲ್.ಬೇಯರ್ಡ್ ಎನ್ನುವ ಅಮೇರಿಕಾದ ಇಂಜಿನಿಯರ್ ಕಂಡುಹಿಡಿದನು. ಈ ಸಾಧನವು ಮುಂದುವರೆದು ಮೊದಲು ಕೇವಲ ಕಪ್ಪು ಬಿಳುಪು ಇದ್ದದ್ದು 'ಕಲರ್ ಮ್ಯಾಚ್' ಕಂಡುಹಿಡಿದು ಡಿಜಿಟಲ್ ಆಗಿ ಪರಿವರ್ತನೆ ಹೊಂದಿದೆ. ಇದು ದೃಕ್-ಶ್ರವಣದ ನೇರ ಪ್ರಸಾರದ ಮಾಧ್ಯಮವಾಗಿದೆ. ಉಪಗ್ರಹಗಳ ಸಹಾಯದಿಂದ ಇಡೀ ಭೂಮಿಯ ಯಾವ ತುದಿಯಲ್ಲಿದ್ದರೂ ದೃಶ್ಯವು ಗೋಚರವಾಗುತ್ತದೆ. ಇದನ್ನು "ಸಾಮಾನ್ಯ ಪ್ರಜೆಯ ಜ್ಞಾನ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವ ಮಾಧ್ಯಮ" ಎಂದು ಮಾರ್ಷೆಲ್ಲರು ಅಭಿಪ್ರಾಯಪಟ್ಟಿದ್ದಾರೆ.

**ದೂರದರ್ಶನದ ಶೈಕ್ಷಣಿಕ ಮೌಲ್ಯಗಳು ಹೀಗಿವೆ:**

- ದೃಕ್-ಶ್ರವಣವಾಗಿರುವುದರಿಂದ ಆಕರ್ಷಕಗೊಳಿಸಿ ವಿಷಯ ತಿಳಿಸುತ್ತದೆ.
- ಶೈಕ್ಷಣಿಕ ಕಾರ್ಯಕ್ರಮಗಳು ನೈಜ ಅಂಶವನ್ನು ತೋರಿಸುವುದರಿಂದ ಇತಿಹಾಸ, ವಿಜ್ಞಾನ, ಭೂಗೋಳ ಇತ್ಯಾದಿ ವಿಷಯಗಳು ಸ್ಪಷ್ಟವಾಗುತ್ತವೆ.
- ವೈಜ್ಞಾನಿಕ ಕಾರ್ಯಕ್ರಮಗಳು ಅದರಲ್ಲೂ ಪ್ರಯೋಗಗಳನ್ನು ಮಾಡಿ ತೋರಿಸುವುದರಿಂದ ಪ್ರಯೋಗ ಕೈಗೊಳ್ಳದೆ ಇರುವ ಶಾಲೆಯ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ.
- ಅಂಗವಿಕಲರಿಗೆ ಕುಳಿತಲ್ಲಿಂದಲೇ ಪ್ರಪಂಚ ದರ್ಶನ ಸಾಧ್ಯ.
- ಹಲವು ಕಾರ್ಯಕ್ರಮಗಳು ಮರುಪ್ರಸಾರಗೊಂಡಾಗ, ಹಿಂದೆ ಇದ್ದಂತಹ ಸ್ಥಿತಿಗಳು ತಿಳಿಯುತ್ತವೆ.
- ಅನೇಕ ರೀತಿಗಳ ಜನರನ್ನು ಶಿಕ್ಷಿತಗೊಳಿಸುತ್ತೆ. ನೃತ್ಯ, ಸಂಗೀತ, ಕ್ರೀಡೆ, ಸಂಸ್ಕೃತಿ ಇತ್ಯಾದಿಗಳ ಮೂಲಕ.
- ಅಭಿನಯ, ಭಾಷೆ, ಅಭಿವ್ಯಕ್ತಿ ಸಾಮರ್ಥ್ಯ, ನಾಟಕ, ರಂಗಕಲೆ, ಚಲನಚಿತ್ರದ ನಟನೆ ಮುಂತಾದವುಗಳ ಕುರಿತು ಉತ್ತಮ ಜ್ಞಾನ, ಮಾರ್ಗದರ್ಶನ ದೊರೆಯುತ್ತದೆ.
- ಸಾಮಾನ್ಯ ಜನರಿಗೂ ಅನೇಕ ಉನ್ನತ ವಿಷಯಗಳ ಪರಿಚಯವಾಗುತ್ತದೆ.

**ಚಲನಚಿತ್ರಗಳು:**

ಕೇವಲ ಮನೋರಂಜನೆಯನ್ನೇ ಉದ್ದೇಶವಾಗಿಟ್ಟುಕೊಂಡಿದ್ದರೂ ಸಾಮಾಜಿಕ ಕಳಕಳಿಯಿಂದ ಹಲವಾರು ಮೌಲ್ಯಗಳನ್ನು ಸಂದೇಶಿಸಿದ ಅತ್ಯಂತ ಜನಪ್ರಿಯ ಮಾಧ್ಯಮವೇ ಚಲನಚಿತ್ರ. ಕಲಿತವರಿಗೂ

Digitised by Bharatavani, CIIL

ಕಲಿಯದವರಿಗೆಲ್ಲಾ ಗೊತ್ತಿರುವ, ಎಲ್ಲರನ್ನೂ ಮುಟ್ಟುವಂತಹ ಮಾಧ್ಯಮ ಇದಾಗಿದೆ. ಅತ್ಯಂತ ರೋಚಕ ರಂಜನೆಯನ್ನು ದೃಶ್ಯ–ಶ್ರವಣ ಎರಡನ್ನೂ ಹೊಂದಿರುವ ಈ ಮಾಧ್ಯಮಕ್ಕೆ ಒಳಪಡದವರೇ ಅತಿ ವಿರಳ ಎನ್ನಬಹುದು. ಅನೇಕರ ಮನಪರಿವರ್ತನೆಗೂ ಇದು ಕಾರಣವಾಗಿದೆ.

ಚಲನಚಿತ್ರವನ್ನು ಸೆಲ್ಯುರಾಯ್ಡ್ ಮಾಧ್ಯಮವೆಂದು ಗುರುತಿಸಲಾಗಿದೆ. ಈ ಮಾಧ್ಯಮ ಅದೆಷ್ಟು ಗಾಢ ಪರಿಣಾಮ ಬೀರುತ್ತದೆ ಎಂದರೆ 5–6 ವರ್ಷದಲ್ಲಿ ಶಾಲೆಯಲ್ಲಿ ಕಲಿತ ವಿಷಯ ಮರೆತರೂ, ಆ ವಯಸ್ಸಿನಲ್ಲಿ ನೋಡಿದ ಸಿನಿಮಾ ಮಾತ್ರ ನೆನಪಿನಲ್ಲಿ' ಉಳಿದಿರುತ್ತದೆ. 100 ವರ್ಷ ನೋಡುತ್ತಿರುವ ಭಾರತೀಯ ಸಿನಿಮಾ ಅನೇಕ ಸೃಜನಶೀಲ ಕ್ಲಾಸ್ ಸಿನಿಮಾಗಳನ್ನು ತಯಾರಿಸಿದೆ. ವರ್ಷಕ್ಕೆ 1000ದಷ್ಟು ಜನಪ್ರಿಯ ಚಲನಚಿತ್ರಗಳನ್ನು ತಯಾರು ಮಾಡಿ ಜನರನ್ನು ರಂಜಿಸುತ್ತಾ ಇದೆ. ಎಲ್ಲವೂ ಶಿಕ್ಷಣ ನೀಡುತ್ತವೆಂದು ಹೇಳಲಾಗದಿದ್ದರೂ ಬದಲಾವಣೆಯನ್ನು ತಂದಿವೆ. ಹಲವು ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಿವೆ.

**ಚಲನಚಿತ್ರಗಳ ಶೈಕ್ಷಣಿಕ ಮೌಲ್ಯಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.**

- ಚಲನಚಿತ್ರಗಳಲ್ಲಿ ಸಂಗೀತ, ನಟನೆ ಎರಡೂ ಇರುವುದರಿಂದ ಎಲ್ಲಾ ರೀತಿಯಲ್ಲೂ ಮನೋರಂಜನಾತ್ಮಕವಾಗಿದೆ.
- ಬೋಧನೆಗೂ ಬಳಸಿಕೊಳ್ಳಬಹುದು.
- ಮನೋರಂಜನೆಯೊಂದಿಗೆ ಸಾಂದರ್ಭಿಕವಾಗಿ ಕಲಿಕೆ ಉಂಟಾಗುತ್ತದೆ.
- ತಾಂತ್ರಿಕವಾಗಿಯೂ ಉತ್ತಮ ಅಭಿವ್ಯಕ್ತಿಯಾಗಿದೆ.
- ಅನೇಕ ಸಾಮಾಜಿಕ ಸುಧಾರಣೆಗಳಿಗೆ ಚಲನಚಿತ್ರಗಳು ಪ್ರೇರಣೆ ನೀಡಿವೆ.
- ಸಾಮಾಜಿಕ ಪಿಡುಗಿನಿಂದ ಮುಕ್ತಿ ಸಾಧ್ಯವಾಗಿದೆ. ಉದಾ:– ವರದಕ್ಷಿಣೆ, ಡಕಾಯಿಟ್–ದರೋಡೆಕೋರರಿಂದ ಸುಧಾರಣೆ, ಜಾತೀಯತೆ ಇತ್ಯಾದಿ.
- ಉತ್ತಮವಾದ ವ್ಯಕ್ತಿತ್ವ ನಿರ್ಮಾಣಕ್ಕೆ ಮಾದರಿಯ ಪೂರೈಕೆ ನಾಯಕ/ನಾಯಕಿಯರಿಂದ, ಪಾತ್ರಧಾರಿಗಳಿಂದ ವೀಕ್ಷಕರಿಗೆ ಆಗುತ್ತದೆ.
- ಧನಾತ್ಮಕ ಹಾಗೂ ಋಣಾತ್ಮಕ ಪ್ರಭಾವ ಇದು ಬೀರಬಲ್ಲದು. ಆದ್ದರಿಂದ ಧನಾತ್ಮಕ ಅಂಶಗಳಿಗೆ ಆದ್ಯತೆ ದೊರೆತು ಆರೋಗ್ಯಕರ ಸಮಾಜ ಬೆಳೆಯಬೇಕು. ಇದಕ್ಕೆ ಎಲ್ಲರೂ ಪ್ರಯತ್ನ ಪಡಬೇಕಾಗಿದೆ.

**ಇತರ ತಾಂತ್ರಿಕ ಮಾಧ್ಯಮಗಳು:**

ಆಧುನಿಕ ಯುಗದ ನೂತನ ಆವಿಷ್ಕಾರಗಳಾದ ಗಣಕ ಯಂತ್ರ ಅತ್ಯಂತ ವೇಗ ಗತಿಯ ಸಂವಹನ ಮಾಧ್ಯಮವಾಗಿದೆ. ಅವುಗಳಲ್ಲಿ



ಅತ್ಯಂತ ನಿಖರ ಹಾಗೂ ತಾಂತ್ರಿಕವಾಗಿ ಉನ್ನತವಾದದ್ದು.

- ಅಂತರ್ಜಾಲ
- ಇ–ಅಂಚೆಗಳು
- ಫೇಸ್‌ಬುಕ್‌ಗಳು
- ಬ್ಲಾಗ್‌ಗಳು
- ಟ್ವಿಟ್ಟರ್ ಸೆಂಟರ್‌ಗಳು

ಬ್ರಾಡ್‌ಬ್ಯಾಂಡ್‌ನಿಂದ ಇಂದು ಅತಿಯಾಗಿ ಬಳಕೆಯಾಗುತ್ತಿರುವ ಇಲೆಕ್ಟ್ರಾನಿಕ್ ಮಾಧ್ಯಮ ಈ ಎಲ್ಲಾ ರೀತಿಯಿಂದ ಸಂಪರ್ಕ ಸಾಧಿಸುತ್ತಿದೆ. ಈ ಜಾಲಗಳು ಮಾಹಿತಿಯನ್ನು ಪ್ರಸಾರ ಮಾಡುತ್ತಿವೆ.

**–ಪ್ರೊ. ವಿಜಯಲಕ್ಷ್ಮಿ ದೇಸಾಯಿ**

## ಶಿಕ್ಷಣದ ತಾತ್ವಿಕ ವಿಶ್ಲೇಷಣೆ

ಶಿಕ್ಷಣಕ್ಕೆ ಸಾರ್ವತ್ರಿಕವಾಗಿ ಅಂಗೀಕೃತವಾಗಬಲ್ಲ ವ್ಯಾಖ್ಯಾನವಿಲ್ಲ. ಹಲವಾರು ಅರ್ಥಗಳನ್ನು ನೀಡುವ ಶಿಕ್ಷಣದ ವ್ಯಾಖ್ಯಾನಗಳಿವೆ. ಈ ವಿವಿಧ ಅರ್ಥಗಳು ಶಿಕ್ಷಣದ ಕಾರ್ಯವೇನು ಎಂಬುದಕ್ಕೆ ಸಂಬಂಧಿಸಿದಂತೆ ಇವೆ. ಈ ಬೇರೆ ಬೇರೆ ಅರ್ಥಗಳ ಅಧ್ಯಯನದಿಂದ ಶಿಕ್ಷಣದ ವ್ಯವಸ್ಥಿತ ಗ್ರಹಿಕೆ ಸುಲಭವಾಗುವುದು.

**ಶಿಕ್ಷಣದ ಶಾಬ್ದಿಕ ಅರ್ಥ:** ಲ್ಯಾಟಿನ್ ಭಾಷೆಯ ಎಡ್ಯುಕೇರ್ (Educare) ಪದದಿಂದ ಎಜ್ಯುಕೇಷನ್ (Education) ಎಂಬ ಇಂಗ್ಲಿಷ್ ಪದ ಬಂದಿದೆ. ಎಡ್ಯುಕೇರ್ ಎಂದರೆ ಮಾರ್ಗದರ್ಶನಮಾಡು ಅಥವಾ ಪ್ರಕಟಗೊಳಿಸು/ಉತ್ಪನ್ನಮಾಡು; ಜ್ಞಾನ, ಅರಿವು ಮತ್ತು ಸಾಮರ್ಥ್ಯಗಳನ್ನು ಮಕ್ಕಳಲ್ಲಿ ವ್ಯವಸ್ಥಿತ ಪ್ರಶ್ನೆಗಳನ್ನು ಕೇಳುವುದರ ಮೂಲಕ ಹೊರತರಬೇಕು ಎಂದು ಇದರ ಅರ್ಥ. ಮಕ್ಕಳನ್ನು ಖಾಲಿ ಪಾತ್ರೆಗಳೆಂಬಂತೆ ಜ್ಞಾನವನ್ನು ಒಳಗೆ ಸುರಿಯುವುದು ಎಂದು ಇದರ ಅರ್ಥವಲ್ಲ. ಗಾಂಧೀಜಿಯವರು 1937ರ 'ಹರಿಜನ' ಪತ್ರಿಕೆಯಲ್ಲಿ ಶಿಕ್ಷಣದ ವ್ಯಾಖ್ಯಾನ ಮೇಲೆ ಹೇಳಿದ ಅರ್ಥಕ್ಕೆ ಹೊಂದಿಕೆಯಾಗಿರುವುದು. ಮಗುವಿನಲ್ಲಿ ಹಾಗೂ ಮಾನವನಲ್ಲಿ (ದೇಹ, ಮನಸ್ಸನು ಹಾಗೂ ಚೈತನ್ಯ) ಶ್ರೇಷ್ಠತಮವಾದುದನ್ನು ಹೊರತರುವುದೇ ಶಿಕ್ಷಣ. ಗಾಂಧೀಜಯವರ ಸಮಯದಲ್ಲಿ ಮಗುವಿನ ಬೌದ್ಧಿಕ ಬೆಳವಣಿಗೆಗೆ ಮಾತ್ರ ಮಹತ್ವ ಕೊಟ್ಟು, ಶಿಕ್ಷಣವನ್ನು ಜ್ಞಾನ ಸಂವಹನೆಗೆ ಸಮಾನಾದುದು ಎಂದು ಭಾವಿಸಲಾಗಿತ್ತು. ಆದ್ದರಿಂದಲೇ ಗಾಂಧೀಜಿಯವರು ಬುದ್ಧಿಯ ಜೊತೆಗೆ ದೇಹ ಮತ್ತು ಚೈತನ್ಯಗಳಲ್ಲಿರುವ ಶ್ರೇಷ್ಠತೆಯನ್ನು ಹೊರತರಬೇಕೆಂದು ಹೇಳಿದರು. ಸ್ವಾಮಿ ವಿವೇಕಾನಂದರು ಸಹ ಶಿಕ್ಷಣವನ್ನು ಇದೇ ರೀತಿ ವ್ಯಾಖ್ಯಾನಿಸಿದ್ದಾರೆ: "ಮಾನವನಲ್ಲಿ ಈಗಾಗಲೇ ಹುದುಗಿರುವ ಪೂರ್ಣತೆಯನ್ನು ಪ್ರಕಟಗೊಳಿಸುವುದೇ ಶಿಕ್ಷಣ. ಮನುಷ್ಯನಲ್ಲಿ ಸ್ವಯಂ ಪರಿಪೂರ್ಣವೂ, ವಿಶ್ವ ಸತ್ಯದ ಭಾಗವೂ ಆಗಿರುವ ಚೈತನ್ಯವು

Digitised by Bharatavani, CIIL

ಹುದುಗಿದೆ ಎಂದು ಇದರ ಅರ್ಥ. ತನ್ನಲ್ಲಿರುವ ವಿಶ್ವಶಕ್ತಿಯ ಅರಿವು ಮೂಡುವಂತೆ ಹಾಗೂ ಅದರ ಸಹಾಯದಿಂದ ಪೂರ್ಣಬಾಳನ್ನು ನಡೆಸುವಂತೆ ಮಾಡುವುದೇ ಶಿಕ್ಷಣದ ಉದ್ದೇಶ."

**ಟೀಕೆಗಳು/ವಿಮರ್ಶೆಗಳು:** ವಿದ್ಯಾರ್ಥಿಯಲ್ಲಡಗಿರುವ ಸಾಮರ್ಥ್ಯಗಳನ್ನು ಹೊರತರುವುದು ಹಾಗೂ ಅವನ ಸುತ್ತಲಿರುವ ವಿಶ್ವದ ಅರಿವನ್ನು ಮೂಡಿಸುವುದು ಎಂದು ಶಿಕ್ಷಣವನ್ನು ಅರ್ಥೈಸಿದರೆ ನಮ್ಮ ಶಾಲೆಯ ಇಂದಿನ ಚಟುವಟಿಕೆಗಳು ನಿಜಕ್ಕೂ ಶಿಕ್ಷಣವೇ ಎಂದು ನಮಗೆ ಆಶ್ಚರ್ಯವಾಗಬಹುದು. ಮಕ್ಕಳಲ್ಲಿ ಇತಿಹಾಸ, ಭೂಗೋಳ, ಸಾಹಿತ್ಯ ಮತ್ತು ಗಣಿತ – ಇವುಗಳ ಜ್ಞಾನವನ್ನು ಹೇಗೆ ತರುವುದು? ಪರಿಮಿತ ವ್ಯಾಪ್ತಿಯಲ್ಲಿ ಸೂಕ್ತ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳಲ್ಲಿ ಪ್ರಾಕೃತಿಕ ಹಾಗೂ ಸಾಮಾಜಿಕ ಪ್ರಕ್ರಿಯೆಗಳ ಅರಿವು ಮೂಡಿಸುವುದು ಸಾಧ್ಯವಿದೆ. ಆದರೆ, ಶಾಲಾಶಿಕ್ಷಣದ ಕಾರ್ಯಕ್ರಮವನ್ನು ಗಮನದಲ್ಲಿಟ್ಟುಕೊಂಡಾಗ ಈ ಅರ್ಥವನ್ನು ಪೂರ್ಣರೀತಿಯಲ್ಲಿ ಉಪಯೋಗಿಸಲಾಗದು.

**ಜ್ಞಾನಾರ್ಜನೆಯ ಅರ್ಥದಲ್ಲಿ ಶಿಕ್ಷಣ:** ಜ್ಞಾನಾಸಕ್ತಿ ಎಂಬ ಶಿಕ್ಷಣದ ತಾತ್ವಿಕ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಜ್ಞಾನಾರ್ಜನೆ ಎಂದು ಶಿಕ್ಷಣವನ್ನು ವಿವರಿಸಬಹುದು. "ಸದ್ಗುಣವೇ ಜ್ಞಾನ. ಸದ್ಗುಣಿಯೂ, ನ್ಯಾಯವಂತನೂ ಆದವನೇ ಶಿಕ್ಷಿತನು" ಎಂದು ಪ್ರಸಿದ್ಧ ಗ್ರೀಕ್ ತತ್ವಜ್ಞ ಸಾಕ್ರಟಿಸ್ ಹೇಳಿರುವನು. "ಜ್ಞಾನವೇ ಶಕ್ತಿ ಮತ್ತು ಸಮಾಜದ ಉನ್ನತಿಗೆ ಸುತ್ತಲ ವಿಶ್ವದ ಅರಿವು ಸಾಧಕ" ಎಂದು ತತ್ವಜ್ಞಾನಿಯೂ, ರಾಜನೀತಿಜ್ಞನೂ ಆದ ಫ್ರಾನ್ಸಿಸ್ ಬೇಕನ್ ಅಭಿಪ್ರಾಯಪಟ್ಟಿರುವನು. ಭಗವದ್ಗೀತೆಯಲ್ಲಿಯೂ ಶ್ರೀಕೃಷ್ಣನು ಸಮತೆ, ಸಮಾಧಾನಚಿತ್ತ ಹಾಗೂ ಮಾನಸಿಕ ಸಮತೆಯುಳ್ಳ ವ್ಯಕ್ತಿಯಾದ ಸ್ಥಿತಪ್ರಜ್ಞನ ಲಕ್ಷಣಗಳಲ್ಲಿ ಜ್ಞಾನವನ್ನೂ ಸೇರಿಸಿದ್ದಾನೆ. ಆದ್ದರಿಂದ, ಶಿಕ್ಷಣದ ಇತಿಹಾಸದ ಪ್ರಾರಂಭದಿಂದ ಇತ್ತೀಚಿನ ಕಾಲದವರೆಗೂ ಶಿಕ್ಷಣವೆಂದರೆ ಜ್ಞಾನ ಸಂಪಾದನೆ ಎಂಬ ಅರ್ಥ ಪ್ರಚಲಿತವಾಗಿದೆ. ಇಂದಿಗೂ ಸಾಮಾನ್ಯ ಜನರ ಮನಸ್ಸಿನಲ್ಲಿ ಇದೇ ಅರ್ಥ ಮನೆಮಾಡಿದೆ. ಚಾರ್ಲ್ಸ್ ಡಿಕನ್ಸ್‌ನ 'ಹಾರ್ಡ್‌ಟೈಮ್ಸ್' ಕಾದಂಬರಿಯ ಪ್ರಾರಂಭದ ಪುಟಗಳಲ್ಲಿ ಶಿಕ್ಷಣದ ಈ ದೃಷ್ಟಿಕೋನ ಚೆನ್ನಾಗಿ ಪ್ರತಿಫಲಿತವಾಗಿದೆ. ಚಾರಿತ್ರ್ಯ ಮತ್ತು ಸುಭದ್ರ ಶಿಕ್ಷಣ ಜ್ಞಾನಸಂಬಂಧಿತವಾದ್ದರಿಂದ ಮಕ್ಕಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಜ್ಞಾನವನ್ನು ಭರಿಸಬೇಕು. ಈಗಲೂ ಸಹ, ಜ್ಞಾನ (knowledge) ವಿವೇಕಕ್ಕೆ (wisdom) ದಾರಿಮಾಡುವುದೆಂಬುದು ಶಿಕ್ಷಣಕ್ಷೇತ್ರದಲ್ಲಿರುವ ಒಂದು ಜನಪ್ರಿಯ ಭಾವನೆ.

**ವಿಮರ್ಶೆ:** ಜ್ಞಾನಾರ್ಜನೆಯೇ ಶಿಕ್ಷಣ, ಜ್ಞಾನವುಳ್ಳವರು ಸದ್ಗುಣಿಗಳು ಹಾಗೂ ವಿವೇಕಿಗಳು ಎನ್ನುವ ಕಲ್ಪನೆ ಸಂಪೂರ್ಣ ಸತ್ಯವಲ್ಲ. ಮಾನವಕುಲದ ಮಹಾನ್ ಪಂಡಿತರು, ವಿಚಾರವಂತರುಗಳ ಜೀವನ ಚರಿತ್ರೆಯನ್ನು ಓದಿದಾಗ ಜ್ಞಾನ ವಿವೇಕಕ್ಕೆ ಅಥವಾ ಸದ್ಗುಣಕ್ಕೆ ದಾರಿಮಾಡುತ್ತದೆ ಎಂಬ ನಂಬಿಕೆಗೆ ಹಲವಾರು ಅಪವಾದಗಳಿರುವುದು ಕಂಡುಬರುತ್ತದೆ. ಉದಾಹರಣೆಗೆ, ಫ್ರಾನ್ಸಿಸ್ ಬೇಕನ್ ಮತ್ತು ರೂಸೊ ದೊಡ್ಡ ಬುದ್ಧಿಜೀವಿಗಳಾಗಿದ್ದರೂ ಅವರ ವ್ಯಕ್ತಿಗತ ಜೀವನ ವಿವೇಕಯುತವಾಗಲಿ ಸದ್ಗುಣಗಳಿಂದ ಕೂಡಿದುದಾಗಲಿ ಆಗಿರಲಿಲ್ಲ. ಆದ್ದರಿಂದ ಹಲವು ಬಾರಿ ಸುಸಂಸ್ಕೃತ ಅನಕ್ಷರಸ್ಥ, ಜ್ಞಾನವಂತನಾದ ಠಕ್ಕನಿಗಿಂತ ಉತ್ತಮನಾಗಿ ಕಂಡುಬರುವನು. ಸುತ್ತಲಿರುವ ಸಾಮಾಜಿಕ ಪರಿಸರವನ್ನು ಅವಲೋಕಿಸಿದಾಗ ಶಿಕ್ಷಣ ಸಂಸ್ಥೆಗಳಿಂದ ಸರ್ಟಿಫಿಕೇಟುಗಳನ್ನು ಹೊಂದಿ ಸುಶಿಕ್ಷಿತರೆಂದು ಪರಿಗಣಿಸಲ್ಪಟ್ಟವರು ಅನುಚಿತವೂ, ತುಚ್ಛವೂ ಆದ ಬಾಳಿಗೆ ದಾರಿಮಾಡುವಂಥ ಅನಾಗರಿಕ, ಜಿಗುಪ್ಸೆ ತರುವ, ಅಸಾಂಸ್ಕೃತಿಕ ರೀತಿಯಲ್ಲಿ ವರ್ತಿಸುವುದನ್ನು ನಾವು ಕಾಣುವುದುಂಟು. ಅವರನ್ನು ಶಿಕ್ಷಿತರೆಂದು ಕರೆಯಲು ಸಾಧ್ಯವೇ? ಶಿಕ್ಷಣವೆಂದರೆ ಜ್ಞಾನಸಂಪಾದನೆಯೇ? ಇಂಥ ಪ್ರಶ್ನೆಗಳು ನಮ್ಮ ಮನಸ್ಸನ್ನು ಹಾದು ಹೋಗುವುದು ಸಹಜ. ಇಷ್ಟೇ ಅಲ್ಲದೆ, ಎಂದಿಗೂ ಶಾಲೆಯ ಮೆಟ್ಟಿಲನ್ನೇ ಹತ್ತದ ಗ್ರಾಮೀಣ ಜನರ ವಿವೇಕಯುತ ಬಾಳು, ಶ್ಲಾಘನೀಯ ವರ್ತನೆಗಳು, ಉಚ್ಚ ಮಟ್ಟದ ನೈತಿಕ ವಿವೇಚನೆಗಳನ್ನು ನಾವು ಅವಲೋಕಿಸಿದಾಗ ಶಿಕ್ಷಣದ ಅರ್ಥದ ಬಗ್ಗೆಯೇ ಅಚ್ಚರಿಪಡುವಂತಾಗುವುದು.

**ಬುದ್ಧಿಯ ಶಿಸ್ತಿಗಾಗಿ ಶಿಕ್ಷಣ ಒಂದು ಉಪಕರಣದಂತೆ:** ಹದಿನಾರನೇ ಶತಮಾನದ ಆಂಗ್ಲ ಜ್ಞಾನಿಯಾದ ಜಾನ್ ಲಾಕ್ ಮನಸ್ಸನ್ನು ವಿವಿಧ ಅಂಗಗಳ/ಸಾಮರ್ಥ್ಯಗಳ ವ್ಯಾಪಾರವೆಂದು ಹೇಳಿದ. ಉದಾಹರಣೆಗೆ, ಸ್ಮರಣೆ, ಕಲ್ಪನೆ, ಚಿಂತನೆ ಇತ್ಯಾದಿ, ಮನೋವ್ಯಾಪಾರಗಳು ಮನಸ್ಸಿನ ಈ ಪರಿಕಲ್ಪನೆಯಲ್ಲಿ ವಿಶ್ವಾಸವಿಡುವ ಪಂಥಕ್ಕೆ, ತತ್ವಕ್ಕೆ ಸಾಮರ್ಥ್ಯ ಮನೋವಿಜ್ಞಾನವೆಂದು (Faculty Psychology) ಹೇಳುವರು. ಜನಿಸಿದಾಗ ಮಗುವಿನ ಮನಸ್ಸು ಶುದ್ಧವಾಗಿರುತ್ತದೆಯೆಂದು ಲಾಕ್ ಅಭಿಪ್ರಾಯಪಟ್ಟು ಅದನ್ನು ಟ್ಯಬುಲರಾಸ ಎಂದು ವರ್ಣಿಸಿದ್ದಾನೆ. ಸುತ್ತಲಿನ ಪ್ರಪಂಚದ ಆಯಾ ಕ್ರಮಾನುಗತ ಪ್ರಚೋದನೆ (simulation)ಗಳ ಪರಿಣಾಮವಾಗಿ ಮನಸ್ಸಿನ ಬೇರೆ ಬೇರೆ ಸಾಮರ್ಥ್ಯಗಳು ವಿಕಾಸಗೊಳ್ಳುವುವು ಎಂದು ಆತ ನಂಬಿದ. ಮಗುವಿನ ಮನಸ್ಸು ಬೇಕಾದಂತೆ ಬಗ್ಗಿಸಬಲ್ಲ ಪ್ಲಾಸ್ಟಿಕ್ ಇದ್ದಂತೆ. ಅದು ಬೆಳೆಯುವ ಕುಡಿಯಂತೆ. ಅದನ್ನು ಯಾವ ದಿಕ್ಕಿನಲ್ಲಿ ಬಗ್ಗಿಸುವೆವೋ ಆ ದಿಕ್ಕಿನಲ್ಲಿ ಅದು ಬೆಳೆಯುವುದು. ಆದ್ದರಿಂದ, ಶಿಕ್ಷಣವೆಂದರೆ, ಮನಸ್ಸಿನ ಬೇರೆ ಬೇರೆ ಸಾಮರ್ಥ್ಯಗಳನ್ನು ಬೆಳೆಸುವ ತರಬೇತಿ ನೀಡುವುದು. ಉದಾಹರಣೆಗೆ, ಜ್ಯಾಮಿತಿಯ ಬೋಧನೆಯಿಂದ ಚಿಂತನಾಶಕ್ತಿಯನ್ನು ಬೆಳೆಸಬಹುದು. ಹಾಗೆಯೇ ಸ್ಮರಣಶಕ್ತಿಯನ್ನು ಚರಿತ್ರೆಯ ಬೋಧನೆಯಿಂದ ಬೆಳೆಸಬಹುದು.

**ವಿಮರ್ಶೆ:** ಸಮಕಾಲೀನ ತತ್ವಜ್ಞಾನವಾಗಲಿ ಅಥವಾ ಮನೋವಿಜ್ಞಾನವಾಗಲಿ ಲಾಕ್ ನೀಡಿರುವ ಮನಸ್ಸಿನ ಪರಿಕಲ್ಪನೆಯನ್ನು ಅಂಗೀಕರಿಸಿಲ್ಲ. ಮಗುವಿನ ಮನಸ್ಸು ಏನನ್ನು ಬೇಕಾದರೂ ಬರೆದುಬಿಡುವಂಥ ಶುದ್ಧ ಸ್ಥಿತಿಯಲ್ಲಿರುವುದಿಲ್ಲ. ಬದಲಾಗಿ ಮಗು ಶಾಲೆಗೆ ಬರುವಾಗ ಆನುವಂಶಿಕವಾಗಿ ಬಂದಿರುವ ಕೊಡುಗೆಗಳನ್ನು, ತನ್ನ ಸುತ್ತಲ ಪ್ರಪಂಚದ ಅನುಭವಗಳನ್ನು ಹೊತ್ತು ತರುವುದು. ಮಕ್ಕಳ ಸಹಜವಾಗಿರುವ ಸಾಮರ್ಥ್ಯ ಅಥವಾ ಅವರು ಹೊತ್ತು ತರುವ ಅನುಭವಗಳನ್ನು ಗಮನಕ್ಕೆ ತೆಗೆದುಕೊಳ್ಳದ ಶಿಕ್ಷಣಕ್ಕೆ ಯಾವ ಬೆಲೆಯೂ ಇಲ್ಲ.

Digitised by Bharatavani, CIIL

**ಬಾಳಿನ ಸಿದ್ಧತೆಯಾಗಿ ಶಿಕ್ಷಣ:** ಪ್ರತಿಯೊಬ್ಬ ವ್ಯಕ್ತಿಯೂ ಸಫಲ ಬಾಳನ್ನು ಬಾಳಲು ಇಚ್ಛಿಸುವನು. ಇದು ಸಾಧ್ಯವಾಗಬೇಕಾದರೆ ಜೀವನದ ಸಮಸ್ಯೆಗಳನ್ನು ಅನುಕೂಲಕರವಾಗಿ ಪರಿಹರಿಸಲೋಸುಗ ಕೌಶಲಗಳನ್ನು, ಸಾಮರ್ಥ್ಯಗಳನ್ನು ಸಂಪಾದಿಸಿಕೊಳ್ಳಬೇಕು. ಉದಾಹರಣೆಗೆ, ಒಬ್ಬ ವ್ಯಕ್ತಿ ಲೌಕಿಕ ಜೀವನವನ್ನು ನಡೆಸುತ್ತ, ಅರೋಗ್ಯವಂತನಾಗಿದ್ದು, ಮಕ್ಕಳನ್ನು ಬೆಳೆಸುವ ರೀತಿಯನ್ನು ಅರಿತಿದ್ದು, ಸಮಾಜದ ಇತರ ಸದಸ್ಯರೊಡನೆ ಶಾಂತಿಯುತವಾಗಿ, ಸಹಕಾರಯುತವಾಗಿ ವರ್ತಿಸಿ, ಪ್ರಜಾಪ್ರಭುತ್ವದ ಸಮರ್ಥ ಪ್ರಜೆಯಾಗಿದ್ದರೆ, ಅವನ ಜೀವನ ಸಫಲವಾಯಿತೆಂದು ಹೇಳಬಹುದು ಎಂದು ಕೆಲವರು ಅಭಿಪ್ರಾಯಪಡುವರು. ಈ ರೀತಿಯ ಸಫಲ ಬಾಳನ್ನು ಬಾಳಲು ಹೋದಾಗ ಅವನಿಗೆ ಹಲವಾರು ಸಮಸ್ಯೆಗಳು ಎದುರಾಗಬಹುದು. ಈ ಜೀವನದ ಸಮಸ್ಯೆಗಳನ್ನು ಪರಿಹರಿಸಿ ಸಫಲ ಅಥವಾ ಸಂಪೂರ್ಣ ಜೀವನವನ್ನು ಜೀವಿಸವುದಕ್ಕೆ ಅವನಿಗೆ ಕೆಲವು ರೀತಿಯ ಜ್ಞಾನ, ಕೌಶಲ, ಮನೋಭಾವಗಳ ಚೌಕಟ್ಟು, ವರ್ತನೆಗಳ ಅಗತ್ಯವಿದೆ. ಅದ್ದರಿಂದ ಶಾಲೆಯಲ್ಲಿ ಓದುವಾಗ ಮಕ್ಕಳಿಗೆ, ದೊಡ್ಡವರಾದ ಮೇಲೆ ಅವರಿಗೆ ಎದುರಾಗಬಹುದಾದ ಸಮಸ್ಯೆಗಳು ಮತ್ತು ಅವುಗಳ ಪರಿಹಾರ – ಇವುಗಳ ಬಗ್ಗೆ ಪರಿಚಯಿಸಬೇಕು. ಈ ಅರ್ಥದಲ್ಲಿ ಶಿಕ್ಷಣವೆಂದರೆ ಬಾಳಿನ ಸಿದ್ಧತೆ. ಇಂಗ್ಲೆಂಡಿನ ಹತ್ತೊಂಬತ್ತನೇ ಶತಮಾನದ ಪ್ರಸಿದ್ಧ ಜೈವವಿಜ್ಞಾನಿ ಮತ್ತು ಶಿಕ್ಷಣತಜ್ಞ ಹರ್ಬರ್ಟ್ ಸ್ಪೆನ್ಸರ್ ಶಿಕ್ಷಣವನ್ನು ಈ ಅರ್ಥದಲ್ಲಿ ಪರಿಗಣಿಸಿದ. ಹತ್ತೊಂಬತ್ತನೇ ಶತಮಾನದ ಎರಡನೇ ಭಾಗದ ಇಂಗ್ಲೆಂಡಿನ ಮೇಲೆ ಸ್ಪೆನ್ಸರ್ ಪ್ರಭಾವ ಬಹು ಗಾಢವಾಗಿತ್ತು.

**ವಿಮರ್ಶೆ:** ಬಾಳಿನ ಸಿದ್ಧತೆಯೆಂದು ಶಿಕ್ಷಣವನ್ನು ಪರಿಗಣಿಸಿದಾಗ, ಸಿದ್ಧತೆಯಕಾಲ ಮತ್ತು ತತ್ಫಲವಾಗಿ ಬಂದ ಅನುಭವಗಳು ಹಾಗೂ ಆ ಕಾಲದ ಅಗತ್ಯಗಳು, ಆಸಕ್ತಿಗಳು ಮತ್ತು ಆಶೋತ್ತರಗಳು ಅಪ್ರಧಾನ (secondary)ವಾಗಿಬಿಡುವುವು. ಅಂಥ ಶಿಕ್ಷಣ ಮಕ್ಕಳ ಬೆಳವಣಿಗೆಯ ಲಯವನ್ನು (rhythm) ಮತ್ತು ಜೀವನಾವಕಾಶಗಳನ್ನು ಉದಾಸೀನ ಮಾಡುತ್ತದೆಯಲ್ಲದೆ ಅವು ಅಪ್ರಕೃತವೂ ಮತ್ತು ಅವಾಸ್ತವಿಕವೂ ಆಗಬಿಡುವುವು. ಈ ದೃಷ್ಟಿ ಪ್ರೌಢಕೇಂದ್ರಿತವಾಯಿತೇ ವಿನಃ ಶಿಶುಕೇಂದ್ರಿತವಾಗಲಿಲ್ಲ. ಸಮಕಾಲೀನ ಶೈಕ್ಷಣಿಕ ವಿಚಾರಧಾರೆಯ ಪ್ರಕಾರ ಜೀವನವೇ ಶಿಕ್ಷಣವೆಂಬ ಪ್ರಕ್ರಿಯೆ; ಜನ್ಮದಿಂದ ಮರಣದವರೆಗೆ ನಾವು ಶಿಕ್ಷಿತರಾಗುತ್ತಿದ್ದೇವೆ ಎಂಬ ಅಭಿಪ್ರಾಯವಿದೆ.

**ನಿರ್ದೇಶನವೆಂಬಂತೆ ಶಿಕ್ಷಣ:** ಕಲಿಯದೆ ಬಂದಿರುವ ಅನುಕ್ರಿಯೆಗಳು (responses), ಸಹಜಪ್ರವೃತ್ತಿಗಳು, ಆವೇಗಗಳು (impulses), ಪ್ರೇರಣೆಗಳನ್ನು ಹೊತ್ತುಕೊಂಡು ಮಕ್ಕಳು ಜನಿಸುತ್ತಾರೆ. ಈ ಸಹಜ ಪ್ರೇರಣೆಗಳನ್ನು ತಡೆಯದೆ, ನಿಯಂತ್ರಿಸದೆ ಹೋದಲ್ಲಿ ಅವು ಅಸಭ್ಯ ಜೀವನಕ್ಕೆ ಎಡೆಮಾಡುವುವು. ಪ್ರಕೃತಿಯ ಸ್ವಯಂ ನಿರ್ದೇಶನದಂತೆ ನಡೆಯುವ ಜೀವನ ಅಸಂಘಟಿತ, ಅವ್ಯವಸ್ಥಿತ, ಉದ್ದೇಶರಹಿತ ಹಾಗೂ ತತ್ವರಹಿತವಾದ ಜೀವನವಾಗುತ್ತದೆ. ಆದರೆ, ಸಮಾಜಜೀವನದ ನಿಯಂತ್ರಣಕ್ಕೊಳಗಾದ ಜೀವನ ವ್ಯವಸ್ಥಿತ, ತತ್ವಸಹಿತ ಹಾಗೂ ಉದ್ದೇಶಸಹಿತವಾದುದು. ಆದ್ದರಿಂದ ಸಹಜ ಪ್ರೇರಣೆಗಳನ್ನು ಸಂಸ್ಕರಿಸುವುದು ಅವಶ್ಯಕ. ಮನುಷ್ಯಜಾತಿಗೆ ಈ ಸಹಜಪ್ರೇರಣೆಗಳು ಸರ್ವೇಸಾಮಾನ್ಯ. ಆದರೆ ಸಹಜಪ್ರೇರಣೆಗಳ ಸಂಸ್ಕರಣದ ರೀತಿ, ನಿಯಂತ್ರಣ, ತೃಪ್ತಿ – ಇವು ಆಯಾ ಧರ್ಮ, ರಾಷ್ಟ್ರೀಯತೆ, ವರ್ಗ, ಜಾತಿಗಳಿಗೆ ತಕ್ಕಂತೆ ಬದಲಾಗುವುದು. ವಿಶ್ವದ ವಿವಿಧ ಸಂಸ್ಕೃತಿಗಳನ್ನು ಈ ಸಂಸ್ಕರಣ ವಿಧದ ಹಿನ್ನೆಲೆಯಲ್ಲಿ ವಿವರಿಸಬಹುದು. ಒಂದು ಗುಂಪಿಗೆ ಸೇರಿದ ವ್ಯಕ್ತಿಯ ಸಹಜ ಪ್ರವೃತ್ತಿಗಳು ಆ ಗುಂಪಿನ ಸಂಪ್ರದಾಯಕ್ಕೆ ಅನುಗುಣವಾಗಿರುವುದಿಲ್ಲ ಎಂದು ಜಾನ್ ಡ್ಯೂಯಿಯು ಭಾವಿಸುತ್ತಾನೆ. ಈ ಸಹಜಪ್ರೇರಣೆಗಳ ಸಂಸ್ಕರಣವೇ, ಅಥವಾ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸಹಜ ವಿಕಾಸದ ಮಾರ್ಪಾಡೇ ಶಿಕ್ಷಣ. "ಮಾರ್ಪಾಡು" ಎಂದರೆ "ನಿರ್ದೇಶನ" ಎಂದು ತಿಳಿಯಬೇಕು. ಅಂತೆಯೇ ಸಹಜಪ್ರವೃತ್ತಿಗಳ ಸಂಸ್ಕರಣಕ್ಕೆ ನಿರ್ದೇಶನ ಅತ್ಯಗತ್ಯ. ಈ ನಿರ್ದೇಶನ ಎರಡು ಹಂತವುಳ್ಳದ್ದು. ಅವು: ನಿಯಂತ್ರಣ ಮತ್ತು ಮಾರ್ಗದರ್ಶನ. ಸಾರ್ವಜನಿಕ ಅಥವ ಒಂದು ಗುಂಪಿನ ಆಸಕ್ತಿಗಳಿಗೆ ಒಬ್ಬ ವ್ಯಕ್ತಿಯನ್ನು ತನ್ನ ಸಹಜಪ್ರವೃತ್ತಗಳನ್ನು ಅಧೀನವಾಗಸುವಂತೆ ತಿಳಿಸುವ ಪ್ರಕ್ರಿಯೆಗೆ ನಿಯಂತ್ರಣ ಎನ್ನಬಹುದು. ಇದು ದೈಹಿಕ ಸ್ವರೂಪದ್ದಾಗಿರದೆ ಬೌದ್ಧಿಕಸ್ವರೂಪದ್ದು. ಜಾನ್ ಡ್ಯೂಯಿ ಹೀಗೆ ಅಭಿಪ್ರಾಯಪಡುವರು: "ಇಂದು ಮಕ್ಕಳ ಚಟುವಟಿಕೆಗಳನ್ನು ಆಯ್ದ ಹಾಗೂ ಉದ್ದೇಶಪೂರಿತ ಪ್ರಚೋದನೆ (ಉದ್ದೀಪಕ)ಗಳಿಂದ ನಿಯಂತ್ರಿಸಲ್ಪಡುತ್ತಿರುವುದರಿಂದ ಜನಾಂಗಗಳು ಮಂದಗತಿಯ ದುಃಖಮಯ ಯುಗಗಳಲ್ಲಿ ಸಾಗಿದ್ದನ್ನು ಈಗ ಅಲ್ಪಕಾಲದಲ್ಲಿ ಸಾಗಲು ಸಮರ್ಥರಾಗಿದ್ದಾರೆ." ಸಹಜ ಪ್ರವೃತ್ತಿಗಳನ್ನು ನಿಯಂತ್ರಿಸಿದ ಮೇಲೆ ಮಕ್ಕಳನ್ನು ಪೂರ್ವನಿರ್ಧಾರಿತ ಗುರಿಗಳತ್ತ ಕೊಂಡೊಯ್ಯುವ ಕಾರ್ಯವೇ ಮಾರ್ಗದರ್ಶನ.

ನಿರ್ದೇಶನ, ನಿಯಂತ್ರಣ ಹಾಗೂ ಮಾರ್ಗದರ್ಶನ ಎರಡನ್ನೂ ಒಳಗೊಳ್ಳುವುದು. ಯಾವ ವಿಧದ ನಿರ್ದೇಶನ ಶಿಕ್ಷಣವೆನಿಸಕೊಳ್ಳುವುವು? ಈ ಪ್ರಶ್ನೆಗೆ ಫೀನಿಕ್ಸ್ ಹೀಗೆ ಉತ್ತರಿಸುವರು: "ಶಿಕ್ಷಣದ ಪ್ರಕ್ರಿಯೆಯಲ್ಲಿ ವ್ಯಕ್ತಿಗಳು ವ್ಯಕ್ತಿಗಳ ವಿಕಾಸವನ್ನು ಉದ್ದೇಶಪೂರ್ವಕವಾಗಿ ಮಾರ್ಗದರ್ಶಿಸುತ್ತಾರೆ." ಶಿಕ್ಷಣದ ಈ ಮೇಲಿನ ಪರಿಭಾಷೆಯನ್ನು ಸಂಶ್ಲೇಷಿಸಿದರೆ ಉಪಯೋಗವಿದೆ.

ಅ) ವ್ಯಕ್ತಿಗಳು ವ್ಯಕ್ತಿಗಳನ್ನು ಮಾರ್ಗದರ್ಶಿಸುತ್ತಾರೆ: ಇದು ವ್ಯಕ್ತಿ–ವ್ಯಕ್ತಿಗಳ ನಡುವಿನ ಸಂಬಂಧವಾದ್ದರಿಂದ ಶಿಕ್ಷಣ ಒಂದು ಮಾನವೀಯ ಉದ್ಯಮ. ವಾಸ್ತವದಲ್ಲಿ, ಸರ್ ಜಾನ್ ಅಡಮ್ಸ್ ಶಿಕ್ಷಣವನ್ನು ದ್ವಿಧ್ರುವ (ಭುಠಿಂಟಚಿಡಿ) ಪ್ರಕ್ರಿಯೆಯೆಂದು ವಿವರಿಸಿದ್ದಾನೆ.

ಶಿಕ್ಷಣ ←------→ ಶಿಕ್ಷಿತ

(ಪ್ರಚೋದನೆ) ←------→ (ಅನುಕ್ರಿಯೆ)

ಆ) ಇದು ಒಂದು ಪ್ರಕ್ರಿಯೆ. ಶಿಕ್ಷಣ ಜೀವನದ ಯಾವುದೇ ಒಂದು ಅವಧಿಗೆ ಸೀಮಿತವಾಗಿರದೆ ಒಂದು ನಿರಂತರ ಕ್ರಿಯೆಯಾಗಿದೆ ಎಂದು ಇದರ ಅರ್ಥ.

Digitised by Bharatavani, CIIL

ಇ) ಈ ಪ್ರಕ್ರಿಯೆ ಫಲಿತಾಂಶ ಬೆಳವಣಿಗೆ ಉದಾ: ಸಾಮಾಜಿಕ ಪ್ರಜ್ಞೆಯ ಬೆಳವಣಿಗೆ

ಈ) ಈ ಪ್ರಕ್ರಿಯೆಯ ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ, ಇಲ್ಲಿ ಮಾರ್ಗದರ್ಶನವು ಯಾಂತ್ರಿ ಹಾಗೂ ಅಂಧವಾಗಿರದೆ ಉದ್ದೇಶಪೂರ್ವಕವೂ, ಧ್ಯೇಯವುಳ್ಳದ್ದು, ಸಂಕಲ್ಪಸಹಿತವೂ ಆಗಿದೆ. ಉದಾಹರಣೆಗೆ, ವಾಹನ ಸಂಚಾರ ಮಾರ್ಗ ಮಧ್ಯದಲ್ಲಿ ನಿಂತು ಪೋಲೀಸಿನವನು ನೀಡುವ ಮಾರ್ಗದರ್ಶನ ಯಾಂತ್ರಿಕ. ಕಾರಣ, ವಾಹನಗಳು ತಲುಪಬೇಕಾದ ಗುರಿಯ ಬಗ್ಗೆ ಪೋಲೀಸಿನವನು ಆಸಕ್ತನಲ್ಲ.

**ವಿಮರ್ಶೆ**: ಇಲ್ಲಿ ಶಿಕ್ಷಣದ ಅರ್ಥ ಅತಿ ಸರಳವೂ (naive) ಅಮೂರ್ತ(abstract)ವೂ ಆಗಿದೆ. ಸುಸ್ಪಷ್ಟವಾಗಿ, ವ್ಯಾವಹಾರಿಕ ವಾಗಿ/ಸಂಕ್ರಿಯಾತ್ಮಕವಾಗಿ (operationally) ಶಿಕ್ಷಣದ ಫಲಿತ, ಹಾಗೂ ನಿರ್ದೇಶನದ ಸ್ವಭಾವಗಳನ್ನು ಇಲ್ಲಿ ಹೇಳಿಲ್ಲ. ಶಾಲೆಯ ಸಂಘಟನೆಯ ಪ್ರಾಯೋಗಿಕ ದೃಷ್ಟಿಕೋನದಿಂದ ಈ ಅರ್ಥ ಅಷ್ಟು ಮೌಲ್ಯವುಳ್ಳದ್ದಲ್ಲ.

**ಶಿಕ್ಷಣವೆಂದರೆ ವಿಕಾಸ/ಬೆಳವಣಗೆ:** ಶಿಕ್ಷಣದ ಈ ವ್ಯಾಖ್ಯೆ ಅಮೆರಿಕದ ದೊಡ್ಡ ತತ್ವಜ್ಞಾನಿಯೂ, ಶಿಕ್ಷಣತಜ್ಞನೂ ಆದ ಜಾನ್ ಡ್ಯೂಯಿಯ ಶೈಕ್ಷಣಿಕ ವಿಚಾರಧಾರೆಯ ಪ್ರತಿನಿಧಿ. ಡ್ಯೂಯಿ ಶಿಕ್ಷಣವನ್ನು ಹೀಗೆ ವ್ಯಾಖ್ಯಾನ ಮಾಡಿದ್ದಾರೆ: "ವಿಕಾಸ ಜೀವನದ ಲಕ್ಷಣವೇ ಆಗಿರುವುದರಿಂದ, ಶಿಕ್ಷಣ ವಿಕಾಸದೊಡನೆ ಸೇರಿಹೋಗಿದೆ. ಶಿಕ್ಷಣಕ್ಕೆ ತನ್ನಿಂದ ಹೊರತಾದ ಗುರಿಯಿಲ್ಲ." ಈ ವ್ಯಾಖ್ಯೆಯನ್ನು ಒಂದು ಚಿತ್ರದ ಸಹಾಯದಿಂದ ವಿವರಿಸಬಹುದು.




ಅನುಭವ, ಜೀವಿ ಮತ್ತು ಅದರ ಪರಿಸರದ ನಡುವಿನ ಅನ್ಯೋನ್ಯ ಕ್ರಿಯೆಯ ಪರಿಣಾಮ. ಎಲ್ಲಾ ಅನುಭವಗಳು ಕಲಿಕೆಯಲ್ಲಿ ಕೊನೆಗೊಂಡರೂ ಎಲ್ಲಾ ಕಲಿಕೆಯೂ ಅನುಭವದ ಪರಿಣಾಮವಾಗಿದೆ. ವಿಕಾಸ ಕಲಿಕೆಯಿಂದ ಸಾಧ್ಯ. ಅನುಭವದಿಂದಾಗುವ ಕಲಿಕೆಯಿಂದ ಉಂಟಾಗುವ ಬೆಳವಣಿಗೆ ಮತ್ತು ವಿಕಾಸದ ಸಮಗ್ರ ಪ್ರಕ್ರಿಯೆಗೆ ಶಿಕ್ಷಣ ಎನ್ನುತ್ತಾರೆ. ಇದನ್ನು ಶಾಲೆಯ ಪರಿಸ್ಥಿತಿಯಲ್ಲಿ ಪ್ರಯೋಗಿಸುವುದಾದರೆ, ಮಗು ಶಾಲೆಗೆ ತನ್ನದೇ ಆದ ಅನುಭವಗಳನ್ನು ಕೊಂಡುತರುತ್ತದೆ. ಶಿಕ್ಷಣವೆಂದರೆ ಈ ಅನುಭವಗಳ ಪುನರ್ ರಚನೆ.

ಡ್ಯೂಯಿಯ ಪ್ರಕಾರ ವಿಕಾಸವೆಂದರೆ ನಿರ್ದೇಶಿತ ಕ್ರಿಯೆಯ ಸಂಚಿತ ಚಲನೆಯೇ ವಿಕಾಸ. ಇದು ವ್ಯಕ್ತಿಯ ಸಮಗ್ರ ದೈಹಿಕ, ಬೌದ್ಧಿಕ, ಸಾಮಾಜಿಕ ಹಾಗೂ ಸಂವೇಗಾತ್ಮಕ ಸಾಮರ್ಥ್ಯಗಳ ಬೆಳವಣಿಗೆ. ಇಂಥ ಬೆಳವಣಿಗೆಗೆ ಅಂತರ್-ಸಂಬಂಧಿತ, ಸಂಘಟಿತ, ಸಮರಸ ಮತ್ತು ನಿರ್ದೇಶಿತ ಚಟುವಟಿಕೆಗಳ ಫಲವಾಗಿರಬೇಕು. ಬೆಳವಣಿಗೆ/ವಿಕಾಸ ಶಿಕ್ಷಣದ ಅಂತಿಮ ಫಲ.

**ವಿಕಾಸ ಯಾವಾಗ ಸಾಧ್ಯ?:** ಅಪ್ರಬುದ್ಧತೆ – ಬೆಳವಣಿಗೆಯ ಪ್ರಾಥಮಿಕ ಅಗತ್ಯ (condition). ಅಪ್ರಬುದ್ಧತೆ ವಿಕಾಸ ಶಕ್ತಿಯ ಕೊರತೆಯನ್ನು ಸೂಚಿಸುವುದಿಲ್ಲ. ಬದಲಿಗೆ ಅದು ಬೆಳೆಯುವ ಸಾಮರ್ಥ್ಯ, ಬೆಳೆಯುವ ಸಾಧ್ಯತೆಯನ್ನು ಸೂಚಿಸುತ್ತದೆ. ಮಗುವಿನಲ್ಲಿ ಇದೊಂದು ನಕಾರಾತ್ಮಕ ಗುಣ. ಅಪ್ರಬುದ್ಧತೆಯ ಎರಡು ಲಕ್ಷಣಗಳಿವೆ. ಅವುಗಳು (ಅ) ಅವಲಂಬನೆ ಮತ್ತು (ಆ) ಸುನಮ್ಯತೆ (plasticity).

**ಅವಲಂಬನೆ:** ಪ್ರಾಣಿಗಳ ಶಿಶುಗಳಿಗೆ ಹೋಲಿಸಿದಾಗ ಮಾನವ ಶಿಶುಗಳಿಗೆ ಅವುಗಳ ಸುತ್ತಲ ಭೌತಿಕ ಪರಿಸರಕ್ಕೆ ಹೊಂದಿಕೊಳ್ಳುವ ವಿಷಯದಲ್ಲಿ ಅಸಹಾಯಕರು. ಪ್ರಾಣಿಗಳ ಶಿಶುಗಳೂ ಹಲವು ದೈಹಿಕ ಸಾಮರ್ಥ್ಯಗಳನ್ನಿಟ್ಟುಕೊಂಡೇ ಜನಿಸುವುವು. ಅವು ಜನಿಸಿದ ತಕ್ಷಣವೇ ಇಲ್ಲ ಅಲ್ಪ ಕಾಲಾನಂತರ ತಮ್ಮನ್ನು ತಾವು ನೋಡಿಕೊಳ್ಳುವ ಶಕ್ತಿ ಹೊಂದಿರುತ್ತವೆ. ಈ ವಿಷಯದಲ್ಲಿ ಮಾನವ ಶಿಶುಗಳು ಇತರರ ಮೇಲೆ ಅವಲಂಬಿತವಾಗಿವೆ. ಕಾಲ ಕಳೆದಹಾಗೆ ಮಗು ಅವಲಂಬನೆಯಿಂದ ನಿರಾವಲಂಬನೆ ಅಥವಾ ಸ್ವಾವಲಂಬನೆಯತ್ತ ಬೆಳೆಯುತ್ತವೆ. ಆರ್ನಾಲ್ಡ್ ಟೋನಿಟಿಯವರ ರಾಷ್ಟ್ರೀಯ ಜೀವನದ ನೆಲೆಯಲ್ಲಿ ವಿಕಾಸದ ಮಾನದಂಡ (criterion) ವ್ಯಕ್ತಿಗತ ಜೀವನಕ್ಕೆ ಅಷ್ಟೇ ಪ್ರಸ್ತುತ. "ಸ್ವಯಂ ನಿರ್ಧಾರದತ್ತ ಮುನ್ನಡೆ ವಿಕಾಸದ ಮಾನದಂಡ." ಆದಾಗ್ಯೂ, ಪ್ರೌಢರಮೇಲೆ ಮಾನವ ಶಿಶುವಿನ ಆವಲಂಬನೆ ದೋಷವೂ ಅಲ್ಲ, ಬಲಹೀನತೆಯೂ ಅಲ್ಲ. ಸಾಮಾಜಿಕ ದೃಷ್ಟಿಕೋನದಿಂದ ಮಗುವಿನ ಪ್ರೌಢರ ಮೇಲಿನ ಅವಲಂಬನೆ ಶಿಶು ಮತ್ತು ಸಮಾಜದ ನಡುವಿನ ಪರಸ್ಪರ ಅವಲಂಬನೆಯ ದ್ಯೋತಕವಾದ್ದರಿಂದ ಅದೂ ಒಂದು ಶಕ್ತಿಯೆ. ಸಮಾಜದ ಶಕ್ತಿಯಿಂದ ಮಗುವು ತನ್ನ ದೈಹಿಕ ಅಸಾಮರ್ಥ್ಯವನ್ನು ಮೀರಬಲ್ಲದು. ಉದಾಹರಣೆಗೆ, ತಾಯಿ ಮಗುವಿಗೆ ತೋರುವ ಪ್ರೇಮದಿಂದ ಅದರ ಬಗ್ಗೆ ಶಿಶುವಿಗೆ ಅರಿವು ಮೂಡುತ್ತದೆ. ಪರಸ್ಪರ ಅವಲಂಬನೆಯಿಂದ ಸಾಧ್ಯ. ಆದ್ದರಿಂದ ವಿಕಾಸದ ಮುಖ್ಯ ಲಕ್ಷಣವೆಂದರೆ ಅವಲಂಬನೆಯಿಂದ ಸ್ವಾವಲಂಬನೆಗೆ ಮುನ್ನಡೆಯುವುದು ಮತ್ತು ಅಂತಹ ಅವಲಂಬನೆಯೆಡೆ ಆರೋಗ್ಯಕರ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದು.

Digitised by Bharatavani, CIIL

**ಸುನಮ್ಯತೆ(plasticity):** ಹಿಂದಿನ ಅನುಭವಗಳನ್ನು ಬಳಸಿಕೊಳ್ಳುವ ಮತ್ತು ಆ ಅನುಭವಗಳ ಅಂಶಗಳಿಂದ ಕಲಿತು, ತದನಂತರ ಚಟುವಟಿಕೆಗಳನ್ನು ಮಾರ್ಪಡಿಸುವ ಸಾಮರ್ಥ್ಯವನ್ನು ಸುನಮ್ಯತೆ ಎನ್ನುತ್ತಾರೆ. ಅನುಭವಗಳಿಂದ ಕಲಿಯುವ ಸಾಮರ್ಥ್ಯ, ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳುವ ಸಾಮರ್ಥ್ಯ, ಭಾವೀ ಚಟುವಟಿಕೆಗಳ ದಿಶೆಯನ್ನು ಸಹಕರಿಸುವ ರೀತಿಯಲ್ಲಿ ಅನುಭವಗಳಿಂದ ಕಲಿಯುವ ಸಾಮರ್ಥ್ಯ, ಅನುಭವಗಳಿಂದ ಮತ್ತೆ ಮತ್ತೆ ಕಲಿಯುವ ವಿಶಾಲ ಮನೋಭಾವ – ಇವುಗಳನ್ನು ಸುನಮ್ಯತೆ ಎನ್ನುತ್ತಾರೆ. ಸುನಮ್ಯತೆಯ ಗುಣವನ್ನು ಹೊಂದಿರುವ ಮನಸ್ಸಿಗೆ ಮಾತ್ರ ಶಿಕ್ಷಣ ಸಾಧ್ಯ. ಜೀವನದ ಅಪಾಯದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯ, ಮನೋಭಾವನೆಗಳನ್ನು ಶಿಕ್ಷಣದ ಮೂಲಕ ಬೆಳೆಸಿಕೊಳ್ಳಬಹುದು. ಶಿಕ್ಷಣ ಹೊಂದಿಕೊಳ್ಳುವ ಅಭ್ಯಾಸವನ್ನು ಬೆಳೆಸುವಂತಾಗಬೇಕು.

ಕಲಿಕೆಯ ಫಲಿತವಾದ ಹೊಂದಾಣಿಕೆಯ ಪರಿಣಾಮವೇ ಸುನಮ್ಯತೆಯ ಗುಣಲಕ್ಷಣಗಳನ್ನು ಹೊಂದಿರುವ ವಿಕಾಸ. ಆದ್ದರಿಂದ ಶಿಕ್ಷಣದ ಅಂತಿಮ ಪರಿಣಾಮ ವಿಕಾಸ. ವಿಕಾಸವನ್ನು ಶಿಕ್ಷಣದೊಡನೆ ಸಮೀಕರಿಸಿದಾಗ ಪಾರ್ಶ್ವಿಕ ವಿಕಾಸವೆಂದು ತಿಳಿಯಬಾರದು. ಬದಲಿಗೆ ವ್ಯಕ್ತಿಯ ದೈಹಿಕ, ಸಾಮಾಜಿಕ, ಬೌದ್ಧಿಕ ಮತ್ತು ಸಂವೇಗಾತ್ಮಕ ಮುಖಗಳ ಸಮಗ್ರ ವಿಕಾಸವೆಂದು ತಿಳಿಯಬೇಕು. ಈ ಅರ್ಥದಲ್ಲಿ ಶಿಕ್ಷಣ ಸಮಗ್ರವಾದ, ಸಕಲವನ್ನೂ ಒಳಗೊಳ್ಳುವ ವಿಕಾಸ. ವಿಕಾಸ ಜೀವನದ ಲಕ್ಷಣ. ಶಿಕ್ಷಣವೂ ವಿಕಾಸದ ಲಕ್ಷಣವನ್ನು ಹೊಂದಿರುವುದರಿಂದ ಜೀವನವೇ ಒಂದು ಶಿಕ್ಷಣ.

**ವಿಮರ್ಶೆ:** ಡ್ಯೂಯಿಯ "ಶಿಕ್ಷಣ ಜೀವನದಂತೆ" ಎಂಬ ಪರಿಕಲ್ಪನೆಯಿಂದ ಪ್ರಭಾವಿತರಾದವರಲ್ಲಿ ಕಿಲ್‌ಪಾಟ್ರಿಕ್, ಚೈಲ್ಡ್ಸ್ ಮತ್ತು ರಾಟ್ನರ್ ಪ್ರಮುಖರು. ಅವರ ಮುಖಂಡತ್ವದಲ್ಲಿ ಕಳೆದ ಶತಮಾನದ ಪ್ರಾರಂಭದಲ್ಲಿ "ಪ್ರೊಗ್ರೆಸಿವ್ ಎಡ್ಯುಕೇಶನ್ ಮೂವ್‌ಮೆಂಟ್" (ಪ್ರಗತಿಶೀಲ ಶೈಕ್ಷಣಿಕ ಆಂದೋಲನ) ಎಂಬ ಆಂದೋಲನ ಅಮೆರಿಕಾದಲ್ಲಿ ಬಹಳ ಜನಪ್ರಿಯವಾಯಿತು. ಆದಾಗ್ಯೂ, ಎರಡು ವಿಶ್ವ ಸಮರಗಳ ನಂತರ ಈ ಶಿಕ್ಷಣದ ಪರಿಕಲ್ಪನೆ ಮತ್ತು ಇದನ್ನು ಆಧರಿಸಿದ ಅಮೆರಿಕದ ಶೈಕ್ಷಣಿಕ ವ್ಯವಸ್ಥೆ ಕಟು ಟೀಕೆಗೆ ಒಳಗಾಯಿತು; ಸೋವಿಯತ್ ರಷ್ಯಾ 1958ರಲ್ಲಿ ತನ್ನ ಸ್ಪುಟ್ನಿಕ್‌ಅನ್ನು ಪ್ರಥಮ ಬಾರಿಗೆ ಉಡಾವಣೆ ಮಾಡಿದನಂತರ ಟೀಕೆ ಇನ್ನಷ್ಟು ಅಧಿಕವಾಯಿತು. ಈ ಟೀಕೆಯ ಮುಖ್ಯ ಅಂಶಗಳು ಹೀಗಿವೆ: ಡ್ಯೂಯಿ ಹೇಳುವ ಹಾಗೆ ವಿಕಾಸವನ್ನು ಹೊರತುಪಡಿಸಿ ಶಿಕ್ಷಣಕ್ಕೆ ಯಾವ ಗುರಿಗಳೂ ಇಲ್ಲ ಎನ್ನುವುದು ಅನುಮೋದಿಸುವುದು ಕಷ್ಟ. ವಿಕಾಸ ಒಂದು ಪ್ರಕ್ರಿಯೆ ಮಾತ್ರ; ಮತ್ತು ಪ್ರತಿಯೊಂದು ಪ್ರಕ್ರಿಯೆಗೂ ಗುರಿ ಇರಲೇಬೇಕು. ವ್ಯಾವಹಾರಿಕ ದೃಷ್ಟಿಯಿಂದಲೂ ಗುರಿಯಿಲ್ಲದ ಶಿಕ್ಷಣದ ಕಲ್ಪನೆ ಪ್ರಾಯಶಃ ಅಸಾಧ್ಯವೇ. ವಿಕಾಸವು ಗುರಿಯನ್ನು ಹೊಂದಿರಬೇಕು. ಥಿಯೋಡರ್ ಬ್ರಾಮೆಲ್ಡ್, ಜಾರ್ಜ ಎಸ್ ಕೌಂಟ್ಸ್ ಮತ್ತು ಹ್ಯಾರಿ ಎಸ್ ಬ್ರೌಡಿ – ಇವರುಗಳು ಈ ಶಿಕ್ಷಣದ ಪರಕಲ್ಪನೆಯನ್ನು ಟೀಕಿಸಿದವರಲ್ಲಿ ಕೆಲವರು. ಇವರಲ್ಲಿ ಈ ಪರಿಕಲ್ಪನೆಯನ್ನು ತೀವ್ರವಾಗಿ ಟೀಕಿಸಿದವನು ಜಾರ್ಜ ಕೌಂಟ್ಸ್. ಈತ ತನ್ನ ಪ್ರಭಾವಿ ಬರಹಗಳಲ್ಲಿ ಹೀಗೆ ಬರೆದಿದ್ದಾನೆ; "ಶಾಲೆಗಳು ಒಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸುವ ಸಾಹಸ ಮಾಡುತ್ತದೆಯೋ?" ಎಂದು ಆತ ಪ್ರಶ್ನಿಸಿದ್ದಾನೆ.

**ಶಿಕ್ಷಣ: ಸಂಸ್ಕೃತಿಯ ಪ್ರಸಾರಕ:** ಇದುವರೆಗೆ ಚರ್ಚಿಸಿದ ಶಿಕ್ಷಣದ ಅರ್ಥಗಳಲ್ಲಿ ಶಿಕ್ಷಣವು ವ್ಯಕ್ತಿಯನ್ನು ಕೇಂದ್ರವಾಗಿರಿಸಿಕೊಂಡಿದೆ. ಆದರೆ, ಸಮಾಜದ ಹಿತದೃಷ್ಟಿಯಿಂದ ಶಿಕ್ಷಣವೆಂದರೆ ಸಂಸ್ಕೃತಿಯ ಪ್ರಸಾರಕ. ಮಾನವನು ಜೈವಿಕ ಪರಂಪರೆಯನ್ನಿಟ್ಟುಕೊಂಡು ಒಂದು ಸಾಮಾಜಿಕ ಪರಂಪರೆಯಲ್ಲಿ ಜನಿಸುವನು ಎನ್ನುವುದು ಆಡಂಬರಕ್ಕಾಗಿ ಆಡಿದ ಸಾಮಾನ್ಯೋಕ್ತಿ (platitude)ಯಾಗುವುದು. ಸೂಕ್ಷ್ಮ ರೀತಿಯಲ್ಲಿ ಸಕಲ ಮಾನವೀಯ ಸಿದ್ಧಿಗಳ ಸಾರ ಸಂಸ್ಕೃತಿ. ಈ.ಬಿ. ಟೇಲರ್‌ನ ಮಾತುಗಳಲ್ಲಿ ಹೇಳುವುದಾದರೆ "ಮಾನವನು ಸಮಾಜದ ಸದಸ್ಯನಾಗಿ ಗಳಿಸಿಕೊಂಡಂಥ ಜ್ಞಾನ, ನಂಬಿಕೆ, ಕಲೆ, ನೈತಿಕತೆ, ಸಿದ್ಧಾಂತ (law), ಆಚಾರ, ಅಥವಾ ಇನ್ನಾವುದೇ ಸಾಮರ್ಥ್ಯ ಅಥವಾ ಅಭ್ಯಾಸಗಳನ್ನು ಒಳಗೊಂಡಿರುವ ಸಂಕೀರ್ಣ ಪೂರ್ಣಕ್ಕೆ ಸಂಸ್ಕೃತಿ ಎನ್ನುವರು." ಪ್ರತಿಯೊಂದು ಸಮಾಜವೂ ಅದರ ಸ್ಥಿರತೆ ಮತ್ತು ನಿರಂತರತೆಯ ದೃಷ್ಟಿಯಿಂದ ಅದರ ಮುಂದಿನ ಪೀಳಿಗೆಗೆ ಈ ಸಂಸ್ಕೃತಿಯನ್ನು ಪ್ರಸಾರ ಮಾಡುತ್ತದೆ. ಶಿಕ್ಷಣವು ಸಂಸ್ಕೃತಿ ಪ್ರಸಾರಣದ ಪ್ರಕ್ರಿಯೆ. ಈ ಅರ್ಥಕ್ಕೆ ಸಂಬಂಧಿಸಿದಂತೆ ಜೆ.ಎಸ್. ಮಿಲ್ ಶಿಕ್ಷಣವನ್ನು ಹೀಗೆ ಪರಭಾಷಿಸಿದ್ದಾರೆ: "ಪ್ರತಿಯೊಂದು ಪೀಳಿಗೆಯೂ ತನ್ನ ಮುಂದಿನ ಪೀಳಿಗೆಗೆ ತನ್ನ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಅರ್ಹರಾಗಿಸಲು ಅಥವಾ ಸಂಸ್ಕೃತಿಯ ಶ್ರೇಷ್ಠತೆಯನ್ನು ಹೆಚ್ಚಿಸಲೆಂದು ಉದ್ದೇಶಪೂರ್ವಕವಾಗಿ ನೀಡುವ ಸಂಸ್ಕೃತಿಯೇ ಶಿಕ್ಷಣ." ಈ ಪರಿಭಾಷೆಯಲ್ಲಿ ಎರಡು ಅಂಶಗಳನ್ನು ಗಮನಿಸಬಹುದು.

(ಅ) ಸಂಸ್ಕೃತಿಯ ರಕ್ಷಣೆ ಶಿಕ್ಷಣದಿಂದ ಮಾತ್ರ ಸಾಧ್ಯ. ಪ್ರತಿಯೊಂದು ಪೀಳಿಗೆಯ ಎಲ್ಲಾ ಚಟುವಟಿಕೆಗಳ ಧ್ಯೇಯ ಸಂಸ್ಕೃತಿಯ ರಕ್ಷಣೆ. ಉದಾಹರಣೆಗೆ ಭಾರತೀಯ ಸಂಸ್ಕೃತಿಯ ಜೀವನ ಯುವಜನಾಂಗದ ಕೈಯಲ್ಲಿದೆ. ಅವರ ಭವ್ಯ ಸಂಸ್ಕೃತಿಯನ್ನು ಕಡೆಗಾಣಿಸಿ ಮತ್ತೊಂದು ಸಂಸ್ಕೃತಿಯನ್ನು ಅನುಕರಿಸಿದರೆ ಭಾರತದ ಸದ್ಯದ ಮುನ್ನಡೆಗೆ ಹಾನಿಕರವಾಗುತ್ತದೆ.

(ಆ) ಯಾವ ಸಂಸ್ಕೃತಿಯೂ ಪರಿಪೂರ್ಣವಲ್ಲ. ಪ್ರತಿಯೊಂದು ಸಂಸ್ಕೃತಿಯನ್ನೂ ಪರಿಶುದ್ಧಗೊಳಿಸುವ ಅಗತ್ಯವಿದೆ. ಉದಾಹರಣೆಗೆ ಭಾರತೀಯ ಸಂಸ್ಕೃತಿ ಪುರಾತನವಾದುದಾದರೂ, ಪ್ರಾಚೀನ ಪರಂಪರೆಗೆ ಉದಾಹರಣೆಯಂತಿದ್ದರೂ, ಕಾಲಾತೀತವೆಂದು ಪರಿಗಣಿಸಲ್ಪಟ್ಟದ್ದರೂ – ಜಾತಿ ಪದ್ಧತಿ, ಅಸ್ಪೃಶ್ಯತೆ ಮುಂತಾದ ಹಲವಾರು ಸಂಪ್ರದಾಯಗಳೂ ಕಾಲಾನಂತರದಲ್ಲಿ ಬೆಳೆದುಕೊಂಡಿವೆ. ಇದೇ ರೀತಿ ಕೃಷಿ ತಂತ್ರಜ್ಞಾನದಲ್ಲೂ ಸುಧಾರಣೆ ಆಗಬೇಕಿದೆ. ಈ ಎಲ್ಲಾ ಸಂಸ್ಕರಣಗಳು ಶಿಕ್ಷಣದಿಂದ ಮಾತ್ರ ಸಾಧ್ಯ.

Digitised by Bharatavani, CIIL

ವ್ಯಕ್ತಿಯೊಬ್ಬನು ತನ್ನ ಅವಲಂಬಿತರು ಅವನ ಕಾಲಾನಂತರ ಕಷ್ಟಕ್ಕೆ ಒಳಗಾಗದಿರಲೆಂದು ಜೀವವಿಮೆಯನ್ನು ಮಾಡಿಸುವ ಹಾಗೆ, ಸಮಾಜದ ಹಿರಿಯರು ಶಿಕ್ಷಣದ ಮೂಲಕ ಅವರ ಯುವಪೀಳಿಗೆಯ ಸ್ಥಿರತೆ, ರಕ್ಷಣೆ ಮತ್ತು ಕಲ್ಯಾಣವನ್ನು ದೃಢಪಡಿಸುತ್ತಾರೆ. ಹಿರಿಯರು ಗತಿಸಿದಮೇಲೆ ಯುವಪೀಳಿಗೆ ಕಷ್ಟಕ್ಕೊಳಗಾಗದಂತೆ ಅವರು ನೋಡಿಕೊಳ್ಳುತ್ತಾರೆ. ಆದ್ದರಿಂದ ಶಿಕ್ಷಣ ಸಂಸ್ಕೃತಿಯ ಪ್ರಸರಣ. ಮಗುವಿನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಶಿಕ್ಷಣ ಮತ್ತು ಸಂಸ್ಕೃತಿಯ ನಡುವಿನ ಅನುಕ್ರಮದ ಅಂತರ್–ಸಂಬಂಧಗಳ ಅಗತ್ಯವನ್ನು 1986 ಹೊಸ ಶಿಕ್ಷಣ ನೀತಿಯ ಕ್ರಿಯಾ ಕಾರ್ಯಕ್ರಮದ (programme of action) 21ನೇ ಅಧ್ಯಾಯದಲ್ಲಿ ಒತ್ತಿ ಹೇಳಲಾಗಿದೆ.

**ವಿಮರ್ಶೆ**: ಮೇಲೆ ಹೇಳಿದ ಶಿಕ್ಷಣದ ಪರಿಕಲ್ಪನೆ ತಕ್ಷಣವೇ ಸಾರ್ವತ್ರಿಕ ಅನುಮೋದನೆ ಪಡೆಯುವುದು. ಆದರೆ, ಮಿಲ್‌ನ ವಿವರಣೆಗೆ "ಸಂಸ್ಕೃತಿಯ ಪ್ರಸರಣ ಶಿಕ್ಷಣದ ಒಂದು ಕಾರ್ಯವೇ ವಿನಹ ಧ್ಯೇಯವಲ್ಲ. ಶಿಕ್ಷಣದ ಉದ್ದೇಶ ಸಂಸ್ಕೃತಿಯ ಬೆಳವಣಿಗೆ" ಎಂಬ ಅಡಿಸೂಚನೆಯನ್ನು ನಾವು ಸೇರಿಸಬಹುದು. ಅಮೆರಿಕಾದ ಶೈಕ್ಷಣಿಕ ವಿಚಾರಧಾರೆಯಲ್ಲಿ ಪುನರ್‌ನಿರ್ಮಾಣ (reconstructionism)ವೆಂಬ ಹೊಸ ಆಂದೋಳನವಿದೆ. ಇದು ವಿಶ್ವದ ಸಂಸ್ಕೃತಿಯನ್ನು ಶಿಕ್ಷಣದ ಮೂಲಕ ಪುನರ್ ನಿರ್ಮಿಸಲು ಪ್ರಯತ್ನಿಸುತ್ತದೆ. ಥಿಯೋಡರ್ ಬ್ರೆಮೆಲ್ಡ್ ಈ ನಿಲುವಿನ ಪ್ರವರ್ತಕ.

**ಮೂಲ: ಡಾ. ಸೀತಾರಾಮು ಎ.ಎಸ್.**

**ಅನು: ಚಂದ್ರಶೇಖರ್ ಬಿ.ಎಂ.**

## ಶಿಕ್ಷಣದ ಮೇಲೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳ ಪ್ರಭಾವ

ಪ್ರಪಂಚದ ಅನೇಕ ದೇಶಗಳಲ್ಲಿ ಈಗ ಕಂಡುಬರುತ್ತಿರುವ ಬದಲಾವಣೆಗಳ ರೀತಿಯಲ್ಲಿ ಏಷ್ಯಾದ ಅನೇಕ ದೇಶಗಳಲ್ಲು ಶೈಕ್ಷಣಿಕ ಸಂಸ್ಥೆಗಳ ಆಡಳಿತ ವ್ಯವಸ್ಥೆ, ಅವುಗಳ ನಿಯಂತ್ರಣ ಮತ್ತು ಒಡೆತನಗಳಲ್ಲಿ ಬದಲಾವಣೆಗಳನ್ನು ಕಾಣಬಹುದು. ಈ ಬದಲಾವಣೆಗಳು ಹೆಚ್ಚಿನ ಸಂದರ್ಭಗಳಲ್ಲಿ ಸರ್ಕಾರದ ಪಾತ್ರವನ್ನು ಕಡಿಮೆ ಮಾಡಿದರೆ ಮತ್ತೆ ಕೆಲವು ಸಂದರ್ಭಗಳಲ್ಲಿ ಸರ್ಕಾರದ ಪಾತ್ರವನ್ನು ಹೆಚ್ಚು ಮಾಡುತ್ತವೆ. ಏನೇ ಆದರೂ ಶೈಕ್ಷಣಿಕ ರಂಗದ ಬಹುಪಾಲಿನ ಜವಾಬ್ದಾರಿಯು ಸರ್ಕಾರಕ್ಕಿಂತಲೂ ಖಾಸಗೀ ಒಡೆತನಕ್ಕೇ ಹೆಚ್ಚಾಗುತ್ತಾ ಸಾಗಿದೆ.

ಖಾಸಗೀಕರಣ ಎನ್ನುವುದು ಇರುವ ಪರಿಸ್ಥಿತಿಯನ್ನು ಸೂಚಿಸುವುದಕ್ಕಿಂತಲೂ ಆಗಬೇಕಾಗಿರುವ ಬದಲಾವಣೆ ಯನ್ನು ಸೂಚಿಸುತ್ತದೆ. ಏಷ್ಯಾದ ಅನೇಕ ರಾಷ್ಟ್ರಗಳು ಇನ್ನೂ ಈ ಬದಲಾವಣೆಯ ಹಂತದಲ್ಲೇ ಇವೆ. ಖಾಸಗೀಕರಣ ಎಂಬುದು ಹಲವು ವಿಶಾಲವಾದ ಮಾದರಿಗಳನ್ನು ಒಳಗೊಂಡಿದೆ ಎನ್ನಬಹುದು. ಕೆಲವು ವ್ಯವಸ್ಥೆಗಳಲ್ಲಿ ಖಾಸಗೀಕರಣವು ಸರ್ಕಾರದ ನೀತಿಯಿಂದ ನೇರವಾಗಿ ಉಂಟಾಗಿರಬಹುದು. ಮತ್ತೆ ಕೆಲವು ಕಡೆ ಅದು ಯಾವ ಪೂರ್ವಯೋಜಿತ ಯೋಜನೆಯೂ ಇಲ್ಲದೆ ತನ್ನಷ್ಟಕ್ಕೆ ತಾನೇ ಉಂಟಾಗಿರಬಹುದು. ಖಾಸಗೀಕರಣದ ಮಾದರಿಗಳು (ಬ್ರೇ 1998) ಹೀಗಿರಬಹುದು:

ಸರ್ಕಾರಿ ಶಾಲೆಗಳನ್ನು ಖಾಸಗಿಯವರಿಗೆ ವಹಿಸಿಕೊಡುವುದು. ಅಂದರೆ ಅವುಗಳ ಒಡೆತನದ ಬದಲಾವಣೆಯು ಒಂದು ಮಾದರಿ. ಇಲ್ಲಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಾಗಿ ಪರಿವರ್ತನೆಗೊಳ್ಳುತ್ತವೆ. ಇದು ಎದ್ದು ಕಾಣುವ ಖಾಸಗೀಕರಣ.

ಮತ್ತೊಂದು ಖಾಸಗೀಕರಣದ ಮಾದರಿ ಎಂದರೆ ಒಂದು ಕ್ಷೇತ್ರದಲ್ಲಿನ ಶಾಲೆಗಳ ಬದಲಾವಣೆಗಳಿಂದ ಸಮತೋಲನವನ್ನು ಕಾಪಾಡಿಕೊಳ್ಳುವ ಎಂದರೆ ಖಾಸಗೀ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿ ಖಾಸಗೀಕರಣವನ್ನು ಸಾಧಿಸುವುದು. ಇದಕ್ಕಾಗಿ ಸರಕಾರಿ ಶಾಲೆಗಳ ಸಂಖ್ಯೆಯನ್ನು ಹಾಗೆಯೇ ಉಳಿಸಿಕೊಂಡು ಖಾಸಗಿ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಲು ಪ್ರೋತ್ಸಾಹಿಸುವುದು. ಇದರಲ್ಲಿ ಸರ್ಕಾರವು ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುವ ಪೋಷಕರಿಗೆ ಧನ ಸಹಾಯಮಾಡುವ ಯೋಜನೆಗಳನ್ನೂ ರೂಪಿಸಿಕೊಳ್ಳಬಹುದು. ಅಥವಾ ಖಾಸಗಿ ಶಾಲೆಗಳಿಗೆ ಸರ್ಕಾರದ ಧನ ಸಹಾವನ್ನು ಹೆಚ್ಚಿಸಿ ಪ್ರೋತ್ಸಾಹಿಸಬಹುದು. ಖಾಸಗೀಕರಣದ ಪರಿಣಾಮಗಳನ್ನು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಎಂದು ವರ್ಗೀಕರಿಸಬಹುದು. ಆರ್ಥಿಕವಾಗಿ ಪರಿಗಣಿಸಿದಾಗ ಮೂಡುವ ಪ್ರಶ್ನೆ: ಖಾಸಗೀಕರಣದಿಂದ ಶೈಕ್ಷಣಿಕ ಕಾರ್ಯಸಾಮರ್ಥ್ಯವನ್ನು ವೃದ್ಧಿಸಲು ಸಾಧ್ಯವೇ? ಎಂಬುದು. ಈಗಾಗಲೇ ಈ ಪ್ರಶ್ನೆಗೆ ಸಕಾರಾತ್ಮಕ ಉತ್ತರ ದೊರೆತಿದ್ದರೂ, ಅದನ್ನು ಸಮರ್ಥಿಸಲು ಇನ್ನೂ ಹಲವು ಸಂಶೋಧನೆಗಳಾಗಬೇಕು. ಆದರೂ ಇದನ್ನು ನಿರ್ಧರಿಸಲು ಖಾಸಗಿ ಮತ್ತು ಸರಕಾರಿ ಶಾಲೆಗಳ ನಡುವೆ ಹೆಚ್ಚಿನ ಪೈಪೋಟಿಯ ಅಗತ್ಯವಿದೆ ಎಂದು ಹೇಳಬಹುದು. ಸಾಮಾಜಿಕವಾಗಿ ನೋಡಿದಾಗ ದೇಶದ ಜನರ ಆಶೋತ್ತರ, ಅವರ ಜೀವನ ಮಟ್ಟ ಮುಂತಾದವುಗಳಿಗೂ, ಅಲ್ಲಿ ಶಿಕ್ಷಣ ವ್ಯವಸ್ಥೆಗೂ ಸಂಬಂಧವಿರುವುದು ಗೋಚರವಾಗುತ್ತದೆ. ರಾಜಕೀಯವಾಗಿ ಪರಿಗಣಿಸಿದಾಗ ಉತ್ತಮ ರಾಜಕೀಯ ವ್ಯವಸ್ಥೆಯ ಸ್ಥಾಪನೆಗೆ ಮಂಜೂರು ಪಡೆಯುವ ಶಿಕ್ಷಣವು ಮುಖ್ಯವಾದುದರಿಂದ ಮತ್ತು ಶಿಕ್ಷಣದ ಖಾಸಗೀಕರಣವು ಇದಕ್ಕೆ ಪ್ರೋತ್ಸಾಹದಾಯಕವಾಗಿರುವುದರಿಂದ, ದೇಶದಲ್ಲಿ ಉತ್ತಮ ಆಡಳಿತ ವ್ಯವಸ್ಥೆಗೆ ಶೈಕ್ಷಣಿಕ ಖಾಸಗೀಕರಣ ಉತ್ತಮವೆಂಬ ತೀರ್ಮಾನಕ್ಕೆ ಬರಬಹುದು. ಇನ್ನು ಶೈಕ್ಷಣಿಕವಾಗಿ ನೋಡಿದಾಗ, ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಉತ್ತಮ ಶಿಕ್ಷಣವನ್ನು ಒದಗಿಸಿ, ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡುವುದರಿಂದ ಭವಿಷ್ಯದಲ್ಲಿ ಮತ್ತಷ್ಟು ಶೈಕ್ಷಣಿಕ ಪ್ರಗತಿಗೆ ಖಾಸಗೀಕರಣವು ಸಹಾಯಕ ಎನ್ನಬಹುದು.

ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯೇ ಶಿಕ್ಷಣದ ಮುಖ್ಯವಾದ ಉದ್ದೇಶವಾಗಿದೆ. ವ್ಯವಸಾಯವೇ ಮುಖ್ಯವಾದ ಉದ್ಯೋಗವಾಗಿರುವ ಸಮಾಜದಲ್ಲಿ ವ್ಯಕ್ತಿಯ ಸರ್ವತೋಮುಖ

Digitised by Bharatavani, CIIL

ಅಭಿವೃದ್ಧಿಗೆ ಪ್ರಾಥಮಿಕ ಶಿಕ್ಷಣವಾದರೂ ಅವಶ್ಯಕ ಎನ್ನುವುದಾದರೆ, ಕೈಗಾರಿಕಾ ಯುಗದಲ್ಲಿ ಪ್ರೌಢ ಶಿಕ್ಷಣ ಅವಶ್ಯಕವಾಗುತ್ತದೆ. ಈಗಿನ ಗಡಿರೇಖೆಗಳಿಲ್ಲದ ಮಾಹಿತಿ ತಂತ್ರಜ್ಞಾನ ಸಮಾಜದಲ್ಲಿ, ಪರಿಸರ ಪ್ರಜ್ಞೆಯನ್ನುಂಟುಮಾಡುವ, ಶಾಂತಿ ಮತ್ತು ಸಾಂಸ್ಕೃತಿಕ ಭಿನ್ನತೆಯ ಅರಿವನ್ನುಂಟು ಮಾಡುವ, ಜಾಗತೀಕರಣಗೊಳ್ಳುತ್ತಿರುವ ಹಾಗೂ ಅನೇಕ ಬಗೆಯ ಪೈಪೋಟಿಯಿಂದ ಕೂಡಿರುವ, 'ಗ್ಲೋಬಲ್ ವಿಲೇಜ್' ಎನಿಸಿಕೊಂಡಿರುವ ಈ 'ಸಂಕುಚಿತ' ಪ್ರಪಂಚದ ಆಗು ಹೋಗುಗಳಿಗೆ ಸ್ಪಂದಿಸುವ ಅಗತ್ಯತೆಗಳನ್ನು ಶಿಕ್ಷಣವು ಪೂರೈಸುವಂತಿರಬೇಕು. ಶಿಕ್ಷಣವು ವ್ಯಕ್ತಿಗಳು ಪರಿಸರದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದುವುದಕ್ಕೆ ಸಹಾಯ ಮಾಡುತ್ತದೆ. ಜಾಗತೀಕರಣವು ಈ ಪರಿಸರದ ವಿಸ್ತೀರ್ಣ, ಪ್ರಕೃತಿ ಮತ್ತು ಮೌಲ್ಯಗಳು ಬದಲಾಗದಂತೆ ಮಾಡಿದೆ.

ಇಂತಹ ಮೇರೆಗಳಿಲ್ಲದ ಸಮಾಜದಲ್ಲಿ ಸಂಕುಚಿತ ಗೊಂಡಿರುವ ಈ ಪ್ರಪಂಚದಲ್ಲಿ ಜೀವಿಸಲು ಅಗತ್ಯವಾದ ಬದಲಾವಣೆಗಳನ್ನು ಹಾಗೂ ಕೆಲಸಗಳನ್ನು ನಿರ್ವಹಿಸಲ ಬೇಕಾದ ತಯಾರಿಯನ್ನು ಒದಗಿಸುವ ಉನ್ನತ ಶಿಕ್ಷಣವನ್ನು ಜನರಿಗೆ ದೊರಕಿಸುವುದೇ ಒಂದು ಮುಖ್ಯವಾದ ಸವಾಲಾಗಿದೆ. ಅಂದರೆ ನಮ್ಮ ಶಿಕ್ಷಣ ಸಂಸ್ಥೆಗಳು ಪ್ರಪಂಚದ ಪ್ರಜೆಗಳನ್ನು ತಯಾರಿಸಬೇಕಾಗಿದೆ. 1991ರಲ್ಲಿ ಸೋವಿಯತ್ ಯೂನಿಯನ್ನಿನ ಪತನಾನಂತರ ಅದನ್ನು ಉದಾರೀಕರಣವನ್ನು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ರಾಷ್ಟ್ರಗಳು ತಾವು ಬಂಡವಾಳಶಾಹಿ ವ್ಯವಸ್ಥೆಯ ಮೇಲೆ ಸಾಧಿಸಿದ ವಿಜಯವೆಂದೂ ಅದರಿಂದ ಆಗಲೇ ಪ್ರಾರಂಭವಾಗಿದ್ದ ಜಾಗತೀಕರಣದ ವೇಗ ಹೆಚ್ಚಾಯಿತೆಂದೂ ಹೇಳಿಕೊಳ್ಳತೊಡಗಿದವು. ಜಾಗತೀಕರಣದ ವೇಗವು ಹೆಚ್ಚಾದಂತೆ ಮಾರುಕಟ್ಟೆ ವ್ಯವಸ್ಥೆಯು ರಾಜಕೀಯ ಪರಿಜ್ಞಾನವನ್ನು ಹಿಮ್ಮೆಟ್ಟಿಸಿ ರಾಷ್ಟ್ರೀಯ ಮತ್ತು ಜಾಗತಿಕ ನೀತಿಗಳನ್ನು ನಿರ್ಧರಿಸುವ ಮುಖ್ಯವಾದ ಮಾರ್ಗದರ್ಶಿಯಾಯಿತು. ಆದ್ದರಿಂದ ಮುಂದೆ ನಡೆದದ್ದು ತಾರ್ಕಿಕ ಅಸಂಬದ್ಧತೆಯನ್ನು ಹೊಂದಲಿಲ್ಲ ಎನ್ನಬಹುದು. ಎಲ್ಲೆಲ್ಲಿಯೂ ರಾಷ್ಟ್ರೀಯ ಸರ್ಕಾರಗಳು ಮಾರುಕಟ್ಟೆಯ ಬೆಳವಣಿಗೆಗೆ ಭಾಗಶಃ ತಾತ್ಸಾರವನ್ನೂ ಮತ್ತು ಭಾಗಶಃ ಖಾಸಗಿ ವಲಯದ ಒತ್ತಡಕ್ಕೆ ಮಣಿದು ಅವುಗಳ ವಿಕಾಸಕ್ಕೆ ಎಡೆಮಾಡಿಕೊಡುವುದರೊಂದಿಗೆ ಸಾಮಾಜಿಕ ಸರಕುಗಳ ಸರಬರಾಜಿನ ಮೇಲೆ ತನ್ನ ನಿಯಂತ್ರಣವನ್ನು ಬಿಟ್ಟುಕೊಟ್ಟವು. ಪ್ರತಿಯೊಂದು ಪದಾರ್ಥದ ಉತ್ಪಾದನೆಯನ್ನೂ ಖಾಸಗಿ ವಲಯವು ಮಾರುಕಟ್ಟೆಯ ಪೂರೈಕೆ ಮತ್ತು ಬೇಡಿಕೆಗಳಿಗನುಗುಣವಾಗಿ ಉತ್ಪಾದಿಸಿ ಪೂರೈಕೆ ಮಾಡುತ್ತವೆ ಎಂದು ಪರಿಗಣಿಸಲಾಯಿತು. ಒಂದರ ನಂತರ ಮತ್ತೊಂದು ಎಲ್ಲವನ್ನೂ – ನೀರು, ವಿದ್ಯುತ್, ಟಪಾಲು ಸೇವೆ, ಆರೋಗ್ಯ ಮತ್ತು ಈಗ ಶಿಕ್ಷಣ – ವಸ್ತುಗಳನ್ನಾಗಿ ಮಾರ್ಪಡಿಸಲಾಗಿದೆ.

ಒಬ್ಬ ವ್ಯಕ್ತಿಯು ಮಾಡುವ ಸಂಪಾದನೆಯ ಪ್ರಮಾಣವು ಅವನು ತನ್ನ ವಿದ್ಯಾಭ್ಯಾಸಕ್ಕಾಗಿ ಹೂಡಿದ ಬಂಡವಾಳಕ್ಕೆ ಅನುಗುಣವಾಗಿರುತ್ತದೆ ಎಂಬ ಅರ್ಥಶಾಸ್ತ್ರಜ್ಞರ ತೀರ್ಮಾನವು ಸರ್ಕಾರಗಳು ಉನ್ನತ ಶಿಕ್ಷಣದಿಂದ ದೂರ ಇರುವಂತೆ ಮಾಡಿದೆ. ಆದರೆ ಇಲ್ಲಿ ಶಿಕ್ಷಣದ ಪ್ರತಿಫಲವನ್ನು ಕೇವಲ ವರಮಾನಗಳ ವ್ಯತ್ಯಾಸದಿಂದ ಮಾತ್ರ ಅಳೆದಿರುವುದೇ ಸಮಸ್ಯೆಗೆ ಕಾರಣ. ಯಾವ ಶಿಕ್ಷಣವನ್ನೂ ಪಡೆಯದ, ಕೇವಲ ಪ್ರಾಥಮಿಕ ಶಿಕ್ಷಣವನ್ನು ಮಾತ್ರ ಪಡೆದಿರುವ, ಪ್ರೌಢ ಶಿಕ್ಷಣವನ್ನು ಪಡೆದಿರುವ ಹಾಗೂ ಉನ್ನತ ಶಿಕ್ಷಣವನ್ನು ಪಡೆದ ವ್ಯಕ್ತಿಗಳ ನಡುವೆ ಇರುವ ಸಂಪಾದನೆಯ ವ್ಯತ್ಯಾಸ ಆಯಾ ವ್ಯಕ್ತಿಗಳು ಪಡೆದ ಶಿಕ್ಷಣ ಮತ್ತು ಅದಕ್ಕಾಗಿ ಅವರು ಹೂಡಿರುವ ಬಂಡವಾಳಗಳಿಂದ ಉಂಟಾಗುತ್ತದೆ. ಈ ವ್ಯತ್ಯಾಸದಿಂದ ಅವರು ತಮ್ಮ ಶಿಕ್ಷಣದಲ್ಲಿ ಹೂಡಿರುವ ಬಂಡವಾಳದ ಪ್ರತಿಫಲವನ್ನು ಕಂಡುಹಿಡಿಯಬಹುದು. ಆದರೆ ಶಿಕ್ಷಣದಿಂದ ಕೇವಲ ವ್ಯಕ್ತಿಗಳ ಸಂಪಾದನೆ ಮಾತ್ರವಲ್ಲ, ಅದರ ಪ್ರಭಾವವು ಅವರ ಆರೋಗ್ಯವನ್ನು ಸುಧಾರಿಸಲು ಸಹಾಯಕ, ಸಾಮಾಜಿಕ ಅಭಿವೃದ್ಧಿಗೆ ಸಹಾಯಕ. ಹೀಗೆ ಅನೇಕ ಬಗೆಯ ಲಾಭಗಳು ಇರುತ್ತವೆ. ಆದ್ದರಿಂದ ವ್ಯಕ್ತಿಗಳಿಗೆ ಹಾಗೂ ಸಮಾಜಕ್ಕೆ ಶಿಕ್ಷಣವು ಉಪಯುಕ್ತ. ಉನ್ನತ ಶಿಕ್ಷಣವು ಕೇವಲ ಅದನ್ನು ಪಡೆದವರಿಗೆ ಮಾತ್ರವಲ್ಲದೆ, ಸಮಾಜಕ್ಕೆ ಮತ್ತು ದೇಶಕ್ಕೆ ಉಪಯುಕ್ತವಾದುದು.

ಶಿಕ್ಷಣದ ಜಾಗತೀಕರಣದ ಪರಿಣಾಮವಾಗಿ ಉನ್ನತ ಶೀಕ್ಷಣ ಸಂಸ್ಥೆಗಳನ್ನು ಲಾಭಕ್ಕಾಗಿ ಬಳಸುವ ವಸ್ತಗಳನ್ನಾಗಿ ಪರಿವರ್ತಿಸುವುದೇ ಆಗಿದೆ. ಅಮೇರಿಕಾದ ಸಂಯುಕ್ತ ಸಂಸ್ಥಾನದಲ್ಲಿ ಇಂತಹ ಉನ್ನತ ಶಿಕ್ಷಣ ಸಂಸ್ಥೆಗಳಿಂದಾಗುವ ವಾರ್ಷಿಕ ಉತ್ಪನ್ನ 500 ಬಿಲಿಯನ್ ಡಾಲರುಗಳಿಗಿಂತಲೂ ಹೆಚ್ಚು ಎಂದು ತಿಳಿದುಬಂದಿದೆ. ಆದರೆ ಸಾಕಷ್ಟು ಮುಂದಾಲೋಚನೆ ಇಲ್ಲದ ಖಾಸಗೀಕರಣದ ಮಾದರಿಗಳನ್ನು ಅಳವಡಿಸಿಕೊಳ್ಳುವುದರಿಂದ ಸಾಮಾನ್ಯವಾದ ಸಾಮಾಜಿಕ ಸೇವೆಯು ಕುಂಠಿತಗೊಳ್ಳುತ್ತದೆ. ಖಾಸಗೀಕರಣದಲ್ಲಿ ಖರ್ಚನ್ನು ಮಿತಗೊಳಿಸಿ, ಲಾಭವನ್ನು ಗರಿಷ್ಠಪ್ರಮಾಣಕ್ಕೆ ನಿಗದಿಪಡಿಸುವುದು ಸಾಮಾನ್ಯವಾದುದು. ಈ ತತ್ವವನ್ನು ಶಿಕ್ಷಣಕ್ಕೆ ಅಳವಡಿಸಿದರೆ ಶಿಕ್ಷಣದ ಮೂಲ ಉದ್ದೇಶ ಹಾಳಾಗುವುದರಲ್ಲಿ ಸಂಶಯವಿಲ್ಲ. ಶಿಕ್ಷಣವು ಯಾವಾಗಲೂ ತೆರೆದ ಮನಸ್ಸು, ವಿಚಾರ ವಿನಿಮಯ, ವೈವಿಧ್ಯತೆ, ಸಂಶೋಧನೆ ಮತ್ತ ಮಿತಿ ಇಲ್ಲದ ಕಲಿಯುವಿಕೆಗೆ ಪ್ರೋತ್ಸಾಹ ನೀಡುವಂತಿರಬೇಕು. ಆದರೆ ಖಾಸಗೀಕರಣವು ಅವುಗಳು ಕೇವಲ ಹಣವಂತರಿಗೆ ಮಾತ್ರ ಸಿಕ್ಕುವಂತೆ ಮಾಡಿ, ಇತರರಿಗೆ ನಿರಾಸೆಯನ್ನುಂಟುಮಾಡುತ್ತದೆ.

ಡಾ. ರಾಘವೇಂದ್ರರಾವ್ ಹೆಚ್.ಎಸ್.

## ಶಿಕ್ಷಣ ಹಕ್ಕು ಕಾಯ್ದೆ (2009)

**ಪೀಠಿಕೆ:**

'ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕು ಕಾಯ್ದೆ' ಲೋಕಸಭೆಯಲ್ಲಿ ಅನುಮೋದನೆಗೊಂಡಿತು. 2009ರಲ್ಲಿ ಅದು ಕಾನೂನು ರೂಪದಲ್ಲಿ ಜಾರಿಗೆ ಬಂದಿದೆ. ಆದರೆ ಒಂದು ಮಸೂದೆ

Digitised by Bharatavani, CIIL

ಕಾನೂನು ಆಗಿ ಜಾರಿಗೆ ಬರುವಾಗ ಕೆಲವಾರು ವಾದವಿವಾದಗಳು ಉದ್ಭವಿಸಿದವು. ಈ ವಾದವಿವಾದಗಳನ್ನು ಪರಿಹರಿಸಿಕೊಂಡ ನಂತರ ಈ ಕಾಯ್ದೆಗೆ ಸಂಸತ್ತಿನಲ್ಲಿ ಒಪ್ಪಿಗೆ ದೊರಕಿತು.

ಭಾರತದಲ್ಲಿ 14 ವರ್ಷ ಪ್ರಾಯದವರೆಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಗಳು ಒದಗಿಸಬೇಕೆಂಬುದು ನಮ್ಮ ಸಂವಿಧಾನ ಶಿಲ್ಪಿಗಳ ಆಶಯವಾಗಿತ್ತು. 1960ರ ಹೊತ್ತಿಗೆ ಈ ಗುರಿ ಈಡೇರಬೇಕಾಗಿತ್ತು. ಆದರೆ ವಿವಿಧ ಕಾರಣಗಳಿಂದಾಗಿ ಈ ಗುರಿಯ ಸಾಧನೆಯಾಗಲಿಲ್ಲ.

1995ರಲ್ಲಿ ' ಸರ್ವಶಿಕ್ಷಾ ಅಭಿಯಾನ' ಜಾರಿಗೆ ಬಂದ ಮೇಲೆ ಬಲು ದೊಡ್ಡ ಪ್ರಮಾಣದಲ್ಲಿ ಪ್ರಾಥಮಿಕ ಶಿಕ್ಷಣದ ವಿಸ್ತರಣೆಯ ಕಾರ್ಯ ಸಮರೋಪಾದಿಯಲ್ಲಿ ನಡೆಯಿತು. 2010ಕ್ಕೆ ಈ ಅಭಿಯಾನವನ್ನು ಮುಕ್ತಾಯಗೊಳಿಸುವ ಆಶಯವಿದ್ದರೂ ಶಿಕ್ಷಣದ ಸಾರ್ವತ್ರೀಕರಣದ ಗುರಿ ಮುಟ್ಟುವುದಕ್ಕೆ ಇನ್ನೂ ಸಾಧ್ಯವಾಗಲಿಲ್ಲ. ಈ ನಡುವೆ ಶಿಕ್ಷಣವು ಮಾನವನ ಮೂಲಭೂತ ಹಕ್ಕುಗಳಲ್ಲಿ ಒಂದು ಎಂಬ ವಾದ ಪ್ರಬಲಗೊಂಡು ನಮ್ಮ ಸಂವಿಧಾನದಲ್ಲೂ ಅದನ್ನು ಒಂದು ಮೂಲಭೂತ ಹಕ್ಕಾಗಿ 86ನೇ ಸಂವಿಧಾನ ತಿದ್ದುಪಡಿಯಾಗಿ ವಿಧಿ 21ಂ ರೂಪದಲ್ಲಿ 2002ರಲ್ಲಿ ಅಳವಡಿಸಿದ್ದಾಯಿತು. ನಂತರದಲ್ಲಿ 'ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕು ಕಾಯ್ದೆ 2009' ಲೋಕಸಭೆಯಲ್ಲಿ ಅನುಮೋದನೆಗೊಂಡು ಕಾನೂನು ರೂಪದಲ್ಲಿ ಅದು ಜಾರಿಗೆ ಬಂದಿತು. ಈ ದೇಶದ 6–14 ಪ್ರಾಯದ ಎಲ್ಲ ಮಕ್ಕಳಿಗೆ ನ್ಯಾಯಯುತವಾಗಿ ತುಲನಾತ್ಮಕವಾಗಿ ಉತ್ತಮ ಗುಣಮಟ್ಟದ ಉಚಿತ ಕಡ್ಡಾಯ ಶಿಕ್ಷಣ ಲಭಿಸಬೇಕು ಎಂದು ಈ ಕಾಯ್ದೆ ಆಶಿಸುತ್ತದೆ.

ಈ ಕಾಯ್ದೆಯ ಪ್ರಕಾರ ಎಲ್ಲಾ ರಾಜ್ಯ ಸರ್ಕಾರಗಳು ಮಕ್ಕಳ ನೆರೆಹೊರೆಯಲ್ಲಿ ಶಾಲೆಗಳನ್ನು ಸ್ಥಾಪಿಸಬೇಕು. ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರನ್ನು ನೇಮಕ ಮಾಡಬೇಕು. ಪಠ್ಯಕ್ರಮ ಹಾಗೂ ಮೌಲ್ಯಮಾಪನ ವಿಧಿ ವಿಧಾನಗಳನ್ನು ನಿಗದಿ ಪಡಿಸಬೇಕು. ಶಿಕ್ಷಕರ ಅರ್ಹತೆಗಳನ್ನು ಖಚಿತಪಡಿಸಬೇಕು. ಶಿಕ್ಷಣಾವಕಾಶಗಳ ವಿಸ್ತರಣೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೂಕ್ತ ಪ್ರಮಾಣದಲ್ಲಿ ಹಣಕಾಸು ವಿನಿಯೋಗಿಸಬೇಕು. ಮಕ್ಕಳನ್ನು ಶಾಲೆಗಳಿಗೆ ಸೇರಿಸುವುದು ಹೆತ್ತವರ ಆದ್ಯ ಕರ್ತವ್ಯ. ವರ್ಷದ ಯಾವುದೇ ವೇಳೆಯಲ್ಲಿ ಮಕ್ಕಳಿಗೆ ಪ್ರವೇಶ ನೀಡಬೇಕು. ಪ್ರವೇಶಕ್ಕಾಗಿ ಶಾಲೆಯವರು ವರ್ಗಾವಣೆ ಪತ್ರ ತನ್ನಿ ಎಂದು ಒತ್ತಡ ಹೇರಬಾರದು. ಶಾಲೆಗಳವರು ಅನಾವಶ್ಯಕವಾಗಿ ಶುಲ್ಕ ಸ್ವೀಕರಿಸಬಾರದು. ಮಕ್ಕಳ ಶಾಲಾ ಪ್ರವೇಶಕ್ಕೆ ಪ್ರವೇಶ ಪರೀಕ್ಷೆ ನಡೆಸುವುದು ಅಪರಾಧ. ಸಮಾಜದ ಪ್ರತಿಷ್ಠಿತ ಖಾಸಗಿ ಶಾಲೆಗಳವರು ದುರ್ಬಲ ವರ್ಗಗಳ ಮಕ್ಕಳಿಗಾಗಿ ಶೇ 25ರಷ್ಟು ಸ್ಥಾನಗಳನ್ನು ಮೀಸಲಿಡಬೇಕು. ಒಂದನೆಯ ತರಗತಿಗೆ ಸೇರಿದ ಮಕ್ಕಳನ್ನು ಅನುತ್ತೀರ್ಣಗೊಳಿಸದೆ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳಬೇಕು. ಯಾವುದೇ ಮಗುವನ್ನು ಶಾಲೆಯಿಂದ ಯಾವುದೇ ಕಾರಣಕ್ಕೂ ಬಹಿಷ್ಕರಿಸಬಾರದು.

ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ಕೊಡುವುದು ನಿಷಿದ್ಧ. ಸರ್ಕಾರಗಳ ಮಾನ್ಯತೆ ಪಡೆದ ಶಾಲೆಗಳು ಮಾತ್ರ ಕಾರ್ಯ ನಿರ್ವಹಿಸಬೇಕು. ನಿಯಮ ಮೀರಿದ ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಬಹುದು. ಜನಗಣತಿ, ಸಂತ್ರಸ್ತರ ಪರಿಹಾರ ಕಾರ್ಯ ಹಾಗೂ ಚುನಾವಣೆಗಳನ್ನು ಹೊರತುಪಡಿಸಿ ಬೇರಾವುದೇ ಕೆಲಸಕ್ಕೂ ಶಿಕ್ಷಕರನ್ನು ನಿಯೋಜಿಸಬಾರದು. ಅಸಾಮರ್ಥ್ಯದ ಮಕ್ಕಳಿಗೂ 18ರ ಪ್ರಾಯದವರೆಗೂ ಸಾರ್ವಜನಿಕ ಶಾಲೆಗಳಲ್ಲಿ ಪ್ರವೇಶ ನೀಡಬೇಕು ಎಂಬ ಹಲವು ಮಹತ್ವಪೂರ್ಣ ಅಂಶಗಳು ಈ ಕಾಯ್ದೆಯಲ್ಲಿವೆ.

ಕಡ್ಡಾಯ ಶಿಕ್ಷಣದ ಅವಕಾಶದ ವಿಸ್ತರಣೆ ದೃಷ್ಟಿಯಿಂದ ತಡವಾಗಿರುವ ಸಂದರ್ಭದಲ್ಲಿ ಈ ಕಾಯ್ದೆ ಅಂಗೀಕಾರ ಪಡೆದುದು ಯೋಗ್ಯವೇ ಆಯಿತು. ಆದರೆ ಈ ಕಾಯ್ದೆಯ ಬಗ್ಗೆ ಸಾರ್ವಜನಿಕವಾಗಿ ವಿಶೇಷ ಚರ್ಚೆ ನಡೆಯಲಿಲ್ಲ. ಪಾಲಕರಲ್ಲಿ, ಶಿಕ್ಷಕರಲ್ಲಿ, ಸಮುದಾಯದಲ್ಲಿ, ಶಾಲಾ ಆಡಳಿತ ಮಂಡಳಿಗಳಲ್ಲಿ ಹಾಗೂ ಶಿಕ್ಷಣಾಧಿಕಾರಿಗಳ ವರ್ಗದಲ್ಲಿ ಈ ಕಾಯ್ದೆ ಬಗ್ಗೆ ವಿಶೇಷ ಜಾಗೃತಿ ಮೂಡಬೇಕಾಗಿದೆ. ಪಾರ್ಲಿಮೆಂಟಿನಲ್ಲಿ ಈ ಕಾಯ್ದೆಯ ಬಗ್ಗೆ ವಿಸ್ತೃತವಾದ ತಲಸ್ಪರ್ಶಿಯಾದ ಚರ್ಚೆ ನಡೆಯಲಿಲ್ಲ ಎನ್ನುವದು ನಿಜಕ್ಕೂ ಅತ್ಯಂತ ಖೇದಕರ ಸಂಗತಿ. ಹೀಗಾಗಿ ಈ ಕಾಯ್ದೆಯಲ್ಲಿ ಕೆಲವೊಂದು ನ್ಯೂನತೆಗಳು ಉಳಿದುಕೊಂಡವು.

ಕನ್ನಡ ಮಾಧ್ಯಮ – ಆಂಗ್ಲ ಮಾಧ್ಯಮ, ನಗರ – ಗ್ರಾಮೀಣ, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ, ರಾಜ್ಯ–ಕೇಂದ್ರ, ಅಂತರಾಷ್ಟ್ರೀಯ, ಐಸಿಎಸ್‌ಸಿ ಪಠ್ಯ – ಹೀಗೆ ಬಹುಪದರಗಳು, ವಿವಿಧ ಪಠ್ಯಕ್ರಮಗಳ ಅಸಮಾನ ಶಾಲಾ ವ್ಯವಸ್ಥೆ ಈ ದೇಶದಲ್ಲಿ ಕಳೆದ 60 ವರ್ಷಗಳಿಂದ ರೂಢಿಯಲ್ಲಿವೆ. ನೆರೆಹೊರೆಯ ಶಾಲಾ ಪರಿಕಲ್ಪನೆ ಹಾಗೂ ಸಮಾನ ಶಿಕ್ಷಣ ವ್ಯವಸ್ಥೆಯ ಬಗ್ಗೆ ಪರಿಣತರು ಕಳೆದ ಕೆಲವು ವರ್ಷಗಳಿಂದ ಒಲವು ವ್ಯಕ್ತಪಡಿಸುತ್ತಲೇ ಇದ್ದರೂ ಶಾಲಾ ಅಸಮಾನತೆ ದಿನೇ ದಿನೇ ತೀವ್ರವಾಗುತ್ತಿದೆ. ಸ್ಪರ್ಧೆ, ತಾರತಮ್ಯ ಹಾಗೂ ಅಸಮಾನತೆಯನ್ನು ಪೋಷಿಸುವ ಈ ಶಾಲಾ ವ್ಯವಸ್ಥೆಗೆ ಕಾಯ್ದೆಯಲ್ಲಿ ಯಾವುದೇ ಚಿಕಿತ್ಸೆ ಕಂಡು ಬಂದಿಲ್ಲ. ಸರ್ಕಾರಿ– ಅನುದಾನಿತ ಹಾಗೂ ಏಕೈಕ ಪಠ್ಯ ಕ್ರಮ ವ್ಯವಸ್ಥೆ ಜಾರಿಗೆ ಕೊಡುವ ನಿಟ್ಟಿನಲ್ಲಿ ಈ ಕಾಯ್ದೆ ಯೋಚಿಸದೇ ಇರುವುದು ಒಂದು ಕೊರತೆಯೆನಿಸುತ್ತದೆ.

ಕಾಯ್ದೆಯು 6–14 ಪ್ರಾಯದ ಮಕ್ಕಳ ಶಿಕ್ಷಣವನ್ನು ಮುಖ್ಯ ಗುರಿಯಾಗಿ ಕೊಂಡಿರುವುದು ಎರಡು ಬಗೆಯ ತೊಂದರೆಗಳಿಗೆ ಕಾರಣವಾಗುತ್ತದೆ. ಒಂದು – ಸಂವಿಧಾನ 45ನೇ ವಿಧಿ ಅವಕಾಶ ಕಲ್ಪಿಸಿದ 0–6ರ ಪ್ರಾಯದ ಮಕ್ಕಳ ಶಾಲಾ ಪೂರ್ವ ಶಿಕ್ಷಣ, ಪೋಷಣೆ ಇತ್ಯಾದಿ ಸೌಲಭ್ಯಗಳಿಂದ ಮಕ್ಕಳು ವಂಚಿತರಾಗಲಿದ್ದಾರೆ. ಇದರಿಂದ ಸುಮಾರು 1701 ಮಿಲಿಯ ಮಕ್ಕಳಿಗೆ ಸರ್ಕಾರಗಳು ಅನ್ಯಾಯ ಬಗೆದಂತಾಗುತ್ತದೆ. ಹಕ್ಕುಗಳ ಅಂತರರಾಷ್ಟ್ರೀಯ ನಿರ್ಣಯದ ಪ್ರಕಾರ 18ರ ಹರೆಯದವರೆಗಿನ ವ್ಯಕ್ತಿಗಳನ್ನು ಮಕ್ಕಳು ಎಂದೇ ಪರಿಗಣಿಸಬೇಕು.

Digitised by Bharatavani, CIIL

ಆದರೆ ಈ ಕಾಯ್ದೆಯು 14 ವರ್ಷದವರೆಗಿನ ಮಕ್ಕಳ ಶಿಕ್ಷಣಕ್ಕೆ ಮಾತ್ರ ಒತ್ತು ಕೊಡುತ್ತಿದೆ. ಇದರಿಂದಾಗಿ ಈ ದೇಶದಲ್ಲಿ ಪದವಿ ಪೂರ್ವ ಹಂತದವರೆಗಿನ ಶಿಕ್ಷಣವನ್ನು ಉಚಿತ ಹಾಗೂ ಕಡ್ಡಾಯಗೊಳಿಸುವ ಒಂದು ಅಪೂರ್ವ ನಿರ್ಧಾರವನ್ನು ಕೈಬಿಟ್ಟಂತಾಗಿದೆ. ಇದರಿಂದಾಗಿ ಪದವಿ–ಪೂರ್ವ ಹಂತದಲ್ಲಿರುವ ಶಿಕ್ಷಣದ ವ್ಯಾಪಕ ವಾಣಿಜ್ಯೀಕರಣ, ಕೋಚಿಂಗ್, ಟ್ಯೂಶನ್ ಇತ್ಯಾದಿಗಳ ಮೂಲಕ ನಡೆಯುತ್ತಿರುವ ಲಾಭ ಸಂಗ್ರಹ ಪ್ರವೃತ್ತಿಗೆ ಲಗಾಮು ಹಾಕುವ ಅವಕಾಶ ತಪ್ಪಿದಂತಾಗಿದೆ.

ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವುದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶಿಕ್ಷಣ ವಿಸ್ತರಣೆಗಾಗಿ ಅಧಿಕ ಹಣ ಹೂಡಿಕೆ ಮಾಡಬೇಕು. ಯಾವ ಅನುಪಾತದಲ್ಲಿ ಮತ್ತು ಎಷ್ಟು ಪ್ರಮಾಣದಲ್ಲಿ ಉಚಿತ ಕಡ್ಡಾಯ ಶಿಕ್ಷಣದ ಹಕ್ಕನ್ನು ಜಾರಿಗೊಳಿಸಲು ಹಣ ವ್ಯಯಿಸಬೇಕು ಎಂಬ ಬಗ್ಗೆ ಕಾಯ್ದೆಯಲ್ಲಿ ಸ್ಪಷ್ಟತೆಯಿಲ್ಲ.

ಇದು ಕೇಂದ್ರ – ರಾಜ್ಯ ಸರ್ಕಾರಗಳ ರಾಜಕೀಯ ಹಗ್ಗ ಜಗ್ಗಾಟಕ್ಕೆ ಅವಕಾಶ ಮಾಡಿಕೊಟ್ಟು ಮಕ್ಕಳಿಗೆ ಅನನುಕೂಲವಾಗುವ ವ್ಯವಸ್ಥೆಯನ್ನು ಬಲಪಡಿಸುತ್ತದೆ. ಒಟ್ಟು ರಾಷ್ಟ್ರೀಯ ವರಮಾನದ ಶೇ. 6ರಷ್ಟು ಮೊತ್ತವನ್ನು ಶಿಕ್ಷಣಕ್ಕಾಗಿ, ಅದರಲ್ಲಿ ಶೇ. 3ರಷ್ಟನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ವ್ಯಯಿಸಬೇಕು ಎಂಬುದನ್ನು ಖಚಿತವಾಗಿ ಕಾಯ್ದೆಯಲ್ಲಿ ಅಳವಡಿಸಿದ್ದರೆ ಪರಸ್ಪರ ಬೊಟ್ಟು ತೋರುವ ಪ್ರವೃತ್ತಿಗೆ ಕಡಿವಾಣ ಹಾಕಬಹುದಿತ್ತು.

ಸಾಮಾಜಿಕ ಬಾಧ್ಯತೆ ದೃಷ್ಟಿಯಿಂದ ಪ್ರತಿಷ್ಠಿತ ಖಾಸಗಿ, ಅನುದಾನರಹಿತ ಶಾಲೆಗಳು ದುರ್ಬಲ ವರ್ಗದ ಮಕ್ಕಳಿಗೆ ಶೇ25ರಷ್ಟು ಸ್ಥಾನಗಳನ್ನು ಮೀಸಲಿಡಬೇಕು ಎಂದು ಮಸೂದೆಯಲ್ಲಿ ತಿಳಿಸಿದ್ದರೂ ಅದರ ಜಾರಿ ಕ್ರಮ ಹೇಗೆ? ಈ ಶಾಲೆಗಳು ಅಂಥಹ ಮಕ್ಕಳಿಗೆ ಪ್ರವೇಶ ನೀಡದಿದ್ದರೆ? ಪ್ರವೇಶ ನೀಡಿದರೂ ಆ ಮಕ್ಕಳ ಶಿಕ್ಷಣವನ್ನು ಕಡೆಗಣಿಸಿದರೆ? ಅವರನ್ನು ತಾತ್ಸಾರದಿಂದ ಕಂಡರೆ? ಈ ಮಕ್ಕಳ ಬೋಧನ ಶುಲ್ಕವನ್ನು ಸರ್ಕಾರ ಒದಗಿಸಿದರೂ ಇನ್ನಿತರ ಶುಲ್ಕಗಳನ್ನು ದುಬಾರಿ ಪ್ರಮಾಣದಲ್ಲಿ ವಸೂಲು ಮಾಡಿದರೆ? ಮುಂತಾದ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡು ಸೂಕ್ತ ಪರಿಹಾರಗಳನ್ನು ಕಾಯ್ದೆಯಲ್ಲಿ ಅಳವಡಿಸದಿರುವುದರಿಂದ ಸಾಮಾಜಿಕ ನ್ಯಾಯದ ವಿಚಾರದಲ್ಲಿ ಈ ಕಾಯ್ದೆ ಸಮಾಧಾನಕರವಾಗಿ ಜಾರಿಗೆ ಬರುವುದು ಕಷ್ಟವಾಗಬಹುದು.

ಶಿಕ್ಷಣದ ಕಾಯ್ದೆ 'ಸಮಾನ ಗುಣಮಟ್ಟದ ಶಿಕ್ಷಣ'ದ ಬಗ್ಗೆ ಪ್ರಸ್ತಾಪಿಸಿದೆ. 'ಗುಣಮಟ್ಟ'ದ ಪರಿಕಲ್ಪನೆ ಏನು? ಯಾವುದು ಗುಣಮಟ್ಟ? ಅದನ್ನು ಮಾಪನ ಮಾಡುವ ಬಗೆ ಹೇಗೆ? ಗುಣಮಟ್ಟದ ವಿಷಯದಲ್ಲಿ ಏಕರೂಪತೆ ಸಾಧ್ಯವೆ? ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆಯೆ? ಇಲ್ಲವೆ? ಎಂಬುದರ ಪರಿಶೀಲನೆ ಹೇಗೆ? ಶಾಲೆಗಳ ಗುಣಮಟ್ಟ ಅಪೇಕ್ಷಿತ ರೀತಿಯಲ್ಲಿ ಇಲ್ಲದಿದ್ದರೆ ಗುಣಮಟ್ಟ ಸುಧಾರಣೆ ಹೇಗೆ? ಎಂಬ ಪ್ರಶ್ನೆಗಳನ್ನು ಈ ಕಾಯ್ದೆ ಸಮರ್ಪಕವಾಗಿ ಚರ್ಚಿಸುವುದಿಲ್ಲ.

ಯಾವುದೇ ಮಗುವನ್ನು ಅನುತ್ತೀರ್ಣಗೊಳಿಸಕೂಡದು ಹಾಗೂ ಬಹಿಷ್ಕರಿಸಬಾರದು ಎಂಬ ನಿಯಮದ ಬಗ್ಗೆ ಹಲವು ಕಡೆಗಳಲ್ಲಿ ಈಗಾಗಲೇ ಪ್ರತಿರೋಧ ವ್ಯಕ್ತವಾಗಿದೆ. ಈ ನಿಯಮದಿಂದ ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ 'ಉತ್ತರದಾಯಿತ್ವ' ಬದ್ಧತೆ ಹಾಗೂ ಶ್ರದ್ಧೆಗಳಿಗೆ ಭಾರಿ ಹೊಡೆತ ಬೀಳುವುದಲ್ಲದೆ 'ಗುಣಮಟ್ಟ ಕುಸಿತ'ಕ್ಕೂ ಕಾರಣವಾಗುತ್ತದೆ ಎಂದು ಕೆಲವರು ವಾದಿಸಿದ್ದಾರೆ. ಎಲ್ಲ ವಿದ್ಯಾರ್ಥಿಗಳೂ ಕಲಿಯುವಂತೆ ಮತ್ತು ಎಲ್ಲ ಶಿಕ್ಷಕರಿಗೂ ಕಲಿಸುವಂತೆ ಮಾಡುವ ಬಗ್ಗೆ ಈ ಕಾಯ್ದೆ ಹೆಚ್ಚಿನ ಮಹತ್ವ ನೀಡಬೇಕಾಗಿದ್ದಿತು.

ವಿದ್ಯಾರ್ಥಿಗಳಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುವುದನ್ನು ಈ ಕಾಯ್ದೆ ನಿರ್ಬಂಧಿಸುತ್ತದೆ. ಆದರೆ ಮಾನಸಿಕ ಹಿಂಸೆಯ ಪರಿಕಲ್ಪನೆಯನ್ನು ಸ್ಪಷ್ಟಪಡಿಸದಿರುವುದರಿಂದ ಮುಂದಿನ ದಿನಗಳಲ್ಲಿ ಶಿಕ್ಷಕರು ಅಧಿಕ ಒತ್ತಡಕ್ಕೆ ಒಳಗಾಗುವ ಅಪಾಯವಿದೆ. ಶಿಕ್ಷಕರ ಮೇಲಿನ ಶೈಕ್ಷಣಿಕೇತರ ಕಾರ್ಯಭಾರವನ್ನು ತಗ್ಗಿಸುವ ಪ್ರಯತ್ನವನ್ನು ಮಾಡಲಾಗಿದೆಯಾದರೂ ಅದನ್ನು ಪೂರ್ತಿಯಾಗಿ ನಿಲ್ಲಿಸಿ 'ಶಿಕ್ಷಕರು ತರಗತಿಗಳ ಕಡೆ ಅಧಿಕ ಗಮನ' ಕೊಡಲು ಬೇಕಾದ ಕ್ರಮ ಕೈಗೊಳ್ಳುವಲ್ಲಿ ಮಸೂದೆ ಸೋತಿದೆ. ದೇಶದ ಸುಮಾರು 450 ಮಿಲಿಯ ಮಕ್ಕಳಿಗೆ ಶಿಕ್ಷಣಾವಕಾಶಗಳನ್ನು ವಿಸ್ತರಿಸುವ ಬೃಹತ್ ಕಾರ್ಯಕ್ರಮಕ್ಕೆ ಹಣ ಒದಗಿಸುವುದು ಹೇಗೆ ಎಂದು ಸರ್ಕಾರಗಳು ಯೋಚಿಸುತ್ತಿರುವಾಗ 'ಸಾರ್ವಜನಿಕ – ಖಾಸಗಿ ಭಾಗಿತ್ವ' (ಕಣಥಟುಬ ಕಡಿುತಚಿಣಜ ಕಚಿಡಿಣಟಿಜಡಿಜಿಚಿಣುಟ)ದ ನಿರ್ವಹಣ ಮಾದರಿ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ ಕಾಯ್ದೆಯಲ್ಲಿ ಇದರ ವಿಧಿ ವಿಧಾನ ಹಾಗೂ ನಿಯಂತ್ರಣಗಳ ಬಗ್ಗೆ ಪ್ರಸ್ತಾಪವಿಲ್ಲದಿರುವುದು ಆಶ್ಚರ್ಯಕರ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(2005) ಮಗುವಿನ ಮಾತೃಭಾಷಾ/ಪ್ರಾದೇಶಿಕ ಭಾಷಾ ಮಾಧ್ಯಮ ಹಾಗೂ ಬಹುಭಾಷೆಗಳ ಕಲಿಕೆಗೆ ಉತ್ತೇಜನ ನೀಡಿದರೂ ಕಾಯ್ದೆಯು ಪ್ರಾಥಮಿಕ ಹಂತದಲ್ಲಾದರೂ ಮಾತೃಭಾಷಾ/ಪ್ರಾದೇಶಿಕ ಭಾಷಾ ಮಾಧ್ಯಮದ ಹಕ್ಕಿನ ಬಗ್ಗೆ ಭರವಸೆ ನೀಡದೆ ಭಾಷಾ ಅಲ್ಪಸಂಖ್ಯಾತ ಮಕ್ಕಳ ಮೂಲಭೂತ ಹಕ್ಕುಗಳ ಉಲ್ಲಂಘನೆ ಮಾಡಿರುವುದು ಶೋಚನೀಯ.

ದೇಶದ ಸದ್ಯದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಗಳು ಶೋಚನೀಯವಾಗಿವೆ. ಸುಮಾರು 30 ಮಿಲಿಯ ಮಕ್ಕಳು ಶಾಲೆಗಳ ಕಡೆ ಮುಖ ಮಾಡಿಯೇ ಇಲ್ಲ. ಸುಮಾರು 105 ಮಿಲಿಯ ಮಕ್ಕಳು ಎಂಟನೆಯ ತರಗತಿಗೆ ಬರುವುದಕ್ಕೆ ಮುನ್ನವೇ ಶಾಲೆಯನ್ನು ಅರ್ಧದಲ್ಲೆ ಬಿಟ್ಟುಬಿಡುತ್ತಾರೆ. ಸುಮಾರು 100 ಮಿಲಿಯ ಮಕ್ಕಳು ಬಾಲಕಾರ್ಮಿಕರಾಗಿ ಇನ್ನೂ ದುಡಿಯುತ್ತಿದ್ದಾರೆ. ಬಾಲಕಾರ್ಮಿಕ ನಿಷೇಧ 1986ರ ಕಾನೂನು ಜಾರಿಯಲ್ಲಿದ್ದರೂ ಬಾಲ ಕಾರ್ಮಿಕ ಸಮಸ್ಯೆಯನ್ನು ನಿವಾರಿಸಲು ಇನ್ನೂ ಸಾಧ್ಯವಾಗಿಲ್ಲ. ಈ ನಡುವೆ ಹೆಚ್ಚುತ್ತಿರುವ ನಗರೀಕರಣದ ದೆಸೆಯಿಂದಾಗಿ ಬೀದಿ ಬದಿಯ ಅಲೆಮಾರಿ ಮಕ್ಕಳ ಸಂಖ್ಯೆ ದಿನೇ ದಿನೇ ಏರುತ್ತಿದೆ.

Digitised by Bharatavani, CIIL

ಬಾಲ ಕಾರ್ಮಿಕ ಸಮಸ್ಯೆ ಹಾಗೂ ಮಕ್ಕಳ ದುರುಪಯೋಗವನ್ನು ಪೂರ್ತಿಯಾಗಿ ನಿವಾರಣೆ ಮಾಡದಿದ್ದರೆ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ(2009) ಹಲ್ಲಿಲ್ಲದ ಹಾವಿನಂತಾಗುತ್ತದೆ. ಅವಕಾಶವಂಚಿತ ಮಕ್ಕಳಿಗೆ ಶಿಕ್ಷಣ ಒದಗಿಸುವ ಆಶಯ ಹೊಂದಿರುವ ಶಿಕ್ಷಣ ಹಕ್ಕು ಕಾಯ್ದೆ ಬಾಲಕಾರ್ಮಿಕರ ಹಾಗೂ ಬೀದಿಬದಿಯ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವ್ಯಕ್ತಪಡಿಸದಿರುವುದು ತೀರ ಖೇದಕರ.

ಮಕ್ಕಳ ಹಕ್ಕು ಕಾಯ್ದೆ ಈಗಾಗಲೇ ಜಾರಿಗೆ ಬಂದಿರುವುದರಿಂದ ನ್ಯಾಯಾಲಯಗಳಲ್ಲಿ ಈ ಕಾಯ್ದೆ ಬಗ್ಗೆ ಸಾರ್ವಜನಿಕ ಹಿತಾಸಕ್ತಿಯ ಹಲವು ಪ್ರಕರಣಗಳು ದಾಖಲಾಗಬಹುದು. ಕೋರ್ಟಿನ ಮೆಟ್ಟಿಲೇರಿ ಶಿಕ್ಷಣದ ಹಕ್ಕನ್ನು ಪಡೆದುಕೊಳ್ಳುವ ಸ್ಥಿತಿ ಮೂಡಿಬರಬಹುದು. ಕಾನೂನಿನ ತೊಡಕುಗಳನ್ನು ನ್ಯಾಯಾಲಯಗಳು ಸರಿಪಡಿಸಬಹುದು. ಆದರೆ ಸಮಾಜದ ಅಂಚಿಗೆ ಸೇರಿದ, ಉಪೇಕ್ಷೆಗೆ ಒಳಗಾಗಿರುವ ವರ್ಗಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ವಿಷಯದಲ್ಲಿ ಸರ್ಕಾರಗಳ ಮೇಲೆ ನೈತಿಕವಾಗಿ, ರಾಜಕೀಯವಾಗಿ ಒಂದು ಪ್ರಬಲ ಒತ್ತಡ ಸೃಷ್ಟಿಸುವುದಕ್ಕೆ ಈ ಹಕ್ಕು ಅವಕಾಶ ಕಲ್ಪಿಸಿದೆ. ಈ ಕಾಯ್ದೆಯ ಬಲದಿಂದಾದರೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಕನಸು ನನಸಾದರೆ ಅದು ಸ್ವತಂತ್ರ ಭಾರತದ ಬಹುದೊಡ್ಡ ಸಾಧನೆ ಎಂದು ನಾವು ಹೆಮ್ಮೆಪಡಬಹುದು.

**–ಡಾ. ನರಸಿಂಹ ಮೂರ್ತಿ ಆರ್.**

## ಶಿಕ್ಷಣದಲ್ಲಿ ಅಂತಾರಾಷ್ಟ್ರೀಯ ಸಹಯೋಗ

ವಿವಿಧ ದೇಶಗಳು, ಅಂತಾರಾಷ್ಟ್ರೀಯ ಸಂಸ್ಥೆಗಳು, ಅಂತರ್‌ಸರಕಾರಿ ಸಂಸ್ಥೆಗಳು ಮತ್ತು ಸರಕಾರೇತರ ಸಂಸ್ಥೆಗಳು ಶಿಕ್ಷಣದಲ್ಲಿ ಆಸ್ಥೆಯಿರುವ ಎಲ್ಲರಿಗೂ ಉಪಯುಕ್ತವಾಗುವ ರೀತಿಯಲ್ಲಿ ಲಭ್ಯವಿರುವ ಶೈಕ್ಷಣಿಕ ಮೂಲಗಳು ಮತ್ತು ಪರಸ್ಪರ ಸಂಪನ್ಮೂಲಗಳನ್ನು ಹಂಚಿಕೊಳ್ಳುವ ಪ್ರಕ್ರಿಯೆಯು **ಶಿಕ್ಷಣದ ಸಹಯೋಗವೆಂದು** ಕರೆಯಲ್ಪಡುತ್ತದೆ. ಶಿಕ್ಷಣದಲ್ಲಿನ ಅಂತಾರಾಷ್ಟ್ರೀಯ ಸಹಯೋಗವು ಮೂರು ರೂಪದಲ್ಲಿ ಇರುತ್ತದೆ. ಮೊದಲನೆಯದು ದೇಶಗಳ ಮತ್ತು ಸಂಸ್ಥೆಗಳ ನಡುವೆ ಮಾಹಿತಿಗಳು, ಸಲಕರಣೆಗಳು, ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ವ್ಯಕ್ತಿಗಳ ನಡುವೆ ನಡೆಯುವ ವಿನಿಮಯ. ಮುಖ್ಯವಾಗಿ ಇದು ದೇಶಗಳನ್ನು ಮತ್ತು ಸಂಸ್ಥೆಗಳನ್ನು ಪರಸ್ಪರ ಲಾಭಕ್ಕಾಗಿ ಒಟ್ಟುಗೂಡಿಸುವ ಉದ್ದೇಶಗಳನ್ನು ಹೊಂದಿದೆ. ಎರಡನೆಯದು ಆರ್ಥಿಕ ಮತ್ತು ತಾಂತ್ರಿಕ ತೊಡಗಿಸಿಕೊಳ್ಳುವಿಕೆ ಮತ್ತು ನೆರವು. ದೇಶಗಳ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ನೆರವು ಒದಗಿಸಲು ಮತ್ತು ಅಂತಾರಾಷ್ಟ್ರೀಯ ಅರಿವು ಮತ್ತು ಶಾಂತಿಗಾಗಿ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡುವ ಸಲುವಾಗಿ ಸಹಯೋಗ ನೀಡಲು ಯುನೆಸ್ಕೊದಿಂದ ಇದು ನೀಡಲ್ಪಡುತ್ತದೆ. ಸಹಯೋಗದ ಮೂರನೆಯ ರೂಪ ಸಹಾಯ/ಬೆಂಬಲವಾಗಿದೆ. ಇದು ಸಾಮಾನ್ಯವಾಗಿ ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ಏಜೆನ್ಸಿಗಳು ನೀಡುವ ಆರ್ಥಿಕ ಸಹಾಯವಾಗಿರುತ್ತದೆ. ಈ ಸಹಯೋಗಗಳ ವಿಭಿನ್ನ ರೂಪಗಳನ್ನು ಈ ಕೆಳಗಿನ ವಿಭಾಗಗಳಲ್ಲಿ ವಿವರಿಸಲಾಗಿದೆ.

**ದ್ವಿಪಕ್ಷೀಯ ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳು:**

ದೇಶಗಳ ನಡುವೆ ನಡೆಯುವ ವಿನಿಮಯ ಕಾರ್ಯಕ್ರಮಗಳಲ್ಲಿ ಈ ಕೆಳಗಿನವುಗಳ ವಿನಿಮಯವನ್ನು ಉದ್ದೇಶಿಸಲಾಗಿದೆ: 1. ಮಾಹಿತಿ ಮತ್ತು ಸಾಮಗ್ರಿಗಳು 2. ಶೈಕ್ಷಣಿಕ ತಜ್ಞರು ಇದನ್ನು ಪರಸ್ಪರ ಅನುಕೂಲಗಳಿಗಾಗಿ ನಡೆಸಲಾಗುತ್ತದೆ. ಮಾಹಿತಿ ವಿನಿಮಯದಲ್ಲಿ ಶೈಕ್ಷಣಿಕ ವ್ಯವಸ್ಥೆಯ ಸಂರಚನೆ, ವಿನ್ಯಾಸ ಮತ್ತು ನಿರ್ವಹಣೆ, ಬೋಧನೆ–ಕಲಿಕೆ ಮತ್ತು ಇತರ ಸಂಬಂಧಿ ಸಾಮಾಗ್ರಿಗಳ ಕುರಿತಾದ ಮಾಹಿತಿಯ ವಿನಿಮಯವಿರುತ್ತದೆ. ಶೈಕ್ಷಣಿಕ ವ್ಯಕ್ತಿಗಳ ಅಥವಾ ತಜ್ಞರ ವಿನಿಮಯವು ಶಿಕ್ಷಣ ವ್ಯವಸ್ಥೆಗಳು, ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಸಂಸ್ಥೆಗಳ ಕಾರ್ಯವೈಖರಿಗಳು ಮತ್ತು ಚಟುವಟಿಕೆಗಳ ಮಾಹಿತಿಯನ್ನು ತಿಳಿದುಕೊಳ್ಳುವ ಗುರಿಯಾಗಿ ಹೊಂದಿದೆ.

ಭಾರತದಲ್ಲಿ ವಿನಿಮಯ ಕಾರ್ಯಕ್ರಮಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಸಂಸ್ಕೃತಿ ವಿಭಾಗದಿಂದ ಗುರುತಿಸಲ್ಪಟ್ಟ ಪರಿಪಾಲನಾ ಏಜೆನ್ಸಿಗಳ ಜೊತೆ ಸಮಾಲೋಚನೆ ನಡೆಸಿ ರೂಪಿಸುತ್ತದೆ. ಪ್ರತಿಯೊಂದು ದೇಶದ ಅಗತ್ಯ ಮತ್ತು ವ್ಯಾಪ್ತಿಯನ್ನು ಆಧರಿಸಿ ಆಯಾ ದೇಶಗಳ ಸರಕಾರಗಳ ಮಂತ್ರಾಲಯಗಳು ಒಪ್ಪಂದಕ್ಕೆ ಬರುತ್ತವೆ. ಎರಡು ದೇಶಗಳ ನಡುವೆ ಸಾಂಸ್ಕೃತಿಕ/ಶೈಕ್ಷಣಿಕ ವಿನಿಮಯ ಕಾರ್ಯಕ್ರಮಕ್ಕೆ (ಸೂಚಿ ಪತ್ರ–ಸಿ/ಇಇಪಿ) ಒಮ್ಮೆ ಸಹಿ ಬಿತ್ತೆಂದರೆ, ಗುರುತಿಸಲ್ಪಟ್ಟ ಪರಿಪಾಲನಾ ಏಜೆನ್ಸಿಗಳಿಗೆ ಸಂಬಂಧಿಸಿದ ವಸ್ತುವಿಷಯಗಳನ್ನು ನಿಗದಿಪಡಿಸುವುದರೊಂದಿಗೆ ಅನುಷ್ಠಾನದ ಕಾರ್ಯಗತಿಯನ್ನು ಭಾರತದ ರಾಯಭಾರಿಯ ಮೂಲಕ ಅಥವಾ ಇನ್ನೊಂದು ದೇಶದ ದೂತವಾಸದ ಮೂಲಕ ಪ್ರಾರಂಭಿಸುತ್ತದೆ. ಇತರ ದೇಶಗಳ ರಾಯಭಾರಿಗಳು ಅನುಷ್ಠಾನ ಕಾರ್ಯವಿಧಾನಕ್ಕಾಗಿ ಅನುಷ್ಠಾನ ಏಜೆನ್ಸಿಗಳನ್ನು ಸಂಪರ್ಕಿಸುತ್ತವೆ. ಸಧ್ಯ ಭಾರತವು 40ಕ್ಕೂ ಹೆಚ್ಚು ದೇಶಗಳಲ್ಲಿ ಸಿ/ಇಇಪಿಯನ್ನು ಹೊಂದಿದೆ.

**ಶಿಕ್ಷಣದಲ್ಲಿ ಯುನೆಸ್ಕೊ ಮತ್ತು ಅಂತಾರಾಷ್ಟ್ರೀಯ ಸಹಯೋಗ:**

ಶಿಕ್ಷಣ ಕ್ಷೇತ್ರದಲ್ಲಿ ಬೌದ್ಧಿಕ ಚರ್ಚಾವೇದಿಕೆ ಮತ್ತು ವಿಚಾರಗಳ ಪ್ರಯೋಗಾಲಯದ ಪಾತ್ರವನ್ನು ನಿರ್ವಹಿಸುವ ಮೂಲಕ ಯುನೆಸ್ಕೊ, ದೇಶಗಳ ನಡುವೆ ಸಹಕಾರ ಏರ್ಪಡುವುದರಲ್ಲಿ ಗಮನಾರ್ಹ ಕೊಡುಗೆಯನ್ನು ಸಲ್ಲಿಸಿದೆ. ಎರಡನೆಯ ಜಾಗತಿಕ ಯುದ್ಧದ ಬಳಿಕ ಶೈಕ್ಷಣಿಕ ವ್ಯವಸ್ಥೆಯ ಮರುರಚನೆಯಲ್ಲಿ ಯುನೆಸ್ಕೊದ ಕ್ರಿಯಾತ್ಮಕ ತೊಡಗಿಸಿಕೊಳ್ಳುವಿಕೆಯು, ಸದಸ್ಯ ರಾಜ್ಯಗಳಲ್ಲಿ ಸರ್ವರಿಗೂ ಶಿಕ್ಷಣದ ಅಗತ್ಯ ಮತ್ತು ತುರ್ತು (ಇಎಫ್‌ಎ), ಒಟ್ಟಾಗಿ ಬಾಳುವಿಕೆ, ಶಾಂತಿಗಾಗಿ ಶಿಕ್ಷಣ, ಎಲ್ಲರಿಗೂ ವೈಜ್ಞಾನಿಕ ಸಾಕ್ಷರತೆ, ಇತ್ಯಾದಿ ಕುರಿತು ಸಂವೇದನೆಗಳನ್ನು ಮೂಡಿಸಿದೆ. ಶಿಕ್ಷಣದಲ್ಲಿ ಯುನೆಸ್ಕೊ

Digitised by Bharatavani, CIIL

ಪಾತ್ರವು ಉತ್ತೇಜನಕಾರಿಯಾಗಿ ಪರಿಣಮಿಸಿದೆ. ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ದೇಶ ಅನುಕೂಲತೆಗಳನ್ನು ಪಡೆಯಲು ಪರಸ್ಪರ ಮತ್ತು ಪ್ರಾದೇಶಿಕವಾಗಿ ಸಜ್ಜುಗೊಳ್ಳುವುದಕ್ಕೆ ಪೂರಕವಾಗಿದೆ.

ಯುನೆಸ್ಕೋ ತನ್ನ ಧ್ಯೇಯವನ್ನು ಪೂರೈಸಲು ಆಯ್ದುಕೊಂಡ ಪ್ರಮುಖ ವಿಧಾನಗಳಲ್ಲಿ ಸಂವಿಧಾನದಲ್ಲಿ ರೂಪಿಸಲಾದ ದೇಶಗಳ ನಡುವಿನ ಸಹಯೋಗಕ್ಕೆ ಪ್ರೋತ್ಸಾಹ ನೀಡುವುದು ಒಂದಾಗಿದೆ. ತನ್ನ ಸ್ಪರ್ಧಾತ್ಮಕ ಕ್ಷೇತ್ರಗಳಲ್ಲಿ ಮಾಹಿತಿ ವಿನಿಮಯಕ್ಕೆ ದೇಣಿಗೆ ನೀಡುವುದು. ಹಿಂದೆ 'ತೀರುವಳಿ ಮನೆ' (ಕ್ಲಿಯರಿಂಗ್ ಹೌಸ್) ಎಂದು ಕರೆಯಿಸಿಕೊಳ್ಳುತ್ತಿದ್ದ ದಾಖಲೀಕರಣ ಮತ್ತು ಮಾಹಿತಿ ಸೇವೆ (ಎಸ್‌ಡಿಐ) ಯು ಜಗತ್ತಿನಾದ್ಯಂತ ಶೈಕ್ಷಣಿಕ ದಾಖಲೀಕರಣದ ಕಾರ್ಯವನ್ನು ಬೆಳೆಸುವುದರಲ್ಲಿ ಗಮನಾರ್ಹ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಅನೇಕ ರಾಷ್ಟ್ರಗಳಲ್ಲಿ ದಾಖಲೀಕರಣ ಕೇಂದ್ರಗಳ ಸ್ಥಾಪನೆಯಲ್ಲಿ ಇದು ನೆರವಾಗಿದೆ. ಯುನೆಸ್ಕೊ ಮತ್ತು ಅಂತಾರಾಷ್ಟ್ರೀಯ ಶಿಕ್ಷಣ ಕಾರ್ಯಾಲಯದ (ಇಂಟರ್‌ನ್ಯಾಶನಲ್ ಬ್ಯುರೋ ಆಫ್ ಎಡ್ಯುಕೇಶನ್–ಐಬಿಇ) ಪ್ರಕಟಣೆಗಳು ದೇಶಗಳ ಅನುಕೂಲಗಳಿಗಾಗಿ ಜಗತ್ತಿನಾದ್ಯಂತ ವ್ಯಾಪಕವಾಗಿ ಹರಡಿಕೊಂಡಿವೆ.

ಬೌದ್ಧಿಕ ವೃತ್ತಿಸಂಸ್ಥೆಯಾಗಿ ಯುನೆಸ್ಕೊಗೆ ಶಿಕ್ಷಣ ಕ್ಷೇತ್ರದಲ್ಲಿ ಎರಡು ವಿಧಗಳ ಕಾರ್ಯಗಳು ಇರುತ್ತವೆ. ಮೊದಲನೆಯದು ಶೈಕ್ಷಣಿಕ ಅವಕಾಶಗಳಲ್ಲಿ ಎಲ್ಲರಿಗೂ ಸಮಾನತೆ ಎಂಬ ಆದರ್ಶವನ್ನು ಮುಂದುವರಿಸಲು ದೇಶಗಳ ನಡುವೆ ಸಹಯೋಗವನ್ನು ಸಂಸ್ಥೀಕರಣಗೊಳಿಸುವ ಗುರಿಯನ್ನು ಹೊಂದಿರುವ ಅಂತಾರಾಷ್ಟ್ರೀಯ ಬೌದ್ಧಿಕ ಸಹಕಾರ. ಎರಡನೆಯದು ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸುವುದರಲ್ಲಿ ಅವರ ಬೇಡಿಕೆಗೆ ಅನುಗುಣವಾಗಿ ಸದಸ್ಯ ರಾಷ್ಟ್ರಗಳ ಜೊತೆ ನೇರ ಸಹಕಾರ. ಶೈಕ್ಷಣಿಕ ಸಹಯೋಗಕ್ಕಾಗಿ ಇರತಕ್ಕಂತಹ ಅಂತಾರಾಷ್ಟ್ರೀಯ ಏಜೆನ್ಸಿಯಾಗಿ ಯುನೆಸ್ಕೊವಿನ ಕಾರ್ಯವನ್ನು ಈ ಕೆಳಗಿನಂತೆ ವಿವರಿಸಬಹುದು :

1. ಸಹಯೋಗದಲ್ಲಿ ಯುನೆಸ್ಕೊ ರಾಷ್ಟ್ರೀಯ ಆಯೋಗಗಳ ಪಾತ್ರ;
2. ಅಂತಾರಾಷ್ಟ್ರೀಯ ಸಹಯೋಗಕ್ಕೆ ಯುನೆಸ್ಕೊ ಶಿಕ್ಷಣ ಸಂಸ್ಥೆಗಳ ಕಾರ್ಯ;
3. ಪ್ರಾದೇಶಿಕ ಸಹಕಾರಕಾಗಿ ಯುನೆಸ್ಕೋ ಪ್ರಾದೇಶಿಕ ಯೋಜನಾನೀತಿಗಳು;
4. ಶಿಕ್ಷಣಕ್ಕೆ ಯುನೆಸ್ಕೋ ನೆರವು;
5. ಯುನೆಸ್ಕೋ ಸಹಭಾಗಿತ್ವದ ಕಾರ್ಯಕ್ರಮಗಳು;
6. ಯುನೆಸ್ಕೋ ವಿದ್ಯಾರ್ಥಿವೇತನಗಳು, ಅಧ್ಯಯನ ಮತ್ತು ಪ್ರಯಾಣ ಅನುವಾದಗಳು
7. ಯುನೆಸ್ಕೋ ಬಹುಮಾನಗಳು; ಮತ್ತು
8. ಯುನೆಸ್ಕೋ ಶಿಕ್ಷಣದ ಅಂತಾರಾಷ್ಟ್ರೀಯ ಆಯೋಗಗಳು.

**ಯುನೆಸ್ಕೊ ರಾಷ್ಟ್ರೀಯ ಆಯೋಗಗಳು:** ಯುನೆಸ್ಕೋ ಕಾರ್ಯವು ಮುಖ್ಯವಾಗಿ ತನ್ನ ಸದಸ್ಯ ರಾಜ್ಯಗಳ ಕಡೆಗೆ ಗುರಿಯನ್ನು ಕೇಂದ್ರೀಕರಿಸಿದೆ. ಇಲ್ಲಿ ತನ್ನ ಸ್ಥಾಪಕ ಸದಸ್ಯರ ಅಭಿಲಾಷೆಯ ಹಾದಿಯಲ್ಲಿಯೇ ಯುನೆಸ್ಕೋ ಕಾರ್ಯವು ಸರಕಾರದ ಅಧಿಕಾರಿಗಳ ವಾಹಿನಿಯ ಮೂಲಕ ಮರುಪ್ರಸಾರಗೊಳ್ಳುವುದಲ್ಲದೆ, ನಾಗರಿಕ ಸಂಸ್ಥೆಗಳ ಪ್ರತಿನಿಧಿತ್ವದ ಸಂಸ್ಥೆಗಳ (ಸಂಯೋಜಿತ ಚಳವಳಿಗಳು, ಸಮೂಹ ಸಂಘಟನೆಗಳು, ಆರ್ಥಿಕ ಕಾರ್ಯಾಚರಣೆಗಳು ಇತ್ಯಾದಿ) ಮೂಲಕ ಕೂಡಾ ಮರುಪ್ರಸಾರಗೊಳ್ಳುತ್ತವೆ. ಯುನೆಸ್ಕೋದ ಸಂವಿಧಾನ ಮತ್ತು ಸರಕಾರ ಮತ್ತು ಯುನೆಸ್ಕೊ ಕಾರ್ಯಗಳಲ್ಲಿ ಆಸಕ್ತಿಯನ್ನು ಹೊಂದಿರುವ ರಾಷ್ಟ್ರೀಯ ಗುಂಪುಗಳ ಸಹಕಾರವನ್ನು ಸಾಮರಸ್ಯಕರವಾಗಿ ಮಾಡುವ ಸಲುವಾಗಿ ಯುನೆಸ್ಕೊ ಆಯೋಗಗಳನ್ನು ರೂಪಿಸಲಾಗುತ್ತದೆ. ರಾಷ್ಟ್ರೀಯ ಆಯೋಗಗಳ ಸನ್ನದು ಏನೆಂದರೆ, ಯುನೆಸ್ಕೊ ಚಟುವಟಿಕೆಗಳಲ್ಲಿ ಅನೇಕ ಮಂತ್ರಾಲಯಗಳ ವಿಭಾಗಗಳು, ಏಜೆನ್ಸಿಗಳು, ಸಂಸ್ಥೆಗಳು, ತೊಡಗಿಕೊಳ್ಳುವುದಾಗಿದೆ. ಸದಸ್ಯ ರಾಷ್ಟ್ರಗಳಲ್ಲಿ ಯುನೆಸ್ಕೋಗಾಗಿ ಇರುವ 178 ರಾಷ್ಟ್ರೀಯ ಆಯೋಗಗಳು ಸಂಪರ್ಕ, ಪ್ರದರ್ಶನಗಳನ್ನು ಸಂಘಟಿಸುವುದು ಮತ್ತು ಅಧಿವೇಶನಗಳನ್ನು ಏರ್ಪಡಿಸುವುದು, ಗ್ರಂಥಗಳನ್ನು ಮತ್ತು ವಾರ್ತಾ ಪತ್ರಗಳನ್ನು ರಾಷ್ಟ್ರೀಯ ಭಾಷೆಗಳಿಗೆ ಅನುವಾದಿಸುವುದು ಮತ್ತು ಪ್ರಕಟಿಸುವುದು, ಮತ್ತು ವೈವಿಧ್ಯಮಯ ಪರೀಕ್ಷಾರ್ಥಕ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ವಾಹಕಗಳಾಗಿ ಕಾರ್ಯ ನಡೆಸುತ್ತವೆ. ಯುನೆಸ್ಕೊದ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು ಪ್ರತಿಯೊಂದು ಪ್ರದೇಶದ ಅಥವಾ ರಾಷ್ಟ್ರದ ಸಂದರ್ಭಕ್ಕನುಗುಣವಾಗಿ ಸರಿಸಾಟಿಯಾಗಿರುವಂತೆ ನೋಡಿಕೊಳ್ಳಲು ರಾಷ್ಟ್ರೀಯ ಆಯೋಗಗಳ ಮುಖ್ಯ ಕಾರ್ಯದರ್ಶಿಗಳ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಸಭೆಗಳನ್ನು 1950ರಿಂದ ನಿಯಮಿತವಾಗಿ ನಡೆಸಲಾಗುತ್ತಿದೆ.

**ಯುನೆಸ್ಕೋ ಶಿಕ್ಷಣ ಸಂಸ್ಥೆಗಳು:**

**ಅಂತಾರಾಷ್ಟ್ರೀಯ ಶಿಕ್ಷಣ ಕಾರ್ಯಾಲಯ (ಇಂಟರ್‌ನ್ಯಾಶನಲ್ ಬ್ಯುರೊ ಆಫ್ ಎಡ್ಯುಕೇಶನ್):**

ಅಂತಾರಾಷ್ಟ್ರೀಯ ಶಿಕ್ಷಣ ಕಾರ್ಯಾಲಯವು (ಐಬಿಇ) ಮಾಹಿತಿ ಮತ್ತು ದಾಖಲೀಕರಣದ ಕೇಂದ್ರವಾಗಿದ್ದು ತೌಲನಿಕ ಶಿಕ್ಷಣದ ತಜ್ಞತೆಯನ್ನು ಹೊಂದಿದೆ. ಇದು ಶಿಕ್ಷಣಕ್ಕೆ ಸಂಬಂಧಿಸಿದ ಮೊತ್ತಮೊದಲಿನ ಅಂತರ್–ಸರಕಾರೀ ಸಂಸ್ಥೆಯಾಗಿದ್ದು, 1925ರಲ್ಲಿ ಜಿನೇವಾದಲ್ಲಿ ಸ್ಥಾಪನೆಯಾಗಿದೆ. 1969ರಲ್ಲಿ ಅಂತಾರಾಷ್ಟ್ರೀಯ ಶಿಕ್ಷಣ ಕಾರ್ಯಾಲಯವು ಸ್ವಾಯತ್ತತೆಯೊಂದಿಗೆ ಯುನೆಸ್ಕೊವಿನ ಅಖಂಡ ಭಾಗವಾಯಿತು. ಕಾರ್ಯಾಲಯದ ಪ್ರಮುಖ ಚಟುವಟಿಕೆಗಳೆಂದರೆ ಅಂತಾರಾಷ್ಟ್ರೀಯ ಶಿಕ್ಷಣ ಅಧಿವೇಶನಗಳ ತಯಾರಿ ಮತ್ತು ಸಂಘಟನೆ, ರಾಷ್ಟ್ರೀಯ ದೇಶಗಳು ಮತ್ತು

Digitised by Bharatavani, CIIL

ಪ್ರಾದೇಶಿಕ ಜಾಲಗಳೊಂದಿಗೆ ಸಹವರ್ತಿಯಾಗಿರುವ ಯುನೆಸ್ಕೊ ಕೇಂದ್ರಕಾರ್ಯಾಲಯಗಳು, ಪ್ರಾದೇಶಿಕ ಕಚೇರಿಗಳು ಮತ್ತು ಸಂಸ್ಥೆಗಳು ಮತ್ತು ಮಾಹಿತಿ ಕೇಂದ್ರಗಳ ಆಪ್ತ ಸಹಕಾರದೊಂದಿಗೆ ತೌಲನಿಕ ಶಿಕ್ಷಣದ ಅಂತಾರಾಷ್ಟ್ರೀಯ ಅಧ್ಯಯನ.

**ಶೈಕ್ಷಣಿಕ ಯೋಜನೆಯ ಅಂತಾರಾಷ್ಟ್ರೀಯ ಸಂಸ್ಥೆ (ಯುನೆಸ್ಕೊ ಇನ್‌ಸ್ಟಿಟ್ಯೂಟ್ ಫಾರ್ ಎಡ್ಯುಕೇಶನ್ (ಐಐಇಪಿ):**

ಉನ್ನತ ಮಟ್ಟದ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ಕೇಂದ್ರವಾಗಿರುವ ಶೈಕ್ಷಣಿಕ ಯೋಜನೆಯ ಅಂತಾರಾಷ್ಟ್ರೀಯ ಸಂಸ್ಥೆಯನ್ನು 1963ರಲ್ಲಿ ಪ್ಯಾರಿಸ್‌ನಲ್ಲಿ ಸ್ಥಾಪಿಸಲಾಯಿತು. ಇದು ಶೈಕ್ಷಣಿಕ ವಿಷಯಗಳ ಅಧ್ಯಯನಗಳು ಮತ್ತು ತರಬೇತಿ ಚಟುವಟಿಕೆಗಳ ಸಂಶೋಧನೆ ಮತ್ತು ಯೋಜನೆಯ ಕೇಂದ್ರಬಿಂದುವಾಗಿದೆ. ಐಐಇಪಿಯ ಮುಖ್ಯ ಕಾರ್ಯಗಳಲ್ಲಿ ಚಟುವಟಿಕೆಗಳ ವಿಕೇಂದ್ರೀಕರಣ, ಸಹಭಾಗಿತ್ವಗಳ ಬಲಪಡಿಸುವಿಕೆ, ಮತ್ತು ಒಕ್ಕೂಟ ಹಾಗೂ ಪ್ರಾದೇಶಿಕ ಮತ್ತು ಉಪ–ಪ್ರಾದೇಶಿಕ ಜಾಲಗಳನ್ನು ಸೃಷ್ಟಿಯಂತಹ ಸಹಭಾಗಿತ್ವ ಮತ್ತು ಅಂತಾರಾಷ್ಟ್ರೀಯ ಸಹಕಾರವನ್ನು ಬಲಪಡಿಸುವುದಾಗಿದೆ. ಐಐಇಪಿಗೆ ವೃತ್ತಿಪರ ಸಹಕಾರವಿರುವ ಅಂತಾರಾಷ್ಟ್ರೀಯ (ಸಹಕಾರಿ) ಗುಂಪುಗಳೆಂದರೆ– ಶಿಕ್ಷಣಕ್ಕೆ ಸಂಬಂಧಿಸಿದ ಅಂತಾರಾಷ್ಟ್ರೀಯ ಕಾರ್ಮಿಕ ಗುಂಪು (ಎಡಬ್ಲ್ಯೂಜಿಇ), ದಕ್ಷಿಣಾತ್ಯ ಶೈಕ್ಷಣಿಕ ಸಂಶೋಧನಾ ಪರಿಕ್ರಮ (ಎಸ್‌ಇಆರ್‌ಐ) ಮತ್ತು ಆಫ್ರಿಕಾದ ಶಿಕ್ಷಣ ಪ್ರಗತಿಯ ಅಸೋಶಿಯೇಶನ್ (ಎಡಿಇಎ) ಮತ್ತು ಶೈಕ್ಷಣಿಕ ಯೋಜನೆಯಲ್ಲಿ ತರಬೇತಿ ಮತ್ತು ಸಂಶೋಧನೆಯ ಏಷ್ಯಾದ ಜಾಲ (ಎಎನ್‌ಟಿಆರ್‌ಇಪಿ). ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಏಷ್ಯಾದ ಸಂಸ್ಥೆಗಳ ಅನುಭವಗಳನ್ನು ಹಂಚಿಕೊಳ್ಳುವ ಸಲುವಾಗಿ ಅವರೊಳಗೆ ಸಿನರ್ಜಿಯನ್ನು ಸೃಷ್ಟಿಸುವ ಸಲುವಾಗಿ 1995ರಲ್ಲಿ ಎಎನ್‌ಟಿಆರ್‌ಇಪಿಯನ್ನು ಸೃಷ್ಟಿಸಲಾಯಿತು.

**ಯುನೆಸ್ಕೊ ಶಿಕ್ಷಣ ಸಂಸ್ಥೆ (ಯುನೆಸ್ಕೊ ಇನ್‌ಸ್ಟಿಟ್ಯೂಟ್ ಫಾರ್ ಎಡ್ಯುಕೇಶನ್) (ಯುಐಇ):**

1951ರಲ್ಲಿ ಮಾನವ ಹಕ್ಕುಗಳಿಗೆ ಪ್ರೋತ್ಸಾಹ ನೀಡಲು ಮತ್ತು ಅಂತಾರಾಷ್ಟ್ರೀಯ ಅರಿವಿಗಾಗಿ ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿಯಲ್ಲಿ ಮೂರು ಅಂತಾರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಯುನೆಸ್ಕೊ ಸ್ಥಾಪಿಸಿತು. ಅವುಗಳೆಂದರೆ ಯುವಜನರಿಗಾಗಿ ಸಂಸ್ಥೆ, ಕೊಲೊನ್ ವಿಶ್ವವಿದ್ಯಾಲಯದಲ್ಲಿ ಸಮಾಜ ವಿಜ್ಞಾನದ ಸಂಸ್ಥೆ, ಮತ್ತು ತೌಲನಿಕ ಶಿಕ್ಷಣದ ಅಧ್ಯಯನ ಮತ್ತು ಶೈಕ್ಷಣಿಕ ಸಂಶೋಧನೆಯ ಉತ್ತೇಜನಕ್ಕಾಗಿ ಹ್ಯಾಮ್‌ಬರ್ಗ್‌ನಲ್ಲಿ ಒಂದು ಸಂಸ್ಥೆ. ಮೊದಲ ಎರಡು ಸಂಸ್ಥೆಗಳು 1960ರೊಳಗೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿದ್ದರೆ, ಫೆಡರಲ್ ರಿಪಬ್ಲಿಕ್ ಜರ್ಮನಿಗೆ ಶಿಕ್ಷಣ ಸಂಸ್ಥೆಯನ್ನು ಉಳಿಸಿಕೊಳ್ಳುವುದು ಬೇಕಾಯಿತು. ಬರ್ಲಿನ್ ಗೋಡೆಯ ಪತನವಾಗುವವರೆಗೆ ಇದು ಎರಡು ಜರ್ಮನಿಗಳ ನಡುವೆ ಸೇತುವೆಯಾಗಿ ಇತ್ತು. ಎಂಬತ್ತರ ದಶಕದ ನಂತರ ಅದರ ಗಮನವು ಅಭಿವೃದ್ಧಿಶೀಲ ರಾಷ್ಟ್ರಗಳ ಕಡೆಗೆ ಹರಿದಿದೆ. ಇವತ್ತಿನ ದಿನ, ಈ ಸಂಸ್ಥೆಯು ಬದುಕಿನುದ್ದದ ಶಿಕ್ಷಣದ ದೃಷ್ಟಿಕೋನದಿಂದ ವಯಸ್ಕ ಶಿಕ್ಷಣದ ಸಂಶೋಧನೆಯನ್ನು ನಡೆಸುವ ಜಾಲದ ಕೇಂದ್ರಭಾಗದಲ್ಲಿ ಇದೆ. 1999ರಲ್ಲಿ ಯುಐಇ ತನ್ನ ವಯಸ್ಕ ಶಿಕ್ಷಣದ ಅಂತಾರಾಷ್ಟ್ರೀಯ ಅಧಿವೇಶನವನ್ನು 'ವಯಸ್ಕ ಶಿಕ್ಷಣ, 21ನೇ ಶತಮಾನಕ್ಕೆ ಕೀಲಿಕೈ' ವಿಷಯವಾಗಿಸಿಕೊಂಡು ಹ್ಯಾಂಬರ್ಗ್‌ನಲ್ಲಿ ನಡೆಸಿದೆ.

**ಪ್ರಾದೇಶಿಕ ಸಹಕಾರಕ್ಕಾಗಿ ಯುನೆಸ್ಕೋ ಪ್ರಾದೇಶಿಕ ಯೋಜನಾನೀತಿಗಳು:**

ಯುನೆಸ್ಕೋ ಅಂತಾರಾಷ್ಟ್ರೀಯ ಚಟುವಟಿಕೆಗಳ ಆಯಾಮಗಳಲ್ಲಿ ಪ್ರಾದೇಶಿಕ ಸಹಕಾರವು ಒಂದಾಗಿದೆ. ಸಹಕಾರಕ್ಕಾಗಿ ಪ್ರಾದೇಶಿಕ ಯೋಜನಾನೀತಿಗಳನ್ನು ಶಿಕ್ಷಣ ಮಂತ್ರಿಗಳ ಅಧಿವೇಶನಗಳಿಂದ ಮತ್ತು ಆರ್ಥಿಕ ಪ್ರಗತಿಗೆ ಕಾರಣರಾದ ಮಂತ್ರಿಗಳು ಆಶಿಸಿದಂತೆ ನಡೆಸಲಾಗುತ್ತದೆ. ಕಲಾಶಿಕ್ಷಣದ ವಸ್ತುಸ್ಥಿತಿಯ ಮೇಲಿಂದ ರೂಪಿಸಲಾದ ಯೋಜನಾನೀತಿಗಳು ಆರ್ಥಿಕ ಅಭಿವೃದ್ಧಿಯ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣದ ವಿಕಾಸದಲ್ಲಿನ ಪರಸ್ಪರ ಆಸಕ್ತಿ ಮತ್ತು ಸಾಮಾನ್ಯ ಪ್ರವೃತ್ತಿ (ಒಲವು)ಯ ಪ್ರಮುಖ ವಿಚಾರಗಳಿಗೆ ಆಧಾರವಾಗಿರುತ್ತವೆ. ಮಂತ್ರಿಗಳ ಅಧಿವೇಶನಗಳಲ್ಲಿ ಸ್ಥಾಪಿಸಲಾದ ಸಂಪರ್ಕ ಮತ್ತು ಸಂಭಾಷಣೆಗಳು ಪ್ರಾದೇಶಿಕ ಸಹಕಾರಕ್ಕೆ ಹೆಚ್ಚಿಸುವ ಪ್ರಯತ್ನಗಳಿಂದ ಅನುಸರಿಸಲ್ಪಟ್ಟಿವೆ. ಮತ್ತು ಇದು ಎಲ್ಲಾ ಪ್ರದೇಶಗಳ ಯುನೆಸ್ಕೊ ಸಹಕಾರಕ್ಕೆ ಅವಕಾಶವನ್ನು ಒದಗಿಸಿದೆ. ಪ್ರಾದೇಶಿಕ ಶೈಕ್ಷಣಿಕ ಅಭಿವೃದ್ಧಿ ಯೋಜನೆಗಳ ರೂಪಣೆಗೆ ಇದು ದಾರಿ ಮಾಡಿಕೊಟ್ಟಿದೆ. ಪ್ರಾದೇಶಿಕ ಯೋಜನಾನೀತಿಗಳ ಬಳಕೆಯು, ಸ್ಥಳೀಯ ವಿಚಾರಗಳ ಕುರಿತು ಉತ್ತಮ ಜ್ಞಾನವನ್ನು ಹೊಂದಿರುವ ಆಶ್ವಾಸನೆಗಾಗಿ ಮತ್ತು ಕಾರ್ಯಕ್ರಮಗಳ ಸುಧಾರಿತ ಅನುಷ್ಠಾನ, ಹಾಗೂ ಪ್ರಾದೇಶಿಕ ನೆಲೆಯಲ್ಲಿ ಸದಸ್ಯ ರಾಷ್ಟ್ರಗಳ ನಡುವೆ ಸಹಕಾರವನ್ನು ಬಲಪಡಿಸುವುದಕ್ಕಾಗಿ ಮತ್ತು ರಾಷ್ಟ್ರೀಯ ಆಯೋಗಗಳೊಂದಿಗೆ ಸಂಪರ್ಕವನ್ನು ಒದಗಿಸುವುದಕ್ಕಾಗಿ ಪ್ರಾದೇಶಿಕ ಕಾರ್ಯಕ್ರಮಗಳು ಮತ್ತು ಯೋಜನೆಗಳು ಪ್ರಾರಂಭಗೊಳ್ಳುವ ಇವು ಕಾರಣವಾಗಿವೆ. ಯುನೆಸ್ಕೋ ಯೋಜನಾನೀತಿಯಾಧಾರಿತ ಪ್ರಾದೇಶಿಕ ಕಾರ್ಯಾಚರಣೆಯು ಪ್ರಾದೇಶಿಕವಾಗಿ ಚಟುವಟಿಕೆಗಳನ್ನು ಮತ್ತು ಜಾಲಗಳನ್ನು ಸೃಷ್ಟಿಸುವ ಮೂಲಕ ನಡೆಯುತ್ತವೆ. ಹೀಗೆ ಸೃಷ್ಟಿಯಾದ ಜಾಲಗಳೆಂದರೆ ಏಶ್ಯನ್ ಪ್ರೋಗ್ರಾಮ್ ಆಫ್ ಎಡ್ಯುಕೇಶನ್ ಇನ್ನೊವೇಶನ್ ಫಾರ್ ಡೆವಲಪ್‌ಮೆಂಟ್ (ಎಪಿಇಐಡಿ), ಕೊಆಪರೇಶನ್ ಇನ್ ರಿಸರ್ಚ್ ಆಂಡ್ ಡೆವಲಪ್‌ಮೆಂಟ್ ಫಾರ್ ಇನ್ನೊವೇಶನ್ ಇನ್ ಸೌತ್–ಈಸ್ಟ್ ಯುರೋಪ್ (ಸಿಒಡಿಐಇಎಸ್‌ಇಇ), ನೆಟವರ್ಕ್ ಆಫ್ ಎಡ್ಯುಕೇಶನಲ್ ಇನ್ನೊವೇಶನ್ ಫಾರ್ ಡೆವಲಪೆಂಟ್ ಇನ್ ಆಫ್ರಿಕಾ (ಎನ್‌ಇಐಡಿಎ), ಕ್ಯಾರಿಬಿಯನ್ ನೆಟ್‌ವರ್ಕ್ ಆಫ್ ಎಡ್ಯುಕೇಶನಲ್ ಇನ್ನೊವೇಶನ್ ಫಾರ್ ಡೆವಲಪ್‌ಮೆಂಟ್ ಇನ್ ಆಫ್ರಿಕಾ (ಎನ್‌ಇಐಡಿ) ಮತ್ತು ಎಡ್ಯುಕೇಶನಲ್ ಇನ್ನೊವೇಶನ್ ಪ್ರೋಗ್ರಾಮ್ ಫಾರ್ ಡೆವಲಪ್‌ಮೆಂಟ್ ವಿತ್ ಅರಬ್ ಸ್ಟೇಟ್ಸ್

Digitised by Bharatavani, CIIL

(ಇಐಪಿಇಡಿಎಎಸ್). ಪ್ರಾದೇಶಿಕ ಯೋಜನಾನೀತಿಗಳು ಪ್ರತಿಯೊಂದು ಪ್ರದೇಶದ ಅಗತ್ಯ ಮತ್ತು ಕಾಳಜಿಯನ್ನು ಆಧರಿಸಿದ್ದರೆ, ಶಿಕ್ಷಣಕ್ಕಾಗಿ ಯುನೆಸ್ಕೋ ಯೋಜನಾನೀತಿಗಳನ್ನು ಅಭಿವೃದ್ಧಿಪಡಿಸಿದ ಪ್ರಮುಖ ಪ್ರದೇಶಗಳೆಂದರೆ : ಉಪ–ದಕ್ಷಿಣಾತ್ಯ ಆಫ್ರಿಕಾ, ಮತ್ತು ಪೆಸಿಫಿಕ್, ಲ್ಯಾಟಿನ್ ಅಮೆರಿಕಾ ಮತ್ತು ಕ್ಯಾರಿಬಿಯನ್, ಅರಬ್ ರಾಷ್ಟ್ರಗಳು ಮತ್ತು ಯುರೋಪ್ ಮತ್ತು ಉತ್ತರ ಅಮೆರಿಕ.

**ಅಂತಾರಾಷ್ಟ್ರೀಯ ಸರಕಾರೇತರ ಸಂಸ್ಥೆಗಳೊಂದಿಗೆ ಸಹಕಾರ (ಎನ್‌ಜಿಒಗಳು):**

ಯುನೆಸ್ಕೋ, ವ್ಯಾಪಕವಾದ ಮತ್ತು ವೈವಿಧ್ಯಪೂರ್ಣ ಸ್ವರೂಪದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದನ್ನು ನಿರೀಕ್ಷಿಸುವುದು ಸಾಧ್ಯವಿಲ್ಲವೆಂಬುದನ್ನು ಮನಗಂಡು, ಸಂಸ್ಥೆಯ ಶಿಕ್ಷಣ ಕಾರ್ಯಕ್ರಮದ ರೂಪಣೆಯಲ್ಲಿ ಭಾಗವಹಿಸಲು ಎನ್‌ಜಿಒಗಳಂತಹ ಇತರ ವಿಶೇಷ ಏಜೆನ್ಸಿಗಳಿಂದ ಸಹಕಾರ ಮತ್ತು ಸಹಯೋಗವನ್ನು ಪಡೆಯುತ್ತದೆ. ಇವುಗಳಲ್ಲಿ ಅತ್ಯಂತ ಮುಖ್ಯವಾದುದು ಅಂತಾರಾಷ್ಟ್ರೀಯ ಮಕ್ಕಳ ಸಮುದಾಯಗಳ ಕೂಟ (ಇಂಟರ್‌ನ್ಯಾಶನಲ್ ಫೆಡರೇಶನ್ ಆಫ್ ಚಿಲ್ಡ್ರನ್ಸ್ ಕಮ್ಯೂನಿಟಿಸ್ (ಐಎಫ್‌ಸಿಸಿ) ಮತ್ತು ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಸಂಘ (ಇಂಟರ್‌ನ್ಯಾಶನಲ್ ಅಸೋಸಿಯೇಶನ್ ಆಫ್ ಯೂನಿವರ್ಸಿಟಿಸ್ ಐಎಯು), 1950ರಲ್ಲಿ ಇಂಟರ್‌ನ್ಯಾಶನಲ್ ಕೌನ್ಸಿಲ್ ಆಫ್ ಸೈಂಟಿಫಿಕ್ ಯೂನಿಯನ್ (ಐಸಿಎಸ್‌ಯು) ಸಹಕಾರ ಒಪ್ಪಂದಕ್ಕೆ ಸಹಿ ಹಾಕಿತು. ನಂತರ, ವರ್ಲ್ಡ್ ಆರ್ಗನೈಸೇಶನ್ ಚೈಲ್ಡ್ ಹುಡ್ ಎಡ್ಯುಕೇಶನ್ (ಡಬ್ಲ್ಯುಒಇಸಿಇ), ಇಂಟರ್‌ನ್ಯಾಶನಲ್ ಕೌನ್ಸಿಲ್ ಫಾರ್ ಅಡಲ್ಟ್ ಎಡ್ಯುಕೇಶನ್ (ಐಸಿಎಇ) ಮತ್ತು ಅಂತಾರಾಷ್ಟ್ರೀಯ ಶಿಕ್ಷಣವನ್ನು ರೂಪಿಸುವುದಕ್ಕಾಗಿ ಇತ್ತೀಚೆಗೆ ಸೇರಿಕೊಂಡಿರುವ ಅನೇಕ ಶಿಕ್ಷಕರ ಒಕ್ಕೂಟಗಳು ಯುನೆಸ್ಕೊದೊಂದಿಗೆ ಸಹಕಾರದಲ್ಲಿ ಕೈಜೋಡಿಸಿಕೊಂಡಿವೆ. ಸದ್ಯ, ಶಿಕ್ಷಣದ ಅಭಿವೃದ್ಧಿಗಾಗಿ ಮತ್ತು ಯುನೆಸ್ಕೊದೊಂದಿಗೆ ಸಹಭಾಗಿತ್ವ, ಸಮಾಲೋಚಕ ಅಥವಾ ಕ್ರಿಯಾತ್ಮಕ ಸಂಬಂಧಕ್ಕಾಗಿ ಸುಮಾರು ನೂರು ಸರಕಾರೇತರ ಸಂಸ್ಥೆಗಳು (ಎನ್‌ಜಿಒಗಳು) ಕಾರ್ಯನಿರತವಾಗಿವೆ. ಎನ್‌ಜಿ ಒಗಳೊಂದಿಗೆ ಸಹಕಾರದ ವಿಧಾನವನ್ನು ಯುನೆಸ್ಕೊ ರೂಪಿಸಿದೆ. ವಾರ್ತಾಪತ್ರಗಳ ಪ್ರಕಟಣೆ ಮತ್ತು ದಾಖಲೀಕರಣದ ಸೇವೆಗಳಿಗಾಗಿ ಅದು ಸಹಯಧನವನ್ನು ಸೀಮಿತ ಸಂಖ್ಯೆಯ ಎನ್‌ಜಿಒಗಳಿಗೆ ಮಂಜೂರು ಮಾಡುತ್ತದೆ. ವಿವಿಧ ಅಧ್ಯಯನಗಳು, ತರಬೇತಿ ಅಥವಾ ಮಾಹಿತಿ ಸಂಬಂಧಿತ ಚಟುವಟಿಕೆಗಳನ್ನು ನಡೆಸುವುದರ ಮೂಲಕ ಅಥವಾ ಹೆಚ್ಚುವರಿ ಆಯವ್ಯಯ ಯೋಜನೆಗಳ ನೈಜ ಅನುಷ್ಠಾನದಲ್ಲಿ ಭಾಗವಹಿಸುವುದರ ಮೂಲಕ ಕೂಡಾ ಯುನೆಸ್ಕೊ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕೊಡುಗೆ ನೀಡಲು ಎನ್‌ಜಿಒಗಳಿಗೆ ಅದು ಅವಕಾಶವನ್ನು ನೀಡಿದೆ.

**ಅಂತರ್‌ಸರಕಾರಿ ಸಂಸ್ಥೆಗಳು ಮತ್ತು ಖಾಸಗಿ ವಲಯದೊಂದಿಗೆ ಯುನೆಸ್ಕೊ ಸಹಕಾರ:**

ವಿಶ್ವಸಂಸ್ಥೆಯ ಒಂದು ಭಾಗವಾಗಿ ಯುನೆಸ್ಕೊ ತನ್ನ ಆದರ್ಶ ಧ್ಯೇಯಗಳನ್ನು ಮತ್ತು ತನ್ನ ಸಾಮಾನ್ಯ ಗುರಿಯನ್ನು ಹಂಚಿಕೊಳ್ಳುತ್ತದೆ. ಅದು ವಿಶ್ವಸಂಸ್ಥೆಯ ಒಳಗಿನ ಇತರ ವಿಶೇಷಜ್ಞ ಏಜೆನ್ಸಿಗಳೊಂದಿಗೆ ಅನೇಕ ವಿಧದ ಸಹಕಾರಿ ಸಂಬಂಧಗಳನ್ನು ಕಾಪಾಡಿಕೊಂಡು ಬರುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದ ಅದರಲ್ಲಿಯೂ ವಿಶೇಷವಾಗಿ ಮೂಲಭೂತ ಶಿಕ್ಷಣಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಚಾರದಲ್ಲಿ ಯುನೆಸ್ಕೊ ಪ್ರಮುಖ ಆಗಿರುತ್ತದೆ. ವಿಶ್ವಸಂಸ್ಥೆಯ ಆದ್ಯತಾ ಆಫ್ರಿಕಾ ಕಾರ್ಯಕ್ರಮದಲ್ಲಿ (1996) ನ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಲ್ಲಿ ಅದು ನೇತಾರವಾಗಿ ಕಾರ್ಯನಿರ್ವಹಿಸುತ್ತದೆ. ಇತ್ತೀಚೆಗೆ ಸಾಂಕ್ರಾಮಿಕ ರೋಗವಾದ ಏಡ್ಸ್‌ನ ಹಬ್ಬುವಿಕೆಯನ್ನು ತಡೆಯುವುದಕ್ಕೆ ಸಹಾಯ ನೀಡುವ ಸಲುವಾಗಿ ಯುನೆಸ್ಕೊ ತನ್ನ ಜಗತ್ತಿನಾದ್ಯಂತದ ಮಾಹಿತಿ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ವಿಶ್ವಸಂಸ್ಥೆಯ ಹೊರಗಿನ ಸುಮಾರು 140 ಅಂತರ್‌ಸರಕಾರಿ, ಅಂತರ್–ಪ್ರಾದೇಶಿಕ, ಪ್ರಾದೇಶಿಕ, ಮತ್ತು ಉಪ ಪ್ರಾದೇಶಿಕ ಸಂಸ್ಥೆಗಳೊಂದಿಗೆ ಯುನೆಸ್ಕೊ ಸಮಾಲೋಚನೆ ಮತ್ತು ಸಹಕಾರವನ್ನು ನಡೆಸುತ್ತದೆ. ಅದು ಜಂಟಿ ಯೋಜನೆಗಳನ್ನು ಕೈಗೊಳ್ಳುತ್ತದೆ ಮತ್ತು ಮಾಹಿತಿ ಮತ್ತು ದಾಖಲೀಕರಣದ ಪರಸ್ಪರ ಆಸಕ್ತಿ ಮತ್ತು ವಿನಿಮಯಗಳ ಪ್ರಶ್ನೆಗಳ ಸಮಾಲೋಚನೆಯನ್ನು ನಡೆಸುತ್ತದೆ.

ಯುನೆಸ್ಕೊ ಮತ್ತು ಖಾಸಗಿ ಏಜೆನ್ಸಿಗಳೊಂದಿಗಿನ ಸಹಕಾರಕ್ಕೆ ದೀರ್ಘ ಇತಿಹಾಸವಿದೆ. ಇದಕ್ಕೆ ದೃಷ್ಟಾಂತಕಾರಕ ಉದಾಹರಣೆಯೆಂದರೆ ಐಐಇಪಿಯನ್ನು ಸೃಷ್ಟಿಸುವುದರಲ್ಲಿ ಮತ್ತು ಐಡಬ್ಯುಜಿಇಯನ್ನು ಸ್ಥಾಪಿಸುವುದರಲ್ಲಿ ರಾಕ್‌ಫೆಲ್ಲರ್ ಪ್ರತಿಷ್ಠಾನ ಮತ್ತು ಫೋರ್ಡ್ ಪ್ರತಿಷ್ಠಾನದ ದೇಣಿಗೆಯಾಗಿದೆ. ಪ್ರಾರಂಭಿಕ ಬಾಲ್ಯಶಿಕ್ಷಣ, ಪರಿಸರ ಶಿಕ್ಷಣ ಮತ್ತು ಮಾನವ ಹಕ್ಕುಗಳ ಕ್ಷೇತ್ರಗಳಲ್ಲಿ ಖಾಸಗಿ ವಲಯದ ಇತರ ಅನೇಕ ಏಜೆನ್ಸಿಗಳೊಂದಿಗೆ ಸಹಯೋಗವಿದೆ. ಇತ್ತೀಚಿನ ಬೆಳವಣಿಗೆಯೊಂದರಲ್ಲಿ ಸದಸ್ಯ ರಾಷ್ಟ್ರಗಳಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ನೀಡಲು ವಾಣಿಜ್ಯ ಸಂಸ್ಥೆಗಳೊಂದಿಗೆ ಸಂಬಂಧಗಳನ್ನು ಸ್ಥಾಪಿಸುವುದು; ಅಮೇರಿಕಾದ ಕಂಪೆನಿಯೊಂದರಿಂದ ಕುಟುಂಬ ಶಿಕ್ಷಣದ ಕುರಿತಾದ ಅಂತಾರಾಷ್ಟ್ರೀಯ ವಿಚಾರಗೋಷ್ಠಿಗಳಿಗೆ ಆರ್ಥಿಕ ಸಹಾಯವನ್ನು ನೀಡುವುದಕ್ಕಾಗಿ ಯುನೆಸ್ಕೊ ವಾಣಿಜ್ಯ ಸಂಸ್ಥೆಗಳೊಂದಿಗೆ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಲು ಬದ್ಧವಾಗಿದೆ. ಈ ರೀತಿಯ ಎರಡು ತಂತ್ರಜ್ಞಾನಗಳೆಂದರೆ, ಗೇಟ್‌ವೇ ಎಡ್ಯುಕೇಶನಲ್ ಪ್ರೊಡಕ್ಟ್ಸ್ ಮತ್ತು ಹೊಸ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಶೈಕ್ಷಣಿಕ ಅನ್ವಯಕ್ಕಾಗಿ ಇಂಟರ್‌ನ್ಯಾಶನಲ್ ಬಿಸಿನೆಸ್ ಮೆಶೀನ್ (ಐಬಿಎಮ್)ನ ನೆರವು.

**ಶಿಕ್ಷಣಕ್ಕೆ ನೆರವು:** ಯುನೆಸ್ಕೊ ಆರ್ಥಿಕ ಏಜೆನ್ಸಿಯಾಗಿರದಿದ್ದರೂ, ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳನ್ನು ಶೇಖರಿಸಲು ಅದು

Digitised by Bharatavani, CIIL

ಪ್ರಯತ್ನಗಳನ್ನು ನಡೆಸುತ್ತದೆ. ಅನೇಕ ಅಭಿವೃದ್ಧಿಶೀಲ ಏಜೆನ್ಸಿಗಳಲ್ಲಿ ಶಿಕ್ಷಣದ ಉದ್ದೇಶಗಳನ್ನು ಅದು ಪ್ರೋತ್ಸಾಹಿಸಿದೆ. ಶಿಕ್ಷಣಕ್ಕಾಗಿ ಜಾಗತಿಕ ನೆರವಿನ ಪ್ರಮಾಣವನ್ನು ಹೆಚ್ಚಿಸುವ ಪ್ರತಿಯೊಂದು ಪ್ರಯತ್ನವನ್ನು ಅದು ನಡೆಸುತ್ತದೆ. ಶಿಕ್ಷಣಕ್ಕಾಗಿ ನೆರವನ್ನು ನಿಯಮಿತ ಕಾರ್ಯಕ್ರಮದ ಆಯವ್ಯಯ (ಬಜೆಟ್)ದಲ್ಲಿ ಮತ್ತು ಹೆಚ್ಚುವರಿ ಆಯವ್ಯಯ (ಬಜೆಟ್) ಸಂಪನ್ಮೂಲಗಳಲ್ಲಿ ನಿಗದಿಪಡಿಸಲಾಗಿದೆ. ಯುನೆಸ್ಕೋ ಬಜೆಟ್‌ನಲ್ಲಿ ನಿಗದಿಪಡಿಸಿರುವುದರಿಂದ ನಿಯಮಿತ ಕಾರ್ಯಕ್ರಮದ ಆಯವ್ಯಯ ಬರುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಶಿಕ್ಷಣದ ಪ್ರಗತಿಗಾಗಿ ಕೆಲವು ರಾಷ್ಟ್ರಗಳಿಂದ ಮತ್ತು ಸಂಸ್ಥೆಗಳಿಂದ ಹೆಚ್ಚುವರಿ ಆಯವ್ಯಯದ ನೆರವು ದೊರೆಯುತ್ತದೆ. ಹೆಚ್ಚುವರಿ ಆಯವ್ಯಯದ ನಿಧಿಯ ಮುಖ್ಯ ಗಮನವು ರಾಷ್ಟ್ರೀಯ ಸಹಭಾಗಿಗಳಿಗೆ ತರಬೇತಿ ನೀಡುವುದಾಗಿದೆ. ಸಹಕಾರದ ಪ್ರಮುಖ ವಿಧಾನವು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- **ಶೈಕ್ಷಣಿಕ ಯೋಜನೆ:** ಜಾಗತಿಕ ಬ್ಯಾಂಕ್‌ನೊಂದಿಗಿನ ಒಪ್ಪಂದಗಳನ್ನು ಅನುಸರಿಸಿ ಯೋಜನಾ ತಯಾರಿ ಮಂಡಲಿಗಳನ್ನು ಅಣಿಗೊಳಿಸಲಾಗುತ್ತದೆ. ಮತ್ತು ವಲಯ ಅಧ್ಯಯನಗಳನ್ನು ನಡೆಸಲಾಗುತ್ತದೆ. ಯೋಜನಾ ಘಟಕಗಳನ್ನು ಸ್ಥಾಪಿಸಲಾಗುತ್ತದೆ ಮತ್ತು ಆಡಳಿತ ಸಿಬ್ಬಂದಿಗಳಿಗೆ ಪ್ರಾದೇಶಿಕ ಸಂಸ್ಥೆಗಳಲ್ಲಿ ಮತ್ತು ಐಐಇಪಿಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ.

- **ಕಾರ್ಯಾತ್ಮಕ ಸಾಕ್ಷರತೆ (ಕಾರ್ಯ ನಡೆಸುವಿಕೆ ಮತ್ತು ಉದ್ಯೋಗ ಸಂತೃಪ್ತಿಯನ್ನು ಅಭಿಪ್ರೇರಕಗಳಾಗಿ ಇಟ್ಟುಕೊಂಡ ದೃಷ್ಟಿಕೋನದಲ್ಲಿ):** ಯುಎನ್‌ಡಿಪಿ ಪ್ರಾಯೋಗಿಕ ಜಾಗತಿಕ ಸಾಕ್ಷರತಾ ಕಾರ್ಯಕ್ರಮಕ್ಕೆ ಸುಮಾರು 50 ಮಿಲಿಯ ಡಾಲರ್‌ಗಳನ್ನು ನೀಡಿದೆ. ಇದರಿಂದ 12 ದೇಶಗಳಿಗೆ ಲಾಭವಾಗಿದೆ.

- **ಶಿಕ್ಷಕರ ತರಬೇತಿ:** ಶಿಕ್ಷಕ ತರಬೇತಿಗಾಗಿ ಕಾಲೇಜುಗಳನ್ನು (ಪ್ರಾಥಮಿಕ, ಉನ್ನತ ಮತ್ತು ತಾಂತ್ರಿಕ) ಸೃಷ್ಟಿಸಲು ಮತ್ತು ಅಭಿವೃದ್ಧಿಪಡಿಸಲು ಬೆಂಬಲ ನೀಡುವುದು. ಕಳೆದ 25 ವರ್ಷಗಳಲ್ಲಿ ಅಭಿವೃದ್ಧಿ ರಾಷ್ಟ್ರಗಳಲ್ಲಿ ಪ್ರತಿವರ್ಷ 4,000 ಶಿಕ್ಷಕರಿಗೆ ತರಬೇತಿಯನ್ನು ನೀಡಲು ಯುನೆಸ್ಕೊ ನೆರವಾಗಿದೆ. ಈ ಪ್ರಯತ್ನದ ಫಲವೆಂದರೆ ಇವತ್ತಿನ ದಿನ ಸುಮಾರು ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳು ಬಾಹ್ಯ ತಾಂತ್ರಿಕ ಸಹಾಯವನ್ನು ಯಾಚಿಸುವ ಅವಕಾಶವಿಲ್ಲದಂತೆ ತಮ್ಮ ಸ್ವಂತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ತರಬೇತಿಯನ್ನು ನೀಡುವುದು ಸಾಧ್ಯವಾಗಿದೆ.

- **ತಂತ್ರಜ್ಞರು ಮತ್ತು ಇಂಜಿನಿಯರುಗಳ ತರಬೇತಿ ನೀಡುವಿಕೆ:** ತಾಂತ್ರಿಕ ಶಾಲೆ ಮತ್ತು ವಿಜ್ಞಾನ ವಿಶ್ವವಿದ್ಯಾಲಯಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಯುನೆಸ್ಕೊ ಬೆಂಬಲ ನೀಡುತ್ತದೆ.

- **ಪಠ್ಯಕ್ರಮಗಳಲ್ಲಿ ಸುಧಾರಣೆ:** ಪಠ್ಯಕ್ರಮಗಳಲ್ಲಿ ಸುಧಾರಣೆಯನ್ನು ಉಂಟುಮಾಡುವುದರಲ್ಲಿ ಯುನೆಸ್ಕೊ ಪಾಲುಗೊಳ್ಳುತ್ತದೆ. ಅದರಲ್ಲಿಯೂ ವಿಶೇಷವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಬೋಧನೆ ಪಠ್ಯಕ್ರಮ ಅಭಿವೃದ್ಧಿ ಕೇಂದ್ರಗಳು ಮತ್ತು ಶಿಕ್ಷಣತಜ್ಞರು ತರಬೇತಿಯನ್ನು ಸ್ಥಾಪಿಸುವುದರಲ್ಲಿ ಬೆಂಬಲವನ್ನು ನೀಡುವುದು; ಶಾಲಾ ಪಠ್ಯಪುಸ್ತಕಗಳ ವಿನ್ಯಾಸ ಮತ್ತು ಉತ್ಪಾದನೆಯಲ್ಲಿ ನೆರವಾಗುವುದು.

- **ಹೊಸ ಶಿಕ್ಷಣ ತಂತ್ರಜ್ಞಾನಗಳು:** ಯುನೆಸ್ಕೋ ಕಾರ್ಯಸೂಚಿಯಲ್ಲಿ ಶಿಕ್ಷಣಕ್ಕಾಗಿ ಶ್ರವ್ಯ-ದೃಶ್ಯ ಮಾಧ್ಯಮವನ್ನು ಅಭಿವೃದ್ಧಿಪಡಿಸುವುದು ಮತ್ತು ರೇಡಿಯೋ ಮತ್ತು ಟೆಲಿವಿಶನ್‌ಗಳನ್ನು ಬಳಸಿಕೊಳ್ಳುವುದು ಇವೆ.

- **ಶಾಲಾ ಕಟ್ಟಡ:** ಅಗತ್ಯಗಳನ್ನು ಮತ್ತು ಆರ್ಥಿಕ ಸಂದರ್ಭಗಳನ್ನು ಅನುಸರಿಸಿ ಶಿಕ್ಷಣ ಸ್ಥಳಾವಕಾಶಗಳನ್ನು ನಿರ್ಮಿಸುವುದು, ಸದಸ್ಯ ರಾಜ್ಯಗಳಲ್ಲಿ ವಿಶೇಷತಮ ಘಟಕಗಳನ್ನು ಸೃಷ್ಟಿಸಲು ಬೆಂಬಲ ನೀಡುವುದು, ಜೊತೆಗೆ ಪ್ರಾದೇಶಿಕ ಕೇಂದ್ರಗಳಲ್ಲಿ ಸಿಬ್ಬಂದಿಗಳಿಗೆ ತರಬೇತಿ ನೀಡುವುದು.

**ಯುನೆಸ್ಕೊ ಸಹಭಾಗಿತ್ವದ ಕಾರ್ಯಕ್ರಮಗಳು:** ಸದಸ್ಯ ರಾಜ್ಯಗಳು ಮತ್ತು ವಿಭಿನ್ನ ಸಂಘಟನೆಗಳು ಮತ್ತು ಸಂಸ್ಥೆಗಳು ನಡೆಸತಕ್ಕಂತಹ ಚಟುವಟಿಕೆಗಳಲ್ಲಿ ತಾನು ತೊಡಗಿಸಿಕೊಳ್ಳುವ ಸಲುವಾಗಿ ಯುನೆಸ್ಕೊ ಸಹಭಾಗಿತ್ವದ ಕಾರ್ಯಕ್ರಮಗಳನ್ನು ಸೃಷ್ಟಿಸಿದೆ. ಸದಸ್ಯ ರಾಜ್ಯಗಳ ನಡುವೆ ಅಥವಾ ಎನ್‌ಜಿಒ ಮತ್ತು ಯುನೆಸ್ಕೊ ನಡುವಿನ ಪಾಲುದಾರಿಕೆಯನ್ನು ಬಲಪಡಿಸುವುದಕ್ಕಾಗಿ ವಿನ್ಯಾಸಗೊಳಿಸಲಾದ ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಪರಸ್ಪರ ತಮ್ಮ ಕೊಡುಗೆಯನ್ನು ನೀಡುವುದರ ಮೂಲಕ, ಈ ಸಹಭಾಗಿತ್ವದ ಈ ರೀತಿ ವಿಭಿನ್ನ ಸ್ವರೂಪದಲ್ಲಿ ಕಾಣಿಸಿಕೊಳ್ಳಬಹುದಾಗಿದೆ; ವಿಶೇಷಜ್ಞತೆ ಅಥವಾ ಸಹಭಾಗಿತ್ವಗಳಿಗೆ ಅಥವಾ ಉಪಕರಣ ಅಥವಾ ದಾಖಲಾತಿಗೆ ಅವಕಾಶವನ್ನು ಒದಗಿಸುವುದು; ಸಭೆಗಳು, ಅಧಿವೇಶನಗಳು, ವಿಚಾರಗೋಷ್ಠಿಗಳು ಅಥವಾ ತರಬೇತಿ ಕೋರ್ಸ್‌ಗಳನ್ನು (ಭಾಷಾಂತರ ಮತ್ತು ಅರ್ಥ ವ್ಯಾಖ್ಯಾನ ಸೇವೆಗಳು, ಪ್ರವಾಸ ಅಥವಾ ಸಹಭಾಗಿಗಳು ಅಥವಾ ಸಮಾಲೋಚಕರೂ, ಸಾಮಾನ್ಯ ಒಪ್ಪಿಗೆಯ ಮೇರೆಗೆ ಅಗತ್ಯವೆಂದು ಪರಿಗಣಿಸಲ್ಪಟ್ಟ ಸೇವೆಗಳು) ನಡೆಸುವುದು. ಈ ಸಹಕಾರವು ಯುನೆಸ್ಕೊ ಮತ್ತು ಇತರ ಸರಕಾರಗಳೊಂದಿಗೆ ಅಥವಾ ಅಂತರ್ ಸರಕಾರಿ ಸಂಸ್ಥೆಗಳು ಅಥವಾ ಅಂತಾರಾಷ್ಟ್ರೀಯ ಸರಕಾರೇತರ ಸಂಘಟನೆಗಳು ಅಥವಾ ಸಂಬಂಧಪಟ್ಟ ಸಂಸ್ಥೆಗಳ ನಡುವೆ ಪರಸ್ಪರ ಒಪ್ಪಂದವನ್ನು ಆಧರಿಸಿ ಇರುತ್ತದೆ. ಈ ಒಪ್ಪಂದಗಳನ್ನು ಯುನೆಸ್ಕೊಗಾಗಿ ರಾಷ್ಟ್ರೀಯ ಆಯೋಗವಾಗಿ ಕಲ್ಪಿಸಿ ತೀರ್ಮಾನಿಸಿಕೊಳ್ಳಬಹುದಾಗಿದೆ. ಈ ಕುರಿತು ಬೇಡಿಕೆಯನ್ನು ಮುಂದಿಡುವ ಸದಸ್ಯ ರಾಜ್ಯ ಸರಕಾರ ಅಥವಾ ಸದಸ್ಯರಿಂದ ಅಧಿಕಾರವನ್ನು ಪಡೆದಾಗ ಇದು ಸಾಧ್ಯವಾಗುತ್ತದೆ. ಸಹಭಾಗಿತ್ವದ ಕಾರ್ಯಕ್ರಮದ ಕೆಳಗೆ ನೆರವನ್ನು ಹೀಗೆ ಪಡೆಯಬಹುದು.

(ಅ) **ಸದಸ್ಯ ರಾಜ್ಯಗಳು ಅಥವಾ ಸಹ ಸದಸ್ಯರು:** ರಾಷ್ಟ್ರೀಯ ರೂಪದ ಚಟುವಟಿಕೆಗಳನ್ನು ಉತ್ತೇಜಿಸಲು, ಉಪ-ಪ್ರಾದೇಶಿಕ,

Digitised by Bharatavani, CIIL

ಪ್ರಾದೇಶಿಕ ಅಥವಾ ಅಂತರ್–ಪ್ರಾದೇಶಿಕ ರೂಪದ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ತಮ್ಮ ರಾಷ್ಟ್ರೀಯ ಆಯೋಗದಿಂದ ಬೇಡಿಕೆಯನ್ನು ಸಲ್ಲಿಸುವುದರ ಮೂಲಕ. ಈ ಬೇಡಿಕೆಗಳನ್ನು ಯಾರ ಪ್ರದೇಶದಲ್ಲಿ ಇದನ್ನು ನಡೆಸಬೇಕಾಗಿದೆಯೋ ಆ ಪ್ರದೇಶದ ಸದಸ್ಯ ರಾಜ್ಯಗಳಿಗೆ ಅಥವಾ ಸಹ ಸದಸ್ಯರಿಗೆ ರಾಷ್ಟ್ರೀಯ ಆಯೋಗವು ಮಂಡಿಸುವುದು. ಈ ಬೇಡಿಕೆಗಳನ್ನು ಬೇರೆ ಸಹಭಾಗಿ ಸದಸ್ಯ ರಾಜ್ಯಗಳ ಅಥವಾ ಸಹ ಸದಸ್ಯರಿಗೆ ರಾಷ್ಟ್ರೀಯ ಆಯೋಗವು ಮಂಡಿಸುವುದು. ಈ ಬೇಡಿಕೆಗಳನ್ನು ಬೇರೆ ಸಹಭಾಗಿ ಸದಸ್ಯ ರಾಜ್ಯಗಳ ಅಥವಾ ಸಹಸದಸ್ಯರ ಕನಿಷ್ಟ ಎರಡು ರಾಷ್ಟ್ರೀಯ ಆಯೋಗಗಳು ಬೆಂಬಲಿಸಬೇಕಾಗುತ್ತದೆ.

**(ಆ) ರಾಷ್ಟ್ರೀಯ ಸಂಸ್ಥೆ:** ಯಾರ ವ್ಯಾಪ್ತಿ ಪ್ರದೇಶದಲ್ಲಿ ಅದು ಇರುವುದೋ ಆ ಪ್ರದೇಶದ ಸದಸ್ಯ ರಾಜ್ಯ ಅಥವಾ ಸಹ ಸದಸ್ಯರ ರಾಷ್ಟ್ರೀಯ ಆಯೋಗದ ಬೇಡಿಕೆಯ ಮೇರೆಗೆ.

**(ಇ) ಅಂತರ್ ಸರಕಾರಿ ಸಂಸ್ಥೆ:** ಇದು ಯುನೆಸ್ಕೊ ಸಹಕಾರಿ ಒಪ್ಪಂದಕ್ಕೆ ಸಹಿ ಹಾಕಿರಬೇಕಾಗಿರುತ್ತದೆ. ಇದರಲ್ಲಿ ಸಹಭಾಗಿತ್ವಕ್ಕೆ ಸಂಬಂಧಿಸಿದ ಚಟುವಟಿಕೆಗಳು ಅನೇಕ ಸದಸ್ಯರ ರಾಜ್ಯಗಳ ನೇರ ಆಸಕ್ತಿಯನ್ನು ಹೊಂದಿರುತ್ತದೆ.

**(ಈ) ಸ್ವ–ಅಧಿಕಾರೇತರ ಅಥವಾ ವಿಶ್ವಸ್ಥ ಸಮಿತಿ:** ವ್ಯಾಪ್ತಿ ಪ್ರದೇಶದ ಬಾಹ್ಯ ಸಂಬಂಧಗಳ ನಿರ್ವಹಣೆಗೆ ಜವಾಬ್ದಾರಿಯಾದ ಸದಸ್ಯ ರಾಜ್ಯದ ರಾಷ್ಟ್ರೀಯ ಆಯೋಗದ ಬೇಡಿಕೆಯ ಮೇರೆಗೆ.

**(ಉ) ಅಂತರ್‌ರಾಷ್ಟ್ರೀಯ ಸರಕಾರೇತರ ಸಂಸ್ಥೆ:** ಯುನೆಸ್ಕೋ ಜೊತೆಗಿನ ತನ್ನ ಹಿಂದಿನ ಸಂಬಂಧಗಳನ್ನು ಕಾಪಾಡಿಕೊಂಡು, ಯೋಜಿತ ಚಟುವಟಿಕೆಗಳನ್ನು ನಡೆಸಬೇಕಾಗಿರುವ ವ್ಯಾಪ್ತಿ ಪ್ರದೇಶದ ಸದಸ್ಯ ರಾಜ್ಯ ಅಥವಾ ಸಹ ಸದಸ್ಯರ ರಾಷ್ಟ್ರೀಯ ಆಯೋಗ ಬೆಂಬಲಿಸಿದಂತಹ ಬೇಡಿಕೆಯ ಮೇರೆಗೆ. ಯುನೆಸ್ಕೊದೊಂದಿಗೆ ಸಂಬಂಧವನ್ನು ಹೊಂದಿರತಕ್ಕಂತಹ ಸರಕಾರೇತರ ಸಂಸ್ಥೆಯ ಬೇಡಿಕೆಯನ್ನು ಕನಿಷ್ಟ ಎರಡು ಸದಸ್ಯ ರಾಜ್ಯಗಳ ರಾಷ್ಟ್ರೀಯ ಆಯೋಗಗಳು ಬೆಂಬಲಿಸಬೇಕಾಗುತ್ತದೆ.

**(ಊ) ಅಂತಾರಾಷ್ಟ್ರೀಯ ಸರಕಾರೇತರ ಸಂಸ್ಥೆ:** ಯುನೆಸ್ಕೊ ಜೊತೆ ಯಾವುದೇ ಅಧಿಕೃತ ಸಂಬಂಧಗಳನ್ನು ಹೊಂದಿರದ ಈ ಸಂಸ್ಥೆಯ ಪರವಾಗಿ ಯಾರ ವ್ಯಾಪ್ತಿ ಪ್ರದೇಶದಲ್ಲಿ ಅದು ಇರುವುದೋ ಆ ಸದಸ್ಯ ರಾಜ್ಯದ ರಾಷ್ಟ್ರೀಯ ಆಯೋಗದ ಬೇಡಿಕೆಯ ಮೇರೆಗೆ; ಈ ರೀತಿಯ ಬೇಡಿಕೆಗಳನ್ನು ಇತರ ಸಹಭಾಗಿತ್ವದ ಸದಸ್ಯ ರಾಜ್ಯಗಳ ಕನಿಷ್ಟ ಎರಡು ರಾಷ್ಟ್ರೀಯ ಆಯೋಗಗಳು ಬೆಂಬಲಿಸಬೇಕಾಗುತ್ತದೆ.

**(ಎ) ಆಫ್ರಿಕಾ ಯುನಿಟಿ ಸಂಸ್ಥೆ:** ಯುನೆಸ್ಕೋದ ಸಮರ್ಥತತೆಯ ಕ್ಷೇತ್ರದಗಳಲ್ಲಿನ ಚಟುವಟಿಕೆಗಳಿಗಾಗಿ,

**(ಏ) ಯುನೆಸ್ಕೋದಲ್ಲಿನ ಪ್ಯಾಲಿಸ್ಟೈನ್ ಪ್ರೇಕ್ಷಕ (ನಿರೀಕ್ಷಕ):** ಯುನೆಸ್ಕೋ ಸಮರ್ಥತೆಯ ಕ್ಷೇತ್ರದ ಚಟುವಟಿಕೆಗಳಿಗೆ ಸಂಬಂಧಿಸಿದ ಸಹಭಾಗಿತ್ವದ ಬೇಡಿಕೆ ಮತ್ತು ಪ್ಯಾಲೆಸ್ತೇನಿಯಾದ ನೇರ ಆಸಕ್ತಿ ಇರುವುದು.

**ಯುನೆಸ್ಕೋ ಫೆಲೋಶಿಪ್‌ಗಳು ಅಧ್ಯಯನ ಮತ್ತು ಪ್ರಯಾಣ ಭತ್ಯೆಗಳು:**

ಎರಡನೆಯ ಜಾಗತಿಕ ಯುದ್ಧದ ಬಳಿಕ ಅನೇಕ ದೇಶಗಳು ಸ್ವತಂತ್ರವಾದವು; ಮತ್ತು ಹೊಸ ರಾಜಕೀಯ ಕ್ರಮದಿಂದಾಗಿ ಕೆಲವು ದೇಶಗಳು ಮರುರಚನೆಗೊಂಡವು. ಅನೇಕ ದೇಶಗಳು ಶಿಕ್ಷಣತಜ್ಞರ ಗಂಭೀರ ಕೊರತೆಯನ್ನು ಎದುರಿಸಿದವು. ಈ ದೇಶಗಳಿಗೆ ಶಿಕ್ಷಣದ ವಿಭಿನ್ನ ಕ್ಷೇತ್ರಗಳಲ್ಲಿ ತಜ್ಞರು ಅಗತ್ಯವಿರುವುದು ಯುನೆಸ್ಕೋ ಗಮನಕ್ಕೆ ಬಂತು. ಶಿಕ್ಷಣತಜ್ಞರು ತನ್ನ ರಾಯಸ (Mandate) ದ ಕೆಳಗೆ ಬರುವುದರಿಂದ, ಯುನೆಸ್ಕೊ ಶಿಕ್ಷಣ ಕ್ಷೇತ್ರದ ಉದ್ಯೋಗಿಗಳಿಗೆ ಫೆಲೋಶಿಪ್‌ಗಳನ್ನು ಮತ್ತು ಅಧ್ಯಯನಕ್ಕೆ ಸಹಾಯಧನವನ್ನು ಪ್ರಾರಂಭಿಸಿತು. ಈ ಫೆಲೋಶಿಪ್‌ಗಳನ್ನು ಸದಸ್ಯ ರಾಜ್ಯಗಳ ಮತ್ತು ಸಹಸದಸ್ಯರ ಕೋರಿಕೆಯ ಮೇರೆಗೆ ನೀಡಲಾಯಿತು. ಫೆಲೋಶಿಪ್ ಪಡೆಯುವ ಮಂದಿ ಈಗಾಗಲೇ ತಮ್ಮ ವೃತ್ತಿಯನ್ನು ಪ್ರಾರಂಭಿಸಿದವರು, ಅಥವಾ ತಮ್ಮ ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಮುಂದುವರಿದ ಹಂತದಲ್ಲಿ ಇರುವವರಾಗಿರುತ್ತಾರೆ. ಅನೇಕ ಯೋಜನೆಗಳಲ್ಲಿ ವಿದೇಶಿ ಸಹಭಾಗಿಗಳನ್ನು ಸ್ಥಳಾಂತರಗೊಳಿಸಿ ತಮ್ಮ ಮೂಲದೇಶಕ್ಕೆ ಹಿಂತಿರುಗಲು ಅವಕಾಶವಾಗುತ್ತದೆ. ಸ್ವಂತ ದೇಶದಲ್ಲಿ ಸೂಕ್ತ ಸೌಲಭ್ಯಗಳಿಲ್ಲದ ಯುವಜನರಿಗೆ ಕೂಡಾ ಅತ್ಯವಶ್ಯಕ ವಲಯಗಳಲ್ಲಿ ತರಬೇತಿಯನ್ನು ಪಡೆಯಲು ಫೆಲೋಶಿಪ್‌ಗಳನ್ನು ನೀಡಲಾಗುತ್ತದೆ. ಆದ್ಯತೆ ನೀಡಲಾದ ಕ್ಷೇತ್ರಗಳೆಂದರೆ, ಬೋಧನೆ ಮತ್ತು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಸಂಶೋಧನೆ ಮತ್ತು ಉನ್ನತ ಶಿಕ್ಷಣದ ಕೆಲವು ವಲಯಗಳಲ್ಲಿ ದಾಖಲೀಕರಣ ಮತ್ತು ದೃಶ್ಯಸಾಧನಗಳ ಬಳಕೆ. ಅನುದಾನಗಳನ್ನು ರಾಷ್ಟ್ರೀಯ ಅಗತ್ಯಗಳನ್ನು ಮತ್ತು ಕಾರ್ಯಕ್ರಮಗಳ ನಡೆಸುವಿಕೆ, ವಿಧಾನಗಳು ಮತ್ತು ಆರ್ಥಿಕತೆಯನ್ನು ಗಮನದಲ್ಲಿಟ್ಟುಕೊಂಡು, ಜೊತೆಗೆ ವಿಜ್ಞಾನ, ಸಂಸ್ಕೃತಿ, ಸಂವಹನ ಮತ್ತು ಪರಿಸರದಂತಹ ನಿಕಟ ಸಂಬಂಧಿ ಕ್ಷೇತ್ರಗಳ ಜಾಗತಿಕ ಒಲವನ್ನು ಗಮನದಲ್ಲಿಟ್ಟು ನೀಡಲಾಗುತ್ತದೆ.

ಫೆಲೋಶಿಪ್ ಹೊಂದಿರುವವರು ತಮ್ಮ ಅಧ್ಯಯನಗಳನ್ನು ಸಂಪೂರ್ಣಗೊಳಿಸಿದ ಬಳಿಕ ವರದಿ ಒಪ್ಪಿಸುವುದನ್ನು ನಿರೀಕ್ಷಿಸಲಾಗುತ್ತದೆ. ಇದರಿಂದ ಫೆಲೋಶಿಪ್ ನೀಡಿಕೆಯ ಲಾಭಗಳನ್ನು ಕಂಡುಕೊಳ್ಳಲು ಯುನೆಸ್ಕೋಗೆ ಅನುಕೂಲವಾಗುತ್ತದೆ. ಅದರಲ್ಲಿಯೂ ವಿಶೇಷವಾಗಿ ಯಾವ ಉದ್ದೇಶಕ್ಕಾಗಿ ಫೆಲೋಶಿಪ್‌ನ್ನು ನೀಡಲಾಗಿದೆಯೋ ಅದರೊಂದಿಗೆ ಫೆಲೋಶಿಪ್ ನೀಡಿದವರಿಗೆ ನಿಗದಿಪಡಿಸಿದ ಕಾರ್ಯಗಳನ್ನು ತುಲನೆ ಮಾಡಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. 1948ರಿಂದ 1996ರ ಅವಧಿಯಲ್ಲಿ 40,000 ಅನುದಾನಗಳನ್ನು ನೀಡಲಾಗಿದೆ. ಈ ಕುರಿತು ಪರಾಮರ್ಶನ ಕೃತಿಯನ್ನು ಗ್ರಂಥವನ್ನು ಪ್ರಕಟಿಸಿದುದು ಯುನೆಸ್ಕೋ ಕಾರ್ಯದ ಪ್ರಮುಖ ಅಂಶವಾಗಿದೆ. ಯುನೆಸ್ಕೊ ಪ್ರಕಟಣೆಯಲ್ಲಿ ಒಂದಾಗಿರುವ 'ವಿದೇಶದಲ್ಲಿ ಶಿಕ್ಷಣ' ಗ್ರಂಥದಲ್ಲಿ ತರಬೇತಿಗಾಗಿ ಒದಗಿಸುವ ಅವಕಾಶಗಳ ಸಮಗ್ರ ಸಮೀಕ್ಷೆ ಇದೆ. ಯುನೆಸ್ಕೋ ಫೆಲೋಶಿಪ್ ಹೊಂದಿರುವವರ ವಿವರ ಸೂಚಿಕೆ (ಡೈರೆಕ್ಟರಿ) ಕೂಡಾ ಲಭ್ಯ ಇದೆ.

Digitised by Bharatavani, CIIL

ಇದರಲ್ಲಿ ಸದಸ್ಯ ರಾಜ್ಯಗಳು ಮತ್ತು ಈ ಫೆಲೋಶಿಪ್‌ಗಳಿಂದ ತರಬೇತಿ ಹೊಂದಿದ ಪರಿಣತ ಸಿಬ್ಬಂದಿಗಳ ವಿವರಗಳನ್ನು ಒದಗಿಸಲಾಗಿದೆ.

- **ಯುನೆಸ್ಕೊ ಬಹುಮಾನಗಳು:** ವ್ಯಕ್ತಿಗಳ ಮತ್ತು ಏಜೆನ್ಸಿಗಳ ಅಸಾಧಾರಣ ಕೊಡುಗೆಯನ್ನು ಗುರುತಿಸುವ ಮತ್ತು ಸಮರ್ಥಿಸುವ ಸಲುವಾಗಿ ಶಿಕ್ಷಣದ ಅನೇಕ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮತ್ತು ಪ್ರಾದೇಶಿಕ ಬಹುಮಾನಗಳನ್ನು ಯುನೆಸ್ಕೋ ನೀಡುತ್ತದೆ. ಬಹುಪಾಲು ಬಹುಮಾನಗಳು ಯುನೆಸ್ಕೋ ಸಲುವಾಗಿ ರಾಷ್ಟ್ರೀಯ ಸರಕಾರಗಳು ಮತ್ತು ಸಂಸ್ಥೆಗಳು ಸ್ಥಾಪಿಸಿದ್ದಾಗಿವೆ.

- **ಸಾಕ್ಷರತಾ ಬಹುಮಾನ:** ಅಂತಾರಾಷ್ಟ್ರೀಯ ಸಾಕ್ಷರತಾ ದಿನದ ಆಚರಣೆಯ ಅಂಗವಾಗಿ ಪ್ರತಿ ವರ್ಷ ಸೆಪ್ಟೆಂಬರ್ 8 ರಂದು ಈ ಕೆಳಗಿನ ಮೂರು ಬಹುಮಾನಗಳನ್ನು ನೀಡಲಾಗುತ್ತದೆ:

- **ಅಂತಾರಾಷ್ಟ್ರೀಯ ರೀಡಿಂಗ್ ಅಸೋಸಿಯೇಶನ್ ಸಾಕ್ಷರತಾ ಪ್ರಶಸ್ತಿ:** ಯುನೈಟೆಡ್ ಸ್ಟೇಟ್ಸ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಸರಕಾರೇತರ ಸಂಸ್ಥೆ ಅಂತಾರಾಷ್ಟ್ರೀಯ ರೀಡಿಂಗ್ ಅಸೋಸಿಯೇಷನ್ (ಐಆರ್‌ಎ) ಈ ಪ್ರಶಸ್ತಿಯನ್ನು ಸ್ಥಾಪಿಸಿದೆ. ಬಹುಮಾನದ ಮೊತ್ತ 15,000 ಡಾಲರ್.

- **ನೊಮ ಬಹುಮಾನ:** ಜಪಾನಿನ ಪ್ರಕಾಶಕರಾದ ದಿವಂಗತ ಸೊಯಿಚಿ ನೋಮ ಅವರ ಹೆಸರಿನಲ್ಲಿ 1980ರಿಂದ ಈ ಬಹುಮಾನವನ್ನು ನೀಡಲಾಗುತ್ತಿದೆ. ಬಹುಮಾನದ ಮೊತ್ತ 15,000 ಡಾಲರ್.

- **ದಿ ಕಿಂಗ್ ಸೆಜಾಂಗ್ ಸಾಕ್ಷರತಾ ಬಹುಮಾನ:** 1989ರಲ್ಲಿ ಸೆಜಾಂಗ್ ದೊರೆಯ ಗೌರವಾರ್ಥಕವಾಗಿ ರಿಪಬ್ಲಿಕ್ ಆಫ್ ಕೊರಿಯಾ ಸ್ಥಾಪಿಸಿದ ಬಹುಮಾನ. ಸೆಜಾಂಗ್ ದೊರೆ 1443 ರಲ್ಲಿ ಸರಳೀಕೃತ ಧ್ವನಿಸಂಬಂಧಿ ಅಕ್ಷರವೊಂದನ್ನು ಕಂಡುಹಿಡಿದಿದ್ದರು. ಇದರಿಂದ ಜ್ಞಾನ ಪ್ರಸಾರಕ್ಕೆ ಹೆಚ್ಚಿನ ನೆರವು ಒದಗಿತ್ತು. ಬಹುಮಾನದ ಮೊತ್ತ 30,000 ಡಾಲರ್.

- **ಶಾಂತಿ ಮತ್ತು ಮಾನವ ಹಕ್ಕುಗಳಿಗಾಗಿ ಶಿಕ್ಷಣ:**

- **ಮಾನವ ಹಕ್ಕುಗಳ ಬೋಧನೆಗೆ ಯುನೆಸ್ಕೋ ಬಹುಮಾನ:** ಮಾನವ ಹಕ್ಕುಗಳ ಘೋಷಣೆಯ 30ನೇ ವಾರ್ಷಿಕೋತ್ಸವ ಸಂದರ್ಭದ ಸಲುವಾಗಿ ಕಾರ್ಯನಿರ್ವಾಹಕ ಮಂಡಲಿಯಿಂದ ಸ್ಥಾಪಿತವಾಗಿರುವ ಬಹುಮಾನ. ಮಾನವ ಹಕ್ಕುಗಳಲ್ಲಿ ಅತ್ಯುನ್ನತ ಕಾರ್ಯವನ್ನು ನಡೆಸಿದ ಸಂಸ್ಥೆ ಅಥವಾ ವ್ಯಕ್ತಿಗೆ ಈ ಬಹುಮಾನವನ್ನು ನೀಡಲಾಗುತ್ತದೆ. ಇದು ವಾರ್ಷಿಕ ಬಹುಮಾನ. ಮೊತ್ತ 10,000 ಡಾಲರ್.

- **ಸಹನಾಯ ಸೇವೆಯಲ್ಲಿ ಮಕ್ಕಳ ಮತ್ತು ಯುವಜನರ ಸಾಹಿತ್ಯಕ್ಕಾಗಿ ಯುನೆಸ್ಕೋ ಬಹುಮಾನ:** ಇದನ್ನು 1995ರಲ್ಲಿ ಸ್ಪೇನಿನ ಸಂತಮಾರಿಯಾ ಎಡಿಶನ್ಸ್ ಪ್ರತಿಷ್ಠಾಪಿಸಿದೆ. 1997ರಲ್ಲಿ ಇಟೆಲಿಯಲ್ಲಿ ನಡೆದ ಬೊಲೊಗ್ನಾ ಮಕ್ಕಳ ಪುಸ್ತಕಮೇಳದಲ್ಲ ಮೊತ್ತಮೊದಲ ಬಾರಿ ಮಕ್ಕಳ ಮತ್ತು ಹದಿಹರೆಯದವರ ಗ್ರಂಥ ಉತ್ಪಾದನೆಯನ್ನು ಗುರುತಿಸುವ ಸಲುವಾಗಿ ಎರಡು ಬಹುಮಾನಗಳನ್ನು ನೀಡಲಾಯಿತು. ಎರಡು ವರ್ಷಗಳಿಗೊಮ್ಮೆ ನೀಡಲಾಗುವ ಪ್ರತಿ ಬಹುಮಾನದ ಮೊತ್ತ 8,000 ಡಾಲರುಗಳು.

**ಶಿಕ್ಷಣ ಸಂಶೋಧನೆ ಮತ್ತು ನಾವಿನ್ಯ:**

- ಕೊಮೆನಿಸ್ ಪದಕ 1993 ರಲ್ಲಿ ಜೆಕಸ್ಲೊವಿಕಾಯಾದ ಮಾನವತಾವಾದಿ, ಲೇಖಕ ಮತ್ತು ಶಿಕ್ಷಣತಜ್ಞ ಜೇನ್ ಅಮೊಸ್ ಕೊಮೆನಿಸ್ (1592–1670) ಅವರ 400ನೇ ವಾರ್ಷಿಕೋತ್ಸವದ ಸಂದರ್ಭದಲಿ ಜೆಕಸ್ಲೋವಿಕಿಯಾ ಮತ್ತು ಯುನೆಸ್ಕೋ ಜಂಟಿಯಾಗಿ ಪ್ರಾರಂಭಿಸಿದ ಬಹುಮಾನ. ಕೊಮೆನಿಸ್ ಡಿಡಾಕ್ಟಿಕ ಮ್ಯಾಗ್ನಾ (ದಿ ಗ್ರೇಟ್ ಡೈಲೆಕ್ಟಿಕ್ಸ್) ಮತ್ತು ಆರ್ಬಿಸ್ ಪಿಕ್ಟಸ್ ಗ್ರಂಥದ ಲೇಖಕರು. ಶೈಕ್ಷಣಿಕ ಸಂಶೋಧನೆ ಮತ್ತು ನಾವೀನ್ಯ ಕ್ಷೇತ್ರದಲ್ಲಿ ನಡೆಸಲಾಗುವ ಅಸಾಧಾರಣ ಚಟುವಟಿಕೆಗಳಿಗಾಗಿ 10 ಶಿಕ್ಷಣತಜ್ಞರಿಗೆ, ಶಿಕ್ಷಣತಜ್ಞರ ಗುಂಪುಗಳಿಗೆ ಅಥವಾ ಶೈಕ್ಷಣಿಕ ಸಂಸ್ಥೆಗಳಿಗೆ ಈ ಪದಕ ಗೌರವವನ್ನು ನೀಡಲಾಗುತ್ತದೆ.

- **ನೆಸ್ಸಿಮ್ ಹಬಿಫ್ ಬಹುಮಾನ:** 1962 ಪ್ರಾರಂಭಿಸಲಾದ ಈ ಬಹುಮಾನವು ಟರ್ಕಿಯ ನೆಸ್ಸಿಮ್ ಹಬಿಫ್ ಅವರ ಉಯಿಲಿನ ಪರಂಪರೆಯದ್ದಾಗಿದೆ. ಬೋಧನಾ ಸಾಮಗ್ರಿಗಳ ಉತ್ಪಾದನೆಗೆ ಈ ಬಹುಮಾನ ಸಲ್ಲುತ್ತದೆ. ಅದರಲ್ಲಿಯೂ ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಶಾಲಾ ಪಠ್ಯಪುಸ್ತಕಗಳಿಗಾಗಿ ಇದನ್ನು ನೀಡಲಾಗುತ್ತದೆ. ಬಹುಮಾನದ ಮೊತ್ತವು ಮೂಲ ಮೊಬಲಗಿನ ಹಣದ ಬಡ್ಡಿಯನ್ನು ಅನುಸರಿಸಿಕೊಂಡು ಇರುತ್ತದೆ. ಇದನ್ನು ಎರಡು ವರ್ಷಗಳಿಗೊಮ್ಮೆ ನೀಡಲಾಗುತ್ತದೆ.

**ಶಾರೀರಿಕ ಶಿಕ್ಷಣ ಮತ್ತು ಕ್ರೀಡೆ:**

- **ದಿ ಪೀರೇ ದಿ ಕೊಬರ್ಟಿನ್ ಸಮಾನಾವಕಾಶ (Fairplay) ಪಾರಿತೋಷಕಗಳು:** ಆಧುನಿಕ ಒಲಿಂಪಿಕ್ ಗೇಮ್ಸ್ ಸ್ಥಾಪಕರಾದ ಬೆರಾನ್ ಪಿರೇ ದಿ ಕೊಬರ್ಟಿನ್ (1863–1937) ಅವರ ನೆನಪಿನಲ್ಲಿ ಅಂತಾರಾಷ್ಟ್ರೀಯ ಕ್ರೀಡಾ ವಿಜ್ಞಾನ ಮತ್ತು ಶಾರೀರಿಕ ಶಿಕ್ಷಣ ಮಂಡಲಿ (ಸಿಎಸ್‌ಪಿಇ) ಮತ್ತು ಅಂತಾರಾಷ್ಟ್ರೀಯ ಕ್ರೀಡಾ ಪತ್ರಕರ್ತರ ಸಂಘಟನೆ (ಐಎಸ್‌ಜೆ) ಸರಕಾರೇತ ಸಂಸ್ಥೆ ಅಂತಾರಾಷ್ಟ್ರೀಯ ಫೇರ್‌ಪ್ಲೇ ಕಮಿಟಿ ಈ ಪಾರಿತೋಷಕಗಳನ್ನು ಸ್ಥಾಪಿಸಿದೆ. ಕ್ರೀಡಾ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಯನ್ನು ತೋರಿದ ಕ್ರೀಡಾಪಟುಗಳಿಗೆ ಮತ್ತು ತಂಡಗಳಿಗೆ ಎರಡು ವರ್ಷಗಳಿಗೊಮ್ಮೆ ಯುನೆಸ್ಕೋ ಡೈರೆಕ್ಟರ್ ಜನರಲ್ ಅವರು ಈ ಪಾರಿತೋಷಕವನ್ನು ನೀಡಿ ಗೌರವಿಸುತ್ತಾರೆ.

- **ಶಾರೀರಿಕ ಶಿಕ್ಷಣ ಮತ್ತು ಎಲ್ಲಾ ಕ್ರೀಡೆಗಳಲ್ಲಿನ ವಿಶಿಷ್ಟ ಸೇವೆಗಳ ಗುರುತಿಸುವಿಕೆಗಾಗಿ ಅಧಿಕೃತ ಯುನೆಸ್ಕೊ ಪ್ರಶಸ್ತಿ:** 1989ರಲ್ಲಿ ಕಾರ್ಯನಿರ್ವಾಹಕ ಮಂಡಳಿಯಿಂದ ಸ್ಥಾಪಿಸಲಾದ ಈ

Digitised by Bharatavani, CIIL

ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ಶಾರೀರಿಕ ಶಿಕ್ಷಣ ಮತ್ತು ಕ್ರೀಡೆಯ ಚಾರ್ಟರ್‌ನ ಸ್ಫೂರ್ತಿಯನ್ನು ಕ್ರೀಡಾ ಬೆಳವಣಿಗೆಗೆ ಅತ್ಯುತ್ತಮ ಕೊಡುಗೆ ನೀಡಿದ ಸಂಸ್ಥೆಗೆ ಅಥವಾ ವ್ಯಕ್ತಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಮೇಲೆ ಉಲ್ಲೇಖಿಸಿರುವ ವಿಭಾಗದಲ್ಲಿ ಗೌರವ ಡಿಪ್ಲೋಮಾವನ್ನು ಎರಡು ವರ್ಷಗಳಿಗೊಮ್ಮೆ ನೀಡಲಾಗುತ್ತದೆ.

**ಶಿಕ್ಷಣದ ಬಗ್ಗೆ ಅಂತಾರಾಷ್ಟ್ರೀಯ ಆಯೋಗಗಳು ಯುನೆಸ್ಕೋ:**

ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಪೂರಕವಾಗುವ ಶಿಕ್ಷಣದ ಗುಣಮಟ್ಟದ ಸುಧಾರಣೆಯಲ್ಲಿ ಯುನೆಸ್ಕೋ ಕ್ರಿಯಾಶೀಲವಾಗಿದೆ. ಜಾಗತಿಕ ಮಟ್ಟದಲ್ಲಿ ಶಿಕ್ಷಣದ ಸ್ಥಾನದ ಚಿತ್ರಣ ಮತ್ತು ವಿಶ್ಲೇಷಣೆಯನ್ನು ನಡೆಸುವುದು, ಉನ್ನತ ಮಟ್ಟದಲ್ಲಿ ವಿಚಾರ ವಿನಿಮಯಕ್ಕೆ ಪ್ರೋತ್ಸಾಹ ನೀಡುವುದು, ಜೊತೆಗೆ ಶಿಕ್ಷಣಕ್ಕೆ ಸಂಬಧಿಸಿದ ವಿಚಾರಗಳ ಕುರಿತು ಜಾಗತಿಕನೆಲೆಯಲ್ಲಿ ಮತ್ತು ಸ್ಥಳೀಯ ನೆಲೆಯಲ್ಲಿ ಚರ್ಚೆಯನ್ನು ನಡೆಸುವುದನ್ನು ಯುನೆಸ್ಕೋ ಮಾಡಿದೆ. ಯುನೆಸ್ಕೋದ ಅಂತಾರಾಷ್ಟ್ರೀಯ ಶಿಕ್ಷಣ ಅಭಿವೃದ್ಧಿ ಆಯೋಗಗಳನ್ನು 1970 ಮತ್ತು 1993 ರಲ್ಲಿ ಸ್ಥಾಪಿಸಲಾಗಿದೆ. ಇದರ ಉದ್ದೇಶ ರಾಷ್ಟ್ರ ಮತ್ತು ಜಾಗತಿಕ ಮಟ್ಟಗಳಲ್ಲಿ ಶಿಕ್ಷಣದ ಮೇಲೆ ಸಾಮಾಜಿಕ ಬದಲಾವಣೆಯ ಪರಿಣಾಮದ ಪರಿಶೀಲನೆಯನ್ನು ನಡೆಸುವುದು ಮತ್ತು ಹೊಸ ಸಮಸ್ಯೆಗಳು, ಜವಾಬ್ದಾರಿಗಳು ಮತ್ತು ಸವಾಲುಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಲು ಕಂಡುಕೊಳ್ಳಬೇಕಾದ ದಾರಿಗಳನ್ನು ಸೂಚಿಸುವುದಾಗಿದೆ. ಯುನೆಸ್ಕೋನ ಎರಡು ಆಯೋಗಗಳ ವಿವರಗಳು ಹೀಗಿವೆ :

**1. ಅಂತಾರಾಷ್ಟ್ರೀಯ ಶಿಕ್ಷಣ ಅಭಿವೃದ್ಧಿ ಆಯೋಗ (1970):** ಸಾಮಾಜಿಕ ಬದಲಾವಣೆಯ ಮೇಲೆ ಶಿಕ್ಷಣದ ಪರಿಶೀಲನೆಗಾಗಿ ಮೊದಲ ಅಂತಾರಾಷ್ಟ್ರೀಯ ಶಿಕ್ಷಣ ಅಭಿವೃದ್ಧಿ ಆಯೋಗವನ್ನು 1970ರಲ್ಲಿ ಸ್ಥಾಪಿಸಲಾಯಿತು. ಈ ಆಯೋಗದ ಅಧ್ಯಕ್ಷರಾಗಿದ್ದವರು ಎಡ್ಗರ್ ಫೌರೆ. ಇವರು ಫ್ರಾನ್ಸ್‌ನ ಮಾಜಿ ಪ್ರಧಾನ ಮಂತ್ರಿ ಮತ್ತು ಶಿಕ್ಷಣ ಸಚಿವರು. ಆರು ಮಂದಿ ಗಣ್ಯರನ್ನು ಅವರ ವೈಯಕ್ತಿಕ ಸಾಮರ್ಥ್ಯವನ್ನು ಆಧರಿಸಿ ಸದಸ್ಯರಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ಇವರಲ್ಲಿ ಉನ್ನತ ಮಟ್ಟದ ಶಿಕ್ಷಣ ತಜ್ಞರು ತಜ್ಞರು ಅಥವಾ ವಿಜ್ಞಾನಿಗಳು, ಮಾಜಿ ಮಂತ್ರಿಗಳು ಅಥವಾ ಅಂತಾರಾಷ್ಟ್ರೀಯ ನಾಗರಿಕ ಸೇವಾ ಅಧಿಕಾರಿಗಳು ಇರುತ್ತಾರೆ. 'ಲರ್ನಿಂಗ್ ಟು ಬಿ' ಹೆಸರಿನ ವರದಿಯನ್ನು ಆಯೋಗ ಹೊರಡಿಸಿದೆ.

**2. 21ನೇ ಶತಮಾನಕ್ಕಾಗಿ ಅಂತಾರಾಷ್ಟ್ರೀಯ ಶಿಕ್ಷಣ ಆಯೋಗ:** 1993 ಮುಂದಿನ ವರ್ಷಗಳಲ್ಲಿ ಶಿಕ್ಷಣ ಎದುರಿಸಬೇಕಾದ ಸವಾಲುಗಳ ಮೇಲೆ ಅಧ್ಯಯನ ಮತ್ತು ಪ್ರತಿಫಲವನ್ನು ನಡೆಸುವ ಸಲುವಾಗಿ ಮತ್ತು ವರದಿಯ ರೂಪದಲ್ಲಿ ಸೂಚನೆಗಳನ್ನು ಮತ್ತು ಶಿಫಾರಸ್ಸುಗಳನ್ನು ರೂಪಿಸುವುದಕ್ಕಾಗಿ ಈ ಆಯೋಗನ್ನು 1993ರಲ್ಲಿ ಸ್ಥಾಪಿಸಲಾಯಿತು. ಉನ್ನತಮಟ್ಟಗಳಲ್ಲಿ ನಿಯಮವನ್ನು ರೂಪಿಸುವವರ ಮತ್ತು ಅಧಿಕಾರಿಗಳ ನವೀಕರಣ ಮತ್ತು ಕಾರ್ಯದರ್ಶಿಗಳಿಗೆ ಆಯೋಗದ ವರದಿಯು ಕಾರ್ಯಸೂಚಿಯಾಗಿ ಒದಗುವುದು. ಈ ಆಯೋಗದ ಅಧ್ಯಕ್ಷರು ಫ್ರಾನ್ಸ್ ದೇಶದ ಆರ್ಥಿಕ ಮತ್ತು ವಿತ್ತ ಸಚಿವಾಲಯದ ಮಾಜಿ ಮಂತ್ರಿಗಳು, ಆಯೋಗದಲ್ಲಿ 14 ಸದಸ್ಯರಿದ್ದಾರೆ. ಇದರ ವರದಿಯ ಶೀರ್ಷಿಕೆ 'ಲರ್ನಿಗ್: ದಿ ಟ್ರೆಶರ್ ವಿದಿನ್'.

**ಸಹಭಾಗಿತ್ವದ ಶಾಲಾ ಯೋಜನೆ ಮತ್ತು ಅಂತಾರಾಷ್ಟ್ರೀಯ ತಿಳಿವಳಿಕೆಗಾಗಿ ಶಿಕ್ಷಣ:**

ಯುನೆಸ್ಕೋದ ಮೂಲಭೂತ ಉದ್ದಿಷ್ಟಕಾರ್ಯಗಳಲ್ಲಿ 'ಶಾಂತಿ ಮತ್ತು ಅಂತಾರಾಷ್ಟ್ರೀಯ ತಿಳಿವಳಿಕೆಗಾಗಿ ಶಿಕ್ಷಣ' ಒಂದಾಗಿದೆ. ಯುನೆಸ್ಕೊ ಕ್ಲಬ್‌ಗಳು ಮತ್ತು ಯುವ ಕಾರ್ಯಕ್ರಮಗಳೊಂದಿಗಿನ ಸಹಭಾಗಿ ಶಾಲಾ ಯೋಜನೆಯು (ಎಎಸ್‌ಪಿ) ಶಾಂತಿಯನ್ನು ಸ್ಥಾಪಿಸುವ ಯುನೆಸ್ಕೋ ಪ್ರಯತ್ನದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಮೇಲೆ ಉಲ್ಲೇಖಿಸಿದ ಧ್ಯೇಯಗಳನ್ನು ವಾಸ್ತವರೂಪಕ್ಕೆ ವರ್ಗಾಯಿಸಲು ಮತ್ತು ರಾಷ್ಟ್ರೀಯ ಆಯೋಗದ ಮೂಲಕ ಶಾಲೆಗಳಿಗೆ ಪ್ರೋತ್ಸಾಹ ನೀಡುವ ಮುಖ್ಯ ಉದ್ದೇಶದೊಂದಿಗೆ 1953ರಲ್ಲಿ ಸಹಭಾಗಿ ಶಾಲಾ ಯೋಜನೆಯನ್ನು ಪ್ರಾರಂಭಿಸಲಾಯಿತು. ಮಕ್ಕಳಿಗೆ ಮತ್ತು ಹದಿಹಯರೆಯದವರಿಗೆ ಕಲಿಸಲು ವಿಶೇಷವಾಗಿ ವಿನ್ಯಾಸಗೊಳಿಸಲಾದ ಅಂಶಗಳು, ವಿಧಾನಗಳು ಮತ್ತು ತಂತ್ರಗಳು ಇದರಲ್ಲಿ ಇರುತ್ತವೆ. ಇದು ಪೂರ್ವಗ್ರಹವನ್ನು ತಿರಸ್ಕರಿಸಿ, ಶಾಂತಿ, ಸಹನೆ ಪರಸ್ಪರ ಗೌರವ ಮತ್ತು ಅರಿವು ಮೂಡಿಸುವ ಸಂಸ್ಕೃತಿಯನ್ನು ಪ್ರಚಾರಕ್ಕೆ ತರಲು ಪ್ರಯತ್ನಪಡುವುದು. ಇಂದು ಸಹಭಾಗಿ ಶಾಲಾ ಯೋಜನೆಯ 132 ದೇಶಗಳಲ್ಲಿ 3,900 ನರ್ಸರಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಹಭಾಗಿ ಶಾಲಾ ಯೋಜನೆಯಲ್ಲಿ ಪಾಲುಗೊಳ್ಳುವ ಶಾಲೆಗಳನ್ನು ಈ ಕೆಳಗಿನ ನಾಲ್ಕು ಮುಖ್ಯ ವಿಚಾರಗಳನ್ನು ಹೊಂದಿರುವ ಅಧ್ಯಯನದಲ್ಲಿ ಒಂದನ್ನು ಕೇಂದ್ರವಾಗಿಟ್ಟುಕೊಂಡು ಯೋಜನೆಯೊಂದನ್ನು ವಿನ್ಯಾಸಗೊಳಿಸಿ ಮುಂದುವರಿಸುವಂತೆ ಆಹ್ವಾನಿಸಲಾಗಿದೆ; ಇತರ ಸಂಸ್ಕೃತಿಗಳು ಮತ್ತು ಜಾಗತಿಕ ಪರಂಪರೆ, ಜಾಗತಿಕ ಸಮಸ್ಯೆಗಳು ಮತ್ತು ಇವುಗಳ ಪರಿಹಾರದಲ್ಲಿ ವಿಶ್ವಸಂಸ್ಥೆಯ ಪಾತ್ರ, ಮಾನವ ಹಕ್ಕುಗಳು ಮತ್ತು ಪರಿಸರ. ಅಂತಾರಾಷ್ಟ್ರೀಯ ಮಟ್ಟದ ಪರಿಪತ್ರಗಳು (ಸುತ್ತೋಲೆಗಳು) ಮತ್ತು 'ಶಾಲೆಯಲ್ಲಿ ಅಂತಾರಾಷ್ಟ್ರೀಯ ತಿಳಿವಳಿಕೆ ವಾರ್ತಾಪತ್ರದ ಮೂಲಕ ಮಾಹಿತಿ ವಿನಿಮಯಕ್ಕೆ ಇದು ನೆರವು ನೀಡುತ್ತಿದೆ. ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಸಭೆಗಳನ್ನು ಕೂಡ ಸಂಘಟಿಸುತ್ತದೆ. ಇದರಿಂದ ಸಹಭಾಗಿ ಶಾಲಾ ಯೋಜನೆಯಲ್ಲಿ ಪಾಲುಗೊಳ್ಳುವವರು ತಮ್ಮ ಅನುಭವವನ್ನು ಮತ್ತು ಹೊಸ ಚಟುವಟಿಕೆಗಳ ಯೋಜನೆಯನ್ನು ಚರ್ಚಿಸುವುದಕ್ಕೆ ಅವಕಾಶ ನೀಡಿದಂತಾಗುತ್ತದೆ. ಸಹಭಾಗಿ ಶಾಲಾ ಯೋಜನೆಯಲ್ಲಿ ಸೇರಿಕೊಳ್ಳಲು ಬಯಸುವ ಶಾಲೆಗಳು (ಶಾಲಾ ಪೂರ್ವದವುಗಳು, ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಶಾಲೆಗಳು, ಜೊತೆಗೆ ತಾಂತ್ರಿಕ ಮತ್ತು ವೃತ್ತಿಪರ ಶಾಲೆಗಳು ಮತ್ತು ಶಿಕ್ಷಕ ತರಬೇತಿ ಸಂಸ್ಥೆಗಳು) ಯನೆಸ್ಕೋಗಾಗಿ ತಮ್ಮ ರಾಷ್ಟ್ರೀಯ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಸೇರಲು ಇರುವ ನಿರ್ಬಂಧನೆಗಳೆಂದರೆ, ಸಹಭಾಗಿ ಶಾಲಾ ಯೋಜನೆಯ ನಾಲ್ಕು

Digitised by Bharatavani, CIIL

ಮುಖ್ಯ ವಸ್ತುಗಳನ್ನುಳ್ಳ ಅಧ್ಯಯನದಲ್ಲಿ ಒಂದನ್ನು ಆಯ್ದುಕೊಂಡು ಕನಿಷ್ಠ ಎರಡು ವರ್ಷ ಕಾರ್ಯ ನಡೆಸುವುದು ಮತ್ತು ಪ್ರತಿವರ್ಷ ಪಡೆದ ಫಲತಾಂಶದ ವರದಿಯನ್ನು ಯುನೆಸ್ಕೋಗೆ ಸಲ್ಲಿಸುವ ಒಪ್ಪಂದಕ್ಕೆ ಸಹಿ ಹಾಕುವುದು.

ಯೋಜನೆಯಲ್ಲಿ ಪಾಲುಗೊಳ್ಳಲು ಅಂಗೀಕಾರ ಪಡೆದ ಶಾಲೆಗಳಿಗೆ ಮಹಾನಿರ್ದೇಶಕರ ಸಹಿ ಇರುವ ಭಾಗವಹಿಸುವಿಕೆಯ ದೃಢಪತ್ರಗಳನ್ನು ಸರ್ಟಿಫಿಕೆಟನ್ನು ನೀಡಲಾಗುತ್ತದೆ. ಮತ್ತು ನಿಯಮಿತವಾಗಿ ದಾಖಲೀಕರಣವನ್ನು ಅವು ಪಡೆಯುತ್ತವೆ. ಕಾರ್ಯಾಗಾರಗಳನ್ನು ಮತ್ತು ವಿಚಾರಗೋಷ್ಠಿಗಳನ್ನು ನಡೆಸಲು, ಬೋಧನಾ ಸಾಮಗ್ರಿಗಳ ತಯಾರಿಕೆ ಮತ್ತು ಪ್ರಕಾಶನ, ಅಧ್ಯಯನ ಭೇಟಿಗಳು ಇತ್ಯಾದಿಗಳ ಕೋರಿಕೆಯನ್ನು ಆಧರಿಸಿ ಆರ್ಥಿಕ ಮತ್ತು ತಾಂತ್ರಿಕ ಸಹಾಯವನ್ನು ಯುನೆಸ್ಕೋ ಒದಗಿಸುತ್ತದೆ. ಪರಿಣಾಮಕಾರಿಗಳೆಂದು ಮತ್ತು ನಾವೀನ್ಯತೆ ಉಳ್ಳವುಗಳೆಂದು ನಿರ್ಧರಿಸಲ್ಪಟ್ಟ ಯೋಜನೆಗಳನ್ನು ಬೇರೆ ಶಾಲೆಗಳಲ್ಲಿ ಪರಿಚಯಿಸಲಾಗುತ್ತದೆ. ಇದರಿಂದ ಈ ಯೋಜನೆಗೆ ಒಂದಕ್ಕಿಂತ ಹೆಚ್ಚು ಪರಿಣಾಮಗಳು ಇರುವಂತಾಗುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ, ಇವುಗಳ ವರದಿಯನ್ನು ಯುನೆಸ್ಕೋ ತನ್ನ ವಾರ್ತಾಪತ್ರ ಲುಕಿಂಗ್ ಆಟ್ ದಿ ಎಎಸ್‌ಪಿಯಲ್ಲಿ ಮತ್ತು ತನ್ನ ಬುಲೆಟಿನ್ 'ಇಂಟರ್ ನ್ಯಾಶನಲ್ ಅಂಡರ್‌ಸ್ಟಾಂಡಿಂಗ್ ಆಟ್ ಸ್ಕೂಲ್'ನಲ್ಲಿ ಪ್ರಕಟಿಸುತ್ತದೆ.

ಮೂಲತಃ ಶೈಕ್ಷಣಿಕವಾಗಿರುವ ದೃಷ್ಟಿಕೋನವನ್ನು ಯುನೆಸ್ಕೋ ಅಳವಡಿಸಿಕೊಂಡಿದೆ. ಇದರ ಕಾರ್ಯಗತಿಯ ಕಾರ್ಯಕ್ರಮವು ವಿಶಾಲ ಮತ್ತು ವಿಭಿನ್ನ ರೀತಿಯದ್ದಾಗಿದೆ. ಇದರಲ್ಲಿ ಅಂತಾರಾಷ್ಟ್ರೀಯ ತಿಳಿವಳಿಕೆ ಮತ್ತು ಶಾಂತಿಯ ಪರಿಕಲ್ಪನೆಯ ಶಿಕ್ಷಣವಷ್ಟೇ ಅಲ್ಲ ಪಠ್ಯಪುಸ್ತಕಗಳ ಸುಧಾರಣೆ, ಬೋಧನಾ ಸಾಮಾಗ್ರಿಗಳ ಉತ್ಪಾದನೆ, ವಿಚಾರಗೋಷ್ಠಿ ಮತ್ತು ಅಧಿವೇಶನಗಳನ್ನು ಸಂಘಟಿಸುವುದು ಕೂಡಾ ಸೇರಿವೆ. ಯುನೆಸ್ಕೋ ತನ್ನ ಹುಟ್ಟಿನಿಂದಲೇ ಅಂತಾರಾಷ್ಟ್ರೀಯ ತಿಳಿವಳಿಕೆಯ ದೃಷ್ಟಿಕೋನದಿಂದ ಪಠ್ಯಪುಸ್ತಕಗಳ ಸುಧಾರಣೆಯಲ್ಲಿ ಆಸಕ್ತಿ ತೋರಿಸಿದೆ. ಯುನೆಸ್ಕೋ ಸಿದ್ಧತಾ ಆಯೋಗವು 1946ರಲ್ಲಿ ಪಠ್ಯಪುಸ್ತಕಗಳ ಸುಧಾರಣೆಯ ದಸ್ತಾವೇಜನ್ನು ಪ್ರಕಟಿಸಿ, ಚರಿತ್ರೆ ಬೋಧನೆ ಮತ್ತು ಪೌರ ಶಿಕ್ಷಣಕ್ಕೆ ವಿಶೇಷ ಗಮನವನ್ನು ಹರಿಸಿ ಅಂತಾರಾಷ್ಟ್ರೀಯ ತಿಳಿವಳಿಕೆ ಪಠ್ಯಪುಸ್ತಕಗಳನ್ನು ಸುಧಾರಿಸಿಕೊಳ್ಳುವಂತೆ ತನ್ನ ಸದಸ್ಯ ರಾಜ್ಯಗಳಿಗೆ ಸೂಚನೆ ನೀಡಿದೆ. ಚರಿತ್ರೆ ಮತ್ತು ಭೂಗೋಳದ ಬೋಧನೆಯಲ್ಲಿ ಸುಧಾರಣೆ, ಅಂತಾರಾಷ್ಟ್ರೀಯ ತಿಳಿವಳಿಕೆಯನ್ನು ಬೆಳೆಸುವುದರಲ್ಲಿ ಸಾಧನವಾಗಿ ಆಧುನಿಕ ಭಾಷೆಯ ಸೂಚನೆಯ ಬಳಕೆ, ಈ ವಿಚಾರಗಳನ್ನಿಟ್ಟುಕೊಂಡು ಸದಸ್ಯ ರಾಜ್ಯಗಳ ರಾಷ್ಟ್ರೀಯ ಆಯೋಗದ ಆಪ್ತ ಸಹಕಾರದೊಂದಿಗೆ ವಿಚಾರಸಂಕಿರಣಗಳ ಮಾಲಿಕೆಯನ್ನು ಯುನೆಸ್ಕೋ ನಡೆಸಿದೆ. ಪಠ್ಯಪುಸ್ತಕಗಳ ಸಂಶೋಧನಾ ಸಂಸ್ಥೆಗೆ ಯುನೆಸ್ಕೋ ಅಂತಾರಾಷ್ಟ್ರೀಯ ಜಾಲದ ಚೌಕಟ್ಟಿನೊಳಗೆ ಪಕ್ಷಪಾತ ಮತ್ತು ರಾಷ್ಟ್ರೀಯತಾ ಪೂರ್ವಗ್ರಹಗಳನ್ನು ನಿವಾರಿಸಲು ಪಠ್ಯಪುಸ್ತಕಗಳ ಪರಸ್ಪರ ಪರಿಷ್ಕರಣೆಗೆ ಕೂಡಾ ಇದು ಪ್ರೋತ್ಸಾಹ ನೀಡಿದೆ. ಬೇರೆ ದೇಶಗಳು ಅಥವಾ ಜನರ ಗುಂಪುಗಳ ಕುರಿತಾದ ಪೂರ್ವಗ್ರಹಗಳನ್ನು ನಿವಾರಿಸಲು ಪಠ್ಯಪುಸ್ತಕಗಳ ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಪುನರಾವಲೋಕನವನ್ನು ನಡೆಸಲು ಬಯಸುವ ಸದಸ್ಯ ರಾಜ್ಯಗಳಿಗಾಗಿ ಮಾರ್ಗದರ್ಶಕ ಸೂತ್ರಗಳನ್ನು ಒದಗಿಸುವುದು ಮತ್ತು ಬೆಂಬಲ ನೀಡುವುದನ್ನು ಯುನೆಸ್ಕೋ ಮುಂದುವರಿಸಿದೆ. 1987 ರಲ್ಲಿ ಜಾರಿಗೆ ಬಂದ ಲಿಂಗ್ವಾಪಕ್ಸ್ ಸಂಸ್ಕೃತಿಗಳ ನಡುವೆ ತಿಳುವಳಿಕೆಯನ್ನು ಪೋಷಿಸಲು ಮತ್ತು ಜನರ ನಡುವೆ ಸಂಪರ್ಕ ವೃದ್ಧಿಗೊಳ್ಳಲು ಭಾಷಾ ಬೋಧನೆ, ಸಾಹಿತ್ಯ ಮತ್ತು ಸಂಸ್ಕೃತೀತ್ವವನ್ನು ಪ್ರೋತ್ಸಾಹಿಸುತ್ತದೆ.

**ಅನ್ಯರಿಂದ ಶಿಕ್ಷಣಕ್ಕೆ ಬೆಂಬಲ ಮತ್ತು ಸಹಾಯ:**

ಶಿಕ್ಷಣದಲ್ಲಿ ಅಂತಾರಾಷ್ಟ್ರೀಯ ಸಹಯೋಗವು ಅನೇಕ ರೀತಿಯ ಆರ್ಥಿಕ ನೆರವಿನ ರೂಪದಲ್ಲಿ ಕೂಡ ನಡೆಯುತ್ತದೆ. ಯುನೆಸ್ಕೋ ಶೈಕ್ಷಣಿಕ ಚಟುವಟಿಕೆಗಳಿಗೆ ಸಹಾಯ ನೀಡುವುದರೊಂದಿಗೆ, ಇತರ ಏಜೆನ್ಸಿಗಳು ಮತ್ತು ದೇಶಗಳು ಕೂಡಾ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಾಗಿ ಶಿಕ್ಷಣಕ್ಕೆ ಸಹಾಯವನ್ನು ಒದಗಿಸುತ್ತವೆ. ಆರ್ಥಿಕ ನೆರವನ್ನು ವಿದ್ಯಾರ್ಥಿವೇತನಗಳು, ವಿಶೇಷ ಕಾರ್ಯಕ್ರಮಗಳಿಗೆ ಸಹಾಯ ಮತ್ತು ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಸಹಾಯ ಧನದ ರೂಪದಲ್ಲಿ ನೀಡಲಾಗುತ್ತದೆ. ವಿದ್ಯಾರ್ಥಿವೇತನಗಳನ್ನು ವಿದ್ಯಾರ್ಥಿಗಳಿಗೆ ವೈಯಕ್ತಿಕ ನೆಲೆಯಲ್ಲಿ ಮತ್ತು ವಿದ್ವಾಂಸರಿಗೆ ಕ್ಷೇತ್ರಗಳಲ್ಲಿ ನೀಡಲಾಗುತ್ತದೆ. ಅನೇಕ ಪ್ರಸಂಗಗಳಲ್ಲಿ ವ್ಯಕ್ತಿ ವಿದೇಶಗಳಿಗೆ ಹೋಗಿ ಕಲಿಯಲು ಅಥವಾ ಸಂಶೋಧನೆ ನಡೆಸಲು ಪ್ರವರ್ತಕರಾಗಿ ಕೂಡಾ ಕಾರ್ಯನಿರ್ವಹಿಸುತ್ತಾರೆ. ಇದರಲ್ಲಿ ಕಾಮನ್‌ವೆಲ್ತ್ ಸ್ಕಾಲರ್‌ಶಿಪ್, ಬ್ರಿಟಿಷ್ ಕೌನ್ಸಿಲ್ ಸ್ಕಾಲರ್‌ಶಿಪ್, ಯು.ಕೆ. ಕೆನಡಾ, ಜರ್ಮನಿ, ರಷ್ಯಾ ಇತ್ಯಾದಿ ದೇಶಗಳ ಸರಕಾರಗಳ ಸ್ಕಾಲರ್‌ಶಿಪ್‌ಗಳು ಇವೆ. ವಿದೇಶಿ ಸರಕಾರಗಳ ವಿದ್ಯಾರ್ಥಿವೇತನಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಶಿಕ್ಷಣ ವಿಭಾಗದ ಮೂಲಕ ಪರಿಷ್ಕರಣೆಗೊಳಿಸಲಾಗುತ್ತದೆ. ಭಾರತೀಯ ಸಂಸ್ಥೆಗಳಲ್ಲಿ ಕಲಿಯುವುದಕ್ಕಾಗಿ ಭಾರತ ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿವೇತನಗಳನ್ನು ನೀಡುತ್ತಿದೆ. ಈ ವಿದ್ಯಾರ್ಥಿವೇತನಗಳ ಪ್ರಮುಖ ಫಲಾನುಭವಿಗಳೆಂದರೆ, ದಕ್ಷಿಣ ಏಷ್ಯಾ, ಆಫ್ರಿಕಾ ಮತ್ತು ಈಶಾನ್ಯ ಏಷ್ಯಾದ ದೇಶಗಳಾಗಿವೆ. ಕೆಲವು ವಿದ್ಯಾರ್ಥಿವೇತನಗಳನ್ನು ಭಾರತೀಯ ಕಲೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕಾಗಿ ಪಶ್ಚಿಮದ ದೇಶಗಳಿಗೆ ನೀಡಲಾಗುತ್ತದೆ. ಅಗಾಧ ಸಂಖ್ಯೆಯಲ್ಲಿ ಭಾರತೀಯ ಮೂಲದ ಜನರು ಇರುವ ಪ್ರದೇಶಗಳಲ್ಲಿ ಹಿಂದಿ ಕಲಿಸುವಿಕೆಗೆ ಶಿಕ್ಷಕರನ್ನು ನಿಯೋಜಿಸಲು ಕೂಡಾ ಭಾರತ ಬೆಂಬಲವನ್ನು ನೀಡಿದೆ.

ವಿಶೇಷ ಕಾರ್ಯಕ್ರಮಗಳಿಗೆ ನೀಡುವ ಆರ್ಥಿಕ ನೆರವು ದೇಶಗಳ ಸಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಗುರಿಯಾಗಿ ಇಟ್ಟುಕೊಂಡಿದೆ. ಯುನೆಸೆಫ್, ಯುಎನ್‌ಡಿಪಿ., ವಿಶ್ವಬ್ಯಾಂಕ್, ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್, ಯುಎಸ್‌ಎಐಡಿ ಇತ್ಯಾದಿ

Digitised by Bharatavani, CIIL

ಏಜೆನ್ಸಿಗಳು ಮತ್ತು ಇತರ ವಿಶೇಷ ಸಹಾಯಕ ಏಜೆನ್ಸಿಗಳು ಸಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ನೆರವಾಗುವ ದೊಡ್ಡ ಪ್ರಮಾಣದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಆರ್ಥಿಕ ನೆರವು ಮತ್ತು ಕಾರ್ಯನೀತಿಗಳನ್ನು ಒದಗಿಸುತ್ತವೆ. ಕೆಲವು ಏಜೆನ್ಸಿಗಳ ನೆರವು ಮತ್ತು ಬೆಂಬಲವನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ:

**ಅಂತಾರಾಷ್ಟ್ರೀಯ ಶಿಕ್ಷಣವನ್ನು ಕುರಿತು ಕಾರ್ಯನಿರತ ಗುಂಪು (ದಿ ಇಂಟರ್‌ನ್ಯಾಶನಲ್ ವರ್ಕಿಂಗ್ ಗ್ರೂಪ್ ಆನ್ ಎಡ್ಯುಕೇಶನ್ –ಐಡಬ್ಲ್ಯುಜಿಇ):**

ಸಹಾಯಾರ್ಥ ಏಜೆನ್ಸಿಗಳು ಮತ್ತು ಪ್ರತಿಷ್ಠಾನಗಳ ಅನೌಪಚಾರಿಕ ಗುಂಪಾಗಿ 1972ರಲ್ಲಿ ಸೃಷ್ಟಿಸಲಾದ ಐಡಬ್ಲ್ಯುಜಿಇಯ ಮುಖ್ಯ ಉದ್ದೇಶ ದಾನಿ ಏಜೆನ್ಸಿಗಳಿಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವುದಕ್ಕೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಒಟ್ಟೊಟ್ಟಿಗೆ ಸಾಗುವುದಕ್ಕೆ ಅವಕಾಶವನ್ನು ಒದಗಿಸುವುದಾಗಿದೆ. ಇದರ ಸದಸ್ಯತ್ವವು ಶಿಕ್ಷಣದ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಸಹಾಯಾರ್ಥ–ಏಜೆನ್ಸಿಗಳಿಗೆ ಮತ್ತು ಪ್ರತಿಷ್ಠಾನಗಳಿಗೆ (ಬಹುಪಕ್ಷೀಯ ಅಥವಾ ದ್ವಿಪಕ್ಷೀಯ, ಸರಕಾರಿ ಅಥವಾ ಸರಕಾರೇತರ) ಮುಕ್ತವಾಗಿದೆ. ಇದರ ಸಚಿವಾಲಯವನ್ನು ಐಐಇಪಿ ಒದಗಿಸುತ್ತದೆ. ಯೋಜನಾ ಸಮಿತಿಯಲ್ಲಿ ಆಘಾಖಾನ್ ಫೌಂಡೇಶನ್, ಅಂತಾರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಐಬಿಆರ್‌ಡಿ), ಸ್ವೀಡಿಶ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಕಾರ್ಪರೇಶನ್, ಏಜೆನ್ಸಿ (ಎಸ್‌ಐಡಿಎ), ಯುನಿಸೆಫ್, ಯುನೆಸ್ಕೊ, ಯುಎಸ್‌ಎಐಡಿ ಮತ್ತು ಡಿಎಫ್‌ಐಡಿಗಳಿದ್ದು, ಫಲಪ್ರದ ಆಡಳಿತಕ್ಕೆ ನಿರ್ವಹಣೆಗೆ ಸಚಿವಾಲಯ ನೆರವಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿನ ಅಂತಾರಾಷ್ಟ್ರೀಯ ಸಹಕಾರಕ್ಕೆ ಸಂಬಂಧಿಸಿದ ಸಾಮಾನ್ಯ ಆಸಕ್ತಿ ವಿಚಾರಗಳನ್ನು ಚರ್ಚಿಸುವುದಕ್ಕಾಗಿ ಐಡಬ್ಲ್ಯುಜಿಇ 16 ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ಸಾಮಾನ್ಯವಾಗಿ ಇಲ್ಲಿ ಚರ್ಚೆಗೆ ಬರುವ ವಿಚಾರಗಳೆಂದರೆ 1. ಏಜೆನ್ಸಿಗಳ ಚಟುವಟಿಕೆಗಳ ಮಾಹಿತಿಯನ್ನು ಹಂಚಿಕೊಳ್ಳುವುದು 2. ಪ್ರಚಲಿತ ಸವಾಲುಗಳಿಗೆ ಸಂಬಂಧಿಸಿದ ಒಂದು ಅಥವಾ ಅನೇಕ ವಿಷಯಗಳ ಕುರಿತು ಚರ್ಚೆ ನಡೆಸುವುದು; 3. ಅಂತರ್–ಏಜೆನ್ಸಿ ಸಹಕಾರವನ್ನು ಸುಧಾರಿಸುವುದು. ಸಹಭಾಗಿಗಳ ಎರಡು ವರ್ಗಗಳು ಈ ಕೆಳಗಿನಂತಿವೆ:

**ಬಹುಪಕ್ಷೀಯ ಏಜೆನ್ಸಿಗಳು ಮತ್ತು ಸಂಸ್ಥೆಗಳು:**

ಆಫ್ರಿಕನ್ ಡೆವಲಪ್‌ಮೆಂಟ್ ಬ್ಯಾಂಕ್, ಏಶ್ಯಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ), ಆಫ್ರಿಕಾದಲ್ಲಿನ ಅಸೋಸಿಯೇಶನ್ ಫಾರ್ ದಿ ಡೆವಲಪ್‌ಮೆಂಟ್ ಆಫ್ ಎಡ್ಯುಕೇಶನ್ (ಎಡಿಇಎ), ಕಾಮನ್‌ವೆಲ್ತ್ ಸೆಕ್ರೆಟರೇಟ್, ಯುರೋಪಿಯನ್ ಕಮ್ಯುನಿಟಿ (ಇಸಿ), ಫುಡ್ ಆಂಡ್ ಅಗ್ರಿಕಲ್ಚರಲ್ ಆರ್ಗನೈಜೇಶನ್ (ಎಫ್‌ಎಓ)ಮ, ಇಂಟರ್‌ನ್ಯಾಶನಲ್ ಇನ್‌ಸ್ಟಿಟ್ಯೂಟ್ ಫಾರ್ ಎಡ್ಯುಕೇಶನಲ್ ಪ್ಲಾನಿಂಗ್ (ಐಐಇಪಿ), ಇಂಟರ್‌ನ್ಯಾಶನಲ್ ಲೇಬರ್ ಆಫೀಸ್ (ಐಎಲ್‌ಓ), ಆರ್ಗನೈಜೇಶನ್ ಫಾರ್ ಇಕನಾಮಿಕ್ ಕಾರ್ಪೊರೇಶನ್ ಆಂಡ್ ಡೆವಲಪ್‌ಮೆಂಟ್ (ಓಇಸಿಡಿ), ಯುಎನ್‌ಡಿಪಿ, ಯುನೆಸ್ಕೋ, ಯುನೆಸೆಫ್, ವಿಶ್ವಬ್ಯಾಂಕ್ ಮತ್ತು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಹೆಚ್‌ಓ).

**ದ್ವಿಪಕ್ಷೀಯ ಏಜೆನ್ಸಿಗಳು ಮತ್ತು ಪ್ರತಿಷ್ಠಾನಗಳು:**

ಆಘಾ ಖಾನ್ ಫೌಂಡೇಶನ್, ಬರ್ನರ್ಡ್ ವ್ಯಾನ್ ಲೀರ್ ಫೌಂಡೇಶನ್, ಕರ್ನಗಿ ಕಾರ್ಪೋರೇಶನ್, ರಾಕ್‌ಫೆಲ್ಲರ್ ಫೌಂಡೇಶನ್, ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಬ್ಯುರೊ (ಆಸ್ಟ್ರೇಲಿಯ), ಫೆಡರಲ್ ಮಿನಿಸ್ಟ್ರಿ ಆಫ್ ಫಾರಿ ಅಫೇರ್ಸ್, ಆಷ್ಟ್ರಿಯನ್ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್ ರಿಸರ್ಚ್ (ಆಷ್ಟ್ರೀಯಾ), ಡೈರೆಕ್ಷನ್ ಜನರಲೆ ಡಿ ಲಾ ಕಾರ್ಪೊರೇಶನ್ ಔ ಡೆವಲಪ್‌ಮೆಂಟ್ (ಬೆಲ್ಜಿಯಂ), ಕೆನೆಡಿಯನ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಏಜೆನ್ಸಿ (ಸಿಐಡಿಎ), ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ರಿಸರ್ಚ್ ಸೆಂಟರ್ (ಐಡಿಆರ್‌ಸಿ) (ಕೆನಡ), ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ಡಿಪಾರ್ಟ್‌ಮೆಂಟ್ (ಡಿಎಎನ್‌ಐಡಿಎ) (ಡೆನ್ಮಾರ್ಕ್), ವಿದೇಶಿ ವ್ಯವಹಾರ ಮಂತ್ರಾಲಯ, ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ಡಿಪಾರ್ಟ್‌ಮೆಂಟ್ (ಡಿಐಡಿಸಿ) (ಫಿನ್‌ಲ್ಯಾಂಡ್), ಏಜೆನ್ಸ್ ಪ್ರಾಂಚೇಸ್ ಡಿ ಡೆವಲಪ್‌ಮೆಂಟ್ (ಫ್ರಾನ್ಸ್), ಮಿನಿಸ್ಟರೆ ಡೆಸ್ ಅಫೇರ್ಸ್ ಎಟ್ರೇಂಜರ್ಸ್ (ಫ್ರಾನ್ಸ್), ಫೆಡರಲ್ ಮಿನಿಸ್ಟ್ರೀ ಫಾರ್ ಸೈಂಟಿಫಿಕ್ ಕಾರ್ಪೊರೇಶನ್ ಅಂಡ್ ಡೆವಲಪ್‌ಮೆಂಟ್ (ಜರ್ಮನಿ), ಅಂತಾರಾಷ್ಟ್ರೀಯ ಅಭಿವೃದ್ಧಿಗಾಗಿ ಜರ್ಮನ್ ಫೌಂಡೇಶನ್ (ಡಿಎಸ್‌ಇ), ತಾಂತ್ರಿಕ ಸಹಕಾರಕ್ಕಾಗಿ ಜರ್ಮನ್ ಏಜೆನ್ಸಿ (ಜಿಟಿಝುಡ್), ಐರ್ಲೆಂಡಿಕ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಏಜೆನ್ಸಿ (ಐಸಿಇಐಡಿಎ) (ಐಸ್‌ಲ್ಯಾಂಡ್), ವಿದೇಶಿ ವ್ಯವಹಾರಗಳ ವಿಭಾಗ (ಐರ್‌ಲ್ಯಾಂಡ್), ಜನರಲ್ ಡೈರೆಕ್ಟೋರೇಟ್ ಫಾರ್ ಡೆವಲಪ್‌ಮೆಂಟ್ ಕಾರ್ಪೊರಶನ್ (ಇಟಲಿ), ವಿದೇಶಿ ವ್ಯವಹಾರಗಳ ಮಂತ್ರಾಲಯ( ನೆದರ್‌ಲ್ಯಾಂಡ್ಸ್), ನೆದರ್‌ಲ್ಯಾಂಡ್ಸ್ (ಆರ್ಗನೈಜೇಶನ್ ಫಾರ್ ಇಂಟರ್‌ನ್ಯಾಶನಲ್ ಕೋ–ಆಪರೇಶನ್ ಇನ್ ಹೈಯರ್ ಎಡ್ಯುಕೇಶನ್ (ಎನ್‌ಯುಎಫ್‌ಎಫ್‌ಐಸಿ), ನಾರ್ವೇನ್ ಏಜೆನ್ಸಿ ಆಫ್ ಡೆವಲಪ್‌ಮೆಂಟ್ ಕೋ–ಆಪರೇಶನ್ (ಎನ್‌ಓಟಿಎಡಿ), ಶಿಕ್ಷಣ ಮಂತ್ರಾಲಯ (ಪೋರ್ಚುಗಲ್), ಸ್ವೀಡೀಶ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಕೋ–ಆಪರೇಶನ್ ಏಜೆನ್ಸಿ (ಎಸ್‌ಐಡಿಎ), ಡೈರೆಕ್ಷನ್ ಡು ಡೆವಲಪ್‌ಮೆಂಟ್ ಎಟ್‌ಡಿ ಲ ಕೋ ಆಪರೇಶನ್ (ಡಿಸಿಸಿ) (ಸ್ವೀಝರ್‌ಲ್ಯಾಂಡ್) ಡಿಪಾರ್ಟ್‌ಮೆಂಟ್ ಆಫ್ ಟೆಕ್ನಿಕಲ್ ಅಂಡ್ ಇಕನಾಮಿಕ್ ಕೋ–ಆಪರೇಶನ್ (ಥೈಲ್ಯಾಂಡ್), ದಿ ಬ್ರಿಟಿಷ್ ಕೌನ್ಸಿಲ್, ಡಿಪಾರ್ಟ್‌ಮೆಂಟ್ ಅಫ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ (ಡಿಎಫ್‌ಐಡಿ) ಮತ್ತು ಯುನೈಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ (ಯುಎಸ್‌ಎಐ)

**ವಿಶ್ವಬ್ಯಾಂಕ್:**

ಬಹುಪಾಲು ಅಭಿವೃದ್ಧಿಶೀಲ ದೇಶಗಳ ಮಾನವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಹಣವನ್ನು

Digitised by Bharatavani, CIIL

ಒದಗಿಸತಕ್ಕಂತಹ ಸಂಸ್ಥೆ ವಿಶ್ವಬ್ಯಾಂಕ್. ಜೀವನಾಧಾರ ಆರ್ಥಿಕ ಬೆಳವಣಿಗೆಯಲ್ಲಿ ಬಡತನವನ್ನು ಕಡಿಮೆ ಮಾಡುವುದು ಮತ್ತು ಮಾನವಾಭಿವೃದ್ಧಿಯಲ್ಲಿ ಬ್ಯಾಂಕಿನ ಯೋಜನಾ ನೀತಿಗಳು ಶಾಲಾ ಪ್ರವೇಶ ಮತ್ತು ಗುಣಮಟ್ಟ ಸುಧಾರಣೆಯಲ್ಲಿ ತಮ್ಮ ಗಮನವನ್ನು ಕೇಂದ್ರೀಕೃತಗೊಳಿಸಿವೆ. ಜ್ಞಾನ (ತಿಳಿವಳಿಕೆ) ಆರ್ಥಿಕತೆಗಾಗಿ ಮಾನವ ಸಾಮರ್ಥ್ಯವನ್ನು ಕಟ್ಟಿಕೊಳ್ಳುವ ಬದ್ಧತೆಯನ್ನು ಹೊಂದಿರುವ ಬ್ಯಾಂಕ್, 2005ರೊಳಗೆ ಎಲ್ಲರಿಗೂ ಶಿಕ್ಷಣವನ್ನು ಒದಗಿಸುವುದರಲ್ಲಿ ಮತ್ತು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ದೇಶಗಳಿಗೆ ನೆರವಾಗುವ ಪ್ರಮುಖ ಉದ್ದೇಶವನ್ನು ಹೊಂದಿದೆ. ಅದರ ಶಿಕ್ಷಣಕ್ಕಾಗಿ ಎರವಲು (ಸಹಾಯ) ನೀಡುವಿಕೆ ಶಿಕ್ಷಣಕ್ಕೆ ಎರವಿಲ್ಲದ ಬೆಂಬಲ ನೀಡುವಿಕೆಯ ಮೂಲಕ ಬ್ಯಾಂಕ್, ಯುನೆಸ್ಕೊ, ಯು.ಎನ್.ಡಿಪಿ., ಯುನಿಸೆಫ್ ಮತ್ತು ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (ಯುಎನ್‌ಪಿಎಫ್) ಯೊಂದಿಗೆ ಶೈಕ್ಷಣಿಕ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ. ಶಿಕ್ಷಣಕ್ಕಾಗಿ ಎರವಲು (ಸಹಾಯ) ನೀಡುವಿಕೆಯು ಪ್ರಾಥಮಿಕ, ಮಾಧ್ಯಮಿಕ, ಮತ್ತು ಉದ್ಯೋಗ ಹಂತಗಳಲ್ಲಿ ಪ್ರವೇಶ, ಗುಣಮಟ್ಟ, ದಕ್ಷತೆ ಮತ್ತು ಸಮಾನತೆಯ ಸುಧಾರಣೆಯ ಯೋಜನೆಗಳಿಗೆ ಬೆಂಬಲ ನೀಡುತ್ತದೆ. ಬಾಂಗ್ಲಾ ದೇಶದ ಮಾಧ್ಯಮಿಕ ಶಾಲಾ ಹೆಣ್ಮಕ್ಕಳ ಶಿಕ್ಷಣಕ್ಕೆ ಸಹಾಯ ನೀಡುವಿಕೆ ಮತ್ತು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಸಾಕ್ಷರತಾ ಪ್ರಮಾಣವನ್ನು ಹೊಂದಿರುವ 266 ಜಿಲ್ಲೆಗಳಲ್ಲಿ ಪ್ರಾರಂಭಿಸಲಾದ ಭಾರತದ ಜಿಲ್ಲಾ ಶಿಕ್ಷಣ ಯೋಜನೆ (ಡಿಪಿಇಪಿ) ಈ ವಿಧದ ಪ್ರಮುಖ ಕಾರ್ಯಯೋಜನೆಗಳಿಗೆ ಉದಾಹರಣೆಗಳಾಗಿವೆ. ಈ ಬೆಂಬಲವನ್ನು ವಯಸ್ಕ ಮತ್ತು ಮಹಿಳಾ ಸಾಕ್ಷರತೆಗಾಗಿಯೂ ಅನೇಕ ದೇಶಗಳಿಗೆ ವಿಸ್ತರಿಸಲಾಗಿದೆ. 2001ರಲ್ಲಿ ಈ ಕಾರ್ಯಯೋಜನೆಗಾಗಿ 1.1 ಬಿಲಿಯನ್ ಡಾಲರ್ ಹಣವನ್ನು ಒದಗಿಸಲಾಗಿದೆ.

ಶಿಕ್ಷಣಕ್ಕೆ ಎರವಿಲ್ಲದ ಬಂಬಲ ನೀಡುವಿಕೆಯನ್ನು ದೇಶಗಳು, ಬಡತನ ಇಳಿಸುವ ಯೋಜನಾನೀತಿ ಪತ್ರ (ಪಿಆರ್‌ಎಸ್‌ಪಿ) ದ ತಯಾರಿಕೆಗಾಗಿ ವಿಶ್ಲೇಷಕ ಕಾರ್ಯ, ಉತ್ತಮ ಪರಿಪಾಠದ ಸಂಯೋಜನೆ, ಸಾಮರ್ಥ್ಯ ಬೆಳೆಸುವಿಕೆ ಮತ್ತು ತಾಂತ್ರಿಕ ಆಧಾರವನ್ನು ಒದಗಿಸುವ ಸಲುವಾಗಿ ನೀಡಲಾಗುತ್ತದೆ. ಶಿಕ್ಷಣ ಆರ್ಥಿಕತೆಗಳು, ಶಿಕ್ಷಕ ತರಬೇತಿ ಮತ್ತು ವೇತನ, ವ್ಯಾಪಕ ಪ್ರವೇಶದ ವ್ಯಾಪ್ತಿಯನ್ನು ಹೊಂದುವುದು, ಇವುಗಳನ್ನು ತಕ್ಷಣ ಗಮನಹರಿಸಬೇಕಾದ ವಿಚಾರಗಳಾಗಿ ಗುರುತಿಸಲಾಗಿದೆ. ಇನ್ನೊಂದು ಬಹು ಮುಖ್ಯವಾದ ಬೆಂಬಲಾತ್ಮಕ ರಚನೆಯೆಂದರೆ ದಾನಿಗಳು, ಸರಕಾರೇತರ ಸಂಸ್ಥೆಗಳು (ಎನ್‌ಜಿಒ), ಮತ್ತು ಖಾಸಗಿ ವಲಯದ ಸಹಭಾಗಿಗಳೊಂದಿಗೆ ಯೋಜನಾನೀತಿಯ ಮೈತ್ರಿಯನ್ನು ಹೊಂದುವುದು. ಆಫ್ರಿಕಾದಲ್ಲಿ ಫೊಕಸಿಂಗ್ ರಿಸೋರ್ಸ್ಸ್ ಆನ್ ಇಫೆಕ್ಟಿವ್ ಸ್ಕೂಲ್ ಹೆಲ್ತ್ (ಎಫ್‌ಆರ್‌ಇಎಸ್‌ಎಚ್) ಯೋಜನೆ ಮತ್ತು ಯೋಜನಾ ನೀತಿಯ ಕೆಳಗೆ ಅಂಕೀಯ ವಿಭಜನೆ ಮತ್ತು ಅಂತಾರಾಷ್ಟ್ರೀಯ ತಂತ್ರಜ್ಞಾನ ಸಂವಹನ (ಐಸಿಟಿ) ವಿಚಾರಗಳನ್ನು ಉದ್ದೇಶಿಸಲು ದೇಶಗಳಿಗೆ ನೆರವಾಗಲು ಖಾಸಗಿ ವಲಯದೊಂದಿಗೆ ಮೈತ್ರಿಯನ್ನು ಹೊಂದುವುದು ಅತ್ಯಂತ ಹೆಚ್ಚು ಲಾಭವನ್ನು ತರುತ್ತಿದೆ. ಇದರೊಂದಿಗೆ, ಫಾವರ್ಟಿ ರಿಡಕ್ಷನ್ ಸಪೋರ್ಟ್ ಕ್ರೆಡಿಟ್ (ಪಿಆರ್‌ಎಸ್‌ಸಿ) ಬಡ್ಡಿರಹಿತ), ಮಧ್ಯಮ ಅವಧಿಯು, ಬಹುವಲಯದ ಬೆಂಬಲವನ್ನು ಮೂಲಭೂತ ಶಿಕ್ಷಣ ನೀಡುವಿಕೆಗೆ ಒದಗಿಸುತ್ತದೆ. ಜೊತೆಗೆ ಆರೋಗ್ಯ ಕಾಳಜಿ, ಜಲ ಮತ್ತು ನೈರ್ಮಲ್ಯ ಸೇವೆಗಳಿಗೆ ಕೂಡಾ ನೀಡುತ್ತದೆ. ಮೊದಲ ಪಿಆರ್‌ಎಸ್‌ಸಿಯನ್ನು 2001ರಲ್ಲಿ ಉಗಾಂಡಾಕ್ಕೆ ನೀಡಲಾಗಿದೆ.

**ವಿಶ್ವ ಬ್ಯಾಂಕ್ ಸಂಸ್ಥೆ (ಡಬ್ಲ್ಯುಬಿಐ):**

ಜ್ಞಾನ, ಸಾಮರ್ಥ್ಯ ಬೆಳೆಸುವಿಕೆ ಮತ್ತು ಸೌಕರ್ಯಗಳ ಮೂಲಕ ಜನರನ್ನು ಸಬಲೀಕರಣಗೊಳಿಸುವ ಸಲುವಾಗಿ ಸ್ಥಾಪಿಸಲಾದ ವಿಶ್ವ ಬ್ಯಾಂಕ್ ಸಂಸ್ಥೆಯು ಸಿಬ್ಬಂದಿಗಳು, ಮತ್ತು ಬ್ಯಾಂಕಿನ ಗ್ರಾಹಕರು, ನಿಯಮಗಳನ್ನು ರೂಪಿಸುವವರು, ಮಂತ್ರಾಲಯದ ಸಿಬ್ಬಂದಿಗಳು, ವಿದ್ವಾಂಸರು, ಸಂಸತ್ತಿನ ಸದಸ್ಯರು, ಪತ್ರಕರ್ತರು, ಸರಕಾರೇತರ ಸಂಸ್ಥೆಗಳು, ಖಾಸಗಿ ವಲಯ ಮತ್ತು ನಾಗರಿಕ ಸಮಾಜದ ಇತರ ಘಟಕಗಳು ಅಭಿವೃದ್ಧಿ ವಿಚಾರಗಳನ್ನು ತಿಳಿದುಕೊಳ್ಳಲು ಸಹಾಯ ನೀಡುತ್ತದೆ. ಇಂದು ವಿಶ್ವಬ್ಯಾಂಕ್ ಸಂಸ್ಥೆಯು ಸುಮಾರು 600 ಕಲಿಕಾ ಚಟುವಟಿಕೆಗಳನ್ನೊಳಗೊಂಡ ಗ್ರಾಹಕ ಯೋಜನೆಗಳ ಮೂಲಕ ಪ್ರತಿವರ್ಷ 150 ದೇಶಗಳ 48,000 ಸಹಭಾಗಿಗಳನ್ನು ತಲುಪುತ್ತದೆ.

**ಯುನೈಟೆಡ್ ನೇಶನ್ಸ್ ಇಂಟರ್‌ನ್ಯಾಶನಲ್ ಚಿಲ್ಡ್ರನ್ ಎಮರ್ಜೆನ್ಸಿ ಫಂಡ್ (ಯುನಿಸೆಫ್): ಈ ಮೂಲಕ ಸಹಾಯ ಮತ್ತು ಬೆಂಬಲ:** ದ್ವಿತೀಯ ಜಾಗತಿಕ ಯುದ್ಧದ ಬಳಿಕ ಯುರೋಪಿನ ಮಕ್ಕಳಿಗೆ ನೆರವು ನೀಡುವ ಸಲುವಾಗಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಸೃಷ್ಟಿಸಿದ 'ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಕ್ಕಳ ತುರ್ತು ನಿಧಿ' ಅಥವಾ ಯುನಿಸೆಫ್1953 ರಲ್ಲಿ ವಿಶ್ವಸಂಸ್ಥೆಯ ವ್ಯವಸ್ಥೆಯಲ್ಲಿ ಖಾಯಂ ಘಟಕವಾಯಿತು. ಈಗ ಯುನಿಸೆಫ್‌ನ ಏಕಮಾತ್ರ ರಾಯಸ ಯಾವುದೆಂದರೆ ಮಕ್ಕಳ ರಕ್ಷಣೆಯನ್ನು ಪ್ರತಿಪಾದಿಸುವುದು, ಅವರ ಮೂಲಭೂತ ಅವಶ್ಯಕತೆಗಳಿಗೆ ನೆರವು ನೀಡುವುದು, ಮತ್ತು ಅವರು ತಮ್ಮ ಸಂಪೂರ್ಣ ಅಂತಃಸತ್ವವನ್ನು ಬೆಳೆಸಿಕೊಳ್ಳಲು ಅವಕಾಶವನ್ನು ವಿಸ್ತರಿಸುವುದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಮಾರ್ಗದರ್ಶನದಲ್ಲಿ ಯೂನಿಸೆಫ್ ಈ ಕೆಳಗಿನ ಪ್ರಯತ್ನಗಳನ್ನು ನಡೆಸುತ್ತಿದೆ : ಮಕ್ಕಳ ಹಕ್ಕುಗಳು ಅತ್ಯವಶ್ಯಕ ನೈತಿಕ ನೀತಿಗಳೆಂದು ಸ್ಥಾಪಿಸುವುದು; ಮಾನವ ಪ್ರಗತಿಗೆ ಮಕ್ಕಳ ಅಸ್ತಿತ್ವ, ರಕ್ಷಣೆ ಮತ್ತು ಪ್ರಗತಿ ಸಾರ್ವತ್ರಿಕ ಅಭಿವೃದ್ಧಿಗೆ ಕಡ್ಡಾಯವೆಂಬುದನ್ನು ಒತ್ತಿ ಹೇಳುವುದು; ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಕ್ಕಳ ಶಿಕ್ಷಣ ಮತು ಆರೋಗ್ಯದ ಆಶಯದೊಂದಿಗೆ ರಾಜಕೀಯ ಸಂಕಲ್ಪ ಮತ್ತು ವೈದ್ಯಕೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದು; ಮತ್ತು ಬಹುಪಾಲು ಅವಕಾಶರಹಿತ ಮಕ್ಕಳಿಗೆ ವಿಶೇಷ ರಕ್ಷಣೆಯನ್ನು ಒದಗಿಸುವುದು. ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ತುರ್ತು ಸ್ಥಿತಿಗಳಿಗೆ ಕೂಡಾ ಅದು ಸ್ಪಂದಿಸುತ್ತದೆ. ಜೊತೆಗೆ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಸಮಾನ ಹಕ್ಕುಗಳ ಕುರಿತಾದ ಯೋಜನೆಗಳಲ್ಲಿ ಆಯಾ ದೇಶಗಳಿಗೆ ಸಹಕಾರವನ್ನು ಒದಗಿಸುತ್ತದೆ ಮತ್ತು ವಿಶ್ವಸಂಸ್ಥೆಯ

Digitised by Bharatavani, CIIL

ರಾಯಸದಲ್ಲಿ ಅಳವಡಿಸಿಕೊಳ್ಳಲಾದ ಸಾಮಾಜಿಕ ಪ್ರಗತಿಯನ್ನು ಕಂಡುಕೊಳ್ಳಲು ಉಳಿದುಕೊಳ್ಳುವಂತಹ ಮಾನವ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಎಲ್ಲಾ ಪಾಲುಗಾರರಿಗೆ ಅದು ಸಹಕಾರ ಒದಗಿಸುತ್ತದೆ.

ಶಿಕ್ಷಣ ಕ್ಷೇತ್ರದ ಯುನಿಸೆಫ್ ಸಹಕಾರವು ರಾಷ್ಟ್ರೀಯ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟಗಳಲ್ಲಿ ಬೇರೂರಿದೆ. ಈ ಚಟುವಟಿಕೆಗಳು ದೇಶಗಳ ಜೊತೆಗಿನ ಸಹಯೋಗದಿಂದ ಪ್ರಾರಂಭಗೊಂಡು ವಿಶ್ವಸಂಸ್ಥೆಯ ಇತರ ಸಹಭಾಗಿಗಳು ಮತ್ತು ವಿಶ್ವಸಂಸ್ಥೆಯ ಹೆಣ್ಮಕ್ಕಳ ಶಿಕ್ಷಣ ಕಾರ್ಯತತ್ಪರತೆ (ಯುಎನ್ ಗರ್ಲ್ಸ್ ಎಡ್ಯುಕೇಶನ್ ಇನಿಶಿಯೇಟಿವ್–ಯುಎನ್‌ಜಿಇಐ) ಯೊಂದಿಗೆ ವಿಶ್ವಸಂಸ್ಥೆಯ ಅಭಿವೃದ್ಧಿ ನೆರವಿನ ಚೌಕಟ್ಟನ್ನು ಯೋಜಿಸುವುದಕ್ಕೆ ದಾರಿ ಮಾಡಿಕೊಡುತ್ತದೆ. ಕೆಲವು ವ್ಯಾಪಕ ಯೋಜನೆಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:

**ಕಾರ್ಯಗತಿಗಾಗಿ ಹೆಣ್ಮಕ್ಕಳ ಶಿಕ್ಷಣ ಚೌಕಟ್ಟು:**

- ಸರ್ವಶಿಕ್ಷಣ (ಇಎಫ್‌ಎ)ಕ್ಕೆ ವ್ಯವಸ್ಥಿತ ಪ್ರವೇಶವನ್ನು ಬೆಂಬಲಿಸುವ ರಾಷ್ಟ್ರೀಯ ಶಿಕ್ಷಣ ಯೋಜನೆಗಳಲ್ಲಿ ಕೆಲಸ ಮಾಡುವುದು. ಇದನ್ನು ಸುಸ್ಥಿತಿಯ ಕಾರ್ಯನೀತಿ ರೂಪಣೆ, ಸಾಮರ್ಥ್ಯ ಬೆಳವಣಿಗೆ ಮತ್ತು ತಾಳಿಕೆಗೆ ಪ್ರಾಶಸ್ತ್ಯ ನೀಡುವಿಕೆ, ಮತ್ತು ದೀರ್ಘಾವಧಿಯ ಬಾಧ್ಯತೆಗೆ ಒಪ್ಪಿಕೊಳ್ಳುವ ಸರಕಾರ ಮತ್ತು ಹಣಒದಗಿಸುವ ಮತ್ತು ಇತರ ಏಜೆನ್ಸಿಗಳನ್ನೊಳಗೊಂಡ 'ಸಾಂದ್ರ' ಪ್ರಯತ್ನದ ಮೂಲಕ ಮಾಡಬಹುದಾಗಿದೆ.
- ಯಜಮಾನಿಕೆ ಮತ್ತು ಉದ್ದೇಶಿತ ಫಲಾನುಭವಿಗಳ ಪರವಾಗಿ ಸಮಾನ ತೊಡಗಿಸಿಕೊಳ್ಳುವಿಕೆಯ ಪರಿಕಲ್ಪನೆಯನ್ನು ಒಳಗೊಂಡಿರುವ ಪಾಲುಗಾರಿಕೆಯನ್ನು ಬೆಳೆಸುವುದು.
- ಸಂಪ್ರದಾಯಸ್ಥ ಮತ್ತು ಅಸಂಪ್ರದಾಯಸ್ಥ ಎರಡೂ ಪಾಲುಗಾರಿಕೆಯನ್ನು ವಿಸ್ತರಿಸಿಕೊಳ್ಳುವುದು. ಇದರಲ್ಲಿ ಕುಟುಂಬ ಮತ್ತು ಸಮುದಾಯದ ಪಾಲುಗೊಳ್ಳುವಿಕೆ ಮತ್ತು ಸಾಮಾಜಿಕ ಚಲನೆಗೆ ನಿರ್ದಿಷ್ಟ ಒತ್ತನ್ನು ನೀಡುವುದು.
- ಮಕ್ಕಳ ದೃಢನಿರ್ಧಾರ, ಸ್ಪರ್ಧೆ ಮತ್ತು ಸಾಧನೆಯನ್ನು ವೃದ್ಧಿಗೊಳಿಸುವಂತಹ ಕಲಿಕಾ ವಾತಾವರಣವನ್ನು ಅಭಿವೃದ್ಧಿಪಡಿಸುವಾಗ, ಶಿಕ್ಷಣದ ಎಲ್ಲಾ ಅಂಶಗಳಲ್ಲಿ ಔಪಚಾರಿ ಅನೌಪಚಾರಿಕ ವಿಧಾನಗಳ ಮೂಲಕ ಒದಗಿ ಬಂದಿರತಕ್ಕಂತಹ ಲಿಂಗಪೂರ್ವಗ್ರಹವನ್ನು ತೆಗೆದುಬಿಡುವುದು.
- ಅನಿವಾರ್ಯತೆಯಿಂದಾಗಿ ದುಡಿಯುವ ಮಕ್ಕಳು, ಅಂಗವಿಕಲರು ಮತ್ತು ಗರ್ಭಿಣಿ ಹುಡುಗಿಯರನ್ನೂ ಒಳಗೊಂಡು ಅತ್ಯಂತ ಹೆಚ್ಚು ದುರ್ಬಲರಾಗಿರುವ ಮಕ್ಕಳಿಗೆ ಗಮನನೀಡುವುದು.
- ಪ್ರಗತಿಯ ಗುರುತಾಗಿ ಪರಿಗಣಿಸಬಹುದಾದ ಮಾಪನದ ಸೂಚಕಗಳನ್ನು ಗುರುತಿಸುವುದು, ಪರಿವೀಕ್ಷಿಸುವುದು ಮತ್ತು ವರದಿ ಮಾಡುವುದು.
- ಎಳೆ ಮಕ್ಕಳ ಕಾಳಜಿ ಮತ್ತು ಪ್ರಗತಿ (ಇಸಿಸಿಡಿ) ಮತ್ತು ಯುವ ಮತ್ತು ಹದಿವಯಸ್ಸಿನ ಕ್ಷೇತ್ರಗಳಲ್ಲಿ ಅಗತ್ಯವೆನಿಸುವ ಚಟುವಟಿಕೆಗಳಿಗೆ ಅವಕಾಶ ಒದಗಿಸುವುದು. ಹೆಣ್ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬಲ್ಲ ಕಾರ್ಯಯೋಜನೆಗಳನ್ನು ಬೆಳೆಸುವುದು.

ವಿಶ್ವಸಂಸ್ಥೆಯ ಹೆಣ್ಣುಮಕ್ಕಳ ಶಿಕ್ಷಣ ಉಪಕ್ರಮ (ಯುನೈಟೆಡ್ ನೇಶನ್ಸ್ ಗರ್ಲ್ಸ್ ಎಡ್ಯುಕೇಶನ್ ಇನಿಶಿಯೇಟಿವ್ ಯು.ಎನ್.ಜಿ.ಇಐ):

2000 ಇಸವಿಯಲ್ಲಿ ಪ್ರಾರಂಭಿಸಲಾದ ಯುಎನ್‌ಜಿಇಐ ಹೆಣ್ಣುಮಕ್ಕಳ ಶಿಕ್ಷಣದ ಗುಣಮಟ್ಟ ಮತ್ತು ಲಭ್ಯತೆಯನ್ನು ಸುಧಾರಿಸುವ ತಾಳಿಕೆಯ ಪ್ರಚಾರವನ್ನು ಹೆಚ್ಚು ನಡೆಸಿದೆ. ಇದನ್ನು ವಿಶ್ವ ಸಂಸ್ಥೆಯ ವ್ಯವಸ್ಥೆಯ ಒಳಗಿನ ಮತ್ತು ಹೊರಗಿನ ವಿಭಿನ್ನ ಘಟಕಗಳ ಸಹವರ್ತಿ ಪಾಲುಗಾರಿಕೆಯ ಮೂಲಕ ನಡೆಸಲಾಗುತ್ತದೆ. ಯೂನಿಸೆಫ್‌ನ ಜಾಗತಿಕ ಹೆಣ್ಣುಮಕ್ಕಳ ಶಿಕ್ಷಣ ಯೋಜನೆಯ ಭಾಗವಾಗಿ ಆಫ್ರಿಕಾದಲ್ಲ ಹುಡುಗಿಯರ ಶಾಲಾ ಸೇರುವಿಕೆಗೆ ಪ್ರೋತ್ಸಾಹ ನೀಡುವ ಸಲುವಾಗಿ ಬಹುರಾಷ್ಟ್ರೀಯ ಯೋಜನೆ ಆಫ್ರಿಕನ್ ಗರ್ಲ್ಸ್ ಎಡ್ಯುಕೇಶನ್ ಇನಿಶಿಯೇಟಿವ್ (ಎಜಿಇಐ)ನ್ನು 1996ರಲ್ಲಿ ಪ್ರಾರಂಭಿಸಲಾಗಿದೆ. ಈಗ ಎರಡನೆಯ ಹಂತದಲ್ಲಿರುವ ಈ ಯೋಜನೆಗೆ ಪ್ರಾರಂಭದಲ್ಲಿ ಕೆನೆಡಿಯನ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಏಜೆನ್ಸಿ (ಸಿಐಡಿಎ) ಯ ಮೂಲಕ ಹಣವನ್ನು ಒದಗಿಸಲಾಗಿತ್ತು. ನಂತರ ಅನೇಕ ಏಜೆನ್ಸಿಗಳು, ಮಂತ್ರಿಗಳು ಮತ್ತು ಇತರ ದಾನಿಗಳು ಹಣ ನೀಡಿದ್ದಾರೆ.

**ಗುಣಮಟ್ಟದ ಶಿಕ್ಷಣಕ್ಕೆ ಬೆಂಬಲಿತ ಕೌಶಲ್ಯಗಳು (Stratgies):**

ಶೈಕ್ಷಣಿಕ ಕಾರ್ಯವಿಧಾನವನ್ನು ಬಲಪಡಿಸುವುದು ಮತ್ತು ಒಳ ಅಂಶಗಳ ಗುಣಮಟ್ಟವನ್ನು ಹೆಚ್ಚಿಸುವುದರ ಮೂಲಕ ಶಿಕ್ಷಣದಲ್ಲಿ ಗುಣಮಟ್ಟದ ಕಾಳಜಿಯನ್ನು ವ್ಯಕ್ತಪಡಿಸಿ ಉತ್ತಮ ದರ್ಜೆಯ ಶಿಕ್ಷಣಾರ್ಥಿಗಳನ್ನು ಸೃಷ್ಟಿಸುವುದು ಯೂನಿಸೆಫ್ ಆಯ್ದುಕೊಂಡ ಪ್ರಮುಖ ವಿಧಾನಗಳಲ್ಲಿ ಒಂದಾಗಿದೆ. ಜೀವನ ಕೌಶಲಗಳು ಆಧಾರಿತ ಶಿಕ್ಷಣವು (ಲೈಫ್ ಸ್ಕಿಲ್ ಬೇಸ್ಡ್ ಎಡ್ಯುಕೇಶನ್–ಎಲ್‌ಎಸ್‌ಬಿಇ) ಸಹಭಾಗಿತ್ವದ ಮತ್ತು ಲಿಂಗ–ಸಂವೇದನೆಯ ಬೋಧನೆ ಮತ್ತು ಅಧ್ಯಯನಕ್ಕೆ ಒತ್ತು ನೀಡುವುದುರ ಮೂಲಕ ಶೈಕ್ಷಣಿಕ ಕಾರ್ಯವಿಧಾನಗಳನ್ನು ಬಲಪಡಿಸುತ್ತದೆ. ಸಹಭಾಗಿತ್ವದ ವಿಧಾನಗಳು ಎಲ್ಲರಿಗೂ ಕೇಳುವುದಕ್ಕೆ ಮತ್ತು ಒಬ್ಬರು ಇನ್ನೊಬ್ಬರಿಂದ ಕಲಿಯುವುದಕ್ಕೆ ಸಮಾನ ಅವಕಾಶಗಳನ್ನು ಒದಗಿಸುತ್ತದೆ. ಮತ್ತು ಸ್ವ–ಮಾರ್ಗದರ್ಶಕ ಮತ್ತು ಪ್ರಾಯೋಗಿಕ ಕಲಿಯುವಿಕೆ (ಮಾಡುವುದರ ಮೂಲಕ ಕಲಿಯುವುದು) ಯನ್ನೊಳಗೊಂಡ ವಿಭಿನ್ನ ಬದುಕಿನ ಶೈಲಿಗಳಿಗೆ ಇದು ಪ್ರಿಯವಾಗಬಹುದು. ಮಕ್ಕಳು ಸಹಜ ಕಾರ್ಯವಿಧಾನವನ್ನು ಆಧರಿಸಿ ಜ್ಞಾನ, ಗುಣಗಳು, ಕೌಶಲ್ಯಗಳು ಮತ್ತು ಅಂತಿಮವಾಗಿ ವರ್ತನೆಯನ್ನು ಬೆಳೆಸಿಕೊಳ್ಳುತ್ತಾರೆ. ಹುಡುಗಿಯರು ಮತ್ತು

Digitised by Bharatavani, CIIL

ಹುಡುಗರನ್ನು ಪರಿಗಣಿಸಿ ಕಲಿಯುವವರ ಬದುಕಿಗೆ ಸಂಗತವೆನಿಸುವ ವಿಚಾರಗಳು ಮತ್ತು ಅಗತ್ಯಗಳನ್ನು ಆಧರಿಸಿ ವಿಷಯವನ್ನು ಹೆಚ್ಚಿಸಲಾಗುವುದು. ಎಲ್‌ಎಸ್‌ಬಿಇಯನ್ನು ಈಗ ಸಾಂಪ್ರದಾಯಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಸೇರಿಸಿಕೊಳ್ಳದ ಮತ್ತು ಯುವಜನರಿಂದ ಗುಣಾತ್ಮಕ ವರ್ತನೆಗಳನ್ನು ಅಳವಡಿಸಿಕೊಳ್ಳಬೇಕೆಂದು ನಿರೀಕ್ಷಿಸುವ ಕೌಶಲ್ಯಗಳು ಉದಾಹರಣೆಗೆ ಆರೋಗ್ಯ, ಮಾನವ ಹಕ್ಕುಗಳು, ಲಿಂಗಸಮಾನತೆ, ಶಾಂತಿ ಇತ್ಯಾದಿಗಳನ್ನು ಪ್ರಸ್ತುತ ಆರೋಗ್ಯ ಮತ್ತು ಸಾಮಾಜಿಕ ವಿಚಾರಗಳಿಗೆ ಅನ್ವಯಿಸಿಕೊಳ್ಳಲಾಗುತ್ತಿದೆ. ಏಡ್ಸ್‌ನಂತಹ ಮಾರಣಾಂತಿಕ ಕಾಯಿಲೆಯಿಂದ ಹುಟ್ಟಿಕೊಂಡಿರುವ ಭೀತಿಯನ್ನು ತಡೆಯುವ ಸಲುವಾಗಿ, ಏಡ್ಸ್ ವಿರುದ್ಧ ಹೋರಾಡುವ ತನ್ನ ಕಾಳಜಿಯನ್ನು ಯೂನಿಸೆಫ್ 'ಕೌಶಲ್ಯ ಆಧಾರಿತ ಆರೋಗ್ಯ ಶಿಕ್ಷಣ' (ಎಸ್‌ಬಿಹೆಚ್‌ಇ)ದ ಮೂಲಕ ವ್ಯಕ್ತಪಡಿಸಿದೆ.

**ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ):**

ಬಡತನವನ್ನು ಕಡಿಮೆ ಮಾಡುವ ಉದ್ದೇಶದಿಂದ ಇಎಸ್‌ಸಿಎಪಿ ಅಳವಡಿಸಿದ ಠರಾವಿನ ಮೂಲಕ ಏಷ್ಯಾ ಅಭಿವೃದ್ಧಿ ಬ್ಯಾಂಕನ್ನು 1965ರಲ್ಲಿ ಸ್ಥಾಪಿಸಲಾಯಿತು. ಇದರ ಪ್ರಧಾನ ಕಚೇರಿ ಫಿಲಿಫೈನ್ಸ್‌ನಲ್ಲಿ ಇದೆ. 43 ಪ್ರಾದೇಶಿ ಸದಸ್ಯರನ್ನು, 16 ಪ್ರಾದೇಶಿಕರಲ್ಲದ ಸದಸ್ಯರು ಈ ಬ್ಯಾಂಕಿನಲ್ಲಿ ಇದ್ದಾರೆ. ಬಡತನವನ್ನು ಕಡಿಮೆ ಮಾಡಲು ಶಿಕ್ಷಣವು ನೆರವಾಗುತ್ತದೆ ಎಂಬುದನ್ನು ಬ್ಯಾಂಕ್ ಎತ್ತಿಹಿಡಿಯುತ್ತದೆ. ಬ್ಯಾಂಕಿನ ತಿಳಿವಳಿಕೆಯಲ್ಲಿ ಶಿಕ್ಷಣವು ವ್ಯಕ್ತಿಗೆ ಸ್ಥಳೀಯ ಮತ್ತು ರಾಷ್ಟ್ರೀಯ ಸರಕಾರಗಳಲ್ಲಿ ಹೆಚ್ಚು ಕ್ರಿಯಾತ್ಮಕವಾಗಿ ಭಾಗವಹಿಸಲು ಅಧಿಕಾರ ಮತ್ತು ಅವಕಾಶಗಳನ್ನು ಒದಗಿಸುತ್ತದೆ. ಶಿಕ್ಷಣದಿಂದ ವೇತನ–ಸಂಪಾದನೆಯ ಅಂತಃಸತ್ವನ್ನು ಹೆಚ್ಚಿಸಲು ಅಗತ್ಯವಿರುವ ಕೌಶಲ್ಯ ಮತ್ತು ತಿಳಿವಳಿಕೆ ಹೆಚ್ಚುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಹಂತದ ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಾಗುತ್ತದೆ. ಬಡತನವನ್ನು ಕಡಿಮೆ ಮಾಡುವ ಮೂರು ಕಂಬಗಳಾದ ಆರ್ಥಿಕ ಬೆಳವಣಿಗೆ, ಸಾಮಾಜಿಕ ಅಭಿವೃದ್ಧಿ ಮತ್ತು ಉತ್ತಮ ಆಡಳಿತ ಸರಕಾರ ಇವಗಳಿಗೆ ತಳಹದಿಯನ್ನು ರೂಪಿಸಲು ನೆರವಾಗುತ್ತದೆ.

ಶಿಕ್ಷಣದಲ್ಲಿ ಪ್ರಮುಖ ಯೋಜನಾ ಹಣ ಹೂಡಿಕೆದಾರವಾಗಿರುವ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ADB) ಕಾರ್ಯನೀತಿ ಸಲಹೆ, ತಾಂತ್ರಿಕ ಪರಿಣತಿ ಮತ್ತು ಸಾಮರ್ಥ್ಯ ಬೆಳೆಸುವಿಕೆಯನ್ನು ಒದಗಿಸುತ್ತದೆ. 1970ರಿಂದ ಎಡಿಬಿ ಶಿಕ್ಷಣ ವಲಯ ಅಭಿವೃದ್ಧಿಯಲ್ಲಿ 53 ಬಿಲಿಯನ್ ಪೌಂಡ್ ಹಣವನ್ನು ಹೂಡಿದೆ. ಪ್ರಾರಂಭದ ದಿನಗಳಲ್ಲಿ ಆ ಕಾಲದ ಆರ್ಥಿಕ ಬೆಳವಣಿಗೆಗಳಿಗೆ ಎಡಿಬಿ ಹಣವನ್ನು ಹೂಡುತ್ತಿತ್ತು. ಪ್ರಥಮ ಶಿಕ್ಷಣ ವಲಯ ಕಾರ್ಯನೀತಿ ಪತ್ರ (1988) ವು ವ್ಯಾಪಕ ಮಾನವ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ಹಣಹೂಡಿಕೆಯ ಪ್ರಾಮುಖ್ಯತೆಯನ್ನು ಗುರುತಿಸಿತು. ಇಎಫ್‌ಎದ ಪ್ರಮುಖ ಬೆಂಬಲಿಗನಾಗಿ, ಎಡಿಬಿಯ ಶಿಕ್ಷಣ ವಲಯ ಅಧಿಕಾರ ಕ್ಷೇತ್ರವು ಮೂಲಭೂತ ಶಿಕ್ಷಣದಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ. ಶಿಕ್ಷಕ ತರಬೇತಿ, ಪಠ್ಯಕ್ರಮ ಮತ್ತು ಶಿಕ್ಷಣ ಯೋಜನೆಯ ಕ್ಷೇತ್ರಗಳಿಗೆ ಹೆಚ್ಚಿನ ಗಮನವನ್ನು ನೀಡಲಾಗಿದೆ. 2001ರಲ್ಲಿ ಮೂಲಭೂತ ಶಿಕ್ಷಣವೊಂದರಲ್ಲಿಯೇ ಇದರ ಹೂಡಿಕೆಯು ಇದರ ಶಿಕ್ಷಣ ಕಾರ್ಯಕ್ಷೇತ್ರದ ಶೇಕಡಾ 41ರಷ್ಟು ಇದೆ. 'ಎಲ್ಲಾ ಮಕ್ಕಳು ಮತ್ತು ವಯಸ್ಕರು ಸಮಾನಾವಕಾಶಗಳನ್ನು ಹೊಂದುವರು ಮತ್ತು ಬಡತನದ ವರ್ತುಲದಿಂದ ಬಿಡುಗಡೆ ಪಡೆಯಲು ತಮ್ಮ ಬದುಕಿನ ಮಟ್ಟವನ್ನು ಸುಧಾರಿಸಲು ಮತ್ತು ರಾಷ್ಟ್ರೀಯ ಬೆಳವಣಿಗೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಮರ್ಥರಾಗುವಷ್ಟು ಪೂರ್ಣ ಗುಣಮಟ್ಟವನ್ನು ಹೊಂದುವರು' ಎಂಬ ದರ್ಶನದೊಂದಿಗೆ ಎಡಿಬಿ ತನ್ನ ದೃಷ್ಟಿಯಿಂದ Vision ಕಾರ್ಯನೀತಿಯ ಹಾದಿಯಲ್ಲಿ ಈ ಕೆಳಗಿನವುಗಳನ್ನು ನಡೆಸುತ್ತದೆ: 1. ವಲಯ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಒಟ್ಟಾರೆ ಚೌಕಟ್ಟಿಗೆ ಹೂಡಿಕೆಯನ್ನು ಜೋಡಿಸಿಕೊಳ್ಳುವುದು. ಮತ್ತು 2 ಬಡವರ ಅಗತ್ಯಗಳ ಮೇಲೆ ಗಮನಹರಿಸುವ ಕಾರ್ಯನೀತಿಗಳು ಮತ್ತು ತಂತ್ರಗಳನ್ನು ಗುರುತಿಸಿ ಅನುಷ್ಠಾನಕ್ಕೆ ತರಲು ಸರಕಾರಗಳಿಗೆ ನೆರವಾಗುವುದು. ತನ್ನ ಇತೀಚಿನ ಶಿಕ್ಷಣ ಕಾರ್ಯನೀತಿಗಳಲ್ಲಿ, ಬ್ಯಾಂಕ್ ಇಎಫ್, ಲಿಂಗ ಸಮಾನತೆ ಮತ್ತು ತಾಂತ್ರಿಕ ಹಾಗೂ ಸಾಮಾಜಿಕ ಶಿಕ್ಷಣಕ್ಕೆ ಬೆಂಬಲವನ್ನು ಉದ್ದೇಶಿಸಿದೆ. ಕಾರ್ಯನೀತಿಯಲ್ಲಿ ಪ್ರಸ್ತಾಪಿಸಲಾದ ಇತರ ವಿಚಾರಗಳೆಂದರೆ :

- ಸಮಾನತೆ ಮತ್ತು ಅವಕಾಶದ ಹೆಚ್ಚಳ, ಗುಣಮಟ್ಟದ ಸುಧಾರಣೆ, ಸಹಭಾಗಿತ್ವದ ಬಲಪಡಿಸುವಿಕೆ, ಮತ್ತು ಹೊಸ ಹಾಗೂ ನವೀನ ತಂತ್ರಜ್ಞಾನಗಳ ಬಳಕೆ, ವಿಶೇಷವಾಗಿ ಐಸಿಟಿ.
- ನಾವೀನ್ಯದ ಹಾಗೂ ಪ್ರತಿಕ್ರಿಯಾತ್ಮಕ ಯೋಜನೆಗಳಿಗೆ ವಿಶೇಷವಾಗಿ ಸರಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಬೆಂಬಲ ನೀಡುವಿಕೆ.
- ಪ್ರಾರಂಭದ ಬಾಲ್ಯದ ಬೆಳವಣಿಗೆಗೆ ಕಡಿಮೆ ವೆಚ್ಚ ಮತ್ತು ಸಮುದಾಯ ಕೇಂದ್ರಿತ ಅವಕಾಶದೊಂದಿಗೆ ಬೆಂಬಲದ ನಿರೀಕ್ಷೆ.
- ಮೂಲಭೂತ ಶಿಕ್ಷಣ, ಸಮಾನ ಅವಕಾಶ, ಮತ್ತು ಸಂಪನ್ಮೂಲ ನೀಡಿಕೆಗೆ ಆದ್ಯತೆ. ಮಾಧ್ಯಮಿಕ ಶಿಕ್ಷಣದ ಗುಣಮಟ್ಟದ ಸುಧಾರಣೆ, ವೆಚ್ಚ–ಹಂಚಿಕೊಳ್ಳುವಿಕೆ, ಖಾಸಗಿ ವಲಯ ಮತ್ತು ವಿಶೇಷ ಯೋಜನೆಗಳಿಗೆ ನಿರ್ದಿಷ್ಟ ಗಮನ ನೀಡುವ ಮೂಲಕ ಬಡವರು ಮತ್ತು ಮಹಿಳೆಯರ ಅವಕಾಶ ಹೆಚ್ಚಿಸುವಿಕೆ.
- ಉನ್ನತ ಶಿಕ್ಷಣದಲ್ಲಿ ಬಡವರು ಮತ್ತು ಮಹಿಳೆಯರು ಸಮಾನ ಪ್ರವೇಶಾವಕಾಶವನ್ನು ಪಡೆಯುವಂತೆ ಉನ್ನತ ಶಿಕ್ಷಣದಲ್ಲಿ ಖಾಸಗಿ ವಲಯದ ಪಾತ್ರದ ಹೆಚ್ಚಳ, ಸರಕಾರದ ಸಾಮರ್ಥ್ಯ ಮತ್ತು ಸಹಾಯಕ ಯೋಜನೆಗಳ ಅಭಿವೃದ್ಧಿ.
- ಮಟ್ಟಗಳ ಸ್ಥಾಪನೆ ಮತ್ತು ಮೇಲ್ವಿಚಾರಣೆ, ಖಾಸಗಿ ಅವಕಾಶಕ್ಕೆ ಪ್ರೋತ್ಸಾಹ, ಮತ್ತು ಸರಕಾರೇತರ ಸಂಸ್ಥೆ (ಎನ್‌ಜಿಒ)

Digitised by Bharatavani, CIIL

ಗಳಿಗೆ ಬೆಂಬಲ ಮತ್ತು ಬಡ ಮಹಿಳೆಯರಿಗೆ ವರಮಾನ ಉತ್ಪತ್ತಿಯಾಗುವಂತಹ ಕೌಶಲ್ಯಗಳಲ್ಲಿ ತರಬೇತಿ, ಈ ಮೂಲಕ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣದಲ್ಲಿ ಸರಕಾರದ ಸಾಮರ್ತ್ಯವನ್ನು ಬಲಪಡಿಸುವುದರಲ್ಲಿ ಬ್ಯಾಂಕ್ ಗಮನ ಹರಿಸುವಿಕೆ.

**ಅಂತಾರಾಷ್ಟ್ರೀಯ ಸಹಾಯಕ ಕಾರ್ಯನೀತಿಗಳು ಮತ್ತು ಸರ್ವ ಶಿಕ್ಷಣಕ್ಕೆ ಬೆಂಬಲ:**

ಇಎಫ್ಎಗೆ ಹೆಚ್ಚಿದ ಬೇಡಿಕೆಯ ವಿಚಾರದಲ್ಲಿ ಅತ್ಯಗತ್ಯವಾದ ಗುರಿಯನ್ನು ಸಾಧಿಸಲು ಎಲ್ಲಾ ಪಾಲುದಾರರ ಬೆಂಬಲವನ್ನು ಹೆಚ್ಚಿಸುವಲ್ಲಿ ಗಮನ ಕೇಂದ್ರೀಕರಿಸುವಂತೆ ಅಂತಾರಾಷ್ಟ್ರೀಯ ಸಹಾಯ(ದಾನಿ) ಏಜೆನ್ಸಿಗಳಿಗೆ ಒತ್ತಾಯ ಮತ್ತು ಪ್ರಚೋದನೆಯನ್ನು ನೀಡಲಾಗಿದೆ. ಅಂತಾರಾಷ್ಟ್ರೀಯ ಕಾರ್ಯನಿರತ ಶಿಕ್ಷಣ ಗುಂಪಿನ (ಐಡಬ್ಲ್ಯುಜಿಇ) 1999 ವರದಿ ತಿಳಿಸುವುದೇನೆಂದರೆ ಬಡತನವನ್ನು ಕಡಿಮೆ ಮಾಡುವ ವಿಚಾರದಲ್ಲಿ ಶಿಕ್ಷಣ ವಲಯದಲ್ಲಿ ಧನಸಹಾಯ ನೀಡುವ ಏಜೆನ್ಸಿಗಳ ಮುಖ್ಯ ಗಮನವು ಇಎಫ್ಎ ಮೇಲಿದೆ (1991 ರಿಂದ 1997ರ ಅವಧಿಯಲ್ಲಿ ಶಿಕ್ಷಣಕ್ಕಾಗಿ ನೀಡಲಾಗುವ ದ್ವಿಪಕ್ಷೀಯ ಸಹಾಯವು 56.7 ಡಾಲರ್‌ನಿಂದ 47.6 ಡಾಲರ್‌ಗೆ ಇಳಿದಿದೆ, ಆದರೆ ಸಾಮಾಜಿಕ ವಲಯಕ್ಕೆ ಒದಗಿಸಲಾದ ಪ್ರಮಾಣವು ಶೇಕಡಾ 30.5ರಷ್ಟು ಹೆಚ್ಚಿದೆ, ಇದರಲ್ಲಿ ಸುಮಾರು ಮೂರನೆಯದು ಶಿಕ್ಷಣವಾಗಿದೆ ಎಂದು ಉಲ್ಲೇಖಿಸುತ್ತಾ). ಇಎಫ್ಎಗೆ ಯುನೆಸ್ಕೋ ಮುಂಚೂಣಿಯಲ್ಲಿರುವ ಏಜೆನ್ಸಿಯಾಗಿರುವುದರಿಂದ, ಇಎಫ್ಎ ಯೋಜನೆಗೆ ಮತ್ತು ಮಾಹಿತಿ ವಿನಿಮಯಕ್ಕೆ ಎಲ್ಲಾ ವಿಧದ ಪ್ರಯತ್ನಗಳನ್ನು ನಡೆಸುತ್ತದೆ. ಯುನೆಸ್ಕೋ ಸಂಘಟಿಸಿದ ಮತ್ತು ಸಮಾನರೀತಿಯಿಂದ ನಡೆಸಿದ ಎರಡು ಪ್ರಮುಖ ಅಧಿವೇಶನಗಳು: 1990ರಲ್ಲಿ ಥಾಯ್‌ಲ್ಯಾಂಡಿನ ಜೊಮ್‌ಟೇನ್ ನಗರದಲ್ಲಿ ನಡೆದ 'ಸರ್ವರಿಗೂ ಶಿಕ್ಷಣದ ಜಾಗತಿಕ ಅಧಿವೇಶನ' ಮತ್ತು 2000ದಲ್ಲಿ ಸೆನ್‌ಗಲ್‌ನ ಡಕಾರ್‌ದಲ್ಲಿ ನಡೆಸಿದ 'ಜಾಗತಿಕ ಶಿಕ್ಷಣ ಚರ್ಚಾಸ್ಥಾನದ (ಫಾರಮ್) ಅಧಿವೇಶನ. ಈ ಅಧಿವೇಶನಗಳಲ್ಲಿ ಹೆಣ್ಣುಮಕ್ಕಳನ್ನು ಮತ್ತು ಅಲ್ಪಸಂಖ್ಯಾತರನ್ನು ತಲುಪಲು ಹೆಚ್ಚಿನ ಪ್ರಯತ್ನಗಳನ್ನು ನಡೆಸುವಂತೆ ಮತ್ತು ಶಿಕ್ಷಣದ ಮಟ್ಟ ಸುಧಾರಿಸುವಂತೆ ಕರೆ ನೀಡಿವೆ. ಶಿಕ್ಷಣಕ್ಕಾಗಿ ಬಾಹ್ಯ ಆರ್ಥಿಕ ನೆರವನ್ನು ಹೆಚ್ಚಿಸುವಂತೆ ಮತ್ತು ಸಾಲ ಪರಿಹಾರಕ್ಕೆ ಅವಕಾಶ ನೀಡುವಂತೆ ಡಕಾರ್ ಘೋಷಣೆ ಎಎಫ್ಎಗೆ ಕರೆ ನೀಡಿದೆ. 'ಇಎಫ್ಎ ಹೃದಯವು ಗ್ರಾಮ ಮಟ್ಟದಲ್ಲಿ ಇದೆ' ಎಂಬುದನ್ನು ಗುರುತಿಸಿಕೊಂಡು ಘೋಷಣೆ ಮುಂದಿಡುವ ಬೇಡಿಕೆಗಳೆಂದರೆ : ರಾಷ್ಟ್ರೀಯ ಎಫ್ಎ ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಹೆಚ್ಚಿನ ಬೆಂಬಲ ಒದಗಿಸುವುದು, ಮಾಹಿತಿ ಮತ್ತು ಅನುಭವಗಳ ವಿನಿಮಯಕ್ಕಾಗಿ ಪ್ರಾಂತೀಯ ಚಟುವಟಿಕೆಗಳನ್ನು ಬಲಪಡಿಸುವುದು. ಇಎಫ್ಎಗಾಗಿ ವಾರ್ಷಿಕ 8.1 ಬಿಲಿಯನ್ ಹಣ ವೆಚ್ಚವಾಗಬಹುದೆಂಬುದನ್ನು ಕೂಡಾ ಅದು ಅಂದಾಜಿಸಿದೆ. ಮತ್ತು ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕ್‌ಗಳೂ ಸೇರಿದಂತೆ ಸರಕಾರಗಳು ಮತ್ತು ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಹಾಯಧನ ಏಜೆನ್ಸಿಗಳಿಂದ ಹೊಸ ಹಾಗೂ ಸುಭದ್ರ ಬಾಧ್ಯತೆಗಳನ್ನು ಇದು ಮುಂದಿಟ್ಟಿದೆ.

ಇತ್ತೀಚೆಗೆ ಬಿಡುಗಡೆಯಾದ ವಿಶ್ವ ಬ್ಯಾಂಕಿನ ಶಿಕ್ಷಣ ಯೋಜನಾ ನೀತಿಯ ಲಿಖಿತ ಪತ್ರಿಕೆಯಲ್ಲಿ ಎರಡು ಜಾಗತಿಕ ಆದ್ಯತೆಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ಅಂತಾರಾಷ್ಟ್ರೀಯ ಗುರಿಯನ್ನು ತಲುಪುವುದು. ವಿಶೇಷವಾಗಿ ಹೆಣ್ಣುಮಕ್ಕಳಿಗೆ ಮತ್ತು ಅತ್ಯಂತ ಬಡವರಿಗೆ ಮೂಲಭೂತ ಶಿಕ್ಷಣ ನೀಡುವುದು. ಎರಡನೆಯದಾಗಿ ಬೋಧನೆ ಮತ್ತು ಕಲಿಕೆಯ ಮಟ್ಟವನ್ನು ಸುಧಾರಿಸುವುದು. ಗ್ರಾಹಕರ ಮೇಲೆ ಗಮನವನ್ನು ಕೇಂದ್ರೀಕೃತಗೊಳಿಸುವ ಸಲುವಾಗಿ ಕಾರ್ಯನೀತಿ ಸಮಿತಿಯ ಸದಸ್ಯರು ವಲಯ ವಿಶ್ಲೇಷಣೆ, ದೇಶ ಯೋಜನೆಗಳು, ಅಭಿವೃದ್ಧಿ ಪ್ರಭಾವ ಮತ್ತು ಇತರ ಏಜೆನ್ಸಿಗಳೊಂದಿಗೆ ಕಾರ್ಯಕಾರಿ ಸಹಭಾಗಿತ್ವಗಳನ್ನು ನಿರ್ಮಿಸುವುದು. ಪ್ರಾರಂಭಿಕ ಪ್ರವೇಶಿಕೆ, (ಆರಂಭಿಕ ಬಾಲ್ಯದ ಅಭಿವೃದ್ಧಿ), ಉಪಕ್ರಮದ ತಂತ್ರಜ್ಞಾನಗಳು ಮತ್ತು ವ್ಯವಸ್ಥಿತ ಸುಧಾರಣೆ ಇವುಗಳು ಶಿಕ್ಷಣದ ಮಟ್ಟ ಸುಧಾರಣೆಯ ಯೋಜನಾ ನೀತಿಯ ಅತ್ಯವಶ್ಯಕ/ಪ್ರಮುಖ ಘಟಕಗಳೆಂಬುದನ್ನು ವರದಿ ಸ್ಫುಟಗೊಳಿಸಿದೆ.

1999 ರಲ್ಲಿ ಬಿಡುಗಡೆಯಾದ ಯೂನಿಸೆಫ್‌ನ ಕಾರ್ಯನೀತಿಗಳ ದಾಖಲೆಯು ನಾಲ್ಕು ಇಎಫ್ಎ ಕ್ಷೇತ್ರಗಳ ಮೇಲೆ ಕೇಂದ್ರೀಕೃತಗೊಂಡಿದೆ. ಅವುಗಳೆಂದರೆ ಪ್ರಾರಂಭಿಕ ಹಂತದ ಬಾಲ್ಯಕಾಲದ ಅಭಿವೃದ್ಧಿ, ಪ್ರಾಥಮಿಕ ಶಾಲೆಗೆ ಪ್ರವೇಶಾಧಿಕಾರ, ನವೀನ ತಂತ್ರಜ್ಞಾನದ ಬಳಕೆ ಮತ್ತು ಹೆಣ್ಮಕ್ಕಳ ಶಿಕ್ಷಣ. ಇತರ ನಿಧಿಸಹಾಯ ಏಜೆನ್ಸಿಗಳ ಸಹಯೋಗದೊಂದಿಗೆ ಯೂನಿಸೆಫ್, ಹೆಚ್ಚು ವ್ಯವಸ್ಥಿತ ವಲಯ ಯೋಜನೆಯನ್ನು, ಮತ್ತು ಕುಟುಂಬಗಳು ಮತ್ತು ಸಮಿತಿಗಳನ್ನು ಸಶಕ್ತೀಕರಣಗೊಳಿಸುವ ಸಲುವಾಗಿ ಶಿಕ್ಷಣದ ವಿಕೇಂದ್ರೀಕರಣವನ್ನು ಅತ್ಯಗತ್ಯದ ಯೋಜನಾನೀತಿಯಾಗಿ ಪರಿಗಣಿಸುವುದು, ಜೊತೆಗೆ ಸಂಘರ್ಷ ಮತ್ತು ತುರ್ತು ಪರಿಸ್ಥಿತಿಗಳಲ್ಲಿ ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡುವುದರ ಕುರಿತು ಪ್ರಯತ್ನ ನಡೆಸುತ್ತಿದೆ.

ಯು.ಕೆ.ಯ ಅಂತಾರಾಷ್ಟ್ರೀಯ ಅಭಿವೃದ್ಧಿ ವಿಭಾಗವು (ಡಿಪಾರ್ಟ್‌ಮೆಂಟ್ ಫಾರ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ – ಡಿಎಫ್ಐಡಿ) ಪ್ರಾಥಮಿಕ ಶಿಕ್ಷಣದ ಕುರಿತಾದ ತನ್ನ ಪ್ರಮುಖ ಹೇಳಿಕೆಯಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವುದು ಮತ್ತು ಲಿಂಗ ಸಮಾನತೆಯಲ್ಲಿ ಪ್ರಗತಿ ವ್ಯಕ್ತಪಡಿಸುವುದು ತನ್ನ ಅಭಿವೃದ್ಧಿಯ ಅತ್ಯುನ್ನತ ಆದ್ಯತೆಗಳೆಂದು ತನ್ನ ಬಾಧ್ಯತೆಯನ್ನು ವ್ಯಕ್ತಪಡಿಸಿದೆ. ಡಿಎಫ್ಐಡಿಯ ಮೂರರಷ್ಟಿನ ತಂತ್ರನೀತಿಯು ಉದ್ದೇಶಿಸಿರುವ ಕಾರ್ಯಗಳೆಂದರೆ: ಇಎಫ್ಎಗಾಗಿ ಕಾರ್ಯನೀತಿಗಳು ಮತ್ತು ಯೋಜನೆಗಳ ಅಭಿವೃದ್ಧಿ ಮತ್ತು ಸಮನ್ವಯಕ್ಕೆ ಕೊಡುಗೆ ನೀಡುವುದು, ಇಎಫ್ಎಗಾಗಿ ಉತ್ತಮ ಗುರಿಯನ್ನು ಹೊಂದಿರತಕ್ಕಂತಹ ದೇಶ ಯೋಜನೆಗಳನ್ನು ರೂಪಿಸುವುದು, ಮತ್ತು ಇಎಫ್ಎಗೆ ಬೆಂಬಲ ನೀಡಲು ಅಂತಾರಾಷ್ಟ್ರೀಯ ಸಂಸ್ಥೆಗಳ ಮೇಲೆ ಪ್ರಭಾವ ಬೀರುವ ಕಲಿತ ಪಾಠಗಳ ಹಂಚಿಕೊಳ್ಳುವಿಕೆ ಮತ್ತು ಪ್ರಗತಿಯ ಪರಿವೀಕ್ಷಣೆಯನ್ನು ಬಲಪಡಿಸುವುದಕ್ಕಾಗಿ ತಿಳಿವಳಿಕೆ ಮತ್ತು ಸಂಶೋಧನಾ ತಂತ್ರನೀತಿಗಳನ್ನು ಅಭಿವೃದ್ಧಿಪಡಿಸುವುದು, ಕಾರ್ಯನೀತಿ ಮಾತುಕತೆಗಾಗಿ ಸಹಭಾಗಿತ್ವವನ್ನು ಬಲಪಡಿಸುವುದು,

Digitised by Bharatavani, CIIL

ವಲಯ-ವ್ಯಾಪಕ ಸಮ್ಮತಿಯನ್ನು ಪ್ರೋತ್ಸಾಹಿಸುವುದು ಮತ್ತು ಬಾಲಕಾರ್ಮಿಕತನದಂತಹ ಪದ್ಧತಿ ನಿವಾರಣೆ ಇತರ ಡಿಎಫ್‌ಐಡಿ ಕಾಳಜಿಗಳನ್ನು ಇಎಫ್‌ಎ ಯೊಂದಿಗೆ ಜೋಡಿಸುವುದು.

ಎಡಿಬಿಯ ಶಿಕ್ಷಣ ವಲಯದ ಕಾರ್ಯನೀತಿಯು ಬಡತನ ಕಡಿಮೆ ಮಾಡುವುದು, 2015 ಮಿಲಿನಿಯಮ್ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದು ಮತ್ತು ಇಎಫ್‌ಗೆ ಸಂಬಂಧಿಸಿದ ಗುರಿಗಳನ್ನು ಹೊಂದುವುದು- ಇವುಗಳ ಮೇಲೆ ಒತ್ತು ನೀಡುವುದರ ಮೂಲಕ ಅಂತಾರಾಷ್ಟ್ರೀಯ ಸಮುದಾಯದೊಂದಿಗೆ ಕೂಡಾ ಪ್ರತಿಕ್ರಿಯಿಸುತ್ತದೆ. ಹುಡುಗಿಯರಿಗೆ ಅವಕಾಶಗಳನ್ನು ಹೆಚ್ಚಿಸುವುದು, ವ್ಯವಸ್ಥಿತ ಸುಧಾರಣೆಗೆ ಮೂಲವಾಗಿ ವಲಯ ವಿಶ್ಲೇಷಣೆಗೆ ಒತ್ತು ನೀಡುವುದು, ಮತ್ತು ಸಮಾನ ಗುರಿಗಳು ಮತ್ತು ಪರಿಕ್ರಮ ಚೌಕಟ್ಟಿನೊಳಗೆ ಹಣ ಒದಗಿಸುವ ಏಜೆನ್ಸಿಗಳೊಂದಿಗೆ ಸಮನ್ವಯವನ್ನು ಹೊಂದುವುದು ಶಿಕ್ಷಣ ವಲಯ ಕಾರ್ಯನೀತಿಯ ಪ್ರಮುಖ ಘಟಕಗಳಾಗಿವೆ.

**ಭವಿಷ್ಯದ ಪರಿಪ್ರೇಕ್ಷ (ನೋಟ):**

ಅಂತಾರಾಷ್ಟ್ರೀಯ ಸಮನ್ವಯವು ಬಾಹ್ಯ ನೆರವು ಮಾತ್ರವೇ ಅಲ್ಲ. ಅದು ಇನ್ನು ಹೆಚ್ಚಿನ ವ್ಯಾಪಕತೆಯದ್ದಾಗಿದೆ. ಬಾಹ್ಯಬೆಂಬಲವು ಜಂಟಿ ಪ್ರಯತ್ನವಾಗಿದ್ದು ಇದರಲ್ಲಿ ಒಂದು ದೇಶವು ಇನ್ನೊಂದು ದೇಶಕ್ಕೆ ಸಹಭಾಗಿತ್ವದ ಆಧಾರದಲ್ಲಿ ಸಹಾಯವನ್ನು ಒದಗಿಸುತ್ತದೆ. ಬಹುಪಾಲು ಸಂದರ್ಭಗಳಲ್ಲಿ ಪ್ರತಿಗ್ರಾಹಕ ದೇಶದ (ಸಹಾಯವನ್ನು ಪಡೆಯುವ) ಬೇಡಿಕೆಯನ್ನು ಅನುಸರಿಸಿ ಸಹಾಯಧನವನ್ನು ನೀಡಲಾಗುತ್ತದೆ. ಅದು ಜಂಟಿ ಪ್ರಯತ್ನವಾಗಿರಬೇಕಾದ ಅಗತ್ಯ ಕೂಡಾ ಇಲ್ಲ. ಶಿಕ್ಷಣದಲ್ಲಿನ ಸಮನ್ವಯತೆಯು ಪರಸ್ಪರ ಅರಿತುಕೊಳ್ಳಲು ಮತ್ತು ಅನುಕೂಲಗಳನ್ನು (ಲಾಭವನ್ನು) ಪ್ರೋತ್ಸಾಹಿಸುವುದಕ್ಕಾಗಿ ದೇಶಗಳು ಮತ್ತು ಸಂಸ್ಥೆಗಳನ್ನು ಪರಸ್ಪರ ಹತ್ತಿರ ತರುವ ತಳಹದಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ. ಅಂತಾರಾಷ್ಟ್ರೀಯ ಸಮನ್ವಯತೆಗೆ ಯಾವುದೇ ರಾಜಕೀಯ ಅಥವಾ ಆರ್ಥಿಕ ತೊಡಕುಗಳು ಇರಬಾರದು. ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆಗಳು ಮತ್ತು ಸರಕಾರೇತರ ಸಂಸ್ಥೆಗಳನ್ನು ಒಳಗೊಳ್ಳುವ ಜಾಗರೂಕತೆಯ ಸಿದ್ಧತೆ ಮತ್ತು ಯೋಜನೆಯನ್ನು ಹೊಂದಿರುವ ದೀರ್ಘಾವಧಿಯ ಯೋಜನೆಗಳು ಅಂತಾರಾಷ್ಟ್ರೀಯ ಸಮನ್ವಯತೆಯ ಗುರಿಯನ್ನು ಸಾಕಾರಗೊಳಿಸಲು ನೆರವಾಗುತ್ತವೆ. ಶಾಲೆಗಳ ಮತ್ತು ಸಂಶೋಧನಾ ಸಂಸ್ಥೆಗಳ ಸ್ಥಾಪನೆಯು ಜಂಟಿ ಪ್ರಯತ್ನದಿಂದ ಮತ್ತು ಸ್ವಪ್ರೇರಿತ ಸಮನ್ವಯತೆಯಿಂದ ನಡೆದರೆ ಅದು ಹೆಚ್ಚು ಲಾಭದಾಯಕವಾಗಿರುತ್ತದೆ. ಈ ವಿಧದ ಸಹಕಾರ ಮತ್ತು ಸಮನ್ವಯತೆಯ ಇತ್ತೀಚಿಗಿನ ಉದಾಹರಣೆಯೆಂದರೆ ಭಾರತ ಮತ್ತು ಮಂಗೋಲಿಯಾದ ಸರಕಾರಗಳು ಮಂಗೋಲಿಯಾದ ಉಲಾನ್ ಬತೋರ್‌ದಲ್ಲಿ ಪ್ರಾರಂಭಿಸಿದ ಇಂಡೋ-ಮಂಗೋಲಿಯನ್ ಜಂಟಿ ಶಾಲೆ.

ಸಮನ್ವಯತೆಯ ಮತ್ತೊಂದು ಆದ್ಯತಾ ಕ್ಷೇತ್ರವೆಂದರೆ ಸಿಬ್ಬಂದಿ ವರ್ಗಕ್ಕೆ ತರಬೇತಿಯನ್ನು ನೀಡುವುದು. ಇದನ್ನು ಕೂಡ ಸೂಕ್ತ ರೀತಿಯಿಂದ ಯೋಜಿಸಿ, ನಿರ್ವಹಿಸಬೇಕಾಗುತ್ತದೆ. ಅಂತಾರಾಷ್ಟ್ರೀಯ ಮಟ್ಟದ ಪದವಿಗಳು ಮತ್ತು ಡಿಪ್ಲೋಮಾಗಳನ್ನು ಪ್ರಾರಂಭಿಸುವುದು ಕೂಡಾ ಶಿಕ್ಷಣ ಕಾರ್ಯಕರ್ತರನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ಅಥವಾ ಈ ಡಿಪ್ಲೋಮಾ ಮತ್ತು ಪದವಿಗಳನ್ನು ಹೊಂದಲು ನಿಯೋಜಿಸುವುದಕ್ಕೆ ನೆರವಾಗುತ್ತದೆ. ಇದರಿಂದ ದೇಶಗಳಿಗೆ ಬೇರೆ ದೇಶಗಳನ್ನು ತಿಳಿದುಕೊಳ್ಳುವುದಕ್ಕೆ, ಮತ್ತು ಸಾಮರ್ಥ್ಯ ಬೆಳೆಸಿಕೊಳ್ಳುವುದರಲ್ಲಿ ತಮ್ಮ ಶೈಕ್ಷಣಿಕ ಅಗತ್ಯಗಳನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇಂದಿನ ಉನ್ನತ ಮಟ್ಟದ ತಂತ್ರಜ್ಞಾನದ ಮಾಹಿತಿ ಯುಗದಲ್ಲಿ ಜಾಗತಿಕ ಸವಾಲುಗಳನ್ನು ಎದುರಿಸುವುದಕ್ಕಾಗಿ ದೇಶಗಳನ್ನು ಒಟ್ಟುಗೂಡಿಸಲು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಇನ್‌ಫಾರ್ಮೇಶನ್ ಅಂಡ್ ಕಮ್ಯೂನಿಕೇಶನ್-ಐಸಿಟಿ)ದ ಬಳಕೆ ಆಗಬೇಕಾಗಿದೆ. ಆನ್.ಲೈನ್ ಮೂಲಕ ನಡೆಸುವ ಪಠ್ಯಕ್ರಮಗಳು ಈಗಾಗಲೇ ಶಿಕ್ಷಣ ಕ್ಷೇತ್ರದಲ್ಲಿ ಇರುವವರಿಗೆ ಮತ್ತು ಕಾರ್ಯನೀತಿ ಯೋಜಕರಿಗೆ ಅನುಕೂಲಗಳನ್ನು ಒದಗಿಸಿವೆ. ಐಸಿಟಿಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಬೇಕಾಗಿದೆ ಮತ್ತು ಶಿಕ್ಷಣದ ಪ್ರತಿಯೊಂದು ಕ್ಷೇತ್ರದಲ್ಲಿ ಶೀಘ್ರ ಸಮನ್ವಯತೆಯನ್ನು ಹೊಂದುವುದಕ್ಕಾಗಿ ಸಂಸ್ಥೆಗಳು ಮತ್ತು ಸಂಘಟನೆಗಳ ಬಳಕೆಯಾಗಬೇಕಾಗಿದೆ. ಇಂದಿನ ಜಗತ್ತಿನಲ್ಲಿ ಸಾಮಾಜಿಕ ಮತ್ತು ಮಾನವ ಅಭಿವೃದ್ಧಿಯ ಏಕಮಾತ್ರ ಭರವಸೆಯೆಂದರೆ ಶೈಕ್ಷಣಿಕ ಅವಕಾಶಗಳನ್ನು ಎಲ್ಲರಿಗೂ ಸಮಾನ ರೀತಿಯಿಂದ ಒದಗಿಸುವ ಮೂಲಕ ಶಿಕ್ಷಣವನ್ನು ಸೂಕ್ತರೀತಿಯಲ್ಲಿ ಬಳಸುವುದಾಗಿದೆ. ಇದನ್ನು ಶಿಕ್ಷಣದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಸೂಕ್ತ ಸಮನ್ವಯತೆಯ ಮೂಲಕ ಸಾಧಿಸಬಹುದಾಗಿದೆ.

**ಮೂಲ: ಪೂರಣ್ ಚಂದ್ ಮತ್ತು ಆರ್. ಮೇಘನಾಥನ್**

**ಅನು: ಡಾ. ಗೀತಾ ಶೆಣೈ**

## ಶಿಕ್ಷಣದಲ್ಲಿ ಅಧಿಕಾರಿಶಾಹಿ ವ್ಯವಸ್ಥೆ

ಎಲ್ಲಾ ಆಧುನಿಕ ಸಂಸ್ಥೆಗಳು ಭವಿಷ್ಯದ ಯೋಜನೆಗಾಗಿ, ದಕ್ಷ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಮತ್ತು ಕಾರ್ಯಗಳಿಂದ ಆಶಾದಾಯಕ ಉತ್ಪಾದಕತೆ ಮತ್ತು ಆರ್ಥಿಕ ಲಾಭಗಳನ್ನು ಪಡೆಯಲು ಅಧಿಕಾರಿಶಾಹಿ ವರ್ಗವನ್ನು ಹೊಂದಿರುತ್ತವೆ. ಸಂಪ್ರದಾಯ ಮತ್ತು ಸಾಮಾಜಿಕ ಸ್ಥಾನಮಾನಗಳಿಂದ ಗೌರವವನ್ನು ಪಾತ್ರವಾಗಿಡುವ ವಯಸ್ಸು ಮತ್ತು ಸಾಮಾಜಿಕಕ ಸ್ತರಗಳನ್ನು ಆಧರಿಸಿ ಪ್ರಭುತ್ವ ಮತ್ತು ಆಡಳಿತಗಳ ಕಾರ್ಯಭಾರವನ್ನು ವಹಿಸಲಾಗುತ್ತಿದ್ದ ಊಳಿಗಮಾನ್ಯ ಸಮಾಜಕ್ಕೆ (Feuda Society) ತದ್ವಿರುದ್ಧವಾಗಿ ಇಂದಿನ ಯುಗದ ಅಧಿಕಾರಿಶಾಹಿಯು (Bureocracy) ಈ ಕೆಳಗಿನ ವೈಶಿಷ್ಟ್ಯಗಳಿಂದ

Digitised by Bharatavani, CIIL

ಕೂಡಿದೆ :

- ಪ್ರತ್ಯೇಕ ಸ್ಥಾಪನೆಗಳಿಗೆ ಗುರಿಗಳನ್ನು ಮತ್ತು ಕಾರ್ಯಗಳನ್ನು ವಹಿಸುವುದು.
- ಪೂರ್ವವಿಧಿತ ಸಾಮರ್ಥ್ಯಗಳು ಮತ್ತು ಮಾನದಂಡಗಳ ಆಧಾರದ ಮೇಲೆ ಶ್ರೇಣಿಬದ್ಧ ಸ್ಥಾನಗಳು ಭರ್ತಿಯಾಗುವುವು.
- ತರ್ಕಬದ್ಧ ಮಾನದಂಡದ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳುವುದು.
- ನಿಯಮ ನಿಬಂಧಗಳಿಗೆ ಬದ್ಧರಾಗಿರುವುದು.
- ಸಾಂಸ್ಥಿಕ ಗುರಿ ಸಾಧನೆ ಮತ್ತು ಅವುಗಳ ಸಾಧನೆಯ ಗರಿಷ್ಠೀಕರಣಕ್ಕೆ ವೈಯಕ್ತಿಕ ನಿರೀಕ್ಷಣೆ ಹಾಗೂ ಆಕಾಂಕ್ಷೆಗಳನ್ನು ಅಡಿಯಾಳಾಗಿಸುವುದು.

ಆದಾಗ್ಯೂ, ಸಂಸ್ಥೆಯೊಂದರಲ್ಲಿ 'ಆದರ್ಶ' ಅಧಿಕಾರಶಾಹಿ ಸಂರಚನೆಯಿಂದ ವ್ಯತಿಕ್ರಮಣವಾಗುವುದುಂಟು ಹಾಗೂ ಮಹತ್ವಪೂರ್ಣ ಗ್ರಾಹಕರ ಪರವಾಗಿ ಸಾಕಷ್ಟು ನಿಯಮ ಉಲ್ಲಂಘನೆಯಾಗುವುದುಂಟು. ವ್ಯಕ್ತಿಗಳು ಸಂಸ್ಥೆಯ ಗುರಿಗಳಿಗೆ ಸಂಪೂರ್ಣ ಅನುರೂಪವಾಗಿರದ ವೈಯಕ್ತಿಕ ಗುರಿ ಸಾಧನೆಗೆ ಸಂಸ್ಥೆಗಳನ್ನು ಬಳಸಿಕೊಳ್ಳುವರು.

ಇತ್ತೀಚೆಗೆ, ಭಾರತದಂಥ ಮುಂದುವರೆಯುತ್ತಿರುವ ದೇಶಗಳಲ್ಲಿ ಅಧಿಕಾರಶಾಹಿಯು ಗಮನಾರ್ಹ ಟೀಕೆಗೆ ಒಳಗಾಗಿದೆ. ಸ್ವತಂತ್ರ ದೇಶವಾಗಿ ಉದಯಗೊಂಡ ಪ್ರಾರಂಭಿಕ ವರ್ಷಗಳಲ್ಲಿ ಅಧಿಕಾರಶಾಹಿ ಉಕ್ಕಿನಂಥ ರಚನೆಯಂತಿರಬಹುದಾದರೂ ಈಗ ಅದು ವಿಕಾಸೋನ್ಮುಖ ಕಾರ್ಯಗಳು, ರಾಷ್ಟ್ರದ ಆಧುನಿಕೀಕರಣಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಅತ್ಯಗತ್ಯವಾಗಿರುವ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಳನ್ನು ವೇಗದಲ್ಲಿ ಕಾರ್ಯರೂಪಕ್ಕೆ ತರುವ ಕೆಲಸಗಳಲ್ಲಿ ಹಿಂಭಾರದಂತೆ ವರ್ತಿಸುತ್ತಿದೆ. ಅಧಿಕಾರಶಾಹಿಯ ಪ್ರಾಧಾನ್ಯದ ಅವಶ್ಯಕತೆಯಿಲ್ಲದಿದ್ದರೂ ತನ್ನನ್ನು ತಾನು ಶಾಶ್ವತವಾಗಿರಿಸಿಕೊಳ್ಳುವ ಅದರ ಒಲವು ಪ್ರಮುಖ ಟೀಕೆಗೆ ಒಳಗಾಗಿದೆ. ಹಳೆಯ ಕಾಲದ ನಿಯಮನಿಬಂಧನೆಗಳಿಗೆ ಒತ್ತನ್ನು ನೀಡುವ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಶೀಘ್ರವಾಗಿ ಕಾರ್ಯರೂಪಕ್ಕ ತರುವುದರಲ್ಲಿ ಅಡಚಣೆಯಾಗಿ ನಿಂತಿದೆ. ಅದರಿಂದ, ಭಾರತದಲ್ಲಿ ಒಂದು ಸ್ಥಳಿಕ (endemic) ಜಾಡ್ಯದಂತೆಯೇ ಇರುವ ವಿಳಂಬ ಮತ್ತು ಅಧಿಕ ಖರ್ಚುಗಳಿಗೆ ದಾರಿಯಾಗುತ್ತದೆ. ಬೆನ್‌ವೆನಿಸ್ಟಿ (1977, p, xii) ಹೀಗೆ ಅಭಿಪ್ರಾಯಪಡುತ್ತಾನೆ. ಅತಿಯಾದ ಭಯದಿಂದಾಗಿ ಅಧಿಕಾರಿಯಾಗಿ ಸರಿಯಾಗಿ ಕೆಲಸಮಾಡುವುದಿಲ್ಲ. ಸಂಸ್ಥೆಯ ಬಹಳಷ್ಟು ಮಂದಿ ಕೆಲಸ ಹೋಗವುದೆಂದು ಭಯಪಡುತ್ತಾರೆ. ವೃತ್ತಿಜೀವನಕ್ಕೆ ಕಂಟಕ ಬಂದೀತೆಂದು ಹೆದರುತ್ತಾರೆ. ಹಗರಣ ಅಥವಾ ನಿರ್ಧಾರಗಳ ದೆಸೆಯಿಂದ ಹಿಡಿಯಲ್ಪಟ್ಟರೆ ಎಂದು ಭಯಪಡುತ್ತಾರೆ. ಆದ್ದರಿಂದ, ಗ್ರಾಹಕ ಅಥವಾ ಕಕ್ಷಿದಾರನಿಗೆ ಸಂಕಟವನ್ನುಂಟು ಮಾಡಿ ಅದರಿಂದ ಅವರು ಪುನಃ ಪ್ರತಿಭಟಿಸಬೇಕಾದ ಸಂದರ್ಭ ಒದಗಿಬರುವಂಥ ರಕ್ಷಣಾತ್ಮಕ ತಂತ್ರಗಳನೇ ಅನುಸರಿಸುತ್ತಾರೆ. ಇದರಿಂದ ಈಗಾಗಲೇ ಭಯಭೀತರಾದವರ ಭಯವನ್ನು ಮತ್ತಷ್ಟು ಹೆಚ್ಚಿಸಿದಂತಾಗುತ್ತದೆ.

ಭಾರತೀಯ ಹಿನ್ನೆಲೆಯಲ್ಲಿ ಅಧಿಕಾರಶಾಹಿ ಮತ್ತು ಅಧಿಕಾರಶಾಹೀಕರಣ (Bureacritisation) ಅಖಿಲಭಾರತ ಮತ್ತು ರಾಜ್ಯ ಸಾರ್ವಜನಿಕ ಸೇವೆ ಮತ್ತು ಕಾರ್ಯಗಳಿಗೆ ಸಂಬಂಧಿಸಿದ ಸಾರ್ವಜನಿಕ ನೌಕರರು ಮತ್ತು ಅಧಿಕಾರಿಶಾಹಿಯನ್ನು ಪ್ರತ್ಯೇಕ ಅಧಿಕಾರಶಾಹಿ ಮತ್ತು ಅಧಿಕಾರಿಶಾಹೀಕರಣ (Bureacritisation) ಪ್ರತ್ಯೇಕ ಅರ್ಥವನ್ನು ಪಡೆದಿರುವಂತೆ ಕಂಡುಬರುತ್ತದೆ. ಉದಾಹರಣೆಗೆ, ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ (ಐ.ಎ.ಸ್.) ಇಂಡಿಯನ್ ಪೊಲೀಸ್ ಸರ್ವಿಸ್ (ಐ.ಪಿ.ಎಸ್.), ಮತ್ತು ಸೆಂಟ್ರಲ್ ಸೆಕ್ರೆಟೇರಿಯಲ್ ಸರ್ವಿಸ್ (ಸಿ.ಎಸ್.ಎಸ್.) ಬಹುಶಃ ಇದಕ್ಕೆ ಕಾರಣ, ದೇಶದ ಆಳ್ವಿಕೆಯಲ್ಲಿ ಸಾಕಷ್ಟು ನಿರ್ಣಯ ಕೈಗೊಳ್ಳುವ ಹಾಗೂ ಆಡಳಿತಾತ್ಮಕ ಅಧಿಕಾರವಿರುವ ಮುಖ್ಯ ಸ್ಥಾನಗಳನ್ನು ಅಧಿಕಾರವನ್ನು ಈ ಸೇವೆಗಳ ಸದಸ್ಯರು ವಹಿಸಿರುವುದು. ಬಹುತೇಕ ಸಂದರ್ಭಗಳಲ್ಲಿ ಈ ಸದಸ್ಯರು ಆರ್ಥಿಕ ಯೋಜನೆ ಮತ್ತು ಆಡಳಿತದಲ್ಲಿ ಯಾವ ತಜ್ಞತೆ ಅಥವಾ ಅನುಭವವಿಲ್ಲದಿದ್ದರೂ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಲ್ಲಿ ಮತ್ತು ಆರ್ಥಿಕ ಸಂಸ್ಥೆಗಳಲ್ಲಿ ಮುಖ್ಯ ನಿರ್ವಾಹಕರಾಗಿದ್ದಾರೆ. ವರ್ಷಗಳು ಕಳೆದಂತೆ ಶೈಕ್ಷಣಿಕ ಆಡಳಿತದ ಕ್ಷೇತ್ರದಲ್ಲಿ, ಮುಖ್ಯತಃ ಉಚ್ಚಮಟ್ಟದಲ್ಲಿ, ಆಡಳಿತಾತ್ಮಕ ಸ್ಥಾನಗಳು ಹೆಚ್ಚಾಗುತ್ತಿರುವುದಷ್ಟೇ ಅಲ್ಲದೆ ವೃತ್ತಿಪರರು ಹಾಗೂ ವಿಶೇಷಜ್ಞರ ಸ್ಥಾನಗಳನ್ನು ಆಕ್ರಮಿಸುತ್ತಾ ಹೆಚ್ಚು ಸಂಖ್ಯೆಯಲ್ಲಿ ಈ ಆಡಳಿತ ಸೇವೆಗಳಿಗೆ ಸಂಬಂಧಿಸಿದ ಸದಸ್ಯರು ಅಲಂಕರಿಸುತ್ತಿದ್ದಾರೆ. ಉದಾಹರಣೆಗೆ, ಕೇಂದ್ರ ಮತ್ತು ರಾಜ್ಯಗಳೆರಡರಲ್ಲೂ, ಶಿಕ್ಷಣ ಕಾರ್ಯದರ್ಶಿಯನ್ನು ಐ.ಎ.ಎಸ್. ಶ್ರೇಣಿಯಿಂದ ನೇಮಕಮಾಡಿಕೊಳ್ಳುತ್ತಾರೆ. ಬಹುತೇಕ ರಾಜ್ಯಗಳಲ್ಲಿ ಈ ಹಿಂದೆ ಶೈಕ್ಷಣಿಕ ಹಾಗೂ ವೃತ್ತಿಪರವಾದ ಹಿನ್ನೆಲೆಯಿರುವ ವ್ಯಕ್ತಿಗಳು ನಿರ್ವಹಿಸುತ್ತಿದ್ದ ಶಿಕ್ಷಣ ನಿರ್ದೇಶಕರ ಹುದ್ದೆಗಳನ್ನೂ ಐ.ಎ.ಎಸ್. ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ವೃತ್ತಿಪರ ತಜ್ಞತೆಯಗತ್ಯವಿರುವ ಕ್ಷೇತ್ರಗಳನ್ನು ನಿರ್ವಹಿಸುತ್ತಿರುವ ಜಂಟಿಕಾರ್ಯದರ್ಶಿ ನಿರ್ದೇಶಕರು ಹಾಗೂ ಉಪಕಾರ್ಯದರ್ಶಿ ಮುಂತಾದ ಹುದ್ದೆಗಳ ಸಂಖ್ಯೆಯು ಹೆಚ್ಚಾಗುತ್ತಿದ್ದು ಈ ಹುದ್ದೆಗಳನ್ನು ಅಖಿಲಭಾರತ ಸೇವೆಯ ವ್ಯಕ್ತಿಗಳು ನಿರ್ವಹಿಸುತ್ತಿದ್ದಾರೆ. ಸ್ವಾತಂತ್ರ್ಯದ ನಂತರದಲ್ಲಿ ಹಲವಾರು ವರ್ಷಗಳಲ್ಲಿ ಶೈಕ್ಷಣಿಕ ಮೂಲಭೂತ ಸೌಕರ್ಯದ ಸ್ಥಾಪನೆ ಮತ್ತು ಅಭಿವೃದ್ಧಿಗೆ ಈ ಇಲಾಖೆಯ ಕೊಡುಗೆ ಮಹತ್ವಪೂರ್ಣವೂ ಮತ್ತು ಗಣನೀಯವೂ ಆಗಿತ್ತಾದರೂ ಸಲಹಾ ಸೇವೆ ಇಲಾಖೆಯಿಂದ ಸಂಪೂರ್ಣವಾಗಿ ಮಾಯವಾಗಿದೆ ಎಂದು ಹೇಳಬೇಕು.

ಅಭಿವೃದ್ಧಿಗೆ ಸಂಬಂಧಿಸಿದ ಗುರಿಗಳನ್ನು ಹೊಂದಿರುವ

Digitised by Bharatavani, CIIL

ಇಲಾಖೆಗಳಲ್ಲಿಯೂ ಭಾರತೀಯ ಆಡಳಿತ ಸೇವೆ (ಐ.ಎ.ಎಸ್.) ಅಧಿಕಾರಿಗಳು ವಿವಿಧ ಹುದ್ದೆಗಳನ್ನು ನಿರ್ವಹಿಸಬೇಕಾಗಿ ಬರುತ್ತದೆ ಎನ್ನುವುದನ್ನು ಸಾಮಾನ್ಯವಾಗಿ ಎರಡು ಆಧಾರದ ಮೇಲೆ ಸಮರ್ಥಿಸಲಾಗುತ್ತದೆ.

- ಇದರಿಂದ ಶಿಕ್ಷಣದಲ್ಲಿ ಸಮಗ್ರ ಭಾರತೀಯ ದೃಷ್ಟಿಕೋನ ಸಾಧ್ಯವಾಗುವುದಲ್ಲದೆ ಶಿಕ್ಷಣವನ್ನು ಕುರಿತಾಗಿ ಪ್ರಾದೇಶಿಕ/ರಾಜ್ಯ ದೃಷ್ಟಿಕೋನಕ್ಕೆ ಬದಲಾಗಿ ಸಮಗ್ರ ಭಾರತದ ದೃಷ್ಟಿಕೋನವನ್ನಿಟ್ಟುಕೊಂಡು ಯೋಜನೆಗಳನ್ನು ರೂಪಿಸಲು ಸುಲಭವಾಗುತ್ತದೆ; ಮತ್ತು

- ವೃತ್ತಿಪರನಾದ ವ್ಯಕ್ತಿ ತನ್ನ ವಿಶೇಷಜ್ಞನೆಯಿಂದಾಗಿ ತಜ್ಞತೆಯ ದೃಷ್ಟಿಕೋನದಿಂದಾಗಿ ಆತನ/ಆಕೆಯ ನಿರ್ಣಯ ವೈಯಕ್ತಿಕವಾಗಿ ಇತರ ತಜ್ಞರ ದೃಷಿಕೋನಗಳಿಂದ ಭಿನ್ನವಾಗಿರಬಹುದು. ಆದರೆ ಸೇವೆಯಲ್ಲಿರುವ ಅಧಿಕಾರಿಗೆ ವಿವಾದಾಂಶಗಳ ವಿಶ್ಲೇಷಣೆಯಲ್ಲಿ ಹೆಚ್ಚು ವಸ್ತುನಿಷ್ಠನಾಗಿರಲು ಸಾಧ್ಯವಾಗುತ್ತದೆ.

- ಮೊದಲನೆಯ ಹೇಳಿಕೆಯನ್ನು ಕುರಿತು ಹೀಗೆ ವಾದಿಸಲಾಗುವುದು. ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಗೆ ಮತ್ತು ರಾಷ್ಟ್ರೀಯ ಏಕತೆಗೆ ಶಿಕ್ಷಣ ಒಂದು ಮಹತ್ವಪೂರ್ಣ ಉಪಕರಣವಾಗಿರುವುದರಿಂದ ಸ್ಥಾನೀಯ ಪರಿಸ್ಥಿತಿಗಳಲ್ಲಿ ಅಧಿಕ ಸಮಂಜಸ್ಯವುಳ್ಳ ಶಿಕ್ಷಣ ಕ್ಷೇತ್ರದ ಶೈಕ್ಷಣಿಕ ನೀತಿ ಹಾಗೂ ಕಾರ್ಯಕ್ರಮಗಳನ್ನು ಸೂತ್ರೀಕರಿಸುವಲ್ಲಿ ಒತ್ತಡವಿರಬಾರದು. ಇವರ ಸೇವಾ ಪರಿಸ್ಥಿತಿಗಳು ರಾಜ್ಯದ ಅಧಿಕಾರಕ್ಕೆ ಸಾಮಾನ್ಯವಾಗಿ ಒಳಪಡದೆ ಇರುವುದರಿಂದ ಅಖಿಲಭಾರತ ಸೇವೆಯ ಅಧಿಕಾರಿಯೊಬ್ಬನು ಸ್ಥಳೀಯ ರಾಜಕೀಯ ಗುಂಪುಗಳು ತರುವ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಾಗುವುದಿಲ್ಲ. ಆತ/ಆಕೆ ನಿರ್ಧಾರಗಳನ್ನು ಕೈಗೊಳ್ಳುವಾಗ ರಾಜಕೀಯ ಅಥವಾ ಅಧಿಕಾರದಲ್ಲಿರುವವರ ಅಗತ್ಯಗಳನ್ನು ಅನುಸರಿಸದೆ ತರ್ಕಬದ್ಧ ಪರಿಗಣನೆಯನ್ನು ಆಧರಿಸಿ ಕೈಗೊಳ್ಳುತ್ತಾರೆ. ಎಂದು ವಾದಿಸಲಾಗುತ್ತದೆ. ಈ ಹೇಳಿಕೆಗೆ ಸ್ಪಷ್ಟ ಅಧ್ಯಯನಗಳು ಇಲ್ಲವಾದರೂ ರಾಜ್ಯದಲ್ಲಿ ನಿಯುಕ್ತಿಗೊಂಡಿರುವ ಸೇವಾ ಅಧಿಕಾರಿಗಳು ಅನೇಕ ಸಲ ರಾಜ್ಯ ಸೇವೆಯಲ್ಲಿರುವವರಂತೆ ಅಥವಾ ವೃತ್ತಿಪರ ಹಿನ್ನೆಲೆಯಲ್ಲಿರುವವರಂತೆ ಒತ್ತಡಕ್ಕೆ ಒಳಗಾಗುವುದು ಕಂಡುಬರುತ್ತದೆ. ಜಯರಾಮ್ ರಮೇಶ್‌ರವರು (2000 ಪ.29) ರಾಜ್ಯಗಳು ವಿಶ್ವಬ್ಯಾಂಕ್‌ನೊಂದಿಗೆ ನೇರವಾಗಿ ಮಾತುಕತೆಗೆ ತೊಡಗುವ ವಿಷಯದ ಬಗ್ಗೆ ಬರೆಯುತ್ತಾ ಹೀಗೆ ಹೇಳುತ್ತಾರೆ:

"ವಿಶ್ವಬ್ಯಾಂಕ್" ಮತ್ತು ರಾಜ್ಯಗಳ ನಡುವಿನ ಅನ್ಯೋನ್ಯಕ್ರಿಯೆಯು ಹೆಚ್ಚುತ್ತಿರುವುದು ಇಬ್ಬರಿಗೂ (ಬ್ಯಾಂಕ್ ಮತ್ತು ರಾಜ್ಯಗಳು) ಸಂತೋಷವನ್ನುಂಟುಮಾಡಿದೆ. ದೆಹಲಿಯ ಹಣಕಾಸು ಇಲಾಖೆ ಅಸಂತುಷ್ಟವಾಗಿದೆ. ರಾಜ್ಯ ಸರ್ಕಾರದ ಸೇವೆಯಲ್ಲಿದ್ದಾಗ ವಿಕೇಂದ್ರೀಕರಣವನ್ನು ಸಮರ್ಥಿಸಿದ ಹಲವು ಅಧಿಕಾರಿಗಳು ಈಗ ತಾವು ಅಧೀನ ಪಾತ್ರವಹಿಸುತ್ತಿದ್ದೇವೆ ಎಂಬ ಭಾವನೆಯನ್ನು ತಾಳುತ್ತಿರುವುದು ವಿಪರ್ಯಾಸದ ಸಂಗತಿ ಇದು ಒಬ್ಬ ಎಲ್ಲಿ ಕುಳಿತಿರುವನೋ ಅದನ್ನು ಆಧರಿಸಿ ಆತನ ನಿಲುವು ಇರುತ್ತದೆ ಎಂಬ ಅಧಿಕಾರಿಶಾಹಿ ಪ್ರಭುತ್ವದ ಮೂಲಭೂತವನ್ನು ಉದಾಹರಿಸುತ್ತದೆ".

ವಸ್ತುನಿಷ್ಠ ಮಾನದಂಡದ ವಿಷಯದ ಬಗ್ಗೆ ಹೇಳುವುದಾದರೆ, ಒಬ್ಬ ವೃತ್ತಿಪರನು ತನ್ನ ನಿರ್ದಿಷ್ಟ ದೃಷ್ಟಿಕೋನಕ್ಕೆ ಬದ್ಧನಾಗಿರುತ್ತಾನೆಂದರೆ ಒಂದು ಪರಿಸ್ಥಿತಿಯ ಪಕ್ಷಪಾತರಹಿತ ಹಾಗೂ ವಸ್ತುನಿಷ್ಠ ಮೌಲ್ಯನಿರ್ಧಾರಣೆಯನ್ನು ಕೈಗೊಳ್ಳುವಲ್ಲಿ ಅಸಮರ್ಥನಾಗಿರುತ್ತಾನಲ್ಲದೆ ಸೂಕ್ತ ಹಾಗೂ ಸಂಭವನೀಯವೆಂದು ಹೇಳಬಹುದಾದ ಮಧ್ಯಸ್ಥಿಕೆಯು ಮೌಲ್ಯನಿರ್ಧಾರಣೆ ಅವಶ್ಯವಾಗಿಬಿಡುತ್ತದೆ. ಒಂದು ರೀತಿಯಲ್ಲಿ, ಆತ/ಆಕೆ ಅರಣ್ಯದಲ್ಲಿ ಮರಗಳನ್ನು ಹುಡುಕಲು ಹೋಗಿ ದಾರಿತಪ್ಪಿದಂತಾಗುತ್ತದೆ. ಆದ್ದರಿಂದ, ಶೈಕ್ಷಣಿಕವಾಗಿ ಪಕ್ಷಪಾತ ರಹಿತವಾದ ಮತ್ತು ಪರಿಸ್ಥಿತಿಯ ವಸ್ತುನಿಷ್ಠ ಹಾಗೂ ಪಕ್ಷಪಾತರಹಿತ ಮೌಲ್ಯನಿರ್ಧಾರದ ಮೇಲೆ ಅವಲಂಬಿತವಾಗಿರುವ ನೀತಿರೂಪಿಸುವಿಕೆ ಹಾಗೂ ಆಡಳಿತಾತ್ಮಕ ಕಾರ್ಯಗಳ ಚುಕ್ಕಾಣಿಯನ್ನು ಸಾಮಾನ್ಯ ಜ್ಞಾನವಿರುವವನೊಬ್ಬ (Generalist) ಹಿಡಿಯುವುದು ಅಪೇಕ್ಷಣೀಯವಷ್ಟೇ ಅಲ್ಲ ಅಗತ್ಯವೂ ಹೌದು. ಇದರಿಂದ ಯಾವುದೇ 'ವೃತ್ತಿಪರ' ದೃಷ್ಟಿಕೋನವನ್ನು ಪ್ರತಿಬಿಂಬಿಸದ ನೀತಿಗಳ ಹಾಗೂ ಕಾರ್ಯಕ್ರಮಗಳ ಸೂತ್ರೀಕರಣ ಖಚಿತಗೊಳ್ಳುತ್ತದೆ. ಸಾರ್ವಜನಿಕ ಸೇವೆಯಲ್ಲಿರುವವನ ಇಂಥ ವಸ್ತುನಿಷ್ಠತೆ ಜ್ಞಾನದ ಕೊರತೆಯಿಂದ ಉಂಟಾದದ್ದು ಹಾಗೂ ವೈಯಕ್ತಿಕ ಅಭಿಪ್ರಾಯಗಳಿಂದ ಮತ್ತು ಪೂರ್ವಾಗ್ರಹಗಳಿಂದ ಪೀಡಿತವಾದದ್ದು ಎಂಬ ಸತ್ಯವನ್ನು ಈ ಧೋರಣೆ ಅಲಕ್ಷಿಸಿದೆ ಎಂದು ತೋರುವುದು. ಸಾಮಾನ್ಯ ಜ್ಞಾನವುಳ್ಳವರು ತಮ್ಮ ವೈಯಕ್ತಿಕ ದೃಷ್ಟಿಕೋನಗಳನ್ನು ಮೀರಿಹೋಗಲಾರರು ಎಂಬುದು ಎಷ್ಟು ನಿಜವೋ ಹಾಗೆಯೇ 'ತಜ್ಞ'ರು, ವಿಶೇಷತಃ, ಕ್ಲಿಷ್ಟ ವಿಶ್ಲೇಷಣೆಯ ಅಗತ್ಯಗಳನ್ನು ತಿಳಿದವರು ತಮ್ಮ ವೃತ್ತಿಪರ ಪೂರ್ವಗ್ರಹಗಳನ್ನು ಮೀರಿಹೋಗಲಾರರು ಎಂಬುದು ಅಷ್ಟೇ ಸತ್ಯ. ವೈಯಕ್ತಿಕ ಗ್ರಹಿಕೆ ವೃತ್ತಿಪರವಾದ ತಜ್ಞತೆಗೆ ಬದಲಿಯಾಗಲಾರದು. ನ್ಯಾಯ ಪರಿಪಾಲನೆ ಮತ್ತು ಶಿಸ್ತು ಹಾಗೂ ಆದಾಯ ಸಂಗ್ರಹಣೆಯಿಂದ ಹಿಡಿದು ಅಭಿವೃದ್ಧಿ; ಆಡಳಿತದವರೆಗೆ ಆಳ್ವಿಕೆಯಲ್ಲಿ ಗಮನಾರ್ಹ ಬದಲಾವಣೆಗಳು ಆಗಿರುವುದರಿಂದ ಹೆಚ್ಚು ಹೆಚ್ಚು ಪ್ರಭೇದಗಳು ಉಂಟಾಗಿದ್ದು ರೂಢಿಯ ಉಪಕ್ರಮಕ್ಕಿಂತ ಉನ್ನತ ಶ್ರೇಣಿಯ ತಜ್ಞತೆ ಮತ್ತು ವಿಶೇಷಜ್ಞಾನಗಳು ಅವಶ್ಯಕವಾಗಿವೆ. ಸಿಬ್ಬಂದಿ ಆಡಳಿತವನ್ನು ಕುರಿತ ವರದಿಯೊಂದು ಹೀಗೆ ಘೋಷಿಸುತ್ತದೆ. "ಸರ್ಕಾರದ ಪಾತ್ರದಲ್ಲಿನ ಬದಲಾವಣೆ ಮತ್ತು ಅದರ ಕಾರ್ಯಗಳ ವೈವಿಧ್ಯತೆ ವಿಭಿನ್ನ ಕೌಶಲ್ಯಗಳನ್ನು ಅಪೇಕ್ಷಿಸುತ್ತವೆಯಲ್ಲದೆ ಮೂಲಭೂತ ಕುಶಲತೆ ಅಥವಾ ಶೈಖ್ಷಣಿಕ ಅರ್ಹತೆಗೆ ತಕ್ಕಂತೆ ಇರುವ ವಿಶೇಷ ತರಬೇತಿಯಿಂದ ಪಡೆಯಬಹುದಾದ ಸಾಮರ್ಥ್ಯವನ್ನೂ

Digitised by Bharatavani, CIIL

ಅಪೇಕ್ಷಿಸುತ್ತವೆ (ಸಿಬ್ಬಂದಿ ಆಡಳಿತವನ್ನು ಕುರಿತ ವರದಿ, 1969, 815).

ಶಿಕ್ಷಣದ ಬಗ್ಗೆ ಅಲ್ಪ ತಿಳುವಳಿಕೆಯುಳ್ಳವರ ಕೈಯಲ್ಲಿ ಇದರ ನಿರ್ವಹಣೆಯನ್ನು ಒಪ್ಪಿಸಲು ಸಾಧ್ಯವಿಲ್ಲದಷ್ಟು ಶಿಕ್ಷಣ ಸಂಕೀರ್ಣವಾದ ಉದ್ಯಮವಾಗಿದೆ. ಇದು ಹೆಚ್ಚು ಆಕರ್ಷಕವಲ್ಲದ ವೃತ್ತಿಕ್ಷೇತ್ರವಾದ್ದರಿಂದ ದೀರ್ಘಕಾಲೀನ ಆಸಕ್ತಿಯಿರುವ ಮತ್ತು ಈ ಕ್ಷೇತ್ರಕ್ಕೆ ಬದ್ಧವಾಗಿರುವ ಕೆಲವೇ ಮಂದಿ ಸೇವಾ ಅಧಿಕಾರಿಗಳು ಈ ಹುದ್ದೆಯನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಶಿಕ್ಷಣ ಇಲಾಖೆಗಳಲ್ಲಿ ಸ್ವಇಚ್ಛೆಯಿಂದ ಕೆಲಸ ಮಾಡಲು ಆಯ್ಕೆ ಮಾಡಿಕೊಳ್ಳುವ ಭಾರತೀಯ ಆಡಳಿತ ಸೇವಾ ಅಧಿಕಾರಿಗಳು ಬಹಳ ವಿರಳ. ತತ್ಪರಿಣಾಮವಾಗಿ, ದೀರ್ಘಕಾಲೀನ ದೃಷ್ಟಿಕೋನದ ಆಧಾರದ ಮೇಲೆ ಶೈಕ್ಷಣಿಕ ಅಭಿವೃದ್ಧಿಯನ್ನು ಯೋಜಿಸಲು ಅಗತ್ಯವಾದ ತಜ್ಞತೆಯನ್ನು ಪ್ರೋತ್ಸಾಹಿಸಬಲ್ಲ ವೃತ್ತಿನಿರತ ಸೇವೆಯಲ್ಲಿ ಸಮಯದಲ್ಲಿ ಕಲಿತುಕೊಳ್ಳುವ ಸಂಭವನೀಯತೆ ಅತ್ಯಲ್ಪ. ತಂದೆತಾಯಿಯಾಗಿದ್ದುಕೊಂಡು ತಮ್ಮ ಮಗುವಿನ ಶಿಕ್ಷಣದ ಕಾಳಜಿಯೊಂದಿಗೆ ಇಂಥ ತಜ್ಞತೆ ಒಬ್ಬರಿಗೆ ಬರಲು ಸಾಧ್ಯವಿಲ್ಲ. ಹೆಚ್ಚೆಂದರೆ, ಶಿಕ್ಷಣದ ಪಿಡುಗುಗಳು ಏನು ಎಂದು ಒಬ್ಬ ವ್ಯಕ್ತಿ, ವಿಶೇಷವಾಗಿ ಸಮ್ಮೇಳನಗಳಲ್ಲಿ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ, ವಿಶದೀಕರಿಸಲು ಶಕ್ತನಾಗಬಲ್ಲನು. ಅಧಿಕಾರಿಗಳು ತಮ್ಮ ಸಂಸ್ಥೆಯಲ್ಲಲ್ಲದೆ ಇತರ ಅಕ್ಕ ಪಕ್ಕದ ವಿಭಾಗಗಳಲ್ಲಿ ಬಡ್ತಿ ಹೊಂದಲು ಬಯಸುವುದು ಬದ್ಧತೆ ಮತ್ತು ವಿಶೇಷಜ್ಞತೆಗಳ ಕೊರತೆಗೆ ಕಾರಣವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ(1986) ಸಲಹೆ ನೀಡಿರುವಂತೆ ಅಖಿಲ ಭಾರತೀಯ ಶಿಕ್ಷಣ ಸೇವೆಯ ರಚನೆ (Indian Educational Service IES) ಶೈಕ್ಷಣಿಕ ವಿಕಾಸದತ್ತ ಅಖಿಲ ಭಾರತದ ದೃಷ್ಟಿಕೋನವನ್ನು ಹಾಗೂ ಬದ್ಧತೆಯನ್ನು ಹೊಂದಿರುವ ತಜ್ಞರ ದಳವನ್ನು ಅಭಿವೃದ್ಧಿಗೊಳಿಸಲು ನೆರವಾಗುತ್ತದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರ, ಸಾರ್ವಜನಿಕ ವಲಯದ ಉದ್ಯಮ ಮತ್ತು ಪ್ರದೇಶಗಳು ಹಾಗೂ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಉಪರಾಜ್ಯ ಸ್ತರಗಳು–ಈ ಮುಂತಾದ ಮಟ್ಟಗಳಲ್ಲಿ ಭಾರತದಲ್ಲಿನ ಅಧಿಕಾರಶಾಹಿಯು ಕೆಲಸ ಮಾಡುತ್ತದೆ. ಆರ್ಥಿಕ ಹಾಗೂ ಸಾಮಾಜಿಕ ಯೋಜನೆ ಮತ್ತು ಆರ್ಥಿಕತೆ ಹಾಗೂ ಬಂಡವಾಳಗಳ ನಿಯಂತ್ರಣ ಇವುಗಳ ಪ್ರಾರಂಭದೊಂದಿಗೆ ಅಧಿಕಾರಶಾಹಿ ಮಹತ್ವದ ಪಾತ್ರವನ್ನು ವಹಿಸಿಕೊಂಡಿದೆ. ಬಹುತೇಕ ಸರಕಾರದ ಪ್ರತಿಯೊಂದು ಸ್ತರದಲ್ಲಿಯೂ ಅಧಿಕಾರಿಯು ಸರಕಾರದ ಕಾರ್ಯ ಸುತ್ತಲೂ ತಿರುಗುವ ತಿರುಗಣಿ (Pivot) ಯಂತಾದ ಯೋಜನೆಗಳು ಹಾಗೂ ಪ್ರಾಯೋಜನೆಗಳ ಅನುಮೋದನೆ, ಪರವಾನಗಿ ನೀಡುವಿಕೆ, ವಿಭಿನ್ನ ಚಟುವಟಿಕೆಗಳಿಗೆ ಅನುದಾನಗಳ ಮಂಜೂರಾತಿ, ನಿಷ್ಪಾದನೆಯ ಪರ್ಯವೇಕ್ಷಣೆ ಮತ್ತು ಮೌಲ್ಯಮಾಪನ, ತಪ್ಪಿತಸ್ಥರಿಗೆ ದಂಡನೆ, ಉತ್ತಮ ಕೆಲಸಗಾರರಿಗೆ ಪುರಸ್ಕಾರ ಇವೇ ಮುಂತಾದವುಗಳು ಆತನ ಕಾರ್ಯಗಳಾದವು. ಹಾಗೂ ಕಾರ್ಯಕ್ರಮಗಳು ಸ್ಥಳೀಯ ಸಾಮಂಜಸ್ಯ ಮತ್ತು ಉಪಯುಕ್ತತೆ ಹೊಂದಿದ್ದು ಸ್ಥಳೀಯವಾಗಿಯೇ ಅವುಗಳ ಯೋಜನೆ ಮತ್ತು ಅನುಷ್ಠಾನ ಕ್ರಮೇಣ ಅಗತ್ಯವಾಗುತ್ತಿದ್ದರೂ ಕಾರ್ಯಕ್ರಮಗಳನ್ನು ಗುರುತಿಸುವ ಮತ್ತು ಅನುಷ್ಠಾನದ ರೀತಿಯನ್ನು ನಿರ್ಧರಿಸುವ ಅಧಿಕಾರ "ಮುಖ್ಯ" ಆಡಳಿತಗಾರರ ವ್ಯಾಪ್ತಿಯಲ್ಲಿದ್ದು ಹೆಚ್ಚಾಗಿ "ಕೇಂದ್ರೀಕರಣ"ವಾಗುತ್ತಿದೆ. ಕೇಂದ್ರ ಮತ್ತು ರಾಜ್ಯಗಳ ಇಲಾಖೆಗಳಿಗೆ ಮಂಜೂರಾತಿ ಮತ್ತು ಅನುಮೋದನೆಗಳ ವಿಷಯದಲ್ಲಿ ವಿಶೇಷಾಧಿಕಾರ ಮತ್ತು ವ್ಯಾಪ್ತಿ ಇರುವುದರಿಂದ ಅಧಿಕ ಖರ್ಚಿನಲ್ಲಿ ಪರ್ಯವಸಾನಗೊಳ್ಳುವ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಾಕಷ್ಟು ವಿಳಂಬವಾಗುವುದು.

ಯೋಜನೆಯನ್ನು ರೂಪಿಸುವ ಪ್ರಾರಂಭಿಕ ಹಂತದಲ್ಲಿ ಸಾರ್ವಜನಿಕರ ಸಹಭಾಗಿತ್ವ ಮತ್ತು ಪಾಲುದಾರಿಕೆ ಅತ್ಯವಶ್ಯವೆನಿಸಿದರೂ, ತಮ್ಮ ಅಗತ್ಯಗಳಿಗೆ ಸೂಕ್ತವಾದುದಕ್ಕೆ ನಿರ್ಧಾರ ಕೈಗೊಳ್ಳುವ ಮತ್ತು ಸಂಪನ್ಮೂಲಗಳನ್ನು ಉಪಯೋಗಿಸುವ ಅಧಿಕಾರವನ್ನು ಸ್ಥಳೀಯ ಮಟ್ಟದಲ್ಲಿ ಸಾರ್ವಜನಿಕರಿಗೆ ಮತ್ತು ಅವರ ಪ್ರತಿನಿಧಿಗಳಿಗೆ ಎಂದಿಗೂ ಹಸ್ತಾಂತರಿಸಲಾಗಿಲ್ಲ. ಇದಕ್ಕೆ ಕಾರಣಗಳು ಹೀಗಿವೆ:

ಸ್ಥಳೀಯ ರಾಜಕಾರಣಿಯ ಅಪನಂಬಿಕೆ, ಅರ್ಥಪೂರ್ಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದಕ್ಕೆ ತಕ್ಕ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಜನಪ್ರತಿನಿಧಿಗಳು ಹೊಂದಿಲ್ಲವೆಂಬ ಭಾವನೆ, ಜನಜೀವನವನ್ನು ನಿಯಂತ್ರಿಸುವ ಶಕ್ತಿ ಮತ್ತು ಅಧಿಕಾರಗಳನ್ನು ಕಳೆದುಕೊಳ್ಳುವ ಭಯ. "ಸ್ಥಳೀಯ ಸಂಸ್ಥೆಗಳ ಮುಖಾಂತರ ಕಾರ್ಯಕ್ರಮಗಳಿಗೆ (ಸಮುದಾಯ ವಿಕಾಸ) ಅನುಗೊಳಿಸುವಲ್ಲಿ ಅಧಿಕಾರಶಾಹಿಯ ಅಸಮರ್ಥತೆ". ಬಲವಂತರಾಯ್ ಸಮಿತಿಯ ಸಲಹೆಯ ಮೇರೆಗೆ ಐವತ್ತರ ದಶಕಗಳಲ್ಲಿ ಪ್ರಾರಂಭಗೊಂಡ ಕಾರ್ಯಕ್ರಮಗಳ ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಅಸಫಲತೆಗೆ ಕಾರಣ ಎಂದು ಪಂಚಾಯತ್ ರಾಜ್ಯ ಸಂಸ್ಥೆಗಳನ್ನು ಕುರಿತ (1978) ವರದಿಯೊಂದು ಗುರುತಿಸಿದೆ. ಟಾಬ್ ಎಂಬಾತನ ದೃಷ್ಟಿಯಲ್ಲಿ ಆಡಳಿತಗಾರರು ಮತ್ತು ಗ್ರಾಮಗಳ ನಡುವಿನ ಅಂತ ಬಹಳ ಅಧಿಕವಾಗಿದ್ದು ಕೆಲವು ಅಧಿಕಾರಿಗಳು ಭಾರತೀಯ ಗ್ರಾಮಗಳನ್ನು ಕಾಣುವುದೇ ಇಲ್ಲ. (ಟಾಬ್, 1969, ಪಿ.ಪಿ.13–14)

ವರ್ಷಗಳು ಕಳೆದಂತೆ ಶೈಕ್ಷಣಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ತಜ್ಞರ ಪಾತ್ರವನ್ನು ಅವಶ್ಯಕವೇನಿಲ್ಲವೆಂಬಂತೆ ಮಾಡುವ ಕೆಲವು ಬೆಳವಣಿಗೆಗಳು ಕಂಡುಬಂದಿವೆ. ಅವು ಯಾವುವೆಂದರೆ:

- ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಅವರಿಗೆ ಅನುಕೂಲವಾಗುವಂತೆ ಹೆಚ್ಚುವರಿ ಹುದ್ದೆಗಳು ಕೆಳಗಿನ ಸ್ತರಗಳಲ್ಲಿಯೂ ಸೃಷ್ಟಿಗೊಂಡಿವೆ.
- ಈ ಹೆಚ್ಚುವರಿ ಅಧಿಕಾರಿಗಳು ಅಧಿಕ ಮಟ್ಟದ ಶೈಕ್ಷಣಿಕ ಸ್ವರೂಪದ ತಜ್ಞತೆ ಅವಶ್ಯವಿರುವ ಹುದ್ದೆಗಳನ್ನು ವಹಿಸಿಕೊಳ್ಳು

Digitised by Bharatavani, CIIL

ವಂತಾಗಿರುವುದು.

- ಕೈಗೊಂಡ ನಿರ್ಧಾರ ಮತ್ತು ಅನುಷ್ಠಾನಗೊಂಡ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಉತ್ತರದಾಯಿತ್ವದ ಕೊರತೆ.

ಅಖಿಲ ಭಾರತ ಸೇವೆಯ ಅಧಿಕಾರಿಗಳ ಅವರ ವರ್ಗದ (Cadre) ಲ್ಲಿ ಆ ಅಧಿಕಾರಿಗಳ ಸ್ಥಾನ ಮತ್ತು ಸೂಚಿತಗೊಂಡಿರುವ ಸ್ಥಾನಮಾನಗಳ ಹಿನ್ನೆಲೆಯಲ್ಲಿ ಇವರ ಹೆಚ್ಚಿನ ಲಭ್ಯತೆ ಮತ್ತು ಇವರಿಗೆ ಎಲ್ಲಿಯಾದರೂ ಹುದ್ದೆಗೆ ಅವಕಾಶ ಮಾಡಿಕೊಡುವ "ಅನಿವಾರ್ಯತೆ" ಇವುಗಳಿಂದಾಗಿ ಹಿಂದಿನ ಇಲಾಖೆಗಳು ಮತ್ತು ಖಾತೆಗಳನ್ನು ಇಬ್ಭಾಗ ಇಲ್ಲವೇ ಮುಬ್ಭಾಗವನ್ನಾಗಿ ಮಾಡಿ ಹೆಚ್ಚುವರಿ ಘಟಕಗಳನ್ನು ಸೃಷ್ಟಿಸಲಾಗಿದೆ. ಈ ಹಿಂದೆ ಶಾಲಾ ಶಿಕ್ಷಣವನ್ನು ಒಂದು ಸಮಗ್ರ ಘಟಕವನ್ನಾಗಿ ಕಾಣಲು ಸಾಧ್ಯವಾಗಿಸಿದ ಶಾಲಾಶಿಕ್ಷಣ ಸಮಗ್ರ ಶಿಕ್ಷಣ ಇಲಾಖೆಯ ಭಾಗವಾಗಿದ್ದರೂ ಕೇಂದ್ರ ಹಾಗೂ ರಾಜ್ಯಮಟ್ಟಗಳಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣಗಳಿಗೆ ಪ್ರತ್ಯೇಕ ಘಟಕಗಳನ್ನು ಸೃಷ್ಟಿಸಲಾಗಿದೆ. ಇತ್ತೀಚೆಗೆ ವಿಶ್ವಬ್ಯಾಂಕ್‌ನಿಂದ ಧನಸಹಾಯ ಪಡೆದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳ ಉಸ್ತುವಾರಿ ನೋಡಲು ಹೊಸ ಘಟಕವನ್ನು ತೆರೆಯಲಾಯಿತು. ಇದರಂತೆಯೇ ವಯಸ್ಕರ ಶಿಕ್ಷಣ, ಅಧ್ಯಾಪಕ ಶಿಕ್ಷಣ, ಕ್ರೀಡೆ ಮತ್ತು ಯುವ ಕಾರ್ಯಕ್ರಮಗಳಿಗೆಂದು ಪ್ರತ್ಯೇಕ ವಿಭಾಗಗಳನ್ನು ಸೃಷ್ಟಿಸಲಾಗಿದೆ. ಸಮ್ಮಿಶ್ರ ಸರ್ಕಾರದ ವಿಭಿನ್ನ ರಾಜಕೀಯ/ಪಕ್ಷಗಳ ಮಂತ್ರಿಗಳು ಸೆಕ್ರಟರಿ/ಕಮೀಷನರ್‌ಗಳನ್ನು ಹಾಗೂ ತತ್ಪೂರಕವಾಗಿರುವ ಜಂಟಿ ಸೆಕ್ರೆಟರಿ, ನಿರ್ದೇಶಕ ಮತ್ತು ಡೆಪ್ಯೂಟಿ/ಉಪ ಸೆಕ್ರೆಟರಿಗಳನ್ನು ಬಯಸುವುದರಿಂದ ಈ ಪಕ್ಷಗಳನ್ನು ತೃಪ್ತಿಪಡಿಸುವ ಒತ್ತಡದಿಂದ ಇಲಾಖೆಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆಯಾಗಿ ಈ ಒಲವು ಪ್ರಬಲವಾಗಿದೆ. ಈ ಹೆಚ್ಚುವರಿ ಕ್ರಮ ಶೈಕ್ಷಣಿಕ ಅಭಿವೃದ್ಧಿ ಸಂಯೋಜನೆಯಲ್ಲಿ ಮತ್ತು ಶಿಕ್ಷಣವನ್ನು ಸಮಗ್ರವಾಗಿ ಪರಿಗಣಿಸಿ ಸುಸಂಬಂಧ ಕ್ರಿಯಾ ಯೋಜನೆಯನ್ನು ರೂಪುಗೊಳಿಸುವಲ್ಲಿ ತೀವ್ರ ಸಮಸ್ಯೆಗಳು ತಲೆದೋರುವಂತೆ ಮಾಡಿದೆ. ಇವರಿಗೆ ವೃತ್ತಿಪರ ಮುನ್ನಡೆಯಲ್ಲಿ ಮತ್ತಷ್ಟು ಪ್ರೋತ್ಸಾಹ ಬೇಕೆಂದು ಭಾರತೀಯ ಆಡಳಿತ ಸೇವೆಯ ಅಧಿಕಾರಿಗಳು ಇತ್ತಿಚೆಗೆ ತಮ್ಮನ್ನು ಸಾರ್ವಜನಿಕ/ಖಾಸಗಿ ವಲಯಗಳ ಉದ್ಯಮಗಳಲ್ಲಿ ಅವುಗಳ ಕಾರ್ಯನಿರ್ವಾಹಕರಾಗಿ ತಮ್ಮನ್ನು ನಿಯೋಜಿಸಬೇಕು ಎಂಬ ಪ್ರಸ್ತಾಪವನ್ನು ಮಂಡಿಸಿದರು; ಇಂತಹ ನಿಯೋಜನೆ ಆರ್ಥಿಕ ಆಡಳಿತಕ್ಕೆ ಬೇಕಾದ ಸಾಮರ್ಥ್ಯವನ್ನು ಅವರಲ್ಲಿ ವೃದ್ಧಿಸುತ್ತದೆ ಎಂಬುದು ಈ ಮಂಡನೆಯ ಹಿಂದಿರುವ ವಾದ.

ಶೈಕ್ಷಣಿಕ ತಜ್ಞತೆ ಮತ್ತು ವಿಶೇಷ ಪರಿಶ್ರಮಗಳ ಅಗತ್ಯವಿರುವ ಹುದ್ದೆಗಳಿಗೆ ಅಖಿಲ ಭಾರತ ಸೇವೆಯ ಅಧಿಕಾರಿಗಳು ಹೆಚ್ಚು ಸಂಖ್ಯೆಯಲ್ಲಿ ನೇಮಕವಾಗುತ್ತಿರುವುದು ಮತ್ತೊಂದು ಬೆಳವಣಿಗೆ. ಕೇಂದ್ರದಲ್ಲಿ ಇದಕ್ಕೆ ಉದಾಹರಣೆಗಳು ಇಂತಿವೆ: ವಯಸ್ಕರ ಶಿಕ್ಷಣದ ನಿರ್ದೇಶನಾಲಯದ ನಿರ್ದೇಶಕರು ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆಯ ಜಂಟಿ ನಿರ್ದೇಶಕರು, ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಮತ್ತು ಕೇಂದ್ರ ಮಾಧ್ಯಮಿಕ ಶಿಕ್ಷಣ ಬೋರ್ಡ್‌ಗಳ ಸಚಿವರು, ಕೇಂದ್ರೀಯ ವಿದ್ಯಾಲಯ ಸಂಘಟನೆಯ ಕಮೀಷನರ್, ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ತು (NCTE) ಸದಸ್ಯರು ಸಚಿವರು ಇತ್ಯಾದಿ. ರಾಜ್ಯಮಟ್ಟದಲ್ಲಿ, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯಗಳ (DSERT) ನಿರ್ದೇಶಕರನ್ನು ಮತ್ತು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳ ನಿರ್ದೇಶಕರನ್ನು ಭಾರತೀಯ ಆಡಳಿತ ಸೇವೆಯಿಂದ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಅನೇಕ ರಾಜ್ಯಗಳಲ್ಲಿ ಈ ಸೇವಾ ಅಧಿಕಾರಿಗಳನ್ನು ವಿಶ್ವವಿದ್ಯಾಲಯಗಳ ಉಪಕುಲಪತಿಗಳಾಗಿಯೂ ನೇಮಕ ಮಾಡಲಾಗಿದೆ. ಯೋಜನಾ ಆಯೋಗ ಇಂತಹ ಅಧಿಕಾರಿಗಳ ಹರಡುವಿಕೆಗೆ ಉತ್ತಮ ನಿದರ್ಶನವಾಗಿದೆ. ಈ ಹಿಂದೆ ಆಯೋಗದ ಸಿಬ್ಬಂದಿಯಲ್ಲಿ ಸಾಮರ್ಥ್ಯವು ಸಾಬೀತುಪಟ್ಟಿರುವಂಥ ಆರ್ಥಿಕತಜ್ಞರು, ತಂತ್ರಜ್ಞರು, ಆರೋಗ್ಯ ಆಡಳಿತದಲ್ಲಿ ವಿಶೇಷ ಪರಿಶ್ರಮವುಳ್ಳವರು, ಸಮಾಜತಜ್ಞರು, ಶಿಕ್ಷಣತಜ್ಞರು, ಕೃಷಿ ವಿಜ್ಞಾನಿಗಳು, ನಗರ ಯೋಜನೆಯ ತಜ್ಞರು ಮುಂತಾದವರನ್ನು ಒಳಗೊಳ್ಳುತ್ತಿತ್ತು, ಆದರೆ, ಈಗ ಬಹಳಷ್ಟು ವಿಶೇಷ ವಿಭಾಗಗಳ ಸಚಿವರ ಸ್ಥಾನಮಾನದ ಭಾರತೀಯ ಆಡಳಿತ ಸೇವೆಯಿಂದ ಆಯ್ಕೆಗೊಂಡ ಪ್ರಧಾನ ಸಲಹೆಗಾರರನ್ನು ತಮ್ಮ ಮುಖ್ಯಸ್ಥರನ್ನಾಗಿ ಹೊಂದಿವೆ. ಸೂಚಿತ ಪಟ್ಟಿಯಲ್ಲಿದ್ದು ಮಂತ್ರಿಗಳಿಗೆ ಸೆಕ್ರೆಟರಿಗಳನ್ನಾಗಿ ನೇಮಕ ಮಾಡಲು ಸಾಧ್ಯವಾಗದಿದ್ದ ಅಧಿಕಾರಿಗಳಿಗೆ ಹುದ್ದೆಯನ್ನು ಕಲ್ಪಿಸ ಹೊರಟಿದ್ದು ಇದಕ್ಕೆ ಕಾರಣ. ಈ ವಿಧಾನ 'ಜಡ'ವಾಗಿರುವ ಅಧಿಕಾರಿಗಳಿಗೆ ನಿರೀಕ್ಷೆಯ ಒಂದು ವೇದಿಕೆಯನ್ನು ಕಲ್ಪಿಸುತ್ತದೆ. ಈ ಹುದ್ದೆಗಳಲ್ಲಿ ಇವರ ಅಧಿಕಾರಾವಧಿಯು ಅತ್ಯಲ್ಪವಾಗಿದ್ದು, ದೀರ್ಘಕಾಲೀನ ಯೋಜನೆಗೆ ಗುರುತರವಾದ ಧಕ್ಕೆಯುಂಟಾಗಿದೆ. ಫಲಕಾರಿಯಾಗಲು ದೀರ್ಘಕಾಲವನ್ನು ತೆಗೆದುಕೊಳ್ಳುವ ಶಿಕ್ಷಣಕ್ಕೆ ವ್ಯವಸ್ಥೆಗೆ ದೀರ್ಘಾವಧಿಯ ಕಾರ್ಯನೀತಿಯ ಅವಶ್ಯಕತೆಯಿದೆ. ಆದಾಗ್ಯೂ, ಸಾರ್ವಜನಿಕ ಸೇವಾ (UPSC) ವಿವಿಧ ವಿಭಾಗಗಳಲ್ಲಿ ತಜ್ಞರನ್ನು ಹೊಂದಿದೆಯಾದರೂ ಅವರು ಮತ್ತೊಬ್ಬರ ಕೆಳಗೆ ಕಾರ್ಯನಿರ್ವಹಿಸುತ್ತಾ ಪೂರಕ ಪಾತ್ರವನ್ನು ವಹಿಸುತ್ತಾರೆಯಲ್ಲದೆ ತಜ್ಞತೆಗೆ ತಕ್ಕದೆಂದು ಹೇಳಬಹುದಾದ ನಿರ್ಧಾರಗಳಲ್ಲಿ ಅವರಿಗೆ ಯಾವ ಅಧಿಕಾರವಾಗಲೀ ಅಥವಾ ಜವಾಬ್ದಾರಿಯಾಗಲಿ ಇಲ್ಲ.

ಮೂರನೆಯ ಪರಿಣಾಮವೆಂದರೆ ಕೈಗೊಂಡ ನಿರ್ಧಾರಗಳಲ್ಲಿ ಉತ್ತರದಾಯಿತ್ವದಿಂದಾಗಿ, ಆಡಳಿತಗಾರರನ್ನು ಅವರು ಕೈಗೊಂಡ ನಿರ್ಧಾರಕ್ಕೆ ಜವಾಬುದಾರರು ಎಂದು ಹೇಳಲು ಸಾಧ್ಯವಾಗುತ್ತಿಲ್ಲ. ಇದು ಎರಡು ರೀತಿಯಲ್ಲಿ ಪ್ರಭಾವ ಬೀರುತ್ತದೆ, ನಾವೀನ್ಯವುಳ್ಳ ಸೃಜನಾತ್ಮಕ ಅಧಿಕಾರಿಗಳನ್ನು ಅವರ ಒಳ್ಳೆಯ ಕಾರ್ಯಕ್ಕೆ

Digitised by Bharatavani, CIIL

ಪುರಸ್ಕರಿಸಲು ಸಾಧ್ಯವಾಗುತ್ತಿಲ್ಲ. ಹಾಗೆಯೇ, ಕೆಲಸಕ್ಕೆ ಬಾರದ ಅಧಿಕಾರಿಗಳನ್ನು ಅವರ ಕಳಪೆ ಕೆಲಸಕ್ಕೆ ದಂಡಿಸಲೂ ಸಾಧ್ಯವಾಗುತ್ತಿಲ್ಲ. ಸರ್ಕಾರದಲ್ಲಿ, ದುರದೃಷ್ಟವಶಾತ್, ಸೂಚಿಸಿದ ಮತ್ತು ಕೈಗೊಂಡ ಕ್ರಮಗಳಿಗೆ ಹೊಂದಿಕೊಂಡಂತೆ ಉತ್ತರದಾಯಿತ್ವವಿಲ್ಲ. ಇದು ಇತ್ತೀಚಿನ ವರ್ಷಗಳಲ್ಲಿ ಅಧಿಕಾರಶಾಹಿಯಲ್ಲಿ ರಾಜಕೀಯ ಆಡಳಿತಗಾರರು ದೃಢ ನಿಲುವನ್ನು ಹೊಂದುವ ಮತ್ತು ನಿರ್ಧಾರ ಕೈಗೊಳ್ಳುವ ಸಾಧ್ಯತೆಯನ್ನು ತೀವ್ರವಾಗಿ ಪ್ರಭಾವಿಸಿದೆ. ಜವಾಬ್ದಾರಿಯನ್ನು ಮತ್ತೊಬ್ಬರ ಮೇಲೆ ಹೊರಿಸುವುದು ಸರ್ಕಾರದ ಕಾರ್ಯವೈಖರಿಯ ಒಂದು ಲಕ್ಷಣವೇ ಆಗಿಬಿಟ್ಟಿದೆ. ಪದೇಪದೇ ವರ್ಗಾವಣೆ, ಆಕರ್ಷಕವಲ್ಲದ ಹುದ್ದೆಗೆ ನಿಯೋಜನೆ, ಅಧಿಕಾರ ಮತ್ತು ಶಕ್ತಿಯನ್ನು ತೋರಲು ಅವಕಾಶದ ಕೊರತೆ, ಅತ್ಯಲ್ಪ ಕೆಲಸ ಮತ್ತು ನಿಯಮಗಳಿಗೆ ಅಷ್ಟೇನೂ ಬದ್ಧತೆಯಿಲ್ಲದ ಹುದ್ದೆಗಳಿಗೆ ನಿಯೋಜನೆ ಇತ್ಯಾದಿ ರೂಪದ ದಂಡನೆಯ ಭಯವು ನಿಯಮ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಒಲವನ್ನು ಹುಟ್ಟುಹಾಕಿದೆ. ಬೆನ್‌ವೆನಿಸ್ಟೆ (1976, pxvi) ಹೀಗೆ ಹೇಳುತ್ತಾನೆ "ಸಂಸ್ಥೆಯ ಸದಸ್ಯರು ಸಂಸ್ಥೆಯ ನಿಯಮಗಳನ್ನು ತಮ್ಮ ವರ್ತನೆಯನ್ನು ಸಮರ್ಥಿಸಲು, ರಕ್ಷಿಸಲು ಉಪಯೋಗಿಸಿಕೊಳ್ಳುತ್ತಾರೆ".

ನಾಲ್ಕನೇ ಪರಿಣಾಮವೆಂದರೆ ವಿಶೇಷಜ್ಞರನ್ನು ಕೆಳಮಟ್ಟದ ಹುದ್ದೆಗಳಿಗೆ ತಳ್ಳಿರುವುದು ಮತ್ತು ಅವರು ಅಭಿವೃದ್ಧಿ ಯೋಜನೆಯಲ್ಲಿ ವಹಿಸಬಹುದಾದ ಮಹತ್ತರ ಪಾತ್ರವನ್ನು ಗುರುತಿಸದೇ ಇರುವುದು. ಸರ್ಕಾರದ ಕಾರ್ಯವಿಧಾನದಲ್ಲಿ 7ತಜ್ಞತೆಯ ಪ್ರವೇಶದಿಂದ ನಿರ್ಧಾರದ ಪ್ರಕ್ರಿಯೆಯಲ್ಲಿ ಯಾವ ಸುಧಾರಣೆಯೂ ಆಗಿಲ್ಲ. ಕಾರಣ, ತಜ್ಞರು ಪ್ರತ್ಯೇಕವಾದ ಕ್ರಮಬದ್ಧ ಶ್ರೇಣಿಯಲ್ಲೇ ಉಳಿದುಬಿಟ್ಟಿದ್ದಾರೆ (ಸಿಬ್ಬಂದಿ ಆಡಳಿತವನ್ನು ಕುರಿತ ವರದಿ, 1969, ಪಿ–11). ವಿಶೇಷಜ್ಞರ ಪಾತ್ರ ಕೇಳಿದಾಗ ಸಲಹೆಯನ್ನು ನೀಡುವುದಕ್ಕಷ್ಟೇ ಸೀಮಿತವಾಗಿ ಉಳಿದಿದೆ; ಹಾಗೂ 'ಸಚಿವಾಲಯದ ಏಕಮೇವ ಜವಾಬ್ದಾರಿಯಾದ ನೀತಿ ರೂಪಿಸುವಿಕೆ ಅಥವಾ ನಿರ್ವಹಣಾ ನಿರ್ಧಾರಗಳಲ್ಲಿ ನೇರವಾಗಿ ಭಾಗಿಯಾಗುವಂತಿಲ್ಲ' ಎಂಬ ಅಂಶವನ್ನು ಮೇಲಿನ ವರದಿ ಹೊರಗೆಡಹಿದೆ. ಸ್ವತಂತ್ರ ಸಂಸ್ಥೆಗಳೆಂದು ಪರಿಗಣಿತವಾಗಿರುವ ಶೈಕ್ಷಣಿಕ ಮತ್ತು ತರಬೇತಿ ಸಂಬಂಧಿತ ಸಮರ್ಥನೆಯ ಸಂಸ್ಥೆ NCERT, NIEPA ಮುಂತಾದುವುಗಳ ಕಾರ್ಯಗಳು ಮತ್ತೊಂದರ ಅಡಿಯಲ್ಲಿ ನಡೆಯುತ್ತಿದು 'ಸಾಮಾನ್ಯ ಜ್ಞಾನದ ಆಡಳಿತಗಾರರ ದೃಷ್ಟಿಯ ಆದ್ಯತೆ ಮತ್ತು ಅಭಿಪ್ರಾಯಗಳಿಗೆ ಸಂಸ್ಥೆಗಳ ನೀತಿಗಳು ಮತ್ತು ಕಾರ್ಯಕ್ರಮಗಳು ಒಳಪಟ್ಟಿವೆ.

ಆಗಿಂದಾಗ್ಗೆ ಬದಲಾಗುವ ಮತ್ತು ಅಲ್ಪ ಅಧಿಕಾರ ಅವಧಿಯುಳ್ಳ ಮುಖ್ಯ ಸಿಬ್ಬಂದಿಯ ಕಾರಣದಿಂದ ನೀತಿಗಳ ಮತ್ತು ಕಾರ್ಯಕ್ರಮಗಳ ಸತತ ಅನುಷ್ಠಾನಕ್ಕೆ ತೀವ್ರ ಧಕ್ಕೆಯುಂಟಾಗಿದೆ. ಇನ್ನಿತರ ಅಭಿವೃದ್ಧಿ ವಲಯಗಳಂತಲ್ಲದೆ ಶಿಕ್ಷಣ ವಲಯದಲ್ಲಿ, ಯೋಜನೆಗಳು ಫಲಕಾರಿಯಾಗುವ ಅವಧಿ ಬಹುದೀರ್ಘವಾದುದು; ಇಂದು ಮಾಡಿದ ಕಾರ್ಯ 15 ರಿಂದ 20 ವರ್ಷಗಳ ನಂತರ ಪ್ರಜೆಗಳ ಮನೋಭಾವ, ಜ್ಞಾನ ಮತ್ತು ಕುಶಲತೆಗಳ ರೂಪದಲ್ಲಿ ಫಲಕಾರಿಯಾಗುವುದು. ಶೈಕ್ಷಣಿಕ ನೀತಿಗಳನ್ನು ಹಾಗೂ ಕಾರ್ಯಕ್ರಮಗಳನ್ನು ಸೂತ್ರೀಕರಿಸುವವರನ್ನು ಅವುಗಳ ಅನುಷ್ಠಾನಕ್ಕೆ ಜವಾಬ್ದಾರರನ್ನಾಗಿಯೂ, ಉತ್ತರದಾಯಿಗಳನ್ನಾಗಿಯೂ ಮಾಡುವುದು ಅತ್ಯವಶ್ಯ. ಸಿಬ್ಬಂದಿಯ ನಿರಂತರತೆಯ ಕೊರತೆ ಸಾಂಸ್ಥಿಕ ಸ್ಮರಣೆ (ಉದ್ದೇಶ, ಗುರಿಗಳ ವಿಷಯವಾಗಿ)ಯನ್ನು ತೀವ್ರವಾಗಿ ಪ್ರಭಾವಿಸಿ ಅಲ್ಪಕಾಲವನ್ನಾಗಿಸಿದೆ. ಇಂತಹ ಪರಿಸ್ಥಿತಿಗಳಲ್ಲಿ, 'ಮುಖ್ಯ' ಸಿಬ್ಬಂದಿಯ ಪ್ರತಿಬಾರಿಯ ಬದಲಾವಣೆಯೊಂದಿಗೆ ನೀತಿಗಳು ಮತ್ತು ಅವುಗಳ ಆದ್ಯತೆಗಳು ಬದಲಾಗುವುದು ಆಶ್ಚರ್ಯದ ಸಂಗತಿಯೇನಲ್ಲ. ಅನೇಕ ವೇಳೆ ಇವುಗಳನ್ನು ಅರ್ಧದಲ್ಲೇ ಕೈ ಬಿಡಲಾಗುವುದು. ಕಾರ್ಯಕ್ರಮಗಳನ್ನು ಅವುಗಳ ಸ್ವರೂಪ ಹೊಸತು ಮತ್ತು ನವೀನವೂ ಎಂಬಂತೆ ಪ್ರಸ್ತಾಪಿಸಲಾಗುವುದು. ಹಳೆಯ ತಪ್ಪುಗಳ ಪುನರಾವೃತ್ತಿಯಾಗುವುದು. ಫಲಕಾರಿಯಾಗಬಲ್ಲ ಪ್ರಯತ್ನಗಳನ್ನು ಕೈಗೊಳ್ಳಲಾಗುವುದಿಲ್ಲ. ಸದ್ಯದ ಪರಿಸ್ಥಿತಿಯ ಮತ್ತು ಅದರ ಅನುಗಾಮಿ ಅವಶ್ಯಕತೆಗಳ ವಾಸ್ತವಿಕ, ಅನುಭವಾತ್ಮಕ ವಿಶ್ಲೇಷಣೆಯನ್ನು ಆಧರಿಸದೆ ಮಹತ್ವಪೂರ್ಣ ಪಾತ್ರಧಾರಿಗಳ ಅನಿಸಿಕೆ ಮತ್ತು ಪಕ್ಷಪಾತವನ್ನು ಆಧರಿಸಿದ ಯೋಜನೆ ಈ ವಸ್ತುಸ್ಥಿತಿಗೆ ಭಾಗಶಃ ಕಾರಣವಾಗಿದೆ.

ಭಾರತದಲ್ಲಿ ಅಧಿಕಾರಶಾಹಿ ಮತ್ತು ಅಧಿಕಾರಶಾಹಿ ಸಂಸ್ಕೃತಿ ಕೇವಲ ಸರ್ಕಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಶೈಕ್ಷಣಿಕ ಸಂಸ್ಥೆಗಳು ಮತ್ತು ವೈಜ್ಞಾನಿಕ ಸ್ಥಾಪನೆಗಳೂ ಈ ಸಂಸ್ಕೃತಿಗೆ ಹೊರತಾಗಿಲ್ಲ. ಪ್ರಸ್ತಾವನೆಗಳನ್ನು ಅನುಮೋದಿಸುವ ಅಧಿಕಾರ ಒಬ್ಬ ವ್ಯಕ್ತಿ ಕ್ರಮಬದ್ಧ ಶ್ರೇಣಿಯಲ್ಲಿ ವಹಿಸಿರುವ ಸ್ಥಾನಕ್ಕೆ ಅನುಗುಣವಾಗಿರುತ್ತದೆ. ಸಾಧಾರಣವಾಗಿ, ಅಂತಿಮ ನಿರ್ಣಯ, ಸಂಪನ್ಮೂಲಗಳ ಲಭ್ಯತೆ ಮತ್ತು ಯಾವುದಕ್ಕಾಗಿ ಅವುಗಳನ್ನು ಬಳಸಬೇಕೆಂಬ ನಿರ್ಣಯದ ಅಧಿಕಾರ ಅಧಿಕೃತ ವ್ಯಕ್ತಿಯೊಬ್ಬನ ಕೈಯಲ್ಲಿರುವುದು. ಭಿನ್ನಾಭಿಪ್ರಾಯ ಹಾಗೂ ವಿರುದ್ಧ ದೃಷ್ಟಿಕೋನಗಳು ಅಸಂತುಷ್ಟಿಗೆ ಕಾರಣವಾಗುವುದಲ್ಲದೆ ನವೀನವಾಗಿ ಯೋಚಿಸುವ ಹಾಗೂ ಸೃಜನಶೀಲ ಕಿರಿಯ ಸಿಬ್ಬಂದಿಯ ವೃತ್ತಿಗೆ ಸಂಚಕಾರ ಬರಬಹುದು. ಉದಾಹರಣೆಗೆ, ವಿಶ್ವವಿದ್ಯಾನಿಲಯಗಳಲ್ಲಿ ವಿಭಾಗದ ಮುಖ್ಯಸ್ಥರುಗಳಿಗಿಂತ ಕುಲಸಚಿವರಿಗೆ (Registrar) ಹೆಚ್ಚು ಅಧಿಕಾರವಿರುವುದು. ವೃತ್ತಿಸ್ಥಳದಲ್ಲಿರುವ ಈ ಬಗೆಯ ವಾತಾವರಣವು ಯುವ ಪ್ರತಿಭಾವಂತ ವಿಜ್ಞಾನಿಗಳು ತಮ್ಮ ಕೆಲಸವನ್ನು ಬಿಟ್ಟು ಹೋಗುವುದಕ್ಕೆ ಪ್ರಮುಖ ಕಾರಣವಾಗಿದೆ. ಆಯ್ಕೆ ಮಾಡಿಕೊಂಡ ವಿಶೇಷ ಪರಿಶ್ರಮದ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯನ್ನು ಹೊರಗೆಡಹಲು ಅನುಕೂಲವಲ್ಲದ ವೃತ್ತಿ ಪರಿಸರದಿಂದಾಗಿ ಹಲವು ಪ್ರತಿಭಾನ್ವಿತ ವ್ಯಕ್ತಿಗಳು ತಮ್ಮ ವೃತ್ತಿಯನ್ನು ತ್ಯಜಿಸಿ ಅನ್ಯದೇಶಗಳಿಗೆ ವಲಸೆ ಹೋಗುವರು. ಭಾರತದಲ್ಲಿ ಬಹುತೇಕ ಶೈಕ್ಷಣಿಕ ಸಂಸ್ಥೆಗಳು

Digitised by Bharatavani, CIIL

ಕೆಳದರ್ಜೆಯ ಅಧಿಕಾರಿ ತನ್ನ ಮೇಲಧಿಕಾರಿಗೆ ಸಲ್ಲಿಸಿದ ಫೈಲ್‌ಗಳ ಮೇಲೆ ಸೂಚಿತವಾದ ಸರ್ಕಾರಿ ಟಿಪ್ಪಣಿಯ ವಿಧಾನವನ್ನೇ ಅನುಸರಿಸುವುವು. ಈ ಸಂಬಂಧದಲ್ಲಿ ಸಲ್ಲಿಸಿದ ಪ್ರಸ್ತಾಪದ ಉಪಯುಕ್ತತೆಯ ಬಗ್ಗೆ ತೀರ್ಮಾನಿಸುವ ಶೈಕ್ಷಣಿಕ ಸಾಮರ್ಥ್ಯವೂ, ತಜ್ಞತೆಯೂ ಮೇಲಧಿಕಾರಿಗೆ ಇರಬಹುದು, ಇಲ್ಲದಿರಬಹುದು. ಯಾವುದೇ ಸೃಜನಶೀಲ ಕೊಡುಗೆಯ ಪೂರ್ವಭಾವೀ ಅಗತ್ಯಗಳಾದ ಭಿನ್ನಾಭಿಪ್ರಾಯ ಮತ್ತು ಸ್ವಾತಂತ್ರ್ಯಗಳನ್ನು ಹಿರಿಯ ಅಧಿಕಾರಿಗಳು ತೋರ್ಪಡಿಸುವ ಅನಾವಶ್ಯಕ ನಿಯಂತ್ರಣವು ಮೊಟಕುಗೊಳಿಸುತ್ತದೆ. ನಮ್ಮ ಶೈಕ್ಷಣಿಕ ಸಂಸ್ಥೆಗಳಲ್ಲಿನ ಈ ತೆರನ ವಾತಾವರಣದಿಂದಾಗಿ, ಕೆಲವು ಅಪವಾದಗಳನ್ನು ಹೊರತುಪಡಿಸಿ, ವಿವಿಧ ವೈಜ್ಞಾನಿಕ ಸಂಸ್ಥೆಗಳಲ್ಲಿ ವೃತ್ತಿ ನಿರತರಾಗಿರುವ ವಿಜ್ಞಾನಿಗಳಿಂದ ಮೂಲಭೂತ ಕೊಡುಗೆಯ ಕೊರತೆ ಕಂಡುಬರುವುದು ಅಚ್ಚರಿಯ ಸಂಗತಿಯಲ್ಲ.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ಮುನ್ಸಿಪಾಲಿಟಿ ಹಾಗೂ ಮುನ್ಸಿಪಲ್ ಕಾರ್ಪೋರೇಷನ್‌ಗಳಿಗೆ ಅಧಿಕಾರ ಮತ್ತು ಸಂಪನ್ಮೂಲಗಳ ವರ್ಗಾವಣೆಗೆ ಸಂಬಂಧಿಸಿದ 75ನೇ ಮತ್ತು 74ನೇ ಸಂವಿಧಾನದ ತಿದ್ದುಪಡಿಗಳು ಸಾರ್ಥಕವಾಗಬೇಕಾದರೆ ಈ ಸಂಸ್ಥೆಗಳ ಗಮನಾರ್ಹ ಸಾಮರ್ಥ್ಯ ವರ್ಧನೆ ಅವಶ್ಯಕವಿದ್ದು ಆಗಮಾತ್ರ ಇವುಗಳು ಅಭಿವೃದ್ಧಿಯಲ್ಲಿ ಅರ್ಥಪೂರ್ಣ ಪಾತ್ರವನ್ನು ವಹಿಸಲುಸಾಧ್ಯವಾಗುವುದು. ಇದಕ್ಕೆ ಅಧಿಕಾರಿಗಳ ತರಬೇತಿಯ ಜವಾಬ್ದಾರಿಯನ್ನು ಹೊತ್ತಿರುವ ಈ ಸಂಸ್ಥೆಗಳು. ಗಂಭೀರ ಪ್ರಯತ್ನಗಳನ್ನು ಕೈಗೊಳ್ಳುವುದು ಅತ್ಯವಶ್ಯಕ. ಅಧಿಕಾರಶಾಹಿ ಆಡಳಿತದ ವಿಭಿನ್ನ ಸ್ತರಗಳ ಮನಸ್ಥಿತಿಗಳ ಹಾಗೂ ಅಭಿಪ್ರಾಯಗಳ ಗಮನಾರ್ಹ ಬದಲಾವಣೆ, ಮಧ್ಯಸ್ಥಗಾರ ಅಥವಾ ಜನರಿಗೆ ಯಾವುದು ಒಳಿತೆಂಬುದನ್ನು ನಿರ್ಣಯಿಸುವ ಪಾತ್ರಕ್ಕಿಂತ ಹೆಚ್ಚಾಗಿ ಸುಗಮಕರ್ತ (Facilitator) ನ ಪಾತ್ರವನ್ನು ಸ್ವೀಕಾರ ಇವುಗಳು ಎಲ್ಲಕ್ಕಿಂತ ಅತ್ಯಾವಶ್ಯಕವಾಗಿವೆ. ಈ ಸಂವೈಧಾನಿಕ ತಿದ್ದುಪಡಿಗಳ ಬೆಳಕಿನಲ್ಲಿ ಸ್ಥಳೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿರುವ ಹಲವು ರಾಜ್ಯಗಳಲ್ಲಿ ಇದುವರೆಗಿನ ಅನುಭವವು ಸಂಪೂರ್ಣವಾಗಿ ಸುಖಕರವಾಗಿಲ್ಲ. ಶೈಕ್ಷಣಿಕ ಆಡಳಿತದ ರಾಜ್ಯಮಟ್ಟದ ಅಧ್ಯಯನಗಳು ತಿಳಿಸುವಂತೆ ಈಗಲೂ ಕಾರ್ಯಕ್ರಮಗಳು ರಾಜ್ಯ ಮತ್ತು ಜಿಲ್ಲಾ ಮುಖ್ಯ ಕಾರ್ಯಾಲಯಗಳಿಂದಲೇ ಸೂತ್ರೀಕರಣಗೊಂಡು ನಿಯಂತ್ರಿಸಲ್ಪಡುತ್ತಿದ್ದು ಸ್ಥಳೀಯ ಮಟ್ಟದಲ್ಲಿ ಜನಪ್ರತಿನಿಧಿಗಳಿಗೆ ಯಾವ ಪ್ರಯತ್ನದ ಅವಕಾಶವನ್ನು ನೀಡಲಾಗಿಲ್ಲ. ಶಿಕ್ಷಣದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರದ ಬಗ್ಗೆ ವಿವರಣೆ ನೀಡುತ್ತಾ ರಾಜ್ಯ ವರದಿಯೊಂದು ಹೀಗೆ ಹೇಳುತ್ತದೆ "ಬಹುತೇಕ ಶಿಕ್ಷಣವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದ್ದು ಅದರಿಂದಲೇ ನಿಯಂತ್ರಿಸಲ್ಪಡುತ್ತಿದೆ" (ರಾಜ್ಯಗಳಲ್ಲಿ ಶೈಕ್ಷಣಿಕ ಆಡಳಿತ).

**ಮೂಲ: ಟಿ.ಎನ್. ಧರ್**

**ಅನು: ಚಂದ್ರಶೇಖರ್ ಬಿ.ಎಂ.**

## ಶಿಕ್ಷಣದಲ್ಲಿ ಆದರ್ಶವಾದ

ಆದರ್ಶವಾದದ ತತ್ವವನ್ನು ಕುರಿತು ಹಲವು ತಪ್ಪುಕಲ್ಪನೆಗಳಿವೆ. ಬಹಳಷ್ಟು ತಪ್ಪುಕಲ್ಪನೆಗಳು ಅದರ ಹೆಸರಿನಿಂದಲೇ ಉದ್ಭವಿಸಿವೆ. ಆದರ್ಶವಾದ (Idealism) ವಿಚಾರವಾದ (Idea-ism) ಎಂದಾಗಬೇಕಿತ್ತು. ಆದರ್ಶವಾದ (Idealism) ವಿಚಾರವಾದ (Idea-ism) ಎನ್ನುವುದರಿಂದಲೇ ಬಂದಿದೆ. ಶಬ್ದಮಾಧುರ್ಯಕ್ಕಾಗಿ, ಸುಖೋಚ್ಚಾರಣೆಗಾಗಿ, ಚೇತನವಾದದ ಇಂಗ್ಲೀಷಿನ Idea-ism ಪದಕ್ಕೆ 'l' ಅಕ್ಷರವನ್ನು ಸೇರಿಸಿ Idealism (ಆದರ್ಶವಾದ) ಎಂದಾಗಿಸಿದ್ದಾರೆ. ವಿಚಾರಗಳು (Ideas) ಸತ್ಯವೆಂದು ಘೋಷಿಸುವ ಕಾರಣದಿಂದ ಈ ಪಂಥ ಪ್ರತ್ಯೇಕತೆಯನ್ನು ಹೊಂದಿರುವುದರಿಂದ Ideaism ವಿಚಾರವಾದ ಎಂಬುದೇ ಸರಿಯಾದ ಬಳಕೆ.

ಪಾಶ್ಚಾತ್ಯ ದೇಶಗಳಲ್ಲಿ ಸಾಕ್ರಟಿಸ್ ಮತ್ತು ಪ್ಲೆಟೋ ಇವರುಗಳಿಂದ ಆದರ್ಶವಾದ ಪ್ರಾರಂಭವಾಯಿತು. ಅದಿನಿಂದ ತತ್ವಶಾಸ್ತ್ರ ಪ್ರಪಂಚವು ಆ ಕ್ಷೇತ್ರವನ್ನು ಶ್ರೀಮಂತಗೊಳಿಸಿ ಮುನ್ನಡಿಸಿದ ತತ್ವಜ್ಞಾನಿಗಳ ಸರಣಿಯಿಂದ ಅಲಂಕೃತಗೊಂಡಿದೆ. ತತ್ವಶಾಸ್ತ್ರ ಪ್ರಪಂಚದಿಂದ ಆದರ್ಶವಾದಿ ಸಾಹಿತ್ಯವನ್ನು ತೆಗೆದುಹಾಕಿಬಿಟ್ಟರೆ ಅಧ್ಯಯನ ಮಾಡಲು ತತ್ವಶಾಸ್ತ್ರ ಶಾಖೆಯ ಜ್ಞಾನ ಭಂಡಾರವೇ ಉಳಿದಿರುವುದಿಲ್ಲ. ಡೆಸ್ಕಾರ್ಟೆ (Descartes), ಸ್ಪಿನೋಜ್, ಲೆಬ್ನಿಟ್ಸ್, ಬರ್ಕ್ಲೆ, ಕಾಂಟ್, ಹೆಗೆಲ್, ಷೋಪೆನ್‌ಡೋವರ್, ಫಿಚ್ (Fichte), ಬರ್ಗಸನ್, ಜೆಂಟೈಲ್, ಬ್ರಾಡ್ಲಿ, ಬೊಸಾಂಕೆ (Bosanquet), ರಾಯ್ಸ್ ಮತ್ತು ಹೋಮ್ ಇವರು ಕೆಲವು ಪ್ರಮುಖ ಆದರ್ಶವಾದಿ ತತ್ವಜ್ಞಾನಿಗಳು. ಇವರಲ್ಲಿ ಕೆಲವರು ಶಿಕ್ಷಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರ್ಶವಾದಿ ಶೈಕ್ಷಣಿಕ ಚಿಂತನೆ ಇನ್ನುಳಿದವರ ತಾತ್ವಕ ಚಿಂತನೆಗಳಿಂದ ಉದ್ಭವಿಸಿದೆ.

**ಆದರ್ಶವಾದದ ಮುಖ್ಯ ತಾತ್ವಿಕ ವಿಚಾರಗಳು:** ಪ್ರತಿಯೊಬ್ಬ ವ್ಯಕ್ತಿಯು ಮನಸ್ಸು ಅಥವಾ ಚೈತನ್ಯವನ್ನು (Mindspirit) ತನ್ನಲ್ಲಿ ತಾನು ಅನುಭವಿಸುವಂತೆ ಮೂಲತಃ ಸತ್ಯವಾಗಿದೆಯೆಂದೂ, ವಿಶ್ವವನ್ನು ಪೂರ್ಣದೃಷ್ಟಿಯಿಂದ ನೋಡಿದಾಗ ಅದು ಮೂಲತಃ ಚೈತನ್ಯವೇ ಆಗಿದೆಯೆಂದೂ ಆದರ್ಶವಾದಿಗಳು ಹೇಳುತ್ತಾರೆ. ಈ ಭೌತಿಕ ಪ್ರಪಂಚ ಅದರ ಹಿಂದಿರುವ ಮಹಾನ್ ಚೈತನ್ಯದ ಅಭಿವ್ಯಕ್ತಿ ಮಾತ್ರವಷ್ಟೆ. ಭೌತಿಕ ಪ್ರಪಂಚ ಅಳಿವುಳ್ಳದ್ದು ಹಾಗೂ ಬದಲಾಗುವಂಥದ್ದು. ಆದರೆ ವಿಶ್ವದ ಸಾರ ಅಥವಾ ಚೈತನ್ಯವೇ ಆದ, ವಿಶ್ವದ ಹಿಂದಿರುವ ವಿಚಾರವನ್ನು ನಾಶಪಡಿಸಲಾಗುವುದಿಲ್ಲ. ಉದಾಹರಣೆಗೆ, ಪ್ರಪಂಚದಲ್ಲಿರುವ ಎಲ್ಲಾ ಮೋಟರುಕಾರುಗಳನ್ನು ನಾಶಪಡಿಸಬಹುದು. ಆದರೆ 'ಮೋಟರ್‌ಕಾರು' ಎಂಬ ಚಿಂತನೆಯನ್ನು ನಾಶಪಡಿಸಲಾಗುವುದಿಲ್ಲ. ವಿಚಾರಗಳು ಮನಸ್ಸಿನ ಅಭಿವ್ಯಕ್ತಿ. ಮನಸ್ಸು ಅವುಗಳನ್ನು ಸೃಷ್ಟಿಸಬಲ್ಲುದಲ್ಲದೆ ಆ ವಿಚಾರಗಳು ಅವಿನಾಶಿ. ಅಂತೆಯೇ, ಮನಸ್ಸು ಸತ್ಯ ಆದರೆ ಜಡ (Matter)ವು ಕ್ಷಯವುಳ್ಳದ್ದು, ನಾಶವುಳ್ಳದ್ದು. ಬೇರೆ ಶಬ್ದಗಳಲ್ಲ ಹೇಳುವುದಾದರೆ, ಸತ್ಯ (Reality) ಆಧ್ಯಾತ್ಮಿಕ ಜಡವಲ್ಲ.

Digitised by Bharatavani, CIIL

ಅಂತಿಮ ಸತ್ಯವನ್ನು ಗ್ರಹಿಸಲಾಗುವುದಿಲ್ಲ ಮತ್ತು ಅದನ್ನು ವಿಚಾರಗಳ ಮೂಲಕ ಮಾತ್ರ ವ್ಯಕ್ತಗೊಳಿಸಬಹುದು. ತಾಂತ್ರಿಕ ಜಗತ್ತು ಮನಸ್ಸಿನ ವಿಚಾರಗಳ ಅಭಿವ್ಯಕ್ತಿಯಾಗಿರುವಂತೆ ಸುತ್ತಲ ಪ್ರಪಂಚ ಚಿಂತನೆಗಳ ಅಭಿವ್ಯಕ್ತಿಯೇ ಆಗಿದೆ.

ಪ್ರತಿಯೊಬ್ಬ ವ್ಯಕ್ತಿಯು ಆಧ್ಯಾತ್ಮಿಕ ಚೈತನ್ಯವುಳ್ಳ ಮನಸ್ಸು ಅಥವಾ ಅಹಂ (Self) ಅಥವಾ ಚೈತನ್ಯ (Spirit)ವನ್ನು ಹೊಂದಿರುವನು. ಅಂತೆಯೇ, ಮಾನವನು ಬ್ರಹ್ಮಾಂಡದೊಳಗಿನ ಪಿಂಡಾಂಡದಂತೆ. ಆದರೆ ಈ ಎಲ್ಲಾ ಪಿಂಡಾಂಡಗಳನ್ನು ಸೇರಿಸಿದರೆ ಬ್ರಹ್ಮಾಂಡವಾಗುವುದಿಲ್ಲ. ಅಂಶಗಳು ತಮ್ಮಲ್ಲಿ ಹೊಂದಿರದ ಗುಣಗಳನ್ನು ಪೂರ್ಣವು ತನ್ನಲ್ಲಿ ಹೊಂದಿದೆ. ಇದೇ ಅರ್ಥ ಬರುವ ಒಂದು ಶ್ಲೋಕ ಈಶಾವಾಸ್ಯ ಉಪನಿಷತ್ತಿನಲ್ಲಿದೆ.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೆ।

ಪೂರ್ಣಸ್ಯ ಪೂರ್ಣಮಾದಾಯ ಪ್ರರ್ಣಾಮೇವಾವಶಿಷ್ಯಂತೆ॥

**ಅರ್ಥ:** ಅದು (ಮನಸ್ಸು) ಪೂರ್ಣ ಮತ್ತು ಇದು (ವ್ಯಕ್ತಿಗತ ಮನಸ್ಸು) ಪೂರ್ಣ ವ್ಯಕ್ತಿಗತ ಪೂರ್ಣವು ಸಮಗ್ರ ಪೂರ್ಣ (Universal Mind)ದಿಂದ ಬಂದಿದೆ. ಆದರೂ, ವ್ಯಕ್ತಿಗತ ಪೂರ್ಣವನ್ನು ಸಮಗ್ರ ಪೂರ್ಣದಿಂದ ಕಳೆದರೆ, ಸಮಗ್ರ ಪೂರ್ಣವು ಹಾಗೆಯೇ ಉಳಿಯುತ್ತದೆ.

ಮೇಲೆ ಹೇಳಿದ ಪರಿಕಲ್ಪನೆಯನ್ನು ಕೆಲವು ನಿರ್ದಿಷ್ಟ ಉದಾಹರಣೆಯಿಂದ ವಿವರಿಸಬಹುದು. ಶ್ವೇತ ವರ್ಣವು ಸಪ್ತವರ್ಣಗಳಿಂದ ಮಾಡಲ್ಪಟ್ಟಿದೆ. ಪ್ರತ್ಯೇಕವಾಗಿ ಅಥವಾ ಸಾಮೂಹಿಕವಾಗಿ ಈ ಸಪ್ತವರ್ಣಗಳು ತೋರಿಲಾಗದಂಥ ವಿಶಿಷ್ಠ ಗುಣಗಳನ್ನು ಶ್ವೇತರಶ್ಮಿಗಳು ಹೊಂದಿದೆ. ಇದೇ ರೀತಿ, ಚತುರ್ಭುಜವು ರೇಖೆಗಳಿಂದಾಗಿದೆ. ರೇಖೆಗಳು ಪ್ರದರ್ಶಿಸಲಾಗದಂಥ ಗುಣವನ್ನು ಚತುರ್ಭುಜವು ಹೊಂದಿದೆ. ವಿವಿಧ ನಿರ್ಮಾಣ ಘಟಕಗಳಿಂದಾಗುವ ಮನೆಯು ಆ ಎಲ್ಲಾ ಘಟಕಗಳಿಗಿಂತಲೂ ಹೆಚ್ಚಿನದಾಗಿದೆ.

ಸಮಗ್ರ ಮನಸ್ಸಿನ ಭಾಗವಾದ ವ್ಯಕ್ತಿಗತ ಮನಸ್ಸು ಅಥವಾ ಅಹಂ ತನ್ನನ್ನು ತಾನು ಜಡ ದೇಹದ ಮೂಲಕ ವ್ಯಕ್ತಗೊಳಿಸಿಕೊಳ್ಳುತ್ತದೆ. ವ್ಯಕ್ತಿಯು ಈ ವ್ಯಕ್ತಿಗತ ಚೈತನ್ಯವನ್ನು ಅರಿತುಕೊಂಡಾಗ ಸಮಗ್ರ ಚೈತನ್ಯದ ಭಾಗವೇ ನಾನು ಎಂಬುದನ್ನು ಕಂಡುಕೊಳ್ಳುತ್ತಾನೆ.

ಆದರ್ಶವಾದಿಗಳು ನಂಬುವ ಮತ್ತೊಂದು ಬಹಳ ಮಹತ್ವಪೂರ್ಣ ತತ್ವವೆಂದರೆ ಜ್ಞಾನದ ಸ್ವರೂಪ. ಅವರ ಪ್ರಕಾರ ಆಧ್ಯಾತ್ಮ ಸತ್ಯದ ಹೃದಯದ ಜ್ಞಾನವೇ (ಬ್ರಹ್ಮಜ್ಞಾನ) ಅತಿ ಉನ್ನತವೂ, ಯೋಗ್ಯತೆಯುಳ್ಳ ಜ್ಞಾನವೂ ಆಗಿದೆ. ಈ ಜ್ಞಾನವನ್ನು ಅಂತರ್‌ದೃಷ್ಟಿಯಿಂದ ಮಾತ್ರ ಗಳಿಸಬಹುದು. ಇದು ಇಂದ್ರಿಯಾಧಾರಿತ, ಭೌತಿಕ ಪ್ರಪಂಚದ ಜ್ಞಾನದಂತೆ ಅಲ್ಲ. ಅರಿವಿಗೆ ಬರುತ್ತಿರುವ ಸುತ್ತಲ ಪ್ರಪಂಚ ಗ್ರಹಿಕೆ (Perception) ಯೇ ಹೊರತು ಸತ್ಯವಲ್ಲ. ಸತ್ಯವಾದುದು ಗ್ರಹಿಕೆಗೆ ಬರುತ್ತಿರುವ ಪ್ರಪಂಚದ ಹಿಂದಿರುವುದು. ಒಂದು ವಸ್ತುವನ್ನು ಗ್ರಹಿಸಿದಲ್ಲಿ ಅದು ಇದೆ ಎಂದು ಹೇಳಲು ಹೇಗೆ ಸಾಧ್ಯ? ಉದಾಹರಣೆಗೆ, ಅರಣ್ಯದ ಮಧ್ಯ ಭಾಗದಲ್ಲಿ ಮರವೊಂದು ಮುರಿದು ಬಿದ್ದ ಶಬ್ದವನ್ನು ಅರಣ್ಯದ ಹೊರಾವರಣದಲ್ಲಿ ಇರುವ ಒಬ್ಬನು ಹೇಗೆ ಕೇಳಲು ಸಾಧ್ಯ? ಸಾಮಾನ್ಯ ಜ್ಞಾನವು ಹೇಳುವಂತೆ, ಶಬ್ದವನ್ನು ವ್ಯಕ್ತಿಯು ಗ್ರಹಿಸಲು ಅಸಮರ್ಥನಾದಲ್ಲಿ, ಶಬ್ದವು ಉತ್ಪನ್ನವಾಯಿತೆಂದು ಹೇಳಲು ಸಾಧ್ಯವಿಲ್ಲ. ಗ್ರಹಿಸಿದಾಗ ಮಾತ್ರ ಮುರಿದು ಬಿದ್ದ ಮರವು ಶಬ್ದಮಾಡಿತೆಂದು ಹೇಳಬಲ್ಲೆವು. ಸಾಮಾನ್ಯ ವ್ಯಕ್ತಿಗಳಿಗೆ ವಿರುದ್ಧವಾಗಿ ಕುರುಡರಿಗೆ ಈ ಪ್ರಪಂಚವು ಕಗ್ಗತ್ತಲಾದರೆ, ಕಿವುಡರಿಗೆ ಅದು ಶಾಶ್ವತ ಮೌನ. ಆದ್ದರಿಂದಲೇ, ಬರ್ಕ್ಲಿ "ಇದೆ ಎಂದಾಗಬೇಕಾದರೆ ಗ್ರಹಿಸಲ್ಪಡಬೇಕು" ಎಂದು ಹೇಳಿದ. ಅಂತೆಯೇ, ಬಾಹ್ಯ ಪ್ರಪಂಚ ಅದರ ಹಿಂದಿರುವ ಮಹಾನ್ ಸತ್ಯದ ವ್ಯಕ್ತಸ್ವರೂಪವಷ್ಟೆ. ಈ ಮಹಾನ್ ಸತ್ಯದ ಜ್ಞಾನವೊಂದೇ ನಿಜವೂ, ಮೌಲ್ಯವುಳ್ಳದ್ದು ಆಗಿದ್ದು ಅದರ ಅಭಿವ್ಯಕ್ತಿಯ ಮೂಲಕ ಮಾತ್ರ ಆ ಜ್ಞಾನ ಸಾಧ್ಯ.

ಭೌತಿಕ ವಿಶ್ವದ ಜ್ಞಾನಕ್ಕೆ ಮಾರ್ಗದರ್ಶಿಗಳಾಗಿರುವ ಅವಲೋಕನ ಪ್ರಯೋಗ, ತರ್ಕ ಇತ್ಯಾದಿ ಮಾರ್ಗಗಳಿಂದ ಪರಮಸತ್ಯದ ಅರಿವು ಸಾಧ್ಯವಿಲ್ಲ. ಆದರ್ಶವಾದಿಗಳು ಅಂತರ್ದೃಷ್ಟಿ ಪರಮಸತ್ಯವನ್ನು ಅರಿಯಲು ಅಗತ್ಯವೆಂದು ಹೇಳುತ್ತಾರೆ. ಆದರೆ, ಭೌತಿಕ ವಿಶ್ವದ ಅರಿವಿಗೆ ನಿಗಮನ ಮತ್ತು ಅನುಗಮನ ಪ್ರಕ್ರಿಯೆಗಳನ್ನು ಆದರ್ಶವಾದಿಗಳು ಬಳಸುವರು. ಪರಮಸತ್ಯದ ಅರಿವಿಗೆ ಭೌತಿಕ ವಿಶ್ವದ ಅರಿವು ಆಧಾರದಂತಿದೆ.

ಆದರ್ಶವಾದ ಮೂರು ಆಧ್ಯಾತ್ಮಿಕ ಮೌಲ್ಯಗಳಲ್ಲಿ ನಂಬಿಕೆಯನ್ನಿರಿಸಿದೆ. ಅವು ಸತ್ಯಂ, ಶಿವಂ, ಸುಂದರಂ. ಸತ್ಯವೆನ್ನುವುದು ಒಂದು ಬೌದ್ಧಿಕ ಮೌಲ್ಯ, ಶಿವಂ ಎನ್ನುವುದು ನೈತಿಕ ಮೌಲ್ಯಕ್ಕೆ ಸಂಬಂಧಿಸಿದೆ, ಸುಂದರ ಎನ್ನುವುದು ಸುಸಂಸ್ಕೃತಾಭಿರುಚಿಗೆ ಸಂಬಂಧಿಸಿದೆ. ಇವೆಲ್ಲವೂ ಒಟ್ಟಿಗೆ "ಒಳ್ಳೆಯದು" ಎಂದಾಗುವುದು. ಪ್ಲೇಟೋವಿನ ಪ್ರಕಾರ ಈ ಮೂರು ಮೌಲ್ಯಗಳು ಒಂದಕ್ಕೊಂದು ಸಮಾನಾಗಿವೆ.

ಅನುಭಾವಿ ಕವಿ ಜಾನ್ ಕೀಟ್ಸ್ ಹೀಗೆ ಹಾಡಿದ್ದಾರೆ:

"ಸೌಂದರ್ಯವೇ ಸತ್ಯ ಸತ್ಯವೇ ಸೌಂದರ್ಯ

ಅದಷ್ಟೇ ಈ ಭೂಮಿಯ ಮೇಲೆ ನೀ ತಿಳಿದಿರುವುದು, ತಿಳಿಯಬೇಕಾದ್ದು"

ಈ ಮೌಲ್ಯಗಳು ಆಗಲೇ ಅಸ್ತಿತ್ವದಲ್ಲಿವೆ. ಮನುಷ್ಯನ ಉದ್ದೇಶ ಅವುಗಳನ್ನು ಕಂಡುಕೊಳ್ಳುವುದು. ಮನುಷ್ಯ ಮೌಲ್ಯಗಳನ್ನು ಸೃಷ್ಟಿಸಲಾರ. ಮೌಲ್ಯಗಳು ಸಾರಭೂತವಾದುವು. ಮೌಲ್ಯಗಳ ನಂತರ ಅಸ್ತಿತ್ವ.

**ಶಿಕ್ಷಣದಲ್ಲಿ ಆದರ್ಶವಾದ: ಶಿಕ್ಷಣದ ಅಗತ್ಯ** : ಆದರ್ಶವಾದಿಗಳು ಎರಡು ಕಾರಣಗಳಿಗಾಗಿ ಮಕ್ಕಳಿಗೆ ಶಿಕ್ಷಣವನ್ನು ನೀಡಲು ಇಚ್ಛಿಸುತ್ತಾರೆ. ಮೊದಲನೆಯದಾಗಿ, ಶಿಕ್ಷಣ ಒಂದು ಆಧ್ಯಾತ್ಮಿಕ

Digitised by Bharatavani, CIIL

ಅಗತ್ಯ. ಇದು ಒಂದು ಸಹಜವಾದ ಅಗತ್ಯವಲ್ಲ. ಪ್ರಕೃತಿ ಬಾಳನ್ನು ನೀಡಬಹುದು – ಆದರೆ ಆ ಬಾಳನ್ನು ಬಾಳುವ ಕಲೆಯನ್ನು ಕಲಿಸಿಕೊಡುವುದು ಶೀಕ್ಷಣ ಮಾತ್ರ.

ಮಾನವನು ಜೈವಿಕ ಪರಂಪರೆಯೊಂದನ್ನು ಹೊತ್ತುಕೊಂಡು ಸಾಮಾಜಿಕ ಪರಂಪರೆ (ಸಂಸ್ಕೃತಿ)ಯಲ್ಲಿ ಜನಿಸುತ್ತಾನೆ. ಈ ಸಂಸ್ಕೃತಿಯನ್ನೆ ಅವನು ವ್ಯಕ್ತಿತ್ವವನ್ನು ರೂಪಿಸುವ ಶಿಕ್ಷಣದಿಂದ ತನ್ನದಾಗಿಸಿಕೊಳ್ಳುತ್ತಾನೆ. ಮಾನವನ ಸಹಜ ಸ್ವಭಾವ ಆಧ್ಯಾತ್ಮಿಕ ಹಾಗೂ ದೈವಿಕ. ಇದನ್ನು ಅವನು ಶಿಕ್ಷಣದ ಮುಖಾಂತರ ಮಾತ್ರ ಅರಿಯಬಲ್ಲನು. ಸ್ವಾಭಾವಿಕವಾದ ಜೀವನವನ್ನು ನಡೆಸಿದರೆ ಈ ಗುರಿಯನ್ನು ಸಾಧಿಸಲಾರನು.

ಎರಡನೆಯದಾಗಿ, ಶಿಕ್ಷಣ ಒಂದು ಸಾಮಾಜಿಕ ಅಗತ್ಯವೂ ಆಗಿದೆ. ವ್ಯಕ್ತಿಗತ ಸ್ವರೂಪದಲ್ಲಿ ಸಮಾಜದ ವಸ್ತುನಿಷ್ಠ ಪ್ರಕ್ಷೇಪಣೆಯೆ (Projection) ಮಾನವ. ಅಂಥ ಪ್ರಕ್ಷೇಪಣೆ ಸಮಾಜದ ಒಳ್ಳೆಯದನ್ನು ಪ್ರತಫಲಿಸಬೇಕು. ಆದ್ದರಿಂದಲೇ ಶಿಕ್ಷಣ ಮತ್ತು ಶಾಲೆಗಳ ಅಗತ್ಯವಿರುವುದು. ಸಾಮಾನ್ಯವಾಗಿ ಒಂದು ದೇಶದ ಜನ ಮತ್ತೊಂದು ದೇಶದ ಜನರೊಡನೆ ಆದ ಅನುಭವದ ಆಧಾರದಮೇಲೆ ಆ ದೇಶದ ಸಾಮಾಜಿಕ ಜೀವನದ ಗುಣಮಟ್ಟವನ್ನು ಅರ್ಥಮಾಡಿಕೊಂಡು ಅದನ್ನು ಕುರಿತ ಟೀಕೆಗಳನ್ನು, ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಚಹಾ ಸಮಯದ ಜನರಾಡುವ ಸಂಭಾಷಣಗಳಲ್ಲಿ ಒಂದು ನಿರ್ದಿಷ್ಟ ಪ್ರದೇಶದ ಜನರನ್ನು ಕುರಿತು ಟೀಕೆಗಳನ್ನು, ತೀರ್ಪುಗಳನ್ನು ಕೊಡುವುದು ಸರ್ವೇಸಾಮಾನ್ಯ. ಉದಾಹರಣೆಗೆ, ಬೆಂಗಾಲಿಗಳು ಹೀಗೆ ಪಂಜಾಬಿಗಳು ಹಾಗೆ, ತಮಿಳರು ಹೀಗೆ ಇತ್ಯಾದಿ. ಅಂತೆಯೇ, ಮನುಷ್ಯನನ್ನು ಸಮಾಜದ ಒಂದು ಪ್ರಕ್ಷೇಪಣೆ ಎಂದು ಪರಿಗಣಿಸಬಹುದು. ಅಂಥ ಪ್ರಕ್ಷೇಪಣೆ ಶಿಕ್ಷಣದ ಮೂಲಕ ಸಕಾರಾತ್ಮಕವಾಗಿ ಕಾಣಬಹುದು.

**ಶಿಕ್ಷಣದ ಅರ್ಥ**: ಅತ್ಯುನ್ನತ ನೈತಿಕ ಚಾರಿತ್ರ್ಯ ಮತ್ತು ಆಳವಾದ ಅಧ್ಯಾತ್ಮಿಕ ಅಂತರ್ದೃಷ್ಟಿಯನ್ನು ತಂದುಕೊಡುವ ಪ್ರಕ್ರಿಯೆಯೇ ಶಿಕ್ಷಣ. ಇದು ಸತ್ಯವೂ, ಸುಂದರವೂ, ಶಿವಮಯವೂ ಆಗಿರುವುದರ ಅಂತರ್ದೃಷ್ಟಿ. ವ್ಯಕ್ತಿಗತ ಮನಸ್ಸು ಮತ್ತು ಅಧ್ಯಾತ್ಮಿಕ ಪರಿಸರಗಳ ನಡುವಿನ ಸಂಪರ್ಕನಾಲೆ (Linkage channel)ಯೇ ಈ ಶಿಕ್ಷಣ. ಸತ್ಯಾನ್ವೇಷಣೆಗೆ, ತಪ್ಪುಮಾಡದಿರುವುದು, ವಿಕೃತವಾದುದನ್ನು ತ್ಯಜಿಸಿ ಸೌಂದರ್ಯವನ್ನು ಆರಾಧಿಸುವುದು, ಒಳ್ಳೆಯದನ್ನು ತನ್ನದಾಗಿಸಿಕೊಳ್ಳುವುದು/ಆತ್ಮಸಾತ್ ಮಾಡಿಕೊಳ್ಳುವುದು, ಪಾಪವನ್ನು ವಿರೋಧಿಸುವುದು – ಇವೆಲ್ಲವನ್ನು ಮಾನವನು ಸಾಧಿಸಲು ಶಿಕ್ಷಣ ಸಹಾಯಮಾಡುತ್ತದೆ. ರಾಸ್ ಹೀಗೆ ಹೇಳಿದ್ದಾನೆ: "ವಿಶ್ವಸತ್ಯವು ನಮ್ಮ ಸತ್ಯವೇ ಆಗಿ, ನಮ್ಮ ಬಾಳಿಗೆ ಶಕ್ತಿಯನ್ನೀಯುವ ಸಲುವಾಗಿ ಪರಮ ವೈಶ್ವಿಕ ಮೌಲ್ಯಗಳ ಅನ್ವೇಷಣೆಯಲ್ಲಿ ನಮಗೆ ನೆರವನ್ನು ನೀಡುವುದೇ ಶಿಕ್ಷಣದ ಕಾರ್ಯವಾಗಿದೆ."

ಮಾನವನು ತನ್ನ ಸ್ವಾಭಾವಿಕ ವೃತ್ತಿಗಳಿಗೆ ಹಾಗೂ ಆಸೆಗಳಿಗೆ ಬಲಿಬೀಳಬಾರದು. ಅವೆಲ್ಲವನ್ನು ದಮನ ಮಾಡಲು ಆತನು ಸಮರ್ಥನಾಗಬೇಕಲ್ಲದೆ ಕೆಲವೊಮ್ಮೆ ಅವುಗಳನ್ನು ಸಂಪೂರ್ಣ ಜಯಿಸಲೂಬೇಕು. ಎಮಾನ್ಯುಯೆಲ್ ಕಾಂಟ್ ಪರಮಸತ್ಯದ ಸಾಕ್ಷಾತ್ಕಾರದಲ್ಲಿ ಇಚ್ಛಾಶಕ್ತಿಯ ಬಲ ಹಾಗೂ ಖಚಿತತೆ (Infalliability)ಯ ಮೇಲೆ ಸಾಕಷ್ಟು ಮೌಲ್ಯವನ್ನಿರಿಸಿದ್ದಾನೆ. ಈ ಇಚ್ಛಾಶಕ್ತಿಯನ್ನು ವಿಕಸಿಸಿ, ರೂಪಿಸುವಲ್ಲಿ ಶಿಕ್ಷಣವು ಮಾನವನಿಗೆ ನೆರವನ್ನೀಯಬೇಕು. ಇಚ್ಛೆ ಅಥವಾ ಹೆಚ್ಚು ಪ್ರಚಲಿತವಿರುವಂತೆ ಸಾಕ್ಷಿ ಸಹಜವಾದುದು. "ಶಿಕ್ಷಣ ಈ ಸಾಕ್ಷಿಯನ್ನು ಇಚ್ಛಿಸಿದ ದಿಶೆಯಲ್ಲಿ ಪೋಷಿಸಿ ಬೆಳೆಸಬೇಕು."

**ಆದರ್ಶವಾದ ಮತ್ತು ಶಿಕ್ಷಣದ ಗುರಿಗಳು**: ಶಿಕ್ಷಣದ ಎರಡು ವಿಧವಾದ ಗುರಿಗಳನ್ನು ಆದರ್ಶವಾದ ಮುಂದಿರಿಸುತ್ತದೆ – ಒಂದು, ವ್ಯಕ್ತಿಯ ಕಲ್ಯಾಣವಾದರೆ ಮತ್ತೊಂದು ಸಮಾಜದ ಹಿತ. ಮೊದಲನೆಯದನ್ನು ಕುರಿತು ಹೇಳುವುದಾದರೆ "ಶಿಕ್ಷಣದ ಪರಮಗುರಿ ಆತ್ಮಸಾಕ್ಷಾತ್ಕಾರ ಅಥವಾ ಅಧ್ಯಾತ್ಮಿಕ ಸಾಕ್ಷಾತ್ಕಾರ (Spiritual becoming)." ಆತ್ಮಸಾಕ್ಷಾತ್ಕಾರ ಜೀವನದ ಗುರಿ ಹಾಗೂ ಶಿಕ್ಷಣದ ಗುರಿಯೂ ಸಹ. ಇಂಥ ಲಕ್ಷಣವುಳ್ಳ ಗುರಿ ಆದರ್ಶವಾದದ ಗುರಿಯಾಗಿರಲು ಮಾತ್ರ ಸಾಧ್ಯ. ಆತ್ಮಜ್ಞಾನಿಯಾಗಿರುವ ಮಾನವ ಒಬ್ಬ ಆದರ್ಶ ಮಾನವ. ಅವನು ಅಧ್ಯಾತ್ಮಿಕ ಮೌಲ್ಯಗಳನ್ನು ಅಂತರ್ಗತಗೊಳಿಸಿದ್ದಾನೆ. "ಒಳ್ಳೆಯದು" ಎಂಬ ನೈತಿಕ ಮೌಲ್ಯವನ್ನು ತೆಗೆದುಕೊಂಡು ಒಂದು ಉದಾಹರಣೆಯನ್ನು ಹೀಗೆ ಕೊಡಬಹುದು: ಆತ್ಮಜ್ಞಾನಿಯು ತನ್ನ ಉದ್ದೇಶದ ಬಗ್ಗೆ ಕುರಿತು ಚಿಂತಿಸಬೇಕಿಲ್ಲ ಹಾಗೂ ಮತ್ತೊಬ್ಬರ ಮೇಲಾಗುವ ತನ್ನ ಕರ್ಮಗಳ ನೈತಿಕ ಪರಿಣಾಮಗಳ ಬಗ್ಗೆಯೂ ಚಿಂತಿಸಬೇಕಿಲ್ಲ. ಸದ್ಗುಣ (Virtue) ಅವನಲ್ಲಿ ಎರಡನೆಯ ಸಹಜಗುಣವೆಂಬಂತಿರುವುದು. ಸಹಜವಾಗಿಯೇ ಅವನು ಸದ್ಗುಣಿಯಾಗಿರುವನಲ್ಲದೆ ಹಾಗಿರಲು ಪ್ರಯತ್ನಿಸಬೇಕಿಲ್ಲ. ಪ್ರೊಫೆಸರ್ ಹಿರಿಯಣ್ಣ ಅಂಥ ವ್ಯಕ್ತಿಯನ್ನು ಹೀಗೆ ವಿವರಿಸಿದ್ದಾರೆ: "ಆತ್ಮಜ್ಞಾನಿಯಾದವನು ಸದ್ಗುಣವನ್ನು ಕಂಡುಕೊಳ್ಳುತ್ತಿರುವನು ಎನ್ನುವುದಕ್ಕಿಂತ ಸದ್ಗುಣವನ್ನು ಪ್ರಕಟಗೊಳಿಸುತ್ತಿರುವನೆಂದು ಹೇಳಬಹುದು." ಇದು ಹೇಗೆಂದರೆ ಸೂರ್ಯ ಬೆಳಕನ್ನು ಪ್ರಕಟಗೊಳಿಸುತ್ತಿದ್ದರೆ ಭೂಮಿಯು ಅದನ್ನು ಅನುಭವಿಸುತ್ತದೆ. ಶಿಕ್ಷಣದ ಗುರಿ ಸ್ವಾಭಾವಿಕ ಮಾನವನನ್ನು ಆದರ್ಶ ಮಾನವನನ್ನಾಗಿ ವಿಕಾಸಗೊಳಿಸುವುದು. ಆದರ್ಶ ಮಾನವನು ಭೌತಿಕ, ಬೌದ್ಧಿಕ, ಸಂವೇಗಾತ್ಮಕ (Emotional), ನೈತಿಕ ಮತ್ತು ಅಧ್ಯಾತ್ಮಿಕ ಪರಿಪೂರ್ಣತೆಗಳನ್ನು ಹಾಗೂ ಸಮಗ್ರವೂ, ಪರಿಪೂರ್ಣವೂ ಆದ ವಿಕಸನವನ್ನು ತನ್ನಲ್ಲಿ ಹೊಂದಿರುವನು.

ಆತ್ಮಜ್ಞಾನಿಯಾದ ವ್ಯಕ್ತಿ ಮುಕ್ತನಾದ ಮಾನವ. ಆತ್ಮಜ್ಞಾನವೆಂದರೆ ವ್ಯಕ್ತಿಯಲ್ಲಿರುವ ಶ್ರೇಷ್ಠ ಸಾಮರ್ಥ್ಯಗಳನ್ನು ವಾಸ್ತವೀಕರಣಗೊಳಿಸುವುದು (Actualize). ಆದರ್ಶವಾದಿಗಳು ದೈಹಿಕ ವಿಕಾಸವನ್ನು ಒಂದು ಪ್ರಶಂಸನೀಯ ಗುರಿ ಎಂದು ಪರಿಗಣಿಸುತ್ತಾರಾದರೂ ಅದನ್ನು ಮಾನಸಿಕ ಆರೋಗ್ಯಕ್ಕೆ ಸಹಕಾರಿ ಎಂದು ಮಾತ್ರ ಹೇಳುವರು. ಆರೋಗ್ಯಕರ ಮನಸ್ಸು ಆರೋಗ್ಯಕರ ದೇಹದಲ್ಲಿರುವುದು ಎಂದು ಅವರು ನಂಬುವರು. ಪ್ರಕೃತಿವಾದ

Digitised by Bharatavani, CIIL

(Naturalism) ಸ್ವಯಂ ಅಭಿವ್ಯಕ್ತಿಯನ್ನು (Self expression) ಎತ್ತಿಹಿಡಿದರೆ ಆದರ್ಶವಾದ ಆತ್ಮಜ್ಞಾನ (Self realization)ದ ಗುಣಗಾನ ಮಾಡುತ್ತದೆ. ಭೌತಿಕ, ಬೌದ್ಧಿಕ, ನೈತಿಕ ಮತ್ತು ಅಧ್ಯಾತ್ಮಿಕ – ಈ ಎಲ್ಲ ಅಂತಃಸ್ಸತ್ವಗಳನ್ನು (Potentials) ಸಮತೋಲನವಾದ, ಸಮಗ್ರವಾದ ರೀತಿಯಲ್ಲಿ ವ್ಯಕ್ತಿಯು ತನ್ನಲ್ಲಿ ವಿಕಾಸಗೊಳಿಸಲು ಶಿಕ್ಷಣವು ಶಕ್ತಿನೀಡಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ಶಿಕ್ಷಣವು ಸುವ್ಯವಸ್ಥಿತ ಸಮಗ್ರ ವ್ಯಕ್ತಿತ್ವವನ್ನು ರೂಪಿಸಬೇಕು. ಹರ್ಮನ್ ಎಚ್ ಹೋಮ್ ತನ್ನ "ಐಡಿಯಲಿಸಂ ಇನ್ ಎಜುಕೇಷನ್" (ಶಿಕ್ಷಣದಲ್ಲಿ ಆದರ್ಶವಾದ) ಎಂಬ ಪುಸ್ತಕದಲ್ಲಿ ಸಮಗ್ರ ವ್ಯಕ್ತಿತ್ವವನ್ನು ರೂಪಿಸಲು ಸಹಕರಿಸುವ ಶಿಕ್ಷಣದ ನಿರ್ದಿಷ್ಟ ಧ್ಯೇಯಗಳ ಕ್ರಮಬದ್ಧ ಶ್ರೇಣಿಯನ್ನು ಕೊಟ್ಟಿದ್ದಾನೆ.




- ಎಲ್ಲರಿಗೂ ಆಧಾರ ಮೌಲ್ಯಗಳು – ಎಲ್ಲರಲ್ಲೂ ಶ್ರೀಮಂತಿಕೆಯನ್ನು ಅಧಿಕಗೊಳಿಸುವುದು
- ವ್ಯಕ್ತಿಗತ ಚಾರಿತ್ರ್ಯವನ್ನು ಎತಿಹಿಡಿದು ಸಾಮಾಜಿಕ ನ್ಯಾಯದಲ್ಲಿ ಸಹಾಯ ಮಾಡುತ್ತದೆ (ಒಳಿತು)
- ವಿಶ್ವದ ಸ್ವಭಾವವನ್ನು ತಿಳಿಯುವಲ್ಲಿ ಸಹಕರಿಸುತ್ತದೆ (ಸತ್ಯ)
- ಸೃಷ್ಟಿಯಲ್ಲಿ ಪೂರ್ಣತೆಯನ್ನು ಪ್ರಕಟಗೊಳಿಸುತ್ತದೆ (ಸೌಂದರ್ಯ)
- ಉಚಿತ (Right)ವಾದುದರ ಕಡೆಗೆ ಮನುಷ್ಯನ ಸಂಕಲ್ಪವನ್ನು ನಿರ್ದೇಶಿಸುತ್ತದೆ (ಒಳಿತು)
- ಅನಂತ ವಿಶ್ವ ಚೈತನ್ಯದೊಡನೆ ಮಾನವನ ಪ್ರಜ್ಞಾಪೂರ್ವಕ ಸಂಬಂಧವನ್ನು ಬೆಳೆಸುತ್ತದೆ (ಸತ್ಯ)

ಪೂರ್ಣವೂ, ಪ್ರಾಮಾಣಿಕವೂ ಆದ ಸತ್ತಾತ್ಮಕ ಸಮಾಜವೇ ಆದರ್ಶವಾದಿಗಳ ಶಿಕ್ಷಣದ ಸಾಮಾಜಿಕ ಗುರಿ. ಸಮತೆ, ಭ್ರಾತೃತ್ವ, ನ್ಯಾಯ ಮತ್ತು ಸ್ವಾತಂತ್ರ್ಯ ಇವೆಲ್ಲವೂ ಅಧ್ಯಾತ್ಮಿಕ ಗುಣವುಳ್ಳವುಗಳಾದ್ದರಿಂದ ಅವರು ಇತರ ಸಾಮಾಜಿಕ ರಚನೆಗಳಿಗಿಂತ ಪ್ರಜಾಸತ್ತೆಯನ್ನು ಹೆಚ್ಚು ಇಷ್ಟಪಡುತ್ತಾರೆ. ಹೋಮ್ ಇದನ್ನು ಹೀಗೆ ವಿವರಿಸುವನು "ಸಮಾಜದಲ್ಲಿ ಅಧ್ಯಾತ್ಮಿಕ ಏಕತೆಯೇ ಪ್ರಜಾಸತ್ತೆ." ಬೊಗೊಸ್ಲವಸ್ಕಿ ಶಿಕ್ಷಣದ ಮುಖಾಂತರ ಪ್ರಜಾಸತ್ತೆ ಸ್ಥಾಪನೆಯಾಗಬೇಕು ಎಂಬ ವಿಚಾರವನ್ನು ಸ್ಪಷ್ಟವಾಗಿ ಹೀಗೆ ಸಾರಿದ್ದಾನೆ: "ನಿಜವಾದ ಪ್ರಜಾಸತ್ತೆಯ ಚೈತನ್ಯ ಮತ್ತು ಸಾರವೇ ಭ್ರಾತೃತ್ವ." ಪ್ರಜಾಸತ್ತಾತ್ಮಕ ಸಮಾಜದಲ್ಲಿ ಮನುಷ್ಯರಲ್ಲಿ ಭ್ರಾತೃತ್ವವನ್ನು ಜಾಗೃತಗೊಳಿಸುವುದು ಆದರ್ಶವಾದಿಯ ಗುರಿ.

ಆದಾಗ್ಯೂ, ಆದರ್ಶವಾದಿ ಶಿಕ್ಷಣದ ವ್ಯಕ್ತಿಗತ ಮತ್ತು ಸಾಮಾಜಿಕ ಗುಣಗಳು ಒಂದಕ್ಕೊಂದು ಪೂರಕವಾಗಿವೆ. ಹೋಮ್ ಇವೆರಡರ ಸಂಶ್ಲೇಷಣೆ (Synthesis) ಪ್ರಭಾವಶಾಲಿಯಾಗಿ ಹೀಗೆ ವ್ಯಕ್ತಗೊಳಿಸಿದ್ದಾನೆ "ದೈಹಿಕವಾಗಿಯೂ, ಮಾನಸಿಕವಾಗಿಯೂ ವಿಕಸನಗೊಂಡ, ಮುಕ್ತ, ಪ್ರಜ್ಞಾಪೂರ್ವ ಮಾನವನು ತನ್ನ ಬೌದ್ಧಿಕ, ಸಂವೇಗಾತ್ಮಕ (Emotional), ಸಂಕಲ್ಪಾತ್ಮಕ (Volitional) ಪರಿಸರದಲ್ಲಿ ದೈವದೊಡನೆ ಮಾಡಿಕೊಳ್ಳುವ ಶ್ರೇಷ್ಠತಮ ಸಮಾಯೋಜನೆಯ ನಿರಂತರ ಪ್ರಕ್ರಿಯೆಯೇ ಶಿಕ್ಷಣ."

**ಆದರ್ಶವಾದ ಮತ್ತು ಪಠ್ಯಕ್ರಮ:** ಆದರ್ಶವಾದಿಗಳು ಮಕ್ಕಳಿಗೆ ಮೌಲ್ಯವುಳ್ಳ ಜ್ಞಾನವನ್ನು ನೀಡಲು ಬಯಸುವರು. ಭೌತಿಕ ಮತ್ತು ಜೈವಿಕ ವಿಜ್ಞಾನಗಳಿಗಿಂತ ಮಾನವಿಕ ವಿಜ್ಞಾನಗಳಿಗೆ ಅವರು ಹೆಚ್ಚಿನ ಮಹತ್ವ ನೀಡುವರು. ಸಂಸ್ಕೃತಿ, ಕಲೆ, ನೈತಿಕತೆ, ಚರಿತ್ರೆ, ತತ್ವಶಾಸ್ತ್ರ ಮತ್ತು ಸಾಹಿತ್ಯ – ಇವುಗಳನ್ನು ಬೋಧಿಸಲು ಇಷ್ಟಪಡುತ್ತಾರೆ. ಮನುಷ್ಯನನ್ನು ಕೇಂದ್ರವನ್ನಾಗಿಸಿಕೊಂಡು, ಅವನ ನೈತಿಕ ಮತ್ತು ಅಧ್ಯಾತ್ಮಿಕ ವಿಕಾಸಕ್ಕೆ ಸಹಕರಿಸುವ ವಿಷಯಗಳ ಬೋಧನೆಯನ್ನು ಸಮರ್ಥಿಸುತ್ತಾರೆ. ವಿಜ್ಞಾನ ಹಾಗೂ ತಂತ್ರಜ್ಞಾನದ ಬೋಧನೆಗೆ ಅವರ ಪ್ರತಿರೋಧವಿಲ್ಲ. ಆದರೆ ಅವುಗಳನ್ನು ಬೋಧಿಸುವ ಮುನ್ನ ಅವುಗಳನ್ನು ಮಾನವೀಕರಿಸಿ ಮಾನವ ಕಲ್ಯಾಣದೆಡೆಗೆ ವ್ಯವಸ್ಥಿತವಾಗಿ ನಿರ್ದೇಶಿತಗೊಳಿಸಬೇಕು. ಉದಾಹರಣೆಗೆ, ಅಣುವಿನ ಬಗ್ಗೆ ಬೋಧಿಸುವಾಗ ಅದರ ಶಾಂತಿಯುತ ಉಪಯುಕ್ತತೆಯ ಬಗ್ಗೆ ಮಾತ್ರ ಹೇಳಬೇಕು. ಅಣುಸ್ಥಾವರ (Atomic reactor) ಗಳನ್ನು ಕುರಿತು ಹೇಳಬೇಕೇ ಹೊರತು ಅಣುಬಾಂಬ್ ಬಗ್ಗೆ ಹೇಳಬಾರದು.

ಸಾಂಪ್ರದಾಯಿಕ ಶಾಲೆಗಳಲ್ಲಿ ಕಾಣದಿರುವ ಒಂದು ಹೊಸ ಮಾದರಿಯ ಪಠ್ಯಕ್ರಮ ವ್ಯವಸ್ಥೆಯನ್ನು ಬೊಗೊಸ್ಲೊವಸ್ಕಿ ತನ್ನ ಕೃತಿ "ಐಡಿಯಲ್ ಸ್ಕೂಲ್" (ಆದರ್ಶ ಶಾಲೆ) ಎಂಬುದರಲ್ಲಿ ಹೇಳಿದ್ದಾರೆ. ಸಮಗ್ರ ವ್ಯಕ್ತತ್ವದ ವಿಕಾಸದತ್ತ ನಿರ್ದೇಶಿತವಾದ ನಾಲ್ಕು ಅಂತರ್‌ಸಂಬಂಧಿತ ಸಾಮಾನ್ಯ ಅಧ್ಯಯನ ಕ್ಷೇತ್ರಗಳ ನೆಲೆಗಟ್ಟಿನಲ್ಲಿ ಪಠ್ಯಕ್ರಮವಿರಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ಅವು ಯಾವುವೆಂದರೆ, ವಿದ್ಯಾರ್ಥಿಯು ತಮ್ಮ ಸುತ್ತಲಿರುವ ಪ್ರಪಂಚದ ಜೈವಿಕ ಹಾಗೂ ಭೌತಿಕ ಮುಖಗಳನ್ನು ಅರಿಯುವ ವಿಶ್ವ ವಿಭಾಗ (Universe division), ಸಮಾಜ ವಿಜ್ಞಾನಗಳ ಅಧ್ಯಯನವನ್ನು ಒಳಗೊಳ್ಳುವ ನಾಗರಿಕತೆ ವಿಭಾಗ (Civilization division), ತತ್ವಶಾಸ್ತ್ರ, ಕಲೆ, ಧರ್ಮ ಇತ್ಯಾದಿಗಳನ್ನು ಒಳಗೊಳ್ಳುವ ಸಾಂಸ್ಕೃತಿಕ ವಿಭಾಗ (Culture division), ಮಾನವ ಜೀವನದ ಭೌತಿಕ, ದೈಹಿಕ, ಸಂವೇಗಾತ್ಮಕ ಹಾಗೂ ಬೌದ್ಧಿಕ ಮುಖಗಳನ್ನೊಳಗೊಂಡ

Digitised by Bharatavani, CIIL

ವ್ಯಕ್ತಿತ್ವ ವಿಭಾಗ (Personality division). ಈ ವ್ಯವಸ್ಥೆ ಆದರ್ಶವಾದಿಗಳು ಬಯಸುವ "ವಿಶ್ವದ ಸಮಗ್ರ ದೃಷ್ಟಿ"ಯನ್ನು ಪ್ರೋತ್ಸಾಹಿಸಬಲ್ಲುದು. ಆದರೆ ಈ ವ್ಯವಸ್ಥೆಯಲ್ಲಿ ವಿವಿಧ ವಿಭಾಗಗಳ ನಡುವಿನ ಸೀಮಾರೇಖೆಗಳು ಸ್ಪಷ್ಟವಾಗಿಲ್ಲ.

**ಆದರ್ಶವಾದ ಮತ್ತು ಬೋಧನಾ ಪದ್ಧತಿಗಳು:** ಆದರ್ಶವಾದ ಆದರ್ಶವಾದಿಕೇಂದ್ರಿತ ಬೋಧನಾ ಪದ್ಧತಿಗಳ ಬಳಕೆಯನ್ನು ಸಮರ್ಥಿಸುತ್ತದೆ. ಅಂದರೆ ಯಾವುದೇ ವಿಷಯವನ್ನು ಬೋಧಿಸುವಾಗ ಮನುಷ್ಯನ ಘನತೆ, ಜೀವನದ ಶ್ರೇಷ್ಠತೆ ಹಾಗೂ ಬಾಳಿನ ಗುರಿಗಳ ಮೇಲೆ ಒತ್ತನ್ನು ನೀಡಬೇಕು. ಆದರ್ಶವಾದಿಗಳು ಮಗುವಿನ ಸ್ವಯಂಶಿಕ್ಷಣವನ್ನು ಒಪ್ಪುತ್ತಾರೆ. ಆದರೆ ಇದು ಪ್ರಕೃತಿವಾದಿಗಳು ಹೇಳುವ ರೀತಿಯದಲ್ಲ. ಆದರ್ಶವಾದಿಗಳು ಪ್ರಕಟರೂಪದ ಚಟುವಟಿಕೆಯನ್ನು ಸ್ವಯಂ-ಕ್ರಿಯಾಶೀಲತೆ (Self-activity) ಎಂದು ಪರಿಗಣಿಸುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ಊಹೆ, ಧ್ಯಾನ ಮತ್ತು ಇನ್ನಿತರ ಮಾನಸಿಕ ಚಟುವಟಿಕೆಗಳನ್ನು ಸ್ವಯಂಕ್ರಿಯಾಶೀಲತೆ ಎಂದು ಹೇಳುವರು. ಕಲಾಸೃಷ್ಟಿಯಂತೆ ಕಲಾಭಿಜ್ಞತೆಯೂ ಅಷ್ಟೇ ಕ್ರಿಯಾತ್ಮಕ ಎಂದು ಆದರ್ಶವಾದಿಗಳ ಅಭಿಪ್ರಾಯ. ಆದಾಗ್ಯೂ, ಮಗುವು ಪ್ರಕಟರೂಪದ ಅಥವಾ ಅಪ್ರಕಟರೂಪದ ಚಟುವಟಿಕೆಗಳಲ್ಲಿ ತೊಡಗಿದಾಗಲೂ ಅದಕ್ಕೆ ತನ್ನ ಗುರಿಗಳ ಅರಿವು ಸದಾ ಇರಬೇಕು.

ರಾಸ್ ಸ್ವಯಂಕ್ರಿಯಾಶೀಲತೆಯನ್ನು ಹೀಗೆ ವಿವರಸುವನು: "ಪ್ರಜ್ಞಾಪೂರ್ವಕವಾಗಿಟ್ಟುಕೊಂಡ ಧ್ಯೇಯಗಳತ್ತ ನಿರ್ದೇಶಿತವಾದ ಸಾಧನೆಯ ಬಲವೇ ಸ್ವಯಂಕ್ರಿಯಾಶೀಲತೆ." ಮಗುವಿನ ಒಲವುಗಳು, ಪ್ರಯತ್ನಗಳು, ಎಲ್ಲಕ್ಕಿಂತ ಮಿಗಿಲಾಗಿ ಮಗುವಿನ ಇಚ್ಛಾಶಕ್ತಿಗಳಿಗೆ ಆದರ್ಶವಾದಿಗಳು ತಮ್ಮ ಬೋಧನೆಗಿಂತ ಹೆಚ್ಚು ಬೆಲೆ ಕೊಡುತ್ತಾರೆ. ಅವರ ಪ್ರಕಾರ ಬೋಧನೆ ಬಹಳವೆಂದರೆ ಕಲಿಕೆಗೆ ಅಗತ್ಯವಿರುವ ಅನುಕೂಲಕರ ಪರಿಸರವೇ ವಿನಃ ಅದರ ಕಾರಣ ಎಂದಿಗೂ ಅಲ್ಲ.

ತರಗತಿಯ ಅಭ್ಯಾಸಕ್ಕೆ ಆದರ್ಶವಾದಿಗಳು ಚರ್ಚೆ ಹಾಗೂ ಉಪನ್ಯಾಸ ಪದ್ಧತಿಯ ಬಳಕೆಯನ್ನು ಉತ್ತೇಜಿಸುತ್ತಾರೆ. ಸಾಕ್ರಟಿಸನ ಪದ್ಧತಿಯೆಂದು ಪ್ರಸಿದ್ಧವಾಗಿರುವ ಚರ್ಚೆಯ ಮೂಲಕ ಕಲಿಕೆ ಪ್ರಶ್ನಿಸುವುದು, ಚರ್ಚಿಸುವುದು – ಇವುಗಳನ್ನು ಒಳಗೊಳ್ಳುತ್ತದೆ. ಭಾರತೀಯ ಶಿಕ್ಷಣದಲ್ಲಿ ಉಪನಿಷತ್ತಿನ ಕಾಲದ ಕಲಿಕೆ ಇದಾಗಿತ್ತು. ಅದು ಅನೌಪಚಾರಿಕ ತರ್ಕ (Informal dialectic) ಪದ್ಧತಿ ಎಂದೂ ಪ್ರಸಿದ್ಧವಾಗಿದೆ. ಉಚಿತ ರೀತಿಯಲ್ಲಿ ಸಿದ್ಧಪಡಿಸಿದ ಮತ್ತು ಪ್ರಸ್ತುತಪಡಿಸಿದ ಉಪನ್ಯಾಸಗಳ ಉಪಯುಕ್ತತೆಗೆ ಆದರ್ಶವಾದಿಗಳು ಹೆಚ್ಚು ಬೆಲೆ ನೀಡುತ್ತಾರೆ. ಉಪನ್ಯಾಸ ಕೇವಲ ವಿಷಯಗಳ ಧ್ವನಿಮುದ್ರಣದ ಉಚ್ಚಾರಣೆಯಂತೆ ಆಗಬಾರದು. ಬದಲಾಗಿ ಪ್ರಬುದ್ಧ ವ್ಯಾಖ್ಯಾನವಾಗಿರಬೇಕು. ಉಪನ್ಯಾಸವನ್ನು ನಿರಂಕುಶ ರೀತಿಯಲ್ಲಿ ನೀಡದೆ ವಿದ್ಯಾರ್ಥಿಗಳ ಸಹಭಾಗಿತ್ವದೊಡನೆ ನೀಡಬೇಕು.

**ಆದರ್ಶವಾದ ಮತ್ತು ಶಾಲೆ:** ಆದರ್ಶವಾದಿಗಳು ಶಾಲೆಗೆ ಮಹತ್ವವನ್ನೀಯುತ್ತಾರೆ. ಸಮಾಜವು ತನ್ನನ್ನು ತಾನು ಅಭಿವ್ಯಕ್ತಗೊಳಿಸುವ ಮಾಧ್ಯಮವೇ ಶಾಲೆ ಎಂದು ಅವರ ಅಭಿಪ್ರಾಯ. ಶಾಲೆ ಸಮಾಜದ ಮನಸ್ಸಿನಂತೆ. ಶಾಲೆಯ ಪರಿಸರ ಮಕ್ಕಳ ನೈತಿಕ ಹಾಗೂ ಅಧ್ಯಾತ್ಮಿಕ ಬೆಳವಣಿಗೆಯನ್ನು ಪ್ರಭಾವಿಸಲು ಸಮರ್ಥವಾಗಬೇಕು. ಇದು ಸಾಧ್ಯವಾಗಬೇಕಾದರೆ, ಶಾಲೆ ತನ್ನದೇ ಆದ ವೈಲಕ್ಷಣಗಳನ್ನು (Ethos), ಸಂಪ್ರದಾಯವನ್ನು ನಿರ್ಮಿಸಬೇಕು.

**ಆದರ್ಶವಾದ ಮತ್ತು ಶಿಸ್ತು:** ಆದರ್ಶವಾದಿಗಳು ಮಕ್ಕಳಿಗೆ "ಸ್ವತಂತ್ರ"ವನ್ನು ಕೊಡಲು ಬಯಸುವರು. ಆದರೆ ಆ ಸ್ವತಂತ್ರ ಗುಣಾತ್ಮಕವಾದುದು. ಅದು ಕ್ರಿಯಾಶೀಲತೆಗೆ ಮುಡಿಪಾಗಿರುವುದು. ಸ್ವತಂತ್ರವೆಂದರೆ ಸ್ವೇಚ್ಛಾಚಾರ ಅಥವ ಮನಬಂದಂತೆ ವರ್ತಿಸುವುದಲ್ಲ. ಸ್ವತಂತ್ರವೆಂದರೆ ಜವಾಬ್ದಾರಿಯೂ ಹೌದು. ಇದು ನಿಯಂತ್ರಿತವೂ, ನಿರ್ದೇಶಿತವೂ ಹಾಗೂ ಸೀಮಿತವೂ ಆಗಿರಬೇಕು. ಅವರ ಒತ್ತು ಇರುವುದು "ಸ್ವಯಂ-ಶಿಸ್ತಿನ" ಮೇಲೆ. ಹೊಗಳಿಕೆ ಅಥವಾ ದಂಡದಂಥ ಬಾಹ್ಯನಿಯಂತ್ರಣಕ್ಕಿಂತ ಆಂತರಿಕ ನಿಯಂತ್ರಣ ಮನುಷ್ಯನ ವರ್ತನೆಯತ್ತ ನಿರ್ದೇಶಿತವಾಗಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ಶಿಸ್ತಿನಲ್ಲಿ ಸ್ವ ಇಚ್ಛೆಯ ಪಾತ್ರಕ್ಕೆ ಹೆಚ್ಚು ಮೌಲ್ಯವನ್ನೀಯಲಾಗುತ್ತದೆ.

**ಆದರ್ಶವಾದ ಮತ್ತು ಶಿಕ್ಷಕ:** ಆದರ್ಶವಾದಿ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕನ ಸ್ಥಾನ ಕೇಂದ್ರೀಭೂತವಾದುದು (focal). ಶಿಕ್ಷಣದ ಪ್ರಕ್ರಿಯೆಗೆ ಕೀಲಿಕೈಯನ್ನು ಒದಗಿಸುವವನೇ ಶಿಕ್ಷಕ. ವಿದ್ಯಾರ್ಥಿಗಳ ಕಲಿಕೆ ಮತ್ತು ವಿಕಾಸಕ್ಕೆ ಅವಕಾಶಗಳನ್ನು ನಿರ್ಧರಿಸಿ ಅದಕ್ಕೆ ತಕ್ಕಂತೆ ಪರಿಸರವನ್ನು ಕಲ್ಪಿಸುವವನು ಶಿಕ್ಷಕ. ವಿಷಯವಸ್ತುವನ್ನು ಸಂಘಟಿಸಿ ಅದನ್ನು ವಿದ್ಯಾರ್ಥಿ ಕಲಿಯುವಂತೆ ಮಾಡುವವನು ಆತನೇ, ಮಗುವನ್ನು ಅದು ಕಲಿಯಲು ಸಿದ್ಧವಾಗಿರುವ ಜ್ಞಾನದಲ್ಲಿ ಪ್ರವೀಣನೆಂಬಂತೆ ಶಿಕ್ಷಕನು ಮಗುವನ್ನು ಎದುರುಗೊಳ್ಳುತ್ತಾನೆ. ಆದರ್ಶವಾದಿ ಶಿಕ್ಷಣ ಪದ್ಧತಿಯು ಶಿಕ್ಷಕನಿಗೆ ನೀಡಿರುವಷ್ಟು ಅಧಿಕಾರವನ್ನು ಶೈಕ್ಷಣಿಕ ತತ್ವಶಾಸ್ತ್ರದ ಇನ್ನಾವುದೇ ಪದ್ಧತಿಯು ನೀಡಿಲ್ಲ. ಆದರೆ ಆದರ್ಶವಾದ ಶಿಕ್ಷಕನಿಂದ ಆತನ ವ್ಯವಹಾರ ಮತ್ತು ವರ್ತನೆಯ ರೂಪದಲ್ಲಿ ಅಧಿಕವಾದುದನ್ನು ಅಪೇಕ್ಷಿಸುತ್ತದೆ. ಶಿಕ್ಷಕ ವಿದ್ಯಾರ್ಥಿಗೆ ಪರಮಸತ್ಯದ ಸಾಕಾರಮೂರ್ತಿಯೇ; ಶಿಕ್ಷಕನು ಆತನ ಬೋಧನಾ ವಿಷಯ ಹಾಗೂ ವಿದ್ಯಾರ್ಥಿಗಳನ್ನು ಕುರಿತ ಅರಿವನ್ನು ಚೆನ್ನಾಗಿ ಹೊಂದಿರಬೇಕು. ತನ್ನ ವಿದ್ಯಾ ಪ್ರೌಢಿಮೆ, ಬೋಧನೆ, ವಿದ್ಯಾರ್ಥಿಗಳನ್ನು ಕುರಿತ ಕಳಕಳಿ, ಆತನ ಸಮಗ್ರ ವರ್ತನೆ – ಇವುಗಳಿಂದ ಶಿಕ್ಷಕನು ವಿದ್ಯಾರ್ಥಿಗಳ ಗೌರವಾದರಗಳನ್ನು ಸಂಪಾದಿಸಬೇಕು. ಅದನ್ನು ಬೇಡುವುದಲ್ಲ. ಮಕ್ಕಳಲ್ಲಿ ಕಲಿಯುವ ಒಲವನ್ನು ಜಾಗೃತಗೊಳಿಸಬೇಕು. ಆತನು ವಿದ್ಯಾರ್ಥಿಯ ಸ್ನೇಹಿತನಂತಿರಬೇಕು. ಹಲವು ಬಾರಿ ಶಿಕ್ಷಕನನ್ನು ಸ್ನೇಹಿತ, ತತ್ವಜ್ಞ, ಮಾರ್ಗದರ್ಶಿ ಎಂದು ಹೇಳುವುದುಂಟು. ಶಿಕ್ಷಕನನ್ನು ಹಲವು ರೀತಿಯಲ್ಲಿ ವಿವರಿಸಿದ್ದಾರೆ "ಮಾನವನನ್ನು ಪೂರ್ಣನಾಗಿಸುವಲ್ಲಿ "ದೈವದೊಡನೆಯ ಸಹೋದ್ಯೋಗಿ", "ಮಾನವನ ಅಧ್ಯಾತ್ಮಿಕ

Digitised by Bharatavani, CIIL

ಸ್ವತ್ತಿನ ಪುರೋಹಿತ", "ಮನಸ್ಸನ್ನು ಸಂಪೂರ್ಣಗೊಳಿಸುವವನು", "ವಿಶ್ವದ ಅತ್ಯುನ್ನತ ಅಸ್ತಿತ್ವದ ಸ್ವರೂಪ", "ಪ್ರಜಾ ಪ್ರಭುತ್ವದ ನಿರ್ಮಾತೃ", "ಶಾಂತಿ ಹಾಗೂ ಉನ್ನತಿಯ ಪ್ರವರ್ತಕ", ಮತ್ತು "ಸಕಲ ಸದ್ಗುಣಗಳ ಆಕರ." ಆದಾಗ್ಯೂ ಕಷ್ಟಸಾಧ್ಯವಾದ ಪಾತ್ರವನ್ನು ನಿರ್ವಹಿಸಲು ಆದರ್ಶವಾದಿಗಳ ಈ ಅಪೇಕ್ಷೆಯನ್ನು ಪೂರೈಸಲು ಒಬ್ಬ ಶಿಕ್ಷಕನಿಗೆ ಕಠಿಣವೇ ಆಗಿದೆ.

ಶಿಕ್ಷಕನು ಒಬ್ಬ ನಿರಂತರ ಕಲಿಕಾರ್ಥಿ. "ಜ್ವಲಿಸುತ್ತಿರುವ ಶಿಕ್ಷಕನಿಂದ ವಿದ್ಯಾರ್ಥಿಗಳು ಜ್ವಲಿಸಲಾರಂಭಿಸುತ್ತಾರೆ" ಎಂಬ ಲೋಕೋಕ್ತಿಯಿದೆ. ಲಾಸ್ಕಿಯ ಶಿಕ್ಷಕನನ್ನು ಕುರಿತ ವಿವರಣೆಯನ್ನು ಆದರ್ಶವಾದಿಗಳು ಒಪ್ಪುತ್ತಾರೆ: "ಕಲಿಯುವ ಕ್ರಿಯೆಯಲ್ಲಿ ತೊಡಗಿರುವವನಿಂದ ಕಲಿಯುವವನು ಹರಿಯುತ್ತಿರುವ ತೊರೆಯಿಂದ ಶುದ್ಧಜಲವನ್ನು ಕುಡಿದಂತಾಗುತ್ತದೆ. ಆದರೆ ಎಲ್ಲವನ್ನೂ ಕಲಿತು ಅದನ್ನು ಬೋಧಿಸಲು ನಿಂತಿರುವವರಿಂದ ಕಲಿಯುವವನು ನಿಂತನೀರಿನ ಹಸಿರುಪಾಚಿಯ ನೀರನ್ನು ಕುಡಿದಂತಾಗುತ್ತದೆ."

ಶಿಕ್ಷಕರು ವಿದ್ಯಾರ್ಥಿಯ ಮೇಲೆ ತಮ್ಮ ಅಭಿಪ್ರಾಯವನ್ನು ಹೇರಬಾರದು ಹಾಗೂ ಅವರು ತಮ್ಮ ಗುಣಗಾನ ಮಡಿಕೊಳ್ಳಬಾರದು. ಆದಷ್ಟು ತಮ್ಮ ಪಾತ್ರವು ಕಡಿಮೆಯೆಂದು ತೋರಿಸಲು ಪ್ರಯತ್ನಿಸಬೇಕು. ಮಕ್ಕಳ ವಿಕಾಸಕ್ಕಾಗಿ ಅವರಿಗೆ ಸಹಕರಿಸುವಾಗ ತಮ್ಮನ್ನು ತಾವು ಮರೆತಿರಬೇಕು. ಪ್ರೋಬೆಲ್ "ಶಿಕ್ಷಕನು ತೋಟದಲ್ಲಿ ಎಲ್ಲಾ ವಿಧದ ಸಸ್ಯಗಳು ತಮ್ಮ ಶಕ್ತಿಗೆ ತಕ್ಕಂತೆ ಬೆಳೆಸುವ ತೋಟಗಾರನಂತೆ" ಎಂದು ಹೇಳಿದ್ದಾರೆ.

**ಆದರ್ಶವಾದದ ಮೌಲ್ಯ ನಿರ್ಧಾರ:** ಶೈಕ್ಷಣಿಕ ವಿಚಾರಧಾರೆಗೆ ಆದರ್ಶವಾದದ ಕೊಡುಗೆ ಸಾರವತ್ತಾದುದೂ ಹಾಗೂ ಗಾಢವಾದುದು. ಆದರ್ಶವಾದ ಶಿಕ್ಷಣದ ಕೆಲವು ಶ್ರೇಷ್ಠ ಗುರಿಗಳನ್ನು ಹೇಳಿದೆ. ವಿಷಯದ ಆಯ್ಕೆ, ವಿಧಾನ ಮತ್ತು ಮೌಲ್ಯಮಾಪನ ವಿಧಾನ ಸರಣಿ ಪದ್ಧತಿಯ ಮೂಲಕ ನಿರ್ಧಾರವಾಗುವುದರಿಂದ ಯಾವುದೇ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣದ ಗುರಿ ಈ ಪ್ರಕ್ರಿಯೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ತನ್ನ ಗುರಿಗಳಿಂದ ಆದರ್ಶವಾದ ಶೈಕ್ಷಣಿಕ ವಿಚಾರಧಾರೆ ಮತ್ತು ಪ್ರಯೋಗಗಳನ್ನು ಪ್ರಭಾವಿತಗೊಳಿಸಿದೆ. ಆದರ್ಶವಾದ ವ್ಯಾಪಕವಾದ ತತ್ವಶಾಸ್ತ್ರ. ಶೈಕ್ಷಣಿಕ ವಿಷಯ ಹಾಗೂ ಪ್ರಯೋಗದ ಎಲ್ಲಾ ಮುಖಗಳ ಬಗ್ಗೆ ಇದು ವಿವರಿಸುತ್ತದೆ. ಈ ವಿವರಗಳಲ್ಲಿ ಜೀವನ ಹಾಗೂ ಶಿಕ್ಷಣದಲ್ಲಿ ಮಾನವೀಯ ಮತ್ತು ವ್ಯಕ್ತಿಗತ ಅಂಗಗಳನ್ನು ಒತ್ತಿ ಹೇಳುತ್ತದೆ.

ಆದರ್ಶವಾದಿ ತತ್ವಶಾಸ್ತ್ರಕ್ಕೆ ವಿವಿಧ ಕಡೆಗಳಿಂದ ಹಲವು ಆಕ್ಷೇಪಣೆಗಳಿವೆ. ವಾಸ್ತವವಾಗಿ, ಕೆಲವು ತತ್ವಶಾಸ್ತ್ರ ಶಾಖೆಗಳು ಆದರ್ಶವಾದವನ್ನು ವಿರೋಧಿಸಿ, ಪ್ರತಿಕ್ರಿಯಿಸಿ ಅದರಿಂದ ಅಸ್ತಿತ್ವಕ್ಕೆ ಬಂದುವುಗಳು. ಆದಾಗ್ಯೂ, ಅದಕ್ಕಿರುವ ವಿರೋಧಗಳ ಸಂಖ್ಯೆಯಿಂದ ಆದರ್ಶವಾದ ಶೈಕ್ಷಣಿಕ ವಿಚಾರಧಾರೆಗೆ ಕೊಡುಗೆಯನ್ನಿತ್ತ ತತ್ವಶಾಸ್ತ್ರವೆಂಬ ಹೆಸರಿಗೆ ಅಡ್ಡಿ ಬರುವುದಿಲ್ಲ.

ಆದರ್ಶವಾದದ ಬಗ್ಗೆ ಮತ್ತೊಂದು ಆಕ್ಷೇಪವೆಂದರೆ ಅದರ ಅಮೂರ್ತ ಸ್ವಭಾವ. ಅದನ್ನು ಅಮೂರ್ತ ತತ್ವಶಾಸ್ತ್ರ ಹಾಗೂ ದಾರ್ಶನಿಕ ಆದರ್ಶ ಸ್ಥಿತಿ (Visionary utopia). ಇದು ತಕ್ಷಣದ ವಾಸ್ತವಿಕತೆಯಿಂದ ನಮ್ಮನ್ನು ಪರಮಸತ್ಯದತ್ತ ಕೊಂಡೊಯ್ಯುವುದು ಈ ಆದರ್ಶವಾದ. ಮತ್ತೊಂದು ಮುಖ್ಯವಾದ ಆದರೆ ಪೂರ್ಣವಾಗಿ ಸಮರ್ಥಿಸಲಾಗದ ಆಕ್ಷೇಪವೆಂದರೆ ಆದರ್ಶವಾದ ವಿಜ್ಞಾನ ಮತ್ತು ತಂತ್ರಜ್ಞಾನದ ಅಧ್ಯಯನಕ್ಕೆ ಅಲ್ಪ ಮೌಲ್ಯವನ್ನಿತ್ತು ಪ್ರಾಯೋಗಿಕ ವಿಧಾನದ ಕಲಿಕೆಯ ವಿರೋಧಿಯಾಗಿದೆ ಎಂಬುದು. ಅಲ್ಲದೆ, ಕಲಿಕಾರ್ಥಿಯು ತನ್ನ ಕಲಿಕೆಗಾಗಿ ಶಿಕ್ಷಕನನ್ನು ಬಹಳವಾಗಿ ಅವಲಂಬಿಸುತ್ತಾನೆ ಎಂಬ ಆದರ್ಶವಾದದ ಸಮರ್ಥನೆಯನ್ನು ಸಹ ಆಕ್ಷೇಪಿಸಲಾಗಿದೆ.

**ಮೂಲ: ಡಾ. ಸೀತಾರಾಮು ಎ.ಎಸ್.**

**ಅನು: ಚಂದ್ರಶೇಖರ್ ಬಿ.ಎಂ.**

## ಶಿಕ್ಷಣದಲ್ಲಿ ಕಥಾವರ್ಣನೆ

ಕಥೆಯ ಮೂಲಕ ಶಿಕ್ಷಣವನ್ನು ನೀಡುವುದು ಹಾಗೂ ಜೀವನದ ಇನ್ನಿತರ ಮೌಲ್ಯಗಳನ್ನು ಬೆಳೆಸುವುದು. ಭಾರತದ ಒಂದು ಪ್ರಾಚೀನ ಸಂಪ್ರದಾಯ. ಕಥಾವರ್ಣನೆ ಒಂದು ಸಂಪೂರ್ಣ ಕಲೆ. ಈ ಕಲೆ ಮಕ್ಕಳನ್ನು ಆಕರ್ಷಿಸುವುದು ಮಾತ್ರವಲ್ಲದೆ ಕಥಾಕಾರನೆಡೆಗೆ ಬೆಳೆದು ನಿಂತವರು ಹಾಗೂ ದೊಡ್ಡವರು ಕೂಡ ಆಕರ್ಷಿತರಾಗುತ್ತಾರೆ! ನಾಟಕ, ಕಲಾಶಾಲೆ ಇತ್ಯಾದಿಗಳು ಈ ಕಲೆಯ ವಿಸ್ತೃತ ಮುಖಗಳು. ಒಬ್ಬ ಒಳ್ಳೆಯ ಕಥಗಾರ ತನ್ನ ಹಾವಭಾವ ಹಾಗೂ ಕಂಠಧ್ವನಿಯ ಏರಿಳಿತದಿಂದ ಕೇಳುವವರ ಮನಸ್ಸಿನಲ್ಲಿ ನಿಜವಾದ ದೃಶ್ಯವನ್ನು ಸೃಷ್ಟಿಸಬಲ್ಲನು. ಜಲಪಾತ, ಹಾರುವ ಹಕ್ಕಿಗಳು, ಬಿರುಗಾಳಿ, ನದಿ ಮುಂತಾದುವುಗಳ ಜೊತೆ ಭೌತಿಕವಾಗಿ ಇದ್ದೇವೆಯೋ ಎಂಬಂತೆ ಆತ ಮಡಬಲ್ಲನು. ಕಥೆಗಾರನು ಕಥೆ ಹೇಳುವಾಗ ಆಯ್ಕೆ ಮಾಡಿ ಉಪಯೋಗಿಸುವ ಸೂಕ್ತಪದಗಳು ಮತ್ತು ಹಾವಭಾವಗಳು ಲಿಖಿತ ರೂಪದ ಕಥೆಗೆ ಜೀವವನ್ನು ತುಂಬುತ್ತದೆ.

ವಾಸ್ತವವಾಗಿ ಕಥೆಗಾರನ ಹಾವಭಾವಗಳು ಕಥಾವಸ್ತುವಿಗಿಂತಲೂ ಹೆಚ್ಚಾಗಿ ಕೇಳುಗರ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ. ಹಾವಭಾವಗಳ ಪ್ರಭಾವದಿಂದ ಕೇಳುಗ ಕಥೆಗಾರನಲ್ಲಿ ಒಂದಾಗುತ್ತನಲ್ಲದೆ ಕೇಳುಗನ ಮುಖದಲ್ಲಿ ಕಥೆ ಹೇಳುವವನ ಮುಖದಲ್ಲಿರುವ ಉಜ್ವಲತೆಯನ್ನು ಕಾಣಬಹುದು. ಒಳ್ಳೆಯ ಕಥೆಗಾರ ತನ್ನ ಉತ್ತರೀಯವನ್ನು ಪೇಟದಂತೆಯೋ, ಮುಖಪರದೆಯಂತೆಯೋ ಅಥವಾ ಇನ್ನಾವುದಾದರಂತೆ ಬಳಸಿ ಅಳು. ಕೂಗು, ನಗು ಮುಂತಾದ ಹಾವಭಾವಗಳನ್ನು ಸಾಮರಸ್ಯ, ದ್ವೇಷ, ಧರ್ಮ, ಪರಿಸರ, ಜೀವನದ ಯಾವುದೇ ಒಂದು ಪರಿಕಲ್ಪನೆ ಇತ್ಯಾದಿಗಳನ್ನು ಕೇಳುಗನಿಗೆ ಪ್ರಭಾವಯುತವಾಗಿ ತಲುಪಿಸಬಲ್ಲನು.

**ಐತಿಹಾಸಿಕ ಹಿನ್ನೆಲೆ:** ಅನಾದಿ ಕಾಲದಿಂದಲೂ ಕಥಾವರ್ಣನೆ ಭಾರತದಲ್ಲಿ ಜೀವನದ ಒಂದು ಮುಖ್ಯ ಅಂಗವಾಗಿದೆ. ಪ್ರಾಚೀನ ಕಾಲದಲ್ಲಿ

Digitised by Bharatavani, CIIL

ಅಕ್ಷರತೆಯಾಗಲಿ ಲಿಖಿತಶಿಕ್ಷಣವಾಗಲಿ ಇರಲಿಲ್ಲ. ನಿರಕ್ಷರರಿಗೂ ಕಥೆಯ ಮೂಲಕ ವೇದ ಪುರಾಣಗಳ ಪರಿಚಯವಿತ್ತು. ಎಲ್ಲಾ ವಿಧದ ಹಾವಭಾವಗಳು ಮತ್ತು ಅಭಿವ್ಯಕ್ತಿಗಳನ್ನು ಉಪಯೋಗಿಸಿ ಹೇಳುತ್ತಿದ್ದಂಥ ಕಥೆಗಳ ಒಂದು ದೊಡ್ಡ ಭಂಡಾರವೆ ಕಥೆಗಾರರ ಬಳಿ ಇರುತ್ತಿತ್ತು. ಇಪ್ಪತ್ತನೇ ಶತಮಾನದ ಆದಿಭಾಗದವರೆಗೂ ಸಕಲ ಸಾಮಾಜಿಕ ಚಟುವಟಿಕೆಗಳ ಕೇಂದ್ರ ಹಳ್ಳಿಯ ಸಾರ್ವಜನಿಕ ಸ್ಥಳ(ಚೌಪಾಲ್)ವಾಗಿದ್ದು ಅಲ್ಲಿರುತ್ತಿದ್ದ ಕಥಾಕಾರನನ್ನು ಎಲ್ಲರೂ ಜ್ಞಾನಾರ್ಜನೆಗಾಗಿ ಮತ್ತು ಮನರಂಜನೆಗಾಗಿ ಹುಡುಕಿಕೊಂಡು ಬರುತ್ತಿದ್ದರು. ಸಾವಿರದ ಐನೂರು ವರ್ಷಗಳ ಹಿಂದೆಯೆ ಪಂಚತಂತ್ರದ ಮೂಲಕ ಮಕ್ಕಳಿಗೆ ಕಥೆಗಳ ಮುಖಾಂತರ ಧಾಳಿಗಳ ನಡುವೆಯೂ ಇಂದಿಗೂ ತನ್ನ ಮನೋಹರತೆಯನ್ನು ಉಳಿಸಿಕೊಂಡು ಬಂದಿರುವ ಕಥಾಸಂಗ್ರಹ ಈ ಪಂಚತಂತ್ರ ಸರ್ವರೂ ಅದರಲ್ಲೂ ಮಕ್ಕಳು ಅರ್ಥಮಾಡಿಕೊಳ್ಳಬಲ್ಲ ಭಾಷಾಸರಳತೆಯೇ ಪಂಚತಂತ್ರವನ್ನು ಕಾಲಾತೀತವಾಗಿ ಅಂಗೀಕೃತಗೊಳ್ಳುವಂತೆ ಮಾಡಿರುವ ಮೋಡಿ. ಪಂಚತಂತ್ರ ರಚಿತವಾದ ನೂರು ವರ್ಷಗಳ ನಂತರ ಯುರೋಪಿನಲ್ಲಿ 'ಕ್ಯಾಂಟರ್‌ಬರಿ ಕಥೆಗಳು' ಎಂಬ ಕಥಾಸಂಗ್ರಹವು ರಚಿತಗೊಂಡಿತು. ಈ ಕಥೆಗಳ ಮುಖ್ಯ ಉದ್ದೇಶ ಅದೇ ಆಗಿತ್ತು ಅಂದರೆ ಮಕ್ಕಳಲ್ಲಿ ಕಲಿಕೆ ಮತ್ತು ಮನರಂಜನೆಯ ಪರಿಜ್ಞಾನ(Sense of learning and entertainment) ಬೆಳೆಸುವುದು. ಹೀಗೆ 'ಸಹಸ್ರರಜನಿ ಚರಿತ', 'ಕಥಾ ಸರಿತ್ಸಾಗರ', ಹಿತೋಪದೇಶ', 'ಜಾತಕ ಕಥೆ'ಗಳಂಥ ಕಥಾಸಂಗ್ರಹಗಳು ತಮ್ಮದೇ ಆದ ಶೈಕ್ಷಣಿಕ ಮೌಲ್ಯಗಳನ್ನು ಹೊಂದಿವೆ. ಈ ಸಂಬಂಧದಲ್ಲಿ ಮಹಾಬೋಧಕನೂ, ತತ್ವಜ್ಞಾನಿಯೂ ಆಗಿದ್ದ ವಿಷ್ಣುಶರ್ಮನ ಉದಾಹರಣೆಯನ್ನು ನಿರೂಪಿಸುವುದು ಸೂಕ್ತವಾಗಿದೆ. ರಾಜನ ಮೂರ್ಖ ಮಕ್ಕಳಿಗೆ ಬೋಧಿಸಿ ಅಪಾರಧನ ಗಳಿಕೆಯ ಪ್ರಸ್ತಾಪವನ್ನು ವಿಷ್ಣುಶರ್ಮ ನಿರಾಕರಿಸಿದ, ಅದಕ್ಕೆ ಬದಲಾಗಿ ಭೂತಕಾಲದ ಘಟನೆಗಳನ್ನು ಕಥೆಗಳ ಮೂಲಕ ನಿರೂಪಿಸುವ ಪರಸ್ಪರ ಚರ್ಚೆಯ ಬೋಧನಾಕಲೆಯನ್ನು ಅನುಸರಿಸುತ್ತಿದ್ದ ತನ್ನ ಆಶ್ರಮಕ್ಕೇ ಆ ಮೂರ್ಖ ಮಕ್ಕಳನ್ನು ಕಳಿಸಬೇಕೆಂದು ಇಚ್ಛಿಸಿದ. ಅಲ್ಲಿ ಈ ಮೂರ್ಖ ಬಾಲಕರಿಗೆ ದೇಶದ ರಾಜಕಾರಣದ ಐದು (ಭೇದ, ಪರೀಕ್ಷೆ, ವಿಶ್ವಾಸ, ವಂಚನೆ, ಮಿತ್ರಕಾರ್ಯ) ಮುಖ್ಯ ತಂತ್ರಗಳನ್ನು ಗುರು ಸಣ್ಣ ಕಥೆಗಳ ಮೂಲಕ ಬೋಧಿಸಿದ. ಮೂರ್ಖರೂ, ಅಹಂಕಾರಿಗಳೂ ಆಗಿದ್ದ ರಾಜನ ಮಕ್ಕಳು ಪಂಡಿತ ವಿಷ್ಣುಶರ್ಮನ ಆಶ್ರಮದಿಂದ ಹೊರಬಂದಾಗ ರಾಜನ ಸಮರ್ಥ ಹಾಗೂ ಸಫಲ ಉತ್ತರಾಧಿಕಾರಿಗಳಾಗಿದ್ದರು. ಅಂದಿನಿಂದ, ಪಂಚತಂತ್ರ ಕಥೆಗಳು ಭಾರತದ ಪ್ರಜೆಗಳನ್ನು ಉದ್ಬೋಧಿಸುತ್ತಾ (Enlightin) ಬಂದಿವೆ. ಮಕ್ಕಳಿಗೆ ಜೀವನದ ಹಲವು ವಿಷಯಗಳನ್ನು ತಿಳಿ ಹೇಳುವ ಉದ್ದೇಶದಿಂದ ಈ ಕಥೆಗಳನ್ನು ಅತಿ ಸರಳ ಮತ್ತು ಸುಬೋಧ(lacid) ಶೈಲಿಯಲ್ಲಿ ಹೇಳಲಾಗಿದೆ. ಪಂಚತಂತ್ರ ಕಥೆಗಳನ್ನು ವಿಶ್ವದ ಹಲವು ಭಾಷೆಗಳಿಗೆ ಭಾಷಾಂತರಿಸಲಾಗಿದೆ.

ಪಂಚತಂತ್ರದಂತೆಯೇ ವೇದೋಪನಿಷತ್ತುಗಳು, ಪ್ರಾಚೀನ ಭಾರತದ ಗ್ರಂಥಗಳು ಜೀವನದ ಅರ್ಥ ಜೀವನದ ಕಲೆ ಮತ್ತು ಕಲಿಯುವ ಕಲೆಗಳನ್ನು ಬೋಧಿಸುವ ಹಲವಾರು ಕಥೆಗಳನ್ನು ಒಳಗೊಂಡಿವೆ. ಈ ಕಥೆಗಳು ನಮಗೆ ವಿವಿಧ ಮೌಲ್ಯಗಳನ್ನು ಬೋಧಿಸುವುದಲ್ಲದೆ ಜೀವನದ ಬೇರೆ ಬೇರೆ ಆದ್ಯತೆಗಳ ಬಗ್ಗೆ ತಿಳಿಸಿಕೊಡುತ್ತವೆ.

ತೆನಾಲಿರಾಮನ ಕಥೆಗಳು ಮಕ್ಕಳಲ್ಲಿ ಹಾಗೂ ದೊಡ್ಡವರಲ್ಲಿ ತಾರ್ಕಿಕ ವಿಚಾರಶಕ್ತಿಯನ್ನು ವಿಕಾಸಗೊಳಿಸುತ್ತವೆ. ಈ ಕಥೆಗಳು ಆಡಳಿತ ಕಲೆಯನ್ನು ವಿವರಿಸುತ್ತದೆ. ರಾಜನು ಯಾವಾಗಲೂ ದುಂದುಗಾರಿಕೆ ಮತ್ತು ಕಪಟ ಶ್ಲಾಘನೆ ಮುಂತಾದುವುಗಳ ಬಗ್ಗೆ ಜಾಗರೂಕನಾಗಿರಬೇಕು. ಅರಿವುಳ್ಳವನಾಗಿರಬೇಕೆಂದು ಈ ಕಥೆಗಳೂ ವಿವರಿಸುತ್ತವೆ. ರಾಜ್ಯದ ಶಾಂತಿ ಮತ್ತು ಏಳ್ಗೆಗೆ ಯೋಜನೆ, ಆವಿಷ್ಕಾರಿಕ ವಿಚಾರಗಳು (Innovative ideas) ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆ ಅಗತ್ಯವೆಂದು ಈ ಕಥೆಗಳು ಬೋಧಿಸುತ್ತವೆ. ಪರಿಸರ ಮತ್ತು ಆರೋಗ್ಯದ ಬಗ್ಗೆಯೂ ಕಳಕಳಿಯನ್ನು ಹೊಂದಿರುವ ಈ ಕಥೆಗಳು ಪರಸ್ಪರಹಿತದ ಬಗ್ಗೆ ಮಾನವರ ಪ್ರಜ್ಞೆಯನ್ನು ಜಾಗೃತಗೊಳಿಸುತ್ತವೆ.

**ಕಥಾವರ್ಣನೆಯ ಪ್ರಾಮುಖ್ಯತೆ:** ಕಥಾವರ್ಣನೆ ಒಂದು ಸೃಜನಾತ್ಮಕ ಕಲೆ. ಲಿಖಿತ ಕಥೆಗಳು ಸಾಮಾನ್ಯ ಮನುಷ್ಯರನ್ನು ತಲುಪುವುದಿಲ್ಲ. ನಮ್ಮ ಶಾಲೆಗಳಲ್ಲಿ ಕಥಾವರ್ಣನೆಯ ಕಲೆಗೆ ವಿಶೇಷ ಗಮನವನ್ನು ಹರಿಸಿದರೆ ಮಾತ್ರ ಈ ಕಲೆಯನ್ನು ಅಭಿವೃದ್ಧಿಗೊಳಿಸಬಹುದು. ಇದು ಶಾಲೆಯ ಪಠ್ಯಕ್ರಮದ ಒಂದು ಅಂಗವಾಗಬೇಕು. ಒಳ್ಳೆಯ ಹಾಗೂ ಮಹತ್ವಪೂರ್ಣ ಕಥೆಗಳ ಶ್ರವಣದಿಂದ ಮಕ್ಕಳು ತಾವೇ ಸ್ವತಃ ಕಥೆಗಳನ್ನು ಬರೆಯಲು ಪ್ರೇರಿತರಾಗಬಹುದು.

**ಮೂಲ : ಬಿಮಲಾ ಸಹದೇವ್**

**ಅನು: ಚಂದ್ರಶೇಖರ್ ಬಿ.ಎಂ.**

## ಶಿಕ್ಷಣದಲ್ಲಿ ನೀತಿ ನಿರೂಪಣೆ

ಒಂದು ನೀತಿ ಸಾಮಾನ್ಯವಾಗಿ ಉದ್ದೇಶದ ಒಂದು ಸಾಮಾನ್ಯ ಹೇಳಿಕೆಯ ರೂಪ ಪಡೆದುಕೊಳ್ಳುತ್ತದೆ. ಇದು ಭವಿಷ್ಯ ನಿರ್ದೇಶಿತವಾಗಿದ್ದು ಇಚ್ಛಿತ ದಿಶೆಯಲ್ಲಿ ಬಹಳ ಅಗತ್ಯವಾದ ಬದಲಾವಣೆಗಳನ್ನು ತರುವುದಕ್ಕಾಗಿ ಅನುಸರಿಸುವ ನೀತಿ ಅಥವಾ ನೀತಿಗಳನ್ನು ಸೂಚಿಸುತ್ತದೆ. ಶಿಕ್ಷಣದಲ್ಲಿ ಒಂದು ನೀತಿ, ಶಿಕ್ಷಣದಲ್ಲಿ ಮಾಡಲು ಉದ್ದೇಶಿಸಿರುವ ಬದಲಾವಣೆಯನ್ನು ಪ್ರೋತ್ಸಾಹಿಸುವ ಮಾನವ ಸಾಮರ್ಥ್ಯಗಳ ಹಾಗೂ ದಕ್ಷತೆಗಳ ಮತ್ತು ಸೃಷ್ಟಿಸಲಿರುವ ಸಾಮಾಜಿಕ ವ್ಯವಸ್ಥೆಯ ಭವಿಷ್ಯದ ದರ್ಶನ (Vision) ವನ್ನು ಪ್ರತ್ಯೇಕಿಸಬೇಕು. ಇದು ಶೈಕ್ಷಣಿಕ ಪ್ರಸ್ತುತ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಮತ್ತು ಅದನ್ನು ಬದಲಾಯಿಸಲು, ಬದಲಾವಣೆಯನ್ನು ಸೂಚಿಸುತ್ತದೆ. ಇಂಥ ಪರಿಸ್ಥಿತಿ ಅನುಭವಕ್ಕೆ ಬಂದ ಮಿತಿಯನ್ನು ದೂರಮಾಡುವುದಾಗಿರಬಹುದು. ಅಥವಾ ಶೈಕ್ಷಣಿಕ ಪರಿಸ್ಥಿತಿಯ ಸಾಂದರ್ಭಿಕತೆ, ದಕ್ಷತೆ ಮತ್ತು ಪ್ರಭಾವಶೀಲತೆಯನ್ನು ಹೆಚ್ಚಿಸುವುದಾಗಿರಬಹುದು. ಭಾರತದಂಥ ವೈಶಾಲ್ಯ ಮತ್ತು ವೈವಿಧ್ಯವಿರುವ ದೇಶದಲ್ಲಿ ಶೈಕ್ಷಣಿಕ ನೀತಿಗಳು

Digitised by Bharatavani, CIIL

ಸೂಚನಾತ್ಮಕವಾಗಿರಬೇಕೆ ಹೊರತು ವಿಧಾಯಕಾತ್ಮಕವಾಗಿರಬಾರದು. ಇದರಿಂದಾಗಿ ಸ್ಥಳೀಯ ಪರಿಸ್ಥಿತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ವಿಸ್ತಾರಗೊಳಿಸಿಕೊಳ್ಳಲು ಸಾಕಷ್ಟು ಅವಕಾಶ ದೊರೆಯುತ್ತದೆ. ಶೈಕ್ಷಣಿಕ ನೀತಿ ಉದ್ದೇಶದ ಹೇಳಿಕೆಯಾಗಿರುವುದರಿಂದ ನೀತಿಗೂ ಮತ್ತು ಆ ನೀತಿ ಪರಿಸ್ಥಿತಿಯನ್ನು ಸರಿಪಡಿಸಲು ಅಥವಾ ಬದಲಾವಣೆ ಮಾಡಲು ಉದ್ದೇಶಿಸುವ ಕಾರ್ಯಕ್ರಮಗಳಿಗೂ ಮತ್ತು ಪ್ರಾಯೋಜನೆಗಳಿಗೂ ನಡುವೆ ಇರುವ ವ್ಯತ್ಯಾಸವನ್ನು ತಿಳಿಯಬೇಕಾದ ಅಗತ್ಯವಿದೆ. ಆದರೆ ಅನೇಕ ವೇಳೆ ಈ ಎರಡನ್ನು ಒಂದೇ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯೂ (1986) ನೀತಿಗಳು ಮತ್ತು ಕಾರ್ಯಕ್ರಮಗಳ ನಡುವೆ ವ್ಯತ್ಯಾಸ ಕಲ್ಪಿಸಲು ಕೆಲವು ಕಡೆ ವಿಫಲವಾಗಿದೆ ಎನ್ನಿಸುತ್ತದೆ.

**ಐತಿಹಾಸಿಕ ದೃಷ್ಟಿಕೋನ:**

ಭಾರತದ ಇತಿಹಾಸದ ಪ್ರಾಚೀನ ಮತ್ತು ಮಧ್ಯಯುಗಗಳಲ್ಲಿ ಶೈಕ್ಷಣಿಕ ನೀತಿ ನಿರೂಪಣೆಯ ಬಗ್ಗೆ ಯಾವುದೇ ದಾಖಲೆಗಳಿಲ್ಲ, ಆದಾಗ್ಯೂ ಈ ಎರಡು ಅವಧಿಗಳಲ್ಲಿ ಸಾಕಷ್ಟು ಶೈಕ್ಷಣಿಕ ಚಟುವಟಿಕೆಗಳು ನಡೆದಿವೆ. ನೀತಿಗಳನ್ನು ನಿರೂಪಿಸುತ್ತಿದ್ದ ಸರ್ಕಾರಗಳು ಪಂಡಿತರಿಗೆ/ವಿದ್ವಾಂತರಿಗೆ ಅನುದಾನಗಳು ಮತ್ತು ಭೂಮಿದಾನಗಳ ರೂಪದಲ್ಲಿ ಪ್ರೋತ್ಸಾಹವನ್ನು ನೀಡುತ್ತಿದ್ದುದನ್ನು ಬಿಟ್ಟರೆ ಶೈಕ್ಷಣಿಕ ವಿಷಯಗಳಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ತಕ್ಷಶಿಲೆ ಮತ್ತು ನಾಳಂದದಂಥ ಗುರುಕುಲಗಳಿಗೆ ನಂತರದ ದಶಕಗಳಲ್ಲಿ ಮಕ್ತಬ್ ಮತ್ತು ಮದರಸಾಗಳಿಗೆ ಕೊಡುತ್ತಿದ್ದ ಸರ್ಕಾರಗಳ ಅಧಿಕೃತ ಬೆಂಬಲದ ಬಗ್ಗೆ ನಮಗೆ ಸಮರ್ಪಕವಾದ ದಾಖಲೆಗಳು ದೊರೆಯುವುದಿಲ್ಲ. ಆದಾಗ್ಯೂ ರಾಜರುಗಳು, ನಾಯಕರುಗಳು ನಂತರದಲ್ಲಿ ಸ್ಥಳೀಯ ಜಮೀನುದಾರರು ಕೊಡುತ್ತಿದ್ದ ಪ್ರೋತ್ಸಾಹದಿಂದ ಇವೆಲ್ಲವೂ ಅಭಿವೃದ್ಧಿ ಹೊಂದುತ್ತಿದ್ದು ಅನುಸರಿಸಬೇಕಾಗಿದ್ದ ಪಠ್ಯಕ್ರಮದ ಬಗ್ಗೆ ಯಾವುದೇ ಅಧಿಕೃತ ಹೇಳಿಕೆಗಳು ಇರುತ್ತಿರಲಿಲ್ಲವಾದರೂ ಸುಪ್ತವಾಗಿ ನಿರೂಪಿತವಾದ ಅಧ್ಯಯನದ ಕಾರ್‍ಯಕ್ರಮದ ಅಧ್ಯಯನದಿಂದ ವಿದ್ಯಾರ್ಥಿಗಳು ಜ್ಞಾನ, ಕೌಶಲಗಳು ಮತ್ತು ಮನೋಭಾವಗಳಂಥ ದಕ್ಷತೆಗಳನ್ನು ನಿರ್ದಿಷ್ಟಪಡಿಸಿದ ಶಿಕ್ಷಣ, ತರಬೇತಿ ಮತ್ತು ಗುರುಕುಲ ವಾಸದ ಅವಧಿಯ ನಂತರ ಪಡೆದುಕೊಳ್ಳಬೇಕೆಂದು ನಿರೀಕ್ಷಿಸಲಾಗುತ್ತಿತ್ತು. ಈ ಸಂಗತಿ ಪ್ರಸಿದ್ಧಿಪಡೆದಿದ್ದ ನಳಂದಾದಂತಹ ಸಂಸ್ಥೆಗಳು ಮತ್ತು ಮದ್ರಾಸಾಗಳ ವಿಷಯದಲ್ಲಿ ವಿಶೇಷವಾಗಿ ನಿಜವಾಗಿತ್ತು. ಶಿಕ್ಷಣ ಮತ್ತು ತರಬೇತಿ ತುಂಬಾ ನಿಷ್ಠುರವಾಗಿದ್ದವು. ಮತು ವಿದ್ಯಾರ್ಥಿ ತುಂಬಾ ಶಿಸ್ತುಬದ್ಧವಾದ ಜೀವನ ನಡೆಸಬೇಕಾಗುತ್ತಿತ್ತು. ಇಂದಿಗೂ ಕೆಲವು ವಿಷಯಗಳಲ್ಲಿ ಉದಾಹರಣೆಗೆ ಆಯುರ್ವೇದ ಮತ್ತು ಯುನಾನಿ ವೈದ್ಯಪದ್ಧತಿಗಳು ಹಿಂದಿನ ಕಾಲದ ಅಧ್ಯಯನ ಪದ್ಧತಿಯಲ್ಲಿ ಮುಂದುವರಿಯುತ್ತಿದೆ. ಗುರುಕುಲಗಳು, ಪಾಠಶಾಲೆಗಳು ಮತ್ತು ಮಕ್ತಾಬ್‌ಗಳಲ್ಲಿ ಶಿಕ್ಷಕ ವಿದ್ಯಾರ್ಥಿ ಸಾಧಿಸುವ ಮಾರ್ಗವನ್ನು ನಿರೂಪಿಸುತ್ತಾರೆ. ಇವುಗಳು ಅರ್ಜುನ ಬಿಲ್ಲ ವಿದ್ಯೆಯಲ್ಲಿ ಸಾಧಿಸಿದಂಥ ಅತಿ ಮೇಲ್ಮಟ್ಟದ ಪ್ರಾವೀಣ್ಯವಾಗಿರಬಹುದಾಗಿತ್ತು. ಆದ್ದರಿಂದ ಒಂದು ಅರ್ಥದಲ್ಲಿ ಶಿಕ್ಷಣದಲ್ಲಿ ನೀತಿ ನಿರೂಪಣೆ ಇತ್ತೀಚಿನ ಘಟನೆ ಎಂದು ತಿಳಿಯಬೇಕಾಗುತ್ತದೆ.

ಭಾರತದಲ್ಲಿ 'ಆಧುನಿಕ' ಶಿಕ್ಷಣ ವ್ಯವಸ್ಥೆಯ ಉಗಮ ಎಂದು ಕರೆಯಬಹುದಾದ ಲಾರ್ಡ್ ಮೆಕಾಲೆ 1833ರಲ್ಲಿ ಬರೆದ ಮೆಕಾಲೆ ಮಿನಿಟ್ (ಜ್ಞಾಪನ ಪತ್ರ) ವನ್ನು ಆಗ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಂಕ್ ಅನುಮೋದನೆ ಮಾಡಿದುದನ್ನು ಶಿಕ್ಷಣದ ಬಗ್ಗೆ ಮಾಡಿದ ಪ್ರಥಮ ನೀತಿ ನಿರೂಪಣೆ ಎನ್ನಬಹುದು. ಈ 'ನೀತಿ ನಿರೂಪಣೆ' ಹೀಗಿದೆ "ಘನತೆವೆತ್ತ ಹಿಸ್ ಲಾರ್ಡ್‌ಶಿಪ್ ಇನ್ ಕೌನ್ಸಿಲ್ ರವರು ಸಮಿತಿಯ ಮುಂದೆ ಈ ಸುಧಾರಣೆಗಳಿಗಾಗಿ ಮೀಸಲಿಟ್ಟಿರುವ ಎಲ್ಲಾ ನಿಧಿಗಳನ್ನು ಇನ್ನು ಮುಂದೆ ದೇಶೀಯ ಜನತೆಗೆ ಇಂಗ್ಲೀಷ್ ಭಾಷೆಯ ಮಾಧ್ಯಮದಿಂದ ಇಂಗ್ಲೀಷ್ ಸಾಹಿತ್ಯ ಮತ್ತು ವಿಜ್ಞಾನದ ಜ್ಞಾನವನ್ನು ಬೋಧಿಸಲು ಉಪಯೋಗಿಸಬೇಕೆಂದು ನಿರ್ದೇಶಿಸುತ್ತಾರೆ." (ಮೆಹಮೂದ್, 1895 ಪುಟ 52) ಇದರಲ್ಲಿ ಉಲ್ಲೇಖವಾಗಿರುವ ಧನರಾಶಿ 1813 ನೇ ವರ್ಷದಲ್ಲಿ "ಭಾರತದಲ್ಲಿ ಬ್ರಿಟೀಷ್ ಅಧಿಕಾರವಿರುವ ಪ್ರದೇಶಗಳ ನಿವಾಸಿಗಳಿಗೆ ಇಂಗ್ಲಿಷ್ ಭಾಷೆಯನ್ನು ಪರಿಚಯಿಸಲು ಮತ್ತು ವಿಜ್ಞಾನಗಳ ಜ್ಞಾನವನ್ನು ಉತ್ತೇಜಿಸಲು" ಅನುಮೋದಿತವಾಗಿದ್ದ 100,000 ಪೌಂಡ್‌ಗೆ ಸಂಬಂಧಿಸಿತ್ತು. (ಮೆಹಮೂದ್ 1895 ಪುಟ. 52) ಈ ಧನರಾಶಿ ಸರ್ಕಾರ ಶಿಕ್ಷಣಕ್ಕೆ ಬೆಂಬಲ ಕೊಡಬೇಕಾದ ತನ್ನ ಜವಾಬ್ದಾರಿಯನ್ನು ಗುರ್ತಿಸಿದುದನ್ನು ಪ್ರತಿನಿಧಿಸಿತು.

ಸ್ವತಂತ್ರಪೂರ್ವ ಭಾರತದಲ್ಲಿ ಆದ ಎರಡನೆಯ ಪ್ರಮುಖ ಬೆಳವಣಿಗೆ ಎಂದರೆ ಸಾಮಾನ್ಯವಾಗಿ ವುಡ್ಸನ ಪರಿಪತ್ರ ಎಂದು ಹೆಸರಾದ 1854ರಲ್ಲಿ ನಿರ್ದೇಶಕರ ಪರಿಷತ್ತಿನ (ಕೌನ್ಸಿಲ್ ಆಫ್ ಡೈರೆಕ್ಟರ್ಸ್) ಶಿಕ್ಷಣ ಪರಿಪತ್ರದ ಪ್ರಕಟಣೆ, 'ಇಡೀ ಭಾರತದ ಜನಸಂಖ್ಯೆ ಶಿಕ್ಷಣವನ್ನು ಸರ್ಕಾರ (ರಾಷ್ಟ್ರ)ದ ಕರ್ತವ್ಯವೆಂದು ಒಪ್ಪಿಕೊಂಡದ್ದು ಪ್ರಾಥಮಿಕವಾದುದಾಗಿತ್ತು (ಮೆಹಬೂದ್ 1895 ಪುಟ 85) ಈ ಪವಿತ್ರ ಶಿಕ್ಷಣ ನೀತಿಯ ಉದ್ದೇಶವನ್ನು ಹೀಗೆ ನಿರೂಪಿಸಿದೆ. "ನಾವು ಭಾರತದಲ್ಲಿ ವಿಸ್ತಾರಗೊಳ್ಳಬೇಕೆಂದು ಬಯಸುವ ಶಿಕ್ಷಣ ಮುಂದುವರಿದ ಯೋಚನೆ ಕಲೆಗಳು, ವಿಜ್ಞಾನ, ತತ್ವಶಾಸ್ತ್ರ, ಸಾಹಿತ್ಯಗಳ ಸಂಕ್ಷಿಪ್ತವಾಗಿ ಹೇಳುವುದಾದರೆ ಯೂರೋಪ್ ದೇಶಗಳ ಜ್ಞಾನವನ್ನು ಪ್ರಚಾರ ಮಾಡುವುದನ್ನು ತನ್ನ ಉದ್ದೇಶವಾಗಿ ಹೊಂದಿರಬೇಕೆಂದು ಒತ್ತುಕೊಟ್ಟು ಘೋಷಿಸುತ್ತೇವೆ". (ನೂರುಲ್ಲ ಮತ್ತು ನಾಯಕ್, 1965 ಪುಟ. 16) ಈ ಶಿಫಾರಸುಗಳು ಇಂದಿನ ವ್ಯವಸ್ಥೆಯಾದ ಶಿಕ್ಷಣ ವಿಶ್ವವಿದ್ಯಾನಿಲಯಗಳೆಂದು ಕರೆಯಬಹುದಾದ ಮೂರು ವಿಶ್ವವಿದ್ಯಾನಿಲಯಗಳ ಆಡಳಿತಾತ್ಮಕ ಸಂರಚನೆಯೊಂದಿಗೆ ಬಾಂಬೆ, ಕಲ್ಕತ್ತ ಮತ್ತು ಮದ್ರಾಸ್ ಈ ಮೂರು ಪ್ರಸಿಡೆನ್ಸಿ ನಗರಗಳಲ್ಲಿ ಸ್ಥಾಪನೆ ಮಾಡುವುದಕ್ಕೆ, ಶಿಕ್ಷಣ ನಿರ್ದೇಶಕರುಗಳು ನೇಮಕ ಶಿಕ್ಷಕ ತರಬೇತಿ ಸಂಸ್ಥೆಗಳ ಆರಂಭ ಸಾಮೂಹಿಕ ಶಿಕ್ಷಣಕ್ಕೆ ಒಂದು ಮೂಲಭೂತ ನೀತಿ ಮುಂತಾದವುಗಳಿಗೆ ದಾರಿ ಮಾಡಿತು.

**ವಸಾಹತು ಅವಧಿಯಲ್ಲಿನ ಇತರ ನೀತಿ ಘೋಷಣೆಗಳು ಹೀಗಿವೆ:**

* ಗವರ್ನರ್ ಇನ್ ಕೌನ್ಸಿಲ್‌ರವರ 1904ರ ನಿರ್ಣಯ "1854ರಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆಯ ಉಗಮವಾದಾಗಿನಿಂದ ಭಾರತದ

Digitised by Bharatavani, CIIL

ಗವರ್ನರ್ ಆದೇಶಗೊಳಿಸಿದ ಭಾರತ ಶಿಕ್ಷಣ ನೀತಿಯ ಬಗೆಗಿನ ಅತ್ಯಂತ ವ್ಯಾಪಕವಾದ ದಾಖಲೆಯಾಗಿತ್ತು." (ಘೋಷ್, 1995, ಪುಟ 119)

* ಭಾರತ ಸರ್ಕಾರದ ಭಾರತೀಯ ಶಿಕ್ಷಣ ನೀತಿ ಬಗ್ಗೆ ನಿರ್ಣಯ "ಶಿಕ್ಷಣದಲ್ಲಿ ಒಂದು ಅಧಿಕಾರಯುತ ಧೈರ್ಯವಾದ ನಿರ್ಣಯವಾಗಿರಲಿಲ್ಲ. ಆದರೆ ಅದು ಹೆಚ್ಚಾಗಿ ಶಿಕ್ಷಣದಲ್ಲಾಗಿದ್ದ ಬದಲಾವಣೆಗಳ ಪುನರಾವಲೋಕನವಾಗಿತ್ತು" (ಘೋಷ್, 1995, ಪುಟ 138)

* ಸಾರ್ಜಂಟ್ ಯೋಜನೆ ಎಂದು ಕರೆಯಲ್ಪಡುವ ಯುದ್ಧೋತ್ತರ (ಎರಡನೆ ವಿಶ್ವ ಮಹಾಯುದ್ಧ) ಶೈಕ್ಷಣಿಕ ಪುನರ್ ರಚನೆಯ ಯೋಜನೆ (1944) "ನಲವತ್ತು ವರ್ಷಗಳಿಗೆ ಕಡಿಮೆ ಅವಧಿಯಲ್ಲಿ ಭಾರತದಲ್ಲಿ ಇಂಗ್ಲೆಂಡಿನಲ್ಲಿ ಈಗಾಗಲೇ ಸಾಧಿಸಿರುವ ಶಿಕ್ಷಣದ ಮಟ್ಟವನ್ನು ಸೃಷ್ಟಿಸುವ ನೀತಿಯ ಉದ್ದೇಶವನ್ನು ಹೊಂದಿತ್ತು" (ನೂರುಲ್ಲ ಮತ್ತು ನಾಯಕ್ 1965 ಪುಟ 364)

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಭಾರತ ಸರ್ಕಾರ ತತ್‌ಕ್ಷಣದಲ್ಲಿ ಶಿಕ್ಷಣದ ಬಗ್ಗೆ ಯಾವುದೇ ಔಪಚಾರಿಕ ಮತ್ತು ವ್ಯಾಪಕವಾದ ನೀತಿ ನಿರೂಪಣೆಯನ್ನು ಮಾಡಲಿಲ್ಲ. ಆದರೂ ಅದು ರಾಷ್ಟ್ರೀಯ ಅಗತ್ಯಗಳನ್ನು ಪೂರೈಸುವಂತೆ ಶೈಕ್ಷಣಿಕ ವ್ಯವಸ್ಥೆಯನ್ನು ಪುನರ್ ರಚಿಸಲು ಅನೇಕ ನೀತಿ ನಿರ್ಣಯಗಳನ್ನು ತೆಗೆದುಕೊಂಡಿತು. ಇವುಗಳಲ್ಲಿ ಅನೇಕ ತೀರ್ಮಾನಗಳು ಸರ್ಕಾರ ಆಗಿಂದಾಗ್ಗೆ ನೇಮಿಸಿದ ಶಿಕ್ಷಣ ಆಯೋಗಗಳ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ (1948) ಮತ್ತು ಸೆಕೆಂಡರಿ ಶಿಕ್ಷಣ ಆಯೋಗ (1953) ಶಿಫಾರಸುಗಳನ್ನು ಅವಲಂಬಿಸಿದ್ದವು. ನೀತಿನಿರ್ಣಯಗಳನ್ನು ತೆಗೆದುಕೊಂಡು, ಪೋಷಿಸುವುದಕ್ಕೆ ಮೊದಲು ಈ ಆಯೋಗಗಳ ಶಿಫಾರಸ್ಸುಗಳನ್ನು ಕೇಂದ್ರೀಯ ಶಿಕ್ಷಣ ಸಲಹಾ ವೇದಿಕೆಗಳಲ್ಲಿ ಚರ್ಚಿಸಲಾಯಿತು. ಈ ನೀತಿ ನಿರ್ಣಯಗಳ ಕೆಲವು ಉದಾಹರಣೆಗಳೆಂದರೆ ಹನ್ನೊಂದು ವರ್ಷಗಳ ವಿವಿಧೋದ್ದೇಶ ಶಾಲಾಶಿಕ್ಷಣದ ಅಂಗೀಕರಣ ಮತ್ತು ತ್ರಿಭಾಷಾ ಸೂತ್ರ.

**ರಾಷ್ಟ್ರೀಯ ಶಿಕ್ಷಣ ನೀತಿ (1968):**

1968ರ ಶಿಕ್ಷಣನೀತಿಯ ಒಂದು ಮುಖ್ಯ ಮಿತಿಯೆಂದರೆ ಸಾಮಾನ್ಯ ನಿರೂಪಣೆ... ಜಾರಿಗೊಳ್ಳುವಿಕೆಯು ನಿರ್ದಿಷ್ಟ ಜವಾಬ್ದಾರಿಗಳು, ನಿರ್ಣಯ ಮತ್ತು ಆಡಳಿತಾತ್ಮಕ ಬೆಂಬಲದೊಂದಿಗೆ, ಜಾರಿಗೊಳಿಸುವಿಕೆಯ ವಿವರವಾದ ತಂತ್ರಗಳನ್ನು ಒಳಗೊಂಡಿರಲಿಲ್ಲ (MHRD 1982, ಪು.2) 1986ರ ಕಾರ್ಯಯೋಜನೆ ಮತ್ತು ಅದರ ಪರಿಷ್ಕೃತ ರೂಪ ಈ ಮಿತಿಯನ್ನು ದೂರ ಮಾಡಿತು.

ರಾಷ್ಟ್ರೀಯ ಶಿಕ್ಷಣ ನೀತಿ (1986) ಒಂದು ವ್ಯಾಪಕ ರೂಪದ ದಾಖಲೆ, ಅದು ಶಿಕ್ಷಣದ ಎಲ್ಲಾ ಹಂತಗಳನ್ನು ಒಳಗೊಂಡಿದೆ. ಅದರ ಪ್ರಕಟಣೆಗೆ ಮೊದಲು ಶಿಕ್ಷಣದ ಅದುವರೆಗಿನ ಬೆಳವಣಿಗೆಗಳ ವ್ಯಾಪಕವಾದ ಪುನರಾವಲೋಕನವನ್ನು ಮತ್ತು ಮೌಲ್ಯಮಾಪನವನ್ನು ಪ್ರಕಟಿಸಲಾಯಿತು (ಶಿಕ್ಷಣ ಮಂತ್ರಾಲಯ, 1985) ಅನೇಕ ರೀತಿಗಳಲ್ಲಿ ಈ ದೃಷ್ಟಿಕೋನ 1986ರ ನೀತಿಯ ಮೂಲ ಲಕ್ಷಣವನ್ನು ನಿರ್ಧರಿಸಿತು. ಸಾಮಾನ್ಯ ನೀತಿಯ ಚೌಕಟ್ಟನ್ನು ಮತ್ತು ಮಾರ್ಗದರ್ಶಿಕೆಗಳಿಗೆ ಬಹುಶಃ ಅಗತ್ಯವಾಗಿರದಿದ್ದ ಜಾರಿಗೊಳಿಸಬೇಕಾಗಬಹುದಾದ ಕಾರ್ಯಕ್ರಮಗಳನ್ನು ಸಲಹೆ ಮಾಡಿತ್ತು. ಕೆಲವು ಉದಾಹರಣೆಗಳು ಹೀಗೆವೆ:

* ಪರಿಶಿಷ್ಟ ಜಾತಿಗಳ ಶಿಕ್ಷಣ ಎಂಬ ಭಾಗದಲ್ಲಿ, "ಶಿಕ್ಷಣದ ಎಲ್ಲಾ ಹಂತಗಳಲ್ಲಿ ಮತ್ತು ಎಲ್ಲಾ ಕ್ಷೇತ್ರಗಳ ಶಿಕ್ಷಣದ ಮಟ್ಟಗಳಲ್ಲಿ, ಮತ್ತು ಅದರ ನಾಲ್ಕು ಆಯಾಮಗಳಲ್ಲಿ ಅಂದರೆ ಗ್ರಾಮೀಣ ಮಹಿಳೆ, ಪುರುಷ, ನಗರದ ಮಹಿಳೆ, ನಗರದ ಪುರುಷ ಈ ಪರಿಶಿಷ್ಟೇತರ ಜಾತಿಗಳ ಜನತೆಯೊಂದಿಗೆ ಈ ವರ್ಗಗಳ ಶಿಕ್ಷಣವನ್ನು ಸಮಾನೀಕರಿಸುವ ಉದ್ದೇಶ ನಿರೂಪಣೆ" ಯೊಂದಿಗೆ ಮೆಟ್ರಿಕ್ ಮೊದಲಿನ ವಿದ್ಯಾರ್ಥಿವೇತನಗಳು ಆ ಸಮುದಾಯಗಳ ಶಿಕ್ಷಕರ ನೇಮಕಾತಿ, ಶಾಲಾ ಕಟ್ಟಡಗಳು ಇರಬೇಕಾದ ಸ್ಥಳಗಳು ಮುಂತಾದವುಗಳೇ ಅಲ್ಲದೆ, ಜಾರಿಗೊಳಿಸಬೇಕಾದ ವಿವಿಧ ಕಾರ್ಯಕ್ರಮಗಳನ್ನು ಪಟ್ಟಿ ಮಾಡುತ್ತದೆ (ಶಿಕ್ಷಣ ಮಂತ್ರಾಲಯ 1985, ಪುಟ 67)

* ವಯಸ್ಕರ ಶಿಕ್ಷಣದ ಭಾಗದಲ್ಲಿ, ಮುಖ್ಯವಾಗಿ 15–35 ವರ್ಷದ ಗುಂಪಿನಲ್ಲಿ ನಿರಕ್ಷರತೆಯನ್ನು ದೂರಮಾಡಲು ನೀತಿ ನಿರ್ದೇಶನಗಳನ್ನು ನೀಡುವುದರ ಜೊತೆಗೆ, ಮುಂದುವರಿದ ಮತ್ತು ಕಾರ್ಮಿಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ, ಗ್ರಂಥಾಲಯಗಳು ಮತ್ತು ಓದುವ ಕೊಠಡಿಗಳಿಗೆ (ರೀಡಿಂಗ್ ರೂಂ) ವ್ಯಾಪಕ ಪ್ರೋತ್ಸಾಹ ನೀಡಿಕೆ, ರೇಡಿಯೋ ಮತ್ತು ಟೆಲಿವಿಷನ್ ಉಪಯೋಗ ಮುಂತಾದವುಗಳನ್ನು ಶಿಫಾರಸು ಮಾಡುತ್ತದೆ.

ನೀತಿ ನಿರೂಪಣೆಯ ಆರಂಭದ ಹಂತಗಳಲ್ಲಿಯೆ ಒಂದು ವಿವರವಾದ ಕಾರ್ಯ ಪ್ರಣಾಳಿಯನ್ನು ಊಹಿಸಿಕೊಳ್ಳಲಾಗಿದೆ. ಈ ನೀತಿ ದಾಖಲೆ ಜಾರಿಗೊಳಿಸಬೇಕಾದ ಕಾರ್ಯಕ್ರಮಗಳ ವಿವರಗಳನ್ನು ಕೊಡುವುದನ್ನು ಕೈಬಿಡಬಹುದಾಗಿತ್ತು. 1992 ಪರಿಷ್ಕೃತವಾದ ಕಾರ್ಯಪ್ರಣಾಳಿ ಹೆಚ್ಚಿನ ಬದಲಾವಣೆಗಳನ್ನೇನು ಒಳಗೊಂಡಿಲ್ಲ. ಜುಲೈ 1991 ರಲ್ಲಿ ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ 'ರಾಷ್ಟ್ರೀಯ ಶಿಕ್ಷಣನೀತಿ 1986) ಯಲ್ಲಿ ಸ್ವಲ್ಪಮಟ್ಟಿನ ಪರಿಷ್ಕರಣೆ ಆಗಬೇಕಾಗಿದೆಯಾದರೂ, ಅದರ ಕಾರ್ಯ ಪ್ರಣಾಳಿಯಲ್ಲಿ ಹೆಚ್ಚಿನ ಪರಿಷ್ಕರಣೆ ಅಗತ್ಯವಿದೆ' ಎಂದು ತೀರ್ಮಾನಿಸಿ ಶಿಫಾರಸ್ಸು ಮಾಡಿದ್ದ ಬದಲಾವಣೆಗಳನ್ನು 1992ರ ಕಾರ್ಯಪ್ರಣಾಳಿಕೆ ಬಹುಮಟ್ಟಿಗೆ ಒಳಗೊಂಡಿದೆ (MHRD, 1992 ಪುಟ xi)

**ಸಂವಿಧಾನಿಕ ಚೌಕಟ್ಟು:**

ರಾಷ್ಟ್ರೀಯ ಮಟ್ಟದಲ್ಲಿ ಅಥವಾ ರಾಜ್ಯಗಳ ಮಟ್ಟದಲ್ಲಿ ನಿರೂಪಿಸುವ ಶೈಕ್ಷಣಿಕ ನೀತಿ ಭಾರತದ ಸಂವಿಧಾನದಲ್ಲಿನ ಪ್ರವಧಾನಗಳ ಚೌಕಟ್ಟಿನೊಳಗೇ ಇರಬೇಕು. ಆಡಳಿತದ ಪ್ರಾವಿಧಾನಗಳ ಅದರಲ್ಲೂ ಶಿಕ್ಷಣಕ್ಕೆ ಸರಿಬಂಧಿಸಿದ ಪ್ರಾವಧಾನಗಳು ಯಾವ ಮಿತಿಯೊಳಗೆ ಶಿಕ್ಷಣದ ನೀತಿಗಳ ನಿರೂಪಿತಗೊಳ್ಳಬೇಕು.

Digitised by Bharatavani, CIIL

ಮತ್ತು ವಿಸ್ತೃತಗೊಳ್ಳಬೇಕು ಎನ್ನುವುದಕ್ಕೆ ಮಿತಿಗಳನ್ನು ಒಡ್ಡುತ್ತವೆ. ಶಿಕ್ಷಣದ ನೀತಿನಿರೂಪಣೆಗೆ ನಿಹಿತಾರ್ಥಗಳುಳ್ಳ ಸಂವಿಧಾನದ ಕೆಲವು ಮುಖ್ಯ ಪರಿಣಾಮಗಳು ಹೀಗಿವೆ:

* ಸಂವಿಧಾನದ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಿದ್ದರೂ, ಕೇಂದ್ರ ಸರ್ಕಾರ ಇದುವರೆಗೆ ಯಾವ ಕಾಯ್ದೆಯನ್ನು ಜಾರಿಗೊಳಿಸದೇ ಇರುವುದರಿಂದ, ರಾಜ್ಯಗಳ ಅಧಿಕಾರವನ್ನು ಮಿತಿಗೊಳಿಸುವ ಕೆಲವು ಸಂವೈಧಾನಿಕ ಪ್ರವಧಾನಗಳಿಗೆ ಒಳಪಟ್ಟಂತೆ ಶಿಕ್ಷಣ ಇಂದೂ ಸಹ ರಾಜ್ಯಗಳ ವಿಷಯವಾಗಿಯೇ ಮುಂದುವರಿಯುತ್ತಿದೆ (ಧರ್, 1974, ಪು. 74–7)

* ರಾಜ್ಯನೀತಿಯ ನಿರ್ದೇಶನಾತ್ಮಕ ತತ್ವಗಳ ಅನುಚ್ಛೇದ 45. 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಮುಕ್ತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವುದನ್ನು ರಾಜ್ಯಗಳ ಕರ್ತವ್ಯವನ್ನಾಗಿ ಮಾಡಿದೆ ಆದ್ದರಿಂದ ಯಾವುದೇ ಶಿಕ್ಷಣನೀತಿ ಗುರಿ ಸಾಧನೆಗೆ ಆದ್ಯತೆ ಸಂಬಂಧಿತ ಪ್ರಯತ್ನಗಳನ್ನು ತಿಳಿಸಬೇಕು.

  ಭಾರತದ ಸರ್ವೋಚ್ಚ ನ್ಯಾಯಾಲಯ ಈಗಾಗಲೇ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಘೋಷಿಸಿದೆ.

* ಅನುಚ್ಛೇದ 29 ಸಮಾಜದ ಎಲ್ಲಾ ವರ್ಗಗಳಿಗೂ ತಮ್ಮ ಭಾಷೆ, ಲಿಪಿ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಖಚಿತಗೊಳಿಸಿದೆ. ಯಾವುದೇ ನೀತಿ ಈ ಸಂರಕ್ಷಣೆಯನ್ನು ಪ್ರತಿಕೂಲವಾಗಿ ಪ್ರಭಾವಗೊಳಿಸಬಾರದು.

* ಅನುಚ್ಛೇದ 30 ಧರ್ಮ ಮತ್ತು ಭಾಷೆಯ ಆಧಾರದ ಮೇಲಿರುವ ಅಲ್ಪಸಂಖ್ಯಾತರಿಗೆ ತಮ್ಮ ಆಯ್ಕೆಗೆ ಅನುಗುಣವಾಗಿ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿಕೊಳ್ಳುವ ಮತ್ತು ಆಡಳಿತ ನಡೆಸಿಕೊಳ್ಳುವ ಅವಕಾಶವನ್ನು ನೀಡುತ್ತದೆ ಮತ್ತು ಅಲ್ಪಸಂಖ್ಯಾತರು ಸ್ಥಾಪಿಸಿಕೊಳ್ಳುವ ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನದ ಸಹಾಯ ನೀಡುವಲ್ಲಿ ಯಾವುದೇ ರೀತಿಯ ಬೇಧಭಾವ ಮಾಡದಂತೆ ರಾಜ್ಯಗಳನ್ನು ತಡೆಯುತ್ತದೆ.

* ಅನುಚ್ಛೇದ 46 ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಮತ್ತು ಕೆಲಸಗಳನ್ನು ಕಾಯ್ದಿರಿಸುವುದರ ಮೂಲಕ ಸಂರಕ್ಷಣಾತ್ಮಕ ವಿಭೇಧೀಕರಣಕ್ಕೆ ಅವಕಾಶ ಕಲ್ಪಿಸಿದೆ ನಿರೂಪಣೆ ಮಾಡುವ ಯಾವುದೇ ಶೈಕ್ಷಣಿಕ ನೀತಿ, ಉದಾಹರಣೆಗೆ, ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಮತ್ತು ಉದ್ಯೋಗಕ್ಕೆ ಅರ್ಹತೆ ಒಂದನ್ನೇ ಆಧಾರವಾಗಿ ಪರಿಗಣಿಸುವಂತಿಲ್ಲ.

* ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು (1992) ಸ್ಥಳೀಯ ಸಂಸ್ಥೆಗಳ ಅಧಿಕಾರ, ಸಂಪನ್ಮೂಲಗಳ ಮತ್ತು ಕಾರ್ಯಗಳನ್ನು ವಿಕೇಂದ್ರೀಕರಣಗೊಳಿಸಿವೆ. ಒಂದು ಶೈಕ್ಷಣಿಕ ನೀತಿ ಈ ಅವಕಾಶವನ್ನು ಹೇಗೆ ಪ್ರಭಾವಗೊಳಿಸುತ್ತದೆ ಎಂಬುದನ್ನು ಸೂಚಿಸಬೇಕಾಗುತ್ತದೆ.

* ಪಟ್ಟಿಗಳು I, II ಮತ್ತುIII ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ವ್ಯಾಪ್ತಿಯನ್ನು ವಿವರಿಸುತ್ತವೆ. ಇವುಗಳಲ್ಲಿ ಕೆಲವು ಅಂಶಗಳು ತಮಗೆ ಸೂಕ್ತವೆನಿಸುವ ಶೈಕ್ಷಣಿಕ ನೀತಿಗಳನ್ನು ನಿರೂಪಿಸುವಲ್ಲಿ ರಾಜ್ಯಗಳ ಅಧಿಕಾರಕ್ಕೆ ಮಿತಿಗಳನ್ನು ಒಡ್ಡುತ್ತವೆ ಎನಿಸುತ್ತದೆ.

**ಸಾಂಸ್ಥಿಕ ಚೌಕಟ್ಟು:**

ಶಿಕ್ಷಣದ ನೀತಿ ನಿರೂಪಣೆಯ ಆರಂಭಿಕ ಪ್ರಯತ್ನ ಸಾಮಾನ್ಯವಾಗಿ ಮಾನವ ಸಂಪನ್ಮೂಲ ಮಂತ್ರಾಲಯದಿಂದ ಆರಂಭವಾಗುತ್ತದೆ. ರಾಷ್ಟ್ರೀಯ ನೀತಿ ನಿರೂಪಣೆಯಲ್ಲಿ ರಾಜ್ಯಗಳಿಗೆ ಬಹು ಮಹತ್ವಪೂರ್ಣ ಪಾತ್ರವಿಲ್ಲವೆನ್ನಿಸಿದರೂ ರಾಜ್ಯಗಳಿಗೆ ತಮ್ಮ ಅಧಿಕಾರ ನಡೆಸಲು ತಮ್ಮದೇ ಆದ ನೀತಿ ಚೌಕಟ್ಟು ಹೊಂದಿಲ್ಲ ಎಂದು ಅರ್ಥವಲ್ಲ. ಶೈಕ್ಷಣಿಕ ಚಟುವಟಿಕೆಗಳ ಸ್ವರೂಪವನ್ನು ನಿರ್ಣಯಿಸುವ ನೀತಿ ಸಂಬಂಧಿತ ಹಾಗೂ ನಿಯಂತ್ರಣ ತಂತ್ರಜ್ಞತೆಗಳು ರಾಜ್ಯಗಳ ಮಟ್ಟದಲ್ಲಿಯೂ ಇರುತ್ತವೆ. ಇಂಥ ಅನೇಕ ಅಂಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಅವುಗಳ ನಿಯಮಗಳು ಮತ್ತು ನಿಯಂತ್ರಣ, ಪ್ರವೇಶ ನಿರ್ಣಾಯಕಗಳು ಮತ್ತು ಸೀಟುಗಳನ್ನು ಕಾಯ್ದಿರಿಸುವಿಕೆ, ಸಂಸ್ಥೆಗಳಿಗೆ ಅನುದಾನ ಸಹಾಯದ ತತ್ವಗಳು/ನಿಯಮಗಳು, ಭಾಷಾ ಬೋಧನೆಗೆ ಸಂಬಂಧಿಸಿದ ನೀತಿ ಶುಲ್ಕ ಸಂರಚನೆ ಇತ್ಯಾದಿಗಳಿಗೆ ಸಂಬಂಧಿಸಿದ ನೀತಿ ನಿರೂಪಣೆಗಳು ಕೆಲವು ಉದಾಹರಣೆಗಳಾಗಿವೆ. ಶಿಕ್ಷಣ ಮುಖ್ಯವಾಗಿ ರಾಜ್ಯಗಳಿಗೆ ಸಂಬಂಧಿಸಿದ ವಿಷಯವಾಗಿರುವುದರಿಂದ, ರಾಷ್ಟ್ರೀಯ ಶೈಕ್ಷಣಿಕ ನೀತಿಗಳನ್ನು ನಿರೂಪಿಸುವಾಗ ರಾಜ್ಯಗಳ ಒಮ್ಮತವನ್ನು ಪಡೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇತರ ವಿಷಯಗಳ ಜೊತೆಗೆ ಈ ಕೆಳಗಿನವುಗಳು ಕೆಲವು ಉದಾಹರಣೆಗಳಾಗಿವೆ :

* ಕೇಂದ್ರ ಮಂತ್ರಿಗಳು ಅಧ್ಯಕ್ಷರಾಗಿರುವ ಮತ್ತು ಎಲ್ಲಾ ರಾಜ್ಯಗಳ ಶಿಕ್ಷಣ ಮಂತ್ರಿಗಳನ್ನು ಒಳಗೊಂಡ ರಾಜ್ಯ ಶಿಕ್ಷಣ ಮಂತ್ರಿಗಳ ಸಮ್ಮೇಳನ.

* ರಾಜ್ಯಗಳ ಪ್ರತಿನಿಧಿಗಳು, ರಾಷ್ಟ್ರೀಯ ಸಂಸ್ಥೆಗಳ ಮತ್ತು ಇತರ ವಿಭಾಗಗಳ ಪ್ರತಿನಿಧಿಗಳನ್ನು ಒಳಗೊಂಡಿರುವ ಕೇಂದ್ರ ಶಿಕ್ಷಣ ಸಲಹಾ ಮಂಡಳಿ (CABE)

* ಕೇಂದ್ರ ಶಿಕ್ಷಣ ಕಾರ್ಯದರ್ಶಿ ಅಧ್ಯಕ್ಷರಾಗಿರುವ ಮತ್ತು ಎಲ್ಲಾ ರಾಜ್ಯಗಳ ಶಿಕ್ಷಣ ಕಾರ್ಯದರ್ಶಿಗಳನ್ನು ಸದಸ್ಯರಾಗಿ ಹೊಂದಿರುವ ರಾಜ್ಯ ಶಿಕ್ಷಣ ಕಾರ್ಯದರ್ಶಿಗಳ ಸಮ್ಮೇಳನ ಮಾನವ ಸಂಪನ್ಮೂಲ ವಿಕಾಸ ವಿಶ್ವವಿದ್ಯಾಲಯ ಅನುದಾನ ಆಯೋಗದ (UGC) ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳನ್ನು ಪ್ರತಿನಿಧಿಸುವ ಕುಲಪತಿಗಳ ಸಮ್ಮೇಳನ (ಭಾರತೀಯ ವಿಶ್ವವಿದ್ಯಾನಿಲಯ ಸಂಘ)

  ಹೆಚ್ಚು ವಿಶಾಲ ಆಧಾರಿತ ಪ್ರತಿನಿಧಿತ್ವವನ್ನು ಹೊಂದಿರುವ

Digitised by Bharatavani, CIIL

ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿಯ (CABE) ಕಾರ್ಯಚಟುವಟಿಕೆಗಳು ಶೈಕ್ಷಣಿಕ ನೀತಿಗಳ ಬಗ್ಗೆ ರಾಜಕೀಯ ಕ್ರಮವಾದ ವೃತ್ತಾತ್ಮಕವಾದ, ಮತ್ತು ಸಾರ್ವಜನಿಕವಾದ ದೃಷ್ಟಿಕೋನಗಳನ್ನು ಪ್ರತಿಬಿಂಬಿಸುತ್ತದೆ. ಶಿಕ್ಷಣ ಸಚಿವರ, ಕಾರ್ಯದರ್ಶಿಗಳ ಸಮ್ಮೇಳನಗಳು ಮತ್ತು ಮಂಡಳಿಗಳು ಸಾಮಾನ್ಯವಾಗಿ ನೀತಿಗಳನ್ನು ಮತ್ತು ಅವುಗಳನ್ನು ಜಾರಿಗೊಳಿಸುವ ತಂತ್ರಗಳನ್ನು ಪ್ರತಿಬಿಂಬಿಸುವ ಸಮಿತಿಗಳನ್ನು ರಚಿಸುತ್ತವೆ. ಉದಾಹರಣೆಗೆ, ಸಂವಿಧಾನದ 73 ಮತ್ತು 75 ತಿದ್ದುಪಡಿಗಳನ್ನು (CABE) ರಚಿಸಿದ್ದ ಒಂದು ಸಮಿತಿ ರೂಪಿಸಿತು. ಮತ್ತು ಸಂಪನ್ಮೂಲಗಳ ವಿಕೇಂದ್ರೀಕಣ ಪ್ರಕ್ರಿಯ ಮಟ್ಟದಲ್ಲಿ ಜನ ಪ್ರತಿನಿಧಿಗಳ ಅಧಿಕಾರ, ಮತ್ತು ಕಾರ್ಯಗಳ ಸ್ವರೂಪ, ಸಂರಚನೆ ಮತ್ತು ಕ್ರಮಗಳನ್ನು ರೂಪಿಸಿತು. (CABE ಸಮಿತಿ)

ಶಿಕ್ಷಣನೀತಿ ನಿರೂಪಣೆ ಕೊಡುಗೆ ನೀಡಿದ ರಾಷ್ಟ್ರೀಯ ಮಟ್ಟದ ಸಂಸ್ಥೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ (NCERT), ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆ (NIEPA) ಈಗ ಶೈಕ್ಷಣಿಕ ಯೋಜನೆ ಮತ್ತು ಆಡಳಿತದ ರಾಷ್ಟ್ರೀಯ ವಿಶ್ವವಿದ್ಯಾನಿಲಯ (National University of Education Planning and Administration-NUEPA), ವಿಶ್ವವಿದ್ಯಾನಿಲಯ ಅನುದಾನ ಆಯೋಗ (UGC) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (AICTE) ಅನ್ವಯಿಕ ಮಾನವಶಕ್ತಿ ಸಂಶೋಧನ ಸಂಸ್ಥೆ (AAMR) ಮುಂತಾದವು ಸೇರಿವೆ. ಈ ಸಂಸ್ಥೆಗಳ ಜೊತೆಗೆ ಬೇರೆ ಅನೇಕ ಸಂಸ್ಥೆಗಳು ಶಿಕ್ಷಣನೀತಿ ನಿರೂಪಣೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿವೆ. ಉದಾಹರಣೆಗೆ, ಶೈಕ್ಷಣಿಕ ವ್ಯವಸ್ಥೆಯ ಮತ್ತು ವಿವಿಧ ಶೈಕ್ಷಣಿಕ ಬೆಳವಣಗೆಗಳ ಮೌಲ್ಯಮಾಪನ ಮಾಡುವುದರ ಜೊತೆಗೆ ಒಂದು ನೀತಿ ಚೌಕಟ್ಟನ್ನು ಸಲಹೆ ಮಾಡಿದ 'ಶಿಕ್ಷಣದ ಸವಾಲು' (Challenge of Education) ಎನ್ನುವ ದಾಖಲೆಯ ರಚನೆ ಮೇಲೆ ಹೇಳಿದ ಕೆಲವು ಸಂಸ್ಥೆಗಳ ಸಹಕಾರಾತ್ಮಕ ಪ್ರಯತ್ನದ ಫಲವಾಗಿತ್ತು. ಯೋಜನಾ ಆಯೋಗ (Planning Commission) ತನ್ನ ವ್ಯಾಪಕವಾದ ಮತ್ತು ವಿಭಾಗೀಯವಾದ ಶಿಫಾರಸ್ಸುಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಕಾಸಾತ್ಮಕ ಗುರಿಗಳು ಮತ್ತು ತಂತ್ರಗಳಿಗೆ ಸಂಬಂಧಿಸಿದಂತೆ ರಾಜ್ಯಮಟ್ಟದ ನೀತಿನಿರೂಪಣೆಗೆ ಮುಖ್ಯವಾದ ಸೂಕ್ತ ನಿಯಮಗಳನ್ನು ನಿರೂಪಿಸುತ್ತದೆ. ಪಂಚವಾರ್ಷಿಕ ಯೋಜನಾ ದಾಖಲೆಗಳು ಕೆಲವು ವೇಳೆ ಶಿಕ್ಷಣದಲ್ಲಿ ಆರಂಭಿಕ ನೀತಿಗಳನ್ನು ನಿರೂಪಿಸಿವೆ. ಮೂರನೇ ಪಂಚವಾರ್ಷಿಕ ಯೋಜನೆ ಉನ್ನತ ಶಿಕ್ಷಣಕ್ಕೆ ಪ್ರವೇಶ ಆಯ್ಕೆಯಿಂದಿರಬೇಕೆಂದು ಮೂಡಿದ್ದ ಶಿಫಾರಸ್ಸು ಇದಕ್ಕೊಂದು ಉದಾಹರಣೆಯಾಗಿದೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರೀಯ ಮಂತ್ರಿಗಳು ಸದಸ್ಯರಾಗಿರುವ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ ಯೋಜನೆ ಉಪಕ್ರಮಗಳು, ತಂತ್ರಗಳು ಮತ್ತು ಬಂಡವಾಳ ಹೂಡಿಕೆಯ ಪ್ರಮಾಣವನ್ನು ಅನುಮೋದಿಸಬೇಕಾಗುತ್ತದೆ. ಪರಿಷತ್ತಿನ ಈ ಚಟುವಟಿಕೆಯಲ್ಲಿ ಶಿಕ್ಷಣವೂ ಸ್ಥಾನ ಪಡೆದಿದೆ.

ಭಾರತದಲ್ಲಿ ಶೈಕ್ಷಣಿಕ ನೀತಿ ನಿರೂಪಣೆ ಕೆಲವು ಕೊರತೆಗಳಿಂದಾಗಿ ಸೊರಗುತ್ತಿದೆ ಎಂದು ತೋರುತ್ತದೆ. ಮೊದಲನೆಯದಾಗಿ, ಭವಿಷ್ಯದ ಮತ್ತು ಸಾಮಾಜಿಕ ವ್ಯವಸ್ಥೆಯ ಸವಾಲುಗಳನ್ನು ಪ್ರಭಾವಯುತವಾಗಿ ಎದುರಿಸಲು ಸಹಾಯ ಮಾಡಲು ಅಗತ್ಯವಾಗಿ ಬೆಳೆಸಬೇಕಾದ ಮಾನವ ದಕ್ಷತೆಗಳನ್ನು ಪ್ರೋತ್ಸಾಹಿಸಲು ಬೇಕಾದ ಶಿಕ್ಷಣದ ಒಂದು ದೃಷ್ಟಿಕೋನ ಇದುವರೆಗೂ ಲಭ್ಯವಾಗಿಲ್ಲ. ಶಿಕ್ಷಣದ ಭವಿಷ್ಯವನ್ನು ಪೂರ್ವಾನುಮಾನ ಮಾಡಲು ತೀವ್ರ ಪ್ರಯತ್ನಗಳನ್ನು ಭಾರತದಲ್ಲಿ ಇದುವರೆಗೂ ಮಾಡಲಾಗಿಲ್ಲ. ಎರಡನೆಯದಾಗಿ, ಶೈಕ್ಷಣಿಕ ವಿಕಾಸಕ್ಕೆ ನೀತಿ ನಿರೂಪಣೆ ಮಾಡಲು ಮತ್ತು ಯೋಜನೆಯನ್ನು ಮಾಡಲು ಅಗತ್ಯವಾದ ಮಾಹಿತಿಗಳ ಆಧಾರ ಇಂದೂ ದುರ್ಬಲವಾದುದಾಗಿದೆ. ಸಾಮಾನ್ಯವಾಗಿ ಉಂಟಾಗುವ ವಿಳಂಬಗಳು ಮತ್ತು ತಪ್ಪುಗಳ ಜೊತೆಗೆ, ಅರ್ಥಪೂರ್ಣ ನೀತಿ ನಿರೂಪಣೆಗೆ ಸಂಬಂಧಿಸಿದ ಸಂಶೋಧನೆ ಕಾರ್ಯ ಶಿಕ್ಷಣ ಸಂಶೋಧಕರ ಚಟುವಟಿಕೆಗಳಿಗೆ ಆದ್ಯತೆಯ ಕ್ಷೇತ್ರವಾಗಿಲ್ಲ. ಪ್ರಾಯೋಜಿತ ಸಂಶೋಧನೆಯಲ್ಲೂ ಇದಕ್ಕೆ ಆದ್ಯತೆ ನೀಡಿಲ್ಲ. ಮೂರನೆಯದಾಗಿ, ರಾಷ್ಟ್ರಮಟ್ಟದ ನೀತಿನಿರೂಪಣೆಯಲ್ಲಿ ರಾಜ್ಯಗಳ ಸಹಭಾಗಿತ್ವ ನಿಯಮಿತವಾಗಿಯೂ ಇಲ್ಲ ಮತ್ತು ಅರ್ಥಪೂರ್ಣವಾಗಿಯೂ ಇಲ್ಲ. ಹೆಚ್ಚೆಂದರೆ, ನೀತಿಗಳ ಅನುಮೋದನೆಯ ಹಂತದಲ್ಲಿ ರಾಜ್ಯಗಳ ಸಹಭಾಗಿತ್ವವನ್ನು ಪಡೆಯಲಾಗುತ್ತದೆ. ನಾಲ್ಕನೆಯದಾಗಿ, ನೀತಿ ನಿರೂಪಣೆ ಮುಖ್ಯವಾಗಿ ಅಧಿಕಾರಶಾಹಿ ಚಟುವಟಿಕೆಯಾಗಿದ್ದು, ಇದರಲ್ಲಿ ಶೈಕ್ಷಣಿಕ ಸಂಸ್ಥೆಗಳು ಮತ್ತು ವೃತ್ತಿಪರ ವ್ಯಕ್ತಿಗಳ ಪಾತ್ರ ಹೆಚ್ಚಾಗಿ ಅಧೀನ ಸ್ವರೂಪದದ್ದಾಗುತ್ತದೆ. ನೀತಿ ನಿರೂಪಕರ ನಿಲುವು ಸಾಮಾನ್ಯ ನಿಲುವು (Generalised Orientation) ಆಗಿರುವುದರಿಂದ ನೀತಿಗಳ ಸ್ವರೂಪ ಮತ್ತು ಲಕ್ಷಣಗಳನ್ನು ನಿರ್ಧರಿಸಬೇಕಾದ ವೃತ್ತ್ಯಾತ್ಮಕ ವಿಶ್ಲೇಷಣೆ, ಮತ್ತು ಮೌಲ್ಯಮಾಪನ ಪರ್ಯಾಯಗಳು ಈ ನೀತಿ ನಿರೂಪಣೆಗಳಲ್ಲಿ ದುರ್ಬಲವಾಗಿರುತ್ತವೆ ಅಥವಾ ಇರುವುದೇ ಇಲ್ಲ ಐದನೆಯದಾಗಿ, ಈ ನೀತಿ ದಾಖಲೆಗಳು ನೀತಿಗಳಿಗೂ ಮತ್ತು ಕಾರ್ಯಕ್ರಮಗಳಿಗೂ ನಡುವೆ ವ್ಯತ್ಯಾಸ ಕಲ್ಪಿಸುವುದರಲ್ಲಿ ವಿಫಲವಾಗಿರುವುದರ ಪರಿಣಾಮವಾಗಿ ನೀತಿ ಸಂಬಂಧಿ ವಿವಾದಾಂಶಗಳ ಬಗ್ಗೆ ಗಮನ ಕೇಂದ್ರೀತ್ವದ ಕೊರತೆ ಕಂಡುಬರುತ್ತದೆ. ಕಡೆಯದಾಗಿ ರಾಜಕೀಯ ಪಕ್ಷಗಳ ಮತ್ತು ಅವುಗಳ ಪ್ರಣಾಳಿಕೆಗಳ ದೃಷ್ಟಿಯಿಂದ ಶಿಕ್ಷಣ ಅಷ್ಟೇನು ಮುಖ್ಯವಲ್ಲದ ವಿಷಯವಾಗಿರುವುದರಿಂದ ಶೈಕ್ಷಣಿಕ ವಿಕಾಸಕ್ಕೆ ಅಗತ್ಯವಾಗಿ ಬೇಕಾದ ಪರ್ಯಾಯ ಉಪಕ್ರಮಗಳ ಪರಿಗಣನೆ ತೀವ್ರ ಸ್ವರೂಪದ್ದಾಗಿಲ್ಲ ಮತ್ತು ಅರ್ಥಪೂರ್ಣವಾಗಿಲ್ಲ.

**ಮೂಲ: ಟಿ.ಎನ್. ಧರ್**

**ಅನು: ಪ್ರೊ. ಮಂಜುನಾಥಯ್ಯ ಬಿ.ಎನ್**

Digitised by Bharatavani, CIIL

## ಶಿಕ್ಷಣದಲ್ಲಿ ಬೊಂಬೆಯಾಟ

**ಹಿನ್ನೆಲೆ:** ಸಂಸ್ಕೃತಿಯ ಪ್ರಾರಂಭದಿಂದಲೂ ಸೂತ್ರದ ಗೊಂಬೆಗಳು ಒಂದಲ್ಲ ಒಂದು ರೂಪದಲ್ಲಿ ಅಸ್ತಿತ್ವದಲ್ಲಿರುತ್ತಾ ಬಂದಿವೆ. ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದಿರುವ ಕೈಗೊಂಬೆಗಳ ಹಲವು ಪ್ರಾಚೀನ ರೂಪಗಳು ಇಂದು ಹಲವು ಏಷ್ಯ ಮತ್ತು ಯುರೋಪು ದೇಶಗಳ ಸಾಂಸ್ಕೃತಿಕ ಪರಂಪರೆಯ ಭಾಗವಾಗಿದೆ. ಮೂರು ಆಯಾಮವುಳ್ಳ ಕೈಗೊಂಬೆಗಳ ಬೆಳವಣಿಗೆಯ ನಿರ್ದಿಷ್ಟ ಕಾಲಾನುಕ್ರಮ ತಿಳಿದಿಲ್ಲವಾದರೂ ಇಂದಿನ ನಕ್ಷತ್ರದ ಗೊಂಬೆಗಳು ಹಳೆಯ ಸೂತ್ರದ ಗೊಂಬೆಗಳ ರೂಪದಿಂದ ಉದಯಿಸಿವೆ. ಸಹಸ್ರಾರು ವರ್ಷಗಳಿಂದ ಪ್ರೇಕ್ಷಕರನ್ನು ನಗುವಂತೆ ಮಾಡುತ್ತಲೇ ಬಂದಿರುವುದು ಕೈಗೊಂಬೆಗಳು ಸರ್ವರಿಗೂ ಇಷ್ಟವಾಗಿರುವುದಕ್ಕೆ ಪ್ರಮಾಣದಂತಿದೆ. ಸಾರ್ವಜನಿಕ ಶಿಕ್ಷಣಕ್ಕಿಂತ ಮೊದಲು ಜನರಿಗೆ ಬೋಧಿಸಲು ಹಾಗೂ ಜನರ ಸಾಮಾಜಿಕ ಮತ್ತು ರಾಜಕೀಯ ಒಲವಿನ ಮೇಲೆ ಪ್ರಕಾಶ ಬೀರಲು ಸೂತ್ರದ ಗೊಂಬೆಗಳನ್ನು ಉಪಯೋಗಿಸಲಾಗಿದೆ. ಮಾನವೀಯ ಮತ್ತು ಸಾಮಾಜಿಕ ಸದ್ಗುಣಗಳು ರಸ್ತೆ ಸುರಕ್ಷಣೆ, ಆರೋಗ್ಯದ ಅಪಾಯಗಳು ಇತ್ಯಾದಿ ವಿಷಯಗಳನ್ನು ಒಳಗೊಂಡಂತೆ ಸೂತ್ರದ ಗೊಂಬೆಗಳನ್ನು ಒಂದು ಪ್ರಬಲ ಶೈಕ್ಷಣಿಕ ಶಕ್ತಿಯಾಗಿ ಪ್ರಾಚೀನ ಕಾಲದಿಂದ ಬಳಸಿಕೊಳ್ಳಲಾಗಿದೆ. ದುರದೃಷ್ಟವಶಾತ್ ಇಂದು ಪ್ರಾಚೀನ ಬೊಂಬೆಯಾಟದ ಕೆಲವೇ ಕೆಲವು ಕಲಾಕೃತಿಗಳು (Artifacts) ಉಳಿದುಕೊಂಡಿವೆ.

ಭಾರತದಲ್ಲಿನ ಬೊಂಬೆಯಾಟದ ಸಂಪ್ರದಾಯ 2000 ವರ್ಷ ಹಳೆಯದಾಗಿದ್ದು ತನ್ನದೇ ಆದ ಉತ್ಕೃಷ್ಟ ಪ್ರದರ್ಶನ ಶೈಲಿಯನ್ನು ಹೊಂದಿದೆ. "ರಾಜಾಸ್ಥಾನ ಶೈಲಿ"ಯು ಚಕ್ರವರ್ತಿ ವಿಕ್ರಮಾದಿತ್ಯನ ಕಾಲದಿಂದ ಅಸ್ತಿತ್ವದಲ್ಲಿದ್ದು ಅದು ಮನರಂಜನೆಯ ಸ್ರೋತವಾಗಿತ್ತು. ವಿವಿಧ ಸೂಘಗಳು, ಶೈಲಿಗಳು ಮತ್ತು ತಂತ್ರಗಳನ್ನೊಳಗೊಂಡಿರುವ ಸಾಂಪ್ರದಾಯಿಕ ಬೊಂಬೆಯಾಟವನ್ನು ಭಾರತದಲ್ಲಿ ಮಕ್ಕಳ ಬೋಧನೆಯಲ್ಲಿ ಹೆಚ್ಚುಹೆಚ್ಚಾಗಿ ಬಳಸಲಾಗುತ್ತಿದೆ. ಸಾಂಪ್ರದಾಯಿಕ ಸೂತ್ರದ ಗೊಂಬೆಯಾಟವು ಮನರಂಜನೆಯ ಶ್ರೀಮಂತ ಸ್ರೋತ ಮಾತ್ರವಾಗಿರದೆ ಜೀವನದ ಎಲ್ಲಾ ಮುಖಗಳಲ್ಲೂ ಶಿಕ್ಷಣವನ್ನೀಯುವ ಉತ್ತರದಾಯಿತ್ವವನ್ನು ಹೊಂದಿದೆ. ಸರ್ಕಾರ ಮತ್ತು ಸ್ವಯಂಪ್ರೇರಿತ ಸಂಘಗಳು ಸೂತ್ರದ ಗೊಂಬೆಯಾಟದ ಕಲೆಯಲ್ಲಿ ಹಲವು ಪ್ರಯೋಗಗಳನ್ನು ಕೈಗೊಂಡಿವೆ. ಅದೇ ಸಮಯದಲ್ಲಿ, ಮಕ್ಕಳಿಗಾಗಿ ಸೂತ್ರದ ಗೊಂಬೆಯಾಟದಿಂದ ತೆಗೆದುಕೊಳ್ಳಲಾದ ಕೆಲವು ನವೀನ ತಂತ್ರಗಳ ಅನ್ವಯಿಕತೆಯ ಸಾಧ್ಯತೆಗಳನ್ನು ಅನ್ವೇಷಿಸಲಾಗುತ್ತಿದೆ.

**ಸೂತ್ರದ ಗೊಂಬೆಗಳ ಪ್ರಕಾರಗಳು ಮತ್ತು ಅವುಗಳ ಪರಿಚಾಲನೆ**(Manipulation): ಮುಖ್ಯವಾಗಿ ನಾಲ್ಕು ಪ್ರಸಿದ್ಧವಾದ ಸೂತ್ರದ ಗೊಂಬೆಗಳ ಪ್ರಕಾರಗಳಿವೆ– ದಂಡ(rod), ಕೈಚೀಲ(Glove), ನೆರಳು(Shadow)ಮತ್ತು ದಾರ(String)ದ ಸೂತ್ರದ ಗೊಂಬೆಗಳು ಸುತ್ತಲ ಪರಿಸರದಲ್ಲಿ ಸುಲಭವಾಗಿ ಲಭ್ಯವಿರುವ ವಿವಿಧ ಪದಾರ್ಥಗಳಿಂದ ಕೈಗೊಂಬೆಗಳನ್ನು ಸಿದ್ಧಪಡಿಸಲಾಗುತ್ತದೆ. ಇದೇ ರೀತಿ ಶೈಕ್ಷಣಿಕ ಕೈಗೊಂಬೆಗಳಾ ಪರಿಚಾಲನಾ ತಂತ್ರಗಳು ಹಾಗೂ ಅವುಗಳ ಪರಿಚಾಲನೆಗೆ ಉಪಯೋಗಿಸುವ ಪದಾರ್ಥಗಳು ವೈವಿಧ್ಯಮಯವಾಗಿರುತ್ತವೆ. "ಮೊಪೆಟ್"(Moppet)ಗಳೆಂಬ ವಿಶೇಷ ಸೂತ್ರದ ಗೊಂಬೆಗಳು ಸಹ ಇವೆ. ಸೂತ್ರದ ಗೊಂಬೆಗಳಿಗೆ ಇಂತಿಷ್ಟೇ ಗಾತ್ರವೆಂದಿಲ್ಲ. ಅವು ಅತಿ ಸಣ್ಣಗಾತ್ರ, ಮಧ್ಯಮಗಾತ್ರ, ದೊಡ್ಡ ಗಾತ್ರ, ಮಾನವ ಸಹಜ ಗಾತ್ರದ(Lifesize) ಅಥವಾ ಬಹುದೊಡ್ಡ ಗಾತ್ರವುಳ್ಳವುಗಳಾಗಿರಬಹುದು.

**ದಂಡ ಸೂತ್ರದ ಗೊಂಬೆಗಳು**(Rod puppets): ಕೈಗೊಂಬೆಯ ತಲೆಗೆ ಅಥವಾ ದೇಹದ ಮೇಲ್ಭಾಗಕ್ಕೆ ದಂಡವೊಂದನ್ನು ಸೇರಿಸಲಾಗುತ್ತದೆ. ಬಾಯಿ, ಕಣ್ಣುಗಳಂಥ ಮುಖ್ಯ ಭಾಗಗಳ ಚಾಲನೆಗೆಂದು ದಾರ, ಸ್ಪ್ರಿಂಗ್‌ಗಳು, ರಬ್ಬರ್‌ಬ್ಯಾಂಡ್‌ಗಳೊಡನೆ ಕೆಲವು ತಾಂತ್ರಿಕ ಉಪಕರಣಗಳನ್ನು ಅಳವಡಿಸಲಾಗುತ್ತದೆ. ಹಸ್ತಗಳ ಚಲನೆಯನ್ನು ಹಸ್ತಗಳಿಗೆ ಕೊಕ್ಕೆಯಿಂದ ಬಂಧಿಸಿರುವ ಕಡ್ಡಿಗಳಿಂದ ಸಾಮಾನ್ಯವಾಗಿ ಮಾಡಲಾಗುತ್ತದೆ. ಸೂತ್ರದ ಗೊಂಬೆಯ ವಿವಿಧ ಭಾಗಗಳನ್ನು ಮಾಡಲು ಹೆಚ್ಚಾಗಿ ಮರವನ್ನು ಉಪಯೋಗಿಸಲಾಗುತ್ತದೆ.

**ಕೈಚೀಲ ಸೂತ್ರದ ಗೊಂಬೆಗಳು**(Glove puppets): ಕೈಚೀಲ ಸೂತ್ರದ ಗೊಂಬೆಗಳ ತಲೆಯನ್ನು ಕಾಗದ, ಒಳಗೆ ತುಂಬಿಸಿರುವ ದಬ್ಬರ್ ಚೆಂಡು, ಬೆಂಡು(Thermocole), ಫೋಮ್(Foam), ಹತ್ತಿ, ಒಳಗೆ ತುಂಬಿಸಿರುವ ತೆಳರೇಷ್ಮೆ ಬಟ್ಟೆ ಅಥವಾ ಉಣ್ಣೆ/ರೇಷ್ಮೆ ಬಟ್ಟೆಯ ಚೀಲ ಮುಂತಾದ ವಿವಿಧ ಪದಾರ್ಥಗಳಿಂದ ಸಿದ್ಧಪಡಿಸಬಹುದು. ಕತ್ತಿನ ಕೆಳಭಾಗದಲ್ಲಿ ಕೈಬೆರಳು ಗಾತ್ರದ ಕೊಳವೆ ಅಥವಾ ದಂಡವೊಂದನ್ನು ಕತ್ತಿನ ಚಾಲನೆಗೆಂದು ಅಳವಡಿಸಲಾಗುತ್ತದೆ.

ಕೈಚೀಲ ಗೊಂಬೆಗಳು ವಿದೂಷಕರನ್ನು ಪ್ರತಿನಿಧಿಸಲು ಹಾಗೂ ಮನರಂಜನೆ ಹಾಗೂ ಕಲಿಯಲು ಪ್ರೇರೇಪಿಸಲು, ಉತ್ಕೃಷ್ಟವಾದವುಗಳು, ರಂಗ ಪ್ರದರ್ಶನಕ್ಕೆಂದು ವಿನ್ಯಾಸಗೊಳಿಸಿರುವ ಕೈಚೀಲ ಸೂತ್ರದ ಗೊಂಬೆಗಳು ಸಾಮಾನ್ಯವಾಗಿ 24 ರಿಂದ 30 ಇಂಚುಗಳಷ್ಟು ಎತ್ತರವುಳ್ಳವು.

**ನೆರಳು ಸೂತ್ರದ ಗೊಂಬೆಗಳು(Shadow puppets):** ಇವು ಕತ್ತರಿಸಿದ ಚಪ್ಪಟೆಯಾಗಿರುವ ಬೆರಳುಗಳನ್ನು ಹೊಂದಿದ್ದು ಚಾಲನೆಗೆಂದು ಕೀಲುಗಳನ್ನು ಸಹ ಹೊಂದಿರುವುವು. ಚಪ್ಪಟೆ ಆಕಾರದ ನೆರಳುಗಳನ್ನು ತೆರೆಯ ಮೇಲೆ ದೀಪದ ಸಹಾಯದಿಂದ ಸೃಷ್ಟಿಸಲಾಗುತ್ತದೆ. ಸಾಂಪ್ರದಾಯಿಕವಾಗಿ ನೆರಳು ಸೂತ್ರದ ಗೊಂಬೆಗಳಿಗೆ ತಿಳಿ ಬಣ್ಣದ(Tinted) ಚರ್ಮವನ್ನು ಪಾರದರ್ಶಕ ಬಣ್ಣದ ಪರಿಣಾಮವನ್ನು ಕೊಡಲು ಬಳಸಲಾಗುತ್ತದೆ. ಕಾರ್ಡಿನಂಥ ಹಾಳೆಗಳು ಅಥವಾ ಇನ್ನಾವುದೇ ಅನುಕೂಲಕರ ಪದಾರ್ಥಗಳನ್ನು ಅಪಾರದರ್ಶಕ (Opaque) ಛಾಯೆಗಳನ್ನು ಸೃಷ್ಟಿಸಲು ಉಪಯೋಗಿಸಬಹುದು.

ನೆರಳು ಸೂತ್ರದ ಗೊಂಬೆಗಳಿಗೆ ವೀಕ್ಷಕರ ಆಸಕ್ತಿಯನ್ನು ಹೆಚ್ಚುಕಾಲ ಹಿಡಿದಿಟ್ಟುಕೊಳ್ಳುವ ಮಾಂತ್ರಿಕ ಶಕ್ತಿಯಿದೆ.

Digitised by Bharatavani, CIIL

ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತವನ್ನು ನೆರಳು ಸೂತ್ರದ ಗೊಂಬೆಗಳ ಮುಖಾಂತರ ಹಲವಾರು ದಿನಗಳು ಪ್ರದರ್ಶಿಸಲಾಗುತ್ತದೆ ಹಾಗೂ ಸಹಸ್ರಾರು ಜನರು ಈ ಪ್ರದರ್ಶನಗಳನ್ನು ಅತ್ಯಾಸಕ್ತಿಯಿಂದಲೂ, ಭಾವುಕತೆಯಿಂದಲೂ ವೀಕ್ಷಿಸುತ್ತಾರೆ. ನೆರಳು ಸೂತ್ರದ ಗೊಂಬೆಗಳು ಬಹಳ ಹಳೆಯ ಪ್ರಕಾರದ ಸೂತ್ರದ ಗೊಂಬೆಗಳು ಎನ್ನುವ ಪ್ರತೀತಿಯಿದೆ. ಹಿಂದೆ ದೊಡ್ಡವರು ಚಿಕ್ಕವರಿಗೆ ನಟಿಸಲು ಅನುಮತಿಸದಿದ್ದಾಗ ಅವರು ಸೂತ್ರದ ಗೊಂಬೆಯ ಮೂಲಕ ಪರೋಕ್ಷವಾಗಿ ಪ್ರದರ್ಶಿಸಬೇಕಾಗಿತ್ತು. ಈ ಘಟ್ಟದಲ್ಲಿ ನೆರಳು ಸೂತ್ರದ ಗೊಂಬೆಗಳನ್ನು ಉಪಯೋಗಿಸುತ್ತಿದ್ದರಿಂದ ಇದು ನಾಟ್ಯ ಮತ್ತು ನಾಟಕದ ಆರಂಭವನ್ನು ಸೂಚಿಸುತ್ತದೆ.

**ದಾರದ ಸೂತ್ರದ ಗೊಂಬೆಗಳು:** ದೇಹದ ಬೇರೆ ಬೇರೆ ಭಾಗಗಳನ್ನು ಕೀಲಿಸಿ ಜೋಡಿಗೆ ದಾರದ ಸೂತ್ರದ ಗೊಂಬೆಯನ್ನು ತಯಾರಿಸಲಾಗುತ್ತದೆ. ಈ ಭಾಗಗಳಿಗೆ ಉದ್ದವಾದ ದಾರವನ್ನು ಕೊಕ್ಕೆಯಿಂದ ಬಂಧಿಸಿ ಚಾಲನೆಯನ್ನು ಮಾಡಲಾಗುತ್ತದೆ. ಸೂತ್ರದ ಗೊಂಬೆಯಾಟಗಾರನಿಗೆ ಎಷ್ಟು ದಾರವನ್ನು ನಿಯಂತ್ರಿಸುವ ಶಕ್ತಿ ಸಾಮರ್ಥ್ಯಗಳಿವೆಯೋ ಅದಕ್ಕೆ ತಕ್ಕಂತೆ ಬೇರೆ ಬೇರೆ ಕೀಲುಗಳಲ್ಲಿ ಬೇಕಾದ ಚಲನೆಯನ್ನು ಸೃಷ್ಟಿಸಬಹುದು. ಸೂತ್ರದ ಗೊಂಬೆಯ ಒಟ್ಟು ದಾರಗಳ ಸಂಖ್ಯೆ ಇದರ ಮೇಲೆ ನಿರ್ಧಾರಿತವಾಗುತ್ತದೆ. ರಾಜಾಸ್ಥಾನದಲ್ಲಿ ದಾರದ ಸೂತ್ರದ ಗೊಂಬೆಗಳಲ್ಲಿ ಪರಿಚಾಲನೆಯನ್ನು ಗೊಂಬೆಯಾಟಗಾರರು ತಮ್ಮ ಬೆರಳುಗಳ ಚಲನೆಯಿಂದ ಮಾಡಿದರೆ ಪಾಶ್ಚಾತ್ಯ ದೇಶಗಳಲ್ಲಿ ಇದಕ್ಕೆ ಮರದ ಪಟ್ಟಿಯ ಒಂದು ಉಪಕರಣವನ್ನು ಬಳಸುತ್ತಾರೆ. ದಾರದ ಚಲನೆಯನ್ನು ಸುಗಮಗೊಳಿಸಲು ದೇಹದ ವಿವಿಧ ಭಾಗಗಳಿಗೆ ಗುರುತ್ವಾಕರ್ಷಣ ಸೆಳೆತಕ್ಕೆಂದು ತೂಕದ ವಸ್ತುವೊಂದು ಅಗತ್ಯವಿರುತ್ತದೆ. ಇಂದಿಗೂ ಎರಡೇ ದಾರವಿರುವ ಪ್ರಾಚೀನ ಸೂತ್ರದ ಗೊಂಬೆಗಳನ್ನು ಕಾಣಬಹುದು. ಒಂದು ದಾರ ಸೂತ್ರದ ಗೊಂಬೆಗೆ ಆಧಾರವಾಗಿದ್ದರೆ ಮತ್ತೊಂದು ಅದರ ಕೈಗಳನ್ನು ನಿಯಂತ್ರಿಸುತ್ತದೆ. ಈ ಸೂತ್ರದ ಗೊಂಬೆಗಳಿಗೆ ತಮ್ಮದೇ ಆದ ವಿಶಿಷ್ಟ ಭಾಷೆಯಿದೆ. ಇದನ್ನು ಗೊಂಬೆಯಾಟಗಾರನು ಬಾಯಿಯಲ್ಲಿ ಹಿಡಿದ ಬಿದಿರು ಮತ್ತು ಚರ್ಮದ ವಾದ್ಯದಿಂದ ವಿಲಕ್ಷಣ ಶಬ್ದವನ್ನು ಹೊರಡಿಸುತ್ತಾನೆ.

**ಸೂತ್ರದ ಗೊಂಬೆಗಳ ಉಪಯೋಗ ಮತ್ತು ಕೊಡುಗೆ:** ಸೂತ್ರದ ಗೊಂಬೆಯಾಧಾರಿತ ಶೈಕ್ಷಣಿಕ ಕಾರ್ಯಕ್ರಮಗಳು ಮಕ್ಕಳ ಬೆಳವಣಿಗೆ ಮತ್ತು ವಿಕಾಸವನ್ನು ಪ್ರಚೋದಿಸುವ ಹೆಚ್ಚಿನ ಸಾಮರ್ಥ್ಯ ಹೊಂದಿವೆ. ಸೂತ್ರದ ಗೊಂಬೆಯಾಟ ಕಲೆ ಮತ್ತು ನಾಟಕರಂಗದ ಮುಖ್ಯ ಶಾಖೆಯಾಗಿರುವುದರಿಂದ ಎಲ್ಲಾ ಕಲೆ ಹಾಗೂ ಕೌಶಲಗಳ ಅಭ್ಯಾಸವನ್ನು ಒಳಗೊಳ್ಳುತ್ತದೆಯಲ್ಲದೆ ಸೃಜನಾತ್ಮಕ ಕಲ್ಪನೆ(Creative imagination)ಯನ್ನು ಎಲ್ಲಾ ದೈಹಿಕ ಕೌಶಲಗಳೊಡನೆ ಬೆಸೆಯುತ್ತದೆ. ನಿಹಿತ ಯೋಗ್ಯತೆಯುಳ್ಳ ಮಕ್ಕಳು ಸರಳ ಸೂತ್ರದ ಗೊಂಬೆಗಳನ್ನು ನಿರ್ಮಿಸಿ ಅವುಗಳ ಪೂರ್ಣ ಅರ್ಥವನ್ನು ಗ್ರಹಿಸಬಲ್ಲರು. ಅಂಥ ಗೊಂಬೆಗಳು ಮಕ್ಕಳು ಗ್ರಹಿಸುವ ಹಾಗೂ ಅವುಗಳೊಡನೆ ಸಂಪರ್ಕಿಸುವ ಪಾತ್ರಗಳಾಗಿರಬಹುದು. ಗೊಂಬೆಯಾಟವನ್ನು ನೋಡಲು ಹೋದಾಗ ಮಗು ತನ್ನದೇ ಆದ ಗೊಂಬೆಯನ್ನು ತೆಗೆದುಕೊಂಡು ಹೋಗಬಹುದು. ಇವೆಲ್ಲವೂ ಚಟುವಟಿಕೆಗೆ ಜೀವವನ್ನು ತುಂಬುತ್ತವೆ. ಇವುಗಳ ಶೈಕ್ಷಣಿಕ ಅಂತಃಸತ್ವಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅವುಗಳನ್ನು ಆಟದಲ್ಲಿ ನೋಡಬೇಕು. ಸೂತ್ರದ ಗೊಂಬೆಯಾಟದ ಪ್ರದರ್ಶನದ ಪ್ರೇಕ್ಷಕರಲ್ಲಿ ಮಕ್ಕಳು ಇದ್ದಲ್ಲಿ ಆಗ ಅವರ ಆಲೋಚನೆಗಳು ಮತ್ತು ಭಾವನೆಗಳು ವ್ಯಕ್ತವಾಗುತ್ತವೆ. ಈ ಕಾರಣಕ್ಕಾಗಿ ಇತ್ತೀಚಿನ ವರ್ಷಗಳಲ್ಲಿ ಸೂತ್ರದ ಗೊಂಬೆಯಾಟವನ್ನು ಉತ್ತೇಜಿಸಲಾಗುತ್ತಿದೆ. ಗ್ರಾಮೀಣ ಪ್ರೇಕ್ಷಕರಲ್ಲಿ ಸೂತ್ರದ ಗೊಂಬೆಯಾಟ ಮತ್ತು ಸಂಬಂಧಿತ ಕಲೆಗಳು ಜನಪ್ರಿಯವಾಗುತ್ತಿವೆ. ಇವುಗಳೊಡನೆ ಪರಸ್ಪರ ಅನ್ಯೋನ್ಯ ಕ್ರಿಯೆಯ ಮೂಲಕ ಮಕ್ಕಳಲ್ಲಿ ನೈತಿಕ, ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಲು ಸೂತ್ರದ ಗೊಂಬೆಯಾಟದ ನಾಟಕಸಂಘಗಳು ಮಕ್ಕಳ ಶಾಖೆಗಳನ್ನು ಸ್ಥಾಪಿಸಿವೆ. ಸೂತ್ರದ ಗೊಂಬೆಯಾಟಕ್ಕೆ ಒಂದು ಕಥೆ ಅಥವಾ ವಿಷಯವನ್ನು ಆಯ್ದುಕೊಳ್ಳುವಾಗ ಬಳಸಬೇಕಾದ ಸೂತ್ರದ ಗೊಂಬೆ ಪ್ರಕಾರ, ಪ್ರದರ್ಶನದ ಉದ್ದೇಶ, ಭಾಗವಹಿಸುವವರ/ಪ್ರದರ್ಶಿಸುವವರ ಯೋಗ್ಯತೆಗಳು, ಮತ್ತು ಪ್ರೇಕ್ಷಕರ ವಿಧ ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮಕ್ಕಳು ವೀಕ್ಷಿಸಲು ಆಸಕ್ತರಾಗಿರುವಂಥ ವಿವಿಧ ಪಾತ್ರಗಳನ್ನು ಸ್ಥಳೀಯವಾಗಿ ದೊರಕುವ ವಸ್ತುಗಳಿಂದ ಸಿದ್ಧಪಡಿಸಲಾಗುವುದು. ಮಕ್ಕಳು ಗೊಂಬೆಯಾಟದೊಡನೆ ಸುಲಭವಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.

ಸೂತ್ರದ ಗೊಂಬೆಯ ರೂಪ ನೈಜವಾಗಿರಬೇಕೋ ಅಥವಾ ಪ್ರೌಢರಿಂದ ಕಲ್ಪಿತಗೊಂಡಿದ್ದಾಗಿರಬೇಕೋ ಎಂಬ ಪ್ರಶ್ನೆ ಆಗಾಗ ಏಳುತ್ತದೆ. 'ಕಾರ್ಯಕ್ರಮದ ಮುಖ್ಯ ಧ್ಯೇಯ ಸೃಜನಾತ್ಮಕತೆ ಎಂಬುದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಮಕ್ಕಳಿಗೆ ಯಥಾರೂಪತೆ ಬೇಕಿಲ್ಲ. ಅವರು ಪ್ರಾಯೋಗಿಕತೆ ಪ್ರಶ್ನಿಸುವಿಕೆ ಮತ್ತು ಜೀವನವನ್ನು ಪ್ರತಿನಿಧಿಸುವ ನವೀನ ಮಾರ್ಗಗಳನ್ನು ಇಷ್ಟಪಡುತ್ತಾರೆ.

ಶಿಕ್ಷಣದಲ್ಲಿ ಸೂತ್ರದ ಗೊಂಬೆಯಾಟ ಮೂರು ಮುಖ್ಯ ಶಾಖೆಗಳನ್ನು ಹೊಂದಿದೆ. ನಾಟಕೀಯ ಅಂಶಗಳನ್ನು ಉಳಿಸಿಕೊಂಡಾಗ ಇದು ಅತ್ಯಂತ ಪ್ರಭಾವಶಾಲಿಯಾಗುತ್ತದೆ. ಆ ಮೂರು ಶಾಖೆಗಳು ಹೀಗಿವೆ–

1. ಪ್ರೇಕ್ಷಕರ ಶಿಕ್ಷಣ: ಪೂರ್ವಪ್ರಾಥಮಿಕ ಹಂತದಿಂದ ಪ್ರೌಢಹಂತದವರೆಗಿನ ವಯೋಮಾನದ ಪ್ರೇಕ್ಷಕರಿಗೆ ಸೂಕ್ತವಾದ ಗೊಂಬೆಯಾಟಗಳ ಮೂಲಕ ತಿಳಿಸಬೇಕಾದ ವಿಚಾರಗಳು ಮತ್ತು ಸಿದ್ಧಾಂತಗಳನ್ನು ಪ್ರೇಕ್ಷಕರ ಶಿಕ್ಷಣ ಒಳಗೊಳ್ಳುತ್ತದೆ.

2. ವ್ಯಕ್ತಿಗತ ಶಿಕ್ಷಣ: ಎಲ್ಲಾ ವಯೋವರ್ಗದವರು ಮಾಡಬಹುದಾದ ಗೊಂಬೆಗಳನ್ನು ಸಿದ್ಧಪಡಿಸುವುದು, ಗೊಂಬೆಯಾಟಗಳ ಪ್ರದರ್ಶನ ಮತ್ತು ಅವುಗಳ ಪರಿಚಾಲನೆ–ಇವುಗಳನ್ನು ವ್ಯಕ್ತಿಗತ ಶಿಕ್ಷಣ ಒಳಗೊಳ್ಳುತ್ತದೆ.

Digitised by Bharatavani, CIIL

3. ಶಿಕ್ಷಣದ ಪ್ರಯೋಗ: ಪ್ರೇಕ್ಷಕರ ಹಾಗೂ ವ್ಯಕ್ತಿಯ ಶಿಕ್ಷಣದ ಪ್ರಾಯೋಗಿಕ ಆಯಾಮವನ್ನು ಇದು ಗಣನೆಗೆ ತೆಗೆದುಕೊಳ್ಳುತ್ತದೆ. ಇಂಥ ಸಂದರ್ಭಗಳಲ್ಲಿ ಬೋಧನೆ ಮತ್ತು ಕಲಿಕೆ ಒಂದಕ್ಕೊಂದು ಪರಸ್ಪರ ಪೂರಕವಾಗಿವೆ.

ಇಂದು ಶಿಕ್ಷಣದ ಸಮಗ್ರ ಭಾಗಗಳೇ ಆಗಿರುವ ವೈಜ್ಞಾನಿಕ ಮನೋಧರ್ಮ, ರಾಷ್ಟ್ರೀಯ ಏಕತೆ, ಪರಿಸರ ಮತ್ತು ತಿರುಳು ಪಠ್ಯಕ್ರಮ ಕ್ಷೇತ್ರಗಳು ಗೊಂಬೆಯಾಟ ಮತ್ತು ಗೊಂಬೆಯಾಟ ನಾಟಕ ಸಂಘಗಳ ಮೂಲಕ ಪ್ರಾಮುಖ್ಯವನ್ನು ಪಡೆಯುತ್ತಿವೆ.

ಶಿಕ್ಷಣ ಇಲಾಖೆಗಳು ಮತ್ತು ವಿವಿಧ ಸರ್ಕಾರಿ ಹಾಗೂ ಖಾಸಗಿ ಸ್ವೈಚ್ಛಿಕ ಸಂಸ್ಥೆಗಳು ಪ್ರಾಥಮಿಕ ಶಿಕ್ಷಣವನ್ನು ಸಾರ್ವಜನಿಕಗೊಳಿಸುವ (ಸರ್ವಶಿಕ್ಷಾ ಅಭಿಯಾನ) ದಿಶೆಯಲ್ಲಿ ಒಂದು ಹೆಜ್ಜೆಯಂತೆ ಸೂತ್ರದ ಗೊಂಬೆಯಾಟದ ಉಪಯೋಗ ಹಾಗೂ ಸಿದ್ಧತೆಯಲ್ಲಿ ತರಬೇತಿಯನ್ನು ನೀಡಿ ಅದನ್ನು ಬೋಧನಾ ಮಾಧ್ಯಮ ಮತ್ತು ಮನರಂಜನೆಯಂತೆ ಬಳಸಿಕೊಳ್ಳಲಾಗುತ್ತಿದೆ. ನವದೆಹಲಿಯ ಸಾಂಸ್ಕೃತಿಕ ಸಂಪನ್ಮೂಲ ಹಾಗೂ ತರಬೇತಿ ಕೇಂದ್ರ ಶಿಕ್ಷಕರಿಗಾಗಿ ಶೈಕ್ಷಣಿಕ ಸೂತ್ರದ ಗೊಂಬೆಗಳ ಸಿದ್ಧತೆ ಮತ್ತು ಬಳಕೆಯಲ್ಲಿ ತರಬೇತಿ ಕೋರ್ಸುಗಳನ್ನು ನಿಯಮಿತವಾಗಿ ನಡೆಸುತ್ತಾ ಬಂದಿದೆ. 1952ರಲ್ಲಿ ಸ್ಥಾಪಿತಗೊಂಡ ಉದಯಪುರದ **ಭಾರತೀಯ ಲೋಕಕಲಾ ಮಂಡಲ್** ಜಾನಪದ ಕಲೆಯ ಅಧ್ಯಯನವನ್ನು ನಡೆಸುತ್ತಲಿದ್ದು ಮಕ್ಕಳು, ಶಿಕ್ಷಕರು ಮತ್ತು ಇನ್ನಿತರ ಕಲೆಕಾರರಿಗೆ ಸೂತ್ರದ ಗೊಂಬೆಯಾಟದ ಕಲೆಯಲ್ಲಿ ತರಬೇತಿಯನ್ನು ನೀಡುತ್ತಿರುವ ಪ್ರತ್ಯೇಕ ಗೊಂಬೆಯಾಟ ಘಟಕವನ್ನು ಹೊಂದಿದೆ. ಈ ಸಂಸ್ಥೆ ಭಾರತ ಮತ್ತು ಹೊರದೇಶಗಳಲ್ಲಿ ಗೊಂಬೆಯಾಟ ಪ್ರದರ್ಶನಗಳನ್ನು ನೀಡಿದೆ. ನವದೆಹಲಿಯ NCERT ಮತ್ತು ಭುವನೇಶ್ವರ್, ಹೈದರಾಬಾದ್, ಲಕ್ನೊ, ಪಾಟ್ನಾ ಮತ್ತು ಪುಣೆಗಳಲ್ಲಿರುವ ರಾಜ್ಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳು ಬಹಳ ಪರಿಣಾಮಕಾರಿಯೆಂದೆನಿಸಿಕೊಂಡಿರುವ ಸೂತ್ರದ ಗೊಂಬೆಯಾಟದ ದೂರದರ್ಶನ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿಯಮಿತವಾಗಿ ಪ್ರಸ್ತುತಪಡಿಸುತ್ತಿವೆ. ಸಂಕೀರ್ಣವಾದ ಪರಿಕಲ್ಪನೆಗಳನ್ನು ದೂರದರ್ಶನ ಮಾಧ್ಯಮದಲ್ಲಿ ಪ್ರಸ್ತುತಪಡಿಸಿದಾಗ ಪ್ರಾಥಮಿಕ ಮಟ್ಟದ ಮಕ್ಕಳಿಗೆ ಅರ್ಥಮಾಡಿಕೊಳ್ಳಲು ಸುಲಭವಾಗುತ್ತವೆ. ರಾಷ್ಟ್ರೀಯ ಬಾಲಭವನ ಮತ್ತು ರಾಜ್ಯಗಳಲ್ಲಿರುವ ಅದರ ಸಹಾಯಕ ಸಂಸ್ಥೆಗಳು ಮಕ್ಕಳಿಗೆ ಸೂತ್ರದ ಗೊಂಬೆಯಾಟದ ಸಿದ್ಧತೆ ಮತ್ತು ಉಪಯೋಗಗಳ ಬಗ್ಗೆ ತರಬೇತಿಯನ್ನು ನೀಡುವುದರಲ್ಲಿ ನಿರತವಾಗಿವೆ.

ಕಥಕ್ಕಳಿ ಪ್ರದರ್ಶನಗಳು ಮತ್ತು ಸೂತ್ರದ ಗೊಂಬೆಯಾಟಗಳು ಭಿನ್ನವಾದುವೆಂದು ತೋರಿಸಿಕೊಡುವ **'ಕೇರಳದ ನಟನಕೈರಳಿ'** ಸಾಂಪ್ರದಾಯಿಕ ಕೈಚೀಲ ಗೊಂಬೆಯಾಟಗಳನ್ನು ಪ್ರಸ್ತುತಪಡಿಸುವ ಸಾಂಪ್ರದಾಯಿಕ ಕಲಾಕಾರರ ಒಂದು ಸಮೂಹ. ಸೂತ್ರದ ಬೊಂಬೆಗಳ ಸ್ವರೂಪ ಅವರ ಸಂಸ್ಕೃತಿಗೆ ಸಂಬಂಧಿಸಿದ್ದು ಬೊಂಬೆಯಾಟಗಳನ್ನು ಸಾಂಪ್ರದಾಯಿಕ ರೀತಿಯಲ್ಲಿ ಪ್ರದರ್ಶಿಸುತ್ತಿದೆ. ಈ ಸಂಪ್ರದಾಯ ಇಂದಿಗೂ ಜೀವಂತವಾಗಿದೆಯಲ್ಲದೆ ಕೇರಳ ಒಂದರಲ್ಲೇ 450ಕ್ಕೂ ಅಧಿಕ ಪ್ರದರ್ಶನಾ ಕಲಾ ರಂಗ ಶಾಲೆಗಳಲ್ಲಿ ಪುನರುಜ್ಜೀವನಗೊಂಡಿವೆ.

ಪಶ್ಚಿಮ ಬಂಗಾಳದ ಕೊಲ್ಕತ್ತಾ ರಂಗಶಾಲಾ ಸಂಘಗಳು ಸೂತ್ರದ ಬೊಂಬೆಯಾಟ ಪ್ರದರ್ಶನಗಳನ್ನು ನಡೆಸುತ್ತಾ ಬಂದಿವೆ. ಇದರ **'ಅಲ್ಲಾದೀನ್'** ಪ್ರದರ್ಶನ ಭಾರತ ಹಾಗೂ ಹೊರದೇಶಗಳಲ್ಲಿ 1000ಕ್ಕೂ ಹೆಚ್ಚು ಬಾರಿ ಪ್ರದರ್ಶಿಸಲ್ಪಟ್ಟಿದೆ. ದೆಹಲಿಯ **ಶ್ರೀ ರಾಮ್ ಕಲಾ ಹಾಗೂ ಸಂಸ್ಕೃತಿ ಕೇಂದ್ರ** ಸಾಂಪ್ರದಾಯಿಕ ಮತ್ತು ಸಮಕಾಲೀನ ಸೂತ್ರದ ಗೊಂಬೆಯಾಟಗಳನ್ನು ಮಕ್ಕಳಿಗಾಗಿ ಪ್ರಸ್ತುತಪಡಿಸುತ್ತಾ ಬಂದಿರುವುದಲ್ಲದೆ ಉಪಯೋಗಿಸಬೇಕಾದ ಸೂತ್ರದ ಗೊಂಬೆಗಳ ವಿಧ, ಪ್ರದರ್ಶನದ ಉದ್ದೇಶ, ಭಾಗವಹಿಸುವವರ ಸಾಮರ್ಥ್ಯಗಳು(Talent) ಮತ್ತು ಉದ್ದೇಶಿತ ಪ್ರೇಕ್ಷಕರು ಈ ಎಲ್ಲಾ ಅಂಶಗಳನ್ನು ಸೂತ್ರದ ಗೊಂಬೆಯನ್ನು ಆಯ್ಕೆ ಮಾಡುವಾಗ ಪರಿಗಣಿಸಬೇಕೆಂಬುದನ್ನು ಒತ್ತಿ ಹೇಳುತ್ತಾ ಬಂದಿದೆ.

**ದೂರದರ್ಶನದಲ್ಲಿ ಸೂತ್ರದ ಗೊಂಬೆ:** ಸಾಂಪ್ರದಾಯಿಕ ಹಾಗೂ ಸಮಕಾಲೀನ ಸೂತ್ರದ ಗೊಂಬೆಗಳಿಗೆ, ಅದರಲ್ಲೂ ಮಕ್ಕಳಿಗೆಂದೇ ಇರುವ ಸೂತ್ರದ ಗೊಂಬೆಗಳಿಗೆ ದೂರದರ್ಶನದ ಕಾರ್ಯಕ್ರಮಗಳಲ್ಲಿ ಅವಕಾಶವಿರಬೇಕು. ಆದಾಗ್ಯೂ, ಸೂತ್ರದ ಗೊಂಬೆಗಳೇ ಸಕಲವನ್ನೂ ಸಾಧಿಸಲಾರವು. ಸಾಂಪ್ರದಾಯಿಕ ಗೊಂಬೆಯಾಟದ ಪ್ರದರ್ಶನಗಳ ಕಥಾನಿರೂಪಣೆಯನ್ನು ಗೊಂಬೆಯಾಟಗಾರರ ಮೇಲೆ ವಿಧಿಸಲಾಗದು. ಗೊಂಬೆಯಾಟಗಾರರು ಮತ್ತು ಉದ್ದೇಶಿತ ಪ್ರೇಕ್ಷಕ (Target Audience) ರೊಡನೆ ಚರ್ಚಿಸಿ ಕಥಾ ನಿರೂಪಣೆಯನ್ನು ಅಲ್ಪಸ್ವಲ್ಪ ಮಾರ್ಪಡಿಸಿಕೊಳ್ಳಬೇಕು. ದೂರದರ್ಶನ ಕಾರ್ಯಕ್ರಮಗಳ ಉತ್ಪಾದನೆಗೆ ಮುಂಚಿತವಾದ ಯೋಜನೆಯಿರಬೇಕು. ಕಥಾನಿರೂಪಕರು, ದೃಶ್ಯಕಲ್ಪಿಸುವವರು, ಉತ್ಪಾದಕರು ಮತ್ತು ಗೊಂಬೆಯಾಟಗಾರರ ನಡುವೆ ಸರಣಿ ಸಭೆಗಳು ಅಗತ್ಯ. ಚಿಕ್ಕ ವಯೋಮಾನದ ಮಕ್ಕಳ ಅವಧಾನ ಅವಧಿ (Attention span) ಅಲ್ಪವಾದುದರಿಂದ ದೀರ್ಘ ಕಥಾವಸ್ತುಗಳನ್ನು ದೂರದರ್ಶನದ ಮೂಲಕ ತೋರಿಸಿದಲ್ಲಿ ಸೂತ್ರದ ಗೊಂಬೆಯಾಟದ ಮೂಲೋದ್ದೇಶವೇ ನಿಷ್ಫಲವಾಗಬಹುದು. ಗೊಂಬೆಯಾಟ ಪ್ರದರ್ಶನದ ಕಥಾವಸ್ತು ಮಕ್ಕಳ ಗ್ರಹಿಕೆಯ ಮಟ್ಟಕ್ಕೆ ತಕ್ಕಂತಿರಬೇಕು. ಬಣ್ಣ, ರಚನಾವಿನ್ಯಾಸ (tenture), ರೂಪ (format)–ಈ ಮೂರು ಅಂಶಗಳು ಸೂತ್ರದ ಗೊಂಬೆಯಾಟ ಪ್ರದರ್ಶನಗಳ ವಿನ್ಯಾಸದಲ್ಲಿ ಬಹುಮುಖ್ಯವಾಗಿವೆ. ಆದ್ದರಿಂದ ದೂರದರ್ಶನದ ಗೊಂಬೆಯಾಟಗಳ ನಿರ್ವಹಣೆ ರಂಗಭೂಮಿಯ ಗೊಂಬೆಯಾಟಗಳ ನಿರ್ವಹಣೆಗಿಂತ ಭಿನ್ನ.

ಸಾಂಪ್ರದಾಯಿಕ ಪ್ರದರ್ಶನಗಳ ಕಥಾವಸ್ತುವಿಗಿಂತ ದೂರದರ್ಶನದ ಪ್ರದರ್ಶನಗಳ ಕಥಾವಸ್ತು ಸಾರವತ್ತಾಗಿದ್ದು ಮಕ್ಕಳ ಕಲ್ಪನೆಯನ್ನು ಪ್ರಚೋದಿಸುವಂತಿರಬೇಕು. ಆದಾಗ್ಯೂ, ಅವುಗಳಲ್ಲಿ ಬೋಧನಾ ಮತ್ತು ಮನರಂಜನಾ ಅಂಶಗಳನ್ನು ಸೇರಿಸಿ ಅವುಗಳನ್ನು ಬೋಧನಾ ಪ್ರದರ್ಶನಗಳಿಗಿಂತ ಭಿನ್ನವಾಗಿಸಬಹುದು. ಇಂಥ ರಚನೆಯಲ್ಲಿ ನೇರವಾದ ಇಲ್ಲವೇ ಪ್ರತ್ಯಕ್ಷರೂಪದ ಬೋಧನೆ–ಕಲಿಕೆ ಇರುವುದಿಲ್ಲ. ಆದರೆ ನಿಕಟಪರಿಸರದ ಸಕಾರಾತ್ಮಕ ಸಾಮಾಜಿಕ ಸಂಬಂಧಗಳನ್ನು

Digitised by Bharatavani, CIIL

ಪ್ರದರ್ಶಿಸುವುದರ ಮುಖಾಂತರ ಬೋಧನಾತ್ಮಕ ಮೌಲ್ಯವುಳ್ಳ ಕಲಿಕೆ ಸಾಧ್ಯವಾಗುತ್ತದೆ. ದೂರದರ್ಶನದಲ್ಲಿ ಸೂತ್ರದ ಗೊಂಬೆ ಒಂದು ಮಾಧ್ಯಮವಾಗಿರುವುದು ಮಕ್ಕಳಿಗೆ ಹೊಸದಾಗಿಯೂ, ಆಸಕ್ತಿಕರವಾಗಿಯೂ ಇರುತ್ತದೆ. ಅಲ್ಲದೆ ಅನುಕರಣೆಯಿಂದಲೂ ಮತ್ತು ನೋಡುವುದರಿಂದಲೂ ಈ ಮಾಧ್ಯಮ ಮಕ್ಕಳನ್ನು ಕಲಿಕೆಗೆ ಪ್ರೇರೇಪಿಸುತ್ತದೆ. ವಿಶೇಷತಃ ರೂಪ (format) ಸರಳವಾಗಿದ್ದಾಗ ಇದು ಬಹಳ ಪ್ರಭಾವಶಾಲಿ.

**ವಿಶೇಷ ಅಗತ್ಯವುಳ್ಳ ವ್ಯಕ್ತಿಗಳಿಗೆ ಸೂತ್ರದ ಗೊಂಬೆ:** ವಿಶೇಷ ಅಗತ್ಯವುಳ್ಳ ಮಕ್ಕಳು ಮತ್ತು ಪ್ರೌಢರಿಗೆ ಸೂಕ್ತವಾದ ಯೋಜನೆಯಿದ್ದಲ್ಲಿ ಸೂತ್ರದ ಗೊಂಬೆಯಾಟ ಬಹಳ ಪರಿಣಾಮಕಾರಿಯಾಗಿರುತ್ತದೆ. ಸೂಕ್ತ ಮಾರ್ಗದರ್ಶನವಿದ್ದಲ್ಲಿ ಇಂಥ ಮಕ್ಕಳ ಗುಂಪು ಅದ್ಭುತಕರ ಸೂತ್ರದ ಗೊಂಬೆಗಳನ್ನು ನಿರ್ಮಿಸಬಹುದು. ಅಷ್ಟೇ ಅಲ್ಲದೆ, ಪರದೆಯ ಹಿಂದಿದ್ದು ಸಕ್ರಿಯವಾಗಿ ಭಾಗವಹಿಸಿ, ಪರಿಚಾಲಿಸಿ ಪ್ರದರ್ಶನಗಳನ್ನು ನಿದೇಶಿಸಲೂಬಹುದು. ಯೋಜನೆಯ ಸಿದ್ಧತೆ ಮತ್ತು ಕಾರ್ಯರೂಪಕ್ಕೆ ತರುವ ಪ್ರಕ್ರಿಯೆಯಲ್ಲಿ ಮಕ್ಕಳು ಅವಿಭಾಜ್ಯ ಅಂಗವಾದರೆ ಅವರಲ್ಲಿ ಸಾಕಷ್ಟು ಆತ್ಮವಿಶ್ವಾಸ ಮೂಡುತ್ತದೆ. ಸೂತ್ರದ ಗೊಂಬೆಗಳ ಮೂಲಕ ಮಕ್ಕಳ ಸುತ್ತಲಿರುವ ಜನಗಳ ಸಂವೇದನೆಗಳು (feeling) ಮತ್ತು ಸಂವೇಗ (emotions) ಗಳನ್ನು ಸೂತ್ರದ ಗೊಂಬೆಗಳ ಮೂಲಕ ವ್ಯಕ್ತಪಡಿಸಬಹುದು. ಜೀವನಪರ್ಯಂತದ ಕೌಶಲಗಳನ್ನು ಗಳಿಸಿಕೊಂಡು ಅವರು ಸಫಲವಾಗಿ ವೃತ್ತಿಪರ ಜೀವನವನ್ನು ಸಾಗಿಸಬಹುದು.

ವಿಕಲರನ್ನು ಒಳಗೊಂಡಂತೆ ಎಲ್ಲಾ ವಯೋಮಾನದ ವ್ಯಕ್ತಿಗಳಲ್ಲಿ (ಸಕಾರಾತ್ಮಕ ಮನೋದೃಷ್ಟಿಯನ್ನು ಮೂಡಿಸುತ್ತಾ) ಸಮಗ್ರವಾದ ರೂಢಿಬದ್ಧವಲ್ಲದ ಪಾತ್ರಗಳನ್ನು ಸಮಗ್ರಗೊಳಿಸಿ ವಿವಿಧ ಗುಂಪುಗಳ ಜನರ ಬಗ್ಗೆ ಹೆಚ್ಚು ಸಕಾರಾತ್ಮಕ ವರ್ತನೆಯನ್ನು ಉಂಟುಮಾಡಲು ರೂಢಿಬದ್ಧವಲ್ಲದ ಪಾತ್ರಗಳನ್ನು ಸಮಗ್ರಗೊಳಿಸುವುದರ ಮೂಲಕ ಮತ್ತು ಸೇವಿಸುವುದರ ಮೂಲಕ ಸಹಾಯ ಮಾಡಬಹುದು.

**ಸಾರಾಂಶ:** ಜ್ಞಾನ, ಕೌಶಲ ಮತ್ತು ವಿಚಾರಗಳನ್ನು ಸಂವಹನೆಯಲ್ಲಿ ಅಧಿಕ ಸಾಮರ್ಥ್ಯವನ್ನು ಸೂತ್ರದಗೊಂಬೆಯಾಟ ಹೊಂದಿದೆ. ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣದ ಸಾರ್ವತ್ರೀಕರಣದ ದಿಶೆಯಲ್ಲಿನ ಪ್ರಯತ್ನಗಳಿಗೆ ಈ ಮಾಧ್ಯಮವು ಪೂರಕವಾಗುತ್ತದೆ. ನಿರಕ್ಷರತೆಯನ್ನು ಅಳಿಸಿ ಹಾಕುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ. ಸುಲಭವಾಗಿ ಅಂಗೀಕೃತವಾಗಬಲ್ಲ ಮಾಧ್ಯಮವಾದ ಈ ಸೂತ್ರಗೊಂಬೆಯಾಟ ನಿರಕ್ಷರಸ್ಥರನ್ನು ಅಧಿಕ ಸಂಖ್ಯೆಯಲ್ಲಿ ಮನಮುಟ್ಟುವಂತೆ ತಲುಪಬಲ್ಲದು. ಅಲ್ಪ ಖರ್ಚಿನಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಯೋಜಿಸಬಲ್ಲದಾದ್ದರಿಂದ ಸೂತ್ರದ ಗೊಂಬೆಯಾಟವನ್ನು ಶಿಕ್ಷಣದಲ್ಲಿ ವ್ಯಾಪಕವಾಗಿ ಉಪಯೋಗಿಸಿಕೊಳ್ಳಬಹುದು. ವರ್ಷಗಳು ಕಳೆದಂತೆ ಎಲ್ಲಾ ರಾಜ್ಯಗಳು ಸೂತ್ರದ ಗೊಂಬೆಯಾಟದ ಫಲಕಗಳನ್ನು ಸ್ಥಾಪಿಸಿವೆ. ಸೂತ್ರದ ಗೊಂಬೆಯ ಸಿದ್ಧತೆ ಮತ್ತು ಶಿಕ್ಷಣದಲ್ಲಿ ಅದರ ಸೂಕ್ತ ಉಪಯೋಗದ ಬಗ್ಗೆ ಸಿಬ್ಬಂದಿಗಳಿಗೆ ವಿಶೇಷತಃ ಶಿಕ್ಷಕರಿಗೆ ತರಬೇತಿಯನ್ನು ನೀಡುವುದು ಈ ಘಟಕಗಳ ಜವಾಬ್ದಾರಿಯಾಗಿದೆ. ಆದರೆ ಅವರ ಪ್ರಯತ್ನಗಳನ್ನು ಶಾಲೆಯೊಡನೆ ಸಂಯೋಜಿಸಿ ಅವರ ಕೆಲಸವನ್ನು ಶಾಲೆಯ ಪಠ್ಯಕ್ರಮದೊಡನೆ ಸೇರಿಸುವ ವ್ಯವಸ್ಥೆಯ ಕೊರತೆಯಿದೆ. ಶೈಕ್ಷಣಿಕ ಸೂತ್ರದ ಗೊಂಬೆಗಳನ್ನು ವಿಸ್ತೃತವಾಗಿ ಉಪಯೋಗಿಸಬೇಕಾದರೆ ಸರಿಯಾದ ಸಂಯೋಜನೆ ಮತ್ತು ಬೆಂಬಲ ಅಗತ್ಯ.

**ಮೂಲ: ಹರ್ಮೇಶ್ ಲಾಲ್**

**ಅನು: ಚಂದ್ರಶೇಖರ್ ಬಿ.ಎಂ.**

## ಶಿಕ್ಷಣದಲ್ಲಿ ಸರ್ವಸಮತೆ

ಸರ್ವಸಮತೆಯನ್ನು ಬೇರೆ ಬೇರೆ ಸಂದರ್ಭಗಳಿಗೆ ಅನುಗುಣವಾಗಿ ಬೇ ರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಆಕ್ಸ್‌ಫರ್ಡಿನ ಅಡ್ವಾನ್ಸ್‌ಡ್ ಲರ್ನರ್ಸ್ ನಿಘಂಟುವಿನಲ್ಲಿ ಅದನ್ನು ಹೀಗೆ ವ್ಯಾಖ್ಯಾನಿಸಲಾಗಿದೆ: 'ಇದು ಆರ್ಥಿಕತೆಯಲ್ಲಿ ಕಂಪೆನಿಯ ಭಾಗಾಂಶದ ಮೌಲ್ಯವಾಗುತ್ತದೆ. ಸಾಮಾನ್ಯ ಬಳಕೆಯಲ್ಲಿ ಪ್ರತಿಯೊಬ್ಬರನ್ನೂ ಸಮಾನವಾಗಿ ಕಾಣುವುದಕ್ಕೆ ಇದನ್ನು ಉಪಯೋಗಿಸಲಾಗುತ್ತದೆ. ಸಾಮಾನ್ಯವಾಗಿ ಇದನ್ನು ನ್ಯಾಯ ಮತ್ತು ಸಮಾನತೆ ಇರುವಂತಹ ಸಮಾಜದಲ್ಲಿರುವ ನಿಷ್ಪಕ್ಷಪಾತವಾದ ರೀತಿಗೆ ಸಮಾನ ಪದವಾಗಿ ಬಳಸಲಾಗುತ್ತದೆ. ಕಾನೂನಿನ ಸಂದರ್ಭದಲ್ಲಿ, ಈಗಾಗಲೇ ಇರತಕ್ಕಂತಹ ಕಾನೂನುಗಳು ತೃಪ್ತಿಕರವಾಗಿ ಇಲ್ಲದಿರುವ ಪರಿಸ್ಥಿತಿಯಲ್ಲಿ ಸೂಕ್ತ ತೀರ್ಪು ನೀಡತಕ್ಕಂತಹ ಸಹಜ ನ್ಯಾಯ ವ್ಯವಸ್ಥೆಯನ್ನು ಇದು ಸೂಚಿಸಬಹುದು.' ಆಕ್ಸ್‌ಫರ್ಡ್ ಪರಾಮರ್ಶನ ನಿಘಂಟುವಿನಲ್ಲಿ 'ಸರ್ವಸಮತೆ'ಯನ್ನು 'ನಿಷ್ಪಕ್ಷಪಾತ'ವಾಗಿ, 'ಕಾನೂನನ್ನು ಸರಿಪಡಿಸಲು ಅಥವಾ ಬೆಂಬಲಿಸಲು ಸಾಮಾನ್ಯ ಕಾನೂನು ನಿಯಮಗಳನ್ನು ಅನ್ವಯಿಸಿಕೊಳ್ಳುವುದು,' 'ಖರ್ಚುಗಳನ್ನು ಕಳೆದು ಅಡವಿಟ್ಟ ಆಸ್ತಿಯ ಭಾಗಾಂಶದ ಮೌಲ್ಯ/ ನಿವ್ವಳ ಮೌಲ್ಯ.' ಎಂಬುದಾಗಿ ವಿವರಿಸಲಾಗಿದೆ. ಈ ಪದವನ್ನು ಅನೇಕ ರೀತಿಯಲ್ಲಿ ವಿವರಿಸಲು ಮ್ಯಕ್‌ಗಿನಿಟಿ ಮತ್ತು ಫಿಶ್(1993) ಪ್ರಯತ್ನಿಸಿದ್ದಾರೆ. ಅವರು ಹೇಳುವ ಪ್ರಕಾರ, ಇದು ಸಂಪನ್ಮೂಲಗಳ ಮತ್ತು ಅವಕಾಶಗಳ ಲಭ್ಯತೆ ಮತ್ತು ಅಥವಾ ಹಂಚಿಕೆಗೆ ಸಂಬಂಧಪಟ್ಟ ಪದವಾಗಿದೆ. ವಿದ್ಯಾರ್ಥಿಗಳ ಗುಂಪನ್ನು ಕುರಿತು ಮಾತನಾಡುತ್ತಾ ಅವರು ಹೇಳುತ್ತಾರೆ, 'ವಿದ್ಯಾರ್ಥಿಗಳ ಗುಂಪುಗಳು ತರಬೇತಿಗೆ ಸೂಕ್ತವೋ, ಅಲ್ಲವೋ ಎಂಬ ನಿಟ್ಟಿನಲ್ಲಿ ಗುಣಲಕ್ಷಣಗಳನ್ನು ಹೊಂದಿದ್ದರೆ ಆಗ ಸರ್ವಸಮತೆಯು ಬೆದರಿಕೆಗೆ ಒಳಪಡುತ್ತದೆ.' ಅವರು ಮುಂದುವರಿದು ಸಮಾನತೆ ಮತ್ತು ಸರ್ವಸಮತೆಯ ನಡುವಿನ ವ್ಯತ್ಯಾಸವನ್ನು ತಿಳಿಸಲು ಪ್ರಯತ್ನಿಸಿ ಹೇಳುತ್ತಾರೆ, 'ಒಂದೇ ಜನಾಂಗದಲ್ಲಿ ವಯಸ್ಸು ಮತ್ತು ಪರಿಸ್ಥಿತಿಯನ್ನು ಪರಿಗಣಿಸದೆ ಸಮಾನ ಅವಕಾಶಗಳನ್ನು ನೀಡುವುದು.' ವಿಭಿನ್ನ ಅವಕಾಶಗಳನ್ನು ಸರಿಯಾದ ಕ್ರಮದಲ್ಲಿ ಸಂಪನ್ಮೂಲವಾಗಿಸಿದಾಗ ಮತ್ತು ಅವುಗಳಿಗೆ ಸಮಾನ ಮಟ್ಟವನ್ನು ಕಲ್ಪಿಸಿದಾಗ ಸರ್ವಸಮತೆಗೆ ಇನ್ನೂ ಹೆಚ್ಚಿನ

Digitised by Bharatavani, CIIL

ಅನುಸಂಧಾನ ಇರಬೇಕಾಗುತ್ತದೆ. ಸರ್ವಸಮತೆಯ ಪರಿಕಲ್ಪನೆಯು 'ಉನ್ನತ ಮೌಲ್ಯ'ದ ಮತ್ತು 'ಕೆಳ ಮೌಲ್ಯ'ದ ವಿದ್ಯಾರ್ಥಿಗಳ ನಡುವೆ ಪಕ್ಷಪಾತದ ತಾರತಮ್ಯವನ್ನು ಹೊಂದದಿರುವ ಶಿಕ್ಷಣ ಮತ್ತು ತರಬೇತಿಗೆ ಆರ್ಥಿಕ ನೆರವನ್ನು ಒದಗಿಸತಕ್ಕಂತ ವ್ಯವಸ್ಥೆಯಾಗಿರಬೇಕೆಂದು ಬಯಸುತ್ತದೆ.

20ನೇ ಶತಮಾನದ ಚೇಂಬರ್ಸ್ ನಿಘಂಟುವಿನ ಸರ್ವಸಮತೆಯ ವ್ಯಾಖ್ಯಾನ ಹೀಗಿದೆ: 'ಪ್ರಕೃತಿಯ ನಿಯಮಗಳಲ್ಲಿ ಕಾಣಬರುವಂತಹ ಹಕ್ಕು, ನಿಯಮಗಳು, ಅಪರಿಪೂರ್ಣ ಅಭಿವ್ಯಕ್ತಿಯ ನೈತಿಕ ತೀರ್ಪು; ನಿಷ್ಪಕ್ಷಪಾತ; ಸರ್ವಸಮತೆಯನ್ನು ಪಡೆಯುವ ಹಕ್ಕು.' ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟುವಿನಲ್ಲಿ ಸರ್ವಸಮತೆಯನ್ನು ಸಾಮಾನ್ಯ ನೆಲೆಯಿಂದ ವಿವರಿಸಿರುವುದು ಹೀಗಿದೆ: 'ಸಮಾನವಾಗಿ ಅಥವಾ ನಿಷ್ಪಕ್ಷಪಾತವಾಗಿ ಇರುವಂತಹ ಗುಣಲಕ್ಷಣ; ಹಿತಕರ; ನಿಷ್ಪಕ್ಷಪಾತ; ನ್ಯಾಯ; ನಿಷ್ಪಕ್ಷವಾಗಿ ಮತ್ತು ಸರ್ವಸಮತೆಯನ್ನು ಪಡೆಯತಕ್ಕಂತಹ ಯಾವುದಾದರೂ ಒಂದು.' ವೆಬ್‌ಸ್ಟರ್ಸ್ ಅವರ ಹೊಸ ಜಾಗತಿಕ ನಿಘಂಟುವಿನಲ್ಲಿ (ಮಾಡರ್ನ್ ಡೆಸ್ಕ್ ಎಡಿಶನ್) ಅದರ ನಿರ್ವಚನ ಹೀಗಿದೆ: 'ನ್ಯಾಯವಾದ ವ್ಯವಹಾರ, ನಿಷ್ಪಕ್ಷಪಾತ, ನ್ಯಾಯ, ನ್ಯಾಯಸಮ್ಮತವಾದ ಹಾಗೂ ಧರ್ಮಸಮ್ಮತವಾದ ಯಾವುದೇ ಆದರೂ, ಶಿಕ್ಷಣದ ನಿಘಂಟು ಇದನ್ನು 'ಕಾನೂನಿನಲ್ಲಿ ಪೂರ್ಣ ಅಥವಾ ಉಚಿತರೀತಿಯ ಉಪಶಮನವಿಲ್ಲದ ಸಂದರ್ಭದಲ್ಲಿ ಪರಿಹಾರ ನೀಡತಕ್ಕಂತಹ ವ್ಯವಸ್ಥೆ' ಎಂಬುದಾಗಿ ಅರ್ಥೈಸುತ್ತದೆ.

ಈ ಚರ್ಚೆಯ ವಿಚಾರವಾಗಿ ಸರ್ವಸಮತೆಯನ್ನು ಹೀಗೆ ವಿವರಿಸಿಕೊಳ್ಳಬಹುದು, 'ಒಂದು ಗುಂಪಿನ ಜನರು ಅಥವಾ ವ್ಯಕ್ತಿ ಕಳೆದುಕೊಂಡಿರುವ ಅವಕಾಶಗಳನ್ನು ತುಂಬಿಕೊಳ್ಳುವ ಕಾಳಜಿ.' ನಾವು ಜನರನ್ನು ಸರ್ವಸಮತೆಯ ಕೊನೆಯ ಕಾಳಜಿಯಾಗಿ ಕಾಣುವುದಾದರೆ, ನಾವು ಅವರನ್ನು ಲಿಂಗ, ಗ್ರಾಮೀಣ–ನಗರ, ಪ್ರಾದೇಶಿಕತೆ(ಜನಸಂಖ್ಯಾಧಾರಿತ ಮತ್ತು /ಅಥವಾ ಭೌಗೋಳಿಕ), ಜಾತಿ(ವಿಶೇಷವಾಗಿ ಭಾರತೀಯ ಸಂದರ್ಭದಲ್ಲಿ ಪರಿಶಿಷ್ಟ ಜಾತಿಗಳು), ಬುಡಕಟ್ಟು(ವಿಶೇಷವಾಗಿ ಪರಿಶಿಷ್ಟ ಬುಡಕಟ್ಟುಗಳು) ಮತ್ತು ಅಂಗವಿಕಲರು ಮತ್ತು ದುರ್ಬಲರು ಎಂಬುದನ್ನು ಆಧರಿಸಿ ಅವರನ್ನು ವರ್ಗೀಕರಿಸಬಹುದು.

ಈ ನಾಲ್ಕೂ ವರ್ಗಗಳನ್ನು ನಾವು ಈಗ ನಾಲ್ಕು ಪ್ರಮುಖ ಅಳತೆಗೋಲುಗಳಿಂದ ಪರಿಶೀಲಿಸೋಣ. ಅವುಗಳೆಂದರೆ ತತ್ವಶಾಸ್ತ್ರ; ಕಾರ್ಯಕ್ರಮಗಳು ಮತ್ತು ಕಾರ್ಯಯೋಜನೆಗಳು. ಇವುಗಳನ್ನು ವಿಶೇಷವಾಗಿ ಸುಲಭಗಮ್ಯತೆ, ಅವಕಾಶಗಳು, ಭಾಗವಹಿಸುವಿಕೆ, ಸಾಧನೆಗಳ ಸಂದರ್ಭಗಳಿಂದ ನೋಡಿಕೊಂಡು; ಅನುಷ್ಠಾನ, ಕಾರ್ಯವಿಧಾನವನ್ನು ಬದಲಾಯಿಸಿಕೊಳ್ಳುವುದು ಮತ್ತು ಕ್ರಮಿಸಬೇಕಾದ ದೂರ. ಇದಲ್ಲದೆ ಬೇರೆ ಉಲ್ಲೇಖ ಇಲ್ಲದಿದ್ದಾಗ ಭಾರತೀಯ ಸಂದರ್ಭಕ್ಕೆ ವಿಶೇಷ ಗಮನವನ್ನು ನೀಡಲಾಗಿದೆ. ನಾವು ಉದ್ದೇಶಪೂರ್ವಕವಾಗಿ ಅಂಕಿ ಅಂಶಗಳನ್ನು ಇಲ್ಲಿ ಕೈಬಿಟ್ಟಿದ್ದೇವೆ. ಏಕೆಂದರೆ ಇದರಿಂದ ಮಾಹಿತಿಯು ನಿಶ್ಚಿತ ಕಾಲಕ್ಕೆ ಸೀಮಿತವಾಗಿಡುವುದು ಮತ್ತು ಸರ್ವವಿಷಯ ಪೂರ್ಣತೆಯಲ್ಲಿ ಪ್ರವೇಶ ಪಡೆಯುವ ಮೂಲಭೂತ ಪರಿಕಲ್ಪನೆಯನ್ನು ಅದು ಸೋಲಿಸಿಬಿಡುವುದು. ನಾವು ಪ್ರವೃತ್ತಿ ಮತ್ತು ಸೈದ್ಧಾಂತಿಕ ಕಾಳಜಿಗಳಲ್ಲಿ ಹೆಚ್ಚು ಗಮನವನ್ನು ಹರಿಸಲಿದ್ದೇವೆ. ಇವುಗಳನ್ನು ಮುಂದೆ ಪ್ರಾಥಮಿಕ ಶಿಕ್ಷಣ, ಸೆಕೆಂಡರಿ ಶಿಕ್ಷಣ ಮತ್ತು ತೃತೀಯ ಹಂತದ ಶಿಕ್ಷಣ ಕ್ಷೇತ್ರಗಳಲ್ಲಿ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣದ ಸಂದರ್ಭದಲ್ಲಿಟ್ಟು ಪರಿಶೀಲಿಸಲಾಗುವುದು.

**ಶಿಕ್ಷಣದಲ್ಲಿ ಲಿಂಗಾಧಾರಿತ ಸರ್ವಸಮತೆಯ ಕಾಳಜಿಗಳು:**

ಈ ಕಾಳಜಿಯ ಮೂಲದಲ್ಲಿರುವುದು ಭಾರತದ ಸಂವಿಧಾನದಲ್ಲಿ ಮತ್ತು ಮಾನವ ಹಕ್ಕುಗಳ ಸನ್ನದಿನಲ್ಲಿ ಅಳವಡಿಸಿಕೊಳ್ಳಲಾದ ಲಿಂಗಸಮಾನತೆ. ಎರಡು ಲಿಂಗಗಳ ನಡುವೆ ಸರ್ವಸಮತೆಯನ್ನು ತರುವುದರಲ್ಲಿ ಅಪಾರ ಪ್ರಗತಿಯನ್ನು ಸಾಧಿಸಲಾಗಿದೆ. ಶಿಕ್ಷಣದಲ್ಲಿ ಯಾವುದೇ ರೀತಿಯ ಲಿಂಗಾಧಾರಿತ ತಾರತಮ್ಯ ಇರಬಾರದೆಂದು ಎಲ್ಲಾ ಹಂತಗಳಲ್ಲಿ ಗುರುತಿಸಲಾಗಿದೆ. ಅಲ್ಲದೆ, ಲಿಂಗ ಸರ್ವಸಮತೆಗೂ ವಿಶೇಷ ಕಾರಣಗಳು ಇವೆ. ನಾವು ಮತ್ತೆ ಮತ್ತೆ ಕೇಳಿಸಿಕೊಳ್ಳುವ ಮಾತು ಯಾವುದೆಂದರೆ, 'ನೀವು ಒಬ್ಬ ಹುಡುಗನಿಗೆ ಶಿಕ್ಷಣ ನೀಡಿದರೆ ಅದು ಒಬ್ಬ ವ್ಯಕ್ತಿಗೆ ಶಿಕ್ಷಣ ನೀಡಿದಂತೆ. ಆದರೆ ನೀವು ಒಬ್ಬ ಹುಡುಗಿಗೆ ಶಿಕ್ಷಣ ನೀಡಿದರೆ, ನೀವು ಒಂದು ಪೀಳಿಗೆಗೆ ಶಿಕ್ಷಣ ನೀಡಿದಂತೆ.' ಆದರೆ ಇದು 'ಮಹಿಳಾ ಸ್ವಾತಂತ್ರ್ಯ' ಚಳವಳಿಯ ಉತ್ಪತ್ತಿಗಳಿಗಿಂತ ಭಿನ್ನವಾಗಿದೆ. ಶಿಕ್ಷಣವು ಸಶಕ್ತೀಕರಣದ ಸಲಕರಣೆಯಾಗಿದೆ. ಇದನ್ನು ಈ ರೀತಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿಯ ತಾತ್ವಿಕತೆಯಲ್ಲಿ ಗುರುತಿಸಲಾಗಿದೆ. ಹೆಣ್ಣುಮಕ್ಕಳ/ಮಹಿಳೆಯರ ಶಿಕ್ಷಣವನ್ನು ಹೊರತುಪಡಿಸಿ ಯಾವುದೇ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲವೆಂಬುದನ್ನು ಎಲ್ಲಾ ಸರಕಾರಿ ಕಾರ್ಯನೀತಿಗಳಲ್ಲಿ ಮಾನ್ಯ ಮಾಡಲಾಗಿದೆ. ಆದುದರಿಂದ, ಮಹಿಳೆಯರ ವಿಮೋಚನೆಗೆ ಇದು ಸಾಧನವಾಗಬಲ್ಲದು. ಸರಕಾರದ ಮಧ್ಯಸ್ಥಿಕೆಯ ಮೂಲಕ ಇದನ್ನು ಅಳವಡಿಸಿಕೊಳ್ಳಲಾಗಿದೆ.

**ಸುಲಭಗಮ್ಯತೆ:**

ಹೆಣ್ಣುಮಕ್ಕಳ ಶಿಕ್ಷಣ ಮತ್ತು ಸುಲಭಗಮ್ಯತೆಗಳಿಗೆ ಹತ್ತಿರದ ಸಂಬಂಧವಿದೆ. ವಿಶೇಷವಾಗಿ ಪ್ರಾಥಮಿಕ ಹಂತದ ನಂತರ (4/5ನೇ ತರಗತಿಯ ಬಳಿಕ) ಹೆಣ್ಣುಮಕ್ಕಳ ದಾಖಲಾತಿಯು ಕೆಳಮಟ್ಟದಲ್ಲಿರಲು ಮನೆಯ ಹತ್ತಿರ ಹಿರಿಯ ಪ್ರಾಥಮಿಕ ಹಂತದ ಶಿಕ್ಷಣವಿರುವ ಶಾಲೆಗಳು ಇಲ್ಲದಿರುವುದು ಮತ್ತು ಹೆಣ್ಣುಮಕ್ಕಳು ಶಾಲಾ ದಾಖಲಾತಿಗೆ ದೂರ ಪ್ರಯಾಣಿಸದಿರುವುದು ಕಾರಣವೆಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಹೆಣ್ಣುಮಕ್ಕಳು ದೂರ ಪ್ರಯಾಣಿಸದಿರುವುದಕ್ಕೆ ವಿಶೇಷ ಕಾರಣಗಳೆಂದರೆ, 1. ಪ್ರಯಾಣಿಸುವಾಗ ಸುರಕ್ಷತೆ ಇರುವುದಿಲ್ಲವೆಂದು; 2. ಕಾಲ್ನಡಿಗೆಯ ಪ್ರಯಾಣ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದರಿಂದ

Digitised by Bharatavani, CIIL

ಮನೆಕೆಲಸಕ್ಕೆ ತೊಂದರೆಯಾಗುವುದು; 3. ಹೆಣ್ಣುಮಕ್ಕಳು ಗೃಹಸಂಬಂಧಿ ಕಾರ್ಯಗಳನ್ನು ನಡೆಸಬೇಕು ಮತ್ತು ಅವರ ಶಿಕ್ಷಣವು ಈ ಉದ್ದೇಶಕ್ಕೆ ಹೊಂದುವಂತಿದ್ದರೆ ಸಾಕೆನ್ನುವ ಹೆತ್ತವರ ಧೋರಣೆ; 4. ಹೆಣ್ಣುಮಕ್ಕಳಿಗೆ ಕಲಿಸಲು ಶಿಕ್ಷಕರಿಗಿಂತ ಶಿಕ್ಷಕಿಯರು ಇರುವುದು ಉತ್ತಮವೆಂದು ತಿಳಿದುಕೊಳ್ಳುವ ಹೆತ್ತವರು. ಇದು ಸಾಂಪ್ರದಾಯಿಕವಾಗಿ ಆಳದಲ್ಲಿ ಬೇರೂರಿರುವ ಇಚ್ಛೆಯಾಗಿದೆ; 5. ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇಲ್ಲದ ಶಾಲೆಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸಲು ಹೆತ್ತವರು ಇಷ್ಟಪಡದಿರುವುದು; 6. ಹುಡುಗಿಯರನ್ನು, ಅದರಲ್ಲಿಯೂ ವಯಸ್ಸಿಗೆ ಬಂದವರನ್ನು ದೂರದ ವಸತಿಶಾಲೆಗೆ ಕಳುಹಿಸಲು ಹೆತ್ತವರು ಇಷ್ಟಪಡದಿರುವುದು.

**ಸರ್ವಸಮತೆಯ ಸವಾಲುಗಳು:**

ಈ ಎಲ್ಲಾ ಅಂಶಗಳಿಂದಾಗಿ ಗ್ರಾಮೀಣ ಪ್ರದೇಶಗಳು, ಜನಸಂಖ್ಯೆ ಕಡಿಮೆ ಇರುವ ಪ್ರದೇಶಗಳು, ಗುಡ್ಡಗಾಡು ಪ್ರದೇಶಗಳು, ದಟ್ಟ ಅರಣ್ಯಪ್ರದೇಶಗಳು ಮತ್ತು ನಗರದ ಕೊಳೆಗೇರಿಯಲ್ಲಿ ವಾಸವಾಗಿರುವವರನ್ನೂ ಸೇರಿಸಿ ದೊಡ್ಡ ಸಂಖ್ಯೆಯ ಹುಡುಗಿಯರು ಈಗಾಗಲೇ ಇರುವ ಶಾಲಾ ಸೌಲಭ್ಯಗಳನ್ನು ಪಡೆಯಲು ವಿಫಲರಾಗಿದ್ದಾರೆ. ಈ ರೀತಿಯಾಗಿ ಭಾರತದಲ್ಲಿ, ಸ್ವಾತಂತ್ರ್ಯೋತ್ತರ ಅವಧಿಯ ಶೈಕ್ಷಣಿಕ ಯೋಜನೆಗಳು ಐವತ್ತು ವರ್ಷಗಳಿಂದ ಚಲಾವಣೆಯಲ್ಲಿದ್ದರೂ. ಶೈಕ್ಷಣಿಕ ಅವಕಾಶಗಳಲ್ಲಿರುವ ಸರ್ವಸಮತೆಯ ಕಾಳಜಿಯು ಒಂದು ನಿರ್ಣಾಯಕ ವಿಚಾರವಾಗಿ ಉಳಿದಿದೆ.

ಶಿಕ್ಷಣದ ಪ್ರತಿಯೊಂದು ಹಂತದಲ್ಲಿ ಶಿಕ್ಷಣದ ಅವಕಾಶ ಮತ್ತು ಶೈಕ್ಷಣಿಕ ಅವಕಾಶಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಲಿಂಗ ಅಂತರವು ಸ್ಪಷ್ಟವಾಗಿ ಗೋಚರವಾಗುತ್ತದೆ.

**ಲಿಂಗ ಸರ್ವಸಮತೆಯನ್ನು ಖಾತ್ರಿಪಡಿಸುವುದಕ್ಕಾಗಿ ಸರಕಾರದ ಮಧ್ಯಸ್ಥಿಕೆ:**

ಹೆಣ್ಣುಮಕ್ಕಳಿಗೆ/ಮಹಿಳೆಯರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವ ಕಾಳಜಿಯಲ್ಲಿ ಸರಕಾರದ ತೀವ್ರ ಸಂವೇದನೆಯು ಯೋಜಿತ ಶೈಕ್ಷಣಿಕ ಮಧ್ಯಸ್ಥಿಕೆಗಳ ಮೂಲಕ ದೇಶವು ಕೈಗೆತ್ತಿಕೊಂಡಿರುವ ಕಾರ್ಯಗಳಲ್ಲಿ ಸುವ್ಯಕ್ತವಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಅನೇಕ ಕಾರ್ಯಕ್ರಮಗಳು ಮತ್ತು ಕಾರ್ಯಯೋಜನೆಗಳನ್ನು ಏರ್ಪಡಿಸಲಾಗಿದೆ. ಶಿಕ್ಷಣದ ಹತ್ತನೆಯ ಪಂಚವಾರ್ಷಿಕ ಯೋಜನೆಯು ಪ್ರಾಥಮಿಕ ಶಾಲೆಗಳ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಅನುಪಾತವನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿತಗೊಳಿಸುವ ಆಲೋಚನೆಯಲ್ಲಿ ಇದೆ. ನಿರ್ದಿಷ್ಟವಾಗಿ ಲಿಂಗ ಸಮಾನತೆಯನ್ನು ಸಾಧಿಸುವ ದೃಷ್ಟಿಯಿಂದ ಅದನ್ನು 3:1ರಲ್ಲಿ ನಿಶ್ಚಿತಗೊಳಿಸಲಾಗಿದೆ. ಕೆಲವು ಅರ್ಥಪೂರ್ಣ ಕಾರ್ಯಕ್ರಮಗಳು ಮತ್ತು ಕಾರ್ಯಯೋಜನೆಗಳು ಹೀಗಿವೆ: ಶಿಕ್ಷಣದ ಎಲ್ಲಾ ಹಂತಗಳಲ್ಲಿ ಹುಡುಗಿಯರಿಗೆ ಉಚಿತ ಶಿಕ್ಷಣ ನೀಡುವಿಕೆ; ಪ್ರಾಥಮಿಕ ಹಂತದಲ್ಲಿ ಹುಡುಗಿಯರಿಗೆ ಉಚಿತ ಸಮವಸ್ತ್ರ ನೀಡುವಿಕೆ; ಪ್ರಾಥಮಿಕ ಹಂತದಲ್ಲಿ ಹುಡುಗಿಯರಿಗೆ ಉಚಿತ ಪುಸ್ತಕಗಳ ನೀಡುವಿಕೆ; ಉಚಿತ ಮಧ್ಯಾಹ್ನದ ಊಟ (ಇದು ಹುಡುಗಿಯರೂ ಸೇರಿದಂತೆ ಪ್ರಾಥಮಿಕ ಹಂತದ ಎಲ್ಲಾ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ); ಹುಡುಗಿಯರ ಶಿಕ್ಷಣಕ್ಕಾಗಿ ವಿಶೇಷ ಘಟಕ ಯೋಜನೆ; ಹುಡುಗಿಯರಿಗಾಗಿ ಹಾಜರಾತಿ ಶಿಷ್ಯವೇತನ; ವಿಶೇಷ ಕಾರ್ಯಕ್ರಮಗಳು ಮತ್ತು ಕಾರ್ಯಯೋಜನೆಗಳ ಮೂಲಕ ಮಹಿಳೆಯರು/ಹುಡುಗಿಯರ ಶಿಕ್ಷಣದ ಪರವಾಗಿ ರಾಜ್ಯಗಳ ರಕ್ಷಣಾತ್ಮಕ ತಾರತಮ್ಯ; ಒಂಭತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಣ್ಣುಮಕ್ಕಳ ಶಿಕ್ಷಣವನ್ನು ವರ್ಗಾಯಿಸಲಾಗದ ಕ್ಷೇತ್ರವಾಗಿ ಗುರುತಿಸುವುದು; ಹೆಣ್ಣುಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ಸಲುವಾಗಿ ಕ್ರಮಗಳನ್ನು ಉಳಿಸಿಕೊಂಡು ಬರುವುದಕ್ಕಾಗಿ ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳ ನಡುವೆ ಅಂತರಸಂಪರ್ಕ; ಹೆಣ್ಣುಮಗು ಮತ್ತು ಮಹಿಳೆಯರ ಸಶಕ್ತೀಕರಣವನ್ನು ಕೇಂದ್ರವಾಗಿಟ್ಟುಕೊಂಡು ಶೈಕ್ಷಣಿಕ ಯೋಜನೆಯ ಕಾರ್ಯವಿಧಾನದಲ್ಲಿ ಲಿಂಗ ಸರ್ವಸಮತೆಯನ್ನು ಸಂಯೋಜಿಸುವುದು; ಶಿಕ್ಷಕಿಯರ ನೇಮಕಾತಿ; ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಕುರಿತಾಗಿ ಸೌಲಭ್ಯಗಳ ಒದಗಿಸುವಿಕೆ; ಶಾಲೆಗಳಲ್ಲಿ ಶಿಶುಕೇಂದ್ರಗಳ ಸೌಲಭ್ಯಗಳು; ರಾಜ್ಯ, ಜಿಲ್ಲೆ ಮತ್ತು ಉಪ-ಜಿಲ್ಲಾ ಹಂತಗಳಲ್ಲಿ ನಿಯಮಿತ ದಾಖಲಾತಿಗಾಗಿ ವ್ಯವಸ್ಥಿತ ಪ್ರಯತ್ನಗಳು; ಶಾಲೆಗಳ ಸೇವೆ ಇಲ್ಲದೇ ಇರುವಂತಹ ಕ್ಷೇತ್ರಗಳಲ್ಲಿ ಹುಡುಗಿಯರಿಗಾಗಿಯೇ ಪ್ರತ್ಯೇಕವಾದ ಅನೌಪಚಾರಿಕ ಶಿಕ್ಷಣ ಕೇಂದ್ರಗಳು, ಪರ್ಯಾಯ ವಿದ್ಯಾಭ್ಯಾಸದ ವಿಶೇಷ ಮಾದರಿಗಳ ಮೂಲಕ, ಉದಾಹರಣೆಗೆ ಅಂಗನ ವಿದ್ಯಾಲಯ, ಬಾಲ ವಿದ್ಯಾಲಯ, ಬಾಲ ಶಾಲೆಗಳು, ಪರ್ಯಾಯ ಶಾಲೆ ಮತ್ತು ಮೊದಲ ಹಂತದ ಬಾಲ್ಯ ಕಾಳಜಿ ಮತ್ತು ಶಿಕ್ಷಣ ಕೇಂದ್ರಗಳು(ಇಸಿಸಿಇ ಗಳು) ಶಿಕ್ಷಣದಲ್ಲಿ ಲಿಂಗ ಸರ್ವಸಮತೆಯ ಚಳವಳಿಯನ್ನು ಬಲಪಡಿಸುವುದಕ್ಕಾಗಿ ಮಹಿಳಾ ಸಂಸ್ಥೆಗಳ ಸಾಮರ್ಥ್ಯದ ಬೆಳೆಸುವಿಕೆ; ರಾಷ್ಟ್ರೀಯ ಮುಕ್ತ ಶಾಲೆ(ಎನ್‌ಓಎಸ್) ಮತ್ತು ರಾಜ್ಯ ಮುಕ್ತ ಶಾಲೆಗಳಂತಹ (ಎಸ್‌ಓಎಸ್ ಗಳು) ಮುಕ್ತ ಕಲಿಕೆ ಮತ್ತು ದೂರ ಮಾದರಿಗಳ ಮೂಲಕ ಶಿಕ್ಷಣವನ್ನು ಒದಗಿಸುವ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದು.

ಇವುಗಳನ್ನು ಲಿಂಗ ಸರ್ವಸಮತೆಯ ತೀರ್ಮಾನವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಭರವಸೆದಾಯಕವಾಗಿರುವ 'ಸರ್ವರಿಗೂ ಶಿಕ್ಷಣ'(ಇಎಫ್‌ಎ)ಕ್ಕಾಗಿ ಇರುವಂತಹ ಪೋಸ್ಟ್ ಡಾಕರ್ ಕಾರ್ಯವಿಧಾನಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

**ಹೆಣ್ಣುಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಅವರ ಸಾಧನೆಗಾಗಿ ಶೈಕ್ಷಣಿಕ ಅವಕಾಶಗಳ ಬಳಕೆಯಲ್ಲಿ ಸರ್ವಸಮತೆ:**

ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಹೆಣ್ಣುಮಕ್ಕಳು ಅವಕಾಶಗಳನ್ನು ಬಳಸುವುದು, ಅದರಲ್ಲಿ ಭಾಗವಹಿಸುವುದು

Digitised by Bharatavani, CIIL

ಮತ್ತು ಅವರ ಸಾಧನೆಯ ಹಂತವನ್ನು ಉಗಮಿಸುತ್ತಿರುವ ಶೈಕ್ಷಣಿಕ ಘಟನಾವಳಿಯು ಸೂಚಿಸುತ್ತದೆ. ಪ್ರಾಥಮಿಕ ಮತ್ತು ಸೆಕೆಂಡರಿ ಹಂತಗಳಲ್ಲಿ ಹುಡುಗರು ಮತ್ತು ಹುಡುಗಿಯರ ದಾಖಲಾತಿಯ ಪ್ರಗತಿಗೆ ಸಂಬಂಧಿಸಿದ ಕೆಲವು ಪ್ರವೃತ್ತಿಗಳು ಸೂಚಿಸುವುದೇನೆಂದರೆ –ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳಲ್ಲಿ ಹುಡುಗರು ಮತ್ತು ಹುಡುಗಿಯರ ದಾಖಲಾತಿಯಲ್ಲಿ ಗಮನಾರ್ಹ ಪ್ರಗತಿಯು ಕಂಡುಬಂದಿದೆ; ಹಿರಿಯ ಪ್ರಾಥಮಿಕ ಹಂತಗಳಲ್ಲಿ ಪ್ರಗತಿಯು ಹೆಚ್ಚು ಪ್ರಭಾವಶಾಲಿಯಾಗಿದೆ; ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳೆರಡರಲ್ಲಿಯೂ, ಒಟ್ಟು ದಾಖಲಾತಿಯಲ್ಲಿ ಹುಡುಗಿಯರ ಶೇಕಡ ಪ್ರಮಾಣವು ಗಣನೀಯವಾಗಿ ಹೆಚ್ಚಾಗಿದೆ; ಹಿರಿಯ ಪ್ರಾಥಮಿಕ ಹಂತದಲ್ಲಿ ಒಟ್ಟು ದಾಖಲಾತಿಯಲ್ಲಿ ಹುಡುಗಿಯರ ಪಾಲು ಕಡಿಮೆ ಇದೆ; ಒಟ್ಟು ದಾಖಲಾತಿ ಅನುಪಾತದಲ್ಲಿನ(ಜಿಇಆರ್) ಹುಡುಗರು–ಹುಡುಗಿಯರ ವ್ಯತ್ಯಾಸವು ಕಡಿಮೆಯಾಗಿದೆ(1990–91ರಲ್ಲಿದ್ದ ಶೇಕಡಾ 22 ಮತ್ತು 25, 1990–2000ದಲ್ಲಿ ಶೇಕಡ 19 ಮತ್ತು 17ಕ್ಕೆ–ಶೇಕಡಾ ಅಂಕಿಗಳಲ್ಲಿ); 1999–2000ದಲ್ಲಿ ವಾರ್ಷಿಕ ಅವಧಿ ಮುಗಿಯುವ ಮೊದಲೇ ಹುಡುಗಿಯರು ಶಾಲೆಯಿಂದ ದೂರ ಸರಿಯುವ ಅಥವಾ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಹುಡುಗಿಯರು ಕಡಿಮೆ ಸಂಖ್ಯೆಯಲ್ಲಿರುವುದು (42.28 ಶೇಕಡ), 1999–2002ರ ಅವಧಿಯಲ್ಲಿ ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಹುಡುಗಿಯರ ಸಂಖ್ಯೆಯ ದರ ಹೆಚ್ಚಿರುವುದು(60.09 ಶೇಕಡ); ಮತ್ತು ಹುಡುಗಿಯರ ಶಿಕ್ಷಣದ ಧನಾತ್ಮಕ ಬೆಳವಣಿಗೆಯು ಪ್ರಾಥಮಿಕ ಹಂತದಲ್ಲಿ ಹುಡುಗರ ಮತ್ತು ಹುಡುಗಿಯರ ದಾಖಲಾತಿಯ ಅನುಪಾತಕ್ಕೆ ಸಂಬಂಧಿಸಿದಂತೆ ಧನಾತ್ಮಕ ಪ್ರವೃತ್ತಿಯನ್ನು ಮತ್ತು ಶಾಲೆ ಬಿಡುವ ಸಂಗತಿಯು ಕಡಿಮೆ ಕಾಣಿಸಿಕೊಂಡಿರುವುದನ್ನು ಸೂಚಿಸುತ್ತದೆ.

**ಪ್ರಾಥಮಿಕದಿಂದ ಹಿರಿಯ ಪ್ರಾಥಮಿಕ ಹಂತಕ್ಕೆ ಸಾಗಿದಾಗ ಸಾಧನೆ ಮತ್ತು ಪರಿವರ್ತನೆಯ ದರ:**

ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳಲ್ಲಿ ಹುಡುಗಿಯರ ಸಾಧನೆ ಮತ್ತು ಪರಿವರ್ತನೆಯ ದರದ ಹಂತಗಳು ಶೈಕ್ಷಣಿಕ ಹೋರಾಟ ಕಾರ್ಯದ ಸರ್ವಸಮತೆ, ಸಮಾನತೆ ಮತ್ತು ಗುಣಮಟ್ಟದ ಉದ್ದೇಶಗಳ ಈಡೇರಿಕೆಯ ವ್ಯಾಪ್ತಿಯನ್ನು ಪ್ರತಿಫಲಿಸುತ್ತವೆ.

ಮೇಲೆ ಉಲ್ಲೇಖಿಸಲಾದ ವಿಚಾರಾಂಶಗಳಲ್ಲಿ ದೇಶವು ಪಡೆದಿರುವಂತಹ ಸ್ಥಾನವು ಪ್ರಗತಿಯನ್ನು ಸೂಚಿಸುತ್ತದೆ. ಕೆಲವು ಪ್ರಾದೇಶಿಕ ಹಂತದ ಭಿನ್ನತೆಗಳು ಇದ್ದರೂ ದೇಶದ ಒಟ್ಟು ಚಿತ್ರಣದಲ್ಲಿ ಸಾಮಾನ್ಯ ಪ್ರವೃತ್ತಿಯು ಎರಡೂ ಪರಿಗಣನೆಗಳಲ್ಲಿ ಸುಧಾರಣೆಯನ್ನು ಸೂಚಿಸುತ್ತದೆ.

ಕಳೆದ ಕೆಲವು ದಶಕಗಳಲ್ಲಿ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸಾಗಿದಾಗ ಹುಡುಗಿಯರ ಸಾಧನೆ ಮತ್ತು ಪರಿವರ್ತನೆಯ ದರದಲ್ಲಿ ಏರಿಕೆಯು ಕಂಡುಬಂದಿದೆ. ಅದರಲ್ಲಿಯೂ ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ(1ನೆ ತರಗತಿಯಿಂದ 8ನೇ ತರಗತಿಯವರೆಗೆ). 1900ರಿಂದ 2001ರ ನಡುವೆ ನಡೆಸಲಾದ ಇತ್ತೀಚಿಗಿನ ಅಧ್ಯಯನಗಳಲ್ಲಿ ಹುಡುಗಿಯರ ಸಾಧನೆಯ ಹಂತಗಳಲ್ಲಿ ಮತ್ತು ಶಿಕ್ಷಣದ ಪ್ರಾಥಮಿಕ ಹಂತದಿಂದ ಹಿರಿಯ ಪ್ರಾಥಮಿಕ ಹಂತದವರೆಗಿನ ಅವರ ಮೇಲ್ಮುಖ ಚಲನೆಯಲ್ಲಿ ಸುಧಾರಣೆಯು ಕಂಡುಬಂದಿದೆ. ಇದು ಹೆಣ್ಣುಮಗುವಿನ ಮೇಲೆ ಗಮನವನ್ನು ಕೇಂದ್ರೀಕೃತಗೊಳಿಸಿದ ಶೈಕ್ಷಣಿಕ ಮಧ್ಯಪ್ರವೇಶಿಕೆಗಳ ಫಲಿತಾಂಶಗಳೆನ್ನುವುದರಲ್ಲಿ ಸಂದೇಹವೇ ಇಲ್ಲ. ಪ್ರಾಥಮಿಕ ಹಂತದಲ್ಲಿ ಹುಡುಗಿಯರ ಸಮಗ್ರ ಕಾರ್ಯನಿರ್ವಹಣೆಯು ಸುಧಾರಣೆ ಹೊಂದಿರುವುದನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ(ಡಿಪಿಇಪಿ) ಅಡಿಯಲ್ಲಿ 1997 ಮತ್ತು 2001ರಲ್ಲಿ ನಡೆಸಲಾದ ಎರಡು ಅಧ್ಯಯನಗಳು ಸೂಚಿಸುತ್ತವೆ. ಕೆಲವು ಜಿಲ್ಲೆಗಳಲ್ಲಿ, ಹುಡುಗಿಯರು ಭಾಷೆ ಮತ್ತು ಪರಿಸರ ಅಧ್ಯಯನಗಳಿಗೆ ಸಂಬಂಧಿಸಿದಂತೆ ಹುಡುಗರಿಗಿಂತ ಮುನ್ನಡೆ ಸಾಧಿಸಿದ್ದಾರೆ. ಭಾಷೆ ಮತ್ತು ಗಣಿತದಂತಹ ವಿಷಯಗಳಲ್ಲಿನ ಲಿಂಗ ಗುಂಪುಗಳ ಸಾಧನೆಯ ವ್ಯತ್ಯಾಸವು 55 ಕ್ಕೂ ಕಡಿಮೆಗೆ ಕುಗ್ಗಿದೆ. ಕಳೆದ ಕೆಲವು ವರ್ಷಗಳಿಂದ ಕಿರಿಯ ಪ್ರಾಥಮಿಕ ಹಂತದಿಂದ ಹಿರಿಯ ಪ್ರಾಥಮಿಕ ಹಂತದವರೆಗೆ ಪರಿವರ್ತನಾ ದರವು ಗಮನಾರ್ಹ ಸುಧಾರಣೆಯನ್ನು ತೋರಿಸುತ್ತದೆ. ಪರಿವರ್ತನಾ ದರದಲ್ಲಿ ಲಿಂಗ ವ್ಯತ್ಯಾಸವು ಶೇಕಡಾ 12.72 ರಿಂದ ಶೇಕಡಾ 20ಕ್ಕೆ ಕುಗ್ಗಿದೆ.

ಇತ್ತೀಚಿಗೆ 75 ಡಿಪಿಇಪಿ ಜಿಲ್ಲೆಗಳಲ್ಲಿ ನಡೆಸಲಾದ ರಾಷ್ಟ್ರಮಟ್ಟದ ಅಧ್ಯಯನಗಳಲ್ಲಿ ಒಂದು ಅಧ್ಯಯನದ ಫಲಿತಾಂಶವು ಶೈಕ್ಷಣಿಕ ಕಾರ್ಯವಿಧಾನದಲ್ಲಿ ಹುಡುಗಿಯರ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಬಹುತೇಕ ಜಿಲ್ಲೆಗಳಲ್ಲಿ ಸಾಪೇಕ್ಷವಾಗಿ ತೃಪ್ತಿದಾಯಕವಾಗಿದ್ದು ಯಶಸ್ಸು ಸಾಧಿಸಿರುವುದನ್ನು ಸೂಚಿಸಿದೆ.

**ಸೆಕೆಂಡರಿ ಮತ್ತು ಹಿರಿಯ ಸೆಕೆಂಡರಿ ಹಂತಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಚಿತ್ರಣ:**

ಶೈಕ್ಷಣಿಕ ಅವಕಾಶಗಳಲ್ಲಿ ಸರ್ವಸಮತೆ ಮತ್ತು ಸಮಾನತೆಯ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಹಂತದಲ್ಲಿನ ಶೈಕ್ಷಣಿಕ ದೃಶ್ಯವು ಕೆಲವು ಗಮನಾರ್ಹ ಪ್ರಗತಿಗಳನ್ನು ಸೂಚಿಸುತ್ತದೆ. ಆದರೆ ಪ್ರಾಥಮಿಕೋತ್ತರ ಹಂತದಲ್ಲಿನ ಪರಿಸ್ಥಿತಿಯು ಸುಮಾರಾಗಿ ಕೆಳ ದರ್ಜೆಯ ಚಿತ್ರಣವನ್ನು ನೀಡುತ್ತದೆ. ಸರ್ವಸಮತೆಯ ವಿಚಾರವು ಸೆಕೆಂಡರಿ ಮತ್ತು ಹಿರಿಯ ಸೆಕೆಂಡರಿ ಹಂತಗಳಲ್ಲಿ ಹೆಚ್ಚು ನಿರ್ಣಯಕವಾಗಿ ಕಂಡುಬರುತ್ತದೆ.

ಸೆಕೆಂಡರಿ ಮತ್ತು ಹಿರಿಯ ಸೆಕೆಂಡರಿ ಹಂತಗಳಲ್ಲಿ ಶೈಕ್ಷಣಿಕ ಅವಕಾಶಗಳ ವಿವರಗಳು ಸೂಚಿಸುವ ವಿಷಯಾಂಶಗಳ ಚಿತ್ರಣಗಳು ಹೀಗಿವೆ: ಸೇವೆ ಲಭ್ಯವಿಲ್ಲದ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಶಾಲೆಗಳನ್ನು, ವಸತಿ ಶಾಲೆಗಳನ್ನು ಪ್ರಾರಂಭಿಸುವುದು ಮತ್ತು ವಸತಿಗೃಹದ ಸೌಲಭ್ಯಗಳನ್ನು ಒದಗಿಸುವುದರ ಮೂಲಕ

Digitised by Bharatavani, CIIL

ಪ್ರವೇಶಾವಕಾಶಗಳ ಸೌಲಭ್ಯಗಳನ್ನು ಹೆಚ್ಚಿಸುವುದು;

ಪ್ರಾಥಮಿಕ ಹಂತದಲ್ಲಿ ಆ ಹಂತವನ್ನು ಮುಗಿಸಿದವರ ಪ್ರವೇಶ ಮತ್ತು ಇತರ ಸಮಾನ ಅವಕಾಶದ ಕ್ರಮಗಳಾದ–ಮುಕ್ತ ಶಾಲಾಶಿಕ್ಷಣ, ಹುಡುಗಿಯರಿಗಾಗಿ ಮತ್ತು ಅವರ ಹಾಗಿರುವವರಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಸಂಕ್ಷೇಪಿತ ಕೋರ್ಸ್‌ಗಳ ಪ್ರವೇಶದಿಂದಾಗಿ ಉದ್ದೇಶಿತ ಗುಂಪಿನ ವ್ಯಾಪಕ ಆವರಿಸಿಕೊಳ್ಳುವಿಕೆ; ವಿದ್ಯಾರ್ಥಿನಿಯರಿಗೆ ಆರ್ಥಿಕ ಸಹಾಯ ಒದಗಿಸುವಿಕೆ; ದೇಶದ ವಿವಿದೆಡೆಗಳಲ್ಲಿ ನವೋದಯ ಶಾಲೆಗಳನ್ನು ಪ್ರಾರಂಭಿಸುವುದು ಮತ್ತು ಕೇಂದ್ರ ಶಾಲೆಗಳನ್ನು ಪಸರಿಸಿಕೊಳ್ಳುವುದು. ಗ್ರಾಮೀಣ ಪ್ರದೇಶಗಳ ಪ್ರತಿಭಾನ್ವಿತರನ್ನು ಗುರುತಿಸುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವಂತೆ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ಈ ಶಾಲೆಗಳಲ್ಲಿ ಶಿಕ್ಷಣದೊಂದಿಗೆ ಊಟ ಮತ್ತು ವಸತಿ ಉಚಿತವಾಗಿರುತ್ತದೆ. ಈ ಶಾಲೆಗಳಲ್ಲಿ ಹುಡುಗಿಯರಿಗೆ ಮತ್ತು ಪರಿಶಿಷ್ಟ ಜಾತಿ/ಪಂಗಡಗಳ ವಿದ್ಯಾರ್ಥಿಗಳಿಗೂ ಅವಕಾಶವಿದೆ.

**ವಿದ್ಯಾರ್ಥಿನಿಯರಿಂದ ಶೈಕ್ಷಣಿಕ ಸೌಲಭ್ಯಗಳ ಬಳಕೆ:**

ವಿದ್ಯಾರ್ಥಿನಿಯರಿಂದ ಶೈಕ್ಷಣಿಕ ಸೌಲಭ್ಯಗಳ ಬಳಕೆಯು ನಿರಾಶಾದಾಯಕ ಚಿತ್ರವನ್ನು ನೀಡುತ್ತದೆ. ಅವುಗಳೆಂದರೆ: 1. ದಾಖಲಾತಿಯಲ್ಲಿ ಲಿಂಗ ಭಿನ್ನತೆ 2. ಹಾಜರಿ; 3. ಶಾಲೆಯನ್ನು ಅರ್ಧದಲ್ಲಿಯೇ ಬಿಡುವ ಸಂಗತಿ ಮತ್ತು; 4. ಸಾಧನೆ. 9 ಮತ್ತು 10ನೇ ತರಗತಿಯ ದಾಖಲಾತಿಯಲ್ಲಿ ಹುಡುಗರು ಮತ್ತು ಹುಡುಗಿಯರ ನಡುವೆ ಅಗಾಧ ಭಿನ್ನತೆಯನ್ನು ಫಲಿತಾಂಶಗಳು ತೋರಿಸಿಕೊಟ್ಟಿವೆ. ಹುಡುಗರಲ್ಲಿ ಇದು 61 ಇದ್ದರೆ ಹುಡುಗಿಯರಲ್ಲಿ ಅದು ಶೇಕಡಾ 39ಕ್ಕಿಂತ ಸ್ವಲ್ಪ ಹೆಚ್ಚಿಗಿದೆ; ಒಂಭತ್ತು ಮತ್ತು ಹತ್ತನೆಯ ತರಗತಿಯಲ್ಲಿ ಶಾಲೆ ಬಿಡುವವರಲ್ಲಿ ಹುಡುಗಿಯರ ಸಂಖ್ಯೆ ಹೆಚ್ಚು; ಭಾರತದ ಅತ್ಯಂತ ಕಡಿಮೆ ಸಾಕ್ಷರತೆ ಇರುವ 148 ಜಿಲ್ಲೆಗಳಲ್ಲಿ ದಾಖಲಾತಿಯಾಗದ ಹುಡುಗಿಯರ ಶೇಕಡಾ ಅತ್ಯಂತ ಹೆಚ್ಚು; ಹುಡುಗಿಯರ ದಾಖಲಾತಿ ಕಡಿಮೆ ಇರುವುದರೊಂದಿಗೆ ಅವರ ಹಾಜರಾತಿಯೂ ಕಡಿಮೆ ಇರುತ್ತದೆ. ಇದರಿಂದ ಹುಡುಗಿಯರು ಬಹುಬೇಗನೆ ಶಾಲೆ ಬಿಟ್ಟುಬಿಡುತ್ತಾರೆ. ವಿದ್ಯಾರ್ಥಿನಿಯರ ಮನೆಯಿಂದ ಶಾಲೆ ಬಹು ದೂರವಿರುವುದು, ಸಾಮಾಜಿಕ ಅಭದ್ರತೆ, ಶಿಕ್ಷಕಿಯರ ಕೊರತೆ, ಶೈಕ್ಷಣಿಕ ಬೆಂಬಲದ ಕೊರತೆ ಇತ್ಯಾದಿಗಳು ವಿದ್ಯಾರ್ಥಿನಿಯರ ಪ್ರಗತಿಯನ್ನು ಕುಂಠಿತಗೊಳಿಸುತ್ತವೆ.

ಸಾಮಾಜಿಕ ಪರಿಸ್ಥಿತಿಗಳ ಕಿರಿಕಿರಿ ಮತ್ತು ಬದುಕಿನ ಒತ್ತಡಗಳಿಂದಾಗಿ ಶಿಕ್ಷಣದ ಪ್ರಾಥಮಿಕ ಹಂತದ ಬಳಿಕ ತಮ್ಮ ಓದನ್ನು ಮುಂದುವರಿಸುವುದು ಅಪಾರ ಸಂಖ್ಯೆಯ ಹೆಣ್ಣುಮಕ್ಕಳಿಗೆ ಸಾಧ್ಯವಾಗುತ್ತಿಲ್ಲ.

**ರಾಷ್ಟ್ರೀಯ ಮುಕ್ತ ಶಾಲೆಯ(ಎನ್‌ಓಎಸ್) ಲಿಂಗ–ಸರ್ವಸಮತೆಯಾಧಾರಿತ ಕಾರ್ಯಕ್ರಮಗಳು:**

ರಾಷ್ಟ್ರೀಯ ಮುಕ್ತ ಶಾಲೆಯು ಮುಕ್ತ ಕಲಿಕೆ ಮತ್ತು ದೂರ ಶಿಕ್ಷಣ ಒದಗಿಸುವಿಕೆಯ ಕಾರ್ಯವಿಧಾನಗಳ ಮೂಲಕ ಈ ದಿಕ್ಕಿನಲ್ಲಿ ಅನೇಕ ಸಂಖ್ಯೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದು ಶಾಲೆಯಿಂದ ಹೊರಗೆ ಇರುವ ಹುಡುಗಿಯರು ಮತ್ತು ಮಹಿಳೆಯರಿಗಾಗಿ ಕೋರ್ಸ್‌ಗಳನ್ನು, ಹತ್ತು ವರ್ಷದ/ಪ್ರೌಢಶಾಲಾ ಹಂತದ ಶಿಕ್ಷಣವನ್ನು ಮುಗಿಸಲು ಬಯಸುವ ಇತರ ವರ್ಗದ ಉದ್ಯೋಗಿಗಳಿಗಾಗಿ ಮುಕ್ತ ಶಾಲಾ ಕೋರ್ಸ್‌ನ್ನು ಮತ್ತು ಉನ್ನತ ಹಂತದ ಸಾಮಾನ್ಯ ಮತ್ತು ವೃತ್ತಿಪರ ಪ್ರೌಢ ಶಿಕ್ಷಣ ಕೋರ್ಸನ್ನು ನಡೆಸುತ್ತದೆ. ರಾಷ್ಟ್ರೀಯ ಮುಕ್ತ ಶಾಲೆ ನಡೆಸುತ್ತಿರುವ ಪರಿಪೂರ್ಣ ಮಹಿಳಾ ಕೋರ್ಸ್ ಹರೆಯದ ಹುಡುಗಿಯರು ಮತ್ತು ವಯಸ್ಕ ಮಹಿಳೆಯರಿಗಾಗಿದ್ದು, ಇದು ಕಾನೂನು ಸಾಕ್ಷರತೆ, ಆರೋಗ್ಯ, ಪೋಷಣೆ, ಸಾಮಾನ್ಯ ಅರಿವು ಮತ್ತು ಇತರವುಗಳನ್ನು ಒಳಗೊಂಡಿದ್ದು ಮಹಿಳಾ ಸಶಕ್ತೀಕರಣದ ಅಗಾಧ ಕ್ಷೇತ್ರಗಳಿಗೆ ವಿಸ್ತರಿಸಿಕೊಂಡಿದೆ. ಇದು ಮೂಲತಃ ವ್ಯಾಪಕ ಕಾರ್ಯಕ್ರಮವಾಗಿದ್ದು ಲಿಂಗ ಸರ್ವಸಮತೆಯನ್ನು ಉದ್ದೇಶಿಸಿಕೊಂಡು ಇದೆ. ಅದು ಸರ್ವಸಮತೆಯ ಕ್ರಮಗಳ ಇಚ್ಛೆಯನ್ನು ಸೃಷ್ಟಿಸುವ ಮೂಲಕ ಹುಡುಗಿಯರು/ಮಹಿಳೆಯರಲ್ಲಿ ಅರಿವನ್ನು ಹುಟ್ಟಿಸುತ್ತದೆ. ಹೊಸದಾಗಿ ಕಲಿಯುವವರಿಗಾಗಿ ಪ್ರಾಥಮಿಕ ಹಂತದ ಸಾಮರ್ಥ್ಯವನ್ನು ಪಡೆಯುವುದಕ್ಕಾಗಿ 3 ಮತ್ತು 5 ನೆ ತರಗತಿಗಳಿಗೆ ಸಮಾನವಾಗಿರುವ ಕೋರ್ಸನ್ನು ರಾಷ್ಟ್ರೀಯ ಮುಕ್ತ ಶಾಲೆ ರೂಪಿಸಿದೆ. ಇನ್ನೂ ಮುಂದುವರಿದು, ಹುಡುಗಿಯರು ಮತ್ತು ಮಹಿಳೆಯರು ಖಾಸಗಿ ಅಭ್ಯರ್ಥಿಗಳಾಗಿ ರಾಜ್ಯ ಮಂಡಳಿ ನಡೆಸುತ್ತಿರುವ ಮಾಧ್ಯಮಿಕ ಮತ್ತು ಸೆಕೆಂಡರಿ ಪರೀಕ್ಷೆಗಳಿಗೆ ಕುಳಿತುಕೊಳ್ಳಬಹುದಾಗಿದೆ. ಒಂಭತ್ತು ರಾಜ್ಯಗಳು ಈಗಾಗಲೇ ಎಸ್‌ಓಎಸ್ ಗಳನ್ನು ಪ್ರಾರಂಭಿಸಿದ್ದು, ಹುಡುಗಿಯರು ಈ ಅವಕಾಶಗಳನ್ನು ಬಳಸುತ್ತಿದ್ದಾರೆ.

**ಶಿಕ್ಷಣಾವಕಾಶದಲ್ಲಿ ಗ್ರಾಮೀಣ–ನಗರ ಅಸಮತೆಗೆ ಸಂಬಂಧಿಸಿದಂತೆ ಸರ್ವಸಮತೆಯ ಕಾಳಜಿಗಳು:**

ಮಹಾತ್ಮಾ ಗಾಂಧಿಯವರು ಗ್ರಾಮದ ಮರುರಚನೆಯನ್ನು ಶೈಕ್ಷಣಿಕ ಮಧ್ಯಪ್ರವೇಶಿಕೆಯ ಮೂಲಕ ನಡೆಸಿ ಭಾರತೀಯ ಪ್ರಜ್ಞೆಯನ್ನು ಉದ್ದೀಪನಗೊಳಿಸುವ ಮಾತುಗಳನ್ನು ಆಡಿದ್ದಾರೆ, 'ಇಡೀ ಜಗತ್ತು ತನ್ನಲ್ಲಿ ಒಳಗೊಂಡಿರುವ ಹಾಗೆ, ಭಾರತವು ಗ್ರಾಮಗಳಲ್ಲಿ ತನ್ನನ್ನು ಒಳಗೊಂಡಿದೆ..ಗ್ರಾಮಗಳು ನಾಶವಾದರೆ, ಭಾರತವೂ ನಾಶವಾಗುವುದು. ಅದು ಭಾರತವಾಗಿ ಉಳಿದಿರುವುದಿಲ್ಲ. ಕೆಲವೇ ನಗರಗಳು ಭಾರತವನ್ನು ರೂಪಿಸಲಾರವು.' 1992ರಲ್ಲಿ ಅದ್ಯತನಗೊಳಿಸಲಾದ 1986 ರಾಷ್ಟ್ರೀಯ ಶಿಕ್ಷಣ ನೀತಿ ಕೂಡ ಈಗ ಅಸ್ತಿತ್ವದಲ್ಲಿರುವ ಶೈಕ್ಷಣಿಕ ಅಭಿವೃದ್ಧಿಗಳಲ್ಲಿನ ಗ್ರಾಮೀಣ–ನಗರ ಅಸಮತೆಯನ್ನು ಕಡಿಮೆ ಮಾಡುವ ಸಲುವಾಗಿ ಗ್ರಾಮೀಣ ಜನತೆಗೆ ಶೈಕ್ಷಣಿಕ ಅವಕಾಶವನ್ನು ಒದಗಿಸುವ ವಿಚಾರಗಳಲ್ಲಿ ಸರ್ವಸಮತೆಯ ತತ್ವಕ್ಕೆ ಅತಿ ಹೆಚ್ಚಿನ ಸ್ಥಾನವನ್ನು ನೀಡುತ್ತದೆ. ತಳಮೂಲ ಕಾರ್ಯನಿರತರಿಂದ ಹಿಡಿದು ಶೈಕ್ಷಣಿಕ

Digitised by Bharatavani, CIIL

ಯೋಜಕರವರೆಗೆ ಪ್ರತಿಯೊಂದು ಹಂತದಲ್ಲಿ ಈ ಕಾಳಜಿಯನ್ನು ಹಂಚಿಕೊಳ್ಳಲಾಗಿದೆ. ಶೈಕ್ಷಣಿಕ ಯೋಜನೆಯಲ್ಲಿನ ಗ್ರಾಮೀಣ ಕೇಂದ್ರೀಕರಣದ ದೃಷ್ಟಿಕೋನವನ್ನು ಸಂವಿಧಾನದ 73ನೇ ತಿದ್ದುಪಡಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಇದರ ಅನುಷ್ಠಾನಕ್ಕೆ ಸ್ಥಳಿಯ ಹಂತದಲ್ಲಿ ಶೈಕ್ಷಣಿಕ ಯೋಜನೆಯಲ್ಲಿ ಒತ್ತನ್ನು ನೀಡಲಾಗಿದೆ ಮತ್ತು ಇತ್ತೀಚಿಗೆ ಜಾರಿಗೆ ತರಲಾದ ಸರ್ವ ಶಿಕ್ಷಾ ಅಭಿಯಾನ(ಎಸ್‌ಎಸ್‌ಎ), ಲೋಕ್ ಜಂಬಿಶ್‌ನ ನವೀನ ಕಾರ್ಯಕ್ರಮಗಳು, ಬಿಹಾರ್ ಶಿಕ್ಷಣ ಯೋಜನೆ, ಉತ್ತರ ಪ್ರದೇಶದ ಮೂಲ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳು, ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ(ಡಿಪಿಇಪಿ)ದ ಇಡೀ ತಾತ್ವಿಕನೆಲೆಯು ವಿಕೇಂದ್ರೀಕರಣ ಯೋಜನಾ ಕಾರ್ಯವಿಧಾನದಲ್ಲಿ ತಮ್ಮ ಗಮನವನ್ನು ಹರಿಸಿದೆ ಮತ್ತು ಸ್ಥಳೀಯ ಸಮುದಾಯದ ಗರಿಷ್ಠ ತೊಡಗಿಸಿಕೊಳ್ಳುವಿಕೆಯನ್ನು ಮುಖ್ಯ ಯೋಜನಾ ಘಟಕವಾಗಿ ಪರಿಗಣಿಸಿದೆ. ಮೂಲಭೂತವಾಗಿ ಗ್ರಾಮೀಣ–ನಗರ ಭಿನ್ನತೆಯು ಗ್ರಾಮೀಣ ಶಾಲೆಗಳಿಗೆ ಮಾಹಿತಿಗಳನ್ನು ಒದಗಿಸುವಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಗಳಿಂದ ಆಗಿದೆ ಎಂಬುದಾಗಿ ತೀವ್ರ ರೀತಿಯಿಂದ ಚರ್ಚಿಸಲಾಗಿದೆ. ಶೈಕ್ಷಣಿಕ ಯೋಜನಾಕಾರ್ಯವು ಆಯಾ ಪ್ರದೇಶದ ಜೀವನಶೈಲಿ ಮತ್ತು ಆರ್ಥಿಕ ವಿಶಿಷ್ಟ ಲಕ್ಷಣಗಳನ್ನು ಆಧರಿಸಿ ಇರಬೇಕು. ಸಂವಿಧಾನಾತ್ಮಕ ತಿದ್ದುಪಡಿಯ ಮೂಲಕ ಶಿಕ್ಷಣದಲ್ಲಿ (ಪ್ರಾಥಮಿಕ, ಪ್ರೌಢಶಾಲಾ, ವೃತ್ತಿಪರ, ಮತ್ತು ವಯಸ್ಕ ಶಿಕ್ಷಣ ಮತ್ತು ಗ್ರಂಥಾಲಯಗಳು) ಪಂಚಾಯತಿಗಳ ಭಾಗವಹಿಸುವಿಕೆಯು ಗ್ರಾಮೀಣ–ನಗರ ಅಸಮತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಮೈಲಿಗಲ್ಲಾಗಿದೆ.

**ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಶೈಕ್ಷಣಿಕ ಅಭಿವೃದ್ಧಿಗಳಲ್ಲಿರುವ ಅಸಮತೋಲನವನ್ನು ಕಡಿಮೆ ಮಾಡುವುದಕ್ಕಾಗಿ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು:**

ಗ್ರಾಮೀಣ ಜನತೆಗಾಗಿ ಅವರ ಆವಶ್ಯಕತೆಗಳು ಮತ್ತು ಅಗತ್ಯಗಳನ್ನು ಅನುಲಕ್ಷಿಸಿ, ಅವರಿಗೆ ಶೈಕ್ಷಣಿಕ ಅವಕಾಶಗಳನ್ನು ಸಮಾನ ರೀತಿಯಿಂದ ನೀಡುವ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶ ಸಮುದಾಯದ ಕ್ರಿಯಾಶೀಲ ಭಾಗವಹಿಸುವಿಕೆಗಾಗಿ ಜವಾಬ್ದಾರಿಗಳ ಕಾರ್ಯನಿರತ ವಿಕೇಂದ್ರೀಕರಣವನ್ನು ಶಾಲಾಮಟ್ಟಕ್ಕೆ ಇಳಿಸುವುದಕ್ಕೆ ಹೆಚ್ಚಿನ ಒತ್ತನ್ನು ನೀಡುವುದು; ಗ್ರಾಮೀಣ ಪ್ರದೇಶಗಳ ಶೈಕ್ಷಣಿಕ ಅಭಿವೃದ್ಧಿಯ ಜವಾಬ್ದಾರಿಯನ್ನು ಪಿಆರ್‌ಐ ಕೆಳಗೆ ರೂಪಿಸಲಾದ ಗ್ರಾಮೀಣ ಶಿಕ್ಷಣ ಸಮಿತಿಗೆ(ವಿಇಸಿ ಗಳು) ಒಪ್ಪಿಸುವುದು; ಗ್ರಾಮೀಣ ಪ್ರದೇಶಗಳಲ್ಲಿ ರಾಜ್ಯಗಳು ಜವಾಬ್ದಾರಿಯನ್ನು ಹಂಚಿಕೊಳ್ಳುವಂತೆ ಪ್ರೋತ್ಸಾಹಿಸುವುದು. ಇದಕ್ಕಾಗಿ ಅವರು ಸರಕಾರೇತರ ಸಂಸ್ಥೆಗಳು(ಎನ್‌ಜಿಒ ಗಳು), ಶಿಕ್ಷಕರು, ಸಾಮಾಜಿಕ ಕಾರ್ಯಕರ್ತರು, ಮಹಿಳಾ ಮಂಡಲಿ ಇತ್ಯಾದಿಗಳನ್ನು ತೊಡಗಿಸಿಕೊಳ್ಳಬಹುದು; ರಾಷ್ಟ್ರ, ರಾಜ್ಯ, ಜಿಲ್ಲೆ ಮತ್ತು ಉಪಜಿಲ್ಲಾ ಮಟ್ಟಗಳಲ್ಲಿ ಶೈಕ್ಷಣಿಕ ಯೋಜನಾ ಕಾರ್ಯ ಮತ್ತು ನಿರ್ವಹಣಾ ವಿಧಾನವನ್ನು ಬಲಪಡಿಸುವುದು; ಯೋಜನೆಯ ಅತ್ಯಂತ ಕೆಳ ಘಟಕವಾಗಿ ವಸತಿಯನ್ನು ಪರಿಗಣಿಸುವುದು; ಯೋಜನಾ ಕಾರ್ಯ ಮತ್ತು ನಿರ್ವಹಣೆಯಲ್ಲಿ ಸ್ಥಳಿಯ ವಿಷಯಗಳಿಗೆ ಸಂಬಂಧಪಟ್ಟಿರುವುದಕ್ಕೆ ಹೆಚ್ಚಿನ ಒತ್ತನ್ನು ನೀಡುವುದು; ಗುಣಮಟ್ಟ ಮತ್ತು ಪ್ರಸ್ತುತತೆಗೆ ಗಮನ ನೀಡುವುದು; ಸೂಕ್ತ ಹಂತಗಳಲ್ಲಿ ಸಶಕ್ತೀಕರಣಕ್ಕೆ ಗಮನ ಹರಿಸುವುದು; ನಕ್ಷೆಯನ್ನು ರೂಪಿಸುವುದು ಮತ್ತು ಅತಿಸೂಕ್ಷ್ಮ ಯೋಜನಾ ಕಾರ್ಯವಿಧಾನಗಳನ್ನು ಬಲಪಡಿಸುವುದಕ್ಕಾಗಿ ಗ್ರಾಮೀಣ ಮತ್ತು ಶಾಲಾ ಹಂತದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕ್ರಿಯಾಶೀಲವಾಗಿ ಇರುವಂತೆ ನೋಡಿಕೊಳ್ಳುವುದು; ಸಂಸ್ಥೆಗಳ ಜಾಲಗಳು ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳುವುದು; ಶಾಲೆಗಳು/ಅನೌಪಚಾರಿಕ ಕೇಂದ್ರಗಳಲ್ಲಿ ಸ್ಥಳೀಯ ಶಿಕ್ಷಕಿಯರನ್ನು ನಿಯೋಜಿಸಿಕೊಳ್ಳುವುದು; ತರಗತಿಯ ಚಟುವಟಿಕೆಗಳು ಪರಿಣಾಮಕಾರಿಯಾಗಿ ನಡೆಯಲು ಶಿಕ್ಷಕರಲ್ಲಿ ಸಾಮರ್ಥ್ಯವನ್ನು ಬೆಳೆಸುವುದು; ಕಲಿಯುವವರ ಅಗತ್ಯಗಳು ಮತ್ತು ಆಕಾಂಕ್ಷೆಗಳಿಗೆ ಸಂಬಂಧಿಸಿದಂತೆ ಪಠ್ಯಕ್ರಮದ ಪ್ರಸ್ತುತತೆಯನ್ನು ಹೆಚ್ಚಿಸುವುದು; ಗ್ರಾಮೀಣ ಶೈಕ್ಷಣಿಕ ಕಾರ್ಯಕ್ರಮಗಳನ್ನು ಇತರ ಅಭಿವೃದ್ಧಿ ಹಾಗೂ ಕ್ಷೇಮಾಭಿವೃದ್ಧಿ ಸೇವೆಗಳಾದ ಆರೋಗ್ಯ, ಪೋಷಣೆ, ಮಕ್ಕಳ ಕಾಳಜಿ ಮತ್ತು ಕಲಿಯುವವರ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಜೋಡಿಸಿಕೊಳ್ಳುವುದು; ಮತ್ತು ಶಿಕ್ಷಣದ ಸಾಮಾಜಿಕ ಪ್ರಸ್ತುತತೆಯನ್ನು ಹೆಚ್ಚಿಸುವುದು.

**ಗ್ರಾಮೀಣ ಮಕ್ಕಳ ಸಹಭಾಗಿತ್ವ ಮತ್ತು ಸಾಧನೆಗಳಿಗಾಗಿ ಇರುವಂತಹ ಅವಕಾಶಗಳಲ್ಲಿ ಸರ್ವಸಮತೆ:**

ಮೇಲೆ ಉಲ್ಲೇಖಿಸಲಾದ ಕಾರ್ಯಕ್ರಮದ ದೃಷ್ಟಿಯಲ್ಲಿ ಈಗ ಗ್ರಾಮೀಣ ಮಕ್ಕಳಿಗೆ ಗುಣಮಟ್ಟ ಮತ್ತು ಪ್ರಮಾಣ ಎರಡಕ್ಕೂ ಸಂಬಂಧಿಸಿದಂತೆ ಸುಧಾರಿತ ಶೈಕ್ಷಣಿಕ ಅವಕಾಶಗಳನ್ನು ಒದಗಿಸಲಾಗಿದೆ.

ಶೇಕಡಾ 83.8 ಕ್ಕೂ ಹೆಚ್ಚಿನ ವಸತಿಪ್ರದೇಶಗಳು ಈಗ 1 ಕಿಮೀ ವ್ಯಾಪ್ತಿಯೊಳಗೆ ಅಥವಾ ಕಾಲ್ನಡಿಗೆಯಲ್ಲಿ ಅಷ್ಟು ದೂರದವರೆಗೆ ಕ್ರಮಿಸುವ ಅಂತರದಲ್ಲಿ ಪ್ರಾಥಮಿಕ ಶಾಲೆಗಳನ್ನು/ವಿಭಾಗಗಳನ್ನು ಹೊಂದಿವೆ. ಶಿಕ್ಷಣಸೇವೆ ಲಭ್ಯವಿಲ್ಲದೆಡೆಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವ ನಿಬಂಧನೆಗಳಿಗೆ ಅನುಗುಣವಾಗಿ ಶಾಲೆಗಳನ್ನು ಒದಗಿಸಲಾಗಿದೆ. ನಿಬಂಧನೆಗಳಿಗೆ ಅನುಗುಣವಾಗಿ ಈ ಸೌಲಭ್ಯಗಳನ್ನು ಒದಗಿಸಲಾಗದ ಪ್ರದೇಶಗಳಲ್ಲಿ ಪರ್ಯಾಯ ಶಾಲಾ ಮಾದರಿಗಳಿಂದ ಮತ್ತು ವಿದ್ಯಾಭ್ಯಾಸ ಒದಗಿಸುವ ವ್ಯವಸ್ಥೆಯನ್ನು ಪ್ರಾರಂಭಿಸುವುದರ ಮೂಲಕ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ಮತ್ತೊಮ್ಮೆ ಶಾಲೆಗೆ ಹಿಂತಿರುಗುವುದು, ಅಲ್ಪಾವಧಿ ಮತ್ತು ದೀರ್ಘಾವಧಿಯ

Digitised by Bharatavani, CIIL

ವಸತಿ ಶಿಬಿರಗಳ ಕ್ರಮಗಳು, ಪ್ರಹಾರ ಪಾಠಶಾಲೆಗಳು ಮತ್ತು ಕೆಲಸ ಮಾಡುವ ಮಕ್ಕಳ ಶಾಲೆಗಳು ಅವರ ಮನೆಬಾಗಿಲಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಲಭ್ಯವಾಗಿಸುವುದರಿಂದಾಗಿ ಗ್ರಾಮೀಣ ಮಕ್ಕಳು ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಸಾಧ್ಯವಾಗಿದೆ. ಎಲ್ಲಾ ಸಮುದಾಯಗಳ ಗ್ರಾಮೀಣ ಮಕ್ಕಳ ದಾಖಲಾತಿ, ಉಳಿದುಕೊಂಡಿರುವುದು ಮತ್ತು ಭಾಗವಹಿಸುವಿಕೆಯು ಸಾಕಷ್ಟು ಪ್ರಮಾಣದಲ್ಲಿ ಸುಧಾರಿಸಿದೆ.

ಹಾಗಿದ್ದರೂ, ಗ್ರಾಮೀಣ ಶಾಲೆಗಳ ಮಕ್ಕಳ ಸಾಧನೆಯ ಮಟ್ಟ, ಶಾಲೆಯನ್ನು ಬಿಟ್ಟು ಹೋಗುವುದು ಮತ್ತು ಶಿಕ್ಷಣದ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸಾಗುವ ಪ್ರಗತಿಯು ತೃಪ್ತಿದಾಯಕವಾಗಿಲ್ಲ. ಅನೇಕ ಹುಡುಗರು ಮತ್ತು ವಿಶೇಷವಾಗಿ ಹುಡುಗಿಯರು ಶಾಲೆಯಲ್ಲಿ ಅಥವಾ ಮನೆಯಲ್ಲಿ ಸೂಕ್ತ ವಾತಾವರಣವಿಲ್ಲದ ಕಾರಣವಾಗಿ ತಮ್ಮ ಕಲಿಕೆಯನ್ನು ಮುಂದುವರಿಸುವುದಿಲ್ಲ. ಇದಕ್ಕಿರುವ ಕಾರಣಗಳಲ್ಲಿ ಅಗತ್ಯದ ಸೌಲಭ್ಯಗಳ ಕೊರತೆ ಒಂದು ಪ್ರಮುಖ ಕಾರಣವಾಗಿದೆ. ಮಾಹಿತಿ ಮತ್ತು ಸಂವಹನ ಸೌಲಭ್ಯಗಳು ಕೂಡ ಬಹಳ ಕಡಿಮೆ ಪ್ರಮಾಣದ್ದಾಗಿವೆ. ಶಿಕ್ಷಣದಲ್ಲಿ ಗ್ರಾಮೀಣ–ನಗರದ ಶಿಕ್ಷಣದಲ್ಲಿನ ಈ ಅಂತರವನ್ನು ಭೇದಿಸಲು ಸರಿಯಾದ ಮಾಹಿತಿಯನ್ನು ಆಧರಿಸಿದ ಇನ್ನೂ ಹೆಚ್ಚು ಪ್ರಮಾಣದ ವ್ಯವಸ್ಥಿತ ಯೋಜಿತ ಕಾರ್ಯದ ಅಗತ್ಯವಿದೆ.

**ಶೈಕ್ಷಣಿಕ ಅಭಿವೃದ್ಧಿ ಮತ್ತು ಸರ್ವಸಮತೆಯ ಕಾಳಜಿಗಳಲ್ಲಿ ಪ್ರಾದೇಶಿಕ ಅಸಮತೆ:**

**ಶಿಕ್ಷಣವನ್ನು ವಿಸ್ತರಿಸುವಲ್ಲಿ ಪ್ರಾದೇಶಿಕ ಸರ್ವಸಮತೆಯ ತತ್ವ:**

ದೇಶದ ಆದ್ಯತೆಯನ್ನು ಸಂವಿಧಾನದ ವಿಧ್ಯುಕ್ತ ನಿರ್ಣಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದರ ಪ್ರಕಾರ ಲಿಂಗ, ಜಾತಿ, ಮತ, ಹುಟ್ಟಿದ ಪ್ರದೇಶ ಮತ್ತು ಹೆತ್ತವರ ಸಮಾಜೋ–ಆರ್ಥಿಕ ಹಿನ್ನೆಲೆಯ ಪರಿಗಣನೆ ಇಲ್ಲದೆ ಶೈಕ್ಷಣಿಕ ಸೌಲಭ್ಯಗಳನ್ನು ಪ್ರತಿಯೊಬ್ಬರಿಗೂ ಮತ್ತು ಎಲ್ಲಾ ವ್ಯಕ್ತಿಗಳಿಗೆ ನೀಡಬೇಕು. ಯೋಜಿತ ಶೈಕ್ಷಣಿಕ ಮಧ್ಯವರ್ತಿತ್ವದ ಮೂಲಭೂತ ಗಮನವು ಎಲ್ಲಾ ರೀತಿಯ ತಾರತಮ್ಯವನ್ನು ತೊಲಗಿಸುವುದಾಗಿದೆ(ದೂರ ಮಾಡುವುದು). ವಿದ್ಯಾಭ್ಯಾಸದ ಸೌಕರ್ಯಗಳನ್ನು ಪಡೆಯುತ್ತಿರುವ ಮಿಲಿಯಗಟ್ಟಳೆ ಹುಡುಗರು ಮತ್ತು ಹುಡುಗಿಯರ ದಾಖಲಾತಿ, ಉಳಿದುಕೊಳ್ಳುವುದು, ಭಾಗವಹಿಸುವಿಕೆ ಮತ್ತು ಸಾಧನೆಯ ಮಟ್ಟಗಳಲ್ಲಿ ಪ್ರಾದೇಶಿಕ ಅಸಮತೋಲಗಳು ಇರುವುದಕ್ಕೆ ಮೂಲ ಕಾರಣ ಈ ತಾರತಮ್ಯವಾಗಿದೆ. ವಿದ್ಯಾರ್ಥಿಗಳು ಅನುಸರಿಸುವ ಪಠ್ಯಕ್ರಮದ ಮೇಲೆ ಪ್ರಭಾವ ಬೀರುವ ಕೆಲವು ವಿಚಾರಗಳು ಇವೆ. ಉದಾಹರಣೆಗೆ, ಶಿಕ್ಷಣವು 'ಕಚೇರಿ ಕೆಲಸಗಾರ'ರನ್ನು ಸೃಷ್ಟಿಸುವ ಸಾಧನವಾಗಿದೆ. ಹೀಗಾಗಿ ಗ್ರಾಮೀಣ ಜನರು ತಮ್ಮ ತಕ್ಷಣದ ಅಗತ್ಯಗಳಿಗೆ ಅದನ್ನು ಪ್ರಸ್ತುತವೆಂದು ಪರಿಗಣಿಸುವುದಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿ(1986) ಮತ್ತು ಅದರ ಕ್ರಿಯಾ ಯೋಜನೆ(ಪ್ಲಾನ್ ಆಫ್ ಆಕ್ಷನ್, 1992)ಯಲ್ಲಿ ಪರಿಣಾಮಕಾರಿಯಾಗಿ ಘೋಷಿಸಲಾದ ಶಿಕ್ಷಣದ ವೃತ್ತಿಪರತ್ವವನ್ನೂ ಸೇರಿಸಿ ಪಠ್ಯಕ್ರಮದ ಸುಧಾರಣೆಯು ಎಲ್ಲಾ ಶೈಕ್ಷಣಿಕ ಪ್ರಯತ್ನಗಳ ಮೂಲೆಗಲ್ಲಾಗಿ ಪರಿಣಮಿಸಿದೆ. ಅನೇಕ ವಿಧದ ಪರ್ಯಾಯ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆಗಳ ಸೌಲಭ್ಯವನ್ನು ಪಡೆಯುತ್ತಿರುವವರು ಅಥವಾ ಪರ್ಯಾಯ ಮತ್ತು ಮುಕ್ತ ವಿದ್ಯಾಭ್ಯಾಸ ವ್ಯವಸ್ಥೆಗಳ ಔಪಚಾರಿಕ/ಅನೌಪಚಾರಿಕ ರೀತಿಯ ಯಾವುದೇ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸ್ಥಿತಿಯಲ್ಲಿ ಇಲ್ಲದವರ ಕುರಿತು ಕೂಡ ಕಾಳಜಿಯನ್ನು ವ್ಯಕ್ತಪಡಿಸಲಾಗಿದೆ. ಸರ್ವಸಮತೆಯ ಅಂಶವನ್ನು ಸಮಾನತೆ ಮತ್ತು ಗುಣಮಟ್ಟ ಆಶ್ವಾಸನೆಯ ಕಾಳಜಿಗಳೊಂದಿಗೆ ಸಂಯೋಜಿಸುವ ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆದಿವೆ. ಪರಿಶಿಷ್ಟ ಜಾತಿ/ಪಂಗಡಗಳ ಮಕ್ಕಳು ಎದುರಿಸುತ್ತಿರುವ ಕೊರತೆ ಮತ್ತು ಅಸಮಾನತೆಯ ಋಣಾತ್ಮಕ ಅಂಶಗಳ ವಿಶ್ಲೇಷಣಾತ್ಮಕ ವಿಶ್ಲೇಷಣೆಯು ದೇಶದ ವಿವಿಧ ಭಾಗಗಳ ಶೈಕ್ಷಣಿಕ ಅಭಿವೃದ್ಧಿಗಳ ನಿರ್ಣಯಾತ್ಮಕ ಮತ್ತು ಪರಿಸ್ಥಿತಿಯಾತ್ಮಕ ವಿಶ್ಲೇಷಣೆಯಿಂದ ಸಾಧ್ಯವಾಗಿದೆ.

ಕಳೆದ ಮೂರು ದಶಕಗಳ ಶೈಕ್ಷಣಿಕ ಯೋಜನಾಕಾರ್ಯದಲ್ಲಿ ಪರಿಶಿಷ್ಟ ಪಂಗಡದ ಜನರು, ಸಾಮಾಜಿಕ ಮತ್ತು ಆರ್ಥಿಕವಾಗಿ ವಂಚಿತರಾಗಿರುವ ಜನರ ಗುಂಪುಗಳು–ಪರಿಶಿಷ್ಟ ಜಾತಿಗಳು–ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಇರುವಂತಹ ವಸತಿತಾಣಗಳು ಮತ್ತು ಭಾಷಾ ಅಲ್ಪ ಸಂಖ್ಯಾತರು ಇರುವಂತಹ ಪ್ರದೇಶಗಳಿಗೆ ಹೆಚ್ಚು ಪ್ರಾಧಾನ್ಯವನ್ನು ನೀಡಲಾಗಿದೆ. ಶೈಕ್ಷಣಿಕ ಕಾರ್ಯವಿಧಾನಗಳಲ್ಲಿ ಭಾಗವಹಿಸಲು ತಡೆಯಾಗಿರುವ ಭೂರಚನೆಗಳಾದ ದಟ್ಟ ಅರಣ್ಯಪ್ರದೇಶಗಳು, ಉನ್ನತ ಬೆಟ್ಟಶ್ರೇಣಿಗಳು, ವಿಸ್ತಾರವಾಗಿರುವ ಮರುಭೂಮಿ ಪ್ರದೇಶಗಳು ಮತ್ತು ಸಣ್ಣಪುಟ್ಟ ಹೊಳೆಹಳ್ಳ ಪ್ರದೇಶಗಳು ಇತ್ಯಾದಿಗಳಿಂದ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿ ಅನೇಕ ಉತ್ತೇಜಕ ಕಾರ್ಯವಿಧಾನಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕುರಿತು ತಿಳಿವಳಿಕೆ ಮೂಡಿದ ಪರಿಣಾಮವಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅಭಿವೃದ್ಧಿಶೀಲ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಸಂಯೋಜನೆ ಮಾಡಲಾಗಿದೆ.

ಎರಡು ನಿರ್ದಿಷ್ಟ ಸಾಮಾಜಿಕ ಗುಂಪುಗಳಾದ–ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಸಂಪೂರ್ಣ ಉದ್ಧಾರವು ಅಭಿವೃದ್ಧಿಯ ಯೋಜನಕಾರರು ಮತ್ತು ಅನುಷ್ಠಾನಕಾರರ ಮುಂದಿರುವ ಪ್ರಮುಖ ಕಾರ್ಯಸೂಚಿಯಾಗಿದೆ. ಇವರಲ್ಲಿ ಬಹಳ ಮಂದಿ ಗ್ರಾಮೀಣ ಪ್ರದೇಶಗಳಲ್ಲಿ ಇರುವವರು. ಹೀಗಾಗಿ ಆ ದೃಷ್ಟಿಕೋನದಿಂದ ಅವರ ಕಾಳಜಿಯನ್ನು ನೋಡಿಕೊಳ್ಳಲಾಗಿದೆ. ಸಂವಿಧಾನದ ವಿಧಿ 46 ನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವ ಬಾಧ್ಯತೆ ಸರಕಾರಕ್ಕೆ ಇದೆ. ಈ ವಿಧಿಯ ಪ್ರಕಾರ, ರಾಜ್ಯವು ವಿಶೇಷ ಕಾಳಜಿಯಿಂದ ದುರ್ಬಲವರ್ಗದ ಜನರ, ಅದರಲ್ಲಿಯೂ ವಿಶೇಶವಾಗಿ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಜನರ ಶೈಕ್ಷಣಿಕ ಆಸಕ್ತಿಗಳಿಗೆ ಪ್ರೋತ್ಸಾಹ ನೀಡಬೇಕು ಮತ್ತು ಅವರಿಗೆ ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ವಿಧದ ಶೋಷಣೆಗಳಿಂದ ರಕ್ಷಣೆಯನ್ನು

Digitised by Bharatavani, CIIL

ಒದಗಿಸಬೇಕು. ಸಂವಿಧಾನದ ವಿಧಿಗಳಾದ 220, 332, 335, 338 ರಿಂದ 342 ಮತ್ತು ಸಂಪೂರ್ಣವಾಗಿ ಐದು ಮತ್ತು ಆರನೇ ಅನುಸೂಚಿಗಳು ವಿಧಿ 46ರಲ್ಲಿ ಅಳವಡಿಸಿಕೊಳ್ಳಲಾದ ಗುರಿಗಳ ಅನುಷ್ಠಾನಕ್ಕಾಗಿ ವಿಶೇಷ ಅವಕಾಶಗಳಿಗೆ ಸಂಬಂಧಿಸಿವೆ.

**ಕಾರ್ಯಕ್ರಮಗಳು ಮತ್ತು ಉತ್ತೇಜಕ ಕಾರ್ಯಯೋಜನೆಗಳು:**

ಶಿಕ್ಷಣಕ್ಷೇತ್ರದಲ್ಲಿ ಧನಾತ್ಮಕ ತಾರತಮ್ಯದ ನಿಯಮಗಳನ್ನು ಆಧರಿಸಿದ ಅಭಿವೃದ್ಧಿ ಕಾರ್ಯಯೋಜನೆಗಳು ವಿಶೇಷವಾಗಿ ಹುಡುಗಿಯರ ದಾಖಲಾತಿ ಮತ್ತು ಅವರನ್ನು ಉಳಿಸಿಕೊಳ್ಳುವ ಕಾರ್ಯದಲ್ಲಿ ಸುಧಾರಣೆ ತರುವುದರಲ್ಲಿ ಗಮನವನ್ನು ಹರಿಸಿವೆ. ಪರಿಶಿಷ್ಟ ಜಾತಿ/ಪಂಗಡಗಳು ಹೆಚ್ಚು ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಪೂರ್ಣಾವಧಿ ಶಾಲೆಗಳನ್ನು ತೆರೆಯುವಲ್ಲಿನ ಅಸಮತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನೇಕ ಉತ್ತೇಜಕ ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿವೆ. ಇದರಲ್ಲಿ ಕೆಲವು ಪ್ರಮುಖ ಕಾರ್ಯಕ್ರಮಗಳು/ ಕಾರ್ಯಯೋಜನೆಗಳು ಹೀಗಿವೆ: ಬಹಳ ಕೆಳಮಟ್ಟದ ಸಾಕ್ಷರತಾ ಮಟ್ಟಗಳನ್ನು ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಹುಡುಗಿಯರಿಗಾಗಿ ವಿಶೇಷ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು; ಅವರಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸುವ ಸಲುವಾಗಿ ಸ್ವಯಂಸೇವಾ ಸಂಸ್ಥೆಗಳಿಗೆ ಅನುದಾನ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳಿಂದ ವಿನಾಯಿತಿ; ಅವರಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕೋತ್ತರ ಶಿಷ್ಯವೇತನ; ಕೇಂದ್ರೀಯ ಶಾಲೆಗಳಲ್ಲಿ ವರ್ಗವಾಗಬಹುದಾದ ಸರ್ಕಾರಿ ಉದ್ಯೋಗವನ್ನುಳ್ಳ ಪರಿಶಿಷ್ಟ ಜಾತಿಯವರ ಮಕ್ಕಳಿಗೆ ಶೇಕಡ 15 ಮತ್ತು ಪರಿಶಿಷ್ಟ ಪಂಗಡದವರ ಮಕ್ಕಳಿಗೆ ಶೇಕಡಾ 7.5ರಷ್ಟು ಸೀಟುಗಳ ಮೀಸಲಾತಿ; ಶಾಲೆಗಳು, ಅನೌಪಚಾರಿಕ ಶಿಕ್ಷಣ ಕೇಂದ್ರಗಳು ಮತ್ತು ಪರ್ಯಾಯ ವಿದ್ಯಾಭ್ಯಾಸ ಕೇಂದ್ರಗಳು; ಪರಿಶಿಷ್ಟ ಜಾತಿ/ಪಂಗಡಗಳ ವಿದ್ಯಾರ್ಥಿಗಳಿಗೆ ಆಶ್ರಮ ಶಾಲೆಗಳು ಮತ್ತು ವಸತಿಗೃಹಗಳು; ವೃತ್ತಿಪರ ಘಟಕಗಳು, ತಾಂತ್ರಿಕ ಶಿಕ್ಷಣ ಮತ್ತು ಜೀವನಕೌಶಲಗಳನ್ನು ಕೇಂದ್ರವಾಗಿಟ್ಟುಕೊಂಡಿರುವ ಕಾರ್ಯಕ್ರಮಗಳೊಂದಿಗೆ ಶೈಕ್ಷಣಿಕ ಕೋರ್ಸ್‌ಗಳನ್ನು ಏಕೀಕರಿಸುವುದು, ಪ್ರಾದೇಶಿಕ ವೈಶಿಷ್ಟ್ಯತೆ ಹೊಂದಿದ ಯೋಜನಾ ಕಾರ್ಯವಿಧಾನಗಳನ್ನು ಜಾರಿಗೊಳಿಸುವುದು, ಪಠ್ಯಕ್ರಮವನ್ನು ಅದರ ಪ್ರಸ್ತುತತೆ ಮತ್ತು ಕಾರ್ಯವೈಖರಿಯನ್ನು ಹೆಚ್ಚಿಸುವ ಸಲುವಾಗಿ ಮರುರೂಪಿಸುವುದು; ತರಗತಿ ಸಂಚಲನ ಕಾರ್ಯವಿಧಾನವನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ಸಲುವಾಗಿ ಸ್ಥಳೀಯ ಹಂತದ ಅಧಿಕಾರಿಗಳಿಗೆ ತರಬೇತಿ ಮರುಕಳಿಸುವಿಕೆ ಸ್ಥಳೀಯ ಮಟ್ಟದ ಉತ್ತೇಜನ ಹಾಗೂ ಮುಂದಾಳುತನವನ್ನು ಪ್ರೋತ್ಸಾಹಿಸುವುದು; ಸ್ಥಳೀಯ ಪರಿಸರ ಪರಿಸ್ಥಿತಿಗಳು, ಸ್ಥಳಿಯ ಭಾಷೆಗಳಿಗೆ ಪ್ರೋತ್ಸಾಹ ನೀಡುವಿಕೆ ಮತ್ತು ಸ್ಥಳೀಯ ವಿಶಿಷ್ಟ ವಸ್ತುಗಳ ಅಭಿವೃದ್ಧಿಯ ಮೂಲಕ ಗುಣಮಟ್ಟದ ಆಶ್ವಾಸನೆಗೆ ಪಟ್ಟು ಹಿಡಿಯುವುದು; ಕಲಿಕೆಯ ಚೌಕಟ್ಟಿಗೆ ಸಂಬಂಧಿಸಿದಂತೆ ಮತ್ತು ರಾಷ್ಟ್ರೀಯ ಮಟ್ಟದ ಮಿತಿಯೊಳಗೆ ಪಠ್ಯಕ್ರಮದ ಚೌಕಟ್ಟಿನೊಳಗೆ ಅದರಲ್ಲಿಯೂ ವಿಶೇಷವಾಗಿ 10 ಮುಖ್ಯ ಘಟಕಗಳಲ್ಲಿ ಕಲಿಕೆಯ ಕನಿಷ್ಠ ಹಂತಗಳನ್ನು ಗುರುತಿಸಿಕೊಳ್ಳುವುದು; ಮತ್ತು ಸ್ಥಳೀಯ ಮಟ್ಟದ ಅಧಿಕಾರಿಗಳಲ್ಲಿ ಸಂವೇದನೆಯನ್ನು ಮೂಡಿಸುವುದು.

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳ ಸಹಭಾಗಿತ್ವ ಮತ್ತು ಸಾಧನೆಗಳಿಗೆ ಅವಕಾಶಗಳನ್ನು ಬಳಸಿಕೊಳ್ಳುವುದರಲ್ಲಿ ಸರ್ವಸಮತೆ:**

ಡಿಪಿಇಪಿ ಕಾರ್ಯಕ್ರಮದ ಅಡಿಯಲ್ಲಿ ನಡೆಸಲಾದ ಕೆಲವು ಅಧ್ಯಯನಗಳು ಇತ್ತೀಚಿಗಿನ ಶೈಕ್ಷಣಿಕ ಮಧ್ಯಪ್ರವೇಶಿಕೆಯಿಂದ ಉಂಟಾಗಿರುವಂತಹ ಅನೇಕ ಲಾಭಗಳನ್ನು ಎತ್ತಿ ತೋರಿಸಿವೆ. ಈ ಅಧ್ಯಯನಗಳಿಂದ ತಿಳಿದುಬಂದಿರುವ ಅಂಶಗಳೆಂದರೆ: ಇದುವರೆಗೆ ಸೇವೆಯ ವ್ಯಾಪ್ತಿಯಲ್ಲಿ ಬಂದಿರದ ಮತ್ತು ಸುಲಭವಾಗಿ ತಲುಪಲು ಸಾಧ್ಯವಿಲ್ಲದ ಪ್ರದೇಶಗಳಲ್ಲಿ ಔಪಚಾರಿಕ ಶಾಲೆಗಳು ಮತ್ತು ಪರ್ಯಾಯ ಶಾಲಾ ಸೌಲಭ್ಯಗಳು ಹೆಚ್ಚು ಸಂಖ್ಯೆಯಲ್ಲಿ ತಲೆ ಎತ್ತಿವೆ; ಔಪಚಾರಿಕ ಶಾಲೆಗಳು ಮತ್ತು ಪರ್ಯಾಯ ಶಾಲೆಗಳಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಮಕ್ಕಳ ದಾಖಲಾತಿ ಮತ್ತು ಶಾಲೆಯಲ್ಲಿ ಉಳಿಯುವಿಕೆಯು ಸಾಕಷ್ಟು ಪ್ರಮಾಣದಲ್ಲಿ ಸುಧಾರಣೆಯನ್ನು ಕಂಡಿದೆ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹುಡುಗಿಯರ ಭಾಗವಹಿಸುವಿಕೆಯು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಸಾಧನೆಯಲ್ಲಿ ಸ್ವಲ್ಪ ಮಟ್ಟಿಗಿನ ಏರಿಕೆ ಗೋಚರಿಸಿದೆ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಲ್ಲಿ ಶಿಕ್ಷಣವನ್ನು ಅರ್ಧದಲ್ಲಿ ನಿಲ್ಲಿಸುವ ಪ್ರಮಾಣದರ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದಲ್ಲಿ ಶಿಕ್ಷಣದ ಪರವಾದ ಅರಿವು ಹೆಚ್ಚು ಪ್ರಮಾಣದಲ್ಲಿದೆ; ಅವರ ಮನಃಸ್ಥಿತಿಗೆ ಸಂಬಂಧಿಸಿದಂತೆ ಗಮನಾರ್ಹ ಬದಲಾವಣೆಗಳು ಆಗಿವೆ; ಮತ್ತು ಈ ಸಮುದಾಯಗಳಿಂದ ಹೆಚ್ಚಿನ ಸಹಕಾರ ಮತ್ತು ನೆರವು ಬರುತ್ತಿದೆ.

ಈ ಧನಾತ್ಮಕ ಪ್ರವೃತ್ತಿಗಳಿಗೆ ಹೊರತಾಗಿಯೂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಮಕ್ಕಳು ಶಿಕ್ಷಣದಲ್ಲಿ ಮುಂದುವರಿಯುವುದು, ಭಾಗವಹಿಸುವುದು ಮತ್ತು ಸಾಧನೆಯ ವಿಚಾರಗಳಲ್ಲಿ ಅತ್ಯಂತ ಅವಕಾಶವಂಚಿತರಾಗಿಯೇ ಉಳಿದಿದ್ದಾರೆ. ಶಿಕ್ಷಣವನ್ನು ಅರ್ಧದಲ್ಲಿ ನಿಲ್ಲಿಸಿ ಹೊರಬೀಳುವ ಸಂಗತಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ವಿದ್ಯಾರ್ಥಿಗಳ ಬದುಕಿನೊಂದಿಗೆ ಭದ್ರವಾಗಿ ಜೋಡಿಸಿಕೊಂಡಿದೆ. ಶಾಲೆಯನ್ನು ಸೇರಿದವರು ಕೂಡ ನಿಯಮಿತವಾಗಿ ಹಾಜರಿರುವುದಿಲ್ಲ ಮತ್ತು ಬದುಕಿನ ಒತ್ತಡದ ಕಾರಣವಾಗಿ ತಮ್ಮ ಶಿಕ್ಷಣವನ್ನು ಮುಂದುವರಿಸುವುದಿಲ್ಲ.

Digitised by Bharatavani, CIIL

ಮೇಲೆ ಉಲ್ಲೇಖಿಸಿದ ವಿಚಾರಗಳಿಗೆ ಸಂಬಂಧಿಸಿದಂತೆ ಅನೇಕ ಮಧ್ಯಪ್ರವೇಶಿಕೆಗಳನ್ನು ಜಾರಿಗೆ ತರಲಾಯಿತು. ಅವುಗಳೆಂದರೆ : ನಿರ್ದಿಷ್ಟ ಮನೆಗಳ ಮಕ್ಕಳ ಶಾಲಾ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಸಂಘಟಕರನ್ನು ತೊಡಗಿಸಿಕೊಳ್ಳುವುದು; ಅಗತ್ಯಕ್ಕೆ ಅನುಗುಣವಾಗಿ ವಿಶೇಷ ಬೋಧನಾ ಬೆಂಬಲ ನೀಡುವಿಕೆ; ಶಾಲೆಯ ಒಡೆತನ ಮತ್ತು ನಿರ್ವಹಣೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳಿಂದ ನಡೆಯುವಂತೆ ನೋಡಿಕೊಳ್ಳುವುದು; ಶಾಲೆಯ ಬಗೆಗಿನ ಆಸಕ್ತಿಯನ್ನು ಪ್ರೋತ್ಸಾಹಿಸುವುದಕ್ಕಾಗಿ ತರಬೇತಿ ಕಾರ್ಯಕ್ರಮಗಳು; ಶಿಕ್ಷಣಸೇವೆಯನ್ನು ಒದಗಿಸದ ಜನವಸತಿಗಳಲ್ಲಿ ಮತ್ತು ಶಾಲೆಯಿಂದ ಹೊರಗೆ ಇರುವಂತಹ ಇತರ ಮಕ್ಕಳಿಗಾಗಿ ಪರ್ಯಾಯ ವಿದ್ಯಾಭ್ಯಾಸ ಸೌಕರ್ಯಗಳನ್ನು ಒದಗಿಸುವುದು; ಸಮುದಾಯದಲ್ಲಿ ಲಭ್ಯವಿರುವ ಸುಶಿಕ್ಷಿತ ಜನರನ್ನು ಶಿಕ್ಷಕರು/ಬೋಧಕರಾಗಿ ಬಳಸಿಕೊಳ್ಳುವುದು; ದುರ್ಬಲ ವರ್ಗದ ಮಕ್ಕಳ ಹಾಜರಾತಿ, ಉಳಿದುಕೊಳ್ಳುವಿಕೆ ಮತ್ತು ಸಾಧನೆಯ ಮೇಲುಸ್ತುವಾರಿ ನೋಡಿಕೊಳ್ಳುವುದು; ಮತ್ತು ಎಸ್‌ಎಸ್‌ಎಯ ಕೆಳಗೆ ವಿದ್ಯಾರ್ಥಿನಿಲಯ, ಪ್ರೋತ್ಸಾಹಧನ ಅಥವಾ ಅಗತ್ಯವಿರುವ ವಿಶೇಷ ಸೌಲಭ್ಯದ ರೂಪದಲ್ಲಿ ಸನ್ನಿವೇಶಕ್ಕೆ ತಕ್ಕುದಾದ ಮಧ್ಯಪ್ರವೇಶಿಕೆಗಳನ್ನು ಒದಗಿಸುವುದು.

**ದೈಹಿಕ ಅಂಗವಿಕಲ ಗುಂಪಿನ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ವಸಮತೆಯ ಕಾಳಜಿ(ಅಂಗವಿಕಲತೆಯುಳ್ಳ ಮಕ್ಕಳು):**

ಭಾರತೀಯ ಸಂದರ್ಭದಲ್ಲಿ ಸರ್ವಸಮತೆಯು ಶಿಕ್ಷಣವನ್ನು ಅಂಗವಿಕಲತೆಯನ್ನು ಹೊಂದಿರುವ ಪ್ರತಿಯೊಬ್ಬ ಮಗುವಿನ ಮೂಲಭೂತ ಹಕ್ಕಿನ ರೂಪದಲ್ಲಿ ಕಲ್ಪಿಸುವ ಪ್ರಜ್ಞೆಯಾಗಿ ಮೂಡಿಬಂದಿದೆ. ಈ ಮಕ್ಕಳಿಗೆ ಸಾಮಾನ್ಯ ತರಗತಿಯ ವ್ಯವಸ್ಥೆಯಲ್ಲಿಯೇ ಶಿಕ್ಷಣವನ್ನು ನೀಡುವ ಭಾವನೆ ಬೆಳೆಯುತ್ತಿದೆ. ಇದರಿಂದ ಈ ಮಕ್ಕಳು(ಅಂಗವಿಕಲರು) ತರಗತಿಯಲ್ಲಿರುವ ಬೇರೆ ಮಕ್ಕಳೊಂದಿಗೆ ಸಾಮಾನ್ಯ ವ್ಯಕ್ತಿಗಳಾಗಿ ಬೆಳೆಯುವುದು ಸಾಧ್ಯವಾಗುತ್ತದೆ. ಅಂಗವಿಕಲ ಮಕ್ಕಳಿಗೆ, ಅಂಗವಿಕಲತೆಯನ್ನು ಹೊಂದಿರದ ಮಕ್ಕಳ ರೀತಿಯಲ್ಲಿಯೇ ಸಮಾನ ರೀತಿಯಲ್ಲಿ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವ ಅಗತ್ಯವನ್ನು ದೇಶದ ಎಲ್ಲಾ ಶೈಕ್ಷಣಿಕ ಕಾರ್ಯನೀತಿಗಳು ಎತ್ತಿ ಹಿಡಿದಿವೆ. ಕಡಿಮೆ ಅಂಗವಿಕಲತೆ ಹೊಂದಿರುವವರಿಗೆ ಸಮಗ್ರ ಶಿಕ್ಷಣವನ್ನು ಮತ್ತು ಗಂಭೀರ ಅಂಗವಿಕಲತೆಯುಳ್ಳ ಮಕ್ಕಳಿಗೆ ಸಾಮಾನ್ಯ ಬೆಳವಣಿಗೆಗೆ ತಯಾರು ಮಾಡಲು ಮತ್ತು ಅವರು ಬದುಕನ್ನು ಧೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಎದುರಿಸಲು ಸಾಧ್ಯವಾಗುವಂತೆ ವಿಶೇಷ ಶಿಕ್ಷಣ ನೀಡುವ ಕ್ರಮವನ್ನು 1986ರ ರಾಷ್ಟ್ರೀಯ ಶಿಕ್ಷಣ ಕಾರ್ಯನೀತಿ ಪ್ರತಿಪಾದಿಸಿದೆ.

ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ಭಾರತದಲ್ಲಿ 6–14 ವರ್ಷದ ವಯೋಮಿತಿಯಲ್ಲಿ 20 ಮಿಲಿಯ ಅಂಗವಿಕಲ ಮಕ್ಕಳಿದ್ದಾರೆ. ಆರನೆಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆಯ ಪ್ರಕಾರ, 8,633 ದೃಷ್ಟಿ ಮಾಂದ್ಯ ಮಕ್ಕಳು ಸಮಗ್ರ ಶಿಕ್ಷಣ ಕಾರ್ಯಕ್ರಮದಲ್ಲಿ ದಾಖಲಾತಿ ಹೊಂದಿದ್ದಾರೆ. ಇನ್ನು 30,000 ದೃಷ್ಟಿದೋಷವಿರುವ ಮಕ್ಕಳನ್ನು ವಿಶೇಷ ಶಾಲೆಗಳಲ್ಲಿ ನೋಡಿಕೊಳ್ಳಲಾಗುತ್ತದೆ. ದೃಷ್ಟಿದೋಷವಿರುವ ಒಟ್ಟು 4.01 ಮಿಲಿಯ ಜನರಲ್ಲಿ ಬರೀ 40,000(ಶೇಕಡಾ 1 ರಷ್ಟು) ಮಂದಿ ಮಾತ್ರ ಸೌಲಭ್ಯವನ್ನು ಪಡೆಯುವವರು ಆಗಿರುವುದರಿಂದ ಸರ್ವಸಮತೆಯ ವಿಚಾರ ಹೆಚ್ಚಿನ ಗಮನವನ್ನು ಸೆಳೆಯುತ್ತದೆ.

**ಅವಕಾಶ:**

ಅಂಗವಿಕಲತೆ ಹೊಂದಿರುವ ಜನರ ಅಧಿನಿಯಮ, 1995(ಸಮಾನ ಅವಕಾಶಗಳು, ಹಕ್ಕುಗಳ ಕಾಯ್ದಿರಿಸುವಿಕೆ ಮತ್ತು ಸಂಪೂರ್ಣ ಸಹಭಾಗಿತ್ವ) ಇಟ್ಟುಕೊಂಡಿರುವ ಗುರಿ ಯಾವುದೆಂದರೆ, ಅಂಗವಿಕಲತೆಗಳನ್ನು ಹೊಂದಿರುವ ಮಕ್ಕಳು ಶಾಲೆಗಳಲ್ಲಿ ಮತ್ತು ವಿಶೇಷ ಸಂಸ್ಥೆಗಳಲ್ಲಿ ಹೆಚ್ಚು ಅವಕಾಶಗಳನ್ನು ಪಡೆಯುವಂತೆ ಮಾಡುವುದು. ಅದನ್ನು ಈ ವಿಧಾನಗಳ ಮೂಲಕ ಸಾಧಿಸಬಹುದಾಗಿದೆ: ಸೂಕ್ತ ರೀತಿಯಲ್ಲಿ ಶಾಲಾ ಪಠ್ಯಕ್ರಮದ ಮರುರಚನೆ, ಶಾಲಾ ಶಿಕ್ಷಕರ ಸಾಮರ್ಥ್ಯಗಳ ಹೆಚ್ಚಳ, ಸೂಕ್ತರೀತಿಯ ಬೋಧನೆ–ಕಲಿಕೆಯ ಸಾಮಗ್ರಿಗಳ ತಯಾರಿಕೆ, ಸ್ವ–ಸಮರ್ಥನೀಯ ಉಪಕರಣಗಳು ಮತ್ತು ಬೋಧನೋಪಕರಣಗಳ ಹೊಸದಾದ ಅಭಿವೃದ್ಧಿ. ಅನೌಪಚಾರಿಕ ಶಿಕ್ಷಣ ಮತ್ತು ಮುಕ್ತ ಶಾಲಾ ವ್ಯವಸ್ಥೆಯ ಅವಕಾಶ ನೀಡುವಿಕೆಯ ಮೂಲಕ ಶಿಕ್ಷಣಾವಕಾಶವನ್ನು ವಿಸ್ತರಿಸಿಕೊಳ್ಳಬಹುದೆಂದು ಅದು ಆಲೋಚಿಸಿದೆ. ಈ ಅಧಿನಿಯಮವು ಶಿಕ್ಷಣಕ್ಕೆ ಒಂದು ಇಡೀ ಅಧ್ಯಾಯವನ್ನು ಮೀಸಲಾಗಿಟ್ಟಿದೆ.

**ಯೋಜನೆಗಳು ಮತ್ತು ಕಾರ್ಯಕ್ರಮಗಳು:**

ಸಧ್ಯ ರಾಷ್ಟ್ರ ಮತ್ತು ರಾಜ್ಯ ಹಂತಗಳಲ್ಲಿ ಅನುಷ್ಠಾನ, ಸಹಯೋಗ ಮತ್ತು ಕಾರ್ಯಕ್ರಮದ ಮೇಲುಸ್ತುವಾರಿಗಾಗಿ ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳು ಕಾರ್ಯನಿರತವಾಗಿವೆ; ಶಿಕ್ಷಣ, ಮರುವಸತಿ, ಸಮಾಲೋಚಕ ಸೇವೆಗಳು ಮತ್ತು ಸಾಮಾಜಿಕ ಸುರಕ್ಷತೆಯ ಕಾರ್ಯಕ್ರಮಗಳನ್ನು ಒದಗಿಸಲು ಅನೇಕ ಸಂಸ್ಥೆಗಳು ಅರ್ಥಪೂರ್ಣ ಸೇವೆಗಳನ್ನು ಸಲ್ಲಿಸುತ್ತಿವೆ; ದೇಶದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸಲಾದ ಸ್ಥಳೀಯ ಹಂತದ ಸಮಿತಿಗಳು ಅಂಗವಿಕಲ ಮಕ್ಕಳ ಕಾರ್ಯಕ್ರಮದಲ್ಲಿ ಸ್ಥಳೀಯ ವಿಶಿಷ್ಟತೆಯ ಘಟಕವನ್ನು ಸೇರಿಸುತ್ತವೆ.

ಕಲಿಯುತ್ತಿರುವ ಅಂಗವಿಕಲರಿಗಾಗಿ ವಿಸ್ತರಿಸಿಕೊಳ್ಳಲಾದ ಸೌಲಭ್ಯಗಳಲ್ಲಿ ಅಂಗವಿಕಲ ಮಕ್ಕಳ ಶಿಷ್ಯವೇತನ, ಈ ಶಿಷ್ಯವೇತನವನ್ನು 9ನೇ ತರಗತಿಯಿಂದ ಪ್ರಾರಂಭವಾಗಿ ಹನ್ನೆರಡನೆಯ ತರಗತಿಯ ನಂತರ ಗರಿಷ್ಠ ಆರು ವರ್ಷಗಳ ಅವಧಿಯವರೆಗೆ ನೀಡಲಾಗುತ್ತದೆ; ಉಚಿತ ವಿದ್ಯಾರ್ಥಿತ್ವ; ಉಚಿತ ಸಾರಿಗೆ; ಶೈಕ್ಷಣಿಕ ಸಾಮಗ್ರಿಗಳನ್ನು ಸಾಂಕೇತಿಕ ದರದಲ್ಲಿ ನೀಡುವಿಕೆ; ಉಪಕರಣ/ಸಲಕರಣೆಗಳನ್ನು ಖರೀದಿಸಲು ಅಥವಾ ಜೋಡಿಸಿಕೊಳ್ಳಲು ನೆರವಾಗುವುದು; ರೈಲು ಮತ್ತು ಇತರ ವಾಹನಗಳಲ್ಲಿ ಉಚಿತ ಪ್ರಯಾಣಸೌಲಭ್ಯ; ಗ್ರಾಮೀಣ

Digitised by Bharatavani, CIIL

ಶಾಲೆಗಳ ಅಂಗವಿಕಲ ಮಕ್ಕಳ ಉಚಿತ ಬಳಕೆಗಾಗಿ, ಕನಿಷ್ಠ ಹತ್ತು ಅಂಗವಿಕಲ ಮಕ್ಕಳನ್ನೊಳಗೊಂಡ ರಿಕ್ಷಾ ಖರೀದಿಗೆ ಅಸಲು ವೆಚ್ಚವನ್ನು ಒದಗಿಸುವುದು; ಎಲ್ಲಾ ವಿಧದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಾನಗಳ ಮೀಸಲಾತಿ; ಮತ್ತು ವೃತ್ತಿಪರ ಕೋರ್ಸ್‌ಗಳು ಮತ್ತು ಜೀವನ ಕೌಶಲಗಳಿಗೆ ಆಧಾರವಾಗುವಿಕೆಯನ್ನು ಕೇಂದ್ರವಾಗಿರಿಸಿಕೊಂಡ ಕಾರ್ಯಕ್ರಮಗಳಿಗೆ ಅವಕಾಶಗಳು ಇದರಲ್ಲಿ ಸೇರುತ್ತವೆ.

ಹತ್ತನೆಯ ಯೋಜನೆಯಲ್ಲಿ ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ವಸಮತೆ, ಸಮಾನತೆ ಮತ್ತು ಗುಣಮಟ್ಟದ ವಿಚಾರಗಳನ್ನು ಖಾತರಿಗೊಳಿಸುವ ಸಲುವಾಗಿ ಸಂಪನ್ಮೂಲ ಬೆಂಬಲಾತ್ಮಕವಾದ ಅನೇಕ ಹೆಜ್ಜೆಗಳನ್ನು ಪ್ರಸ್ತುತಪಡಿಸಲಾಗಿದೆ. ಅವುಗಳೆಂದರೆ: ಅಂಗವಿಕಲ ಮಕ್ಕಳ ಮನೆ ಸಮೀಕ್ಷೆಯನ್ನು ಆಧರಿಸಿ ಅತೀ ಸೂಕ್ಷ್ಮ ನೆಲೆಯಿಂದ ಯೋಜನೆಯನ್ನು ರೂಪಿಸುವುದು; ದೈಹಿಕ ಅಂಗವಿಕಲತೆಯುಳ್ಳ ಗುಂಪಿನ ವಿಭಿನ್ನ ವರ್ಗಗಳ ಕಲಿಕೆಯ ಅಗತ್ಯಗಳನ್ನು ಗುರುತಿಸುವುದು ಮತ್ತು ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಅವರಿಗೆ ಸೂಕ್ತರೀತಿಯಿಂದ ಸ್ಥಾನವನ್ನು ಕಲ್ಪಿಸುವುದು; ವಿಭಿನ್ನ ವರ್ಗಗಳ ಅಂಗವಿಕಲ ಮಕ್ಕಳಿಗಾಗಿ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗಳನ್ನು ನಿಕಟವಾಗಿ ತೊಡಗಿಸಿಕೊಳ್ಳುವಿಕೆಯ ಮೂಲಕ ಸಂಪನ್ಮೂಲ ಬೆಂಬಲವನ್ನು ಬಲಪಡಿಸಿಕೊಳ್ಳುವುದು; ಅಂಗವಿಕಲ ಮಕ್ಕಳ ಶಾಲೆಗಳ ಶಿಕ್ಷಕರಿಗೆ ವಿಶೇಷ ರೀತಿಯ ಸೇವಾನಿರತ ತರಬೇತಿಯನ್ನು ನೀಡುವುದು; ಗಂಭೀರ ರೀತಿಯ ಅಂಗವಿಕಲ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳು ಮತ್ತು ಅಲ್ಪಪ್ರಮಾಣದ ಅಂಗವಿಕಲತೆಯುಳ್ಳ ಮಕ್ಕಳಿಗೆ ವಿಶೇಷ ಶಿಕ್ಷಕರ ನೇಮಕಾತಿ.

ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ವಸಮತೆಯ ವಿಚಾರಕ್ಕೆ ಪ್ರತಿಕ್ರಿಯಾತ್ಮಕವಾಗಿರುವ ಸಮಗ್ರ ಪ್ರಯತ್ನಗಳು ಅಂತರ್ಗತ ಶಾಲಾ ವಿಧಾನವನ್ನು ಅಳವಡಿಸಿಕೊಳ್ಳುವುದಕ್ಕೆ ಒತ್ತನ್ನು ನೀಡಿವೆ. ಈ ವಿಧಾನದ ಮುಖ್ಯ ಗಮನವು ಪರಿಣಾಮಕಾರಿಯಾದ ತರಗತಿ ಕೋಣೆಗಳನ್ನು ಸೃಷ್ಟಿಸುವುದಾಗಿದೆ. ಈ ತರಗತಿಕೋಣೆಗಳಲ್ಲಿ ವಿಕಲತೆ ಇರಲಿ ಅಥವಾ ವಿಕಲತೆ ಇಲ್ಲದಿರಲಿ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ, ಎಲ್ಲಾ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪರಿಗಣಿಸಲಾಗುತ್ತದೆ.

**ಅಂಗವಿಕಲ ಮಕ್ಕಳ ಸಹಭಾಗಿತ್ವ ಮತ್ತು ಸಾಧನೆಗಾಗಿ ಶೈಕ್ಷಣಿಕ ಅವಕಾಶಗಳ ಬಳಕೆಯಲ್ಲಿ ಸರ್ವಸಮತೆ:**

ದೇಶದ ಶೈಕ್ಷಣಿಕ ಚಿತ್ರವು ಶಿಕ್ಷಣ ಕ್ಷೇತ್ರದಲ್ಲಿ ಲಭ್ಯವಿರುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಕಡೆಗೆ ಅಂಗವಿಕಲ ಕಲಿಕಾರ್ಥಿಗಳ ಹೆತ್ತವರ ಮತ್ತು ಕಲಿಕಾರ್ಥಿಗಳ ಧನಾತ್ಮಕ ಪ್ರತಿಕ್ರಿಯೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ವಾಸ್ತವ ಸಂಗತಿಯ ಸೂಚನೆಯಾಗಿ ಅನೇಕ ಶಾಲಾ ಕಾರ್ಯಕ್ರಮಗಳಲ್ಲಿ ಅಂಗವಿಕಲ ಮಕ್ಕಳ ದಾಖಲಾತಿ ಇದೆ.

ಆರನೆಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆಯಲ್ಲಿ (ಜುಲೈ, 1998) ವಿಭಿನ್ನ ವಿಭಾಗಗಳಲ್ಲಿ ಅಂಗವಿಕಲ ಮಕ್ಕಳ ದಾಖಲಾತಿ ಸ್ಥಾನವನ್ನು ವರದಿ ಮಾಡಲಾಗಿದೆ. (ನೋಡಿ ಕೋಷ್ಟಕ 1)

ಕೋಷ್ಟಕ 1

ಶಾಲೆಗಳಲ್ಲಿ ಸಂಘಟಿತ ಶೈಕ್ಷಣಿಕ ಕಾರ್ಯಕ್ರಮಗಳ ಅಡಿಯಲ್ಲಿ ದಾಖಲಾದ ಅಂಗವಿಕಲ ಮಕ್ಕಳು (ಹಿರಿಯ ಪ್ರಾಥಮಿಕ ಹಂತ)

| | | ಅಂಗವಿಕಲತೆಯ ವಿಧ | | | | | |
|---|---|---|---|---|---|---|---|
| ಕ್ಷೇತ್ರ | ಆಡಳಿತ | ದೃಷ್ಟಿದೋಷ ಇರುವವರು | ಶ್ರವಣ ದೋಷ ಹೊಂದಿರುವವರು | ಅಸ್ಥಿ ಸಂಬಂಧಿ ವಿಕಲಾಂಗತ್ವ ಹೊಂದಿರುವವರು | ಮಾನಸಿಕ ಬೆಳವಣಿಗೆಯಲ್ಲಿ ಹಿಂದೆ ಬಿದ್ದವರು | ಇತರರು | ಒಟ್ಟು |
| 1 | 2 | 3 | 4 | 5 | 6 | 7 | 8 |
| ಗ್ರಾಮಾಂತರ ಪ್ರದೇಶ | ಸರ್ಕಾರಿ | 996 | 533 | 6734 | 369 | 926 | 9558 |
| | ಸರ್ಕಾರೇತರ | 262 | 264 | 1582 | 67 | 141 | 2316 |
| | ಒಟ್ಟು | 1258 | 797 | 8316 | 436 | 1067 | 11874 |
| ನಗರ ಪ್ರದೇಶ | ಸರ್ಕಾರಿ | 604 | 904 | 3781 | 271 | 251 | 5811 |
| | ಸರ್ಕಾರೇತರ | 736 | 581 | 2293 | 572 | 1467 | 5649 |
| | ಒಟ್ಟು | 1340 | 1485 | 6074 | 843 | 1718 | 11460 |
| ಒಟ್ಟು | ಸರ್ಕಾರಿ | 1600 | 1437 | 10515 | 640 | 1177 | 15369 |
| | ಸರ್ಕಾರೇತರ | 998 | 845 | 3875 | 639 | 1608 | 7965 |
| | ಒಟ್ಟು | 2598 | 2282 | 14390 | 1279 | 2785 | 23334 |

ಸೂಚನೆ: ಸರ್ಕಾರಿ= ಸರ್ಕಾರಿ+ಸ್ಥಳೀಯ ಸಂಸ್ಥೆಗಳು. ಸರ್ಕಾರೇತರ= ಖಾಸಗಿ ಅನುದಾನಿತ+ ಖಾಸಗಿ ಅನುದಾನರಹಿತ

Digitised by Bharatavani, CIIL

ಸೆಕೆಂಡರಿ ಮತ್ತು ಹಿರಿಯ ಸೆಕೆಂಡರಿ ಹಂತಗಳಲ್ಲಿ ಅಂಗವಿಕಲ ಮಕ್ಕಳ ದಾಖಲಾತಿ ಸ್ಥಾನದ ಕುರಿತಾದ ಮಾಹಿತಿಯನ್ನು ಕೋಷ್ಟಕ 2 ರಲ್ಲಿ ಒದಗಿಸಲಾಗಿದೆ.

ಕೋಷ್ಟಕ 2

ಸಮಗ್ರ ಶೈಕ್ಷಣಿಕ ಕಾರ್ಯಕ್ರಮದ ಅಡಿಯಲ್ಲಿ ಶಾಲೆಗಳಲ್ಲಿ ದಾಖಲಾದ ಅಂಗವಿಕಲರು (ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಹಂತಗಳು)

| | | ವಿಕಲಾಂಗತೆಯ ವಿಧ | | | | | |
|---|---|---|---|---|---|---|---|
| ಕ್ಷೇತ್ರ | ಆಡಳಿತ | ದೃಷ್ಟಿದೋಷ ಇರುವವರು | ಶ್ರವಣ ದೋಷ ಇರುವವರು | ಅಸ್ಥಿ ಸಂಬಂಧದ ವಿಕಲಾಂಗತ್ವ ಇರುವವರು | ಮಾನಸಿಕ ಬೆಳವಣಿಗೆಯಲ್ಲಿ ಹಿಂದೆ ಬಿದ್ದವರು | ಇತರರು | ಒಟ್ಟು |
| 1 | 2 | 3 | 4 | 5 | 6 | 7 | 8 |
| ಗ್ರಾಮಾಂತರ ಪ್ರದೇಶ | ಸರ್ಕಾರಿ | 290 | 200 | 5346 | 137 | 585 | 9558 |
| | ಸರ್ಕಾರೇತರ | 428 | 213 | 2710 | 65 | 1283 | 4699 |
| | ಒಟ್ಟು | 718 | 413 | 8056 | 202 | 1868 | 11257 |
| ನಗರ ಪ್ರದೇಶ | ಸರ್ಕಾರಿ | 582 | 473 | 3416 | 95 | 542 | 5108 |
| | ಸರ್ಕಾರೇತರ | 927 | 319 | 3144 | 572 | 376 | 571 |
| | ಒಟ್ಟು | 1509 | 792 | 6560 | 667 | 918 | 5679 |
| ಒಟ್ಟು | ಸರ್ಕಾರಿ | 872 | 673 | 8762 | 232 | 1127 | 11666 |
| | ಸರ್ಕಾರೇತರ | 1355 | 532 | 5854 | 441 | 1854 | 10036 |
| | ಒಟ್ಟು | 2227 | 1205 | 14616 | 673 | 2981 | 21702 |

**ಸೂಚನೆ:** ಸರ್ಕಾರಿ= ಸರ್ಕಾರಿ+ಸ್ಥಳೀಯ ಸಂಸ್ಥೆಗಳು. ಸರ್ಕಾರೇತರ= ಖಾಸಗಿ ಅನುದಾನಿತ+ ಖಾಸಗಿ ಅನುದಾನರಹಿತ

ಈ ದಿಕ್ಕಿನಲ್ಲಿ ಅಂಗವಿಕಲ ಮಕ್ಕಳ ಶಿಕ್ಷಣದ ಪ್ರವೃತ್ತಿಯಲ್ಲಿ ಉತ್ತಮ ಪ್ರಾರಂಭ ನಡೆದಿರುವುದು ವ್ಯಕ್ತವಾಗಿದೆ. ಸರಕಾರ ಮತ್ತು ಸರಕಾರೇತರ ಸಂಘಟನೆಗಳು ತಮಗಾಗಿ ಒದಗಿಸಿರುವ ಅವಕಾಶಗಳನ್ನು ವಿಭಿನ್ನ ವಿಭಾಗಗಳ ಅಂಗವಿಕಲ ಮಕ್ಕಳು ಬಳಸಿಕೊಳ್ಳುತ್ತಿದ್ದಾರೆ. ಹಿರಿಯ ಪ್ರಾಥಮಿಕ ಮತ್ತು ಹಿರಿಯ ಸೆಕೆಂಡರಿ ಹಂತದಲ್ಲಿ ಅಸ್ಥಿಚಿಕಿತ್ಸೆಗೆ ಸಂಬಂಧಿಸಿದ ಅಂಗವಿಕಲ ಮಕ್ಕಳ ದಾಖಲಾತಿಯು ಅತಿ ಹೆಚ್ಚಿನದ್ದಾಗಿದೆ.

ಬೋಧನೆ–ಕಲಿಕೆಯ ಕಾರ್ಯವಿಧಾನದಲ್ಲಿ ಕಲಿಕಾರ್ಥಿಗಳ ಕ್ರಿಯಾಶೀಲ ತೊಡಗಿಕೊಳ್ಳುವಿಕೆಗಾಗಿ ಸಹಭಾಗಿತ್ವದ ಮತ್ತು ತಂತ್ರಾಧಾರಿತ ನಿರ್ವಹಣಾ ಕ್ರಮಾನುಸರಣೆಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ತರಗತಿಕೋಣೆಯ ಪರಿಸರವು ಕಲಿಯುವವರು ವೃತ್ತಿಪರ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವುದನ್ನು ಸೂಚಿಸುತ್ತದೆ. ಸೂಕ್ತ ರೀತಿಯ ಸಮಾಲೋಚಕ ಕಾರ್ಯಕ್ರಮಗಳ ಅನುಪಸ್ಥಿತಿ ಮತ್ತು ಸಂವಹನದ ಅಂತರದಿಂದಾಗಿ ಈಗಾಗಲೇ ಲಭ್ಯವಿರುವ ಸೌಕರ್ಯಗಳ ಸರಿಯಾದ ಬಳಕೆಗಾಗಿ ಇನ್ನೂ ಹೆಚ್ಚಿನ ಕಾರ್ಯವನ್ನು ಮಾಡಬೇಕಾಗಿದೆ.

ಈ ನಿಟ್ಟಿನಲ್ಲಿ ನವದೆಹಲಿಯ ರಾಷ್ಟ್ರೀಯ ಮುಕ್ತ ಶಾಲೆಯು ತನ್ನ ಮುಕ್ತ ಕಲಿಕೆ ಮತ್ತು ದೂರ ಶಿಕ್ಷಣ ಕಾರ್ಯಕ್ರಮಗಳ ಮೂಲಕ ತೆಗೆದುಕೊಂಡ ಕ್ರಮಗಳು ಸರ್ವಸಮತೆ ಮತ್ತು ಸಮಾನತೆಯ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಅತ್ಯಂತ ಹೆಚ್ಚಿನ ಭರವಸೆಯನ್ನು ನೀಡುತ್ತವೆ. ಇದೇ ಸರಳ ಕಾರಣಕ್ಕಾಗಿ ಶೈಕ್ಷಣಿಕ ನಿರ್ವಹಣಾ ಕ್ರಮಾನುಸರಣೆಯಲ್ಲಿನ ಸುಲಲಿತೆಯು ಅವರ ವ್ಯಕ್ತಿಗತ ಅಗತ್ಯಗಳಿಗೆ ಹೊಂದಿಕೊಂಡಿದ್ದು ಅವರಿಗೆ ವಿಷಯವನ್ನು ಆಯ್ಕೆ ಮಾಡಲು, ಪರೀಕ್ಷೆಯನ್ನು ಭಾಗಶಃ ತೆಗೆದುಕೊಳ್ಳಲು ಸ್ವಾತಂತ್ರ್ಯವನ್ನು ಒದಗಿಸುತ್ತವೆ. ಅವಕಾಶವಂಚಿತ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಅಂಗೀಕೃತ ಸಂಸ್ಥೆಗಳನ್ನು(ಎಸ್ಎಐಇಡಿ) ಎನ್ಒಎಸ್ ಸ್ಥಾಪಿಸಿದೆ. ಈ ಸಂಸ್ಥೆಗಳಲ್ಲಿ ವಿಶೇಷ ಅವಕಾಶ ಮತ್ತು ಕಲಿಕಾ ಬೆಂಬಲದೊಂದಿಗೆ ಅಂಗವಿಕಲ ಮತ್ತು ಅವಕಾಶವಂಚಿತ ಮಕ್ಕಳಿಗಾಗಿ ದುಡಿಯಲಾಗುತ್ತದೆ. ಅವಕಾಶವಂಚಿತ ಜನರ ಗುಂಪುಗಳಿಗೆ ಸೇವೆ ಸಲ್ಲಿಸುವ ಸಲುವಾಗಿ ದೇಶದಲ್ಲಿ ದುಡಿಯುತ್ತಿರುವ ಸರಕಾರಿ, ಸರಕಾರೇತರ ಮತ್ತು ವಿಶೇಷ ಸಂಸ್ಥೆಗಳನ್ನು ಭಾರತದ ವಿವಿಧ ರಾಜ್ಯಗಳಲ್ಲಿ ಗುರುತಿಸಲಾಗಿದೆ. ಎಸ್ಎಐಇಡಿ ಯಲ್ಲಿ ಶೈಕ್ಷಣಿಕ ಮತ್ತು ವೃತ್ತಿಪರ ಕೋರ್ಸುಗಳಿಗೆ ಅವಕಾಶಗಳಿವೆ.

ಈ ಕ್ಷೇತ್ರದಲ್ಲಿ ಶಿಕ್ಷಣ ಮತ್ತು ಕ್ಷೇಮಾಭಿವೃದ್ಧಿ ವಿಭಾಗಗಳಲ್ಲಿ ಜತೆಜತೆಯಾಗಿ ಕೆಲಸ ಮಾಡುವ ಅನೇಕ ಏಜೆನ್ಸಿಗಳು ಇವೆ. ಇವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ: ಎನ್ಸಿಇಆರ್ಟಿ, ಎನ್ಒಎಸ್, ಮಾನವ ಸಂಪನ್ಮೂಲ ವಿಭಾಗದ

Digitised by Bharatavani, CIIL

ಮಂತ್ರಾಲಯ(ಎಮ್‌ಹೆಚ್‌ಆರ್‌ಡಿ), ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ವಿಶ್ಯುವಲಿ ಹ್ಯಾಂಡಿಕ್ಯಾಪ್ಡ್. ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಹಿಯರಿಂಗ್ ಆಂಡ್ ಸ್ಪೀಚ್ ಥೆರಪಿ, ಠಾಕೂರ್ ಪ್ರಸಾದ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲಿ ರಿಟಾರ್ಡೆಡ್, ಸ್ಪಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ, ಮತ್ತು ಬೇರೆ ಹಲವಾರು ಎನ್‌ಜಿಒಗಳು. ವಿಭಿನ್ನ ಮಂತ್ರಾಲಯಗಳ ನಡುವೆ ಕೆಲವೊಮ್ಮೆ ಸಹಯೋಗ ಮತ್ತು ಸಹಕಾರ ಸಡಿಲವಾಗಿರುವುದನ್ನು ಕಾರ್ಯಕ್ರಮಗಳು ತೋರ್ಪಡಿಸುತ್ತವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈ ವಿಭಾಗ ಮತ್ತು ಬುಡಕಟ್ಟು ಶಿಕ್ಷಣವನ್ನು ಮಾನವ ಸಂಪನ್ಮೂಲ ವಿಭಾಗದ ಮಂತ್ರಾಲಯಕ್ಕೆ ಸ್ಥಾನಾಂತರಿಸಬೇಕೆಂದು ಹೇಳುವ ಬುದ್ಧಿಜೀವಿಗಳ ಗುಂಪು ಇದೆ.

**ಮುಕ್ತ ಕಲಿಕೆ ಮತ್ತು ದೂರ ಶಿಕ್ಷಣದ ಮೂಲಕ ಮೂಲ ಶಿಕ್ಷಣದಲ್ಲಿ ಸರ್ವಸಮತೆ:**

ರಾಷ್ಟ್ರೀಯ ಮುಕ್ತ ಶಾಲೆಯು ಒಂಭತ್ತು ಎಸ್‌ಓಎಸ್ ಗಳೊಂದಿಗೆ ಶಿಕ್ಷಣವನ್ನು ಜನಸಮುದಾಯದ 'ತಲುಪದಿರುವವರಿಗೆ', ಅಂಚಿನಲ್ಲಿ ಇರುವವರಿಗೆ ಮತ್ತು ಅವಕಾಶವಂಚಿತ ಗುಂಪುಗಳಿಗೆ ತಲುಪಿಸುವುದರ ಮೂಲಕ ಮಧ್ಯಪ್ರವೇಶಿಕೆಯ ಕೆಲವು ಗಮನಾರ್ಹ ಕಾರ್ಯಗಳನ್ನು ನಡೆಸಿದೆ. ಅದು ಶಿಕ್ಷಣವನ್ನು ಪಡೆಯುವ ಅವಕಾಶದಲ್ಲಿ ಅಸಮತೆಯನ್ನು ಕಡಿಮೆ ಮಾಡಲು ಸಂಘಟಿತ ಪ್ರಯತ್ನಗಳನ್ನು ನಡೆಸುತ್ತಿದೆ.

ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಮತ್ತು ಅವಕಾಶವಂಚಿತ ಗುಂಪುಗಳಿಗಾಗಿ ನಡೆಸುವುದರ ಮೂಲಕ ಶಿಕ್ಷಣವನ್ನು ಪ್ರಜಾಸತ್ತಾತ್ಮಕತೆಯ ದಿಕ್ಕಿಗೆ ಕರೆದೊಯ್ಯುತ್ತಿದೆ. ಗುಣಮಟ್ಟವನ್ನು ಕಳೆದುಕೊಳ್ಳದೆ ಜನಸಮುದಾಯಕ್ಕಾಗಿ ಶಿಕ್ಷಣದ ಸರ್ವಸಮತೆ ಮತ್ತು ಸಮಾನತೆಯ ಈ ಕಾಳಜಿಯನ್ನು ದೃಷ್ಟಿಯಲ್ಲಿಟ್ಟು ರಾಷ್ಟ್ರೀಯ ಮುಕ್ತಶಾಲೆಯು ದೇಶದ ಎಲ್ಲ ಕಡೆಗಳಲ್ಲಿ ಮುಕ್ತ ಮೂಲ ಶಿಕ್ಷಣವನ್ನು(ಒಬಿಇ-ಓಪನ್ ಬೇಸಿಕ್ ಎಡ್ಯುಕೇಶನ್) ಪ್ರಾರಂಭಿಸುವ ಹೊಸ ವಿಧಾನದಿಂದ ಶಿಕ್ಷಣದ ಫಲವು ಅನೇಕ ಕಾರ್ಯಕ್ರಮಗಳ ಮೂಲಕ ಆದ್ಯತೆಯಲ್ಲಿರುವ ಗ್ರಾಹಕ ಗುಂಪುಗಳಿಗೆ ತಲುಪುವಂತಾಗಿದೆ. ಈ ಗುಂಪಿನಲ್ಲಿ ಇರುವವರೆಂದರೆ ಶಾಲೆ ಬಿಟ್ಟವರು ಮತ್ತು ಅಂಚಿನಲ್ಲಿರುವ ಗುಂಪುಗಳು. ಅಂಚಿನಲ್ಲಿರುವ ಗುಂಪಿನಲ್ಲಿ ಇರುವವರು ಗ್ರಾಮೀಣ ಯುವಜನರು, ನಗರಪ್ರದೇಶದ ಬಡವರು, ಹುಡುಗಿಯರು, ಮಹಿಳೆಯರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗಗಳು, ಅಂಗವಿಕಲರು ಮತ್ತು ಮಾಜಿ ಸೈನಿಕರು.

**ನೀಡಲಾಗುವ ಕಾರ್ಯಕ್ರಮಗಳು ಮತ್ತು ಕೋರ್ಸ್‌ಗಳು:**

ತಲುಪಲಾಗದವರನ್ನು ತಲುಪುವ ಅನುಸರಣೆಯಲ್ಲಿ ಒಬಿಇ ಕಾರ್ಯಕ್ರಮಗಳು ಶಿಕ್ಷಣದ ಮೂರು ಹಂತಗಳನ್ನು ವ್ಯಾಪಿಸಿಕೊಳ್ಳುತ್ತವೆ, ಅವುಗಳೆಂದರೆ 1. ಸಿದ್ಧತೆಯ ಹಂತ(ಎ); 2. ಪ್ರಥಮ ಹಂತ (ಬಿ); 3. ಪ್ರಾಥಮಿಕ ಹಂತ (ಸಿ) ಇವುಗಳು ಔಪಚಾರಿಕ ಶಾಲೆಗಳ 3, 5 ಮತ್ತು 8ನೇ ತರಗತಿಗಳಿಗೆ ಸಮಾನವಾಗಿವೆ. ರಾಷ್ಟ್ರೀಯ ಮುಕ್ತಶಾಲೆಯು ತನ್ನ ಒಬಿಇ ಕಾರ್ಯಕ್ರಮಗಳ ಮೂಲಕ ಕೋರ್ಸಗಳನ್ನು ಒದಗಿಸುತ್ತದೆ. ಮೂಲ ಶಿಕ್ಷಣದ ಕಾರ್ಯಕ್ರಮದಲ್ಲಿ ಎರಡು ಘಟಕಗಳಿವೆ. ಅವುಗಳೆಂದರೆ, ಮುಕ್ತ ಮೂಲ ಶಿಕ್ಷಣ–ಪ್ರಾಥಮಿಕ(ಒಬಿಇ–ಇ) ಮತ್ತು ವಯಸ್ಕರಿಗಾಗಿ ಮುಕ್ತ ಮೂಲ ಶಿಕ್ಷಣ(ಒಬಿಇ–ಎ). ಒಬಿಇ–ಎ ಯ ಕೇಂದ್ರ ವಸ್ತುವಿಷಯ 'ಉತ್ತಮ ಹೆತ್ತವರಾಗುವುದು.' ಒಬಿಇ ಕಾರ್ಯಕ್ರಮಗಳು ಶೈಕ್ಷಣಿಕ ಮತ್ತು ವೃತ್ತಿಪರ ಎರಡೂ ಕೋರ್ಸಗಳನ್ನು ಒದಗಿಸುತ್ತವೆ. ಸಧ್ಯದಲ್ಲಿಯೇ ಒಬಿಇ ಕಾರ್ಯಕ್ರಮದ ಕೆಳಗೆ ಅನೇಕ ವೃತ್ತಿಪೂರ್ವ ಕೋರ್ಸಗಳನ್ನು ಸೇರಿಸಲಾಗುವುದು.

**ಹುಡುಗರು ಮತ್ತು ಹುಡುಗಿಯರ ಸಹಭಾಗಿತ್ವ ಮತ್ತು ಸಾಧನೆಗಾಗಿ ಅವಕಾಶಗಳ ಬಳಕೆಯಲ್ಲಿ ಸರ್ವಸಮತೆ:**

ದೇಶದಾದ್ಯಂತ ಹರಡಿಕೊಂಡಿರುವ ಅಧ್ಯಯನ ಕೇಂದ್ರಗಳ ಬಹುದೊಡ್ಡ ಜಾಲದ ಮೂಲಕ ರಾಷ್ಟ್ರೀಯ ಮುಕ್ತ ಶಾಲೆಯು ತನ್ನ ಉದ್ದೇಶಿತ ಗುಂಪನ್ನು ತಲುಪುತ್ತದೆ. ಈ ಅಧ್ಯಯನ ಕೇಂದ್ರಗಳು ಎನ್‌ಓಎಸ್ ಅಂಗೀಕೃತ ಸಂಸ್ಥೆಗಳಲ್ಲಿ ಇರುತ್ತವೆ. ಎಲ್ಲವನ್ನೂ ಸೇರಿಸಿ, ಒಬಿಇ ಕಾರ್ಯಕ್ರಮಗಳು ಸುಮಾರು 5,00,000 ಹುಡುಗರು ಮತ್ತು ಹುಡುಗಿಯರನ್ನು ಒಳಗೊಳ್ಳುತ್ತವೆ. ಹತ್ತನೆಯ ಯೋಜನೆಯಲ್ಲಿ ಎನ್‌ಓಎಸ್ ತನ್ನ ಒಬಿಇ ಕಾರ್ಯಕ್ರಮದ ಮೂಲಕ 1,00,00,000 ವಯಸ್ಕರನ್ನು ತಲುಪುವ ಪ್ರಸ್ತಾಪವಿದೆ.

**ದೂರ ಶಿಕ್ಷಣದಲ್ಲಿ ಸರ್ವಸಮತೆ:**

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ದೂರಶಿಕ್ಷಣದ ಕ್ರಮವು ತಲುಪಿದವರನ್ನು ತಲುಪುವ ಸವಾಲುಗಳನ್ನು ಎದುರಿಸುವಲ್ಲಿ ಬಹಳ ಉಪಯುಕ್ತವೆನಿಸಿದೆ. ತಲುಪದವರನ್ನು ತಲುಪುವ ಸವಾಲುಗಳನ್ನು ಪರಿಹರಿಸಿದೆ. ಈ ಮಧ್ಯಪ್ರವೇಶಿಕೆಯು ವಿಶೇಷವಾಗಿ ಬೋಧಕರ ಮತ್ತು ಸಹಾಯಕರ ಸಾಮರ್ಥ್ಯಗಳನ್ನು, ಪ್ರಾಥಮಿಕ ಹಂತದಲ್ಲಿ ಕಲಿಯುವವರ ಮತ್ತು ವಯಸ್ಕರ ವಿಷಯ ತಿಳವಳಿಕೆಯನ್ನು ಹೆಚ್ಚು ಮಾಡುವಲ್ಲಿ ಮತ್ತು ಈಗಾಗಲೇ ನಡೆಯುತ್ತಿರುವ ಹೊಸ ಬೆಳವಣಿಗೆಗಳು ಮತ್ತು ಸವಾಲುಗಳ ಕುರಿತು ಆಗಿಂದಾಗಲೇ ತಿಳಿದುಕೊಳ್ಳಲು ಸಹಾಯಕವಾಗಿವೆ. ಆದರೆ ಮಾಹಿತಿ ತಂತ್ರಜ್ಞಾನವನ್ನು ಆಧರಿಸಿದ ಕಾರ್ಯಕ್ರಮಗಳ ವ್ಯಾಪಕ ಅಳವಡಿಕೆಯಲ್ಲಿ ಸರ್ವಸಮತೆ ಮತ್ತು ಸಮಾನತೆಯ ದುಪ್ಪಟ್ಟು ಕಾಳಜಿಗಳು ತಳಹಂತದ ವಾಸ್ತವತೆಗಳಾಗಿ ಎದ್ದು ಕಾಣಿಸಿವೆ. ದೂರಕ್ರಮದ ಮೂಲಕ ಮೂಲ ಶಿಕ್ಷಣವನ್ನು ಒದಗಿಸುವುದರಲ್ಲಿ ಇರುವ ಸವಾಲುಗಳು ಈ ಅಂಶಗಳಿಗೆ ಸಂಬಂಧಪಟ್ಟವುಗಳಾಗಿವೆ: 1. ಬಹುದೂರದ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳು ಕೈಗೆಟಕುವಲ್ಲಿ ಲಭ್ಯವಾಗುವುದು; 2. ಮಾಹಿತಿ, ಸಂಪರ್ಕ ಮತ್ತು ತಂತ್ರಜ್ಞಾನದ ಸೂಕ್ತ ಬಳಕೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳ ಒದಗಿಸುವಿಕೆ; 3. ಬಹುದೂರದ ಸಮುದಾಯಗಳಲ್ಲಿ ಬೆಂಬಲಿತ ರಚನೆಗಳ ಸ್ಥಾಪನೆ ಮತ್ತು ನಿರ್ವಹಣೆ; 4. ಪೂರಕ

Digitised by Bharatavani, CIIL

ಕಲಿಕೆ/ಬೋಧನೆಯ ಸಾಮಾಗ್ರಿಗಳನ್ನು ವಿನ್ಯಾಸಗೊಳಿಸುವುದು; 5. ಕಲಿಯುವವರು ತಾವು ಇರುವ ಕಡೆಯಿಂದ, ತಮ್ಮ ಅನುಕೂಲತೆಗೆ ತಕ್ಕ ಸಮಯದಲ್ಲಿ ನಿಯಮಿತವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವಾಗ ಅವರೊಂದಿಗೆ ನೇರವಾಗಿ ಪ್ರತಿಕ್ರಿಯಿಸಲು ಅಗತ್ಯವಿರುವ ಬೆಂಬಲಿತ ರಚನೆಗಳನ್ನು ಸೃಷ್ಟಿಸುವುದು; ಮತ್ತು 6. ಮೊದಲೇ ನಿಶ್ಚಯಿಸಿದ ದಿನಾಂಕಗಳು ಮತ್ತು ಸಮಯದಲ್ಲಿ ವಯಸ್ಕ ಕಲಿಕಾರ್ಥಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಎದುರಿಸುತ್ತಿರುವ ಕಷ್ಟಗಳು.

**ಸಾಕ್ಷರತಾ ಕಾರ್ಯಕ್ರಮದಲ್ಲಿ ಸರ್ವಸಮತೆಯ ವಿಚಾರಗಳು–ವಯಸ್ಕ ಶಿಕ್ಷಣ ಕಾರ್ಯಕ್ರಮದ ಕಾಳಜಿಗಳು:**

**ವಯಸ್ಕ ಶಿಕ್ಷಣದಲ್ಲಿ ಸರ್ವಸಮತೆಯ ಕಾಳಜಿಗಳ ತಾತ್ವಿಕತೆ**

ಜಗತ್ತಿನ ಒಟ್ಟು ಅನಕ್ಷರಸ್ಥರಲ್ಲಿ ಶೇಕಡಾ 30ರಷ್ಟು ಮಂದಿ ಭಾರತದಲ್ಲಿ ಇರುವುದು ಈ ದೇಶದ ತೀವ್ರ ಕಾಳಜಿಗಳಲ್ಲಿ ಒಂದು. ಜಗತ್ತಿನ ಒಟ್ಟು ಅನಕ್ಷರಸ್ಥ ಸಮುದಾಯದಲ್ಲಿ ಅನಕ್ಷರಸ್ಥ ಮಹಿಳಾ ಸಮುದಾಯದ ಪಾಲು ಶೇಕಡಾ 50ಕ್ಕೂ ಹೆಚ್ಚು. ಈ ಕುರಿತು ತೀವ್ರ ಭಾವನೆ ಇದೆ. ಈ ವಿಚಾರವು ಸಾಕ್ಷರತೆಯಲ್ಲಿ ಯಾವುದೇ ವಿಧದ ಪ್ರಾದೇಶಿಕ, ಗ್ರಾಮೀಣ, ನಗರ ಮತ್ತು ಪುರುಷ–ಸ್ತ್ರೀ ಅಸಮತೆಯನ್ನು ತೋರಗೊಡದೆ ಶಿಕ್ಷಣಾವಕಾಶ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವ ಸರ್ವಸಮತೆಯ ಕಾಳಜಿಯೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ಸಾಕ್ಷರತಾ ಸಶಕ್ತೀಕರಣವನ್ನು ಸಾಮಾಜಿಕ ವಲಯಗಳ ವಿವಿಧ ವಿಧದ ಬೆಳವಣಿಗೆಗಳೊಂದಿಗೆ, ಉದಾಹರಣೆಗೆ ಆರೋಗ್ಯ, ನೈರ್ಮಲ್ಯ, ಪೋಷಣೆ, ಶಿಶು ಮರಣ ಪ್ರಮಾಣ, ತಾಯಿ ಮತ್ತು ಮಗುವಿನ ಕಾಳಜಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡರೂ ಸಮಾಜವನ್ನು ವ್ಯಾಪಕ ರೀತಿಯಿಂದ ಅನ್ವಯಿಸಿಕೊಂಡು ಬದುಕಿನ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಸಮುದಾಯಗಳು ಪ್ರಜಾಸತ್ತಾತ್ಮಕವಾಗಿ ಭಾಗವಹಿಸುವುದು ಇತ್ಯಾದಿಗಳೊಂದಿಗೆ ಬಹಳ ಹತ್ತಿರವಾಗಿ ಜೋಡಿಸಿಕೊಳ್ಳುವ ಜಾಗತಿಕ ಕಾಳಜಿಯಲ್ಲಿ ಭಾರತವು ಪಾಲುಗೊಳ್ಳುತ್ತದೆ.

ಈ ಕಾಳಜಿಗಳನ್ನು ಕಾರಣವಾಗಿಸಿಕೊಂಡು ಅನಕ್ಷರತೆಯನ್ನು ಸಂಪೂರ್ಣವಾಗಿ ಕಿತ್ತೊಗೆಯಲು ಪರ್ಯಾಯ ವಿಧಾನಗಳನ್ನು ಅಳವಡಿಸಿಕೊಳ್ಳುವ ನಿರಂತರ ಪ್ರಯತ್ನ ನಡೆಯುತ್ತಿದೆ. ಇದನ್ನು ಹಂತಗಳಲ್ಲಿ ಮತ್ತು ಸಮಯಾವಧಿಗೆ ಸೀಮಿತವಾದ ಕಾರ್ಯಕ್ರಮಗಳ ಮೂಲಕ ನಡೆಸಲಾಗುತ್ತದೆ. ಇಲ್ಲಿನ ಕೇಂದ್ರ ವಿಚಾರ ಯಾವುದೆಂದರೆ, ಗ್ರಾಮೀಣ–ನಗರ, ಪುರುಷ–ಸ್ತ್ರೀ ಮತ್ತು ಸಾಕ್ಷರತೆಯ ಪ್ರಾದೇಶಿಕ ಹಂತಗಳು– ಇವುಗಳ ನಡುವಿನ ಅಗಾಧ ಅಂತರವನ್ನು ತುಂಬಿಕೊಳ್ಳುವುದು. ಸರ್ವಸಮತೆಯ ವಿಚಾರಕ್ಕೆ ಜನಸಂಖ್ಯೆಯ ಎಲ್ಲಾ ವಿಭಾಗಗಳ ತಿಳಿವಳಿಕೆ, ಮಾಹಿತಿ, ದಕ್ಷತೆಗಳು ಮತ್ತು ಧೋರಣಾ ಅಂಶಗಳಲ್ಲಿ ಉಳಿದುಬರುವಂತಹ ಬದಲಾವಣೆಯನ್ನು ತರುವುದರ ಕಡೆಗೆ ಗಮನ ಇದೆ. ಸಾಕ್ಷರತೆಯ ಈ ದರ್ಶನವನ್ನು ಮಾನವ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಅತ್ಯಂತ ಶಕ್ತಿಯುತ ಸಾಧನವಾಗಿ ಪರಿವರ್ತಿಸಲು ಭಾರತದಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಶನ್‌ನ(ಎನ್‌ಎಲ್‌ಎಮ್) ಉಗಮವಾಗಿದೆ.

**ರಾಷ್ಟ್ರೀಯ ಸಾಕ್ಷರತಾ ಮಿಶನ್‌ನ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು:**

ಭಾರತದಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಶನ್ 1988 ರಲ್ಲಿ ಸ್ಥಾಪಿಸಲಾಯಿತು. ರಾಜ್ಯ ಸಾಕ್ಷರತಾ ಮಿಶನ್‌ಗಳು ಮತ್ತು ರಾಜ್ಯ ಸಂಪನ್ಮೂಲ ಕೇಂದ್ರಗಳ ಮೂಲಕ ವಯಸ್ಕ ಸಾಕ್ಷರತೆಯ ಕಾರ್ಯನೀತಿಗಳು, ಕಾರ್ಯವಿಧಾನಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು ಇದರ ಧ್ಯೇಯವಾಗಿದೆ. ಎನ್‌ಎಲ್‌ಎಮ್‌ನ ಮೂರು ಕಾರ್ಯಕ್ರಮಗಳು ಬದುಕಿನುದ್ದದ ಮತ್ತು ಮುಂದುವರಿದ ಶಿಕ್ಷಣ ಕಾರ್ಯಕ್ರಮದ ದೀರ್ಘಾವಧಿಗೆ ಸಂಬಂಧಿಸಿದ ಸರ್ವಸಮತೆಯ ವಿಚಾರವನ್ನು ಗಮನದಲ್ಲಿಟ್ಟುಕೊಂಡಿವೆ. ಈ ಗುರಿಯನ್ನು ಗಮನದಲ್ಲಿಟ್ಟುಕೊಂಡು ಅದು ಮೂರು ಅಗಾಧ ಪ್ರಮಾಣದ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ಅವುಗಳೆಂದರೆ, 1. ಸಂಪೂರ್ಣ ಸಾಕ್ಷರತೆ; 2. ಸಾಕ್ಷರತೆಯ ನಂತರದ; ಮತ್ತು 3. ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳು. ಸಂಪೂರ್ಣ ಸಾಕ್ಷರತೆಯ ಮೊದಲ ಹಂತವು 15ರಿಂದ 35ರ ವಯೋಮಿತಿಯಲ್ಲಿರುವ ಪುರುಷರನ್ನು ಮತ್ತು ಸ್ತ್ರೀಯರನ್ನು ಪ್ರಯೋಜನಾತ್ಮಕ ಸಾಕ್ಷರತಾ ಕುಶಲತೆಗಳು ಮತ್ತು ಜೀವನಾಧಾರಿತ ಕುಶಲತೆಗಳಿಂದ ಸಶಕ್ತೀಕರಣಗೊಳಿಸುವ ಗುರಿಯನ್ನು ಹೊಂದಿದೆ. ಸಾಕ್ಷರತೆಯ ನಂತರದ ಎರಡನೆಯ ಹಂತದಲ್ಲಿ (ಪಿಎಲ್‌ಪಿ–ಪೋಸ್ಟ್–ಲಿಟರಸಿ ಪ್ರೊಗ್ರಾಮ್ಸ್) ಮೊದಲ ಹಂತದ ಮೂಲಕ ಪಡೆದಂತಹ ಸಾಕ್ಷರತಾ ಕುಶಲತೆಗಳನ್ನು ಬಲಪಡಿಸಿಕೊಳ್ಳುವುದಕ್ಕೆ ಮತ್ತು ವೃತ್ತಿಪರ ಕೌಶಲತೆಗಳನ್ನು ವೃದ್ಧಿಪಡಿಸಿಕೊಳ್ಳುವುದಕ್ಕೂ ಒತ್ತನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮಗಳನ್ನು ಬಲಪಡಿಸಿಕೊಳ್ಳುವಿಕೆ, ಪರಿಹರಿಸಿಕೊಳ್ಳುವಿಕೆ ಮತ್ತು ಕುಶಲತೆಯ ಬೆಳವಣಿಗೆಗೆ ಉದ್ದೇಶಿಸಲಾಗುತ್ತದೆ. ಇಲ್ಲಿ ವಿಷಯಕ್ಕೆ ಸಂಬಂಧಿಸಿದ ಒತ್ತು ಹೆಚ್ಚಾಗಿ ಆರೋಗ್ಯ, ಪೋಷಣೆ, ನೈರ್ಮಲ್ಯ, ತಾಯಿ ಮತ್ತು ಮಗುವಿನ ಕಾಳಜಿ, ಮತ್ತು ಜನಸಂಖ್ಯೆ ಮತ್ತು ಅಭಿವೃದ್ಧಿ ಶಿಕ್ಷಣದ ವಿಭಾಗಗಳಿಗೆ ಇರುತ್ತದೆ. ಮೂರನೆಯ ಕಾರ್ಯಕ್ರಮವು ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವನ್ನು ಸೂಚಿಸುತ್ತದೆ. ಈ ಹಂತದಲ್ಲಿ ಸಾಕ್ಷರತೆಯನ್ನು ಮೀರುವ ರೂಪಾಂತರ ಅಥವಾ ಬದಲಾವಣೆ ಗೋಚರಿಸುತ್ತದೆ. ಇಲ್ಲಿ 'ಜನ ಚೇತನ ಕೇಂದ್ರ'ಗಳ (ಗ್ರಾಮೀಣ ಸಾಕ್ಷರತೆ ಮತ್ತು ಸಂಪನ್ಮೂಲ ಕೇಂದ್ರಗಳು) ಕಾರ್ಯಕ್ರಮಗಳನ್ನು ಒದಗಿಸಲಾಗುತ್ತದೆ. ಇದರಲ್ಲಿ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ವೃತ್ತಿಪರ ಚಟುವಟಿಕೆಗಳು ಇರುತ್ತವೆ. ಈ ವೃತ್ತಿಪರ ಚಟುವಟಿಕೆಗಳು ಸ್ಥಳೀಯ ವೃತ್ತಿಗಳು, ಭೌತಿಕ, ಸಾಂಸ್ಕೃತಿಕ ಮತ್ತು ಇತರ ಮನರಂಜನಾ ಚಟುವಟಿಕೆಗಳಿಗೆ ಸಂಬಂಧಿಸಿ ಇರುತ್ತವೆ. ಕಲಿಕಾರ್ಥಿಗಳು ಉದ್ಯಮಶೀಲತೆ, ವರಮಾನ–ಉತ್ಪಾದನೆ ಮತ್ತು ಸಾಮಾಜಿಕ ಕ್ರಿಯಾವಿಧಾನಗಳನ್ನು ಕೇಂದ್ರವಾಗಿಟ್ಟುಕೊಂಡಿರುವ ಚಟುವಟಿಕೆಗಳಿಗೆ ತೆರೆದುಕೊಳ್ಳುವ

Digitised by Bharatavani, CIIL

ರೀತಿಯಲ್ಲಿ ಈ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದ ಹಂತದಲ್ಲಿ ಸರ್ವಸಮತೆಯ ವಿಚಾರವನ್ನು ಸಮಾನತೆ ಮತ್ತು ಗುಣಮಟ್ಟದ ಕಾಳಜಿಗಳೊಂದಿಗೆ ಸಂಯೋಜಿಸಲಾಗುವುದು. ಮುಂದುವರಿಕೆಯ ಶಿಕ್ಷಣ ಕೇಂದ್ರಗಳು(ಸಿಇಸಿ ಗಳು) ಮತ್ತು ನೊಡಲ್ ಮುಂದುವರಿಕೆಯ ಶಿಕ್ಷಣ ಕೇಂದ್ರಗಳು(ಎನ್‌ಸಿಇಸಿ ಗಳು) ಮೂಲ ಶಿಕ್ಷಣ, ಸಾಕ್ಷರತಾ ಕುಶಲತೆಗಳ ಹೆಚ್ಚಳ, ಪರ್ಯಾಯ ಶಿಕ್ಷಣ ಒದಗಿಸುವಿಕೆಯ ಕ್ರಮಗಳು ಮತ್ತು ಸಾಮಾಜಿಕ ಮತ್ತು ವೃತ್ತಿಪರ ಅಭಿವೃದ್ಧಿಗೆ ವಿಶಿಷ್ಟವಾದ ಮತ್ತು ಅಗತ್ಯವನ್ನು ಆಧರಿಸಿದ ಅವಕಾಶಗಳನ್ನು ಒದಗಿಸುತ್ತವೆ. ಸಾಕ್ಷರತೆ ಮತ್ತು ಸಾಮಾಜಿಕ ಕುಶಲತೆಗಳಿಂದ ಸಶಕ್ತೀಕರಣಗೊಂಡಿರುವ ಕಲಿಕಾರ್ಥಿಗಳು ತಮ್ಮ ಆಸಕ್ತಿಯ ವಿಶೇಷ ಕ್ಷೇತ್ರಕ್ಕೆ ಅನುಗುಣವಾಗಿ ಅಧ್ಯಯನವನ್ನು ಮುಂದುವರಿಸಲು ಅವಕಾಶಗಳನ್ನು ಪಡೆಯುತ್ತಾರೆ.

ಸಾಕ್ಷರತಾ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಅದರ ಉಸ್ತುವಾರಿಯನ್ನು ನೋಡಿಕೊಳ್ಳುವುದರಲ್ಲಿ ಅತ್ಯಂತ ಪ್ರಮುಖ ಶಕ್ತಿಯಾಗಿ ಎನ್‌ಎಲ್‌ಎಮ್, ಸಮುದಾಯದೊಂದಿಗೆ ಜನರ ಚಳವಳಿಯನ್ನು ಪ್ರೋತ್ಸಾಹಿಸಿದೆ. ಸಮಾಜದಲ್ಲಿ ಸರ್ವಸಮತೆಗೆ ಪ್ರೋತ್ಸಾಹ ನೀಡುವುದು ಮತ್ತು ಸಾಕ್ಷರತೆಯಲ್ಲಿ ಪುರುಷ–ಸ್ತ್ರೀ, ಗ್ರಾಮೀಣ–ನಗರ ಮತ್ತು ಪ್ರಾದೇಶಿಕ ಹಂತದ ನಡುವಿನ ವ್ಯತ್ಯಾಸಗಳ ಅಂತರವನ್ನು ತುಂಬಿಕೊಳ್ಳುವುದರಲ್ಲಿ ಈ ಎಲ್ಲವು ಪ್ರಭಾವವನ್ನು ಬೀರಿವೆ.

**ಸಹಭಾಗಿತ್ವ ಮತ್ತು ಸಾಧನೆಗಾಗಿ ಅವಕಾಶಗಳನ್ನು ಬಳಸಿಕೊಳ್ಳುವುದರಲ್ಲಿ ಸರ್ವಸಮತೆ:**

ಎನ್‌ಎಲ್‌ಎಮ್, ರಾಜ್ಯ ಸಾಕ್ಷರತಾ ಮಿಶನ್‌ಗಳು ಮತ್ತು ಜನಶಿಕ್ಷಾ ಸಂಸ್ಥಾನಗಳು ನಡೆಸುತ್ತಿರುವ ಶಾಶ್ವತನೆಲೆಯ ಕಾರ್ಯವು ಸಾಕ್ಷರತಾ ಕಾರ್ಯಕ್ರಮಗಳ ಗುರಿಯನ್ನು ತಲುಪುವುದರಲ್ಲಿ ಗಮನಾರ್ಹ ಪ್ರಯತ್ನಗಳನ್ನು ನಡೆಸಿವೆ. ಈ ಪ್ರಯತ್ನಗಳ ಕೆಲವು ಉತ್ತಮಾಂಶಗಳು ಸೂಚಿಸುವುದೇನೆಂದರೆ: ಸಾಕ್ಷರತಾ ಪ್ರಮಾಣವು ಶೇಕಡಾ 65.38 ರಷ್ಟು ಹೆಚ್ಚಾಗಿದೆ. ಇದರಲ್ಲಿ ಪುರುಷರು ಮತ್ತು ಸ್ತ್ರೀಯರ ಸಾಕ್ಷರತಾ ಪ್ರಮಾಣವು ಅನುಕ್ರಮವಾಗಿ 75.85 ಮತ್ತು 54.16 ಆಗಿರುತ್ತದೆ; ಅನಕ್ಷರಸ್ಥರ ಸಂಖ್ಯೆ 31.9 ಮಿಲಿಯದಷ್ಟು ಕಡಿಮೆಯಾಗಿದೆ; ಪುರುಷ ಮಹಿಳೆಯರ ಸಾಕ್ಷರತಾ ದರಗಳಲ್ಲಿನ ವ್ಯತ್ಯಾಸವು 1991ರಲ್ಲಿ ಶೇಕಡಾ 24.84 ಇದ್ದರೆ, 2001ರಲ್ಲಿ ಅದು ಶೇಕಡಾ 21.7ರಷ್ಟು ಇದೆ; ಪುರುಷ ಸಮುದಾಯದಲ್ಲಿ 3/4 ರಷ್ಟು ಮಂದಿ ಸಾಕ್ಷರರಾಗಿದ್ದರೆ, ಸ್ತ್ರೀ ಸಮುದಾಯದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಸಾಕ್ಷರರಾಗಿದ್ದಾರೆ; ಮತ್ತು ಎಲ್ಲಾ ರಾಜ್ಯಗಳಲ್ಲಿ ಸ್ತ್ರೀ ಮತ್ತು ಪುರುಷರ ಸಾಕ್ಷರತಾ ದರವು ಇಂದ್ರಿಯಗ್ರಾಹ್ಯ ಸುಧಾರಣೆಯನ್ನು ಕಂಡಿದೆ.

ಸಾಕ್ಷರತಾ ಕಾರ್ಯಕ್ರಮಗಳ ಅತ್ಯಂತ ಗಮನಾರ್ಹ ಕೊಡುಗೆಯು ಈ ವಿಚಾರಗಳಿಗೆ ಸಂಬಂಧಿಸಿದಂತೆ ಕಂಡುಬಂದಿದೆ: 1. ಮಹಿಳಾ ಸಶಕ್ತೀಕರಣ; 2. ಶಿಕ್ಷಣದಲ್ಲಿ ಹುಡುಗಿಯರು/ಮಹಿಳೆಯರ ವ್ಯಾಪಕ ಪಾಲ್ಗೊಳ್ಳುವಿಕೆ; 3. ಲಿಂಗ ಸಂವೇದನೆ; 4. ಸಾಮಾಜಿಕ ವಿಷಯಗಳಿಗೆ ಪ್ರೋತ್ಸಾಹ; 5. ಸಮುದಾಯದಲ್ಲಿನ ಅವಕಾಶವಂಚಿತ ವಿಭಾಗಗಳಿಗೆ–ಪರಿಶಿಷ್ಟ ಜಾತಿ/ಪಂಗಡ, ಇತರ ಹಿಂದುಳಿದ ಜಾತಿಗಳು, ಅಲ್ಪಸಂಖ್ಯಾತ ಗುಂಪುಗಳು ಮತ್ತು ಬೀದಿಪಾಲಾಗಿರುವ ಅಶಕ್ತ ಮತ್ತು ಕೂಲಿಕೆಲಸದಲ್ಲಿ ದುಡಿಯುತ್ತಿರುವ ಮಕ್ಕಳು–ಶಿಕ್ಷಣ ಒದಗಿಸುವ ಹೆಚ್ಚು ಕಾರ್ಯವಿಧಾನಗಳು. ಇವುಗಳೆಲ್ಲದರ ಪರಿಣಾಮವಾಗಿ ಕ್ಷೇಮಾಭಿವೃದ್ಧಿಯ ಕಾರ್ಯಯೋಜನೆಗಳು ರೂಪು ತಾಳಿವೆ. ಈ ಕಾರ್ಯಯೋಜನೆಗಳು ವಿಶೇಷ ಅಗತ್ಯಗಳನ್ನು ಹೊಂದಿರುವ ಬೀದಿ ಮಕ್ಕಳು, ದೈಹಿಕವಾಗಿ ಅಂಗವಿಕಲತೆಯುಳ್ಳ ಮಕ್ಕಳು ಮತ್ತು ಪರಿಶಿಷ್ಟ ಜಾತಿ/ಪಂಗಡ/ಅಲ್ಪಸಂಖ್ಯಾತ ಸಮುದಾಯಗಳ ಮಕ್ಕಳಿಗೆ ಉದ್ದೇಶಿತವಾಗಿ ಇವೆ. (ಎಡ್ಯುಕೇಶನ್ ಫಾರ್ ಆಲ್–ಡೆವಲಪ್‌ಮೆಂಟ್ಸ್ ಸಿನ್ಸ್ ಡಾಕರ್, ಇಂಡಿಯಾ ಕಂಟ್ರಿ ಪೇಪರ್, ಮಿನಿಷ್ಟ್ರಿ ಆಫ್ ಹ್ಯುಮನ್ ರಿಸೋರ್ಸ್ ಡೆವಲಪ್‌ಮೆಂಟ್, ಡಿಪಾರ್ಟಮೆಂಟ್ ಆಫ್ ಎಲಿಮೆಂಟರಿ ಎಡ್ಯುಕೇಶನ್ ಆಂಡ್ ಲಿಟರಸಿ, ಗವರ್ನಮೆಂಟ್ ಆಫ್ ಇಂಡಿಯಾ, 2001).

**ಭವಿಷ್ಯದ ನಿರ್ದೇಶನಗಳು: ಕ್ರಮಿಸಬೇಕಾಗಿರುವ ಮೈಲಿಗಳಷ್ಟು ಅಂತರ:**

ಕಳೆದ ಎರಡು ದಶಕಗಳಲ್ಲಿ ದೇಶದಲ್ಲಿ ನಡೆದಂತಹ ಶಿಕ್ಷಣ ಅಭಿವೃದ್ಧಿಗಳ ಸಾರಾವಲೋಕನವು ವ್ಯಕ್ತಪಡಿಸಿದ್ದೇನೆಂದರೆ, ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಮಾನತೆ ಮತ್ತು ಶಿಕ್ಷಣದ ಗುಣಮಟ್ಟದೊಂದಿಗೆ ಸರ್ವಸಮತೆಯು ಅಭೂತಪೂರ್ವ ಸುಧಾರಣೆಯನ್ನು ಕಂಡಿದೆ. ಆದರೆ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಮರುಪರಿಶೀಲನೆಯನ್ನು ನಡೆಸಿದಾಗ ಕಂಡುಬರುವ ವಾಸ್ತವ ಸ್ಥಿತಿಯು ತಿಳಿಯಪಡಿಸುವುದೇನೆಂದರೆ ನಾವಿನ್ನೂ ಮೈಲಿಗಳಷ್ಟು ಅಂತರವನ್ನು ಕ್ರಮಿಸಬೇಕಾಗಿದೆ. ಶಾಲೆಗಳು ತೆರೆದುಕೊಂಡಿದ್ದರೂ, ಅರ್ಧದಲ್ಲಿಯೇ ಶಾಲೆ ಬಿಟ್ಟು ಹೋಗುವವರನ್ನು ಅನೇಕ ಸಮಜೋ–ಆರ್ಥಿಕ ಕಾರಣಗಳಿಂದಾಗಿ ಸಂಪೂರ್ಣವಾಗಿ ತಡೆಯುವುದು ಸಾಧ್ಯವಾಗಿಲ್ಲ. ಪ್ರತಿಯೊಬ್ಬ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂದು ಸಂವಿಧಾನದ 93ನೇ ತಿದ್ದುಪಡಿ ಸೂಚಿಸುತ್ತದೆ. ಇದರಿಂದ ಶಿಕ್ಷಣವನ್ನು ಒದಗಿಸುವ ಪರ್ಯಾಯ ವಿಧಾನಗಳಿಗೆ ವ್ಯಾಪಕ ಅವಕಾಶಗಳು ದೊರೆತಿವೆ. ಆದರೆ ಇವೆಲ್ಲವುಗಳ ಹೊರತಾಗಿಯೂ ದೇಶದಲ್ಲಿ ಮಿಲಿಯಗಟ್ಟಳೆ ಮಕ್ಕಳು ಪ್ರೌಢಶಾಲಾ ಹಂತದವರೆಗೆ ಶಾಲೆಗೆ ಹೋಗುವುದೂ ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದಾರೆ.

2020ರೊಳಗೆ ಸೆಕೆಂಡರಿಶಾಲಾ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕೆಂಬ ಸರಕಾರದ ನಿರ್ಧಾರದಲ್ಲಿ ಸರ್ವಸಮತೆಯ ಕಾಳಜಿಯು ಪ್ರತಿಫಲಿತವಾಗಿದೆ. ಇದು ಶಿಕ್ಷಣದಲ್ಲಿ ಪ್ರಾಥಮಿಕ ಹಂತವನ್ನು ಮೀರಿದ ಸರ್ವಸಮತೆಯ ಅವಕಾಶವನ್ನು ವಿಸ್ತರಿಸುತ್ತದೆ.

ಶಿಕ್ಷಣವನ್ನು ತಲುಪಿಸಲು ಆಗದವರಿಗೆ ತಲುಪಿಸುವುದಕ್ಕಾಗಿ ಪರ್ಯಾಯ ಕಾರ್ಯ ವಿಧಾನವಾಗಿ ಮುಕ್ತ ವಿದ್ಯಾಭ್ಯಾಸದ

Digitised by Bharatavani, CIIL

ಕ್ರಮವು ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ ಗುರಿಯನ್ನು ತಲುಪಲು ಅನಿವಾರ್ಯ ಅಗತ್ಯವಾಗಿ ಪರಿಣಮಿಸಿದೆ. ಮುಕ್ತ ಮೂಲ ಶಿಕ್ಷಣವನ್ನು ಔಪಚಾರಿಕ, ಅನೌಪಚಾರಿಕ, ಪರ್ಯಾಯ ವಿದ್ಯಾಭ್ಯಾಸ ಮತ್ತು ದೂರ ಶಿಕ್ಷಣ ಕ್ರಮದೊಂದಿಗೆ ಬೆರೆಸಿಕೊಂಡು ಬಲಪಡಿಸಿಕೊಳ್ಳುವುದು ಶಿಕ್ಷಣದಲ್ಲಿ ಸರ್ವಸಮತೆ ಮತ್ತು ಸಮಾನತೆಯ ಕಾಳಜಿಗಳನ್ನು ಎದುರಿಸಲು ಉತ್ತರವೆಂಬುದಾಗಿ ತಿಳಿದುಕೊಳ್ಳಬಹುದು.

ಸೂಕ್ತ ಒತ್ತಿನ ಅಗತ್ಯವಿರುವ ಬೇರೆ ಕ್ಷೇತ್ರಗಳೆಂದರೆ: ಅವಕಾಶ ವಂಚಿತ ಸಮುದಾಯಗಳ ಸಾಂಸ್ಕೃತಿಕ ಘಟಕಗಳಿಗೆ ವಿಶಿಷ್ಟ ಪ್ರಸಕ್ತತೆಯನ್ನು ಒದಗಿಸುವ ರೀತಿಯಲ್ಲಿ ಪಠ್ಯಕ್ರಮದ ವಿಕೇಂದ್ರೀಕರಣ; ರಾಷ್ಟ್ರೀಯ ಸಾಕ್ಷರತಾ ಕಾರ್ಯಕ್ರಮವನ್ನು ಶಾಲಾ–ವಲಯ ಮತ್ತು ಸಾಮಾಜಿಕ–ವಲಯ ಕಾರ್ಯಕ್ರಮಗಳೊಂದಿಗೆ ಸಂಯೋಜಿಸಿ ವ್ಯಾಪಕ ವಿಧಾನವನ್ನು ಅಳವಡಿಸಿಕೊಳ್ಳುವುದು; ಸಮುದಾಯದ ಜನರಿಗೆ ಹೆಚ್ಚಿನ ಜವಾಬ್ದಾರಿಯನ್ನು ಪರಿಕಲ್ಪಿಸಿ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಲಿಂಗ ಸಂವೇದನೆಯನ್ನು ಕಾಣಿಸುವುದು; ತಲುಪಲಾಗದವರನ್ನು ತಲುಪುವ ದೇಶದ ತೀರ್ಮಾನ, ಬದ್ಧತೆ ಮತ್ತು ಆಕಾಂಕ್ಷೆಗಳನ್ನು ಕಾರ್ಯಗತಗೊಳಿಸುವ ದಿಕ್ಕಿನಲ್ಲಿ ಎಲ್ಲಾ ಹಂತಗಳಲ್ಲಿ ಸಂಪನ್ಮೂಲಗಳನ್ನು ಬಲಪಡಿಸುವ ಉದ್ದೇಶದಿಂದ ಸರಕಾರ, ಸರಕಾರೇತರ ಮತ್ತು ಕ್ಷೇಮಾಭಿವೃದ್ಧಿ ಸಂಸ್ಥೆಗಳ ನಡುವೆ ಜಾಲವನ್ನು ಸ್ಥಾಪಿಸುವುದು.

**ಮೂಲ: ಎನ್.ಕೆ. ಎಂಬಸ್ಟ್**

**ಅನು: ಡಾ. ಗೀತಾ ಶೆಣೈ**

## ಶಿಕ್ಷಣದಲ್ಲಿ ಸ್ವಾಯತ್ತತೆ

ಯಾವುದೇ ಹಂತದ ಶಿಕ್ಷಣವಾಗಲಿ ಉತ್ತಮ ಶಿಕ್ಷಣದ ಉತ್ಕೃಷ್ಟತೆಯ ಲಕ್ಷಣವೇ ಬದಲಾವಣೆ ಮತ್ತು ಪ್ರಯೋಗಶೀಲತೆ. ಶಿಕ್ಷಣ ವ್ಯವಸ್ಥೆಯ ವಿಶಿಷ್ಟ ಲಕ್ಷಣವಾಗಿದೆ ಮತ್ತು ಸ್ವಾಯತ್ತತೆಯು ಪ್ರಯೋಗಶೀಲತೆಗೆ ರಹದಾರಿ ನೀಡುತ್ತದೆ ಎಂದು ಭಾವಿಸಲಾಗಿದೆ. ಶಿಕ್ಷಣ ವ್ಯವಸ್ಥೆಯನ್ನು ಭವಿಷ್ಯಕ್ಕೆ ಸಜ್ಜುಗೊಳಿಸಿ, ಅದಕ್ಕೊಂದು ರೂಪಕೊಟ್ಟು ಸಾಮಾಜಿಕ ಅಭಿವೃದ್ಧಿಯ ನೆಲೆಗಳನ್ನು ನಿರ್ಧರಿಸಿ, ಸಮಾಜೋ–ಆರ್ಥಿಕ ಬೆಳವಣಿಗೆಯ ವೇಗವನ್ನು ವೃದ್ಧಿಗೊಳಿಸುವುದು ಯಾವುದೇ ಶಿಕ್ಷಣ ವ್ಯವಸ್ಥೆಯ ಆಶೋತ್ತರವಾಗಿರುತ್ತದೆ. ಯಾವುದೇ ರಾಷ್ಟ್ರದಲ್ಲಿನ ಜೀವನದ ಗುಣಮಟ್ಟ ಮತ್ತು ವಿಕಾಸದ ವೇಗ, ಆ ರಾಷ್ಟ್ರದ ಧ್ಯೇಯಾತ್ಮಕ ವಾತಾವರಣ ಮತ್ತು ಅದರ ಸೂಕ್ತ ವಿಸ್ತರಣೆಯ ಮೇಲೆ ನಿಂತಿರುತ್ತದೆ. ಇತಿಹಾಸ, ಸಂಸ್ಕೃತಿ, ಪರಂಪರೆ ಮತ್ತು ಮೌಲ್ಯಗಳ ಸ್ಪಷ್ಟ ಗ್ರಹಿಕೆಗಳ ಜೊತೆಗೆ ಆತ್ಮ ಸ್ಥೈರ್ಯದ ಭಾವನೆ, ಮಾನವೀಯ ಸಾಮರ್ಥ್ಯಗಳ ವಿಕಾಸದ ಮೂಲಕವೇ ಭೌತಿಕ, ಸಾಮಾಜಿಕ ಮತ್ತು ಆಧ್ಯಾತ್ಮಕ ಸಮಸ್ಯೆಗಳ ಪರಿಹಾರ ಸಾಧ್ಯವಾಗುತ್ತದೆ. ಶಿಕ್ಷಣ ಹಾಗು ಬೌದ್ಧಿಕ ವರ್ಗದವುಗಳಿಂದ ರೂಪಿತವಾದ ಸಾಮಾಜಿಕ ಪರಿಸರದ ಒಟ್ಟಾರೆ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ವಿಶೇಷವಾಗಿ ಉನ್ನತ ಶಿಕ್ಷಣವು ಬದುಕಿನ ವಿವಿಧ ವಲಯಗಳಿಗೆ–ಕೈಗಾರಿಕೆ, ಕೃಷಿ, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಮುಂತಾದ ಕ್ಷೇತ್ರಗಳಿಗೆ ಪ್ರಶಿಕ್ಷಣ ಹಾಗೂ ನಿರಂತರವಾಗಿ ಬದಲಾಗುವ ಮಾನವ ಸಂಪನ್ಮೂಲವನ್ನು ಒದಗಿಸಿಕೊಡುವಲ್ಲಿ ಯಶಸ್ವಿಯಾಗಿದೆ. ಅಷ್ಟೇ ಅಲ್ಲದೆ, ಆಡಳಿತ ಸೇವೆಗೂ ಅಗತ್ಯವಾದ ಮಾನವಸಂಪನ್ಮೂಲವನ್ನು ಅದು ಒದಗಿಸಿಕೊಡುತ್ತದೆ. ಪ್ರವೇಶಾವಕಾಶ, ಸಮಾನತೆ, ಗುಣಾತ್ಮಕತೆ ಮತ್ತು ಸಮಂಜಸತೆಗಳು ಶೈಕ್ಷಣಿಕ ಯೋಜನೆ ಮತ್ತು ವಿಕಾಸದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.. ಶಿಕ್ಷಣದಲ್ಲಿ ಸ್ವಾಯತ್ತತೆಯನ್ನು ಈ ತೆರನಾದ ಗುರಿಗಳನ್ನು ಸಾಫಲ್ಯಗೊಳಿಸುವ ಸಾಧನವಾಗಿ ಪರಿಗಣಿಸಲಾಗಿದೆ.

ಸ್ವಾಯತ್ತತೆಯನ್ನು 'ಸ್ವಾತಂತ್ರ್ಯ' ಹಾಗು 'ಸ್ವ ಆಡಳಿತ' ಎಂದು ವ್ಯಾಖ್ಯಾನಿಸಲಾಗಿದೆ. ಇಂತಿದ್ದರೂ, ಶೈಕ್ಷಣಿಕ ಸಂದರ್ಭಗಳಲ್ಲಿ ವಿವಿಧ ಲೇಖಕರು ವಿವಿಧ ದೃಷ್ಟಿಕೋನಗಳಲ್ಲಿ ಇದನ್ನು ವ್ಯಾಖ್ಯಾನಿಸಿದ್ದಾರೆ. ಈ ಲೇಖನವು ಕೆಳಕಂಡ ಅಂಶಗಳನ್ನು ಒದಗಿಸಲು ಪ್ರಯತ್ನಿಸುತ್ತದೆ: 1. ಬೇರೆ ಬೇರೆ ಲೇಖಕರ ದೃಷ್ಟಿಕೋನಗಳಲ್ಲಿ ಸ್ವಾಯತ್ತತೆ. 2. ಸಾಮಾನ್ಯವಾಗಿ ಶೈಕ್ಷಣಿಕ ಸಂದರ್ಭದಲ್ಲಿ ಹಾಗು ವಿಶೇಷತಃ ಭಾರತೀಯ ಸಂದರ್ಭದಲ್ಲಿ ಸ್ವಾಯತ್ತತೆಯ ಅರ್ಥ. 3. ವ್ಯವಸ್ಥೆ ಮತ್ತು ಸಮಾಜದ ಮೇಲೆ ಸ್ವಾಯತ್ತತೆಯ ಪರಿಣಾಮಗಳು.

ಪ್ರಪಂಚದ ಇತರ ಭಾಗಗಳಲ್ಲಿ ಆಗುತ್ತಿರುವ ಅಭಿವೃದ್ಧಿಗಳ ಜೊತೆಗೆ ಭಾರತವನ್ನು ಜೊತೆಯಾಗಿಸಲು ಅಗತ್ಯವಾದ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು, ಯೋಜಿಸಲು ಮತ್ತು ಕಾರ್ಯ ರೂಪಕ್ಕೆ ತರಲು ದಕ್ಷ ವ್ಯಕ್ತಿಗಳು ಲಭ್ಯವಿದ್ದಾಗ ಮಾತ್ರ ಆರ್ಥಿಕತೆಯ ಸ್ವಾವಲಂಬನೆ ಮತ್ತು ದೇಶೀಯ ಲಕ್ಷಣವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಸ್ವಾತಂತ್ರ್ಯ ಪಡೆದಾಗಿನಿಂದಲೂ ವಿಶೇಷತಃ ಭಾರತದಲ್ಲಿ ಕಳೆದ ಎರಡು ದಶಕಗಳಲ್ಲಿ ಶೈಕ್ಷಣಿಕ ಬದಲಾವಣೆಗಳು ಉತ್ತಮ ರೀತಿಯಲ್ಲಿ ಆಗಿವೆ ಮತ್ತು ವಿಶೇಷವಾಗಿ ಕಳೆದ ಎರಡು ದಶಕಗಳಲ್ಲಿ ಶೈಕ್ಷಣಿಕ ಸಿದ್ಧಾಂತಗಳು, ಉದಾರೀಕರಣ, ಜಾಗತೀಕರಣ, ಮತ್ತು ಖಾಸಗೀಕರಣದ ನೆಲೆಯಲ್ಲಿ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಪ್ರಗತಿಗಳು ರಾಷ್ಟ್ರದ ಮೂಲೆಮೂಲೆಗಳಿಗೆ ತಲುಪುವಂತಾಗಿ ಇವು ಶೈಕ್ಷಣಿಕ ಕ್ಷೇತ್ರದ ಮೇಲೆ ಅಪಾರ ಪರಿಣಾಮ ಬೀರಿವೆ. ಪರಿಣಾಮವಾಗಿ ಇವು ಶಿಕ್ಷಣವನ್ನು ರಾಷ್ಟ್ರೀಯ ಅಭಿವೃದ್ಧಿಗೆ ಮಾತ್ರವಲ್ಲದೆ ವ್ಯಕ್ತಿಗತ ಸಾಧನೆಯನ್ನೂ ಮುಖ್ಯವಾಗಿಸಿ ಅದನ್ನು ಮೂಲ ಕೇಂದ್ರಕ್ಕೆ ತಂದಿವೆ. ಶಿಕ್ಷಣ ಕ್ಷೇತ್ರದ ಹೊರಗೆ ಆಗುತ್ತಿರುವ ಬದಲಾವಣೆಗಳನ್ನು ಶಿಕ್ಷಣ ಕ್ಷೇತ್ರ ಬರಮಾಡಿಕೊಂಡು ಅವುಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮತ್ತು ಅವುಗಳನ್ನು ಬದಲಾಯಿಸಿಕೊಂಡು ಸವಾಲುಗಳನ್ನು ಎದುರಿಸಲು ಸಜ್ಜಾಗುತ್ತಿದೆ. ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಳೆದ ಒಂದು ದಶಕ ಒತ್ತಡದ ಅವಧಿಯಾಗಿದೆ. ಆರ್ಥಿಕ ಅಡೆತಡೆಗಳ ಕಾರಣದಿಂದಾಗಿ ಶುಲ್ಕ ಹೆಚ್ಚಳ, ಶುಲ್ಕ ವ್ಯತ್ಯಯಗಳು ಗೋಚರಿಸತೊಡಗಿದವು.

Digitised by Bharatavani, CIIL

ಘಟಕವೆಚ್ಚ, ಸಂಪನ್ಮೂಲಗಳ ಕ್ರೋಢೀಕರಣದೆಡೆ ಶೈಕ್ಷಣಿಕ ಸಂಸ್ಥೆಗಳು ಗಮನ ಹರಿಸಿವೆ. ಶಿಕ್ಷಣದ ಬೇಡಿಕೆ ಹೆಚ್ಚಾಗುತ್ತಾ ಶಿಕ್ಷಣ ಒಳ್ಳೆಯ ಬದುಕಿಗಷ್ಟೇ ಅಲ್ಲ ಸಮಾಜದಲ್ಲಿ ಬದುಕುಳಿಯಲು ಅಗತ್ಯವಾದುದಾಗಿ ಮಾರ್ಪಾಟಾಗಿದೆ. ಈ ಅಂಶ ಮತ್ತು ಇತರೆ ಅಂಶಗಳು ನಿರ್ವಾಹಕರನ್ನು ಯೋಚಿಸುವಂತೆ ಮಾಡಿ, ಖಾಸಗಿ ವ್ಯಕ್ತಿಗಳನ್ನು ನ್ಯಾಯಯುತವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಮತ್ತು ವ್ಯವಸ್ಥೆಯ ಸುಧಾರಣೆಯ ಕಡೆ ಚಿಂತಿಸುವಂತೆ ಮಾಡಿವೆ. ಶಿಕ್ಷಣದ ಅಂತರರಾಷ್ಟ್ರೀಕರಣ ಶಿಕ್ಷಣದ ಆಯಾತ ಮತ್ತು ನಿರ್ಯಾತ, ಪರ್ಯಾಯ ಮತ್ತು ಆಯ್ಕೆಗಳನ್ನು ಪಾಲುದಾರರಿಗೆ ಒದಗಿಸುವುದು. ಈ ಎಲ್ಲಾ ಅಂಶಗಳು ಶೈಕ್ಷಣಿಕ ಸಂರಚನೆಯ ಸುಧಾರಣೆ, ಹೊಂದಾಣಿಕೆ ಮತ್ತು ಪುನರ್ ವಿನ್ಯಾಸಗಳನ್ನು ಯೋಚಿಸಿ, ತನ್ಮೂಲಕ ಹೊಸ ಸಂರಚನೆ ಕಾರ್ಯ ಸಂಬಂಧಗಳನ್ನು ವಿಕಾಸಗೊಳಿಸಿ ಶೈಕ್ಷಣಿಕ ನೀತಿ ಮತ್ತು ಕಾರ್ಯಕ್ರಮಗಳನ್ನು ನವೀಕರಿಸುವುದನ್ನು ಶಿಕ್ಷಣ ವ್ಯವಸ್ಥೆಗೆ ಅನಿವಾರ್ಯಗೊಳಿಸಿದೆ. ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಶಿಕ್ಷಣದಲ್ಲಿ ಸ್ವಾಯತ್ತತೆಯ ಅಂಶಗಳನ್ನು ಮುಂದಿನ ವಾಕ್ಯ ವೃಂದಗಳಲ್ಲಿ ಚರ್ಚಿಸಲಾಗಿದೆ.

ಶಿಕ್ಷಣದಲ್ಲಿ ಸ್ವಾಯತ್ತತೆಯನ್ನು ಚರ್ಚಿಸುವ ಮುನ್ನ, ಭಾರತೀಯ ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಪರಿಕಲ್ಪನೆಯ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸುವುದು ಒಳಿತು. ಇದು ಶಿಕ್ಷಣದಲ್ಲಿ ಸ್ವಾಯತ್ತತೆಯ ಅಂಶವನ್ನು ಗ್ರಹಿಸಲು ನೆರವಾಗುತ್ತದೆ. ಐತಿಹಾಸಿಕ ಬರಹಗಳಿಂದ ಮತ್ತು ದಾಖಲೆಗಳಿಂದ ಶಿಕ್ಷಣದಲ್ಲಿ ಸ್ವಾಯತ್ತತೆ ಇತ್ತೆಂಬುದು ತಿಳಿದುಬಂದಿರುತ್ತದೆ. ಸ್ವಾಯತ್ತತೆಯು ಶಾಲಾ ಹಂತ ಹಾಗು ಉನ್ನತ ಶಿಕ್ಷಣ ಮತ್ತು ವೃತ್ತಿ ಶಿಕ್ಷಣದಲ್ಲಿ ಪ್ರಧಾನವಾಗಿಯೇ ಇತ್ತೆಂಬುದು ಗಮನಾರ್ಹ. ಪ್ರಾಚೀನ ಭಾರತದಲ್ಲಿ ಶಿಕ್ಷಣವು ಸರ್ಕಾರ ಅಥವಾ ಯಾವುದೇ ಬಾಹ್ಯ ನಿಯಂತ್ರಣಗಳಿಂದ ಮುಕ್ತವಾಗಿತ್ತು. ಪಂಡಿತರು ಅಧ್ಯಯನದ ಮೂಲಕ ಜ್ಞಾನ ಸಂಪಾದಿಸುವಂತೆ ಮಾಡುವುದು ರಾಜನ ಜವಾಬ್ದಾರಿಗಳಲ್ಲೊಂದಾಗಿತ್ತು ಮತ್ತು ಯಾವುದೇ ಮೂಲದಿಂದ ಅಡಚಣೆಯಿಲ್ಲದೆ ಆ ಜ್ಞಾನವನ್ನು ಪ್ರಸಾರ ಮಾಡುವುದು ಪಂಡಿತರ ಕರ್ತವ್ಯವಾಗಿತ್ತು.

ಮೊಗಲ್ ಅವಧಿಯಲ್ಲೂ ಅಂದರೆ ಮಧ್ಯಕಾಲೀನ ಕಾಲಘಟ್ಟದಲ್ಲೂ ಶಿಕ್ಷಕನೇ ಬೋಧನೆ ಮತ್ತು ಕಲಿಕೆಗೆ ಜವಾಬ್ದಾರನಾಗಿದ್ದು ಎಲ್ಲ ರೀತಿಯ ಪ್ರೋತ್ಸಾಹಗಳೂ ಅವನಿಗೆ ಸಿಗುತ್ತಿದ್ದವು ಮತ್ತು ರಾಜ್ಯ ಶಿಕ್ಷಣದ ನೀತಿ ಮತ್ತು ಯೋಜನೆಯಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಕಲಿಕೆಯನ್ನು ಯಾವಾಗಲೂ ಅತ್ಯಂತ ಗೌರವದಿಂದ ನೋಡಲಾಗುತ್ತಿತ್ತು ಮತ್ತು ರಾಜ್ಯಾದ್ಯಂತ ವಿದ್ಯಾವಂತರನ್ನು ಪ್ರೀತಿಸಿ, ಗೌರವಿಸಿ ಪ್ರೋತ್ಸಾಹಿಸಲಾಗುತ್ತಿತ್ತು. ಪ್ರಾಥಮಿಕ ಶಿಕ್ಷಣವು 'ಮಕ್ತಾಬ್'ಗಳಲ್ಲಿ ದೊರೆಯುತ್ತಿದ್ದರೂ ಇದು ಪೂರ್ಣವಾಗಿ ಖಾಸಗಿ ಉದ್ಯಮವಾಗಿತ್ತು. 'ಮದ್ರಸಾ'ಗಳು ಮಾತ್ರ ರಾಜ್ಯದಿಂದ ಮತ್ತು ಗಣ್ಯರಿಂದ ಪೋಷಿಸಲ್ಪಡುತ್ತಿದ್ದವು. ಬೌದ್ಧರ ಕಾಲಘಟ್ಟದ ಅವನತಿಯ ನಂತರವೇ ಉನ್ನತ ಶಿಕ್ಷಣದ ಈ ಸಾಂಪ್ರದಾಯಿಕ ಕೇಂದ್ರಗಳು ಇಲ್ಲವಾಗುತ್ತಾ ಬಂದವು ಮತ್ತು ವಸಾಹತು ವ್ಯವಸ್ಥೆಯ ಪ್ರಭಾವ ಪ್ರಬಲವಾಯಿತು. ಈ ತೆರನಾದ ಉನ್ನತಶಿಕ್ಷಣದ ಸ್ವಾಯತ್ತ ಕೇಂದ್ರಗಳನ್ನು ಕ್ರಿ.ಶ.1600ರ ಪ್ರಾರಂಭದಿಂದಲೂ ಗುರುತಿಸಬಹುದು ಮತ್ತು ಇವು ತಮ್ಮ ಅಸ್ತಿತ್ವಕ್ಕೆ, ಅಲ್ಲದೆ ತಮ್ಮ ಗುಣಮಟ್ಟ ಮತ್ತು ಉತ್ಕೃಷ್ಟತೆಗೂ ಹೆಸರುವಾಸಿಯಾಗಿದ್ದವು. ಗುರುಕುಲಗಳು ಅಥವಾ ಮದ್ರಸಾಗಳು ಅಥವಾ ಮಕ್ತಾಬ್‌ಗಳು ಅಥವಾ ಆಶ್ರಮಗಳೇ ಆಗಲಿ ವಿಶ್ವವಿದ್ಯಾನಿಲಯಗಳಾದ ನಳಂದ, ತಕ್ಷಶಿಲಾ, ಕಾಶಿ ಮುಂತಾದವುಗಳೇ ಆಗಲಿ ಎಲ್ಲವೂ ಸ್ವಾಯತ್ತತೆಯನ್ನು ಹೊಂದಿದ್ದವು. ಈ ಕೇಂದ್ರಗಳು ಭಾರತದಿಂದ ಮಾತ್ರವಲ್ಲದೇ, ಚೀನಾ, ಟಿಬೇಟ್‌ನಿಂದಲೂ ಪಂಡಿತರನ್ನು ಆಕರ್ಷಿಸುತ್ತಿದ್ದವು. ಆ ಕಾಲಘಟ್ಟದಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ 'ಏನು', ಏಕೆ', 'ಹೇಗೆ', 'ಎಲ್ಲಿ', 'ಎಷ್ಟು ಪ್ರಮಾಣದಲ್ಲಿ', 'ಯಾವ ಕಾಲದಲ್ಲಿ' ಇತ್ಯಾದಿ ಅಂಶಗಳನೆಲ್ಲಾ ಬೋಧಕರು, ವಿದ್ಯಾರ್ಥಿಗಳು ಹಾಗು ಪೋಷಕರು ಜೊತೆಗೂಡಿ ಸಂಸ್ಥೆಯ ಅಡಿಯಲ್ಲೇ ತೀರ್ಮಾನಿಸುತ್ತಿದ್ದರು. ಇಷ್ಟರ ಮಟ್ಟಿಗೆ ಕಲಿಕೆಯ ಗುಣ ಮತ್ತು ಪರಿಮಾಣ ಅವುಗಳ ಪ್ರಮಾಣದ ಹಂತಗಳು ಹಾಗು ಜ್ಞಾನದ ಪ್ರಾವೀಣ್ಯತೆ, ಕೌಶಲಗಳು ಮತ್ತು ಸಂಬಂಧಿತ ಮನೋಧೋರಣೆಗಳು ಮತ್ತು ನಿರ್ದಿಷ್ಟ ಜ್ಞಾನ ವಾಹಿನಿಗೆ ಅಗತ್ಯವಾದ ವರ್ತನೆಗಳು ಮುಂತಾದವುಗಳೆಲ್ಲವೂ ಒಂದು ಸಂಚಯದ (ಪ್ಯಾಕೇಜ್) ರೂಪದಲ್ಲಿ ಪ್ರವೇಶಕ್ಕೆ ಮೊದಲೇ ವಿದ್ಯಾರ್ಥಿಗೆ ದೊರೆಯುತ್ತಿದ್ದವು. ಈ ವ್ಯವಸ್ಥೆಯು ಆ ನಿರ್ದಿಷ್ಟ ಕ್ಷೇತ್ರಕ್ಕೆ ಅಗತ್ಯವಾದ ಕಲಿಕೆಯ ಮಟ್ಟ, ಜ್ಞಾನದ ಪ್ರಾವೀಣ್ಯತೆ, ಮನೋಧೋರಣೆ ಮತ್ತು ಕೌಶಲಗಳಿಗೆ ಅಗತ್ಯವಾದ ಕಲಿಕೆಯ ವೇಗವನ್ನು ನಿರ್ಧರಿಸಿಕೊಂಡು ಪ್ರಾವೀಣ್ಯಗೊಳಿಸುವ ಅವಕಾಶ ಕಲ್ಪಿಸುತ್ತಿದ್ದವು. ಈ ಅವಧಿಯಲ್ಲಿ ಕೇವಲ ಅಂಕಗಳ ಆಧಾರದ ಮೇಲೆಯೇ ಕಾರ್ಯಕ್ಷಮತೆಯನ್ನು ನಿರ್ಧರಿಸುವುದರ ಬದಲು, ಲಿಖಿತ ಪರೀಕ್ಷೆಗಳ ಜೊತೆಗೆ ವಿದ್ಯಾರ್ಥಿಯ ವರ್ತನೆಗಳ ವೀಕ್ಷಣೆ ಮೂಲಕ ನಿರ್ಧರಿಸಲಾಗುತ್ತಿತ್ತು.

ಈ ಅವಧಿಯಲ್ಲಿ ಆಕ್ರಮಣಗಳು, ಹಸ್ತಕ್ಷೇಪ ಮತ್ತು ಒತ್ತಾಯ ಮುಂತಾದ ಕಾರಣಗಳಿಂದ ಶಿಕ್ಷಣ ವ್ಯವಸ್ಥೆ ಇಂದಿನ ರೂಪು ಪಡೆಯಿತು. ಪೂರ್ಣ ಸ್ವಾಯತ್ತವಾಗಿದ್ದ ವ್ಯವಸ್ಥೆ ಪರಾಯತ್ತ (Hetronomous) ವ್ಯವಸ್ಥೆಯಾಗಿ ಮಾರ್ಪಟ್ಟಿತೆಂದರೆ ಸ್ವಾಯತ್ತತೆ ಎಂಬ ಪದ ಎಲ್ಲಾ ಹಂತಗಳಲ್ಲೂ ಶಿಕ್ಷಣವನ್ನು ಜಾರಿಗೊಳಿಸುವವರಿಗೆ ಒಂದು ಹೊಸ ಪದವಾಗಿ ಮಾರ್ಪಟ್ಟಿತು. ತಾತ್ವಿಕವಾಗಿ ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದರೂ ವಾಸ್ತವದಲ್ಲಿ ಕಲಿಕೆಯ ಈ ಕೇಂದ್ರಗಳು ಧನಸಹಾಯ ನಿಯೋಗಗಳ ಮೇಲೆ ಅವಲಂಬಿತವಾಗಿವೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ವಿಶ್ವವಿದ್ಯಾನಿಲಯಗಳು ಬಹುಮಂದಿ ಚಲಾಯಿಸುವ ಸ್ವಾಯತ್ತತೆಯನ್ನು (Hetrokephalous) ಅನುಸರಿಸುತ್ತವೆ. ಸಾಂಸ್ಥಿಕ ಸ್ವಾತಂತ್ರ್ಯವನ್ನು ನೇರವಾಗಿ ಕುಂಠಿತಗೊಳಿಸಿ, ಸಂದರ್ಭಗಳು ಒದಗಿಬಂದಂತೆಲ್ಲಾ ಪರೋಕ್ಷವಾಗಿ ಅವುಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವಂತೆ ಮಾಡಲಾಗುತ್ತಿದೆ. ಬೌದ್ಧರ ಕಾಲ ಮತ್ತು ಆ ನಂತರದ ಸಾಂಪ್ರದಾಯಿಕ ಕಲಿಕಾ ಕೇಂದ್ರಗಳು ಬಹುತೇಕ ಮುಚ್ಚಿವೆ.

Digitised by Bharatavani, CIIL

ಈ ಎಲ್ಲ ಅಂಶಗಳು ವಿದ್ಯಾರ್ಥಿ ಮತ್ತು ತರಗತಿಗಳಲ್ಲೇ ಅಲ್ಲದೆ, ಶೈಕ್ಷಣಿಕ ಸಂಸ್ಥೆಗಳಲ್ಲಿ ರಾಷ್ಟ್ರವ್ಯಾಪಿಯಾಗಿ ಪಸರಿಸಿ, ದೊಡ್ಡ ಪ್ರಮಾಣದ ಸ್ಪರ್ಧೆಯನ್ನು ತಂದೊಡ್ಡುತ್ತಿವೆ. ಸ್ಪರ್ಧಾತ್ಮಕವಾದ ಈ ಸಂದರ್ಭದಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ವೈವಿಧ್ಯತೆಯನ್ನು ಕಾಯ್ದುಕೊಳ್ಳಬೇಕಾದ್ದು ಮಹತ್ವದ ಅಂಶವಾಗಿದೆ. 'ಬೇರೆಯದ್ದಕ್ಕಿಂತ ಭಿನ್ನ' ಮತ್ತು 'ಉತ್ತಮ' ಅಷ್ಟೇ ಅಲ್ಲ, 'ಅತ್ಯುತ್ತಮ' ಎಂಬುದನ್ನು ಪ್ರದರ್ಶಿಸುತ್ತಲೇ ವಿದ್ಯಾರ್ಥಿಗಳನ್ನು ಆಕರ್ಷಿಸಲಾಗುತ್ತಿದೆ. ಉದ್ಯೋಗದಾತರು ಮತ್ತು ಧನ ಸಹಾಯ ನೀಡುವವರು ಈ ಅಂಶಗಳನ್ನು ತಮ್ಮ ಗುರಿಯನ್ನು ಸಾಧಿಸಿಕೊಳ್ಳುವ ಪ್ರಬಲ ಸಾಧನವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

'ಗುಣಮಟ್ಟ' ಮತ್ತು 'ಸಮಂಜಸತೆ' ಅನೇಕ ಭರಿತಗಳಲ್ಲಿ (Inputs) ಮುಖ್ಯವಾದವು ಎಂಬುದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗುತ್ತಿದ್ದರೂ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಮೇಲೆ ಸ್ವಾಯತ್ತತೆ ಮತ್ತು ಆರ್ಥಿಕ ಉತ್ತರದಾಯಿತ್ವ ಹಾಗೂ ಅವುಗಳ ಸಂಯುಕ್ತ ಶಕ್ತಿಯ (Synergrtic) ಪ್ರಭಾವವನ್ನು ನಿರ್ವಿವಾದ ಮಟ್ಟದವರೆಗೆ ಸಿದ್ಧಪಡಿಸಲಾಗಿದೆ. ಮೊದಲೇ ಪ್ರಸ್ತಾಪಿಸಿದಂತೆ ಶಿಕ್ಷಣವು ಪ್ರಧಾನ ವ್ಯವಸ್ಥೆಯ ಒಂದು ಉಪವ್ಯವಸ್ಥೆಯಾಗಿಯೇ ಇರುತ್ತದೆ. ಸಾಂದರ್ಭಿಕ ಅಂಶಗಳು ಸ್ವಾಯತ್ತತೆಯನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಉನ್ನತ ಶಿಕ್ಷಣದಲ್ಲಿ ವಿಶೇಷತಃ ವಿಶ್ವವಿದ್ಯಾನಿಲಯಗಳಿಗೆ ಸ್ವಾಯತ್ತತೆಯನ್ನು ನೀಡಬೇಕೆಂಬುದನ್ನು ತಾತ್ವಿಕವಾಗಿ ಒಪ್ಪಿಕೊಳ್ಳಲಾಗಿದೆ. ಎಲ್ಲಾ ಸಮಿತಿಗಳು, ಆಯೋಗಗಳು ಶಾಲೆಗಳಿಗೆ ಸ್ವಾಯತ್ತತೆ ಕೊಡಬೇಕು ಎಂದಿದ್ದರೂ ಅನುಷ್ಠಾನದಲ್ಲಿ ಮಾತ್ರ ಇನ್ನೂ ಈ ಅಂಶ ಪ್ರಾರಂಭಿಕ ಹಂತದಲ್ಲೇ ಇದೆ.

**ಸ್ವಾಯತ್ತತೆಯ ವ್ಯಾಖ್ಯಾನ:**

ಶಿಕ್ಷಣದಲ್ಲಿ ಸ್ವಾಯತ್ತತೆಯು ವಿಭಿನ್ನ ರೀತಿಗಳಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ. ಅತ್ಯಂತ ಬಹಳ ಸರಳ ರೂಪದಲ್ಲಿ ಅದನ್ನು 'ಸ್ವೇಚ್ಛೆ' ಮತ್ತು 'ಸ್ವಾತಂತ್ರ್ಯ' ಎನ್ನಲಾಗಿದೆ ಮತ್ತು ಸಂಕೀರ್ಣ ರೂಪಗಳಲ್ಲಿ ನ್ಯಾಯಿಕ ಅವಕಾಶಗಳು, ಸ್ವಾಯತ್ತತೆಯ ಸಂದರ್ಭ ಮುಂತಾದವುಗಳ ಆಧಾರದ ಮೇಲೆ ಅದನ್ನು ವ್ಯಾಖ್ಯಾನಿಸಲಾಗುತ್ತದೆ. ಗ್ಲೆನ್ನಿ ಮತ್ತು ಡಾಲ್‌ಗ್ಲಿಶ್(1973) ಸ್ವಾಯತ್ತತೆಯನ್ನು 'ಸ್ವಾತಂತ್ರ್ಯ' ಮತ್ತು 'ಸ್ವಯಂ–ಆಡಳಿತ' ಕ್ಕೆ ಸಮೀಕರಿಸಿದ್ದಾರೆ. ಆದರೆ ಈ ಸಮಾನಾರ್ಥಕಗಳನ್ನು ಯಾವ ರೀತಿ ವಿಶ್ಲೇಷಿಸಬೇಕೆಂದು ಹೇಳಿಲ್ಲ. ಆದರೆ ಅವರು ಶೈಕ್ಷಣಿಕ ಸಂಸ್ಥೆಗಳಲ್ಲಿ ಆಚರಣೆಯಲ್ಲಿರುವ ಸ್ವಾಯತ್ತತೆಯನ್ನು ಹೋಲಿಸುತ್ತಾ ಸಂಸ್ಥೆಗಳು ಅನುಭವಿಸುತ್ತಿರುವ ಸ್ವಾಯತ್ತತೆಯ ಪ್ರಮಾಣವನ್ನು ಸೂಚಿಸುತ್ತಾರೆ. ಬರ್ಡ್‌ಹಾಲ್ (1971) ಮತ್ತು ಎಪ್ಸ್ಟಿಯನ್ (1974) ಶೈಕ್ಷಣಿಕ ಸ್ವಾತಂತ್ರ್ಯವನ್ನು ಸ್ಥಾಪಿಸುವಲ್ಲಿ ಸಾಂಸ್ಥಿಕ ಸ್ವಾಯತ್ತತೆ ಮತ್ತು ಬೋಧಕ ಸಿಬ್ಬಂದಿ ಸ್ವಾಯತ್ತತೆಯ ನಡುವೆ ವ್ಯತ್ಯಾಸ ಕಲ್ಪಿಸುತ್ತಾರೆ. ಮೂಡಿ ಮತ್ತು ಯೂಸ್ಟೇನ್ (1974) ಬಹಳ ಸರಳವಾಗಿ ಸ್ವಾಯತ್ತತೆಯೆಂದರೆ ಮಧ್ಯ ಪ್ರವೇಶಿಸುವಿಕೆ ಇಲ್ಲದಿರುವಿಕೆ ಮತ್ತು ಸ್ವಾತಂತ್ರ್ಯ ಎಂದಿದ್ದಾರೆ.

ಮುಂದುವರೆದು ಬರ್ಡ್‌ಹಾಲ್ ವಿವಿಧ ರೀತಿಯ ಸ್ವಾಯತ್ತತೆಯನ್ನು ವ್ಯತ್ಯಾಸೀಕರಿಸಿದ್ದಾನೆ ಮತ್ತು ಪ್ರತಿ ವಿಧದ ಅಡಿಯಲ್ಲಿ ಮತ್ತೆ ಹಲವು ವಿಧಗಳನ್ನು ವ್ಯತ್ಯಾಸೀಕರಿಸಿದ್ದಾನೆ. ಸಂಬಂಧಿ ಸ್ವಾಯತ್ತತೆ–ವಿರುದ್ಧ ಪರ್ಯಾಪ್ತ ಸ್ವಾಯತ್ತತೆ ಇತ್ಯಾದಿ. ಸಂಬಂಧಿ ಸ್ವಾಯತ್ತತೆಯು ಸಂಸ್ಥೆಯೊಂದು ಸಾರ್ವಜನಿಕ ಹಣಕಾಸನ್ನು ವೆಚ್ಚ ಮಾಡುವುದಕ್ಕೆ ಸಂಬಂಧಿಸಿದ್ದಾಗಿದ್ದು ಇದು ಯೋಜನೆ, ಆಯವ್ಯಯ ಪ್ರಕ್ರಿಯೆ, ಪೂರೈಕೆ ವ್ಯವಸ್ಥೆ ಹಾಗು ಲೆಕ್ಕ ತಪಾಸಣೆ ಇತ್ಯಾದಿಗಳನ್ನು ಒಳಗೊಂಡಿದೆ. ಪರ್ಯಾಪ್ತ ಸ್ವಾಯತ್ತತೆಯು ಶಿಕ್ಷಕರಿಗೆ ಸಂಬಂಧಿಸಿದ ನಿರ್ಣಯ ಕೈಗೊಳ್ಳುವಿಕೆ, ಆಯ್ಕೆ ಮತ್ತು ನೇಮಕಾತಿ, ಉದ್ಯೋಗ ಕೊಡಿಸುವಿಕೆ, ವರ್ಗಾವಣೆ, ಪದವಿ ಪ್ರಧಾನ ಮತ್ತು ಸಂಶೋಧನಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ್ದಾಗಿದ್ದು ಶೈಕ್ಷಣಿಕ ನೀತಿ ನಿರೂಪಣೆಯ ವಿಧಾನ ಮತ್ತು ಗುರಿಯನ್ನು ಒಳಗೊಂಡಿದೆ. ಆದರೆ ಇದು ನಿರಾಧಾರವಾದ ವ್ಯತ್ಯಾಸವೆಂದು ತೋರುತ್ತದೆ. ಏಕೆಂದರೆ ಈ ಎರಡು ಕ್ರಮ ಸಂಬಂಧಿ ನಿರ್ಣಯದ ಸ್ವಾತಂತ್ರ್ಯವನ್ನು ಹೊಂದಿಲ್ಲದೆ ಪರಸ್ಪರ ಪ್ರತ್ಯೇಕವಾದವುಗಳಾಗಿವೆ. ಕಾರ್ಯಕ್ರಮ ಸ್ವಾಯತ್ತತೆಯು ಬೇರೆಯವರು ಕೈಗೊಂಡಿರುವ ದಿನನಿತ್ಯದ ಕೆಲಸ ಕಾರ್ಯಗಳನ್ನು ಯಥಾವತ್ತಾಗಿ ಮಾಡುವಂತಾಗಿಬಿಡುತ್ತದೆ.

ಸ್ವಾಯತ್ತತೆಗೆ ವಿರುದ್ಧವಾದುದು ಪರಾಯತ್ತ (ನಿರ್ಬಂಧಿತ) ವ್ಯವಸ್ಥೆ. ಇದರಲ್ಲಿ ಸಂಸ್ಥೆಗಳೇ ನಿರ್ಣಯ ತೆಗೆದುಕೊಳ್ಳುವ ಬದಲು ಬೇರೆಯವರು ನಿರ್ಣಯ ಕೈಗೊಳ್ಳುತ್ತಾರೆ. (ಲೇನ್ 1980) ಭಾರತೀಯ ಶಿಕ್ಷಣದ ಸಂದರ್ಭದಲ್ಲಿ ಇತರರು ಎಂದರೆ, ಮಾನವ ಸಂಪನ್ಮೂಲ ಸಚಿವಾಲಯ, ರಾಜ್ಯ ಸರ್ಕಾರಗಳು, ಶಾಸನಬದ್ಧ ಸಂಸ್ಥೆಗಳಾದ ಯು.ಜಿ.ಸಿ. ಎ.ಐ.ಸಿಟಿ.ಇ., ಮೆಡಿಕಲ್ ಕೌನ್ಸಿಲ್, ಆರ್ಕಿಟೆಕ್ಚರಲ್ ಕೌನ್ಸಿಲ್, ನರ್ಸಿಂಗ್, ಫಾರ್ಮಸಿ, ಅಗ್ರಿಕಲ್ಚರಲ್ ಕೌನ್ಸಿಲ್, ಬಾರ್ ಕೌನ್ಸಿಲ್ ಇತ್ಯಾದಿಗಳು. ಕೇಂದ್ರ ಮತ್ತು ರಾಜ್ಯಗಳ ಸಮಿತಿಗಳು, ನಿರ್ದೇಶಕರು, ಮತ್ತಿತರ ಅನುಮೋದನೆ ಮಾಡುವ ಸಮಿತಿಗಳ ಜೊತೆಗೆ ವಿಶ್ವವಿದ್ಯಾನಿಲಯಗಳು ಹಾಗು ಖಾಸಗಿ ವ್ಯವಸ್ಥಾಪನಾ ಮಂಡಳಿಗಳೆಲ್ಲಾ ಬಹು ಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳನ್ನು ಪ್ರತ್ಯಕ್ಷ ಹಾಗು ಪರೋಕ್ಷವಾಗಿ ನಿಯಂತ್ರಿಸುತ್ತವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, 'ಏನು' ಮತ್ತು 'ಹೇಗೆ'ಎಂಬ ಅಂಶಗಳಿಗೆ ಸಂಬಂಧಪಟ್ಟಂತೆ ನಿರ್ಣಯ ಕೈಗೊಳ್ಳುವ ಕೆಲಸ ಶೈಕ್ಷಣಿಕ ಸಂಸ್ಥೆಗಳ ಹೊರಗಿನ ಸಮಿತಿಗಳದೇ ಆಗಿರುತ್ತವೆ. ಈ ತೆರನಾದ ಪರಾಯತ್ತತೆಯ (ನಿರ್ಬಂಧನೆಗಳ) ಸನ್ನಿವೇಶ ಎರಡು ಕಾರಣಗಳಿಂದ ಉಂಟಾಗಬಹುದು. ಅ) ಶಕ್ತಿ ಮತ್ತು ಆ) ಅಧಿಕಾರ. ಶಕ್ತಿ ಕೇಂದ್ರೀಕರಣದ ಕಾರಣದಿಂದಾಗಿ ಸಂಸ್ಥೆಗಳು ನಿರ್ದೇಶನಗಳನ್ನು ಪಾಲಿಸಲೇಬೇಕು. ಅಧಿಕಾರದ ಕಾರಣದಿಂದಾಗಿ ಆದೇಶಗಳನ್ನು ಸಂಸ್ಥೆಗಳು ಸ್ವಇಚ್ಛೆಯಿಂದಲೇ ಪಾಲಿಸಬೇಕಾಗುತ್ತದೆ.

ಗ್ಲೆನ್ನಿ ಮತ್ತು ಡಾಲ್‌ಗ್ಲಿಶ್ (1973) ಅವರ ಪ್ರಕಾರ ನೈಜ ಸ್ವಾಯತ್ತತೆಯು ವರ್ತನೆಗೆ ಸಂಬಂಧಿಸಿದ ಪರಿಕಲ್ಪನೆಯಾಗಿದೆ. ಶಾಸನಾತ್ಮಕ ಸ್ವಾಯತ್ತತೆಯು ವರ್ತನಾ ಪ್ರಕ್ರಿಯೆಯ ಭಾಗವಾಗಿರುತ್ತದೆ,

Digitised by Bharatavani, CIIL

ಇದು ಸ್ವಾಯತ್ತತೆಯನ್ನು ಪ್ರಭಾವಿಸುತ್ತದೆ. ಆದರೆ, ಯಾವುದೇ ರೀತಿಯಲ್ಲೂ ಸ್ವಾಯತ್ತತೆಯನ್ನು ಖಚಿತಗೊಳಿಸುವುದಿಲ್ಲ. ಶಾಸನಾತ್ಮಕ ಸ್ವಾಯತ್ತತೆಯು ಎರಡು ವಿಧಗಳಲ್ಲಿರುತ್ತದೆ. ಅ) ವ್ಯಕ್ತ ಸ್ವಾಯತ್ತತೆ ಮತ್ತು ಆ) ಅವ್ಯಕ್ತ(ಅಂರ್ತನಿಹಿತ) ಸ್ವಾಯತ್ತತೆ. ವ್ಯಕ್ತ ಸ್ವಾಯತ್ತತೆಯು ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಅಂಶಗಳನ್ನು ಮತ್ತು ಪ್ರಾವಧಾನಗಳನ್ನು ಒಳಗೊಂಡಿರುತ್ತದೆ. ಸಂಸ್ಥೆಗಳನ್ನು ನಿಯಂತ್ರಿಸಲು ವ್ಯಕ್ತ ನಿಯಮಗಳು, ನಿರ್ದೇಶನಗಳಿಲ್ಲದಿರುವುದು ಸಂಸ್ಥೆಗೆ ಪರ್ಯಾಪ್ತ ಪ್ರಮಾಣದಲ್ಲಿ ಅವ್ಯಕ್ತ ಸ್ವಾಯತ್ತತೆಯನ್ನು ನೀಡುತ್ತದೆ ಮತ್ತು ಕಾನೂನು ಬದ್ಧವಾಗಿ ಸಂಸ್ಥೆ ಸರ್ಕಾರಕ್ಕೆ ಅಧೀನವಾಗಿದೆ ಎಂದು ಹೇಳಿದರೂ ಈ ಅವ್ಯಕ್ತ ಸ್ವಾಯತ್ತತೆ ಲಭ್ಯವಾಗುತ್ತದೆ. ಮುಂದುವರೆದು ವ್ಯಕ್ತ ಸ್ವಾಯತ್ತತೆಯನ್ನು ನಿರ್ಬಂಧಿತ ಸ್ವಾಯತ್ತತೆ ಅಥವಾ ಅನಿರ್ಬಂಧಿತ ಸ್ವಾಯತ್ತತೆಗಳಾಗಿಯೂ ನೋಡಬಹುದು.

ಸ್ವಾಯತ್ತತೆಯನ್ನು ಅ) ಶೈಕ್ಷಣಿಕ ವ್ಯವಸ್ಥೆಯ ಸಂಘಟನಾತ್ಮಕ ಸಂರಚನೆ ಆ) ಒಟ್ಟು ಶೈಕ್ಷಣಿಕ ವ್ಯವಸ್ಥೆಯ ಶ್ರೇಣಿಯಲ್ಲಿ ಸಂಸ್ಥೆಯ ಸ್ಥಾನ – ಈ ಎರಡು ಸಂದರ್ಭಗಳಿಗೆ ಅನ್ವಯಿಸಿದಂತೆ ಪರಿಗಣಿಸದಿದ್ದಲ್ಲಿ ಸ್ವಾಯತ್ತತೆ ಸಂಸ್ಥೆಗೆ ಯಾವ ಅರ್ಥವನ್ನೂ ಹೊಂದುವುದಿಲ್ಲ.

**ಸ್ವಾಯತ್ತತೆ ಏಕೆ?**

ಕಾಲೇಜುಗಳಿಗೆ ಸ್ವಾಯತ್ತತೆಯನ್ನು ಕೊಡುವ ಸಂದರ್ಭದಲ್ಲಿ ಒತ್ತಡವನ್ನು ತರಲು ಅನೇಕ ಅಂಶಗಳು ಕೊಡುಗೆ ನೀಡಿವೆ. ಸಮಾಜ ವಿಕಾಸ ಹೊಂದಿದಂತೆಲ್ಲಾ ಶಾಲೆಗಳ ಪ್ರವೇಶಾತಿಯಲ್ಲಿ ಹೆಚ್ಚಳವಾಗಿದ್ದು ಪರಿಣಾಮವಾಗಿ ಅತಿ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳು ಶಾಲೆಗಳಿಂದ ಹೊರಬರುತ್ತಿರುವ ಕಾರಣದಿಂದ ಕಾಲೇಜುಗಳ ಪ್ರವೇಶಾತಿಗೆ ಅಧಿಕ ಬೇಡಿಕೆ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಕಾಲೇಜುಗಳ ಸಂಖ್ಯೆಯ ಹೆಚ್ಚಳ ಅಧಿಕವಾಗಿ ಅವು ವಿಶ್ವವಿದ್ಯಾನಿಲಯಗಳ ಮಾನ್ಯತೆ ಪಡೆಯುತ್ತಿವೆ. ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಪ್ರವೇಶಾವಕಾಶ ಕಲ್ಪಿಸಲು ಇರುವ ಕಾಲೇಜುಗಳನ್ನು ವಿಸ್ತರಿಸಬೇಕು ಅಥವಾ ಹೆಚ್ಚು ಹೆಚ್ಚು ಕಾಲೇಜುಗಳನ್ನು ತೆರೆದು ಅವುಗಳಿಗೆ ವಿಶ್ವವಿದ್ಯಾನಿಲಯಗಳ ಮಾನ್ಯತೆ ದೊರಕುವಂತಾಗಬೇಕು. ಮಾನ್ಯತೆ ಪಡೆದ ಕಾಲೇಜುಗಳ ಸಂಖ್ಯೆಯು ವಿಶ್ವವಿದ್ಯಾನಿಲಯಗಳಿಂದ ವಿಶ್ವವಿದ್ಯಾನಿಲಯಗಳಿಗೆ ಬದಲಾಗುತ್ತಾ ಹೋಗುತ್ತದೆ. ಒಂದು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಕಾಲೇಜುಗಳ ಸಂಖ್ಯೆ 15 ರಿಂದ 450ರವರೆಗೂ ವ್ಯತ್ಯಾಸ ಹೊಂದುತ್ತದೆ. ಮೊದಲೇ ಉಲ್ಲೇಖಿಸಿದಂತೆ ಉನ್ನತ ಶಿಕ್ಷಣ ಸಂಸ್ಥೆಗಳು ಹೊಸ ಪಾತ್ರಗಳನ್ನು, ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಬದಲಾಗಬೇಕಾದ ಬೇಡಿಕೆಯಿದೆ. ಆದ್ದರಿಂದ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಶೈಕ್ಷಣಿಕ ಆಡಳಿತದ ಜೊತೆಗೆ ಉದ್ಯಮಶೀಲತೆಗೆ ಮತ್ತು ವ್ಯವಸ್ಥಾಪನಾ ಆಡಳಿತ ಅಂಶಗಳಿಗೆ ಸಂಬಂಧಿಸಿದ ಭರಿತ (ಖಚಿರಿಣಾ)ಗಳ ಬೇಡಿಕೆಯೂ ಇದೆ. ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಅಧ್ಯಾಪಕರಿಗಿಂತ ಅಧ್ಯಾಪಕೇತರ ಉದ್ಯೋಗಿಗಳ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳ ಅನುಪಾತ **1:3** ಯಿಂದ **1:8**ರವರೆಗೆ ಇದೆ. ಮುಂದುವರೆದು ವಿದ್ಯಾರ್ಥಿ ಹಾಗು ಅಧ್ಯಾಪಕೇತರ ಉದ್ಯೋಗಿಗಳ ಅನುಪಾತ ಎರಡರಿಂದ ಇಪ್ಪತ್ತು ವಿದ್ಯಾರ್ಥಿಗಳವರೆಗೂ ಹೋಗುತ್ತದೆ. ವಿದ್ಯಾರ್ಥಿ–ಶಿಕ್ಷಕರ ಅನುಪಾತವು ವಿಶ್ವವಿದ್ಯಾನಿಲಯದಿಂದ ವಿಶ್ವವಿದ್ಯಾನಿಲಯಕ್ಕೆ ಬೇರೆಯಾಗುವುದರ ಜೊತೆಗೆ ವಿಶ್ವವಿದ್ಯಾನಿಲಯದಲ್ಲೇ ಇಲಾಖೆಯಿಂದ ಇಲಾಖೆಗೆ, ವಿಷಯದಿಂದ ವಿಷಯಕ್ಕೆ ಮತ್ತು ಕಾಲೇಜಿನಿಂದ ಕಾಲೇಜಿಗೆ ಬೇರೆಯಾಗುತ್ತದೆ. ಶೈಕ್ಷಣಿಕ ವ್ಯವಹಾರಗಳನ್ನು ನಿರ್ವಹಿಸಬೇಕೆಂಬ ವಿಶ್ವಾಸ ಮತ್ತು ನಿರೀಕ್ಷೆಗಳಿಂದಲೇ ಕುಲಪತಿಗಳು ನೇಮಕಗೊಂಡರೂ ಅವರುಗಳು ಅನಿವಾರ್ಯವಾಗಿ ದಿನನಿತ್ಯದ ಉಲ್ಬಣ ಸಮಸ್ಯೆಗಳನ್ನು ನಿರ್ವಹಿಸುವುದರಲ್ಲೇ ಕಾಲವ್ಯಯಿಸುತ್ತಾರೆ. ಇದರಿಂದಾಗಿ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನ ಅಭಿವೃದ್ಧಿಗೆ, ನವೀನ ಆಚರಣೆಗಳಿಗೆ, ಕಾರ್ಯಕ್ರಮಗಳ ಗುಣಾತ್ಮಕತೆ ಹೆಚ್ಚುಸುವುದಕ್ಕೆ ಅವರಿಗೆ ಸಮಯವೇ ಇಲ್ಲದಂತಾಗುತ್ತದೆ. ಇದರ ಪರಿಣಾಮವಾಗಿ, ಕಾಲಾಂತರದಲ್ಲಿ ವಿಶ್ವವಿದ್ಯಾನಿಲಯ ಆಡಳಿತವು ಶೈಕ್ಷಣಿಕ ಕಾರ್ಯಗಳನ್ನು ಸುಗಮಗೊಳಿಸುವುದರ ಬದಲಾಗಿ ಸ್ವ–ಸೇವಾಕೇಂದ್ರೀಕೃತವಾಗಿವೆ, ಸ್ವ–ಆಧಾರಿತವಾದವುಗಳಾಗಿವೆ ಮತ್ತು ತನ್ನ ಅಂಗಭೂತ ಕಾಲೇಜುಗಳಿಗಾಗಿ ವಿಶ್ವವಿದ್ಯಾನಿಲಯದ ಬಳಿ ಸಮಯವೇ ಇಲ್ಲವಾಗಿದೆ.

ಈ ಎಲ್ಲಾ ಅಂಶಗಳ ಜೊತೆಗೆ ಇನ್ನಷ್ಟು ಅಂಶಗಳು ಸೇರ್ಪಡೆಯಾಗಿ ಉನ್ನತ ಶಿಕ್ಷಣ ವ್ಯವಸ್ಥೆಯು ತನ್ನನ್ನು ತಾನೇ ನಿರ್ವಹಿಸಿಕೊಳ್ಳುವ ವ್ಯವಸ್ಥೆಯೆಡೆಗೆ ಸಾಗುತ್ತಿದೆ. ನಿರ್ಣಯ ತೆಗೆದುಕೊಳ್ಳುವ ಮಂದಿಗೆ ಆಡಳಿತವನ್ನು ವಿಕೇಂದ್ರೀಕರಣಗೊಳಿಸುವುದು ಮತ್ತು ಆರ್ಥಿಕ ಉತ್ತರದಾಯಿತ್ವವನ್ನು ಖಚಿತಗೊಳಿಸದೆ ಬೇರೆ ಆಯ್ಕೆಯೇ ಇಲ್ಲದಂತಾಗಿದೆ. ಕಾಲೇಜುಗಳ ಆಡಳಿತವನ್ನು ವಿಕೇಂದ್ರೀಕರಣಗೊಳಿಸಿ ಅವುಗಳ ಕಾರ್ಯವನ್ನು ಸುಗಮಗೊಳಿಸುವುದರ ಜೊತೆಗೆ ಭಾರತದಲ್ಲಿ ವಿಶ್ವವಿದ್ಯಾನಿಲಯಗಳ ಗಾತ್ರವನ್ನು ನಿರ್ವಹಿಸಬಹುದಾದ ಪ್ರಮಾಣಕ್ಕೆ ತರಲು ಸ್ವಾಯತ್ತತೆ ನೀಡಿಕೆಯನ್ನು ಒಂದು ಸಾಧನವೆಂದು ಪರಿಗಣಿಸಲಾಗಿದೆ.

ಸಂಸ್ಥೆಗಳನ್ನು ನಿರ್ವಹಿಸುತ್ತಿರುವವರ ಮನಸ್ಸನ್ನು ಹಲವು ಪ್ರಶ್ನೆಗಳು ಕಾಡುತ್ತವೆ. ಸ್ವಾಯತ್ತತೆ ಏತಕ್ಕಾಗಿ?, ಎಲ್ಲವನ್ನೂ ಸರ್ಕಾರವೇ ಶೈಕ್ಷಣಿಕ ಸಂಸ್ಥೆಗಳಿಗೆ ಕೊಡುತ್ತಿರುವಾಗ ಸ್ವಾಯತ್ತತೆ ಏಕೆ?, ಅಷ್ಟಕ್ಕೂ ಸ್ವಾಯತ್ತತೆಯನ್ನು ಏಕೆ ಕೊಡಬೇಕು? ಈ ಪ್ರಶ್ನೆಗಳಿಗೆ ಉತ್ತರ, ಹೆಚ್ಚು ಸ್ವಾಯತ್ತತೆಯನ್ನು ಕೊಡುವುದಲ್ಲ ಆದರೆ ಜವಾಬ್ದಾರಿಯುತವಾದ ಸ್ವಾಯತ್ತತೆ ನೀಡುವುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಂಸ್ಥೆಗಳನ್ನು ನಡೆಸುವಾಗ ಸ್ವಾಯತ್ತತೆಗೆ ಉತ್ತರದಾಯಿತ್ವ ಇರಬೇಕು. ಮುಂದುವರೆದು, ಗುಣಮಟ್ಟವನ್ನು ಕಾಯ್ದುಕೊಳ್ಳಲು, ಗುರಿಗಳನ್ನು ಸಾಫಲ್ಯಗೊಳಿಸಲು ಸ್ವಾಯತ್ತತೆ ಬೇಕು. ಶೈಕ್ಷಣಿಕ ಕಾರ್ಯ ಚಟುವಟಿಕೆಗಳು ಹೆಚ್ಚು ಸ್ವಾತಂತ್ರ್ಯ ಇರುವ ಸಂದರ್ಭದಲ್ಲಿ ಒಳ್ಳೆಯ ಪರಿಣಾಮಗಳನ್ನೇ ಕೊಡುತ್ತವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ 'ಏನು' ಮತ್ತು 'ಹೇಗೆ' ಎನ್ನುವ

Digitised by Bharatavani, CIIL

ಅಂಶಗಳಿಗೆ ಸ್ವಾಯತ್ತತೆ ನೀಡಿದರೆ, ಪಾಲ್ಗೊಳ್ಳುವ ಮಂದಿಯಿಂದ ಅತ್ಯುತ್ತಮವಾದದ್ದನ್ನು ನಿರೀಕ್ಷಿಸಬಹುದು.

ಕಳೆದ ನಾಲ್ಕೈದು ದಶಕಗಳಲ್ಲಿ ಈ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆಗಳು ಸ್ವಾಯತ್ತತೆ ಮತ್ತು ವೃತ್ತಿ ಸಾಫಲ್ಯತೆಯ ನಡುವಣ ಸಂಬಂಧವನ್ನು ಸಮರ್ಥಿಸಿವೆ.

**ಸ್ವಾಯತ್ತತೆಯ ಮೇಲೆ ಸಂಶೋಧನೆಗಳು:**

ಬಹಳ ಆಸಕ್ತಿದಾಯಕ ವಿಷಯವೆಂದರೆ, ಬಹಳಷ್ಟು ಅಧ್ಯಯನಗಳು ಸ್ವಾಯತ್ತತೆ ಮತ್ತು ಗುಣಾತ್ಮಕತೆಗಳ ಸಂಬಂಧ ಧನಾತ್ಮಕವಾಗಿರುವುದನ್ನು ಸಮರ್ಥಿಸಿವೆ. (ಕಾರ್ನಗೆ ಕಮೀಷನ್ 1973; ಆದಿಶೇಷಯ್ಯ 1974; ಆಂಡರ್‌ಸನ್ 1981; ಅರುಣ್ 1987; ವಾನ್‌ವಾರ್ಷನ್ 1988; ಸ್ಕೈಟಿಸ್ ಸಿ.ಎ. 1988; ಯಶ್‌ಪಾಲ್ 1990; ವಾನ್‌ವಾಷನ್‌ವಿಕ್ ಮತ್ತು ವೆಸ್ಟರ್ ಹೈಡೆನ್ 1994; ಸುಧಾರಾವ್ 1993, 1997), ಸಂಶೋಧನೆ ಆಡಳಿತ ಮತ್ತು ಗುಣಾತ್ಮಕತೆ ಮತ್ತು ಸ್ವಾಯತ್ತತೆ ನಡುವೆ ಸಂಬಂಧ ಸ್ಥಾಪಿಸಿದೆ. (ಭಂಡಾರ್‌ಕರ್ ಕೃಷ್ಣರಾಜ್ 1987, ನೀವೆ 1983, ಸೀಬರ್ 1981, ಲವಕರೆ ಪಿ.ಜೆ. ಮತ್ತು ಇತರರು 1995, ಪವಾರ್ ಕೆ.ಬಿ. 1995, ಜಸ್ಟಿನ್ ಟಿ. 1996, ಆಲ್ಡರ್‌ಮನ್ ಜಿ. 1996, ದೇಶ್‌ಮುಖ್ ಕೆ.ಜಿ. 1998, ಖನ್ನ ಎಸ್. ಕೆ. 1999, ಸುಧಾರಾವ್ 1999).

ಸ್ವಾಯತ್ತತೆಯ ಬಗ್ಗೆ ಬಹಳಷ್ಟು ಶೈಕ್ಷಣಿಕ ತಜ್ಞರು ತಮ್ಮದೇ ಗ್ರಹಿಕೆಗಳನ್ನು ಹೊಂದಿರುವುದು ಆಸಕ್ತಿದಾಯಕವಾಗಿದೆ ಎನ್ನಬಹುದು. ಕೆಲವರು ಗುಣಮಟ್ಟವನ್ನು ಹೆಚ್ಚಿಸಲು ಹಾಗು ಬದಲಾವಣೆಯನ್ನು ತರಲು ಸ್ವಾಯತ್ತತೆಯು ಅವಕಾಶ ಕಲ್ಪಿಸುತ್ತದೆ ಎಂದು ತಿಳಿಸಿದ್ದಾರೆ. ಮತ್ತೆ ಕೆಲವರು ನಿರ್ಣಯ ಕೈಗೊಳ್ಳುವಿಕೆಯಲ್ಲಿ ಪಾಲ್ಗೊಳ್ಳುವ ಒಂದು ಅವಕಾಶವಿದೆಯೆಂದು ಭಾವಿಸುತ್ತಾರೆ. ಮತ್ತೊಂದು ಗುಂಪು ವಿಶ್ಲೇಷಣೆಯ ಮೂಲಕ ಸಾಮಾಜಿಕ ಮತ್ತು ಸ್ಥಳೀಯ ಅಗತ್ಯತೆಗಳನ್ನು ಗುರುತಿಸಿ ಎದುರಾಗುವ ಸಾಂಸ್ಥಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಗು ನಾವೀನ್ಯತೆಯನ್ನು ತರಲು ಸ್ವಾಯತ್ತತೆ ಅವಕಾಶ ಕಲ್ಪಿಸುತ್ತದೆ ಎಂದಿದ್ದಾರೆ. ಮತ್ತೆ ಕೆಲವರು ತಮ್ಮ ಪ್ರತಿಭೆಯನ್ನು ಒಟ್ಟಾಗಿ ಪ್ರದರ್ಶಿಸಿ, ಸಂಸ್ಥೆಯೊಂದನ್ನು ಕಟ್ಟಲು ಇರುವ ಅವಕಾಶವನ್ನು ಸ್ವಾಯತ್ತತೆ ಕಲ್ಪಿಸುತ್ತದೆ ಎಂದು ಬಣ್ಣಿಸಿದ್ದಾರೆ. ಸ್ವಾಯತ್ತತೆಯನ್ನು ಇನ್ನೂ ಕೆಲವು ದೃಷ್ಟಿಗಳಿಂದ ಪರಿಭಾವಿಸುವ ಇನ್ನು ಹಲವು ಗುಂಪುಗಳನ್ನು ಗುರ್ತಿಸಿ ಪಟ್ಟಿಮಾಡಬಹುದು.

ಸಮುದಾಯಕ್ಕೆ ಉತ್ತಮಗೊಳಿಸುವ, ಶಾಂತಿಯುತ ಸಹ ಅಸ್ಥಿತ್ವವನ್ನು ಮತ್ತು ಮೌಲ್ಯಗಳನ್ನು ಪ್ರೋತ್ಸಾಹಿಸುವ ಮತ್ತು ಒಂದು ಭವಿಷ್ಯದ ಕಾಣ್ಕೆಯೊಂದಿಗೆ ಸಂಸ್ಥೆಯನ್ನು ರೂಪಿಸಲು ಅವಕಾಶ ಕಲ್ಪಿಸುವ ಒಂದು ಪ್ರಕ್ರಿಯೆಯಾಗಿ ಸ್ವಾಯತ್ತತೆಯನ್ನು ಮನೋಧೋರಣೆಯ ಬದಲಾವಣೆಯಾಗಿಯೂ ಪರಿಗಣಿಸಬಹುದು. ಸ್ವಾಯತ್ತತೆಯು ಪೂರ್ಣತಃ ಸ್ವಾಯತ್ತತೆ ಮೂಲಭೂತವೆಂದು ಪರಿಗಣಿಸಲಾಗಿದೆ. ಆರ್ಥಿಕ ಮತ್ತು ಆಡಳಿತಾತ್ಮಕ ಅಂಶಗಳಿಗೆ ಸೀಮಿತವಾಗದೆ, ಬೋಧನಾಶಾಸ್ತ್ರ ಮತ್ತು ಪಠ್ಯಕ್ರಮದ ಅಂಶಗಳಿಗೆ ಹೆಚ್ಚಾಗಿ ಸಂಬಂಧಿಸಿದ್ದಾಗಿರುತ್ತದೆ. ಪರಿಣಾಮಕಾರಿ ಬೋಧನೆ, ಕಲಿಕೆಯ ಮೂಲಕ ಗುಣಾತ್ಮಕತೆಯನ್ನು ತರಬಯಸುವುದಾದರೆ ಅದನ್ನು ಸ್ವಾಯತ್ತತೆ ನೀಡಿಕೆಯಿಂದ ಸಾಧಿಸಬಹುದು. ಸ್ವಾಯತ್ತತೆ ಮೂಲಕ ಮಾನವ ಸಂಪನ್ಮೂಲ ತರಬೇತಿಯನ್ನು, ನಿರ್ವಹಣ ತಂತ್ರಗಳ ಜ್ಞಾನವನ್ನು ಮತ್ತು ಸಂಪನ್ಮೂಲಗಳ ಸ್ವತಂತ್ರ ನಿರ್ವಹಣೆಯನ್ನು ಉತ್ತಮಪಡಿಸುವ ಕೌಶಲ್ಯಗಳನ್ನು ಬೆಳೆಸುವ ಪರಿಸ್ಥಿತಿಗಳನ್ನು ಸಂಸ್ಥೆಯಲ್ಲಿ ಉಂಟುಮಾಡಬಹುದು. ಶೈಕ್ಷಣಿಕ ಸಂಸ್ಥೆಗಳಿಗೆ ಈ ತೆರನಾದ ಸ್ವಾಯತ್ತತೆಯು ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಅತ್ಯಗತ್ಯವಾಗಿದೆ. ವಿಶ್ವವಿದ್ಯಾನಿಲಯಗಳಿಗೆ ಆರ್ಥಿಕ ಸ್ವಾಯತ್ತತೆಯು ಒಂದು ಬಹುಮಾನವಾಗುತ್ತದೆ. ಕಾರ್ಯಕ್ರಮಗಳಿಗಾಗಿ ಸಾರ್ವಜನಿಕ ಸಂಪನ್ಮೂಲಗಳಲ್ಲದೆ, ಬೇರೆಯ ಮೂಲಗಳಿಂದಲೂ ಸಂಪನ್ಮೂಲಗಳನ್ನು ಪಡೆಯಬಹುದು, ಧನಸಹಾಯ ಮಾಡಿದ ನಿಯೋಗಗಳಿಗೆ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಬಹುದು ಎಂದು ಸ್ವಾಯತ್ತತೆಯನ್ನು ಅರ್ಥೈಸಬಹುದು. ಶೈಕ್ಷಣಿಕ ಸ್ವಾತಂತ್ರ್ಯ ಕೇವಲ ಸವಲತ್ತು ಮಾತ್ರವಲ್ಲ, ಅದೊಂದು ಜವಾಬ್ದಾರಿ. ಶೈಕ್ಷಣಿಕ ಸ್ವಾತಂತ್ರ್ಯವನ್ನು ಅನುಷ್ಠಾನಗೊಳಿಸಲು ನಿರ್ಬಂಧಗಳಿರಬಾರದು. ಶೈಕ್ಷಣಿಕ ಸ್ವಾತಂತ್ರ್ಯ ಏಕ ಕಾಲದಲ್ಲಿ ಗುರಿಯೂ ಆಗುತ್ತದೆ, ಮಾಧ್ಯಮವೂ ಆಗುತ್ತದೆ ಹಾಗು ಮೂಲಭೂತ ಮಾನವ ಹಕ್ಕಾಗುತ್ತದೆ. ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಸ್ವಾಯತ್ತತೆ ನೀಡುವ ಕ್ರಮ ರಾಜ್ಯ, ಶಾಸಕಾಂಗ ಹಾಗು ವಿಶೇಷವಾಗಿ ಸಂಸತ್ತಿನ ಅಧಿಕಾರವನ್ನು ಮೊಟಕುಗೊಳಿಸುವ ಸ್ಪಷ್ಟ ಮಾರ್ಗವಾಗುತ್ತದೆ.

'ವಿಶ್ವವಿದ್ಯಾನಿಲಯಗಳಿಗೆ ಸ್ವಾಯತ್ತತೆ ಕೊಡುವ ಉದ್ದೇಶವಿದೆ' ಎಂಬುದಾಗಿ ಕೇಂದ್ರ ಸಚಿವರೇ ಘೋಷಿಸಿದ್ದಾರೆ. ಇದನ್ನು ಮಹತ್ವದ್ದಾಗಿ ಪರಿಗಣಿಸಿದರೆ ಇದು ಹೇಗೆ ಮುಂದುವರೆಯುತ್ತದೆ ಮತ್ತು ಇದರ ಆಶಯಗಳೇನು, ಅಷ್ಟೇ ಅಲ್ಲದೆ, ನೈಜ ಅರ್ಥದಲ್ಲಿ ಸಾಂಸ್ಥಿಕ ಸ್ವಾಯತ್ತತೆಯನ್ನು ಕೊಡಲಾಗುತ್ತದೆಯೇ ಎಂಬ ಅಂಶಗಳು ಎದುರಾಗುತ್ತವೆ.

ಸಂಶೋಧಕರಿಂದ ವಿದ್ಯಾರ್ಥಿ ಸ್ವಾಯತ್ತತೆಗೆ ಸಂಬಂಧಪಟ್ಟಂತೆ ನಾಲ್ಕು ಸಂದರ್ಭಗಳು ಗುರುತಿಸಲ್ಪಟ್ಟಿವೆ. 1. ಕಲಿಕೆಯನ್ನು ಬೆಂಬಲಿಸುವ ವಾತಾವರಣ ನಿರ್ಮಾಣ. 2. ಕಲಿಕಾರ್ಥಿಗಳಿಗೆ ನಿಯಮಿತ ಮುನಶ್ಚೇತನ 3. ಸಮಗ್ರ ಕಲಿಕೆಗೆ ಒತ್ತು ನೀಡುವುದು. 4. ಕಲಿಕಾಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು. ವ್ಯಕ್ತಿಗತ ವೃತ್ತಿ ವಿಕಾಸ ಮತ್ತು ಬದಲಾವಣೆಗಾಗಿ ಸಂಸ್ಥೆಯ ಪ್ರತಿಸ್ಪಂದಿಸುವಿಕೆಯನ್ನು ಗರಿಷ್ಠಗೊಳಿಸಲು ಸ್ವಾಯತ್ತತೆಯನ್ನು ವಿಸ್ತಾರಗೊಳಿಸಬಹುದು.

ಬಾಯ್ಡ್ ಅವರು, 'ಎರಡೂ ತುಂಡುಗಳು ಮುಖ್ಯ' ಎಂದಿದ್ದಾರೆ. ಸ್ವಾಯತ್ತತೆಯ ದುರುಪಯೋಗವಾದಿರಲು ಉತ್ತರದಾಯಿತ್ವ ಅಗತ್ಯವಾಗಿದೆ. ಆದರೆ ಈ ಎರಡರಿಂದಲೂ ಸಾರ್ವಜನಿಕ ಶಿಕ್ಷಣದಲ್ಲಿ ಕ್ರಾಂತಿಯನ್ನೇ ಉಂಟುಮಾಡಬಹುದು.

Digitised by Bharatavani, CIIL

ಸ್ವಾಯತ್ತತೆಯಿಂದ ನೌಕರಶಾಹಿ ನಿಯಮಾವಳಿಗಳಿಂದ ಸ್ವಾತಂತ್ರ್ಯ ಮತ್ತು ಸಂಪನ್ಮೂಲಗಳನ್ನು ಉಳಿಸಿ ಅವುಗಳನ್ನು ಶಿಕ್ಷಣದ ಉನ್ನತೀಕರಣಕ್ಕೆ ಪುನರ್‌ಬಳಕೆಗೆ ನಮ್ಯತೆ ಬರುತ್ತದೆ. ಉತ್ತರದಾಯಿತ್ವ ಇರುವುದರಿಂದ ನಿಯಮ ರೂಪಕರಿಗೆ ಮತ್ತು ಪೋಷಕರಿಗೆ ಖಾತ್ರಿಯೂ ದೊರಕಿ, ಶಿಕ್ಷಕರು ಮತ್ತು ಪ್ರಾಂಶುಪಾಲರುಗಳಿಗೆ ಉತ್ತೇಜನ ದೊರಕುತ್ತದೆ. ವಿದ್ಯಾರ್ಥಿಗಳು ರಾಜ್ಯದ ನಿಯಮಿತ ಮಟ್ಟಗಳನ್ನು ಸಾಧಿಸುವುದನ್ನು ಕಳಪೆ ಫಲಿತಾಂಶಗಳಿಗೆ ಪ್ರಾಂಶುಪಾಲರಿಗೆ ಕಡಿಮೆ ವೇತನ ಕೊಡುವುದನ್ನು ಮತ್ತು ಒಳ್ಳೆಯ ಫಲಿತಾಂಶಗಳಿಗೆ ಹೆಚ್ಚಿನ ವೇತನ ನೀಡುವುದನ್ನು, ಶಿಕ್ಷಕರು ದಕ್ಷತೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದನ್ನು ಅಂದರೆ ಕಲಿಕೆಯ ಗ್ಯಾರಂಟಿಯನ್ನು ಸ್ವಾಯತ್ತತೆ ಖಚಿತಗೊಳಿಸುತ್ತದೆ.

ಶಿಕ್ಷಕರಿಗೆ ಅವರವರ ಅಧ್ಯಯನ ಕ್ಷೇತ್ರದಲ್ಲಿ ನೀಡುವ ಸ್ವಾತಂತ್ರ್ಯ ಸಂಶೋಧಕರು ಮತ್ತು ಶಿಕ್ಷಕರು ಭದ್ರತೆ ಪಡೆದು ಸಾಂಸ್ಥಿಕ ಹಂತದಲ್ಲಿ ಮುಜುಗರ, ನಿರ್ಬಂಧಗಳಿಲ್ಲದೆ ಆಡಳಿತಗಾರರು, ರಾಜಕೀಯ ಮುಖಂಡರುಗಳ ವೈಯಕ್ತಿಕ ತಾತ್ವಿಕತೆಗಳು ಮತ್ತು ವರ್ತನ ಶೈಲಿಗಳಿಗೆ ಒಳಗಾಗದೆ ಉನ್ನತ ಕಲಿಕೆಯನ್ನು ಮುಂದುವರಿಸಲು ಸಾಧ್ಯವಾಗುತ್ತದೆ ಎಂದು ನಿರೀಕ್ಷಿಸಲಾಗುತ್ತದೆ.

ಶೈಕ್ಷಣಿಕ ಸ್ವಾತಂತ್ರ್ಯವು ಔಪಚಾರಿಕವಾದವಾಗಿ 19ನೇ ಶತಮಾನದಲ್ಲಿ ಜರ್ಮನಿಯಲ್ಲಿ ವಿಕಾಸಗೊಂಡಿತು. ಬರ್ಲಿನ್ ವಿಶ್ವವಿದ್ಯಾನಿಲಯದ ವಿಲ್‌ಹೆಲ್ಮ್ ವೋನ್ ಹಂಬೋಲ್ಟ್ ಅವರು ಮಾಡಿದ ಕೆಲಸಗಳ ಫಲಿತವಾಗಿ ಈ ಕಲ್ಪನೆಯು ಚಾಲ್ತಿಗೆ ಬಂದಿತು. ಇವರು ವಿಕಾಸಗೊಳಿಸಿದ ಸ್ವ–ಸರ್ಕಾರದ ಪರಿಕಲ್ಪನೆ ಮತ್ತು ಪಾಶ್ಚಿಮಾತ್ಯ ಯುರೋಪಿಯನ್ ವಿಶ್ವವಿದ್ಯಾನಿಲಯದಲ್ಲಿ ಲೆಡೆರ್ ಫ್ರೀಡೀಟ್ (ಜರ್ಮನ್ ಪದ) ಅಂದರೆ ಬೋಧಿಸುವ ಸ್ವಾತಂತ್ರ್ಯ ಎಂದು ಕರೆಯಲ್ಪಟ್ಟಿತು. ಇದರ ಜೊತೆಗೆ ಲೆಹರ್ ಫ್ರೀಹೀಟ್ – ಪಠ್ಯಕ್ರಮವನ್ನು ಆಯ್ದುಕೊಳ್ಳಲು ವಿದ್ಯಾರ್ಥಿಗೆ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ವಿಕಾಸಗೊಳಿಸಿದ್ದರು. ಲೆಹಲ್ ಫ್ರೀಹೀಟ್‌ನಲ್ಲಿ ಎರಡು ಅಂಶಗಳಿದ್ದವು. ಅದರ ಅರ್ಥ ಮೊದಲಿಗೆ ಪ್ರಾಧ್ಯಾಪಕನಿಗೆ ಅಥವಾ ಉಪನ್ಯಾಸಕನಿಗೆ ತನ್ನ ದೃಢನಿಶ್ಚಯಗಳಿಗೆ ಅನುಗುಣವಾಗಿ ರಾಜಕೀಯ ಅಥವಾ ಇತರ ನಿರ್ಬಂಧಗಳಿಲ್ಲದೆ ಬೋಧಿಸುವ ಸ್ವಾತಂತ್ರ್ಯವಿರಬೇಕು. ಎರಡನೆಯದಾಗಿ ನಿಗದಿತ ಪಠ್ಯವಸ್ತುವಿಗೆ ಸಂಬಂಧಪಡದಿದ್ದರೂ ತಾನು ಯಾವ ವಿಷಯದ ಬಗ್ಗೆ ಉಪನ್ಯಾಸ ಮಾಡಬೇಕೆಂಬುದನ್ನು ಆಯ್ಕೆಮಾಡಿಕೊಳ್ಳಲು ಅವನಿಗೆ ಸ್ವಾತಂತ್ರ್ಯವಿರಬೇಕು.

ಶೈಕ್ಷಣಿಕ ಸ್ವಾತಂತ್ರ್ಯ ಸಮಾಜದ ಒಳಿತಿಗೆ ಜ್ಞಾನವನ್ನು ಹೆಚ್ಚಿಸುವ ಉದ್ದೇಶದಿಂದ ವಾದಗಳನ್ನು ಮತ್ತು ಪೊಳ್ಳು ಸಿದ್ಧಾಂತಗಳನ್ನು, ಗ್ರಹಿಸಿದ ಅಭಿಪ್ರಾಯಗಳನ್ನು ಪರೀಕ್ಷಿಸುವ ಮತ್ತು ಸವಾಲು ಮಾಡುವ ಅವಕಾಶಗಳನ್ನು ಖಚಿತಗೊಳಿಸುತ್ತದೆ. ಅರ್ಥರ್ ಓ. ಲೌಜಾಯ್ ಹೇಳುವಂತೆ ಶೈಕ್ಷಣಿಕ ಸ್ವಾತಂತ್ರ್ಯ ವ್ಯಕ್ತಿಗೆ ತನ್ನ ಸಂಶೋಧನೆಯ ಅವಧಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ಅನ್ವೇಷಿಸಲು ಮತ್ತು ಚರ್ಚಿಸಲು ಮತ್ತು ಯಾವುದೇ ನಿರ್ಬಂಧವಿಲ್ಲದೆ ಪ್ರಕಟನೆಯ ಮೂಲಕವಾಗಲಿ ಅಥವಾ ವಿದ್ಯಾರ್ಥಿಗಳಿಗೆ ಬೋಧಿಸುವುದರ ಮೂಲಕವಾಗಲಿ ತನ್ನ ತೀರ್ಮಾನವನ್ನು ಅಭಿವ್ಯಕ್ತಗೊಳಿಸುವ ಅವಕಾಶ ಒದಗಿಸುತ್ತದೆ. (Academic Freedom, 1930, P.384). ವಿದ್ವಾಂಸರಿಗೆ ಬೋಧನೆ ಮಾಡಲು ಅಥವಾ ತತ್ವಶಾಸ್ತ್ರೀಯ ಆಧಾರದ ಮೇಲೆ ಅಲ್ಲದೆ, ಅನುಶೀಲನೆಯ ದಕ್ಷತೆಯ ಆಧಾರದ ಮೇಲೆ ಜ್ಞಾನವನ್ನು ಹೆಚ್ಚಿಸಲು ಶೈಕ್ಷಣಿಕ ಸ್ವಾತಂತ್ರ್ಯ ಒಂದು ಪೂರ್ವ–ನಿಬಂಧನೆಯಾಗುತ್ತದೆ. (ಪೋಲ್ಯಾನಿ, 1947).

ನ್ಯಾಯಿಕ ದೃಷ್ಟಿಕೋನದಿಂದ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಯಾವ ಪರಿಭಾಷೆಯೂ ಇಲ್ಲ. ಆದರೆ ಒಬ್ಬ ವಿಮರ್ಶಕ ಸೂಚಿಸುವಂತೆ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸೇರಿಕೊಂಡಿರುವ ಶೈಕ್ಷಣಿಕ ಸಮುದಾಯದ ಸದಸ್ಯರ ಕಾರ್ಯಗಳಾದ ಬೋಧನೆ, ಕಲಿಕೆ, ಕಲೆಗಳ ಆಚರಣೆ ಮತ್ತು ಸಂಶೋಧನೆಯ ಪ್ರಭಾವಯುತ ಕಾರ್ಯಕ್ಷಮತೆಗೆ ಅಡಿಪಾಯವಾಗಿರುವ ಸ್ವಾತಂತ್ರ್ಯವೇ ಶೈಕ್ಷಣಿಕ ಸ್ವಾತಂತ್ರ್ಯವಾಗಿದೆ. ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ತಮ್ಮ ಪಾತ್ರಗಳನ್ನು ನಿರ್ವಹಿಸಲು ಸಮರ್ಥರನ್ನಾಗಿಸಲು ಶೈಕ್ಷಣಿಕ ಸ್ವಾತಂತ್ರ್ಯದ ಹಕ್ಕನ್ನು ಗುರ್ತಿಸಲಾಗಿದೆ (ಫುಚ್, 1967).

ಶೈಕ್ಷಣಿಕ ಸ್ವಾತಂತ್ರ್ಯದ ಸೀಮೆಗಳನ್ನು ವಿವರಿಸುವುದರಲ್ಲಿ ತೊಂದರೆಗಳು ಉಂಟಾಗಿವೆ. 1940ರ Statement of Principles on Academic Freedom ಭಾಗಶಃ ಹೀಗೆ ಹೇಳಿದೆ. "ತರಗತಿಯಲ್ಲಿ ತನ್ನ ವಿಷಯವನ್ನು ಚರ್ಚಿಸಲು ಅಧ್ಯಾಪಕನಿಗೆ ಸ್ವಾತಂತ್ರ್ಯದ ಹಕ್ಕಿದೆ. ಆದರೆ ಹೀಗೆ ಬೋಧನೆ ಮಾಡುವಾಗ ತನ್ನ ವಿಷಯಕ್ಕೆ ಸಂಬಂಧವಿಲ್ಲದ ವಿವಾದಾತ್ಮಕ ವಿಷಯ ವಸ್ತುವನ್ನು ತನ್ನ ಬೋಧನೆಯಲ್ಲಿ ಸೇರಿಸದಿರುವಂತೆ ಎಚ್ಚರವಹಿಸಬೇಕಾಗುತ್ತದೆ." (ಜಾಗಿನ್ 1967 ಪು. 351). ಆದರೆ ಇಲ್ಲಿ ನಿಜವಾದ ಪ್ರಶ್ನೆಯೆಂದರೆ ಅಧ್ಯಾಪಕನನ್ನು ಅಧ್ಯಾಪಕನನ್ನಾಗಿ ಮತ್ತು ಅಧ್ಯಾಪಕನಾಗಿರುವ ಪೌರನಾಗಿರುವುದರ ನಡುವೆ ಇರುವ ವ್ಯತ್ಯಾಸವನ್ನು ಹೇಗೆ ಗುರ್ತಿಸುವುದು ಎಂಬುದಾಗಿದೆ. ೦೦ಕಿಗ ಹೀಗೆ ಹೇಳುತ್ತದೆ. ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ಶಿಕ್ಷಕ ಒಬ್ಬ ಪೌರನಾಗಿರುತ್ತಾನೆ, ಒಂದು ಶಿಕ್ಷಿತ ವೃತ್ತಿಯ ಸದಸ್ಯನಾಗಿರುತ್ತಾನೆ ಮತ್ತು ಒಂದು ಶೈಕ್ಷಣಿಕ ಸಂಸ್ಥೆಯ ಅಧಿಕಾರಿಯಾಗಿದ್ದಾಗ ಒಬ್ಬ ಪೌರನಾಗಿ ಮಾತನಾಡುವಾಗ ಅಥವಾ ಬರೆಯುವಾಗ ಅವನು ಸಂಸ್ಥೆಯ ನಿಯಂತ್ರಣದಿಂದ ಅಥವಾ ಶಿಸ್ತಿನಿಂದ ಮುಕ್ತನಾಗಿರಬೇಕು, ಆದರೆ ಸಮುದಾಯದಲ್ಲಿನ ಅವನ ವಿಶಿಷ್ಟ ಸ್ಥಾನ ಅವನ ಮೇಲೆ ಕೆಲವು ಬಾಧ್ಯತೆಗಳನ್ನು ಹೇರುತ್ತದೆ. ಓರ್ವ ಶಿಕ್ಷಿತ ವ್ಯಕ್ತಿಯಾಗಿ ಮತ್ತು ಒಬ್ಬ ಶೈಕ್ಷಣಿಕ ಅಧಿಕಾರಿಯಾಗಿ ತನ್ನ ಹೇಳಿಕೆಗಳಿಂದ ಸಾರ್ವಜನಿಕರು ತನ್ನ ವೃತ್ತಿಯ ಬಗ್ಗೆ ಮತ್ತು ತನ್ನ ಸಂಸ್ಥೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದು ಎಂಬುದನ್ನು ಅವನು/ಅವಳು ನೆನಪಿನಲ್ಲಿಡಬೇಕು. ಆದ್ದರಿಂದ ಅವನ/ಅವಳ ಹೇಳಿಕೆಗಳು ಯಾವಾಗಲೂ ನಿಖರವಾಗಿರಬೇಕು, ಹೇಳಿಕೆಗಳನ್ನು ಕೊಡುವಾಗ ಸೂಕ್ತ ನಿಯಂತ್ರಣವನ್ನು ಉಪಯೋಗಿಸಬೇಕು, ಬೇರೆಯವರ ಅಭಿಪ್ರಾಯಗಳಿಗೆ ಗೌರವ ತೋರಿಸಬೇಕು ಮತ್ತು ತಾನು ಸಂಸ್ಥೆಯ

Digitised by Bharatavani, CIIL

ಪರವಾಗಿ ಮಾತನಾಡುವವನಲ್ಲ ಎಂದು ಸೂಚಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. (ಜೌಗಿನ್ 1967 ಪು. 36). ಸಂಯುಕ್ತ ಸಂಸ್ಥಾನದ ಬಹುತೇಕ ಉನ್ನತ ಶಿಕ್ಷಣ ಸಂಸ್ಥೆಗಳು ಹೊಂದಿರುವ ಅಭಿಪ್ರಾಯವೇ ಈ ಉಲ್ಲೇಖವಾಗಿದೆ ಮತ್ತು ಇದು ಬೇರೆ ದೇಶಗಳಲ್ಲಿ ಪರಿಗಣಿಸಬೇಕಾದ ಒಂದು ಮಾದರಿಯಾಗಿದೆ.

'ಸೂಕ್ತ ನಿಯಂತ್ರಣ' ಎನ್ನುವುದರ ಅಸ್ಪಷ್ಟತೆ ಸ್ವರೂಪದಿಂದಾಗಿ ಶೈಕ್ಷಣಿಕ ಸ್ವಾತಂತ್ರ್ಯದ ಪ್ರಾಚಲಗಳನ್ನು (Parameters) ನಿಖರವಾಗಿ ನಿಶ್ಚಿತಗೊಳಿಸುವ ಪ್ರಯತ್ನದಲ್ಲಿ ಇನ್ನೂ ತೊಂದರೆಗಳಿವೆ. ಈ ಪರಿಕಲ್ಪನೆಯ ಒಂದು ವಿವರಣೆ ನಿಯಂತ್ರಣ ಅಭಿವ್ಯಕ್ತಿಯ ರೀತಿಗೆ ಅನ್ವಯಿಸುತ್ತದೆ ಎನ್ನುವುದನ್ನು ಒಪ್ಪಬಹುದು, ಆದರೆ ವಿಷಯ ಅಭಿವ್ಯಕ್ತಿಯ ಮೇಲಿನ ಯಾವುದೇ ನಿರ್ಬಂಧ ಶೈಕ್ಷಣಿಕ ಸ್ವಾತಂತ್ರ್ಯದ ನಿರ್ಬಂಧವಾಗುತ್ತದೆ.

ಇದು ಶೈಕ್ಷಣಿಕ ಸ್ವಾತಂತ್ರ್ಯದ ಮತ್ತು ಸಾಂಸ್ಥಿಕ ಸ್ವಾತಂತ್ರ್ಯದ ಭಾಗವಾಗಿದೆ. ಇದು ವೃತ್ತಿ ಸ್ವಾತಂತ್ರ್ಯವೂ ಹೌದು, ಆರ್ಥಿಕ ಸ್ವಾತಂತ್ರ್ಯವೂ ಹೌದು. ಇಲ್ಲಿ ಶೈಕ್ಷಣಿಕ ಸ್ವಾತಂತ್ರ್ಯದ ಪೂರ್ಣ ಮಹತ್ವ ಅಡಗಿದೆ. ಶಿಕ್ಷಕರಿಗೆ ಪ್ರಾಥಮಿಕ ಕಾರ್ಯದ ಜೊತೆಗೆ ಇನ್ನೂ ಕೆಲವು ಇತರ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಆದರೆ ಅವನು ಶಿಕ್ಷಕರ ಸಂಘಕ್ಕೆ (ಗಿಲ್ಡ್) ಸೇರಿದವನಾಗಿರುವುದರಿಂದ, ಉನ್ನತ ಕಲಿಕೆ ಸಂಸ್ಥೆಯಲ್ಲಿ ಒಂದು ಸ್ಥಾನ ಹೊಂದಿರುವುದರಿಂದ ಅವನು/ಅವಳು ಪ್ರಥಮವಾಗಿ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಜ್ಞಾನಾನ್ವೇಷಣೆಯಲ್ಲಿ ಮತ್ತು ಜ್ಞಾನ ಸಂವಹನದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕಾಗುತ್ತದೆ. ಅವನು/ಅವಳು ಮಾಡುವ ಕಾರ್ಯ ಸಮುದಾಯ ಸೇವೆಯಾಗುತ್ತದೆ. ಶಿಕ್ಷಕನ ಸೇವೆ ತನ್ನ ವಿದ್ಯಾರ್ಥಿಗಳಿಗೆ ಮಾಡುವ ಅಥವಾ ಸಂಸ್ಥೆಗೆ ಮಾಡುವ ಅಥವಾ ತನ್ನ ವೃತ್ತಿಗೆ ಮಾಡುವ ಸೇವೆಯಷ್ಟೇ ಅಲ್ಲ. ಅದು ದೇಶಕ್ಕೆ ಮಾಡುವ ಸೇವೆಯಾಗಿದೆ. ಅದು ನಾಗರೀಕತೆಗೆ ಮಾಡುವ ಸೇವೆ. ಮಾನವ ಕುಲಕ್ಕೆ ಮಾಡುವ ಸೇವೆ. ಅತ್ಯಮೂಲ್ಯವಾದ ಈ ಸೇವೆಯ ಪೂರ್ತಿ ವಿದ್ವಾಂಸ (ಸ್ಕಾಲರ್) ತನ್ನ ಸ್ವಾತಂತ್ರ್ಯವನ್ನು ಆರೋಗ್ಯ ಪೂರ್ಣವಾಗಿ ಉಳಿಸಿಕೊಳ್ಳುವುದನ್ನೆ ಅವಲಂಬಿಸಿದೆ. (ಮೆಕ್ಕೈವರ್, 1955).

ಭಾರತದಲ್ಲಿ ಉನ್ನತ ಶಿಕ್ಷಣದ ಯೋಜನೆಯು ಬ್ರಿಟೀಷ್ ಮಾದರಿಗಳಿಂದ ಪ್ರಭಾವಿತವಾಗಿದೆ. ಇದು ಶೈಕ್ಷಣಿಕ ಸ್ವಾತಂತ್ರ್ಯದ ಪರಿಕಲ್ಪನೆ ಮತ್ತು ಅಧ್ಯಾಪಕ ಸಮುದಾಯದ ಪಾತ್ರದ ಮೇಲೆ ಹಿತಕರ ಪ್ರಭಾವವನ್ನು ಬೀರಿದೆ. ಬಹಳ ಹಿಂದೆಯೇ ಕಲ್ಕತ್ತಾ ವಿಶ್ವವಿದ್ಯಾನಿಲಯ ಆಯೋಗದ (1917) ಸಂದರ್ಭದಲ್ಲೇ ಈ ಮಾತನ್ನು ಒತ್ತಾಯಪೂರ್ವಕವಾಗಿ ಹೀಗೆ ಹೇಳಲಾಗಿತ್ತು. "ಚೆನ್ನಾಗಿ ಆಯ್ಕೆಗೊಂಡ, ಸುಭದ್ರವಾದ ಅಧಿಕಾರಾವಧಿ ಹೊಂದಿದ, ಸ್ವತಂತ್ರ್ಯದ ಲಕ್ಷಣವನ್ನು ಹೊಂದಿದ ವಿಶ್ವವಿದ್ಯಾನಿಲಯದ ಶಿಕ್ಷಕ ಸಮೂಹ ಭಾರತದಲ್ಲಿ ಸಾರ್ವಜನಿಕ ಚಿಂತನೆಯನ್ನು ರೂಪಿಸುವಲ್ಲಿ ಒಂದು ಅಂಶವಾಗುತ್ತದೆ. ಇದರ ಮೌಲ್ಯದ ಬಗ್ಗೆ ಹೆಚ್ಚಾಗಿ ಹೇಳಬೇಕಾದ ಅವಶ್ಯಕತೆಯಿಲ್ಲ." (ಆಶ್‌ಬಿಯಿಂದ ಉಲ್ಲೇಖಿತ).

**ಶಿಕ್ಷಣದಲ್ಲಿ ಸ್ವಾಯತ್ತತೆಯ ಬಗ್ಗೆ ಸಂಶೋಧನೆ:**

ಸುಧಾರಾವ್ 1991ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸ್ವಾಯತ್ತ ಕಾಲೇಜುಗಳ ಬಗ್ಗೆ ಪ್ರಥಮ ಬಾರಿಗೆ ಕೈಗೊಂಡ ಸಂಶೋಧನೆ ಭಾರತದ ಸಂದರ್ಭದಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ವಾಯತ್ತತೆಯ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ವಿವರವಾಗಿ ತಿಳಿಸುತ್ತದೆ. ಋಣಾತ್ಮಕ ಪರಿಣಾಮಗಳು ಏನೇ ಇರಲಿ, ಧನಾತ್ಮಕ ಪರಿಣಾಮಗಳು ಋಣಾತ್ಮಕ ಪರಿಣಾಮಗಳಿಗಿಂತ ಅಧಿಕವಾಗಿರುವ ತಥ್ಯಾಂಶದಿಂದ, ಸರಿಯಾದ ರೀತಿಯಲ್ಲಿ ಸ್ವಾಯತ್ತತೆಯನ್ನು ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಲಿಕಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚಿನ ಉತ್ತರದಾಯಿತ್ವ ಮತ್ತು ಪಾರದರ್ಶಿಕತೆಯಿಂದ ಅನುಷ್ಠಾನಗೊಳಿಸಿದರೆ ಸ್ವಾಯತ್ತತೆಯ ಉತ್ತಮಗುಣ ಸಮರ್ಥಿತವಾಗುತ್ತದೆ. ಅದು ಗುಣಾತ್ಮಕತೆಯನ್ನು ಮತ್ತು ಸಮಂಜಸತೆಯನ್ನು ಖಚಿತಗೊಳಿಸುತ್ತದೆ ಎಂಬುದು ಸಿದ್ಧವಾಗಿದೆ. ಇನ್ನೂ ಸಿದ್ಧವಾಗಬೇಕಾದ ಅಂಶವೆಂದರೆ ಉತ್ತರದಾಯಿತ್ವ ಮತ್ತು ಇದು ಈ ವ್ಯವಸ್ಥೆಯಲ್ಲಿದೆಯೆ? ಸಂಸ್ಥೆಯಲ್ಲಿದೆಯೆ? ವಿದ್ಯಾರ್ಥಿಗಳಲ್ಲಿದೆಯೆ? ಅಥವಾ ಇನ್ನೆಲ್ಲಾದರೂ ಇದೆಯೆ? ಮುಂದುವರಿದು 'ಯಾರು' 'ಯಾವುದಕ್ಕೆ' ಜವಾಬ್ದಾರರಾಗಬೇಕು? ಇದು 'ಕೆಳಗಿನಿಂದ ಮೇಲಕ್ಕೆ' ಇರಬೇಕೆ? ಅಥವಾ 'ಮೇಲಿನಿಂದ ಕೆಳಕ್ಕೆ ಇರಬೇಕೆ? ಅಥವಾ ಎಲ್ಲಾ ಪಾಲುದಾರರಲ್ಲೂ ಇರಬೇಕೆ? ಎಂಬ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸುವುದು.

ಈ ಅಧ್ಯಯನದ ಕೆಲವು ಮುಖ್ಯ ತೀರ್ಮಾನಗಳು ಹೀಗಿವೆ– ಅಧ್ಯಾಪಕರ ಸ್ಥಾನಮಾನದಲ್ಲಿ ವೃದ್ಧಿ, ಕಾರ್ಯ–ದಿನಗಳ ಸಂಖ್ಯೆಯಲ್ಲಿ ಹೆಚ್ಚಳ, ಕಾರ್ಯ–ಘಂಟೆಗಳ ಹೆಚ್ಚಳ, ಅಧ್ಯಾಪಕರು ಪೂರ್ಣತಃ ಸಿದ್ಧರಾಗಿ ತರಗತಿಗೆ ಬರುವುದು, ನವೀನ ಆಚರಣೆಗಳನ್ನು ಆರಂಭಿಸುವುದು, ಎಲ್ಲಾ ಸ್ವಾಯತ್ತ ಸಂಸ್ಥೆಗಳಲ್ಲಿ ಕೋರ್ಸುಗಳನ್ನು ಮತ್ತು ಪಠ್ಯಕ್ರಮವನ್ನು ಸೂಕ್ತ ಉನ್ನತೀಕರಣದೊಂದಿಗೆ ಪುನರ್ ರಚಿಸಿರುವುದು, ಹಲವಾರು ಹೊಸ ಕೋರ್ಸ್‌ಗಳನ್ನು ಆರಂಭಿಸಿರುವುದು, ಸೆಮಿಸ್ಟರ್ ವ್ಯವಸ್ಥೆ, ಆಂತರಿಕ ಮೌಲ್ಯಮಾಪನ, ಉತ್ತಮ ಪ್ರಶ್ನೆಪತ್ರಿಕೆಗಳು ಮುಂತಾದ ಪರೀಕ್ಷಾ ಸುಧಾರಣೆಗಳನ್ನು ಮಾಡಿರುವುದು, ಉತ್ತಮ ರೀತಿಯ ಪ್ರವೇಶ ನೀತಿ, ಮೂಲಸೌಕರ್ಯಗಳು ಮತ್ತು ಕಟ್ಟಡಗಳ ಗರಿಷ್ಠ ಮಟ್ಟದ ಬಳಕೆ, ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಂದ ಗ್ರಂಥಾಲಯದ ಉತ್ತಮ ಮಟ್ಟದಲ್ಲಿ ಬಳಕೆ.

ಇವುಗಳಲ್ಲದೆ, ಈ ಅಧ್ಯಯನ ಕೆಲವು ಇತರ ಪರಿಣಾಮಗಳನ್ನು ತೋರಿಸಿದೆ. ಅವು ಹೀಗಿವೆ– ಸಿಬ್ಬಂದಿಯ ಆಡಳಿತಾತ್ಮಕ ಕಾರ್ಯ ಹೆಚ್ಚಾಗಿರುವುದು, ಸಂಸ್ಥೆಯ ಮಟ್ಟದಲ್ಲಿ ಸೂಕ್ತ ತಜ್ಞತೆ ಪಡೆದವರು ಇಲ್ಲದಿರುವುದರಿಂದ ಕೆಲವು ವೇಳೆ ಕೋರ್ಸ್‌ಗಳ ಪುನರ್–ಸಂರಚನೆ ನಿರೀಕ್ಷಿತ ಮಟ್ಟಕ್ಕೆ ಬರದಿರುವುದು, ಮತ್ತು ಕಾಲ ಕಳೆದಂತೆ ಕೆಲವು ಕಾಲೇಜುಗಳು ಹೇಳಿದಂತೆ ತಾವು ಪ್ರತ್ಯೇಕಿಸಲ್ಪಡುತ್ತೇವೆ ಎನ್ನುವ ಒಂದು ರೀತಿಯ ಭಯ ಇರುವುದು. ಇದರ ಜೊತೆಗೆ

Digitised by Bharatavani, CIIL

ಪಠ್ಯಕ್ರಮವನ್ನು ಒಮ್ಮೆ ಪುನರ್-ಸಂರಚನೆ ಮಾಡಿದ ನಂತರ ದೀರ್ಘಕಾಲದವರೆಗೆ ಪುನಃ ಪುನರ್-ಸಂರಚನೆ ಮಾಡದೆ ಇರುವ ಪ್ರವೃತ್ತಿಯಿರುವುದರಿಂದ ಪಠ್ಯಕ್ರಮ ಹಳತಾಗುವ ಸಾಧ್ಯತೆ. ಇವು ಅವಲೋಕಕರು ಸ್ವಾಯತ್ತ ಕಾಲೇಜುಗಳಲ್ಲಿ ವೀಕ್ಷಿಸಿದ ವಾಸ್ತವಿಕ ಅಂಶಗಳಾಗಿದ್ದವು. ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡುವುದು ಕೇವಲ ವಿಕೇಂದ್ರಿಕರಣಗೊಳಿಸುವುದು ಮತ್ತು ಸಂಸ್ಥೆಗಳಲ್ಲಿ 'ಬೋಧನೆ ಮತ್ತು ಕಲಿಕೆಯನ್ನು ಸುಗಮಗೊಳಿಸುವ ಸಾಧನಕ್ಕಿಂತ ಹೆಚ್ಚಾಗಿ ಒಂದು ಅಧಿಕಾರದ ಆಟ'ವಾಗಿದೆ ಎಂದು ತೋರುತ್ತದೆ. 'ಅಧಿಕಾರದ ಆಟ' ಯಾವ 'ಅಂಶ'ಗಳ ಬಗ್ಗೆ ಯಾರು ತೀರ್ಮಾನ ಕೈಗೊಳ್ಳುತ್ತಾರೆ ಎನ್ನುವುದರ ಬಗ್ಗೆಯೆ?

**ಸ್ವಾಯತ್ತತೆಯ ಬಗ್ಗೆ ತಜ್ಞರ ದೃಷ್ಟಿಕೋನಗಳು– ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ(1948) ಹೀಗೆ ಹೇಳಿದೆ:** "ಶೈಕ್ಷಣಿಕ ವ್ಯವಸ್ಥೆ ಒಂದು ಸಲ ನಿರ್ಮಾಣವಾಗುತ್ತದೆ ಮತ್ತು ಎಲ್ಲಾ ಕಾಲಗಳಿಗೂ ಅಲ್ಲ. ಮಾನವರನ್ನು ಶಿಕ್ಷಿತರನ್ನಾಗಿ ಮಾಡುವ ಬದಲಾವಣೆಗೊಳ್ಳದ ಕ್ರಮಗಳಿಲ್ಲ. ವೈದಿಕ ಕಾಲದಲ್ಲಿ ಅಥವಾ ವಿದ್ಯೆ ಪುನರುಜ್ಜೀವನದ (ರೆನೆಸಾನ್ಸ್)ಕಾಲದಲ್ಲಿ ಬಹುಮುಖ್ಯವಾಗಿದ್ದ ಪಠ್ಯಕ್ರಮ ಬದಲಾಗದೆ 20ನೇ ಶತಮಾನದವರೆಗೂ ಮುಂದುವರಿಯಲು ಸಾಧ್ಯವಿಲ್ಲ. ಸ್ವತಂತ್ರ ಸಮಾಜದಲ್ಲಿ ಸ್ವತಂತ್ರ ಮನುಷ್ಯನ ಕಾಣ್ಕೆಯನ್ನು ಸಾಕಾರಗೊಳಿಸುವುದು ಪ್ರಜಾಸತಾತ್ಮಕ ಸಂಸ್ಥೆಯ ಜೀವಂತ ವಿಶ್ವಾಸ ಮತ್ತು ಸ್ಫೂರ್ತಿಗೊಳಿಸುವ ಮಾರ್ಗದರ್ಶಿಯಾಗಿದೆ. ಬದಲಾದ ಪರಿಸ್ಥಿತಿಗಳಿಗೆ ವಿವೇಚನೆಯಿಂದ ಮತ್ತು ಚೆನ್ನಾದ ರೀತಿಯಲ್ಲಿ ಹೊಂದಿಕೊಂಡು ಈ ಗುರಿಯತ್ತ ನಾವು ಸಾಗಬೇಕಾಗಿದೆ."

ಪ್ರೊ॥ ಮಹಾಜನಿಯವರ ಅಧ್ಯಕ್ಷತೆಯಲ್ಲಿ 1964ರಲ್ಲಿ ನೇಮಕಗೊಂಡಿದ್ದ ಕಾಲೇಜು ಸಮಿತಿ ಕಾಲೇಜುಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಹೀಗೆ ಹೇಳಿದೆ–"ಭಾರತದಲ್ಲಿ ಉನ್ನತ ಶಿಕ್ಷಣವನ್ನು ಅಭಿವೃದ್ಧಿಗೊಳಿಸುವ ಒಂದು ವ್ಯಾವಹಾರಿಕ ವಿಧಾನವೆಂದರೆ ಕೆಲವು ಕಾಲೇಜಗಳನ್ನು ಅವುಗಳು ಹಿಂದೆ ಮಾಡಿರುವ ಕಾರ್ಯ, ಪ್ರಭಾವ ಬೀರಿರುವ ಸಂಪ್ರದಾಯ, ಪ್ರಬುದ್ಧತೆ ಮತ್ತು ಶೈಕ್ಷಣಿಕ ಗುಣಮಟ್ಟದ ಆಧಾರದ ಮೇಲೆ ಆಯ್ಕೆ ಮಾಡಿಕೊಂಡು ಅವುಗಳಿಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು, ಹೊಸ ವಿಚಾರಗಳೊಂದಿಗೆ ಪ್ರಯೋಗ ಮಾಡಲು, ವಿಶ್ವವಿದ್ಯಾನಿಲಯದೊಂದಿಗೆ ಸಮಾಲೋಚಿಸಿ ತಮ್ಮದೇ ಆದ ಪಠ್ಯಕ್ರಮವನ್ನು ವಿನ್ಯಾಸಗೊಳಿಸಲು ಮತ್ತು ಅದನ್ನು ನಡೆಸಲು ಸ್ವಾತಂತ್ರ್ಯ ನೀಡುವ ಸ್ವಾಯತ್ತತೆಯನ್ನು ಕೊಡುವುದಾಗಿದೆ."

ವಿಶ್ವವಿದ್ಯಾನಿಲಯ ಶಿಕ್ಷಣದ ಗುಣಮಟ್ಟದ ಸಮಿತಿ ಪ್ರೊ॥ ಎಸ್.ಕೆ ಸಿದ್ಧಾಂತರವರ ಅಧ್ಯಕ್ಷತೆಯಲ್ಲಿ 1965ರಷ್ಟು ಹಿಂದಿಯೇ ಅಂಗಭೂತ ವ್ಯವಸ್ಥೆಯ ಜೊತೆ ಜೊತೆಗೆ ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡುವ ಬಗ್ಗೆ ಚರ್ಚಿಸಿತ್ತು. ಸಮಿತಿ ಹೀಗೆ ಹೇಳಿದೆ–"ಅಂಗಭೂತ ವ್ಯವಸ್ಥೆಯಲ್ಲಿ ದುರ್ಬಲ ಕಾಲೇಜು ಅಧ್ಯಯನ ಕೋರ್ಸ್‌ಗಳ, ಬೋಧನೆಯ ಅಗತ್ಯಗಳು, ಪರೀಕ್ಷೆ ಮುಂತಾದವುಗಳನ್ನು ನಿರ್ಧರಿಸುವ ನೀತಿಯನ್ನು ನಿರ್ಧರಿಸುವ ಸಾಧ್ಯತೆಯಿದೆ. ಹೆಚ್ಚಿನ ಗುಣಮಟ್ಟಕ್ಕೆ ಏರುವ ಸಾಮರ್ಥ್ಯವನ್ನು ಹೊಂದಿರುವ ಒಳ್ಳೆಯ ಕಾಲೇಜುಗಳಿಗೆ ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಬೇರೆಯವುಗಳಿಗಿಂತ ಉತ್ತಮವಾಗಿರುವ ಕೆಲಸಮಾಡುವ ಕಾಲೇಜುಗಳಿಗೆ ತಮ್ಮ ಯೋಜನೆಯಂತೆ ಮುಂದುವರಿಯಲು, ಆಧುನಿಕೀಕರಣಗೊಳಿಸಲು ಮತ್ತು ತಮ್ಮ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಅನುಮತಿ ನೀಡದಿದ್ದಲ್ಲಿ ಅವುಗಳಿಗೆ ತಮ್ಮ ಮೇಲ್ಮಟ್ಟದ ಸಾಧನೆಯನ್ನು ನಿರಂತರವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ."

ಕೊಠಾರಿ ಶಿಕ್ಷಣ ಆಯೋಗ 1966ರ ಹಿಂದೆಯೇ ಉನ್ನತ ಶಿಕ್ಷಣದಲ್ಲಿ ನವೀನ ಆಚರಣೆಗಳನ್ನು ಆರಂಭಿಸುವ ಮತ್ತು ಅವುಗಳ ಜವಾಬ್ದಾರಿಯನ್ನು ಖಚಿತಗೊಳಿಸಿಕೊಳ್ಳಬೇಕಾದುದರ ಮಹತ್ವದ ಬಗ್ಗೆ ಒತ್ತು ನೀಡಿತ್ತು. ಅದು ಸೆಕೆಂಡರಿ ಶಾಲೆಗಳಿಗೆ ಸ್ವಾಯತ್ತತೆಯನ್ನು ನೀಡುವ ಬಗ್ಗೆ ದಾಖಲಿಸಿದೆ. ಭಾರತ ಸರ್ಕಾರದ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವಾಲಯವು ಪರೀಕ್ಷಾ ಸುಧಾರಣೆಗಳ ಬಗ್ಗೆ ಕಾರ್ಯ ಸಮೂಹ ಒಂದನ್ನು ನೇಮಿಸಿತು. ಇದು ಪರೀಕ್ಷಾ ವ್ಯವಸ್ಥೆಯನ್ನು ಸುಧಾರಣೆ ಮಾಡಲು ವಿವಿಧ ಕ್ರಮಗಳನ್ನು ಶಿಫಾರಸು ಮಾಡುವುದರ ಜೊತೆಗೆ ವಿದ್ಯಾರ್ಥಿಗಳನ್ನು ಬಿಗಿಯಾದ, ದಟ್ಟವಾದ, ಪಠ್ಯವಸ್ತುಗಳಿಂದ, ಪಠ್ಯಪುಸ್ತಕಗಳಿಂದ ಮತ್ತು ಬಾಹ್ಯ ಪರೀಕ್ಷೆಗಳಿಂದ ಮುಕ್ತಗೊಳಿಸಲು ಕೆಲವು ಆಯ್ದ ಶಾಲೆಗಳಿಗೆ ನೀಡುವ ಸಾಧ್ಯತೆ ಬಗ್ಗೆ ಸೆಕೆಂಡರಿ ಶಿಕ್ಷಣ ಮಂಡಳಿಗಳು ಪರೀಕ್ಷಿಸಬೇಕೆಂದೂ ಶಿಫಾರಸು ಮಾಡಿತು. ನಂತರದಲ್ಲಿ ಮೊದಲಿಯಾರ್ ಆಯೋಗವೂ ಸೇರಿದಂತೆ ಅನೇಕ ಸಮಿತಿಗಳು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಶಾಲಾ ಶಿಕ್ಷಣದ ಗುಣಮಟ್ಟದ ಹೆಚ್ಚಳವನ್ನು ಸುಗಮಗೊಳಿಸಲು ವಿಕೇಂದ್ರಿಕರಣಗೊಳಿಸುವುದಕ್ಕೆ ಮತ್ತು ಸ್ವಾಯತ್ತತೆ ನೀಡುವುದಕ್ಕೆ ಒತ್ತು ನೀಡಿದ್ದವು. ಉನ್ನತ ಶಿಕ್ಷಣದಲ್ಲಿ ನವೀನ ಆಚರಣೆಗಳನ್ನು ಆರಂಭಿಸುವುದಕ್ಕೆ ಒಂದು ಕ್ರಮವಾಗಿ ಸ್ವಾಯತ್ತ ಕಾಲೇಜುಗಳನ್ನು ಆರಂಭಿಸುವ ಅಗತ್ಯದ ಬಗ್ಗೆ ಆಯೋಗ ಒತ್ತು ನೀಡಿತ್ತು. ಅದು ಹೀಗೆ ಹೇಳಿತ್ತು. ದೀರ್ಘಕಾಲದಿಂದ ಒಂದು ವಿಶ್ವವಿದ್ಯಾನಿಲಯದಷ್ಟೇ ಒಳ್ಳೆಯ ಕೆಲಸವನ್ನು ಮಾಡುತ್ತಿರುವ ಅನೇಕ ಕಾಲೇಜುಗಳಿವೆ ಮತ್ತು ಇಂಥ ಕಾಲೇಜುಗಳನ್ನು ಪ್ರೋತ್ಸಾಹಿಸುವುದು ಶಿಕ್ಷಣ ನೀತಿಯ ಉದ್ದೇಶವಾಗಬೇಕು. ಒಂದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ತನ್ನನ್ನು ತಾನು ಗಣನೀಯವಾಗಿ ಉತ್ತಮಪಡಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ಕಾಲೇಜಾಗಲಿ ಅಥವಾ ಕೆಲವು ಕಾಲೇಜುಗಳ ಸಮೂಹವಾಗಲಿ ಇದ್ದಲ್ಲಿ ಅದನ್ನು ಸ್ವಾಯತ್ತತೆ ನೀಡಲು ಪರಿಗಣಿಸಬಹುದು. ಈ ಸ್ವಾಯತ್ತತೆ ತನ್ನದೇ ಆದ ಪ್ರವೇಶ ನಿಯಮಗಳನ್ನು ರೂಪಿಸಿಕೊಳ್ಳುವುದು, ತನ್ನದೇ ಅಧ್ಯಯನ ಕೋರ್ಸ್‌ಗಳನ್ನು ನಿಗದಿಪಡಿಸಿಕೊಳ್ಳುವುದನ್ನು, ಪರೀಕ್ಷೆ ನಡೆಸುವುದನ್ನು ಒಳಗೊಳ್ಳುತ್ತದೆ. ಸಾಮಾನ್ಯ ಮೇಲ್ವಿಚಾರಣೆ ಮತ್ತು ವಾಸ್ತವಿಕವಾಗಿ ಪದವಿ ಪ್ರಧಾನ ಮಾಡುವುದಕ್ಕೆ ಮಾತ್ರ ಪಿತೃ ವಿಶ್ವವಿದ್ಯಾನಿಲಯದ ಪಾತ್ರ ಸೀಮಿತವಾಗುತ್ತದೆ. ಅಂಥ ಕಾಲೇಜುಗಳಿಗೆ ಮಾನ್ಯತೆ ನೀಡಲು ವಿಶ್ವವಿದ್ಯಾನಿಲಯದ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಬೇಕು.

Digitised by Bharatavani, CIIL

ವಿಶ್ವವಿದ್ಯಾನಿಲಯ ಅನುದಾನ ಆಯೋಗ 1978ರಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣದ ವಿಕಾಸದ ಬಗ್ಗೆ ನೀಡಿದ ತನ್ನ ಹೇಳಿಕೆಯಲ್ಲಿ ವಿಶ್ವವಿದ್ಯಾನಿಲಯಗಳ ಅಧಿಕಾರಶಾಹಿ ಮತ್ತು ಕೇಂದ್ರಿಕೃತ ಸಂರಚನೆಯ ಸಂದರ್ಭದಲ್ಲಿ ಸ್ವಾಯತ್ತ ಕಾಲೇಜುಗಳ ಪರಿಕಲ್ಪನೆಗೆ ಬಹಳ ಮಹತ್ವವಿದೆ ಎಂದು ಹೇಳಿತು. ಕಾಲೇಜಿಗೆ ನೀಡುವ ಸ್ವಾಯತ್ತತೆ ಆ ಕಾಲೇಜು ಮತ್ತು ಅದರ ಅಧ್ಯಾಪಕರು ತಾವು ಒದಗಿಸುವ ಶೈಕ್ಷಣಿಕ ಕಾರ್ಯಕ್ರಮಗಳಿಗೆ, ತಮ್ಮ ಬೋಧನೆಯ ವಿಷಯವಸ್ತು ಮತ್ತು ಗುಣಮಟ್ಟಕ್ಕೆ ಮತ್ತು ಪ್ರವೇಶಕ್ಕೆ ಮತ್ತು ತಮ್ಮ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಸಂಪೂರ್ಣ ಹೊಣೆಗಾರಿಕೆಯನ್ನು ಮತ್ತು ಉತ್ತರದಾಯಿತ್ವವನ್ನು ವಹಿಸಿಕೊಳ್ಳುತ್ತಾರೆ ಎಂಬ ಅರ್ಥವನ್ನು ಧ್ವನಿಸುತ್ತದೆ. ಈ ಮೂಲಭೂತ ಷರತ್ತು ತೃಪ್ತಿಯಾಗದಿದ್ದಲ್ಲಿ ಸಮಂಜಸತೆಯ ಸಮಸ್ಯೆಯನ್ನು ತೃಪ್ತಿಕರವಾಗಿ ಪರಿಹರಿಸಲು ಅಥವಾ ಸ್ಥಳೀಯ ಅಗತ್ಯಗಳಿಗೆ ಮತ್ತು ಪರಿಸ್ಥಿತಿಗಳಿಗೆ ಪಠ್ಯಕ್ರಮವನ್ನು ಹೊಂದಿಕೊಳ್ಳಲು ಸಾಧ್ಯವಾಗುವುದಿಲ್ಲ ಮತ್ತು ಇದಕ್ಕಿಂತಲೂ ಮುಖ್ಯವಾದುದೆಂದರೆ ವಿದ್ಯಾರ್ಥಿಗಳಿಗೆ ಅವರ ಅಗತ್ಯಗಳು ಮತ್ತು ಅಭಿಸಾಮರ್ಥ್ಯಗಳ ಆಧಾರದ ಮೇಲೆ ಹೆಚ್ಚಿನ ವೈಯಕ್ತಿಕ ಗಮನ ನೀಡಲು ಸಾಧ್ಯವಾಗುವುದಿಲ್ಲ. ಇದು ಮಾತ್ರ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಪಾರಸ್ಪರಿಕ ಒಪ್ಪಿಗೆಯಿಂದ ಮತ್ತು ಪಾರಸ್ಪರಿಕವಾಗಿ ತೃಪ್ತಿ ನೀಡುವ ರೀತಿಯಲ್ಲಿ ಸತ್ಯ ಮತ್ತು ಉತ್ಕೃಷ್ಟತೆಯ ಆರ್ಜನೆಯ ಗುರಿಯನ್ನು ಸಾಧಿಸುವ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸಮುದಾಯವನ್ನಾಗಿ ಮಾಡುತ್ತದೆ ಮತ್ತು ಈ ಸಂಸ್ಥೆಗಳು ರಾಷ್ಟ್ರೀಯ ಸಮಗ್ರತೆಯ ಮತ್ತು ಅಭಿವೃದ್ಧಿಯ ಅಗತ್ಯಗಳಿಗೆ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ. ಸ್ವಾಯತ್ತ ಕಾಲೇಜಿನ ಪರಿಕಲ್ಪನೆಯ ಅರ್ಥ ಒಂದು ಸಂಸ್ಥೆಯನ್ನು ಉನ್ನತ ಔಪಚಾರಿಕ ಸ್ಥಾನಮಾನದ ಪ್ರತ್ಯೇಕ ತಲೆಪಟ್ಟಿಯೊಡನೆ ನಿರಂತರವಾಗಿ ವರ್ಗೀಕರಿಸುವದೆಂದಲ್ಲ. ಸಂಸ್ಥೆ ಸ್ವಾಯತ್ತ ಕಾಲೇಜಾಗಿ ತನ್ನ ಮಾನ್ಯತೆಯನ್ನು ಸಮರ್ಥಿಸಿಕೊಳ್ಳಲು ಆವಧಿಕ ಪುನರಾವಲೋಕನದ ಮೂಲಕ ನಿರಂತರವಾಗಿ ಪರೀಕ್ಷೆಗೆ ಒಳಪಡಬೇಕಾದ ಅಗತ್ಯವಿದೆ ಮತ್ತು ಉನ್ನತಮಟ್ಟದ ಶೈಕ್ಷಣಿಕ ಉತ್ಕೃಷ್ಟತೆಯ ಹಾಗೂ ಸಮಾಜಕ್ಕೆ ತನ್ನ ಕೊಡುಗೆಯ ನಿರೀಕ್ಷಿತ ಮಟ್ಟವನ್ನು ಉಳಿಸಿಕೊಳ್ಳದಿದ್ದಲ್ಲಿ ತನ್ನ ಮಾನ್ಯತೆಯನ್ನು ಕಳೆದುಕೊಳ್ಳುವ ಸಾಧ್ಯತೆಯಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ರೀತಿಯ ಸವಲತ್ತನ್ನು ಸಂಸ್ಥೆ ನಿರಂತರವಾಗಿ ಉಳಿಸಿಕೊಳ್ಳಬೇಕು ಮತ್ತು ತನ್ನ ಕಾರ್ಯಕ್ಷಮತೆಯ ಮೂಲಕ ಉಳಿಸಿಕೊಳ್ಳಬೇಕು.

ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಬಗ್ಗೆ ನೇಮಕವಾಗಿದ್ದ ಗಜೇಂದ್ರ ಗಡಕರ್ ಸಮಿತಿ(1971) ಸ್ವಾಯತ್ತ ಕಾಲೇಜುಗಳನ್ನು ಸ್ಥಾಪಿಸಬೇಕಾದ ಅಗತ್ಯದ ಮಹತ್ವದ ಮೇಲೆ ಬೆಳಕು ಚೆಲ್ಲಿತು. ಇವುಗಳ ಸ್ಥಾಪನೆಯನ್ನು ಸುಗಮಗೊಳಿಸಲು ಇನ್ನು ಮುಂದೆ ಜಾರಿಗೊಳ್ಳುವ ವಿಶ್ವವಿದ್ಯಾನಿಲಯಗಳ ಮತ್ತು ರಾಜ್ಯ ಕಾಯ್ದೆಗಳಲ್ಲಿ ಕಾಲೇಜುಗಳಿಗೆ ಸ್ವಾಯತ್ತತೆ ನೀಡಲು ಅವಕಾಶ ಕಲ್ಪಿಸಬೇಕಲ್ಲದೆ ವಿಶೇಷವಾಗಿ ಮುಂದುವರಿದ ಅಧ್ಯಯನ ಕೇಂದ್ರಗಳಲ್ಲಿನ ಕೆಲವು ಬೋಧನಾ ವಿಭಾಗಗಳಿಗೆ ಮತ್ತು ಬೋಧನಾ ವಿಭಾಗಗಳ ಕೆಲವು ಘಟಕಗಳಿಗೂ ಸ್ವಾಯತ್ತತೆ ನೀಡಲು ಅವಕಾಶ ಕಲ್ಪಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತು.

ನವೀನ ಆಚರಣೆಗಳನ್ನು ಆರಂಭಿಸಲು, ಬೋಧನೆ–ಕಲಿಕಾ ವಿಧಾನಗಳನ್ನು ವಿನ್ಯಾಸಗೊಳಿಸಲು ತಮ್ಮದೇ ಆದ ಪ್ರವೇಶ ನಿಯಮಗಳನ್ನು ರೂಪಿಸಿಕೊಳ್ಳಲು, ತಮ್ಮದೇ ಆದ ಅಧ್ಯಯನ ಕೋರ್ಸ್‌ಗಳನ್ನು ನಿಗದಿಪಡಿಸಲು ಮತ್ತು ಪರೀಕ್ಷೆಗಳನ್ನು ತಾವೇ ನಡೆಸಲು ಕಾಲೇಜುಗಳಿಗೆ ಸ್ವಾಯತ್ತತೆಯನ್ನು ಒದಗಿಸಬೇಕಾದ ಅಗತ್ಯವನ್ನು 1986ರ ಹೊಸ ಶಿಕ್ಷಣ ನೀತಿ ಗುರ್ತಿಸಿದೆ ಮತ್ತು ಅದನ್ನು ಸಮರ್ಥಿಸಿದೆ. ಇದಕ್ಕೆ ಸಂಬಂಧಿಸಿದ ಶಿಫಾರಸು ಹೀಗಿದೆ. ಕಾಲೇಜುಗಳನ್ನು ಅಂಗಭೂತಗೊಳಿಸುವ ವ್ಯವಸ್ಥೆಯ ಮಿಶ್ರಿತ ಅನುಭವಗಳ ದೃಷ್ಟಿಯಲ್ಲಿ ಅಂಗಭೂತಗೊಳಿಸುವ ವ್ಯವಸ್ಥೆಯನ್ನು ಬದಲಿಸಿ ಅದರ ಸ್ಥಾನದಲ್ಲಿ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ನಡುವೆ ಹೆಚ್ಚು ಸೃಜನಾತ್ಮಕ ಸಾಹಚರ್ಯವಿರುವ ವ್ಯವಸ್ಥೆ ಬರುವವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸ್ವಾಯತ್ತವಾಗಲು ಸಹಾಯ ಮಾಡಲಾಗುವುದು. ಇದೇ ರೀತಿ ವಿಶ್ವವಿದ್ಯಾನಿಲಯಗಳಲ್ಲಿರುವ ವಿಭಾಗಗಳನ್ನು ಆಯ್ಕೆ ಆಧಾರದ ಮೇಲೆ ಸ್ವಾಯತ್ತಗೊಳಿಸುವುದನ್ನು ಪ್ರೋತ್ಸಾಹಿಸಲಾಗುವುದು. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದೊಂದಿಗೆ ಉತ್ತರದಾಯಿತ್ವವೂ ಬರುತ್ತದೆ. ಹೊಸ ಶಿಕ್ಷಣ ನೀತಿಯ(1986) ಕಾರ್ಯಕ್ರಮ ಯೋಜನೆ ಸ್ವಾಯತ್ತ ಕಾಲೇಜುಗಳ ವಿಕಾಸದ ಕ್ರಮವನ್ನು ವಿವರವಾಗಿ ಸೂಚಿಸಿದೆ.

ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಸ್ವಾಯತ್ತ ಕಾಲೇಜುಗಳ ಕಾರ್ಯಕ್ರಮದ ಬಗ್ಗೆ ಪ್ರಕಟಿಸಿರುವ 1987ರ ಪರಿಷ್ಕೃತ ಮಾರ್ಗದರ್ಶನ ಸೂಚಿ ಸ್ವಾಯತ್ತ ಕಾಲೇಜುಗಳಿಗೆ ತಮ್ಮದೇ ಆದ ಅಧ್ಯಯನದ ಕೋರ್ಸುಗಳನ್ನು, ಪಠ್ಯವಸ್ತುವನ್ನು ನಿರ್ಧರಿಸುವ, ಸರ್ಕಾರದ ಕಾಯ್ದಿರಿಸುವಿಕೆಯ ನಿಯಮಗಳಿಗೆ ಒಳಪಟ್ಟಂತೆ ಪ್ರವೇಶ ನಿಯಮಗಳನ್ನು ನಿಗದಿಪಡಿಸುವ ಮತ್ತು ಬೋಧನಾ ವಿಧಾನಗಳನ್ನು ವಿಕಾಸಗೊಳಿಸಿಕೊಳ್ಳುವ, ಮೌಲ್ಯಮಾಪನ ಮಾಡುವ ಮತ್ತು ಪರೀಕ್ಷೆಗಳನ್ನು ನಡೆಸುವ ಸ್ವಾತಂತ್ರ್ಯ ಹೊಂದಿರುತ್ತವೆ ಎಂದು ಸೂಚಿಸಿದೆ(ವಿವರಗಳಿಗೆ ಯು.ಜಿ.ಸಿ ಮಾರ್ಗದರ್ಶಿ ಸೂಚಿ ನೋಡಿ)

ಸ್ವಾಯತ್ತ ಕಾಲೇಜುಗಳ ಕಾರ್ಯಕ್ರಮದಡಿಯಲ್ಲಿ ವಿಶ್ವವಿದ್ಯಾನಿಲಯಗಳು ಇದುವರೆಗೆ ಕೈಗೊಳ್ಳುತ್ತಿದ್ದ ಮುಖ್ಯ ಕಾರ್ಯಗಳನ್ನು ಕಾಲೇಜುಗಳಿಗೆ ವರ್ಗಾಯಿಸಲಾಗುತ್ತದೆ. ಈ ರೀತಿಯಲ್ಲಿ ಸ್ವಾಯತ್ತ ಕಾಲೇಜುಗಳಲ್ಲಿ ಸಹಭಾಗಿತ್ವದ ನಿರ್ಣಯ ಕೈಗೊಳ್ಳುವಿಕೆ ಖಚಿತಗೊಳ್ಳುತ್ತದೆ ಮತ್ತು ಅಧ್ಯಾಪಕರ ಬೆಂಬಲವನ್ನು ಮತ್ತು ಕಾರ್ಯಕ್ಷಮತೆಯ ಸಾಧನೆಯನ್ನು ಖಚಿತಗೊಳಿಸುತ್ತದೆ.

1992ರ ಸಂವಿಧಾನ ತಿದ್ದುಪಡಿ ಮತ್ತು CABE ಸಮಿತಿಯ ಶಿಫಾರಸುಗಳು ಅಧ್ಯಾಪಕರು, ಪೋಷಕರು ಮತ್ತು ಸ್ಥಳೀಯ ಸಮಿತಿಗಳಿಗೆ ಶೈಕ್ಷಣಿಕ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸ್ವೀಕರಿಸುವ ಕೊನೆಯಲ್ಲಿದ್ದುಕೊಂಡು ಕೇವಲ ಸೀಮಾಂತ ರೂಪದ ಪಾತ್ರ ವಹಿಸಬೇಕಾಗಿರುವ ಪ್ರಸ್ತುತದಲ್ಲಿರುವ ನಿರ್ವಹಣೆಯ(ವ್ಯವಸ್ಥಾಪನೆಯ) ಸಂರಚನೆಯನ್ನು ಸುಧಾರಿಸುವ

Digitised by Bharatavani, CIIL

ಉದ್ದೇಶವನ್ನು ಹೊಂದಿದ್ದವು. ಶೈಕ್ಷಣಿಕ ಸಂಸ್ಥೆಗಳಿಗೆ ಜೀವ ತುಂಬಲು ಐದನೇ ವೇತನ ಆಯೋಗ ವಿಕೇಂದ್ರೀಕರಣದ, ಸಹಭಾಗಿತ್ವದ, ಕಾರ್ಯಕ್ಷಮತೆ ಉದ್ದೇಶಿತವಾದ, ಸ್ವಾಯತ್ತತೆಯುಳ್ಳ ಮತ್ತು ಪಾರದರ್ಶಕವಾದ ವ್ಯವಸ್ಥೆ ಸಂಸ್ಥೆಯ ಕಾರ್ಯಕ್ಷಮತೆಗೆ ಮತ್ತು ಗುಣಮಟ್ಟಕ್ಕೆ ಅಗತ್ಯವಾದ ಷರತ್ತುಗಳಾಗಬೇಕೆಂದು ಅದು ಶಿಫಾರಸು ಮಾಡಿದೆ.

ಅನೇಕ ದೇಶಗಳಲ್ಲಿ 1960ಮತ್ತು1970ರ ದಶಕಗಳಲ್ಲಿ ಉನ್ನತ ಶಿಕ್ಷಣದ ವೆಚ್ಚ ಹೆಚ್ಚಾದುದು, ಇನ್ನು ಕೆಲವು ಸಂದರ್ಭಗಳಲ್ಲಿ ಧನಸಹಾಯಕ್ಕಾಗಿ ಸರ್ಕಾರವನ್ನು ಹೆಚ್ಚಾಗ ಅವಲಂಬಿಸಬೇಕಾಗಿ ಬಂದುದು ಶೈಕ್ಷಣಿಕ ಉದ್ದೇಶಕ್ಕಾಗಿ ಮಾಡಬೇಕಾದ ವೆಚ್ಚದ ಬಗ್ಗೆ ಸರ್ಕಾರಗಳು ಪುನರಾವಲೋಕಿಸುವಂತೆ ಮಾಡಿದವು. ಇದಕ್ಕೆ ಪ್ರತಿಯಾಗಿ ವೆಚ್ಚದ ಮೇಲಿನ ವಿಶ್ವವಿದ್ಯಾನಿಲಯದ ಬಾಹ್ಯ ನಿಯಂತ್ರಣ ಸ್ವಾಯತ್ತತೆಗೆ ಆತಂಕಕಾರಿಯಾಗುವುದಲ್ಲದೆ, ತತ್ ಪರಿಣಾಮವಾಗಿ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಆತಂಕಕಾರಿಯಾಗುವುದಿಲ್ಲವೇ ಎನ್ನುವ ಪ್ರಶ್ನೆ ಉದ್ಭವಿಸುವಂತಾಯಿತು. ಭಾರತದಲ್ಲಿ ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರದ, ಯು.ಜಿ.ಸಿ.ಯ ಪಾತ್ರ ಸಾಮಾಜಿಕ ಆದ್ಯತೆಗಳು ಮತ್ತು ರಾಷ್ಟ್ರೀಯ ಅಗತ್ಯಗಳಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯಗಳಿಗೆ ಸಂಪನ್ಮೂಲಗಳನ್ನು ಹಂಚುವ ಬಗ್ಗೆ ನಿರ್ಣಾಯಕ ನಿರ್ಧಾರವನ್ನು ಕೈಗೊಳ್ಳುವ ನಿಯೋಗವಾಗಿ ಬದಲಾಯಿತು. ಈ ಬದಲಾವಣೆಯ ಪರಿಣಾಮಗಳನ್ನು ಸಮಿತಿಯೇ ಈ ರೀತಿ ವಿವರಿಸಿದೆ. "ಇಲ್ಲಿ ದ್ವಂದ್ವ ಸ್ಪಷ್ಟವಾಗಿದೆ. ಒಂದು ಕಡೆ, ಪ್ರತಿಯೊಂದು ವಿಶ್ವವಿದ್ಯಾನಿಲಯವೂ ವಿಶ್ವವಿದ್ಯಾನಿಲಯಗಳ ಸಮಗ್ರ ಅವಕಾಶಗಳಿಗೆ ಮತ್ತು ರಾಷ್ಟ್ರೀಯ ಅಗತ್ಯಗಳಿಗೆ ಗೌರವ ನೀಡದೆ ತನ್ನ ದೃಷ್ಟಿಯಲ್ಲಿ ಸರಿಯಾದುದು ಎಂದುದನ್ನು ಮಾಡತೊಡಗಿದರೆ, ಶೈಕ್ಷಣಿಕ ಸ್ವಾತಂತ್ರ್ಯದ ಗೌರವಿಸಲ್ಪಟ್ಟ ಹೆಸರಿನಲ್ಲಿ ಅನಾಯಕತ್ವ ಮತ್ತು ಸ್ವೇಚ್ಛಾಚಾರದಲ್ಲಿ ಪರಿಣಮಿಸುವ ಸ್ಪಷ್ಟ ಅಪಾಯವಿದೆ. ಇನ್ನೊಂದೆಡೆ ತೀರಾ ಕೇಂದ್ರಿಕೃತವಾಗಿ ಯೋಜಿಸುವಿಕೆ ಬಗ್ಗೆ ನಿರ್ಬಂಧಿತ ಮನಸ್ಕತೆ ಮತ್ತು ಅತಿಯಾದ ಕಾಳಜಿ ಇದ್ದರೆ, ಅತಿಯಾದ ನಿಯಂತ್ರಣದಿಂದ ಶೈಕ್ಷಣಿಕ ಸಂಸ್ಥೆಗಳ ಮುಕ್ತ ಬೆಳವಣಿಗೆ ಕುಂಠಿತಗೊಳ್ಳುವ ಅದೇ ರೀತಿಯ ಸ್ಪಷ್ಟ ಅಪಾಯವೂ ಇದೆ. ಸಾಂಸ್ಥಿಕ ಸ್ವಾಯತ್ತತೆ ಸಡಿಲಗೊಂಡಿರುವುದು ಸ್ಪಷ್ಟವಾಗಿದೆ. ಆದರೆ 'ಮುಕ್ತ ಸೈದ್ಧಾಂತಿಕ ಅಭಿವ್ಯಕ್ತಿಗೆ ವ್ಯಕ್ತಿಗೆ ಇರುವ ಹಕ್ಕಿನ ಪ್ರಶ್ನೆ ಎಲ್ಲಾ ಕಂಡು ಬರುತ್ತಿಲ್ಲ' (ಹ್ಯಾಸ್ಲೆ ಮತ್ತು ಟ್ರೋವ್–1971).

ಆದರೆ ವಾಸ್ತವವಾಗಿ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಏನನ್ನು ಬೋಧಿಸಬೇಕು ಮತ್ತು ಯಾವ ವಿಶ್ವವಿದ್ಯಾನಿಲಯದಲ್ಲಿ ಒಂದು ನಿರ್ದಿಷ್ಟ ಕಲಿಕೆ ಶಾಖೆಯನ್ನು ಅಧ್ಯಯನ ಮಾಡಬೇಕು ಎನ್ನುವುದನ್ನು ಹೆಚ್ಚು ಹೆಚ್ಚು ನಿರ್ಧರಿಸತೊಡಗಿದಾಗ ಸಮಿತಿಯ ಅಂದರೆ ಯು.ಜಿ.ಸಿ.ಯ ಗರಿಷ್ಠ ಮಟ್ಟಕ್ಕೆ ಹೆಚ್ಚಾಯಿತು. ಲಾರ್ಡ್ ಗೌಥರ್–ಹಂಟ್ ಹೇಳುವಂತೆ ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಯಾವ ಮಟ್ಟಕ್ಕೆ ಸವೆದು ಹೋಯಿತೆಂದರೆ ಈಗ ವಿಶ್ವವಿದ್ಯಾನಿಲಯಗಳು – "ಯು.ಜಿ.ಸಿ.ಗೆ ಅಧೀನವಾಗಿರುವುದಲ್ಲದೇ ಅದನ್ನೇ ಅವಲಂಬಿಸಿವೆ ಮತ್ತು ಯು.ಜಿ.ಸಿ.ಯ ಸೂಕ್ಷ್ಮ ಉದ್ದೇಶಗಳು ಏನೇ ಇರಲಿ ಮುಂದಿನ ಐದು ವರ್ಷಗಳಲ್ಲಿ ವಿಶ್ವವಿದ್ಯಾನಿಲಯಗಳ ತಥಾಕಥಿತ ಸ್ವಾಯತ್ತತೆ ಇನ್ನೂ ಸವೆದು ಹೋಗುವುದರಲ್ಲಿ ಸಂಶಯವಿಲ್ಲ". ಕೇಂದ್ರಿಕರಣ ಸಮಿತಿಯನ್ನು (ಯು.ಜಿ.ಸಿ.ಯನ್ನು) ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರದ ನಡುವಣ ಹೆಚ್ಚುವರಿ ಸಂಸ್ಥೆಯ ಸ್ಥಾನವನ್ನು ಸರ್ಕಾರದ ನಿಯೋಗವಾಗಿ ಬದಲಾಯಿಸಲಾಗಿದೆ. ವಿಶ್ವವಿದ್ಯಾನಿಲಯಗಳು ಯು.ಜಿ.ಸಿ.ಯಿಂದ ಹೆಚ್ಚು ಹೆಚ್ಚು ನಿಯಂತ್ರಿತವಾದಂತೆ ಯು.ಜಿ.ಸಿ ಸಹ ಸರ್ಕಾರಕ್ಕೆ ಹೆಚ್ಚು ಹೆಚ್ಚಾಗಿ ಅಧೀನಗೊಳ್ಳಲು ಅವಕಾಶ ಕಲ್ಪಿತವಾಗುತ್ತದೆ. 'ಆದರೆ ಸ್ವಾಯತ್ತತೆ ಕಡಿಮೆಯಾದುದರಿಂದ ಶೈಕ್ಷಣಿಕ ಸ್ವಾತಂತ್ರ್ಯ ಸಂಕ್ಷಿಪ್ತಗೊಂಡಿದೆ ಎಂದು ಆರೋಪಿಸಲಾಗುವುದಿಲ್ಲ'. (ಉಲ್ಲೇಖಿತ ಸಾಮಗ್ರಿಯನ್ನು 'ದಿ ಯು.ಜಿ.ಸಿ ಆ್ಯಂಡ್ ದಿ ಯೂನಿವರ್ಸಿಟಿ–1976' ಇಂದ ತೆಗೆದುಕೊಳ್ಳಲಾಗಿದೆ).

ವಿಶ್ವವಿದ್ಯಾನಿಲಯಗಳ ಮೇಲೆ ಸರ್ಕಾರದ ಸೂಕ್ತವಾದ ಪ್ರಭಾವವನ್ನು ಮತ್ತು ಶೈಕ್ಷಣಿಕ ಸ್ವಾತಂತ್ರ್ಯದ ಮೇಲೆ ಬೀರುವ ಸೂಕ್ತವಾದ ಪ್ರಭಾವವನ್ನು ವ್ಯತ್ಯಾಸೀಕರಿಸುತ್ತಾ ಎರಿಕ್ ಆಶ್‌ಬಿ ಹೀಗೆ ಸಲಹೆ ಮಾಡಿದ್ದಾರೆ. "ವಿಶ್ವವಿದ್ಯಾನಿಲಯಗಳ ಮೇಲೆ ಸರ್ಕಾರದ ಪ್ರಭಾವ ಸಮಗ್ರ ಸಾಮಾಜಿಕ ನೀತಿಗೆ (ಉದಾ: ಸೆಕೆಂಡರಿ ನಂತರದ ಶಿಕ್ಷಣವನ್ನು ಪಡೆಯಬಹುದಾದ ವಯೋ ಸಮೂಹದ ಅನುಪಾತ) ಮಾತ್ರ ಸೀಮಿತವಾಗಿರಬೇಕು". ಮತ್ತೊಂದೆಡೆ ಅವರು ಮುಂದುವರಿದು ಹೀಗೆ ವಾದಿಸುತ್ತಾರೆ – "ಓರ್ವ ಪ್ರಾಧ್ಯಾಪಕನಿಗೆ ಓರ್ವ ಸಾಮಾನ್ಯ ಮನುಷ್ಯ ಹೇಗೆ ಬೋಧಿಸಬೇಕು ಎಂದು ಹೇಳುವುದು. ಹಾಸ್ಯಾಸ್ಪದವಾಗಿ ತೋರುತ್ತದೆ. (ಹ್ಯಾಸ್‌ಲೇ ಮತ್ತು ಟ್ರೊನಿಂದ ಉಲ್ಲೇಖಿತ, 1971).

ಡ್ರೆಸ್ಸೆಲ್(1972) ವಿಶ್ವವಿದ್ಯಾನಿಲಯದ ಸ್ವಾಯತ್ತತೆಗೆ ಮತ್ತು ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ನಡುವೆ ಸೂಕ್ಷ್ಮವಾದ ವ್ಯತ್ಯಾಸ ಕಲ್ಪಿಸುತ್ತಾರೆ. ಕೆಲವು ವಿವರಣೆಗಳನ್ನು ಮತ್ತು ಕೆಲವು ಕ್ರಿಯಾತ್ಮಕ ನಿಯಂತ್ರಣಗಳನ್ನು ವಿಶ್ವವಿದ್ಯಾನಿಲಯಗಳ ಮೇಲೆ ಹೇರುವುದು ಅವುಗಳ ಸ್ವಾಯತ್ತತೆಗೆ ತೀವ್ರರೂಪದ ಅಡಚಣೆಯನ್ನುಂಟು ಮಾಡುವುದಿಲ್ಲ. ಆ ರೀತಿಯ ನಿಯಂತ್ರಣಗಳಿಗೂ ಸ್ವಾತಂತ್ರ್ಯಕ್ಕೂ ಇರುವ ಸಂಬಂಧ ತೀರಾ ಸ್ವಲ್ಪವಾಗಿರುತ್ತದೆ. ಸಂಸ್ಥೆಯ ಉದ್ದೇಶ ಹಾಗೂ ಸಂಸ್ಥೆಯ ಸ್ವಾಯತ್ತತೆಯ ಪರಿಗಣನೆ ಇದೇ ರೀತಿಯ ಕಾಳಜಿಯನ್ನುಂಟು ಮಾಡುತ್ತವೆ. 'ಶೈಕ್ಷಣಿಕ ಸ್ವಾತಂತ್ರ್ಯ ಇತರ ಬಹುತೇಕ ಸ್ವಾತಂತ್ರ್ಯಗಳಂತೆ ತನ್ನ ಮಿತಿಗಳನ್ನು ಹೊಂದಿರುತ್ತದೆ ಎನ್ನುವುದನ್ನು ಶೈಕ್ಷಣಿಕ ಸಮುದಾಯ ಗುರ್ತಿಸಬೇಕು.' ಅಂತಿಮ ವಿಶ್ಲೇಷಣೆಯಲ್ಲಿ ಯಾವ ಮಿತಿಗಳು ಇರಬೇಕು ಎನ್ನುವುದರ ಒಪ್ಪಿಗೆಯನ್ನು ಒಂದು ರೀತಿಯ ರಾಜಕೀಯ ಪ್ರಕ್ರಿಯೆಯ ಮೂಲಕ ತಲುಪಲು ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಗೆ ಕೊಡುಗೆಯಾಗಿ ನಾವು ತನ್ನ ಸಂಶೋಧನ ಕಾರ್ಯಕ್ರಮಗಳ ವ್ಯಾಪಕವಾದ ಸಾಮಾನ್ಯ ದಿಶೆಗಳನ್ನು ನಿರ್ಧರಿಸಲು ವಿಶ್ವವಿದ್ಯಾನಿಲಯಕ್ಕೆ ಇರುವ ಹಕ್ಕಿಗೂ ಮತ್ತು ಯಾವುದೇ ಹಂತದಲ್ಲಿ ನಿರ್ದಿಷ್ಟ ಸಂಶೋಧಕನಿಗೆ ಅವನು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂದು ಹೇಳುವ

Digitised by Bharatavani, CIIL

ವಿಶ್ವವಿದ್ಯಾನಿಲಯದ ಹಕ್ಕಿಗೂ ನಡುವೆ ವ್ಯತ್ಯಾಸೀಕರಿಸಲು ನಾವು ಆರಂಭಿಸಬೇಕು ಎಂದು ಅವರು ಸಲಹೆ ಮಾಡುತ್ತಾರೆ.

ಸ್ವಾಯತ್ತತೆ ವಿಕೇಂದ್ರೀಕರಣಕ್ಕೂ ಮತ್ತು ಖಾಸಗೀಕರಣಕ್ಕೂ ಸಂಬಂಧ ಹೊಂದಿದೆ. ಉನ್ನತ ಶಿಕ್ಷಣದ ಖಾಸಗಿ ಸಂಸ್ಥೆಗಳಿಗೆ ಅನ್ವಯಿಸಿದಂತೆ, ಸ್ವಾಯತ್ತತೆ ಸಾಂಸ್ಥಿಕ ಸ್ವಯಂ–ಆಡಳಿತವನ್ನು ಅಥವಾ ರಾಜ್ಯ ನಿಯಂತ್ರಣದಿಂದ ಮುಕ್ತಿಯನ್ನು ಸೂಚಿಸುತ್ತದೆ. ಒಂದು ಸಂಸ್ಥೆ ಹೆಚ್ಚು ಸ್ವಾಯತ್ತವಾಗಿದಷ್ಟು ಅದಕ್ಕೆ ತನ್ನದೇ ಆದ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವ ಮತ್ತು ತನ್ನ ಹಣವನ್ನು (ಅದು ಸಾರ್ವಜನಿಕವಾದದ್ದಾಗಿರಲ್ಲಿ ಅಥವಾ ಆಗದಿರಲಿ) ತನ್ನ ಇಷ್ಟಕ್ಕೆ ಅನುಗುಣವಾಗಿ ವಿನಿಯೋಗಿಸಲು ಸರ್ಕಾರದಿಂದ ಅವಕಾಶ ಹೊಂದಿರುತ್ತದೆ. ಆದರೆ ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ, ಅದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿರುವುದರಿಂದ ಯಾವ ಕ್ಷೇತ್ರಗಳಿಗೆ ಆ ಅಧಿಕಾರವನ್ನು ಸ್ವಾಯತ್ತತೆಯಡಿಯಲ್ಲಿ ಸಂಸ್ಥೆಗೆ ವರ್ಗಾಯಿಸಬೇಕೆಂಬುದು ಪರಿಗಣಿಸಬೇಕಾದ ವಿಷಯವಾಗುತ್ತದೆ. ವರ್ಗಾಯಿಸಲು ರಾಜ್ಯಕ್ಕೆ ಅತ್ಯಂತ ಸುಲಭವಾದ ಕ್ಷೇತ್ರಗಳೆಂದರೆ– ವಾಸ್ತವವಾಗಿ ಹೇಳಬೇಕೆಂದರೆ ವರ್ಗಾಯಿಸದೇ ಇರಲು ಕಷ್ಟವಾದ ಕ್ಷೇತ್ರಗಳೆಂದರೆ ಪಠ್ಯಕ್ರಮ (ಒಂದು ಕೋರ್ಸ್‌ಗೆ ಅಥವಾ ಪದವಿಗೆ ಬೋಧಿಸಬೇಕಾದುದು ಅಥವಾ ಕಲಿಯಬೇಕಾದುದು), ಬೋಧನೆಯ ವಿಧಾನಗಳು ಮತ್ತು ಪಾಂಡಿತ್ಯ ಪೂರ್ಣ ಅನ್ವೇಷಣೆಯ ಉದ್ದೇಶಗಳು. ಮತ್ತೊಂದೆಡೆ ರಾಜ್ಯ ವರ್ಗಾಯಿಸದೇ ಇರಬಹುದಾದ ಕ್ಷೇತ್ರವೆಂದರೆ ಶಿಕ್ಷಣದ ಉದ್ದೇಶ (ಮಿಷನ್ ಅಂದರೆ ಸಂಸ್ಥೆ ವ್ಯಾಪಕ ರೀತಿಯಲ್ಲಿ ಸಂಶೋಧನೋನ್ಮುಖ ವಿಶ್ವವಿದ್ಯಾನಿಲಯವಾಗಿರಬೇಕೋ ಅಥವಾ ಬೋಧನೆ ಮತ್ತು ಅನ್ವಯಿಕ ಪಾಂಡಿತ್ಯವನ್ನು ಉದ್ದೇಶವಾಗಿ ಹೊಂದಿರುವ ಪಾಲಿಟೆಕ್ನಿಕ್ ರೀತಿಯದಾಗಿರಬೇಕೇ ಅಥವಾ ಬೇರೆ ರೀತಿಯದಾಗಿರಬೇಕೇ ಎಂಬುದು), ಅಂತಿಮ ಮೇಲ್ವಿಚಾರಣೆ ಅಥವಾ ಗುಣಮಟ್ಟದ ನಿಯಂತ್ರಣ. ಅದರಲ್ಲೂ ಸಾರ್ವಜನಿಕ ಆದಾಯ(ರೆವಿನ್ಯೂ)ದಿಂದ ಬೆಂಬಲ ಪಡೆಯುವ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಹುಶಃ ಸಾರ್ವಜನಿಕ ಉಪಭೋಕ್ತೃವಿನ ಸಂರಕ್ಷಣೆಯ ಉದ್ದೇಶಕ್ಕಾಗಿ, ಖಾಸಗಿಯಾಗಿ ಬೆಂಬಲಿತವಾದ ಉನ್ನತ ಶಿಕ್ಷಣದ ಮೇಲೂ ಸಹ, ತನ್ನ ಹಕ್ಕನ್ನು ಬಿಟ್ಟುಕೊಡುವ ಸಾಧ್ಯತೆ ಇರುವುದಿಲ್ಲ. ಆದಾಗ್ಯೂ ರಾಜ್ಯ ಆ ಅಧಿಕಾರವನ್ನು ಸಾರ್ವಜನಿಕ ಉತ್ತರದಾಯಿತ್ವ ಹೊಂದಿರುವ ಹೆಚ್ಚುವರಿ(ಬಫರ್) ಸಂಸ್ಥೆಗೆ ವರ್ಗಾಯಿಸಲು ಇಚ್ಛಿಸಬಹುದು.

**ಶಿಕ್ಷಣದಲ್ಲಿ ಸ್ವಾಯತ್ತತೆ: ಅದರ ಕಾರ್ಯನಿರ್ವಹಿಸುವಿಕೆ:**

ಶೈಕ್ಷಣಿಕ ಸಂದರ್ಭದಲ್ಲಿ ಸ್ವಾಯತ್ತತೆಯ ಬಗ್ಗೆ ಇದುವರೆಗೆ ಮಾಡಿದ ಅವಲೋಕನಗಳ ಆಧಾರದ ಮೇಲೆ ಪಡೆದ ಗ್ರಹಿಕೆಗಳು, ಅನುಭವಗಳು ಮತ್ತು ಸಂಶೋಧನೆಗಳ ತೀರ್ಮಾನಗಳು ಕೇವಲ ಸ್ವಾಯತ್ತತೆಯ ಬಗ್ಗೆಯೇ ಅಲ್ಲದೆ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿಸುತ್ತವೆ. ವಿವಿಧ ದೇಶಗಳ ಅನುಭವಗಳಿಂದ ಸ್ವಾಯತ್ತತೆಯನ್ನು ನೀಡಬೇಕಾಗಿ ಬಂದ ಸಂದರ್ಭ ಕೇವಲ ಸ್ವಾಯತ್ತತೆಯ ಅಂತರಾರ್ಥಕ್ಕಿಂತ ಹೆಚ್ಚಿನ ಪರಿಗಣನೆಗೆ ಒಳಗಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಮಿಗಿಲಾಗಿ ಶೈಕ್ಷಣಿಕ ವಿಭಾಗಗಳಲ್ಲಿ ಇದು ಕಂಡುಬರುತ್ತದೆ. ಏಕೆಂದರೆ ರಾಷ್ಟ್ರಗಳ ಪ್ರಗತಿ ಶಿಕ್ಷಣವನ್ನು ಅವಲಂಬಿಸಿರುತ್ತದೆ. ನಿಜ ಹೇಳಬೇಕೆಂದರೆ ಮಾನವ ಸಂಪನ್ಮೂಲ ವಿಕಾಸವೇ ಮತ್ತು ಎಲ್ಲಾ ಕ್ಷೇತ್ರಗಳ ಕಾರ್ಯಕ್ಷಮತೆಯೇ ಶಿಕ್ಷಣ ಕ್ಷೇತ್ರವನ್ನು ಅವಲಂಬಿಸಿವೆ. ಅಷ್ಟರಮಟ್ಟಿಗೆ ಒಂದು ರೀತಿಯಲ್ಲಿ ಇದು ದೇಶಗಳ ಅಭಿವೃದ್ಧಿಗೆ ದಿಶೆಯನ್ನು ಕೊಡುವುದೇ ಅಲ್ಲದೆ ಯೋಜಿಸುವಿಕೆಯನ್ನು, ಸೃಜನಶೀಲತೆಯನ್ನು ಮತ್ತು ವರ್ತನೆಯನ್ನು ಪೋಷಿಸುತ್ತದೆ. ಇವೆಲ್ಲವೂ ಶಿಕ್ಷಣದ ವಿಷಯವಸ್ತುವನ್ನು ಅವಲಂಬಿಸಿವೆ. ಶ್ರೀ ಜವಹರ್‌ಲಾಲ್ ನೆಹರು ಹೇಳಿದಂತೆ ಯಾವ ದೇಶದಲ್ಲಿ ಅದರ ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲವೂ ಸರಿಯಾಗಿರುತ್ತದೆಯೋ ಆ ದೇಶದಲ್ಲಿ ಎಲ್ಲವೂ ಸರಿಯಾಗಿರುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಶಿಕ್ಷಣ ಕ್ಷೇತ್ರ ಜನಗಳಿಗೆ ಅತ್ಯಂತ ಹೆಚ್ಚಿನ ಉತ್ತರದಾಯಿತ್ವವನ್ನು ಹೊಂದಿದೆ. ಈ ಕ್ಷೇತ್ರದ ಚಟುವಟಿಕೆಗಳನ್ನು ಸುಗಮಗೊಳಿಸಲೆಂದೇ ಸ್ವಾಯತ್ತತೆ ಬಗ್ಗೆ ಯೋಚಿಸಲಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳೂ ಸ್ವಾಯತ್ತವಾದವುಗಳಾಗಿವೆ. ಈ ವಿಶ್ವವಿದ್ಯಾನಿಲಯಗಳಿಗೆ ಅಂಗಭೂತಗೊಂಡಿರುವ ಸ್ವಲ್ಪ ಸಂಖ್ಯೆಯ(131) ಕಾಲೇಜುಗಳೂ ಸ್ವಾಯತ್ತವಾಗಿವೆ. ಶಾಲಾ ಮಟ್ಟದಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳು ಮತ್ತು ಮಾಧ್ಯಮಿಕ(ಮಿಡ್ಲ್) ಶಾಲೆಗಳು ಕನಿಷ್ಠ ಪಠ್ಯಕ್ರಮವನ್ನು ಅನುಸರಿಸಬೇಕಾದುದನ್ನು ಹೊರತುಪಡಿಸಿ, ಸ್ವಾಯತ್ತತೆಯನ್ನು ಹೊಂದಿವೆ. ಎಲ್ಲಾ ಖಾಸಗಿ ಸಂಸ್ಥೆಗಳು ಸ್ವಾಯತ್ತವಾದವುಗಳು. ಆದರೆ ಅವು ಅಂಗಭೂತಗೊಂಡಿರುವ CBSE/ICSC ಮಂಡಳಿಗಳ ಬೇಡಿಕೆಯನ್ನು ಪೂರೈಸಲು ತಮ್ಮ ಪಠ್ಯಕ್ರಮವನ್ನು/ಪಠ್ಯವಸ್ತುವನ್ನು ಹೊಂದಿಸಿಕೊಳ್ಳಬೇಕು.

ಮೇಲಿನ ಸಾಲುಗಳಲ್ಲಿ 'ಹೊರತುಪಡಿಸಿ' ಎನ್ನುವ ಪದ ಸ್ವಾಯತ್ತತೆಯ ವ್ಯಾಪ್ತಿಯ ಸೀಮಾರೇಖೆಗಳನ್ನು ಸೂಚಿಸುತ್ತದೆ. ಅಂದರೆ ಕನಿಷ್ಠ ಅಗತ್ಯ ಅಂಶಗಳು ಎಷ್ಟು ಇರಬೇಕೆಂಬುದನ್ನು ತಿಳಿಸುತ್ತದೆ.

ಈ ಸಂಸ್ಥೆಗಳು ಅವುಗಳ ಆರಂಭದಿಂದಲೂ ಸ್ವಾಯತ್ತವಾಗಿವೆಯಾದರೂ ಅವುಗಳ ಕಾರ್ಯಕ್ಷಮತೆಯಲ್ಲಿ ಇನ್ನೂ ವ್ಯತ್ಯಾಸಗಳಿವೆ. ಯಾವುದೇ ಸಂಸ್ಥೆಯ ಸ್ವಾಯತ್ತತೆಯ ಕಾರ್ಯಕ್ಷಮತೆ ಯಾವುದೇ ಒಂದು ಸಂದರ್ಭದಲ್ಲಿ ಸಂಸ್ಥೆಯ ಸಂಯುಕ್ತ ಶಕ್ತಿಯ(ಸೈನರ್ಜಿ)ಫಲಿತವಾಗಿರುತ್ತದೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ ಸಾಂದರ್ಭಿಕ ವ್ಯತ್ಯಾಸಗಳು ಶಿಕ್ಷಣ ಕ್ಷೇತ್ರದಲ್ಲಿ ಸ್ವಾಯತ್ತತೆಯ ಕಾರ್ಯಸ್ಥಿತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತವೆ. ಇವುಗಳ ಜೊತೆಗೆ ಸಂಸ್ಥೆಯ ಸಂಪನ್ಮೂಲಗಳ ಪರಿಸ್ಥಿತಿಯೂ ಸೇರುತ್ತದೆ. ಇದೂ ಅಲ್ಲದೆ ನಿಯಂತ್ರಣ ಸಂಸ್ಥೆಗಳು, ರಾಜ್ಯಸರ್ಕಾರ ಮತ್ತು ಸಂಸ್ಥೆಗಳ ವ್ಯವಸ್ಥಾಪನ ಮಂಡಳಿಗಳು ತಮಗೆ ದತ್ತವಾಗಿರುವ ಅಧಿಕಾರ ಸ್ವಾಯತ್ತತೆಯ ಕಾರ್ಯಸ್ಥಿತಿಯ ಮೇಲೆ

Digitised by Bharatavani, CIIL

ತಮ್ಮದೇ ಆದ ಪ್ರಭಾವವನ್ನು ಹೊಂದಿರುತ್ತದೆ. ಇವೆಲ್ಲವುಗಳಿಗಿಂತ ಮಿಗಿಲಾಗಿ ಅಧಿಕಾರ ನಿಯಂತ್ರಣ ಮತ್ತು ಪ್ರಾಧಿಕಾರದ ಬಗ್ಗೆ ಆಡಳಿತಗಾರರ ಮನೋಭಾವ ಸ್ವಾಯತ್ತತೆಯ ಕಾರ್ಯಾಸ್ಥಿತಿಯಲ್ಲಿ ಇನ್ನೂ ಹೆಚ್ಚಿನ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಶಿಕ್ಷಕರ ಗುಣಮಟ್ಟ, ಅವರ ಜ್ಞಾನದ ಉನ್ನತೀಕರಣ ಮತ್ತು ಕೌಶಲಗಳ ಕೊರತೆ ಮತ್ತು ಉತ್ತರದಾಯಿತ್ವದ ಬಗ್ಗೆ ಅವರ ಋಣಾತ್ಮಕ ಮನೋಭಾವ– ಇವೆಲ್ಲವೂ ಶಿಕ್ಷಣದಲ್ಲಿ ಸ್ವಾಯತ್ತತೆಯ ಮಾರಕಗಳಾಗುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

ಸ್ವಾಯತ್ತತೆಯಲ್ಲಿ ಸಂದರ್ಭದ ಪಾತ್ರದ ವಿಷಯಕ್ಕೆ ಬಂದರೆ ಶಿಕ್ಷಣ ಕ್ಷೇತ್ರದಲ್ಲಿ ವಿಕಾಸಶೀಲ ದೇಶಗಳಿಗೆ ಹೋಲಿಸಿದಂತೆ, ವಿಕಾಸಗೊಂಡ ದೇಶಗಳಲ್ಲಿ ಸ್ವಾಯತ್ತತೆ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಅವಲೋಕಿಸಿರುವುದು ಆಸಕ್ತಿಪೂರ್ಣ ವಿಷಯವಾಗಿದೆ. ವಸಾಹತುಷಾಹಿ ಪ್ರಭಾವವಿರುವ ವಿಕಾಸಶೀಲ ದೇಶಗಳು ಮತ್ತು ಆ ರೀತಿಯ ಪ್ರಭಾವವಿಲ್ಲದ ಇತರ ವಿಕಾಸಶೀಲ ದೇಶಗಳ ನಡುವೆ ಇರುವ ಈ ವ್ಯತ್ಯಾಸವನ್ನು ಸಹ ನೋಡಬಹುದು. ಮೊದಲನೇ ಸಂದರ್ಭದಲ್ಲಿ ವಿಕಾಸಗೊಂಡ ದೇಶಗಳು ವಿಕಾಸಶೀಲ ದೇಶಗಳಿಗಿಂತ ಹೆಚ್ಚಿನ ಸ್ವಾಯತ್ತತೆಯನ್ನು ಅನುಭವಿಸುತ್ತವೆ ಎನ್ನುವುದು ಸ್ಪಷ್ಟವಾಗಿದೆ ಮತ್ತು ಎರಡನೇ ಸಂದರ್ಭದಲ್ಲಿ ವಸಾಹತುಷಾಹಿ ಪ್ರಭಾವವಿರುವ ವಿಕಾಸಶೀಲ ದೇಶಗಳು (ಉದಾ: ಭಾರತ) ಇತರ ವಿಕಾಸಶೀಲ ದೇಶಗಳಿಗಿಂತ ಹೆಚ್ಚಿನ ಸ್ವಾಯತ್ತತೆಯನ್ನು ಅನುಭವಿಸುತ್ತವೆ. ಕೇವಲ ಸ್ವಾಯತ್ತತೆಯನ್ನು ನೀಡುವುದು ವ್ಯವಸ್ಥೆಯನ್ನಾಗಲಿ ಅಥವಾ ಸಂಸ್ಥೆಗಳನ್ನಾಗಲಿ ಅಥವಾ ಆ ಸಂಸ್ಥೆಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳನ್ನು ಸ್ವಾಯತ್ತರನ್ನಾಗಿ ಮಾಡುವುದಿಲ್ಲವೆಂದು ಅನೇಕರ ಗಮನಕ್ಕೆ ಬಂದಿದೆ. ಆಡಳಿತಗಾರರು, ಶಿಕ್ಷಣತಜ್ಞರ ಮತ್ತು ವಿದ್ಯಾರ್ಥಿಗಳ ಕಾಳಜಿ, ಬದ್ಧತೆ, ಜವಾಬ್ದಾರಿ ಮತ್ತು ಉತ್ತರದಾಯಿತ್ವ ಸಂಸ್ಥೆಯಲ್ಲಿ ಬೋಧನೆ ಮತ್ತು ಕಲಿಕೆಯ ಬಗ್ಗೆಯೂ ಅಲ್ಲದೆ, ಸಮುದಾಯ, ಸಮಾಜ ಮತ್ತು ದೇಶದ ಬಗ್ಗೆಯೂ ಇರುವಂತೆ ಕಾರ್ಯನಿರ್ವಹಿಸುವುದು ಈ ರೀತಿಯ ವ್ಯತ್ಯಾಸಗಳಿಗೆ ಕಾರಣವಾಗುತ್ತದೆ.

ಈಗಾಗಲೇ ಮೊದಲು ಹೇಳಿದಂತೆ ವಿಕಾಸಶೀಲ ದೇಶಗಳು ಅನಕ್ಷರತೆ, ಅಜ್ಞಾನ, ಅರಿವಿನ ಕೊರತೆ ಹೆಚ್ಚು ಮುಂದುವರಿಯದಿರುವ ಸಂವಹನ ತಂತ್ರಜ್ಞಾನ ಹಾಗೂ ಮಾಧ್ಯಮಗಳು ಇತ್ಯಾದಿ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ನಿರ್ಬಂಧಗಳನ್ನು ಹೊಂದಿರುತ್ತವೆ ಮತ್ತು ಈ ಅಂಶಗಳು ಜನ ಸಮೂಹದ ವಿವಿಧ ವಿಭಾಗಗಳಿಗೆ ಪ್ರವೇಶ ಸಾಧ್ಯತೆ, ಸಮತೆ, ಸಮಂಜಸತೆ, ಸಮಾನತೆ ಮತ್ತು ಗುಣಾತ್ಮಕತೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಮತ್ತು ರಾಷ್ಟ್ರದ ಪಾತ್ರವನ್ನು ಅನಿವಾರ್ಯವಾಗಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಉದ್ಭವಿಸುವ ವಿವಾದಾಂಶಗಳೆಂದರೆ– 'ಎಷ್ಟು ಪ್ರಮಾಣದ ಸ್ವಾಯತ್ತತೆ ಮತ್ತು 'ಯಾರಿಗೆ'? ನಿಯಂತ್ರಕ ಸಂಸ್ಥೆಗಳ ಅಧೀನದಲ್ಲಿ ಯಾವ ನಿರ್ಧಾರಗಳನ್ನು ಬಿಡಬೇಕು ಮತ್ತು ಸಂವಿಧಾನದ ಕರ್ತವ್ಯಗಳನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಬೇರೆಯವರಿಗೆ ಬಿಡಬಹುದಾದ ಅಂಶಗಳಾವುವು? ಸಾಮಾನ್ಯವಾಗಿ ಹೇಳುವುದಾದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಶೈಕ್ಷಣಿಕ ನಿರ್ಧಾರಗಳನ್ನು ಶೈಕ್ಷಣಿಕ ತಜ್ಞರಿಗೆ ಬಿಡಬೇಕು ಎಂಬುದರ ಬಗ್ಗೆ ಒಮ್ಮತದ ಅಭಿಪ್ರಾಯವಿದೆ. ಆದರೆ ಹಣಕಾಸಿನ ಮತ್ತು ಆಡಳಿತದ ಅಂಶಗಳು ಚರ್ಚಾಸ್ಪದ ವಿಷಯಗಳಾಗಿವೆ.ಇಲ್ಲಿ ಪುನಃ ಗುಣಮಟ್ಟ ಅಥವಾ ಅರ್ಹತಾ ರೂಪದಲ್ಲಿ ಎಲ್ಲವನ್ನು ಸಂಪೂರ್ಣವಾಗಿ ಶಿಕ್ಷಣ ತಜ್ಞರಿಗೆ ಬಿಟ್ಟರೆ, ಅವರು ವಂಚಿತ ವರ್ಗಗಳ ಬಗ್ಗೆ ಯಾವುದೇ ಕಾಳಜಿ ತೆಗೆದುಕೊಳ್ಳುವಂತೆ ತೋರುವುದಿಲ್ಲ. ಹಣ ಸಹಾಯ ಸಾರ್ವಜನಿಕ ರಾಜಾದಾಯದಿಂದ (ರೆವಿನ್ಯೂ) ಬರುವುದರಿಂದ ಎಲ್ಲರಿಗೂ ಪ್ರತಿಫಲ ದೊರೆಯಬೇಕೆಂದು ಒತ್ತಾಯಪಡಿಸುವ ಹಕ್ಕನ್ನು ಸಾರ್ವಜನಿಕರು ಹೊಂದಿರುತ್ತಾರೆ ಎಂಬುದು ಸ್ಪಷ್ಟವೇ ಇದೆ. ಶೈಕ್ಷಣಿಕ ವಿಷಯಗಳಿಗೆ ಬಂದಾಗ ಪಠ್ಯಕ್ರಮದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ಶಿಕ್ಷಣ ತಜ್ಞರಿಗೆ ಬಿಡಬೇಕೆ ಅಥವಾ ಬೇಡವೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಶಿಕ್ಷಣ ತಜ್ಞರು ತಮ್ಮದೇ ಆದ ಪೂರ್ವನಿರ್ಧಾರಿತ ಶೈಕ್ಷಣಿಕ ಆಸಕ್ತಿಗಳ ಸಾಧನೆಗಾಗಿ ಸ್ಥಳೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಕಾಳಜಿಗಳಿಗೆ ಗಮನ ನೀಡದಿರಬಹುದೆಂಬ ಆತಂಕವಿದೆ.

ಶೈಕ್ಷಣಿಕ ಮತ್ತು ಶೈಕ್ಷಣಿಕೇತರ – ಈ ಎರಡು ಗುಂಪುಗಳ ನಡುವೆ ಇರುವ ವ್ಯತ್ಯಾಸ ಶೈಕ್ಷಣಿಕ ಕ್ಷೇತ್ರದಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಮುಂದುವರಿದು ಹೇಳಬೇಕೆಂದರೆ ಸಂಸ್ಥೆಯಲ್ಲಿ ಶೈಕ್ಷಣಿಕೇತರ ಗುಂಪಿನ ಪಾತ್ರ ಮತ್ತು ಅವರ ಮನೋಭಾವ, ಬೌದ್ಧಿಕತಾ–ವಿರೋಧಿ ನಿಲುವು ಶಿಕ್ಷಣ ತಜ್ಞರ ಗುಂಪಿನ ಪ್ರತಿ ಅವರ ಸಂವೇದನಾರಹಿತತೆ ಇವುಗಳು ತಮ್ಮದೇ ಆದ ಕೊಡುಗೆಗಳನ್ನು ಹೊಂದಿರುತ್ತವೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಸಂಘಗಳ ಚಟುವಟಿಕೆಗಳು ಮತ್ತು ನೌಕರ ಸಂಘಗಳು ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಗೂ ಮತ್ತು ಶೈಕ್ಷಣಿಕ ಸಂಸ್ಥೆಗಳ ನಿರ್ಣಯ ತೆಗೆದುಕೊಳ್ಳುವ ಮಂಡಳಿಗಳ ಕಾರ್ಯಕ್ಕೂ ಅತಿಕ್ರಮಣ ಮಾಡುತ್ತಿವೆ. ಸಾಮಾನ್ಯವಾಗಿ ನಿಯಂತ್ರಕ ಮಂಡಳಿಗಳು, ಸಮಯ ಕಳೆದಂತೆಲ್ಲಾ ತಮ್ಮ ಚಟುವಟಿಕೆಗಳನ್ನು ಪುನರ್–ಸಕ್ರಿಯಗೊಳಿಸುವ ಕಾರ್ಯದಲ್ಲಿ ತೊಡಗಿವೆ ಮತ್ತು ಈ ಪ್ರಕ್ರಿಯೆಯಲ್ಲಿ ಅವು ಅಪ್ರಸ್ತುತವಾಗತೊಡಗಿವೆ. ಬದಲಾವಣೆಗಳ ದೃಷ್ಟಿಯಿಂದ ತನಗೆ ನಿರ್ಧಾರಿತವಾಗಿರುವ ಉನ್ನತೀಕರಣದ ದೃಷ್ಟಿಯಿಂದ ತನಗೆ ನಿರ್ಧಾರಿತವಾಗಿರುವ ಕಾರ್ಯಸೂಚಿಗೆ ಗಮನ ನೀಡಲು ಸಾಧ್ಯವಾಗುವಂತೆ ವಿಕೇಂದ್ರೀಕರಣಗೊಳಿಸಬೇಕಾದ ದೃಷ್ಟಿಯಿಂದ ಬದಲಾವಣೆ ಹೊಂದುವ ಕಾಲ ಬಂದಿದೆ.

ಸ್ವಾಯತ್ತತೆ ಎಂದರೆ ಸಂಸ್ಥೆಗಳನ್ನು ಬದಲಾಗುವ ಅಗತ್ಯಗಳಿಗೆ ಅನುಗುಣವಾಗಿ ತಮ್ಮ ಕಾರ್ಯಕ್ರಮಗಳನ್ನು ಮತ್ತು ಅವುಗಳ ಗುಣಮಟ್ಟವನ್ನು ಹೊಂದಿಸಲು ಸಮರ್ಥವನ್ನಾಗಿಸುವುದನ್ನು ಪ್ರೋತ್ಸಾಹ ನೀಡಲು ಧನಸಂಗ್ರಹ ಮಾಡುವ ಸ್ವಾತಂತ್ರ್ಯವನ್ನು ನೀಡುವುದೂ ಎಂದಾಗಬಹುದು. ಆದಾಗ್ಯೂ ಧನಸಹಾಯ ನೀಡುವ ನಿಯೋಗಗಳ ನಿಯಂತ್ರಣ ವ್ಯವಸ್ಥೆಯೊಳಕ್ಕೆ ನುಸುಳಬಹುದು ಎಂಬ ಭಯ ಇದ್ದೇ ಇದೆ. ಶೈಕ್ಷಣಿಕ ಸ್ವಾತಂತ್ರ್ಯ

Digitised by Bharatavani, CIIL

ಒಂದು ಸವಲತ್ತು ಮಾತ್ರವಲ್ಲ. ಆದರೆ, ಅಂತಿಮವಾಗಿ ಅದು ಸಮಾಜ ಮತ್ತು ಸಮುದಾಯದ ಬಗ್ಗೆ ಇರುವ ಮಹತ್ತಾದ ಜವಾಬ್ದಾರಿಯಾಗಿದೆ. ಅದಕ್ಕೆ ಬೆಲೆ ತೆರುವುದಕ್ಕಾಗಿಯೇ ಶಿಕ್ಷಣ ತಜ್ಞರನ್ನು ಪೋಷಿಸಲಾಗುತ್ತದೆ. ಶಿಕ್ಷಣತಜ್ಞರು ಒಮ್ಮೆ ತಮ್ಮ ಸ್ಥಾನಗಳಲ್ಲಿ ನೆಲೆಗೊಂಡ ನಂತರದಲ್ಲಿ ತಮ್ಮದೇ ಆದ ಸಂಶೋಧನಾ ಕ್ಷೇತ್ರದ ಮೇಲೆ ಮತ್ತು ತಮ್ಮ ಬೆಳವಣಿಗೆ ಮೇಲೆ ಗಮನ ಕೇಂದ್ರೀಕರಿಸಿ ಸಮಾಜಕ್ಕೆ ತಾವು ನೀಡಬೇಕಾದ ಪ್ರತಿಫಲದ ಬಗ್ಗೆ ಯೋಚಿಸದಿರುವ ಪ್ರವೃತ್ತಿಯನ್ನು ಹೊಂದಿದ್ದಾರೆ ಎಂಬ ಪ್ರಬಲವಾದ ಭಾವನೆ ಸಾರ್ವಜನಿಕರಲ್ಲಿದೆ. ಒಂದು ರೀತಿಯಲ್ಲಿ ಸ್ವಾಯತ್ತತೆ ಮಾನವಹಕ್ಕಿಗೆ ಸಂಬಂಧಿಸಿದ ವಿಷಯವಾಗಿದೆ ಮತ್ತು ವಾಸ್ತವವಾಗಿ ಅದು ಒಂದು ಮೂಲಭೂತ ಹಕ್ಕಾಗಿದೆ. ಅದರೆ ನಮ್ಮ ಮೂಲಭೂತ ಕರ್ತವ್ಯಗಳ ಸರಿಯಾದ ಗ್ರಹಿಕೆಯಲ್ಲೇ ಸ್ವಾಯತ್ತತೆಯ ಉಪಯೋಗಿಸುವಿಕೆ ಅಂತರ್–ನಿಹಿತವಾಗಿದೆ. ಶಿಕ್ಷಣ ವ್ಯವಸ್ಥೆಗೆ ಸ್ವಾಯತ್ತತೆ ನೀಡುವ್ವದೆಂದರೆ ಸಚಿವಾಲಯ, ಪಾರ್ಲಿಮೆಂಟ್(ಸಂಸತ್ತು) ಮತ್ತು ಶಾಸನಸಭೆಗಳು ಮುಂತಾದವುಗಳ ನಿಯಂತ್ರಣ ಮತ್ತು ಅಧಿಕಾರವನ್ನು ದುರ್ಬಲಗೊಳಿಸುವುದೆಂದು ಅರ್ಥವಾಗುತ್ತದೆ. ಶೇ.40ಕ್ಕೂ ಹೆಚ್ಚು ಜನತೆ ಅನಕ್ಷರತೆ ಹೊಂದಿರುವ, ಶೇ.80ರಷ್ಟು ಜನತೆ ಗ್ರಾಮೀಣ ಹಿನ್ನೆಲೆಯಲ್ಲಿ ಜೀವಿಸುತ್ತಿರುವ ಮತ್ತು ಈ ಜನತೆಯ ಬಹುಭಾಗದ ಜನತೆ ಬಡತನ, ಆರೋಗ್ಯ ಮತ್ತು ಆರ್ಥಿಕ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಇನ್ನೂ ಹೋರಾಡುತ್ತಿರುವ ಭಾರತದಂಥ ವಿಕಾಸಶೀಲ ಸಮಾಜದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಪೂರ್ಣ ಸ್ವಾಯತ್ತತೆಯನ್ನು ನೀಡಲು ಸಾಧ್ಯವಿದೆಯೆ ಎಂಬುದೇ ಪ್ರಶ್ನೆಯಾಗಿದೆ. ಈ ಸಮಸ್ಯೆಗಳನ್ನು ಹೋಗಲಾಡಿಸುವುದರಲ್ಲಿ ಕೊಡುಗೆ ನೀಡುವುದರಲ್ಲಿ ಶಿಕ್ಷಣ ಪ್ರಮುಖ ಅಂಶವಾಗಿದೆ ಎಂದು ಭಾವಿಸಲಾಗಿದೆ. ಅದುದರಿಂದಲೇ 'ಯಾರಿಗೆ' 'ಎಷ್ಟು ಪ್ರಮಾಣದ' ಸ್ವಾಯತ್ತತೆಯನ್ನು 'ಎಲ್ಲೆಲ್ಲಿ' ಮತ್ತು 'ಯಾವ ಯಾವುದಕ್ಕೆ' ಕೊಡಬೇಕೆಂಬ ಪ್ರಶ್ನೆ ಏಳುತ್ತದೆ. ಏಕೆಂದರೆ ಅಂತಿಮವಾಗಿ ರಾಜ್ಯ ಮತ್ತು ರಾಜಕಾರಣಿಗಳು ಸಂಸತ್ತಿಗೆ ಉತ್ತರ ನೀಡುವವರಾಗಿರುತ್ತಾರೆ. ತರಗತಿಗಳಲ್ಲಿ ಬೋಧನೆ–ಕಲಿಕೆಯ ಕಾರ್ಯದ ಸ್ವರೂಪವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಂಬಂಧವಿಲ್ಲದ ಅಂಶಗಳು, ವಿವಾದಾತ್ಮಕ ಅಂಶಗಳು ಶಿಕ್ಷಣ ವ್ಯವಸ್ಥೆಗೆ ಪ್ರವೇಶ ಮಾಡದಂತಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಮುಖ್ಯವಾದ ಅಂಶಗಳು ಉಪೇಕ್ಷಿತವಾಗದಂತೆ ನೋಡಿಕೊಳ್ಳಲು ಇದು ಎಲ್ಲಕ್ಕಿಂತ ಮುಖ್ಯವಾಗುತ್ತದೆ. ಸ್ವಾಯತ್ತತೆಯ 'ರೀತಿ, ವಿಷಯವಸ್ತು', 'ವಿಷಯವಸ್ತು–ಸಂದರ್ಭ', 'ಉದ್ದೇಶಿತ–ಕಾರ್ಯಾನ್ವಿತ', 'ತತ್ವಶಃ–ಆಚರಣೆಯಲ್ಲಿರುವ' ಮತ್ತು 'ಪ್ರಜ್ಞಾಪೂರ್ವಕ–ಅಪ್ರಜ್ಞಾಪೂರ್ವಕ' ಈ ಜಿಜ್ಞಾಸೆಗಳ ಬಗ್ಗೆ ಈಗಾಗಲೇ ಬಹಳಷ್ಟನ್ನು ಹೇಳಿ ಆಗಿದೆ.

ಸಂಕ್ಷಿಪ್ತವಾಗಿ ಶಿಕ್ಷಣದಲ್ಲಿ ಸ್ವಾಯತ್ತತೆ, ನಿಜವಾದ ಅರ್ಥದಲ್ಲಿ ಅದನ್ನುಜಾರಿಗೊಳಿಸುವದರಲ್ಲಿದೆ. ಅದನ್ನುಅದರಕಾರ್ಯಕ್ಷಮತೆಯ ರೂಪದಲ್ಲಿ ವಿಶ್ಲೇಷಿಸಿದಾಗ ದೃಷ್ಟಿ ಗೋಚರವಾಗುವುದು ಸಾಂಸ್ಥಿಕ ಉದ್ದೇಶಗಳ ಬಗ್ಗೆ ಜಾರಿಗೊಳಿಸುವವರ 'ಸ್ವಯಂ–ಉದ್ದೇಶಿತ ತದ್ವಿರುದ್ಧವಾದ ಸೇವಾ ಉದ್ದೇಶಿತ' ನಿಲುವು, ಇವೆರಡರ ನಡುವೆ ಒಂದು ಸಮತೋಲನವನ್ನು ತರಲು, ಮತ್ತು ಈ ಉದ್ದೇಶಗಳನ್ನು ಸಾಧಿಸುವುದನ್ನು ಸುಗಮಗೊಳಿಸಲು ಸ್ವಾಯತ್ತತೆಯನ್ನು ಒಂದು ಪ್ರಭಾವಕಾರಿ ಸಾಧನವೆಂದು ಪರಿಗಣಿಸಲಾಗಿದೆ ಮತ್ತು ಹೀಗೆ ಮಾಡುವುದರಲ್ಲಿ ನಿಯಮಗಳು, ನಿಯಂತ್ರಣಗಳು, ಮಾನಕಗಳು, ಮಾನದಂಡಗಳು, ಕಾಯ್ದೆಗಳು, ವಿಧಿಗಳು ಇತ್ಯಾದಿಗಳ ಜೊತೆಗೆ ವ್ಯಕ್ತಿ ಪ್ರತ್ಯಕ್ಷ(ಪರ್ಸೆಪ್ಷನ್), ಮನೋಭಾವ ಮತ್ತು ವರ್ತನೆಗಳೂ ಸಹಾಯಕ್ಕೆ ಬರುತ್ತವೆ. ಸ್ವಾಯತ್ತತೆ ಒಂದು ವರ್ತನಾತ್ಮಕ ಪರಿಕಲ್ಪನೆ. ಮುಂದುವರಿದು ಹೇಳಬೇಕೆಂದರೆ ಅದರ ವಾಸ್ತವಿಕವಾದ ಕಾರ್ಯಾನ್ವಯನ ಅದು ಜಾರಿಗೊಳ್ಳಬೇಕಾದ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಇತರ ಸಂದರ್ಭಗಳನ್ನು ಅವಲಂಬಿಸಿದೆ.

**ಮೂಲ: ಕೆ. ಸುಧಾರಾವ್**

**ಅನು: ಡಾ. ಉಮಾದೇವಿ ಪಿ.**

## ಶಿಕ್ಷಣವನ್ನು ಕುರಿತ ಸಮಿತಿಗಳು

ಭಾರತ ದೇಶದಲ್ಲಿ ಆಗಾಗ್ಗೆ ಶಿಕ್ಷಣದ ಬಗ್ಗೆ ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಅನೇಕ ಸಮಿತಿಗಳನ್ನು ನೇಮಿಸಲಾಗಿದೆ. ಕೆಲವು ಸಮಿತಿಗಳನ್ನು ಉದಾಹರಣೆಗೆ ಇಂಗ್ಲಿಷ್ ರಿವ್ಯೂ ಕಮಿಟಿ, ಶಾಲೆ ಮತ್ತು ಕಾಲೇಜು ಶಿಕ್ಷಣದ ಕೆಲವು ವಿಷಯಗಳ ಬೋಧನೆ–ಕಲಿಕೆಯ ಸ್ಥಿತಿಯನ್ನು ಪುನರಾವಲೋಕನ ಮಾಡಲು ನೇಮಿಸಿದ್ದರೆ, ಕೆಲವು ಸಮಿತಿಗಳನ್ನು ಧಾರ್ಮಿಕ ಮತ್ತು ನೈತಿಕ ಶಿಕ್ಷಣ, ಶಿಕ್ಷಣದ ವೃತ್ತೀಕರಣ, ಮಹಿಳಾ ಶಿಕ್ಷಣ ಮುಂತಾದ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಮುಖಗಳ ಬಗ್ಗೆ ವರದಿ ಮಾಡಲು ನೇಮಿಸಲಾಗಿದ್ದಿತು.

ಭಾರತ ಸರ್ಕಾರದಿಂದ ನೇಮಿತವಾಗುವ ಸಮಿತಿಗಳನ್ನು ಹೊಸ ಶಿಕ್ಷಣ ನೀತಿಗಳನ್ನು ರೂಪಿಸಲು ಅಥವಾ ಶಿಕ್ಷಣದ ವಿವಿಧ ಅಂಶಗಳಲ್ಲಿ ಸದ್ಯ ಇರುವ ಪರಿಸ್ಥಿತಿಯನ್ನು ಪುನರಾವಲೋಕನ ಮಾಡಲು ನೇಮಿಸಲಾಗುತ್ತದೆ. ಇದಕ್ಕೆ ಪ್ರತಿಯಾಗಿ ರಾಜ್ಯಮಟ್ಟದ ಸಮಿತಿಗಳನ್ನು ರಾಷ್ಟ್ರಮಟ್ಟದ ಸಮಿತಿಗಳು ಮಾಡುವ ಶಿಫಾರಸ್ಸುಗಳನ್ನು ಜಾರಿಗೊಳಿಸಲು, ಸಲಹೆಗಳನ್ನು ನೀಡಲು ಮತ್ತು ಸಂಬಂಧಪಟ್ಟ ರಾಜ್ಯದ ಬೇಡಿಕೆಗಳಿಗೆ ಮತ್ತು ಅಗತ್ಯಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸು ಮಾಡಲು ನೇಮಿಸಲಾಗುತ್ತದೆ.

ಭಾರತದಲ್ಲಿ 1929ರಲ್ಲಿ ನೇಮಿತವಾದ ಹಾರ್ಟಾಗ್ ಶಿಕ್ಷಣ ಸಮಿತಿ ವರದಿ ಮೊದಲುಗೊಂಡು ಭಾರತ ಸರ್ಕಾರದ ಶಿಕ್ಷಣ ಇಲಾಖೆಯಿಂದ ಮತ್ತು ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದಿಂದ (UGC) ಶೈಕ್ಷಣಿಕ ವ್ಯವಸ್ಥೆಯನ್ನು ಪುನರಾವಲೋಕನ ಮಾಡಿ ಅವಶ್ಯಕ ಸುಧಾರಣೆಗಳನ್ನು ಮಾಡಲು ಶಿಫಾರಸುಗಳನ್ನು ಮಾಡುವ ಉದ್ದೇಶದಿಂದ ನೇಮಿತವಾಗಿದ್ದ ಮುಖ್ಯವಾದ ಸಮಿತಿಗಳ ಉದ್ದೇಶಗಳನ್ನು ಮತ್ತು ವಿಶಿಷ್ಟವಾದ ಶಿಫಾರಸುಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.

Digitised by Bharatavani, CIIL

ಶಿಕ್ಷಣದ ಬಗ್ಗೆ ಹಾರ್ಟಾಗ್ ಸಮಿತಿಯನ್ನು (1929) ಆಗ ದೇಶದಲ್ಲಿದ್ದ ಶಿಕ್ಷಣದ ಸಮಗ್ರ ಸ್ಥಿತಿಯನ್ನು ಪುನರಾವಲೋಕನ ಮಾಡಲು ನೇಮಿಸಲಾಗಿತ್ತು. ಈ ಸಮಿತಿ ಶಿಕ್ಷಣದ ಆತುರದ ವಿಸ್ತರಣೆಯನ್ನು ಖಂಡಿಸಿದುದಲ್ಲದೆ ಸುಭದ್ರಗೊಳಿಸುವಿಕೆಯನ್ನು ಮತ್ತು ಸುಧಾರಣೆಯನ್ನು ಶಿಫಾರಸು ಮಾಡಿತು. ಈ ಸಮಿತಿಯ ಪ್ರಾಥಮಿಕ ಶಿಕ್ಷಣ, ಸೆಕೆಂಡರಿ (ಮಾಧ್ಯಮಿಕ)ಶಿಕ್ಷಣ, ಉನ್ನತ ಶಿಕ್ಷಣ, ತಾಂತ್ರಿಕ ಹಾಗೂ ಔದ್ಯೋಗಿಕ ಶಿಕ್ಷಣ, ಮತ್ತು ಹರಿಜನರು, ಮುಸ್ಲಿಂಮರು ಮತ್ತು ಮಹಿಳೆಯರ ಶಿಕ್ಷಣದ ಬಗ್ಗೆ ವ್ಯಾಪಕವಾದ ಶಿಫಾರಸುಗಳನ್ನು ಮಾಡಿತು. ಹೆಚ್ಚಿನ ಪ್ರಮಾಣದಲ್ಲಿ ಅಪವ್ಯಯ (wastage) ಮತ್ತು ಸ್ಥಗಿತತೆ (stagnation) ಇದ್ದರೆ ಪ್ರಾಥಮಿಕ ಶಿಕ್ಷಣ ಪ್ರಭಾವಕಾರಿಯಾಗುವುದಿಲ್ಲವೆಂದು ಸಮಿತಿ ಭಾವಿಸಿತು. ಆದ್ದರಿಂದ ಶಿಕ್ಷಣವನ್ನು ವಿಸ್ತಾರಗೊಳಿಸುವುದಕ್ಕಿಂತ ಶಿಕ್ಷಣದ ಸಂರಚನೆಯನ್ನು ಬಲಗೊಳಿಸುವುದು ಒಳ್ಳೆಯದು ಎಂದು ಸಮಿತಿ ಸಲಹೆ ಮಾಡಿತು. ಪ್ರಾಥಮಿಕ ಶಾಲೆಗಳು, ವೈದ್ಯಕೀಯ ಪರಿಹಾರ, ವಯಸ್ಕರ ಶಿಕ್ಷಣ, ಸಮೂಹ ಸಾಕ್ಷರತೆ, ಮನೋರಂಜನೆ ಮುಂತಾದ ಗ್ರಾಮೀಣ ಅಭಿವೃದ್ಧಿ ಕಾರ್ಯಗಳ ಕೇಂದ್ರಗಳಾಗಿ ಸೇವೆ ಸಲ್ಲಿಸುವಂತೆ ಮಾಡಲು ಪ್ರಾಥಮಿಕ ಶಿಕ್ಷಣದಲ್ಲಿ ಗುಣಾತ್ಮಕ ಸುಧಾರಣೆಯ ಅಗತ್ಯವಿದೆ ಎಂದು ಸಮಿತಿ ಹೇಳಿತು. ಹಾರ್ಟಾಗ್ ಸಮಿತಿಯ ಶಿಫಾರಸಿನಂತೆ ಭಾರತ ಸರ್ಕಾರ ವಿಸ್ತರಣೆಗೆ ಬದಲಾಗಿ ದೃಢೀಕರಣದ ನೀತಿಯನ್ನು ಅನುಸರಿಸಿತು.

ಮಾಧ್ಯಮಿಕ (ಸೆಕೆಂಡರಿ) ಶಿಕ್ಷಣಕ್ಕೆ ಸಂಬಂಧಿಸಿದಂತೆ, ಸೆಕೆಂಡರಿ ಶಿಕ್ಷಣದಲ್ಲಿ ಎರಡು ಮುಖ್ಯ ದೋಷಗಳಿವೆ ಎಂದು ಸಮಿತಿ ತಿಳಿಸಿತು. (1) ಮೆಟ್ರಿಕ್ಯುಲೇಷನ್ ಪರೀಕ್ಷೆಯ ಅತಿಯಾದ ಪ್ರಾಧಾನ್ಯ ಮತ್ತು (2) ಈ ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯ ಅನುತೀರ್ಣತೆಗಳು ಮಾಧ್ಯಮಿಕ ಶಾಲೆಗಳಲ್ಲಿ (middle schools) ವಿಭೇದೀಕೃತ ಮತ್ತು ವೈವಿಧ್ಯಪೂರ್ಣ ಪಠ್ಯಕ್ರಮಗಳನ್ನು ಆರಂಭಿಸುವುದರ ಮೂಲಕ ಸೆಕೆಂಡರಿ ಶಿಕ್ಷಣವನ್ನು ಸುಧಾರಣೆ ಮಾಡಬೇಕಾದ ಅಗತ್ಯವಿದೆ ಎಂದು ಸಮಿತಿ ಸಲಹೆ ಮಾಡಿತು. ಪ್ರೌಢಶಾಲೆಗಳಲ್ಲಿ ಔದ್ಯೋಗಿಕ ಮತ್ತು ವಾಣಿಜ್ಯ ಕೋರ್ಸ್‌ಗಳನ್ನು ಆರಂಭಿಸಬೇಕೆಂದೂ ಸಮಿತಿ ಸಲಹೆ ನೀಡಿತು. ಆದರೆ ಸೆಕೆಂಡರಿ ಶಿಕ್ಷಣವನ್ನು ಸುಧಾರಿಸಲು ಸರ್ಕಾರ ಯಾವುದೇ ದೃಢವಾದ (concrete) ಕ್ರಮವನ್ನು ತೆಗೆದುಕೊಳ್ಳದ್ದರಿಂದ ಸ್ಥಿತಿ ಮೊದಲಿನಂತೆಯೇ ಉಳಿಯಿತು.

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಅವುಗಳ ಗುಣಮಟ್ಟ ಕಡಿಮೆಯಾಗುತ್ತಿದೆ ಎಂದು ಸಮತಿ ಭಾವಿಸಿತು. ವಿಶ್ವವಿದ್ಯಾನಿಲಯಗಳು ಮತ್ತು ಅವುಗಳ ಸಂಬಂಧಿತ ಕಾಲೇಜುಗಳು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಂದಾಗಿ ತಮ್ಮ ಹೊರೆಯನ್ನು ಹೆಚ್ಚಿಸಿಕೊಳ್ಳುತ್ತಿವೆ ಎಂದು ಸಮಿತಿ ಹೇಳಿತು. ಆದ್ದರಿಂದ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಸಂಘಟಿತ ಪ್ರಯತ್ನಗಳನ್ನು ಮಾಡಬೇಕೆಂದು ಸಲಹೆ ಮಾಡಲಾಯಿತು.

ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಾಲೆಗೆ ಹಾಜರಾಗುತ್ತಿರುವ ಬಾಲಕ, ಬಾಲಕಿಯರ ಅಂಕಿ ಅಂಶಗಳ ಬಗ್ಗೆ ಬಹಳ ಅಂತರವಿದೆ ಎಂದು ಸಮಿತಿ ತೋರಿಸಿತು. ಆದ್ದರಿಂದ ಮಹಿಳೆಯರಿಗೆ ಸೂಕ್ತವಾದ ಪಠ್ಯಕ್ರಮವನ್ನು ಅಳವಡಿಸಬೇಕಾದ ಮತ್ತು ಸಾಕಷ್ಟು ವೇತನದೊಂದಿಗೆ ಮಹಿಳಾ ಶಿಕ್ಷಕಿಯರನ್ನು, ಮಹಿಳಾ ನಿರೀಕ್ಷಕರನ್ನು ನೇಮಿಸಬೇಕಾದ ಅಗತ್ಯವಿದೆಯೆಂದು ಸಮಿತಿ ಒತ್ತಿ ಹೇಳಿತು.

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡಬೇಕಾದ ಅಗತ್ಯವಿದೆಯೆಂದು ಸಮಿತಿ ಶಿಫಾರಸು ಮಾಡಿತು. ಇದರ ಪರಿಣಾಮವಾಗಿ, ಸೇವಾನಿರತ ಶಿಕ್ಷಕರಿಗೆ ಪುನಃಶ್ಚೇತನ ಕೋರ್ಸ್‌ಗಳನ್ನು ಏರ್ಪಡಿಸಲಾಯಿತು. ಶಿಕ್ಷಕರ ನೇಮಕಾತಿ, ತರಬೇತಿ ಮತ್ತು ಸೇವಾಸ್ಥಿತಿಗಳ ಬಗ್ಗೆ ಸಮಿತಿ ಮುಖ್ಯವಾದ ಶಿಫಾರಸುಗಳನ್ನು ಮಾಡಿತು. ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ (CBSE) ಪೂರ್ವ-ಪ್ರಾಥಮಿಕ ಮಟ್ಟದಿಂದ ಹೈಸ್ಕೂಲ್‌ವರೆಗಿನ ಶಿಕ್ಷಕರ ತರಬೇತಿಗೆ ಸಂಬಂಧಿಸಿದ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಂಡಿತು. ಹರಿಜನರು ಮತ್ತು ಮುಸ್ಲಿಂಮರು ಸಹ ಬೇರೆಯವರೊಡನೆ ಸೇರಿ ಅಧ್ಯಯನ ಮಾಡಬೇಕೆಂದು ಸಮಿತಿ ಸಲಹೆ ಮಾಡಿತು.

**ಅಬಟ್ ಮತ್ತು ವುಡ್ ಸಮಿತಿಯನ್ನು (1936)** ಶಿಕ್ಷಣದ ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ಕೆಲವು ಸಮಸ್ಯೆಗಳಿಗೆ ಮತ್ತು ಮುಖ್ಯವಾಗಿ ಔದ್ಯೋಗಿಕ ಶಿಕ್ಷಣದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ನೀಡಲು ನೇಮಿಸಲಾಯಿತು. ಸಾಮಾನ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಣ ಮಕ್ಕಳ ಸಹಜ ಆಸಕ್ತಿಗಳು ಮತ್ತು ಚಟುವಟಿಕೆಗಳನ್ನು ಆಧರಿಸಬೇಕಲ್ಲದೆ, ಪುಸ್ತಕ ಕಲಿಕೆಯನ್ನು ಹೆಚ್ಚಾಗಿ ಪ್ರೋತ್ಸಾಹಿಸಬಾರದು ಎಂದು ಸಮಿತಿ ಸಲಹೆ ಮಾಡಿತು. ಹೈಸ್ಕೂಲ್‌ಗಳಲ್ಲಿ ಕಲಾ ಶಿಕ್ಷಣಕ್ಕೆ ಗಮನ ಕೊಡಬೇಕೆಂದು ದೇಶದ ಕೈಗಾರಿಕೆ ಅಗತ್ಯಗಳಿಗೆ ಅನುಗುಣವಾಗಿ ಔದ್ಯೋಗಿಕ ಶಿಕ್ಷಣವನ್ನು ವಿಸ್ತರಿಸಬೇಕೆಂದು ಸಮಿತಿ ಹೇಳಿತು. ಕೃಷಿಯನ್ನೂ ಒಳಗೊಂಡಂತೆ ತಾಂತ್ರಿಕ ಶಿಕ್ಷಣ ನೀಡುವ ಟ್ರೇಡ್ ಶಾಲೆಗಳನ್ನು (ಜ್ಯೂನಿಯರ್ ಮತ್ತು ಸೀನಿಯರ್ ಔದ್ಯೋಗಿಕ ಶಾಲೆಗಳು) ಮಾಧ್ಯಮಿಕ (middle) ಮತ್ತು ಪ್ರೌಢಶಾಲೆ ಮಟ್ಟದಲ್ಲಿ ತೆರೆಯಬೇಕೆಂದು ಸಮಿತಿ ಶಿಫಾರಸು ಮಾಡಿತು. ಆಗ ಎರಡನೆ ವಿಶ್ವಯುದ್ಧ ಆರಂಭವಾದುದ್ದರಿಂದ ಈ ಶಿಫಾರಸುಗಳಿಗೆ ಬೇಕಾದಷ್ಟು ಗಮನ ನೀಡಲಾಗಲಿಲ್ಲ.

**ಜಾಕಿರ್ ಹುಸೇನ್ ಸಮಿತಿಯನ್ನು (1937)** ಮೂಲಶಿಕ್ಷಣ ಕಾರ್ಯಕ್ರಮವನ್ನು ರೂಪಿಸಲು ನೇಮಿಸಲಾಯಿತು. ಮೂಲ ಶಿಕ್ಷಣದ (Basic Education) ಅವಧಿ 7 ವರ್ಷದ್ದಾಗಿರಬಾರದೆಂದು ಮತ್ತು ಇದನ್ನು 7ರಿಂದ 14ವರ್ಷ ವಯಸ್ಸಿನ ಬಾಲಕ-ಬಾಲಕಿಯರಿಗೆ ಉಚಿತವಾಗಿ ನೀಡಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. ಮಾತೃಭಾಷೆ ಬೋಧನ ಮಾಧ್ಯಮವಾಗಿರಬೇಕು. ಪಠ್ಯಕ್ರಮದಲ್ಲಿ ಇಂಗ್ಲೀಷ್ ಬೋಧನೆಗೆ ಅವಕಾಶವಿರಲೇ ಕೂಡದು. ಇಡೀ ಶಿಕ್ಷಣ ಮೂಲಭೂತ ಕಸಬಿನ ಸುತ್ತ ಕೇಂದ್ರಿಕೃತವಾಗಿರಬೇಕು ಮತ್ತು ಶಿಶುವಿನ ಜೀವನದೊಂದಿಗೆ ನಿಕಟ ಸಂಬಂಧ ಹೊಂದಿರಬೇಕು.

Digitised by Bharatavani, CIIL

1939ರಲ್ಲಿ ಜನಪ್ರಿಯ ಸರ್ಕಾರಗಳು ಈ ಮೂಲಭೂತ ಶಿಕ್ಷಣದ ಕಾರ್ಯಕ್ರಮಕ್ಕೆ ಒಂದು ಅವಕಾಶ ಕೊಡಬೇಕೆಂದು ಆಸಕ್ತಿ ಹೊಂದಿದ್ದವು. ಬಾಂಬೆ ಪ್ರಾಂತ್ಯದಲ್ಲಿ ಕೆಲವು ಮೂಲಶಿಕ್ಷಣ ಶಾಲೆಗಳನ್ನು ಆರಂಭಿಸಲಾಯಿತು. ಆದರೆ ಎರಡನೇ ಮಹಾಯುದ್ಧದ ಆರಂಭ ಸರ್ಕಾರದ ಪ್ರಯತ್ನವಾಗಿದ್ದ ಈ ರಾಷ್ಟ್ರೀಯ ಮಹತ್ವ ಹೊಂದಿದ್ದ ಮಹಾನ್ ಪ್ರಯೋಗದ ವಿಕಾಸಕ್ಕೆ ಅಡ್ಡಿ ಉಂಟುಮಾಡಿತು.

ವಾರ್ಧಾ ಶಿಕ್ಷಣ ಕಾರ್ಯಕ್ರಮ (1938)ವನ್ನು ಪರಿಗಣಿಸಲು **ಕೇಂದ್ರಿಯ ಶಿಕ್ಷಣ ಸಲಹಾ ಮಂಡಳಿಯ ಮೊದಲನೆ ಸಮಿತಿ (1938)** ಯನ್ನು ನೇಮಿಸಲಾಯಿತು. ಮೂಲಶಿಕ್ಷಣದ ವಿಸ್ತರಣೆ ಬಗ್ಗೆ ಈ ಸಮಿತಿ ತನ್ನ ನಿಲುವನ್ನು ಪ್ರಸ್ತುತ ಪಡಿಸಿತು ಮತ್ತು ಪ್ರಾಂತೀಯ (ದೇಶೀಯ) ಭಾಷೆಗಳು ಬೋಧನ ಮಾಧ್ಯಮವಾಗಿರಬೇಕೆಂದು ಸಮಿತಿ ಸಲಹೆ ಮಾಡಿತು. ಮೂಲಶಿಕ್ಷಣ ಶಾಲೆಗಳಲ್ಲಿ ಇಂಗ್ಲೀಷ್‌ನ್ನು ಐಚ್ಛಿಕ ವಿಷಯವಾಗಿ ಬೋಧಿಸಬಾರದು. ಬಾಹ್ಯ ಪರೀಕ್ಷೆ ಇರಕೂಡದು.

**ಕೇಂದ್ರಿಯ ಶಿಕ್ಷಣ ಸಲಹಾ ಮಂಡಳಿಯ ಎರಡನೆ ಸಮಿತಿಯನ್ನು (1939)** ಮೂಲಶಿಕ್ಷಣದ ಮಹತ್ವವನ್ನು ಪರಿಗಣಿಸಲು ನೇಮಿಸಲಾಗಿತ್ತು. ಮೂಲಶಿಕ್ಷಣದ ಅವಧಿ 6ನೇ ವಯಸ್ಸಿನಿಂದ 14ನೇ ವಯಸ್ಸಿನವರೆಗೆ 8ವರ್ಷಗಳ ಕೋರ್ಸ್ ಆಗಿರಬೇಕೆಂದೂ ಮತ್ತು ಅದನ್ನು ಎರಡು ಹಂತಗಳಾಗಿ (ಜೂನಿಯರ್ ಬೇಸಿಕ್ ಮತ್ತು ಸೀನಿಯರ್ ಬೇಸಿಕ್) ಎಂದು ವಿಭಜಿಸಬೇಕೆಂದೂ ಈ ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿತು. ಮೂಲಶಿಕ್ಷಣದ ಮಹತ್ವವನ್ನು ಸಮಿತಿ ಪೂರ್ಣತಃ ಗುರುತಿಸಿತು ಮತ್ತು ಪೂರ್ವಪ್ರಾಥಮಿಕ ಶಿಕ್ಷಣದ ಬಗ್ಗೆ ಶಿಕ್ಷಕರಿಗೆ ತರಬೇತಿ ನೀಡುವ ಸೌಲಭ್ಯಗಳು ಇರಬೇಕೆಂದೂ ಮತ್ತು ದಕ್ಷತೆಯಿಂದ ಕೂಡಿದ ಬೇಸಿಕ್ (ಮೂಲಶಿಕ್ಷಣ) ಪೂರ್ವ ಶಾಲೆಗಳನ್ನು ಪ್ರೋತ್ಸಾಹಿಸಲು ಖಾಸಗಿ ನಿಯೋಗಗಳನ್ನು ಪ್ರಚೋದಿಸಬೇಕೆಂದೂ ಮತ್ತು ಕಡ್ಡಾಯ ಹಾಜರಿಗೆ ಬೇಕಾದ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಬೇಸಿಕ್ ಶಾಲೆಗಳಿಗೆ ದಾಖಲು ಮಾಡುವುದನ್ನು ಪ್ರೋತ್ಸಾಹಿಸಬೇಕೆಂದೂ ಈ ಸಮಿತಿ ಸಲಹೆ ಮಾಡಿತು. ಈ ಸಮಿತಿಗಳ ಶಿಫಾರಸುಗಳನ್ನು ಸ್ವೀಕರಿಸಿತ್ತೆಂಬುದು ಯುದ್ಧೋತ್ತರ ಶೈಕ್ಷಣಿಕ ಬೆಳವಣಿಗೆಯ ವರದಿಗಳಿಂದ ಸ್ಪಷ್ಟವಾಗುತ್ತದೆ.

**ವಯಸ್ಕರ ಶಿಕ್ಷಣ ಸಮಿತಿಯನ್ನು (1939)** ವಯಸ್ಕರ ಶಿಕ್ಷಣದ ಪ್ರಶ್ನೆಯನ್ನು ಸಾಮಾನ್ಯ ರೂಪದಲ್ಲಿ ಮತ್ತು ವಿಶೇಷವಾಗಿ ನಿರಕ್ಷರತೆಯ ನಿರ್ಮೂಲನಕ್ಕೆ ಮತ್ತು ಗ್ರಾಮೀಣ ಗ್ರಂಥಾಲಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಪರಿಗಣಿಸಲು ನೇಮಿಸಲಾಯಿತು. ಈ ಸಮಿತಿಯ ಶಿಫಾರಸುಗಳನ್ನು ಮೌಲ್ಯಮಾಪನ ಮಾಡಲು ನೇಮಿಸಲಾಯಿತು. ಭಾರತದಲ್ಲಿ ಸಾಮಾಜಿಕ ಸಂಶೋಧನೆ ಕೇಂದ್ರವೊಂದನ್ನು ಸ್ಥಾಪಿಸಬೇಕೆಂದು ಈ ಸಮಿತಿ ಸಲಹೆ ನೀಡಿತು. ಸಾಮಾಜಿಕ ಕಾರ್ಯಕರ್ತರಿಗೆ ತರಬೇತಿ ನೀಡಲು ಪ್ರಶಿಕ್ಷಣ ಶಾಲೆಯನ್ನು ತೆರೆಯಬೇಕೆಂದೂ ಮತ್ತು ಭಾರತದ ಪ್ರತಿ ವಿಶ್ವವಿದ್ಯಾನಿಲಯ ಪಠ್ಯೇತರ ಚಟುವಟಿಕೆ (Extra-mural) ವಿಭಾಗವನ್ನು ಹೊಂದಿರಬೇಕೆಂದೂ ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿತು.

**ಶಾಲಾ ಮಕ್ಕಳ ವೈದ್ಯಕೀಯ ಪರೀಕ್ಷೆ ಮತ್ತು ಶಾಲೆಗಳಲ್ಲಿ ಆರೋಗ್ಯಶಾಸ್ತ್ರ ಬೋಧನೆ ಬಗ್ಗೆ ಜಂಟಿ ಸಮಿತಿ (1941)**ಯನ್ನು ದೈಹಿಕ ಶಿಕ್ಷಣ, ವೈಯಕ್ತಿಕ ಮತ್ತು ಪರಿಸರ ಸಂಬಂಧಿ ಆರೋಗ್ಯ, ಶಾಲೆಗಳಲ್ಲಿ ಮತ್ತು ಪ್ರಶಿಕ್ಷಣ ಶಾಲಾ–ಕಾಲೇಜುಗಳಲ್ಲಿ ಆರೋಗ್ಯಶಾಸ್ತ್ರ ಈ ವಿಷಯಗಳನ್ನು ಪರಿಶೀಲಿಸಲು ನೇಮಿಸಲಾಯಿತು. ಈ ಸಮಿತಿಯ ಶಿಫಾರಸುಗಳು ಮೌಲ್ಯವುಳ್ಳದ್ದಾಗಿದ್ದವು. ಆದರೆ ಈ ಶಿಫಾರಸುಗಳಿಗೆ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳು ತೀವ್ರವಾಗಿ ಗಮನ ನೀಡಲಿಲ್ಲ.

ವಿವಿಧ ರೀತಿಯ ಕೋರ್ಸ್‌ಗಳಲ್ಲಿ ಪರೀಕ್ಷಾ ವ್ಯವಸ್ಥೆಯನ್ನು ಪರಿಶೀಲಿಸಲು **ಪರೀಕ್ಷಾ ಸಮಿತಿ (1942)**ಯನ್ನು ನೇಮಿಸಲಾಯಿತು. ಹೈಸ್ಕೂಲ್ ಮಟ್ಟದಲ್ಲಿ ಒಂದೇ ಒಂದು ಬಾಹ್ಯ ಪರೀಕ್ಷೆ ಇರಬೇಕೆಂದು ಮತ್ತು 3ವರ್ಷದ ಪದವಿ ಕೋರ್ಸ್ ಅಂತ್ಯದಲ್ಲಿ ಒಂದೇ ಒಂದು ಬಾಹ್ಯಪರೀಕ್ಷೆ ಇರಬೇಕೆಂದು ಸಮಿತಿ ಸಲಹೆ ಮಾಡಿತು. ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಪಡೆಯಲು ಇಂಟರ್ ಮೀಡಿಯೆಂಟ್ ಕೋರ್ಸ್‌ಗಳನ್ನು ಉಳಿಸಿಕೊಳ್ಳಬೇಕೆಂದೂ ಎರಡು ಬಾಹ್ಯಪರೀಕ್ಷೆಗಳು (ಇಂಟರ್ ಮೀಡಿಯೇಟ್ ಮತ್ತು ಅಂತಿಮ ಪರೀಕ್ಷೆ) ಅವಶ್ಯಕವೆಂದೂ ಸಮಿತಿ ಸೂಚಿಸಿತು. ಮೂರು ವರ್ಷಗಳ ಅವಧಿಯ ಪದವಿ ಕೋರ್ಸ್‌ಗೆ ವರ್ಗಾವಣೆ ಬಯಸುವ ವಿದ್ಯಾರ್ಥಿಗಳಿಗೆ ಬಾಹ್ಯಪರೀಕ್ಷೆ ಅವಶ್ಯಕವಾಗಬಹುದೆಂದೂ ಮತ್ತು ಕೋರ್ಸ್‌ನ ಪ್ರಥಮ ವರ್ಷದಲ್ಲಿ ಆಂತರಿಕ ಮತ್ತು ಬಾಹ್ಯ ಪರೀಕ್ಷೆಗಳೆರಡನ್ನೂ ನಡೆಸಬೇಕೆಂದೂ ಈ ಸಮಿತಿ ಅಭಿಪ್ರಾಯಪಟ್ಟಿತು. ವಿವಿಧ ಶೈಕ್ಷಣಿಕ ಮಂಡಳಿಗಳು ಮತ್ತು ವಿಶ್ವವಿದ್ಯಾನಿಲಯಗಳು ಈ ಸಲಹೆಯನ್ನು ತಮ್ಮ ಅಗತ್ಯಗಳಿಗೆ ಮತ್ತು ಮಾನದಂಡಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮಾಡಿಕೊಂಡು ಈಗಲೂ ಜಾರಿಗೊಳಿಸುತ್ತಿವೆ.

**ಶಿಕ್ಷಕರ ಮತ್ತು ಯುವ ನಾಯಕರ ಪೂರೈಕೆ, ನೇಮಕಾತಿ ಮತ್ತು ತರಬೇತಿ ಸಮಿತಿ (1942)**ಯನ್ನು ಕಲೆ, ಮತ್ತು ಕುಶಲಕಲೆಗಳು, ಸಂಗೀತ, ದೈಹಿಕ ಶಿಕ್ಷಣ ಮತ್ತು ಗೃಹಕೃತ್ಯ ಸಂಬಂಧಿತ ಕೋರ್ಸ್‌ಗಳ ಅಧ್ಯಯನ ವಿಷಯವಸ್ತುವಿನ ಬಗ್ಗೆ ಪರಿಶೀಲಿಸಲು ನೇಮಿಸಲಾಯಿತು. ಈ ಕೋರ್ಸ್‌ಗಳಿಗೆ ಬೇಕಾದ ಶಿಕ್ಷಕರ ನೇಮಕಾತಿಗೆ ಕ್ಷೇತ್ರವನ್ನು ವಿಸ್ತರಿಸಲು ಈ ಸಮಿತಿ ಅನೇಕ ಕ್ರಮಗಳನ್ನು ಸೂಚಿಸಿತು. ಈ ವಿಷಯಗಳ ಬೋಧನೆಯನ್ನು ಆಕರ್ಷಕವಾಗಿ ಮಾಡಲು ಸಮಿತಿ ಮೂರು ಅಗತ್ಯವಾದ ಉಪಾಯಗಳನ್ನು ಸಲಹೆ ಮಾಡಿತು. (i) ಹೆಚ್ಚಿನ ಪ್ರತಿಫಲ ದೊರೆಯುವಂತಾಗಲು ವೇತನ ಶ್ರೇಣಿಯನ್ನು ಉತ್ತಮಪಡಿಸುವುದು (ii) ಉತ್ತಮ ಶಾಲಾ ಕಟ್ಟಡಗಳು, (iii) ಎಲ್ಲಾ ವಿಧದ ಶಾಲೆಗಳಲ್ಲೂ ಸಣ್ಣ ತರಗತಿಗಳೊಂದಿಗೆ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

**ತಾಂತ್ರಿಕ ಶಿಕ್ಷಣ ಸಮಿತಿ (1943)**ಯನ್ನು ಅಂದಿನ ಸನ್ನಿವೇಶದಲ್ಲಿದ್ದ ತಾಂತ್ರಿಕ ಶಿಕ್ಷಣ ವ್ಯವಸ್ಥೆಯನ್ನು ಪರೀಕ್ಷಿಸಲು ಮತ್ತು ಮೌಲ್ಯಮಾಪನ ಮಾಡಲು ನೇಮಿಸಲಾಯಿತು. ತಾಂತ್ರಿಕ ಶಿಕ್ಷಣವನ್ನು ಯಾವುದೇ

Digitised by Bharatavani, CIIL

ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಪರಿಗಣಿಸಬೇಕೆಂದೂ ಮತ್ತು ಶೈಕ್ಷಣಿಕ ಸ್ವರೂಪದ ಯಾವುದೇ ಕೋರ್ಸ್‌ಗಿಂತ ಅದು ಕಳಪೆಯಾದುದಲ್ಲವೆಂದೂ ಸಮಿತಿ ಅಭಿಪ್ರಾಯಪಟ್ಟಿತು.

ಕಿರಿಯ ಪ್ರಾಥಮಿಕ ಶಾಲೆಯಿಂದ (Elementary School) ಸ್ನಾತಕೋತ್ತರ ಮಟ್ಟದವರೆಗಿನ ಕೃಷಿ ಶಿಕ್ಷಣದ ಸ್ಥಿತಿಯನ್ನು ಚರ್ಚಿಸಲು **ಕೃಷಿ ಶಿಕ್ಷಣ ಸಮಿತಿ(1944)**ಯನ್ನು ನೇಮಿಸಲಾಯಿತು. ಸಾಮಾನ್ಯ ಶಿಕ್ಷಣದ ಜೊತೆ ಜೊತೆಗೆ ಕೃಷಿ ಶಿಕ್ಷಣವನ್ನು ನೀಡಲು ಕೃಷಿ ಶಾಲೆಗಳನ್ನು, ಕಾಲೇಜುಗಳನ್ನು ಮತ್ತು ವಿಶ್ವವಿದ್ಯಾನಿಲಯದ ಕೃಷಿ ವಿಭಾಗಗಳನ್ನು ಆರಂಭಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. ಈ ಸಮಿತಿಯ ಶಿಫಾರಸುಗಳನ್ನು ಕೆಲವು ರಾಜ್ಯಗಳಲ್ಲಿ ಜಾರಿಗೆ ತರಲಾಯಿತು.

**ಧಾರ್ಮಿಕ ಶಿಕ್ಷಣ ಸಮಿತಿ(1944)**ಯನ್ನು ವಿವಿಧ ಕೋರ್ಸ್‌ಗಳಲ್ಲಿ ಧಾರ್ಮಿಕ ಶಿಕ್ಷಣದ ಸ್ಥಿತಿಗತಿಯ ಬಗ್ಗೆ ಚರ್ಚಿಸಲು ನೇಮಿಸಲಾಗಿತ್ತು. ಧರ್ಮವನ್ನು ಪರೀಕ್ಷೆಯ ವಿಷಯವಾಗಿ ಪರಿಗಣಿಸಬಾರದೆಂದೂ, ಆದರೆ ಒಂದು ಐಚ್ಛಿಕ ವಿಷಯವಾಗಿ ಪರಿಗಣಿಸಬೇಕೆಂದು ಸಮಿತಿ ಸೂಚಿಸಿತು. ಸಾಧ್ಯವಾದಷ್ಟು ಮಟ್ಟಿಗೆ ಮೂಲಭೂತವಾದ ನೈತಿಕ ಮತ್ತು ಸದಾಚಾರ (Ethical)ದ ನಿಯಮಗಳನ್ನು ಪಠ್ಯವಸ್ತುವಿನಲ್ಲಿ ಸೇರಿಸಿ, ಅವುಗಳಿಗೆ ಒತ್ತು ನೀಡಬೇಕೆಂದು ಸಮಿತಿ ಶಿಫಾರಸು ಮಾಡಿತು.

**ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು ಮತ್ತು ಉದ್ಯೋಗ ಆಯ್ಕೆಯಲ್ಲಿ ಅವರಿಗೆ ಸಲಹೆ ನೀಡುವುದಕ್ಕೆ ಸಂಬಂಧಿಸಿದ ಸಮಿತಿ(1945)**ಯನ್ನು ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆಮಾಡುವ ವಿಧಾನಗಳನ್ನು ಸಲಹೆ ಮಾಡಲು ನೇಮಿಸಲಾಯಿತು. ಮೊದಲ ಹಂತದ ಪ್ರವೇಶ ಆಯ್ಕೆಯನ್ನು 11+ವಯಸ್ಸಿನಲ್ಲಿ ಜೂನಿಯರ್ ಬೇಸಿಕ್ ಹಂತದಲ್ಲಿ ಮಾಡಬೇಕೆಂದು ಸಮಿತಿ ಶಿಫಾರಸು ಮಾಡಿತು. ಮುಂದಿನ ಹಂತದ ಆಯ್ಕೆಯನ್ನು 14+ ವಯಸ್ಸಿನ ಮಟ್ಟದಲ್ಲಿ ಸೀನಿಯರ್ ಬೇಸಿಕ್‌ನ ಅಂತ್ಯದಲ್ಲಿ ಮಾಡಬೇಕೆಂದು ಸಮಿತಿ ತಿಳಿಸಿತು.

**ಬೇಸಿಕ್ ಇಂಗ್ಲಿಷ್ ಸಮಿತಿ(1946)**ಯನ್ನು ವೈಜ್ಞಾನಿಕ ಮತ್ತು ತಾಂತ್ರಿಕ ಅಗತ್ಯಗಳನ್ನು ಪೂರೈಸಲು ಬೇಕಾದ ಬೇಸಿಕ್ ಇಂಗ್ಲೀಷ್‌ನ ಪ್ರಶ್ನೆಯನ್ನು ಪರಿಗಣಿಸಲು ನೇಮಿಸಲಾಯಿತು. ಈ ಸಮಿತಿಯ ಶಿಫಾರಸುಗಳಿಗೆ ವಿಶೇಷ ಗಮನ ನೀಡಲಾಯಿತು.

**ಭಾರತದ ಸೆಕೆಂಡರಿ ಶಾಲಾ ಪರೀಕ್ಷಾ ಪರಿಷತ್ ಬಗ್ಗೆ ಸಮಿತಿ (1946)**ಯನ್ನು ಸೆಕೆಂಡರಿ ಶಾಲಾ ಪರೀಕ್ಷೆ ವ್ಯವಸ್ಥೆಯನ್ನು ವಿವರಿಸಲು ನೇಮಿಸಲಾಯಿತು. ಮುಂದೆ ತಿಳಿಸುವ ಎರಡು ಉದ್ದೇಶಗಳನ್ನು (1) ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಪಡೆಯುವುದು ಮತ್ತು (2) ಸೆಕೆಂಡರಿ ಶಾಲೆಯನ್ನು ಪೂರೈಸಿದ ನಂತರ ಉದ್ಯೋಗ ಪಡೆಯುವುದು – ಪೂರೈಸಲು ಹೈಸ್ಕೂಲ್ ಕೋರ್ಸ್‌ನ ಕೊನೆಯಲ್ಲಿ ಒಂದು ಪರೀಕ್ಷೆ ನಡೆಸಬೇಕೆಂದು ಈ ಸಮಿತಿ ಸಲಹೆ ಮಾಡಿತು.

ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ವಿಶೇಷ ಸಂಸ್ಥೆಗಳಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ತರಬೇತಿಯನ್ನು ತತ್‌ಕ್ಷಣದಲ್ಲಿ ಸುಧಾರಣೆ ಮಾಡುವ ಮತ್ತು ವಿಸ್ತರಿಸುವ ಉದ್ದೇಶದಿಂದ **ವೈಜ್ಞಾನಿಕ ಮಾನವ ಶಕ್ತಿ ಸಮಿತಿ (1947)**ಯನ್ನು ನೇಮಿಸಲಾಯಿತು. ಉನ್ನತ ಮಟ್ಟದಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಸುಧಾರಣೆ ತರಲು ಈ ಸಮಿತಿ ಅನೇಕ ಕಾರ್ಯಗಳನ್ನು ಸಲಹೆ ಮಾಡಿತು. ಆದರೆ ಅದರ ಎಲ್ಲಾ ಶಿಫಾರಸುಗಳನ್ನು ಪ್ರಭಾವಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗಲಿಲ್ಲ.

**ಸಾಗರೋತ್ತರ ವಿದ್ಯಾರ್ಥಿ ವೇತನಗಳ ಸಮಿತಿ(1947)**ಯನ್ನು ಸಾಗರೋತ್ತರ ವಿದ್ಯಾರ್ಥಿವೇತನಗಳ ಕಾರ್ಯಕ್ರಮದ ಪ್ರಗತಿ ಮತ್ತು ವ್ಯಾಪ್ತಿಯನ್ನು ಪರಿಶೀಲಿಸಲು ನೇಮಿಸಲಾಯಿತು. ಆಗ ಇದ್ದ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಪ್ರಭಾವಕಾರಿಯಾದ ರೀತಿಯಲ್ಲಿ ಸುಧಾರಿಸಲು ಈ ಸಮಿತಿ ಕ್ರಮಗಳನ್ನು ಸೂಚಿಸಿತು. ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಅದಾಗಲೇ 1945ರಲ್ಲೆ ಆರಂಭಿಸಲಾಗಿತ್ತು. ಅದನ್ನು ಮುಂದುವರಿಸುವಂತೆ ಸಮಿತಿ ಸಲಹೆ ಮಾಡಿತು.

**ಭಾರತದಲ್ಲಿ ಉನ್ನತ ತಾಂತ್ರಿಕ ಸಂಸ್ಥೆಗಳ ವಿಕಾಸ ಸಮಿತಿ(1948)**ಯನ್ನು ಭಾರತದಲ್ಲಿ ಉನ್ನತ ತಾಂತ್ರಿಕ ಸಂಸ್ಥೆಗಳನ್ನು ವಿಕಾಸವನ್ನು ಪರೀಕ್ಷಿಸಲು ನೇಮಿಸಲಾಯಿತು. ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಭಾರತದಲ್ಲಿ ಯುದ್ಧೋತ್ತರ ಅಗತ್ಯಗಳ ಪೂರೈಕೆ ದೃಷ್ಟಿಯಿಂದ ಒಂದೊಂದು ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸುವುದು ಅವಶ್ಯಕವಾಗಿದೆ ಎಂದು ಈ ಸಮಿತಿ ಅಭಿಪ್ರಾಯಪಟ್ಟಿತು. ಸ್ವಲ್ಪ ಕಾಲದಲ್ಲಿಯೇ ಈ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರಲಾಯಿತು.

**ಭಾರತದಲ್ಲಿ ಸೆಕೆಂಡರಿ ಶಿಕ್ಷಣ ಸಮಿತಿ(1948)**ಯನ್ನು ಕೇಂದ್ರಿಯ ಶಿಕ್ಷಣ ಸಲಹಾ ಮಂಡಳಿ ತನ್ನ ವರದಿಯಲ್ಲಿ ವ್ಯಾಖ್ಯಾನಿಸಿದ್ದ ಸೆಕೆಂಡರಿ ಶಿಕ್ಷಣ ವ್ಯವಸ್ಥೆಯ ಗುರಿಗಳನ್ನು ಮತ್ತು ಉದ್ದೇಶಗಳನ್ನು ಪರೀಕ್ಷಿಸಲು ನೇಮಕ ಮಾಡಲಾಗಿತ್ತು. ಸೆಕೆಂಡರಿ ಶಾಲಾ ಮಟ್ಟದಲ್ಲಿ ರಾಷ್ಟ್ರಭಾಷೆ (ಹಿಂದಿ) ಮತ್ತು ಇಂಗ್ಲೀಷ್‌ನ ಸ್ಥಾನವನ್ನು ವ್ಯಾಖ್ಯಾನಿಸಲಾಯಿತು. ಪರೀಕ್ಷೆಯ ಸ್ವರೂಪ ಮತ್ತು ಬೋಧನಾ ವಿಧಾನಗಳು, ಸೆಕೆಂಡರಿ ಶಿಕ್ಷಣಕ್ಕೂ ಮೂಲ ಶಿಕ್ಷಣಕ್ಕೂ ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಣಕ್ಕೂ ಇರುವ ಸಂಬಂಧ ಈ ಅಂಶಗಳನ್ನು ಈ ಸಮಿತಿ ವಿವರಿಸಿತು. ಸೆಕೆಂಡರಿ ಶಾಲೆಗಳು ವಿವಿಧ್ದೇಶ ಸ್ವರೂಪದವಾಗಿರಬೇಕು. ಆದರೆ ವಿವಿಧೋದ್ದೇಶ ಶಾಲೆಗಳನ್ನು ನಿರುತ್ಸಾಹಗೊಳಿಸಬಾರದು ಎಂಬುವು ಈ ಸಮಿತಿಯ ಮುಖ್ಯ ಶಿಫಾರಸುಗಳಲ್ಲಿ ಸೇರಿದ್ದವು. ಆಗಿನ ಸಂದರ್ಭದಲ್ಲಿ ಸ್ವಲ್ಪಕಾಲ ಈ ವಿಷಯವಾಗಿ ಏನೂ ಆಗಲಿಲ್ಲವಾದ್ದರಿಂದ ಕೇಂದ್ರಿಯ ಶಿಕ್ಷಣ ಸಲಹಾ ಮಂಡಳಿ ತನ್ನ 16ನೇ ಸತ್ರದಲ್ಲಿ ಸೆಕೆಂಡರಿ ಶಿಕ್ಷಣ ದೇಶಕ್ಕೆ ಬಹಳ ಮುಖ್ಯವೆಂಬ ತನ್ನ ವಿಶ್ವಾಸವನ್ನು ಪುನರುಚ್ಚರಿಸಿ ಸೆಕೆಂಡರಿ ಶಿಕ್ಷಣದ ಪುನರ್ ವ್ಯವಸ್ಥೆಯನ್ನು ಇನ್ನೂ ವಿಳಂಬ ಮಾಡಬಾರದು ಎಂದು ತೀರ್ಮಾನಿಸಿತು. ಈ ಸಮಿತಿ ಸುಧಾರಣೆಗೆ ಸಲಹೆ ಮಾಡಿದ್ದ ಕ್ರಮಗಳನ್ನು ಕಾಲಕ್ರಮೇಣ ಭಾಗಶಃ ಜಾರಿಗೆ ತರಲಾಯಿತು.

Digitised by Bharatavani, CIIL

**ಭಾರತದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಹಣಕಾಸು ಒದಗಿಸುವ ಮಾರ್ಗಗಳು ಮತ್ತು ಸಾಧನಗಳನ್ನು ಕುರಿತ ಸಮಿತಿ**(1948) ಈ ಸಮಿತಿಯನ್ನು ಆಗಿನ ಸಂದರ್ಭದಲ್ಲಿ ಇದ್ದ ಆರ್ಥಿಕ (ಹಣಕಾಸು) ಸಂಪನ್ಮೂಲಗಳನ್ನು ಮತ್ತು ದೇಶದ ಎಲ್ಲಾ ಪ್ರಾಂತ್ಯಗಳು ಮತ್ತು ರಾಜ್ಯಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಪರಿಶೀಲಿಸಲು ನೇಮಿಸಲಾಯಿತು. ದೇಶದ ಅಭಾವದಿಂದಾಗಿ ಶೈಕ್ಷಣಿಕ ಅಭಿವೃದ್ಧಿಯನ್ನು ಅಡ್ಡಿಪಡಿಸಬಾರದು ಎಂದು ಸಮಿತಿ ಸೂಚಿಸಿತು.

ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು ಮಾಡುತ್ತಿದ್ದ ಪ್ರಾಥಮಿಕ ಶಿಕ್ಷಣದ ಆಡಳಿತವನ್ನು ಪರಿಗಣಿಸಿ ಸಲಹೆ ನೀಡಲು **ಪ್ರಾಥಮಿಕ ಶಿಕ್ಷಣದ ಆಡಳಿತದಲ್ಲಿ ರಾಜ್ಯಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಸಂಬಂಧವನ್ನು ಕುರಿತ ಸಮಿತಿ (1951)**ಯನ್ನು ನೇಮಿಸಲಾಗಿತ್ತು.

**ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆಯನ್ನು ಪರಿಗಣಿಸಲು ತಜ್ಞರ ಸಮಿತಿ(1953)**ಯನ್ನು ಹೊಸ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅಗತ್ಯವಾದ ವಿದ್ಯಾರ್ಥಿಗಳ ಮತ್ತು ವಿವಿಧ ಮಟ್ಟಗಳಲ್ಲಿ ಶೈಕ್ಷಣಿಕ ಸಂಸ್ಥೆಗಳ ಕನಿಷ್ಟ ಸಂಖ್ಯೆಯನ್ನು ಪರಿಗಣಿಸಲು ಉದ್ದೇಶದಿಂದ ನೇಮಿಸಲಾಗಿತ್ತು. ಮಧ್ಯಭಾರತದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಆರಂಭಿಸಬಹುದೆಂದು ಸಮಿತಿ ಅಭಿಪ್ರಾಯಪಟ್ಟಿತು.

**ಗ್ರಾಮೀಣ ಕ್ಷೇತ್ರಗಳಿಗೆ ಉನ್ನತ ಶಿಕ್ಷಣ ಸಮಿತಿ(1954)**ಯನ್ನು ಗ್ರಾಮೀಣ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣದ ಬಗ್ಗೆ ಒಂದು ವ್ಯಾಪಕ ಸಮೀಕ್ಷೆಯನ್ನು ಮಾಡಲು ಈ ಸಮಿತಿ ನೇಮಕಗೊಂಡಿತ್ತು. ಗ್ರಾಮೀಣ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣದ ಅವಶ್ಯಕತೆಗಳು ಮತ್ತು ಸಮಸ್ಯೆಗಳ ಬಗ್ಗೆ ಈ ಸಮಿತಿ ಚರ್ಚಿಸಿತು. ವಿಶ್ವವಿದ್ಯಾನಿಲಯಗಳ ವಿನ್ಯಾಸವನ್ನು ವಿವರಿಸಲಾಯಿತು. ಗ್ರಾಮೀಣ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣದ ಗುರಿಗಳು, ಸಂಘಟನೆ ಮತ್ತು ವಿಷಯವಸ್ತುವಿನ ಬಗ್ಗೆ ಸಮಿತಿ ಸಲಹೆಗಳನ್ನು ನೀಡಿತು.

**ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಶೈಕ್ಷಣಿಕ ಸಮಿತಿ(1955)**ಯನ್ನು ಈ ಎರಡು ದ್ವೀಪ ಸಮೂಹಗಳಲ್ಲಿ ಇದ್ದ ಶೈಕ್ಷಣಿಕ ವ್ಯವಸ್ಥೆಯನ್ನು ಅಧ್ಯಯನ ಮಾಡಲು ಅದನ್ನು ಸುಧಾರಿಸಿ ಪುನರ್‌ವ್ಯವಸ್ಥೆ ಮಾಡಲು ಯೋಜನೆಗಳನ್ನು ಶಿಫಾರಸು ಮಾಡಲು ನೇಮಿಸಲಾಗಿತ್ತು. ಈ ಸಮಿತಿ ಪ್ರಾಥಮಿಕ ಶಿಕ್ಷಣ, ಹೈಸ್ಕೂಲ್ ಶಿಕ್ಷಣ ಔದ್ಯೋಗಿಕ ಶಿಕ್ಷಣ ಮತ್ತು ಸಾಮಾಜಿಕ ಶಿಕ್ಷಣಗಳನ್ನು ಪರಿಶೀಲಿಸಿತು. ಆಡಳಿತ, ಬೋಧನಾ ಮಾಧ್ಯಮ, ಶಿಕ್ಷಕರು ಮತ್ತು ಸಾಮಾಜಿಕ ಶಿಕ್ಷಣ ಮುಂತಾದ ವಿಷಯಗಳನ್ನು ಸಮಿತಿ ತನ್ನ ವರದಿಯ ಪರಿಗಣನೆಗೆ ತೆಗೆದುಕೊಂಡಿತು. ಶಾಲೆಗಳು ಇಲ್ಲಿನ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳನ್ನು 1957–58ರೊಳಗೆ ತೆರೆಯಬೇಕೆಂದು ಮತ್ತು ಆಗ ಇದ್ದ ಎಲ್ಲಾ 19 ಪ್ರಾಥಮಿಕ ಶಾಲೆಗಳನ್ನು ಸೂಕ್ತ ಬೇಸಿಕ್ ಶಾಲೆಗಳಾಗಿ ಪರಿವರ್ತಿಸಬೇಕೆಂದು ಸಮಿತಿ ಶಿಫಾರಸು ಮಾಡಿತು. ಆಗ ಇದ್ದ ಸಹಶಿಕ್ಷಣ ಹೈಸ್ಕೂಲ್‌ಗಳನ್ನು ಬಾಲಕರಿಗಾಗಿ ಹೈಯರ್ ಸೆಕೆಂಡರಿ ವಿವಿಧೋದ್ದೇಶ ಶಾಲೆಗಳಾಗಿ ಪರಿವರ್ತಿಸಬಹುದೆಂದು ಮತ್ತು ಬೇರೊಂದು ಸ್ಥಾನದಲ್ಲಿ ಬಾಲಕಿಯರಿಗಾಗಿ ಸೀನಿಯರ್ ಬೇಸಿಕ್ ಶಾಲೆಯೊಂದನ್ನು ತೆರೆಯಬೇಕೆಂದು, ಟ್ರೇಡ್ ಶಾಲೆಯೊಂದನ್ನು ತೆರೆಯಬಹುದೆಂದು ಸಮಿತಿ ಸೂಚಿಸಿತು. ಸಾಮಾನ್ಯ ವಯಸ್ಕ ಅನಕ್ಷರಸ್ಥ ಜನತೆಯಲ್ಲದೆ, ಬೇರೆ ಬೇರೆ ಇಲಾಖೆ/ ವಿಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯ ಅನಕ್ಷರಸ್ತ ಕೂಲಿಕಾರರು ಮತ್ತು ನೌಕರರು ಇರುವುದರಿಂದ ಆ ದ್ವೀಪಗಳಲ್ಲಿ ಸಾಮಾಜಿಕ ಶಿಕ್ಷಣದ ತುರ್ತು ಅಗತ್ಯವಿದ್ದುದರಿಂದ ಸಮಿತಿ ಸಾಮಾಜಿಕ ಶಿಕ್ಷಣದ ಕ್ರಮಗಳನ್ನು ಸಲಹೆ ಮಾಡಿತು. ಈ ಸಮಿತಿಯ ಬಹಳಷ್ಟು ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲಾಯಿತು.

**ಮೂಲಶಿಕ್ಷಣದ ಮೌಲ್ಯಮಾಪನ ಸಮಿತಿ(1956)**ಯು ಬೇರೆ ಬೇರೆ ರಾಜ್ಯಗಳಲ್ಲಿ ಇದ್ದ ಮೂಲಶಿಕ್ಷಣದ ಸ್ಥಿತಿಗತಿಗಳನ್ನು ಕುರಿತು ಸಮೀಕ್ಷೆ ಮಾಡಲು ಮತ್ತು ಪ್ರಭಾವಕಾರಿ ಸುಧಾರಣೆ ಮಾಡಲು ಮಾರ್ಗಗಳನ್ನು ಕುರಿತು ಚಿಂತಿಸಲು ನೇಮಕಗೊಂಡಿತು. ಸಮಿತಿ ಈ ಮುಂದಿನವುಗಳ ಪಾತ್ರಕ್ಕೆ ಸಂಬಂಧಿಸಿದಂತೆ ಶಿಫಾರಸುಗಳನ್ನು ಮಾಡಿತು. (i) ಭಾರತ ಸರ್ಕಾರ (ii) ರಾಜ್ಯ ಸರ್ಕಾರಗಳು (iii) ವಿಶ್ವವಿದ್ಯಾನಿಲಯಗಳು (iv) ಆಡಳಿತ ವರ್ಗ (v) ಶಿಕ್ಷಕ ತರಬೇತಿ ಸಂಸ್ಥೆಗಳು (vi) ಬೇಸಿಕ್ ಶಾಲೆಗಳು. ಈ ಸಮಿತಿಯ ಶಿಫಾರಸಿನಂತೆ ನವದೆಹಲಿಯಲ್ಲಿ ರಾಷ್ಟ್ರೀಯ ಮೂಲಶಿಕ್ಷಣ ಸಂಸ್ಥೆಯನ್ನು 1956ರಲ್ಲಿ ಸ್ಥಾಪಿಸಲಾಯಿತು. 6ರಿಂದ 14ವರ್ಷ ವಯಸ್ಸಿನ ಮಕ್ಕಳ ಶಿಕ್ಷಣ ಮೂಲ ಶಿಕ್ಷಣ ರೂಪದ್ದಾಗಿರಬೇಕೆಂದು ಇರುವ ಕಿರಿಯ ಪ್ರಾಥಮಿಕ ಶಾಲೆಗಳನ್ನು (Elementary) ಮೂಲಶಿಕ್ಷಣ ಶಾಲೆಗಳಾಗಿ ಪರಿವರ್ತಿಸುವ ಹೊಸ ಬೇಸಿಕ್ ಶಾಲೆಗಳನ್ನು ಆರಂಭಿಸುವ, ಮೂಲಶಿಕ್ಷಣದ ಬಗ್ಗೆ ಸಾಹಿತ್ಯವನ್ನು ಸೃಷ್ಟಿಸುವ ಮತ್ತು ಮೂಲಶಿಕ್ಷಣ ಶಾಲೆಗಳ ಶಿಕ್ಷಕರಿಗೆ ತರಬೇತಿ ಕೊಡುವ ಕಾರ್ಯಕ್ರಮಗಳನ್ನು ಶಕ್ತಿಯುತವಾಗಿ ಕೈಗೊಳ್ಳಬೇಕೆಂಬುದನ್ನು ಕೇಂದ್ರ ಮತ್ತು ರಾಜ್ಯಸರ್ಕಾರಗಳು ತತ್ವಶಃ ಆಗ ಒಪ್ಪಿಕೊಂಡವು. ಬಹಳ ಮಟ್ಟಿಗೆ ಈ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಂಡರು ಸಹ ಮೂಲಶಿಕ್ಷಣದಲ್ಲಿ ಹೆಚ್ಚಿನ ಪ್ರಗತಿಯೇನೂ ಆಗಲಿಲ್ಲ.

**ಮೂರು ವರ್ಷಗಳ ಪದವಿ ಕೋರ್ಸ್‌ನ ಅಂದಾಜು ಸಮಿತಿ(1956)**ಯನ್ನು ಉನ್ನತ ಶಿಕ್ಷಣದಲ್ಲಿ ಸಂರಚನಾತ್ಮಕ ಸುಧಾರಣೆಗಳನ್ನು ಮಾಡಲು ಅಂದರೆ ಎಲ್ಲಾ ವಿಶ್ವವಿದ್ಯಾನಿಲಯಗಳು 3ವರ್ಷ ಪದವಿಯ ಹೊಸ ವ್ಯವಸ್ಥೆಗೆ ಬದಲಾವಣೆ ಮಾಡಲು ನೇಮಿಸಲಾಯಿತು. ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾಧ್ಯವಾದಷ್ಟು ವಿಶ್ವವಿದ್ಯಾನಿಲಯಗಳು 3ವರ್ಷಗಳ ಪದವಿ ಕೋರ್ಸ್‌ನ್ನು ಆರಂಭಿಸಬೇಕೆಂದು ಮತ್ತು ಪದವಿ–ಪೂರ್ವ (ಪ್ರಿ–ಯುನಿವರ್ಸಿಟಿ) ತರಗತಿಯ ಅಂತ್ಯದಲ್ಲಿ ಪಬ್ಲಿಕ್ ಪರೀಕ್ಷೆ ಇರಬೇಕೆಂದು ಸಮಿತಿ ಸೂಚಿಸಿತು. ಕಾಲೇಜು ಶಿಕ್ಷಣದ ದಿಶಾಮಟ್ಟವನ್ನು ಸಾಮಾನ್ಯರೂಪದಲ್ಲಿ ಸುಧಾರಿಸಬೇಕಾಗಿರುವುದರಿಂದ ಪಠ್ಯವಸ್ತುಗ್ಗಳನ್ನು ಪರಿಷ್ಕರಿಸುವ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಒತ್ತಡವನ್ನು ಕಡಿಮೆಮಾಡುವ, ಉಪನ್ಯಾಸಕ ವಿದ್ಯಾರ್ಥಿಗಳ ಅನುಪಾತವನ್ನು

Digitised by Bharatavani, CIIL

ಉತ್ತಮಪಡಿಸುವ, ಪ್ರಯೋಗಶಾಲೆಗಳನ್ನು ಬಲಗೊಳಿಸುವ, ಗ್ರಂಥಾಲಯಗಳಲ್ಲಿ ಸಮೃದ್ಧಿಗೊಳಿಸುವ ಅಗತ್ಯವಿದೆ ಎಂದು ಅದಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಮಿತಿ ಸಲಹೆ ಮಾಡಿತು.

**ಬೆನಾರಸ್ ವಿಶ್ವವಿದ್ಯಾನಿಲಯ ಪರಿಶೀಲನಾ ಸಮಿತಿ(1957)–** ಈ ವಿಶ್ವವಿದ್ಯಾನಿಲಯದಲ್ಲಿದ್ದ ಶಿಸ್ತಿನ ಸಾಮಾನ್ಯ ಸ್ಥಿತಿಯನ್ನು ಕುರಿತು ಮತ್ತು ಆಡಳಿತ ಮತ್ತು ಬೋಧಕ ಸಿಬ್ಬಂದಿಯಲ್ಲಿ ಸರಿಯಾದ ನಡತೆ ಮತ್ತು ಶಿಸ್ತನ್ನು ಖಚಿತಪಡಿಸಿಕೊಳ್ಳಲು ಆಗಿನ ಸಂದರ್ಭದಲ್ಲಿದ್ದ ನಿಯಮಗಳು ಮತ್ತು ಕ್ರಮಗಳ ಪರ್ಯಾಪ್ತತೆ ಮತ್ತು ಪರಣಾಮಕಾರಿತ್ವವನ್ನು ಪರಿಶೀಲಿಸಲು ಈ ಸಮಿತಿಯನ್ನು ನೇಮಿಸಲಾಗಿತ್ತು. ವಿಶ್ವವಿದ್ಯಾನಿಲಯದಲ್ಲಿನ ಶೈಕ್ಷಣಿಕ ಜೀವನವನ್ನು ಮತ್ತು ಕಾರ್ಯವನ್ನು ಉತ್ತಮಪಡಿಸಲು ಅವಶ್ಯಕವಾದ ಕ್ರಮಗಳನ್ನು ಮತ್ತು ಪರಿಹಾರಗಳನ್ನು ಸೂಚಿಸುವುದು. ಈ ಸಮಿತಿಯ ಗುರಿಯಾಗಿದ್ದಿತು. ಸಮಿತಿ ಈ ಎಲ್ಲಾ ವಿಷಯಗಳ ಬಗೆ ಚರ್ಚಿಸಿ ವಿದ್ಯಾರ್ಥಿಗಳ ದಾಖಲಾತಿ, ಮಹಿಳಾ ಕಾಲೇಜು ಮತ್ತು ಸಂಗೀತ ಕಾಲೇಜು, ಪರೀಕ್ಷೆಗಳು ಮತ್ತು ಪರೀಕ್ಷಕರು – ಈ ವಿಷಯಗಳ ಬಗ್ಗೆ ಸಲಹೆಗಳನ್ನು ನೀಡಿತು.

**ಮೂಲಶಿಕ್ಷಣೋತ್ತರ ಶಾಲೆಗಳನ್ನು ಮತ್ತು ವಿವಿಧೋದ್ದೇಶ ಶಾಲೆಗಳನ್ನು ಸಮಗ್ರಗೊಳಿಸುವಿಕೆಯನ್ನು ಕುರಿತ ಸಮಿತಿ(1957)**ಯನ್ನು ವಿವಿಧೋದ್ದೇಶ ಶಾಲೆಗಳಲ್ಲಿ ಮತ್ತು ಆಗ ಇದ್ದ ಮೂಲಶಿಕ್ಷಣೋತ್ತರ ಶಾಲೆಗಳಲ್ಲಿ ಇದ್ದ ಪಠ್ಯವಸ್ತುಗಳನ್ನು ತುಲನಾತ್ಮಕವಾಗಿ ಅಧ್ಯಯನಮಾಡಿ ಅವುಗಳಲ್ಲಿರುವ ಸಾಮಾನ್ಯ ಅಂಶಗಳನ್ನು ಗುರ್ತಿಸಿ, ಈ ಎರಡೂ ವಿಧದ ಶಾಲೆಗಳನ್ನು ಪರಸ್ಪರ ಹತ್ತಿರ ತರುವ ಸಾಧ್ಯತೆಯನ್ನು ಪರಿಶೀಲಿಸಲು ನೇಮಿಸಲಾಗಿತ್ತು. ಬೇಸಿಕ್ ಶಾಲೆಗಳಲ್ಲಿ ಕಸಬುಗಳ ಅಧ್ಯಯನ, ಮಾನವಿಕ(Humanities) ಮತ್ತು ವಿಜ್ಞಾನ ವಿಷಯಗಳ ಅಧ್ಯಯನದ ಮಟ್ಟವನ್ನು ಹೆಚ್ಚಿಸುವುದು, ವಿವಿಧೋದ್ದೇಶ ಶಾಲೆಗಳಾಗಿ ಪರಿವರ್ತಿಸಲು ಶಾಲೆಗಳ ಆಯ್ಕೆ ಮತ್ತು ಸಾಮಾನ್ಯ ಪರೀಕ್ಷೆ ವ್ಯವಸ್ಥೆ – ಈ ಅಂಶಗಳ ಬಗ್ಗೆ ಈ ಸಮಿತಿ 10 ಶಿಫಾರಸುಗಳನ್ನು ಮಾಡಿತು.

ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಲು ಮತ್ತು ಅವಶ್ಯಕ ಸುಧಾರಣೆಗಳನ್ನು ತರಲು ಕ್ರಮಗಳನ್ನು ಸಲಹೆ ಮಾಡಲು ಪರೀಕ್ಷಾ ಸುಧಾರಣೆಗಳ ಸಮಿತಿ(1957)ಯನ್ನು ನೇಮಿಸಲಾಯಿತು. ಸಮಿತಿ ಅಂಕ ನೀಡಿಕೆ, ಮಾಪನ ಮಾಡುವಿಕೆ, ವಿದ್ಯಾರ್ಥಿಗಳ ವರ್ಗೀಕರಣ ಮತ್ತು ಪರೀಕ್ಷೆಯ ಮಾಧ್ಯಮ ಮತ್ತು ಪರೀಕ್ಷೆ ಸುಧಾರಣೆಗಳ ಬಗ್ಗೆ ಚರ್ಚಿಸಿ ಶಿಫಾರಸುಗಳನ್ನು ಮಾಡಿತು.

**ಭಾರತೀಯ ಪರೀಕ್ಷಾ ಸುಧಾರಣ ಪ್ರಾಯೋಜನೆ ಸಮಿತಿ(1958)**ಯನ್ನು ಅಮೇರಿಕಾ ದೇಶದಲ್ಲಿರುವ ಪರೀಕ್ಷಾ ವ್ಯವಸ್ಥೆಯನ್ನು ಅಧ್ಯಯನ ಮಾಡುವ ಉದ್ದೇಶದಿಂದ ಸಂಯುಕ್ತ ಸಂಸ್ಥಾನಗಳ (USA) ದೇಶಕ್ಕೆ ಭೇಟಿ ನೀಡಲು ನೇಮಿಸಲಾಗಿತ್ತು. ಈ ಸಮಿತಿ ಬೋಧನಾ ವಿಧಾನಗಳು ಮತ್ತು ಪರೀಕ್ಷಾ ಸುಧಾರಣೆಗಳ ಬಗ್ಗೆ ವಿವಿಧ ಶಿಫಾರಸುಗಳನ್ನು ಮಾಡಿತು.

**ವಾಣಿಜ್ಯ ಶಿಕ್ಷಣಕ್ಕಾಗಿ ವಿಶೇಷ ಸಮಿತಿ(1958)**ಯನ್ನು ಶಿಕ್ಷಣದ ವಿವಿಧ ಮಟ್ಟಗಳಲ್ಲಿ ವಾಣಿಜ್ಯ ಶಿಕ್ಷಣವನ್ನು ಕುರಿತು ಚರ್ಚಿಸಲು ನೇಮಿಸಲಾಯಿತು. ವಿಕಾಸಗೊಳ್ಳುತ್ತಿದ್ದ ದೇಶದ ಆರ್ಥಿಕ ವ್ಯವಸ್ಥೆಯ ಅಗತ್ಯಗಳಿಗೆ ಮತ್ತು ಸಂಪನ್ಮೂಲಗಳಿಗೆ ಸೂಕ್ತವಾಗುವ ರೀತಿಯಲ್ಲಿ ವಾಣಿಜ್ಯ ಶಿಕ್ಷಣವನ್ನು ಸುಧಾರಿಸಲು ಈ ಸಮಿತಿ ಶಿಫಾರಸುಗಳನ್ನು ಮಾಡಿತು.

**ಮಹಿಳಾ ಶಿಕ್ಷಣದ ರಾಷ್ಟ್ರೀಯ ಸಮಿತಿ(1958)**ಯನ್ನು 6ರಿಂದ 17ವರ್ಷ ವಯಸ್ಸಿನ ಹೆಣ್ಣು ಮಕ್ಕಳ ಪ್ರಾಥಮಿಕ ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಮಟ್ಟಗಳ ಶಿಕ್ಷಣದಲ್ಲಿನ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಸಲಹೆ ನೀಡಲು ನೇಮಿಸಲಾಗಿತ್ತು. ಈ ಸಮಿತಿ ಪ್ರಾಥಮಿಕ ಮತ್ತು ಸೆಕೆಂಡರಿ ಹಂತಗಳಲ್ಲಿ ಬಾಲಕ–ಬಾಲಕಿಯರ ನಡುವೆ ಇರುವ ಅಂತರವನ್ನು ನಿವಾರಿಸಲು ವಿಶೇಷ ಕ್ರಮಗಳನ್ನು ಶಿಫಾರಸು ಮಾಡಿತು. ಇದಲ್ಲದೆ ಈ ಸಮಿತಿ ವೃತ್ತಿಪರ ಮತ್ತು ಔದ್ಯೋಗಿಕ ಶಿಕ್ಷಣಕ್ಕೆ ಪಠ್ಯಕ್ರಮ ಮತ್ತು ಪಠ್ಯವಸ್ತುವನ್ನು ವಿವರಿಸಿತು. ವಯಸ್ಕ ಮಹಿಳೆಯರಿಗೆ ವಿಶೇಷ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದಕ್ಕೂ ಒತ್ತು ನೀಡಲಾಯಿತು. ಪ್ರಾಥಮಿಕ, ಮಾಧ್ಯಮಿಕ ಮತ್ತು ವಿಶ್ವವಿದ್ಯಾನಿಲಯದ ಮಟ್ಟಗಳಲ್ಲಿ ಮಹಿಳಾ ಶಿಕ್ಷಣದಲ್ಲಿರುವ ಸ್ಥಗಿತತೆ ಮತ್ತು ವ್ಯರ್ಥತೆಯ ಸಮಸ್ಯೆಗಳು, ಪೂರ್ವಪ್ರಾಥಮಿಕ ಶಿಕ್ಷಣ, ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರ ಶಿಕ್ಷಣ, ಅಂಗವಿಕಲ ಬಾಲಕಿಯರ ಶಿಕ್ಷಣ, ಸಾಮಾಜಿಕ ಶಿಕ್ಷಣ, ಶಿಕ್ಷಕಿಯರ ತರಬೇತಿ ಮತ್ತು ಉದ್ಯೋಗ – ಈ ವಿಶೇಷ ಸಮಸ್ಯೆಗಳನ್ನು ಈ ಸಮಿತಿ ವಿಸ್ತಾರವಾಗಿ ಚರ್ಚಿಸಿತು. ಮಹಿಳೆಯರ ಉನ್ನತ ಶಿಕ್ಷಣಕ್ಕಾಗಿ ಪ್ರತ್ಯೇಕ ನಿಧಿಯನ್ನು ಇಡಬೇಕೆಂದು ಈ ಸಮಿತಿ ವಿಶ್ವವಿದ್ಯಾನಿಲಯ ಆಯೋಗವನ್ನು ಒತ್ತಾಯಿಸಿತು. ಮಹಿಳಾ ಶಿಕ್ಷಣದ ಈ ಅಂಶವನ್ನು ನೋಡಿಕೊಳ್ಳಲು ಶಿಕ್ಷಣ ಮಂತ್ರಾಲಯದಲ್ಲಿ ಮಾರ್ಗದರ್ಶನ, ನಾಯಕತ್ವ ಮತ್ತು ಸಲಹೆ ನೀಡಲು ಮಹಿಳಾ ಶಿಕ್ಷಣದ ರಾಷ್ಟ್ರೀಯ ಪರಿಷತ್ತನ್ನು ಸ್ಥಾಪಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. ರಾಜ್ಯ ಬಾಲಕಿಯರ ಮತ್ತು ಮಹಿಳಾ ಶಿಕ್ಷಣ ಪರಿಷತ್ತುಗಳನ್ನು ಸ್ಥಾಪಿಸಬೇಕೆಂದೂ ಮತ್ತು ಬಾಲಕಿಯರ ಶಿಕ್ಷಣವನ್ನು ನೋಡಿಕೊಳ್ಳಲು ಶಿಕ್ಷಣ ನಿರ್ದೇಶನಾಲಯಗಳಲ್ಲಿ ಜಂಟಿ–ನಿರ್ದೇಶಕರನ್ನು ನೇಮಿಸಬೇಕೆಂದೂ ಈ ಸಮಿತಿ ಸಲಹೆ ಮಾಡಿತು. ಈ ರಾಷ್ಟ್ರೀಯ ಸಮಿತಿ ಮಾಡಿದ್ದ ಶಿಫಾರಸುಗಳನ್ನು ಭಾರತ ಸರ್ಕಾರ ಸಾಮಾನ್ಯರೂಪದಲ್ಲಿ ಒಪ್ಪಿಕೊಂಡಿತು ಮತ್ತು ನಂತರದಲ್ಲಿ ಆರಂಭವಾದ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ತೀರ್ಮಾನಿಸಿತು.

ಶೈಕ್ಷಣಿಕ ಸಂಸ್ಥೆಗಳಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬೋಧನೆಯ ಅಪೇಕ್ಷಣೀಯತೆ ಮತ್ತು ಸೂಕ್ಷ್ಮತೆಯನ್ನು ಹಾಗೂ ಸಾಮಾನ್ಯ ಪಠ್ಯಕ್ರಮದಲ್ಲಿ ಅದರ ಸ್ಥಾನವನ್ನು ಪರಿಗಣಿಸುವ

Digitised by Bharatavani, CIIL

ಉದ್ದೇಶದಿಂದ ಧಾರ್ಮಿಕ ಮತ್ತು ನೈತಿಕ ಬೋಧನೆ ಸಮಿತಿಯನ್ನು 1959ರಲ್ಲಿ ನೇಮಿಸಲಾಯಿತು. ಈ ಸಮಿತಿ ಪ್ರಾಥಮಿಕ, ಮಾಧ್ಯಮಿಕ ಮತ್ತು ವಿಶ್ವವಿದ್ಯಾನಿಲಯ ಮಟ್ಟಗಳಲ್ಲಿ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳ ಬೋಧನೆಯ ಬಗ್ಗೆ ಪರಿಗಣಿಸಿತು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬೋಧಿಸಬೇಕೆಂದು ಶಿಫಾರಸು ಮಾಡಿತು. ಮಹಾನ್ ಧಾರ್ಮಿಕ ಮುಖಂಡರ, ಸಂತರ, ಅನುಭಾವಿಗಳ (mystics) ಮತ್ತು ದಾರ್ಶನಿಕರ ಸಂಕ್ಷಿಪ್ತ ಜೀವನ ಮತ್ತು ಬೋಧನೆಗಳನ್ನು ಒಳಗೊಂಡ ಸೂಕ್ತ ಪುಸ್ತಕಗಳನ್ನು ಎಲ್ಲಾ ಹಂತಗಳಿಗೂ (ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯದ ಹಂತದವರೆಗೆ) ಸಿದ್ಧಪಡಿಸಬೇಕೆಂದು ಸಮಿತಿ ಸಲಹೆ ಮಾಡಿತು. ಈ ಪುಸ್ತಕಗಳು ಎಲ್ಲಾ ತರಗತಿಗಳ ವಿದ್ಯಾರ್ಥಿಗಳಿಗೆ ಸೂಕ್ತವಾಗಿರಬೇಕು ಮತ್ತು ಈ ವಿಷಯ ಎಲ್ಲರಿಗೂ ಅಧ್ಯಯನದ ವಿಷಯವಾಗಿರಬೇಕೆಂಬ ಸಲಹೆಯನ್ನು ಈ ಸಮಿತಿ ನೀಡಿತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಗಣಿತಶಾಸ್ತ್ರವನ್ನು ಕುರಿತ ಪುನರಾವಲೋಕನ ಸಮಿತಿಯನ್ನು 1959**ರಲ್ಲಿ ನೇಮಿಸಲಾಗಿತ್ತು. ಶೈಕ್ಷಣಿಕ ಸಂಸ್ಥೆಗಳಲ್ಲಿ ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ ವಿಷಯಗಳ ಅಂದು ಇದ್ದ ಸ್ಥಿತಿಯನ್ನು ಕುರಿತು ಚರ್ಚಿಸುವುದು ಈ ಸಮಿತಿಯ ಪಠ್ಯವಸ್ತುವನ್ನು ಸುಧಾರಣೆ ಮಾಡುವುದು ಮತ್ತು ಆಧುನಿಕೀಕರಣಗೊಳಿಸುವಿಕೆ ಮತ್ತು ಮಾದರಿ ಪಠ್ಯವಸ್ತುವನ್ನು ಸಿದ್ಧಪಡಿಸುವುದು. ಸಂಶೋಧನೆ ಮತ್ತು ತರಬೇತಿಯಲ್ಲಿನ ಪ್ರವೃತ್ತಿಗಳು ಮತ್ತು ಸಂಶೋಧನೆಯ ಸೌಲಭ್ಯಗಳನ್ನು ಚರ್ಚಿಸಿತು. ಸಂಸ್ಥೆಗಳ ನಡುವೆ ಸಂಯೋಜನೆಯನ್ನು ಸಾಧಿಸುವ ಮಾರ್ಗಗಳು ಮತ್ತು ಸಾಧನಗಳು ಹಾಗೂ ಬೋಧನೆ ಮತ್ತು ಸಂಶೋಧನೆಯ ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯೇತರ ಕೇಂದ್ರಗಳನ್ನು ಸಮಿತಿ ಮೌಲ್ಯಮಾಪನ ಮಾಡಿತು. ಗಣಿತಶಾಸ್ತ್ರಕ್ಕೆ ಬೇಕಾದ ಅಪೇಕ್ಷಿತವಾದ ತರಬೇತಿಗೆ ಮಾನದಂಡವನ್ನು ಸೂಚಿಸಲು ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಮಾದರಿ ಪಠ್ಯವಸ್ತುವನ್ನು ಪ್ರತಿ 5 ವರ್ಷಗಳಿಗೊಮ್ಮೆ ಪುನರಾವಲೋಕನ ಮಾಡಿ, ಪರಿಷ್ಕರಿಸಬೇಕೆಂದು ಸಮಿತಿ ಸಲಹೆ ನೀಡಿತು. ಈ ವಿಷಯ ಕ್ಷೇತ್ರದಲ್ಲಿ ತರಬೇತಿ ಮತ್ತು ಸಂಶೋಧನೆಯ ಸೌಲಭ್ಯಗಳನ್ನು ವಿಸ್ತರಿಸಲು ನಂತರದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ವಿಶೇಷವಾಗಿ ಜೀವರಸಾಯನಶಾಸ್ತ್ರದಲ್ಲಿ ತರಬೇತಿ ಮತ್ತು ಸಂಶೋಧನೆಯ ಸ್ಥಿತಿಯನ್ನು ಪಠ್ಯವಸ್ತುಗಳ ಮತ್ತು ಪರೀಕ್ಷೆಗಳ ಸ್ಥಿತಿಯನ್ನು ಪುನರಾವಲೋಕನ ಮಾಡಲು **ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಜೀವ–ರಸಾಯನಶಾಸ್ತ್ರ ಪುನರಾವಲೋಕನ ಸಮಿತಿಯನ್ನು (1959)** ನೇಮಿಸಲಾಯಿತು. ಜೀವ–ರಸಾಯನಶಾಸ್ತ್ರಕ್ಕೆ ಸ್ವತಂತ್ರ ವಿಭಾಗದ ಸ್ಥಾನಮಾನವಿರಬೇಕೆಂದು ಸಮಿತಿ ಸಲಹೆ ಮಾಡಿತು. ಸ್ನಾತಕ ಮಟ್ಟದಲ್ಲಿ ಜೀವ–ರಸಾಯನಶಾಸ್ತ್ರದ ಬೋಧನೆಯ ಅಗತ್ಯವಿಲ್ಲವೆಂದೂ, ಆದರೆ ಅದನ್ನು ಸ್ನಾತಕೋತ್ತರ ಹಂತದಲ್ಲಿ ಮಾತ್ರ ಬೋಧಿಸಬೇಕೆಂದೂ ಮತ್ತು ಅದು ಎರಡು ವರ್ಷದವರೆಗೆ ಮುಂದುವರಿದು M.sc ಪದವಿಗೆ ಅವಕಾಶ ಕಲ್ಪಿಸಬೇಕೆಂದು ಸಮಿತಿ ಸಲಹೆ ಮಾಡಿತು. M.sc ಗಿಂತ ಕೆಳಗಿನ ಮಟ್ಟದಲ್ಲಿ ಜೀವ–ರಸಾಯನಶಾಸ್ತ್ರವನ್ನು ಬೋಧಿಸುವುದರಿಂದ ಜೀವ–ರಸಾಯನಶಾಸ್ತ್ರದ ಆಧಾರವಾದ ಮೂಲಭೂತ ವಿಷಯಗಳಾದ ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರದ ಅಧ್ಯಯನದಿಂದ ವಿದ್ಯಾರ್ಥಿಯ ಗಮನವನ್ನು ಬೇರೆ ಕಡೆಗೆ ತಿರುಗಿಸುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟಿತು. ಈ ಸಮಿತಿಯ ಶಿಫಾರಸುಗಳ ವಿವಿಧ ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಗಮನ ಸೆಳೆದವು.

**ದೈಹಿಕ ಶಿಕ್ಷಣ, ಮನೋರಂಜನೆ ಮತ್ತು ಯುವ ಯೋಗಕ್ಷೇಮದ ಕ್ಷೇತ್ರದಲ್ಲಿ ನಡೆಯುತ್ತಿದ್ದ ಯೋಜನೆಗಳ ಸಂಯೋಜನೆ ಮತ್ತು ಸಮಗ್ರತಾ ಸಮಿತಿ (1959)** ದೈಹಿಕ ಶಿಕ್ಷಣಕ್ಕಾಗಿ ಆರಂಭವಾಗಿದ್ದ ವಿವಿಧ ಯೋಜನೆಗಳ ಅನುಕೂಲಗಳನ್ನು ಮತ್ತು ಅವುಗಳ ಪಾತ್ರವನ್ನು ವಿವರಿಸಲು ನೇಮಿಸಲಾಯಿತು. ಶೈಕ್ಷಣಿಕ ಸಂಸ್ಥೆಗಳಲ್ಲಿ ಕೈಗೊಳ್ಳುತ್ತಿರುವ ಮನೋರಂಜನೆ, ಚಾರಿತ್ರ್ಯ ನಿರ್ಮಾಣ ಮತ್ತು ಶಿಸ್ತಿನ ಅಭ್ಯಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಸಮಿತಿ ಚರ್ಚಿಸಿತು ಮತ್ತು ಸಂಬಂಧಪಟ್ಟ ಯೋಜನೆಗಳನ್ನು ಮತ್ತು ಚಟುವಟಿಕೆಗಳನ್ನು ವಿಕಾಸಗೊಳಿಸಲು ಮಾರ್ಗಗಳನ್ನು ಮತ್ತು ಸಾಧನಗಳನ್ನು ಸಲಹೆ ಮಾಡಲಾಯಿತು. ಸ್ಕೌಟಿಂಗ್, ಪರ್ವತಾರೋಹಣ, ನೃತ್ಯ, ನಾಟಕ, ಸಂಗೀತ, ಸಾಮಾಜಿಕ ಸೇವೆ, ಕಾರ್ಯಾಗಾರ ಚಟುವಟಿಕೆಗಳು ಮುಂತಾದವುಗಳನ್ನು ಒಳಗೊಂಡ ಕಡ್ಡಾಯ ಮತ್ತು ಐಚ್ಛಿಕ ವಿಷಯಗಳಿಗೆ ಒತ್ತು ಕೊಡಲಾಯಿತು. ಶಿಕ್ಷಣದ ವಿವಿಧ ಮಟ್ಟಗಳಲ್ಲಿ ಈ ಸಮಿತಿಯ ಕೆಲವು ಶಿಫಾರಸುಗಳನ್ನು ಜಾರಿಗೊಳಿಸಲಾಯಿತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಸಸ್ಯಶಾಸ್ತ್ರದ ಬಗ್ಗೆ ಪುನರಾವಲೋಕನ ಸಮಿತಿಯನ್ನು (1959)** ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಸಸ್ಯಶಾಸ್ತ್ರದ ಬೋಧನೆ ಮತ್ತು ಸಂಶೋಧನೆಯ ಸ್ಥಿತಿಯನ್ನು ಪುನರಾವಲೋಕನ ಮಾಡುವ ಉದ್ದೇಶದಿಂದ ನೇಮಿಸಲಾಗಿತ್ತು. ಈ ಸಮಿತಿ ಪಠ್ಯವಸ್ತುಗಳ ಸುಧಾರಣೆ ಮತ್ತು ಬೋಧನ ವಿಧಾನಗಳಲ್ಲಿ ಉಪನ್ಯಾಸಕರುಗಳಿಗೆ ದಿಶಾ ನಿರ್ದೇಶನದ ಅಗತ್ಯವನ್ನು ಮನಗಂಡಿತು. ಆದ್ದರಿಂದ ಈ ಸಮತಿ ಪಠ್ಯಕ್ರಮ ಸುಧಾರಣೆ, ಬಟಾನಿಕಲ್ ಗಾರ್ಡನ್‌ಗಳ ವಿಕಾಸ, ವಿಶ್ವವಿದ್ಯಾನಿಲಯಗಳ ಸಸ್ಯಶಾಸ್ತ್ರ ವಿಭಾಗಗಳಲ್ಲಿ ಮತ್ತು ಸಂಬಂಧಪಟ್ಟ ಕಾಲೇಜುಗಳಲ್ಲಿ ಹೆಚ್ಚು ಎತ್ತರದಲ್ಲಿರುವ ಜೀವಿಗಳ ಜೀವಶಾಸ್ತ್ರದ ಬೋಧನೆಯನ್ನು ಆರಂಭಿಸುವುದು. ಈ ವಿಷಯಗಳ ಬಗ್ಗೆ ಶಿಫಾರಸುಗಳನ್ನು ಮಾಡಿತು.

ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ರಸಾಯನಶಾಸ್ತ್ರದ ಬಗ್ಗೆ ಪುನರಾವಲೋಕನ ಸಮಿತಿ (1960)ಯನ್ನು ಉನ್ನತ ಶಿಕ್ಷಣ ಮಟ್ಟದಲ್ಲಿ ರಸಾಯನಶಾಸ್ತ್ರದಲ್ಲಿ ಅದುವರೆಗೆ ಸಾಧಿಸಿದ ವಿಕಾಸವನ್ನು ಪುನರಾವಲೋಕನ ಮಾಡಲು ನೇಮಿಸಲಾಗಿತ್ತು. ರಸಾಯನಶಾಸ್ತ್ರ ಬೋಧನೆಯ ಮಟ್ಟವನ್ನು ಸುಧಾರಿಸಲು ಈ ಸಮಿತಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಮಾದರಿ ಪಠ್ಯವಸ್ತುಗಳನ್ನು ಸಲಹೆ ಮಾಡಿತು. ರಸಾಯನಶಾಸ್ತ್ರದಲ್ಲಿ M.sc ಕೋರ್ಸ್‌ನ ಅವಧಿ

Digitised by Bharatavani, CIIL

B.sc ನಂತರದ ಎರಡು ವರ್ಷಗಳಾಗಿರಬೇಕೆಂದು ಇದು ಸಲಹೆ ಮಾಡಿತು. P.hd ಪದವಿಯನ್ನು ಪಡೆಯಲು 5ವರ್ಷಗಳ ಗರಿಷ್ಟ ಅವಧಿಯನ್ನು ನಿಗದಿಪಡಿಸಬೇಕು. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಸಮಿತಿಯ ಈ ಸಲಹೆಯನ್ನು ಒಪ್ಪಿಕೊಳ್ಳಲಾಯಿತು. ಸಕ್ರಿಯವಾಗಿರುವ ಸಂಶೋಧನ ಕೇಂದ್ರಗಳನ್ನು ರಸಾಯನಶಾಸ್ತ್ರ ಸಂಶೋಧನೆಯ ಪ್ರಮುಖ ಕೇಂದ್ರಗಳನ್ನಾಗಿ ಉನ್ನತೀಕರಿಸಬೇಕು ಮತ್ತು ಅವುಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತರಲು ಪ್ರಯತ್ನಿಸಬೇಕೆಂದೂ ಈ ಸಮಿತಿ ಶಿಫಾರಸು ಮಾಡಿತು.

ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಬೋಧನೆಯ ಮತ್ತು ಬೋಧನ ವಿಧಾನಗಳ ಗುಣಮಟ್ಟವನ್ನು ಮೌಲ್ಯಮಾಪನ ಮಾಡಲು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಬೋಧನ ಮಾಧ್ಯಮಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್ ಬೋಧನೆಯನ್ನು ಬಲಗೊಳಿಸಲು ಶಿಫಾರಸು ಮಾಡಲು **ಇಂಗ್ಲಿಷ್ ಪುನರಾವಲೋಕನ ಸಮಿತಿಯನ್ನು (1960)** ನೇಮಿಸಲಾಗಿತ್ತು. ಈ ಸಮಿತಿ ಶಾಲೆ, ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ (ಐಚ್ಛಿಕ ಮತ್ತು ಆನರ್ಸ್ ವಿಷಯವಾಗಿ) ಇಂಗೀಷ್ ಬೋಧನಾ ವಿಷಯವಾಗಿ ಮತ್ತು ಸಂಶೋಧನಾ ವಿಷಯವಾಗಿ ಇಂಗ್ಲಿಷ್‌ನ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸುಗಳನ್ನು ಮಾಡಿತು. ಪ್ರಿಯೂನಿವರ್ಸಿಟಿಯ ಮೊದಲನೆ ವರ್ಷದಲ್ಲಿ ಇಂಗ್ಲಿಷ್ ಸ್ಥಾನದ ಬಗ್ಗೆ ಮತ್ತು ಇಂಟರ್ ಮೀಡಿಯೇಟ್ ಪದವಿ ಕೋರ್ಸ್‌ಗಳಲ್ಲಿ ಇಂಗ್ಲಿಷ್‌ನ ಸ್ಥಾನದ ಬಗ್ಗೆಯೂ ಚರ್ಚಿಸಲಾಯಿತು. ಇಂಗ್ಲಿಷ್ ಒಂದು ಐಚ್ಛಿಕ ವಿಷಯವಾಗಿರಬೇಕೆಂದೂ ಮತ್ತು ಪದವಿ ಕೋರ್ಸ್‌ಗಳಿಗೆ ಆನರ್ಸ್ ವಿಷಯವಾಗಿರಬೇಕೆಂದು ಸಮಿತಿ ಸಲಹೆ ನೀಡಿತು. ಸಂಶೋಧನ ಕಾರ್ಯ ಸಾಮಾನ್ಯವಾಗಿ ವಿಶ್ವವಿದ್ಯಾನಿಲಯಗಳ ಬೋಧನ ವಿಭಾಗಗಳಿಗೆ ಸೀಮಿತವಾಗಿರಬೇಕು. ಈ ಸಮಿತಿಯ ಶಿಫಾರಸುಗಳನ್ನು ಅನೇಕ ವಿಶ್ವವಿದ್ಯಾನಿಲಯಗಳು ಜಾರಿಗೊಳಿಸಿದವು.

**ಶಿಕ್ಷಣಶಾಸ್ತ್ರ ಪುನರಾವಲೋಕನ ಸಮಿತಿ (1960)** – ಶಿಕ್ಷಣಶಾಸ್ತ್ರದಲ್ಲಿ ವಿವಿಧ ಕೋರ್ಸ್‌ಗಳನ್ನು ನಿರ್ಧರಿಸಲು, ವಿಶೇಷವಾಗಿ ಶಿಕ್ಷಣಶಾಸ್ತ್ರದ ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಅಧ್ಯಯನದ ಉದ್ದೇಶಗಳನ್ನು ನಿರೂಪಿಸಲು ಮತ್ತು ವಿಶೇಷ ಪರಿಣತಿಗಳನ್ನು ಕೋರ್ಸ್‌ಗಳ ಅವಧಿಯನ್ನು ನಿರ್ಧರಿಸಲು, ಮತ್ತು ಭಾರತೀಯ ವಿಶ್ವವಿದ್ಯಾನಿಲಯಗಳ ಶಿಕ್ಷಣಶಾಸ್ತ್ರ ವಿಭಾಗಗಳಲ್ಲಿ ಬೋಧನೆ ಮತ್ತು ಸಂಶೋಧನೆಯ ಮಟ್ಟವನ್ನು ಮೌಲ್ಯಮಾಪನ ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಈ ಸಮಿತಿ ಶಿಕ್ಷಣಶಾಸ್ತ್ರದ ಸ್ನಾತಕೋತ್ತರ ಕೋರ್ಸ್, ಶಿಕ್ಷಣದಲ್ಲಿ ಸಂಶೋಧನೆ ಮತ್ತು ಶಿಕ್ಷಣಶಾಸ್ತ್ರ ವಿಭಾಗಗಳಿಗೆ ಇತರ ಸೌಲಭ್ಯಗಳು ಮತ್ತು ಸಿಬ್ಬಂದಿ – ಈ ಅಂಶಗಳ ಬಗ್ಗೆ ಶಿಫಾರಸು ಮಾಡಿತು. ಈ ಸಮಿತಿ ಪಠ್ಯವಸ್ತುವಿನ ವಿವಿಧ ಭಾಗಗಳ ಬೋಧನೆಗೆ ವಿಧಾನಗಳನ್ನು ಶಿಫಾರಸು ಮಾಡುವುದರ ಜೊತೆಗೆ ಪರೀಕ್ಷೆಗಳನ್ನು ನಡೆಸಲು ಮಾರ್ಗದರ್ಶಿ ಸೂತ್ರಗಳನ್ನು ಸೂಚಿಸಿತು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಬೇಕಾದ ಗರಿಷ್ಟ ಅಂಕಗಳನ್ನು ಮತ್ತು ಪರೀಕ್ಷೆ ನಡೆಸಲು ಪ್ರಶ್ನೆಪತ್ರಿಕೆಗಳನ್ನು ಒಂದುಗೂಡಿಸುವುದನ್ನು ಸಲಹೆ ಮಾಡಲಾಯಿತು. ಶಿಕ್ಷಣಶಾಸ್ತ್ರದಲ್ಲಿ ಸಂಶೋಧನೆಯ ಬಗ್ಗೆಯೂ ಸಲಹೆ ನೀಡಲಾಯಿತು. ಈ ಸಮಿತಿಯ ಬಹುತೇಕ ಶಿಫಾರಸುಗಳನ್ನು ವಿವಿಧ ವಿಶ್ವವಿದ್ಯಾನಿಲಯಗಳು ಜಾರಿಗೊಳಿಸಿದವು.

ಸಾಮಾನ್ಯ ಶಿಕ್ಷಣದ ಸ್ಥಿತಿಗತಿ ಬಗ್ಗೆ ವರದಿಯನ್ನು ಅಂತಿಮಗೊಳಿಸಲು **ಸಾಮಾನ್ಯ ಶಿಕ್ಷಣ ಸಮಿತಿ (1960)** ನೇಮಕಗೊಂಡಿತು. ಈ ಸಮಿತಿ ಸಾಮಾನ್ಯ ಶಿಕ್ಷಣದ ಹಿಂದೆ ಇರುವ ಮೂಲಭೂತ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಅದರಲ್ಲಿ ಮಾನವಿಕ, ಸಾಮಾಜಿಕ ವಿಜ್ಞಾನಗಳು ಮತ್ತು ಪ್ರಾಕೃತಿಕ ವಿಜ್ಞಾನಗಳಿಗೆ ಸಮಾನ ಮಹತ್ವ ಕೊಡುವುದಕ್ಕೆ ಒತ್ತು ನೀಡಿತು. ಸಾಮಾನ್ಯ ಶಿಕ್ಷಣವನ್ನು ಮಾನಕೀಕರಣ (ಏಕರೂಪತೆಗೆ) ಗೊಳಿಸುವುದಕ್ಕೆ ಒಲವು ತೋರಿಸಲಿಲ್ಲ ಮತ್ತು ಈ ಕ್ಷೇತ್ರದಲ್ಲಿ ಪ್ರಯೋಗಶೀಲತೆಯ ಮಹತ್ವವನ್ನು ಒತ್ತಿ ಹೇಳಿತು.

**ಸಮಾಜ ಕಾರ್ಯ ಶಿಕ್ಷಣದ ಪುನರಾವಲೋಕನ ಸಮಿತಿ (1960)** ಸ್ನಾತಕೋತ್ತರ ಮಟ್ಟದಲ್ಲಿ ಸಮಾಜಕಾರ್ಯದ ಬೋಧನೆ, ತರಬೇತಿ ಮತ್ತು ಸಂಶೋಧನೆಗಳ ಅಂದಿನ ಸ್ಥಿತಿಗತಿಯನ್ನು ಪರೀಕ್ಷಿಸಲು ಮತ್ತು ಅವುಗಳನ್ನು ಸುಧಾರಿಸಲು ಕ್ರಮಗಳನ್ನು ಸಲಹೆ ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಸಮಿತಿ ಈ ಅಂಶಗಳ ಬಗ್ಗೆ ಇದ್ದ ಮಿತಿಗಳನ್ನು ಪರೀಕ್ಷಿಸಿ ಅವುಗಳನ್ನು ಸುಧಾರಿಸಲು ಕ್ರಮಗಳನ್ನು ಸಲಹೆ ಮಾಡಿತು. ಈ ಸಮಿತಿ ಕ್ಷೇತ್ರ ಕಾರ್ಯ, ತರಬೇತಿ, ಕಾರ್ಯಕ್ರಮಗಳು ಮತ್ತು ಸಮಾಜ ಕಾರ್ಯದಲ್ಲಿ ಪದವಿ ಕಾರ್ಯಕ್ರಮದ ಬಗ್ಗೆಯೂ ಒತ್ತು ನೀಡಿತು. ಪದವಿ ಮಟ್ಟದ ಸಮಾಜಕಾರ್ಯದ ಶಿಕ್ಷಣ ಸ್ನಾತಕೋತ್ತರ ಮಟ್ಟದ ಕಾರ್ಯಕ್ರಮಕ್ಕೆ ಸಾಕಷ್ಟು ಆಧಾರವನ್ನು ಒದಗಿಸಬೇಕೆಂದು ಸಮಿತಿ ಹೇಳಿತು.

ಬಾಲಕ ಮತ್ತು ಬಾಲಕಿಯರಿಗೆ ಪಠ್ಯಕ್ರಮಗಳನ್ನು ಪ್ರತ್ಯೇಕಗೊಳಿಸುವುದರ ಬಗ್ಗೆ ಸಮಿತಿಯನ್ನು (1961) ಶಿಕ್ಷಣದ ಎಲ್ಲಾ ಮಟ್ಟಗಳಲ್ಲಿ ಬಾಲಕಿಯರಿಗಾಗಿ ಪಠ್ಯಕ್ರಮದ ಸಮಸ್ಯೆಯನ್ನು ವ್ಯಾಪಕ ರೀತಿಯಲ್ಲಿ ಪರೀಕ್ಷಿಸಲು ನೇಮಿಸಲಾಗಿತ್ತು. ಈ ಸಮಿತಿ ಮಹಿಳೆಯರಿಗೆ ಲಿಂಗ ಸಮಾನತೆ ಮತ್ತು ಸಹಶಿಕ್ಷಣ ಸಮಸ್ಯೆಗಳ ಬಗ್ಗೆ ಚರ್ಚಿಸಿತು. ಪ್ರಾಥಮಿಕ ಮಟ್ಟದಲ್ಲಿ ಪ್ರತ್ಯೇಕ ಪಠ್ಯಕ್ರಮಗಳ ಬಗ್ಗೆ ಸಲಹೆಗಳನ್ನು ನೀಡಲಾಯಿತು. ಔದ್ಯೋಗಿಕ ಶಿಕ್ಷಣಕ್ಕೆ ಒತ್ತು ನೀಡಲಾಯಿತು. ಸಾಮಾನ್ಯ ಶಿಕ್ಷಣದಲ್ಲಿ ಕೋರ್ಸ್‌ಗಳ ವಿಬೇಧೀಕರಣವನ್ನು ನಿರೂಪಿಸಲಾಯಿತು. ಲಲಿತಕಲೆಗಳು, ಗಣಿತ ಮತ್ತು ವಿಜ್ಞಾನ ವಿಷಯಗಳ ಬೋಧನೆಗೆ ಮಹತ್ವ ನೀಡಲಾಯಿತು. ವಿವಿಧ ಮಟ್ಟಗಳಿಗೆ ಬೇಕಾದ ಪಠ್ಯಪುಸ್ತಕಗಳಿಗೆ ಸಲಹೆಗಳನ್ನು ಕೊಡಲಾಯಿತು.

ರಾಷ್ಟ್ರೀಯ ಜೀವನದೊಂದಿಗೆ ಶೈಕ್ಷಣಿಕ ಪ್ರಕ್ರಿಯೆಗಳನ್ನು ಸಮಗ್ರಗೊಳಿಸುವುದನ್ನು ಪ್ರೋತ್ಸಾಹಿಸಲು ಶಿಕ್ಷಣದ ಪಾತ್ರವನ್ನು ಪರಿಗಣಿಸುವುದನ್ನು ಅಧ್ಯಯನ ಮಾಡಲು **ಭಾವೈಕ್ಯತೆ (Emotional Integration) ಸಮಿತಿಯನ್ನು (1961)** ನೇಮಿಸಲಾಯಿತು.

Digitised by Bharatavani, CIIL

ಸಾಮಾನ್ಯ ಮಟ್ಟದಲ್ಲಿ ಯುವ ಜನಾಂಗಕ್ಕೆ ಮತ್ತು ವಿಶೇಷವಾಗಿ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಧನಾತ್ಮಕ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಈ ಸಮಿತಿ ಸಲಹೆ ನೀಡಿತು. ಈ ಮುಂದಿನ ವಿಷಯಗಳ ಬಗ್ಗೆ ಸಮಿತಿ ಶಿಫಾರಸುಗಳನ್ನು ಮಾಡಿತು. (i) ಭಾಷೆ ಮತ್ತು ಲಿಪಿ (ii) ಶಾಲಾ ಶಿಕ್ಷಣ (iii) ಶಿಕ್ಷಕ ಮತ್ತು ಪಠ್ಯಕ್ರಮ (iv) ಪಠ್ಯಪುಸ್ತಕಗಳು (v) ವಿಶ್ವವಿದ್ಯಾನಿಲಯ ಶಿಕ್ಷಣ (vi) ಯುವ ಕಾರ್ಯಕ್ರಮಗಳು (vii) ವಯಸ್ಕರ ಶಿಕ್ಷಣ ಮತ್ತು (viii) ಇತರ ವಾಚನ ಸಾಮಗ್ರಿಗಳು. ಇಡೀ ದೇಶಕ್ಕೆ ಸಾಮಾನ್ಯ ವಿನ್ಯಾಸವಿರುವ ಶಿಕ್ಷಣಕ್ಕೆ ಸಮಿತಿ ಸಲಹೆ ಮಾಡಿತು. ಶಿಕ್ಷಣವನ್ನು ವಿದ್ಯಾರ್ಥಿಗಳ ಅಭಿಸಾಮರ್ಥ್ಯಗಳು ಮತ್ತು ಸಾಮರ್ಥ್ಯಗಳಿಗೆ ಹೊಂದುವಂತೆ ಹಾಗೂ ದೇಶದ ಆರ್ಥಿಕ ಮತ್ತು ಸಾಮಾಜಿಕ ಅಗತ್ಯಗಳಿಗೆ ಸೂಕ್ತವಾಗುವಂತೆ ಯೋಜಿಸಬೇಕೆಂದು ಸಮಿತಿ ಅಭಿಪ್ರಾಯಪಟ್ಟಿತು. ವಿದ್ಯಾರ್ಥಿಗಳಿಗೆ ಉದ್ಯೋಗಗಳ ಅಥವಾ ಅರೆ–ಉದ್ಯೋಗಗಳ ತರಬೇತಿಗೆ ಸೇರಿಕೊಳ್ಳಲು ಅನುಕೂಲವಾಗುವಂತೆ ಶಿಕ್ಷಣದಲ್ಲಿ ಹೆಚ್ಚಿನ ಅಂತಿಮ ಘಟ್ಟಗಳಿರಬೇಕೆಂಬುದು ಈ ಸಮಿತಿಯ ಸೂಚನೆಯಾಗಿತ್ತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯ ವಿಜ್ಞಾನದ ಪುನರಾವಲೋಕನ ಸಮಿತಿ (1961)** ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ವಿಜ್ಞಾನದ ವಿಭಾಗಗಳಲ್ಲಿ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟದ ಸುಧಾರಣೆಯ ಪ್ರಶ್ನೆಯನ್ನು ಪರಿಗಣಿಸಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಪಠ್ಯಕ್ರಮದಲ್ಲಿ ಸಿದ್ಧಾಂತ ಮತ್ತು ಆಚರಣೆಯ ತಾರತಮ್ಯಾತ್ಮಕ ಸ್ಥಾನವೂ ಸೇರಿದಂತೆ ವಿವಿಧ ಕೋರ್ಸ್‌ಗಳ ಬೇರೆ ಬೇರೆ ಅಧ್ಯಯನ ವಿಷಯಗಳಿಗೆ ಸರ್ವಸಮ್ಮತವಾದ ಪಠ್ಯವಸ್ತುಗಳನ್ನು ಈ ಸಮಿತಿ ರೂಪಿಸಿತು. ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾ ಮತ್ತು ಪದವಿ ಕೋರ್ಸ್‌ಗಳ ಸಮಾನತೆಯ ಪ್ರಶ್ನೆಯ ಬಗ್ಗೆಯೂ ಸಮಿತಿ ಚರ್ಚಿಸಿತು. ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಡೆಯುವ ಅವಕಾಶ ಮತ್ತು ವಿಚಾರಸಂಕಿರಣ ವಿಚಾರಗೋಷ್ಠಿಗಳು ಮತ್ತು ಪುನಃಶ್ಚೇತನ ಕಾರ್ಯಕ್ರಮಗಳನ್ನು ಪದೋನ್ನತಿಗಾಗಿ ಸಲಹೆ ಮಾಡಲಾಯಿತು. ಗ್ರಂಥಾಲಯ ವಿಜ್ಞಾನದಲ್ಲಿ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟವನ್ನು ಹೆಚ್ಚಿಸುವ ವಿಚಾರವೂ ಸಮಿತಿಯ ವ್ಯಾಪ್ತಿಯಲ್ಲಿ ಬಂದವು. ಬೇರೆ ಬೇರೆ ಗ್ರಂಥಾಲಯ ವಿಜ್ಞಾನ ವಿಭಾಗಗಳು ಮತ್ತು ಗ್ರಂಥಾಲಯಗಳ ನಡುವೆ ಸಹಕಾರದ ಬಗ್ಗೆಯೂ ಚರ್ಚಿಸಲಾಯಿತು. ಈ ಸಮಿತಿಯ ಶಿಫಾರಸುಗಳನ್ನು ಅನೇಕ ವಿಶ್ವವಿದ್ಯಾನಿಲಯಗಳು ಕಾರ್ಯರೂಪಕ್ಕೆ ತಂದವು.

**ವಿಶ್ವವಿದ್ಯಾನಿಲಯಗಳಿಗೆ ಮಾದರಿ ಕಾಯ್ದೆ ಬಗ್ಗೆ ಸಮಿತಿಯನ್ನು (1961)** ವಿಶ್ವವಿದ್ಯಾನಿಲಯಗಳ ಆಡಳಿತಾತ್ಮಕ ಸಂರಚನೆಯನ್ನು ಚರ್ಚಿಸಲು ನೇಮಿಸಲಾಗಿತ್ತು. ಕುಲಪತಿಗಳನ್ನು ಒಂದು ಸಮಿತಿ (Court) ಆಯ್ಕೆ ಮಾಡಬೇಕೆಂದು ಈ ಸಮಿತಿ ಸೂಚಿಸಿತು. ಕುಲಪತಿಯ ಅವಧಿ 5 ವರ್ಷಗಳಾಗಿರಬೇಕು. ಸಾಮಾನ್ಯವಾಗಿ ಒಬ್ಬನೇ ವ್ಯಕ್ತಿಯನ್ನು ಒಂದು ವಿಶ್ವವಿದ್ಯಾನಿಲಯಕ್ಕೆ ಎರಡು ಅವಧಿಗಳಿಗಿಂತ ಹೆಚ್ಚು ಕಾರ್ಯಾವಧಿಗೆ ನೇಮಿಸಬಾರದು. ಕುಲಪತಿ ಮತ್ತು ಕುಲಸಚಿವರ ಸ್ಥಾನ ಮತ್ತು ಆಯ್ಕೆ ಸಮಿತಿಯ ರಚನೆಯ ವಿಧವನ್ನು ವಿವರಿಸಲಾಯಿತು. ಪ್ರವೇಶಕ್ಕೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಇರುವ ಕಾಲೇಜುಗಳ ಗಾತ್ರವನ್ನು ಹೆಚ್ಚಿಸಬಾರದು. ಅದರ ಬದಲು ಸಂಜೆ ಕಾಲೇಜುಗಳು ಮತ್ತು ಅಂಚೆ–ತೆರಪಿನ ಕೋರ್ಸ್‌ಗಳಂಥ ಕ್ರಮಗಳ ಮೂಲಕ ಈ ಬೇಡಿಕೆಯನ್ನು ಪೂರೈಸಬೇಕು. ಅಂಗಭೂತ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ಉಪನ್ಯಾಸಕರ ಸೇವಾ ಪರಿಸ್ಥಿತಿಗಳು ಮತ್ತು ವೇತನದ ಬಗ್ಗೆಯೂ ಈ ಸಮಿತಿ ಚರ್ಚಿಸಿತು.

**ವಿಶ್ವವಿದ್ಯಾನಿಲಯ ಶಿಕ್ಷಣದ ಗುಣಮಟ್ಟದ ಬಗ್ಗೆ ಸಮಿತಿ (1961)** ವಿಶ್ವವಿದ್ಯಾಲಯ ಶಿಕ್ಷಣದ ಗುಣಮಟ್ಟವನ್ನು ವಸ್ತುನಿಷ್ಠವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿ ಮೌಲ್ಯಮಾಪನ ಮಾಡಲು ಮತ್ತು ಸುಧಾರಣೆಗೆ ವಿವಿಧ ಕ್ರಮಗಳನ್ನು ಸಲಹೆ ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಈ ಸಮಿತಿ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಅಧ್ಯಯನ ಕೋರ್ಸ್‌ಗಳು ಮತ್ತು ಸಂಶೋಧನೆಯ ಬಗ್ಗೆ ಚರ್ಚಿಸಿತು. ಉನ್ನತ ಶಿಕ್ಷಣ ಮಟ್ಟದಲ್ಲಿ ವಿಜ್ಞಾನ ಶಿಕ್ಷಣಕ್ಕೆ ಒತ್ತು ನೀಡಲಾಯಿತು. ಬೋಧನೆಯ ಸುಧಾರಣೆ, ಬೋಧನ ಮಾಧ್ಯಮ, ಪರೀಕ್ಷೆಗಳ ಸುಧಾರಣೆ, ಕಾಲೇಜುಗಳಿಗೆ ಸಂಬಂಧಿಸಿದ ಕಾರ್ಯಗಳು, ಗುಣಮಟ್ಟವನ್ನು ಉಳಿಸಿಕೊಳ್ಳುವಿಕೆ ಮತ್ತು ಸಂಯೋಜನೆ, ಪ್ರವೇಶ ನೀತಿ, ವಿಶ್ವವಿದ್ಯಾನಿಲಯ ಶಿಕ್ಷಣದ ಉದ್ದೇಶಗಳು ಮತ್ತು ಗುಣಮಟ್ಟದ ಮೌಲ್ಯಮಾಪನ ಈ ವಿಷಯಗಳ ಬಗ್ಗೆಯೂ ಸಲಹೆಗಳನ್ನು ನೀಡಲಾಯಿತು.

ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಸಮಾಜಶಾಸ್ತ್ರದ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟವನ್ನು ಪರೀಕ್ಷಿಸಲು ಮತ್ತು ಈ ವಿಷಯದಲ್ಲಿ ಒದಗಿಸುತ್ತಿದ್ದ ಅಧ್ಯಯನದ ಕೋರ್ಸ್‌ಗಳನ್ನು ಆಧುನೀಕರಣಗೊಳಿಸಲು ಮತ್ತು ಉತ್ತಮಗೊಳಿಸಲು ಶಿಫಾರಸುಗಳನ್ನು ಮಾಡಲು **ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಸಮಾಜಶಾಸ್ತ್ರದ ಪುನರಾವಲೋಕನ ಸಮಿತಿಯನ್ನು (1961)** ನೇಮಿಸಲಾಯಿತು. ಸಮಾಜಶಾಸ್ತ್ರದಲ್ಲಿ ಸಂಶೋಧನೆಯ ಬಗ್ಗೆ ಚರ್ಚಿಸಲಾಯಿತು. ಮಾನವಶಾಸ್ತ್ರಕ್ಕೂ ಮತ್ತು ಸಮಾಜಶಾಸ್ತ್ರಕ್ಕೂ ನಡುವೆ ನಿಕಟ ಸಂಬಂದವನ್ನು ಏರ್ಪಡಿಸಬೇಕಾದ ಅಗತ್ಯವಿದೆ ಎಂದೂ ಮತ್ತು ಸಮಾಜಶಾಸ್ತ್ರ ಮತ್ತು ಸಮಾಜಕಾರ್ಯಗಳ ನಡುವೆ ವ್ಯತ್ಯಾಸ ಕಲ್ಪಿಸಬೇಕೆಂದೂ ಈ ಸಮಿತಿ ಸೂಚಿಸಿತು. MA ಮತ್ತು P.hD ಪದವಿಗಳ ನಡುವೆ M.Litt ಎನ್ನುವ ಮಾಧ್ಯಮ ಪದವಿಯನ್ನು ಆರಂಭಿಸಬೇಕೆಂದೂ ಸೂಚಿಸಲಾಯಿತು. ಈ ಪದವಿ ಒಂದು ಅಂತಿಮ ಮಟ್ಟವಾಗುವುದಲ್ಲದೆ ಮಟ್ಟದಲ್ಲಿ ಆಗುತ್ತಿದ್ದ ಅಪವ್ಯಯವನ್ನು ತಪ್ಪಿಸುವುದೆಂದು ಸಮಿತಿ ಅಭಿಪ್ರಾಯಪಟ್ಟಿತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಮನೋವಿಜ್ಞಾನದ ಬಗ್ಗೆ ಪುನರಾವಲೋಕನ ಸಮಿತಿ (1961)** ಮನೋವಿಜ್ಞಾನಕ್ಕೆ ಸಂಬಂಧಿಸಿದಂತೆ ಉದ್ದೇಶಗಳು, ಕೋರ್ಸ್‌ಗಳ ವಿಷಯವಸ್ತು,

Digitised by Bharatavani, CIIL

ಪ್ರವೇಶಾವಶ್ಯಕತೆಗಳು, ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟ, ಪರೀಕ್ಷಾ ತಂತ್ರಗಳು – ಈ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಈ ಸಮಿತಿ ನೇಮಕಗೊಂಡಿತ್ತು. ವಿಶ್ವವಿದ್ಯಾನಿಲಯಗಳಲ್ಲಿ ಮನೋವಿಜ್ಞಾನದ ಮತ್ತು ಸಂಬಂಧಿತ ವಿಷಯಗಳ ಬೋಧನೆ ಮತ್ತು ಸಂಶೋಧನೆಗೆ ಇದ್ದ ಸೌಲಭ್ಯಗಳನ್ನು ಈ ಸಮಿತಿ ಪರೀಕ್ಷಿಸಿತು. ಮನೋವಿಜ್ಞಾನ ಶಿಕ್ಷಣದ ಮುಖ್ಯ ಅಂಶಗಳಿಗೆ ಸಂಬಂಧಿಸಿದಂತೆ ಅಧ್ಯಯನ ಕೋರ್ಸ್‌ಗಳನ್ನು ಸುಧಾರಿಸಲು ಮತ್ತು ಸಂಶೋಧನೆಗೆ ಪ್ರೋತ್ಸಾಹ ನೀಡಲು ಈ ಸಮಿತಿ ಅನೇಕ ಮೌಲ್ಯವುಳ್ಳ ಶಿಪಾರಸುಗಳನ್ನು ಮಾಡಿತ್ತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ತತ್ವಶಾಸ್ತ್ರದ ಬಗ್ಗೆ ಪುನರಾವಲೋಕನ ಸಮಿತಿಯನ್ನು (1961)** ವಿಶ್ವವಿದ್ಯಾನಿಲಯ ಶಿಕ್ಷಣದ ವಿವಿಧ ಹಂತಗಳಲ್ಲಿ ತತ್ವಶಾಸ್ತ್ರದ ಬೋಧನೆ ಮತ್ತು ಕಲಿಕೆಯ ಉದ್ದೇಶವನ್ನು ವ್ಯಾಖ್ಯಾನಿಸಲು, ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ತತ್ವಶಾಸ್ತ್ರದ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟವನ್ನು ಪರೀಕ್ಷಿಸಲು, ಈ ವಿಷಯದ ಅಧ್ಯಯನವನ್ನು ಪ್ರೋತ್ಸಾಹಿಸಲು ಮತ್ತು ಒಂದು ಬೌದ್ಧಿಕ ಶಾಸ್ತ್ರದ ರೂಪದಲ್ಲಿ ತತ್ವಶಾಸ್ತ್ರದ ಭವಿಷ್ಯದ ಬೆಳವಣಿಗೆಯ ಸಮಸ್ಯೆಯ ಪರಿಗಣನೆಗೆ ಕ್ರಮಗಳನ್ನು ಸಲಹೆ ಮಾಡಲು ನೇಮಿಸಲಾಯಿತು. ತತ್ವಶಾಸ್ತ್ರದ ವಿಷಯವನ್ನು ಹೆಚ್ಚು ಗತಿಶೀಲಾತ್ಮಕವಾಗಿ ಮತ್ತು ಆಕರ್ಷಕವಾಗಿ ಮಾಡಲು ಈ ಸಮಿತಿ ಕೆಲವು ಮೌಲ್ಯಯುತ ಸಲಹೆಗಳನ್ನು ನೀಡಿತ್ತು.

**ಅಂಚೆ-ತೆರಪಿನ ಕೋರ್ಸ್‌ಗಳು ಮತ್ತು ಸಂಜೆ ಕಾಲೇಜುಗಳ ಬಗ್ಗೆ ತಜ್ಞರ ಸಮಿತಿ (1961)** – ಅಂಚೆ ತೆರಪಿನ ಕೋರ್ಸ್‌ಗಳನ್ನು ರೂಪಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸಲು ಈ ಸಮಿತಿಯನ್ನು ನೇಮಿಸಲಾಯಿತು. ಪದವಿ ಮಟ್ಟದ ಬೋಧನೆಗೆ ಅಥವಾ ತತ್ಸಮಾನ ಕೋರ್ಸ್‌ಗಳಿಗೆ ಬೋಧನೆಯನ್ನು ವಿಶ್ವವಿದ್ಯಾನಿಲಯಗಳೇ ಕೈಗೊಳ್ಳಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. ಅಂಚೆ-ತೆರಪಿನ ಕೋರ್ಸ್‌ಗಳು ಪ್ರಥಮ ಪದವಿಗೆ ಮಾತ್ರ ಸೀಮಿತವಾಗಿರಬೇಕು. ಇದಲ್ಲದೆ, ಅಂಚೆ-ತೆರಪಿನ ಕೋರ್ಸ್‌ಗಳು ಮತ್ತು ಸಂಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ ಈ ಸಮಿತಿ ಇನ್ನು ಅನೇಕ ಶಿಫಾರಸುಗಳನ್ನು ಮಾಡಿತು.

ವಿಶ್ವವಿದ್ಯಾನಿಲಯ ಅನುದಾನ ಆಯೋಗ (UGC) ಅಂಗಭೂತ ಕಾಲೇಜುಗಳ ಯೋಗಕ್ಷೇಮದ ಬಗ್ಗೆ ಮತ್ತು ಅವುಗಳನ್ನು ಸುಧಾರಿಸುವುದರಲ್ಲಿ ಮುಖ್ಯವಾಗಿ ಆಸಕ್ತಿ ಹೊಂದಿತ್ತು. ಆದ್ದರಿಂದ ಅಂಗಭೂತ ಕಾಲೇಜುಗಳ ಯೋಗಕ್ಷೇಮ ಮತ್ತು ಸುಧಾರಣೆಗೆ ಲಭ್ಯವಿದ್ದ ಸೀಮಿತ ಸಂಪನ್ಮೂಲಗಳ ಸೂಕ್ತವಾಗಿ ಮತ್ತು ಪ್ರಭಾವಕಾರಿಯಾಗಿ ಉಪಯೋಗಿಸಿಕೊಳ್ಳುವುದರ ಬಗ್ಗೆ UGCಗೆ ಸಲಹೆ ನೀಡಲು ಕಾಲೇಜು ಶಿಕ್ಷಣದ ಗುಣಮಟ್ಟವನ್ನು ಉಳಿಸಿಕೊಳ್ಳಲು ಮತ್ತು ಸುಧಾರಿಸಲು ಮಾರ್ಗಗಳನ್ನು ಸೂಚಿಸಲು **ಕಾಲೇಜುಗಳ ಸಮಿತಿಯನ್ನು (1962)** ನೇಮಿಸಲಾಗಿತ್ತು. ಭಾರತದಲ್ಲಿನ ವಿಶ್ವವಿದ್ಯಾನಿಲಯದ ಶಿಕ್ಷಣ ಬಹುಮಟ್ಟಿಗೆ ಕಾಲೇಜುಗಳ ಗುಣಮಟ್ಟವನ್ನು ಅವಲಂಬಿಸಿರುತ್ತದೆ ಎನ್ನುವುದು ಈ ಸಮಿತಿಯ ಅಭಿಪ್ರಾಯವಾಗಿತ್ತು. ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಕಾಲೇಜು ಶಿಕ್ಷಣವನ್ನು ಉತ್ತಮಪಡಿಸಲು ಮತ್ತು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮಗಳನ್ನು ಸೂಚಿಸಲು ಇದೇ ಸಮಿತಿಯನ್ನು 1964ರಲ್ಲಿ ಪುನರ್ ರಚಿಸಲಾಯಿತು. ಸಾಮಾನ್ಯ ಶಿಕ್ಷಣವನ್ನು ಅದರಲ್ಲೂ ವಿಶೇಷವಾಗಿ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ಪುನರ್ ಸಂಘಟಿಸುವುದರ ಬಗ್ಗೆ ಮತ್ತು ಕಾಲೇಜುಗಳಲ್ಲಿ ಟ್ಯೂಟೋರಿಯಲ್ ವ್ಯವಸ್ಥೆ ಬಗ್ಗೆ ಈ ಸಮಿತಿ ಚರ್ಚಿಸಿತು. ಹೊಸ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವುದರ ಬಗ್ಗೆ ಮತ್ತು ಅವುಗಳನ್ನು ವಿಶ್ವವಿದ್ಯಾನಿಲಯಗಳಿಗೆ ಅಂಗಭೂತಗೊಳಿಸುವುದರ ಬಗ್ಗೆಯೂ ಸಮಿತಿ ಮೌಲ್ಯಮಾಪನ ಮಾಡಿತು. ಅಂಗಭೂತ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಸಹಾಯವನ್ನು ಈ ಸಮಿತಿ ಖಚಿತಗೊಳಿಸಿತು.

**ಸ್ನಾತಕಪೂರ್ವ ಹಂತದಲ್ಲಿ ಶಿಕ್ಷಣಶಾಸ್ತ್ರವನ್ನು ಒಂದು ಐಚ್ಛಿಕ ವಿಷಯವಾಗಿಸುವ ಬಗ್ಗೆ ಸಮಿತಿ (1963)** – ಈ ಸಮಿತಿಯನ್ನು ಶಿಕ್ಷಣಶಾಸ್ತ್ರವನ್ನು BA/BSc ಪದವಿ ಮಟ್ಟದಲ್ಲಿ ಒಂದು ಐಚ್ಛಿಕ ವಿಷಯವಾಗಿ ಸೇರಿಸುವ ಬಗ್ಗೆ ಮತ್ತು ಆ ವಿಚಾರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಚರ್ಚಿಸಲು ನೇಮಿಸಲಾಯಿತು. ಆದರೆ ಶಿಕ್ಷಣಶಾಸ್ತ್ರವನ್ನು ಸ್ನಾತಕ-ಪೂರ್ವ ಹಂತದಲ್ಲಿ ಒಂದು ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡುವುದು. **ಬಾಲಕಿಯರ ಶಿಕ್ಷಣದ ಬಗ್ಗೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಬೆಂಬಲದ ಕೊರತೆಗೆ ಕಾರಣಗಳು ಮತ್ತು ಸಾರ್ವಜನಿಕ ಸಹಕಾರವನ್ನು ಪಡೆಯುವುದರ ಬಗ್ಗೆ ಪರಿಶೀಲನಾ ಸಮಿತಿ (1963)** ಬಾಲಕಿಯರ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲು ಮಾರ್ಗಗಳನ್ನು ಮತ್ತು ಕ್ರಮಗಳನ್ನು ಸೂಚಿಸಲು ಈ ಸಮಿತಿ ನೇಮಕಗೊಂಡಿತ್ತು. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಾಲಕಿಯರ ಶಿಕ್ಷಣದ ಬಗ್ಗೆ ಸಮುದಾಯ ಸಂಚಲತೆಯನ್ನುಂಟು ಮಾಡಲು ಸಾಕಷ್ಟು ಸಂಘಟನೆಯೊಂದಿಗೆ ವ್ಯವಸ್ಥಿತ ಕಾರ್ಯಕ್ರಮಗಳ ಆಯೋಜನೆಯ ಅಗತ್ಯವಿದೆಯೆಂದು ಈ ಸಮಿತಿ ಅಭಿಪ್ರಾಯಪಟ್ಟಿತು. ಈ ಸಮಿತಿಯ ಕೆಲವು ಶಿಫಾರಸುಗಳನ್ನು ಭಾಗಶಃ ಜಾರಿಗೆ ತರಲಾಗಿತ್ತು.ಹೈಸ್ಕೂಲ್ ಮತ್ತು ಹೈಯರ್ ಸೆಕೆಂಡರಿ ಶಾಲೆಗಳಲ್ಲಿನ ಬೋಧನೆಗೆ ಬೇಕಾದ ಸಿದ್ಧತೆಯಾಗುತ್ತದೆ ಎಂದು ತಿಳಿಯಬಾರದು ಎಂದು ಈ ಸಮಿತಿ ಸೂಚಿಸಿತು.

ಮಾರ್ಚ್6, 1963ರಲ್ಲಿ ನಡೆದ ಶಿಕ್ಷಣದ ಬಗ್ಗೆ ಸಂಸತ್ತಿನ ಸಲಹಾ ಸಮಿತಿಯ ಸದಸ್ಯರ ಅನೌಪಚಾರಿಕ ಸಭೆಯ ಶಿಫಾರಸಿನ ಪ್ರಕಾರ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಒಂದು ಕೇಂದ್ರ ಪಟ್ಟಿಯ ವಿಷಯವಾಗಿ ಮಾಡಬೇಕೆಂಬ ಮತ್ತು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರ ಇದುವರೆಗೆ ಮಾಡಿರುವುದಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಇದರ ಪರಿಣಾಮವಾಗಿ ಅಂದಿನ ಶಿಕ್ಷಣ ಸಚಿವರು ಒಂದು ಸಮಿತಿಯನ್ನು ನೇಮಿಸಲು ಆದೇಶವಿತ್ತರು.

Digitised by Bharatavani, CIIL

ಆದ್ದರಿಂದ ಉನ್ನತ ಶಿಕ್ಷಣದ ಬಗ್ಗೆ ಪಾರ್ಲಿಮೆಂಟ್ ಸದಸ್ಯರ ಒಂದು ಸಮಿತಿಯನ್ನು (1963) ಉನ್ನತ ಶಿಕ್ಷಣದ ಬಗ್ಗೆ ಕೇಂದ್ರ ಸರ್ಕಾರದ ಜವಾಬ್ದಾರಿಗಳ ವಿಷಯದಲ್ಲಿ ಸಂವಿಧಾನದಲ್ಲಿರುವ ಪ್ರಾವಧಾನಗಳನ್ನು (Provisions) ಪರಿಗಣಿಸಲು ಮತ್ತು ಈ ಉದ್ದೇಶಕ್ಕಾಗಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಸೂಚಿಸಲು ಮತ್ತು UGCಯ ಕಾರ್ಯವನ್ನು ಪುನರಾವಲೋಕನ ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣದ ವಿಷಯವನ್ನು ರಾಜ್ಯಪಟ್ಟಿಯಿಂದ ಸಮವರ್ತಿ ಪಟ್ಟಿಗೆ ಬದಲಾಯಿಸಬೇಕೆಂದು ಈ ಸಮಿತಿ ಸೂಚಿಸಿತು. ವಿಶ್ವವಿದ್ಯಾನಿಲಯಗಳಿಗೆ ಮತ್ತು ಉನ್ನತ ಶಿಕ್ಷಣಕ್ಕೆ ನೀಡುವ ವಿದ್ಯಾರ್ಥಿವೇತನಗಳನ್ನು ಮುಖ್ಯವಾಗಿ ಮಹಿಳೆಯರಿಗೆ ಗಣನೀಯವಾಗಿ ಹೆಚ್ಚಿಸಬೇಕು. ವಿಶ್ವವಿದ್ಯಾನಿಲಯಗಳು ಒಂದೇ ರೀತಿಯ ಪ್ರವೇಶ ನೀತಿಯನ್ನು ಅನುಸರಿಸಬೇಕು. ನಿಯಮಿತ ಕೋರ್ಸ್‌ಗಳನ್ನು ತೆಗೆದುಕೊಳ್ಳದಿರುವವರಿಗಾಗಿ ಬೆಳಗಿನ ಮತ್ತು ಸಂಜೆ ಕಾಲೇಜುಗಳನ್ನು ಮತ್ತು ಅಂಚೆ-ತೆರಪಿನ ಕೋರ್ಸ್‌ಗಳನ್ನು ಆರಂಭಿಸಬೇಕೆಂದು ಈ ಸಮಿತಿ ಸಲಹೆ ಮಾಡಿತು. ಪ್ರವೇಶಕ್ಕೆ ಬೇಕಾದ ವಯಸ್ಸಿನ ಕನಿಷ್ಠ ಮಿತಿ ಬಗ್ಗೆ ವಿಶ್ವವಿದ್ಯಾನಿಲಯಗಳು ಗಮನ ಕೊಡಬೇಕು. ಕೇಂದ್ರ ಸರ್ಕಾರ ಪ್ರತಿಯೊಂದು ರಾಜ್ಯದಲ್ಲೂ ಮಾದರಿಯಾಗಿ ಅತ್ಯಂತ ಹೆಚ್ಚಿನ ಗುಣಮಟ್ಟದ ಕನಿಷ್ಠ ಒಂದು ಕೇಂದ್ರಿಯ ಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ಕೇಂದ್ರ ಸರ್ಕಾರ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬಹುದು. ಉನ್ನತ ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸುವ ಪ್ರಯತ್ನವನ್ನು ಶಿಕ್ಷಣ ಸಚಿವಾಲಯ ಮಾಡಿದ್ದರಿಂದ ಬಹುಶಃ ಸಮಿತಿ ಈ ಶಿಫಾರಸುಗಳನ್ನು ಮಾಡಿರಬೇಕೆಂದೆನಿಸುತ್ತದೆ. ಆದರೆ ಅನೇಕ ರಾಜ್ಯಗಳಿಂದ ವಿರೋಧ ಉಂಟಾದುದರಿಂದ ಈ ಪ್ರಯತ್ನಗಳು ಯಶಸ್ವಿಯಾಗಲಿಲ್ಲ.

**ಭಾರತದ ಉತ್ತರ-ಪೂರ್ವ ಪ್ರದೇಶದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದರ ಬಗ್ಗೆ ಸಮಿತಿ (1963)** – ಈ ಸಮಿತಿಯನ್ನು ಭಾರತದ ಉತ್ತರ-ಪೂರ್ವ ಕ್ಷೇತ್ರದಲ್ಲಿ ಆಗ ಇದ್ದ ಉನ್ನತ ಶಿಕ್ಷಣದ ಸೌಲಭ್ಯಗಳನ್ನು ಮೌಲ್ಯಮಾಪನ ಮಾಡಲು ಮತ್ತು ಆ ಕ್ಷೇತ್ರದಲ್ಲಿ ಬೇಕಾದ ಉನ್ನತ ಶಿಕ್ಷಣದ ವಿಕಾಸದ ವಿನ್ಯಾಸವನ್ನು ಪರಿಗಣಿಸಲು ಮತ್ತು ಆ ಪ್ರದೇಶದಲ್ಲಿ ಗಣಿತ ವಿಶ್ವವಿದ್ಯಾನಿಲಯವನ್ನು 1956ರ UGC ಕಾಯ್ದೆಯಡಿಯಲ್ಲಿ ಸ್ಥಾಪಿಸುವುದು ಅಪೇಕ್ಷಣೀಯವೇ ಎಂಬುದನ್ನು ಪರೀಕ್ಷಿಸಲು ನೇಮಿಸಲಾಗಿತ್ತು. ಆ ಪ್ರದೇಶದ ಪ್ರತಿಯೊಂದು ಮುಖ್ಯಕೇಂದ್ರದಲ್ಲಿ ಒಂದು ಅಂಗಭೂತ ಕಾಲೇಜಿನೊಂದಿಗೆ ಫೆಡರಲ್ ವಿಧದ ವಿಶ್ವವಿದ್ಯಾನಿಲಯ ಒಂದನ್ನು ಸ್ಥಾಪಿಸಬೇಕೆಂದು ಈ ಸಮಿತಿ ಸಲಹೆ ನೀಡಿತು. ವಿಶ್ವವಿದ್ಯಾನಿಲಯದ ಕಾಲೇಜುಗಳು ಕ್ರಮೇಣ ಪೂರ್ಣರೂಪದಲ್ಲಿ ಸ್ನಾತಕೋತ್ತರ ಬೋಧನೆ ಮತ್ತು ಸಂಶೋಧನೆಯ ಕೇಂದ್ರಗಳಾಗಬೇಕು. ಸೂಕ್ತಮಟ್ಟದಲ್ಲಿ ಔದ್ಯೋಗಿಕ ಮತ್ತು ತಾಂತ್ರಿಕ ಶಿಕ್ಷಣವನ್ನು ಆರಂಭಿಸುವ ಕಾರ್ಯವನ್ನು ಈ ವಿಶ್ವವಿದ್ಯಾನಿಲಯ ಕೈಗೊಳ್ಳಬೇಕು. ಬಾಲಕರಿಗೆ ಒಂದು ಪಾಲಿಟೆಕ್ನಿಕ್ ಕಾಲೇಜನ್ನು ಮತ್ತು ಬಾಲಕಿಯರಿಗೆ ಒಂದು ನರ್ಸಿಂಗ್ ಕಾಲೇಜನ್ನು ಸ್ಥಾಪಿಸಬಹುದೆಂದು ಸಮಿತಿ ಸೂಚಿಸಿತು. ಈ ಸಮಿತಿಯ ಬಹುತೇಕ ಸೂಚನೆಗಳನ್ನು ಕಾಲಕ್ರಮದಲ್ಲಿ ಜಾರಿಗೆ ತರಲಾಯಿತು.

ಭಾರತ ಸರ್ಕಾರ ನೇಮಿಸಿದ್ದ ಲಂಚ ನಿರೋಧ ಸಮಿತಿಯ ಅವಲೋಕನವನ್ನು ಪರಿಗಣಿಸಲು **ವಿಶ್ವವಿದ್ಯಾನಿಲಯದ ಆಡಳಿತದ ಕೆಲವು ಸಮಸ್ಯೆಗಳ ಬಗ್ಗೆ ಸಮಿತಿಯನ್ನು (1964)** ನೇಮಿಸಲಾಗಿತ್ತು. ಈ ಸಮಿತಿ ವಿಶ್ವವಿದ್ಯಾನಿಲಯಗಳಲ್ಲಿ ಇದ್ದಿರಬಹುದಾದ ತಪ್ಪು ಆಚರಣೆಗಳ ವ್ಯಾಪ್ತಿಯನ್ನು ಪರೀಕ್ಷಿಸಿತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಅರಾಬಿಕ್ ಮತ್ತು ಪರ್ಷಿಯನ್ ಅಧ್ಯಯನದ ಬಗ್ಗೆ ಸಮಿತಿ (1964)** – ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಅರಾಬಿಕ್ ಮತ್ತು ಪರ್ಷಿಯನ್ ಭಾಷೆಗಳ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟವನ್ನು ಉತ್ತಮಪಡಿಸಲು ಮಾರ್ಗಗಳನ್ನು ಸೂಚಿಸಲು ಮತ್ತು ಅರಾಬಿಕ್ ಮತ್ತು ಪರ್ಷಿಯನ್ ಭಾಷೆಗಳ ಅಧ್ಯಯನಕ್ಕೆ ಇರುವ ಕೋರ್ಸ್‌ಗಳನ್ನು ಆಧುನಿಕೀಕರಣಗೊಳಿಸಲು ಮತ್ತು ಸುಧಾರಿಸಲು ಶಿಫಾರಸುಗಳನ್ನು ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ಸಮಿತಿ ಅರಾಬಿಕ್ ಮತ್ತು ಪರ್ಷಿಯನ್ ಭಾಷೆಗಳ ಬೋಧನೆಗೆ ಇದ್ದ ಪಠ್ಯವಸ್ತುಗಳನ್ನು ಪರಿಶೀಲಿಸಿ ಅವುಗಳನ್ನು ಬದಲಾಯಿಸಬೇಕೆಂದು ಸಲಹೆ ನೀಡಿತು. ಅರಾಬಿಕ್ ಮತ್ತು ಪರ್ಷಿಯನ್ ಭಾಷೆಗಳನ್ನು ಆಧುನಿಕ ವೈಜ್ಞಾನಿಕ ಕ್ರಮದಲ್ಲಿ ಬೋಧಿಸಬೇಕೆಂದು ಸಮಿತಿ ಶಿಫಾರಸು ಮಾಡಿತು.

**ಗಣಿತಶಾಸ್ತ್ರದ ಸುಧಾರಣ ಸಮಿತಿಯನ್ನು** (1964) ಜ್ಞಾನ ಬೆಳೆಯುತ್ತಿದ್ದ ಅಂದಿನ ವೇಗದ ದೃಷ್ಟಿಯಲ್ಲಿ ಗಣಿತಶಾಸ್ತ್ರದ ಪಠ್ಯವಸ್ತುವನ್ನು ಪ್ರತಿ 5 ವರ್ಷಗಳಿಗೊಮ್ಮೆ ಬದಲಾಯಿಸಬೇಕಾದ ಅಗತ್ಯತೆಯನ್ನು ಪುನರಾವಲೋಕನ ಮಾಡುವ ಮತ್ತು ಪರಿಷ್ಕರಿಸಬೇಕಾದ ಅಗತ್ಯವನ್ನು ಪರೀಕ್ಷಿಸಲು ನೇಮಿಸಲಾಯಿತು. ಅಂದಿನ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಗಣಿತಶಾಸ್ತ್ರದ ಬೋಧನೆಗೆ ಇದ್ದ ಸೌಲಭ್ಯಗಳನ್ನು ಈ ಸಮಿತಿ ಚರ್ಚಿಸಿತು. ಪ್ರಿಯೂನಿವರ್ಸಿಟಿ ಹಂತದಿಂದ ಎರಡನೇ ವರ್ಷದ ಹಂತದವರೆಗೆ ಗಣಿತಶಾಸ್ತ್ರದ ಪಠ್ಯವಸ್ತು ಮತ್ತು ಪರೀಕ್ಷಾ ಕ್ರಮವನ್ನು ಸುಧಾರಿಸಲು ಈ ಸಮಿತಿ ಸಲಹೆಗಳನ್ನು ನೀಡಿತು.

**ಭಾರತೀಯ ಸಂಸದೀಯ ಮತ್ತು ವೈಜ್ಞಾನಿಕ ಸಮಿತಿ** (1964) ಪ್ರಾಥಮಿಕ ಮಿಡಲ್ ಮತ್ತು ಸೆಕೆಂಡರಿ ಹಂತಗಳಲ್ಲಿ ಆಯಾ ಹಂತಗಳಿಗೆ ನೀತಿಗಳು ಮತ್ತು ತೀರ್ಮಾನಗಳಿಗೆ ಸಂಬಂಧಿಸಿದಂತೆ 'ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ'ದ ಸಮಸ್ಯೆಗಳನ್ನು ಅಧ್ಯಯನ ಮಾಡಲು ಮತ್ತು ವಿಜ್ಞಾನ ಕಲಿಕೆಯ ಕೋರ್ಸ್‌ಗಳನ್ನು ಹೇಗೆ ಸಂಘಟಿಸಲಾಗಿತ್ತು ಎಂಬುದನ್ನು ಪರೀಕ್ಷಿಸಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಪ್ರಾಥಮಿಕ ಹಂತದಲ್ಲಿ ವಿಜ್ಞಾನವನ್ನು ಪ್ರಾಕೃತಿಕ ಅಧ್ಯಯನವಾಗಿಯೂ ಮತ್ತು ಮಿಡಲ್ ಸ್ಕೂಲ್ ಹಂತದಲ್ಲಿ ಸಾಮಾನ್ಯ ವಿಜ್ಞಾನ ಕೋರ್ಸ್‌ಗಳಾಗಿ ಪರಿಚಯಿಸಬೇಕೆಂದು ಈ

Digitised by Bharatavani, CIIL

ಸಮಿತಿ ಶಿಫಾರಸು ಮಾಡಿತು. ಶಾಲಾ ಶಿಕ್ಷಣದ ಆರಂಭಿಕ ಹಂತದಲ್ಲಿ ವಿಜ್ಞಾನವನ್ನು ವಿಶೇಷತೆಯ (Specialization) ರೂಪದಲ್ಲಿ ಬೋಧಿಸುವುದನ್ನು ನಿಲ್ಲಿಸಲೇಬೇಕು. ಶಾಲಾ ಪಠ್ಯಕ್ರಮವನ್ನು, ಪಠ್ಯಪುಸ್ತಕಗಳನ್ನು ಆಧುನಿಕೀಕರಣಗೊಳಿಸುವುದು ಮತ್ತು ಸೆಕೆಂಡರಿ ಶಾಲಾ ಶಿಕ್ಷಕರಿಗೆ ಬೇಸಿಗೆ ಶಿಬಿರಗಳನ್ನು ಏರ್ಪಡಿಸುವುದು. ಈ ವಿಷಯಗಳಿಗೆ ತೀವ್ರ ಗಮನವನ್ನು ನೀಡಬೇಕು. ಶಾಲಾ ಕಟ್ಟಡಗಳು ಮತ್ತು ಪ್ರಯೋಗಶಾಲೆಗಳ ಸೇವಾ ಸ್ಥಿತಿ ಮತ್ತು ನಿಗಾವಣೆಯ ಅಂಶಗಳನ್ನು ಈ ಸಮಿತಿ ಚರ್ಚಿಸಿತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ರಾಜ್ಯಶಾಸ್ತ್ರದ ಬಗ್ಗೆ ಸಮಿತಿಯನ್ನು(1964)** ರಾಜ್ಯಶಾಸ್ತ್ರದ ಬೋಧನೆಯ ಗುಣಮಟ್ಟವನ್ನು ಪುನರಾವಲೋಕನ ಮಾಡಲು ನೇಮಿಸಲಾಗಿತು. ಸಮಿತಿ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ರಾಜ್ಯಶಾಸ್ತ್ರದ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟವನ್ನು ಪರೀಕ್ಷಿಸಿತು ಮತ್ತು ಅವುಗಳ ಸುಧಾರಣೆಗೆ ಕ್ರಮಗಳನ್ನು ಸೂಚಿಸಿತು. BA ಮತ್ತು MA ಮಟ್ಟದ ಕಡ್ಡಾಯ ಮತ್ತು ಐಚ್ಛಿಕ ರಾಜ್ಯಶಾಸ್ತ್ರದ ಪಠ್ಯವಸ್ತುಗಳನ್ನು ಸುಧಾರಿಸುವುದರ ಬಗ್ಗೆ ಮತ್ತು ಇತರ ಸಂಬಂಧಿತ ವಿಷಯಗಳ ಬಗ್ಗೆ ಈ ಸಮಿತಿ ಶಿಫಾರಸುಗಳನ್ನು ಮಾಡಿತು.

ದೈಹಿಕ ಶಿಕ್ಷಣದಲ್ಲಿದ್ದ ಮಿತಿಗಳನ್ನು ನಿವಾರಣೆ ಮಾಡಲು ಮತ್ತು ಅದರ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವವಿದ್ಯಾನಿಲಯ ಅನುದಾನ ಆಯೋಗ ದೈಹಿಕ ಶಿಕ್ಷಣ ಸಮಿತಿಯನ್ನು (1965) ನೇಮಿಸಿತು. ಅಂದಿನ ಪರಿಸ್ಥಿತಿಯಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ದೈಹಿಕ ಶಿಕ್ಷಣಕ್ಕೆ ಇದ್ದ ಸೌಲಭ್ಯಗಳನ್ನು ಪರೀಕ್ಷಿಸುವುದು ಮತ್ತು ಈ ಸೌಲಭ್ಯಗಳನ್ನು ಎಷ್ಟರಮಟ್ಟಿಗೆ ಉತ್ತಮಪಡಿಸಬಹುದು ಮತ್ತು ದೈಹಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬಹುದೆಂಬುದನ್ನು ಸಲಹೆ ಮಾಡುವುದು. ಈ ಸಮಿತಿಯ ಉದ್ದೇಶಗಳಾಗಿದ್ದವು. ಸಮಿತಿ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ದೈಹಿಕ ಶಿಕ್ಷಣವನ್ನು ಉತ್ತಮಪಡಿಸಲು ಕೆಲವು ಸಾಮಾನ್ಯ ಶಿಫಾರಸುಗಳನ್ನು ಮಾಡಿತು. ಈ ಶಿಫಾರಸುಗಳನ್ನು ಭಾಗಶಃ ಕಾರ್ಯಾನ್ವಯಗೊಳಿಸಲಾಯಿತು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಭೂಗೋಳಶಾಸ್ತ್ರದ ಬಗ್ಗೆ ಸಮಿತಿ (1965) –** ಭೂಗೋಳಶಾಸ್ತ್ರದ ವಿವಿಧ ಕ್ಷೇತ್ರಗಳಲ್ಲಿ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟದ ಸ್ಥಿತಿಗತಿಯನ್ನು ಮೌಲ್ಯಮಾಪನ ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ಭೂಗೋಳಶಾಸ್ತ್ರದಲ್ಲಿ ಬೋಧನೆ ಮತ್ತು ಸಂಶೋಧನೆಯನ್ನು ಉತ್ತಮಪಡಿಸಲು ಈ ಸಮಿತಿ ಶಿಫಾರಸುಗಳನ್ನು ಮಾಡಿತು.

**ವಿದ್ಯಾರ್ಥಿ ಯೋಗಕ್ಷೇಮ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಸಮಿತಿ (1965) –** ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮನಃಸ್ಥಿತಿಯನ್ನು (Morale) ಮತ್ತು ಶಿಸ್ತನ್ನು ಉತ್ತಮಪಡಿಸಲು ಕ್ರಮಗಳನ್ನು ಸಲಹೆ ಮಾಡಲು ಈ ಸಮಿತಿ ನೇಮಿಸಲಾಯಿತು. ಶಿಕ್ಷಣವನ್ನು ನೌಕರಿಯೊಂದಿಗೆ ಜೋಡಿಸಬೇಕೆಂದು, ಇದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೂ ಮತ್ತು ಅವರ ಅಂತಿಮ ಘಟ್ಟವಾದ ನೌಕರಿಗೂ ನಡುವೆ ಇರುವ ಅಂತರವನ್ನು ನಿವಾರಿಸಲು ಸಾಧ್ಯವಾಗುತ್ತದೆ ಎಂದು ಈ ಸಮಿತಿ ಅಭಿಪ್ರಾಯಪಟ್ಟಿತು. ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ವ್ಯವಹಾರಗಳಲ್ಲಿ ರಾಜಕೀಯ ಪಕ್ಷಗಳು ಹಸ್ತಕ್ಷೇಪ ಮಾಡುವುದನ್ನು ತಡೆಯಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡಿಕೊಂಡು ಬರಬೇಕೆಂದು ಈ ಸಮಿತಿ ಸಲಹೆ ನೀಡಿತು.

**ಶಾಲಾ ಪಠ್ಯಪುಸ್ತಕಗಳ ಸಮಿತಿ (1966) –** ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸಲು ಮತ್ತು ಮೌಲ್ಯಮಾಪನ ಮಾಡಲು ಅನುಸರಿಸಬೇಕಾದ ನಿಯಮಗಳ ಬಗ್ಗೆ ಇರುವ ವಿವಾದಾಂಶಗಳನ್ನು ಪರೀಕ್ಷಿಸಲು ಮತ್ತು ಈ ವಿಷಯದಲ್ಲಿ ಭಾರತ ಸರ್ಕಾರಕ್ಕೆ ಸಲಹೆ ನೀಡಲು ಮತ್ತು ಭಾರತದಂಥ ಜಾತ್ಯತೀತ ರಾಷ್ಟ್ರದಲ್ಲಿ ಪಠ್ಯಪುಸ್ತಕಗಳಲ್ಲಿ ಧರ್ಮ ಮತ್ತು ಪೌರಾಣಿಕ ಅಂಶಗಳ ಸ್ಥಾನವನ್ನು ನಿರ್ಧರಿಸಲು ಈ ಸಮಿತಿಯನ್ನು ನೇಮಿಸಲಾಯಿತು. ಸಮಿತಿ ಪಠ್ಯಪುಸ್ತಕಗಳಲ್ಲಿ ಸಂಸ್ಕೃತ ಭಾಷೆಯ ಸ್ಥಾನವನ್ನು ಮೌಲ್ಯಮಾಪನ ಮಾಡಿತು. ಇತಿಹಾಸ ಬೋಧನೆಯ ಬಗ್ಗೆಯೂ ಚರ್ಚಿಸಲಾಯಿತು. ಇಡೀ ಸಮಾಜವನ್ನು ಬೌದ್ಧಿಕವಾಗಿ ಮತ್ತು ಸಂವೇಗಾತ್ಮಕವಾಗಿ ದಿಶಾನಿರ್ದೇಶನ ಮಾಡಲು ವ್ಯಾಪಕವಾದ ರಾಷ್ಟ್ರೀಯ ಉಪಕ್ರಮವನ್ನು ಅನುಸರಿಸಬೇಕಾದ ಅಗತ್ಯವಿದೆಯೆಂದು ಈ ಸಮಿತಿ ಸೂಚಿಸಿತು. ರಾಷ್ಟ್ರೀಯ ಸುಸಂಬದ್ಧತೆಯನ್ನು (Cohesion) ಉಂಟುಮಾಡಲು ಮತ್ತು ಮುಂದಿನ ಜನಾಂಗದಲ್ಲಿ ಪ್ರಗತಿಶೀಲಾತ್ಮಕವಾದ ದೂರದೃಷ್ಟಿಯನ್ನು ಬೆಳೆಸುವಲ್ಲಿ ಪಠ್ಯಪುಸ್ತಕಗಳು ಪೂರ್ಣಪ್ರಮಾಣದ ಕೊಡುಗೆ ನೀಡುವಂತೆ ನೋಡಿಕೊಳ್ಳುವುದು ಸರ್ಕಾರದ ಕಡ್ಡಾಯವೆನಿಸುವ ತುರ್ತು ಕರ್ತವ್ಯವಾಗಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿತು. ಈ ಸಮಿತಿಯ ಶಿಫಾರಸುಗಳನ್ನು ಶೈಕ್ಷಣಿಕ ಸಂಸ್ಥೆಗಳು ಸಂತೋಷದಿಂದ ಸ್ವೀಕರಿಸಿದವು.

**ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಸಂಖ್ಯಾಶಾಸ್ತ್ರದ ಬಗ್ಗೆ ಸಮಿತಿಯನ್ನು (1967) –** ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಅಂದಿನ ಪರಿಸ್ಥಿತಿಯಲ್ಲಿ ಸಂಖ್ಯಾಶಾಸ್ತ್ರ ಕ್ಷೇತ್ರದಲ್ಲಿ ಬೋಧನೆ ಮತ್ತು ಸಂಶೋಧನೆಗೆ ಇದ್ದ ಸೌಲಭ್ಯಗಳನ್ನು ಪುನರಾವಲೋಕನ ಮಾಡಲು ಮತ್ತು ಆ ಕ್ಷೇತ್ರದಲ್ಲಿನ ಅಧ್ಯಯನ ಕೋರ್ಸ್‌ಗಳನ್ನು ಸುಧಾರಣೆ ಮಾಡಲು ಶಿಫಾರಸಗಳನ್ನು ಮಾಡಲು ನೇಮಿಸಲಾಯಿತು. ಸಮಿತಿ ಭಾರತದಲ್ಲಿ ಸಂಖ್ಯಾಶಾಸ್ತ್ರದ ಬೆಳವಣಿಗೆಗೆ ಸಲಹೆಗಳನ್ನು ನೀಡಿತು.

**ಉನ್ನತ ಶಿಕ್ಷಣದಲ್ಲಿ ಶ್ರವ್ಯ–ದೃಶ್ಯ ಸಾಧನಗಳ ಬಗ್ಗೆ ಸಮಿತಿ (1967) –** ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ರೇಡಿಯೋ, ಚಲನಚಿತ್ರಗಳು ಮತ್ತು ಯೋಜಿತ ಬೋಧನೆಯೂ ಸೇರಿದಂತೆ ಇತರ ಶ್ರವ್ಯ–ದೃಶ್ಯ ಸಾಧನಗಳನ್ನು ಎಷ್ಟು ಉತ್ತಮ ರೀತಿಯಲ್ಲಿ ಉಪಯೋಗಿಸಬಹುದೆಂಬುದರ ಬಗ್ಗೆ ಪರಿಗಣಿಸಲು ಈ ಸಮಿತಿ ನೇಮಕಗೊಂಡಿತ್ತು ಚಲನಚಿತ್ರಗಳು, ಚಿತ್ರಸುರಳಿಗಳು, ಸ್ಲೈಡುಗಳು, ದೂರದರ್ಶನ, ಯೋಜಿತ ಕಲಿಕೆ, ಭಾಷಾ ಪ್ರಯೋಗಾಲಯಗಳು ಮತ್ತು ವಿಶ್ವವಿದ್ಯಾನಿಲಯ ಪ್ರಸಾರಗಳು,

Digitised by Bharatavani, CIIL

ಉನ್ನತ ಕಲಿಕೆಯ ಅಗತ್ಯಭಾಗವಾಗಿರಬೇಕೆಂದು ಸಮಿತಿ ಸೂಚಿಸಿತು. ಅಂದಿನ ಪರಿಸ್ಥಿತಿಯಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣದಲ್ಲಿ ಶ್ರವ್ಯ–ದೃಶ್ಯ ಸಾಧನಗಳ ಉಪಯೋಗವನ್ನು ಸಹ ಮೌಲ್ಯಮಾಪನ ಮಾಡಲಾಯಿತು. ಉನ್ನತ ಶಿಕ್ಷಣಕ್ಕೆ ಈ ಸಾಧನಗಳನ್ನು ಹೇಗೆ ಉಪಯುಕ್ತವಾದವುಗಳನ್ನಾಗಿ ಮಾಡಬಹುದೆಂಬುದನ್ನು ಸಮಿತಿ ವಿವರಿಸಿತು. ಶ್ರವ್ಯ–ದೃಶ್ಯ ಸಾಧನಗಳ ಉತ್ಪಾದನೆ ಮತ್ತು ಉಪಯೋಗವನ್ನು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರೋತ್ಸಾಹಿಸಬೇಕೆಂಬುದು ಸಮಿತಿಯ ಅಭಿಪ್ರಾಯವಾಗಿತ್ತು. ಭಾಷಾ ಪ್ರಯೋಗಾಲಯಗಳ ಸ್ಥಾಪನೆ ಮತ್ತು ಯೋಜಿತ ಕಲಿಕೆಯ ಆರಂಭವೂ ಸೇರಿದಂತೆ ಈ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸಲಾಯಿತು.

ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಕುಲಪತಿಗಳು ದಿನಾಂಕ: 1 ಡಿಸೆಂಬರ್ 1966ರಂದು ನಡೆಸಿದ ತಮ್ಮ ಸಭೆಯಲ್ಲಿ ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ಸುಧಾರಣ ಸಮಿತಿಯೊಂದನ್ನು ನೇಮಿಸಬೇಕೆಂದು ಶಿಫಾರಸು ಮಾಡಿದ್ದರು. ಇದರ ಪ್ರಕಾರ 1967ರಲ್ಲಿ ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ವ್ಯವಸ್ಥೆಯ ಪುನರಾವಲೋಕನ ಮಾಡಲು ಮತ್ತು ಹೆಚ್ಚಿನ ವಿಶ್ವಾಸನೀಯತೆ ಮತ್ತು ಸಿಂಧುತ್ವವನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಅಳತೆ ಮತ್ತು ಮೌಲ್ಯಮಾಪನದಲ್ಲಿ ಅಗತ್ಯವಾದ ಬದಲಾವಣೆಗಳನ್ನು ಸೂಚಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಪರೀಕ್ಷಾ ಸುಧಾರಣೆಗೆ ಕೆಲವು ಸಾಮಾನ್ಯ ಮತ್ತು ನಿರ್ದಿಷ್ಟ ಶಿಫಾರಸುಗಳನ್ನು ಮಾಡಿತು.

**ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಸಂಸದೀಯ ಸದಸ್ಯರ ಸಮಿತಿ (1967)** – 1964–66ರ ಶೈಕ್ಷಣಿಕ ವರದಿಯನ್ನು ಪರಿಗಣಿಸಲು ಮತ್ತು ಭಾರತ ಸರ್ಕಾರದ ಪರಿಗಣಿಸಬಹುದಾದ ರಾಷ್ಟ್ರೀಯ ನೀತಿಯೊಂದನ್ನು ರೂಪಿಸಲು ಕರಡು ಪ್ರತಿಯೊಂದನ್ನು ಸಿದ್ಧಪಡಿಸಲು ಮತ್ತು ತತ್‌ಕ್ಷಣದ ಕಾರ್ಯಾನ್ವಯನಕ್ಕೆ ಕಾರ್ಯಕ್ರಮವೊಂದನ್ನು ಗುರ್ತಿಸಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಎಲ್ಲಾ ಹಂತಗಳಲ್ಲಿಯೂ (1ರಿಂದ 12 ತರಗತಿಗಳವರೆಗೆ) ಭಾರತೀಯ ಭಾಷೆಗಳನ್ನು ಬೋಧನ ಮಾಧ್ಯಮವಾಗಿ ಅನುಸರಿಸುವುದರ ಬಗ್ಗೆ ಈ ಸಮಿತಿ ಚರ್ಚಿಸಿತು. ಹಿಂದಿ ಭಾಷೆ ಸಂಪರ್ಕ ಭಾಷೆಯಾದುದರಿಂದ ಮತ್ತು ಭವಿಷ್ಯದಲ್ಲಿ ದೇಶದ ಏಕಮಾತ್ರ ಆಡಳಿತ ಭಾಷೆಯಾಗಬಹುದೆಂಬ ನಿರೀಕ್ಷೆಯಿರುವುದರಿಂದ ಹಿಂದಿ ಭಾಷೆಯ ಅಧ್ಯಯನದ ವಿಶೇಷ ಮಹತ್ವವನ್ನು ಸಮರ್ಥಿಸಲಾಯಿತು. ಸಂಸ್ಕೃತದ ಬೋಧನೆ, ವಿಜ್ಞಾನ ಶಿಕ್ಷಣ, ಮತ್ತು ಸಂಶೋಧನೆಯ ಬಗ್ಗೆಯೂ ಚರ್ಚಿಸಲಾಯಿತು. ಕೃಷಿ ಮತ್ತು ಕೈಗಾರಿಕೆಗೆ ಸಂಬಂಧಿಸಿದ ಶಿಕ್ಷಣದ ಬಗ್ಗೆ ಚರ್ಚಿಸಲಾಯಿತು. ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಶೈಕ್ಷಣಿಕ ಅವಕಾಶಗಳ ಸಮಾನೀಕರಣದ ಬಗ್ಗೆಯೂ ಈ ಸಮಿತಿ ಚರ್ಚಿಸಿತು. ಅಂಶಕಾಲಿಕ ಶಿಕ್ಷಣ ಮತ್ತು ಪೂರ್ಣಕಾಲಿಕ ಶಿಕ್ಷಣ, ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ, ಬಾಲಕಿಯರ ಶಿಕ್ಷಣ, ಅಂಗವಿಕಲರ ಶಿಕ್ಷಣ, ದುರ್ಬಲವರ್ಗಗಳ ಶಿಕ್ಷಣ – ಈ ವಿಚಾರಗಳ ಬಗ್ಗೆ ಸಮಿತಿ ವಿವರವಾಗಿ ಚರ್ಚಿಸಿತು. ಶಿಕ್ಷಣ ವ್ಯವಸ್ಥೆಯ ಗುಣಮಟ್ಟದ ಸಮಗ್ರ ಸುಧಾರಣೆಯ ಬಗ್ಗೆ ಈ ಸಮಿತಿ 'ಶಿಕ್ಷಣ' ರಾಷ್ಟ್ರೀಯ ಅಭಿವೃದ್ಧಿಯ ಶಕ್ತಿಯುತ ಸಾಧನವೆಂದು ಹೇಳುತ್ತಾ ಅಂದು ಅಸ್ತಿತ್ವದಲ್ಲಿದ್ದ ಶೈಕ್ಷಣಿಕ ವ್ಯವಸ್ಥೆಯಲ್ಲಿ ರಾಷ್ಟ್ರವ್ಯಾಪ್ತಿ ಸುಧಾರಣೆಯ ಕಾರ್ಯಕ್ರಮದ ಅಗತ್ಯವಿದೆ ಎಂದು ಸಮಿತಿ ಸಲಹೆ ನೀಡಿತು. ಆದ್ದರಿಂದ ರಾಷ್ಟ್ರೀಯ ಶೈಕ್ಷಣಿಕ ವ್ಯವಸ್ಥೆಯ ವಿಕಾಸಕ್ಕೆ ಅತ್ಯಂತ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಶಿಕ್ಷಕನ ಪಾತ್ರ, ಬೋಧನೆಯ ನವೀನ ವಿಧಾನಗಳು, ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು, ಪರೀಕ್ಷಾ ಸುಧಾರಣೆಗಳು ಮುಂತಾದ ವಿಷಯಗಳ ಬಗ್ಗೆ ಈ ಸಮಿತಿ ಶಿಫಾರಸುಗಳನ್ನು ಮಾಡಿತು. ಇದಾದ ನಂತರದಲ್ಲಿ ಭಾರತ ಸರ್ಕಾರ 1968ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಕಟಗೊಳಿಸಿತು.

**ಗ್ರಾಮೀಣ ಉನ್ನತ ಶಿಕ್ಷಣ ಸಮಿತಿ (1967)** – ಗ್ರಾಮೀಣ ಉನ್ನತ ಶಿಕ್ಷಣದ ಯೋಜನೆಯ ಪ್ರಗತಿಯನ್ನು ಪುನರಾವಲೋಕಿಸಲು ಮತ್ತು ಅದನ್ನು ಸುಧಾರಿಸಲು ಕ್ರಮಗಳನ್ನು ಸೂಚಿಸಲು ಈ ಸಮಿತಿಯನ್ನು ನೇಮಕ ಮಾಡಲಾಯಿತು. ಗ್ರಾಮೀಣ ಉನ್ನತ ಶಿಕ್ಷಣದ ಸ್ಥೂಲ ಗುರಿಗಳು ಮತ್ತು ಕಾರ್ಯಗಳನ್ನು ಮತ್ತು ಇಂಗ್ಲೀಷ್, ಪ್ರಾದೇಶಿಕ ಭಾಷೆಗಳು, ಅಧ್ಯಯನದ ವಿಷಯಗಳು ಮತ್ತು ಪಠ್ಯಕ್ರಮದ ಬಗ್ಗೆ ಈ ಸಮಿತಿ ಚರ್ಚಿಸಿತು. ಗ್ರಾಮೀಣ ಸಂಸ್ಥೆಗಳನ್ನು ಭವಿಷ್ಯದಲ್ಲಿನ ಸ್ಥಾನಮಾನ ಮತ್ತು ಹೊಸದಾಗಿ ಗ್ರಾಮೀಣ ಸಂಸ್ಥೆಗಳನ್ನು ಆರಂಭಿಸುವುದರ ಬಗ್ಗೆ ಮೌಲ್ಯಮಾಪನ ಮಾಡಲಾಯಿತು. ಆಡಳಿತ ಸಂರಚನೆ, ಪ್ರವೇಶಾತಿ, ಇಂಗ್ಲೀಷ್ ಮತ್ತು ಪ್ರಾದೇಶಿಕ ಭಾಷೆಗಳ ಬೋಧನೆ, ಪಠ್ಯಕ್ರಮ, ವಿಸ್ತರಣ ಕಾರ್ಯ ಮತ್ತು ಸಂಶೋಧನೆ, ಶಿಕ್ಷಕರ ಸ್ಥಾನಮಾನ, ಗ್ರಾಮೀಣ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳಿಗೆ ನೌಕರಿಯ ಸಾಧ್ಯತೆ, ಗ್ರಾಮೀಣ ಸಂಸ್ಥೆಗಳ ಭವಿಷ್ಯದಲ್ಲಿನ ಸ್ಥಾನಮಾನ, ಕಾರ್ಯವಿಧಾನ ಹೊಸ ಗ್ರಾಮೀಣ ಸಂಸ್ಥೆಗಳ ಸ್ಥಾಪನೆ ಮುಂತಾದ ಅಂಶಗಳ ಬಗ್ಗೆ ಈ ಸಮಿತಿ ಶಿಫಾರಸುಗಳನ್ನು ಮಾಡಿತು.

**ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಪರಿಶೀಲನ ಸಮಿತಿ (1968)** – ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ 1968ಕ್ಕೆ ಸ್ವಲ್ಪ ಮುಂಚೆ ನಡೆದಿದ್ದ ಅಶಾಂತಿಪೂರ್ಣ ಘಟನೆ ಮತ್ತು ಚಳುವಳಿಯ ಬಗ್ಗೆ ಪರಿಶೀಲನೆ ಮಾಡಲು ಮತ್ತು ಆ ಪರಿಸ್ಥಿತಿಯನ್ನು ಪರಿಹರಿಸಲು ಅಗತ್ಯವಾದ ಅಥವಾ ಸೂಕ್ತವಾದ ಕ್ರಮವನ್ನು ಶಿಫಾರಸು ಮಾಡಲು ಮತ್ತು ವಿಶ್ವವಿದ್ಯಾನಿಲಯದ ಶಿಸ್ತಿನ ಸಾಮಾನ್ಯ ಸ್ವರೂಪವನ್ನು ಮತ್ತು ಕಾನೂನಿನ ವ್ಯವಸ್ಥೆಯನ್ನು ಉತ್ತಮಪಡಿಸಲು ಈ ಸಮಿತಿಯನ್ನು ನೇಮಿಸಲಾಗಿತ್ತು. ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಿಸಿದಂತೆ ಇದ್ದ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಕಾಯ್ದೆಯ ತಿದ್ದುಪಡಿ ಮಾಡಬೇಕೆಂದು ಈ ಸಮಿತಿ ಸೂಚಿಸಿತು. ವಿಶ್ವವಿದ್ಯಾನಿಲಯದಲ್ಲಿ ಆಗ ಇದ್ದ ಸೌಲಭ್ಯಗಳನ್ನು ಬಲಗೊಳಿಸಬೇಕೆಂದು ಸಮಿತಿ ಸಲಹೆ ನೀಡಿತು. ವಿಶ್ವವಿದ್ಯಾನಿಲಯದ ಆಡಳಿತ ಮತ್ತು ವಿದ್ಯಾರ್ಥಿ ಶಿಸ್ತು, ಇಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣದ ಪುನರ್ ವ್ಯವಸ್ಥೆ

Digitised by Bharatavani, CIIL

ಇತ್ಯಾದಿ ವಿಚಾರಗಳ ಬಗ್ಗೆ ಸಮಿತಿ ತೀವ್ರ ರೂಪದ ಶಿಫಾರಸುಗಳನ್ನು ಮಾಡಿತು.

**ವಿಶ್ವವಿದ್ಯಾನಿಲಯಗಳ ಆಡಳಿತದ ಬಗ್ಗೆ ಸಮಿತಿಯನ್ನು** (1969) ವಿಶ್ವವಿದ್ಯಾನಿಲಯಗಳ ಕಾಯ್ದೆಗಳು, ವಿಧಿಗಳು, ಸುಗ್ರೀವಾಜ್ಞೆಗಳು (Ordinances) ಮತ್ತು ನಿಯಮಾವಳಿಗಳು, ವಿಶ್ವವಿದ್ಯಾನಿಲಯಗಳ ಇತರ ಅಂಗಗಳು, ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡುವವರು, ವಿಶ್ವವಿದ್ಯಾನಿಯಗಳ ಪ್ರಾಧಿಕಾರಗಳು, ಬೋಧನಾ ವಿಭಾಗಗಳ ಸಂಘಟನೆ ಮತ್ತು ಹಣಕಾಸು ಮತ್ತು ಅಧಿಕಾರಕ್ಕೆ ಸಂಬಂಧಪಟ್ಟ ಇತರ ಕೆಲವು ವಿಚಾರಗಳ ಬಗ್ಗೆ ಪರಿಶೀಲಿಸಲು ನೇಮಿಸಲಾಗಿತ್ತು.

**ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಆಡಳಿತದ ಬಗ್ಗೆ ಸಮಿತಿ (1969)** – ವಿಶ್ವವಿದ್ಯಾನಿಲಯಗಳಿಗೆ ಅತ್ಯುತ್ತಮ ಸಾಮರ್ಥ್ಯ ಉಳ್ಳವರನ್ನು ಆಕರ್ಷಿಸುವುದು, ಅಧ್ಯಾಪಕರ ಕಾರ್ಯಗಳನ್ನು ಮತ್ತು ವೃತ್ತಿ ದಕ್ಷತೆಗಳನ್ನು ಉತ್ತಮಪಡಿಸಬೇಕಾದ ಅಗತ್ಯತೆ, ವೇತನಮಾನಗಳು ಮತ್ತು ಅವುಗಳ ತಾರ್ಕಿಕ ಆಧಾರ, ವಿಶ್ವವಿದ್ಯಾನಿಲಯ ಅಧ್ಯಾಪಕರು, ಕಾಲೇಜು ಅಧ್ಯಾಪಕರು, ಅಧ್ಯಾಪಕರ ಮೌಲ್ಯಮಾಪನ, ಕಾಲೇಜುಗಳ ಪ್ರಾಂಶುಪಾಲರು, ಟ್ಯೂಟರ್‌ಗಳು ಮತ್ತು ಡೆಮಾನ್‌ಸ್ಟ್ರೇಟರ್‌ಗಳು, ವೇತನ ನಿರ್ಧಾರದ ಆಧಾರ, ಗ್ರಂಥಾಲಯ ಸಿಬ್ಬಂದಿ ಮತ್ತು ದೈಹಿಕ ಶಿಕ್ಷಕರ ವೇತನಮಾನ, ರಾಷ್ಟ್ರೀಯ ವೇತನ ನೀತಿಯ ಅವಶ್ಯಕತೆ, ಅಂಗಭೂತ (Affiliated) ಕಾಲೇಜುಗಳಲ್ಲಿ ಅಧ್ಯಾಪಕರ ನೇಮಕಾತಿ, ಸೇವಾ ಸ್ಥಿತಿಗಳು ಮತ್ತು ನಡತೆಯ ನೀತಿ ಸಂಹಿತೆ ಈ ವಿಚಾರಗಳನ್ನು ಪರಿಗಣಿಸಿ ಶಿಫಾರಸುಗಳನ್ನು ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು.

**ಪರೀಕ್ಷೆಗಳ ಬಗ್ಗೆ ಸಮಿತಿ (1970)** – ಅಂದಿನ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ಪರೀಕ್ಷೆಗಳ ಸ್ಥಿತಿಯನ್ನು ಮೌಲ್ಯಮಾಪನ ಮಾಡಲು ಮತ್ತು ಪರೀಕ್ಷೆಗಳಲ್ಲಿ ನಡೆಯುತ್ತಿದ್ದ ತಪ್ಪು ಆಚರಣೆಗಳನ್ನು ಹತ್ತಿಕ್ಕಲು ಮತ್ತು ಪರೀಕ್ಷಾ ನಿರೀಕ್ಷಕರಿಗೆ ರಕ್ಷಣೆಯನ್ನು ಒದಗಿಸಲು, ಮತ್ತು ಪರೀಕ್ಷೆಗಳಿಗೆ ಸಂಬಂಧಿಸಿದ ಇತರ ವಿಚಾರಗಳನ್ನು ಮೌಲ್ಯಮಾಪನ ಮಾಡಲು ಈ ಸಮಿತಿ ನೇಮಕಗೊಂಡಿತ್ತು. ಈ ವಿಷಯಗಳ ಬಗ್ಗೆ ಒಂದು ಕಾನೂನನ್ನು ರೂಪಿಸವ ಬಗ್ಗೆ, ಪರೀಕ್ಷೆಗಳನ್ನು ನಡೆಸುವುದರ ಬಗ್ಗೆ, ಪರೀಕ್ಷಾ ಫಲಿತಾಂಶಗಳ ಉಪಯೋಗ, ಶಿಕ್ಷಣದ ಬಜೆಟ್ ತಯಾರಿಕೆ, ಸಂಶೋಧನೆ ಮುಂತಾದ ವಿಚಾರಗಳ ಬಗ್ಗೆ ಈ ಸಮಿತಿ ಶಿಫಾರಸುಗಳನ್ನು ಮಾಡಿತು.

ಆಧುನಿಕ ಭಾರತೀಯ ಭಾಷೆಗಳಲ್ಲಿ ಅಧ್ಯಯನ ಕೋರ್ಸ್‌ಗಳ ಬಗ್ಗೆ, ಪುನರಾವಲೋಕನ ಮಾಡಲು **ಆಧುನಿಕ ಭಾರತೀಯ ಭಾಷೆಗಳ ಸಮಿತಿಯನ್ನು** (1970) ನೇಮಿಸಲಾಯಿತು. ಈ ಕ್ಷೇತ್ರದಲ್ಲಿ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟವನ್ನು ಉತ್ತಮಗೊಳಿಸಲು ಅನೇಕ ಕ್ರಮಗಳನ್ನು ಈ ಸಮಿತಿ ಸಲಹೆ ಮಾಡಿತು.

**ಕುಲಪತಿಗಳ ಸಲಹಾ ಸಮಿತಿ (1970)** – ದೇಶದಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ವಿಶ್ವವಿದ್ಯಾನಿಲಯ ಅನುದಾನ ಆಯೋಗಕ್ಕೆ (UGC) ಸಲಹೆ ನೀಡಲು ಈ ಸಮಿತಿಯನ್ನು ನೇಮಿಸಲಾಯಿತು. ವಿಶ್ವವಿದ್ಯಾನಿಲಯಗಳಲ್ಲಿ ಸಹಕುಲಪತಿಗಳ (Pro-Vice Chancellors) ನೇಮಕಕ್ಕೆ ಅವಕಾಶ ಕಲ್ಪಿಸುವುದು ಅಪೇಕ್ಷಣೀಯ ಎಂದು ಈ ಸಮಿತಿ ಸೂಚಿಸಿತು. ಪ್ರತಿಯೊಂದು ವಿಶ್ವವಿದ್ಯಾನಿಲಯವೂ ವಿದ್ಯಾರ್ಥಿಗಳ ಸೌಲಭ್ಯಗಳ ಅಗತ್ಯತೆಗಳು ಮತ್ತು ಆದ್ಯತೆ ಬಗ್ಗೆ ಮೌಲ್ಯಮಾಪನ ಮಾಡಲು ಒಂದು ಸಮಿತಿಯನ್ನು ಮತ್ತು ಪ್ರಭಾವಿಕತೆಯನ್ನು ಉತ್ತಮಪಡಿಸಿಕೊಳ್ಳಲು ಬೋಧನೆಯ ದಕ್ಷತೆ ಮತ್ತು ಪ್ರಭಾವಿಕತೆಯನ್ನು ಉತ್ತಮಪಡಿಸಿಕೊಳ್ಳಲು ಬೇಕಾದ ಸೌಕರ್ಯಗಳನ್ನು ಮೌಲ್ಯಮಾಪನ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಬೇಕು.

**ಸಮಾಜಕಾರ್ಯ ಶಿಕ್ಷಣ ಮತ್ತು ತರಬೇತಿ ಬಗ್ಗೆ ಸಮಿತಿ (1970)**– ಸಮಾಜಕಾರ್ಯ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳ ಬಗ್ಗೆ UGCಗೆ ಸಲಹೆ ನೀಡಲು ಈ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಸಮಾಜಕಾರ್ಯ ಶಿಕ್ಷಣ ಮತ್ತು ತರಬೇತಿಯ ಗುಣಮಟ್ಟವನ್ನು ಉತ್ತಮಪಡಿಸುವುದು. ಕೋರ್ಸ್‌ಗಳನ್ನು ಪರಷ್ಕರಿಸುವುದು, ನೌಕರಿಯ ಅವಕಾಶಗಳು ಮುಂತಾದವುಗಳ ಬಗ್ಗೆ ಸಮಿತಿ ಅನೇಕ ಕ್ರಮಗಳನ್ನು ಸೂಚಿಸಿತು.

**ಪಾಲಿಟೆಕ್ನಿಕ್ ಶಿಕ್ಷಣವನ್ನು ಪುನರ್ ವ್ಯವಸ್ಥೆಗೊಳಿಸುವುದರ ಬಗ್ಗೆ ವಿಶೇಷ ಸಮಿತಿ (1970)**– ಈ ಸಮಿತಿಯನ್ನು ಶಿಕ್ಷಣದ ಇಡೀ ವ್ಯವಸ್ಥೆಯನ್ನು ಪರೀಕ್ಷಿಸಲು ಮತ್ತು ಡಿಪ್ಲೋಮಾ ಕೋರ್ಸ್‌ಗಳ ಪ್ರಾಯೋಗಿಕ ವಿಷಯ ವಸ್ತುವನ್ನು ಮತ್ತು ಪಾಲಿಟೆಕ್ನಿಕ್ ಶಿಕ್ಷಣದ ಇತರ ಅಂಶಗಳನ್ನು ಉತ್ತಮಪಡಿಸಲು ಕ್ರಮಗಳನ್ನು ಶಿಫಾರಸು ಮಾಡಲು ನೇಮಿಸಲಾಯಿತು. ಪಾಲಿಟೆಕ್ನಿಕ್ ಶಿಕ್ಷಣವನ್ನು ಕೈಗಾರಿಕೆ ಮತ್ತು ವಾಣಿಜ್ಯ ವಿಕಾಸದೊಂದಿಗೆ ಸಂಯೋಜಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. 1970ರಿಂದ ಮುಂದಿನ 10 ವರ್ಷಗಳಲ್ಲಿ ಅತ್ಯಂತ ಹೆಚ್ಚಿನ ಆದ್ಯತೆಯನ್ನು ತಾಂತ್ರಿಕ ಶಿಕ್ಷಣದ ಪರಿಮಾಣಾತ್ಮಕ ವಿಸ್ತಾರಕ್ಕಿಂತ ಕೋರ್ಸ್‌ಗಳ ಗುಣಾತ್ಮಕ ಸುಧಾರಣೆಗೆ ಮತ್ತು ಇರುವ ಸಂಸ್ಥೆಗಳನ್ನು ದೃಢಗೊಳಿಸುವಿಕೆಗೆ ಕೊಡಬೇಕೆಂದು ಸಮಿತಿ ಸೂಚಿಸಿತು. 'ಟೆಕ್ನಿಷಿಯನ್' ಪರಿಕಲ್ಪನೆ ಮತ್ತು ಅವನ ಶಿಕ್ಷಣದ ಬಗ್ಗೆ ಪಾಲಿಟೆಕ್ನಿಕ್ ಶಿಕ್ಷಣವನ್ನು ಪುನರ್ ವ್ಯವಸ್ಥೆಗೊಳಿಸುವುದರ ಬಗ್ಗೆ ಪರೀಕ್ಷೆಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು, ತರಬೇತಿ ಮತ್ತು ನೌಕರಿ, ಶಿಕ್ಷಕರ ಸ್ಥಾನಮಾನ, ಶಿಕ್ಷಕರ ವೃತ್ತಿ, ಬೆಳವಣಿಗೆ ಮುಂತಾದ ವಿಷಯಗಳ ಬಗ್ಗೆಯೂ ಈ ಸಮಿತಿ ಅನೇಕ ಶಿಫಾರಸುಗಳನ್ನು ಮಾಡಿತು.

**ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ನಿಧಿಯನ್ನು ಪಡೆಯುವುದಕ್ಕೆ ಮಾರ್ಗ ಸೂಚಿಸಲು ಸಮಿತಿ (1970)**– ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಹಣಕಾಸು ಲಭ್ಯತೆಯ ಬಗ್ಗೆ ಮೌಲ್ಯಮಾಪನ ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಆರಂಭಿಸಲಾಗಿದ್ದ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳಿಗೆ ಅತಿರಿಕ್ತ ಕೊಠಡಿಗಳನ್ನು ನಿರ್ಮಾಣ ಮಾಡಲು 90ಕೋಟಿ ಹಣಬೇಕಾಗುವುದೆಂದು ಈ ಸಮಿತಿ ಅಂದಾಜು ಮಾಡಿತು. ನಾಲ್ಕನೇ ಪಂಚವಾರ್ಷಿಕ ಯೋಜನೆ

Digitised by Bharatavani, CIIL

ಆರಂಭವಾಗುವುದಕ್ಕೆ ಮೊದಲು ಆರಂಭವಾಗಿದ್ದ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳಿಗೆ ಅದುವರೆಗೆ ಕಟ್ಟಲು ಸಾಧ್ಯವಾಗದಿದ್ದ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಬೇಕಾದ ಧನರಾಶಿಯನ್ನು ಲಾಟರಿಗಳು ಮತ್ತು ದಾನಗಳ ಮೂಲಕ ಸಂಗ್ರಹಿಸಬಹುದೆಂದು ಸಮತಿ ಸಲಹೆ ಮಾಡಿತು. ಮೂಲಭೂತ ಸೌಕರ್ಯಗಳಿಗೆ ಮತ್ತು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಸ್ಥಳೀಯ ಸಮುದಾಯದಿಂದ ಸಂಗ್ರಹಿಸಬಹುದು.

**ಭಾರತದಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ರಾಷ್ಟ್ರೀಯ ಸಮತಿ (1971)**– ಭಾರತದಲ್ಲಿ ಮಹಿಳೆಯರ ಸಂಪೂರ್ಣ ಸ್ಥಾನಮಾನವನ್ನು ಪರೀಕ್ಷಿಸಲು ಈ ಸಮಿತಿ ನೇಮಕಗೊಂಡಿತು. ಆದರೆ ಈ ಸಮಿತಿ ಮಹಿಳೆಯರ ಶೈಕ್ಷಣಿಕ ಸ್ಥಾನಮಾನವನ್ನು ಮಾತ್ರ ಚರ್ಚಿಸಿತು. ಸಾಮಾನ್ಯ ಶಿಕ್ಷಣದ ಸಾಮಾನ್ಯ ಕೋರ್ಸ್‌ಗಳು (ಔಪಚಾರಿಕ ಮತ್ತು ಸಂಪ್ರದಾಯರಹಿತ), ಸಹಶಿಕ್ಷಣ, ಪೂರ್ವಪ್ರಾಥಮಿಕ ಶಿಕ್ಷಣ, ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ಬಾಲವಾಡಿಗಳು ನಡೆದುಕೊಂಡು ಹೋಗಬಹುದಾದಷ್ಟು ದೂರದಲ್ಲಿ ಪ್ರಾಥಮಿಕ ಶಾಲೆಗಳು ಬಾಲಕಿಯರನ್ನು ಶಾಲೆಗೆ ಕರೆತರಲು ಪ್ರಚಾರ ಕಾರ್ಯ, ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕಿಯರ ಸಂಖ್ಯೆಯನ್ನು ಹೆಚ್ಚಿಸುವುದು, ಶಾಲೆಗೆ ಹಾಜರಾಗಲು ಬಾಲಕಿಯರಿಗೆ ಪ್ರೋತ್ಸಾಹಕಗಳು, ಬಹುಪ್ರವೇಶ ವ್ಯವಸ್ಥೆಯನ್ನು ಅನುಸರಿಸುವುದು. ಬಾಲಕಿಯರಿಗೆ ಅಂಶಕಾಲಿಕ ಶಿಕ್ಷಣ, ಸೆಕೆಂಡರಿ ಶಿಕ್ಷಣದವರೆಗೆ ಬಾಲಕಿಯರಿಗೆ ಉಚಿತ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಮಹಿಳೆಯರಿಗೆ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಸೇವೆಗಳು– ಈ ವಿಷಯಗಳ ಬಗ್ಗೆ ಈ ಸಮಿತಿ ಶಿಫಾರಸುಗಳನ್ನು ಮಾಡಿತು.

**ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜುಗಳ ಪುನರಾವಲೋಕನ ಸಮಿತಿಯನ್ನು (1972)** ಅಧ್ಯಯನ ಕೋರ್ಸ್‌ಗಳು, ಬೋಧನ ಸಿಬ್ಬಂದಿಯ ಗುಣಮಟ್ಟ, ಪ್ರವೇಶ ನಿಯಮಗಳು ಮತ್ತು ಬೋಧನೆಗೆ ಸೌಕರ್ಯಗಳು ಈ ವಿಷಯಗಳೂ ಸೇರಿದಂತೆ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ ಮತ್ತು ಅಭಿವೃದ್ಧಿ ಸಂಘಟನಾತ್ಮಕ ಮತ್ತು ಆಡಳಿತಾತ್ಮಕ ಸಂರಚನೆಯ ಬಗ್ಗೆ ಅಂದು ಇದ್ದ ಸ್ಥಿತಿಯನ್ನು ವರದಿ ಮಾಡಲು ನೇಮಿಸಲಾಗಿತ್ತು. ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜುಗಳನ್ನು ಬೋಧನ ಸಿಬ್ಬಂದಿಯ ವಿನಿಮಯ ಮತ್ತು ಸಾಮಾನ್ಯ ಕೋರ್ಸ್‌ಗಳು ಸೇರಿದಂತೆ ಅವುಗಳಿಗೆ ಸಂಬಂಧಿಸಿದ ತಾಂತ್ರಿಕ ಸಂಸ್ಥೆಗಳೊಂದಿಗೆ ಸೂಕ್ತರೀತಿಯಲ್ಲಿ ಅಂಗಭೂತಗೊಳಿಸಬೇಕಾದ ಮತ್ತು ಸಂಬಂಧಗೊಳಿಸಬೇಕಾದ ವ್ಯಾವಹಾರಿಕತೆ ಮತ್ತು ಅಪೇಕ್ಷಣೀಯತೆ ಬಗ್ಗೆ ಈ ಸಮಿತಿ ಸಲಹೆ ನೀಡಿತು. ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜುಗಳನ್ನು ಕೇಂದ್ರಿಯ ಇಂಜಿನಿಯರಿಂಗ್ ಕಾಲೇಜುಗಳೆಂದು ಪುನರ್ ನಾಮಕರಣ ಮಾಡುವುದು ಸೂಕ್ತವೆಂದು ಸಮಿತಿ ಶಿಫಾರಸು ಮಾಡಿತು. ಸಮಿತಿ ನೇಮಕವಾದ ವರ್ಷದಲ್ಲಿ ವಿದ್ಯಾರ್ಥಿ ಪ್ರವೇಶದಲ್ಲಿ ಅಪವ್ಯಯ ಶೇ.70ಕ್ಕಿಂತ ಹೆಚ್ಚಾಗಿದ್ದ ಅಥವಾ ಕೆಲವು ವರ್ಷಗಳಲ್ಲಿ ಸತತವಾಗಿ ವಿದ್ಯಾರ್ಥಿಗಳ ಪ್ರವೇಶ ಮಂಜುರಾಗಿದ್ದ ಪ್ರವೇಶ ಸಾಮರ್ಥ್ಯಕ್ಕಿಂತ ಶೇ.80ಕ್ಕೂ ಕಡಿಮೆ ಇದ್ದ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶವನ್ನು ನಿಲ್ಲಿಸಬೇಕು ಅಥವಾ ಮುಂದೂಡಬೇಕೆಂದು ಈ ಸಮಿತಿ ಸೂಚನೆ ನೀಡಿತು. ಈ ಸಮಿತಿ ಪ್ರವೇಶ ವಿನ್ಯಾಸ, ಪರೀಕ್ಷೆಗಳನ್ನು ನಡೆಸುವುದು, ಬೋಧನೆಯ ವಿಷಯಗಳು ಮತ್ತು ಕಾಲೇಜುಗಳಲ್ಲಿನ ಇತರ ಸೌಕರ್ಯಗಳ ಬಗ್ಗೆಯೂ ಶಿಫಾರಸುಗಳನ್ನು ಮಾಡಿತು.

10+2+3 ಶೈಕ್ಷಣಿಕ ಸಂರಚನೆಯ ಬಗ್ಗೆ ಸಮಿತಿ (1972)– ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 10+2+3 ಏಕರೂಪ ಸಂರಚನೆ ವಿನ್ಯಾಸವನ್ನು ಶಾಲೆ ಮತ್ತು ಕಾಲೇಜು ಮಟ್ಟದವರೆಗೆ ಜಾರಿಗೊಳಿಸಲು ಬೇಕಾದ ವ್ಯಾವಹಾರಿಕ ಕ್ರಮಗಳನ್ನು ಸೂಚಿಸಲು ಮತ್ತು ಈ ಕಾರ್ಯಕ್ರಮವನ್ನು ಜಾರಿಗೊಳಿಸಲು ತಗುಲುವ ವೆಚ್ಚವನ್ನು ಅಂದಾಜು ಮಾಡಲು ಈ ಸಮಿತಿ ನೇಮಕಗೊಂಡಿತು. ಪ್ರಾಥಮಿಕ ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಮಟ್ಟಗಳಲ್ಲಿ ಪಠ್ಯಕ್ರಮವನ್ನು ಪುನರ್ ಸಂರಚನೆಗೊಳಿಸುವ ಬಗ್ಗೆ ಪ್ರತಿ ರಾಜ್ಯದ ಸ್ಥಿತಿಯ ಬಗ್ಗೆ ಸಮಿತಿ ಚರ್ಚಿಸಿತು. 11ಮತ್ತು 12ನೇ ತರಗತಿಗಳ ಪಠ್ಯಕ್ರಮವನ್ನು ಹೊಸ ವ್ಯವಸ್ಥೆಯ 9 ಮತ್ತು 10ನೇ ತರಗತಿಗಳ ಪಠ್ಯಕ್ರಮದ ಆಧಾರದ ಮೇಲೆ ರಚಿತವಾಗಬೇಕೆಂದೂ ಸಮಿತಿ ಸೂಚಿಸಿತು. ಔದ್ಯೋಗಿಕ ವಿಷಯಗಳ ವಿಷಯವಸ್ತುವನ್ನು ಸಮಿತಿ ಸಲಹೆ ಮಾಡಿತು. ವಿವಿಧೋದ್ದೇಶ ಬೇಸಿಕ್ ನಂತರದ ಮತ್ತು ಟೆಕ್ನಿಕಲ್ ಉನ್ನತ ಮತ್ತು ಜೂನಿಯರ್ ಶಾಲೆಗಳಲ್ಲಿನ ಬೋಧನಾಕ್ರಮವನ್ನು ಪುನರಾವಲೋಕಿಸಬೇಕೆಂದೂ ಸಮಿತಿ ಸಲಹೆ ನೀಡಿತು. ಔದ್ಯೋಗಿಕ ತರಬೇತಿ ಮತ್ತು ಮಾರ್ಗದರ್ಶನ, ಪರೀಕ್ಷೆಗಳು, ಹೊಸ 11 ಮತ್ತು 12ನೇ ತರಗತಿಗಳ ಸ್ಥಾನ ನಿರ್ಧಾರ, ಶಿಕ್ಷಕರ ತರಬೇತಿ, ಸಂಪ್ರದಾಯ–ರಹಿತ ಶಿಕ್ಷಣ ಮತ್ತು 10+2+3 ಸಂರಚನೆಯ ಹಣಕಾಸಿಗೆ ಸಂಬಂಧಿಸಿದ ನಿಹಿತಾರ್ಥಗಳ ಬಗ್ಗೆಯೂ ಈ ಸಮಿತಿ ಚರ್ಚಿಸಿತು.

ವಿಶ್ವವಿದ್ಯಾನಿಲಯ ಅನುದಾನ ಆಯೋಗದ (UGC) ಪುನರಾವಲೋಕನ ಸಮತಿ (1974)– ಉನ್ನತ ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸುವುದು ಮತ್ತು ಸಂಯೋಜಿಸುವುದು ವಿಶೇಷವಾಗಿ ಸಂಬಂಧಪಟ್ಟಂತೆ ವಿಶ್ವವಿದ್ಯಾನಿಲಯ ಅನುದಾನ ಆಯೋಗದ ನೀತಿಗಳು, ಕಾರ್ಯಕ್ರಮಗಳು ಮತ್ತು ಕಾರ್ಯವೈಖರಿಯನ್ನು ಪುನರಾವಲೋಕನ ಮಾಡಲು ಮತ್ತು ಅದು ತನ್ನ ಜವಾಬ್ದಾರಿಗಳನ್ನು ಇನ್ನೂ ಪ್ರಭಾವಯುತವಾಗಿ ನೆರವೇರಿಸಲು ಅನುಕೂಲಕರವಾದ ಶಿಫಾರಸುಗಳನ್ನು ಮಾಡಲು ಈ ಸಮಿತಿಯನ್ನು ನೇಮಕ ಮಾಡಲಾಗಿತ್ತು. ಈ ಸಮತಿ ಚರ್ಚಿಸಿದ ಇತರ ವಿಷಯಗಳ ಅನುದಾನಗಳು, ಸಂಶೋಧನೆ, ಯೋಜನೆ ಮತ್ತು ಮೌಲ್ಯಮಾಪನ, ಸಂಘಟನೆ ಮತ್ತು ಸಂರಚನೆ ಮತ್ತು ಸಂವೈಧಾನಿಕ ಮತ್ತು ಕಾನೂನಿನ ಅಂಶಗಳಿಗೆ ಸಂಬಂಧಿಸಿದ್ದವು. ಬೋಧನ ಸಿಬ್ಬಂದಿಯ ವಿವಿಧ ವರ್ಗಗಳಿಗೆ ಸೇವಾವಧಿ ತರಬೇತಿಯನ್ನು ಸಮಿತಿ ಸೂಚಿಸಿತು. UGCಯ ವಿವಿಧ ಯೋಜನೆಗಳನ್ನು ಅಥವಾ ಚಟುವಟಿಕೆಗಳನ್ನು ಉಸ್ತುವಾರಿ

Digitised by Bharatavani, CIIL

ಮಾಡಬೇಕಾದ ಮತ್ತು ಮೌಲ್ಯಮಾಪನ ಮಾಡಬೇಕಾದ ತುರ್ತು ಅಗತ್ಯವಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿತು. UGC, ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳು, ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ನಡುವೆ ಇನ್ನೂ ಹೆಚ್ಚಿನ ನಿಕಟ ಅನ್ಯೋನ್ಯಕ್ರಿಯೆ ಉಂಟಾಗಬೇಕೆಂಬುದು ಈ ಸಮಿತಿಯ ಇಚ್ಛೆಯಾಗಿತ್ತು.

**ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಬೋಧನೆಯ ಸ್ಥಾನಮಾನದ ಬಗ್ಗೆ ಸಮಿತಿ (1974)–** ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಬೋಧನೆಯ ಸ್ಥಾನಮಾನವನ್ನು ಮೌಲ್ಯಮಾಪನ ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಬೋಧನೆಯ ಸಂಘಟನೆ, ಕೋರ್ಸ್‌ಗಳು, ವಿದ್ಯಾರ್ಥಿಗಳು, ಬೋಧನೆಯ ಕ್ರಮಗಳು, ಮೌಲ್ಯಮಾಪನ, ಅಧ್ಯಾಪಕರು, ಸಂಶೋಧನೆ ಮತ್ತು ಪ್ರಕಟಣೆ– ಈ ವಿಚಾರಗಳ ಬಗ್ಗೆ ಚರ್ಚಿಸಿತು. ವಿಶ್ವವಿದ್ಯಾನಿಲಯಗಳ ವಿಭಾಗಗಳಲ್ಲಿ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಬೋಧನೆಯ ಬಗ್ಗೆ ಈ ಸಮಿತಿ ಕೆಲವು ಶಿಫಾರಸುಗಳನ್ನು ಮಾಡಿತು.

1960ರಲ್ಲಿ ಪ್ರಥಮ ಸಮಾಜಕಾರ್ಯ ಸಮಿತಿಯ ಪುನರಾವಲೋಕನದ ನಂತರ ಪುನಃ ಯಾವ ರೀತಿಯ ಪುನರಾವಲೋಕನ ಆಗದೇ ಇದ್ದುದರಿಂದ **ಎರಡನೇ ಸಮಾಜಕಾರ್ಯ ಸಮಿತಿಯನ್ನು (1975)** ನೇಮಿಸಲಾಯಿತು. ಸಮಾಜಕಾರ್ಯ ಬೋಧನೆಯ ಕಾರ್ಯಕ್ರಮವನ್ನು ಹೆಚ್ಚು ಅರ್ಥಪೂರ್ಣವಾಗಿ ಮತ್ತು ಪ್ರಸಕ್ತವಾಗಿ ಮಾಡುವ ದೃಷ್ಟಿಯಿಂದ ಕೋರ್ಸ್‌ಗಳ ವಿಷಯವಸ್ತು, ಕ್ಷೇತ್ರ ಕಾರ್ಯ ಮತ್ತು ಸಂಶೋಧನೆ ಸೇರಿದಂತೆ ಅಂದಿನ ಸಂದರ್ಭದಲ್ಲಿ ಇದ್ದ ಸಮಾಜಕಾರ್ಯ ಶಿಕ್ಷಣದ ಕಾರ್ಯಕ್ರಮಗಳನ್ನು ವಿಮರ್ಶಾತ್ಮಕವಾಗಿ ಪುನರಾವಲೋಕನ ಮಾಡಲು ಕ್ರಮಗಳನ್ನು ಸಲಹೆ ಮಾಡುವುದು. ಈ ಸಮಿತಿಯ ಉದ್ದೇಶವಾಗಿತ್ತು. ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿಗೆ ಒತ್ತು ನೀಡಲು ಪಠ್ಯವಸ್ತುವಿನಲ್ಲಿ ಬದಲಾಯಿಸಬೇಕಾದ ಮತ್ತು ಬೋಧನ ವಿಧಾನಗಳನ್ನು ಉತ್ತಮಪಡಿಸಬೇಕಾದ ಅಗತ್ಯವಿದೆಯೆಂದು ಮತ್ತು ಸಮಾಜಕಾರ್ಯದ ವೃತ್ತಿಪರ ಶಿಕ್ಷಣದ ವಿಶೇಷ ಅಗತ್ಯವಿದೆ ಎಂದು ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿತು.

**ಉರ್ದು ಪ್ರೋತ್ಸಾಹನ ಸಮಿತಿ (1975)**ಯನ್ನು ಉರ್ದುಭಾಷೆಗೆ ಪ್ರೋತ್ಸಾಹ ನೀಡಲು ಅನುಸರಿಸಬೇಕಾದ ಕ್ರಮಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಸಲಹೆ ನೀಡಲು ನೇಮಿಸಲಾಯಿತು. ಸಮಿತಿ ಉರ್ದುಭಾಷೆಯ ಹಿನ್ನೆಲೆ ಮತ್ತು ಸಂವಿಧಾನದಲ್ಲಿ ಅದಕ್ಕೆ ನೀಡಲಾಗಿರುವ ಸಂರಕ್ಷಣೆಯ ಬಗ್ಗೆ ಚರ್ಚಿಸಲಾಯಿತು ಮತ್ತು ಪ್ರಾಥಮಿಕ, ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಮಟ್ಟಗಳಲ್ಲಿ ಉರ್ದು ಮಾಧ್ಯಮವಿರಬೇಕೆಂದು ಮತ್ತು ಉರ್ದುಭಾಷಾ ಶಿಕ್ಷಕರಿಗೆ ತರಬೇತಿ ನೀಡಬೇಕೆಂದು ಈ ಸಮಿತಿ ಶಿಫಾರಸು ಮಾಡಿತು.

**ಪಠ್ಯವಸ್ತುಗಳು ಮತ್ತು ಪಠ್ಯಪುಸ್ತಕಗಳ ಪುನರಾವಲೋಕನ ಸಮಿತಿ (1977)–** ಶಾಲಾಶಿಕ್ಷಣದ 10+2 ವ್ಯವಸ್ಥೆಗೆ NCERTಸಿದ್ಧಗೊಳಿಸಿದ ಪಠ್ಯವಸ್ತುಗಳನ್ನು ಮತ್ತು ಪಠ್ಯಪುಸ್ತಕಗಳನ್ನು ಪುನರಾವಲೋಕನ ಮಾಡಲು ಈ ಸಮಿತಿ ನೇಮಕಗೊಂಡಿತ್ತು. NCERTಯ ದಾಖಲೆ 10ವರ್ಷಗಳ ಶಾಲೆಗೆ ಪಠ್ಯಕ್ರಮದಲ್ಲಿ ಗುರ್ತಿಸಿರುವ ಉದ್ದೇಶಗಳನ್ನು ಪಠ್ಯವಸ್ತುವನ್ನು ಮತ್ತು ಪಠ್ಯಪುಸ್ತಕಗಳನ್ನು ಹಂತವಾರು ಮತ್ತು ವಿಷಯವಾರು ಚರ್ಚೆಗೆ ಒಳಪಡಿಸಿತು. ಅದು ಅಧ್ಯಯನದ ಕಾರ್ಯಕ್ರಮವನ್ನು ವಿಮರ್ಶಿಸಿ, ಬೇರೆ ಬೇರೆ ವಿಷಯಗಳ ಬೋಧನೆಗೆ ನಿಗದಿಪಡಿಸಲಾಗಿದ್ದ ಸಮಯದಲ್ಲಿ ಸೂಕ್ತ ಬದಲಾವಣೆಯನ್ನು ಸೂಚಿಸಿತು. ಮುಂದುವರೆದ ಮಟ್ಟದ ವಿಷಯಗಳ ಅಧ್ಯಯನಕ್ಕೆ ಪ್ರತಿಭಾವಂತ ವಿದ್ಯಾರ್ಥಿಗಳ ಅಗತ್ಯದ ಬಗ್ಗೆ ಮತ್ತು ಕೆಲವು ವಿಷಯಗಳಲ್ಲಿ ವಿದ್ಯಾರ್ಥಿಗಳಲ್ಲಿ ನಿರ್ದಿಷ್ಟ ಆಸಕ್ತಿಗಳು ಮತ್ತು ಅಭಿಸಾಮರ್ಥ್ಯಗಳು ಇರುವುದರ ಬಗ್ಗೆ ಅಥವಾ ಇಲ್ಲದಿರುವುದರ ಬಗ್ಗೆ ಸಮಿತಿ ಒತ್ತು ನೀಡಿತು. ಅಂದು ಪ್ರಚಲಿತವಿದ್ದ ಶೈಕ್ಷಣಿಕ ವ್ಯವಸ್ಥೆ ನಗರ ಉದ್ದೇಶಿತವಾದುದೆಂದು, ಪ್ರಸಕ್ತೀಯ ದೃಷ್ಟಿಯುಳ್ಳದ್ದು ಮತ್ತು ಸಂಪೂರ್ಣವಾಗಿ ದೈಹಿಕ ಚಟುವಟಿಕೆಗಳಿಂದ ರಹಿತವಾದುದು ಆಗಿದೆಯೆಂದು ಸಮಿತಿ ಭಾವಿಸಿತು. ಅವಕಾಶದ ದೃಷ್ಟಿಯಿಂದ ಈ ವ್ಯವಸ್ಥೆ ಸಮಾಜದ ಬಡ ಹಾಗೂ ದುರ್ಬಲ ವರ್ಗಗಳಿಗೆ ಪ್ರತಿಕೂಲಕರವಾಗಿದೆ. ಆದ್ದರಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಮೂಲ ಶಿಕ್ಷಣದ ತತ್ವಗಳು ಕೇಂದ್ರ ಸ್ಥಾನವನ್ನು ಪಡೆದುಕೊಳ್ಳಬೇಕಾದ ಅಗತ್ಯವಿತ್ತೆಂದು ಈ ಸಮಿತಿ ಭಾವಿಸಿತು.

1977ರಲ್ಲಿ ನೇಮಕಗೊಂಡಿದ್ದ ಪಠ್ಯವಸ್ತುಗಳು ಮತ್ತು ಪಠ್ಯಪುಸ್ತಕಗಳ ಸಮಿತಿಯ ವರದಿಯನ್ನು ಅನುಸರಿಸಿ ಅಂದಿನ ಕೇಂದ್ರ ಶಿಕ್ಷಣ ಮಂತ್ರಿಗಳು ಹೈಯರ್ ಸೆಕೆಂಡರಿ ಪುನರಾವಲೋಕನ ಸಮಿತಿಯನ್ನು (1977) ನೇಮಿಸಿದರು. ಈ ಸಮಿತಿ ಶಿಕ್ಷಣದ ಔದ್ಯೋಗಿಕೀಕರಣಕ್ಕೆ ಸಂಬಂಧಿಸಿದಂತೆ +2 ಹಂತದ ಪಠ್ಯಕ್ರಮವನ್ನು ಪುನರಾವಲೋಕನ ಮಾಡಿತು. ಈ ಸಮಿತಿ ಫೆಬ್ರವರಿ 1977ರಲ್ಲಿ 'ಮಾಡುವುದನ್ನು ಕಲಿಯುವುದು–ಕಲಿಯುವ ಮತ್ತು ಕಾರ್ಯನಿರತ ಸಮಾಜ' (Learning to Do-towards a Learning and working society) ಎನ್ನುವ ಶೀರ್ಷಿಕೆಯ ತನ್ನ ವರದಿಯಲ್ಲಿ ಶಿಕ್ಷಣದ ಔದ್ಯೋಗಿಕೀಕರಣಕ್ಕಾಗಿ ಶಿಫಾರಸು ಮಾಡಿತು. ಸಮಿತಿ ಈ ಮುಂದಿನ ವಿಷಯಗಳ ಬಗ್ಗೆ ಶಿಫಾರಸುಗಳನ್ನು ಮಾಡಿತು. – (i) ಕಾರ್ಯ ಆಧಾರಿತ ಕಲಿಕೆ (ii) ಕೃಷಿ ಆಧಾರಿತ ಔದ್ಯೋಗಿಕ ಕೋರ್ಸುಗಳು (iii) ಕೋರ್ಸ್‌ಗಳನ್ನು ವಾಹಿನಿಗೊಳಿಸುವುದರಲ್ಲಿ ನಮ್ಯತೆ (iv) ಎರಡು ವಿಸ್ತೃತ ಕಲಿಕಾ ಘಟಕಗಳು – ಸಾಮಾನ್ಯ ಶಿಕ್ಷಣದ ವ್ಯಾಪ್ತಿ ಮತ್ತು ಔದ್ಯೋಗಿಕ ಶಿಕ್ಷಣದ ವ್ಯಾಪ್ತಿ (v) ಸ್ಥಳೀಯ ಅಗತ್ಯಗಳು ಮತ್ತು ಪರಿಸ್ಥಿತಿಗಳಿಗೆ ಸೂಕ್ತವಾದ ಪಠ್ಯಪುಸ್ತಕಗಳು (vi) 11 ಮತ್ತು 12ನೇ ತರಗತಿಗಳಿಗೆ ಸೆಮಿಸ್ಟರ್ ವ್ಯವಸ್ಥೆಯ ಅನುಸರಣೆ (vii) ಸಮಾಲೋಚನೆ ಮತ್ತು ಸ್ಥಾನೀಕರಣದ ಅಧಿಕಾರಿಗಳು (viii) ಔದ್ಯೋಗಿಕ ಕೋರ್ಸ್‌ಗಳಿಗೆ ಶಿಕ್ಷಕರು (ix) ಶಿಕ್ಷಕರ ಸೇವಾ ಪೂರ್ವ ಮತ್ತು ಸೇವಾವಧಿ ತರಬೇತಿ (x) ಔದ್ಯೋಗಿಕ ಕೋರ್ಸ್‌ಗಳಿಗೆ ಶಿಕ್ಷಕರು (xi)ಪಠ್ಯಕ್ರಮ (xii) ಔದ್ಯೋಗಿಕ ಸಮೀಕ್ಷೆಗಳು (xiii) ಗ್ರಾಮೀಣ ಕ್ಷೇತ್ರಗಳಲ್ಲಿ ಶಾಲೆಗಳ ಸ್ಥಾಪನೆ (xiv) ಲಭ್ಯವಿರುವ ಸಂಪನ್ಮೂಲಗಳ ಉಪಯೋಗ

Digitised by Bharatavani, CIIL

(xv) ಅಪೆರೆಂಟಿಸ್ ಶಿಪ್ (ಅಭ್ಯಾಸಿಗ)ಸೌಕರ್ಯಗಳು (xvi) ನೇಮಕಾತಿ ನೀತಿಗಳು (xvii) ಲಂಬೀಯ ಸಂಚಲನೆ (xviii) ರಾಷ್ಟ್ರೀಯ ಔದ್ಯೋಗಿಕ ಶಿಕ್ಷಣ ಪರಿಷತ್ತಿನ ಸಂಘಟನೆ (xix) ರಾಜ್ಯ ಔದ್ಯೋಗಿಕ ಶಿಕ್ಷಣ ಪರಿಷತ್ತು (xx) ಸ್ಥಳೀಯ ಬೆಂಬಲ (xxi) ಕಾರ್ಯಕ್ರಮದ ಮೌಲ್ಯಮಾಪನ (xxii) ಹಣಕಾಸಿನ ಸಂಪನ್ಮೂಲಗಳು. ಈ ಎಲ್ಲಾ ಶಿಫಾರಸುಗಳನ್ನು ಹೆಚ್ಚಿನ ಮಟ್ಟದಲ್ಲಿ +2 ಹಂತದಲ್ಲಿ ಕಾರ್ಯರೂಪಕ್ಕೆ ತರಲಾಯಿತು.

ಭಾರತದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡಲು **ಕೃಷಿ ವಿಶ್ವವಿದ್ಯಾನಿಲಯಗಳ ಪುನರಾವಲೋಕನ ಸಮಿತಿಯನ್ನು (1977)** ನೇಮಿಸಲಾಯಿತು. ಕೃಷಿ ಕ್ಷೇತ್ರದಲ್ಲಿ ಸ್ವ–ಉದ್ಯೋಗಕ್ಕೆ ಪ್ರೇರಣೆ ಹೊಂದಿದ ಶಿಷ್ಟರಲ್ಲದ (non-elite) ಪದವೀಧರರನ್ನು ಸೃಷ್ಟಿಸುವುದರಲ್ಲಿ ಮತ್ತು ವಿವಿಧ ಮಟ್ಟಗಳಿಗೆ ಅಗತ್ಯವಾಗಿದ್ದ ತರಬೇತಿ ಪಡೆದ ಮಾನವಶಕ್ತಿಯ ಅಗತ್ಯವನ್ನು ಕೃಷಿ ವಿಶ್ವವಿದ್ಯಾನಿಲಯಗಳು ಎಷ್ಟರಮಟ್ಟಿಗೆ ಪೂರೈಸುತ್ತಿವೆ ಎಂಬುದನ್ನು ಈ ಸಮಿತಿ ಮೌಲ್ಯಮಾಪನ ಮಾಡಿತು. ಸಂಶೋಧನೆ ಮತ್ತು ತತ್ ಸಂಬಂಧಿತ ಸೌಲಭ್ಯಗಳನ್ನು ರಾಜ್ಯಸರ್ಕಾರಗಳಿಂದ ಸಂಬಂಧಿತ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಸಂಪೂರ್ಣವಾಗಿ ವರ್ಗಾಯಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. ಈ ಶಿಫಾರಸಿನ ಜೊತೆಗೆ ಕೃಷಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮಿತಿ ಇನ್ನು ಹಲವಾರು ಶಿಫಾರಸುಗಳನ್ನು ಮಾಡಿತು.

**UGC ಜಾರಿಗೊಳಿಸುತ್ತಿದ್ದ ವಿವಿಧ ಕಾರ್ಯಕ್ರಮಗಳ ಬಗ್ಗೆ ಪುನರಾವಲೋಕನ ಸಮಿತಿ (1978)–** ಕೇಂದ್ರ ಸರ್ಕಾರದ ನಿರ್ದೇಶನದಂತೆ ಅಂದಿನ ಸಂದರ್ಭದಲ್ಲಿ UGC ಕಾರ್ಯಾನ್ವಯಗೊಳಿಸುತ್ತಿದ್ದ ವಿವಿಧ ಕಾರ್ಯಕ್ರಮಗಳನ್ನು ವ್ಯಾಪಕ ರೀತಿಯಲ್ಲಿ ಪುನರಾವಲೋಕನ ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆ, ಸಂಶೋಧನೆ ಮತ್ತು ಪರೀಕ್ಷೆಗಳ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಮತ್ತು ಉಳಿಸಿಕೊಳ್ಳುವುದರಲ್ಲಿ UGCಯ ವಿವಿಧ ಕಾರ್ಯಕ್ರಮಗಳ ಪರಿಣಾಮವನ್ನು ನಿರ್ಧರಿಸುವುದು ಈ ಸಮಿತಿಯ ಪ್ರಯತ್ನವಾಗಿತ್ತು. ವಿವಿಧ ಉಪ–ಸಮೂಹಗಳು ಕೈಗೊಂಡ ಅಧ್ಯಯನ ಸಹಾಯದಿಂದ ಸಮಿತಿ ವಿಶ್ವವಿದ್ಯಾನಿಲಯ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಮತ್ತು ಉಳಿಸಿಕೊಳ್ಳಲು ಯಾವುದೇ ಪ್ರಭಾವ ಬೀರದ ಯೋಜನೆಗಳನ್ನು ಗುರ್ತಿಸಿತು. ಅಂಥ ಯೋಜನೆಗಳನ್ನು ಕೈಬಿಡುವುದು ಸಮಿತಿಯ ವಿಚಾರವಾಗಿತ್ತು. ಭವಿಷ್ಯದ ಕ್ರಿಯಾಯೋಜನೆಯನ್ನು ನಿರ್ಧರಿಸಲು ಮೂರು ವರ್ಷಗಳಿಗೂ ಮೇಲ್ಪಟ್ಟು ಜಾರಿಯಲ್ಲಿದ್ದ ಯೋಜನೆಗಳ ಗುಣಮಟ್ಟವನ್ನು ಈ ಸಮಿತಿ ಮೌಲ್ಯಮಾಪನ ಮಾಡಿತ್ತು.

**ಸ್ನಾತಕೋತ್ತರ ಶಿಕ್ಷಣ ಮತ್ತು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ಸಂಶೋಧನೆ ಬಗ್ಗೆ ಪುನರಾವಲೋಕನ ಸಮಿತಿ (1978)–** ಸ್ನಾತಕೋತ್ತರ ಕೋರ್ಸ್‌ಗಳ ಅಭಿವೃದ್ಧಿಯಲ್ಲಿ ಮತ್ತು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದ ಸಂಶೋಧನೆಯಲ್ಲಿ 1978ರವರೆಗೆ ಆಗಿದ್ದ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಸ್ನಾತಕೋತ್ತರ ಶಿಕ್ಷಣದ ಆಗಿನ ಸ್ಥಿತಿಯನ್ನು ಮತ್ತು ಇಂಜಿನಿಯರಿಂಗ್ ಮತ್ತು ತಂತ್ರ ಜ್ಞಾನದಲ್ಲಿನ ಸಂಶೋಧನೆಯ ಸ್ಥಿತಿ ಹಾಗೂ ಅದರ ಸಮಸ್ಯೆಗಳನ್ನು ಚರ್ಚಿಸಿತು. ಸಮಿತಿ ಈ ವಿಷಯಗಳಿಗೆ ಸಂಬಂಧಿಸಿದ ನೀತಿಯ ಅವಶ್ಯಕತೆ, ವಿದ್ಯಾರ್ಥಿವೇತನಗಳು, ಪುನರ್ ಸಂರಚನೆಗೊಳಿಸುವಿಕೆ, ಪುನರ್‌ಸಂಘಟನೆಗೊಳಿಸುವಿಕೆ, ಪ್ರವೇಶಾತಿ, ಹೊಸ ಕೋರ್ಸ್‌ಗಳು (ಅಂಶಕಾಲಿಕ), ನೌಕರಿಯ ಸಾಧ್ಯತೆ, ಮಾನವಶಕ್ತಿ ಯೋಜನೆ ಮತ್ತು ಅದರ ಉಪಯೋಗ, ಬೋಧಕ ವರ್ಗದ ಸುಧಾರಣೆ, ಉಪಕರಣಗಳ ಅನುರಕ್ಷಣೆ (maintenance) ಉಪಕರಣಗಳ ಬಳಕೆಯಲ್ಲಿ ತರಬೇತಿ, ಸಂಸ್ಥೆ ಮತ್ತು ಕೈಗಾರಿಕೆ ನಡುವಣ ಸಹಯೋಗ, ಸಂಶೋಧನೆ, ಸಾಮಾಜಿಕ–ಆರ್ಥಿಕ ಸಮಂಜಸತೆ, ಬಹುಶಾಸ್ತ್ರೀಯ, ಅಂತರ–ಶಾಸ್ತ್ರೀಯ ಸಂಬಂಧ ಮತ್ತು ಧನಸಹಾಯದ ವಿನ್ಯಾಸ, ಅಸಮತೋಲನದ ನಿವಾರಣೆ, ಮಾಹಿತಿ ಸೇವೆಗಳು, ದತ್ತಾಂಶ ಬ್ಯಾಂಕ್, ಪ್ರವೇಶ ಮತ್ತು ನಿಯಂತ್ರಣ, ಮೌಲ್ಯಮಾಪನ ಮತ್ತು ಮಾನ್ಯತೆ ನೀಡುವಿಕೆ, ಹೊರದೇಶಗಳ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ನೀತಿ – ಈ ವಿಚಾರಗಳಿಗೆ ಸಮತಿ ಶಿಫಾರಸುಗಳನ್ನು ಮಾಡಿತು.

**ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಪುನರಾವಲೋಕನ ಸಮಿತಿಯನ್ನು (1979)–** ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ (National Adult Education Programme-NAEP) ಕಾರ್ಯವನ್ನು ಪುನರಾವಲೋಕನ ಮಾಡಲು ಮತ್ತು ವಯಸ್ಕರ ಶಿಕ್ಷಣಕ್ಕೆ ಆದ್ಯತೆಯಲ್ಲಿ ಬದಲಾವಣೆಯನ್ನು ಸೂಚಿಸಲು ಮತ್ತು ಉತ್ತಮ ರೀತಿಯಲ್ಲಿ ಜಾರಿಗೊಳಿಸುವುದರ ಮೂಲಕ NAEP ನಿಗದಿಪಡಿಸಲಾಗಿದ್ದ ಧನರಾಶಿಯಲ್ಲಿ ಏನಾದರೂ ಉಳಿತಾಯ ಮಾಡಬಹುದೆ ಎಂಬುದನ್ನು ಪರೀಕ್ಷಿಸಲು ನೇಮಿಸಲಾಗಿತ್ತು. NAEPಯನ್ನು ತೀವ್ರ ರೀತಿಯಲ್ಲಿ ಬದಲಾಯಿಸಿ, ಬಲಗೊಳಿಸಬೇಕೆಂದು ಸಮಿತಿ ಸೂಚಿಸಿತು. ವಯಸ್ಕರ ಶಿಕ್ಷಣದ ಆದ್ಯತೆ ಮತ್ತು ಅದರ ಭವಿಷ್ಯ, ಕಲಿಕಾರ್ಥಿಗಳ ಭಾಗವಹಿಸುವಿಕೆ, ರಾಷ್ಟ್ರೀಯ ಮತ್ತು ರಾಜ್ಯ ವಯಸ್ಕರ ಶಿಕ್ಷಣ ಮಂಡಳಿಗಳ ಪಾತ್ರದ ಬಗ್ಗೆ ಸಮಿತಿ ನಿರ್ದಿಷ್ಟ ಶಿಫಾರಸುಗಳನ್ನು ಮಾಡಿತು. ಇದಲ್ಲದೆ ಈ ಸಮಿತಿ ಜಾರಿಗೊಳಿಸುವ ನಿಯೋಗಗಳು, ರಾಜಕೀಯ ಪಕ್ಷಗಳು ಮತ್ತು ಇತರ ಸಂಘಟನೆಗಳ ಪಾಲ್ಗೊಳ್ಳುವಿಕೆ, ಸಂಪನ್ಮೂಲ ಕೇಂದ್ರಗಳು, ಬೋಧನಾ ಸಾಮಗ್ರಿಗಳು, ಹಣಕಾಸಿಗೆ ಸಂಬಂಧಿಸಿದ ಕ್ರಮಗಳು ಮುಂತಾದ ವಿಷಯಗಳ ಬಗ್ಗೆಯೂ ಸಲಹೆಗಳನ್ನು ನೀಡಿತು.

**ಕೇಂದ್ರಿಯ ವಿಶ್ವವಿದ್ಯಾನಿಲಯಗಳ ಕಾರ್ಯದ ಪರಿಶೀಲನಾ ಸಮಿತಿ (1982)–** ಕೇಂದ್ರಿಯ ವಿಶ್ವವಿದ್ಯಾನಿಲಯಗಳು ಅವುಗಳಿಗೆ ಸಂಬಂಧಿಸಿದ ಕಾಯ್ದೆಗಳು ಮತ್ತು ವಿಧಿಗಳು ರೂಪಿಸಲಾಗಿದ್ದ ಉದ್ದೇಶಗಳನ್ನು ಪೂರ್ಣಗೊಳಿಸುತ್ತಿವೆಯೆ ಎಂಬುದನ್ನು ಪರೀಕ್ಷಿಸಲು ಮತ್ತು ಕೇಂದ್ರಿಯ ವಿಶ್ವವಿದ್ಯಾನಿಲಯಗಳಲ್ಲಿ ಶಿಸ್ತಿನ ಸಾಮಾನ್ಯ ಸ್ಥಿತಿಯನ್ನು ಪರೀಕ್ಷಿಸಲು ಈ ವಿಶ್ವವಿದ್ಯಾನಿಲಯಗಳ

Digitised by Bharatavani, CIIL

ಆವರಣದಲ್ಲಿ ಆಗಿದ್ದ ಗಲಭೆಗಳನ್ನು ಗುರ್ತಿಸಲು ಮತ್ತು ಅವುಗಳಿಗೆ ಪರಿಹಾರಗಳನ್ನು ಸೂಚಿಸಲು ಈ ಸಮಿತಿಯನ್ನು ನೇಮಿಸಲಾಯಿತು. ಈ ವಿಶ್ವವಿದ್ಯಾನಿಲಯಗಳಲ್ಲಿನ ಸಹಕಾರಾತ್ಮಕ ಜೀವನವನ್ನು (Corporate Life) ಬಲಗೊಳಿಸಲು ಈ ಸಮಿತಿ ಕ್ರಮಗಳನ್ನು ಸೂಚಿಸಿತು. ರಾಜಕೀಯ ಪಕ್ಷಗಳಿಗೆ ಒಂದು ನೀತಿ ಸಂಹಿತೆಯನ್ನು ರೂಪಿಸಬೇಕೆಂದು ಮತ್ತು ವಿಶ್ವವಿದ್ಯಾನಿಲಯಗಳ ವ್ಯವಹಾರಗಳಲ್ಲಿ ಅವುಗಳ ಪಾಲ್ಗೊಳ್ಳುವಿಕೆಯನ್ನು ಮಿತಿಗೊಳಿಸಬೇಕೆಂದು ಸಮಿತಿ ಅಪೇಕ್ಷಿಸಿತು. ಈ ವಿಶ್ವವಿದ್ಯಾನಿಲಯಗಳ ಕಾರ್ಯದಕ್ಷತೆಗೆ ಬೇಕಾದ ಮತ್ತು ಅವುಗಳ ಆವರಣಗಳಲ್ಲಿ ಅಧ್ಯಯನಕ್ಕೆ ಅನುಕೂಲಕರವಾದ ಶೈಕ್ಷಣಿಕ ವಾತಾವರಣವನ್ನು ಪ್ರೋತ್ಸಾಹಿಸಲು ಬೇಕಾದ ಕ್ರಮಗಳನ್ನು ಸಮಿತಿ ಸೂಚಿಸಿತು.

**ಕಾಲೇಜುಗಳಿಂದ ಶುಲ್ಕವನ್ನು ವಿಧಿಸುವುದರ ಬಗ್ಗೆ UGC ಕಾಯ್ದೆಯಡಿಯಲ್ಲಿ ನಿಯಮಗಳನ್ನು ರೂಪಿಸಲು ಸಮಿತಿ (1984)–** ವಿವಿಧ ಕೋರ್ಸ್‌ಗಳಿಗೆ ಕಾಲೇಜುಗಳು ವಿಧಿಸಬಹುದಾದ ಶುಲ್ಕಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವುದು ಈ ಸಮಿತಿಯ ಗುರಿಯಾಗಿತ್ತು. ಸಾಮಾನ್ಯ ಪದವಿ, ವಿಜ್ಞಾನ, ತಾಂತ್ರಿಕ ಮತ್ತು ವೃತ್ತಿಪರ ಕೋರ್ಸುಗಳಿಗೆ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಕಾಲೇಜುಗಳು ಒಂದು ವರ್ಷಕ್ಕೆ ವಿಧಿಸಬಹುದಾದ ಶುಲ್ಕಗಳ ಬಗ್ಗೆ ಈ ಸಮಿತಿ ಒಂಬತ್ತು ನಿರ್ದಿಷ್ಟ ಶಿಫಾರಸುಗಳನ್ನು ಮಾಡಿತು. ಯಾವುದೇ ಕಾಲೇಜು ವಿದ್ಯಾರ್ಥಿಗೆ ವಿಧಿಸುವ ವಾರ್ಷಿಕ ಶುಲ್ಕದ ಮೊತ್ತವನ್ನು ಪ್ರತಿ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಖರ್ಚು ಮಾಡುವ ಸರಾಸರಿ ವೆಚ್ಚದ ಆಧಾರದ ಮೇಲೆ ನಿರ್ಧರಿಸಬೇಕಾಗಿತ್ತು ಮತ್ತು ಯಾವುದೇ ಕಾರಣಕ್ಕೆ ಈ ಶುಲ್ಕದ ಮೊತ್ತ UGC ನಿಗದಿಪಡಿಸುವ ಮಿತಿಯನ್ನು ಮೀರಬಾರದು.

**ವಯಸ್ಕರ ಮತ್ತು ಮುಂದುವರಿಕೆ ಶಿಕ್ಷಣದ ಪುನರಾವಲೋಕನ ಸಮಿತಿಯನ್ನು** (1985) ಅಕ್ಟೋಬರ್ 1983ರಿಂದ ಮಾರ್ಚ್ 1985ರವರೆಗೆ ವಿಶ್ವವಿದ್ಯಾನಿಲಯಗಳು ನಡೆಸುತ್ತಿದ್ದ ನಿರಕ್ಷರತೆ ನಿರ್ಮೂಲನ ಕಾರ್ಯಕ್ರಮದ ಬಗ್ಗೆ ಪುನರಾವಲೋಕನ ಮಾಡಲು ನೇಮಿಸಲಾಯಿತು. ವಯಸ್ಕರ ಶಿಕ್ಷಣ ಮತ್ತು ಮುಂದುವರಿಕೆ ಶಿಕ್ಷಣದ ಆಂದೋಲನವನ್ನು ಜೀವನ–ಕೇಂದ್ರಿತ ಮತ್ತು ಜೀವನ ಪರ್ಯಂತ ಪ್ರಕ್ರಿಯೆಯಾಗಿ ಮಾರ್ಪಾಡಿಸಬೇಕೆಂದು ಸಮಿತಿ ಶಿಫಾರಸು ಮಾಡಿತು. ಇದರ ಬಗ್ಗೆ ಪರಿಸರ ಬೆಂಬಲವನ್ನು ಸೃಷ್ಟಿಸಲು ಮತ್ತು ಜನರಲ್ಲಿ ಜಾಗೃತಿ ಮೂಡಿಸಲು 15 ದಿನಗಳ ವಿಶೇಷ ಸಾಕ್ಷರತಾ ಶಿಬಿರವನ್ನು ಒಳಗೊಂಡಂತೆ ಇಡೀ ವಿದ್ಯಾರ್ಥಿ ಸಮೂಹವನ್ನು ಅದರ ನಾಯಕರೊಡನೆ ಒಳಗೊಂಡು ಸಾಮೂಹಿಕ ಆಂದೋಲನವನ್ನು ನಡೆಸಬೇಕೆಂದು ಈ ಸಮಿತಿ ಸಲಹೆ ಮಾಡಿತು.

**ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸ್ಥಾಪನೆಯ ಬಗ್ಗೆ ಸಮಿತಿ (1986)–** ಈ ವಿಷಯದ ಬಗ್ಗೆ ರಾಷ್ಟ್ರೀಯ ಶಿಕ್ಷಣ ನೀತಿಯ (1986) ಕ್ರಿಯಾ ಯೋಜನೆ ಪ್ರಕಾರ ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಸ್ಥಾಪಿಸುವುದರ ಬಗ್ಗೆ ಶಿಫಾರಸು ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ಉಪಸಮಿತಿಯೊಂದು ರೂಪಿಸಿದ್ದ ಮಾರ್ಗದರ್ಶಿ ಸೂತ್ರಗಳನ್ನು ಈ ಸಮಿತಿ ಪರಿಗಣಿಸಿತು. ಈ ಮಾರ್ಗದರ್ಶಿ ಸೂತ್ರಗಳು ಉದ್ದೇಶಗಳು, ಸಂರಚನೆ, ಸೇವೆಯ ನಿಯಮಗಳು ಮತ್ತು ಷರತ್ತುಗಳು, ಸಿಬ್ಬಂದಿ, ತಾತ್ಕಾಲಿಕವಾದ ಕಾರ್ಯಗಳು, ಯೋಜನೆ ಮತ್ತು ಸಂಘಟನೆ ಶೈಕ್ಷಣಿಕ, ಸಲಹಾತ್ಮಕ ಮತ್ತು ಆಡಳಿತಾತ್ಮಕ ಕಾರ್ಯಗಳು, ಪರಿಷತ್ತಿನ ಸದಸ್ಯರಿಗೆ ವೇತನ, ಬಜೆಟ್ ಮತ್ತು ವರದಿ ಈ ಅಂಶಗಳನ್ನು ಒಳಗೊಂಡಿದ್ದವು.

**ಶಿಕ್ಷಣಶಾಸ್ತ್ರದಲ್ಲಿ ಪಠ್ಯಕ್ರಮ ವಿಕಾಸ ರಾಷ್ಟ್ರೀಯ ಸಮಿತಿ:** ಸ್ನಾತಕೋತ್ತರ ಹಂತ (1986)– ದೇಶದಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಅಂದಿನ ಸಂದರ್ಭದಲ್ಲಿ ಇದ್ದ ಪಠ್ಯಕ್ರಮಗಳನ್ನು ಮೌಲ್ಯಮಾಪನ ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಪಠ್ಯಕ್ರಮವನ್ನು ಜಾರಿಗೊಳಿಸಲು ಬೇಕಾದ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು, ಬೋಧನೆಯ ಸಾಧನಗಳು, ಗ್ರಂಥಾಲಯ ಮತ್ತು ಪ್ರಯೋಗಶಾಲೆ, ಉಪಕರಣಗಳು – ಈ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಮಿತಿ ಸಲಹೆಗಳನ್ನು ನೀಡಿತು. ಪಠ್ಯಕ್ರಮವನ್ನು ಅಂತಿಮಗೊಳಿಸಲು ಮತ್ತು ಜಾರಿಗೊಳಿಸಲು, ಪಠ್ಯಕ್ರಮಕ್ಕೆ ಬೆಂಬಲವಾಗಿರಲು ಬೆಂಬಲ ಸಾಮಗ್ರಿಗಳ ವಿಕಾಸ, ಪಠ್ಯಕ್ರಮವನ್ನು ಜಾರಿಗೊಳಿಸಲು ಬೇಕಾದ ನಿಯೋಗಗಳು ಮತ್ತು ಸಂಸ್ಥೆಗಳ ಬಗ್ಗೆಯೂ ಸಮಿತಿ ಸಲಹೆ ನೀಡಿತು.

**ಭಾರತೀಯ ಭಾಷೆಗಳಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ಪುಸ್ತಕಗಳ ಉತ್ಪಾದನೆ ಯೋಜನೆಯ ಬಗ್ಗೆ ಪುನರಾವಲೋಕನ ಸಮಿತಿ (1987)–** ಭಾರತೀಯ ಭಾಷೆಗಳಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ಪುಸ್ತಕಗಳ ಉತ್ಪಾದನೆ ಯೋಜನೆಯನ್ನು ವಿಶ್ವವಿದ್ಯಾನಿಲಯಗಳ ವ್ಯವಸ್ಥೆಯಲ್ಲಿ ಅವುಗಳ ಪ್ರಭಾವಕಾರಿ ಉಪಯೋಗ ಮತ್ತು ಉನ್ನತ ಶಿಕ್ಷಣ ಮಟ್ಟದಲ್ಲಿ ಭಾರತೀಯ ಭಾಷೆಗಳನ್ನು ಬೋಧನ ಮಾಧ್ಯಮವಾಗಿ ಅಳವಡಿಸಿಕೊಳ್ಳಬೇಕೆಂದು ವ್ಯಕ್ತಗೊಂಡಿರುವ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ಆ ಯೋಜನೆಯನ್ನು ಕನಿಷ್ಠ ಪಕ್ಷದಲ್ಲಿ ಎಂಟನೇ ಪಂಚವಾರ್ಷಿಕ ಯೋಜನೆ ಮುಗಿಯುವವರೆಗಾದರೂ ಮುಂದುವರಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. ಆದರೆ ಆ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯಗಳ ಮಟ್ಟದ ಪುಸ್ತಕಗಳಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಸಮಿತಿ ಸೂಚಿಸಿತು.

ಭಾರತ ಸರ್ಕಾರದ ಶಿಕ್ಷಣ ಇಲಾಖೆ 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪುನರಾವಲೋಕನ ಮಾಡಲು **ರಾಷ್ಟ್ರೀಯ ಶಿಕ್ಷಣ ನೀತಿಯ (1986) ಪುನರಾವಲೋಕನ ಸಮಿತಿಯನ್ನು (1990)** ನೇಮಿಸಿತು. ಸಮಿತಿ ತನ್ನ ವರದಿಯನ್ನು ಅದೇ ವರ್ಷ ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯನ್ನು ಪರೀಕ್ಷಿಸುವ ದೃಷ್ಟಿಯಿಂದ ಕೇಂದ್ರಿಯ ಶಿಕ್ಷಣ ಸಲಹಾ ಮಂಡಳಿ (CABE) 1992ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (1986) ಸಮಿತಿಯನ್ನು ನೇಮಿಸಿತು. 1990ರಲ್ಲಿ ಸಲ್ಲಿಸಲಾಗಿದ್ದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ CABEಯ ಸಮಿತಿ SC/ST ಗುಂಪುಗಳ ಮತ್ತು ಇತರ ಹಿಂದುಳಿದ ಗುಂಪುಗಳ ಶಿಕ್ಷಣಕ್ಕಾಗಿ ಒಂದು ಸ್ಥಾಯಿ ಸಮಿತಿಯನ್ನು ನೇಮಕಮಾಡಬೇಕೆಂದು

Digitised by Bharatavani, CIIL

ಶಿಫಾರಸು ಮಾಡಿತು. ಸಾಮಾನ್ಯ ಶಾಲಾವ್ಯವಸ್ಥೆಗೆ ಸಂಬಂಧಪಟ್ಟಂತೆ ಹೊಸ ಶಿಕ್ಷಣ ನೀತಿಯ(1986) ಪ್ರಾವಧಾನಗಳನ್ನು(provisions) ಜಾರಿಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಮಿತಿ ಸೂಚಿಸಿತು. ನವೋದಯ ವಿದ್ಯಾಲಯ ಯೋಜನೆಯನ್ನು ಮುಂದುವರಿಸಬೇಕೆಂದೂ ಮತ್ತು ಪ್ರತಿ ಜಿಲ್ಲೆಯಲ್ಲಿ ನವೋದಯ ಶಾಲೆಯನ್ನು ಆರಂಭಿಸಬೇಕೆಂದು ಈ ಸಮಿತಿ ಹೇಳಿತು. ಆರಂಭಿಕ ಬಾಲ್ಯಾವಸ್ಥೆ ಶಿಕ್ಷಣ ಮತ್ತು ಶಿಶುಸಂರಕ್ಷಣೆಗೆ (Early Childhood care and Education-EECE) ಸಂಬಂಧಿಸಿದ ಸಮಗ್ರ ಶಿಶುವಿಕಾಸ ಯೋಜನೆ (ICDS) ಮತ್ತು ಇತರ ಶಿಶು ಸಂರಕ್ಷಣ ಯೋಜನೆಗಳನ್ನು ಮತ್ತು ಕಪ್ಪು ಹಲಗೆಯ ಯೋಜನೆಯನ್ನು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲೂ ಮುಂದುವರಿಸಬೇಕೆಂದು ಸಮಿತಿ ಸಲಹೆ ಮಾಡಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯೋಜನೆ, ವಯಸ್ಕರ ಶಿಕ್ಷಣ ಮತ್ತು ಮುಂದುವರಿಕೆ ಶಿಕ್ಷಣ, ಸೆಕೆಂಡರಿ ಶಿಕ್ಷಣ, ಶಿಕ್ಷಣದ ಔದ್ಯೋಗಿಕರಣ, ಉನ್ನತ ಶಿಕ್ಷಣ, ಶಿಕ್ಷಣದ ನಿರ್ವಹಣೆ, ಶಿಕ್ಷಣಕ್ಕೆ ಸಂಪನ್ಮೂಲಗಳು– ಇವುಗಳಲ್ಲಿ ಸುಧಾರಣೆಗಳನ್ನು ಮಾಡಬೇಕೆಂದು ಸಮಿತಿ ಅತ್ಯಲ್ಪ ಪ್ರಮಾಣದದ್ದಾಗಿದೆಯಾದರೂ, ಈ ನೀತಿಯ ಕಾರ್ಯಯೋಜನೆಯನ್ನು (Programme of Action-POA) ಗಣನೀಯ ಪ್ರಮಾಣದಲ್ಲಿ ಪರಿಷ್ಕರಿಸಬೇಕಾದ ಅಗತ್ಯವಿದೆಯೆಂದು ಸಮಿತಿ ಸೂಚಿಸಿತು. ಸಮಿತಿಯ ಈ ಸೂಚನೆಯಂತೆ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು (MHRI) 1992ರ ಕಾರ್ಯಯೋಜನೆಯ ದಾಖಲೆಯನ್ನು ಹೊರತಂದಿತು.

**ಉದ್ಯೋಗೋನ್ಮುಖ ಕೋರ್ಸುಗಳನ್ನು ಆರಂಭಿಸುವ ಬಗ್ಗೆ ದೆಹಲಿ ವಿಶ್ವವಿದ್ಯಾನಿಲಯ ಸಮಿತಿ (1995)–** ಸ್ವ–ಉದ್ಯೋಗವೂ ಸೇರಿದಂತೆ ಆಗ ಮುಂದುವರಿಯುತ್ತಿದ್ದ ಉದ್ಯೋಗೋನ್ಮುಖ ಕೋರ್ಸುಗಳ ಕಾರ್ಯಕ್ರಮ ಪ್ರಭಾವಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಬೆಂಬಲ/ಪ್ರೋತ್ಸಾಹಕ ಕ್ರಮಗಳನ್ನು ಪುನರಾವಲೋಕನ ಮಡಲು ಈ ಸಮಿತಿ ನೇಮಕಗೊಂಡಿತ್ತು. ವಿದ್ಯಾರ್ಥಿಗಳ ಸಂಪೂರ್ಣ ವಿಕಾಸಕ್ಕೆ ಉದ್ಯೋಗೋನ್ಮುಖ ಕೋರ್ಸುಗಳ ಅಗತ್ಯವಿದೆಯೆಂದು ಮತ್ತು ಶೈಕ್ಷಣಿಕ ಸಂಸ್ಥೆಗಳು ಹಾಗೂ ಅವುಗಳ ಸುತ್ತಮುತ್ತ ಇರುವ ಸಮುದಾಯಗಳು/ ಕೈಗಾರಿಕೆಗಳ ನಡುವೆ ಸಂಪರ್ಕ ಕಲ್ಪಿಸಬೇಕಾದ ಅವಶ್ಯಕತೆಯಿದೆ ಎಂದು ಈ ಸಮಿತಿ ಶಿಫಾರಸು ಮಾಡಿತು. ಉದ್ಯೋಗೋನ್ಮುಖ ಕೋರ್ಸುಗಳನ್ನು ಹೆಚ್ಚು ಉತ್ಪಾದಕವಾದವುಗಳನ್ನಾಗಿ ಮತ್ತು ಉಪಯುಕ್ತವಾದವುಗಳನ್ನಾಗಿ ಮಾಡಲು ಅವುಗಳನ್ನು ಯೋಜಿತ ರೀತಿಯಲ್ಲಿ ವಿಕಾಸಗೊಳಿಸಬೇಕಾದ ಅಗತ್ಯವಿದೆ. ಈ ರೀತಿಯ ಕೋರ್ಸುಗಳು ಮತ್ತು ಕಾರ್ಯಕ್ರಮಗಳು ಸ್ವ–ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶೈಕ್ಷಣಿಕ ಮಟ್ಟವನ್ನು ಖಚಿತಗೊಳಿಸುವಲ್ಲಿ ಸಹಾಯಕವಾಗಬಹುದು.

ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಮಾಡಲು ಮಂತ್ರಿಗಳ ಸಮಿತಿ (1997)– ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಮಾಡಲು ಸಂವಿಧಾನದಲ್ಲಿ ತಿದ್ದುಪಡಿ ಮಾಡಲು ಪ್ರಸ್ತಾವನೆಯ ನ್ಯಾಯಿಕ, ಶೈಕ್ಷಣಿಕ, ಆಡಳಿತಾತ್ಮಕ, ಆರ್ಥಿಕ ನಿಹಿತಾರ್ಥಗಳನ್ನು ಪರಿಗಣಿಸಲು ಮತ್ತು ಪರೀಕ್ಷಿಸಲು ಈ ಸಮಿತಿಯನ್ನು ನೇಮಿಸಲಾಯಿತು. ಶಿಕ್ಷಣ ರಾಜ್ಯಪಟ್ಟಿಯಲ್ಲಿರುವುದರಿಂದ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಲು ಕೇಂದ್ರ ಸರ್ಕಾರ ಕಾನೂನು ಜಾರಿಗೊಳಿಸುವ ಅಗತ್ಯವಿಲ್ಲವೆಂದು ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿತು. ಇದಕ್ಕೆ ಬದಲಾಗಿ, ರಾಜ್ಯಗಳು ಇರುವ ತಮ್ಮ ಕಾನೂನನ್ನು ತಿದ್ದುಪಡಿ ಮಾಡಬಹುದು ಅಥವಾ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ವಿಸ್ತೃತ ಚೌಕಟ್ಟನ್ನು ಒದಗಿಸಲು ಹೊಸ ಕಾನೂನನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಮಾರ್ಗದರ್ಶಿ ಸೂತ್ರಗಳನ್ನು ಸೂಚಿಸಬೇಕಾಗುತ್ತದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಬೋಧನಾ ಶುಲ್ಕದ ವಿನಾಯಿತಿ, ಹಿರಿಯ ಪ್ರಾಥಮಿಕ ಮಟ್ಟದವರೆಗೆ ಎಲ್ಲಾ ಮಕ್ಕಳಿಗೂ ಉಚಿತ ಪಠ್ಯಪುಸ್ತಕಗಳ ನೀಡಿಕೆ, ಮತ್ತು ಉಚಿತ ಬರವಣಿಗೆ ಸಾಮಗ್ರಿಗಳ ನೀಡಿ ಕೆಯನ್ನು ಒಳಗೊಂಡಿರಬೇಕು. ಅಲ್ಲಿಂದೀಚೆಗೆ ಭಾರತೀಯ ಸಂಸತ್ತು (ಪಾರ್ಲಿಮೆಂಟ್) 6–14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಸಂವಿಧಾನದ 93ನೇ ತಿದ್ದುಪಡಿಯನ್ನು ಜಾರಿಗೊಳಿಸಿದೆ.

**ಮೂಲ: ಕುಲದೀಪ್ ಕೌರ್**

**ಅನು: ಪ್ರೊ. ಮಂಜುನಾಥಯ್ಯ ಬಿ.ಎಸ್.**

## ಶಿಶುವಿನ ದೈಹಿಕ ಹಾಗೂ ಚಲನಾತ್ಮಕ ವಿಕಾಸ

ಶೈಶವವು ಕೇವಲ 2 ವರ್ಷಗಳ ಅವಧಿಯದ್ದು ಎಂದು ಕೆಲವರ ಅಭಿಪ್ರಾಯ. ಆ ರೀತಿಯ ವರ್ಗೀಕರಣವೂ ಕಾಣಬರುತ್ತದೆ. ಆದರೆ ಮಗುತನವನ್ನು (2 ವರ್ಷಗಳ ವರೆಗಿನ ಅವಧಿ) ಇದರಲ್ಲಿಯೇ ಪರಿಗಣಿಸಿರುವ ಉದಾಹರಣೆಗಳಿವೆ. ಈ ಲೇಖನದಲ್ಲಿ ಜನನದಿಂದ ಎರಡು ವರ್ಷಗಳ ಅವಧಿಯಲ್ಲಿ ಎಂದರೆ ಶೈಶವ ಮತ್ತು ಮಗುತನದಲ್ಲಿ ಜರುಗುವ ಶಾರೀರಿಕ ಹಾಗೂ ಚಲನಾತ್ಮಕ ಬೆಳವಣಿಗೆ ಮತ್ತು ವಿಕಾಸಗಳನ್ನು ವಿವರಿಸಲಾಗಿದೆ.

### ಜನನ ಕಾಲದ ತೂಕ, ಎತ್ತರ:

ಜನಿಸಿದಾಗ ಶಿಶುವಿನ ತೂಕವು ಸರಾಸರಿ 7 ಪೌಂಡುಗಳಷ್ಟು ಹಾಗೂ ಎತ್ತರ 14 ಇಂಚುಗಳಷ್ಟಿರುತ್ತದೆ. ಐದು ತಿಂಗಳಿಗೆ ಶಿಶುವಿನ ತೂಕ ದ್ವಿಗುಣವಾಗಿ 14 ಪೌಂಡುಗಳಿಗಿಂತ ಹೆಚ್ಚಾಗುತ್ತದೆ. ಒಂದು ವರ್ಷದ ಅವಧಿಯಲ್ಲಿ ಮೂರು ಪಟ್ಟಿಗಿಂತ ಹೆಚ್ಚಾಗಿ 22 ಪೌಂಡುಗಳಾಗಿರಬೇಕು. ಎರಡನೆಯ ವರ್ಷದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ತೂಕದಲ್ಲಿ ಹೆಚ್ಚಳವಾಗುವುದಿಲ್ಲ. ಆದರೆ 5–6 ಪೌಂಡುಗಳಷ್ಟು ಹೆಚ್ಚಳವಾಗಿ 27–28 ಪೌಂಡುಗಳಾಗುವ

Digitised by Bharatavani, CIIL

ಸಾಧ್ಯತೆಯಿದೆ. ಸತ್ಯ ಸಂಗತಿಯೆಂದರೆ ಭಾರತದ ಹಲವಾರು ಮಕ್ಕಳು ಜನನ ಕಾಲದಲ್ಲಿ 7 ಪೌಂಡುಗಳಿಗಿಂತ ಕಡಿಮೆ ತೂಕವನ್ನು ಹೊಂದಿರುತ್ತಾರೆ. ಶಿಶುವಿನ ಎತ್ತರವು ಜನಿಸಿದಾಗ ಸರಾಸರಿ 14–16 ಇಂಚುಗಳಷ್ಟಿರುತ್ತದೆ. ಪ್ರಥಮ ವರ್ಷದಲ್ಲಿ 10–12 ಇಂಚುಗಳಷ್ಟು ಹೆಚ್ಚಳವಾಗಿ, ಎತ್ತರ 24–28 ಇಂಚುಗಳಷ್ಟಾಗಿರುತ್ತದೆ. ಎರಡನೆಯ ವರ್ಷದ ಅಂತ್ಯದ ವೇಳೆಗೆ ಐದು ಇಂಚುಗಳಷ್ಟು ಬೆಳವಣಿಗೆಯಾಗಿ 29–33 ಇಂಚುಗಳಷ್ಟು ಎತ್ತರವಾಗುವ ಸಾಧ್ಯತೆಗಳಿವೆ. ಹುಟ್ಟಿದ ಮಗುವಿನ ತಲೆ ಬಹಳ ದೊಡ್ಡದಿರುತ್ತದೆ. ಅದು ಶರೀರದ 1/4 ಭಾಗದಷ್ಟಿರುತ್ತದೆ. ಕುತ್ತಿಗೆ ಇರುವುದೇ ಇಲ್ಲ. ಗದ್ದ ರೂಪುಗೊಳ್ಳಬೇಕಾಗಿರುತ್ತದೆ. ಎದೆ ರೂಪುಗೊಂಡು ಮೂಡಬೇಕಾಗಿರುತ್ತದೆ. ಮಗುವಿನ ಮೆದುಳು ಒಂದು ವರ್ಷದಲ್ಲಿ ವಯಸ್ಕರ ಮೆದುಳಿನ 2/3 ರಷ್ಟು ಗಾತ್ರವನ್ನು ಪಡೆದುಕೊಳ್ಳುತ್ತದೆ. ಎರಡು ವರ್ಷಗಳ ಅಂತರದಲ್ಲಿ ವಯಸ್ಕರ ಮೆದುಳಿನ 4/5 ರಷ್ಟು ಗಾತ್ರವನ್ನು ಹೊಂದುತ್ತದೆ.

ಆದರೆ ತಾಯಿಯ ವಯಸ್ಸು 18 ಕ್ಕಿಂತ ಕಡಿಮೆ ಇರುವ, ಗರ್ಭದಲ್ಲಿರುವಾಗ ಸರಿಯಾದ ಪೋಷಣೆ ಆಗುವುದಿಲ್ಲ. ವಿಶ್ರಾಂತಿ ಸಿಗದ ಸುಮಾರು 50% ಶಿಶುಗಳ ಶಾರೀರಿಕ ತೂಕ, ಎತ್ತರ ಹಾಗೂ ಮೆದುಳಿನ ಬೆಳವಣಿಗೆ ನಿರೀಕ್ಷಿಸಿದ ರೀತಿಯಲ್ಲಿ ಆಗುವುದಿಲ್ಲ. ಜನನಾಂತರದ ನ್ಯೂನ ಪೋಷಣೆ ಮಕ್ಕಳ ತೂಕ ಎತ್ತರ ಹಾಗೂ ಮೆದುಳಿನ ಬೆಳವಣಿಗೆಯ ಮೇಲೆ ಅಪಾಯಕಾರಿ ಪರಿಣಾಮವನ್ನುಂಟುಮಾಡುತ್ತದೆ. ಶಿಶುಗಳ ಶಾರೀರಿಕ ಬೆಳವಣಿಗೆಯನ್ನು ಗುಣಾಣುಗಳು(Genes) ಬಹಳಷ್ಟು ಪ್ರಭಾವಿಸುತ್ತವೆ. ಶಿಶುವು ಬಹಳ ಎತ್ತರವಾಗವುದು ಅಥವಾ ಕುಳ್ಳನಾಗುವುದು ಅನುವಂಶೀಯತೆಯನ್ನು ಅವಲಂಬಿಸಿದೆಯಾದರೂ ಪೋಷಣೆ, ಜೀವನದ ಸ್ಥಿತಿಗತಿ, ಸಾಮಾನ್ಯ ಆರೋಗ್ಯ ಮತ್ತು ಬಸುರಿಯಾದಾಗ ತಾಯಿಯ ವಯಸ್ಸು ಮುಂತಾದವುಗಳ ಪಾತ್ರವನ್ನು ಅಲ್ಲಗಳೆಯಲಾಗದು, ಗಂಡು ಮಕ್ಕಳು ಹೆಣ್ಣು ಮಕ್ಕಳಿಗಿಂತ ಸ್ವಲ್ಪ ಹೆಚ್ಚು ಭಾರ ಮತ್ತು ಎತ್ತರವಾಗಿರುತ್ತಾರೆ ಮತ್ತು ಹದಿಹರೆಯದ ಸ್ವಲ್ಪ ಕಾಲವನ್ನು ಮಾತ್ರ ಹೊರತುಪಡಿಸಿ. ಜೀವಿತದಾದ್ಯಂತವೂ ಹೀಗೆಯೇ ಮುಂದುವರೆಯುತ್ತಾರೆ.

**ದೈಹಿಕ ವಿಕಾಸ:**

ದೈಹಿಕ ವಿಕಾಸವೆಂದರೆ ಶಿಶುವಿನ ದೇಹದ ಅಂಗಾಂಗಳ ಗಾತ್ರದಲ್ಲಿ ಕಂಡುಬರುವ ಹೆಚ್ಚಳ, ಬದಲಾವಣೆ ಹಾಗೂ ಬೆಳವಣಿಗೆಯಾಗಿದೆ. ಆರಂಭದ ಎರಡು ವರ್ಷಗಳಲ್ಲಿ ಬೆಳವಣಿಗೆಯು ತೀವ್ರವಾಗಿರುತ್ತದೆ ಎಂಬುದು ಈ ಮೇಲೆ ನೀಡಲಾಗಿರುವ ಮಾಹಿತಿಯಿಂದ ಗೊತ್ತಾಗುತ್ತದೆ. ಶಿಶುವು ಪುನರಾವರ್ತಿಸುವ ಚಲನೆಯ ಚಟುವಟಿಕೆಗಳಿಂದ ದೈಹಿಕ ಶಕ್ತಿಯು ಹೆಚ್ಚಳವಾಗುತ್ತದೆ. ಆರಂಭದಲ್ಲಿ ಹಲವಾರು ದೈಹಿಕ ವರ್ತನೆಗಳು ಪರಾವರ್ತಿತ ಪ್ರತಿಕ್ರಿಯೆಗಳ ರೂಪದಲ್ಲಿ ಕಂಡುಬರುತ್ತವೆ.

**ಪರಾವರ್ತಿತ ಪ್ರತಿಕ್ರಿಯೆಗಳು:**

ಮಕ್ಕಳ ಅನೇಕ ದೈಹಿಕ ಚಟುವಟಿಕೆಗಳು ಕೇವಲ ಪರಾರ್ವತಿತ ಪ್ರತಿಕ್ರಿಯೆಗಳಾಗಿವೆ. ಅವು ಶರೀರದ ಸ್ವಯಂಚಾಲಿತ ವರ್ತನೆಗಳಾಗಿದ್ದು ಅವುಗಳ ಮೇಲೆ ಶಿಶುವಿಗೆ ಯಾವುದೇ ನಿಯಂತ್ರಣವಿರುವುದಿಲ್ಲ, ಇವು ಜನನಾನಂತರದ ಕೆಲವು ವಾರ, ತಿಂಗಳುಗಳಲ್ಲಿ ಮಾಯವಾಗಿ ಬಿಡುತ್ತವೆ. ಜನಿಸಿದಾಗ ಪರಾವರ್ತಿತ ಪ್ರತಿಕ್ರಿಯೆಗಳಿಲ್ಲದಿರುವುದು ಶಿಶುವಿನ ಬದುಕಿಗೆ ತೊಂದರೆಯನ್ನು ಉಂಟುಮಾಡಬಹುದು. ಬಹಳ ದೀರ್ಘಾವಧಿಯವರೆಗೆ ಮುಂದುವರಿಯುವಂತಹವು ಬೆಳವಣಿಗೆಗೆ ಅಡ್ಡಿಯಾಗಬಹುದು.

ಮುಖವನ್ನು ಉಜ್ಜುವ ಮತ್ತು ತುಟಿಗಳಿಂದ ಚೀಪುವ ಪರಾವರ್ತಿತ ಪ್ರತಿಕ್ರಿಯೆಗಳು ಶಿಶುವಿನ ಬದುಕುಳಿಯುವಿಕೆಗೆ ಅಗತ್ಯವಾದವುಗಳಾಗಿವೆ. ಮಗು ಉಜ್ಜುವ ಪ್ರತಿಕ್ರಿಯೆಯಿಂದಾಗಿ ತನ್ನ ಸಮೀಪವಿರುವ ತಾಯಿಯ ಶರೀರಕ್ಕೆ ತನ್ನ ಮುಖವನ್ನು ಉಜ್ಜುತ್ತದೆ. ಅದರಿಂದಾಗಿ ಮಗು ತನ್ನ ಆಹಾರದ ಮೂಲವಾದ ತಾಯಿಯ ಮೊಲೆತೊಟ್ಟನ್ನು ಹುಡುಕಲು ಸಾಧ್ಯವಾಗುತ್ತದೆ. ನಂತರ ಶಿಶುವು ಮೊಲೆ ತೊಟ್ಟನ್ನು ಚೀಪುವ ಮೂಲಕ ಹಾಲನ್ನು ಕುಡಿಯಲು ಆರಂಭಿಸುತ್ತದೆ. ಈ ಪರಾವರ್ತಿತ ಪ್ರತಿಕ್ರಿಯೆಗಳು ಅದರ ಬದುಕುಳಿಯುವ ಪ್ರಯತ್ನಕ್ಕೆ ಅತ್ಯಂತ ಪ್ರಯೋಜನಕಾರಿಯಾಗಿವೆ.

ಮುಖದ ಪರಾವರ್ತಿತ ಪ್ರತಿಕ್ರಿಯೆಯು ಶಿಶುವು ಒಂದು ಶಬ್ದದಿಂದ ಅಥವಾ ತಕ್ಷಣದ ಚಲನೆಯಿಂದ ಚಕಿತವಾದಾಗ, ಭಯಭೀತವಾದಾಗ ಕಂಡುಬರುತ್ತದೆ. ಶಿಶುವು ತನ್ನ ಕೈಕಾಲುಗಳನ್ನು ವೇಗವಾಗಿ ಅಲುಗಾಡಿಸುತ್ತದೆ ಮತ್ತು ಕುತ್ತಿಗೆಯನ್ನು ಹಿಗ್ಗಿಸುತ್ತದೆ. ತಲೆಯನ್ನು ಅಲುಗಾಡಿಸುತ್ತದೆ.

ಶಿಶುವಿನ ಅಂಗೈಯಲ್ಲಿ ಬೆರಳು ಅಥವಾ ಆಟದ ಸಾಮಾನು ಇಟ್ಟಾಗ ಅದು ಬಲವಾಗಿ ಹಾಗೂ ಗಟ್ಟಿಯಾಗಿ ಹಿಡಿದುಕೊಳ್ಳುವುದಾಗಿದೇ ಅಂಗೈ ಹಿಡಿತಕ್ಕೆ ಸಂಬಂಧಿಸಿದ ಪರಾವರ್ತಿತ ಪ್ರತಿಕ್ರಿಯೆ. ಇದು ಮೂರು ನಾಲ್ಕು ತಿಂಗಳಿನಲ್ಲಿ ಮಾಯವಾಗುತ್ತದೆ. ಬಾಬಿನಸ್ಕಿ ಪ್ರತಿಕ್ರಿಯೆ ಪೂರ್ಣಾವಧಿ ಗರ್ಭಸ್ಥ ಶಿಶುಗಳಲ್ಲಿ ಕಂಡುಬರುತ್ತದೆ. ಮಗುವಿನ ಪಾದ ಅಥವಾ ಹೆಬ್ಬೆರಳುಗಳನ್ನು ಮುಟ್ಟಿ ತಟ್ಟಿದಾಗ ಹೆಬ್ಬೆರಳುಗಳು ಅಗಲವಾಗುತ್ತದೆ ಹಾಗೂ ಸಂಕುಚಿತಗೊಳ್ಳುತ್ತವೆ. ಪಾದವು ತಿರುಗುತ್ತದೆ. ಇದು ಒಂದು ವರ್ಷ ಕಾಲ ಕಾಣುತ್ತದೆ. ಹೆಜ್ಜೆಯಿಡುವ ಅಥವಾ ನಡೆಯುವ ವರ್ತನೆ ಪೂರ್ಣವಾಗಿ ಗರ್ಭಸ್ಥ ಶಿಶುಗಳಲ್ಲಿ ಕಾಣಬಹುದು. ಮಗುವನ್ನು ನಿಲ್ಲಿಸಿ ಹಿಡಿದುಕೊಂಡಾಗ ಮಗು ಒಂದಾದ ನಂತರ ಒಂದು ಕಾಲನ್ನು ಎತ್ತುತ್ತದೆ. ಇದೇ ಹೆಜ್ಜೆಯಿಡುವ ಅನೈಚ್ಛಿಕ ಪ್ರತಿಕ್ರಿಯೆ. ಈ ಎಲ್ಲಾ ಪರಾವರ್ತಿತ ಪ್ರತಿಕ್ರಿಯೆಗಳು ವಿವಿಧ ಅವಧಿಗಳವರೆಗಿದ್ದು ನಂತರ ಮಾಯಾವಾದರೂ ಅವು ಬಹಳ ಮಹತ್ವಪೂರ್ಣವಾಗಿವೆ. ಪ್ರಾರಂಭದ ಹಂತದಲ್ಲಿ ಮಗು ಆಹಾರವನ್ನು ಶೋಧಿಸಲು ಚೀಪಲು, ಉಸಿರಾಡಲು ಹಾಗೂ ಬೆಳಕು, ಶಬ್ದ, ಚಲನೆ, ಅಡೆತಡೆಗಳಿಗೆ ಪ್ರತಿಕ್ರಿಯಿಸಲು ಇವು ಸಹಾಯಕವಾಗುತ್ತವೆ. ಅಲ್ಲದೆ

Digitised by Bharatavani, CIIL

ವಿವಿಧ ದೈಹಿಕ ಚಲನವಲನಗಳಿಗೆ ಹಾಗೂ ಚಟುವಟಿಕೆಗಳಿಗೆ ಅಡಿಪಾಯವಾಗುತ್ತವೆ.

**ದೈಹಿಕ ವಿಕಾಸದ ನಿಯಮಗಳು:**

ದೈಹಿಕ ವಿಕಾಸದಲ್ಲಿ ಒಂದು ನಿಗದಿತ ಕ್ರಮವಿದೆ. ಮಕ್ಕಳು ತಮ್ಮ ಎದೆಯನ್ನು ಎತ್ತುವ ಮೊದಲು ಗದ್ದವನ್ನು ಎತ್ತುತ್ತಾರೆ. ಹಿರಿಯರ ಆಸರೆಯಿಂದ ಕುಳಿತುಕೊಂಡ ನಂತರ ಮಾತ್ರ ಅವರಿಗೆ ಸ್ವತಂತ್ರವಾಗಿ ಕುಳಿತುಕೊಳ್ಳಲು ಬರುತ್ತದೆ. ನಿಲ್ಲಲು ಕಲಿತುಕೊಂಡ ಮೇಲೆ ಮಾತ್ರ ನಡೆಯಲು ಸಾಧ್ಯವಿದೆ. ಎಂದರೆ ಮಕ್ಕಳು ಸರಳವಾದ ಚಲನೆಗಳನ್ನು ಕಲಿತುಕೊಂಡ ಮೇಲೆ ಸಂಕೀರ್ಣ ಚಲನೆಗಳನ್ನು ಕಲಿಯಲು ಸಾಧ್ಯವಾಗುತ್ತದೆ. ಮಕ್ಕಳು ನಡೆಯಲು ಕಲಿಯುವ ಮೊದಲೇ ತಮ್ಮ ಕೈಗಳಿಂದ ಊಟ ಮಾಡಲು ಚುಪ್ ಮಾಡಲು, ಮುದ್ದಿಸಲು ಬಾ ಬಾ ಗಿಳಿಯೇ ಎಂದು ಕೈ ಹಾಗೂ ಬೆರಳುಗಳನ್ನು ಬಳಸುವ ಚಾತುರ್ಯವನ್ನು ಕಲಿತಿರುತ್ತಾರೆ. ಅವರು ತಮ್ಮ ಹಸ್ತಗಳನ್ನು ಬಳಸುವ ಮೊದಲು ತೋಳುಗಳನ್ನು ಚಾಕಚಕ್ಯತೆಯಿಂದ ತಿರುಗಿಸಬಲ್ಲರು. ವಿಕಾಸದ ಈ ಪರಿಯನ್ನು ವಿವರಿಸಲು ಮನೋವಿಜ್ಞಾನಿಗಳು ಶಿರೋಪಾದಾಭಿಮುಖ ನಿಯಮ ಮತ್ತು ಕೇಂದ್ರ ಪರಿಧಿ ನಿಯಮ ಎಂಬ ಎರಡು ನಿಯಮಗಳನ್ನು ಗುರುತಿಸಿದ್ದಾರೆ. ಶಿರೋಪಾದಾಭಿಮುಖ ನಿಯಮದ ಅನುಸಾರ ವಿಕಾಸವು ತಲೆಯಿಂದ ಪ್ರಾರಂಭವಾಗಿ ಮುಂಡದಿಂದ ಹಾದು ಪಾದಗಳೆಡೆಗೆ ಮುಂದುವರಿಯುತ್ತದೆ. ಪಿಂಡದ ತಲೆ, ಮಿದುಳು ಮತ್ತು ಕಣ್ಣುಗಳು ಇನ್ನುಳಿದ ಭಾಗಗಳಿಗಿಂತ ಮೊದಲೇ ರೂಪುಗೊಂಡಿರುತ್ತವೆ. ಶರೀರದ ಮೇಲ್ಭಾಗಗಳು, ಕೆಳಭಾಗಗಳಿಗಿಂತ ಬಹಳ ಅಸಮಪ್ರಮಾಣದಲ್ಲಿ ದೊಡ್ಡಗಾತ್ರವನ್ನು ಹೊಂದಿರುತ್ತವೆ. ಎರಡು ತಿಂಗಳ ಪಿಂಡದ ತಲೆ ಒಟ್ಟು ಶರೀರದ ಅರ್ಧದಷ್ಟಿರುತ್ತದೆ. ಶಿಶುಗಳು ಶರೀರದ ಮೇಲ್ಭಾಗದ ಅಂಗಗಳನ್ನು ಕೆಳಭಾಗದ ಅಂಗಗಳಿಗಿಂತ ಮೊದಲೇ ಬಳಸಲು ಕಲಿಯುತ್ತಾರೆ. ಮಕ್ಕಳು ತಮ್ಮ ಸೊಂಟ ಹಾಗೂ ಕಾಲುಗಳ ಮೇಲೆ ನಿಯಂತ್ರಣ ಹೊಂದುವ ಮೊದಲೇ ನೋಡಲು ಕೇಳಲು ರುಚಿ ವಾಸನೆ ಇತ್ಯಾದಿಗಳನ್ನು ಅನುಭವಿಸಲು ಕಲಿತಿರುತ್ತಾರೆ. ಕೇಂದ್ರ ಪರಿಧಿ ನಿಯಮದ ಅನುಸಾರ ವಿಕಾಸವು ದೇಹದ ಕೇಂದ್ರಭಾಗದಿಂದ ಆರಂಭವಾಗಿ ಅದರ ತುದಿಯಲ್ಲಿರುವ ಅಂಗಗಳೆಡೆಗೆ ವ್ಯಾಪಿಸುತ್ತದೆ. ಹೀಗಾಗಿ ಪಿಂಡದ ತಲೆ ಮತ್ತು ಸೊಂಟಗಳು ಕೈ ಕಾಲುಗಳಿಗಿಂತ ಮೊದಲೇ ರೂಪುಗೊಳ್ಳುತ್ತವೆ. ಶಿಶುಗಳು ಮೊದಲು ತೋಳುಗಳನ್ನು ಬಳಸಲು ಕಲಿತು ನಂತರ ಮುಂಗೈ, ಹಸ್ತ ಹಾಗೂ ಬೆರಳುಗಳ ಬಳಕೆಯನ್ನು ಕಲಿಯುತ್ತಾರೆ. ಹೀಗೆ ಈ ಎರಡು ನಿಯಮಗಳು ಶಿಶುಗಳ ದೈಹಿಕ ವಿಕಾಸವನ್ನು ಸಮರ್ಪಕವಾಗಿ ವಿವರಿಸುತ್ತವೆ.

**ಚಲನೆಯ ವಿಕಾಸ:**

ಈಗಾಗಲೆ ಗುರುತಿಸಿರುವಂತೆ ಯಾವುದೇ ಕೌಶಲ್ಯದ ಕಲಿಕೆಯು ಸರಳವಾದ ಕ್ರಿಯೆಗಳಿಂದ ಆರಂಭವಾಗಿ ಸಂಕೀರ್ಣ ಕಾರ್ಯಗಳೆಡೆಗೆ ಮುನ್ನಡೆಯುತ್ತದೆ. ಶಿಶುಗಳು ಬೆಳೆಯುತ್ತಾ ಹೋದಂತೆ ತಮ್ಮ ದೇಹದ ಮೇಲೆ ಹೆಚ್ಚಿನ ನಿಯಂತ್ರಣವನ್ನು ಹೊಂದುತ್ತಾರೆ. ತಮ್ಮ ಅಂಗಾಂಗಳನ್ನು ವಿಶಿಷ್ಟವಾಗಿ ಉಪಯೋಗಿಸಲು ಕಲಿಯುತ್ತಾರೆ. ಮೊದಲಿಗೆ ಮಕ್ಕಳು ಪದಾರ್ಥಗಳನ್ನು ತಮ್ಮ ಹಸ್ತವನ್ನೆಲ್ಲಾ ಉಪಯೋಗಿಸಿ ಹಿಡಿದುಕೊಳ್ಳುತ್ತಾರೆ. ತದನಂತರದಲ್ಲಿ ಹೆಬ್ಬೆರಳು ಮತ್ತು ತೋರು ಬೆರಳುಗಳನ್ನು ಬಳಸಿ ವಸ್ತುಗಳನ್ನು (ಉದಾ: ಚಾಕಲೇಟ್, ಗಾಜಿನ ಗೋಲಿ, ಪೆನ್ನು ಇತ್ಯಾದಿಗಳನ್ನು) ಹಿಡಿದು ಎತ್ತಬಲ್ಲರು. ಪ್ರತ್ಯೇಕವಾದ ವಿವಿಧ ಚಲನೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿದ ಮೇಲೆ ಅವೆಲ್ಲವುಗಳನ್ನು ಒಗ್ಗೂಡಿಸಿ ಸಂಕೀರ್ಣ ದೈಹಿಕ ವರ್ತನಾ ವಿನ್ಯಾಸಗಳನ್ನು ರೂಪಿಸಿಕೊಳ್ಳುತ್ತಾರೆ. ಹೀಗೆ ತೋಳುಗಳು, ಸೊಂಟ, ಕಾಲು ಹಾಗೂ ಪಾದಗಳ ಚಲನೆಗಳ ಮೇಲಿನ ನಿಯಂತ್ರಣವನ್ನು ಸಂಯೋಜಿಸಿ ನಡೆಯಲು ಕಲಿಯುತ್ತಾರೆ.

ಪಿಂಡಗಳು ಬಹಳಷ್ಟು ತಿರುಗುವುದು, ಒದೆಯುವುದು, ಹೆಬ್ಬೆರಳನ್ನು ಚೀಪುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿರುತ್ತವೆ. ನವಜಾತ ಶಿಶುಗಳು ತಮ್ಮ ತಲೆಯನ್ನು ತಿರುಗಿಸುತ್ತವೆ. ಕಾಲುಗಳನ್ನು ಆಡಿಸುತ್ತವೆ, ಕೈಗಳನ್ನು ಜಾಡಿಸುತ್ತವೆ, ಹಲವಾರು ಪರಾವರ್ತಿತ ಪ್ರತಿಕ್ರಿಯೆಗಳನ್ನು ಪ್ರದರ್ಶಿಸುತ್ತವೆ. ಈ ಜನನಪೂರ್ವ ಮತ್ತು ಜನನಾನಂತರದ ಆರಂಬಿಕ ದೈಹಿಕ ಚಲನವಲನಗಳು ಮಿದುಳಿನ ಕಾಂಡದಿಂದ ನಿಯಂತ್ರಿಸಲ್ಪಡುತ್ತವೆ. ಮೇಲ್ಮಿದುಳಿನ (ಸೆರೆಬ್ರಲ್ ಕಾರ್ಟೆಕ್ಸ್) ತಳದಲ್ಲಿರುವ ಕಾಂಡವು ಶಿಶುಗಳ ಅನೈಚ್ಛಿಕ, ಆದಿಮ, ಪರಾವರ್ತಿತ ಪ್ರತಿಕ್ರಿಯೆಗಳನ್ನು ನಿಯಂತ್ರಿಸುವ ಜವಾಬ್ದಾರಿ ವಹಿಸಿಕೊಳ್ಳುತ್ತದೆ. ನಾಲ್ಕು ತಿಂಗಳಾನಂತರದಲ್ಲಿ ಐಚ್ಛಿಕ ಮಿದುಳಿನಿಂದ ನಿಯಂತ್ರಿಸಲ್ಪಡುವ ಚಲನೆಗಳು ಕಾಣಿಸಿಕೊಳ್ಳುತ್ತವೆ.

**ಚಲನೆ ವಿಕಾಸದಲ್ಲಿ ಮೈಲಿಗಲ್ಲುಗಳು:**

ಮೂಲಭೂತವಾದ ಚಲನೆಯ ಎಲ್ಲಾ ಕೌಶ್ಯಲ್ಯಗಳನ್ನು ಶಿಶುಗಳಿಗೆ ಕಲಿಸಿಕೊಡುವ ಅಗತ್ಯವಿಲ್ಲ. ಅವರಿಗೆ ಅನಗತ್ಯ ಹಸ್ತಕ್ಷೇಪ ಮಾಡದೆ ಸ್ವಾತಂತ್ರ್ಯ ನೀಡಿ ಮುಕ್ತವಾದ ಹಾಗೂ ಸುರಕ್ಷೆಯಿಂದಿರುವ ಅವಕಾಶಗಳನ್ನು ಒದಗಿಸಿದರೆ ಸಾಕು. ಅವರ ಕೇಂದ್ರ ನರಮಂಡಲ ವ್ಯವಸ್ಥೆ, ಸ್ನಾಯುಗಳು ಮತ್ತು ಮೂಳೆಗಳು ಪಕ್ವಗೊಂಡಾದ ಮೇಲೆ ಅವರಿಗೆ ಸಾಕಷ್ಟು ಸ್ವಾತಂತ್ರ್ಯ ಮತ್ತು ಸ್ಥಳಾವಕಾಶ ನೀಡಿದರೆ ಸಾಕು. ಅವರು ತಮ್ಮ ಹೊಸ ಹೊಸ ಚಲನೆಗಳಿಂದ ತಮ್ಮ ತಾಯ್ತಂದೆ ಹಾಗೂ ಇತರೆ ಹಿರಿಯರನ್ನು ಸಂಭ್ರಮಾಶ್ಚರ್ಯಗಳಲ್ಲಿ ತೇಲಿಸಬಲ್ಲರು. ಒಂದು ಕೌಶಲ್ಯವನ್ನು ಕಲಿತ ಕೂಡಲೆ ಅದನ್ನು ಸಾಕಷ್ಟು ಬಾರಿ ಅಭ್ಯಾಸಮಾಡಿ ಅದರಲ್ಲಿ ಪರಿಣತಿಯನ್ನು ಸಾಧಿಸುತ್ತಾರೆ. ಇದು ಕೆಲವೊಮ್ಮೆ ತಂದೆ ತಾಯಿಗೆ ಬೇಸರ ಹಾಗೂ ದಣಿವನ್ನುಂಟುಮಾಡಬಹುದು. ಉದಾ: ಒಂದು ರಿಂಗನ್ನು ಬಿಸಾಡುವುದು, ಅದನ್ನು ತಂದುಕೊಡಲು ಚೀರುವುದು, ಮತ್ತೆ ಬಿಸಾಡುವುದು, ಹೀಗೆ ಹಲವು ಬಾರಿ ಈ ಕ್ರಿಯೆ ಜರುಗಬೇಕಾಗುತ್ತದೆ. ಹೀಗೆ ಕಲಿತ ಪ್ರತಿಯೊಂದು ಕೌಶಲ್ಯವು ಕಲಿಯಲೇಬೇಕಾದ ಕೌಶಲ್ಯಗಳ ಸರಣಿಯಲ್ಲಿರುವ ತದನಂತರದ ಕಾರ್ಯಗಳೆಡೆಗೆ ಶಿಶುವನ್ನು ಮುನ್ನಡೆಸುತ್ತದೆ.

Digitised by Bharatavani, CIIL

**ತಲೆಯ ನಿಯಂತ್ರಣ:**

ಜನನಾನಂತರ ಹೆಚ್ಚಿನ ಶಿಶುಗಳು ಬೆನ್ನಮೇಲೆ ಮಲಗಿರುವಾಗ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ತಮ್ಮ ತಲೆಯನ್ನು ತಿರುಗಿಸಬಲ್ಲರು. ಹೊಟ್ಟೆಯಮೇಲೆ ಮಲಗಿರುವಾಗ ಹೊರಳಲು ಅನುಕೂಲವಾಗುವ ಮಟ್ಟಿಗೆ ತಲೆಯನ್ನು ಮೇಲೆತ್ತಬಲ್ಲರು. ಮೊದಲಿಗೆ ಹೊಟ್ಟೆಯ ಮೇಲೆ ಮಲಗಿದ್ದಾಗ ತಲೆ ಮೇಲೆತ್ತಲು ಕಲಿಯುವರು. ಆನಂತರ ತಲೆಯನ್ನು ಎತ್ತಿಕೊಂಡಿದ್ದಾಗ ತಲೆಯನ್ನು ನೇರವಾಗಿಡಲು ಮತ್ತು ಬೆನ್ನಮೇಲೆ ಮಲಗಿದಾಗ ತಲೆಯನ್ನು ಎತ್ತಿಹಿಡಿಯಲು ಕಲಿಯುವರು. ಈ ಎಲ್ಲಾ ಕ್ರಿಯೆಗಳಿಂದ ಮೂರು ತಿಂಗಳ ಆಸುಪಾಸಿನಲ್ಲಿ ಅಥವಾ ಆ ನಂತರದ ಎರಡು ವಾರಗಳಲ್ಲಿ ತಲೆ ಸ್ವತಂತ್ರವಾಗಿ ನಿಲ್ಲುವುದು. ಇದಕ್ಕಿಂತ ಹೆಚ್ಚು ತಡವಾದರೆ ಪಾಲಕರು ವೈದ್ಯರನ್ನು ಕಾಣುವುದು ಅಗತ್ಯವಾಗುತ್ತದೆ.

**ಕುಳಿತುಕೊಳ್ಳಲು ಕಲಿಯುವುದು:**

ಶಿಶುಗಳು ಮಲಗಿದ ಸ್ಥಿತಿಯಿಂದ ಎದ್ದು ಕುಳಿತುಕೊಳ್ಳಲು ಅಥವಾ ನಿಂತ ಸ್ಥಿತಿಯಿಂದ ಕುಳಿತುಕೊಳ್ಳಲು ಕಲಿಯಬಹುದು. ಸಾಮಾನ್ಯವಾಗಿ ಶಿಶುವು ಆರರಿಂದ ಆರೂವರೆ ತಿಂಗಳ ಅವಧಿಯಲ್ಲಿ ಆಸರೆಯಿಲ್ಲದೆ ಕುಳಿತುಕೊಳ್ಳಲು ಕಲಿಯುತ್ತದೆ. ಎಂಟರಿಂದ ಒಂಬತ್ತು ತಿಂಗಳ ಅವಧಿಯಲ್ಲಿ ಯಾರ ಸಹಾಯವಿಲ್ಲದೆ ಕುಳಿತುಕೊಳ್ಳಲು ಮತ್ತು 5–10 ನಿಮಿಷಗಳವರೆಗೆ ಈ ಸ್ಥಿತಿಯಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ.

**ಹೊರಳಲು ಕಲಿಯುವುದು:**

ಮಗು ಸಾಮಾನ್ಯವಾಗಿ ಐದರಿಂದ ಆರು ತಿಂಗಳ ಅವಧಿಯಲ್ಲಿ ಉದ್ದೇಶಪೂರ್ವಕವಾಗಿ ಹೊರಳಲು ಆರಂಭಿಸುತ್ತದೆ. ಮೊದಲು ಹೊಟ್ಟೆಯ ಮೇಲಿಂದ ಬೆನ್ನಿಗೆ ಹೊರಳುತ್ತದೆ. ನಂತರದಲ್ಲಿ ಬೆನ್ನಿನಿಂದ ಹೊಟ್ಟೆಯ ಮೇಲೆ ಹೊರಳುತ್ತದೆ. ಇದಕ್ಕಿಂತ ಮೊದಲೇ ಹೊಟ್ಟೆಯ ಮೇಲೆ ಅಡ್ಡಾಗಿರುವ ಮತ್ತು ತೋಳುಗಳ ಮೇಲೆ ನಿಂತು ತಲೆ ಎತ್ತಿರುವ ಮಗುವು ಆಕಸ್ಮಿಕವಾಗಿ ಹೊರಳಿ ಬೀಳುವ ಅವಕಾಶಗಳಿವೆ. ಆದ್ದರಿಂದ ಪುಟ್ಟ ಶಿಶುಗಳನ್ನು ಒಂಟಿಯಾಗಿ ಬಿಡದಿರುವುದು ಕ್ಷೇಮ.

**ನಡಿಗೆಗೆ ಮೊದಲಿನ ಚಲನೆಗಳು:**

ಶಿಶುಗಳು ನಡೆಯಲು ಕಲಿಯುವ ಮೊದಲು ಹಲವು ರೀತಿಗಳಲ್ಲಿ ತೆವಳಿ, ಕುಳಿತು ಕೈಯೂರಿ ಅಂಬೆಗಾಲಿಟ್ಟು ತಮ್ಮ ಪರಿಸರದಲ್ಲಿ ಓಡಾಡುವರು. ತಮ್ಮ ಹೊಟ್ಟೆಯ ಮೇಲೆ ತೆವಳುವರು. ತಮ್ಮ ಶರೀರವನ್ನು ತೋಳುಗಳೊಂದಿಗೆ ಮುಂದಕ್ಕೆಳೆಯುವರು. ಪಾದಗಳನ್ನು ಎಳೆದು ಮಡಿಚಿ ಮುಂದಕ್ಕೆ ಎಳೆದುಕೊಳ್ಳುವರು. ಕುಳಿತ ಸ್ಥಿತಿಯಲ್ಲಿ ಕೈಮೇಲೆ ಭಾರ ಹಾಕಿ ಮುಂದೆ ಹೋಗುವರು. ಪಾದಗಳು ಹಾಗೂ ಹಸ್ತಗಳನ್ನು ನೆಲದ ಮೇಲಿಟ್ಟು ಪ್ರಾಣಿಗಳ ಹಾಗೆ ಚಲಿಸುವರು. ಹಸ್ತ ಹಾಗು ಮೊಣಕಾಲುಗಳನ್ನು ಪಾದದ ಮೇಲುಭಾಗವನ್ನು ನೆಲದ ಮೇಲಿಟ್ಟು ಅಂಬೆಗಾಲು ಹಾಕಿ ಚಲಿಸುವರು. ಸಾಮಾನ್ಯವಾಗಿ ಒಂಬತ್ತರಿಂದ ಹತ್ತು ತಿಂಗಳ ಕಾಲದಲ್ಲಿ ಎಲ್ಲಾ ಶಿಶುಗಳು ತೆವಳುವುದರಲ್ಲಿ ಮತ್ತು ಅಂಬೆಗಾಲಿಡುವುದರಲ್ಲಿ ತೊಡಗಿರುವರು.

**ನಿಲ್ಲಲು ಆರಂಭ:**

8 ತಿಂಗಳಲ್ಲಿ ಮಗುವು ಆಸರೆಯ ಕೈಯೊಂದಿಗೆ ಎದ್ದು ನಿಲ್ಲುವುದು. ಒಂದು ತಿಂಗಳಾನಂತರ ಮಂಚ, ಸೋಫಾ, ಟೀಪಾಯ್ ಇತ್ಯಾದಿಗಳನ್ನು ಹಿಡಿದುಕೊಂಡು ಎದ್ದುನಿಲ್ಲುವುದು. ಒಂದು ವರ್ಷದಲ್ಲಿ ತಾನೇ ಸ್ವತಂತ್ರವಾಗಿ ನಿಲ್ಲಲು ಕಲಿಯುವುದು.

**ನಡೆಯುವುದು:**

13 ರಿಂದ 14 ತಿಂಗಳ ಅವಧಿಯಲ್ಲಿ ಅಂದರೆ ನಿಲ್ಲಲು ಕಲಿತ 2 ತಿಂಗಳ ನಂತರ ಮಕ್ಕಳು ಮೊದಲ ಹೆಜ್ಜೆಗಳನ್ನಿಡಲು ಕಲಿಯುವರು. ಕೆಳಬಿದ್ದಾಗ ಮತ್ತೆ ಅಂಬೆಗಾಲಿಡುವರು ಅಥವಾ ತೆವಳುವರು. ಮತ್ತೆ ಎದ್ದುನಿಂತು ಹೆಜ್ಜೆಗಳನ್ನಿಡಲು ಕಲಿಯುವರು. ಕೆಲವೇ ದಿವಸಗಳಲ್ಲಿ ಅಲುಗಾಡುತ್ತಲಾದರೂ ನಡೆಯಲು ಕಲಿಯುವರು. ಮಗುವು 9–11 ತಿಂಗಳಲ್ಲಿ ಹಿರಿಯರ ಸಹಾಯದಿಂದ, 14–15 ತಿಂಗಳಲ್ಲಿ ಸ್ವತಂತ್ರವಾಗಿ ಮತ್ತು 18 ತಿಂಗಳ ವಯಸ್ಸಿನಲ್ಲಿ ವೇಗವಾಗಿ ನಡೆಯಬಲ್ಲದು. 20 ತಿಂಗಳಲ್ಲಿ ಜಿಗಿಯಬಲ್ಲದು ಮತ್ತು 24 ತಿಂಗಳಲ್ಲಿ ಎಡವಿ ಬೀಳದೆ ಓಡಲು ಕಲಿತಿರುತ್ತದೆ. 36 ತಿಂಗಳ ವಯಸ್ಸಿನಲ್ಲಿ ಒಂದೇ ಕಾಲಿನ ಮೇಲೆ ನಿಲ್ಲಬಲ್ಲುದು. ಹದಿನೆಂಟು ತಿಂಗಳಿಗೆ ಮಕ್ಕಳು ಮೆಟ್ಟಿಲುಗಳನ್ನು ಹತ್ತ ಬಲ್ಲರು. ಈ ಅವಧಿಗಿಂತ ಮೊದಲು ಮೆಟ್ಟಿಲುಗಳ ಮೇಲೆ ತೆವಳಿ ಮೇಲೆ ಹೋಗಬಲ್ಲರು. ಆದರೆ ಈ ಸಂದರ್ಭದಲ್ಲಿ ಕೆಳಗೆ ಬೀಳುವ ಅಪಾಯವು ಬಹಳಷ್ಟಿದೆ. ಆದುದರಿಂದ ಮಕ್ಕಳಿಗೆ ನಿರಂತರ ನಿರೀಕ್ಷಣೆ ಮತ್ತು ರಕ್ಷಣೆಗಳ ಅಗತ್ಯವಿದೆ. ಆರಂಭದಲ್ಲಿ ಒಂದೇ ಮೆಟ್ಟಿಲಿನ ಮೇಲೆ ಒಂದರ ನಂತರ ಒಂದಾಗಿ ಎರಡು ಕಾಲುಗಳನ್ನು ಇಡುವರು. ಆದರೆ 3 ವರ್ಷಗಳ ಹೊತ್ತಿಗೆ ಒಂದು ಮೆಟ್ಟಲ ಮೇಲೆ ಕಾಲನ್ನಿಟ್ಟು ನಂತರದ ಮೆಟ್ಟಲ ಮೇಲೆ ಇನ್ನೊಂದು ಕಾಲಿಟ್ಟು ಹತ್ತಲು ಕಲಿಯುವರು. ಕೆಳಗಿಳಿದು ಬರುವುದು ಕಷ್ಟಕರ. 20 ತಿಂಗಳವರೆಗೆ ಒಂದು ಕೈಯನ್ನು ಮೆಟ್ಟಿಲುಗಳ ಹಿಡಿಯನ್ನು (ರೇಲಿಂಗ) ಹಿಡಿದು ಇಳಿಯಲು ಕಲಿಯುತ್ತಾರೆ. ನಾಲ್ಕು ವರ್ಷಗಳಾಗುವಷ್ಟರಲ್ಲಿ ಮೆಟ್ಟಿಲುಗಳ ಮೇಲೆ ಒಂದೊಂದೇ ಕಾಲನ್ನಿಟ್ಟು ಸ್ವತಂತ್ರವಾಗಿ ಇಳಿಯಲು ಕಲಿತು ಕೊಳ್ಳುತ್ತಾರೆ. 3 ವರ್ಷಗಳ ಅಂತ್ಯದಲ್ಲಿ ಬಹಳಷ್ಟು ಮಕ್ಕಳು ಒಂದೇ ಕಾಲಿನ ಮೇಲೆ ನಿಂತು ಸಮತೋಲನ ಮಾಡಬಲ್ಲರು.

**ಕೈಚಳಕ ನಿರ್ವಹಣೆ:**

ನಾಲ್ಕು ತಿಂಗಳ ಮಗು ಸ್ವಲ್ಪ ಮಧ್ಯಮಗಾತ್ರದ ವಸ್ತುಗಳನ್ನು ಹಿಡಿದುಕೊಳ್ಳಬಲ್ಲದು. ಆದರೆ ತೀರಾ ಪುಟ್ಟದಾದ ವಸ್ತುವನ್ನು ಹಿಡಿಯಲು ಅದಕ್ಕೆ ಸಮಸ್ಯೆಯಾಗುತ್ತದೆ. ನೀರು ಕುಡಿಯುವ ಗ್ಲಾಸನ್ನು ಹಿಡಿಯಲು ಮಗುವಿಗೆ ಸಾಧ್ಯವಾಗುತ್ತದೆ. ಆದರೆ ಪೆನ್ ಹಿಡಿಯಲು ಆಗುವುದೇ ಇಲ್ಲ. ಆರು ಅಥವಾ ಆರೂವರೆ ತಿಂಗಳಲ್ಲಿ ಸ್ವಲ್ಪ ದೊಡ್ಡದಾದ ಚೆಂಡು ಅಥವಾ ರಿಂಗನ್ನು ಅಥವಾ ಮರದ ಬ್ಲಾಕನ್ನು

Digitised by Bharatavani, CIIL

ಹಿಡಿದು ಒಂದು ಕೈಯಿಂದ ಇನ್ನೊಂದು ಕೈಗೆ ವರ್ಗಾಯಿಸಬಲ್ಲದು. ಏಳು ತಿಂಗಳಲ್ಲಿ ಒಂದು ಸಣ್ಣ ವಸ್ತುವನ್ನು, ಉದಾಹರಣೆಗೆ ಗಾಜಿನ ಗೋಲಿಯನ್ನು ಹಿಡಿಯಲು ಸಾಧ್ಯವಾಗುತ್ತದೆ. ಆದರೆ ಅದನ್ನು ಎತ್ತಿಕೊಳ್ಳಲು ಆಗುವುದಿಲ್ಲ, 9 ತಿಂಗಳಲ್ಲಿ ಹೆಬ್ಬೆರಳು ಮತ್ತು ತೋರುಬೆರಳಿನಲ್ಲಿ ಶಕ್ತಿ ಸಂಚಯವಾಗಿರುತ್ತದೆ. ಹೀಗೆ ಬೆರಳುಗಳ ನಡುವೆ ಸಾಕಷ್ಟು ಸಮನ್ವಯತೆ ಉಚಿಟಾಗಿರುವುದರಿಂದ ಬಟಾಣಿ ಕಾಳಿನಂಥ ಪುಟ್ಟ ಪದಾರ್ಥವನ್ನು ಸಹ ಬೆರಳುಗಳ ಇಕ್ಕಳಿಕೆಯ ಚಲನೆಯಿಂದ ಎತ್ತಿಕೊಳ್ಳಲು ಸಾಧ್ಯವಾಗುತ್ತದೆ. 15 ತಿಂಗಳಲ್ಲಿ ಮಗುವು ಕಾಳನ್ನು ಎತ್ತಿ ಒಂದು ಬಟ್ಟಲಿನಲ್ಲಿ ಹಾಕಲು ಸಾಧ್ಯವಾಗುತ್ತದೆ. 18 ತಿಂಗಳಲ್ಲಿ ಬಟ್ಟಲನ್ನು ತಿರುವುಮುರುವುಗೊಳಿಸಿ ಆ ಕಾಳನ್ನು ಹೊರಗೆಚೆಲ್ಲಲು ಸಾಧ್ಯವಾಗುತ್ತದೆ. 18 ತಿಂಗಳಲ್ಲಿ ಘನಾಕೃತಿಗಳಿಂದ ಗೋಪುರವನ್ನು ರಚಿಸಬಲ್ಲರು.

**ಚಲನೆಯ ವಿಕಾಸದಲ್ಲಿ ಪರಿಸರದ ಪ್ರಭಾವ:**

ಮಾನವ ಜೀವಿಗಳು ಕುಳಿತುಕೊಳ್ಳುವ, ನಿಲ್ಲುವ, ನಡೆಯುವ ವೈವಿಧ್ಯಮಯವಾದ ಚಟುವಟಿಕೆಗಳನ್ನು ಮಾಡಲು ಜೈವಿಕವಾಗಿಯೇ ರೂಪುಗೊಂಡಿದ್ದಾರೆ. ಈ ಎಲ್ಲಾ ಕೌಶಲ್ಯಗಳು ಒಂದು ಕ್ರಮಕ್ಕನುಗುಣವಾಗಿ ಪೂರ್ವನಿರ್ಧಾರಿತ ವಿನ್ಯಾಸದಂತೆ ವಿಕಾಸಗೊಳ್ಳುತ್ತವೆ. ಮಕ್ಕಳು ತಕ್ಕಮಟ್ಟಿನ ಜೈವಿಕ ಪಕ್ವತೆಯನ್ನು ಸಾಧಿಸಿದಾಗ ಮಾತ್ರ ವಿಕಾಸ ಸಾಧ್ಯವಾಗುತ್ತದೆ. ಮಕ್ಕಳ ಚಲನೆಯ ವಿಕಾಸದಲ್ಲಿ ಪರಿಸರವು ಸಹ ಒಂದು ಸೀಮಿತವಾದ ಪಾತ್ರವನ್ನು ವಹಿಸುತ್ತದೆ. ಚಲನೆಯ ವಿಕಾಸದ ಮೇಲೆ ಲಿಂಗ, ವಾಸದ ಸ್ಥಳ, ತಂದೆ ತಾಯಂದಿರ ಶಿಕ್ಷಣ ಇತ್ಯಾದಿಗಳಿಗೆ ಪಾತ್ರವಿದೆ ಎಂದು ಹೇಳಲಾಗದು. ಪೌಷ್ಠಿಕ ಆಹಾರ, ಆರೋಗ್ಯ ಕಾಳಜಿ, ಶಾರೀರಿಕ ಚಲನೆಗೆ ಸ್ವಾತಂತ್ರ್ಯ, ಚಲನೆಯ ಕೌಶಲ್ಯಗಳನ್ನು ಅಭ್ಯಾಸ ಮಾಡಲು ಸದವಕಾಶಗಳು ಸಿಕ್ಕರೆ ಮಕ್ಕಳ ಚಲನೆಯ ವಿಕಾಸವು ಸುಗಮವಾಗಿ ಆಗುತ್ತದೆ.

**ದೈಹಿಕ ಹಾಗೂ ಚಲನೆಯ ವಿಕಾಸಕ್ಕೆ ಸಲಹೆಗಳು:**

1) ಬಾಲ್ಯವಿವಾಹವನ್ನು ಸಂಪೂರ್ಣವಾಗಿ ಮತ್ತು ವಾಸ್ತವಿಕವಾಗಿ ನಿಷೇಧಿಸಬೇಕು. ಹದಿನೆಂಟು ವರ್ಷಗಳ ನಂತರ ವಿವಾಹವಾದರೂ ಸಹ 21 ವರ್ಷಗಳವರೆಗೆ ಮಕ್ಕಳಾಗದಂತೆ ಅರಿವು ಹೆಚ್ಚಿಸುವ ಕ್ರಮಕೈಗೊಳ್ಳಬೇಕು. ಆಗ ತಾಯಿಯ ಗರ್ಭಾಶಯವು ಸಂಪೂರ್ಣವಾಗಿ ಬೆಳೆದಿರುವುದರಿಂದ ಪಿಂಡವು ಚೆನ್ನಾಗಿ ಬೆಳೆಯಲು ಪೂರ್ಣಗಾತ್ರ ಪಡೆಯಲು ಸಾಧ್ಯವಾಗುತ್ತದೆ.

2) ರಕ್ತಸಂಬಂಧಿಗಳ ನಡುವೆ ವಿವಾಹವಾಗುವುದರಿಂದ ಅವರಿಬ್ಬರಲ್ಲಿರಬಹುದಾದ ಒಳ್ಳೆಯ ಗುಣಗಳು ವರ್ಗಾವಣೆ ಯಾಗುವ ಹಾಗೆಯೇ ದುರ್ಬಲತೆಗಳು, ಕಾಯಿಲೆಗಳು ಹಾಗೂ ಅಂಗವಿಕಲತೆಗಳು ಅನುವಂಶೀಯವಾಗಿ ವರ್ಗಾವಣೆಯಾಗುವ ಸಾಧ್ಯತೆಗಳಿವೆ. ಆದುದರಿಂದ ರಕ್ತಸಂಬಂಧಿಗಳ ನಡುವೆ ವಿವಾಹವಾಗದಿರುವುದು ಒಳ್ಳೆಯದು.

3) ಶೇ 70 ರಷ್ಟು ಜನ ಹೆಣ್ಣು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಗರ್ಭಿಣಿಯಲ್ಲಿಯೂ ರಕ್ತ ಹೀನತೆ ವ್ಯಾಪಕವಾಗಿದೆ ಹಾಗೂ ತೀವ್ರವಾಗಿದೆ. ಇದು ತಾಯಿಯ ಜೀವಕ್ಕೆ, ಮಗುವಿನ ಬೆಳವಣಿಗೆಗೆ ಮಾರಕವಾಗುತ್ತದೆ. ರಕ್ತಹೀನತೆಯನ್ನು ಸೂಕ್ತ ಆಹಾರ, ಚಿಕಿತ್ಸೆ, ವಿಶ್ರಾಂತಿಯಿಂದ ನಿವಾರಿಸಿಕೊಳ್ಳಬೇಕು. ಇದರಿಂದ ಗರ್ಭದಲ್ಲಿ ಶಿಶುವಿನ ಬೆಳವಣಿಗೆ ಸರಿಯಾಗಿ ಆಗುತ್ತದೆ.

4) ಮಕ್ಕಳ ದೈಹಿಕ ವಿಕಾಸಕ್ಕೆ ಅಗತ್ಯವಾದ ಸೂಕ್ತ ಆಹಾರವನ್ನು ಕಾಲಕಾಲಕ್ಕೆ ಕಡ್ಡಾಯವಾಗಿ ಕೊಡಬೇಕು.

5) ಮಗುವಿನ ಮೈ ಕೈಗಳು ಸ್ವಚ್ಛವಾಗಿರಬೇಕು. ತಾಯಿ/ ಕಾಳಜಿನೀಡುವವರು ತಮ್ಮ ಸ್ವಚ್ಛತೆಗೆ ತೀವ್ರ ಮಹತ್ವ ನೀಡಬೇಕು. ಸ್ವಚ್ಛತೆಯ ಅಭ್ಯಾಸಕ್ರಮಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಲು ಕಲಿಸಬೇಕು.

6) ಮಗುವಿಗೆ ಆಹಾರ ನೀಡುವ ಪಾತ್ರೆ ಚಮಚಗಳು ತುಂಬಾ ಸ್ವಚ್ಛವಾಗಿರಬೇಕು. ನಂಜಾಣುಗಳಿಂದ ಮುಕ್ತವಾಗಿರಬೇಕು. ಉದಾಹರಣೆಗೆ ಹಾಲೂಡುವ ಬಾಟಲಿಗಳನ್ನು ಸರಿಯಾಗಿ ನೀರಲ್ಲಿ ಹಾಕಿ ಕುದಿಸದಿದ್ದರೆ ಮಗುವಿನ ಶರೀರದಲ್ಲಿ ನಂಜಾಣುಗಳು ಪ್ರವೇಶ ಪಡೆದು ವಾಂತಿ ಬೇದಿಗೆ ಕಾರಣವಾಗುತ್ತದೆ.

7) ಶಿಶುವನ್ನು 2–3 ತಿಂಗಳಿಂದಲೇ ಹೊಟ್ಟೆಯ ಮೇಲೆ ಮಲಗಿಸಬೇಕು ಅದರಿಂದಾಗಿ ಅದರ ಕುತ್ತಿಗೆ ಹಾಗೂ ಬೆನ್ನಿನ ನರಗಳು ಸಬಲವಾಗುತ್ತವೆ. ಅದು ಹೊರಳದಿದ್ದಾಗ ಹೊರಳಲು ಸಹಾಯಮಾಡಬೇಕು

8) ಶಿಶುಗಳಿಗೆ 4–5 ತಿಂಗಳಿನಿಂದಲೇ ತಾಯಿಯ ಎದೆಹಾಲಿನೊಂದಿಗೆ ಸೂಕ್ತ, ವಿವಿಧ ಹಾಗೂ ವಿಶೇಷವಾದ ಆಹಾರ ಪದಾರ್ಥಗಳನ್ನು ತಯಾರಿಸಿ ನೀಡಬೇಕು.

9) ಮಕ್ಕಳಿಗೆ 'ವಾಕರ್' ನೀಡಿ ನಡೆಯಲು ಕಲಿಸುವುದರಿಂದ ಅವರ ಬೆನ್ನಿನ ನರಗಳು ದುರ್ಬಲವಾಗುತ್ತವೆ. ಆದುದರಿಂದ ವಾಕರ್ ನಂತಹ ಸಾಧನಗಳನ್ನು ನೀಡದಿರುವುದು ಒಳಿತು.

10) ಮಕ್ಕಳು ಚಲಿಸಲಾರಂಭಿಸಿದ ಮೇಲೆ ಅವುಗಳ ಸರಾಗ ಸುರಕ್ಷಿತ ಚಲನೆಗೆ ಮನೆಯ ಪರಿಸರವನ್ನು ಪುನರ್ ರೂಪಿಸಬೇಕು. ಮೆಟ್ಟಿಲ ಹತ್ತಿರ ಅವರ ಚಲನೆಗೆ ಪ್ರತಿಬಂಧಕಗಳನ್ನು ಅಳವಡಿಸಬೇಕು.

11) ಮಕ್ಕಳು ಚಲಿಸಲಾರಂಬಿಸಿದ ಮೇಲೆ ಕೆಳಗೆ ಬೀಳುವ, ಕೈಕಾಲು ತಿರುಚುವ, ತಲೆ ಹೊಡೆಯುವ, ಹಲವಾರು ಅಪಾಯಗಳುಂಟಾಗುತ್ತವೆ. ಕಾರಣ ಈ ಮಕ್ಕಳನ್ನು ತಂದೆ–ತಾಯಿ ಪೋಷಕರು ನಿರಂತರವಾಗಿ ನಿರೀಕ್ಷಣೆ, ವೀಕ್ಷಣೆ, ರಕ್ಷಣೆ ಹಾಗೂ ಮೇಲ್ವಿಚಾರಣೆ ಮಾಡುತ್ತಿರಬೇಕು.

Digitised by Bharatavani, CIIL

12) ದೈಹಿಕ ಬೆಳವಣಿಗೆಯಲ್ಲಿ ಮತ್ತು ಚಲನ ಕೌಶಲಗಳ ವಿಕಾಸದಲ್ಲಿ ತೀರಾ ವಿಳಂಬ ಕಂಡುಬಂದಲ್ಲಿ ಪೋಷಕರು ವೈದ್ಯರ ಸಲಹೆ ಪಡೆದು ಸೂಕ್ತ ಚಿಕಿತ್ಸಾಕ್ರಮ ಕೈಗೊಳ್ಳಬೇಕು.

–ಡಾ. ವೆಂಕಟರೆಡ್ಡಿ ಆರ್.

## ಶೈಕ್ಷಣಿಕ ಆಟಿಕೆಗಳು

'ಶೈಕ್ಷಣಿಕ ಆಟಿಕೆಗಳು' ಎಂಬ ಪದವನ್ನು ಬೇರೆ ಬೇರೆ ವಿಧಗಳಲ್ಲಿ ಅರ್ಥೈಸಬಹುದು. ಈ ಅರ್ಥೈಸುವಿಕೆಯ ಆಯಾಮದ ಒಂದು ತುದಿಯಲ್ಲಿ ಶಿಕ್ಷಕ ನಿರೀಕ್ಷಿಸುತ್ತಿರುವ ನಿರ್ದಿಷ್ಟ ಕಲಿಕಾ ಉದ್ದೇಶಗಳಿರುವ ಶಿಕ್ಷಣಾತ್ಮಕ, ಬೋಧನಾ ಸಹಾಯಕ ಎನ್ನುವ ಅರ್ಥ ಈ ಪದಕ್ಕಿದ್ದರೆ ಮತ್ತೊಂದು ತುದಿಯಲ್ಲಿ ಅಂತರ್ನಿಹಿತವಾದ ಯವುದೇ ಕಲಿಕೆಯ ಒತ್ತಡವಿಲ್ಲದ ಆಟದ ಸಾಮಗ್ರಿಗಳು ಎಂದು ಹೇಳಬಹುದು. ಈ ಮಿತಿಯಿರದ ಅನಿರ್ಬಂಧಿತ, ಅಸಂರಚಿತ ಆಟದ ವಸ್ತುಗಳು ನಾಟಕರಂಗದ ಸಾಮನುಗಳಂತೆ ಮಕ್ಕಳ ಆಟಗಳಲ್ಲಿ ಆಸರೆಗಳಾಗಿ ನಾನಾ ರೀತಿಯಲ್ಲಿ ಬಳಕೆಯಾಗುತ್ತ ವಿಭಿನ್ನ ಫಲಿತಗಳಿಗೆ ಉಪಯೋಗಿಸಲ್ಪಡುತ್ತಿವೆ.

ಎಲ್ಲಾ ಶೈಕ್ಷಣಿಕ ಆಟಿಕೆಗಳು– ಅವುಗಳು ಚಿಂದಿಯಾಗಿರಲಿ ಅಥವಾ ತ್ಯಾಜ್ಯ ಕಸವಾಗಿರಲಿ ಅಥವಾ ನೈಜ್ಯತೆ ಇಲ್ಲದ ಕೃತಕತೆಯಿಂದ ಕೂಡಿರಲಿ, ಅವು ವಿಕಾಸದ ಲಾಭವನ್ನು ಪ್ರೋತ್ಸಾಹಿಸುವಂಥ ವ್ಯಾಪಕವಾದ ಮೂರ್ತ ಅನುಭವಗಳನ್ನು ನೀಡುತ್ತವೆ. ಅವುಗಳು ಬುಗುರಿಯಾಡಿಸುವ ಕ್ರಿಯೆಯಾಗಿರಬಹುದು, ಗಾಳಿಪಟ ಹಾರಿಸುವುದಿರಬಹುದು ಅಥವಾ ಗುಳ್ಳೆಯನ್ನು ಊದುವ ಸರಳ ಕ್ರಿಯೆಗಳಲ್ಲಿ ಮಗು ಭಾಷೆಯನ್ನು, ಗಣಿತ, ತತ್ವಶಾಸ್ತ್ರ ಮತ್ತು ಗುಣಾತ್ಮಕ ಕೌಶಲಗಳನ್ನು ಕಲಿತುಕೊಳ್ಳುತ್ತದೆ.

ಶಿಕ್ಷಕರು ಶೈಕ್ಷಣಿಕ ಆಟಿಕೆಗಳನ್ನು ಸಾಮಾನ್ಯವಾಗಿ ಅವು ಪ್ರೋತ್ಸಾಹಿಸುತ್ತಿರುವ ಕಲಿಕೆಯ ಫಲಿತದ ಆಧಾರದ ಮೇಲೆ ವರ್ಗೀಕರಿಸುತ್ತಾರೆ. ಮಗು ಬೆಳೆದಂತೆಲ್ಲಾ ಅದರ ಆಟವು ಏಕಾಂತದಿಂದ ಗುಂಪಿನ ಆಟವಾಗಿ ಬದಲಾಗುತ್ತದೆ. ಆಟದ ಸಾಮಗ್ರಿಗಳ ಜೊತೆ ಅವರ ಅನ್ಯೋನ್ಯ ಕ್ರಿಯೆ ಸಂಕೀರ್ಣವಾಗುತ್ತದೆ. ಆದ್ದರಿಂದ, ಶಿಕ್ಷಕರು ಮಕ್ಕಳ ವಯೋಮಾನಕ್ಕೆ ತಕ್ಕಂತೆ ಉಪಯೋಗಿಸುವ ಅನುಕ್ರಮದ ಆಧಾರದ ಮೇಲೆ ಆಟಿಕೆಗಳನ್ನು ವಿಂಗಡಿಸುತ್ತಾರೆ. ಶಿಕ್ಷಣದಲ್ಲಿ ಆಟಿಕೆಗಳ ಪಾತ್ರವನ್ನು ಅರ್ಥಮಾಡಿಕೊಳ್ಳುವ ಮತ್ತೊಂದು ವರ್ಗೀಕರಣವೆಂದರೆ, ಅವುಗಳನ್ನು ಆಟವಾಡಲಿರುವ ಉತ್ಪನ್ನದ ವಸ್ತುಗಳು ಎಂದಷ್ಟೇ ನೋಡದೆ, ಆಟಿಕೆಗಳನ್ನು ನಿರ್ಮಿಸುವುದು ಕಲಿಕೆಯನ್ನು ಪೋಷಿಸುವ ವಿಧಾನವೆಂದು ಪರಿಗಣಿಸುವುದು.

ಏಕಕಾಲದ ಸಂಸ್ಕೃತಿಯ ನೋಟವಿರುವ ಭಾರತೀಯ ಸಂದರ್ಭದಲ್ಲಿ ಗ್ರಾಮಾಂತರ ಮತ್ತು ನಗರ, ಮನೆ ಮತ್ತು ಶಾಲೆಗಳ ಮಕ್ಕಳು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ವಿಧದ ಆಟದ ಸಾಮಾನುಗಳನ್ನು ಉಪಯೋಗಿಸುವರು. ಶೈಕ್ಷಣಿಕ ವರ್ಗದಲ್ಲಿ ಬಹುಪಾಲು ಆಟಿಕೆಗಳು ಶಾಲಾ ಪೂರ್ವದಲ್ಲಿ, ಕೆಲವು ಪ್ರಾಥಮಿಕ ಶಾಲೆಯಲ್ಲಿ ಮತ್ತು ಬಹುಪಾಲು ಪ್ರೌಢಶಾಲೆಯಲ್ಲಿ ಒಂದೂ ಇಲ್ಲವೆನ್ನಬಹುದು. ರಾಜ್ಯ ಶಾಲೆಗಳು ಮತ್ತು ಶಾಲಾಪೂರ್ವ ಮಟ್ಟಗಳಲ್ಲಿ ಆಟಿಕೆಗಳ ಶೈಕ್ಷಣಿಕ ಮೌಲ್ಯವನ್ನು ಗುರುತಿಸುವ ಕೊರತೆ ಇಂದಿಗೂ ಇರುವುದು ಶೋಚನೀಯವಾದುದು. ಇಂದಿಗೂ ಶಿಕ್ಷಣ ಪ್ರಕ್ರಿಯೆಯಲ್ಲಿ ಮುಖ್ಯ ಸ್ಥಾನದಲ್ಲಿರುವುದು ಮತ್ತು ಸಕ್ರಿಯವಾಗಿ ನೇರವಾಗಿ ಅನ್ವೇಷಿಸುವುದನ್ನು ನಿರುತ್ಸಾಹಗೊಳಿಸುವುದು ಇಂದಿನ ಶಿಕ್ಷಣದ ಪದ್ಧತಿಯಾಗಿದೆ. ಶಿಕ್ಷಣದಲ್ಲಿ ಆಟಿಕೆಗಳ ರಚನಾತ್ಮಕ ಬಳಕೆಯಲ್ಲಿ ತೀವ್ರವಾದ ಪರಿಮಿತಿಯಿದ್ದು ಸರ್ಕಾರಿ ಸಂಪನ್ಮೂಲಗಳು ಶಾಲೆಗಳಲ್ಲಿ ಉಗ್ರಾಣದ ಸ್ಥಳ ಮತ್ತು ಪ್ರಜ್ಞಾವಂತ ಶಿಕ್ಷಕರು ಎಂಬ ಮೂರು ಪ್ರಮುಖ ಅಂಶಗಳಲ್ಲಿ ಕೊರತೆಗಳಿವೆ.

**ಅಸಂರಚಿತ ಆಟದ ಸಾಮಗ್ರಿಗಳು:** ಅಧಿಕವಾದ ಅಸಂರಚಿತ ಆಟದ ಸಾಮಗ್ರಿಗಳೆಂದರೆ ಮರಳು, ನೀರು, ಕಡ್ಡಿಗಳು, ಕಲ್ಲುಗಳು, ಎಲೆಗಳು, ಹಗ್ಗ, ಬಣ್ಣ ಮತು ಶಂಖ ಅಥವಾ ಚಿಪ್ಪುಗಳು. ಈ ಸಾಮಗ್ರಿಗಳು ಕ್ರಿಯಾತ್ಮಕ ಆಟಗಳ ಅವಕಾಶಗಳನ್ನು ಮತ್ತು ಕಲಿಯುವ ಪೂರ್ವದಲ್ಲಿ ಮೌಲಿಕವಾದ ಪ್ರಜ್ಞಾಶೀಲ, ಚಲನಶೀಲ ಅನುಭವಗಳನ್ನು ಒದಗಿಸುತ್ತವೆ. ಭಾರತೀಯ ಸಂದರ್ಭದಲ್ಲಿ, ಇವುಗಳು ಎಲ್ಲೆಡೆ ಸಿಗಬಹುದಾದ ಮತ್ತು ಅತಿ ಕಡಿಮೆ ಖರ್ಚಿನ ಅಥವಾ ಖರ್ಚೇ ಇಲ್ಲದ ಮೌಲಿಕ ಆಟದ ಸಾಮಗ್ರಿಗಳಾಗಿವೆ. ಉದಾ: ಚಿಪ್ಪುಗಳ ಸಂಗ್ರಹವು ಅವುಗಳ ಗಾತ್ರ, ಬಣ್ಣ, ರಚನೆ ಮತ್ತು ವೈವಿಧ್ಯತೆಗಳು ಮತ್ತು ಎಣಿಕೆಯಲ್ಲಿ ವಾಸ್ತವಿಕ ಅನುಭವಗಳನ್ನು ಒದಗಿಸಬಲ್ಲುದು. ಇತರ ದೇಶಗಳಲ್ಲಿ ಎಂದರೆ ಸ್ಕ್ಯಾಂಡಿನೇವಿಯನ್ ದೇಶಗಳಲ್ಲಿ ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಮರಳು ಮತ್ತು ಜಲಕ್ರೀಡೆಗಳಿಗೆ ಭೌತಿಕ ಸ್ಥಳಾವಕಾಶವಿರುತ್ತದೆ. ಭಾರತದಲ್ಲಿ ಇದೇ ಶಾಲೆಗಳಲ್ಲಿ ಈ ಸಾಮಗ್ರಿಗಳಿಗೆ ಅಂಥ ಸ್ಥಾನವನ್ನು ಕೊಟ್ಟಿಲ್ಲ.

**ಮಾಂಟೆಸ್ಸರಿ ಸಾಮಗ್ರಿಗಳು:** ಬಹುಶಃ ಅತ್ಯಧಿಕ ಪ್ರಸಿದ್ಧ ಸಂರಚಿತ ಸಾಮಗ್ರಿಗಳೆಂದರೆ ಮಾಂಟೆಸ್ಸರಿ ಸಾಮಗ್ರಿಗಳು. ಇವುಗಳು ಶಾಲಾಪೂರ್ವ ಶಿಕ್ಷಣ ಹಾಗೂ ಅಸಮರ್ಥತೆಯುಳ್ಳ ಮಕ್ಕಳ ಶಿಕ್ಷಣಕ್ಕೆ ಹೆಚ್ಚಾಗಿ ಬಳಕೆಯಲ್ಲಿವೆ. ಇವುಗಳನ್ನು ನಿರ್ದಿಷ್ಟ ಶೈಕ್ಷಣಿಕ ಉದ್ದೇಶಗಳಿಗೆ ಒತ್ತು ನೀಡಿ ವಿನ್ಯಾಸಗೊಳಿಸಲಾಗಿರುತ್ತದೆ. ಈ ಉಪಕರಣಗಳು ಸಂವೇದನಾನುಭವ, ಭಾಷೆ ಮತ್ತು ಗಣಿತ ಈ ಮೂರು ವಿಷಯಗಳಿಗೆ ಸಂಬಂಧಿಸಿದ, ಗಣಿತಶಾಸ್ತ್ರದ ಸಾಮಗ್ರಿಗಳು ವಿಶೇಷವಾಗಿ ಉಪಯುಕ್ತವೆನಿಸಿ ವ್ಯಾಪಕವಾಗಿ ಬಳಕೆಯಲ್ಲಿವೆ.

ಮಾರಿಯಾ ಮಾಂಟೆಸ್ಸರಿ 1929 ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದಳು. ಸಾಮಗ್ರಿಗಳನ್ನು ಭಾರತೀಯ ಸಂದರ್ಭದಲ್ಲಿ ವ್ಯಾಪಕವಾಗಿ ಬಳಸಲು ಅನುಕೂಲವಾಗುವಂತೆ ವಿತರಣೆ ಸಾಮಗ್ರಗಳನ್ನು ದೇವನಾಗರಿ ಭಾಷೆಯಲ್ಲಿ ಅಭಿವೃದ್ಧಿಪಡಿಸಿದಳು. ಕ್ರಿಯಾಶೀಲವಾದ ಮಾಂಟೆಸ್ಸರಿ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಹೈದರಾಬಾದ್ ಮತ್ತು ಬೆಂಗಳೂರಿನಂತಹ ಪಟ್ಟಣಗಳಲ್ಲಿ ಈ ಬಗೆಯ ಸಾಮಗ್ರಿಗಳನ್ನು

Digitised by Bharatavani, CIIL

ಬಳಸುವ ಹಲವಾರು ಮಾಂಟೆಸ್ಸರಿ ಶಾಲೆಗಳು ಇವೆ. ಮಾಂಟೆಸ್ಸರಿ ವಸ್ತುಗಳು ಮರದಿಂದ ಮಾಡಿದ್ದು ಅತಿ ಬೆಲೆಯುಳ್ಳಂಥವು. ಚೆನ್ನಾಗಿ ತರಬೇತಿ ಹೊಂದಿರುವ ಶಿಕ್ಷಕರು ಅವುಗಳನ್ನು ಉಪಯೋಗಿಸಲು ಬೇಕಾಗುತ್ತಾರೆ. ಆದ್ದರಿಂದ ಅವುಗಳನ್ನು ನಗರಗಳಲ್ಲಿನ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳು ಹೆಚ್ಚಾಗಿ ಉಪಯೋಗಿಸುತ್ತಾರೆ.

ಮಾಂಟೆಸ್ಸರಿ ಉಪಕರಣಗಳಲ್ಲಿ ಹೆಚ್ಚು ಬೆಲೆಬಾಳುವ ಗುಣಮಟ್ಟ ಬೇಕಾದುದರಿಂದ ಅವುಗಳ ಕೆಲವೇ ತಯಾರಿಕೆದಾರರು ಭಾರತದಲ್ಲಿದ್ದಾರೆ. ಆದ್ದರಿಂದ ಅವುಗಳ ಬೇಡಿಕೆ ಮತ್ತು ಸರಬರಾಜುಗಳ ನಡುವೆ ಬಹು ದೊಡ್ಡ ಅಂತರವಿದೆ. 1953 ರಲ್ಲಿ ಕೀರಾ ಬನಾಸಿಂಕಾ ಎಂಬ ಪೋಲಿಷ್ ಮಹಿಳೆಯು ಕೇಬೀ ಸ್ಕೂಲ್ ಎಕ್ವಿಪ್‌ಮೆಂಟ್ ಮ್ಯಾನುಫಾಕ್ಚರಿಂಗ್ ಕಂಪನಿಯನ್ನು ಹೈದರಾಬಾದಿನಲ್ಲಿ ಸ್ಥಾಪಿಸಿದಳು. ಅಂತರ್‌ರಾಷ್ಟ್ರೀಯ ಗುಣಮಟ್ಟ ದರ್ಜೆಯನ್ನು ಹೊಂದಿರುವ ಮತ್ತು ಅಸೋಸಿಯೇಷನ್ ಆಫ್ ಮಾಂಟೆಸ್ಸರಿ ಇಂಟರ್‌ನ್ಯಾಷನಲ್ (AMI) ರವರಿಂದ ಮಾನ್ಯತೆ ಪಡೆದಿರುವ ಮೂರು ಕೇಂದ್ರಗಳಲ್ಲಿ ಇದೂ ಒಂದಾಗಿದೆ.

1920 ರಲ್ಲಿಯೇ ತಾರಾಬಾಯ್ ಮೋದಕ್ ಎಂಬ ಶಾಲಾಪೂರ್ವ ಶಿಕ್ಷಣ ತಜ್ಞ ಶಿಕ್ಷಕಿಯೊಬ್ಬರು ಗಿಜುಬಾಯ್ ಬಧೇಕಾ ಎಂಬುವವರೊಡಗೂಡಿ ಮಾಂಟೆಸ್ಸರಿ ಪದ್ಧತಿಯನ್ನು ಭಾರತದ ಸಾಮಾಜಿಕ ಸಂಸ್ಕೃತಿಯ ಸಂದರ್ಭಕ್ಕೆ ಅಳವಡಿಸಿಕೊಂಡರು. ತಾರಾಬಾಯ್ ಮೋದಕ್ ಮಹಾರಾಷ್ಟ್ರ, ಕೋಸಬಾದ್ ಗ್ರಾಮ ಬಾಲಶಿಕ್ಷಣ ಕೇಂದ್ರಗಳ ಬುಡಕಟ್ಟು ಮಕ್ಕಳಿಗಾಗಿ ಸೇವೆ ಸಲ್ಲಿಸುತ್ತಾ ಕಡಿಮೆ ವೆಚ್ಚದ ಮಾಂಟೆಸ್ಸರಿ ಉಪಕರಣಗಳನ್ನು ಮಕ್ಕಳಿಗಾಗಿ ಅಭಿವೃದ್ಧಿಪಡಿಸಿದರು.

90ರ ದಶಕದಲ್ಲಿ ಬೆಂಗಳೂರಿನ Concerned for working children ಮತ್ತು ಕಲ್ಕತ್ತಾದ ವಿಕ್ರಮಶಿಲಾ ಕಡಿಮೆ ವೆಚ್ಚದ ಮಾಂಟೆಸ್ಸರಿ ಸಾಮಗ್ರಿಗಳನ್ನು ಗ್ರಾಮಾಂತರ ಶಾಲಾಪೂರ್ವ ಹಂತದ ಮತ್ತು ಪ್ರಾಥಮಿಕ ಶಾಲೆಗಳಿಗಾಗಿ ಅಳವಡಿಸಿಕೊಳ್ಳಲು ಅಭಿವೃದ್ಧಿಪಡಿಸಿದರು.

**ಕಲಿಕಾ ಸಂಪನ್ಮೂಲಗಳು:** ಈ ವಿಭಾಗವು ವ್ಯಾಪಕವಾಗಿ ತಿಳಿದಿರುವಂತೆ ಶೈಕ್ಷಣಿಕ ಆಟಿಕೆಗಳನ್ನು ಮತ್ತು ಅನೇಕ ಬಗೆಯ ಸಾಮಗ್ರಿಗಳನ್ನು ಒಳಗೊಳ್ಳುತ್ತದೆ. ವಿಶೇಷ ಕಲಿಕಾ ಉತ್ಪನ್ನಗಳೆಂದೇ ವಿನ್ಯಾಸಗೊಳಿಸಿದ ಪೂರ್ವಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಿರುವ ಮಕ್ಕಳ ಶೈಕ್ಷಣಿಕ ಸಾಮಗ್ರಿಗಳನ್ನು ಅದು ಒಳಗೊಳ್ಳುತ್ತದೆ. ಒಗಟು ಸಮಸ್ಯೆಗಳು (ಪಜಲ್ಸ್), ಫ್ಲಾಷ್ ಕಾರ್ಡ್ಸ್, ಬಿಲ್ಡಿಂಗ್ ಬ್ಲಾಕ್ಸ್, ಪೇಯಿರಿಂಗ್ ಗೇಮ್ಸ್, ಲಾಂಗ್ವೇಜ್ ಏಯ್ಡ್ಸ್, ಮ್ಯಾಥ್ಸ್ ಮತ್ತು ವೈಜ್ಞಾನಿಕ ಸಾಧನಗಳೇ ಮುಂತಾದ ಕಲಿಕಾ ಸಂಪನ್ಮೂಲಗಳು ವ್ಯಾಪಕವಾಗಿ ಬಳಕೆಯಲ್ಲಿವೆ. ಕಲಿಕಾ ಸಂಪನ್ಮೂಲಗಳ ಶಾಲಾ ಸನ್ನಿವೇಶಕ್ಕೆ ಬಳಕೆ ಮತ್ತು ಸಾಮೂಹಿಕ ಬಳಕೆಯನ್ನು ಮನಸ್ಸಿನಲ್ಲಿಟ್ಟುಕೊಂಡು ವಿಶಿಷ್ಟವಾಗಿ ವಿನ್ಯಾಸಗೊಳಿಸಿರುತ್ತದೆ. ದುರದೃಷ್ಟವಶಾತ್ ಈ ಬಗೆಯ ಸಾಮಗ್ರಿಗಳು ಭಾರತದ ಮುಖ್ಯ ನಗರಗಳಲ್ಲೂ ಅತ್ಯಲ್ಪವಾಗಿ ದೊರೆಯುತ್ತವೆ.

ದೇಶದ ಕಲಿಕಾ ಸಂಪನ್ಮೂಲ ಕ್ಷೇತ್ರಗಳನ್ನು ಎರಡು ಪ್ರಾತಿನಿಧಿಕ ಸಂಸ್ಥೆಗಳು ಉತ್ತೇಜಿಸುತ್ತಿವೆ. ಮೊದಲಿಗೆ ತಾವು ಕೆಲಸ ಮಾಡುತ್ತಿರುವ ವಿಶಿಷ್ಟ ಕ್ಷೇತ್ರ ಅಥವಾ ವಿಷಯದ ವ್ಯಾಪ್ತಿಗೆ ಅನುಗುಣವಾಗಿ ಹೆಚ್ಚು ಬಳಸಲ್ಪಡುವ ಕಲಿಕಾ ಸಹಾಯಕಗಳ ವಿನ್ಯಾಸಗಳನ್ನು ಶೈಕ್ಷಣಿಕ ಗುಂಪುಗಳು ಸಿದ್ಧಪಡಿಸುತ್ತವೆ. ಎರಡನೆಯದಾಗಿ ವಾಣಿಜ್ಯ ಉದ್ದೇಶದಿಂದ ಮಾರಾಟಕ್ಕೆ ಅನುಗುಣವಾಗಿ ಕಲಿಕಾ ಸಹಾಯಕಗಳನ್ನು ಸಣ್ಣ ಪ್ರಮಾಣದ ಉದ್ದಿಮೆಗಾರರು ತಯಾರಿಸುತ್ತಾರೆ.

ನವೀನತೆಯನ್ನು ತರುವ ಶೈಕ್ಷಣಿಕ ಗುಂಪುಗಳ ಪ್ರಯತ್ನ ಸೀಮಿತ ಪ್ರಭಾವ ಬೀರುತ್ತದೆ. ಶಿಕ್ಷಕರು ಅಪರೂಪವಾಗಿ ವಿನ್ಯಾಸಗೊಳಿಸಿದ ಸಾಮಗ್ರಿಗಳು ಪರಿಗಣನೆಗೆ ಬರಬೇಕಾದರೆ ಅವುಗಳ ನವೀನ ಆಲೋಚನೆಗಳು ಕಣ್ಣಿಗೆ ಕಾಣು ವಂತಹವಾಗಿದ್ದು ವ್ಯವಸ್ಥೆಯ ಮೇಲೆ ಅಗಾಧ ಪ್ರಭಾವ ಬೀರುವಂತಿರಬೇಕು. (ಆದ್ದರಿಂದ ಶಿಕ್ಷಕರು ಅಭಿವೃದ್ಧಿಪಡಿಸಿದ ಕಲಿಕಾ ಸಾಮಗ್ರಿಗಳು ಅವರ ಭೌಗೋಳಿಕ ಪರಿಸರವನ್ನು ದಾಟಿ ಆಚೆಗೆ ಪ್ರಚುರವಾಗುವುದಿಲ್ಲ.) ಏಕೆಂದರೆ ಹಲವು ಶೈಕ್ಷಣಿಕ ಗುಂಪುಗಳು ಆಸಕ್ತಿಯನ್ನು ಕಳೆದುಕೊಂಡಿರುತ್ತವೆ. ಅಥವಾ ಸರ್ಕಾರ ಮಟ್ಟಕ್ಕೆ ಅಥವಾ ವಾಣಿಜ್ಯ ಮಟ್ಟಕ್ಕೆ ಅವಗಳಿಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ತಮ್ಮ ಸಾಮಗ್ರಿಗಳನ್ನು ಯಾವುದೇ ಸ್ವೀಕಾರ ರಶೀತಿ ಇಲ್ಲದೆ ಇತರರು ಪ್ರಸಾರಮಾಡಿ ಲಾಭ ಪಡೆದುಕೊಳ್ಳುವರೆಂಬ ಭಯದಿಂದ ಸಾಮಗ್ರಿಗಳನ್ನು ಹಂಚಿ ಕೊಳ್ಳುವಲ್ಲಿ ಬಹು ಎಚ್ಚರವಹಿಸುತ್ತಾರೆ. ಬೇರೆ ಇತರ ಸಂದರ್ಭಗಳಲ್ಲಿ ಸಾಮಗ್ರಿಗಳ ಮಾರಾಟವು ತರಬೇತಿಯ ಮೇಲೆ ಅವಲಂಬಿತವಾಗಿರುತ್ತದೆ. ಮತ್ತು ಸ್ವವಿವರಣೆಗಳಿಲ್ಲದೆ ನಿರ್ಮಿತವಾಗಿ ಏಕಪಕ್ಷೀಯವಾಗಿ ನಿಲ್ಲುತ್ತವೆ ಅಥವಾ ಎಲ್ಲೋ ಮಾರಾಟವಾಗುತ್ತವೆ.

ಎರಡನೆಯ ಪ್ರಾತಿನಿಧಿಕ ಗುಂಪಾದ ವಾಣಿಜ್ಯ ತಯಾರಿಕಾದಾರರ ಮಿತಿಯೇನೆಂದರೆ ಪ್ರಸ್ತುತದಲ್ಲಿ ದೊರಕುತ್ತಿರುವ ಅವರ ಶೈಕ್ಷಣಿಕ ಸಾಮಗ್ರಿಗಳು ಬಾಳಿಕೆ ಮತ್ತು ಸುಭದ್ರತೆ, ದೃಶ್ಯ ಮತ್ತು ಪಠ್ಯವಿಷಯಗಳಲ್ಲಿ ಖಚಿತತೆ; ಬೋಧಕರಿಗೆ ಗುಣಮಟ್ಟದಲ್ಲಿ ಖಚಿತತೆಯ ಅಳತೆಗೋಲು ಆಗುವ ಬಾಹ್ಯ ಪರೀಕ್ಷೆಗಳಿಗೆ ಒಳಗಾಗದೆ ಮಾರುಕಟ್ಟೆಗಳಲ್ಲಿ ದೊರಕುತ್ತಿವೆ. ಸೂಕ್ಷ್ಮ ಸ್ಥಿತಿಯ ಸಂದರ್ಭ ಅಥವಾ ಸಾಂಸ್ಕೃತಿಕ ವಿಶಿಷ್ಟತೆಗಳಲ್ಲದೆ ಈ ಸಾಮಗ್ರಿಗಳು ರೂಪುಗೊಂಡಿರುತ್ತವೆ. ಮತ್ತೊಂದೆಡೆ, ಕಲಿಕಾ ಸಾಮಗ್ರಿಗಳು ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಗೊಳ್ಳುವುದರಿಂದ ಸಾರ್ವಜನಿಕರಿಗೆ ಕೊಳ್ಳುವ ಶಕ್ತಿಗೆ ಅನುಗುಣವಾದ ಬೆಲೆಯಿಂದ ಸಾಮೂಹಿಕ ತಯಾರಿಕೆದಾರರು ಆರ್ಥಿಕ ಲಾಭ ಪಡೆಯುವರು.

ಕಲಿಕಾ ಸಂಪನ್ಮೂಲಗಳ ಪ್ರಚಾರವು ಮಾರಾಟದ ಕಾರಣದಿಂದ ಸೀಮಿತಗೊಳ್ಳುವ ವಿಷಯವಾಗಿದೆ. ಆಟದ ಸಾಮಾನು ಅಂಗಡಿಗಳಿಂದ ಕಲಿಕಾ ಸಹಾಯಕಗಳನ್ನು ವಾಣಿಜ್ಯೋದ್ದೇಶದಿಂದ ಮಾರಾಟವಾಗುವಂತೆ ಉತ್ತೇಜಿಸುವುದು ಕಷ್ಟಕರ. ಒಂದು ಬೊಂಬೆಗಿಂತ ಒಂದು ಕಲಿಕಾ ಸಹಾಯಕ ವಸ್ತುವಿನ ಬಗ್ಗೆ ಅದರ

Digitised by Bharatavani, CIIL

ಉಪಯೋಗ ಕುರಿತು ವಿವರಣೆ ನೀಡಿದಮೇಲೆ ಶಿಕ್ಷಕ/ಪೋಷಕರು ಮಾಹಿತಿ ತಿಳಿದು ಅದನ್ನು ಕೊಳ್ಳುವ ತೀರ್ಮಾನಕ್ಕೆ ಬರುತ್ತಾರೆ ಮತ್ತು ಆಗ ಮಾತ್ರ ಒಂದು ಮಗುವು ಅದನ್ನು ಚೆನ್ನಾಗಿ ಉಪಯೋಗಿಸಲು ಸಾಧ್ಯವಾಗುತ್ತದೆ. ಸಾಂಪ್ರದಾಯಕ ಗೊಂಬೆ ಮತ್ತು ಪುಸ್ತಕಗಳ ಅಂಗಡಿಗಳಲ್ಲಿ ಕಲಿಕಾ ಸಾಮಗ್ರಿಯ ಶೈಕ್ಷಣಿಕ ಮೌಲ್ಯವನ್ನು ವಿವರಿಸುವ ತರಬೇತಿ ಪಡೆದ ಸಿಬ್ಬಂದಿಗಳು ಇರುವುದಿಲ್ಲ.

ಮರದ ಸಾಮಗ್ರಿಗಳು ಹಾಗೂ ಮುದ್ರಣ ಮಾಧ್ಯಮದ ಮೂಲಕ ಕಲಿಕಾ ಸಂಪನ್ಮೂಲ ಸಾಮಗ್ರಿಗಳನ್ನು ತಯಾರಿಸುವ ಮಾಧ್ಯಮಗಳ ಹಲವು ಭಾರಿ ಪ್ರಮಾಣದವರೆಗಿನ ತಯಾರಿಕೆದಾರರು ಇಂದು ದೇಶದಲ್ಲಿದ್ದಾರೆ. ಶಿಕ್ಷಣದ ಕಲಿಕಾ ಸಾಮಗ್ರಿಗಳು ಬೋಧನೆಮೇಲೆ ಅವಲಂಬಿತವಲ್ಲದ್ದರಿಂದ ಹೆಚ್ಚಿನ ಉತ್ಪಾದನೆಗೆ ಮತ್ತು ಮಾರಾಟಕ್ಕೆ ಆರ್ಥಿಕ ದೃಷ್ಟಿಯಿಂದ ವ್ಯಾವಹಾರಿಕವಾದ್ದರಿಂದ ಈ ವಯಸ್ಸಿನ ಮಕ್ಕಳ ಕಲಿಕಾ ಸಾಮಗ್ರಿಗಳತ್ತ ಹಲವಾರು ವ್ಯಾಪಾರಿಗಳು ಗಮನ ಕೇಂದ್ರೀಕರಿಸುತ್ತಿದ್ದಾರೆ. ಶಾಲಾಪೂರ್ವ ಶೈಕ್ಷಣಿಕ ಸಾಮಗ್ರಿಗಳ ಉತ್ಪಾದನೆಯು ಅಧಿಕ ಬಳಕೆ ತಳಹದಿಯಾಗಿದ್ದಂತೆಯೇ ಪ್ರೌಢಶಾಲೆಯಲ್ಲಿ ಭಾಷಾ ವಿಭಿನ್ನತೆ ಈ ತಳಹದಿಗೆ ಪ್ರತಿಕೂಲವಾಗುತ್ತದೆ ಮತ್ತು ಶಾಲಾ ಪೂರ್ವದಿಂದ ಪ್ರೌಢಶಾಲೆವರೆಗಿನ ಕಲಿಕಾ ಸಂಪನ್ಮೂಲಗಳ ಬಳಕೆಯು ಭಾಗಶಃ ಇಳಿಮುಖವಾಗುವುದಕ್ಕೆ ಕಾರಣವಾಗುತ್ತದೆ.

1980 ರಲ್ಲಿ ಅತ್ಯಂತ ಹಳೆಯ ಶೈಕ್ಷಣಿಕ ಆಟಿಕೆಯ ಉತ್ಪಾದನಾ ಕಾರಣರಾಗಿದ್ದ ಉಜ್ವಲ್ ಎಂಬ ದೆಹಲಿಯ ವಾಣಿಜ್ಯ ಸಂಸ್ಥೆಯು ವಿದೇಶದಲ್ಲಿ ರೂಪಿಸಲ್ಪಟ್ಟ ಮರದ ಪಜಲ್ಸ್ ಅಥವಾ ಸಮಸ್ಯೆ ಬಿಡಿಸುವ ಆಟದ ಸಾಮಾನು ಗಳಿಂದ ಉತ್ತೇಜನ ಪಡೆದಿತ್ತು. ದೆಹಲಿಯ ಒಳಗೆ ಹಾಗೂ ಹೊರಗೆ ಖಜಾನಾ ಮತ್ತು ಲಿಟಲ್ ಜೀನಿಯಸ್ ಎಂಬ ಮರದ ಆಟದ ಸಾಮಾನು ಉತ್ಪಾದನೆಯ ಘಟಕಗಳಿರುವ ಎರಡು ಸಂಸ್ಥೆಗಳು ಸ್ಥಾಪನೆಯಾದವು. ಉಜ್ವಲ್ ಮತ್ತು ಖಜಾನಾ ಎಂಬೆರಡು ಸಂಸ್ಥೆಗಳು ಸರ್ಕಾರಿ ಶಾಲಾಪೂರ್ವ ಶಾಲೆಗಳಿಗೆ ಆರಂಭಿಕ ಕಲಿಯುವ ಸಾಮಗ್ರಿಗಳನ್ನು ಒದಗಿಸುತ್ತಿದ್ದವು.

1990 ರಲ್ಲಿ ಕ್ರಿಯೇಟಿವ್ ಎಜುಕೇಷನಲ್ ಏಯ್ಡ್ಸ್ ಶಿಕ್ಷಕರೊಡನೆ ಸಹಭಾಗಿಯಾಗಿ ಅಸಂಖ್ಯ ಶಾಲಾಪೂರ್ವ ಸಾಮಗ್ರಿಗಳ ಮಾರುಕಟ್ಟೆಗೆ ಸಾಮೂಹಿಕ ಉತ್ಪಾದನೆಯಲ್ಲಿ ಮುದ್ರಿತ ಸಾಮಗ್ರಿಗಳನ್ನು ಉತ್ಪಾದಿಸಿತು. ಅವರ ಮುದ್ರಣ ಮಾಧ್ಯಮದ ತಾಂತ್ರಿಕ ಆಯ್ಕೆ, ಜನಪ್ರಿಯ ಕಲಿಕಾ ಸಹಾಯಕಗಳು, ಬಾಳಿಕೆಯ ಪ್ಯಾಕೇಜಿಂಗ್ ಮತ್ತು ಉಪಯೋಗದ ಖಚಿತ ಮಾಹಿತಿಗಳಿಂದ ಅವುಗಳ ವ್ಯಾಪಾರ ಸುಲಭವಾಯಿತು. ಮತ್ತು ಬಹುಸಂಖ್ಯಾತ ಮಧ್ಯಮ ವರ್ಗವು ಕೊಳ್ಳಬಲ್ಲ ಬೆಲೆ ದೇಶಾದ್ಯಂತ ಜನಪ್ರಿಯತೆ ಪಡೆಯಲು ಸಹಾಯಕವಾದವು. ಪೋಷಕರ ಹೆಚ್ಚಿನ ಜಾಗೃತಿ ಮತ್ತು ಶೈಕ್ಷಣಿಕ ಸಾಮಗ್ರಿಗಳ ಬೇಡಿಕೆಯಿಂದಾಗಿ ಹೆಚ್ಚು ಯಶಸ್ಸು ಪಡೆಯಲು ಕಾರಣವಾದವು.

ಕಲ್ಕತ್ತಾದ ನ್ಯೂವೇವ್ ಎಂಬ ಮತ್ತೊಂದು ತಯಾರಿಕಾ ಸಂಸ್ಥೆಯು ಶಾಲಾ ಶಿಕ್ಷಕರೊಡನೆ ಕೂಡಿ ಶಾಲಾ ಪೂರ್ವ ಮತ್ತು ಪ್ರಾಥಮಿಕ ಶಾಲೆಗಳಿಗೆ ವ್ಯಾಪಕ ಶ್ರೇಣಿಯ ಬೋಧನಾ ಸಹಾಯಕಗಳನ್ನು ತಯಾರಿಸುತ್ತಿದೆ. ಶಾಲಾ ಮಾರುಕಟ್ಟೆಯನ್ನು ಗುರಿಯಾಗಿಸಿಕೊಂಡು ವ್ಯಾಪಕ ಶ್ರೇಣಿಯ ಮರ ಮತ್ತು ಮುದ್ರಿತ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿತಲ್ಲದೆ ಬೇರೆ ಗುಂಪುಗಳು ಮಾಡಿದ ಕಲಿಕಾ ಸಂಪನ್ಮೂಲ ಸರಕುಗಳೂ ಹೊರ ಹೋಗುವಂತೆ ಮಾಡಿದವು.

ಶಿಕ್ಷಕ, ಉತ್ಪಾದನಾಕಾರ ಮತ್ತು ಮಕ್ಕಳ ನಡುವೆ ಒಂದು ಸಾಂಕೇತಿಕ ಸಂಬಂಧದ ಅವಶ್ಯಕತೆಯನ್ನು ಮನಗಂಡು 1975 ರಲ್ಲಿ ಒಂದು ರಾಷ್ಟ್ರೀಯ ಲಾಭವಿಲ್ಲದ ಸಂಸ್ಥೆಯನ್ನು Educator Manufacturer Association (EDMA) ಅದರ ಕಾರ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿತು. ಹಲವು EDMA ಕಾರ್ಯಾಗಾರಗಳನ್ನು ಏರ್ಪಡಿಸಿ ಶಿಕ್ಷಕರು ಮತ್ತು ಮಕ್ಕಳು ಕೂಡಿ ಕಲಿಕಾ ಸಂಪನ್ಮೂಲಗಳನ್ನು ಮಾಡುವ ಹಾಗೂ ಬಳಸುವಲ್ಲಿ ತೊಡಗಿಸಿತು. ಕರ್ನಾಟಕ ಸರ್ಕಾರದಲ್ಲಿ 50 ಸಮುದಾಯ ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಲು ಸಹಾಯ ಮಾಡಿತು. ಅತ್ಯಂತ ನೈಜ್ಯ ಅಗತ್ಯಕ್ಕೆ ಸ್ಪಂದಿಸಿದ ಅದರ EDMA ಆರಂಭಿಕ ಉತ್ಸಾಹವನ್ನು ಉಳಿಸಿಕೊಳ್ಳದೇ ಹೋದುದು ದುರದೃಷ್ಟಕರ. EDMA ಸಹಯೋಗದಲ್ಲಿ ಬೆಂಗಳೂರಿನ ಡೈನಾಮ್ ಇಂಜಿನಿಯರಿಂಗ್ ಕಾರ್ಪೊರೇಷನ್ ಎಂಬ ತಯಾರಿಕಾದಾರರು ಎಲ್ಲ ಶ್ರೇಣಿಯ ಶಾಲಾಪೂರ್ವ ಕಲಿಕಾ ಪ್ಲಾಸ್ಟಿಕ್ ಸಾಮಗ್ರಿಗಳ ಜೊತೆಗೆ ವಿಜ್ಞಾನದ ಕಿಟ್ಸ್ ಮತ್ತು ಬೊಂಬೆಗಳನ್ನು ಅಭಿವೃದ್ಧಿಪಡಿಸಿತು. ಮೈಸೂರಿನಲ್ಲಿ ಮರದ ಆಟಿಕೆಗಳು ಮತ್ತು ಪಜಲ್‌ಗಳು ಹೆಚ್ಚನ ಸಂಖ್ಯೆಯಲ್ಲಿ ತಯಾರಾದವು.

ಪುಣೆಯ ಸೆಂಟರ್ ಫಾರ್ ಲರ್ನಿಂಗ್ ರಿಸೋರ್ಸಸ್ (CLR) ಎಂಬ ಲಾಭವಿಲ್ಲದ ಶೈಕ್ಷಣಿಕ ಗುಂಪು 1980 ರಲ್ಲಿ ಭಾಷೆ, ಗಣಿತ ಮತ್ತು ಸೃಜನಶೀಲ ಸಾಮಗ್ರಿಗಳನ್ನು ಪಿಯಾಜೆ ಸಿದ್ಧಾಂತದ ಚೌಕಟ್ಟಿನಲ್ಲಿ ರೂಪಿಸುವಲ್ಲಿ ಪರಿಣತಿ ಹೊಂದಿತು. ಅಐಖ ಶಿಕ್ಷಕರಿಗೆ ತರಬೇತಿ ನೀಡಿತು ಮತ್ತು ನಂತರ ಸಾಮಗ್ರಿಗಳನ್ನು ವಿತರಿಸಿ ಅದರ ಸರಿಯಾದ ಬಳಕೆಯನ್ನು ಖಚಿತವಡಿಸಿಕೊಂಡಿತು. ಅದರ ಕಲಿಕಾ ಸಹಾಯಕಗಳು ಭಾರತದ ಸಂದರ್ಭದಲ್ಲಿ ಕಲ್ಪನಾತ್ಮಕವಾಗಿ ಹಾಗೂ ವಿವರಣೆಯೊಂದಿಗೆ ರೂಪಿಸಲ್ಪಟ್ಟಿದ್ದವು.

ಕಲಿಕಾ ಸಂಪನ್ಮೂಲಗಳನ್ನು ಉತ್ತೇಜಿಸುವ ಸಲುವಾಗಿ ಯೂನಿಸೆಫ್‌ನಿಂದ NCERT ಪ್ರತಿನಿಧಿಸಲ್ಪಟ್ಟ 'ದಿ ಚಿಲ್ಡ್ರನ್ಸ್ ಮೀಡಿಯಾ ಲ್ಯಾಬ್' (CML) 1975 ರಲ್ಲಿ ಸ್ಥಾಪನೆ ಆಯಿತು. CML ನಿಂದ ವಿವಿಧ ರಾಜ್ಯಗಳಲ್ಲಿ ಉಪಯೋಗಿಸುತ್ತಿರುವ ಆಟಿಕೆಗಳ ದಾಖಲೆ ಮತ್ತು ಈ ಆಟಿಕೆಗಳನ್ನು ಹೇಗೆ ವಿವಿಧ ರೀತಿಯಲ್ಲಿ ಹೊಸ ಮಾರ್ಗ ಗಳಲ್ಲಿ ಉಪಯೋಗಿಸಬಹುದು ಎಂಬ ಬಗ್ಗೆ ಸಲಹೆ ನೀಡುವ ನಿಯತಕಾಲಿಕೆಗಳನ್ನು ಹೊರತರುವ ಉದ್ದೇಶವುಳ್ಳ ಒಂದು ಕ್ರಿಯಾ ಯೋಜನೆಯನ್ನು ಆರಂಭಿಸಿತು. ಹೊಸ ಮಾದರಿಗಳು ಸಹ ರೂಪುಗೊಂಡವು. ಪ್ರತಿ ರಾಜ್ಯದಿಂದಲೂ ಆಟಿಕೆಗಳ ಶೈಕ್ಷಣಿಕ ಮೌಲ್ಯವನ್ನು ಮೌಲ್ಯಮಾಪನ ಮಾಡುವ ಒಂದು

Digitised by Bharatavani, CIIL

ಮಾದರಿಯ ರಚನೆಯೂ ಆಯಿತು. ಈ ಯೋಜನೆಯಲ್ಲಿ ವಿಶ್ರಾಂತ ಶಿಕ್ಷಣ ತಜ್ಞರು ಮತ್ತು ಆಟದ ಪ್ರತಿಪಾದಕರಿಂದ ಬೆಂಗಳೂರಿನ ಇಂದಿರಾ ಸ್ವಾಮಿನಾಥನ್ ಮತ್ತು ಮುಂಬೈಯ ಅರುಣಾ ಥಕ್ಕರ್ ಮುಂತಾದವರನ್ನು ಒಳಗೊಳ್ಳಲಾಯಿತು. ನಿಯತಕಾಲಿಕಗಳಲ್ಲಿ ಗುಜರಾತ, ಆಂಧ್ರಪ್ರದೇಶ, ಮಣಿಪುರ, ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮತ್ತು ಒರಿಸ್ಸಾದ ಮೌಲಿಕವಾದ ಆಟದ ಸಾಮಗ್ರಿಗಳ ದಾಖಲೆಯನ್ನು ಒದಗಿಸಿದವು. ಈ ಯೋಜನೆಯು ಸಾಂಪ್ರದಾಯಿಕ ಮತ್ತು ವಾಣಿಜ್ಯೋದ್ದೇಶದ ಆಟಿಕೆಗಳನ್ನು, ಕಲಿಕಾ ಸಹಾಯಕಗಳನ್ನು ಒಳಗೊಂಡಿತ್ತು.

CML ಸಹಾ ಇತರ ಮಾದರಿಯ ಕಲಿಕಾ ಸಂಪನ್ಮೂಲಗಳನ್ನು ಕ್ಷೇತ್ರ ಪರೀಕ್ಷೆ ಮಾಡಿ ವಿನ್ಯಾಸಗೊಳಿಸಿತು. ಹಲವು ಸಂಶೋಧನೆ ಮತ್ತು ವಿನ್ಯಾಸ ಪ್ರಯತ್ನಗಳಿದ್ದರೂ, ಈ ಆಲೋಚನೆಗಳು ಉತ್ಪಾದನೆಗೆ ಒಳಗಾಗಲಿಲ್ಲ. ಮತ್ತು ಅವುಗಳಿಂದ ಯಾವುದೇ ವ್ಯಾಪಕವಾದ ಬದಲಾವಣೆಯು ಶೈಕ್ಷಣಿಕ ವ್ಯವಸ್ಥೆಯಲ್ಲಿ ಉಂಟಾಗಲಿಲ್ಲ.

1988 ರಲ್ಲಿ ಜೆ.ಸಿ.ಸೋನಿ, ನವದೆಹಲಿಯಲ್ಲಿ 'ಲೋ ಕಾಸ್ಟ್ ಟೀಚಿಂಗ್ ಏಯ್ಡ್ಸ್ ಸೊಸೈಟಿ' (LCTAS)ಯನ್ನು, ಸ್ಥಾಪಿಸಿ, ಕಡಿಮೆ ವೆಚ್ಚದ ವೈಜ್ಞಾನಿಕ ಆಟಿಕೆಗಳನ್ನು ಸಾಮಾನ್ಯ ತತ್ವಗಳಿಂದ ಶೂನ್ಯ, ದೃಷ್ಟಿ ಭ್ರಾಂತಿ, ಆಯಸ್ಕಾಂತ ಆಕರ್ಷಣೆ, ಕೇಂದ್ರಾಪಗಮನ ಬಲ ಇತ್ಯಾದಿಗಳನ್ನು ಬಳಸಿ ಮಾಡುವುದನ್ನು ಉತ್ತೇಜಿಸಿತು. ಅದರ ಉದ್ದೇಶ ಕಡಿಮೆ ಬೆಲೆಯಿರುವ ಆಟಿಕೆಗಳನ್ನು ಅಧಿಕ ಸಂಖ್ಯೆಯ ಮಕ್ಕಳಿಗೆ ಹೆಚ್ಚು ದೊರಕುವಂತಾಗಲಿ ಎಂಬುದಾಗಿತ್ತು. ನ್ಯಾಷನಲ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ ಕಮ್ಯುನಿಕೇಷನ್ (NCSTC) ಸಹಭಾಗಿತ್ವದಲ್ಲಿ ಸೋನಿ ಈ ಸಾಮಗ್ರಿಗಳನ್ನು ಸಚೇತನಗೊಳಿಸಿ ಬೆಳೆಸಲು ಶಿಕ್ಷಕರಿಗೆ ತರಬೇತಿಯ ಕಾರ್ಯಾಗಾರಗಳನ್ನು ನಡೆಸಿದರು.

ತಮಿಳುನಾಡಿನ ಸೈನ್ಸ್ ಫೋರಂ, ಭಾರತ್ ಜನ್‌ವಿಜ್ಞಾನ್ ಜಾಥಾ ಮತ್ತು ಕೇರಳದ ಶಾಸ್ತ್ರ ಸಾಹಿತ್ಯ ಪರಿಷತ್ ಮುಂತಾದ ಸಂಸ್ಥೆಗಳೂ ಸೇರಿದಂತೆ ಭಾರತದ ಎಲ್ಲೆಡೆ ನಾನಾ ಬಗೆಯ ಜನಪ್ರಿಯ ವಿಜ್ಞಾನ ಆಂದೋಲನಗಳಿಂದ ಕಡಿಮೆ ವೆಚ್ಚದ ವೈಜ್ಞಾನಿಕ ಆಟಿಕೆಗಳು ಉತ್ತೇಜಿಸಲ್ಪಟ್ಟವು.

ಮಧ್ಯಪ್ರದೇಶದ ಏಕಲವ್ಯ ಎಂಬ ಪ್ರಸಿದ್ಧ ಲಾಭರಹಿತ ಶೈಕ್ಷಣಿಕ ಗುಂಪು 18 ವರ್ಷಗಳನ್ನು ಮೀರಿದವರಿಗೆ ಶೈಕ್ಷಣಿಕ ಆಟಿಕೆಗಳನ್ನು ಮಾಡುವ ಘಟಕವನ್ನು ನಡೆಸುತ್ತಿತ್ತು. ಅದರ ಮರದ ಆಟಿಕೆಗಳು ವಿಜ್ಞಾನ, ಗಣಿತದ ತತ್ವಗಳನ್ನು ಆಧರಿಸಿದ್ದು ವಿವರಗಳೊಂದಿಗೆ ಕೂಡಿರುತ್ತಿದ್ದವು. 'ಏಕಲವ್ಯ' ಪಡೆದ ವಿಶ್ವಾಸಾರ್ಹ ಸ್ಥಾನದಿಂದ, ಶೈಕ್ಷಣಿಕ ಮತ್ತು ಮನೋರಂಜನಾತ್ಮಕವಾಗಿ ಇರುವಂತಹ ಆಟಿಕೆಗಳಿಂದ ಶಿಕ್ಷಣದಲ್ಲಿ ಆಟಿಕೆಗಳ ಸ್ಥಾನವನ್ನು ಅರಿಯುವಂತೆ ಉತ್ತೇಜನ ನೀಡಲು ಸಹಾಯವಾಯಿತು.

1995 ರಿಂದ ಬೆಂಗಳೂರು ಮೂಲದ ಸುವಿದ್ಯಾ ಎಂಬ ಲಾಭರಹಿತ ಶೈಕ್ಷಣಿಕ ಸಂಪನ್ಮೂಲ ಕೇಂದ್ರವು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಗಣಿತ ಬೋಧನಾ ಸಾಮಗ್ರಿಗಳನ್ನು ವಿನ್ಯಾಸಗೊಳಿಸುವಲ್ಲಿ ಭಾಗಿಯಾಗಿದೆ. ಕರ್ನಾಟಕದಾದ್ಯಂತ ಸ್ಥಾಪಿಸಿರುವ ಗಣಿತ ಪ್ರಯೋಗಾಲಯಗಳಲ್ಲಿ 'ಸುವಿದ್ಯಾ' ರೂಪಿಸಿದ ಕಲಿಕಾ ಸಹಾಯಕಗಳನ್ನು ಸರ್ಕಾರವು ಬಳಸುತ್ತಿದೆ. ಅಹಮದಾಬಾದ್ ನಲ್ಲಿರುವ TALEEM ಎಂಬ ಗುಂಪು ಏಕಲವ್ಯ ಶಿಕ್ಷಣ ಪ್ರತಿಷ್ಠಾನದಿಂದ ಸ್ಥಾಪಿಸಲ್ಪಟ್ಟು ಕಲಿಕಾ ಸಂಪನ್ಮೂಲಗಳನ್ನು ವಿನ್ಯಾಸಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ. ಅದು ಗಣಿತ ಸಂಪನ್ಮೂಲ ಸಾಮಗ್ರಿಯನ್ನು ರೂಪಿಸುವಲ್ಲಿ ಮತ್ತು ಆರ್ಥಿಕವಾಗಿ ಮಾರುಕಟ್ಟೆಯಲ್ಲಿಯೂ ಮುನ್ನಡೆದಿದೆ.

1995 ರಲ್ಲಿ ಬೆಂಗಳೂರಿನಲ್ಲಿರುವ 'ಸೂತ್ರಧಾರ್' ಎಂಬ ಲಾಭರಹಿತ ಶೈಕ್ಷಣಿಕ ಮಾಧ್ಯಮ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಿದರು. ವಿನ್ಯಾಸ ಮತ್ತು ಜನಪದ ಆಟಿಕೆಗಳು ಮತ್ತು ಬಿಡುಗಡೆಗೊಂಡ ಕಲಿಕಾ ಸಂಪನ್ಮೂಲಗಳಿಗೆ ಛತ್ರರೂಪಿ ಕೇಂದ್ರದ ಮತ್ತು ವ್ಯವಸ್ಥಿತ ಸಂಘಟನೆಗಳ ಕೊರತೆ ನೀಗಿಸುವ ಪ್ರತಿಕ್ರಿಯೆಯಾಗಿ ದೇಶದ ಎಲ್ಲೆಡೆ ಶೈಕ್ಷಣಿಕ ಗುಂಪುಗಳಿಂದ ರೂಪಿಸಲ್ಪಟ್ಟ ಕಲಿಕಾ ಸಂಪನ್ಮೂಲಗಳನ್ನು ಉತ್ತೇಜಿಸಲು, ಬೇರೆ ದೇಶಗಳಲ್ಲಿ ಶಿಕ್ಷಕ ಸಹಾಯಕ ಮಳಿಗೆಗಳಿರುವಂತೆಯೇ 'ಸೂತ್ರಧಾರ್' ಸಹಾ ಒಂದು ಶೈಕ್ಷಣಿಕ ಮಳಿಗೆಯನ್ನು ನಡೆಸುತ್ತಿದೆ. ಈ ಕಲಿಕಾ ಸಂಪನ್ಮೂಲಗಳು ವಿಶಿಷ್ಟವಾಗಿದ್ದು ಯಾವುದೇ ಆಟಿಕೆ ಅಥವಾ ಪುಸ್ತಕದ ಅಂಗಡಿಗಳಲ್ಲಿ ಮಾರಾಟವಾಗುವುದಿಲ್ಲ. ಶಾಲೆಗಳಿಗೆ ಮತ್ತು ಪೋಷಕರಿಗೆ ಅವುಗಳ ಬಳಕೆಯ ಮಾಹಿತಿ ದೊರೆತಂತೆ ಒಂದೇ ಛತ್ರದ ಅಡಿಯಲ್ಲಿ ಎಲ್ಲಾ ಸಾಮಗ್ರಿಗಳು ದೊರಕುತ್ತವೆ. 'ಸೂತ್ರಧಾರ್' ಶೈಕ್ಷಣಿಕ ಸಮುದಾಯಗಳು ಮತ್ತು ಕುಶಲಕರ್ಮಿಗಳ ಸಹಭಾಜಕತ್ವದಲ್ಲಿ ಕಲಿಕಾ ಸಂಪನ್ಮೂಲಗಳನ್ನು ಪರಿಷ್ಕರಿಸಿದೆ ಮತ್ತು ಮೌಲ್ಯಮಾಪನ ಮಾಡಿಸಿದೆ. ಅದು ಶೈಕ್ಷಣಿಕ ಆಟಿಕೆಗಳ ಖಾಲಿ ಕ್ಷೇತ್ರದಲ್ಲಿ ಇರುವ ಸ್ಥಳವನ್ನು ಭರ್ತಿಮಾಡುವ ಉದ್ದೇಶವನ್ನು ಹೊಂದಿದೆ. ಅದು ಸಾರ್ವಜನಿಕ ಪ್ರದರ್ಶನಗಳಲ್ಲಿ ಮತ್ತು ಅಂಗಡಿಗಳಲ್ಲಿ ಕಲಿಕಾ ಸಹಾಯಕಗಳ ಬಳಕೆಯನ್ನು ಶಿಕ್ಷಕರ ತರಬೇತಿಗಳ ಮೂಲಕ ವ್ಯಾಖ್ಯಾನಿಸಿ ಉತ್ತೇಜಿಸುತ್ತಿದೆ. ಅದು ಆರಂಭಿಕ ಕಲಿಕೆಯ ಕಿಟ್ ಮತ್ತು ವಿಶೇಷ ಅಗತ್ಯಗಳಲ್ಲಿ ಮಕ್ಕಳಗೆ ಆಟಿಕೆಗಳನ್ನು ಅಭಿವೃದ್ಧಿಪಡಿಸಲು ಕರ್ನಾಟಕದಲ್ಲಿ ಶಾಲಾಪೂರ್ವ ಹಂತಗಳಲ್ಲಿ ಸೇವೆ ಸಲ್ಲಿಸಿದೆ.

ಬರೋಡಾದಲ್ಲಿರುವ ಶಿಶು ಮಿಲಾಪ್ ಎಂಬ ಒಂದು ಲಾಭರಹಿತ ಶೈಕ್ಷಣಿಕ ಸಂಪನ್ಮೂಲ ಕೇಂದ್ರವು ಸಾರ್ವಜನಿಕ ವಸ್ತು ಪ್ರದರ್ಶನಗಳಲ್ಲಿ ಮತ್ತು ಅಂಗಡಿಯೊಂದರ ಮೂಲಕ ಕಡಿಮೆ ವೆಚ್ಚದ ಆಟಿಕೆಗಳನ್ನು ಮತ್ತು ಕಲಿಕಾ ಸಹಾಯಕಗಳನ್ನು ಸಾರ್ವಜನಿಕರ ಬಳಕೆಗೆ ಉತ್ತೇಜಿಸುತ್ತಿದೆ. ತೊಂಬತ್ತರ ದಶಕದ ಹಿಂದೆಯೇ ಮುಂಬಯಿಯ ಕಾಮೆಟ್ ಮೀಡಿಯಾ ಫೌಂಡೇಷನ್, ನವನಿರ್ಮಿತಿ, ಮುಂಬೈ ಮತ್ತು ನವದೆಹಲಿಯ ಜೊಡೊಗ್ಯಾನ್ ಮುಂತಾದವುಗಳು ವಸ್ತುಪ್ರದರ್ಶನಗಳ ಮೂಲಕ ಶೈಕ್ಷಣಿಕ ಆಟಿಕೆಗಳನ್ನು ಉತ್ತೇಜಿಸಲು ಕಾರ್ಯೋನ್ಮುಖವಾಗಿವೆ.

Digitised by Bharatavani, CIIL

**ಸಮುದಾಯ ನಿರ್ಮಿತ ಆಟಿಕೆಗಳು:** ಪಟ್ಟಣಗಳಲ್ಲಿ ಮತ್ತು ಸಣ್ಣ ಊರುಗಳಲ್ಲಿ ಕಡಿಮೆ ಬೆಲೆಯ ಪ್ಲಾಸ್ಟಿಕ್ ಮತು ಲೋಹದ ಆಟಿಕೆಗಳನ್ನು ರಸ್ತೆಯ ಪಕ್ಕದ ಕಾಲುದಾರಿಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ, ಸಣ್ಣ ಅಂಗಡಿಗಳಲ್ಲಿ ಮತ್ತು ಚಿಲ್ಲರೆ ವ್ಯಾಪಾರದ ತಿರುಗುವ ವ್ಯಾಪಾರಿಗಳು ಮಾರುತ್ತಿದ್ದಾರೆ. ಗೊಂಬೆಗಳು, ಪ್ರಾಣಿಗಳು, ಕಾರುಗಳು, ಮುಖವಾಡಗಳು ಮತ್ತು ಅಡಿಗೆ ಸೆಟ್‌ಗಳು ಮುಂತಾದ ಅನೇಕ ಬಗೆಯ ಆಟಿಕೆಗಳಲ್ಲಿ ಮಕ್ಕಳು ಕಲ್ಪನಾತ್ಮಕವಾಗಿ ಆಟವಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಆಟಿಕೆಗಳನ್ನು ತೈವಾನ್ ಮತ್ತು ಚೀನಾ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದು ಕೆಲವು ನಗರಗಳಲ್ಲಿ ದೊರೆಯುತ್ತಿವೆ. ಈ ಮೇಲಿನ ಹಲವು ಆಟಿಕೆಗಳನ್ನು ಭಾರತದ ಮಧ್ಯಮ ಗಾತ್ರದ ತಯಾರಿಕಾದಾರರು ಅಭಿವೃದ್ಧಿ ಪಡಿಸಿ ತಯಾರಿಸುತ್ತಿದ್ದಾರೆ.

ಅತಿ ಕಡಿಮೆ ಬೆಲೆಯ ಆಟಿಕೆಗಳಷ್ಟೇ ಅಲ್ಲದೆ ಪ್ರಸಿದ್ಧಿಯ ಮುದ್ರೆ ಇರುವ (Branded) ಮತ್ತು ಆಮದಾದ ಆಟಿಕೆಗಳು ದೊಡ್ಡ ರಾಜಧಾನಿಯಂತಹ ಪಟ್ಟಣಗಳಲ್ಲಿ ದೊರಕುತ್ತಿದ್ದು ಅವುಗಳಲ್ಲಿ ಬಾರ್ಬಿ ಮತ್ತು ಆಕ್ಷನ್ ಹೀರೋಗಳಾದ ಹಿ–ಮಾನ್‌ನಂತಹ ಬೊಂಬೆಗಳೂ ಇವೆ. ಇಂತಹ ಹಲವು ಬೊಂಬೆಗಳಲ್ಲಿ ಏಕಪ್ರಕಾರದ ಪಡಿಯಚ್ಚಾದ ಹೆಣ್ಣು ಅಥವಾ ಗಂಡು ಬೊಂಬೆಗಳು ಕೋಪದಿಂದ ಆಕ್ರಮಣ ಮಾಡುವ ಮತ್ತು ಹಿಂಸೆಯ ಭಾವ ಹೊಂದಿರುತ್ತವೆ. ಅವುಗಳೆಂದರೆ ಕಾರು, ಸೆಲ್ ಫೋನ್, ವಾಷಿಂಗ್ ಮೆಷಿನ್, ಅಂದವಾದ ರೇಷ್ಮೆ ದಾರದ ಅಥವಾ ಹೊಂಬಣ್ಣದ ಕೂದಲು, ಅಂದವಾದ ಚರ್ಮದಿಂದ ಇಂದಿನ ಸ್ಥಾನಮಾನದ ಪ್ರತೀಕಗಳನ್ನು ಬಿಂಬಿಸುತ್ತವೆ.

ಈ ಬೊಂಬೆಗಳು ಮಾಧ್ಯಮಗಳ ಮೂಲಕ ವ್ಯಾಪಕವಾದ ಜಾಹಿರಾತನ್ನು ಪಡೆದಿರುತ್ತವೆ ಮತ್ತು ಪ್ರಪಂಚದಾದ್ಯಂತ ಅನುಕೂಲವಾದ ಆಟದ ವಸ್ತುವಾಗಿ ಮತ್ತು ಒಂದೇ ಉತ್ಪತ್ತಿ ಸ್ಥಾನವುಳ್ಳ ಸಂಸ್ಕೃತಿಯನ್ನು ಪರಿಣಾಮಕಾರಿಯಾಗಿ ಬೀರುತ್ತವೆ. ಗೊಂಬೆಗಳು ಅಗಾಗ್ಗೆ ಸೆಟ್‌ಗಳಲ್ಲಿ ಮತ್ತು ಅನೇಕ ಅಳವಡಿಕೆಗಳನ್ನು ಹೊಂದಿ ಮಾರಲ್ಪಡುತ್ತವೆ. ಉದಾಃ ಒಂದು ಬೊಂಬೆಯ ಜೊತೆಗೆ ಶಾಪಿಂಗ್ ಸೆಟ್ ಅಥವಾ ವೇಶಭೂಷಣದ ಸೆಟ್ ಇತ್ಯಾದಿ. ಈ ಸೆಟ್‌ಗಳು ಹೆಚ್ಚು ಸ್ಫುಟವಾಗಿರುವುದಕ್ಕಿಂತ ಕಡಿಮೆ ಲಕ್ಷಣ ಹೊಂದಿದ್ದರೆ ಕಲ್ಪನೆಗೆ ಅಭ್ಯಾಸ ನೀಡಿದಂತಾಗಿ, ವಿವಿಧ ಕಥೆಗಳನ್ನು ಹೆಣೆಯುವ ಮತ್ತು ತನ್ಮೂಲಕ ವಿವಿಧ ಬಗೆ ಚಿಂತನೆಗಳಿಗೆ ಆಸ್ಪದ ನೀಡಬಹುದು ಎಂದು ಶಿಕ್ಷಕರು ಸಲಹೆ ನೀಡಿದ್ದಾರೆ.

ಇಂತಹ ಹಲವು ಬೊಂಬೆಗಳ ವಿಡಿಯೋ ಗೇಮ್ಸ್ ಮುಂತಾದವು ದೂರದರ್ಶನಗಳಲ್ಲಿ ಪ್ರಸಿದ್ಧ ಧಾರಾವಾಹಿ ಗಳಾಗಿ ಬರುವಂತಹ ಸ್ಟಾರ್ ವಾರ್ಸ್ ಯುದ್ಧ ಸಂಗತಿಗಳನ್ನು ಪ್ರತಿಬಿಂಬಿಸುತ್ತವೆ. ಮತ್ತು ಮಕ್ಕಳ ಪ್ರತಿಕ್ರಿಯೆಯ ವೇಗವನ್ನು ಅಂಕೆಯಲ್ಲಿಡುವ ಮಾದರಿಯಲ್ಲಿ ಅವರ ಚಿಂತನೆಗಳಿಗೆ ಸವಾಲಾಗಿರುತ್ತವೆ. ಬೊಂಬೆಗಳು ಮನರಂಜನೆಯ ಕೈಗಾರಿಕೆಯ ಬಹುದೊಡ್ಡ ಭಾಗವಾಗಿ, ಕ್ಯಾಸೆಟ್‌ಗಳ, ಟಿ.ವಿ ಷೋಗಳ ಮೂಲಕ ಉತ್ತೇಜನ ಪಡೆಯುತ್ತಿವೆ ಮತ್ತು ನಾನಾ ವಿಧವಾದ ವಿಂಗಡಣೆಯುಳ್ಳ, ನೆನಪಿನಲ್ಲಿಡಬೇಕಾದ ವಸ್ತು, ವಿಷಯಗಳನ್ನು ಎಂದರೆ ಬ್ಯಾಗ್ಸ್, ಲಂಚ್ ಬಾಕ್ಸಸ್, ವಾಟರ್ ಬಾಟಲ್ಸ್, ಸ್ಟಿಕರ್ಸ್ ಮತ್ತು ಸಾಕ್ಸ್‌ಗಳನ್ನು ಜೊತೆ ಜೊತೆಗೆ ಜನಪ್ರಿಯಗೊಳಿಸುತ್ತಿವೆ. ಮಕ್ಕಳನ್ನೇ ಗುರಿಯಾಗಿಸಿ ಕೊಂಡ ಸಾಮಾಜಿಕ ಅಂತಸ್ತಿನ ಒತ್ತಡದಿಂದ ಅವುಗಳು ಭಾರತದ ರಾಜಧಾನಿಗಳಂತಹ ದೊಡ್ಡ ಪಟ್ಟಣಗಳಲ್ಲಿ ಸುಲಭ ಸಾಧ್ಯವಾದ ಜನಪ್ರಿಯತೆ ಪಡೆಯುತ್ತಿವೆ.

**ಸ್ವದೇಶಿ ಆಟಿಕೆಗಳು:** ಅತ್ಯಂತ ಪ್ರಾಚೀನವಾದ ಆಟಿಕೆಗಳೆಂದರೆ ಟೆರ್ರಾಕೋಟಾ ಕುದುರೆ, ಹತ್ತುತ್ತಿರವ ಕೋತಿ ಮತ್ತು ಚಕ್ರಗಳಿರುವ ಕುರಿ ಅಥವಾ ಟಗರು (Ram-on-wheels) ಮುಂತಾದವುಗಳನ್ನು ಹಿಂದೂ ಕಣಿವೆಯ ನಿವೇಶಲಗಳಲ್ಲಿ ಉತ್ಖನನ ಮಾಡಲಾಗಿದೆ. ಈ ಬಗೆಯ ಹಲವು ಆಟಿಕೆಗಳು ಬಾಳಿಕೆಯಲ್ಲಿರುವಂಥವು. ಭಾರತದಲ್ಲಿ ಇಂದು ಎರಡು ಭಿನ್ನ ಬಗೆಯ ಸ್ವದೇಶಿ ಆಟಿಕೆಗಳನ್ನು ನೋಡಬಹುದು.

ಹಲವು ಜನಪದ ಆಟಿಕೆಗಳನ್ನು ಜೈವಿಕ ಸಾಮಗ್ರಿಗಳಿಂದ ಮಾಡಲ್ಪಟ್ಟು ನಗರ ತ್ಯಾಜ್ಯಗಳನ್ನು ಹಬ್ಬ, ಉತ್ಸವಗಳ ಚಟುವಟಿಕೆಳಲ್ಲಿಯೂ ಮತ್ತು ನಯ ನಾಜೂಕಿಲ್ಲದೆ ರೂಕ್ಷ ಗುಣಮಟ್ಟದಿಂದ ಕೂಡಿರುತ್ತವೆ. ಅಂತಹ ಆಟಿಕೆಗಳ ನಿರ್ಮಾಣವನ್ನು ಆದಾಯದ ಪರ್ಯಾಯ ಮೂಲವಾಗಿ ಸಾಂಪ್ರದಾಯಿಕ ಆಟಿಕಾ ತಯಾರಿಕೆದಾರರಲ್ಲದವರು ಅಥವಾ ಕರಕುಶಲಗಾರರು ಕೈಗೊಳ್ಳುತ್ತಾರೆ. ಅವುಗಳು ಹೆಚ್ಚು ನಯ ನಾಜೂಕಿನ ಆಟಿಕೆಗಳಾಗಿದ್ದು, ವೃತ್ತಿನಿರತ ಕರ ಕುಶಲಗಾರರಿಂದ ನಿರ್ಮಿತವಾಗಿರುತ್ತವೆ. ಬಣ್ಣ ಹಚ್ಚಿದ ಮರದ ಸಾಮಾನುಗಳು ಅಥವಾ ಬೆಂಡು ಅಥವಾ ಸ್ಪಂಜಿನಿಂದ ರೂಪಿಸಿದ ಆಟಿಕೆಗಳನ್ನು ಭಿನ್ನ ರೀತಿಯ ಶೃಂಗಾರಮಯ ಸಂಪ್ರದಾಯದ ಮತ್ತು ಮಾಧ್ಯಮದ ಆಟಿಕೆಗಳನ್ನು ನಿರ್ಮಿಸುತ್ತಾರೆ. ಅವರಿಗೆ ಆ ಸಂಪ್ರದಾಯದ ಆಟಿಕೆಗಳು ವಾಡಿಕೆಯಾಗಿ ಕಲಿತಿರುವ ಕರಕುಶಲ ವಸ್ತುಗಳ ಭಾಗವಾಗಿರುತ್ತದೆ.

ಜನಪದ ಆಟಿಕೆಗಳು ಐತಿಹ್ಯಗಳಾಗಿ ಮತ್ತು ಜನಪದವಾಗಿ ನಮಗೆ ಅವುಗಳ ಸಾಂಸ್ಕೃತಿಕ, ಸಾಮಾಜಿಕ ಮತ್ತು ಭಾಷಿಕ ಅನುಕರಣದಿಂದ ಅರ್ಥ ನೀಡುತ್ತವೆ. ತಾಯಿ–ಮಗು, ದೇವತೆ ಅಥವಾ ಕುದುರೆ ಅಥವಾ ಸವಾರ ಮುಂತಾದ ಹಲವು ಆಟಿಕೆಗಳು ಹಬ್ಬ ಆಚರಣೆ ಪ್ರಾಮುಖ್ಯವನ್ನು ಹೊಂದಿದ್ದು ಭಾರತದ ಎಲ್ಲೆಡೆ ಕಾಣಸಿಗುತ್ತವೆ. ಸಂಕ್ರಾಂತಿ, ದಸರಾ, ಗಣೇಶ ಚತುರ್ಥಿ ಅಥವಾ ದೀಪಾವಳಿಯಂತಹ ಹಬ್ಬಗಳು ತಮ್ಮದೇ ಆದ ಕಥೆಗಳು, ಆಚರಣೆಗಳು, ಆಹಾರಗಳು ಮತ್ತು ಆಟಿಕೆಗಳನ್ನು ಜೊತೆಗೂಡಿಸಿಕೊಂಡಿರುತ್ತವೆ. ಈ ಎಲ್ಲಾ ಹಬ್ಬಾಚರಣೆಗಳ ಸಂದರ್ಭಗಳಲ್ಲಿ ಸಣ್ಣ ಉತ್ಸವ, ಜಾತ್ರೆ ನಡೆದು ಮಾರುಕಟ್ಟೆ ಸಜೀವಗೊಳ್ಳುತ್ತದೆ.

ಕೈಯಲ್ಲಿ ಮಾಡಿದ ವಸ್ತುಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಿತವಾದ ಆಟಿಕೆಗಳಷ್ಟೇ ಅಲ್ಲದೆ ಪ್ರತಿ ಜನಪದ ಆಟಿಕೆಗೂ ಅದರದೇ ಆದ ಗುರುತು, ವೇಷ, ಶೃಂಗಾರ ಮತ್ತು ಅಭಿವ್ಯಕ್ತಿಯಿರುತ್ತದೆ. ಎರಡು ಆಟಿಕೆಗಳು ಒಂದರಂತೆ ಇನ್ನೊಂದು ಇರುವುದಿಲ್ಲ. ಮತ್ತು ಒಂದು

Digitised by Bharatavani, CIIL

ಮಗುವು ಒಂದು ಆಟಿಕೆಯನ್ನು ಅದರ ಭಾವಾಭಿವ್ಯಕ್ತಿ ನೋಡಿಯೇ ಆರಿಸಿಕೊಳ್ಳುತ್ತದೆ. ನಿರ್ದಿಷ್ಟ ಉಡುಪು ಮತ್ತು ಅಲಂಕಾರಗಳನ್ನು ನೋಡಿ ಆಟಿಕೆ ನಿರ್ಮಾಣಕಾರರಿಂದ ಕೊಳ್ಳಲು ತೊಡಗುತ್ತಾರೆ. ಇದು ವೈವಿಧ್ಯದ ಗುಣವುಳ್ಳ ಸಂಬಂಧವನ್ನು ಮತ್ತು ಆಟಿಕೆಯ ಬಗ್ಗೆ ಮಗುವಿಗೆ ಉಂಟಾಗುವ ಒಡನಾಟದ ಸೊಗಸನ್ನು ಹೆಚ್ಚಿಸುತ್ತದೆ.

ವಿವಿಧ ಬಣ್ಣಗಳ ಮತ್ತು ವಿನೋದದಿಂದ ಕೂಡಿದ ನಲಿವಿನ ಸೊಗಸಾದ ಉಡುಪಿನಿಂದ ಅಲಂಕೃತವಾದ ಆಟಿಕೆಗಳಲ್ಲಿ– ಹಾವನ್ನು ಎಳೆಯುವುದು, ಪೇಪರ್ ಪಿನ್ ವೀಲ್ಸ್, ಮಣ್ಣಿನ ಗಾಡಿಗಳು ಅಥವಾ ಕೊಕ್ಕುಳ್ಳ ಪಕ್ಷಿಗಳು– ಬರಿಯ ರಚನೆಯ ಸಂಪತ್ತು ಜನಪದ ಆಟಿಕೆಯನ್ನು ಒಂದು ಕಲಿಕಾ ಮೌಲ್ಯದ ಶ್ರೀಮಂತ ಭಂಡಾರವಾಗಿಸುತ್ತವೆ.

ಜನಪದ ಆಟಿಕೆಗಳ ಬಾಳಿಕೆ ಅಲ್ಪಾವಧಿಯದು ಮತು ಕಡಿಮೆ ವೆಚ್ಚದ್ದಾಗಿ ಅವುಗಳ ಕಾರ್ಯ ರೀತಿಯಲ್ಲಿ ಪಾರದರ್ಶಕತೆಯಿರುತ್ತದೆ. ಅವುಗಳು ನೇಯ್ಗೆಯ ವೈವಿಧ್ಯಪೂರ್ಣ ವಿನ್ಯಾಸಗಳಿಂದ ಮತ್ತು ವಸ್ತ್ರಗಳಿಂದ ಕಲಾತ್ಮಕವಾಗಿ ಆಗಿರುತ್ತವೆ. ಅನೇಕ ಆಟಿಕೆಗಳು ಸಹಜವಾಗಿ ಲಭ್ಯವಿರುವ ಸಾಮಗ್ರಿಗಳಾದ ಜೇಡಿ ಮಣ್ಣು, ಮರ, ಕಾಗದ, ಬಟ್ಟೆ, ಬೆಂಡು, ನಾರು, ಬೊಂಬು ಮತ್ತು ಹುಲ್ಲು ಮುಂತಾದವುಗಳಿಂದ ಮಾಡಲಾಗಿರುತ್ತವೆ. ಅವು ನಿಜವಾಗಿಯೂ ಜನಪದದೇ. ಕೈಗೆ ಸಿಗುವ ಸಾಮಗ್ರಗಳನ್ನು ಉಪಯೋಗಿಸಿಕೊಂಡಿರುತ್ತವೆ. ಅವುಗಳೆಂದರೆ ಲೋಹದ ತ್ಯಾಜ್ಯ, ನಾರು ಸೇರಿದಂತೆ ಬಾಟಲಿಯ ಮುಚ್ಚಳಗಳು, ಟಿನ್ ಕ್ಯಾನ್‌ಗಳು, ರೀಫಿಲ್ಸ್‌ಗಳು, ಸ್ಪ್ರಿಂಗ್ ಇತ್ಯಾದಿ. ಅವುಗಳ ತಯಾರಿಕೆಯ ಯಂತ್ರಗಾರಿಕೆ ಹಲವು ಸಾಮಗ್ರಿಗಳೊಡನೆ ದೇಶಿಯಾಗಿಯೇ ಜೊತೆ ಜೊತೆಗೆ ಬೆಸೆದುಕೊಂಡಿದೆ.

ಒಂದು ಆಟಿಕೆಯೊಡನೆ ಮಕ್ಕಳು ಆಟವಾಡುತ್ತಿದ್ದಂತೆಯೇ ಅದು ಹೇಗೆ ಗಿರ್ರನೆ ತಿರುಗುತ್ತದೆ, ಶಬ್ದ ಮಾಡುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಾ ಅದಕ್ಕೆ ಅರಿವಿಲ್ಲದೆಯೇ ಅದರ ವಿವಿಧ ಸಾಮಗ್ರಿಗಳನ್ನು, ಗುಣ ಲಕ್ಷಣಗಳನ್ನು, ವೈಜ್ಞಾನಿಕ ತತ್ವಗಳಾದ ಚಲನೆ, ಶಕ್ತಿ, ಗುರುತ್ವಾಕರ್ಷಣೆ, ಶಬ್ದ ಇತ್ಯಾದಿಗಳನ್ನೂ ಕಲಿಯುತ್ತವೆ. ವಿಜ್ಞಾನದ ವಿಷಯವಲ್ಲದೆ ಜನಪದ ಆಟಿಕೆಗಳು ಮಕ್ಕಳನ್ನು ಅವುಗಳಲ್ಲಿನ ವಿನೋದ ಅಥವಾ ಆಶ್ಚರ್ಯಗಳ ರೀತಿಗಳಿಂದ ಜಾದೂ ರೀತಿಯಲ್ಲಿ ಸೆಳೆಯುತ್ತವೆ. ಆಧುನಿಕ ಬಳಕೆ ಮಾತಿನಲ್ಲಿ ಈ ಆಟಿಕೆಗಳು ಪರಿಸರ ಸ್ನೇಹಿ, ಸ್ವಸ್ಥ, ರಾಜಕೀಯವಾಗಿ ಯಥಾರ್ಥ ಅಥವಾ ವಿಶುದ್ಧ.

ಮೂವತ್ತು ವರ್ಷಗಳ ಹಿಂದೆಯೇ ಸುದರ್ಶನ್ ಖನ್ನಾ ಎಂಬ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್‌ನ ವಿಭಾಗದ ಸದಸ್ಯ ಜನಪದ ಆಟಿಕೆಗಳನ್ನು ದಾಖಲೀಕರಿಸಿದ್ದಾರೆ. ಅವರು ಜನಪದ ಆಟಿಕೆಗಳನ್ನು ಚಲನಾತ್ಮಕ ಮತ್ತು ನಿಶ್ಚಲ ಎಂದು ಎರಡು ವಿಧವಾಗಿ ವಿಂಗಡಿಸಿದ್ದಾರೆ. ಚಲನಾತ್ಮಕ ಆಟಿಕೆಗಳೆಂದರೆ ಚಲಿಸುವಂಥವು ಅಥವಾ ಕ್ರಿಯೆ ಪ್ರಕ್ರಿಯೆಗಳಿಗೆ ಸ್ಪಂದಿಸುವಂಥವಾಗಿ ಮಕ್ಕಳಿಗೆ ಒದಗಿಸಿದಾಗ ಅವುಗಳ ಪುನರಾವರ್ತನೆಯ ಕ್ರಿಯೆಯಿಂದ ಸಂತೋಷ ಗೊಳ್ಳುತ್ತವೆ. ಇವು ಪೇಪರ್ ಪಿನ್ ವೀಲ್ಸ್, ಜಂಪಿಂಗ್ ಜಾಕ್ಸ್ ಮತ್ತು ಮಣ್ಣಿನ ಗಾಡಿಗಳು. ಜನಪದ ವಾದ್ಯಗಳು ಮಾಡುವ ಶಬ್ದಗಳಿಗೆ ಮಕ್ಕಳು ಸಂತೋಷ ಪಡುತ್ತಾರೆ. ಅವುಗಳೆಂದರೆ ಏಕತಾರ, ಗಿರಿಕೆಗಳು, ತಾಳಗಳು, ಡಮರು, ಢಪಲಿ, ಕಬಾಶ್, ಗೆಜ್ಜೆಗಳು ಮತ್ತು ಗಂಟೆಗಳು.

ಜಡ ಅಥವಾ ನಿಶ್ಚಲ ಆಟಿಕೆಗಳು ಸಣ್ಣ ಪ್ರತಿರೂಪದಲ್ಲಿರುತ್ತವೆ. ಅವುಗಳ ಉಡುಪು, ಉದ್ಯೋಗಗಳು, ಆಹಾರ, ಜೀವನ ಶೈಲಿಗಳು ಅವು ನಿರ್ಮಿತಗೊಂಡ ಸ್ಥಳಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತವೆ. ಈ ಆಟಿಕೆಗಳಲ್ಲಿ ಪ್ರಾಣಿಗಳು ಮತ್ತು ಹಕ್ಕಿಗಳು ಗ್ರಾಮ ದೃಶ್ಯದ ಉಬ್ಬು ಕೆತ್ತನೆ, ವಿವಿಧ ಉದ್ಯೋಗಗಳಲ್ಲಿರುವ ಜನರು, ಯೋಧರು, ಹೆಂಡ ಕಟ್ಟುವವರು, ವಾದ್ಯಗಾರರು, ಮೀನು ಹಿಡಿಯುವವರು, ರೈತರು, ಸಂಗೀತಗಾರರು, ಬೊಂಬೆಗಳು, ಮುಖವಾಡಗಳು ಮತ್ತು ಸೂತ್ರದ ಬೊಂಬೆಗಳು, ಆಟದ ಹಣ್ಣುಗಳು ಮತ್ತು ತರಕಾರಿಗಳು, ಆಟದ ಪೀಠೋಪಕರಣಗಳು, ಮೀನು ಹಿಡಿಯುವ ಸಲಕರಣೆಗಳು, ಅಡಿಗೆ ಸೆಟ್‌ಗಳು, ದೇವರುಗಳು ಮತ್ತು ದೇವತೆಯರು ಸೇರಿವೆ. ಹಲವು ನಿಶ್ಚಲ ಆಟಿಕೆಗಳಲ್ಲಿ ಕರಕುಶಲ ಆಟಿಕೆಗಳಾದ ವಾರಣಾಸಿಯ ಪುಟ್ಟ ಸಂಗೀತಗಾರರು, ಗೋಕಾಕ್‌ದ ಮರದ ಹಣ್ಣುಗಳು, ಕೊಂಡಪಲ್ಲಿಯ ಪ್ರಾಣಿಗಳು ಮತ್ತು ಜನರು, ಗುಜರಾತಿನ ಹಬ್ಬಗಳ ಸ್ಟಫ್ಡ್ ಪ್ರಾಣಿಗಳು, ಮಥುರೈನ ಅಡಿಗೆ ಸೆಟ್‌ಗಳು ಇತ್ಯಾದಿಗಳನ್ನು ಗಮನಿಸಬಹುದು.

ಮರದ ಆಟಿಕೆಗಳನ್ನು ಭಾರತದಾದ್ಯಂತ ವ್ಯವಸ್ಥಿತವಾಗಿ ಗೃಹ ಕೈಗಾರಿಕೆಗಳು ಸಿದ್ಧಪಡಿಸುತ್ತಿವೆ. ಉದಾ: ಕರ್ನಾಟಕದ ಚೆನ್ನಪಟ್ಟಣದಲ್ಲಿ ಉಳಿಯಿಂದ ಮಾಟಲ್ಪಟ್ಟ ಮರದ ಆಟಿಕೆಗಳು, ಮಹಾರಾಷ್ಟ್ರದ ಸಾವಂತವಾಡಿ ಅಥವಾ ಆಂಧ್ರಪ್ರದೇಶದ ಇಟ್ಟಿಕೊಪ್ಪಕದಲ್ಲಿ ಹಲವು ದಶಕಗಳಿಂದಲೂ ತಯಾರಾಗುತ್ತಿರುವ ಅರಗಿನ ಮೆರಗು ನೀಡಿದ ಈ ಮರದ ಆಟಿಕೆಗಳೆಂದರೆ ಬುಗುರಿಗಳು, ಮಣಿಗಳು, ಪುಶ್ ಪುಲ್ ಆಟಿಕೆಗಳು, ಸ್ಕಿಪ್ಪಿಂಗ್ ಹಗ್ಗಗಳು, ಅಡುಗೆ ಸಾಮಾನುಗಳ ಸೆಟ್‌ಗಳು ಮತ್ತು ರಟ ರಟ ಸದ್ದುಮಾಡುವ ಗಿಲಿಕೆಗಳು– ಗ್ರಾಮೀಣ, ನಗರ ಪ್ರದೇಶ ಮತ್ತು ರಫ್ತು ಮಾರುಕಟ್ಟೆಯ ಬೇಡಿಕೆಗಳನ್ನು ಈಡೇರಿಸುತ್ತಿವೆ. ಅವುಗಳ ಗಾತ್ರ ಮತ್ತು ಗುಣಮಟ್ಟದಲ್ಲಿ ಹಾಗೆಯೇ ವ್ಯತ್ಯಾಸಗಳೂ ಇರುತ್ತವೆ.

ಈ ಮರದ ಆಟಿಕೆಗಳ ಉತ್ಪಾದನೆಯು ಅನೇಕ ಸಮಸ್ಯೆಗಳೊಂದಿಗೆ ಹೆಣೆದುಕೊಂಡಿದೆ. ಇದಕ್ಕೆ ಸಂಬಂಧಿಸಿದವರೆಲ್ಲರ ನಡುವೆ ಇರುವ ಅರಿವಿನ ಅಂತರವೇ ಕಾರಣವಾಗಿದೆ. ಆಟಿಕೆ ತಯಾರಕರು ಮರ, ವಿದ್ಯುಚ್ಛಕ್ತಿ ಮತ್ತು ಬಂಡವಾಳಕ್ಕಾಗಿ ಸಾಲ ಪಡೆಯುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗ್ರಾಹಕರು ಈ ಆಟಿಕೆಗಳ ಗುಣ ಮಟ್ಟದಲ್ಲಿ ಇಳಿಕೆ, ಸುರಕ್ಷೆ ಇಲ್ಲದ ಬಣ್ಣಗಳು, ನಿಸ್ತೇಜತೆ ಮೊಳೆಗಳು, ಮರದ ರೂಕ್ಷತೆ, ನವೀನತೆಯ ಅಭಾವ ಇತ್ಯಾದಿಗಳಿಂದ ಅಸಂತುಷ್ಟರಾಗಿದ್ದಾರೆ. ಮೌಲ್ಯ ಪ್ರಜ್ಞೆಯ ಸ್ವತಂತ್ರ ಮಾರುಕಟ್ಟೆಯಲ್ಲಿ ಆಧುನಿಕತೆಯ ಸಾಮಾಜಿಕ ಪ್ರತಿಷ್ಠೆ ಪಡೆದಿರುವ ಪ್ಲಾಸ್ಟಿಕ್ ಆಟಿಕೆಗಳಿಗೆ ಆಕರ್ಷಿತರಾಗುವ ಗ್ರಾಹಕರು ಇಂತಹ ಮರದ ಆಟಿಕೆಗಳಿಗೆ ಹೆಚ್ಚು ಬೆಲೆ ತೆರಲು ಇಷ್ಟಪಡುವುದಿಲ್ಲ.

Digitised by Bharatavani, CIIL

ಇಟ್ಟಿಕೊಪ್ಪಕದ 200 ಹಳೆಯ ಕುಟುಂಬಗಳಲ್ಲಿ 30 ಕುಟುಂಬಗಳು ಮಾತ್ರ ಸಸ್ಯದ ಬಣ್ಣಗಳನ್ನು ಉಪಯೋಗಿಸಲಾರಂಭಿಸಿದರೆ, ಉಳಿದವರು ಅರಗುಪೂರಿತ ಆಟಿಕೆಗಳನ್ನು ಮಾಡುತ್ತಿರುವುದು ಪೂರ್ಣವಾಗಿ ಕ್ಷೇಮವಲ್ಲವೆಂಬ ಕಾರಣಕ್ಕೆ ಇವುಗಳನ್ನು ದೃಢೀಕರಿಸಿರುವುದಿಲ್ಲ. ಪೋಷಕರು ಶಾಲೆಗಳ ವಾತಾವರಣದಲ್ಲಿ ಹೆಚ್ಚುತ್ತಿರುವ ಜಾಗೃತಿಯ ಪರಿಣಾಮ ಇಂತಹ ಮರದ ಆಟಿಕೆಗಳನ್ನು ಉತ್ತೇಜಿಸುವಲ್ಲಿ ಅಡೆತಡೆಗಳುಂಟಾಗಿದೆ.

ಸ್ವದೇಶಿ ಆಟಿಕೆಗಳ ದುರ್ಬಲ ಮತ್ತು ಅವ್ಯವಸ್ಥಿತ ಮಾರುಕಟ್ಟೆಯು ಸಹಾ ಅವುಗಳ ಬೇಡಿಕೆಯು ಇಳಿಮುಖವಾಗಲು ಕಾರಣವಾಗಿವೆ. ಸಾಂಪ್ರದಾಯಿಕವಾಗಿ ಜನಪದ ಆಟಿಕೆಗಳು ಹಬ್ಬ ಅಥವಾ ಜಾತ್ರೆಯಲ್ಲಿ ರಸ್ತೆಗಳಲ್ಲಿ ಮಾರಲ್ಪಡುತ್ತಿವೆ. ಜಾತ್ರೆಗಳು ಸಹಾ ಕಡಿಮೆಯಾಗುತ್ತಿದ್ದು ಕರಕುಶಲ ಕರ್ಮಿಗಳು ಆಟಿಕಾ ಕೈಗಾರಿಕೆ ಉತ್ಪಾದನಾಕಾರರಂತೆ ಮಾರುಕಟ್ಟೆ, ಜಾಹಿರಾತುಗಳಿಗೆ ವೆಚ್ಚ ಮಾಡಲು ಕಷ್ಟಸಾಧ್ಯ. ಕೇವಲ ಕೆಲವೇ ಹಬ್ಬಗಳು ಮತ್ತು ಜಾತ್ರೆಗಳು ಉಳಿದಿದ್ದು ವಾರ್ಷಿಕವಾಗಿ ಅಹಮದಾಬಾದಿನ ಗಾಳಿಪಟ ಹಾರಿಸುವ ಹಬ್ಬ ಅಥವಾ ದಸರಾ ಆಚರಣೆ ಗಳಲ್ಲಿ ಆಟಿಕೆಗಳ ಸಂಗ್ರಹವು ವರ್ಷಕ್ಕೊಮ್ಮೆ ಪ್ರದರ್ಶಿತವಾಗಿ ವಂಶ ಪಾರಂಪರ್ಯವಾಗಿ ಬಂದ ಚರ ಸ್ವತ್ತಿನಂತೆ ಮಕ್ಕಳ ಆಟಿಕೆಗಳು ಉಳಿದಿವೆ.

1990 ರಲ್ಲಿ ಕ್ರಾಫ್ಟ್ ಕೌನ್ಸಿಲ್ ಆಫ್ ಇಂಡಿಯಾ ಸಂಸ್ಥೆಯು ದೇಶದೊಳಗೆ ಮತ್ತು ವಿದೇಶಗಳಲ್ಲಿ ವಸ್ತು ಪ್ರದರ್ಶನ ಗಳನ್ನು ಏರ್ಪಡಿಸಿ ಜನಪದ ಆಟಿಕೆಗಳ ಬಗ್ಗೆ ಜಾಗೃತಿಯನ್ನುಂಟು ಮಾಡಿತ್ತು. ಈ ಆಟಿಕೆಗಳನ್ನು ಮೆಚ್ಚಿಕೊಳ್ಳದಿದ್ದರೆ ಆಟಿಕೆಗಳ ತಯಾರಿಕೆಯಿಂದ ಜೀವನವನ್ನು ನಿರ್ವಹಿಸುವುದು ಆಟಿಕಾ ತಯಾರಕರಿಗೆ ಸಾಧ್ಯವಾಗುವುದಿಲ್ಲ. ಮಕ್ಕಳ ಆಟಿಕೆಗಳಿಗೆ ಒಂದು ಸಾಂಸ್ಕೃತಿಕ ಮೆರುಗು ನೀಡಿ ಬಲಪಡಿಸಬೇಕಾದ ಅಗತ್ಯದಿಂದ ಕ್ರಾಫ್ಟ್ ಕೌನ್ಸಿಲ್‌ನವರು ಪಾರಂಪರಿಕ ಕಲೆಗಳ ನವೀನತೆಯನ್ನು ಕಂಡುಹಿಡಿದಿದ್ದಾರೆ. ಅವುಗಳೆಂದರೆ ಮಧುಬನಿ ಪೇಯಿಂಟಿಂಗ್, ಹೊಸತಾದ ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸುವುದು, ಪಜಲ್ಸ್‌ಗಳು ಮತ್ತು ವರ್ಣಮಾಲೆ ಚಿತ್ರಪಟಗಳು. ಬೆಂಗಳೂರು ಮೂಲದ ಶಿಕ್ಷಕರಾದ ಸ್ವಾಮಿನಾಥನ್ ಎಂಬುವರು ಶೈಕ್ಷಣಿಕ ಪಜಲ್ಸ್‌ಗಳನ್ನು, ಆಟಿಕೆಗಳನ್ನು (ರಂಗೋಲಿ ವಿನ್ಯಾಸಗಳು, ಗಂಜೀಫಾ ಕಾರ್ಡ್‌ಗಳು ಇತ್ಯಾದಿ) ಪಾರಂಪರಿಕ ಕಲೆಗಳ ಆಧಾರದಲ್ಲಿ ಕಂಡುಹಿಡಿದಿದ್ದಾರೆ.

**ಪಾರಂಪರಿಕ ಕಲೆಗಳು:** ಒಂದು ಆಟವನ್ನು ನಿಶ್ಚಿತ ನಿಯಮಗಳಿಂದ ವಿವಿಧ ವಯೋಮಾನಗಳಿಗೆ ಅನುಗುಣವಾಗಿ ಕೌಶಲಗಳಿಂದ, ವ್ಯತ್ಯಾಸಗಳಿಂದ ಆಡಬಹುದಾಗಿದೆ. ಆಟಗಳು ಎಣಿಕೆ, ಚಲನೆಯ ಕೌಶಲಗಳು ಮತ್ತು ಚಿಂತನಾ ಕೌಶಲಗಳನ್ನು ಪ್ರೋತ್ಸಾಹಿಸಿ ಅಭಿವೃದ್ಧಿಪಡಿಸುತ್ತವೆ. ಅವುಗಳನ್ನು ಸಾಮಾಜಿಕ ಗುಂಪುಗಳಲ್ಲಿ, ಹಿರಿಯರೊಡನೆ ಮಕ್ಕಳು ಬೆರೆತು ಮಾದರಿಯಾಗಿ ಆಡಬಹುದು.

ಭಾರತದ ಪಾರಂಪರಿಕ ಆಟಗಳು ಕೇವಲ ಫಲಕಗಳ (ಮಣೆಯ) ಆಟಗಳಲ್ಲ. ಅವು ನೆಲದ ಮೇಲೂ ಗೆರೆಗಳನ್ನು ರಚಿಸಿ, ಅನೌಪಚಾರಿಕವಾಗಿಯೂ ಆಡಬಹುದಾದಂಥವು. ಅನೇಕ ಪಾರಂಪರಿಕ ಆಟಗಳಿದ್ದು, ಅವುಗಳಲ್ಲಿ ಭಾರತದ ಹಲವು ರಾಜ್ಯಗಳಲ್ಲಿ, ಮಣಿಪುರದಿಂದ ತಮಿಳುನಾಡಿನವರೆಗೂ ಆಡಲ್ಪಡುವ ಪಲಂಗುಡಿ ಆಟವೂ ಒಂದಾಗಿದೆ. ಅನೇಕ ಆಟಗಳು ವ್ಯಾಪಾರಿಗಳು ಮತ್ತು ಪ್ರವಾಸಿಗಳಿಂದ ಪ್ರಪಂಚದ ಎಲ್ಲೆಡೆ ವಲಸೆ ಹೋಗಿವೆ. ಪಲಂಗುಡಿಯನ್ನು ಮಂಕಾಲಿ ಎಂಬ ಹೆಸರಿನಿಂದ ಆಫ್ರಿಕಾದಲ್ಲಯೂ, ಇಂಡೋನೇಶಿಯಾದಲ್ಲಿಯೂ ಆಡುತ್ತಾರೆ.

ಚೆಸ್, ಚೌಸರ್ ಅಥವಾ ಲೂಡೋ, ಚೌಕಾಬಾರ, ಗಿಲ್ಲಿ ದಾಂಡು, ಗಂಜೀಫಾ ಕಾರ್ಡ್‌ಗಳು, ಲಗೋರಿ ಅಥವಾ ಒಂಬತ್ತು ಪಿನ್‌ಗಳು, ತ್ರಿರಂಗ, ಇಕ್ಕದುಕ್ಕಿ ಅಥವಾ ಹಾಪ್‌ಸ್ಕಾಚ್ ಮುಂತಾದವು ಭಾರತೀಯ ಪಾರಂಪರಿಕ ಆಟಗಳಾಗಿದ್ದು ಕೌಶಲ್ಯ ಮತ್ತು ನಿಯಮಗಳಿಂದ ಕೂಡಿವೆ. ಪ್ರತಿಯೊಂದು ಆಟವೂ ಶೈಕ್ಷಣಿಕ ಮೌಲ್ಯಗಳನ್ನು ಹೊಂದಿವೆ. ನಿದರ್ಶನಕ್ಕೆ ಪೀತು ಅಥವಾ ಏಳು ಬಾಲಗಳು ಮಕ್ಕಳಿಗೆ ಒಂದು ಅನುಕ್ರಮ ವ್ಯವಸ್ಥೆಯಲ್ಲಿ ಏರುತ್ತ ಹೋಗುವ, ಹಾಗೆ ಇಳಿಯುವುದನ್ನು ಕಲಿಸುತ್ತದೆ. ಗಿಟ್ಟಿನ್ ಅಥವಾ ಐದು ಕಲ್ಲುಗಳು ಮಕ್ಕಳಗೆ ಎಣಿಸಲು ಮತ್ತು ಕೂಡುವುದನ್ನು ಕಲಿಸುತ್ತವೆ, ಗಂಜೀಫಾ ಕಾರ್ಡ್‌ಗಳು ಒಟ್ಟಾಗಿ ಸೇರುವ ಮತ್ತು ಎಣಿಕೆಯನ್ನು ಕಲಿಸುತ್ತವೆ.

ಭಾರತದ ಪಾರಂಪರಿಕ ಆಟಗಳಲ್ಲಿ ಎಣಿಕೆಗಳಿಗಾಗಿ ವಸ್ತುಗಳನ್ನು ಸಂಗ್ರಹಿಸುವುದು ಮತ್ತು ಆಡುವುದು ಮಕ್ಕಳ ಶೈಕ್ಷಣಿಕ ಅನುಭವದ ಒಂದು ಭಾಗವಾಗಿದೆ. ಎಣಿಕೆಗಾಗಿ ಹುಣಿಸೇ ಬೀಜಗಳು, ಕೆಂಪು ಬೀಜಗಳು, ಕಪ್ಪುಗಣ್ಣಿನ ಕೆಂಪು ಗುಲಗಂಜಿ ಬೀಜಗಳು, ಮಾರ್ಬಲ್ ಚೂರುಗಳು, ಪಾಲಿಷ್ ಆದ ಹರಳುಗಳು ಮತು ಕವಡೆ ಚಿಪ್ಪುಗಳನ್ನು ಉಪಯೋಗಿಸುತ್ತಾರೆ.

**ಸೂತ್ರದ ಗೊಂಬೆಗಳು:** ಪಾರಂಪರಿಕ ಸೂತ್ರದ ಗೊಂಬೆಗಳನ್ನು ಅನೇಕ ಸಮುದಾಯಗಳು ಸಾಮಾಜಿಕ ಸಂವಹನದ ಒಂದು ರೂಪ ಎಂಬಂತೆ ಉಪಯೋಗಿಸಿಕೊಂಡು ಬರುತ್ತಿವೆ. ವಯಸ್ಕರ ಸಾಕ್ಷರತೆಗೆ ಶ್ರಮಿಸುತ್ತಿರುವ ಹಲವು ಸಂಘಗಳು ಆರೋಗ್ಯ, ಅಥವಾ ಮಹಿಳೆ, ಮಕ್ಕಳು ಮತ್ತು ವಯಸ್ಕರ ಮನೋರಂಜನೆಗೆ ಮತ್ತು ಆಪ್ತವಾದ ಮಾಧ್ಯಮದಂತೆ ಸೂತ್ರದ ಗೊಂಬೆಗಳನ್ನು ಬಳಸುತ್ತಿದ್ದಾರೆ. ರಾಜಸ್ಥಾನದ ಉರ್ಮುಲ್, ಅಹಮದಾಬಾದ್‌ನ ಚೇತನಾ ಮತ್ತು ದರ್ಪಣ್, ಸಂಚಾರಿ ಸಾರ್ವಜನಿಕ ಶಿಶು ಶಾಲೆ ಮತ್ತು ನವದೆಹಲಿಯ ಮಾಧ್ಯಮ್ ಮುಂತಾದ ಸಂಸ್ಥೆಗಳು ಸಕ್ರಿಯವಾದ ಸೂತ್ರದ ಬೊಂಬೆಗಳ ಘಟಕಗಳನ್ನು ಹೊಂದಿವೆ.

**ಆಟಿಕೆಗಳ ತಯಾರಿಕೆ:** ಹಲವು ಶಿಕ್ಷಕರಿಗೆ ಆಟಿಕೆಗಳ ತಯಾರಿಕೆ ಮತ್ತು ರಿಪೇರಿಗಳಲ್ಲಿ ಅಮೂಲ್ಯ ಶೈಕ್ಷಣಿಕ ಅನುಭವ ಇದೆ ಎಂದು ನಂಬುತ್ತಾರೆ. ಅವರಲ್ಲಿ ಅರವಿಂದ ಗುಪ್ತಾ ಎಂಬ ದೆಹಲಿ ಮೂಲದ ಲೇಖಕರು ಕಡಿಮೆ ವೆಚ್ಚದ ಆಟಿಕೆಗಳನ್ನು ತ್ಯಾಜ್ಯ ಮತ್ತು ನಾರು ಮುಂತಾದವುಗಳಿಂದ ರಬ್ಬರ್ ಚಪ್ಪಲಿಗಳು ಮತ್ತು ಚತುಷ್ಕೋನದ ಡಬ್ಬಗಳನ್ನು ಮಾಡುವ ಅನೇಕ ಪುಸ್ತಕಗಳನ್ನು ರಚಿಸಿ ಈ ವಿಷಯದಲ್ಲಿ ಪ್ರಮುಖ ಲೇಖಕರಾಗಿದ್ದಾರೆ.

Digitised by Bharatavani, CIIL

ಆಟಿಕೆ ತಯಾರಿಕೆಯ ವಿಧಾನ ಎಲ್ಲರಿಗೂ ಸಾಧ್ಯವಾಗುವಂತಹದಾಗಿದ್ದು ಮಕ್ಕಳನ್ನೂ ತೊಡಗಿಸುತ್ತದೆ. ಇಂದಿನ ಜೀವನ ಪದ್ಧತಿ ಉಂಟುಮಾಡುತ್ತಿರುವ ಅಧಿಕವಾದ ತ್ಯಾಜ್ಯವನ್ನು ಶುಚಿಗೊಳಿಸುತ್ತದೆ. ಸಾಮಗ್ರಿಗಳನ್ನು ನಿರ್ವಹಿಸುವಲ್ಲಿ ಒಂದು ಆಟಿಕೆ ಮಾಡುವಾಗ ಮಕ್ಕಳು ಗಮನಿಸುತ್ತಾ, ಕೇಳುತ್ತಾ ಮತ್ತು ಅದನ್ನು ತಯಾರಿಸುವಲ್ಲಿ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಸರಿಪಡಿಸಿಕೊಳ್ಳುವುದನ್ನು ಕಲಿಯುವರು. ಕಾಗದದ ಸಿಳ್ಳನ್ನು ಮಾಡುವಾಗ ವಿವಿಧ ಬಗೆಯ ಕಾಗದವು ಸಿಳ್ಳಿನ ಗುಣಮಟ್ಟದ ಶಬ್ದವನ್ನು ಪ್ರಭಾವಿಸುತ್ತದೆ ಎಂಬುದನ್ನೂ ಅವರು ಕಲಿಯುವರು. ಆಟಿಕೆ ಮಾಡುವ ವಿಧಾನವು ಮಗುವಿಗೆ ಒಟ್ಟಿಗೆ ನೀಡುವ ಮೆಚ್ಚುಗೆ ಮತ್ತು ತೃಪ್ತಿ ಸಂತೋಷಗಳು ಅಂತಹುದೇ ಆಟಿಕೆಯನ್ನು ಕೊಳ್ಳುವಲ್ಲಿ ಸಿಗುವುದಿಲ್ಲ.

ಪ್ರಯೋಗ ವಿಧಾನದ ಗಟ್ಟಿಯಾದ ಅನುಭವ, ಸಮಸ್ಯೆ ನಿವಾರಣೆ ಮತ್ತು ನಿರ್ಧಾರ ಮಾಡುವುದು, ವಿವಿಧ ಬಗೆಯ ಚಿಂತನೆಗಳಲ್ಲಿ ಫಲಿತವಾಗುತ್ತದೆ. ಮಗುವಿನ ಅರಿವಿನ ಪದರಗಳಲ್ಲಿ ಬಿಚ್ಚಿಕೊಳ್ಳುತ್ತದೆ. ಮೊದಲಿಗೆ ಆಟಿಕೆ ಹೇಗೆ ಕೆಲಸ ಮಾಡುತ್ತದೆ ಎಂಬ ಅನುಭವ ಮತ್ತು ಅರಿವಿಲ್ಲದೆಯೇ ಅದರ ಭೌತಿಕತೆಯನ್ನು ಅರ್ಥ ಮಾಡಿ ಕೊಳ್ಳುವುದು ಮತ್ತು ಕೊನೆಗೆ ವೈಜ್ಞಾನಿಕ ತತ್ವಕ್ಕೆ ಒಂದು ಔಪಚಾರಿಕ ಹೆಸರು ಕೊಡುವಂಥ ಜ್ಞಾನ ದೊರೆಯುತ್ತದೆ.

ಕಲ್ಕತ್ತಾ ಮೂಲದ ಮೇರಿ ಆನ್ ದಾಸ್‌ಗುಪ್ತಾ ಎಂಬ ಶಿಕ್ಷಕಿಯು ಗ್ರಾಮೀಣ ಶಾಲಾ ಶಿಕ್ಷಕರೊಡನೆ ಕೆಲಸ ಮಾಡುತ್ತಾ ಆಟಿಕೆಗಳನ್ನು ಮಾಡುವ ಪರಿಕಲ್ಪನೆ ಮತ್ತು ತ್ಯಾಜ್ಯಗಳಿಂದ ಕಲಿಕಾ ಸಾಮಗ್ರಿಗಳನ್ನು ಮಾಡುವುದಕ್ಕೆ ಉತ್ತೇಜನ ನೀಡಿದರು. ಆಕೆ ಈ ಕುರಿತು ಒಂದು ಪುಸ್ತಕ ರಚಿಸಿದ್ದಾರೆ ಮತ್ತು ಶಿಕ್ಷಕರ ತರಬೇತಿಯಲ್ಲಿ ಸಕ್ರಿಯ ವಾಗಿದ್ದರು. ಗ್ರಾಮೀಣ ಶಾಲಾಪೂರ್ವ ಮಕ್ಕಳಿಗೆ ಜನಪದ ಆಟಿಕೆಗಳ ಉಪಯೋಗ ಕುರಿತು ಬಂಗಾಳದಲ್ಲಿ ಉತ್ತೇಜನ ನೀಡುವಲ್ಲಿ ಯಶಸ್ವಿಯಾಗಿದ್ದರು.

**ವಿಶೇಷ ಅಗತ್ಯಗಳ ಮಕ್ಕಳಿಗೆ ಆಟಿಕೆಗಳು/ಕ್ರೀಡಾ ಚಿಕಿತ್ಸೆ (ಥೆರಪಿ):** ಮಕ್ಕಳ ವಿಶೇಷ ಅಗತ್ಯಗಳಿಗೆ ಆಟಿಕೆಗಳ ಬಳಕೆಯ ಮತ್ತೊಂದು ಕ್ಷೇತ್ರದಲ್ಲಿ ಕೆಲಸ ನಡೆಯುತ್ತಿದೆ. ಅಂಗವಿಕಲ ಮಕ್ಕಳಲ್ಲಿ ಒಂದಕ್ಕಿಂತ ಹೆಚ್ಚು ಸಹಜ ಶಕ್ತಿಯು ಕುಗ್ಗಿರುವುದರಿಂದ ಇದು ಅವರ ಇತರ ಶಕ್ತಿಗಳನ್ನು ಬೆಳೆಸಿಕೊಳ್ಳುವಲ್ಲಿ ಅನಾನುಕೂಲ ಉಂಟು ಮಾಡುತ್ತದೆ. ಉದಾ: ನಡೆಯಲಾಗದ ಮಗು ಇತರ ಮಕ್ಕಳು ಜೀವನದ ಅನುಭವಗಳಿಂದ ಹೊಂದುವ ಸಾಮರ್ಥ್ಯಕ್ಕಿಂತ ಕಲಿಯುವಲ್ಲಿ ಹಿಂದುಳಿಯುತ್ತದೆ. ಪ್ರತಿ ಅಂಗವಿಕಲತೆಗೂ ತನ್ನದೇ ಆದ ಆಟಿಕೆಗಳ ಗುಂಪಿನ ಅವಶ್ಯಕತೆಯಿರುತ್ತದೆ. ವಿಶೇಷ ಅಗತ್ಯಗಳಿಗೆ ಸಾಮಗ್ರಿಗಳನ್ನು ರೂಪಿಸುತ್ತಿರುವ ಹಲವು ಗುಂಪುಗಳಲ್ಲಿ ಹೈದರಾಬಾದ್‌ನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ದಿ ಮೆಂಟಲಿ ಹ್ಯಾಂಡಿಕ್ಯಾಪ್ಡ್; ಚೆನ್ನೈಯ ದಿ ಹೆಲ್ಪ್ ಸೆಂಟರ್ ಫಾರ್ ದಿ ಹ್ಯಾಂಡಿಕ್ಯಾಪ್ಡ್; ನವದೆಹಲಿಯ ಸಮಾಧಾನ್; ಡೆಹ್ರಾಡೂನ್‌ನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ದಿ ವಿಶುಯಲಿ ಹ್ಯಾಂಡಿಕ್ಯಾಪ್ಡ್– ಮುಂತಾದ ಸಂಸ್ಥೆಗಳು ದೃಷ್ಟಿ ವಿಕಲರಿಗೆ ಕಲಿಕಾ ಸಾಮಗ್ರಿಗಳನ್ನು ರೂಪಿಸಿದೆ. ಅಹಮದಾಬಾದ್‌ನ ದಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಡಿಸೈನ್ ಸಹಾ ಯುನೆಸ್ಕೋದ ಸಹಭಾಗಿತ್ವದಲ್ಲಿ 2001 ರಲ್ಲಿ ನಡೆದ ಕಾರ್ಯಾಗಾರದಿಂದ ಹೊಮ್ಮಿದ ಉತ್ಪನ್ನವಾಗಿ ಮಕ್ಕಳ ಪುನರ್ವಸತಿಗಾಗಿ ಆಟಿಕೆಗಳ ಮಾದರಿಗಳನ್ನು ರೂಪಿಸಿದೆ.

ಹಲವು ಆಸ್ಪತ್ರೆಗಳಲ್ಲಿ ಬೆಂಗಳೂರಿನ ನಿಮ್ಹಾನ್ಸ್ (ದಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋಸೈನ್ಸಸ್) ಕ್ರೀಡಾ ಚಿಕಿತ್ಸಾ (ಥೆರಪಿಯ) ಕೇಂದ್ರಗಳನ್ನು ಹೊಂದಿ, ಆಟಿಕೆಗಳನ್ನು ಬಳಸಿ ಕಾರಣ ಪತ್ತೆ ಹಚ್ಚುವ ಮತ್ತು ಚಿಕಿತ್ಸೆಯನ್ನು ಕೊಡಲಾಗುತ್ತಿದೆ. ನವದೆಹಲಿಯ ಜನಮಾಧ್ಯಮ್‌ನಂತಹ ಇತರ ಸಂಸ್ಥೆಗಳು ವಿಶೇಷ ಅಗತ್ಯವಿರುವ ಮಕ್ಕಳ ಜೊತೆ ಪರಸ್ಪರ ಪ್ರತಿಕ್ರಿಯಿಸಲು ಸೂತ್ರದ ಗೊಂಬೆಗಳನ್ನು ಬಳಸಿಕೊಂಡಿದೆ. ಮಕ್ಕಳ ಭಾವನೆಗಳು, ಭಯಗಳು ಮತ್ತು ಆತಂಕಗಳನ್ನು ಅಭಿವ್ಯಕ್ತಿಗೊಳಿಸಲು ಮುಖವಾಡಗಳು, ಸೂತ್ರದ ಗೊಂಬೆಗಳು ಮತ್ತು ಆಟಿಕೆಗಳ ಮೂಲಕ ಮಕ್ಕಳಿಗೆ ಕಲ್ಪನಾಶೀಲವಾದ ಮತ್ತು ಕ್ಷೇಮಕರವಾದ ಪ್ರಪಂಚವನ್ನು ಒದಗಿಸಿವೆ.

**ಆಟಿಕೆಗಳ ಸಂಶೋಧನೆ ಮತ್ತು ಅಭಿವೃದ್ಧಿ:** ಆಟಿಕೆಗಳ ಕ್ಷೇತ್ರದಲ್ಲಿ ಸಂಯೋಜನೆಗೆ ಅಥವಾ ವೃತ್ತಿಪರ ಶಿಕ್ಷಣ ಸಂಶೋಧನೆಗೆ ಕೆಲವು ಅವಕಾಶಗಳಿವೆ. ಅಹಮದಾಬಾದ್‌ನ ದಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಡಿಸೈನ್ (NID)ನ ಸುದರ್ಶನ್ ಖನ್ನಾರವರು ಪ್ರಧಾನಾಧಿಕಾರಿಯಾಗಿ ಆಟಿಕೆ ವಿನ್ಯಾಸದಲ್ಲಿ ವೃತ್ತಿಪರ ಸ್ನಾತಕೋತ್ತರ ಕೋರ್ಸನ್ನು ಆರಂಭಿಸಿದರು. ಮಕ್ಕಳು ಮತ್ತು ಮಾಧ್ಯಮ ಕುರಿತ ಸ್ನಾತಕೋತ್ತರ ಪದವಿಯನ್ನು ಸಹ ಪುಣೆಯ ಎಸ್‌ಎನ್‌ಡಿಟಿ ವಿಶ್ವವಿದ್ಯಾನಿಲಯ ಆರಂಭಿಸಿದೆ.

1955 ರಲ್ಲಿ ಆಲ್ ಇಂಡಿಯಾ ಹ್ಯಾಂಡಿಕ್ರಾಫ್ಟ್ ಬೋರ್ಡ್ ಆಟಿಕೆಗಳನ್ನು ಉತ್ತೇಜಿಸುವ ಎರಡು ಸಂಸ್ಥೆಗಳನ್ನು ಸ್ಥಾಪಿಸಿದೆ. ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪೋಷಣೆಯಲ್ಲಿ ಬೊಂಬೆ ಮತ್ತು ಆಟಿಕೆ ತಯಾರಿಸುವ ಕೇಂದ್ರಗಳನ್ನು ಮುಂಬಯಿಯಲ್ಲಿ ಸ್ಥಾಪಿಸಿದರೂ ಅದು ಮುನ್ನಡೆಯಲಿಲ್ಲ. ಗೊಂಬೆ ತಯಾರಿಕೆ ಕೇಂದ್ರ ವರ್ಷಪೂರ್ತಿ ತರಬೇತಿ ಕೋರ್ಸ್ ನಡೆಸಿತು ಮತ್ತು ಆಟಿಕೆ ತಯಾರಿಕೆ ಕೇಂದ್ರ ಆಟಿಕೆಗಳ ಉತ್ಪಾದನೆಯನ್ನು ವಾಣಿಜ್ಯೀಕರಿಸಿತು.

1980 ರಲ್ಲಿ ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಮೀಷನರ್ ಆಟಿಕೆಗಳನ್ನು ಉತ್ತೇಜಿಸಲು ರಾಷ್ಟ್ರೀಯ ಅಂಗಸಂಸ್ಥೆ ಯೊಂದನ್ನು ಸ್ಥಾಪಿಸಲು ಗಮನ ಹರಿಸಿತ್ತು ಮತ್ತು ದೇಶದಲ್ಲಿ ನಡೆದ ಹಲವು ಪ್ರಾಂತೀಯ ಕಾರ್ಯಾಗಾರಗಳ ಆಲೋಚನೆಗಳನ್ನು ದಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಡಿಸೈನ್ ಸಂಸ್ಥೆಯು ಪರೀಕ್ಷಿಸಿತು. ರಾಜ್ಯ ಪ್ರಾಂತೀಯ ಡಿಸೈನ್ ಕೇಂದ್ರಗಳು ಹೆಚ್ಚು ಸಕ್ರಿಯ ಪಾತ್ರ ವಹಿಸುವುದರ ಪರವಾಗಿದ್ದುದರಿಂದ ಈ ಆಲೋಚನೆಯನ್ನು ಕೈ ಬಿಡಲಾಯಿತು. ಸಾಂಪ್ರದಾಯಿಕ ಆಟಿಕಾ ತಯಾರಿಕಾ ಕೈಗಾರಿಕೆಯು

Digitised by Bharatavani, CIIL

ಹೊಸ ವಿನ್ಯಾಸಗಳನ್ನು ಕಂಡುಹಿಡಿದು ಅಥವಾ ಮಾರಾಟದ ಸಮಸ್ಯೆಗಳನ್ನು ಎದುರಿಸಿದ್ದನ್ನು ದುರದೃಷ್ಟವಶಾತ್ ಪ್ರಮುಖವಾಗಿ ತಿಳಿಯಪಡಿಸಲು ಅವುಗಳು ಶಕ್ತವಾಗಲಿಲ್ಲ.

2001 ರಲ್ಲಿ NID ಒಂದು ಆಟಿಕಾ ತಯಾರಿಕೆ ಸಂಶೋಧನೆ ಕೇಂದ್ರವನ್ನು ಸ್ಥಾಪಿಸಿತು. ವಿನ್ಯಾಸ, ಮೌಲ್ಯ ಮಾಪನ ಮತ್ತು ಹೊಸತನ್ನು ಕಂಡುಹಿಡಿಯುವ ಉದ್ದೇಶದಿಂದ ಕ್ರೀಡಾ ಕ್ಲಿನಿಕ್‌ಗಳ ಸ್ಥಾಪನೆಗಳಿದ್ದ ಮತ್ತು ವಾಣಿಜ್ಯ ಉದ್ದೇಶಿತ ಆಟಿಕಾ ತಯಾರಿಕಾದಾರರಿಗೆ ಸಲಹೆ ಕೊಡುವುದು ಉದ್ದೇಶವಾಗಿತ್ತು. ದಿ ಟಾಯ್ ಅಸೋಸಿಯೇಷನ್ ಆಫ್ ಇಂಡಿಯಾ, ಟಾಯ್ ಡಿಸೈನ್ ಅಂಡ್ ಡೆವಲಪ್‌ಮೆಂಟ್ ಇನ್ಸ್‌ಟಿಟ್ಯೂಟ್ (ಟಿಡಿಡಿಐ) ಮತ್ತು ಟಾಯ್ ಸಿಟಿಯನ್ನು ನವದೆಹಲಿಯ ಹೊರಗೆ ನೊಯಿಡಾದಲ್ಲಿ ಆರಂಭಿಸಲು ಅಪರೋಕ್ಷ ಶಿಫಾರಸು ನಡೆಸಿತು. ಇದು ವೃತ್ತಿ ಸಂರಕ್ಷಿತ ಪ್ರದೇಶ ಕ್ಷೇತ್ರ. ಟಿಡಿಡಿಐಗೆ (TDDI) ಸಹಾಯಕವಾಗಿ ವಿನ್ಯಾಸ ಮತ್ತು ಮೌಲ್ಯಮಾಪನದ ಸಂಪನ್ಮೂಲ ಕೇಂದ್ರವಾಗಿ ಮತ್ತು ತಯಾರಿಕೆಗಾಗಿ ಟಾಯ್ ಸಿಟಿಯನ್ನು ಆರಂಭಿಸಿತು.

ಬೆಂಗಳೂರಿನ ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್, 1995 ರಲ್ಲಿ ಸ್ಥಾಪಿತವಾದ ಅನುದಾನಿತ ಸಂಸ್ಥೆ. ಇದು ಜನಪದ ಆಟಿಕೆಗಳ ದಾಖಲೀಕರಣ ಮತ್ತು ಪ್ರಯೋಗಗಳ ಕೆಲಸದ ವಿನ್ಯಾಸವನ್ನು ಮತ್ತು ಸಮಕಾಲೀನ ಆಟಿಕೆಗಳು ಮತ್ತು ಬೊಂಬೆಗಳ ಉಪಯೋಗವನ್ನು ಸಮರ್ಥಿಸುತ್ತದೆ. ಆಟಿಕೆಗಳ ದಾಖಲೀಕರಣ ಮತ್ತು ನವೀನತೆಯ ಕಂಡುಹಿಡಿಯುವ ಒರಿಸ್ಸಾದ OXFAM ಎಂಬ ಅನುದಾನ ನೀಡುವ ಪ್ರಾತಿನಿಧಿಕ ಸಂಸ್ಥೆಯು ಸಮರ್ಥನೆ ಕೆಲಸಗಳಿಗೆ ಮುಂದೆ ಬಂದಿತು.

ಸುದರ್ಶನ್ ಖನ್ನಾ ಮತ್ತು ಭಾರತದ ಕೆಲವು ವೃತ್ತಿಪರ ಆಟಿಕಾ ವಿನ್ಯಾಸಗಾರರು ಇಂಟರ್‌ನ್ಯಾಷನಲ್ ಟಾಯ್ಸ್ ರಿಸರ್ಚ್ ಅಸೋಸಿಯೇಷನ್ ಜೊತೆಗೆ ಸಹಯೋಜನೆ ಹೊಂದಿ ಜಾಗತಿಕ ವೃತ್ತಿಪರ ಸದಸ್ಯತ್ವವನ್ನು ಹೊಂದಿದ್ದಾರೆ.

**ಆಟಿಕೆಗಳ ಸಂಗ್ರಹಾಲಯ ಮತ್ತು ಕೇಂದ್ರಗಳು:** ದೇಶದಲ್ಲಿ ಮಕ್ಕಳ ಆಟಿಕೆಗಳನ್ನು ಉತ್ತೇಜಿಸುವ ಕೆಲವು ಸಂಗ್ರಹಾಲಯಗಳು ಅಥವಾ ಕೇಂದ್ರಗಳು ಇವೆ. ದಿ ಕೈಟ್ ಮ್ಯೂಸಿಯಂ, ಅಲಹಾಬಾದ್ ಮತ್ತು ನವದೆಹಲಿಯ ಡಾಲ್ಸ್ ಮ್ಯೂಸಿಯಂ ಪರಂಪರೆಯ ಮ್ಯೂಸಿಯಂಗಳಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳು ಮಕ್ಕಳಿಗೆ ಆಟಿಕೆಗಳ ತಯಾರಿಕಾದಾರರೊಡನೆ ಪ್ರವರ್ತಿಸುವ ಅವಕಾಶಗಳನ್ನು ನೀಡುವ ಪರಸ್ಪರ ಕ್ರಿಯೆಯ ಪ್ರಭಾವ ಬೀರುವ ಕೇಂದ್ರಗಳಾಗಿರದೆ ಕೇವಲ ಆಟಿಕೆಗಳ ಉಗ್ರಾಣ ಮನೆಗಳಾಗಿವೆ.

ನವದೆಹಲಿಯ ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ಮಂಡಳಿಯ ಅಧೀನಕ್ಕೆ ದೇಶದ ಎಲ್ಲೆಡೆ ಇರುವ ವಿಜ್ಞಾನ ಸಂಗ್ರಹಾಲಯಗಳು ಮತ್ತು ಇನ್ನೂ ಹಲವು, ಹಾಗೂ ನವದೆಹಲಿಯ ಕೈಕೆಲಸಗಳ ಕಲಾಸಂಗ್ರಹಾಲಯವು ಆಟಿಕೆಗಳ ಜೊತೆ ಪರಸ್ಪರ ಪ್ರತಿಕ್ರಿಯೆಯ ಪ್ರದರ್ಶನಗಳು, ಕಾರ್ಯಾಗಾರಗಳ ಅನುಭವಗಳನ್ನು ಅವು ಕೈಗೆ ತೆಗೆದು ಕೊಂಡಿವೆ. ನವದೆಹಲಿಯ ಸೆಂಟರ್ ಫಾರ್ ಕಲ್ಚರಲ್ ರಿಸೋರ್ಸಸ್ ಅಂಡ್ ಟ್ರೈನಿಂಗ್ ಕೇಂದ್ರವು ಸಹಾ ಕಾರ್ಯಾಗಾರಗಳ ಮೂಲಕ ಶಿಕ್ಷಕರಿಗೆ, ಕರಕುಶಲಕರ್ಮಿಗಳಿಗೆ ಮತ್ತು ಮಕ್ಕಳಿಗೆ ಸಾಂಪ್ರದಾಯಿಕ ಜನಪದ ಆಟಿಕೆಗಳು ಮತ್ತು ಬೊಂಬೆಗಳ ಬಗ್ಗೆ ಕಲಿಯಲು ಅವಕಾಶಗಳನ್ನು ಏರ್ಪಡಿಸುತ್ತಿದೆ.

ಮುಂಬಯಿಯ ದೇವೇಂದ್ರ ದೇಸಾಯಿ ಅವರಿಂದ ಉತ್ತೇಜಿಸಲ್ಪಟ್ಟ ಬೊಂಬೆ ಸಂಗ್ರಹಾಲಯಗಳ ಜಾಲವು ನಗರದಲ್ಲಿ ಎಲ್ಲೆಡೆ ಉತ್ತಮವಾಗಿ ಸ್ಥಾಪಿತವಾಗಿವೆ. ಈ ಸಂಗ್ರಹಾಲಯಗಳು ಕೆಳ ಹಾಗೂ ಮಧ್ಯಮ ವರ್ಗದವರ ಮಕ್ಕಳಿಗೆ ಆಟದ ಹಾಗೂ ಕಲಿಯುವ ಅವಕಾಶಗಳ ಸೌಲಭ್ಯಗಳನ್ನು ನೀಡುತ್ತದೆ. ಹಲವು ರಾಜ್ಯಗಳ ಮತ್ತು ನಗರಗಳಲ್ಲಿ ಕ್ರಿಯಾಶೀಲವಾಗಿರುವ ಬಾಲಭವನಗಳು ಬೊಂಬೆ ತಯಾರಿಕಾದಾರರು ಮಕ್ಕಳೊಂದಿಗೆ ಪರಸ್ಪರ ಬೆರೆಯುವಂತೆ ಏರ್ಪಡಿಸುತ್ತಿವೆ.

**ಸವಾಲುಗಳು:** ದೇಶದಲ್ಲಿ ಶೈಕ್ಷಣಿಕ ಆಟಿಕೆಗಳನ್ನು ಉತ್ತೇಜಿಸಲು ಹಲವಾರು ಸವಾಲುಗಳನ್ನು ಎದುರಿಸಬೇಕಾದ ಅಗತ್ಯವಿದೆ.

1. **ಏಕಾಗ್ರಮುಖತೆ:** ಆಟಿಕೆಗಳನ್ನು ಉತ್ತೇಜಿಸುವಲ್ಲಿ ಕರಕುಶಲ ಕಲೆ, ಶಿಕ್ಷಣ, ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳೊಡನೆ ಹೆಚ್ಚಿನ ಪರಸ್ಪರ ಬೆರೆವ ಪ್ರಕ್ರಿಯೆಯ ಬೇಡಿಕೆಯಿದೆ.

2. **ಜಾಗೃತಿ:** ಬಾಧ್ಯತೆಯುಳ್ಳ ಮೇಲಿನ ಎಲ್ಲಾ ಮಧ್ಯಸ್ಥಗಾರರು ಆಟಿಕೆಗಳ ಶೈಕ್ಷಣಿಕ ಮೌಲ್ಯಗಳನ್ನು ಪರಿಗಣಿಸದೇ ಹೋದರೆ ಶಿಕ್ಷಣದಲ್ಲಿ ಅವಗಳಿಗೆ ಸ್ಥಾನವೇ ದೊರಕುವುದಿಲ್ಲ. ಮಂಡಳಿಯ ಎಲ್ಲರಿಗೂ ಕಲೆತು ಯೋಚಿಸುವ ಜಾಗೃತಿ ನಿರ್ಮಾಣವಾಗಬೇಕು. ಆಟಿಕೆಗಳನ್ನು ವಿತರಣೆ ಮಾಡಿದರೂ ಶಿಕ್ಷಕರು ಸಲಕರಣೆಗಳನ್ನು ಉಪಯೋಗಿಸಲು ಅವುಗಳು ಮುರಿದು ಹೋಗಬಹುದೆಂಬ ಭಯದಿಂದ ಅಥವಾ ಕಳೆದು ಹೋಗಬಹುದೆಂದು ಆಟಿಕೆಗಳನ್ನು ಮತ್ತೆ ಭರ್ತಿಮಾಡಲಾಗದ ಮತ್ತು ವಿಧಿಸಬಹುದಾದ ಶಿಕ್ಷಾ/ ದಂಡನೆಯ ರೂಪದ ಕ್ರಮಗಳ ಹೆದರಿಕೆಯಿಂದ ನಿರ್ವಹಿಸಲು ಒಲವು ತೋರುವುದಿಲ್ಲ. ಆಟಿಕೆಗಳನ್ನು ಒಂದು ಅವಧಿಯ ಬಂಡವಾಳ ಹೂಡಿಕೆ ವೆಚ್ಚ ಎಂದು ಕಾಣದೆ ಮರುಕಳಿಸುವ ಅಶ್ಯಕತೆಯ ವೆಚ್ಚವೆಂದು ನೋಡಬೇಕಾಗಿದೆ.

3. **ಶಿಕ್ಷಕರಿಗೆ ತರಬೇತಿ:** ಶಿಕ್ಷಕರು ಆಟಿಕೆಗಳನ್ನು ಮಾಡುವ ಹಾಗೂ ಅದರ ಉಪಯೋಗವನ್ನು ಜಾಗರೂಕತೆಯಿಂದ ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನ, ಕಲೆ/ಕರಕುಶಲತೆ, ನಾಟಕ, ಭಾಷೆ, ಕಲೆಗಳು, ಸಂಗೀತ ಮತ್ತು ಸಮಾಜ ವಿಜ್ಞಾನಗಳ ವಿಭಾಗದಲ್ಲಿ ನಿರ್ವಹಿಸುವ ತರಬೇರಿಯ ಅವಶ್ಯಕತೆಯಿದೆ.

4. **ಅಧಿಕ ಸಂಪನ್ಮೂಲಗಳು:** ಆಟಿಕೆಗಳಿಗೆ ನೀಡಿರುವ ಪ್ರಾಮುಖ್ಯವು ಅದರ ಸಂಪನ್ಮೂಲ ಹಂಚಿಕೆಯಲ್ಲಿಯೇ ಪ್ರತಿಫಲಿಸುತ್ತದೆ. ಇದುವರೆಗೂ ಅಂಗನವಾಡಿಗೆ ಸರ್ಕಾರದ ಹಂಚಿಕೆಯು ಕೇವಲ ಆರಂಭದಲ್ಲಿ ಒಮ್ಮೆ ಮಾತ್ರ ದೊರಕುವ ಅನುದಾನವಾಗಿದೆ. 2000 ದಲ್ಲಿ ಮಾತ್ರ ವಾರ್ಷಿಕ ಮರುಕಳಿಕೆ ಅನುದಾನವನ್ನು ಬಜೆಟ್‌ನ ಆಯ

Digitised by Bharatavani, CIIL

ವ್ಯಯದಲ್ಲಿ ಸೇರಿಸಲಾಗಿತ್ತು. ಇಂದಿಗೂ ಪ್ರಾಥಮಿಕ ಮಟ್ಟದ ಕಲಿಕಾ ಸಾಮಗ್ರಿಗಳಿಗೆ ನಿರಂತರ ಅನುದಾನ ಹಂಚಿಕೆಯಿರುವುದಿಲ್ಲ.

**5. ನಿಯಮಾವಳಿ:** ಆಟಿಕೆಗಳ ರಕ್ಷಣಾ ಮಟ್ಟವನ್ನು ಅಥವಾ ವಿಷರಹಿತ ಬಣ್ಣಗಳಿಗೆ ಬೇಡಿಕೆಯನ್ನು ಗಮನಿಸಲು ಒಂದು ನಿಯಮಬದ್ಧ ಅಂಗಸಂಸ್ಥೆಯಿಲ್ಲ. ಭಾರತೀಯ (ಪ್ರಮಾಣಗಳ) ಮಟ್ಟದ, ಆದರ್ಶ ಸಂಸ್ಥೆಯ ಅಳತೆಗೋಲನ್ನು ಹೆಚ್ಚು ವ್ಯಾಪಕವಾಗಿ ತಿಳಿಯಬೇಕಾಗಿದೆ.

**6. ಮಾರಾಟ (ಮಾರ್ಕೆಟಿಂಗ್):** ಗ್ರಾಮಾಂತರ ಪ್ರದೇಶಗಳಲ್ಲಿ ಆಟಿಕೆಗಳ ಮಾರಾಟ ಅಭಿವೃದ್ಧಿ ಆಗಬೇಕಾದ ಅಗತ್ಯವಿದೆ. ನಗರ ಪ್ರದೇಶಗಳಲ್ಲಿ, ಪ್ರಯಾಣದ ಸ್ಥಳಗಳಲ್ಲಿ, ಶಾಪಿಂಗ್ ಮಾರ್ಕೆಟ್‌ಗಳಲ್ಲಿ, ಆಟದ ಸಾಮಾನು ಹಾಗೂ ಅಂಗಡಿಗಳಲ್ಲಿ, ರಾಜ್ಯ ಎಂಪೋರಿಯಂ ಇತ್ಯಾದಿಗಳಲ್ಲಿ ಶೈಕ್ಷಣಿಕ ಆಟಿಕೆಗಳು ಹೆಚ್ಚು ವ್ಯಾಪಕವಾಗಿ ದೊರಕಬೇಕಾದ ಅಗತ್ಯವಿದೆ. ಹೆಚ್ಚು ಕಲಿಕಾ ಸಂಪನ್ಮೂಲ ಕೇಂದ್ರಗಳ ಸ್ಥಾಪನೆಯ ಅಗತ್ಯವಿದೆ.

ರಾಜ್ಯ ತೆರಿಗೆ, ದಂಡನೆಗಳು ಆಟಿಕೆಗಳ ಉಪಯೋಗವನ್ನು 'ಶಿಕ್ಷಣ' ಎಂಬುದಕ್ಕಿಂತ ಹೆಚ್ಚಾಗಿ 'ಮನರಂಜನೆ' ಎಂದು ಒತ್ತಿ ಹೇಳುವಂತೆ ತೆರಿಗೆ ವಿಧಿಸುವುದರಿಂದ ಮಾರಾಟವು ನಿಸ್ತೇಜವಾಗಿದೆ.

**7. ತರಬೇತಿ:** ಸಂಪ್ರದಾಯದ ಹಾಗೂ ಭಾರತೀಯ ಸಮುದಾಯ ನಿರ್ಮಿತ ಆಟಿಕೆಗಳಿಗೆ ವಿನ್ಯಾಸಗಳ ಬೆಂಬಲದ ಅಗತ್ಯವಿದೆ. ಸಂಪ್ರದಾಯದ ಕರಕುಶಲಗಾರರಿಗೆ ಅವರ ಕೌಶಲಗಳನ್ನು ಉನ್ನತೀಕರಿಸಲು ತರಬೇತಿಯ ಅಗತ್ಯವಿದೆ.

**8. ಸಂಶೋಧನೆಗಳು:** ಸ್ವದೇಶಿ ಸಾಮಗ್ರಿಗಳಿಂದ ನಿರ್ಮಿತ ಉದಾ: ತೆಂಗಿನಕಾಯಿ ಚಿಪ್ಪುಗಳು, ಕೈಗಾರಿಕಾ ತ್ಯಾಜ್ಯಗಳು ಮುಂತಾದವುಗಳಿಂದ ಹೊಸ ಆಟಿಕೆಗಳನ್ನು ಸುಲಭವಾಗಿ ಸಿಗುವಂತೆ ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ.

ಮೂಲ: ಮಂದಿರಾ ಕುಮಾರ್

ಅನು: ಪ್ರೊ. ರತ್ನಮ್ಮ ಕೆ. ಎಸ್.

## ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಸಹಯೋಗ

ವಿದ್ಯಾರ್ಥಿಗಳ ಬಿಕ್ಕಟ್ಟು ಜಾಗೃತಿಕ ಸಂಗತಿಯಾಗಿದೆ. ಸಾಮಾನ್ಯನೆಲೆಯಲ್ಲಿ ವಿದ್ಯಾರ್ಥಿಗಳು ತಾವು ಪಡೆಯುತ್ತಿರುವ ಶಿಕ್ಷಣ ಮಾದರಿ, ಆಡಳಿತದ ಕಾರ್ಯವಿಧಾನ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಲಾದ ಬದಲಾವಣೆಗಳು ಮತ್ತು ಹೊಸ ಶೋಧನೆಗಳ ಕುರಿತು ಸಂತುಷ್ಟರಾಗಿಲ್ಲ. ಉನ್ನತ ಶಿಕ್ಷಣ ವ್ಯವಸ್ಥೆಗಳಲ್ಲಿ ವಿದ್ಯಾರ್ಥಿಗಳು ಆಗಾಗ ಪ್ರತಿಭಟನೆಗಳನ್ನು ನಡೆಸುವುದನ್ನು ನಾವು ಕಾಣುತ್ತೇವೆ. ಇತ್ತೀಚಿಗೆ ಕೆಲವೊಮ್ಮೆ ಶಾಲಾ ವ್ಯವಸ್ಥೆಯಲ್ಲಿ ಅತಿ ಕ್ಷುಲ್ಲಕ ವಿಚಾರಗಳಿಗಾಗಿ ಪ್ರತಿಭಟನೆಗಳು ನಡೆಯುತ್ತಿರುತ್ತವೆ.



ಆದುದರಿಂದ, ಈ ರೀತಿಯ ಸಮಸ್ಯೆಗಳ ನಿವಾರಣೆಗಾಗಿ ಮತ್ತು ಶೈಕ್ಷಣಿಕ ಕಾರ್ಯವಿಧಾನವನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡುವುದಕ್ಕಾಗಿ ಬಹಳಷ್ಟು ಸಂಸ್ಥೆಗಳಲ್ಲಿ ನಿರ್ಧಾರ ಕೈಗೊಳ್ಳುವ ಕಾರ್ಯವಿಧಾನದಲ್ಲಿ, ನಿರ್ಧಾರಗಳನ್ನು ಅನುಷ್ಠಾನಗೊಳಿಸುವಲ್ಲಿ ಮತ್ತು ಶಿಕ್ಷಕರ ಕಾರ್ಯನಿರ್ವಹಣೆಯ ಮೌಲ್ಯಮಾಪನ ಕಾರ್ಯಗಳಲ್ಲಿ ಕೂಡ ವಿದ್ಯಾರ್ಥಿಗಳು ಭಾಗವಹಿಸುವುದನ್ನು ಕಾಣುತ್ತೇವೆ. ಹೀಗೆ ವಿದ್ಯಾರ್ಥಿಗಳು ಬೇರೆ ಬೇರೆ ಸಂಸ್ಥೆಗಳಲ್ಲಿ, ಬೇರೆ ಬೇರೆ ವಿಧಾನಗಳಲ್ಲಿ ಶಿಕ್ಷಣದ ಆಡಳಿತರಂಗದಲ್ಲಿ ಭಾಗವಹಿಸುತ್ತಿದ್ದಾರೆ. ಈಗ ಮನಸ್ಸಿಗೆ ಹೊಳೆಯುವ ಪ್ರಶ್ನೆಗಳೆಂದರೆ :–

1. ಶಿಕ್ಷಣದ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಏನು?
2. ಶಿಕ್ಷಣದ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು ಅಗತ್ಯವೇ?
3. ಹೌದೆಂದಾದರೆ ಅದರ ಲಾಭವೇನು?
4. ಶಿಕ್ಷಣದ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳು ಕೈಗೊಳ್ಳ ಬಹುದಾದ ಆಡಳಿತಾತ್ಮಕ ಕಾರ್ಯಗಳು ಯಾವುವು? ಮತ್ತು
5. ಶಿಕ್ಷಣದ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳು ಹೇಗೆ ಭಾಗವಹಿಸುತ್ತಾರೆ?

**ಅರ್ಥ ಮತ್ತು ಪ್ರಾಮುಖ್ಯ:** ಶಿಕ್ಷಣ ವ್ಯವಸ್ಥೆಯ ಮುಖ್ಯ ಫಲಾನುಭವಿಗಳು ವಿದ್ಯಾರ್ಥಿಗಳು. ಅವರು ದೇಶದ ಭವಿಷ್ಯವಾಗಿದ್ದಾರೆ. ದೇಶದ ಪ್ರಗತಿ ಅದರ ಪ್ರಜೆಗಳ ಶಿಕ್ಷಣವನ್ನು ಆಧರಿಸಿ ಇರುವುದನ್ನು ತಿಳಿದುಕೊಂಡು ಬಹುಪಾಲು ದೇಶಗಳು ಶಿಕ್ಷಣದ ಎಲ್ಲ ಖರ್ಚುವೆಚ್ಚಗಳನ್ನು ಅಥವಾ ಅದರ ಒಂದು ಭಾಗವನ್ನು ಭರಿಸುತ್ತವೆ. ಹಲವು ದೇಶಗಳಲ್ಲಿ ವಿದ್ಯಾರ್ಥಿಗಳು ಕೂಡ ತಮ್ಮ ಶಿಕ್ಷಣಕ್ಕೆ ಚಂದಾ ನೀಡುತ್ತಿದ್ದಾರೆ. ಹಾಗಿದ್ದರೂ, ಅನೇಕ ದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಏನನ್ನು ಕಲಿಸಬೇಕು? ಅವರಿಗೆ ಹೇಗೆ ಕಲಿಸಬೇಕು? ಅವರಿಗೆ ಯಾವಾಗ ಕಲಿಸಬೇಕು? ಅವರನ್ನು ಶಿಸ್ತಿಗೆ ಹೇಗೆ ಒಳಪಡಿಸಬೇಕು? ಅವರನ್ನು ಶಿಸ್ತಿಗೆ ಒಳಪಡಿಸುವ ಅಗತ್ಯವಿದೆಯೇ? ಎನ್ನುವುದನ್ನು ನಿರ್ಧರಿಸುವುದರಲ್ಲಿ ವಿದ್ಯಾರ್ಥಿಗಳಿಗೆ ಅವಕಾಶ ಇರುವುದಿಲ್ಲ. ಈ ವಿಧದ ಅನೇಕ ಪ್ರಶ್ನೆಗಳು ಇವೆ. ದೇಶದ ಮತ್ತು ಪ್ರಜೆಗಳ ವರ್ತಮಾನ ಮತ್ತು ಭವಿಷ್ಯದ ಅಗತ್ಯಗಳನ್ನು ಅನುಸರಿಸಿ ಶಿಕ್ಷಣವನ್ನು ಸಂರಚಿಸಲಾಗಿದೆ. ಪಠ್ಯಕ್ರಮ ಮತ್ತು ಸಂಸ್ಥೆಗಳ ನಿಯಮ ಮತ್ತು ನಿಬಂಧನೆಗಳನ್ನು ನಿರ್ಧರಿಸುವ ಮತ್ತು ಕಾರ್ಯರೂಪಕ್ಕೆ ತರುವ ಅನೇಕ ಸಿದ್ಧಾಂತಗಳು ಮತ್ತು ವಿಚಾರ ಪರಂಪರೆಗಳು ಇವೆ. ವಿದ್ಯಾರ್ಥಿಗಳಿಗೆ ಅವರ ಅಗತ್ಯಗಳಿಗನುಗುಣವಾಗಿ ಕಲಿಸಿದರೆ ಅವರ ಅಗತ್ಯಗಳಿಗನುಗುಣವಾಗಿ ಕಲಿಸಿದರೆ ಅವರು ಚೆನ್ನಾಗಿ ಕಲಿಯುವರೆಂಬುದು ವಿವಾದಾತೀತ ಅಂಶವಾಗಿದೆ. ಸಂಸ್ಥೆಯ ಆಡಳಿತದ ವಿಚಾರದಲ್ಲಿ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರೆ ಅಥವಾ ಅದರಲ್ಲಿ ಅವರು ಒಳಗೊಳ್ಳುವಂತೆ ಮಾಡಿದರೆ

Digitised by Bharatavani, CIIL

ತಾವು ಸಂಸ್ಥೆಯ ಭಾಗವೆಂದು ಭಾವನೆ ಅವರಲ್ಲಿ ಬೆಳೆಯುವುದು. ವಿದ್ಯಾರ್ಥಿಗಳೆಂದರೆ ಬಾಲಿಶ ಗುಂಪು, ಅವರಲ್ಲಿ ಜವಾಬ್ದಾರಿಯ ಪ್ರಜ್ಞೆ ಇರುವುದಿಲ್ಲ, ಅವರು ಪೂರ್ವಾಭಾವಿಯಾಗಿ ಭವಿಷ್ಯವನ್ನು ತಿಳಿಯಲಾರರು ಇತ್ಯಾದಿಯಾಗಿ ನಾವು ಆಲೋಚಿಸಬಹುದು. ಹೀಗಾಗಿ ವಿದ್ಯಾರ್ಥಿಗಳು ಶಿಕ್ಷಣದ ಆಡಳಿತಾಂಗದಲ್ಲಿ ಪಾಲುಗೊಳ್ಳುವುದನ್ನು ಯಾರೂ ಒಪ್ಪಲಾರರು. ಆದರೆ ವಿದ್ಯಾರ್ಥಿಗಳನ್ನು ಅವರ ಭವಿಷ್ಯಕ್ಕಾಗಿ ತಯಾರುಗೊಳಿಸಬೇಕು ಮತ್ತು ಅವರನ್ನು ಜವಾಬ್ದಾರಿಯುತ ಪ್ರಜೆಗಳನ್ನು ಮಾಡಬೇಕು ಎಂಬ ವಿಚಾರವನ್ನು ಪರಿಗಣಿಸಿ ನೋಡಿದಾಗ ಶಿಕ್ಷಣ ಸಂಸ್ಥೆಗಳು ತರಬೇತಿ ಕ್ಷೇತ್ರಗಳಾಗಿ ವಿದ್ಯಾರ್ಥಿಗಳು ಶಿಕ್ಷಣದ ಆಡಳಿತಾಂಗದಲ್ಲಿ ಪಾಲುಗೊಳ್ಳುವುದನ್ನು ಎಲ್ಲರೂ ಒಪ್ಪಿಯೇ ಒಪ್ಪುತ್ತಾರೆ. ವಿದ್ಯಾರ್ಥಿಗಳು ಶಿಕ್ಷಣದ ಆಡಳಿತಾಂಗದಲ್ಲಿ ಭಾಗವಹಿಸುವ ವಿಚಾರಗಳ ಪರ್ಯಾಲೋಚನೆಗಳು ಹೊಸವೇನಲ್ಲ. ಈ ವಿಚಾರಗಳನ್ನು ಚರ್ಚಿಸಿರುವ ಅನೇಕ ಲೇಖನಗಳನ್ನು ಮತ್ತು ವರದಿಗಳನ್ನು ನಾವು ಕಾಣಬಹುದಾಗಿದೆ.

ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಎಂದರೆ ವಿದ್ಯಾರ್ಥಿಗಳು ಸಂಸ್ಥೆಯ ಎಲ್ಲ ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಪಾಲುಗೊಳ್ಳುವುದು ಎಂದಾಗುತ್ತದೆ. ವಿದ್ಯಾರ್ಥಿಗಳು ಮುಷ್ಕರ ಮತ್ತು ತಮ್ಮ ಸಂಘಟನೆಯ (ಯೂನಿಯನ್) ಚಟುವಟಿಕೆಗಳ ಮೂಲಕ ಸಂಸ್ಥೆಗಳ ಕಾರ್ಯನೀತಿಗಳು ಮತ್ತು ನಿರ್ಧಾರಗಳ ಮೇಲೆ ಪ್ರಭಾವ ಬೀರುವುದು ಮಾತ್ರ ಆಡಳಿತಾಂಗದಲ್ಲಿನ ಭಾಗವಹಿಸುವಿಕೆ ಎಂದಾಗುವುದಿಲ್ಲ, ಕಾರ್ಯನೀತಿಗಳನ್ನು ರಚಿಸುವ ಮತ್ತು ನಿರ್ಧಾರಗಳನ್ನು ಕೈಗೊಳ್ಳುವ ಸ್ಥಾನದಲ್ಲಿ ಕೂಡ ವಿದ್ಯಾರ್ಥಿಗಳು ಇರಬೇಕಾಗುತ್ತದೆ. ಕಾರ್ಯನೀತಿಗಳನ್ನು ಮತ್ತು ನಿರ್ಧಾರಗಳನ್ನು ಬದಲಿಸುವ ಕಾರ್ಯವನ್ನು ವಿದ್ಯಾರ್ಥಿಗಳೇ ಪ್ರಾರಂಭಿಸುವ ಹಾಗಿರಬಹುದು. ವಿದ್ಯಾರ್ಥಿಗಳನ್ನು ಶಿಕ್ಷಣ ವ್ಯವಸ್ಥೆಯ ಗ್ರಾಹಕರನ್ನಾಗಿ ಕಾಣಲಾಗುತ್ತದೆ. ಆದುದರಿಂದಲೇ, ಶಿಕ್ಷಣವನ್ನು ಗ್ರಾಹಕರ ಬೇಡಿಕೆಗಳು ಮತ್ತು ಅಗತ್ಯಗಳಿಗೆ ಯುಕ್ತವಾದ ರೀತಿಯಿಂದ ಸಜ್ಜುಗೊಳಿಸುವುದು ಸಮಂಜಸವಾಗಿದೆ. ಹೀಗೆ ಮಾಡುವುದರಿಂದ, ವಿದ್ಯಾರ್ಥಿಗಳನ್ನು ಆಡಳಿತಾಂಗದಲ್ಲಿ ಸೇರಿಸಿಕೊಳ್ಳದೇ ಇರುವುದು ಶಿಕ್ಷಣಕ್ಕೆ ಸಾಧ್ಯವಾಗದು. ಶ್ರೀವಾತ್ಸವ (1975) ತಮ್ಮ ಅಧ್ಯಯನದಲ್ಲಿ ಕಂಡುಕೊಂಡ ಪ್ರಕಾರ ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಅರ್ಥಪೂರ್ಣ ಭಾಗವಹಿಸುವಿಕೆಯು ವಿದ್ಯಾರ್ಥಿಗಳಿಗೆ ಒಂದು ತಂಡವಾಗಿ ಕಾರ್ಯನಿರ್ವಹಿಸುವ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ. ಸಂಸ್ಥೆಯ ಒಟ್ಟು ಉದ್ದೇಶ ಮತ್ತು ಅದರ ಎಲ್ಲ ಚಟುವಟಿಕೆಗಳಲ್ಲಿ ಗುರುತಿಸಿಕೊಳ್ಳುವಿಕೆ ಮತ್ತು ಬದ್ಧತೆಯ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತದೆ. ಇದು ನಿರ್ಧಾರ ಕೈಗೊಳ್ಳುವ ಕಾರ್ಯನೀತಿಗಳು, ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ನಿಜವಾಗಿ ಹಂಚಿಕೊಳ್ಳುವ ದಾರಿಯನ್ನು ವಿದ್ಯಾರ್ಥಿಗಳಿಗೆ ಒದಗಿಸಿಕೊಡುತ್ತದೆ. ಹೀಗೆ ವಿದ್ಯಾರ್ಥಿಗಳ ಭಾಗವಹಿಸುವಿಕೆಯು ಸಂಸ್ಥೆಗಳಿಗೆ ಮತ್ತು ಸಮಾಜ ಮತ್ತು ವ್ಯಕ್ತಿಗಳಿಗೆ ಅಗಾಧ ಪ್ರಮಾಣದಲ್ಲಿ ಪ್ರಯೋಜನಕಾರಿಯಾಗಿದೆ.

**ಚಾರಿತ್ರಿಕ ಪರಿಪ್ರೇಕ್ಷೆ:** ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಸಹಯೋಗದ ವಿಚಾರವು ಸುಮಾರು 150 ವರ್ಷಗಳಷ್ಟು ಹಿಂದಿನದು. 1857ರಲ್ಲಿ ಬ್ರಿಟನ್‌ನಲ್ಲಿ ಒಂದು ಮಸೂದೆಯನ್ನು ಜಾರಿಗೊಳಿಸಲಾಯಿತು. ಆ ಮಸೂದೆಯ ಪ್ರಕಾರ ಸ್ಕಾಟಿಶ್ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಂದ ಚುನಾಯಿತರಾದ ಮುಖ್ಯಾಧಿಕಾರಿಗಳನ್ನು (ರೆಕ್ಟರ್ಸ್) ಹೊಂದುವುದು ಸಾಧ್ಯವಾಯಿತು. ಭಾರತದಲ್ಲಿ ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳು ಭಾಗಹಿಸುವ ವಿಚಾರದ ಚರ್ಚೆಯನ್ನು 1936ರಲ್ಲಿ ಜವಾಹರಲಾಲ್ ನೆಹರೂ ಮತ್ತು ಮೊಹಮ್ಮದ್ ಅಲಿ ಜಿನ್ನಾ ಪ್ರಾರಂಭಿಸಿದರು. ಆ ಕಾಲದಲ್ಲಿ ಭಾರತದ ಸ್ವಾತಂತ್ರ್ಯವನ್ನು ಸಾಧಿಸುವುದಕ್ಕೆ ಇದರ ಅಗತ್ಯ ಇತ್ತು. ಆದರೆ ದೇಶ ಸ್ವತಂತ್ರವಾದ ಬಳಿಕ ವಿದ್ಯಾರ್ಥಿಗಳ ಸಹಯೋಗವನ್ನು ಅಸಮ್ಮತಿಸಲಾಯಿತು. ಆದಾಗ್ಯೂ, 1970ರಲ್ಲಿ ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಸಹಯೋಗ ಸಮಂಜಸವಾಗಿರುವಂತೆ ಭಾಸವಾಗತೊಡಗಿತು. ಈ ಕುರಿತು ಕೇಂದ್ರ ಸರಕಾರ ಗಂಭೀರವಾಗಿ ಗಮನವನ್ನು ಹರಿಸಿತು. 1971ರಲ್ಲಿ ಕೇಂದ್ರ ಮಟ್ಟದಲ್ಲಿ ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯಗಳ ಅಧಿಕಾರ ಸಮಿತಿಯನ್ನು (ಗವರ್ನೆನ್ಸ್ ಕಮಿಟಿ) ಕೂಡ ರೂಪಿಸಲಾಯಿತು. ಗಜೇಂದ್ರ ಗಡ್ಕರ್ ಅವರ ಅಧ್ಯಕ್ಷತೆಯಲ್ಲಿ 1971ರಲ್ಲಿ ಯುಜಿಸಿಯಿಂದ ನೇಮಕಗೊಂಡ ಈ ಸಮಿತಿಯು 'ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಸಹಯೋಗವನ್ನು ಹೇಗೆ ಪ್ರೋತ್ಸಾಹಿಸಬಹುದು ಮತ್ತು ವಿಶ್ವವಿದ್ಯಾಲಯಗಳು ಮತ್ತು ಮಹಾವಿದ್ಯಾಲಯಗಳಲ್ಲಿ ಇದನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬುದರ ಕುರಿತು ಸೂಚನೆಗಳಿದ್ದು, ಪ್ರತಿಯೊಂದು ವಿಶ್ವವಿದ್ಯಾಲಯ ಪರಿನಿಯಮದಲ್ಲಿ ವಿದ್ಯಾರ್ಥಿ ಮಂಡಳಿಯ ಸ್ಥಾಪನೆಗೆ ಅವಕಾಶವಿರಬೇಕೆಂದು ಶಿಫಾರಸ್ಸು ಮಾಡಿದೆ. ವಿದ್ಯಾರ್ಥಿ ಮಂಡಳಿಯ ಕಾರ್ಯಭಾರಗಳು ಈ ಕೆಳಗಿನಂತಿರಬಹುದು:

1. ವಿದ್ಯಾರ್ಥಿಗಳ ಕಾರ್ಯದ ಮೇಲೆ ಪರಿಣಾಮ ಬೀರುವ ವಿಚಾರಗಳ ಕುರಿತು ಕಾರ್ಯಾಂಗ ಮತ್ತು ಅಧ್ಯಯನಾಂಗ ಸಮಿತಿಗಳಿಗೆ ಶಿಫಾರಸ್ಸು ಮಾಡುವುದು. ಉದಾಹರಣೆಗೆ ಅಧ್ಯಯನ ವಿಷಯ (ಕೋರ್ಸ್)ದ ರಚನೆ, ಬೋಧನೆಯ ವಿನ್ಯಾಸ ಇತ್ಯಾದಿ, ವಿದ್ಯಾರ್ಥಿಗಳಿಗೆ ಸಂಬಂಧಿಸಿ ಇರಬಹುದಾದ ವಿಶ್ವವಿದ್ಯಾಲಯದ ಸಾಂಸ್ಥಿಕ ಬದುಕು, ಮತ್ತು ವಿಶ್ವವಿದ್ಯಾಲಯದಲ್ಲಿನ ಸಹ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು.

2. ಸಾಮಾನ್ಯವಾಗಿ ಶಿಸ್ತು, ಕ್ಷೇಮಾಭಿವೃದ್ಧಿ, ಕ್ರೀಡೆ, ಸಾಹಿತ್ಯಕ ಮತ್ತು ವಿಭಾಗೀಯ ಸಂಘಗಳು, ವಿದ್ಯಾರ್ಥಿನಿಲಯ, ವಿದ್ಯಾರ್ಥಿಗಳ ಮನೆಗಳು, ಮತ್ತು ಅನಿವಾಸಿ ವಿದ್ಯಾರ್ಥಿ ಕೇಂದ್ರಗಳ ನಿರ್ವಹಣೆ, ವಿಸ್ತರಣಾ ಕಾರ್ಯ, ವಿದ್ಯಾರ್ಥಿಗಳ ಆರೋಗ್ಯ, ರಾಷ್ಟ್ರೀಯ ಸೇವಾ ಕಾರ್ಯಯೋಜನೆ, ಎನ್‌ಸಿಸಿ ಇತ್ಯಾದಿಗಳ ಮೇಲೆ ಪರಿಣಾಮ ಬೀರುವ ಎಲ್ಲ ನಿಯಮಗಳನ್ನು ಅಭಿಪ್ರಾಯ ಪಡೆಯುವ ಉದ್ದೇಶದಿಂದ ವಿದ್ಯಾರ್ಥಿ ಮಂಡಳಿಯ ಮುಂದಿಡುವುದು, ಆಮೇಲೆ ಮಂಡಳಿಯ ಅಭಿಪ್ರಾಯಗಳನ್ನು ನಿರ್ಧಾರ ಕೈಗೊಳ್ಳುವ

Digitised by Bharatavani, CIIL

ಸಲುವಾಗಿ ಅಧ್ಯಯನಾಂಗದ ಸಮಿತಿಗೆ, ಆಮೇಲೆ ಕಾರ್ಯಾಂಗ ಸಮಿತಿಗೆ ಕಳುಹಿಸುವುದು ಮತ್ತು,

3. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಯಾವುದೇ ವಿಚಾರದ ಕುರಿತು ಮಂಡಳಿಯು ತನ್ನ ಅಭಿಪ್ರಾಯಗಳನ್ನು ಮತ್ತು ಶಿಫಾರಸ್ಸುಗಳನ್ನು ಉಪಕುಲಪತಿಗಳ ಅಥವಾ ವಿಶ್ವವಿದ್ಯಾಲಯದ ಬೇರೆ ಯಾವುದೇ ಅಧಿಕಾರಿಯ ಗಮನಕ್ಕೆ ತರುವ ಹಕ್ಕನ್ನು ಹೊಂದಿರಬೇಕು. ಯಾವುದೇ ಒಂದು ವಿಚಾರ ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದು ಅಥವಾ ಸಂಬಂಧಿಸಿದ್ದು ಅಲ್ಲವೆಂಬುದನ್ನು ನಿರ್ಧರಿಸುವ ಅಧಿಕಾರ ವಿದ್ಯಾರ್ಥಿ ಮಂಡಳಿಯ ಚೇರಮನ್‌ನದಾಗಿರುತ್ತದೆ.

ವಿದ್ಯಾರ್ಥಿ ಮಂಡಳಿಯು ಪ್ರತಿವರ್ಷ ಕನಿಷ್ಠ ಮೂರು ಬಾರಿಯಾದರೂ ಸಭೆ ಸೇರಬೇಕು ಮತ್ತು ಎರಡು ಸಭೆಗಳ ನಡುವೆ ಆರು ತಿಂಗಳಿಗಿಂತ ಹೆಚ್ಚು ಅಂತರವಿರಬಾರದೆಂಬ ಸಲಹೆಯನ್ನು ಕೂಡಾ ಅದು ನೀಡಿದೆ. ಚೇರಮನ್ ಅಥವಾ ಮಂಡಳಿಯ ಅರ್ಧಕ್ಕಿಂತ ಹೆಚ್ಚು ಸದಸ್ಯರು ಒತ್ತಾಯಪಡಿಸಿದರೆ ವಿಶೇಷ ಸಭೆಗಳನ್ನು ಆಯೋಜಿಸಬಹುದು.

ವಿದ್ಯಾರ್ಥಿ ಮಂಡಳಿಯ ಸಂಯೋಜನೆ ಈ ಕೆಳಗಿನಂತೆ ಇರಬೇಕು.

1. ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿ.
2. ಪ್ರತಿಯೊಂದು ವಿಭಾಗದ ವಿದ್ಯಾರ್ಥಿಗಳ ಸಲಹಾ ಸಮಿತಿಯ ಕಾರ್ಯದರ್ಶಿ
3. ಮತದಾರ ಸಮುದಾಯ ಚುನಾಯಿಸಿದ ಹತ್ತು ಮಂದಿಗಳಲ್ಲಿ ಅನುಪಾತದ ಪ್ರತಿನಿಧೀಕರಣದ ವ್ಯವಸ್ಥೆಗೆ ಅನುಗುಣವಾಗಿ ಪ್ರತಿಯೊಂದು ಮಹಾವಿದ್ಯಾಲಯದ ವಿದ್ಯಾರ್ಥಿ ಮಂಡಳಿಯ ಒಬ್ಬ ವಿದ್ಯಾರ್ಥಿ ಪ್ರತಿನಿಧಿ ಇರುತ್ತಾರೆ.
4. ಉಪಕುಲಪತಿಗಳು ನಾಮನಿರ್ದೇಶನ ನೀಡಿದ ಐದು ವಿದ್ಯಾರ್ಥಿಗಳು. ಇವರು ಮೇಧಾವಿ ವಿದ್ಯಾರ್ಥಿಗಳಾಗಿರಬಹುದು ಅಥವಾ ಕ್ರೀಡಾಪಟುಗಳು ಅಥವಾ ವಿದ್ಯಾರ್ಥಿ ಚಟುಟಿಕೆಯ ಯಾವುದೇ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿದವರಾಗಿರಬೇಕು. ಇಲ್ಲಿ ವಿಶೇಷ ಆಸಕ್ತಿಗಳಿಗೆ ಸೂಕ್ತ ಮನ್ನಣೆ ನೀಡಲಾಗುತ್ತದೆ.

ಉಪಕುಲಪತಿಗಳು ನಾಮನಿರ್ದೇಶನ ನೀಡಿದ ಶಿಕ್ಷಕರೊಬ್ಬರು ಮಂಡಳಿಯ ಚೇರಮನ್ ಆಗುವ ಅಪೇಕ್ಷೆಯನ್ನು ಸಮಿತಿ ತನ್ನ ಸಲಹೆಯಲ್ಲಿ ವ್ಯಕ್ತಪಡಿಸಿದೆ. ಇದು ಪಠ್ಯೇತರ ಚಟುವಟಿಕೆಗಳ ನಿರ್ವಹಣೆಯನ್ನು ಸಂಪೂರ್ಣವಾಗಿ ವಿದ್ಯಾರ್ಥಿಗಳಿಗೇ ಬಿಟ್ಟು ಕೊಡಬೇಕೆಂದು ಕೂಡಾ ಅದು ಸೂಚಿಸಿದೆ.

ಪ್ರೊಫೆಸರ್ ಎ. ಜ್ಞಾನಮ್ ಅವರ ಅಧ್ಯಕ್ಷತೆಯ ಯುಜಿಸಿ ಸಮಿತಿಯ "ಹೊಸ ಶೈಕ್ಷಣಿಕ ನಿರ್ವಹಣೆಯ ಕಡೆಗೆ" (1990, ಪು. 86) ವರದಿಯ ದೃಷ್ಟಿಯಲ್ಲಿ ವಿಶ್ವವಿದ್ಯಾಲಯವು ಕಲಿಕೆಯ ಅನುಸರಣೆ, ಜ್ಞಾನ ಸಂಪಾದನೆ, ಮುಂದಿನ ತಲೆಮಾರಿಗೆ ಅದರ ರವಾನೆ ಮತ್ತು ಹೊಸ ಜ್ಞಾನದ ಅನ್ವೇಷಣೆಗಾಗಿ ಮುಡುಪಾಗಿರುವ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಘವಾಗಿದೆ. ವಿಶ್ವವಿದ್ಯಾಲಯಗಳ ಪ್ರಜಾಪ್ರಭುತ್ವವಾದಿ ಕಾರ್ಯನಿರ್ವಹಣೆಗೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳ ವ್ಯಾಪಕ ಸಹಯೋಗವು ಬಹುಮುಖ್ಯ. ಇದು ಸಾಧ್ಯವಾಗಬೇಕಾದರೆ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಬೋಧನೇತರ ಸಿಬ್ಬಂದಿಯವರು ವಿಶ್ವವಿದ್ಯಾಲಯಗಳ ಸೂಕ್ತ ಸಂಸ್ಥೆಗಳ ತಮ್ಮ ಸಮುಚಿತ ಪ್ರತಿನಿಧೀಕರಣದ ಮೂಲಕ, ಅಥವಾ ಸಲಹಾ ಸಮಿತಿಗಳ ಮೂಲಕ ಸಹಯೋಗ ನೀಡಬೇಕು. ಮುಂದೆ, ಸಮಿತಿ ಗಮನಿಸಿದ ಪ್ರಕಾರ, ಈಗ ಇರುವಂತಹ ಹೆಚ್ಚು ಕಡಿಮೆ ಅಧಿಕಾರಶಾಹೀ ರಚನೆಯ ಸಹಯೋಗೀ ಪ್ರಜಾಪ್ರಭುತ್ವವಾದಿ ಕಾರ್ಯನಿರ್ವಹಣೆಯಿಂದ ಸ್ಥಾನಾಂತರಗೊಳಬೇಕು. ಇದರಲ್ಲಿ ಸಂಘಟಿತ ಗುಂಪುಗಳು ಕಾರ್ಯವಿಧಾನಗಳ ಮೂಲಕ ಈಗಾಗಲೇ ರೂಪಿತವಾಗಿರುವ ಅನುಸೂಚನೆಯ ಕಡೆಗೆ ಕೆಲಸ ನಿರ್ವಹಿಸುತ್ತವೆ. ಶೈಕ್ಷಣಿಕ ಚಟುವಟಿಕೆಗಳ ಅಧಿಕಾರಶಾಹಿ ವಿಷಯಾಂಶಗಳನ್ನು ನಿರ್ಲಕ್ಷಿಸಬೇಕು.

ವಿಶ್ವವಿದ್ಯಾನಿಲಯಗಳ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಡಗಿಸಿ ಕೊಳ್ಳಬೇಕೆಂದು ಯುಜಿಸಿ ತನ್ನ ವರದಿ (1990) ಯಲ್ಲಿ ಸೂಚಿಸಿದೆ. ಅದು ಈ ಕೆಳಗಿನಂತಿವೆ:

1. ಸಾಂಘಿಕ ಬದುಕು, ಸಾಂಸ್ಕೃತಿಕ ಚಟುವಟಿಕೆಗಳು, ಆಟಗಳು ಮತ್ತು ಕ್ರೀಡೆಗಳು, ಶೈಕ್ಷಣಿಕ ಸಂಘಗಳು ಮತ್ತು ವಿದ್ಯಾರ್ಥಿನಿಲಯಗಳು ಇತ್ಯಾದಿಗಳ ಸಂಘಟನೆಯಲ್ಲಿ ವಿದ್ಯಾರ್ಥಿಗಳು ಮುಖ್ಯ ಪಾತ್ರವನ್ನು ನಿರ್ವಹಿಸಬೇಕು.

2. ವಿದ್ಯಾರ್ಥಿಗಳ ಸಲಹಾ ಸಮಿತಿಗಳು ವಿಭಾಗ, ಬೋಧನಾಂಗ ಮತ್ತು ವಿಶ್ವವಿದ್ಯಾಲಯದ ಮಟ್ಟದಲ್ಲಿ ಇರಬೇಕು. ಈ ಸಮಿತಿಯ ಚೇರಮನ್ ಆಗಿ ಮುಖ್ಯಸ್ಥರು/ಡೀನ್/ಉಪಕುಲಪತಿ ಇರುತ್ತಾರೆ. ಪ್ರತಿಭಾವಂತ ವಿದ್ಯಾರ್ಥಿಗಳು ಸದಸ್ಯರಾಗಿರುತ್ತಾರೆ. ಇಲ್ಲಿ ಅವರು ಪ್ರಮುಖ ಶೈಕ್ಷಣಿಕ ಪ್ರಶ್ನೆಗಳಾದ ಅಧ್ಯಯನ ವಿಷಯಗಳ (ಕೋರ್ಸ್) ರಚನೆ, ಪಠ್ಯಕ್ರಮದ ವಿಷಯಗಳು, ಪಠ್ಯಕ್ರಮದ ವಿನ್ಯಾಸ, ಬೋಧನೆಯ ವಿನ್ಯಾಸ ಮತ್ತು ಪರೀಕ್ಷೆ, ಸಂಶೋಧನೆ ಇತ್ಯಾದಿಗಳ ಕುರಿತು, ವಿಶ್ವವಿದ್ಯಾಲಯದ ಉತ್ತಮ ಕಾರ್ಯನಿರ್ವಹಣೆಯ ಕುರಿತು ಕೂಡ ತಮ್ಮ ಅಭಿಪ್ರಾಯಗಳನ್ನು ಮಂಡಿಸುವರು. ವಿದ್ಯಾರ್ಥಿಗಳು ವ್ಯಕ್ತಪಡಿಸುವ ಸೂಚನೆಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಅಂಗಗಳು ಸೂಕ್ತ ಗಮನವನ್ನು ನೀಡಬೇಕು.

ವಿದ್ಯಾರ್ಥಿಗಳ ಎಲ್ಲ ಸಮಿತಿಗಳಲ್ಲಿ ವಿವಿಧ ವಿಭಾಗಗಳಿಗೆ, ಶಾಖೆಗಳಿಗೆ, ತರಗತಿಗಳಿಗೆ ಮತ್ತು ಮಹಿಳೆಯರಿಗೆ ತಕ್ಕ ಪ್ರತಿನಿಧೀಕರಣವನ್ನು ನೀಡಬೇಕು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ನಾಮನಿರ್ದೇಶನ ಮಾಡಬೇಕು.

Digitised by Bharatavani, CIIL

ಸಮಿತಿಯ ಕೆಲವು ನಿರ್ದಿಷ್ಟ ಸೂಚನೆಗಳು ಹೀಗಿವೆ:

1. ವಿದ್ಯಾರ್ಥಿಗಳಿಗೆ ಸೆನೆಟ್‌ನಲ್ಲಿ ಪಾಲುಗೊಳ್ಳಲು ಅವಕಾಶವನ್ನು ನೀಡಬೇಕು. ಆದರೆ ಸಿಂಡಿಕೇಟ್, ಅಧ್ಯಯನ ಮಂಡಳಿ ಮತ್ತು ಶೈಕ್ಷಣಿಕ ಮಂಡಳಿಗಳಲ್ಲಿ ಅಲ್ಲ.
2. ಉಪಕುಲಪತಿಗಳು ಅಥವಾ ಕುಲಪತಿಗಳು ಅಥವಾ ವಿದ್ಯಾರ್ಥಿ ಕ್ಷೇಮಾಭಿವೃದ್ಧಿಯ ಡೀನ್ ಅವರಿಂದ ವಿದ್ಯಾರ್ಥಿಗಳ ಕಲಿಕೆ, ಸಹ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿನ ಯೋಗ್ಯತೆ/ಹಿರಿಮೆ/(ಮೆರಿಟ್)ಯನ್ನು ಆಧರಿಸಿ ಅವರ ಪ್ರತಿನಿಧೀಕರಣವು ನಾಮನಿರ್ದೇಶನದ ಮೂಲಕ ನಡೆಯಬೇಕು.
3. ಈ ಕೆಳಗಿನ ವೇದಿಕೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಬೇಕು :

ಅ. ಸಾಂಘಿಕ ಬದುಕು, ಸಹ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ಸಮಿತಿಗಳು ಮತ್ತು ಸಂಘಟನೆಗಳು.

ಆ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ವಾಸಕ್ಕಾಗಿ ಅಥವಾ ಶಿಕ್ಷಣಕ್ಕಾಗಿ ಇರುವ ಸಭಾಂಗಣ, ವಿದ್ಯಾರ್ಥಿನಿಲಯಗಳಿಗೆ ಇರುವಂತಹ ಸಲಹಾ ಸಮಿತಿಗಳು, ಇತ್ಯಾದಿ.

ಇ. ಕ್ರೀಡೆಗಳು, ಸಮಾಜ ಸೇವೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಇರುವಂತಹ ಸಮಿತಿಗಳು.

ವಿದ್ಯಾರ್ಥಿಗಳ ಸಹಯೋಗದ ಕಲ್ಪನೆಯು ಭಾರತ ಸರಕಾರ ನೇಮಕ ಮಾಡಿರುವ ಸಮಿತಿಗಳ ಮತ್ತು ತಜ್ಞರ ಗಮನ ಸೆಳೆದಿರುವುದನ್ನು ಕಾಣಬಹುದಾಗಿದೆ. ಈ ಕ್ಷೇತ್ರದಲ್ಲಿ, ಅದರಲ್ಲಿಯೂ ನಿರ್ದಿಷ್ಟವಾಗಿ ವಿದ್ಯಾರ್ಥಿಗಳ ಸಹಯೋಗ, ಅಶಾಂತಿ ಮತ್ತು ಅಶಿಸ್ತಿನ ಕುರಿತು ಅನೇಕ ಸಂಶೋಧನೆಗಳು ನಡೆದಿವೆ. ಈ ಅಧ್ಯಯನಗಳ ಮೂಲಕ ಕಂಡುಕೊಂಡ ಕೆಲವು ಅಂಶಗಳು ಹೀಗಿವೆ:

ರಿಡಲ್ (1962), ಭಟ್ಟಾಚಾರ್ಯ (1967), ಶರ್ಮ (1968), ಡುಗಲ್ (1968), ಕಾಳೆ (1972), ಮಜುಮದಾರ್ (1974), ದೇಸಾಯಿ (1989), ಮಲ್ಹೋತ್ರ ಮತ್ತು ಮೆನನ್ (1991), ಶ್ರೀವಾಸ್ತವ (1989), ಬೊರ (1985), ಮೊದಲಾದವರು ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅಧ್ಯಯನ ಮಾಡಿದ್ದಾರೆ ಮತ್ತು ವಿದ್ಯಾರ್ಥಿಗಳ ಬಹುಪಾಲು ಸಮಸ್ಯೆಗಳಿಗೆ ಈ ಕೆಳಗಿನವುಗಳು ಕಾರಣಗಳೆಂಬುದಾಗಿ ಕಂಡುಕೊಂಡಿದ್ದಾರೆ:

1. ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಗೆ ಗಮನವನ್ನು ನೀಡುವುದಿಲ್ಲ.
2. ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಹಯೋಗವು ಕೆಳಮಟ್ಟದ್ದಾಗಿರುತ್ತದೆ.
3. ವಿದ್ಯಾರ್ಥಿಗಳ ಅಶಾಂತಿಯು ಶೈಕ್ಷಣಿಕ ಆಡಳಿತಾಂಗದಲ್ಲಿನ ಸಹಯೋಗದೊಂದಿಗೆ ಸಂಬಂಧವನ್ನು ಹೊಂದಿದೆ.
4. ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಹಯೋಗದ ಮಟ್ಟವು ಕಡಿಮೆ ಇದೆ.
5. ವಿದ್ಯಾರ್ಥಿಗಳ ಸಮಿತಿಗಳು ಶೈಕ್ಷಣಿಕ ಆಡಳಿತಾಂಗದಲ್ಲಿ ಭಾಗವಹಿಸುವಿಕೆ.
6. ವಿಶ್ವವಿದ್ಯಾನಿಲಯಗಳು ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನ ವಾಹಿನಿ ಭಂಗಗೊಂಡಿರುವುದು ಅವರ ಅಶಿಸ್ತಿಗೆ ಮುಖ್ಯ ಕಾರಣ.
7. ಶಿಕ್ಷಣ ಸಂಸ್ಥೆಗಳು ತಮ್ಮ ಆವರಣದಲ್ಲಿ ಒದಗಿಸುವ ಸೌಲಭ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಅಸಮಾಧಾನವಿದೆ.
8. ವಿಶ್ವವಿದ್ಯಾನಿಲಯಗಳು ಮತ್ತು ಮಹಾವಿದ್ಯಾಲಯಗಳ ಹಗೆತನದಿಂದ ಕೂಡಿದ ಅಧಿಕಾರಶಾಹಿ ಕಾರ್ಯನಿರ್ವಹಣೆಯನ್ನು ವಿದ್ಯಾರ್ಥಿಗಳು ಇಷ್ಟಪಡುವುದಿಲ್ಲ.
9. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಮತ್ತು ಶೈಕ್ಷಣಿಕ ಆಡಳಿತಾಂಗದಲ್ಲಿ ಅವರ ಕ್ರಿಯಾಶೀಲ ಸಹಯೋಗವನ್ನು ಹೆಚ್ಚಿಸಿದೆ.
10. ವಿದ್ಯಾರ್ಥಿ ಸಮುದಾಯ ಕುರಿತು ಆಡಳಿತಗಾರರ ಮತ್ತು ಶಿಕ್ಷಕರ ಅಸಡ್ಡೆಯ ಧೋರಣೆ.

ಶ್ರೀವತ್ಸ ಆರ್.ಸಿ. (1975) ಅವರು ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಸಹಯೋಗದ ಕುರಿತು ನಡೆಸಿದ ದೆಹಲಿ ವಿಶ್ವವಿದ್ಯಾನಿಲಯದ ಅಧ್ಯಯನವು ಸಾಮಾನ್ಯ ಕೋರ್ಸ್‌ಗಳಲ್ಲಿಗಿಂತ ವೃತ್ತಿಪರ ಕೋರ್ಸ್ ವಿದ್ಯಾರ್ಥಿಗಳು ಹೆಚ್ಚು ಶಿಸ್ತುಭರಿತರಾಗಿರುತ್ತಾರೆ ಎಂಬ ಮೂಲ ಗ್ರಹಿಕೆಯಿಂದ ಪ್ರಾರಂಭಗೊಳ್ಳುತ್ತದೆ. ಇಲ್ಲಿ ಕಂಡುಕೊಂಡ ವಿದ್ಯಾರ್ಥಿಗಳ ಸಹಯೋಗವನ್ನು ಪ್ರೋತ್ಸಾಹಿಸುವ ಮುಖ್ಯ ಕಾರಣಗಳು ಹೀಗಿವೆ:

1. ಸಾಮಾಜಿಕ ಜವಾಬ್ದಾರಿಗಳನ್ನು ಕೈಗೊಳ್ಳಲು ಶಾಲೆಯ ತರಬೇತಿ ತಳಹದಿಯಾಗಿರುತ್ತದೆ.
2. ವಿದ್ಯಾರ್ಥಿಗಳು ಪ್ರೌಢತೆ, ಅನುಭವ ಮತ್ತು ಜವಾಬ್ದರಿಯನ್ನು ಹೊಂದಿರುವವರಾಗಿರುತ್ತಾರೆ.
3. ಕಲಿಕೆಯು ದ್ವಿಮಾರ್ಗದ ಕಾರ್ಯವಿಧಾನವಾಗಿದೆ ಮತ್ತು ವಿದ್ಯಾರ್ಥಿಗಳು ಸಹ–ಪಾಲುದಾರರಾಗಿ ಕ್ರಿಯಾಶೀಲ ಸಹಯೋಗಿಗಳಾಗಬೇಕು.
4. ಆಡಳಿತಾಂಗದಲ್ಲಿ ಭಾಗವಹಿಸುವವರ ಮೂಲಕ ವಿದ್ಯಾರ್ಥಿಗಳು ಸೃಜನಶೀಲರು ಮತ್ತು ಜವಾಬ್ದಾರಿಯನ್ನು ಹೊಂದಿರುವವರಾಗುತ್ತಾರೆ.
5. ಆಡಳಿತಾಂಗದಲ್ಲಿ ಭಾಗವಹಿಸಲು (ಪಾಲುಗೊಳ್ಳಲು) ವಿದ್ಯಾರ್ಥಿ

Digitised by Bharatavani, CIIL

ಗಳು ಕಾತುರರಾಗಿರುತ್ತಾರೆ.

ಆಡಳಿತಾಂಗದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡದಿರುವುದಕ್ಕೆ ಶ್ರೀವತ್ಸ್ ಅವರು ಕೆಲವು ಕಾರಣಗಳನ್ನು ಕಂಡುಕೊಂಡಿದ್ದಾರೆ. ಅವು ಹೀಗಿವೆ :

1. ಶಿಕ್ಷಣದ ಮಟ್ಟ ಕೆಳಗಿಳಿಯುವುದು.
2. ಸಂಸ್ಥೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಈ ಹಿಂದೆ ಯಾವುದೇ ಪೂರ್ವಭಾವಿತ್ವ ಇಲ್ಲ.
3. ಇದರಿಂದ ಆಡಳಿತದಲ್ಲಿ ದಕ್ಷತೆ ಕಡಿಮೆಯಾಗುತ್ತದೆ.
4. ವಿದ್ಯಾರ್ಥಿಗಳು ಅನೇಕ ಆಡಳಿತಾತ್ಮಕ ಸಮಸ್ಯೆಗಳನ್ನು ಹುಟ್ಟು ಹಾಕುವವರಲ್ಲದೆ ಯಾವುದೇ ಪರಿಹಾರವನ್ನು ಒದಗಿಸಲಾರರು.
5. ಇದು ವಿದ್ಯಾರ್ಥಿಗಳ ಅಶಿಸ್ತಿಗೆ ದಾರಿ ಮಾಡಿಕೊಡುತ್ತದೆ.
6. ಇದು ಬೋಧನಾ ಸಿಬ್ಬಂದಿಯ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿ ಪರಿಣಮಿಸುತ್ತದೆ.

ಕಾರ್ಸನ್ ತಮ್ಮ ಅಧ್ಯಯನದಲ್ಲಿ (1957) ಕಂಡುಕೊಂಡ ಪ್ರಕಾರ "ಆಡಳಿತದಲ್ಲಿ ಪಾಲುಗೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಒದಗಿಸಿ ಕೊಡಲಾಗಿದೆ. ಅವರ ಅಭಿಪ್ರಾಯಗಳು, ಅದರಲ್ಲಿಯೂ ನಿರ್ದಿಷ್ಟವಾಗಿ ಶೈಕ್ಷಣಿಕ ಮತ್ತು ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಹೆಚ್ಚು ಪ್ರಭಾವಶಾಲಿಯಾಗಿ ಇಲ್ಲ. ನಿರ್ಧಾರ ಕೈಗೊಳ್ಳುವ ವೇದಿಕೆಗಳಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕನ್ನು ಪಡೆದಿರುವ ವಿದ್ಯಾರ್ಥಿಗಳು ಬಹುತೇಕ ಸಂದರ್ಭಗಳಲ್ಲಿ ತಾವು ಗಳಿಸಿರುವ ಅಧಿಕಾರವನ್ನು ಬಳಸಿಕೊಳ್ಳಲು ಸೋತಿರುವುದು ಇದಕ್ಕೆ ಭಾಗಶಃ ಕಾರಣವಾಗಿದೆ. ವಿದ್ಯಾರ್ಥಿ ಚುನಾವಣೆಗಳಲ್ಲಿ ಶೇಕಡ 30ರಷ್ಟು ವಿದ್ಯಾರ್ಥಿಗಳು ಮಾತ್ರ ಭಾಗವಹಿಸುತ್ತಾರೆ." ಹೀಗಾಗಿ, ವಿದ್ಯಾರ್ಥಿಗಳಿಗೆ ಭಾಗವಹಿಸುವ ಅವಕಾಶಗಳನ್ನು ನೀಡಿದರೂ, ಬಹಳಷ್ಟು ಪ್ರತಿಭಾವಂತ ವಿದ್ಯಾರ್ಥಿಗಳು, ವಿಶೇಷವಾಗಿ ಹೆಣ್ಣುಮಕ್ಕಳು ಮತ್ತು ಗ್ರಾಮೀಣ ಹಿನ್ನೆಲೆಯವರು ಶೈಕ್ಷಣಿಕ ಆಡಳಿತಾಂಗದಲ್ಲಿ ಭಾಗವಹಿಸುವುದಿಲ್ಲ.

**ವಿದ್ಯಾರ್ಥಿ ಸರಕಾರದ ವಿಧಗಳು:** ವಿದ್ಯಾರ್ಥಿಗಳು ಶೈಕ್ಷಣಿಕ ಆಡಳಿತಾಂಗದಲ್ಲಿ ವಿವಿಧ ಮಟ್ಟಗಳಲ್ಲಿ ಭಾಗವಹಿಸುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ವಿದ್ಯಾರ್ಥಿಗಳ ಸಂಘ, ಭೌತಿಕ ಸುಲಭ್ಯಗಳು, ಹಾಸ್ಟೆಲ್ ಸೌಲಭ್ಯಗಳು, ಆರ್ಥಿಕತೆ, ಯೋಜನೆ ಮತ್ತು ಸಂಸ್ಥೆಯ ಅಭಿವೃದ್ಧಿ, ಕಟ್ಟಡ ಉಪಕರಣ, ವಿದ್ಯಾರ್ಥಿಗಳ ನೆರವು, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು, ಸಿಬ್ಬಂದಿ ಪ್ರಗತಿ ಮತ್ತು ಮೌಲ್ಯಮಾಪನ ಚಟುವಟಿಕೆಗಳು. ಈ ಚಟುವಟಿಕೆಗಳನ್ನು ನಡೆಸಲು ಈ ಕೆಳಗಿನ ರೀತಿಯ ವಿದ್ಯಾರ್ಥಿ ಸರಕಾರಗಳನ್ನು ಭಾರತೀಯ ಶಾಲೆಗಳು, ಮಹಾವಿದ್ಯಾಲಯಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಕಾಣಬಹುದು.

**ವಿದ್ಯಾರ್ಥಿ ಪರಿಷತ್ತು:** ವಿದ್ಯಾರ್ಥಿಗಳ ಪರಿಷತ್ತನ್ನು ಚುನಾವಣೆ ಅಥವಾ ನಾಮನಿರ್ದೇಶನದ ಮೂಲಕ ರೂಪಿಸಲಾಗುತ್ತದೆ. ಪರಿಷತ್ತಿನಲ್ಲಿ ಬೇರೆ ಬೇರೆ ವರ್ಗಗಳ ಮತ್ತು ವಿಭಾಗಗಳ ವಿದ್ಯಾರ್ಥಿಗಳಿಗೆ ಸೂಕ್ತ ಸ್ಥಾನಮಾನ ನೀಡಲಾಗಿರುತ್ತದೆ. ಬಹಳಷ್ಟು ಪರಿಷತ್ತುಗಳಲ್ಲಿ ಅಧ್ಯಕ್ಷ ಸ್ಥಾನವನ್ನು ನಾಮನಿರ್ದೇಶಿತ ಶಿಕ್ಷಕರಿಗೆ ಕಾದಿರಿಸಲಾಗುತ್ತದೆ. ಸಂಸ್ಥೆಯ ಮುಖ್ಯಸ್ಥರು ಓರ್ವ ಶಿಕ್ಷಕರನ್ನು ಪರಿಷತ್ತಿನ ಅಧ್ಯಕ್ಷನ್ನಾಗಿ ನಾಮನಿರ್ದೇಶಿಸುತ್ತಾರೆ. ಕೆಲವು ಸಂಸ್ಥೆಗಳಲ್ಲಿ ಅಧ್ಯಕ್ಷರು ವಿದ್ಯಾರ್ಥಿಗಳಿಂದ ನೇರವಾಗಿ ಅಥವಾ ಅವರ ಪ್ರತಿನಿಧಿಗಳಿಂದ ಪರೋಕ್ಷವಾಗಿ ಚುನಾಯಿತರಾಗುತ್ತಾರೆ. ಅಧ್ಯಕ್ಷರು ಸಂಸ್ಥೆಯ ಕಾರ್ಯನೀತಿಗಳನ್ನು ರೂಪಿಸುವ ಮತ್ತು ಅವುಗಳನ್ನು ಕಾರ್ಯಾಗತಗೊಳಿಸುವ ಅನೇಕ ವಿಭಾಗಗಳ ಪದನಿಮಿತ್ತ ಸದಸ್ಯರಾಗುತ್ತಾರೆ. ಪ್ರತಿವರ್ಷ ಪರಿಷತ್ತನ್ನು ರೂಪಿಸಲಾಗುವುದು ಮತ್ತು ಸಭೆಯನ್ನು ತಿಂಗಳಿಗೊಮ್ಮೆಯಾದರೂ ನಡೆಸಲಾಗುವುದು. ಉಳಿದ ಸದಸ್ಯರಲ್ಲಿ ಒಬ್ಬರು ಕಾರ್ಯದರ್ಶಿ, ಉಳಿದವರು ಪದಾಧಿಕಾರಿಗಳಾಗುತ್ತಾರೆ. ಉದಾಹರಣೆಗೆ ಕ್ರೀಡೆ, ವಿದ್ಯಾರ್ಥಿನಿಲಯದ ಕಾರ್ಯನಿರ್ವಾಹಕರು, ಖಜಾಂಚಿ, ಶೈಕ್ಷಣಿಕ ವ್ಯವಹಾರಗಳು, ಸಂಸ್ಕೃತಿ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಇತ್ಯಾದಿಗಳು. ಪರಿಷತ್ತು ಬಹುತೇಕ ವಿದ್ಯಾರ್ಥಿಗಳ ವಿಶ್ವಾಸಕ್ಕೆ ಪಾತ್ರವಾಗಿರುವ ತನಕ ಅದು ಸಂಸ್ಥೆಯ ಅಧಿಕಾರವರ್ಗದೊಂದಿಗೆ ಅತಿ ಆತ್ಮೀಯವಾಗಿ, ಅತಿ ಸಮೀಪದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

**ಸಾಮಾನ್ಯ ಸಂಘಟನೆ:** ವಿದ್ಯಾರ್ಥಿಗಳ ಮತ್ತು ಸಂಘಟನೆಯ ಪ್ರಯೋಜನಕ್ಕಾಗಿ ಸಾಮಾನ್ಯ ಸಂಘಟನೆಗಳನ್ನು ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ತಾವೇ ಸೃಷ್ಟಿಸುತ್ತಾರೆ ಅಥವಾ ಸಂಸ್ಥೆಗಳೇ ಅವುಗಳನ್ನು ಸ್ಥಾಪಿಸುತ್ತವೆ. ಬರೋಡಾ ನಗರದ ಕೆಲವು ಶಾಲೆಗಳಲ್ಲಿ 'ಗುಣಮಟ್ಟದ ಗುಂಪುಗಳು' (ಕ್ವಾಲಿಟಿ ಸರ್ಕಲ್ಸ್) ಪ್ರಾರಂಭವಾಗಿರುವುದನ್ನು ಕಾಣುತ್ತೇವೆ. ಈ ರೀತಿಯ ಸಂಘಟನೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಕೆಲವು ಶಿಕ್ಷಕರು ಇರುತ್ತಾರೆ. ಇವರು ಒಟ್ಟಿಗೆ ಚಿಂತನೆ ನಡೆಸಿ ಶಾಲಾ ಅಧಿಕಾರಿಗಳಿಗೆ ಸರಿಯಾದ ನಿರ್ದೇಶನಗಳನ್ನು ಒದಗಿಸುತ್ತಾರೆ. ಈ ರೀತಿಯ ಬೇರೆ ಕೆಲವು ಸಂಘಟನೆಗಳೆಂದರೆ ಭೂಕಂಪ ಪರಿಹಾರ ಸಂಘ, ಥಿಂಕ್–ಟ್ಯಾಂಕ್ ಸಂಸ್ಥೆ, ಮತ್ತು ಶೈಕ್ಷಣಿಕ ಬೆಂಬಲದ ಸಂಘ ಇತ್ಯಾದಿ. ಈ ರೀತಿಯ ಸಂಘಟನೆಗಳ ಕಾರ್ಯಗಳೆಂದರೆ, ಸಂಸ್ಥೆಯ ಅಭಿವೃದ್ಧಿಗೆ ಬೆಂಬಲ ನೀಡುವುದು ಮತ್ತು ಹೊಸ ವಿಚಾರಗಳನ್ನು ಅಸ್ತಿತ್ವಕ್ಕೆ ತರುವುದು. ಸಾಮಾನ್ಯ ಸಂಘಟನೆಗಳು ಸಂಸ್ಥೆಗಳ ಬೆಂಬಲ ಮತ್ತು ಪರವಾನಗಿಯೊಂದಿಗೆ ಅಥವಾ ಅದಿಲ್ಲದೆಯೂ ಕಾರ್ಯನಿರ್ವಹಿಸುತ್ತಿರುವುದು ಕಾಣಬಹುದಾಗಿದೆ.

**ವಿದ್ಯಾರ್ಥಿ ಪ್ರತಿನಿಧಿಗಳ ಸಭೆ (ಕಾಂಗ್ರೆಸ್):**

ಸಂಸ್ಥೆಯ ಆಡಳಿತಾಂಗದಲ್ಲಿ ತಮ್ಮ ಮಾತುಗಳನ್ನು (ಸಲಹೆ/ಸೂಚನೆ/ಅಭಿಪ್ರಾಯ ಇತ್ಯಾದಿ) ಪ್ರಸ್ತುತಪಡಿಸುವ ಸಲುವಾಗಿ ವಿದ್ಯಾರ್ಥಿಗಳು ಸ್ಥಳೀಯ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಬೇರೆ ಬೇರೆ ಸಂಘಟನೆಗಳನ್ನು ರೂಪಿಸುತ್ತಾರೆ. ಈ ರೀತಿಯ ಕೆಲವು

Digitised by Bharatavani, CIIL

ಸಂಘಟನೆಗಳೆಂದರೆ ಪೂರ್ವವಿ ಸಂಘ (ಅಲುಮ್ನಿಗಳ) ಸಂಘ, ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿಗಳ ಸಂಘಟನೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಇತ್ಯಾದಿ. ಈ ವಿಧದ ಎಲ್ಲ ಸಂಘಟನೆಗಳು ಸಂಸ್ಥೆಗಳಿಗೆ ತಮ್ಮ ಭವಿಷ್ಯದ ಕಾರ್ಯಕ್ರಮಗಳನ್ನು ಯೋಜಿಸಲು ಮತ್ತು ನಿರ್ಧಾರ ಕೈಗೊಳ್ಳುವ ಕಾರ್ಯಗತಿಯಲ್ಲಿ ಭಾಗವಹಿಸಲು ನೆರವಾಗುತ್ತವೆ. ಈ ಸಂಘಟನೆಗಳು ಸಂಘಟನೆಯ ಆಡಳಿತದ ಮೇಲೆ ಪ್ರಭಾವ ಬೀರಲು ಎಲ್ಲ ಹಂತಗಳಲ್ಲಿ ಕ್ರಿಯಾಶೀಲವಾಗಿ ಇರುತ್ತವೆ. ಆದರೆ, ಹಲವಾರು ಸಂದರ್ಭಗಳಲ್ಲಿ ಈ ಸಂಘಟನೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ತಮ್ಮ ಧೋರಣೆಗಳು ಮತ್ತು ತಾತ್ವಿಕತೆಯಲ್ಲಿ ಭಿನ್ನವಾಗಿರುವುದನ್ನು ಕಾಣುತ್ತೇವೆ. ಆದುದರಿಂದ ಸಂಸ್ಥೆಗಳು ಮತ್ತು ಈ ಸಂಘಟನೆಗಳ ನಡುವೆ ತೀವ್ರ ಭಿನ್ನತೆಗಳು ಇರುತ್ತವೆ. ಹಾಗಿದ್ದರೂ, ಈ ಸಂಘಟನೆಗಳ ಕೊಡುಗೆಯನ್ನು ನಿರ್ಲಕ್ಷಿಸುವಂತಿಲ್ಲ. ಬಹುಪಾಲು ಭಾರತೀಯ ಶೈಕ್ಷಣಿಕ ಸಂಸ್ಥೆಗಳು ಐವತ್ತರ ದಶಕದ ನಂತರ ಸೃಷ್ಟಿಯಾದ ವಿದ್ಯಾರ್ಥಿ ಕಾಂಗ್ರೆಸ್‌ಗಳಿಂದ ಪ್ರಭಾವ ಹೊಂದಿವೆ.

**ವಿದ್ಯಾರ್ಥಿಗಳ ಸರಕಾರದ ಸಂರಚನೆ:**

ಸಾಮಾನ್ಯವಾಗಿ ಭಾರತದಲ್ಲಿ ಕಂಡುಬರುವ ವಿದ್ಯಾರ್ಥಿ ಸರಕಾರದ ಸಂರಚನೆಯು ಹೀಗಿರುತ್ತದೆ:




Digitised by Bharatavani, CIIL

**ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಉದ್ದೇಶಗಳು:**

1. ಪ್ರಜಾಪ್ರಭುತ್ವವಾದಿ ಕಾರ್ಯವಿಧಾನವು ಕಾರ್ಯನಿರತವಾಗಲು ಅವಕಾಶಗಳನ್ನು ಒದಗಿಸಲು
2. ಪಾಲ್ಗೊಳ್ಳುವಿಕೆ ಮೂಲಕ ಯುವಜನತೆಯು ಪ್ರಜಾಪ್ರಭುತ್ವವನ್ನು ತಿಳಿಯಲು ಅವಕಾಶವನ್ನು ಒದಗಿಸಲು.
3. ತನ್ನ ಶಾಲೆಯ ಕಾರ್ಯಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ವಿದ್ಯಾರ್ಥಿಗಳ ಚಟುವಟಿಕೆಯ ನಿರ್ವಹಣೆಯಲ್ಲಿ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆಗಾಗಿ.
4. ಸಾಮಾನ್ಯ ನೆಲೆಯಲ್ಲಿ ಶಾಲೆಯ ಅಭಿವೃದ್ಧಿಯನ್ನು ಸಾಧಿಸಲು ನೆರವಾಗಬಲ್ಲ ವಿಚಾರಗಳ ತೀರುವೆ ಮನೆಯ ಸ್ಥಾಪನೆಗಾಗಿ.
5. ವಿದ್ಯಾರ್ಥಿಗಳಲ್ಲಿ ಸಂಘಟನೆಯ ಕುರಿತಾಗಿ ಜವಾಬ್ದಾರಿಯ ಭಾವನೆಗಳನ್ನು ಬೆಳೆಸಲು.
6. ಶಾಲೆ ಮತ್ತು ಸಮುದಾಯದ ನಡುವೆ ಆಪ್ತ ಸಂಬಂಧ ಬೆಳೆಸಲು.

**ಕಾರ್ಯಗಳು:**

ಸಂಸ್ಥೆಗಳ ಆಡಳಿತದಲ್ಲಿ ವಿದ್ಯಾರ್ಥಿಗಳು ನಡೆಸುವ ನಿರ್ದಿಷ್ಟ ಕಾರ್ಯಗಳು ಈ ಕೆಳಗಿನಂತಿವೆ:

1. ಎಲ್ಲ ಕ್ಲಬ್‌ಗಳ ಮರು ಅವಲೋಕನ, ಅನುಮೋದನೆ, ಮತ್ತು ಸನ್ನದು ನೀಡುವಿಕೆ.
2. ಚುನಾವಣೆಗಳಲ್ಲಿ ನೆರವು ನೀಡುವಿಕೆ.
3. ಎಲ್ಲ ಪಠ್ಯ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುವುದು.
4. ಚಟುವಟಿಕೆಯ ಮುಂಗಡ ಪತ್ರ ತಯಾರಿಸುವುದು.
5. ವಿದ್ಯಾರ್ಥಿಗಳ ಚಟುವಟಿಕೆಯ ಶುಲ್ಕ ಸಂಗ್ರಹಿಸುವುದು.
6. ಎಲ್ಲ ಶಾಲಾ ಪಕ್ಷಗಳನ್ನು ನಿಯಮಿತಗೊಳಿಸುವುದು.
7. ಎಲ್ಲ ಕೂಟ (ಸಭಾ) ಕಾರ್ಯಕ್ರಮಗಳ ಮೇಲ್ವಿಚಾರಣೆ ನಡೆಸುವುದು.
8. ಎಲ್ಲ ವಿದ್ಯಾರ್ಥಿಗಳ ಸಹ–ಪಠ್ಯ ಚಟುವಟಿಕೆಗಳ ದಾಖಲೆಗಳನ್ನು ಇಡುವುದು.
9. ಸ್ಥಾನ ವ್ಯವಸ್ಥೆಯನ್ನು ರೂಪಿಸುವುದು.
10. ಕ್ರೀಡಾ ಪ್ರಶಸ್ತಿಗಳ ಮೇಲ್ವಿಚಾರಣೆ ನಡೆಸುವುದು.
11. ಮಾಸಿಕಪ್ರಶಸ್ತಿಗಳಿಗಾಗಿ ವಿದ್ಯಾರ್ಥಿಗಳನ್ನು ಆಯ್ಕೆಮಾಡುವುದು.
12. ಶಾಲಾ ಪ್ರಕಟಣೆಗಳು (ಪ್ರಕಾಶನಗಳು)
13. ವಾರ್ಷಿಕ ಉತ್ತಮ ವಿದ್ಯಾರ್ಥಿ ಪ್ರಶಸ್ತಿ ನೀಡುವುದು.
14. ಸದಾಚಾರ ಸಂಹಿತೆಯನ್ನು ರೂಪಿಸಿವುದು.
15. ಉಪಹಾರಗೃಹದೊಂದಿಗೆ ಅತಿ ಸನಿಹದಿಂದ ಕಾರ್ಯ ನಿರ್ವಹಿಸುವುದು.
16. ಮೇಲ್ವಿಚಾರಣೆ ನೋಡಿಕೊಳ್ಳುವುದು.
17. ವಿದ್ಯಾರ್ಥಿ ನ್ಯಾಯಾಲಯವನ್ನು ಸ್ಥಾಪಿಸುವದು.
18. ಶಾಲಾ ವಿದ್ಯಾಪೀಠವನ್ನು ಅಂಗೀಕರಿಸುವುದು.
19. ಹೊಸ ವಿದ್ಯಾರ್ಥಿಗಳು ಶಾಲೆಗೆ ಹೊಂದಿಕೊಳ್ಳುವಂತೆ ಮಾಡುವುದು.
20. ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ನೋಡಿ ಕೊಳ್ಳುವುದು.
21. ವರಮಾನ ಹುಟ್ಟಿಸುವ ಚಟುವಟಿಕೆಗಳನ್ನು ಯೋಜಿ ಸುವುದು ಮತ್ತು ನಡೆಸುವುದು **ಉದಾ:** ಕ್ರೀಡೆಗಳು, ವಾರ್ಷಿಕ ದಿನಾಚರಣೆ, ನಾಟಕ, ಮಗುವಿನ ದತ್ತುಸ್ವೀಕಾರ ರಿಯಾಯಿತಿ ಇತ್ಯಾದಿ.

ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯು ಚರ್ಚೆಯ ವಿಚಾರ ಅಲ್ಲ. ಈ ಕಲ್ಪನೆಯ ಅನ್ವಯತೆಯು ಸಂಸ್ಥೆಯ ತಾತ್ವಿಕತೆ, ಸರಕಾರ ಮತ್ತು ವಿದ್ಯಾರ್ಥಿಗಳ ಪರಿಪಕ್ವತೆಯನ್ನು ಅವಲಂಬಿಸಿ ಇರುತ್ತದೆ. ಹಾಗಿದ್ದರೂ, ಅನೇಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಸಂಸ್ಥೆಯ ಎಲ್ಲ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವುದನ್ನು ಕಾಣುತ್ತೇವೆ. ಇದರಿಂದ ವಿದ್ಯಾರ್ಥಿಗಳು ತಾವು ತಮ್ಮ ಸಂಸ್ಥೆಗೆ ಸೇರಿದವರು ಮತ್ತು ಇದರೊಂದಿಗೆ ಸಂಯೋಜಿಸಿಕೊಂಡವರು ಎಂಬ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ವಿದ್ಯಾರ್ಥಿಗಳ ಬಹುತೇಕ ಅತೃಪ್ತಿ ಮತ್ತು ಸಮಸ್ಯೆಗಳನ್ನು ತಪ್ಪಿಸಬಹುದಾಗಿದೆ. ಅನೇಕ ಭಾರತೀಯ ಮತ್ತು ವಿದೇಶಿ ವಿಶ್ವವಿದ್ಯಾಲಯಗಳು ಶೈಕ್ಷಣಿಕ ಆಡಳಿತಾಂಗದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಜಾರಿಗೆ ತಂದಿದ್ದಾರೆ. ಸಾಂಸ್ಥಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಕ್ರಿಯಾಶೀಲ ತೊಡಗಿಸಿಕೊಳ್ಳುವಿಕೆಯನ್ನು ರಾಷ್ಟ್ರಮಟ್ಟದ ಸಮಿತಿಗಳು, ಆಯೋಗಗಳು ಮತ್ತು ಟಿಕ್ಯುಎಮ್ ತಜ್ಞರು ಕೂಡಾ ಒತ್ತಾಯಿಸಿದ್ದಾರೆ.

ಮೂಲ: ಎನ್. ಪ್ರಧಾನ್
ಅನು: ಡಾ. ಗೀತಾ ಶೆಣೈ.

## ಶೈಕ್ಷಣಿಕ ಚಲನಚಿತ್ರಗಳು

**ಶೈಕ್ಷಣಿಕ ಚಲನಚಿತ್ರಗಳ ಮೌಲ್ಯ:** ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಶೈಕ್ಷಣಿಕ ಚಲನಚಿತ್ರಗಳು ವೈವಿಧ್ಯಮಯವಾಗಿದ್ದು ಪ್ರಧಾನ ಪಾತ್ರವನ್ನು ಗಳಿಸಿಕೊಂಡಿವೆ. ಆದಾಗ್ಯೂ ಭಾರತದಲ್ಲಿ ಶೈಕ್ಷಣಿಕ ಚಲನಚಿತ್ರಗಳ ನಿರ್ಮಾಣ ಮತ್ತು ಉಪಯೋಗವು ಉಪಕರಣಗಳ

Digitised by Bharatavani, CIIL

ದುಬಾರಿ ಬೆಲೆ, ಇತರ ಆಡಳಿತ ನಿರ್ವಹಣೆ ಮತ್ತು ಆಡಳಿತಾತ್ಮಕ ಸಂಕೀರ್ಣತೆಗಳಿಂದಾಗಿ ಅತಿ ನಿಧಾನವಾಗಿ ಸಾಗುತ್ತಿದೆ. ತರಗತಿಗಳಲ್ಲಿ ಕಲಿಸುವುದರಲ್ಲಿ ಇದೊಂದು ಸಾಹಸವೇ ಆಗಿ ಸೇರಿದ್ದು ಒಟ್ಟಾರೆ ಶೈಕ್ಷಣಿಕ ಚಲನಚಿತ್ರಗಳನ್ನು ಅತ್ಯಂತ ಆಧುನಿಕವಾದ ಶಿಕ್ಷಣದ ಸಾಧನ ಎಂದು ಮಾನ್ಯ ಮಾಡಲಾಗಿದೆ. ಕೊಠಡಿಯು ಕತ್ತಲೆಯಾಗಿದ್ದು, ಪ್ರೊಜೆಕ್ಟರ್‌ನಿಂದ ಚಲನಚಿತ್ರವು ಪರದೆಯ ಮೇಲೆ ಮೂಡಿದಾಗ ವಿದ್ಯಾರ್ಥಿಗಳು ಹೆಚ್ಚು ಕಲ್ಪನಾಶೀಲರಾಗಿ ಕಾರ್ಯಕ್ರಮದ ವಸ್ತುವಿನ ಮೇಲೆ ಗಮನ ಕೇಂದ್ರೀಕರಿಸುತ್ತಾರೆ. ವಿಷಯವನ್ನು ಮರೆಯದಂತೆ ಕಲಿಯುವಲ್ಲಿ ಮಹತ್ತರವಾದ ಅವಕಾಶವನ್ನು ಇದು ಒದಗಿಸುವುದರಿಂದ ನಿರ್ಬಂಧವಿಲ್ಲದ ವಾತಾವರಣದಲ್ಲಿ ಕಲಿಯುವವರು ಸಂಪೂರ್ಣವಾಗಿ ತನ್ಮಯರಾಗುತ್ತಾರೆ. ಶೈಕ್ಷಣಿಕ ಚಲನಚಿತ್ರಗಳು ದೂರದರ್ಶನ ಕಾರ್ಯಕ್ರಮಗಳಿಗೆ ಹೋಲಿಸಿದರೆ ಹೆಚ್ಚು ಸುದೀರ್ಘಾವಧಿಯ ಬಾಳಿಕೆಯನ್ನು ಹೊಂದಿರುತ್ತವೆ ಮತ್ತು ಸಂಕೀರ್ಣವಾದ ಪರಿಕಲ್ಪನೆಗಳನ್ನು ಗ್ರಹಿಸುವಲ್ಲಿ ಅತ್ಯಂತ ಪ್ರಬಲವಾದ ಬೋಧನಾ ಮಾಧ್ಯಮಗಳಲ್ಲಿ ಒಂದಾಗಿ ಮುಖ್ಯ ಪಾತ್ರವಹಿಸುತ್ತದೆ.

ಶೈಕ್ಷಣಿಕ ಚಲನಚಿತ್ರಗಳು ಕಲಿಕೆಯನ್ನು ಪ್ರಚೋದಿಸುತ್ತದೆ. ಅದರಲ್ಲೂ ವಿಶೇಷವಾಗಿ ಸಾಮೂಹಿಕ ಚರ್ಚೆ ಮತ್ತು ಪ್ರಯೋಗಗಳಲ್ಲಿ ನಿರತವಾದ ಸಂದರ್ಭಗಳಲ್ಲಿ ಅದರ ಪ್ರಯೋಜನ ಪರಿಣಾಮಕಾರಿ. ವೈವಿಧ್ಯಮಯವಾದ ದೃಶ್ಯಗಳು ಮತ್ತು ಪದಗಳಿಂದ ಅನುಭವಗಳನ್ನು ಸಮೃದ್ಧಿಗೊಳಿಸಿ ಕಲಿಕಾ ವಿಧಾನಕ್ಕೆ ಪ್ರೇರಕಶಕ್ತಿಯನ್ನು ಒದಗಿಸುತ್ತವೆ. ಶೈಕ್ಷಣಿಕ ಚಲನಚಿತ್ರಗಳು ತರ್ಕಬದ್ಧವಾದ ಮತ್ತು ಅನುಕ್ರಮವಾದ ಕಲಿಕೆಗೆ ಸಹಾಯಕವಾಗುವುದರಿಂದ ಉರುಹಚ್ಚುವ ಕುರುಡು ಪದ್ಧತಿಯನ್ನು ನಿವಾರಿಸುತ್ತವೆ. ಚಲನಚಿತ್ರವೊಂದರಲ್ಲಿ ಘಟನೆಗಳು ಮತ್ತು ಪ್ರಯೋಗಗಳ ಸಮ್ಮಿಶ್ರವಿರುವುದರಿಂದ ಶಿಕ್ಷಕರು ಮತ್ತು ಕಲಿಯುವವರಿಗೆ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಆ ಬಗ್ಗೆ ಚಿಂತನೆಗೆ ತೊಡಗಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುತದೆ. ಪಠ್ಯಪುಸ್ತಕಗಳಲ್ಲಿ ಈಗಾಗಲೇ ಇರುವ ಮಾಹಿತಿಗಳನ್ನು ಶೈಕ್ಷಣಿಕ ಚಲನಚಿತ್ರಗಳು ಅಚ್ಚೊತ್ತುವಂತೆ ಭದ್ರಪಡಿಸಿ ಕಲಿಯುವವರ ಜ್ಞಾನವನ್ನು ಹೆಚ್ಚಿಸುತ್ತವೆ. ಚಲನಚಿತ್ರಗಳಲ್ಲಿನ ದೃಶ್ಯಗಳ ಪೂರಕವಾದ ವ್ಯಾಖ್ಯಾನ ವಿವರಣೆ ಇರುವುದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ವರ್ತನೆಗಳಲ್ಲಿ ಅಗಾಧವಾದ ರೀತಿಯಲ್ಲಿ ಗಮನಾರ್ಹ ಬದಲಾವಣೆಗೆ ಕಾರಣಬರುತ್ತದೆ.

ಒಂದು ಚಿತ್ರವು ಸಾವಿರ ಪದಗಳಿಗಿಂತ ಮಿಗಿಲು ಎಂಬ ಪ್ರಸಿದ್ಧ ಹೇಳಿಕೆಯುಂಟು. ಚಲನಚಿತ್ರವು ಶಬ್ದ ಸಹಿತವಾಗಿರುವುದರಿಂದ ಕೇವಲ ಅಧಿಕ ವಿವರಣೆ ಕೊಡುವುದಕ್ಕಿಂತ ಹೆಚ್ಚು ಪರಿಣಾಮ ಬೀರುತ್ತದೆ. ಚಟುವಟಿಕೆಗಳು ತಮ್ಮ ಪ್ರಯೋಗಳೇ ಮುಂತಾದವನ್ನು ನೈಜವಾಗಿ ಒಳಗೊಳ್ಳುವುದರಿಂದ ಮತ್ತು ವರ್ತಮಾನಕ್ಕೆ ಸಂಬಂಧಿಸಿದಂತೆ ಹೇಳುವುದರಿಂದ ಭೂತಕಾಲದ ಘಟನೆಗಳು ಜೀವಂತವಾಗಿದ್ದು ಶೈಕ್ಷಣಿಕ ಚಲನಚಿತ್ರಗಳು ತರಗತಿಗಳಿಗೆ ಹೆಚ್ಚು ವಾಸ್ತವತೆಯನ್ನುಂಟು ಮಾಡುತ್ತವೆ. ಪಠ್ಯಮಾಧ್ಯಮದಲ್ಲಿ ವಿಷಯಗಳನ್ನು ನಿಸ್ತೇಜವಾಗಿ ಓದುವಲ್ಲಿ ವಿದ್ಯಾರ್ಥಿಗಳು ಆಸಕ್ತಿಯನ್ನು ಕಳೆದುಕೊಳ್ಳುವುದಕ್ಕಿಂತ ದೃಶ್ಯಾತ್ಮಕವಾಗಿ ಗ್ರಹಿಸಿ ಅನುಭವಿಸುವುದರಿಂದ ಸಂದೇಶವನ್ನು ಸುಲಭವಾಗಿ ಸ್ವೀಕರಿಸಬಹುದು. ಕಲಿಯಬೇಕಾದ ವಿಷಯದ ಅಧ್ಯಯನಕ್ಕಿಂತ ರಾಷ್ಟ್ರೀಯ ಆಶೋತ್ತರಗಳು, ಸಾಧನೆಗಳು, ಮೌಲ್ಯಗಳು ಮತ್ತು ನೀತಿಗಳನ್ನು ವಿಶಿಷ್ಟ ವಿಷಯ ಸತ್ವದಿಂದ ಶೈಕ್ಷಣಿಕ ಚಲನಚಿತ್ರಗಳು ಪ್ರತಿಬಿಂಬಿಸುತ್ತವೆ. ಶೈಕ್ಷಣಿಕ ಚಲನಚಿತ್ರಗಳು ಪ್ರಮುಖವಾಗಿ ಮೂಲಭೂತ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಒತ್ತು ನೀಡುವ ಉದ್ದೇಶವನ್ನು ಹೊಂದಿರುವುದಲ್ಲದೆ, ವಿವಿಧ ವಿಷಯಗಳಲ್ಲಿ ಕೌಶಲಗಳನ್ನು ಹೆಚ್ಚಿಸಿ ಸುಸಂಸ್ಕೃತ ಅಭಿರುಚಿಯನ್ನು ಅಭಿವೃದ್ಧಿಪಡಿಸುತ್ತದೆ. ಒಂದು ಶಕ್ತಿಯುತವಾದ ಸಂವಹನ ಮಾಧ್ಯಮವಾಗಿ ತಿಳಿಸುವ, ಕಲಿಸುವ, ಮನರಂಜನೆ ನೀಡುವ ಮತ್ತು ಪ್ರೇರಣೆ ನೀಡುವುದೇ ಮುಂತಾದ ಮಾಧ್ಯಮವಾಗಿ ಶೈಕ್ಷಣಿಕ ಚಲನಚಿತ್ರಗಳನ್ನು ದುಡಿಸಿಕೊಳ್ಳಬಹುದಾಗಿದೆ. ಶಾಲೆಯಿಂದಾಚೆ ಅಥವಾ ತರಗತಿಗಳ ಒಳಗೆ ಸಾಂಪ್ರದಾಯಕವಾಗಿ ಕಲಿಸುವುದಕ್ಕಿಂತ ದೀರ್ಘಾವಧಿಗೂ ಹೆಚ್ಚು ಕಾಲ ಪಠ್ಯವಿಷಯವನ್ನು ಚಲನಚಿತ್ರಗಳ ಮೂಲಕ ನಿರ್ವಹಿಸಬಹುದಾಗಿದೆ. ತರಗತಿಗಳ ಬೋಧನೆಗೆ ಚಲನಚಿತ್ರಗಳನ್ನು ಉಪಯೋಗಿಸಿಕೊಳ್ಳುವುದರಿಂದ ಸುಲಭವಾಗಿ ವಿಷಯಗಳನ್ನು ನಿರೂಪಿಸುವುದು ಮತ್ತು ಸಮರ್ಥಿಸುವುದು ಪರಿಣಾಮಕಾರಿಯಾಗಿರುತ್ತದೆ. ಚಲನಚಿತ್ರವು ಚಲನೆಯನ್ನು ಒಳಗೊಂಡ ಮಾಧ್ಯಮ ಮತ್ತು ಈ ಮಾಧ್ಯಮದ ಮೂಲಕ ಚಲನಶೀಲವಾದ ವಿಷಯಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಸಮರ್ಥಿಸಿ ನಿರೂಪಿಸಬಹುದು. ಉದಾಹರಣೆಗೆ ಒಂದು ಎಂಜಿನ್ ಕಾರ್ಯನಿರ್ವಹಣೆಯ ಸಂಕೀರ್ಣತೆಗಳನ್ನು ಗ್ರಹಿಸಲು ಚಲನಚಿತ್ರವು ಉತ್ತಮ ಮಾಧ್ಯಮವಾಗಿರುತ್ತದೆ.

ಚಲನಚಿತ್ರವು ಒಂದು ಆಲೋಚನೆಯನ್ನು ಬಹು ಶೀಘ್ರವಾಗಿ ಮತ್ತು ಅಳಿಯದಂತೆ ದೃಶ್ಯ ಗೋಚರ ಶ್ರವಣ ಸಾಧ್ಯ ಬಿಂಬಗಳನ್ನು ಕಲಿಸಲು ಬೇಕಾಗುವ ಸಮಯವನ್ನು ಕಡಿಮೆಗೊಳಿಸಬಲ್ಲದು. ಈ ಮಾಧ್ಯಮದಿಂದ ಬಹು ಸಂಕೀರ್ಣ ಪ್ರಯೋಗಗಳನ್ನು ಸಮರ್ಥವಾಗಿ ಪ್ರದರ್ಶನಗೊಳಿಸಲು ಸಾಧ್ಯವಾಗುತ್ತದೆ. ಇದು ಪರಿಣಿತ ಬೋಧನಾ ಕೌಶಲ್ಯಗಳನ್ನು ಒಳಗೊಂಡಿರುವುದರಿಂದ ಒಬ್ಬ ಅತ್ಯುತ್ತಮ ಶಿಕ್ಷಕನಿಗೆ ಹೆಚ್ಚಾಗಿ ವಿದ್ಯಾರ್ಥಿಗಳಿಗೂ ವೀಕ್ಷಕರಿಗೂ ಒಂದು ವಿಷಯವನ್ನು ಪರಿಣಾಮಕಾರಿಯಾಗಿ ಬೋಧಿಸಲು ಅವಕಾಶ ನೀಡುತ್ತದೆ. ವಿದ್ಯಾರ್ಥಿಗಳು ಇಂತಹ ಚಲನಚಿತ್ರವನ್ನು ನೋಡುವುದರಿಂದ ಅದೇ ಮೂಲಭೂತ ಆಲೋಚನೆಗಳನ್ನು ಮತ್ತು ತಂತ್ರಗಳನ್ನು ಒಟ್ಟಾಗಿ ನೋಡುವುದರಿಂದ ಎಲ್ಲಾ ವಿದ್ಯಾರ್ಥಿಗಳಿಗೂ ಒಂದೇ ವಿಧವಾದ ಸಾಮಾನ್ಯ ಅನುಭವಗಳನ್ನು ಉಂಟುಮಾಡುತ್ತದೆ. ಶಿಕ್ಷಕರು ಬೇರೆಯವರಿಂದ ಪಠ್ಯವಿಷಯಗಳನ್ನು ಬೋಧನಾ ಪದ್ಧತಿಗಳನ್ನು ಗಮನಿಸುವುದರಿಂದ ತನ್ಮೂಲಕ ತಮ್ಮ ಬೋಧನಾ ವಿಧಾನದ ಜ್ಞಾನವನ್ನು ವಿಸ್ತರಿಸಿಕೊಳ್ಳುತ್ತಾರೆ. ಮಾನವರಲ್ಲಿ ಇರುವ ವಿಶೇಷ ಗುಣಗಳನ್ನು ಬದಲಾಯಿಸುವುದು ಚಲನಚಿತ್ರದ ಉದ್ದೇಶವಲ್ಲ. ಇದು ಆ ಕೆಲಸವನ್ನು ಭಾಗಶಃ ಮಾಡುತ್ತದೆ. ಉಳಿದುದನ್ನು ಮಾನವ ಮೂಲಾಂಶವು ಅಚ್ಚೊತ್ತುವಂತೆ ಕೌಶಲದಿಂದ ನಿರ್ವಹಿಸುತ್ತದೆ. ಅಸಾಧ್ಯವೂ ಅವಾಸ್ತವೂ ಆದ ಸಾಂಪ್ರದಾಯಕ

Digitised by Bharatavani, CIIL

ತರಗತಿ ಬೋಧನೆಗಳಿಗಿಂತ, ಚಲನಚಿತ್ರಗಳು ಹಲವು ರೀತಿಯ ಮತ್ತು ವೈವಿಧ್ಯಮಯವಾದ ಕಲಿಕೆಯ ಅನುಭವಗಳನ್ನು ಹೆಚ್ಚು ಸಮರ್ಥವಾಗಿ ಹೊಂದಿರುತ್ತದೆ.

ಶೈಕ್ಷಣಿಕ ಚಲನಚಿತ್ರಗಳ ಬಳಕೆಯ ಬಗ್ಗೆ ಸಮ್ಮಿಶ್ರ ಪ್ರತಿಕ್ರಿಯೆಗಳಿವೆ. ಶೈಕ್ಷಣಿಕ ಚಲನಚಿತ್ರಗಳು ಪಾಶ್ಚಾತ್ಯರಿಂದ ಆಮದುಗೊಳಿಸಿಕೊಂಡ ವೈಭವೋಪೇತ ಸಾಧನಗಳು ಮತ್ತು ಬೋಧನೆ–ಕಲಿಕೆಗಳ ಪ್ರಕ್ರಿಯೆಯಲ್ಲಿ ಶೈಕ್ಷಣಿಕ ಚಲನಚಿತ್ರಗಳ ಕೊಡುಗೆ ಇರುವುದಿಲ್ಲ ಎಂದು ಒಂದು ವರ್ಗದ ಜನರು ವಿರೋಧಿಸುತ್ತಾರೆ. ಇವು ಶಿಕ್ಷಣದ ಆಂತರ್ಯವನ್ನು ಬಹಿರಂಗಪಡಿಸಲು ಜೋಡಿಸಿದ ಅಲಂಕಾರದ ಬೆಡಗಿನಂತಿದೆ. ಶೈಕ್ಷಣಿಕ ಚಲನಚಿತ್ರಗಳು ನಿಜವಾಗಿಯೂ ಹಲವು ನಿರ್ಧರಿತ ಪರಿಕಲ್ಪನೆಗಳನ್ನು ಗ್ರಹಿಸಿಕೊಳ್ಳಲು ಉಪಯುಕ್ತವೆಂದು ಇನ್ನೊಂದು ವರ್ಗ ಬಲವಾಗಿ ಪ್ರತಿಪಾದಿಸುತ್ತದೆ. ಈ ವರ್ಗವು ಶೈಕ್ಷಣಿಕ ಚಲನಚಿತ್ರಗಳ ಯೋಗ್ಯ ರೀತಿಯ ಬಳಕೆಯಲ್ಲಿನ ವಿಫಲತೆಯನ್ನು ಆರೋಪಿಸುವ ಸಂಶೋಧಕರು ಮತ್ತು ಶಿಕ್ಷಣತಜ್ಞರು ಈ ವರ್ಗವನ್ನು ಪ್ರತಿನಿಧಿಸುತ್ತಾರೆ. ಶೈಕ್ಷಣಿಕ ಚಲನಚಿತ್ರಗಳು ನಿರೂಪಿಸುವ ವಸ್ತು ವಿವರಣೆ ಸಹಿತವಾಗಿರುತ್ತದೆ. ಮತ್ತು ಅದು ವಾಸ್ತವತೆ ಸುಸ್ಪಷ್ಟತೆ ಮತ್ತು ಖಚಿತತೆಗಳಿಂದ ಸಮರ್ಥವಾಗಿರುತ್ತದೆ. ಇದು ಶೈಕ್ಷಣಿಕ ಚಲನಚಿತ್ರಗಳ ಪ್ರಮುಖ ಅನುಕೂಲವಾಗಿದೆ.

**ಐತಿಹಾಸಿಕ ಬೆಳವಣಿಗೆ:** ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ರಾಜ್ಯಸರ್ಕಾರಗಳು ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಮತ್ತು ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸಲು ಅವಶ್ಯಕತೆಯನ್ನು ಮನಗಂಡವು. ಶೈಕ್ಷಣಿಕ ಅಭಿವೃದ್ಧಿಯ ಪ್ರಮುಖ ಗುರಿಯು ಪ್ರಾಥಮಿಕ ಶಿಕ್ಷಣವನ್ನು ತೃಪ್ತಿಕರ ಗುಣಮಟ್ಟದಲ್ಲಿ ಸಾರ್ವತ್ರೀಕರಣಗೊಳಿಸುವುದೇ ಆಗಿದೆ. ಈ ಪ್ರಯತ್ನದಲ್ಲಿ ರೇಡಿಯೋ, ದೂರದರ್ಶನ ಪ್ರಸಾರಗಳು ಶೈಕ್ಷಣಿಕ ಚಲನಚಿತ್ರಗಳೇ ಇತ್ಯಾದಿಯಾಗಿ ನಾನಾ ವಿಧದ ಮಾರ್ಗಗಳನ್ನು ವಿಸ್ತೃತವಾಗಿ ಬಳಕೆಯಲ್ಲಿ ತರಲಾಗಿದೆ. 1950ರವರೆಗೂ 16 ಮಿ.ಮಿ. ಶೈಕ್ಷಣಿಕ ಚಲನಚಿತ್ರಗಳ ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದನೆ ಮತ್ತು ಆಯ್ದಚಿತ್ರಗಳನ್ನು ಪ್ರಾದೇಶಿಕ ಭಾಷೆಗಳಿಗೆ ಡಬ್ಬಿಂಗ್ ಮಾಡುವ ಯೋಜನೆಗಳು ಕಾರ್ಯರೂಪಕ್ಕೆ ಬರಲಿಲ್ಲ. ಚಿತ್ರಗಳ ಕೈಗಾರಿಕಾ ಸೌಲಭ್ಯಗಳು ಪ್ರಮುಖವಾಗಿ ಮುಂಬಯಿಗೂ ನಂತರ ಚೆನ್ನೈಗೂ ಸೀಮಿತಗೊಂಡಿದ್ದವು. ಅಂದಿನ ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯವು ಕೇಂದ್ರ ಚಲನಚಿತ್ರ ಗ್ರಂಥಾಲಯದಲ್ಲಿ ಶ್ರವ್ಯದೃಶ್ಯ ವಿಭಾಗವನ್ನು ಸ್ಥಾಪಿಸಿತು. ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಮಂಡಳಿಯ (NCERT) ಅಧೀನದಲ್ಲಿರುವ ಈ ವಿಭಾಗವು ರಾಷ್ಟ್ರೀಯ ಶ್ರವ್ಯ–ದೃಶ್ಯ ಶಿಕ್ಷಣ ಸಂಸ್ಥೆಯ ಒಂದು ಅಂಗವಾಗಿದೆ. ಅದೇ ರೀತಿಯ ಶೈಕ್ಷಣಿಕ ಚಲನಚಿತ್ರ ಗ್ರಂಥಾಲಯಗಳು ರಾಜ್ಯ ಶ್ರವ್ಯ–ದೃಶ್ಯ ಘಟಕಗಳು/ಶೈಕ್ಷಣಿಕ ತಂತ್ರಜ್ಞಾನ ಸೆಟ್‌ಗಳಾಗಿ ಸ್ಥಾಪಿತವಾದವು. ಈ ಬೆಳವಣಿಗೆಯಷ್ಟೇ ಅಲ್ಲದೆ ಶೈಕ್ಷಣಿಕ ಚಿತ್ರಗಳ ಗ್ರಂಥಾಲಯಗಳು ಬ್ರಿಟಿಷ್ ಕೌನ್ಸಿಲ್‌ನ ಯುನೈಟೆಡ್ ಸ್ಟೇಟ್ಸ್ ಇನ್‌ಫರ್ಮೇಷನ್ ಸರ್ವಿಸ್, ನ್ಯಾಷನಲ್ ಫಿಲ್ಮ್ ಬೋರ್ಡ್ ಆಫ್ ಕೆನಡಾ, ರಶಿಯನ್ ಇನ್‌ಫರ್ಮೇಶನ್ ಸರ್ವಿಸ್ ಇತ್ಯಾದಿಗಳಿಂದ ನಿರ್ವಹಿಸಲ್ಪಡುತ್ತಿವೆ. ಮತ್ತು ಈ ಶೈಕ್ಷಣಿಕ ಚಲನಚಿತ್ರ ಸಂಗ್ರಹಾಲಯಗಳಿಂದ ಶಿಕ್ಷಣ ಸಂಸ್ಥೆಗಳು ಮತ್ತು ವ್ಯಕ್ತಿಗಳು ಚಲನಚಿತ್ರಗಳನ್ನು ತೆಗೆದುಕೊಳ್ಳುವ ಅವಕಾಶಗಳನ್ನು ಒದಗಿಸಲಾಗಿದೆ.

**ಬೋಧನಾತ್ಮಕ ಮತ್ತು ಶೈಕ್ಷಣಿಕ ಚಲನಚಿತ್ರಗಳ ವ್ಯತ್ಯಾಸಗಳು:**

ಬೋಧನಾತ್ಮಕ ಚಿತ್ರಗಳು ಮತ್ತು ಶೈಕ್ಷಣಿಕ ಚಲನಚಿತ್ರಗಳ ನಡುವೆ ವ್ಯತ್ಯಾಸ ಕಲ್ಪಿಸುವುದು ಅಗತ್ಯವಾಗಿದೆ. ಬೋಧನಾತ್ಮಕ ಚಲನಚಿತ್ರಗಳೆಂದರೆ ಪಠ್ಯದ ನಿಗದಿತ ವಿಷಯವನ್ನು ಒಳಗೊಂಡಂತೆ ನೇರ ತರಗತಿಯ ಬೋಧನೆಯನ್ನು ಒಳಗೊಳ್ಳುವ ಚಲನಚಿತ್ರಗಳು. ಇವು ಪಠ್ಯಪುಸ್ತಕಗಳಲ್ಲಿ ನೀಡಿರುವ ಪಠ್ಯಕ್ಕೆ ಪೂರಕವಾಗಿ ಹೆಚ್ಚಿನ ಮಾಹಿತಿಗಳನ್ನು ಒದಗಿಸಿ ಕೊಡುತ್ತವೆ ಮತ್ತು ಸಮರ್ಥಿಸುತ್ತವೆ. ಶೈಕ್ಷಣಿಕ ಚಲನಚಿತ್ರಗಳು ಮತ್ತೊಂದೆಡೆ, ಪಠ್ಯಪುಸ್ತಕದಾಚೆಗೂ ಹೆಚ್ಚು ಮಾಹಿತಿಗಳನ್ನು ಒದಗಿಸುತ್ತವೆ. ಅವು ಒಂದು ವಿಧದಲ್ಲಿ ಪೂರಕ ಪಠ್ಯಮಾಹಿತಿಗಳ ಸ್ವರೂಪದಲ್ಲಿವೆ. ಶೈಕ್ಷಣಿಕ ಚಲನಚಿತ್ರಗಳು ಪಠ್ಯಪುಸ್ತಕಗಳಲ್ಲಿರುವ ಮೂಲಭೂತ ಪರಿಕಲ್ಪನೆಗಳು ಮತ್ತು ಆಲೋಚನೆಗಳನ್ನು ಸಮೃದ್ಧಗೊಳಿಸುವ ಮಾಹಿತಿಗಳು ಮತ್ತು ಅನುಭವಗಳನ್ನು ಒಳಗೊಂಡಿರುತ್ತವೆ. ಗುಡ್ ಎಂಬುವನು ಶೈಕ್ಷಣಿಕ ಮತ್ತು ಬೋಧನಾತ್ಮಕ ಚಲನಚಿತ್ರಗಳ ವ್ಯತ್ಯಾಸ ಹೀಗೆ ಕಲ್ಪಿಸಿದ್ದಾನೆ. ಒಬ್ಬ ವ್ಯಕ್ತಿಯು ತನ್ನ ಸಾಮರ್ಥ್ಯಗಳನ್ನು ಮನೋಭಾವಗಳನ್ನು ಮತ್ತು ಸಮಾಜದಲ್ಲಿರುವ ಇತರ ನಡೆವಳಿಕೆಗಳು ಅಥವಾ ಗುಣಾತ್ಮಕ ಮೌಲ್ಯಗಳನ್ನೂ ಬೆಳೆಸಿಕೊಳ್ಳುವುದು ಮತ್ತು ಜನರು ಸಾಮಾಜಿಕ ದಕ್ಷತೆ, ಮತ್ತು ಅನುಕೂಲ ಪರಿಸ್ಥಿತಿಯಲ್ಲಿ ಪಠ್ಯಕ್ಕೆ ಸಂಬಂಧಿಸಿದಂತೆ ಚಲನಚಿತ್ರಗಳನ್ನು ಮಾಡುವ ಕೆಲವು ಪ್ರಯತ್ನಗಳು ನಡೆದಿವೆ; ಉದಾಹರಣೆಗೆ ಸೂರ್ಯಗ್ರಹಣ, ಭಾರತದ ಭೌಗೋಳಿಕ ಲಕ್ಷಣಗಳು, ಭಾರತದ ಸ್ವಾತಂತ್ರ್ಯ ಹೋರಾಟ, ಖಗೋಳ ಶಾಸ್ತ್ರ ಮಾಲಿಕೆ, ಪರಿಸರದ ಮೂಲಕ ಕಲಿಯುವುದು, ವಿಜ್ಞಾನವು ಜೀವನದ ಒಂದು ಭಾಗ, ಶಿಲೆಗಳು ಮತ್ತು ಮಣ್ಣು, ವರ್ತುಲ ಇತ್ಯಾದಿಗಳ ಸಚಿತ್ರ ವಿವರಣೆಗಳು.

**ಶಿಕ್ಷಕರ ಸಿದ್ಧತೆ ಮತ್ತು ಪಾತ್ರ:** ತರಗತಿಗಳಲ್ಲಿ ಶೈಕ್ಷಣಿಕ ಚಲನಚಿತ್ರಗಳನ್ನು ಉಪಯೋಗಿಸುವ ಶಿಕ್ಷಕರಿಗೆ ಹೆಚ್ಚಿನ ಸಿದ್ಧತೆಯ ಅಗತ್ಯವಿರುತ್ತದೆ. ಇದೂ ಅಲ್ಲದೆ, ಚಲನಚಿತ್ರ ಮಾರ್ಗದರ್ಶಿ ಹಾಳೆಗಳು ಸಂದೇಹ ನಿವಾರಕಗಳಾಗಿದ್ದು ವಿದ್ಯಾರ್ಥಿಗಳಿಗೆ ವಿಷಯದೊಡನೆ ಚಲನಚಿತ್ರವನ್ನು ಸಂಯೋಜಿಸುವಲ್ಲಿ ಪರಿಣಾಮ ಬೀರುತ್ತವೆ. ಚಲನಚಿತ್ರವನ್ನು ಸ್ವಲ್ಪ ಸ್ವಲ್ಪವಾಗಿ ತೋರಿಸುವುದರಿಂದ, ವಿಷಯದ ಕಲಿಕೆಯು ಎಷ್ಟರ ಮಟ್ಟಿಗೆ ಆಗಿದೆಯೆಂಬುದನ್ನು ನಿರ್ಧರಿಸಲು ಶಿಕ್ಷಕರು ಪಠ್ಯ ಸಂದರ್ಭವನ್ನು ವಿದ್ಯಾರ್ಥಿಗಳೊಡನೆ ಚರ್ಚಿಸಲು ಇಷ್ಟಪಡಬಹುದು. ಚಲನಚಿತ್ರ ಸಂಗ್ರಹಾಲಯಗಳಲ್ಲಿ ಇರುವ ಸಿಬ್ಬಂದಿಗಳಿಗೆ ಮಾಹಿತಿ ಪುಸ್ತಕಗಳನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ದಿಶಾನಿರ್ದೇಶನ (ಒರಿಯೆಂಟೇಷನ್) ಒದಗಿಸುವ ಅಗತ್ಯವಿದೆ. ಶೈಕ್ಷಣಿಕ ಚಲನಚಿತ್ರಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಜಾಗೃತಿಯನ್ನು ಉಂಟು ಮಾಡುವುದರಿಂದ ಅವರಿಗೆ ಅದನ್ನು ಸಿದ್ಧಪಡಿಸುವ ಹಾಗೂ ಚಲನಚಿತ್ರ ಸಂಗ್ರಹಾಲಯವನ್ನು ಅಭಿವೃದ್ಧಿಪಡಿಸುವ ವಿಧಾನಗಳಲ್ಲಿ ತಾಂತ್ರಿಕತೆಯನ್ನು ಅಳವಡಿಸುವ ಮೂಲಭೂತ

Digitised by Bharatavani, CIIL

ಕೌಶಲಗಳನ್ನು ಕಲಿಸಬೇಕಾಗಿದೆ. ಇದರಲ್ಲಿ ರೀವೈಂಡಿಗ್ ರೀಲನ್ನು ಕತ್ತರಿಸಿ ಜೋಡಿಸುವುದು, ಪ್ರದರ್ಶನಗೊಳ್ಳುವಾಗ ಫಿಲಂ ರೀಲು ಕಡಿದು ಹೋದಾಗ ಅದನ್ನು ಸೇರಿಸುವುದು ಮತ್ತು ಫಿಲಂನ ಸುರುಳಿಗಳನ್ನು ಇಡುವ ಫಿಲಂ ಕ್ಯಾನ್‌ಗಳ ಸರಿಯಾದ ರೀತಿಯ ನಿರ್ವಹಣೆಗಳೇ ಮೊದಲಾದವುಗಳನ್ನು ಒಳಗೊಂಡಿದೆ.

ಚಲನಚಿತ್ರಗಳು ಶಿಕ್ಷಕರಿಗೆ ಸರಿಯಾದ ವಿಷಯ ಪ್ರವೇಶ (ಪರಿಚಯ) ಮಾಡಲು ಮತ್ತು ಸ್ವತಂತ್ರವಾಗಿ ಅರ್ಥಪೂರ್ಣವಾಗಿ ಜೋಡಿಸುವ ಮಾಧ್ಯಮವಾಗಿ ಉಪಯುಕ್ತವಾಗಿವೆ. ಆದ್ದರಿಂದ ವ್ಯವಸ್ಥಿತವಾಗಿ ನಿಯೋಜಿಸಿಕೊಂಡು ವಿಷಯದ ವಿಶ್ಲೇಷಣೆಯನ್ನು ಮುಂಚಿತವಾಗಿಯೇ ಸಿದ್ಧಪಡಿಸಿಕೊಳ್ಳುವುದು ಶಿಕ್ಷಕರ ಮೂಲಭೂತ ಜವಾಬ್ದಾರಿಯಾಗಿದೆ. ಚಲನಚಿತ್ರಗಳನ್ನು ನಿಧಾನವಾಗಿ ಮತ್ತು ತ್ವರಿತವಾಗಿ ಕಲಿಯುವಂತಹವರು ಒಟ್ಟಾಗಿಯೇ ವೀಕ್ಷಿಸುತ್ತಾರೆ ಮತ್ತು ನಿಧಾನವಾಗಿ ಕಲಿಯುವವರು ಮೌಖಿಕ ಬೋಧನಾ ಮಾಧ್ಯಮದಲ್ಲಿ ಗ್ರಹಿಸುವುದಕ್ಕಿಂತ ಸುಲಭವಾಗಿ ವೈಯುಕ್ತಿಕ ಅಭಿವೃದ್ಧಿಯನ್ನು ಪಡೆಯಬಹುದಾದಂತಹ ಆಯ್ಕೆಮಾಡಿದ ಅಥವಾ ನಿರ್ಬಂಧಿತ ವಾತಾವರಣದಲ್ಲಿ (ವಿಶೇಷವಾಗಿ ಶಾಲೆಯಲ್ಲಿನ) ಶಾಲಾ ಅಥವಾ ಶಾಲೆಯಿಂದ ಹೊರಗೆ ಕಲಿಯುವ ಪ್ರಕ್ರಿಯೆಗಳು ಶೈಕ್ಷಣಿಕವೆನ್ನಿಸುತ್ತವೆ. ಕಂಠಪಾಠ (Recitation) ಉಪನ್ಯಾಸ ಅಥವಾ ಉದ್ದೇಶಪೂರಿತ ಚಟುವಟಿಕೆಗಳ ಮೂಲಕ ಕಂಡುಹಿಡಿಯುವ ಜ್ಞಾನವು ಬೋಧನಾತ್ಮಕ ಪ್ರಕ್ರಿಯೆ ಎನ್ನಿಸುತ್ತದೆ. (ಡಿಕ್ಷನರಿ ಆಫ್ ಎಜುಕೇಷನ್ ಮೆಕ್‌ಗ್ರಾ–ಹಿಲ್ ಬುಕ್ ಕಂಪೆನಿ, ಲಂಡನ್, ಯು.ಕೆ.,)

ಚಲನಚಿತ್ರದ ಶೈಕ್ಷಣಿಕ ಮೌಲ್ಯವು ಶಿಕ್ಷಕ, ಅವನು/ಅವಳು ಅದನ್ನು ತರಗತಿಯಲ್ಲಿ ಹೇಗೆ ಉಪಯೋಗಿಸುತ್ತಾನೆ ಎಂಬ ಅವರ ಉದ್ದೇಶವನ್ನು ಅವಲಂಬಿಸಿರುತ್ತದೆ. ಚಲನಚಿತ್ರವು ಸಮುದಾಯ ಸಂವಹನದ ಪರಿಣಾಮಕಾರಿ ಮಾಧ್ಯಮ ಮತ್ತು ವಿವಿಧ ವಿಷಯಗಳನ್ನು ಮಾಹಿತಿಯನ್ನು ಒದಗಿಸುವುದಷ್ಟೆ ಅಲ್ಲದೆ ವರ್ತನೆಯಲ್ಲಿ ಬದಲಾವಣೆಯನ್ನುಂಟು ಮಾಡುವ ಅಧಿಕ ಸಾಮರ್ಥ್ಯವನ್ನು ಹೊಂದಿದೆ.

**ಶೈಕ್ಷಣಿಕ ಚಲನಚಿತ್ರಗಳನ್ನು ಒದಗಿಸುವ ಪ್ರಾತಿನಿಧಿಕ ಸಂಸ್ಥೆಗಳು:** ಶೈಕ್ಷಣಿಕ ಚಲನಚಿತ್ರಗಳ ಉತ್ಪಾದನೆಯು ಭಾರತದ ಕೆಲವು ಕೇಂದ್ರಗಳಿಗೆ ಮಾತ್ರ ಸೀಮಿತಗೊಂಡಿದೆ. ವಾರ್ತಾ ಮತ್ತು ಪ್ರಸಾರ ಮಂತ್ರಾಲಯವಾದ ಚಲನಚಿತ್ರ ವಿಭಾಗ, ಮಕ್ಕಳು ಮತ್ತು ಯುವಜನ ಫಿಲಂ ಸೊಸೈಟಿ, ಅಲಹಾಬಾದ್‌ನ ಎಜುಕೇಷನ್ ಎಕ್ಸ್‌ಪ್ಯಾನ್‌ಶನ್ ಆಫೀಸ್, ನವದೆಹಲಿ, ಎನ್‌ಸಿಇಆರ್‌ಟಿ, ಪುಣೆಯ ಫಿಲಂ ಮತ್ತು ಟೆಲಿವಿಷನ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾ ಇವೇ ಮುಂತಾದವು ಕೆಲ ಶೈಕ್ಷಣಿಕ ಚಲನಚಿತ್ರಗಳನ್ನು ಉತ್ಪಾದಿಸುವ ಕೆಲವೇ ಪ್ರಮುಖ ಪ್ರಾತಿನಿಧಿಕ ಸಂಸ್ಥೆಗಳು. ಬೋಧಪ್ರದ ಚಲನಚಿತ್ರಗಳು ಮುಖ್ಯವಾಗಿ ನವದೆಹಲಿಯ ಎನ್‌ಸಿಇಆರ್‌ಟಿ ಮಾತ್ರ ಪ್ರಮುಖವಾದ ಶೈಕ್ಷಣಿಕ ಚಲನಚಿತ್ರಗಳನ್ನು ಉತ್ಪಾದಿಸುತ್ತದೆ. ಪ್ರತಿವರ್ಷವೂ ವಾರ್ತಾ ಮತ್ತು ಪ್ರಸಾರ ಇಲಾಖೆಯ ಮಂತ್ರಾಲಯದ ಚಲನಚಿತ್ರ ವಿಭಾಗವು ಅಧಿಕ ಸಂಖ್ಯೆಯಲ್ಲಿ ವಾರ್ತಾ ಚಿತ್ರಗಳನ್ನು (ಡಾಕ್ಯುಮೆಂಟರಿ) ಮತ್ತು ವಾರ್ತಾ ರೀಲ್ (ಸುರುಳಿ)ಗಳನ್ನು ಅನೇಕ ಪ್ರಾಂತೀಯ ಭಾಷೆಗಳಲ್ಲಿ ಸಿದ್ಧಪಡಿಸುತ್ತಿವೆ. ಈ ಚಲನಚಿತ್ರಗಳು ಇತಿಹಾಸ, ಭೋಗೋಳಶಾಸ್ತ್ರ, ಪ್ರಚಲಿತ ವಿದ್ಯಮಾನಗಳು, ವಿಜ್ಞಾನ ಮತ್ತು ತಂತ್ರಜ್ಞಾನ, ಕಲೆ ಮತ್ತು ಸಂಸ್ಕೃತಿ ಮತ್ತು ಮೌಲ್ಯಗಳನ್ನು ಬೋಧಿಸುವುದೇ ಇತ್ಯಾದಿ ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ಸಮೃದ್ಧವಾದ ಮತ್ತು ಹಿನ್ನೆಲೆ ಮಾಹಿತಿಯನ್ನು ಒದಗಿಸುವಲ್ಲಿ ಉಪಯುಕ್ತವಾಗಿವೆ. ಆದಾಗ್ಯೂ, ವಿಶೇಷ ವಿಷಯ ಮತ್ತು ಪಠ್ಯದ ಕ್ಷೇತ್ರಗಳಲ್ಲಿ ಶೈಕ್ಷಣಿಕ ಚಲನಚಿತ್ರಗಳ ಕೊರತೆಯಿದೆ. ಆದರೂ ನೇರವಾಗಿ ಕಲಿಯುವಂತೆ ಸರಿಯಾದ ಒಳವಿಷಯಗಳನ್ನು, ಮಧ್ಯಂತರ ವಿಶ್ರಾಂತಿ ಕಾಲವನ್ನು ಆಗಾಗ್ಗೆ ನೀಡುವ ಮೂಲಕ ಒದಗಿಸುವುದಾದರೆ ಚಲನಚಿತ್ರಗಳಿಂದ ಹೆಚ್ಚು ಕಲಿಯಬಲ್ಲರೆಂಬುದು ಸಾಮಾನ್ಯವಾಗಿ ಅನುಭವಕ್ಕೆ ಬಂದಿದೆ.

ಶಿಕ್ಷಕರು ಒಂದು ವೇಳೆ ಕಲಿಯುವವರಿಗೆ ಪ್ರಸ್ತುತವಾದ ವಸ್ತುವನ್ನುಳ್ಳ ಚಲನಚಿತ್ರವನ್ನು ಆಯ್ಕೆ ಮಾಡಿಕೊಳ್ಳುವುದಾದರೆ, ಚಲನಚಿತ್ರದ ವಸ್ತುವು ಪ್ರೇಕ್ಷಕರಿಗೆ ಹೆಚ್ಚು ಆಪ್ತವಾದ ವಸ್ತುವೆಂದೂ ತಮ್ಮದೇ ಪರಿಸರಕ್ಕೆ ಸೇರಿದ್ದೆಂದೂ ಭಾವನೆ ಬಂದು ಸುಲಭವಾಗಿ ಅದನ್ನು ಗ್ರಹಿಸಿ ಸ್ವೀಕರಿಸುವಂತೆ ಹೆಚ್ಚು ಪ್ರಭಾವ ಬೀರುತ್ತದೆ. ಆದರೂ ವಿದ್ಯಾರ್ಥಿಗಳಿಗೆ ಅದು ಸ್ಪಷ್ಟವಾಗದಿದ್ದಂತೆ ಅದರಿಂದ ವಿವರಣೆ ಬಯಸುವುದಕ್ಕಾಗಲೀ, ಪ್ರಶ್ನಿಸುವುದಕ್ಕಾಗಲೇ ಹೆಚ್ಚು ಅವಕಾಶವಾಗುವುದಿಲ್ಲ. ಆದರೆ ಶಿಕ್ಷಕರು ಮುಂಚಿತವಾಗಿ ಸಿದ್ಧತೆ ಮಾಡಿಕೊಂಡಿದ್ದರೆ, ಆ ಸಂದರ್ಭಕ್ಕೆ ಅನುಗುಣವಾಗಿ ಕಾರ್ಯಕ್ರಮವನ್ನು ಪರಿಚಯಿಸಿದರೆ ಅದರ ಸಂಕ್ಷಿಪ್ತ ಹಿನ್ನೆಲೆಯನ್ನೋ ಅಥವಾ ಅದರ ಪ್ರಮುಖ ಲಕ್ಷಣಗಳನ್ನೋ ವಿಸ್ತರಿಸಿ ಕತೆಯಲ್ಲಿ ಹೇಳಿದ್ದರೆ, ಅವರು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಬಹುದಾಗಿದೆ. ಶಿಕ್ಷಕರು ಕಾರ್ಯಕ್ರಮಗಳ ಉಪಯೋಗಿಗಳು ಮತ್ತು ಅವರು ಯಾವಾಗ ಚಲನಚಿತ್ರವನ್ನು ಉಪಯೋಗಿಸಬೇಕು ಮತ್ತು ಅದರ ಎಷ್ಟು ಭಾಗವನ್ನು ಗುರ್ತಿಸಿಕೊಳ್ಳುವ ವಸ್ತುವಿಗೆ ಪ್ರಸ್ತುತವಾಗುವಂತೆ ಪ್ರದರ್ಶನಕ್ಕೆ ಬಳಸಿಕೊಳ್ಳಬಹುದು ಎಂಬ ಆಯ್ಕೆಯನ್ನು ಮಾಡಿಕೊಳ್ಳಬಹುದು. ಚಿತ್ರವು ಪ್ರದರ್ಶನವಾಗುವುದಕ್ಕೆ ಮೊದಲೇ ಅದರ ಮಹತ್ವದ ಪ್ರಶ್ನೆ ಉತ್ತರಿಸಲು ಸಿದ್ಧವಾಗುವುದು ಶಿಕ್ಷಕರ ಮುಖ್ಯ ಕೊಡುಗೆ ಆಗುತ್ತದೆ. ಕಲಿಯುವವರು ಮತ್ತು ಶಿಕ್ಷಕರು ದೃಶ್ಯವಸ್ತುವನ್ನು ಗುರುತಿಸುವುದರಿಂದ, ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ಗುಣಾತ್ಮಕವಾಗಿ ಉತ್ತರಿಸಬಹುದಾಗಿದೆ. ಆದಾಗ್ಯೂ ಒಂದೇ ಚಲನಚಿತ್ರವನ್ನು ಒಬ್ಬ ಶಿಕ್ಷಕ ಹಲವು ಬಾರಿ ನೋಡಲೇಬೇಕಾಗುವುದಿರಿಂದಾಗಿ ಕೇಂದ್ರೀಕರಣದ ಅವಧಿಯನ್ನು ಮತ್ತು ಕಲಿಯುವವರ ಗ್ರಹಿಕೆಯ ಮಟ್ಟವನ್ನು ಗಮನಿಸಲಾಗದಷ್ಟು ವಸ್ತುವನ್ನು ವಿದ್ಯಾರ್ಥಿಗಳ ಮೇಲೆ ಹೇರುವ ಅಪಾಯದ ಸಂಭವವಿರುತ್ತದೆ. ಕಲಿಯುವ ಮತ್ತು ಕಲಿಸುವ ವಿಧಾನದಲ್ಲಿ ಚಲನಚಿತ್ರದ ವಸ್ತುನಿಷ್ಠತೆ ಮತ್ತು ಕಲಿಯುವವರ ಪ್ರಗತಿಯ ವೇಗವನ್ನು ಚಲನಚಿತ್ರ ಪ್ರದರ್ಶಿಸುವ ವೇಳೆಯಲ್ಲಿ ಗಮನದಲ್ಲಿರಿಸಿಕೊಂಡರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ಶೈಕ್ಷಣಿಕ ಚಲನಚಿತ್ರವನ್ನು ಶಿಕ್ಷಕರ ಉಪಸ್ಥಿತಿಯಲ್ಲಿ ಪ್ರದರ್ಶಿಸುವುದರಿಂದ ಶಿಸ್ತಿನ ಸಮಸ್ಯೆಯನ್ನು ನಿವಾರಿಸಬಹುದು.

Digitised by Bharatavani, CIIL

ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ಪೂರಕನಾಗಿ ಹೇಳುವ ಮತ್ತು ಚರ್ಚಿಸಲು ಪೂರ್ಣವಾಗಿ ಸಿದ್ಧವಾಗಿರಬೇಕು. ಕೆಲವು ಸಂದರ್ಭಗಳಲ್ಲಿ ವಾಸ್ತವವಾದ ಪ್ರಯೋಗವು ಸಹಾ ಅಗತ್ಯವಿದೆ. ಕಲಿಯುವವರು ನಿಶ್ಚಿತರವಾದ ಗುರಿಯ ಮಾರ್ಗ ಬಿಟ್ಟುಹೋಗುವುದನ್ನು ಕಡಿಮೆಮಾಡಲು ಶಿಕ್ಷಕರು ನಡುವೆ ಬಂದು ನಿರ್ದೇಶನ ಕೊಡುವ ತಂತ್ರವನ್ನು ಉಪಯೋಗಿಸುವುದು ಯೋಗ್ಯವಾಗಿರುತ್ತದೆ.

**ಕೇಂದ್ರೀಯ ಚಲನಚಿತ್ರ ಸಂಗ್ರಹಾಲಯ ಅದರ ಸಂಗ್ರಹಣೆ ಮತು ನಿರ್ಬಂಧಗಳು:**

ಕೇಂದ್ರೀಯ ಚಲನಚಿತ್ರ ಸಂಗ್ರಹಾಲಯದಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯಲ್ಲಿದ್ದು (NCERT) ಎಲ್ಲಾ ವಿಷಯಗಳ ಕ್ಷೇತ್ರವನ್ನು ವಾಸ್ತವವಾಗಿ ಒಳಗೊಂಡಂತೆ ಸುಮಾರು 8000 ಶೈಕ್ಷಣಿಕ ಚಲನಚಿತ್ರಗಳಿವೆ. ದಕ್ಷಿಣಪೂರ್ವ ಏಷ್ಯಾದಲ್ಲಿಯೇ ಕೇಂದ್ರೀಯ ಚಲನಚಿತ್ರ ಸಂಗ್ರಹಾಲಯವು ಅತ್ಯಂತ ದೊಡ್ಡ ಶೈಕ್ಷಣಿಕ ಚಲನಚಿತ್ರ ಸಂಗ್ರಹಾಲಯಗಳಲ್ಲಿ ಒಂದಾಗಿದೆ. 16 ಮಿಲಿಮೀಟರ್ ಪ್ರೊಜೆಕ್ಟರ್‌ಗಳಿರುವ ಶಿಕ್ಷಣ ಸಂಸ್ಥೆಗಳು ಕೇಂದ್ರೀಯ ಚಲನಚಿತ್ರ ಸಂಗ್ರಹಾಲಯವು ಸದಸ್ಯತ್ವ ಪಡೆದು ಯಾವುದೇ ಶುಲ್ಕವಿಲ್ಲದೆ ಚಿತ್ರಗಳನ್ನು ಪಡೆಯಬಹುದು. ಶೈಕ್ಷಣಿಕ ಚಲನಚಿತ್ರಗಳನ್ನು ವಿಡಿಯೋ ಕ್ಯಾಸೆಟ್‌ಗಳಿಗೆ ಟೆಲಿಸಿನಿಮೈನ್‌ಗಳ ಮೂಲಕ ವರ್ಗಾಯಿಸಬಹುದಾಗಿರುವುದರಿಂದ ಶಾಲೆಗಳು ಚಲನಚಿತ್ರಗಳನ್ನು ಬಳಸಲು ಸುಲಭವಾಗುತ್ತದೆ. ಶೈಕ್ಷಣಿಕ ಚಲನಚಿತ್ರಗಳ ಉಪಯೋಗವು ಚಾಲಕಶಕ್ತಿಯಾಗುವ ಪ್ರಚೋದನೆಯಾಗುವಂತೆ ಮಾಡಲು ರಾಜ್ಯ ಶೈಕ್ಷಣಿಕ ಸಂಸ್ಥೆ (SCERT) ಗಳಲ್ಲಿ ಚಲನಚಿತ್ರ ಸಂಗ್ರಹಾಲಯಗಳನ್ನು ತೆರೆದು ಕೇಂದ್ರೀಯ ಚಲನಚಿತ್ರ ಸಂಗ್ರಹಾಲಯವನ್ನು ವಿಕೇಂದ್ರೀಕರಣಗೊಳಿಸುವ ಒಂದು ಪ್ರಸ್ತಾವನೆಯನ್ನು ಚರ್ಚೆಗೆ ತರಲಾಗಿದೆ. ಕೆಲವು ರಾಜ್ಯಗಳಲ್ಲಿ ಸಂಚಾರಿ ಚಲನಚಿತ್ರ ಘಟಕಗಳಿದ್ದು ಶೈಕ್ಷಣಿಕ ಚಲನಚಿತ್ರಗಳನ್ನು ವಿವಿಧ ಶಾಲೆಗಳಿಗೆ ಒಯ್ದು ಪ್ರದರ್ಶಿಸಲಾಗುತ್ತಿದೆ. ಇನ್ನೂ ಕೆಲವು ರಾಜ್ಯಗಳಲ್ಲಿ 16 ಮಿಲಿಮೀಟರ್ ಪ್ರೊಜೆಕ್ಟರ್‌ಗಳಿಲ್ಲದ ಶಾಲೆಗಳಲ್ಲಿ ಮತ್ತು ಸಮುದಾಯ ಕೇಂದ್ರಗಳಲ್ಲಿಗೆ ಮುಂದಾಗಿ ಹೋಗಿ ಶೈಕ್ಷಣಿಕ ಚಲನಚಿತ್ರಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡುವ ಮೂಲಕ ಪ್ರಸಾರ ಮಂತ್ರಾಲಯದ ದೃಶ್ಯ ಪ್ರಚಾರ ನಿರ್ದೇಶನಾಲಯದ ಸಂಚಾರಿ ವಾಹನಗಳಿದ್ದೂ ಮಾಡಲಾಗದ ಸೇವೆಯನ್ನು ಸ್ವತಂತ್ರ ಸಂಸ್ಥೆಗಳು ಮತ್ತು ಚಲನಚಿತ್ರ ಪ್ರಿಯ ಗುಂಪುಗಳು ವಾರ್ತಾ ಮತ್ತು ಮಾರ್ಗದರ್ಶಕವಾಗಿ ಮುನ್ನಡೆಸುತ್ತಿವೆ.

**ಸಂಶೋಧನೆಯ ಫಲಿತಾಂಶಗಳು:**

ಅಮೆರಿಕಾ ಮತ್ತು ಯುರೋಪಿಯನ್ ದೇಶಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮನೋಭಾವಗಳಿಗೆ ಸಂಬಂಧಿಸಿದಂತೆ ಚಲನಚಿತ್ರಗಳ ಶೈಕ್ಷಣಿಕ ಮೌಲ್ಯಗಳನ್ನು ಅಳೆಯಲು ಸಂಶೋಧನೆಗಳು ನಡೆದಿವೆ. ವಿಷಯದ ತಿರುಳಿನ ಸ್ವರೂಪವನ್ನು ಚಲನಚಿತ್ರಗಳಲ್ಲಿ ದೊರಕುವ ಸಂಸ್ಕಾರವನ್ನು ಪ್ರಧಾನವಾಗಿ ಅವಲಂಬಿಸಿರುವ ಈ ಅಧ್ಯಯನಗಳಿಂದ ಜ್ಞಾನ ಮತ್ತು ಮನೋಭಾವಗಳಲ್ಲಿ ಯಾವುದೇ ಬದಲಾವಣೆಯನ್ನು ನಿಖರವಾಗಿ ಗುರುತಿಸಲಾಗಿಲ್ಲ. ಭಾರತದಲ್ಲಿ ಅಂತಹ ಸಂಶೋಧನೆಗಳು ಬಹಳ ಕಡಿಮೆ ಮತ್ತು ಆಗಾಗ ನಡೆದಿವೆ. ಆದರೂ ಚಲನಚಿತ್ರಗಳು ತರಗತಿಗಳನ್ನು ಅತ್ಯಂತ ಆಸಕ್ತಿದಾಯಕವಾಗಿಯೂ ಮತ್ತು ತರಗತಿಗಳನ್ನು ಶಿಕ್ಷಕರು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯಕವಾಗಿಯೂ ಇರುವುದನ್ನು ವರದಿಗಳು ನಿರೂಪಿಸಿವೆ. ಆದರೆ ವಿದ್ಯಾರ್ಥಿಗಳು ಇತರ ಯಾವುದೇ ಅನುಭವಗಳಿಗಿಂತಲೂ ಚಲನಚಿತ್ರಗಳಿಂದಲೇ ಹೆಚ್ಚು ಪರಿಣಾಮಕಾರಿಯಾಗಿ ಕಲಿಯುತ್ತಾರೆ ಎಂಬುದಕ್ಕೆ ಯಾವುದೇ ನಿರ್ಣಾಯಕ ಆಧಾರಗಳಿರುವುದಿಲ್ಲ. ಅಧಿಕ ಸಂಖ್ಯೆಯ ಪ್ರೇಕ್ಷಕರು ಚಲನಚಿತ್ರಗಳನ್ನು ತಮ್ಮ ಇಚ್ಛಾನುಸಾರ ಯಾವುದೇ ವೇಳೆಯಲ್ಲಿ ಬೇಕಾದರೂ ನೋಡಬಹುದಾಗಿದೆ. ಶೈಕ್ಷಣಿಕ ಚಲನಚಿತ್ರಗಳ ಮೂಲಕ ಅಥವಾ ಚಲನಚಿತ್ರಗಳ ಬಳಕೆಯಿಲ್ಲದೆ ಕಲಿಯುವುದರ ಪ್ರಭಾವವನ್ನು ತಿಳಿಯುವ ತೌಲನಿಕ ಅಧ್ಯಯನಗಳ ಫಲಿತಾಂಶಗಳು ಗಂಭೀರವಾಗಿಲ್ಲದೆ ಸದ್ಯಕ್ಕೆ ಯಾವುದೇ ಸುಭದ್ರವಾದ ಸಾಮಾನ್ಯ ಅಭಿಪ್ರಾಯವೂ (ಸಾಮಾನ್ಯೀಕರಣ) ವ್ಯಕ್ತಗೊಳ್ಳುವುದಿಲ್ಲ. ವಿಶಿಷ್ಟವಾದ ವಸ್ತುವನ್ನೊಳಗೊಂಡ ಗುಣಾತ್ಮಕ ಸಂದರ್ಭದಿಂದಾಗಿ ದೃಶ್ಯಾತ್ಮಕ ಮಾಧ್ಯಮದೊಡನೆ ತುಲನೆ ಮಾಡಿದಾಗ ಶೈಕ್ಷಣಿಕ ಚಲನಚಿತ್ರಗಳು ಉತ್ತಮವೆಂದು ಕಂಡುಬಂದಿದೆ. ವಿಜ್ಞಾನದ ಬೋಧನೆಯಲ್ಲಿ ವಾಸ್ತವಿಕ ಪ್ರಯೋಗ ಅಥವಾ ಪ್ರದರ್ಶನವು ಚಲನಚಿತ್ರಗಳಿಗಿಂತ ಬಹುಪಾಲು ಉತ್ತಮವಾಗಿರುತ್ತವೆ. ಆದರೂ ಒಂದು ಅಥವಾ ಇಬ್ಬರು ವಿದ್ಯಾರ್ಥಿಗಳು ಮಾತ್ರ ಒಟ್ಟಿಗೆ ಸರಿಯಾಗಿ ನೋಡಬಹುದಾದ ಪ್ರಯೋಗಗಳು ಅಥವಾ ಪ್ರದರ್ಶನಗಳನ್ನು ನಡೆಸುವುದಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ನೋಡಬಹುದಾದ ಚಲನಚಿತ್ರವು ಅಂತಹ ಸಂದರ್ಭಗಳಲ್ಲಿ ಹೆಚ್ಚು ಸೂಕ್ತ ಮಾಧ್ಯಮವೆನಿಸುತ್ತದೆ. ಒಂದು ಚಲನಚಿತ್ರವು ವಿಶಿಷ್ಟ ವಸ್ತು ತಿರುಳನ್ನು ಪ್ರದರ್ಶಿಸಲು ಯೋಗ್ಯ ಮಾದರಿಯಾಗಿ ಹೊಂದುವುದೇ ಅಥವಾ ಅದನ್ನೇ ಪರಿಣಾಮಕಾರಿ ಬೋಧನೆಗೆ ಯೋಗ್ಯವಾಗುವಂತೆ ರೂಪಿಸಬಹುದೇ ಎಂಬುದರ ನಿರ್ಣಯ ತುರ್ತಾಗಿ ಆಗಬೇಕಾಗಿದೆ. ಪ್ರಮುಖ ಉದ್ದೇಶಗಳಿಗೆ ಹೊಂದುವಂತ ನಿಖರ ಉದ್ದೇಶಗಳು, ಗುರಿಯಾಗಿರುವ ಪ್ರೇಕ್ಷಕರ ಸ್ವವಿವರ ಮತ್ತು ಕಾರ್ಯಕ್ರಮದ ತಿರುಳಿನ ವಸ್ತುವನ್ನು ಶೈಕ್ಷಣಿಕ ಚಲನಚಿತ್ರಗಳು ಹೊಂದಿರಬೇಕು. ಸುಲಭವಾಗಿ ಗ್ರಹಿಸಲು ಸಾಧ್ಯವಾಗುವಂತೆ ಯೋಗ್ಯವಾದ ರೀತಿಯಲ್ಲಿ ಚಲನಚಿತ್ರಗಳ ವಸ್ತುವನ್ನು ಸುವ್ಯವಸ್ಥಿತವಾಗಿ ಯೋಜಿಸಿ ನಿರ್ವಹಿಸಬೇಕು. ಕಾರ್ಯಕ್ರಮದ ವಸ್ತುವು ಖಚಿತತೆ, ವಾಸ್ತವತೆ ಮತ್ತು ತಾಂತ್ರಿಕವಾಗಿ ಪರಿಷ್ಕಾರ ಹೊಂದಿರಬೇಕು, ಗುರಿಯಾಗಿರುವ ಪ್ರೇಕ್ಷಕನಿಗೆ ಸ್ಪಷ್ಟವಾಗುವಂತೆ ಪ್ರತಿಪಾದನೆಯಿರಬೇಕು. ಎಲ್ಲಾ ವಿದ್ಯಾರ್ಥಿಗಳು ಸಮಾನವಾಗಿ ಭಾಗವಹಿಸುವಂತೆ ಅಗತ್ಯವಾದರೆ ಪ್ರಮುಖ ಲಕ್ಷಣಗಳನ್ನು ಮನದಟ್ಟಾಗುವಂತೆ ಮಾಡಲು ಪುನರಾವರ್ತನೆ ಮಾಡುತ್ತಾ ಎಲ್ಲಾ ತರಗತಿಗಳು ಕಾರ್ಯಕ್ರಮವನ್ನು ಸಮಾನವಾಗಿ ನೋಡುವಂತೆ ದೃಶ್ಯಾತ್ಮಕ ವಿವರಗಳನ್ನು ಪ್ರದರ್ಶಿಸಬೇಕು.

ದೇಶದಲ್ಲಿ ಶೈಕ್ಷಣಿಕ ಚಲನಚಿತ್ರಗಳ ಬಳಕೆಯ ವ್ಯಾಪ್ತಿ ಅಲ್ಪ. ಚಲನಚಿತ್ರ ಸಂಸ್ಕೃತಿಯು ಕ್ರಮೇಣ ಇಳಿಮುಖವಾಗುತ್ತಿದ್ದು, ಅದರ

Digitised by Bharatavani, CIIL

ಸ್ಥಾನವನ್ನು ದೂರದರ್ಶನವು ಆಕ್ರಮಿಸುತ್ತಿರುವುದೇ ಇದಕ್ಕೆ ಪ್ರಮುಖ ಕಾರಣವೆನ್ನಬಹುದು. ಆಯ್ಕೆಯಾದ ವಿಜ್ಞಾನ ಮತ್ತು ತಂತ್ರಜ್ಞಾನ, ಸಾಮಾಜಿಕ ವಿಜ್ಞಾನಗಳಾದ ಖಗೋಳಶಾಸ್ತ್ರ, ಇತಿಹಾಸ ಮತ್ತು ಭೂಗೋಳಶಾಸ್ತ್ರ ಇತ್ಯಾದಿ ವಿಷಯಗಳು ಮತ್ತು ಹೊಸ ಪಠ್ಯಗಳನ್ನು ಆರಂಭಿಸಿರುವ ಸಂದರ್ಭಗಳಲ್ಲಿ ಶಾಲೆಗಳು ಮತ್ತು ಶಿಕ್ಷಕರ ಪ್ರಶಿಕ್ಷಣ ಸಂಸ್ಥೆಗಳ ಅನುಕೂಲಕ್ಕಾಗಿ ಸೀಮಿತ ಸಂಖ್ಯೆಯಲ್ಲಿ ಬಹು ಉನ್ನತ ಗುಣಮಟ್ಟದ ಉತ್ಪಾದಿತ ಬೋಧಪ್ರದ ಚಲನಚಿತ್ರಗಳನ್ನು ಟೆಲಿಸಿನಿ ಯಂತ್ರಗಳ ಮೂಲಕ ದೂರದರ್ಶನ ಕಾರ್ಯಕ್ರಮಗಳಾಗಿ ವರ್ಗಾಯಿಸಬಹುದಾಗಿದೆ ಮತ್ತು ವ್ಯಾಪಕ ರೀತಿಯಲ್ಲಿ ಅವು ದೊರೆಯುತ್ತಿವೆ. ದೇಶದಲ್ಲಿ ಶೈಕ್ಷಣಿಕ ಚಲನಚಿತ್ರಗಳ ಬಳಕೆ ಮತ್ತು ಅಭಿವೃದ್ಧಿಯನ್ನು ಕುರಿತು ಪರಾಮರ್ಶಿಸಬೇಕಾದ ಅಗತ್ಯವಿದೆ. ಉತ್ತಮ ಮಟ್ಟದ ಶೈಕ್ಷಣಿಕ ಚಲನಚಿತ್ರಗಳ ಕೊರತೆಯಿದ್ದು ಅವುಗಳ ಉತ್ಪಾದನೆಗೆ ಹೆಚ್ಚು ಆದ್ಯತೆ ನೀಡಬೇಕಾಗಿದೆ.

ಚಲನಚಿತ್ರಗಳನ್ನು ನೋಡುವ ಪ್ರೇಕ್ಷಕರು ಅದೇ ವೇಳೆಯಲ್ಲಿ ದೃಶ್ಯಗಳನ್ನು ಮುಖ್ಯವಾಗಿ ನೋಡುವುದರಿಂದ ಶೈಕ್ಷಣಿಕ ಚಲನಚಿತ್ರಗಳಲ್ಲಿ ಅತಿಯಾದ ಶೀರ್ಷಿಕೆಗಳ ಬಳಕೆಯನ್ನು ನಿವಾರಿಸಬಹುದಾಗಿದೆ. ದೃಶ್ಯಗಳನ್ನು ಸಮರ್ಥಿಸಲು ಮಾತ್ರ ವ್ಯಾಖ್ಯಾನಗಳನ್ನು ಬಳಸಬೇಕೇ ಹೊರತು ಚಲನಚಿತ್ರಗಳಲ್ಲಿ ದೃಶ್ಯಗಳೇ ಮಾತನಾಡುವಂತಿರಬೇಕು. ಚಲನಚಿತ್ರಗಳಲ್ಲಿ ಹಿನ್ನೋಟದ ತಂತ್ರ ಸಾಮಾನ್ಯವಾಗಿ ಬಳಕೆಯಲ್ಲಿದ್ದು ಶೈಕ್ಷಣಿಕ ಚಲನಚಿತ್ರಗಳಲ್ಲಿ ಇದರ ಬಳಕೆಯು ಕಲಿಯುವವರಿಗೆ ಸುಲಭವಾಗಿ ಅರ್ಥವಾಗದ ಕಾರಣ ಈ ವಿಧಾನವನ್ನು ನಿವಾರಿಸಬಹುದು. ಚಲನಚಿತ್ರಗಳಿಂದ ಕಲಿಯುವಾಗ ಪ್ರಚೋದನೆಯ ವಿಷಯಗಳನ್ನಾಗಲೀ ಅಥವಾ ಅರ್ಥೈಸಿಕೊಳ್ಳುವುದನ್ನಾಗಲೀ, ಆಸಕ್ತಿಯನ್ನಾಗಲೀ ಮೌಲ್ಯಮಾಪನ ಮಾಡುವುದು ಕಷ್ಟಸಾಧ್ಯ. ಅಂತಿಮ ನಿರ್ಮಾಣವು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಯೋಗ್ಯವಾದ ಪ್ರದರ್ಶನವಾಗುವ ಮಟ್ಟಕ್ಕೆ ಬರಬೇಕಾದರೆ, ನಿರ್ಮಾಣಕ್ಕೆ ತೊಡಗುವ ಮೊದಲೇ, ಸಾಹಿತ್ಯ ನಿರ್ಮಾಣ ಹಂತದಲ್ಲಿ ಸಾಧ್ಯವಾದರೆ ಪ್ರತಿ ಸನ್ನಿವೇಶದ ಮೇಲೆ ನಿರೀಕ್ಷಿತ, ಅಗತ್ಯ ಪ್ರಶ್ನೆಗಳನ್ನು ಗುರಿಯಾಗಿರುವ ಪ್ರೇಕ್ಷಕರು ಎತ್ತುವಂತೆ ಮಾಡುವ ಮೂಲಕ ಅಥವಾ ಸಾಧ್ಯವಾದ ಬದಲಾವಣೆಗಳನ್ನು ಮಾಡುವ ಪ್ರಯತ್ನ ಮಾಡಬಹುದಾಗಿದೆ.

Science is Doing, Tools and Techniques of cell study, Rocks and Soil, Teaching Elementary Physics, Learning through Environment and Solar Elips ಮುಂತಾದ ಹಲವು ಶೈಕ್ಷಣಿಕ ಚಲನಚಿತ್ರಗಳನ್ನು ನವದೆಹಲಿಯ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್ ಸಂಸ್ಥೆಯು (NCERT) ನಿರ್ಮಿಸಿದ್ದು, ಅವುಗಳ ಪರಿಣಾಮವನ್ನು ಕಂಡುಹಿಡಿಯಲು ಬೋಧನಾ–ಕಲಿಕೆಗಳ ವಿಧಾನದಲ್ಲಿ ಉತ್ತಮಪಡಿಸುವ ದೃಷ್ಟಿಯಿಂದ ಮೌಲ್ಯಮಾಪನ ಮಾಡಲಾಗಿದೆ. ಚಲನಚಿತ್ರಗಳ ಬಳಕೆ ಮತ್ತು ವಸ್ತು. ಪ್ರತಿಪಾದನೆ, ಮತ್ತು ತಾಂತ್ರಿಕ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುದೇ ದೋಷಗಳನ್ನು ಎಳೆಎಳೆಯಾಗಿ ಗುರುತಿಸಿ ಹೇಳುವಂತೆ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಲಾಗಿದೆ. ಚಲನಚಿತ್ರಗಳನ್ನು ಮೌಲ್ಯಮಾಪನ ಮಾಡುವ ವಿಶ್ಲೇಷಣೆಯ ಮಾರ್ಗದ ಪ್ರಯತ್ನವು ನಿರ್ದಾಕ್ಷಿಣ್ಯವಾಗಿ ಮತ್ತು ವಸ್ತುನಿಷ್ಠವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ಒದಗಿಸಿದೆ. ಕೆಲವು ವಿಷಯಗಳಲ್ಲಿ ಉದ್ದೇಶಗಳು ಪರಿಣಾಮಕಾರಿಯಾಗಿ ಸ್ಫುಟವಾಗಿರುವುದನ್ನು ತಿಳಿದು ಬಂದಿದೆ. ರಚನಾತ್ಮಕವಾದ ಸಂಶೋಧನಾ ಗುಣವಿಮರ್ಶೆಯ ಅಗತ್ಯ ಸಹಮತದೊಡನೆ ಚಿತ್ರಗಳನ್ನು ನಿರ್ಮಾಣಕ್ಕೆ ತೆಗೆದುಕೊಳ್ಳಬಹುದುದೆಂದು ಒಟ್ಟಾರೆ ಅಭಿಪ್ರಾಯವಿದೆ. ಕರಡು ಪ್ರತಿಯ ಸಿದ್ಧತೆಯಾದಾಗಲೇ ಮೌಲ್ಯಮಾಪನವನ್ನು ನಿರ್ಮಾಣ ಪೂರ್ವ ಅವಧಿಯಲ್ಲಿಯೇ ಮಾಡಬಹುದಾಗಿದೆ. ವಿಶೇಷವಾಗಿ ಚಲನಚಿತ್ರಗಳನ್ನು ಧಾರಾವಾಹಿ ಮಾದರಿಯಲ್ಲಿ ನಿರ್ಮಾಣವಾಗುವಂತೆ ಯೋಜನೆ ಮಾಡಿದ್ದಲ್ಲಿ ಕಾರ್ಯಕ್ರಮದ ಸಾರಾಂಶವನ್ನೇ ಮೌಲ್ಯಮಾಪನ ಮಾಡಬೇಕಾಗುತ್ತದೆ. ಚಲನಚಿತ್ರ ನಿರ್ಮಾಣದ ಹಲವು ವಿಷಯಗಳು ಪರಸ್ಪರ ಸಂಬಂಧ ಹೊಂದಿರುತ್ತವೆ. ಆದ್ದರಿಂದ ಯಾವ ಮಾದರಿ ಅಥವಾ ಮಾಧ್ಯಮ ಹೆಚ್ಚು ಸರಿಯಾದುದು ಮತ್ತು ಪರಿಣಾಮಕಾರಿ ಎಂಬ ತೀರ್ಮಾನಕ್ಕೆ ಬರಲು ಪರ್ಯಾಯಗಳನ್ನು ಚರ್ಚಿಸಬೇಕಾಗಿದೆ. ವ್ಯವಸ್ಥಿತವಾದ ಸಂಶೋಧನೆ ಮತ್ತು ಮೌಲ್ಯಮಾಪನ ವಿಧಾನಗಳನ್ನು ಅನುಸರಿಸಿದ ನಂತರ ಈ ಮಾರ್ಗ ಗೋಚರವಾಗುವುದು.

**ಮೂಲ: ಹರ್ಮೇಶ್ ಲಾಲ್**
**ಅನು: ಪ್ರೊ. ರತ್ನಮ್ಮ ಕೆ.ಎಸ್.**

## ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳು

**ಪ್ರವೇಶ:**

ರೇಡಿಯೋ, ಟಿವಿ, ಸಿನಿಮಾ ಮತ್ತು ಇತರ ಬೋಧನಾ ಸಾಮಗ್ರಿಗಳು ಹಾಗೂ ಪೂರಕ ಸಾಮಗ್ರಿಗಳು ಮುಂತಾದ ವಿವಿಧ ಮಾಧ್ಯಮಗಳ ಮೂಲಕ ಶಿಕ್ಷಣಕ್ಕೆ ಬೆಂಬಲ ನೀಡಲು ಪೂರ್ಣಕಾಲಿಕ ಅಥವಾ ಅರೆಕಾಲಿಕವಾಗಿ ಯೋಜನೆ, ಉತ್ಪಾದನೆ, ಸಂಶೋಧನೆ, ತರಬೇತಿ, ಮೌಲ್ಯಮಾಪನ ಮತ್ತು ಇಂತಹುದೇ ಇತರ ಚಟುವಟಿಕೆಗಳಲ್ಲಿ ತೊಡಗಿರುವ ಸಂಸ್ಥೆಗಳಿಗೆ 'ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳು' ಎಂದು ಕರೆಯುವರು. ಈ ಲೇಖನ ಖಾಸಗಿ ಸಂಸ್ಥೆಗಳು ಮತ್ತು ಬಹುಮಾಧ್ಯಮ ಕಂಪ್ಯೂಟರ್ ಸಹಾಯಿತ ಸಾಮಗ್ರಿಗಳ ಉತ್ಪಾದನೆಯಲ್ಲಿ ತೊಡಗಿರುವ ಸಂಸ್ಥೆಗಳನ್ನು ಚರ್ಚಿಸುವುದಿಲ್ಲ. ಅಲ್ಲದೆ ಈ ಲೇಖನದ ವ್ಯಾಪ್ತಿ ಭಾರತದ ಸಂಸ್ಥೆಗಳು ಮಾತ್ರವಾಗಿರುವುದು. ಈ ಸಂಸ್ಥೆಗಳು ಸಾಂಪ್ರದಾಯಿಕ ಸಂಭಾಷಣೆ ಆಧಾರಿತ, ಉಪನ್ಯಾಸ ಕೇಂದ್ರಿತ ಶಿಕ್ಷಣ ವಿಧಾನಗಳಲ್ಲಿ ಕಂಡು ಬಂದ ಕೊರತೆಗಳಿಂದಾಗಿ ಅಸ್ತಿತ್ವಕ್ಕೆ ಬಂದವು.

**ಸ್ವಾತಂತ್ರ್ಯ ನಂತರದ ಬೆಳವಣಿಗೆಗಳು:**

ಇತರ ಮುಂದುವರೆದ ದೇಶಗಳಲ್ಲಿ ವಿಶೇಷವಾಗಿ ಇಂಗ್ಲೆಂಡ್, ಜಪಾನ್ ಮತ್ತು ಅಮೇರಿಕಾಗಳಲ್ಲಿ, ವಿವಿಧ

Digitised by Bharatavani, CIIL

ರೀತಿಯ ಬೋಧನಾಸಾಮಗ್ರಿಗಳ ಬಳಕೆಯ ಯಶೋಗಾಥೆಗಳು ಸ್ವಲ್ಪ ಪ್ರಭಾವಿಸಿದವು. ಆದರೆ, ವಾಸ್ತವವಾಗಿ ವಿವಿಧ ದೇಶೀಯ ಪ್ರಯತ್ನಗಳಿಂದಾಗಿ ಮುಖ್ಯವಾಗಿ ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯದ ಪ್ರಯತ್ನಗಳಿಂದಾಗಿ ಅಧ್ಯಾಪಕರು ಚಾರ್ಟ್‌ಗಳು, ಮಾದರಿಗಳು ಮತ್ತು ಶಿಕ್ಷಕರಿಂದ ತಯಾರಾದ ಅಲ್ಪವೆಚ್ಚದ ಬೋಧನಾ ಸಾಮಗ್ರಿಗಳು ಪ್ರಕ್ಷೇಪಣರಹಿತ ಸಾಧನಗಳಂತೆ ಶೈಕ್ಷಣಿಕ ಚಲನಚಿತ್ರಗಳು, ಫಿಲಂಸ್ಟ್ರಿಪ್‌ಗಳು, ಸ್ಲೈಡ್‌ಗಳು, ಎಪಿಡಿಯೋಸ್ಲೋಪ್ ಪ್ರಕ್ಷೇಪಣಗಳು, ಆಡಿಯೋ ಟೇಪ್ ಇತ್ಯಾದಿಗಳಿಂದ ಉಪಯುಕ್ತ ಲಾಭಗಳನ್ನು ಆಗಲೇ ಪಡೆದಿದ್ದರು. ಸರ್ಕಾರದ ಸಹಾಯದಿಂದ ವಿವಿಧ ಸಂಸ್ಥೆಗಳು ಆಯೋಜಿಸಿದ ಕೆಲವು ಅಲ್ಪಕಾಲೀನ ಕಾರ್ಯಕ್ರಮಗಳನ್ನು ನಡೆಸಿಕೊಡಲು ಇವುಗಳನ್ನು ಸಿದ್ಧಪಡಿಸಲಾಯಿತು. ಆದರೆ ದೇಶದಲ್ಲಿ ಇವುಗಳ ಉಪಯೋಗ ವಾಸ್ತವ ತರಗತಿಗಳಲ್ಲಿ ಆದದ್ದು ಅತ್ಯಲ್ಪ. ಅಲ್ಲದೆ ಸ್ವಾತಂತ್ರ್ಯಪೂರ್ವದ ಯುದ್ಧಾನಂತರದ ಕಾಲದಲ್ಲಿ ಕೇಂದ್ರಸರ್ಕಾರದ ಶಿಕ್ಷಣ ಮಂತ್ರಾಲಯವು ಕೇಂದ್ರ ಫಿಲಂ ಗ್ರಂಥಾಲಯವನ್ನು ತೆರೆಯಿತು. ಇದನ್ನು ಸ್ವಾತಂತ್ರ್ಯನಂತರ ದೇಶದ ವಿವಿಧ ರಾಜ್ಯಗಳಲ್ಲಿ ಕ್ರಮೇಣ ಸ್ಥಾಪಿಸಲಾಯಿತು. ಶ್ರವಣ–ದೃಶ್ಯ(ಆಡಿಯೋ–ವಿಷುಯಲ್) ಘಟಕಗಳು ಹಾಗೂ ರಾಜ್ಯ ಫಿಲಂ ಗ್ರಂಥಾಲಯಗಳು 60ರ ದಶಕದಲ್ಲಿ ಅಸ್ತಿತ್ವಕ್ಕೆ ಬಂದವು.

NCERT ಸಂಸ್ಥೆಯ ಪ್ರಯತ್ನದಿಂದ ಈ ಹಿಂದೆ 1959ರಲ್ಲಿಯೆ ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಆಡಿಯೋ ವಿಷುಯಲ್ ಎಜುಕೇಷನ್ ಸಂಸ್ಥೆಯು ಹಾಕಿಕೊಟ್ಟ ನಿರ್ದೇಶನಕ್ಕೆ ಅನುಸಾರವಾಗಿ ಅಧ್ಯಾಪಕರಿಗೆ ಮತ್ತು ಅಧ್ಯಾಪಕ ಶಿಕ್ಷಕರಿಗೆ ವಿವಿಧ ಬೋಧನಾ ಸಾಮಗ್ರಿಗಳನ್ನು ಆಯೋಜಿಸಲಾಯಿತು. ಪ್ರಥಮ ಬಾರಿಗೆ 1959ರಲ್ಲಿ ದೆಹಲಿಯಲ್ಲಿ ಶಾಲಾಪ್ರಸಾರವನ್ನು ಪ್ರಾರಂಭಿಸಿ ನಂತರ ಕಲ್ಕತ್ತೆಯಲ್ಲೂ ಆರಂಭಿಸಲಾಯಿತು. ಇವುಗಳು ಅಧ್ಯಾಪಕರ ಉಪನ್ಯಾಸಗಳನ್ನು ಒಳಗೊಂಡಿದ್ದು, ವಿಷಯ ವಸ್ತು ವ್ಯಾಪ್ತಿಯಲ್ಲಿ ಪರಿಮಿತಿಯುಳ್ಳದವುಗಳಾಗಿದ್ದರೂ, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಶೈಕ್ಷಣಿಕ ಆಡಳಿತಗಾರರ ಮೇಲೆ ಬಲವಾದ ಪ್ರಭಾವವನ್ನು ಬೀರಿದ್ದವು. ಇಂತಹ ಸೌಲಭ್ಯಗಳು ಶಿಕ್ಷಣದ ವ್ಯಾಪ್ತಿಯನ್ನು ಆಚೆಗೆ ಕೊಂಡೊಯ್ಯಬಹುದು ಎಂದು ಶಿಕ್ಷಕರು ಅರಿತುಕೊಂಡರು.

**ಶೈಕ್ಷಣಿಕ ತಂತ್ರಜ್ಞಾನ ಪ್ರಾಯೋಜನೆ:**

ದೂರದರ್ಶನ ಹಲವು ಬೋಧನಾ ಸಾಮಗ್ರಿಗಳ ಲಾಭಗಳನ್ನು ಒಟ್ಟುಗೂಡಿಸಿತು. ಇದರ ಪ್ರಭಾವವನ್ನು 60ರ ದಶಕದಲ್ಲಿ ನಡೆಸಿದ ಡೆಲ್ಲಿ ಸ್ಕೂಲ್ ಟೆಲಿವಿಷನ್ ಯೋಜನೆಯಿಂದ ಪ್ರಯೋಗಗಳ ಮೂಲಕ ಕಂಡುಕೊಳ್ಳಲಾಯಿತು. ಭಾರತಸರ್ಕಾರವು ಪ್ರಾರಂಭಿಸಿದ ಶೈಕ್ಷಣಿಕ ತಂತ್ರಜ್ಞಾನ ಪ್ರಾಯೋಜನೆಯಡಿಯಲ್ಲಿ NCERT ಸಂಸ್ಥೆಯಲ್ಲಿ ಶೈಕ್ಷಣಿಕ ತಂತ್ರಜ್ಞಾನ ಕೇಂದ್ರವನ್ನು (Center for Educational Technology CET) 1973ರಲ್ಲಿ ಸ್ಥಾಪಿಸಲಾಯಿತು. ಇದೇ ಪ್ರಣಾಲಿಯ ಅಡಿಯಲ್ಲಿ ವಿವಿಧ ರಾಜ್ಯಗಳ ಶಿಕ್ಷಣ ಇಲಾಖೆಗಳಲ್ಲಿ ಶೈಕ್ಷಣಿಕ ತಂತ್ರಜ್ಞಾನ ಘಟಕಗಳನ್ನು (Educational Technology Cell, ET Cell) ಸ್ಥಾಪಿಸಲಾಯಿತು. 1975ರಲ್ಲಿ ಸ್ಯಾಟಿಲೈಟ್ ಇನ್‌ಸ್ಟ್ರಕ್ಷನಲ್ ಟೆಲಿವಿಷನ್ ಎಕ್ಸ್‌ಪೆರಿಮೆಂಟ್ SITE (ಉಪಗ್ರಹ ಬೋಧನಾ ದೂರದರ್ಶನ ಪ್ರಯೋಗ) ಎಂಬುದನ್ನು ಆರಂಭಿಸಲಾಯಿತು. ನಮ್ಮಂತಹ ದೊಡ್ಡದೇಶಕ್ಕೆ ಇದು ಹಲವು ವಿಧಗಳಲ್ಲಿ ಇದೊಂದು ಅಪೂರ್ವ ಪಥಪ್ರದರ್ಶಕ ಪ್ರಯೋಗವಾಗಿತ್ತು. ಈ ಪ್ರಯೋಗವು ಅಮೇರಿಕನ್ ಮೂಲದ ಉಪಗ್ರಹದ ಸೌಲಭ್ಯಗಳನ್ನು ಟೆಲಿವಿಷನ್ ಕಾರ್ಯಕ್ರಮಗಳನ್ನು ಬಿತ್ತರಿಸಲು ಬಳಸಿಕೊಂಡಿತು. ಈ ಪ್ರಯೋಗದ ಮೂಲಕ ಪರಿಷ್ಕೃತ ಸಂಪರ್ಕ ತಂತ್ರಜ್ಞಾನವನ್ನು ದೂರದರ್ಶನ ನೇರ ಗ್ರಾಹಕ ಸೆಟ್‌ಗಳ (Direct Reception Sets, DRS) ರೂಪದಲ್ಲಿ 6 ವಿವಿಧ ರಾಜ್ಯಗಳಲ್ಲಿನ 20 ಜಿಲ್ಲೆಗಳ ಸಮೂಹದಲ್ಲಿದ್ದ 2340 ದೂರಸ್ಥ ಗ್ರಾಮಗಳನ್ನು ತಲುಪಲು ಬಳಸಿಕೊಳ್ಳಲಾಯಿತು. ವಿವಿಧ ಭಾಷಾಮಾಧ್ಯಮದ ಈ ರಾಜ್ಯಗಳ ದೂರದರ್ಶನದಂತಹ ವಸ್ತುವನ್ನು ಕಂಡರಿಯದ ಜನಗಳ ಉಪಯೋಗಕ್ಕಾಗಿ ಇದನ್ನು ಬಳಸಿಕೊಳ್ಳಲಾಯಿತು. ಶೈಕ್ಷಣಿಕ ದೂರದರ್ಶನ ಕಾರ್ಯಕ್ರಮಗಳನ್ನು ಈ ಪ್ರಾಯೋಜನೆಯ ನಿಮಿತ್ತ ಸಿದ್ಧಪಡಿಸುವಲ್ಲಿ ಭಾಗಿಯಾದವರಿಗೆ ಇದೊಂದು ಸವಾಲಿನಂತೆ, ಮಹತ್ಸಾಧನೆಯಂತಿತ್ತು. ಪ್ರಾರಂಭಿಸುವಾಗ ಉತ್ಪಾದನ ಸೌಲಭ್ಯಗಳ ಮತ್ತು ಉಪಕರಣಗಳ ಕೊರತೆಯಿತ್ತಲ್ಲದೆ ಪ್ರದೇಶಗಳು ಕೇಂದ್ರಿಯ ಸ್ಟೇಷನ್‌ನಿಂದಲೂ ಹಾಗೂ ಪರಸ್ಪರ ಬಹಳ ದೂರದಲ್ಲಿದ್ದವು. ಆದರೆ ಈ ಪ್ರಾಯೋಜನೆಯಲ್ಲಿ ಭಾಗಿಯಾಗಿದ್ದ ಶಿಕ್ಷಣಕ್ಷೇತ್ರದಲ್ಲಿರುವವರಿಗೆ ಉತ್ಪಾದನಾ ಹಾಗೂ ಬೋಧಕ ಸಿಬ್ಬಂದಿಗಳಿಗೆ ಕಲಿಯಲು ಇದೊಂದು ದೊಡ್ಡ ಅವಕಾಶವಾಗಿತ್ತು. ಈ ಪ್ರಯೋಗದ ಮುಖಾಂತರ ದೇಶವು ಶೈಕ್ಷಣಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ದಾಪುಗಾಲನ್ನು ಇಟ್ಟಿತ್ತು. ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್ (ISRO) ಅಹಮದಾಬಾದ್‌ನ ಸ್ಪೇಸ್ ಅಪ್ಲಿಕೇಷನ್ ಸೆಂಟರ್ ದೂರದರ್ಶನ ಕೇಂದ್ರ ಮತ್ತು ಸಿ.ಇ.ಟಿ ಪ್ರಯೋಗದಲ್ಲಿ ಸಕ್ರಿಯವಾಗಿ ಭಾಗವಹಿಸಿದವು.

ಶೈಕ್ಷಣಿಕ ದೂರದರ್ಶನಕ್ಕಾಗಿ ಉಪಯೋಗಿಸಲಾಗುವ ಉತ್ಪನ್ನವನ್ನು ಒಳ್ಳೆಯ ತಂಡ ಮಾತ್ರ ಉತ್ತಮವಾಗಿ ತಯಾರಿಸಲಬಲ್ಲದು ಎಂಬ ಅರಿವು ಈ ಪ್ರಯೋಗದ ಪರಿಣಾಮಗಳಲ್ಲಿ ಒಂದು ಪ್ರಮುಖ ಅಂಶವಾಗಿತ್ತು. ಇದರ ಯೋಜನೆ ಮತ್ತು ಸಂಶೋಧನೆ ಶೈಕ್ಷಣಿಕ ತಜ್ಞರ ಜವಾಬ್ದಾರಿಯಾದರೆ ಅದರ ವಾಸ್ತವಿಕ ರೆಕಾರ್ಡಿಂಗ್ ಮತ್ತು ಉತ್ಪಾದನೆ ತರಬೇತಿ ಪಡೆದ ಪ್ರೊಡ್ಯುಸರ್ ಮತ್ತು ತಾಂತ್ರಿಕ ಸಿಬ್ಬಂದಿಗಳಿಂದ ಆಗಬೇಕಿತ್ತು. ಶೈಕ್ಷಣಿಕ ದೂರದರ್ಶನವು ಮನರಂಜನೆ ಅಥವಾ ವಾರ್ತೆಗಳಿಗೆಂದು ನಿರ್ಮಿಸಲಾಗುವ ಇತರ ಕಾರ್ಯಕ್ರಮಗಳಿಗಿಂತ ಭಿನ್ನವಾಗಿರುವುದು. ಶೈಕ್ಷಣಿಕ ದೂರದರ್ಶನದಿಂದ ಸಣ್ಣ ಮಕ್ಕಳು ಹೆಚ್ಚಿನ ಲಾಭ ಪಡೆದರು ಎಂಬ ಅಂಶವೂ ಸಹ ಹೊರಬಿದ್ದಿತು.

**ಶೈಕ್ಷಣಿಕ ರೇಡಿಯೋ:**

ಶೈಕ್ಷಣಿಕ ರೇಡಿಯೋ ಮತ್ತು ಆಡಿಯೋ ಕಾರ್ಯಕ್ರಮಗಳು ಸಹ ಪ್ರಾಥಮಿಕ ಮಟ್ಟದ ಶಿಕ್ಷಣ ಸ್ತರದವರೆಗೂ ತಲುಪಿವೆ. ರಾಜಸ್ಥಾನದ ಜಯ್‌ಪುರ್ ಮತ್ತು ಅಜ್ಮೀರ್ ಜಿಲ್ಲೆಗಳ ಕೆಲವು ಆಯ್ದ ಗ್ರಾಮಗಳಲ್ಲಿ 1ರಿಂದ 3ನೇ ತರಗತಿಯ ಮಕ್ಕಳಿಗೆ ಹಿಂದೀ ಭಾಷೆಯನ್ನು ಪ್ರಥಮಭಾಷೆಯಾಗಿ ಕಲಿಸುವಲ್ಲಿ NCERT

Digitised by Bharatavani, CIIL

ಪ್ರಾಯೋಜಿತ ರೇಡಿಯೋ ಪೈಲಟ್ ಪ್ರಾಯೋಜನೆ ಇದಕ್ಕೆ ಒಂದು ಉದಾಹರಣೆ. ಈ ಪ್ರಾಯೋಜನೆಯಡಿಯಲ್ಲಿನ ಸಾಮಗ್ರಿ ಭಾಷೆಯ ಮತ್ತು ಶಿಶುಬೋಧನಾ ಶಾಸ್ತ್ರದಲ್ಲಿ ಪರಿಣಿತರಾದವರಿಂದ ತಯಾರಿಸಲಾಗಿದ್ದು, CET, NCERTಗಳ ಸ್ಟುಡಿಯೋಗಳಲ್ಲಿ ವೃತ್ತಿಪರರಿಂದ ಉತ್ಪಾದಿಸಲಾಗಿತ್ತು. ಈ ಕಾರ್ಯಕ್ರಮಗಳು ಜಯ್‌ಪುರ್ ಮತ್ತು ಅಜ್ಮೇರ್‌ನ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರಿತವಾಗಿ ಶಾಲೆಗಳಲ್ಲಿ ವಿತರಿಸಲಾದ ಬ್ಯಾಟರಿ ಚಾಲಿತ ಟು-ಇನ್-ಒನ್‌ಗಳ ಸಹಾಯದಿಂದ ಮಕ್ಕಳು ಅವುಗಳನ್ನು ಕೇಳಿದರು.

### CIETಯ ಸ್ಥಾಪನೆ:

ಸೂಕ್ತ ಸೌಲಭ್ಯಗಳು ಮತ್ತು ಸಿಬ್ಬಂದಿಯೊಂದಿಗಿನ ಪೂರ್ಣಕಾಲಿಕ ಸಮರ್ಪಿತ ಸಂಸ್ಥೆಗಳು ಸ್ಥಾಪನೆಯಾಗದಿದ್ದರೆ ಎಲೆಕ್ಟ್ರಾನಿಕ್ ಮಾಧ್ಯಮವನ್ನು ಶಿಕ್ಷಣದ ಲಾಭಕ್ಕಾಗಿ ಪೂರ್ಣವಾಗಿ ಬಳಸಲು ಸಾಧ್ಯವಿಲ್ಲ ಎಂಬ ಅಂಶವು ಸುಸ್ಪಷ್ಟ. CET, NCERTಗಳು ಸಮಿತಿಯ ಒಂದು ಘಟಕವಾಗಿ ಪ್ರಾಂಶುಪಾಲರ ನೇತೃತ್ವದಲ್ಲಿ ಕೆಲಸ ಮಾಡುತ್ತಿದ್ದವು. ತಾತ್ಕಾಲಿಕ ಆಡಿಯೋ ಸ್ಟುಡಿಯೋ ಮತ್ತು ವಿಡಿಯೋ ನಿರ್ಮಾಣಕ್ಕಾಗಿ Out Door Broadcasting(OB) ವ್ಯಾನ್‌ಗಳಂಥ ಕನಿಷ್ಠ ಉತ್ಪಾದನಾ ಸೌಲಭ್ಯಗಳನ್ನು ಇವು ಹೊಂದಿದ್ದವು. ಲಿಪಿಪ್ರತಿ, ಸಂಶೋಧನೆ ಮತ್ತು ಮೌಲ್ಯಮಾಪನಗಳಿಂದ ನಿರ್ದಿಷ್ಟ ಕೆಲಸಗಳಿಗೆ ಹೊಸದಾಗಿ ನೇಮಿಸಿಕೊಂಡವರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಒಳಗೊಂಡಂತೆ ಇದು ಹಲವು ಕಾರ್ಯಕ್ರಮಗಳನ್ನು ಮಾಡಲು ಸಮರ್ಥವಾಗಿದ್ದವು. ಸೂಕ್ತ ಸಮಯಗಳಲ್ಲಿ ದೂರದರ್ಶನದ ಮೂಲಕ ಪ್ರಸಾರಗೊಂಡ ಕೆಲವು ಟೆಲಿವಿಷನ್ ಕಾರ್ಯಕ್ರಮಗಳ ಹಾಗೂ ಶೈಕ್ಷಣಿಕ ಫಿಲಂಗಳ ಉತ್ಪಾದನೆಯಲ್ಲಿ ಕೆಲವು ನುರಿತ ಫಿಲಂ ನಿರ್ಮಾಪಕರು ಭಾಗವಹಿಸಿದ್ದರು.

1984ರಲ್ಲಿ CET ಯನ್ನು NCERT ಸಂಸ್ಥೆಯ ಬೋಧನಾ ಸಾಮಗ್ರಿ ವಿಭಾಗದೊಂದಿಗೆ ವಿಲೀನಗೊಳಿಸಿ ಕೇಂದ್ರೀಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಯನ್ನಾಗಿಸಿ (CIET) ಜಂಟಿ ನಿರ್ದೇಶಕರ ನೇತೃತ್ವದಲ್ಲಿ ಕಾರ್ಯನಿರತವಾಗುವಂತೆ ಮಾಡಲಾಯಿತು. UNDP ಯ ಆರ್ಥಿಕ ಸಹಕಾರದಡಿಯಲ್ಲಿ ಇದರ ಟೆಲಿವಿಷನ್ ಸ್ಟುಡಿಯೋಗಾಗಿ ವಿಶಿಷ್ಟ ಉಪಕರಣಗಳನ್ನು ತನ್ನದಾಗಿಸಿಕೊಂಡು ಟೆಲಿವಿಷನ್ ನಿರ್ಮಾಣದ ವಿಭಿನ್ನ ನಿರ್ದಿಷ್ಟ ಆಯಾಮಗಳಲ್ಲಿ ತಾಂತ್ರಿಕ ಸಿಬ್ಬಂದಿಗಳನ್ನು ತರಬೇತಿಗೊಳಿಸಲಾಯಿತು.

### SIETಗಳು:

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಶೈಕ್ಷಣಿಕ ತಂತ್ರಜ್ಞಾನ ಯೋಜನೆಯ ಅಡಿಯಲ್ಲಿ ಆರು ರಾಜ್ಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳನ್ನು (State Institute of Educational Technology) 1986ರಲ್ಲಿ ಆಂಧ್ರಪ್ರದೇಶ್, ಬಿಹಾರ್, ಗುಜರಾತ್, ಮಹಾರಾಷ್ಟ್ರ, ಒರಿಸ್ಸಾ ಮತ್ತು ಉತ್ತರಪ್ರದೇಶ ರಾಜ್ಯಗಳಲ್ಲಿ ಸ್ಥಾಪಿಸಲಾಯಿತು. ಆಯಾ ಸ್ಟುಡಿಯೋಗಳು ನಿರ್ಮಾಣದ ಹಂತದಲ್ಲಿದ್ದಾಗ ಪ್ರಾರಂಭದಲ್ಲಿ ಕಾರ್ಯಕ್ರಮಗಳನ್ನು CIET ನಲ್ಲಿ ಹಿಂದಿಯಲ್ಲಿ ವಿಕಾಸಗೊಳಿಸಿ ಗುಜರಾತಿ, ಮರಾಠಿ, ಒರಿಯಾ ಮತ್ತು ತೆಲುಗು ಭಾಷೆಗಳಿಗೆ ಡಬ್ ಮಾಡಲಾಯಿತು. ಪ್ರತಿ ಭಾಷೆಗೂ ಕೆಲಸದ ದಿನಗಳಲ್ಲಿ ದೂರದರ್ಶನವು 45 ನಿಮಿಷಗಳ ಕಾಲಾವಕಾಶ ಒದಗಿಸಿತು ಮತ್ತು ಶಿಕ್ಷಕರಿಗಾಗಿ ಪ್ರತಿ ಶನಿವಾರವನ್ನು ಮೀಸಲಿಡಲಾಯಿತು. ಪ್ರಾರಂಭದಲ್ಲಿ ದೂರದರ್ಶನವು ನಿರ್ಮಿಸಿದ ಕಾರ್ಯಕ್ರಮಗಳಲ್ಲಿ ಶೇ.50%ರಷ್ಟನ್ನು ಬಳಸಿಕೊಳ್ಳಲಾಯಿತು. ಆದರೆ 1987ರ ನಂತರ ಎಲ್ಲಾ ಕಾರ್ಯಕ್ರಮಗಳನ್ನು ಸ್ವತಃ ನಿರ್ಮಿಸಿತು. ಉಪಕರಣಗಳ ಖರೀದಿ, ಸ್ಥಾಪನೆ ಮತ್ತು ರಿಪೇರಿ ತನ್ನ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ ಅವರು ತಯಾರಿಸಿದ ಉತ್ಪಾದನೆಯನ್ನು ದೂರದರ್ಶನದ ಮೂಲಕ ಬಿತ್ತರಿಸಲು ಅಡಕಗೊಳಿಸುವುದು ಇವೇ ಮುಂತಾದ ಕಾರ್ಯಗಳಲ್ಲಿ ನಿರತವಾಗಿದ್ದ CIETನ ನಿಗಾವಣೆಯಲ್ಲಿ SIET ಗಳನ್ನು ಸ್ಥಾಪಿಸಿ ಪ್ರಬಲಗೊಳಿಸಲಾಯಿತು. ಆದಾಗ್ಯೂ, ಗುಜರಾತ್ ಮತ್ತು ಮಹಾರಾಷ್ಟ್ರಗಳ ಕಾರ್ಯಕ್ರಮಗಳನ್ನು ನೇರವಾಗಿ ದೂರದರ್ಶನಕ್ಕೆ ನೀಡಲಾಯಿತು. ಒರಿಯಾ ಮತ್ತು ತೆಲುಗು ಭಾಷೆಗಳಿಗೆ ಡಬ್ ಮಾಡಲಾಯಿತು. ಇವು 1989ರವರೆಗೆ ತಮ್ಮದೇ ಕಾರ್ಯಕ್ರಮಗಳನ್ನು ಉತ್ಪಾದಿಸುವವರೆಗೂ ಇದು ಮುಂದುವರೆಯಿತು.

### INSAT:

ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯವು ಭಾರತದ ಸ್ವಂತ ಉಪಗ್ರಹ ಅಂದರೆ ಇಂಡಿಯನ್ ನ್ಯಾಷನಲ್ ಸ್ಯಾಟಿಲೈಟ್ ಟೆಲಿವಿಷನ್ ಪ್ರೊಗ್ರಾಂ (INSAT) ಉಪಗ್ರಹದಿಂದ ಬಿತ್ತರಿಸಲು ಕಾರ್ಯಕ್ರಮಗಳನ್ನು ಹೊಂದಿತ್ತು. ಈ ಉಪಗ್ರಹವು ಶಾಲಾಶಿಕ್ಷಣ, ಉನ್ನತ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಅಧ್ಯಾಪಕ ಶಿಕ್ಷಣಗಳಿಗಾಗಿ ಮೀಸಲಾಗಿದ್ದಿತು. ವಿಶ್ವವಿದ್ಯಾನಿಲಯ ಅನುದಾನ ಆಯೋಗವು (UGC) 17 ವಿಭಿನ್ನ ವಿಶ್ವವಿದ್ಯಾನಿಲಯಗಳಲ್ಲಿ ಪ್ರತಿಯೊಂದು EMRC/AVRCಗಳು ತಮ್ಮದೇ ಆದ ನಿರ್ಮಾಣ, ಸಂಶೋಧನೆ ಮತ್ತು ತರಬೇತಿ ಯೋಜನೆಗಳನ್ನು ಹೊಂದುವುದರ ಜೊತೆಗೆ ಉತ್ಪಾದನೆಗೆ ತಮ್ಮದೇ ಆದ ವೇಳಾಪಟ್ಟಿಯನ್ನು ಹೊಂದಿದ್ದವು. ಈ ಕಾರ್ಯಕ್ರಮಗಳು ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿರುವ ಬೋಧನಾ ಮಾಧ್ಯಮಗಳಾದ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಇರುತ್ತಿದ್ದವು. 1992-93ರಲ್ಲಿ ಯು.ಜಿ.ಸಿ ಶೈಕ್ಷಣಿಕ ಸಂಪರ್ಕಕ್ಕಾಗಿ ಒಕ್ಕೂಟ (Consortium for Educational Communication, CEC)ವನ್ನು ಸ್ಥಾಪಿಸಿತು. ಈ ಒಕ್ಕೂಟವು EMRCಗಳ ಉತ್ಪಾದನೆಗಳನ್ನು ಸ್ವೀಕರಿಸಿ ಪ್ರಸಾರಗೊಳಿಸಿತಲ್ಲದೆ ವೀಡಿಯೊ ಪ್ರತಿಗಳ ವಿತರಣೆ ಮತ್ತು ಮಾರಾಟಕ್ಕಾಗಿ ಒಂದು ಆಕರವಾಗಿ ಪರಿಣಮಿಸಿತು. ಅಲ್ಲದೆ ಇದು CIET ಮತ್ತು ಇತರ ಶಾಲಾಮಟ್ಟದ ಶೈಕ್ಷಣಿಕ ದೂರದರ್ಶನ ಕಾರ್ಯಕ್ರಮಗಳನ್ನು ಸ್ವೀಕರಿಸಿತು.

### IGNOU ಕಾರ್ಯಕ್ರಮಗಳು:

1990ರ ವೇಳೆಗೆ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯದ (IGNOU) ಎಲೆಕ್ಟ್ರಾನಿಕ್ ಮೀಡಿಯಾ ಪ್ರೊಡಕ್ಷನ್ ಸೆಂಟರ್(EMRC) ಶೈಕ್ಷಣಿಕ ದೂರದರ್ಶನ ಕಾರ್ಯಕ್ರಮಗಳಿಗಾಗಿ ದೊಡ್ಡ ಪ್ರಮಾಣದಲ್ಲಿ

Digitised by Bharatavani, CIIL

ತನ್ನ ಉತ್ಪಾದನೆಯನ್ನು ಪ್ರಾರಂಭಿಸಿತಲ್ಲದೆ ಶೈಕ್ಷಣಿಕ ವೀಡಿಯೊ ಕಾರ್ಯಕ್ರಮಗಳ ಪ್ರತಿಮಾಡುವುದು ಮತ್ತು ಸಂಗ್ರಹಿಸಿರುವ ಸೇವೆಯನ್ನು ಪ್ರಾರಂಭಿಸಿ ಬೆಳಗ್ಗೆ ಈ ಕಾರ್ಯಕ್ರಮಗಳನ್ನು ತನ್ನ ಒಂದು ಗಂಟೆ ಕಾಲಾವಕಾಶದಲ್ಲಿ ಪ್ರಸಾರಕ್ಕಾಗಿ ಬಿತ್ತರಿಸುತ್ತಿತ್ತು. 1993ರಲ್ಲಿ ಅಧ್ಯಯನ ಕೇಂದ್ರಗಳಲ್ಲಿರುವ ತನ್ನ ದಿಟ್ಟ ಹಾಗೂ ನವೀನ ಪ್ರಯೋಗವನ್ನು ಸಹ ಇದು ಪ್ರಾರಂಭಿಸಿತು. ದೇಶದ ದೂರ ದೂರದ ಸ್ಥಳಗಳಲ್ಲಿರುವ ವಿವಿಧ ಅಧ್ಯಯನ ಕೇಂದ್ರಗಳಿಂದ ವಿದ್ಯಾರ್ಥಿಗಳು ದೂರದರ್ಶನದ ಶಿಕ್ಷಕರೊಂದಿಗೆ ಪ್ರಶ್ನೆಗಳನ್ನು ಕೇಳಲು ಇದರಿಂದ ಸಾಧ್ಯವಾಯಿತು.

**ಇತರ ಸಂಸ್ಥೆಗಳು:**

ಭೂಪಾಲ, ಚಂಡೀಗಡ್, ಚೆನ್ನೈ ಮತ್ತು ಕೊಲ್ಕತ್ತಾಗಳಲ್ಲಿರುವ ತಾಂತ್ರಿಕ ಶಿಕ್ಷಕ ತರಬೇತಿ ಸಂಸ್ಥೆಗಳು ಈಗಾಗಲೇ ತಮ್ಮ ಕ್ಲೋಸ್ ಸರ್ಕ್ಯೂಟ್ ಟೆಲಿವಿಷನ್ ಸ್ಟುಡಿಯೋಗಳಿಗಾಗಿ ವಿಶೇಷ ಉಪಕರಣಗಳನ್ನು ಹೊಂದಿದ್ದವು. ಇವುಗಳನ್ನು ಪಾಲಿಟೆಕ್ನಿಕ್ ಶಿಕ್ಷಕರ ಲಾಭಕ್ಕಾಗಿ ತಾಂತ್ರಿಕ ಶಿಕ್ಷಣ ಒದಗಿಸಲು ಟೆಲಿವಿಷನ್ ಪ್ರೊಡಕ್ಷನ್ ಕೇಂದ್ರಗಳನ್ನಾಗಿ ಪರಿವರ್ತಿಸಲಾಯಿತು. ಮಹಿಳಾ ವಿಶ್ವವಿದ್ಯಾನಿಲಯ, ಮುಂಬಯಿ, ದೆಹಲಿ, ಮುಂಬಯಿ, ಕಾನ್ಪುರ ಮತ್ತು ಖರಗ್‌ಪುರ್‌ಗಳಲ್ಲಿರುವ ಇಂಡಿಯನ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಗಳು, ಮೈಸೂರಿನ ಕೇಂದ್ರೀಯ ಭಾರತೀಯ ಭಾಷಾ ಕೇಂದ್ರ (CIIL) ಕಿವುಡರಿಗಾಗಿರುವ ಮುಂಬಯಿನ ಅಲಿ ಯವರ್‌ಜಂಗ್ ನ್ಯಾಷನಲ್ ಇನ್ಸಿಟ್ಯೂಟ್ ಫಾರ್ ದ ಡೆಫ್, ವಯಸ್ಕರ ಶಿಕ್ಷಣ ನಿರ್ದೇಶನಾಲಯ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನವದೆಹಲಿ, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಪರ್ಕ ಸಮಿತಿ, ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ ನವದೆಹಲಿ, ಈ ಎಲ್ಲಾ ಸಂಸ್ಥೆಗಳು ತಮ್ಮ ಕ್ಷೇತ್ರಗಳಲ್ಲಿ ಶೈಕ್ಷಣಿಕ ದೂರದರ್ಶನ ಉತ್ಪಾದನೆಗಳನ್ನು ಹೊಂದಿವೆ.

CIET ಪ್ರಾರಂಭಿಸಿದ ಮತ್ತೆ ಕೆಲವು ನಾವೀನ್ಯಯುತ ಪ್ರಾಯೋಜನೆಗಳಾದ ಕ್ಲಾಸ್‌ರೂಮ್ 2000 ಪ್ಲಸ್ (1993) DDK/ಮೈಕ್ರೊವೇವ್ ಲಿಂಕ್‌ಗಳ ಮುಖಾಂತರ ಕರ್ನಾಟಕದ 225 ಜಿಲ್ಲೆಗಳೊಡನೆ ಅನ್ಯೋನ್ಯ ಕ್ರಿಯಾತ್ಮಕ ಕಾರ್ಯಕ್ರಮಗಳಿಗಾಗಿ ಟೆಲಿಫೋನ್ ಲೈನ್‌ಗಳನ್ನು ಬಳಸಿಕೊಂಡಿತು. 1997ರಲ್ಲಿ ಇದೇ ರೀತಿಯ ಕಾರ್ಯಕ್ರಮಗಳನ್ನು ಮಧ್ಯಪ್ರದೇಶದ ಗಾಂಧೀಗ್ರಾಮ್ ಮತ್ತು ಜಬಲ್‌ಪುರ್ ಕೇಂದ್ರಗಳು ನಿರ್ಮಿಸಿದವು.

**ಜ್ಞಾನ್ ದರ್ಶನ್:**

1997ರಿಂದ ಶೈಕ್ಷಣಿಕ ದೂರದರ್ಶನ ಕಾರ್ಯಕ್ರಮಗಳನ್ನು ನಿರಂತರವಾಗಿ ಪ್ರಸಾರಗೊಳಿಸಲು ಜ್ಞಾನ್‌ದರ್ಶನ್ ಎಂಬ ಸಮರ್ಪಿತ ದೂರದರ್ಶನ ಛಾನೆಲ್ ಲಭ್ಯವಿದೆ. ಈ ಛಾನೆಲ್ ಬಹುತೇಕ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಅವಕಾಶ ನೀಡುತ್ತದೆ. ಕಾರ್ಯಕ್ರಮಗಳನ್ನು ನಿರ್ಮಿಸುವ ಸಂಸ್ಥೆಗಳಿಗೆ ಈ ಹಿಂದೆ ಇದ್ದ ಸಮಯಾವಕಾಶದ ಪರಿಮಿತಿ ಸಮಸ್ಯೆಯಾಗಿ ಉಳಿದಿಲ್ಲ. ವಾಸ್ತವವಾಗಿ, ಈ ಛಾನೆಲ್‌ನಿಂದ ಬರುವ ಬೇಡಿಕೆಯಿಂದಾಗಿ ಕಾರ್ಯಕ್ರಮಗಳ ನಿರ್ಮಾಣವು ಬಹುದೊಡ್ಡ ಕೆಲಸವಾಗಿದೆ. ಇತರ ಛಾನೆಲ್‌ಗಳು ಸಹ ಶೈಕ್ಷಣಿಕ ವಲಯಕ್ಕೆ ಕಾರ್ಯಕ್ರಮಗಳನ್ನು ಒದಗಿಸುವ ಇಚ್ಛೆಯನ್ನು ಹೊಂದಿದ್ದು, ಅಂತಹ ಒಂದು ಛಾನೆಲ್ ಆಗಿರುವ ನ್ಯಾಷನಲ್ ಜಿಯಾಗ್ರಫಿಕ್ ಸಂಸ್ಥೆಯೊಡನೆ ಸಹಯೋಗಕ್ಕಾಗಿ ಮಾತುಕತೆಗಳನ್ನು ಆರಂಭಿಸಲಾಯಿತು. ದೂರದರ್ಶನದ ಈ ಹೊಸ ಛಾನೆಲ್ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಬಿತ್ತರಿಸುತ್ತಿದೆ.

**ಜ್ಞಾನವಾಣಿ:**

CIET ಹಾಗೂ ಇತರ ಸಂಸ್ಥೆಗಳು ಉತ್ಪಾದಿಸುವ ಆಡಿಯೋ ಕಾರ್ಯಕ್ರಮಗಳನ್ನು ಈಗ ಆಕಾಶವಾಣಿಯ ಮುಖಾಂತರ ಬಿತ್ತರಿಸಲಾಗುತ್ತಿದೆ. ಇದು ಟೆಲಿವಿಷನ್ ಕಾರ್ಯಕ್ರಮಗಳನ್ನು ಬಿತ್ತರಿಸುವ ಜ್ಞಾನದರ್ಶನದ ಧಾಟಿಯಲ್ಲೇ ಇದೆ. ಈಗ ಶೈಕ್ಷಣಿಕ ಆಡಿಯೋ ಕಾರ್ಯಕ್ರಮಗಳನ್ನು ಬಿತ್ತರಿಸಲು ಸಮರ್ಪಿತ ರೇಡಿಯೋ ಎಲ್ಲರಿಗೂ ಸುಲಭವಾಗಿ ಲಭ್ಯವಿರುವುದರಿಂದ ಇಂತಹ ಪ್ರಸಾರಗಳು ಖಂಡಿತವಾಗಿ ಜನಪ್ರಿಯವೂ ಅಗ್ಗವೂ ಆಗುವುವು. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಮತ್ತು ಪ್ರಸಾರಭಾರತಿಗಳ ಪ್ರೊಡಕ್ಷನ್ ಸಂಸ್ಥೆಯ (EMPC) ಮೂಲಕ ರೇಡಿಯೋ ಸಲಹೆ ಮತ್ತು ಫೋನ್ ಇನ್ ಸೌಲಭ್ಯಗಳು ಸಾಧ್ಯವಾಗಿವೆ. ಸದ್ಯದಲ್ಲಿ ಪ್ರತಿ ಭಾನುವಾರ ಸಾಯಂಕಾಲ 4ರಿಂದ 5ಗಂಟೆಯವರೆಗೆ ಫೋನ್–ಇನ್ ಕಾರ್ಯಕ್ರಮದ ಸೌಲಭ್ಯವನ್ನು ಹೊಂದಿರುವ ಒಟ್ಟು 18ರ ಆಲ್ ಇಂಡಿಯಾ ರೇಡಿಯೋ ಸ್ಟೇಷನ್‌ಗಳಿವೆ. ಬೆಂಗಳೂರು, ಚೆನ್ನೈ, ದೆಹಲಿ, ಗೌಹಾಟಿ, ಜಯಪುರ್, ಕೊಲ್ಕತ್ತ ಮತ್ತು ಲಕ್ನೋ AIR ಸ್ಟೇಷನ್‌ಗಳಲ್ಲಿ EMPC, IGNOU ಸಂಸ್ಥೆಯ ಸ್ಟುಡಿಯೋಗಳಿಂದ ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಸಲಹೆ ಕಾರ್ಯಕ್ರಮದ ಮರುಪ್ರಸಾರ ಮಾಡಲು ಸಾಯಂಕಾಲ 4ರಿಂದ 5ಗಂಟೆಯವರೆಗೆ ಅವಕಾಶವಿದೆ. ವಿದ್ಯಾರ್ಥಿಗಳು ನಿಃಶುಲ್ಕ ದೂರವಾಣಿ ಸಂಖ್ಯೆಯಿಂದ ಸ್ಟುಡಿಯೋಗಳಲ್ಲಿ ಕುಳಿತಿರುವ ವಿಶೇಷಜ್ಞರ ಜೊತೆ ಮುಕ್ತವಾದ ಅನ್ಯೋನ್ಯಕ್ರಿಯೆ ನಡೆಸಬಹುದು. ಜ್ಞಾನದರ್ಶನದಲ್ಲಿ ಭಾರತದ 38 ನಗರಗಳಿಂದ ಉಚಿತ ಬೋಧನಾ ಸೌಲಭ್ಯ, ಫೋನ್–ಇನ್ ಸಲಹೆ ಮತ್ತು ದೂರಸಮ್ಮೇಳನ(Teleconference) ಇತ್ಯಾದಿಗಳಿಗೆ ಅವಕಾಶವಿದೆ. ಆಡಿಯೋ ಮತ್ತು ವೀಡಿಯೋ ಸ್ಟುಡಿಯೋಗಳಿಗೆ ತಜ್ಞರೊಡನೆ ಅನ್ಯೋನ್ಯಕ್ರಿಯೆ ನಡೆಸಲು ನಿಃಶುಲ್ಕ ದೂರವಾಣಿ ಸಂಖ್ಯೆ ಲಭ್ಯವಿದೆ. ಪ್ರತಿದಿನ ಪ್ರಸಾರವಾಗುವ ವಸ್ತು ವಿಷಯದ ವ್ಯಾಪ್ತಿ ವಿಸ್ತಾರವಾಗಿದ್ದು, ವಿಜ್ಞಾನ, ತಂತ್ರಜ್ಞಾನ, ಸಂಗೀತ, ಲಲಿತಕಲೆ ಹಾಗೂ ಶಿಕ್ಷಕರಿಗೆ ಕೆಲವು ವಿಕಾಸಾತ್ಮಕ ಮುಖಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಒಳಗೊಳ್ಳುತ್ತದೆ. ಹೊರದೇಶದಿಂದಲೂ ಸಹ ಕೆಲವು ಆಯ್ದ ಕಾರ್ಯಕ್ರಮಗಳು ಇದರಲ್ಲಿ ಸೇರಿರುವುದು.

EMPC - IGNOU ಇವರ ಮೂಲಕ ಲಭ್ಯವಿರುವ ವೀಡಿಯೋ ಕ್ಯಾಸೆಟ್‌ಗಳ ಜೊತೆಗೆ ಪಠ್ಯಕ್ರಮ ಆಧಾರಿತ ಶೈಕ್ಷಣಿಕ ದೂರದರ್ಶನ ಕಾರ್ಯಕ್ರಮಗಳು ಸಹ ಸಿ.ಡಿ.ರೂಪದಲ್ಲಿ ಲಭ್ಯವಿದೆ. ಭಾರತದ ವಿವಿಧ

Digitised by Bharatavani, CIIL

ನಗರಗಳಲ್ಲಿ ಹದಿನೈದು ಕೇಬಲ್ ಅಪರೇಟರ್‌ಗಳು ಜ್ಞಾನದರ್ಶನ ಕಾರ್ಯಕ್ರಮಗಳನ್ನು ತೋರಿಸುತ್ತಿರುವುದು ಈ ಕಾರ್ಯಕ್ರಮಗಳು ವಿದ್ಯಾರ್ಥಿ ಸಮೂಹದಲ್ಲಿ ಎಷ್ಟು ಜನಪ್ರಿಯವಾಗಿವೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಹೆಚ್ಚಿದ ಉತ್ಪಾದನೆ ಮತ್ತು ವಿತರಣಾ ವ್ಯವಸ್ಥೆಯೊಂದಿಗೆ ಹೆಚ್ಚು ಇಂಥ ಸಂಸ್ಥೆಗಳು ಇನ್ನು ಮುಂದೆ ಅಸ್ತಿತ್ವಕ್ಕೆ ಬಂದು ದೇಶದಾದ್ಯಂತ ಶಿಕ್ಷಣದ ವ್ಯಾಪ್ತಿ ಮತ್ತು ಲಭ್ಯತೆಯನ್ನು ಹೆಚ್ಚಿಸುವುದರಲ್ಲಿ ಸಂಶಯವಿಲ್ಲ.

**ಶಾಲಾಮಟ್ಟದ ET ಸಂಸ್ಥೆಗಳು:**

1. CIET – NCETR, ನವದೆಹಲಿ
2. SIET, ಆಂಧ್ರಪ್ರದೇಶ, ಹೈದರಾಬಾದ್
3. SIET, ಬಿಹಾರ್, ಪಾಟ್ನಾ
4. SIET, ಗುಜರಾತ್, ಅಹಮದಾಬಾದ್
5. SIET, ಒಡಿಶಾ, ಭುವನೇಶ್ವರ್
6. SIET, ಉತ್ತರಪ್ರದೇಶ, (ದೀಕ್ಷಾ), ಲಕ್ನೊ
7. SIET, ಕೇರಳ, ತಿರುವನಂತಪುರಂ
8. SIET, ನವದೆಹಲಿ

**ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದ ET ಸಂಸ್ಥೆಗಳು:**

1. ಮಾಸ್ ಕಮ್ಯೂನಿಕೇಷನ್ ರಿಸರ್ಚ್ ಸೆಂಟರ್ (MCRC), ನವದೆಹಲಿ.
2. ಶೈಕ್ಷಣಿಕ ಮಾಧ್ಯಮ ಸಂಶೋಧನಾ ಕೇಂದ್ರ (EMRC), ಕೊಲ್ಕತ್ತಾ.
3. ಶೈಕ್ಷಣಿಕ ಮಾಧ್ಯಮ ಸಂಶೋಧನಾ ಕೇಂದ್ರ (EMRC), ಅಹಮದಾಬಾದ್.
4. ಶೈಕ್ಷಣಿಕ ಮಾಧ್ಯಮ ಸಂಶೋಧನಾ ಕೇಂದ್ರ (EMRC), ಹೈದರಾಬಾದ್.
5. ಶೈಕ್ಷಣಿಕ ಮಾಧ್ಯಮ ಸಂಶೋಧನಾ ಕೇಂದ್ರ (EMRC), ಜೋದ್‌ಪುರ್.
6. ಶೈಕ್ಷಣಿಕ ಮಾಧ್ಯಮ ಸಂಶೋಧನಾ ಕೇಂದ್ರ (EMRC), ಪುಣೆ.
7. ಶೈಕ್ಷಣಿಕ ಮಾಧ್ಯಮ ಸಂಶೋಧನಾ ಕೇಂದ್ರ (EMRC), ಮಧುರೈ.
8. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಹೈದರಾಬಾದ್
9. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಇಂದೂರ್
10. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಚೆನ್ನೈ
11. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಇಂಫಾಲ
12. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಪಟಿಯಾಲ
13. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ರೂರ್ಕಿ
14. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಶ್ರೀನಗರ್
15. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಮೈಸೂರು
16. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಕ್ಯಾಲಿಕಟ್
17. ಆಡಿಯೋ ವಿಷುಯಲ್ ರಿಸರ್ಚ್ ಸೆಂಟರ್, ಸಾಗರ್
18. ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಹೈದರಾಬಾದ್
19. ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ, ನವದೆಹಲಿ
20. ವೈ.ಬಿ. ಚವ್ಹಾಣ್ ಮುಕ್ತ ವಿಶ್ವವಿದ್ಯಾನಿಲಯ, ನಾಸಿಕ್
21. ಕೋಟಾ ಮುಕ್ತ ವಿಶ್ವವಿದ್ಯಾಲಯ, ಕೋಟಾ

**ತಾಂತ್ರಿಕ ಶಿಕ್ಷಣ ET ಸಂಸ್ಥೆಗಳು:**

1. ತಾಂತ್ರಿಕ ಶಿಕ್ಷಕ ತರಬೇತಿ ಸಂಸ್ಥೆ, ಚೆನ್ನೈ
2. ತಾಂತ್ರಿಕ ಶಿಕ್ಷಕ ತರಬೇತಿ ಸಂಸ್ಥೆ, ಕೊಲ್ಕತ್ತ
3. ತಾಂತ್ರಿಕ ಶಿಕ್ಷಕ ತರಬೇತಿ ಸಂಸ್ಥೆ, ಚಂಡೀಗಢ
4. ತಾಂತ್ರಿಕ ಶಿಕ್ಷಕ ತರಬೇತಿ ಸಂಸ್ಥೆ, ಭೂಪಾಲ
5. ಇಂಡಿಯನ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ(NCSTC/DST), ನವದೆಹಲಿ
6. ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಪರ್ಕ ಸಮಿತಿ, ನವದೆಹಲಿ
7. ವಿಜ್ಞಾನ ಪ್ರಸಾರ್, ಡಿ.ಎಸ್.ಟಿ, ನವದೆಹಲಿ
8. ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ನಿಗಮ
9. ಆಲ್ ಇಂಡಿಯಾ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್

**ಜ್ಞಾನ ದರ್ಶನ್ ಛಾನೆಲ್‌ಗಾಗಿ ಇರುವ ಇತರ ET ಸಂಸ್ಥೆಗಳು:**

1. ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ
2. ಪರಿಸರ ಮಂತ್ರಾಲಯ
3. ರಾಷ್ಟ್ರೀಯ ಸಾರ್ವಜನಿಕ ಸಹಕಾರ ಮತ್ತು ಶಿಶು ಅಭಿವೃದ್ಧಿ ಸಂಸ್ಥೆ, ನವದೆಹಲಿ
4. C-DIT ತಿರುವನಂತಪುರಂ ಇಮೇಜಿಂಗ್ ತಂತ್ರಜ್ಞಾನ ವಿಕಾಸ ಸಂಸ್ಥೆ
5. ಎಂಟರ್‌ಪ್ರೆನರ್ ವಿಕಾಸ ಸಂಸ್ಥೆ, ಅಹಮದಾಬಾದ್
6. ಅಭಿವೃದ್ಧಿ ಶಿಕ್ಷಣ ಅಂತರರಾಷ್ಟ್ರೀಯ ಸೊಸೈಟಿ, ಪುಣೆ
7. ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆ(ICA)
8. TRASTEL
9. ಗ್ರಾಮೀಣ ವಿಕಾಸ ಮಂತ್ರಾಲಯ
10. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ (MHFW)
11. ಭಾರತೀಯ ರೇಲ್ವೆ
12. ಕೃಷಿ ಮಂತ್ರಾಲಯ (ಕೃಷಿ ವಿಶ್ವವಿದ್ಯಾನಿಲಯಗಳ ಸಂವಹನ ವಿಭಾಗಗಳು)
13. ಆಹಾರ ಸಂಸ್ಕರಣ ಕೈಗಾರಿಕೆಗಳ ಮಂತ್ರಾಲಯ
14. ಕೇಂದ್ರಿಯ ಹಿಂದಿ ನಿರ್ದೇಶನಾಲಯ, ನವದೆಹಲಿ
15. ಅಂಚೆ ತರಬೇತಿ ಸಂಸ್ಥೆ, ಚೆನ್ನೈ
16. UNICEF
17. ಮಾರುತಿ ಉದ್ಯೋಗ ಲಿಮಿಟೆಡ್
18. ಮಾಹಿತಿ ಮತ್ತು ಪ್ರಸಾರಣ ಮಂತ್ರಾಲಯ

Digitised by Bharatavani, CIIL

ಸೂಚನೆ: ಈ ಪಟ್ಟಿ ಲಭ್ಯವಿದ್ದ ಮಾಹಿತಿಯ ಆಧಾರ ಹೊಂದಿದೆ. ಇಲ್ಲಿ ಸೇರಿಸದೇ ಇರುವ ಇದೇ ರೀತಿಯ ಇನ್ನು ಅನೇಕ ಸಂಸ್ಥೆಗಳಿರಬಹುದು.

**ಮೂಲ: ಸಿ.ಎಚ್.ಕೆ. ಮಿಶ್ರಾ**
**ಅನು: ಚಂದ್ರಶೇಖರ್ ಬಿ. ಎಂ.**

## ಶೈಕ್ಷಣಿಕ ನವೀನ ಆಚರಣೆಗಳು

'ನವೀನ ಆಚರಣೆ' (Innovation) ಎನ್ನುವ ಆಂಗ್ಲಪದ ಪದೋತ್ಪತ್ತಿಯ ಪ್ರಕಾರ ಲ್ಯಾಟಿನ್ ಭಾಷೆಯ 'Innovare' ಎನ್ನುವ ಪದದಿಂದ ಬಂದಿದೆ. ಈ ಪದದ ಅರ್ಥ ಏನನ್ನಾದರೂ ಹೊಸದಾದುದಕ್ಕೆ (ನವೀನವಾದುದಕ್ಕೆ) ಬದಲಾಯಿಸುವುದು ಎಂದಾಗುತ್ತದೆ. ಅಂತರಾಷ್ಟ್ರೀಯ ಶೈಕ್ಷಣಿಕ ಶಬ್ದಕೋಶ 'ನವೀನ ಆಚರಣೆ' (Innovation) ಎನ್ನುವ ಪದವನ್ನು ಹೀಗೆ ಅರ್ಥೈಸಿದೆ. – ಶಿಕ್ಷಣ ಮತ್ತು ಬೋಧನೆಯಲ್ಲಿ ಹೊಸ ವಿಚಾರಗಳನ್ನು ಅಥವಾ ಆಚರಣೆಗಳನ್ನು ಪ್ರೋತ್ಸಾಹಿಸುವುದೇ ನವೀನ ಆಚರಣೆ ಎನಿಸುತ್ತದೆ. ಪದದ ಅರ್ಥದಿಂದ ಸ್ವೀಕರಿಸುವವನ ದೃಷ್ಟಿಯಿಂದ ಹೊಸತು ಎನಿಸಿಕೊಳ್ಳುವ ವಿಚಾರ ಅಥವಾ ಆಚರಣೆ ನವೀನ ಆಚರಣೆಯೆನಿಸುತ್ತದೆ. ನವೀನ ಆಚರಣೆ ಅದರ ರವಾನೆಯ ಮಾಧ್ಯಮಗಳಾದ ಸಂಪನ್ಮೂಲ ವ್ಯವಸ್ಥೆ ಮತ್ತು ಸಂವಹನದ ಮೂಲಕ ಸೃಷ್ಟಿಯಾಗಿ ರವಾನಿಸಲ್ಪಡುತ್ತದೆ ಮತ್ತು ಸಂಭಾವ್ಯತೆಯ ಸಂಘಟನೆಯ ಗುರಿಯಾದ ಹೊಂದಾಣಿಕೆ ವ್ಯವಸ್ಥೆಯನ್ನು ತಲುಪುತ್ತದೆ. ನವೀನ ಆಚರಣೆ ಹೊಸ ವಿಚಾರಗಳಿಗಿಂತ ಹೆಚ್ಚಿನದಾಗಿದೆ. ಏಕೆಂದರೆ ಅದು ಆ ವಿಚಾರಗಳನ್ನು ಯಶಸ್ವಿಯಾಗಿ ಪರಿಚಯಿಸುವುದನ್ನು ಅಥವಾ ಹೊಸ ರೀತಿಯಲ್ಲಿ ಕಾರ್ಯಗಳು ಉಂಟಾಗುವಂತೆ ಮಾಡುವುದನ್ನು ಒಳಗೊಳ್ಳುತ್ತದೆ. ಅದು ಹೊಸ ವಿಚಾರಗಳನ್ನು ಉಪಯುಕ್ತವಾದ, ಪ್ರಾಯೋಗಿಕವಾದ ಮತ್ತು ವಾಣಿಜ್ಯ ಉತ್ಪಾದಕಗಳ ಅಥವಾ ಸೇವೆಗಳ ರೂಪಕ್ಕೆ ಪರಿವರ್ತಿಸುವುದಾಗುತ್ತದೆ.

ನವೀನ ಆಚರಣೆಗಳು ಕೆಲವು ಲಕ್ಷಣಗಳನ್ನು ಹೊಂದಿರುತ್ತವೆ ಎಂದು ಹೇಳಲಾಗುತ್ತದೆ. ನವೀನ ಆಚರಣೆಗಳಲ್ಲಿ ನಾವು ನೋಡುವ (ಪ್ರತ್ಯಕ್ಷಾನುಭವಿಸುವ) ಲಕ್ಷಣಗಳು ಅವುಗಳ ಸಫಲತೆಯ ಪೂರ್ವಸೂಚಕಗಳಾಗಿರುತ್ತವೆ. ಒಂದು ನವೀನ ಆಚರಣೆ ಒಂದು ಗುಂಪಿನ ಅಥವಾ ಸಾಮಾಜಿಕ ವ್ಯವಸ್ಥೆಯ ಹಾಗೂ ವ್ಯಕ್ತಿಗಳ ವ್ಯಾಪಕವಾದ ಸ್ವೀಕೃತಿಯನ್ನು ಪಡೆಯಬೇಕಾದ ಅಗತ್ಯವಿದೆ. ಆಗ ಮಾತ್ರ ಅದು ಯಶಸ್ವಿಯಾಗುತ್ತದೆ ಮತ್ತು ಸಂಘಟನೆಯಿಂದ ಪ್ರಾಯೋಗಿಕವಾಗಿ ಉಪಯೋಗದಲ್ಲಿ ತರಲ್ಪಡುತ್ತದೆ. ನವೀನ ಆಚರಣೆಗಳು ಇಲ್ಲಿ ಹೇಳಲೇಬೇಕಾದ ಐದು ಲಕ್ಷಣಗಳನ್ನು ಹೊಂದಿವೆ. (i) ತಾರತಮ್ಯಾತ್ಮಕ ಅನುಕೂಲ (ii) ಹೊಂದಿಕೊಳ್ಳುವಿಕೆ (iii) ಸಂಕೀರ್ಣತೆ (iv) ಪ್ರಯತ್ನಿಸಿ ನೋಡುವಿಕೆ (v) ಅವಲೋಕಿಸುವ ಸಾಧ್ಯತೆ. ಸುಲಭವಾಗಿ ಸಣ್ಣ ಸಣ್ಣ ಭಾಗಗಳಾಗಿ ವಿಭಾಗಿಸಬಹುದಾದ, ಸುಲಭವಾಗಿ ಬೇರೆಯವರಿಗೆ ಸಂವಹಿಸಲು (ತಿಳಿಯ ಹೇಳಲು) ಸಾಧ್ಯವಾದ, ಹೊಂದಾಣಿಕೆಯಾಗುವಂಥ, ಹೆಚ್ಚು ಸಂಕೀರ್ಣತೆ ಹೊಂದಿಲ್ಲದ, ಮತ್ತು ಉಪಯುಕ್ತವೆನಿಸುವಂಥ ನವೀನ ಆಚರಣೆಗಳು ಈ ಲಕ್ಷಣಗಳನ್ನು ಹೊಂದಿಲ್ಲದ ನವೀನ ಆಚರಣೆಗಳಿಗಿಂತ ಸಾಪಾಕ್ಷವಾಗಿ ಸಫಲವಾಗಬಲ್ಲವು. ಆದ್ದರಿಂದ ನವೀನ ಆಚರಣೆ ಮಾಡುವುದೆಂದರೆ ಸೃಷ್ಟಿಸುವುದು, ಮೌಲಿಕ ರೀತಿಯಲ್ಲಿ ಹೊಸದೊಂದು ಮಾರ್ಗವನ್ನು ಅನುಸರಿಸುವುದು ಎಂದು ಅರ್ಥವಾಗುತ್ತದೆ.

ಇಂದು ಭಾರತೀಯ ಶಿಕ್ಷಣವ್ಯವಸ್ಥೆ ರಾಷ್ಟ್ರದ ಯೋಗಕ್ಷೇಮವನ್ನು ಬಲಪಡಿಸುತ್ತಿದ್ದ ಸಾಮಾಜಿಕ ಉದಾರತೆಯ ವ್ಯವಸ್ಥೆಯಾಗಿಲ್ಲದೆ ಇನ್ನು ಕೆಲವೇ ದಶಕಗಳಲ್ಲಿ ಫಲಿತಾಂಶಗಳನ್ನು ನೋಡಬಹುದಾದಂಥ ದಿಶೆಗಳನ್ನು, ಸಂರಚನೆಗಳನ್ನು, ಪ್ರಕ್ರಿಯೆಗಳನ್ನು, ರೂಪಗಳನ್ನು ಮತ್ತು ವಿಷಯ ವಸ್ತುಗಳನ್ನು ಅರಸುವ ರಾಷ್ಟ್ರೀಯ ಪ್ರಯತ್ನವಾಗಿದೆ. ಯಾವುದೇ ಶೈಕ್ಷಣಿಕ ನೀತಿಯ ಮತ್ತು ಆ ನೀತಿಯ ಸಫಲ ವ್ಯವಸ್ಥೆಯ ಅವಶ್ಯಕತೆಗಳನ್ನು ಆಧರಿಸಿದ ನವೀನ ಆಚರಣೆಗಳ ಗುಣಾತ್ಮಕತೆಯನ್ನು ಅವಲಂಬಿಸಿದೆ. ಆದ್ದರಿಂದ ನವೀನ ಆಚರಣೆಗಳು ಶಾಲೆಗಳಲ್ಲಿ ಬೋಧನೆ ಮತ್ತು ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

**ಶಾಲಾ ಶಿಕ್ಷಣದಲ್ಲಿ ನವೀನ ಆಚರಣೆಗಳು:**

ಕಳೆದ ಕೆಲವು ದಶಕಗಳಲ್ಲಿ ಮಾನವ ಜೀವನದ ಈ ಹಿಂದಿನ ಐದಾರು ದಶಕಗಳಿಗೆ ಹೋಲಿಸಿದರೆ, ತಮ್ಮ ಪ್ರಮಾಣ (ಗಾತ್ರ) ಮತ್ತು ಪ್ರಭಾವದಲ್ಲಿ ಎಷ್ಟೋ ಪಟ್ಟು ಮಿಗಿಲಾಗಿವೆ. ಶೈಕ್ಷಣಿಕ ಮತ್ತು ಸಾಮಾಜಿಕ ಬೇಡಿಕೆಗಳು ಬದಲಾಗಿವೆ. ನಿಜ ಹೇಳಬೇಕೆಂದರೆ ಭಾರತದಲ್ಲಿ ಶಿಕ್ಷಣ ಮತ್ತು ಕಲಿಕೆ ರೂಪಾಂತರಗೊಂಡಿವೆ. ಪರ್ಯಾಯ ಕ್ರಮಗಳನ್ನು ಪ್ರಯತ್ನಿಸಲಾಗಿದೆ. ಪ್ರಯೋಗಗಳನ್ನು ಮಾಡಲಾಗಿದೆ ಮತ್ತು ಹೊಸ ದಿಶೆಗಳನ್ನು ಮತ್ತು ಉಪಕ್ರಮಗಳನ್ನು ಅನುಸರಿಸಲಾಗಿದೆ. ಶಾಲಾ ಶಿಕ್ಷಣದಲ್ಲಿ ಗಮನಾರ್ಹ ನವೀನ ಆಚರಣೆಗಳು ಈ ಮುಂದಿನಂತಿವೆ.

**ಶಾಲಾ ಪೂರ್ವ ಹಂತ:** ಈ ಹಂತ ಮಕ್ಕಳನ್ನು ಶಾಲಾ ಜೀವನಕ್ಕೆ ಸಿದ್ಧಗೊಳಿಸುತ್ತದೆ. ರಾಷ್ಟ್ರೀಯ ಮಕ್ಕಳ ನೀತಿ (1974) ಭಾರತದ ಬಹಳಷ್ಟು ಮಕ್ಕಳು ಅವರ ದೈಹಿಕ, ಸಾಮಾಜಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಅಡಚಣೆ ಉಂಟುಮಾಡುವಂಥ ಆರ್ಥಿಕ ಮತ್ತು ಸಾಮಾಜಿಕ ಪರಿಸರದಲ್ಲಿ ಜೀವಿಸುತ್ತಿದ್ದಾರೆ ಎಂಬುದನ್ನು ಒಪ್ಪಿಕೊಂಡಿದೆ. ಬಡತನ, ಕೆಟ್ಟ ಪರಿಸರಣೀಯ ಸ್ವಚ್ಛತೆ, ರೋಗಗಳು, ಸಾಂಕ್ರಾಮಿಕತೆ, ಮೂಲಭೂತ ಆರೋಗ್ಯ ಸಂರಕ್ಷಣೆ ಲಭ್ಯವಾಗದಿರುವಿಕೆ ಮತ್ತು ಸೂಕ್ತವಲ್ಲದ ಶಿಶು ಸಂರಕ್ಷಣ ಮತ್ತು ಪೋಷಣೆಯ ಆಚರಣೆಗಳು ಈ ರೀತಿ ಅಡಚಣೆ ಉಂಟುಮಾಡುವ ಪರಿಸ್ಥಿತಿಗಳಾಗಿವೆ. ಆದ್ದರಿಂದ ಈ ರೀತಿಯ ಪರಿಸ್ಥಿತಿಗಳಲ್ಲಿ ಜೀವಿಸುತ್ತಿರುವ ಮಕ್ಕಳ ಅವಶ್ಯಕತೆಗಳನ್ನು ಪೂರೈಸಲು ವಿಶೇಷ ಹಸ್ತಕ್ಷೇಪಣೀಯ (ಮಧ್ಯಸ್ಥಿಕೆ) ಕಾರ್ಯಕ್ರಮಗಳು ಬೇಕಾಗುತ್ತವೆ.

Digitised by Bharatavani, CIIL

ಈ ದೃಢನಂಬಿಕೆಯ ಆಧಾರದ ಮೇಲೆ 1975ರಲ್ಲಿ ಸಮಗ್ರ ಶಿಶುವಿಕಾಸ ಸೇವೆಗಳು(Integrated Child Development Services-ICDS) ಎಂಬ ನವೀನ ಆಚರಣೆಯ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಇಂದು ICDS ಕಾರ್ಯಕ್ರಮ ಇತಿಹಾಸದಲ್ಲೇ ತುಲನೆಯಿಲ್ಲದಂಥ ಇಡೀ ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಮತ್ತು ಅತಿ ಅಪೂರ್ವವಾದ ಆರಂಭಿಕ ಶಿಶು ಅಕ್ಷರದ ಕಾರ್ಯಕ್ರಮವನ್ನು ಪ್ರತಿನಿಧಿಸುತ್ತದೆ. ಕಾರ್ಯಕ್ರಮವನ್ನು 6ವರ್ಷಗಳ ಒಳಗಿನ ಮಕ್ಕಳ ಸಂಪೂರ್ಣವಾದ ವಿಕಾಸವನ್ನು ಅಭಿವೃದ್ಧಿಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಉತ್ತಮಮಟ್ಟದ ಶಿಶು ಸಂರಕ್ಷಣೆ, ಸ್ವಾಸ್ಥ್ಯ ಮತ್ತು ಪೌಷ್ಟಿಕತೆ, ನೀರು ಮತ್ತು ಪರಿಸರಣೀಯ ಸ್ವಚ್ಛತೆ ಮತ್ತು ಆರಂಭಿಕ ಪ್ರಚೋದನೆ ಮತ್ತು ಕಲಿಕೆಗೆ ಬೇಕಾದ ಎಲ್ಲಾ ರೀತಿಯ ಸೇವೆಗಳನ್ನು ಏಕಾಗ್ರಗೊಳಿಸುವ ಸಮಗ್ರ ಉಪಕ್ರಮವನ್ನು ಈ ಕಾರ್ಯಕ್ರಮ ಒದಗಿಸುತ್ತದೆ.

ಆರಂಭಿಕ ಶೈಶವಾವಸ್ಥೆ ಸಂರಕ್ಷಣೆ ಮತ್ತು ಶಾಲಾಪೂರ್ವ ಶಿಕ್ಷಣ (Early Childhood Care and Education-ECCE) ICDS ಅಡಿಯಲ್ಲಿ ಒದಗಿಸುವ ಮುಖ್ಯ ಸೇವೆಗಳಾಗಿವೆ. ಇದು ಕಾರ್ಯಕ್ರಮ 3ರಿಂದ 6ವರ್ಷ ವಯಸ್ಸಿನ ಮಕ್ಕಳಿಗೆ ಅಂಗನವಾಡಿಗಳು, ಬಾಲವಾಡಿಗಳು ಮತ್ತು ದೈನಿಕ ಸಂರಕ್ಷಣ ಕೇಂದ್ರದ ಜಾಲದ ಮೂಲಕ ಲಭ್ಯವಾಗುತ್ತದೆ. ಮಕ್ಕಳ ಗರಿಷ್ಠ ಮಟ್ಟದ ಬೆಳವಣಿಗೆ ಮತ್ತು ವಿಕಾಸಕ್ಕೆ ಅಗತ್ಯವಾಗಿ ಬೇಕಾದ ಭರಿತ (Input) ಗಳಿಗೆ ಒತ್ತು ನೀಡುವುದರೊಂದಿಗೆ ಸ್ವಾಭಾವಿಕ, ಆನಂದದಾಯಕ ಮತ್ತು ಪ್ರಚೋದನದಾಯಕ ಪರಿಸರವನ್ನು ಒದಗಿಸುವ ಮತ್ತು ಖಚಿತಗೊಳಿಸಿಕೊಳ್ಳುವ ಗುರಿಯನ್ನು ಈ ಕಾರ್ಯಕ್ರಮಗಳು ಹೊಂದಿವೆ.

ಶಿಕ್ಷಣದ ಆರಂಭದ ಅವಧಿಯಲ್ಲಿಯೇ ಒದಗಿಸುವ ಅನುಭವಗಳು ಮಗುವಿನ ವ್ಯಕ್ತಿತ್ವದ ವಿಕಾಸದಲ್ಲಿ ನಿರ್ಣಾಯಕ ಪಾತ್ರವನ್ನು ಹೊಂದಿರುತ್ತವೆ ಮತ್ತು ಮಕ್ಕಳ ನಂತರದ ಶಿಕ್ಷಣದ ಪ್ರಬಲವಾದ ಪ್ರಭಾವವನ್ನು ಬೀರುತ್ತವೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ICDS ಕಾರ್ಯಕ್ರಮದ ಮೂಲಕ 3ರಿಂದ 6ವರ್ಷದ ಒಳಗಿನ ವಂಚಿತ ವರ್ಗಗಳ 125ಲಕ್ಷ (12.5 ಮಿಲಿಯನ್) ಮಕ್ಕಳು ಕೇಂದ್ರ-ಆಧಾರಿತ ಆರಂಭಿಕ ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ.

ಸಂಕ್ಷಿಪ್ತವಾಗಿ ಈ ಆಂದೋಲನದ ಮುಖ್ಯ ಗುರಿ ಪೂರ್ವ-ಪ್ರಾಥಮಿಕ ಶಾಲೆಯ ಈ ಮುಂದಿನ ಮುಖ್ಯ ಉದ್ದೇಶಗಳನ್ನು ಸಾಧಿಸುವುದಾಗಿದೆ. (i) ಮಕ್ಕಳಿಗೆ ಬೆಳಕು, ಸೂರ್ಯನ ಪ್ರಕಾಶ, ಅವಕಾಶ (space) ಮತ್ತು ಶುದ್ಧಗಾಳಿಯಂತಹ ಆರೋಗ್ಯಕರ ಬಾಹ್ಯ ಪರಿಸ್ಥಿತಿಗಳನ್ನು ಒದಗಿಸುವುದು (ii) ಸ್ವಾಸ್ಥ್ಯಯುಕ್ತ, ಸಂತೋಷದಾಯಕ ಮತ್ತು ನಿಯಮಿತ ಜೀವನವನ್ನು ನಿರಂತರ ವೈದ್ಯಕೀಯ ಮೇಲ್ವಿಚಾರಣೆಯನ್ನು ಸಂಘಟಿಸುವುದು (iii) ಒಳ್ಳೆಯ ವೈಯಕ್ತಿಕ ಅಭ್ಯಾಸಗಳನ್ನು ಬೆಳೆಸಿಕೊಳ್ಳಲು ಪ್ರತಿಯೊಂದು ಮಗುವಿಗೂ ಸಹಾಯ ಮಾಡುವುದು. (iv) ಕಲ್ಪನಾಶೀಲತೆಯನ್ನು ಅಭ್ಯಾಸಮಾಡಲು ಮತ್ತು ಅನೇಕ ಅಭಿರುಚಿಗಳನ್ನು ಮತ್ತು ವಿವಿಧ ಕೌಶಲ್ಯಗಳ ವಿಕಾಸಕ್ಕಾಗಿ ಅವಕಾಶಗಳನ್ನು ಒದಗಿಸುವುದು (v) ತಮ್ಮ ವಯಸ್ಸಿನ ಮಕ್ಕಳ ಜೊತೆಗೆ ಹಾಗೂ ಬೇರೆ ಬೇರೆ ವಯಸ್ಸಿನ ಮಕ್ಕಳ ಜೊತೆಗೆ ಪರಸ್ಪರ ಸೇರಿಕೊಂಡು ಕೆಲಸ ಮಾಡಲು ಮತ್ತು ಆಟವಾಡಲು ಅನುಕೂಲವಾಗುವಂತೆ ಸಣ್ಣ ಪ್ರಮಾಣದಲ್ಲಿ ಮಕ್ಕಳಿಗೆ ಸಮುದಾಯ ಜೀವನದ ಅನುಭವವನ್ನು ಕೊಡುವುದು. (vi) ಮನೆಯ ಜೀವನದೊಂದಿಗೆ ನಿಜವಾದ ಐಕ್ಯತೆಯನ್ನು ಸಾಧಿಸುವುದು.

**ಪ್ರಾಥಮಿಕ ಶಿಕ್ಷಣ:** ಪ್ರಾಥಮಿಕ ಶಿಕ್ಷಣದ ಹಂತ 1ರಿಂದ 8ನೇ ತರಗತಿಗಳನ್ನು ಮತ್ತು 6ರಿಂದ 14ವರ್ಷದ ವಯೋ ಸಮೂಹವನ್ನು ಒಳಗೊಂಡಿದೆ. ಪ್ರಾಥಮಿಕ ಹಂತದಲ್ಲಿನ ಶೈಕ್ಷಣಿಕ ಸೌಲಭ್ಯಗಳು ವಿಸ್ತಾರಗೊಳ್ಳುವುದರೊಂದಿಗೆ ಈ ಮುಂದಿನ ನವೀನ ಆಚರಣೆಗಳು ಪ್ರಾರಂಭವಾದವು.

**ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ:** ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು (Universalisation of Elementary Education-UEE) ಒಂದು ರಾಷ್ಟ್ರೀಯ ಗುರಿಯಾಗಿ ಒಪ್ಪಿಕೊಳ್ಳಲಾಗಿ 1992ರಲ್ಲಿ ಪರಿಷ್ಕೃತವಾದ 1986ರ ರಾಷ್ಟ್ರೀಯ ಶೈಕ್ಷಣಿಕ ನೀತಿ 21ನೇ ಶತಮಾನ ಆರಂಭವಾಗುವುದರೊಳಗೆ 6ರಿಂದ 14ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ತೃಪ್ತಿಕರ ಮಟ್ಟದ ಗುಣಾತ್ಮಕತೆಯನ್ನು ಹೊಂದಿರುವ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಲಾಗುತ್ತದೆ ಎಂದು ಹೇಳಿದೆ. ಒಂಬತ್ತನೇ ಪಂಚವಾರ್ಷಿಕ ಯೋಜನೆ ಎಂದರೆ ಸಾರ್ವತ್ರಿಕ ಪ್ರವೇಶ ಸಾಧ್ಯತೆ, ಸಾರ್ವತ್ರಿಕ ಉಳಿಸಿಕೊಳ್ಳುವಿಕೆ ಮತ್ತು ಸಾರ್ವತ್ರಿಕ ಸಾಧನೆ ಎಂಬ ಅರ್ಥದಲ್ಲಿ ಪರಿಕಲ್ಪಿಸಿಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿರುವ ಪ್ರಯತ್ನಗಳ ಫಲವಾಗಿ ಶೇ.94ರಷ್ಟು ದೇಶದ ಗ್ರಾಮೀಣ ಜನಸಂಖ್ಯೆ ಒಂದು ಕಿ.ಮೀ. ಅಂತರದಲ್ಲಿ ಶಾಲೆಗಳನ್ನು ಪಡೆದಿದೆ. ಹಿರಿಯ ಪ್ರಾಥಮಿಕ ಹಂತದಲ್ಲಿ ಶೇ.84ರಷ್ಟು ಗ್ರಾಮೀಣ ಜನಸಂಖ್ಯೆ 3 ಕಿ.ಮೀ. ಅಂತರದಲ್ಲಿ ಶಾಲೆಗಳನ್ನು ಹೊಂದಿದೆ. 1950-51ರಲ್ಲಿ ಪ್ರಾಥಮಿಕ ಮಟ್ಟದಲ್ಲಿ ಶೇ. 42ರಷ್ಟಿದ್ದ ದಾಖಲಾತಿ ಪ್ರಮಾಣ 1998-99ರ ವೇಳೆಗೆ ಶೇ. 92.14ರಷ್ಟು ಹೆಚ್ಚಾಗಿದೆ. 1950-51ರಲ್ಲಿದ್ದ ಶಾಲೆಗಳ ಸಂಖ್ಯೆ 1.23 ಲಕ್ಷದಿಂದ 1998-99ರ ವೇಳೆಗೆ 8.7 ಲಕ್ಷಕ್ಕೆ ಏರಿದೆ. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಖ್ಯೆ 1950-51ರಲ್ಲಿ 0.24 ಲಕ್ಷವಿದ್ದದ್ದು 1998-99ರ ವೇಳೆಗೆ 31.80 ಲಕ್ಷಕ್ಕೆ ಏರಿದೆ.

ಕೇಂದ್ರ ಮತ್ತು ರಾಜ್ಯಸರ್ಕಾರಗಳು ಅನೇಕ ವರ್ಷಗಳ ಅವಧಿಯಲ್ಲಿ ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಮತ್ತು ಶಾಲೆಗಳಲ್ಲಿ ಮಕ್ಕಳ ಸಾಧನೆಯ ಮಟ್ಟಗಳನ್ನು ಸುಧಾರಿಸಲು ಅನೇಕ ತಂತ್ರಗಳನ್ನು ವಿಕಾಸಗೊಳಿಸಿವೆ. ಈ ತಂತ್ರಗಳ ಪ್ರಮುಖ ಅಂಶಗಳು ಹೀಗಿವೆ. (i) ಪೋಷಕರಲ್ಲಿ ಅರಿವನ್ನು ಉಂಟುಮಾಡುವುದು ಮತ್ತು ಸಮುದಾಯ ಸಂಚಲನೆಯನ್ನು ಸೃಷ್ಟಿಸುವುದು, (ii) ಸಮುದಾಯಗಳನ್ನು ಮತ್ತು ಪಂಚಾಯತ್ ರಾಜ್ಯ ಸಂಸ್ಥೆಗಳನ್ನು

Digitised by Bharatavani, CIIL

(Panchayat Raj Institutions-PRI)ಗಳನ್ನು ಒಳಗೊಳ್ಳುವುದು (ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳು) (iii) ಆರ್ಥಿಕ ಪ್ರೋತ್ಸಾಹಕಗಳು (iv) ಶಾಲೆಗಳ ಮೂಲಭೂತ ಸೌಕರ್ಯಗಳನ್ನು ಸುಧಾರಿಸುವುದು (v) ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಪ್ರಯತ್ನ (vi) ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕತೆ ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ (ಮಧ್ಯಾಹ್ನದ ಊಟ ಕಾರ್ಯಕ್ರಮ) (vii) ಸಂಪ್ರದಾಯರಹಿತ ಶಿಕ್ಷಣ (Non-formal Education-NFE) ಕಾರ್ಯಕ್ರಮ ಮತ್ತು (viii) ಶಿಕ್ಷಕ ತರಬೇತಿ ಕಾರ್ಯಕ್ರಮಗಳು.

ಸಂವಿಧಾನದ (83ನೇ ತಿದ್ದುಪಡಿ) ಮಸೂದೆಯನ್ನು (1997) ರಾಜ್ಯ ಸಭೆಯಲ್ಲಿ ದಿನಾಂಕ: 28ನೇ ಜುಲೈ 1997ರಂದು ಮಂಡಿಸಲಾಯಿತು. ಇದರ ಉದ್ದೇಶ 6ರಿಂದ 14ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಮೂಲಭೂತ ಅಧಿಕಾರವಾಗಿ (ಹಕ್ಕಾಗಿ) ಮಾಡುವುದಾಗಿತ್ತು.

**ಸರ್ವಶಿಕ್ಷಾ ಅಭಿಯಾನ:** ರಾಷ್ಟ್ರೀಯ ರಾಜ್ಯ ಶಿಕ್ಷಣ ಮಂತ್ರಿಗಳ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸಾಧನೆಯನ್ನು ಸಂಕಲ್ಪ (ಮಿಷನ್) ರೀತಿಯಲ್ಲಿ ಪೂರ್ಣಗೊಳಿಸುವುದಕ್ಕಾಗಿ ಸರ್ವಶಿಕ್ಷಾ ಅಭಿಯಾನ ಎನ್ನುವ ಹೊಸ ಯೋಜನೆಯನ್ನು ವಿಕಾಸಗೊಳಿಸಲಾಯಿತು. ಸರ್ವಶಿಕ್ಷಾ ಅಭಿಯಾನದ(SSA) ಗುರಿಗಳು ಹೀಗಿವೆ. 6ರಿಂದ 14ವರ್ಷ ವಯಸ್ಸಿನ ಎಲ್ಲಾ ಮಕ್ಕಳು (i) 2003ರ ಹೊತ್ತಿಗೆ ಶಾಲೆಗಳಲ್ಲಿ/ ಶಿಕ್ಷಣ ಖಾತರಿ ಯೋಜನೆ (Education Guarantee Scheme-EGS)/ ಸೇತುಬಂಧ ಕಾರ್ಯಕ್ರಮದಲ್ಲಿ ಇರಬೇಕು (ii) 2007ರ ಹೊತ್ತಿಗೆ 5ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ಮುಗಿಸಬೇಕು. (iii) 2010ರ ಹೊತ್ತಿಗೆ 10ವರ್ಷಗಳ ಶಾಲಾಜೀವನವನ್ನು ಮುಗಿಸಿರಬೇಕು (ಟಿಪ್ಪಣಿ: ಈ ಕಾಲಮಿತಿಯನ್ನು ಈಗ 2015ರವರೆಗೆ ವಿಸ್ತರಿಸಲಾಗಿದೆ) ಸರ್ವಶಿಕ್ಷಾ ಅಭಿಯಾನದ ಒಂದು ಭಾಗವಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಮಾಧ್ಯಮ ಪ್ರಚಾರ ಮತ್ತು ಪ್ರತಿಪಾದನ ಯೋಜನೆಯನ್ನು ಆರಂಭಿಸಲಾಗಿದೆ.

**ಸಂಪ್ರದಾಯರಹಿತ ಶಿಕ್ಷಣ:** ಭಾರತ ಸರ್ಕಾರದ ಶಿಕ್ಷಣ ಇಲಾಖೆ 1979–80ರಿಂದ ಹಲವಾರು ಕಾರಣಗಳಿಂದ ಔಪಚಾರಿಕ ಶಿಕ್ಷಣ ವ್ಯವಸ್ಥೆಯಿಂದ ಹೊರಗುಳಿದಿರುವ 6ರಿಂದ 14ವರ್ಷ ವಯಸ್ಸಿನ ಮಕ್ಕಳಿಗಾಗಿ ಸಂಪ್ರದಾಯ ರಹಿತ ಶಿಕ್ಷಣದ ಕಾರ್ಯಕ್ರಮವೊಂದನ್ನು ಆರಂಭಿಸಿದೆ.

ಈ ರೀತಿಯ ಮಕ್ಕಳ ಸಮೂಹದಲ್ಲಿ ಔಪಚಾರಿಕ ಶಾಲೆಯನ್ನು ಬಿಟ್ಟವರು ಶಾಲೆಗಳು ಇಲ್ಲದ ಜನವಸತಿಗಳಲ್ಲಿ ಇರುವ ಮಕ್ಕಳು, ಉದ್ಯೋಗ ಮಾಡುವ ಮಕ್ಕಳು ಸೌದೆ, ಹುಲ್ಲು, ನೀರು ತರುವಂಥ ಮಕ್ಕಳು, ಪುಟ್ಟ ತಮ್ಮ/ತಂಗಿಯರನ್ನು ನೋಡಿಕೊಳ್ಳುವ ಮಕ್ಕಳು ದನಕರುಗಳನ್ನು ಮೇಯಿಸುವುದು ಮುಂತಾದ ಕೆಲಸಗಳನ್ನು ಮಾಡುವ ಮಕ್ಕಳು ಮತ್ತು ಔಪಚಾರಿಕ ಶಾಲೆಗಳಿಗೆ ಹೋಗಲು ಸಾಧ್ಯವಾಗದ ಹೆಣ್ಣುಮಕ್ಕಳು ಸೇರುತ್ತಾರೆ. ಈ ಕಾರ್ಯಕ್ರಮದ ಗಮನ ಶೈಕ್ಷಣಿಕವಾಗಿ ಹಿಂದುಳಿದಿರುವ 10ರಾಜ್ಯಗಳಾದರೂ ಇದು ನಗರ ಕ್ಷೇತ್ರಗಳ ಕೊಳಚೆ ಪ್ರದೇಶಗಳನ್ನು ಮತ್ತು ಸರ್ವತೀಯ, ಬುಡಕಟ್ಟುಗಳ ಮತ್ತು ಮರುಭೂಮಿ ಕ್ಷೇತ್ರಗಳನ್ನೂ ಒಳಗೊಳ್ಳುತ್ತದೆ. ಸದ್ಯದಲ್ಲಿ ಈ ಕಾರ್ಯಕ್ರಮ 25 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಕ್ರಿಯಾನ್ವಿತವಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ 60–40ರ ಅನುಪಾತದಲ್ಲಿ ಸಹಾಯ ನೀಡಲಾಗುತ್ತದೆ ಮತ್ತು ಸಹ ಶೈಕ್ಷಣಿಕ ಮತ್ತು ಬಾಲಿಕಾ ಕೇಂದ್ರಗಳನ್ನು ನಡೆಸುವುದಕ್ಕಾಗಿ ಕ್ರಮವಾಗಿ 90:10ರ ಅನುಪಾತದಲ್ಲಿ ಸಹಾಯ ನೀಡಲಾಗುತ್ತಿದೆ. ಕೇಂದ್ರಗಳನ್ನು ನಡೆಸುವ ಮತ್ತು ಪ್ರಾಯೋಗಿಕವಾದ ಮತ್ತು ನವೀನ ಆಚರಣೆಯ ಪ್ರಾಯೋಜನೆಗಳನ್ನು ಕೈಗೊಳ್ಳುವ ಸ್ವೈಚ್ಛಿಕ ಸಂಸ್ಥೆಗಳ ಶತಪ್ರತಿಶತ ಸಹಾಯ ನೀಡಲಾಗುತ್ತಿದೆ. ಸದ್ಯದಲ್ಲಿ 2.97ಲಕ್ಷ, NFE ಕೇಂದ್ರಗಳನ್ನು 74.25ಲಕ್ಷ ಮಕ್ಕಳಿಗೆ ಸೇವೆ ಸಲ್ಲಿಸಲು ಮಂಜೂರು ಮಾಡಲಾಗಿದೆ. ಇವುಗಳಲ್ಲಿ ಪ್ರತ್ಯೇಕವಾದ ಹೆಣ್ಣು ಮಕ್ಕಳಿಗೆ 1.1ಲಕ್ಷ ಕೇಂದ್ರಗಳಿವೆ. ಸುಮಾರು 58.788 ಕೇಂದ್ರಗಳು 816 ಸ್ವೈಚ್ಛಿಕ ನಿಯೋಗಗಳಿಂದ ನಡೆಸಲ್ಪಡುತ್ತಿವೆ.

ಯೋಜನಾ ಆಯೋಗ NFE ಕಾರ್ಯಕ್ರಮವನ್ನು ಮೌಲ್ಯಮಾಪನ ಮಾಡಿತು. ಇದರ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಪರಿಷ್ಕರಿಸಲಾಗಿದೆ. ಇದೇ ಕಾರ್ಯಕ್ರಮವನ್ನು ಶಿಕ್ಷಣ ಖಾತರಿ ಯೋಜನೆ(EGS) ಮತ್ತು ಪರ್ಯಾಯ ಮತ್ತು ನವೀನ ಶಿಕ್ಷಣ (Alternative and Innovative Education-AIE) ಎಂಬ ಹೊಸ ಶೀರ್ಷಿಕೆಗಳಡಿಯಲ್ಲಿ ನಡೆಸಲಾಗುತ್ತಿದೆ.

**ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ:** ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು(District Primary Education Programme-DPEP)ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣ ಸಾಧಿಸಲು 1994 ಆರಂಭಿಸಿದ ಪ್ರಮುಖ ಪ್ರಯತ್ನವಾಗಿದೆ. ಈ ಕಾರ್ಯಕ್ರಮವನ್ನು ರಾಜ್ಯ ಮಟ್ಟದಲ್ಲಿ ನೊಂದಾಯಿಸಲ್ಪಟ್ಟ ಸಂಘಗಳಿಂದ ಜಾರಿಗೊಳಿಸಲಾಯಿತು. ಪ್ರಾಥಮಿಕ ಮಟ್ಟದಲ್ಲಿ ಶಾಲೆ ಬಿಡುವವರ ಸಂಖ್ಯೆಯನ್ನು ಶೇ.10ಕ್ಕೂ ಕಡಿಮೆ ಮಾಡಿ, ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶವಕಾಶವನ್ನು ಒದಗಿಸುವುದನ್ನು ಪ್ರಾಥಮಿಕ ಶಾಲಾ ಮಕ್ಕಳ ಸಾಧನಾ ಮಟ್ಟವನ್ನು ಶೇ.25ಕ್ಕೆ ಹೆಚ್ಚಿಸುವುದನ್ನು ಮತ್ತು ಮಕ್ಕಳ ನಡುವಣ ಲಿಂಗ ಮತ್ತು ಸಾಮಾಜಿಕ ವ್ಯತ್ಯಾಸಗಳನ್ನು ಶೇ.5ಕ್ಕೆ ಕಡಿಮೆ ಮಟ್ಟಕ್ಕೆ ತರುವುದನ್ನು ಗುರಿಯಾಗಿ ಹೊಂದಿದೆ.

DPEP ಕಾರ್ಯಕ್ರಮ ಸಾಂದರ್ಭಿಕವಾದುದು ಮತ್ತು ಇದು ಗಣನೀಯವಾಗಿ ಲಿಂಗ ಕೇಂದ್ರಿತವಾಗಿದೆ. ಹೊಸ ತರಗತಿಗಳನ್ನು ಮತ್ತು ಶಾಲೆಗಳ ನಿರ್ಮಾಣ, ಸಂಪ್ರದಾಯರಹಿತ/ ಪರ್ಯಾಯ ಶಾಲಾ ಕೇಂದ್ರಗಳನ್ನು ತೆರೆಯುವುದು, ಹೊಸದಾಗಿ ಶಿಕ್ಷಕರನ್ನು ನೇಮಿಸುವುದು, ಆರಂಭಿಕ ಶೈಶವಾವಸ್ಥೆ ಶಿಕ್ಷಣ ಕೇಂದ್ರಗಳನ್ನು ತೆರೆಯುವುದು, ರಾಜ್ಯಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತುಗಳನ್ನು(State Council of Educational Research

Digitised by Bharatavani, CIIL

and Training-SCERT) ಬಲಗೊಳಿಸುವುದು, ಜಿಲ್ಲಾ ಶೈಕ್ಷಣಿಕ ತರಬೇತಿ ಸಂಸ್ಥೆಗಳನ್ನು (District Institutes of Educational Training-DIET) ಬಲಗೊಳಿಸುವುದು, ಬ್ಲಾಕ್ ಸಂಪನ್ಮೂಲ ಕೇಂದ್ರಗಳನ್ನು(Block Resource Centres-BRC's) ಮತ್ತು ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳನ್ನು (Cluster Resource Centres-CRC's) ತೆರೆಯುವುದು, ಶಿಕ್ಷಕರ ತರಬೇತಿ, ಬೋಧನಾ–ಕಲಿಕಾ ಸಾಮಗ್ರಿಗಳನ್ನು ವಿಕಾಸಗೊಳಿಸುವುದನ್ನು ಸಂಶೋಧನೆ ಆಧಾರಿತ ಮಧ್ಯಸ್ಥಿಕೆ ಕ್ರಮಗಳು, ಬಾಲಕಿಯರ ಶಿಕ್ಷಣಕ್ಕೆ ವಿಶೇಷ ಮಧ್ಯಸ್ಥಿಕೆ ಕ್ರಮಗಳು, ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟು(SC/ST) ಗುಂಪುಗಳ ಶಿಕ್ಷಣ ಇತ್ಯಾದಿಗಳು ಈ ಕಾರ್ಯಕ್ರಮದ ಅಂಶಗಳಾಗಿವೆ.

ಜಿಲ್ಲೆ ಈ ಕಾರ್ಯಕ್ರಮದ ಜಾರಿಗೊಳಿಸುವಿಕೆಯ ಘಟಕವಾಗಿದೆ ಮತ್ತು ಜಿಲ್ಲೆಗಳನ್ನು ಎರಡು ನಿರ್ಣಾಯಕದ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ. (ಎ) ಮಹಿಳಾ ಸಾಕ್ಷರತೆ ಮಟ್ಟ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವ ಶೈಕ್ಷಣಿಕವಾಗಿ ಹಿಂದುಳಿದಿರುವ ಜಿಲ್ಲೆಗಳು ಮತ್ತು (ಬಿ) ಸಂಪೂರ್ಣ ಸಾಕ್ಷರತೆ ಕಾರ್ಯಕ್ರಮ (Total Literacy Campaign-TLC) ಯಶಸ್ವಿಯಾಗಿದ್ದು, ಪ್ರಾಥಮಿಕ ಶಿಕ್ಷಣಕ್ಕೆ ಬೇಡಿಕೆ ಹೆಚ್ಚಾಗಿದ್ದ ಜಿಲ್ಲೆಗಳು. DPEP ಕೇಂದ್ರ ಸರ್ಕಾರದಿಂದ ಪ್ರಾಯೋಜಿತವಾದ ಕಾರ್ಯಕ್ರಮವಾಗಿತ್ತು. ಮೊದಲಿಗೆ ರಾಜ್ಯಗಳ 42 ಜಿಲ್ಲೆಗಳಲ್ಲಿ 1994ರಲ್ಲಿ ಆರಂಭವಾದ ಈ ಕಾರ್ಯಕ್ರಮವನ್ನು ನಂತರದಲ್ಲಿ 15ರಾಜ್ಯಗಳ 219ಜಿಲ್ಲೆಗಳಿಗೆ ವಿಸ್ತರಿಸಲಾಯಿತು.

**ಕಪ್ಪು ಹಲಗೆ ಕಾರ್ಯಕ್ರಮ:** ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಯಾಗದಿದ್ದುದರ ಬಗ್ಗೆ 1986 ರಾಷ್ಟ್ರೀಯ ಶಿಕ್ಷಣ ನೀತಿ(NPE) ಹೆಚ್ಚಿನ ಚಿಂತೆ ವ್ಯಕ್ತಪಡಿಸಿತು. ಆದ್ದರಿಂದ 1995ರೊಳಗೆ ಈ ಕಾರ್ಯಕ್ರಮವನ್ನು ಪೂರ್ಣಗೊಳಿಸಬೇಕೆಂದು ಅದು ತೀರ್ಮಾನಿಸಿತು. ಹೀಗೆ ತೀರ್ಮಾನಿಸುವಾಗ ಪ್ರಾಥಮಿಕ ಶಿಕ್ಷಣದ ಪರಿಮಾಣಾತ್ಮಕ ವಿಸ್ತಾರದೊಂದಿಗೆ, ಶಾಲೆ ಬಿಡುವವರ ಸಮಸ್ಯೆ, ಸ್ಥಗಿತತೆ ಮತ್ತು ಅಪವ್ಯಯದ ಸಮಸ್ಯೆಗಳನ್ನು ತೃಪ್ತಿಕರವಾಗಿ ಪರಿಹರಿಸಲು ಪ್ರಾಥಮಿಕ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಗಳನ್ನು ತರುವಂಥ ವ್ಯಾಪಕವಾದ ಕಾರ್ಯಕ್ರಮದ ತುರ್ತಾದ ಅಗತ್ಯವಿದೆ ಎಂದೂ ಭಾವಿಸಲಾಯಿತು. ಆದ್ದರಿಂದ 1987–88ರಲ್ಲಿ ಕಪ್ಪುಹಲಗೆ ಕಾರ್ಯಕ್ರಮವನ್ನು (Operation Black Board-OBB) ಆರಂಭಿಸಲಾಯಿತು. ಈ ನವೀನ ಆಚರಣೆ ಕಾರ್ಯಕ್ರಮ ದೇಶದಾದ್ಯಂತ ಪ್ರಾಥಮಿಕ ಶಾಲೆಗಳನ್ನು ಪರ್ಯಾಪ್ತವಾಗಿ ಸುಧಾರಣೆ ಮಾಡುವ ಗುರಿಯನ್ನು ಹೊಂದಿತ್ತು. 'ಸಂಕ್ರಿಯೆ'(Operation) ಎನ್ನುವ ಪದದ ಬಳಕೆ ಈ ಕಾರ್ಯಕ್ರಮ ತುರ್ತಾಗಿ ಆಗಬೇಕಿತ್ತು ಎನ್ನುವುದನ್ನು ಸೂಚಿಸುತ್ತದೆ. ಇದರ ಗುರಿಗಳು ಸ್ಪಷ್ಟವಾಗಿದ್ದವು ಮತ್ತು ಚೆನ್ನಾಗಿ ವಿನ್ಯಾಸಗೊಳಿಸಲ್ಪಟ್ಟಿದ್ದವು ಮತ್ತು ಪೂರ್ವನಿರ್ಧಾರಿತ ಸಮಯದಲ್ಲಿ ಜನಗಳ ಸಹಕಾರದೊಂದಿಗೆ ಈ ಗುರಿಗಳನ್ನು ಸಾಧಿಸಲು ಸರ್ಕಾರ ನಿಶ್ಚಯಿಸಿತ್ತು. ಕಪ್ಪು ಹಲಗೆ ಕಾರ್ಯಕ್ರಮದಲ್ಲಿ ಮೂರು ಅಂಶಗಳಿದ್ದವು.

1. ಎಲ್ಲಾ ಹವಾಮಾನ ಪರಿಸ್ಥಿತಿಗಳಲ್ಲಿ ಉಪಯೋಗಿಸಲು ಯೋಗ್ಯವಾದ ಒಂದು ವಿಸ್ತೃತ ವೆರಾಂಡ, ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ಹೊಂದಿರುವ ಸಾಕಷ್ಟು ದೊಡ್ಡದಾದ ಎರಡು ಕೊಠಡಿಗಳನ್ನು ನಿರ್ಮಿಸುವುದು.

2. ಪ್ರತಿಯೊಂದು ಪ್ರಾಥಮಿಕ ಶಾಲೆಗೂ ಕನಿಷ್ಠ ಇಬ್ಬರು ಶಿಕ್ಷಕರನ್ನು (ಅವರಲ್ಲಿ ಒಬ್ಬರು ಮಹಿಳೆಯಾಗಿರಬೇಕು.) ನೇಮಕ ಮಾಡುವುದು.

3. ಶಾಲಾ ಕಟ್ಟಡದ ನಿರ್ಮಾಣಕ್ಕೆ ಅಗತ್ಯವಾದ ಕ್ರೀಡೆಗಳು, ಅವುಗಳಿಗೆ ಬೇಕಾದ ಭೂಮಿಯನ್ನು ಸ್ಥಳೀಯ ಸಮುದಾಯ ಒದಗಿಸಬೇಕು.

ಈ ಕಾರ್ಯಕ್ರಮವನ್ನು 100 ಮಕ್ಕಳಿಗಿಂತ ಹೆಚ್ಚು ಮಕ್ಕಳ ದಾಖಲಾತಿ ಇರುವ ಶಾಲೆಗಳಿಗೆ ಮೂರನೇ ಶಿಕ್ಷಕ/ಶಿಕ್ಷಕಿಯನ್ನು ನೇಮಕ ಮಾಡುವುದಕ್ಕೆ ಮತ್ತು ಅತಿರಿಕ್ತ ಶಿಕ್ಷಕರನ್ನು ಮತ್ತು ಬೋಧನಾ–ಕಲಿಕಾ ಸಲಕರಣೆಗಳನ್ನು ಒದಗಿಸುವುದಕ್ಕೆ ವಿಸ್ತರಿಸಲಾಯಿತು. ಈ ಕಾರ್ಯಕ್ರಮ ಬೋಧನಾ–ಕಲಿಕಾ ಸಲಕರಣೆಗಳಿಗೆ ಮತ್ತು ಶಿಕ್ಷಕರ ವೇತನಕ್ಕೆ ಶತಪ್ರತಿಶತ ಸಹಾಯವನ್ನು ಒದಗಿಸಿತು. ಶಾಲಾ ಕಟ್ಟಡಗಳ ಜವಾಬ್ದಾರಿ ರಾಜ್ಯಗಳದ್ದಾಗಿತ್ತು.

**ಕಲಿಕೆಯ ಕನಿಷ್ಠ ಮಟ್ಟಗಳು:** ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಪರಿಷತ್ತು (National Council of Education and Training-NCERT) 1990ರಲ್ಲಿ ಪ್ರಾಥಮಿಕ ತರಗತಿಗಳಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳನ್ನು (Minimum Levels of Learning-MLL) ನಿರೂಪಿಸುವ ಕಾರ್ಯವನ್ನು ಮಾಡಿತ್ತು. MLL ತಂತ್ರ ಶಾಲೆಗಳಲ್ಲಿ ಕಲಿಕಾರ್ಜನೆಯನ್ನು ಸುಧಾರಿಸುವ ಗುರಿಯನ್ನು ಹೊಂದಿತ್ತು. ಈ ಮಾನಕಗಳನ್ನು ಸಾಧಿಸುವ ಕ್ರಮಗಳನ್ನು ವಿವರಿಸಲಾಯಿತು. MLLಗಳನ್ನು 1990ರಲ್ಲಿ ನೇಮಿಸಿದ ಒಂದು ಸಮಿತಿ ನಿರೂಪಿಸಿತು. 2000 ಪ್ರಾಥಮಿಕ ಶಾಲೆಗಳನ್ನು 10,000 ಶಿಕ್ಷಕರನ್ನು ಮತ್ತು ಸುಮಾರು 3.86ಲಕ್ಷ ವಿದ್ಯಾರ್ಥಿಗಳನ್ನು ಒಳಗೊಂಡ ಅನೇಕ ಪ್ರಾಯೋಜನೆಗಳನ್ನು ಈ ಸಂದರ್ಭದಲ್ಲಿ ಆಯೋಜಿಸಲಾಗಿತ್ತು.

ಶಾಲೆಗಳಲ್ಲಿ MLLಗಳನ್ನು ಪರಿಚಯಿಸುವ ಮುಖ್ಯ ಹಂತಗಳು ಈ ಕೆಳಕಂಡಂತಿದ್ದವು.

(ಎ) ಆ ಸಮಯದಲ್ಲಿದ್ದಂತೆ ಕಲಿಕೆಯ ಮಟ್ಟವನ್ನು ಮೌಲ್ಯಮಾಪನ ಮಾಡುವುದು.

(ಬಿ) ಪ್ರತಿಯೊಂದು ವಿಷಯ ಕ್ಷೇತ್ರದಲ್ಲಿ MLLಗಳನ್ನು ವ್ಯಾಖ್ಯಾನಿಸುವುದು ಮತ್ತು ಅವುಗಳನ್ನು ಸಾಧಿಸಲು ಸಮಯದ ಚೌಕಟ್ಟನ್ನು ನಿರ್ಧರಿಸುವುದು.

(ಸಿ) ದಕ್ಷತೆ–ಆಧಾರಿತ ಕಲಿಕೆ ಬಗ್ಗೆ ಬೇಕಾದ ಬೋಧನಾ ಆಚರಣೆಗಳ ಬಗ್ಗೆ ಶಿಕ್ಷಕರಿಗೆ ದಿಶಾನಿರ್ದೇಶನ ನೀಡುವುದು.

Digitised by Bharatavani, CIIL

(ಡಿ) ತರಗತಿಯ ಬೋಧನೆಯೊಂದಿಗೆ ವಿದ್ಯಾರ್ಥಿಗಳ ಕಲಿಕೆಯ ನಿರಂತರ, ವ್ಯಾಪಕ ಮೌಲ್ಯಮಾಪನವನ್ನು ಸಮಗ್ರಗೊಳಿಸುವುದು.

(ಇ) ಪಠ್ಯಪುಸ್ತಕಗಳನ್ನು ಪುನರಾವಲೋಕನ ಮಾಡುವ ಮತ್ತು ಅವುಗಳನ್ನು ಪರಿಷ್ಕರಿಸುವ ಅಗತ್ಯವಿತ್ತು.

(ಎಫ್) ಭೌತಿಕ ಸೌಕರ್ಯಗಳನ್ನು ಒದಗಿಸುವುದು, ಶಿಕ್ಷಕರ ತರಬೇತಿ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಒಳಗೊಂಡಂತೆ MLLಗಳ ಅರ್ಜನೆಯನ್ನು ಉತ್ತಮಪಡಿಸಲು ಅಗತ್ಯವಾದ ಭರಿತಗಳನ್ನು (inputs) ಒದಗಿಸುವುದು.

**ಲೋಕ್ ಜಂಬಿಶ್:** ಲೋಕ್ ಜಂಬಿಶ್ (ಎಲ್ಲರಿಗೂ ಶಿಕ್ಷಣದ ಬಗ್ಗೆ ಜನಗಳ ಆಂದೋಲನ) ಎಂಬ ಹೆಸರಿನ ಒಂದು ನವೀನ ಪ್ರಾಯೋಜನೆಯನ್ನು ಸ್ವೀಡನ್ನಿನ ಅಂತರರಾಷ್ಟ್ರೀಯ ಅಭಿವೃದ್ಧಿ ಪ್ರಾಧಿಕಾರದ(Swedish International development Authority-SIDA) ನೆರವಿನಿಂದ ರಾಜಸ್ಥಾನ ರಾಜ್ಯದಲ್ಲಿ ಆರಂಭಿಸಲಾಯಿತು. ಈ ಪ್ರಾಯೋಜನೆಯ ಮೂಲ ಉದ್ದೇಶ ಎಲ್ಲಾ ಜನರನ್ನು ಜಾಗೃತಗೊಳಿಸಿ ಅವರ ಸಹಭಾಗಿತ್ವದ ಮೂಲಕ 'ಎಲ್ಲರಿಗೂ ಶಿಕ್ಷಣ'ವನ್ನು ಒದಗಿಸುವುದನ್ನು ಸಾಧಿಸುವುದಾಗಿತ್ತು. 1997–98ರ ಅವಧಿಯಲ್ಲಿ ಈ ಕಾರ್ಯಕ್ರಮ 75ಬ್ಲಾಕ್‌ಗಳಲ್ಲಿ ನಡೆಯುತ್ತಿತ್ತು. ಆಯ್ಕೆ ಮಾಡಿಕೊಂಡಿದ್ದ 415 ಕ್ಲಸ್ಟರ್‌ಗಳಲ್ಲಿ (ಸಂಕುಲಗಳಲ್ಲಿ) 8675 ಹಳ್ಳಿಗಳ ಪರಿಸರ ನಿರ್ಮಾಣಕ್ಕಾಗಿ ಮತ್ತು ಸಮುದಾಯ ಸಂಪರ್ಕಕ್ಕಾಗಿ ವ್ಯಾಪಕ ರೀತಿಯಲ್ಲಿ ಒಳಗೊಳ್ಳಲಾಗಿತ್ತು. 5712 ಮಹಿಳಾ ಗುಂಪುಗಳನ್ನು ರಚಿಸಲಾಯಿತು. 6954 ಹಳ್ಳಿಗಳಲ್ಲಿ ಶಾಲಾ ನಕ್ಷೆ ರಚಿಸುವ (school mapping) ಚಟುವಟಿಕೆ ನಡೆಸಲಾಯಿತು. 529 ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಯಿತು. ಈ ಪ್ರಾಯೋಜನೆಯಡಿಯಲ್ಲಿ 268 ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಉನ್ನತೀಕರಿಸಲಾಯಿತು. ಮತ್ತು 5010 'ಸಹಜ ಶಿಕ್ಷಾ ಕೇಂದ್ರ'ಗಳನ್ನು ತೆರೆಯಲಾಯಿತು. ರಾಜಸ್ಥಾನದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮುಖ್ಯವಾಹಿನಿಗೆ ತಂದಿದ್ದ 1ರಿಂದ 4ನೇ ತರಗತಿಗಳಿಗಾಗಿ MLLಆಧಾರಿತ ಪಠ್ಯಪುಸ್ತಕಗಳನ್ನು ವಿಕಾಸಗೊಳಿಸುವುದರ ಮೂಲಕ ಗುಣಮಟ್ಟದ ಸುಧಾರಣೆಗೆ ಲೋಕ ಜಂಬಿಶ್ ಪ್ರಾಯೋಜನೆ ಸಕಾರಾತ್ಮಕವಾದ ಕೊಡುಗೆಯನ್ನು ನೀಡಿತು.

**ಸೂಕ್ಷ್ಮ ಆಯೋಜನೆಯನ್ನು ಚಾಲನೆಗೊಳಿಸುವ ಯೋಜನೆ:** ರಾಷ್ಟ್ರೀಯ ಶಿಕ್ಷಣ ನೀತಿ (National Policy of Education-NPE) ಮತ್ತು ಪರಿಷ್ಕೃತ ನೀತಿ ನಿರೂಪಣೆ (1992) ಪ್ರತಿಯೊಂದು ಮಗುವಿಗೆ ಸಾಧ್ಯವಾದಷ್ಟು ಮಟ್ಟಿಗೆ ಶಾಲಾವ್ಯವಸ್ಥೆಯಿಂದ ಅಥವಾ ಎಲ್ಲೆಲ್ಲಿ ಅಗತ್ಯವೋ ಅಲ್ಲಲ್ಲಿ ಆಂಶಿಕ ಸಮಯದ ಸಂಪ್ರದಾಯರಹಿತ ಶಿಕ್ಷಣದ ಮೂಲಕ ತೃಪ್ತಿಕರ ಗುಣಮಟ್ಟದ ಶಿಕ್ಷಣವನ್ನು ಪಡೆಯುವುದನ್ನು ಖಚಿತಗೊಳಿಸಲು ಸೂಕ್ಷ್ಮ ಆಯೋಜನೆ ಚಟುವಟಿಕೆಯನ್ನು ಕೈಗೊಳ್ಳಲು ಶಿಕ್ಷಕರ ಹಾಗೂ ಇತರ ಕ್ಷೇತ್ರ ಮಟ್ಟದ ಕಾರ್ಯಕರ್ತರ ಮೂಲಕ ಅನೇಕ ಚಟುವಟಿಕೆಗಳನ್ನು ಏರ್ಪಡಿಸುವುದನ್ನು ನಿರೀಕ್ಷಿಸಿದ್ದವು. ಅದಕ್ಕೆ ತಕ್ಕಂತೆ ಸೂಕ್ಷ್ಮ ಆಯೋಜನಾ ಪ್ರಾಯೋಜನೆಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ನಿರೂಪಿಸಿ ಅವುಗಳನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೂ ವಿತರಿಸಲಾಗಿತ್ತು.

**ಬಾಲಭವನ ಸಂಸ್ಥೆ, ಭಾರತ:** ಭಾರತದ ಪ್ರಥಮ ಪ್ರಧಾನಮಂತ್ರಿ ಪಂಡಿತ್ ಜವಹರಲಾಲ್ ನೆಹರೂರವರ ಪ್ರಯತ್ನದ ಫಲವಾಗಿ ಬಾಲಭವನ ಸಂಸ್ಥೆ, ಭಾರತ ನವದೆಹಲಿಯಲ್ಲಿ (Bal Bhavan Society, India-New Delhi-BBSI) 1955ರಲ್ಲಿ ಸ್ಥಾಪಿಸಲಾಯಿತು. ಇದು ಪೂರ್ಣ ಧನಸಹಾಯ ಪಡೆಯುವ ಸ್ವಾಯತ್ತ ಸಂಘಟನೆಯಾಗಿದೆ. 5ರಿಂದ 16ವರ್ಷ ವಯಸ್ಸಿನ ಮಕ್ಕಳಲ್ಲಿ ಸೃಜನಶೀಲತೆಯನ್ನು ಅಭಿವೃದ್ಧಿಗೊಳಿಸಲು ಇದೊಂದು ನವೀನ ಆಚರಣೆಯಾಗಿದೆ. ಮಕ್ಕಳೂ ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ ದುರ್ಬಲವಾಗಿರುವ ವಿಭಾಗಗಳಿಂದ ಬರುವ ಮಕ್ಕಳು ಸೃಜನಾತ್ಮಕ/ಪ್ರದರ್ಶನ ಕಲೆಗಳು, ಪರಿಸರ, ಖಗೋಳಶಾಸ್ತ್ರ, ಛಾಯಾ ಚಿತ್ರಗ್ರಹಣ, ಸಮಗ್ರಗೊಳಿಸುವ ಚಟುವಟಿಕೆಗಳು, ದೈಹಿಕ ಚಟುವಟಿಕೆಗಳಿಂದ ಆರಂಭಿಸಿ ವಿಜ್ಞಾನ ಸಂಬಂಧಿತ ಚಟುವಟಿಕೆಗಳವರೆಗಿನ ಚಟುವಟಿಕೆಗಳಲ್ಲಿ ತಮ್ಮ ಆಯ್ಕೆಯ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಪಡೆಯುತ್ತಾರೆ. ಇಡೀ ದೆಹಲಿ ನಗರದಲ್ಲಿ ಈ ಸಂಸ್ಥೆ 52 ಬಾಲಭವನಗಳನ್ನು ಹೊಂದಿದೆ ಮತ್ತು ಶ್ರೀನಗರದಲ್ಲಿ ಒಂದು ಮತ್ತು ಮಂಡಿಯಲ್ಲಿ ಮತ್ತೊಂದು ಒಟ್ಟು ಎರಡು ಜವಹರ್ ಬಾಲಭವನಗಳಿಗೆ ಸಂಸ್ಥೆ ಧನಸಹಾಯ ಮಾಡುತ್ತಿದೆ.

**ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಟಿಕತೆ ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ:** ಸಾಮಾನ್ಯವಾಗಿ ಮಧ್ಯಾಹ್ನದ ಊಟ(Mid-day Meal-MDM) ಎಂದು ಕರೆಯಲ್ಪಡುವ ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಟಿಕತೆ ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ (National Programme of National Support to Primary Education) 1995ರ ಆಗಸ್ಟ್ 15ರಂದು ಆರಂಭಿಸಲಾಯಿತು. ನವೀನವಾಗಿದ್ದ ಈ ಕಾರ್ಯಕ್ರಮ ದಾಖಲಾತಿ, ಹಾಜರಾತಿ ಮತ್ತು ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದಲ್ಲದೆ ಪ್ರಾಥಮಿಕ ಶಾಲಾ ತರಗತಿಗಳಲ್ಲಿ ಮಕ್ಕಳ ಪೌಷ್ಟಿಕತೆಯ ಮಟ್ಟವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿತ್ತು.

ಈ ಕಾರ್ಯಕ್ರಮ ಎಲ್ಲಾ ಸರ್ಕಾರಿ, ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ 1ರಿಂದ 5ನೇ ತರಗತಿಗಳಲ್ಲಿ ಓದುತ್ತಿರುವ ಮಕ್ಕಳಿಗೆ ಬೇಯಿಸಿದ ಊಟವನ್ನು/ಸಂಸ್ಕರಣಗೊಳಿಸಿದ ಆಹಾರವನ್ನು ಒದಗಿಸಬೇಕೆಂದು ಕಲ್ಪಿಸಿಕೊಂಡಿತ್ತು. 1999–2000ನೇ ವರ್ಷದಲ್ಲಿ 6.88ಲಕ್ಷ ಶಾಲೆಗಳಲ್ಲಿ ಓದುತ್ತಿದ್ದ 9.90 ಕೋಟಿ ಮಕ್ಕಳನ್ನು ಈ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗಿತ್ತು. ಇದಕ್ಕಾಗಿ 2000–2001ನೇ ವರ್ಷದಲ್ಲಿ 1090ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಯಿತು. ಆಹಾರ ಧಾನ್ಯಗಳ ಖರೀದಿ ಮತ್ತು ಆಹಾರಧಾನ್ಯಗಳನ್ನು

Digitised by Bharatavani, CIIL

ಭಾರತದ ಆಹಾರ ಮಂಡಳಿ ಇಲಾಖೆಗಳಿಂದ ಸಾಗಿಸುವುದಕ್ಕೆ ಸಾರಿಗೆ ವೆಚ್ಚವನ್ನು ವಾಪಸ್ ಪಡೆಯಲು ಈ ಕಾರ್ಯಕ್ರಮದಲ್ಲಿ ಕೇಂದ್ರಸರ್ಕಾರದ ಸಹಾಯವಿತ್ತು. ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ತಲಾ 3ಕಿ.ಗ್ರಾಂ. ಧಾನ್ಯವನ್ನು (ಗೋಧಿ, ಅಕ್ಕಿ) ವಿತರಿಸಲಾಗುತ್ತದೆ.

**ಪಠ್ಯಕ್ರಮ ಸುಧಾರಣೆಗಳು–ಯುನೆಸ್ಕೋ ಮತ್ತು ಯುನಿಸೆಫ್ ಪ್ರಾಯೋಜನೆಗಳು:**

ಪಠ್ಯಕ್ರಮದಲ್ಲಿ ಸುಧಾರಣೆಗಳನ್ನು ಮಾಡಲು ಮತ್ತು ಪ್ರಾಥಮಿಕ ಶಾಲಾ ಹಂತದಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಅನೇಕ ಪ್ರಾಯೋಜನೆಗಳನ್ನು ಆರಂಭಿಸಲಾಗಿತ್ತು. ಅವುಗಳಲ್ಲಿ ಮುಖ್ಯವಾದವುಗಳು ಈ ಕೆಳಕಂಡಂತಿವೆ.

(i) UNICEF ಸಹಾಯದಿಂದ ಪ್ರಾಥಮಿಕ ಶಿಕ್ಷಣ ಪಠ್ಯಕ್ರಮ ಸುಧಾರಣೆ ಪ್ರಾಯೋಜನೆ.

(ii) 9 ರಾಜ್ಯಗಳಲ್ಲಿ ಪ್ರತಿಯೊಂದು ರಾಜ್ಯದಲ್ಲೂ 100 ಪ್ರಾಥಮಿಕ ಶಾಲೆಗಳನ್ನು ಒಳಗೊಂಡಂತೆ ಪೌಷ್ಟಿಕತೆ ಆರೋಗ್ಯ ಶಿಕ್ಷಣ ಮತ್ತು ಪರಿಸರ ಸ್ವಚ್ಛತೆ (Nutrition Health Education and Environment Sanitation-NHEES) ಪ್ರಾಯೋಜನೆ.

(iii) ಪ್ರತಿಯೊಂದು ರಾಜ್ಯದಲ್ಲಿ ತಲಾ 30 ಶಾಲೆಗಳನ್ನು ಒಳಗೊಂಡಂತೆ 15ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣ ಪಠ್ಯಕ್ರಮ ನವೀಕರಣ (Primary Education Curriculum Renewal-PECR)ಪ್ರಾಯೋಜನೆ.

(iv) ಪ್ರತಿಯೊಂದು ರಾಜ್ಯದಲ್ಲಿ 100 ಸಮುದಾಯ ಶಿಕ್ಷಣ ಕೇಂದ್ರಗಳನ್ನು ಒಳಗೊಂಡಂತೆ 13ರಾಜ್ಯಗಳಲ್ಲಿ ಸಮುದಾಯ ಶಿಕ್ಷಣ ಮತ್ತು ಸಹಭಾಗಿತ್ವದಲ್ಲಿ ಅಭಿವೃದ್ಧಿ ಚಟುವಟಿಕೆಗಳ (Development Activities in Community Education and Participation-DACE)ಪ್ರಾಯೋಜನೆ.

(v) ಬಾಲಕಿಯರ ಶಿಕ್ಷಣವನ್ನು ಪ್ರೋತ್ಸಾಹಿಸಲು ಕ್ಷೇತ್ರ ತೀವ್ರ ಶಿಕ್ಷಣ ಪ್ರಾಯೋಜನೆ (Area Intensive Education Project-AIEP).

(vi) 11 ರಾಜ್ಯಗಳಲ್ಲಿ ಆರಂಭಿಕ ಶೈಶವಾವಸ್ಥೆ ಶಿಕ್ಷಣ (Early Childhood Education-ECE) ಪ್ರಾಯೋಜನೆ. ಯ ಮೀಡಿಯಾ ಲ್ಯಾಬೋರೇಟರಿ NCERTಈ ಪ್ರಾಯೋಜನೆಗೆ ಬೇಕಾಗಿದ್ದ ಆಟದ ಸಾಮಗ್ರಿಗಳನ್ನು ಒದಗಿಸಿತ್ತು.

**ಮಾಧ್ಯಮಿಕ ಶಿಕ್ಷಣದಲ್ಲಿ ನವೀನ ಆಚರಣೆಗಳು:** ಮಾಧ್ಯಮಿಕ ಶಾಲೆಯ ಹಂತದ ಶಿಕ್ಷಣ ಕಿಶೋರಾವಸ್ಥೆ ಹಂತಕ್ಕೆ ಹೊಂದಿಕೊಂಡಂತಿರುವುದರಿಂದ ಅದು ಅತ್ಯಂತ ನಿರ್ಣಾಯಕ ಹಂತವಾಗುತ್ತದೆ. ಜೀವನ ಕ್ಷೇತ್ರಕ್ಕೆ ಪ್ರವೇಶಿಸುವ ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಇದು ಶಿಕ್ಷಣದ ಅಂತಿಮ ಘಟ್ಟವಾಗುತ್ತದೆ. ಈ ಹಂತವನ್ನು ಮುಗಿಸುವ ಮಕ್ಕಳು ಉನ್ನತ ಶಿಕ್ಷಣವನ್ನು ಮುಂದುವರಿಸಲು ಬೇಕಾದ ಪರಿಪಕ್ವತೆಯನ್ನು ಹೊಂದಿರುತ್ತಾರೆಂದು ನಿರೀಕ್ಷಿಸಲಾಗುತ್ತದೆ. ದೇಶದ ಸಾಮಾಜಿಕ–ಆರ್ಥಿಕ ಪುನಃ ನಿರ್ಮಾಣದಲ್ಲಿ ಮಾಧ್ಯಮಿಕ ಶಿಕ್ಷಣದ ಪ್ರಾಮುಖ್ಯದ ದೃಷ್ಟಿಯಿಂದ, ಮಾಧ್ಯಮಿಕ ಶಿಕ್ಷಣ ಆಯೋಗ (1952–53) ಮಾಧ್ಯಮಿಕ ಶಿಕ್ಷಣದ ನಾಲ್ಕು ಉದ್ದೇಶಗಳನ್ನು ನಿರೂಪಿಸಿತ್ತು. (ಎ) ಪ್ರಜಾಸತ್ತಾತ್ಮಕ ಪೌರತ್ವದ ವಿಕಾಸ (ಬಿ) ಔದ್ಯೋಗಿಕ ದಕ್ಷತೆಯ ಸುಧಾರಣೆ (ಸಿ) ವ್ಯಕ್ತಿತ್ವ ವಿಕಾಸ ಮತ್ತು (ಡಿ) ನಾಯಕತ್ವದ ಗುಣಗಳ ವಿಕಾಸ.

ಕಳೆದ 50ವರ್ಷಗಳಲ್ಲಿ ಮಾಧ್ಯಮಿಕ ಶಿಕ್ಷಣ ವಿಭಾಗದಲ್ಲಿ ಇದುವರೆಗೆ ಮಾಡಿರುವ ಸಾಧನೆಗಳು ಸೆಕೆಂಡರಿ ಮತ್ತು ಉನ್ನತ ಸೆಕೆಂಡರಿ ಮಟ್ಟಗಳ ಸಂಸ್ಥೆಗಳ ಸಂಖ್ಯೆ 1951ರಲ್ಲಿ 7,410ಇದ್ದದ್ದು 1999ರ ವೇಳೆಗೆ 1.10ಲಕ್ಷಕ್ಕೆ ಏರಿರುವುದನ್ನು 1951ರಲ್ಲಿ ಇದ್ದ 15ಲಕ್ಷ ಮಕ್ಕಳ ದಾಖಲಾತಿ 1999ರಲ್ಲಿ 15.42 ಲಕ್ಷಗಳಿಗೆ ಏರಿರುವುದನ್ನು ಸೂಚಿಸುತ್ತದೆ. ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿ (Central Secondary Education Board-CBSE), NCERT, ಮತ್ತು ರಾಷ್ಟ್ರೀಯ ಮುಕ್ತಶಾಲೆ (National Open School-NOS) ಸೇರಿದಂತೆ ಆರು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಮತ್ತು 10ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ ಮತ್ತು ಬಹಳಷ್ಟು ರಾಜ್ಯಗಳಲ್ಲಿ 10 ವರ್ಷಗಳ ಸಾಮಾನ್ಯ ಶಿಕ್ಷಣವನ್ನು ಮತ್ತು 2ವರ್ಷಗಳ ವಿಶೇಷ ಶಿಕ್ಷಣವನ್ನು ನೀಡುವ 10+2 ಶಿಕ್ಷಣ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

**ಮಾಧ್ಯಮಿಕ ಶಿಕ್ಷಣದ ಔದ್ಯೋಗೀಕರಣ:** ರಾಷ್ಟ್ರೀಯ ಶಿಕ್ಷಣ ನೀತಿ (1992) ಕಾರ್ಯಪ್ರಪಂಚದ ಬಗ್ಗೆ ವಿದ್ಯಾರ್ಥಿಗಳಲ್ಲಿ ಸ್ವಸ್ಥ ಮನೋಭಾವವನ್ನು ಬೆಳೆಸಲು, ವ್ಯಕ್ತಿಗತ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು, ಕುಶಲ ಮಾನವಶಕ್ತಿಯ ಬೇಡಿಕೆ ಮತ್ತು ಪೂರೈಕೆ ನಡುವೆ ಇರುವ ಅಸಂತುಲನೆಯನ್ನು ಕಡಿಮೆ ಮಾಡಲು ಮತ್ತು ಯಾವುದೇ ನಿರ್ದಿಷ್ಟ ಅಭಿರುಚಿ ಅಥವಾ ಉದ್ದೇಶವಿಲ್ಲದೇ ಉನ್ನತ ಶಿಕ್ಷಣವನ್ನು ಮುಂದುವರಿಸಲು ಬಯಸುವವರಿಗೆ ಒಂದು ಪರ್ಯಾಯ ಮಾರ್ಗವನ್ನು ಒದಗಿಸಲು ಚೆನ್ನಾಗಿ ಯೋಜಿಸಿದ ಔದ್ಯೋಗಿಕ ಶಿಕ್ಷಣದ ಕಾರ್ಯಕ್ರಮಗಳನ್ನು ಪರಿಭಾವಿಸುತ್ತದೆ. ಪರಿಷ್ಕೃತ ನೀತಿ 1995ರ ಹೊತ್ತಿಗೆ ಶೇ.10ರಷ್ಟು ಮತ್ತು 2000ವರ್ಷದ ಹೊತ್ತಿಗೆ ಶೇ.25ರಷ್ಟು ಉನ್ನತ ಮಾಧ್ಯಮಿಕ ಹಂತದ ವಿದ್ಯಾರ್ಥಿಗಳನ್ನು ಔದ್ಯೋಗಿಕ ವಾಹಿನಿಗೆ ತಿರುಗಿಸುವ ಗುರಿಯನ್ನು ನಿರ್ಧಾರಮಾಡಿತ್ತು.

ರಾಷ್ಟ್ರೀಯ ಮಟ್ಟದಲ್ಲಿ ಔದ್ಯೋಗಿಕ ಶಿಕ್ಷಣದ ಸಂಯುಕ್ತ ಪರಿಷತ್ತನ್ನು (Joint Council of Vocational Education-JCVE) ರಾಜ್ಯಮಟ್ಟದಲ್ಲಿ ಅದರ ಪ್ರತಿರೂಪ ಪರಿಷತ್ತುಗಳೊಂದಿಗೆ ವಿವಿಧ ನಿಯೋಗಗಳು ನಡೆಯುವ ಔದ್ಯೋಗಿಕ ಕಾರ್ಯಕ್ರಮಗಳಿಗೆ ನೀತಿ ಮಾರ್ಗದರ್ಶನ ಸೂತ್ರಗಳನ್ನು ನಿರೂಪಿಸಲು, ಯೋಜನೆ ಮಾಡಲು ಮತ್ತು ಸಂಯೋಜನೆ ಮಾಡಲು ಸ್ಥಾಪಿಸಲಾಯಿತು. JCVE ನಿರ್ಧರಿಸಿದ ಕಾರ್ಯಗಳನ್ನು ಪ್ರಭಾವಯುತವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಯ ಒಂದು ಸ್ಥಾಯಿ ಸಮಿತಿಯನ್ನು ರಚಿಸಲಾಯಿತು.

Digitised by Bharatavani, CIIL

ಶಾಲೆಯನ್ನು ಬಿಟ್ಟವರು ನವಸಾಕ್ಷರರು ಮುಂತಾದವರಿಗೆ ಸಂಪ್ರದಾಯ-ರಹಿತವಾದ, ನಮ್ಯತೆಯುಳ್ಳ ಮತ್ತು ಅಗತ್ಯ ಆಧಾರಿತ ಔದ್ಯೋಗಿಕ ಶಿಕ್ಷಣ ಕಾರ್ಯಕ್ರಮವನ್ನು ಒದಗಿಸಬೇಕಾದ ಅವಶ್ಯಕತೆ ಈ ಶಿಕ್ಷಣ ನೀತಿ ಒತ್ತು ನೀಡಿತ್ತು. ಆದ್ದರಿಂದ ಸ್ವೈಚ್ಛಿಕ ಸಂಘಟನೆಗಳು ಔದ್ಯೋಗಿಕ ಶಿಕ್ಷಣ ಕ್ಷೇತ್ರದಲ್ಲಿನ ನವೀನ ಆಚರಣೆಯ ಕಾರ್ಯಕ್ರಮಗಳಿಗೆ ಈ ಕಾರ್ಯಕ್ರಮ ಧನಸಹಾಯ ನೀಡುತ್ತಿತ್ತು. ಹದಿನಾಲ್ಕಕ್ಕೂ ಹೆಚ್ಚು ಸಂಘಟನೆಗಳು ಈ ಕಾರ್ಯಕ್ರಮದಡಿಯಲ್ಲಿ ಸಹಾಯವನ್ನು ಪಡೆದುಕೊಂಡಿವೆ.

CBSE ಜನರಲ್ ಇನ್‌ಶೂರೆನ್ಸ್ ಕಂಪೆನಿ ಮತ್ತು ಜೀವ ವಿಮಾ ಸಂಸ್ಥೆಯ ಸಹಯೋಗದೊಂದಿಗೆ ದೇಶದಾದ್ಯಂತ ಕ್ರಮವಾಗಿ 18 ಮತ್ತು 20 ಶಾಲೆಗಳಲ್ಲಿ ಎರಡು ವರ್ಷ ಅವಧಿಯ ವಿಮಾ ಕ್ಷೇತ್ರದಲ್ಲಿ ಉದ್ಯೋಗೋನ್ಮುಖ ಕೋರ್ಸ್‌ಗಳನ್ನು ಆರಂಭಿಸಿದವು. ರೈಲು ಮಂತ್ರಾಲಯ 9ರೈಲು ವಲಯಗಳಲ್ಲಿ ರೈಲ್ವೆ ಕಮರ್ಷಿಯಲ್ ಸಿಬ್ಬಂದಿಗೆ ವಿಶೇಷ ಔದ್ಯೋಗಿಕ ಕೋರ್ಸ್‌ಗಳನ್ನು ಆರಂಭ ಮಾಡಿತು. ಸ್ವಾಸ್ಥ್ಯ ಮತ್ತು ಕುಟುಂಬಕಲ್ಯಾಣ ಮಂತ್ರಾಲಯ ವೈದ್ಯಕೀಯ ಪ್ರಯೋಗಾಲಯ ಟೆಕ್ನಿಶಿಯನ್ X-ಕಿರಣ ಟೆಕ್ನಿಶಿಯನ್, ಆಪ್ತಲಾಮಿಕ್ (ಕಣ್ಣಿಗೆ ಸಂಬಂಧಿಸಿದ) ಟೆಕ್ನಿಶಿಯನ್ ಮತ್ತು ಆಕ್ಸಿಲರಿ ನರ್ಸಿಂಗ್ ಮಿಡ್‌ವೈಫರಿ ಎಂಬ ಸ್ವಾಸ್ಥ್ಯ ಸಂಬಂಧಿತ ಕೋರ್ಸ್‌ಗಳನ್ನು ದೆಹಲಿಯ 5 ಶಾಲೆಗಳಲ್ಲಿ ಆರಂಭಿಸಿತು.

ಭೋಪಾಲ್‌ನಲ್ಲಿ 1ಜುಲೈ 1993ರಂದು ಪಂಡಿತ ಸುಂದರಲಾಲ್ ಶರ್ಮ ಕೇಂದ್ರೀಯ ಔದ್ಯೋಗಿಕ ಶಿಕ್ಷಣ ಸಂಸ್ಥೆ (pt. Sundarlal Sharma Central Vocation Institute) ಎಂಬ ಹೆಸರಿನಲ್ಲಿ ಒಂದು ಕೇಂದ್ರೀಯ ಔದ್ಯೋಗಿಕ ಶಿಕ್ಷಣ ಸಂಸ್ಥೆಯನ್ನು ಆರಂಭಿಸಲಾಯಿತು. ಈ ಸಂಸ್ಥೆಯನ್ನು NCERTಯ ಸಮಗ್ರ ಆಶ್ರಯದಲ್ಲಿ ಆರಂಭಿಸಲಾಯಿತು. ಔದ್ಯೋಗಿಕ ಶಿಕ್ಷಣ ಕ್ಷೇತ್ರದಲ್ಲಿ ಈ ಸಂಸ್ಥೆ ಅತ್ಯುಚ್ಚ ಸಂಶೋಧನೆ ಮತ್ತು ವಿಕಾಸದ ಸಂಸ್ಥೆಯಾಗಿದೆ.

NCERT ಸ್ವಾಸ್ಥ್ಯ ಸಂಬಂಧಿತ 8ಕೋರ್ಸುಗಳಿಗೆ ಪಠ್ಯಕ್ರಮವನ್ನು ಸಿದ್ಧಪಡಿಸಿದೆ ಮತ್ತು ಮೆಡಿಕಲ್ ಲ್ಯಾಬೊರೇಟರಿ ಟೆಕ್ನಿಶಿಯನ್ ಮತ್ತು ಬಹುಉದ್ದೇಶಿತ ಮೂಲಭೂತ ಸ್ವಾಸ್ಥ್ಯ ಕಾರ್ಯಕರ್ತರಿಗೆ(ಪುರುಷರಿಗೆ) ಪಠ್ಯಪುಸ್ತಕಗಳನ್ನುವಿಕಾಸಗೊಳಿಸಿದೆ. ಈ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಉಪಯೋಗಿಸಿಕೊಳ್ಳುತ್ತಿವೆ.

ನ್ಯಾಷನಲ್ ಇನ್‌ಫರ್‌ಮ್ಯಾಟಿಕ್ಸ್ ಸೆಂಟರ್ (NIC) NCERTಯ ಸಹಯೋಗದೊಂದಿಗೆ ಔದ್ಯೋಗಿಕ ಶಿಕ್ಷಣಕ್ಕಾಗಿ ಕಾರ್ಯಕ್ರಮ ಕಾರ್ಯಾನ್ವಯನದ ಬಗ್ಗೆ ಮಾಹಿತಿಯನ್ನು ಪಡೆಯಲು ಒಂದು ಕಂಪ್ಯೂಟರೀಕರಣಗೊಳಿಸುವ ನಿರ್ವಹಣ ಮಾಹಿತಿ ವ್ಯವಸ್ಥೆಯನ್ನು ವಿಕಾಸಗೊಳಿಸಿದೆ.

ರಾಷ್ಟ್ರೀಯ ಶಿಕ್ಷಣನೀತಿ (1986) ಪರಿಭಾವಿಸಿದಂತೆ 1993-94ನೇ ವರ್ಷದಿಂದ ನಿಮ್ನ ಮಾಧ್ಯಮಿಕ ಶಾಲೆ ಹಂತದಲ್ಲಿ ಉದ್ಯೋಗ ಪೂರ್ವ ಶಿಕ್ಷಣ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಕಾರ್ಯಕ್ರಮದ ಉದ್ದೇಶ 9ಮತ್ತು 10ನೇ ತರಗತಿ ವಿದ್ಯಾರ್ಥಿಗಳಲ್ಲಿ ಔದ್ಯೋಗಿಕ ಆಸಕ್ತಿಗಳನ್ನು ಬೆಳೆಸಲು, ಔದ್ಯೋಗಿಕ ಆದ್ಯತೆಗಳನ್ನು ತಾವೇ ಹುಡುಕಿಕೊಳ್ಳಲು, ಕೆಲಸಗಳಲ್ಲಿ ಪಾಲ್ಗೊಳ್ಳಲು ಮತ್ತು ಕಾರ್ಯಸಂಸ್ಕೃತಿಗೆ ಸಂಬಂಧಿಸಿದಂತೆ ಅಪೇಕ್ಷಿತ ಮನೋಭಾವಗಳನ್ನು ಬೆಳೆಸಿಕೊಳ್ಳಲು ಸರಳವಾದ ವಿಕ್ರಯ-ಯೋಗ್ಯ ಕೌಶಲಗಳನ್ನು ಕಲಿಸುವುದಾಗಿತ್ತು.

ರಾಷ್ಟ್ರೀಯ ಫ್ಯಾಷನ್ ತಂತ್ರಜ್ಞಾನ ಸಂಸ್ಥೆಯ (National Institute of Fashion Technology-NIFT) ಬೆಂಬಲದೊಂದಿಗೆ ಫ್ಯಾಷನ್ ಮತ್ತು ಉಡುಪು ತಯಾರಿಸುವ ಕೋರ್ಸ್‌ಗಳನ್ನು ನೀಡಲು ಒಂದು ಸಹಯೋಗಾತ್ಮಕ ಪ್ರಾಯೋಜನೆ ಅಡಿಯಲ್ಲಿ ಇಂದೋರ್ ವಿಶಾಖಪಟ್ಟಣ ಮತ್ತು ಲೂಧಿಯಾನಗಳಲ್ಲಿ ಮೂರು ಸರ್ಕಾರಿ ಶಾಲೆಗಳನ್ನು ಆರಂಭಿಸಲಾಯಿತು.

**ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ:** NPE(1986) ಪರಿಭಾವಿಸಿದಂತೆ ವಿಜ್ಞಾನ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಮತ್ತು ವೈಜ್ಞಾನಿಕ ಮನಃಪ್ರವೃತ್ತಿಯನ್ನು ಪ್ರೋತ್ಸಾಹಿಸಲು ಶಾಲೆಗಳಲ್ಲಿ ವಿಜ್ಞಾನದ ಶಿಕ್ಷಣದ ಸುಧಾರಣೆ ಎಂಬ ಹೆಸರಿನಲ್ಲಿ ಒಂದು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವನ್ನು 1987-88ರಲ್ಲಿ ಆರಂಭಿಸಲಾಯಿತು. ಈ ಕಾರ್ಯಕ್ರಮದಡಿಯಲ್ಲಿ ರಾಜ್ಯಗಳಿಗೆ/ ಕೇಂದ್ರಾಡಳಿತ ಪ್ರದೇಶಗಳಿಗೆ ಮತ್ತು ಸ್ವೈಚ್ಛಿಕ ಸಂಘಟನೆಗಳಿಗೆ ಹಣಕಾಸಿನ ಸಹಾಯ ನೀಡಲಾಗುತ್ತಿತ್ತು. ಸ್ವೈಚ್ಛಿಕ ನಿಯೋಗಗಳಿಗೆ ಪ್ರಾಯೋಗಿಕ ಮತ್ತು ನವೀನ ಆಚರಣೆಯ ಕಾರ್ಯಕ್ರಮಗಳಿಗೂ ಸಹಾಯ ನೀಡಲಾಗುತ್ತಿತ್ತು ಮತ್ತು ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಜ್ಞಾನ ಸಂಚಯನಗಳನ್ನು (Science kits) ಒದಗಿಸಲು, ಸೆಕೆಂಡರಿ ಹಾಗೂ ಸೀನಿಯರ್ ಸೆಕೆಂಡರಿ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯಗಳನ್ನು ಉನ್ನತೀಕರಿಸಿ ಬಲಗೊಳಿಸಲು ಮತ್ತು ವಿಜ್ಞಾನ ಮತ್ತು ಗಣಿತಶಾಸ್ತ್ರ ಶಿಕ್ಷಕರಿಗೆ ತರಬೇತಿ ನೀಡಲು ಸಹಾಯ ನೀಡಲಾಗುತ್ತಿತ್ತು.

**ಅಂತರರಾಷ್ಟ್ರೀಯ ಒಲಂಪಿಯಾಡ್**: ಈ ಕಾರ್ಯಕ್ರಮದ ಒಂದು ಪ್ರಮುಖ ಅಂಶವೆಂದರೆ ಪ್ರತಿವರ್ಷ ಅಂತರರಾಷ್ಟ್ರೀಯ ಗಣಿತಶಾಸ್ತ್ರ ಒಲಂಪಿಯಾಡ್ (1989ರಿಂದ), ಅಂತರರಾಷ್ಟ್ರೀಯ ಭೌತಶಾಸ್ತ್ರ ಒಲಂಪಿಯಾಡ್ (1998ರಿಂದ) ಮತ್ತು ಅಂತರರಾಷ್ಟ್ರೀಯ ರಸಾಯನಶಾಸ್ತ್ರ ಒಲಂಪಿಯಾಡ್ (1999ರಿಂದ) ಈ ವಿಜ್ಞಾನ ಒಲಂಪಿಯಾಡ್‌ಗಳಲ್ಲಿ ಭಾರತೀಯ ಶಾಲಾ ಮಕ್ಕಳು ಭಾಗವಹಿಸುವಂತೆ ಮಾಡುವುದು. 2000ನೇ ವರ್ಷದಲ್ಲಿ ಭಾರತೀಯ ವಿದ್ಯಾರ್ಥಿ ತಂಡ ಅಂತರರಾಷ್ಟ್ರೀಯ ಜೀವಶಾಸ್ತ್ರ ಒಲಂಪಿಯಾಡ್‌ನಲ್ಲಿ ಭಾಗವಹಿಸಿತ್ತು.

**ಶಾಲೆಗಳಲ್ಲಿ ಶೈಕ್ಷಣಿಕ ತಂತ್ರಜ್ಞಾನ:** ಇದು ಕೇಂದ್ರ ಯೋಜನೆ ಕಾರ್ಯಕ್ರಮದ ಕೆಲವು ನಿರ್ದಿಷ್ಟ ಅಂಶಗಳನ್ನು ಹೊಂದಿದ್ದ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮ. ಈ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಸಂಪೂರ್ಣ ವೆಚ್ಚವನ್ನು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಒದಗಿಸಿದ ವರ್ಣ ದೂರದರ್ಶನಗಳ

Digitised by Bharatavani, CIIL

ವೆಚ್ಚದಲ್ಲಿ ಶೇ.75ರಷ್ಟನ್ನು ಕೇಂದ್ರಸರ್ಕಾರ ಭರಿಸಲು ಅವಕಾಶ ಕಲ್ಪಿಸಿಕೊಡಲಾಗಿತ್ತು.

ಶಾಲೆಯ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಗುಣಾತ್ಮಕ ಶಿಕ್ಷಣ ದೊರೆಯುವ ಅವಕಾಶ ಕಲ್ಪಿಸಲು ಶಾಲೆಗಳಿಗೆ ಇವುಗಳನ್ನು ವಿತರಿಸಲಾಗಿತ್ತು. ಈ ಶಾಲೆಗಳಿಗೆ ಸೂಕ್ತವಾದ ಕಾರ್ಯಕ್ರಮಗಳನ್ನು ತಯಾರಿಸಲು ಉತ್ತರಪ್ರದೇಶ, ಬಿಹಾರ, ಒರಿಸ್ಸಾ, ಮಹಾರಾಷ್ಟ್ರ, ಗುಜರಾತ್ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ 6 ಸ್ವಾಯತ್ತ ರಾಜ್ಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳಿಗೆ (State Institute of Educational Technology-SIET) ಈ ಕಾರ್ಯಕ್ರಮದಡಿಯಲ್ಲಿ ಧನಸಹಾಯ ನೀಡಲಾಗುತ್ತದೆ. ಕೇಂದ್ರ ಯೋಜನಾ ಕಾರ್ಯಕ್ರಮದಲ್ಲಿ NCERTಯ ಒಂದು ಅಂಗ ಸಂಸ್ಥೆಯಾದ ಕೇಂದ್ರಿಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗೂ (Central Institute of Educational Technology-CIET) ಧನಸಹಾಯ ನೀಡಲಾಗುತ್ತಿದೆ. ಈ ಸಂಸ್ಥೆ ಶಾಲಾ ವಿಭಾಗಕ್ಕೆ ತಯಾರಿಸುವ ಕಾರ್ಯಕ್ರಮಗಳನ್ನು ದೂರದರ್ಶನ ಮತ್ತು ಆಕಾಶವಾಣಿ ರೇಡಿಯೋ ಮತ್ತು ಟಿ.ವಿ.ಗಳ ಮೂಲಕ ಪ್ರಸಾರ ಮಾಡಲಾಗುತ್ತದೆ.

ಈ ಕಾರ್ಯಕ್ರಮದಡಿಯಲ್ಲಿ ಆಗಿರುವ ಪ್ರಗತಿಯನ್ನು ಹೀಗೆ ವರದಿ ಮಾಡಬಹುದು. ಇದುವರೆಗೆ (ವರ್ಷ 2000ದವರೆಗೆ) 2,81,616 ರೇಡಿಯೋ–ಕಂ–ಕ್ಯಾಸೆಟ್ ಪ್ಲೇಯರ್‌ಗಳನ್ನು ಮತ್ತು 407 ವರ್ಣ ಟಿ.ವಿ.ಗಳನ್ನು ವಿತರಿಸಲಾಯಿತು. CIET ಮತ್ತು SIETಗಳು ಸೇರಿ ಶಾಲಾ ವಿಭಾಗಕ್ಕೆ ಒಟ್ಟು 3921 ದೂರದರ್ಶನ ಕಾರ್ಯಕ್ರಮಗಳನ್ನು ಮತ್ತು 1,100 ರೇಡಿಯೋ(ಆಡಿಯೋ) ಕಾರ್ಯಕ್ರಮಗಳನ್ನು ನಿರ್ಮಾಣ ಮಾಡಿದ್ದವು. ಶಾಲಾ ಮಕ್ಕಳಿಗೆ ಭಾರತೀಯ ಭಾಷೆಗಳನ್ನು ದೂರಶಿಕ್ಷಣ ಮತ್ತು ಅನ್ಯೋನ್ಯ ಕ್ರಿಯಾತ್ಮಕ ಕಲಿಕೆಯಲ್ಲಿ ಕಲಿಸಲು CIET ಕ್ಯಾಸೆಟ್‌ಗಳನ್ನು ಸಿದ್ಧಪಡಿಸಿದೆ.

ಶಿಕ್ಷಣ ಮತ್ತು ಸಂಸ್ಕೃತಿಯ ಇಂಡೋ–ಯು.ಎಸ್ ಉಪ–ಆಂತ ಎಂಬ ನವೀನ ಆಚರಣೆಯ ಮತ್ತು ಪ್ರಾಯೋಗಿಕ ಪ್ರಾಯೋಜನೆಯಡಿಯಲ್ಲಿ ಕ್ಲಾಸ್ ರೂಂ– 2000 ಎ.ಡಿ ಎಂಬ ಕಾರ್ಯಕ್ರಮವನ್ನು ಮೇ 1993ರಲ್ಲಿ ಆರಂಭಿಸಲಾಯಿತು. ಈ ಕಾರ್ಯಕ್ರಮ ದೇಶದ ವಿವಿಧ ಸ್ಥಳಗಳಲ್ಲಿದ್ದ ಶಾಲೆಗಳಿಗೆ ಕೇಂದ್ರಿಯ ಸೌಲಭ್ಯದ ಮೂಲಕ 'ಜೀವಂತ' ಬೋಧನೆಯ ಸೇವೆಯನ್ನು ಒಳಗೊಂಡಿತ್ತು. ಈ ಕಾರ್ಯಕ್ರಮವನ್ನು ರಾಜ್ಯಗಳ/ಕೇಂದ್ರಾಡಳಿತ ಪ್ರದೇಶಗಳ ಶೈಕ್ಷಣಿಕ ತಂತ್ರಜ್ಞಾನ ಕೋಶಗಳ (Education Technology Cells) ಮತ್ತು NCERT ಯ CIET ಮೂಲಕ ಜಾರಿಗೊಳಿಸಲಾಯಿತು.

**ಶಾಲೆಗಳಲ್ಲಿ ಕಂಪ್ಯೂಟರ್ ಸಾಕ್ಷರತೆ ಮತ್ತು ಅಧ್ಯಯನ:** ಶಾಲೆಗಳಲ್ಲಿ ಕಂಪ್ಯೂಟರ್ ಸಾಕ್ಷರತೆ ಮತ್ತು ಅಧ್ಯಯನ (Computer Literacy and Studies in Schools-CLASS) ಎಂಬ ಪ್ರಾಯೋಗಿಕ ಪ್ರಾಯೋಜನೆಯನ್ನು (Pilot Project) ವಿದ್ಯುನ್ಮಾನ (Electronics) ಇಲಾಖೆಯ ಸಹಕಾರದೊಂದಿಗೆ 1984–85ರಲ್ಲಿ ಆರಂಭಿಸಲಾಯಿತು. ಇದನ್ನು 248 ಆಯ್ದ ಸೆಕೆಂಡರಿ/ಉನ್ನತ ಸೆಕೆಂಡರಿ ಶಾಲೆಗಳಲ್ಲಿ ಪ್ರಾರಂಭಿಸಲಾಯಿತು. ಈ ಪ್ರಾಯೋಗಿಕ ಪ್ರಾಯೋಜನೆಯ ಸ್ಥೂಲ ಉದ್ದೇಶಗಳು ಕಂಪ್ಯೂಟರ್ ಬಗ್ಗೆ ಇರುವ ರಹಸ್ಯವನ್ನು ರಹಸ್ಯರಹಿತಗೊಳಿಸುವುದನ್ನು ಮತ್ತು ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ (hands on) ಅನುಭವವನ್ನು ಒದಗಿಸುವುದನ್ನು ಒಳಗೊಂಡಿದ್ದವು. ಶಿಕ್ಷಕರಿಗೆ ತರಬೇತಿ ನೀಡಲು 42 ಸಂಪನ್ಮೂಲ ಕೇಂದ್ರಗಳನ್ನು ತೆರೆಯಲಾಯಿತು. ಯಂತ್ರಾಂಶ (Hardware) ಸ್ಥಾಪನೆ ಮತ್ತು ಅದರ ಸಂರಕ್ಷಣೆಯ ಜವಾಬ್ದಾರಿಯನ್ನು ಕಂಪ್ಯೂಟರ್ ಮೆಯಿಂಟೆನೆನ್ಸ್ ಕಾರ್ಪೊರೇಷನ್‌ಗೆ (CMC) ವಹಿಸಲಾಯಿತು. ಈ ಪ್ರಾಯೋಜನೆಯನ್ನು 1984–85ರಲ್ಲಿ 501 ಶಾಲೆಗಳಿಗೆ ಮತ್ತು 1986–87ರಲ್ಲಿ 500 ಶಾಲೆಗಳಿಗೆ ವಿಸ್ತರಿಸಲಾಯಿತು. ಈ ಪ್ರಾಯೋಜನೆ 1992–93ರವರೆಗೂ ಮುಂದುವರೆಯಿತು. CLASS ಪ್ರಾಯೋಜನೆ 1993–94ರಿಂದ ಕೇಂದ್ರ–ಪ್ರಾಯೋಜಿಕ ಕಾರ್ಯಕ್ರಮವಾಯಿತು. ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಇನ್ನೂ 2371 ಶಾಲೆಗಳನ್ನು ಈ ಕಾರ್ಯಕ್ರಮದಡಿಯಲ್ಲಿ ತರಲಾಯಿತು. ಎಲೆಕ್ಟ್ರಾನಿಕ್ ಇಲಾಖೆ ಹಿಂದೆ ಜಾರಿಯಲ್ಲಿದ್ದ CLASS ಕಾರ್ಯಕ್ರಮದ ಸ್ಥಳದಲ್ಲಿ ಪರಿಷ್ಕೃತ ಕಾರ್ಯಕ್ರಮ ಒಂದನ್ನು ರೂಪಿಸುವ ಪ್ರಯತ್ನದಲ್ಲಿ ತೊಡಗಿತು.

**ಶಾಲಾ ಶಿಕ್ಷಣಕ್ಕೆ ಪರಿಸರಣೀಯ ನೆಲೆ:** ರಾಷ್ಟ್ರೀಯ ಶಿಕ್ಷಣ ನೀತಿ (1986) ಪರಿಸರ ಸಂರಕ್ಷಣೆ ಒಂದು ಮೌಲ್ಯವಾಗಬೇಕೆಂದೂ, ಇದರೊಂದಿಗೆ ಇನ್ನೂ ಕೆಲವು ನಿರ್ದಿಷ್ಟ ಮೌಲ್ಯಗಳು ಶಿಕ್ಷಣದ ಎಲ್ಲಾ ಹಂತಗಳ ಪಠ್ಯಕ್ರಮಗಳ ಸಮಗ್ರ ಭಾಗವಾಗಿರಬೇಕೆಂದೂ ತಿಳಿಸುತ್ತದೆ. ಈ ಉದಾತ್ತ ಉದ್ದೇಶವನ್ನು ಕಾರ್ಯಾಚರಣೆಯಲ್ಲಿ ತರಲು ವಿದ್ಯಾರ್ಥಿಗಳ ಮನಸ್ಸು ಮತ್ತು ಬುದ್ಧಿಯನ್ನು ಪ್ರಕೃತಿಯಲ್ಲಿ ಅಂತರ್‌ನಿಹಿತವಾದ ಅಪಾಯಗಳ ಬಗ್ಗೆ ಮತ್ತು ಜೀವಿ–ಪರಿಸರ ಸಮತೋಲನವನ್ನು ಗೊಂದಲಗೊಳಿಸುವುದರ ಅಪಾಯಗಳ ಬಗ್ಗೆ ಸಂವೇದನಶೀಲಗೊಳಿಸಬೇಕು.

ಈ ಗುರಿಯನ್ನು ಗಮನದಲ್ಲಿಟ್ಟುಕೊಂಡು 'ಶಾಲಾ ಶಿಕ್ಷಣಕ್ಕೆ ಪರಸರಣೀಯ ನೆಲೆ' (Environmental Orientation to School Education) ಎಂಬ ಹೆಸರಿನಲ್ಲಿ ಒಂದು ಕೇಂದ್ರ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮವನ್ನು 1988–89ರಲ್ಲಿ ಆರಂಭಿಸಲಾಯಿತು. ಈ ಕಾರ್ಯಕ್ರಮದಡಿಯಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸ್ವೈಚ್ಛಿಕ ಸಂಘಟನೆಗಳಿಗೆ ಸಹಾಯ ನೀಡಲು ಉದ್ದೇಶಿಸಲಾಗಿತ್ತು. ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಿಗೆ ಸಹಾಯ ನೀಡಲಾಯಿತು.

**ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಪ್ರಾಯೋಜನೆ:** ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಪ್ರಾಯೋಜನೆಯನ್ನು (ಶಾಲಾ ಶಿಕ್ಷಣ (National Population Education Project) ವ್ಯವಸ್ಥೆಯಲ್ಲಿ ಜನಸಂಖ್ಯಾ ಶಿಕ್ಷಣವನ್ನು ಸಾಂಸ್ಥಿಕರಿಸಲು (Institutionalise) ಏಪ್ರಿಲ್ 1980ರಂದು ಪ್ರಾರಂಭಿಸಲಾಯಿತು. ಈ ಪ್ರಾಯೋಜನೆಯನ್ನು ಮಾನವ

Digitised by Bharatavani, CIIL

ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮೇಲ್ವಿಚಾರಣೆಯಲ್ಲಿ ಜಾರಿಗೊಳಿಸಿತು. ಈ ಪ್ರಾಯೋಜನೆಯನ್ನು ದೇಶದಾದ್ಯಂತ 29 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೊಳಿಸಲಾಯಿತು. ಈ ಕಾರ್ಯಕ್ರಮವನ್ನು ಉನ್ನತ ಹಾಗೂ ವಯಸ್ಕರ ಶಿಕ್ಷಣ ವಿಭಾಗಗಳಲ್ಲಿಯೂ ಜಾರಿಗೊಳಿಸಲಾಯಿತು. ವರ್ಷ 2000 ವೇಳೆಗೆ ಮೂರು ಆವರ್ತಗಳನ್ನು ಮುಗಿಸಿದ ಈ ಪ್ರಾಯೋಜನೆ ಈ ಮುಂದಿನ ಅಂಶಗಳಿಗೆ ಒತ್ತು ಕೊಟ್ಟಿತ್ತು. (i) ಪಠ್ಯವಸ್ತುಗಳಲ್ಲಿ ಮತ್ತು ಪಠ್ಯಪುಸ್ತಕಗಳಲ್ಲಿ ಜನಸಂಖ್ಯಾ ಶಿಕ್ಷಣವನ್ನು ಸೇರಿಸುವುದು (ii) ಶಾಲಾ ಶಿಕ್ಷಣದ ಎಲ್ಲಾ ಹಂತಗಳಿಗೂ ಪಠ್ಯಕ್ರಮ, ಬೋಧನಾತ್ಮಕ ಮತ್ತು ಪ್ರಶಿಕ್ಷಣ(ತರಬೇತಿ) ಸಾಮಗ್ರಿಗಳ ಮೂಲರೂಪವೊಂದನ್ನು (proto type) ವಿಕಾಸಗೊಳಿಸುವುದು (iii) ದೇಶದಾದ್ಯಂತ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು ಮತ್ತು (iv) NCERTಯ ಪಠ್ಯಪುಸ್ತಕಗಳಲ್ಲಿ ಉಳಿಸಿಕೊಳ್ಳಬಹುದಾದ ವಿಕಾಸ, ವಯಸ್ಸಾಗುವಿಕೆ ಮತ್ತು ಇತರ ಸಂಬಂಧಿತ ವಿಷಯಗಳನ್ನು ಸೇರಿಸುವುದು. ಕಾರ್ಯಕ್ರಮದ ನಾಲ್ಕನೇ ಆವರ್ತ (1999–2000) ಶಾಲೆಗಳಲ್ಲಿ "ಜನಸಂಖ್ಯೆ ಮತ್ತು ವಿಕಾಸ ಶಿಕ್ಷಣ" (Population and Development Education in Schools) ಎಂಬ ಹೊಸ ಶೀರ್ಷಿಕೆಯೊಂದಿಗೆ ಜೂನ್ 1998ರಲ್ಲಿ ಆರಂಭವಾಯಿತು. ಈ ಪ್ರಾಯೋಜನೆಯ ಕೆಲವು ಚಟುವಟಿಕೆಗಳನ್ನು CBSE, NOS, CISCE, NCTE, KVS ಮತ್ತು NVS ಮುಂತಾದ ಕೇಂದ್ರ ಮಟ್ಟದ ಸ್ವಾಯತ್ತ ಸಂಸ್ಥೆಗಳಿಗೆ ವಹಿಸಲಾಯಿತು. ಇದರಿಂದಾಗಿ ಪ್ರಾಯೋಜನೆ ಹೆಚ್ಚಿನ ಸಂಖ್ಯೆಯ ಶಾಲೆಗಳಿಗೆ ತಲುಪಲು ಸಾಧ್ಯವಾಯಿತು.

**ಅಸಮರ್ಥ ಮಕ್ಕಳಿಗೆ ಸಮಗ್ರ ಶಿಕ್ಷಣ:** ಅಸಮರ್ಥತೆಗಳುಳ್ಳ ಮಕ್ಕಳಿಗೆ ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲಿಯೇ ಶೈಕ್ಷಣಿಕ ಅವಕಾಶ ಕಲ್ಪಿಸಿ ತನ್ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ಅವರ ಸಮನ್ವಯವನ್ನು (Inclusion) ಸುಗಮಗೊಳಿಸುವ ಉದ್ದೇಶದಿಂದ ಅಸಮರ್ಥ ಮಕ್ಕಳಿಗೆ ಸಮಗ್ರ ಶಿಕ್ಷಣ (Integrated Education for Disabled Children-IEDC)ಕಾರ್ಯಕ್ರಮವನ್ನು ಆರಂಭಿಸಲಾಯಿತು. ಈ ಕಾರ್ಯಕ್ರಮದಡಿಯಲ್ಲಿ ರಾಜ್ಯಗಳಿಗೆ ಮತ್ತು ಸರ್ಕಾರೇತರ ಸಂಘಟನೆಗಳಿಗೆ (NGO's) ಶತಪ್ರತಿಶತ ಆರ್ಥಿಕ ನೆರವನ್ನು ನೀಡಲಾಯಿತು. ಸಂಪನ್ಮೂಲ ಕೇಂದ್ರಗಳನ್ನು ಆರಂಭಿಸಲು, ಸಮೀಕ್ಷೆ ನಡೆಸಲು, ನ್ಯೂನತೆಗಳಿರುವ ಅಸಮರ್ಥ ಮಕ್ಕಳ ಮೌಲ್ಯಮಾಪನ ಮಾಡಲು, ಬೋಧನಾ ಸಾಮಗ್ರಿಗಳನ್ನು ಖರೀದಿಸಲು ಮತ್ತು ತಯಾರಿಸಲು ಮತ್ತು ಶಿಕ್ಷಕರಿಗೆ ತರಬೇತಿ ದಿಶಾನಿರ್ದೇಶನವನ್ನು ನೀಡಲು ಸಹ ಸಹಾಯ ನೀಡಲಾಗುತ್ತದೆ.

ಅಸಮರ್ಥತೆಗಳುಳ್ಳ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ಸಹಭಾಗಿತ್ವ) ಕಾಯ್ದೆ – 1995 ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ ಅಮರ್ಥತೆಯುಳ್ಳ ಮಕ್ಕಳ ಶಿಕ್ಷಣ ಮುಖ್ಯ ಭೂಮಿಕೆಯನ್ನು ಪಡೆದುಕೊಂಡಿದೆ. IEDC ಕಾರ್ಯಕ್ರಮವನ್ನು 27ರಾಜ್ಯಗಳು ಮತ್ತು 5ಕೇಂದ್ರಾಡಳಿತ ಪ್ರದೇಶಗಳಲ್ಲಿ 22,000 ಶಾಲೆಗಳಲ್ಲಿ 95,000ಕ್ಕೂ ಹೆಚ್ಚು ಮಕ್ಕಳು ಅದರ ಪ್ರತಿಫಲ ದೊರೆಯುವಂತೆ ಜಾರಿಗೊಳಿಸಲಾಗಿದೆ. ಮೈಸೂರು ಮತ್ತು ಕಾನ್ಪುರದಲ್ಲಿ ಅಸಮರ್ಥತೆಯುಳ್ಳ ವಿದ್ಯಾರ್ಥಿಗಳಿಗಾಗಿಯೇ ಎರಡು ಪಾಲಿಟೆಕ್ನಿಕ್ ಕಾಲೇಜುಗಳನ್ನು ಆರಂಭಿಸಲಾಗಿದೆ.

**ರಾಷ್ಟ್ರೀಯ ಮುಕ್ತ ಶಾಲೆ:** ಮಾನವ ಸಂಪನ್ಮೂಲ ವಿಕಾಸ ಮಂತ್ರಾಲಯದ ಅಡಿಯಲ್ಲಿ ಒಂದು ಸ್ವಾಯತ್ತ ನೋಂದಾಯಿತ ಸಂಸ್ಥೆಯಾಗಿ ಸ್ಥಾಪಿತವಾಗಿರುವ ರಾಷ್ಟ್ರೀಯ ಮುಕ್ತ ಶಾಲೆ (National Open School-NOS) ತನ್ನಲ್ಲಿ ದಾಖಲಾದ ವಿದ್ಯಾರ್ಥಿಗಳನ್ನು ಪದವಿ–ಪೂರ್ವ ಹಂತದವರೆಗೆ ಪರೀಕ್ಷಿಸುವ ಮತ್ತು ಅವರಿಗೆ ಪ್ರಮಾಣಪತ್ರ ನೀಡುವ ಅಧಿಕಾರವನ್ನು ಪಡೆದಿದೆ. NOS ತಾನು ನೀಡುವ ಮೂಲಭೂತ (ಪ್ರಾಥಮಿಕ) ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಹಂತದ ಕೋರ್ಸುಗಳ ಮೂಲಕ ಆಸಕ್ತಿಯಿರುವ ಕಲಿಕಾರ್ಥಿಗಳಿಗೆ ಮುಂದುವರಿಕೆ ಶಿಕ್ಷಣದ ಅವಕಾಶಗಳನ್ನು ಒದಗಿಸುತ್ತದೆ. NOS ಒಂದು ನವೀನ ಆಚರಣೆಯ ಸಂಸ್ಥೆಯಾಗಿದ್ದು ನಮ್ಯತೆಯನ್ನು ಹೊಂದಿರುವುದಲ್ಲದೆ ಕಲಿಕಾರ್ಥಿ ತನ್ನದೇ ಆದ ವೇಗದಲ್ಲಿ ಕಲಿಯುವ ಮತ್ತು ಕಲಿಕೆಯ ವಿಷಯಗಳ ಮುಕ್ತ ಆಯ್ಕೆಯನ್ನು ತನ್ನ ಮುಖ್ಯ ಲಕ್ಷಣವಾಗಿ ಹೊಂದಿದೆ. ಶಿಕ್ಷಕರನ್ನು, ಪ್ರಾಂಶುಪಾಲರುಗಳನ್ನು ಹಾಗೂ ಸಾರ್ವಜನಿಕರನ್ನು ಮತ್ತು ಖಾಸಗಿ ವಿಭಾಗದ ಉದ್ಯಮಗಳನ್ನು ಗಮನದಲ್ಲಿಟ್ಟುಕೊಂಡು ಅನೇಕ ಜೀವನ ಸಮೃದ್ಧಿಕರಣ ಕೋರ್ಸುಗಳನ್ನು ನೀಡುತ್ತಿದೆ ಮತ್ತು ನೀಡಲು ಪ್ರಸ್ತಾಪಿಸಿದೆ. 6ರಿಂದ 14ವರ್ಷ ವಯಸ್ಸಿನ ಶಾಲೆಯಿಂದ ಹೊರಗುಳಿದಿರುವ ಮತ್ತು ವಯಸ್ಕ ಕಲಿಕಾರ್ಥಿಗಳಿಗೆ ಮುಕ್ತ ಮೂಲಶಿಕ್ಷಣ ಪ್ರಾಯೋಜನೆಯನ್ನು (Open Basic Education Project) ಆರಂಭಿಸಿದೆ.

NOS ದೂರ ಶಿಕ್ಷಣದ ಮೂಲಕ ನೀಡುತ್ತಿರುವ ಕಾರ್ಯಕ್ರಮಗಳು ಈ ಅಂಶಗಳನ್ನು ಒಳಗೊಂಡಿವೆ (i) (ii) ವೈಯಕ್ತಿಕ ಸಂಪರ್ಕ ಕಾರ್ಯಕ್ರಮಗಳು (Personal Contact Program-PCP) PCPಗಳಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳು ಅಥವಾ ಅಧ್ಯಯನಕೇಂದ್ರಗಳೆಂದು ಹೇಳುವ ಆಯ್ದ ಮಾನ್ಯತೆ ಪಡೆದ ಶಾಲೆಗಳು ಮತ್ತು ಸಂಸ್ಥೆಗಳಲ್ಲಿ ತರಗತಿಗಳನ್ನು ಮತ್ತು ಟ್ಯುಟೋರಿಯಲ್ಸ್‌ಗಳನ್ನು ನಡೆಸಲಾಗುತ್ತದೆ. ಈ ಅಧ್ಯಯನ ಕೇಂದ್ರಗಳು ದೇಶದಾದ್ಯಂತ ಹರಡಿವೆ. ಈ ಕೇಂದ್ರಗಳಲ್ಲಿ ಪ್ರಾಯೋಗಿಕ ತರಗತಿಗಳನ್ನು ನಡೆಸಲಾಗುತ್ತದೆ. (iii) ಆಡಿಯೋ ಮತ್ತು ವೀಡಿಯೋ ಕಾರ್ಯಕ್ರಮಗಳು. ಈ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಸಂಪರ್ಕ ಕಾರ್ಯಕ್ರಮದ ಅವಧಿಯಲ್ಲಿ ಅವುಗಳನ್ನು ನೋಡಲು ಅಥವಾ ಉಪಯೋಗಿಸಲು ಅನುಕೂಲವಾಗುವಂತೆ ಅವುಗಳನ್ನು ಎಲ್ಲಾ ಅಧ್ಯಯನ ಕೇಂದ್ರಗಳಿಗೆ ಒದಗಿಸಲಾಗುತ್ತದೆ. ವಿದ್ಯಾರ್ಥಿಗಳು ಸ್ವಲ್ಪ ಹಣವನ್ನು ಕೊಟ್ಟು ಅವುಗಳನ್ನು ಕೊಂಡುಕೊಳ್ಳಬಹುದು.

NOS ಮಾನ್ಯತೆ ಪಡೆದ ಸಾಂಸ್ಥಿಕ ಅಧ್ಯಯನ ಕೇಂದ್ರಗಳೆಂದು (Accredited Institutional Study Centres-AISC) ಕರೆಯಲ್ಪಡುವ 1000ಕ್ಕೂ ಹೆಚ್ಚು ಅಧ್ಯಯನ ಕೇಂದ್ರಗಳ ಜಾಲದ

Digitised by Bharatavani, CIIL

ಮೂಲಕ ತನ್ನ ವಿದ್ಯಾರ್ಥಿಗಳಿಗೆ ಸೇವೆ ನೀಡುತ್ತಿದೆ. ಅನಿವಾಸಿ ಭಾರತೀಯರಿಗೆ ಮತ್ತು ಬೇರೆ ದೇಶಗಳ ರಾಷ್ಟ್ರೀಯ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸುವ ಉದ್ದೇಶದಿಂದ NOS ಮಧ್ಯ–ಪ್ರಾಚ್ಯ (ದುಬೈ, ಅಬುದಾಬಿ, ಮಸ್ಕಟ್ ಮತ್ತು ಕುವೈತ್) ನೇಪಾಲ (ಕಠಮಂಡು ಮತ್ತು ಭೂತ್‌ವಾಲ್) ಮತ್ತು ಕೆನಡ (ವಾರಕ್ಕೊಮ್ಮೆ) ಗಳಲ್ಲಿ ಮಾನ್ಯತೆ ಪಡೆದ ಕೇಂದ್ರಗಳನ್ನು ಹೊಂದಿದೆ. ಭಾರತ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (Central Board of Secondary Education-CBSE) ಮತ್ತು ಭಾರತೀಯ ಶಾಲಾ ಸರ್ಟಿಫಿಕೇಟ್ ಪರೀಕ್ಷಾ ಪರಿಷತ್‌ನಂತೆಯೆ (Council for the Indian School Certificate Examination-CISCE) ತನ್ನದೇ ಆದ ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಮತ್ತು ಔದ್ಯೋಗಿಕ ಪರೀಕ್ಷೆಗಳ ರಾಷ್ಟ್ರೀಯ ಮಂಡಳಿಯನ್ನು (National Board of Secondary and Sensor Secondary and Vocational Examinations-NBSSVE) ಹೊಂದಿದೆ. NOS ವರ್ಷದ ಎರಡು ಸಲ ಮೇ ಮತ್ತು ನವೆಂಬರ್ ತಿಂಗಳುಗಳಲ್ಲಿ ತನ್ನ ಪರೀಕ್ಷೆಗಳನ್ನು ನಡೆಸುತ್ತದೆ. ಬ್ರೂನೈ ದರುಸ್ಸಲಾಂನಲ್ಲಿ ಮಾರ್ಚ್, 1999ರಲ್ಲಿ ನಡೆದ ದೂರಶಿಕ್ಷಣದ ಪ್ಯಾನ್ ಕಾಮನ್‌ವೆಲ್ತ್ ಫೋರಂನಲ್ಲಿ ದೂರಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಂಸ್ಥಿಕ ಸಾಧನೆಗಾಗಿ ಕಾಮನ್‌ವೆಲ್ತ್ ಕಲಿಕಾ ಉತ್ಕೃಷ್ಟತಾ ಬಹುಮಾನವನ್ನು ರಾಷ್ಟ್ರೀಯ ಮುಕ್ತಶಾಲೆಗೆ (NOS) ನೀಡಲಾಗಿದೆ.

ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ಸಿದ್ಧರಾದಾಗ ಪರೀಕ್ಷೆ ತೆಗೆದುಕೊಳ್ಳುವ ಅವಕಾಶ ನೀಡುವ 'ಬೇಡಿಕೆ ಮೇಲೆ ಪರೀಕ್ಷೆ' (Examination on Demand) ಎಂಬ ಒಂದು ನವೀನ ಯೋಜನೆ ಬಗ್ಗೆ ಕೆಲಸ ಮಾಡುತ್ತಿತ್ತು. ಈ ರೀತಿಯ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಯನ್ನು ಕಂಪ್ಯೂಟರ್ ಸಹಾಯದಿಂದ ಸಿದ್ಧಪಡಿಸಿ ಬೇರೆ ಬೇರೆ ಅಧ್ಯಯನ ಕೇಂದ್ರಗಳಿಗೆ ಕಳುಹಿಸಲಾಗುವುದು.

**ನವೋದಯ ವಿದ್ಯಾಲಯಗಳು:** ದೇಶದ ಪ್ರತಿ ಜಿಲ್ಲೆಯಲ್ಲಿ ಒಂದು ಮಾದರಿ ಶಾಲೆಯನ್ನು ಸ್ಥಾಪಿಸಬೇಕೆಂಬುದು ರಾಷ್ಟ್ರೀಯ ಶಿಕ್ಷಣ ನೀತಿ (1986) ಪರಿಭಾವಿಸಿದ ಮತ್ತೊಂದು ನವೀನ ಆಚರಣೆಯಾಗಿತ್ತು. ಅದಕ್ಕೆ ಅನುಗುಣವಾಗಿ ಒಂದು ಯೋಜನೆಯನ್ನು ರೂಪಿಸಲಾಯಿತು. ಆ ಯೋಜನೆಯಂತೆ ಸರಾಸರಿ ಜಿಲ್ಲೆಗೆ ಒಂದರಂತೆ 'ನವೋದಯ ವಿದ್ಯಾಲಯ' ಎಂಬ ಹೆಸರಿನೊಂದಿಗೆ ವಸತಿ ಶಾಲೆಗಳನ್ನು ಆರಂಭಿಸಬೇಕೆಂದು ತೀರ್ಮಾನಿಸಲಾಯಿತು. ನವೋದಯ ಶಾಲೆಗಳು ಪೂರ್ಣತಂ ವಸತಿ ಮತ್ತು ಸಹ ಶಿಕ್ಷಣ ಸಂಸ್ಥೆಗಳಾಗಿದ್ದು ಸೀನಿಯರ್ ಸೆಕೆಂಡರಿ (ಉನ್ನತ ಮಾಧ್ಯಮಿಕ) ಹಂತದ 1985–86ರಲ್ಲಿ ಎರಡು ಪ್ರಾಯೋಗಿಕ ಶಾಲೆಗಳೊಂದಿಗೆ ಆರಂಭಿಸಲಾಯಿತು ಮತ್ತು ಈಗ ಈ ಯೋಜನೆ ವಿಕಾಸಗೊಂಡು 30ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಅನೇಕ ಜಿಲ್ಲೆಗಳಲ್ಲಿ 1.27ಲಕ್ಷ ವಿದ್ಯಾರ್ಥಿಗಳ ದಾಖಲಾತಿಯೊಂದಿಗೆ 423 ನವೋದಯ ವಿದ್ಯಾಲಯಗಳನ್ನು ಹೊಂದಿದೆ. ಪ್ರತಿವರ್ಷ ಈ ಶಾಲೆಗಳಿಗೆ 25,000 ಹೊಸ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಈ ವಿದ್ಯಾಲಯಗಳು ವಿಶೇಷ ಸಾಮರ್ಥ್ಯಗಳಿರುವ, ಪ್ರಖರಬುದ್ಧಿಯ, ಪ್ರತಿಭಾವಂತ ಮಕ್ಕಳನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಉತ್ತಮ ಶೈಕ್ಷಣಿಕ ಅವಕಾಶಗಳಿಂದ ವಂಚಿತರಾದ ಮಕ್ಕಳನ್ನು ಗುರ್ತಿಸುವ ಮತ್ತು ವಿಕಾಸಗೊಳಿಸುವ ಬೆಳವಣಿಗೆಯ ಒಂದು ನೂತನ ಶೈಲಿಯೊಂದನ್ನು ಪರಿಭಾವಿಸಿದವು. ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ಶೇ.33ರಷ್ಟು ಬಾಲಕಿಯರು ಇರಬೇಕೆಂಬುದನ್ನು ಖಚಿತಗೊಳಿಸಕೊಳ್ಳಲಾಗುತ್ತದೆ. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಿದ್ಯಾರ್ಥಿಗಳನ್ನು ವಲಸೆ ಕಳುಹಿಸುವುದು ನವೋದಯ ವಿದ್ಯಾಲಯಗಳ ಒಂದು ಅಪೂರ್ವ ಲಕ್ಷಣವಾಗಿದೆ. ಈ ಯೋಜನೆಯಂತೆ 9ನೇ ತರಗತಿಯಲ್ಲಿ ಓದುತ್ತಿರುವ ಒಂದು ಭಾಷಾಕ್ಷೇತ್ರದಲ್ಲಿ ಇರುವ ಶೇ.30ರಷ್ಟು ವಿದ್ಯಾರ್ಥಿಗಳನ್ನು ಒಂದು ಶೈಕ್ಷಣಿಕ ವರ್ಷದ ಅವಧಿಯನ್ನು ಮತ್ತೊಂದು ಭಾಷಾ ಕ್ಷೇತ್ರದಲ್ಲಿ (ಹಿಂದಿ ಕ್ಷೇತ್ರದಿಂದ ಹಿಂದಿ ಇಲ್ಲದ ಕ್ಷೇತ್ರಕ್ಕೆ ಮತ್ತು ತದ್ವಿರುದ್ಧವಾಗಿ) ಇರುವ ವಿದ್ಯಾಲಯದಲ್ಲಿ ಕಳೆಯುತ್ತಾರೆ. ಈ ಕ್ರಮ ದೇಶದ ಸಂಸ್ಕೃತಿಯ ವೈವಿಧ್ಯತೆಯನ್ನು ಮತ್ತು ಬಹುಳತೆಯನ್ನು ಅರ್ಥಮಾಡಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಪ್ರೋತ್ಸಾಹಿಸಲು ಸಹಾಯ ಮಾಡುತ್ತದೆ.

**ಕೇಂದ್ರಿಯ ವಿದ್ಯಾಲಯಗಳು:** ಎರಡನೇ ವೇತನ ಆಯೋಗದ ಶಿಫಾರಸ್ಸಿನಂತೆ ಭಾರತ ಸರ್ಕಾರ 1962ರಲ್ಲಿ ಕೇಂದ್ರಿಯ ವಿದ್ಯಾಲಯವನ್ನು ಬೇರೆ ಬೇರೆ ರಾಜ್ಯಗಳಲ್ಲಿದ್ದ ಸಂಘಟನೆಯ ಯೋಜನೆ ಒಪ್ಪಿಗೆ ನೀಡಿತು. ಮೊದಲಿಗೆ 20 ಸೈನಿಕ ಶಾಲೆಗಳನ್ನು (Regiment Schools) 1965ರಲ್ಲಿ ಕೇಂದ್ರಿಯ ಶಾಲೆಗಳಾಗಿ ತೆಗೆದುಕೊಳ್ಳಲಾಯಿತು. ಸೈನ್ಯ ಸಿಬ್ಬಂದಿಯೂ ಸೇರಿದಂತೆ ವರ್ಗಾವಣೆಯಾಗುವ ಕೇಂದ್ರ ಸರ್ಕಾರದ ನೌಕರರ ಮಕ್ಕಳ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು ಕೇಂದ್ರಿಯ ವಿದ್ಯಾಲಯಗಳನ್ನು ಸ್ಥಾಪಿಸುವ ಮತ್ತು ಅವುಗಳ ಮೇಲ್ವಿಚಾರಣೆ ಮಾಡುವ ಮತ್ತು ಸಾಮಾನ್ಯ ಶೈಕ್ಷಣಿಕ ಕಾರ್ಯಕ್ರಮವನ್ನು ಒದಗಿಸುವ ಪ್ರಮುಖ ಉದ್ದೇಶದಿಂದ ಕೇಂದ್ರಿಯ ವಿದ್ಯಾಲಯ ಸಂಘಟನೆ (KVS) ಎಂಬ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈಗ ಒಟ್ಟು 874 ಕೇಂದ್ರಿಯ ವಿದ್ಯಾಲಯಗಳಿವೆ. ಅವುಗಳಲ್ಲಿ ಒಂದು ನೇಪಾಳದ ಕಠ್ಮಂಡುನಲ್ಲಿ ಮತ್ತು ಮತ್ತೊಂದು ರಷ್ಯಾ ದೇಶದ ಮಾಸ್ಕೋನಲ್ಲಿ ಇದೆ. ಎಲ್ಲಾ ಕೇಂದ್ರಿಯ ವಿದ್ಯಾಲಯಗಳು ಏಕರೂಪದ ಪಠ್ಯವಸ್ತುವನ್ನು ಅನುಸರಿಸುತ್ತವೆ.

**ರಾಷ್ಟ್ರೀಯ ಪ್ರತಿಭಾ ಅನ್ವೇಷಣ ಯೋಜನೆ:** ದೇಶದಲ್ಲಿ ಶಾಲಾ ಮಟ್ಟದಲ್ಲಿ ಪ್ರತಿಭೆಗಳನ್ನು ಗುರ್ತಿಸುವ ಉದ್ದೇಶದಿಂದ NCERT ಒಂದು ಪೂರ್ವ ರಾಷ್ಟ್ರೀಯ ವಿಜ್ಞಾನ ಪ್ರತಿಭಾ ಅನ್ವೇಷಣಾ ಕಾರ್ಯಕ್ರಮ (National Science Talent Search Scheme-NTSS) ಎಂಬ ನವೀನ ಆಚರಣೆಯ ಪ್ರಾಯೋಗಿಕ ಪ್ರಾಯೋಜನೆಯನ್ನು 1963ರಲ್ಲಿ ದೆಹಲಿಯ ಕೇಂದ್ರಾಡಳಿತ ಪ್ರದೇಶದಲ್ಲಿ ಪ್ರಾರಂಭಿಸಿ ನಂತರದಲ್ಲಿ ಅದನ್ನು 1964ರಲ್ಲಿ 350 ವಿದ್ಯಾರ್ಥಿ ವೇತನಗಳೊಂದಿಗೆ ದೇಶದಾದ್ಯಂತ ವಿಸ್ತರಿಸಲಾಯಿತು.

Digitised by Bharatavani, CIIL

ಆರಂಭದ ನಂತರದ ಮೂರು ದಶಕಗಳಲ್ಲಿ ಈ ಕಾರ್ಯಕ್ರಮದಲ್ಲಿ ಅನೇಕ ಬದಲಾವಣೆಗಳಾದವು ಮತ್ತು ಇದರ ಹೆಸರನ್ನು 1977ರಲ್ಲಿ ರಾಷ್ಟ್ರೀಯ ಪ್ರತಿಭಾ ಅನ್ವೇಷಣಾ ಕಾರ್ಯಕ್ರಮವೆಂದು (National Talent Search Scheme-NTS) ಬದಲಾಯಿಸಲಾಯಿತು. ಸಂಕ್ಷಿಪ್ತವಾಗಿ ಈ ಕಾರ್ಯಕ್ರಮದ ವಿವರ ಹೀಗಿದೆ. ಹತ್ತನೇ ತರಗತಿ ಮಟ್ಟದಲ್ಲಿ ಪ್ರತಿಭಾವಂತ ಮಕ್ಕಳನ್ನು ಗುರ್ತಿಸಲು 1000 ವಿದ್ಯಾರ್ಥಿವೇತನಗಳನ್ನು (ಸಾಮಾನ್ಯ ವರ್ಗಕ್ಕೆ 775, ಪರಿಶಿಷ್ಟ ಜಾತಿಗಳ ವರ್ಗಕ್ಕೆ 150 ಮತ್ತು ಪರಿಶಿಷ್ಟ ಬುಡಕಟ್ಟುಗಳ ವರ್ಗಕ್ಕೆ 75 ವಿದ್ಯಾರ್ಥಿ ವೇತನಗಳು) ನೀಡುತ್ತದೆ. ಈ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತದೆ. ಮೊದಲಿಗೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ಮಟ್ಟದಲ್ಲಿ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ನಂತರ ಅರ್ಹತೆ ಮತ್ತು SC/STಮೀಸಲಾತಿಯನ್ನು ಗಮನದಲ್ಲಿಟ್ಟುಕೊಂಡು ಅನೇಕ ವಿದ್ಯಾರ್ಥಿಗಳನ್ನು (ಸೆಕೆಂಡರಿ ಮಟ್ಟದಲ್ಲಿರುವ ಒಟ್ಟು ಮಕ್ಕಳ ಅನುಪಾತಕ್ಕೆ ಅನುಗುಣವಾಗಿ) ರಾಷ್ಟ್ರಮಟ್ಟದ ಪರೀಕ್ಷೆಗೆ ಶಿಫಾರಸ್ಸು ಮಾಡುತ್ತವೆ. ನಂತರ ಮೇ ಎರಡನೇ ವಾರದ ಭಾನುವಾರ ಪ್ರತಿಯೊಂದು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಯಾವುದಾದರೊಂದು ಕೇಂದ್ರದಲ್ಲಿ ರಾಷ್ಟಮಟ್ಟದ ಪರೀಕ್ಷೆಯನ್ನು ನಡೆಸುತ್ತದೆ. ಈ ಪರೀಕ್ಷೆಯ ಲಿಖಿತ ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಂತಿಮ ಅರ್ಹತಾ ಪಟ್ಟಿಯನ್ನು ಸಿದ್ಧಗೊಳಿಸುತ್ತದೆ. ಈ ಕಾರ್ಯಕ್ರಮದಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಅವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನದ ಹಂತದಲ್ಲಿ ವಿಶ್ವವಿದ್ಯಾನಿಲಯಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಸ್ (IITs), ರಾಷ್ಟೀಯ ಪ್ರಯೋಗಾಲಯಗಳು, ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೇಸಿಗೆ ರಜದ ಅವಧಿಯಲ್ಲಿ 30 ದಿನಗಳ ಬೇಸಿಗೆ ಶಾಲೆ ಮತ್ತು ಬೇಸಿಗೆ ಸ್ಥಾನೀಕರಣ (Placement) ಕಾರ್ಯಕ್ರಮಗಳ ಮೂಲಕ ಪೋಷಣ (Nurturance) ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ.

**ಮಹಿಳೆಯರ ಸಮಾನತೆಗೆ ಶಿಕ್ಷಣದಲ್ಲಿ ನವೀನ ಆಚರಣೆಗಳು:**

ಶಿಕ್ಷಣದ ಮೂಲಕ ಮಹಿಳೆಯರ ಸ್ಥಾನಮಾನದಲ್ಲಿ ಮೂಲಭೂತ ಬದಲಾವಣೆ ತರುವುದಕ್ಕೆ ಭಾರತ ಸರ್ಕಾರ ಬದ್ಧವಾಗಿದೆ. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮಹಿಳೆಯರ ಸಹಭಾಗಿತ್ವಕ್ಕೆ ಮಹಿಳೆಯರ ಸಬಲೀಕರಣ ಒಂದು ನಿರ್ಣಾಯಕ ಪೂರ್ವಾವಶ್ಯಕತೆಯಾಗಿದೆ ಎಂದು ಅದು ನಂಬುತ್ತದೆ. ಮಹಿಳೆಯರ ಸಬಲೀಕರಣದ ಪ್ರಮುಖ ಕಾರ್ಯಕ್ರಮಗಳು ಈ ಕೆಳಕಂಡಂತಿವೆ. (i) ಮಹಿಳಾ ಸಮಾಖ್ಯವನ್ನು 1989ರಲ್ಲಿ ಆರಂಭಿಸಲಾಯಿತು. ಸಮಾನತೆಯನ್ನು ಸಾಧಿಸಲು ಮಹಿಳೆಯರನ್ನು ಸಬಲೀಕರಣಗೊಳಿಸುವುದರಲ್ಲಿ ಶಿಕ್ಷಣದ ಕೇಂದ್ರೀಯ ಪಾತ್ರವನ್ನು ಮಹಿಳಾ ಸಮಾಖ್ಯ ಕಾರ್ಯಕ್ರಮ ಗುರ್ತಿಸುತ್ತದೆ. ವರ್ಷ 2000ದಲ್ಲಿದ್ದಂತೆ ಆಂಧ್ರಪ್ರದೇಶ, ಆಸ್ಸಾಂ, ಬಿಹಾರ, ಗುಜರಾತ್, ಕರ್ನಾಟಕ, ಕೇರಳ, ಮಧ್ಯಪ್ರದೇಶ ಮತ್ತು ಉತ್ತರಪ್ರದೇಶ ಈ ಎಂಟು ರಾಜ್ಯಗಳ 51 ಜಿಲ್ಲೆಗಳ 7335 ಹಳ್ಳಿಗಳಲ್ಲಿ ಈ ಕಾರ್ಯಕ್ರಮ ಕ್ರಿಯಾನ್ವಿತವಾಗಿದ್ದಿತು. (ii) ಸರ್ವಶಿಕ್ಷಾ ಅಭಿಯಾನ (iii) ಕಪ್ಪು ಹಲಗೆ ಕಾರ್ಯಕ್ರಮ (iv) ಸಂಪ್ರದಾಯರಹಿತ ಶಿಕ್ಷಣ – 1.18 ಲಕ್ಷ ಕೇಂದ್ರಗಳು ಬಾಲಕಿಯರಿಗಾಗಿಯೇ ಇದ್ದವು. (v) ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ–ಬಾಲಕಿಯರ ಶಿಕ್ಷಣಕ್ಕಾಗಿ ವಿಶೇಷ ಮಧ್ಯಸ್ತಿಕೆ ಕ್ರಮಗಳು (vi) ರಾಷ್ಟ್ರೀಯ ಸಾಕ್ಷರತಾ ಮಿಶನ್– 2005ರ ಹೊತ್ತಿಗೆ ಶೇ.75ರಷ್ಟು ಉಳಿಸಿಬೆಳಿಸಿಕೊಳ್ಳಬಹುದಾದ ಕಾರ್ಯಾತ್ಮಕ ಸಾಕ್ಷರತೆಯ ಗುರಿಯನ್ನು ಹೊಂದಿತ್ತು. (vii) ನವೋದಯ ವಿದ್ಯಾಲಯಗಳು ಪೂರ್ಣವಸತಿ ಹಾಗೂ ಸಹಶಿಕ್ಷಣ ಸಂಸ್ಥೆಗಳು (viii) ಔದ್ಯೋಗಿಕ ಶಿಕ್ಷಣ ಉನ್ನತ ಶಿಕ್ಷಣಕ್ಕೆ ಪರ್ಯಾಯವಾಗಿ (xi) ವಿದ್ಯಾರ್ಥಿಯನಿಯರಿಗಾಗಿ ವಸತಿ ಮತ್ತು ಭೋಜನ ಸೌಲಭ್ಯಗಳು–ಗ್ರಾಮೀಣ ಪ್ರದೇಶಗಳ ಮತ್ತು ದುರ್ಬಲ ಹೊಂದಿದ ಕಿಶೋರಿಯರ ದಾಖಲಾತಿಯನ್ನು ಉತ್ತಮಪಡಿಸಲು ವಿಶ್ವವಿದ್ಯಾನಿಲಯ ಆಯೋಗ (UGC) ಮಹಿಳೆಯರ ಅಧ್ಯಯನ ಕ್ಷೇತ್ರದಲ್ಲಿ ಸಂಶೋಧನ ಪ್ರಾಯೋಜನೆಗಳನ್ನು ಕೈಗೊಳ್ಳುವುದನ್ನು ಪ್ರೋತ್ಸಾಹಿಸಲು ಸಂಸ್ಥೆಗಳಿಗೆ ಅಗತ್ಯ ಧನಸಹಾಯವನ್ನು ಒದಗಿಸುತ್ತದೆ. UGC ಯ ಮಹಿಳಾ ಅಧ್ಯಯನ ಕೇಂದ್ರಗಳಿಂದ 22 ವಿಶ್ವವಿದ್ಯಾನಿಲಯಗಳು ಮತ್ತು 11 ಕಾಲೇಜುಗಳ ಈ ಸಹಾಯವನ್ನು ಪಡೆದುಕೊಂಡವು. ಉನ್ನತ ಶಿಕ್ಷಣದ ಸೌಲಭ್ಯಗಳಲ್ಲಿರುವ ಸಾಮಾಜಿಕ ಮತ್ತು ಪ್ರಾದೇಶಿಕ ಅಂತರಗಳನ್ನು ನಿವಾರಣೆ ಮಾಡಲು ಸಹ UGC ಸಹಾಯವನ್ನು ನೀಡುತ್ತದೆ.

**ಅಧ್ಯಾಪಕ ಶಿಕ್ಷಣದಲ್ಲಿ ನವೀನ ಆಚರಣೆಗಳು:** ವ್ಯಾವಹಾರ್ಯವಾದ ಸಾಂಸ್ಥಿಕ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸಲು ಅಧ್ಯಾಪಕರಿಗೆ ದಿಶಾನಿರ್ದೇಶನ ನೀಡಲು ಶಾಲಾ ಶಿಕ್ಷಕರ ಶಿಶು ಬೋಧನಾ ಕೌಶಲಗಳನ್ನು ವಯಸ್ಕರ ಶಿಕ್ಷಣ ಮತ್ತು ಸಂಪ್ರದಾಯರಹಿತ ಶಿಕ್ಷಣದ ಕಾರ್ಯಕರ್ತರ ಮತ್ತು ಅಧ್ಯಾಪಕ ಶಿಕ್ಷಕರಿಗೆ ತರಬೇತಿ ನೀಡಲು, ನಿರಂತರವಾಗಿ ಅವರ ಜ್ಞಾನ ಮತ್ತು ದಕ್ಷತೆಗಳನ್ನು ಉನ್ನತೀಕರಿಸಲು ಅಧ್ಯಾಪಕ ಶಿಕ್ಷಣ ವ್ಯವಸ್ಥೆಯನ್ನು ಪುನರ್‌ರಚಿಸುವ ಮತ್ತು ಪುನರ್‌ವ್ಯವಸ್ಥೆಗೊಳಿಸುವ ಕೇಂದ್ರಸರ್ಕಾರದಿಂದ ಪ್ರಾಯೋಜಿತಗೊಂಡ ಕಾರ್ಯಕ್ರಮವನ್ನು 1987–88ರಲ್ಲಿ ಕೈಗೆತ್ತಿಕೊಳ್ಳಲಾಯಿತು. ಈ ಕಾರ್ಯಕ್ರಮ ಪ್ರಾಥಮಿಕ ಶಿಕ್ಷಕರಿಗೆ ಮತ್ತು ಸಂಪ್ರದಾಯ–ರಹಿತ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣದ ಬೋಧಕರಿಗೆ ಶೈಕ್ಷಣಿಕ ಮತ್ತು ಸಂಪನ್ಮೂಲ ಬೆಂಬಲವನ್ನು ಒದಗಿಸಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು (District Institutes of Education of Training-DIET) ಸ್ಥಾಪಿಸಬೇಕೆಂದು ಪರಿಭಾವಿಸಿತು. ಆಯ್ದ ಕೆಲವು ಸೆಕೆಂಡರಿ ಅಧ್ಯಾಪಕ ಶಿಕ್ಷಣ ಸಂಸ್ಥೆಗಳನ್ನು (Secondary Teacher Education Institutions-STEI's) ಸೆಕೆಂಡರಿ ಮಟ್ಟದ ಶಿಕ್ಷಕರಿಗೆ ಸೇವಾಪೂರ್ವ ಮತ್ತು ಸೇವಾವಧಿ ತರಬೇತಿಯನ್ನು ಸಂಘಟಿಸಲು, ಸೆಕೆಂಡರಿ ಶಾಲೆಗಳಿಗೆ ವಿಸ್ತರಣ ಮತ್ತು ಬೆಂಬಲ ಸೇವೆಗಳನ್ನು ಒದಗಿಸಲು ಮತ್ತು DIETಗಳಿಗೆ ಶೈಕ್ಷಣಿಕ ಮಾರ್ಗದರ್ಶನ ನೀಡಲು ಅಧ್ಯಾಪಕ ಶಿಕ್ಷಣ

Digitised by Bharatavani, CIIL

ಕಾಲೇಜುಗಳಾಗಿ (Colleges of Teacher Education- CTE) ಮತ್ತು ಶಿಕ್ಷಣದ ಮುಂದುವರಿದ ಅಧ್ಯಯನ ಸಂಸ್ಥೆಗಳನ್ನಾಗಿ (Institutes of Advanced Studies in Education- IASE's) ಉನ್ನತಿಕರಿಸಬೇಕೆಂದೂ ಈ ಕಾರ್ಯಕ್ರಮ ಪರಿಭಾವಿಸಿತು. ಅದರಂತೆ 461 DIETಗಳನ್ನು, 76 CTEಗಳನ್ನು ಮತ್ತು 54 DIET/ASEಗಳನ್ನು ವಿವಿಧ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ಈ ಯೋಜನೆಯಡಿಯಲ್ಲಿ ಮಂಜೂರು ಮಾಡಲಾಯಿತು. ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ಪ್ರಶಿಕ್ಷಣ ಪರಿಷತ್ತುಗಳನ್ನು (State Council of Educational Research and Training-SCERT) ಬಲಗೊಳಿಸಲು ಹಣಕಾಸಿನ ಸಹಾಯವನ್ನು ನೀಡಲಾಯಿತು. ಶಾಲಾ ಶಿಕ್ಷಕರಿಗೆ ವಿಶೇಷ ದಿಶಾನಿರ್ದೇಶನ ಕಾರ್ಯಕ್ರಮವೆಂಬ (Special Orientation Programme for School Teachers-SOPT) ಹೆಸರಿನ ತರಬೇತಿ ಕಾರ್ಯಕ್ರಮದಲ್ಲಿ ದೇಶದಾದ್ಯಂತ 17ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಶಿಕ್ಷಕರಿಗೆ ದಿಶಾನಿರ್ದೇಶನ ನೀಡಲಾಯಿತು.

**ಶಿಕ್ಷಕರಿಗೆ ರಾಷ್ಟ್ರೀಯ ಪುರಸ್ಕಾರಗಳು**: ದೇಶದಲ್ಲಿರುವ ಅರ್ಹತೆಯುಳ್ಳ ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸುವ (ಅಭಿನಂದಿಸುವ) ಸಲುವಾಗಿ 1958ರಲ್ಲಿ ಶಿಕ್ಷಕರಿಗೆ ರಾಷ್ಟ್ರೀಯ ಪುರಸ್ಕಾರಗಳನ್ನು ನೀಡುವ ಯೋಜನೆಯನ್ನು ಆರಂಭಿಸಲಾಯಿತು. ಈ ಪುರಸ್ಕಾರಗಳಲ್ಲಿ 20 ಪುರಸ್ಕಾರಗಳನ್ನು ಪ್ರತ್ಯೇಕವಾಗಿ ಸಂಸ್ಕೃತ, ಪರ್ಷಿಯನ್ ಮತ್ತು ಅರೇಬಿಕ್ ಭಾಷೆಗಳನ್ನು ಸಾಂಪ್ರದಾಯಿಕ ಸಂಸ್ಥೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ ಸಾಮಾನ್ಯ ಶಿಕ್ಷಕರಿಗೆ ಎರಡು ಗುಂಪುಗಳಿಗೆ ಪುರಸ್ಕಾರ ನೀಡಲಾಗುತ್ತದೆ. (i) ಪ್ರಾಥಮಿಕ ಶಿಕ್ಷಕರು (ತರಗತಿ I ರಿಂದ VIII) ಮತ್ತು (ii) ಸೆಕೆಂಡರಿ ಶಿಕ್ಷಕರು (ತರಗತಿ IX ರಿಂದ XII) ಪ್ರತಿಯೊಂದು ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೂ ಅಲ್ಲಿರುವ ಒಟ್ಟು ಶಿಕ್ಷಕ ಸಂಖ್ಯೆಗೆ ಅನುಗುಣವಾಗಿ ಪುರಸ್ಕಾರಗಳ ಸಂಖ್ಯೆಯನ್ನು ನಿಗದಿಗೊಳಿಸಲಾಗಿರುತ್ತದೆ. ಇವುಗಳಲ್ಲಿ ಅರ್ಧದಷ್ಟು ಪುರಸ್ಕಾರಗಳು ಪ್ರಾಥಮಿಕ ಶಿಕ್ಷಕರಿಗೂ, ಉಳಿದರ್ಧ ಪುರಸ್ಕಾರಗಳು ಸೆಕೆಂಡರಿ ಶಿಕ್ಷಕರಿಗೂ ಇರುತ್ತವೆ. ಆದರೆ ಸಣ್ಣ ಗಾತ್ರದ ಕೇಂದ್ರಾಡಳಿತ ಪ್ರದೇಶಗಳಿಗೆ ಈ ಎರಡೂ ವರ್ಗಗಳಲ್ಲಿ ತಲಾ ಒಂದು ಪುರಸ್ಕಾರವಿರುತ್ತದೆ. ಈ ಪುರಸ್ಕಾರಗಳಿಗೆ ಅರ್ಹರಾಗಲು ರಾಜ್ಯಮಟ್ಟದ ಆಯ್ಕೆ ಸಮಿತಿ ಅವರ ಅಭ್ಯರ್ಥಿಪತ್ರವನ್ನು ಪರಿಗಣಿಸುವ ದಿನದವರೆಗೆ 15ವರ್ಷಗಳ ನಿರಂತರ ಸೇವೆ ಸಲ್ಲಿಸಿರಬೇಕಾಗುತ್ತದೆ. ಪ್ರಾಂಶುಪಾಲರಿಗೆ ಮತ್ತು ಮುಖ್ಯೋಪಾಧ್ಯಾಯರಿಗೆ ಈ ಅರ್ಹತಾ ಅವಧಿ 20ವರ್ಷಗಳಾಗಿವೆ. ಆಯ್ಕೆಯನ್ನು ಶಿಕ್ಷಣ ನಿರ್ದೇಶಕರ (DPI) ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಆಯ್ಕೆ ಸಮಿತಿ ಮಾಡುತ್ತದೆ.

ಪ್ರತಿ ಅಭ್ಯರ್ಥಿಯ ಜೈವಿಕ ಮಾಹಿತಿಯನ್ನು (Bio-data) ಪರಿಶೀಲಿಸಿದ ನಂತರ ಸಂಪೂರ್ಣವಾಗಿ ಅರ್ಹತೆಯ ಆಧಾರದ ಮೇಲೆ ಅಂತಿಮ ಆಯ್ಕೆಯನ್ನು ಭಾರತ ಸರ್ಕಾರ ಮಾಡುತ್ತದೆ. ಪ್ರತಿಯೊಂದು ಪುರಸ್ಕಾರ ಒಂದು ಅರ್ಹತಾ ಪತ್ರ (Merit Certificate), ಒಂದು ಬೆಳ್ಳಿಯ ಪದಕ, ಒಂದು ಶಾಲು ಮತ್ತು ರೂ. 10,000/– ನಗದು ಬಹುಮಾನವನ್ನು ಒಳಗೊಂಡಿರುತ್ತದೆ. ಪುರಸ್ಕಾರಗಳನ್ನು ಪ್ರತಿವರ್ಷ ಸೆಪ್ಟೆಂಬರ್ 5ರಂದು ಅಂದರೆ ಶಿಕ್ಷಕರ ದಿನಾಚರಣೆಯಂದು ಪುರಸ್ಕೃತ ಶಿಕ್ಷಕರನ್ನು ಸನ್ಮಾನಿಸಲೆಂದೇ ನವದೆಹಲಿಯಲ್ಲಿ ಏರ್ಪಡಿಸುವ ಸಮಾರಂಭದಲ್ಲಿ ನೀಡಲಾಗುತ್ತದೆ.

**ವಿಶ್ವವಿದ್ಯಾನಿಲಯ ಮತ್ತು ಉನ್ನತ ಶಿಕ್ಷಣದಲ್ಲಿ ನವೀನ ಆಚರಣೆಗಳು:** ದೇಶದಲ್ಲಿನ 227 (ಟಿಪ್ಪಣಿ: ಇತ್ತೀಚೆಗೆ ಈ ಸಂಖ್ಯೆ ಹೆಚ್ಚಾಗಿರುವ ಸಾಧ್ಯತೆ ಇದೆ.) ವಿಶ್ವವಿದ್ಯಾನಿಲಯಗಳ ಮೂಲಕ ಉನ್ನತ ಶಿಕ್ಷಣವನ್ನು ನೀಡಲಾಗುತ್ತಿದೆ. ಇವುಗಳಲ್ಲಿ 16ಕೇಂದ್ರೀಯ ವಿಶ್ವವಿದ್ಯಾನಿಲಯಗಳಾಗಿವೆ ಮತ್ತು ಉಳಿದವುಗಳು ರಾಜ್ಯ ಕಾಯ್ದೆಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಡೀ ದೇಶದಲ್ಲಿ 11,089 ಕಾಲೇಜುಗಳಿವೆ. ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಕಾಯ್ದೆ (1956) ಅಡಿಯಲ್ಲಿ 40 ಸಂಸ್ಥೆಗಳನ್ನು ಪರಿಗಣಿತ (deemed) ವಿಶ್ವವಿದ್ಯಾನಿಲಯಗಳನ್ನಾಗಿ ಘೋಷಿಸಲಾಗಿದೆ. ರಾಷ್ಟ್ರೀಯ ಮಹತ್ವದ ಸಂಸ್ಥೆಗಳಲ್ಲಿಯೂ ವಿಶೇಷ ವೃತ್ತಿಪರ ಶಿಕ್ಷಣವನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಸಂಖ್ಯೆ (ವರ್ಷ 2000ದಲ್ಲಿದ್ದಂತೆ) 7,418 ಲಕ್ಷಗಳು ಮತ್ತು ಒಟ್ಟು ಅಧ್ಯಾಪಕರ ಸಂಖ್ಯೆ 3.42ಲಕ್ಷಗಳು.

ಸಾವಿರಾರು ವರ್ಷಗಳ ಹಿಂದೆಯೇ ಭಾರತದಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿತ್ತು ಎನ್ನುವುದು ಭಾರತಕ್ಕೆ ಹೆಮ್ಮೆಯ ವಿಷಯವಾಗಿದೆ. ಕಾಂಚಿಪುರಂ, ಕನೌಜ್, ಕಾಶಿ (ಕ್ರಿ.ಪೂ. 7ನೇಶತಮಾನ) ಮಿಥಿಲಾ, ನಾಡಿಯಾ, ತಕ್ಷಶಿಲಾ, ವಲ್ಲಭಿ ಮತ್ತು ವಿಕ್ರಮಶಿಲಾ ಇವು ಭಾರತದ ಪ್ರಾಚೀನ ವಿಶ್ವವಿದ್ಯಾನಿಲಯಗಳೆನಿಸಿವೆ. ಇವೆಲ್ಲವೂ ಸಾಮಾನ್ಯವಾಗಿ ಮೂರು ಪ್ರಮುಖ ಲಕ್ಷಣಗಳನ್ನು ಹೊಂದಿದ್ದವು. (ಎ) ಉಚಿತ ಶಿಕ್ಷಣ (ಬಿ) ಸ್ವಾಯತ್ತತೆಯ ಸ್ವರೂಪ ಮತ್ತು ರಾಜ್ಯ ನಿಯಂತ್ರಣದಿಂದ ಮುಕ್ತಿ (ಸಿ) ಬರ್ಮಾ (ಇಂದಿನ ಮಯನ್ಮಾರ್), ಸಿಲೋನ್ (ಇಂದಿನ ಶ್ರೀಲಂಕಾ), ಚೈನಾ, ಕೊರಿಯಾ ಮತ್ತು ಟಿಬೆಟ್ ದೇಶಗಳಿಂದ ವಿದ್ಯಾರ್ಥಿಗಳು ಇವುಗಳಲ್ಲಿ ಅಧ್ಯಯನ ಮಾಡಲು ಬರುತ್ತಿದುದುಂಟು.

ಸ್ವಾತಂತ್ರ್ಯದ ನಂತರ ನಮ್ಮ ಗಮನವನ್ನು ಸೆಳೆಯುವ ವಿಶ್ವವಿದ್ಯಾನಿಲಯ ಶಿಕ್ಷಣದ ಮೈಲಿಗಲ್ಲುಗಳೆಂದರೆ ಶಿಕ್ಷಣ ಆಯೋಗಗಳ ರಚನೆ ಮತ್ತು ಅವುಗಳ ಶಿಫಾರಸುಗಳ ಅನುಸಾರ ವಿವಿಧ ರೀತಿಯ ಕೋರ್ಸ್‌ಗಳನ್ನು ಆರಂಭಿಸಿದುದು ಮತ್ತು ವಿಶೇಷಜ್ಞತೆಗಳಿಗೆ ಹಾಗೂ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಗಮನ ನೀಡಿದ್ದು.

**ವಿಶ್ವವಿದ್ಯಾನಿಲಯ ಅನುದಾನ ಆಯೋಗ:** ಭಾರತ ಸರ್ಕಾರ ನವೆಂಬರ್ 1953ರಂದು ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆ, ಪರೀಕ್ಷೆಗಳು ಮತ್ತು ಸಂಶೋಧನೆಗಳ ಮಾನದಂಡಗಳನ್ನು ನಿರ್ಧರಿಸಲು ಮತ್ತು ಅವುಗಳನ್ನು ಉಳಿಸಿಕೊಂಡು ಹೋಗುವ ಉದ್ದೇಶದಿಂದ ವಿಶ್ವವಿದ್ಯಾನಿಲಯ ಅನುದಾನ ಆಯೋಗವನ್ನು (University Grants Commision-UGC) ಸ್ಥಾಪಿಸಿತು. ಪ್ರತಿಯೊಂದು ರಾಜ್ಯವೂ ಈಗ ತನ್ನದೇ ಆದ ರಾಜ್ಯ ವಿಶ್ವವಿದ್ಯಾನಿಲಯ ಆಯೋಗವನ್ನು ಸ್ಥಾಪಿಸಿದೆ.

Digitised by Bharatavani, CIIL

ತನ್ನ ಅಸ್ತಿತ್ವದ ಅಲ್ಪ ಕಾಲಾವಧಿಯಲ್ಲಿಯೇ ಅನೇಕ ನವೀನ ಆಚರಣೆಯ ಪ್ರಾಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಆರಂಭಿಸಿದೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

1) ಸ್ವಾಯತ್ತ ಕಾಲೇಜುಗಳು (Autonomous Colleges).

2) ಸ್ನಾತಕ–ಪೂರ್ವ ಕೋರ್ಸ್‌ಗಳನ್ನು ಪುನರ್ ವಿನ್ಯಾಸಗೊಳಿಸಿ ಅವುಗಳನ್ನು ಹೆಚ್ಚು ಪ್ರಸ್ತುತಗೊಳಿಸಿದ್ದು, ಮತ್ತು ಅವುಗಳನ್ನು ಕೆಲಸಕ್ಕೆ/ಕ್ಷೇತ್ರಕ್ಕೆ/ಪ್ರಾಯೋಗಿಕ ಅನುಭವಕ್ಕೆ ಮತ್ತು ಉತ್ಪಾದಕತೆಗೆ ಸಂಬಂಧಿಸುವಂತೆ ಮಾಡಿದುದು.

3) ಸದ್ಯ ಇರುವ ವಿಶ್ವವಿದ್ಯಾನಿಲಯಗಳ ವಿಭಾಗಗಳನ್ನು ಮತ್ತು ಕಾಲೇಜುಗಳನ್ನು ದೃಢಗೊಳಿಸಿ, ಅವುಗಳ ಸೌಲಭ್ಯಗಳನ್ನು ಹೆಚ್ಚಿಸಿದ್ದು.

4) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ 93 ವಿಶ್ವವಿದ್ಯಾನಿಲಯಗಳಿಗೆ ಕಂಪ್ಯೂಟರ್ ಸೌಲಭ್ಯವನ್ನು ಮತ್ತು 200 ಕಾಲೇಜುಗಳಿಗೆ ಮಿನಿ–ಕಂಪ್ಯೂಟರ್‌ಗಳನ್ನು ಒದಗಿಸಿದ್ದು. ಹೊಸದಾಗಿ ನೇಮಕಗೊಂಡ ವಿಶ್ವವಿದ್ಯಾನಿಲಯಗಳ ಮತ್ತು ಕಾಲೇಜುಗಳ ಉಪನ್ಯಾಸಕರುಗಳಿಗೆ ದಿಶಾ–ನಿರ್ದೇಶನ ಮಾಡಲು ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳನ್ನು (Academic Staff Colleges) ಆರಂಭಿಸಿದ್ದು.

ಸಂಶೋಧನೆಗೆ ಪ್ರೋತ್ಸಾಹ ನೀಡಲು ಉಪನ್ಯಾಸಕರಿಗೆ ವ್ಯಕ್ತಿಗತವಾಗಿ ಮತ್ತು ಕಾಲೇಜುಗಳಿಗೆ ವಿಶೇಷ ಸಹಾಯ ನೀಡುದುದು.

5) ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿನ (JNU) ನ್ಯೂಕ್ಲಿಯರ್ ಸೈನ್ಸ್‌ಸೆಂಟರ್ ಪೂನಾ ವಿಶ್ವವಿದ್ಯಾನಿಲಯದಲ್ಲಿನ ರೇಡಿಯೋ ಅಸ್ಟ್ರಾನಮಿ ಸೆಂಟರ್, ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿನ ನ್ಯಾಷನಲ್ ಸೆಂಟರ್ ಆಫ್ ಅಸ್ಟ್ರಾನಮಿ ಮುಂತಾದ ದಾಖಲು ಕೇಂದ್ರಗಳನ್ನು ಸ್ಥಾಪಿಸಿದುದು.

6) ಮಾಧ್ಯಮ ಮತ್ತು ಶೈಕ್ಷಣಿಕ ತಂತ್ರಜ್ಞಾನದ ಸೌಲಭ್ಯಗಳನ್ನು ಒದಗಿಸಿದ್ದು.

7) 92 ವಿಶ್ವವಿದ್ಯಾನಿಲಯಗಳಲ್ಲಿ ಮತ್ತು 2121 ಕಾಲೇಜುಗಳಲ್ಲಿ ವಯಸ್ಕರ ಶಿಕ್ಷಣ ಮುಂದುವರಿದ ಶಿಕ್ಷಣ ಮತ್ತು ವಿಸ್ತರಣ ಕಾರ್ಯಕ್ರಮಗಳನ್ನು ಆರಂಭಿಸಿದ್ದು.

8) ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟುಗಳಿಗೆ ಸೌಲಭ್ಯಗಳನ್ನು ಒದಗಿಸಿದುದು.

9) ಕಾಲೇಜು ಶಿಕ್ಷಕರ ದ್ವಿಪಕ್ಷೀಯ ವಿನಿಮಯ ಕಾರ್ಯಕ್ರಮ.

10) ಮಹಿಳಾ ಅಧ್ಯಯನ ಕ್ಷೇತ್ರದಲ್ಲಿ ಚೆನ್ನಾಗಿ ವಿನ್ಯಾಸಗೊಳಿಸಿದ ಪ್ರಾಯೋಜನೆಗಳನ್ನು ಕೈಗೊಳ್ಳಲು ವಿಶ್ವವಿದ್ಯಾನಿಲಯಗಳಿಗೆ ವಿಶೇಷ ಸಹಾಯ ನೀಡಿಕೆ.

11) ಆಯ್ಕೆ ಮಾಡಿದ ಕೆಲವು ವಿಶ್ವವಿದ್ಯಾನಿಲಯ ವಿಭಾಗಗಳನ್ನು ಮುಂದುವರಿದ ಅಧ್ಯಯನ ಕೇಂದ್ರಗಳಾಗಿ (Centres of Advanced Studies) ಗುರ್ತಿಸಿದ್ದು.

**ಗ್ರಾಮೀಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳು:**

1954ರಲ್ಲಿ ನೇಮಿಸಿದ್ದ ಗ್ರಾಮೀಣ ಉನ್ನತ ಶಿಕ್ಷಣ ಸಮಿತಿಯ ಶಿಫಾರಸಿನ ಪ್ರಕಾರ ಭಾರತ ಸರ್ಕಾರ ಗ್ರಾಮೀಣ ಸಂಸ್ಥೆಗಳನ್ನು ಮತ್ತು ಗ್ರಾಮೀಣ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವ ನವೀನ ಆಚರಣೆಯ ಕಾರ್ಯಕ್ರಮವನ್ನು ರೂಪಿಸಿತು. ಈ ಕಾರ್ಯಕ್ರಮದಡಿಯಲ್ಲಿ ಸಾಮಾಜಿಕವಾಗಿ ಉಪಯುಕ್ತವಾದ ಉತ್ಪಾದಕವಾದ ಕಾರ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳ ನಡುವೆ ಸಂಬಂಧ ಕಲ್ಪಿಸುವ ವಿಚಾರದಿಂದ 14 ಸಂಸ್ಥೆಗಳನ್ನು ಗ್ರಾಮೀಣ ಸಂಸ್ಥೆಗಳಾಗಿ ವಿಕಾಸಗೊಳಿಸಲು ಆಯ್ಕೆ ಮಾಡಿಕೊಳ್ಳಲಾಯಿತು.

**ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತವಿಶ್ವವಿದ್ಯಾನಿಲಯ:** ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತವಿಶ್ವವಿದ್ಯಾನಿಲಯವನ್ನು (Indira Gandhi National Open University-IGNOU) ಸೆಪ್ಟೆಂಬರ್ 1985ರಲ್ಲಿ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಮುಕ್ತ ವಿಶ್ವವಿದ್ಯಾನಿಲಯ ಮತ್ತು ದೂರಶಿಕ್ಷಣವನ್ನು ಆರಂಭಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ ಸಂಸತ್ತಿನ ಕಾಯ್ದೆ ಪ್ರಕಾರ ಸ್ಥಾಪಿಸಲಾಯಿತು. ಜನಸಂಖ್ಯೆಯ ಹೆಚ್ಚಿನ ಭಾಗಗಳಿಗೆ ಮುಖ್ಯವಾಗಿ ಅನನುಕೂಲಿತ ಗುಂಪುಗಳಿಗೆ ಅವಕಾಶ ಕಲ್ಪಿಸುವುದರ ಮೂಲಕ ಉನ್ನತ ಶಿಕ್ಷಣಕ್ಕೆ ಪ್ರವೇಶಾವಕಾಶವನ್ನು ವಿಸ್ತೃತಗೊಳಿಸುವುದು. ಮುಂದುವರಿದ ಶಿಕ್ಷಣ ಕಾರ್ಯಕ್ರಮಗಳನ್ನು ಸಂಘಟಿಸುವುದು ಮತ್ತು ಮಹಿಳೆಯರು ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುವವರು ಪರ್ವತೀಯ ಪ್ರದೇಶಗಳಲ್ಲಿ ವಾಸಿಸುವವರು ಮುಂತಾದ ನಿರ್ದಿಷ್ಟ ಲಕ್ಷ್ಯ ಕೇಂದ್ರಿತ ಸಮೂಹಗಳಿಗೆ ವಿಶೇಷ ಕಾರ್ಯಕ್ರಮಗಳನ್ನು ಆರಂಭಿಸುವುದು ಇವು ಈ ವಿಶ್ವವಿದ್ಯಾನಿಲಯದ ಪ್ರಮುಖ ಉದ್ದೇಶಗಳಾಗಿದ್ದವು.

ಬೋಧನಾ ವಿಧಾನಗಳು ಮತ್ತು ಕಲಿಕೆಯ ಗತಿ, ಕೋರ್ಸ್‌ಗಳ ಸಂಯೋಜನೆ, ಪ್ರವೇಶಾರ್ಹತೆಗಳು, ಪ್ರವೇಶದ ವಯಸ್ಸು, ಮೌಲ್ಯಮಾಪನ ಕ್ರಮ ಮುಂತಾದವುಗಳಲ್ಲಿ ನಮ್ಯತೆ ಮತ್ತು ಮುಕ್ತತೆಯುಳ್ಳ ನವೀನ ಆಚರಣೆಯ ವಿಶ್ವವಿದ್ಯಾನಿಲಯ ಮಟ್ಟದ ಶಿಕ್ಷಣ ವ್ಯವಸ್ಥೆಯನ್ನು IGNOU ಒದಗಿಸುತ್ತದೆ.

ಈ ವಿಶ್ವವಿದ್ಯಾನಿಲಯ ಮುದ್ರಿತ ಸಾಮಗ್ರಿಗಳು ಮತ್ತು ಶ್ರವ್ಯ ದೃಶ್ಯ ಸಾಮಗ್ರಿಗಳು, ದೇಶದಾದ್ಯಂತ ಹರಡಿರುವ ತನ್ನ ಅಧ್ಯಯನ ಕೇಂದ್ರಗಳಲ್ಲಿ ಸಮಾಲೋಚನೆ ಪತ್ರಗಳನ್ನು ಒಳಗೊಂಡ ಸಮಗ್ರ ಬಹುಮಾಧ್ಯಮ ಬೋಧನಾ ತಂತ್ರವನ್ನು ಅಳವಡಿಸಿಕೊಂಡಿದೆ.

**ಸಾಂಸ್ಥಿಕ ಸ್ವಾಯತ್ತತೆ: ಸ್ವಾಯತ್ತ ಕಾಲೇಜುಗಳು** (Autonomous colleges): ಬೆಳವಣಿಗೆಯತ್ತ ಮುಂದುವರಿಯಲು ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಸ್ವಾಯತ್ತತೆಯ ಸ್ಥಿತಿ ಇರಬೇಕಾಗುತ್ತದೆ. ಸಾಂಸ್ಥಿಕ ಸನ್ನಿವೇಶದಲ್ಲಿ ಉದಾಹರಣೆಗಾಗಿ, ಒಂದು ಕಾಲೇಜು

Digitised by Bharatavani, CIIL

ಸ್ವಾಯತ್ತತೆಗಾಗಿ ಪ್ರಯತ್ನಿಸುತ್ತದೆ. ಸಾಮಾನ್ಯವಾಗಿ ಭಾರತದಲ್ಲಿ ಕಾಲೇಜುಗಳು ವಿಶ್ವವಿದ್ಯಾನಿಲಯಗಳಿಂದ ಅಂಗೀಕೃತವಾಗಿರುತ್ತವೆ. ಪಠ್ಯಕ್ರಮ ಯೋಜನೆ, ಪರೀಕ್ಷೆ ನಡೆಸುವುದು ಮತ್ತು ಕಾಲೇಜಿನ ಬಹುತೇಕ ಅಂಶಗಳು ಮತ್ತು ಪದವಿ ಪ್ರದಾನ ಮಾಡುವುದು. ಈ ಎಲ್ಲವೂ ವಿಶ್ವವಿದ್ಯಾನಿಲಯದಿಂದಲೇ ಮಾಡಲ್ಪಡುತ್ತದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ಅಂಗೀಕೃತ ಕಾಲೇಜು ವಿಶ್ವವಿದ್ಯಾನಿಲಯದ ನಿಬಂಧನೆಗಳನ್ನು ಒಪ್ಪಿಕೊಂಡು ಅದರಂತೆ ನಡೆಯುತ್ತದೆ. ವಿಶ್ವವಿದ್ಯಾನಿಲಯಗಳು ಕಾಲೇಜುಗಳನ್ನು ಅಂಗೀಕರಿಸುವ ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಸಂಖ್ಯೆ ಕಡಿಮೆಯಿದ್ದಾಗ ರೂಪಿಸಲಾಗಿತ್ತು. ವಿಶ್ವವಿದ್ಯಾನಿಲಯಗಳು ಪರೀಕ್ಷೆ ನಡೆಸುವ ಮತ್ತು ಕಾಲೇಜುಗಳ ಪರವಾಗಿ ಪದವಿ ಪ್ರದಾನ ಮಾಡುವ ಸಂಸ್ಥೆಗಳಾಗಿದ್ದವು. ಸ್ವಾತಂತ್ರ್ಯ ನಂತರ ವಿಶ್ವವಿದ್ಯಾನಿಲಯಗಳ, ಕಾಲೇಜುಗಳ ಮತ್ತು ಇತರ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಅನೇಕ ಪಟ್ಟು ಹೆಚ್ಚಾಗಿದೆ. ಜ್ಞಾನದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಬದ್ಧವಾಗಿರಬೇಕಾಗಿರುವ ವಿಶ್ವವಿದ್ಯಾನಿಲಯಗಳು ಅಂಗೀಕೃತ ಕಾಲೇಜುಗಳಿಗೆ ಸಂಬಂಧಿಸಿದ ಅನೇಕ ಚಟುವಟಿಕೆಗಳಿಗಾಗಿ ತಮ್ಮ ಬಹಳಷ್ಟು ಕಾಲ ಮತ್ತು ಶಕ್ತಿಯನ್ನು ವಿನಿಯೋಗಿಸಬೇಕಾದ ಒತ್ತಡಕ್ಕೆ ಒಳಗಾಗಬೇಕಾಗಿ ಬಂದದ್ದರಿಂದ ಬೋಧನೆ ಮತ್ತು ಸಂಶೋಧನೆಗಳಂಥ ಶೈಕ್ಷಣಿಕ ಕಾರ್ಯಗಳಿಗೆ ವಿಶ್ವವಿದ್ಯಾನಿಲಯಗಳು ಬಹಳ ಸ್ವಲ್ಪ ಸಮಯ ನೀಡಬೇಕಾಗಿ ಬಂತು. ಆದ್ದರಿಂದ ಸ್ವಾಯತ್ತ ಕಾಲೇಜುಗಳ ವಿಚಾರ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಒಂದು ನವೀನ ಆಚರಣೆಯ ವಿಚಾರವಾಯಿತು. ವಿದ್ವತ್ತು ಮತ್ತು ಉತ್ಕೃಷ್ಟತೆಯನ್ನು ಸಾಧಿಸಲು ಅನುಕೂಲಕರವಾದ ಬೌದ್ಧಿಕ ವಾತಾವರಣದ ಪ್ರೋತ್ಸಾಹಕ್ಕೆ ಮತ್ತು ವಿಕಾಸಕ್ಕೆ ಶೈಕ್ಷಣಿಕ ಸ್ವಾತಂತ್ರ್ಯದ ಉಪಯೋಗ ಬಹಳ ನಿರ್ಣಾಯಕವಾದ ಅಂಶವಾಗಿದೆ ಎಂದು ಕೊಠಾರಿ ಶಿಕ್ಷಣ ಆಯೋಗ (1964–65) ಪರಿಗಣಿಸಿತ್ತು. ಸ್ವಾಯತ್ತ ಕಾಲೇಜುಗಳಿಗಾಗಿ ಮಾಡಿದ ಶಿಫಾರಸಿಗೆ ಸಂಬಂಧಿಸಿದಂತೆ ಕೊಠಾರಿ ಶಿಕ್ಷಣ ಆಯೋಗ ಹೀಗೆ ಹೇಳಿದೆ.

"ಬಹಳ ದಿನಗಳಿಂದ ಚರ್ಚೆಗೆ ಒಳಪಟ್ಟಿರುವ ಸ್ವಾಯತ್ತ ಕಾಲೇಜುಗಳ ಪ್ರಶ್ನೆಯ ಬಗ್ಗೆ ನಾವು ಚಿಂತಿಸಲು ಇಷ್ಟಪಡುತ್ತೇನೆ". ತಾನೇ ಸ್ವತಃ ಗಣನೀಯವಾಗಿ ಉತ್ತಮಗೊಳ್ಳುವ ಸಾಮರ್ಥ್ಯವನ್ನು ಹೊಂದಿದ ಒಂದು ಶ್ರೇಷ್ಠ ಕಾಲೇಜು ಇದ್ದರೆ, ದೊಡ್ಡ ವಿಶ್ವವಿದ್ಯಾನಿಲಯ ಒಂದರಲ್ಲಿ ತುಂಬಾ ಒಳ್ಳೆಮಟ್ಟದ ಕಾಲೇಜುಗಳ ಸಮೂಹವಿದ್ದರೆ, ಅಂಥ ಸಂಸ್ಥೆಗೆ (ಕಾಲೇಜಿಗೆ) ಸ್ವಾಯತ್ತತೆಯ ಸ್ಥಾನಮಾನ ನೀಡಲು ಪರಿಗಣಿಸಬೇಕು. ಈ ಸ್ಥಾನಮಾನ ತನ್ನದೇ ಆದ ಪ್ರವೇಶಾರ್ಹತೆಗಳನ್ನು ರೂಪಿಸಿಕೊಳ್ಳುವ, ಅಧ್ಯಯನ ವಿಷಯಗಳನ್ನು ನಿಗದಿಪಡಿಸುವ ಪರೀಕ್ಷೆಗಳನ್ನು ನಡೆಸುವ ಮತ್ತು ಇನ್ನೂ ಮುಂತಾದವುಗಳ ಅಧಿಕಾರವನ್ನು ಒಳಗೊಳ್ಳುತ್ತದೆ. ಪಿತೃ ವಿಶ್ವವಿದ್ಯಾನಿಲಯದ ಪಾತ್ರ ಅಂಥ ಕಾಲೇಜಿನ ಮೇಲ್ವಿಚಾರಣೆಗೆ ಮತ್ತು ವಾಸ್ತವಿಕ ಪದವಿ ಪ್ರದಾನಕ್ಕೆ ಸೀಮಿತವಾಗಿರುತ್ತದೆ. ತಮ್ಮ ಸಂವಿಧಾನದಲ್ಲಿ ಇಂಥ ಸ್ವಾಯತ್ತ ಕಾಲೇಜುಗಳನ್ನು ಗುರ್ತಿಸುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ನಾವು ಶಿಫಾರಸ್ಸು ಮಾಡುತ್ತೇವೆ.

ಮೇಲೆ ಹೇಳಿದ ಮಾರ್ಗದರ್ಶನ ಸೂಚಿಗಳಂತೆ ಸ್ವಾಯತ್ತತೆಯನ್ನು ಪಡೆಯುವ ಕಾಲೇಜು ನವೀನ ಆಚರಣೆಗಳನ್ನು ಆರಂಭಿಸುವ ಪಠ್ಯಕ್ರಮವನ್ನು ವಿನ್ಯಾಸಗೊಳಿಸುವ, ಬೋಧನೆ–ಕಲಿಕೆಯ ವಿಧಾನಗಳನ್ನು ವಿಕಾಸಗೊಳಿಸುವ, ತನ್ನದೇ ಆದ ಪ್ರವೇಶಾರ್ಹತೆಗಳನ್ನು ರೂಪಿಸಿಕೊಳ್ಳುವ, ತನ್ನದೇ ಆದ ಅಧ್ಯಯನ ಕೋರ್ಸ್‌ಗಳನ್ನು ನಿಗದಿಪಡಿಸುವ ಮತ್ತು ಪರೀಕ್ಷೆಯನ್ನು ನಡೆಸುವ ಕಾರ್ಯಗಳಲ್ಲಿ ತನ್ನ ಸಾಮರ್ಥ್ಯವನ್ನು ತೋರಿಸಬೇಕಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ (1986) ಉನ್ನತ ಶಿಕ್ಷಣದ ಪ್ರಗತಿಯ ದಿಶೆಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಸ್ವಾಯತ್ತತೆಯನ್ನು ಪಡೆಯುವ ಸಂಸ್ಥೆ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನವೀನ ಆಚರಣೆಗಳನ್ನು ಕೈಗೊಳ್ಳುವ ತಮ್ಮ ಸೃಜನಾತ್ಮಕ ಪ್ರತಿಭೆಗಳನ್ನು ಉಪಯೋಗಿಸಿಕೊಳ್ಳುವ ಬೋಧನೆ, ಪರೀಕ್ಷೆ ಮತ್ತು ಸಂಶೋಧನೆಗಳನ್ನು ಉತ್ತಮಪಡಿಸಲು ಮತ್ತು ಸಾಮಾಜಿಕ ಅಗತ್ಯಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸಲು ಅವಕಾಶಗಳನ್ನು ಒದಗಿಸುವ ಗುರಿಯನ್ನು ಹೊಂದಿರಬೇಕು.

UGCಯ ಮಾರ್ಗದರ್ಶನ ಸೂಚಿಗಳ ಪ್ರಕಾರ ಒಂದು ಸ್ವಾಯತ್ತ ಕಾಲೇಜು ಈ ಕೆಳಗಿನವುಗಳಿಗೆ ಸ್ವಾತಂತ್ರ್ಯ ಹೊಂದಿರುತ್ತವೆ.

(ಎ) ಅಧ್ಯಯನ ಕೋರ್ಸ್‌ಗಳನ್ನು ಮತ್ತು ಪಠ್ಯವಸ್ತು (Syllabus) ವನ್ನು ನಿರ್ಧರಿಸುವುದು.

(ಬಿ) ಪ್ರವೇಶದ ನಿಯಮಗಳನ್ನು ನಿಗದಿಪಡಿಸುವುದು.

(ಸಿ) ಮೌಲ್ಯಮಾಪನ ವಿಧಾನವನ್ನು ವಿಕಾಸಗೊಳಿಸುವುದು ಮತ್ತು ಪರೀಕ್ಷೆಗಳನ್ನು ನಡೆಸುವುದು.

ಭವಿಷ್ಯದಲ್ಲಿ ಉನ್ನತ ಮಟ್ಟಗಳನ್ನು ಸಾಧಿಸಲು ಮತ್ತು ಹೆಚ್ಚಿನ ಸೃಜನಶೀಲತೆಯ ಅಭಿವ್ಯಕ್ತಿಗೆ ಸ್ವಾಯತ್ತತೆ ಒಂದು ಸಾಧನವಾಗುತ್ತದೆ. ಆದರೆ ಸ್ವಾಯತ್ತತೆಯನ್ನು ಹಿಂದೆ ಮಾಡಿದ ಒಳ್ಳೆಯ ಸಾಧನೆಗೆ ಸಂದ ಬಹುಮಾನ ಎಂದು ಪರಿಗಣಿಸುವುದಕ್ಕಿಂತ ಭವಿಷ್ಯದಲ್ಲಿ ಹೆಚ್ಚಿನ ಮಟ್ಟಗಳನ್ನು ಸಾಧಿಸುವುದಕ್ಕೆ ಮತ್ತು ಹೆಚ್ಚಿನ ಸೃಜನಶೀಲತೆಯ ಅಭಿವ್ಯಕ್ತಿಗೆ ಸಾಧನವೆಂದು ಪರಿಗಣಿಸಬೇಕು.

**ಸ್ವಾಯತ್ತ ಸಂಶೋಧನ ಸಂಘಟನೆಗಳು:** ದೇಶದಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸಲು ಕೆಲವು ಸ್ವಾಯತ್ತ ಸಂಶೋಧನೆ ಸಂಘಟನೆಗಳ ಸ್ಥಾಪನೆ ಮತ್ತೊಂದು ನವೀನ ಆಚರಣೆ ಕ್ರಮವಾಗಿದೆ.

ನವದೆಹಲಿಯಲ್ಲಿರುವ 1972ರಲ್ಲಿ ಸ್ಥಾಪಿತವಾದ ಭಾರತೀಯ ಐತಿಹಾಸಿಕ ಸಂಶೋಧನೆ ಪರಿಷತ್ತು (Indian Council of Historical Research-ICHR) ಐತಿಹಾಸಿಕ ಸಂಶೋಧನೆಯ ಪ್ರಗತಿಯನ್ನು ಪುನರಾವಲೋಕಿಸುತ್ತದೆ ಮತ್ತು ವೈಜ್ಞಾನಿಕ ರೀತಿಯಲ್ಲಿ ಇತಿಹಾಸದ ಬರವಣಿಗೆಯನ್ನು ಪ್ರೋತ್ಸಾಹಿಸುತ್ತದೆ. ಇದು ತಾನೇ ಪ್ರಾಯೋಜನೆಗಳನ್ನು ಕೈಗೊಳ್ಳುತ್ತದೆ. ವಿದ್ವಾಂಸರಿಗೆ ವ್ಯಕ್ತಿಗತವಾಗಿ ಕೈಗೊಳ್ಳುವ ಸಂಶೋಧನ ಪ್ರಾಯೋಜನೆಗಳಿಗೆ ಧನಸಹಾಯ ನೀಡುತ್ತದೆ. ಫೆಲೋಶಿಪ್‌ಗಳನ್ನು ನೀಡುತ್ತದೆ ಮತ್ತು ಪ್ರಕಟಣೆ ಮತ್ತು ಅನುವಾದ ಕಾರ್ಯಗಳನ್ನು ಮಾಡುತ್ತದೆ.

Digitised by Bharatavani, CIIL

ಭಾರತೀಯ ತತ್ವಶಾಸ್ತ್ರ ಸಂಶೋಧನ ಪರಿಷತ್ತು (Indian Council of Philosophical Research-ICPR) 1981ರಲ್ಲಿ ಸ್ಥಾಪಿತವಾಗಿ, ನವದೆಹಲಿ ಮತ್ತು ಲಕ್ನೋದಲ್ಲಿರುವ ತನ್ನ ಕಾರ್ಯಾಲಯಗಳ ಮೂಲಕ ತತ್ವಶಾಸ್ತ್ರ ಮತ್ತು ಅದಕ್ಕೆ ಸಂಬಂಧಿಸಿದ ಶಾಸ್ತ್ರ (Displines)ಗಳಲ್ಲಿ ಸಂಶೋಧನೆಯ ಪ್ರಗತಿಯನ್ನು ಪುನರವಲೋಕಿಸುತ್ತದೆ. ಪ್ರಾಯೋಜನೆಗಳನ್ನು ಪ್ರಾಯೋಜಿತಗೊಳಿಸುತ್ತದೆ ಅಥವಾ ಪ್ರಾಯೋಜನೆಗಳಿಗೆ ಸಹಾಯ ನೀಡುತ್ತದೆ ಮತ್ತು ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಸಂಶೋಧನೆ ಕೈಗೊಳ್ಳಲು ಸಹಾಯ ನೀಡುತ್ತದೆ.

ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನ ಪರಿಷತ್ತು (Indian Council of Social Science Research-ICSSR) ಸಾಮಾಜಿಕ ವಿಜ್ಞಾನಗಳಲ್ಲಿನ ಸಂಶೋಧನೆಯನ್ನು ಪ್ರೋತ್ಸಾಹಿಸುವ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ಸಾಮಾಜಿಕ ವಿಜ್ಞಾನಗಳ ಸಂಶೋಧನೆಯನ್ನು ಪುನರಾವಲೋಕನ ಮಾಡುವುದು, ಸರ್ಕಾರಕ್ಕೆ ಅಥವಾ ಹೊರಗಿನ ಸಂಸ್ಥೆಗಳಿಗೆ ಸಂಶೋಧನ ಚಟುವಟಿಕೆಗಳ ಬಗ್ಗೆ ಸಲಹೆ ನೀಡುವುದು, ಸಂಶೋಧನ ಕಾರ್ಯಕ್ರಮಗಳನ್ನು ಪ್ರಾಯೋಜನೆ ಮಾಡುವುದು ಮತ್ತು ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ಸಾಮಾಜಿಕ ವಿಜ್ಞಾನದಲ್ಲಿ ಸಂಶೋಧನೆಗೆ ಧನಸಹಾಯ (ಗ್ರಾಂಟ್) ನೀಡುವುದು ಈ ಸಂಘಟನೆಯ ಕಾರ್ಯಗಳಾಗಿವೆ.

**ತಾಂತ್ರಿಕ ಶಿಕ್ಷಣದಲ್ಲಿ ನವೀನ ಆಚರಣೆಗಳು:** ಉತ್ಪಾದನೆಗಳಿಗೆ ಮತ್ತು ಸೇವೆಗಳಿಗೆ ಮೌಲ್ಯವನ್ನು ನೀಡುವ ಮತ್ತು ರಾಷ್ಟ್ರೀಯ ಆರ್ಥಿಕತೆಗೆ ಕೊಡುಗೆ ನೀಡುವ ಹೆಚ್ಚಿನ ಸತ್ವವುಳ್ಳ ತಾಂತ್ರಿಕ ಶಿಕ್ಷಣ ಮಾನವ ಸಂಪನ್ಮೂಲ ವಿಕಾಸದ ನಿರ್ಣಾಯಕ ಭಾಗವಾಗಿದೆ. ಪಂಚವಾರ್ಷಿಕ ಯೋಜನೆಗಳು ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿವೆ. ಕಳೆದ ಐದು ದಶಕಗಳಲ್ಲಿ ದೇಶದಲ್ಲಿ ತಾಂತ್ರಿಕ ಶಿಕ್ಷಣದ ಕ್ಷೇತ್ರದಲ್ಲಿ ಅದ್ಭುತ ವಿಸ್ತರಣೆಯಾಗಿದೆ. ಸರ್ಕಾರಿ ವಲಯವೇ ಅಲ್ಲದೆ, ಖಾಸಗಿ ಮತ್ತು ಸ್ವೆಚ್ಛಿಕ ಸಂಘಟನೆಗಳು ತಾಂತ್ರಿಕ ಶಿಕ್ಷಣದ ವಿಸ್ತರಣೆಯಲ್ಲಿ ತಾಂತ್ರಿಕ ಮತ್ತು ನಿರ್ವಹಣ ಸಂಸ್ಥೆಗಳನ್ನು ಸ್ಥಾಪಿಸುವುದರಲ್ಲಿ ಸೇರಿಕೊಂಡಿದೆ. ಸ್ವಾತಂತ್ರ್ಯ ಬಂದ ಸಮಯದಲ್ಲಿ 3,400 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದ 45 ಡಿಪ್ಲೊಮಾ ಹಂತದ ಪಾಲಿಟೆಕ್ನಿಕ್ ಸಂಸ್ಥೆಗಳ ಸಂಖ್ಯೆ ಜೂನ್ 2000 ವರ್ಷದ ವೇಳೆಗೆ 2.12 ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುವ ಪಾಲಿಟೆಕ್ನಿಕ್‌ಗಳ ಸಂಖ್ಯೆ 778ಕ್ಕೆ ಏರಿತ್ತು.

ಇದೇ ರೀತಿ 1947ರಲ್ಲಿ ಇದ್ದ ಡಿಗ್ರಿ ಮಟ್ಟದ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳು ಕ್ರಮವಾಗಿ 38 ಮತ್ತು 2940ರಿಂದ 2000ದ ವೇಳೆಗೆ ಕ್ರಮವಾಗಿ 778 ಮತ್ತು 1.8ಲಕ್ಷಕ್ಕೆ ಏರಿದ್ದವು. ಅನೇಕ ತಾಂತ್ರಿಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಇಂಜಿನಿಯರಿಂಗ್, ತಂತ್ರಜ್ಞಾನ ಮತ್ತು ಅನ್ವಯಿಕ ವಿಜ್ಞಾನಗಳಲ್ಲಿ ಪಿ.ಹೆಚ್.ಡಿ ಅಧ್ಯಯನಗಳಿಗೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

**ಭಾರತೀಯ ತಂತ್ರಜ್ಞಾನ ಸಂಸ್ಥೆಗಳು ಮತ್ತು ಭಾರತೀಯ ನಿರ್ವಹಣಾ ಸಂಸ್ಥೆಗಳು:** ತಾಂತ್ರಿಕ ಶಿಕ್ಷಣ ಮತ್ತು ನಿರ್ವಹಣಾ ಶಿಕ್ಷಣದ (Management Education) ಗುಣಾತ್ಮಕ ವಿಕಾಸದ ದಿಶೆಯಲ್ಲಿ ಒಂದು ನವೀನ ಆಚರಣೆಯ ಹೆಜ್ಜೆಯಾಗಿ ಭಾರತ ಸರ್ಕಾರ ಭಾರತೀಯ ತಂತ್ರಜ್ಞಾನ ಸಂಸ್ಥೆಗಳನ್ನು (Indian Institutes of Technology-IIT's) ಮತ್ತು ಭಾರತೀಯ ನಿರ್ವಹಣಾ ಸಂಸ್ಥೆಗಳನ್ನು (Indian Institutes of Management-IIM's) ಸ್ಥಾಪಿಸಿತು. ಇವು ಮುಂಬೈ, ದೆಹಲಿ, ಕಾನ್‌ಪುರ, ಖರಗ್‌ಪುರ, ಚೆನ್ನೈ, ಗೌಹಾತಿ ಮತ್ತು ರೂರ್ಕಿ ಈ ಸ್ಥಳದಲ್ಲಿರುವ 7 Indian Institutes of Technology-IIT's ಮತ್ತು ಅಹಮದಾಬಾದ್, ಕೊಲ್ಕತ್ತ, ಬೆಂಗಳೂರು, ಲಕ್ನೋ, ಇಂದೋರ್ ಮತ್ತು ಕೊಶಿಕ್ಕೋಡು – ಈ ಸ್ಥಳಗಳಲ್ಲಿರುವ 6 IITಗಳನ್ನು ಒಳಗೊಳ್ಳುತ್ತವೆ.

**ವಿಶೇಷ ಸಂಸ್ಥೆಗಳು:** ದೇಶದಲ್ಲಿ ಭಾರತೀಯ ವಿಜ್ಞಾನಸಂಸ್ಥೆ (IISc), ಬೆಂಗಳೂರು, ನವದೆಹಲಿಯಲ್ಲಿರುವ ಯೋಜನೆ ಮತ್ತು ಕಟ್ಟಡ ನಿರ್ಮಾಣ ಶಾಲೆ (School of Planning and Architecture-SPA) ನವದೆಹಲಿ, ಭಾರತೀಯ ಗಣಿಗಳ ಶಾಲೆ (Indian School of Mines-ISM), ಕೈಗಾರಿಕೆ, ಇಂಜಿನಿಯರಿಂಗ್ ತರಬೇತಿ ಸಂಸ್ಥೆ (Indian Institute for Training in Indurstrial Engineering-NITIE), ಮುಂಬೈಯ ರಾಂಚಿಯಲ್ಲಿರುವ ರಾಷ್ಟ್ರೀಯ ಫೌಂಡ್ರಿ ಮತ್ತು ಪೋಜ್ ತಂತ್ರಜ್ಞಾನ ಸಂಸ್ಥೆ (National Institute of Found Forge Technology-NIFFT), ಭಾರತೀಯ ಮಾಹಿತಿ ತಂತ್ರಜ್ಞಾನ ಮತ್ತು ನಿರ್ವಹಣ ಸಂಸ್ಥೆ, ಗ್ವಾಲಿಯರ್ (Indian Institute of Information Technology and Management-IIIMT) ಮತ್ತು ಅಲಹಾಬಾದಿನ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (Indian Institute of Information Technology-IIIT) ಯಂತಹ ಕೆಲವು ವಿಶೇಷ ತಾಂತ್ರಿಕ ಸಂಸ್ಥೆಗಳು ದೇಶದಲ್ಲಿವೆ. ಈ ಎಲ್ಲಾ ಸಂಸ್ಥೆಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿಶೇಷ ಶಿಕ್ಷಣವನ್ನು ನೀಡುವುದರಿಂದ ತಾಂತ್ರಿಕ ಶಿಕ್ಷಣಕ್ಷೇತ್ರದಲ್ಲಿ ಇವು ನವೀನ ಆಚರಣೆಗಳೆನ್ನಿಸಿವೆ.

**ವಯಸ್ಕರ ಶಿಕ್ಷಣದಲ್ಲಿ ನವೀನ ಆಚರಣೆಗಳು:** ಭಾರತ ಸ್ವಾತಂತ್ರ್ಯ ಪಡೆದಾಗಿನಿಂದಲೂ ತನ್ನ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇದೆ. ಈ ದಿಶೆಯಲ್ಲಿ ಅನೇಕ ವಯಸ್ಕರ ಶಿಕ್ಷಣ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಆದರೆ ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ (National Literacy Mission-NLM) ಸ್ಥಾಪನೆ ಈ ದಿಶೆಯಲ್ಲಿ ಒಂದು ನವೀನ ಆಚರಣೆಯಾಗಿದೆ. 1988ರಲ್ಲಿ ಸ್ಥಾಪನೆಯಾದ ಈ ಮಿಷನ್ 15ರಿಂದ 35ವರ್ಷ ವಯಸ್ಸಿನ (ಸಂಪ್ರದಾಯರಹಿತ ಶಿಕ್ಷಣ ನಡೆಯುತ್ತಿಲ್ಲದ ಸ್ಥಳಗಳಲ್ಲಿರುವ 9ರಿಂದ 14ವರ್ಷ ವಯಸ್ಸಿನ ಮಕ್ಕಳ ಗುಂಪು ಸೇರಿದಂತೆ) 100 ಮಿಲಿಯನ್ (ಒಂದು ಮಿಲಿಯನ್ ಅಂದರೆ 10ಲಕ್ಷ) ವ್ಯಕ್ತಿಗಳ ಕಾರ್ಯಾತ್ಮಕ ಸಾಕ್ಷರತೆಯನ್ನು (Functional Literacy) ಸಾಧಿಸುವ ಗುರಿಯನ್ನು ಹೊಂದಿದೆ. NLMಅಡಿಯಲ್ಲಿ ಆಗಿರುವ ಅತಿಮುಖ್ಯವಾದ ಬೆಳವಣಿಗೆಯೆಂದರೆ ದೇಶದ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ ಆಂದೋಲನ ಕ್ರಮ ಪ್ರಾಬಲ್ಯವನ್ನು

Digitised by Bharatavani, CIIL

ಪಡೆದುದು. 1989ರಲ್ಲಿ ಕೇರಳ ರಾಜ್ಯದ ಎರ್ನಾಕುಲಂನಲ್ಲಿ ಕೈಗೊಂಡ ಸಂಪೂರ್ಣ ಸಾಕ್ಷರತಾ ಆಂದೋಲನ (Total Literacy Campaign-TLC) ಇಡೀ ದೇಶಕ್ಕೆ ಅನುಸರಣ ಯೋಗ್ಯ ಮಾದರಿಯಾಯಿತು ಮತ್ತು ವಯಸ್ಕರ ಶಿಕ್ಷಣದಲ್ಲಿ ಆಂದೋಲನಕ್ರಮದ ಪ್ರಾಬಲ್ಯವನ್ನು ಬಹುತೇಕ ಖಚಿತಗೊಳಿಸಿತು. ನಂತರದಲ್ಲಿ ಸಾಕ್ಷರತಾ ಆಂದೋಲನಗಳು ಕ್ಷೇತ್ರ ನಿರ್ದಿಷ್ಟವೂ, ಸಮಯ–ನಿಗದಿತವೂ, ವೆಚ್ಚ–ಪರಿಣಾಮಕಾರಿಗಳೂ ಮತ್ತು ಫಲಿತಾಂಶ ನಿರ್ದೇಶನವೂ ಆಗಿ ನಿರಕ್ಷರತೆಯನ್ನು ನಿರ್ಮೂಲನ ಮಾಡಲು NLMಗೆ ಪ್ರಧಾನ ಸಮರ ತಂತ್ರಗಳಾದವು. ವಯಸ್ಕರ ಶಿಕ್ಷಣ ಕಾರ್ಯಕ್ರಮ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದ (Continuing Education Programme-CEP) ಮೂಲಕ ಕಲಿಕಾ ಸಮಾಜ (Learning Society) ವನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿದೆ. ಈ ಕಾರ್ಯಕ್ರಮದ ಕೇಂದ್ರವಾಗಿ ಜನರಲ್ಲಿ ಓದುವ ಅಭ್ಯಾಸವನ್ನು ಬೆಳೆಸುವ ಗ್ರಾಮೀಣ ಗ್ರಂಥಾಲಯಗಳಿವೆ.

**ಶ್ರಮಿಕ ವಿದ್ಯಾಪೀಠಗಳು:** ಶ್ರಮಿಕ ವಿದ್ಯಾಪೀಠಗಳ ಸ್ಥಾಪನೆ ವಯಸ್ಕರ ಶಿಕ್ಷಣದ ದಿಶೆಯಲ್ಲಿ ಇಟ್ಟ ಮತ್ತೊಂದು ನವೀನ ಆಚರಣೆಯ ಹೆಜ್ಜೆಯಾಗಿದೆ. ದೇಶದ ವಿವಿಧ ಕೈಗಾರಿಕೆ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 36 ಶ್ರಮಿಕ ವಿದ್ಯಾಪೀಠಗಳು (ವರ್ಷ 2000ದಲ್ಲಿದ್ದಂತೆ) ಉದ್ಯೋಗನಿರತರಿಗೆ, ಸ್ವಉದ್ಯೋಗನಿರತರಿಗೆ, ಸಂರಕ್ಷಣೆ ಕಾರ್ಯನಿರ್ವಹಿಸುವವರಿಗೆ ಮತ್ತು ಕೈಗಾರಿಕೆ ಕಾರ್ಯನಿರತರ ಕುಟುಂಬ ವರ್ಗದವರಿಗೆ ಮುಂದುವರಿದ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಸಂಪ್ರದಾಯರಹಿತ ರೀತಿಯಲ್ಲಿ ಒದಗಿಸುತ್ತದೆ. ಸಾಂಸ್ಥಿಕ ಚೌಕಟ್ಟನ್ನು ಪ್ರತಿನಿಧಿಸುತ್ತವೆ. ಪ್ರತಿಯೊಂದು ಶ್ರಮಿಕ ವಿದ್ಯಾಪೀಠದ ವ್ಯವಹಾರಗಳನ್ನು ಓರ್ವ ಗೌರವ ಅಧ್ಯಕ್ಷರಿರುವ ನಿರ್ವಹಣ ಮಂಡಳಿ ನೋಡಿಕೊಳ್ಳುತ್ತದೆ. ಶ್ರಮಿಕರ ಮತ್ತು ಉದ್ಯೋಗದಾತರ ಆಸಕ್ತಿಗಳನ್ನು ಪ್ರತಿನಿಧಿಸುವ ಸದಸ್ಯರನ್ನು ಈ ಮಂಡಳಿ ಹೊಂದಿರುತ್ತದೆ.

**ಸಾಕ್ಷರೋತ್ತರ ಮತ್ತು ಮುಂದುವರಿಕೆ ಶಿಕ್ಷಣ:** ಫೆಬ್ರವರಿ 1988ರಲ್ಲಿ ಭಾರತ ಸರ್ಕಾರ ದೇಶದಾದ್ಯಂತ ಜನಶಿಕ್ಷಣ ನಿಲಯಗಳನ್ನು ಹಂತ ಹಂತವಾಗಿ ಸ್ಥಾಪಿಸಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿತು. ವಯಸ್ಕರು ಕಲಿತ ಸಾಕ್ಷರತೆಯನ್ನು ಉಳಿಸಿಕೊಳ್ಳುವಂತೆ ಮಾಡುವುದು ಪ್ರಾಥಮಿಕ ಸಾಕ್ಷರತೆಯ ನಂತರ ಕಲಿಕಾರ್ಥಿಗಳು ತಮ್ಮ ಕಲಿಕೆಯನ್ನು ಮುಂದುವರಿಸುವಂತೆ ಮಾಡುವುದು ಮತ್ತು ತಮ್ಮ ಜೀವನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ತಮ್ಮ ಕಲಿಕೆಯನ್ನು ಉಪಯೋಗಿಸಿಕೊಳ್ಳಲು ಅವಕಾಶವನ್ನು ಉಂಟುಮಾಡುವುದು ಜನಶಿಕ್ಷಣ ನಿಲಯಗಳ (JSM) ಮುಖ್ಯ ಉದ್ದೇಶಗಳಾಗಿದ್ದವು.

**ರಾಷ್ಟ್ರೀಯ ಸಾಕ್ಷರತಾ ಮಿಷನ್‌ನಲ್ಲಿ ಸ್ವೈಚ್ಛಿಕ ನಿಯೋಗಗಳ ಸ್ಥಾಪನೆ:** ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಸ್ವೈಚ್ಛಿಕ ನಿಯೋಗಗಳು ಮಹತ್ವಪೂರ್ಣವಾದ ಪಾತ್ರ ವಹಿಸಿವೆ. ಕಾರ್ಯಾತ್ಮಕ ಸಾಕ್ಷರತೆಯ ಪ್ರಾಯೋಜನೆಗಳನ್ನು ಕೈಗೊಳ್ಳುವುದು, ಜನಶಿಕ್ಷಣ ನಿಲಯಗಳ ಮೂಲಕ ಸಾಕ್ಷರೋತ್ತರ ಕಾರ್ಯಕ್ರಮಗಳನ್ನು ನಡೆಸುವುದು, ಸಂಪನ್ಮೂಲಗಳನ್ನು ವಿಕಾಸಗೊಳಿಸುವುದು ಪುಸ್ತಕ ಪ್ರಕಟಣೆ, ವಿಚಾರ, ಸಂಕಿರಣಗಳನ್ನು ನಡೆಸುವುದಲ್ಲದೆ, ಸಂಶೋಧನ ಪ್ರಾಯೋಜನೆಗಳನ್ನು ಕೈಗೊಳ್ಳುವುದು – ಈ ರೀತಿಯ ವಿವಿಧ ಮಾರ್ಗಗಳ ಮೂಲಕ ವಯಸ್ಕರ ಶಿಕ್ಷಣವನ್ನು ಪ್ರಚಾರಮಾಡುವ ನೋಂದಣಿ ಮಾಡಲ್ಪಟ್ಟ ಸ್ವೈಚ್ಛಿಕ ನಿಯೋಗಗಳಿಗೆ ಧನಸಹಾಯ ನೀಡಲಾಗುತ್ತದೆ.

2000ನೇ ವರ್ಷದ ವೇಳೆಗೆ 556 ಜಿಲ್ಲೆಗಳನ್ನು ಸಾಕ್ಷರತಾ ಆಂದೋಲನದಡಿಯಲ್ಲಿ ತರಲಾಗಿತ್ತು. ಅವುಗಳಲ್ಲಿ 259ಜಿಲ್ಲೆಗಳು ಸಾಕ್ಷರೋತ್ತರ ಹಂತವನ್ನು ತಲುಪಿದ್ದವು. 85 ಜಿಲ್ಲೆಗಳನ್ನು ಮುಂದುವರಿಕೆ ಶಿಕ್ಷಣ/ಕಾರ್ಯಕ್ರಮದಡಿಯಲ್ಲಿ ತರಲಾಗಿತ್ತು. 2000ದ ವರ್ಷದಲ್ಲಿ NLMನಿರಕ್ಷರ ಜನಸಂಖ್ಯೆಯ ಬಹಳಷ್ಟು ಭಾಗ ಇರುವ ಹಿಂದಿ ಭಾಷಾ ಪ್ರದೇಶಗಳಾದ ಬಿಹಾರ, ಮಧ್ಯಪ್ರದೇಶ, ರಾಜಸ್ತಾನ ಮತ್ತು ಉತ್ತರಪ್ರದೇಶ ರಾಜ್ಯಗಳಿಗೆ ವಿಶೇಷ ಗಮನ ನೀಡಿತ್ತು.

**ಸಮಾಜದ ಅನನುಕೂಲಿತ ವಿಭಾಗಗಳ ಶಿಕ್ಷಣದಲ್ಲಿ ನವೀನ ಆಚರಣೆಗಳು:**

1992ರಲ್ಲಿ ಪರಿಷ್ಕರಿಸಿದ ರಾಷ್ಟ್ರೀಯ ಶಿಕ್ಷಣ ನೀತಿ (1986) ಸಮಾನತೆಯಿಂದ ವಂಚಿತಗೊಳಿಸಲ್ಪಟ್ಟ ವಿಭಾಗಗಳು ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ (SC), ಪರಿಶಿಷ್ಟ ಬುಡಕಟ್ಟುಗಳು (ST), ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಗುಂಪುಗಳ ವಿಶಿಷ್ಟ ಅಗತ್ಯಗಳಿಗೆ ಗಮನ ಹರಿಸಿತ್ತು. ಇದರ ಪರಿಣಾಮವಾಗಿ SC/STಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಅನೇಕ ನವೀನ ಆಚರಣೆ ಕ್ರಮಗಳನ್ನು ಕೈಗೊಂಡಿತ್ತು. ಅವುಗಳಲ್ಲಿ ಕೆಲವು ಹೀಗಿವೆ. (i) 200 ಜನಸಂಖ್ಯೆಯುಳ್ಳ STಗಳ ವಸತಿಗಳಲ್ಲಿ ಒಂದು ಕಿ.ಮೀ. ದೂರದಲ್ಲಿ ಪ್ರಾಥಮಿಕ ಶಾಲೆಯನ್ನು ಒದಗಿಸಲು ಸಾಮಾನ್ಯವಾಗಿ ಬೇಕಾಗಿದ್ದ 300 ಜನಸಂಖ್ಯೆಯನ್ನು ಕಡಿಮೆ ಮಾಡಲಾಯಿತು. (ii) ಎಲ್ಲಾ ರಾಜ್ಯಗಳಲ್ಲೂ ಹಿರಿಯ ಪ್ರಾಥಮಿಕ ಹಂತರದವರೆಗಾದರೂ ಸರ್ಕಾರಿ ಶಾಲೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳಿಗೆ ಬೋಧನ ಶುಲ್ಕವನ್ನು ರದ್ದು ಮಾಡಲಾಯಿತು. ಅನೇಕ ರಾಜ್ಯಗಳು ಉನ್ನತ ಸೆಕೆಂಡರಿ (PUC) ಹಂತದವರೆಗೂ ಈ ವರ್ಗಗಳ ವಿದ್ಯಾರ್ಥಿಗಳಿಗೆ ಬೋಧನ ಶುಲ್ಕವನ್ನು ರದ್ದು ಪಡಿಸಿವೆ. ಈ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳು, ಉಚಿತ ಸಮವಸ್ತ್ರಗಳು, ಬರವಣಿಗೆ ಸಾಮಗ್ರಿಗಳು, ಸ್ಕೂಲ್‌ಬ್ಯಾಗ್ ಮುಂತಾದ ಪ್ರೋತ್ಸಾಹಕಗಳನ್ನು ನೀಡಲಾಗುತ್ತಿದೆ. (iii) DPEP, ಲೋಕಜಂಬಿಶ್ ಮತ್ತು ಶಿಕ್ಷಾ ಕರನಿ, ರಾಷ್ಟ್ರೀಯ ಸಂಪ್ರದಾಯರಹಿತ ಶಿಕ್ಷಣ ಕಾರ್ಯಕ್ರಮ (NFE) ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಪೋಷಣೆ, ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ (National Programme for Nurtional Support to Primary Education-NPNSP) ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರಲ್ಲಿ SC ಮತ್ತು ST ಗಳು ಹೆಚ್ಚಾಗಿ ಇರುವ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗುತ್ತಿದೆ. (iv) ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ IITಗಳು, ರೀಜಿನಲ್ ಇಂಜಿನಿಯರಿಂಗ್

Digitised by Bharatavani, CIIL

ಕಾಲೇಜುಗಳು ಮತ್ತು ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಸೇರಿದಂತೆ SC ಮತ್ತು ST ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಬೇಕಾದ ಕನಿಷ್ಠ ಅರ್ಹತೆಗಳನ್ನು ಸಡಿಲಗೊಳಿಸುವುದರ ಜೊತೆಗೆ ಈ ವರ್ಗಗಳ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಸಂಖ್ಯೆಯಲ್ಲಿ ಸ್ಥಳಗಳನ್ನು ಕಾಯ್ದಿರಿಸಿವೆ. ಕೇಂದ್ರಿಯ ವಿಶ್ವವಿದ್ಯಾನಿಲಯಗಳೂ ಸೇರಿದಂತೆ 103 ವಿಶ್ವವಿದ್ಯಾನಿಲಯಗಳಲ್ಲಿ ಕಾಯ್ದಿರಿಸುವಿಕೆ ನೀತಿಯ ಸರಿಯಾದ ಪಾಲನೆಯನ್ನು ಖಚಿತಪಡಿಸಿಕೊಳ್ಳಲು UGC SC/ST ಸೆಲ್‌ಗಳನ್ನು ಆರಂಭಿಸಿದೆ. ಕಾಯ್ದಿರಿಸುವಿಕೆ ನೀತಿಯ ಜಾರಿಗೊಳಿಸುವಿಕೆಯನ್ನು ಪುನರಾವಲೋಕನ ಮಾಡಲು ಒಂದು ಸ್ಥಾಯಿ ಸಮಿತಿಯನ್ನು (Study Committee) ನೇಮಿಸಿದೆ. (v) SC ಮತ್ತು ST ವಿದ್ಯಾರ್ಥಿಗಳ ಶೈಕ್ಷಣಿಕ ಕೌಶಲಗಳನ್ನು ಮತ್ತು ಭಾಷಾ ದಕ್ಷತೆಗಳನ್ನು ಉತ್ತಮಪಡಿಸಲು ಪರಿಹಾರಾತ್ಮಕ ಬೋಧನೆ ಮತ್ತು ವಿಶೇಷ ಬೋಧನೆಯ ವ್ಯವಸ್ಥೆ ಮಾಡಲಾಗಿದೆ. ಪ್ರವೇಶ ಪರೀಕ್ಷೆಯಲ್ಲಿ ಸೀಮಾಂತವಾಗಿ (Marginally) ಅನುತೀರ್ಣವಾಗುವ SC ಮತ್ತು ST ವಿದ್ಯಾರ್ಥಿಗಳಿಗೆ ಒಂದು ವರ್ಷ ತರಬೇತಿ ಕೊಟ್ಟು IITಗಳಲ್ಲಿ ಮೊದಲನೇ ವರ್ಷದ ಪ್ರವೇಶ ನೀಡಲಾಗುತ್ತಿದೆ. (vi) ರಾಷ್ಟ್ರೀಯ ವಿದ್ಯಾರ್ಥಿ ವೇತನಗಳ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಪ್ರದೇಶಗಳ SC/ST ವಿದ್ಯಾರ್ಥಿಗಳಿಗೆ ಸೆಕೆಂಡರಿ ಹಂತದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿದೆ. ಇದಲ್ಲದೆ ರಾಷ್ಟ್ರೀಯ ಪ್ರತಿಭಾ ಅನ್ವೇಷಣ ಕಾರ್ಯಕ್ರಮದಲ್ಲಿ 70 ವಿದ್ಯಾರ್ಥಿವೇತನಗಳನ್ನು ಈ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗಾಗಿ ಕಾಯ್ದಿರಿಸಲಾಗಿದೆ. (vii) ಪ್ರತಿವರ್ಷ SC/ST ವಿದ್ಯಾರ್ಥಿಗಳಿಗೆ UGC 50 ಜೂನಿಯರ್ ರಿಸರ್ಚ್ ಫೆಲೋಶಿಪ್‌ಗಳನ್ನು, 25 ವಿದ್ಯಾರ್ಥಿವೇತನಗಳನ್ನು, 20 ರಿಸರ್ಚ್ ಅಸೋಸಿಯೇಟ್‌ಶಿಪ್‌ಗಳನ್ನು, 50 ಫೆಲೋಶಿಪ್‌ಗಳನ್ನು ಪ್ರತ್ಯೇಕವಾಗಿ ನೀಡುತ್ತಿದೆ. ಉಪನ್ಯಾಸಕರ ನೇಮಕಾತಿಗೆ UGC ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆಯನ್ನು (National Eligibility Test-NET) ತೆಗೆದುಕೊಳ್ಳಲು ಬೇಕಾಗಿರುವ ಸ್ನಾತಕೋತ್ತರ ಮಟ್ಟದ ಪರೀಕ್ಷೆಯಲ್ಲಿ ಪಡೆದಿರಬೇಕಾದ ಶೇ. 55 ಅಂಕಗಳ ಮಿತಿಯನ್ನು SC/ST ವಿದ್ಯಾರ್ಥಿಗಳಿಗೆ ಶೇ. 50ಕ್ಕೆ ಇಳಿಸಲಾಗಿದೆ. (viii) ಮೈಸೂರಿನಲ್ಲಿರುವ ಭಾರತೀಯ ಭಾಷೆಗಳ ಕೇಂದ್ರಿಯ ಸಂಸ್ಥೆ (Central Institute of Indian Languages-CIIL) ಪ್ರಾದೇಶಿಕ ಭಾಷೆಗಳಲ್ಲಿ ಬುಡಕಟ್ಟು ಭಾಷೆಗಳಿಗೆ ಅನುವಾದ ಮಾಡುವುದನ್ನು ಸುಗಮಗೊಳಿಸಲು ಪಠ್ಯಪುಸ್ತಕಗಳು, ಪ್ರಾಥಮಿಕೆಗಳು (Primers), ವ್ಯಾಕರಣ ಪುಸ್ತಕಗಳು, ಶಬ್ದಕೋಶಗಳು, ದ್ವಿಭಾಷೀಯ ಪಠ್ಯಪುಸ್ತಕಗಳು ಮುಂತಾದವುಗಳನ್ನು ಸಿದ್ಧಪಡಿಸುತ್ತದೆ. ಈ ಸಂಸ್ಥೆ 75 ಬುಡಕಟ್ಟು ಮತ್ತು ಸೀಮಾಪ್ರದೇಶಗಳ ಭಾಷೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. NCERT ಬುಡಕಟ್ಟು ಭಾಷೆಗಳಲ್ಲಿ 10 ಪುಸ್ತಕಗಳನ್ನು ಮತ್ತು 15 ಬುಡಕಟ್ಟು ಉಪಭಾಷೆಗಳಲ್ಲಿ ಬೋಧನಾ–ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿದೆ. (ix) ಕೇಂದ್ರ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ದೇಶದಲ್ಲಿ SC/ST ಮಹಿಳೆಯರ ಸಾಕ್ಷರತೆಯ ದರ ಶೇ.10ಕ್ಕಿಂತ ಕಡಿಮೆ ಇರುವ 146 ಜಿಲ್ಲೆಗಳನ್ನು ಶೈಕ್ಷಣಿಕ ಕಾರ್ಯಕ್ರಮಗಳನ್ನು/ಯೋಜನೆಗಳನ್ನು ಜಾರಿಗೊಳಿಸುವುದರಲ್ಲಿ ವಿಶೇಷ ಗಮನ ನೀಡುವುದಕ್ಕಾಗಿ ಆಯ್ಕೆ ಮಾಡಿಕೊಂಡಿದೆ.

**ಅಲ್ಪಸಂಖ್ಯಾತರ ಶಿಕ್ಷಣಕ್ಕೆ ನವೀನ ಆಚರಣೆಗಳು:** 1992ರ ಪರಿಷ್ಕೃತ ಕ್ರಿಯಾ ಯೋಜನೆಗೆ (Programme of Action-POA) ಅನುಸಾರವಾಗಿ ಎರಡು ಹೊಸ ಕೇಂದ್ರ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮಗಳನ್ನು 1993–94ರ ಅವಧಿಯಲ್ಲಿ ಆರಂಭಿಸಲಾಯಿತು. ಅವೆಂದರೆ ಶೈಕ್ಷಣಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರಿಗೆ ಕ್ಷೇತ್ರ ತೀವ್ರತಾ ಯೋಜನೆ (Scheme of Area Intensive Programme for Educationally Backward Minorities) ಮತ್ತು ಮದ್ರಸಾ ಶಿಕ್ಷಣದ ಆಧುನೀಕರಣಕ್ಕೆ ಧನಸಹಾಯದ ಯೋಜನೆ (Scheme of Financial Assistance for Modernization of Madrasa Education). ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದ ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರು ಹೆಚ್ಚಾಗಿ ಇರುವ ಪ್ರದೇಶಗಳಿಗೆ ಮೂಲಭೂತ ಶೈಕ್ಷಣಿಕ ಸೌಕರ್ಯಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸುವುದು. ಶೈಕ್ಷಣಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರಿಗೆ ಕೇಂದ್ರ ತೀವ್ರತಾ ಕಾರ್ಯಕ್ರಮ ಯೋಜನೆಯ ಉದ್ದೇಶವಾಗಿತ್ತು. ಈ ಕಾರ್ಯಕ್ರಮದಡಿಯಲ್ಲಿ (i) ಹೊಸ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅಗತ್ಯವಿದ್ದೆಡೆಗಳಲ್ಲಿ ಸಂಪ್ರದಾಯ–ರಹಿತ ಶಿಕ್ಷಣ ಕೇಂದ್ರಗಳನ್ನು ತೆರೆಯಲು, (ii) ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶೈಕ್ಷಣಿಕ ಮೂಲ ಸೌಕರ್ಯಗಳನ್ನು ಮತ್ತು ಭೌತಿಕ ಸೌಲಭ್ಯಗಳನ್ನು ಬಲಗೊಳಿಸಲು ಮತ್ತು (iii) ಶೈಕ್ಷಣಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ವರ್ಗಗಳ ಹೆಣ್ಣು ಮಕ್ಕಳಿಗಾಗಿ ಬಹುವಾಹಿನಿ (Multi-stream) ಯುಕ್ತ ವಸತಿ ಉನ್ನತ ಮಾಧ್ಯಮಿಕ ಶಾಲೆಗಳನ್ನು ಆರಂಭಿಸಲು ಶೇ.100ರಷ್ಟು ಧನಸಹಾಯವನ್ನು ನೀಡಲಾಗುತ್ತದೆ.

ಹೀಗೆ ನವೀನ ಆಚರಣೆಗಳೊಂದಿಗೆ ಮತ್ತು ಭರವಸೆಗಳೊಂದಿಗೆ ಭಾರತ 21ನೇ ಶತಮಾನದತ್ತ ಧಾವಿಸಲು ಆರಂಭಿಸಿತು.

**ಮೂಲ: ಪ್ರಭಾ ದೀಕ್ಷಿತ್**
**ಅನು: ಪ್ರೊ. ಮಂಜುನಾಥಯ್ಯ ಬಿ.ಎನ್.**

## ಶೈಕ್ಷಣಿಕ ಪತ್ರಿಕೋದ್ಯಮ

ಭಾರತದಲ್ಲಿ ಶಿಕ್ಷಣವು ಶತಮಾನಗಳಿಂದಲೂ ಗೌರವಾರ್ಹವಾದ ಪ್ರಕಾಶಮಾನ ಸಾಧನೆಯ ಗುರುತುಗಳಿಂದ ಒಡಗೂಡಿದ ದೀರ್ಘ ಇತಿಹಾಸವನ್ನು ಹೊಂದುತ್ತಲೇ ಬಂದಿದೆ. ಗುರುಕುಲ ವ್ಯವಸ್ಥೆ ತಮ್ಮ ಪಾಂಡಿತ್ಯ ಮತ್ತು ಅಧ್ಯಾತ್ಮಿಕ ಶ್ರೇಷ್ಠತೆಗೆ ಪ್ರಸಿದ್ಧರಾದ ಗಣನೀಯ ವ್ಯಕ್ತಿತ್ವಗಳನ್ನು ಉತ್ಪಾದಿಸಿದೆ ಎಂಬುದರಲ್ಲಿ ಸಂಶಯವಿಲ್ಲ. 19ನೇ ಶತಮಾನದಲ್ಲಿ ಶಾಲೆಗಳ ಮೂಲಕ ಸಂಘಟಿತ ಶಿಕ್ಷಣ ವ್ಯವಸ್ಥೆ

Digitised by Bharatavani, CIIL

ಪ್ರಾರಂಭವಾದ ನಂತರ ಶಿಕ್ಷಣ ರೂಢಿಬದ್ಧವಾದುದಾಗಿದೆ. ವಿಶೇಷವಾಗಿ ಕಳೆದ ಕೆಲವು ದಶಕಗಳ ಕಾಲಘಟ್ಟದಲ್ಲಿ ಶಿಕ್ಷಣವೆಂದರೆ ಕಟ್ಟುನಿಟ್ಟಿನ ಪಠ್ಯಕ್ರಮವೆಂದೂ ಹಾಗೂ ಸಾಧಾರಣವಾಗಿ ವಿದ್ಯಾರ್ಥಿಗಳ ವಾಸ್ತವಿಕ ಜ್ಞಾನವನ್ನು ಪರೀಕ್ಷೆ ಮಾಡದೆ ಕೇವಲ ಅವರ ಸ್ಮರಣಶಕ್ತಿ ಮತ್ತು ಕಂಠಪಾಠದ ಕಲಿಕೆಯ ಸಾಮರ್ಥ್ಯವನ್ನು ಪರೀಕ್ಷಿಸುವ ಪರೀಕ್ಷೆಗಳೆಂದೂ ಪರಿಗಣಿಸಲಾಗಿದೆ.

**ಶೈಕ್ಷಣಿಕ ಪತ್ರಿಕೋದ್ಯಮ ಎಂದರೇನು?**

ನಿಶ್ಚಿತವಾಗಿ ಮೇಲಿನ ಪದಗಳು ವಿವಿಧ ವ್ಯಕ್ತಿಗಳಿಗೆ ವಿಭಿನ್ನ ಅರ್ಥವುಳ್ಳದ್ದಾಗಿವೆ. ಸಮಾಜದ ವಿವಿಧ ವರ್ಗಗಳನ್ನು ಶಿಕ್ಷಿತರನ್ನಾಗಿ ಮಾಡುವುದು. ಕಲಿಕೆ ಮತ್ತು ಕೌಶಲಗಳ ಸಂಪಾದನೆಗಳನ್ನು ಕುರಿತ ಬೆಳವಣಿಗೆಯ ಮಾಹಿತಿ ಮತ್ತು ಜ್ಞಾನದ ಪ್ರಸಾರ ಮತ್ತು ಸಮುದಾಯ ಹಾಗೂ ರಾಷ್ಟ್ರಗಳಿಗೆ ಮಹತ್ವಪೂರ್ಣವೆಂದೆನಿಸಿದ ಶೈಕ್ಷಣಿಕ ವಿಚಾರಗಳನ್ನು ಕುರಿತಂತೆ ಸಾರ್ವಜನಿಕ ಚರ್ಚೆಗೆ ಪ್ರೇರಣೆ ನೀಡುವುದು – ಇವೆಲ್ಲವೂ ಶೈಕ್ಷಣಿಕ ಪತ್ರಿಕೋದ್ಯಮದ ಘಟಕಗಳಾಗಿವೆ. ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿನ ಶಿಕ್ಷಣಕ್ಕೆ ಸಂಬಂಧಿಸಿದ ಸಮಾಚಾರ ಮತ್ತು ಲೇಖನಗಳು, ಹೊಸ ಪಠ್ಯಕ್ರಮಗಳನ್ನು ಕುರಿತಂತೆ ಅಂಕಿಅಂಶ ಆಧಾರಿತ ಮತ್ತು ಜನಾಭಿಪ್ರಾಯಗಳ ಸರ್ವೇಕ್ಷಣೆಗಳೂ ಸಹ ಶೈಕ್ಷಣಿಕ ಪತ್ರಿಕೋದ್ಯಮದಲ್ಲಿ ಒಳಗೊಳ್ಳುತ್ತದೆ. ಇದರ ಜೊತೆಗೆ ದೈನಿಕಗಳಲ್ಲಿ ಶಾಲೆ/ವಿಶ್ವವಿದ್ಯಾನಿಲಯ ಆವರಣಗಳ ಬೆಳವಣಿಗೆಗಳ ವಿವರಣೆ ಮತ್ತು ಪಾಂಡಿತ್ಯಪೂರ್ಣ ಪ್ರಕಟಣೆಗಳನ್ನು ಈ ಜ್ಞಾನಶಾಖೆಯ ಭಾಗವೆಂದು ಹೇಳಬಹುದು.

**ಶೈಕ್ಷಣಿಕ ಪತ್ರಿಕೋದ್ಯಮದ ಸಂಕ್ಷಿಪ್ತ ಇತಿಹಾಸ:**

ಪತ್ರಿಕೋದ್ಯಮ ತನ್ನ ನಿಜರೂಪದಲ್ಲಿ ಭಾರತದಲ್ಲಿ 220 ವರ್ಷಗಳಿಗೂ ಹಳೆಯದು. 'ಎಲ್ಲಾ ಪಕ್ಷಗಳಿಗೂ ತೆರೆದ ರಾಜಕೀಯ ಹಾಗೂ ಲಾಭದ ಆದರೆ ಯಾರಿಂದಲೂ ಪ್ರಭಾವಕ್ಕೆ ಒಳಗಾಗದ ಪತ್ರಿಕೆ' ಎಂದು ಘೋಷಿಸಿಕೊಳ್ಳುತ್ತಾ ಜನವರಿ 1780ನೆಯ ಇಸವಿಯಲ್ಲಿ "ಬೆಂಗಾಲ್ ಗೆಝೆಟ್" ಎಂಬ ಎರಡು ಪುಟದ ಸಾಪ್ತಾಹಿಕ (ಅಗ್ರಗಾಮಿಯೆಂದು ಕರೆಯಬಹುದಾದ) ಪ್ರಥಮವಾಗಿ ಪ್ರಕಟಗೊಂಡಿತು.

ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ದೇಶದ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಅಲ್ಪಸಂಖ್ಯೆಯಲ್ಲಿದ್ದುದರಿಂದ ಪತ್ರಿಕೋದ್ಯಮಿಗಳು ಶೈಕ್ಷಣಿಕ ವಿಚಾರಗಳ ಮೇಲೆ ಹೆಚ್ಚು ಗಮನ ಹರಿಸಲಿಲ್ಲ. ವಾರ್ತಾಪತ್ರಿಕೆಗಳಲ್ಲಿ ಏನೇ ಬಂದರೂ ಗೌರವಾನ್ವಿತರಿಂದ ಶ್ರೇಷ್ಠ ಅಧ್ಯಾಪಕರ, ಪ್ರಾಂಶುಪಾಲರ ಮತ್ತು ಪ್ರಾಧ್ಯಾಪಕರ ಪ್ರತಿಕೃತಿಗಳ ಅನಾವರಣ ಮತ್ತು ಸಂಸ್ಥೆಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ನಡೆಯುವ ಕಾರ್ಯಕ್ರಮ ಇವೇ ಮುಂತಾದ ಶೀರ್ಷಿಕೆಗಳಿಗೆ ಸಂಬಂಧಿಸಿರುತ್ತಿತ್ತು.

ಸ್ವಾತಂತ್ರ್ಯಾನಂತರದ ಅವಧಿ ದೇಶದಾದ್ಯಂತ ಶಾಲಾ–ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಅಗಾಧ ಸಂಖ್ಯಾಸ್ಫೋಟಕ್ಕೆ ಸಾಕ್ಷಿಯಾಯಿತು. ಸಾಕ್ಷರತೆಯಲ್ಲಿ ಪ್ರಗತಿಯಾದಂತೆ ವಾರ್ತಾಪ್ರತಿಗಳು ಮತ್ತು ನಿಯತಕಾಲಿಕೆಗಳ ಸಂಖ್ಯೆ ಸಹ ಅಧಿಕಗೊಂಡಿತು. ಸಹಜವಾಗಿಯೇ ಎಂದಿಗಿಂತ ಶಿಕ್ಷಣಕ್ಕೆ ಸಂಬಂಧಿಸಿದ ಘಟನೆಗಳ ವಿಷಯವಸ್ತು ಮತ್ತು ವ್ಯಾಪ್ತಿಯೂ ಹೆಚ್ಚಿತು. ಆದರೆ ವ್ಯವಸ್ಥೆಯಲ್ಲಿ ಶೈಕ್ಷಣಿಕ ಪತ್ರಿಕೋದ್ಯಮ ಯಥಾವತ್ತಾಗಿ ಪ್ರಮುಖ ಸ್ಥಾನವನ್ನು ಇನ್ನೂ ಪಡೆದಿಲ್ಲ ಎಂಬುದು ತಡವಾಗಿಯೇ ಉಳಿಯಿತು. ದೇಶದ ಶಾಲಾಶಿಕ್ಷಣದ ಸಲುವಾಗಿ ಇರುವ ಶೃಂಗಸಂಸ್ಥೆಯಾದ ರಾಷ್ಟ್ರೀಯ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆ (NCERT) ಇದರ ನಿಹಿತಾರ್ಥಗಳೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿತ್ತು ಎಂಬುದು ಗಮನಾರ್ಹ. ಕೆಲವು ವರ್ಷಗಳ ಹಿಂದೆ ಇದು ಆಯೋಜಿಸಿದ ವಿಚಾರಗೋಷ್ಠಿಗಳು ದೋಷಗಳನ್ನು ಬೊಟ್ಟು ಮಾಡುವಲ್ಲಿ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿನ ವಿವಿಧ ಅಭಿವೃದ್ಧಿ ಮತ್ತು ವಿಚಾರಗಳ ಬಗ್ಗೆ ಪತ್ರಿಕೋದ್ಯಮಗಳಿಂದ ನಿಯಮಿತ, ನಂಬಲರ್ಹವಾದ ಲೇಖನಗಳ ಅವಶ್ಯಕತೆಯನ್ನು ಒತ್ತಿ ಹೇಳುವುದರಲ್ಲಿ ಸಹಾಯಕವಾದವು. ಶಿಕ್ಷಣದ ಎಲ್ಲಾ ಮುಖಗಳ ಬಗ್ಗೆ ಪರಿಚಿತನಾದ ತಜ್ಞರೊಬ್ಬರನ್ನು ದೈನಿಕ ಪತ್ರಿಕೆಗಳು ನೇಮಿಸಿಕೊಳ್ಳುವ ಅಗತ್ಯವಿದೆ ಎಂಬ ನಿರ್ಣಾಯಕ ಶಿಫಾರಸ್ಸು ಮಾಡಲಾಯಿತು.

ವಿಚಾರಗೋಷ್ಠಿಯಲ್ಲಿ 'ದಿ ಹಿಂದೂ' ವಾರ್ತಾಪತ್ರಿಕೆಯು ಶೈಕ್ಷಣಿಕ ಬಾತ್ಮೀದಾರರನ್ನು ನೇಮಿಸಿಕೊಂಡಿದೆ ಎಂಬ ಅಂಶದ ಉಲ್ಲೇಖವಾಯಿತು. ಲೇಖನಗಳು ಮತ್ತು ಸಂಪಾದಕೀಯಗಳು ಪ್ರಮುಖ ಪುಟದಲ್ಲಿ ಲೇಖನಗಳು ಮತ್ತು ವಿಶ್ಲೇಷಣಾತ್ಮಕ ಬರಹಗಳು ನಿಯಮಿತವಾಗಿ 25 ವರ್ಷಗಳಿಂದಲೂ ಕಾಣಿಸಿಕೊಳ್ಳುತ್ತಿರುವ 'ದಿ ಹಿಂದೂ' ಪತ್ರಿಕೆಯ ಗಮನವನ್ನು ಸೆಳೆಯಿತು. ಇದಲ್ಲದೆ ಸಾಪ್ತಾಹಿಕ ಶೈಕ್ಷಣಿಕ ಅನುಪೂರಕದಲ್ಲಿ (supplement) ಲೇಖನಗಳನ್ನು ಪ್ರಕಟಿಸುತ್ತಿರುವ ಈ ವಾರ್ತಾಪತ್ರಿಕೆ ಶಿಕ್ಷಕರ, ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡು ಬರುತ್ತಿರುವುದು ಅಲ್ಪಪ್ರಮಾಣದ್ದೇನಲ್ಲ.

**ಭಾರತದಲ್ಲಿ ಶೈಕ್ಷಣಿಕ ಪತ್ರಿಕೋದ್ಯಮಕ್ಕಾಗಿ ಕೈಗೆತ್ತಿಕೊಂಡ ವಿವಾದಾಂಶಗಳು**

ಬಹುತೇಕ ಆಂಗ್ಲ ಮತ್ತು ಪ್ರಾದೇಶಿಕ ಭಾಷೆಯ ದೈನಿಕಗಳು ದುರದೃಷ್ಟವಶಾತ್, ಸಂಪಾದಕರು 'ಗಟ್ಟಿ ವಾರ್ತೆ'ಗಳೆಂದು ಪರಿಗಣಿಸುವ ಸಾಮಾನ್ಯವಾಗಿ ನಕಾರಾತ್ಮಕ ಇಂಗಿತವುಳ್ಳ ಪ್ರಾಪಂಚಿಕ ಆಗುಹೋಗುಗಳ ಬಗ್ಗೆ ಗಮನ ಕೇಂದ್ರಿಕರಿಸುತ್ತವೆ. ಪ್ರಾಂಶುಪಾಲರನ್ನೋ ಅಥವಾ ಉಪಕುಲಪತಿಗಳನ್ನೋ ಘೇರಾಯಿಸುವುದು, ಆವರಣಗಳಲ್ಲಿನ ಹಿಂಸಾತ್ಮಕ ಘಟನೆಗಳು ಮತ್ತು ಪರೀಕ್ಷಾ ಸಂಬಂಧಿ ಹಗರಣಗಳು ಇವೇ ಮುಂತಾದ ಘಟನೆಗಳು ಮಾಧ್ಯಮಗಳ ಗಮನವನ್ನು ತಕ್ಷಣವೇ ಸೆಳೆದುಬಿಡುತ್ತವೆ.

ಅಧ್ಯಾಪಕ ಸಂಘಗಳು ಹಾಗೂ ವಿದ್ಯಾರ್ಥಿ ಸಮುದಾಯಗಳ ಚಳುವಳಿಗಳು, ಶೈಕ್ಷಣಿಕ ಸಮುದಾಯದ ಕೆಲವು ವರ್ಗಗಳ ಅನೈತಿಕ ವರ್ತನೆ, ಶಾಲಾಕಾಲೇಜುಗಳನ್ನು ನಿರ್ವಹಿಸುವ ವ್ಯಕ್ತಿಗಳ ವಾಣಿಜ್ಯ ದೃಷ್ಟಿಯುಳ್ಳ ಲೋಭೆ–ಇವುಗಳೂ ಸಹ ಗಮನ ಸೆಳೆಯುವುವು.

Digitised by Bharatavani, CIIL

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ಮಹಿಳಾ ಶಿಕ್ಷಣ ಮತ್ತು ಸಬಲೀಕರಣ, ಸಾರ್ವಜನಿಕರಲ್ಲಿ ಸಾಕ್ಷರತೆಗೆ ಪ್ರೋತ್ಸಾಹನ ಇತ್ಯಾದಿಗಳೂ ಸಹ ವಾರ್ತಾಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಒಳ್ಳೆಯದೇ. ಇದರ ಜೊತೆಗೆ ವೃತ್ತಿಜೀವನಕ್ಕೆ ಪರಾಮರ್ಶನವನ್ನು ಕುರಿತ ಲೇಖನಗಳು ಮತ್ತು ಶಿಕ್ಷಣಸಂಸ್ಥೆಗಳು ಪ್ರಾರಂಭಿಸಿರುವ ಸಮಾಜವನ್ನು ತಲುಪುವ ಕಾರ್ಯಕ್ರಮಗಳೂ ಸಹ ಮುದ್ರಣ ಮಾಧ್ಯಮದಲ್ಲಿ ಕಾಣಿಸಿಕೊಳ್ಳುವುವು.

ಇದು ಹೇಗಾದರೂ ಇರಲಿ, ಶೈಕ್ಷಣಿಕ ಪತ್ರಿಕೋದ್ಯಮವನ್ನು ಇಂದಿಗೂ ಪತ್ರಿಕೋದ್ಯಮ ವಿಕಾಸದ ಒಂದು ಭಾಗವಾಗಿ ಪರಿಗಣಿಸಲಾಗಿಲ್ಲ. ಇದನ್ನು ಸರಿಪಡಿಸಿದಾಗ ಮಾತ್ರವೇ ಸಮಾಜದ ಸಕಲ ವರ್ಗಗಳಿಂದ ಉತ್ತಮ ಸಾಮಾಜಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಮುನ್ನಡೆ ಸಾಧ್ಯವಾಗುವುವು.

**ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದ ಪತ್ರಿಕೋದ್ಯಮಗಳ ತೌಲನಿಕ ಚಿತ್ರಣ:**

ಇತ್ತೀಚಿನ ವರ್ಷಗಳಲ್ಲಿ ಹಲವಾರು ವಾರ್ತಾಪತ್ರಿಕೆಗಳು ಶೈಕ್ಷಣಿಕ ವಿಚಾರಗಳ ಸಲುವಾಗಿ ಸ್ಥಳವನ್ನು ನಿಯಮಿತ ರೂಪದಲ್ಲಿ ಮೀಸಲಾಗಿರುತ್ತಿವೆ. ಆದಾಗ್ಯೂ ಇವುಗಳು ಕೇವಲ ಗೌಣವಾದ ವಿವಾದಾಂಶಗಳನ್ನು ಮಾತ್ರ ಕುರಿತದ್ದಾಗಿದ್ದು, ಬರಹಗಳಲ್ಲಿ ವಿಶ್ಲೇಷಣಾತ್ಮಕವಾದದ್ದು ಏನೂ ಇರುವುದಿಲ್ಲ. ಪ್ರಾದೇಶಿಕ ಮಟ್ಟದಲ್ಲಿ ಹಲವು ಪ್ರಾದೇಶಿಕ ಭಾಷಾ ದಿನಪತ್ರಿಕೆಗಳು ಸಾರ್ವಜನಿಕ ಪರೀಕ್ಷೆಯಲ್ಲಿ ಬರಬಹುದಾದ (ಮುಖ್ಯವಾಗಿ ಶಾಲಾ ಸ್ತರದಲ್ಲಿನದು) ಸಂಭವನೀಯ ಪ್ರಶ್ನೆಗಳು ಮತ್ತು ಅವುಗಳಿಗೆ ಉತ್ತರಗಳನ್ನು ನೀಡುತ್ತದೆ.

ರಾಷ್ಟ್ರೀಯ ಮಟ್ಟದಲ್ಲಿ, ಶೈಕ್ಷಣಿಕ ಪತ್ರಿಕೋದ್ಯಮದ ನವಶೈಲಿಯೊಂದು ಉದ್ಭವಿಸಿದ್ದು ಚೆನ್ನಾಗಿ ನಿರ್ವಹಿಸಲಾಗುವ ಸಂಸ್ಥೆಗಳನ್ನು ಹಾಗೂ ಪ್ರತಿಷ್ಠಿತ ಅಧ್ಯಾಪಕರ ಸಾಧನೆಗಳನ್ನು ಕುರಿತ ಲೇಖನಗಳನ್ನು ಪ್ರಕಟಿಸುವ "ಎಜುಕೇಷನ್ ವರ್ಲ್ಡ್" ಮತ್ತು "ಎಡುಟ್ರಾಕ್ಸ್" ಎಂಬ ಮಾಸಿಕ ನಿಯತಕಾಲಿಕೆಗಳು ಪ್ರಕಟಗೊಳ್ಳುತ್ತಿವೆ. ನಿಯಮಿತವಾಗಿ 'ಡೆಕ್ಕನ್ ಹೆರಾಲ್ಡ್' ನಂತಹ ದಿನಪತ್ರಿಕೆಗಳು ವಿಶೇಷ ಲೇಖನಗಳನ್ನು ಪ್ರಕಟಿಸುತ್ತವೆ. NCERT, NIEPA ಮತ್ತು UGCಯಂತಹ ಸಂಸ್ಥೆಗಳೂ ಸಹ ಶಿಕ್ಷಣಕ್ಕೆ ಸಾಂಗತ್ಯವುಳ್ಳ ಕ್ಷೇತ್ರಗಳಲ್ಲಿನ ಪ್ರಮುಖ ವಿವಾದಾಂಶಗಳನ್ನು ಪ್ರಕಟಿಸುತ್ತವೆ. ಆದಾಗ್ಯೂ ಈ ಎಲ್ಲಾ ಪ್ರಕಟಣೆಗಳು ಅಧ್ಯಾಪಕರು, ವಿದ್ಯಾರ್ಥಿಗಳು, ಶೈಕ್ಷಣಿಕ ಆಡಳಿತಗಾರರು ಮತ್ತು ಸಾರ್ವಜನಿಕರನ್ನು ಎಷ್ಟರಮಟ್ಟಿಗೆ ತಲುಪುತ್ತಿವೆ ಎನ್ನುವುದನ್ನು ಅಂದಾಜಿನಿಂದ ತಿಳಿಯಬೇಕಷ್ಟೆ.

ದೇಶದಲ್ಲಿ ಇಂಗ್ಲೇಂಡ್‌ನ (ಯುನೈಟೆಡ್ ಕಿಂಗ್‌ಡಮ್) 'ದಿ ಟೈಮ್ಸ್' ಶಿಕ್ಷಣ ಅನುಪೂರಕ ಉನ್ನತ ಶಿಕ್ಷಣ ಅನುಪೂರಕಗಳಿಗೆ ಹೋಲಿಸಬಹುದಾದ ಪ್ರಕಟಣೆಗಳು ಹೊರಬರಬೇಕಿದೆ. ಈ ವಿಮರ್ಶೆಗಳು ಮತ್ತು ಅನುಪೂರಕಗಳು ಪಠ್ಯಕ್ರಮ ಬದಲಾವಣೆ ಮತ್ತು ಶಿಕ್ಷಣ ಸಂಘಗಳ ಕಾರ್ಯಚಟುವಟಿಕೆಗಳನ್ನು ಒಳಗೊಂಡಂತೆ ಅತಿ ಸೂಕ್ಷ್ಮ ಬದಲಾವಣೆಗಳ ವಿವರಗಳನ್ನು ವಿಶೇಷಣಾತ್ಮಕ ರೂಪದಲ್ಲಿ ಹೊರತರುತ್ತವೆ.

**ಶೈಕ್ಷಣಿಕ ಪತ್ರಿಕೋದ್ಯಮದಲ್ಲಿ ಲಭ್ಯವಿರುವ ಶಿಕ್ಷಣ ಮತ್ತು ಪ್ರಶಿಕ್ಷಣ:**

ಇವುಗಳು ಅಸ್ತಿತ್ವದಲ್ಲಿಯೇ ಇಲ್ಲವೆಂದು ಪರಿಗಣಿಸಬೇಕಾಗಿದೆ. ಸಾಮಾನ್ಯವಾಗಿ ಇತರ ವಿಷಯಗಳನ್ನು ವರದಿಮಾಡುವ ಸಾಮಾನ್ಯ ವರದಿಗಾರರು ಹಲವು ಸಂದರ್ಭಗಳಲ್ಲಿ ಶಿಕ್ಷಣದ ಬಗ್ಗೆ ಬರೆಯುವರು. ಪತ್ರಕರ್ತರು ವೃತ್ತಿಯಲ್ಲಿರುವಾಗಲೇ ಕಲಿತುಕೊಳ್ಳುವುದರಿಂದ ಈ ಕ್ಷೇತ್ರದ ಬಗ್ಗೆ ಅರಿವು ಹೊಂದಲು ಕೆಲವು ವರ್ಷಗಳೇ ಬೇಕಾಗುತ್ತದೆ. ಪ್ರಶಿಕ್ಷಣವು ಪ್ರಮುಖವಾಗಿ "ಪ್ರಯತ್ನ-ದೋಷ"ದ (Trail-and-error) ವಿಧಾನದ್ದಾಗಿದ್ದು ದಿನಕಳೆದಂತೆ ವರದಿಗಾರರು ಕಲಿತುಕೊಳ್ಳುತ್ತಾರೆ. ಸೇವಾಪೂರ್ವ ಪ್ರಶಿಕ್ಷಣವು ಲಭ್ಯವಿಲ್ಲ ಹಾಗೂ ದೇಶದ ಪತ್ರಿಕೋದ್ಯಮ ಶಾಲೆಗಳು, ವಿಶ್ವವಿದ್ಯಾನಿಲಯಗಳ ವಿಭಾಗಗಳು ಸೇರಿದಂತೆ, ಶೈಕ್ಷಣಿಕ ಪತ್ರಿಕೋದ್ಯಮಕ್ಕೆ ಅಧಿಕ ಮಹತ್ವ ನೀಡುವುದಿಲ್ಲ.

**ಭವಿಷ್ಯದ ಪಥ/ದಿಕ್ಕುದೆಸೆ:**

ಶೈಕ್ಷಣಿಕ ಪತ್ರಿಕೋದ್ಯಮದ ಭವಿಷ್ಯ ಶಿಕ್ಷಣಕ್ಕೆ ಸಂಬಂಧಿಸಿದ ತಜ್ಞ ಬರಹಗಾರರು ಮತ್ತು ವರದಿಗಾರರಿಂದ ಬರುವ ಭರಿತ(Input)ಗಳಿಗೆ ವಾರ್ತಾಪತ್ರಿಕೆಗಳ ಸಂಪಾದಕರು ಎಷ್ಟು ಮಹತ್ವ ನೀಡುತ್ತಾರೆ ಎನ್ನುವುದನ್ನು ಬಹಳ ಅವಲಂಬಿಸಿದೆ. ಕೆಲವು ದಶಕಗಳ ಹಿಂದೆ ಇದ್ದ ಸ್ಥಿತಿಗೆ ಹೋಲಿಸಿದರೆ ಪ್ರಗತಿಯ ಗತಿ ಅತಿ ನಿಧಾನವಾಗಿದೆ. ಶಿಕ್ಷಣ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜೀವನವನ್ನು ಮುಟ್ಟುವುದರಿಂದ ಮಾಧ್ಯಮಗಳಿಂದ ಅಧಿಕ ಗಮನ ಇದಕ್ಕೆ ದೊರೆಯಬೇಕು.

ಶಾಲಾಸ್ತರದಲ್ಲಿ 180 ದಶಲಕ್ಷ ವಿದ್ಯಾರ್ಥಿಗಳಿಗೆ ಮತ್ತು ಉನ್ನತ ಶಿಕ್ಷಣ ಮಟ್ಟದಲ್ಲಿ 7ದಶಲಕ್ಷ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ದೊರಕಿಸಿಕೊಡುತ್ತಿರುವ ಒಂದು ದಶಲಕ್ಷಗಳಿಗಿಂತಲೂ ಅಧಿಕ ಶಾಲೆಗಳು, 11,000 ಕಾಲೇಜುಗಳು ಮತ್ತು 270 ವಿಶ್ವವಿದ್ಯಾನಿಲಯಗಳು ಭಾರತದ ಬೃಹತ್ ಶೈಕ್ಷಣಿಕ ಮೂಲಭೂತ ಸೌಕರ್ಯದ ಹಿನ್ನೆಲೆಯಲ್ಲಿ ಶೈಕ್ಷಣಿಕ ಪತ್ರಿಕೋದ್ಯಮದ ಪ್ರಮುಖಪಾತ್ರ ಎಷ್ಟರಮಟ್ಟಿನದು ಎನ್ನುವುದನ್ನು ಕಾಣಬಹುದು.

ಭಾರತದಲ್ಲಿ ಶೈಕ್ಷಣಿಕ ಪತ್ರಿಕೋದ್ಯಮವು ದೇಶಭಕ್ತಿ ಮತ್ತು ಮೌಲ್ಯ ಅಥವಾ ನೈತಿಕ ಶಿಕ್ಷಣಗಳಿಗೆ ಸಂಬಂಧಿಸಿದ ವಿಷಯಗಳ ಮೇಲೆಯೂ ಅವಶ್ಯಕವಾಗಿ ಗಮನ ಕೇಂದ್ರೀಕರಿಸಬಹುದಾಗಿದೆ. ಜಾಗತೀಕರಣದ ಈ ಯುಗದಲ್ಲಿ ಶೈಕ್ಷಣಿಕ ಪತ್ರಿಕೋದ್ಯಮ ಜಾಗತಿಕ ಬೆಳವಣಿಗೆಗಳಿಗೆ ಸಂಬಂಧಿಸಿದ ವಿವಾದಾಂಶಗಳಿಗೂ ಸಹ ಗಮನ ನೀಡಬೇಕಾಗಿದೆ.

**ಮೂಲ: ಟಿ. ರಾಜಗೋಪಾಲನ್**

**ಅನು: ಚಂದ್ರಶೇಖರ್ ಬಿ.ಎಂ.**

Digitised by Bharatavani, CIIL

## ಶೈಕ್ಷಣಿಕ ಶಾಸನರಚನೆ

ಪುರಾತನ ಭಾರತದಲ್ಲಿ ಶೈಕ್ಷಣಿಕ ಶಾಸನವು ವೇದವಿಧಿಯಾದ ಸನಾತನ ಧರ್ಮಕ್ಕೆ ಅನುಸಾರವಾಗಿ ಇದ್ದಿತು. ವೇದಗಳೆಂಬುದು ಚಾಲ್ತಿಯಲ್ಲಿದ್ದ ಆಯಾ ಸಾಮಾಜಿಕ ಪರಿಸ್ಥಿತಿಗೆ ಸೂಕ್ತ ಅರ್ಥವನ್ನು ನೀಡಲು ಋಷಿಗಳಿಂದ ಅರ್ಥೈಸಲಾದ ಮತ್ತು ಪುನರ್ ಅರ್ಥೈಸಲಾದ ಅಲಿಖಿತ ಶಾಸನಗಳಾಗಿವೆ. ಸದಾ ಬದಲಾಗುತ್ತಿರುವ ಸಮಾಜವು ವೇದಗಳು ವಿಧಿಸಿರುವ ಶಾಶ್ವತ ಮೌಲ್ಯಗಳನ್ನು ಪಾಲಿಸಲು ವಿಧಿವಿಧಾನಗಳಂತಿರುವ ವ್ಯಾಖ್ಯಾನಗಳನ್ನು ಧರ್ಮಶಾಸ್ತ್ರವೆಂದು ಕರೆಯುವರು. ಸನಾತನ ಧರ್ಮ ನಾಲ್ಕು ಪುರುಷಾರ್ಥಗಳನ್ನು ವಿವರಿಸಿತು. ಧರ್ಮ, ಅರ್ಥ, ಕಾಮ, ಮೋಕ್ಷ. ಜೀವನ ಮತ್ತು ಶಿಕ್ಷಣದ ಈ ಪ್ರಮುಖ ಗುರಿಗಳನ್ನು ಸಾಧಿಸಲು ಸನಾತನ ಧರ್ಮವು ನಾಲ್ಕು ಆಶ್ರಮಗಳನ್ನು ಸೂಚಿಸಿತು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ. ಆಯಾ ಆಶ್ರಮಗಳಲ್ಲಿ ಜೀವನ ಪರ್ಯಂತ ಹೊಂದಬೇಕಾದ ಶಿಕ್ಷಣದಂತಿರುವ ವಿವಿಧ ಸಂಸ್ಕಾರಗಳನ್ನು ವಿಧಿಸಲಾಗಿದೆ.

ಕ್ರಮೇಣ ಮಾನವ ಸ್ವಭಾವದ ಮೇಲೆ ಧರ್ಮದ ಹಿಡಿತ ತಪ್ಪಿಹೋಗಿ ಬ್ರಿಟಿಷರ ಬರುವಿಕೆಯಿಂದ ಪ್ರಾರಂಭಗೊಂಡು ವಿದೇಶಿ ಪ್ರಭುತ್ವದ ಕಾರಣದಿಂದ ಸನಾತನ ಧರ್ಮದ ಪ್ರಭಾವ ಇಲ್ಲದಂತೆಯೇ ಆಯಿತು. ಶಿಕ್ಷಣದ ಮೇಲೆ ಸನಾತನ ಧರ್ಮದ ಹಿಡಿತ ಸಡಿಲಗೊಂಡಿದ್ದರಿಂದ ಉಂಟಾದ ನಿರ್ವಾತವನ್ನು ಭರಿಸಲು ಸಭೆ, ಸಮಿತಿಗಳಲ್ಲಿ ಜನಪ್ರತಿನಿಧಿಗಳು ಶಿಕ್ಷಣ ಕಾನೂನುಗಳನ್ನು ಮಾಡಿ ಆಧುನಿಕ ಶೈಕ್ಷಣಿಕ ಶಾಸನರಚನೆಗೆ ದಾರಿಮಾಡಿಕೊಟ್ಟರು.

**ಐತಿಹಾಸಿಕ ಹಿನ್ನೆಲೆ:**

1854ರ ವುಡ್ಸ್ ಡಿಸ್‌ಪ್ಯಾಚ್ (ವುಡ್ಡನ ಪರಿಪತ್ರ) ಪದಗುಚ್ಛದ ನಿಖರ ಅರ್ಥದಲ್ಲಿ ಶೈಕ್ಷಣಿಕ ಶಾಸನ ರಚನೆ ಶಾಸನವಲ್ಲದಿದ್ದರೂ ಲಂಡನ್ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ವಿನ್ಯಾಸಗೊಳಿಸಲಾದ ಕಲ್ಕತ್ತ, ಬಾಂಬೆ ಮತ್ತು ಮದ್ರಾಸ್ (ಈಗಿನ ಕೊಲ್ಕೆತ್ತ, ಮುಂಬೈ, ಚೆನ್ನೈ) ಪಟ್ಟಣಗಳಲ್ಲಿ ಮೂರು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ನೆರವಾಯಿತು. ಇದು ಶಾಸನ ರಚನೆಯ ಬಲವುಳ್ಳ ಮೊದಲನೆಯ ದಸ್ತಾವೇಜಾಗಿತ್ತು.

**ಸಾಮ್ರಾಜ್ಯಶಾಹಿ ಶಾಸನ ಸಭೆಯಲ್ಲಿನ ಮಸೂದೆಗಳು:**

ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಪ್ರಾರಂಭಿಸಲು ಮತ್ತು ಪ್ರಾಥಮಿಕ ಶಿಕ್ಷಣದ ವಿಸ್ತರಣೆಗಾಗಿ ಉತ್ತಮ ಅವಕಾಶ ಕಲ್ಪಿಸಲು ಕ್ರಮಶಃ 1910 ಮತ್ತು 1911ರಲ್ಲಿ ಗೋಪಾಲ ಕೃಷ್ಣ ಗೋಖಲೆಯವರು ಸಾಮ್ರಾಜ್ಯಶಾಹಿ ಶಾಸನಸಭೆಯಲ್ಲಿ ಮಂಡಿಸಿದ ಎರಡು ಮಸೂದೆಗಳನ್ನು ಶೈಕ್ಷಣಿಕ ಕಾನೂನು ರಚನೆ ನಿಟ್ಟಿನಲ್ಲಿ ಆದ ಬಹು ಮುಂಚಿನ ಪ್ರಯತ್ನಗಳೆಂದು ಗುರುತಿಸಬಹುದು. ಇವೆರಡೂ ಮಸೂದೆಗಳು ತಿರಸ್ಕೃತವಾದಾಗ್ಯೂ 1910 ಮತ್ತು 1930ರ ನಡುವಣ ಕಾಲದಲ್ಲಿ ಇಡೀ ದೇಶದ ಗಮನವನ್ನು ಶಿಕ್ಷಣದತ್ತ ಸೆಳೆದ ಮಸೂದೆಗಳಾಗಿದ್ದವು. ಸ್ವಇಚ್ಛೆಯಿಂದಾದ ಹಿಂದೆಂದೂ ಕಂಡಿರದಂತಹ ಪ್ರಾಥಮಿಕ ಶಿಕ್ಷಣದ ವಿಸ್ತಾರವಾಗಿ ಇದರಿಂದ 1916 ಮತ್ತು 1930ರ ಮಧ್ಯದ ಅವಧಿಯಲ್ಲಿ ವಿಭಿನ್ನ ಪ್ರಾಂತ್ಯಗಳು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನುಗಳನ್ನು ಜಾರಿಗೊಳಿಸುವಂತಾಯಿತು. ಇವುಗಳಲ್ಲಿ ಕೆಲವು ಕಾನೂನುಗಳನ್ನು ಸ್ವತಂತ್ರ ಬಂದ ನಂತರವೂ ರಾಜ್ಯಗಳು ಜಾರಿಯಲ್ಲಿರಿಸಿದ್ದವು. ಉದಾಹರಣೆಗೆ ಬಾಂಬೆ ಪ್ರಾಥಮಿಕ ಶಿಕ್ಷಣ ಕಾನೂನು 1918, ಬೆಂಗಾಲ್ ಪ್ರಾಥಮಿಕ ಶಿಕ್ಷಣ ಕಾಯ್ದೆ 1919, ಮದ್ರಾಸ್ ಪ್ರಾಥಮಿಕ ಶಿಕ್ಷಣ ಕಾಯ್ದೆ 1920, ಮತ್ತು ಬೆಂಗಾಲ್ (ಗ್ರಾಮೀಣ) ಪ್ರಾಥಮಿಕ ಶಿಕ್ಷಣ ಕಾಯ್ದೆ 1930 (ಮರಕೈಟ್, 1987).

**ಪ್ರಜಾಪ್ರಭುತ್ವವಾದಿ ಆಶೋತ್ತರಗಳು/ಹೆಗ್ಗುರಿಗಳು:**

ಯಾವುದೇ ಇತರ ಶಾಸನ ರಚನೆ ರಾಷ್ಟ್ರವೊಂದರ ಪ್ರಜಾಪ್ರಭುತ್ವವಾದಿ ಹೆಗ್ಗುರಿಗಳ ಸಹಜ ಪರಿಣಾಮವಾಗಿರುವಂತೆ ಶೈಕ್ಷಣಿಕಶಾಸನ ರಚನೆಯೂ ಆಗಿದೆ. ವಸಾಹತುಆಳ್ವಿಕೆಗೆ ಹೆಚ್ಚು ಸೂಕ್ತವಾದ ಶಾಸನಗಳನ್ನೇ ಆಂಗ್ಲರು ಬಹುಮಟ್ಟಿಗೆ ಜಾರಿಗೊಳಿಸುತ್ತಿದ್ದರಿಂದ ಈ ದಿಶೆಯಲ್ಲಿ ಪ್ರಜಾಪ್ರಭುತ್ವವಾದಿ ಹೆಗ್ಗುರಿಗಳನ್ನು ಸಾಧಿಸುವಲ್ಲಿ ಆಂಗ್ಲಆಳ್ವಿಕೆಯ ಸಮಯದಲ್ಲಿ ಅಡಚಣೆಯುಂಟಾಗಿತ್ತು. ಭಾರತದೇಶ ಸ್ವತಂತ್ರ ಪಡೆಯದ ಹೊರತು ಪ್ರಜಾಪ್ರಭುತ್ವವಾದಿ ಶಾಸನ ರಚನೆ ಅಸಾಧ್ಯವಾಗಿತ್ತು. ರಾಷ್ಟ್ರೀಯ ಆಂದೋಳನದಲ್ಲಿ ಬ್ರಿಟಿಷ್ ಆಳ್ವಿಕೆಯಿಂದ ಸ್ವತಂತ್ರರಾಗಲು ಕೈಗೊಂಡ ಹಲವಾರು ಪ್ರಯತ್ನಗಳನ್ನು ಕಾಣಬಹುದು.

ರಾಷ್ಟ್ರಜಾಗೃತಿಯು ಭಾರತದ ಪ್ರಜೆಗಳ ಅವಶ್ಯಕತೆಗಳು ಮತ್ತು ಉತ್ಕಾಂಕ್ಷೆಗಳಿಗೆ ಸುಸಂಬದ್ಧವಾದ ಶಿಕ್ಷಣಕ್ಕೆ ಬುನಾದಿಯನ್ನು ಹಾಕಿಕೊಟ್ಟಿತು. ಇದರ ಫಲವಾಗಿ ಮಹಾತ್ಮಗಾಂಧಿಯವರು ಮೂಲಶಿಕ್ಷಣವೆಂಬ ಅಪೂರ್ವ ಯೋಜನೆಯೊಂದನ್ನು ಮಂಡಿಸಿದರು. ಇದನ್ನು ಕಾಂಗ್ರೆಸ್ ಸರ್ಕಾರಗಳು 1937ರಲ್ಲಿ ಸ್ವತಂತ್ರಕ್ಕೆ ಮುನ್ನ ಹಾಗೂ ಸ್ವತಂತ್ರದ ನಂತರ 1966ರವರೆಗೆ ಭಾರತ ಸರ್ಕಾರ ಮತ್ತು ರಾಜ್ಯಗಳು 1968ರಲ್ಲಿ ಭಾರತದ ಸಂಸತ್ತು ಒಪ್ಪಿಕೊಂಡ ರಾಷ್ಟ್ರೀಯ ಶಿಕ್ಷಣ ನೀತಿಯ ರೂಪದಲ್ಲಿ ಭಾರತೀಯ ರಾಷ್ಟ್ರೀಯ ಶಿಕ್ಷಣ ಆಯೋಗದ (1966) ವರದಿಯನ್ನು ತನ್ನದಾಗಿಸಿಕೊಳ್ಳುವವರೆಗೂ ಮುಂದುವರೆಸಲಾಯಿತು.

**ಶಿಕ್ಷಣ ಆಯೋಗ (1964–66):**

ದೇಶದಲ್ಲಿ ಶೈಕ್ಷಣಿಕ ಶಾಸನ ರಚನೆಗೆ ಸಂಬಂಧಿಸಿದಂತೆ ಅದರ ಸ್ಥಿತಿಗತಿಗಳು ವೈವಿಧ್ಯಮಯವಾಗಿದ್ದು ಎಲ್ಲಾ ರಾಜ್ಯಗಳಲ್ಲೂ ಶಿಕ್ಷಣಕ್ಕೆ ಸಂವೈಧಾನಿಕ ಸ್ಥಾನಮಾನಗಳನ್ನು ಕೊಡಬೇಕು ಎಂದು ರಾಷ್ಟ್ರೀಯ ಶಿಕ್ಷಣ ಆಯೋಗವು (1964–66) ಉಲ್ಲೇಖಿಸಿತು. ಇದು ರಾಷ್ಟ್ರೀಯ ಶಿಕ್ಷಣ ಕಾಯ್ದೆಯನ್ನು ಜಾರಿಗೊಳಿಸಬೇಕೆಂದು ಸಹ ಸಲಹೆ ಮಾಡಿತಾದರೂ ಅದು ಘಟಿಸಲಿಲ್ಲ. ಈ ಸಂದರ್ಭದಲ್ಲಿ ಈ ಕೆಳಗಿನ ಆಯೋಗದ ವರದಿಯ ಒಂದು ಭಾಗ ಸಮಂಜಸವಾಗುವುದು.

Digitised by Bharatavani, CIIL

**ಶೈಕ್ಷಣಿಕ ಕಾಯ್ದೆಗಳು:** ಪ್ರಸ್ತುತದಲ್ಲಿ ಶೈಕ್ಷಣಿಕ ಶಾಸನರಚನೆ ನಗಣ್ಯ ಸನ್ನಿವೇಶವನ್ನು ನಮ್ಮ ಮುಂದಿರಿಸಿದೆ. ಬಹಳಷ್ಟು ರಾಜ್ಯಗಳಲ್ಲಿ ಇದು ಹಲವು ಕಾನೂನುಗಳಲ್ಲಿ ಹಂಚಿಹೋಗಿದ್ದು, ಇದರಲ್ಲಿ ಬಹಳಷ್ಟು ಇನ್ನೂ ಕಾರ್ಯಶಾಖೆಯ ಆದೇಶಗಳ ರೂಪದಲ್ಲಿವೆ. ಕೇರಳವೊಂದೇ ಶಿಕ್ಷಣಕಾಯ್ದೆಯನ್ನು ಹೊಂದಿರುವ ರಾಜ್ಯ. ಆದ್ದರಿಂದ ಶಿಕ್ಷಣಕ್ಕೆ ಎಲ್ಲೆಡೆಯೂ ಎಲ್ಲಾ ರಾಜ್ಯಗಳಲ್ಲಿಯೂ ಸಂವೈಧಾನಿಕ ಆಧಾರವನ್ನು ಕೊಟ್ಟು ಎಲ್ಲಾ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಿಕ್ಷಣ ಕಾಯ್ದೆಯನ್ನು ಜಾರಿಗೆ ತರಬೇಕು ಎಂದು ನಾವು ಶಿಫಾರಸ್ಸು ಮಾಡುತ್ತೇವೆ. ಈಗ ಅಸ್ತಿತ್ವದಲ್ಲಿರುವ ಇತರೆ ಎಲ್ಲಾ ಕಾನೂನುಗಳಿಗೆ ಬದಲಿಯಾಗಿರುವಂತಹ ಮತ್ತು ಈಗಿರುವ ಕಾರ್ಯಶಾಖೆಯ ಆದೇಶಗಳ ರೂಪದಲ್ಲಿರುವ ಕೆಲವು ಮುಖ್ಯ ಆಡಳಿತಾತ್ಮಕ ಅಂಶಗಳಿಗೆ )ಉದಾಹರಣೆಗೆ ಅನುದಾನದ ಕಾನೂನು) ಸಂವೈಧಾನಿಕ ಆಧಾರ ನೀಡುವಂತಹ ಸಮಗ್ರ ಹಾಗೂ ಏಕೀಕೃತ ಕ್ರಮ ಇದಾಗಿರಬೇಕು.

ಭಾರತ ಸರ್ಕಾರವು ರಾಜ್ಯಸರ್ಕಾರಗಳಿಗೆ ಮತ್ತು ಸ್ಥಳೀಯ ಅಧಿಕಾರಿಗಳಿಗೆ ಅವರ ಪ್ರದೇಶಗಳಲ್ಲಿ ಶೈಕ್ಷಣಿಕ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅನುಷ್ಠಾಗಿಸುವಲ್ಲಿ ಮಾರ್ಗದರ್ಶನ ನೀಡಲು ಸಹಾಯಕವಾಗುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕುರಿತಂತೆ ಒಂದು ಘೋಷಣೆಯನ್ನು ಹೊರಡಿಸಬೇಕು. ರಾಷ್ಟ್ರೀಯಶಿಕ್ಷಣ ಕಾಯ್ದೆಯನ್ನು ಜಾರಿಗೊಳಿಸುವ ಸಾಧ್ಯತೆಯನ್ನು ಸಹ ಪರೀಕ್ಷಿಸಬೇಕು.

**ರಾಷ್ಟ್ರೀಯ ಶಿಕ್ಷಣ ನೀತಿ (1986):**

ಪುನಃ 1986ರಲ್ಲಿ ಭಾರತೀಯ ಸಂಸತ್ತು ಮತ್ತೊಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಂಗೀಕರಿಸಿತು. ಇದನ್ನು 1993ರಲ್ಲಿ ಮತ್ತೆ ಪರಿಷ್ಕರಿಸಲಾಯಿತು. ಇದನ್ನು 1993ರಲ್ಲಿ ಮತ್ತಿ ಪರಿಷ್ಕರಿಸಲಾಯಿತು. 1968ರ ರಾಷ್ಟ್ರೀಯ ಶಿಕ್ಷಣ ನೀತಿಯು 1964–66ರ ಭಾರತೀಯ ರಾಷ್ಟ್ರೀಯ ಶಿಕ್ಷಣ ಆಯೋಗದ ಸಲಹೆಗಳ ಪರಿಣಾಮದಂತಿದ್ದರೆ, 1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಸಿದ್ಧ ಶಿಕ್ಷಣ ತಜ್ಞರು, ಶೈಕ್ಷಣಿಕ ಆಡಳಿತಗಾರರು ಮತ್ತು ಅಧ್ಯಾಪಕರುಗಳ ವ್ಯಾಪಕ ಚರ್ಚೆಯ ಫಲಿತಾಂಶವಾಗಿತ್ತು. ವಿಶ್ವವಿದ್ಯಾನಿಲಯ ಶಿಕ್ಷಣ (1948) ಮತ್ತು ಮಾಧ್ಯಮಿಕ ಶಿಕ್ಷಣ (1952–53)ಗಳಿಗೆ ಸಂಬಂಧಿಸಿದ ಮುಂಚಿನ ಆಯೋಗಗಳು ಮಾಡಿದ ಸಲಹೆಗಳು ಸಹ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಭಾವಿಸಿದವು. ಲಭ್ಯತೆಯ ಸಮಸ್ಯೆಗಳು, ಗುಣಮಟ್ಟ ಮತ್ತು ಪರಿಮಾಣ, ಶಾಲಾ ಸ್ತರದಲ್ಲಿ ರಾಷ್ಟ್ರೀಯ ಮೂಲಭೂತ ಪಠ್ಯಕ್ರಮದ ಜೊತೆಗಿನ ಶಿಕ್ಷಣ ರಾಷ್ಟ್ರೀಯ ಮಾದರಿ (10+2+3), ಕೇಂದ್ರ ಮತ್ತು ರಾಜ್ಯಗಳ ನಡುವೆ ಅರ್ಥಪೂರ್ಣ ಸಹಭಾಗಿತ್ವ ಮತ್ತು ಮಾನವಶಕ್ತಿಯ ಬೆಳವಣಿಗೆ ಇವೇ ಮುಂತಾದವುಗಳನ್ನು 1986ರ ರಾಷ್ಟ್ರೀಯ ನೀತಿ ಚರ್ಚಿಸಿತು. ತಾರತಮ್ಯಗಳ ನಿರ್ಮೂಲನ, ಸಮಾನ ಶೈಕ್ಷಣಿಕ ಅವಕಾಶಗಳು, ಮಹಿಳಾ ಸಮಾನತೆ ಕುರಿತಂತೆ ಶಿಕ್ಷಣ ಮತ್ತು ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ವರ್ಗಗಳ ಶಿಕ್ಷಣ ಇವುಗಳಿಗೆ ಒತ್ತನ್ನು ನೀಡಲಾಯಿತು. ಈ ನೀತಿಯ ಅನುಷ್ಠಾನದ ಫಲಸ್ವರೂಪವಾಗಿ ಕಾರ್ಯಚಟುವಟಿಕೆಗಳು ಈ ಮುಂದಿನವುಗಳನ್ನು ಒಳಗೊಂಡಿದ್ದವು. ಪ್ರಾಥಮಿಕ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಆಪರೇಷನ್ ಕಪ್ಪು ಹಲಗೆ, ಏಕಶಿಕ್ಷಕ ಪ್ರಾಥಮಿಕ ಶಾಲೆಗಳನ್ನು ದ್ವಿಶಿಕ್ಷಕ ಶಾಲೆಗಳನ್ನಾಗಿ ಪರಿವರ್ತಿಸುವುದು, ಹೆಚ್ಚುವರಿ ಕೊಠಡಿಗಳನ್ನು ಒದಗಿಸುವುದು, ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆ (DIET) ಆರಂಭ, ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿಪರ ಬೆಳವಣಿಗೆಗಾಗಿ ತರಬೇತಿ, ಪ್ರತಿಭಾವಂತ ಗ್ರಾಮೀಣ ಮಕ್ಕಳಿಗಾಗಿ ಪಥ ಪ್ರದರ್ಶಕವಾದ ನವೋದಯ ವಿದ್ಯಾಲಯಗಳೆಂಬ ಹೊಸಶಾಲೆಗಳು, ಅನೌಪಚಾರಿಕ ಶೈಕ್ಷಣಿಕ ಕೇಂದ್ರಗಳು ಇತ್ಯಾದಿ.

ಶೈಕ್ಷಣಿಕ ಸಮಸ್ಯೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಕುರಿತಂತೆ ಮತ್ತು ಸರ್ವೋಚ್ಚ ನ್ಯಾಯಾಲಯಗಳು ನೀಡುವ ಪ್ರಮುಖ ತೀರ್ಪುಗಳು ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ಸರ್ಕಾರಿ ಆದೇಶದ (GO) ರೂಪದಲ್ಲಿ ಕಾರ್ಯಸೂಚನೆಗಳನ್ನು ಆಧರಿಸಿರುವ ತಮ್ಮ ಶೈಕ್ಷಣಿಕ ಸೂತ್ರಗಳನ್ನು ರೂಪಿಸುವುದಕ್ಕೆ ಮಾರ್ಗದರ್ಶಿಗಳಂತಿರುವ ಸಾಂಧರ್ಭಿಕ ಕಾನೂನುಗಳನ್ನು ಒದಗಿಸುತ್ತವೆ.

**ಪಂಚವಾರ್ಷಿಕ ಯೋಜನೆಗಳು:**

ರಾಷ್ಟ್ರೀಯ ಅಭಿವೃದ್ಧಿಗಾಗಿ ಪ್ರತಿಯೊಂದು ಪಂಚವಾರ್ಷಿಕ ಯೋಜನೆ ಶಿಕ್ಷಣ ಕ್ಷೇತ್ರವನ್ನು ಕುರಿತಂತೆ ಯೋಜನೆಯನ್ನು ಹೊಂದಿದ್ದು, ಶಿಕ್ಷಣದ ಅಭಿವೃದ್ಧಿ ಸಾಗಬೇಕಿರುವ ದಿಶೆಗಳನ್ನು ವ್ಯಾಖ್ಯಾನಿಸಿ ವಿಭಿನ್ನ ಯೋಜನೆ ಹಾಗೂ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯಸರ್ಕಾರಗಳ ಜವಾಬ್ದಾರಿಗಳನ್ನು ಸ್ಪಷ್ಟಪಡಿಸುತ್ತದೆ. ಅಲ್ಲದೆ, ಶಾಲಾ ದಾಖಲಾತಿಗಳ ಲಕ್ಷ್ಯವೆಷ್ಟು, ಮುಂದಿನ ಐದು ವರ್ಷಗಳಲ್ಲಿನ ಹಾಜರಾತಿ ಮತ್ತು ಆಗಬೇಕಿರುವ ಸಾಧನೆಗಳೇನು ಎಂಬುದನ್ನೂ ಸಹ ಇದು ಸ್ಪಷ್ಟಪಡಿಸುತ್ತದೆ.

**ಶಾಸನ ರಚನೆಯ ಅಧಿಕಾರದ ಮೂಲಗಳು: ಭಾರತದ ಸಂವಿಧಾನ:** ಭಾರತದ ಸಂವಿಧಾನ ಜನವರಿ 26, 1950ರಂದು ಜಾರಿಗೆ ಬಂದಿತು. ಇದು ಶಿಶುಕಲ್ಯಾಣ, ಮಕ್ಕಳ ಹಕ್ಕುಗಳು, ಮಕ್ಕಳ ಕೂಲಿ/ಬಾಲಶ್ರಮ, ಕಡ್ಡಾಯ ಶಿಕ್ಷಣ, ಅಲ್ಪಸಂಖ್ಯಾತರಿಗೆ ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯಲು ಸ್ವಾತಂತ್ರ್ಯ, ಧಾರ್ಮಿಕ ಬೋಧನೆ, ಇವೇ ಮೊದಲಾದ ಹಲವಾರು ಲಿಖಿತ ಕಾನೂನುಗಳನ್ನು ಹೊಂದಿರುವುದರಿಂದ ಶೈಕ್ಷಣಿಕ ಶಾಸನ ರಚನೆಗೆ ಮುಖ್ಯ ಸ್ರೋತವಾಗಿದೆ. ಇವುಗಳನ್ನು ಈ ಕೆಳಗೆ ಅವು ಸಂವಿಧಾನದಲ್ಲಿ ಕಾಣಿಸಿಕೊಳ್ಳುವ ಕ್ರಮದಲ್ಲಿಯೇ ಕೊಡಲಾಗಿದೆ.

**ಏಳನೆಯ ಷೆಡ್ಯೂಲ್ (ಅನುಚ್ಛೇದ 246):**

ಸಂಯುಕ್ತ ಪಟ್ಟಿಯ 66ನೆಯ ದಾಖಲು ಮತ್ತು ಸಹವರ್ತಿಪಟ್ಟಿಯ 25ನೆಯ ದಾಖಲು ಏಳನೆಯ ಷೆಡ್ಯೂಲ್ ಅಡಿಯಲ್ಲಿ ಅಧಿಕಾರಪ್ರದವಾಗಿದ್ದು, ಕ್ರಮವಾಗಿ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳು ಕೈಗೊಳ್ಳಬಲ್ಲ ಶೈಕ್ಷಣಿಕ ಶಾಸನ ರಚನೆಯ ಪ್ರಾಚಲಗಳನ್ನು ಸ್ಪಷ್ಟಪಡಿಸುತ್ತದೆ.

Digitised by Bharatavani, CIIL

**ಪಟ್ಟಿ I – ಸಂಯುಕ್ತ ಪಟ್ಟಿ(ಕೇಂದ್ರ ಪಟ್ಟಿ)**

**66ನೇ ನಮೂದು:** ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಥವಾ ಸಂಶೋಧನೆ ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳಲ್ಲಿ ಸಂಯೋಜನೆ ಮತ್ತು ಮಾನದಂಡಗಳ ನಿಶ್ಚಯ.

**ಪಟ್ಟಿ III – ಸಹವರ್ತಿ ಪಟ್ಟಿ**

25ನೇ ನಮೂದು: ಪಟ್ಟಿ 1ರಲ್ಲಿನ 63, 64, 65 ಮತ್ತು 66ನೇ ದಾಖಲುಗಳಲ್ಲಿನ ಷರತ್ತುಗಳಿಗೆ ಒಳಪಟ್ಟಂತೆ ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣಗಳೂ ಸೇರಿದಂತೆ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳು, ಔದ್ಯೋಗಿಕ ಮತ್ತು ಕಾರ್ಮಿಕವರ್ಗದ ತಾಂತ್ರಿಕ ತರಬೇತಿ.

ಭಾರತೀಯ ಸಂಸತ್ತು ಕೇಂದ್ರಪಟ್ಟಿ ಅಥವಾ ಸಹವರ್ತಿಪಟ್ಟಿಯಲ್ಲಿ ಪಟ್ಟಿಮಾಡಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ಜಾರಿಗೊಳಿಸಬಹುದಾದರೆ ರಾಜ್ಯ ವಿಧಾನಸಭೆ, ರಾಜ್ಯಪಟ್ಟಿಯಲ್ಲಿ ನಮೂದಾಗಿರುವ ವಿಷಯಗಳ ಮೇಲೆ ಕಾನೂನು ರೂಪಿಸಬಹುದಾಗಿದೆ. 1976ರವರೆಗೂ ಶಾಲಾಶಿಕ್ಷಣ ರಾಜ್ಯಪಟ್ಟಿಯಲ್ಲಿ ಆದರೆ ಸಂವಿಧಾನ (42ನೆ ತಿದ್ದುಪಡಿ) ಕಾಯ್ದೆ, 1976ರ ಅಡಿ ನಮೂದಾಗಿದ್ದು ನಂತರ 1977, ಜನವರಿ 3ರಂದು ಇದನ್ನು ಸಹವರ್ತಿ ಪಟ್ಟಿಗೆ ವರ್ಗಾಯಿಸಿ ಜಾರಿಗೊಳಿಸಲಾಯಿತು. ಸಹವರ್ತಿ ಒದಗಣೆಯ ಅಡಿಯಲ್ಲಿ ಒಂದೇ ವಿಷಯದ ಮೇಲಿನ ರಾಜ್ಯದ ಕಾನೂನು ಕೇಂದ್ರದ ಕಾನೂನಿನ ಜೊತೆ ವಿರೋಧ/ ಅಸಾಂಗತ್ಯವನ್ನು ಹೊಂದಿದ್ದಲ್ಲಿ ಆ ವಿರೋಧವು ಕಳೆಯುವಷ್ಟರಮಟ್ಟಿಗೆ ರಾಜ್ಯದ ಆ ಕಾನೂನು ಅನೂರ್ಜಿತವಾಗುವುದು. ಆದರೆ ಅಂತಹ ಅಸಾಂಗತ್ಯಕ್ಕೆ ಕೇಂದ್ರ ಸರ್ಕಾರದ ಅನುಮತಿಯಿತ್ತರೆ ಅದು ಅಸ್ತಿತ್ವಕ್ಕೆ ಬರಬಹುದು. ಆದಾಗ್ಯೂ ವ್ಯಾವಹಾರಿಕವಾಗಿ ರಾಜ್ಯಸರ್ಕಾರಗಳು ಶಾಲಾಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಕಾನೂನು ರಚಿಸುವ ಅಧಿಕಾರವನ್ನು ಚಲಾಯಿಸುತ್ತಾ ಬಂದಿವೆ. ಕಾರಣ, ಪ್ರಾದೇಶಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ವ್ಯತ್ಯಾಸಗಳು ಎದ್ದು ಕಾಣುವಂತಿರುವ ಭಾರತದಂತಹ ವಿಶಾಲ ದೇಶದಲ್ಲಿ ಸ್ಥಳೀಯ ಅವಶ್ಯಕತೆಗಳು ಮತ್ತು ಜನರ ಅಭೀಪ್ಸೆಗಳಿಗೆ ಅನುಗುಣವಾಗಿ ಈ ವಿಷಯದೊಡನೆ ರಾಜ್ಯವು ವ್ಯವಹರಿಸುವುದು ಹೆಚ್ಚು ಸೂಕ್ತವಾಗಿದೆ. ಆದ್ದರಿಂದ ವ್ಯಾವಹಾರಿಕವಾಗಿ ಇಂದಿಗೂ ಶಾಲಾಶಿಕ್ಷಣ ಕಾನೂನು ರಚನೆಯ ಅಧಿಕಾರದ ವಿಷಯದಲ್ಲಿ ರಾಜ್ಯದ ವಿಷಯದಂತೆಯೇ ಆಗಿದೆ. ಕೇಂದ್ರಸರ್ಕಾರವು ತನ್ನದೇ ಆದ ನಿಯಮಿತ ರಾಷ್ಟ್ರೀಯ ಶಿಕ್ಷಣ ಇಲಾಖೆಯನ್ನು ಹೊಂದಿಲ್ಲದೆ ರಾಜ್ಯ ಶಿಕ್ಷಣ ಇಲಾಖೆಗಳನ್ನು ಅವಲಂಬಿಸಿ ಅವುಗಳ ಅನುಷ್ಠಾನಕ್ಕೆ ಧನಸಹಾಯ ನೀಡಬೇಕಾಗಿರುವುದು ಇದಕ್ಕೆ ಕಾರಣ.

ಕೇಂದ್ರಿಯ ವಿದ್ಯಾಲಯಗಳು, ಸೈನಿಕ ಶಾಲೆಗಳು, ನವೋದಯ ಶಾಲೆಗಳು, ರಾಷ್ಟ್ರೀಯ ಮುಕ್ತ ಶಾಲೆಗಳು, ಇಂಡೋ–ಟಿಬೇಟಿಯನ್ ಶಾಲಾ ಸಂಘ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆ, ವಯಸ್ಕರ ಶಿಕ್ಷಣ ವಿಭಾಗ ಮತ್ತು ಶಾಲಾ ಶಿಕ್ಷಣದ ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಬೋರ್ಡ್ ಮತ್ತು ಉನ್ನತ ಶಿಕ್ಷಣದ ವಿಶ್ವವಿದ್ಯಾನಿಲಯ ಆಯೋಗ – ಇವೇ ಮೊದಲಾದ ವಿಶೇಷ ಯೋಜನೆಗಳ ಆಡಳಿತದ ಸಲುವಾಗಿ ಭಾರತ ಸರ್ಕಾರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದಡಿ ಶಿಕ್ಷಣ ವಿಭಾಗವೊಂದನ್ನು ಹೊಂದಿದೆ.

**ಶಿಕ್ಷಣ ಮತ್ತು ಮಕ್ಕಳಿಗೆ ಸಂಬಂಧಿಸಿದಂತೆ ಸಂವಿಧಾನದ ಕಾಯ್ದೆಗಳು:**

ಶಿಕ್ಷಣಕ್ಕೆ ಸಂಗತವಾದ ಸಂವಿಧಾನದ ಇತರ ಕಾನೂನುಗಳನ್ನು ಈ ಕೆಳಗೆ ಪಟ್ಟಿಮಾಡಿದೆ. ಅವು ಶೈಕ್ಷಣಿಕ ಶಾಸನ ರಚನೆಗೆ ಅಧಿಕಾರ ನೀಡುವ ಮೂಲಗಳೂ ಸಹ ಆಗಿವೆ.

**ಮೂಲಭೂತ ಹಕ್ಕುಗಳು:**

**ಪರಿಚ್ಛೇದ 15(3):** ಈ ಕಾನೂನಿನಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ರಾಜ್ಯವು ವಿಶೇಷ ಕಾನೂನುಗಳನ್ನು ರೂಪಿಸುವುದಕ್ಕೆ ತಡೆಯಾಗುವಂಥದ್ದು ಯಾವುದೂ ಇಲ್ಲ.

**ಪರಿಚ್ಛೇದ 21:** ಪ್ರಾಣರಕ್ಷಣೆ ಮತ್ತು ವೈಯಕ್ತಿಕ ಸ್ವಾತಂತ್ರ: ಯಾವ ವ್ಯಕ್ತಿಯನ್ನೂ ಕಾನೂನು ರೀತ್ಯಾ ಸ್ಥಾಪಿಸಲಾದ ಕ್ರಮಕ್ಕೆ ಹೊರತಾಗಿ, ಆತನ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರದಿಂದ ವಂಚಿಸುವಂತಿಲ್ಲ.

**ಪರಿಚ್ಛೇದ 23:** ಮನುಷ್ಯರ ಸಾಗಣೆಯ ನಿಷೇದ ಮತ್ತು ಬಲವಂತದ ಕೂಲಿ:

1) ಮನುಷ್ಯರ ಸಾಗಾಣಿಕೆ ಮತ್ತು ಭಿಕ್ಷೆ ಹಾಗೂ ಇನ್ನಿತರ ಸಮಾನ ರೂಪದ ಬಲವಂತದ ಕೂಲಿಗಳನ್ನು ನಿಷೇದಿಸಲಾಗಿದೆ ಹಾಗೂ ಈ ಕಾನೂನಿನ ಯಾವುದೇ ತೆರನ ಉಲ್ಲಂಘನೆ ಕಾನೂನಿನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆನಿಸಿಕೊಳ್ಳುವುದು.

2) ಸಾರ್ವಜನಿಕ ಉದ್ದೇಶಗಳಿಗಾಗಿ ರಾಜ್ಯವನ್ನು ಕಡ್ಡಾಯ ಸೇವೆಯನ್ನು ವಿಧಿಸುವುದರಿಂದ ತಡೆಯುವಂತಹುದು. ಈ ಕಾನೂನಿನಲ್ಲಿ ಇಲ್ಲ ಮತ್ತು ಹೀಗೆ ಅಂತಹ ಸೇವೆಯನ್ನು ವಿಧಿಸುವಾಗ ರಾಜ್ಯವು ಕೇವಲ ಧರ್ಮ, ಕುಲ, ಜಾತಿ ಅಥವಾ ವರ್ಗ ಅಥವಾ ಇವುಗಳಲ್ಲಿ ಯಾವುದಾದರೂ ಒಂದರ ಆಧಾರದ ಮೇಲೆ ತಾರತಮ್ಯವನ್ನು ತೋರುವಂತಿಲ್ಲ.

**ಅನುಚ್ಛೇದ 24: ಕಾರ್ಖಾನೆಗಳಲ್ಲಿ ಮಕ್ಕಳನ್ನು ಉದ್ಯೋಗಕ್ಕೆ ಇರಿಸಿಕೊಳ್ಳುವುದರ ನಿಷೇದ ಇತ್ಯಾದಿ:** ಹದಿನಾಲ್ಕು ವರ್ಷದ ಕೆಳಗಿನ ಯಾವ ಮಗುವನ್ನು ಯಾವುದೇ ಕಾರ್ಖಾನೆ ಅಥವಾ ಗಣಿಗಳಲ್ಲಿ ಅಥವಾ ಇನ್ಯಾವುದೇ ಅಪಾಯಕರ ಉದ್ಯೋಗದಲ್ಲಿ ತೊಡಗಿಸುವಂತಿಲ್ಲ.

**ಅನುಚ್ಛೇದ 28**: ಕೆಲವು ನಿರ್ದಿಷ್ಟ ಶೈಕ್ಷಣಿಕ ಸಂಸ್ಥೆಗಳಲ್ಲಿ ಧಾರ್ಮಿಕ

Digitised by Bharatavani, CIIL

ಬೋಧನೆ ಅಥವಾ ಧಾರ್ಮಿಕ ಆರಾಧನೆಗೆ ಹಾಜರಾಗುವುದಕ್ಕೆ ಸಂಬಂಧಿಸಿದ ಸ್ವಾತಂತ್ರ್ಯ:

1) ರಾಜ್ಯನಿಧಿಗಳಿಂದ ಪೂರ್ಣರೀತಿಯಲ್ಲಿ ಬೆಂಬಲ ಪಡೆಯುತ್ತಿರುವ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಧಾರ್ಮಿಕ ಬೋಧನೆ ನೀಡುವಂತಿಲ್ಲ.

2) ರಾಜ್ಯದ ಆಡಳಿತಕ್ಕೆ ಒಳಪಟ್ಟ ಆದರೆ ಧಾರ್ಮಿಕ ಬೋಧನೆ ನೀಡಬೇಕಾಗಿರುವಂತಹ ಯಾವುದೇ ಪುದುವಟ್ಟು ಇಲ್ಲವೇ ಟ್ರಸ್ಟ್‌ನ ಅಡಿಯಲ್ಲಿ ಸಂಸ್ಥಾಪಿಸಲಾಗಿರುವ ಶೈಕ್ಷಣಿಕ ಸಂಸ್ಥೆಗಳಿಗೆ ವಿಧಿ (1) ಯಾವುದೇ ರೀತಿಯಲ್ಲಾಗಲಿ ಅನ್ವಯಿಸುವುದಿಲ್ಲ.

3) ರಾಜ್ಯದಿಂದ ಮಾನ್ಯತೆ ಪಡೆದ ಅಥವಾ ರಾಜ್ಯನಿಧಿಯಿಂದ ಸಹಾಯ ಪಡೆಯುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಹಾಜರಾಗುವ ಯಾವುದೇ ವ್ಯಕ್ತಿ ಅಂಥ ಸಂಸ್ಥೆಯಲ್ಲಾಗಲಿ ಅಥವಾ ಅದಕ್ಕೆ ಹೊಂದಿಕೊಂಡಂತಿರುವ ಆವರಣದಲ್ಲಾಗಲಿ ಆಯೋಜಿಸಲಾದ ಯಾವುದೇ ಧಾರ್ಮಿಕ ಬೋಧನೆಯಲ್ಲಿ ಹಾಜರಾಗಲೇಬೇಕೆಂಬ ನಿರ್ಬಂಧವಿಲ್ಲ. ಅಂಥ ವ್ಯಕ್ತಿಯ ಒಪ್ಪಿಗೆಯಿದ್ದಲ್ಲಿ ಅಥವಾ ಅಂಥ ವ್ಯಕ್ತಿಯು ಅಪಾಪ್ತ ವಯಸ್ಕನಾದಲ್ಲಿ ಆ ವ್ಯಕ್ತಿಯ ಪಾಲಕರ ಒಪ್ಪಿಗೆಯಿದ್ದಲ್ಲಿ ಅಲ್ಲಿಗೆ ಹಾಜರಾಗಲು ಅಡ್ಡಿಯಿಲ್ಲ.

**ಅನುಚ್ಛೇದ ಕಾಯ್ದೆ: 29 ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ:**

1) ತನ್ನದೇ ಆದ ಪ್ರತ್ಯೇಕ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿರುವ ಭಾರತದ ಭೂಪ್ರದೇಶದಲ್ಲಿ ಅಥವಾ ಅದರ ಯಾವುದೇ ಭೂಭಾಗದಲ್ಲಿ ನೆಲೆಸಿರುವ ಪ್ರಜೆಗಳ ಯಾವುದೇ ಒಂದು ಭಾಗ ಇವುಗಳನ್ನು ಉಳಿಸಿಕೊಳ್ಳುವ ಹಕ್ಕನ್ನು ಹೊಂದಿರುವುದು.

2) ರಾಜ್ಯದಿಂದ ನಡೆಸಲಾಗುವ ಅಥವಾ ರಾಜ್ಯದ ಧನರಾಶಿಯಿಂದ ಸಹಾಯವನ್ನು ಪಡೆಯುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಯಾವ ಪ್ರಜೆಯನ್ನೂ ಸಹ ಕೇವಲ ಧರ್ಮ, ಕುಲ, ಜಾತಿ, ಭಾಷೆ ಅಥವಾ ಇದಾವುದಾದರೂ ಒಂದರ ಆಧಾರದ ಮೇಲೆ ಪ್ರವೇಶವನ್ನು ನಿಷೇದಿಸುವಂತಿಲ್ಲ.

**ಅನುಚ್ಛೇದ 30: ಶೈಕ್ಷಣಿಕ ಸಂಸ್ಥೆಗಳ ಸಂಸ್ಥಾಪನೆ ಮತ್ತು ಆಡಳಿತಗಳಲ್ಲಿ ಅಲ್ಪಸಂಖ್ಯಾತರ ಹಕ್ಕು:**

1) ಎಲ್ಲಾ ಅಲ್ಪಸಂಖ್ಯಾತರು, ಧರ್ಮವನ್ನಾಗಲಿ ಅಥವಾ ಭಾಷೆಯನ್ನಾಗಲಿ ಆಧರಿಸಿರಲಿ, ತಮ್ಮ ಆಯ್ಕೆಯ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಹಕ್ಕನ್ನು ಹೊಂದಿರುತ್ತಾರೆ. [(1–A) ವಿಧಿ(1)ರಲ್ಲಿ ಹೇಳಿರುವಂತೆ ಅಲ್ಪಸಂಖ್ಯಾತರಿಂದ ಸ್ಥಾಪಿಸಲಾದ ಮತ್ತು ನಿರ್ವಹಿಸಲಾದ ಶೈಕ್ಷಣಿಕ ಸಂಸ್ಥೆಯೊಂದರ ಯಾವುದೇ ಆಸ್ತಿಯ ಕಡ್ಡಾಯದ ಸ್ವಾಮ್ಯಕ್ಕೆ ಸಂಬಂಧಿಸಿದ ಕಾನೂನು ರೂಪಿಸುವಾಗ ಅಂತಹ ಆಸ್ತಿಯನ್ನು ಸ್ವಾಮ್ಯಕ್ಕೆ ತೆಗೆದುಕೊಳ್ಳಲು ಅವಕಾಶ ನೀಡುವ ಅಂತಹ ಕಾನೂನಿನ ಅಡಿಯಲ್ಲಿ ನಿಗದಿಪಡಿಸಲಾದ ಅಥವಾ ನಿಶ್ಚಿತಗೊಳಿಸಲಾದ ಮೊಬಲಗು ಆ ವಿಧಿಯ ಅಡಿಯಲ್ಲಿನ ಹಕ್ಕಿನ ಆಶ್ವಾಸನೆ ಸೀಮಿತಗೊಳ್ಳದಂತೆ ಅಥವಾ ರದ್ದಾಗದಂತೆ/ ನಿರಾಕರಣೆಗೊಳ್ಳದಂತೆ ರಾಜ್ಯವು ಖಚಿತಪಡಿಸಿಕೊಳ್ಳಬೇಕು.

2) ಶೈಕ್ಷಣಿಕ ಸಂಸ್ಥೆಗಳಿಗೆ ಸಹಾಯ ನೀಡುವಲ್ಲಿ ನಿರ್ವಹಣೆಯ ಧಾರ್ಮಿಕ ಅಥವಾ ಭಾಷಿಕ ಆಧಾರದ ಮೇಲಿನ ಅಲ್ಪಸಂಖ್ಯಾತರಿಂದ ನಡೆಯುತ್ತಿದೆಯೆಂಬ ನೆಲೆಗಟ್ಟಿನಲ್ಲಿ ಯಾವುದೇ ಶೈಕ್ಷಣಿಕ ಸಂಸ್ಥೆಯನ್ನು ಕುರಿತಂತೆ ತಾರತಮ್ಯವನ್ನು ತೋರುವಂತಿಲ್ಲ.

**ರಾಜ್ಯನೀತಿಯ ನಿರ್ದೇಶಕ ತತ್ವಗಳು:**

**ಅನುಚ್ಛೇದ 39(c):** ಪುರುಷ ಮತ್ತು ಮಹಿಳಾ ಕಾರ್ಮಿಕರ ಆರೋಗ್ಯ ಮತ್ತು ಬಲ ಹಾಗೂ ಮಕ್ಕಳ ಎಳೆಯ ವಯಸ್ಸು ದುರುಪಯೋಗ ಆಗುವುದಿಲ್ಲ ಮತ್ತು ಪ್ರಜೆಗಳು ಆರ್ಥಿಕ ಅಗತ್ಯದಿಂದಾಗಿ ತಮ್ಮ ವಯೋಮಾನ ಮತ್ತು ಬಲಕ್ಕೆ ಅನುಗುಣವಲ್ಲದ ಉದ್ಯೋಗವನ್ನು ಪ್ರವೇಶಿಸುವುದಿಲ್ಲ.

**ಅನುಚ್ಛೇದ 39(f):** ಮಕ್ಕಳಿಗೆ ಆರೋಗ್ಯಕರ ರೀತಿಯಲ್ಲಿ ಮತ್ತು ಸ್ವತಂತ್ರ ಹಾಗೂ ಗೌರವಯುತ ಪರಿಸರದಲ್ಲಿ ವಿಕಾಸಗೊಳ್ಳಲು ಅವಕಾಶಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಲಾಗುವುದು ಮತ್ತು ಬಾಲ್ಯ ಹಾಗೂ ಯೌವನಗಳನ್ನು ಪೋಷಣೆಯಿಂದ ಮತ್ತು ನೈತಿಕ ಹಾಗೂ ಭೌತಿಕ ತ್ಯಾಗಗಳಿಂದ ರಕ್ಷಿಸಲಾಗುವುದು.

**ಅನುಚ್ಛೇದ 41: ಕೆಲವು ಸಂದರ್ಭಗಳಲ್ಲಿ ಉದ್ಯೋಗದ, ಶಿಕ್ಷಣದ ಮತ್ತು ಸಾರ್ವಜನಿಕ ಸಹಾಯದ ಹಕ್ಕು:**

ರಾಜ್ಯವು ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಬೆಳವಣಿಗೆಯ ಪರಿಧಿಯಲ್ಲಿ ನಿರುದ್ಯೋಗ, ವೃದ್ಧಾಪ್ಯ, ರೋಗ ಮತ್ತು ಅಸಾಮರ್ಥ್ಯ ಮತ್ತು ಇನ್ನಿತರ ಅಪೇಕ್ಷಣೀಯವಾದ ಬಯಕೆಗಳ ಸಂದರ್ಭಗಳಲ್ಲಿ ಉದ್ಯೋಗದ, ಶಿಕ್ಷಣದ ಮತ್ತು ಸಾರ್ವಜನಿಕ ಸಹಾಯದ ಹಕ್ಕನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಪ್ರಭಾವಶಾಲಿ ಕಾನೂನುಗಳನ್ನು ರಚಿಸಬೇಕು.

**ಅನುಚ್ಛೇದ 45: ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಪ್ರಾವಧಾನ:**

ರಾಜ್ಯವು ಈ ಸಂವಿಧಾನ ಪ್ರಾರಂಭದ ಹತ್ತು ವರ್ಷಗಳ ಅವಧಿಯ ಒಳಗೆ ಎಲ್ಲಾ ಮಕ್ಕಳಿಗೂ ಅವರು ಹದಿನಾಲ್ಕು ವರ್ಷ ವಯೋಮಾನ ತಲುಪವವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವ ಪ್ರಯತ್ನ ಮಾಡಬೇಕು.

**ಅನುಚ್ಛೇದ 51(c):** ಅಂತರರಾಷ್ಟ್ರೀಯ ಕಾನೂನು ಮತ್ತು ಸಂಧಾನದ ಕರಾರುಗಳನ್ನು ಕುರಿತಾದ ಗೌರವವನ್ನು ಸಂಘಟಿತ ದೇಶಗಳೊಡನೆ ವ್ಯವಹರಿಸುವಾಗ ತೋರುವ ಮನೋಭಾವವನ್ನು ಬೆಳೆಸಬೇಕು.

**ಅನುಚ್ಛೇದ 51–A: ಮೂಲಭೂತ ಕರ್ತವ್ಯಗಳು:** ಈ ಕೆಳಗಿನವುಗಳು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯಗಳಾಗಿವೆ.

Digitised by Bharatavani, CIIL

a) ಸಂವಿಧಾನಕ್ಕೆ ಬದ್ಧನಾಗಿರುವುದು ಮತ್ತು ಅದರ ಆದರ್ಶಗಳು ಮತ್ತು ಸಂಸ್ಥಾಪನೆಗಳು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸುವುದು.

b) ನಮ್ಮ ರಾಷ್ಟ್ರೀಯ ಸ್ವತಂತ್ರ ಸಂಗ್ರಾಮವನ್ನು ಪ್ರಭಾವಿಸಿದ ಉದಾತ್ತ ಆದರ್ಶಗಳನ್ನು ಸ್ಮರಿಸಿಕೊಂಡು ಅನುಸರಿಸುವುದು.

c) ಭಾರತದ ಪ್ರಭುತ್ವ, ಐಕ್ಯತೆ ಮತ್ತು ಸಮಗ್ರತೆಗಳನ್ನು ಎತ್ತಿಹಿಡಿಯುವುದು ಮತ್ತು ರಕ್ಷಿಸುವುದು

d) ದೇಶವನ್ನು ರಕ್ಷಿಸುವುದು ಮತ್ತು ಯುದ್ಧಕ್ಕೆ ಕರೆಬಂದಾಗ ರಾಷ್ಟ್ರಸೇವೆ ಸಲ್ಲಿಸುವುದು.

e) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ವಿಭಾಗೀಯ ತಾರತಮ್ಯಗಳನ್ನು ಮೀರಿ ಭಾರತದ ಪ್ರಜೆಗಳ ನಡುವೆ ಸಾಮರಸ್ಯ ಮತ್ತು ಭ್ರಾತೃತ್ವದ ಮನೋಭಾವವನ್ನು ಪ್ರೋತ್ಸಾಹಿಸುವುದು: ಮಹಿಳೆಯರ ಗೌರವಕ್ಕೆ ಧಕ್ಕೆ ತರುವ ಆಚಾರಗಳನ್ನು ತ್ಯಜಿಸುವುದು.

f) ನಮ್ಮ ಸಮ್ಮಿಳಿತ ಸಂಸ್ಕೃತಿಯ ಶ್ರೀಮಂತ ಪರಂಪರೆಗೆ ಬೆಲೆಕೊಟ್ಟು ರಕ್ಷಿಸುವುದು.

g) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ಪ್ರಾಣಿಸಂಪತ್ತುಗಳನ್ನು ಒಳಗೊಂಡಂತೆ ಪ್ರಾಕೃತಿಕ ಪರಿಸರವನ್ನು ರಕ್ಷಿಸುವುದು ಮತ್ತು ಬೆಳೆಸುವುದು ಹಾಗೂ ಜೀವರಾಶಿಗಳಿಗೆ ಅನುಕಂಪ ತೋರುವುದು.

h) ವೈಜ್ಞಾನಿಕ ಮನಃಪಾಕ, ಮನುಷ್ಯತ್ವ ಮತ್ತು ವೈಚಾರಿಕ ಹಾಗೂ ಸುಧಾರಣಾ ಮನೋಭಾವಗಳನ್ನು ಬೆಳೆಸಿಕೊಳ್ಳುವುದು.

i) ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಶಪಥಪೂರ್ವಕ ಹಿಂಸೆಯನ್ನು ತ್ಯಜಿಸುವುದು.

j) ರಾಷ್ಟ್ರವು ನಿರಂತರವಾಗಿ ಪ್ರಯತ್ನದ ಹಾಗೂ ಸಾಧನೆಯ ಉನ್ನತ ಸ್ತರಗಳಿಗೆ ಏರುವಂತೆ ವೈಯಕ್ತಿಕ ಹಾಗೂ ಸಾಂಘಿಕ ಚಟುವಟಿಕೆಗಳ ಸರ್ವಕ್ಷೇತ್ರಗಳಲ್ಲಿಯೂ ಶ್ರೇಷ್ಠತೆಗಾಗಿ ಶ್ರಮಿಸುವುದು.

ಕಾಯ್ದೆ 51–A ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೂಲಭೂತ ಕರ್ತವ್ಯಗಳು ಶಿಕ್ಷಣದ ಅತಿಮುಖ್ಯ ಗುರಿಗಳನ್ನು ಗಮನದಲ್ಲಿರಿಸುವಂತೆ ಹಾಗೂ ಜವಾಬ್ದಾರಿಯುತ, ಅರ್ಥಪೂರ್ಣ ಮತ್ತು ಸಹಭಾಗಿತ್ವವುಳ್ಳ ಪೌರತ್ವಕ್ಕಾಗಿ ಮೂಲ ಪಠ್ಯಕ್ರಮವಾಗಿ ಸಂವಿಧಾನವನ್ನು ಕುರಿತಾದ ಹಾಗೂ ಅದರ ಆದರ್ಶ ಹಾಗೂ ಸಂಸ್ಥಾಪನೆಗಳನ್ನು ಕುರಿತಾದ ಗೌರವ ಹಾಗೂ ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳ ಬಗೆಗಿನ ಗೌರವ ನಮ್ಮ ರಾಷ್ಟ್ರದ ಸ್ವತಂತ್ರ ಸಂಗ್ರಾಮವನ್ನು ಪ್ರೇರೇಪಿಸಿದ ಉದಾತ್ತ ಆದರ್ಶಗಳನ್ನು ಆಧರಿಸುವಂತೆ, ಅನುಸರಿಸುವಂತೆ ನಮ್ಮನ್ನು ಪ್ರೋತ್ಸಾಹಿಸುತ್ತವೆ. ಭಾರತದ ಸಾರ್ವಭೌಮತ್ವದ ಐಕ್ಯತೆ ಮತ್ತು ಸಮಗ್ರತೆಗಳನ್ನು ಕಾಪಾಡಿಕೊಳ್ಳುವಿಕೆ ಮತ್ತು ದೇಶಸೇವೆಯ ಮೂಲಕ ದೇಶದ ರಕ್ಷಣೆ ಅತ್ಯಂತ ಮೂಲಭೂತವಾದವುಗಳು. ಸಾಮರಸ್ಯ, ಸಮಾನ ಭ್ರಾತೃತ್ವ, ಧಾರ್ಮಿಕ, ಭಾಷಿಕ, ಪ್ರಾದೇಶಿಕ ಮತ್ತು ವಿಭಾಗೀಯ ವೈವಿಧ್ಯತೆಗಳನ್ನು ಮೀರುವುದು, ಮಹಿಳೆಯರ ಗೌರವಕ್ಕೆ ಧಕ್ಕೆ ತರುವ ಆಚಾರಗಳನ್ನು ತ್ಯಜಿಸುವುದು ಮೌಲ್ಯಯುತವಾದವುಗಳು. ನಮ್ಮ ಸಂಯುಕ್ತ ಸಂಸ್ಕೃತಿಯ ಶ್ರೀಮಂತ ಪರಂಪರೆಗೆ ಬೆಲೆಕೊಟ್ಟು ಉಳಿಸಿಕೊಳ್ಳುವುದು, ಪ್ರಾಕೃತಿಕ ಪರಿಸರದ–ಅರಣ್ಯಗಳು, ನದಿಗಳು, ಸರೋವರಗಳು ಮತ್ತು ವನ್ಯಜೀವಿಗಳು– ರಕ್ಷಣೆ ಮತ್ತು ಸುಧಾರಣೆ ಪ್ರಮುಖ ಮಾನವೀಯ ಮೌಲ್ಯಗಳು. ವೈಜ್ಞಾನಿಕ ಮನೋದೃಷ್ಟಿ, ಮಾನವತೆ ಮತ್ತು ವೈಚಾರಿಕ ಹಾಗೂ ಸುಧಾರಣಾ ಮನೋಭಾವಗಳನ್ನು ಬೆಳೆಸಬೇಕಾಗಿದೆ. ಸಾರ್ವಜನಿಕ ಸ್ವತ್ತಿನ ರಕ್ಷಣೆ, ಹಿಂಸೆಯ ಶಪಥಪೂರ್ವಕ ತ್ಯಾಗ ಮತ್ತು ಶ್ರೇಷ್ಠತೆಯತ್ತ ಪ್ರಯತ್ನ– ಇವೆಲ್ಲವೂ ಬಹು ಮುಖ್ಯ ಶೈಕ್ಷಣಿಕ ಗುರಿಗಳು.

**ಅನುಚ್ಛೇದ 343:** ಒಕ್ಕೂಟದ ಅಧಿಕೃತ ಭಾಷೆ: ಒಕ್ಕೂಟದ ಅಧಿಕೃತ ಭಾಷೆ ದೇವನಾಗರಿ ಲಿಪಿಯ ಹಿಂದಿ ಭಾಷೆಯಾಗಿರುವುದು. ಒಕ್ಕೂಟದ ಅಧಿಕೃತ ಉದ್ದೇಶಗಳಿಗೆ ಬಳಸಲಾಗುವ ಸಂಖ್ಯೆಗಳ ಸ್ವರೂಪ ಭಾರತೀಯ ಸಂಖ್ಯೆಗಳ ಅಂತರರಾಷ್ಟ್ರೀಯ ಸ್ವರೂಪದ್ದಾಗಿರವುದು.

**ಅನುಚ್ಛೇದ 345:** ರಾಜ್ಯವೊಂದರ ಅಧಿಕೃತ ಭಾಷೆ ಅಥವಾ ಭಾಷೆಗಳು: ಕಾಯ್ದೆ 346 ಮತ್ತು 347ರ ಷರತ್ತುಗಳಿಗೆ ಒಳಪಟ್ಟಂತೆ ರಾಜ್ಯ ಶಾಸಕಾಂಗವು ರಾಜ್ಯದಲ್ಲಿ ಬಳಕೆಯಲ್ಲಿರುವ ಯಾವುದಾದರೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಅಥವಾ ಹಿಂದಿ ಭಾಷೆಯನ್ನು ರಾಜ್ಯದ ಎಲ್ಲಾ ಅಥವಾ ಯಾವುದೇ ಅಧಿಕೃತ ಉದ್ದೇಶಗಳಿಗಾಗಿ ಉಪಯೋಗಿಸಬಹುದಾಗಿದೆ. ರಾಜ್ಯದ ಶಾಸಕಾಂಗವೂ ಕಾನೂನು ರೀತ್ಯಾ ಈ ಉದ್ದೇಶಕ್ಕೆ ಅವಕಾಶ ಮಾಡುವವರೆಗೂ ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ರಾಜ್ಯದಲ್ಲಿ ಅಧಿಕೃತ ಉದ್ದೇಶಗಳಿಗಾಗಿ ಆಂಗ್ಲಭಾಷೆಯನ್ನು ಬಳಸಲಾಗುತ್ತಿತ್ತೋ ಅವುಗಳಿಗೆಲ್ಲಾ ಆಂಗ್ಲಭಾಷೆಯೇ ಅಧಿಕೃತ ಭಾಷೆಯಾಗಿ ಮುಂದುವರೆಯುವುದು.

**ಅನುಚ್ಛೇದ 350–A:** ಪ್ರಾಥಮಿಕ ಘಟ್ಟದಲ್ಲಿ ಮಾತೃಭಾಷೆಯಲ್ಲಿ ಬೋಧನೆಗಾಗಿ ಸೌಲಭ್ಯಗಳು:

ಭಾಷಾ ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಬೋಧಿಸಲು ಪರ್ಯಾಪ್ತ ಸೌಲಭ್ಯಗಳನ್ನು ಒದಗಿಸುವುದು ಪ್ರತಿಯೊಂದು ರಾಜ್ಯದ ಮತ್ತು ರಾಜ್ಯದೊಳಗಿನ ಪ್ರತಿಯೊಂದು ಸ್ಥಾನೀಯ ಪ್ರಾಧಿಕಾರಗಳ ಪ್ರಯತ್ನವಾಗಿರುವುದು ಮತ್ತು ರಾಷ್ಟ್ರಾಧ್ಯಕ್ಷರು ತಮಗೆ ಅಗತ್ಯವೆಂದು ಅಥವಾ ಸೂಕ್ತವೆಂದು ತೋರಿದ ಅಂಥ ಸೌಲಭ್ಯಗಳ ಒದಗಣೆಯನ್ನು

Digitised by Bharatavani, CIIL

ಲಭ್ಯವಾಗಿಸಲು ಯಾವುದೇ ರಾಜ್ಯಕ್ಕೆ ಅಂಥ ನಿರ್ದೇಶನಗಳನ್ನು ಹೊರಡಿಸಬಹುದು.

**ಅನುಚ್ಛೇದ 351:** ಹಿಂದಿ ಭಾಷೆಯ ಬೆಳವಣಿಗೆಗಾಗಿ ನಿರ್ದೇಶನಗಳು:

ಭಾರತದ ಸಂಯುಕ್ತ ಸಂಸ್ಕೃತಿಯ ಸರ್ವಘಟಕಗಳನ್ನು ವ್ಯಕ್ತಪಡಿಸುವ ಮಾಧ್ಯಮದಂತಾಗಲು ಹಿಂದಿಭಾಷೆಯ ವ್ಯಾಪನೆಗಾಗಿ ಪ್ರೋತ್ಸಾಹ, ಅದರ ಬೆಳವಣಿಗೆ ಹಾಗೂ ಹಿಂದೂಸ್ತಾನಿ ಮತ್ತು 8ನೇ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿರುವ ಇತರ ಭಾರತೀಯ ಭಾಷೆಗಳಲ್ಲಿ ಬಳಸಲಾಗುವ ರೂಪಗಳು, ಶೈಲಿಗಳು ಮತ್ತು ಅಭಿವ್ಯಕ್ತಿಗಳು, ಇದರ ಲಕ್ಷಣಗಳಲ್ಲಿ ಹಸ್ತಕ್ಷೇಪವಾಗದ ರೀತಿಯಲ್ಲಿ ಆತ್ಮಸಾತ್ ಮಾಡಿಕೊಂಡು ಇದರ ಶ್ರೀಮಂತಿಕೆಯನ್ನು ಖಾತ್ರಿಗೊಳಿಸುವುದು ಮತ್ತು ಎಲ್ಲೆಲ್ಲಿ ಅವಶ್ಯಕವೋ ಅಥವಾ ಅಪೇಕ್ಷಣೀಯವೋ ಅಲ್ಲಿ ಇದರ ಪದಸಂಪತ್ತಿಗಾಗಿ ಪ್ರಥಮತಃ ಸಂಸ್ಕೃತದಿಂದ ನಂತರ ಇತರ ಭಾಷೆಗಳಿಂದ ಎರವಲು ಪಡೆಯುವುದು ಒಕ್ಕೂಟದ ಕರ್ತವ್ಯವಾಗುವುದು.

ಮಕ್ಕಳು ಆರ್ಥಿಕ ಅಗತ್ಯಗಳಿಂದಾಗಿ ಉದ್ಯೋಗವನ್ನು ಕೈಗೊಳ್ಳುವಂತಾಗಿ ತನ್ಮೂಲಕ ಆಗುವ ಅವರ ಶೋಷಣೆಯಿಂದ ಅವರನ್ನು ರಕ್ಷಿಸಬೇಕು ಎಂಬ ಅಂಶವನ್ನು ಸಂವಿಧಾನವು ಮನಗಂಡಿದೆ. ಅದೇ ಸಮಯದಲ್ಲಿ ರಾಜ್ಯವು ಮಕ್ಕಳ ಆರೋಗ್ಯ ಮತ್ತು ಬಲಗಲ ರಕ್ಷಣೆಯ ಭಾರವನ್ನು ಹೊತ್ತಿದೆ(39,c). ಮನುಷ್ಯರ ಸಾಗಾಣಿಕೆ ಮತ್ತು ಬಲವಂತದ ಕೂಲಿ ಇಲ್ಲವೇ ಕಾರ್ಖಾನೆಗಳಲ್ಲಿ ಮಕ್ಕಳನ್ನು ಉದ್ಯೋಗದಲ್ಲಿರಿಸಿಕೊಳ್ಳುವಿಕೆ ಇತ್ಯಾದಿಗಳಿಂದಲೂ ಸಹ ಮಗುವು ರಕ್ಷಿಸಲ್ಪಟ್ಟಿದೆ. ಮಗುವಿಗೆ ತನ್ನ ಪ್ರತ್ಯೇಕ ಭಾಷೆ, ಲಿಪಿ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಆದ್ದರಿಂದಲೇ ಭಾಷಿಕ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸುವ ಹಕ್ಕನ್ನು ಹೊಂದಿದ್ದಾರೆ. ಆದರೂ ಸಹ ಇದು ಅಬಾಧಿತ ಹಕ್ಕಾಗಿರದೆ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯದಂತೆ ಶಿಕ್ಷಣ ಇಲಾಖೆಯು ವಿಧಿಸಿರುವ ಯುಕ್ತ ಪರಿಮಿತಿಗಳಿಗೆ ಒಳಪಟ್ಟು ಚಲಾಯಿಸಬೇಕಾದ ಹಕ್ಕಾಗಿದೆ. ಅಷ್ಟೇ ಅಲ್ಲದೆ ಮಗುವು ಪ್ರಾಣರಕ್ಷಣೆ ಮತ್ತು ಸ್ವಾತಂತ್ರ್ಯವನ್ನು ಖಾತ್ರಿಪಡಿಸುವ, ಭಾರತದ ಸರ್ವೋಚ್ಚ ನ್ಯಾಯಾಲಯದ ಮಹತ್ವಪೂರ್ಣ ತೀರ್ಪಿನಂತೆ 14ವರ್ಷದವರೆಗೂ ಸಾರ್ವತ್ರಿಕ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನೂ ಸಹ ಒಂದು ಮೂಲಭೂತ ಹಕ್ಕನ್ನಾಗಿಸುವ ಕಾಯ್ದೆ 21ರ ಎಲ್ಲಾ ಲಾಭಗಳನ್ನು ಪಡೆಯುತ್ತದೆ. (ಉನ್ನಿಕೃಷ್ಣನ್, ಜೆ.ಪಿ, ಮತ್ತು ಇತರರು ಹಾಗೂ ಆಂಧ್ರಪ್ರದೇಶ ರಾಜ್ಯ ಮತ್ತು ಇತರರು, ಎ.ಪಿ.ಆರ್, 1993 ಎಸ್.ಸಿ 2178) ಭಾರತೀಯ ಸಂಸತ್ತು 2002 ಮೇ 14ರಂದು ಕಾಯ್ದೆ 21A ಎಂಬ ಹೊಸ ಕಾಯ್ದೆಯನ್ನು ಸೇರಿಸಿ 6ರಿಂದ 14ವಯೋಮಾನದ ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ನೀಡುವುದರ ಮೂಲಕ ಭಾರತ ಸಂವಿಧಾನಕ್ಕೆ 93ನೇ ತಿದ್ದುಪಡಿಯನ್ನು ಮಾಡಿತು. ಯಾವುದೇ ತಾರತಮ್ಯವಿಲ್ಲದೆ, ಕಾನೂನಿನಡಿಯಲ್ಲಿ ಸರ್ವಸಮಾನತೆ ಮತ್ತು ಕಾನೂನುಗಳ ಸಮಾನರಕ್ಷಣೆಗಳನ್ನು ಹೇಳುವ ಕಾಯ್ದೆ ಇದ್ದಾಗ್ಯೂ ಸಹ, ಮಹಿಳೆಯರು ಮತತು ಮಕ್ಕಳ ರಕ್ಷಣೆ ಹಾಗೂ ಅವರ ಉತ್ತಮ ಜೀವನ ವಿಧಾನಕ್ಕಾಗಿ ಸಂಸತ್ತು ಯಾವುದೇ ವಿಶೇಷ ಕಾನೂನುಗಳನ್ನು ರಚಿಸಬಹುದು.

ಈಗ ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಪರಿಗಣಿಸುವುದರಿಂದ 14 ವಯೋಮಾನದ ಒಳಗಿರುವ ಎಲ್ಲಾ ಮಕ್ಕಳು ಕಾರ್ಖಾನೆ ಯಾ ಮನೆ ಯಾ ಜಮೀನುಗಳಲ್ಲಿ ಕೆಲಸಕ್ಕಿರದೆ ನಿಯಮಿತ ಶಾಲೆಗಳಲ್ಲಿ ತಮ್ಮ ಸ್ಥಾನವನ್ನು ಹೊಂದಬೇಕು. ಈ ಸಂದರ್ಭದಲ್ಲಿ ಶಿಶುಶ್ರಮ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ಪಟ್ಟಿ ಅಸಂವೈಧಾನಿಕವಾಗುವುದು. ಏಕೆಂದರೆ, ಇದು ಷೆಡ್ಯೂಲ್‌ಗಳ ಭಾಗ 'ಎ' ಮತ್ತು 'ಬಿ'ಗಳಲ್ಲಿ ಪಟ್ಟಿಮಾಡಿರುವ ಕೆಲವು ನಿರ್ದಿಷ್ಟ ಕಸುಬುಗಳಲ್ಲಿ, ಕೆಲಸಗಳಲ್ಲಿ ಮಾತ್ರ ಮಕ್ಕಳನ್ನು ಕೆಲಸಕ್ಕಿಟ್ಟುಕೊಳ್ಳುವುದನ್ನು ನಿಷೇದಿಸುತ್ತದೆ ಮತ್ತು ಈ ನಿಷೇದ ಉದ್ಯೋಗದಲ್ಲಿರುವವನ ಕುಟುಂಬದವರಿಂದ ಸ್ಥಾಪಿಸಲಾಗಿರುವ ಅಥವಾ ಸರ್ಕಾರದಿಂದ ಧನಸಹಾಯ ಪಡೆಯುತ್ತಿರುವ ಅಥವಾ ಸರ್ಕಾರದ ಮಾಧ್ಯಮವಾಗಿರುವ ಕಾರ್ಯಾಗಾರಗಳಿಗೆ ಅನ್ವಯವಾಗುವುದಿಲ್ಲ (ಸೆಕ್ಷನ್–3). ಸೆಕ್ಷನ್ 6ಮತ್ತು 7ರ ಅಡಿಯಲ್ಲಿ ಈ ಕಾನೂನು ಕೆಲಸದ ಗಂಟೆಗಳು ಮತ್ತು ಅವಧಿಗಳನ್ನು ನಿಯಂತ್ರಿಸುವುದರಿಂದ 14ವರ್ಷದ ಕೆಳಗಿರುವ ಮಕ್ಕಳನ್ನು ಉದ್ಯೋಗದಲ್ಲಿ ಇರಿಸಿಕೊಳ್ಳಬಹುದು ಎಂಬ ಅರ್ಥವ್ಯಕ್ತವಾಗಿ ಸ್ಪಷ್ಟವಾಗಿಯೇ ಅದು ಸಂವಿಧಾನ ವಿರೋಧಿಯಾಗುತ್ತದೆ.

**ಮಗುವಿನ ಹಕ್ಕುಗಳ ಘೋಷಣೆ:**

ಭಾರತ ಸಂವಿಧಾನದ 51ನೇ ಅನುಚ್ಛೇದದ ಪ್ರಕಾರ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಹಾಗೂ ಅಂತರರಾಷ್ಟ್ರೀಯ ಕಾನೂನು ಮತ್ತು ಕರಾರುಗಳಿಗೆ ಗೌರವಗಳನ್ನು ಬೆಳೆಸುವ ಜವಾಬ್ದಾರಿಯನ್ನು ಭಾರತ ಸರ್ಕಾರವು ಹೊತ್ತಿದೆ. ಸಂಯುಕ್ತ ರಾಷ್ಟ್ರದ ನವೆಂಬರ್ 20, 1959ರಂದು ನಡೆದ ಸಭೆಯಲ್ಲಿ ಅಂಗೀಕೃತವಾದ ಪ್ರಸ್ತಾಪಕ್ಕೆ 1386 (XIV)ಕ್ಕೆ ಸಹಿ ಹಾಕಿರುವ ಭಾರತ ಮಗುವಿನ ಹಕ್ಕುಗಳ ಘೋಷಣೆಯನ್ನು ಅನುಷ್ಠಾನಕ್ಕೆ ತರುವ ವಿಶೇಷ ಜವಾಬ್ದಾರಿಯನ್ನು ಹೊತ್ತಿದೆ.

ಮೇಲೆ ಹೇಳಿರುವ ಘೋಷಣೆಯು ಮಗು ಮತ್ತು ಅದರ ತಾಯಿಯು ಸಾಕಷ್ಟು ಪೌಷ್ಠಿಕತೆ, ವಸತಿ, ಮನರಂಜನೆ ಹಾಗೂ ವೈದ್ಯಕೀಯ ಸೇವೆಗಳು ಒಳಗೊಂಡಂತೆ ಶಾರೀರಿಕವಾಗಿ, ಮಾನಸಿಕವಾಗಿ, ನೈತಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ಸಾಮಾಜಿಕವಾಗಿ ವಿಕಸನ ಹೊಂದುತ್ತಾ ಸಾಮಾಜಿಕ ಭದ್ರತೆಯ ಸರ್ವಲಾಭಗಳನ್ನು ಪೂರ್ಣವಾಗಿ ಪಡೆಯಲು ವಿಶೇಷ ರಕ್ಷಣೆಯೊಂದಿಗೆ ಸುಖಕರ ಬಾಲ್ಯವನ್ನುಗುರಿಯಾಗಿಸಿಕೊಂಡಿದೆ. ಶಾರೀರಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಅಸಾಮರ್ಥ್ಯವುಳ್ಳ ಮಗುವಿಗೆ ಅದರ ನಿರ್ದಿಷ್ಟ ಪರಿಸ್ಥಿತಿಗೆ ಅವಶ್ಯವಿರುವ ವಿಶೇಷ ಉಪಚಾರ, ಶಿಕ್ಷಣ ಮತ್ತು ವಿಶೇಷ ಗಮನ ನೀಡಲಾಗುವುದು. ಮಗುವು ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಕನಿಷ್ಠ ಪಕ್ಷ ಮಾಧ್ಯಮಿಕ ಶಾಲಾ ಘಟ್ಟದವರೆಗೆ

Digitised by Bharatavani, CIIL

ಪಡೆಯಲು ಅರ್ಹವಾಗಿರುವುದಲ್ಲದೆ ಸಮಾಜದ ಉಪಯುಕ್ತ ಸದಸ್ಯನಾಗಲು ತನ್ನ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಸಮಾನ ಅವಕಾಶದ ಆಧಾರದ ಮೇಲೆ ಮಗುವನ್ನು ಸಮರ್ಥನನ್ನಾಗಿಸಿ ಅದರ ಸಾಮಾನ್ಯ ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಶಿಕ್ಷಣವನ್ನು ಒದಗಿಸಲಾಗುವುದು. ಇದಕ್ಕೆ ಮುಂಚಿತವಾಗಿ 1924ರಲ್ಲಿ ಜಿನೀವಾ ಮಕ್ಕಳ ಹಕ್ಕು ಘೋಷಣೆಯಾಗಿದ್ದು ಇದು ಸಾರ್ವತ್ರಿಕ ಮಾನವ ಹಕ್ಕು ಘೋಷಣೆಯಲ್ಲಿ ಮಾನ್ಯತೆ ಪಡೆಯಿತು.

**ಮಕ್ಕಳ ರಾಷ್ಟ್ರೀಯ ನೀತಿ:**

ಮಕ್ಕಳ ರಾಷ್ಟ್ರೀಯ ನೀತಿಯನ್ನು ಆಗಸ್ಟ್ 22, 1974ರ ತಾರೀಖಿನ 1–14–1974 ಸಂಖ್ಯೆಯ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಪ್ರಸ್ತಾಪದಲ್ಲಿ ಭಾರತ ಸರ್ಕಾರವು ನಿರೂಪಿಸಿದೆ. ಈ ಮುಂಚೆ ಉಲ್ಲೇಖಿಸಿದ ಕರಾರಿನ ಜವಾಬ್ದಾರಿಯ ಹಿನ್ನೆಲೆಯಲ್ಲಿ ಫಲಿತಾಂಶವಾಗಿದ್ದು ಮಾನವ ಸಂಪನ್ಮೂಲದ ಬೆಳವಣಿಗೆಯನ್ನು ಕುರಿತಾದ ನಮ್ಮ ರಾಷ್ಟ್ರೀಯ ಯೋಜನೆಗಳಲ್ಲಿ ಮಕ್ಕಳ ಯೋಜನೆಗಳು/ ಕಾರ್ಯಕ್ರಮಗಳು ಪ್ರಮುಖ ಪಾತ್ರ ವಹಿಸಬೇಕೆಂದು ಘೋಷಿಸುತ್ತದೆ. ಈ ಘೋಷಣೆಯ ಪ್ರಕಾರ ಮಕ್ಕಳ ಆಹಾರದಲ್ಲಿನ ಕೊರತೆಯನ್ನು ನೀಗಿಸಿ ಪೌಷ್ಠಿಕ ಸೇವೆಯನ್ನು ಒದಗಿಸುವುದಕ್ಕಾಗಿ ಸಮಗ್ರ ಆರೋಗ್ಯ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಎಲ್ಲಾ ಮಕ್ಕಳನ್ನು ತರಬೇಕು. ಎಲ್ಲಾ ಮಕ್ಕಳಿಗೂ 14 ವಯೋಮಾನದವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸಲು ರಾಜ್ಯವು ಕ್ರಮ ತೆಗೆದುಕೊಳ್ಳಬೇಕಾಗಿದ್ದು, ಇದಕ್ಕಾಗಿ ಲಭ್ಯ ಸಂಪನ್ಮೂಲಗಳಿಗೆ ಅನುಗುಣವಾದ ಕಾಲಮಿತಿಯುಳ್ಳ ಕಾರ್ಯಕ್ರಮವೊಂದನ್ನು ಯೋಜಿಸಲಾಯಿತು. ಸಾಮಾಜಿಕವಾಗಿ ಅಸಮರ್ಥರಾಗಿರುವ ದುಷ್ಕರ್ಮರತರಾಗಿರುವ ಅಥವಾ ಭಿಕ್ಷೆ ಬೇಡುವಂತೆ ಬಲವಂತಪಡಿಸಲಾಗಿರುವ ಇಲ್ಲವೇ ಇನ್ನಾವುದೇ ಬಗೆಯ ಸಂಕಷ್ಟದಲ್ಲಿರುವ ಮಕ್ಕಳಿಗೆ ರಾಜ್ಯವು ಶಿಕ್ಷಣ, ತರಬೇತಿ ಮತ್ತು ಪುನರ್ವಸತಿಗಾಗಿ ಸೌಲಭ್ಯಗಳನ್ನು ಒದಗಿಸುವುದು. ಮಕ್ಕಳ ರಾಷ್ಟ್ರೀಯ ನೀತಿಯಲ್ಲಿ ನಿರೂಪಿಸಲಾಗಿರುವ ಗುರಿಗಳನ್ನು ಸಾಧಿಸಲು ಮಕ್ಕಳನ್ನು ಅಲಕ್ಷ್ಯ, ಹಿಂಸೆ ಮತ್ತು ಶೋಷಣೆಗಳೆಂದು ರಕ್ಷಿಸಲಾಗುವುದು. ರಾಷ್ಟ್ರೀಯ ಮಕ್ಕಳ ಸಮಿತಿಯೊಂದನ್ನು ರಚಿಸಿ ಅಗತ್ಯ ಆಡಳಿತಾತ್ಮಕ ಬೆಂಬಲ ನೀಡಲಾಗುವುದು.

ಸಾಮಾಜಿಕವಾಗಿ ಪಾಪವೆಂದು ಪರಿಗಣಿಸಲಾಗಿರುವ ಮಕ್ಕಳ ಕೂಲಿಯ ವ್ಯಾಪಕತೆ, ಮಹಾತ್ಮ ಗಾಂಧೀಜಿಯವರ ಮೂಲಶಿಕ್ಷಣದ ತತ್ವಗಳಿಗೆ ಅನುಸಾರವಾಗಿ ಇದನ್ನು ಬೋಧನೆಗೆ ಮಾಧ್ಯಮವನ್ನಾಗಿ ಮಾಡಿಕೊಳ್ಳದೆ ಮಗುವಿನ ಶಿಕ್ಷಣ, ಆಟ, ಆರೋಗ್ಯ, ಗೌರವ, ಸ್ವಾತಂತ್ರ್ಯ ಮತ್ತು ಭವಿಷ್ಯಗಳೆಲ್ಲವನ್ನೂ ಬಲಿಕೊಟ್ಟು ಧನಸಂಚಯನದ ಮೂಲದಂತೆ ಬಳಸಿಕೊಳ್ಳುವ ಶೋಷಣೆಯು ಮೂಲಭೂತ ಹಕ್ಕಿನ ರೂಪದಲ್ಲಿಯೂ ಸಹ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಪ್ರೋತ್ಸಾಹನಕ್ಕೆ ದೊಡ್ಡ ಅಡಚಣೆಯಾಗಿದೆ. ಮಕ್ಕಳ ಕೂಲಿಯ ನಿರ್ಮೂಲನ ಮತ್ತು ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಪ್ರೋತ್ಸಾಹನಗಳಿಗೆ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಅವಶ್ಯಕ ರಾಜಕೀಯ ಇಚ್ಛೆ ಅಗತ್ಯವಿದೆ ಮತ್ತು ಮಗುವಿನ ಶಾಲಾಶಿಕ್ಷಣದ ಪ್ರೋತ್ಸಾಹನಕ್ಕೆ ಮತ್ತು ಮನೆಯಲ್ಲಿ ಅಥವಾ ವಿದ್ಯಾರ್ಥಿನಿಲಯದಲ್ಲಿ ಅದರ ಆರೋಗ್ಯಕರ ಪೋಷಣೆಗೆ ಬೇಕಾದ ಧನಸಹಾಯವನ್ನು ಒದಗಿಸಬೇಕಾಗುತ್ತದೆ. ಅದೇ ಸಮಯದಲ್ಲಿ ಕಟ್ಟಡಗಳು, ಪೀಠೋಪಕರಣಗಳು, ಗ್ರಂಥಾಲಯಗಳು, ಪ್ರಯೋಗಾಲಯಗಳು, ಆಟದ ಮೈದಾನಗಳು ದೃಶ್ಯ–ಶ್ರವಣ ಉಪಕರಣಗಳು ಮತ್ತು ಶೌಚಾಲಯಗಳ ನಿರ್ಮಾಣ ಇವೇ ಮುಂತಾದ ಮೂಲಭೂತ ಸೌಕರ್ಯಗಳಿಗಾಗಿ ಧನಸಹಾಯ ನೀಡುವುದು ಸಹ ಅವಶ್ಯಕವಾಗಿದೆ. ನೆರೆಹೊರೆಯ ಶಾಲಾನೀತಿಯೊಂದಿಗಿನ ಸಾಮಾನ್ಯ ಶಾಲಾವ್ಯವಸ್ಥೆಯನ್ನು ಅನುಷ್ಠಾನಿಸಿ ಸರ್ಕಾರೇತರ ಶಾಲೆಗಳನ್ನು ರಾಷ್ಟ್ರೀಯ ಶಾಲಾವ್ಯವಸ್ಥೆಯಲ್ಲಿ ಸಮಗ್ರಗೊಳಿಸಿ, ಶಾಲಾ ಮಕ್ಕಳಿಗೆ ಪ್ರಭಾವೀ ಮಧ್ಯಾಹ್ನ ಭೋಜನ ಯೋಜನೆ ಹಾಗೂ ಹಾಲು ಸರಬರಾಜಿನ ವ್ಯವಸ್ಥೆಯನ್ನು ಒದಗಿಸುವುದು ಅವಶ್ಯಕವಾಗಿದೆ.

**ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಕಾನೂನುಗಳು:**

ಸ್ವಾತಂತ್ರ ಬರುವ ಮುನ್ನ ಹಾಗೂ ಬಂದ ನಂತರ ಆರಂಭಿಕ ಹಾಗೂ ಪ್ರಾಥಮಿಕ ಶಿಕ್ಷಣದ ಕಡೆಗೆ ಗಮನ ಕೇಂದ್ರವಾಗುತ್ತಲೇ ಬಂದಿದೆ. ಆದ್ದರಿಂದ ಸ್ವಾತಂತ್ರ ಬಂದ ನಂತರ ಹಲವು ರಾಜ್ಯಗಳು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ಜಾರಿಗೆ ತಂದವು. ಈ ಕಾನೂನುಗಳು ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯವನ್ನು ಕುರಿತು ಸ್ಪಷ್ಟವಾಗಿ ಹೇಳುವುದಲ್ಲದೆ ದಾಖಲಾತಿಯ ನೀತಿ ಮಗುವಿನ ವಯಸ್ಸು, ಆಡಳಿತಾತ್ಮಕ ಅಂಶಗಳು ಇವೇ ಮುಂತಾದವುಗಳಿಗೆ ಸಂಬಂಧಿಸಿದ ವಿವಿಧ ಕಾಯ್ದೆ/ಕಾನೂನುಗಳನ್ನು ಸಹ ಹೇಳುತ್ತವೆ. ಉದಾಹರಣೆಗೆ ಅಸ್ಸಾಂ ಪ್ರಾಥಮಿಕ ಶಿಕ್ಷಣ (ಪ್ರಾಂತೀಕರಣ) ತಿದ್ದುಪಡಿ ಕಾನೂನುಗಳು 1979, ಬಾಂಬೆ ಪ್ರಾಥಮಿಕ ಶಿಕ್ಷಣ ಕಾಯ್ದೆಗಳು 1986, ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ 1961 ಇವುಗಳು ಬಹುತೇಕ ಪ್ರಾಂತೀಕರಣ ಮತ್ತು ಸರ್ಕಾರೇತರ ಖಾಸಗಿ ಶಾಲೆಗಳ ಸ್ವಾಮ್ಯಸ್ವಾಧೀನ(Take-over) ಅಥವಾ ಸಹಾಯಕ ಅನುದಾನ ಅಥವಾ ಶಿಕ್ಷಕರ ಸೇವೆಗಳ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವೆಯ ಭದ್ರತೆಯ ಖಾತ್ರಿ ಉದಾ: ಕರ್ನಾಟಕ ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಕಾಯ್ದೆ– ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿವೆ. ಕೆಲವು ಕಾಯ್ದೆಗಳು ಮತ್ತು ನಿಯಮಗಳು ಸೇವೆಯ ಷರತ್ತುಗಳು, ದರ್ಜೆ ಮತ್ತು ನೇಮಕಾತಿಗಳಿಗೆ ಸಂಬಂಧಿಸಿವೆ. ಕೆಲವು ಕಾನೂನುಗಳು– ತಾತಾ ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್, ನವೋದಯ ವಿದ್ಯಾಲಯ ಸಮಿತಿ ಮತ್ತು ಶಿಕ್ಷಣ ಪ್ರಸಾರಕ ಮಂಡಳಿಗಳಂತಹ ಸಂಘಗಳ ಸ್ಥಾಪನೆಗೆ ಸಂಬಂಧಿಸಿವೆ. ಮತ್ತೆ ಕೆಲವು ಕಾಯ್ದೆಗಳು ಮೂಲಭೂತ ಶಿಕ್ಷಣದಂತಹ ಶಿಕ್ಷಣದ ನಿರ್ದಿಷ್ಟ ವ್ಯವಸ್ಥೆಗಳನ್ನು ಕುರಿತದ್ದಾಗಿದೆ. ಒಂದು ಸಂದರ್ಭದಲ್ಲಿ ಪಠ್ಯಪುಸ್ತಕಗಳನ್ನೇ ನಿರ್ದಿಷ್ಟವಾಗಿಟ್ಟುಕೊಂಡಿರುವ ಕಾನೂನುಗಳು ಸಹ ಕಂಡುಬರುವುವು.

ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ (ಇಂಟರ್‌ಮೀಡಿಯೇಟ್) ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಸಂಖ್ಯ

Digitised by Bharatavani, CIIL

ಕಾನೂನುಗಳು ಮತ್ತು ನಿಯಮಗಳು ಅಸ್ತಿತ್ವದಲ್ಲಿರುವುವು. ಇವುಗಳಲ್ಲಿ ಹಲವು ಮಾಧ್ಯಮಿಕ ಶಿಕ್ಷಣದ ಎಲ್ಲಾ ಅಂಶಗಳನ್ನು ಸಮಗ್ರ ರೀತಿಯಲ್ಲಿ ಪರಿಗಣಿಸುವುವು. ಉದಾ: ಗುಜರಾತ್ ಮಾಧ್ಯಮಿಕ ಶಿಕ್ಷಣ ಅಧಿನಿಯಮ 1972 ಮಹಾರಾಷ್ಟ್ರ ಮಾಧ್ಯಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣ ಬೋರ್ಡ್ ಅಧಿನಿಯಮ 1965, ಉತ್ತರಪ್ರದೇಶ ಮಾಧ್ಯಮಿಕ ಶಿಕ್ಷಣ ಬೋರ್ಡ್ ಅಧಿನಿಯಮ 1965, ಉತ್ತರಪ್ರದೇಶ ಮಾಧ್ಯಮಿಕ ಶಿಕ್ಷಣ 1986, ಇತ್ಯಾದಿ. ಇವುಗಳಲ್ಲಿ ಬಹಳಷ್ಟು ಕಾಯ್ದೆಗಳು ಸೇವೆಯ ನಿಯಮಗಳು ಮತ್ತು ಖಾಸಗಿ ಅನುದಾನಿತ ಶಾಲೆಗಳ ಸ್ವಾಮ್ಯಸ್ವಾಧೀನ ಅಥವಾ ಪ್ರಾಂತೀಕರಣಗಳ ವಿಷಯಕ್ಕೆ ಸಂಬಂಧಿಸಿವೆ. ಹಲವು ಕಾಯ್ದೆಗಳು ಮಾಧ್ಯಮಿಕ ಶಿಕ್ಷಣ ಬೋರ್ಡ್ ಅಥವಾ ಭಾರತೀಯ ಶಾಲಾಪರೀಕ್ಷಾ ಸರ್ಟಿಫಿಕೇಟ್ ಇತ್ಯಾದಿಗಳ ಸ್ಥಾಪನೆಯನ್ನು ಹಾಗೂ ನಿಯಮಗಳು ಮತ್ತು ಪಠ್ಯಕ್ರಮಗಳನ್ನು ಕುರಿತದ್ದಾಗಿವೆ. ಪ್ರತಿಯೊಂದು ಕಾಯ್ದೆಯ ಅಡಿಯಲ್ಲಿ ಶಾಸಕಾಂಗವು ಕಾಯ್ದೆಯಲ್ಲಿ ಅಧಿಕೃತಗೊಳಿಸರುವಂತೆ ಅಥವಾ ಕಾಯ್ದೆ 309ರಲ್ಲಿರುವಂತೆ ಇಲಾಖೆಗಳು ನಿಯಮಗಳನ್ನು ರಚಿಸುತ್ತವೆ. ಸಂಬಂಧಿತ ಶಾಸಕಾಂಗದಲ್ಲಿ ಆರು ತಿಂಗಳ ಒಳಗೆ ಅಂಗೀಕಾರಕ್ಕಾಗಿ ನಿಯಮಗಳನ್ನು ಇರಿಸಲಾಗುವುದರಿಂದ ಈ ನಿಯಮಗಳಿಗೆ ಶಾಸನಬದ್ಧ ಅಧಿಕಾರವಿರುತ್ತದೆ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಕಾಯ್ದೆಗಳು ನಿಯಮಗಳ ಜೊತೆಗೆ ಆಯಾ ರಾಜ್ಯದ ಶಿಕ್ಷಣದ ಮತ್ತು ಮಗುವಿನ ವಿಕಾಸದ ಹಂತಗಳು ಮತ್ತು ಮುಖಗಳನ್ನು ಕುರಿತಂತೆ ಸಮಗ್ರವಾಗಿ ಪರಿಗಣಿಸುವ ಸಮಗ್ರ ಕಾಯ್ದೆಗಳು ಅಸ್ತಿತ್ವದಲ್ಲಿವೆ. ಉದಾಹರಣೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983; ಡೆಲ್ಲಿ ಶಾಲಾಶಿಕ್ಷಣ ಅಧಿನಿಯಮ 1973; ಆಂಧ್ರಪ್ರದೇಶ ಶಿಕ್ಷಣ ಅಧಿನಿಯಮ 1982; ಕೆಲವು ಕಾಯ್ದೆಗಳು ಖಾಸಗಿ ಅನುದಾನಿತ ಶಾಲೆಗಳು, ಅವುಗಳ ವ್ಯವಸ್ಥಾಪನೆ, ಶಿಕ್ಷಣಕರ ಇತ್ಯಾದಿಗಳನ್ನು ಪರಿಗಣಿಸುತ್ತವೆ. ಇನ್ನು ಕೆಲವು ಮೋಟಾರು ಸಾರಿಗೆ ಪ್ಲಾಂಟೇಷನ್, ಗಣಿಗಳು, ಕೈಗಾರಿಕೆಗಳು ಅಥವಾ ಮಕ್ಕಳ ಕಾಯ್ದೆ, ಬಾಲಶ್ರಮ ಅಧಿನಿಯಮ, ಚಿಕ್ಕಪ್ರಾಯದ ಮಕ್ಕಳ ನ್ಯಾಯ ಅಧಿನಿಯಮ ಇವೆಲ್ಲವೂ ಮಗುವಿನ ಶಿಕ್ಷಣ, ಉದ್ಯೋಗಕ್ಕೆ ಅದರ ಸೂಕ್ತ ವಯಸ್ಸು ಅಥವಾ ಉತ್ಪಾದನಾ ಘಟಕಗಳಲ್ಲಿ ಉದ್ಯೋಗದ ನಿಷೇದ ಇವುಗಳು ಸಂಬಂಧಿಸಿದ ಭಾಗಗಳನ್ನು ಹೊಂದಿವೆ.

**ವಿಶ್ವವಿದ್ಯಾನಿಲಯಗಳು ಮತ್ತು ವೃತ್ತಿಪರ ಸಂಘಗಳಿಗೆ ಸಂಬಂಧಿಸಿದ ಅಧಿನಿಯಮಗಳು:**

ಸಂಸತ್ತು ಅಥವಾ ರಾಜ್ಯ ಶಾಸಕಾಂಗಗಳಲ್ಲಿ ಜಾರಿಗೊಳಿಸಲಾದ ಕೇಂದ್ರ ಅಥವಾ ರಾಜ್ಯ ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ಸಂಬಂಧಿಸಿದ ಅಸಂಖ್ಯ ಕಾಯ್ದೆಗಳಿವೆ. ವುಡ್ಸ್ ಡಿಸ್‌ಪ್ಯಾಚ್, 1854, ಇದರಲ್ಲಿನ ಶಿಫಾರಸುಗಳ ಆಧಾರದ ಮೇಲೆ ಸ್ಥಾಪನೆಗೊಂಡ ಮೊದಲ ಮೂರು ವಿಶ್ವವಿದ್ಯಾನಿಲಗಳಾದ ಬಾಂಬೆ, ಮದ್ರಾಸ್ ಮತ್ತು ಕಲ್ಕತ್ತ ವಿಶ್ವವಿದ್ಯಾನಿಲಯಗಳ ಜೊತೆಗೆ ಅಲಿಘರ್, ಅಣ್ಣಾಮಲೈ, ಬನಾರಸ್, ದೆಹಲಿ, ಗೌಹಾಟಿ, ಗುಜರಾತ್ ಮತ್ತು ಪುಣೈ ವಿಶ್ವವಿದ್ಯಾನಿಲಯಗಳನ್ನು ಸ್ವತಂತ್ರಕ್ಕೆ ಮುಂಚೆ ಸ್ಥಾಪಿಸಲಾಯಿತು. ಸಂಸತ್ತಿನಿಂದಾಗಲಿ ಅಥವಾ ರಾಜ್ಯ ಶಾಸಕಾಂಗಳಿಂದಾಗಲಿ ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಸಂಬಂಧಿಸಿದ ಶಾಸನ ರಚನೆಯಲ್ಲಿ ದೇಶದಾದ್ಯಂತ ಅದ್ಭುತ ಬೆಳವಣಿಗೆ ಕಂಡುಬಂತು. ಬೇರೆಬೇರೆ ವಿಶ್ವವಿದ್ಯಾನಿಲಯಗಳಿಗೆ ಕಾಲಕಾಲಕ್ಕೆ ಕಾಯ್ದೆಗಳನ್ನು ಜಾರಿಗೆ ತರಲಾಯಿತು. 1915ರ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಅಧಿನಿಯಮ ಬಹಳ ಮುಂಚಿನವುಗಳಲ್ಲಿ ಒಂದು. ಮಹಾರಾಷ್ಟ್ರ ವಿಶ್ವವಿದ್ಯಾನಿಲಯ ಅಧಿನಿಯಮ, 1974; ಮಣಿಪುರ ವಿಶ್ವವಿದ್ಯಾನಿಲಯ ಅಧಿನಿಯಮ, 1980; ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್ ವಿಶ್ವವಿದ್ಯಾನಿಲಯ ಅಧಿನಿಯಮ 1994 ಇವೇ ಮುಂತಾದ ಹಲವು ಅಧಿನಿಯಮಗಳನ್ನು ವಿವಿಧ ವಿಶ್ವವಿದ್ಯಾನಿಲಯಗಳಿಗಾಗಿ ಸ್ವಾತಂತ್ರ್ಯಾ ನಂತರ ಜಾರಿಗೊಳಿಸಲಾಯಿತು. ಹಲವು ನಿಯಮಗಳನ್ನು ವಿಶ್ವವಿದ್ಯಾನಿಲಯಗಳ ನೌಕರರಿಗಾಗಿ, ಸಾಲ ಅಥವಾ ಗೃಹನಿರ್ಮಾಣಕ್ಕಾಗಿ ಮುಂಗಡ ಹಣವನ್ನು ನೀಡುವುದರ ಬಗ್ಗೆ ರಚಿಸಲಾಗಿದೆಯಲ್ಲದೆ ಸೇವೆಯ ನಿಯಮ ನಿಬಂಧನೆಗಳು, ಖಾಸಗಿ ಕಾಲೇಜುಗಳಿಗೆ ಸಂಬಂಧಿಸಿದ ಶಿಸ್ತುಕ್ರಮ ಅಥವಾ ಪಠ್ಯಕ್ರಮವನ್ನು ಕುರಿತ ಅಥವಾ ವಿಶೇಷವಾಗಿ ಬಿ.ಎಡ್ ಇತ್ಯಾದಿ ನಿರ್ದಿಷ್ಟ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪಠ್ಯಕ್ರಮಗಳಿಗೆ ಸಂಬಂಧಿಸಿದ ನಿಯಮಗಳೂ ಸಹ ರಚಿತವಾಗಿವೆ.

ಕಾಲಕಾಲಕ್ಕೆ ನ್ಯಾಯವಾದಿಗಳು, ವಿಜ್ಞಾನಿಗಳು ಮತ್ತು ತಂತ್ರಜ್ಞರು, ವೈದ್ಯಕೀಯ ವಿಶೇಷಜ್ಞರು, ಪಶುವೈದ್ಯರು ಹಾಗೂ ಇತರ ವೃತಿಪರವಾದ ಶಿಕ್ಷಣ ಪಡೆದ ಸದಸ್ಯರ ಸ್ವಯಂನಿಯಂತ್ರಿತ ವೃತ್ತಿಪರ ಅಂಗಗಳಿಗೆ ಸಂಬಂಧಿಸಿದ ನಿಯಮ ನಿಬಂಧನೆಗಳು ಜಾರಿಗೆ ಬಂದಿವೆ. ಈ ನಿಯಮಗಳು ಆಯಾ ಅಂಗಗಳ ಸದಸ್ಯರ ವೃತ್ತಿಯಲ್ಲಿನ ವರ್ತನೆಯನ್ನು ನಿಯಂತ್ರಿಸುವುದಷ್ಟೇ ಅಲ್ಲದೆ ಅವರ ವೃತ್ತಿಪರ ಶಿಕ್ಷಣವನ್ನೂ ಸಹ ನಿಯಂತ್ರಿಸುತ್ತವೆ. ಯಾವ ವೃತ್ತಿಪರ ಶಿಕ್ಷಣ ಸಂಸ್ಥೆಯನ್ನು ಅಥವಾ ಕಾಲೇಜನ್ನು ಈ ಅಂಗಗಳ ಪ್ರಾರಂಭಿಕ ಅನುಮತಿ ಇಲ್ಲದೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಗಾಗಿ ಅಥವಾ ಸರ್ಕಾರಿ ಮಾನ್ಯತೆಗಾಗಿ ಇವುಗಳು ನೀಡುವ ಯೋಗ್ಯತಾ ಪತ್ರ (Accreditation) ವಿಲ್ಲದೆ ಪ್ರಾರಂಭಿಸುವಂತಿಲ್ಲ.

ಭಾರತ ಸಂವಿಧಾನದ 25ನೇ ನಮೂದಾಗಿ ಸಹವರ್ತಿಪಟ್ಟಿಯಲ್ಲಿ ಶಿಕ್ಷಣವನ್ನು ಸೇರಿಸಿದ ನಂತರ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ ಅಧಿನಿಯಮ 1987 (AICTE) ಮತ್ತು ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ ಅಧಿನಿಯಮ, 1993 (NCTE) ಈ ಎರಡು ಅಧಿನಿಯಮಗಳನ್ನು ಭಾರತೀಯ ಸಂಸತ್ತು ಜಾರಿಗೆ ತಂದಿತು.

**ಆಧಾರಿತ ಸ್ತರದ ಶಾಸನ ರಚನೆ:**

ಭಾರತೀಯ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಅಷ್ಟೆ ಅಲ್ಲದೆ ಆಧಾರಿಕ ಸ್ತರದಲ್ಲಿಯೂ ಕೆಲವು ಶಾಸನ ರಚನಾ ಚಟುವಟಿಕೆಗಳು ನಡೆಯುವುವು. ಸಂಸತ್ತು ಅಥವಾ ಒಂದು ರಾಜ್ಯ ಶಾಸಕಾಂಗವು ಜಾರಿಗೆ ತಂದ ಪ್ರತಿಯೊಂದು ಕಾನೂನಿನ ಅಡಿಯಲ್ಲಿನ

Digitised by Bharatavani, CIIL

ನಿಯಮಗಳನ್ನು ಆ ಕಾನೂನಿನಲ್ಲಿಯೇ ಅಧಿಕೃತವಾಗಿರುವಂತೆ ಅಧೀನ ಕಾಯ್ದೆ () ಗಳೆಂದು ಕರೆಯಲಾಗುವುದು. ಭಾರತ ಸಂವಿಧಾನದ 309ನೆಯ ಅನುಚ್ಛೇದದ ಪ್ರಕಾರ ಪರಿಸ್ಥಿತಿಯೊಂದರ ತುರ್ತಿನ ಅಗತ್ಯವನ್ನು ಪೂರೈಸಲು ನಿಯಮಗಳ ರಚನೆ, ಕಛೇರಿ ಜ್ಞಾಪಕ ಪತ್ರಗಳನ್ನು ಹೊರಡಿಸುವುದು, ಸರ್ಕಾರಿ ಆದೇಶ (ಕಾರ್ಯಾತ್ಮಕ ಅಥವಾ ಆಡಳಿತಾತ್ಮಕ ಸೂಚನೆಗಳು) ಇತ್ಯಾದಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಲಾಗಿದೆ. ಸಂವಿಧಾನದ ಪ್ರಕಾರ ರಾಷ್ಟ್ರಧ್ಯಕ್ಷರು ಅಥವಾ ಒಕ್ಕೂಟದ ವ್ಯವಹಾರಕ್ಕೆ ಸಂಬಂಧಿಸಿದ ಸೇವೆಗಳು ಮತ್ತು ಹುದ್ದೆಗಳ ವಿಷಯದಲ್ಲಿ ನಿರ್ದೇಶನವನ್ನು ನೀಡಬಲ್ಲ ವ್ಯಕ್ತಿಯ ಮತ್ತು ರಾಜ್ಯವೊಂದರ ರಾಜ್ಯಪಾಲರು ಅಥವಾ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಸೇವೆಗಳು ಮತ್ತು ಹುದ್ದೆಗಳ ವಿಷಯದಲ್ಲಿ ನಿರ್ದೇಶನವನ್ನು ನೀಡಬಲ್ಲ ವ್ಯಕ್ತಿಯು ಇಂತಹ ಸೇವೆ ಮತ್ತು ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ವ್ಯಕ್ತಿಗಳ ನೇಮಕಾತಿ ಮತ್ತು ಸೇವೆಯ ನಿಯಮಗಳನ್ನು ಈ ಅನುಚ್ಛೇದದ ಅಡಿಯಲ್ಲಿನ ಸೂಕ್ತ ಶಾಸನದ ಕಾಯ್ದೆಯ ಪ್ರಕಾರ ಅಥವಾ ಆ ಕಾಯ್ದೆಯಲ್ಲಿ ಈ ಸಂಬಂಧದಲ್ಲಿ ಕಾಯ್ದೆಗಳನ್ನು ರಚಿಸುವವರೆಗೂ, ನಿಯಂತ್ರಿಸುವ ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿರುವರು ಮತ್ತು ಹೀಗೆ ರಚಿಸಿದ ಯಾವುದೇ ಕಾನೂನು ಇಂತಹ ಯಾವುದೇ ಕಾಯ್ದೆಯಲ್ಲಿನ ಪ್ರಾವಧಾನಗಳಿಗೆ ಒಳಪಟ್ಟು ಪ್ರಭಾವಕಾರಿಯಾಗುವುದು.

ರಾಜ್ಯಸರ್ಕಾರಗಳ ಅಧೀನದ ವಿವಿಧ ಶಿಕ್ಷಣ ಇಲಾಖೆಗಳು, ಶಿಕ್ಷಣ ಸೂತ್ರಗಳು, ಅನುದಾನದ ನಿಯಮಗಳು, ಆರ್ಥಿಕ ನಿಯಮಗಳು, ಲೋಕಸೇವಾ ನಿಬಂಧನೆಗಳು (ಶಿಕ್ಷಣ ವಿಭಾಗಗಳಲ್ಲಿ ಉದ್ಯೋಗದಲ್ಲಿರುವವರನ್ನು ಸೇರಿಸಿದಂತೆ ಸಮಸ್ತ ಸರ್ಕಾರಿ ನೌಕರರಿಗೆ ಅನ್ವಯವಾಗುವಂಥವು) ಖಾಸಗಿ ಮಾನ್ಯತೆ ಪಡೆದ ಸಂಸ್ಥೆಗಳಿಗಾಗಿ ನಿಯಮಗಳು, ಶಿಸ್ತಿನ ನಿಯಮಗಳು (ವರ್ತನೆಯನ್ನು ನಿಯಂತ್ರಿಸುವ ನಿಯಮಗಳು) ಇವೇ ಮೊದಲಾದ ವಿಭಿನ್ನ ಸೂತ್ರಗಳನ್ನು ಸಿದ್ಧಪಡಿಸುತ್ತವೆ. ವಿಭಿನ್ನ ಸ್ತರಗಳಲ್ಲಿನ ವೃತ್ತಿಪರ ಸಂಘಗಳು ಎಲ್ಲಾ ವೃತ್ತಿಪರರಿಗೂ ಕಡ್ಡಾಯವಾಗಿರುವ ವೃತ್ತಿಯಲ್ಲಿ ನೈತಿಕತೆಯ ಬಗ್ಗೆ ಸ್ವಯಂ-ನಿಯಂತ್ರಣ ನಿಯಮಗಳನ್ನು ರಚಿಸುತ್ತವೆ.

ಶಿಕ್ಷಣ ವಿಭಾಗಗಳು ಅನುಷ್ಠಾನಿಸಲೇಬೇಕಾದ ವಿವಿಧ ಸುತ್ತೋಲೆಗಳನ್ನು ಅಧೀನ ಕಛೇರಿಗೆ ಅಥವಾ ಅಧಿಕಾರಿಗಳಿಗೆ ಅಧಿಕೃತವಾಗಿ ವಿತರಿಸುತ್ತವೆ. ಜಿಲ್ಲೆ, ತಾಲ್ಲೂಕು/ ಮಂಡಲ ಹಾಗೂ ಬ್ಲಾಕ್ ಸ್ತರಗಳ ಕಾರ್ಯಾಲಯಗಳು ಸಹ ತಮ್ಮ ತಮ್ಮ ವ್ಯಾಪ್ತಿಯಲ್ಲಿನ ಆಡಳಿತ ನಿಯಂತ್ರಣಕ್ಕಾಗಿ ಇದೇ ತೆರನ ಕಾರ್ಯಾತ್ಮಕ ಆದೇಶಗಳನ್ನು ಹೊರಡಿಸುತ್ತವೆ. ಸರ್ಕಾರಿ ಸಂಸ್ಥೆಗಳಲ್ಲದೆ ಪಂಚಾಯತ್ ರಾಜ್ ಸಂಸ್ಥೆಗಳೆಂದು ಹೆಸರಾದ ಜಿಲ್ಲಾ ಪರಿಷದ್ ಮತ್ತು ಪಂಚಾಯತ್ ಸಮಿತಿಗಳಂಥ ಸ್ಥಳೀಯ ಸರ್ಕಾರಗಳು ನಿಯಮ ನಿಬಂಧನೆಗಳನ್ನು ರಚಿಸುವುದಲ್ಲದೆ ಸ್ಥಳೀಯ ಅಗತ್ಯಗಳನ್ನು ಪೂರೈಸಲು ಕಾರ್ಯಾತ್ಮಕ ಸೂಚನೆಗಳನ್ನು ನೀಡುತ್ತವೆ. ಇವೆಲ್ಲವೂ ರಾಜ್ಯ ವಿಧಾನಸಭೆಗಳಲ್ಲಿನ ಮತ್ತು ಕೇಂದ್ರದ ಸಂಸತ್ತಿನಲ್ಲಿ ಔಪಚಾರಿಕ ಶಾಸನ ರಚನೆಯ ಜೊತೆಗೆ ಆಧಾರಿತ ಸ್ತರದಲ್ಲಿ ನಡೆಯುವ ಶಾಸನ ರಚನೆಗಳಾಗಿವೆ. ಆಡಳಿತದ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣದ ತತ್ವಕ್ಕೆ ಅನುಗುಣವಾಗಿ ಆಧಾರಿತ ಸ್ತರದ ನಿಯಂತ್ರಣಕ್ಕೆ ವಿಶೇಷತಃ ಆಧಾರಿತ ಸ್ತರದಲ್ಲಿ ದಕ್ಷ ಶೈಕ್ಷಣಿಕ ಅನುಷ್ಠಾನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.

**ಉಪಸಂಹಾರ:**

ಪ್ರಸ್ತುತ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡಾಗ ರಾಷ್ಟ್ರೀಯ ಶಿಕ್ಷಣ ಆಯೋಗ ಶಿಫಾರಸ್ಸು ಮಾಡಿದಂತೆ ಪಟ್ಟಿ ಮಾಡಿದ ಹಾಗೂ ಪಟ್ಟಿಯಲ್ಲಿರದ ಇತರ ಎಲ್ಲಾ ಸಮಗ್ರ ಮತ್ತು ವಿಭಾಗೀಯ ಶಿಕ್ಷಣ ಕಾನೂನುಗಳನ್ನು ಸಮಗ್ರಗೊಳಿಸಿ ಭಾರತ ಸರ್ಕಾರ ಭಾರತೀಯ ಶಿಕ್ಷಣ ಅಧಿನಿಯಮವನ್ನು ಜಾರಿಗೆ ತರಬಹುದು. ಸದ್ಯದ ಕಾನೂನುಗಳು ಹಾಗೂ ನಿಯಮಗಳ ಮುಖಾಂತರ ವಿಶೇಷವಾಗಿ ಶಾಲಾಶಿಕ್ಷಣದ ಪರಿಮಾಣಾತ್ಮಕ ವಿಸ್ತರಣೆಯ ಸಲುವಾಗಿ ಮತ್ತು ಎಲ್ಲಾ ಸ್ತರಗಳಲ್ಲಿ ಮತ್ತು ಶಾಖೆಗಳಲ್ಲಿ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ ಮತ್ತು ವೃತ್ತಿಪರ ಶಿಕ್ಷಣಗಳ ಗುಣಾತ್ಮಕ ಸುಧಾರಣೆಗಾಗಿ ರಾಷ್ಟ್ರೀಯ ಶಿಕ್ಷಣ ನೀತಿಯ (1986) ಅನುಷ್ಠಾನದ ಅನುಭವದ ಹಿನ್ನೆಲೆಯಲ್ಲಿ ಈ ಕಾರ್ಯವಾಗಬೇಕಾಗಿದೆ.

ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸಿದ ಹಿನ್ನೆಲೆಯಲ್ಲಿ ಪರಿಮಾಣಾತ್ಮಕ ವಿಸ್ತಾರ ಮತ್ತು ಮೂಲಭೂತ ಸೌಕರ್ಯಗಳ ಒದಗಣೆಗಾಗಿ ಕೇಂದ್ರದಲ್ಲಿ ಆದಾಯ ತೆರಿಗೆಯಲ್ಲಿ ಹೆಚ್ಚಿನ ಕರಭಾರದ ರೂಪದಲ್ಲಿ ಶಿಕ್ಷಣ ಸೆಸ್ಸನ್ನು ಮತ್ತು ರಾಜ್ಯಗಳಲ್ಲಿ ಭೂಕಂದಾಯವನ್ನು ವಿಧಿಸುವ ಸೂಕ್ತ ಶಾಸನರಚನೆಯ ಬಗ್ಗೆ ಚಿಂತಿಸಬೇಕಾಗಿದೆ. ಇದನ್ನು ಕೈಗೊಳ್ಳದ ಹೊರತು ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ತ ಆಧುನಿಕ ಸೌಲಭ್ಯವುಳ್ಳ ಪರ್ಯಾಪ್ತ ಶಾಲಾ ಅವಕಾಶವನ್ನು ಒದಗಿಸುವುದು ಮತ್ತು ಶಾಲೆಯ ವಿವಿಧ ಮುಖಗಳಲ್ಲಿ ಅಥವಾ ಉನ್ನತ ಶಿಕ್ಷಣದಲ್ಲಿ ಗುಣಾತ್ಮಕ ಸುಧಾರಣೆ ತರುವುದು ಬಹಳ ಕಷ್ಟವಾಗುವುದು.

ಶಿಕ್ಷಣದ ರಾಷ್ಟ್ರೀಯ ನೀತಿ (1986) ಸೂಕ್ತವಾಗಿಯೇ ಹೇಳಿರುವಂತೆ 'ಎಲ್ಲಾ ಶಿಕ್ಷಕರು ಬೋಧಿಸಬೇಕು ಹಾಗೂ ವಿದ್ಯಾರ್ಥಿಗಳು ಕಲಿಯಬೇಕು'. ಇದಾಗಬೇಕಾದರೆ ಬದ್ಧತೆಯುಳ್ಳ ಶಿಕ್ಷಕರು ಮತ್ತು ಅತ್ಯಂತ ಪ್ರೇರಿತವಾದ ವಿದ್ಯಾರ್ಥಿಗಳು ಅತ್ಯವಶ್ಯಕ. ಅಧ್ಯಾಪಕ ಶಿಕ್ಷಣ ಸಂಸ್ಥೆಗೆ ಪ್ರವೇಶ ಪಡೆಯುವ ಘಟ್ಟದಲ್ಲೇ ಅಭ್ಯರ್ಥಿಗಳಿಗೆ ಬೋಧಕ ವೃತ್ತಿಗೆ ಬೇಕಾದ ಮನೋಭಾವಗಳು, ಅಭಿಸಾಮರ್ಥ್ಯಗಳು ಮತ್ತು ಆಸಕ್ತಿಗಳಿವೆಯೇ ಎಂದು ತಿಳಿಯಲು ಅವರ ಸಂಪೂರ್ಣ ಮಾನಸಿಕ ಪರೀಕ್ಷೆಯನ್ನು ನಡೆಸಿದ ನಂತರ ಬದ್ಧತೆಯುಳ್ಳ ಸರಿಯಾದ ರೀತಿಯ ಅಧ್ಯಾಪಕರ ನೇಮಕಾತಿಗಾಗಿ ಸೂಕ್ತ ಕಾಯ್ದೆಗಳನ್ನು ರಚಿಸಬೇಕಾಗುತ್ತದೆ. ವಸತಿಸಹಿತದ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರಿಗೆ ವಿದ್ಯಾರ್ಥಿಗಳಿಗೆ ಸಂಪೂರ್ಣರೂಪದ ಪ್ರಶಿಕ್ಷಣವನ್ನು ನೀಡಿ ನಂತರ ಅನಾವಶ್ಯಕವಾದ ಆಯ್ಕೆ ಪರೀಕ್ಷೆಗಳನ್ನು ನಡೆಸದೆ ಅವರವರ ಉದ್ಯೋಗದ ಸ್ಥಳಕ್ಕೆ ನೇರವಾಗಿ ಕಳುಹಿಸಬೇಕು.

Digitised by Bharatavani, CIIL

ಸ್ವಾಮಿ ವಿವೇಕಾನಂದ, ಶ್ರೀ ಅರಬಿಂದೊ, ಮಹಾತ್ಮಗಾಂಧಿ ಮತ್ತು ಇತರ ಭಾರತೀಯ ತತ್ವಶಾಸ್ತ್ರಜ್ಞರು ತಿಳಿಸಿಕೊಟ್ಟಿರುವಂತೆ ದೇಶಿಯ ಶಿಕ್ಷಣ ವ್ಯವಸ್ಥೆಯ ಅನುಷ್ಠಾನಕ್ಕಾಗಿ ಸೂಕ್ತ ಶಾಸನಗಳನ್ನು ತರಬೇಕು.

**ಮೂಲ: ಸಿ.ಎಸ್. ಸುಬ್ಬರಾವ್**
**ಅನು: ಚಂದ್ರಶೇಖರ್ ಬಿ.ಎಂ.**

## ಶೈಕ್ಷಣಿಕ ಸಂಶೋಧನಾ ಪದವಿಗಳು

ಸಂಶೋಧನೆಯು ಜ್ಞಾನದ ಒಂದು ಹೊಸಶಾಖೆಯಾಗಿದ್ದು, ಇಂದು ಪ್ರತಿಯೊಂದು ಜ್ಞಾನ ಕ್ಷೇತ್ರದಲ್ಲೂ ಕ್ಷಿಪ್ರಗತಿಯಲ್ಲಿ ಜ್ಞಾನದ ಅನ್ವೇಷಣಾ ಕಾರ್ಯವನ್ನು ಮಾಡಲಾಗುತ್ತಿದೆ. ಇದೇ ರೀತಿ ಶಿಕ್ಷಣಕ್ಷೇತ್ರದಲ್ಲೂ ಕಳೆದ ಸುಮಾರು 70 ವರ್ಷಗಳಿಂದ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಂಶೋಧನೆಯನ್ನು ಮಾಡಲಾಗುತ್ತಿದೆ. ಇದರ ಸಂಖ್ಯೆಯು ಇತ್ತೀಚೆಗೆ ಗಣನೀಯವಾಗಿ ಹೆಚ್ಚುತ್ತಲಿದೆ. ಪ್ರಜಾತಂತ್ರದ ವಿಕಾಸ ಮತ್ತು ವಿವಿಧ ದೇಶಗಳ ಶಿಕ್ಷಣ ಕ್ಷೇತ್ರದ ಸಂಪರ್ಕದಿಂದ ಸಂಶೋಧನಾ ಕ್ಷೇತ್ರಕ್ಕೆ ಹೆಚ್ಚು ಬೆಲೆ ಉಂಟಾಗಿದೆ. ಶೈಕ್ಷಣಿಕ ಸಂಶೋಧನಾ ಕ್ಷೇತ್ರದಲ್ಲಿ ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳು ಮೊದಲನೇ ಸ್ಥಾನವನ್ನು ಪಡೆದುಕೊಂಡಿವೆಯಾದರೂ ಇತ್ತೀಚಿನ ದಿನಗಳಲ್ಲಿ ಭಾರತವೂ ಸೇರಿದಂತೆ ಅನೇಕ ದೇಶಗಳು ಶೈಕ್ಷಣಿಕ ಸಂಶೋಧನೆಯಲ್ಲಿ ಹೆಚ್ಚಿನ ಗಮನವನ್ನು ನೀಡುತ್ತಿದ್ದು ಸಂಶೋಧನಾ ಕಾರ್ಯಕ್ಕೆ ವಿಶ್ವವಿದ್ಯಾನಿಲಯಗಳ ಮೂಲಕ ಪದವಿಗಳನ್ನೂ ನೀಡುತ್ತಿವೆ. ಸ್ನಾತಕೋತ್ತರ ಪದವಿಯನ್ನು ಪಡೆಯಲಿರುವ ವಿದ್ಯಾರ್ಥಿಗಳು ತಮಗೆ ಆಸಕ್ತಿಯಿರುವ ವಿಷಯಗಳಲ್ಲಿ ಸಮಸ್ಯೆಯೊಂದನ್ನು ಆಯ್ಕೆ ಮಾಡಿಕೊಂಡು ಸಂಶೋಧನೆಯನ್ನು ಮಾಡಿ ಅದರ ವರದಿಯನ್ನು ಮೌಲ್ಯಮಾಪನಕ್ಕೆ ಒಪ್ಪಿಸಬೇಕು ಕೆಲವು ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಈ ರೀತಿಯ ಸಂಶೋಧನೆ ಕಡ್ಡಾಯವಾಗಿರುತ್ತದೆ. ಇದರಲ್ಲಿ ಕಿರು ಸಂಶೋಧನೆ (Dissertation) ಎನ್ನುತ್ತಾರೆ. ಇದು ವಿಜ್ಞಾನ, ವಾಣಿಜ್ಯ, ಮಾನವಿಕ ವಿಷಯಗಳ ಸಂಶೋಧನ ವಿಷಯದ ಜ್ಞಾನ/ಕೌಶಲಗಳನ್ನು ಉಪಯೋಗಿಸಲು ಇದರಿಂದ ಸಾಧ್ಯವಾಗುತ್ತದೆ. ಭಾಷಾ ವಿಷಯಗಳು ಅಥವಾ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಅನುಮತಿ ನೀಡಿರುವ ಎಲ್ಲಾ ಸ್ನಾತಕ ಪದವಿ ವಿಷಯಗಳೂ ಅನ್ವಯಿಸುತ್ತದೆ. ಶಿಕ್ಷಣಶಾಸ್ತ್ರದ ಎಂ.ಎಡ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಈ ರೀತಿಯ ಕಿರುಸಂಶೋಧನಾ ಪ್ರಬಂಧವನ್ನು ವಿದ್ಯಾರ್ಥಿಗಳು ಸಂಶೋಧನೆ ಮಾಡಿ ಮಂಡಿಸಿದರೂ ಅದನ್ನು ಪೂರ್ಣರೂಪದ ಸಂಶೋಧನೆ ಎಂದಾಗಲಿ, ಎಂ.ಎಡ್. ಪದವಿಯನ್ನು ಸಂಶೋಧನ ಪದವಿ ಎಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ ಅದು ಸ್ನಾತಕೋತ್ತರ ಪದವಿಯ ಒಂದು ಭಾಗವೇ ಆಗಿದ್ದು, ಸಂಶೋಧನ ಪದವಿಗಳಿಗಾಗಿ ಒಪ್ಪಿಸುವ ಮಹಾ ಪ್ರಬಂಧಗಳ ಶಿಷ್ಟತೆಯನ್ನಾಗಲಿ, ಗುಣಮಟ್ಟವನ್ನಾಗಲಿ ಹೊಂದಿರುವುದಿಲ್ಲ.

ಶಿಕ್ಷಣಶಾಸ್ತ್ರ ವಿಷಯದಲ್ಲಿ ನೀಡುತ್ತಿರುವ ಪ್ರಮುಖ ಸಂಶೋಧನಾ ಪದವಿಗಳು ಯಾವುವೆಂದರೆ–

1. ಮಾಸ್ಟರ್ ಆಫ್ ಫಿಲಾಸಫಿ (M.phil)
2. ಡಾಕ್ಟರ್ ಆಫ್ ಫಿಲಾಸಫಿ (Ph.D)
3. ಪೋಸ್ಟ್ ಡಾಕ್ಟರೇಟ್ ಸಂಶೋಧನೆ
4. ಡಾಕ್ಟರ್ ಆಫ್ ಎಜುಕೇಷನ್(D.Ed)

### ಮಾಸ್ಟರ್ ಆಫ್ ಫಿಲಾಸಫಿ (Master of Philosophy):

ಎಂ.ಎಡ್. ಪದವಿ ಅಂದರೆ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಶಿಕ್ಷಣಶಾಸ್ತ್ರ ವಿಷಯದಲ್ಲಿ ಎಂ.ಫಿಲ್ ಪದವಿ ಪಡೆಯಲು ಇಚ್ಚೆಯಿರುವವರು ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ(UGC) ಮಾನ್ಯತೆ ಪಡೆದಿರುವ ಯಾವುದಾದರೂ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಿಂದ ಈ ಪದವಿಯನ್ನು ಪಡೆದುಕೊಳ್ಳಬಹುದಾಗಿದೆ. ಇದರ ಅವಧಿಯು ಒಂದು ವರ್ಷಗಳ ಕಾಲವಾಗಿದ್ದು ಈ ಒಂದು ವರ್ಷದ ಅವಧಿಯಲ್ಲಿ ಅವರು ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಮಂಡಿಸಬೇಕು ಅಷ್ಟೇ ಅಲ್ಲದೆ ಆರು ತಿಂಗಳುಗಳ ಕಾಲ ಸಂಶೋಧನಾ ವಿಧಾನವನ್ನು ತರಗತಿಗಳಲ್ಲಿ ಅಧ್ಯಯನ ಮಾಡಬೇಕಾಗುತ್ತದೆ ಹಾಗೂ ಕೊನೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಪರೀಕ್ಷೆಯನ್ನು ಬರೆದು ಅದರಲ್ಲಿ ಉತ್ತೀರ್ಣರಾಗಬೇಕಾಗುತ್ತದೆ. ಆ ನಂತರ ವಿದ್ಯಾರ್ಥಿಯು ನಿರ್ದಿಷ್ಟ ವಿಷಯ ಕುರಿತು ಮಂಡಿಸಿದ ಪ್ರಬಂಧದ ಮೌಲ್ಯಮಾಪನ ಕಾರ್ಯ ಮುಗಿದು ಫಲಿತಾಂಶ ಬಂದ ನಂತರ ಅವರಿಗೆ ಎಂ.ಫಿಲ್ ಪದವಿಯನ್ನು ಪ್ರದಾನ ಮಾಡಲಾಗುತ್ತದೆ. ಈ ಪದವಿಯನ್ನು ಪಡೆದ ಅಭ್ಯರ್ಥಿಯು ಉನ್ನತ ವ್ಯಾಸಂಗವಾಗಿ ಪಿ.ಹೆಚ್‌ಡಿ ಪದವಿಗೆ ಪ್ರಯತ್ನಿಸಬಹುದು ಅಥವಾ ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉಪನ್ಯಾಸಕರಾಗಿ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಲು ಅರ್ಹರಾಗಿರುತ್ತಾರೆ. ಎಂ.ಫಿಲ್ ಪದವಿ ಪಡೆದವರು ತಮ್ಮ ಹೆಸರಿನ ಮುಂದೆ ಡಾ. (ಡಾಕ್ಟರ್) ಎಂದು ನಮೂದಿಸಿಕೊಳ್ಳುವಂತಿಲ್ಲ.

### ಡಾಕ್ಟರ್ ಆಫ್ ಫಿಲಾಸಫಿ (Doctor of Philosophy):

ಡಾಕ್ಟರ್ ಆಫ್ ಫಿಲಾಸಫಿ ಎಂಬುದನ್ನು ಸರಳೀಕರಿಸಿ Ph.D ಎಂದು ಸಹ ಕರೆಯಬಹುದಾಗಿದೆ. ಇದು ವಿಶ್ವವಿದ್ಯಾನಿಲಯಗಳ ಉನ್ನತ ಹಂತದ ಪದವಿಯಾಗಿದ್ದು ಸ್ನಾತಕೋತ್ತರ ಪದವಿ ಅಥವಾ ಎಂ.ಫಿಲ್ ಪದವಿ ಪಡೆದವರು ಹಾಗೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ನಡೆಸುವ UGC-NET-JRF ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಈ ಪದವಿಗೆ ನೋಂದಾಯಿಸಿ ಕೊಳ್ಳಲು ಅರ್ಹರಾಗಿರುತ್ತಾರೆ.

ಪಿಹೆಚ್.ಡಿ ಪದವಿಯನ್ನು ಪಡೆಯಲು ಆಕಾಂಕ್ಷೆಯನ್ನು ಹೊಂದಿರುವ ವಿದ್ಯಾರ್ಥಿಗಳು ನಿರ್ದಿಷ್ಟ ವಿಷಯದಲ್ಲಿ ಕನಿಷ್ಠ 55% ಅಂಕಗಳೊಂದಿಗೆ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು

Digitised by Bharatavani, CIIL

ಹಾಗೂ ಉತ್ತಮ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿದವನಾಗಿರಬೇಕು. ಈ ಕನಿಷ್ಠ ಅರ್ಹತೆಯನ್ನು ಹೊಂದಿರುವ ವ್ಯಕ್ತಿಗಳು ಶಿಕ್ಷಣಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ಪದವಿಗೆ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆ ನೋಂದಾವಣೆಗೆ ನಿರ್ದಿಷ್ಟ ಶುಲ್ಕವನ್ನು ಪಾವತಿಸಿ ವಿಶ್ವವಿದ್ಯಾನಿಲಯದ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಆನಂತರ ವಿಶ್ವವಿದ್ಯಾನಿಲಯ ಮಾರ್ಗದರ್ಶಕರ ಸಲಹೆ ಮತ್ತು ಮಾರ್ಗದರ್ಶನಕ್ಕೆ ಒಪ್ಪಿಕೊಳ್ಳುವ ಅನುಗುಣವಾಗಿ ಸಂಶೋಧನಾ ಕಾರ್ಯ ನಿರ್ವಹಿಸಬಹುದಾಗಿದೆ. ಈ ಸಂದರ್ಭದಲ್ಲಿ ಕೆಲವೊಂದು ವಿಶ್ವವಿದ್ಯಾನಿಲಯಗಳು ಸಂಶೋಧನೆಯ ಜೊತೆಗೆ 'ಕೋರ್ಸ್‌ವರ್ಕ್' ಮಾಡುವುದನ್ನು (ಉಪನ್ಯಾಸಗಳಿಗೆ ಹಾಜರಾಗುವುದನ್ನು) ಕಡ್ಡಾಯ ಮಾಡಿವೆ.

ಪಿಹೆಚ್.ಡಿ ಪದವಿಯನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳಿಗೆ ಆಯಾ ವಿಶ್ವವಿದ್ಯಾನಿಲಯಗಳ ಜೊತೆಗೆ ಯುಜಿಸಿಯು ಕೆಲವೊಂದು ನಿಯಮಗಳನ್ನು ರೂಪಿಸಿದೆ. ಅವುಗಳೆಂದರೆ,

- ಸ್ವಾತಕೋತ್ತರ ಅಥವಾ ಅದಕ್ಕೆ ಸಂವಾದಿಯಾಗಿರುವ ಪದವಿಯಲ್ಲಿ ಕನಿಷ್ಠ ಶೇಕಡ 55 ಅಂಕಗಳೊಂದಿಗೆ ದ್ವಿತೀಯ ಶ್ರೇಣಿ ಪಡೆದಿರಬೇಕು. ಪರಿಶಿಷ್ಟ ಜಾತಿ/ವರ್ಗ ಅಥವಾ ಪ್ರವರ್ಗ–1ರ ಅಭ್ಯರ್ಥಿಗಳಾದರೆ ಶೇಕಡ 50ರಷ್ಟು ಅಂಕಗಳನ್ನು ಪಡೆದಿದ್ದರೆ ಸಾಕಾಗುತ್ತದೆ. ಹಾಗೆಯೇ ನಿರಂತರವಾಗಿ ಮೂರು ವರ್ಷ ಸೇವೆ ಸಲ್ಲಿಸಿದ ಸೇವಾನಿರತ ಶಿಕ್ಷಕರಿಗೂ ಈ ನಿಯಮ ಅನ್ವಯಿಸುತ್ತದೆ.

- ಪಿಹೆಚ್.ಡಿ ಪದವಿ ಪಡೆಯಲು ಮಾರ್ಗದರ್ಶಕರು ಅಥವಾ ಸಹ ಮಾರ್ಗದರ್ಶಕರ ಸಲಹೆಯ ಮೇರೆಗೆ ಮಹಾಪ್ರಬಂಧನ್ನು ಸಿದ್ಧಪಡಿಸಬೇಕಾಗುತ್ತದೆ. ಜೊತೆಗೆ ಮಾರ್ಗದರ್ಶಕರೂ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದುಕೊಂಡಿರಬೇಕು.

- ಪಿಹೆಚ್.ಡಿ ಪದವಿಗೆ ನೋಂದಣಿ ಮಾಡಿಕೊಳ್ಳುವ ಮುನ್ನ ಇವರು ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಹಾಗೂ ಈ ಅರ್ಹತಾ ಅಂಕಗಳಿಗೆ ಅನುಗುಣವಾಗಿ ಸಂದರ್ಶನಕ್ಕೆ ಹಾಜರಾಗಿ ಆನಂತರ ಮಾರ್ಗದರ್ಶಕರನ್ನು ಗುರ್ತಿಸಿ ಮಾರ್ಗದರ್ಶನಕ್ಕೂ ಅವರ ಅನುಮತಿ ಪಡೆಯಬೇಕು. ಯುಜಿಸಿ ನಡೆಸುವ ರಾಷ್ಟ್ರ ಮಟ್ಟದ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (National Eligibility Test-NET) ತೇರ್ಗಡೆ ಹೊಂದಿದ ಹಾಗೂ ಅದರಿಂದ ಕಿರಿಯ ಸಂಶೋಧನಾ ಶಿಷ್ಯವೇತನ ಪಡೆದವರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟು ಕೋಶ (SC/ST Cell) ಹಾಗೂ ರಾಜೀವ್ ಗಾಂಧಿ ರಾಷ್ಟ್ರೀಯ ಶಿಷ್ಯವೇತನ ಪಡೆದವರು ಹಾಗೂ ಪ್ರಾಜೆಕ್ಟ್ ಫೆಲೋ ಆಗಿ ಕಾರ್ಯನಿರ್ವಹಿಸುತ್ತಿರುವವರು ಮತ್ತು ರಾಜ್ಯಮಟ್ಟದಲ್ಲಿ ನಡೆಸಲಾಗುವ ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆಯಲ್ಲಿ (State Level Eligibility Test-SLET) ತೇರ್ಗಡೆ ಹೊಂದಿರುವವರು ರಾಷ್ಟ್ರೀಯ ಅರ್ಹತಾ ಪರೀಕ್ಷೆಯಿಂದ ವಿನಾಯಿತಿ ಪಡೆಯಬಹುದು ಹಾಗೂ ಸಂದರ್ಶನಕ್ಕೆ ಹಾಜರಾಗಿ ನೇರವಾಗಿ ಸಂಶೋಧನೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಇವುಗಳೊಂದಿಗೆ ಆಯಾ ವಿಶ್ವವಿದ್ಯಾನಿಲಯಗಳು ರೂಪಿಸುವ ನೀತಿ ನಿಯಮಗಳಿಗೆ ಅನುಗುಣವಾಗಿ ಶಿಕ್ಷಣಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿಗೆ ನೋಂದಣಿ ಮಾಡಿಕೊಂಡ ಅಭ್ಯರ್ಥಿಗಳು ಅವರ ಮಾರ್ಗದರ್ಶಕರ ಸಲಹೆ ಮತ್ತು ಸೂಚನೆಗಳಿಗೆ ಅನುಗುಣವಾಗಿ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನ ಪ್ರಸ್ತಾವನೆಯನ್ನು ಸಿದ್ಧಪಡಿಸಬೇಕಾಗುತ್ತದೆ. ಈ ಪ್ರೌಢ ಪ್ರಬಂಧವನ್ನು ಸಿದ್ಧಪಡಿಸಲು ಕನಿಷ್ಠ 3 ವರ್ಷ ಮತ್ತು ಗರಿಷ್ಠ 5 ವರ್ಷ ಸಮಯವಿರುತ್ತದೆ. ಅಭ್ಯರ್ಥಿಯು ಈ ಅವಧಿಯೊಳಗೆ ಕಾರಣಾಂತರಗಳಿಂದ ಸಂಶೋಧನೆ ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ ಮತ್ತೆ ಎರಡು ವರ್ಷಗಳ ಅವಧಿಗೆ ಸಂಶೋಧನಾ ನಿರ್ದೇಶಕರಿಂದ ಅನುಮತಿಯನ್ನು ಪಡೆದುಕೊಂಡು, ಈ ಅವಧಿಯಲ್ಲಿ ಕನಿಷ್ಠ ಮೂರು ಸಂಶೋಧನಾ ಲೇಖನಗಳನ್ನು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟಿಸಬೇಕು. ಸಿದ್ಧಪಡಿಸಿದ ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು. ಆನಂತರ ಮಾರ್ಗದರ್ಶಕರೂ ಸೇರಿದಂತೆ ಮೂರು ಮೌಲ್ಯಮಾಪಕರಿಂದ ಧನಾತ್ಮಕ ವರದಿ ಬಂದ ನಂತರ ಮುಕ್ತ ಸಂದರ್ಶನ ಮಾಡಿದ ನಂತರ ಶಿಕ್ಷಣ ಶಾಸ್ತ್ರದಲ್ಲಿ ಪಿ.ಹೆಚ್.ಡಿ ಪದವಿ ನೀಡಲಾಗುತ್ತದೆ.

ಪಿ.ಹೆಚ್.ಡಿ ಪದವಿ ಪಡೆದವರು ತಮ್ಮ ಹೆಸರಿನ ಮುಂದೆ ಡಾ॥ (ಡಾಕ್ಟರ್) ಎಂದು ನಮೂದಿಸಿಕೊಳ್ಳಬಹುದು. ಡಾಕ್ಟರ್ ಆಫ್ ಫಿಲಾಸಫಿ(ಪಿಹೆಚ್‌ಡಿ) ಪದವಿಯನ್ನು ಇನ್ನೂ ಒಂದು ರೀತಿಯಲ್ಲಿ ನೀಡುವ ಕ್ರಮವಿದೆ. ಇದಕ್ಕೆ ಗೌರವ ಡಾಕ್ಟರೇಟ್ (Honouris Cause) ಎಂದು ಹೇಳುತ್ತಾರೆ. ವಿಶ್ವವಿದ್ಯಾನಿಲಯಗಳು ತಮ್ಮ ಘಟಿಕೋತ್ಸವಕ್ಕೆ ಮೊದಲು ಸಿಂಡಿಕೇಟ್ ಸಭೆಯಲ್ಲಿ ಸಮಾಜಕ್ಕೆ ತಮ್ಮ ಪ್ರತಿಭೆ, ಕೃತಿಗಳು, ಸಮಾಜಸೇವೆ ಮುಂತಾದವುಗಳ ಮೂಲಕ ಮಹತ್ವದ ಕೊಡುಗೆ ನೀಡಿದ ಸಾಹಿತಿಗಳು, ಕಲಾವಿದರು, ವಿಜ್ಞಾನಿಗಳು, ಕ್ರೀಡಾಪಟುಗಳು ಮತ್ತು ಸಮಾಜಸೇವಕರ ಕೊಡುಗೆಗಳನ್ನು ಗುರುತಿಸಿ, ಗೌರವಿಸಿ ವಾರ್ಷಿಕ ಘಟಿಕೋತ್ಸವದಲ್ಲಿ ಅಂಥವರಿಗೆ ಗೌರವ ಡಾಕ್ಟರೇಟ್ ನೀಡುವ ಪದ್ಧತಿ ಇದೆ. ಈ ಪದವಿಗೂ ಪಿಹೆಚ್‌ಡಿ ಎಂದೇ ಹೇಳುತ್ತಾರೆ. ಆದರೆ ಇದು ಸಂಶೋಧನೆಗೆ ನೀಡಿದ ಪದವಿಯಾಗುವುದಿಲ್ಲ. ಗೌರವ ಡಾಕ್ಟರೇಟ್ ಪಡೆದವರೂ ತಮ್ಮ ಹೆಸರಿನೊಂದಿಗೆ ಡಾ॥ ಅಭಿಧಾನವನ್ನು ಸೇರಿಸಿಕೊಳ್ಳಬಹುದು.

**D.sc., D.Lit., D.Ed ಮತ್ತು D.Com ಪದವಿಗಳು:**

ವಿಜ್ಞಾನ, ಸಾಹಿತ್ಯ/ಮಾನವಿಕಗಳು. ಶಿಕ್ಷಣಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರದ ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಗ್ರಂಥಗಳನ್ನು ಪ್ರಕಟಿಸಿ, ಸಂಶೋಧನೆಗಳನ್ನು ಮಾಡಿ ತಮ್ಮ ಕ್ಷೇತ್ರಕ್ಕೆ ಮಹತ್ತರ ಕೊಡುಗೆಗಳನ್ನು ನೀಡಿ ತಮ್ಮ ಕ್ಷೇತ್ರವನ್ನು ಸಮೃದ್ಧಗೊಳಿಸಿದ ವ್ಯಕ್ತಿಗಳು Ph.D ಗಿಂತ ಸ್ವಲ್ಪ ಮೇಲ್ಮಟ್ಟದ ಮಾನ್ಯತೆ ಇರುವ Doctor of Science (D.Sc), Doctor of Literature (D.Lit), Doctor of Education(D.Ed), ಮತ್ತು Doctor of Commerce (D.Com) ಪದವಿಗಳಲ್ಲಿ ಯಾವುದನ್ನಾದರೂ ಪಡೆಯಲು ನೋಂದಣಿ ಮಾಡಿಕೊಳ್ಳುವ

Digitised by Bharatavani, CIIL

ಅವಕಾಶ ಕೆಲವು ವಿಶ್ವವಿದ್ಯಾನಿಲಯಗಳಲ್ಲಿದೆ. ಅಂಥವರು ನಿಗದಿತ ಶುಲ್ಕವನ್ನು ಪಾವತಿಸಿ ತಮ್ಮ ಎಲ್ಲಾ ಕೃತಿಗಳನ್ನು (ಪುಸ್ತಕ, ಸಂಶೋಧನ ವರದಿ ಇತ್ಯಾದಿ) ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ, ಜೊತೆಗೆ ಆ ಪದವಿಗಾಗಿಯೇ ಮಹಾಪ್ರಬಂಧ ಒಂದನ್ನು ಸಿದ್ಧಪಡಿಸಿ ಸಲ್ಲಿಸಬೇಕು. ವಿಶ್ವವಿದ್ಯಾನಿಲಯ ನೇಮಿಸುವ ಪರೀಕ್ಷಾ ಮಂಡಳಿ ಈ ಎಲ್ಲವನ್ನು ಮೌಲ್ಯಮಾಪನ ಮಾಡಿ ಪದವಿ ನೀಡಬಹುದೆಂದು ಶಿಫಾರಸು ಮಾಡಿದರೆ ಆ ಪದವಿಯನ್ನು ವಿಶ್ವವಿದ್ಯಾನಿಲಯ ನೀಡುತ್ತದೆ. ಈ ಪದವಿಗಳು ಒಂದು ರೀತಿಯಲ್ಲಿ ಸಂಶೋಧನ ಪದವಿಗಳೆನಿಸುತ್ತವೆ ಈ ಪದವಿಗಳನ್ನು ಪಡೆದವರೂ ಡಾ॥ ಅಭಿಧಾನವನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳಬಹುದು.

**ಪೋಸ್ಟ್ ಡಾಕ್ಟರೇಟ್ ಸಂಶೋಧನೆ:**

ಪೋಸ್ಟ್ ಡಾಕ್ಟರೇಟ್ ಸಂಶೋಧನೆಯು ಡಾಕ್ಟರ್ ಆಫ್ ಫಿಲಾಸಫಿ ಪದವಿ ಪಡೆದ ನಂತರದ ಸಂಶೋಧನೆಯಾಗಿದ್ದು ಇದು ಅತ್ಯಂತ ಉನ್ನತ ಮಟ್ಟದ ಸಂಶೋಧನೆಯಾಗಿದೆ. ಈ ರೀತಿ ಸಂಶೋಧನೆಯನ್ನು ಶಿಕ್ಷಣಶಾಸ್ತ್ರ ಅಥವಾ ಇತರ ವಿಷಯಗಳಲ್ಲಿ ಅಥವಾ ಶಿಕ್ಷಣಕ್ಕೆ ಸಂಬಂಧಿಸಿದ ಇತರೆ ವಿಷಯಗಳನ್ನು ಒಟ್ಟುಗೂಡಿಸಿ ಸಮಗ್ರವಾಗಿ ಸಂಶೋಧನೆ ಮಾಡಬಹುದಾಗಿದೆ. ಇಲ್ಲಿ ಸಂಶೋಧಕ ನಿರ್ದಿಷ್ಟ ವಿಷಯದ ಬಗ್ಗೆ ಆಳವಾದ ಸಂಶೋಧನೆಯನ್ನು ಮಾಡಬೇಕಾಗುತ್ತದೆ.

ಈ ಮಟ್ಟದ ಸಂಶೋಧನೆಯಲ್ಲಿ ಸಂಶೋಧಕರಿಗೆ ಉತ್ತಮ ವೇತನ ಸೌಲಭ್ಯ ನೀಡುವುದರ ಮೂಲಕ ವಿವಿಧ ಸಂಘಟನೆಗಳು, ಸರ್ಕಾರಿ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ಮುಂತಾದ ಸಂಸ್ಥೆಗಳು ಶಿಷ್ಯವೇತನವನ್ನು (Fellowship) ನೀಡುವುದರ ಮೂಲಕ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತವೆ. UGC ನಿವೃತ್ತಿ ಪ್ರಾಧ್ಯಾಪಕರಿಗೆ ನೀಡುವ Professor Emirtus ಸ್ಥಾನಮಾನ, ಫೋರ್ಡ್, ರಾಕ್‌ಫೆಲ್ಲರ್ ಮುಂತಾದ ಸಂಸ್ಥೆಗಳು ನೀಡುವ ಫೆಲೋಶಿಫ್‌ಗಳು ಇದರ ಉದಾಹರಣೆಗಳಾಗಿವೆ. ಈ ರೀತಿ ಸಂಶೋಧನೆ ಕಾರ್ಯ ಮಾಡಿದವರಿಗೆ ಪೋಸ್ಟ್‌ಡಾಕ್ಟರ್ ಫೆಲೋ, ಸಹಾಯಕ ಪೋಸ್ಟ್ ಡಾಕ್ಟರ್, ರೀಸರ್ಚ್ ಅಸೋಸಿಯೇಟ್, ಪ್ರೊಫೆಸರ್ ಎಮಿರೈಟಸ್ ಮುಂತಾದ ಅಭಿಧಾನಗಳಿಂದ ಕರೆಯಲಾಗುತ್ತದೆ ಇವೆಲ್ಲವೂ ವಿಶ್ವವಿದ್ಯಾನಿಲಯದ ಸಂಶೋಧನ ಪದವಿಗಳಲ್ಲದಿದ್ದರೂ, ಉನ್ನತ ಸಂಶೋಧನೆಯನ್ನು ಗುರ್ತಿಸುವ ಅಭಿಧಾನಗಳಾಗಿವೆ. ಈ ರೀತಿ ಸಂಶೋಧನೆಯನ್ನು ಸ್ವತಃ ಅಭ್ಯರ್ಥಿಯೇ ಸ್ವತಂತ್ರವಾಗಿಯಾಗಲಿ ಅಥವಾ ಪ್ರಧಾನ ಸಂಶೋಧಕರೆಂದು ಮಾರ್ಗದರ್ಶಕರನ್ನು ನೇಮಕ ಮಾಡಿಕೊಂಡಾಗಲಿ ಮಾಡಬಹುದಾಗಿದೆ. ಈ ಸಂಶೋಧನಕಾರರಲ್ಲಿ ಹೆಚ್ಚಿನ ಜ್ಞಾನದ ಜೊತೆಗೆ ಉತ್ತಮ ಸಂಶೋಧನಾ ಅನುಭವವನ್ನು ಪಡೆಯಲು ಅವಕಾಶವಿದ್ದು ಹೆಚ್ಚು ಮೌಲ್ಯವುಳ್ಳ ಸಂಶೋಧನಾ ಲೇಖನಗಳನ್ನು ಪ್ರಕಟಿಸಿ ಉತ್ತಮ ಸಾಮರ್ಥ್ಯವುಳ್ಳ ಸಂಶೋಧಕರಾಗಿ ಹೆಚ್ಚಿನ ಜ್ಞಾನ ಪಡೆಯುವುದರೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿರುವ ಹಲವಾರು ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡು ಹಿಡಿಯುವುದರೊಂದಿಗೆ ಶಿಕ್ಷಣ ಕ್ಷೇತ್ರವನ್ನು ಹೆಚ್ಚು ಸಮೃದ್ಧಿಗೊಳಿಸುವ ಉತ್ತಮ ಅವಕಾಶವಿದೆ.

–ಡಾ. ಶೀಲಾ ಜಿ.

## ಶೈಕ್ಷಣಿಕ ಸಂಶೋಧನೆಗೆ ಹಣಕಾಸಿನ ನೆರವು

ಇಂದು ವಿಶ್ವವಿದ್ಯಾನಿಲಯಗಳಲ್ಲಿ, ಮಹಾವಿದ್ಯಾಲಯಗಳಲ್ಲಿ ಹೆಚ್ಚಿನ ಸಂಶೋಧನೆಗಳು ನಿರಂತರವಾಗಿ ನಡೆಯುತ್ತಲಿವೆ. ಪ್ರಾರಂಭದಲ್ಲಿ ಸಂಶೋಧಕರು ತಮ್ಮ ಸಂಶೋಧನೆಗಾಗಿ ಹಣದ ನೆರವನ್ನು ತಾವೇ ಮಾಡಿಕೊಳ್ಳುತ್ತಿದ್ದರು. 1965ರ ನಂತರದಲ್ಲಿ ವಿಶ್ವವಿದ್ಯಾನಿಲಯ ಅನುದಾನ ಆಯೋಗ ಭಾರತೀಯ ಸಾಮಾಜಿಕ ವಿಜ್ಞಾನಗಳ ಸಂಶೋಧನಾ ಪರಿಷತ್ (Indian council of Social Science Research-ICSR) ಶಿಕ್ಷಣಶಾಸ್ತ್ರವೂ ಸೇರಿದಂತೆ ಸಾಮಾಜಿಕ ವಿಜ್ಞಾನದ ಸಂಶೋಧನೆಯಲ್ಲಿ ತೊಡಗುವ ಸಂಶೋಧಕರಿಗೆ ಉದಾರವಾದ ಹಣಕಾಸಿನ ನೆರವನ್ನು ನೀಡುತ್ತಾ ಬಂದಿವೆ. ಅದರಂತೆಯೇ ಸಾಮಾಜಿಕ ವಿಜ್ಞಾನಗಳ ಸಂಶೋಧನೆಗಾಗಿ ವಿದೇಶಿ ಸಂಸ್ಥೆಗಳಾದ USEFI ಫೋರ್ಡ್ ಸಂಸ್ಥೆ (Ford Foundation) ಮತ್ತು ರಾಕ್ ಫೆಲ್ಲರ್ (Rock Feller) ಮುಂತಾದ ಸಂಸ್ಥೆಗಳು ಕೂಡಾ ಸಂಶೋಧಕರಿಗೆ ಹಣಕಾಸಿನ ಸಹಾಯವನ್ನು ಮಾಡುತ್ತಲಿವೆ. ಭಾರತದಲ್ಲಿ ಖಾಸಗಿ ಸಂಸ್ಥೆಗಳಾದ ಟಾಟಾ, ಬಿರ್ಲಾ ಮುಂತಾದ ಔದ್ಯೋಗಿಕ ಕುಟುಂಬಗಳು ಕೂಡಾ ಸಂಶೋಧನಾ ಕಾರ್ಯಕ್ಕೆ ಹಣಕಾಸಿನ ನೆರವನ್ನು ನೀಡುವುದಲ್ಲದೆ ಸಂಶೋಧನಾ ಸಂಸ್ಥೆಗಳನ್ನು ನಡೆಸುತ್ತಲಿವೆ. ಉದಾ: ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಸಿಯಲ್ ಸಾಯನ್ಸ್ (TATA Institute of Social Science) ಜೊತೆ ಜೊತೆಗೆ ಭಾರತ ಸರಕಾರವು ಸಾಮಾಜಿಕ ವಿಜ್ಞಾನಗಳ ಸಂಶೋಧನೆಗಳಿಗಾಗಿ ಅಧಿಕ ಪ್ರಮಾಣದಲ್ಲಿ ಆರ್ಥಿಕ ಸಹಾಯವನ್ನು ಒದಗಿಸುತ್ತಲಿವೆ. ವಿಶ್ವವಿದ್ಯಾನಿಲಯಗಳೂ ತಮ್ಮ ಆಯವ್ಯಯ ಅಂದಾಜಿನಲ್ಲಿ ಸಂಶೋಧನೆಗೆಂದು ಹಣವನ್ನು ಮೀಸಲಾಗಿಟ್ಟು ಸಂಶೋಧಕರಿಗೆ ಆರ್ಥಿಕ ನೆರವು ನೀಡುತ್ತವೆ. ಆದರೆ ಗಮನಿಸಬೇಕಾದ ಸಂಗತಿ ಏನೆಂದರೆ, ಸರಕಾರವು ಹಣವನ್ನು ಒದಗಿಸುವಾಗ ಸಂಶೋಧಕರಿಗೆ ಅದರಲ್ಲೂ ಸಾಮಾಜಿಕ ವಿಜ್ಞಾನದ ಸಂಶೋಧಕರಿಗೆ ನೈಸರ್ಗಿಕ ವಿಜ್ಞಾನದ ಸಂಶೋಧಕರಿಗಿಂತ ಕಡಿಮೆ ಪ್ರಮಾಣದಲ್ಲಿ ಹಣ ಒದಗಿಸುವುದು ಕಂಡು ಬರುತ್ತದೆ. 1973ರಲ್ಲಿ ಭಾರತದ ಸರಕಾರವು 2500 ಮಿಲಿಯನ್ ರೂಪಾಯಿಗಳನ್ನು ನೈಸರ್ಗಿಕ ವಿಜ್ಞಾನ, ಸಾಮಾಜಿಕ ವಿಜ್ಞಾನ, ತಂತ್ರಜ್ಞಾನ, ಕೃಷಿ, ವೈದ್ಯಕೀಯ, ಶಿಕ್ಷಣ ಇತ್ಯಾದಿ ಶಾಸ್ತ್ರಗಳ ಅಭಿವೃದ್ಧಿ ಮತ್ತು ಸಂಶೋಧನೆಗಾಗಿ ಮಂಜೂರು ಮಾಡಿತ್ತು. ಇದರಲ್ಲಿ ಒಟ್ಟು 25 ಮಿಲಿಯನ್ (ಒಂದು ಮಿಲಿಯನ್=ಹತ್ತು ಲಕ್ಷ) ರೂಪಾಯಿಗಳು ಮಾತ್ರ ಸಾಮಾಜಿಕ ವಿಜ್ಞಾನಗಳಿಗೆ ದೊರಕಿತು. ನೈಸರ್ಗಿಕ ವಿಜ್ಞಾನದ ನೂರನೇಯ ಒಂದು ಭಾಗವಿದು. ಇದರಿಂದ ಇವೆರಡರಲ್ಲಿಯ ಆರ್ಥಿಕ ನೆರವಿನಲ್ಲಿನ ಅಧಿಕ ಅಂತರವನ್ನು ಗಮನಿಸಬಹುದು.

Digitised by Bharatavani, CIIL

ರಾಷ್ಟ್ರದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಆಡಳಿತಾತ್ಮಕ ಅಭಿವೃದ್ಧಿಯಲ್ಲಿ ಸಾಮಾಜಿಕ ವಿಜ್ಞಾನ ವಿಷಯಗಳ ಪಾತ್ರ ಅಪರಿಮಿತವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದಾಗ್ಯೂ ಇವುಗಳಿಗೆ ದೊರೆಯುತ್ತಿರುವ ಆರ್ಥಿಕ ನೆರವು ಅತ್ಯಲ್ಪವಾಗಿದೆ. ಈ ಪ್ರವೃತ್ತಿ ಬದಲಾಗಬೇಕು.

ಸರಕಾರವನ್ನು ಹೊರತುಪಡಿಸಿ ಅನೇಕ ಖಾಸಗಿ ವಲಯಗಳೂ ಸಾಮಾಜಿಕ ವಿಜ್ಞಾನಗಳ ಸಂಶೋಧನೆಯಲ್ಲಿ ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳುತ್ತಲಿವೆ. ಸಾಮಾಜಿಕ ವಿಜ್ಞಾನಗಳ ಸಂಶೋಧನೆಗಳು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಮುಖ್ಯ ಸಾಧನಗಳಾಗಿವೆ. ಭಾರತವನ್ನು ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ಅಥವಾ ಸಮಾಜವನ್ನಾಗಿ ರೂಪಿಸುವಲ್ಲಿ ಸಾಮಾಜಿಕ ವಿಜ್ಞಾನಗಳು ಅತಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಿರುವುವು. ಈ ನಿಟ್ಟಿನಲ್ಲಿ ಸಾಮಾಜಿಕ ವಿಜ್ಞಾನಗಳ ಕಾರ್ಯವು ಇನ್ನೂ ಪ್ರಗತಿಪಥದಲ್ಲಿ ನಡೆಯಬೇಕಾಗಿದೆ. ಇದಕ್ಕಾಗಿ ಈ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ನಡೆಸುವ ಸಾಮಾಜಿಕ ವಿಜ್ಞಾನಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸಿನ ನೆರವು ದೊರಕಬೇಕು.

-ಡಾ. ಶೈಲಜ ಹೆಚ್.ಎಂ.

## ಶೈಕ್ಷಣಿಕ ಸಂಶೋಧನೆಯ ವಿಧಾನಗಳು

ಒಂದು ಸಂಶೋಧನಾ ಅಧ್ಯಯನವನ್ನು ಕೈಗೊಳ್ಳುವಾಗ ಸಂಶೋಧಕನು ಯಾವ ವಿಧಾನವನ್ನು ಅನುಸರಿಸಬೇಕೆಂದು ನಿರ್ಧರಿಸಬೇಕಾಗುತ್ತದೆ. ಏಕೆಂದರೆ ಸಂಶೋಧನಾ ಸಮಸ್ಯೆಗಳ ಸ್ವರೂಪದಲ್ಲಿ ವ್ಯತ್ಯಾಸಗಳಿರುತ್ತವೆ. ಕೆಲವು ಅಧ್ಯಯನಗಳಿಗೆ ತತ್ವಶಾಸ್ತ್ರೀಯ ಆಧಾರಗಳ ಅಗತ್ಯವಿರುತ್ತದೆ. ಮತ್ತೆ ಕೆಲವು ಅಧ್ಯಯನಗಳಿಗೆ ಐತಿಹಾಸಿಕ ಮೂಲಗಳ ಅವಶ್ಯಕತೆ ಇರುತ್ತದೆ. ಕೆಲವು ಸಲ ಸಂಶೋಧಕನಿಗೆ ಒಂದು ನಿರ್ದಿಷ್ಟವಾದ ಜನಸಮುದಾಯದ (Population) ಕೆಲವು ವಿಶಿಷ್ಟವಾದ ಗುಣಲಕ್ಷಣಗಳಲ್ಲಿ ಆಸಕ್ತಿ ಇರಬಹುದು. ಆದ್ದರಿಂದ ವಿವಿಧ ರೀತಿಯ ಸಂಶೋಧನಾ ಸಮಸ್ಯೆಗಳಿಗೆ ಉತ್ತರಿಸಲು ಸಂಶೋಧಕರು ಬೇರೆ ಬೇರೆ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಒಬ್ಬ ಸಂಶೋಧಕನಿಗೆ ವಿವಿಧ ಸಂಶೋಧನಾ ವಿಧಾನಗಳ ಇತಿಮಿತಿಗಳ ಬಗ್ಗೆ ಅರಿವು ಇರಬೇಕಾದುದು ಅವಶ್ಯಕ. ಸಂಶೋಧನೆಯ ಉದ್ದೇಶ, ಬೇಕಾದ ದತ್ತಾಂಶಗಳು, ಬಳಸಬೇಕಾದ ಉಪಕರಣಗಳು/ತಂತ್ರಗಳು, ಸಂಶೋಧನ ವಿನ್ಯಾಸ, ದತ್ತಾಂಶ ಸಂಗ್ರಹಣೆ ಕ್ರಮ ಇವುಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಶೋಧನೆಯಲ್ಲಿ ಅನೇಕ ವಿಧಾನಗಳಿವೆ. ಈ ಕೆಳಗೆ ಮುಖ್ಯವಾದ ಸಂಶೋಧನ ವಿಧಾನಗಳನ್ನು ವಿವರಿಸಲಾಗಿದೆ.

**ತಾತ್ವಿಕ ಸಂಶೋಧನೆ:**

ತಾತ್ವಿಕ ಸಂಶೋಧನೆ (Philosophical Research) ಭೂತಕಾಲದ ಘಟನೆಗಳಿಗಿಂತ ಶೈಕ್ಷಣಿಕ ಆಚರಣೆಗಳ ಹಿಂದೆ ಇರುವ ಸೈದ್ಧಾಂತಿಕ ಅಥವಾ ತಾತ್ವಿಕ ಆಧಾರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತದೆ. ತಾತ್ವಿಕ ಸಂಶೋಧನೆಯಲ್ಲಿ ಮುಖ್ಯವಾಗಿ ಎರಡು ವಿಧದ ಅಧ್ಯಯನಗಳನ್ನು ಗುರುತಿಸಬಹುದು. ಒಂದು ವಿಧದ ಅಧ್ಯಯನ ಒಂದು ದೇಶಕ್ಕೆ, ಜನರಿಗೆ ಮತ್ತು ಸಮುದಾಯಕ್ಕೆ ಒಂದು ನಿಗದಿತ ಕಾಲಘಟ್ಟದಲ್ಲಿ ಪ್ರಭಾವ ಬೀರುವ ಪರಿಕಲ್ಪನೆಗಳು ಮತ್ತು ಪ್ರಧಾನ ವಿಚಾರಗಳು, ವ್ಯಕ್ತಿಗಳ ಜೀವನ, ಸಾಧನೆಗಳು, ಹಾಗೂ ಅವರ ಸಾಹಿತ್ಯ ಪ್ರತಿಬಿಂಬಿಸುವ ಒಲವುಗಳನ್ನು ಕುರಿತು ಕಾಳಜಿ ವಹಿಸುತ್ತದೆ. ಇನ್ನೊಂದು ವಿಧದ ಅಧ್ಯಯನ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹಾನ್ ವ್ಯಕ್ತಿಗಳ ಜೀವನ, ವಿಚಾರಗಳು ಮತ್ತು ಸಾಧನೆಗಳ ಕುರಿತಾದ ವಿಮರ್ಶಾತ್ಮಕ ಚಿಂತನೆಗಳನ್ನು ಒಳಗೊಳ್ಳುತ್ತದೆ. ಶೈಕ್ಷಣಿಕ ಪರಿಕಲ್ಪನೆಗಳ ವಿಶ್ಲೇಷಣೆಯೂ ಇದರಲ್ಲಿ ಸೇರುತ್ತದೆ. ತಾತ್ವಿಕ ಸಂಶೋಧನೆಯಲ್ಲಿ ತರ್ಕ, ತತ್ವ ಮೀಮಾಂಸೆ, ಜ್ಞಾನ ಮೀಮಾಂಸೆ, ತತ್ವಶಾಸ್ತ್ರೀಯ ಮನೋವಿಜ್ಞಾನ, ನೀತಿಶಾಸ್ತ್ರ ಮುಂತಾದ ವಿಧಗಳಿವೆ. ತಾತ್ವಿಕ ಸಂಶೋಧನೆಗೆ ಯಾವುದೇ ವಿಶೇಷವಾದ ಉಪಕರಣಗಳ ಅವಶ್ಯಕತೆ ಇರುವುದಿಲ್ಲ. ವಿಶ್ಲೇಷಣಾತ್ಮಕ ಒಳನೋಟ ಮತ್ತು ಸಂಶ್ಲೇಷಣಾತ್ಮಕ ಸಾಮರ್ಥ್ಯವಿದ್ದರೆ ಸಾಕಾಗುತ್ತದೆ. ತಾತ್ವಿಕ ಸಂಶೋಧನೆಯಲ್ಲಿ ಮುಖ್ಯವಾಗಿ ಗ್ರಂಥಾಲಯ ತಂತ್ರ ಹಾಗೂ ವಿಷಯ ವಸ್ತುವಿನ ವಿಶ್ಲೇಷಣಾ (Content analysis) ತಂತ್ರವನ್ನು ಪ್ರಮುಖವಾಗಿ ಬಳಸಲಾಗುತ್ತದೆ. ತತ್ವಶಾಸ್ತ್ರ ಮನಸ್ಸು ಮತ್ತು ವಾಸ್ತವಾಂಶಗಳ ನಡುವಣ ತರ್ಕಬದ್ಧವಾದ ಸಂವಾದವಾದ್ದರಿಂದ, ಸಂಶೋಧನೆಯಲ್ಲಿ ತತ್ವಶಾಸ್ತ್ರಜ್ಞನಿಗೆ ಪ್ರಾಥಮಿಕ ವಿಧಾನ ಅಥವಾ ಸಾಧನ ತಾರ್ಕಿಕ ನಿಯಮಗಳೇ ಆಗಿರುತ್ತವೆ. ಇತರ ಸಂಶೋಧಕರಂತೆಯೇ ತತ್ವಶಾಸ್ತ್ರಜ್ಞರು ಅವಲೋಕಿಸುತ್ತಾರೆ, ಅಧ್ಯಯನ ಮಾಡಿ ವಿಶ್ಲೇಷಿಸುತ್ತಾರೆ, ಪ್ರಾಕಲ್ಪನೆಗಳನ್ನು ರಚಿಸುತ್ತಾರೆ ಮತ್ತು ಅವುಗಳನ್ನು ಪರೀಕ್ಷಿಸುತ್ತಾರೆ. ನಂತರ ಸಾಮಾನ್ಯೀಕರಣಗೊಳಿಸುತ್ತಾರೆ ಅಥವಾ ಅಂತಿಮ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ತಾತ್ವಿಕ ಸಂಶೋಧನೆ ವಿವಿಧ ಮೂಲಗಳಿಂದ ದತ್ತಾಂಶಗಳ ಸಂಗ್ರಹಣೆ ಮತ್ತು ಅವುಗಳ ವರ್ಗೀಕರಣದ ವಿಶ್ಲೇಷಣೆ – ಈ ಎಲ್ಲಾ ಹಂತಗಳನ್ನು ಒಳಗೊಳ್ಳುತ್ತದೆ. ತಾತ್ವಿಕ ಸಂಶೋಧನೆ ಘಟನೆಗಳ ತರ್ಕಬದ್ಧವಾದ ಅನ್ವೇಷಣೆಯಾಗಿದೆ. ಅದು ಮಾನವತೆ ಮತ್ತು ಜೀವನವನ್ನು ಸಂಪೂರ್ಣವಾಗಿ ಅಧ್ಯಯನ ಮಾಡುವುದಕ್ಕೆ ಸಂಬಂಧಿಸಿದೆ. ಯಶಸ್ವಿ ತಾತ್ವಿಕ ಸಂಶೋಧನೆಗೆ, ಸಂಶೋಧಕನಿಗೆ ಆಳವಾದ ಅಧ್ಯಯನ ಸಾಮರ್ಥ್ಯ, ವಿಶ್ಲೇಷಣ ಹಾಗೂ ಸಂಶ್ಲೇಷಣ ಸಾಮರ್ಥ್ಯ, ನಿಹಿತಾರ್ಥಗಳನ್ನು ಹೊರ ತೆಗೆದು ಅವುಗಳನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸುವ ಸಾಮರ್ಥ್ಯ ಇರಬೇಕಾಗುತ್ತದೆ.

**ಐತಿಹಾಸಿಕ ಸಂಶೋಧನೆ:**

ಐತಿಹಾಸಿಕ ಸಮಸ್ಯೆಗಳಿಗೆ/ಘಟನೆಗಳಿಗೆ ವೈಜ್ಞಾನಿಕ ಅನ್ವೇಷಣೆಯ ವಿಧಾನವನ್ನು ಅಳವಡಿಸುವುದಕ್ಕೆ ಐತಿಹಾಸಿಕ

Digitised by Bharatavani, CIIL

ಸಂಶೋಧನೆ (Historical Research) ಎನ್ನುತ್ತೇವೆ. ಐತಿಹಾಸಿಕ ಸಂಶೋಧನೆ ಹಿಂದಿನ ಘಟನೆಗಳ ಬೆಳವಣಿಗೆಗಳ ಮತ್ತು ಅನುಭವಗಳ ವಿಮರ್ಶಾತ್ಮಕ ಸಂಶೋಧನೆಯಾಗಿದೆ ಈ ರೀತಿಯ ಸಂಶೋಧನೆಯಲ್ಲಿ ವಿವಿಧ ಮೂಲಗಳಲ್ಲಿ ಮಾಹಿತಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಎಚ್ಚರಿಕೆಯಿಂದ ಅಂಥ ಸಾಕ್ಷಿಗಳ ದಾಖಲೆಗಳ ಸಿಂಧುತ್ವವನ್ನು ನಿರ್ಧರಿಸಲಾಗುತ್ತದೆ. ಹಿಂದಿನ ಘಟನೆಗಳ ಮತ್ತು ಆಗಿನ ಜನರ ಒಲವುಗಳನ್ನು ಅನ್ವೇಷಣೆ ಮಾಡುವುದರ ಆಧಾರದ ಮೇಲೆ ಪ್ರಸ್ತುತದಲ್ಲಿ ಪರಿಹರಿಸದೆ ಇರುವ ಸಾಮಾಜಿಕ ಸಮಸ್ಯೆಗಳಿಗೆ ಪರ್ಯಾಯ ಆಲೋಚನೆಗಳ ಅಥವಾ ಚಿಂತನೆಗಳನ್ನು, ವಿಧಾನಗಳನ್ನು ಅನ್ವೇಷಿಸುವುದು ಐತಿಹಾಸಿಕ ಸಂಶೋಧನೆಯ ಮುಖ್ಯ ಉದ್ದೇಶಗಳಾಗಿವೆ. ಐತಿಹಾಸಿಕ ಸಂಶೋಧನೆಯನ್ನು ಎರಡು ಪ್ರಮುಖ ಉದ್ದೇಶಗಳಿಂದ ಕೈಗೊಳ್ಳಲಾಗುತ್ತದೆ. ಮೊದಲನೆಯದಾಗಿ ಪ್ರಸ್ತುತ ಸನ್ನಿವೇಶದ ಬಗ್ಗೆ ವಾಸ್ತವಿಕ ದೃಷ್ಟಿ ಹೊಂದಲು ಐತಿಹಾಸಿಕ ಸಂಶೋಧನೆಯನ್ನು ಕೈಗೊಳ್ಳಬಹುದು. ಉದಾಹರಣೆಗೆ ಐತಿಹಾಸಿಕ ಹಿನ್ನೆಲೆಯ ಅರಿವು ಶಿಕ್ಷಣದಲ್ಲಿ ಈ ಮೊದಲು ಮಾಡಿದ ತಪ್ಪುಗಳನ್ನು ಮತ್ತೆ ಪುನರಾವರ್ತನೆ ಮಾಡದಂತೆ ತಡೆಯುತ್ತದೆ. ಎರಡನೆಯದಾಗಿ ಹಿಂದಿನ ಘಟನೆಗಳ ಕುರಿತು ಒಂದು ಪಾಂಡಿತ್ಯ ಪೂರ್ಣ ಹಾಗೂ ತರ್ಕಬದ್ಧವಾದ ವರದಿಯನ್ನು ನೀಡುವ ಉದ್ದೇಶದಿಂದ ಐತಿಹಾಸಿಕ ಸಂಶೋಧನೆಯನ್ನು ಕೈಗೊಳ್ಳಲಾಗುತ್ತದೆ. ಸಂಶೋಧಕ ವರ್ತಮಾನದ ವಿಚಾರಗಳನ್ನು ಪರಿಗಣಿಸದೆ ಕೇವಲ ಭೂತಕಾಲದ ಘಟನೆಯ ಬಗ್ಗೆ ನಿಖರವಾದ ವರದಿಯನ್ನು ನೀಡುವುದರಲ್ಲಿ ಆಸಕ್ತಿ ಹೊಂದಿರುತ್ತಾನೆ. ಐತಿಹಾಸಿಕ ಸಂಶೋಧನೆಯನ್ನು ಪ್ರಮಾಣಾತ್ಮಕ ಸಂಶೋಧನೆ, ಗ್ರಂಥ ವಿವರಣಾತ್ಮಕ ಸಂಶೋಧನೆ ಮತ್ತು ಕಾನೂನಾತ್ಮಕ ಆಧಾರಿತ ಸಂಶೋಧನೆ ಎಂದು ವರ್ಗೀಕರಿಸಬಹುದು. ಪ್ರಮಾಣಾತ್ಮಕ ಸಂಶೋಧನೆಯು ದಾಖಲೆಗಳನ್ನು ಆಧಾರವಾಗಿ ಪರಿಗಣಿಸುತ್ತದೆ. ಗ್ರಂಥ ವಿವರಣಾತ್ಮಕ ಸಂಶೋಧನೆಯು ವಿಷಯಕ್ಕೆ ಸಂಬಂಧಿಸಿದ ವಿವಿಧ ಗ್ರಂಥಗಳನ್ನು ಆಧಾರವಾಗಿ ಪರಿಗಣಿಸುತ್ತದೆ. ಕಾನೂನು ಆಧಾರಿತ ಸಂಶೋಧನೆ ಆಡಳಿತಗಾರರಿಗೆ ಹೆಚ್ಚು ಉಪಯುಕ್ತವಾಗಿದೆ. ಆದರೆ ಅಂತಹ ಸಂಶೋಧನೆಗೆ ಕಾನೂನಿನ ತಿಳುವಳಿಕೆ ಇರಬೇಕಾದುದು ಅವಶ್ಯಕ.

ಐತಿಹಾಸಿಕ ಸಂಶೋಧನೆ ಸಮಸ್ಯೆಯ ಆಯ್ಕೆ, ಪ್ರಾಕಲ್ಪನೆಗಳ ರಚನೆ, ದತ್ತಾಂಶ ಸಂಗ್ರಹಣೆ, ದತ್ತಾಂಶದ ವಿಮರ್ಶೆ, ತೀರ್ಮಾನಗಳ ಅರ್ಥೈಸುವಿಕೆ ಮತ್ತು ವರದಿ ಮಾಡುವಿಕೆ. ಈ ಹಂತಗಳನ್ನು ಒಳಗೊಂಡಿರುತ್ತದೆ. ಐತಿಹಾಸಿಕ ಸಂಶೋಧನೆಯಲ್ಲಿ ದತ್ತಾಂಶ ಸಂಗ್ರಹಣೆ ಪ್ರಮುಖವಾದ ಹಂತವಾಗಿದೆ. ದತ್ತಾಂಶವನ್ನು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಸಂಗ್ರಹಿಸಬಹುದು. ದಾಖಲೆಗಳು (ಸಂವಿಧಾನ, ನ್ಯಾಯಾಲಯದ ತೀರ್ಮಾನಗಳು, ಕಛೇರಿ ದಾಖಲೆಗಳು, ಪತ್ರಗಳು, ದಿನಚರಿಗಳು, ಉಯಿಲುಗಳು, ಪ್ರಮಾಣ ಪತ್ರಗಳು ಇತ್ಯಾದಿ), ಅವಶೇಷಗಳು (ಪಳೆಯುಳಿಕೆಗಳು, ಆಯುಧಗಳು, ಕಟ್ಟಡಗಳು, ಚಿತ್ರಗಳು, ನಾಣ್ಯಗಳು ಇತ್ಯಾದಿ) ಮತ್ತು ಮೌಖಿಕ ಸಾಕ್ಷ್ಯಗಳು (ಘಟನೆಯಲ್ಲಿ ಭಾಗವಹಿಸಿದವರ ವಿವರಣೆ) ಐತಿಹಾಸಿಕ ದತ್ತಾಂಶದ ಪ್ರಾಥಮಿಕ ಮೂಲಗಳಾಗಿವೆ. ಗ್ರಂಥಗಳು, ವರದಿಗಳು ಮತ್ತು ವಿಶ್ವಕೋಶ ಮುಂತಾದವು ಅನುಷಂಗಿಕ ಮೂಲಗಳಿಗೆ ಉದಾಹರಣೆಗಳಾಗಿವೆ. ಇವು ಸಾಮಾನ್ಯವಾಗಿ ಪ್ರಾಥಮಿಕ ಮೂಲಗಳಿಂದ ಪಡೆದ ಮಾಹಿತಿಗಳ ವಿವರಣೆಗಳಾಗಿರುತ್ತವೆ. ಐತಿಹಾಸಿಕ ಸಂಶೋಧನೆಯಲ್ಲಿ ದತ್ತಾಂಶಗಳನ್ನು ಸಂಗ್ರಹಿಸಿದ ನಂತರ ಅದು ಎಷ್ಟರ ಮಟ್ಟಿಗೆ ವಿಶ್ವಾಸಾರ್ಹವಾಗಿದೆ ಅಥವಾ ಸಿಂಧುವಾಗಿದೆ ಎಂದು ನಿರ್ಧರಿಸಬೇಕಾಗುತ್ತದೆ. ಎರಡು ವಿಧದ ದತ್ತಾಂಶದ ವಿಮರ್ಶೆಗಳಿವೆ–1. ಬಾಹ್ಯ ವಿಮರ್ಶೆ 2. ಆಂತರಿಕ ವಿಮರ್ಶೆ. ಬಾಹ್ಯ ವಿಮರ್ಶೆ ದತ್ತಾಂಶದ ವಿಶ್ವಾಸಾರ್ಹತೆಯನ್ನು ಸ್ಥಾಪಿಸುತ್ತದೆ. ಇದಕ್ಕೆ ದಾಖಲೆಗಳ ಕಾಲ, ಸಹಿ, ಕೈಬರಹ, ಭಾಷಾ ಬಳಕೆ ಮುಂತಾದ ಪರೀಕ್ಷಣಗಳನ್ನು ಬಳಸಬಹುದು. ಹಾಗೆಯೆ ವಸ್ತುಗಳ ಭೌತಿಕ ಮತ್ತು ರಸಾಯನ ಶಾಸ್ತ್ರೀಯ ಪರೀಕ್ಷಣಗಳನ್ನು ಕೈಗೊಳ್ಳಬಹುದು. ದಾಖಲೆಗಳ ಒಳಗೆ ಅಡಕವಾಗಿರುವ ವಿಚಾರಗಳ, ಮಾಹಿತಿಗಳ ಅರ್ಥ ಮತ್ತು ವಿಶ್ವಾಸಾರ್ಹತೆಯನ್ನು ದೃಢಪಡಿಸಿಕೊಳ್ಳುವುದಕ್ಕೆ ಆಂತರಿಕ ವಿಮರ್ಶೆಯು ಸಂಬಂಧಿಸಿದೆ. ಉದಾಹರಣೆಗೆ ದಾಖಲೆಗಳಿಂದ ಪಡೆದ ಮಾಹಿತಿಗಳು/ವಿಚಾರಗಳು ಆ ದಾಖಲೆಗಳ ಕಾಲಘಟ್ಟಕ್ಕೆ ಸೂಕ್ತವೆನಿಸುತ್ತವೆಯೋ ಅವುಗಳಿಗೂ ಅದೇ ಕಾಲಘಟ್ಟದ ಇತರ ಘಟನೆಗಳಿಗೆ ಸಮಂಜಸವಿದೆ ಎಂದು ನಿರ್ಣಯಿಸಬೇಕಾಗುತ್ತದೆ.

ಐತಿಹಾಸಿಕ ಸಂಶೋಧನೆಯನ್ನು ಕೈಗೊಳ್ಳುವಾಗ ಸಂಶೋಧಕನು ಅನುಷಂಗಿಕ ಮೂಲಗಳಿಂದ ಸುಲಭವಾಗಿ ದೊರೆಯುವ ದತ್ತಾಂಶಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾದ ಪ್ರಾಥಮಿಕ ಮೂಲಗಳಿಂದ ದತ್ತಾಂಶಗಳನ್ನು ಪಡೆಯುವುದರ ಕಡೆಗೆ ಹೆಚ್ಚು ಒಲವು ತೋರಿಸಬೇಕು. ಐತಿಹಾಸಿಕ ಸಂಶೋಧನೆಯು ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ, ಉನ್ನತ ಶಿಕ್ಷಣ, ವಯಸ್ಕರ ಶಿಕ್ಷಣ, ದೂರ ಶಿಕ್ಷಣ, ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆ ಮುಂತಾದ ಶಿಕ್ಷಣದ ವಿವಿಧ ಕ್ಷೇತ್ರಗಳಿಗೆ ತನ್ನ ಮಹತ್ವಪೂರ್ಣವಾದ ಕೊಡುಗೆಯನ್ನು ನೀಡಿದೆ. ಮೂಲಗಳ ನಿಖರತೆ ಸಂಶಯಾಸ್ಪದವಾಗಿರುವುದು, ಅಪೇಕ್ಷಿತ ಕಾಲಘಟ್ಟದ ಬಗ್ಗೆ ಸಾಕಷ್ಟು ಮೂಲಗಳು ದೊರಕದಿರುವುದು, ಕೆಲವು ವೇಳೆ ಸಂಶೋಧಕನ ಪೂರ್ವಗ್ರಹಪೂರ್ಣ ನಿಲುವು ಐತಿಹಾಸಿಕ ಸಂಶೋಧನೆಯ ಕೆಲವು ಮಿತಿಗಳಾಗಿವೆ.

**ಸಮೀಕ್ಷೆ ಅಥವಾ ಸರ್ವೇಕ್ಷಣೆ:**

ಸಮೀಕ್ಷೆ ಅಥವಾ ಸರ್ವೇಕ್ಷಣ(Survey) ಒಂದು ವರ್ಣನಾತ್ಮಕ ಸಂಶೋಧನೆಯಾಗಿದ್ದು ಒಂದು ನಿರ್ದಿಷ್ಟ ಸಮೂಹದಿಂದ ಆಯ್ಕೆ ಮಾಡಿದ ಪ್ರತಿದರ್ಶದಿಂದ ಸೂಕ್ತ ರೀತಿಯಲ್ಲಿ ವಿನ್ಯಾಸಗೊಳಿಸಿದ ಪ್ರಶ್ನಾವಳಿ ಅಥವಾ ಅಂಶಾವಳಿ ಮೂಲಕ ದತ್ತಾಂಶಗಳನ್ನು ಸಂಗ್ರಹಿಸುವುದನ್ನು ಹಾಗೂ ಅದನ್ನು ವಿಶ್ಲೇಷಿಸುವುದನ್ನು ಒಳಗೊಳ್ಳುತ್ತದೆ. ಈ ವಿಧಾನವನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಇದು ಸ್ಥಳೀಯ, ರಾಜ್ಯದ ಮತ್ತು ರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಸಮಸ್ಯೆಗಳನ್ನು ಅಧ್ಯಯನ ಮಾಡುವುದರಲ್ಲಿ ಸಹಕಾರಿಯಾಗಿದೆ. ಉತ್ತಮ ಸಮೀಕ್ಷಾ ಅಧ್ಯಯನ ಆಯ್ಕೆ ಮಾಡಿಕೊಂಡ ಸಮುದಾಯದಲ್ಲಿ ವಾಸ್ತವದಲ್ಲಿ ಇರುವುದು ಏನು,

Digitised by Bharatavani, CIIL

ನಮಗೆ ಬೇಕಾಗಿರುವುದು ಏನು ಮತ್ತು ಅದನ್ನು ಹೇಗೆ ಪಡೆಯುವುದು ಎಂಬುದರ ಬಗ್ಗೆ ಗಮನ ನೀಡುತ್ತದೆ ಮಾಹಿತಿಯನ್ನು ಸಂಗ್ರಹಿಸುತ್ತದೆ. ಸಮೀಕ್ಷೆ ಅಧ್ಯಯನಗಳನ್ನು ವರ್ಣನಾತ್ಮಕ, ಆದರ್ಶಾತ್ಮಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನಗಳೆಂದು ವಿಂಗಡಿಸಬಹುದು.

ಅ) **ವರ್ಣನಾತ್ಮಕ ಸಮೀಕ್ಷೆ:** ವರ್ಣನಾತ್ಮಕ ಸಮೀಕ್ಷೆಗಳು (Descriptive Survey) ವಾಸ್ತವ ಸ್ಥಿತಿಗಳನ್ನು ಅಥವಾ ಪ್ರಸಕ್ತ ಘಟನೆ ಅಥವಾ ಸಂಗತಿಗಳನ್ನು ವರ್ಣಿಸುತ್ತವೆ ಹಾಗೂ ಅರ್ಥೈಸುತ್ತವೆ. ಜನರ ಅಭಿಪ್ರಾಯಗಳಿಗೆ, ನಡೆದಿರುವ ಪ್ರಕ್ರಿಯೆಗಳಿಗೆ ಎದ್ದು ಕಾಣುವ ಪರಿಣಾಮಗಳಿಗೆ ಅಥವಾ ಬೆಳೆಯುತ್ತಿರುವ ಒಲವುಗಳ ಅಧ್ಯಯನಕ್ಕೆ ಸಹ ಇವು ಸಂಬಂಧಿಸಿರುತ್ತವೆ. ಈ ರೀತಿಯ ಸಮೀಕ್ಷೆಗಳು ಮೂಲತಃ ಪ್ರಸ್ತುತ ಸಂಗತಿಗಳಿಗೆ ಸಂಬಂಧಿಸಿದ್ದರೂ ಭೂತಕಾಲದಲ್ಲಿ ಪ್ರಭಾವ ಬೀರಿದ ಘಟನೆಗಳನ್ನು ಪರಿಗಣಿಸುತ್ತವೆ. ಹೀಗಾಗಿ ವರ್ಣನಾತ್ಮಕ ಸಮೀಕ್ಷೆಯ ಈಗಾಗಲೇ ಸಂಭವಿಸಿರುವ ಘಟನೆಗಳು ಮತ್ತು ಇಂದಿನ ಪರಿಸ್ಥಿತಿ ಅಥವಾ ಸನ್ನಿವೇಶಗಳಿಗೆ ಸಂಬಂಧಿಸಿರುವ ಸಂಗತಿಗಳನ್ನು ಅಧ್ಯಯನ ಮಾಡಬಹುದು. ಸಾಮಾನ್ಯವಾದ ಸಂಶೋಧನಾ ಅಧ್ಯಯನಗಳಲ್ಲಿ ಇರುವಂತೆ ವರ್ಣನಾತ್ಮಕ ಸಮೀಕ್ಷೆಯ ಅಧ್ಯಯನಗಳಲ್ಲಿಯೂ ಸಂಶೋಧನೆಯ ಎಲ್ಲಾ ಹಂತಗಳು ಇರುತ್ತವೆ. ವರ್ಣನಾತ್ಮಕ ಸಮೀಕ್ಷೆ ಅಧ್ಯಯನಗಳಲ್ಲಿ ಸಂಶೋಧಕನು ಕೇವಲ ದತ್ತಾಂಶಗಳ ವರ್ಣನೆಯತ್ತ ತನ್ನ ಗಮನವನ್ನು ಕೇಂದ್ರೀಕರಿಸುವುದರ ಜೊತೆಗೆ ದತ್ತಾಂಶವನ್ನು ಸರಿಯಾಗಿ ವಿಶ್ಲೇಷಿಸಿ ಅರ್ಥಪೂರ್ಣವಾಗಿ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವುದು ಅವಶ್ಯಕ. ವರ್ಣನಾತ್ಮಕ ಸಮೀಕ್ಷೆಯ ದತ್ತಾಂಶಗಳನ್ನು ಗುಣಾತ್ಮಕವಾಗಿ ಮತ್ತು ಪರಿಮಾಣಾತ್ಮಕವಾಗಿ ಅಂಕಿ–ಅಂಶಗಳ ರೂಪದಲ್ಲಿ ಅರ್ಥೈಸಬಹುದು. ವರ್ಣನಾತ್ಮಕ ಅಧ್ಯಯನಗಳನ್ನು 1. ತಥ್ಯಾಂಶ ಸಮೀಕ್ಷಾ ಅಧ್ಯಯನಗಳು 2. ಅಂತರ ಸಂಬಂಧೀಯ ಅಧ್ಯಯನಗಳು ಮತ್ತು 3. ವಿಕಾಸಾತ್ಮಕ ಅಧ್ಯಯನಗಳು ಎಂದು ವಿಂಗಡಿಸಬಹುದು. ಆದರೆ ಈ ವರ್ಗೀಕರಣ ಅಷ್ಟು ನಿರ್ದಿಷ್ಟವಲ್ಲ. ಒಂದು ವಿಧದ ಅಧ್ಯಯನ ಮತ್ತೊಂದು ರೀತಿಯ ಅಧ್ಯಯನದ ಗುಣಲಕ್ಷಣಗಳನ್ನು ಹೊಂದಿರಬಹುದು.

**ಆ) ಆದರ್ಶಾತ್ಮಕ ಸಮೀಕ್ಷೆ:** ಆದರ್ಶಾತ್ಮಕ ಸಮೀಕ್ಷೆಯು (Normative Survey) ಪ್ರಸ್ತುತ ಇರುವ ಸಾಮಾನ್ಯ ಅಥವಾ ಒಂದು ನಿರ್ದಿಷ್ಟ ಪರಿಸ್ಥಿತಿ ಅಥವಾ ಆಚರಣೆಯನ್ನು ಕುರಿತು ನಡೆಸುವ ಸಂಶೋಧನೆಯಾಗಿದೆ, ಇದು ಭೌಗೋಳಿಕ ವಿತರಣೆಯನ್ನು ಒಳಗೊಂಡಂತಹ ಯಾವುದಾದರೂ ಅಧ್ಯಯನವಾಗಿರಬಹುದು. ಉದಾ: ಪ್ರಪಂಚದ ವಿವಿಧ ಭಾಗಗಳಲ್ಲಿರುವ ಹವಾಮಾನದ ಪರಿಸ್ಥಿತಿಗಳ ಅಧ್ಯಯನವಾಗಬಹುದು. ಅಥವಾ ಪ್ರಪಂಚದಲ್ಲಿ ವಿತರಣೆಯಾಗಿರುವ ಸ್ವಾಭಾವಿಕ ಸಂಪನ್ಮೂಲ ಅಧ್ಯಯನ ಆಗಿರಬಹುದು. ಆದರ್ಶಾತ್ಮಕ ಸಮೀಕ್ಷೆ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳಿಂದ ದತ್ತಾಂಶವನ್ನು ಸಂಗ್ರಹಿಸುತ್ತದೆ. ಅಧ್ಯಯನವು ವಾಸ್ತವಾಂಶಗಳಿಗೆ ಸಂಬಂಧಿಸಿರುತ್ತದೆ. ಮತ್ತು ಭೇದ ಅಧ್ಯಯನವಾಗಿರುತ್ತದೆ. ಆದರ್ಶಾತ್ಮಕ ಅಧ್ಯಯನ ವ್ಯಕ್ತಿಗತ ಗುಣಲಕ್ಷಣಗಳಿಗೆ ಸಂಬಂಧಿಸಿರುವುದಿಲ್ಲ. ಆದರೆ ಇಡೀ ಸಮಷ್ಠಿಯ ಸಾಮಾನ್ಯೀಕರಣಗೊಳಿಸಿದ ಅಂಕಿಅಂಶಗಳಿಗೆ ಸಂಬಂಧಿಸಿರುತ್ತದೆ. ಆದರ್ಶಾತ್ಮಕ ಸಮೀಕ್ಷೆ ವೈಜ್ಞಾನಿಕವಾದ ನಿಯಮಗಳನ್ನು ಒಳಗೊಂಡ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಅಪೇಕ್ಷೆಯನ್ನು ಹೊಂದಿರುವುದಿಲ್ಲ. ಆದರೆ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಉಪಯುಕ್ತವಾದ ಮಾಹಿತಿಯನ್ನು ನೀಡುತ್ತದೆ. ಇನ್ನು ಹೆಚ್ಚು ಮೂಲಭೂತ ಸ್ವರೂಪದ ಸಂಶೋಧನೆಯನ್ನು ಕೈಗೊಳ್ಳಲು ಇದು ಸಹಾಯ ಮಾಡುತ್ತದೆ. ಆದರ್ಶಾತ್ಮಕ ಸಮೀಕ್ಷೆಗಳು ಸಂಕೀರ್ಣತೆಯಲ್ಲಿ ವೈವಿಧ್ಯತೆಯನ್ನು ಹೊಂದಿರುತ್ತವೆ. ಕೆಲವು ಅಧ್ಯಯನಗಳು ಘಟನೆಗಳ ಪುನರಾವೃತ್ತಿಗೆ ಸಂಬಂಧಿಸಿದ್ದರೆ ಮತ್ತೆ ಕೆಲವು ಘಟನೆಗಳು ಮತ್ತು ಸಂಗತಿಗಳ ನಡುವೆ ಇರುವ ಸಂಬಂಧಗಳನ್ನು ಸ್ಥಾಪಿಸುವುದನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿರುತ್ತವೆ. ಆದರ್ಶಾತ್ಮಕ ಸಮೀಕ್ಷೆಗಳು ಗುಣಾತ್ಮಕವಾಗಿರಬಹುದು ಅಥವಾ ಪರಿಮಾಣಾತ್ಮಕವಾಗಿರಬಹುದು. ವರ್ಣನೆಗಳು ಶಾಬ್ದಿಕ ರೂಪದಲ್ಲಿರಬಹುದು. ಅಥವಾ ಅಂಕಿಅಂಶಗಳ ಮೂಲಕ ಸೂಚಿಸಿರಬಹುದು ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದ ಸಮೀಕ್ಷೆ ಅತ್ಯಂತ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ಶೈಕ್ಷಣಿಕ ಸಮೀಕ್ಷೆಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು.

a) ಕಲಿಕೆಗೆ ಸಂಬಂಧಿಸಿದ ಭೌತಿಕ ಪರಿಸ್ಥಿತಿಗಳು (ಕಟ್ಟಡ, ಪೀಠೋಪಕರಣಗಳು, ಗ್ರಂಥಾಲಯ ಸೌಲಭ್ಯಗಳು ಇತ್ಯಾದಿ)

b) ಕಲಿಕೆಗೆ ಸಂಬಂಧಿಸಿದ ವ್ಯಕ್ತಿಗಳು (ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ತಂದೆ ತಾಯಿಗಳು ಮುಂತಾದವರ ವರ್ತನೆ)

c) ಕಲಿಕೆಯ ಫಲಿತಾಂಶ ಅಥವಾ ವಿದ್ಯಾರ್ಥಿಯ ಕಲಿಯುವ ಸಾಮರ್ಥ್ಯ (ಸಾಧನೆ ಅಥವಾ ಮೂಲ ಸಾಮರ್ಥ್ಯಗಳು, ಮಾಹಿತಿ ಅಥವಾ ಮನೋಭಾವಗಳು)

ಇ) **ವಿಶ್ಲೇಷಣಾತ್ಮಕ ಸಮೀಕ್ಷೆ:** ವಿಶ್ಲೇಷಣಾತ್ಮಕ ಸಮೀಕ್ಷೆಗಳು (Analytical Survey) ಘಟನೆಯ ವಿಶ್ಲೇಷಣೆಯನ್ನು ಗುರಿಯಾಗಿ ಹೊಂದಿರುತ್ತವೆ. ಸಮಸ್ಯೆಯ ಆಯ್ಕೆಯಿಂದ ಪ್ರಾರಂಭಿಸಿ, ಉದ್ದೇಶ, ನಿರೂಪಣೆ, ದತ್ತಾಂಶ ಸಂಗ್ರಹಣೆ, ದತ್ತಾಂಶ ವಿಶ್ಲೇಷಣೆ ಮತ್ತು ಅಂತಿಮ ತೀರ್ಮಾನಗಳನ್ನು ಕೈಗೊಳ್ಳುವವರೆಗೆ ವಿಶ್ಲೇಷಣೆಯನ್ನು ಮಾಡಲಾಗುತ್ತದೆ. ಶೈಕ್ಷಣಿಕ ಸಂಶೋಧನೆಯ ಸಮಸ್ಯೆಗಳು ಅತ್ಯಂತ ವಿಶಾಲವಾಗಿರುತ್ತವೆ. ಆದ್ದರಿಂದ ಅವುಗಳನ್ನು ಅಧ್ಯಯನ ಮಾಡಲಾಗುವುದಿಲ್ಲ. ಇವುಗಳನ್ನು ಪ್ರಾಥಮಿಕವಾಗಿ ಉಪಘಟಕಗಳಾಗಿ ವಿಶ್ಲೇಷಣೆ ಮಾಡಬೇಕು. ನಂತರ ಅವುಗಳಲ್ಲಿರುವ ಸುಸಂಬದ್ಧವಾದ ಸಂಬಂಧಗಳನ್ನು ಸುಸಂಬದ್ಧವಲ್ಲದ ಸಂಬಂಧಗಳಿಂದ ಬೇರ್ಪಡಿಸಿ ವೈಜ್ಞಾನಿಕವಾಗಿ ವಿಶ್ಲೇಷಿಸಬೇಕು. ಸಾಮಾನ್ಯವಾಗಿ ಒಂದು ಘಟನೆಯ ಗುಣಲಕ್ಷಣಗಳನ್ನು ಅದರ ಘಟಕಾಂಶಗಳಲ್ಲಿಯೂ ಕಾಣಬಹುದು. ಇವುಗಳನ್ನು ಗುರುತಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು ವಿಶ್ಲೇಷಣೆಯಿಂದ ಸಾಧ್ಯವಾಗುತ್ತದೆ. ಇದರಿಂದ ಇಡೀ ಘಟನೆಯ ಸ್ವರೂಪವನ್ನು ತಿಳಿದುಕೊಳ್ಳಲು ಮತ್ತು ಅದರ ಕಾರಣಗಳನ್ನು

Digitised by Bharatavani, CIIL

ವಿಶ್ಲೇಷಿಸಲು ಸಹಾಯಕವಾಗುತ್ತದೆ. ಯಾವ ಮಟ್ಟದವರೆಗೆ ವಿಶ್ಲೇಷಣೆಯನ್ನು ಮಾಡಬೇಕು ಎನ್ನುವುದನ್ನು ಸಂಶೋಧಕನೇ ನಿರ್ಧರಿಸಬೇಕು ಸರಿಯಾಗಿ ವಿಶ್ಲೇಷಣೆ ಮಾಡದಿದ್ದರೆ ಅಧ್ಯಯನದ ಉದ್ದೇಶವೇ ದಿಕ್ಕುತಪ್ಪಿ ತೀರ್ಮಾನಗಳು ತಪ್ಪಾಗುವ ಸಾಧ್ಯತೆ ಇರುತ್ತದೆ. ಆದುದರಿಂದ ಘಟನೆಯನ್ನು ವಿಶ್ಲೇಷಣೆ ಮಾಡುವಾಗ ಘಟನೆಯ ಕುರಿತಾದ ಸಂಪೂರ್ಣವಾದ ತಿಳುವಳಿಕೆ ಇರಬೇಕಾಗುತ್ತದೆ. ಕೆಲವೊಮ್ಮೆ ಘಟನೆಗೆ ಇರುವ ನಿಯಮಗಳು ಅದರ ಎಲ್ಲಾ ಘಟಕಾಂಶಗಳಿಗೆ ಅನ್ವಯಿಸದೆ ಇರುವ ಸಾಧ್ಯತೆ ಇರುತ್ತದೆ. ವಿಶ್ಲೇಷಣೆ ವರ್ಣನೆಯ ಒಂದು ರೂಪವಾಗಿದೆ. ಘಟನೆಗಳ ಮೂಲಭೂತ ಸ್ವರೂಪದ ಒಳನೋಟವನ್ನು ಪಡೆಯಲು ವಿಶ್ಲೇಷಣೆಯು ಅತ್ಯಗತ್ಯವಾಗಿದೆ. ವಿಶ್ಲೇಷಣೆಯು ಇಲ್ಲದೆ ಹೋದಾಗ ಘಟನೆಯ ಅಥವಾ ಸಂಗತಿಗಳ ಸಮರ್ಪಕವಾದ ವಿವರಣೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಸ್ವರೂಪದ ಅಗತ್ಯ ವಿಶ್ಲೇಷಣಾತ್ಮಕ ಸಂಶೋಧನೆಯನ್ನು ಕೆಲವು ಸಲ ವಿಷಯ ವಸ್ತುವಿನ ವಿಶ್ಲೇಷಣೆ ಎಂದೂ ಗುರುತಿಸಲಾಗುತ್ತದೆ ಇಂತಹ ಅಧ್ಯಯನಗಳು ಆಡಳಿತಗಾರರಿಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತವೆ. ವಿಶ್ಲೇಷಣಾತ್ಮಕ ಅಧ್ಯಯನಗಳಲ್ಲಿ ಘಟನೆಯ ಆಯಾಮಗಳನ್ನು ಗುರುತಿಸುವುದು ಮತ್ತು ಅವುಗಳ ಸಂಬಂಧಗಳನ್ನು ತಿಳಿಯುವುದು ಪ್ರಮುಖವಾಗಿದೆ.

**ಸಹಸಂಬಂಧಾತ್ಮಕ ವಿಧಾನ:**

ಸಹಸಂಬಂಧಾತ್ಮಕ ವಿಧಾನ (Correlation Method) ಶಿಕ್ಷಣದಲ್ಲಿ ಒಂದು ಮುಖ್ಯ ಸಂಶೋಧನ ವಿಧಾನವಾಗಿದೆ. ಈ ವಿಧಾನಗಳಲ್ಲಿ ವಿವಿಧ ಮನೋವೈಜ್ಞಾನಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಚಲಕಗಳ ನಡುವೆ ಇರಬಹುದಾದ ಸಹ ಸಂಬಂಧವನ್ನು ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸಿ ಕಂಡುಹಿಡಿದು ವ್ಯಾಖ್ಯಾನಿಸಲಾಗುತ್ತದೆ. ಈ ವಿಧಾನ ಸಮಸ್ಯೆಯನ್ನು ಕಾರ್ಯಕಾರಣ ಹಾಗೂ ಪರಿಣಾಮಗಳೆರಡರ ದೃಷ್ಟಿಯಿಂದಲೂ ಅಧ್ಯಯನ ಮಾಡುತ್ತದೆ. ಏಕಕಾಲದಲ್ಲಿ ಅನೇಕ ಚಲಕಗಳು ಹಾಗೂ ಅವುಗಳ ನಡುವಣ ಸಹಸಂಬಂಧವನ್ನು ಅಧ್ಯಯನ ಮಾಡಲಾಗುತ್ತದೆ. ಚಲಕಗಳು ಪರಸ್ಪರ ನೇರ ಸಂಬಂಧ ಹೊಂದಿರಬಹುದು ಅಥವಾ ಪರೋಕ್ಷ ರೀತಿಯ ಸಂಬಂಧ ಹೊಂದಿರಬಹುದು. ಅಥವಾ ಪರಸ್ಪರ ಸಂಬಂಧಿಸದೇ ಇರಬಹುದು. ಚಲಕಗಳ ನಡುವಣ ಈ ರೀತಿಯ ಸಹ ಸಂಬಂಧದ ಮಟ್ಟವನ್ನು ಗುರುತಿಸಲು ಈ ವಿಧಾನವನ್ನು ಅನುಸರಿಸಲಾಗುತ್ತದೆ.

ಸಹ ಸಂಬಂಧಾತ್ಮಕ ಅಧ್ಯಯನಗಳು ಚಲಕಗಳ ನಡುವಣ ಸಂಬಂಧದ ಮಟ್ಟವನ್ನು ನಿರ್ಧರಿಸುವ ವರ್ಣಾತ್ಮಕ ಸಂಶೋಧನಾ ವಿಧಾನಕ್ಕೆ ಸಂಬಂಧಿಸಿದೆ. ಸಾಮಾನ್ಯವಾಗಿ ಎರಡು ಚಲಕಗಳ ನಡುವಣ ಸಂಬಂಧವನ್ನು ಗುರುತಿಸಲಾಗುತ್ತದೆ. ಕೆಲವೊಮ್ಮೆ ಅನೇಕ ಚಲಕಗಳ ನಡುವಣ ಸಂಬಂಧವನ್ನು ಗುರುತಿಸಬೇಕಾಗುತ್ತದೆ. ಎರಡು ಚಲಕಗಳಿರುವ ಸನ್ನಿವೇಶದಲ್ಲಿ ಒಂದು ಸ್ವತಂತ್ರ ಚಲಕವಾಗಿರುತ್ತದೆ ಮತ್ತು ಇನ್ನೊಂದು ಪರತಂತ್ರ (ಅವಲಂಬಿತ) ಚಲಕವಾಗಿರುತ್ತದೆ. ಅವುಗಳ ನಡುವೆ ಸಂಬಂಧವಿದೆ ಎಂದು ಪ್ರಾಕಲ್ಪಿಸಿಕೊಳ್ಳಲಾಗುತ್ತದೆ. (ಇಂತಹ ಸನ್ನಿವೇಶಗಳನ್ನು ಪರೀಕ್ಷಿಸಿದಾಗ ನಿರಾವಲಂಬಿ ಚಲಕದ ಮೇಲೆ ಅವಲಂಬಿ ಚಲಕದ ಪ್ರಭಾವವನ್ನು ಬದಿಗಿಡಲಾಗುತ್ತದೆ ಮತ್ತು ಕೇವಲ ಅವಲಂಬಿ ಚಲಕದ ಮೇಲೆ ನಿರಾವಲಂಬಿ ಚಲಕದ ಪ್ರಭಾವವನ್ನು ಅನ್ವೇಷಿಸಲಾಗುತ್ತದೆ) ಸಹ ಸಂಬಂಧವು ಧನಾತ್ಮಕವಾಗಿರಬಹುದು ಅಥವಾ ಋಣಾತ್ಮಕವಾಗಿರಬಹುದು. ಎರಡು ಚಲಕಗಳ ನಡುವೆ ನೇರ ಸಂಬಂಧವಿದ್ದಾಗ ಒಂದು ಚಲಕವನ್ನು ಹೆಚ್ಚುಗೊಳಿಸಿದಾಗ ಇನ್ನೊಂದು ಚಲಕವೂ ಹೆಚ್ಚಾಗುತ್ತದೆ. ಇದನ್ನು ಧನಾತ್ಮಕ ಸಹ ಸಂಬಂಧ ಎಂದು ಗುರುತಿಸಲಾಗುತ್ತದೆ. ಎರಡು ಚಲಕಗಳ ನಡುವೆ ವಿರುದ್ಧ ದಿಶೆಯಲ್ಲಿ ನೇರ ಸಂಬಂಧವಿರುವ ಸಾಧ್ಯತೆಯು ಇದೆ. ಇದನ್ನು ಋಣಾತ್ಮಕ ಸಂಬಂಧ ಎನ್ನುತ್ತೇವೆ. ಇನ್ನೂ ಕೆಲವು ಸಲ ಚಲಕಗಳ ನಡುವೆ ಯಾವುದೇ ಸಂಬಂಧವಿರುವುದಿಲ್ಲ. ಸಹ ಸಂಬಂಧ ಗುಣಾಂಕದ ವ್ಯಾಪ್ತಿಯು +1 ರಿಂದ –1ರವರೆಗೂ ಹರಡಿರುತ್ತದೆ. ವಿವಿಧ ಸನ್ನಿವೇಶಗಳಲ್ಲಿ ಹಾಗೂ ವಿವಿಧ ವಿಧದ ಅಂಕಗಳ ಸಹ ಸಂಬಂಧ ಗುಣಾಂಕವನ್ನು ಕಂಡುಹಿಡಿಯಲು ಸಂಖ್ಯಾಶಾಸ್ತ್ರಜ್ಞರು ಅನೇಕ ತಂತ್ರಗಳನ್ನು ರಚಿಸಿದ್ದಾರೆ. ದತ್ತಾಂಶಕ್ಕೆ ಅನುಗುಣವಾದ ತಂತ್ರವನ್ನು ಸಂಶೋಧಕನು ಆಯ್ಕೆ ಮಾಡಬೇಕು.

ಸಹ ಸಂಬಂಧಾತ್ಮಕ ವಿಧಾನ ವಿಶೇಷವಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಮತ್ತು ವರ್ತನಾ ವಿಜ್ಞಾನದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಉಪಯುಕ್ತವಾಗಿದೆ. ಪ್ರಮುಖವಾಗಿ ಇದು ಏಕ ಕಾಲದಲ್ಲಿ ಅನೇಕ ಚಲಕಗಳನ್ನು ಮತ್ತು ಅವುಗಳ ಆಂತರಿಕ ಸಂಬಂಧಗಳನ್ನು ಅಳತೆ ಮಾಡುವುದಕ್ಕೆ ಅನುವು ಮಾಡಿಕೊಡುತ್ತದೆ. ವರ್ತನಾ ವಿಜ್ಞಾನದ ಸಮಸ್ಯೆಗಳಲ್ಲಿ ಒಂದು ವಿಧದ ವರ್ತನೆಗೆ ಒಂದು ಚಲಕವಲ್ಲದೆ ಅನೇಕ ಚಲಕಗಳು ಪ್ರಭಾವ ಬೀರುವ ಸಾಧ್ಯತೆ ಇರುತ್ತದೆ. ಸಹ ಸಂಬಂಧಾತ್ಮಕ ಸಂಶೋಧನೆ ಮೂಲಕ ವರ್ತನೆಯನ್ನು ಹೆಚ್ಚು ನೈಜವಾದ ಸನ್ನಿವೇಶದಲ್ಲಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.

**ಕಾರಣಾತ್ಮಕ – ತೌಲನಿಕ ವಿಧಾನ:**

ಸಂಶೋಧಕನು ಒಂದು ಘಟನೆಯನ್ನು ಅಧ್ಯಯನ ಮಾಡುವಾಗ, ಆ ಘಟನೆಯು ಏಕೆ ಘಟಿಸುತ್ತದೆ ಹಾಗೂ ಹೇಗೆ ಘಟಿಸುತ್ತದೆ? ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಸಂಶೋಧಕನು ಇಂತಹ ಇತರ ಘಟನೆಗಳು ಸಂಭವಿಸಿದ ವಿವಿಧ ಸನ್ನಿವೇಶಗಳನ್ನು ಹೋಲಿಸಿ ನೋಡುತ್ತಾನೆ ಹಾಗೂ ಅವುಗಳಲ್ಲಿರುವ ಹೋಲಿಕೆಗಳನ್ನು ಹಾಗೂ ವ್ಯತ್ಯಾಸಗಳನ್ನು ಗುರುತಿಸುತ್ತಾನೆ. ಈ ರೀತಿಯ ಸಂಶೋಧನೆಗೆ ಕಾರಣಾತ್ಮಕ–ತೌಲನಿಕ (Causal-Comparative Method) ಸಂಶೋಧನೆ ಎನ್ನುತ್ತೇವೆ. ಕಾರಣಾತ್ಮಕ–ತೌಲನಿಕ ಸಂಶೋಧನೆ ಜಾನ್ ಸ್ಟುವರ್ಟ್ ಮಿಲ್ಲನು ಸೂಚಿಸಿದ ಕಾರಣಾತ್ಮಕ ಸಂಬಂಧಗಳನ್ನು ಅನ್ವೇಷಿಸುವ ವಿಧಾನಗಳ ಮೇಲೆ ಆಧಾರಿತವಾಗಿವೆ. ಈ ವಿಧಾನವನ್ನು ಒಪ್ಪಂದದ ವಿಧಾನ (Method of Agreement) ಎಂದು ಗುರುತಿಸಲಾಗುತ್ತದೆ.

Digitised by Bharatavani, CIIL

ಕಾರಣಾತ್ಮಕ ತೌಲನಿಕ ಸಂಶೋಧನೆಗೆ ವ್ಯಾನ್ ಡೇಲನ್ ಒಂದು ಉದಾಹರಣೆಯನ್ನು ಕೊಡುತ್ತಾನೆ. ಎ ಬಿ ಸಿ ಡಿ ಇ ಎಫ್ ಎಂಬ ಆರು ವಿದ್ಯಾರ್ಥಿಗಳು ಒಂದು ಸ್ಪರ್ಧೆಗೆ ಹೋಗುತ್ತಿದ್ದಾರೆ ಎಂದು ಕಲ್ಪಿಸಿಕೊಳ್ಳೋಣ. ಅವರಲ್ಲಿ ಎ ಬಿ ಹಾಗೂ ಸಿ ವಿದ್ಯಾರ್ಥಿಗಳಿಗೆ ಅನಾರೋಗ್ಯವಾಗುತ್ತದೆ. ಎಂದಾಗ ವೈದ್ಯರು ಅವರ ಅನಾರೋಗ್ಯಕ್ಕೆ ಕಾರಣವನ್ನು ಹುಡುಕುತ್ತಾರೆ. ಎ ಬಿ ಸಿ ವಿದ್ಯಾರ್ಥಿಗಳು ಹಿಂದಿನ ದಿನ ಸೇವಿಸಿದ ಆಹಾರದ ಬಗ್ಗೆ ವೈದ್ಯರು ಕೇಳುತ್ತಾರೆ. ಆಗ ಆ ಎಲ್ಲಾ ವಿದ್ಯಾರ್ಥಿಗಳು ಬೇರೆ ಬೇರೆ ರೀತಿಯ ಆಹಾರಗಳನ್ನು ಸೇವಿಸಿರುತ್ತಾರೆ. ಆದರೆ ಎಲ್ಲರೂ ಸ್ಟ್ರಾಬೆರಿ ಕ್ರೀಮ್ ತಿಂಡಿಯನ್ನು ತಿಂದಿರುತ್ತಾರೆ. ಇದರಿಂದ ಅನಾರೋಗ್ಯದಿಂದ ಬಳಲುವ ಮೂವರೂ ಸ್ಟ್ರಾಬೆರಿ ಕ್ರೀಮ್ ತಿಂಡಿಯನ್ನು ತಿಂದಿರುತ್ತಾರೆ ಎಂದು ತಿಳಿಯುತ್ತದೆ. ಈಗ ಒಪ್ಪಂದದ ವಿಧಾನದ ಮೂಲಕ ವೈದ್ಯರು ಅನಾರೋಗ್ಯಕ್ಕೆ ಸ್ಟ್ರಾಬೆರಿ ಕ್ರೀಮ್ ಕಾರಣ ಎನ್ನುವ ನಿರ್ಧಾರಕ್ಕೆ ಬರುತ್ತಾರೆ. ಏಕೆಂದರೆ ಕೇವಲ ಇದು ಮಾತ್ರ ಮೂರೂ ವಿದ್ಯಾರ್ಥಿಗಳ ಅನಾರೋಗ್ಯಕ್ಕೆ ಕಾರಣವಾಗಿರುತ್ತದೆ. ಈ ವಿಧಾನದೊಂದಿಗೆ ಜೆ.ಎಸ್.ಮಿಲ್‌ರವರ ಒಪ್ಪಂದ ಮತ್ತು ವ್ಯತ್ಯಾಸದ ಜಂಟಿವಿಧಾನ (Joint Method of Agreement and Difference) ಎನ್ನುವ ವಿಧಾನವನ್ನು ಸಹ ಉಪಯೋಗಿಸಬಹುದು. ಈ ವಿಧಾನದ ಪ್ರಕಾರ ಘಟನೆ ಘಟಿಸುವಾಗ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಂದರ್ಭಗಳಲ್ಲಿ ಯಾವುದೇ ಸಾಮಾನ್ಯ ಸನ್ನಿವೇಶಗಳಿಲ್ಲದೆ ಹೋದಾಗ ಅಥವಾ ಎರಡು ಘಟನೆಗಳು ಒಂದೇ ವಿಷಯದಲ್ಲಿ ವ್ಯತ್ಯಾಸ ಹೊಂದಿದಾಗ ಆಗುವ ಪರಿಣಾಮಗಳಿಗೆ ಆ ಸಂದರ್ಭವೇ ಕಾರಣ ಎಂದು ತೀರ್ಮಾನಕ್ಕೆ ಬರಬಹುದಾಗಿದೆ. ಈ ವಿಧಾನವನ್ನು ಅನುಸರಿಸಿದಾಗ ವೈದ್ಯರು ಆರೋಗ್ಯವಾಗಿದ್ದ ಡಿ ಇ ಎಫ್ ವಿದ್ಯಾರ್ಥಿಗಳು ಸ್ಟ್ರಾಬೆರಿ ಕ್ರೀಮ್ ತಿಂಡಿಯನ್ನು ತಿಂದಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಇದರಿಂದ ಎ ಬಿ ಸಿ ವಿದ್ಯಾರ್ಥಿಗಳು ಸ್ಟ್ರಾಬೆರಿ ಕ್ರೀಮ್ ತಿಂಡಿಯನ್ನು ತಿಂದಿರುವುದೇ ಅವರ ಅನಾರೋಗ್ಯಕ್ಕೆ ಕಾರಣ ಎಂದು ತೀರ್ಮಾನಿಸುತ್ತಾರೆ.

ಕಾರಣಾತ್ಮಕ–ತೌಲನಿಕ ಸಂಶೋಧನೆಗಳು ಸರಳವಾದ ಸಹ ಸಂಬಂಧ ಅಥವಾ ಸಂಬಂಧಗಳಷ್ಟೆ ಅಲ್ಲದೆ ಅದರಿಂದಾಗುವ ಪರಿಣಾಮಗಳನ್ನು ಅಧ್ಯಯನ ಮಾಡುತ್ತವೆ. ಈ ವಿಧದ ಸಂಶೋಧನೆಗಳಲ್ಲಿ ಕಾರಣ–ಪರಿಣಾಮ ಸಂಬಂಧಗಳು ಕೇವಲ ಸೂಚಿಸಲಾಗುತ್ತದೆ. ಪ್ರಾಯೋಗಿಕ ಅಧ್ಯಯನಗಳಲ್ಲಿರುವಂತೆ ಸಂಬಂಧಗಳನ್ನು ಸ್ಥಾಪಿಸಲಾಗುವುದಿಲ್ಲ. ವಿವಿಧ ಚಲಕಗಳ ನಡುವಣ ಪರಿಣಾಮಗಳ ವ್ಯತ್ಯಾಸಗಳು, ವಿವಿಧ ಸಮೂಹಗಳ ನಡುವಣ ಪರಿಣಾಮಗಳ ವ್ಯತ್ಯಾಸಗಳು ಅಥವಾ ಚಲಕಗಳ ವಿವಿಧ ಮಟ್ಟಗಳ ಪರಿಣಾಮಗಳ ವ್ಯತ್ಯಾಸಗಳು ತೌಲನಿಕ ಸಂಶೋಧನೆಯಲ್ಲಿ ಅಡಕವಾಗಿರುತ್ತವೆ. ಇವುಗಳನ್ನು ಉನ್ನತ ಮಟ್ಟದ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಉಪಯೋಗಿಸಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ವಿಚಲನೆಯ ವಿಶ್ಲೇಷಣೆ (Analysis of Variance) ಮತ್ತು ವಿಚಲನಾ ಗುಣಾಂಕ (Co-efficient of Variation) ಸಹಸಂಬಂಧ ಗುಣಾಂಕ (Co-efficient of Correlation) ಹಾಗೂ ಬಹು ವಿಚಲನಾ ವಿಶ್ಲೇಷಣೆಗಳಂತಹ (Co-efficient of Multiple Variation) ಸಂಖ್ಯಾಶಾಸ್ತ್ರೀಯ ತಂತ್ರಗಳು ಈ ರೀತಿಯ ತಂತ್ರಗಳು ಉದಾಹರಣೆಗಳಾಗಿದೆ. ಈ ತಂತ್ರಗಳನ್ನು ಬಳಸಿ ಪ್ರತಿಯೊಂದು ಚಲಕದ ಪ್ರಭಾವ ಅಥವಾ ಹಲವು ಚಲಕಗಳ ಪ್ರಭಾವ ಅಥವಾ ಎರಡು ಅಥವಾ ಹೆಚ್ಚು ಚಲಕಗಳ ಅನ್ಯೋನ್ಯ ಕ್ರಿಯೆಯ ಪರಿಣಾಮವನ್ನು ಸಹ ನಿರ್ಧರಿಸಬಹುದು.

**ಪ್ರಾಯೋಗಿಕ ವಿಧಾನ:**

ಪ್ರಾಯೋಗಿಕ ವಿಧಾನ (Experimental Method) ಸಂಶೋಧನೆಯ ಬಹು ಮುಖ್ಯವಾದ ವಿಧಾನವಾಗಿದೆ. ಈ ವಿಧಾನ ವೈಜ್ಞಾನಿಕ ವಿಧಾನದ ಹಂತಗಳನ್ನು ಉಪಯೋಗಿಸುತ್ತದೆ. ಶುದ್ಧ ವಿಜ್ಞಾನಗಳಲ್ಲಿ ಇದು ಪ್ರಧಾನ ಸಂಶೋಧನೆಯ ವಿಧಾನವಾಗಿದೆ. ಮನೋವಿಜ್ಞಾನ ಮತ್ತು ಶಿಕ್ಷಣಶಾಸ್ತ್ರದಲ್ಲೂ ಈ ವಿಧಾನವನ್ನು ಬಹುತೇಕ ಉಪಯೋಗಿಸಲಾಗುತ್ತದೆ ಪ್ರಯೋಗ ವಿಧಾನದ ಬಗ್ಗೆ ಹೆಚ್ಚಿನ ವಿವರಣೆಗೆ ಪ್ರತ್ಯೇಕ ಲೇಖನವನ್ನು ನೋಡಿ ಪುಟ ಸಂ. (541)

**ಅರ್ಧ–ಪ್ರಾಯೋಗಿಕ ವಿಧಾನ:**

ಮನೋವಿಜ್ಞಾನ ಮತ್ತು ಶಿಕ್ಷಣಶಾಸ್ತ್ರದಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಪ್ರಯೋಗ ವಿಧಾನದ ಎಲ್ಲಾ ನಿಯಮಗಳನ್ನು ಅನುಸರಿಸಿ ಪ್ರಯೋಗಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ಇದಕ್ಕೆ ಮಾನವನ ವರ್ತನೆ ಮತ್ತು ಸಾಮಾಜಿಕ ಸನ್ನಿವೇಶಗಳ ಸಂಕೀರ್ಣತೆಯೇ ಕಾರಣ. ಅಂಥ ಸಂದರ್ಭಗಳಲ್ಲಿ ಪ್ರಯೋಗದ ಕೆಲವು ನಿಯಮಗಳ ಪಾಲನೆ ಸಾಧ್ಯವಿಲ್ಲ. ಇಂಥ ಪ್ರಯೋಗಗಳಿಗೆ ಅರ್ಧ ಪ್ರಯೋಗಗಳು (Quasi Experiments) ಎನ್ನುತ್ತಾರೆ. ಈ ವಿಧಾನದ ಹೆಚ್ಚಿನ ವಿವರಣೆಗಳಿಗೆ ಪ್ರತ್ಯೇಕ ಲೇಖನ ನೋಡಿ ಪುಟ ಸಂಖ್ಯೆ (541)

**ಸ್ವಾಭಾವಿಕ ಅನುಶೀಲನ ವಿಧಾನ:**

ಆಯಾ ಸಮಾಜಗಳು, ಸಾಂಸ್ಕೃತಿಕ ಸಮೂಹಗಳ ಬಗ್ಗೆ ಅಧ್ಯಯನ ಮಾಡಲು ಗ್ರಾಮ/ಪ್ರದೇಶ/ದೇಶ ಮುಂತಾದ ಘಟಕಗಳ ಬಗ್ಗೆ ಅಧ್ಯಯನ ಮಾಡಲು ಪ್ರತ್ಯೇಕ ಅಧ್ಯಯನ ವಿಧಾನಗಳಿಗೆ ಈ ವಿಧಾನಗಳು ಪರಿಮಾಣಾತ್ಮಕ ವಿಶ್ಲೇಷಣೆಗಿಂತ ಗುಣಾತ್ಮಕ ವಿಶ್ಲೇಷಣೆಗೆ ಹೆಚ್ಚು ಮಹತ್ವ ಕೊಡುತ್ತವೆ. ಈ ರೀತಿಯ ಸಂಶೋಧನೆಗಳಿಗೆ ಸ್ವಾಭಾವಿಕ ಅನುಶೀಲನ ವಿಧಾನಗಳು (Naturalistic Enquiry Method) ಎಂದು ಹೇಳಲಾಗುತ್ತದೆ. ಈ ವಿಧಾನದ ವಿವರಗಳಿಗೆ ಪ್ರತ್ಯೇಕ ಲೇಖನ ನೋಡಿ ಪುಟ ಸಂಖ್ಯೆ (541)

**ವಿಕಾಸಾತ್ಮಕ ವಿಧಾನ:**

ವಿಕಾಸಾತ್ಮಕ ವಿಧಾನ (Developmental Method) ಬೆಳವಣಿಗೆಯ ದಿಕ್ಕು, ಒಲವು, ವೇಗ, ಪ್ರಗತಿ ಮತ್ತು ಅವನತಿಗಳನ್ನು ವಿಕಾಸ ಮತ್ತು ಅಧ್ಯಯನ ಮಾಡುವ ವಿಧಾನವಾಗಿದೆ. ಅದು ಮಾನವನ ವರ್ತನೆಯ ವಿವಿಧ ಮುಖಗಳ ವಿಕಾಸದ ವಿನ್ಯಾಸಗಳನ್ನು ಅಧ್ಯಯನ ಮಾಡುತ್ತದೆ. ಮಾನವನ ವರ್ತನೆಯ ವಿಕಾಸದಲ್ಲಿ

Digitised by Bharatavani, CIIL

ಕಾಲಾನುಕ್ರಮದಲ್ಲಿ ಆಗುವ ಬದಲಾವಣೆಗಳ ಕುರಿತು ವಿಕಾಸಾತ್ಮಕ ವಿಧಾನ ಅನ್ವೇಷಣೆ ಮಾಡುತ್ತದೆ. ಈ ವಿಧಾನ ಮಾನವನ ವಿಕಾಸದ ವಿವಿಧ ರೂಪಗಳನ್ನು ಅಧ್ಯಯನ ಮಾಡುವುದರಲ್ಲಿ ಸಹಕಾರಿಯಾಗಿದೆ.

ಮಾನವನ ಬೆಳವಣಿಗೆಯನ್ನು ಎರಡು ವಿಧಾನಗಳಿಂದ ಅಧ್ಯಯನ ಮಾಡಬಹುದು. ಮೊದಲನೆಯದು ಲಂಬೀಯ ಅಧ್ಯಯನ ಮತ್ತು ಎರಡನೆಯದು ಸೀಳುನೋಟದ ಅಧ್ಯಯನ. ಲಂಬೀಯ ಅಧ್ಯಯನದಲ್ಲಿ ಒಂದೇ ಸಮೂಹದ ಮಕ್ಕಳ ಬೆಳವಣಿಗೆಯ ದಿಶೆಯನ್ನು ವಿವಿಧ ವಯಸ್ಸುಗಳಲ್ಲಿ ಅಧ್ಯಯನ ಮಾಡಬಹುದು. ಅದೇ ಸಮೂಹದ ವಿದ್ಯಾರ್ಥಿಗಳನ್ನು ಅನೇಕ ಚಲಕಗಳ ಸಂಬಂಧದಲ್ಲಿ ಪರೀಕ್ಷಿಸಬಹುದು. ಮಕ್ಕಳು ಬೇರೆ ಬೇರೆ ವಯೋ ಘಟ್ಟಗಳಲ್ಲಿದ್ದಾಗ ಅವರ ಮೇಲಿನ ವಿವಿಧ ಚಲಕಗಳ ಪ್ರಭಾವವನ್ನು ಅಧ್ಯಯನ ಮಾಡಬಹುದು. ಅವರ ವಿಕಾಸ, ವಿನ್ಯಾಸಗಳನ್ನು ಸಹ ವೈಯಕ್ತಿಕವಾಗಿ ಗುರುತಿಸಬಹುದು. ಆದರೆ ಈ ರೀತಿಯ ಅಧ್ಯಯನಗಳಿಗೆ ದೀರ್ಘ ಸಮಯ ಬೇಕಾಗುತ್ತದೆ. ಆದರೆ ಸೀಳುನೋಟ ಅಧ್ಯಯನದಲ್ಲಿ ಅದೇ ಸಮೂಹದ ವಿದ್ಯಾರ್ಥಿಗಳನ್ನು ಪದೇ ಪದೇ ಅಳತೆ ಮಾಡುವುದಕ್ಕಿಂತ ವಿವಿಧ ವಯಸ್ಸಿನ ಬೇರೆ ಬೇರೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅಳತೆ ಮಾಡಬಹುದು. ನಂತರ ಮಕ್ಕಳ ಪ್ರತಿ ಚಲಕದ ವಿಕಾಸ ಅಥವಾ ಬೆಳವಣಿಗೆಯನ್ನು ಪ್ರತಿ ವಯೋ ಹಂತದ ಸರಾಸರಿಗಳನ್ನು ವಿಶ್ಲೇಷಿಸಿ ತೀರ್ಮಾನಿಸಲಾಗುತ್ತದೆ. ಲಂಬೀಯ ವಿಧದ ಅಧ್ಯಯನಗಳನ್ನು ಹೆಚ್ಚಾಗಿ ಚಿಕಿತ್ಸಾಲಯಗಳಲ್ಲಿ ಹಾಗೂ ಪ್ರಯೋಗಾಲಯಗಳಲ್ಲಿ ಬಳಸುತ್ತಾರೆ. ಶೈಕ್ಷಣಿಕ ಕ್ಷೇತ್ರದಲ್ಲೂ ಈ ರೀತಿಯ ಅಧ್ಯಯನಗಳಾಗಿವೆ. ಉದಾಹರಣೆಗೆ ಟರ್ಮನ್ ಮತ್ತು ಸಂಗಡಿಗರು ಪ್ರತಿಭಾವಂತ ವಿದ್ಯಾರ್ಥಿಗಳ ಒಂದು ವ್ಯಾಪಕವಾದ ಲಂಬೀಯ ಅಧ್ಯಯನವನ್ನು ಮಾಡಿದ್ದಾರೆ. ಈ ಅಧ್ಯಯನದ ತೀರ್ಮಾನಗಳು ಪ್ರತಿಭಾವಂತ ಮಕ್ಕಳ ಬೆಳವಣಿಗೆಯನ್ನು ತಿಳಿದುಕೊಳ್ಳುವುದರಲ್ಲಿ ಹಾಗೂ ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳನ್ನು ಕೈಗೊಳ್ಳುವುದಕ್ಕೆ ಮಹತ್ವದ ಕೊಡುಗೆಯನ್ನು ನೀಡಿವೆ. ಗೆಸೆಲ್ ಮಕ್ಕಳ ಗತ್ಯಾತ್ಮಕ ಮತ್ತು ಭೌತಿಕ ಬೆಳವಣಿಗೆ ಮತ್ತು ಸಂವೇಗಾತ್ಮಕ ಭಾವನೆಗಳ ವ್ಯಕ್ತಪಡಿಸುವಿಕೆ ಹಾಗೂ ಮಕ್ಕಳ ಹೊಂದಾಣಿಕೆ ವರ್ತನೆಗಳನ್ನು ಶೈಶವಾವಸ್ಥೆಯಿಂದ ಹದಿನಾರು ವರ್ಷಗಳವರೆಗೆ ಅಧ್ಯಯನ ಮಾಡಿದನು. ಈ ಅಧ್ಯಯನಗಳನ್ನು 1911 ರಿಂದ 1961ರವರೆಗೆ ನಡೆಸಲಾಯಿತು. ಲಂಬೀಯ ಅಧ್ಯಯನಗಳು ಮಗುವಿನ ಬೆಳವಣಿಗೆ ಮತ್ತು ವಿಕಾಸವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಮಹತ್ವದ ಕೊಡುಗೆಯನ್ನು ನೀಡಿದೆ.

**ವ್ಯಕ್ತಿ ಅಧ್ಯಯನ ವಿಧಾನ:**

ವ್ಯಕ್ತಿ ಅಧ್ಯಯನ ವಿಧಾನ (Case study Method)ವನ್ನು ವ್ಯಕ್ತಿ ಚರಿತ್ರೆಯ ಅಧ್ಯಯನ ಎಂದೂ ಗುರುತಿಸಲಾಗುತ್ತದೆ. ನಿರ್ದಿಷ್ಟ ವ್ಯಕ್ತಿಯ ನಿರ್ದಿಷ್ಟ ಸಮಸ್ಯೆಗಳನ್ನು ಪತ್ತೆ ಹಚ್ಚಿ, ಅಧ್ಯಯನ ಮಾಡಿ, ಅವನ ವರ್ತನಾ ದೋಷಗಳಿಗೆ ಕಾರಣ ಪತ್ತೆ ಹಚ್ಚಿ ನಿವಾರಣೋಪಾಯಗಳನ್ನು ಸೂಚಿಸಲು ಅನುಸರಿಸುವ ವಿಶಿಷ್ಟ ವಿಧಾನವೇ ವ್ಯಕ್ತಿ ಅಧ್ಯಯನ ವಿಧಾನ. ಇಲ್ಲಿ ನಿರ್ದಿಷ್ಟ ವ್ಯಕ್ತಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದು ಅವನ ವರ್ತನಾ ಸಮಸ್ಯೆಯ ಕಾರಣವನ್ನು ಪತ್ತೆ ಹಚ್ಚಿ ಪರಿಹಾರವನ್ನು ಸೂಚಿಸುವುದರಿಂದ ವ್ಯಕ್ತಿ ಅಧ್ಯಯನ ಎಂದೂ ಹೇಳುತ್ತಾರೆ. ಈ ವಿಧಾನ ವ್ಯಕ್ತಿಯ ಪೂರ್ಣವಾದ ಮತ್ತು ಆಳವಾದ ಅಧ್ಯಯನವನ್ನು ಒಳಗೊಳ್ಳುತ್ತದೆ. ಈ ವಿಧಾನದಲ್ಲಿ ಅನೇಕ ಸಾಧನಗಳು ಮತ್ತು ತಂತ್ರಗಳ ನೆರವನ್ನು ಪಡೆಯಲಾಗುತ್ತದೆ.

ವ್ಯಕ್ತಿ ಅಧ್ಯಯನವನ್ನು ಸಾಮಾನ್ಯವಾಗಿ ಎರಡು ಹಂತಗಳಲ್ಲಿ ಕೈಗೊಳ್ಳಲಾಗುತ್ತದೆ. ಮೊದಲ ಹಂತದಲ್ಲಿ ವ್ಯಕ್ತಿ ಜೀವನದ ಎಲ್ಲ ಮುಖಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಎರಡನೇ ಹಂತದಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ವಿಶ್ಲೇಷಿಸಿ ಸಮಸ್ಯೆಯನ್ನು ಗುರುತಿಸಿ ಅದಕ್ಕೆ ಸೂಕ್ತವಾದ ಪರಿಹಾರೋಪಾಯವನ್ನು ಸೂಚಿಸಲಾಗುತ್ತದೆ.

ಮಾಹಿತಿಯನ್ನು ತಂದೆ, ತಾಯಿ, ಕುಟುಂಬದ ಸದಸ್ಯರು, ಬಂಧುಮಿತ್ರರು, ಗೆಳೆಯರು, ಸಹೋದ್ಯೋಗಿಗಳು ಹಾಗೂ ಇತರರ ಮೂಲಕ ಮನೋಪರೀಕ್ಷಣ, ಸಂದರ್ಶನ ಮುಂತಾದ ವಿವಿಧ ಸಾಧನಗಳು ಮತ್ತು ತಂತ್ರಗಳನ್ನು ಬಳಸಿ ಸಂಗ್ರಹಿಸಬಹುದು. ಪರಿಚಯಾತ್ಮಕ ಮಾಹಿತಿಯಲ್ಲಿ, ಹೆಸರು, ವಿಳಾಸ, ಲಿಂಗ, ವಯಸ್ಸು, ದೈಹಿಕ ಲಕ್ಷಣಗಳು ಮುಂತಾದ ವಿವರಗಳನ್ನು ಸಂಗ್ರಹಿಸಲಾಗುತ್ತದೆ. ವ್ಯಕ್ತಿತ್ವದ ಮಾಹಿತಿಗಳನ್ನು ದಾಖಲಿಸುವಾಗ, ವ್ಯಕ್ತಿಯ ಮನೋಧೋರಣೆಗಳು, ಸಾಮರ್ಥ್ಯಗಳು, ಬುದ್ಧಿಮಟ್ಟ, ಹವ್ಯಾಸಗಳು, ಆಸಕ್ತಿಗಳು ಮುಂತಾದವುಗಳನ್ನು ದಾಖಲಿಸಲಾಗುತ್ತದೆ. ವ್ಯಕ್ತಿ ವಿದ್ಯಾರ್ಥಿಯಾಗಿದ್ದರೆ ಶಾಲೆ/ಕಾಲೇಜಿನಲ್ಲಿ ಅವನ/ಅವಳ ಸಾಧನೆ, ಅನುಭವಿಸಿದ ಸೋಲು ಗೆಲುವುಗಳು, ಘರ್ಷಣೆಗಳು, ವಿಶೇಷ ಸಾಮರ್ಥ್ಯಗಳು, ವರ್ತನೆಗಳು ಇವುಗಳನ್ನು ದಾಖಲಿಸಲಾಗುತ್ತದೆ. ವ್ಯಕ್ತಿ ಉದ್ಯೋಗಸ್ಥನಾಗಿದ್ದರೆ, ವೃತ್ತಿಯಲ್ಲಿ ಅವನ/ಅವಳ ಸಾಧನೆ, ಅನುಭವಿಸಿದ ಸೋಲು ಗೆಲುವುಗಳು, ಬಡ್ತಿ, ಘರ್ಷಣೆಗಳು ವಿವಿಧ ವರ್ತನೆಗಳು ಇತ್ಯಾದಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತದೆ. ವ್ಯಕ್ತಿಯ ಆರೋಗ್ಯದ ಬಗ್ಗೆ ಸಹ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ವ್ಯಕ್ತಿಯ ರೋಗಗಳ ಚರಿತ್ರೆ, ಅನುವಂಶಿಕ ನ್ಯೂನತೆಗಳ ವಿವರ, ದೈಹಿಕ ನ್ಯೂನತೆಗಳು ಹಾಗೂ ಪ್ರಸಕ್ತ ಆರೋಗ್ಯದ ವಿವರಗಳನ್ನು ವೈದ್ಯಕೀಯ ಪರೀಕ್ಷೆ ಮತ್ತು ವೈದ್ಯರ ಪರೀಕ್ಷೆಯ ಮೂಲಕ ಸಂಗ್ರಹಿಸಬೇಕು. ಇದಲ್ಲದೆ ವ್ಯಕ್ತಿಯ ಬಗ್ಗೆ ಕುಟುಂಬದ ಸದಸ್ಯರು, ಸಹೋದ್ಯೋಗಿಗಳು, ಮಿತ್ರರು, ನೆರೆಹೊರೆಯವರಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತದೆ.

ಸಂಗ್ರಹಿಸಿದ ಮಾಹಿತಿಯನ್ನು ಅರ್ಥಪೂರ್ಣವಾಗಿ ವ್ಯವಸ್ಥೆಗೊಳಿಸಿ ದಾಖಲಿಸಲಾಗುತ್ತದೆ. ಇವುಗಳ ಆಧಾರದ ಮೇಲೆ ವ್ಯಕ್ತಿಯ ಸಂಪೂರ್ಣ ಜೀವನ ಚರಿತ್ರೆಯನ್ನು ಬರೆಯಲಾಗುತ್ತದೆ. ಸಂಗ್ರಹಿಸಿದ ಮಾಹಿತಿಗಳ ವಿಶ್ಲೇಷಣೆಯ ಆಧಾರದ ಮೇಲೆ ಸಮಸ್ಯೆಯ ಕಾರಣಗಳನ್ನು ವಿಶ್ಲೇಷಿಸಲಾಗುತ್ತದೆ. ಸ್ಪಷ್ಟ

Digitised by Bharatavani, CIIL

ಕಾರಣಗಳನ್ನು ಖಚಿತಗೊಳಿಸಿಕೊಳ್ಳಲಾಗುತ್ತದೆ ನಂತರ ಆ ಸಮಸ್ಯೆಗೆ ಯುಕ್ತ ಪರಿಹಾರೋಪಾಯಗಳನ್ನು ನಿರ್ಧರಿಸಲಾಗುತ್ತದೆ. ವ್ಯವಸ್ಥಿತ ಕಾರ್ಯಕ್ರಮಗಳ ಮೂಲಕ ನಿವಾರಣೋಪಾಯಗಳನ್ನು ಕೈಗೊಳ್ಳಲಾಗುತ್ತದೆ. ಈ ನಿವಾರಣೋಪಾಯಗಳಲ್ಲಿ ವ್ಯಕ್ತಿಗೆ/ಪೋಷಕರಿಗೆ ಸಮಾಲೋಚನೆ, ಮಾರ್ಗದರ್ಶನ, ವೈದ್ಯಕೀಯ ಚಿಕಿತ್ಸೆ, ಮನೋಚಿಕಿತ್ಸೆ ಮುಂತಾದವು ಸೇರುತ್ತವೆ. ನಿವಾರಣೋಪಾಯಗಳ ಕಾರ್ಯಕ್ರಮ ಪೂರ್ಣಗೊಂಡ ನಂತರ ನಿವಾರಣೋಪಾಯಗಳ ಮೌಲ್ಯ ನಿರ್ಧಾರ ಮಾಡಿ ಅಗತ್ಯವಾದರೆ ಅನುವರ್ತಿ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತದೆ.

ವ್ಯಕ್ತಿ ಅಧ್ಯಯನ ತರ್ಕಬದ್ಧವಾಗಿರುತ್ತದೆ. ಸುವ್ಯವಸ್ಥಿತವಾಗಿರುತ್ತದೆ ಮತ್ತು ಪೂರ್ವನಿರ್ಧಾರಿತ ಕ್ರಮದಲ್ಲಿ ನಡೆಯುತ್ತದೆ. ತೀವ್ರವಾದ ವರ್ತನಾ ಸಮಸ್ಯೆಗಳು, ಹೊಂದಾಣಿಕೆ ಸಮಸ್ಯೆಗಳು ಇರುವವರಿಗೆ ಈ ವಿಧಾನದಿಂದ ಸಹಾಯ ನೀಡಬಹುದು. ವ್ಯಕ್ತಿಗೆ ಸಂಬಂಧಪಟ್ಟ ಸಮಗ್ರವಾದ ವಿವರಗಳನ್ನು ದಾಖಲಿಸುವುದರಿಂದ ಸಂಪೂರ್ಣವಾದ ಅಧ್ಯಯನ ಮಾಡಿದಂತಾಗುತ್ತದೆ. ವ್ಯಕ್ತಿಯನ್ನು ಅನೇಕ ದೃಷ್ಟಿಯಿಂದ ಮತ್ತು ಆಯಾಮಗಳಿಂದ ಅಧ್ಯಯನ ಮಾಡಲಾಗುತ್ತದೆ. ನಿರ್ಧಾರಗಳನ್ನು ಬಲಪಡಿಸಲು ಅನೇಕ ಪರೀಕ್ಷಣಗಳ ಸಹಾಯ ಪಡೆಯಬಹುದು.

ವ್ಯಕ್ತಿ ಅಧ್ಯಯನ ವಿಧಾನ ಕೆಲವು ನ್ಯೂನತೆಗಳನ್ನು ಸಹ ಹೊಂದಿದೆ. ವಿಷಯ ಸಂಗ್ರಹಣೆ ಮಾಡುವಾಗ ಸಿಕ್ಕ ವಿವರಗಳು ಸತ್ಯಕ್ಕೆ ದೂರವಾಗಿರುವ ಸಂಭವವಿದೆ. ಉದಾಹರಣೆಗೆ ತಂದೆ ತಾಯಿಗಳು ತಮ್ಮ ಮಕ್ಕಳ ಬಗ್ಗೆ ಕೆಲವು ವಿವರಣೆಗಳನ್ನು ಮುಚ್ಚಿಡಬಹುದು. ಮಾಹಿತಿ ಕೊಡುವವರ ನೆನಪಿನ ಶಕ್ತಿಯಲ್ಲಿ ಎಲ್ಲಾ ವಿಷಯಗಳೂ ಉಳಿದಿರದೇ ಹೋಗುವ ಸಾಧ್ಯತೆಯಿದೆ. ವಿಷಯಗಳನ್ನು ತಪ್ಪಾಗಿ ಗ್ರಹಿಸುವ ಸಂಭವವಿದೆ. ವಿಷಯಗಳನ್ನು ಅರ್ಥೈಸುವಾಗ ಸಹ ತಪ್ಪುಗಳಾಗಬಹುದು. ಈ ವಿಧಾನಕ್ಕೆ ಹೆಚ್ಚು ಸಮಯ, ಹಣ ಮತ್ತು ತರಬೇತಿ ಪಡೆದ ಸಿಬ್ಬಂದಿಯ ಅಗತ್ಯವಿದೆ. ಎಲ್ಲಾ ರೀತಿಯ ಸಮಸ್ಯೆಗಳಿಗೂ ಈ ವಿಧಾನದಿಂದ ಪರಿಹಾರ ಕಂಡುಹಿಡಿಯಲು ಸಾಧ್ಯವಿಲ್ಲ.

–ಡಾ. ನಾಗೇಂದ್ರಕುಮಾರ್ ಆರ್.

## ಶೈಕ್ಷಣಿಕ ಸಂಶೋಧನೆಯಲ್ಲಿ ದತ್ತಾಂಶಗಳ ಸಂಗ್ರಹಣೆ

ಎಲ್ಲ ಸಂಶೋಧನೆಗಳಿಗೂ ಒಂದೇ ಬಗೆಯಾದ ದತ್ತಾಂಶ ಸಾಮಗ್ರಿಗಳು ಮತ್ತು ಅವು ಸಂಗ್ರಹಿಸುವ ವಿಧಾನವಿರುವುದಿಲ್ಲ. ಪ್ರತಿಯೊಂದು ಸಂಶೋಧನೆಯ ಗುರಿ, ಉದ್ದೇಶ ಮತ್ತು ಪ್ರಯೋಜನಗಳು ಬೇರೆ ಬೇರೆಯಾಗಿರುವುದರಿಂದ ಅವುಗಳಿಗೆ ಬೇಕಾಗುವ ದತ್ತಾಂಶ ಸಾಮಗ್ರಿಗಳು ಹೆಚ್ಚು ಕಡಿಮೆ ಬೇರೆ ಬೇರೆಯಾಗಿಯೇ ಇರುತ್ತವೆ. ದತ್ತಾಂಶಗಳ ಸಂಗ್ರಹಗಳಿಗೆ ಅನುಕೂಲತೆಗಾಗಿ ಕೆಲವು ಸಾಧನ ಸಲಕರಣೆಗಳನ್ನು ಗೊತ್ತುಪಡಿಸಲಾಗಿದ್ದರೂ ಅವೆಲ್ಲವುಗಳನ್ನು ಒಂದೇ ತೆರನಾಗಿ ಉಪಯೋಗಿಸಲು ಸಾಧ್ಯವಿಲ್ಲ. ಆದುದರಿಂದ ಸಂಶೋಧಕನು ತನ್ನ ಗುರಿಯ ಸಾರ್ಥಕತೆಗಾಗಿ ಯಾವ ಯಾವ ಹಂತಗಳಲ್ಲಿ ಯಾವ ಯಾವ ಸಾಧನೆಗಳನ್ನು, ಯಾವ ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂಬುದರ ಸರಿಯಾದ ಪರಿಜ್ಞಾನ ಹೊಂದಿರಬೇಕು. ಅಷ್ಟೇ ಅಲ್ಲದೆ, ಹೊಸ ಸಾಧನಗಳನ್ನು ರಚಿಸಿಕೊಳ್ಳಬೇಕೆ? ಅಥವಾ ಸದ್ಯದಲ್ಲಿ ಲಭ್ಯವಿರುವ ಸಾಧನಗಳನ್ನೇ ಆಯ್ಕೆ ಮಾಡಿಕೊಳ್ಳಬೇಕೆ? ಅಥವಾ ಲಭ್ಯವಿರುವ ಸಾಧನಗಳನ್ನೇ ಸ್ವಲ್ಪ ಬದಲಾಯಿಸಿ ಅಥವಾ ಅನುವಾದಿಸಿ ತನ್ನ ಸಂಶೋಧನೆಗೆ ಹೊಂದಿಸಿಕೊಳ್ಳಬೇಕೆ? ಇತ್ಯಾದಿ ಪ್ರಶ್ನೆಗಳ ಬಗ್ಗೆ ಕೂಲಂಕಶವಾಗಿ ಚರ್ಚಿಸಿ ತಿಳಿದುಕೊಳ್ಳಬೇಕು. ಸಂಶೋಧನೆಗೆ ಮುಖ್ಯವಾಗಿ ಈ ರೀತಿಯ ಗ್ರಹಿಕೆಯೇ ಕೇಂದ್ರವಾಗಿರುತ್ತದೆ. ಸಂಶೋಧನೆಗೆ ಬೇಕಾದ ಮಾಹಿತಿಗಳನ್ನು ಅಂಕಿ–ಅಂಶಗಳನ್ನು ಯಾವ ರೀತಿಗಳಲ್ಲಿ ಕಲೆಹಾಕಬೇಕು ಎಂಬುದನ್ನು ಸಂಶೋಧಕನು ಮೊದಲೇ ತಿಳಿದುಕೊಂಡಿರಬೇಕು.

ಸಂಶೋಧಕನಿಗೆ ದತ್ತಾಂಶ ಸಂಗ್ರಹಣೆಗಳಿಗೆ ಹಲವು ತಂತ್ರಗಳು, ಸಾಧನಗಳು ಸಲಕರಣೆಗಳು ಲಭ್ಯವಿವೆ. ಅವುಗಳಲ್ಲಿ ಮುಖ್ಯವಾದವುಗಳು ಹೀಗಿವೆ.

(1) ಪ್ರಶ್ನಾವಳಿ (2) ಸಂದರ್ಶನ (3) ತಪಶೀಲು ಪಟ್ಟಿ (4) ನಿರ್ಧಾರ ಮಾಪನಗಳು (5) ಅವಲೋಕನ (6) ದಾಖಲೆಗಳ ಪರೀಕ್ಷೆ (7) ವ್ಯಕ್ತಿತ್ವ ಪರೀಕ್ಷೆಗಳು (8) ಮೌಲ್ಯ/ಮನೋಭಾವ/ಅಭಿರುಚಿ ಮಾಪನಗಳು (9) ಬುದ್ಧಿಶಕ್ತಿ/ಸೃಜನಶೀಲತೆ ಪರೀಕ್ಷಣಗಳು (10) ಅಭಿಸಾಮರ್ಥ್ಯ (ವಿಶೇಷ ಸಾಮಾರ್ಥ್ಯ ಪರೀಕ್ಷಣಗಳು).

ಇವುಗಳಲ್ಲಿ ಯಾವುದಾದರೊಂದು ಅಥವಾ ಅನೇಕ ಸಾಧನಗಳನ್ನು ಸಂಶೋಧಕ ತನ್ನ ಉದ್ದೇಶಗಳಿಗೆ ಸೂಕ್ತವಾದಂತೆ ಆಯ್ಕೆ ಮಾಡಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಬಹುದು.

ದತ್ತಾಂಶ ಸಂಗ್ರಹಣೆಯಲ್ಲಿ ಪ್ರಮುಖವಾದ ಹಂತವೆಂದರೆ, ಪ್ರಶ್ನಾವಳಿ ಅಥವಾ ತಪಶೀಲು ಪಟ್ಟಿಗಳನ್ನು, ಸೂಚಿಗಳನ್ನು (Schedule) ಸರಿಯಾಗಿ ಉದ್ದೇಶಕ್ಕೆ ರಚಿಸಿಕೊಳ್ಳುವುದು. ಸಂದರ್ಭಕ್ಕೆ ತಕ್ಕಂತೆ ಸಲಹೆ–ಸೂಚನೆಗಳನ್ನು ಅವುಗಳಲ್ಲಿ ಮುದ್ರಿಸಿ, ಉತ್ತರಿಸುವವರಿಗೆ ಸಂಶಯ, ಸಮಸ್ಯೆ ಎದುರಾಗದ ರೀತಿಯಲ್ಲಿ ಈ ಸಾಧನಗಳನ್ನು ರಚಿಸುವುದರಲ್ಲಿ ಸಂಶೋಧಕನ ಜಾಣ್ಮೆ ಅಡಗಿದೆ. ಇದಲ್ಲದೇ ಪ್ರಶ್ನಾವಳಿಗಳಲ್ಲಿ ಪ್ರಶ್ನೆಗಳು ಎಷ್ಟು ಇರಬೇಕು? ಹೇಗೆ ಇರಬೇಕು? ಪ್ರಶ್ನೆಗಳನ್ನು ವೈಯಕ್ತಿಕವಾಗಿ ಕೇಳಬೇಕೋ ಅಥವಾ ಸಾಮೂಹಿಕವಾಗಿ ಕೇಳಬೇಕೋ? ಅಥವಾ ಚಿಕ್ಕ ಚಿಕ್ಕ ಗುಂಪುಗಳನ್ನು ಉದ್ದೇಶಿಸಿ ಕೇಳಬೇಕೋ? ಎಂಬುದರ ಬಗ್ಗೆ ಸಂಶೋಧಕನು ಚೆನ್ನಾಗಿ ವಿಚಾರಿಸಬೇಕು.

ಸಂಶೋಧನೆಯಲ್ಲಿ ವ್ಯಕ್ತಿತ್ವ, ಬುದ್ಧಿಶಕ್ತಿ, ಮುಂತಾದ ಅಂಶಗಳನ್ನು ಪರೀಕ್ಷಿಸಬೇಕಾಗಿದಲ್ಲಿ ಅದಕ್ಕಾಗಿ ಸರಿಯಾದ ಪರೀಕ್ಷಣವನ್ನು ಆಯ್ಕೆ ಮಾಡಿಕೊಳ್ಳಬೇಕು. ಅವು ಪರೀಕ್ಷೆ ಕೊಡುವ ಸಮೂಹ ವಯಸ್ಸು, ಬುದ್ಧಿಮಟ್ಟ, ಭಾಷೆಗೆ ಹೊಂದಿಕೊಳ್ಳುವಂತಿರಬೇಕು. ಪರೀಕ್ಷೆಯನ್ನು

Digitised by Bharatavani, CIIL

ಕೊಡುವ ಕ್ರಮವನ್ನು ಸೂಚನೆಗಳನ್ನು ಅರಿತು ನಿಧಾನಕ್ರಮವನ್ನು ಸರಿಯಾಗಿ ಅನುಸರಿಸಬೇಕು.

ದತ್ತಾಂಶ ವಿಶ್ಲೇಷಣೆಗೆ ಸಹಾಯವನ್ನು ಪಡೆಯುವಾಗ, ಪ್ರಶ್ನಾವಳಿಗಳ, ಪರೀಕ್ಷಣಗಳ ಉತ್ತರಗಳನ್ನು ಕಂಪ್ಯೂಟರ್‌ನ ಭಾಷೆಗೆ ಅಳವಡಿಸಬೇಕು. ಭಾರತದ ಗ್ರಾಮೀಣ ಅಭಿವೃದ್ಧಿ ನಿಗಮದ ಮುಖ್ಯಸ್ಥರಾದ ಪದ್ಮಶ್ರೀ ಶ್ರೀನಿವಾಸನ್‌ರವರು ಹೇಳಿದ– "ಅಂಕಿ–ಅಂಶಗಳನ್ನು ತಪ್ಪದೇ ಎಣಿಸಿ, ಅದನ್ನು ಕೋಷ್ಟಕ ರೂಪಕ್ಕೆ ತರುವಲ್ಲಿ ಗಣಕಯಂತ್ರಗಳು ಆಧುನಿಕ ಸಂಶೋಧಕರಿಗೆ ಒಂದು ವರದಾನ" ಎಂಬ ಮಾತು ಸತ್ಯವಾದದ್ದು.

ಅವಲೋಕನ, ಸಂದರ್ಶನ ತಂತ್ರಗಳನ್ನು ಉಪಯೋಗಿಸಬೇಕಾಗಿದ್ದಲ್ಲಿ ಅವುಗಳನ್ನು ವಸ್ತುನಿಷ್ಠವಾಗಿ ನಡೆಸಬೇಕು. ಅವಲೋಕನ/ಸಂದರ್ಶನ ಸೂಚಿಯನ್ನು ರಚಿಸಿಕೊಂಡು ಉಪಯೋಗಿಸಿದರೆ ಏನನ್ನು ಅವಲೋಕಿಸಬೇಕು, ಹೇಗೆ ಸಂದರ್ಶನ ನಡೆಸಬೇಕು, ಸಂದರ್ಶನದಲ್ಲಿ ಯಾವ ರೀತಿಯ ಪ್ರಶ್ನೆಗಳನ್ನು ಕೇಳಬೇಕು ಎನ್ನುವುದು ಸ್ಪಷ್ಟವಾಗುತ್ತದೆ. ವೀಕ್ಷಣೆ ಮಾಡುವಾಗ ಒಬ್ಬರಿಗಿಂತ ಹೆಚ್ಚು ವೀಕ್ಷಕರು ಬೇರೆ ಬೇರೆ ಸ್ಥಾನಗಳಿಂದ ವೀಕ್ಷಣೆ ಮಾಡುವುದು ಒಳ್ಳೆಯದು.

–ಡಾ. ಶೈಲಜ ಹೆಚ್.ಎಂ.

## ಶೈಕ್ಷಣಿಕ ಸಂಸ್ಥೆಗಳ ಉತ್ತರದಾಯಿತ್ವ

ಸ್ವಾತಂತ್ರ್ಯ ಪೂರ್ವ ಶೈಕ್ಷಣಿಕ ಆಡಳಿತವನ್ನು ಅವಲೋಕಿಸದರೆ ಸ್ವತಂತ್ರ ಭಾರತದಲ್ಲಿ ಶೈಕ್ಷಣಿಕ ಆಡಳಿತದ ಹೊಸ ಯುಗವೆ ಪ್ರಾರಂಭಗೊಂಡಿತು. ಆಧುನಿಕ ಭಾರತದ ಶಿಕ್ಷಣದ ಅಭಿವೃದ್ಧಿಗೆ ಖಾಸಗಿ ಸಂಸ್ಥೆಗಳು ಅನೇಕ ರೀತಿಯಲ್ಲಿ ಸಹಾಯವನ್ನು ನೀಡಿವೆ. ಖಾಸಗಿಯವರಿಂದ ನಿರ್ವಹಿಸಲ್ಪಡುವ ಶೈಕ್ಷಣಿಕ ಹಂತಗಳು ಬಾಲವಾಡಿಯಿಂದ ಪ್ರಾರಂಭಗೊಂಡು ಸ್ನಾತಕ ಪದವಿಯವರೆಗೆ ವಿಸ್ತರಿಸಿಕೊಂಡಿವೆ. ಸರಕಾರದಿಂದ ಸ್ಥಾಪಿಸಲ್ಪಟ್ಟ ಶಾಲೆಗಳು ನೇರವಾಗಿ ಸರಕಾರದ ಆಧೀನಕ್ಕೊಳಪಟ್ಟಿದ್ದರೆ, ಖಾಸಗಿಯವರಿಂದ ನಡೆಸಲ್ಪಡುವ ಸಂಸ್ಥೆಗಳು ಆಡಳಿತ ಸಮಿತಿಯ ನಿಯಂತ್ರಣಕ್ಕೊಳಪಟ್ಟಿವೆ. ಸದ್ಯದ ಸನ್ನಿವೇಶದಲ್ಲಿ ಶಿಕ್ಷಣ ಸಂಸ್ಥೆಗಳು ಮೂರು ನಿಯೋಗಗಳಿಂದ ನಿರ್ವಹಿಸಲ್ಪಡುತ್ತಿವೆ. ಅವು ಸರಕಾರಿ, ಸ್ಥಾನಿಕ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಘಗಳು.

ಸರಕಾರ ಎಂದರೆ ನಾವು ಇಲ್ಲಿ ಎರಡು ರೀತಿಯಾಗಿ ಪರಿಗಣಿಸಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರ. ಶಾಲೆಯ ಆಡಳಿತಕ್ಕೆ ಸಂಬಂಧಿಸಿದಂತೆ ಸರಕಾರದ ಪಾತ್ರವು ಪರಿಮಿತಿಯನ್ನು ಹೊಂದದೆ. ರಾಜ್ಯದಲ್ಲಿ ಎಲ್ಲ ಶಾಲೆಗಳ ಸಂಖ್ಯೆಯನ್ನು ತೆಗೆದು–ಕೊಂಡರೆ ಅದರಲ್ಲಿ ಕೇವಲ 1/5 ಅಂಶ ಸರಕಾರಿ ಸಂಸ್ಥೆಗಳಿವೆ. ಖಾಸಗಿ ಸಂಘ ಸಂಸ್ಥೆಗಳು ಜನತೆಯ ಶಿಕ್ಷಣದಲ್ಲಿ ಅತ್ಯಂತ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದ್ದು, ಈ ಕಾರ್ಯವನ್ನು ನಿರ್ವಹಿಸುವಲ್ಲಿ ಅವುಗಳ ಸಂಪನ್ಮೂಲಗಳು ಸೀಮಿತವಾಗಿವೆ. ನಮ್ಮ ಸರಕಾರಿ ಶೈಕ್ಷಣಿಕ ಯೋಜನೆಗಳನ್ನು, ಸರಕಾರಿ ಮಾರ್ಗದರ್ಶನ ಮತ್ತು ನಿರ್ದೇಶನದಲ್ಲಿ ಈ ಖಾಸಗಿ ಶೈಕ್ಷಣಿಕ ಸಂಘ ಸಂಸ್ಥೆಗಳು ಮಹತ್ವದ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಖಾಸಗಿ ಶಾಲೆಗಳು ಸರಕಾರದೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಪಾಲುಗಾರರಾಗಿದ್ದು, ಸ್ಥಾನಿಕ ಸಂಸ್ಥೆಗಳು ಜನತೆಯ ಶೈಕ್ಷಣಿಕ ಆಶೋತ್ತರಗಳನ್ನು ಪೂರೈಸುವಲ್ಲಿ ಫಲಕಾರಿಗಳಾಗಿವೆ. ನಮ್ಮ ಶೈಕ್ಷಣಿಕ ಸಂಸ್ಥೆಗಳನ್ನು ಈ ಕೆಳಗಿನಂತೆ ಮೂರು ಗುಂಪುಗಳಲ್ಲಿ ವಿಂಗಡಿಸಬಹುದು.

1. **ಸರಕಾರಿ ಸಂಸ್ಥೆಗಳು:** ಸರಕಾರಿ ಸಂಸ್ಥೆಗಳು ಸರಕಾರದಿಂದಲೆ ಸ್ಥಾಪಿಸಲ್ಪಟ್ಟಿದ್ದು, ಅವುಗಳ ಮೇಲ್ವಿಚಾರಣೆಯು/ನಿರ್ವಹಣೆಯು ಸರಕಾರದಿಂದಲೇ ನಡೆಯುತ್ತದೆ. ಈ ಸಂಸ್ಥೆಗಳು ನೇರವಾಗಿ ಸರಕಾರದ ನಿಯಂತ್ರಣದಲ್ಲಿರುತ್ತವೆ. ಸರಕಾರಿ ನಿರ್ವಹಣೆಯಲ್ಲಿ ರಾಜ್ಯ ಸರಕಾರದ ಮತ್ತು ಕೇಂದ್ರ ಸರಕಾರದ ಎರಡು ನಿಯಂತ್ರಣಗಳಿರುತ್ತವೆ. ರಾಜ್ಯ ಸರಕಾರಗಳಿಂದ ನಿರ್ವಹಿಸಲ್ಪಡುವ ಸಂಸ್ಥೆಗಳ ಆಡಳಿತದಲ್ಲಿ ಕೇಂದ್ರ ಸರಕಾರದ ಪಾತ್ರವು ಅತಿ ಕಡಿಮೆಯಾಗಿದ್ದು, ಅಪ್ರತ್ಯಕ್ಷವಾಗಿರುತ್ತದೆ. ಕೇಂದ್ರಾಡಳಿತದ ಪ್ರದೇಶಗಳಲ್ಲಿಯ ಶಾಲೆಗಳ ಮೇಲೆ ನೇರ ನಿಯಂತ್ರಣಗಳನ್ನು ಹೊಂದಿದೆ. ಕೇಂದ್ರೀಯ ವಿದ್ಯಾಲಯಗಳು ಮತ್ತು ನವೋದಯ ವಿದ್ಯಾಲಯಗಳ ಮೇಲೆ ನೇರನಿಯಂತ್ರಣವನ್ನು ಹೊಂದಿದೆ.

2. **ಸ್ಥಾನಿಕ ಸಂಸ್ಥೆಗಳು:** ಸ್ಥಾನಿಕ ಸಂಸ್ಥೆಗಳಲ್ಲಿ ಮುಖ್ಯವಾಗಿ ಗ್ರಾಮ ಪಂಚಾಯತಿ, ಮಂಡಳ ಪಂಚಾಯತಿಗಳು ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ನಿರ್ವಹಿಸುತ್ತವೆ. ಜಿಲ್ಲಾ ಪರಿಷತ್‌ಗಳು ಪ್ರೌಢ ಶಿಕ್ಷಣದ ಜವಾಬ್ದಾರಿಯನ್ನು ನಿರ್ವಹಿಸುತ್ತವೆ. ಕೆಲವು ನಗರ ಸಭೆಗಳು ಶಾಲೆಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಸ್ಥೆಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿವೆ. ಈ ಸಂಸ್ಥೆಗಳು ಹಣಕಾಸಿನ ಸಹಾಯಕ್ಕಾಗಿ ರಾಜ್ಯ ಸರಕಾರವನ್ನೇ ಅವಲಂಬಿಸಿವೆ. ಸ್ಥಾನಿಕ ಸಂಸ್ಥೆಗಳು ಕೆಲವು ಮಾದರಿ ಅಥವಾ ಪ್ರಾಯೋಗಿಕ ಶಾಲೆಗಳನ್ನು ಕೂಡ ತೆರೆದಿವೆ.

ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ಥಾನಿಕ ಸಂಸ್ಥೆಗಳಿಗೆ ಕೆಲವು ನಿಗದಿತ ಕರ್ತವ್ಯಗಳನ್ನು ವಹಿಸುವದು ಸೂಕ್ತ. ಉದಾ: ಯಥೋಚಿತ ಸ್ಥಳದ ಅನುಕೂಲತೆಯನ್ನು ಹಾಗೂ ಉಪಕರಣಗಳನ್ನು ಒದಗಿಸುವುದು, ಶಾಲೆಯ ಕಟ್ಟಡಗಳ ದುರಸ್ತಿಯನ್ನು ನೋಡಿಕೊಳ್ಳುವದು, ಹೊಸ ಕಟ್ಟಡಗಳನ್ನು ಕಟ್ಟಿಸುವುದು, ತಮ್ಮ ಕಾರ್ಯವ್ಯಾಪ್ತಿಯಲ್ಲಿ ಮಕ್ಕಳ ಹಾಜರಾತಿಯನ್ನು ಒತ್ತಾಯಿಸಿ, ಸಂವಿಧಾನಾತ್ಮಕವಾಗಿ ದತ್ತುಕೊಟ್ಟ ಕಡ್ಡಾಯ ಹಾಗೂ ಉಚಿತ ಶಿಕ್ಷಣದ ಕಾರ್ಯಕ್ರಮವು ಯಶಸ್ವಿಯಾಗುವಂತೆ ಪ್ರಯತ್ನಿಸುವುದು. ಈ ಮೇಲಿನ ಕಾರ್ಯಕ್ರಮಗಳು ಅಲ್ಲದೆ ಇತರ ಸೌಲಭ್ಯಗಳಾದ ಮದ್ಯಾಹ್ನದ ಉಪಾಹಾರ, ಸಮವಸ್ತ್ರಗಳ ವಿತರಣೆ/

Digitised by Bharatavani, CIIL

ಉಚಿತ ಪಠ್ಯಪುಸ್ತಕಳ ವಿತರಣೆ, ಲೇಖನಿ ಮತ್ತು ಇತರ ಬರೆಯುವ ವಸ್ತುಗಳನ್ನು ಒದಗಿಸುವುದು ಸ್ಥಾನಿಕ ಸಂಸ್ಥೆಗಳ ಕಾರ್ಯವಾಗಿದೆ.

**ಸ್ಥಾನಿಕ ಸಂಸ್ಥೆಗಳ ಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು:**

1. ಪ್ರಾಥಮಿಕ ಶಾಲೆಗಳಿಗೆ ಸಾಕಾಗುವಷ್ಟು ಸ್ಥಳಾವಕಾಶವನ್ನು, ಉಪಕರಣಗಳನ್ನು ಒದಗಿಸುವುದು. 2. ಸದ್ಯಕ್ಕೆ ಅಗತ್ಯವಾದ ಶಾಲೆಯ ಕಟ್ಟಡಗಳ ದುರಸ್ತಿಕಾರ್ಯವನ್ನು ನಿರ್ವಹಿಸುವುದು, ಹಣಕಾಸಿನ ಮತ್ತು ಇನ್ನಿತರ ಸೌಲಭ್ಯಗಳು ದೊರೆತರೆ ಅಥವಾ ಪರವಾನಗಿ ಸಿಕ್ಕರೆ ವಿಶೇಷ ದುರಸ್ತಿಕಾರ್ಯಗಳನ್ನು ನೋಡಿಕೊಳ್ಳುವದು ಹಾಗೂ ಹೊಸ ಕಟ್ಟಡಗಳನ್ನು ನಿರ್ಮಿಸುವುದು. 3. ವಿಧಿಸಿದ ಅಧಿಕಾರವನ್ನು ಚಲಾಯಿಸಿ ಶಾಲೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು. 4. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲ ಪ್ರಾಥಮಿಕ ಶಾಲೆಗಳ ಮಕ್ಕಳ ಹಾಜರಾತಿಯ ಬಗ್ಗೆ ವಿಶೇಷ ಗಮನ ಹರಿಸಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾರ್ಯಕ್ರಮವು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು. 5. ಶಾಲೆಯ ತೋಟ ಮತ್ತು ಆಟದ ಮೈದಾನಗಳನ್ನು ಒದಗಿಸುವುದು ಹಾಗೂ ಸುಸ್ಥಿತಿಯಲ್ಲಿರಿಸುವುದು. 6. ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಹಾಗೂ ಶಾಲೆಯ ಮಕ್ಕಳಿಗೆ ಅವಶ್ಯವೆನಿಸುವ ಸೌಲಭ್ಯಗಳನ್ನು ಒದಗಿಸುವುದು. ಉದಾ: ಪಾಯಖಾನೆ, ಊಟದ ಕೋಣೆ, ವಿಶೇಷ ಸಂದರ್ಭಗಳಲ್ಲಿ ರೋಗನಿರೋಧಕ ಚುಚ್ಚುಮದ್ದನ್ನು ಹಾಕಿಸುವುದು, ವೈದ್ಯಕೀಯ ತಪಾಸಣೆ. 7. ಎಲ್ಲಿ ಸಾಧ್ಯವೆನಿಸುತ್ತಿದೆಯೋ ಹಾಗೂ ಅಗತ್ಯತೆಯು ಕಂಡುಬರುವುದೋ ಆ ಸಂದರ್ಭಗಳಲ್ಲಿ ಉಚಿತ ಪಠ್ಯಪುಸ್ತಕಗಳ ವಿತರಣೆ, ಸಮವಸ್ತ್ರಗಳನ್ನು ಹಂಚುವುದು, ಮದ್ಯಾಹ್ನದ ಉಪಾಹಾರ ಯೋಜನೆ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. 8. ಶಾಲೆಯ ಕಾರ್ಯಕ್ರಮಗಳಿಗೆ ಆರ್ಥಿಕ ಸಹಾಯವನ್ನು ಒದಗಿಸುವುದು. 9. ಶಾಲೆಯ ಕಾರ್ಯಕ್ರಮಗಳನ್ನು ಆಚರಿಸುವುದು ಅಲ್ಲದೆ ಶಾಲಾ ಪ್ರವಾಸ ಯೋಜನೆಗಳನ್ನು ಹಾಗೂ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಯ ಕಾರ್ಯಕ್ರಮಗಳನ್ನು ಸಂಘಟಿಸುವುದು.

ಈ ಮೇಲಿನ ಜವಾಬ್ದಾರಿಯನ್ನು ಯಾವುದೇ ಸಮಸ್ಯೆಗಳಿರದಂತೆ ಖರ್ಚುಗಳನ್ನು ನಿಭಾಯಿಸಲು ಶಾಲೆಯ ಮಂಡಳಿಯು ಈ ಕೆಳಗಿನ ಸಂಸ್ಥೆಗಳಿಂದ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು: 1. ಸ್ಥಾನಿಕ ಪಂಚಾಯತ ಮಂಡಳಿಯ ಆದಾಯದಲ್ಲಿ ನಿಶ್ಚಿತ ಅನುಪಾತದಲ್ಲಿ ಹಣವನ್ನು ಪಡೆಯುವುದು. 2. ಸಮಾನತೆಯ ತತ್ವವನ್ನೇ ಆಧಾರವಾಗಿಟ್ಟುಕೊಂಡು ಅನುದಾನವನ್ನು ನಿಗದಿಗೊಳಿಸುವುದು. ಅಂದರೆ, ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಪ್ರಮಾಣದ ಅನುದಾನವನ್ನು ಕೊಡುವದು. ಅಲ್ಲದೇ, ಶ್ರೀಮಂತ ಹಾಗೂ ಅಭಿವೃದ್ಧಿ ಹೊಂದಿದ ಕ್ಷೇತ್ರಗಳಿಗೆ ಕಡಿಮೆ ಪ್ರಮಾಣದ ಅನುದಾನವನ್ನು ಕೊಡುವದು. 3. ಸ್ಥಾನಿಕ ಸಂಸ್ಥೆಗಳ ನಿಯಂತ್ರಣದಲ್ಲಿ ಪ್ರಾಥಮಿಕ ಶಿಕ್ಷಣವನ್ನು ವಿಧಿಸುವದನ್ನು ವಿರೋಧಿಸುವ ಅಂಶಗಳು.

ಪ್ರಾಯೋಗಿಕ ಅನುಬಂಧಗಳಿಂದ ಪ್ರಾಥಮಿಕ ಶಿಕ್ಷಣವನ್ನು ಸ್ಥಾನಿಕ ಸಂಸ್ಥೆಗಳ ನಿಯಂತ್ರಣಕ್ಕೆ ಒಪ್ಪಿಸುವುದರಿಂದ ಕಂಡುಬಂದಿರುವ ಇತಿ–ಮಿತಿಗಳು ಈ ಕೆಳಗಿನಂತಿವೆ.

- ಸ್ಥಾನಿಕ ಸಂಸ್ಥೆಗಳು ಮೊದಲೇ ನಿಯಮಿತ ಆರ್ಥಿಕ ಸಂಪನ್ಮೂಲಗಳನ್ನು ಪಡೆದಿವೆ. ಇದರ ಫಲವಾಗಿ, ಶಾಲೆಯ ಪರಿಸ್ಥಿತಿಗಳು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಕೂಲವಾಗಿವೆ.
- ಸ್ಥಾನಿಕ ವಲಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ವೈವಿಧ್ಯಮಯ ಮತ್ತು ಕಠಿಣವಾದ ಸಮಸ್ಯೆಗಳಿಗೆ ಯೋಗ್ಯ ಹಾಗೂ ತೃಪ್ತಿಕರ ಪರಿಹಾರವನ್ನು ಕಂಡುಕೊಳ್ಳುವ ಸಾಕಷ್ಟು ಅನುಭವಿ ಹಾಗೂ ಸಮರ್ಥ ನಾಯಕರ ಕೊರತೆಯಿದೆ.
- ಶಿಕ್ಷಕರ ಅನಾನುಕೂಲಗಳು: 1. ನೇಮಕಾತಿಗಳು ನಿಯಮಾನುಸಾರಿಯಾಗಿರದು, 2. ಹೆಚ್ಚು ವರ್ಗಾವರ್ಗಿಗಳು, 3. ವೇತನದ ಸೌಲಭ್ಯವು ಇನ್ನೂ ಹಳೆಯ ಶ್ರೇಣಿಯಲ್ಲಿಯೆ ಇದೆ, 4. ಶಾಲೆಯ ಅಂತರಿಕ ಕಾರ್ಯಗಳಲ್ಲಿ ಸ್ಥಾನಿಕ ರಾಜಕೀಯವು ತೂರಿಕೊಳ್ಳುತ್ತದೆ.

  ಆದರೆ ಪ್ರಾಥಮಿಕ ಶಿಕ್ಷಣವನ್ನು ಸ್ಥಾನಿಕ ಸಂಸ್ಥೆಗಳು ವಹಿಸುವದು ಸೂಕ್ತ ಎಂಬುದನ್ನು ಬೆಂಬಲಿಸುವ ಕೆಲವು ಅಂಶಗಳು ಈ ಕೆಳಗಿನಂತಿವೆ:
- ಪ್ರಾಥಮಿಕ ಶಿಕ್ಷಣದ ಆಡಳಿತದ ಕಾರ್ಯದೊಂದಿಗೆ ಸಹಚರ್ಯೆಯನ್ನು ಹೊಂದುವುದರಿಂದ ಈ ಉದ್ಯಮದಲ್ಲಿ ಸ್ಥಾನಿಕ ಅಭಿರುಚಿಯು ಉತ್ತೇಜನಗೊಳ್ಳುವುದು ಮತ್ತು ಈ ಉದ್ಯಮವನ್ನು ಸುಸ್ಥಿತಿಯಲ್ಲಿರಿಸಲು ನಿರಾತಂಕವಾದ ಬೆಂಬಲವನ್ನು ಪಡೆದುಕೊಳ್ಳುತ್ತದೆ.
- ಆಡಳಿತಾತ್ಮಕ ಕಾರ್ಯಗಳಲ್ಲಿ ತೀವ್ರ ಹಾಗೂ ತಕ್ಕಷ್ಟು ಸೇವೆಗಳನ್ನು ಪಡೆದುಕೊಳ್ಳಬಹುದು. ಉದಾ: ಶಾಲೆಯ ಕಟ್ಟಡವನ್ನು ಸುವ್ಯವಸ್ಥೆಯಲ್ಲಿರಿಸಲು ಅಗತ್ಯವಾದ ಪೀಠೋಪಕರಣಗಳನ್ನು ಕೊಂಡುಕೊಳ್ಳಲು, ಉಪಕರಣಗಳನ್ನು ವ್ಯವಸ್ಥಿತ ಸ್ಥಿತಿಯಲ್ಲಿಡುವುದಕ್ಕಾಗಿ ಬೇಕಾಗುವ ಸೌಲಭ್ಯಗಳನ್ನು, ಮದ್ಯಾಹ್ನದ ಉಪಾಹಾರ ಯೋಜನೆಯನ್ನು ಪೂರೈಸುವುದಕ್ಕಾಗಿ ಅಗತ್ಯವಾಗಿರುವ ಅಂಶಗಳು, ಉಚಿನ ಪಠ್ಯಪುಸ್ತಕದ ಸರಬರಾಜು, ಅಗತ್ಯವಿರುವ ಮಕ್ಕಳಿಗೆ ಉಚಿತ ಸಮವಸ್ತ್ರಗಳನ್ನು ಒದಗಿಸುವುದು.
- ಶಿಕ್ಷಣದ ಸ್ಥಾನಮಾನವನ್ನು ಉನ್ನತ ದರ್ಜೆಗೆ ಏರಿಸಲು ಪ್ರಬೋಧಿತ ಸ್ಥಾನಿಕ ಸ್ಥಳೀಯ ಮೇಲ್ವಿಚಾರಣೆಯು (enlightened local supervision) ಹೆಚ್ಚು ಕಾಲ ತನ್ನ ಪ್ರಭಾವವನ್ನು ಬೀರುತ್ತದೆ.
- ಸ್ಥಾನಿಕ ಸಂಸ್ಥೆಗಳ ನಿಯಂತ್ರಣದಲ್ಲಿ ಪ್ರಾಥಮಿಕ ಶಾಲೆಗಳು ಇರುವುದರಿಂದ ಯಾವುದೇ ಅಗತ್ಯತೆ, ಸಮಸ್ಯೆಗಳಿಗೆ ಸೂಕ್ತ

Digitised by Bharatavani, CIIL

ಏರ್ಪಾಡುಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ.

- ಸ್ಥಾನಿಕ ಸಂಸ್ಥೆಗಳು ಶಿಕ್ಷಣದತ್ತ ಒಲವನ್ನು ತೋರಿಸುವುದರಿಂದ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಯೋಜನೆಯು ಯಶಸ್ವಿಯಾಗುವಲ್ಲಿ ಸಂದೇಹವಿಲ್ಲ.

**2. ಖಾಸಗಿ ಸಂಘ ಸಂಸ್ಥೆಗಳು:** ಭಾರತೀಯ ಶೈಕ್ಷಣಿಕ ರಂಗದಲ್ಲಿ ಖಾಸಗಿ ಸಂಘ ಸಂಸ್ಥೆಗಳು ಅತಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತವೆ. ಶಿಕ್ಷಣ ರಂಗದ ಅನೇಕ ಹಂತಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಸ್ಥೆಗಳ ನಿರ್ವಹಣೆಯಲ್ಲಿ ಸಲ್ಲಿಸಬೇಕಾದ ಪಾತ್ರವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುತ್ತಿವೆ. ಒಟ್ಟು ಶಾಲೆಯ ಸಂಖ್ಯೆಗಳನ್ನು ಪರಿಗಣಿಸಿದಾಗ ಅವುಗಳಲ್ಲಿ 1/3 ಭಾಗದಷ್ಟು ಶಾಲೆಗಳು ಖಾಸಗಿಯವರಿಂದಲೇ ನಿರ್ವಹಿಸಲ್ಪಟ್ಟವುಗಳಾಗಿದ್ದು, ಪ್ರಾರಂಭದಲ್ಲಿಯೇ ಶೈಕ್ಷಣಿಕ ಆಡಳಿತದ ಭದ್ರ ಬುನಾದಿಯನ್ನು ಹಾಕಿಕೊಟ್ಟಿವೆ. ಸ್ವತಂತ್ರ ಭಾರತದಲ್ಲಿ ಇವು ಎರಡನೆಯ ಸ್ಥಾನವನ್ನು ಪಡೆದುಕೊಂಡಿದ್ದು, ಅವುಗಳನ್ನೆಂದಿಗೂ ಕಡೆಗಣಿಸುವುದು ಸಾಧ್ಯವಿಲ್ಲ.

ಸರಕಾರದಿಂದ ಅನುದಾನದ ಸೌಲಭ್ಯವನ್ನು ಕೆಲವು ಸಂಸ್ಥೆಗಳು ಅಪೇಕ್ಷಿಪಡಬಹುದು, ಕೆಲವು ಅಪೇಕ್ಷಿಪಡದೇ ಇರಬಹುದು; ಆದಾಗ್ಯೂ, ಸಮಯದಿಂದ ಸಮಯಕ್ಕೆ ಬದಲಾವಣೆಗೊಳ್ಳುವ, ರಾಜ್ಯ ಶಿಕ್ಷಣ ಇಲಾಖೆಯಿಂದ ನಿಗದಿಪಡಿಸಲ್ಪಡುವ ನಿಯಮಾವಳಿಗಳನ್ನು, ಕಟ್ಟುಪಾಡುಗಳನ್ನು ತಪ್ಪದೆ ಪಾಲಿಸುತ್ತವೆ. ಸಾರ್ವಜನಿಕ ಪರೀಕ್ಷೆಗಾಗಿ ತಮ್ಮ ಅಭ್ಯರ್ಥಿಗಳನ್ನು ಕಳುಹಿಸಿಕೊಡುವುದಕ್ಕಾಗಿ ಸಂಶಯಪಡದಹಾಗೆ ಸರಕಾರಿ ಇಲಾಖೆಯಿಂದ ಮಾನ್ಯತೆಯನ್ನು ಪಡೆದುಕೊಳ್ಳುತ್ತವೆ. ಸರಕಾರಿ ಇಲಾಖೆಯಿಂದಾಗಲಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದಾಗಲಿ ಯಾವುದೇ ಹಣಕಾಸಿನ ನೆರವು ಪಡೆಯದೆ ಅನೇಕ ಖಾಸಗಿ ಸಂಸ್ಥೆಗಳು ಮಾಧ್ಯಮಿಕ, ಪದವಿ ಪೂರ್ವ ಮಹಾವಿದ್ಯಾಲಯ, ಪದವಿ, ಅಭಿಯಂತರ, ವೈದ್ಯಕೀಯ ಮಹಾವಿದ್ಯಾಲಯಗಳು, ಶಿಕ್ಷಣ ಮಹಾವಿದ್ಯಾಲಯಗಳನ್ನು, ಮತ್ತು ತಾಂತ್ರಿಕ ಮಹಾವಿದ್ಯಾಲಯಗಳನ್ನು ನಿರ್ವಹಿಸುತ್ತಿವೆ.

**3.1 ಖಾಸಗಿ ಶಿಕ್ಷಣ ಸಂಸ್ಥೆಗಳ ವಿಂಗಡನೆ:** ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಾಲ್ಕು ಗುಂಪುಗಳಲ್ಲಿ ವಿಂಗಡಿಸಬಹುದು. 1. ಮಾನ್ಯತೆ ಮತ್ತು ಅನುದಾನವನ್ನು ಪಡೆದ ಸಂಸ್ಥೆಗಳು, 2. ಮಾನ್ಯತೆಯನ್ನು ಪಡೆದ ಆದರೆ ಅನುದಾನರಹಿತ ಸಂಸ್ಥೆಗಳು, 3. ಅನುದಾನ ಮತ್ತು ಮಾನ್ಯತೆಯನ್ನು ಪಡೆಯದ ಸಂಸ್ಥೆಗಳು, 4. ಅನುದಾನ ಪಡೆದ ಮತ್ತು ಮಾನ್ಯತೆಯನ್ನು ಪಡೆಯದ ಸಂಸ್ಥೆಗಳು.

1. **ಮಾನ್ಯತೆ ಮತ್ತು ಅನುದಾನವನ್ನು ಪಡೆದ ಸಂಸ್ಥೆಗಳು:** ಈ ಸಂಸ್ಥೆಗಳು ಸರಕಾರಿ ಶಿಕ್ಷಣ ಇಲಾಖೆಯಿಂದ ಮಾನ್ಯತೆಯನ್ನು ಪಡೆದುದಲ್ಲದೆ, ಅನುದಾನ ಸಂಹಿತೆಯ ನಿಯಮಾವಳಿಗಳ ಪ್ರಕಾರ ಸರಕಾರದಿಂದ ಅನುದಾನವನ್ನು ಪಡೆದುಕೊಳ್ಳುತ್ತವೆ. ಈ ಸಂಸ್ಥೆಗಳು ಸರಕಾರಿ ಸಂಸ್ಥೆಗಳಿಗಿಂತ ಭಿನ್ನವಾಗಿರುತ್ತವೆ. ಏಕೆಂದರೆ ಸರಕಾರಿ ಶಾಲೆಗಳು ಸರಕಾರದಿಂದ ಸ್ಥಾಪಿಸಲ್ಪಟ್ಟಿದ್ದು, ಸರಕಾರಿ ನಿಯಂತ್ರಣದಲ್ಲಿಯೆ ಇದ್ದು, ಸರಕಾರದಿಂದಲೇ ಧನ ಸಹಾಯವನ್ನು ಪಡೆದುಕೊಳ್ಳುತ್ತವೆ. ಮಾನ್ಯತೆ ಮತ್ತು ಅನುದಾನವನ್ನು ಪಡೆದ ಸಂಸ್ಥೆಗಳು ಸರಕಾರದ ಮಿತ ನಿಯಂತ್ರಣದಲ್ಲಿ ಕಾರ್ಯವನ್ನು ನಿರ್ವಹಿಸುತ್ತವೆ.

2. **ಮಾನ್ಯತೆಯನ್ನು ಪಡೆದ ಆದರೆ ಅನುದಾನರಹಿತ ಸಂಸ್ಥೆಗಳು:** ಮಾನ್ಯತೆಯನ್ನು ಪಡೆದ ಆದರೆ ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳು ಸರ್ವ ಸಾಮಾನ್ಯವಾಗಿ ಪ್ರಗತಿಪರ ಆಡಳಿತ ಮಂಡಳಿಗಳಿಂದ ನಿರ್ವಹಿಸಲ್ಪಟ್ಟಿರುತ್ತವೆ. ಈ ಸಂಸ್ಥೆಗಳು ಯಾವುದೇ ಹಣಕಾಸಿನ ನೆರವಿಗಾಗಿ ಸರಕಾರವನ್ನು ಅವಲಂಬಿಸಿರುವುದಿಲ್ಲ. ಅಲ್ಲದೆ ಸರಕಾರದತ್ತ ಯೋಚಿಸುವುದಿಲ್ಲ. ಇವುಗಳು ಹೆಚ್ಚಿನ ದರದಲ್ಲಿ ಹಣವನ್ನು ವಿದ್ಯಾರ್ಥಿಗಳಿಂದ ಪಡೆಯುವುದರಿಂದ ಇವು ಕೇವಲ ಶ್ರೀಮಂತರ ಸೊತ್ತಾಗುತ್ತವೆ.

3. **ಅನುದಾನ ಮತ್ತು ಮಾನ್ಯತೆಯನ್ನು ಪಡೆಯದ ಸಂಸ್ಥೆಗಳು:** ಅನುದಾನ ಮತ್ತು ಮಾನ್ಯತೆಯನ್ನು ಪಡೆಯದ ಸಂಸ್ಥೆಗಳಾವುದೆಂದರೆ, ರಾತ್ರಿ ಶಾಲೆಗಳು ಮತ್ತು ತರಬೇತಿ ನೀಡುವ ಸಂಸ್ಥೆಗಳು. ಈ ರೀತಿಯ ಶಾಲೆಗಳು ವಿದ್ಯಾರ್ಥಿಗಳನ್ನು ಸಾರ್ವಜನಿಕ ಪರೀಕ್ಷೆಗಳಿಗೆ ತರಬೇತಿ ನೀಡಿದರೂ ಅವುಗಳು ಸರಕಾರದ ಯಾವುದೇ ನಿಯಮಾವಳಿಗೆ ಬದ್ಧವಾಗಿರುವುದಿಲ್ಲ.

4. **ಅನುದಾನ ಪಡೆದ ಮತ್ತು ಮಾನ್ಯತೆಯನ್ನು ಪಡೆಯದ ಸಂಸ್ಥೆಗಳು:** ಈ ಸಂಸ್ಥೆಗಳು ಸರಕಾರಿ ಅನುದಾನವನ್ನು ಪಡೆಯುತ್ತಿದ್ದರೂ ಯಾವುದೇ ರೀತಿಯ ಮಾನ್ಯತೆಯನ್ನು ಪಡೆದುಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಇಂತಹ ಸಂಸ್ಥೆಗಳು ಅತಿವಿರಳ.

ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಅನೇಕ ರೀತಿಯಲ್ಲಿ ತಮ್ಮದೆ ಆದ ಕೊಡುಗೆಗಳನ್ನು ಕೊಟ್ಟಿದ್ದರೂ ಸಾಮಾಜಿಕ ತೆಗಳುವಿಕೆಯಿಂದ, ದೋಷಾರೋಪಣೆಗಳಿಂದ ಮುಕ್ತವಾಗಿರುವುದಿಲ್ಲ. ಅವುಗಳ ಮೇಲಿರುವ ಆರೋಪಣೆಗಳೆಂದರೆ ವಾಣಿಜ್ಯೀಕರಣ, ವ್ಯಾಪಾರಿ ಮನೋಭಾವನೆ, ಕೋಮು ಮನೋಭಾವನೆ, ಶಿಕ್ಷಕರನ್ನು ಪೀಡಿಸುವುದು, ಕಿರಿಕುಳ ಕೊಡುವುದು, ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವುದು ಹಾಗೂ ಹಣಕಾಸಿನ ಅವ್ಯವಹಾರ ಇತ್ಯಾದಿ. ಖಾಸಗಿ ಶಿಕ್ಷಣ ಸಂಸ್ಥೆಗಳ ಸುಧಾರಣೆಗಾಗಿ ಭಾರತೀಯ ಶಿಕ್ಷಣ ಆಯೋಗವು (1964–66) ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಿತು:

- ಸರಕಾರವು ಖಾಸಗಿ ಅನುದಾನ ನೀಡಿದ ಶೈಕ್ಷಣಿಕ ಸಂಸ್ಥೆಗಳಿಗೆ ಬೆಂಬಲವಿತ್ತು ಅವುಗಳು ಸಂತೃಪ್ತವಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಕಾರ್ಯನಿರ್ವಹಿಸುವಲ್ಲಿ ಅವುಗಳು ವಿಫಲವಾದರೆ ಅಂಥ ಸಂಸ್ಥೆಗಳನ್ನು ನಿರ್ವಹಿಸಲು ಮುಂದಾಗಬೇಕು, ಅಥವ ಅವನ್ನು ತೆಗೆದುಹಾಕಬೇಕು.
- ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ನಿಯಂತ್ರಣ ಮತ್ತು

Digitised by Bharatavani, CIIL

ಸಹಾಯ ಬೇಡಿಕೆಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ವ್ಯತ್ಯಾಸವಾಗುವ ನೀತಿಯನ್ನು ಜಾರಿಯಲ್ಲಿ ತರಬೇಕು. ಉತ್ತಮ ಶಾಲೆಗಳಿಗೆ ಹೆಚ್ಚಿನ ಸ್ವಾತಂತ್ರವನ್ನು ಮತು ಸಹಾಯವನ್ನು ನೀಡಿ ಅವುಗಳ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುವುದು. ಇದು ಸಾಮಾನ್ಯ ಶಾಲೆಯ ವ್ಯವಸ್ಥೆಗೆ ಮಾದರಿಯಾಗಬೇಕು.

ಈ ಕೆಳಗಿನ ಮಾರ್ಗಗಳನ್ನು ಅನುಸರಿಸಿ ಖಾಸಗಿ ಶಾಲೆಯ ಆಡಳಿತ ಮಂಡಳಿಯನ್ನು ಬಲಪಡಿಸುವುದು ಅವಶ್ಯವಾಗಿದೆ.

1) ಪ್ರತಿಯೊಂದು ಶಾಲೆಗೆ ತಮ್ಮದೇ ಆಡಳಿತ ಮಂಡಳಿಯಿದ್ದು, ಅದು ಆಡಳಿತ ಮಂಡಳಿಯ ಪ್ರತಿನಿಧಿಗಳನ್ನು, ಶಿಕ್ಷಣ ಇಲಾಖೆಯ ಸಿಬ್ಬಂದಿ ಮತ್ತು ಶಿಕ್ಷಕರನ್ನು ಒಳಗೊಂಡಿರಬೇಕು. 2) ಸ್ಥಾನಿಕ ಸಂಸ್ಥೆಯ ಸಿಬ್ಬಂದಿ ಅಥವಾ ಸರಕಾರಿ ಶಾಲೆಯ ಸಿಬ್ಬಂದಿ ಮಾದರಿಯಲ್ಲಿಯ ಈ ಖಾಸಗಿ ಶಾಲೆಯ ಸಿಬ್ಬಂದಿ ವರ್ಗವಿರುವಂತೆ ನೋಡಿಕೊಳ್ಳಬೇಕು. 3) ಅನುದಾನ ಸಂಹಿತೆಯ ನಿಯಮಾವಳಿಗಳನ್ನು ಸುಧಾರಿಸಬೇಕು.

- ಸರಕಾರಿ ಸಹಾಯಕ್ಕೆ ಅರ್ಹತೆಯುಳ್ಳ ಸಂಸ್ಥೆಯೆಂದು ಪರಿಗಣಿಸಬೇಕಾದರೆ ಆ ಶೈಕ್ಷಣಿಕ ಸಂಸ್ಥೆಯನ್ನು ನಿರ್ವಹಿಸುವ ಸಂಸ್ಥೆಯು ಯಾವುದೇ ಲಾಭದ ಆಶೆಯನ್ನು ಹೊಂದಿರದಂತೆ ನೋಡಿಕೊಳ್ಳುವ ವ್ಯತ್ಯಾಸವಾಗದ ನಿಯಮಗಳನ್ನು ಜಾರಿಯಲ್ಲಿ ತರಬೇಕು.
- ಯಾವುದೇ ಶೈಕ್ಷಣಿಕ ಸಂಸ್ಥೆಯ ಆಡಳಿತ ಮಂಡಳಿಯು ಅವಶ್ಯಕತೆಗಳನ್ನು ಪೂರೈಸುವಲ್ಲಿ ಅಸಫಲವಾದರೆ ಅಥವ ನಿರ್ದಿಷ್ಟ ದರ್ಜೆಯ ಮಟ್ಟಕ್ಕೆ ಬರಲು ಶಾಶ್ವತವಾಗಿ ಉದಾಸೀನ ತೋರಿದರೆ ಅಂತಹ ಶೈಕ್ಷಣಿಕ ಸಂಸ್ಥೆಗಳ ಒಡೆತನವನ್ನು ರಾಜ್ಯ ಸರಕಾರದ ಶಿಕ್ಷಣ ಇಲಾಖೆಯು ವಹಿಸಿಕೊಳ್ಳುವಂತೆ ಅನುಕೂಲವಾಗಲು ಅನುದಾನ ಸಂಹಿತೆಯ ನಿಯಮಗಳನ್ನು ತಿದ್ದುಪಡಿ ಮಾಡುವುದು ಅಗತ್ಯವಾಗಿದೆ. ಈ ರೀತಿಯಾಗಿ ಶೈಕ್ಷಣಿಕ ಸಂಸ್ಥೆಗಳು ತಮ್ಮದೇ ಆದ ಉತ್ತರದಾಯಿತ್ವವನ್ನು ಹೊಂದಿದ್ದು ಶಿಕ್ಷಣದ ಪ್ರಗತಿಯಲ್ಲಿ ಈ ಮೂಲಕ ಸಮಾಜದ, ರಾಜ್ಯದ, ರಾಷ್ಟ್ರದ ಅಭಿವೃದ್ಧಿಯಲ್ಲಿ ಅಪಾರ ಕೊಡುಗೆಗಳನ್ನು ನೀಡಿವೆ.

–ರತನ ಭೀ ಚವಾಣ

## ಶೈಕ್ಷಣಿಕ ಸಮ್ಮೇಳನಗಳು

ಪ್ರತಿಯೊಂದು ವೃತ್ತಿಯಲ್ಲಿ ಆ ವೃತ್ತಿ ನಿರತರಿಗೆ ಎರಡು ಉದ್ದೇಶಗಳಿರುತ್ತವೆ. ಒಂದು ಅವರ ವೃತ್ತಿಯ ಬೆಳವಣಿಗೆ (Professional Development) ಅಂದರೆ ಅವರ ವೃತ್ತಿಕ್ಷೇತ್ರಗಳಲ್ಲಿ ಆಗಿರುವ ಜ್ಞಾನದ ಮತ್ತು ಕೌಶಲಗಳ ಬಗ್ಗೆ ತಿಳಿದುಕೊಳ್ಳುವುದು, ಇತ್ತೀಚಿನ ಪ್ರವೃತ್ತಿಗಳನ್ನು ತಿಳಿದುಕೊಳ್ಳುವುದು. ಎರಡನೆಯದಾಗಿ ತಮ್ಮ ವೃತ್ತಿಯಲ್ಲಿ ನೌಕರರಿಗೆ ಹಾಗೂ ಸರ್ಕಾರದ ಮಾನ್ಯತೆ, ಸವಲತ್ತುಗಳ /ಅನುಕೂಲತೆಗಳ ಬಗ್ಗೆ ಚರ್ಚಿಸಿ, ತಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ, ನೌಕರದಾತರಿಗೆ ಮನವರಿಕೆ ಮಾಡಿಕೊಡುವುದು. ಇದಕ್ಕಾಗಿ ವೃತ್ತಿನಿರತರು ಆಗಾಗ್ಗೆ ಒಂದೆಡೆ ಸೇರುತ್ತಾರೆ. ಈ ರೀತಿಯ ಸಮಾವೇಶಗಳನ್ನು ಸಮ್ಮೇಳನ (Conference) ಎಂದು ಹೇಳುತ್ತಾರೆ.

ಶಿಕ್ಷಕ ವೃತ್ತಿಯಲ್ಲಿ ತೊಡಗಿರುವವರೂ ಆಗಾಗ್ಗೆ ಸಭೆ ಸೇರಿ ಮೇಲೆ ತಿಳಿಸಿದ ಎರಡು ಮುಖ್ಯವಾದ ಉದ್ದೇಶಗಳ ಬಗ್ಗೆ ಚರ್ಚಿಸಿ, ವಿಚಾರಗಳ ವಿನಿಮಯ ಮಾಡಿಕೊಂಡು, ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಈ ರೀತಿಯ ಸಮಾವೇಶಗಳೇ **ಶೈಕ್ಷಣಿಕ ಸಮ್ಮೇಳನಗಳು.** ಶೈಕ್ಷಣಿಕ ಸಮ್ಮೇಳನಗಳಂತೆಯೇ ಇನ್ನು ಬೇರೆ ರೀತಿಯ ಸಮಾವೇಶಗಳು ನಡೆಯುತ್ತವೆ. ಇವುಗಳಿಗೆ ವಿಚಾರ ಸಂಕಿರಣ (Seminar), ವಿಚಾರಗೋಷ್ಠಿ (Symposium) ಮತ್ತು ಕಾರ್ಯಗಾರ (Workshop) ಎನ್ನುತ್ತಾರೆ. ಇವುಗಳ ಬಗ್ಗೆ ಈ ವಿಶ್ವಕೋಶದ ಮೊದಲನೆ ಸಂಪುಟದಲ್ಲಿ ವಿವರಿಸಲಾಗಿದೆ. ಸಂಕ್ಷಿಪ್ತವಾಗಿ ವಿಚಾರ ಸಂಕಿರಣ ಒಂದು ವಿಚಾರ ಕೇಂದ್ರಿತವಾಗಿದ್ದು ಅದರಲ್ಲಿ ವಿಚಾರದ ಬಗ್ಗೆ ಲೇಖನಗಳನ್ನು ಮಂಡಿಸಿ ಚರ್ಚಿಸಲಾಗುತ್ತದೆ. ವಿಚಾರಗೋಷ್ಠಿಯಲ್ಲಿ ಒಂದು ಮುಖ್ಯ ವಿಚಾರದ ವಿವಿಧ ಮುಖಗಳ ಬಗ್ಗೆ ಪರಿಣತರು ತಮ್ಮ ನಿಲುವನ್ನು ಮಂಡಿಸಿದ ನಂತರ ಚರ್ಚಿಸಲಾಗುತ್ತದೆ. ಇದೂ ವಿಚಾರ ಕೇಂದ್ರಿತವಾದುದೆ ಕಾರ್ಯಾಗಾರದಲ್ಲಿ ಯಾವುದಾದರೂ ಕೌಶಲದ ಬಗ್ಗೆ ಕಲಿತುಕೊಳ್ಳಲು ಪ್ರಾಯೋಗಿಕ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತದೆ. ಇದರಲ್ಲಿ ಕೌಶಲಗಳ ಕಲಿಕೆ ಪ್ರಧಾನವಾಗಿದ್ದು, ಹೆಚ್ಚಿನ ಸಂಖ್ಯೆಯ ಸದಸ್ಯರು ಪಾಲ್ಗೊಳ್ಳದೆ ಕೆಲವು ಸದಸ್ಯರು ಮಾತ್ರ ಪಾಲ್ಗೊಳ್ಳುತ್ತಾರೆ. ಇದಕ್ಕೆ ವಿರುದ್ಧವಾಗಿ ಸಮ್ಮೇಳನ ವ್ಯಾಪಕ ವ್ಯಾಪ್ತಿಯನ್ನು ಹೊಂದಿದೆ. ವೃತ್ತಿಗೆ ಸಂಬಂಧಿಸಿದ ಜ್ಞಾನದ ಬೆಳವಣಿಗೆ ಮತ್ತು ಸೇವಾ ಸೌಲಭ್ಯಗಳು–ಈ ಎರಡರ ಚರ್ಚೆಯನ್ನು ಒಳಗೊಂಡಿರುತ್ತದೆ. ಸಮ್ಮೇಳನಗಳಲ್ಲಿ ಹೆಚ್ಚಿನ ಸಂಖ್ಯೆಯ ಸದಸ್ಯರು ಪಾಲ್ಗೊಳ್ಳುತ್ತಾರೆ.

ಶೈಕ್ಷಣಿಕ ಸಮ್ಮೇಳನಗಳನ್ನು ಸಾಮಾನ್ಯವಾಗಿ ವೃತ್ತಿ ಸಂಘಟನೆಗಳು (Professional organisation) ಆಯೋಜಿಸುತ್ತವೆ. ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ಶೈಕ್ಷಣಿಕ ಸಮ್ಮೇಳನಗಳನ್ನು ತಮ್ಮ ಪ್ರಮುಖ ಶೈಕ್ಷಣಿಕ ಸಂಸ್ಥೆಗಳ ಉದಾಹರಣೆಗೆ NCERT, UGC, NCTE, DSERT, ವಿಶ್ವವಿದ್ಯಾನಿಲಯಗಳ– ಸಹಕಾರದಿಂದ ಆಯೋಜಿಸಬಹುದು. ಜಾಗತಿಕ ಮಟ್ಟದ ಶೈಕ್ಷಣಿಕ ಸಮ್ಮೇಳನಗಳನ್ನು ಜಾಗತಿಕ ಮಟ್ಟದ ಸಂಸ್ಥೆಗಳು UNESCO, ವಿಶ್ವಬ್ಯಾಂಕ್, UNICEF, SARC ಮುಂತಾದವು– ಜಾಗತಿಕ ಶೈಕ್ಷಣಿಕ ಸಮ್ಮೇಳನಗಳನ್ನು ಏರ್ಪಡಿಸಬಹುದು. ಇಂಥ ಸಮ್ಮೇಳನಗಳಲ್ಲಿ ಪ್ರಪಂಚದ ವಿವಿಧ ದೇಶಗಳಿಂದ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಥಾಯ್ಲೆಂಡಿನ ಜಾಂಟಿಯನ್‌ನಲ್ಲಿ ಎಲ್ಲರಿಗೂ ಶಿಕ್ಷಣದ ಬಗ್ಗೆ 1992ರಲ್ಲಿ ನಡೆದ ವಿಶ್ವಸಮ್ಮೇಳನ, 2002ರಲ್ಲಿ ಸೆನೆಗಲ್‌ನ ಡಾಕರ್ ಎಂಬಲ್ಲಿ ನಡೆದ ಜಾಗತಿಕ ಶೈಕ್ಷಣಿಕ ಸಮಾವೇಶ ಜಾಗತಿಕ ಶೈಕ್ಷಣಿಕ ಸಮ್ಮೇಳನಗಳ ಉದಾಹರಣೆಗಳಾಗಿವೆ.

Digitised by Bharatavani, CIIL

ಶೈಕ್ಷಣಿಕ ಸಮ್ಮೇಳನಗಳು ಸಾವಧಿಕವಾಗಿರುತ್ತವೆ. ವರ್ಷಕ್ಕೊಮ್ಮೆ, ಎರಡು ವರ್ಷಗಳಿಗೆ ಒಮ್ಮೆ ಸಮ್ಮೇಳನಗಳನ್ನು ಸಂಘಟಿಸುವುದು ಸರ್ವೇಸಾಮಾನ್ಯ. ಕೆಲವು ವೇಳೆ ಶಿಕ್ಷಣದ ಬಗ್ಗೆ ಯಾವುದಾದರೂ ಮುಖ್ಯ ನೀತಿ ನಿರೂಪಣೆಯನ್ನು ಚರ್ಚಿಸಬೇಕಾಗಿ ಬಂದರೆ ಅಥವಾ ವೃತ್ತಿ ಬಾಧಕವಾಗಬಹುದಾದ ಸಂದರ್ಭ ಬಂದರೆ ತುರ್ತು ಸೂಚನೆ ನೀಡಿ ಸಮ್ಮೇಳನಗಳನ್ನು ಆಯೋಜಿಸಬಹುದು. ಸಮ್ಮೇಳನಗಳು ಸಾಮಾನ್ಯವಾಗಿ 2 ರಿಂದ 3 ದಿನಗಳು ನಡೆಯುತ್ತವೆ. ಸಂಘಟಿಸುವ ಸಂಸ್ಥೆ ಸಮ್ಮೇಳನದ ಎಲ್ಲಾ ಏರ್ಪಾಡುಗಳನ್ನು ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಕೆಲವು ವೇಳೆ ಆಯೋಜಿಸುವ ಸಂಸ್ಥೆ ಸಮಾಜದ ಶಿಕ್ಷಣಾಸಕ್ತಿಯುಳ್ಳ ಶ್ರೀಮಂತರಿಂದ ಆರ್ಥಿಕ ನೆರವನ್ನು ಪಡೆಯಬಹುದು.

ಶೈಕ್ಷಣಿಕ ಸಮ್ಮೇಳನದ ಆಯೋಜನ ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸುತ್ತದೆ. ಮೊದಲನೆ ದಿನ ಯಾರಾದರೂ ಪ್ರಮುಖ ವ್ಯಕ್ತಿ ಸಮ್ಮೇಳನವನ್ನು ಉದ್ಘಾಟಿಸುತ್ತಾರೆ. ಸದಸ್ಯರು ಮೊದಲು ನೋಂದಣಿ ಮಾಡಿಕೊಳ್ಳುತ್ತಾರೆ. ನಂತರ ಉದ್ಘಾಟನೆ ನಡೆಯುತ್ತದೆ. ಆಹ್ವಾನಿತ ವಿಷಯ ತಜ್ಞರು ಪ್ರಧಾನ ಭಾಷಣ ಮಾಡುತ್ತಾರೆ. ನಂತರ ವಿವಿಧ ಸತ್ರಗಳಲ್ಲಿ (Sessions) ಸದಸ್ಯರು ವಿವಿಧ ವಿಷಯಗಳ ಬಗ್ಗೆ ತಮ್ಮ ಲೇಖನಗಳನ್ನು ಮಂಡಿಸುತ್ತಾರೆ. ಕೆಲವು ವೇಳೆ ಬೋಧನ ಕೌಶಲಗಳ ಬಗ್ಗೆ ಪ್ರಾಯೋಗಿಕ ಅನುಭವವನ್ನು ಒದಗಿಸಲಾಗುತ್ತದೆ. ಆಹ್ವಾನಿತ ತಜ್ಞರಿಂದ ವಿಶೇಷ ಉಪಾನ್ಯಾಸಗಳನ್ನು ಏರ್ಪಡಿಸಬಹುದು. ಎರಡನೆಯ ದಿನವೂ ಇದೇ ಕಾರ್ಯಕ್ರಮವನ್ನು ನಡೆಯುತ್ತವೆ. ಇದಲ್ಲದೆ ಸಮ್ಮೇಳನ ನಡೆಯುವ ಸ್ಥಳಕ್ಕೆ ಸಮೀಪವಿರುವ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಏರ್ಪಡಿಸಬಹುದು, ನೃತ್ಯ ಸಂಗೀತ, ನಾಟಕದಂಥ ಮನರಂಜನೆ ಕಾರ್ಯಕ್ರಮ ಏರ್ಪಡಿಸಬಹುದು. ಲೇಖನ ಪತ್ರಗಳಲ್ಲಿ ಸದಸ್ಯರು ಬೇರೆ ಬೇರೆ ಗುಂಪುಗಳಾಗಿ ಸೇರಿ ಚರ್ಚಿಸುತ್ತಾರೆ. ಅಂತಿಮ ದಿನದಂದು ಎಲ್ಲಾ ಸದಸ್ಯರು ಒಟ್ಟಿಗೆ ಸಮಾವೇಶಗೊಳ್ಳುತ್ತಾರೆ. ಸಮ್ಮೇಳನದಲ್ಲಿ ಅದುವರೆಗೆ ವಿವಿಧ ಸತ್ರಗಳಲ್ಲಿ ಮಂಡಿಸಿದ ಲೇಖನಗಳ ಸಾರಾಂಶವನ್ನು ಪ್ರಸ್ತುತಪಡಿಸಲಾಗುತ್ತದೆ. ನಂತರ ಸಮ್ಮೇಳನದಲ್ಲಿ ಅದುವರೆಗೆ ನಡೆದ ಚರ್ಚೆ, ವಿಚಾರ ವಿನಿಮಯದ ಆಧಾರದ ಮೇಲೆ ನಿರ್ಣಯಗಳನ್ನು ಅಂಗೀಕರಿಸಲಾಗುತ್ತದೆ. ಅಗತ್ಯವಿದ್ದರೆ ನಿರ್ಣಯಗಳನ್ನು ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುತ್ತದೆ. ಇದಾದ ನಂತರ ಆಹ್ವಾನಿತ ಪ್ರಮುಖರು ತಮ್ಮ ಭಾಷಣದೊಂದಿಗೆ ಸಮ್ಮೇಳನವನ್ನು ಸಮಾರೋಪಗೊಳಿಸುತ್ತಾರೆ. ಸದಸ್ಯರು ಒಬ್ಬರನ್ನೊಬ್ಬರು ಬೀಳ್ಕೊಡುವಿಕೆಯೊಂದಿಗೆ ಸಮ್ಮೇಳನ ಮುಕ್ತಾಯವಾಗುತ್ತದೆ. ಸಮ್ಮೇಳನಗಳು ನಡೆದ ನಂತರ ಅದರ ಬಗ್ಗೆ ಒಂದು ವರದಿಯನ್ನು ಪ್ರಕಟಿಸುತ್ತಾರೆ. ಇದರಲ್ಲಿ ಲೇಖನಗಳ ಸಾರಾಂಶ, ಭಾಷಣಗಳ ಸಾರಾಂಶ ಒಳಗೊಂಡಿರುತ್ತದೆ. ಸಮ್ಮೇಳನ ನಡೆಯುವ ದಿನಗಳಲ್ಲಿ ಹಾಜರಾಗುವ ಸದಸ್ಯರಲ್ಲರಿಗೂ ಉಪಹಾರ, ಊಟದ ವ್ಯವಸ್ಥೆ ಮಾಡಲಾಗುತ್ತದೆ.

ಶೈಕ್ಷಣಿಕ ಸಮ್ಮೇಳನಗಳನ್ನು ಶಿಕ್ಷಣದ ವಿವಿಧ ಹಂತಗಳ ಶಿಕ್ಷಕ ಸಂಘಟನೆಗಳು ಆಯೋಜಿಸಬಹುದು. ವಿವಿಧ ಪ್ರಾದೇಶಿಕ ಮಟ್ಟದಲ್ಲಿ ಅಂದರೆ ವಿಶ್ವವಿದ್ಯಾನಿಲಯ, ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಜಾಗತಿಕ ಮಟ್ಟಗಳಲ್ಲಿ ಆಯೋಜಿಸಬಹುದು. ಶಿಕ್ಷಕ ಸಂಘಟನೆಯ ಸದಸ್ಯರು ಸಮ್ಮೇಳನದಲ್ಲಿ ಭಾಗವಹಿಸಬಹುದು. ಸದಸ್ಯರಲ್ಲದವರು ನಿಗದಿತ ಸಮ್ಮೇಳನ ಶುಲ್ಕವನ್ನು ಪಾವತಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಸಮ್ಮೇಳನದಲ್ಲಿ ಭಾಗವಹಿಸಬಹುದು. ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳಿಗೆ ಆಹ್ವಾನಿತ ಸಾರ್ವಜನಿಕರು, ಮಾಧ್ಯಮದವರು ಪಾಲ್ಗೊಳ್ಳುತ್ತಾರೆ.

ಶೈಕ್ಷಣಿಕ ಸಮ್ಮೇಳನಗಳಿಂದ ಅನೇಕ ಪ್ರಯೋಜನಗಳಿವೆ. ಅವುಗಳಲ್ಲಿ ಮುಖ್ಯವಾದವು ಹೀಗಿವೆ.

- ಶಿಕ್ಷಣದ ವಿವಿಧ ಕ್ಷೇತ್ರಗಳ ಜ್ಞಾನದಲ್ಲಿ, ಬೋಧನ ಕೌಶಲಗಳಲ್ಲಿ, ಆಚರಣೆಯ ಪ್ರವೃತ್ತಿಗಳಲ್ಲಿ ಇತ್ತೀಚೆಗೆ ಆಗಿರುವ ಬೆಳವಣಿಗೆಗಳನ್ನು ಬದಲಾವಣೆಗಳನ್ನು ತಿಳಿದುಕೊಳ್ಳಬಹುದು. ಇದು ವೃತ್ತಿ ಬೆಳವಣಿಗೆಗೆ ಸಹಾಯಕವಾಗುತ್ತದೆ.
- ಶಿಕ್ಷಣದಲ್ಲಿನ ಹೊಸ ಹೊಸ ಸಂಶೋಧನೆಗಳ ಬಗ್ಗೆ ತಿಳಿದುಕೊಳ್ಳಬಹುದು.
- ಶಿಕ್ಷಕರು ತಮ್ಮ ಲೇಖನಗಳನ್ನು ಮಂಡಿಸುವುದರ ಮೂಲಕ ತಮ್ಮ ಅಭಿಪ್ರಾಯಗಳನ್ನು, ನವೀನ ಆಚರಣೆಗಳು ವ್ಯಕ್ತಪಡಿಸಬಹುದು.
- ವೃತ್ತಿ ಬಾಂಧವರನ್ನು ಪರಸ್ಪರ ಪರಿಚಯ ಮಾಡಿಕೊಂಡು ವಿಚಾರ ವಿನಿಮಯ ಮಾಡಿಕೊಳ್ಳಬಹುದು.
- ಕೆಲವು ವೇಳೆ ವಿಷಯ ಸಂಶೋಧನ ಪ್ರಬಂಧಗಳ ಮೌಲ್ಯಮಾಪಕ ತಜ್ಞರನ್ನು ಗುರ್ತಿಸಬಹುದು.
- ಶಿಕ್ಷಕ ವೃತ್ತಿಗೆ ಸಂಬಂಧಿಸಿದ ಸೇವಾ ಸವಲತ್ತುಗಳನ್ನು ಉತ್ತಮಪಡಿಸಿಕೊಳ್ಳಬಹುದು.
- ಸಮ್ಮೇಳನ ನಡೆಯುವ ಸ್ಥಳದ ಸಮೀಪದಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಬಹುದು.
- ಹೊಸ ಮೈತ್ರಿಯನ್ನು ಬೆಳೆಸಿಕೊಳ್ಳಬಹುದು.

ಶೈಕ್ಷಣಿಕ ಸಮ್ಮೇಳನಗಳಿಂದ ಇಷ್ಟೆಲ್ಲಾ ಅನುಕೂಲಗಳಿದ್ದರೂ ಅದರಲ್ಲಿ ಕೆಲವು ಮಿತಿಗಳಿವೆ. ಅನೇಕ ವೇಳೆ ಜ್ಞಾನಾರ್ಜನೆಗಿಂತ ಸೇವಾವಶ್ಯಕತೆಗಾಗಿ ನಮೂದಿಸಿಕೊಳ್ಳಲು ಸಮ್ಮೇಳನಗಳಿಗೆ ಹಾಜರಾಗುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಮಂಡಿಸುವ ಲೇಖನಗಳೂ ಕಳಪೆ ಮಟ್ಟದವುಗಳಾಗಿದ್ದು ಹೆಸರಿಸುವುದಕ್ಕೆ ಮಾತ್ರವಾಗಿರುತ್ತವೆ. ಇತ್ತೀಚೆಗೆ ಇಂಟರ್‌ನೆಟ್‌ನಿಂದ ಮಾಹಿತಿಯನ್ನು ಯಥಾವತ್ತಾಗಿ ನಕಲು ಮಾಡಿ ಅಥವಾ ಬೇರೆಯವರು ಬರೆದಿರುವ ಲೇಖನವನ್ನು ಪೂರ್ತಿಯಾಗಿ ಅಥವಾ ಭಾಗಶಃ ನಕಲು ಮಾಡುವ ಕೃತಿಚೌರ್ಯ ಪ್ರವೃತ್ತಿ ಕಂಡುಬರುತ್ತಿದೆ. ಲೇಖನಗಳನ್ನು ಸರಿಯಾಗಿ ಗುಣಮಟ್ಟದ ಮೇಲೆ

Digitised by Bharatavani, CIIL

ಆಯ್ಕೆ ಮಾಡುವುದಿಲ್ಲ. ಕೆಲವು ಸದಸ್ಯರು ಸಮ್ಮೇಳನ ಚರ್ಚೆಗಳಲ್ಲಿ ಕಲಿಯುವ ದೃಷ್ಟಿಯಿಂದ ಸಕ್ರಿಯವಾಗಿ ಭಾಗವಹಿಸುವುದಿಲ್ಲ. ಮೊದಲನೆ ದಿನದ ನಂತರವೆ ಅನೇಕ ಮಂದಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಅಥವಾ ವಸ್ತುಗಳನ್ನು ಕೊಳ್ಳಲು ಹೋಗುವ ಪ್ರವೃತ್ತಿ ಕಂಡು ಬರುತ್ತದೆ. ಲೇಖನಗಳ ಮಂಡನೆಯಾದ ನಂತರ ಅವುಗಳ ಬಗ್ಗೆ ಸಾಕಷ್ಟು ಪ್ರಶ್ನೋತ್ತರ, ಚರ್ಚೆ ನಡೆಯುವುದಿಲ್ಲ. ಸಮ್ಮೇಳನ ಸತ್ರಗಳಲ್ಲಿ ಅನೇಕ ಲೇಖನಗಳ ಸಂಖ್ಯೆ ಹೆಚ್ಚಿನ ಸಂಖ್ಯೆಯ ಲೇಖನಗಳನ್ನು ಸ್ವೀಕರಿಸುವುದರಿಂದ ಹೆಚ್ಚಾಗಿ ಪ್ರಶ್ನೋತ್ತರಕ್ಕೆ/ ಚರ್ಚೆಗೆ ಸಾಕಷ್ಟು ಸಮಯ ದೊರಕುವುದಿಲ್ಲ. ಲೇಖನಗಳ ಮಂಡನೆ ನಾಮಮಾತ್ರಕ್ಕೆ ಆಗುತ್ತದೆ. ಮತ್ತೊಂದು ಮಿತಿ ಎಂದರೆ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳಿಗೆ ಹೆಚ್ಚಿನ ಸಮಯವನ್ನು ವಿನಿಯೋಗಿಸುವುದು ಈ ಎರಡೂ ಸಮಾರಂಭಗಳಿಗೆ ಒಂದು ದಿನ ಕಳೆದುಹೋಗುತ್ತದೆ. ರಾಜಕೀಯ ಹಾಗೂ ಇತರ ಗಣ್ಯರನ್ನು ಆಹ್ವಾನಿಸಿದಾಗ (ಆಹ್ವಾನಿಸುವುದು ತಪ್ಪೇನೂ ಅಲ್ಲ, ಕೆಲವು ವೇಳೆ ಹಾಗೆ ಆಹ್ವಾನಿಸುವುದು ಹಲವಾರು ಕಾರಣಗಳಿಂದಾಗಿ ಅನಿವಾರ್ಯವಾಗಲೂಬಹುದು) ಕೆಲವರು ದೀರ್ಘ ಭಾಷಣದಲ್ಲಿ ತೊಡಗಬಹುದು ಇದರಿಂದ ಕಾಲ ವ್ಯಯವಾಗುತ್ತದೆ.

ಇಷ್ಟೆಲ್ಲಾ ಮಿತಿಗಳಿದ್ದರೂ, ಸಮ್ಮೇಳನಗಳನ್ನು ನಡೆಸಲೇಬೇಕು. ವೃತ್ತಿಬೆಳವಣಿಗೆಗೆ, ವೃತ್ತಿ ಸಂರಕ್ಷಣೆಗೆ ಅದು ಅನಿವಾರ್ಯ ಆದ್ದರಿಂದ ಅದರ ಗುಣಾತ್ಮಕತೆಯನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕು. ಲೇಖನಗಳನ್ನು ಆಹ್ವಾನಿಸುವಾಗ ಲೇಖಕರಿಗೆ ವಿವರವಾದ ಸಲಹೆ, ಸೂಚನೆಗಳನ್ನು ಕೊಡುವುದು ಒಳ್ಳೆಯದು ಬರುವ ಲೇಖನಗಳೆಲ್ಲವನ್ನೂ ಸ್ವೀಕರಿಸುವುದು ಒಳ್ಳೆಯದಲ್ಲ. ಲೇಖನಗಳನ್ನು ಸಂಪಾದಿಸಲು ತಜ್ಞರ ಸಮಿತಿಯೊಂದನ್ನು ನೇಮಿಸಿ ಅವರಿಂದ ಬರುವ ಲೇಖನಗಳನ್ನು ಸಂಪಾದನೆ ಮಾಡಿಸಿ ಕಳಪೆ ಮಟ್ಟದ ಲೇಖನಗಳನ್ನು ತಿರಸ್ಕರಿಸಬೇಕು. ಲೇಖನಗಳಲ್ಲಿ ಕೃತಿಚೌರ್ಯ ಮಾಡಿರುವುದು ಕಂಡುಬಂದಲ್ಲಿ ಅಂಥ ಲೇಖನಗಳನ್ನು ಕಾರಣ ತಿಳಿಸಿ ತಿರಸ್ಕರಿಸಬೇಕು. ಸ್ವೀಕರಿಸುವ ಲೇಖನಗಳಲ್ಲಿ ಮಾಹಿತಿಗೆ, ಭಾಷೆಗೆ ಸಂಬಂಧಿಸಿದಂತೆ ದೋಷಗಳಿದ್ದರೆ ಲೇಖನವನ್ನು ಲೇಖಕರಿಗೆ ಹಿಂದಿರುಗಿಸಿ ಅವುಗಳನ್ನು ಸರಿಪಡಿಸಬೇಕು. ಸಮ್ಮೇಳನದಲ್ಲಿ ಲೇಖನಗಳ ಮಂಡನೆಯಾದಾಗ ವೀಕ್ಷಕರಿಂದ ಅವುಗಳನ್ನು ಲೇಖನದ ವಿಷಯವಸ್ತು, ಶೈಲಿ, ಅದರ ಬಗ್ಗೆ ಆಗುವ ಪ್ರಶ್ನೋತ್ತರ– ಇವುಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿಸಿ ಉತ್ತಮಮಟ್ಟದ ಲೇಖನಗಳಿಗೆ ಬಹುಮಾನ ಕೊಡುವ ವ್ಯವಸ್ಥೆ ಮಾಡುವುದು ಲೇಖನಗಳ ಗುಣಮಟ್ಟವನ್ನು ಹೆಚ್ಚಿಸುವ ಒಂದು ಮಾರ್ಗವಾಗುತ್ತದೆ. ಸದಸ್ಯರು ಲೇಖನ ಮಂಡನೆ ಸತ್ರಗಳಲ್ಲಿ ಹಾಜರಿದ್ದು ಪ್ರಶ್ನೋತ್ತರ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಸದಸ್ಯರು ಸತ್ರಗಳಲ್ಲಿ ಹಾಜರಿರಬೇಕೆಂಬುದನ್ನು ಕಡ್ಡಾಯಗೊಳಿಸಬಹುದು. ಆದರೆ ಪ್ರಬುದ್ಧ ಶಿಕ್ಷಕರಿಗಾಗಿ ಶೈಕ್ಷಣಿಕ ಸಮ್ಮೇಳನ ನಡೆಸುವಾಗ ವಿದ್ಯಾರ್ಥಿಗಳಿಗೆ ಮಾಡಿದಂತೆ ಹಾಜರಿ ಕಡ್ಡಾಯಗೊಳಿಸುವುದನ್ನು ಬಹುಶಃ ಸದಸ್ಯರು ವಿರೋಧಿಸುವ ಸಾಧ್ಯತೆಯೂ ಇದೆ. ಉಪಹಾರ, ಭೋಜನ ವ್ಯವಸ್ಥೆ ಸಮರ್ಪಕವಾಗಬೇಕು ಎಂದು ಬೇರೆಯಾಗಿ ಹೇಳಬೇಕಾಗಿಲ್ಲ ಅದು ಅನಿವಾರ್ಯವಾಗುತ್ತದೆ. ಒಟ್ಟಿನಲ್ಲಿ ಶೈಕ್ಷಣಿಕ ಸಮ್ಮೇಳನಗಳ ಗುಣಮಟ್ಟವನ್ನು ಉತ್ತಮಪಡಿಸುವ ಸಾಧ್ಯತೆಯಿದೆ ಎಂದು ಹೇಳಬಹುದು.

**–ಪ್ರೊ. ಮಂಜುನಾಥಯ್ಯ ಬಿ.ಎಸ್.**

## ಶೈಕ್ಷಣಿಕ ಸಿಬ್ಬಂದಿ

ಒಂದು ಶೈಕ್ಷಣಿಕ ಸಂಸ್ಥೆಯನ್ನು ನಿರ್ವಹಿಸಬೇಕಾದರೆ ಅದಕ್ಕೆ ವಿವಿಧ ರೀತಿಯ ಸಿಬ್ಬಂದಿಯ ಅವಶ್ಯಕವಾಗಿದೆ. ಈ ಸಿಬ್ಬಂದಿ ವರ್ಗವೇ ಶೈಕ್ಷಣಿಕ ಸಿಬ್ಬಂದಿ. ಸಿಬ್ಬಂದಿಗಳಿರದ ಶಾಲೆಗಳನ್ನು ಊಹಿಸುವುದು ಕಷ್ಟಕರ. ಶೈಕ್ಷಣಿಕ ಸಿಬ್ಬಂದಿಗಳಲ್ಲಿ ಎರಡು ವರ್ಗದ ಸಿಬ್ಬಂದಿಗಳನ್ನು ಕಾಣಬಹುದಾಗಿದೆ.

1. ಬೋಧಕ ಸಿಬ್ಬಂದಿ ವರ್ಗ
2. ಬೋಧಕೇತರ ಸಿಬ್ಬಂದಿ ವರ್ಗ

ಬೋಧನೆಯು ಎರಡು ಅಥವಾ ಹೆಚ್ಚು ವ್ಯಕ್ತಿಗಳ ಮಧ್ಯದ ಸಂಪರ್ಕವಾಗಿದೆ. ಈ ಕ್ರಿಯೆಯಲ್ಲಿ ಪ್ರಭುತ್ವವನ್ನು ಹೊಂದಿದ ಶಿಕ್ಷಕ ಕಲಿಯುತ್ತಿರುವ ವಿದ್ಯಾರ್ಥಿಗಳ ವ್ಯಕ್ತಿತ್ವದ ವಿಕಾಸವನ್ನು ಮಾಡುವ ಉದ್ದೇಶವನ್ನು ಹೊಂದಿರುತ್ತಾನೆ. ಯಾವುದೇ ಶಾಲೆಯು ಆಧುನಿಕ ಉಪಕರಣಗಳನ್ನು, ಸೌಲಭ್ಯಗಳನ್ನು ಪಡೆದಿದ್ದರೂ, ಅಲ್ಲಿ ಯೋಗ್ಯ, ಶೈಕ್ಷಣಿಕ ಅರ್ಹತೆ ಇರುವ ಸಿಬ್ಬಂದಿ ಇಲ್ಲದಿದ್ದಲ್ಲಿ ಅಲ್ಲಿನ ಕಾರ್ಯಗಳನ್ನು ದಕ್ಷತೆಯಿಂದಲೂ, ಪರಿಣಾಮಕಾರಿಯಾಗಿಯೂ ನೆರವೇರಿಸುವುದು ಸಾಧ್ಯವಿಲ್ಲ. ಸಂಸ್ಥೆಗೆ ಯೋಗ್ಯ ಸಿಬ್ಬಂದಿಗಳನ್ನು ನೇಮಿಸಿಕೊಳ್ಳದಿದ್ದರೆ ಶಾಲೆಯನ್ನು ಸ್ಥಾಪಿಸಿದ ಘನ ಉದ್ದೇಶಗಳೇ ವಿಫಲವಾಗುತ್ತವೆ.

ಬೋಧನಾ ಪ್ರಕ್ರಿಯೆಯಲ್ಲಿ ಅನೇಕ ಅಂಶಗಳು ಒಳಗೊಂಡಿರುತ್ತವೆ. ಉದಾ: ಲಿಂಗ, ಶೈಕ್ಷಣಿಕ ಮಾಧ್ಯಮ, ಶಿಕ್ಷಕರು, ಕಲಿಕಾರ್ಥಿ, ಬೋಧನಾ ಮಾದರಿಗಳು, ವರ್ಗಕೋಣೆಯ ಪರಿಸರ, ಬೋಧನಾ ಸಾಮಗ್ರಿಗಳು ಇತ್ಯಾದಿ.

**ಬೋಧಕ ಸಿಬ್ಬಂದಿ:**

ಬೋಧನಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯು ಅತ್ಯಂತ ಪ್ರಮುಖವಾದ ಪರಿವರ್ತ್ಯ. ಯಾವುದೇ ಶೈಕ್ಷಣಿಕ ಪ್ರಕ್ರಿಯೆಯು ಸಾಂಗವಾಗಿ ನೆರವೇರಬೇಕಾದರೆ ಕಲಿಯಬೇಕೆಂಬ ವಿದ್ಯಾರ್ಥಿಗಳ ಇಚ್ಛಾ ಶಕ್ತಿಯು ಎಲ್ಲಕ್ಕಿಂತಲೂ ಅಗತ್ಯವಾದ ಪೂರ್ವಾವಶ್ಯಕತೆಯಾಗಿದೆ. ಕಲಿಕೆಯ ಅನುಭವಗಳನ್ನು ಸ್ವೀಕರಿಸುವ ವಿದ್ಯಾರ್ಥಿಯು ಬೋಧನಾ ಕಲಿಕೆಯಲ್ಲಿ ಸಹಕಾರಿಯಾಗದಿದ್ದರೆ ಗ್ರಹಿಸುವ ಸಾಮರ್ಥ್ಯವುಳ್ಳವನಾಗಿರದಿದ್ದರೆ ಇಡೀ ಶೈಕ್ಷಣಿಕ ಪ್ರಕ್ರಿಯೆಯು ಪ್ರಯೋಜನವಿಲ್ಲದಂತಾಗುತ್ತದೆ. ವಿದ್ಯಾರ್ಥಿಗಳು ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ

Digitised by Bharatavani, CIIL

ಮಾಡುವಹೊಣೆಗಾರಿಕೆ ಬೋಧಕ ಸಿಬ್ಬಂದಿಯದು. ಇದಕ್ಕಾಗಿ ಶಿಕ್ಷಕರು ನಿರ್ದಿಷ್ಟ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

**ಬೋಧಕ ಸಿಬ್ಬಂದಿ ಶೈಕ್ಷಣಿಕ ಅರ್ಹತೆಗಳು:**

ಬೋಧನೆಯ ಯೋಗ್ಯತೆ ಹಾಗೂ ಶ್ರೇಷ್ಠತೆಯು ಶಿಕ್ಷಕರ ಯೋಗ್ಯತೆ, ಶ್ರೇಷ್ಠತೆಯನ್ನು ಮತ್ತು ಶಿಕ್ಷಕರ ಶೈಕ್ಷಣಿಕ ಅರ್ಹತೆಗಳನ್ನು ಅವರ ಆಂತರಿಕ ಯೋಗ್ಯತೆ, ಸಾಮರ್ಥ್ಯಗಳು, ವೃತ್ತಿಪರ ಕೌಶಲ್ಯಗಳನ್ನು ಕರಗತ ಮಾಡಿಕೊಂಡಿರುವುದನ್ನು ಅವಲಂಬಿಸಿದೆ. ಶೈಕ್ಷಣಿಕ ಹಂತದಲ್ಲಿ ಮುಂದುವರಿದಂತೆ ಶಿಕ್ಷಕರ ಶೈಕಣಿಕ ಅರ್ಹತೆಗಳಲ್ಲಿಯೂ ಬದಲಾವಣೆಗಳು ಇರಬೇಕಾಗುತ್ತವೆ. ಹೆಚ್ಚಿನ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿದ ಶಿಕ್ಕಕರನ್ನು ಆಯ್ದುಕೊಂಡರೂ ತಪ್ಪೇನಿಲ್ಲ. ಆದರೆ ಶಾಲೆಯ ಹಣಕಾಸು ಸ್ಥಿತಿ ಇಂತಹ ನೇಮಕಾತಿಗೆ ಆಸ್ಪದವನ್ನೀಯುವಂತಿರಬೇಕು. ಶಿಕ್ಷಕರ ವಿವಿಧ ದರ್ಜೆಗಳಿಗೆ ಶೈಕ್ಷಣಿಕ ಅರ್ಹತೆಗಳು ಈ ರೀತಿ ಇವೆ.

**1. ಪೂರ್ವ ಪ್ರಾಥಮಿಕ ಹಂತ:**

ಅ) ಕಡಿಮೆಯೆಂದರೂ ಮ್ಯಾಟ್ರಿಕ್ (ಎಸ್.ಎಸ್.ಎಲ್.ಸಿ) ಪರೀಕ್ಷೆಯಲ್ಲಿ ಪಾಸಾಗಿರಬೇಕು.

ಆ) ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯನ್ನು (ಎನ್.ಟಿ.ಸಿ) ಪಡೆದಿರಬೇಕು.

**2. ಪ್ರಾಥಮಿಕ ಹಂತ:**

ಅ) ಕಡೆಯ ಪಕ್ಷ ಪದವಿಪೂರ್ವ ಶಿಕ್ಷಣವನ್ನು (ಪಿ.ಯು.ಸಿ.) ಮುಗಿಸಿರಬೇಕು.

ಆ) ಶಿಕ್ಷಕರ ತರಬೇತಿಯನ್ನು ಪಡೆದಿರಬೇಕು. (ಟಿ.ಸಿ.ಎಚ್ ಅಥವಾ ಡಿ.ಇಡ್)

**3. ಮಾಧ್ಯಮಿಕ ಹಂತ:**

ಅ) ಮಾಧ್ಯಮಿಕ ಹಂತದಲ್ಲಿ ಬೋಧಿಸಲಾಗುವ ವಿಷಯಗಳನ್ನು ಆಯ್ದುಕೊಂಡು ಕೊನೆಯ ಪಕ್ಷ ಪದವಿಯನ್ನು ಬಿ.ಎಸ್ಸಿ ಅಥವಾ ಬಿ.ಎ., ಅಥವಾ ಎಮ್.ಎಸ್ಸಿ., ಅಥವಾ ಎಂ.ಎ ಪಡೆದುಕೊಂಡಿರಬೇಕು.

ಅ) ಉನ್ನತ ಅಂದರೆ ಸ್ನಾತಕೋತ್ತರ ಪದವಿಯನ್ನು ಪಡೆದಿರುವುದು ಅಪೇಕ್ಷಣೀಯ.

ಇ) ಶಿಕ್ಷಣದಲ್ಲಿ ಬಿ.ಎಡ್. ಪದವಿಯನ್ನು ಪಡೆದುಕೊಂಡಿರಬೇಕು.

ಈ) ಸ್ನಾತಕೋತ್ತರ ಪದವಿಯನ್ನು ಹೊಂದಿದ್ದರೆ ಇನ್ನೂ ಉತ್ತಮ.

**4. ಪಿ.ಯು.ಸಿ./ಉನ್ನತ ಮಾಧ್ಯಮಿಕ ಹಂತ:** ಎಂ.ಎ., ಎಂ.ಎಸ್ಸಿ., ಎಂ.ಕಾಂ., ಎಂ.ಬಿ.ಎ., ದ್ವಿತೀಯ ದರ್ಜೆ ಪದವಿ ಪಡೆದಿರಬೇಕು. ಇತ್ತೀಚೆಗೆ ಕರ್ನಾಟಕ ಸರ್ಕಾರ ಪಿ.ಯು.ಸಿ ಉಪನ್ಯಾಸಕರಾಗಲು ಬಿ.ಎಡ್ ಪದವಿ ಪಡೆಯಬೇಕೆಂಬುದನ್ನು ಕಡ್ಡಾಯವಾಗಿಸಿದೆ.

**5. ಕಾಲೇಜು ಹಂತ:** ಕಾಲೇಜುಗಳಲ್ಲಿ ಉಪನ್ಯಾಸಕರಾಗಿ (ಲೆಕ್ಚರರ್ – ಅಸಿಸ್ಟೆಂಟ್ ಪ್ರೊಫೆಸರ್) ಆಗಿ ನೇಮಕಗೊಳ್ಳಲು ಎಂ.ಎ., ಎಂ.ಎಸ್ಸಿ., ಎಂ.ಕಾಂ., ಎಂ.ಬಿ.ಎ. ನಲ್ಲಿ ಶೇ 55 ರಷ್ಟು ಅಂಕ ಪಡೆದು ತೇರ್ಗಡೆ ಹೊಂದಿರಬೇಕು. ಜೊತೆಗೆ ವಿಶ್ವವಿದ್ಯಾನಿಲಯ ಆಯೋಗ (ಯು.ಜಿ.ಸಿ) ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್.ಇ.ಟಿ)ಯಲ್ಲಿ ತೇರ್ಗಡೆ ಹೊಂದಿರಬೇಕು. ಪಿ.ಎಚ್.ಡಿ. ಪದವಿ ಪಡೆದಿದ್ದರೆ ಒಳ್ಳೆಯದೆ. ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು ಅಗಾಗ್ಗೆ ನಡೆಸುವ ದಿಶಾ ನಿರ್ದೇಶನ ಅಥವಾ ಪುನಶ್ಚೇತನದ ಕೋರ್ಸ್‌ಗಳಿಗೆ ಹಾಜರಾಗಬೇಕು.

**6. ಸ್ನಾತಕೋತ್ತರ ಹಂತ:** ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ವಿಭಾಗಗಳಲ್ಲಿ, ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸುವ ಕಾಲೇಜುಗಳಲ್ಲಿ ಉಪನ್ಯಾಸಕರಾಗಲು ಕಾಲೇಜು ಹಂತಕ್ಕೆ ಉಪನ್ಯಾಸಕರಾಗುವ ಅರ್ಹತೆಗಳೇ ಇವೆ. ಪಿ.ಎಚ್.ಡಿ. ಪದವಿ ಪಡೆದಿರಬೇಕಾದುದು ಕಡ್ಡಾಯ. ಬೋಧನಾನುಭವಕ್ಕೆ ಮಾನ್ಯತೆ ಇದೆ. ಸಂಶೋಧನಾನುಭವ, ಪುಸ್ತಕಗಳ/ಲೇಖನಗಳ ಪ್ರಕಟಣೆ ಅತಿರಿಕ್ತ ಅಗತ್ಯ ಯೋಗ್ಯತೆಗಳಾಗಿವೆ.

**ಶಿಕ್ಷಕರ ವ್ಯಕ್ತಿತ್ವ ಲಕ್ಷಣಗಳು:**

ಶಿಕ್ಷಕರು ಮಕ್ಕಳ ವ್ಯಕ್ತಿತ್ವನ್ನು ರೂಪಿಸುವ ಮತ್ತು ಜೀವನದ ಎಲ್ಲ ಮಾರ್ಗಗಳಲ್ಲಿಯೂ ಅವರಿಗೆ ತರಬೇತಿಯನ್ನು ನೀಡುವ ಜವಾಬ್ದಾರಿಯನ್ನು ಹೊಂದಿರುವುದರಿಂದ ಶಿಕ್ಷಕರು ಕಲಿಕೆಗೆ, ಮೌಲ್ಯಗಳಿಗೆ, ಆದರ್ಶಗಳಿಗೆ ಮಾದರಿಯಾಗಿರಬೇಕು. ಅವುಗಳೆಂದರೆ ಶಿಕ್ಷಕರು ನಿರ್ದಿಷ್ಟ ವ್ಯಕ್ತಿತ್ವ ಲಕ್ಷಣಗಳನ್ನು ಹೊಂದಿರುವುದರ ಜೊತೆಗೆ ವೃತ್ತಿಪರ ದಕ್ಷತೆಗಳನ್ನು, ವೃತ್ತಿಯ ಬಗ್ಗೆ ನಿರ್ದಿಷ್ಟ ಮನೋಭಾವ, ಒಲವುಗಳನ್ನು ಹೊಂದಿರಬೇಕಾಗುತ್ತದೆ.

**ಈ ಕೆಳಕಂಡ ವ್ಯಕ್ತಿತ್ವ ಲಕ್ಷಣಗಳೂ ಅಪೇಕ್ಷಣೀಯ:**

1. ಉತ್ತಮ ದೈಹಿಕ ಲಕ್ಷಣಗಳು ಇರಬೇಕಾಗುತ್ತದೆ.
2. ಸ್ವಯಂ ವಿಶ್ಲೇಷಣೆಯು ಶಿಕ್ಷಕರಾದವರ ವ್ಯಕ್ತಿತ್ವದ ಒಂದು ಪ್ರಮುಖ ಅಂಶ.
3. ಶಿಕ್ಷಕ ಸಂಘಜೀವಿಯಾಗಿರಬೇಕು.
4. ಉತ್ತಮ ಮಾನಸಿಕ ಮತ್ತು ದೈಹಿಕ ಆರೋಗ್ಯ ಹೊಂದಿರಬೇಕು.
5. ಸಂತುಷ್ಟತೆ ಮತ್ತು ಆತ್ಮಾಭಿಮಾನವನ್ನು ಹೊಂದಿದವನಾ ಗಿರಬೇಕು.
6. ಶಿಕ್ಷಕರಾದವರು ಉತ್ತಮ ಮೌಲ್ಯಗಳನ್ನು, ಆಸಕ್ತಿಗಳನ್ನು ಹೊಂದಿರಬೇಕು.
7. ಶಿಕ್ಷಕರು ಸಹಕಾರ ಮತ್ತು ಕಠಿಣ ಪರಿಶ್ರಮದ ಪ್ರವೃತ್ತಿಗಳನ್ನು ಹೊಂದಿರಬೇಕು.

Digitised by Bharatavani, CIIL

8. ಒಳ್ಳೆಯ ಭಾಷಾ ಸಾಮರ್ಥ್ಯ, ಸಂವಹನ ಕೌಶಲಗಳನ್ನು ಹೊಂದಿರಬೇಕು. ಸ್ಪಷ್ಟವಾದ ಧ್ವನಿ ಶಿಕ್ಷಕರ ಒಂದು ಉತ್ತಮ ಗುಣ.

**ವೃತ್ತಿಗೆ ಸಂಬಂಧಿಸಿದ ಅಂಶಗಳು:**

- ಶಾಲೆಯ ಬಗ್ಗೆ ಸದಾ ನಿಷ್ಠೆಯುಳ್ಳವನಾಗಿರಬೇಕು.
- ಸದಾ ಹಸನ್ಮುಖಿಯಾಗಿರಬೇಕು ಮತ್ತು ಎಲ್ಲರೊಂದಿಗೂ ವಿನಯದಿಂದ ವರ್ತಿಸಬೇಕು.
- ತನ್ನ ವಿದ್ಯಾರ್ಥಿಗಳಿಂದ ಬರುವ ಅಭಿಪ್ರಾಯಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬೇಕು ಮತ್ತು ವರ್ಗಕೋಣೆಯಲ್ಲಿ ಪ್ರಜಾಸತ್ತಾತ್ಮಕ ವಾತಾವರಣವನ್ನು ನಿರ್ಮಾಣ ಮಾಡಿ ಸ್ವತಂತ್ರ ಚರ್ಚೆಗೆ ಆಸ್ಪದವನ್ನುಂಟು ಮಾಡಿಕೊಡಬೇಕು.
- ಮಾತು ಕಡಿಮೆ ಕೃತಿ ಹೆಚ್ಚು ಎಂಬ ತತ್ವ ಪಾಲನೆಯು ಶಿಕ್ಷಕನದಾಗಿರಬೇಕು.
- ಸ್ವಾವಲಂಬಿ ಮತ್ತು ಸ್ವಯಂ ಮಾರ್ಗದರ್ಶಿಯಾಗಿರಬೇಕು.
- ಶಿಕ್ಷಕನು ಸದಾ ಉತ್ಸಾಹಿಯಾಗಿರಬೇಕು.
- ಮಕ್ಕಳ ಅಭ್ಯಾಸ, ವಿಷಯ ಮತ್ತು ಬೋಧನಾ ವಿಧಾನ ಅರಿತವನಾಗಿರಬೇಕು.
- ಮಕ್ಕಳ ಮನೋವಿಜ್ಞಾನ ಮತ್ತು ಬೋಧನಾ ವಿಧಾನಗಳ ಜ್ಞಾನ ಹೊಂದಿರಬೇಕು.
- ವೃತ್ತಿಗಾಗಿ ಸಮರ್ಪಣಾ ಮನೋಭಾವನೆ ಇರಬೇಕು.
- ನಿಜವಾದ ಶಿಕ್ಷಕನು ಸದಾ ವಿದ್ಯಾರ್ಥಿಯಾಗಿದ್ದು ನಿರಂತರವಾಗಿ ಕಲಿಯುತ್ತಿರಬೇಕು.
- ಹೊಸ ವಿಧಾನಗಳೊಂದಿಗೆ, ತಂತ್ರಗಳೊಂದಿಗೆ ಪ್ರಯೋಗಗಳನ್ನು ಕೈಗೊಳ್ಳಬೇಕು.
- ಸೃಜನಾತ್ಮಕ ಶಕ್ತಿ ಮತ್ತು ಸ್ವತಂತ್ರವಾಗಿ ಆಲೋಚಿಸುವ ಶಕ್ತಿ ಹೊಂದಿರಬೇಕು.
- ಪ್ರಚಲಿತ ಘಟನೆಗಳ ಬಗ್ಗೆ ಜ್ಞಾನವಿರಬೇಕು.
- ಶಿಕ್ಷಕರಿಗೆ ಬೋಧನೆಯು ಕೇವಲ ಕಾನೂನು ಬದ್ಧ ಅಧಿಕಾರವಾಗಿರಬಾರದು. ಅದು ಅವರ ನೈತಿಕ ಹಕ್ಕಾಗಿರಬೇಕು. ನಿಜವಾದ ಶಿಕ್ಷಕನಿಗೆ ಬೋಧನೆಯು ಕೇವಲ ಹಣವನ್ನು ಗಳಿಸುವ ಸಾಧನವಾಗಿರಬಾರದು.

**ಶಿಕ್ಷಕರ ಪಾತ್ರ:** ಇಂದಿನ ಆಧುನಿಕ ಸಮಾಜದಲ್ಲಿ ಶಿಕ್ಷಕರು ಅನೇಕ ವಿಧದ ಪಾತ್ರಗಳನ್ನು ನಿರ್ವಹಿಸಬೇಕಾಗಿದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

1. ಶಿಕ್ಷಕನು ಕ್ರಿಯಾತ್ಮಕ ಸಂಶೋಧಕನಂತೆ
2. ಶಿಕ್ಷಕನು ಶೈಕ್ಷಣಿಕ ತತ್ವಜ್ಞಾನಿಯಂತೆ
3. ಶಿಕ್ಷಕನು ಶೈಕ್ಷಣಿಕ ಮನೋವಿಜ್ಞಾನಿಯಂತೆ
4. ಶಿಕ್ಷಕನು ಶೈಕ್ಷಣಿಕ ಸಮಾಜ ತಜ್ಞನಂತೆ
5. ಶಿಕ್ಷಕನು ಸಂಖ್ಯಾಶಾಸ್ತ್ರಜ್ಞನಂತೆ
6. ಶಿಕ್ಷಕನು ಅರ್ಥಶಾಸ್ತ್ರಜ್ಞನಂತೆ
7. ಶಿಕ್ಷಕನು ಸಾಮಾಜಿಕ ಅಭಿಯಂತರನಂತೆ
8. ಶಿಕ್ಷಕನು ಸಮಾಜ ಸೇವಕನಂತೆ
9. ಶಿಕ್ಷಕನು ಮಾರ್ಗದರ್ಶಿಯೂ ಮತ್ತು ಮಿತ್ರನಂತೆ
10. ಶಿಕ್ಷಕನು ರಾಷ್ಟ್ರಶಿಲ್ಪಿಯಂತೆ
11. ಶಿಕ್ಷಕನು ವ್ಯವಸ್ಥಾಪಕನಂತೆ

**ಬೋಧಕೇತರ ಸಿಬ್ಬಂದಿ:**

ಬೋಧಕೇತರ ಸಿಬ್ಬಂದಿಯು ಈ ಕೆಳಗಿನ ನೌಕರ ವರ್ಗದವರನ್ನು ಒಳಗೊಂಡಿರುತ್ತದೆ.

1. ಗುಮಾಸ್ತರು
2. ಮೇಲ್ವಿಚಾರಕರು
3. ಬೆರಳಚ್ಚುಗಾರ
4. ಗ್ರಂಥಪಾಲಕರು
5. ಲೆಕ್ಕ ಪರೀಕ್ಷಕರು
6. ಸೇವಕರು
7. ಕಾವಲುಗಾರ
8. ಸ್ವಚ್ಛತಾ ಸಿಬ್ಬಂದಿ

**ಬೋಧಕೇತರ ಸಿಬ್ಬಂದಿಯ ಕಾರ್ಯಗಳು:**

ಬೋಧಕೇತರ ಸಿಬ್ಬಂದಿಯ ಕಾರ್ಯಗಳು ಭಿನ್ನವಾದವುಗಳಾಗಿದ್ದು ಅವರವರ ದರ್ಜೆಗೆ ಸಂಬಂಧಿಸಿದಂತೆ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವುಗಳೆಂದರೆ:

1. ಲೆಕ್ಕ ಪತ್ರವನ್ನಿಡುವುದು
2. ದಾಖಲಾತಿಗಳನ್ನು ಮತ್ತು ದಾಖಲೆ ಪುಸ್ತಕಗಳನ್ನು ಕಾಪಾಡುವುದು.
3. ದಂಡದ ಹಣ ಮತ್ತು ಶುಲ್ಕವನ್ನು ಸಂಗ್ರಹಿಸುವುದು.
4. ವಿದ್ಯಾರ್ಥಿ ವೇತನ ಮತ್ತು ಸಿಬ್ಬಂದಿ ವೇತನಗಳನ್ನು ವಿತರಿಸುವುದು.
5. ವೈಯಕ್ತಿಕ ದಾಖಲೆಗಳನ್ನು ನೀಡುವುದು.
6. ಸಂಸ್ಥೆಯ ಸಾಮಾನ್ಯ ಸ್ಥಿತಿಯನ್ನು ಕಾಪಾಡಿಕೊಳ್ಳುವುದು/

Digitised by Bharatavani, CIIL

ಹಾಗೂ ಸಂಸ್ಥೆಯು ಎಲ್ಲ ವಿಧಗಳಲ್ಲೂ ಮಾದರಿಯಾಗುವಂತೆ ಮಾಡುವುದು.

7. ಶಾಲೆಯ ಕಛೇರಿಯ ವ್ಯವಹಾರವೆಲ್ಲವು ಸುಗಮವಾಗಿ ಸಾಗಲು ಮುಖ್ಯೋಪಾಧ್ಯಾಯರಿಗೆ ಸಹಾಯವನ್ನು ಮಾಡುವುದು.

**ಸಿಬ್ಬಂದಿ ಸಭೆಗಳು:**

ಶಾಲೆಯು ದಕ್ಷ ರೀತಿಯಿಂದ ತನ್ನ ಕಾರ್ಯವನ್ನು ನಿರ್ವಹಿಸಬೇಕಾದರೆ ಶಾಲೆಯ ಎಲ್ಲ ಸಿಬ್ಬಂದಿ ವರ್ಗವು ಉದ್ದೇಶಿಸಿದ ಸಮಯದಲ್ಲಿ ತಮ್ಮ ಅನುಭವಗಳನ್ನು ಚರ್ಚಿಸಲು ಮತ್ತು ಜವಾಬ್ದಾರಿಯ ತಮ್ಮ ಕಾರ್ಯ ಏನು ಎಂಬುದನ್ನು ತಿಳಿದುಕೊಳ್ಳಲು ಸಿಬ್ಬಂದಿ ಸಭೆ ಸೇರಬೇಕಾಗುತ್ತದೆ. ಮುಖ್ಯೋಪಾಧ್ಯಾಯರು ಈ ಸಭೆಯಲ್ಲಿ ಅಧ್ಯಕ್ಷ ಸ್ಥಾನವನ್ನು ವಹಿಸಿರುತ್ತಾರೆ.

ಸಿಬ್ಬಂದಿ ಸಭೆಯಲ್ಲಿ ಶಿಕ್ಷಕರ ಮತ್ತು ಮುಖ್ಯೋಪಾಧ್ಯಾಯರ ಕರ್ತವ್ಯಗಳೇನು ಎಂಬ ಪ್ರಶ್ನೆಗೆ ಬಿಗ್ಸ್ ಅವರು ಈ ಕೆಳಗಿನ ಸಲಹೆಗಳನ್ನು ಕೊಡುತ್ತಾರೆ.

1. ಅವರ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಹಾಯ ಮಾಡುವುದು.
2. ಶಿಕ್ಷಣದ ಬಗ್ಗೆ ವಿಶಾಲ ನೋಟವನ್ನು ತಾಳುವುದು
3. ಸಭೆಯು ಸಂತೋಷದಾಯಕವು ಮತ್ತು ಹಿತಕರವಾಗಿಯೂ ಇರಬೇಕು.

**ಸಿಬ್ಬಂದಿ ಸಭೆಯ ಉದ್ದೇಶಗಳು:**

1. ಶಾಲೆಯ ಸಾಮಾನ್ಯ ಪ್ರಗತಿಯನ್ನು ಚರ್ಚಿಸುವುದು
2. ಪ್ರವೇಶ ನೀತಿಯನ್ನು ಚರ್ಚಿಸುವುದು.
3. ಪಠ್ಯ ವಿಷಯಗಳನ್ನು ಶಿಕ್ಷಕರಿಗೆ ಹಂಚುವುದು
4. ಪರೀಕ್ಷೆಗಳನ್ನು ನಡೆಸುವುದು ಮತ್ತು ಮೌಲ್ಯಮಾಪನ ಮಾಡುವುದು.
5. ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸುವುದು.
6. ಬೋಧನಾ ಕಾರ್ಯವನ್ನು ಬೋಧಕ ಸಿಬ್ಬಂದಿಗಳೊಂದಿಗೆ ಚರ್ಚಿಸುವುದು.
7. ಪಠ್ಯೇತರ ಚಟುವಟಿಕೆಗಳನ್ನು ಸಂಘಟಿಸುವುದು.
8. ವೇಳಾ ಪತ್ರಿಕೆಯನ್ನು ರಚಿಸುವುದು.
9. ಸಂಸ್ಥೆಯ ಅಭಿವೃದ್ಧಿಗೆ ಹೊಸ ಯೋಜನೆಗಳನ್ನು ರೂಪಿಸಿ, ಕೈಗೊಳ್ಳುವುದು.
10. ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಶಿಸ್ತಿನ ಬಗ್ಗೆ ಚರ್ಚಿಸುವುದು.
11. ಸಿಬ್ಬಂದಿಗಳ ಮಧ್ಯೆ ಉದ್ಭವಿಸುವ ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವುದು.
12. ಸಿಬ್ಬಂದಿಗಳ ಸ್ವಾಗತ ಮತ್ತು ಬೀಳ್ಕೊಡುಗೆ ಸಮಾರಂಭವನ್ನೇರ್ಪಡಿಸುವುದು.
13. ಸಂಸ್ಥೆಯಲ್ಲಿ ವಾರ್ಷಿಕೋತ್ಸವವನ್ನು, ದಿನಾಚರಣೆಗಳನ್ನು ಆಚರಿಸುವುದು.
14. ವಿಚಾರ ವಿನಿಮಯ ಮಾಡಿಕೊಳ್ಳುವುದು.
15. ಶಿಕ್ಷಕ–ಪೋಷಕ ಸಭೆಗಳನ್ನು ಆಯೋಜಿಸುವುದು.
16. ಸಮುದಾಯ ಸಂಬಂಧಗಳ ಬಗ್ಗೆ ಚರ್ಚಿಸುವುದು.

**ಸಿಬ್ಬಂದಿ ನಿರ್ವಹಣೆಯಲ್ಲಿ ಸಂಸ್ಥೆಯ ಮುಖ್ಯಸ್ಥರ ಪಾತ್ರ:**

ಶೈಕ್ಷಣಿಕ ಸಂಸ್ಥೆಗಳಲ್ಲಿ ಅವು ಶಾಲೆಗಳಾಗಿರಲಿ ಅಥವಾ ಕಾಲೇಜು/ವಿಶ್ವವಿದ್ಯಾನಿಲಯಗಳ ವಿಭಾಗಗಳಾಗಿರಲಿ ಸಂಸ್ಥೆಯ ಸಿಬ್ಬಂದಿಯ – ಬೋಧಕ ಹಾಗೂ ಬೋಧಕೇತರ ನಿರ್ವಹಣೆಯಲ್ಲಿ ಸಂಸ್ಥೆಯ ಮುಖ್ಯಸ್ಥರು (ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು) ಬಹುಮುಖ್ಯ ಪಾತ್ರ ವಹಿಸಬೇಕಾಗುತ್ತದೆ. ಇವರ ಪಾತ್ರದ ಮುಖ್ಯ ಅಂಶಗಳನ್ನು ಹೀಗೆ ನಿರೂಪಿಸಬಹುದು.

- ಎಲ್ಲಾ ಸಿಬ್ಬಂದಿಯೊಡನೆ ಸೌಹಾರ್ದಯುತ ಸಾಮಾಜಿಕ ಸಂಬಂಧಗಳನ್ನು ಇಟ್ಟುಕೊಳ್ಳಬೇಕು.
- ಸಿಬ್ಬಂದಿ ವರ್ಗದರೊಡನೆ ಸ್ನೇಹಪೂರ್ಣವಾಗಿ ವರ್ತಿಸಬೇಕು.
- ಯಾರಲ್ಲಾದರೂ ತಪ್ಪು ಕಂಡುಬಂದಲ್ಲಿ ಅದನ್ನು ಸೌಹಾರ್ದಯುತವಾಗಿ ಆದರೆ ಕಟುವಾಗಿ ತಿಳಿಯ ಹೇಳಿ ತಿದ್ದಬೇಕು.
- ಕಾರ್ಯಗಳ ಹಂಚಿಕೆಯಲ್ಲಿ ಯಾವುದೇ ಮನೋಭಾವ ತೋರಿಸದೆ ಪ್ರಜಾಸತ್ತಾತ್ಮಕವಾಗಿ ನಡೆದುಕೊಳ್ಳಬೇಕು.
- ಸಿಬ್ಬಂದಿ ವರ್ಗದವರ ಕುಂದುಕೊರತೆಗಳನ್ನು ಪರಿಹರಿಸಲು ಶಕ್ತಿ ಮೀರಿ ಪ್ರಯತ್ನಿಸಬೇಕು.
- ಶಿಕ್ಷಕರ ವೃತ್ತಿ ಬೆಳವಣಿಗೆಗೆ ಸಾಕಷ್ಟು ಅವಕಾಶಗಳನ್ನು ಒದಗಿಸಬೇಕು.
- ಸಿಬ್ಬಂದಿ ವರ್ಗದವರಲ್ಲಿ ಯಾವುದೇ ಕಾರಣದಿಂದ ಘರ್ಷಣೆಗಳು ಉಂಟಾದಾಗ ಅವುಗಳನ್ನು ಸುಖಾಂತ್ಯವಾಗುವಂತೆ ಪರಿಹರಿಸಬೇಕು.
- ಸಿಬ್ಬಂದಿಗೆ ದೊರಕಬೇಕಾದ ಸೇವಾ ಸವಲತ್ತುಗಳು ಸರಿಯಾಗಿ ದೊರಕುವಂತೆ ನೋಡಿಕೊಳ್ಳಬೇಕು.
- ಶಿಕ್ಷಕರಲ್ಲಿರಬಹುದಾದ ಸಾಮರ್ಥ್ಯಗಳನ್ನು ಸೃಜನಶೀಲತೆಯನ್ನು ಗುರ್ತಿಸಿ, ಪ್ರೋತ್ಸಾಹಿಸಬೇಕು.
- ಸಿಬ್ಬಂದಿ ವರ್ಗದವರಲ್ಲಿ ಸಂಸ್ಥೆಯ ಬಗ್ಗೆ, ವೃತ್ತಿಯ ಬಗ್ಗೆ ಬದ್ಧತೆ ಮತ್ತು ಪ್ರಾಮಾಣಿಕ ಪ್ರಯತ್ನಶೀಲತೆಯನ್ನು ಬೆಳೆಸಬೇಕು.

–ಡಾ. ಶೈಲಜ ಎಚ್.ಎಂ.

Digitised by Bharatavani, CIIL

## ಶೈಶವಾವಸ್ಥೆಯಲ್ಲಿನ ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ

ಒಬ್ಬ ವ್ಯಕ್ತಿಯು ತಾನು ಹುಟ್ಟಿದ ಮತ್ತು ಬೆಳೆದ ಸಂಸ್ಕೃತಿಯ ವರ್ತನೆಗಳ ನಿಯಮಗಳನ್ನು ಕಲಿಯುವುದನ್ನು ಸಾಮಾಜೀಕರಣವೆನ್ನುತ್ತಾರೆ. ಇತರರೊಂದಿಗೆ ಬದುಕಲು ಶಿಶು ಯಾವ ವರ್ತನೆಯನ್ನು ಒಪ್ಪಿಕೊಳ್ಳುವುದು ಮತ್ತು ಯಾವ ವರ್ತನೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ ಎಂದು ತಿಳಿದುಕೊಳ್ಳುವುದನ್ನು ಕಲಿಯುವುದು. ಸಮಾಜದಲ್ಲಿ ಸ್ಪಷ್ಟವಾದ ಮತ್ತು ಅನಿವಾರ್ಯವಾದ ಕೆಲವು ನಿಯಮಗಳಿರುತ್ತವೆ. ಇವುಗಳು ವೈಯಕ್ತಿಕ ನಿರ್ಧಾರಕ್ಕೆ ಅವಕಾಶ ನೀಡುತ್ತವೆ ಅಲ್ಲದೇ ಕೆಲವೊಂದು ನಿಯಮಗಳು ಸಮಯದಿಂದ ಸಮಯಕ್ಕೆ ಬದಲಾಗುತ್ತಿರುತ್ತವೆ. ಜನ್ಮದಿಂದ 2 ರಿಂದ 2½ ವರ್ಷದ ಅವಧಿ ಶೈಶವಾವಸ್ಥೆಯ ಅವಧಿಯಾಗಿದೆ. ಈ ಅವಧಿಯ ಶಿಶುವಿನ ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸದಲ್ಲಿ ಮಹತ್ವಪೂರ್ವ ಬದಲಾವಣೆಗಳು ಕಂಡುಬರುತ್ತವೆ.

**ಸಾಮಾಜಿಕ ವಿಕಾಸ:** ಸಾಮಾಜೀಕರಣವೆಂದರೆ ತನ್ನೊಂದಿಗೆ ಮತ್ತು ಇತರರೊಂದಿಗೆ ಬದುಕಲು ಕಲಿಯುವುದು. ಶಿಶು ಸಾಮಾಜೀಕರಣದಿಂದ ತನ್ನ ಪೋಷಕರು, ಮತ್ತು ಸುತ್ತಮುತ್ತಲಿನ ಇತರ ವ್ಯಕ್ತಿಗಳೊಂದಿಗಿನ ತನ್ನ ಸಂಬಂಧದ ಮೂಲಕ ತನ್ನ ಸಂವೇಗಗಳನ್ನು ವ್ಯಕ್ತಪಡಿಸುವುದನ್ನು ಮತ್ತು ಸಂವೇಗಗಳ ಅರ್ಥೈಸುವಿಕೆಯನ್ನು ಕಲಿಯುವುದು. ಮಕ್ಕಳು ತಮ್ಮ ಪೋಷಕರೊಂದಿಗೆ ಬಾಂಧವ್ಯವನ್ನು ಸೃಷ್ಟಿಸಿಕೊಳ್ಳುವುದು ಶೈಶವಾವಸ್ಥೆಯಲ್ಲಿನ ಆರೋಗ್ಯಪೂರ್ಣ ಸಾಮಾಜಿಕ ಬೆಳವಣಿಗೆಯಾಗಿದೆ. ಎರಿಕ್ ಎರಿಕ್‌ಸನ್ನರ ಪ್ರಕಾರ ಹುಟ್ಟಿನಿಂದ 12 ತಿಂಗಳುಗಳವರೆಗೆ ಶಿಶು ತನ್ನನ್ನು ನೋಡಿಕೊಳ್ಳುವವರು ತನ್ನನ್ನು ಪ್ರೀತಿಯಿಂದ ಕಾಣುತ್ತಿದ್ದರೆ ಮತ್ತು ಆರೈಕೆ ಮಾಡುತ್ತಿದ್ದರೆ ಅವರ ಬಗೆಗೆ ಶಿಶು ಪ್ರೀತಿ ಮತ್ತು ಮೂಲಭೂತ ನಂಬಿಕೆಯನ್ನು ಬೆಳೆಸಿಕೊಳ್ಳುತ್ತದೆ. ಒಂದು ವೇಳೆ ಶಿಶುವಿಗೆ ಸರಿಯಾದ ಪ್ರೀತಿ ಮತ್ತು ಆರೈಕೆ ಸಿಗದಿದ್ದರೆ ಅದು ಮೂಲಭೂತವಾಗಿ ಅಪನಂಬಿಕೆಯನ್ನು ಬೆಳೆಸಿಕೊಳ್ಳುತ್ತದೆ.

**ಬಂಧನ ಪೂರ್ವ ಹಂತ:** ಬೌಲ್ಬಿಯವರ ಬಂಧನ ಸಿದ್ಧಾಂತದ ಪ್ರಕಾರ ಈ ಹಂತವು ಶಿಶುವಿನ ಹುಟ್ಟಿನಿಂದ ಆರು ವಾರಗಳವರೆಗೆ ಇರುತ್ತದೆ. ಬಂಧನಪೂರ್ವ ಅವಧಿಯಲ್ಲಿ ಶಿಶುವಿನ ಸ್ವಯಂಚಾಲಿತ ಪರಾವರ್ತಿತ ಪ್ರತಿಕ್ರಿಯೆಗಳು(Reflex) ಚಟುವಟಿಕೆಗಳಾದ ಹಿಡಿಯುವುದು, ಅಳುವುದನ್ನು ಒಳಗೊಂಡಿರುತ್ತವೆ. ಇವುಗಳ ಮೂಲಕ ಶಿಶುವನ್ನು ನೋಡಿಕೊಳ್ಳುವವರು ಶಿಶುವಿನೊಂದಿಗೆ ಬಾಂಧವ್ಯದಿಂದಿರಲು ಕಾರಣವಾಗುತ್ತದೆ. ಶಿಶುವಿನ ಆರೈಕೆ ಮಾಡುವವರು ಶಿಶುವಿಗೆ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ತಮ್ಮ ಅಗತ್ಯತೆಯಿದೆ ಎನ್ನುವ ಭಾವನೆಯಿಂದ ಶಿಶುವಿನ ಅಗತ್ಯತೆಗಳನ್ನು ಪೂರೈಸುತ್ತಾರೆ. ಈ ಅವಧಿಯಲ್ಲಿ ಶಿಶು ತನ್ನ ತಾಯಿಯನ್ನು ಆಕೆಯ ಧ್ವನಿ ಮತ್ತು ವಾಸನೆಯಿಂದ ಗುರುತಿಸಲಾರಂಭಿಸುತ್ತದೆ. ಪ್ರತಿ ವ್ಯಕ್ತಿಯ ದೇಹ ಪ್ರತ್ಯೇಕ ವಾಸನೆಯನ್ನು ಹೊಂದಿದ್ದು, ಶಿಶು ಈ ವಾಸನೆಯನ್ನು ಗ್ರಹಿಸುವ ಸಾಮರ್ಥ್ಯ ಹೊಂದಿರುತ್ತದೆಂದು ಸಂಶೋಧನೆಗಳು ದೃಢಪಡಿಸಿವೆ. ಶಿಶು ಸ್ಪರ್ಶಕ್ಕೆ ತನ್ನಂತೆ ತಾನೆ ಮುಗುಳ್ನಗುತ್ತದೆ. ಇದರಿಂದಾಗಿ ಶಿಶುವಿನ ಆರೈಕೆ ಮಾಡುವವರಿಗೆ ಶಿಶುವಿನೊಂದಿಗೆ ಹೆಚ್ಚು ಸಂವಹನ ನಡೆಸಲು ಉತ್ತೇಜನ ದೊರೆತಂತಾಗುತ್ತದೆ. ಇತರರೊಂದಿಗೆ ಈ ಸಂವಹನದಿಂದ ಶಿಶುವಿನ ಮಾನಸಿಕ ಸಂವೇಗಾತ್ಮಕ, ಸಾಮಾಜಿಕ ಬೆಳವಣಿಗೆ ಮತ್ತು ಕಲಿಕೆಯು ಹೆಚ್ಚಾಗುತ್ತದೆ.

ಆರನೇ ವಾರದಿಂದ ಪ್ರಾರಂಭವಾಗಿ ಆರನೇ ತಿಂಗಳು ಅಥವಾ ಎಂಟನೇ ತಿಂಗಳುಗಳವರೆಗಿನ ಅವಧಿಯು ಬಾಂದವ್ಯ ಸೃಷ್ಟಿಸುವ ಅವಧಿಯಾಗಿರುತ್ತದೆ. ಈ ಅವಧಿಯಲ್ಲಿ ಶಿಶುವು ತನ್ನ ಆರೈಕೆ ಮಾಡುವವರ ಬಗ್ಗೆ ಗಮನ ಹರಿಸುತ್ತದೆ. ಶಿಶುಗಳು ಎರಡನೇ ತಿಂಗಳಿನಿಂದ ದೃಷ್ಟಿ ಇಟ್ಟು ನೋಡಲು ಪ್ರಾರಂಭಿಸುತ್ತವೆ. ಮತ್ತು ಮೂರರಿಂದ ಐದು ತಿಂಗಳ ಅವಧಿಯಲ್ಲಿ ಪರಿಚಿತರೊಂದಿಗೆ ಉದ್ದೇಶಪೂರ್ವಕವಾಗಿ ಮುಗುಳ್ನಗಲು ಪ್ರಾರಂಭಿಸುತ್ತವೆ.

ಆರು ಅಥವಾ ಎಂಟು ತಿಂಗಳಿನಿಂದ ಪ್ರಾರಂಭಿಸಿ ಹದಿನೆಂಟರಿಂದ ಇಪ್ಪತ್ತನಾಲ್ಕು ತಿಂಗಳವರೆಗೆ ಬಾಂದವ್ಯ ಅವಧಿಯಲ್ಲಿ ಶಿಶುವಿಗೆ ತನ್ನನ್ನು ಆರೈಕೆ ಮಾಡುವವರೊಂದಿಗೆ ಬೇರ್ಪಡಿಕೆ ಆತಂಕವು ಬೆಳೆಯುತ್ತದೆ. ಶಿಶುಗಳು ತಮ್ಮ ತಾಯಿಗೆ ಅಂಟಿಕೊಂಡಿರುವುದು, ಅಜ್ಜಿಯನ್ನು ಬಾಗಿಲವರೆಗೆ ಅನುಸರಿಸುವುದು ಅಥವಾ ತಂದೆ ಹೊರಟಾಗ ಅಳುವುದರ ಮುಖಾಂತರ ತಮ್ಮ ಅಸಂತೋಷವನ್ನು ವ್ಯಕ್ತಪಡಿಸುತ್ತವೆ. ಬಾಂಧವ್ಯವಷ್ಟೇ ಅಲ್ಲದೇ ಶಿಶು ಪಾರಸ್ಪರಿಕತೆ ಮತ್ತು ಸಾಮಾಜಿಕ ಕೌಶಲಗಳನ್ನು ಬೆಳಸಿಕೊಳ್ಳಲು ಪ್ರಾರಂಭಿಸುತ್ತದೆ. ಒಂಬತ್ತನೇ ತಿಂಗಳಿಂದ ಹನ್ನೊಂದನೇ ತಿಂಗಳವರೆಗೆ ಶಿಶು ಕಣ್ಣಾಮುಚ್ಚಾಲೆ ಆಟದಲ್ಲಿ ಭಾಗವಹಿಸಲು ಇಷ್ಟಪಡುತ್ತದೆ. 'ಟಾಟಾ, ಬೈ' ಹೇಳಲು ಪ್ರಾರಂಭಿಸುತ್ತವೆ. ಶಿಶುಗಳು ಹೊಸ ಪ್ರಚೋದನೆಗಳಿಗೆ ತಾವು ಹೇಗೆ ಪ್ರತಿಕ್ರಿಯಿಸಬೇಕು ಎಂದು ತಿಳಿದುಕೊಳ್ಳಲು ಸಾಮಾಜಿಕ ಸುಳಿವುಗಳಿಗೆ ಇತರ ಜನರ ದೈಹಿಕ ಮತ್ತು ಸಂವೇಗಾತ್ಮಕ ಪ್ರತಿಕ್ರಿಯೆಗಳನ್ನು ಗಮನಿಸುತ್ತಿರುತ್ತವೆ.

ಶಿಶುಗಳು ಬಾಂದವ್ಯ ಸೃಷ್ಟಿಸುವಿಕೆಯ ಅಂತಿಮ ಹಂತದಲ್ಲಿ 18 ರಿಂದ 24 ತಿಂಗಳುಗಳ ವರಗೆ ತಮ್ಮ ಆಸೆ ಅಗತ್ಯತೆಗಳನ್ನು ತಮಗೆ ಆರೈಕೆ ನೀಡುವವರಿಗೆ ತಿಳಿಸುತ್ತವೆ ಮತ್ತು ತಾವು ಸುರಕ್ಷಿತವಾಗಿ ಮತ್ತು ಬಾಂಧವ್ಯದಿಂದಿರಬೇಕೆಂಬುದನ್ನು ತಾವು ಅಭಿವ್ಯಕ್ತಪಡಿಸುತ್ತವೆ. ಈ ಅವಧಿಯಲ್ಲಿ ಶಿಶು 'ಬೇಡ' ಎಂಬುದನ್ನು ಅರ್ಥೈಸಿಕೊಳ್ಳಲು ಪ್ರಾರಂಭಿಸುತ್ತದೆ. ಯಾವುದಾದರೂ 'ಬೇಡ' ಎಂದ ಕೆಲಸವನ್ನು ಮಾಡಿದಾಗ ತಾನು ತಪ್ಪು ಮಾಡಿದ್ದೇನೆಂದು ಅರಿತು ಅದನ್ನು ಮುಚ್ಚಿಡಲು ಅಥವಾ ಬೇರೆ ವಿಷಯದೆಡೆಗೆ ಗಮನಹರಿಸುವಂತೆ ಪ್ರಯತ್ನಿಸುತ್ತದೆ. ಕುಟುಂಬದ ದಿನಚರಿಯನ್ನು ಗಮನಿಸುವುದು ಮತ್ತು ಅದರಲ್ಲಿ ಭಾಗವಹಿಸುವುದರ ಮುಖಾಂತರ ಸಾಮಾಜಿಕ ಪಾರಸ್ಪರಿಕತೆಯು ಪಕ್ವಗೊಳ್ಳುತ್ತಾ ಹೋಗುತ್ತದೆ.

Digitised by Bharatavani, CIIL

ತಮ್ಮ ಸಮವಯಸ್ಕರು ಮತ್ತು ಹಿರಿಯರೊಂದಿಗೆ ಆಟವಾಡುತ್ತಾ ತಮ್ಮ ಸಂತೋಷಕ್ಕೆ ಇತರರೂ ಕಾರಣವಾಗಬಹುದೆಂಬುದನ್ನು ತಿಳಿಯುತ್ತವೆ. ಶೈಶವಾವಸ್ಥೆಯಲ್ಲಿ ಪ್ರೀತಿ, ವಾತ್ಸಲ್ಯಗಳು ಸಮರ್ಪಕವಾಗಿ ದೊರಕದಿದ್ದಲ್ಲಿ ಶಿಶು ಸಾಮಾಜಿಕವಾಗಿ ಮತ್ತು ಸಂವೇಗಾತ್ಮಕವಾಗಿ ಬೆಸೆದುಕೊಳ್ಳುವ ಸಾಮರ್ಥ್ಯವನ್ನು ಹೊಂದುವುದಿಲ್ಲ. ಶೈಶವಾವಸ್ಥೆಯಲ್ಲಿ ದೊರಕುವ ಕೌಟುಂಬಿಕ ಮತ್ತು ಸಾಮಾಜಿಕ ಅನುಭವಗಳ ಪ್ರಭಾವದಿಂದಾಗಿ ಶಿಶು ಭವಿಷ್ಯದಲ್ಲಿ ಅಂತರ್ಮುಖಿಯಾಗುವ ಅಥವಾ ಬಹಿರ್ಮುಖಿಯಾಗುವ ಸಾಧ್ಯತೆ ಬಹುಮಟ್ಟಿಗೆ ಇರುತ್ತದೆ.

**ಸಂವೇಗಾತ್ಮಕ ವಿಕಾಸ:**

ಶಿಶುವಿನಲ್ಲಿ ವೈವಿಧ್ಯಪೂರ್ಣವಾದ ಸಂವೇಗಗಳನ್ನು ಸಮರ್ಪಕವಾಗಿ ಅನುಭವಿಸುವ ಮತ್ತು ಅಭಿವ್ಯಕ್ತಗೊಳಿಸುವ ಸಾಮರ್ಥ್ಯದ ಬೆಳವಣಿಗೆಯನ್ನು ಸಂವೇಗಾತ್ಮಕ ವಿಕಾಸವೆನ್ನುತ್ತಾರೆ. ಸಂವೇಗಗಳು ಒಬ್ಬ ವ್ಯಕ್ತಿಯ ಪ್ರಯತ್ನ, ಸಿದ್ಧತೆ, ನಿರ್ವಹಣೆಗೆ ತನ್ನ ಮತ್ತು ಪರಿಸರದ ಮಧ್ಯದ ಸಂಬಂಧವನ್ನು ಬದಲಿಸುವುದು ಇವೆಲ್ಲವುಗಳನ್ನು ಪ್ರತಿಬಿಂಬಿಸುತ್ತವೆ.

ಸಂವೇಗಗಳು ಆಂತರಿಕ ಮಾನಸಿಕ ಪ್ರಕ್ರಿಯೆಗಳಾದ ಆಲೋಚನೆ ಅಭಿಪ್ರೇರಣೆ ಮತ್ತು ಅಂತರ್ ವ್ಯಕ್ತ್ಯಾತ್ಮಕ ಪ್ರಕ್ರಿಯೆಗಳಾದ ಸಾಮಾಜಿಕ ಪಾರಸ್ಪರಿಕತೆ ಇವೆರಡನ್ನೂ ಸಂಯೋಜಿಸುತ್ತವೆ ಮತ್ತು ವ್ಯವಸ್ಥಿತಗೊಳಿಸುತ್ತವೆ.

ಶಿಶು ದಿನನಿತ್ಯದ ಜೀವನದಲ್ಲಿ ತನ್ನ ಗುರಿಗಳನ್ನು ಮುಟ್ಟಲು ಸಂವೇಗಗಳನ್ನು ಅಸ್ತ್ರವಾಗಿ ಬಳಸುತ್ತಾ ಹೋಗುತ್ತದೆ. ನವಜಾತ ಶಿಶು ಸಂಕಟ ಮತ್ತು ಭಾವೋದ್ರೇಕಗಳ ಸಾಮಾನ್ಯ ವಿನ್ಯಾಸಗಳನ್ನು ತೋರ್ಪಡಿಸುತ್ತದೆ. ಶಿಶುವಿನಲ್ಲಿ ಹುಟ್ಟಿನಿಂದಲೇ ಕೆಲವು ಮೂಲ ಸಂವೇಗಗಳು ಕಂಡುಬರುತ್ತವೆ. ಪ್ರಾರಂಭಿಕ ಸಂವೇಗಾತ್ಮಕತೆಯಲ್ಲಿ ಆನಂದದಾಯಕ ಪ್ರಚೋದನೆಯೆಡೆಗೆ ಆಕರ್ಷಿತವಾಗುವುದು ಮತ್ತು ಆನಂದದಾಯಕವಲ್ಲದ ಪ್ರಚೋದನೆಗಳಿಂದ ತನ್ನನ್ನು ತಾನು ಹಿಂತೆಗೆದುಕೊಳ್ಳುವುದು ಈ ಎರಡು ಸ್ಥಿತಿಗಳನ್ನು ಕಾಣಬಹುದು.

ಶಿಶುವಿನಲ್ಲಿ ಮೂರನೇ ತಿಂಗಳಿನಲ್ಲಿ ಬಹಳ ವ್ಯತ್ಯಾಸಗಳುಳ್ಳ ಭಾವನೆಗಳು ಮತ್ತು ಪ್ರತಿಕ್ರಿಯೆಗಳಾದ ಸಂತೋಷ, ಭಯ, ಉದ್ರೇಕ, ಸಂಭ್ರಮ, ಅಸಂತೋಷ ಮತ್ತು ಇತರ ಭಾವನೆಗಳು ಮತ್ತು ಸಂವೇಗಗಳ ಬಗ್ಗೆ ಸ್ವಲ್ಪ ಅರಿವು ಮೂಡುತ್ತದೆ. ಶಿಶು ಆರನೇ ತಿಂಗಳಿನಲ್ಲಿ ನಗುವುದು, ಸಂಭ್ರಮಗೊಳ್ಳುವುದು, ಸಂತೋಷ ವ್ಯಕ್ತಪಡಿಸುವುದು ಮತ್ತು ತನಗೆ ಇಷ್ಟವಾಗುವುದು, ಇಷ್ಟವಲ್ಲದುಗಳನ್ನು ವ್ಯಕ್ತಪಡಿಸಲಾರಂಭಿಸುತ್ತವೆ. ತನ್ನ ಪ್ರತಿಬಿಂಬವನ್ನು ನೋಡಿ ನಗುತ್ತದೆ.

ಶಿಶು ಹುಟ್ಟಿನಿಂದಾಗಿ ಆಸಕ್ತಿ, ನೋವು (ದುಃಖ), ಬೇಸರ ಮತ್ತು ಸಂತೋಷಗಳನ್ನನುಭವಿಸಬಹುದು. ಎರಡರಿಂದ ಆರು ತಿಂಗಳುಗಳ ಅಂತರದಲ್ಲಿ ಶಿಶು ಕೋಪ, ಬೇಸರ, ಆಶ್ಚರ್ಯ ಮತ್ತು ಭಯಗಳನ್ನು ಅನುಭವಿಸುತ್ತದೆ.

ಒಂಬತ್ತನೇ ತಿಂಗಳಿಗೆ ಮಗು ತನ್ನ ತಾಯಿ ಅಥವಾ ತನ್ನನ್ನು ಆರೈಕೆ ಮಾಡುವ ವ್ಯಕ್ತಿಯೊಂದಿಗೆ ಬಾಂಧವ್ಯವನ್ನು ಬೆಸೆದುಕೊಂಡಿರುತ್ತದೆ ಮತ್ತು ಅವರೊಂದಿಗೆ ಹೆಚ್ಚು ಸಮಯ ಆಡಲು ಇಷ್ಟಪಡುತ್ತದೆ. ಹನ್ನೆರಡನೇ ತಿಂಗಳಿಗೆ ತಾನು ಬಯಸಿದ ವಸ್ತುಗಳು ಸಿಗದಿದ್ದಾಗ ಕೋಪವನ್ನು ತೋರುತ್ತವೆ, ಅಪರಿಚಿತರ ಮುಂದೆ ನಾಚಿಕೆ ವ್ಯಕ್ತಪಡಿಸುತ್ತವೆ. ಶಿಶುವಿನ ಮೊದಲನೇ ವರ್ಷದಲ್ಲಿ ಸಂತೋಷ, ಆಶ್ಚರ್ಯ, ಬೇಸರ, ಜಿಗುಪ್ಸೆ, ಕೋಪ ಮತ್ತು ಭಯ ಇವುಗಳ ಅಭಿವ್ಯಕ್ತಿ ಬೆಳವಣಿಗೆಯಾಗುತ್ತದೆ. ಅಲ್ಲಿಂದ ಎಂಟು ವಾರಗಳಲ್ಲಿ ಶಿಶು ಇತರರಿಗೆ ಮುಗುಳ್ನಗಲು ಪ್ರಾರಂಭಿಸುತ್ತದೆ ಮತ್ತು ಅಪರಿಚಿತರಿಗೆ ಮುಗುಳ್ನಗುವುದಿಲ್ಲ. ಏಳರಿಂದ ಒಂಬತ್ತನೆ ತಿಂಗಳಿನಲ್ಲಿ ಶಿಶು ಬೇರ್ಪಡಿಕೆ ಆತಂಕವನ್ನು ಬೆಳೆಸಿಕೊಳ್ಳುತ್ತದೆ.

ಹದಿನೈದನೇ ತಿಂಗಳಿಗೆ ಮಗು ತನ್ನನ್ನು ಆರೈಕೆ ಮಾಡುವವರಿಂದ ದೂರವಾಗುವ ಬಗ್ಗೆ ಆತಂಕ ಮತ್ತು ಭಯವನ್ನು ತೋರುತ್ತದೆ ಮತ್ತು ಆರೈಕೆ ಮಾಡುವವರ ಬಳಿಯೇ ಯಾವಾಗಲೂ ಇರಲು ಬಯಸುತ್ತದೆ.

ತಮಗೆ ಕೋಪ ಬಂದಾಗ ವಸ್ತುಗಳನ್ನು ಎಸೆಯುವುದರ ಮುಖಾಂತರ ಮಕ್ಕಳು ಕೋಪ ವ್ಯಕ್ತಪಡಿಸುತ್ತಾರೆ. ಪೋಷಕರು ಬೇರೆ ಮಕ್ಕಳನ್ನು ಎತ್ತಿಕೊಂಡರೆ ಅಸೂಯೆಯಿಂದ ಕಿರುಚುತ್ತಾರೆ ಮತ್ತು ಕೋಪ ವ್ಯಕ್ತಪಡಿಸುತ್ತಾರೆ. ಹದಿನೆಂಟನೇ ತಿಂಗಳಲ್ಲಿ ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ತಿಳಿಯಲು ಆಸಕ್ತಿ ಮತ್ತು ಕುತೂಹಲವನ್ನು ತೋರಿಸುತ್ತಾರೆ. ಸಂಕೀರ್ಣ ಸಂವೇಗಗಳಾದ ಜಂಭ, ನಾಚಿಕೆ, ಮುಜುಗರ, ಪಾಪಪ್ರಜ್ಞೆಗಳು ಎರಡನೇ ವರ್ಷದ ಕೊನೆಯಲ್ಲಿ ಕಂಡುಬರುತ್ತವೆ. ಒಂದನೇ ವರ್ಷ ಮುಗಿಯುವಷ್ಟರಲ್ಲಿ ಶಿಶು ಇತರರ ಮುಖ ಚರ್ಯೆಗಳ ತೋರ್ಪಡಿಕೆ ಆಧಾರದ ಮೇಲೆ ತನ್ನ ವರ್ತನೆಯನ್ನು ಮಾಡುತ್ತದೆ.

ಶಿಶುವಿನಲ್ಲಿ ಕಂಡುಬರುವ ಸಾಮಾಜಿಕ ಅಥವಾ ಸಂವೇಗಾತ್ಮಕ ಮೈಲಿಗಲ್ಲುಗಳನ್ನು ಹೀಗೆ ನೋಡಬಹುದು.

2–3 ತಿಂಗಳು– ಸಾಮಾಜಿಕ ಮುಗುಳ್ನಗೆಯೊಂದಿಗೆ ಇತರರೊಂದಿಗೆ ಪ್ರತಿಕ್ರಿಯಿಸುತ್ತದೆ.

4–6 ತಿಂಗಳು– ಸತತವಾಗಿ ನಗುತ್ತವೆ ಮತ್ತು ಇತರರನ್ನು ಅನುಕರಿಸುತ್ತದೆ.

5–6 ತಿಂಗಳು– ಅಪರಿಚಿತರ ಬಗ್ಗೆ ಆತಂಕ ಪ್ರಾರಂಭವಾಗುತ್ತದೆ.

7–10 ತಿಂಗಳು– ತಾಯಿಯಿಂದ ಬೇರ್ಪಡಿಸುವಿಕೆಯ ಆತಂಕ ಪ್ರಾರಂಭವಾಗುತ್ತದೆ.

8–10 ತಿಂಗಳು– ಸಾಮಾಜಿಕವಾಗಿ ಪ್ರತಿಕ್ರಿಯೆ ಪ್ರಾರಂಭವಾಗುತ್ತದೆ.

11–12 ತಿಂಗಳು– ಸಂವೇಗಗಳನ್ನು ನಿಯಂತ್ರಿಸಲು ಪ್ರಾರಂಭಿಸುತ್ತದೆ.

Digitised by Bharatavani, CIIL

ಶೈಶವಾವಸ್ಥೆಯಲ್ಲಿನ ಸಂವೇಗಾತ್ಮಕ ವಿಕಾಸ ಶಿಶು ಮುಂದೆ ಬೆಳೆದು ದೊಡ್ಡದಾದ ನಂತರ ಇತರರೊಂದಿಗೆ ಹೇಗೆ ಸಂವೇಗಾತ್ಮಕವಾಗಿ ಸಂಬಂಧಿಸಿಕೊಳ್ಳುತ್ತದೆ ಎಂಬುದಕ್ಕೆ ಅಡಿಪಾಯವಾಗಿರುತ್ತದೆ.

ಶಿಶು ಮಾತನಾಡಲು ಕಲಿಯುವ ಮುನ್ನ ತನ್ನ ಸಂವೇಗಗಳನ್ನು ದೈಹಿಕ ವರ್ತನೆ ಮೂಲಕ ತೋರ್ಪಡಿಸುವಿಕೆಯಿಂದಲೇ ಇತರರೊಂದಿಗೆ ಸಂವಹನ ನಡೆಸುತ್ತದೆ. ಶಿಶು ತನ್ನ ಪೋಷಕರ ಸಂವೇಗಗಳು ಮತ್ತು ಮುಖದಲ್ಲಿನ ಭಾವಗಳ ತೋರ್ಪಡಿಸುವಿಕೆ, ಧ್ವನಿಯ ಏರಿಳಿತಗಳನ್ನು ಗಮನಿಸುತ್ತಿರುತ್ತವೆ ಮತ್ತು ಅದನ್ನು ಅನುಕರಿಸುತ್ತವೆ.

ಶಿಶುಗಳು ಬಹಳಷ್ಟು ವಿಸ್ತಾರವಾದ ಸಕಾರಾತ್ಮಕ ಮತ್ತು ನಕಾರಾತ್ಮಕ ಸಂವೇಗಗಳನ್ನು ತೋರ್ಪಡಿಸುತ್ತವೆ. ಸಕಾರಾತ್ಮಕ ಸಂವೇಗಗಳಾದ ಮುಗುಳ್ನಗುವುದು, ನಗುವುದು ಸಂತೋಷ ಮತ್ತು ಉದ್ರೇಕಗೊಳ್ಳುವುದನ್ನು ತೋರ್ಪಡಿಸುವುದು, ನಕಾರಾತ್ಮಕ ಸಂವೇಗಗಳಾದ ಅಳುವುದು, ಕೋಪವನ್ನು ತೋರಿಸುವುದು, ಆತಂಕಗೊಳ್ಳುವುದು, ಬೇಸರ ಪಡುವುದು. ಕೆಲವು ಸಂವೇಗಗಳು ಜೈವಿಕವಾಗಿ ನಿರ್ಧಾರಿತವಾಗಿರುತ್ತವೆ ಮತ್ತು ಇನ್ನು ಕೆಲವು ಸಂಕೀರ್ಣ ಸಂವೇಗಗಳು ನಿರ್ದಿಷ್ಟ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವದಿಂದ ನಿರ್ಧಾರಿತವಾಗುತ್ತವೆ.

ಶಿಶು ಹುಟ್ಟಿನಿಂದ ನಾಲ್ಕು ತಿಂಗಳುಗಳವರಗಿನ ಅವಧಿಯಲ್ಲಿ ಸಾಮಾನ್ಯವಾಗಿ ಅಳುತ್ತದೆ ಮತ್ತು ನಗುತ್ತದೆ. ತನ್ನನ್ನು ನೋಡುತ್ತಿರುವವರ ಮುಖವನ್ನು ಮುಟ್ಟಲು ಕೈ ನೀಡುತ್ತದೆ. ತನಗೆ ಹಸಿವಾದಾಗ ಅಳುವಿನ ಮೂಲಕ ತಿಳಿಸಲು ಪ್ರಯತ್ನಿಸುತ್ತದೆ. ಹೊಸ ಶಬ್ದಗಳಿಗೆ ಉದ್ರೇಕಗೊಳ್ಳುತ್ತದೆ, ಸಮಾಧಾನವಾದಾಗ ಮುಗುಳ್ನಗುತ್ತದೆ.

ನಾಲ್ಕರಿಂದ ಎಂಟು ತಿಂಗಳುಗಳವರಗಿನ ಅವಧಿಯಲ್ಲಿ ಶಿಶು ತನ್ನ ಸುತ್ತಮುತ್ತಲಿರುವ ಕುಟುಂಬದವರನ್ನು ಗುರುತಿಸುತ್ತದೆ. ಮತ್ತು ಅವರನ್ನು ಅನುಕರಿಸಲು ಕುತೂಹಲ ತೋರಿಸುತ್ತದೆ. ಎಂಟರಿಂದ ಹನ್ನೆರಡು ತಿಂಗಳುಗಳವರೆಗಿನ ಅವಧಿಯಲ್ಲಿ ಇತರರ ಹಾಸ್ಯದ ಮುಖಗಳಿಗೆ ನಗುತ್ತದೆ. 12–18 ತಿಂಗಳುಗಳವರೆಗಿನ ಅವಧಿಯಲ್ಲಿ ಜನರೊಂದಿಗೆ ಬೆರೆಯಲು ನಾಚಿಕೆಯನ್ನು ತೋರುತ್ತದೆ.

ಹದಿನೆಂಟರಿಂದ ಇಪತ್ನಾಲ್ಕು ತಿಂಗಳವರೆಗಿನ ಅವಧಿಯಲ್ಲಿ ತನ್ನ ಸುತ್ತಮುತ್ತಲಿನವರು ಬೇಸರ, ದುಃಖ ವ್ಯಕ್ತಪಡಿಸಿದಾಗ ಸಮಾಧಾನ ಮಾಡಲು ಸಹಾನುಭೂತಿಯನ್ನು ತೋರಿಸುತ್ತದೆ.

**ಸಂತೋಷ:** ಪ್ರಾರಂಭದಲ್ಲಿ ಮಗುವಿನಲ್ಲಿ ಮುಗುಳ್ನಗೆಯು ಕಂಡು ಬಂದ ನಂತರದಲ್ಲಿ ಗಹಗಹಿಸಿ ನಗುವುದನ್ನು ಕಾಣಬಹುದು. ಶಿಶು ಸಂಜ್ಞಾನಾತ್ಮಕ ಮತ್ತು ಚಲನಾತ್ಮಕ ಚಟುವಟಿಕೆಗಳಲ್ಲಿ ತಾನು ಯಾವುದೇ ಹೊಸ ಕೌಶಲಗಳನ್ನು ಸಾಧಿಸುವಾಗ ಮುಗುಳ್ನಗುತ್ತದೆ. ಮುಗುಳ್ನಗು ಪೋಷಕರು ವಾತ್ಸಲ್ಯಪೂರಿತವಾಗಿ ಮತ್ತು ಪ್ರಚೋದನಾತ್ಮಕವಾಗಿ ಪ್ರತಿಕ್ರಿಯಿಸಲು ಉತ್ತೇಜಿಸುತ್ತದೆ. ಶಿಶುವಿನ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುವಲ್ಲಿ ಮತ್ತು ಪೋಷಕರೊಂದಿಗೆ ಸಹಾಯತ್ಮಕವಾದ ಹಿತವಾದ ಸಂಬಂಧವನ್ನು ಕಲ್ಪಿಸುವಲ್ಲಿ ಸಂತೋಷದ ಸಂವೇಗ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ನವಜಾತ ಶಿಶು ಹಿತವಾದ ಸ್ಪರ್ಶ ಮತ್ತು ಶಬ್ದಗಳಿಗೆ ಹಾಗು ತಾಯಿಯ ಧ್ವನಿಗೆ ಮುಗಳ್ನಗುತ್ತದೆ. ಶಿಶು ಒಂದು ತಿಂಗಳು ತುಂಬುವ ಹೊತ್ತಿಗೆ ಆಸಕ್ತಿದಾಯಕ ದೃಶ್ಯಗಳು, ಕಣ್ಸೆಳೆಯುವ ಬೆಳಕಿನ ವಸ್ತುಗಳ ಜಗಿತ ಇವುಗಳಿಗೆ ಮುಗುಳ್ನಗುತ್ತದೆ. 6ರಿಂದ 10ವಾರಗಳಲ್ಲಿ ಶಿಶು ಸಾಮಾಜಿಕ ಮುಗುಳ್ನನಗೆಯನ್ನು ತೋರುತ್ತದೆ. ಮೂರರಿಂದ ನಾಲ್ಕು ತಿಂಗಳಲ್ಲಿ ಮಗು ಸಂಜ್ಞಾನಾತ್ಮಕ ಬೆಳವಣಿಗೆಯಿಂದಾಗಿ ಆಗಿರುವ ಮಾಹಿತಿ ಸಂಗ್ರಹಣೆಯಿಂದಾಗಿ ಗಹಗಹಿಸಲು ಪ್ರಾರಂಭಿಸುತದೆ. ಒಂದು ವರ್ಷ ತುಂಬುವುದರೊಳಗೆ ಪರಿಚಿತ ಜನರೊಂದಿಗೆ ಮತ್ತು ಪೋಷಕರೊಂದಿಗೆ ಮಗು ಸಂತೋಷವನ್ನು ವ್ಯಕ್ತ ಪಡಿಸುತ್ತದೆ. 10ರಿಂದ 12ನೇ ತಿಂಗಳ ಅವಧಿಯಲ್ಲಿ ಶಿಶು ವಿವಿಧ ರೀತಿಯ ಮುಗುಳ್ನನಗುವಿಕೆಯನ್ನು ತೋರುತ್ತದೆ. ಎರಡನೇ ವರ್ಷದಲ್ಲಿ ಶಿಶುವಿಗೆ ನಗುವು ಸಾಮಾಜಿಕ ಸಂಕೇತವಾಗುತ್ತದೆ.

**ಕೋಪ:** ಶಿಶು ಹಸಿವು, ನೋವು ಮತ್ತು ದೇಹದ ಉಷ್ಣಾಂಶದಲ್ಲಿನ ಬದಲಾವಣೆಗಳು ಮತ್ತು ಯಾವುದೇ ಅಹಿತಕರ ಅನುಭವಗಳಿಗೆ ಕೋಪವನ್ನು ವ್ಯಕ್ತಪಡಿಸುತ್ತದೆ. ನಾಲ್ಕು ತಿಂಗಳಿಂದ ಎರಡನೇ ವರ್ಷದವರೆಗೆ ಅಂತರ ಮತ್ತು ಗಾಢತೆಯಲ್ಲಿ ಕೋಪದ ಅಭಿವ್ಯಕ್ತತೆಯು ಹೆಚ್ಚಾಗುತ್ತಾ ಹೋಗುತ್ತದೆ. ಶಿಶು ಬೆಳೆದಂತೆಲ್ಲಾ ನೋವಿನ ಪ್ರಚೋದನೆ ಅಥವಾ ತಾನು ಗುರಿಯನ್ನು ತಲುಪಲು ಅಡ್ಡಬಂದಿರುವುದೇನು ಎಂದು ಗುರುತಿಸುವ ಸಂಜ್ಞಾನಾತ್ಮಕ ಬೆಳವಣಿಗೆಯಿಂದಾಗಿ ತನ್ನ ಕೋಪಕ್ಕೆ ಕಾರಣವಾದ ವಸ್ತುಗಳನ್ನು ಗುರುತಿಸುತ್ತದೆ ಮತ್ತು ಕೋಪಗೊಳ್ಳುತ್ತದೆ.

**ದುಃಖ:** ನೋವಿನ ಪ್ರತಿಕ್ರಿಯೆ ತೋರಲು ದುಃಖವನ್ನು ಶಿಶು ತೋರಿಸುತ್ತದೆ. ಪರಿಚಿತವಾದ ವಸ್ತುಗಳು ಅಥವಾ ತನ್ನನ್ನು ಪ್ರೀತಿಸುವ ಮತ್ತು ಆರೈಕೆ ಮಾಡುವವರು ಕಾಣದಿದ್ದಾಗ ಶಿಶು ದುಃಖವನ್ನು ವ್ಯಕ್ತಪಡಿಸುತ್ತದೆ.

**ಭಯ:** ಮೊದಲನೇ ವರ್ಷದಲ್ಲಿ ಭಯವು ಪ್ರಾರಂಭವಾಗುತ್ತದೆ. ಶಿಶು ಹೊಸ ಆಟಿಕೆಯೊಂದಿಗೆ ಆಡಲು ಭಯ ಪಡುತ್ತದೆ. ಅಪರಿಚಿತ ವಯಸ್ಕರನ್ನು ಕಂಡಾಗ ಭಯವನ್ನು ವ್ಯಕ್ತಪಡಿಸುತ್ತದೆ. ಇದನ್ನು ಅಪರಿಚಿತರ ಆತಂಕವೆಂದು ಕರೆಯುತ್ತಾರೆ. ಪೋಷಕರು ಶಿಶುವನ್ನು ಒಂಟಿಯಾಗಿ ಬಿಟ್ಟಾಗ ಅದು ಭಯಗೊಳ್ಳುತ್ತದೆ.

ಪ್ರಾರಂಭದ ಶೈಶವಾವಧಿಯು ತುಂಬಾ ಮುಖ್ಯವಾದದ್ದು. ಈ ಅವಧಿಯು ಅಲ್ಪಾವಧಿಯಿಂದ ಕೂಡಿದ್ದರೂ ಈ ಹಂತದಲ್ಲಿ ಕಂಡುಬರುವ ವಿಕಾಸ ಪ್ರಕ್ರಿಯೆಗಳು ತುಂಬಾ ಪ್ರಮುಖವಾದವು. ಕಾರಣ ಈ ಅವಧಿಯಲ್ಲಿ ಕಂಡುಬರುವಂತಹ ವಿಕಾಸ ಮುಂದಿನ ಅವಧಿಗಳ ವಿಕಾಸದ ಮೇಲೆ ಪ್ರಭಾವ ಬೀರುತ್ತವೆ. ಶೈಶವಾವಸ್ಥೆಯಲ್ಲಿ ಸಾಮಾಜೀಕರಣದ ಪ್ರಕ್ರಿಯೆ ಪ್ರಾರಂಭವಾಗುತ್ತದೆ ಮತ್ತು ಇತರರ ಸಂವೇಗಗಳನ್ನು ಗಮನಿಸುವುದು, ಅರ್ಥೈಸಿಕೊಳ್ಳಲು ಪ್ರಯತ್ನಿಸುವುದು ಹಾಗೂ ಸಂದರ್ಭಕ್ಕೆ ಅನುಗುಣವಾಗಿ

Digitised by Bharatavani, CIIL

ಅವುಗಳನ್ನು ಬಳಸಲು ಪ್ರಾರಂಭಿಸುವಂತಹ ಸಂವೇಗಾತ್ಮಕ ವಿಕಾಸ ಈ ಹಂತದಲ್ಲಿ ಕಂಡು ಬರುತ್ತದೆ. ಅಂದರೆ ಶೈಶವಾವಸ್ಥೆಯಲ್ಲಿ ಕಂಡುಬರುವ ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ ತುಂಬಾ ಮಹತ್ವಪೂರ್ಣವಾದುದು. ಆದ್ದರಿಂದ ಈ ವರ್ತನ ಮುಖಗಳ ವಿಕಾಸವೇ ವ್ಯಕ್ತಿಯ ಭವಿಷ್ಯದ ಸಾಮಾಜೀಕರಣದ ಪ್ರಕ್ರಿಯೆಗೆ ಬುನಾದಿಯಾಗಿರುತ್ತದೆ.

–ಸುರ್ಮ ಎಸ್.

## ಶ್ರಮದ ಮಾರುಕಟ್ಟೆ ಮತ್ತು ಶಿಕ್ಷಣ

ಶೈಕ್ಷಣಿಕ ಅರ್ಥಶಾಸ್ತ್ರದ ಮುಖ್ಯಾಂಶವು ಶಿಕ್ಷಣಕ್ಕೂ ಶ್ರಮದ ಮಾರುಕಟ್ಟೆಗೂ ಇರುವ ಸಂಬಂಧದಲ್ಲಿ ಕಾಣಬಹುದಾಗಿದೆ. ಮಾನವ ಮಾಡುವ ಕೆಲಸದ ಆಧಾರದಮೇಲೆ ಅವನಲ್ಲಿ ತೊಡಗಿಸಲಾದ ಬಂಡವಾಳದ ಮೌಲ್ಯವನ್ನು ನಿರ್ಧರಿಸಲಾಗುತ್ತದೆ. ಅವನಲ್ಲಿ ತೊಡಗಿಸಲಾದ ಬಂಡವಾಳವನ್ನೇ 'ಮಾನವ ಬಂಡವಾಳ' ಎನ್ನುವುದು. ಹಾಗೆ ತೊಡಗಿಸಲಾಗುವ ಬಂಡವಾಳ ಎಂದರೆ ಆ ವ್ಯಕ್ತಿಯ ವಿದ್ಯಾಭ್ಯಾಸ, ತರಬೇತಿ ಮುಂತಾದವುಗಳಿಗಾಗಿ ಮಾಡುವ ವೆಚ್ಚ. ಎಂದರೆ ಅವನು ಒಂದು ನಿರ್ದಿಷ್ಟವಾದ ಕೆಲಸವನ್ನು ಮಾಡಲು ಅವನನ್ನು ರೂಪಿಸಲು ಮಾಡುವ ವೆಚ್ಚ. ಉದಾಹರಣೆಗೆ, ವೈದ್ಯನಾಗಿ ಕೆಲಸಮಾಡಲು, ಶಿಕ್ಷಕ ವೃತ್ತಿಯನ್ನು ಕೈಗೊಳ್ಳಲು, ಮರಗೆಲಸ (ಬಡಗಿ) ಮಾಡಲು ಇತ್ಯಾದಿ.

ಥಿಯೋಡರ್ ಶೂಲ್ಟ್ಸ್, ಗ್ಯಾರಿ ಬೆಕರ್ ಮತ್ತು ಜಾಕೋಬ್ ಮಿನ್ಸ್ ರವರು ಶ್ರಮದ ಅಂಚಿನ ಉತ್ಪಾದನಾ ಶಕ್ತಿಗೂ ಶಿಕ್ಷಣ ಮತ್ತು ತರಬೇತಿಗಳಲ್ಲಿ ಅವರಿಗಾಗಿ ಮಾಡಲಾದ ಬಂಡವಾಳ ಹೂಡಿಕೆಗೂ ನೇರವಾದ ಸಂಬಂಧ ಇದೆ, ಇದರಲ್ಲಿ ವ್ಯಕ್ತಿಗಳು ತಮ್ಮ ಜೀವಿತಾವಧಿಯಲ್ಲಿ ತಮ್ಮ ಸ್ವಭಾವಕ್ಕೆ ತಕ್ಕಹಾಗೆ ಗಳಿಸುವ ಕೆಲಸದ ಅನುಭವದ ಲಾಭವೂ ಸೇರಿರುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಆದರೆ 1970ರ ವೇಳೆಗೆ ಶ್ರಮದ ಮಾರುಕಟ್ಟೆಯು ಹೇಗೆ ಸೃಷ್ಟಿಯಾಗುತ್ತದೆ ಎಂಬುದರ ದೃಷ್ಟಿಕೋನವು ಹಿಂದಿನ ದೃಷ್ಟಿಕೋನದಿಂದ ಭಿನ್ನತೆಯನ್ನು ಹೊಂದಿತು. ಹತ್ತೊಂಬತ್ತನೆ ಶತಮಾನದ 'ನಿಯೋ ಕ್ಲಾಸಿಕಲ್' ಅರ್ಥಶಾಸ್ತ್ರಜ್ಞರು ಶ್ರಮದ ಮಾರುಕಟ್ಟೆಯು ಅಪರಿಪೂರ್ಣ ಪೈಪೋಟಿಯಿಂದ ಕೂಡಿದ್ದು ಅದರಿಂದ ಶಿಕ್ಷಣ ಮತ್ತು ಅಂಚಿನ ಉತ್ಪಾದನೆಗಳ ಸಂಬಂಧಕ್ಕೆ ತೀವ್ರ ಧಕ್ಕೆ ಉಂಟಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

[ಇಲ್ಲಿ **ಶ್ರಮ** ಎಂದರೆ ಮಾನವ ಶಕ್ತಿ. ಉತ್ಪಾದನೆಗೆ ಅಗತ್ಯವಾದ ಒಂದು ಅಂಶ. ಉಳಿದವುಗಳು: ಭೂಮಿ, ಬಂಡವಾಳ ಮತ್ತು ಮೇಲ್ವಿಚಾರಣೆಗಳು.

**ಶ್ರಮದ ಮಾರುಕಟ್ಟೆ** ಎಂದರೆ ಶ್ರಮದ ಬೇಡಿಕೆ ಮತ್ತು ಪೂರೈಕೆಗಳನ್ನು ನಿರ್ಧರಿಸಿ ಅದಕ್ಕೆ ಒಂದು ಬೆಲೆಯನ್ನು ನಿರ್ಧರಿಸುವ ಸ್ಥಳ. ಅದು ಎಲ್ಲಿ ಬೇಕಾದರೂ ಇರಬಹುದು. ಸಾಮಾನ್ಯ ಭಾಷೆಯಲ್ಲಿನ ಮಾರುಕಟ್ಟೆಗೆ ಒಂದು ಗೊತ್ತಾದ ಸ್ಥಳ ಮತ್ತು ಹೆಸರು ಇರುತ್ತದೆ.

**ಅಂಚಿನ ಉತ್ಪಾದನೆ** ಎಂದರೆ ಒಂದು ಕೆಲಸವನ್ನು ಹಲವರು ಸೇರಿ ಮಾಡುತ್ತಿರುತ್ತಾರೆ ಎಂದಿಟ್ಟುಕೊಳ್ಳಿ. ಅದರಿಂದಾಗಿ ಉತ್ಪಾದನೆಯ ಪ್ರಮಾಣ 40 ಕ್ವಿಂಟಾಲ್‌ಗಳು ಎಂದಿಟ್ಟುಕೊಳ್ಳೋಣ. ಅದೇ ಕೆಲಸಕ್ಕೆ ಇನ್ನೂ ಒಬ್ಬ ಸೇರಿಕೊಂಡಾಗ ಆ ಉತ್ಪಾದನೆ 40 ರಿಂದ 43 ಕ್ವಿಂಟಾಲ್‌ಗೆ ಹೆಚ್ಚಿದರೆ, ಹೆಚ್ಚಾದ 3 ಕ್ವಿಂಟಾಲನ್ನು ಅಂಚಿನ ಉತ್ಪಾದನೆ ಎನ್ನುತ್ತಾರೆ.]

ಸಂಕ್ಷಿಪ್ತವಾಗಿ ಹೇಳುವುದಾದರೆ, ಶ್ರಮದ ಅಂಚಿನ ಉತ್ಪಾದನಾಶಕ್ತಿಯು ಕೆಲಸಮಾಡುವ ಸಂಸ್ಥೆಯ ಪರಿಸರವನ್ನು ಅವಲಂಬಿಸಿರುತ್ತದೆ ಎನ್ನುವುದು ಅವರ ಅಭಿಪ್ರಾಯ. ಏಕೆಂದರೆ ಉತ್ಪಾದನಾಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಕೆಲಸಗಾರರಿಗೆ ಆಗಾಗ ಅಗತ್ಯವಾಗುವ ಶಿಕ್ಷಣ ಮತ್ತು ತರಬೇತಿಗಳಿಗೆ ಖರ್ಚು ಮಾಡುವಷ್ಟು ಶಕ್ತಿಯು ಸಂಸ್ಥೆಗಳಿಗಿರಬೇಕು, ಉತ್ತಮ ಕೆಲಸದ ವಾತಾವರಣ ಇರಬೇಕು.

['ನಿಯೋ ಕ್ಲಾಸಿಕಲ್' (ಮಧ್ಯ ಕಾಲೀನ) ಅರ್ಥಶಾಸ್ತ್ರಜ್ಞರು ಎಂದರೆ – ಪುರಾತನ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳನ್ನು ತಿದ್ದಿ ಹೇಳಿದವರು ಎನ್ನಬಹುದು. ಅವರುಗಳೆಂದರೆ: ಜೆ.ಎಂ.ಕ್ಲಾರ್ಕ್, ಎಫ್.ವೈ.ಎಡ್ಜ್ ವರ್ತ್, ಇರ್ವಿಂಗ್ ಫಿಷರ್, ಆಲ್ಫ್ರೆಡ್ ಮಾರ್ಷಲ್, ವಿ.ಪರೇಟೋ, ಎಲ್.ವಾಲ್ರಾಸ್ ಮತ್ತು ಕೆ.ವಿಕ್ಸೆಲ್]

ಶಿಕ್ಷಣ ಮತ್ತು ಸಂಪಾದನೆಗಳ ನಡುವೆ ನಿಕಟ ಸಂಬಂಧ ಇರುವುದು ಶ್ರಮದ ಮಾರುಕಟ್ಟೆಯ ಹಲವು ನಿರ್ಧಾರಗಳಿಗೆ ಕಾರಣ. ಶಿಕ್ಷಣವನ್ನು ಪಡೆಯಲು ಪಟ್ಟ ಶ್ರಮ, ಕಡಿಮೆ ಶಿಕ್ಷಣವನ್ನು ಪಡೆದ ಶ್ರಮ ಹಾಗೂ ಶಿಕ್ಷಣವನ್ನೇ ಪಡೆಯದ ಶ್ರಮಗಳ ನಡುವೆ ಅನೇಕ ವ್ಯತ್ಯಾಸಗಳಿರುವುದು ಸಹಜ. ಆದ್ದರಿಂದ ಅವರ ಸಂಪಾದನೆಗಳಲ್ಲೂ ವ್ಯತ್ಯಾಸ ಇರುತ್ತದೆ. ಯಾವ ಬಗೆಯ ಶಿಕ್ಷಣ ಮತ್ತು ತರಬೇತಿಯನ್ನು ಪಡೆದರೆ ಅಂತಹ ಶ್ರಮಕ್ಕೆ ಎಂತಹ ಬೇಡಿಕೆ ಇರುತ್ತದೆ ಎಂಬುದನ್ನು ಅರಿತು ಅಂತಹ ಶಿಕ್ಷಣ ಮತ್ತು ತರಬೇತಿಯನ್ನು ಪಡೆದು ಬೇಡಿಕೆಗೆ ತಕ್ಕ ಪೂರೈಕೆಯನ್ನು ಸೃಷ್ಟಿಮಾಡಿ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯಲು ಜನರು ಪ್ರಯತ್ನಿಸುತ್ತಾರೆ.

ಅತಿಯಾದ ಪೈಪೋಟಿಯಿಂದ ಕೂಡಿದ ಈ ಜಾಗತಿಕ ಪ್ರಪಂಚದಲ್ಲಿ, ಶ್ರಮದ ಮಾರುಕಟ್ಟೆ ಅತ್ಯಂತ ಉತ್ತಮರೀತಿಯಲ್ಲಿ ಪ್ರತಿಕ್ರಯಿಸುವುದರಲ್ಲಿ ಅನಮಾನವಿಲ್ಲ. ಏಕೆಂದರೆ ಅಂತಹ ಪ್ರಪಂಚದಲ್ಲಿ ಶ್ರಮಕ್ಕೆ ಬೇಕಾದ ಸಾಂಸ್ಥಿಕ ಪರಿಸರ, ಖಾತರಿಯಾದ ವರಮಾನ, ಸಾಮಾಜಿಕ ಹಾಗೂ ಉದ್ಯೋಗದ ಭರವಸೆ ಮತ್ತು ಕಾರ್ಮಿಕ ರಕ್ಷಣೆ, ಎಲ್ಲವೂ ಇರುತ್ತದೆ. ಅದಕ್ಕಾಗಿ ಉದ್ಯೋಗಕ್ಕಾಗಿ ಅಗತ್ಯವಾದ ಶಿಕ್ಷಣವನ್ನು ಪಡೆಯುವುದಕ್ಕೆ ಜನರು ಪ್ರಯತ್ನಿಸುತ್ತಾರೆ.

Digitised by Bharatavani, CIIL

ಇತ್ತೀಚೆಗೆ ನಡೆಸಲಾದ ಹಲವು ಸಂಶೋಧನೆಗಳಿಂದ ಶಿಕ್ಷಣಕ್ಕೂ ಮತ್ತು ಶ್ರಮದ ಮಾರಕಟ್ಟೆಗೂ ಇರುವ ನಿಕಟ ಸಂಬಂಧವನ್ನು ಶಿಕ್ಷಣ ಪಡೆದವರ ಶ್ರಮಕ್ಕೂ, ಶಿಕ್ಷಣ ಪಡೆಯದವರ ಶ್ರಮಕ್ಕೂ ಹಾಗೂ ಅವರ ವರಮಾನಗಳಿಗೂ ಇರುವ ವ್ಯತ್ಯಾಸದಿಂದ ಕಂಡುಕೊಳ್ಳಲಾಗಿದೆ. ಇದರ ಪರಣಾಮವಾಗಿ ಶಿಕ್ಷಣದ ನೀತಿಯನ್ನು ನಿರೂಪಿಸುವವರನ್ನು ವಿವಿಧ ಹಂತಗಳ ಶಿಕ್ಷಣ ಮತ್ತು ಅದರಿಂದಾಗುವ ಲಾಭಗಳನ್ನು ಲೆಕ್ಕಾಚಾರ ಹಾಕುವಂತೆ ಪ್ರೇರೇಪಿಸುತ್ತದೆ. ಅದರಲ್ಲೂ ಉನ್ನತ ಶಿಕ್ಷಣದ ವಿಷಯದಲ್ಲಿ ಇದು ಹೆಚ್ಚು. ಶಿಕ್ಷಣ ಮತ್ತು ಅದಕ್ಕೆ ಸಂಬಂಧಪಟ್ಟ ಕೌಶಲಗಳು ಶ್ರಮದ ಉತ್ತಮ ಮಾರುಕಟ್ಟೆಯ ಸೃಷ್ಟಿಗೆ ಸಹಾಯ ಮಾಡುವ ಅಂಶಗಳು. ಒಂದು ದೇಶದ ಅಭಿವೃದ್ಧಿ ಹಾಗೂ ಅದು ಜಾಗತಿಕ ಪ್ರಪಂಚದಲ್ಲಿ ಗಳಿಸುವ ಸ್ಥಾನಮಾನಗಳೂ ಕೂಡ ಉತ್ತಮ ಕೌಶಲದಿಂದ ಕೂಡಿದ ಶ್ರಮದ ಸೃಷ್ಟಿಯ ಪ್ರಮಾಣವನ್ನು ಅವಲಂಬಿಸಿದೆ. ಶಿಕ್ಷಣದಲ್ಲಿ ಆಸಕ್ತಿಯನ್ನು ತೋರಿಸುವ ದೇಶದ ಆರ್ಥಿಕ ನೀತಿಯು ಅಲ್ಲಿನ ಜನರ ಆದಾಯದ ಹೆಚ್ಚಳಕ್ಕೆ ಸಂಬಂಧಪಟ್ಟಿರುವಂತೆ ದೇಶದ ಬಡತನದ ನಿವಾರಣೆಯ ಗುರಿಯನ್ನೂ ಹೊಂದಿರುತ್ತದೆ.

–ಡಾ. ರಾಘವೇಂದ್ರರಾವ್ ಹೆಚ್.ಎಸ್.

# ಸ

## ಸಂಪ್ರದಾಯ ರಹಿತ ಶಿಕ್ಷಣ – ಅರ್ಥ, ಉದ್ದೇಶಗಳು

ಸಂಪ್ರದಾಯ ರಹಿತ ಶಿಕ್ಷಣವೆಂಬ ಪರಿಕಲ್ಪನೆ (Non-formal Education) 1960ರಲ್ಲಿ ಹುಟ್ಟಿಕೊಂಡಿತು. ಈ ಶಿಕ್ಷಣ ಪದ್ಧತಿಯು ಬಹಳ ಹೊಸ ಶಿಕ್ಷಣ ವ್ಯವಸ್ಥೆಯಂತೂ ಅಲ್ಲ; ಸಂಪ್ರದಾಯ ರಹಿತ ಶಿಕ್ಷಣ ಒಂದು ಕಲಿಕೆಯ ವಿಧಾನ. ಪ್ರಸ್ತುತ ವಿದ್ಯಾಪದ್ಧತಿಯು ದೇಶದ ಪ್ರಚಲಿತ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಪ್ರತೀಕ ಆಗಿದೆ. ಪ್ರತಿವರ್ಷವೂ ಶಾಲಾ ಕಾಲೇಜುಗಳಲ್ಲಿ ಔಪಚಾರಿಕ ಶಿಕ್ಷಣ ಪಡೆದು ಹೊರಬಂದ ಲಕ್ಷಾಂತರ ಮಂದಿ ನಿರುದ್ಯೋಗಿಗಳಾಗಿದ್ದಾರೆ. ನಮ್ಮ ಆರ್ಥಿಕ ಯೋಜನೆಯ ಕಾರ್ಯಚರಣೆ ತುಂಬಾ ನಿಧಾನ. ನಿಂತು ಸಾಗು ಎಂಬದು ಅದರ ತತ್ವ. ಇದರ ಫಲವಾಗಿ ಎಂಜಿನಿಯರುಗಳು ಮತ್ತು ವಿಜ್ಞಾನಿಗಳಿಗೇ ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗ ದೊರೆಯುತಿಲ್ಲ. ಉದ್ಯೋಗ ವಿನಿಮಯ ಕೇಂದ್ರದಲ್ಲಿ ದಾಖಲಾಗುವ ಅರ್ಜಿದಾರರಲ್ಲಿ ಶೇ.98% ಅಭ್ಯರ್ಥಿಗಳಿಗೆ ತಾಂತ್ರಿಕ ಕೌಶಲ್ಯಗಳು ಇರುವುದಿಲ್ಲ. ಅವರು ನಿರ್ವಹಿಸಬಹುದಾದ ಕೆಲಸಗಳು ಹೆಚ್ಚಿನ ಪ್ರಮಾಣದಲ್ಲಿ ದೊರಕದಿರುವುದು. ದಿನನಿತ್ಯದ ಅಗತ್ಯಗಳನ್ನು ಪೂರೈಸುವ ಕೆಲಸಗಾರರು ಸಿಗದಿರುವುದು ಸಹ ಒಂದು ಸಾಮನ್ಯವಾದ ಸಂಗತಿಯಾಗಿದೆ. ಇದು ದಿನನಿತ್ಯದ ಕಾರ್ಯನಿರ್ವಹಣೆಗೆ ಬಹಳ ಅಡಚಣೆಯಾಗಿದೆ.

ಆದರೂ ಯುವಪೀಳಿಗೆಯವರು ಔಪಚಾರಿಕ ಶಿಕ್ಷಣ ಸಂಸ್ಥೆಗಳಿಂದ ಹೊರಬರುತ್ತಿದ್ದಾರೆ. ಜನಸಂಖ್ಯೆಯ ಸ್ಫೋಟದಿಂದ ಶಾಲಾ ಕಾಲೇಜುಗಳಲ್ಲಿ ಸ್ಥಳಾಭಾವವೂ ಇದೆ. ಈ ಎಲ್ಲಾ ಕಾರಣಗಳಿಂದಾಗಿ ಶಿಕ್ಷಣ ಪಡೆಯುವ ಅವಕಾಶದಿಂದ ಜನರು ವಂಚಿತರಾಗುವ ಸಾಧ್ಯತೆಗಳಿದ್ದು ಮುಂದಿನ ಜೀವನವು ಸುಗಮವಾಗಿರಲು ಪ್ರತಿಯೊಬ್ಬ ವ್ಯಕ್ತಿಯು ಸಹ ತನ್ನ ಆಸಕ್ತಿ ಮತ್ತು ಅರ್ಹತೆಗೆ ಅನುಸಾರವಾಗಿ ಉದ್ಯೋಗವನ್ನು ಆಯ್ದುಕೊಳ್ಳುವುದು ಅನಿವಾರ್ಯವಾಗುವುದರಿಂದ ಸಂಪ್ರದಾಯ ರಹಿತ ಶಿಕ್ಷಣ ಅಗತ್ಯವೆನಿಸುತ್ತದೆ.

ಸಂಪ್ರದಾಯ ರಹಿತ ಶಿಕ್ಷಣ ಸಾಧಾರಣವಾಗಿ ಶಾಲೆಯಿಂದ ಹೊರಗಡೆ ದೊರೆಯುವಂತಹ ಶಿಕ್ಷಣ. ವ್ಯಕ್ತಿಯ ಅವಶ್ಯಕತೆಯನ್ನು ಆಧರಿಸಿ ನೀಡುವಂತಹ ಶಿಕ್ಷಣ. ವ್ಯಕ್ತಿಗೆ ದೊರೆಯುವ ವಿರಾಮ ಕಾಲವನ್ನು ಅವಲಂಬಿಸಿ ಆತನ ಅನುಕೂಲತೆಗೆ ತಕ್ಕಂತೆ ನೀಡಲ್ಪಡುವ ಶಿಕ್ಷಣ ಕ್ರಮ. ಇದು ಆತನ ಪರಿಸರ, ಸಾಮರ್ಥ್ಯ, ಅವಶ್ಯಕತೆ ಇವುಗಳನ್ನು ಆಧರಿಸಿ ನೀಡುವಂತಹುದು. ಈ ಶಿಕ್ಷಣ ಕ್ರಮವು ಸುಸಂಘಟಿತವಾಗಿದ್ದು ನಿರ್ದಿಷ್ಟ ಉದ್ದೇಶಗಳನ್ನು ಹೊಂದಿ ತಕ್ಷಣದಲ್ಲಿಯೇ ಪ್ರತಿಫಲನವನ್ನು ದೊರಕಿಸಿಕೊಡುತ್ತದೆ. ಪರಿಸರ ಮತ್ತು ಕಲಿಕಾರ್ಥಿಯ ಅವಶ್ಯಕತೆಗಳನ್ನು ಪೂರೈಸುತ್ತದೆ. ಈ ಶಿಕ್ಷಣ ಕ್ರಮದಲ್ಲಿ ವಸ್ತುವಿಷಯ ಹಾಗೂ ಬೋಧನಾ ವಿಧಾನ ವಿಭೇದಿಕರಿಸಲಾಗಿದೆ. ಕಲಿಯುವವರಿಗೆ ತಕ್ಕಂತೆ ಭಾಗವಹಿಸುವ ಅಭ್ಯರ್ಥಿಗಳಿಗೆ ತಕ್ಕಂತೆ ಸ್ಥಳೀಯ ಸಂಪನ್ಮೂಲಗಳನ್ನಾಧರಿಸಿ ಗರಿಷ್ಟತಮ ಉಪಯೋಗವನ್ನು ಪಡೆಯುವುದಾಗಿದೆ. ಮಾನವ ಶಕ್ತಿಯನ್ನು ಬಳಸಿಕೊಂಡು ಅದಕ್ಕೆ ಚಾಲನೆಯನ್ನುಕೊಟ್ಟು ಪರಿಸರ ಮತ್ತು ವ್ಯಕ್ತಿಯನ್ನು ಶ್ರೀಮಂತಗೊಳಿಸುತ್ತದೆ.

ಕೂಮ್ಸ್ ಮತ್ತು ಅಹಮದ್‌ರ ಪ್ರಕಾರ ಸಂಪ್ರದಾಯ ರಹಿತ ಶಿಕ್ಷಣ ಪರಿಸರ ಅಂಶಗಳಿಂದ ಕೂಡಿದ್ದು, ಇದು ವ್ಯಕ್ತಿಗಳಲ್ಲಿ ಗೃಹಕೃತ್ಯದ ಕೌಶಲ್ಯಗಳನ್ನು ಬೆಳೆಸುತ್ತದೆ. ಸೌಂದರ್ಯ ಪ್ರಜ್ಞೆಯನ್ನು ಆಸ್ವಾದಿಸುವ ಮತ್ತು ಪರಿಸರ, ವ್ಯಕ್ತಿ ಬೆಳವಣಿಗೆ ಇನ್ನಿತರ ಅಂಶಗಳಲ್ಲಿ ಕುರಿತು ಯೋಚನಾ ಲಹರಿಯನ್ನು ವಿಶ್ಲೇಷಿಸುತ್ತದೆ. ಮನೋಭಾವ, ಮೌಲ್ಯ, ವಿಬಿನ್ನ ವಿಚಾರಗಳನ್ನು ಕುರಿತು ವ್ಯಕ್ತಿ ಅಧಿಕಾರಯುತವಾಗಿ ತನ್ನ ವಿಚಾರ ಜ್ಞಾನವನ್ನು ಪ್ರಕಟಿಸಲು ಚಾಲನೆ ನೀಡುತ್ತದೆ ಹಾಗೂ ಯಾವುದೇ ಜ್ಞಾನವನ್ನು ಪ್ರಕಟಿಸಲು ಚಾಲನೆ ನೀಡಲು ಸಮರ್ಥವಾಗಿರುತ್ತದೆ.

ಡಾ.ಎಫ್.ಎ.ಕೋಶಿಯವರ ಪ್ರಕಾರ ಜನರ ಸಾಮಾಜಿಕ, ವೈಯಕ್ತಿಕ ಬದುಕು ಮತ್ತು ಔದ್ಯೋಗಿಕ ಸಾಮರ್ಥ್ಯಗಳನ್ನು ಅಥವಾ ವೃತ್ತೀಯ ಸಾಮರ್ಥ್ಯಗಳನ್ನು ಉತ್ತಮಪಡಿಸುವಲ್ಲಿ ಸಂಪ್ರದಾಯ ರಹಿತ ಶಿಕ್ಷಣ ಪ್ರಭಾವ ಬೀರುತ್ತದೆ. ಇದರಿಂದ ತಕ್ಷಣದ ಲಾಭ ಹಾಗೂ ಬದಲಾವಣೆಯನ್ನು ಹೊಂದಬಹುದು. ವ್ಯಕ್ತಿಯ ದಿನನಿತ್ಯದ ಜೀವನದಲ್ಲಿ ಆತನ ಪರಿಸರದ ಅಂಶಗಳನ್ನು ಅವಲಂಬಿಸಿ, ಆತನ ಗುರಿ ಮತ್ತು ಅಭಿಲಾಷೆಗಳನ್ನು ಪೂರೈಸುವುದರ ಜೊತೆಗೆ ಪ್ರಯೋಗಾತ್ಮಕತೆಯನ್ನು ಬೆಳೆಸುತ್ತದೆ.

Digitised by Bharatavani, CIIL

ಸಂಪ್ರದಾಯ ರಹಿತ ಶಿಕ್ಷಣ ಬಹಳ ವಿಶಾಲವ್ಯಾಪ್ತಿ ಹೊಂದಿದ್ದು, ಔಪಚಾರಿಕ ಶಿಕ್ಷಣಕ್ಕೂ, ಶಾಲೆಗೆ ಹೋಗದ ಮಕ್ಕಳಿಗೂ, ಶಾಲೆಯಿಂದ ಹೊರಬಂದ ಮಕ್ಕಳಿಗೂ, ಯುವಕರಿಗೂ, ಹಿರಿಯರಿಗೂ ನೀಡಬಹುದಾಗಿದೆ. ಅಂದರೆ 6 ರಂದ 99ನೇ ವಯಸ್ಸಿನವರೆಗೂ ನೀಡಬಹುದಾದಂತಹುದು ಎಚಿದು ಮಾಲ್ಕೋಂ ಆದಿಶೇಷಯ್ಯ ಹೇಳಿದ್ದಾರೆ.

**ಸಂಪ್ರದಾಯ ರಹಿತ ಶಿಕ್ಷಣದ ಲಕ್ಷಣಗಳು:**

1. ಇದು ಬಹುಮುಖಿಯಾದ ಪ್ರಕ್ರಿಯೆಯಾಗಿದೆ. ಅಂದರೆ ಇದು ಅಕ್ಷರತೆ, ಸಾಮಾಜಿಕ ಪ್ರಜ್ಞೆ ಮತ್ತು ವೃತ್ತಿ ತರಬೇತಿ ನೀಡುವುದಾಗಿದೆ.
2. ಇದು ಕೇವಲ ಮಕ್ಕಳು ಮತ್ತು ಯುವಕರಿಗಾಗಿ ಮಾತ್ರವಲ್ಲ ತಮ್ಮ ಜೀವನದ ಯಾವುದೇ ಹಂತದಲ್ಲಿ ಶಿಕ್ಷಣ ಪಡೆಯಬಯಸುವ ವಯಸ್ಕರಾಗಿಯೇ ಇದೆ.
3. ಇದು ಯಾವುದೇ ಜಟಿಲ ಕಠಿಣ ಕಾಯಿದೆ ಕಟ್ಟಳೆಗಳಿಲ್ಲದ ಅಥವಾ ನಿರ್ದಿಷ್ಟ ಹಂತ ಅಥವಾ ವೇಳೆಯ ಮಿತಿಯಿಲ್ಲದ ಸರಳ ಶಿಕ್ಷಣ ಕ್ರಮವಾಗಿದೆ.
4. ಇದು ಜೀವಕ್ಕೆ ಮತ್ತು ಸುತ್ತಲಿನ ವಾತವರಣಕ್ಕೆ ಸಂಬಂದಿಸಿದುದು ಆಗಿದೆ.
5. ಇದು ಅಸಾಂಪ್ರದಾಯಿಕ ಶಿಕ್ಷಣ ಪಡೆಯುವವರನ್ನು ಕ್ರಿಯಾಶೀಲರನ್ನಾಗಿ ಮತ್ತು ಸಮರ್ಥ ಕೆಲಸಾಗಾರರನ್ನಾಗಿ ರೂಪಿಸುವ ಪೂರ್ವ ಸಿದ್ಧತೆಯನ್ನು ಒದಗಿಸುತ್ತದೆ.
6. ಇದು ಜೀವನದಲ್ಲಿ ಬರುವ ವಿವಿಧ ಅವಕಾಶಗಳನ್ನು ಮತ್ತು ಉದ್ಯೋಗಗಳನ್ನು ಕೈಗೊಳ್ಳಲು ಶಿಕ್ಷಣ ನೀಡುತ್ತದೆ.
7. ಶಿಕ್ಷಣ ಕ್ಷೇತ್ರ ಮತ್ತು ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡುತ್ತದೆ. ವಿವಿಧ ಕ್ಷೇತ್ರಗಳಲ್ಲಿ ತರಬೇತಿ ಪಡೆದ ವ್ಯಕ್ತಿ ಒಂದು ಉದ್ಯೋಗ ಸಿಗದಿದ್ದಾಗ ಮತ್ತೊಂದು ಉದ್ಯೋಗ ಕೈಗೊಳ್ಳಬಹುದು.
8. ಗ್ರಾಮೀಣ ಜನರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮತ್ತು ಆವಕಾಶ ರಹಿತರಿಗೆ, ಹಿಂದುಳಿದವರಿಗೆ ಪ್ರಗತಿಯತ್ತ ಸಾಗಲು ಅವಕಾಶ ನೀಡುತ್ತದೆ.
9. ಸ್ತ್ರೀಯರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು ಶ್ರಮಿಸುತ್ತದೆ.

ಟಿ.ಎ.ಕೋಷಿಯವರ ಪ್ರಕಾರ, ಅಸಂಪ್ರದಾಯ ಶಿಕ್ಷಣ ಚಟುವಟಿಕೆಗಳನ್ನು ಔಪಚಾರಿಕ ಶಾಲೆ ಮತ್ತು ವಿಶ್ವವಿದ್ಯಾಲಯಗಳ ಪರಿಧಿಯ ಕೌಶಲ್ಯಗಳನ್ನು, ಅಭಿವ್ಯಕ್ತಿಗಳನ್ನು ಮತ್ತು ಆಚರಣೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರುತ್ತದೆ.

ಕಲಿಯುವವನ ಬೇಡಿಕೆಗಳನ್ನು ಈಡೇರಿಸಲು ಇದು ಸಾಮಾಜಿಕ ಮತ್ತು ವೈಯಕ್ತಿಕ ಜೀವನವನ್ನು ವೃತ್ತಿ ಸಾಮರ್ಥ್ಯವನ್ನು ಉತ್ತಮಗೊಳಿಸುವತ್ತ ವಿಶೇಷ ಗಮನ ಕೊಡುತ್ತದೆ. ಇದು ಉತ್ತಮ ಶಿಕ್ಷಣ ವ್ಯವಸ್ಥೆಯಾಗಿರುವುದು. ಮಕ್ಕಳಲ್ಲಿ ಸಾಧ್ಯವಾಗಿಸುವ ಕಲಿಕೆಯು ತತ್‌ಕ್ಷಣ ವ್ಯವಹಾರಿಕವಾಗಿ ಪ್ರಯೋಜನಕಾರಿಯಾಗಿರುವುದರಿಂದ ಇದು ವ್ಯಾಪಕ ಕಲಿಕಾ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ.

**ಸಂಪ್ರದಾಯ ರಹಿತ ಶಿಕ್ಷಣದ ಬೆಳವಣಿಗೆಯ ಕಾರಣಗಳು:**

1. ಜೀವನ ಪರ್ಯಂತ ಶಿಕ್ಷಣಕ್ಕೆ ಹೆಚ್ಚಿದ ಬೇಡಿಕೆ.
2. ಜೀವನದ ಯಾವುದೇ ವಯಸ್ಸು ಮತ್ತು ಸಮಯ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಬೇಕಾದ ಅಗತ್ಯತೆ.
3. ಒಮ್ಮೆ ಶಿಕ್ಷಣ ಪಡೆದ ನಂತರ ಕೆಲ ಕಾಲ ಬಿಟ್ಟು ಪುನಃ ಶಿಕ್ಷಣ ಪಡೆಯಲು ಅವಕಾಶದ ಬೇಡಿಕೆ.
4. ಎಲ್ಲರಿಗೂ ಶಿಕ್ಷಣವನ್ನು ಒದಗಿಸಬೇಕೆಂಬ ರಾಷ್ಟ್ರೀಯ ಉದ್ದೇಶ.
5. ಆಧುನಿಕ ಸಂದರ್ಭದಲ್ಲಿ ಶಿಕ್ಷಣ ಪಡೆಯಬೇಕೆಂಬುವವರ ಸಂಖ್ಯೆಯ ಹೆಚ್ಚಳ.
6. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದಿಂದಾಗಿ ಸಮಾಜದ ಎಲ್ಲರೂ ಈ ಕ್ಷೇತ್ರಗಳ ಮೂಲಭೂತ ಜ್ಞಾನ ಪಡೆಯಬೇಕಾದ ಅಗತ್ಯತೆ.

**ಸಂಪ್ರದಾಯ ರಹಿತ ಶಿಕ್ಷಣದ ಉದ್ದೇಶಗಳು:**

1. ಬಡತನ, ಅನಕ್ಷರತೆ ಮತ್ತು ನಿರುದ್ಯೋಗವನ್ನು ಹೋಗಲಾಡಿಸುವುದು.
2. ದಿನನಿತ್ಯದ ಜೀವನದ, ವ್ಯವಹಾರಕ್ಕಾಗಿ ಓದು–ಬರಹ ಕಲಿಸುವುದು.
3. ಜ್ಞಾನ, ತಿಳುವಳಿಕೆ ಮತ್ತು ಮನೋಭಾವ ಕೌಶಲ್ಯಗಳನ್ನು ಬೆಳೆಸುವುದು.
4. ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾಡುವುದು ಮತ್ತು ಸ್ವಯಂ ಉದ್ಯೋಗಕ್ಕೆ ತರಬೇತಿ ಕೊಡುವುದು.
5. ಸಮಾಜದ ಬದಲಾವಣೆಗೆ ಹೊಂದಿಕೊಂಡು ಹೋಗಲು ವ್ಯಕ್ತಿಗಳಿಗೆ ಸಹಾಯ ಮಾಡುವುದು.
6. ಕಲಿಕಾರ್ಥಿಗಳ ತಕ್ಷಣದ ಅವಶ್ಯಕತೆಗಳನ್ನು ಪೂರೈಸುವುದು.
7. ಸಮಾನತೆಯ ಭಾವನೆಯನ್ನು ಬೆಳೆಸುವುದು.
8. ಔದ್ಯೋಗಿಕ ಕೌಶಲಗಳನ್ನು ಗಳಿಸಿಕೊಳ್ಳಲು ಸಹಾಯ ಮಾಡುವುದು.
9. ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕರಿಸುವುದು.
10. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಪರಿಜ್ಞಾನ ಮೂಡಿಸುವುದು.
11. ವ್ಯಕ್ತಿಗಳನ್ನು ಉತ್ತಮ ನಾಗರಿಕರನ್ನಾಗಿ ಮಾಡುವುದು.
12. ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹ ನೀಡುವುದು.

Digitised by Bharatavani, CIIL

13. ತಮ್ಮ ತೊಂದರೆಗಳನ್ನು ತಾವೇ ಪರಿಹರಿಸಿಕೊಳ್ಳುವಂತೆ ಸಹಾಯ ಮಡುವುದು.

14. ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಪ್ರೇರೇಪಿಸುವುದು.

15. ಜೀವನ ಪರ್ಯಂತ ಶಿಕ್ಷಣವನ್ನು ಒದಗಿಸುವುದು.

ಸಂಪ್ರದಾಯರಹಿತ ಶಿಕ್ಷಣದ ಸಹಾಯದಿಂದ ಜೀವನ ಪರ್ಯಂತ ಶಿಕ್ಷಣವೆಂಬ ಪರಿಕಲ್ಪನೆ ಮೂಡಿ ಬಂದಿದೆ. ಇದು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ ಸಾಧಿಸಲು ಸಹಕಾರಿಯಾಗಿದೆ.

–ಕಾಂತರಾಜು ಎಂ. ಎಸ್.

## ಸಂಪ್ರದಾಯ ರಹಿತ ಶಿಕ್ಷಣ – ಪಠ್ಯಕ್ರಮ, ವಿಧಾನಗಳು

ಸಂಪ್ರದಾಯ ರಹಿತ ಶಿಕ್ಷಣ (Non-formal Education) ವಿಶಾಲವಾದ ಅರ್ಥವನ್ನು ಹೊಂದಿದ್ದು ಜೀವನದುದ್ದಕ್ಕೂ ಅನುಭವದಿಂದ ದೊರೆಯುವ ಶಿಕ್ಷಣವಾಗಿದೆ. ಪ್ರತಿ ಅನುಭವ ಮನುಷ್ಯನಿಗೆ ಒಂದಿಲ್ಲೊಂದು ಪಾಠ ನೀಡುತ್ತದೆ. ಆ ಅನುಭವದಿಂದ ಮುಂದೆ ಅಂತಹ ಪ್ರಸಂಗಗಳಲ್ಲಿ ಅವನು ಜಾಣ್ಮೆಯಿಂದ ವರ್ತಿಸುತ್ತಾನೆ. ಆದ್ದರಿಂದಲೇ ಲಾಡ್ವರವರು "ಶಿಕ್ಷಣವೆಂದರೆ ಜೀವನ, ಜೀವನವೆಂದರೆ ಶಿಕ್ಷಣ" ಎಂದು ಹೇಳಿದ್ದಾರೆ. ಇದು ಶಿಕ್ಷಣದ ವ್ಯಾಪ್ತಿಯನ್ನು ತುಂಬ ಜೀವನದಷ್ಟೇ ವಿಶಾಲವನ್ನಾಗಿ ಮಾಡಿದೆ. ಜೀವನದ ಎಲ್ಲ ರಂಗಗಳನ್ನು ಒಳಗೊಳ್ಳುವಂತೆ ಮಾಡಿದೆ.

ಸಂಪ್ರದಾಯರಹಿತ ಶಿಕ್ಷಣವನ್ನು ಜನರಿಗೆ ಅನುಕೂಲವಾಗುವಂತಹ ಸ್ಥಳದಲ್ಲಿ ಅಂದರೆ ದೇವಸ್ಥಾನಗಳು, ಕೈಗಾರಿಕಾ ಕೇಂದ್ರಗಳು, ಬಯಲು ಮಂದಿರ, ಖಾಸಗಿ ಮನೆಗಳು, ಶಾಲಾವರಾಂಡಗಳು ಮತ್ತು ಭಜನೆ ಮನೆಗಳಲ್ಲಿ ದೊರಕಿಸಿಕೊಡಬಹುದು.

**ಪಠ್ಯಕ್ರಮ:** ಸಂಪ್ರದಾಯ ರಹಿತ ಶಿಕ್ಷಣ ವ್ಯಾಪಕ ವ್ಯಾಪ್ತಿಯುಳ್ಳದ್ದು. ಅದು ಜೀವನದ ಎಲ್ಲ ಕ್ಷೇತ್ರಗಳಿಗೆ ಕೈಚಾಚಿದೆ. ಅದು ಜೀವನ ಪರ್ಯಂತ ಶಿಕ್ಷಣ ಹಾಗೂ ಅಭಿವೃದ್ಧಿಯ ಸಂಕೇತವೂ ಹೌದು. ವ್ಯಕ್ತಿಯ ವಿಕಾಸ ಅನಿವಾರ್ಯ. ಸಾಮುದಾಯಿಕ ಜೀವನದಲ್ಲಿ ಪಾಲ್ಗೊಳ್ಳುವುದು ಅಗತ್ಯ. ಸಂಪ್ರಾದಾಯ ರಹಿತ ಶಿಕ್ಷಣದ ವಸ್ತುಗಳನ್ನು ನಿರ್ಧರಿಸುವಾಗ ಸಮಾಜದಲ್ಲಿ ಶೈಕ್ಷಣಿಕವಾಗಿ ಹಿಂದುಳಿದವರ ಅವಶ್ಯಕತೆಗಳಿಗೆ ಆದ್ಯತೆ ನೀಡುವುದು ಅಗತ್ಯ.

ನಿರಕ್ಷರತೆಯಿಂದ ನರಳುವವರಿಗೆ, ಸಾಕಷ್ಟು ಸೂಕ್ತ ರೀತಿಯ ವಿದ್ಯೆಯಿಲ್ಲದವರಿಗೆ, ಸಂಪನ್ಮೂಲಗಳ ಕೊರತೆ ಹಾಗೂ ಇನ್ನಿತರ ಕಾರಣಗಳಿಂದ ಸಾಮೂಹಿಕ ಜೀವನದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ ಅಥವಾ ಅವರು ಸಮಾಜದ ಪರಿಸ್ಥಿಗೆ ಹೊಂದಿಕೊಳ್ಳಲು ಸಾಧ್ಯವಿಲ್ಲ ಹಾಗೂ ಅಂಥವರ ಅಭಿವೃದ್ಧಿಗೆ ರೂಪಿಸುವ ತರಬೇತಿ ಯೋಜನೆಯಲ್ಲಿ ಓದು, ಬರಹ, ಲೆಕ್ಕ ಮತ್ತು ಪರಿಸರವನ್ನು ಅರಿಯುವ ಅಂಶಗಳನ್ನು ಅಳವಡಿಸುವುದು ಒಳ್ಳೆಯದು. ಜೊತೆಗೆ ಅವರು ಆರ್ಥಿಕ ದೃಷ್ಟಿಯಿಂದ ಯಾವುದಾದರೂ ಉತ್ಪಾದನಾ ಕಾರ್ಯದಲ್ಲಿ ನಿರತರಾಗಲು ಸೂಕ್ತ ಶಿಕ್ಷಣ ಮತ್ತು ತರಬೇತಿ ಅಗತ್ಯ. ಮೇಲಾಗಿ ಆರೋಗ್ಯ ಮತ್ತು ನೈರ್ಮಲ್ಯ, ಗೃಹಕೃತ್ಯ ನಿರ್ವಹಣೆ, ಮಕ್ಕಳ ಲಾಲನೆ ಪಾಲನೆ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಬೆಳೆಸಿಕೊಳ್ಳುವ ಪ್ರವೃತ್ತಿ ಹಾಗೂ ಸಾಮುದಾಯಿಕ ಜೀವನದಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತಹ ವಿಷಯಗಳ ಮೇಲೆ ತಿಳುವಳಿಕೆ ನೀಡತಕ್ಕದ್ದು.

ಸೂಕ್ತ ಮತ್ತು ಲೌಖಿಕ ಶಿಕ್ಷಣವಿಲ್ಲದ ಯುವಕರು ತಮ್ಮ ಸಮಾಜದ ಸಮಸ್ಯೆಗಳನ್ನರಿತು ಅವುಗಳನ್ನು ಪರಿಹರಿಸಿಕೊಳ್ಳಲಾರರು ಮತ್ತು ಅವರು ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ಜವಾಬ್ದಾರಿಯಿಂದ ಪಾಲ್ಗೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಅವರವರ ಕಸುಬಿನಲ್ಲಿ ನೈಪುಣ್ಯತೆಯನ್ನು ಪಡೆಯಲು ಹೆಚ್ಚಿನ ವೃತ್ತಿಪರ ಮತ್ತು ಲೌಖಿಕ ಶಿಕ್ಷಣ ಹಾಗೂ ತರಬೇತಿಯನ್ನು ನೀಡಬೇಕು.

ಅಂಗವಿಕಲರೂ ಸಹ ಸೂಕ್ತ ಕಸುಬನ್ನು ಕಲಿತು ಉತ್ಪಾದನಾ ಕಾರ್ಯದಲ್ಲಿ ತೊಡಗುವಂತಹ ಶಿಕ್ಷಣ ವ್ಯವಸ್ಥೆ ಅಗತ್ಯ. ಅಂತೆಯೇ ಬುದ್ಧಿಮಾಂದ್ಯತೆ ಇರುವವರಿಗೂ ಯಾವುದಾದರೂ ಸುಲಭವಾದ ಕೌಶಲವನ್ನು ಕಲಿಸಬೇಕು. ಪಠ್ಯಕ್ರಮದಲ್ಲಿ ಆರೋಗ್ಯ ಮತ್ತು ನೈರ್ಮಲ್ಯ, ಗೃಹಕೃತ್ಯ ಮತ್ತು ಕೌಟುಂಬಿಕ ಜೀವನದ ಅಂಶಗಳಿಗೂ ಅವಕಾಶವಿರಬೇಕು.

**ಅಭ್ಯಾಸ ಪತ್ರಿಕೆ ರಚನೆ:**

ಸಾಂಪ್ರದಾಯಿಕ ಸಾಕ್ಷರತೆಯ ಕಲ್ಪನೆ ಇಂದು ಕ್ರಾಂತಿಕಾರಕವಾಗಿ ಬದಲಾಗಿದೆ. ಅದು ಕ್ರಿಯಾತ್ಮಕ ರೂಪ ತಾಳಿದೆ. ಅಭ್ಯಾಸ ಪತ್ರಿಕೆ ತಯಾರಿಸಲು ಕೆಲವು ಸಾಮಾನ್ಯ ನಿಯಮಗಳಿವೆ.

1. ಶಿಕ್ಷಣಾರ್ಥಿಗಳ ಪರಿಸರ ಮತ್ತು ಅವಶ್ಯಕತೆ, ಸೂಕ್ತ ಸಾಧನಗಳ ಬಳಕೆ ಹಾಗೂ ಅವುಗಳ ಮೂಲಕ ಕಲಿಯುವವರ ಆಸಕ್ತಿಯನ್ನು ಮತ್ತು ಅಗತ್ಯಗಳನ್ನು ಅರಿಯುವುದು. ಅವುಗಳ ಪೂರೈಕೆಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

2. ಕಲಿಯುವವರ ಅಗತ್ಯಗಳನ್ನು ಪೂರೈಸಬಲ್ಲ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಅನುಗುಣವಾದ ಅಭ್ಯಾಸ ಪತ್ರಿಕೆ ತಯಾರಾಗಬೇಕು.

3. ಶಿಕ್ಷಣಾರ್ಥಿಗಳು ಕಲಿಯಲು ಸೂಕ್ತ ಕಾರ್ಯಕ್ರಮಗಳ ವ್ಯವಸ್ಥೆಯಿರಬೇಕು.

4. ಶೈಕ್ಷಣಿಕ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ತಮ್ಮ ಗುರಿಯನ್ನು ಸಾಧಿಸಿವೆ ಎಂಬುದನ್ನು ಪರಿಶೀಲಿಸಲು ಮೌಲ್ಯಮಾಪನದ ವ್ಯವಸ್ಥೆ ಇರಬೇಕು.

   ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯದ ಪ್ರಕಾರ ಸಂಪ್ರದಾಯ ರಹಿತ ಶಿಕ್ಷಣದ ರಾಷ್ಟ್ರೀಯ ಮಟ್ಟದ ಅಭ್ಯಾಸ ಪತ್ರಿಕೆಯ ಗುರಿ ಹೀಗಿದೆ.

Digitised by Bharatavani, CIIL

1. ಭಾರತೀಯರ ಜನ ಜೀವನದಲ್ಲಿ ಸಾಕಷ್ಟು ವೈವಿಧ್ಯತೆ ಇದೆ. ಅಂತಹ ವೈವಿಧ್ಯತೆಯ ಮಧ್ಯೆ ಏಕತೆಯನ್ನು ಸಾಧಿಸುವುದು.
2. ವಿವಿಧ ಧರ್ಮಗಳ ಬಗ್ಗೆ ಪರಸ್ಪರ ಗೌರವ ಮತ್ತು ಮತ ಸಹಿಷ್ಣುತೆ, ಎಲ್ಲ ಧರ್ಮಗಳಿಗೂ ಸರ್ವಸಮ್ಮತವಾದ ಸಾಂಸ್ಕೃತಿಕ ಭೂಮಿಕೆಯ ಸಿದ್ಧತೆ.
3. ಸ್ವಾವಲಂಬನೆಯ ಅಗತ್ಯವನ್ನು ಮೂಡಿಸುವುದು.
4. ಪ್ರಜಾಪ್ರಭುತ್ವ ಮತ್ತು ಲೌಕಿಕ ಅಧಿಕಾರ ಪಾಲನೆ.
5. ಶೋಷಣೆಗೆ ಅವಕಾಶವಿಲ್ಲದಂತೆ ಎಲ್ಲರಿಗೂ ಸಮಾನಾವಕಾಶ.
6. ಕುರುಡು ನಂಬಿಕೆಗಳನ್ನು ಮತ್ತು ಮೂಢನಂಬಿಕೆಗಳನ್ನು ಹೋಗಲಾಡಿಸಿ ವೈಜ್ಞಾನಿಕ ಮನೋಭಾವವನ್ನು ಮೂಡಿಸುವುದು.
7. ಮಕ್ಕಳ ಕಲ್ಯಾಣ, ಏಳಿಗೆ ಮತ್ತು "ಚಿಕ್ಕ ಕುಟುಂಬ ಚೊಕ್ಕ ಕುಟುಂಬ" ಎಂಬ ವಿಚಾರದಲ್ಲಿ ಅರಿವು ಮೂಡಿಸುವುದು.

**ಬೋಧನಾ ಕ್ರಮಗಳು:**

ಬೋಧನೆಯಲ್ಲಿ ಶಿಕ್ಷಣಾರ್ಥಿ ಕೇಂದ್ರ ಬಿಂದು. ಅದನ್ನು ದೃಷ್ಟಿಯಲ್ಲಿರಿಸಿಕೊಂಡು ಪಠ್ಯ ಪುಸ್ತಕವನ್ನು ರಚಿಸಬೇಕೆಂಬುದು ನಿರ್ವಿವಾದ. ಬೋಧನೆಯಲ್ಲಿ ಉಪನ್ಯಾಸಕ್ಕೆ ಹೆಚ್ಚಿನ ಒತ್ತು ಇಲ್ಲ. ಶಿಕ್ಷಣಾರ್ಥಿಗಳು ತಮ್ಮ ಅನುಭವಗಳನ್ನು ಮತ್ತು ಸಮಸ್ಯೆಗಳನ್ನು ವ್ಯಕ್ತಪಡಿಸಲು ಅವಕಾಶವಿರತಕ್ಕದ್ದು. ಜೊತೆಗೆ ಕಲಿಯುವವರ ಸ್ವಯಂ-ಅಧ್ಯಯನಕ್ಕೆ ಆದ್ಯತೆ ನೀಡುವುದು ಅಗತ್ಯ. ಈ ಕಾರ್ಯ ಚಟುವಟಿಕೆಯಲ್ಲಿ ಉಪಾಧ್ಯಾಯರು ಮಾರ್ಗದರ್ಶಕರು ಮಾತ್ರ. ಇದೊಂದು ಆದರ್ಶದ ಕಲ್ಪನೆ.

ಶಿಕ್ಷಣಾರ್ಥಿ ಕಲಿಕೆಯಲ್ಲಿ ಹೆಚ್ಚು ಹೆಚ್ಚಾಗಿ ಹಾಗೂ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡುವುದು ಸಂಪ್ರದಾಯ ರಹಿತ ಶಿಕ್ಷಣದ ಗುರಿ. ಕಲಿಕೆ ವ್ಯಕ್ತಿಯಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಿ ಅದನ್ನು ಮುಂದುವರಿಸಲು ಉತ್ತೇಜಿಸಬೇಕು. ಅನೇಕ ಸಂದರ್ಭಗಳಲ್ಲಿ ಶಿಕ್ಷಣಾರ್ಥಿಗಳು ನಮ್ಮ ನಿರೀಕ್ಷೆಯಂತೆ ಕಲಿಕೆಯಲ್ಲಿ ಪಾಲ್ಗೊಳ್ಳುವುದಿಲ್ಲ ಹಾಗೂ ಈ ಬಗ್ಗೆ ಸಾಕಷ್ಟು ಆಸಕ್ತಿ ತೋರಿಸುವುದಿಲ್ಲ. ಈ ರೀತಿಯ ಜಡ ಮನೋಭಾವನೆ ತೊಲಗಿ ಕಲಿಕಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳುವಂತಹ ಮಾನಸಿಕ ಪರಿವರ್ತನೆ ಅವರಲ್ಲಿ ಆಗಬೇಕು.

**ಬೋಧನಾ ವಿಧಾನಗಳು:**

1. ಮೂಲಭೂತ ಕೌಶಲಗಳಾದ ಓದು, ಬರಹ, ಲೆಕ್ಕಾಚಾರಗಳನ್ನು ಚೆನ್ನಾಗಿ ಕಲಿಸುವ ಕ್ರಮಗಳನ್ನು ಉಪಯೋಗಿಸಬೇಕು.
2. **ಪರಿಸರದ ಪರಿಶೀಲನೆ:** ಪ್ರಾಕೃತಿಕ ಸನ್ನಿವೇಶದ ವಿಶ್ಲೇಷಣೆ ಆಯಾ ಕ್ಷೇತ್ರದ ಬೆಳೆಗಳು, ಸಂಘ ಸಂಸ್ಥೆಗಳು ಮುಂತಾದವುಗಳ ಪರಿಚಯ ಮತ್ತು ವಿಶ್ಲೇಷಣೆ.
3. **ಭೇಟಿ:** ಸಹಕಾರ ಸಂಘ, ಗ್ರಾಮ ಪಂಚಾಯಿತಿ, ಜಾತ್ರೆಗಳು, ಮೇಳಗಳು, ಮಾದರಿ ಕೃಷಿ ಕ್ಷೇತ್ರಗಳು, ಸಾರ್ವಜನಿಕ ಆರೋಗ್ಯ ಕೇಂದ್ರ, ಪ್ರವಾಹ ಪೀಡಿತ ಪ್ರದೇಶಗಳು, ಪ್ರಾಚೀನ ಶಿಲ್ಪಕಲಾ ಕೇಂದ್ರಗಳು ಇತ್ಯಾದಿ.
4. **ವಿಚಾರ ವಿನಿಮಯ:** ಬ್ಯಾಂಕಿನ ಅಧಿಕಾರಿ, ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ, ಓದು ಬರಹ ಕಲಿತು ಆದರ್ಶ ಜೀವನ ನಡೆಸುತ್ತಿರುವ ಯುವಕ, ಜೀತವಿಮೋಚನೆಯಿಂದ ಮುಕ್ತರಾದವರು ಇತ್ಯಾದಿ.
5. **ಅನುಕರಣ ಚಟುವಟಿಕೆಗಳು:** ಸಾಲ ನೀಡಿಕೆ, ಉದ್ಯೋಗಕ್ಕೆ ನೇಮಕಾತಿ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೋಕು ಬೋರ್ಡಿನ ಆಡಳಿತ ಕ್ರಮ, ಸಾಕ್ಷರತಾ ಕೌಶಲ್ಯದ ಬಳಕೆ ಈ ವಿಷಯಗಳ ಬಗ್ಗೆ ವಾಸ್ತವ ಪರಿಚಯ ಮಾಡಿಸಲು ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಅನುಕರಣ ಚಟುವಟಿಕೆಗಳನ್ನು ಏರ್ಪಡಿಸಬೇಕು.
6. ಭಿತ್ತಿಪತ್ರ, ಛಾಯಾಚಿತ್ರ, ಸಾಕ್ಷ್ಯಚಿತ್ರ ಮತ್ತು ಲಘು ಚಿತ್ರಪಟಗಳನ್ನು ಉಪಯೋಗಿಸಬೇಕು.
7. **ಜಾನಪದ ಮಾಧ್ಯಮಗಳ ಬಳಕೆ:** ಸೂತ್ರದ ಗೊಂಬೆ, ತೊಗಲು ಗೊಂಬೆ ಮತ್ತು ಪುತ್ಥಳಿಗೊಂಬೆ ಆಟಗಳು, ಸಾರ್ವಜನಿಕ ಅನಿಷ್ಟಗಳನ್ನು ಮತ್ತು ದುರ್ವ್ಯವಹಾರಗಳನ್ನು ಬಯಲು ಮಾಡುವಂತಹ ಕಿರು ನಾಟಕಗಳು. ಉದಾ: ಬಾಲ್ಯ ವಿವಾಹ, ವಿಧವಾ ವಿವಾಹ, ವರದಕ್ಷಿಣೆಯ ಪಿಡುಗು, ಜೀವ ವಿಮೆಯಿಂದ ದೊರೆಯುವ ಲಾಭಗಳು, ಭ್ರಷ್ಟಾಚಾರ ಮುಂತಾದ ಸಾರ್ವಜನಿಕ ಸಮಸ್ಯೆಗಳನ್ನು ಬಳಸಿಕೊಳ್ಳುವುದು.

**ಸಾಂಸ್ಕೃತಿಕ ಮನೋರಂಜನೆ ಮತ್ತು ಸಾರ್ವಜನಿಕ ಕಾರ್ಯಕ್ರಮಗಳು:**

ಶಿಕ್ಷಣಾರ್ಥಿಗಳು ಸಾಂಸ್ಕೃತಿಕ ಮನೋರಂಜನೆ ಕಾರ್ಯಕ್ರಮಗಳಲ್ಲಿ (ಅಂದರೆ ಆಟಪಾಠಗಳಲ್ಲಿ) ಮತ್ತು ರಾಷ್ಟ್ರೀಯ ಹಬ್ಬ ಹರಿದಿನಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಈ ಕಾರ್ಯಕ್ರಮಗಳು ಸಂಪ್ರದಾಯ ರಹಿತ ಶಿಕ್ಷಣ ಕೇಂದ್ರದ ಅಭ್ಯಾಸ ಪತ್ರಿಕೆಯಲ್ಲಿ ಇಲ್ಲದಿದ್ದರೂ ಕೂಡ ಇಂತಹ ಕಾರ್ಯಕ್ರಮಗಳನ್ನು ಕಡೆಗಣಿಸುವಂತಿಲ್ಲ. ಅವುಗಳಿಂದ ಉಂಟಾಗುವ ಪರಿಣಾಮ ಬಹಳ. ಈ ರೀತಿ ಶಿಕ್ಷಣ ಕಾರ್ಯಕ್ರಮವನ್ನು ಮನೋರಂಜನೆ ಮತ್ತು ಜಾನಪದ ಕಾರ್ಯಕ್ರಮಗಳೊಂದಿಗೆ ಬೆಸೆಯುವುದು ಬುದ್ಧಿವಂತಿಕೆ ಮತ್ತು ಲಾಭಕರ. ಸಾಮೂಹಿಕ ಭಜನೆ, ಜಾನಪದ ಮೇಳ, ಸಂಗೀತ, ನೃತ್ಯ, ನಾಟಕ, ಬಯಲಾಟ, ಯಕ್ಷಗಾನ, ಚಲನಚಿತ್ರ ಪ್ರದರ್ಶನ ಮುಂತಾದ ಮನೋರಂಜನ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಿ ಹಾಗೂ ಅಂತಹ ಕಾರ್ಯಕ್ರಮಗಳಲ್ಲಿ ಶಿಕ್ಷಣಾರ್ಥಿಗಳು ಪಾಲ್ಗೊಳ್ಳುವಂತೆ ಮಾಡಿದರೆ ಅವರಲ್ಲಿರುವ ಸುಪ್ತ ಪ್ರತಿಭೆಗಳು ಹೊರಹೊಮ್ಮಲು ಅವಕಾಶ ದೊರಕುತ್ತದೆ.

Digitised by Bharatavani, CIIL

ಕೊಕೋ, ಕಬ್ಬಡ್ಡಿ, ಕುಸ್ತಿ, ರಾಮನಚಂಡು, ಲಗ್ಗೇಚೆಂಡು, ಈಜುಗಾರಿಕೆ ಮುಂತಾದ ಸ್ಥಳೀಯ ಕ್ರೀಡಾ ಸ್ಪರ್ಧೆಗಳು ಹಾಗೂ ಪ್ರಚಾರೋಪನ್ಯಾಸ, ಚರ್ಚಾಗೋಷ್ಠಿ, ಪುಸ್ತಕ ವಾಚನ, ಪತ್ರಿಕಾವಲೋಕನ, ವಸ್ತು ಪ್ರದರ್ಶನ ಮುಂತಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು. ಇಂತಹ ಕಾರ್ಯಕ್ರಮಗಳಲ್ಲಿ ಶಿಕ್ಷಣಾರ್ಥಿಗಳು ಪಾಲ್ಗೊಳ್ಳುವಂತೆ ಪ್ರೇರೇಪಿಸಿ ಅವರಲ್ಲಿ ಧೈರ್ಯ, ಪರಸ್ಪರ ಸಹಕಾರ, ಹೊಂದಾಣಿಕೆ ಮತ್ತು ಸಾಮುದಾಯಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮನೋಭಾವ ಮುಂತಾದ ಒಳ್ಳೆಯ ಗುಣಗಳು ಬೆಳೆಯಲು ಸಹಾಯ ಮಾಡಬೇಕು.

**ಬೋಧನೆಯಲ್ಲಿ ಬಳಸಬಹುದಾದ ಪಾಠೋಪಕರಣಗಳು:**

1. ಓದು, ಬರಹ, ಲೆಕ್ಕದ ಜೊತೆಗೆ ಶಿಕ್ಷಣಾರ್ಥಿಗಳ ನಿರ್ದಿಷ್ಟ ಸಮಸ್ಯೆಗಳನ್ನು ವಿಚಾರ ಮಾಡುವ ಪಠ್ಯ ಪುಸ್ತಕಗಳು.
2. ಪೂರಕ ಪುಸ್ತಕ: ನಿಗದಿತ ಪಠ್ಯ ಪುಸ್ತಕದಲ್ಲಿ ಇಲ್ಲದ ವಿಷಯಗಳನ್ನು ಹಾಗೂ ಶಿಕ್ಷಣಾರ್ಥಿಗಳ ಜೀವನದ ವಿವಿಧ ಸಮಸ್ಯೆಗಳನ್ನು ಕುರಿತ ಎರಡನೆಯ ಪುಸ್ತಕ (ರೀಡರ್).
3. ಪಠ್ಯ ಪುಸ್ತಕದಲ್ಲಿ ಅಡಗಿರುವ ತಾಂತ್ರಿಕ ವಿಷಯಗಳ ಮೇಲೆ ಟಿಪ್ಪಣಿ.
4. ಚಿತ್ರಪಟಗಳು.
5. ವಾಚನಹಾಳೆ (Reading Card), ಮಡಿಕೆ ಹಾಳೆ (Folder) ಮತ್ತು ಪುಸ್ತಿಕೆಗಳು (Book Lets).
6. ಸುಲಭ ಮತ್ತು ಸರಳವಾದ ದೃಕ್‌ಶ್ರವಣ ಸಾಧನಗಳು, ಚಿತ್ರಪಟಗಳು ಮತ್ತು ಮಿಂಚು ಪಟಗಳು (Flash Cards).
7. ಕಾರ್ಯ ಪುಸ್ತಕ (Work Book).
8. ಉಪಾಧ್ಯಾಯರ ಶಿಕ್ಷಣ ಕೈಪಿಡಿ.
9. ಪೂರಕ ಸ್ಥಿರೀಕರಣ ಸಾಹಿತ್ಯ.
10. ಸರಳ ಶೈಲಿಯ ಕಥಾ ಪುಸ್ತಕಗಳು.

**ಸಂಪ್ರದಾಯ ರಹಿತ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ:**

ವಿವಿಧ ಹಂತಗಳಲ್ಲಿ (ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ, ಅಂತರರಾಷ್ಟ್ರೀಯ) ವಿವಿಧ ಸಂಪ್ರದಾಯ ರಹಿತ ಶಿಕ್ಷಣ ಸಂಘ ಸಂಸ್ಥೆಗಳ ಮಧ್ಯೆ ಹೊಂದಾಣಿಕೆ ಮತ್ತು ಸಹಕಾರ ಏರ್ಪಡಲು ಹಾಗೂ ಅವುಗಳಿಗೆ ಸಲಹೆ ನೀಡಲು ಸೂಕ್ತ ವ್ಯವಸ್ಥೆ ಇರತಕ್ಕದ್ದು. ಅಂತಹ ವ್ಯವಸ್ಥೆಯಲ್ಲಿ ಸಂಪ್ರದಾಯ ರಹಿತ ಶಿಕ್ಷಣ, ಸಂಸ್ಥೆಗಳ ಮತ್ತು ಶಿಕ್ಷಣಾರ್ಥಿಗಳ ಪ್ರಾತಿನಿಧ್ಯ ಇರಬೇಕು. ಅವು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಾಕಷ್ಟು ಹಣಕಾಸಿನ ನೆರವನ್ನು ಒದಗಿಸುವುದು ಅನಿವಾರ್ಯ.

ಸರಕಾರ ಮತ್ತು ಅನೌಪಚಾರಿಕ ಸಂಪ್ರದಾಯ ರಹಿತ ಶಿಕ್ಷಣ ಸಂಸ್ಥೆಗಳು (ರಾಷ್ಟ್ರ ಮತ್ತು ಪ್ರಾದೇಶಿಕ ಮಟ್ಟದಲ್ಲಿ) ಕೆಲಸ ಮಾಡಲು ಒಂದು ಜಂಟಿ ವ್ಯವಸ್ಥೆ ಅಗತ್ಯ. ಸಂಪ್ರದಾಯ ರಹಿತ ಶಿಕ್ಷಣ ಸಂಘ ಸಂಸ್ಥೆಗಳಿಗೂ ಮತ್ತು ಸಾಮೂಹಿಕ ಮಾಧ್ಯಮಗಳಾದ ರೇಡಿಯೋ ಮತ್ತು ದೂರದರ್ಶನ ಸಂಸ್ಥೆಗಳ ಮಧ್ಯೆ ಸಹಕಾರ ಮತ್ತು ಹೊಂದಾಣಿಕೆ ಇರುವಂತೆ ನೋಡಿಕೊಳ್ಳುವುದು ಅಗತ್ಯ.

ಸಂಪ್ರದಾಯ ರಹಿತ ಶಿಕ್ಷಣ ಸಂಘ ಸಂಸ್ಥೆಗಳು ಯಶಸ್ವಿಯಾಗಿ ಹಾಗೂ ಸ್ವತಂತ್ರವಾಗಿ ಸೇವೆ ಸಲ್ಲಿಸಲು ಮತ್ತು ಅಭಿವೃದ್ಧಿ ಹೊಂದಲು ಅನುಕೂಲವಾಗುವಂತೆ ಅನುದಾನದ ನೀತಿ ನಿಯಮಗಳನ್ನು ರಚಿಸತಕ್ಕದ್ದು.

ದಕ್ಷತೆಯಿಂದ ಸೇವೆ ಸಲ್ಲಿಸುವ ಸಂಪ್ರದಾಯ ರಹಿತ ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ತಾಂತ್ರಿಕ ನೆರವು ಮತ್ತು ಧನ ಸಹಾಯವನ್ನು ನೀಡಬೇಕು.

ಸಂಪ್ರದಾಯ ರಹಿತ ಶಿಕ್ಷಣ ಸಂಸ್ಥೆಗಳಿಗೆ ನೀಡುವ ಧನ ಸಹಾಯ ಕೆಳಗೆ ಕಾಣಿಸಿದ ಬಾಬ್ತುಗಳಿಗೆ ತಗಲುವ ವೆಚ್ಚವನ್ನು ಪೂರೈಸಬೇಕು.

1. ಕಲಿಕೆ, ಬೋಧನೆ ಮತ್ತು ಸ್ಥಿರೀಕರಣ ಸಾಹಿತ್ಯ ತಯಾರಿಸಲು ಮತ್ತು ಪ್ರಕಟಿಸಲು ತಗಲುವ ವೆಚ್ಚ.
2. ಕಾರ್ಯಕರ್ತರ ಸಂಭಾವನೆ ಮತ್ತು ತರಬೇತಿ (ತರಬೇತಿ ವೆಚ್ಚ ಎಂದರೆ ಪ್ರಯಾಣ, ವಸತಿ, ಊಟ, ತಿಂಡಿ ಖರ್ಚು).
3. ಸಂಶೋಧನೆ, ಪ್ರಕಟನೆ ಮತ್ತು ಪ್ರಚಾರ.
4. ಈಗಿರುವ ಸೌಲಭ್ಯಗಳನ್ನು ಬಳಸಿಕೊಳ್ಳುವ ಇಲ್ಲವೆ ಹೊಸ ಸೌಕರ್ಯಗಳನ್ನು ಕಲ್ಪಿಸಿಕೊಳ್ಳಲು ತಗಲುವ ವೆಚ್ಚ.

ಸಂಪ್ರದಾಯ ಶಿಕ್ಷಣ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲು ನೀಡುವ ಧನ ಸಹಾಯ ಕ್ರಮವಾಗಿ ಹರಿಯತಕ್ಕದ್ದು. ಜೊತೆಗೆ ಕಾರ್ಯಕ್ರಮಗಳನ್ನು ಮುಂದುವರೆಸಲು ಸರಕಾರ, ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಘ, ಬ್ಯಾಂಕುಗಳು, ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳ ಮಾಲೀಕರು ಉದ್ಯೋಗಿಗಳನ್ನು ಕೊಡಬಲ್ಲ ಧಣಿಗಳು ಮತ್ತು ಜೀವವಿಮಾ ಸಂಸ್ಥೆಗಳು ತಮ್ಮ ಸಂಪನ್ಮೂಲಕ್ಕೆ ಅನುಗುಣವಾಗಿ ಹಣವನ್ನು ಮೀಸಲಿಡತಕ್ಕದ್ದು.

**ಉಪಸಂಹಾರ:**

ನಿರಕ್ಷರತಾ ನಿವಾರಣೆ ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆ. ಅದರ ನಿವಾರಣೆ ಜೀವನ ಪರ್ಯಂತ ಶಿಕ್ಷಣಕ್ಕೆ ಅಥವಾ ಸಂಪ್ರದಾಯ ರಹಿತ ಶಿಕ್ಷಣಕ್ಕೆ ನಾಂದಿ. ಸಾಮೂಹಿಕ ನಿರಕ್ಷರತೆ ಮತ್ತು ಅಜ್ಞಾನ ಇಡೀ ವಿಶ್ವಕ್ಕೆ ಅವಮಾನ ಹಾಗೂ ಒಂದು ರೀತಿಯಲ್ಲಿ ಸವಾಲು ಸಹ ಹೌದು. ಅದೊಂದು ಜಾಗತಿಕ ಸಮಸ್ಯೆ. ಅದನ್ನು ಪರಿಹರಿಸಲು ಪರಸ್ಪರ ಸಹಾಯ, ಸಹಕಾರ ಮತ್ತು ಸಹಾನುಭೂತಿ ಅಗತ್ಯ.

– ಡಾ. ರಾಜೀವ್ ಪಿ. ಗುಂಡಾಳೆ

Digitised by Bharatavani, CIIL

## ಸಂಬಂಧಿತ ಸಾಹಿತ್ಯಾವಲೋಕನ

**ಅರ್ಥ:** ಂಯಾವುದೇ ವಿಷಯ ಕ್ಷೇತ್ರದಲ್ಲಿ ಸಂಶೋಧನೆಯನ್ನು ಕೈಗೊಳ್ಳುವಾಗ ಅದಕ್ಕಾಗಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಸಂಶೋಧನ ಸಮಸ್ಯೆಯನ್ನು ಗುರುತಿಸಲು ಸಂಶೋಧನ ಕ್ಷೇತ್ರದ ಅಧ್ಯಯನ ಮಾಡುವುದು, ಸಂಶೋಧನ ಸಮಸ್ಯೆಯನ್ನು ಗುರುತಿಸುವುದು, ಗುರುತಿಸಿದ ಸಮಸ್ಯೆಯನ್ನು ಸರಿಯಾಗಿ ನಿರೂಪಿಸುವುದು ಗುರುತಿಸಿದ ಸಮಸ್ಯೆಯನ್ನು ಸರಿಯಾಗಿ ನಿರೂಪಿಸುವುದು ಈ ಪೂರ್ವ ಸಿದ್ಧತೆಯ ಚಟುವಟಿಕೆಗಳಾಗಿವೆ. ಸಂಶೋಧನೆ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಇದುವರೆಗೂ ಆಗಿರುವ ಅಧ್ಯಯನಗಳಿಂದ ಪ್ರೇರಿತವಾಗುವ ಮುಂದಿನ ಹಂತವಾಗಿರುತ್ತದೆ. ಈ ಎಲ್ಲಾ ಸಂಶೋಧನೆಗಳ ಅಧ್ಯಯನ ಮತ್ತು ವಿಶ್ಲೇಷಣೆಯಿಂದ ಸಂಶೋಧನ ಸಮಸ್ಯೆ ಹೊರಹೊಮ್ಮುತ್ತದೆ. ಈ ರೀತಿ ಒಂದು ಸಂಶೋಧನೆಯನ್ನು ಕೈಗೊಳ್ಳುವುದಕ್ಕೆ ಮೊದಲು ಸಂಬಂಧಪಟ್ಟ ಕ್ಷೇತ್ರದಲ್ಲಿ ಇದುವರೆಗೆ ಆಗಿರುವ ಸಂಶೋಧನೆ ಅಧ್ಯಯನಗಳನ್ನು ಗುರ್ತಿಸಿ ಅವುಗಳನ್ನು ಅಧ್ಯಯನ ಮಾಡುವುದು, ಸಂಶೋಧನೆಗೆ ಸಂಬಂಧಪಟ್ಟಂತೆ ಬೇಕಾದ ಸೈದ್ಧಾಂತಿಕ ಹಿನ್ನೆಲೆ, ಸಿದ್ಧಾಂತಗಳು, ತತ್ವಗಳು/ನಿಯಮಗಳು, ಪರಿಕಲ್ಪನೆಗಳು ಮತ್ತು ಗ್ರಹಿಕೆಗಳನ್ನು ಸಂಶೋಧಕ ಆಳವಾಗಿ, ವ್ಯಾಪಕವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಈ ರೀತಿಯ ಚಟುವಟಿಕೆಗೆ ಸಂಬಂಧಿತ ಸಾಹಿತ್ಯಾವಲೋಕನ (Review of Related Literature) ಎಂದು ಹೇಳಲಾಗುತ್ತದೆ.

ಜಾನ್ ಡಬ್ಲ್ಯು ಬೆಸ್ಟ್‌ರವರ ಅಭಿಪ್ರಾಯದಲ್ಲಿ, "ವ್ಯಾವಹಾರಿಕವಾಗಿ ಪರಿಗಣಿಸಿದಾಗ ಮಾನವನ ಇದುವರೆಗಿನ ಎಲ್ಲಾ ಜ್ಞಾನವು ಪುಸ್ತಕಗಳಲ್ಲಿ ಮತ್ತು ಗ್ರಂಥಾಲಯಗಳಲ್ಲಿ ದೊರೆಯುತ್ತದೆ. ಪ್ರಾಣಿಗಳ ವಿಷಯದಲ್ಲಿ ಇದು ಸಾಧ್ಯವಾಗುವುದಿಲ್ಲ. ಪ್ರಾಣಿಗಳಲ್ಲಿ ಪ್ರತಿಯೊಂದು ಪೀಳಿಗೆಯೂ ಕಲಿಕೆಯನ್ನು ಮೊದಲಿನಿಂದಲೇ ಆರಂಭಿಸಬೇಕಾಗುತ್ತದೆ. ಆದರೆ ಮಾನವ ಗತಕಾಲದ ಸಂಗ್ರಹವಾಗಿರುವ ಮತ್ತು ದಾಖಲುಗೊಳಿಸಿರುವ ಜ್ಞಾನದಿಂದ ಮುಂದಕ್ಕೆ ಜ್ಞಾನವನ್ನು ವೃದ್ಧಿಪಡಿಸುತ್ತಾನೆ. ಸಂಶೋಧಕರು ಮುಖ್ಯವಾಗಿ ಇದಕ್ಕೆ ಕೊಡುಗೆ ನೀಡುತ್ತಾರೆ. ಸಂಶೋಧನೆಯ ದೃಷ್ಟಿಯಿಂದ ಹಿಂದಿನಿಂದ ಸಂಗ್ರಹಗೊಂಡಿರುವ ಜ್ಞಾನವನ್ನು ಅವಲೋಕಿಸುವುದು ಮುಖ್ಯವಾದ ಕಾರ್ಯವಾಗಿರುತ್ತದೆ."

ಈ ಲೇಖನದಲ್ಲಿ 'ಸಾಹಿತ್ಯ' ಎನ್ನುವ ಪದವನ್ನು ಕಾವ್ಯ/ಗದ್ಯ/ಪದ್ಯ ಇತ್ಯಾದಿಗಳನ್ನು ಒಳಗೊಂಡ ಸಾಮಾನ್ಯವಾಗಿ ಅರ್ಥೈಸುವ ಸಾಹಿತ್ಯವಾಗಿ ಉಪಯೋಗಿಸಿಲ್ಲ. ಇಲ್ಲಿ ಸಂಶೋಧನೆ ಉದ್ದೇಶಗಳಿಗಾಗಿ ಬೇಕಾಗುವ ಮಾಹಿತಿ/ಅಂಕಿಅಂಶಗಳನ್ನು ಒಳಗೊಂಡ ಜ್ಞಾನಾಂಶಗಳ ಸಂಗ್ರಹವೆಂಬ ಅರ್ಥದಲ್ಲಿ 'ಸಾಹಿತ್ಯ' ಎಂಬ ಪದವನ್ನು ಉಪಯೋಗಿಸಲಾಗಿದೆ. ಸಂಶೋಧನ ಉದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಂಗ್ರಹಿತ ಜ್ಞಾನರಾಶಿಯನ್ನು ಹುಡುಕಿ, ಅವಲೋಕಿಸಿ, ಅಧ್ಯಯನಮಾಡಿ ಸಂಶೋಧನೆಗೆ ಬೇಕಾದ ಜ್ಞಾನಾಂಶಗಳನ್ನು ಅವಲೋಕಿಸುವ ಅಧ್ಯಯನ ಮಾಡುವ ಕ್ರಿಯೆಗೆ ಸಂಬಂಧಿತ ಸಾಹಿತ್ಯಾವಲೋಕನ ಎಂದು ಹೇಳುತ್ತೇವೆ.

**ಆವಶ್ಯಕತೆ:** ಸಂಶೋಧನೆಯಲ್ಲಿ ಸಂಬಂಧಿತ ಸಾಹಿತ್ಯಾವಲೋಕನದ ಆವಶ್ಯಕತೆಯನ್ನು ಈ ಮುಂದಿನ ರೀತಿಯಲ್ಲಿ ಹೇಳಬಹುದು.

1. ವಿಜ್ಞಾನ/ಸಮಾಜ ವಿಜ್ಞಾನ/ಸಾಹಿತ್ಯ ಕ್ಷೇತ್ರಗಳಲ್ಲಿ ಸಂಶೋಧನೆ ಕೈಗೊಳ್ಳಲು ಸಂಬಂಧಿತ ಸಾಹಿತ್ಯಾವಲೋಕನ ಆಧಾರಭೂತವಾಗುತ್ತದೆ.
2. ಸಂಶೋಧನ ಸಮಸ್ಯೆಯನ್ನು ಹುಡುಕಲು ಉದ್ದೇಶಿತ ಕ್ಷೇತ್ರದ ಜ್ಞಾನರಾಶಿಯನ್ನು ಅವಲೋಕಿಸಿ, ಅಧ್ಯಯನ ಮಾಡಬೇಕಾಗುತ್ತದೆ.
3. ಸಂಶೋಧನ ಸಮಸ್ಯೆಯನ್ನು ಆಯ್ಕೆ ಮಾಡಿಕೊಂಡು ನಿರೂಪಿಸಿದ ನಂತರ ಆ ಕ್ಷೇತ್ರದಲ್ಲಿ ಅದುವರೆಗೆ ಆಗಿರುವ ಸಂಶೋಧನೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ನಿಜವಾದ ಅರ್ಥದಲ್ಲಿ ಸಂಶೋಧನೆಯ ಸಮಸ್ಯೆ ಈ ರೀತಿಯ ಅಧ್ಯಯನದಿಂದ ಹೊರಹೊಮ್ಮಬೇಕು.
4. ಸಂಶೋಧನ ಸಮಸ್ಯೆಗೆ ಸಂಬಂಧಪಟ್ಟ ಸೈದ್ಧಾಂತಿಕ ವಿಷಯವನ್ನು–ಜ್ಞಾನಾಂಶಗಳು, ಪರಿಕಲ್ಪನೆಗಳು, ಸಿದ್ಧಾಂತಗಳು– ಪ್ರಸ್ತುತಪಡಿಸಲು, ಅಧ್ಯಯನದಲ್ಲಿ ಚರಾಂಶಗಳನ್ನು ಆಯ್ಕೆಮಾಡಿ ಅವುಗಳನ್ನು ವ್ಯಾಖ್ಯಾನಿಸಲು ಸಾಹಿತ್ಯಾವಲೋಕಬೇಕಾಗುತ್ತದೆ.
5. ಆಯ್ಕೆ ಮಾಡಿಕೊಂಡ ಸಮಸ್ಯೆಯನ್ನು ಈಗ ಯೋಜಿಸಿರುವಂತೆಯೇ ಹಿಂದೆ ಯಾರಾದರೂ ಅಧ್ಯಯನ ಮಾಡಿದ್ದಾರೆಯೇ ಎಂದು ತಿಳಿಯಲು ಸಾಹಿತ್ಯಾವಲೋಕನ ಮಾಡಬೇಕು. ಇದರಿಂದ ಸಂಶೋಧನೆಯ ಪುನರಾವರ್ತನೆ ತಪ್ಪುತ್ತದೆ.
6. ಸಂಶೋಧನೆಗೆ ಬೇಕಾದ ಉಪಕರಣಗಳನ್ನು (ಪರೀಕ್ಷೆಗಳು, ಪ್ರಶ್ನಾವಳಿಗಳು ಇತ್ಯಾದಿ) ಆಯ್ಕೆ ಮಾಡಿಕೊಳ್ಳಲು ಅಥವಾ ಹೊಸದಾಗಿ ಸಿದ್ಧಪಡಿಸಿಕೊಳ್ಳಲು ಸಾಹಿತ್ಯಾವಲೋಕನ ಸಹಾಯಕವಾಗುತ್ತದೆ.
7. ಸಂಶೋಧನೆಯ ವಿನ್ಯಾಸವನ್ನು ಮತ್ತು ಸಂಶೋಧನ ವಿಧಾನಗಳನ್ನು ಆಯ್ಕೆ ಮಾಡಿಕೊಂಡು ಅಂತಿಮಗೊಳಿಸಲು, ಸೂಕ್ತವಾದ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಹಿತ್ಯಾವಲೋಕನ ಬೇಕಾಗುತ್ತದೆ.
8. ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆಗೆ ವ್ಯಾಖ್ಯಾನಿಸುವಿಕೆ ಮತ್ತು ನಿರ್ಣಯಗಳನ್ನು ರೂಪಿಸುವಿಕೆ ಅವಲೋಕಿಸಿದ ಸಾಹಿತ್ಯದ ಅಂದರೆ ಹಿಂದೆ ಈ ಸಂಬಂಧವಾಗಿ ನಡೆದಿರುವ ಸಂಶೋಧನೆಗಳ ಆಧಾರದ ಮೇಲೆ ಆಗಬೇಕಾಗುತ್ತದೆ. ಆದ್ದರಿಂದ ಸಾಹಿತ್ಯಾವಲೋಕನದ ಅಗತ್ಯವಿದೆ.

Digitised by Bharatavani, CIIL

**ಸಂಬಂಧಿತ ಸಾಹಿತ್ಯದ ವಿಧಗಳು:**

ಗ್ರಂಥಾಲಯದಲ್ಲಿ ಎರಡು ರೀತಿಯ ಮಾಹಿತಿಗಳು ಲಭ್ಯವಿವೆ. ಇವುಗಳನ್ನು ಪ್ರಾಥಮಿಕ (Primary) ಮತ್ತು ಆನುಷಂಗಿಕ (Secondary) ಮಾಹಿತಿಗಳು ಎಂದು ಗುರುತಿಸುತ್ತಾರೆ. ಇವುಗಳನ್ನು ಅನುಕ್ರಮವಾಗಿ ನೇರವಾದ ಮತ್ತು ಪರೋಕ್ಷವಾದ ಮಾಹಿತಿಯ ಮೂಲಗಳೆಂದು ಹೇಳುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಈ ಕೆಳಗೆ ನೀಡಿದ ರೂಪದಲ್ಲಿ ಪ್ರಾಥಮಿಕ ಮಾಹಿತಿಯು ಲಭ್ಯವಿದೆ.

i) ಪುಸ್ತಕಗಳು, ವಾರ್ಷಿಕ ಪುಸ್ತಕಗಳು ಮತ್ತು ಕೈಪಿಡಿಗಳು

ii) ದಿನಚರಿಗಳು, ಪುಸ್ತಿಕೆಗಳು

iii) ಎಮ್. ಫಿಲ್ ಮತ್ತು ಪಿಎಚ್.ಡಿಯ ಮಹಾಪ್ರಬಂಧಗಳು ಮತ್ತು ಇತರ ಸಂಶೋಧನೆ/ಪ್ರಾಯೋಜನೆ ವರದಿಗಳು

iv) ಸರಕಾರಿ ಪ್ರಕಟಣೆಗಳು/ವರದಿಗಳು, ಗೆಜೆಟ್‌ಗಳು.

v) ಶಿಕ್ಷಣದ ಇತರ ವಿಷಯಗಳ ವಿಶ್ವಕೋಶಗಳು.

vi) ಶೈಕ್ಷಣಿಕ ಕ್ಷೇತ್ರಗಳಲ್ಲಿನ ಸಂಶೋಧನೆಯ ವಿಶ್ವಕೋಶಗಳು.

vii) ಶಿಕ್ಷಣದಲ್ಲಿಯ ಸಂಶೋಧನೆಗಳ ಸಮೀಕ್ಷೆಗಳು

viii) ಕೈಪಿಡಿಗಳು/ವಾರ್ಷಿಕ ಪುಸ್ತಿಕೆಗಳು

ix) ಸಂಶೋಧನೆಗಳ ಸಾರ ಸಂಗ್ರಹಗಳು

x) ಸರ್ಕಾರಿ/ಇತರ ದಾಖಲೆಗಳು

xi) ಗ್ರಂಥ ಸೂಚಿಗಳು/ಮಾರ್ಗದರ್ಶಿಗಳು

xii) ಕಾರ್ಯಸೂಚಿಗಳು (Almanac)

xiii) ಸಂದರ್ಭ/ಪರಾಮರ್ಶನ ಗ್ರಂಥಗಳು

xiv) ಸಂಶೋಧನ ಪತ್ರಿಕೆಗಳು/ಇತರ ಸಾಮಾನ್ಯ ಪತ್ರಿಕೆಗಳು (ಸ್ವದೇಶದಿಂದ, ವಿದೇಶಗಳಿಂದ ಪ್ರಕಟಿತವಾದವುಗಳು)

xv) ಐತಿಹಾಸಿಕ ಕರುಹುಗಳು/ಸ್ಮಾರಕಗಳ ಅವಶೇಷಗಳು, ಪಳೆಯುಳಿಕೆಗಳು ಇತ್ಯಾದಿ.

xvii) ಮೋನೋಗ್ರಾಫ್‌ಗಳ (ಏಕ ವ್ಯಕ್ತಿಯ ಸಂಶೋಧನ ವರದಿ)

**ಸಂಬಂಧಿತ ಸಾಹಿತ್ಯದ ಮೂಲಗಳು:** ಸಂಬಂಧಿತ ಸಾಹಿತ್ಯದ ಮೂಲಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ (Secondary) ಮೂಲಗಳೆಂದು ವರ್ಗೀಕರಿಸಬಹುದು. ಪ್ರಾಥಮಿಕ ಮೂಲಗಳು ನೇರವಾಗಿ ಅನುಭವವನ್ನು ಪಡೆದ, ಸಂಶೋಧನೆ ಮಾಡಿದ, ವೀಕ್ಷಿಸಿದ ಮಾಹಿತಿಗಳನ್ನು ಅಂಕಿಅಂಶಗಳನ್ನು ಒಳಗೊಂಡಿರುತ್ತವೆ. ಇವು ನೇರವಾಗಿ ಬಂದಿರುವುದರಿಂದ ಮಧ್ಯೆ ಪ್ರವೇಶಿಸುವ ಮೂರನೇ ವ್ಯಕ್ತಿಯಿಂದ ವಿದ್ರೂಪಗೊಂಡಿರುವುದಿಲ್ಲವಾದ್ದರಿಂದ ಹೆಚ್ಚಿನ ನಿಖರತೆಯನ್ನು, ಅಧಿಕೃತತೆಯನ್ನು ಹೊಂದಿರುತ್ತವೆ. ಸಂಶೋಧನೆಗೆ ಇವು ಹೆಚ್ಚು ಉಪಯುಕ್ತವೆನಿಸುತ್ತವೆ. ಆದರೆ ಇವುಗಳನ್ನು ಪಡೆದುಕೊಳ್ಳುವುದು ಕಷ್ಟವಾಗುತ್ತದೆ. ಇವುಗಳು ಸುಲಭವಾಗಿ ಲಭ್ಯವಿರುವುದಿಲ್ಲ.

ಪರಾಮರ್ಶನ ಪುಸ್ತಕಗಳು, ಸಂಶೋಧನ/ಪ್ರಾಯೋಜನ ವರದಿಗಳು, ಸಂಶೋಧನ ಪತ್ರಿಕೆಗಳಲ್ಲಿ ಪ್ರಕಟವಾಗುವ ಸಂಶೋಧನ ವರದಿಗಳು, ನೇರವಾಗಿ ವೀಕ್ಷಿಸಿ ಮಾಡಿದ ವರದಿಗಳು, ಸಂದರ್ಶನದ ವರದಿಗಳು, ಸಂಶೋಧಕರೇ ವೀಕ್ಷಿಸಿದ ಪಳೆಯುಳಿಕೆಗಳು/ಸ್ಮಾರಕಗಳು, ವಸ್ತುಗಳು, ಘಟನೆಗಳು, ಸರ್ಕಾರದ ವರದಿಗಳು, ಮನೋಗ್ರಾಫ್‌ಗಳು, ಡೈರಿಗಳು, ಮೂಲ ದಾಖಲೆಗಳು, ನೇರವಾದ ಮೌಖಿಕ ವರದಿಗಳು, ಗೆಜೆಟ್‌ಗಳು, ಮುಂತಾದವು ಪ್ರಾಥಮಿಕ ಮೂಲಗಳ ಉದಾಹರಣೆಗಳಾಗಿವೆ.

ಆನುಷಂಗಿಕ ಮೂಲಗಳಿಂದ ಬರುವ ಮಾಹಿತಿ/ಅಂಕಿ–ಅಂಶಗಳು ವರದಿ ಮಾಡುವ, ದಾಖಲಿಸುವ ವ್ಯಕ್ತಿಯ ನೇರ ಅನುಭವಕ್ಕೆ, ವೀಕ್ಷಣೆಗೆ ಬಂದಿರುವುದಿಲ್ಲ. ಇಲ್ಲಿ ಮೂರನೇ ವ್ಯಕ್ತಿಯ ಹಸ್ತಕ್ಷೇಪವಿರುತ್ತದೆ. ಹೀಗೆ ಇಂಥವರು ವರದಿ ಮಾಡಿರುತ್ತಾರೆ ಎಂದು ಮತ್ತೊಬ್ಬ ವ್ಯಕ್ತಿ ವರದಿ ಮಾಡುತ್ತಾನೆ ಅಥವಾ ತನ್ನ ವರದಿಯಲ್ಲಿ ಬರೆಯುತ್ತಾನೆ. ಆದ್ದರಿಂದ ಈ ರೀತಿಯ ಮೂಲಗಳಿಂದ ಬರುವ ಮಾಹಿತಿ/ಅಂಕಿ–ಅಂಶಗಳಲ್ಲಿ ಹೆಚ್ಚಿನ ನಿಖರತೆ, ಅಧಿಕೃತತೆ ಇಲ್ಲದಿರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಇಂಥ ಮೂಲಗಳಿಂದ ತೆಗೆದುಕೊಳ್ಳುವ ಮಾಹಿತಿಯನ್ನು ಅಂಕಿಅಂಶಗಳನ್ನು ಒಂದಕ್ಕಿಂತ ಹೆಚ್ಚು ಮೂಲಗಳನ್ನು ನೋಡಿ ಖಚಿತಪಡಿಸಿಕೊಳ್ಳಬೇಕು. ಬೇರೆ ಲೇಖಕರ ಗ್ರಂಥಗಳ/ಲೇಖನಗಳ ಸಾರಾಂಶೀಕರಣ, ಲೇಖನಗಳ ಸಂಕಲನ ವಿಶ್ವಕೋಶಗಳು ಪ್ರಾಚೀನ ಗ್ರಂಥಗಳು, ಇತಿಹಾಸಿಕ ಗ್ರಂಥಗಳು/ಲೇಖನಗಳು, ಸಂಶೋಧನ ಅಧ್ಯಯನದ ಸಮೀಕ್ಷೆಗಳು, ವಾರ್ಷಿಕ ಸಂಪುಟಗಳು, ಪಳೆಯುಳಿಕೆಗಳ/ಸ್ಮಾರಕಗಳ/ವಸ್ತುಗಳ ಚಿತ್ರಗಳು, ರೇಖಾಚಿತ್ರಗಳು, ವೀಕ್ಷಣೆಗಳ ಪರೋಕ್ಷ ವರದಿಗಳು ಮುಂತಾದವು ಆನುಷಂಗಿಕ ಮೂಲಗಳಿಗೆ ಉದಾಹರಣೆಗಳಾಗುತ್ತವೆ.

**ಸಂಬಂಧಿತ ಸಾಹಿತ್ಯ ಆಕರಗಳು ದೊರೆಯುವ ಮೂಲಗಳು:**

**ಗ್ರಂಥಾಲಯಗಳು:**

ಸಂಬಂಧಿತ ಸಾಹಿತ್ಯವನ್ನು ಒದಗಿಸುವ ಮೂಲಗಳಲ್ಲಿ ವಿದ್ಯುನ್ಮಾನ ಮೂಲಗಳಾದ ಅಂತರ್‌ಜಾಲ (Internet) ಮುಂತಾದವು ಬರುವುದಕ್ಕಿಂತ ಮೊದಲು ಗ್ರಂಥಾಲಯವೇ ಪ್ರಮುಖವಾಗಿತ್ತು. ಈಗಲೂ ಸಹ ಗ್ರಂಥಾಲಯದ ಮಹತ್ವ ಕಡಿಮೆಯೇನಾಗಿಲ್ಲ. ಗ್ರಂಥಾಲಯಗಳಲ್ಲಿ ನಮಗೆ ಬೇಕಾದ ಆಕರ ಗ್ರಂಥಗಳನ್ನು ಹುಡುಕುವುದೇ ಒಂದು ಕೌಶಲ. ಹಿಂದೆ ಪುಸ್ತಕಗಳ/ಲೇಖಕರ ಕಾರ್ಡುಗಳ ಸಂಖ್ಯೆ ಆಧಾರದ ಮೇಲೆ ಬೇಕಾದ ಗ್ರಂಥಗಳನ್ನು ದಾಖಲೆಗಳನ್ನು ಹುಡುಕಬೇಕಾಗಿತ್ತು. ಆದರೆ ಈಗ ಗ್ರಂಥಗಳನ್ನು/ ದಾಖಲೆಗಳನ್ನು ಕಂಪ್ಯೂಟರೀಕರಣಗೊಳಿಸುವುದರಿಂದ ಅತ್ಯಂತ ಸುಲಭವಾಗಿ ಬೇಕಾದ ಗ್ರಂಥವನ್ನು ಪಡೆಯಬಹುದು. ಪುಸ್ತಕವನ್ನು ಪಡೆದ ನಂತರ ಅದರ ವಿಷಯವಸ್ತುವನ್ನು ಸ್ಥೂಲವಾಗಿ ನೋಡಿ

Digitised by Bharatavani, CIIL

ಅದು ನಮ್ಮ ಸಂಶೋಧನೆಗೆ ಉಪಯುಕ್ತವೇ ಅಲ್ಲವೆ ಎಂದು ನಿರ್ಧರಿಸಿ ತೆಗೆದುಕೊಳ್ಳಬೇಕು ಅಗತ್ಯವಿದ್ದರೆ ಗ್ರಂಥಗಳಲ್ಲಿನ ಕೆಲವು ಪುಟಗಳ/ದಾಖಲೆಗಳ/ಚಿತ್ರಗಳ ಜೆರಾಕ್ಸ್ ಪ್ರತಿ/ಫೋಟೋ ಪ್ರತಿ ಪಡೆಯಬೇಕು. ಅಗತ್ಯಬಿದ್ದರೆ ಒಂದು ಗ್ರಂಥಾಲಯ ಬೇರೊಂದು ಗ್ರಂಥಾಲಯದಿಂದ ಬೇಕಾದ ಗ್ರಂಥವನ್ನು/ದಾಖಲೆಗಳನ್ನು ಎರವಲಾಗಿ ಪಡೆದುಕೊಳ್ಳಬಹುದು.

**ಸಂಶೋಧನೆಗಳ ಸಾರಾಂಶ ಗ್ರಂಥಗಳು:** ಈ ರೀತಿಯ ಗ್ರಂಥಗಳು ಒಂದು ವರ್ಷದ ಅವಧಿಯಲ್ಲಿ ಒಂದು ನಿರ್ದಿಷ್ಟ ವಿಷಯ ಕ್ಷೇತ್ರದಲ್ಲಿ ಪ್ರಕಟವಾಗಿರುವ ಅಥವಾ ಕೈಗೊಂಡಿದ್ದ ಸಂಶೋಧನೆಗಳ ಸಾರಾಂಶವನ್ನು ಹೊಂದಿರುತ್ತವೆ. ಪ್ರತಿಯೊಂದು ವಿಷಯ ಕ್ಷೇತ್ರದಲ್ಲೂ ಇಂಥ ಸಾರಾಂಶ ಗ್ರಂಥಗಳು ಪ್ರಕಟವಾಗುತ್ತವೆ. ಇವು ಸಂಬಂಧಿತ ಸಾಹಿತ್ಯದ ಒಳ್ಳೆಯ ಮೂಲಗಳಾಗಿವೆ.

**ಅಂತರ್ ಜಾಲ:** ಮಾಹಿತಿ ತಂತ್ರಜ್ಞಾನ ವಿಕಾಸಗೊಂಡಿರುವ ಇತ್ತೀಚಿನ ದಶಕಗಳಲ್ಲಿ ಅಂತರ್‌ಜಾಲ (Internet) ಸಂಬಂಧಿತ ಸಾಹಿತ್ಯವನ್ನು ಹುಡುಕಲು ಒಳ್ಳೆಯ ಮೂಲವಾಗಿದೆ. ಎಲ್ಲಾ ವಿಷಯ ಕ್ಷೇತ್ರಗಳಲ್ಲಿ ವಿಫುಲ ಸಾಹಿತ್ಯವನ್ನು ಒದಗಿಸುವ ಅಸಂಖ್ಯ ಕ್ಷೇತ್ರಗಳನ್ನು ಅಂತರ್‌ಜಾಲದ ಮೂಲಕ ಸಂಪರ್ಕಿಸಬಹುದು. ನಮಗೆ ಮಾಹಿತಿ ಅಗತ್ಯವಿರುವ ಮುಖ್ಯ ಶೀರ್ಷಿಕೆಗಳು/ಪರಿಕಲ್ಪನೆಗಳು/ಲೇಖಕರ ು/ಮಾಹಿತಿಯ ಮೂಲಗಳ ಹೆಸರನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿದರೆ ಅದಕ್ಕೆ ಸಂಬಂಧಿಸಿದ ವೆಬ್‌ಸೈಟ್‌ಗಳು ತೆರೆದುಕೊಳ್ಳುತ್ತವೆ. ವೆಬ್‌ಸೈಟ್ ವಿಳಾಸ ನಿಖರವಾಗಿ ಗೊತ್ತಿದ್ದರೆ ಇನ್ನೂ ಒಳ್ಳೆಯದು. ನಮಗೆ ಬೇಕಾದ ಮಾಹಿತಿಗಳನ್ನು ಈ ವೆಬ್‌ಸೈಟ್‌ಗಳಿಂದ ಪಡೆದುಕೊಳ್ಳಬಹುದು. ಕೆಲವು ವೇಳೆ ಹೀಗೆ ಮಾಹಿತಿ ಪಡೆಯಲು ಶುಲ್ಕವನ್ನು ನೀಡಬೇಕಾಗುತ್ತದೆ. ನಮಗೆ ಬೇಕಾದ ಮಾಹಿತಿಗಳ ಪ್ರಿಂಟ್‌ಗಳನ್ನು ಪಡೆದುಕೊಳ್ಳಬಹುದು.

**ವೈಯಕ್ತಿಕ ಸಂಪರ್ಕ:** ಮಾಹಿತಿಯನ್ನು/ಅಂಕಿ-ಅಂಶಗಳನ್ನು ಅವುಗಳು ಗೊತ್ತಿರುವ ವ್ಯಕ್ತಿಗಳಿಂದ/ಸಂಸ್ಥೆಗಳಿಂದ ಸಂದರ್ಶನ, ನೇರ ಭೇಟಿ ಮೂಲಕ ಸಂಗ್ರಹಿಸಿಕೊಳ್ಳಬಹುದು. ಹಾಗೆ ಮಾಹಿತಿ ಪಡೆದುಕೊಳ್ಳುವಾಗ ಮಾಹಿತಿಯನ್ನು ಎಚ್ಚರಿಕೆಯಿಂದ ದಾಖಲಿಸಿಕೊಳ್ಳಬೇಕಾಗುತ್ತದೆ.

**ಸಂಬಂಧಿತ ಸಾಹಿತ್ಯಾವಲೋಕನಗಳ ಕೆಲವು ಮಾರ್ಗದರ್ಶಿ ಸೂತ್ರಗಳು:**

1. ಮೊಟ್ಟಮೊದಲು ಪ್ರಸ್ತುತ ಸಂಶೋಧನೆಯ ವ್ಯಾಪ್ತಿಗೆ ಒಳಪಟ್ಟಂತೆ ಅಗತ್ಯವೆನಿಸುವ ಪುಸ್ತಕಗಳನ್ನು/ದಾಖಲೆಗಳನ್ನು/ವಸ್ತುಗಳನ್ನು/ಆಕರಗ್ರಂಥಗಳನ್ನು ಪಟ್ಟಿ ಮಾಡಿಕೊಳ್ಳಬೇಕು.
2. ಈ ಆಕರಗಳು ದೊರೆಯಬಹುದಾದ ಸ್ಥಳಗಳನ್ನು/ವ್ಯಕ್ತಿಗಳನ್ನು/ಪ್ರಕಾಶಕರ ವಿಳಾಸಗಳನ್ನು, ವೆಬ್‌ಸೈಟ್‌ಗಳ ವಿಳಾಸಕ್ಕೆ ಪಟ್ಟಿ ಮಾಡಿಕೊಳ್ಳಬೇಕು.
3. ನಿಮ್ಮ ಸಂಶೋಧನೆಗೆ ಸಂಬಂಧಿಸಿದ ಪುಸ್ತಕಗಳನ್ನು, ದಾಖಲೆಗಳುನ್ನು, ಸಂಶೋಧನೆ ಲೇಖನಗಳನ್ನು, ವರದಿಗಳನ್ನು ಸಂಶೋಧನ ಪ್ರಬಂಧಗಳನ್ನು, ವಿದ್ಯುನ್ಮಾನ, ಸಾಮಗ್ರಿಗಳನ್ನು ಪಟ್ಟಿ ಮಾಡಿಕೊಂಡು ಅವುಗಳನ್ನು ಹುಡುಕಲು, ನಂತರ ಅಧ್ಯಯನ ಮಾಡಲು ಪ್ರಾರಂಭಿಸಬೇಕು.
4. ಪ್ರತಿಯೊಂದು ಸಾಮಗ್ರಿಯನ್ನು ಪರಾಮರ್ಶಿಸಿದಾಗ/ಅಧ್ಯಯನ ಮಾಡಿದಾಗ ನಮಗೆ ಬೇಕಾಗಬಹುದಾದ ವಿಷಯವಸ್ತುವನ್ನು/ಉಲ್ಲೇಖಗಳನ್ನು ಟಿಪ್ಪಣಿ ಮಾಡಿಕೊಳ್ಳಬೇಕು ಈ ಟಿಪ್ಪಣಿಗಳನ್ನು ಪ್ರತ್ಯೇಕ ಕಾರ್ಡುಗಳಲ್ಲಿ/ಹಾಳೆಗಳಲ್ಲಿ ಬರೆದಿಟ್ಟುಕೊಳ್ಳಬೇಕು. ಹಾಗೆಯೇ ಆ ಸಾಮಗ್ರಿ ಯಾವ ಮೂಲದಿಂದ (ಪುಸ್ತಕ, ವರದಿ, ಲೇಖನ ಇತ್ಯಾದಿ) ಪಡೆದುಕೊಂಡಿದೆ ಎಂಬುದನ್ನು ಅದರ ಹೆಸರು, ಲೇಖಕರು, ಪ್ರಕಾಶಕರು ವಿಳಾಸ ಪ್ರಕಾಶನದ ವರ್ಷ, ಪುಟಗಳು ಈ ಮಾಹಿತಿಗಳೊಂದಿಗೆ ಬರೆದುಕೊಳ್ಳುವುದನ್ನು ಮರೆಯಬಾರದು. ಸಂಶೋಧನ ವರದಿಯಲ್ಲಿ ಆಧಾರ ಗ್ರಂಥಗಳನ್ನು ಬರೆಯಲು ಈ ಮಾಹಿತಿ ಬೇಕಾಗುತ್ತದೆ.
5. ನಮಗೆ ಬೇಕಾದ ವಿಷಯವಸ್ತು ಒಂದು ಮೂಲದಿಂದ ಸಾಕಷ್ಟು ದೊರೆಯದಿದ್ದಲ್ಲಿ ಬೇರೆ ಮೂಲಗಳನ್ನು ನೋಡಿ ಹೆಚ್ಚಿನ ಸಾಮಗ್ರಿಯನ್ನು ಸಂಗ್ರಹಿಸಬೇಕು.
6. ಸಂಶೋಧನೆಯ ಫಲಿತಾಂಶಗಳನ್ನು ವಿಶ್ಲೇಷಿಸಲು ಇದೇ ವಿಷಯದ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಡಿರುವ ಸಂಶೋಧನೆ ಅಧ್ಯಯನಗಳನ್ನು ಉಲ್ಲೇಖಿಸಬೇಕಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಇತ್ತೀಚಿನವರೆಗೆ ನಡೆದಿರುವ ಸಂಶೋಧನೆಗಳನ್ನು ಅವಲೋಕಿಸಿ ಸಂಶೋಧನ ಸಾರಾಂಶ ಗ್ರಂಥಗಳಿಂದ, ಅಂತರ್‌ಜಾಲ ಅನ್ವೇಷಣೆಯಿಂದ ಈ ಕಾರ್ಯ ಸಾಧ್ಯವಾಗುತ್ತದೆ. ತೀರ ಹಿಂದೆ ಮಾಡಿದ ಸಂಶೋಧನೆಗಳನ್ನು ನೋಡಬೇಕಾಗಿಲ್ಲ. ಆದರೆ ಸೈದ್ಧಾಂತಿಕ ಹಿನ್ನೆಲೆ ಬರೆಯುವಾಗ ಐತಿಹಾಸಿಕವಾಗಿ ಮಹತ್ವಪೂರ್ಣವಾಗಿರುವ ಹಳೆಯ ಮೂಲಗಳನ್ನು ನೋಡಬೇಕಾಗುತ್ತದೆ.
7. ಸಾಹಿತ್ಯಾವಲೋಕನಕ್ಕೆ ಮೂಲಗಳನ್ನು ಹುಡುಕುವಾಗ ಸಂಶೋಧಕ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಗ್ರಂಥಪಾಲಕರು, ಹಿರಿಯ ಸಂಶೋಧಕರು, ಮಾರ್ಗದರ್ಶಕರು ಅನುಭವಿ ಅಧ್ಯಾಪಕರೊಂದಿಗೆ ಪರಾಮರ್ಶಿಸಿ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.
8. ಸಂಬಂಧಿತ ಸಾಹಿತ್ಯಾವಲೋಕನ ಸಂಶೋಧನ ಕಾರ್ಯ ಆರಂಭವಾದಾಗಿನಿಂದ ವರದಿ ಬರೆಯುವವರೆಗೂ ನಿರಂತರವಾಗಿ ನಡೆಯುವ ಪ್ರಕ್ರಿಯೆ. ಆದ್ದರಿಂದ ಈ ಕಾರ್ಯವನ್ನು ಬೇಗ ಆರಂಭಿಸುವುದು ಒಳ್ಳೆಯದು.
9. ಸಂಶೋಧನ ಪತ್ರಿಕೆಗಳ ಲೇಖನಗಳನ್ನು ಅವಲೋಕಿಸುವಾಗ ಲೇಖನಗಳ ಸಾರಾಂಶಗಳನ್ನು ಬರೆದುಕೊಳ್ಳುವುದಲ್ಲದೆ ಅಗತ್ಯವಿರುವ ಲೇಖನಗಳನ್ನು ಅಥವಾ ಅವುಗಳ ಭಾಗಗಳನ್ನು ಪ್ರತಿ ಮಾಡಿಟ್ಟುಕೊಳ್ಳಲು ಮರೆಯಬಾರದು.

Digitised by Bharatavani, CIIL

10. ಹೀಗೆ ಸಂಗ್ರಹಿಸಿದ ಸಾಹಿತ್ಯವನ್ನು ಬೇರೆ, ಬೇರೆ ವಿಭಾಗಗಳಡಿಯಲ್ಲಿ ಉದಾಹರಣೆಗೆ ಸೈದ್ಧಾಂತಿಕ ಹಿನ್ನೆಲೆ, ಚಲಕಗಳ ವ್ಯಾಖ್ಯಾನ, ಪ್ರತಿದರ್ಶ, ದತ್ತಾಂಶ ಸಂಗ್ರಹಣೆ ಉಪಕರಣಗಳು, ಸಂಖ್ಯಾಶಾಸ್ತ್ರೀಯ ತಂತ್ರಗಳು ಮತ್ತು ಸಂಶೋಧನ ಸಮಸ್ಯೆಗೆ ಸಂಬಂಧಿಸಿದ ಈ ಹಿಂದೆ ಮಾಡಿರುವ ಸಂಶೋಧನೆ ಅಧ್ಯಯನಗಳ ಸಾರಾಂಶಗಳೂ ಈ ವಿಭಾಗಗಳಲ್ಲಿ ವರ್ಗೀಕರಣ ಮಾಡಿಟ್ಟುಕೊಳ್ಳಬೇಕು. ಸಂಶೋಧನ ವರದಿ ಬರೆಯಲು ಇದು ಸಹಾಯಕವಾಗುತ್ತದೆ.

ಸಂಶೋಧಕ ಮಾಡುವ ಸಂಬಂಧಿತ ಸಾಹಿತ್ಯಾವಲೋಕನದ ವ್ಯಾಪ್ತಿ, ವೈವಿಧ್ಯ, ಗಹನತೆ, ಸಂಖ್ಯೆ ಸಂಶೋಧನೆಗೆ ಸಂಬಂಧಿಸಿದಂತೆ ಸಂಶೋಧಕನ ಅಧ್ಯಯನದ ವಿಸ್ತಾರ ಮತ್ತು ಆಳವನ್ನು ತೋರಿಸುತ್ತದೆ.

–ಡಾ. ಹೂವಿನಭಾವಿ

## ಸಂಯುಕ್ತ ರಾಷ್ಟ್ರ ಸಂಘ ಮತ್ತು ಶಿಕ್ಷಣ

ಭಾರತದಲ್ಲಿರುವ ಸಂಯುಕ್ತ ರಾಷ್ಟ್ರಸಂಘ ವ್ಯವಸ್ಥೆ 'ಎಲ್ಲರಿಗೂ ಶಿಕ್ಷಣ'ದ ಗುರಿಯನ್ನು ಸಾಧಿಸಲು ತಂತ್ರಗಳನ್ನು ರೂಪಿಸಲು ಸರ್ಕಾರ, ಪೌರ ಸಮಾಜ ಮತ್ತು ಸರ್ಕಾರೇತರ ಸಂಸ್ಥೆ (NGO) ಗಳ ಸಹಕಾರವನ್ನು ಪಡೆಯುತ್ತಿದೆ. ಮುಖ್ಯವಾಗಿ ಕಠಿಣ ಪರಿಸ್ಥಿತಿಗಳಲ್ಲಿರುವ ಹೆಣ್ಣು ಮಕ್ಕಳಿಗೆ ವಿಶೇಷ ಒತ್ತು ನೀಡಲಾಗುತ್ತಿದೆ. 2015ರೊಳಗಾಗಿ ಭಾರತದಲ್ಲಿ ಉತ್ತಮ ಗುಣಮಟ್ಟದ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ವಾಸ್ತವಿಕತೆಯಾಗುತ್ತದೆ ಎಂದು ಆಶಿಸಲಾಗುತ್ತದೆ. ಈ ಅವಧಿಯಲ್ಲಿಯೇ ಲಿಂಗ ಅಸಮಾನತೆಯನ್ನು ತೆಗೆದುಹಾಕಿ ಲಿಂಗ ಸಮಾನತೆಯನ್ನು ಸಾಧಿಸಲಾಗುತ್ತದೆ ಎಂಬ ಆಶೆ ಇದೆ.

ದೀರ್ಘಕಾಲಿಕವಾದ ವಿಶ್ವಶಾಂತಿಯನ್ನು ಸಾಧಿಸುವುದು ಸಂಯುಕ್ತ ರಾಷ್ಟ್ರ ಸಂಘದ ಗುರಿಯಾದರೂ ವಿಶಾಲವಾದ ಅರ್ಥದಲ್ಲಿ ಶಿಕ್ಷಣವೇ ಅದರ ಮುಖ್ಯ ಗುರಿ ಎನ್ನಬಹುದು. ಜೀವನದುದ್ದಕ್ಕೂ ಶಿಕ್ಷಣದ ಅಗತ್ಯದ ಬಗ್ಗೆ ಅರಿವನ್ನು ಪುನರುಜ್ಜೀವನಗೊಳಿಸಲು ಹೊಸದೊಂದು ಉತ್ತೇಜನವನ್ನು ಕೊಡುವುದಕ್ಕಾಗಿಯೇ ಯುನೆಸ್ಕೋವಿನ (ಸಂಯುಕ್ತ ರಾಷ್ಟ್ರ ಶೈಕ್ಷಣಿಕ, ವೈಜ್ಞಾನಿಕ, ಸಾಮಾಜಿಕ ಸಂಘಟನೆ) ಶೈಕ್ಷಣಿಕ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮಕ್ಕೆ 21ನೇ ಶತಮಾನಕ್ಕೆ ಶಿಕ್ಷಣಕ್ಕಾಗಿ ನೇಮಿಸಿದ ಶೈಕ್ಷಣಿಕ ಆಯೋಗ ತನ್ನ ವರದಿ "ಕಲಿಕೆ ಅಂತರಂಗದ ಖಜಾನೆ"ಯಲ್ಲಿ ಗುರ್ತಿಸಿರುವ ಕಲಿಕೆಯ ನಾಲ್ಕು ಸ್ಥಂಭಗಳಾದ ತಿಳಿಯಲು ಕಲಿಯುವುದು. ಮಾಡಲು ಕಲಿಯುವುದು, ಒಟ್ಟಾಗಿ ಬಾಳ್ವೆ ನಡೆಸಲು ಕಲಿಯುವುದು ಮತ್ತು ನಾವು ನಾವಾಗಿರಲು (ಸ್ವ ಅರಿವು ಪಡೆಯಲು) ಕಲಿಯುವುದು ಕೇಂದ್ರಭೂತವಾಗಿವೆ.

ಯುನೆಸ್ಕೋ ಮತ್ತು ಭಾರತದಲ್ಲಿರುವ ಸಂಯುಕ್ತ ರಾಷ್ಟ್ರ ಸಂಘ ವ್ಯವಸ್ಥೆಯ ದೃಷ್ಟಿಯಲ್ಲಿ ಭಾರತದಲ್ಲಿನ ಶೈಕ್ಷಣಿಕ ಚಟುವಟಿಕೆಗಳನ್ನು 2000ದ ಏಪ್ರಿಲ್ ತಿಂಗಳಲ್ಲಿ ಸೆನೆಗಲ್ ದೇಶದ ಡಾಕರ್‌ನಲ್ಲಿ ವಿಶ್ವ ಆರೋಗ್ಯ ವೇದಿಕೆ ರೂಪಿಸಿದ ಡಾಕರ್ ಕಾರ್ಯ ಚೌಕಟ್ಟುಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಿ, ಜಾರಿಗೊಳಿಸಲಾಗಿದೆ.

ಈ ಕಾರ್ಯಕ್ರಮ ಚೌಕಟ್ಟು ಈ ಕೆಳಗಿನ ಗುರಿಗಳನ್ನು ಸಾಧಿಸಲು ದೇಶಗಳನ್ನು ಬದ್ಧಗೊಳಿಸುತ್ತದೆ.

(i) ಆರಂಭಿಕ ಬಾಲ್ಯಾವಸ್ಥೆಯ ಅದರಲ್ಲೂ ಅತ್ಯಂತ ಅನುಕೂಲ ಪರಿಸ್ಥಿತಿಯಲ್ಲಿರುವ ಮಕ್ಕಳ ವ್ಯಾಪಕವಾದ ಆರೈಕೆ ಮತ್ತು ಶಿಕ್ಷಣವನ್ನು ವಿಸ್ತರಿಸುವುದು ಮತ್ತು ಉತ್ತಮಪಡಿಸುವುದು.

(ii) 2015 ರ ಹೊತ್ತಿಗೆ ಎಲ್ಲಾ ಮಕ್ಕಳಿಗೂ, ಅದರಲ್ಲಿಯೂ ಕಠಿಣ ಪರಿಸ್ಥಿತಿಗಳಲ್ಲಿರುವ ಮಕ್ಕಳಿಗೆ ಹಾಗೂ ವಿವಿಧ ಅಲ್ಪಸಂಖ್ಯಾತ ಜನಾಂಗಗಳಿಗೆ ಸೇರಿದ ಮಕ್ಕಳಿಗೆ ವಿಶೇಷ ಮಹತ್ವ ಕೊಡುವುದರೊಂದಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದು.

(iii) ಸೂಕ್ತ ಕಲಿಕೆಗೆ ಸಮಾನ ಅವಕಾಶಗಳ ಲಭ್ಯತೆ, ಜೀವನಕೌಶಲಗಳು ಮತ್ತು ಪೌರತ್ವ ಶಿಕ್ಷಣ ಕಾರ್ಯಕ್ರಮಗಳೊಂದಿಗೆ ಎಲ್ಲಾ ಯುವಕ ಯುವತಿಯರ ಮತ್ತು ವಯಸ್ಕರ ಶೈಕ್ಷಣಿಕ ಆವಶ್ಯಕತೆಗಳನ್ನು ಪೂರೈಸುವುದು.

(iv) 2015ರೊಳಗೆ ವಿಶೇಷವಾಗಿ ಮಹಿಳೆಯರು ಸೇರಿದಂತೆ, ವಯಸ್ಕರ ಸಾಕ್ಷರತಾ ಮಟ್ಟವನ್ನು ಶೇ. 50ರಷ್ಟು ಹೆಚ್ಚಿಸುವುದು ಮತ್ತು ಎಲ್ಲಾ ವಯಸ್ಕರರಿಗೂ ಸಮಾನವಾಗಿ ಲಭ್ಯವಾಗುವ ಮೂಲಭೂತ ಮತ್ತು ಮುಂದುವರಿಕೆ ಶಿಕ್ಷಣವನ್ನು ಒದಗಿಸುವುದು.

(v) ಮುಖ್ಯವಾಗಿ ಸಾಕ್ಷರತೆ, ಸಂಖ್ಯಾಜ್ಞಾನ ಮತ್ತು ಮುಖ್ಯವಾದ ಜೀವನ ಕೌಶಲಗಳೊಂದಿಗೆ ಗುರ್ತಿಸಬಹುದಾದ ಮತ್ತು ಅಳತೆ ಮಾಡಬಹುದಾದ್ದರಿಂದ ಶಿಕ್ಷಣದ ಎಲ್ಲಾ ಮುಖಗಳಲ್ಲಿಯೂ ಶಿಕ್ಷಣದ ಗುಣಾತ್ಮಕತೆಯನ್ನು ಉತ್ತಮಪಡಿಸುವುದು ಹಾಗೂ ಉತ್ಕೃಷ್ಟತೆಯನ್ನು ಖಚಿತಪಡಿಸಿಕೊಳ್ಳುವುದು.

ಸಂಯುಕ್ತ ರಾಷ್ಟ್ರ ಸಂಘದ ನಿಯೋಜಗಳು ಭಾರತದಲ್ಲಿ ಸರ್ಕಾರಗಳು ಮತ್ತು ಸರ್ಕಾರೇತರ ಸಂಘಟನೆಗಳೊಂದಿಗೆ ಈ ಮುಂದಿನ ಚಟುವಟಿಕೆಗಳಿಗೆ ಕೆಲಸ ಮಾಡುತ್ತಿದೆ.

- ಎಲ್ಲರಿಗೂ ಶಿಕ್ಷಣ (Education for All (EFA) ನೀತಿಗಳನ್ನು ಬಡತನ ನಿವಾರಣೆ ಮತ್ತು ವಿಕಾಸದ ತಂತ್ರಗಳಿಗೆ ಸಂಬಂಧಿಸಿದ ಚೌಕಟ್ಟಿನಲ್ಲಿ ಪ್ರೋತ್ಸಾಹಿಸುವುದು.
- ಶಿಕ್ಷಣದ ವಿಕಾಸಕ್ಕಾಗಿ ತಂತ್ರಗಳನ್ನು ರೂಪಿಸುವುದರಲ್ಲಿ, ಜಾರಿಗೊಳಿಸುವಲ್ಲಿ ಮತ್ತು ಮೇಲ್ವಿಚಾರಣೆ ಮಾಡುವಲ್ಲಿ ಪೌರ ಸಮಾಜವನ್ನು ತೊಡಗಿಸಿಕೊಳ್ಳುವಿಕೆ ಮತ್ತು

Digitised by Bharatavani, CIIL

ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳುವುದು.

- ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆಗೆ ಸಹಾನುಭೂತಿ ಪೂರ್ಣವಾದ ಪಾಲ್ಗೊಳ್ಳುವಂಥ ಮತ್ತು ಜವಾಬ್ದಾರಿಯುಳ್ಳ ವ್ಯವಸ್ಥೆಗಳನ್ನು ವಿಕಾಸಗೊಳಿಸುವುದು.
- ಮನೋಭಾವಗಳು, ಮೌಲ್ಯಗಳು ಮತ್ತು ಆಚರಣೆಗಳಲ್ಲಿ ಬದಲಾವಣೆಯಾಗಬೇಕಾದ ಅಗತ್ಯ ದೃಷ್ಟಿಯಿಂದ ಶಿಕ್ಷಣದಲ್ಲಿ ಲಿಂಗ ಸಮಾನತೆ ಸಾಧಿಸುವುದಕ್ಕಾಗಿ ಸಮಗ್ರಗೊಳಿಸಿ ಜಾರಿಗೊಳಿಸುವುದು.
- ದೇಶವ್ಯಾಪ್ತಿಯಾಗಿರುವ ಲೈಂಗಿಕ ರೋಗಗಳಾದ HIV ಮತ್ತು AIDS ರೋಗಗಳನ್ನು ನಿವಾರಿಸಲು ಶೈಕ್ಷಣಿಕ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ತುರ್ತಾಗಿ ಜಾರಿಗೊಳಿಸುವುದು.
- ಕಲಿಕೆಯಲ್ಲಿ ಉತ್ಕೃಷ್ಟತೆಗೆ ಮತ್ತು ಎಲ್ಲರಿಗೂ ಸ್ಪಷ್ಟವಾಗಿ ನಿರೂಪಿಸಿದ ಕಲಿಕಾ ಮಟ್ಟಗಳನ್ನು ಸಾಧಿಸಲು ಅನುಕೂಲಕರವಾದ ಸುರಕ್ಷತೆ, ಆರೋಗ್ಯಪೂರ್ಣ, ಎಲ್ಲವನ್ನೂ ಒಳಗೊಳ್ಳುವ ಮತ್ತು ಸಮಾನವಾಗಿ ಲಭ್ಯವಾಗುವ ಸಂಪನ್ಮೂಲಗಳನ್ನು ಶಿಕ್ಷಣದಲ್ಲಿ ಒದಗಿಸುವುದು.
- ಅಧ್ಯಾಪಕರ ಸ್ಥಾನಮಾನ, ನೈತಿಕ ಸ್ಥೈರ್ಯ ಮತ್ತು ವೃತ್ತಿಪರತೆಯನ್ನು ಹೆಚ್ಚಿಸುವುದು.
- ಎಲ್ಲರಿಗೂ ಶಿಕ್ಷಣದ (EFA) ಗುರಿಗಳನ್ನು ಸಾಧಿಸಲು ನೂತನ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವುದು.
- ರಾಷ್ಟ್ರೀಯ, ಪ್ರಾಂತೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಎಲ್ಲರಿಗೂ ಶಿಕ್ಷಣದ ಗುರಿಗಳನ್ನು ಮತ್ತು ಅವುಗಳನ್ನು ಸಾಧಿಸಲು ಬಳಸುವ ತಂತ್ರಗಳ ಪ್ರಗತಿಯನ್ನು ವ್ಯವಸ್ಥಿತವಾಗಿ ಮೇಲ್ವಿಚಾರಣೆ ಮಾಡುವುದು.
- ಎಲ್ಲರಿಗೂ ಶಿಕ್ಷಣ ನೀಡುವ ಗುರಿಯತ್ತ ಪ್ರಗತಿಯನ್ನು ತ್ವರಿತಗೊಳಿಸಲು ಪ್ರಸ್ತುತ ಇರುವ ಶೈಕ್ಷಣಿಕ ತಂತ್ರಗಳನ್ನು ಇನ್ನೂ ಉತ್ತಮಪಡಿಸುವುದು.

ಎಲ್ಲರಿಗೂ ಶಿಕ್ಷಣ ನೀಡುವ ಯೋಜನೆಯ ಮೌಲ್ಯಮಾಪನ ಈ ಯೋಜನೆಯ ಸವಾಲು ಆಫ್ರಿಕಾ ಖಂಡದಲ್ಲಿ ಸಹರಾ ಮರುಭೂಮಿಯ ದಕ್ಷಿಣಕ್ಕಿರುವ ರಾಷ್ಟ್ರಗಳಲ್ಲಿ, ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಮತ್ತು ಅತಿ ಕಡಿಮೆ ಪ್ರಗತಿ ಹೊಂದಿದ ರಾಷ್ಟ್ರಗಳಲ್ಲಿ ಅತ್ಯಧಿಕವಾದುದಾಗಿದೆ ಎಂದು ಸ್ಪಷ್ಟಪಡಿಸಿದೆ. ಆದ್ದರಿಂದ ಈ ಯೋಜನೆಯ ಅನುಷ್ಠಾನದಲ್ಲಿ ಈ ಎರಡು ಭೂ ಭಾಗಗಳಿಗೆ ಆದ್ಯತೆ ನೀಡಬೇಕಾಗುತ್ತದೆ.

ಯುನೆಸ್ಕೋ ಎಲ್ಲರಿಗೂ ಶಿಕ್ಷಣದ ಯೋಜನೆಗೆ ಸಹಭಾಗಿಗಳಾದ ದೇಶಗಳ ಕಾರ್ಯಗಳನ್ನು ಸಂಯೋಜಿಸಬೇಕಾದ ತನ್ನ ಕಾಯ್ದೆ ಬದ್ಧ ಪಾತ್ರವನ್ನು ಮುಂದುವರಿಸುತ್ತದೆಯೆಂದು ಮತ್ತು ಈ ಕಾರ್ಯಕ್ರಮಗಳ ಸಹಯೋಗಿ ಚಲನಶೀಲತೆಯ ಮೇಲ್ವಿಚಾರಣೆ ಮಾಡುವುದರಲ್ಲಿ ಕಾರ್ಯದರ್ಶಿಯ ಪಾತ್ರವನ್ನು ಮುಂದುವರಿಸುತ್ತದೆ ಎಂದು ಕಾರ್ಯಚೌಕಟ್ಟು ಹೇಳಿದೆ.

**ಯುನೆಸ್ಕೋ ಮತ್ತು ಶಿಕ್ಷಣ:**

ಎಲ್ಲರಿಗೂ ಶಿಕ್ಷಣದ ಛತ್ರದಡಿಯಲ್ಲಿ ಭಾರತದಲ್ಲಿ ಯುನೆಸ್ಕೋ ತನ್ನ ಎಲ್ಲಾ ಚಟುವಟಿಕೆಗಳಿಗೂ ವಿಸ್ತೃತ ಆಧಾರದವನ್ನು ಹೊಂದಿದೆ.

ವಿಶ್ವ ಶಿಕ್ಷಣ ವೇದಿಕೆಗೆ ಪೂರ್ವಭಾವಿಯಾಗಿ ನವದೆಹಲಿಯ ಯುನೆಸ್ಕೋ ಕಳೆದ ವರ್ಷ (2003) ದಕ್ಷಿಣ ಮತ್ತು ಪಶ್ಚಿಮ ಏಷ್ಯಾದಲ್ಲಿನ ಎಲ್ಲರಿಗೂ ಶಿಕ್ಷಣದ ಕಾರ್ಯಚಟುವಟಿಕೆಗಳನ್ನು (ಯುನೆಸ್ಕೋ ವಿಶ್ವವ್ಯಾಪಿ ಪ್ರಯತ್ನದ ಅಂಗವಾಗಿ) ಸಂಯೋಜಿಸುವ ಕಾರ್ಯವನ್ನು ಕೈಗೊಂಡಿತ್ತು. ಇದರಲ್ಲಿ ಆಫಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಭಾರತ, ಇರಾನ್, ಮಾಲ್ಡೀವ್ ದ್ವೀಪಗಳು ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ ದೇಶಗಳನ್ನೊಳಗೊಂಡ ಈ ಪ್ರದೇಶಗಳಲ್ಲಿ ಎಲ್ಲರಿಗೂ ಶಿಕ್ಷಣದ ಪ್ರಗತಿಯನ್ನು ಆಯೋಜನೆಯ 18 EFA ನಿರ್ಧಾರಕಾಂಶಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವ ಕಾರ್ಯ ಸೇರಿತ್ತು. ಈ ರಾಷ್ಟ್ರಗಳ ಎಲ್ಲರಿಗೂ ಶಿಕ್ಷಣಕ್ಕೆ ಸಂಬಂಧಿಸಿದ ರಾಷ್ಟ್ರ ವರದಿ ಸಿದ್ಧಪಡಿಸುವುದಕ್ಕೆ ಪೂರ್ವಭಾವಿಯಾಗಿ ಕಳೆದ ವರ್ಷ (2003) ನವದೆಹಲಿ ಮತ್ತು ಕಠಮಂಡುವಿನಲ್ಲಿ ಎರಡು ಪ್ರಾದೇಶಿಕ ಮೀಟಿಂಗ್‌ಗಳನ್ನು ನಡೆಸಲಾಯಿತು.

ಈ ಚಟುವಟಿಕೆಗೆ ಧನಸಹಾಯ ಮಾಡಿದ ನಿಯೋಗಗಳ ಯುನೆಸ್ಕೊ UNICF, UNFPA, UNDP ಮತ್ತು ವಿಶ್ವ ಬ್ಯಾಂಕ್ ದ್ವಿರಾಷ್ಟ್ರೀಯ ಸಂಘಟನೆಗಳಾದ DFID, SIDA ಐರೋಪ್ಯ ಒಕ್ಕೂಟ ಈ ಸಂಘಟನೆಗಳು ಕೂಡ ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ನಿಯತ ಅವಧಿಗಳಲ್ಲಿ ಸಭೆ ಸೇರಿದ ಮತ್ತು ತಮ್ಮ ಕ್ಷೇತ್ರ ಕಛೇರಿಗಳ ಮೂಲಕ ಈ ದೇಶಗಳಿಗೆ ಸಹಾಯ ನೀಡಲಾಗುತ್ತಿತ್ತು.

ಇದಕ್ಕೆ ಬೇಕಾದ ಕಾರ್ಯ ಚೌಕಟ್ಟನ್ನು ಡಾಕರ್ ವೇದಿಕೆ ಸಭೆಗೆ ಮೊದಲೇ ಬ್ಯಾಂಕ್‌ಕಾಕ್‌ನಲ್ಲಿ ಸೇರಿದ್ದ ಏಷ್ಯ ಪ್ಯಾಸಿಫಿಕ್ ದೇಶಗಳ ಸಭೆಯಲ್ಲಿ ಸಿದ್ಧಪಡಸಲಾಗಿತ್ತು.

ಡಾಕರ್ ಸಭೆಯಲ್ಲಿಯೇ ಹೆಣ್ಣು ಮಕ್ಕಳ ಶಿಕ್ಷಣ, ಗುಣಾತ್ಮಕ ಕಲಿಕೆ, ಶಿಕ್ಷಣದಿಂದ ವಂಚಿತರಾಗಿದ್ದ ಹೆಣ್ಣುಮಕ್ಕಳು, ಕೆಲಸ ಮಾಡುವ ಮಕ್ಕಳು ಅಲ್ಪಸಂಖ್ಯಾತ ಜನಾಂಗಗಳಿಗೆ ಸೇರಿದ ಮಕ್ಕಳು, ಹಿಂಸೆ, ಸಂಘರ್ಷ, ಅಸಮರ್ಥ, ವಂಚನೆಗೆ ಒಳಗಾದ, ಗುಂಪಿಗೆ ಸೇರಿದ ಮಕ್ಕಳು ಮತ್ತು HIV, AIDS ರೋಗಗಳ ಪ್ರಭಾವಕ್ಕೆ ಒಳಗಾದ ಮಕ್ಕಳಿಗೆ ವಿಶೇಷ ಒತ್ತು ನೀಡಲಾಗಿತ್ತು. ದಕ್ಷಿಣ ಏಷ್ಯಾ ಆಫ್ರಿಕಾದ ಸಹಾರ ಮರಭೂಮಿಯ ಕೆಳಗಿರುವ ದೇಶಗಳು ಮತ್ತು ಕನಿಷ್ಠ ಮಟ್ಟದ ಪ್ರಗತಿ ಹೊಂದಿರುವ ದೇಶಗಳನ್ನು ಅವುಗಳಲ್ಲಿ ಪ್ರಪಂಚದ ಅಶಿಕ್ಷಿತ ಮತ್ತು ವಂಚಿತರಾಗಿರುವ ಜನಸಮುದಾಯದ ಬಹುಸಂಖ್ಯಾತ ಜನರು ವಾಸಿಸುವುದರಿಂದ ಈ ಯೋಜನೆಯ

Digitised by Bharatavani, CIIL

ಕಾರ್ಯಕ್ಕೆ ಆದ್ಯತಾ ಕ್ಷೇತ್ರಗಳೆಂದು ಪರಿಗಣಿಸಲಾಯಿತು. ಈ ಎಲ್ಲಾ ದೇಶಗಳ ಸರ್ಕಾರಗಳು 2015ರೊಳಗೆ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸುವ ಪ್ರತಿಜ್ಞೆ ಮಾಡಿದವು.

ಭಾರತ ಒಂದು ದೇಶಸಂಬಂಧಿ ವರದಿಯನ್ನು ಸಿದ್ಧಪಡಿಸಿದ್ದಲ್ಲದೆ, ಹೆಚ್ಚಿನ ಗಮನ ನೀಡಬೇಕಾದ ಕ್ಷೇತ್ರಗಳ ಬಗ್ಗೆ ಬೆಳಕು ಚೆಲ್ಲುವ 26 ಅಧ್ಯಯನಗಳನ್ನು ವರದಿ ಮಾಡಿತು. ಲಿಂಗ ಅಂತರ, ಸಮತೆಯನ್ನು ಉತ್ತಮಗೊಳಿಸುವಿಕೆ, ನಿರ್ವಹಣಾ ಸುಧಾರಣೆಗಳು, ಮೂಲಶಿಕ್ಷಣಕ್ಕೆ ಧನ ಸಹಾಯವನ್ನು ಹೆಚ್ಚಿಸುವುದು ಸಾಕ್ಷರತೆ ಮತ್ತು ಉತ್ತರ ಸಾಕ್ಷರತ, ಆರಂಭಿಕ ಬಾಲ್ಯಾವಸ್ಥೆಯ ಸಂರಕ್ಷಣೆ ಮತ್ತು ಶಿಕ್ಷಣ, ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೆಚ್ಚಿಸುವುದು,. ಗಮನ ಪಡೆಯದಿರುವ ಭೌಗೋಳಿಕ ಪ್ರದೇಶಗಳಿಗೆ ಮತ್ತು ಕಡೆಗಣಿಸಲ್ಪಟ್ಟಿರುವ ಸಾಮಾಜಿಕ ಗುಂಪುಗಳಿಗೆ ಸಹಾಯ ಒದಗಿಸುವುದು, HIV, AIDS ರೋಗ ಪೀಡಿತರನ್ನು ನೋಡಿಕೊಳ್ಳುವುದು ಮತ್ತು ಆರೋಗ್ಯ, ಪೌಷ್ಠಿಕತೆ, ಪರಿಸರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಆಗುತ್ತಿರುವ ಕಾರ್ಯಗಳನ್ನು ಏಕಾಗ್ರಮುಖ ವಾಗಿಸುವುದು ಈ ಕ್ಷೇತ್ರಗಳಿಗೆ ಈ ವರದಿ ಗಮನ ನೀಡಿತ್ತು.

ಇದರ ಅನುಸರಣ ಕಾರ್ಯದ ರೂಪವಾಗಿ, ಪ್ರತಿಯೊಂದು ದೇಶವೂ ತನ್ನದೇ ಆಗಿ ರಾಷ್ಟ್ರೀಯ ಯೋಜನೆಯನ್ನು ರೂಪಿಸಿತು.

**ಇ–9 ದೇಶ EFA:**

ಇ–9 ದೇಶಗಳಲ್ಲಿ 5 ದೇಶಗಳು ಭಾರತ, ಬಾಂಗ್ಲಾದೇಶ, ಚೈನಾ, ಇಂಡೋನೇಷ್ಯ ಮತ್ತು ಪಾಕಿಸ್ತಾನ–ವಿಶ್ವದ ಈ ಭಾಗದಲ್ಲಿ ಬರುತ್ತವೆ. ಡಾಕರ್ ಫ್ಲೋರಂಗೆ ಪೂರ್ವಭಾವಿಯಾಗಿ ಈ ಪ್ರತಿಯೊಂದು ದೇಶದಲ್ಲಿಯೂ ತರಬೇತಿ ಮತ್ತು ಸಾಮರ್ಥ್ಯ ವರ್ಧನ ಕಾರ್ಯಾಗಾರಗಳನ್ನು ಏರ್ಪಡಿಸಲಾಯಿತು. ಭಾರತ ಆಕರ್ಷಕರವಾದ ಸಾಕ್ಷರತಾ ಹಾಗೂ ಸಾಕ್ಷರೋತ್ತರ ಸಾಮಗ್ರಿಗಳನ್ನು ಸಿದ್ಧಪಡಿಸುವುದು, ಗ್ರಾಮೀಣ ಗ್ರಂಥಾಲಯಗಳನ್ನು ತೆರೆಯುವುದು ಮತ್ತು ಬಾಲಕಿಯರಿಗೆ ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಜ್ಞಾನವನ್ನು ನೀಡುವ ಕಾರ್ಯಕ್ರಮಗಳ ಮೂಲಕ ಸಾಕ್ಷರತಾ ಪರಿಸರವನ್ನು ಸೃಷ್ಟಿಸುವುದಕ್ಕೆ ವಿಶೇಷ ಗಮನ ನೀಡಿತು.

ಎಲ್ಲಾ ಇ–9 ದೇಶಗಳು 2000ನೇ ವರ್ಷದಲ್ಲಿ ಬ್ರೆಜಿಲ್‌ನ ರೆಸಿಫೆ ಎಂಬಲ್ಲಿ ಸಭೆ ಸೇರಿದವು. ಡಾಕರ್ ಫ್ಲೋರಂನಲ್ಲಿ ಪ್ರಸ್ತುತಪಡಿಸಲು ರಸಿಫೆ ಘೋಷಣೆಯನ್ನು ಬರೆಯಲಾಯಿತು. ಈ ಘೋಷಣೆ ವಯಸ್ಕರ ಅನಕ್ಷರತೆಯನ್ನ ನಿರ್ಮೂಲನ ಮಾಡುವುದು, ಲಿಂಗ ಸಮತೆ, ಶಿಕ್ಷಣ ಮತ್ತು ಶ್ರಮ (ಕಾರ್ಯ) ಸಮೂಹ, ಲಭ್ಯತೆ ಮತ್ತು ಗುಣಾತ್ಮಕತೆ, ಸಹಿಷ್ಣುತೆ ಮತ್ತು ಲಿಂಗ ಸಮತೆಯನ್ನು ಗೌರವಿಸುವುದು ಈ ವಿಷಯಗಳಿಗೆ ಗಮನ ನೀಡಿತ್ತು.

**ದೂರಶಿಕ್ಷಣ:**

ಇ–9 ದೇಶಗಳಲ್ಲಿ ಅವುಗಳ ಪ್ರದೇಶ ವ್ಯಾಪ್ತಿ ಮತ್ತು ಜನಸಂಖ್ಯೆಯ ಗಾತ್ರದ ದೃಷ್ಟಿಯಿಂದ ದೂರಶಿಕ್ಷಣ ವಿಶೇಷ ಮಹತ್ವ ಪಡೆಯುತ್ತದೆ. ಈ ಸಂಬಂಧವಾಗಿ ಯುನೆಸ್ಕೋ ತಲುಪದವರನ್ನು ತಲುಪುವುದು. ಮೂಲಭೂತ ಶಿಕ್ಷಣದಲ್ಲಿ ದೂರವಿಧಾನದ ಪ್ರಸ್ತುತ ಉಪಯೋಗ (Reaching the Unreached current use of Distance Mode in Basic Education) ಎಂಬ ಒಂದು ಅಧ್ಯಯನವನ್ನು ನಡೆಸಲು ಸಹಾಯ ನೀಡಿತು. ಈ ಅಧ್ಯಯನದ ಗುರಿ ಭಾರತ ಕೈಗೊಂಡಿರುವ ದೂರಶಿಕ್ಷಣ ವಿಧಾನ (Distance Education Mode-Dem) ನ ಸಫಲತೆಯನ್ನು ಮೌಲ್ಯಮಾಪನ ಮಾಡುವುದಾಗಿತ್ತು. ಈ ಅಧ್ಯಯನ ದೂರಶಿಕ್ಷಣ ಕಾರ್ಯಕ್ರಮಗಳ ಗುಣಮಟ್ಟ ಮತ್ತು ಪ್ರಭಾವಿಕತೆಯನ್ನು ವಿಶ್ಲೇಷಿಸಿತು ಮತ್ತು ಮುಕ್ತ ಶಾಲೆಯನ್ನು ಒಂದು ಸತ್ವಪೂರ್ಣ ಪರ್ಯಾಯ ಕ್ರಮವಾಗಿ ಶಿಫಾರಸ್ಸು ಮಾಡುವುದರ ಜೊತೆಗೆ, ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಹಂತಗಳಲ್ಲಿ ದೂರಶಿಕ್ಷಣ ವಿಧಾನಗಳನ್ನು ಉಪಯೋಗಿಸಲು ಇರುವ ಅಡೆತಡೆಗಳನ್ನು ಪಟ್ಟಿ ಮಾಡಿತು. ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ (IGNOU) ದೂರಶಿಕ್ಷಣದ ಮೂಲಕ ಅಧ್ಯಾಪಕ ಪ್ರಶಿಕ್ಷಣಕ್ಕಾಗಿ ಯನೆಸ್ಕೋ ಅಧ್ಯಯನ ಪೀಠವನ್ನು ಆರಂಭಿಸಲಾಯಿತು. ಈ ಅಧ್ಯಯನ ಪೀಠ ಈ ಕ್ಷೇತ್ರದಲ್ಲಿನ ಚಟುವಟಿಕೆಗಳಿಗೆ ಕೇಂದ್ರ ಬಿಂದುವಾಗಿ ಕೆಲಸ ಮಾಡುತ್ತದೆ. ಅಧ್ಯಾಪಕ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಉತ್ತಮಪಡಿಸಲು, ಕಾರ್ಯಾಗಾರಗಳು, ವಿಚಾರಸಂಕಿರಣಗಳನ್ನು ಏರ್ಪಡಿಸಲು ಮತ್ತು ದಾಖಲೆಗಳನ್ನು ರೂಪಿಸಲು ಕಾರ್ಯನಿರ್ವಹಿಸುತ್ತದೆ.

**ವಿಕೇಂದ್ರೀಕರಣ ವ್ಯಾಪ್ತಿ ಜನಶಾಲಾ ಪ್ರಾಯೋಜನೆ:**

ಸಂಯುಕ್ತಸಂಘದ (UR) ಅಭಿವೃದ್ಧಿ ಸಹಾಯ ಚೌಕಟ್ಟಿನಡಿಯಲ್ಲಿ (UNDEVELOMENT FRAMEWORK) UNESCO, UNICEF, UNDP, UNFPA ಮತ್ತು ಖಐಔ ಸಂಯುಕ್ತ ರಾಷ್ಟ್ರಗಳ ಸಂಘದ ಈ ಐದು ನಿಯೋಗಗಳು ವಿಶೇಷವಾಗಿ ವಿಕೇಂದ್ರೀಕರಣ ಮತ್ತು ಲಿಂಗ ವಿಷಯದ ಮೇಲೆ ಗಮನ ಕೇಂದ್ರೀಕರಿಸಿ ಭಾರತ ಸರ್ಕಾರದೊಂದಿಗೆ ಪ್ರಥಮ ಬಾರಿಗೆ ಸೇರಿಕೊಂಡು ಎಂಟು ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ 5 ವರ್ಷ ಅವಧಿಯ ಪ್ರಾಯೋಜನೆಯೊಂದನ್ನು ಆರಂಭಿಸಿ ಕಾರ್ಯ ನಿರ್ವಹಿಸುತ್ತಿವೆ ಬ್ಲಾಕ್ ಮತ್ತು ಹಳ್ಳಿಯ ಮಟ್ಟದಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ವಿಕೇಂದ್ರೀಕರಣಗೊಳಿಸುವುದು ಈ ಪ್ರಾಯೋಜನೆಯ ವಿಶೇಷ ಲಕ್ಷಣವಾಗಿದೆ. ಇದರ ಕಾರ್ಯಾನ್ವಾಯಕ್ಕಾಗಿ ಪ್ರಾಯೋಜನೆ ಒಂದು ನಿರ್ವಹಣ ಸಂರಚನೆಯನ್ನು ಸ್ಥಾಪಿಸಿದೆ. ಮೊದಲ ಎರಡು ವರ್ಷಗಳವರೆಗೆ ಸೂಕ್ಷ್ಮಯೋಜನೆ, ಬಹುವರ್ಗ (ತರಗತಿ) ಬೋಧನೆಯ ಬಗ್ಗೆ ಶಿಕ್ಷಕರ ತರಬೇತಿ, ಶಾಲೆ ಮತ್ತು ಹಳ್ಳಿಯ ನಡುವೆ ಸಂಪರ್ಕ ಕಲ್ಪಿಸುವುದು, ಶಾಲೆಯಿಂದ ಹೊರಗುಳಿದಿದ್ದ ಮಕ್ಕಳಿಗೆ

Digitised by Bharatavani, CIIL

ಪರ್ಯಾಯ ಪರಿಹಾರಗಳನ್ನು ಸೃಷ್ಟಿಸುವುದು, ಶಿಕ್ಷಣದ ಮತ್ತು ಕಲಿಕಾ ಪರಿಹಾರಗಳ ಗುಣಮಟ್ಟವನ್ನು ಉತ್ತಮಪಡಿಸುವುದು, ಶಿಕ್ಷಣದಲ್ಲಿ ಪಾಲುಗಾರಿಕೆ ವಿಕಾಸ ಮುಂತಾದ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗಿತ್ತು.

UNESCO, DIET ಶಿಕ್ಷಕರ ಸಹಯೋಗದೊಂದಿಗೆ ಹಿಂದಿ ಭಾಷೆಯಲ್ಲಿ ಬಹುವರ್ಗ (ತರಗತಿ) ಬೋಧನೆಗಾಗಿ ಒಂದು ಕೈಪಿಡಿಯನ್ನು ರಚಿಸಲಾಗಿದೆ.

**ವಿಶೇಷ ಅಗತ್ಯಗಳ ಬೋಧನೆಗೆ ಅಂತಾರಾಷ್ಟ್ರೀಯ ಕೇಂದ್ರ:**

1997ರಲ್ಲಿ ನಡೆದ UNESCO ಸಾಮಾನ್ಯ ಸಮ್ಮೇಳನದಲ್ಲಿ ಭಾರತ ವಿಶೇಷ ಶಿಕ್ಷಣದಲ್ಲಿ ಸಂಶೋಧನೆ ಮತ್ತು ತರಬೇತಿ ಪ್ರೋತ್ಸಾಹಕ್ಕಾಗಿ ಏಷ್ಯಾ ಫೆಸಿಫಿಕ್ ಪ್ರದೇಶದಲ್ಲಿ ಒಂದು ಪ್ರಾದೇಶಿಕ ಸಂಸ್ಥೆ ಕೇಂದ್ರದ ಸ್ಥಾಪನೆಗಾಗಿ ಪ್ರಸ್ತಾವನೆಯನ್ನು ಮಾಡಿತ್ತು. ಇದಕ್ಕಾಗಿ 2000ನೇ ವರ್ಷದ ಜುಲೈಯಲ್ಲಿ ನಡೆದ ಎರಡು ದಿನಗಳ ಕಾರ್ಯಾಗಾರದಲ್ಲಿ ಈ ಕೇಂದ್ರದ ರೂಪರೇಷೆಯನ್ನು ಸಿದ್ಧಪಡಸಲಾಗಿತ್ತು.

ಅಸಮರ್ಥತೆಗಳುಳ್ಳ ಮಕ್ಕಳಿಗೆ ಮತ್ತು ಯುವಕ/ಯುವತಿಯರಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದನ್ನು ಸುಗಮಗೊಳಿಸಲು ಈ ಕೇಂದ್ರವನ್ನು ಸ್ಥಾಪಿಸಲಾಯಿತು. ಈ ಕೇಂದ್ರದ ಸಮನ್ವಯ ಶಿಕ್ಷಣದ ತತ್ವಗಳ ಆಧಾರದ ಮೇಲೆ ಸಂಶೋಧನೆ ಮತ್ತು ಆಚರಣೆಗಳನ್ನು ಕೈಗೊಳ್ಳಲು ಶಿಕ್ಷಕರಿಗೆ, ಶಿಕ್ಷಣ ಬೋಧಕರಿಗೆ, ಆಡಳಿತಗಾರರಿಗೆ ಮತ್ತು ನಿರ್ವಹಣಾಕರ್ತರಿಗೆ ತರಬೇತಿ ನೀಡಲು ಮತ್ತು ತನ್ನ ಪ್ರದೇಶದಲ್ಲಿ ಹಾಗೂ ಆ ಪ್ರದೇಶವನ್ನು ದಾಟಿ ಇರುವ ಇದೇ ರೀತಿ ಸಂಸ್ಥೆಯೊಂದಿಗೆ ಮಾಹಿತಿ ಜಾಲವನ್ನು ನಿರ್ಮಿಸಲು ಒಂದು ಜ್ಞಾನ ಬ್ಯಾಂಕ್ ರೂಪದಲ್ಲಿ ಸೇವೆ ಸಲ್ಲಿಸುತ್ತಿದೆ.

ಈ ಕೇಂದ್ರದ ಮುಖ್ಯ ಧ್ಯೇಯ (ಮಿಶನ್) ತನ್ನ ಪ್ರದೇಶದಲ್ಲಿರುವ ದೇಶಗಳ ಸಹಾಯದೊಂದಿಗೆ ಸಮನ್ವಯ ಶಿಕ್ಷಣದಲ್ಲಿರುವ ಸಂಪನ್ಮೂಲ ವ್ಯಕ್ತಿಗಳ ದತ್ತಾಂಶ ಆಧಾರವನ್ನು (Data Base) ಮತ್ತು ಒಂದು ನಿರ್ದೇಶಿಕೆಯನ್ನು (Directory) ಸಿದ್ಧಗೊಳಿಸುವುದು, ಅಸಮರ್ಥನೆಗಳುಳ್ಳ ಮಕ್ಕಳ (Children with Disability CWD) ಬಗ್ಗೆ ದತ್ತಾಂಶಗಳನ್ನು ಸಂಗ್ರಹಿಸುವುದು, ಶಿಕ್ಷಕರು, ಆಡಳಿತಗಾರರು, ನಿರ್ವಹಣ ಕರ್ತರುಗಳಿಗ ಸಂವೇದನಶೀಲತೆ ಆಂದೋಲನಗಳನ್ನು ನಡೆಸುವುದು, ಶಿಕ್ಷಕರಿಗೆ ತರಬೇತಿನೀಡುವುದು, ಅಂಥ ತರಬೇತಿ ಕಾರ್‍ಯಕ್ರಮಗಳಿಗೆ ಪಠ್ಯಕ್ರಮಗಳನ್ನು ಮಾಡ್ಯೂಲ್‌ಗಳನ್ನು ಸಿದ್ಧಪಡಿಸುವುದು ಮತ್ತು ತಮ್ಮ ತಮ್ಮ ಜಿಲ್ಲೆಗಳಲ್ಲಿ ಮತ್ತು ಸಮುದಾಯಗಳಲ್ಲಿ ಕಾರ್ಯಯೋಜನೆಗಳನ್ನು ಸಿದ್ಧಪಡಿಸಲು ಆಡಳಿತಗಾರರನ್ನು ಸಮರ್ಥರನ್ನಾಗಿಸಲು ಅವರಿಗೆ ದಿಶಾ ನಿರ್ದೇಶನ ಕೋರ್ಸ್‌ಗಳನ್ನು ನಡೆಸುವುದನ್ನು ಒಳಗೊಂಡಿದೆ.

ಭಾರತದಲ್ಲಿ ಶಾಲೆಗೆ ಹೋಗಬೇಕಾದ ಅಗತ್ಯವುಳ್ಳ 30 ದಶಲಕ್ಷ (ಮಿಲಿಯನ್) ಅಸಮರ್ಥತೆಗಳುಳ್ಳ ಮಕ್ಕಳಿದ್ದಾರೆ ಮತ್ತು ಏಷ್ಯಾ ಫೆಸಿಫಿಕ್ ಪ್ರದೇಶ ಪ್ರಪಂಚದಲಿಯೇ ಅತಿಹೆಚ್ಚು ಅಸಮರ್ಥ ಮಕ್ಕಳ ಜನ ಸಂಖ್ಯೆಯನ್ನು ಹೊಂದಿದೆ.

**ಅಸಮರ್ಥತೆಯುಳ್ಳ ಮಕ್ಕಳ ಶಿಕ್ಷಣ:**

ಪ್ರತಿಯೊಂದು ಮಗುವಿಗೂ ಶಿಕ್ಷಣವನ್ನು ನೀಡುವ ತನ್ನ ಧ್ಯೇಯದ (ಮಿಶನ್) ಭಾಗವಾಗಿ UNESCO ರಾಜಸ್ತಾನ್ ರಾಜ್ಯದ ಕಾಮಾನ್, ಭರತಪುರ್, ಸಗವಾರ, ಮತ್ತು ಪ್ರತಾಪಗಢ ಬ್ಲಾಕ್‌ಗಳಲ್ಲಿ ಲೋಕ್ ಜಂಬಿಶ್ ಸಂಸ್ಥೆ ಅಸಮರ್ಥತೆಯುಳ್ಳ ಮಕ್ಕಳಿಗಾಗಿ ಆರಂಭಿಸಿರುವ ಕಾರ್ಯಕ್ಕೆ ಬೆಂಬಲ ನೀಡಿದೆ. ಅಸಮರ್ಥತೆಯುಳ್ಳ ಮಕ್ಕಳನ್ನು ಸಮಗ್ರ ಶಿಕ್ಷಣಕ್ಕೆ ಸಿದ್ಧಪಡಿಸಲು, ಅವರನ್ನು ಆತ್ಮವಿಶ್ವಾಸಿಗಳನ್ನಾಗಿ ಮಾಡಲು, ಮತ್ತು ಅವರ ಅಸಮರ್ಥತೆಗೆ ಬೇಕಾದ ಉಪಕರಣಗಳನ್ನು ಒದಗಿಸಲು ಅವರಿಗೆ ಒಂದು ತಿಂಗಳ, ಮೂರು ತಿಂಗಳ ಮತ್ತು ಆರು ತಿಂಗಳ ಶಿಬಿರಗಳನ್ನು ಏರ್ಪಡಿಸಲಾಯಿತು. ವಿವಿಧ ವಯೋ ಗುಂಪಿಗೆ ಸೇರಿದ್ದ 110 ಮಕ್ಕಳು ಈ ಪ್ರಾಯೋಜನೆಯಲ್ಲಿ ಸೇರಿದ್ದರು. ಇವರಲ್ಲಿ 106 ಮಕ್ಕಳನ್ನು ಔಪಚಾರಿಕ ಶಾಲಾ ವ್ಯವಸ್ಥೆಯೊಂದಿಗೆ ಸಮಗ್ರಗೊಳಿಸಲಾಯಿತು.

ತರಗತಿಯಲ್ಲಿ ವಿಶೇಷ ಅಗತ್ಯಗಳು ಎಂಬ ವಿಷಯದ ಅಂತಾರಾಷ್ಟ್ರೀಯ ತಜ್ಞರ ಸಹಾಯದೊಂದಿಗೆ UNESCO ಒಂದು ಅಧ್ಯಾಪಕ ಶಿಕ್ಷಣ ಸಂಪನ್ಮೂಲ ಸಂಚಯ (pack) ವನ್ನು ಸಿದ್ಧಪಡಿಸಿದೆ. ಇಂಗ್ಲೀಷ್‌ನಲ್ಲಿದ್ದ ಇದನ್ನು ಹಿಂದಿಗೆ ಅನುವಾದ ಮಾಡಿ ಪ್ರಾಯೋಗಿಕ ಪರೀಕ್ಷೆ ಮಾಡಲಾಗಿದೆ.

**ಸಾಕ್ಷರೋತ್ತರ ಕಾರ್ಯಕ್ರಮ:**

ನವಸಾಕ್ಷರರು ಗಳಿಸಿದ ಸಾಕ್ಷರತೆ ಮೂಲಭೂತ ಕೌಶಲ್ಯಗಳು ಅನೇಕ ವೇಳೆ ದುರ್ಬಲವಾಗಿರುತ್ತವೆ. ಆದ್ದರಿಂದ ಇಂಥವರ ಸಾಕ್ಷರತೆಯನ್ನು ಉಳಿಸಿಕೊಳ್ಳುವುದು ಯುನೆಸ್ಕೋನ ಒಂದು ಕಾರ್ಯವಾಗಿದೆ. ಈ ಸಂಬಂಧವಾಗಿ ಯುನೆಸ್ಕೋ ನವ ದೆಹಲಿಯಲ್ಲಿರುವ ಜಾಮಿಯಾ ಮೀಲಿಯಾ ಇಸ್ಲಾಮಿಯಾ ವಿಶ್ವವಿದ್ಯಾನಿಲಯದ ರಾಜ್ಯ ವಯಸ್ಕರ ಮತು ಸಂಪ್ರದಾಯರಹಿತ ಶಿಕ್ಷಣ ಕೇಂದ್ರ (State Reserve Center for Adult and Non-formal Education - SRC) ಕೈಗೊಂಡಿದ್ದ ಒಂದು ನವೀನ ಆಚರಣೆಯ ಸಂಶೋಧನ ಪ್ರಾಯೋಜನೆಯನ್ನು ಬೆಂಬಲಿಸಿದೆ. ರಾಷ್ಟ್ರೀಯ ಸಾಕ್ಷರತಾ ಮಿಶನ್ ಸಾಕ್ಷರರೆಂದು ಘೋಷಿಸಿದ್ದ ವಯಸ್ಕರು ಏಷ್ಟಾದ ಮಟ್ಟಿಗೆ ತಮ್ಮ ಸಾಕ್ಷರತೆ ಕೌಶಲಗಳನ್ನು ದಿನನಿತ್ಯದ ಸಂವಹನದಲ್ಲಿ ಉಪ ಯೋಗಿಸುತ್ತಾರೆಂಬುದನ್ನು ಮೌಲ್ಯಮಾಪನ ಮಾಡುವುದು ಈ ಪ್ರಾಯೋಜನೆಯ ಉದ್ದೇಶವಾಗಿತ್ತು.

ನವಸಾಕ್ಷರರಿಗೆ ಮಾಹಿತಿ ಹಾಳೆಗಳು ಮತ್ತು ಮುಂಗಡದ ಅಂಚೆವೆಚ್ಚ ಪಾವತಿಸಿದ ಜವಾಬು ಕಾರ್ಡುಗಳನ್ನು ಕಳುಹಿಸಲಾಯಿತು. ನವಸಾಕ್ಷರರು ಕಳುಹಿಸಿದ ಹಿನ್ನುಣಿಕೆ (Feed back) ಅವರಲ್ಲಿ ಕೆಲವು ಬದಲಾವಣೆಗಳನ್ನು ತೋರಿಸಿತು. ಕಲಿಯಲು ಮತ್ತು ಅಭ್ಯಾಸ ಮಾಡಲು ಒಂದು ರೀತಿಯ ಆತುರ, ಸಾಮಾಜಿಕ ಅನ್ಯೋನ್ಯ ಕ್ರಿಯೆಯಲ್ಲಿ ಮತ್ತು ಆರೋಗ್ಯ, ಉಡುಪು

Digitised by Bharatavani, CIIL

ಮತ್ತು ಅಡುಗೆ ಮಾಡುವುದರ ಬಗ್ಗೆ ಅರಿವಿನಲ್ಲಿ ಸುಧಾರಣೆ ಈ ಬದಲಾವಣೆಗಳು ಕಂಡುಬಂದವು.

**ಕಠಿಣ ಪರಿಸ್ಥಿತಿಗಳಲ್ಲಿರುವ ಮಕ್ಕಳು:**

ಡಾಕರ್ ಸಮ್ಮೇಳನದಲ್ಲಿ ಒಪ್ಪಿಕೊಂಡಿದ್ದ ಕ್ರಿಯಾ ಚೌಕಟ್ಟು ಬಾಲಕಿಯರಿಗೆ ಮತ್ತು ಕಠಿಣ ಪರಿಸ್ಥಿತಿಗಳಲ್ಲಿರುವ ಮಕ್ಕಳಿಗೆ ಒತ್ತು ನೀಡಿ ಎಲ್ಲರಿಗೂ ಶಿಕ್ಷಣದ ಗುರಿಯನ್ನು ಸಾಧಿಸಲು ಅನೇಕ ದೇಶಗಳನ್ನು ಬದ್ಧರನ್ನಾಗಿಸಿದೆ. ಯುನೆಸ್ಕೋ ಕೊಲ್ಕತ್ತಾದಲ್ಲಿರುವ CINI ಆಶಾ ಮತ್ತು ಡಾನ್‌ಬಾಸ್ಕೋ ಆಶಾಲಯಂ ಎಂಬ ಎರಡು ಸರ್ಕಾರೇತರ ಖಾಸಗಿ ಸಂಸ್ಥೆ (NGO) ಗಳೊಂದಿಗೆ ಕೆಲಸ ಮಾಡಿದೆ. CINI ಆಶಾ ಸಂಸ್ಥೆ ಬೀದಿ ಮಕ್ಕಳನ್ನು ಬಾಲಶ್ರಮಿಕರನ್ನು ಮತ್ತು ಲೈಂಗಿಕ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳನ್ನು ಔಪಚಾರಿಕ ಶಾಲೆಗಳ ಮುಖ್ಯ ವಾಹಿನಿಗೆ ತಂದಿರುವುದಲ್ಲದೆ, ಈ ಮಕ್ಕಳ ಅಸ್ತಿತ್ವ (ಉಳಿಯುವಿಕೆ), ಬೆಳವಣಿಗೆ ಮತ್ತು ವಿಕಾಸದ ಕಡೆಗೂ ಗಮನ ನೀಡುತ್ತಿದೆ CINI ಆಶಾ ಕೈಗೊಂಡಿದ್ದ 'ಶಿಕ್ಷಣದ ಮೂಲಕ ವಿಕಾಸದ ಹಕ್ಕು' ಎಂಬ ಪ್ರಾಯೋಜನೆ ಅದರ ಕಾರ್ಯ ಕ್ಷೇತ್ರದಲ್ಲಿರುವ ಎಲ್ಲಾ ಮಕ್ಕಳೂ ಶಾಲೆಗಳಿಗೆ ದಾಖಲಾಗುವುದನ್ನು ಮತ್ತು ಅವರನ್ನು ಶಾಲೆಯಲ್ಲಿ ಉಳಿಸಿಕೊಳ್ಳುವದನ್ನು ಖಚಿತಪಡಿಸಿಕೊಂಡಿತು.

ಡಾನ್ ಬಾಸ್ಕೋ ಆಶಾಲಯ ಮತ್ತು ಯುನೆಸ್ಕೋ ಬೀದಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಮತ್ತು ವೃತ್ತಿಶಿಕ್ಷಣವನ್ನು ಕೊಡುವ ಉದ್ದೇಶವನ್ನು ಹೊಂದಿದ್ದ 'ಸಾಮಾಜಿಕ ಬದಲಾವಣೆಗೆ ಶಿಕ್ಷಣ' ಎಂಬ ಪ್ರಾಯೋಜನೆಯನ್ನು ಕೈಗೊಂಡಿದ್ದವು. ಮಕ್ಕಳನ್ನು ಔಪಚಾರಿಕ ಶಾಲೆಗಳಿಗೆ ಸಮಗ್ರಗೊಳಿಸಲಾಯಿತು. ಮತ್ತು ಪಠ್ಯಕ್ರಮವನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ನವೀನ ರೀತಿಯ ಶೈಕ್ಷಣಿಕ ಕಿಟ್‌ಗಳನ್ನು ತಯಾರಿಸಲಾಯಿತು ಮತ್ತು ಕಂಪ್ಯೂಟರ್ ತರಬೇತಿ ಕಾರ್ಯಕ್ರಮಗಳನ್ನು, ವಾರ್ಷಿಕ ಶೈಕ್ಷಣಿಕ ಶಿಬಿರ ಗಳನ್ನು ಮತ್ತು ಸಂಗೀತ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಲಾಯಿತು.

ಸರ್ಕಾರೇತರ ಸಂಸ್ಥೆಗಳ (NGO) ಬೀದಿ ಮಕ್ಕಳಿಗಾಗಿ ಕೈಗೊಂಡಿದ್ದ ಸಂಪ್ರದಾಯ ರಹಿತ ಶಿಕ್ಷಣದ ಮತ್ತು ವೃತ್ತಿ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಲು 'ಭಾರತದಲ್ಲಿ ಬೀದಿ ಮಕ್ಕಳ ಮತ್ತು ಕೆಲಸ ಮಾಡುವ ಮಕ್ಕಳ ಪರಿಸ್ಥಿತಿ ವಿಶ್ಲೇಷಣೆ' ಎಂಬ ಒಂದು ಅಧ್ಯಯನವನ್ನು ಸಹ ಯುನೆಸ್ಕೋ ನಡೆಸಿದೆ ಈ ಕೇಂದ್ರಗಳಲ್ಲಿ ದಾಖಲಾಗಿರುವ ಮಕ್ಕಳು ಯಾರು? ಇವರು ಸಂಪ್ರದಾಯರಹಿತ ಶಿಕ್ಷಣ (NFE) ತರಗತಿಗಳಿಗೆ ಹಾಜರಾಗುತ್ತಾರೆಯೆ ಅಥವಾ ಕೇಂದ್ರವನ್ನು ಬಿಡುತ್ತಾರೆಯ? ಅವರು ಪಡೆಯುತ್ತಿರುವ ಸಂಪ್ರದಾಯರಹಿತ ಶಿಕ್ಷಣದ ಒಟ್ಟು ಪ್ರಭಾವವೇನು? ಸಂಪ್ರದಾಯ ರಹಿತ ಶಿಕ್ಷಣ (NFE) ಕೊಡುತ್ತಿರುವ ಕಟ್ಟಡಗಳ ಮತ್ತು ಕೇಂದ್ರಗಳ ಸ್ಥಿತಿ ಏನು? ಬೀದಿ ಮಕ್ಕಳ ಪುನರ್ವಸತಿಗೆ ಅನುಸರಿಸುತ್ತಿರುವ ತಂತ್ರಗಳಾವುವು? NGO ಗಳು ಮತ್ತು NFE ಕೇಂದ್ರಗಳು ಯಾವ ರೀತಿಯ ಪಠ್ಯಕ್ರಮವನ್ನು ರೂಪಿಸಿವೆ ಮತ್ತು ಯಾವ ರೀತಿಯ ಬೋಧನೋಪಕರಣಗಳನ್ನು ಉಪಯೋಗಿಸುತ್ತಿವೆ ಎಂಬ ವಿವಾದಾಂಶಗಳ ಬಗ್ಗೆ ಈ ಅಧ್ಯಯನ ಗಮನ ನೀಡಿತ್ತು. ಸಂಕ್ಷಿಪ್ತವಾಗಿ ಬೀದಿ ಮಕ್ಕಳು ಮತ್ತು ಕೆಲಸ ಮಾಡುವ ಮಕ್ಕಳಿಗಾಗಿ ರೂಪಿಸಿ, ನಡೆಸುತ್ತಿದ್ದ ಸರ್ಕಾರಿ ಮತ್ತು ಸರ್ಕಾರೇತರ ಕಾರ್ಯಕ್ರಮಗಳು ಎಷ್ಟು ಪರಿಣಾಮಕಾರಿಯಾಗಿವೆ ಎಂಬುದನ್ನು ತಿಳಿಯುವುದು ಮುಖ್ಯ ಉದ್ದೇಶವಾಗಿತ್ತು. ಈ ಅಧ್ಯಯನ ಸರ್ಕಾರೇತರ ಸಂಸ್ಥೆಗಳು ಅನುಸರಿಸುತ್ತಿರುವ ಶೈಕ್ಷಣಿಕ ಮತ್ತು ಔದ್ಯೋಗಿಕ ಚಟುವಟಿಕೆಗಳು ಮತ್ತು ಪುನರ್ವಸತಿ ತಂತ್ರಗಳ ಬಗ್ಗೆ ಗಮನಹರಿಸಿತ್ತು. ಈ ರೀತಿಯ ಮಕ್ಕಳ ಗುಂಪಿಗೆ ಶಿಕ್ಷಣ ಒದಗಿಸುವುದು ವಿಶೇಷವಾಗಿ ಮುಖ್ಯವಾಗಿತ್ತು. ಏಕೆಂದರೆ ಅಂಥ ಶಿಕ್ಷಣ ಮಕ್ಕಳನ್ನು ಬಡತನದ ಚಕ್ರದಿಂದ ಹೊರತರಲು ಸಹಾಯವಾಗಿತ್ತು. ಅದೂ ಅಲ್ಲದೆ ಮಾದಕ ದ್ರವ್ಯಗಳ ಸಾಗಾಣಿಕೆ/ ಮಾರಾಟ, ಲೈಂಗಿಕ ದುರುಪಯೋಗ, ಅಪರಾಧ, ಅಪಾಯಕಾರಿ ಉದ್ಯೋಗಗಳಲ್ಲಿ ಕೆಲಸ ಮಾಡುವುದು ಮುಂತಾದ ದಿನನಿತ್ಯದ ಉಳಿಯುವಿಕೆಯ ಬಗೆಗಿನ ಅನಿಶ್ಚಿತತೆಯಿಂದ ಈ ಮಕ್ಕಳನ್ನು ರಕ್ಷಿಸಲು ಶಿಕ್ಷಣ ಅಗತ್ಯವಾಗಿತ್ತು.

ಈ ಅಧ್ಯಯನ ಭಾರತದ 8 ರಾಜ್ಯಗಳ ಮುಖ್ಯ ನಗರಗಳಲ್ಲಿ (ನವದೆಹಲಿ, ಕೋಲ್ಕತ್ತಾ, ಮುಂಬಯಿ, ಭುವನೇಶ್ವರ, ಚೆನ್ನೈ ಶಿವಕಾಶಿ, ಬೆಂಗಳೂರು, ಮಿರ್ಜಾಪುರ, ಫಿರೋಜಾಬಾದ್, ಕಾನ್ಪುರ, ಮತ್ತು ಅಹಮದಾಬಾದ್) ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಮತ್ತು ಅಂತಾರಾಷ್ಟ್ರೀಯ ಸಂಘಟನೆಗಳು ನಗರ ಪ್ರದೇಶಗಳಲ್ಲಿನ ವಂಚಿತ ಮಕ್ಕಳಿಗಾಗಿ ಒದಗಿಸಿದ್ದ ಸಂಪ್ರದಾಯರಹಿತ ಶಿಕ್ಷಣದ ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಿತ್ತು. ಇದಕ್ಕಾಗಿ ಶಿಕ್ಷಕರು, ಪೋಷಕರು, ಸಂಪ್ರದಾಯರಹಿತ ಶಿಕ್ಷಣದ ತರಗತಿಗಳಿಗೆ ದಾಖಲಾಗಿದ್ದ ಮತ್ತು ದಾಖಲಾಗದಿದ್ದ ಮಕ್ಕಳು ಮತ್ತು ತಮ್ಮ ಸಂಪ್ರದಾಯರಹಿತ ಶಿಕ್ಷಣವನ್ನು ಮುಗಿಸಿದ್ದ ಮಕ್ಕಳ ಸಂದರ್ಶನವನ್ನು ಮಾಡಲಾಗಿತ್ತು.

ಈ ಅಧ್ಯಯನದ ವರದಿ ಸಂಪ್ರದಾಯರಹಿತ ಶಿಕ್ಷಣದ ಗುಣಮಟ್ಟವನ್ನು ಮತ್ತು ಅದನ್ನು ಒದಗಿಸುವ ವ್ಯವಸ್ಥೆಯನ್ನು ಹೇಗೆ ಉತ್ತಮಪಡಿಸಬೇಕೆಂದು ಶಿಫಾರಸ್ಸು ಮಾಡಿತ್ತು. ನವದೆಹಲಿಯ ಪ್ರಯಾಸ್ ಎಂಬ ಸರ್ಕಾರೇತರ ಸಂಸ್ಥೆಯೊಂದಿಗೆ ಯುನೆಸ್ಕೋ ದೆಹಲಿಯ ಬೀದಿ ಮಕ್ಕಳ ಮತ್ತು ಕೆಲಸ ಮಾಡುವ ಮಕ್ಕಳ ಅಗತ್ಯಗಳನ್ನು ಪೂರೈಸಲು ನವೀನ ರೀತಿಯ ಶೈಕ್ಷಣಿಕ ಸಾಮಗ್ರಿಗಳನ್ನು ಸಿದ್ಧಪಡಿಸಿದೆ.

**HIV/AIDS:** ಡಾಕರ್ ಸಮ್ಮೇಳನದಲ್ಲಿ ರೂಪಿಸಿದ ಚೌಕಟ್ಟು ವಿಶ್ವದಾದ್ಯಂತ ವಿಸ್ತೃತವಾಗಿ ಹರಡಿರುವ HIV/AIDS ರೋಗಗಳನ್ನು ಎದುರಿಸಲು ಶೈಕ್ಷಣಿಕ ಕಾರ್ಯಕ್ರಮಗಳನ್ನು ಮತ್ತು ನಿಯಂತ್ರಿಸುವ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕೆಂದು ರಾಷ್ಟ್ರಗಳಿಗೆ ಕರೆ ನೀಡಿತ್ತು.

ರಾಷ್ಟ್ರೀಯ ಸಾಕ್ಷರತಾ ಮಿಷನ್ (National Literary

Digitised by Bharatavani, CIIL

Mission) ಪಠ್ಯಪುಸ್ತಕಗಳ ಮೂಲಕ ನವಸಾಕ್ಷರರಿಗೆ HIV/ AIDS ರೋಗಗಳ ಬಗ್ಗೆ ತಿಳುವಳಿಕೆ ನೀಡಲು ಯುನೆಸ್ಕೋ ರಾಷ್ಟ್ರೀಯ ಸಾಕ್ಷರತಾ ಮಿಷನ್‌ನೊಂದಿಗೆ ಕೆಲಸ ಮಾಡಿತು. ಈ ಕಾರ್ಯವನ್ನು ಮನೋರಂಜಕವಾದ ಮತ್ತು ಸಾಂಸ್ಕೃತಿಕವಾಗಿ ಸಂವೇದನಶೀಲವಾದ ರೀತಿಯಲ್ಲಿ ಕೈಗೊಳ್ಳಲಾಗಿತ್ತು. ಉದಾಹರಣೆಗೆ, ಸರ್ಕಾರೇತರ ಸಂಸ್ಥೆಗಳು (NGO) ಆಗಾಗ್ಗೆ AIDS ಬಗ್ಗೆ ಇದ್ದ IEC ಸಾಮಗ್ರಿಗಳನ್ನು ಪುನರಾವಲೋಕನ ಮಾಡಿದ್ದವು ಮತ್ತು ಬರಹಗಾರರು, ಕಲಾವಿದರು, ನಾಟಕಕಾರರುಗಳ ಸಹಾಯದಿಂದ NLM ಮಾನದಂಡಗಳಿಗೆ ಅನುಸಾರವಾಗಿ ಹೊಸದಾದ ಮತ್ತು ಸೂಕ್ತವಾದ ಬೋಧನ/ಕಲಿಕಾ ಸಾಮಗ್ರಿಗಳನ್ನು ವಿನ್ಯಾಸಗೊಳಿಸಿವೆ. ಲೈಂಗಿಕವಾಗಿ ಹರಡುವ ಸೋಂಕುಗಳು, HIV ಬಾಧಿತ ವ್ಯಕ್ತಿಗಳ ಸಂರಕ್ಷಣೆ ಮತ್ತು ಬೆಂಬಲ, ಹೆಚ್ಚಿನ ಅಪಾಯದ ವರ್ತನೆ, ವಲಸೆ ಹೋಗುವ ಜನಸಮೂಹಗಳಿಗೆ ಅಪಾಯ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಕಥೆಗಳನ್ನು ಆಯ್ಕೆಮಾಡಿ ಮುದ್ರಿಸಲಾಗಿದೆ. ಇದೇ ರೀತಿಯ ಅಧ್ಯಯನಗಳನ್ನು ಪ್ರಾಯೋಗಿಕ ಆಧಾರದ ಮೇಲೆ ಆಲ್ವಾರ್, ಕೋಟ, ಇಂದೋರ್ ಮತ್ತು ಉಜ್ಜಯಿನಿ ಹಾಗೂ ದೆಹಲಿಯ ಆಯ್ದ ಐದು ಕೋಟಿ ಪ್ರದೇಶಗಳಲ್ಲಿ ನಡೆಸಲಾಯಿತು.

**ಮಧ್ಯಪ್ರದೇಶದಲ್ಲಿ (MP) ಸಖ–ಆಧಾರಿತ ಕಿಶೋರ ಶಿಕ್ಷಣ:**

ಕಿಶೋರಾವಸ್ಥೆಯಲ್ಲಿ ಜೀವೋತ್ಪತ್ತಿಗೆ ಸಂಬಂಧಿಸಿದ ಆರೋಗ್ಯ ವಿಷಯಗಳತ್ತ ಬಹು ವಿಭಾಗೀಯ ಪ್ರಕ್ರಿಯೆಯನ್ನು ಉಂಟುಮಾಡಲು ಯುನೆಸ್ಕೋ ಮತ್ತು UNFPA ಸಂಸ್ಥೆಗಳು ಮಧ್ಯಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ಸರ್ಕಾರಿ ಶಿಕ್ಷಣಶಾಸ್ತ್ರ ಕಾಲೇಜುಗಳನ್ನು ಮತ್ತು DIET ಗಳನ್ನು ಬಲಗೊಳಿಸಲು ಪ್ರಾಯೋಜನೆಯನ್ನು ಕೈಗೊಂಡಿದ್ದವು. ಕಿಶೋರಾವಸ್ಥೆಯಲ್ಲಿ ಜೀವೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯದ ಬಗ್ಗೆ ಯುವ ಜನತೆಗೆ ತಿಳುವಳಿಕೆ ಸಂದೇಶಗಳು ಮತ್ತು ಸುರಕ್ಷಿತ ಆರೋಗ್ಯದ ಕೌಶಲಗಳ ಬಗ್ಗೆ ತಿಳುವಳಿಕೆ ನೀಡುವುದಕ್ಕಾಗಿ ಅಧ್ಯಾಪಕ ಶಿಕ್ಷಕರಿಗೆ, ವಿದ್ಯಾರ್ಥಿ ಶಿಕ್ಷಕರಿಗೆ ಮತ್ತು NGO ಗಳಿಗೆ ತರಬೇತಿ ನೀಡಲಾಗಿತ್ತು.

ಪ್ರತಿ ವರ್ಷ ಯುನೆಸ್ಕೋ ಮತ್ತು UNAIDS ಸಂಸ್ಥೆಗಳು ಈ ಸಮಸ್ಯೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವಾಗಿ "ವಿಶ್ವ ಏಡ್ಸ್ ದಿನ" ವನ್ನು ಆಚರಿಸುತ್ತವೆ. ಉದಾಹರಣೆಗಾಗಿ 2003ನೇ ವರ್ಷದಲ್ಲಿ ಯುನೆಸ್ಕೋ ಪ್ರಾಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ 10 NGO ಗಳು ದೆಹಲಿಯ ಆಯ್ದ 100 ಸರ್ಕಾರಿ ಶಾಲೆಗಳಲ್ಲಿ ಅಂತರಶಾಲಾ ಚರ್ಚಾಸ್ಪರ್ಧೆಗಳು, ನಿಬಂಧಗಳ ಲೇಖನ ಮತ್ತು ಪೋಸ್ಟರ್ (ಭಿತ್ತಿ ಚಿತ್ರ) ಸ್ಪರ್ಧೆಗಳು, ಕ್ವಿಜ್‌ಗಳು, ಕ್ರೀಡೆಗಳು, ಹಾಡುಗಳು ಮತ್ತು ಸ್ಕಿಟ್‌ಗಳನ್ನು ಒಳಗೊಂಡಂತೆ ಅನೇಕ ಚಟುವಟಿಕೆಗಳನ್ನು ಆಯೋಜಿಸಿದ್ದವು. AIDS ಮಾನವರು ವ್ಯತ್ಯಾಸ ಉಂಟು ಮಾಡುತ್ತಾರೆ ಎಂಬ ವಿಷಯದ ಬಗ್ಗೆ ಯುನೆಸ್ಕೋ ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅನೇಕ ಭಿತ್ತಿಚಿತ್ರಗಳನ್ನು (Posters) ವಿಕಾಸಗೊಳಿಸಿತ್ತು.

ಭಾರತದಲ್ಲಿರುವ ಕೆಲವು ಪ್ರದೇಶಗಳು ತಮ್ಮ ಸಾಂಸ್ಕೃತಿಕ ಆಚರಣೆಗಳಿಂದ HIV/AIDS ರೋಗಗಳನ್ನು ಹೊಂದುವ ನಿಹಾತಾರ್ಥವಿರುವುದರಿಂದ ಅಂಥ ಪ್ರದೇಶಗಳಲ್ಲಿ ರೋಗ ಪೀಡಿತರನ್ನು ಗುರ್ತಿಸಲು ಮತ್ತು ಆ ವಿಷಯವಾಗಿ ಸಂಶೋಧನೆ ಕೈಗೊಳ್ಳಲು ಯುನೆಸ್ಕೋ ನವದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸ್ಟಡೀಸ್ ಟ್ರಸ್ಟ್‌ನ ಸಹಯೋಗದೊಂದಿಗೆ HIV/ AIDS ರೋಗಗಳ ನಿಯಂತ್ರಣಕ್ಕೆ ಮತ್ತು ರೋಗಿಗಳ ಸಂರಕ್ಷಣೆಗೆ ಸಾಂಸ್ಕೃತಿಕ ಉಪಕ್ರಮ ಒಂದನ್ನು ರೂಪಿಸಲು ಭಾರತೀಯ ಕೈಪಿಡಿಯೊಂದನ್ನು ಸಿದ್ಧಪಡಿಸಿತು.

ಯುನೆಸ್ಕೋ ಮತ್ತು ಇಂಡಿಯನ್ ನ್ಯಾಷನಲ್ ಕಮೀಷನ್ ಫಾರ್ ಕೋಆಪರೇಷನ್ ಒಟ್ಟಾಗಿ ಸೇರಿ ಭಾರತದ ವಿವಿಧ ಭಾಗಗಳಲ್ಲಿ HW/AIDS ರೋಗಗಳ ನಿಯಂತ್ರಣ ರೋಗಿಗಳ ಸಂರಕ್ಷಣೆ ಮತ್ತು ಬೆಂಬಲದ ಬಗ್ಗೆ ಸಮುದಾಯ ಜಾಗೃತಿಯನ್ನುಂಟು ಮಾಡಲು ಯುನೆಸ್ಕೋ ಕ್ಲಬ್‌ಗಳನ್ನು ಆರಂಭಿಸಲು ಅನೇಕ ಕಾರ್ಯಾಗಾರಗಳನ್ನು ಆಯೋಜಿಸಿದ್ದವು.

**ಬಾಲಕರ ದುಡಿಮೆ**

**ILO ಮತ್ತು IPEC ಅಡಿಯಲ್ಲಿ ಆರಂಭಿಕ ಪ್ರಯತ್ನಗಳು:**

ಬಾಲಕರ ದುಡಿಮೆ ಬಗ್ಗೆ ಮನೋಭಾವವನ್ನು ಬದಲಿಸುವುದರಿಂದ ಮತ್ತು ಶೈಕ್ಷಣಿಕ ಮೂಲಭೂತ ಸೌಕರ್ಯಗಳನ್ನು ಪುನರ್ಬಲನ ಗೊಳಿಸುವುದರಿಂದ ಬಾಲದುಡಿಮೆಯನ್ನು ಕ್ರಮೇಣವಾಗಿ ನಿಲ್ಲಿಸಬಹುದೆಂದು ILOನ ನಂಬಿಕೆಯಾಗಿತ್ತು. ಮಾನವ ಬಂಡವಾಳವನ್ನು ವಿಕಾಸಗೊಳಿಸುವುದರ ಮೂಲಕ ಮತ್ತು ಕೌಶಲಗಳನ್ನು ರೂಪಿಸುವುದರ ಮೂಲಕ ಬಡತನವನ್ನು ಕಡಿಮೆಮಾಡಲು ಶಿಕ್ಷಣ ಒಂದು ಸಾಧನವಾಗಿತ್ತು. ಆದ್ದರಿಂದ ಶಿಕ್ಷಣವನ್ನು ಮಕ್ಕಳ ಹಕ್ಕಾಗಿ ಪರಿಗಣಿಸಲಾಗುತ್ತದೆಯಲ್ಲದೆ ಅದನ್ನು ಪೋಷಕರ ಮತ್ತು ರಾಷ್ಟ್ರದ ಕರ್ತವ್ಯವೆಂದು ಪರಿಗಣಿಸಬೇಕಾಗುತ್ತದೆ.

ಭಾರತದಲ್ಲಿ ಬಾಲಕರ ದುಡಿಮೆಯ ಪ್ರಮಾಣ ಹೆಚ್ಚಾಗಿರುವ ಕೆಲವು ಕ್ಷೇತ್ರಗಳಲ್ಲಿ ನ್ಯಾಷನಲ್ ಚೈಲ್ಡ್ ಲೇಬರ್ ಪ್ರಾಜೆಕ್ಟ್ (NCLP) ಮೂಲಕ ಸಮಗ್ರ ಕ್ಷೇತ್ರ ನಿರ್ದಿಷ್ಟ ಉಪಕ್ರಮದಲ್ಲಿ ಸರ್ಕಾರ ಕೈಗೊಂಡಿದ್ದ ಕೆಲವು ಪ್ರಾಯೋಜನೆಗಳ ಬಗ್ಗೆ IPEC ತನ್ನ ಗಮನ ಕೇಂದ್ರೀಕರಿಸಿತ್ತು. IPEC-NCLP ಸಹಯೋಗದಡಿಯಲ್ಲಿ ದೇಶದ 7 ಜಿಲ್ಲೆಗಳಲ್ಲಿ ತೀವ್ರರೂಪದ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಇದರ ಮೊದಲ ಕಾರ್ಯಕ್ರಮವನ್ನು ಆಂಧ್ರಪ್ರದೇಶದಲ್ಲಿ ಆರಂಭಿಸಲಾಗಿತ್ತು.

ಮಧ್ಯವರ್ತಿ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಸಂಯೋಜನ ಸಂರಚನೆ (ವ್ಯವಸ್ಥೆ)ಗಳನ್ನು ಸ್ಥಾಪಿಸಲು ಮತ್ತು ರಾಜ್ಯದ ಎಲ್ಲಾ ಪ್ರಯತ್ನಗಳನ್ನು ಸಮಗ್ರಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು

Digitised by Bharatavani, CIIL

ಆಂಧ್ರಪ್ರದೇಶದಲ್ಲಿ ಆರಂಭಿಸಲಾಗಿದ್ದ ರಾಜ್ಯ ಆಧಾರಿತ 'ಆಂಧ್ರಪ್ರದೇಶದಲ್ಲಿ ಬಾಲಶ್ರಮದ ನಿರ್ಮೂಲನೆ' ಎಂಬ ಈ ಪ್ರಾಯೋಜನೆ ಒಂದು ನವೀನ ಉಪಕ್ರಮವನ್ನು ಒದಗಿಸಿತ್ತು. ಈ ಪ್ರಾಯೋಜನೆಯ ಕ್ರಿಯಾಯೋಜನೆ ಭಾರತ ಸರ್ಕಾರ ನಡೆಸುತ್ತಿದ್ದ ರಾಷ್ಟ್ರೀಯ ಶಿಶುಶ್ರಮ ಪ್ರಾಯೋಜನೆಗಳನ್ನು (NCLP) ಮುಖ್ಯ ಮಾರ್ಗವಾಗಿ ಉಪಯೋಗಿಸಿಕೊಂಡು ಸಮಗ್ರ ಕ್ಷೇತ್ರ ನಿರ್ದಿಷ್ಟ ಉಪಕ್ರಮದ ಪರಿಕಲ್ಪನೆಯ ಆಧಾರದ ಮೇಲೆ ಅತ್ಯಂತ ಕೆಟ್ಟ ರೂಪದಲ್ಲಿದ್ದ ಶಿಶುಶ್ರಮ (ದುಡಿಮೆ)ವನ್ನು ನಿರ್ಮೂಲನ ಮಾಡಲು ಪುನರಾವರ್ತಿಸಬಹುದಾದ ಮಾದರಿಯೊಂದನ್ನು ವಿಕಾಸಗೊಳಿಸುವ ಉದ್ದೇಶವನ್ನು ಹೊಂದಿತ್ತು. ಜಿಲ್ಲಾ ಕಲೆಕ್ಟರ್ ಈ ಕ್ರಿಯಾಯೋಜನೆಯನ್ನು ಜಾರಿಗೊಳಿಸುವ ನಿಯೋಗವಾಗಿದ್ದರು ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಶಿಶು ವಿಕಾಸ, ಗ್ರಾಮೀಣ ಅಭಿವೃದ್ಧಿ ಮತ್ತು ಕುಟುಂಬ ಕಲ್ಯಾಣ ಮುಂತಾದ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು NCLP ಯ ಪ್ರಾಯೋಜನೆಗಳ ಸದಸ್ಯರಾಗಿದ್ದರು.

ಅಕ್ಟೋಬರ್ 1999 ರಲ್ಲಿ ಈ ರಾಜ್ಯ ಆಧಾರಿತ ಪ್ರಾಯೋಜನೆಯನ್ನು ಆಂಧ್ರಪ್ರದೇಶದ ಮರ್ಕಾಪುರ ವಿಭಾಗದಲ್ಲಿ ಉದ್ಘಾಟಿಸಲಾಗಿತ್ತು. ಮತ್ತು ಶೀಘ್ರದಲ್ಲಿಯೇ 40 ಹಳ್ಳಿಗಳಲ್ಲಿ 80 ಸ್ಥಿತ್ಯಂತರ ಶಿಕ್ಷಣ ಕೇಂದ್ರಗಳು (Transitional Educational Centres) ಕಾರ್ಯಾರಂಭ ಮಾಡಿದ್ದವು. ಶಾಲೆಯನ್ನು ಬಿಡಿಸಿದ್ದ ಮಕ್ಕಳನ್ನು ಪುನಃ ಔಪಚಾರಿಕ ಶಾಲೆಗಳಿಗೆ ಅಲ್ಪ ಅವಧಿಯಲ್ಲಿಯೇ ಪುನಃ ಪ್ರವೇಶ ಪಡೆಯುವಂತೆ ಮಾಡಲು ಈ ಕೇಂದ್ರಗಳನ್ನು ಸೇತುವಿನ ರೂಪದಲ್ಲಿ ಆರಂಭಿಸಲಾಯಿತು. ಪ್ರತಿಯೊಂದು ಮಗುವಿನ ಈ ಕೇಂದ್ರದಲ್ಲಿ ಇರುವಿಕೆ ತಾತ್ಕಾಲಿಕವಾದುದಾಗಿತ್ತು ಮತ್ತು ಮಗುವನ್ನು ಆದಷ್ಟು ಬೇಗ ನಿಯಮಿತ ಶಾಲೆ ವಾಹಿನಿಗೆ ತರಲಾಗುತ್ತಿತ್ತು. ಮುಖ್ಯ ವಾಹಿನಿಗೆ ಮಗುವನ್ನು ಸೇರಿಸಿದ ನಂತರವೂ ವ್ಯಕ್ತಿಗಳ ಬೋಧನೆಗೆ (ಟ್ಯುಟೋರಿಯಲ್) ಸಮಾಲೋಚನೆಗೆ ಮತ್ತು ಅನುಸರಣ ಕಾರ್ಯಕ್ಕೆ ಯಾವ ಮಗುವೂ ಶಾಲೆಯನ್ನು ಬಿಡದಂತಿರುವುದನ್ನು ಖಚಿತಪಡಿಸಿಕೊಳ್ಳಲು, ಪ್ರತಿದಿನವೂ ತರಗತಿಗೆ ಮೊದಲಿಗೆ ಮತ್ತು ನಂತರ ಮಗುವನ್ನು ಈ ಕೇಂದ್ರಕ್ಕೆ ತರಲು ಪ್ರಾಯೋಜನೆಯು ಮುಂದುವರಿದಿತ್ತು.

ರಾಜ್ಯದ ಕೈಗಾರಿಕೆಗಳಿಂದ ಮತ್ತು ಬಳಪದ ಕಲ್ಲಿನ ಕ್ವಾರಿಗಳಿಂದ 8 ರಿಂದ 12 ವರ್ಷ ವಯಸ್ಸಿನ 2265 ಬಾಲ ಶ್ರಮಿಕರನ್ನು ಕೆಲಸದಿಂದ ಬಿಡಿಸಲಾಯಿತು. ಪೋಷಕರನ್ನು ಸಮುದಾಯವನ್ನು ನೌಕರಿ ಕೊಡುವವರನ್ನು ಮತ್ತು ಕಾರ್ಮಿಕ ಸಂಘಗಳನ್ನು (Trade Union) ಬಾಲ ದುಡಿಮೆಯ ಬಗ್ಗೆ ಸಂವೇದೀಕರಣಗೊಳಿಸಲಾಯಿತು ಮತ್ತು ಕೆಲಸ ಬಿಡಿಸಿದ ಮಕ್ಕಳ ತಾಯಂದಿರಿಗೆ ಹಣ ಪಡೆಯುವಂತಹ ಅವಕಾಶಗಳನ್ನು ಒದಗಿಸಲಾಯಿತು. ಮಕ್ಕಳು ಅಪಾಯಕಾರಿ ಕೆಲಸಗಳನ್ನು ಮಾಡುವುದನ್ನು ತಪ್ಪಿಸುವುದು, ಅಪಾಯಕಾರಿ ಕೆಲಸ ಮಾಡುತ್ತಿದ್ದರೆ ಅದರಿಂದ ಮಕ್ಕಳನ್ನು ಮುಕ್ತಿಗೊಳಿಸುವುದು ಈ ಪ್ರಾಯೋಜನೆಯ ಉದ್ದೇಶವಾಗಿತ್ತು. ಈ ಪ್ರಾಯೋಜನೆಯನ್ನು ಕೈಗೊಂಡಿದ್ದವರು ಆ ಕ್ಷೇತ್ರದಲ್ಲಿನ ಎಲ್ಲಾ IPEC ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಉದ್ದೇಶಗಳನ್ನು ಸಾಧಿಸಿದರು ಮತ್ತು ಮರಕಾಪುರ ಕ್ಷೇತ್ರದಿಂದ ಬಾಲ ದುಡಿಮೆಯನ್ನು ನಿರ್ಮೂಲನ ಮಾಡಲು ಮತ್ತು ಅಪಾಯಕಾರಿ ಕೆಲಸಗಳಿಂದ ಮಕ್ಕಳನ್ನು ಮುಕ್ತಾಯಗೊಳಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾದರು. ಬಾಲಶ್ರಮಿಕರಿಗೆ ನೇರವಾದ ಸೇವೆ, ಒದಗಿಸುವುದು, ಬಾಲಶ್ರಮಿಕರ ಕುಟುಂಬಗಳನ್ನು ಬಲಗೊಳಿಸುವುದು, ಸರ್ಕಾರಿ ಸಂಸ್ಥೆಗಳನ್ನು ಮುಖ್ಯ ಕಾರ್ಯಕರ್ತರಿಗೆ ತರಬೇತಿ ನೀಡುವುದರ ಮೂಲಕ ಬಲಗೊಳಿಸುವುದು ಮತ್ತು ಸ್ಥಳೀಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಸಮಾಜದ ವಿವಿಧ ವಿಭಾಗಗಳ ಅರಿವನ್ನು ಹೆಚ್ಚಿಸುವುದು ಇವೆಲ್ಲವನ್ನು ಒಳಗೊಂಡಂತೆ ಸಮಗ್ರ ಉಪಕ್ರಮದ ಮೂಲಕ ಅಪಾಯಕಾರಿ ಕೆಲಸಗಳಿಂದ ತತ್‌ಕ್ಷಣವೇ ಮಕ್ಕಳನ್ನು ಮುಕ್ತಗೊಳಿಸಬೇಕು ಎಂಬ ಡಿಸೆಂಬರ್ 1996ರ ಉಚ್ಚ ನ್ಯಾಯಾಲಯದ ತೀರ್ಪಿಗೂ ಈ ಪ್ರಾಯೋಜನೆ ತನ್ನ ಕೊಡುಗೆಯನ್ನು ನೀಡಿತ್ತು. ಈ ಪ್ರಾಯೋಜನೆಯ ಕ್ರಿಯಾಯೋಜನೆ ಪೂರೈಕೆ ಮಾಡುವ ನಿಯೋಗಗಳನ್ನು ಸಂಯೋಜನೆಗೊಳಿಸಬೇಕೆಂದು ಮತ್ತು VN ನಿಯೋಗಗಳ, ರಾಜ್ಯಗಳ, ಸ್ಥಳೀಯ ಮತ್ತು ಕೇಂದ್ರ ಸರ್ಕಾರಗಳ ಸರ್ಕಾರೇತರ ಸಂಘಟನೆಗಳ ಮತ್ತು ಖಾಸಗಿ ನಿಯೋಗಗಳ ಕಾರ್ಯಗಳನ್ನು ಆಯ್ಕೆ ಮಾಡಿದ ಕ್ಷೇತ್ರಗಳಲ್ಲಿ ಮತ್ತು ವಿಭಾಗಗಳಲ್ಲಿ ಬಾಲ ದುಡಿಮೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಂಬಂಧವಿರುವಂತೆ ಸಮಗ್ರಗೊಳಿಸಬೇಕೆಂದು ಕಲ್ಪಿಸಿಕೊಂಡಿತ್ತು.

**ಮೂಲ: ಮೇಯ್‌ಗಾಯ್‌ಡಿ ಮತ್ತು ಲತಿಕಾ ಸಡಗಾಂವ್‌ಕರ್**
**ಅನು: ಪ್ರೊ. ಮಂಜುನಾಥಯ್ಯ ಬಿ.ಎಸ್.**

## ಸಂವಹನ ಕೌಶಲಗಳು

ಪರಿಣಾಮಕಾರಿಯಾಗಿ ಸಂವಹನ ಕೈಗೊಳ್ಳಲು ಅವಶ್ಯವಾಗಿರುವ ಮತ್ತು ಸಹಾಯವಾಗುವ ಕೌಶಲ್ಯಗಳನ್ನು ಸಂವಹನ ಕೌಶಲ್ಯಗಳೆನ್ನುವರು. ಆದೇಶಿಸುವುದು, ನಿರ್ದೇಶಿಸುವುದು, ಉಪದೇಶಿಸುವುದು, ಸ್ವಾಗತಿಸುವುದು, ಸಾರ್ವಜನಿಕರನ್ನುದ್ದೇಶಿಸಿ ಮಾತನಾಡುವುದು, ಉಪನ್ಯಾಸ ನೀಡುವುದು, ಚರ್ಚೆ, ಪ್ರಶ್ನಿಸುವಿಕೆ ಮುಂತಾದವು ಬಗೆಬಗೆಯ ಸಂವಹನ ಕೌಶಲಗಳು.

ಸಂವಹನಗಳಲ್ಲಿ ಎರಡು ವಿಧ. ಒಂದು ಶಾಬ್ದಿಕ ಸಂವಹನ, ಮತ್ತೊಂದು ಅಶಾಬ್ದಿಕ ಸಂವಹನ. ಶಾಬ್ದಿಕ ಸಂವಹನ ಎಂದರೆ "ಭಾಷೆಯ ಮೂಲಕ ಘಟನೆಗಳನ್ನು ಪ್ರಯೋಗಗಳನ್ನು ಉದಾಹರಣೆಗಳನ್ನು ಇತ್ಯಾದಿ ಸಂಗತಿಗಳನ್ನು ಸ್ಪಷ್ಟ ಸರಳ, ನಿರರ್ಗಳತೆ, ವಿಷಯ ವಿಚಾರಗಳ ನಿರಂತರತೆ, ಒತ್ತು, ನಿರ್ದಿಷ್ಟ ವೇಗ, ತಾತ್ಕಾಲಿಕ ನಿಲುಗಡೆ, ಧ್ವನಿ ಏರಿಳಿತಗಳೊಂದಿಗೆ ಸಂವಹನ ಮಾಡುವುದು.

Digitised by Bharatavani, CIIL

ಚರ್ಚೆಯನ್ನು ನಾವು ಉತ್ತಮ ಸಂವಹನ ಎಂದು ಕರೆಯುತ್ತೇವೆ, ಏಕೆಂದರೆ ಇಲ್ಲಿ ವ್ಯಕ್ತಿಯು ತಾನು ಒಂದು ವಿಚಾರದ ಬಗ್ಗೆ ತಿಳಿದ ಅಂಶಗಳನ್ನು ತನ್ನದೇ ಆದ ಮಾರ್ಗದಲ್ಲಿ ವ್ಯಕ್ತಪಡಿಸುತ್ತಾನೆ. ವಿಚಾರದ ಪರ ವಿರೋಧ ಹಾಗೂ ಅವನ ಆಂಗಿಕ ಚಲನೆಗಳು ಇಲ್ಲಿ ಮುಖ್ಯವಾಗಿರುತ್ತವೆ ಹಾಗೂ ವ್ಯಕ್ತಿಯ ಸ್ಪಷ್ಟವಾದ ಅಭಿವ್ಯಕ್ತಿಯೂ ಸಹ ಒಂದು ಸಂವಹನ ಕೌಶಲ್ಯವಾಗಿದೆ. ಸಂವಾದವೂ ಒಂದು ಬಗೆಯ ಸಂವಹನ ಪ್ರಕಾರ. ಇದು ದ್ವಿಮುಖ ಸಂವಹನಕ್ಕೆ ಉತ್ತಮ ಉದಾಹರಣೆಯಾಗಿದೆ ಇಲ್ಲಿ ಒಂದು ವಿಷಯದ ಬಗ್ಗೆ ನಾಲ್ಕೈದು ಜನರು ವಿಚಾರ ಮಂಡಿಸುವರು ಹಾಗೇ ತಮಗೆ ತಿಳಿದ ವಿಚಾರವನ್ನು ಹೊರಹಾಕುವರು. ವಿಜ್ಞಾನ, ಕಲೆ, ಪ್ರಸ್ತುತ ರಾಜಕೀಯ, ಸಮಸ್ಯೆ ಮುಂತಾದ ವಿಚಾರಗಳ ಸಂವಾದಗಳನ್ನು ನೋಡಬಹುದು. ಆದೇಶಗಳು ತರಗತಿಯಲ್ಲಿ, ಮನೆಯಲ್ಲಿ, ಉದ್ಯಮದಲ್ಲಿ ಪ್ರಮುಖವಾಗಿ ಬಳಸುವ ಕೌಶಲ, ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಾಲಿಸುವಂತೆ ಮಾಡುವ ಹೇಳಿಕೆಗಳು. ಅದು ಅವರ ಮನಸ್ಸಿಗೆ ನೋವಾಗದೆ ವಿನಮ್ರವಾಗಿ ಸಂತೋಷದಿಂದ ನಾವು ಹೇಳಿದ ಕೆಲಸ ಮಾಡಲು ಸಹಾಯವಾಗಬೇಕು. ನಿರ್ದೇಶನಗಳನ್ನು ಶಾಬ್ದಿಕ ಮತ್ತು ಅಶಾಬ್ದಿಕವಾಗಿ ನೀಡುತ್ತೇವೆ. ಸಂಚಾರಿ ಫಲಕಗಳು, ಸೂಚನಾ ಫಲಕಗಳು, ಹಾಗೆಯೇ ಟ್ರಾಫಿಕ್ ದೀಪಗಳು, ವಿದ್ಯಾರ್ಥಿಗಳಿಗೆ ಶಿಕ್ಷಕರ ನಿರ್ದೇಶನಗಳು ಸಹ ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ವಿದ್ಯಾರ್ಥಿಗಳಿಗೆ ಯಾವುದೇ ಕಾರ್ಯವನ್ನು ಮಾಡಲು ನಿರ್ದೇಶಿಸಿದಾಗ ಅದು ಉತ್ತಮವಾಗಿದ್ದರೆ ವಿದ್ಯಾರ್ಥಿಗಳು ಸರಿಯಾಗಿ ಅರಿತುಕೊಂಡು ಕಾರ್ಯ ಪ್ರವರ್ತರಾಗುವರು.

ಪ್ರಶ್ನಿಸುವಿಕೆ ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಕಲಿಕಾ ಮಟ್ಟ ಅಳೆಯಲು ಬಳಸುವ ಕೌಶಲ್ಯ. ವಿದ್ಯಾರ್ಥಿಗಳ ಗಮನವನ್ನು ವಿಷಯ ಮತ್ತು ಬೋಧನೆಯ ಕಡೆಗೆ ಸೆಳೆಯುವರು.

**ತರಗತಿಗೆ ಸಂಬಂಧಪಟ್ಟ ಶಾಬ್ದಿಕ ಸಂವಹನ:**

1. ಜ್ಞಾನಾತ್ಮಕ ಅಂಶಗಳಿಗೆ ಸಂಬಂಧಪಟ್ಟ ಬೋಧಕನ ಎಲ್ಲಾ ಚಟುವಟಿಕೆಗಳು, ಉದಾ: ಉಪನ್ಯಾಸ, ಸಮರ್ಥಿಸುವಿಕೆ, ವಿವರಣೆ ಸ್ಪಷ್ಟೀಕರಿಸುವಿಕೆ ಮುಂತಾದವುಗಳು.
2. ಸಂವೇಗಾತ್ಮಕ ಅಂಶಗಳಿಗೆ ಸಂಬಂಧಪಟ್ಟ ಎಲ್ಲಾ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಉದ್ದೇಶಿಸಿದ ಹೊಗಳಿಕೆ, ಪ್ರೋತ್ಸಾಹ, ಕಲ್ಪನೆಗಳನ್ನು ಮತ್ತು ಭಾವನೆಗಳನ್ನು ಸ್ವೀಕರಿಸುವಿಕೆ/ ಒಪ್ಪಿಕೊಳ್ಳುವುದು.
3. ಮನೋಜನ್ಯ ವಲಯಕ್ಕೆ ಸಂಬಂಧಿಸಿ ಚಟುವಟಿಕೆಗಳು: ಪ್ರಾತ್ಯಕ್ಷಿಕೆ, ಪ್ರಯೋಗ ಮಾಡುವಿಕೆ, ಮಾತನಾಡುವಿಕೆ, ಬರವಣಿಗೆ, ಚಿತ್ರಕಲೆ.

**ಪರಿಣಾಮಕಾರಿ ಬಾಯ್ದೆರೆ/ಶಾಬ್ದಿಕ ಸಂವಹನದ ತತ್ವಗಳು:**

1. ಸ್ಪಷ್ಟ ಉಚ್ಚಾರಣೆ.
2. ಸ್ಪಷ್ಟತೆ, ಸಂಕ್ಷಿಪ್ತತೆ ಮತ್ತು ಸಂಪೂರ್ಣತೆ.
3. ಶಬ್ದ ಭಂಡಾರ.
4. ಆತ್ಮವಿಶ್ವಾಸ.
5. ಸ್ವರಭಾವಗಳಲ್ಲಿ ಏರಿಳಿತ.
6. ಧ್ವನಿ ಮತ್ತು ಶೈಲಿ.
7. ಭಾಷೆ.
8. ಪುಷ್ಟೀಕರಣ.

ಮೌಖಿಕ ಸಂವಹನದಲ್ಲಿ ನಮಗೆ ಇಷ್ಟವಾದ ರೀತಿಯಲ್ಲಿ ಮತ್ತು ಅಗತ್ಯತೆಗನುಗುಣವಾಗಿ ಸಂಭಾಷಣೆಯನ್ನು ನಡೆಸಬಹುದು, ದೂರವಾಣಿ ಸಂವಹನ, ಸಂದರ್ಶನ, ಅರ್ಪಣೆ ನೀಡುವಾಗ, ಭೇಟಿಯಾದಾಗ ಸಂವಹನ ಕೌಶಲ್ಯವು ಬಹಳ ಪ್ರಮುಖವಾಗಿ ಬೇಕಾಗುತ್ತದೆ.

**ಮುಖಾ–ಮುಖಿ, ಸಂಭಾಷಣೆ: (Face to Face conversation):**

ಈ ಸಂಭಾಷಣೆಯು ಸಣ್ಣ ಗುಂಪು, ಬೇರೆಯವರನ್ನು ಭೇಟಿಯಾದಾಗ, ಇಬ್ಬರು ವ್ಯಕ್ತಿಗಳಿದ್ದಾಗ ಸಂದರ್ಶನದಲ್ಲಿ– ಹೀಗೆ ಹಲವಾರು ಸಂದರ್ಭದಲ್ಲಿ ಬಳಸಲಾಗುತ್ತದೆ. ದೂರವಾಣಿ ಸಂವಹನ, ವಿಷಯಮಂಡನೆ, ಭಾಷಣ, ಸಂದರ್ಶನ, ಸಭೆ ಮುಂತಾದವುಗಳು.

**ಅಶಾಬ್ದಿಕ ಸಂವಹನ:** "ಭಾವನೆಗಳನ್ನು, ಅಭಿರುಚಿಗಳನ್ನು, ವಿಷಯವಸ್ತುವನ್ನು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಸಂವಹನ ಮಾಡುವ ಅಮೌಖಿಕ ಕ್ರಿಯೆಯೇ ಅಶಾಬ್ದಿಕ ಸಂವಹನ". ಅಶಾಬ್ದಿಕವಾಗಿ ಸುದ್ದಿಯನ್ನು ಅನೇಕ ರೀತಿಯಲ್ಲಿ ಸಂವಹನಿಸಬಹುದು:

ಸಂವಹನ ಮಾಡುವಾಗ ಪದಗಳನ್ನು ಬಳಸುವ ಬದಲು ಹಾವ ಭಾವಗಳನ್ನು ಸಂಖ್ಯೆಗಳು, ಶಬ್ದ ಸಂಖ್ಯೆಗಳು, ಲೇಖನ ಚಿಹ್ನೆಗಳು ಗುರುತುಗಳನ್ನು ಬಳಸಬಹುದು. ಇದೇ ಸಾಂಕೇತಿಕ ಭಾಷೆ. **ಉದಾ:** ಬೆರಳು ತೋರಿಸುವಿಕೆ, ಹುಬ್ಬೇರಿಸುವಿಕೆ, ತಲೆಯಾಡಿಸುವುದು, ವಿಷಯ, ವಿಚಾರಗಳಿಗೆ ತಕ್ಕಂತೆ ಚಿತ್ರಗಳು, ಮಾದರಿಗಳು, ಸಂಖ್ಯೆ ಮುಂತಾದವುಗಳು. ಎರಡನೆಯದಾಗಿ, ಕ್ರಿಯಾ ಅಥವಾ ಚಲನಾತ್ಮಕ ಭಾಷೆ. ಇಲ್ಲಿ ಸಾಂಕೇತಿಕ ಭಾಷೆಯನ್ನು ಬಳಸದೆ ಉದ್ದೇಶ ಅಥವಾ ಅಪೇಕ್ಷಿತ ಚಲನೆಗಳನ್ನು ಬಳಸುವುದಾಗಿದೆ. ಉದಾ: ಪ್ರಯೋಗ ಮಾಡುವುದು, ಓದುವುದು ಇತ್ಯಾದಿ. ಮೂರನೆಯದಾಗಿ, ಉದ್ದೇಶಪೂರ್ವಕವಾಗಿ ಸಂವಹನ ಪ್ರಕ್ರಿಯೆಯಲ್ಲಿ ಪ್ರದರ್ಶಿಸಲ್ಪಡುವ ವಸ್ತುಗಳೇ ವಸ್ತು ಭಾಷೆ. ಅಶಾಬ್ದಿಕ ಸಂವಹನದಲ್ಲಿ ಅನೇಕ ವಿಧಗಳನ್ನು ಗುರುತಿಸಲಾಗಿದೆ.

Digitised by Bharatavani, CIIL

**ಶರೀರಗತಿ ಸಂವೇದನೆ:**

ದೇಹದ ಭಾಗಗಳನ್ನೇ ಸೂಕ್ಷ್ಮವಾಗಿ ಬಳಸಿಕೊಂಡು ಅಶಾಬ್ದಿಕ ಸಂವಹನ ಬಳಸುವುದರ ಮೂಲಕ ಸಂವಹನವನ್ನು ಪರಿಣಾಮಕಾರಿಯಾಗಿ ಬಳಸುವುದು. ಇದು ಶರೀರಗತಿ ಸಂವೇದನೆ. ಇದು ಆರು ಉಪ ಘಟಕಾಂಶಗಳನ್ನು ಒಳಗೊಂಡಿದೆ. ಅವೆಂದರೆ, ದೃಷ್ಟಿ ಸಂಪರ್ಕ, ಮುಖಭಾವಾಭಿವ್ಯಕ್ತಿ, ಹಾವಭಾವಾಭಿವ್ಯಕ್ತಿ, ನಿಲುವು/ಭಂಗಿ, ದೇಹ ಚಲನೆ ಮತ್ತು ಸ್ಪರ್ಶಿಸುವಿಕೆ.

**ಸ್ಥಳಾಂತರ ಸಂಬಂಧ:**

ಕಾಲ ಸಂವೇದನೆ/ಕಾಲ ಬಳಕೆ.

ಸಮಾನಾಂತರ ಭಾಷೆ.

ಕಲಾತ್ಮಕಾಂಶಗಳು.

**ಬರವಣಿಗೆ ಸಂವಹನ ಕೌಶಲ್ಯ:**

ಸಂವಹನ ಉತ್ತಮವಾಗಲು ಮೌಖಿಕ/ಬಾಯ್ದೆರೆ ಸಂವಹನ ಕೌಶಲ್ಯದೊಂದಿಗೆ ಬರವಣಿಗೆ ಅಥವಾ ಲಿಖಿತ ಸಂವಹನ ಕೌಶಲ್ಯ ಅವಶ್ಯಕ.

**–ಡಾ. ಜಗನ್ನಾಥ್ ಡಾಂಘೆ**

## ಸಂವಹನ ಮತ್ತು ಶಿಕ್ಷಣ

ಕಮ್ಯುನಿಕೇಷನ್ ಎಂಬ ಆಂಗ್ಲಪದ ಲ್ಯಾಟಿನ್ ಭಾಷೆಯ 'Communis' ಎಂಬ ಮೂಲ ಪದದಿಂದ ಜನ್ಮತಾಳಿದೆ. ಇದು 'Common' ಎಂಬ ಅರ್ಥ ಕೊಡುತ್ತದೆ. ಸಾಮಾನ್ಯ ಅನುಭವ ಹೊಂದುವುದೇ "Communication" ಅಥವಾ ಸಂವಹನ (ಸಂಸರ್ಗ) ಆಗಿದೆ.

**ಹಾವ್‌ಲ್ಯಾಂಡ್:** "ಸಂದೇಶಕಾರನು, ಸಂದೇಶ ಸ್ವೀಕರಿಸುವವನಲ್ಲಿ ಬದಲಾವಣೆ ತರಲು ಮಾಡುವ ಪ್ರಕ್ರಿಯೆಯೇ ಸಂವಹನ".

**ಲೀಗನ್ಸ್:** "ಇಬ್ಬರು ವ್ಯಕ್ತಿಗಳು ತಮ್ಮ ತಮ್ಮ ಭಾವನೆಗಳನ್ನು ಪರಿಣಾಮಕಾರಿಯಾಗಿ ವಿನಿಮಯ ಮಾಡಿಕೊಳ್ಳುವುದರ ಮೂಲಕ ಒಂದು ಸಾಮಾನ್ಯ ಅಭಿಪ್ರಾಯಕ್ಕೆ ಬರುವುದೇ ಸಂವಹನ".

**ಥಿಯೋ ಹೇಯ್‌ಮನ್:** "ಇಬ್ಬರು ವ್ಯಕ್ತಿಗಳ ನಡುವೆ ಮಾಹಿತಿಯ ವಿನಿಮಯ ಮತ್ತು ಪರಸ್ಪರ ತಿಳುವಳಿಕೆ ಉಂಟಾಗುವಂತೆ ಮಾಡುವುದೇ ಸಂವಹನ".

**ಸಂವಹನ ಪ್ರಕ್ರಿಯೆ (Communication Process):**
ಸಂವಹನ ಇಬ್ಬರ ನಡುವೆ ನಡೆಯುವ ಪ್ರಕ್ರಿಯೆ, ಆದಿಮಾನವ ತನ್ನ ಭಾವನೆಗಳನ್ನು ಚಿಹ್ನೆ ಗುರುತು ಹಾಗೂ ಭಾವಾಭಿನಯಗಳ ಮೂಲಕ ವ್ಯಕ್ತಪಡಿಸುತ್ತಿದ್ದನು. ಕಾಲಚಕ್ರ ಉರುಳಿದಂತೆ, ಸಮಾಜ ಬದಲಾವಣೆಯಾದಂತೆ ಭಾಷೆಯ ಮೂಲಕ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಪ್ರಾರಂಭಿಸಿದನು, ಅದೇ ರೀತಿ ತಂತ್ರಜ್ಞಾನ ಬೆಳೆದಂತೆ ಲಿಖಿತ ಪದಗಳು ಹಾಗೂ ಮಾಧ್ಯಮಗಳನ್ನು ಬಳಸಲು ತೊಡಗಿದನು.

ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರಗತಿಯಿಂದ ಆಕಾಶವಾಣಿ, ದೂರದರ್ಶನ, ದೂರವಾಣಿ ಮತ್ತು ಮೊಬೈಲ್ ಸಂಪರ್ಕಗಳ ಬಳಕೆ ಹೆಚ್ಚು ಕಂಡುಬರುತ್ತಿದೆ. ಮೊದಮೊದಲು ವ್ಯಕ್ತಿ ತನ್ನ ಭಾವನೆಗಳನ್ನು ಮೌಖಿಕ ಅಥವಾ ಬರವಣಿಗೆಯ ಮೂಲಕ ಬಳಸುತ್ತಿದ್ದವನು ನವೀನ ತಂತ್ರಜ್ಞಾನದ ಪ್ರಭಾವದಿಂದ ಸಮೂಹ–ಸಂಪರ್ಕ ಮಾಧ್ಯಮಗಳನ್ನು ಬಳಸಲಾರಂಭಿಸಿದನು. ಇದ–ರಿಂದ ಸಂವಹನ ಪ್ರಕ್ರಿಯೆ ವಿಶಾಲಗೊಂಡು ಸಂಪರ್ಕ ಪ್ರಕ್ರಿಯೆ ಮುಖಾಮುಖಿಯಾಗದೆ ಪರೋಕ್ಷವಾಗಿ ನಡೆಯುತ್ತಿದೆ.

**ಸಂವಹನ ಚಕ್ರ (Communication Cycle):**

ಸಂವಹನ ಚಕ್ರ ಪ್ರಮುಖವಾಗಿ ನಾಲ್ಕು ಅಂಶಗಳನ್ನು ಒಳಗೊಂಡಿದೆ. 1) ಸಂದೇಶ ಕಳುಹಿಸುವವ (S); 2) ಸಂದೇಶ (M) ಅಥವಾ ವಿಷಯ; 3) ವಿಷಯ ಪ್ರಸಾರ ಮಾಡುವ ಮಾಧ್ಯಮ (C); 4) ವಿಷಯ ಸ್ವೀಕರಿಸುವವ (R) (SMCR ಮತ್ತು ಪುಷ್ಟೀಕರಣ), ಎಂಬ ನಾಲ್ಕು ಅಂಶಗಳನ್ನು ಒಳಗೊಂಡಿದೆ. ಈ ಪ್ರಕ್ರಿಯೆಗೆ 'ಸಂವಹನ ಚಕ್ರ' ಎನ್ನುವರು.

ಸಂದೇಶ ಕಳುಹಿಸುವ ಮಾಹಿತಿಯನ್ನು ನಿರ್ದಿಷ್ಟ ಮಾಧ್ಯಮದಿಂದ ಮೌಖಿಕ ಅಥವಾ ಲಿಖಿತ, ಚಿಹ್ನೆ ರೂಪದಲ್ಲಿ ಮಾಹಿತಿ/ವಿಷಯವನ್ನು ಕಳುಹಿಸುತ್ತಾನೆ. ಮಾಹಿತಿ ಸ್ವೀಕರಿಸುವವ ಅಪೇಕ್ಷಿತ ರೀತಿಯಲ್ಲಿ ಪ್ರತಿಕ್ರಿಯಿಸಿ ಪುಷ್ಟೀಕರಣ ನೀಡುವನು.

**ಸಂವಹನ ವಿಧಗಳು (Types of Communication):**

ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಪ್ರಕ್ರಿಯೆಗೆ ಸಂವಹನ ಎನ್ನುವರು. ಕೆಲವು ವೇಳೆ ಇದು ಒಬ್ಬರಿಂದ ಒಬ್ಬರಿಗೆ, ಒಬ್ಬರಿಂದ ಹಲವರಿಗೆ, ಹಲವರಿಂದ ಹಲವರಿಗೆ ಉಂಟಾಗುತ್ತದೆ. ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಸಂವಹನ ಸರಳವಾಗಿರುತ್ತದೆ. ಆದರೆ ವಿಷಯ ಅರ್ಥೈಸಲು ಕ್ಲಿಷ್ಟವಾಗುತ್ತದೆ. ಇದರ ವಿಧಗಳನ್ನು ಕೆಳಕಂಡಂತೆ ಗುರ್ತಿಸಬಹುದು.

**ಮುಖಾಮುಖಿ ಸಂವಹನ:**

ಈ ರೀತಿಯ ಸಂವಹನದಿಂದ ಇಬ್ಬರ ನಡುವೆ ಭಾವನೆಗಳು ಪರಸ್ಪರ ವಿನಿಮಯವಾಗುತ್ತವೆ. ಮುಖಾಮುಖಿ ಭೇಟಿಯಿಂದ ಇಬ್ಬರಲ್ಲೂ ಸಹಕಾರ ಹಾಗೂ ಅನ್ಯೋನ್ಯತೆ ಬೆಳೆಯುತ್ತದೆ. ಸಮಸ್ಯೆಗಳು ಎದುರಾದರೆ ಅಥವಾ ವಿಷಯ ಅರ್ಥವಾಗದಿದ್ದರೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬಹುದು ಮತ್ತು ಇದರಿಂದ ಅನುಮಾನಗಳು ದೂರವಾಗುತ್ತವೆ. ಈ ರೀತಿಯ ಸಂವಹನ ವಿಚಾರಗೋಷ್ಠಿ ಚರ್ಚೆ, ಚಿಂತನೆ ಇತ್ಯಾದಿಗಳ ಮೂಲಕ ನಡೆ–ಯುತ್ತದೆ.

Digitised by Bharatavani, CIIL

**ಬರೆಯುವವ–ಓದುವವರ ಸಂವಹನ:**

ಈ ಸಂವಹನದಲ್ಲಿ ಬರೆಯುವವ ದೈಹಿಕವಾಗಿ ದೂರದಲ್ಲಿರುತ್ತಾನೆ ಆದರೂ ಓದುವವನಿಂದ ಗೌರವಿಸಲ್ಪಡುತ್ತಾನೆ. ಆದರೆ ವಿಷಯ ಅರ್ಥವಾಗದಿದ್ದರೆ ತಕ್ಷಣ ಪರಿಹಾರ ಪಡೆಯಲಾರ. ಅದೂ ಅಲ್ಲದೆ ಇಬ್ಬರೂ ಮುಖಾಮುಖಿಯಾಗಿ ಇಲ್ಲದಿರುವುದರಿಂದ ಸಂತೋಷವಾಗಲಿ, ನೆಮ್ಮದಿಯಾಗಲಿ ಅವರಲ್ಲಿರುವುದಿಲ್ಲ. ಈ ರೀತಿಯ ಸಂವಹನ ದಿನಪತ್ರಿಕೆ, ನಿಯತಕಾಲಿಕೆಗಳು, ಪುಸ್ತಕಗಳು–ಇತ್ಯಾದಿಗಳನ್ನು ಓದುವುದರ ಮೂಲಕ ಉಂಟಾಗುತ್ತದೆ.

**ಆಲಿಸುವ–ವೀಕ್ಷಿಸುವ ಸಂವಹನ:**

ಈ ಸಂವಹನದಲ್ಲಿಯೂ ಸಹ ವ್ಯಕ್ತಿ ಸಂದೇಶವಾಹಕನಿಂದ ದೈಹಿಕವಾಗಿ ದೂರದಲ್ಲಿರುತ್ತಾನೆ. ಈ ಪ್ರಕ್ರಿಯೆಯು ಸಾಮಾನ್ಯವಾಗಿ ನಾಟಕ, ಚಲನಚಿತ್ರ ಹಾಗೂ ದೂರದರ್ಶನ ವೀಕ್ಷಣೆಯಲ್ಲಿ ಕಂಡುಬರುತ್ತದೆ

**ಪ್ರತ್ಯಕ್ಷೀಕರಣ ಸಂವಹನ:**

ಈ ವಿಧದ ಸಂವಹನದಲ್ಲಿ ವ್ಯಕ್ತಿ ಏನೇನು ಘಟನೆ, ಮಾಹಿತಿ ಹಾಗೂ ನಿದರ್ಶನಗಳನ್ನು ಇಳಿಸಬೇಕೆಂದಿರುವನೋ ಅವುಗಳನ್ನು ದೃಶ್ಯ ರೂಪದಲ್ಲಿ ಪ್ರತ್ಯಕ್ಷೀಕರಿಸಿ ಸಂಕೇತ ಕಳುಹಿಸುತ್ತಾನೆ. ಇದನ್ನು ಸ್ವೀಕರಿಸುವವ ಪೂರ್ಣ ಪ್ರಮಾಣದಲ್ಲಿ ಗಮನ ಕೊಡುವ ಸಂದೇಶವನ್ನು ಅರ್ಥೈಸಿಕೊಳ್ಳುವನು.

**ಅಂತರ ವ್ಯಕ್ತಿ ಸಂವಹನ ಕೌಶಲ್ಯ (Interpersonal Communication Skills):**

ಅಂತರ್–ವ್ಯಕ್ತಿ ಸಂವಹನವು ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಪ್ರಕ್ರಿಯೆಯಾಗಿದೆ. ಇದರಿಂದ ಇಬ್ಬರೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವರಲ್ಲದೆ ಈರ್ವರ ಉದ್ದೇಶಗಳೂ ಯಶಸ್ವಿಯಾಗುತ್ತವೆ.

ಅಂತರ್ ವ್ಯಕ್ತಿ ಸಂವಹನವು ಒಂದು ಕಲೆ. ಇದನ್ನು ಅರಿತು–ಕೊಂಡು ಇಬ್ಬರು ಪರಿಣಾಮಕಾರಿಯಾಗಿ ಸಂವಹನಕ್ರಿಯೆಯಲ್ಲಿ ಭಾಗವಹಿಸಬೇಕು. ಇಲ್ಲಿ ಅಧ್ಯಾಪಕ ಒಬ್ಬ ಕೌಶಲ್ಯವುಳ್ಳ ವ್ಯಕ್ತಿ. ಇವನು ವಿದ್ಯಾರ್ಥಿಗಳೊಡನೆ ಕೌಶಲ್ಯತೆಯಿಂದ ಸಾಂದರ್ಭಿಕವಾಗಿ ವರ್ತಿಸಬೇಕು. ಇದಕ್ಕೆ ಭಾಷಾಕೌಶಲ್ಯವೂ ಅವಶ್ಯಕ. ವಾಕ್‌ಚಾತುರ್ಯವಿರಬೇಕು ಮತ್ತು ಮಧುರ ಬಾಂಧವ್ಯವಿರಬೇಕು. ಆಗ ಸಂವಹನ ಕೌಶಲ್ಯ ಯಶಸ್ವಿಯಾಗುತ್ತದೆ.

ಅಂತರ್ ವ್ಯಕ್ತಿ ಸಂವಹನ ಏರ್ಪಡುವ ಮುನ್ನ ತರಗತಿಯಲ್ಲಿ ಅಧ್ಯಾಪಕ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಕೇಳುವ ಮನೋಭಾವ ಬೆಳೆಸಿಕೊಳ್ಳಬೇಕು. ಅವರ ಅಭಿರುಚಿ, ಆಸಕ್ತಿ ಹಾಗೂ ಮನೋಭಾವಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದ–ರಿಂದ ಸಂವಹನ ಕೌಶಲ್ಯವು ಏಕಮುಖವಾಗಿರದೆ ನಿರಂತರವಾಗಿ ಇಬ್ಬರ ನಡುವೆ ನಡೆಯುವ ಕಾರ್ಯವಾಗಿರುತ್ತದೆ. ಅಂ–ದರೆ ಅಧ್ಯಾಪಕ ಹಾಗೂ ವಿದ್ಯಾರ್ಥಿಗಳ ನಡುವೆ ನಡೆಯುವ ಅಂತರ್ ವ್ಯಕ್ತಿ ಸಂವಹನಾ ಕೌಶಲ್ಯವಾಗಿರುತ್ತದೆ. ಈ ಕಾರ್ಯದಲ್ಲಿ ಭಾಷೆ, ಅನ್ಯೋನ್ಯತೆ ಹಾಗೂ ದೃಕ್‌ಶ್ರವಣೋಪಕರಣಗಳ ಪಾತ್ರ ಮಹತ್ವವುಳ್ಳದ್ದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಬೋಧನೆಯು ಒಂದು ವಿಧದ ಸಂಸರ್ಗ ಅಥವಾ ಸಂಭಾಷಣೆ ಆಗಿದೆ. ಶಿಕ್ಷಣದ ಅನೇಕ ವಿಚಾರಗಳು ಮಾಹಿತಿ, ಮನೋಭಾವ, ವರ್ತನೆ ಮುಂತಾದವುಗಳನ್ನು ವಿದ್ಯಾರ್ಥಿಗೆ ತಲುಪಿಸಬೇಕು. ಶಿಕ್ಷಕ ಕಲಿಸಿದ್ದನ್ನು ವಿದ್ಯಾರ್ಥಿ ಸ್ವೀಕರಿಸಿ ಅರ್ಥೈಸಿಕೊಂಡು ಕಲಿಕೆ ನೆರವೇರಿದಾಗ ಮಾತ್ರ ಸಂಸರ್ಗವು ಫಲಪ್ರದವಾಗುತ್ತದೆ. ತರಗತಿಯಲ್ಲಿ ಶಿಕ್ಷಕನು ಸಂಸರ್ಗವನ್ನು ಕಳುಹಿಸುವವನಾದರೆ ವಿದ್ಯಾರ್ಥಿ ಸ್ವೀಕರಿಸುವವನಾಗುತ್ತಾನೆ. ಹೀಗೆ ವಿದ್ಯಾರ್ಥಿ ಸಂಸರ್ಗವನ್ನು ಸರಿಯಾಗಿ ಅರ್ಥೈಸಿಕೊಂಡಾಗ ಮಾತ್ರ ತಕ್ಕ ಪ್ರತಿಕ್ರಿಯೆ ನೀಡಬಲ್ಲ. ಹೀಗೆ ವಿದ್ಯಾರ್ಥಿಗಳಿಗೆ ಹಲವಾರು ರೀತಿಯಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆ ನಡೆಯುವ ಒಂದು ಸಂಸರ್ಗವಾಗಿದೆ ಎಂದು ತಿಳಿಯಬಹುದು.

ಶಿಕ್ಷಣದಲ್ಲಿ ಸಂವಹನ ಪ್ರಕ್ರಿಯೆ ಶಿಕ್ಷಕ ಕೇಳಿದ ಪ್ರಶ್ನೆಗೆ ಉತ್ತರ ರೂಪದಲ್ಲಿ ವ್ಯಕ್ತಗೊಳ್ಳಬಹುದು, ಮನೋಭಾವ ಪರಿವರ್ತನೆ, ವರ್ತನೆ ಪರಿವರ್ತನೆಯ ರೂಪದಲ್ಲಿಯೂ ಪ್ರಕಟಗೊಳ್ಳಬಹುದು. ಶಿಕ್ಷಕ ಹೇಳಿದ್ದನ್ನು ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಪುನರುಚ್ಚರಿಸಿದರೆ ಸಾಲದು. ಬೋಧನೆಯಲ್ಲಿ ವರ್ತಮಾನದ ಅಥವಾ ತತ್‌ಕ್ಷಣದ ಆಯಾಮವನ್ನು ಮಾತ್ರ ಪರಿಗಣಿಸದೇ ಕಲಿತಜ್ಞಾನವನ್ನು ಭವಿಷ್ಯದ ಸಂದರ್ಭಗಳಲ್ಲಿಯೂ ಮತ್ತು ತರಗತಿಯ ಹೊರಗಡೆಗೂ ಸೂಕ್ತ ಪ್ರತಿಕ್ರಿಯೆಯೊಂದಿಗೆ ಅನ್ವಯಿಸುವಂತಾಗಬೇಕು. ಉತ್ತಮ ಬೋಧನೆ ಅಥವಾ ಉತ್ತಮ ಸಂಸರ್ಗವು ವಿದ್ಯಾರ್ಥಿಗಳಲ್ಲಿ ಮತ್ತು ಶಿಕ್ಷಕರಲ್ಲಿ ಸಂಬಂಧ ಏರ್ಪಡಿಸುವಲ್ಲಿ ಶಿಕ್ಷಣವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹೀಗೆ ಸಂಸರ್ಗವು ನಡೆಯಬೇಕಾದರೆ ಶಿಕ್ಷಕರು ತಮ್ಮ ವಿಚಾರಗಳನ್ನು ಸಂಸರ್ಗದ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸುವಂತಿರಬೇಕು. ಪರಿಣಾಮಕಾರಿಯಾಗಿ ಹೀಗೆ ಶಿಕ್ಷಣವು ಮತ್ತು ಸಂಸರ್ಗವು ಒಂದಕ್ಕೊಂದು ಬಿಡಿಸಲಾಗದ ಸಂಬಂಧವನ್ನು ಹೊಂದಿದೆ ಎಂದು ತಿಳಿಯಬಹುದಾಗಿದೆ.

- ಪ್ರತಿಕ್ರಿಯೆ ನೀಡಲು ಶಿಕ್ಷಣದಲ್ಲಿ ಸಂಸರ್ಗ ಮಹತ್ವದ ಪಾತ್ರವನ್ನು ವಹಿಸುತ್ತದೆ.
- ಶಿಕ್ಷಕರ ಮಧ್ಯೆ ಅಂತರ ಸಮಭಾವನೆಯನ್ನು ಮೂಡಿಸಲು ಈ ಸಂಸರ್ಗ ಮಹತ್ವ ಪಡೆದುಕೊಂಡಿದೆ.
- ಮಕ್ಕಳಲ್ಲಿ ಆಲಿಸುವ, ಅರ್ಥೈಸುವ, ಓದುವ ಕೌಶಲ್ಯವನ್ನು ಬೆಳೆಸಲು ಸಂವಹನ ಅಗತ್ಯವಾಗಿ ಬೇಕಾಗುತ್ತದೆ.
- ಪ್ರಜಾಸತ್ತಾತ್ಮಕ ವ್ಯಕ್ತಿತ್ವ ನಿರ್ಮಿಸುತ್ತದೆ.
- ಶಿಕ್ಷಕನಿಗೆ ಪರಿಣಾಮಕಾರಿಯಾಗಿ ಬೋಧಿಸಲು ಸಂವಹನ ಸಹಾಯಕ.
- ವಿದ್ಯಾರ್ಥಿಗಳಲ್ಲಿ ಆಸಕ್ತಿ ಕೆರಳಿಸಲು ಸಹಾಯಕ.
- ವಿದ್ಯಾರ್ಥಿಗಳಲ್ಲಿ ಅಭಿಪ್ರೇರಣೆ ಸಂಗ್ರಹಿಸಲು ಇದು ಸಹಾಯಕ.

Digitised by Bharatavani, CIIL

ಹೀಗೆ ಶಿಕ್ಷಣದಲ್ಲಿ ಸಂವಹನವು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಇತರರೊಡನೆ ಯಾವ ರೀತಿ ನಡೆದುಕೊಳ್ಳಬೇಕು ಮತ್ತು ಹೇಗೆ ಅವರೊಂದಿಗೆ ಬಾಳಬೇಕು ಎಂಬುದನ್ನು ಶಿಕ್ಷಣದಿಂದ ಸಂವಹನದ ಮೂಲಕ ತಿಳಿಯಬಹುದಾಗಿದೆ.

ಶಿಕ್ಷಕರ ತರಗತಿ ಸಂವಹನವು ಪ್ರಮುಖವಾಗಿ ಏಕಮುಖವಾಗಿರದೆ, ದ್ವಿಮುಖವಾಗಿರಬೇಕು. ಶಿಕ್ಷಕನು ವಿವರಣೆ, ಪ್ರಶ್ನಿಸುವಿಕೆ, ಉದಾಹರಣೆ ನೀಡುವ ಕೌಶಲ್ಯಗಳನ್ನು ತರಗತಿಯಲ್ಲಿ ರೂಢಿಸಿಕೊಳ್ಳಬೇಕು. ಶಿಕ್ಷಕ ತನ್ನ ಬೋಧನೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಹನ ಮಾಡುತ್ತಾ ತಾನು ವಿವರಿಸಿ ಪ್ರಶ್ನೆ ಕೇಳಿ ಉತ್ತರ ಪಡೆಯಬೇಕು. ವಿದ್ಯಾರ್ಥಿಗಳ ಅಭಿಪ್ರಾಯ ಕೇಳಬೇಕು. ಅವರಿಂದ ಹೇಳಿಸಬೇಕು. ಆಗ ಮಾತ್ರ ವಿದ್ಯಾರ್ಥಿಗಳಲ್ಲಿನ ಭಾವನೆ ಅವರ ಸಂವಹನ ಕೌಶಲ್ಯಗಳನ್ನು ಹೊರಹಾಕಲು ಸಹಾಯವಾಗುತ್ತದೆ. ತರಗತಿಯಲ್ಲಿ ಚರ್ಚೆ ಏರ್ಪಡಿಸುವುದು, ಪ್ರಬಂಧ ಬರೆಯುವುದು, ಚಿತ್ರಕಲಾ ಸ್ಪರ್ಧೆ ಮುಂತಾದವನ್ನು ಏರ್ಪಡಿಸುವ ಮೂಲಕ ಕೌಶಲ್ಯ ಹೊರಹಾಕಲು ವೇದಿಕೆ ಸಿದ್ಧಪಡಿಸಬೇಕು.

**ಸಂವಹನದ ಮೇಲೆ ಪ್ರಭಾವ ಬೀರುವ ಅಂಶಗಳು**

1. **ವಿಶ್ವಾಸಾರ್ಹತೆ** (Credibility): ಸಂದೇಶವನ್ನು ಕುರಿತು ಸ್ವೀಕರಿಸುವವನ ವಿಶ್ವಾಸಾರ್ಹತೆ
2. **ಸಾಮರ್ಥ್ಯತೆ** (Capability): ವಿಷಯಕ್ಕೆ ಸಂಬಂಧಿಸಿದಂತೆ ಸ್ವೀಕರಿಸುವವನ ಸಾಮರ್ಥ್ಯ
3. **ಹಿನ್ನೆಲೆ** (Context): ವಿಷಯಕ್ಕೆ ತಕ್ಕ ಸ್ವೀಕರಿಸುವವನ ಹಿನ್ನೆಲೆ
4. **ವಿಷಯ** (Content):ಸರಳವಾಗಿ ಅರ್ಥವಾಗುವ ಸಂದೇಶ
5. **ಮಾಧ್ಯಮ** (Medium/Channel): ಸೂಕ್ತ ಮಾಧ್ಯಮದ ಆಯ್ಕೆ ಮತ್ತು ಬಳಕೆ
6. **ಸ್ಪಷ್ಟತೆ** (Clarity): ಅರ್ಥೈಸಿಕೊಳ್ಳಲು ವಿಷಯ ಮತ್ತು ಸಂದೇಶದ ಸ್ಪಷ್ಟತೆ
7. **ನಿರಂತರತೆ** (Contuinity/Consistancy): ಪುನರಾವರ್ತನೆಯಿಂದ ಮರುಪುಷ್ಟೀಕರಣ

**ಯಶಸ್ವಿ ಸಂವಹನದ ಹತ್ತು ಸೂತ್ರಗಳು:**

1. **ಓದುವಿಕೆ:** ಜ್ಞಾನ ವಿಕಾಸಕ್ಕಾಗಿ ಹಲವು ಭಾಷೆಗಳನ್ನು ತಿಳಿಯುವುದು ಅಥವಾ ಅಭ್ಯಸಿಸುವುದು.
2. **ಬುದ್ಧಿವಂತಿಕೆಯಿಂದ ಕೇಳುವಿಕೆ ಅಥವಾ ಆಲಿಸುವಿಕೆ:** ಸಂವಹನ ದ್ವಿಮುಖ ಪ್ರಕ್ರಿಯೆ. ಪ್ರಮುಖವಾದ ಅಂಶಗಳನ್ನು ಗಮನವಿಟ್ಟು ಮತುಗಳನ್ನು ಆಲಿಸುವಿಕೆ.
3. **ಚಿಂತನೆ ಮತ್ತು ಯೋಜನೆ:** ಸಂವಹನ ಯೋಜನೆ ತಯಾರಿಸುವುದು ಮತ್ತು ಉದ್ದೇಶ ಆಧಾರಿತ ಯೋಚಿಸಿ ಮಾತನಾಡಬೇಕು ಅಥವಾ ಬರೆಯಬೇಕು.
4. **ಸೂಕ್ತ ಭಾಷೆ ಬಳಕೆ:** ಉಪಯೋಗಿಸುವ ಭಾಷೆ ಶುದ್ಧ, ಸರಳ ಮತ್ತು ಸೂಕ್ತವಾದುದಾಗಿರಬೇಕು.
5. **ಮುಕ್ತ ಮನಸ್ಸು:** ಇತರರ ಭಾವನೆಗಳನ್ನು ಸ್ವೀಕರಿಸಬೇಕು ಮತ್ತು ಅವಕಾಶ ಕಲ್ಪಿಸಿ ಕೊಡಬೇಕು.
6. **ಸೂಕ್ತ ಮಾಧ್ಯಮದ ಆಯ್ಕೆ:** ವಿಷಯಕ್ಕೆ ಮತ್ತು ವ್ಯಕ್ತಿಗಳಿಗೆ ಸೂಕ್ತವಾಗುವ ಮಾಧ್ಯಮದ ಆಯ್ಕೆ ಮತ್ತು ಬಳಕೆ.
7. **ಸಂವಹನದ ಸಮಯ ನಿರ್ಧಾರ:** ಸಂವಹನಕ್ಕೆ ಉತ್ತಮ ಸಮಯದ ಆಯ್ಕೆ.
8. **ಉತ್ತಮ ಭಾಷೆ ಬಳಕೆ:** ಬಳಸುವ ಪದಗಳು ವಿಷಯಕ್ಕೆ ಸಂಬಂಧಿಸಿರಬೇಕು ಮತ್ತು ಸುಲಭವಾಗಿ ಅರ್ಥವಾಗುವಂತಿರಬೇಕು.
9. **ಪುಷ್ಟೀಕರಣದ ಅಳವಡಿಕೆ:** ಪುಷ್ಟೀಕರಣ ಬಳಸಿಕೊಳ್ಳುವ ಸ್ವಭಾವ ಹೊಂದಿರಬೇಕು. ಆಗ ಪರಿಣಾಮಕಾರಿ ಸಮ ಸಂವಹನ ಸಾಧ್ಯ, ಇಲ್ಲದಿದ್ದರೆ ಸಂದೇಶ ತಲುಪಲು ಸಾಧ್ಯವಿಲ್ಲ.
10. **ಉನ್ನತ ಗುರಿ:** ಉನ್ನತ ಮತ್ತು ಅತ್ಯುತ್ತಮ ವಿಧಾನಗಳನ್ನು ಬಳಕೆ ಮಾಡುವುದು. ಹೆಚ್ಚು ಭಾಷಾ ಪದಗಳ ಅರ್ಥ ನೀಡುವಿಕೆ ಮತ್ತು ತಯಾರಿ ನಡೆಸಿರಬೇಕು.

**–ಡಾ. ಜಗನ್ನಾಥ್ ಡಾಂಘೆ**

## ಸಂವಹನದ ಅಡಚಣೆಗಳು:

ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯನ್ನುಂಟು ಮಾಡುವ ಅಂಶಗಳನ್ನು ಸಂವಹನದ ಕಂದಕಗಳು ಎನ್ನುತ್ತಾರೆ. ಈ ಕೆಳಗಿನ ಅಂಶಗಳು ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯನ್ನುಂಟು ಮಾಡುತ್ತವೆ. ಸಂವಹನದಲ್ಲಿನ ಕಂದಕಗಳನ್ನು–ವೈಯಕ್ತಿಕ, ಸಾಮಾಜಿಕ, ತಾಂತ್ರಿಕ ಹಾಗೂ ಪರಿಸರದಲ್ಲಿನ ಕಂದಕಗಳೆಂದು ವಿಂಗಡಿಸಬಹುದು.

**ಅಂತರ್ ವ್ಯಕ್ತಿ ಸಂವಹನದ ಅಡಚಣೆಗಳು:**

ಸಂವಹನ ಪ್ರಕ್ರಿಯೆಗೆ ಅಡಚಣೆಯು ಸಂವಹನದಲ್ಲಿ ಭಾಗವಹಿಸುವ ವ್ಯಕ್ತಿಯ ಆಂತರಿಕ ವಿಷಯಗಳು ಕಾರಣವಾಗಿದ್ದರೆ ಇಂತಹ ಕಂದಕಗಳನ್ನು ಅಂತರ್‌ವ್ಯಕ್ತಿ ಸಂವಹನದ ಕಂದಕಗಳು ಎನ್ನುತ್ತಾರೆ. ಸಂದೇಶವನ್ನು ಕಳುಹಿಸುವವರು ಅಥವಾ ಸ್ವೀಕರಿಸುವವರು ಸಂವಹಿಸುವ ವಿಷಯದ ಬಗ್ಗೆ ಪೂರ್ವಕಲ್ಪನೆಯನ್ನು ಅಥವಾ ಊಹೆಗಳನ್ನು ಹೊಂದಿದ್ದರೆ ಮತ್ತು ಸಂವಹಿಸುವ ವಿಷಯದ ಬಗ್ಗೆ ಆಸಕ್ತಿಯಿರದಿದ್ದರೆ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯುಂಟಾಗುತ್ತದೆ. ಪ್ರೇಕ್ಷಕರ ಮನಃಸ್ಥಿತಿ, ಜ್ಞಾನ ಮತ್ತು ಸಮಯಾವಕಾಶವನ್ನು ಅರಿತು ಸಂವಾಹಕರು ಮಾತನಾಡದಿದ್ದರೆ ಸಂವಹನದಲ್ಲಿ ಅಡಚಣೆಯುಂಟಾಗುತ್ತದೆ.

Digitised by Bharatavani, CIIL

ಸಂದೇಶವನ್ನು ರವಾನಿಸುವರ ಅಥವಾ ಸ್ವೀಕರಿಸುವವರ ದೈಹಿಕ ಅಥವಾ ಮಾನಸಿಕ ಪರಿಸ್ಥಿತಿ ಸರಿಯಿಲ್ಲದಿದ್ದರೆ, ಚರ್ಚಿಸುವ ವಿಷಯದ ಬಗ್ಗೆ ಸಾಮಾನ್ಯ ಗ್ರಹಿಕೆಯಿಲ್ಲದಿದ್ದರೆ, ವಿಭಿನ್ನ ಕಲ್ಪನೆಗಳಿದ್ದರೆ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯುಂಟಾಗುತ್ತದೆ. ಸಂದೇಶವನ್ನು ರವಾನಿಸುವವರಲ್ಲಿ ಅಥವಾ ಸ್ವೀಕರಿಸುವವರಲ್ಲಿ ಬರವಣಿಗೆ ಅಥವಾ ಉಚ್ಚರಿಸುವ ದೋಷವಿದ್ದರೆ ಸಂವಹನದಲ್ಲಿ ಅಡಚಣೆಯುಂಟಾಗುತ್ತದೆ. ಸಂದೇಶವನ್ನು ಸಂಕೇತಿಸಿ ರವಾನಿಸುವಾಗ ದ್ವಂದ್ವಾರ್ಥಗಳು ಬರುವ ಪದಗಳನ್ನು ಬಳಸಿದರೆ ಅಥವಾ ಸರಳವಾದ ಭಾಷೆಯನ್ನು ಬಳಸದಿದ್ದರೆ ಸಂದೇಶವನ್ನು ಸ್ವೀಕರಿಸುವವರು ಮಾಹಿತಿಯನ್ನು ವಿಸಂಕೇತಿಸುವಲ್ಲಿ ತೊಂದರೆಯುಂಟಾಗುತ್ತದೆ.

**ವ್ಯಕ್ತಿಗಳ ನಡುವಿನ ಸಂವಹನದ ಅಡಚಣೆಗಳು:**

ಸಂವಹನ ಪ್ರಕ್ರಿಯೆಗೆ ಅಡಚಣೆಗಳು ವ್ಯಕ್ತಿಗತವಾಗಿದ್ದರೆ ಇಂತಹ ಕಂದಕಗಳನ್ನು ವ್ಯಕ್ತಿಗಳ ನಡುವಿನ ಸಂವಹನದ ಕಂದಕಗಳು ಎನ್ನುತ್ತೇವೆ. ಉದಾಹರಣೆಗೆ ಸಂದೇಶವನ್ನು ಕಳುಹಿಸುವವರಲ್ಲಿ ಅಥವಾ ಸ್ವೀಕರಿಸುವವರಲ್ಲಿ ಭಿನ್ನಾಭಿಪ್ರಾಯ ಅಥವಾ ಅಪನಂಬಿಕೆಯಿದ್ದಾಗ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯುಂಟಾಗುತ್ತದೆ. ಸಂವಹನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿಯು ಸಂದೇಶವನ್ನು ಸರಿಯಾಗಿ ಸಂಕೇತಿಸಿ ರವಾನಿಸದಿದ್ದರೆ ಅಥವಾ ಸಂದೇಶವನ್ನು ಸ್ವೀಕರಿಸುವ ವ್ಯಕ್ತಿಯು ಮಾಹಿತಿಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸದಿದ್ದರೆ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯುಂಟಾಗುತ್ತದೆ. ಸಂವಹನದಲ್ಲಿ ಪಾಲ್ಗೊಳ್ಳುವವರ ನಡುವೆ ಚರ್ಚಿಸಲು ಸಾಮಾನ್ಯ ಅಂಶಗಳು ಇಲ್ಲವಾದಲ್ಲಿ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯುಂಟಾಗುತ್ತದೆ. ಸಂವಹನ ಪ್ರಕ್ರಿಯೆಯಲ್ಲಿ ಹೇಳುಗ ಹಾಗೂ ಕೇಳುಗರ ನಡುವೆ ಸಾಮಾನ್ಯ ಚರ್ಚಾಂಶಗಳಿದ್ದರೆ ಸಂವಹನ ಹೆಚ್ಚು ಆಸಕ್ತಿದಾಯಕ ಹಾಗೂ ಅರ್ಥಪೂರ್ಣವಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣ ವ್ಯಕ್ತಿಗಳ ಅನುಭವ, ಶಿಕ್ಷಣ, ಮೌಲ್ಯಗಳು ಮತ್ತು ವ್ಯಕ್ತಿತ್ವ, ಇವು ವ್ಯಕ್ತಿಗಳ ಆಲೋಚನೆ, ವಿಚಾರ–ಧಾರೆ ಮುಂತಾದವುಗಳ ಮೇಲೆ ತೀವ್ರ ಪ್ರಭಾವವನ್ನುಂಟು ಮಾಡುತ್ತವೆ.

**ಸಾಮಾಜಿಕ ಸಂವಹನದ ಅಡಚಣೆಗಳು:**

ವ್ಯಕ್ತಿಗಳ ಜಾತಿ, ಮತ, ಧರ್ಮ, ಆರ್ಥಿಕ ಮತ್ತು ಸಂಸ್ಕೃತಿಯ ಅಂಶಗಳು ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯನ್ನುಂಟು ಮಾಡಿದರೆ ಇಂತಹವುಗಳನ್ನು ಸಾಮಾಜಿಕ ಕಂದಕಗಳು ಎನ್ನುತ್ತಾರೆ. ಉದಾಹರಣೆಗೆ: ಬೇರೆ ಬೇರೆ ಜಾತಿ, ಮತ ಅಥವಾ ಸಂಸ್ಕೃತಿಗೆ ಸೇರಿದ ಜನರು ಸಂವಹನ ಪ್ರಕ್ರಿಯೆಯಲ್ಲಿ ಭಾಗವಹಿಸುವಾಗ ತಾನು ಮೇಲು–ಕೀಳೆಂಬ ಭಾವನೆ ಹೊಂದಿದಾಗ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯುಂಟಾಗುತ್ತದೆ.

**ತಾಂತ್ರಿಕ ಸಂವಹನದ ಅಡಚಣೆಗಳು:**

ಸಂವಹನ ಪ್ರಕ್ರಿಯೆಯಲ್ಲಿ ಬಳಸುವ ತಾಂತ್ರಿಕ ಅಂಶಗಳಾದ ವಿದ್ಯುತ್‌ಚ್ಛಕ್ತಿ ಅಭಾವ, ಸಂವಾಹಕ ಉಪಕರಣಗಳಲ್ಲಿನ ದೋಷ ಇನ್ನಿತರ ಅಂಶಗಳು ಸಂವಹನಕ್ಕೆ ಅಡಚಣೆಯನ್ನುಂಟು ಮಾಡಿದರೆ ಇಂತಹವುಗಳನ್ನು ತಾಂತ್ರಿಕ ಸಂವಹನದ ಕಂದಕಗಳು ಎನ್ನುತ್ತಾರೆ. ಹೆಚ್ಚಿನ ಜನರೊಡನೆ ಸಂವಹನ ಪ್ರಕ್ರಿಯೆಯಲ್ಲಿ ತೊಡಗಿದಾಗ ಸರಿಯಾದ ಸಮೂಹ ಮಾಧ್ಯಮದ ಬಳಕೆಯನ್ನು ಮಾಡದಿರುವುದು. ಉದಾಹರಣೆಗೆ: ಶಿಕ್ಷಕರು ತರಗತಿಯಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಬೋಧಿಸುವಾಗ ಭೂಪಟ, ಒ.ಹೆಚ್.ಪಿ ಅಥವಾ ಎಲ್.ಸಿ.ಡಿ. ಪ್ರಕ್ಷೇಪಕಗಳನ್ನು ಬಳಸಿ ಬೋಧಿಸದಿದ್ದರೆ ಪರಿಣಾಮಕಾರಿ ಕಲಿಕೆಯುಂಟಾಗುವುದಿಲ್ಲ. ತಂತ್ರಜ್ಞಾನವನ್ನು ಬಳಸುವಾಗ ಪ್ರೇಕ್ಷಕರ ಮನೋವಿಜ್ಞಾನದ ಬಗ್ಗೆ ಸಾಕಷ್ಟು ಅರಿವು ಇರಬೇಕು. ತಾಂತ್ರಿಕ ಸಂವಾಹಕ ಉಪಕರಣಗಳನ್ನು ಬಳಸುವ ತರಬೇತಿ ಹೊಂದದೆಯಿರುವುದು ಸಂವಹನಕ್ಕೆ ಕಂದಕವಾಗುತ್ತದೆ.

**ಪರಿಸರದಲ್ಲಿನ ಅಡಚಣೆಗಳು:**

ಸಂವಹನ ಮಾರ್ಗದಲ್ಲಿನ ತೊಂದರೆಗಳು: ಸಂವಹನದ ಮಾರ್ಗದಲ್ಲಿ ಉಂಟಾಗುವ ಸದ್ದು ಅಥವಾ ಗದ್ದಲ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯನ್ನುಂಟು ಮಾಡುತ್ತವೆ. ಸಂದೇಶವನ್ನು ರವಾನಿಸುವವನು ಕಳುಹಿಸಿದ ಸಂಕೇತಗಳು ಸಂದೇಶವನ್ನು ಸ್ವೀಕರಿಸುವವರಿಗೆ ಸರಿಯಾದ ಮಾಹಿತಿ ಪಡೆಯಲು ಅಡಚಣೆಯನ್ನುಂಟು ಮಾಡುತ್ತವೆ. ಉದಾಹರಣೆಗೆ: ಶಿಕ್ಷಕರು ತರಗತಿಯಲ್ಲಿ ಪಾಠವನ್ನು ಮಾಡುವಾಗ ರಸ್ತೆಯಲ್ಲಿ ಸಾಗುವ ಮೋಟಾರು ವಾಹನಗಳ ಸದ್ದು ಅಥವಾ ಗದ್ದಲದಿಂದ ವಿದ್ಯಾರ್ಥಿಗಳು ವಿಷಯವನ್ನು ಅರ್ಥೈಸಿಕೊಳ್ಳುವಲ್ಲಿ ಅಡಚಣೆಯನ್ನುಂಟು ಮಾಡುತ್ತವೆ. ತರಗತಿಯಲ್ಲಿ ಸರಿಯಾದ ವಾತಾವರಣ ವ್ಯವಸ್ಥೆಯಿರದಿದ್ದರೆ ಸಂವಹನ ಪ್ರಕ್ರಿಯೆಯಲ್ಲಿ ಅಡಚಣೆಯುಂಟಾಗುತ್ತದೆ. ಕೆಲವೊಮ್ಮೆ ವಾತಾವರಣದಲ್ಲಿ ಉಷ್ಣತೆ ತೀವ್ರವಾಗಿದ್ದರೆ ಹವಾ ನಿಯಂತ್ರಕ ಇಲ್ಲದಿದ್ದರೆ ಸಂವಹನ ಪ್ರಕ್ರಿಯೆ ಯಶಸ್ವಿಯಾಗುವುದಿಲ್ಲ.

–ಶ್ರೀನಿವಾಸ್ ಕೆ.ಎಸ್.

## ಸಂಶೋಧನೆ–ಅರ್ಥ, ಸ್ವರೂಪ

**ಸಾಮಾನ್ಯ ಜ್ಞಾನ ಮತ್ತು ವೈಜ್ಞಾನಿಕ ಜ್ಞಾನ:**

ಸಾಮಾನ್ಯ ಜ್ಞಾನ ಮತ್ತು ವೈಜ್ಞಾನಿಕ ಜ್ಞಾನ ಅಥವಾ ಸಂಶೋಧನೆ ಆಧಾರಿತ ಜ್ಞಾನಕ್ಕೂ ನಡುವೆ ವ್ಯತ್ಯಾಸಗಳಿವೆ. ಅದನ್ನು ಬಳಸುವ ಸಮಾಜಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಜ್ಞಾನ ಪ್ರತಿಯೊಬ್ಬನಿಗೂ ಅಥವಾ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಜ್ಞಾನವಾಗಿದೆ.

Digitised by Bharatavani, CIIL

ಅಂದರೆ ಸಾಮಾನ್ಯ ಜ್ಞಾನವು ನಿರ್ದಿಷ್ಟ ಸಮುದಾಯದ ಅರ್ಥಾತ್ ಒಂದು ಸಂಸ್ಥೆ, ಒಂದು ನಗರ, ಒಂದು ದೇಶದ ನಿರ್ದಿಷ್ಟ ಭಾಗ ಅಥವಾ ಒಂದು ದೇಶದ ಪ್ರಜೆಗಳಿಂದ/ಸದಸ್ಯರಿಂದ ಹಂಚಿಕೊಳ್ಳಬಹುದಾದ ಅಂಗೀಕೃತವೆಂದು ಸ್ವೀಕರಿಸಿದ ಜ್ಞಾನವಾಗಿದೆ. ಸಾಮಾನ್ಯ ಜ್ಞಾನವು ಒಂದು ನಿರ್ದಿಷ್ಟ ವಿಷಯಕ್ಕೆ ಮಾತ್ರ ಸಂಬಂಧಿಸಿರದೆ, ಎಲ್ಲ ವಿಷಯಗಳಿಗೆ, ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಇರುತ್ತದೆ. ಇದು ವಿಜ್ಞಾನ, ಇತಿಹಾಸ, ಕಲೆ, ಸಾಹಿತ್ಯ, ಮನೋರಂಜನೆ ಇತ್ಯಾದಿಗಳಿಗೆ ಸಂಬಂಧಿಸಿರಬಹುದು. ಸಾಮಾನ್ಯ ಜ್ಞಾನವನ್ನು ನಮೂದಿಸುವ ಅಗತ್ಯವಿರುವುದಿಲ್ಲ. ಉದಾಹರಣೆಗೆ ರಾಜ್ಯಗಳ ಅಥವಾ ದೇಶಗಳ ರಾಜಧಾನಿಗಳ ಜ್ಞಾನವನ್ನು ಸಾಮಾನ್ಯ ಜ್ಞಾನ ಎಂದು ಪರಿಗಣಿಸಲಾಗುತ್ತದೆ. ಕೋನಾನ್‌ರು ಹೇಳುವಂತೆ ಸಾಮಾನ್ಯ ಜ್ಞಾನವು ಮಾನವ ಕುಲದ ವ್ಯಾವಹಾರಿಕ ಉಪಯೋಗಗಳಿಗೆ ತೃಪ್ತಿದಾಯಕವಾಗುವ ಪರಿಕಲ್ಪನೆಗಳ ಸರಣಿ ಮತ್ತು ಪರಿಕಲ್ಪನಾತ್ಮಕ ರಚನೆಗಳಾಗಿವೆ. ಆದರೆ ಆಧುನಿಕ ವಿಜ್ಞಾನದಲ್ಲಿ ವಿಶೇಷವಾಗಿ ಮನೋವಿಜ್ಞಾನದಲ್ಲಿ ಮತ್ತು ಶಿಕ್ಷಣದಲ್ಲಿ ಈ ಪರಿಕಲ್ಪನೆಗಳ ಸರಣಿ ಮತ್ತು ಪರಿಕಲ್ಪನಾತ್ಮಕ ರಚನೆಗಳು ಗಂಭೀರವಾಗಿ ತಪ್ಪುದಾರಿಗೆಳೆಯುವಂತದ್ದಾಗಿರಬಹುದು. ಉದಾಹರಣೆಗೆ ಹಿಂದಿನ ಶಿಕ್ಷಣ ಪದ್ಧತಿಯು ಬಹಳಷ್ಟು ಶಿಕ್ಷಕರಿಗೆ ಶಿಕ್ಷೆಯನ್ನು ಬೋಧನಾಶಾಸ್ತ್ರದ ಒಂದು ಸಾಧನವಾಗಿ ಬಳಸಲಾಗುವುದು ಎಂಬುದು ಸ್ಪಷ್ಟವಾಗಿತ್ತು. ಇದು ಒಂದು ಸಾಮಾನ್ಯ ಜ್ಞಾನವಾಗಿದೆ. ಹಿಂದಿನ ಈ ಸಾಮಾನ್ಯ ಜ್ಞಾನವು ದೋಷ ಪೂರ್ಣವಾಗಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಶಿಕ್ಷೆಗಿಂತ ಬಹುಮಾನ ಅಥವಾ ಪ್ರಶಂಸೆಯು ಕಲಿಕೆಗೆ ಸಹಾಯ ಮಾಡುವುದರಲ್ಲಿ ಹೆಚ್ಚು ಪರಿಣಾಮಕಾರಿ ಎಂಬುದು ಕಂಡುಬಂದಿದೆ. ಮನುಷ್ಯನ ಇಂದ್ರಿಯ ಸಾಮರ್ಥ್ಯಗಳು ಮಿತಿಗೊಳಪಟ್ಟಿದ್ದು, ಸಾಮಾನ್ಯ ಜ್ಞಾನ ಇಂದ್ರಿಯ ಅನುಭವಗಳಿಂದ ಸಂಗ್ರಹಿಸಿದವುಗಳಾಗಿದ್ದರಿಂದ, ಅವುಗಳು ಮಿತಿಗೊಳಪಟ್ಟಿವೆ. ಮಾನವನ ತೀರ್ಮಾನಗಳು ನಿಖರವಾದ ಪುರಾವೆ/ಆಧಾರಗಳನ್ನು ಅವಲಂಬಿಸಿರದೆ ಅಂದಾಜು ಅಥವಾ ಊಹೆಯಾಗಿದ್ದು, ಹೆಚ್ಚಾಗಿ ವೈಯಕ್ತಿಕವಾಗಿರುತ್ತದೆ. ಇಂತಹ ನಿರ್ಧಾರಗಳು ಅಥವಾ ಜ್ಞಾನ ವಸ್ತುನಿಷ್ಠತೆಯ ಕೊರತೆಯನ್ನು ಹೊಂದಿರುತ್ತವೆ.

ವೈಜ್ಞಾನಿಕ ಜ್ಞಾನ ಅಥವಾ ಸಂಶೋಧನೆ ಆಧಾರಿತ ಜ್ಞಾನ ಈ ಮಿತಿಗಳಿಂದ ಕೂಡಿರುವುದಿಲ್ಲ. ವೈಜ್ಞಾನಿಕ ಜ್ಞಾನ ನಿಖರ, ಉದ್ದೇಶಿತ, ಪರೀಕ್ಷಿಸಬಲ್ಲ ಮತ್ತು ವಿಶ್ವಸನೀಯ ಜ್ಞಾನವಾಗಿರುತ್ತದೆ. ಈ ಜ್ಞಾನವನ್ನು ಪ್ರಾಯೋಗಿಕ ಪರೀಕ್ಷೆಗಳ ಮೂಲಕ ಸಂಗತಿಗಳನ್ನು ಅಧ್ಯಯನ ಮಾಡುವ ವೈಜ್ಞಾನಿಕ ಪ್ರಕ್ರಿಯೆಯನ್ನು ಅನುಸರಿಸಿ ಪಡೆಯಲಾಗುತ್ತದೆ. ಇದನ್ನು ದತ್ತಾಂಶಗಳನ್ನು ಸಂಗ್ರಹಿಸಿ, ಅವುಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಿ, ವಿಶ್ಲೇಷಿಸಿ ಸೂಕ್ತ ತೀರ್ಮಾನದಿಂದ ರೂಪಿಸಿರುತ್ತಾರೆ. ವೈಜ್ಞಾನಿಕ ಜ್ಞಾನ ವಸ್ತುನಿಷ್ಠ ದತ್ತಾಂಶಗಳ ಆಧಾರದ ಮೇಲೆ ರೂಪಿಸಲ್ಪಟ್ಟಿದ್ದು, ಇದು ಪೂರ್ವಾಗ್ರಹ ಪೀಡಿತ ಮತ್ತು ವ್ಯಕ್ತಿನಿಷ್ಠವಾಗಿರದೆ ವಸ್ತನಿಷ್ಠವಾಗಿರುತ್ತದೆ. ವೈಜ್ಞಾನಿಕ ತೀರ್ಮಾನಗಳು, ಸಾಮಾನ್ಯೀಕರಣಗಳು ನಿಗಮನ ಮತ್ತು ಅನುಗಮನದಿಂದ ತಾರ್ಕಿಕ ವಿಧಾನಗಳನ್ನು ಆಧರಿಸಿರುತ್ತವೆ. ವೈಜ್ಞಾನಿಕ ಜ್ಞಾನದಲ್ಲಿ ಪದಗಳು, ಪರಿಕಲ್ಪನೆಗಳನ್ನು ನಿಖರವಾದ ಅರ್ಥದೊಂದಿಗೆ ನಿರೂಪಿಸಲಾಗುತ್ತದೆ. ಇಲ್ಲಿ ಅಸ್ಪಷ್ಟತೆಗೆ ಅವಕಾಶವಿರುವುದಿಲ್ಲ. ಸಂಗತಿಗಳು, ಪರಿಕಲ್ಪನೆಗಳು, ಮೂಲ ತತ್ವಗಳು, ವಿಚಾರ ಸರಣಿಗಳು, ಸಾಮಾನ್ಯೀಕರಣಗಳು ಇತ್ಯಾದಿಗಳನ್ನು ವೈಜ್ಞಾನಿಕ ಜ್ಞಾನ ಹೊಂದಿರುತ್ತದೆ. ಸಾಮಾನ್ಯ ಜ್ಞಾನ ವೈಜ್ಞಾನಿಕ ಜ್ಞಾನದ ಆಧಾರ ಅಥವಾ ಆರಂಭಿಕ ಅಂಶ ಆಗಿರಬಹುದು.

**ಸಂಶೋಧನೆಯ ಪರಿಕಲ್ಪನೆ:**

ಮಾನವರು ಹೆಚ್ಚಿನ ಜ್ಞಾನಕ್ಕಾಗಿ ತುಡಿಯುತ್ತಿರುತ್ತಾರೆ. ಹೊಸ ಜ್ಞಾನವನ್ನು ಪಡೆಯುತ್ತಾ, ಪಡೆದ ಜ್ಞಾನವನ್ನು ಬೇರೆ ಬೇರೆ ಕ್ಷೇತ್ರಗಳಿಗೆ ಅನ್ವಯಿಸುತ್ತಿರುತ್ತಾರೆ. ಅಂದರೆ ಮಾನವರು ನಿರಂತರವಾಗಿ ಶೋಧಿಸುತ್ತಿರುತ್ತಾರೆ. ಸರಳವಾಗಿ, ಸಂಶೋಧನೆಯೆಂದರೆ ಜ್ಞಾನಕ್ಕಾಗಿ ಶೋಧನೆಯಾಗಿದೆ. ಇದು ಒಂದು ಸಂಗತಿಗೆ ಮೂಲಭೂತವಾಗಿರುವ ತಥ್ಯಂಶಗಳನ್ನು ಹೊರ ಹಾಕುವ ಪ್ರಕ್ರಿಯೆಯಾಗಿದೆ. ಇದು ಒಂದು ಸಂಗತಿಯ ವಿವಿಧ ಆಯಾಮಗಳನ್ನು ಮತ್ತೆ ಮತ್ತೆ ನೋಡುವ ಪ್ರಕ್ರಿಯೆಯಾಗಿದೆ. ಸಂಶೋಧನೆ ಜಗತ್ತಿನ ವಿವಿಧ ಸಂಗತಿಗಳ ನಡುವೆ ಇರುವ ಸಂಬಂಧವನ್ನು ಕಂಡುಹಿಡಿಯುವುದಕ್ಕೂ ಸಂಬಂಧಿಸಿದ್ದಾಗಿದೆ. ಸಂಶೋಧನೆ ಮಾನವಿಕಗಳು, ಸಂಸ್ಕೃತಿ ಮತ್ತು ಸಮಾಜದ ಜ್ಞಾನವನ್ನು ಒಳಗೊಂಡಂತೆ ಜ್ಞಾನದ ಸಂಗ್ರಹವನ್ನು ಹೆಚ್ಚಿಸಲು ವ್ಯವಸ್ಥಿತವಾಗಿ ನಡೆಸುವ ಔಪಚಾರಿಕ ಕಾರ್ಯವಾಗಿದೆ.

ಸಂಶೋಧನೆಯನ್ನು ಬಹಳಷ್ಟು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಮಾರ್ಟಿನ್ ಶಟ್ಲವರ್ಥ್‌ರ್ ಪ್ರಕಾರ "ಸಂಶೋಧನೆಯ ವ್ಯಾಪಕ ವ್ಯಾಖ್ಯೆ ಜ್ಞಾನದ ಮುಂದುವರಿಕೆಗೆ ದತ್ತಾಂಶಗಳು, ಮಾಹಿತಿಗಳು ಮತ್ತು ತಥ್ಯಗಳನ್ನು ಸಂಗ್ರಹಿಸುವುದು ಒಳಗೊಳ್ಳುತ್ತದೆ." ಜಾನ್ ಬೆಸ್ಟ್‌ರು ವ್ಯಾಖ್ಯಾನಿಸಿದಂತೆ "ಸಂಶೋಧನೆ ನಡೆಯಲಿರುವ ಘಟನೆಗಳನ್ನು ಮುಂದಾಗಿ ಊಹಿಸಿಕೊಳ್ಳಲು ಮತ್ತು ಸಾಧ್ಯವಾಗುವ ಮಟ್ಟಿಗೆ ಅದನ್ನು ನಿಯಂತ್ರಿಸಲು ಸಹಾಯಕವಾಗುವಂತಹ ಸಾಮಾನ್ಯ ತತ್ವಗಳನ್ನು ಕಂಡುಕೊಳ್ಳಲು ನಡೆಸುವ, ಪ್ರಸ್ತುತ ಸಂಗತಿಗಳ ಮತ್ತು ನಿಯಂತ್ರಿತ ವರ್ತನೆಗಳ ಕ್ರಮಬದ್ಧ ಮತ್ತು ವಸ್ತುನಿಷ್ಠ ವಿಶ್ಲೇಷಣೆಯಾಗಿದೆ." ಗ್ರಸ್‌ವೆಲ್‌ರ ಪ್ರಕಾರ ಸಂಶೋಧನೆ "ಒಂದು ವಿಷಯ ಅಥವಾ ವಿಚಾರದ ಬಗೆಗೆ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಮಾಹಿತಿಯನ್ನು ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಒಂದು ಪ್ರಕ್ರಿಯೆಯಾಗಿದೆ." ಮೇರಿಯನ್‌ರ ವೆಬ್‌ಸ್ಟರ್ ಶಬ್ದಕೋಶದಂತೆ "ಸಂಶೋಧನೆ ವಿದ್ವತ್ ಪೂರ್ಣ ಅನ್ವೇಷಣೆ ಅಥವಾ ಪರೀಕ್ಷೆ, ವಿಶೇಷವಾಗಿ ತನಿಕೆ ಅಥವಾ ಪ್ರಯೋಗದ ಮೂಲಕ ತಥ್ಯಗಳನ್ನು ಕಂಡುಹಿಡಿಯುವುದು ಮತ್ತು ಅರ್ಥೈಸುವುದು, ಸ್ವೀಕರಿಸಿರುವ ಸಿದ್ಧಾಂತಗಳು ಮತ್ತು ನಿಯಮಗಳನ್ನು ಪರಿಷ್ಕರಿಸುವುದು, ಹೊಸ ತಥ್ಯಗಳ ಬೆಳಕಿನಲ್ಲಿ ಹೊಸ ಅಥವಾ ಪರಿಷ್ಕೃತ ಸಿದ್ಧಾಂತಗಳು ಅಥವಾ ನಿಯಮಗಳನ್ನು ಪ್ರಾಯೋಗಿಕವಾಗಿ ಅನ್ವಯಿಸುವುದಾಗಿದೆ."

Digitised by Bharatavani, CIIL

ಸಂಶೋಧನೆಯ ಫಲಿತಾಂಶಗಳನ್ನು, ತಥ್ಯಗಳನ್ನು ಸ್ಥಾಪಿಸಲು, ದೃಢಪಡಿಸಲು, ಪುನಃ ದೃಢಪಡಿಸಲು, ನವೀನ ಅಥವಾ ಅಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಲು, ಸಿದ್ಧಾಂತಗಳನ್ನು ಬೆಂಬಲಿಸಲು, ಹೊಸ ಸಿದ್ಧಾಂತಗಳನ್ನು ರೂಪಿಸಲು ಬಳಸಲಾಗುತ್ತದೆ. ವ್ಯಾಪಕವಾಗಿ ಸಂಶೋಧನೆಯನ್ನು ಒಂದು ವಿಷಯ, ಸಂಗತಿ ಅಥವಾ ಘಟಕಗಳ ಬಗೆಗಿನ ಅರ್ಥಪೂರ್ಣ ಪ್ರಶ್ನೆಗಳಿಗೆ ವೈಜ್ಞಾನಿಕ ಕ್ರಮಗಳನ್ನು ಅನ್ವಯಿಸುವುದರ ಮೂಲಕ ಉತ್ತರಗಳನ್ನು ಪಡೆಯುವ ವ್ಯವಸ್ಥಿತ ಪ್ರಯತ್ನವಾಗಿದೆ. ಸಂಶೋಧನೆ ಒಂದು ದೃಷ್ಟಿಕೋನ ಅಥವಾ ಅನ್ವೇಷಣೆಯ ಒಂದು ಮನೋಭಾವದ ಆಧಾರವನ್ನು ಹೊಂದಿರುತ್ತದೆ.

**ಸಂಶೋಧನೆಯ ಲಕ್ಷಣಗಳು:**

ಸಂಶೋಧನೆ ಸಾಮಾನ್ಯವಾಗಿ ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ಉತ್ತರವನ್ನು ನೀಡಲು ಸಾಧ್ಯವಿರುವ ಪ್ರಶ್ನೆಗಳಿಗೆ ಉತ್ತರವನ್ನು ಪರಿಶೋಧಿಸುತ್ತದೆ. ಹೀಗೆ ಸಂಶೋಧನೆ ಉತ್ತಮವಾಗಿ ಯೋಜಿಸಿದ ವಿಧಾನ, ಅಂದರೆ ವೈಜ್ಞಾನಿಕ ವಿಧಾನದ ಮೂಲಕ ಸಮಸ್ಯೆಗಳಿಗೆ ಅವಲಂಬಿಸಬಹುದಾದ ಪರಿಹಾರಗಳನ್ನು ಪಡೆದುಕೊಳ್ಳುವ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಇದರ ಲಕ್ಷಣಗಳು ಈ ಕೆಳಗಿನಂತಿವೆ.

- ಸಂಶೋಧನೆ ಸಮಸ್ಯೆಯ ಪರಿಹಾರದೆಡೆಗೆ ನಿರ್ದೇಶಿತವಾಗಿರುತ್ತದೆ.
- ಇದು ಪ್ರಶ್ನೆಗೆ ಉತ್ತರ ನೀಡಲು ಪ್ರಯತ್ನವಾಗಿದೆ ಅಥವಾ ಎರಡು ಅಥವಾ ಹೆಚ್ಚು ಚರಾಂಶಗಳ ನಡುವಿನ ಸಂಬಂಧವನ್ನು ನಿರ್ಧರಿಸುತ್ತದೆ.
- ಇದು ಶೋಧನೆಯನ್ನು ಒರೆ ಹಚ್ಚುವ ಕ್ರಿಯೆಯಾಗಿದೆ.
- ಇದು ಮಾಹಿತಿಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ ಸಂಗತಿಗಳಿಗೆ ಸಂಬಂಧಿಸಿದ ಸಾಮಾನ್ಯ ತತ್ವಗಳನ್ನು ಕಂಡುಹಿಡಿಯುವುದಕ್ಕೆ ಸಂಬಂಧಿಸಿದೆ.
- ಇದು ದತ್ತಾಂಶಗಳ ಸಂಗ್ರಹಣೆಗೆ ವಿಶ್ವಾಸನೀಯ ಸಾಧನಗಳನ್ನು ಬಳಸುತ್ತದೆ.
- ಇದು ಸಾರ್ವತ್ರೀಕರಣಗಳ, ನವೀನ ತತ್ವಗಳ ಮತ್ತು ಸಿದ್ಧಾಂತಗಳ ಶೋಧನೆಗೆ ಒತ್ತು ನೀಡುತ್ತದೆ.
- ಇದು ಯಾವಾಗಲೂ ಪ್ರಯೋಗದ ಮೂಲಕ ದೊರೆಯುವ ಹಾಗೂ ಸ್ವತಃ ವೀಕ್ಷಿಸಿ ಅನುಭವಿಸಬಲ್ಲ ಸಂಗತಿಗಳನ್ನು ಮಾತ್ರ ಸಾಕ್ಷ್ಯಾಧಾರವಾಗಿ ಪರಿಗಣಿಸುತ್ತದೆ.
- ಸಂಶೋಧನೆ ವಸ್ತುನಿಷ್ಠವಾಗಿದ್ದು, ತಾರ್ಕಿಕವಾಗಿರುತ್ತದೆ.
- ಸಂಶೋಧನೆ ಹೊಸ ಜ್ಞಾನವನ್ನು ಸಂಗ್ರಹಿಸುತ್ತದೆ.
- ಇದು ತಾಳ್ಮೆಯ ಮತ್ತು ಪಟ್ಟು ಹಿಡಿದು ಮಾಡುವ ಚಟುವಟಿಕೆಯಾಗಿದೆ.
- ಸಂಶೋಧನೆಯು ಎಚ್ಚರಿಕೆಯಿಂದ ರೂಪಿಸಲ್ಪಟ್ಟ ವಿಧಾನಗಳನ್ನು ಅನುಸರಿಸಿ ಮುಂದುವರಿಯುತ್ತದೆ.

**ಸಂಶೋಧನೆಯ ಉದ್ದೇಶಗಳು:**

- ವೈಜ್ಞಾನಿಕ ವಿಧಾನ ಮತ್ತು ಕ್ರಮಗಳನ್ನು ಅನ್ವಯಿಸುವುದರ ಮೂಲಕ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಹಿಡಿಯುವುದು ಪ್ರಧಾನವಾಗಿದೆ.
- ಸಂಶೋಧನೆ ಸಂಗತಿಗಳಿಗೆ, ವಿಷಯಗಳಿಗೆ ಸಂಬಂಧಿಸಿದಂತೆ ವೀಕ್ಷಿಸುವ, ಪರಿಶೋಧಿಸುವ, ವರ್ಣಿಸುವ, ಭವಿಷ್ಯ ನುಡಿಯುವುದು ಮತ್ತು ವಿವರಿಸುವುದು.
- ಇದು ಮಾನವ ಕುಲಕ್ಕೆ ಸಹಾಯಕವಾಗುವ ನಿರ್ದಿಷ್ಟ ಪ್ರಶ್ನೆಗಳಿಗೆ ನಿಖರ ಮತ್ತು ಗ್ರಾಹ್ಯ ಉತ್ತರಗಳನ್ನು ಕಂಡುಹಿಡಿಯುತ್ತದೆ.
- ಸಂಶೋಧನೆಯನ್ನು ಸಮಸ್ಯೆಗಳನ್ನು ಪರಿಹರಿಸಲು, ಕಾರಣಗಳನ್ನು ಕಂಡುಹಿಡಿಯಲು, ಹೊಸ ಜ್ಞಾನವನ್ನು ಸೃಷ್ಟಿಸಲು, ತಥ್ಯಗಳು, ಸಿದ್ಧಾಂತಗಳು ಮತ್ತು ನಿಯಮಗಳನ್ನು ಸ್ಥಿರಪಡಿಸಲು ಕೈಗೊಳ್ಳಲಾಗುತ್ತದೆ.
- ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿಷಯ ಮತ್ತು ಮಾಹಿತಿ ಸಂಗ್ರಹಿಸಲು, ಅನ್ವೇಷಿಸಲು ಮತ್ತು ಅದಕ್ಕೆ ಸಂಬಂಧಿಸಿದಂತೆ ವ್ಯಕ್ತಿ ತೆಗೆದುಕೊಂಡ ನಿರ್ಧಾರಗಳನ್ನು ದೃಢಪಡಿಸಲು ಮತ್ತು ಬದಲಾಯಿಸಿಕೊಳ್ಳಲು ಸಹಾಯ ಮಾಡಲು ಸಂಶೋಧನೆಯನ್ನು ನಡೆಸಲಾಗುತ್ತದೆ.
- ಸಂಶೋಧನೆಯು ಒಂದು ವಿಶಿಷ್ಟ ವಿಷಯದ ಜ್ಞಾನದ ನಿರ್ವಹಣೆಗೆ ಸಂಬಂಧಿಸಿದಂತೆ ಪೂರ್ಣತೆ, ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಖಾತರಿಪಡಿಸಿಕೊಳ್ಳುತ್ತದೆ.
- ಮೂಲಭೂತ ಸಂಶೋಧನೆಯಿಂದ ಕಂಡುಹಿಡಿದ ಜ್ಞಾನವನ್ನು, ಸಿದ್ಧಾಂತಗಳನ್ನು ಪರೀಕ್ಷಿಸುವುದು ಮತ್ತು ಪರಿಷ್ಕರಿಸುವುದು.
- ಇದು ಕೆಲವೊಂದು ಸಂಗತಿಗಳು ಏಕೆ ನಡೆಯುತ್ತವೆ ಎಂಬುದನ್ನು ವಿವರಿಸುತ್ತದೆ ಮತ್ತು ಸಂಶೋಧನೆಯಿಂದ ರೂಪಿಸಿದ ತತ್ವಗಳು, ನಿಯಮಗಳು ಮತ್ತು ಸಿದ್ಧಾಂತಗಳನ್ನು ಸಂಶೋಧನಾ ಚೌಕಟ್ಟಿನ ಹೊರಗೆ ಅನ್ವಯಿಸುವಂತೆ ಮಾಡುತ್ತದೆ.
- ಸಂಶೋಧನೆಯು ಪ್ರಾಕಲ್ಪನೆಗಳನ್ನು ಸರಿಪಡಿಸುವ, ಸಂಸ್ಕರಿಸುವ, ಪರಿಶೀಲಿಸುವ ಮತ್ತು ಪರಿಷ್ಕರಿಸುವುದನ್ನು ಕೈಗೊಳ್ಳುತ್ತದೆ.
- ಫಲಿತಾಂಶಗಳನ್ನು ಸಾರ್ವತ್ರಿಕರಣಗೊಳಿಸಲು, ಮುಂದಿನ

Digitised by Bharatavani, CIIL

ಅಧ್ಯಯನಕ್ಕಾಗಿ ಹೊಸ ಸಮಸ್ಯೆಗಳನ್ನು ಗುರುತಿಸುವುದು, ನವೀನ ಕ್ಷೇತ್ರಗಳನ್ನು ತೆರೆದಿಡುವುದು.

- ಇದು ಅಸ್ಥಿತ್ವದಲ್ಲಿರುವ ಜ್ಞಾನದಲ್ಲಿರುವ ಅಂತರವನ್ನು ಗುರುತಿಸುತ್ತದೆ, ವಿವಿಧ ಸಿದ್ಧಾಂತಗಳು ಮತ್ತು ಉಪಕ್ರಮಗಳನ್ನು ಹೋಲಿಸುತ್ತದೆ, ವಿವಿಧ ವಿಧಾನಗಳನ್ನು ಅನ್ವೇಷಿಸುತ್ತದೆ ಮತ್ತು ಅಸ್ಥಿತ್ವದಲ್ಲಿರುವ ಸಂಗತಿಗಳು, ತಥ್ಯಗಳು, ಸಿದ್ಧಾಂತಗಳು ಮತ್ತು ನಿಯಮಗಳನ್ನು ಅರ್ಥೈಸಿಕೊಳ್ಳಲು ಸಹಾಯಕವಾಗಿದೆ.

**ಸಂಶೋಧನೆಯ ವಿಧಗಳು:**

ಉದ್ದೇಶವನ್ನು ಅವಲಂಬಿಸಿ ಸಂಶೋಧನೆಯನ್ನು ಮೂಲಭೂತ ಸಂಶೋಧನೆ, ಆನ್ವಯಿಕ ಸಂಶೋಧನೆ ಮತ್ತು ಕ್ರಿಯಾ ಸಂಶೋಧನೆ ಎಂದು ವರ್ಗೀಕರಿಸಲಾಗಿದೆ. ಸಂಶೋಧನೆಯ ಕ್ರಮವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಐತಿಹಾಸಿಕ ಸಂಶೋಧನೆ, ವರ್ಣನಾತ್ಮಕ ಸಂಶೋಧನೆ ಮತ್ತು ಪ್ರಾಯೋಗಿಕ ಸಂಶೋಧನೆ ಎಂದು ವರ್ಗೀಕರಿಸಲಾಗಿದೆ.

**ಮೂಲಭೂತ ಸಂಶೋಧನೆ:** ಇದರ ಮುಖ್ಯ ಗುರಿಯು ಮೂಲಭೂತ ಸತ್ಯದ ಸಂಶೋಧನೆಯಾಗಿದೆ. ಇದು ಸಿದ್ಧಾಂತಗಳನ್ನು ರೂಪಿಸುವುದು ಮತ್ತು ಅಸ್ಥಿತ್ವದಲ್ಲಿರುವ ಜ್ಞಾನರಾಶಿಗೆ ಹೆಚ್ಚಿನ ಜ್ಞಾನವನ್ನು ಸೇರಿಸುವುದಾಗಿದೆ. ಈ ರೀತಿಯ ಸಂಶೋಧನೆಯಲ್ಲಿ ವಿಷಯಗಳು ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕಿಂತ ಹೆಚ್ಚಾಗಿ ವಿಶಾಲವೂ, ಗಹನವೂ ಆದ ಸಂಗತಿಗಳಿಗೆ ಸಂಬಂಧಿಸಿರುತ್ತವೆ. ಮೂಲಭೂತ ಸಂಶೋಧನೆಯು ಮುಂದಿನ ಆನ್ವಯಿಕ ಸಂಶೋಧನೆಗೆ ತಳಹದಿಯನ್ನು ಒದಗಿಸುತ್ತದೆ. ಇದನ್ನು ಮೂಲ ಸಂಶೋಧನೆ ಅಥವಾ ಶುದ್ಧ ಸಂಶೋಧನೆ ಎಂದು ಕರೆಯುತ್ತಾರೆ.

**ಅನ್ವಯಿಕ ಸಂಶೋಧನೆ:** ವಿಧಿ ವಿಧಾನಗಳಿಗೆ ಸಂಬಂಧಿಸಿದಂತೆ ಮೂಲಭೂತ ಸಂಶೋಧನೆಗೆ ಹೋಲಿಕೆಯಿದ್ದರೂ ಇದರ ಮುಖ್ಯ ಗುರಿ ಈಗಾಗಲೇ ಕಂಡುಹಿಡಿದ ಸಿದ್ಧಾಂತ, ತತ್ವ ಅಥವಾ ನಿಯಮಗಳನ್ನು ನಿರ್ದಿಷ್ಟ ಉದ್ದೇಶಕ್ಕೆ ಅಥವಾ ಕಾರ್ಯಕ್ಕೆ ಅಥವಾ ಒಂದು ವಸ್ತು ಅಥವಾ ಕಾರ್ಯದ ವಿಧಾನವನ್ನು ಇನ್ನೂ ಉತ್ತಮ ಪಡಿಸುವುದಕ್ಕೆ ಅನ್ವಯಿಸುವುದಾಗಿದೆ. ಇದನ್ನು ಜ್ಞಾನಕ್ಕಾಗಿ ಜ್ಞಾನವನ್ನು ಸಂಪಾದಿಸುವ ಉದ್ದೇಶಕ್ಕಿಂತ, ಆಧುನಿಕ ಜಗತ್ತಿನಲ್ಲಿ ಅಸ್ಥಿತ್ವದಲ್ಲಿರುವ ವ್ಯಾವಹಾರಿಕ ಸಮಸ್ಯೆಗಳನ್ನು ಪರಿಹರಿಸಲು ವಿನ್ಯಾಸಗೊಳಿಸಲಾಗುವುದು.

**ಕ್ರಿಯಾ ಸಂಶೋಧನೆ:** ಇದು ಸೀಮಿತ ವ್ಯಾಪ್ತಿಯ ಅನ್ವಯಿಕ ಸಂಶೋಧನೆಯಾಗಿದೆ. ಪ್ರಧಾನವಾಗಿ ಇದು ಶಾಲೆ, ಕಾಲೇಜುಗಳ ಅಥವಾ ತರಗತಿಯ ಸಮಸ್ಯೆಗಳಿಗೆ ನೇರವಾದ ಪರಿಹಾರ ಕಂಡುಹಿಡಿಯುವುದಕ್ಕೆ ಬಳಸುವುದಾಗಿದೆ. ಒಂದು ನಿರ್ದಿಷ್ಟ ಗುಂಪಿನ ವಿದ್ಯಾರ್ಥಿಗಳಿಗೆ, ಸಂಬಂಧಿಸಿದ ಸಮಸ್ಯೆಯ ಪರಿಹಾರ ಪಡೆದುಕೊಳ್ಳಲು ಶಿಕ್ಷಕರು, ಮೇಲ್ವಿಚಾರಕರು ಅಥವಾ ಆಡಳಿತಗಾರರು ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳುತ್ತಾರೆ.

**ಐತಿಹಾಸಿಕ ಸಂಶೋಧನೆ:** ಇದು ಹಿಂದೆ ನಡೆದ ಅಥವಾ ಇದ್ದ ಸಂಗತಿಗಳು ಅಥವಾ ಘಟನೆಗಳನ್ನು ಅನ್ವೇಷಿಸುವುದು, ವರ್ಣಿಸುವುದು ಮತ್ತು ಅರ್ಥೈಸುವುದಕ್ಕೆ ಸಂಬಂಧಿಸಿದೆ. ಇದು ಹಿಂದಿನ ಸಂಗತಿಗಳಿಗೆ ಸಂಬಂಧಿಸಿದಂತೆ ನಿರ್ಧಾರಗಳನ್ನು ತಲುಪಲು, ತಥ್ಯಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಈ ಸಂಶೋಧನೆಯಿಂದ ಹಿಂದಿನ ಸಂಗತಿಗಳನ್ನು ನಿಖರವಾಗಿ ಅರ್ಥೈಸಿಕೊಳ್ಳುವುದರ ಮೂಲಕ ವರ್ತಮಾನದ ಸ್ಪಷ್ಟ ದೃಷ್ಟಿಕೋನವನ್ನು ಪಡೆಯಬಹುದಾಗಿದೆ.

**ವಿವರಣಾತ್ಮಕ ಸಂಶೋಧನೆ:** ಇದು ಪ್ರಸ್ತುತದಲ್ಲಿ ಇರುವ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು, ವರ್ಣಿಸುವುದು ಮತ್ತು ಅರ್ಥೈಸುವುದಕ್ಕೆ ಸಂಬಂಧಿಸಿದ ಸಂಶೋಧನೆಯಾಗಿದೆ. ಇದು ಸಂಗತಿಗಳ, ಘಟನೆಗಳ, ಸಂಸ್ಥೆಗಳ ಪ್ರಸ್ತುತ ಸ್ಥಿತಿಗತಿಗಳ ಬಗೆಗೆ ಸಂಬಂಧಿಸಿದಂತೆ ಸುಸಂಗತವಾದ ಮತ್ತು ನಿಷ್ಕೃಷ್ಟವಾದ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ಸಂಶೋಧಿಸಿದ ಮಾಹಿತಿ ಮತ್ತು ತಥ್ಯಗಳಿಂದ ಸಮಂಜಸವಾದ ಸಾಮಾನ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಧಾನ ಗುರಿಯುಳ್ಳದ್ದಾಗಿದೆ.

**ಪ್ರಾಯೋಗಿಕ ಸಂಶೋಧನೆ:** ಇದು ನಿಯಂತ್ರಿತ ಸನ್ನಿವೇಶದಲ್ಲಿ ಸಂಗತಿಗಳ ನಡುವಿನ ಮೂಲ ಸಂಬಂಧವನ್ನು ಪತ್ತೆಹಚ್ಚುವುದಕ್ಕೆ ಸಂಬಂಧಿಸಿದೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ನಿಯಂತ್ರಿತ ಸನ್ನಿವೇಶದಲ್ಲಿ ಉದ್ದೇಶಪೂರ್ವಕವಾಗಿ ಬದಲಾಯಿಸಿದ (Manipulated) ಚಲಕ/ಚಲಕಗಳು ಮತ್ತು ವೀಕ್ಷಿತ ಚಲಕ/ಚಲಕಗಳ ನಡುವೆ ವ್ಯವಸ್ಥಿತ ಮತ್ತು ತಾರ್ಕಿಕ ಸಂಬಂಧವನ್ನು ಸ್ಥಾಪಿಸುವುದಾಗಿದೆ.

**ಸಂಶೋಧನೆಯ ವಿಧಾನಗಳು:**

ಸಂಶೋಧನಾ ಪ್ರಕ್ರಿಯೆಯಲ್ಲಿ ಸಂಶೋಧನಾ ಸಮಸ್ಯೆಯನ್ನು ಆಯ್ದುಕೊಂಡು ಉದ್ದೇಶಗಳನ್ನು ರೂಪಿಸಿಕೊಂಡ ನಂತರ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಲು ಅಥವಾ ಸಂಶೋಧನೆಯನ್ನು ನಡೆಸಲು ಸಮರ್ಪಕ ವಿಧಾನವನ್ನು ಆಯ್ಕೆ ಮಾಡಿಕೊಳ್ಳುವುದು ಒಂದು ಅತ್ಯಂತ ಪ್ರಮುಖ ಕಾರ್ಯ. ಸಂಶೋಧನೆಯ ಉದ್ದೇಶಗಳು, ಬೇಕಾದ ದತ್ತಾಂಶಗಳು, ತಂತ್ರಗಳು, ದತ್ತಾಂಶ ಸಂಗ್ರಹಣೆಯ ಕ್ರಮ ಇವುಗಳನ್ನು ಅವಲಂಬಿಸಿ ಸಂಶೋಧನೆ ನಡೆಸಲು ಸೂಕ್ತ ವಿಧಾನವನ್ನು ಆಯ್ದುಕೊಳ್ಳಬೇಕು. ಈ ಸಂಶೋಧನಾ ವಿಧಾನಗಳು ಇಂತಿವೆ.

- ತಾತ್ವಿಕ ಸಂಶೋಧನಾ ವಿಧಾನ
- ಐತಿಹಾಸಿಕ ಸಂಶೋಧನಾ ವಿಧಾನ
- ಸಮೀಕ್ಷಾ ವಿಧಾನ
- ವರ್ಣನಾತ್ಮಕ ವಿಧಾನ
- ಆದರ್ಶಾತ್ಮಕ ವಿಧಾನ
- ವಿಶ್ಲೇಷಣಾತ್ಮಕ ವಿಧಾನ
- ಸಹ ಸಂಬಂಧಾತ್ಮಕ ವಿಧಾನ

Digitised by Bharatavani, CIIL

- ಕಾರಣಾತ್ಮಕ ತುಲನಾತ್ಮಕ ವಿಧಾನ
- ಪ್ರಾಯೋಗಿಕ ವಿಧಾನ
- ಅರ್ಧ ಪ್ರಾಯೋಗಿಕ ವಿಧಾನ
- ವಿಕಾಸಾತ್ಮಕ ಅಧ್ಯಯನ ವಿಧಾನಗಳು

**ಹಂತಗಳು:**

ಸಾಮಾನ್ಯವಾಗಿ ಯಾವುದೇ ಸಂಶೋಧನೆಯಲ್ಲಿ ಮುಖ್ಯವಾಗಿ ಐದು ಹಂತಗಳನ್ನು ಗುರುತಿಸಬಹುದಾಗಿದೆ. ಆದರೆ ಸಂಶೋಧನೆಯ ಸ್ವರೂಪವನ್ನು ಅವಲಂಬಿಸಿ ಈ ಹಂತಗಳಲ್ಲಿ ತುಸು ಬದಲಾವಣೆಗಳನ್ನು ಕಾಣಬಹುದಾಗಿದೆ. ಸಂಶೋಧನೆಯ ಹಂತಗಳು ಇಂತಿವೆ.

**1. ಸಮಸ್ಯೆಯನ್ನು ಗುರುತಿಸುವುದು ಮತ್ತು ವ್ಯಾಖ್ಯಾನಿಸುವುದು:**

ಪರಿಹಾರವನ್ನು ಕಂಡುಕೊಳ್ಳಬೇಕಾಗಿರುವ ಸಮಸ್ಯೆಯನ್ನು ಗುರುತಿಸಿ ಮೂರ್ತ ಪದಗಳಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸುವುದು ಮೊದಲ ಹಂತವಾಗಿದೆ.

**2. ಪ್ರಾಕಲ್ಪನೆಗಳನ್ನು ರೂಪಿಸುವುದು:**

ಸಮಸ್ಯೆಯನ್ನು ಸ್ಪಷ್ಟ ಪದಗಳಲ್ಲಿ ವ್ಯಾಖ್ಯಾನಿಸಿದ ನಂತರ ಪ್ರಾಕಲ್ಪನೆಗಳನ್ನು ರಚಿಸಬೇಕು. ಪ್ರಾಕಲ್ಪನೆಗಳು ಸಮಸ್ಯೆಯ ಪರಿಹಾರಕ್ಕೆ ಜಾಣ್ಮೆಯ ಊಹೆಗಳಾಗಿವೆ. ಇದಕ್ಕೆ ಸಮಸ್ಯೆಗೆ ಸಂಬಂಧಿಸಿದ ಜ್ಞಾನ ಅಥವಾ ಮಾಹಿತಿಯ ವಿಮರ್ಶಾತ್ಮಕ ಪರಿಶೀಲನೆಯ ಅಗತ್ಯವಿರುತ್ತದೆ.

**3. ಸಂಶೋಧನಾ ವಿನ್ಯಾಸ:**

ಸಂಶೋಧನಾ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಹಿಡಿಯಲು ಸಮರ್ಪಕ ವಿಧಾನವನ್ನು ನಿರ್ಧರಿಸಿ ಸೂಕ್ತ ಯೋಜನೆಯನ್ನು ರೂಪಿಸುವುದಾಗಿದೆ. ಸಂಶೋಧನೆಯ ವಿಷಯ, ಬೇಕಾಗುವ ಮಾಹಿತಿ, ಪ್ರತಿದರ್ಶಚಯನ, ದತ್ತಾಂಶ ಸಂಗ್ರಹಣೆಯ ಕ್ರಮ ಇತ್ಯಾದಿಗಳನ್ನು ಅವಲಂಬಿಸಿ ಸಂಶೋಧನೆಯ ಕಾರ್ಯ ಯೋಜನೆಯ ವಿನ್ಯಾಸವನ್ನು ರಚಿಸಿಕೊಳ್ಳಲಾಗುವುದು.

**4. ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ:**

ಸಂಶೋಧನೆಯಲ್ಲಿ ರೂಪಿಸಿಕೊಂಡ ಪ್ರಾಕಲ್ಪನೆಗಳನ್ನು ಪರೀಕ್ಷಿಸಲು ಅಗತ್ಯ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತದೆ. ಸಮರ್ಪಕ ನಿರ್ಧಾರಗಳನ್ನು ಕೈಗೊಳ್ಳಲು ಪ್ರಾಕಲ್ಪನೆಗಳು ಸರಿಯೋ ತಪ್ಪೋ ಎಂದು ತೀರ್ಮಾನಿಸಲು ದತ್ತಾಂಶಗಳನ್ನು ವಿಶ್ಲೇಷಿಸಲಾಗುತ್ತದೆ.

**5. ದೃಢಪಡಿಸಿಕೊಳ್ಳುವುದು ಮತ್ತು ನಿರ್ಣಯಗಳನ್ನು ಕೈಗೊಳ್ಳುವುದು:**

ದತ್ತಾಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿದ ನಂತರ ದೊರೆತ ಫಲಿತಾಂಶಗಳ ಆಧಾರದ ಮೇಲೆ ಪ್ರಾಕಲ್ಪನೆಗಳನ್ನು ಸ್ವೀಕರಿಸಲಾಗುವುದು ಅಥವಾ ತಿರಸ್ಕರಿಸಲಾಗುವುದು. ಇದನ್ನು ಅವಲಂಬಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲಾಗುವುದು.

**ಸಂಶೋಧಕನ ಲಕ್ಷಣಗಳು:**

ಸಂಶೋಧನೆಯಲ್ಲಿ ಯಶಸ್ವಿಯಾಗಲು ಉತ್ತಮ ಸಂಶೋಧಕನು ಸರಿಯಾದ ಮತ್ತು ಅಪೇಕ್ಷಿತ ಲಕ್ಷಣಗಳನ್ನು ಹೊಂದಿರಬೇಕು. ಅವುಗಳು ಇಂತಿವೆ.

1. **ಬುದ್ಧಿಶಕ್ತಿ ಮತ್ತು ಆಸಕ್ತಿ:** ಉತ್ತಮ ಸಂಶೋಧಕನಾಗಲು ಪ್ರಥಮವಾಗಿ ಸಂಶೋಧನೆಯಲ್ಲಿ ತೊಡಗಿಕೊಳ್ಳುವ ಉದ್ದೇಶದೊಂದಿಗೆ ಸಾಧ್ಯವಾದಷ್ಟು ಉತ್ತಮ ಸಂಶೋಧನೆಯನ್ನು ನಡೆಸಬೇಕೆಂಬ ತೀವ್ರ ಆಸಕ್ತಿ ಇರಬೇಕು. ಇದರಿಂದ ಬೇಕಾದಂತಹ ಜ್ಞಾನ, ಮಾಹಿತಿ ಮತ್ತು ದತ್ತಾಂಶಗಳನ್ನು ಸಂಚಿತಗೊಳಿಸಲು ಸುಲಭವಾಗುವುದು.

2. **ವಿಶ್ಲೇಷಣಾತ್ಮಕ ಮನಸ್ಸು:** ಸಂಶೋಧಕನಿಗೆ ಸಂಶೋಧನೆಗೆ ಸಂಬಂಧಿಸಿದ ವಿಷಯಗಳನ್ನು ಸಮರ್ಪಕವಾಗಿ ವಿಶ್ಲೇಷಿಸುವ ಸಾಮರ್ಥ್ಯವಿರಬೇಕು.

3. **ಉತ್ಕೃಷ್ಟ ಬರವಣಿಗೆ ಮತ್ತು ಶಾಬ್ದಿಕ ಸಂವಹನ:** ಸಂಶೋಧನೆಯನ್ನು ನಡೆಸಿ ದತ್ತಾಂಶಗಳನ್ನು ಸಂಗ್ರಹಿಸಿ ಸರಿಯಾಗಿ ವಿಶ್ಲೇಷಿಸಿದ ನಂತರ ಉತ್ತಮ ಸಂಶೋಧನಾ ವರದಿ ತಯಾರಿಸುವುದು ಒಂದು ಪ್ರಮುಖ ಕಾರ್ಯವಾಗಿದೆ. ಇದಕ್ಕೆ ಸಂಶೋಧಕನಿಗೆ ಉತ್ಕೃಷ್ಟ ಬರವಣಿಗೆ ಮತ್ತು ಶಾಬ್ದಿಕ ಸಂವಹನ ಕೌಶಲಗಳಿರಬೇಕು.

4. **ಕಾರ್ಯತತ್ಪರತೆ:** ಸಂಶೋಧಕನು ಶ್ರಮವಹಿಸಿ ಉದ್ಯಮಶೀಲತೆಯಿಂದ, ಶ್ರದ್ಧೆಯಿಂದ ತನ್ನ ಸಂಶೋಧನಾ ಕಾರ್ಯವನ್ನು ನಿರ್ವಹಿಸುವಂತಹವನಾಗಿರಬೇಕು.

5. **ಮುಂದಾಲೋಚನೆ:** ಸಂಶೋಧಕನು ಮುಂದಾಲೋಚಕನಾಗಿದ್ದು, ಸಂಶೋಧನೆಗೆ ಸಂಬಂಧಿಸಿದಂತೆ ಏನನ್ನು ಮಾಡಬೇಕು? ಯಾವ ರೀತಿ ಮಾಡಬೇಕು? ಎಲ್ಲಿ ಮಾಡಬೇಕು? ಎಂಬಂಥ ಮುಖ್ಯ ಪ್ರಶ್ನೆಗಳಿಗೆ ಮುಂಚಿತವಾಗಿ ಮನಸ್ಸಿನಲ್ಲಿ ಉತ್ತರಗಳನ್ನು ಕಂಡುಕೊಳ್ಳುವ ಬಗೆಗೆ ಚಿಂತನೆ ಮಾಡುತ್ತಿರಬೇಕು.

6. **ಸಮಂಜಸತೆ:** ಸಂಶೋಧಕನು ಪ್ರಾರಂಭದಲ್ಲಿ ಬಳಸಿದ ಹೇಳಿಕೆಗಳಿಗೂ, ಉದ್ದೇಶಗಳಿಗೂ ಸಂಶೋಧನೆ ನಡೆಸಿದ ನಂತರ ನೀಡುವ ಹೇಳಿಕೆಗಳಿಗೂ, ಉದ್ದೇಶಗಳಿಗೂ ಸುಸಂಗತೆ ಅಥವಾ ಹೊಂದಾಣಿಕೆ ಇರಬೇಕು. ಇವುಗಳ ನಡುವೆ ತಾರ್ಕಿಕ ಸಂಬಂಧವಿರಬೇಕು.

Digitised by Bharatavani, CIIL

7. **ವಿವೇಚನೆ:** ಸಂಶೋಧಕನು ಯುಕ್ತಾ ಯುಕ್ತಾ ಪರಿಜ್ಞಾನವುಳ್ಳವನಾಗಿದ್ದು ವಿವೇಕಯುತವಾಗಿ ಸಂಶೋಧನೆ ನಡೆಸುವಂತಹವನಾಗಿರಬೇಕು.

8. **ಸೃಜನಶೀಲ ಮತ್ತು ಅಧಿಕ ಅಭಿಪ್ರೇರಣೆ:** ಸಂಶೋಧಕನು ಸೃಜನಶೀಲ ಮತ್ತು ಅಧಿಕ ಅಭಿಪ್ರೇರಣೆಯುಳ್ಳ ವ್ಯಕ್ತಿಯಾಗಿರಬೇಕು. ಸಂಶೋಧನಾ ಸಮಸ್ಯೆಯನ್ನು ಸವಾಲಾಗಿ ತೆಗೆದುಕೊಂಡು ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವುದಕ್ಕಿಂತ ಸಮಸ್ಯೆಯನ್ನು ಪರಿಹರಿಸುವಂತವನಾಗಿರಬೇಕು.

9. **ವ್ಯವಹಾರ ಕುಶಲತೆ:** ಉಪಯುಕ್ತ ತಥ್ಯಗಳನ್ನು ಶೋಧಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಅದು ಅಧ್ಯಯನವನ್ನು ಸರಿಯಾಗಿ ಮುಂದುವರಿಸಲು ಮತ್ತು ಪೂರ್ಣಗೊಳಿಸಲು ಸಹಾಯಕ.

10. **ದೃಢ ನಿರ್ಧಾರ:** ಸಂಶೋಧನೆಯ ಸಮಯದಲ್ಲಿ ಕಠಿಣ ಮತ್ತು ಅನಿರೀಕ್ಷಿತ ಸನ್ನಿವೇಶಗಳು ಎದುರಾಗಬಹುದು. ಸಂಶೋಧಕನು ಸಂಶೋಧನೆಯನ್ನು ಪೂರ್ಣಗೊಳಿಸುವ ದೃಢನಿರ್ಧಾರವುಳ್ಳವನಾಗಿದ್ದು ದೃಢನಿಷ್ಠೆಯಿಂದ ಮತ್ತು ಸತತ ಪ್ರಯತ್ನದಿಂದ ಸಂಪೂರ್ಣಗೊಳಿಸುವಂತವನಾಗಿರಬೇಕು.

11. **ಮುಕ್ತ ಮನಸ್ಸು:** ಇತರರ ನಂಬಿಕೆ ಮತ್ತು ಅಭಿಪ್ರಾಯಗಳೆಡೆಗೆ ಮುಕ್ತ ಮನಸ್ಸುಳ್ಳವನಾಗಿರಬೇಕು.

12. **ತಾಳ್ಮೆ:** ಸಂಶೋಧನೆಯು ಅತ್ಯಂತ ತಾಳ್ಮೆ ಮತ್ತು ಸಂರಚನೆಯಿಂದ ನಡೆಸಬೇಕಾದ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಸಂಶೋಧಕನು ಹಲವಾರು ಅಡೆತಡೆಗಳು, ತೊಂದರೆಗಳನ್ನು ಎದುರಿಸುವ ಸಾಧ್ಯತೆ ಇದೆ. ಈ ಎಲ್ಲ ತೊಂದರೆಗಳನ್ನು ನಿವಾರಿಸಿಕೊಂಡು ತಾಳ್ಮೆಯಿಂದ ತನ್ನ ಸಂಶೋಧನಾ ಕಾರ್ಯವನ್ನು ನಿರ್ವಹಿಸಬೇಕು.

13. **ಸಮಯ ಪ್ರಜ್ಞೆ:** ಸಂಶೋಧಕನು ಸಮಯ ಪ್ರಜ್ಞೆಯುಳ್ಳವನಾಗಿದ್ದು, ವೇಳಾಪಟ್ಟಿಯನ್ನು ಸಮರ್ಪಕವಾಗಿ ಅನುಸರಿಸುವಂತವನಾಗಿರಬೇಕು.

–ಡಾ. ಶೈಲಜಾ ಪಿ. ಶಾನುಭಾಗ್

## ಸಂಸ್ಕೃತಿ ಮತ್ತು ಶಿಕ್ಷಣ

**ಸಂಸ್ಕೃತಿ:** ಸಮಾಜದಿಂದ ಪ್ರತಿಯೊಬ್ಬ ವ್ಯಕ್ತಿಯೂ ಹೇಗೆ ಸಾಂಸಾರಿಕ ಜೀವನದ ಎಲ್ಲಾ ಉಡುಗೊರೆಗಳನ್ನು ಪಡೆಯುತ್ತಾನೋ, ಸಮುದಾಯ, ಶಿಕ್ಷಣ, ವೃತ್ತಿಪರತೆ, ನ್ಯಾಯವಾಗಿ ದಕ್ಕುವ ಹಕ್ಕುಗಳು, ಕ್ಷೇಮ ಮತ್ತು ರಕ್ಷಣೆಗಳು ಹೇಗೆ ಬಳುವಳಿಯಾಗಿ ಪಡೆಯುತ್ತಾನೋ ಹಾಗೆಯೇ ಬೆಲೆಕಟ್ಟಲಾಗದ ಸಾಂಸ್ಕೃತಿಕ ಪರಂಪರೆಯನ್ನೂ ಸಮಾಜದಿಂದ ಪಡೆಯುತ್ತಾನೆ. ಸಂಸ್ಕೃತಿಯು ಮಾನವ ನಿರ್ಮಿತ ಸಾಮಾಜಿಕ ಸಂಸ್ಥೆಯಾಗಿದೆ. ಮಾನವನ ದೈನಂದಿನ ಕಾರ್ಯಗಳಾದ ಊಟ ಮಾಡುವುದು, ಉಡುಪು ಧರಿಸುವುದು, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು, ಯಾವುದೋ ಒಂದು ಮಾನವಾತೀತ ಶಕ್ತಿಯ ಬಗ್ಗೆ ನಂಬಿಕೆ ವಹಿಸುವುದು, ಇವುಗಳೆಲ್ಲದರಲ್ಲಿ ಸಂಸ್ಕೃತಿಯು ಅಡಕವಾಗಿದೆ.

ಮಾನವನ ನಿರ್ದಿಷ್ಟವಾದ ಆಲೋಚನೆಗಳು ಅವನ ವರ್ತನೆಯನ್ನು ನಿರ್ಧರಿಸುವಂತೆ ಸಂಸ್ಕೃತಿಯು ಅವನ ವ್ಯಕ್ತಿತ್ವವನ್ನು ರೂಪಿಸುತ್ತದೆ. ನಾವು ಏನೇ ಯೋಚಿಸಲಿ, ಮಾಡಲಿ, ಪಾಲಿಸಲಿ ಅವುಗಳೆಲ್ಲವೂ ಸಂಸ್ಕೃತಿಯಿಂದ ಪ್ರಭಾವಿತಗೊಳ್ಳುತ್ತವೆ. ಸಾಮಾಜಿಕ, ನೈತಿಕ ಪರಿಪಕ್ವತೆ ಕಡೆಗೆ ಮಾನವನ ಪ್ರಯಾಣವೇ ಸಂಸ್ಕೃತಿ ಎನ್ನಬಹುದು.

ಲಲಿತಕಲೆ, ಸಾಹಿತ್ಯ, ಧರ್ಮ, ಸೌಂದರ್ಯೋಪಾಸನೆ, ಮನರಂಜನೆ ಮುಂತಾದವುಗಳ ಮೂಲಕ ಸಂಸ್ಕೃತಿ ಅಭಿವ್ಯಕ್ತಗೊಳ್ಳುತ್ತದೆ. ಮಾನವರ ನಂಬಿಕೆಗಳು, ನಿರ್ದಿಷ್ಟ ಸಾಮಾಜಿಕ ಶಿಕ್ಷಣ, ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಭಾವನೆಗಳು, ಸಂಸ್ಕೃತಿಯಿಂದ ಪ್ರಭಾವಿತಗೊಳ್ಳುತ್ತವೆ.

**ಸಂಸ್ಕೃತಿಯ ವಿಧಗಳು:** ಸಂಸ್ಕೃತಿಯು ಹಲವಾರು ಬಗೆಯದಾಗಿರುತ್ತದೆ. ಸಮುದಾಯದ ಸಂಸ್ಕೃತಿ, ರಾಷ್ಟ್ರೀಯ ಸಂಸ್ಕೃತಿ ಮತ್ತು ವಿಶ್ವಸಂಸ್ಕೃತಿ, ಪ್ರತಿಯೊಂದು ಸಮುದಾಯ/ಸಮಾಜ ತಮ್ಮದೇ ಆದ ಪ್ರತ್ಯೇಕ ಆಚಾರ ವಿಚಾರಗಳನ್ನು ರೂಪಿಸಿಕೊಂಡು ಅವುಗಳನ್ನು ಪಾಲಿಸಿಕೊಂಡು ಬರುತ್ತದೆ. ಸಮುದಾಯದ, ಸಮಾಜದ ಸದಸ್ಯರೆಲ್ಲರೂ ಇವುಗಳನ್ನು ಪಾಲಿಸುತ್ತಾರೆ. ಪ್ರತಿಯೊಂದು ಸಮುದಾಯ ತನ್ನದೇ ಆದ ನಂಬಿಕೆಗಳು, ಸಂಪ್ರದಾಯಗಳು, ಕಟ್ಟಳೆಗಳನ್ನು ಹೊಂದಿರುತ್ತದೆ. ಇವುಗಳ ಒಟ್ಟು ರೂಪವನ್ನು ಸಮುದಾಯ ಸಂಸ್ಕೃತಿ ಅಥವಾ ಸಾಮಾಜಿಕ ಸಂಸ್ಕೃತಿ ಎನ್ನುತ್ತೇವೆ.

ಇದೇ ರೀತಿ ಪ್ರತಿಯೊಂದು ರಾಷ್ಟ್ರ/ದೇಶದ ಧ್ಯೇಯಗಳು, ಆದರ್ಶಗಳು, ವಿಧಿವಿಧಾನಗಳು, ಆಹಾರ ವ್ಯವಹಾರಗಳನ್ನು ಹೊಂದಿರುತ್ತದೆ. ಇವುಗಳ ಒಟ್ಟು ಮೊತ್ತದ ರೀತಿ ನೀತಿಗಳನ್ನು ರಾಷ್ಟ್ರೀಯ ಸಂಸ್ಕೃತಿ ಎನ್ನುತ್ತೇವೆ.

ಇಡೀ ವಿಶ್ವವೇ ಮಾನವೀಯ ಮೌಲ್ಯಗಳಾದ ಪರಸ್ಪರ ಸಹಕಾರ, ಸಹಬಾಳ್ವೆ, ಸಹಾನುಭೂತಿ, ಸಮಾಜಸೇವೆ, ಸಾಮಾಜಿಕ ಜವಾಬ್ದಾರಿ ಮುಂತಾದ ಅತ್ಯಂತ ಶ್ರೇಷ್ಠ ಗುಣಗಳ ಆಧಾರದ ಮೇಲೆ ತನ್ನ ಅಸ್ತಿತ್ವವನ್ನು ರೂಪಿಸಿಕೊಂಡಿದೆ. ಇವುಗಳ ಒಟ್ಟು ಸ್ವರೂಪವನ್ನು ವಿಶ್ವಸಂಸ್ಕೃತಿ ಎನ್ನಬಹುದು.

ಇನ್ನು ಭೌತಿಕ ಸಂಸ್ಕೃತಿ ಎಂದರೆ ಮಾನವ ನಿರ್ಮಿತ ಎಲ್ಲಾ ವಸ್ತುಗಳು ಮತ್ತು ಮಾನವನ ಯೋಗಕ್ಷೇಮಕ್ಕಾಗಿ ಬಳಸುವ ಸಾಧನಗಳು ಟಿ.ವಿ., ರೇಡಿಯೋ, ಯಂತ್ರಗಳು, ರವಾನೆಗೆ ಬಳಸುವ ವಾಹನಗಳು ಮುಂತಾದವುಗಳು ಇದನ್ನೇ ನಾಗರಿಕತೆ ಎಂದೂ ಹೇಳುತ್ತಾರೆ. ಸಂಸ್ಕೃತಿ ನಾವು ಸ್ವಭಾವದಲ್ಲಿ ಹೇಗಿದ್ದೇವೆ

Digitised by Bharatavani, CIIL

ಎನ್ನುವುದನ್ನು ಸೂಚಿಸಿದರೆ, ನಾಗರಿಕತೆ ನಾವು ಏನನ್ನು ಹೊಂದಿದ್ದೇವೆ ಎನ್ನುವುದನ್ನು ಸೂಚಿಸುತ್ತದೆ. ಇದನ್ನೇ ಇಂಗ್ಲಿಷ್‌ನಲ್ಲಿ Culture is what we are civilization is what we have ಎಂದು ಹೇಳುತ್ತಾರೆ.

ಅಭೌತಿಕ ಸಂಸ್ಕೃತಿ ಎಂದರೆ ಒಬ್ಬ ವ್ಯಕ್ತಿಯ ನಡತೆಯನ್ನು ರೂಪಿಸುವ ಆದರ್ಶಗಳು, ಮೌಲ್ಯಗಳು, ಮನೋವೃತ್ತಿಗಳು, ಭಾಷಾಶೈಲಿ, ಕಲೆ, ಸಂಗೀತ, ಧರ್ಮ, ಆಚರಣೆ ಮತ್ತು ಪರಂಪರೆ.

**ಸಂಸ್ಕೃತಿಯ ಗುಣಲಕ್ಷಣಗಳು:** ಸಂಸ್ಕೃತಿಯು ನಾವು ಗಳಿಸಿಕೊಂಡ ರೀತಿ ರಿವಾಜುಗಳು ಮತ್ತು ವಿಧಿವಿಧಾನಗಳನ್ನು ಪ್ರತಿಬಿಂಬಿಸುತ್ತದೆ ಹಾಗೂ ಪ್ರತಿನಿಧಿಸುತ್ತದೆ. ಸಂಸ್ಕೃತಿಗೆ ತನ್ನದೇ ಆದ ಗುರುತಿಸಬಹುದಾದ ನೆಲೆ ಇದೆ. ಸಂಸ್ಕೃತಿಯು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾವಣೆ ಮಾಡುವಂತಹುದು, ಹಾಗೆಯೇ ಒಂದು ಪೀಳಿಗೆಯು ಹಲವು ಸಲ ಸಂಸ್ಕೃತಿಯ ನವೀಕರಣ ಮಾಡಬಹುದಾದ್ದರಿಂದ ಅದು ಯಾವಾಗಲೂ ನವನವೀನವಾಗಿ ಉಳಿಯುತ್ತದೆ. ಸಂಸ್ಕೃತಿಯು ಮಾನವನ ಹಾಗೂ ಸಮಾಜದ ಉಪಯೋಗಕ್ಕೆ ಬರುವ ಸಾಧನವಾಗಿದೆ. ಬಳಕೆಯಾಗದಿದ್ದಲ್ಲಿ ನಶಿಸಿಹೋಗುತ್ತದೆ. ಎಲ್ಲಾ ಜನರನ್ನು ಒಟ್ಟುಗೂಡಿಸುವ ಶಕ್ತಿಯು ಸಂಸ್ಕೃತಿಯ ಮಹತ್ವಪೂರ್ಣ ಕೊಡುಗೆಯಾಗಿದೆ.

**ಸಂಸ್ಕೃತಿ ಮತ್ತು ಶಿಕ್ಷಣ:** ಶಿಕ್ಷಣವು ವ್ಯಕ್ತಿಯ ಭೌತಿಕ, ಬೌದ್ಧಿಕ, ನೈತಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಬಳಸಲಾಗುತ್ತಿರುವ ಅತ್ಯಂತ ಶಕ್ತಿಯುತ ಸಾಧನವಾಗಿದೆ. ಅದು ಬರಿಯ ಮಾಹಿತಿ ವಿನಿಮಯವಾಗಿರದೆ ವ್ಯಕ್ತಿತ್ವದ ಸಂಪೂರ್ಣ ಬೆಳವಣಿಗೆಗೆ ಪೂರಕವಾಗುವ ಒಂದು ಸತ್ವಯುತ ಅನುಭವ. ಜೀವನದ ಉದ್ದಗಲಕ್ಕೂ ಅನುಭವಗಳ ಸರಮಾಲೆಯಿಂದ ಪಾಠಕಲಿಯುವ ಪ್ರಕ್ರಿಯೆಯೇ ಶಿಕ್ಷಣ. ಬರಿಯ ಶಿಕ್ಷಣಸಂಸ್ಥೆಗಳು ನೀಡುವ ಜ್ಞಾನವನ್ನು ನಾವು ಶೀಕ್ಷಣ ಎನ್ನಲಾಗದು. ಸಾರ್ವತ್ರಿಕವಾಗಿ ಒಪ್ಪಿಗೆಯಾಗುವ ಆದರ್ಶಗಳ ಪಾಲನೆಗೆ ದಾರಿದೀಪವಾಗುವ ಸಾಮಾಜಿಕ ಅರಿವೇ ಶಿಕ್ಷಣ. ಶಿಕ್ಷಣದಿಂದಲೇ ಮಾನವನು ಅತ್ಯಂತ ಸರಳವಾಗಿ ಆದರೆ ಅಷ್ಟೇ ಸುಲಲಿತವಾಗಿ ಇತರರೊಂದಿಗೆ ವ್ಯವಹರಿಸಬಲ್ಲ. ತನ್ನ ಅಸ್ತಿತ್ವವನ್ನು ಯಾವುದೇ ಪರಿಸರದಲ್ಲಿ ರೂಪಿಸಿಕೊಂಡು ಸಾಧಿಸಬಲ್ಲ. ಅಂತಹ ಶಿಕ್ಷಣವು ಸಂಸ್ಕೃತಿಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಶಿಕ್ಷಣದ ಉದ್ದೇಶವು ಮಾನವನನ್ನು ಸುಸಂಸ್ಕೃತನಾಗಿಸುವುದೇ ಆಗಿದೆ. ಯಾವುದೇ ಒಂದು ದೇಶದ ಜನರು ಸುಸಂಸ್ಕೃತರಾಗಿದ್ದಾರೆಂದರೆ ಅದಕ್ಕೆ ಕಾರಣ ಆ ದೇಶದ ಶೈಕ್ಷಣಿಕ ವ್ಯವಸ್ಥೆ ಮತ್ತು ಶಿಕ್ಷಣ ನೀಡುವ ವೈಖರಿಯ ಪ್ರಭಾವವೇ ಆಗಿರುತ್ತದೆ. ಒಂದು ದೇಶದ ಸಂಸ್ಕೃತಿಯು ಆ ದೇಶದ ಶಿಕ್ಷಣದ ಮೇಲೆ ಹೇಗೆ ತನ್ನ ಪ್ರಭಾವ ಬೀರುತ್ತದೆಯೋ ಅದೇ ರೀತಿ ಒಂದು ದೇಶದ ಶಿಕ್ಷಣವೂ ಆ ದೇಶದ ಸಂಸ್ಕೃತಿಯ ಮೇಲೆ ಅಷ್ಟೇ ಪ್ರಭಾವ ಬೀರುತ್ತದೆ.

ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಆದ ಸಂಸ್ಕೃತಿ ಇರುತ್ತದೆ. ಆ ಸಂಸ್ಕೃತಿಯು ಶಿಕ್ಷಣದ ಪ್ರಭಾವಕ್ಕೆ ಒಳಪಡಲೇಬೇಕಾಗುತ್ತದೆ. ಶಿಕ್ಷಣದ ಮೂಲಕ ಬಗೆಬಗೆಯ ಸಂಸ್ಕೃತಿಯ ಜನರು ಹಬ್ಬ ಹರಿದಿನ, ಉತ್ಸವ, ಸಮ್ಮೇಳನಗಳಲ್ಲಿ ಒಂದಾಗುತ್ತಾರೆ ಹಾಗೂ ವಿಚಾರ ವಿನಿಮಯ ನಡೆಯುತ್ತದೆ. ಈ ಪ್ರಕ್ರಿಯೆಯ ಆರಂಭವು ಶಾಲೆಯಿಂದ ಆಗುತ್ತದೆ. ಆದ್ದರಿಂದ ಶಿಕ್ಷಣವು ಸಂಸ್ಕೃತಿಯ ವಿನಿಮಯಕ್ಕೆ ಹಾಗೂ ಸಮುದಾಯದಲ್ಲಿನ ಸಂಸ್ಕೃತಿಯ ಸಂಸ್ಕರಣಕ್ಕೆ ಕೊಂಡಿಯಂತೆ ವರ್ತಿಸಿ ಜನರ ಮನಮನೆಗಳಿಗೆ ಸಂಸ್ಕೃತಿಯನ್ನು ನವೀಕರಿಸಿ ಕೊಂಡೊಯ್ಯುವಲ್ಲಿ ಸಹಾಯಕಾರಿಯಾಗುತ್ತದೆ. ಅಷ್ಟೇ ಅಲ್ಲ, ಸಂಸ್ಕೃತಿಯು ಆಯಾ ದೇಶದ ಶೈಕ್ಷಣಿಕ ಪದ್ಧತಿಯನ್ನು ಪ್ರಭಾವಿತಗೊಳಿಸುತ್ತದೆ. ಉದಾಹರಣೆಗೆ ಒಂದು ದೇಶದಲ್ಲಿ ಆಧ್ಯಾತ್ಮಿಕ ನೆಲೆಮೇಲೆ ಸಂಸ್ಕೃತಿಯು ನಿಂತಿದ್ದರೆ, ಆ ದೇಶದ ಶಿಕ್ಷಣವು ಹೆಚ್ಚಿಗೆ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಆಧಾರದ ಮೇಲೆ ರೂಪುಗೊಂಡಿರುತ್ತದೆ.

**ಶಿಕ್ಷಣದ ವಿವಿಧ ರಂಗಗಳಲ್ಲಿ ಸಂಸ್ಕೃತಿಯ ಪ್ರಭಾವ**

1. **ಸಂಸ್ಕೃತಿ ಮತ್ತು ಶಿಕ್ಷಣದ ಗುರಿಗಳು:** ಒಂದು ಸಮಾಜದ ಶಿಕ್ಷಣದ ಅರ್ಥ ಮತ್ತು ಗುರಿಗಳು ಆ ಸಮಾಜದ ಸಂಸ್ಕೃತಿಯ ಆದರ್ಶಗಳು, ಮೌಲ್ಯಗಳು ಮತ್ತು ರೀತಿ ನೀತಿಗಳ ಆಧಾರದ ಮೇಲೆ ರೂಪುಗೊಳ್ಳುತ್ತವೆ.

2. **ಸಂಸ್ಕೃತಿ ಮತ್ತು ಪಠ್ಯಕ್ರಮ:** ಶಿಕ್ಷಣದ ಉದ್ದೇಶಗಳನ್ನು ಪಠ್ಯಕ್ರಮದ ಮೂಲಕ ತಲುಪಲು ಪ್ರಯತ್ನಿಸಲಾಗುತ್ತದೆ. ಸಂಸ್ಕೃತಿಯು ಸಮಾಜದ ಅಗತ್ಯತೆಗಳನ್ನು ಪ್ರತಿನಿಧಿಸಿದರೆ ಪಠ್ಯಕ್ರಮದಲ್ಲಿ ಆ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಅಗತ್ಯ ಚಟುವಟಿಕೆಗಳನ್ನು ಸೇರಿಸಲಾಗುತ್ತದೆ. ಶೈಕ್ಷಣಿಕ ವ್ಯವಸ್ಥೆಯು ದೇಶದ ಸಾಂಸ್ಕೃತಿಕ ಅಗತ್ಯತೆಗಳನ್ನು ಪೂರೈಸುತ್ತದೆ.

3. **ಸಂಸ್ಕೃತಿ ಮತ್ತು ಬೋಧನಾ ವಿಧಾನಗಳು:** ಸಂಸ್ಕೃತಿ ಶಿಕ್ಷಕರ ಬೋಧನಾ ವಿಧಾನಗಳ ಮೇಲೆ ಪರಿಣಾಮ ಬೀರುತ್ತದೆ. ಹಿಂದಿನಕಾಲದಲ್ಲಿ ಗುರುಕೇಂದ್ರೀಕೃತ ಶಿಕ್ಷಣವಿದ್ದು ಜ್ಞಾನವನ್ನು ಶಿಷ್ಯರ ಮೇಲೆ ಹೇರಲಾಗುತ್ತಿತ್ತು. ಬರಿಯ ಕಂಠಪಾಠದಿಂದ ಶಿಕ್ಷಣದ ಪ್ರಗತಿಯು ಅಸಹಜ ಹಾಗೂ ಕೃತ್ರಿಮವಾಗಿ ಉಂಟಾಗುತ್ತಿತ್ತು. ಆದರೆ ಈಗ ಶಿಕ್ಷಣವು ಶಿಶುಕೇಂದ್ರಿಕೃತವಾಗಿದ್ದು, ಮಕ್ಕಳ ಆಸಕ್ತಿ, ಸಾಮರ್ಥ್ಯಗಳು, ಅಗತ್ಯತೆಗಳು ಇವೆಲ್ಲವುದರ ಪರಿಗಣನೆಯೊಂದಿಗೆ ಮುಕ್ತ ಹಾಗೂ ವೈವಿಧ್ಯಮಯ ಕಲಿಕಾ ಅನುಭವಗಳನ್ನು ನೀಡುವುದರ ಮೂಲಕ, ಮಕ್ಕಳ ಉಜ್ವಲ ಭವಿಷ್ಯವನ್ನು ರೂಪಿಸುವತ್ತ ನಾಗಾಲೋಟದಿಂದ ನಡೆಯುತ್ತಿದೆ.:

4. **ಸಂಸ್ಕೃತಿ ಮತ್ತು ಪಠ್ಯಪುಸ್ತಕಗಳು:** ಪಠ್ಯಪುಸ್ತಕಗಳನ್ನು ಪಠ್ಯಕ್ರಮಕ್ಕೆ ಅನುಸಾರವಾಗಿ ಬರೆಯುವುದರಿಂದ ಮತ್ತು

Digitised by Bharatavani, CIIL

ಪಠ್ಯಕ್ರಮವು ಸಂಸ್ಕೃತಿಯನ್ನು ಪ್ರತಿನಿಧಿಸುವುದರಿಂದ ಎಲ್ಲಾ ಪಠ್ಯಪುಸ್ತಕಗಳೂ ಸಂಸ್ಕೃತಿಯ ಪರಂಪರಾನುಗತ ವಿನಿಮಯಕ್ಕೆ ಸಹಾಯಕವಾಗುವಂತೆ ರಚಿಸಲ್ಪಡುತ್ತವೆ.

5. **ಸಂಸ್ಕೃತಿ ಮತ್ತು ಶಿಕ್ಷಕರು:** ಶಿಕ್ಷಕರು ಸಂಸ್ಕೃತಿಯ ಪ್ರತಿನಿಧಿಗಳು ದೇಶವು ಸುಖಶಾಂತಿಯಿಂದಿರಬೇಕಾದರೆ, ಶಿಕ್ಷಕರು ಪ್ರತಿಯೊಬ್ಬರ ಸಂಸ್ಕೃತಿ, ಆಚಾರ ವಿಚಾರಗಳಿಗೆ ತಕ್ಕ ಗೌರವ ಸ್ಥಾನಮಾನಗಳನ್ನು ನೀಡುವತ್ತ ಗಮನಹರಿಸಬೇಕಿದೆ. ಮತಾಂಧತೆ ಮತ್ತು ತಮ್ಮ ಸಂಸ್ಕೃತಿಯೇ ಶ್ರೇಷ್ಠವೆಂಬ ಪೂರ್ವಗ್ರಹ ಪೀಡಿತ ಭಾವನೆಗಳಿದ್ದರೆ ಅಂತಹ ಸಮಾಜದಲ್ಲಿ ಗೊಂದಲ ಉಂಟಾಗುವುದು ಸಹಜ.

6. **ಸಂಸ್ಕೃತಿ ಮತ್ತು ಶಾಲೆ:** ಶಾಲೆಯು ಒಂದು ಪುಟ್ಟ ಸಮಾಜ. ಭಾರತದಂಥ ಬಹುಸಂಸ್ಕೃತಿ ರಾಷ್ಟ್ರದ ಶಾಲೆಯಲ್ಲಿ ವಿವಿಧ ಸಂಸ್ಕೃತಿಗಳ ಸಂಗಮ ಉಂಟಾಗುತ್ತದೆ. ಶಾಲೆಗಳ ಎಲ್ಲ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ಆಯಾ ದೇಶದ ಅಥವಾ ಸಮುದಾಯದ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಆಧರಿಸಿರುತ್ತವೆ.

ಶಾಲೆಯೇ ಸಂಸ್ಕೃತಿಯ ಅಳಿವು, ಉಳಿವುಗಳಿಗೆ ಕಾರಣವಾಗುವುದು. ಅಲ್ಲದೆ ಪರಂಪರೆಯ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಂಸ್ಕೃತಿಯನ್ನು ರವಾನಿಸುವ ಜವಾಬ್ದಾರಿಯನ್ನು ಹೊಂದಿರುವ ಮಹತ್ವದ ಸಾಧನ ಶಾಲೆಯಾಗಿದೆ.

ಇನ್ನು ಶಿಕ್ಷಣವು ಸಂಸ್ಕೃತಿಯನ್ನು ರಕ್ಷಿಸುತ್ತದೆ, ಪೋಷಿಸುತ್ತದೆ, ಪೀಳಿಗೆಯಿಂದ ಪೀಳಿಗೆಗೆ ರವಾನಿಸುತ್ತದೆ, ಸಂಸ್ಕೃತಿಯು ಮರೆಯಾಗಿ ಹೋಗದಂತೆ ಕಾಪಾಡುತ್ತದೆ ಹಾಗೂ ಸಾಂಸ್ಕೃತಿಕ ಹಿನ್ನೆಡೆಯನ್ನು ತಡೆಗಟ್ಟಿ, ಮೌಲ್ಯಗಳನ್ನು ಆದರ್ಶಗಳನ್ನು ಸಮುದಾಯದ ಎಲ್ಲೆಗಳು ಮೀರಿ ಹೋಗದಂತೆ ಕಾಪಾಡುತ್ತದೆ. ಆದ್ದರಿಂದ ಸಂಸ್ಕೃತಿಯೊಂದಿಗೆ ಶಿಕ್ಷಣವು ಯಾವಾಗಲೂ ಹಾಸುಹೊಕ್ಕಾಗಿರುತ್ತದೆ ಹಾಗೆಯೇ ಶಿಕ್ಷಣದಲ್ಲೂ ಸಂಸ್ಕೃತಿಯ ಹೆಗ್ಗುರುತುಗಳನ್ನು ಕಾಣಬಹುದಾಗಿದೆ.

–ಡಾ. ಸುಧಾ ಬಿ.ಜಿ.

## ಸಮಗ್ರ ಶಿಕ್ಷಣ

ಕೆಲವು ಮುಖ್ಯವಾದ ವಿಕಾಸಾತ್ಮಕ ಬದಲಾವಣೆಗಳು ಸಮಗ್ರ ಶಿಕ್ಷಣದ ಪರಿಕಲ್ಪನೆಯನ್ನು ಹೆಚ್ಚು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವನ್ನು ಉಂಟುಮಾಡಿವೆ. ಮೊದಲನೆಯದಾಗಿ, ಇಂದು ಏಕಕಾಲದಲ್ಲಿ ವ್ಯಾಪಕವಾದ ಮತ್ತು ವಿಶೇಷಜ್ಞತೆಯಿಂದ ಕೂಡಿದ ಅಥವಾ ಪ್ರತಿಯೊಬ್ಬ ವ್ಯಕ್ತಿಗೂ ಸೂಕ್ತವೆನಿಸುವ ಹೊಸ ಶಿಕ್ಷಣ ಬೇಕಾಗಿದೆ. ಹೋಲಿಸಲಾಗದ, ಗಹನತೆಯಿಂದ ಕೂಡಿದ ವಿಚಾರಶೀಲತೆಗಾಗಿ, ಎರಡನೆಯದಾಗಿ, ಆಧುನಿಕ ಮಾನವನ ವ್ಯಕ್ತಿತ್ವ ಹಿಂದೆಂದೂ ಇಲ್ಲದಷ್ಟು ಮಾನಸಿಕ ತುಮುಲಕ್ಕೆ ಒಳಗಾಗಿರುವುದರಿಂದ, ಇನ್ನೂ ಸರಿಯಾಗಿ ವ್ಯಾಖ್ಯಾನಿಸಲು ಸಾಧ್ಯವಾಗಿಲ್ಲದ ಮತ್ತು ಅಪೂರ್ಣವಾಗಿ ಅನ್ವೇಷಿಸಲಾಗಿರುವ ಹೊಸದೊಂದು ಆಯಾಮ ಶಿಕ್ಷಣಕ್ಕೆ ಸೇರಿಕೊಂಡಿದೆ. ಮೂರನೆಯದಾಗಿ, ವಿಶ್ವದಾದ್ಯಂತ ಜ್ಞಾನ ಮತ್ತು ಸಂಸ್ಕೃತಿಯನ್ನು ಸಂಶ್ಲೇಷಿಸುವ ಹೆಚ್ಚಿನ ಶೋಧನೆ ಕಂಡುಬರುತ್ತಿದೆ. ಆಧುನಿಕ ಜ್ಞಾನದ ಸಂದರ್ಭದಲ್ಲಿ ಪ್ರಾಚೀನ ಜ್ಞಾನವನ್ನು ಪುನಃ ಕಂಡು ಹಿಡಿಯಲಾಗುತ್ತಿದೆ. ಮಾನವತಾವಾದಿಗಳು ಮತ್ತು ತಂತ್ರಜ್ಞಾನಿಗಳು ಒಬ್ಬರಿಗೊಬ್ಬರ ಅವಶ್ಯಕತೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಯಸತೊಡಗಿದ್ದಾರೆ ಮತ್ತು ವಿಜ್ಞಾನಿ ಮತ್ತು ಅನುಭಾವಿ (Mystic) ಒಬ್ಬರನೊಬ್ಬರನ್ನು ಆಲಂಗಿಸಿಕೊಳ್ಳಲು ಸಿದ್ಧರಾಗತೊಡಗಿದ್ದಾರೆ. ಇವೆಲ್ಲವುಗಳ ಶೈಕ್ಷಣಿಕ ನಿಹಿತಾರ್ಥಗಳು ಸುಸ್ಪಷ್ಟವಾಗಿವೆ. ನಮ್ಮ ಶೈಕ್ಷಣಿಕ ಪಠ್ಯವಸ್ತುಗಳು ಈ ಸಂಶ್ಲೇಷಣೆಯ ಇತ್ತೀಚಿನ ಪ್ರವೃತ್ತಿಗಳನ್ನು ಪ್ರತಿಬಿಂಬಿಸಬೇಕು. ನಮ್ಮ ಶಿಕ್ಷಣದ ಉದ್ದೇಶಗಳು ಪ್ರಜ್ಞಾಪೂರ್ವಕವಾಗಿ ಮತ್ತು ಪ್ರಗತಿಕೋನವನ್ನು ಮತ್ತು ತಂತ್ರಜ್ಞಾನೀಯ ಕೌಶಲಗಳನ್ನು ನೈತಿಕವಾಗಿ ಶಿಸ್ತಿಗೊಳಪಟ್ಟ ಆತ್ಮಶಕ್ತಿಯನ್ನು ಮತ್ತು ಕಲಾವಿದನ ಪರಿಮಾರ್ಜಿತ ಕಲ್ಪನಾಶೀಲತೆಯನ್ನು ವಿಜ್ಞಾನಿಯ ಪ್ರಾಮಾಣಿಕ ಜಾನವನ್ನು ಮತ್ತು ಆಧ್ಯಾತ್ಮಿಕ ವ್ಯಕ್ತಿಯ ಉದಾತ್ತದೃಷ್ಟಿ ಮತ್ತು ಸತತವಾಗಿ ವೃದ್ಧಿಸುವ ಪರಿಪೂರ್ಣತೆಯನ್ನು ಸಮಂಜಸಗೊಳಿಸಬಲ್ಲ ಹೊಸರೀತಿಯ ಮಾನವನನ್ನು ರೂಪಿಸುವ ವಿಚಾರವನ್ನು ಒಳಗೊಂಡಿರಬೇಕಾಗಿದೆ.

ಮಾನವನ ಅಸ್ತಿತ್ವ ಒಂದೇ ಮುಖದ ಘಟಕವಾಗಿದ್ದಿದ್ದರೆ ಪೂರ್ವತಃ ಭೌತಿಕ, ಜೈವಿಕ ಅಥವಾ ಮಾನಸಿಕವಾಗಿದ್ದಿದ್ದರೆ ಅಥವಾ ಆಧ್ಯಾತ್ಮಿಕವಾಗಿದ್ದರೆ, ಮಾನವ ಜೀವನದ ಸಮಸ್ಯೆಗಳು ಇಂದು ನಾವು ಎದುರಿಸುತ್ತಿರುವ ಸಂಕಟಪೂರ್ಣ ಘಟ್ಟವನ್ನು ತಲುಪುತ್ತಿರಲಿಲ್ಲ. ಮಾನವ ಜೀವಿ ತ್ರಿವಿಧ ಜಾಲವಾಗಿದ್ದಾನೆ. ಅವನು ರಹಸ್ಯಾತ್ಮಕ ರೀತಿಯಲ್ಲಿ ಭೌತಿಕ–ಜೈವಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಜೀವಿಯಾಗಿದ್ದಾನೆ ಮತ್ತು ಅವುಗಳ ಪರಸ್ಪರ ಸಂಬಂಧವೇನು ಎಂಬುದನ್ನು ತಿಳಿಯದೆ ನಾವು ಅವುಗಳ ಪರಸ್ಪರ ದ್ವಂದ್ವ ರೀತಿಯ ಕರೆಗಳನ್ನು ಮತ್ತು ಆದೇಶಗಳನ್ನು ಕೇಳಬೇಕಾದ ಪರಿಸ್ಥಿತಿಗೆ ತಳ್ಳಲ್ಪಟ್ಟಿದ್ದೇವೆ ಮತ್ತು ಯಾವುದನ್ನು ಅನುಸರಿಸಬೇಕು. ಮತ್ತು ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನು ತಿಳಿಯಲಾರದವರಾಗಿದ್ದೇವೆ. ಈ ಹಿನ್ನೆಲೆಯಲ್ಲಿ ಜೀವನ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಗಹನವಾದ ಪ್ರಶ್ನೆಗಳು ತೀವ್ರರೂಪದಲ್ಲಿ ತುರ್ತು ಎನಿಸಿವೆ ಮತ್ತು ಆದೇಶಾತ್ಮಕವಾಗಿವೆ.

ಪ್ರಾಚೀನ ಕಾಲದ ಜೈವಿಕ ಮತ್ತು ಭೌತಿಕ ಆದಿಮ ಬರ್ಬರ ಮಾನವ ನಾಗರೀಕ ಮಾನವನ ರೂಪದಲ್ಲಿ ಹಿಂದಿರುಗಿ ಬಂದಿರುವುದು ಈ ಪರಿಸ್ಥಿತಿಯ ಮೊದಲ ಅಪಾಯವಾಗಿದೆ. ಮಾನವನಲ್ಲಿರುವ ಜೈವಿಕ ಮತ್ತು ಭೌತಿಕ ಮಾನವನನ್ನು ನಿಯಂತ್ರಿಸಲು ಮತ್ತು ಉದ್ಧಾರಮಾಡಲು ಉನ್ನತವಾದ ಮತ್ತು ಪ್ರಯತ್ನಪೂರಕವಾದ ಬೌದ್ಧಿಕ ಮತ್ತು ನೈತಿಕ ಆದರ್ಶವಿಲ್ಲದಿದ್ದಲ್ಲಿ

Digitised by Bharatavani, CIIL

ಮತ್ತು ಮಾನವನನ್ನು ಅವನಿಂದಲೇ ಬಿಡುಗಡೆಮಾಡಿ ಅವನ ಆಂತರಿಕ ಅಸ್ತಿತ್ವದೆಡೆಗೆ ಕೊಂಡ್ಯೊಯ್ಯುವ ಅಭ್ಯಾಸವನ್ನು ಪರಾಜಿತಗೊಳಿಸುವ ಸಾಧ್ಯತೆ ಇದೆ. ಈ ಪ್ರತಿದಾಳಿಯನ್ನು ತಪ್ಪಿಸಿಕೊಂಡರೂ ಇನ್ನೂ ಒಂದು ಅಪಾಯವಿದೆ. ಮಾನವನಲ್ಲಿ ಯಾವುದೇ ಆದರ್ಶ ಅಥವಾ ದೃಷ್ಟಿಕೋನವಿಲ್ಲದ ಸ್ಥಿರವಾದ (ಬದಲಾವಣೆಯಿಲ್ಲದ) ಸುಖಾಪೇಕ್ಷಿತವಾದ ಮತ್ತು ಯಾಂತ್ರೀಕೃತವಾದ ಸಾಮಾಜಿಕ ಜೀವನಶೈಲಿ ಘನೀಕೃತಗೊಂಡಿರುವ ಮತ್ತೊಂದು ಅಪಾಯವಿದೆ. ವಿಶ್ವದ ಹೆಚ್ಚು ಹೆಚ್ಚು ವಿಶಾಲವಾದ ಕ್ಷೇತ್ರಗಳಲ್ಲಿನ ಸ್ಥಿತಿಯನ್ನು ನೋಡಿರುತ್ತದೆ. ವಿವೇಕಪೂರ್ಣ ಚಿಂತನೆ ಹೆಚ್ಚು ಹೆಚ್ಚು ಉನ್ನತ ಕ್ಷೇತ್ರಗಳನ್ನು ವಿಕಾಸಗೊಳಿಸುವುದು ಮುಂದುವರಿದರೆ ಈ ಅಪಾಯವನ್ನು ತಪ್ಪಿಸುವ ಸಾಧ್ಯತೆಯಿದೆ. ದುರಾದೃಷ್ಟವಶಾತ್ ಈ ವಿವೇಕಪೂರ್ಣಚಿಂತನೆ ಜೀವನ ಮತ್ತು ದೇಹದ ಮತ್ತು ಮಾನವನ ಆಂತರ್ಯದಲ್ಲಿರುವ ಮೇಲ್ಮಟ್ಟದ ಆಧ್ಯಾತ್ಮಿಕ ವಾಸ್ತವಿಕತೆಯ ನಡುವೆ ಮಧ್ಯವರ್ತಿಯಾಗುವ ಆಸಕ್ತಿ ತೋರಿಸುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಮಾನವತೆ ಯಾಂತ್ರಿಕವಾದ ಸಾಮಾಜಿಕ ಜೀವನಕ್ಕೆ ಅಡಿಯಾಳಾಗಬಹುದು ಮತ್ತು ಕಡೆಗೆ ಅಂತರ್ ಚೇತನದ ಗಹನವಾದ ಕರೆಯನ್ನು ಸಮಾಧಿ ಮಾಡುವಲ್ಲಿ ಜಯಶೀಲವಾಗಬಹುದು. ಈ ಸಮಾಧಿ ಮಾಡುವಿಕೆ ಆ ವಿಕಾಸಾತ್ಮಕ ಪ್ರೇರಣೆ ಮತ್ತು ಸಮಾಜವನ್ನು ವ್ಯಕ್ತಿಯನ್ನು ಎಷ್ಟು ಸಾಧ್ಯವೋ ಅಷ್ಟು ಪರಿಪೂರ್ಣತೆಗೆ ತರುವುದರಲ್ಲಿ ಮತ್ತು ವ್ಯಕ್ತಿ ಮತ್ತು ಸಮಾಜದ ನಡುವಣ ಸಂಬಂಧವನ್ನು ಸಾಧ್ಯವಿರುವಷ್ಟು ಪರಿಪೂರ್ಣತೆಗೆ ತರುವುದರಲ್ಲಿ ಅಪಾಯಕಾರಿಯಾದ ಉಸಿರುಕಟ್ಟಿಸುವಿಕೆಯ ಸ್ಥಿತಿಗೆ ತರುತ್ತದೆ ಎಂದು ಅರ್ಥವಾಗುತ್ತದೆ.

ಅಹಂ ಭಾವನೆಯನ್ನು ಅತಿಕ್ರಯಿಸುವುದು ಅಥವಾ ಅಹಂಸ್ಥಿತಿಯನ್ನು ಮೀರಿದ ಸ್ಥಿತಿಗೆ ತಲುಪುವುದು ಮಾನವ ಜೀವಿಯ ಸ್ವಭಾವದ ಮೂಲಭೂತ ತತ್ವವಾಗಿದೆ ಮತ್ತು ಮಾನವ ಕುಲ ನಾಗರೀಕತೆಯ ಆರಾಮ ಜೀವನ ಮತ್ತು ನಿರಂತರ ಪೈಪೋಟಿ ಮತ್ತು ಸಂಘರ್ಷದ ಮೋಜಿನಡಿಯಲ್ಲಿ ಮತ್ತು ದುರ್ಬಲವಾಗಿಸುವ ಮಾನವೀಯತೆಯಿಲ್ಲದ, ನಾಗರೀಕತೆಯ ಯಾಂತ್ರಿಕ ವ್ಯವಸ್ಥೆಯಿಂದ ನಿಯಂತ್ರಿತವಾಗಿ ಅಹಂನ ಸ್ವಾರ್ಥಪ್ರೇರಿತ ಹಸಿವುಗಳ ಒತ್ತಡದ ಭಾರದಡಿಯಲ್ಲಿ ಬೌದ್ಧಿಕ ಮಾನವ ಜೀವಿಯ ಮಿತಿಗಳನ್ನು ದಾಟಿಹೋಗುವ ಈ ಪ್ರೇರಣೆ ಹೂತುಹೋಗಬಹುದಾದ ನಿಷ್ಕ್ರಿಯಗೊಳಿಸುವ ಸ್ಥಿತಿಯನ್ನು ತಲುಪಿದರೆ ಮಾನವ ಜೀವಿ ವಿಕಾಸದ ಉದ್ದೇಶಗಳನ್ನು ಮತ್ತು ಮಾನವ ವ್ಯಕ್ತಿತ್ವದ ಸಾಧ್ಯತೆಗಳ ತುಟ್ಟತುದಿಯಲ್ಲಿ ಇರುವ ಶಕ್ತಿಗಳನ್ನು ಭಗ್ನಗೊಳಿಸುತ್ತಾನೆ. ಇದು ವಿಕಾಸದ ಸಂಕಟ ಸ್ಥಿತಿಯ ಹೃದಯಪ್ರಾಯವಾಗಿದೆ. ಮತ್ತು ಭೌತಿಕ ಮತ್ತು ಮಾನಸಿಕ ವಲಯಗಳಾಚೆ ಇರುವ ಚೇತನದ ವಲಯದಲ್ಲಿ ಇರುವ ಸಾಮರ್ಥ್ಯಗಳು ಮತ್ತು ಶಕ್ತಿಗಳ ದ್ವಾರದಲ್ಲಿ ಕೆಲಸ ಮಾಡಲು ನಮಗೆ ಸಾಧ್ಯವಾದರೆ ಮಾತ್ರ ಈ ಸಂಕಟಸ್ಥಿತಿಯನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಮಾನವೀಯತೆಗೆ ಸಹಾಯಕವಾಗುವ ಒಂದು ಪರಿಸ್ಥಿತಿ ಇದೆ. ಒಂದು ಕಡೆ ಭೌತಿಕವಾದ ಪ್ರತಿ ಉಂಟಾಗುತ್ತಿರುವ ಸಮಕಾಲೀನ ಅತೃಪ್ತಿ ಮತ್ತು ಮತ್ತೊಂದೆಡೆ ಭೌತಿಕ ಪ್ರಪಂಚದ ಅರ್ಥವನ್ನು ಮತ್ತು ಉದ್ದೇಶ ಪೂರ್ವತೆಯನ್ನು ತಿರಸ್ಕರಿಸುತ್ತಿರುವ ಆಧ್ಯಾತ್ಮಿಕತೆಯ ಪ್ರತಿ ಉಂಟಾಗುತ್ತಿರುವ ಅತೃಪ್ತಿಯೇ ಆ ಪರಿಸ್ಥಿತಿ. ಶತಶತಮಾನಗಳ ಪ್ರಯೋಗಗಳ ನಂತರ ಭೌತಿಕವಾದ ಮಾನಸಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳನ್ನು ಅನ್ವೇಷಿಸಲು ಅಗತ್ಯವಾದ ಹೊಸ ಅವಿಷ್ಕಾರಗಳನ್ನು ಮಾಡಬೇಕಾದ ಒತ್ತಡಕ್ಕೆ ಕ್ರಮೇಣ ದಾರಿಮಾಡಿಕೊಡುತ್ತಿದೆ.

ಇದೇ ರೀತಿ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಮಾಡಿರುವ ಶತಮಾನಗಳ ಪ್ರಯೋಗಗಳು ಭೌತಿಕ ಜೀವನವನ್ನು ಮತ್ತು ಸಾಮುದಾಯಿಕ ಯೋಗಕ್ಷೇಮವನ್ನು ಉಪೇಕ್ಷಿಸುವುದು, ಬಡತನದಲ್ಲಿ ಅಥವಾ ದಿವಾಳಿತನದಲ್ಲಿ ಮತ್ತು ಆರ್ಥಿಕ ಮತ್ತು ರಾಜಕೀಯ ಗುಲಾಮಿತನದಲ್ಲಿ ಪರ್ಯವಸನವಾಗುತ್ತದೆ ಎಂಬುದನ್ನು ತೋರಿಸಿವೆ.

ಚೇತನ (Spirit) ಮತ್ತು ಭೌತಿಕ ವಸ್ತು (Matter) ಈ ಎರಡು ಜ್ಞಾನಗಳನ್ನು ಜೊತೆಗೂಡಿಸಿ ಸಂಶ್ಲೇಷಿಸಬೇಕಾದ ಅಗತ್ಯವಿದೆ ಎನ್ನುವುದು ಈಗ ಸ್ಪಷ್ಟವಾಗತೊಡಗಿದೆ. ಜೀವನದ ವಿಶ್ವಾತೀತ (Super Cosmic) ಜೀವನವನ್ನು ಜೀವನದ ವೈಶಿಕ (Cosmic) ಧ್ಯೇಯದೊಂದಿಗೆ ಸಮಗ್ರಗೊಳಿಸಿ ವಿಸ್ತರಿಸಬೇಕಾಗಿದೆ. ಹೀಗೆ ಮಾಡುವಾಗ ಚೇತನ ಮತ್ತು ಭೌತಿಕ ವಸ್ತುಗಳ ನಡುವೆ ಇರುವುದೆಲ್ಲವನ್ನು ಪರಿಪೂರ್ಣಗೊಳಿಸಬೇಕಾಗಿದೆ ಮತ್ತು ಇವೆರಡನ್ನು ಸಂಪೂರ್ಣವಾಗಿ ಸಮಗ್ರಗೊಳಿಸಿ ಒಂದು ಮಾಡಬೇಕಾಗಿದೆ. ಈ ಎಲ್ಲವನ್ನು ಸಾಮೂಹಿಕ ಮಟ್ಟದಲ್ಲಿ ಮತ್ತು ವ್ಯಕ್ತಿಗತ ಮಟ್ಟಗಳೆರಡರಲ್ಲೂ ಮಾಡಬೇಕಾಗಿದೆ ಮತ್ತು ಹೀಗೆ ಮಾಡುವಾಗ ಸಮಗ್ರ ಶಿಕ್ಷಣವನ್ನು ವಿಕಾಸಗೊಳಿಸಬೇಕಾದ ಅಗತ್ಯವಿದೆ ಎನ್ನುವುದು ನಮಗೆ ತಿಳಿಯುತ್ತದೆ.

ನಾವು ಮನುಷ್ಯ ಜೀವಿಯನ್ನು ವಿಶ್ಲೇಷಿಸಿದರೆ, ಆ ಜೀವಿಯಲ್ಲಿ ದೇಹ ಮತ್ತು ಚೇತನದ ನಡುವೆ ಜೈವಿಕ, ಬೌದ್ಧಿಕ, ಆತ್ಮಿಕ ಎಂಬ ಮೂರು ಮೂಲವಸ್ತುಗಳು ಇವೆ ಎಂಬುದು ನಮಗೆ ತಿಳಿಯುತ್ತದೆ. ಇದರ ಜೊತೆಗೆ ಈ ಮೂರು ಅಂಶಗಳ ನಡುವೆ ಸ್ವಭಾವಗಳ ಪಾರಸ್ಪರಿಕ ಸಂಬಂಧವೂ ಇದೆ ಎಂಬುದನ್ನು ನಾವು ಅರಿಯುತ್ತೇವೆ. ದೈಹಿಕ ಮತ್ತು ಜೈವಿಕ ಅಂಶಗಳು ಬಹುಮಟ್ಟಿಗೆ ಬೌದ್ಧಿಕ ಅಂಶದಿಂದ ನಿಯಂತ್ರಿತವಾಗುತ್ತದೆ ಮತ್ತು ಮಾರ್ಗದರ್ಶನ ಪಡೆಯುತ್ತವೆ ಮತ್ತು ವಿಕಾಸದ ಒಂದು ನಿರ್ದಿಷ್ಟ ಹಂತದವರೆಗೆ ಮನಸ್ಸು ನಾಯಕನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆವೆ. ಈ ವಿಚಾರ ತೈತ್ತರೀಯ ಉಪನಿಷತ್ತಿನಲ್ಲಿರುವ ಮನಸ್ಸಿಗೆ ಸಂಬಂಧಪಟ್ಟಂತೆ ಮನೋಮಯ ಎನ್ನುವುದನ್ನು ಶಾರೀರಾ ಪ್ರಣಯನೇತಾ (ದೈಹಿಕ ಮತ್ತು ಜೈವಿಕ ಭಾಗಗಳ ನಾಯಕ) ಎಂಬ ವರ್ಣನೆಯನ್ನು ಸಮರ್ಥಿಸುತ್ತದೆ. ಆದರೆ ಮನಸ್ಸಿನ ನಾಯಕತ್ವ ಒಂದು ರೀತಿಯಲ್ಲಿ ಮಿತಿಯುಳ್ಳದ್ದೇ ಆಗಿದೆ. ಏಕೆಂದರೆ ತಾರ್ಕಿಕ, ನೈತಿಕ ಮತ್ತು ಸೌಂದರ್ಯ ಪ್ರಜ್ಞಾತ್ಮಕ ಶಕ್ತಿಗಳ ವಿಕಾಸಹೊಂದಲು ಆರಂಭವಾದಂತೆ ಸತ್ಯದ ಅನ್ವೇಷಣೆ, ಸೌಂದರ್ಯದ ಸೌಂದರ್ಯತ್ಮಾಕ ಅನ್ವೇಷಣೆ ಮತ್ತು ಒಳ್ಳೆಯತನದ ದ್ವಂದ್ವಗಳನ್ನು/ಸಂಘರ್ಷಗಳನ್ನು ಪರಿಹರಿಸಲು ತಾನು ಅಸಮರ್ಥ

Digitised by Bharatavani, CIIL

ಎಂಬುದು ಮನಸ್ಸಿಗೆ ಅರಿವಾಗುತ್ತದೆ. ಇದಲ್ಲದೆ ಜೈವಿಕ ಮತ್ತು ದೈಹಿಕ ಭಾಗಗಳಿಂದ ಸತತವಾಗಿ ಹೊರಹೊಮ್ಮುವ ಅರ್ಧಪ್ರಜ್ಞೆಯ ಮತ್ತು ಸುಪ್ತಪ್ರಜ್ಞೆ ಶಕ್ತಿಗಳು ಪ್ರಧಾನವಾಗಿರುವ ಅತಾರ್ಕಿಕ ಶಕ್ತಿಗಳನ್ನು ಯಶಸ್ವಿಯಾಗಿ ಎದುರಿಸಲು ತಾನು ಅಸಮರ್ಥನೆಂಬುದು ಮನಸ್ಸಿಗೆ ತಿಳಿಯುತ್ತದೆ. ಉಪನಿಷತ್ತುಗಳು ಹೇಳುವ ಅಂತರಾತ್ಮನ್ ಎಂಬ, ವೇದಗಳಲ್ಲಿ ವರ್ಣಿತವಾಗಿರುವ ಆಧ್ಯಾತ್ಮಿಕ ಅಗ್ನಿ ಎಂಬ ಆತ್ಮಿಕ ಭಾಗವನ್ನು ಮಾನವ ಪ್ರಯಾಣದ ಪುರೋಹಿತನಾಗಿ ಮುಂದಕ್ಕೆ ತರಬೇಕಾದ ಸಮಯ ಬರಬೇಕಾಗಿದೆ. ಈ ಆತ್ಮಿಕ ಭಾಗ ವಿಕಾಸ ಹೊಂದಿದಂತೆ ಆಧ್ಯಾತ್ಮಿಕ ಚೇತನದ ಕ್ಷೇತ್ರದ ದ್ವಾರಗಳು ಶಕ್ತಿಯುತವಾಗಿ ತೆರೆದುಕೊಳ್ಳುವ ಸಂದರ್ಭ ಬರುತ್ತದೆ. ಆಗ ತೈತ್ತರೀಯ ಉಪನಿಷತ್ತು ಹೇಳುವ ಅತಿಮಾನಸ ಸ್ವರೂಪದ ವಿಜ್ಞಾನಮಯ ಕೋಶ ಹೊರಹೊಮ್ಮಲು ಸಾಧ್ಯವಾಗುತ್ತದೆ. ಈ ಹಂತದ ಆತ್ಮಿಕ ಶಕ್ತಿ ಮಾತ್ರ ತನ್ನಲ್ಲಿರುವ ಎಲ್ಲಾ ವಿಧಧ ಶಕ್ತಿಗಳನ್ನು ಸಮಗ್ರಗೊಳಿಸಿ ತನ್ನ ಸ್ವಾಭಾವಿಕ ಮತ್ತು ಸಹಜ ರೀತಿಯ ಪ್ರಭುತ್ವದ ನಿಯಂತ್ರಣದಲ್ಲಿ ತರಲು ಮಾನವನನ್ನು ಸಮರ್ಥರನ್ನಾಗಿಸುತ್ತದೆ.

ವೇದಗಳಲ್ಲಿ ಮತ್ತು ಉಪನಿಷತ್ತುಗಳಲ್ಲಿ ಬಹುತೇಕ ಅಡಕವಾಗಿರುವ ವಿಕಾಸ ಪ್ರಕ್ರಿಯೆಯ ಸಂಪೂರ್ಣ ಪ್ರಕ್ರಿಯೆಯ ರಹಸ್ಯಗಳು ಲುಪ್ತವಾಗುತ್ತವೆ ಎಂದು ತಿಳಿದಾಗ ಶ್ರೀ ಅರವಿದರು ಈ ರಹಸ್ಯಗಳನ್ನು ಪುನಃ ಅನ್ವೇಷಿಸಿದರು ಮತ್ತು ಅವುಗಳನ್ನು ಪರಿಪೂರ್ಣವಾಗಿ ವಿವರಿಸಿದರು. ಈ ಎಲ್ಲಾ ಜ್ಞಾನಗಳ ಬೆಳಕಿನಲ್ಲಿ ಸಮಗ್ರ ಶಿಕ್ಷಣದ (Integral Education) ಪರಿಕಲ್ಪನೆ ಮತ್ತು ಆಚರಣೆಯ ಬಗ್ಗೆ ಮತ್ತು ಮನಸ್ಸು ಮತ್ತು ದೇಹದ ಮೇಲೆ ಚೇತನದ ಹತೋಟಿಯ ಪ್ರಾಚೀನ ರಹಸ್ಯಗಳ ಸಂಶ್ಲೇಷಣೆಯ ಬಗ್ಗೆ ಮತ್ತು ದೇಹ, ಜೀವನ ಮತ್ತು ಮನಸ್ಸಿನ ಸಾಧ್ಯತೆಗಳನ್ನು ಪರಿಪೂರ್ಣವಾಗುವಂತೆ ಮಾಡಲು ಜೀವನವನ್ನು ಉಪಯೋಗಿಸಿಕೊಳ್ಳಬಹುದಾದ ಆಧುನಿಕ ರಹಸ್ಯಗಳ ಬಗ್ಗೆ ವಿಶ್ವಾಸಪೂರ್ವಕವಾಗಿ ಮಾತನಾಡಲು ನಾವು ಸಮರ್ಥರಾಗಿದ್ದೇವೆ.

ಸಮಗ್ರ ಶಿಕ್ಷಣ ವ್ಯಕ್ತಿತ್ವದ ಸಮಗ್ರ ವಿಕಾಸವನ್ನು ತನ್ನ ಗುರಿಯಾಗಿಟ್ಟುಕೊಂಡಿರುವುದೇ ಅಲ್ಲದೆ, ಅದು ತನ್ನ ವ್ಯಾಪ್ತಿಯಲ್ಲಿ ಎಲ್ಲಾ ಜ್ಞಾನವನ್ನು ಒಳಗೊಳ್ಳುತ್ತದೆ. ಅದು ಪ್ರಕ್ರಿಯೆಗಳನ್ನು ತಿಳಿದುಕೊಂಡು ಅವುಗಳನ್ನು ಮಾನವನ ಭೌತಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಉಪಯೋಗಿಸಲು ಮಾತ್ರವಲ್ಲದೆ ಅವುಗಳ ಮೂಲಕ ಜಗತ್ತಿನಲ್ಲಿರುವ ಚೇತನವನ್ನು ಮತ್ತು ಚೇತನದ ವಿವಿಧ ರೂಪಗಳಲ್ಲಿ ಅದರ ಮಾರ್ಗಗಳನ್ನು ತಿಳಿದುಕೊಳ್ಳಲು ಸಹ ಭೌತಿಕ ಮತ್ತು ಮಾನಸಿಕ ವಿಜ್ಞಾನಗಳ ಅಧ್ಯಯನವನ್ನು ಒಳಗೊಳ್ಳುತ್ತದೆ. ಅದು ಮನಸ್ಸು ಗ್ರಹಿಸುವಂತೆ ಒಳ್ಳೆತನವನ್ನು ಹುಡುಕಲು ಮಾತ್ರವಲ್ಲದೆ ನೈತಿಕತೆಯನ್ನು ಮೀರಿ ಇರುವ ಒಳ್ಳೆತನವನ್ನು ಅನ್ವೇಷಿಸಲು ನೀತಿಶಾಸ್ತ್ರವನ್ನು ಅಧ್ಯಯನ ಮಾಡುತ್ತದೆ. ಅದೇ ರೀತಿ ವ್ಯಕ್ತಿನಿಷ್ಠವಾದ ಮತ್ತು ವಸ್ತುನಿಷ್ಠವಾದ ಪ್ರಪಂಚದ ಬಿಂಬಗಳನ್ನು ಪ್ರಸ್ತುತಪಡಿಸಲು ಮಾತ್ರವಲ್ಲದೆ, ಅವುಗಳನ್ನು ಮೀರಿ ಹೋಗುವ ಮಹತ್ವಪೂರ್ಣವಾದ ಮತ್ತು ಸೃಜನಾತ್ಮಕವಾದ ದೃಷ್ಟಿಯಿಂದ ಕಾಣಲು ಮತ್ತು ಅವುಗಳಲ್ಲಿ ಅಡಗಿರಬಹುದಾದ ತರ್ಕಾತೀತ ಸತ್ಯವನ್ನು ಮತ್ತು ಸೌಂದರ್ಯವನ್ನು ಅಭಿವ್ಯಕ್ತಗೊಳಿಸಲು ಕಲೆಯನ್ನು ಅಧ್ಯಯನ ಮಾಡುತ್ತದೆ. ಮಾನವಿಕಗಳ (Humanities) ಅಧ್ಯಯನವನ್ನು ಪ್ರೋತ್ಸಾಹಿಸುತ್ತದೆ. ಆದರೆ ಅನೇಕ ಮಂದಿಯನ್ನು ಅನಿವಾರ್ಯವಾಗಿ ಎಂದೆಂದಿಗೂ ಜೀವನದ ಕೆಳ ಹಂತಗಳಲ್ಲಿ ಇಟ್ಟು, ಕೆಲವೇ ಮಂದಿ ಪ್ರಸಿದ್ಧರಾದ ಆಧ್ಯಾತ್ಮಿಕ ವ್ಯಕ್ತಿಗಳ ಹಿನ್ನೆಲೆಯಾಗಿ ಸಮಾಜವನ್ನು ಪೋಷಿಸುವುದಕ್ಕಾಗಿ ಅಲ್ಲದೆ, ಪೃಥ್ವಿಯ ಇಡೀ ಜೀವನವನ್ನು ಪುನರುತ್ಥಾನಗೊಳಿಸಲು ಪ್ರೋತ್ಸಾಹಿಸುವುದಕ್ಕಾಗಿ ಮತ್ತು ಈ ಪುನರುತ್ಥಾನಕ್ಕಾಗಿ ಹಿಂದೆ ಪರಾಜಯಗಳು ಉಂಟಾಗಿದ್ದರೂ, ಗರಿಷ್ಠ ಮಟ್ಟದ ಆಶಾವಾದವನ್ನು ಪ್ರೋತ್ಸಾಹಿಸುವುದಕ್ಕಾಗಿ ಈ ಅಧ್ಯಯನವನ್ನು ಮಾಡಲಾಗುತ್ತದೆ ಮತ್ತು ಜ್ಞಾನದ ಸಮತೋಲನವನ್ನು ಪ್ರೋತ್ಸಾಹಿಸುತ್ತದೆ ಮತ್ತು ಅದು ಸರ್ವವ್ಯಾಪಕತೆಯ ಚೇತನವನ್ನು ಮತ್ತು ಐಕ್ಯಮತವನ್ನು ಪೋಷಿಸಲು ಪ್ರಯತ್ನಿಸುತ್ತದೆ.

ಜ್ಞಾನ, ಸಂಕಲ್ಪ, ಸಾಮಂಜಸ್ಯ ಮತ್ತು ಕೌಶಲವನ್ನು ಏಕಕಾಲದಲ್ಲಿ ವಿಕಾಸಗೊಳಿಸುವುದರ ಬಗ್ಗೆ ಹಾಗೂ ಶಿಕ್ಷಣದ ತೀರ ಆರಂಭಿಕ ಹಂತದಿಂದಲೇ ಮಾನವ ಜೀವಿಯ ಎಲ್ಲಾ ಭಾಗಗಳ ವಿಕಾಸವನ್ನು ಸಾಧ್ಯವಾದಷ್ಟು ಮಟ್ಟಿಗೆ ಉಂಟುಮಾಡುವುದರ ಬಗ್ಗೆ ಒತ್ತು ನೀಡುವುದು ಸಮಗ್ರ ಶಿಕ್ಷಣದ ಒಂದು ಮುಖ್ಯ ಲಕ್ಷಣವಾಗಿದೆ. ಪ್ರತಿ ಶಿಶುವೂ ತನ್ನ ಗುಣಗಳು ಮತ್ತು ಲಕ್ಷಣಗಳಲ್ಲಿ, ಸಾಮರ್ಥ್ಯಗಳಲ್ಲಿ ಮತ್ತು ಅಂತಃಸ್ವತ್ತುಗಳಲ್ಲಿ, ತನ್ನ ಪ್ರಧಾನ ಒಲವುಗಳಲ್ಲಿ ಮತ್ತು ಪ್ರವೃತ್ತಿಗಳಲ್ಲಿ ಅಪೂರ್ವವಾಗಿರುವುದರಿಂದ ಸಮಗ್ರ ಶಿಕ್ಷಣ ತನ್ನ ಆಚರಣೆಯಲ್ಲಿ ಹೆಚ್ಚು ಹೆಚ್ಚಾಗಿ ವ್ಯಕ್ತಿಗತವಾಗುವ ಒಲವು ಹೊಂದಿದೆ. ಪುನಃ ಇದೇ ಕಾರಣದಿಂದಾಗಿ ಸಮಗ್ರ ಶಿಕ್ಷಣದ ವಿಧಾನಗಳೂ ಶಿಶುವಿನ ಬೆಳವಣಿಗೆಯಲ್ಲಿ ಅದರ ಸಕ್ರೀಯ ಸಹಭಾಗಿತ್ವವನ್ನು ಒಳಗೊಂಡು ಹೆಚ್ಚು ಗತಿಶೀಲಾತ್ಮಕವಾಗುತ್ತದೆ.

ಪ್ರತಿಯೊಂದು ಮಗುವನ್ನು ಅವಲೋಕಿಸುವುದು ಮತ್ತು ಮಗು ತನ್ನ ಅಸ್ಥಿತ್ವದ ಪ್ರತಿಯೊಂದು ಭಾಗವೂ ನಿರಂತರ ಸಮತೋಲನ ಮತ್ತು ಸಮಗ್ರತೆಯ ಸ್ಥಿತಿಯಲ್ಲಿರುವಂತೆ ಮೊನಚುಗೊಳಿಸಬಲ್ಲ ಶಿಲ್ಪದಂತೆ ಕಡೆಯಬಲ್ಲ ಪರಿಶುದ್ಧಗೊಳಿಸಬಲ್ಲ ಮತ್ತು ರೂಪಾಂತರಿಸಬಲ್ಲ ಉನ್ನತ ಹಂತದ ಜ್ಞಾನ ಪ್ರಕಾಶದೆಡೆಗೆ ತನ್ನ ಸಂಪೂರ್ಣ ಅಸ್ತಿತ್ವವನ್ನು ಮೇಲೆತ್ತಲು ಸಹಾಯಕವಾದ ಗತಿಶೀಲಾತ್ಮಕ ವಿಧಾನಗಳನ್ನು ವಿಕಾಸಗೊಳಿಸುವುದು ಶಿಕ್ಷಕನ ಪ್ರಥಮ ಕಾರ್ಯವಾಗಿದೆ. ಇದರ ಅರ್ಥ ತೋರಿಕೆಗೆ ಮಹತ್ವಹೀನ ಎನಿಸುತ್ತದೆ. ಅತಿಸೂಕ್ಷ್ಮ ವಿವರಗಳಿಗೆ ಮತ್ತು ಕ್ರಿಯೆಗಳಿಗೂ ದೊಡ್ಡ ವಿಷಯಗಳಿಗೆ ತೋರಿಸುವಷ್ಟು ಎಚ್ಚರಿಕೆ ಮತ್ತು ಪರಿಪೂರ್ಣತೆಯಿಂದ ಸಾಧ್ಯವಿರುವ ಎಲ್ಲಾ ಗತಿಶೀಲಾತ್ಮಕ ವಿಧಾನಗಳನ್ನು ಶಿಕ್ಷಕ ಉಪಯೋಗಿಸಬೇಕೆಂಬುದಾಗುತ್ತದೆ. ಏಕೆಂದರೆ, ಉಪಯೋಗಿಸಲು ಯಾವುದೂ ಅತಿಕ್ಷುಲ್ಲಕವಾದುದು ಇಲ್ಲ ಮತ್ತು ಪ್ರಯತ್ನಿಸಲು ಬೃಹತ್ತಾದುದು ಯಾವುದೂ ಇಲ್ಲ.

ಬೋಧನೆ, ಉದಾಹರಣೆ ಮತ್ತು ಪ್ರಭಾವ ಈ ಮೂರು ಶಿಕ್ಷಕನ

Digitised by Bharatavani, CIIL

ಉಪಕರಣಗಳಾಗಿವೆ. ಓರ್ವ ಉತ್ತಮ ಶಿಕ್ಷಕ ಬೋಧಿಸುವುದಕ್ಕಿಂತ ಹೆಚ್ಚಾಗಿ ಸ್ಫೂರ್ತಿ ನೀಡುತ್ತಾನೆ. ಸಾಮರ್ಥ್ಯಗಳನ್ನು ಮತ್ತು ಅನುಭವಗಳನ್ನು ಸ್ವಾಭಾವಿಕ ಪ್ರಕ್ರಿಯೆಯ ಮೂಲಕ ಮತ್ತು ಮುಕ್ತವಾಗಿ ವಿಸ್ತರಿಸುವುದರ ಮೂಲಕ ಬೆಳೆಸುವುದು ಅವನ ಗುರಿಯಾಗಿರುತ್ತದೆ. ಮಗುವಿನ ನಿಷ್ಕ್ರಿಯ ಗ್ರಹಣಶೀಲ, ಮನಸ್ಸಿನ ಮೇಲೆ ಶಿಕ್ಷಕ ತನ್ನ ಅಭಿಪ್ರಾಯಗಳನ್ನು ಹೇರುವುದಿಲ್ಲ. ಯಾವುದು ಉತ್ಪಾದಕವೋ ಅದರಿಂದ ಮಾತ್ರ ಮಗು ಬೆಳೆಯುತ್ತದೆ ಮತ್ತು ಭೂಮಿಯ ಒಳಗಿನ ಪ್ರೋತ್ಸಾಹಕ ಮತ್ತು ಹಿತಕರ ಪರಿಸ್ಥಿತಿಯಲ್ಲಿ ಬೀಜ ಬೆಳೆಯುವುದು ಎಷ್ಟು ಖಚಿತವೋ ಮಗುವಿನ ಬೆಳವಣಿಗೆಯೂ ಅಷ್ಟೇ ಖಚಿತ ಎಂದು ಶಿಕ್ಷಕ ತಿಳಿದಿರುತ್ತಾನೆ. ಉದಾಹರಣೆ ಬೋಧನೆಗಿಂತ ಪ್ರಬಲವಾದುದು ಎಂದು ಅವನು ತಿಳಿದಿದ್ದಾನೆ. ವಾಸ್ತವವಾಗಿ ಅಂಥ ಉದಾಹರಣೆ ಹೊರಗಣ ಕ್ರಿಯೆಗಳದ್ದಾಗಿರದೆ ಜೀವನದ ಆಂತರಿಕ ಪ್ರೇರಣೆಯದಾಗಿರುತ್ತದೆ ಮತ್ತು ಆಂತರಿಕ ಚಟುವಟಿಕೆಗಳದ್ದಾಗಿರುತ್ತದೆ. ಅಂತಿಮವಾಗಿ ಅನುಭವ ಉದಾಹರಣೆಗಿಂತ ಹೆಚ್ಚು ಮುಖ್ಯವಾಗುತ್ತದೆ. ಏಕೆಂದರೆ, ಅನುಭವ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಣ ಸಂಪರ್ಕದ ಶಕ್ತಿಯಿಂದ ಒಬ್ಬರ ಆತ್ಮದ ಮತ್ತೊಬ್ಬರ ಆತ್ಮದ ನಿಕಟತೆಯಿಂದ ವಿದ್ಯಾರ್ಥಿಗೆ ಶಿಕ್ಷಕ ಮೌನದಿಂದಲೂ ತಾನು ಏನಾಗಿದ್ದಾನೆ ಅದೆಲ್ಲವನ್ನೂ ಅಥವಾ ತಾನು ಏನು ತಡೆದಿದ್ದಾನೆ ಅದೆಲ್ಲವನ್ನೂ ವಿದ್ಯಾರ್ಥಿಯ ಆಂತರ್ಯಕ್ಕೆ ತುಂಬುವುದರ ಮೂಲಕ ಉಂಟಾಗುತ್ತದೆ. ಒಬ್ಬ ಒಳ್ಳೆಯ ಶಿಕ್ಷಕ ತಾನೇ ಒಬ್ಬ ನಿರಂತರ ವಿದ್ಯಾರ್ಥಿಯಾಗಿರುತ್ತಾನೆ. ಅವನು ಮಕ್ಕಳನ್ನು ಮುನ್ನಡೆಸುವ ಮಗುವಾಗಿದ್ದಾನೆ ಮತ್ತು ಇತರ ಜ್ಯೋತಿಗಳನ್ನು ಬೆಳಗಿಸುವ ಜ್ಯೋತಿಯಾಗಿದ್ದಾನೆ, ಒಂದು ನಾವೆಯಂತಿದ್ದಾನೆ, ಒಂದು ವಾಹಿನಿಯಂತಿದ್ದಾನೆ.

ನಮ್ಮ ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ನಾವು ಬೌದ್ಧಿಕ ವಿಕಾಸದಲ್ಲಿ ಹೆಚ್ಚು ವ್ಯಸ್ತರಾಗಿದ್ದೇವೆ ಮತ್ತು ನಾವು ವಿಷಯೋನ್ಮುಖ, ಪುಸ್ತಕೊನ್ಮುಖ ಮತ್ತು ಪರೀಕ್ಷೋನ್ಮುಖವಾದ ವ್ಯವಸ್ಥೆಗೆ ಸಂಬಂಧಿಸಿದ ಗುಣಗಳಿಗೆ ಅತಿಯಾದ ಪ್ರಾಮುಖ್ಯವನ್ನು ಕೊಡುತ್ತಿದ್ದೇವೆ. ನಾವು ಸ್ಮರಣೆಯ ಶಕ್ತಿಗಳಿಗೆ ಕೊಡುವಷ್ಟು ಮಹತ್ವವನ್ನು ಗ್ರಹಿಕೆಯ ಶಕ್ತಿಗಳಿಗೆ ಕೊಡುತ್ತಿಲ್ಲ. ತಥ್ಯಾಂಶಗಳನ್ನು ತಿಳಿದುಕೊಳ್ಳುವುದಕ್ಕೆ ಕೊಡುವಷ್ಟು ಒತ್ತನ್ನು ಕಲ್ಪನಾಶೀಲತೆಯ ವಿಕಾಸಕ್ಕೆ ಕೊಡುತ್ತಿಲ್ಲ. ಖಂಡಿತಗೊಂಡ ಮಾಹಿತಿಗೆ ಕೊಡುವಷ್ಟು ಮಹತ್ವವನ್ನು ನಾವು ಸತ್ಯದ ಅನ್ವೇಷಣೆಗೆ ಕೊಡುತ್ತಿಲ್ಲ. ಇಷ್ಟಾದಾಗ್ಯೂ ದೈಹಿಕ ಶಿಕ್ಷಣಕ್ಕೆ ಮತ್ತು ಸೌಂದರ್ಯ ಪ್ರಜ್ಞೆ ಶಿಕ್ಷಣಕ್ಕೆ ಸ್ವಲ್ಪಮಟ್ಟಿನ ಸ್ಥಾನವನ್ನು ಕೊಟ್ಟಿದ್ದೇವೆ. ಆದರೂ ಅವುಗಳನ್ನು ಎಷ್ಟರಮಟ್ಟಿಗೆ ಕಡೆಗಣಿಸಿದ್ದೇವೆಂದರೆ ಅವುಗಳನ್ನು ಹೆಚ್ಚು ಕಡಿಮೆ ಉಪೇಕ್ಷಿಸಿದಂತೆಯೇ ಆಗಿದೆ. ವ್ಯಕ್ತಿತ್ವದ ಆಂತರಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಸ್ಥಿತಿ ಪೂರ್ಣಕ್ಕೆ ಅತೃಪ್ತಿಕರವಾಗಿಯೇ ಇದೆ.

ನಾವು ಒಂದಲ್ಲ ಒಂದು ಧರ್ಮದಲ್ಲಿ ನಂಬಿಕೆ ಇಡಲಿ ಅಥವಾ ಯಾವುದೇ ಧರ್ಮದಲ್ಲಿ ನಂಬಿಕೆ ಇಡದಿರಲಿ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ನಾವು ಆಚರಿಸಬಹುದು. ನೈತಿಕತೆ ಮತ್ತು ಆಧ್ಯಾತ್ಮಿಕತೆ ಈ ಎರಡು ಮತೀಯ ಆಚರಣೆಗಳು ಮತ್ತು ವ್ರತಾಚರಣೆಗಳಿಂದ ಅಥವಾ ಯಾವುದೇ ಒಂದು ಮತ ನಿರ್ದಿಷ್ಟವಾಗಿ ವಿಧಿಸುವ ಕ್ರಿಯೆಗಳಿಂದ ಸ್ವತಂತ್ರವಾಗಿರಬಲ್ಲವು ಮತ್ತು ಈ ಎರಡೂ ನೇರ ಸೈದ್ಧಾಂತಿಕವಾಗಿ ಬದ್ಧವಾಗಿರುವ ಮತ್ತು ಒರೆಹಚ್ಚಬಹುದಾದ ಅಧಿಕಾರ (Authority)ವನ್ನು ಹೊರತುಪಡಿಸಿ ಮತ್ತ್ಯಾವುದೇ ಅಧಿಕಾರದಿಂದ ಸ್ವತಂತ್ರವಾಗಿ ಇರಬಲ್ಲವು.

ಆಧ್ಯಾತ್ಮಿಕತೆ ವ್ಯಕ್ತಿಯ ನಡತೆಗೆ ಮಾತ್ರ ಸೀಮತಿವಾದುದಲ್ಲ. ಕಾರ್ಯಗಳ ಎಲ್ಲಾ ಮುಖಗಳನ್ನು ಸಮಂಜಸಗೊಳಿಸುವುದಕ್ಕಾಗಿ ಪ್ರಜ್ಞೆಯ ಪ್ರಗತಿಶೀಲ ಬದಲಾವಣೆಯ ವಿಧಾನದಿಂದ ಕೈಗೊಳ್ಳುವ ಎಲ್ಲಾ ಕಾರ್ಯಗಳನ್ನು ಮತ್ತು ಪ್ರಯತ್ನಗಳನ್ನು ಆಧ್ಯಾತ್ಮಿಕತೆ ಒಳಗೊಳ್ಳುತ್ತದೆ ಮತ್ತು ಈ ರೀತಿಯ ಪ್ರಯತ್ನದಿಂದ ಅತ್ಯಂತ ಉನ್ನತಮಟ್ಟದ ಜ್ಞಾನ ಮತ್ತು ಅತಿ ಗಹನವಾದ ಪ್ರೀತಿಯೊಂದಿಗೆ ಕಾರ್ಯಗಳನ್ನು ಸಮಗ್ರಗೊಳಿಸುತ್ತದೆ.

ಏಕೆಂದರೆ ಸಾಮಾನ್ಯವಾಗಿ ಅಜ್ಞೇಯತಾವಾದ (Agnosticism) ಸಂಶಯವಾದ (Scepticism), ಧನಾತ್ಮಕ/ಸಕಾರಾತ್ಮಕ ಅಥವಾ ಮುಕ್ತಚಿಂತನೆ (Positivism) ಎಂದು ಕರೆಯಲ್ಪಡುವ ಆಧ್ಯಾತ್ಮಿಕತೆ ತನ್ನ ಹಿಂದೆ ಸರಿಯಾಗಿ ಅರ್ಥಮಾಡಿಕೊಂಡರೆ, ಗುರ್ತಿಸಿದರೆ, ಗೌರವಿಸಿದರೆ ಮತ್ತು ಅನುಸರಿಸಿದರೆ ಸಾಮಾನ್ಯವಾಗಿ ಒಪ್ಪಿಕೊಂಡಿರುವ ಧಾರ್ಮಿಕ ಗುಣಗಳಾದ ಶ್ರದ್ಧೆ ಮತ್ತು ಮತೀಯವಾದ ಬೋಧನೆಗಳು ಮತ್ತು ಆದೇಶಗಳ ಹಿಂದೆ ಇರುವ ಪ್ರಜ್ಞೆಯಲ್ಲಿ ಅಡಗಿರುವ ಅಜ್ಞಾತ ಶಕ್ತಿಗೆ ಪೂರಕವಾಗುವ ನೇರ ಅನುಭವದ ಬಗ್ಗೆ ಕಾಳಜಿಯನ್ನು ತೋರಿಸುತ್ತದೆ ಮತ್ತು ಒತ್ತಾಯಿಸಿ ಕೇಳುತ್ತದೆ.

ಏಕೆಂದರೆ ಆಧ್ಯಾತ್ಮಿಕತೆ ಯಾವಾಗಲೂ ರೂಪಗಳನ್ನು ದಾಟಿ ಸಾರವನ್ನು (Essence) ಮತ್ತು ಜೀವಂತ ಪ್ರಜ್ಞೆಯನ್ನು ನೋಡುತ್ತದೆ ಮತ್ತು ಹೀಗೆ ಮಾಡುವಾಗ ಅದು ರೂಪಗಳ ಹಿಂದಿರುವುದನ್ನು ಮೇಲಕ್ಕೆ ತರುತ್ತದೆ. ಆದ್ದರಿಂದ ಒಂದು ಹೊಸ ಸೃಷ್ಟಿಯಾಗುತ್ತದೆ. ಆಧ್ಯಾತ್ಮಿಕತೆ ರೂಪಗಳನ್ನು ಮತ್ತು ನೈತಿಕತೆ ಮತ್ತು ಧರ್ಮದ ವಿಧಾನಗಳನ್ನು ಅತಿಕ್ರಯಿಸುತ್ತದೆ ಮತ್ತು ತನ್ನದೇ ಆದ ಜೀವನವನ್ನು ಮತ್ತು ಪ್ರಗತಿಶೀಲ ರೂಪಗಳನ್ನು ಪುನಃ ಸೃಷ್ಟಿಸಿಕೊಳ್ಳುತ್ತದೆ.

ಆಧ್ಯಾತ್ಮಿಕತೆ ಮತ್ತು ಆಧ್ಯಾತ್ಮಿಕ ಮೌಲ್ಯಗಳು ಮತ್ತು ಅವುಗಳನ್ನು ಸಾಧಿಸುವ ವಿಧಾನಗಳು ವಿಶಿಷ್ಟವಾದವುಗಳು. ಆಧ್ಯಾತ್ಮಿಕತೆಯ ಬಗ್ಗೆ ಕೇವಲ ಕಲಿತುಕೊಳ್ಳುವುದು ಆಧ್ಯಾತ್ಮಿಕತೆಯಲ್ಲ. ಆಧ್ಯಾತ್ಮಿಕತೆಯ ಬಗ್ಗೆ ಅತ್ಯಂತ ಉದಾರವೆನಿಸುವ ಗ್ರಂಥವೂ ಆಂತರಿಕ ಮತ್ತು ಉನ್ನತಮಟ್ಟದ ಆತ್ಮನನ್ನು ಕಾಣಬಹುದಾದ ಮತ್ತು ಅರಿತುಕೊಳ್ಳಬಹುದಾದ ಮತ್ತು ಮಾನವ ಸ್ವರೂಪದ ಆಂತರಿಕ ಕಾರ್ಯಗಳನ್ನು ರೂಪಾಂತರಗೊಳಿಸಬಹುದಾದ ಪ್ರಜ್ಞೆಯ ಆಂತರಿಕ ಪರಿವರ್ತನೆಯ ನೇರ ಅಭ್ಯಾಸಕ್ಕೆ ಪ್ರತಿಯಾಗಲಾರದು. ಆಧ್ಯಾತ್ಮ ಮೌಲ್ಯಗಳನ್ನು ಬೆಳೆಸುವ ಮತ್ತು ಈ ಮೌಲ್ಯಗಳನ್ನು ಜೀವನದ ಗತಿಶೀಲಾತ್ಮಕ ಬೇಡಿಕೆಯೊಂದಿಗೆ ಸಂಶ್ಲೇಷಿಸುವುದನ್ನು ಗುರಿಯಾಗಿ

Digitised by Bharatavani, CIIL

ಇಟ್ಟುಕೊಂಡಿರುವ ಶಿಕ್ಷಣ ಸಾಕಷ್ಟು ಮೂಲಭೂತವಾದ ಬದಲಾವಣೆಯನ್ನು ತರಲೇಬೇಕಾಗುತ್ತದೆ. ನೈತಿಕತೆ ಅಥವಾ ಆಧ್ಯಾತ್ಮಿಕತೆಯ ಬಗ್ಗೆ ಕೆಲವು ಶ್ರೇಣಿಬದ್ಧ ಪುಸ್ತಕಗಳನ್ನು ಸೂಚಿಸುವುದು ಮತ್ತು ಅಂಥ ಪುಸ್ತಕಗಳನ್ನು ಅಧ್ಯಯನ ಮಾಡಲು ಮತ್ತು ಅವುಗಳಲ್ಲಿ ಕೆಲವು ಪುಸ್ತಕಗಳನ್ನು ಅಧ್ಯಯನ ಮಾಡಲು ನಿಗದಿಪಡಿಸುವುದು ಸಾಕಾಗುತ್ತದೆ. ಆಧ್ಯಾತ್ಮಿಕತೆ ಒಂದು ಜೀವಂತ ಪ್ರಕ್ರಿಯೆ ಮತ್ತು ಆಧ್ಯಾತ್ಮ ಅಥವಾ ನಿಜವಾದ ಶಿಕ್ಷಣ ಆಂತರಿಕ ಜ್ಯೋತಿಯನ್ನು ಬೆಳಗಿಸುವ ಒಂದು ಪ್ರಕ್ರಿಯೆ. ಅದೂ ಅಲ್ಲದೆ ಆಧ್ಯಾತ್ಮಿಕ ಮೌಲ್ಯಗಳು, ಕೇಂದ್ರಿಯ ಮೌಲ್ಯಗಳು ಮತ್ತು ಆದ್ದರಿಂದಲೇ ಆ ಮೌಲ್ಯಗಳು ಉಳಿದೆಲ್ಲಾ ಮೌಲ್ಯಗಳನ್ನು ಮತ್ತು ಶಿಕ್ಷಣದ ಎಲ್ಲಾ ಮುಖಗಳನ್ನು ನಿರ್ಧರಿಸಬೇಕು.

ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಕೆಲವು ನಿರ್ದಿಷ್ಟ ಮೌಲ್ಯಗಳನ್ನು ಪ್ರೋತ್ಸಾಹಿಸುವುದರ ಮೂಲಕ ಆಧ್ಯಾತ್ಮಿಕ ಪ್ರಜ್ಞೆಯ ವಿಕಾಸಕ್ಕೆ ಸಹಾಯ ನೀಡುವುದು. ದೈಹಿಕ ಶಿಕ್ಷಣದ ಕ್ಷೇತ್ರದಲ್ಲಿ ನಾವು ಪ್ರೋತ್ಸಾಹಿಸಲೇ ಬೇಕಾದ ಮೌಲ್ಯಗಳೆಂದರೆ, ಆರೋಗ್ಯ, ಶಕ್ತಿ, ದೈಹಿಕ ನಮ್ಯತೆ, ಲಾಲಿತ್ಯ ಮತ್ತು ಸೌಂದರ್ಯ, ಜೈವಿಕ ಶಿಕ್ಷಣ ಕ್ಷೇತ್ರದಲ್ಲಿ ನಾವು ಪ್ರೋತ್ಸಾಹಿಸಲೇಬೇಕಾದ ಮೌಲ್ಯಗಳೆಂದರೆ ಸಮರಸತೆ ಮತ್ತು ಮೈತ್ರಿ, ಧೈರ್ಯ ಮತ್ತು ಸಾಹಸಪ್ರವೃತ್ತಿ, ಸಹಿಷ್ಣುತೆ ಮತ್ತು ಸತತ ಪ್ರಯತ್ನಶೀಲತೆ ಮತ್ತು ಅಜ್ಞಾನ, ವಿಭಜನೆ ಮತ್ತು ಅನ್ಯಾಯದ ಶಕ್ತಿಗಳನ್ನು ಗೆಲ್ಲಲು ಅದಮ್ಯ ಇಚ್ಛೆ, ಬೌದ್ಧಿಕ ಕ್ಷೇತ್ರದಲ್ಲಿ ನಾವು ಬೆಳೆಸಲೇಬೇಕೆಂದು ಬಯಸುವ ಮೌಲ್ಯಗಳೆಂದರೆ ಉನ್ನತಮಟ್ಟದ್ ನಿಷ್ಪಕ್ಷಪಾತತೆ, ಭಾವರಹಿತವಾಗಿ ಸತ್ಯದ ಅನ್ವೇಷಣೆ, ಶಾಂತತೆ ಮತ್ತು ಮೌನ ಮತ್ತು ಸಾಧ್ಯವಿದ್ದಷ್ಟು ವಿಸ್ತೃತ ಸಂಶ್ಲೇಷಣೆ, ಸೌಂದರ್ಯ ಪ್ರಜ್ಞೆಯ ವಿಕಾಸಕ್ಕೆ ಸಂಬಂಧಿಸಿದಂತೆ ಪ್ರೋತ್ಸಾಹಿಸಬೇಕಾದ ಮೌಲ್ಯಗಳೆಂದರೆ ಸೌಂರ್ಯದದರ್ಶನ ಸಾಧ್ಯವಿದ್ದಷ್ಟು ಅತ್ಯಂತ ಗಹನವಾದ ಸೌಂದರ್ಯಾನುಭವದ ಸೃಜನಾತ್ಮಕ ಆನಂದ ಮತ್ತು ಅಭಿವ್ಯಕ್ತಿ.

ಎಲ್ಲಕ್ಕಿಂತ ಮಿಗಿಲಾಗಿ ಜೀವನವೇ ಜೀವನದ ಮಹಾಶಿಕ್ಷಕ. ಆದ್ದರಿಂದ ಆಧ್ಯಾತ್ಮಿಕ ಮೌಲ್ಯಗಳು ಶೈಕ್ಷಣಿಕ ಪರಿಸರದ ವಾತಾವರಣ ಮತ್ತು ಜೀವಂತ ಉಸಿರುಗಳಾಗಿಲ್ಲದಿದ್ದಲ್ಲಿ ಅವುಗಳನ್ನು ನಿಜವಾಗಿ ಮತ್ತು ಪ್ರಭಾವಯುತವಾಗಿ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲು ಸಾಧ್ಯವಾಗುವುದಿಲ್ಲ.

ವಾಸ್ತವವಾಗಿ ಆಧ್ಯಾತ್ಮಿಕ ಮೌಲ್ಯಗಳ ಅನ್ವೇಷಣೆ, ವ್ಯಕ್ತಿತ್ವದ ಆತ್ಮಿಕ ಮತ್ತು ಆಧ್ಯಾತ್ಮಿಕ ಮುಖಗಳನ್ನು ನಿಯಂತ್ರಿಸುವ ಸತ್ಯಗಳನ್ನು ಮತ್ತು ಶಕ್ತಿಗಳನ್ನು ಅನ್ವೇಷಿಸಿ ಬೆಳೆಸಿಕೊಳ್ಳುವುದಾಗಿದೆ. ವ್ಯಕ್ತಿಯ ಆತ್ಮಿಕ ಅಸ್ತಿತ್ವವೇ ನಿಜವಾದ ವ್ಯಕ್ತಿ, ವ್ಯಕ್ತಿತ್ವದ ಎಲ್ಲಾ ಲಕ್ಷಣಗಳ ಹಿಂದಿರುವ ನಿಜವಾದ ವ್ಯಕ್ತಿ, ಇದು ಸಮಗ್ರಗೊಳಿಸುವಚಿಥದು. ಆದರೆ ಅಹಂಕಾರ ರಹಿತವಾದುದು ಮತ್ತು ಸ್ವಲ್ಪ ಸ್ವಲ್ಪವಾಗಿ ಅದು ತನ್ನನ್ನು ತಾನು ದೇಹಕ್ಕೆ, ಜೀವನಕ್ಕೆ ಮತ್ತು ಮನಸ್ಸಿಗೆ ಅವುಗಳ ಸರಿಯಾದ ವಿಕಾಸದ ಅನುಪಾತಕ್ಕೆ ಪ್ರಕ್ಷೇಪಿಸಿಕೊಳ್ಳುತ್ತದೆ ಮತ್ತು ಅವುಗಳನ್ನು ತನ್ನ ಪ್ರಕಾಶದಿಂದ ಮತ್ತು ಪರಿಶುದ್ಧತೆಯಿಂದ ಪರಿಭಾವಿತಗೊಳಿಸುತ್ತದೆ ಮತ್ತು ತನ್ನ ಪ್ರಗತಿಶೀಲ ಶಾಸನದಿಂದ ವ್ಯಕ್ತಿಯ ಅಸ್ತಿತ್ವದ ವಿವಿಧ ಭಾಗಗಳ ಸಾಮಂಜಸ್ಯವನ್ನು ಸ್ಥಾಪಿಸುತ್ತದೆ. ಅದಕ್ಕೆ ಮಾತ್ರ ಪ್ರಪಂಚದ ವ್ಯಕ್ತಿಗಳ ಸಮಷ್ಟಿಯಲ್ಲಿ ವ್ಯಕ್ತಿಗೆ ಅಪೂರ್ವವಾದ ಅಭಿವ್ಯಕ್ತಿಯ ನಿಜವಾದ ಧ್ಯೇಯ (Mission)ನ ಅರಿವಿದೆ. ಅದರ ಗುರಿ ಪ್ರಪಂಚದಲ್ಲಿ ಅತ್ಯಂತ ಉನ್ನತವಾದುದು ಸಾಧನೆಯಾಗಿದೆ ಮತ್ತು ಪಾರಸ್ಪರಿಕತೆ ಮತ್ತು ಐಕ್ಯತೆ ಅದರ ಕ್ರಿಯೆಯ ನಿಯಮವಾಗಿವೆ.

ಆತ್ಮಿಕ ಅಂಶ ನಮ್ಮಲ್ಲಿರುವ ಅತ್ಯಂತ ಒಳಗಿನ ಮತ್ತು ಅತ್ಯಂತ ಗಹನವಾದ ಅಂಶವಾದರೆ ಆಧ್ಯಾತ್ಮಿಕ ಅಂಶ ಅತ್ಯಂತ ಉನ್ನತವಾದುದು ಮತ್ತು ಇಂದ್ರಿಯ ಜ್ಞಾನಾತೀತವಾದುದಾಗಿದೆ. ಆತ್ಮಿಕ ಜೀವನ ಅಮೃತತ್ವದ ಮತ್ತು ಕೊನೆಯಿಲ್ಲದ ಕಾಲದ್ದಾಗಿದ್ದರೆ, ಇದಕ್ಕೆ ಪ್ರತಿಯೊಂದು ಆಧ್ಯಾತ್ಮಿಕ ಪ್ರಜ್ಞೆ ಎಂದರೆ ಎಲ್ಲಾ ಸೃಷ್ಟಿಗಳ ಹೊರಗಿನದು ಮತ್ತು ಕಾಲ ಮತ್ತು ಅವಕಾಶದಿಂದ ಅಚೆಯದಾಗಿದೆ.

ಇದನ್ನು ಮೀರಿ ಒಂದು ಉನ್ನತ ಅಂಶವಾದ ಮನೋಜ್ಞವಾದ ಪ್ರಜ್ಞೆ ಇದೆ. ಇದು ಆಧ್ಯಾತ್ಮಿಕತೆಯ ಇಂದ್ರಿಯಾತೀತ ಪ್ರವೃತ್ತಿಯನ್ನು ಮತ್ತು ಆತ್ಮದ ಸರ್ವವ್ಯಾಪಕತೆಯನ್ನು ಮತ್ತು ಬೌದ್ಧಿಕ, ಜೈವಿಕ ಮತ್ತು ದೈಹಿಕ ಮುಖಗಳ ಶಕ್ತಿಗಳನ್ನು ಮತ್ತು ಪರಿಪೂರ್ಣಗಳನ್ನು ಹೊಂದಾಣಿಕೆ ಮಾಡುತ್ತದೆ.

**ವಿಧಾನಗಳು ಮತ್ತು ಪ್ರಾಯೋಗಿಕ ಅನ್ವಯಿಕತೆ.**

**ಜೀವನ ಪರ್ಯಂತ ಶಿಕ್ಷಣವಾಗಿ ಸಮಗ್ರ ಶಿಕ್ಷಣ:**

ಸಮಗ್ರ ಶಿಕ್ಷಣ ಜೀವನ ಪರ್ಯಂತ ಶಿಕ್ಷಣ. ಅಂದರೆ ಅದು ದೇಹದ ಜನ್ಮಕ್ಕೂ ಮೊದಲು ಆರಂಭವಾಗುತ್ತದೆ ಮತ್ತು ಜೀವನ ಪರ್ಯಂತ ಮುಂದುವರೆಯುತ್ತದೆ. ಆರಂಭದಲ್ಲಿ ವಿಕಾಸದ ಮೊದಲ ಹಂತಗಳಲ್ಲಿ ಆತ್ಮಿಕ ಶಿಕ್ಷಣವನ್ನು ಆರಂಭಿಸಲು ಪೋಷಕರು ಮತ್ತು ಶಿಕ್ಷಕರು ಕೈಗೊಳ್ಳಬಹುದಾದ ದೇಹ, ಜೀವ ಮತ್ತು ಮನಸ್ಸಿನ ವಿಕಾಸಕ್ಕೆ ಹೆಚ್ಚಿನ ಮಹತ್ವಕೊಡಲಾಗುತ್ತದೆ. ವಾಸ್ತವವೆಂದರೆ, ಬಾಲ್ಯಾವಸ್ಥೆಯಲ್ಲಿ ಆತ್ಮಿಕ ಮುಖ ಬಹಳ ಪ್ರತಿಕ್ರಿಯಾಶೀಲವಾಗಿರುತ್ತದೆ ಮತ್ತು ಸರಿಯಾದ ವಾತಾವರಣವನ್ನು ಒದಗಿಸಿದರೆ ಮಾತ್ರ ಮುಂದಿನ ಹಂತಗಳಲ್ಲಿ ಸರಿಯಾದ ದಿಶೆಗಳಲ್ಲಿ ದೈಹಿಕ, ಜೈವಿಕ ಮತ್ತು ಬೌದ್ಧಿಕ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದರೆ ಆತ್ಮಿಕ ಅಸ್ತಿತ್ವ ಹೆಚ್ಚು ಹೆಚ್ಚು ಪ್ರಕಟಗೊಳ್ಳುವುದಕ್ಕೆ ಸಹಾಯಕವಾಗುತ್ತದೆ ಮತ್ತು ಆತ್ಮಿಕ ಅಸ್ತಿತ್ವದ ಅನ್ವೇಷಣೆಯನ್ನು ಹೆಚ್ಚು ಸುಗಮಗೊಳಿಸಬಹುದು. ಸಮಗ್ರ ಶಿಕ್ಷಣದಲ್ಲಿ ಈ ಅನ್ವೇಷಣೆಯನ್ನು ಅತ್ಯಂತ ಮಹತ್ವಪೂರ್ಣವಾದುದು ಎಂದು ಪರಿಗಣಿಸಲಾಗಿದೆ. ಏಕೆಂದರೆ ಇದರ ಮೂಲಕ ವ್ಯಕ್ತಿಗೆ ತನ್ನ ಅಂತಿಮ ಗುರಿಯ ಬಗ್ಗೆ ಪ್ರಜ್ಞೆ ಮೂಡುತ್ತದೆ ಮತ್ತು ಅವನು ತನ್ನ ಜೀವನದ ಪ್ರಭುವಾಗುತ್ತಾನೆ.

**ಆತ್ಮಿಕ ಶಿಕ್ಷಣ:**

ಪೋಷಕರು ಮತ್ತು ಶಿಕ್ಷಕರು ಎಷ್ಟರಮಟ್ಟಿಗೆ ಸಹಾಯ ನೀಡಬಹುದು

Digitised by Bharatavani, CIIL

ಎನ್ನುವುದಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದುದೇನೆಂದರೆ ಅನೇಕ ವೇಳೆ ಅವರ ಸಹಜಸ್ಫೂರ್ತಿಯ ಪ್ರತಿಕ್ರಿಯೆಗಳ ಮೂಲಕ ಮತ್ತು ಅವರು ಆಡುವ ಮಾತುಗಳ ಮೂಲಕವೋ ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಿಗೊಳ್ಳುವ ಆತ್ಮಿಕ ಅನುಭವದ ಪ್ರಭಾವದಡಿಯಲ್ಲಿ ಬಹಳಷ್ಟು ಮಕ್ಕಳು ಇರುತ್ತಾರೆಂಬುದು ಪ್ರೀತಿ, ಸತ್ಯ, ಸೌಂದರ್ಯ, ಜ್ಞಾನ, ಶ್ರೇಷ್ಠತೆ, ಸಾಹಸಗಳ ಪ್ರತಿ ಸಹಜವಾಗಿ ಆಕರ್ಷಿತಗೊಳ್ಳುವುದು ಆತ್ಮಿಕ ಪ್ರಭಾವದ ನಿಶ್ಚಿತ ಕುರುಹಾಗಿದೆ. ಈ ಪ್ರತಿಕ್ರಿಯೆಗಳನ್ನು ಗುರ್ತಿಸಲು ಮತ್ತು ಅವುಗಳನ್ನು ವಿವೇಚನಾ ಪೂರ್ಣವಾಗಿ ಮತ್ತು ಆತ್ಮಿಕ ಭಾವದಿಂದ ಪ್ರೋತ್ಸಾಹಿಸುವುದೇ ಮೊದಲ ಅನಿವಾರ್ಯ ಹೆಜ್ಜೆಯಾಗುತ್ತದೆ.

ಮಗುವಿಗೆ ಒಳ್ಳೆಯ ಮಾತುಗಳನ್ನು ಆಡುವುದು, ಬುದ್ಧಿವಂತಿಕೆಯಿಂದ ಸಲಹೆ ನೀಡುವುದು ಈ ವರ್ತನೆಗಳನ್ನು ವ್ಯಕ್ತಿ ತಾನು ಬೋಧಿಸುವುದನ್ನು ತನ್ನ ಜೀವನದ ಉದಾಹರಣೆಯ ಮೂಲಕ ತೋರಿಸದಿದ್ದಲ್ಲಿ ಇವು ಮಗುವಿನ ಮೇಲೆ ಅಲ್ಪ ಪ್ರಭಾವ ಬೀರುತ್ತದೆ ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕು.

ಸತ್ಯವಾದಿತ್ವ, ಪ್ರಾಮಾಣಿಕತೆ, ನೇರನುಡಿ, ಧೈರ್ಯ, ನಿಃಸ್ವಾರ್ಥತೆ, ಸಹನೆ, ಕಷ್ಟಸಹಿಷ್ಣುತೆ, ಸತತ ಪ್ರಯತ್ನಶೀಲತೆ, ಶಾಂತಿ, ಮೌನ, ಮತ್ತು ಸ್ವನಿಯಂತ್ರಣ—ಇವು ಮಕ್ಕಳಲ್ಲಿ ಬೆಳೆಸಬೇಕಾದ ಅತ್ಯುತ್ತಮ ಲಕ್ಷಣಗಳಾಗಿವೆ ಮತ್ತು ಇವುಗಳನ್ನು ಎಷ್ಟೇ ಸುಂದರವಾದ ಭಾಷಣಗಳಿಂದ ಅಲ್ಲದೆ ವ್ಯಕ್ತಿಯ ಜೀವಂತ ಉದಾಹರಣೆಯ ಮೂಲಕ ಎಂದೆಂದಿಗೂ ಉತ್ತಮ ರೀತಿಯಲ್ಲಿ ಬೋಧಿಸಬಹುದು.

ಮಗುವಿಗೆ ಅದರ ಪರಿಪೂರ್ಣತೆಗೆ ಸರಿಯಾದ ಮಾರ್ಗದಲ್ಲಿ ಇಡುವುದು ಮತ್ತು ವೀಕ್ಷಿಸಿ, ಸಲಹೆ ನೀಡುತ್ತಾ, ಸಹಾಯ ನೀಡುತ್ತಾ, ಆದರೆ ಯಾವುದನ್ನೂ ಒತ್ತಾಯಿಸದೆ ಅಥವಾ ಮಗು ಪ್ರವೇಶಿಸದೆ, ಮಗುವನ್ನು ಪ್ರೋತ್ಸಾಹಿಸುವುದು ಶಿಕ್ಷಕನ ಪಾತ್ರವಾಗಿದೆ. ವೈಯಕ್ತಿಕ ಉದಾಹರಣೆ, ದೈನಿಕ ಸಂಭಾಷಣೆ ಮತ್ತು ದಿನನಿತ್ಯ ಓದುವ ಪುಸ್ತಕಗಳು ಸಲಹೆಯ ಅತ್ಯುತ್ತಮ ವಿಧಾನಗಳಾಗಿವೆ.

ಕಿರುವಯಸ್ಸಿನ ವಿದ್ಯಾರ್ಥಿಗಳಿಗೆ ಪುಸ್ತಕಗಳು ಅತ್ಯಂತ ಘನತೆಯಿಂದ ಕೂಡಿದ ಗತಕಾಲದ ಉದಾಹರಣೆಗಳನ್ನು ಒಳಗೊಂಡಿರಬೇಕು. ಇವುಗಳನ್ನು ಮಾನವನ ಆಸಕ್ತಿಯ ಸರ್ವೋಚ್ಚ ಘಟಣೆಗಳಾಗಿ ಚಿತ್ರಿಸಬೇಕೇ ಹೊರತು ನೈತಿಕ ಪಾಠಗಳಂತಲ್ಲ, ಮತ್ತು ಹಿರಿಯ ವಿದ್ಯಾರ್ಥಿಗಳಿಗೆ ಮಹಾನ್ ಚೇತನಗಳ ಮಹಾನ್ ಚಿಂತನೆಗಳು, ಗರಿಷ್ಠತಮ ಸಂವೇಗಗಳನ್ನು ಉತ್ತೇಜಿಸುವ ಮತ್ತು ಸರ್ವೋಚ್ಚ ಆದರ್ಶಗಳನ್ನು ಮತ್ತು ಆಕಾಂಕ್ಷೆಗಳನ್ನು ಉದ್ದೀಪಿಸುವ ಸಾಹಿತ್ಯದ ಭಾಗಗಳನ್ನು, ಇತಿಹಾಸದ ದಾಖಲೆಗಳನ್ನು ಮತ್ತು ಆ ಮಹಾನ್ ಚಿಂತನೆಗಳಿಗೆ, ಆದರ್ಶಗಳಿಗೆ ತಕ್ಕಂತೆ ಜೀವಿಸಿದವರ ಜೀವನ ಚರಿತ್ರೆಗಳನ್ನು ಈ ಪುಸ್ತಕಗಳು ಒಳಗೊಂಡಿರಬೇಕು.

ತಮ್ಮಲ್ಲಿ ಉದ್ಭವವಾಗುವ ಗಹನವಾದ ಮತ್ತು ಉದಾತ್ತವಾದ ಪ್ರಚೋದನೆಗಳನ್ನು ಕ್ರಿಯೆಯಲ್ಲಿ, ಅನುಕರಣೆ ಮಾಡಲು ಮಕ್ಕಳಿಗೆ ಅವಕಾಶ ಒದಗಿಸಬೇಕು. ಅಪೇಕ್ಷಣೀಯವಲ್ಲದ ಪ್ರಚೋದನೆಗಳನ್ನು ಮತ್ತು ಅಭ್ಯಾಸಗಳನ್ನು ಒರಟು ರೀತಿಯಿಂದ ಟೀಕಿಸಬಾರದು. ಒಂದು ನಿಶ್ಚಿತ ಉದ್ದೇಶವಿದ್ದಾಗ ಗದರಿಸುವುದು ಅನಿವಾರ್ಯವೆನಿಸಿದ ಸಂದರ್ಭವನ್ನು ಹೊರತುಪಡಿಸಿ ಮಗುವನ್ನು ಬೈಯಬಾರದು. ಅದರಲ್ಲಿಯೂ, ವ್ಯಕ್ತಿ ತಾನು ಮಾಡಿದ ತಪ್ಪಿಗೆ ಮಗುವನ್ನು ಬೈಯದಂತೆ ಎಚ್ಚರವಹಿಸಬೇಕು. ಮಕ್ಕಳು ಬಹಳ ಸೂಕ್ಷ್ಮವಾದ ಮತ್ತು ಸೂಕ್ಷ್ಮ ದೃಷ್ಟಿಯುಳ್ಳ ವೀಕ್ಷಕರಾಗಿರುತ್ತಾರೆ. ಬೇರೆಯವರ ಮಿತಿಗಳನ್ನು ಕಂಡುಹಿಡಿಯಲು ಮತ್ತು ಅವುಗಳನ್ನು ಯಾವುದೇ ದಯಾದಾಕ್ಷಿಣ್ಯವಿಲ್ಲದೆ ತೋರಿಸಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಒಂದು ಮಗು ತಪ್ಪು ಮಾಡಿದಾಗ ಸಹಜ ಸ್ಫೂರ್ತಿಯಿಂದ ಮತ್ತು ಅದನ್ನು ಮುಚ್ಚುಮರೆಯಿಲ್ಲದೆ ಶಿಕ್ಷಕರಲ್ಲಿ ಅಥವಾ ಪೋಷಕರಲ್ಲಿ ಒಪ್ಪಿಕೊಂಡಾಗ ಕರುಣೆಯಿಂದ ಮತ್ತು ಪ್ರೀತಿಯಿಂದ ವರ್ತನೆಯಲ್ಲಿ ಏನು ತಪ್ಪಾಗಿದೆ ಎನ್ನುವುದನ್ನು ಅರ್ಥಮಾಡಿಸಬೇಕು ಮತ್ತು ಮಗು ಆ ತಪ್ಪನ್ನು ಪುನಃ ಮಾಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಒಪ್ಪಿಕೊಂಡ ತಪ್ಪನ್ನು ಕ್ಷಮಿಸಬೇಕು. ಮಗು ತಪ್ಪು ಪ್ರಚೋದನೆಗಳನ್ನು ಪಾಪಗಳು ಮತ್ತು ಅಪರಾಧಗಳು ಎಂದು ಯೋಚಿಸದೆ ಅವುಗಳನ್ನು ಗುಣಪಡಿಸಬಹುದಾದ ರೋಗದ ಲಕ್ಷಣಗಳಂತೆ ಮತ್ತು ನಿರಂತರ ಮತ್ತು ದೀರ್ಘಕಾಲದ ಇಚ್ಛಾಪೂರ್ವಕವಾದ ಪ್ರಯತ್ನದಿಂದ ಬದಲಾಯಿಸಬಹುದಾದ ವರ್ತನೆಗಳು ಎಂದು ಯೋಚಿಸಲು ಪ್ರೋತ್ಸಾಹಿಸಬೇಕು. ತಪ್ಪು ಕಲ್ಪನೆಯನ್ನು ತಿರಸ್ಕರಿಸಬೇಕು ಮತ್ತು ಅದರ ಸ್ಥಾನದಲ್ಲಿ ನಿಜಾಂಶವನ್ನು, ಭಯವನ್ನು ಧೈರ್ಯದಿಂದ, ಸ್ವಾರ್ಥತೆಯನ್ನು ತ್ಯಾಗದಿಂದ, ಮೋಹ/ಸಂಲಗ್ನವನ್ನು ವೈರಾಗ್ಯದಿಂದ ಮತ್ತು ಪ್ರೀತಿಯಿಂದ ಪ್ರತಿಸ್ಥಾಪಿಸಬೇಕು.

ಇನ್ನೂ ರೂಪಗೊಳ್ಳದೆ ಇರುವ ಸದ್ಗುಣಗಳನ್ನು ತಪ್ಪುಗಳೆಂದು ತಿರಸ್ಕರಿಸದಿರಲು ಸಾಕಷ್ಟು ಎಚ್ಚರ ವಹಿಸಬೇಕು ಮತ್ತು ಅನೇಕ ಯುವಕ/ಯುವತಿಯರ ಒರಟು ವರ್ತನೆ ಮತ್ತು ಅಜಾಗರೂಕ ಪ್ರವೃತ್ತಿಯ ವರ್ತನೆಗಳು ಅವರಲ್ಲಿ ಹುದುಗಿರುವ ಅತಿ ಹೆಚ್ಚಾದ ಬಲ, ಮಹಾನತೆ ಮತ್ತು ಶ್ರೇಷ್ಠತೆಗಳು ಉಕ್ಕಿ ಬರುವ ಪ್ರವಾಹ ಮಾತ್ರವಾಗಿರುತ್ತದೆ. ಅವುಗಳನ್ನು ಪರಿಶುದ್ಧಗೊಳಿಸಬೇಕೆ ಹೊರತು ನಿರುತ್ಸಾಹಗೊಳಿಸಬಾರದು.

ಸ್ಪಷ್ಟವಾಗಿ ನೋಡುವ ಪ್ರೀತಿ ಸ್ಥಿರವಾದುದು, ಮೃದುವಾದುದು ಮತ್ತು ಸಾಕಷ್ಟು ಪ್ರಾಯೋಗಿಕ ಜ್ಞಾನದಿಂದ ಕೂಡಿರುವುದರಿಂದ ಅಂಥಹ ಪ್ರೀತಿ ಮಗುವಿನ ಶಿಕ್ಷಣವನ್ನು ಪ್ರಭಾವಯುತವನ್ನಾಗಿ ಮಾಡಲು ಅನಿವಾರ್ಯವಾಗಿ ಬೇಕಾಗುವ ನಂಬಿಕೆಯ ಬಂಧಗಳನ್ನು ಸೃಷ್ಟಿಸುತ್ತದೆ.

ಮಗು ಪ್ರಶ್ನೆ ಕೇಳಿದಾಗ, ಅದು ಅರ್ಥವಿಲ್ಲದ್ದು ಅಥವಾ ಮೂರ್ಖತನದ್ದು ಎಂದು ಉತ್ತರಿಸಬಾರದು ಅಥವಾ ಆ ಪ್ರಶ್ನೆಯ ಉತ್ತರವನ್ನು ಅರ್ಥಮಾಡಿಕೊಳ್ಳಲಾರೆ ಎಂದು ಹೇಳಬಾರದು. ಕುತೂಹಲವನ್ನು ಮುಂದೂಡಲು ಸಾಧ್ಯವಿಲ್ಲ ಮತ್ತು ಆ ಪ್ರಶ್ನೆಯನ್ನು

Digitised by Bharatavani, CIIL

ನಿಜವಾದ ರೀತಿಯಲ್ಲಿ ಉತ್ತರಿಸಲು ಪ್ರಯತ್ನಿಸಲೇ ಬೇಕು. ಆ ಉತ್ತರ ಕೇಳುಗನ ಮೆದುಳಿಗೆ ನಿಲುಕುವ ರೀತಿಯಲ್ಲಿರಬೇಕು.

ಅರಿವು ಬೆಳೆದಂತೆ ಮಗು ತನ್ನ ಆಂತರಿಕ ಆತ್ಮಿಕ ಅಸ್ತಿತ್ವದ ಮೇಲೆ ಗಮನ ಕೇಂದ್ರೀಕರಿಸಲು ಕಲಿಸಬೇಕು ಮತ್ತು ಆತ್ಮಿಕ ಅಸ್ತಿತ್ವವನ್ನು ಹೆಚ್ಚು ಹೆಚ್ಚು ಜೀವಂತ ವಾಸ್ತವವನ್ನಾಗಿಸಬೇಕು. ಆಂತರಿಕವಾಗಿ ಅಶಾಂತತೆ ಉಂಟಾದಾಗ ಅದನ್ನು ತಳ್ಳಿಹಾಕದೆ ಅದರ್ಕಕ್ಕೆ ಗಮನ ಕೊಟ್ಟು ಆಂತರಿಕ ವೀಕ್ಷಣೆಯಿಂದ ಆ ಅಶಾಂತತೆಯ ಕಾರಣವನ್ನು ತಿಳಿದುಕೊಂಡು ಆಂತರಿಕ ಅಥವಾ ಬಾಹ್ಯ ವಿಧಾನಗಳಿಂದ ಅದನ್ನು ಪರಿಹರಿಸಿಕೊಳ್ಳಲು ಮಗುವಿಗೆ ಕಲಿಸಬೇಕು.

**ಬೌದ್ಧಿಕ ಶಿಕ್ಷಣ:**

ಬೌದ್ಧಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಅದರ ವಿಧಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ಮನಸ್ಸಿನ ಪ್ರಕ್ರಿಯೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಾಗ ಉತ್ತಮ ರೀತಿಯಲ್ಲಿ ನಿರ್ಧರಿಸಬಹುದು. ಮನಸ್ಸು ಹೆಚ್ಚಾಗಿ ಗ್ರಹಿಕೆಯ ಚಟುವಟಿಕೆಗಳಿಗೆ ಸಂಬಂಧಿಸಿದ ಮತ್ತು ಗ್ರಹಿಕೆಯ ಕ್ರಿಯೆ ಪ್ರಶ್ನೆಗೆ ಸಂಬಂಧಿಸಿದ ವಿಚಾರಗಳು ಅಥವಾ ವಸ್ತುಗಳನ್ನು ಹಿಡಿದಿಟ್ಟುಕೊಳ್ಳುವ ಒಂದು ಕೇಂದ್ರವನ್ನು ಅನ್ವೇಷಿಸುವುದಾಗಿದೆ.

ಬೌದ್ಧಿಕ ಶಿಕ್ಷಣ ಅತ್ಯಂತ ವ್ಯಾಪಕವಾದ ಮತ್ತು ಸೂಕ್ಷ್ಮವಾದ ವಿಚಾರಗಳನ್ನು ಜೀರ್ಣಿಸಿಕೊಂಡು (ಅರ್ಥಮಾಡಿಕೊಂಡು) ಮತ್ತು ಸಮಗ್ರಗೊಳಿಸಿ ಅವುಗಳನ್ನು ಒಳಗೊಳ್ಳುವ ಕೇಂದ್ರೀಯ ಪರಿಕಲ್ಪನೆಗಳನ್ನು ರೂಪಿಸಲು ವಿದ್ಯಾರ್ಥಿಗಳ ಮನಸ್ಸಿಗೆ ತರಬೇತಿ ಕೊಡುವ ಪ್ರಕ್ರಿಯೆಯಾಗಿದೆ.

ಈ ಕೇಂದ್ರೀಯ ಪರಿಕಲ್ಪನೆಗಳು ಮುಂದುವರಿದು ಮನಸ್ಸಿಗೆ ಆಭಾಸಗೊಳ್ಳುವ ಮತ್ತು ಅದು ಪರಿಕಲ್ಪಿಸಿಕೊಳ್ಳಬಹುದಾದ ಆದರೆ ಮನಸ್ಸು ಹಿಡಿದಿಟ್ಟುಕೊಳ್ಳಲಾಗದ ಮತ್ತು ಸಂಪೂರ್ಣವಾಗಿ ಅನುಭವದಲ್ಲಿ ಇಟ್ಟುಕೊಳ್ಳಲಾಗದ ಸಾರಭೂತ ಅರ್ಥವನ್ನು (Essential Meaning) ಸೂಚಿಸುತ್ತವೆ ಎಂಬುದು ಕಂಡುಬಂದಿದೆ. ಈ ವಿಚಾರ ಬೌದ್ಧಿಕ ವಿಕಾಸದ ಚರಮ ಸೀಮೆಯನ್ನು ಮತ್ತು ಮನಸ್ಸಿನ ಮಿತಿಗಳನ್ನು ಏಕಕಾಲದಲ್ಲಿ ತೋರಿಸುತ್ತದೆ. ಈ ಹಂತವನ್ನು ತಲುಪಿದ ನಂತರ ಮನಸ್ಸು ತನ್ನ ಸಹಜ ಕಾರ್ಯವನ್ನು ನಿಲ್ಲಿಸಿ ಮೌನದ ಧ್ಯಾನ ಸ್ಥಿತಿಗೆ ಬರಬೇಕಾಗುತ್ತದೆ ಮತ್ತು ಮೇಲ್ಮಟ್ಟದ ಅನುಭವಗಳಿಗೆ ತನ್ನನ್ನು ಒಡ್ಡಿಕೊಳ್ಳಬೇಕಾಗುತ್ತದೆ. ಆ ಮೇಲ್ಮಟ್ಟದ ವಲಯಗಳಿಂದ ಸ್ಪಷ್ಟವಾಗಿ ಮತ್ತು ನಿಖರವಾಗಿ ಅಂತಹ ಪ್ರೇರಣೆಗಳನ್ನು ಮತ್ತು ಅಂತಃಸ್ಫೂರ್ತಿಗಳನ್ನು ಪಡೆಯಲು ಮತ್ತು ಅವುಗಳನ್ನು ಸೃಜನಾತ್ಮಕವಾಗಿ ಅಭಿವ್ಯಕ್ತಿಗೊಳಿಸಲು ಸಿದ್ಧವಾಗಬೇಕಾಗುತ್ತದೆ. ಈ ದಿಶೆಗಳಲ್ಲಿ ಮನಸ್ಸನ್ನು ತರಬೇತಿಗೊಳಿಸಲು ಐದು ಹಂತಗಳಿರುವ ಕಾರ್ಯಕ್ರಮ ಈ ಕೆಳಗಿನಂತಿದೆ–

- ಗಮನ ಕೇಂದ್ರೀಕರಣ ಮತ್ತು ಅವಧಾನ ಶಕ್ತಿಯ ವಿಕಾಸ.
- ವಿಸ್ತೃತಗೊಳಿಸುವ, ವ್ಯಾಪಕಗೊಳಿಸುವ, ಸಂಕೀರ್ಣಗೊಳಿಸುವ ಮತ್ತು ಸಮೃದ್ಧಗೊಳಿಸುವ ಸಾಮರ್ಥ್ಯಗಳ ವಿಕಾಸ.
- ಜೀವನಕ್ಕೆ ಮಾರ್ಗದರ್ಶಕವಾಗುವ ಕೇಂದ್ರೀಯ ಅಥವಾ ಮೇಲ್ಮಟ್ಟದ ವಿಚಾರ ಅಥವಾ ಸರ್ವೋಚ್ಚ ಪ್ರಕಾಶಮಾನವಾದ ವಿಚಾರ ಒಂದರ ಸುತ್ತ ಉಳಿದ ವಿಚಾರಗಳನ್ನು ಸಂಘಟಿಸುವಿಕೆ.
- ಚಿಂತನೆಯ ನಿಯಂತ್ರಣ, ಅನಪೇಕ್ಷಿತ ಯೋಚನೆಗಳನ್ನು ತಿರಸ್ಕರಿಸಿ ಅಂತಿಮವಾಗಿ ತನಗೆ ಬೇಕಾದುದರ ಬಗ್ಗೆ ಮತ್ತು ಯಾವಾಗ ಬೇಕಾಗುತ್ತದೆ ಎನ್ನುವುದರ ಬಗ್ಗೆ ಯೋಚಿಸುವಿಕೆ.
- ಮಾನಸಿಕ ಮೌನದ, ಪರಿಪೂರ್ಣ ಶಾಂತತೆಯ ಮತ್ತು ವ್ಯಕ್ತಿತ್ವದ ಆಂತರಿಕ ವಲಯಗಳಿಂದ ಬರುವ ಅಂತಃಸ್ಫೂರ್ತಿಗಳನ್ನು ಹೆಚ್ಚು ಹೆಚ್ಚಾಗಿ ಸ್ವೀಕರಿಸುವಿಕೆಯ ವಿಕಾಸ.

ವಿಕಾಸಗೊಂಡ ವೀಕ್ಷಣೆಯ ಶಕ್ತಿ ಮತ್ತು ಗಮನ ಕೇಂದ್ರೀಕರಣ ಮತ್ತು ಅಭಿರುಚಿಗಳ ವಿಸ್ತಾರದ ಮೂಲಕ ವಿಚಾರ ಬಾಹುಳ್ಯ ವಿಚಾರಗಳ ಸಮೃದ್ಧಿ, ದೃಷ್ಟಿಕೋನಗಳ ಸಮಗ್ರತೆ – ಈ ಲಕ್ಷಣಗಳನ್ನು ಬೆಳೆಸಬೇಕು. ಕೇಂದ್ರೀಯ ವಿಚಾರಗಳನ್ನು ಬೆಳೆಯುತ್ತಿರುವ ಮನಸ್ಸಿನ ಮೇಲೆ ಒತ್ತಾಯ ಪೂರ್ವಕವಾಗಿ ಹೇರಬಾರದು, ಹಾಗೆ ಮಾಡುವುದು ಮತಾಗ್ರಹ ವಿಧಾನವಾಗುವುದು. ಅದರಿಂದ ಮನಸ್ಸು ಕ್ಷೀಣಿಸತೊಡಗಬಹುದು, ತಾರ್ಕಿಕ ಸಾಮರ್ಥ್ಯಗಳನ್ನು ಕಠಿಣ ರೀತಿಯಲ್ಲಿ ಉಪಯೋಗಿಸಿಕೊಂಡು ಮನಸ್ಸಿನ ಒಂದು ಅನ್ವೇಷಣಾ ಕ್ರಿಯೆಯಾಗಿ ಮನಸ್ಸು ಕೇಂದ್ರೀಯ ವಿಚಾರಗಳತ್ತ ಬೆಳೆಯಬೇಕು.

ವಿಚಾರಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮಾತ್ರವಲ್ಲದೆ, ಅವುಗಳನ್ನು ಟೀಕಿಸುವುದಕ್ಕೂ ಮತ್ತು ನಿಯಂತ್ರಿಸುವುದಕ್ಕೂ ಒತ್ತುಕೊಡಬೇಕು. ಗ್ರಹಿಸುವಿಕೆ, ಸಂಶ್ಲೇಷಿಸುವಿಕೆ, ಸೃಜನಶೀಲತೆ, ನಿರ್ಣಯಿಸುವಿಕೆ, ಕಲ್ಪನಾಶೀಲತೆ, ಸ್ಮರಣೆ ಮತ್ತು ವೀಕ್ಷಣೆ – ಇವುಗಳಿಗೆ ಮಾತ್ರವಲ್ಲದೆ ತಾರ್ಕಿಕ ಕಾರ್ಯಗಳಾದ ಹೋಲಿಸುವಿಕೆ, ತರ್ಕಿಸುವಿಕೆ, ನಿಗಮನಗೊಳಿಸುವಿಕೆ (Deduction), ಅನುಮಾನ (Inference) ಮತ್ತು ತೀರ್ಮಾನಗೊಳಿಸುವಿಕೆಗಳಿಗೆ ಹೆಚ್ಚಿನ ಒತ್ತು ಕೊಡಬೇಕು. ಮಾನವನ ತರ್ಕದ ಈ ಎರಡೂ ಅಂಶಗಳು ಮಾನಸಿಕ ತರಬೇತಿಯ ಪರಿಪೂರ್ಣತೆಗೆ ಅತ್ಯಂತ ಮುಖ್ಯವಾದವುಗಳಾಗಿವೆ. ಬೃಹತ್ತಾದ ಮತ್ತು ಶಕ್ತಿಯುತವಾದ ವಿಚಾರಗಳನ್ನು ಒಂದು ಪ್ರಚೋದನೆಯಾಗಿ ಮತ್ತು ಸವಾಲಾಗಿ ವಿದ್ಯಾರ್ಥಿಗಳಿಗೆ ಸತತವಾಗಿ ಪ್ರಸ್ತುತಪಡಿಸಿ ಅವುಗಳನ್ನು ಎದುರಿಸಲು ಅಥವಾ ಅವುಗಳನ್ನು ಗ್ರಹಿಸಿ, ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಂತೆ ವಿದ್ಯಾರ್ಥಿಗಳನ್ನು ಒತ್ತಾಯಗೊಳಿಸುವ ವಾತಾವರಣವನ್ನು ಸೃಷ್ಟಿಸುವುದು ಅತ್ಯುತ್ತಮ ವಿಧಾನಗಳಲ್ಲಿ ಒಂದಾಗಿದೆ. ಚಿಂತಕರು ಮಾತ್ರ ಚಿಂತಕರನ್ನು ಸೃಷ್ಟಿಸಬಲ್ಲರು ಮತ್ತು ಶಿಕ್ಷಕರು ನಿರಂತರವಾಗಿ ಮಹಾನ್ ಚಿಂತನೆಗಳನ್ನು ಮತ್ತು ವಿಚಾರಗಳನ್ನು ಉತ್ಪಾದಿಸುವ ಪ್ರಕ್ರಿಯೆಯಲ್ಲಿ ತೊಡಗಿರದಿದ್ದಲ್ಲಿ ಭದ್ರವಾದ ಮತ್ತು ಕಠೋರವಾದ ಬೌದ್ಧಿಕ ಶಿಕ್ಷಣವನ್ನು ನಿರೀಕ್ಷಿಸುವುದು ವ್ಯರ್ಥವೇ ಸರಿ. ಪರಿಪೂರ್ಣ

Digitised by Bharatavani, CIIL

ಬೌದ್ಧಿಕ ಶಿಕ್ಷಣಕ್ಕೆ ವಿಚಾರೋತ್ಪಾದನೆ ಮತ್ತು ಮೌನದಿಂದ ಕೂಡಿದ ಸ್ಪಂದಿಸುವ, ಸಂಶ್ಲೇಷಣಾತ್ಮಕ ವಿಚಾರಗಳಿಂದ ಮತ್ತು ಅತ್ಯಂತ ಸಮಗ್ರವಾದ ಆಕಾಂಕ್ಷೆಗಳಿಂದ ತುಂಬಿರುವ ಮತ್ತು ಅತ್ಯಂತ ವ್ಯಾಪಕವಾದ ಸಿದ್ಧಿಗಳು ಮತ್ತು ಸಮತೋಲನ ಐಕ್ಯತೆಯಿಂದ ಸಮೃದ್ಧವಾದ ವಾತಾವರಣವೇ ಅನಿವಾರ್ಯವಾದುದಾಗಿದೆ.

ವಿದ್ಯಾರ್ಥಿಯನ್ನು ಪ್ರಚೋದಿಸಲು ಮತ್ತು ವಿಷಯದ ಬಗ್ಗೆ ಅವನಲ್ಲಿ/ಅವಳಲ್ಲಿ ಆಸಕ್ತಿ ಮೂಡಿಸಲು ಒಂದು ಸವಾಲಿನಂತೆ ವಿಷಯವನ್ನು ಪ್ರಸ್ತುತಪಡಿಸುವ ಸತತ ಪ್ರಯತ್ನವನ್ನು ಮಾಡಲೇಬೇಕು. ಹೊಸ ಮತ್ತು ಕಲ್ಪನಾಶೀಲ ವಿಧಾನಗಳನ್ನು ಹುಡುಕಿ ಕೇಳುವುದು, ವಿವಿಧ ಮೂಲಗಳಿಂದ ಬೋಧನಾ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುವುದು, ವಿವಿಧ ಬೋಧನಾ ವಿಷಯಗಳಲ್ಲಿ ಹೊಸ ಪರಿಕಲ್ಪನೆಗಳನ್ನು ಪರಿಚಯಿಸುವುದು ಮತ್ತು ಹೊಸ ರೀತಿಗಳಲ್ಲಿ ವ್ಯಾಖ್ಯಾನಿಸುವುದು, ಹೊಸ ಹೊಸ ವಿಷಯಗಳನ್ನು ವಿಕಾಸಗೊಳಿಸುವುದು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಎಲ್ಲಾ ಮಾನಸಿಕ ಸಾಮರ್ಥ್ಯಗಳ ವಿವರಗಳಿಗೆ ಗಮನಕೊಡುವುದು ಮತ್ತು ಬೌದ್ಧಿಕ ಶಿಕ್ಷಣ ಆತ್ಮನನ್ನು ಮರೆಯಾಗಿಸದ ರೀತಿಯಲ್ಲಿ ಮಾನಸಿಕ ಸಾಮರ್ಥ್ಯಗಳನ್ನು(Faculties) ಬೆಳೆಸುವುದು. ಇದು ಸಂಕ್ಷಿಪ್ತವಾಗಿ ಬೌದ್ಧಿಕ ಶಿಕ್ಷಣದ ಪ್ರಯತ್ನ ಮತ್ತು ಅದರ ನಿಜವಾದ ಆಶಯವಾಗಿದೆ.

**ಜೈವಿಕ ಶಿಕ್ಷಣ:**

ಜೈವಿಕ ಶಿಕ್ಷಣ ಜೀವಶಕ್ತಿಯನ್ನು (ಇದು ಸಾಮಾನ್ಯವಾಗಿ ಸಂವೇಗಗಳಲ್ಲಿ, ಬಯಕೆಗಳಲ್ಲಿ ಮತ್ತು ಬೋಧನೆಗಳಲ್ಲಿ ಸ್ಪಂದಿಸುತ್ತದೆ) ಮೂರು ದಿಶೆಗಳಲ್ಲಿ ತರಬೇತಿಗೊಳಿಸುವುದಾಗಿದೆ. ಜೀವಶಕ್ತಿಯನ್ನು ನಿಜವಾದ ಕಾರ್ಯವನ್ನು ಹುಡುಕುವುದಾಗಿದೆ ಮತ್ತು ಅದರ ಅಹಂಕೇಂದ್ರಿತ ಮತ್ತು ಅಜ್ಞಾನ ಪ್ರವೃತ್ತಿಯನ್ನು ಸ್ಥಾನಾಂತರಗೊಳಿಸಿ ಮಾನಸಿಕ ಸ್ವಭಾವದ ಉನ್ನತ ನಿಯಮಗಳನ್ನು ಅನುಸರಿಸಲು ಇಚ್ಛಾಪೂರ್ವಕವಾಗಿ ಮತ್ತು ಸಾಮರ್ಥ್ಯಪಡೆದಿರುವ ಪ್ರಭುವನ್ನಾಗಿಸುವುದು, ವಿಷಯಾಸಕ್ತ (ಇಂದ್ರಿಯ ಲೋಲುಪ) ಮತ್ತು ಕಲಾಸಕ್ತ ಚಟುವಟಿಕೆಗಳ ಮೂಲಕ ವ್ಯಕ್ತವಾಗುವ ಜೀವಶಕ್ತಿ ಪ್ರವೃತ್ತಿಯನ್ನು ಸೂಕ್ಷ್ಮಗೊಳಿಸುವುದು ಮತ್ತು ಉದಾತ್ತೀಕರಿಸುವುದು ಮತ್ತು ಜೈವಿಕ ಬಯಕೆಗಳ ಲಕ್ಷಣವಿರುವ ವ್ಯಕ್ತಿತ್ವ ಸ್ವಭಾವದಲ್ಲಿರುವ ದ್ವಂದ್ವಗಳನ್ನು ಮತ್ತು ವಿರೋಧಾಭಾಸಗಳನ್ನು ಪರಿಹರಿಸಲು ಮತ್ತು ವ್ಯಕ್ತಿತ್ವ ಲಕ್ಷಣಗಳನ್ನು ರೂಪಾಂತರಣಗೊಳಿಸಲು ತರಬೇತಿ ನೀಡುವುದು.

ಜೈವಿಕ ಭಾಗದೊಂದಿಗೆ ವ್ಯವಹರಿಸುವ ಸಾಮಾನ್ಯ ವಿಧಾನಗಳು ಬಲವಂತಪಡಿಸುವುದು, ದಮನ ಮಾಡುವುದು, ವರ್ಜಿಸುವುದು ಮತ್ತು ತಪಶ್ಚರ್ಯೆ ಆಗಿವೆ. ಆದರೆ ಈ ವಿಧಾನಗಳು ದೀರ್ಘಕಾಲ ಉಳಿಯುವ ಫಲಿತಾಂಶಗಳನ್ನು ಕೊಡುವುದಿಲ್ಲ. ಇದಲ್ಲದೆ, ಈ ವಿಧಾನಗಳು ಜೀವಶಕ್ತಿಯ ಚೋದನೆ(Drive) ಮತ್ತು ಗತಿಶೀಲತೆ ಒಣಗಿ ಹೋಗಲು ಮಾತ್ರ ಸಹಾಯಕವಾಗುತ್ತವೆ ಮತ್ತು ಇದರಿಂದಾಗಿ ಆತ್ಮಸಾಕ್ಷಾತ್ಕಾರ (ಆತ್ಮೋದ್ದೇಶ ಸಾಧನೆ) ದಲ್ಲಿ ಜೀವಶಕ್ತಿಯ ಸಹಕಾರ ಇಲ್ಲದಂತಾಗುತ್ತದೆ.

ಜೈವಿಕ ಭಾಗದ ನಿಜವಾದ ತರಬೇತಿ ಇನ್ನೂ ಹೆಚ್ಚು ಸೂಕ್ಷ್ಮ ಸ್ವರೂಪದ್ದಾಗಿದೆ ಮತ್ತು ಹೆಚ್ಚು ಕಷ್ಟದಾಯಕವಾದುದಾಗಿದೆ. ಅದಕ್ಕೆ ಸಹನಶೀಲತೆ, ಕೊನೆಯಿಲ್ಲದ ಸತತ ಪ್ರಯತ್ನಶೀಲತೆ ಮತ್ತು ಬದಲಾಗದ ಇಚ್ಛೆಯ ಅಗತ್ಯವಿದೆ. ಏಕೆಂದರೆ ನಮ್ಮ ಗುರಿ ಜೀವಶಕ್ತಿಯ ರೂಪಾಂತರಣದ ಮೂಲಕ ಜೀವನದ ಉದ್ದೇಶ ಸಾಧನೆಯೇ ಹೊರತು ಜೀವನವನ್ನು ನಿರಾಕರಿಸುವುದಲ್ಲ.

ಮೊದಲಿಗೆ ಸಂವೇದನಾಂಗಗಳ ಸಾಮರ್ಥ್ಯಗಳನ್ನು ವಿಕಾಸಗೊಳಿಸಬೇಕು. ಅವುಗಳನ್ನು ಸೂಕ್ಷ್ಮಗೊಳಿಸಬೇಕು ಮತ್ತು ಸಮೃದ್ಧಗೊಳಿಸಬೇಕು. ನಂತರ, ನಮ್ಮಲ್ಲಿ ಇರುವ ಆಂತರಿಕ ಮತ್ತು ಸೂಕ್ತವಾಗಿರುವ ಸಂವೇದನೆಗಳನ್ನು ಕಂಡುಹಿಡಿಯಬೇಕು ಮತ್ತು ಅವುಗಳನ್ನು ವಿಕಾಸಗೊಳಿಸಬೇಕು, ಮೂರನೆಯದಾಗಿ, ಈ ಸಂವೇದನೆಗಳು ಬಯಸುವ ಕ್ರಿಯೆಯನ್ನು ಸ್ಥೂಲವಾದುದನ್ನು ಮತ್ತು ಒರಟಾದುದನ್ನು ತಿರಸ್ಕರಿಸಲು ಮತ್ತು ಪರಿಮಾರ್ಜಿತ ರುಚಿಗಳನ್ನು ಮತ್ತು ಉನ್ನತ ಕಲಾತ್ಮಕ ಅನುಭವಗಳನ್ನು ಆನಂದಿಸುವಂತೆ ತರಬೇತುಗೊಳಿಸಬೇಕು. ಅಂತಿಮವಾಗಿ ಬಯಕೆಗಳು, ಭಾವನೆಗಳು, ಆಕಾಂಕ್ಷೆಗಳು, ಲಾಲಸೆಗಳು ಮುಂತಾದವುಗಳನ್ನು ಅವುಗಳಿಂದ ಉದ್ಭವಿಸುವ ವಿದ್ರೋಹಗಳನ್ನು, ದಂಗೆಗಳನ್ನು ಮತ್ತು ವಿರೋಧಾಭಾಸಗಳನ್ನು ಆಳವಾಗಿ ಮತ್ತು ಭೇದಕ ರೀತಿಯಲ್ಲಿ ವೀಕ್ಷಿಸಬೇಕು ಮತ್ತು ಈ ರೀತಿಯ ವಿರುದ್ಧ ದಿಶೆಗಳ ಪ್ರವೃತ್ತಿಗಳಲ್ಲಿರಬಹುದಾದ ಸಾಮಂಜ್ಯಸ ಮತ್ತು ಸಮರಸತೆಗೆ ಕೊಡುಗೆಯಾಗಬಹುದಾದ ಅಂಶಗಳನ್ನು ಪ್ರತ್ಯೇಕಗೊಳಿಸಲು ಮತ್ತು ಆ ದ್ವಂದ್ವಗಳನ್ನು, ವಿರೋಧಾಭಾಸಗಳನ್ನು ನಮ್ಮ ಮಾನಸಿಕ ಸ್ವಭಾವದ ವಿವಿಧ ವಿಧಾನಗಳ ಮೂಲಕ ಪ್ರಯತ್ನಿಸಬೇಕು.

ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಭಾವಯುತ ವಿಧಾನಗಳು ಹೀಗಿವೆ –

- ಆದಷ್ಟು ಬೇಗ ಮಗುವಿನಲ್ಲಿ ಪ್ರಗತಿ ಮತ್ತು ಪರಿಪೂರ್ಣತೆಯ ಕಡೆಗೆ ಪ್ರವೃತ್ತಿಸುವ ಇಚ್ಛೆಯನ್ನು ಉಂಟುಮಾಡಬೇಕು.
- ಆಯಾ ಮಗುವಿನ ಸ್ವಭಾವಕ್ಕೆ ಅನುಗುಣವಾಗಿ ತರ್ಕಬದ್ಧವಾದ ವಾದವಿವಾದ ಮತ್ತು ಭಾವುಕತೆ ಅಥವಾ ಘನತೆ ಮತ್ತು ಆತ್ಮ ಗೌರವದ ಭಾವದ ಬಯಕೆ ಇವುಗಳನ್ನು ಬೆಳೆಸಬೇಕು.
- ಇಚ್ಛಾಶಕ್ತಿಯನ್ನು ವಿಕಾಸಗೊಳಿಸಬಹುದು ಮತ್ತು ಯಾವುದೇ ಪರಾಜಯವನ್ನು ಅಂತಿಮವೆಂದು ತಿಳಿಯಬಾರದು ಎನ್ನುವ ವಿಚಾರವನ್ನು ಮನವರಿಕೆ ಮಾಡಿಸುವುದು.
- ಪ್ರಯತ್ನದಿಂದ ಇಚ್ಛಾಶಕ್ತಿಯಿಂದ ಗರಿಷ್ಠ ಪ್ರಮಾಣದ ಪ್ರಯತ್ನವನ್ನು ಬಯಸುವುದು.
- ಎಲ್ಲಕ್ಕಿಂತ ಮಿಗಿಲಾಗಿ ಶಿಕ್ಷಕನಿಂದ ನಿರಂತರವಾಗಿ ಮತ್ತು

Digitised by Bharatavani, CIIL

ಪ್ರಾಮಾಣಿಕವಾಗಿ ತೋರಿಸಲ್ಪಡುವ ಉದಾಹರಣೆಗಳು.

ಇಷ್ಟೆಲ್ಲಾ ಆದರೂ ಯಾವ ದಿಶೆಯಲ್ಲಿ ಈ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು ಎನ್ನುವುದು ಮನಸ್ಸಿಗೆ ತರಬೇತಿ ನೀಡುವುದರಿಂದ ಮಾತ್ರ ನಮ್ಮ ಆತ್ಮಿಕ ಅಸ್ತಿತ್ವದಲ್ಲಿರುವ ರಹಸ್ಯ ಜ್ಞಾನದ ಅನಾವರಣಗೊಳಿಸುವುದರಿಂದ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಜೈವಿಕ ಅಸ್ತಿತ್ವ ಈ ಜ್ಞಾನ ಪ್ರಕಾಶಕ್ಕೆ ತೆರೆದುಕೊಳ್ಳುವ ಅಭ್ಯಾಸವನ್ನು ವಿಕಾಸಗೊಳಿಸಲು ಮತ್ತು ಆ ಪ್ರಕಾಶದಲ್ಲಿ ವರ್ತಿಸಲು ಆ ಆಂತರಿಕ ಮತ್ತು ಉನ್ನತ ಜ್ಞಾನವನ್ನು ಕಾರ್ಯರೂಪಕ್ಕೆ ತರುವ ಇಚ್ಛಾಶಕ್ತಿಯಾಗಿ ಜೈವಿಕ ಅಸ್ತಿತ್ವವನ್ನು ಅದರ ಸೂಕ್ತ ಸ್ಥಾನದಲ್ಲಿ ಇಡಬೇಕಾಗುತ್ತದೆ. ವ್ಯಕ್ತಿಯ ಇಚ್ಛಾ ಶಕ್ತಿಯನ್ನು ವಿಕಾಸಗೊಳಿಸುವುದು ಮತ್ತು ಅತಿ ಹೆಚ್ಚಾಗಿ ಬೆಲೆ ಕೊಡಬೇಕಾದುದು ಫಲಿತಾಂಶಕ್ಕಲ್ಲ, ಆದರೆ ಕಾರ್ಯಾನ್ವಯಕ್ಕೆ ಮತ್ತು ವ್ಯಕ್ತಿಯ ಅತ್ಯುತ್ತಮ ಪ್ರಯತ್ನಕ್ಕೆ ಎನ್ನುವುದನ್ನು ಕಂಡುಕೊಳ್ಳಲು ಇಚ್ಛಾಶಕ್ತಿಯನ್ನು ಉಪಯೋಗಿಸುವುದನ್ನು ಪ್ರೋತ್ಸಾಹಿಸುವುದು ಜೈವಿಕ ಶಿಕ್ಷಣದ ಮಹತ್ವದ ಪಾಠವಾಗಿದೆ.

**ದೈಹಿಕ ಶಿಕ್ಷಣ:**

ದೈಹಿಕ ಶಿಕ್ಷಣದ ವಿಷಯಕ್ಕೆ ಸಂಬಂಧಿಸಿದಂತೆ ದೈಹಿಕ ಅಸ್ತಿತ್ವ ನಮ್ಮ ಆಧಾರವಾಗಿದೆ ಮತ್ತು ಅತ್ಯುಚ್ಚ ಆಧ್ಯಾತ್ಮಿಕ ಮೌಲ್ಯಗಳೂ ಸಹ ವ್ಯಕ್ತವಾಗುವ ನಮ್ಮ ಜೀವನವೇ ದೈಹಿಕ ಅಸ್ತಿತ್ವದಲ್ಲಿ ಅಡಕವಾಗಿದೆ. ಒಂದು ಹಳೆಯ ಸಂಸ್ಕೃತ ಉಕ್ತಿ "ಶರೀರಮಾದ್ಯಂ ಖಲು ಧರ್ಮಸಾಧನಮ್" – ಧರ್ಮದ ಸಾಧನೆಗೆ ದೇಹವೇ ಸಾಧನ ಎಂದು ಹೇಳುತ್ತದೆ. ಇಲ್ಲಿ "ಧರ್ಮ" ಎಂದರೆ ನಮಗೆ ನಾವೇ ಪ್ರಸ್ತುತಗೊಳಿಸಿಕೊಳ್ಳುವ ಎಲ್ಲಾ ಆದರ್ಶಗಳು ಮತ್ತು ಅವುಗಳು ಕಾರ್ಯಗತಗೊಳ್ಳುವ ನಿಯಮಗಳು ಮತ್ತು ಅವುಗಳ ಕ್ರಿಯೆಗಳು ಎಂದು ಅರ್ಥವಾಗುತ್ತದೆ.

ಶಿಕ್ಷಣದ ಎಲ್ಲಾ ಕ್ಷೇತ್ರಗಳಿಗಿಂತ ವಿಧಾನಗಳು, ವ್ಯವಸ್ಥೆ, ಶಿಸ್ತು ಮತ್ತು ಕ್ರಮದಿಂದ ಪರಿಪೂರ್ಣವಾಗಿ ನಿರ್ಧರಿತವಾಗುವ ಕ್ಷೇತ್ರವು ದೈಹಿಕ ಶಿಕ್ಷಣ ಕ್ಷೇತ್ರ. ದೇಹದ ಎಲ್ಲಾ ಶಿಕ್ಷಣವೂ ಕಠೋರವಾಗಿ, ವಿವರವಾಗಿ ಮತ್ತು ಕ್ರಮಬದ್ಧವಾಗಿರಲೇಬೇಕಾಗುತ್ತದೆ.

ದೈಹಿಕ ಶಿಕ್ಷಣ ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿದೆ – ದೇಹವನ್ನು ನಿಯಂತ್ರಿಸುವುದು ಮತ್ತು ಶಿಸ್ತಿಗೆ ಒಳಪಡಿಸುವುದು, ದೇಹದ ಎಲ್ಲಾ ಭಾಗಗಳ ಮತ್ತು ಚಲನೆಗಳ ಕ್ರಮಬದ್ಧವಾದ ಮತ್ತು ಸಮಂಜಸವಾದ ಪೂರ್ಣರೂಪದ ವಿಕಾಸ, ಏನಾದರೂ ದೈಹಿಕ ದೋಷಗಳು ಮತ್ತು ವಿರೂಪತೆಗಳಿದ್ದಲ್ಲಿ ಅವುಗಳನ್ನು ಸರಿಪಡಿಸುವುದು. ದೈಹಿಕ ಶಿಕ್ಷಣ ಮಾನವ ದೇಹದ, ಅದರ ರಚನೆ ಮತ್ತು ಕಾರ್ಯಗಳ ಜ್ಞಾನದ ಮೇಲೆ ಆಧಾರಿತವಾಗಿರಬೇಕು ಮತ್ತು ದೇಹದ ಅಭ್ಯಾಸಗಳ ಬೆಳವಣಿಗೆ ಈ ಜ್ಞಾನಕ್ಕೆ ಹೊಂದಾಣಿಕೆಯಾಗುವಂತಿರಬೇಕು. ಬೆಳವಣಿಗೆಯ ಆರಂಭಿಕ ಹಂತದಿಂದಲೇ ಮಗುವಿಗೆ ಸರಿಯಾದ ಇರುವಿಕೆಯ ಸ್ಥಿತಿಗಳನ್ನು, ಭಂಗಿಗಳನ್ನು ಮತ್ತು ಚಲನೆಗಳನ್ನು ಕಲಿಸಬೇಕು. ಆಹಾರದ ಆಯ್ಕೆಯಲ್ಲಿಯೂ ಅದೇ ರೀತಿಯಾದ ತರಬೇತಿ ಕೊಡಬೇಕು. ಮಗು ಸರಳವಾದ ಮತ್ತು ಆರೋಗ್ಯಕರವಾದ, ಸತ್ವಪೂರ್ಣವಾದ ಮತ್ತು ಹಸಿವನ್ನುಂಟುಮಾಡುವ ವಸ್ತುಗಳ ಬಗ್ಗೆ ರುಚಿ ಬೆಳೆಸಿಕೊಳ್ಳಬೇಕು. ಮಗು ತಿಂದರೆ ಹೊಟ್ಟೆ ಭಾರವಾಗುವಂಥ ವಸ್ತುಗಳನ್ನು ವರ್ಜಿಸಬೇಕು, ಮುಖ್ಯವಾಗಿ ಹಸಿವಾದಾಗ ಮಾತ್ರ ತಿನ್ನುವಂತೆ ಮತ್ತು ಕೇವಲ ತನ್ನ ಅತಿ ಆಸೆ ಮತ್ತು ಹೊಟ್ಟೆಬಾಕತನಕ್ಕಾಗಿ ಆಹಾರವನ್ನು ಒಂದು ಸಾಧನವಾಗಿ ಮಾಡಿಕೊಳ್ಳಕೂಡದೆಂದು ಮಗುವಿಗೆ ತಿಳುವಳಿಕೆ ನೀಡಬೇಕು.

ಮಗುವಿಗೆ ಶುಚಿತ್ವ ಮತ್ತು ಆರೋಗ್ಯಕರ ಅಭ್ಯಾಸಗಳನ್ನು ಕಲಿಸಬೇಕು. ತಾನು ರೋಗಿಷ್ಟನಾಗಿರುವುದರಿಂದ ಬೇರೆಯವರಿಗೆ ಹೆಚ್ಚು ಆಸಕ್ತಿ ಪೂರ್ಣವಾಗುವುದಿಲ್ಲ, ಆದರೆ ಆರೋಗ್ಯವಂತನಾಗಿದ್ದರೆ ಬೇರೆಯವರಿಗೆ ಹೆಚ್ಚು ಆಸಕ್ತಿಪೂರ್ಣನಾಗುತ್ತೇನೆ ಎಂಬುದನ್ನು ಮಗುವಿಗೆ ಮನದಟ್ಟು ಮಾಡಿಸುವುದು ಬಹಳ ಮುಖ್ಯವಾದುದು ಕಾಯಿಲೆ ಬೀಳುವುದು ಸದ್ಗುಣ ಅಥವಾ ತ್ಯಾಗದ ಸೂಚನೆಯಲ್ಲ ಅದು ಪರಾಜಿತಗೊಳ್ಳುವ ಮತ್ತು ಕೀಳರಿಮೆಯ ಸೂಚನೆ ಎಂಬುದನ್ನು ಮಕ್ಕಳಿಗೆ ತಿಳಿಸಬೇಕು.

**ಸ್ವಾತಂತ್ರ್ಯ ಮತ್ತು ಶಿಸ್ತು:**

ಸಮಗ್ರ ಶಿಕ್ಷಣ ಸ್ವಾತಂತ್ರ್ಯ ಮತ್ತು ಶಿಸ್ತಿನ ನಡುವಣ ಸೂಕ್ತ ಸಂಶ್ಲೇಷಣೆಗೆ ಒತ್ತುಕೊಡುವುದೇ ಅದರ ಒಂದು ಪ್ರಮುಖ ಸಮಸ್ಯೆಯಾಗಿದೆ. ಶಿಕ್ಷಣ ಒಂದು ಸೃಜನಾತ್ಮಕ ಪ್ರಕ್ರಿಯೆಯಾಗಿರುವುದರಿಂದ ಮತ್ತು ಅದರಿಂದಲೇ ಒತ್ತಾಯ ಮತ್ತು ಸೃಜನಶೀಲತೆ ಒಟ್ಟಿಗೆ ಇರಲು ಸಾಧ್ಯವಿಲ್ಲವಾದ್ದರಿಂದ, ಸ್ವಾತಂತ್ರ್ಯ ಶಿಕ್ಷಣದ ಅತಿ ಮುಖ್ಯವಾದ ಸಾಧನವಾಗಬೇಕಾಗುತ್ತದೆ. ಶಿಸ್ತನ್ನು ಸ್ವಾತಂತ್ರ್ಯದ ಶಿಶುವನ್ನಾಗಿಸಿದಾಗ ಮತ್ತು ಶಿಸ್ತು ಸ್ವಯಂ–ಶಿಸ್ತಾಗಿ ರೂಪಾಂತರಣಗೊಂಡಾಗ ಆದರ್ಶ ಪರಿಸ್ಥಿತಿ ಲಭ್ಯವಾಗುತ್ತದೆ.

ಮಕ್ಕಳು ಶಿಕ್ಷಣದ ಚಟುವಟಿಕೆಗಳಿಗೆ ಬೇರೆ ಬೇರೆ ರೀತಿಗಳಲ್ಲಿ ಪ್ರತಿಕ್ರಿಯಿಸುತ್ತಾರೆ ಎನ್ನುವುದನ್ನು ನಾವು ಗುರುತಿಸಬೇಕು. ಕೆಲವು ಮಕ್ಕಳು ಕಲೆಗಳು, ಸಂಗೀತ, ನಾಟಕ–ಕವಿತೆಗಳ ರಚನೆ ಮುಂತಾದ ಸೃಜನಾತ್ಮಕ ಚಟುವಟಿಕೆಗಳ ಕಡೆಗೆ ಪ್ರಬಲವಾದ ಆಕರ್ಷಣೆಯ ಅನುಭವ ಪಡೆಯುತ್ತಾರೆ. ಆದ್ದರಿಂದ ಸ್ವಾಭಾವಿಕವಾಗಿ ಅಂಥಹ ಮಕ್ಕಳಿಗೆ ಈ ಮೌಲ್ಯಯುತ ಚಟುವಟಿಕೆಗಳನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಕೊಡಲೇಬೇಕಾಗುತ್ತದೆ. ಆದರೆ ಈ ರೀತಿಯ ಸೃಜನಾತ್ಮಕ ಚಟುವಟಿಕೆಗಳ ಕಡೆಗೆ ಸ್ವಾಭವಿಕ ಪ್ರವೃತ್ತಿ ಇಲ್ಲದ ಮಕ್ಕಳನ್ನು ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒತ್ತಾಯಪಡಿಸುವ ಉದಾಹರಣೆಗಳಿವೆ. ಇದು ಸಂಪೂರ್ಣವಾಗಿ ಅಸ್ವೀಕಾರಾರ್ಹವಾದುದು.

ಸೃಜನಾತ್ಮಕ ಚಟುವಟಿಕೆಗಳಿಗೆ ಅಥವಾ ಉತ್ಪಾದನಾ ಚಟುವಟಿಕೆಗಳಿಗೆ ಸುಲಭವಾಗಿ ಪ್ರತಿಕ್ರಿಯೆ ತೋರಿಸದಿರುವ, ಆದರೆ ಗಹನವಾಗಿ ಚಿಂತನಶೀಲರಾಗಿರುವ ಮತ್ತು ಯೋಚನೆಯ ಅಮೂರ್ತ ಭಾವವನ್ನು ಮತ್ತು ವೈಚಾರಿಕತೆಯ ಸ್ಪಷ್ಟತೆ ಮತ್ತು

Digitised by Bharatavani, CIIL

ಸೌಂದರ್ಯವನ್ನು ಗ್ರಹಿಸುವುದು ಒಂದು ರೋಚಕ ಪ್ರಾಯೋಜನೆ ಎಂದು ಪರಿಗಣಿಸುವ ಮಕ್ಕಳೂ ಇದ್ದಾರೆ ಎನ್ನುವುದನ್ನು ನಾವು ಗಮನಿಸುವುದು ಅಗತ್ಯವಾಗಿದೆ. ವೈಚಾರಿಕತೆಯ ಗಹನವಾದ ಅಭ್ಯಾಸ ಮತ್ತು ವಿಚಾರಗಳ ಸಂಘಟನೆ ಒಂದು ಬಹಳ ಸಕ್ರಿಯಾತ್ಮಕವಾದ ಚಟುವಟಿಕೆಯಾಗಿದೆ ಎಂಬುದನ್ನು ನಾವು ಗುರುತಿಸಬೇಕು. ಇದು ಗಮನ ಕೇಂದ್ರೀಕರಣದ ಒಂದು ಘನವಾದ ಚಟುವಟಿಕೆಯಾಗಿದೆ.

ಅದೇ ಸಮಯದಲ್ಲಿ ಸೃಜನಾತ್ಮಕ ಮತ್ತು ಉತ್ಪಾದಕ ಚಟುವಟಿಕೆಗೆ ಯಾವುದೇ ಗಮನವನ್ನು ಕೊಡದೇ, ವೈಚಾರಿಕತೆಯನ್ನು ಪೂರ್ತಿಯಾಗಿ ಅನುಸರಿಸಿದರೆ ವ್ಯಕ್ತಿತ್ವದ ಏಕಮುಖ ವಿಕಾಸಕ್ಕೆ ದಾರಿ ಮಾಡಿಕೊಟ್ಟತಾಂಗುತ್ತದೆ. ಆದರೆ ಇದರ ಪರಿಹಾರ ಯಾವುದೇ ಚಟುವಟಿಕೆಯನ್ನು ಕಡ್ಡಾಯ ಮಾಡುವುದಲ್ಲ, ಆದರೆ ಬೇರೆ ಬೇರೆ ವಿಧದ ಚಟುವಟಿಕೆಗಳನ್ನು ಸಮತೋಲಿತ ವ್ಯಕ್ತಿತ್ವ ವಿಕಾಸಕ್ಕೆ ಕ್ರಮೇಣ ಸಮತೋಲಿತ ರೀತಿಯಲ್ಲಿ ಹೇಗೆ ಮಿಶ್ರಿತಗೊಳಿಸಬಹುದು ಎಂಬುದರ ಬಗ್ಗೆ ಮಕ್ಕಳಿಗೆ ಸಲಹೆ ನೀಡುವುದು, ಪ್ರೇರೇಪಿಸುವುದು ಮತ್ತು ಸೂಚಿಸುವುದಾಗಿದೆ. ಆದರೆ ಹಾಗೆ ಸಲಹೆ ನೀಡುವಾಗ ಕೆಲವು ವೇಳೆ ವಿಚಾರಾತ್ಮಕ ಚಟುವಟಿಕೆಯ, ಉತ್ಪಾದಕ ಚಟುವಟಿಕೆಯ ಅಥವಾ ಸೃಜನಾತ್ಮಕ ಚಟುವಟಿಕೆಯ ಪ್ರತ್ಯೇಕವಾದ ವಿಕಾಸ ಕಾರ್ಯ ಅವಧಿಗಳು ಮನೋವೈಜ್ಞಾನಿಕವಾಗಿ ತನ್ನದೇ ಆದ ತರ್ಕಸಂಗತ ಬೇಡಿಕೆಯನ್ನು ಹೊಂದಿರುತ್ತದೆ ಎನ್ನುವುದನ್ನು ಶಿಕ್ಷಕ ತಿಳಿದುಕೊಳ್ಳಬೇಕು ಮತ್ತು ಅಂಥಹ ಕಾರ್ಯವನ್ನು ಪ್ರಶಂಸಿಸಬೇಕು. ಈ ಬೇಡಿಕೆಯನ್ನು ಎಷ್ಟರ ಮಟ್ಟಿಗೆ ತೃಪ್ತಿಗೊಳಿಸಬೇಕು ಮತ್ತು ವಿಕಾಸದ ಇತರ ಬೇಡಿಕೆಗಳಿಗೆ ಅಂತಹ ಬೇಡಿಕೆಯನ್ನು ಗೌಣವಾಗಿಸಬೇಕು ಎನ್ನುವುದನ್ನು ನಿರ್ಣಯಿಸುವುದಕ್ಕೆ ಶಿಕ್ಷಕ ವ್ಯಕ್ತಿತ್ವ ರೂಪಣೆಯ ಮನೋವೈಜ್ಞಾನಿಕ ಕಾರ್ಯಗಳ ಬಗ್ಗೆ ಬಹಳ ಗಹನವಾದ ಅಂತರ್‌ದೃಷ್ಟಿಯನ್ನು ಹೊಂದಿರಬೇಕು ಮತ್ತು ಮಕ್ಕಳಲ್ಲಿರುವ ಮನೋವೈಜ್ಞಾನಿಕ ವ್ಯತ್ಯಾಸಗಳ ಬಗ್ಗೆ ಸಹಾನುಭೂತಿಪೂರ್ಣ ತಿಳಿವಳಿಕೆಯನ್ನು ಹೊಂದಿರಬೇಕು.

ಕೆಲವು ಮಕ್ಕಳು ಆತ್ಮ-ತ್ಯಾಗದ ಅಥವಾ ತಮ್ಮ ಮೂಲಭೂತ ಸಂವೇಗಗಳ ಶುದ್ಧೀಕರಣದ ಮತ್ತು ಜೀವನದ ಉದಾತ್ತ ಆದರ್ಶಗಳನ್ನು ಆರಾಧಿಸುವ ಚಟುವಟಿಕೆಗಳಲ್ಲಿ ಆಳವಾದ ಆಸಕ್ತಿಯನ್ನು ಹೊಂದಿರುತ್ತಾರೆ ಎಂಬುದನ್ನು ಗಮನಿಸಬೇಕು. ಇಂಥಹ ಮಕ್ಕಳು ಕೆಲವು ವೇಳೆ ತಮ್ಮ ಅಧ್ಯಯನದಲ್ಲಿ ಅಥವಾ ಕಲೆ ಅಥವಾ ಕಲಾ-ಕುಶಲ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸುವುದಿಲ್ಲ ಮತ್ತು ಇಂಥಹ ಮಕ್ಕಳ ದಡ್ಡತನದ ಬಗ್ಗೆ ಅಥವಾ ಅಧ್ಯಯನದ ಬಗ್ಗೆ ಅವರ ಗಮನದ ಕೊರತೆಯ ಬಗ್ಗೆ ಶಿಕ್ಷಕರು ಆಗಾಗ್ಗೆ ದೂರು ಹೇಳುತ್ತಾರೆ. ಆದರೆ ಒಬ್ಬ ಉತ್ತಮ ಶಿಕ್ಷಕ ಈ ರೀತಿ ಪ್ರಶ್ನೆಗೆ ಒಳಗಾಗಿರುವ ಮಗು ಶುದ್ಧೀಕರಣ ಅಥವಾ ಪರಿಮಾರ್ಜನೆ ಎಂದು ಹೇಳುವ ಚಟುವಟಿಕೆಗಳಲ್ಲಿ ಆಂತರಿಕವಾಗಿ ತನ್ನನ್ನು ತೊಡಗಿಸಿದ್ದಾನೆ/ಳೆಯೆ, ಇಲ್ಲವೆ ಎಂದು ಶಿಕ್ಷಕ ತನ್ನನ್ನು ತಾನು ಕೇಳಿಕೊಳ್ಳಬೇಕು.

ಮಹಾಭಾರತದ ಧರ್ಮರಾಯ(ಯುಧಿಷ್ಠಿರ) ನಂತೆ ಯಾವುದನ್ನೇ ಆದರೂ ತಮ್ಮ ಜೀವನದಲ್ಲಿ ಆಚರಣೆಗೆ ತಂದು ಅದರಲ್ಲಿ ಸಫಲತೆ ಪಡೆಯದೇ ಅದರಿಂದ ತಾವು ಒಂದು ಪಾಠ ಕಲಿತೆವು ಎಂದು ಸಾಧಿಸದಿರುವ ಮಕ್ಕಳೂ ಇರಬಹುದು. ಇಂಥಹ ಮಕ್ಕಳು ನಿಜವಾಗಿಯೂ ಉದಾತ್ತ ಪ್ರಕೃತಿಯ ಮಕ್ಕಳು ಮತ್ತು ಇಂಥಹ ಮಕ್ಕಳ ಉದಾತ್ತತೆಯನ್ನು ಪ್ರಶಂಸಿಸಲು ಮತ್ತು ಅಂಥಹ ಭಾವನೆಯನ್ನು ಅದರ ಪರಿಪೂರ್ಣತೆಯ ಕಡೆಗೆ ಮುಂದುವರಿಸಲು ಅವರನ್ನು ಪ್ರೋತ್ಸಾಹಿಸಲು ಶಿಕ್ಷಕ ಸಮರ್ಥನಾಗಬೇಕು.

ಶೈಕ್ಷಣಿಕ ಪ್ರಕ್ರಿಯೆಯ ಅವಧಿಯಲ್ಲಿ ಮಕ್ಕಳಲ್ಲಿ ಕೆಲವು ಮೂಲಭೂತ ಪ್ರಶ್ನೆಗಳು ಏಳುತ್ತವೆ. ಆದರೆ ಆ ಪ್ರಶ್ನೆಗಳನ್ನು ನಾವು ಉತ್ತರಿಸುವುದಿಲ್ಲ. ಉದಾಹರಣೆಗೆ, ನಾವು ಗಣಿತವನ್ನು ಏಕೆ ಕಲಿಯಬೇಕು? ಜೀವನದ ಉದ್ದೇಶವೇನು? ಭಾಷೆ ಮತ್ತು ಗಣಿತಕ್ಕೆ ಇರುವ ಸಂಬಂಧವೇನು? ಇಂಥಹ ಪ್ರಶ್ನೆಗಳನ್ನು ಕೇಳಲು ಮಕ್ಕಳಿಗೆ ಸ್ವಾತಂತ್ರ್ಯವಿರಬೇಕು ಮತ್ತು ಇಂಥಹ ಪ್ರಶ್ನೆಗಳು ನಿಗದಿತ ಪಠ್ಯವಸ್ತುವಿನ ಒಂದು ಭಾಗವಾಗಿಲ್ಲವಾದರೂ ಅವುಗಳನ್ನು ಉತ್ತರಿಸಲು ಸಾಕಷ್ಟು ಸಮಯ ಮತ್ತು ಸಿದ್ಧತೆ ಇರಬೇಕು.

ಜ್ಞಾನದ ಇಷ್ಟೊಂದು ಬೆಳವಣಿಗೆಯಾಗಿದ್ದರೂ, ವಿದ್ಯಾರ್ಥಿ ಹೊಸತನದ ಮತ್ತು ಆಶ್ಚರ್ಯ ಮತ್ತು ರಹಸ್ಯದ ಭಾವಗಳನ್ನು ಕಳೆದುಕೊಳ್ಳುವ ರೀತಿಯಲ್ಲಿ ಮಗುವನ್ನು ವಿಕಾಸಗೊಳಿಸುವುದು ಮತ್ತೊಂದು ಮುಖ್ಯವಾದ ವಿಷಯವಾಗಿದೆ. ನಿಜವಾಗಿಯೂ ಇದು ಶಿಕ್ಷಕನ ಕಾರ್ಯದ ಕಷ್ಟಕರವಾದ ಅಂಶವಾಗಿದೆ.

**ಮೂಲ: ಕಿರೀತ್ ಜೋಷಿ**

**ಅನು: ಪ್ರೊ. ಮಂಜುನಾಥಯ್ಯ ಬಿ. ಎನ್.**

## ಸಮಾನತೆ ಮತ್ತು ಆರ್ಥಿಕ ವಿತರಣೆ

ಆರ್ಥಿಕ ಸಮಾನತೆ ಎಂದರೆ ರಾಷ್ಟ್ರದಲ್ಲಿ ಉತ್ಪತ್ತಿಯಾಗುವ ಸಂಪತ್ತಿನ ಸಮಾನವಾದ ಹಂಚಿಕೆಯ ಮೂಲಕ ಸಾಧಿಸಲಾಗುವ ಸಮಾನತೆ, ದೇಶದಲ್ಲಿನ ಶ್ರೀಮಂತರಿಗೂ ಮತ್ತು ಬಡವರಿಗೂ ಆರ್ಥಿಕ ಪರಿಸ್ಥಿತಿಯಲ್ಲಿ ಹೆಚ್ಚಿನ ಅಂತರ ಇಲ್ಲದೇ ಇರುವುದು. ಆದಾಯದ ಅಸಮಾನತೆಯನ್ನು ಅಳತೆ ಮಾಡಲು ಸಾಮಾನ್ಯವಾಗಿ ಗಿನಿ ಇಂಡೆಕ್ಸ್‌ನ್ನು ಬಳಸಲಾಗುತ್ತದೆ. ಅದೊಂದು ನಕ್ಷೆ. ಅದು ಅನೇಕ ಗಿನಿ ಪ್ರತಿನಿಧಿಸುತ್ತದೆ. ಈ ನಕ್ಷೆಯು ಲಾರೆಂಝ್ ರೇಖೆಯ ಆಧಾರವನ್ನು ಹೊಂದಿರುತ್ತದೆ. ಲಾರೆಂಝ್ ರೇಖೆಯು 0 ಇಂದ 1ರ ವರೆಗಿನ ಆದಾಯದ ಹಂಚಿಕೆಯನ್ನು ತೋರಿಸುತ್ತದೆ. ಇದರಲ್ಲಿ 0 ವು ಅತ್ಯಂತ ಸಮವಾದ ಹಂಚಿಕೆಯನ್ನು ತೋರಿಸಿದರೆ, 1 ಆದಾಯದ ಅಸಮಾನವಾದ ಹಂಚಿಕೆಯನ್ನು ತೋರಿಸುತ್ತದೆ. ಅಂಕಿಯನ್ನು 100 ರಿಂದ ಗುಣಿಸುವುದರಿಂದ ಓದಲು ಹಾಗೂ ಹೋಲಿಸಿ ನೋಡಲು ಸುಲಭವಾಗುತ್ತದೆ.

ಲಾರೆಝ್ ರೇಖೆಯ ಮೇಲಿನ ಪ್ರತಿಯೊಂದು ಬಿಂದುವೂ

Digitised by Bharatavani, CIIL

"ತಳಸ್ತರದ ಶೇಕಡ 20ರಷ್ಟು ಕುಟುಂಬಗಳು ದೇಶದ ಒಟ್ಟು ಆದಾಯದ ಶೇಕಡ 10 ರಷ್ಟು ಆದಾಯವನ್ನು ಹೊಂದಿರುತ್ತದೆ" ಎಂದು ಸೂಚಿಸುತ್ತದೆ. (ಇದಕ್ಕೆ ಪರೇಟೋ ನೀತಿ ಎನ್ನುತ್ತಾರೆ). ಒಂದು ಅತ್ಯಂತ ಸಮನಾದ ಆದಾಯದ ಹಂಚಿಕೆ ಎಂದರೆ ಅಲ್ಲಿ ಎಲ್ಲಾ ವ್ಯಕ್ತಿಗಳ ಆದಾಯವೂ ಒಂದೇ ಆಗಿರುತ್ತದೆ. ಆದರೆ ಇದು ವಸ್ತುಸ್ಥಿತಿಯಾಗಲು ಸಾಧ್ಯವಿಲ್ಲ. ಏಕೆಂದರೆ ಜನರ ಆದಾಯದಲ್ಲಿ ವ್ಯತ್ಯಾಸವಿಲ್ಲದೆ ಇರಲು ಸಾಧ್ಯವಿಲ್ಲ. ಆದರೆ ಈ ವ್ಯತ್ಯಾಸವು ಹೆಚ್ಚಾಗಿರಬಾರದು. ಅಂತಹ ವ್ಯವಸ್ಥೆಯನ್ನು ನಾವು ಉತ್ತಮವಾದ ಆರ್ಥಿಕ ವಿತರಣೆ ಎನ್ನಬಹುದು. ಇಲ್ಲಿ 'ಎ' ಎನ್ನುವ ಕ್ಷೇತ್ರವು ಅತ್ಯಂತ ಸಮನಾದ ಹಂಚಿಕೆಯನ್ನೂ ಮತ್ತು 'ಬಿ' ಎನ್ನುವ ಕ್ಷೇತ್ರವು ಅಸಮಾನವಾದ ಹಂಚಿಕೆಯನ್ನೂ ಪ್ರತಿನಿಧಿಸುತ್ತವೆ.

ಗಿನಿ ಗುಣಾಂಕ ಕ್ಷೇತ್ರವು ಅತ್ಯಂತ ಸಮಾನ ಹಂಚಿಕೆಯ ರೇಖೆಗೂ ಲಾರೆಝ್ ರೇಖೆಗೂ ನಡುವೆ ಶೇಕಡಾವಾರು ಪರಿಪೂರ್ಣ ಸಮಾನತೆ ಮತ್ತು ಅಸಮಾನತೆಯನ್ನು ತೋರಿಸುತ್ತದೆ. ಗಿನಿ ಗುಣಾಂಕ ಹೆಚ್ಚಾದಷ್ಟೂ ಹಂಚಿಕೆಯ ಅಸಮಾನತೆಯೂ ಹೆಚ್ಚು ಎಂದು ತಿಳಿಯಬಹುದು.

**ಶಿಕ್ಷಣದ ಪಾತ್ರ:**

ಆದಾಯದ ಅಸಮಾನತೆಗೆ ಕಾರಣವಾದ ಅನೇಕ ಅಂಶಗಳಿವೆ. ಅವುಗಳು ಯಾವಾಗಲೂ ಹೊರನೋಟಕ್ಕೆ ಗೋಚರವಾಗದೇ ಇರಬಹುದು ಮತ್ತು ಚರ್ಚಿಸಲು ನಿಲುಕದೇ ಇರಬಹುದು. ಒಂದು ಕಾರಣ, ಕೆಲಸದ ಅವಧಿಯ ಹೆಚ್ಚಳ 'ಸಿರಿವಂತ' ಸಮುದಾಯಕ್ಕೂ ಮತ್ತು ಕಡಿಮೆ ಕೆಲಸದ ಅವಧಿ 'ಬಡ' ಸಮುದಾಯಕ್ಕೂ ಪ್ರಾಪ್ತವಾಗಿರುವುದು ಇರಬಹುದು. ಹೆಚ್ಚು ಕಾಲವನ್ನು ಕೆಲಸದಲ್ಲಿ ಹೂಡುವುದರಿಂದ ಆದಾಯ ಹೆಚ್ಚಬಹುದು. ಅದರಿಂದಾಗಿ ಸಿರಿವಂತರ ಆದಾಯದ ಅಂಕಿ-ಅಂಶ ಉತ್ತಮಗೊಳ್ಳಬಹುದು.

ಅಂತಾರಾಷ್ಟ್ರೀಯ ವ್ಯಾಪಾರವು ಕಂಪನಿಗಳ ವಿಸ್ತರಣಾ ಯೋಜನೆಗಳಿಗೆ ಸಹಾಯಕವಾದ ಒಂದು ಮುಖ್ಯವಾದ ಅಂಶ. ಅದು ಮಾರುಕಟ್ಟೆ ವಿಸ್ತೀರ್ಣವನ್ನು ಹೆಚ್ಚಿಸುತ್ತದೆ ಹಾಗೂ ಪದಾರ್ಥಗಳ ಬಾಳಿಕೆ ಅವಧಿಯ ಹೆಚ್ಚಳಕ್ಕೂ ಕಾರಣವಾಗುತ್ತದೆ. ವಿದೇಶಿ ವ್ಯಾಪಾರದಲ್ಲಿ ತೊಡಗುವ ಮತ್ತೊಂದು ವಿಧಾನವೆಂದರೆ 'ಹೊರಗುತ್ತಿಗೆ' ವಿಧಾನ. ಬೇರೆ ದೇಶಗಳಲ್ಲಿ ನಮ್ಮ ದೇಶದ ಕೆಲಸಗಳನ್ನು ಮಾಡಿಸಿ, ತಯಾರಿಸಿದ ವಸ್ತುಗಳನ್ನು ಅಲ್ಲಿ ಮತ್ತು ಇತರ ದೇಶಗಳಲ್ಲಿ ಮಾರಾಟ ಮಾಡುವುದು. ಇದರಿಂದ ಹೊರದೇಶಗಳಲ್ಲಿ ಕಡಿಮೆ ಕೂಲಿಯಲ್ಲಿ ದೊರಕುವ ಶ್ರಮದ ಲಾಭವನ್ನು ಪಡೆಯಬಹುದು. ಇದರಿಂದ ಉತ್ಪಾದನಾ ವೆಚ್ಚವು ಕಡಿಮೆಯಾಗಿ, ಬರುವ ಲಾಭ ಹೆಚ್ಚುತ್ತದೆ.

ತಾಂತ್ರಿಕ ಪ್ರಗತಿಯಿಂದಾಗಿ ಅನೇಕ ದೇಶಗಳು ಭಾರತದಲ್ಲಿ 'ಹೊರಗುತ್ತಿಗೆ' ವಿಧಾನದಲ್ಲಿ ಕೆಲಸಗಳನ್ನು ಸೃಷ್ಟಿಸುತ್ತಿವೆ. ಅವುಗಳಿಂದಾಗಿ ಉದ್ಯೋಗಾವಕಾಶಗಳು ಹೆಚ್ಚಾಗುತ್ತಲಿವೆ. ಇಂತಹ ವಿವಿಧ ಉದ್ಯೋಗಗಳನ್ನು ಮಾಡಲು ಸೂಕ್ತ ಶಿಕ್ಷಣ ಮುಖ್ಯವಾದುದು. ಆದ್ದರಿಂದ ಭಾರತದಲ್ಲಿ ಕೇವಲ 'ಹೊರಗುತ್ತಿಗೆ' ನಿರ್ವಹಣೆಗಾಗಿಯಲ್ಲದಿದ್ದರೂ ನಮ್ಮದೇ ಆದ ವಿವಿಧ ಕೈಗಾರಿಕೆಗಳಿಗೆ, ವ್ಯವಸಾಯಕ್ಕೆ, ವ್ಯಾಪಾರಕ್ಕೆ ಬೇಕಾದ ಶಿಕ್ಷಣವನ್ನು ನಮ್ಮ ದೇಶದ ಯುವಕರಿಗೆ ಒದಗಿಸುವುದು ಬಹಳ ಮುಖ್ಯವಾದುದು. ಆದ್ದರಿಂದ ಶಿಕ್ಷಣವು ಉದ್ಯೋಗಗಳ ನಿರ್ವಹಣೆಗೆ ಸಹಾಯಕ. ಉದ್ಯೋಗಗಳಿಂದ ಆದಾಯದ ಹೆಚ್ಚಳ, ನಂತರ ಆದಾಯದ ಸಮಾನತೆ ಮುಂತಾದ ವಿಚಾರಗಳು ಪ್ರಮುಖವಾಗುತ್ತವೆ.

– ಡಾ. ರಾಘವೇಂದ್ರರಾವ್ ಹೆಚ್.ಎಸ್.

## ಸಮಾಲೋಚನೆ

ಸಮಾಲೋಚನೆ ಎನ್ನುವುದು ಇಬ್ಬರು ವ್ಯಕ್ತಿಗಳ ನಡುವೆ ಏರ್ಪಡುವ ಸಂಬಂಧದ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಇಬ್ಬರು ವ್ಯಕ್ತಿಗಳೆಂದರೆ ಒಬ್ಬ ಸಮಸ್ಯೆ ಹೊಂದಿರುವ ವ್ಯಕ್ತಿ ಅಥವಾ ಕಕ್ಷಿದಾರ ಮತ್ತು ಇನ್ನೊಬ್ಬ ತರಬೇತಿ ಹಾಗೂ ಅನುಭವ ಹೊಂದಿದ ವೃತ್ತಿಪರ ವ್ಯಕ್ತಿ ಅಥವಾ ಸಮಾಲೋಚಕ. ಈ ಪ್ರಕ್ರಿಯೆಯಲ್ಲಿ ಸಮಾಲೋಚಕ ತನ್ನ ಕಕ್ಷಿದಾರನು ತನ್ನ ಸಮಸ್ಯೆಗಳಿಗೆ ತಾನೇ ಪರಿಹಾರ ಕಂಡುಕೊಳ್ಳುವಂತೆ ಮಾಡುತ್ತಾನೆ. ಈ ಸಮಾಲೋಚನೆ ಮೂಲತಃ ಸಮಾಲೋಚಕ ಮತ್ತು ಸಲಹಾರ್ಥಿಯು ಮುಖಾಮುಖಿ ಭೇಟಿಯಾಗುವ ಒಂದು ಸಂಬಂಧವನ್ನೊಳಗೊಂಡಿದೆ.

ಸಮಾಲೋಚನೆ ವಿಶಾಲವ್ಯಾಪ್ತಿಯ ಈ ಕೆಳಕಂಡ ಕ್ರಮಗಳನ್ನೊಳಗೊಳ್ಳುತ್ತದೆ-ಸಲಹೆ ನೀಡುವಿಕೆ, ಮನೋವಿಶ್ಲೇಷಣೆ, ಮಾಹಿತಿ ನೀಡುವಿಕೆ, ಪರೀಕ್ಷಾ ಅಂಕಗಳ ಅರ್ಥೈಸುವಿಕೆ, ಸಲಹಾರ್ಥಿಯು ತನ್ನ ತೊಂದರೆಗಳ ಬಗ್ಗೆ ಆಲೋಚಿಸುವಂತೆ ಪ್ರೋತ್ಸಾಹಿಸುವುದು ಅಥವಾ ತನ್ನ ಭಾವನೆಗಳ ಮೂಲಕ ಕಾರ್ಯನಿರ್ವಹಿಸುವುದು ಇತ್ಯಾದಿ... ಸಮಾಲೋಚನೆ ಎಂಬುದು ಸಲಹೆಗಾರ ಮತ್ತು ಸಲಹಾರ್ಥಿಯನ್ನೊಳಗೊಳ್ಳುವ ದ್ವಿಮುಖ ಕಾರ್ಯವಾಗಿದೆ. ಮಾರ್ಗದರ್ಶನ ಸೇವೆಗಳಲ್ಲಿ, ಸಮಾಲೋಚನೆಯನ್ನು ಸಹಾಯ ಮಾಡುವ ಪ್ರಕ್ರಿಯೆಯ ಮುಖ್ಯಭಾಗ ಎಂದು ಪರಿಗಣಿಸಲಾಗಿದೆ, ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಪ್ರಯತ್ನದಲ್ಲಿ ಅತ್ಯಂತ ಅಗತ್ಯವಾದ ಸಹಾಯವಾಗಿದೆ.

ಸಮಾಲೋಚನೆಯ ಕೆಲವು ವ್ಯಾಖ್ಯೆಗಳನ್ನು ಗಮನಿಸಬಹುದು ಜಿ.ಸಿ.ರೆನ್ ಪ್ರಕಾರ "ಸಮಾಲೋಚನೆಯು ಪರಸ್ಪರ ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ವಿಚಾರ ವಿನಿಮಯಗಳ ವೈಯಕ್ತಿಕ ಹಾಗೂ ಕ್ರಿಯಾಶೀಲ ಸಂಬಂಧವಾಗಿದೆ". "ಸಮಾಲೋಚನೆಯು ಇಬ್ಬರು ವ್ಯಕ್ತಿಗಳ ನಡುವಣ ಏರ್ಪಡುವ ಸಂಬಂಧವಾಗಿದ್ದು, ಕಷ್ಟ ಅಥವಾ ಸಮಸ್ಯೆಗಳನ್ನೆದುರಿಸುತ್ತಿರುವ ವ್ಯಕ್ತಿಯು ಮತ್ತೊಬ್ಬನ ಸಹಾಯ ಬೇಡಿದಾಗ ನೀಡುವುದಾಗಿದೆ" ಎಂದು ಎರಿಕ್‌ಸನ್

Digitised by Bharatavani, CIIL

ವ್ಯಾಖ್ಯಾನಿಸಿದ್ದಾನೆ. ಕಾರ್ಲ್‌ರೋಜರ್ಸ್ ಅಭಿಪ್ರಾಯದಲ್ಲಿ "ವ್ಯಕ್ತಿಯೊಂದಿಗಿನ ಸರಣೀಕೃತ ನೇರ ಸಂಪರ್ಕಗಳ ಮೂಲಕ ಅವನ ಮನೋಭಾವ ಮತ್ತು ವರ್ತನೆಗಳಲ್ಲಿ ಅಪೇಕ್ಷಿತ ಬದಲಾವಣೆ ತರಲು ನೀಡುವ ಸಹಾಯವೇ ಸಮಾಲೋಚನೆ.

ಸಮಾಲೋಚನೆಯ ಪ್ರಕ್ರಿಯೆ ಈ ಕೆಳಗಿನ ಲಕ್ಷಣಗಳನ್ನು ಹೊಂದಿದೆ.

1. ಸಮಾಲೋಚಕ ಹಾಗೂ ಕಕ್ಷಿದಾರನ ನಡುವಿನ ಅಂತರ್‌ಕ್ರಿಯೆ
2. ವೃತ್ತಿಪರ ಸನ್ನಿವೇಶದಲ್ಲಿ ನಡೆಯುತ್ತದೆ, ಮತ್ತು
3. ಸಮಾಲೋಚಕ ಮತ್ತು ಕಕ್ಷಿದಾರನ ಸಂಬಂಧ ಪ್ರಾರಂಭವಾಗಿ ಕಕ್ಷಿದಾರನ ವರ್ತನೆಯಲ್ಲಿ ಬದಲಾವಣೆಯನ್ನು ಸುಗಮಗೊಳಿಸುತ್ತದೆ.

ಪೆಪಿನ್ಸ್ಕ ಮತ್ತು ಪೆಪಿನ್ಸ್ಕ ಪ್ರಕಾರ "ಸಮಾಲೋಚನೆಯ ಸಂಬಂಧ ಇಬ್ಬರು ವ್ಯಕ್ತಿಗಳ ನಡುವಿನ ಅಂತರ್‌ಕ್ರಿಯೆಯಿಂದ ಬೆಳೆಯುತ್ತದೆ. ಒಬ್ಬ ವೃತ್ತಿಪರ ತರಬೇತಿ ಹೊಂದಿದ ವ್ಯಕ್ತಿ ಹಾಗೂ ಮತ್ತೊಬ್ಬ ಅವನಿಂದ ಸೇವೆ/ಸಲಹೆ ನಿರೀಕ್ಷಿಸುವ ವ್ಯಕ್ತಿ".

**ಸಮಾಲೋಚನೆಯ ಸ್ವರೂಪ:**

ಸಮಾಲೋಚನಾ ಪ್ರಕ್ರಿಯೆಯಲ್ಲಿ ಸಮಾಲೋಚಕ ಮತ್ತು ಸಮಾಲೋಚಿತ ವ್ಯಕ್ತಿಗಳ ಮಧ್ಯೆ ಪರಸ್ಪರ ಗೌರವ ಭಾವನೆ ಇರಬೇಕು, ಸಮಾಲೋಚಕ ಸ್ನೇಹಪರ ಹಾಗೂ ಸಹಕಾರ ಭಾವನೆ ಹೊಂದಿರಬೇಕು, ಸಮಾಲೋಚಿತ ವ್ಯಕ್ತಿ ಸಮಾಲೋಚಕನಲ್ಲಿ ನಂಬಿಕೆ ಮತ್ತು ವಿಶ್ವಾಸ ಹೊಂದಿರಬೇಕು.

- ಸಮಾಲೋಚನೆ ಸಲಹಾರ್ಥಿಗೆ ಉದ್ದೇಶಪೂರ್ವಕವಾದ ಕಲಿಕಾ ಅನುಭವಗಳನ್ನು ಒದಗಿಸುತ್ತದೆ.
- ಸಮಾಲೋಚನೆಯು ಸಮಾಲೋಚಕ ಮತ್ತು ಸಲಹಾರ್ಥಿಯು ನಡುವಿನ ಖಾಸಗಿ ಸಂದರ್ಶನ ವಾಗಿರುತ್ತದೆ.
- ಸಮಾಲೋಚನೆಯು ಇಬ್ಬರು ವ್ಯಕ್ತಿಗಳ ಮಧ್ಯೆ ಪರಸ್ಪರ ವಿಶ್ವಾಸದ ಮೇಲೆ ಏರ್ಪಡುವ ಸಂಬಂಧವಾಗಿದೆ.
- ಸಮಾಲೋಚನಾ ಪ್ರಕ್ರಿಯೆಯು ಸಲಹಾರ್ಥಿಯ ಅಗತ್ಯತೆಗಳಿಗನುಗುಣವಾಗಿ ರೂಪಿತಗೊಳ್ಳುತ್ತದೆ.
- ಸಮಾಲೋಚನ ಪ್ರಕ್ರಿಯೆಯಲ್ಲಿ ಸಲಹಾರ್ಥಿಯ ಸ್ವಯಂ ಸ್ವೀಕೃತಿ ಹಾಗೂ ಸ್ವಯಂ ನಿರ್ದೇಶನಕ್ಕೆ ಒತ್ತು ಕೊಡಲಾಗಿದೆ.

**ಸಮಾಲೋಚನೆಯ ಉದ್ದೇಶಗಳು:**

- ಸಮಾಲೋಚನೆಯ ಪ್ರಮುಖ ಉದ್ದೇಶ ವ್ಯಕ್ತಿ ತನಗೆ ತಾನೆ ಸಹಾಯ ಮಾಡಿಕೊಳ್ಳುವಂತೆ ಆತನಿಗೆ ಸಹಾಯ ನೀಡುವುದಾಗಿದೆ.
- ವ್ಯಕ್ತಿಗೆ ಅವನ ಯಶಸ್ಸಿಗೆ ಪೂರಕವಾಗುವ ಮಹತ್ವದ ಅಂಶಗಳ ಬಗ್ಗೆ ಮಾಹಿತಿ ನೀಡುವುದು.
- ವ್ಯಕ್ತಿಯು ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಹಾಯಕವಾಗುವಂತಹ ಮಾಹಿತಿಯನ್ನು ಸಂಗ್ರಹಿಸುವುದು.
- ಸಮಾಲೋಚಕ ಮತ್ತು ಕಕ್ಷಿದಾರನ ಮಧ್ಯೆ ಪರಸ್ಪರ ಅರ್ಥಮಾಡಿಕೊಳ್ಳುವಂತಹ ವಾತಾವರಣವನ್ನು ಸ್ಥಾಪಿಸುವುದು.
- ಕಕ್ಷಿದಾರ ತನ್ನ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಅಗತ್ಯವಾದ ಆಯ್ಕೆಗಳನ್ನು ಮಾಡಲು, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ಅಗತ್ಯವಾದ ಯೋಜನೆಗಳನ್ನು ರೂಪಿಸಿಕೊಳ್ಳಲು ನೆರವಾಗುವುದು.
- ಕಕ್ಷಿದಾರ ಸ್ವತಂತ್ರವಾಗಿ ಆಲೋಚಿಸುವಂತೆ ಮತ್ತು ಜವಾಬ್ದಾರಿಯುತವಾಗಿ ವರ್ತಿಸುವಂತೆ ಮಾಡುವುದು.
- ಕಕ್ಷಿದಾರನಿಗೆ ತನ್ನ ಆಸಕ್ತಿಗಳು, ಸಾಮರ್ಥ್ಯಗಳು, ಅಭಿರುಚಿಗಳು ಮತ್ತು ಅವಕಾಶಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುವುದು.
- ಸಮಾಲೋಚನೆಯ ಉದ್ದೇಶ ವ್ಯಕ್ತಿಯ ತಕ್ಷಣದ ಸಮಸ್ಯೆಗೆ ಪರಿಹಾರ ನೀಡುವುದಾಗಿರದೆ, ಅವನ ವರ್ತನೆ ಹಾಗೂ ಮನೋಭಾವಗಳಲ್ಲಿ ಬದಲಾವಣೆ ತರುವುದಾಗಿದೆ.
- ಕಕ್ಷಿದಾರನಿಗೆ ತನ್ನ ಸಾಮರ್ಥ್ಯಗಳನ್ನು ಗುರ್ತಿಸಲು ನೆರವಾಗುವುದು ಮತ್ತು ಸಕಾರಾತ್ಮಕ ಮನೋಧೋರಣೆಗಳನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸುವುದು.

ಸಮಾಲೋಚಕ ವ್ಯಕ್ತಿಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ವಿದ್ಯಾರ್ಥಿ ತನಗೆ ತಾನೇ ಸಹಾಯ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸುತ್ತಾನೆ. ಈ ಪ್ರಕ್ರಿಯೆ ವ್ಯಕ್ತಿ ತನ್ನ ಪಾತ್ರ ಸನ್ನಿವೇಶವನ್ನು ವಸ್ತುನಿಷ್ಠವಾಗಿ ಅರ್ಥ ಮಡಿಕೊಳ್ಳುವುದಾಗಿದೆ. ಸಮಾಲೋಚಕ ವ್ಯಕ್ತಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸುತ್ತಾನೆ. ಸಮಾಲೋಚಕ ಸಮಸ್ಯೆಯನ್ನು ಪರಿಹರಿಸುವುದಿಲ್ಲ ಆದರೆ ಸಮಸ್ಯೆ ಪರಿಹಾರದಲ್ಲಿ ನೆರವಾಗುತ್ತಾನೆ.

**ಸಮಾಲೋಚನೆಯ ತತ್ವಗಳು:**

ಸಮಾಲೋಚನೆಯ ಕೆಲವು ಮುಖ್ಯ ತತ್ವಗಳು ಹೀಗಿವೆ;

- ಸಮಾಲೋಚನೆ ಸಮಾಲೋಚಕನಿಗೂ ಸಲಹಾರ್ಥಿಗೂ (Counselee) ನಡೆಯುವ ಸೌಹಾರ್ದಪೂರ್ಣ ವಿಚಾರ ವಿನಿಮಯದ ಪ್ರಕ್ರಿಯೆಯಾಗಿರಬೇಕು.
- ಸಮಾಲೋಚನೆ ವ್ಯಕ್ತಿಗತ ಸಲಹಾ ಸೇವೆಯ ಅವಶ್ಯಕತೆಯುಳ್ಳ ಸಲಹಾರ್ಥಿಯ ಅಪೂರ್ವತೆಯನ್ನು

Digitised by Bharatavani, CIIL

ಗುರ್ತಿಸುವುದಕ್ಕೆ ಮಹತ್ವಕೊಡುತ್ತದೆ.

- ಸಮಾಲೋಚನೆ ಯಾವಾಗಲೂ ಧನಾತ್ಮಕ ಅಂಶಗಳಿಗೆ ಒತ್ತು ನೀಡುತ್ತದೆ.
- ಸಮಾಲೋಚನೆಯ ಪ್ರಮಾಣ ಮತ್ತು ವ್ಯಾಪ್ತಿಯನ್ನು ಪ್ರತಿಯೊಂದು ಸಮಸ್ಯೆಯ ಅಗತ್ಯವನ್ನು ಅವಲಂಬಿಸಿರಬೇಕು.
- ತೀವ್ರ ಸಮಸ್ಯೆಗಳನ್ನು ಎದುರಿಸುವ ಎಲ್ಲರಿಗೂ ಸಮಾಲೋಚನೆಯ ಅಗತ್ಯವಿರುತ್ತದೆ.
- ಸಮಲೋಚನೆಯ ಪ್ರಕ್ರಿಯೆ ಸಮಾಲೋಚಕನು ಒಪ್ಪಿರುವ ಸಿದ್ಧಾಂತಗಳಿಂದ ಪ್ರಭಾವಿತಗೊಳ್ಳುತ್ತದೆ.
- ಸಮಾಲೋಚನೆ ಒಂದು ವ್ಯವಸ್ಥಿತ ಪ್ರಕ್ರಿಯೆಯಾದುದರಿಂದ ಸಮಾಲೋಚಕ ಅದಕ್ಕೆ ಬೇಕಾದ ವೃತ್ತಿ ಅರ್ಹತೆಗಳನ್ನು ಹೊಂದಿರುತ್ತಾನೆ.
- ಸಮಾಲೋಚನೆಯ ಸಫಲತೆಗೆ ಸಮಾಲೋಚಕ ಮತ್ತು ಸಲಹಾರ್ಥಿಯ ನಡುವೆ ಸೌಹಾರ್ದಯುತ ಸಂಬಂಧ(Rapport) ಇರಬೇಕಾಗುತ್ತದೆ.
- ಸರಿಯಾಗಿ ಕೈಗೊಂಡ ಸಮಾಲೋಚನೆ ಸಲಹಾರ್ಥಿಯ ವ್ಯಕ್ತಿತ್ವದಲ್ಲಿ ಧನಾತ್ಮಕ ಬದಲಾವಣೆಗಳನ್ನು ಉಂಟುಮಾಡಬೇಕು.
- ಸಮಾಲೋಚಕ ವಿವಿಧ ಮೂಲಗಳಿಂದ ಮತ್ತು ವಿಧಾನಗಳಿಂದ ಬೇಕಾದ ಪೂರಕ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಬೇಕು.

**ಸಮಾಲೋಚಕನ ಅರ್ಹತೆಗಳು ಮತ್ತು ಗುಣಗಳು:**

ಸಮಾಲೋಚನೆ ಒಂದು ವೃತ್ತೀಯ ಕಾರ್ಯವಾಗಿದೆ. ಅದರಲ್ಲಿ ಸಫಲತಾಪೂರ್ವಕವಾಗಿ ಕಾರ್ಯ ನಿರ್ವಹಿಸಲು ಸಮಾಲೋಚಕನಿಗೆ ಅನೇಕ ಅರ್ಹತೆಗಳು ಮತ್ತು ಗುಣಗಳು ಇರಬೇಕಾಗುತ್ತದೆ. ಇವುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು– 1. ಸಮಾಲೋಚನೆಯ ವೃತ್ತಿಗೆ ಅಗತ್ಯವಾದ ಶೈಕ್ಷಣಿಕ ಅರ್ಹತೆಗಳು 2. ಒಬ್ಬ ವ್ಯಕ್ತಿಯಾಗಿ ಮತ್ತು ಸಮಾಲೋಚಕನಾಗಿ ಇರಬೇಕಾದ ವೃತ್ತಿ ಸಂಬಂಧಿತ ಕೌಶಲಗಳು ಮತ್ತು ವ್ಯಕ್ತಿತ್ವ ಲಕ್ಷಣಗಳು.

ಸಮಾಲೋಚನೆಯನ್ನು ಒಂದು ವೃತ್ತಿಯಾಗಿ ಕೈಗೊಳ್ಳಲು ವ್ಯಕ್ತಿ ಮೂಲತಃ ವೈದ್ಯಕೀಯ ಪದವಿ ಅಥವಾ ಸ್ನಾತಕೋತ್ತರ ಪದವಿಯೊಂದಿಗೆ ಮನೋಚಿಕಿತ್ಸೆಯಲ್ಲಿ (Psychatry) ಸೂಕ್ತ ಅರ್ಹತೆ (ಪದವಿ/ಡಿಪ್ಲೋಮಾ) ಪಡೆದಿರಬೇಕು. ಇವರನ್ನು ಮನೋಚಿಕಿತ್ಸಕರು (Psychologist) ಎನ್ನುತ್ತಾರೆ. ಮನೋವಿಜ್ಞಾನದಲ್ಲಿ ಸಮಾಲೋಚನೆ ಮತ್ತು ಮಾರ್ಗದರ್ಶನದ ವಿಷಯದೊಂದಿಗೆ ಸ್ನಾತಕೋತ್ತರ ಪದವಿ ಪಡೆದ ನಂತರ ಮನೋವೈಜ್ಞಾನಿಕ ವೈದ್ಯ ಮತ್ತು ಸಮಾಲೋಚನೆಯಲ್ಲಿ ಪದವಿ/ಡಿಪ್ಲೋಮಾ ಪಡೆದವರೂ ಸಮಾಲೋಚಕರಾಗಬಹುದು. ಇವರನ್ನು ಚಿಕಿತ್ಸಕ ಮನೋವಿಜ್ಞಾನಿಗಳು (Clinical Psychologist) ಎನ್ನುತ್ತಾರೆ. ಬೆಂಗಳೂರಿನ ಪ್ರಸಿದ್ಧ NIMHANS ಸಂಸ್ಥೆ ಈ ಎರಡೂ ರೀತಿಯ ಕೋರ್ಸ್‌ಗಳನ್ನು ನಡೆಸುತ್ತಿದೆ.

ಎರಡನೇ ಗುಂಪಿನ ಅರ್ಹತೆಗಳು ಅನೇಕ ಇವೆ. ಅವುಗಳನ್ನು ಹೀಗೆ ಪಟ್ಟಿಮಾಡಬಹುದು;

1. ಸಮಾಲೋಚಕ ಒಳ್ಳೆಯ ಕೇಳುಗನಾಗಿರಬೇಕು. ಸಲಹಾರ್ಥಿ ಹೇಳುವುದನ್ನು ಶಾಂತಚಿತ್ತದಿಂದ ಕೇಳುವ ಸಹನೆ ಹೊಂದಿರಬೇಕು. ಅಗತ್ಯವಿದ್ದರೆ ಮಾತ್ರ ಮಧ್ಯೆ ಒಂದೆರಡು ಪ್ರಶ್ನೆಗಳನ್ನು ಕೇಳಬೇಕು.
2. ಸಮಾಲೋಚಕ ಸಂವೇಗಾತ್ಮಕ ಪ್ರಬುದ್ಧತೆ ಹೊಂದಿರಬೇಕು. ತನ್ನ ಸಂವೇಗಗಳ ಮೇಲೆ ಸಂಪೂರ್ಣ ಹತೋಟಿ ಹೊಂದಿರಬೇಕು. ಯಾವುದೇ ಕಾರಣಕ್ಕೂ ಸಂವೇಗಾತ್ಮಕವಾಗಿ ಪ್ರತಿಕ್ರಿಯೆ ತೋರಿಸಬಾರದು.
3. ಸಮಾಲೋಚಕ ಮುಕ್ತ ಮನಸ್ಸು ಹೊಂದಿರಬೇಕು. ಸಲಹಾರ್ಥಿ ವ್ಯಕ್ತಪಡಿಸುವ ವಿಚಾರಗಳ, ಘಟನೆಗಳ ವಿವರಗಳನ್ನು ಅವು ಎಷ್ಟೇ ಅತಾರ್ಕಿಕವಾಗಿರಲಿ ಒಪ್ಪಿಕೊಳ್ಳಬೇಕು. ಅವುಗಳನ್ನು ಟೀಕಿಸಬಾರದು.
4. ಸಮಾಲೋಚಕ ಒಳ್ಳೆಯ ಕೇಳುಗನಾಗಿರುವುದರೊಂದಿಗೆ ಶಾಂತಿಯಿಂದಿರಬೇಕು. ಈ ಎರಡೂ ಗುಣಗಳಿಗೆ ಪರಸ್ಪರ ನಿಕಟ ಸಂಬಂಧವಿದೆ. ಈ ಗುಣದಿಂದಾಗಿ ಸಲಹಾರ್ಥಿಯ ಋಣಾತ್ಮಕ ವರ್ತನೆಗಳನ್ನು (ರೇಗುವುದು, ಹಠಮಾರಿತನ, ಲೇಟಾಗಿ ಚಿಕಿತ್ಸೆಗೆ ಬರುವುದು, ಅಳುವುದು ಇತ್ಯಾದಿ) ಶಾಂತಚಿತ್ತದಿಂದ ನಿರ್ವಹಿಸಲು ಸಾಧ್ಯವಾಗುತ್ತದೆ.
5. ಅನುಭೂತಿ (Emphathy) ಸಮಾಲೋಚಕನಿಗೆ ಇರಬೇಕಾದ ಮತ್ತೊಂದು ಮುಖ್ಯ ಗುಣವಾಗಿ ಅನುಭೂತಿ ಎಂದರೆ ಸಲಹಾರ್ಥಿಯ ಸಂವೇಗಗಳನ್ನೂ, ಭಾವಗಳನ್ನೂ ಸರಿಯಾಗಿ ತಿಳಿದುಕೊಂಡು ಅದೇ ಭಾವವನ್ನು ಅನುಭವಿಸುವುದನ್ನು ವ್ಯಕ್ತಪಡಿಸುವುದು. ಇದರಲ್ಲಿ ಭಾವಾನುಭೂತಿಯ ತಾದಾತ್ಮತೆ ಇರುತ್ತದೆ. ಇದು ಅನುಕಂಪೆ (Sympathy)ಗಿಂತ ಭಿನ್ನವಾದುದು. ಅನುಕಂಪೆಯಲ್ಲಿ ವ್ಯಕ್ತಿಯ ಸ್ಥಿತಿಯ ಬಗ್ಗೆ, ಅಸಹಾಯಕತೆ ಬಗ್ಗೆ ಕರುಣೆ ತೋರಿಸುವುದಾಗುತ್ತದೆ. ಅಂದರೆ ವ್ಯಕ್ತಿಯ ದಯನೀಯ ಸ್ಥಿತಿಯನ್ನು ಅವನಿಗೆ ಬೊಟ್ಟು ಮಾಡಿ ತೋರಿಸಿದಂತಾಗುತ್ತದೆ. ಇದರಿಂದ ವ್ಯಕ್ತಿ ಇನ್ನಷ್ಟು ಹತಾಶನಾಗುವ ಸಾಧ್ಯತೆ ಇದೆ. ಆದರೆ ಸಹಾನುಭೂವಿ ಧನಾತ್ಮಕ ಭಾವನೆಯನ್ನುಂಟು ಮಾಡುತ್ತದೆ.

Digitised by Bharatavani, CIIL

6. ಸಮಾಲೋಚಕನಿಗೆ ಪ್ರಾಮಾಣಿಕತೆ ಅತ್ಯಂತ ಆವಶ್ಯಕವಾಗಿ ಇರಬೇಕಾದ ಗುಣ. ಇದು ಅವನ ವೃತ್ತಿಗೆ ಬೇಕೇಬೇಕು. ಸಮಾಲೋಚಕ ಸಲಹಾರ್ಥಿಯು ನೀಡುವ ಮಾಹಿತಿಗಳನ್ನು ಗೌಪ್ಯವಾಗಿಡಬೇಕು. ವೃತ್ತಿಯ ಅಗತ್ಯಗಳಿಗೆ ಒಂದು ವೇಳೆ ಅಂಥ ಮಾಹಿತಿಯನ್ನು ತಿಳಿಸಬೇಕಾಗಿದ್ದಲ್ಲಿ ಸಲಹಾರ್ಥಿಯ ಪರಿಚಯವನ್ನು ವ್ಯಕ್ತಪಡಿಸಬಾರದು.

7. ಸಮಾಲೋಚಕನಿಗೆ ತಾರ್ಕಿಕವಾಗಿ ಚಿಮತಿಸುವ, ವಿಶ್ಲೇಷಿಸುವ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯವಿರಬೇಕು.

8. ಸಮಾಲೋಚಕನಿಗೆ ಒಳನೋಟದ ಸಾಮರ್ಥ್ಯವಿರಬೇಕು. ಪಡೆದ ಮಾಹಿತಿಗಳ ಒಳಹೊಕ್ಕು ಸಮಸ್ಯೆಯ ಕಾರಣಗಳನ್ನು ತಿಳಿಯಲು ಇದು ಸಹಾಯಕವಾಗುತ್ತದೆ.

9. ಸಮಾಲೋಚಕ ಧನಾತ್ಮಕವಾಗಿರಬೇಕು. ಆಶಾವಾದಿ ಯಾಗಿರಬೇಕು. ತನ್ನ ಸಮಾಲೋಚನೆಯ ಪ್ರಯತ್ನ ಫಲಕಾರಿಯಾಗುತ್ತದೆ ಎಂಬ ದೃಢ ವಿಶ್ವಾಸ ಹೊಂದಿರಬೇಕು. ಇದರಿಂದ ಅದೇ ಭರವಸೆಯನ್ನು ಸಲಹಾರ್ಥಿಯಲ್ಲೂ ಮೂಡಿಸಲು ಸಾಧ್ಯವಾಗುತ್ತದೆ.

10. ಸಮಾಲೋಚಕ ಸಲಹಾರ್ಥಿಯೊಂದಿಗೆ ಅಲ್ಲದೆ ಸಲಹಾರ್ಥಿಯ ಕುಟುಂಬದವರೊಂದಿಗೆ, ಇತರ ರೀತಿಯಲ್ಲಿ ಸಂಬಂಧಪಟ್ಟವರೊಂದಿಗೆ (ಸ್ನೇಹಿತರು, ವೈದ್ಯರು, ಶಿಕ್ಷಕರು ಇತ್ಯಾದಿ) ಸಾಮಾಜಿಕವಾಗಿ ವ್ಯವಹರಿಸಬೇಕಾದ ಅಗತ್ಯವಿರುವುದರಿಂದ ಸಮಾಲೋಚಕ ಸಾಮಾಜಿಕ ಕೌಶಲಗಳಲ್ಲಿ ಪರಿಣತನಾಗಿರಬೇಕಾಗುತ್ತದೆ.

**ಸಮಾಲೋಚನೆಯ ವಿಧಗಳು:**

ಸಮಾಲೋಚನಾ ಪ್ರಕ್ರಿಯೆಯ ಸ್ವರೂಪ ಮತ್ತು ಸಮಾಲೋಚಕನ ಪಾತ್ರ ನಿರ್ವಹಣೆಯ ಸ್ವರೂಪದ ಆಧಾರದ ಮೇಲೆ ಇದರಲ್ಲಿ ಎರಡು ರೀತಿಯ ಸಮಾಲೋಚನ ವಿಧಾನಗಳಿವೆ.

1. ನಿರ್ದೇಶಿತ ಸಮಾಲೋಚನೆ (Directive counselling)
2. ಅನಿರ್ದೇಶಿತ ಸಮಾಲೋಚನೆ (Nondirective counselling)

**ನಿರ್ದೇಶಿತ ಸಮಾಲೋಚನೆ:**

ನಿರ್ದೇಶಿತ ಸಮಾಲೋಚನೆಯ (Directive counselling) ಪ್ರಮುಖ ಪ್ರತಿಪಾದಕರು ಇ.ಜಿ. ವಿಲಿಯಂಸನ್‌ರವರು, ನಿರ್ದೇಶಿತ ಸಮಾಲೋಚನೆಯಲ್ಲಿ ಸಲಹೆಗಾರನೇ ಕೇಂದ್ರ ಬಿಂದು ಮತ್ತು ಅವನೇ ಪ್ರಮುಖ ಪಾತ್ರ ವಹಿಸುತ್ತಾನೆ. ಈ ರೀತಿಯ ಸಮಾಲೋಚನೆಯಲ್ಲಿ ಸಮಸ್ಯೆಯು ಸಂದರ್ಶನದ ಕೇಂದ್ರವಾಗಿರುತ್ತದೆಯೇ ಹೊರತು ವ್ಯಕ್ತಿಯಲ್ಲ, ಸಲಹೆಗಾರನು ಸಲಹೆ ಪಡೆಯುವ ವ್ಯಕ್ತಿಗೆ ಅಥವಾ ವಿದ್ಯಾರ್ಥಿಗೆ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕೈಗೊಳ್ಳಬೇಕಾದ ಅವಶ್ಯಕ ಕ್ರಮಗಳನ್ನು ಕುರಿತು ನಿರ್ದೇಶನ ನೀಡುತ್ತಾನೆ ಇಲ್ಲಿ ಸಹೆಗಾರನು ಸಲಹೆ ಪಡೆಯುವವನ ಆಲೋಚನೆಯನ್ನು ಸರಿಯಾದ ರೀತಿಯಲ್ಲಿ ನಿರ್ದೇಶಿಸಲು ಮಾಹಿತಿ ನೀಡುವಿಕೆ, ವಿವರಿಸುವಿಕೆ, ಅರ್ಥೈಸುವಿಕೆ ಮತ್ತು ಮನವೊಲಿಸುವಿಕೆಯ ತಂತ್ರಗಳನ್ನು ಬಳಸಿಕೊಳ್ಳುತ್ತಾನೆ. ಇಲ್ಲಿ ಸಲಹೆ ನೀಡುವಾತ ಸೂಕ್ತ ತರಬೇತಿ ಹಾಗೂ ಅನುಭವ ಹೊಂದಿರುವ ವೃತ್ತಿಪರ ವ್ಯಕ್ತಿಯಾಗಿರುತ್ತಾನೆ. ಸಲಹೆಗಾರನು ಸಮಸ್ಯೆಯನ್ನು ವಿಶ್ಲೇಷಿಸಿದ ನಂತರ ಸಲಹೆ ಪಡೆಯುವ ವ್ಯಕ್ತಿ ದೃಢನಿರ್ಧಾರಗಳನ್ನು ಕೈಗೊಳ್ಳಲು ಬೇಕಾದ ಎಲ್ಲಾ ಸಹಾಯವನ್ನು ಮಾಡುತ್ತಾನೆ.

ಸಲಹೆಗಾರನ ಅರ್ಥೈಸುವಿಕೆ ಮತ್ತು ನಿರ್ದೇಶನಗಳಿಗೆ ಈ ವಿಧಾನದಲ್ಲಿ ಹೆಚ್ಚಿನ ಮಹತ್ವ ನೀಡುವುದರಿಂದ ಇದನ್ನು ನಿರ್ದೇಶಿತ ಸಮಾಲೋಚನೆ ಅಥವಾ ಸಲಹೆಗಾರ ಕೇಂದ್ರಿತ ವಿಧಾನ ಎಂದು ಕರೆಯುತ್ತಾರೆ.

ನಿರ್ದೇಶಿತ ಸಮಾಲೋಚನೆ ಈ ಕೆಳಗಿನ ಆರು ಪ್ರಮುಖ ಹಂತಗಳನ್ನು ಒಳಗೊಳ್ಳುತ್ತದೆ:

1. **ವಿಶ್ಲೇಷಣೆ:** ಈ ಹಂತದಲ್ಲಿ ಸಮಾಲೋಚಕನು ವಿವಿಧ ತಂತ್ರಗಳನ್ನು ಬಳಸಿಕೊಂಡು ವಿವಿಧ ಮೂಲಗಳಿಂದ ಸಲಹಾರ್ಥಿಯ ಬಗ್ಗೆ ಮಾಹಿತಿ ಸಂಗ್ರಹಿಸುತ್ತಾನೆ ಮತ್ತು ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸುತ್ತಾನೆ.

2. **ವಿಶ್ಲೇಷಣೆ:** ಮಾಹಿತಿಯನ್ನು ಕ್ರೋಢೀಕರಿಸಿ, ದತ್ತಾಂಶವನ್ನು ವ್ಯವಸ್ಥಿತಗೊಳಿಸಿ ವಿಶ್ಲೇಷಿಸುವ ಮೂಲಕ ವಿದ್ಯಾರ್ಥಿಯ ಸಾಮರ್ಥ್ಯಗಳು, ನ್ಯೂನತೆಗಳು, ಹೊಂದಾಣಿಕೆ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತಾನೆ.

3. **ನೈದಾನಿಕತೆ:** ಸಲಹಾರ್ಥಿಯ ಸಮಸ್ಯೆಯ ಸ್ವರೂಪ ಮತ್ತು ಸಮಸ್ಯೆಗೆ ಕಾರಣಗಳನ್ನು ಪತ್ತೆ ಹಚ್ಚುತ್ತಾನೆ.

4. **ಮುನ್ಸೂಚಿಸುವಿಕೆ:** ವ್ಯಕ್ತಿಯ ಸಮಸ್ಯೆ ಪರಿಹಾರಕ್ಕಾಗಿ ಮತ್ತು ಭವಿಷ್ಯದ ಅಭಿವೃದ್ಧಿಗಾಗಿ ಸೂಕ್ತ ಕ್ರಮಗಳನ್ನು ಮುನ್ಸೂಚಿಸುತ್ತಾನೆ.

5. **ಸಮಾಲೋಚನೆ ಅಥವಾ ಸಲಹೆ ನೀಡುವಿಕೆ:** ಪರಿಹಾರದ ಕ್ರಿಯಾಯೋಜನೆಯನ್ನು ಅಥವಾ ಪರ್ಯಾಯ ಪರಿಹಾರಗಳನ್ನು ಸಲಹಾರ್ಥಿಗೆ ನೀಡಲಾಗುತ್ತದೆ. ಆದರೆ ಸಲಹೆಗಾರ ಅವನ ಪರಿಹಾರಗಳನ್ನು ಒಪ್ಪಿಕೊಳ್ಳಲೇಬೇಕೆಂದು ಒತ್ತಾಯಿಸುವುದಿಲ್ಲ. ವಿದ್ಯಾರ್ಥಿಯು ಸೂಕ್ತ ಹೊಂದಾಣಿಕೆ ಮಾಡಿಕೊಳ್ಳಲು ನೆರವಾಗುತ್ತಾನೆ.

6. **ಅನುಸರಣ ಕಾರ್ಯ:** ಸಲಹಾರ್ಥಿಯ ಕ್ರಿಯಾಯೋಜನೆಯನ್ನು ಕಾರ್ಯಗತಗೊಳಿಸಿದ ನಂತರ ಸಲಹೆಗಾರನು

Digitised by Bharatavani, CIIL

ಅದರ ಪ್ರಗತಿಯ ಅನುಸರಣ ಕಾರ್ಯ ಕೈಗೊಳ್ಳುವನು, ಸಮಾಲೋಚಕ ತಾನು ನೀಡಿದ ಸಲಹೆಯ ಪರಿಣಾಮಕಾರಿತ್ವವನ್ನು ನಿರ್ಧರಿಸುತ್ತಾನೆ.

ನಿರ್ದೇಶನ ಸಮಾಲೋಚನೆಯಲ್ಲಿ ಭಾವನಾತ್ಮಕ ಅಂಶಗಳಿಗಿಂತ ಬೌದ್ಧಿಕ ಅಂಶಗಳಿಗೆ ಹೆಚ್ಚು ಒತ್ತು ನೀಡಲಾಗುತ್ತದೆ.

**ಅನಿರ್ದೇಶಿತ ಸಮಾಲೋಚನೆ:**

ಅನಿರ್ದೇಶಿತ ಸಮಾಲೋಚನೆ (Nondirective counselling) ಪ್ರಮುಖ ಪ್ರತಿಪಾದಕರು ಶ್ರೇಷ್ಠ ಮಾನವತಾವಾದಿ ಕಾರ್ಲ್‌ರಾಜರ್ಸ್‌ರವರು. ಈ ಮಾದರಿಯ ಸಮಾಲೋಚನೆಯಲ್ಲಿ ಸಲಹೆ ಪಡಯುವ ವ್ಯಕ್ತಿಯೇ ಕೇಂದ್ರ ಬಿಂದು, ಅವನು ಸಮಾಲೋಚನಾ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುತ್ತಾನೆ. ಇವನು ಸಮಾಲೋಚಕನ ಸಹಾಯದೊಂದಿಗೆ ತನ್ನ ಸಮಸ್ಯೆಯ ಒಳನೋಟವನ್ನು ಪಡೆಯುತ್ತಾನೆ ಮತ್ತು ಅದರ ಪರಿಹಾರಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುತ್ತಾನೆ.

ಈ ಮಾದರಿಯ ಸಮಾಲೋಚನೆಯಲ್ಲಿ ಸ್ವಸಹಾಯ, ಸ್ವಯಂಅರಿವು ಮತ್ತು ಸ್ವಯಂ ಕ್ರಿಯೆಯನ್ನು ಪ್ರೇರೇಪಿಸಲಾಗುತ್ತದೆ. ಸಲಹಾರ್ಥಿ ತಾನೇ ನಿರ್ಣಯಗಳನ್ನು ಕೈಗೊಳ್ಳಬೇಕು, ಸಮಾಲೋಚಕನ ಮನೋಭಾವ ಸ್ನೇಹಪೂರ್ವಕ ಮತ್ತು ಪ್ರಜಾಸತ್ತಾತ್ಮಕವಾಗಿರುತ್ತದೆ, ಈ ವಿಧಾನದಲ್ಲಿ ಸಲಹೆ ಪಡೆಯುವವನಿಗೆ ಅಧಿಕ ಮಹತ್ವ ನೀಡಲಾಗುತ್ತದೆಯೇ ಹೊರತು ಅವನ ಸಮಸ್ಯೆಗಲ್ಲ. ಅವನ ಸಮಸ್ಯೆ ನಿವಾರಣೆಗೆ ಬೌದ್ಧಿಕ ಅಂಶಗಳಿಗಿಂತ ಅವನ ಭಾವನಾತ್ಮಕ ಅಂಶಗಳಿಗೆ ಹೆಚ್ಚಿನ ಬೆಲೆ ಕೊಡಲಾಗುತ್ತದೆ, ಈ ವಿಧಾನದಲ್ಲಿ ಸಲಹಾರ್ಥಿ ತನ್ನ ಸಮಸ್ಯೆಗಳನ್ನು ತಾನೇ ಸ್ವತಂತ್ರವಾಗಿ ಪರಿಹರಿಸಿಕೊಳ್ಳಲು ಸಮರ್ಥನಾಗುತ್ತಾನೆ. ಅನಿರ್ದೇಶಿತ ಸಮಾಲೋಚನೆಯ ಪ್ರತಿಪಾದಕರಾದ ಕಾರ್ಲ್‌ರಾಜರ್ಸ್‌ರವರು ಶೈಕ್ಷಣಿಕ, ವೃತ್ತಿಪರ ಹಾಗೂ ನೈತಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಈ ವಿಧಾನವನ್ನು ಬಳಸಿಕೊಂಡಿದ್ದಾರೆ. ಈ ವಿಧಾನದಲ್ಲಿ ಸಲಹಾರ್ಥಿಗೆ ಪ್ರಾಧಾನ್ಯ ಇರುವುದರಿಂದ ಇದನ್ನು ಸಲಹಾರ್ಥಿ ಕೇಂದ್ರಿತ ಸಮಾಲೋಚನೆ (Client Centered Councelling) ಎಂದು ಹೇಳುತ್ತಾರೆ.

**ಅನಿರ್ದೇಶಿತ ಸಮಾಲೋಚನೆಯ ಹಂತಗಳು ಕೆಳಕಂಡಂತಿವೆ:**

1. ಸಮಾಲೋಚಕ ಮತ್ತು ಸಲಹಾರ್ಥಿಯ ನಡುವೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಲಾಗುವುದು, ಇದರಿಂದ ಸಲಹಾರ್ಥಿ ತನ್ನೆಲ್ಲಾ ಮಾಹಿತಿಯನ್ನು ಸಲಹೆಗಾರನಿಗೆ ನೀಡಲು ಉತ್ತೇಜಿತನಾಗುತ್ತಾನೆ.
2. ಸಮಾಲೋಚನಾ ಸಂದರ್ಶನದಲ್ಲಿ ಸಲಹೆಗಾರ ಪ್ರೋತ್ಸಾಹದಾಯಕ ವಾತಾವರಣವನ್ನು ನಿರ್ಮಿಸುತ್ತಾನೆ, ಸಲಹಾರ್ಥಿಯನ್ನು ಗೌರವಭಾವನೆಯಿಂದ ನಡೆಸಿಕೊಳ್ಳುತ್ತಾನೆ.
3. ಸಲಹೆಗಾರನು ತಾಳ್ಮೆ ಮತ್ತು ಆಸಕ್ತಿಯಿಂದ ಸಲಹಾರ್ಥಿಯು ಸಾದರಪಡಿಸುವ ಸಮಸ್ಯೆಯನ್ನು ಕೇಳಿಸಿಕೊಳ್ಳುತ್ತಾನೆ. ಸಲಹಾರ್ಥಿಯು ಮಾಹಿತಿ ನೀಡುವ ಸಂದರ್ಭದಲ್ಲಿ ಸಲಹೆಗಾರ ಯಾವುದೇ ರೀತಿಯಲ್ಲಿ ಪ್ರಶ್ನಿಸುವುದಿಲ್ಲ ಅಥವಾ ಅದರ ವಿಮರ್ಶೆ ಮಾಡುವುದಿಲ್ಲ. ಸಲಹಾರ್ಥಿಯ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ ಮತ್ತು ಅವನನ್ನು ಪ್ರಶಂಸಿಸುತ್ತಾನೆ.
4. ಸಲಹೆಗಾರನು ಸಲಹಾರ್ಥಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಮೂಲಕ ಅವನು ತನ್ನ ಭಾವನೆಗಳನ್ನು ಹೊರಹಾಕುವ ಮೂಲಕ, ತನ್ನ ಭಾವನೆಗಳು, ಮನೋಧೋರಣೆಗಳು, ಆಲೋಚನೆಗಳು ಮತ್ತು ಆಕಾಂಕ್ಷೆಗಳ ಒಂದು ನೈಜ ಚಿತ್ರಣ ಪಡೆದುಕೊಳ್ಳುವಂತೆ ಪ್ರೇರೇಪಿಸುತ್ತಾನೆ.
5. ಸಲಹಾರ್ಥಿ ತನ್ನ ಪ್ರಜ್ಞಾನುಭವದಿಂದ ಮರೆಯಾಗಿರುವ ಅಂಶಗಳನ್ನು ಹೊರಸೆಳೆದು ಅವುಗಳ ಒಳನೋಟ ಪಡೆದು ಹೊಸ ದೃಷ್ಟಿಕೋನ ರೂಪಿಸಿಕೊಳ್ಳುತ್ತಾನೆ.
6. ಸಲಹಾರ್ಥಿ ತನ್ನ ದೌರ್ಬಲ್ಯಗಳನ್ನು, ತಪ್ಪು ಕಲ್ಪನೆಗಳನ್ನು ಅರ್ಥಮಾಡಿಕೊಂಡು ತನ್ನ ಸಾಮರ್ಥ್ಯಗಳನ್ನು ಅರಿತುಕೊಳ್ಳುತ್ತಾನೆ. ತನ್ನ ಸ್ವಪರಿಕಲ್ಪನೆಯನ್ನು ಬದಲಾಯಿಸಿಕೊಂಡು ಹೊಸದಾದ ತನ್ನ ನೈಜ ಸ್ವಯಂ ಪರಿಕಲ್ಪನೆಯನ್ನು ಬೆಳೆಸಿಕೊಳ್ಳುತ್ತಾನೆ.
7. ಸಲಹೆಗಾರ ಸಲಹಾರ್ಥಿಯ ತಕ್ಷಣದ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಒತ್ತು ಕೊಡದೆ, ಅವನಲ್ಲಿ ಅಗತ್ಯವಾದ ಹೊಂದಾಣಿಕೆ ಅಥವಾ ವರ್ತನೆಯಲ್ಲಿ ಮಾರ್ಪಾಡನ್ನು ತರುವ ಮೂಲಕ ಸಂಪೂರ್ಣ ವ್ಯಕ್ತಿತ್ವ ರೂಪಿಸಲು ಪ್ರಯತ್ನಿಸುತ್ತಾನೆ. ಇದರಲ್ಲಿ ಅವನ ಭಾವನಾತ್ಮಕ ಉದ್ದೇಶಗಳನ್ನು ಹೊರಹಾಕುವಂತೆ ಪ್ರಯತ್ನ ಮಾಡಲಾಗುವುದು.
8. ಈ ವಿಧಾನದಲ್ಲಿ ಸಲಹೆಗಾರನ ಪ್ರಮುಖ ಉದ್ದೇಶ ಸಲಹಾರ್ಥಿಗೆ ಪ್ರೋತ್ಸಾಹದಾಯಕ ವಾತಾವರಣವನ್ನು ನಿರ್ಮಿಸಿ ಅವನೇ ತನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಂತೆ ಮಾಡುವುದಾಗಿದೆ. ಇಲ್ಲಿ ಸಲಹೆಗಾರ ಯಾವುದನ್ನೂ ತನ್ನ ಇಚ್ಛೆಯಂತೆ ನಿರ್ದೇಶಿಸುವುದಿಲ್ಲ.

**ಸಮಾಲೋಚನೆಯ ಕಾರ್ಯನಿರ್ವಹಣಾ ವಿಶ್ಲೇಷಣೆ:**

ಕಾರ್ಯನಿರ್ವಹಣಾ ವಿಶ್ಲೇಷಣೆಯು (Transactional analysis) ಎರಿಕ್‌ಬರ್ನೆಯವರು ರೂಪಿಸಿದ ಒಂದು ಬೌದ್ಧಿಕ

Digitised by Bharatavani, CIIL

ಸಿದ್ಧಾಂತವಾಗಿದೆ. ಡುಸೆ (1977) ಇವರು ಹೇಳುವ ಪ್ರಕಾರ ಕಾರ್ಯ ನಿರ್ವಹಣಾ ವಿಶ್ಲೇಷಣೆ ನಾಲ್ಕು ಹಂತಗಳಲ್ಲಿ ರೂಪಿತವಾಗಿದೆ. ಮೊದಲನೆ ಹಂತದಲ್ಲಿ (1955–62) ಬರ್ನೆಯವರು ಅಹಂಸ್ಥಿತಿಗಳ ಪರಿಕಲ್ಪನೆಯನ್ನು ಅಭಿವೃದ್ಧಿಗೊಳಿಸಿದರು. ಇವರ ವಿಚಾರಗಳು ಕಕ್ಷಿದಾರನು ಮಗುವಾಗಿ, ಪೋಷಕನಾಗಿ ಮತ್ತು ಒಬ್ಬ ವಯಸ್ಕನಾಗಿ ವರ್ತಿಸುವುದರ ಮೇಲೆ ಪ್ರಭಾವಿತವಾಗಿದೆ (ಮಗು, ಪೋಷಕ ಮತ್ತು ವಯಸ್ಕ – ಮೂರು ಅಹಂಸ್ಥಿತಿಗಳು).

ಎರಡನೇ ಹಂತದಲ್ಲಿ (1962–66) ತಮ್ಮ ವಿಚಾರಗಳನ್ನು ಕಾರ್ಯನಿರ್ವಹಣೆ ಮತ್ತು ಆಟಗಳ ಮೇಲೆ ಕೇಂದ್ರೀಕರಿಸಿದ್ದಾರೆ. ಇದನ್ನು ಆಧರಿಸಿ ಬರ್ನೆಯವರು ಜನಪ್ರಿಯವಾದ "ಗೇಮ್ಸ್ ಪೀಪಲ್ ಸೆ" ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಮೂರನೇ ಹಂತದಲ್ಲಿ (1966–70) ಕೆಲವು ವ್ಯಕ್ತಿಗಳು ತಮ್ಮ ಜೀವನದಲ್ಲಿ ನಿರ್ದಿಷ್ಟ ಆಟಗಳನ್ನು ಆಡಲು ಆಯ್ಕೆ ಮಾಡಿಕೊಳ್ಳುವುದರ ಹಿಂದಿನ ಕಾರಣಗಳನ್ನು ವಿಶ್ಲೇಷಿಸಿದ್ದಾರೆ. ನಾಲ್ಕನೇ ಹಂತದಲ್ಲಿ (1970ರ ನಂತರ) ಬರ್ನೆ ಮತ್ತು ಅವನ ಅನುಯಾಯಿಗಳು ಕ್ರಿಯೆ ಮತ್ತು ಶಕ್ತಿಯ ವಿತರಣೆಗೆ ಒತ್ತು ಕೊಟ್ಟಿರುತ್ತಾರೆ.

**ಮಾನವನ ಸ್ವರೂಪದ ದೃಷ್ಟಿಕೋನ:**

ಕಾರ್ಯನಿರ್ವಹಣಾ ವಿಶ್ಲೇಷಣೆ ಒಂದು ಆಶಾವಾದದ ಸಿದ್ಧಾಂತವಾಗಿದೆ. ಇದರ ಮೂಲ ನಂಬಿಕೆ ಏನೆಂದರೆ– ಹಿಂದಿನ ಯಾವುದೇ ದುರದೃಷ್ಟಕರ ಘಟನೆಗಳ ಹೊರತಾಗಿಯೂ ವ್ಯಕ್ತಿಯು ಬದಲಾಗಬಲ್ಲ ಎಂಬುದು. ಕಾರ್ಯನಿರ್ವಹಣಾ ವಿಶ್ಲೇಷಣೆ ಒಂದೇ ವರ್ತನೆಗೆ ನಿರ್ದಿಷ್ಟವಾಗಿ ಅಂಟಿಕೊಂಡಿರುವುದನ್ನು ವಿರೋಧಿಸುತ್ತದೆ. ಜನರು ತಮ್ಮ ಜೀವನದಲ್ಲಿ ಹಲವಾರು ಆಯ್ಕೆಗಳನ್ನು ಹೊಂದಿದ್ದಾರೆ ಎಂಬುದನ್ನು ನಂಬುತ್ತದೆ ಮತ್ತು ಒಮ್ಮೆ ಕೈಗೊಂಡ ನಿರ್ಧಾರಗಳನ್ನು ನಂತರದ ಹಂತದಲ್ಲಿ ಪುನರ್ ನಿರ್ಧರಿಸಲು ಅವಕಾಶವಿದೆ ಎಂದು ಭಾವಿಸುತ್ತಾರೆ. ಕಾರ್ಯನಿರ್ವಹಣೆ ವಿಶ್ಲೇಷಣೆಯ ಪ್ರಕಾರ ಮಾನವನ ವರ್ತನೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಮುನ್ಸೂಚಿಸಲು ನಾಲ್ಕು ಪ್ರಮುಖ ವಿಧಾನಗಳನ್ನು ಸೂಚಿಸಿದ್ದಾರೆ.

**ರಚನಾತ್ಮಕ ವಿಶ್ಲೇಷಣೆ:** ವ್ಯಕ್ತಿಯಲ್ಲಿ ಅಂತರ್ಗತವಾಗಿ ನಡೆಯುವ ಅಂಶಗಳನ್ನು ಅಥವಾ ವರ್ತನೆಯನ್ನು ಅರ್ಥಮಾಡಿಕೊಳ್ಳುವುದು.

**ಕಾರ್ಯನಿರ್ವಹಣಾ ವಿಶ್ಲೇಷಣೆ:** ಎರಡು ಅಥವಾ ಹೆಚ್ಚಿನ ವ್ಯಕ್ತಿಗಳ ಮಧ್ಯೆ ನಡೆಯುವ ಅಂತರ್‌ಕ್ರಿಯೆಯ ವರ್ತನೆಯನ್ನು ವರ್ಣಿಸುವುದು.

**ಆಟಗಳ ವಿಶ್ಲೇಷಣೆ:** ವ್ಯಕ್ತಿಗಳ ನಡುವಿನ ಅಂತರ್‌ಕ್ರಿಯೆಗಳು ಹೇಗೆ ತಪ್ಪು ಭಾವನೆಗಳಿಗೆ ಕಾರಣವಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.

**ಹಸ್ತಪ್ರತಿಯ ವಿಶ್ಲೇಷಣೆ:** ವ್ಯಕ್ತಿ ಸಾಗಿಸುತ್ತಿರುವ ಜೀವನದ ಯೋಜನೆಯನ್ನು ಅರ್ಥಮಾಡಿಕೊಳ್ಳುವುದು.

**ಸಮಾಲೋಚಕನ ಪಾತ್ರ:** ಕಾರ್ಯನಿರ್ವಹಣಾ ವಿಶ್ಲೇಷಣೆಯಲ್ಲಿ ಚಿಕಿತ್ಸೆಯು ಸಮಾಲೋಚಕನನ್ನು ಆರಂಭದಲ್ಲಿ ಒಬ್ಬ ಶಿಕ್ಷಕನ ಪಾತ್ರವನ್ನು ನಿರ್ವಹಿಸುವಂತೆ ಬಯಸುತ್ತದೆ. ಸಮಾಲೋಚಕ ಕಕ್ಷಿದಾರನಿಗೆ ಕಾರ್ಯನಿರ್ವಹಣಾ ವಿಶ್ಲೇಷಣೆಯ ಭಾಷೆ ಮತ್ತು ಪರಿಕಲ್ಪನೆಗಳನ್ನು ವಿವರಿಸುತ್ತಾನೆ, ಇದು ಆ ವ್ಯಕ್ತಿಯು ತನ್ನ ಬಗ್ಗೆ ಹೊಸದಾಗಿ ಆಲೋಚಿಸುವಂತೆ ಪ್ರೇರೇಪಿಸುತ್ತದೆ.

**ಗುರಿಗಳು:**

- ಕಾರ್ಯ ನಿರ್ವಹಣಾ ವಿಶ್ಲೇಷಣೆಯ ಪ್ರಾಥಮಿಕ ಗುರಿಗಳೆಂದರೆ ಕಕ್ಷಿದಾರರನ್ನು "ಕಪ್ಪೆ"ಗಳಿಂದ 'ರಾಜಕುಮಾರ' ಅಥವಾ 'ರಾಜಕುಮಾರಿ'ಯಾಗಿ ರೂಪಾಂತರಗೊಳ್ಳಲು ಅಥವಾ ಮಾರ್ಪಾಡಾಗಲು ನೆರವಾಗುತ್ತದೆ.
- ಕಾರ್ಯನಿರ್ವಹಣಾ ವಿಶ್ಲೇಷಣಾ ವಿಧಾನದಲ್ಲಿ ಮನೋವಿಶ್ಲೇಷಣಾ ವಿಧಾನದಂತೆ ಕೇವಲ ವ್ಯಕ್ತಿಗಳು ಹೊಂದಾಣಿಕೆ ಮಡಿಕೊಳ್ಳುವುದನ್ನು ಕಲಿಯುವುದಾಗಿರದೆ, ಆರೋಗ್ಯ ಮತ್ತು ಸ್ವಾಯತ್ತತೆ ಪಡೆಯಲು ಒತ್ತು ನೀಡಲಾಗಿದೆ.
- ಕಕ್ಷಿದಾರರು ತಮ್ಮ ಹಾಳಾಗಿರುವ ಅಹಂಸ್ಥಿತಿಗಳನ್ನು ಗುರುತಿಸಿಕೊಳ್ಳಲು ಮತ್ತು ಅದನ್ನು ಪುನರ್ ಸ್ಥಾಪಿಸಿಕೊಳ್ಳಲು ಸಮಾಲೋಚಕರು ನೆರವಾಗುತ್ತಾರೆ.

**ತಂತ್ರಗಳು:**

ಕಾರ್ಯನಿರ್ವಹಣಾ ವಿಶ್ಲೇಷಣೆಯಲ್ಲಿ ಬಳಸುವ ತಂತ್ರಗಳು ಈ ಕೆಳಕಂಡಂತಿವೆ.

1. **ಚಿಕಿತ್ಸೆಯ ಒಪ್ಪಂದ (Treatment contract):** ಒಂದು ನಿರ್ದಿಷ್ಟ ಹಾಗೂ ಸರಳ ಒಪ್ಪಂದ– ಇಬ್ಬರ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಮಾಲೋಚಕ ಹಾಗೂ ಕಕ್ಷಿದಾರನ ನಡುವಿನ ಒಪ್ಪಂದ.
2. **ಪ್ರಶ್ನಿಸುವಿಕೆ (Interrogation):** ಕಕ್ಷಿದಾರನ ವಯಸ್ಕ ಸ್ಥಿತಿಯೊಂದಿಗೆ ಮಾತನಾಡುವ ಮೂಲಕ ಸಮಾಲೋಚಕ ವಯಸ್ಕ ಪ್ರತಿಕ್ರಿಯೆಯನ್ನು ಪಡೆಯುತ್ತಾನೆ. ವಯಸ್ಕ ಪ್ರತಿಕ್ರಿಯೆ ಬರುವವರೆಗೂ ತನ್ನ ಪ್ರಶ್ನಿಸುವಿಕೆಯನ್ನು ಮುಂದುವರೆಸುತ್ತಾನೆ.
3. **ನಿದರ್ಶಿಸುವಿಕೆ (Illustration):** ಒಂದು ನಿರ್ದಿಷ್ಟ ವಿಷಯವನ್ನು ಸಮಾಲೋಚಕ ಸೂಕ್ತ ನಿದರ್ಶನಗಳೊಂದಿಗೆ ವಿವರಿಸುವ ಮೂಲಕ ಕಕ್ಷಿದಾರನಿಗೆ ಅರ್ಥ ಮಾಡಿಸುತ್ತಾನೆ.
4. **ದೃಢೀಕರಣ (Confirmation):** ಮಾರ್ಪಾಡಾದ ವರ್ತನೆ ಮತ್ತೆ ಕಕ್ಷಿದಾರನಲ್ಲಿ ಕಂಡುಬಂದಾಗ ಅದರ ಕಡೆಗೆ

Digitised by Bharatavani, CIIL

ಸಮಾಲೋಚಕನು ಗಮನ ಸೆಳೆದು ದೃಢೀಕರಿಸುತ್ತಾನೆ.

5. **ಅರ್ಥೈಸುವಿಕೆ (Interpretation):** ಕಕ್ಷಿದಾರನ ಮಗುವಿನ ಅಹಂ ಸ್ಥಿತಿಗೆ ಮತ್ತು ಅವನ ವರ್ತನೆಗೆ ಸಮಾಲೋಚಕನು ವಿವರಣೆ ನೀಡುತ್ತಾನೆ.

6. **ನಿರ್ದಿಷ್ಟ ರೂಪು ಕೊಡುವಿಕೆ (Crystallisation):** ವಯಸ್ಕ –ವಯಸ್ಕ ಅಂತರ್‌ಕ್ರಿಯೆ ನಡೆದು, ಕಕ್ಷಿದಾರನು ತನ್ನ ವೈಯಕ್ತಿಕ ಆಟವನ್ನು ತೊರೆಯುವಂತಹ ಅರಿವನ್ನು ಮೂಡಿಸಿಕೊಳ್ಳುತ್ತಾನೆ.

7. **ಎದುರಿಗಿಡುವಿಕೆ (Confrontation):** ಕಕ್ಷಿದಾರನ ವರ್ತನೆ ಅಥವಾ ಮಾತುಗಳಲ್ಲಿರುವ ಅನಿಶ್ಚಿತತೆಯನ್ನು ಸಮಲೋಚಕನು ಅವನ ಮುಂದಿಡುತ್ತಾನೆ.

ಕಾರ್ಯ ನಿರ್ವಹಣಾ ವಿಶ್ಲೇಷಣೆಯ ಎಲ್ಲಾ ತಂತ್ರಗಳಲ್ಲಿ ಪ್ರಶ್ನಿಸುವಿಕೆ, ತುಲನೆ ಮಾಡುವಿಕೆ ಮತ್ತು ಸಂಭಾಷಣೆಯ ಸಂಯೋಗವನ್ನು ಬಳಸಿಕೊಳ್ಳಲಾಗುತ್ತದೆ.

**ಕಾರ್ಯನಿರ್ವಹಣಾ ವಿಶ್ಲೇಷಣೆಯ ಗುಣಗಳು:**

- ಈ ವಿಧಾನದಲ್ಲಿ ಸುಲಭವಾಗಿ ಅರ್ಥವಾಗುವ ಮತ್ತು ವ್ಯಾಖ್ಯಾನಿಸಬಹುದಾದ ಪದಗಳನ್ನು ಬಳಸಲಾಗುತ್ತದೆ.
- ಈ ವಿಧಾನವನ್ನು ಇತರೆ ಕ್ರಿಯೆ ಆಧಾರಿತ ವಿಧಾನಗಳೊಂದಿಗೆ ಸುಲಭವಾಗಿ ಬಳಸಬಹುದಾಗಿದೆ.
- ಈ ವಿಧಾನವು ಕಕ್ಷಿದಾರನ ವರ್ತನೆಯನ್ನು ಬದಲಾಯಿಸುವ ಜವಾಬ್ದಾರಿ ಹೊಂದಿದೆ.
- ಈ ವಿಧಾನವು ಗುರಿ ನಿರ್ದೇಶಿತವಾಗಿದೆ.

**ಅವಗುಣಗಳು:**

- ಈ ವಿಧಾನದಲ್ಲಿ ಬೌದ್ಧಿಕ ಅಂಶಗಳಿಗೆ ಒತ್ತುಕೊಟ್ಟಿರುವುದನ್ನು ಟೀಕಿಸಲಾಗಿದೆ.
- ಈ ವಿಧಾನವನ್ನು ಇದರ ಸರಳತೆ, ರಚನೆ ಹಾಗೂ ಜನಪ್ರಿಯತೆಗಾಗಿ ಟೀಕಿಸಲಾಗಿದೆ.
- ಈ ವಿಧಾನದ ಬಗ್ಗೆ ನಡೆದಿರುವ ಸಂಶೋಧನೆ ತುಂಬಾ ದುರ್ಬಲವಾಗಿದೆ.
- ಬರ್ನೆ 1970ರಲ್ಲಿ ನಿಧನರಾದ ನಂತರ ಈ ವಿಧಾನದಲ್ಲಿ ಯಾವುದೇ ಪ್ರಗತಿ ಕಂಡುಬಂದಿರುವುದಿಲ್ಲ.

**ಶಿಕ್ಷಣದಲ್ಲಿ ಸಮಾಲೋಚನೆಯ ಪಾತ್ರ (ಶಿಕ್ಷಕರ ಪಾತ್ರ):**

ಶಿಕ್ಷಣಕ್ಷೇತ್ರದಲ್ಲಿ ಸಮಾಲೋಚನಾ ತಂತ್ರವನ್ನು ಬಳಸಿಕೊಂಡು ಶಿಕ್ಷಕರು ವಿದ್ಯಾರ್ಥಿಗಳ ಅಗತ್ಯತೆಗಳನ್ನು ಅರಿತುಕೊಂಡು, ಅವುಗಳನ್ನು ಪೂರೈಸಲು ಪ್ರಯತ್ನಿಸುತ್ತಾರೆ.

- ವಿದ್ಯಾರ್ಥಿಗಳು ತಮ್ಮನ್ನು ತಾವು ಅರ್ಥಮಾಡಿಕೊಳ್ಳಲು ಹಾಗೂ ಅವರ ಸಾಮಾಜಿಕ ಹಾಗೂ ಮಾನಸಿಕ ವರ್ತನೆಗಳನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರು ನೆರವಾಗುತ್ತಾರೆ.
- ವಿದ್ಯಾರ್ಥಿಗಳು ತಮ್ಮ ಅಭಿಕ್ಷಮತೆಗಳು, ಸಾಮರ್ಥ್ಯಗಳು, ಆಸಕ್ತಿಗಳು ಮತ್ತು ಅವಕಾಶಗಳನ್ನು ಬಳಸಿಕೊಂಡು ಅಗತ್ಯತೆಗಳನ್ನು ಈಡೇರಿಸಿಕೊಳ್ಳುವಂತೆ ಮಾಡುವುದು.
- ವಿದ್ಯಾರ್ಥಿಗಳಲ್ಲಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.
- ಎಲ್ಲಾ ಅಧ್ಯಾಪಕರು ವೈಯಕ್ತಿಕವಾಗಿ ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಂಡು ಅವರಿಗೆ ಅಗತ್ಯವಾದ ಮಾಹಿತಿ ಒದಗಿಸುವುದು ಮತ್ತು ಮೌಲ್ಯಮಾಪನ ಮಾಡುವುದು.
- ವಿದ್ಯಾರ್ಥಿಗಳ ಅಭಿವೃದ್ಧಿಯ ಮೇಲೆ ಶಾಲಾ ಕಾರ್ಯಕ್ರಮಗಳ ಪ್ರಭಾವವನ್ನು ನಿರ್ಧರಿಸುವುದು.
- ಶಾಲೆ ಹಾಗೂ ಶಾಲೆಯ ಹೊರಗಿನ ಪರಿಸರ ಬೋಧನೆಯ ಮೇಲೆ ಬೀರುವ ಪ್ರಭಾವವನ್ನು ತಿಳಿಯುವುದು.
- ಪೋಷಕರು ತಮ್ಮ ಮಕ್ಕಳ ಪ್ರಗತಿ ಹಾಗೂ ಬೆಳವಣಿಗೆಯ ಅಗತ್ಯತೆಗಳನ್ನು ಅರ್ಥಮಾಡಿಕೊಳ್ಳಲು ಪೋಷಕರಿಗೆ ನೆರವಾಗುವುದು.
- ಮಕ್ಕಳಿಗಾಗಿ ಇರುವ ಶಾಲೆಯ ಹೊರಗಿನ ಅಭಿವೃದ್ಧಿಯ ಅವಕಾಶಗಳನ್ನು ಸಮುದಾಯದಲ್ಲಿ ಉತ್ತೇಜಿಸುವುದು.
- ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಸಮುದಾಯದ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು ಅಥವಾ ಅಭಿವೃದ್ಧಿಪಡಿಸುವುದು.
- ವಿದ್ಯಾರ್ಥಿಗಳ ಶೈಕ್ಷಣಿಕ, ವೃತ್ತಿಪರ ಹಾಗೂ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಸಮಾಲೋಚನೆ ಮಾಡಲಾಗುವುದು.

–ಡಾ. ವಾಮದೇವಪ್ಪ ಹೆಚ್. ವಿ.

## ಸಮಾಲೋಚನೆಯ ಸಿದ್ಧಾಂತಗಳು

ಸಮಾಲೋಚನೆಯ ಬೇರೆ ಬೇರೆ ಉಪಕ್ರಮಗಳಿಗೆ ಬೇರೆ ಬೇರೆ ಸೈದ್ಧಾಂತಿಕ ಆಧಾರವಿರುತ್ತದೆ. ಸಮಾಲೋಚನ ಪ್ರಕ್ರಿಯೆಗಳು ಮನೋವಿಜ್ಞಾನಿ ಹೊಂದಿರುವ ಸಿದ್ಧಾಂತದಿಂದ ಪ್ರಭಾವಿತವಾಗಿರುತ್ತದೆ. ಮನೋವಿಜ್ಞಾನಿಗಳು ಸಮಾಲೋಚನೆಯ ಅನೇಕ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಪ್ರತಿಯೊಂದು ಸಿದ್ಧಾಂತವು ಈ ಮುಂದಿನ ಅಂಶಗಳನ್ನು ಒಳಗೊಂಡಿರುತ್ತದೆ– ಮಾನವ ಸ್ವಭಾವದ ಬಗೆಗಿನ ನಿಲುವು, ವ್ಯಕ್ತಿತ್ವದ ಪರಿಕಲ್ಪನೆ,

Digitised by Bharatavani, CIIL

ಸಮಾಲೋಚನೆಯ ಗುರಿಗಳು ಮತ್ತು ಪ್ರಕ್ರಿಯೆ ಬಳಸುವ ವಿಧಾನಗಳು/ತಂತ್ರಗಳು ಮತ್ತು ಸಮಾಲೋಚನೆಯ ಪ್ರಮುಖ ಸಿದ್ಧಾಂತಗಳನ್ನು ಈ ಮುಂದೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಸಮಾಲೋಚನೆಯ ಮನೋವಿಶ್ಲೇಷಣಾತ್ಮಕ ಸಿದ್ಧಾಂತಗಳನ್ನು ಮುಖ್ಯವಾಗಿ ಫ್ರಾಯ್ಡ್, ಯೂಂಗ್ ಮತ್ತು ಅಡ್ಲೆರ್ ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ, ಅಡ್ಲೆರ್‌ನನ್ನು ಹೊರತುಪಡಿಸಿ ಮಾನವನ ವರ್ತನೆ ಸೂಕ್ತ ಚೇತನದ ಪ್ರೇರಣೆಗಳಿಂದ ನಿಯಂತ್ರಿತವಾಗಿರುತ್ತದೆ. ಆದರೆ ಅಡ್ಲೆರ್‌ನ ಪ್ರಕಾರ ಮಾನವನ ವರ್ತನೆ ಚೇತನಾವಸ್ಥೆಯ ಪ್ರೇರಣೆಗಳಿಂದ ಪ್ರಭಾವಿತಗೊಳ್ಳುತ್ತದೆ. ಫ್ರಾಯ್ಡ್‌ನ ಪ್ರಕಾರ ಮಾನವ ಮೂಲತಃ ಮೃಗೀಯ ಜೈವಿಕ ಸ್ವಭಾವದವನಾದರೆ, ಯೂಂಗ್ ಪ್ರಕಾರ ಮಾನವ ಸೃಜನಾತ್ಮಕ ಪ್ರವೃತ್ತಿಗಳನ್ನು ಹೊಂದಿದ್ದಾನೆ. **ಫ್ರಾಯ್ಡ್** ವ್ಯಕ್ತಿತ್ವದಲ್ಲಿ ಇದ್ ಅಹಂ ಮತ್ತು ಅಧಿ–ಅಹಂ ಎಂಬ ಮೂರು ಭಾಗಗಳನ್ನು ಗುರ್ತಿಸಿದ್ದಾರೆ. ಮೃಗಿಕ ಸ್ವಭಾವದ ಇದ್, ನೈತಿಕ ಸ್ವಭಾವದ ಅಧಿ ಅಹಂ, ಅಹಂ ಅನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ. ಇದ್ ಜೈವಿಕ ಪ್ರೇರಣೆಗಳ ನೇರ ತೃಪ್ತಿಗೆ ಪ್ರಯತ್ನಿಸಿದರೆ ಅಧಿ–ಅಹಂ ನೈತಿಕತೆಯ ಕಡೆಗೆ, ಸಾಮಾಜಿಕ ನಿಯಮಗಳ ಕಡೆಗೆ ಎಳೆಯುತ್ತದೆ. ಇದರಿಂದಾಗಿ ಅಹಂನಲ್ಲಿ ಸಂಘರ್ಷಗಳು ಉಂಟಾಗಿ ಸಮಾಲೋಚನೆಯ ಅಗತ್ಯವುಂಟಾಗುತ್ತದೆ. ಈ ಸಂಘಗಳಿಗೆ ಮೂಲವಾಗಿರುವ ಮನೋಗ್ರಂಥಿಗಳನ್ನು (Complexes) ನಿವಾರಿಸಲು, ದಮನ ಮಾಡಿದ ಪ್ರೇರಣೆಗಳನ್ನು ಸಾಮಾಜಿಕ ನಿಯಮಗಳಿಗೆ ಒಳಪಟ್ಟು ತೃಪ್ತಿಪಡಿಸಲು ವ್ಯಕ್ತಿಗೆ ಸಹಾಯ ಮಾಡಿ, ಅವನ ಆತಂಕವನ್ನು, ದ್ವಂದ್ವಗಳನ್ನು ನಿವಾರಿಸುವುದೇ ಸಮಾಲೋಚನೆಯ ಗುರಿಯಾಗುತ್ತದೆ. ಇದಕ್ಕಾಗಿ ಸಮಾಲೋಚಕ ಮುಕ್ತ ಸಹಚರ್ಯ, ಕನಸುಗಳ ವಿಶ್ಲೇಷಣೆ, ವ್ಯಕ್ತಿ ಪ್ರತ್ಯಾರೋಪ (Transference) ಮಾಡುವ ಪ್ರೇರಣೆಗಳ ವಿಶ್ಲೇಷಣೆ, ವ್ಯಕ್ತಿಯಲ್ಲಿ ಉಂಟಾಗುವ ಪ್ರತಿರೋಧದ ವಿಶ್ಲೇಷಣೆ ಮುಂತಾದ ತಂತ್ರಗಳನ್ನು ಉಪಯೋಗಿಸುತ್ತಾರೆ. ಸುಪ್ತ ಚೇತನದ ಪ್ರೇರಣೆಗಳನ್ನು ಚೇತನಾವಸ್ಥೆಗೆ ತಂದು ಅವುಗಳನ್ನು ವಿಶ್ಲೇಷಿಸಿ, ಪರಿಹರಿಸಿಕೊಳ್ಳಲು ವ್ಯಕ್ತಿಗೆ ಸಹಾಯ ಮಾಡುವುದು ಸಮಾಲೋಚಕನ ಪಾತ್ರವಾಗುತ್ತದೆ.

ಯೂಂಗ್ (Jung) ಸುಪ್ತ ಚೇತನದಲ್ಲಿ ಮೃಗೀಯ ಪ್ರವೃತ್ತಿಗಳನ್ನು ಒಪ್ಪಿದರೂ, ಅದರಾಚೆ ಮಾನವನಲ್ಲಿ ಸೃಜನಾತ್ಮಕ ಪ್ರೇರಣೆಗಳು, ಇಡೀ ಮಾನವಕುಲದ ಸಾಮಾನ್ಯ ಅನುಭವಗಳ ಪ್ರೇರಣೆಗಳು (ಇವುಗಳಿಗೆ ಪ್ರಾಚೀನ ಕಲ್ಪಗಳು Arehetypes ಎಂದು ಹೆಸರು) ಇವೆ ಎನ್ನುತ್ತಾನೆ. ಇವುಗಳಿಗೆ ಸಂಬಂಧಿಸಿದಂತೆಯೂ ಸಂಘರ್ಷಗಳು, ದ್ವಂದ್ವಗಳು ಉಂಟಾಗಿ ವ್ಯಕ್ತಿಗೆ ಸಮಾಲೋಚನೆ ಬೇಕಾಗುತ್ತದೆ. ಇವುಗಳನ್ನು ವಿಶ್ಲೇಷಿಸಿ, ಪರಿಹಾರ ಕಂಡುಕೊಳ್ಳಲು ವ್ಯಕ್ತಿಗೆ ಸಹಾಯ ಮಾಡುವುದು ಸಮಾಲೋಚನೆಯ ಮುಖ್ಯ ಗುರಿಯಾಗುತ್ತದೆ. ಫ್ರಾಯ್ಡ್ ಉಪಯೋಗಿಸುವ ತಂತ್ರಗಳನ್ನೇ ಯೂಂಗ್ ಸಹ ಉಪಯೋಗಿಸುತ್ತಾನೆ. ಆದರೆ ಸಹಚರ್ಯೆಗಳನ್ನು, ಸ್ವಪ್ನಗಳನ್ನು ತನ್ನದೇ ಆದ ಸಂಕೇತಗಳ ಮೂಲಕ ವಿಶ್ಲೇಷಿಸುತ್ತಾನೆ. ದ್ವಂದ್ವಗಳನ್ನು ಪರಿಹರಿಸಿಕೊಂಡು ತನ್ನ ಸಾಮರ್ಥ್ಯಗಳನ್ನು ಸೃಜನಾತ್ಮಕವಾಗಿ ಅಭಿವ್ಯಕ್ತಿಗೊಳಿಸಲು ಸಮಾಲೋಚಕ ವ್ಯಕ್ತಿಗೆ ಸಹಾಯ ಮಾಡುತ್ತಾನೆ.

ಅಡ್ಲೆರನ ಪ್ರಕಾರ ಸಾಮಾಜಿಕ ಆಸಕ್ತಿ ಮಾನವನ ವ್ಯಕ್ತಿತ್ವದ ಒಂದು ಮುಖ್ಯ ಅಂಶವಾಗಿದೆ. ಈ ಆಸಕ್ತಿ ಜನ್ಮಜಾತವಲ್ಲ, ಆದರೆ ಇದನ್ನು ತರಬೇತಿಯಿಂದ ವಿಕಾಸಗೊಳಿಸಬಹುದು. ಮಾನವನ ಬೆಳವಣಿಗೆಯೊಂದಿಗೇ ಸಮಾಜಕ್ಕೆ ಸಂಬಂಧಿಸಿದಂತೆ ಅವನಲ್ಲಿ ಕೀಳರಿಮೆ ಅಥವಾ ಮೇಲರಿಮೆಯ ಪ್ರವೃತ್ತಿಗಳು ಉಂಟಾಗಿ ಇವುಗಳಿಂದಾಗಿಯೇ ಅವನಲ್ಲಿ ಸಮಸ್ಯೆಗಳು ಉಂಟಾಗುತ್ತವೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾಲೋಚನೆಯ ಅಗತ್ಯ ಉಂಟಾಗುತ್ತದೆ. ವ್ಯಕ್ತಿಯಲ್ಲಿ ಆರೋಗ್ಯಕರ ಜೀವನ ಶೈಲಿಯನ್ನು ಮತ್ತು ಸಾಮಾಜಿಕ ಆಸಕ್ತಿಯನ್ನು ಬೆಳೆಸುವುದು ಸಮಾಲೋಚನೆಯ ಗುರಿಗಳಾಗಿವೆ. ವ್ಯಕ್ತಿಯೊಡನೆ ಸೌಹಾರ್ದ ಸಂಬಂಧವನ್ನು, ಅವನ ಜೀವನ ಶೈಲಿಯನ್ನು ಸ್ಥಾಪಿಸುವುದು ವ್ಯಕ್ತಿಯ ವ್ಯಕ್ತಿಗತ ತರ್ಕವನ್ನು ಪ್ರಶ್ನಿಸುವ, ಎದುರಿಸುವಿಕೆ (Confrontation) ತಂತ್ರ, ಪ್ರೋತ್ಸಾಹಿಸುವುದು ಮುಂತಾದ ತಂತ್ರಗಳನ್ನು ಆಡ್ಲೆರನ ರೀತಿಯ ಸಮಾಲೋಚನೆಯಲ್ಲಿ ಉಪಯೋಗಿಸಲ್ಪಡುತ್ತವೆ. ಸಮಾಲೋಚಕ ನಿದಾನಕರ್ತನಾಗಿ, (Diagnosticion), ಶಿಕ್ಷಕನಾಗಿ ಮತ್ತು ಮಾದರಿಯಾಗಿ ಪಾತ್ರ ವಹಿಸುತ್ತಾನೆ.

**ಅನಿರ್ದೇಶಿತ ಅಥವಾ ವ್ಯಕ್ತಿ (ಕಕ್ಷಿದಾರ) ಕೇಂದ್ರಿತ ಸಮಾಲೋಚನೆಯ ಪ್ರತಿಪಾದಕನಾದ ಕಾರ್ಲ್ ರೋಜರ್ಸ್** ತನ್ನ ಮಾನವತಾವಾದಿ ಮನೋವಿಜ್ಞಾನದ ಮೂಲತತ್ವಗಳನ್ನು ತನ್ನ ಸಮಾಲೋಚನ ಉಪಕ್ರಮಕ್ಕೆ ಆಧಾರವಾಗಿರಿಸಿಕೊಂಡಿದ್ದಾನೆ. ಇವನ ಪ್ರಕಾರ ಮಾನವ ಸ್ವಭಾವ ಮೂಲತಃ ಒಳ್ಳೆಯದೇ ಆಗಿರುತ್ತದೆ. ವ್ಯಕ್ತಿ ತನ್ನ ಸಾಮರ್ಥ್ಯದಿಂದಲೇ ಆತ್ಮ–ವಾಸ್ತವೀಕರಣದ ಕಡೆಗೆ ಮುಂದುವರಿಯುವ ಸಾಮರ್ಥ್ಯವನ್ನು ಹೊಂದಿದ್ದಾನೆ. ರೋಜರ್ಸ್ ವ್ಯಕ್ತಿಯ ಜೀವನದ ಘಟನೆಗಳನ್ನು ವ್ಯಕ್ತಿಯ ದೃಷ್ಟಿಯಿಂದಲೇ (ವ್ಯಕ್ತಿನಿಷ್ಠ ದೃಷ್ಟಿಯಿಂದಲೇ) ಅರ್ಥೈಸಬೇಕೆಂಬ ಘಟನಾತ್ಮಕವಾದಿ (Phenomenological) ನಿಲುವಿಗೆ ಮಹತ್ವ ಕೊಡುತ್ತಾನೆ. ವ್ಯಕ್ತಿಯಲ್ಲಿ ತನ್ನ ಸಮಸ್ಯೆಗಳಿಗೆ ತಾನೇ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯವಿದೆ. ಇದಕ್ಕೆ ಸಮಾಲೋಚಕನ ನಿಲುವಿನಲ್ಲಿರಬೇಕಾಗುತ್ತದೆ. ವ್ಯಕ್ತಿಯ ಸ್ವಯಂ (Self) ಪರಿಕಲ್ಪನೆಗೆ ಈ ಸಿದ್ಧಾಂತ ಮಹತ್ವ ನೀಡುತ್ತದೆ. ರೋಜರ್ಸ್ ವ್ಯಕ್ತಿಯ ಭೂತಕಾಲದ ಘಟನೆಗಳಿಗಿಂತ ವರ್ತಮಾನದ ಘಟನೆಗಳಿಗೆ, ಭವಿಷ್ಯದ ಯೋಜನೆಗಳಿಗೆ ಆಸೆ–ಆಕಾಂಕ್ಷೆಗಳಿಗೆ, ಗುರಿಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಾನೆ. ವ್ಯಕ್ತಿಯ ವಾಸ್ತವಿಕ ಅಹಂ ಗೂ (Real Self) ಮತ್ತು ಅವನ ಆದರ್ಶ ಅಹಂ ಗೂ (Ideal Self)ಗೂ ಸಮಂಜಸತೆ ಇಲ್ಲದಿದ್ದಾಗ ಅವನಲ್ಲಿ ಸಮಸ್ಯೆಗಳು ಉಂಟಾಗುತ್ತವೆ. ಈ ರೀತಿಯ ಅಸಮಾನತೆಯನ್ನು ನಿವಾರಿಸಲು ಸಮಾಲೋಚನೆಯ ಅವಶ್ಯಕತೆ ಉಂಟಾಗುತ್ತದೆ. ವ್ಯಕ್ತಿಯಲ್ಲಿ ನೈಜವಾದ ಪ್ರತ್ಯಕ್ಷಾನುಭವವನ್ನು ಉಂಟು ಮಾಡುವುದು, ಹೆಚ್ಚಿನ ಆತ್ಮ–ವಿಶ್ವಾಸ ಮತ್ತು ಸ್ವ–ನಿರ್ದೇಶನವನ್ನು ಬೆಳೆಸುವುದು, ಅವನಲ್ಲಿ ಧನಾತ್ಮಕ ಮೌಲ್ಯದ ಭಾವನೆಯನ್ನು

Digitised by Bharatavani, CIIL

ಉಂಟು ಮಾಡುವುದು, ಹೆಚ್ಚಿನ ಪ್ರಬುದ್ಧತೆ, ಸಾಮಾಜಿಕ ಕೌಶಲ್ಯ ಮತ್ತು ಹೊಂದಾಣಿಕೆಯ ವರ್ತನೆ ಬೆಳೆಸುವುದು, ಪೂರ್ಣವಾಗಿ ಕಾರ್ಯನಿರತರನ್ನಾಗಿಸುವುದು ಸಮಾಲೋಚನೆಯ ಗುರಿಗಳಾಗಿವೆ. ರೋಜರ್ಸ್ ಅನಿರ್ದೇಶಿತ ಕ್ರಮವನ್ನು ಅನುಸರಿಸುತ್ತಾನೆ. ವ್ಯಕ್ತಿ ತನ್ನನ್ನು ತಾನು ಅಭಿವ್ಯಕ್ತಗೊಳಿಸಿಕೊಳ್ಳಲು ಅವಕಾಶ ಕಲ್ಪಿಸುತ್ತಾನೆ. ಸಮಾಲೋಚಕ ಕೇಳುಗನಾಗಿ ವ್ಯಕ್ತಿ ಹೇಳುವುದನ್ನು ಸ್ವೀಕರಿಸುತ್ತಾನೆ. ನಂತರ ವ್ಯಕ್ತಿಯ ಭಾವನೆಯನ್ನು, ಸಂವೇಗಗಳನ್ನು ತಾನು ಯಾವುದೇ ನಿರ್ಣಯವನ್ನು ಮಾಡದೇ ವ್ಯಕ್ತಿಯೇ ವಿಶ್ಲೇಷಿಸಿಕೊಳ್ಳಲು ಪ್ರೋತ್ಸಾಹಿಸುತ್ತಾನೆ. ಸಹಾನುಭೂತಿ, ಹಾರ್ದಿಕತೆ ಮತ್ತು ಸಮಂಜಸತೆಯ ವರ್ತನೆಯನ್ನು ತೋರಿಸುತ್ತಾನೆ. ಸಮಾಲೋಚಕ ತನ್ನೊಂದಿಗೆ ನಿಜವಾದ, ಅಧಿಕೃತವಾದ ಸಂಬಂಧ ಹೊಂದಿದ್ದಾನೆ, ತನಗೆ ಮಾದರಿಯಾಗಿದ್ದಾನೆ ಎನ್ನುವ ಭಾವನೆಯನ್ನು ಕಕ್ಷಿದಾರನಲ್ಲಿ ಉಂಟುಮಾಡುವುದು ಸಮಾಲೋಚಕನ ಕರ್ತವ್ಯವಾಗುತ್ತದೆ.

ಅಸ್ತಿತ್ವವಾದಿ ನಿಲುವಿನ ರೋಲೋ ಮೇ ಮತ್ತು ವಿಕ್ಟರ್ ಫ್ರಾಂಕೆಲ್ ಪ್ರಕಾರ ವ್ಯಕ್ತಿ ತನ್ನ ಆಯ್ಕೆಗಳ ಮೂಲಕ ತನ್ನ ಚರಿತ್ರೆಯನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಅರ್ಥಪೂರ್ಣ ಆಯ್ಕೆಗಳನ್ನು ಮಾಡದಿರುವುದು ಮತ್ತು ತನ್ನ ಅಂತಃಸ್ಸತ್ವವನ್ನು ಹೆಚ್ಚಿಸಿಕೊಳ್ಳುವಲ್ಲಿ ವಿಫಲನಾಗುವುದು ಸಮಸ್ಯೆಗಳಿಗೆ ಕಾರಣವಾಗುತ್ತವೆ. ಆತಂಕ ಒಂದು ಪ್ರೇರಕಶಕ್ತಿಯಾಗಿ ಕೆಲಸ ಮಾಡಬಲ್ಲದು. ಫ್ರಾಂಕೆಲ್ಲನ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಒಂದು ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಶೀಲನಾಗುತ್ತಾನೆ. ಇದನ್ನು ವ್ಯಕ್ತಿ ಒಂದು ಕಾರ್ಯ ಮಾಡುವುದರಿಂದ, ಒಂದು ಮೌಲ್ಯವನ್ನು ಅನುಭವಿಸುವುದರಿಂದ ಮತ್ತು ಜೀವನದಲ್ಲಿ ಕಷ್ಟ ಅನುಭವಿಸುವುದರಿಂದ ಕಂಡುಕೊಳ್ಳುತ್ತಾನೆ ವ್ಯಕ್ತಿಗಳು ತಮ್ಮ ಆಯ್ಕೆಗಳಿಗೆ ತಾವೇ ಜವಾಬ್ದಾರರಾಗುವಂತೆ ಮಾಡುವುದು, ಸ್ವ-ಅರಿವಿನ ಮೂಲಕ ಅಂತಃಸ್ಸತ್ವ, ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸುವುದು, ಒಂದು ಆಂತರಿಕ ಸಂಬಂಧಗಳ ಚೌಕಟ್ಟನ್ನು ರೂಪಿಸುವುದು ಸಮಾಲೋಚನೆಯ ಗುರಿಗಳಾಗುತ್ತವೆ. ವ್ಯಕ್ತಿಯೊಡನೆ ನಿಕಟ ಸಂಬಂಧ ಬೆಳೆಸುವ ಮತ್ತು ವ್ಯಕ್ತಿಯ ಆಯ್ಕೆಗಳನ್ನು, ನಿಲುವುಗಳನ್ನು ಪ್ರಶ್ನಿಸುವ ತಂತ್ರಗಳನ್ನು ಸಮಾಲೋಚಕ ಉಪಯೋಗಿಸುತ್ತಾನೆ. ಸಮಾಲೋಚಕ ಓರ್ವ ಅಧಿಕೃತ ವ್ಯಕ್ತಿಯಾಗಿ, ಮಾದರಿಯಾಗಿ ಪಾತ್ರ ನಿರ್ವಹಿಸಬೇಕು.

**ಫ್ರಿಟ್ಜ್ ಪರ್ಲ್ಸ್ ಪ್ರತಿಪಾದಿಸಿರುವ ಸಮಾಲೋಚನೆಯ ಗೆಸ್ಟಾಲ್ಟ್ ಸಿದ್ಧಾಂತದ** ಪ್ರಕಾರ ಮಾನವನ ಭಾವನೆಗಳ ಸಮಷ್ಟಿಯೇ ಸಮಾಲೋಚನೆಗೆ ಆಧಾರವಾಗಬೇಕು. ಈ ನಿಲುವು ಮಾನವನ ಪ್ರಸ್ತುತದ (ಇಂದಿನ) ಸ್ಥಿತಿಯ ಬಗ್ಗೆ ಗಮನವನ್ನು ಕೇಂದ್ರೀಕರಿಸಿ ವ್ಯಕ್ತಿಯ ಅರಿವಿನ ಸ್ಥಿತಿಯನ್ನು ವಿಶ್ಲೇಷಿಸುತ್ತದೆ. ವ್ಯಕ್ತಿ ತನ್ನನ್ನು ತಾನು ಸ್ವೀಕರಿಸಿಕೊಳ್ಳುವ ಮೂಲಕ ಆತ್ಮ ವಾಸ್ತವೀಕರಣವನ್ನು ಸಾಧಿಸುತ್ತಾನೆ. ವ್ಯಕ್ತಿ ಸಹಜವಾಗಿಯೇ ಇಡಿಯಾದ, ಸಮಗ್ರವಾದ, ಉತ್ಪಾದಕವಾದ ಜೀವನವನ್ನು ಸಾಧಿಸಬೇಕೆಂದು ಬಯಸುತ್ತಾನೆ. ಗತಕಾಲ ವ್ಯಕ್ತಿಯ ಜೀವನವನ್ನು ನಿಯಂತ್ರಿಸುತ್ತದೆ ಎಂದು ಒಪ್ಪದ ಈ ಸಿದ್ಧಾಂತ ಮಾನವನಿಗೆ ತನ್ನನ್ನು ಪರಿವರ್ತಿಸಿಕೊಂಡು, ಜವಾಬ್ದಾರಿಯನ್ನು ಸಾಧಿಸುವ ಸಾಮರ್ಥ್ಯವಿದೆಯೆಂದು ಒಪ್ಪುತ್ತದೆ. ವ್ಯಕ್ತಿಗಳು, ಸಂವೇದನೆಗಳು, ಸಂವೇಗಗಳಿಗೆ ಮಹತ್ವ ಕೊಡದೆ ಬೌದ್ಧಿಕವಾದುದಕ್ಕೆ ಮಹತ್ವ ಕೊಡುವುದರಿಂದ ಸಮಸ್ಯೆಗಳು ಉಂಟಾಗುತ್ತವೆ. ಇದರಿಂದಾಗಿ ಸಮಾಲೋಚನೆ ಬೇಕಾಗುತ್ತದೆ. ಈ ಸಿದ್ಧಾಂತ ವ್ಯಕ್ತಿಗಳ ವ್ಯಕ್ತಿನಿಷ್ಠ ಅನುಭವಗಳಿಗೆ ಹೆಚ್ಚಿನ ಮಹತ್ವ ಕೊಡುತ್ತದೆ. ವರ್ತಮಾನದ ಪರಿಸ್ಥಿತಿಗಳನ್ನು ವಿಶ್ಲೇಷಿಸಿ, ಭೂತಕಾಲದ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುವುದು, ಸಮಂಜಸತೆಯನ್ನು ವ್ಯಕ್ತಿಯಲ್ಲಿ ಉಂಟುಮಾಡುವುದು ಬೌದ್ಧಿಕ ಪ್ರಭುತ್ವವನ್ನು ಬೆಳೆಸುವುದು ಸಮಾಲೋಚನೆಯ ಗುರಿಗಳಾಗಿವೆ. ಗೆಸ್ಟಾಲ್ಟ್ ಸಮಾಲೋಚಕ ಆಶಾಭಂಗದ ಕ್ರಿಯೆಗಳು, ಪಾತ್ರಾಭಿನಯ, ಕಲ್ಪಿಸಿಕೊಳ್ಳುವಿಕೆ, ಮನೋ-ನಾಟಕ-ಇವುಗಳನ್ನು ಒಳಗೊಂಡ ಗೆಸ್ಟಾಲ್ಟ್ ಚಿಕಿತ್ಸೆ (Gestalt Theraphy) ಕ್ರಮವನ್ನು ಅನುಸರಿಸುತ್ತಾನೆ. ಕನಸುಗಳ ವಿಶ್ಲೇಷಣೆ, ಎದುರಿಸುವುದು, ವ್ಯಕ್ತಿ ತನ್ನ ವ್ಯಕ್ತಿತ್ವದ ವಿವಿಧ ಮುಖಗಳು ಒಂದು ಖಾಲಿ ಕುರ್ಚಿಯಲ್ಲಿ ಕುಳಿತಿವೆ ಎಂದು ಕಲ್ಪಿಸಿಕೊಂಡು ಅವುಗಳೊಡನೆ ಚರ್ಚಿಸುವುದು (Empty chair), 'ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ' ಎಂಬ ತಂತ್ರ ಮುಂತಾದ ತಂತ್ರಗಳನ್ನು ಸಮಾಲೋಚಕ ಉಪಯೋಗಿಸುತ್ತಾನೆ. ಸೂಕ್ತ ಪರಿಸರವನ್ನು ನಿರ್ಮಿಸುವುದು, ತಡೆಯುಂಟಾಗಿರುವ ಶಕ್ತಿಯನ್ನು ಗುರ್ತಿಸಲು ನೆರವಾಗುವುದು, ವರ್ತಮಾನಕ್ಕೆ ಸಂಬಂಧಿಸಿದಂತೆಯೇ ಮಾತನಾಡುವುದು ಸಮಾಲೋಚಕನ ಪಾತ್ರಗಳಾಗಿವೆ.

**ವಿವೇಚನಾಯುಕ್ತ-ಸಂವೇಗಾತ್ಮಕ ಚಿಕಿತ್ಸೆಯ (Rational Emotive Theracy-RET) ಪ್ರತಿಪಾದಕನಾದ ಆಲ್ಬರ್ಟ್ ಎಲ್ಲಿಸನ** ಪ್ರಕಾರ ಮಾನವ ಸಂಪೂರ್ಣವಾಗಿ, ವಿವೇಚನಾಯುಕ್ತನಾಗಿ, ವಿವೇಚನಾರಹಿತನಾಗಿ, ಅರ್ಥಪೂರ್ಣವಾಗಿ, ಅಸಂಬದ್ಧನಾಗಿ ಯೋಚಿಸಬಲ್ಲ ಸಾಮರ್ಥ್ಯ ಹೊಂದಿದ್ದಾನೆ. ಈ ಸಾಮರ್ಥ್ಯ ಜನ್ಮಜಾತವಾದುದಾಗಿದೆ. ವಿವೇಚನಾರಹಿತ ಯೋಚನೆಗಳಿಂದ ಸಮಸ್ಯೆಗಳು ಉಂಟಾಗುವುದರಿಂದ ಎಲ್ಲಿಸ್ ಅವುಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾನೆ. ಮಾನವ ಅನೇಕ ಅತಾರ್ಕಿಕ ವಿವೇಚನಾರಹಿತ ನಂಬಿಕೆಗಳನ್ನು ಹೊಂದಿದ್ದಾನೆ. ಉದಾಹರಣೆಗೆ-ಎಲ್ಲರೂ ಪ್ರೀತಿಸಲ್ಪಡಬೇಕು, ನಾನು ನಂಬಿದಂತೆ ಘಟನೆಗಳು ಘಟಿಸದಿರುವುದು ಒಂದು ದೊಡ್ಡ ಆಘಾತ, ಮಾನವನಿಗೆ ಮೌಲ್ಯವಿರುವುದು ಅವನ ಸಾಧನೆಗಳಿಂದ ಮಾತ್ರ ಇತ್ಯಾದಿ ಮನುಷ್ಯ ಸುಲಭವಾಗಿ ನಂಬುವುದರಿಂದ ಮತ್ತು ಸೂಚನೆಗಳಿಗೆ ಸುಲಭವಾಗಿ ಒಳಗಾಗುವುದರಿಂದ ಸಮಸ್ಯೆಗಳು ಉದ್ಭವಿಸುತ್ತವೆ. ಮನುಷ್ಯ ಘಟನೆಗಳ ಬಗ್ಗೆ ಬೇರೆ ಬೇರೆ ರೀತಿಗಳಲ್ಲಿ ಸಂಜ್ಞಾನವನ್ನು ಪಡೆಯುತ್ತಾನೆ. ಆದರೂ ಅವನಿಗೆ ತನ್ನ ಯೋಚನೆಗಳನ್ನು ನಿಯಂತ್ರಿಸುವ ಸಾಮರ್ಥ್ಯವಿದೆ. ಆದರೂ ಕೆಲವು ವೇಳೆ ಅವನಿಗೆ ಸಮಾಲೋಚನೆ ಬೇಕಾಗುತ್ತದೆ. ವ್ಯಕ್ತಿಗಳು ವಿವೇಚನಾಯುಕ್ತರಾಗಿ, ಉತ್ಪಾದಕರಾಗಿ ಬದುಕಲು ಸಹಾಯ ಮಾಡುವುದು, ತೊಂದರೆಯನ್ನು ಉಂಟುಮಾಡುತ್ತಿರುವ ಯೋಚನೆಗಳನ್ನು ಗುರ್ತಿಸಲು ನೆರವಾಗುವುದು, ಅಪೇಕ್ಷೆಗಳು ನಮ್ಮ ಕಡ್ಡಾಯ

Digitised by Bharatavani, CIIL

ಬೇಡಿಕೆಗಳಲ್ಲವೆನ್ನುವುದರ ಅರಿವು ಮೂಡಿಸುವುದು, ಸೂಕ್ತವಾದ ಸಂವೇಗಾತ್ಮಕ ಪ್ರತಿಕ್ರಿಯೆಗಳನ್ನು ಬೆಳೆಸುವುದು– ಇವು ಸಮಾಲೋಚನೆಯ ಗುರಿಗಳಾಗಿವೆ. RET ಸಮಾಲೋಚಕ ಘಟನೆಯನ್ನು ಸಕ್ರಿಯಗೊಳಿಸುವುದು (Activating), ನಂಬಿಕೆ (Belief), ಸಂವೇಗಾತ್ಮಕ ಪರಿಣಾಮ (Emotional Consequence) ಗಳನ್ನು ಒಳಗೊಂಡ ABC ನಿಯಮ, ಸಂವೇಗಾತ್ಮಕ ನಿಯಂತ್ರಣ ಕಾರ್ಡ್‌ಗಳ ಬಳಕೆ ಮುಂತಾದ ತಂತ್ರಗಳನ್ನು ಬಳಸುತ್ತಾನೆ. RET ಸಮಾಲೋಚಕ ನೇರ, ಸಕ್ರಿಯ ಬೋಧಕನಾಗಿರಬೇಕು. ಸಾಕಷ್ಟು ಬುದ್ಧಿ ಉಪಯೋಗಿಸಬೇಕು.

**ವರ್ತನವಾದಿ ಸಿದ್ಧಾಂತಗಳಲ್ಲಿ** (ಸಂಜ್ಞಾನಾತ್ಮಕ ವರ್ತನವಾದಿಗಳಾದ ಟೋಲ್‌ಮನ್ ಮತ್ತು ಲೆವಿನ್ನರನ್ನು ಹೊರತುಪಡಿಸಿ) **ಪ್ರಮುಖ ಪ್ರತಿಪಾದಕನಾದ ಬಿ.ಎಫ್. ಸ್ಕಿನ್ನರ**ನ ಪ್ರಕಾರ ಸಮಾಲೋಚನೆ ಪ್ರಸ್ತುತದಲ್ಲಿ ವ್ಯಕ್ತವಾಗುತ್ತಿರುವ ವರ್ತನೆಯ ಮೇಲೆ ಗಮನ ಕೇಂದ್ರೀಕರಿಸಬೇಕು. ಎಲ್ಲಾ ವರ್ತನೆಗಳೂ ಅವು ಸಮಾಯೋಜಿತವಾದವುಗಳಾಗಿರಲಿ ಅಥವಾ ಅಸಮಾಯೋಜಿತವಾದವುಗಳಾಗಲಿ ಕಲಿಕೆಯಿಂದ ಉಂಟಾಗುತ್ತವೆ. ಅಪಸಮಾಯೋಜಿತ ವರ್ತನೆಗಳನ್ನು ನಿವಾರಿಸಲು ಸಮಾಯೋಜಿತ ವರ್ತನೆಗಳನ್ನು ಕಲಿತುಕೊಳ್ಳಲು ಸಾಧ್ಯವಿದೆ. ಚಿಕಿತ್ಸೆ ನೀಡುವಾಗ ಸ್ಪಷ್ಟವಾಗಿ ವ್ಯಾಖ್ಯಾನಿಸಬಹುದಾದ, ಅಳತೆ ಮಾಡಬಹುದಾದ, ನಿರ್ದಿಷ್ಟ ಗುರಿಗಳನ್ನು ನಿರ್ಧರಿಸಿಕೊಳ್ಳಬೇಕಾದ ಅಗತ್ಯವಿದೆ.

ಅನುಕ್ರಿಯಾತ್ಮಕ ಕಲಿಕೆಯಲ್ಲಿ (Respondent Learning) ನಿರ್ದಿಷ್ಟ ಪ್ರಚೋದನೆ ಅನುಕ್ರಿಯೆಯ ಸಂಬಂಧವಿದ್ದು ಅದು ಜನ್ಮಜಾತ ಆಧಾರ ಹೊಂದಿದ್ದು ಸ್ವಲ್ಪ ಮಟ್ಟಿನ ಬದಲಾವಣೆಗೆ ಅವಕಾಶವಿರುತ್ತದೆ. ಕ್ರಿಯಾಜನ್ಯ (ಪ್ರಸೂತ) ಕಲಿಕೆಯಲ್ಲಿ (Operant Conditioned Learning) ಪ್ರಚೋದನ ಅನುಕ್ರಿಯೆ ಸಂಬಂಧ ಕಲಿಕೆಯಿಂದ ಉಂಟಾಗುತ್ತದೆ. ಇದು ಪರಿಸರದಲ್ಲಿನ ಬದಲಾವಣೆಗಳನ್ನು ಅವಲಂಬಿಸಿರುವುದರಿಂದ ಅದನ್ನು ಇಷ್ಟಬಂದಂತೆ ಬದಲಾಯಿಸಲು ಸಾಧ್ಯವಾಗುತ್ತದೆ. ವರ್ತನೆಯ ಬಹಳಷ್ಟು ಸಮಸ್ಯೆಗಳು ಈ ರೀತಿಯ, ಆದರೆ ತಪ್ಪಾದ ಕಲಿಕೆಯಿಂದ ಕಲಿತವುಗಳಾಗಿರುತ್ತದೆ. ಅವುಗಳನ್ನು ಸರಿಯಾದ ಪುನರ್–ಕಲಿಕೆಯಿಂದ ಸರಿಪಡಿಸಬಹುದು. ಇತರರ ವರ್ತನೆಗಳನ್ನು (ಕೆಲವು ವೇಳೆ ತಪ್ಪಾದ ವರ್ತನೆಗಳನ್ನು) ಕಲಿತುಕೊಳ್ಳುವ ಸಾಮಾಜಿಕ ನಮೂನೀಕರಣ (Social Modelling) ಈ ಸಿದ್ಧಾಂತದಲ್ಲಿ ಮಹತ್ವ ಪಡೆಯುತ್ತದೆ. ವರ್ತನವಾದಿ ಸಮಾಲೋಚನೆಯಲ್ಲಿ ಸಮಸ್ಯಾ ವರ್ತನೆಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗುತ್ತದೆ. ಸಮಸ್ಯೆಯ ವಿಕಾಸದ ಚರಿತ್ರೆಯನ್ನು ಗುರ್ತಿಸಲಾಗುತ್ತದೆ. ನಿರ್ದಿಷ್ಟ ಗುರಿಗಳನ್ನು ನಿರ್ಧರಿಸಲಾಗುತ್ತದೆ. ಈ ಗುರಿಗಳನ್ನು ಸಾಧಿಸಲು ಸೂಕ್ತವಾದ ವರ್ತನಾತ್ಮಕ ತಂತ್ರಗಳನ್ನು ಅನುಸರಿಸಲಾಗುತ್ತದೆ. ವರ್ತನವಾದಿ ಸಮಾಲೋಚಕ ಸಮಸ್ಯಾವರ್ತನೆಯ ಕಾರ್ಯವಿಶ್ಲೇಷಣೆ (Task Analysis), ಸೂಕ್ತ ಪುನರ್ಬಲಕ (Reinforcar) ಮತ್ತು ಪುನರ್ಬಲದ ತಪಶೀಲನ್ನು (Schedule of Reinforcement) ನಿರ್ಧರಿಸುವುದು, ಅಪೇಕ್ಷಿತ ವರ್ತನೆಯನ್ನು ಕ್ರಮಾಗತವಾಗಿ ರೂಪಿಸುವುದು (Shaping), ಸಾಮಾನ್ಯೀಕರಣ, ಉನ್ಮೂಲನ (Extinction), ಅಗತ್ಯಬಿದ್ದಾಗ ಲಘುದಂಡನೆ, ಬಹುಮಾನ ನೀಡಿ ಸಂವೇದೀಕರಣ ಮುಂತಾದ ವರ್ತನ ಬದಲಾವಣೆಯ ತಂತ್ರಗಳು ಮುಂತಾದವುಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ವರ್ತನವಾದಿ ಸಮಾಲೋಚಕ ತಾನು ನೀಡುವ ಸಮಾಲೋಚನೆಯಲ್ಲಿ ಸಲಹೆಗಾರನ, ಪುನರ್ಬಲನ ಕರ್ತನ ಮತ್ತು ಸುಗಮತಾಕರ್ತನ ಪಾತ್ರಗಳನ್ನು ವಹಿಸುತ್ತಾನೆ. ಸಮಾಲೋಚನೆಯಲ್ಲಿ ಸಕ್ರಿಯ ಆಸಕ್ತಿ ವಹಿಸಿ ಅದರ ಉದ್ದೇಶಗಳ ಸಾಧನೆಗೆ ತೋರಿಸುವ ಕಕ್ಷಿದಾರನ ಸಂಬಂಧಪಟ್ಟ ವ್ಯಕ್ತಿಗಳು ಕಕ್ಷಿದಾರನ ಪ್ರತಿ ವರ್ತನೆಗಳ ಮೇಲ್ವಿಚಾರಣೆ ಮಾಡುತ್ತಾನೆ. ಸಮಾಲೋಚಕ ಸಾಮಾಜಿಕ ವರ್ತನೆಯ ಮಾದರಿ (Model) ಆಗಿಯೂ ವರ್ತಿಸಬೇಕಾಗುತ್ತದೆ. ಸಮಾಲೋಚಕ ಅಗತ್ಯಬಿದ್ದಲ್ಲಿ ಮಾನಸಿಕ ಪರೀಕ್ಷೆಗಳನ್ನು ನೈದಾನಿಕ ಕ್ರಮಗಳನ್ನು ಉಪಯೋಗಿಸುತ್ತಾನೆ.

**ವಾಸ್ತವಿಕತಾ ಚಿಕಿತ್ಸೆಯ (Reality Therapy) ಪ್ರತಿಪಾದಕನಾದ ವಿಲಿಯಂ ಗ್ಲೇಸರನ** ಪ್ರಕಾರ ವ್ಯಕ್ತಿಗಳು ಹುಟ್ಟುಗುಣಗಳಿಂದ ಮತ್ತು ಸುಪ್ತಚೇತನದಿಂದ ಪ್ರೇರಿತರಾಗುವುದಿಲ್ಲ. ಅವರು ಚೇತನಾವಸ್ಥೆಯ ಸ್ತರದಲ್ಲಿಯೆ ಪ್ರತಿಕ್ರಿಯಿಸುತ್ತಾರೆ. ಪ್ರತಿಯೊಬ್ಬನಲ್ಲೂ ಸ್ವಾಸ್ಥ್ಯದ ಬೆಳವಣಿಗೆಯ ಶಕ್ತಿಗಳಿದ್ದು ಅವು ವ್ಯಕ್ತಿಯನ್ನು ದೈಹಿಕ ಮತ್ತು ಮಾನಸಿಕ ಬೆಳವಣಿಗೆಯತ್ತ ಪ್ರೇರೇಪಿಸುತ್ತವೆ. ಗ್ಲೇಸರನಿಗೆ ವ್ಯಕ್ತಿಯ ತಾದತ್ಮ್ಯತೆ (Identity) ಅಥವಾ ಸ್ವಾಸ್ಥ್ಯ ಭಾವನೆಯುಳ್ಳ ಸ್ವಯಂ ಮುಖ್ಯವಾಗುತ್ತದೆ. ವ್ಯಕ್ತಿಗಳು ಸ್ವಯಂ ನಿಯಂತ್ರಿತವಾದವರು ಎಂದು ಗ್ಲೇಸರ್ ನಂಬುತ್ತಾನೆ. ಈ ಪ್ರಕ್ರಿಯೆಯಲ್ಲಿ ವರ್ತನೆ, ನಿಯಂತ್ರಣ ಮತ್ತು ಸ್ವಯಂನ ಪ್ರತ್ಯಕ್ಷಾನುಭವ ಮುಖ್ಯವಾಗುತ್ತವೆ. ವ್ಯಕ್ತಿಯನ್ನು ಮಾನಸಿಕವಾಗಿ ಪ್ರಬಲನನ್ನಾಗಿ ಮತ್ತು ವಿವೇಚನಾಯುಕ್ತನನ್ನಾಗಿ ಮಾಡುವುದು, ತಮಗೆ ಜೀವನದಲ್ಲಿ ಏನು ಬೇಕು ಎಂಬುದನ್ನು ನಿರ್ಣಯಿಸುವಂತೆ ಮಾಡುವುದು, ಒಳಗೊಳ್ಳುವ ಹಾಗೂ ಅರ್ಥಪೂರ್ಣ ಸಂಬಂಧಗಳನ್ನು ಬೆಳೆಸಿಕೊಳ್ಳಲು ಸಹಾಯ ನೀಡುವುದು, ಗತಕಾಲವನ್ನು ಮರೆಯುವಂತೆ ಮಾಡುವುದು, ಯಾವುದೇ ನೆಪಗಳನ್ನು ಹೇಳದಿರುವಂತೆ ಮಾಡುವುದು, ವಾಸ್ತವಿಕ ಚಿಕಿತ್ಸೆಯ ಗುರಿಗಳಾಗಿದೆ. ವಾಸ್ತವಿಕ ಚಿಕಿತ್ಸೆ ಬಳಸುವ ಸಮಾಲೋಚಕ ವೈವಿಧ್ಯಪೂರ್ಣವಾದ ನವೀನ ರೀತಿಯ ತಂತ್ರಗಳನ್ನು ಬಳಸುತ್ತಾನೆ. ಹಾಸ್ಯವನ್ನು ಯಥೋಚಿತವಾಗಿ ಉಪಯೋಗಿಸುತ್ತಾನೆ. ಎದುರಿಸುವ ತಂತ್ರವೂ ಉಪಯೋಗಕ್ಕೆ ಬರುತ್ತದೆ. ಕಕ್ಷಿದಾರ ಏನನ್ನು ಬಯಸುತ್ತಾನೆಂಬುದನ್ನು ಗುರ್ತಿಸುವುದು, ಕಕ್ಷಿದಾರ ಏನು ಮಾಡುತ್ತಿದ್ದಾನೆಂದು ತಿಳಿದುಕೊಳ್ಳುವುದು, ಅವನ ಪ್ರಯತ್ನಗಳು ಎಷ್ಟರ ಮಟ್ಟಿಗೆ ಸಹಾಯಕವಾಗಿವೆ ಎಂದು ತಿಳಿದುಕೊಳ್ಳುವುದು, ಭವಿಷ್ಯದಲ್ಲಿ ಅವರು ಹೇಗೆ ವರ್ತಿಸಬೇಕೆಂದು ಇಷ್ಟಪಡುತ್ತಾರೆಂಬುದನ್ನು ಯೋಚಿಸುವುದು– ಇವುಗಳನ್ನು ಒಳಗೊಂಡ ಗ್ಲೇಸರನ WDEP ತಂತ್ರ ಒಂದು ವಿನೂತನ ರೀತಿಯದಾಗಿದೆ. ಈ ಸಮಾಲೋಚನ ಪ್ರಕ್ರಿಯೆ ಎಂಟು ಹಂತಗಳನ್ನು ಒಳಗೊಂಡಿದೆ.

Digitised by Bharatavani, CIIL

ಎರಿಕ್ ಬರ್ನ್ ಎಂಬುವನು ಪ್ರತಿಪಾದಿಸಿರುವ ಸಮಾಲೋಚನೆಯ ವ್ಯವಹಾರಾತ್ಮಕ ವಿಶ್ಲೇಷಣೆ ಸಿದ್ಧಾಂತದಲ್ಲಿ (Theory of Transactional Analysis) ಮಾನವನ ಸ್ವಭಾವದ ಬಗ್ಗೆ ಆಶಾವಾದಿ ನಿಲುವನ್ನು ತೆಗೆದುಕೊಳ್ಳಲಾಗಿದೆ. ಜೀವನದಲ್ಲಿ ಅನಿರೀಕ್ಷಿತ ಘಟನೆಗಳು ಉಂಟಾದರೂ ಮಾನವ ತನ್ನ ಜೀವನದ ದಿಶೆಯನ್ನು ಬದಲಾಯಿಸಿಕೊಳ್ಳಬಲ್ಲ ಎಂದು ನಂಬಲಾಗಿದೆ. ಜೀವನದಲ್ಲಿ ತೆಗೆದುಕೊಂಡ ದೋಷಯುಕ್ತ ನಿರ್ಧಾರಗಳನ್ನು ಸರಿಯಾದ ದಿಶೆಯಲ್ಲಿ ಬದಲಿಸಿಕೊಳ್ಳಲು ಯಾವಾಗಲೂ ಕಾಲ ಮಿಂಚುವುದಿಲ್ಲ. ಇದರಲ್ಲಿ ಮುಖ್ಯವಾಗಿ ನಾಲ್ಕು ರೀತಿಯ ವಿಶ್ಲೇಷಣೆಗಳನ್ನು ಮಾಡಲಾಗುತ್ತದೆ.

(i) ವ್ಯಕ್ತಿಯ ಆಂತರ್ಯದ ಅನಿಸಿಕೆಗಳ ವಿಶ್ಲೇಷಣೆಗೆ (Structural Analysis)

(ii) ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಅನ್ಯೋನ್ಯ ಕ್ರಿಯೆಯ ವಿಶ್ಲೇಷಣೆ (Transactional Analysis)

(iii) ಋಣಾತ್ಮಕ ಭಾವಗಳಿಗೆ ಕಾರಣವಾದ ಇಬ್ಬರು ವ್ಯಕ್ತಿಗಳ ನಡುವೆ ಆಟದಂತಿರುವ ವರ್ತನೆಗಳ ವಿಶ್ಲೇಷಣೆ (Game Analysis)

(iv) ವ್ಯಕ್ತಿ ಆಯ್ಕೆ ಮಾಡಿಕೊಂಡಿರುವ ಜೀವನದ ಯೋಜನೆಯ ವಿಶ್ಲೇಷಣೆ (Script Analysis)

ಮೊದಲನೆಯ ವಿಶ್ಲೇಷಣೆಯಲ್ಲಿ ವ್ಯಕ್ತಿ ಅಹಂ ಸ್ಥಿತಿ (Ego-State) ಎಂದರೆ ತನ್ನನ್ನು ತಾನು ನೋಡುತ್ತಿರುವ ರೀತಿಯ ಆಧಾರದ ಮೇಲೆ ಮೂರು ಸ್ಥಿತಿಗಳಲ್ಲಿ ಯಾವುದು ವ್ಯಕ್ತಿಯಲ್ಲಿದೆ ಎನ್ನುವುದನ್ನು ತಿಳಿಯಲಾಗುತ್ತದೆ. ಪೋಷಕ ಅಹಂ ಸ್ಥಿತಿಯಲ್ಲಿ (Parent Ego-State) ವ್ಯಕ್ತಿ ದೊಡ್ಡವರ ಆದೇಶಗಳಿಗೆ, ಸೂಚನೆಗೆ ಮಣಿದು ವರ್ತಿಸುತ್ತಾನೆ. ವಯಸ್ಕ ಅಹಂ ಸ್ಥಿತಿ (Adult Ego-state) ವ್ಯಕ್ತಿ ವಸ್ತುನಿಷ್ಠವಾಗಿರುತ್ತಾನೆ. ವಯಸ್ಕನಂತೆ ಯೋಚಿಸುತ್ತಾನೆ ಮತ್ತು ತಾರ್ಕಿಕವಾಗಿ ವ್ಯವಹರಿಸುತ್ತಾನೆ. ಮಗುವಿನ ಅಹಂ–ಸ್ಥಿತಿಯಲ್ಲಿದ್ದರೆ (Child Ego-state) ವ್ಯಕ್ತಿ ಸಣ್ಣ ಮಗುವಿನಂತೆ ವರ್ತಿಸುತ್ತಾನೆ. ಮಗುವಿನಂಥ ಭಾವನೆಗಳನ್ನು ಹೊಂದಿರುತ್ತಾನೆ. ಪೋಷಕರ ಸಂರಕ್ಷಣೆಯನ್ನು ನಿರೀಕ್ಷಿಸುತ್ತಾನೆ.

ಎರಡನೇ ರೀತಿಯ ವಿಶ್ಲೇಷಣೆಯಲ್ಲಿ ಎರಿಕ್ ಬರ್ನ್ ಇಬ್ಬರು ವ್ಯಕ್ತಿಗಳ ನಡುವಣ, ಅನ್ಯೋನ್ಯ ಕ್ರಿಯೆಯಲ್ಲಿ 'ಚೆನ್ನಾಗಿರುವುದು' (Being O.K), 'ಚೆನ್ನಾಗಿಲ್ಲದಿರುವುದು' (Being not O.K) ಎನ್ನುವ ಎರಡು ಭಾವನೆಗಳಿಗೆ ಸಂಬಂಧಿಸಿದಂತೆ ನಾಲ್ಕು ರೀತಿಯ ಸಂಬಂಧಗಳನ್ನು ಗುರ್ತಿಸುತ್ತಾನೆ. (I am O.K -you are O.K.- I am O.K- you are not O.K- I am not O.K- You are O.K- I am not O.K- You are not O.K) ಈ ಮನೋಸ್ಥಿತಿಗಳೊಂದಿಗೆ ವ್ಯಕ್ತಿಯ ಅಹಂ– ಸ್ಥಿತಿಯೂ ಸೇರಿಕೊಂಡು ನಾಲ್ಕು ರೀತಿಯ ವ್ಯಕ್ತಿತ್ವಗಳು ರೂಪುಗೊಳ್ಳುತ್ತವೆ. ಬರ್ನ್ ಪ್ರತಿಯೊಂದು ವ್ಯಕ್ತಿತ್ವದ ಲಕ್ಷಣಗಳನ್ನು ಗುರ್ತಿಸಿದ್ದಾನೆ. ಇವುಗಳಲ್ಲಿ ಮೊದಲನೇ ವಿಧದ ವ್ಯಕ್ತಿತ್ವವನ್ನು (I and you are O.K) ಹೊರತುಪಡಿಸಿ ಉಳಿದ ಮೂರು ವ್ಯಕ್ತಿತ್ವಗಳ ವ್ಯವಹಾರದಲ್ಲಿ ಸಮಸ್ಯೆಗಳು ಉಂಟಾಗುತ್ತವೆ. ಸಮಾಲೋಚನೆಯ ಮೂಲಕ ವ್ಯಕ್ತಿಯಲ್ಲಿ ವಯಸ್ಕ ಅಹಂ–ಸ್ಥಿತಿಯನ್ನುಂಟುಮಾಡಿ ವ್ಯವಹಾರಿಕ ಮನಃಸ್ಥಿತಿಯನ್ನು ಧನಾತ್ಮಕವಾಗಿ ಪರಿವರ್ತಿಸಿದರೆ ಈ ಸಮಸ್ಯೆಗಳು ಪರಿಹಾರವಾಗುತ್ತವೆ. ಇದಾದ ನಂತರ ವ್ಯಕ್ತಿ ತನ್ನ ದೋಷಯುಕ್ತ ಜೀವನ ಯೋಜನೆಯಲ್ಲಿ ಸರಿಯಾದ ರೀತಿಯಲ್ಲಿ ಬದಲಾಯಿಸಲು ಸಮಾಲೋಚಕ ವ್ಯಕ್ತಿಗೆ ಸಹಾಯ ಮಾಡುತ್ತಾನೆ.

ಎರಿಕ್ ಬರ್ನ್ ತನ್ನ ನಿಲುವಿನ ಸಮಾಲೋಚನೆಯಲ್ಲಿ ಮುಂದಿನ ತಂತ್ರಗಳನ್ನು ಉಪಯೋಗಿಸುತ್ತಾನೆ;

(i) ಸಮಾಲೋಚಕ ಮತ್ತು ಸಲಹಾರ್ಥಿ (Client) ನಡುವೆ ಚಿಕಿತ್ಸೆಯ ಒಪ್ಪಂದ

(ii) ಸೂಕ್ತವಾಗಿ ಪ್ರಶ್ನಿಸುವುದು

(iii) ಜೀವನದಲ್ಲಿನ ವಿರೋಧಾಭಾಸಕರವಾದ ಸಂಬಂಧಗಳನ್ನು, ವರ್ತನೆಗಳನ್ನು ವ್ಯಕ್ತಿ ಧೈರ್ಯವಾಗಿ ಎದುರಿಸಿ ವಿಶ್ಲೇಷಿಸುವುದು

(iv) ವಯಸ್ಕ ಅಹಂ–ಸ್ಥಿತಿಯನ್ನು ವಿವರಿಸಿ ಬೆಳೆಸುವುದು

(v) ಕಥೆಗಳು ಅಥವಾ ಉದಾಹರಣೆಗಳ ಮೂಲಕ ದೃಷ್ಟಾಂತೀಕರಿಸುವುದು

(vi) ಅಸ್ಥಿರ ವರ್ತನೆಗಳ ಕಾರಣಗಳನ್ನು ವಿವರಿಸುವುದು.

–ಪ್ರೊ. ಮಂಜುನಾಥಯ್ಯ ಬಿ.ಎನ್. ಮತ್ತು
ಡಾ. ಶೈಲಜಾ ಪಿ. ಶಾನುಭಾಗ್

## 'ಸಮುದಾಯದತ್ತ ಶಾಲೆ' ಕಾರ್ಯಕ್ರಮ

'ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು, ಈ ದೇಶದ ಆಧಾರ ಸ್ತಂಭವೆ ಮಕ್ಕಳು' ಇಂತಹ ಮಕ್ಕಳು ಪ್ರಬಲರು ಪ್ರಬುದ್ಧರು ಆಗ ಬೇಕಾದರೆ ಸುಶಿಕ್ಷಿತರಾಗಬೇಕಾಗುತ್ತದೆ, ಇಂತಹ ಮಹತ್ತರ ಕೆಲಸ ಕೇವಲ ಶಿಕ್ಷಣದಿಂದ ಮಾತ್ರ ಸಾಧ್ಯ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಿಂದಲೂ ಎಲ್ಲರಿಗೂ ಶಿಕ್ಷಣ ಒದಗಿಸುವುದು ಪ್ರಮುಖವಾದ ಕೆಲಸವಾಗಿತ್ತು. ಶಿಕ್ಷಣ ಮಗುವನ್ನು ಪ್ರಗತಿ ಪಥದತ್ತ ನಡೆಸುತ್ತದೆ. ಸ್ವಾತಂತ್ರ್ಯ ನಂತರ ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಪೂರಕವಾಗಿ ಸಂವಿಧಾನ ರಚನೆಯಾಯಿತು ಈ ಸಂವಿಧಾನದಲ್ಲಿ ಕಂಡುಕೊಂಡ ಒಂದೇ ಒಂದು ಕಾಲ ಮಿತಿಯ ಕಾರ್ಯಕ್ರಮವೆಂದರೆ ಹದಿನಾಲ್ಕು ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವ ಆಶಯ ಸಂವಿಧಾನ ಜಾರಿಯಾದ 64 ವರ್ಷಗಳ ನಂತರವೂ ಈ ಗುರಿ ಮುಟ್ಟದಿರುವುದು ನಮ್ಮೆಲ್ಲರಿಗೂ ಒಂದು ಸವಾಲಾಗಿದೆ.

Digitised by Bharatavani, CIIL

ಭಾರತದ ನ್ಯಾಯಾಂಗವು ಶಾಲಾ ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಘೋಷಿಸುವುದರ ಮೂಲಕ ಶಿಕ್ಷಣದ ಸಾರ್ವತ್ರಿಕರಣಕ್ಕೆ ಒಂದು ಹೊಸ ತಿರುವು ನೀಡಿ ಶಿಕ್ಷಣ ವಂಚಿತ ಮಕ್ಕಳ ಬದುಕಿನಲ್ಲಿ ಒಂದು ಹೊಸ ಆಶಾಭಾವನೆಯನ್ನು ಮೂಡಿಸಿದೆ, ಇದರಿಂದ ಮಗು ತನ್ನ ಬಾಲ್ಯವನ್ನು ಸುಮಧುರ ಭಾವಗೀತೆಯನ್ನಾಗಿಸುವ ಅವಕಾಶವನ್ನು ಸರ್ಕಾರ ಕಲ್ಪಿಸಿಕೊಟ್ಟಿದೆ, ಆ ಅವಕಾಶವೇ ಶಿಕ್ಷಣ, ಈ ದೇಶದ ದೊಡ್ಡ ಸಂಪತ್ತು ಮತ್ತು ನಾಡಿ ಬಡಿತವೆ ಆಗಿರುವ ಮಕ್ಕಳ ಶಿಕ್ಷಣದ ಹೊಣೆ ಸರ್ಕಾರದ ಬಹು ಪ್ರಮುಖವಾದ.

ರಾಜ್ಯ ಸರ್ಕಾರದ ಈ ದಿಸೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಇದರಲ್ಲಿ ಸಮುದಾಯದತ್ತ ಶಾಲೆ ಒಂದು ಅದ್ಭುತವಾದ ಕಾರ್ಯಕ್ರಮ. ಇದರಿಂದ ಸಮಾಜದ ಪ್ರತಿಯೊಬ್ಬ ಸದಸ್ಯರು ತಮ್ಮನ್ನು ತಾವೇ ಮಕ್ಕಳ ಶಿಕ್ಷಣದಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು ಅನುಕೂಲವಾಗುವಂತಹ ಅನುರೂಪವಾದ ಕಾರ್ಯಕ್ರಮ, ಶಾಲೆ ಮತ್ತು ಸಮುದಾಯ ಒಂದು ನಾಣ್ಯದ ಎರಡು ಮುಖಗಳು ಸಮುದಾಯದಿಂದ ಶಾಲೆ, ಶಾಲೆಯಿಂದ ಸಮುದಾಯದ ಪ್ರಗತಿ ಆದ್ದರಿಂದ ಮಾನವ ಸಂಪತ್ತು ಸದೃಢವಾಗಬೇಕಾದರೆ ಸರ್ವರಿಗೂ ಶಿಕ್ಷಣ ಬೇಕೆ ಬೇಕು ಇದು ದೇಶದ ಯಾವುದೇ ಸಮಸ್ಯೆಗೆ ಸಿದ್ಧೌಷಧವಿದ್ದಂತೆ.

ಸರ್ಕಾರ ಹಮ್ಮಿಕೊಂಡಿರುವ ಎಲ್ಲ ಕಾರ್ಯಕ್ರಮಗಳು ಸಮರ್ಥವಾಗಿ ನಡೆಯಬೇಕಾದರೆ ಅದು ಸಮುದಾಯದ ಪಾಲುಗೊಳ್ಳುವಿಕೆಯಿಂದ ಮಾತ್ರ ಸಾಧ್ಯ, ದೇಶದ ಬುನಾದಿಯಾದ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಶಿಕ್ಷಣದ ಮೇಲಿದೆ ಆದ್ದರಿಂದ ಸಮುದಾಯದ ಭಾಗವಾದ ಶಾಲೆ ಸಮುದಾಯವನ್ನು ಒಳಗೊಂಡು ಮಕ್ಕಳ ಬೆಳವಣಿಗೆಗೆ ಸತತ ಪ್ರಯತ್ನವನ್ನು ಮಾಡಬೇಕಾಗಿದೆ.

ರಾಜ್ಯ ಸರ್ಕಾರವು ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಹಲವಾರು ಪ್ರಯತ್ನಗಳನ್ನು ಮಾಡುತ್ತಲೇ ಬಂದಿದೆ. ಸಮುದಾಯವನ್ನು ಶಿಕ್ಷಣದ ಸಾರ್ವತ್ರೀಕರಣದಲ್ಲಿ ತೊಡಗಿಸಿಕೊಳ್ಳುವ ಮೊದಲ ಪ್ರಯತ್ನವಾಗಿ ದಿನಾಂಕ 27–02–1988ರಲ್ಲಿ ರಲ್ಲಿ ಆದೇಶವನ್ನು ಹೊರಡಿಸಿತ್ತು, ಇದರ ಅನ್ವಯ ರಾಜ್ಯದಲ್ಲಿ ಅಂದು ಜಾರಿಯಲ್ಲಿದ್ದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮತ್ತು ಕೇಂದ್ರ ಸರ್ಕಾರದ ಶಿಕ್ಷಣದ ಹೊಸ ನೀತಿಯನ್ನು (1986) ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ಶಾಲಾಭಿವೃದ್ಧಿ ಸಮಿತಿಗಳನ್ನು (SDK) ಶೈಕ್ಷಣಿಕ ಸಮಿತಿಗಳೆಂದು ಪುನರ್ ನಾಮಕರಣ ಮಾಡುವ ತೀರ್ಮಾನ ಕೈಗೊಳ್ಳಲಾಯಿತು. ಈ ಸಮಿತಿಯಲ್ಲಿ ಕೇವಲ ಜನಪ್ರತಿನಿಧಿಗಳು ಮತ್ತು ಊರಿನ ಗಣ್ಯ ವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು.

ಇದಾದ ನಂತರ ಜುಲೈ 1995ರಲ್ಲಿ ಸಾರ್ವಜನಿಕ ಶಿಕ್ಷಣದ ನಿರ್ದೇಶಕರು (DPI) ರಾಜ್ಯದ ಎಲ್ಲ ಉಪನಿರ್ದೇಶಕರಿಗೆ (DPI) ಬರೆದ ಪತ್ರದಲ್ಲಿ ರಾಜ್ಯದ ಎಲ್ಲ ಶಾಲೆಗಳಲ್ಲಿ 9 ರಿಂದ 12 ಜನಗಳೊಳಗೊಂಡ ಶಾಲಾಭಿವೃದ್ಧಿ ಸಮಿತಿಗಳನ್ನು ರಚಿಸುವಂತೆ ಸೂಚನೆ ನೀಡಿದರು. ಈ ಪತ್ರದ ಅನ್ವಯ ಸಮಿತಿಯಲ್ಲಿ ಮೊದಲ ಬಾರಿಗೆ ಒಬ್ಬ ಪೋಷಕ ಪ್ರತಿನಿಧಿಗೆ ಅವಕಾಶ ಕಲ್ಪಿಸಲಾಯಿತು.

ಆಗಸ್ಟ್ 1995ರಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿಗಳನ್ನು (Village Education Committee - VEC) ರಚಿಸುವಂತೆ ಸರ್ಕಾರ ಆದೇಶಿಸಿತ್ತು ಈ ಸಮಿತಿಯಲ್ಲಿ ಕನಿಷ್ಠ 7ರಿಂದ ಗರಿಷ್ಠ 15 ಸದಸ್ಯರಿದ್ದು ಪೋಷಕ ಪ್ರತಿನಿಧಿಯೊಬ್ಬರಿಗೆ ಅವಕಾಶ ಕಲ್ಪಿಸಲಾಗಿತ್ತು.

ಒಟ್ಟಾರೆ ಸರ್ವಶಿಕ್ಷಣ ಅಭಿಯಾನದ (SSA) ಪೂರ್ವದಲ್ಲಿದ್ದ ಶಾಲಾಭಿವೃದ್ಧಿ ಶಿಕ್ಷಣ ಸಮಿತಿ ಗ್ರಾಮ ಶಿಕ್ಷಣ ಸಮಿತಿಗಳ ಮೂಲ ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಜನ ಪ್ರತಿನಿಧಿ ಮತ್ತು ಊರಿನ ಗಣ್ಯವ್ಯಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತಾದರೂ 1999ರಲ್ಲಿ ರಚನೆಯಾದ ಶಿಕ್ಷಣ ಕಾರ್ಯಪಡೆಯ ವರದಿ ಶಿಫಾರಸ್ಸಿನಂತೆ ರಾಜ್ಯ ಸರ್ಕಾರವು 2001ರಲ್ಲಿ ರಾಜ್ಯದ ಎಲ್ಲಾ ಕಿರಿಯ ಪ್ರಾಥಮಿಕ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ ಮತ್ತು ಶಾಲಾಭಿವೃದ್ಧಿ ಸಮಿತಿಗಳ ಬದಲಾಗಿ ಶಾಲಾಭಿವೃದ್ಧಿ ಮತ್ತು ಮೇಲ್ ಉಸ್ತುವಾರಿ ಸಮಿತಿಗಳನ್ನು (School Development and monitoring Committee - SDMC) ರಚಿಸುವಂತೆ ಆದೇಶ ನೀಡಿತ್ತು. ಇದರ ಮೂಲಕ ಸಮುದಾಯದತ್ತ ಶಾಲೆ ಕಾರ್ಯಕ್ರಮಕ್ಕೆ ಚಾಲನೆ ಕೊಡಲಾಯಿತು.

ಈ ಆದೇಶದ ಅನ್ವಯ ಪ್ರತಿಯೊಂದು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ ತಾಯಂದಿರು ಆ ಶಾಲೆಯ ಪೋಷಕರ ಪರಿಷತ್ತಿನ (Parents council) ಸದಸ್ಯರಾಗಿರುತ್ತಾರೆ, ಪೋಷಕರ ಪರಿಷತ್ತು 9 ಜನ ಪ್ರತಿನಿಧಿಯನ್ನು ಆಯ್ಕೆ ಮಾಡುತ್ತದೆ, ಈ 9 ಜನರು ಸೇರಿ ಅವರಲ್ಲೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ, ಇವರೊಂದಿಗೆ ಈ ಸಮಿತಿಯ ಪದನಿಮಿತ್ತ ಮತ್ತು ನಾಮನಿರ್ದೇಶನ ಸದಸ್ಯರಿರುತ್ತಾರೆ. ಈ ಸಮಿತಿ ಆಯ್ಕೆಯಾದ ನಂತರ 3 ವರ್ಷಗಳವರೆಗೂ ಕಾರ್ಯ ನಿರ್ವಹಿಸುತ್ತದೆ. ಈ ಸಮಿತಿಯ ಮೂಲಕ ಸಮುದಾಯದೊಂದಿಗೆ ಶಾಲೆಯ ಪಾಲ್ಗೊಳ್ಳುವಿಕೆಯೇ ಸಮುದಾಯದತ್ತ ಶಾಲೆ.

**ಸ್ವರೂಪ ಮತ್ತು ಉದ್ದೇಶ:**

ಕಲಿಕಾ ಸಾಮರ್ಥ್ಯಗಳನ್ನು ಪಡೆಯಬೇಕೆಂಬುದು ಸಮುದಾಯದತ್ತ ಶಾಲೆಯ ಮೂಲ ಉದ್ದೇಶ. ಎಲ್ಲಾ ಮಕ್ಕಳು ಶಾಲೆಯಲ್ಲಿದ್ದು ನಿಗದಿತ ಪ್ರತಿ ಶಿಕ್ಷಕ/ಶಿಕ್ಷಕಿ ಪರಿಣಾಮಕಾರಿಯಾಗಿ ಕಲಿಸುವ ಸಾಮರ್ಥ್ಯಗಳನ್ನು ಹೊಂದಿ ಕಲಿಸುವುದರಲ್ಲಿ ತೊಡಗಬೇಕು ಮತ್ತು ಶಿಕ್ಷಣವು ಒಂದು ಜನಾಂದೋಲನವಾಗಬೇಕು ಅಂದರೆ ಯಾವುದೇ ಕಾರಣಕ್ಕೆ ಮಗುವಿನ ಶಿಕ್ಷಣ ಕುಂಠಿತವಾಗದಂತೆ ಪ್ರತಿಯೊಂದು ಮಗುವಿನ ಬಾಳನ್ನು ಹಸನಗೊಳಿಸಬೇಕು. ಶಿಕ್ಷಣದ ಸಾರ್ವತ್ರೀಕರಣ ಮತ್ತು ಶಾಲೆಯ ಸರ್ವೋತಮುಖ ಬೆಳವಣಿಗೆಗೆ

Digitised by Bharatavani, CIIL

ಶಿಕ್ಷಣದ ಪ್ರಕ್ರಿಯೆಯಲ್ಲಿ ಪೋಷಕರು ಮತ್ತು ಸಮುದಾಯದ ಸಮಾನ ರೀತಿಯ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು ಶೈಕ್ಷಣಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಸಂಘಟಿಸಲು ಕರ್ನಾಟಕ ಸರ್ಕಾರ ಶಿಕ್ಷಣ ಇಲಾಖೆಯಲ್ಲಿ ಹಮ್ಮಿಕೊಂಡಿರುವ ಒಂದು ವಿನೂತನ ಕಾರ್ಯಕ್ರಮವೇ ಸಮುದಾಯದತ್ತ ಶಾಲೆ, ಒಂದು ಅರ್ಥದಲ್ಲಿ ಪೋಷಕರು, ಸಾರ್ವಜನಿಕರು ಹಾಗೂ ದಾನಿಗಳು ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಇತರ ಭಾಗಿದಾರರು ಸರ್ಕಾರಿ ಶಾಲೆಯ ಕಾರ್ಯನಿರ್ವಹಣೆಯನ್ನು ಸಾಮಾಜಿಕವಾಗಿ ಮೌಲ್ಯಮಾಪನ ಮಾಡಲು ಇರುವ ಪಾರದರ್ಶಿಕ ವ್ಯವಸ್ಥೆಯೇ ಸಮುದಾಯದತ್ತ ಕಾರ್ಯಕ್ರಮ.

ಶಿಕ್ಷಕರು ಮತ್ತು ಪೋಷಕರ ಕರ್ತವ್ಯ ಲಿಂಗಬೇಧವಿಲ್ಲದ ಜಾತಿ, ಮತ, ಸ್ಥಿತಿಗತಿಯ ಬೇಧವಿಲ್ಲದೆ ಶಾಲಾ ನಿಯಮಗಳನ್ನು ಮಕ್ಕಳ ಪ್ರಗತಿಯ ಅಭಿವೃದ್ಧಿಗೆ ರೂಪಿಸುವ ಗುರಿ, ಸಂಪನ್ಮೂಲಗಳ ಸದ್ಬಳಕೆ ಗ್ರಂಥಾಲಯದ ಅಭಿವೃದ್ಧಿ ಪುಷ್ಟೀಕರಣ ಮಕ್ಕಳ ಆರೋಗ್ಯ, ಆಟ, ಕಲಿಕೆ, ಈ ಎಲ್ಲವುಗಳ ಬಗ್ಗೆ ಸಮುದಾಯ ಪಾಲ್ಗೊಳ್ಳುವಂತೆ ಮಾಡುವುದೇ ಈ ಕಾರ್ಯಕ್ರಮದ ಗುರಿಯಾಗಿದೆ.

ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯಶಿಕ್ಷಕರ ಪಾತ್ರ ಬಹು ಮುಖ್ಯವಾಗಿರುತ್ತದೆ. ಏಕೆಂದರೆ ಕಾರ್ಯಕ್ರಮದ ನಿಯೋಜಕರೆ ಮುಖ್ಯ ಶಿಕ್ಷಕರಾಗಿರುತ್ತಾರೆ, ಇವರು ಈ ಕಾರ್ಯಕ್ರಮದ ಅನ್ವಯ ನಿಗದಿತ ದಿನಾಂಕಗಳಂದು ಪ್ರತಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಎಲ್ಲ ಪಾಲಕರು ಮತ್ತು ಎಸ್.ಡಿ.ಎಂ.ಸಿ. ಸದಸ್ಯರು ಭಾಗವಹಿಸುವಂತೆ ಎಲ್ಲ ಕ್ರಮಗಳನ್ನು ಸಹ ಶಿಕ್ಷಕರ ಸಹಕಾರದೊಂದಿಗೆ ತೆಗೆದುಕೊಳ್ಳಬೇಕು. ಮಾರ್ಗದರ್ಶಕರು ಮತ್ತು ಶಿಕ್ಷಕರು ಕಡ್ಡಾಯವಾಗಿ ಭಾಗವಹಿಸಿ ನಿಯೋಜಿತ ಕಾರ್ಯವನ್ನು ನಿರ್ವಹಿಸುವಂತೆ ಮಾಡುವುದು ಮುಖ್ಯವಾಗಿರುತ್ತದೆ, ಸಾಮಾನ್ಯವಾಗಿ ಮಾರ್ಗದರ್ಶಕರು ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳ ಬೋಧಕ ಸಿಬ್ಬಂದಿಗಳಾಗಿರುತ್ತಾರೆ. ಇವರು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಮಾರ್ಗದರ್ಶನ ನೀಡುತ್ತಾರೆ. ಹಾಗೆಯೇ ಸರ್ಕಾರಿ ಪ್ರೌಢಶಾಲೆಗೆ ಅನುದಾನಿತ/ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು ಈ ಕಾರ್ಯಕ್ರಮದ ಮಾರ್ಗದರ್ಶಕರಾಗಿರುತ್ತಾರೆ. ಈ ಕಾರ್ಯಕ್ರಮ ಶಾಲೆಯಲ್ಲಿ ಸೂಕ್ತ ರೀತಿಯಲ್ಲಿ ನಡೆಯುವ ಮುಖ್ಯ ಶಿಕ್ಷಕರು, ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವ ಹೊಣೆಹೊತ್ತಿರುತ್ತಾರೆ. ಇವರು ನಿಗದಿತ ದಿನದಂದು ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಿ ಬೆಳಿಗ್ಗಿನಿಂದ ಸಾಯಂಕಾಲದವರಿಗೆ ಕ್ರಮಬದ್ಧವಾಗಿ ರೂಪಿಸಿದ ಕಾರ್ಯಕ್ರಮವನ್ನು ಸಹಶಿಕ್ಷಕರ ಸಹಕಾರದಿಂದ ಆಯೋಜಿಸಬೇಕು. ಕಾರ್ಯಕ್ರಮದ ನಂತರ ಮಕ್ಕಳ ಪ್ರತಿಭೆಗೆ ಅವಕಾಶ ನೀಡಲು ವಿವಿಧ ರೀತಿಯ ಮನೋರಂಜನಾ ಕಾರ್ಯಗಳನ್ನು ತಂದೆ–ತಾಯಂದಿರ ಸಹಕಾರದೊಂದಿಗೆ ಅಚ್ಚುಕಟ್ಟಾಗಿ ಆಯೋಜಿಸಬೇಕು.

ಸಹ ಶಿಕ್ಷಕರು ಮುಖ್ಯ ಶಿಕ್ಷಕರೊಂದಿಗೆ ಎಲ್ಲಾ ಕಾರ್ಯಕ್ರಮದಲ್ಲಿ ತೊಡಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸುತ್ತಾರೆ. ಶಿಕ್ಷಕರು ಮುಖ್ಯವಾಗಿ ಮಕ್ಕಳ ಪ್ರಗತಿಗೆ ಸಂಬಂಧಪಟ್ಟ ಎಲ್ಲಾ ದಾಖಾಲಾತಿಗಳನ್ನು ಎಲ್ಲ ಚಟುವಟಿಕೆಗಳ ವಿವರವನ್ನು ಸಮಿತಿಗೆ ಒದಗಿಸಬೇಕಾಗುತ್ತದೆ. ಅಲ್ಲದೆ ಮಕ್ಕಳ ಕುಂದುಕೊರತೆಗಳನ್ನು ಸಮಿತಿಯ ಮುಂದೆ ವಿವರಿಸುವುದು ಮತ್ತು ಸಮಿತಿ ಕೇಳುವ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಕೊಡುವುದು ಇವರ ಕರ್ತವ್ಯವಾಗಿರುತ್ತದೆ.

ಅನುಪಾಲನಾ ದೃಷ್ಟಿಯಿಂದ ಶಾಲೆಗೆ ನಿಗದಿಪಡಿಸಿದ ಮಾರ್ಗದರ್ಶಕರು ಮುಂದೆ ನಡೆಯುವ ಎಲ್ಲ "ಸಮುದಾಯದತ್ತಾ ಶಾಲೆ" ಕಾರ್ಯಕ್ರಮದಲ್ಲಿ ಭಾಗವಹಿಸಿ ಶಾಲೆಯ ಪ್ರಗತಿಗೆ ನೆರವಾಗಬೇಕಾಗುತ್ತದೆ. ಈ ಕಾರ್ಯಕ್ರಮದ ಉಸ್ತುವಾರಿಗಾಗಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳು, ಶಿಕ್ಷಣ ಸಂಯೋಜಕರು, ಬಿ.ಆರ್.ಸಿ. ಹಾಗೂ ಸಿ.ಆರ್.ಸಿ. ಸಿಬ್ಬಂದಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಒಂದೊಂದು ಶಾಲೆಯನ್ನು ಆಯ್ಕೆಮಾಡಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗುತ್ತದೆ.

'ಸಮುದಾಯದತ್ತ ಶಾಲೆ' ಕಾರ್ಯಕ್ರಮದಲ್ಲಿ ನಿರ್ವಹಿಸಬೇಕಾದ ಕಾರ್ಯಗಳು ಹೀಗಿವೆ:–

ಶಾಲೆಯ ಸಮಯದಲ್ಲಿ ಅಂದರೆ ಬೆಳಿಗ್ಗೆ 10.30 ರಿಂದ 1.30ರವರೆಗೆ

ಶಿಕ್ಷಕರ ಕಲಿಸುವಿಕೆ ಹಾಗೂ ಮಕ್ಕಳ ಕಲಿಕೆಯ ಅವಲೋಕನ, ಮೌಲ್ಯಮಾಪನ, ದಾಖಲೆಗಳ ಪರಿಶೀಲನೆ, ಶಿಕ್ಷಕರೊಡನೆ ಸಮಾಲೋಚನೆ ಮಾಡುವುದು.

ಮಧ್ಯಾಹ್ನ 2.30ರಿಂದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ, ತರಗತಿವಾರು ಉತ್ತರ ಪತ್ರಿಕೆ ಮತ್ತು ಪ್ರಗತಿ ಪತ್ರಗಳ ಸಮೇತ ಪೋಷಕರೊಡನೆ ಸಮಾಲೋಚನೆ ಮಾಡಲು ಶಾಲಾ ಹಂತದಲ್ಲಿ ತರಗತಿವಾರು ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳುವುದು.

ಮಕ್ಕಳು ಕಲಿತಿರುವ ವಿಷಯದ ಮೇಲೆ ಪ್ರಶ್ನಿಸಿ ಉತ್ತರ ಪಡೆಯುವುದು, ವಿದ್ಯಾರ್ಥಿಗಳಿಂದ ಪಾಠ ಓದಿಸುವುದು.

ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರೊಡನೆ ಸಮಾಲೋಚನೆ.

ಮಕ್ಕಳ ಪ್ರತಿಭೆಗೆ ಅವಕಾಶ ನೀಡುವ ಮನರಂಜನಾ ಕಾರ್ಯಕ್ರಮ.

ಈ ಕಾರ್ಯಕ್ರಮದ ವರದಿಯನ್ನು ನಮೂದಿತ ನಮೂನೆಯೊಂದಿಗೆ ಶಾಲಾ ಹೆಸರು ವಿಳಾಸದಿಂದ ಹಿಂದಿನ ವರದಿ ಮತ್ತು ನಡಾವಳಿಯ ಮೇಲೆ ಕೈಗೊಂಡ ಕ್ರಮಗಳು ಮಕ್ಕಳ ಬಿ.ಯಿಂದ ಎ. ಗ್ರೇಡ್ ಅಂಕಿ ಅಂಶಗಳು ಹಾಗೂ ಶಾಲೆಯ ಎಲ್ಲಾ

Digitised by Bharatavani, CIIL

ವ್ಯವಸ್ಥೆಯ ಬಗ್ಗೆ ವರದಿ ಕೊಡುವುದು.

ವರದಿ ಮತ್ತು ಅನುಪಾಲನೆಯನ್ನು ಮುಖ್ಯ ಶಿಕ್ಷಕರ ಮತ್ತು ಮಾರ್ಗದರ್ಶಕರ ಸಹಿಯೊಂದಿಗೆ ಪ್ರತಿ ‘ಸಮುದಾಯದತ್ತ ಶಾಲೆ’ ಕಾರ್ಯಕ್ರಮ ನಡೆದ ನಂತರ ವರದಿಯನ್ನು ತಯಾರಿಸಿ ಮಾರ್ಗದರ್ಶಕರು ಹಾಗೂ ಅಧಿಕಾರಿಗಳು ತಕ್ಷಣ ಮೇಲಧಿಕಾರಿಗಳಿಗೆ/ಶಿಕ್ಷಣ ಸಂಯೋಜಕರಿಗೆ/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡಬೇಕು.

ಕಾರ್ಯಕ್ರಮ ನಡೆದ ಎಂಟು ದಿನಗಳೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಲಾಕ್ ಮಟ್ಟದಲ್ಲಿ ವರದಿಯನ್ನು ಕ್ರೋಢೀಕರಿಸಿ, ವಿಶ್ಲೇಷಿಸಿ ಅವರ ಹಂತದಲ್ಲಿ ಕೈಗೊಳ್ಳಬಹುದಾದ ಎಲ್ಲಾ ಕ್ರಮಗಳನ್ನು ಕೈಗೊಂಡು ಕ್ರೋಢೀಕೃತ ವರದಿಯನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಕಳುಹಿಸಬೇಕು.

ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ಉಪನಿರ್ದೇಶಕರು (ಅಭಿವೃದ್ಧಿ) ಎಲ್ಲಾ ಮಾಹಿತಿಗಳನ್ನು ಕ್ರೋಢೀಕರಿಸಿ ಅವರವರ ವ್ಯಾಪ್ತಿಗೆ ಬರುವ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಂಡು ಕ್ರೋಢೀಕೃತ ಜಿಲ್ಲಾ ವರದಿಯನ್ನು ಸಾರ್ವಜನಿಕ ಶಿಕ್ಷಣ ಆಯುಕ್ತರಿಗೆ ಕಳುಹಿಸಬೇಕು.

**ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ:**

ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಪಾತ್ರ ಬಹುಮುಖ್ಯವಾದುದು, ಸಮುದಾಯವನ್ನು ಸಕ್ರಿಯವಾಗಿ ಶಾಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಾನೂನು ಬದ್ಧವಾಗಿ ಎಸ್.ಡಿ.ಎಂ.ಸಿ. ರಚನೆಗೆ ಅವಕಾಶ ಕಲ್ಪಿಸಲಾಗಿದೆ. ಈ ಸಮಿತಿಯು ಮೊದಲಿಗೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ 16.06.2006ರ ಅಧಿಸೂಚನೆಯ ಮಾದರಿ ಉಪವಿಧಿಗಳನ್ವಯ ರಚಿಸಲ್ಪಟ್ಟಿದೆ.

ಎಸ್.ಡಿ.ಎಂ.ಸಿ. ಎಂದರೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ–ತಾಯಿ ಪರಿಷತ್ತಿನಿಂದ ಚುನಾಯಿತರಿಂದ ಪಾಲಕರಾದ ಪ್ರತಿನಿಧಿಗಳು ನಾಮನಿರ್ದೇಶಿತ ಸದಸ್ಯರಾಗಿ ಶಾಲೆಯ ಉನ್ನತ ತರಗತಿಯಲ್ಲಿ ಕಲಿಯುತ್ತಿರುವ ಇಬ್ಬರು ವಿದ್ಯಾರ್ಥಿ ಪ್ರತಿನಿಧಿಗಳು ವಿವಿಧ ಇಲಾಖೆಯ ಪ್ರತಿನಿಧಿಗಳು ಸಂಘ ಸಂಸ್ಥೆ ಮತು ಸಮುದಾಯದ ಸದಸ್ಯರನ್ನೊಳಗೊಂಡಿರುತ್ತದೆ, ಶಾಲೆಗೆ 10,000/– ರೂ.ಗಳಿಗಿಂತ ಹೆಚ್ಚಿನ ಮೊತ್ತದ ದೇಣಿಗೆ ನೀಡಿದ ಒಬ್ಬರು ಇರುತ್ತಾರೆ.

ಇವರ ಕರ್ತವ್ಯ, ಅಧಿಕಾರ, ಗುಣಾತ್ಮಕ ಶಿಕ್ಷಣಕ್ಕೆ ಸಹಕಾರ– ಶೈಕ್ಷಣಿಕ ಸಹಕಾರ– ಶೈಕ್ಷಣಿಕ ವರ್ಷ ಆರಂಭವಾಗುವ ಒಂದು ತಿಂಗಳ ಮೊದಲೇ ಶಾಲೆಯ ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಮೂಲಕ ಶಾಲಾ ಕ್ರಿಯಾಯೋಜನೆಯನ್ನು ರೂಪಿಸಿ ಅನುಮೋದಿಸಲಾಗುವುದು. ಈ ವಾರ್ಷಿಕ ಯೋಜನೆಯು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕವಾದ ಎಲ್ಲ ಚಟುವಟಿಕೆಗಳನ್ನು ಒಳಗೊಂಡಂತೆ ಶಾಲಾ ವ್ಯಾಪ್ತಿಯಲ್ಲಿ ಬರುವ 3ರಿಂದ 14 ವಯಸ್ಸಿನ ಎಲ್ಲ ಮಕ್ಕಳ ನಿಖರ ಮಾಹಿತಿಯನ್ನು ಸಂಗ್ರಹಿಸಲಾಗುವುದು 3ರಿಂದ 6ನೇ ವಯಸ್ಸಿನ ಎಲ್ಲ ಮಕ್ಕಳು ಶಾಲೆಯಲ್ಲಿದ್ದು ಕಲಿಕೆಯಲ್ಲಿ ತೊಡಗುವಂತೆ ನೋಡಿಕೊಳ್ಳಲಾಗುವುದು.

ಶಾಲೆಯಿಂದ ಹೊರಗುಳಿದಿರುವ ಎಲ್ಲ ಮಕ್ಕಳನ್ನು ಶಾಲೆಯ ಮುಖ್ಯವಾಹಿನಿಗೆ ತರುವುದು, ಸರ್ಕಾರದಿಂದ ಉಚಿತವಾಗಿ ನೀಡುವ ಪಠ್ಯಪುಸ್ತಕ, ಸಮವಸ್ತ್ರ ಶಾಲಾ ಬ್ಯಾಗ್, ನೋಟ್ ಪುಸ್ತಕ, ವಿದ್ಯಾರ್ಥಿವೇತನ ಬಿಸಿಯೂಟ ಇತ್ಯಾದಿ ಉತ್ತೇಜನಕಾರಿ ಸೌಲಭ್ಯಗಳು ಶಾಲೆಯ ಎಲ್ಲಾ ಮಕ್ಕಳಿಗೆ ಸಕಾಲಕ್ಕೆ ಸಿಗುವಂತೆ ಮಾಡುವುದು ಮಕ್ಕಳ ಕಲಿಕೆಯ ನಿರಂತರ ಮೌಲ್ಯಮಾಪನಗಳನ್ನು ಆಧರಿಸಿ ಕಲಿಕೆಯಲ್ಲಿ ಮತ್ತಷ್ಟು ಅಭಿವೃದ್ಧಿಪಡಿಸಲು ಆವಶ್ಯಕವಾದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಶಾಲಾ ಆಸ್ತಿಯನ್ನು ನಿರ್ವಹಿಸುವುದು, ಮತ್ತು ಸಂರಕ್ಷಿಸುವುದು, ಶಾಲೆಯಲ್ಲಿ ಜಾತಿ ಧರ್ಮ, ಲಿಂಗ ತಾರತಮ್ಯ ಬಾರದಂತೆ ನೋಡಿಕೊಳ್ಳುವುದು, ಅಗತ್ಯವುಳ್ಳ ಮಕ್ಕಳು ಶಾಲೆಗೆ ಹಾಜರಾಗಲು ಅನುಕೂಲವಾಗುವಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಸಹ ಈ ಸಮಿತಿಯ ಕರ್ತವ್ಯವಾಗಿವೆ.

ಮಕ್ಕಳು ತಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಅನುಕೂಲವಾಗುವಂತೆ ಮಕ್ಕಳ ಸಹಾಯವಾಣಿ ದೂರವಾಣಿ 1098ಅನ್ನು ನಿರ್ವಹಿಸುವುದು ಮತ್ತು ಪ್ರಚಾರ ಮಾಡುವುದು ಈ ಸಮಿತಿಯ ಕರ್ತವ್ಯವಾಗಿದೆ.

ಎಸ್.ಡಿ.ಎಂ.ಸಿ. ಕೇವಲ ಶಾಲೆ ಕಾಮಗಾರಿಗಳಿಗೆ ಮಾತ್ರ ಸೀಮಿತವಾಗಿರದೆ ಮಕ್ಕಳ ದಾಖಲಾತಿ, ಹಾಜರಾತಿ, ಮಕ್ಕಳು ಶಾಲೆಯಲ್ಲಿ ಉಳಿಯುವಂತೆ ಉತ್ತಮ ಕಲಿಕೆಯನ್ನು ಸಾಧಿಸಲು ಸಮುದಾಯದ ಇತರ ಸದಸ್ಯರೊಂದಿಗೆ ಬಂಧ ಕಲಿಸುವ ಮತ್ತು ಇಲಾಖೆಯ ಜೊತೆ ನಿರಂತರ ಸಂಪರ್ಕವಿಟ್ಟುಕೊಳ್ಳುವ ಮೂಲಕ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

ಎಸ್.ಡಿ.ಎಂ.ಸಿ.ಯ ಎಲ್ಲಾ ಸದಸ್ಯರು ತಮಗೆ ದೊರಕಿರುವ ಅಧಿಕಾರವನ್ನು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಬಳಸುವ ಮೂಲಕ ಶಾಲೆಯನ್ನು ಗುಣಾತ್ಮಕ ಕಲಿಕಾ ಕೇಂದ್ರವಾಗಿ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**ಉಪಸಂಹಾರ:** ‘ಸಮುದಾಯತ್ತ ಶಾಲೆ’ಯ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಮುಖ್ಯೋಪಾಧ್ಯಾಯರು, ಶಿಕ್ಷಕರು, ಮಾರ್ಗದರ್ಶಕರು ಹಾಗೂ ಇಲಾಖೆಯ ಅಧಿಕಾರಿಗಳೊಡನೆ ಮಾಡಿದ ಚರ್ಚೆಯಿಂದ ಕಾರ್ಯಕ್ರಮದ ಸ್ಥಿತಿಗತಿ ಅರ್ಥವಾಗುತ್ತದೆ. ಆರಂಭದಲ್ಲಿ ತುಂಬ ಆಶಾದಾಯಕವಾಗಿದ್ದು ಈ ಕಾರ್ಯಕ್ರಮ ತನ್ನ ಚೈತನ್ಯವನ್ನು ಕಳೆದುಕೊಳ್ಳುತ್ತಾ ಬಂದಿದೆ. ಕಾರ್ಯಕ್ರಮದ ರೂಪುರೇಷೆಗಳು ಅರ್ಥಗರ್ಭಿತವಾಗಿದ್ದು,

Digitised by Bharatavani, CIIL

ಪರಿಣಾಮಕಾರಿಯಾಗಿದ್ದರೂ ಸಮುದಾಯದ ನಿಜವಾದ ಪಾಲ್ಗೊಳ್ಳುವಿಕೆಯ ವ್ಯವಸ್ಥೆಯಲ್ಲಿ ಏರುಪೇರನ್ನು ಕಾಣುತ್ತೇವೆ. ಇದಕ್ಕೆ ರಾಜಕೀಯ ಸಾಮಾಜಿಕ, ಆರ್ಥಿಕ ಅಂಶಗಳು ಕಾರಣವಾಗಿರಬಹುದು ಅಥವಾ ಪೋಷಕರ ಉದಾಸೀನತೆ ಅಜ್ಞಾನವು ಕಾರಣವಾಗಿರಬಹುದು. ಆದ್ದರಿಂದ ಶಾಲೆಗಳಲ್ಲಿ ಸಮುದಾಯದ ಅರ್ಥಪೂರ್ಣ ಭಾಗವಹಿಸುವಿಕೆ ಅತಿ ಮುಖ್ಯವಾಗಿರುತ್ತದೆ. ಮಕ್ಕಳು ತಮ್ಮ ಕಲಿಕೆಯನ್ನು ಅಭಿವ್ಯಕ್ತಿಸಲು ಅನ್ವೇಷಿಸಲು ತಮ್ಮ ಅಗತ್ಯವನ್ನು ಗುರುತಿಸಲು ಸಮುದಾಯವು ಬೆಂಬಲವಾಗಿ ನಿಲ್ಲುವಂತೆ ಮಾಡಬೇಕು. ಶಾಲೆಯ ಬೆಂಬಲವಾಗಿ ಕೆಲಸಮಾಡಬೇಕಾದ ವ್ಯವಸ್ಥೆಗಳು (ಅಂಗನವಾಡಿ ಆರೋಗ್ಯ ಕೇಂದ್ರ) ಹೀಗೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯತೆ ಕಾಪಾಡಿಕೊಳ್ಳಬೇಕು. ಹೀಗೆ ಶಾಲೆಯತ್ತ ಸಮುದಾಯವನ್ನು ಸಮುದಾಯದತ್ತ ಶಾಲೆಯನ್ನು ಕೊಂಡ್ಯೊಯ್ದು ಸಮಾನತೆ, ಸಮಾಮಾಜಿಕ ನ್ಯಾಯ ಆರ್ಥಿಕ ಅಭಿವೃದ್ಧಿಯ ವಾತಾವರಣವನ್ನು ಕಲ್ಪಿಸುವುದಾದರೆ 'ಸಮುದಾಯದತ್ತ ಶಾಲೆ' ಕಾರ್ಯಕ್ರಮ ನಮ್ಮ ರಾಜ್ಯದ ಶಿಕ್ಷಣ ವ್ಯವಸ್ಥೆಗೆ ಕಲ್ಪತರು ಆಗುವಲ್ಲಿ ಸಂಶಯವಿಲ್ಲ.

–ಪ್ರೊ. ಉಮಾ ರಾಜಶೇಖರ್

## ಸಮೂಹ ಅನ್ಯೋನ್ಯ ಕ್ರಿಯಾ ವಿಶ್ಲೇಷಣೆಯ ಮಾದರಿಗಳು

ಬೋಧನೆ ಒಂದು ಸಂಜ್ಞಾನಾತ್ಮಕ ಪ್ರಕ್ರಿಯೆಯಾಗಿದ್ದು, ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ನಡೆಯುವ ಅನ್ಯೋನ್ಯ ಕ್ರಿಯೆಯಾಗಿದೆ. ಇದು ಇವರಿಬ್ಬರಲ್ಲಿ ಪರಸ್ಪರ ಸಂಬಂಧವನ್ನು ಸ್ಥಾಪಿಸುವುದು. ಪ್ರಾಚೀನ ಕಾಲದ ಬೋಧನೆಯಲ್ಲಿ ಶಿಕ್ಷಕನಿಗೆ ಹೆಚ್ಚಿನ ಪ್ರಾಧಾನ್ಯ ಕೊಡಲಾಗಿತ್ತು. ಕಾಲಕ್ರಮೇಣ ಶಿಕ್ಷಕನ ಜೊತೆ ವಿಷಯಕ್ಕೂ ಆದ್ಯತೆ ನೀಡಲಾಯಿತು. ಆದರೆ ಶೈಕ್ಷಣಿಕ ಮನೋವಿಜ್ಞಾನ ಅನುಷ್ಠಾನಕ್ಕೆ ಬಂದಂದಿನಿಂದ ಮಗುವಿಗೆ ಅಥವಾ ಕಲಿಯುವವನಿಗೆ ಹೆಚ್ಚು ಮಹತ್ವ ಬಂದು ಶಿಕ್ಷಣ ಶಿಶು ಕೇಂದ್ರಿತ ಶಿಕ್ಷಣವಾಗಿ ಪರಿಣಮಿಸಿತು. ಉನ್ನತ ಸ್ಥಾನದಲ್ಲಿರುವ ಶಿಕ್ಷಕನ ಮನಸ್ಸು ಸಂಸ್ಕಾರಗೊಂಡು ಕೆಳಮಟ್ಟದಲ್ಲಿರುವ ಮಗುವಿನ ಮನಸ್ಸಿನೊಡನೆ ಸಂಗಮವಾಗಬೇಕು. ತನ್ನ ವ್ಯಕ್ತಿತ್ವ, ಅಭ್ಯಾಸ, ವೃತ್ತಿ ಮತ್ತು ಅವುಗಳ ಪ್ರಕ್ರಿಯೆಗಳ ಪ್ರಭಾವ ಮಕ್ಕಳ ಮೇಲೆ ಉಂಟಾಗುತ್ತದೆಂಬ ಅರಿವು ಶಿಕ್ಷಕನಿಗೆ ಇರಬೇಕು. ಆಧುನಿಕ ಶಿಕ್ಷಣದಲ್ಲಿ ಅನೇಕ ವಿಧವಾದ ಜಟಿಲ ಅಂಶಗಳು ತಮ್ಮ ಪರಸ್ಪರ ಪ್ರತಿಕ್ರಿಯೆಗಳಿಂದ ಶಿಕ್ಷಣ ಪ್ರವೃತ್ತಿಯನ್ನು ರೂಪಿಸಲು ಸಹಾಯಕವಾಗಿವೆ. ಬೋಧಕ ಮತ್ತು ವಿದ್ಯಾರ್ಥಿಗಳು ಅನ್ಯೋನ್ಯ ಕ್ರಿಯೆಯಿಂದ ವರ್ತಿಸುವುದರ ಜೊತೆಗೆ ಒಬ್ಬರು ಇನ್ನೊಬ್ಬರ ಕಲಿಕೆಯ ಸಾಮರ್ಥ್ಯ ಮತ್ತು ಕಲಿಕೆಯನ್ನು ಪ್ರಭಾವಯುಕ್ತವಾಗಿ ಬದಲಿಸುವುದರಿಂದ ನಿಜಕ್ಕೂ ಬೋಧನೆಯು ಒಂದು ನಿರಂತರ ಪ್ರಕ್ರಿಯೆಯಾಗಿ ಪರಿಣಮಿಸುತ್ತದೆ.

**ಅರ್ಥ ಮತ್ತು ಸ್ವರೂಪ:** ಶಾಲೆಯ ತರಗತಿಯಲ್ಲಿ ಚಟುವಟಿಕೆಗಳ ಕ್ರಮಬದ್ಧ ವರ್ತನ ವಿನ್ಯಾಸಗಳೇ ಬೋಧನಾ ಅನ್ಯೋನ್ಯ ಕ್ರಿಯೆಗಳಾಗಿವೆ. ಸಾಮಾನ್ಯವಾಗಿ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪ್ರಮುಖವಾಗಿ ಮೂರು ಅಂಶಗಳು ಕಾಣಸಿಗುತ್ತವೆ. ಅವುಗಳೆಂದರೆ ಬೋಧನೆ, ಕಲಿಕೆ, ಮೌಲ್ಯಮಾಪನ. ಈ ಮೂರು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧವನ್ನು ಹೊಂದಿದ್ದು, ಶಿಕ್ಷಣದ ಪ್ರಗತಿಗೆ ಪೂರಕವಾಗುತ್ತವೆ. ಅಲ್ಲದೆ ಈ ಪ್ರಗತಿಗೆ ಸಹಾಯಕವಾಗುವ ವರ್ತನೆಯು ಅಪೇಕ್ಷಣಿಯವೂ ಸಹ ಆಗಿದೆ ಮತ್ತು ಶಿಕ್ಷಣದ ಉದ್ದೇಶಗಳನ್ನು ಸಾಧಿಸಲು ಸುಲಭ ಸಾಧ್ಯವಾಗುತ್ತದೆ. ಅಲ್ಲದೆ ಶಿಕ್ಷಕರಾದವರು ಬೋಧನಾ ಉದ್ದೇಶಗಳನ್ನು ಗಮನಿಸಿಕೊಂಡು ಕಲಿಸಿದರೆ ವಿದ್ಯಾರ್ಥಿಗಳು ಅದಕ್ಕೆ ಪೂರಕವಾಗಿ ಅಧ್ಯಯನದಲ್ಲಿ ನಿರತರಾಗುತ್ತಾರೆ. ಇದರಿಂದ ಅವರಲ್ಲಿನ ವರ್ತನಾ ಬದಲಾವಣೆಗಳನ್ನು ತಿಳಿದುಕೊಳ್ಳಲು ಮತ್ತು ಮೌಲ್ಯಮಾಪನ ಮಾಡಲು ಸಹಾಯವಾಗುತ್ತದೆ.

ಬೋಧನಾ ಅನ್ಯೋನ್ಯ ಕ್ರಿಯೆಗೆ ಸಂವಹನವೇ ಮೂಲಾಧಾರವಾಗಿದ್ದು, ಇದು ವಿದ್ಯಾರ್ಥಿಗಳ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುವ ಶಕ್ತಿ ಹೊಂದಿದೆ. ಶಿಕ್ಷಕನ ಆ ಸಂವಹನವು ಶಾಬ್ದಿಕವಾಗಿರಬಹುದು ಅಥವಾ ಅಶಾಬ್ದಿಕವಾಗಿರಬಹುದು. ಒಟ್ಟಿನಲ್ಲಿ ಶಿಕ್ಷಕನು ಈ ಸಂವಹನವನ್ನು ಬೋಧನಾ ಕಲಿಕಾ ಪ್ರಕ್ರಿಯೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಸೂಕ್ತ ದಿಶೆಯಲ್ಲಿ ಪ್ರಚೋದಿಸಲು ಹಾಗೂ ಮೌಲ್ಯಮಾಪನ ಮಾಡಲು ಬಳಸಬಹುದಾಗಿದೆ. ಶಿಕ್ಷಕರ ವರ್ತನೆ ಮತ್ತು ವಿದ್ಯಾರ್ಥಿಗಳ ವರ್ತನೆಯ ಪಾರಿಸ್ಪರಿಕ ಪ್ರಕ್ರಿಯೆಯನ್ನೇ ಬೋಧನೆಯ ಅನ್ಯೋನ್ಯಕ್ರಿಯೆ ಎಂದು ಕರೆಯಲಾಗುತ್ತದೆ. ಶಿಕ್ಷಕರ ವರ್ತನೆ ಅಥವಾ ಸಂವಹನದ ವ್ಯವಸ್ಥಿತವಾದ ಮತ್ತು ವಸ್ತುನಿಷ್ಠವಾದ ವರ್ತನ ವಿನ್ಯಾಸವೇ ಅನ್ಯೋನ್ಯ ಕ್ರಿಯೆಯಾಗಿದೆ.

ತರಗತಿಯಲ್ಲಿ ಶಿಕ್ಷಕನ ಪರಸ್ಪರ ಅನ್ಯೋನ್ಯ ಕ್ರಿಯೆ ವಿಶ್ಲೇಷಣೆಯು ಒಂದು ತಂತ್ರವಾಗಿದ್ದು, ಈ ತಂತ್ರದಿಂದ ಶಿಕ್ಷಕನು ಪರಿಣಾಮಕಾರಿ ಬೋಧನೆಗೆ ಮುಂದಾಗಬಹುದಾಗಿದೆ. ಈ ಅನ್ಯೋನ್ಯಕ್ರಿಯೆ ವಿಶ್ಲೇಷಣ ತಂತ್ರದಲ್ಲಿ ತರಗತಿಯಲ್ಲಿನ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂವಹನದಲ್ಲಿ ಅನೇಕ ವಿಷಯಗಳನ್ನು ಅರ್ಥೈಸಿಕೊಂಡು ದಾಖಲಿಸುವಲ್ಲಿ ಸಾಂಕೇತಿಕರಣವನ್ನು ಉಪಯೋಗಿಸಲಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಅದೇ ಸಂಕೀರ್ಣವನ್ನು ದಾಖಲಿಸಿದ ನಂತರ ಅದನ್ನು ವಿಸಂಕೇತಿಕರಣದಿಂದ (Decodes) ಅರ್ಥೈಸಿ ಅದನ್ನು ಪ್ರಯೋಜನಕ್ಕೆ ಬರುವಂತೆ ವ್ಯವಸ್ಥೆಗೊಳಿಸಲಾಗುತ್ತದೆ.

* ತರಗತಿಯಲ್ಲಿನ ಅನ್ಯೋನ್ಯಕ್ರಿಯೆ ವಿನ್ಯಾಸವನ್ನು ವಿಶ್ಲೇಷಣೆ ಮಾಡುವುದರಿಂದ ನಮಗೆ ಶೈಕ್ಷಣಿಕ ಪ್ರಕ್ರಿಯೆಯ ಬಗ್ಗೆ ಮಾಹಿತಿ ದೊರೆಯುತ್ತದೆ. ಇದರ ಆಧಾರದ ಮೇಲೆ ಬೋಧನಾ ಪ್ರಕ್ರಿಯೆಯನ್ನು ಉತ್ತಮಪಡಿಸಬಹುದು. ತರಗತಿ ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸಲು ಶಿಕ್ಷಣತಜ್ಞರು ಅನೇಕ ತಂತ್ರಗಳನ್ನು ವಿವರಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗಿದೆ.

Digitised by Bharatavani, CIIL

**1. ಅನ್ಯೋನ್ಯಕ್ರಿಯಾ ವಿಶ್ಲೇಷಣೆಯ ವರ್ಗವ್ಯವಸ್ಥೆ ಮಾದರಿ:**

ಲಂಡನ್‌ನ ಮಿನ್ನೆಸೋಟಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದ ನೆಡ್.ಎ ಫ್ಲಾಂಡರ್‌ರವರು 1959ರಲ್ಲಿ ಈ ಪರಸ್ಪರಾನುವರ್ತನೆಯ ವಿಶ್ಲೇಷಣೆಯ ವರ್ಗವ್ಯವಸ್ಥೆಯನ್ನು ಮಾದರಿಯನ್ನು ಒಂದು ಶಿಕ್ಷಕರ ತರಬೇತಿ ಅಥವಾ ಬೋಧನಾ ತಂತ್ರವನ್ನಾಗಿ ರೂಪಿಸಿ ತರಗತಿ ಬಳಕೆಮಾಡುವಲ್ಲಿ ಯಶಸ್ವಿಯಾದರು. ಇವರ ಈ ವಿಶ್ಲೇಷಣ ತಂತ್ರವು ಕ್ರಮರೂಪದ ಒಂದು ವ್ಯವಸ್ಥೆಯಾಗಿದ್ದು, ಇಂತಹ ವ್ಯವಸ್ಥೆಯಡಿಯಲ್ಲಿ ಶಿಕ್ಷಕನು ತರಗತಿಯಲ್ಲಿ ಶಿಕ್ಷಕ-ವಿದ್ಯಾರ್ಥಿಗಳ ನಡುವೆ ನಡೆಯುವ ಶಾಬ್ದಿಕ ವರ್ತನೆಯನ್ನು ವೀಕ್ಷಿಸಿ, ಸಂಕೇತಿಸಿ, ವಿಸಂಕೇತಿಸಿ ವಿಶ್ಲೇಷಣೆ ಮಾಡಲಾಗುತ್ತದೆ.

ಫ್ಲಾಂಡರ್ ತರಗತಿಯಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ನಡುವಣ ಶಾಬ್ದಿಕ ಅನ್ಯೋನ್ಯ ಕ್ರಿಯೆಯಲ್ಲಿ ಮೂರು ಗುಂಪುಗಳಾಗಿ ವಿಂಗಡಿಸಿದ್ದಾನೆ.

1) ಶಿಕ್ಷಕನ ಮಾತು 2) ವಿದ್ಯಾರ್ಥಿಗಳ ಮಾತು 3) ನಿಶ್ಯಬ್ದತೆ ಅಥವಾ ಗೊಂದಲ.

ಶಿಕ್ಷಕರ ಮಾತಿನ ಗುಂಪಿನಲ್ಲಿ ಏಳು ವರ್ತನೆಗಳಿವೆ. ಮೊದಲ ನಾಲ್ಕು ವರ್ತನೆಗಳು ವಿದ್ಯಾರ್ಥಿಗಳ ಮೇಲೆ ಬೀರುವ ವರ್ತನೆಗಳಾಗಿವೆ. ಉಳಿದ ಮೂರು ವರ್ತನೆಗಳು ವಿದ್ಯಾರ್ಥಿಗಳ ಮೇಲೆ ಪ್ರತ್ಯಕ್ಷವಾಗಿ ಪ್ರಭಾವ ಬೀರುತ್ತವೆ. ವಿದ್ಯಾರ್ಥಿಗಳ ಮಾತಿನ ಗುಂಪಿನಲ್ಲಿ ಎರಡು ವರ್ತನ ವರ್ಗಗಳಿವೆ. ಪ್ರತಿಕ್ರಿಯೆ ನೀಡುವುದು, ಸ್ವಯಂಪ್ರೇರಿತವಾಗಿ ಮಾತನಾಡುವುದು, ಕೆಲವು ವೇಳೆ ತರಗತಿಯಲ್ಲಿ ಸ್ವಲ್ಪಕಾಲ ಶಿಕ್ಷಕರ ಮಾತು ಇರುವುದಿಲ್ಲ. ವಿದ್ಯಾರ್ಥಿಗಳ ಮಾತೂ ಇರುವುದಿಲ್ಲ. ತಾತ್ಕಾಲಿಕವಾಗಿ ನಿಶ್ಯಬ್ದತೆ ಇರುತ್ತದೆ. ಕೆಲವು ವೇಳೆ ಶಿಕ್ಷಕ – ವಿದ್ಯಾರ್ಥಿಗಳು ಪರಸ್ಪರ ಅರ್ಥಮಾಡಿಕೊಳ್ಳದಿರುವುದರಿಂದ ಗೊಂದಲದ ಸ್ಥಿತಿ ಉದ್ಭವವಾಗಬಹುದು. ಈ ಸ್ಥಿತಿಯನ್ನು ವರ್ತನೆಯ ಗುಂಪಿನಲ್ಲಿ ಸೇರಿಸಿ ಅದನ್ನು ಹತ್ತನೇ ಶಾಬ್ದಿಕ ವರ್ತನೆಯ ವರ್ಗವೆಂದು ಪರಿಗಣಿಸಲಾಗಿದೆ.

ಒಂದು ಒಳ್ಳೆಯ ತರಗತಿಯಲ್ಲಿ ಅಂದರೆ ಕಲಿಕೆ ಉಂಟಾಗುತ್ತಿರುವ ತರಗತಿಯಲ್ಲಿ, ಫ್ಲಾಂಡರ್‌ನ ಪ್ರಕಾರ ಆಧ್ಯಾಪಕನ ಮಾತು ಮತ್ತು ವಿದ್ಯಾರ್ಥಿಗಳ ಮಾತಿನ ಅನುಪಾತ ಕಡಿಮೆ ಇರಬೇಕು. ನಿಶ್ಯಬ್ದ/ ಗೊಂದಲದ ಸಮಯ ಅತ್ಯಲ್ಪವಾಗಿರಬಹುದು. ಅಧ್ಯಾಪಕರ ಮಾತು ಹೆಚ್ಚಾಗಿದ್ದರೆ ಅನ್ಯೋನ್ಯಕ್ರಿಯೆ ಕಡಿಮೆಯಾಗಿ ತರಗತಿ ಅಧ್ಯಾಪಕ ಕೇಂದ್ರೀಕೃತವಾಗುತ್ತದೆ. ವಿದ್ಯಾರ್ಥಿಗಳ ಮಾತು ಅತಿ ಹೆಚ್ಚಾದರೆ ಅದು ಗೊಂದಲಕ್ಕೆ ಕಾರಣವಾಗಬಹುದು.

**ಫ್ಲಾಂಡರ್‌ನ ವರ್ಗವ್ಯವಸ್ಥೆಯ ವಿವರ ಈ ರೀತಿ ಇದೆ.**

| ವರ್ಗೀಕರಣ | ಪ್ರಭಾವ/ ಸ್ವರೂಪ | ವರ್ತನೆಯ ವಿವರ |
|---|---|---|
| ಶಿಕ್ಷಕರ ಮಾತು | ಪರೋಕ್ಷ ಪ್ರಭಾವ | 1. ಭಾವನೆಗಳನ್ನು ಒಪ್ಪಿಕೊಳ್ಳುವುದು.<br>2. ಹೊಗಳುವಿಕೆ/ಪ್ರೇರೇಪಿಸುವುದು.<br>3. ವಿದ್ಯಾರ್ಥಿಗಳ ವಿಚಾರಧಾರೆಯನ್ನು ಒಪ್ಪುವುದು.<br>4. ಪ್ರಶ್ನೆಗಳನ್ನು ಕೇಳುವುದು. |
| | ಪ್ರತ್ಯೇಕ/ ನೇರ ಪ್ರಭಾವ | 5. ಉಪನ್ಯಾಸ ನೀಡಿಕೆ<br>6. ನಿರ್ದೇಶನವನ್ನು ನೀಡುವುದು.<br>7. ವಿಮರ್ಶೆ ಮಾಡುವುದು/ಸಮರ್ಥಿಸುವುದು. |
| ವಿದ್ಯಾರ್ಥಿಗಳ ಮಾತು | ಕ್ರಿಯಾತ್ಮಕ ಹೇಳಿಕೆ ಅಥವಾ ವಿದ್ಯಾರ್ಥಿಗಳ ಪ್ರಕ್ರಿಯೆ | 8. ವಿದ್ಯಾರ್ಥಿಗಳ ಮರು ಮಾತು |
| | ಪ್ರಾರಂಭಿಕ ಹೇಳಿಕೆ | 9. ವಿದ್ಯಾರ್ಥಿಗಳ ಪ್ರಾರಂಭಿಕ ಮಾತುಗಾರಿಕೆ |
| ನಿಶ್ಯಬ್ದತೆ ಅಥವಾ ಗೊಂದಲ | ಶಿಕ್ಷಕರು/ ಎಲ್ಲ ವಿದ್ಯಾರ್ಥಿಗಳು | 10. ನಿಶ್ಯಬ್ದತೆ/ಗೊಂದಲ |

ಫ್ಲಾಂಡರ್‌ನ ವ್ಯವಸ್ಥೆಯಲ್ಲಿ 10 ವಿಧದ ಶಾಬ್ದಿಕ ಅನ್ಯೋನ್ಯ ಕ್ರಿಯಾ ವರ್ತನೆಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ಕೊಟ್ಟಿದೆ.

Digitised by Bharatavani, CIIL

## ಸಮೂಹ ಅನ್ಯೋನ್ಯ ಕ್ರಿಯಾ ವಿಶ್ಲೇಷಣೆಯ ಮಾದರಿಗಳು

**1. ಭಾವನೆಗಳನ್ನು ಒಪ್ಪಿಕೊಳ್ಳುವುದು:**

ಇದು ಮಕ್ಕಳ ಮೇಲೆ ಪರೋಕ್ಷವಾಗಿ ಪ್ರಭಾವಬೀರು ವಂತಹ ವರ್ತನೆಯಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಭಾವನೆಗಳಿಗೆ, ಅನಿಸಿಕೆಗಳಿಗೆ ಸೂಕ್ತ ಮನ್ನಣೆ ನೀಡುತ್ತಾರೆ. ಅಂದರೆ ಶಿಕ್ಷಕರು ಸದಾಕಾಲ ಮಕ್ಕಳನ್ನು ಗದರಿಸಲು ಮುಂದಾಗದೇ ಅವರಲ್ಲಿ ಸರಿಯಾದ ಧೈರ್ಯ ತುಂಬಿ ಅವರುಗಳು ತಮ್ಮ ಭಾವನೆಗಳನ್ನು ಯಾವುದೇ ಭಯ ಅಥವಾ ಭೀತಿಯಿಲ್ಲದೆ ಅಭಿವ್ಯಕ್ತಗೊಳಿಸುವಂತೆ ಮಾಡುತ್ತಾರೆ. ಆಗ ಮಾತ್ರ ಮಕ್ಕಳು ಧೈರ್ಯವಾಗಿ ಅಭಿವ್ಯಕ್ತಪಡಿಸಲು ಸಾಧ್ಯವಾಗುತ್ತದೆ.

**2. ಹೊಗಳುವಿಕೆ/ಪ್ರೇರೇಪಿಸುವುದು:**

ಮಕ್ಕಳ ಮೇಲೆ ಪರೋಕ್ಷವಾಗಿ ಪ್ರಭಾವಬೀರುವಂತಹ ಮತ್ತೊಂದು ವರ್ತನೆಯೇ ಹೊಗಳುವಿಕೆ. ಹೊಗಳುವಿಕೆ ಮಕ್ಕಳನ್ನು ಉತ್ಸಾಹದ ಕ್ಷಣಗಳಲ್ಲಿ ತೇಲುವಂತೆ ಮಾಡುವುದರಿಂದ ನಿಸ್ಸಂದೇಹವಾಗಿ ಮಕ್ಕಳು ಸಕ್ರಿಯ ಕಲಿಕೆಗೆ ಮುಂದಾಗುತ್ತಾರೆ. ಆದಕಾರಣ ಮಕ್ಕಳು ಸರಿಯಾಗಿ ಪ್ರತಿಕ್ರಿಯಿಸಲು ಮತ್ತು ಅವರಿಗೆ ಯಾವುದೇ ಸಂದರ್ಭದಲ್ಲಿ ಮನಸ್ಸಿಗೆ ನೋವಾಗದಂತೆ ಎಚ್ಚರ ವಹಿಸಲು ಶಿಕ್ಷಕನು ಆಗಾಗ ತರಗತಿಯಲ್ಲಿ ಹಾಸ್ಯ ಪ್ರವೃತ್ತಿಗೆ ಮುಂದಾಗಿ ಅಲ್ಲಿ ನಿರ್ಭಯ ವಾತಾವರಣದ ಭರವಸೆಯನ್ನು ಮೂಡಿಸುತ್ತಾನೆ.

**3. ವಿದ್ಯಾರ್ಥಿಗಳ ವಿಚಾರಧಾರೆಯನ್ನು ಒಪ್ಪುವುದು ಅಥವಾ ಉಪಯೋಗಿಸುವುದು:** ಇದು ತರಗತಿಯಲ್ಲಿ ಶಿಕ್ಷಕನ ಮಾತುಗಾರಿಕೆಗೆ ಸಂಬಂಧಿಸಿದಂತೆ ಹಾಗೂ ಪರೋಕ್ಷ ಪ್ರಭಾವ ಬೀರುವಂತಹ ಮತ್ತೊಂದು ವರ್ತನೆಯಾಗಿದೆ. ಇದರ ಮೂಲಕ ಶಿಕ್ಷಕನು ತರಗತಿಯಲ್ಲಿ ಮಕ್ಕಳ ವಿಚಾರಧಾರೆಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು ಅದನ್ನು ಸರಿಯಾಗಿ ವಿವರಿಸುತ್ತಾರೆ. ಅರ್ಥೈಸುವುದರ ಮೂಲಕ ಬೋಧನಾ ಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗುತ್ತಾರೆ.

**4. ಪ್ರಶ್ನೆಗಳನ್ನು ಕೇಳುವುದು:** ಪ್ರಶ್ನೆಗಳನ್ನು ಕೇಳುವ ಶಿಕ್ಷಕರ ವರ್ತನೆ ಬೋಧನೆಯಲ್ಲಿ ಮಹತ್ವಪೂರ್ಣವೆನಿಸುತ್ತದೆ. ಸಾಮಾನ್ಯವಾಗಿ ಈ ವರ್ತನೆಯ ಮೂಲಕ ಶಿಕ್ಷಕನು ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ವಿಷಯದ ವಿಧಾನಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಉತ್ತರಿಸುವಂತಹ ಪ್ರಶ್ನೆಗಳನ್ನು ಕೇಳುತ್ತಾರೆ. ಶಿಕ್ಷಕನು ವಿಷಯದ ಕುರಿತಾಗಿ ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಅದಕ್ಕೆ ತಕ್ಕಂತೆ ಮಕ್ಕಳಿಂದ ಉತ್ತಮ ಪ್ರತಿಕ್ರಿಯೆಗಳನ್ನು ಪಡೆಯುತ್ತಾರೆ.

**5. ಉಪನ್ಯಾಸ ನೀಡಿಕೆ:** ವಿದ್ಯಾರ್ಥಿಗಳ ಮೇಲೆ ನೇರ ಪ್ರಭಾವ ಬೀರುವಂತಹ ಶಿಕ್ಷಕರ ವರ್ತನೆಯೇ ಉಪನ್ಯಾಸ ನೀಡುವುದು ಅಥವಾ ಬೋಧಿಸುವುದು. ಈ ವರ್ತನೆಯಲ್ಲಿ ಶಿಕ್ಷಕನು ವಿಷಯವಸ್ತು, ಘಟನೆಗಳಿಗೆ ಸಂಬಂಧಿಸಿದಂತೆ ಉಪನ್ಯಾಸ ನೀಡುತ್ತಾರೆ. ಅಲ್ಲದೆ ಸಂದರ್ಭೋಚಿತವಾಗಿ ತಮ್ಮ ವಿಚಾರಧಾರೆಗಳನ್ನು ಅಥವಾ ಅಭಿಪ್ರಾಯಗಳನ್ನು ಸೂಕ್ತ ದೃಷ್ಟಾಂತಗಳ ನೀಡಿಕೆಯ ಮೂಲಕ ವಿವರಿಸುತ್ತಾರೆ.

**6. ನಿರ್ದೇಶನವನ್ನು ನೀಡುವುದು:** ಪ್ರತ್ಯಕ್ಷ ಪ್ರಭಾವಕ್ಕೆ ಸಂಬಂಧಿಸಿದಂತೆ ಶಿಕ್ಷಕನ ಮಾತುಗಾರಿಕೆಯು ಮತ್ತೊಂದು ನಿರ್ದೇಶನವನ್ನು ಕೊಡುವುದು. ಕೆಲವು ಸಲ ತರಗತಿಯಲ್ಲಿನ ಮಕ್ಕಳನ್ನು ತನ್ನ ನಿಯಂತ್ರಣಕ್ಕೆ ಅಥವಾ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಶಿಕ್ಷಕರಿಗೆ ಅನಿವಾರ್ಯವಾಗುತ್ತದೆ.

**7. ವಿಮರ್ಶೆ ಮಾಡುವುದು ಅಥವಾ ಸಮರ್ಥಿಸುವುದು:**

ಶಿಕ್ಷಕನ ಮಾತುಗಾರಿಕೆಯ ಮತ್ತು ಪ್ರತ್ಯಕ್ಷ ಪ್ರಭಾವ ಬೀರುವಂತಹ ಕೊನೆಯ ವರ್ತನೆಯೇ ಶಿಕ್ಷಕರು ಮಾಡುವ ವಿಮರ್ಶೆ ಮತ್ತು ತಮ್ಮ ನಿಲುವಿನ ಸಮರ್ಥನೆ. ಶಿಕ್ಷಕರು ತರಗತಿಯಲ್ಲಿ ವಿದ್ಯಾರ್ಥಿಗಳ ಅನುಚಿತ ವರ್ತನೆಗಳಿಗೆ ತೀಕ್ಷ್ಣ ವಿಮರ್ಶೆಯ ಮೂಲಕ ಅವರನ್ನು ತಿದ್ದಲು ಮುಂದಾಗುತ್ತಾರೆ. ಅಲ್ಲದೇ ಸಾಧ್ಯವಿದ್ದಷ್ಟು ಮಟ್ಟಿಗೆ ತಮ್ಮ ಇರುವಿಕೆಯ ಅರಿವನ್ನು ಮಕ್ಕಳಿಗೆ ಮನದಟ್ಟು ಮಾಡಿ ತರಗತಿಯಲ್ಲಿ ಶಿಸ್ತಿನ ವಾತಾವರಣವನ್ನುಂಟುಮಾಡಲು ಪ್ರಯತ್ನಿಸುವರು. ಹೀಗೆ ಮಾಡುವುದರ ಮೂಲಕ ಶಿಕ್ಷಕರು ತರಗತಿಯಲ್ಲಿ ವಿದ್ಯಾರ್ಥಿಗಳ ವರ್ತನೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಬಹುದು. ಹಾಗೆಯೆ ಬೋಧನೆ ಮಾಡುವಾಗ ತಾವು ಬೋಧಿಸುವುದನ್ನು ಯಥೋಚಿತವಾಗಿ ಸಮರ್ಥಿಸಿಕೊಳ್ಳುತ್ತಾರೆ.

**8. ವಿದ್ಯಾರ್ಥಿಗಳ ಮರು ಮಾತು:** ಇದು ವಿದ್ಯಾರ್ಥಿಗಳ ಮಾತಿಗೆ ಸಂಬಂಧಿಸಿದ ವರ್ತನೆಯಾಗಿದ್ದು, ಇದರಲ್ಲಿ ಶಿಕ್ಷಕರು ಕೇಳುವಂತಹ ಪ್ರಶ್ನೆಗೆ ಅಥವಾ ವಿಚಾರಗಳಿಗೆ ವಿದ್ಯಾರ್ಥಿಗಳು ಪ್ರತ್ಯುತ್ತರ ನೀಡುತ್ತಾ-ರೆ. ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರ ನೀಡುವುದರ ಮೂಲಕ ಪ್ರತಿಕ್ರಿಯೆ ನೀಡುತ್ತಾ-ರೆ.

**9. ವಿದ್ಯಾರ್ಥಿಗಳ ಪ್ರಾರಂಭಿಕ ಮಾತುಗಳು:** ವಿದ್ಯಾರ್ಥಿಗಳ ಮಾತುಗಾರಿಕೆಗೆ ಸಂಬಂಧಿಸಿದಂತೆ ಎರಡನೇ ಮತ್ತು ಕೊನೆಯ ವರ್ತನೆ ಇದಾಗಿದ್ದು, ಇದರಲ್ಲಿ ವಿದ್ಯಾರ್ಥಿ ತಾನೇ ಸ್ವಯಂಪ್ರೇರಿತವಾಗಿ ಕಲಿಕಾ ಚಟುವಟಿಕೆಯನ್ನು ಪ್ರಶ್ನೆ ಕೇಳುವುದರ/ವಿವರಣೆ ಕೇಳುವುದರ ಮೂಲಕ ವಿದ್ಯಾರ್ಥಿಗಳ ಮಾತುಗಳು ಸಾಧ್ಯವಿದ್ದಷ್ಟು ಸ್ವಯಂ ಪ್ರೇರಣೆಯಿಂದ ಒಡಗೂಡಿರುತ್ತವೆ. ವಿದ್ಯಾರ್ಥಿಗಳೂ ತಾವಾಗಿಯೆ ಮುಂದಾಗುತ್ತಾರೆ. ಯಾವ ವಿಷಯವನ್ನು ಮಾತನಾಡಬೇಕು ಹಾಗೂ ಆ ವಿಷಯವನ್ನು ಹೇಗೆ ಮಾತನಾಡಬೇಕೆಂಬುದನ್ನು ವಿದ್ಯಾರ್ಥಿಯೇ ನಿರ್ಧರಿಸುತ್ತಾನೆ.

**10. ನಿಶ್ಶಬ್ದತೆ/ಗೊಂದಲ:** ಹೆಸರೇ ಸೂಚಿಸುವಂತೆ ಇದು ಶಿಕ್ಷಕ ಅಥವಾ ವಿದ್ಯಾರ್ಥಿಗಳು ಮಾತನಾಡದೇ ಇರುವ ಸಮಯವಾಗಿದೆ. ಸಾಮಾನ್ಯವಾಗಿ ಬೋಧನಾ-ಕಲಿಕಾ ಸನ್ನಿವೇಶದಲ್ಲಿ ಶಿಕ್ಷಕರು ಮಕ್ಕಳಿಗೆ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಒಂದು ವಿಚಾರವನ್ನು ಕುರಿತು ಪ್ರಶ್ನೆ ಕೇಳುವ ಅಥವಾ ಪರಸ್ಪರ ಅನ್ಯೋನ್ಯಕ್ರಿಯೆ ಇಲ್ಲದಾಗ ಸ್ವಲ್ಪಮಟ್ಟಿನ ನಿಶ್ಶಬ್ದತೆ ಆವರಿಸಿಕೊಳ್ಳುತ್ತದೆ. ಕೆಲವು ವೇಳೆ ಶಿಕ್ಷಕ ಅಥವಾ ವಿದ್ಯಾರ್ಥಿ ಗೊಂದಲಕ್ಕೆ ಒಳಗಾದಾಗ ನಿಶ್ಶಬ್ದತೆ ಉಂಟಾಗಬಹುದು.

- ಫ್ಲಾಂಡರ್‌ನ ಮಾದರಿಯನ್ನು ಬಳಸುವಾಗ ತರಗತಿಯಲ್ಲಿ ಬೋಧನಾ ಪ್ರಕ್ರಿಯೆಯನ್ನು ವೀಕ್ಷಿಸುವ ವ್ಯಕ್ತಿ ತರಗತಿಯ ಅನ್ಯೋನ್ಯ ಕ್ರಿಯೆಯನ್ನು ಎಚ್ಚರಿಕೆಯಿಂದ ವೀಕ್ಷಿಸಿ ಸೂಕ್ತ ತಪಸೀಲು ಪಟ್ಟಿಯಲ್ಲಿ ಪ್ರತಿ ಮೂರು ಸೆಕೆಂಡಿಗೆ ಒಂದು ಘಟಕದ ರೂಪದಲ್ಲಿ ವೀಕ್ಷಿಸಿದ ಶಾಬ್ದಿಕ ವರ್ತನೆ ಹತ್ತು ವರ್ತನ ವರ್ಗಗಳಲ್ಲಿ ಯಾವುದಕ್ಕೆ ಶಿಕ್ಷಕನ/ ವಿದ್ಯಾರ್ಥಿಗಳ/ಗೊಂದಲದ ವರ್ತನೆಗೆ ಅನ್ವಯಿಸುತ್ತಾನೆ ಎಂಬುದನ್ನು ನಿರ್ಧರಿಸಿ ಆ ವರ್ತನೆಯ ಮುಂದೆ ಒಂದು ಗೆರೆ (\) ಹಾಕುವುದರ ಮೂಲಕ ಗುರ್ತಿಸಿಕೊಳ್ಳುತ್ತಾನೆ. ಬೋಧನೆಯ ಅವಧಿ ಮುಗಿದ ನಂತರ ಈ ಗುರ್ತುಗಳನ್ನು ಲೆಕ್ಕ ಮಾಡಿ ಪ್ರತಿ ವರ್ಗಕ್ಕೆ (ಶಿಕ್ಷಕರ ಮಾತು, ವಿದ್ಯಾರ್ಥಿಗಳ ಮಾತು, ನಿಶ್ಶಬ್ದತೆ/ಗೊಂದಲ) ಒಟ್ಟು ಎಷ್ಟು ಸಮಯವಾಗಿದೆ ಎಂಬುದನ್ನು ಲೆಕ್ಕಚಾರ ಮಾಡಲಾಗುತ್ತದೆ. ಶಿಕ್ಷಕರ ಮಾತಿನ ಸಮಯಕ್ಕೂ

Digitised by Bharatavani, CIIL

ವಿದ್ಯಾರ್ಥಿಗಳ ಮಾತಿಗೂ ಇರುವ ಅನುಪಾತವನ್ನು ಕಂಡು ಹಿಡಿದು ಬೋಧನಾ ಪ್ರಕ್ರಿಯೆಯಲ್ಲಿ ಶಿಕ್ಷಕರ ಮಾತಿನ ಪ್ರಾಧಾನ್ಯ ಅಧಿಕವಾಗಿದೆಯೇ, ವಿದ್ಯಾರ್ಥಿಗಳ ಮಾತಿನ ಪ್ರಾಧಾನ್ಯವಿದೆಯೇ ಎಂಬುದನ್ನು ಕಂಡು ಹಿಡಿಯಲಾಗುತ್ತದೆ. ಒಂದು ಬೋಧನಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಅನ್ಯೋನ್ಯಕ್ರಿಯೆಯ ಸಮಯ ಶಿಕ್ಷಕ ಅನ್ಯೋನ್ಯಕ್ರಿಯೆಯ ಸಮಯಕ್ಕಿಂತ ಹೆಚ್ಚಾಗಿರಬೇಕಾಗುತ್ತದೆ. ನಿಶ್ಯಬ್ದತೆ ಗೊಂದಲದ ಸಮಯ ಆದಷ್ಟು ಕಡಿಮೆ ಇರಬೇಕು.

ಈ ತಂತ್ರವನ್ನು ಉಪಯೋಗಿಸುವ ಮುನ್ನ ವೀಕ್ಷಕರು ಕೆಲವು ತರಗತಿಗಳಲ್ಲಿ ಬೋಧನೆಯನ್ನು ವೀಕ್ಷಿಸಿ, ಅನ್ಯೋನ್ಯಕ್ರಿಯೆಯನ್ನು ಗುರ್ತಿಸಿಕೊಳ್ಳುವುದರಲ್ಲಿ ಸೂಕ್ತ ತರಬೇತಿ ಪಡೆಯಬೇಕಾದುದು ಅನಿವಾರ್ಯವಾಗುತ್ತದೆ.

- ಫ್ಲಾಂಡರ್ ನಂತರದಲ್ಲಿ ತನ್ನ ಮಾದರಿಯನ್ನು ಸ್ವಲ್ಪ ಮಾರ್ಪಡಿಸಿ ಪರಸ್ಪರ ವಿನಿಮಯ ವರ್ಗವ್ಯವಸ್ಥೆ (Reciprocal category system) ಎಂಬ ಮಾದರಿಯನ್ನು ರೂಪಿಸಿದ್ದಾನೆ. ಶಿಕ್ಷಕರ ಮಾತಿನ ವರ್ಗಗಳು ಮತ್ತು 10ನೇ ವರ್ಗವಾಗಿ ಮೌನ/ಗೊಂದಲದ ವರ್ಗ ಸೇರಿಸಲಾಗಿದೆ. ವಿದ್ಯಾರ್ಥಿಗಳ ಮಾತಿನಲ್ಲಿ 10 ವರ್ಗಗಳನ್ನು ವಿವರಿಸಲಾಗಿದೆ.

ಫ್ಲಾಂಡರ್‌ನನ್ನು ಅನುಸರಿಸಿ 1970ರಲ್ಲಿ ಅರ್ನೆಸ್ಟ್ ಬೆಂಟ್ಲಿ ಮತ್ತು ಎಡಿತ್ ಮಿಲ್ಲರ್‌ರವರು ಸಮಾನ ರೂಪಿ ಮಾತಿನ ವರ್ಗಗಳು (Equivalent Talk Categories) ಎಂಬ ಮಾದರಿಯನ್ನು ರೂಪಿಸಿದ್ದಾರೆ. ಇದರಲ್ಲಿ ಮೂಲ ಮಾದರಿಯಲ್ಲಿದ್ದಂತೆ ಅನ್ಯೋನ್ಯಕ್ರಿಯೆಯ 10 ವರ್ಗಗಳಿದ್ದು, ಅವುಗಳ ನಿರೂಪಣೆಯಲ್ಲಿ ಸ್ವಲ್ಪ ಮಾರ್ಪಾಡು ಮಾಡಲಾಗಿದೆ.

## 2. ನಾಯರ್ ಅವರ ಅನ್ಯೋನ್ಯ ಕ್ರಿಯಾ ವಿಶ್ಲೇಷಣೆಯ ಮಾದರಿಗಳು:

ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ನಾಯರ್ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆ ಆಗುವ ಅನ್ಯೋನ್ಯಕ್ರಿಯೆಯಲ್ಲಿ ಸಂಜ್ಞಾನಾತ್ಮಕ ಮತ್ತು ಸಂವೇಗಾತ್ಮಕ ಅಂಶಗಳಿಗೆ ಒತ್ತು ಕೊಟ್ಟು ತಮ್ಮದೇ ಆದ ತರಗತಿಯ ಅನ್ಯೋನ್ಯ ಕ್ರಿಯಾ ವಿಶ್ಲೇಷಣೆಯ ಎರಡು ಮಾದರಿಗಳನ್ನು ರೂಪಿಸಿದ್ದಾರೆ. ಈ ಮಾದರಿಗಳಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ನಿರ್ದಿಷ್ಟ ವರ್ತನೆಗಳನ್ನು ವಿವರಿಸಲಾಗಿದೆ. ತರಗತಿಯ ವೀಕ್ಷಕ ಅಥವಾ ವಿದ್ಯಾರ್ಥಿಗಳ ಸಣ್ಣದಾದ, ಗುರ್ತಿಸಬಹುದಾದ ವ್ಯಾಖ್ಯಾನಿಸಬಹುದಾದ ವರ್ತನೆಗಳನ್ನು ಅಥವಾ ಘಟನೆಗಳನ್ನು ಅವಲೋಕಿಸಿ ದಾಖಲಿಸಬೇಕಾಗುತ್ತದೆ. ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ಗುರ್ತಿಸಬಹುದಾದ ಘಟನೆಗಳು ಅಥವಾ ವರ್ತನೆಗಳು ಉಂಟಾದಾಗ ಅನ್ಯೋನ್ಯಕ್ರಿಯೆ ಉಂಟಾಗುತ್ತದೆ. ಒಂದು ಬೋಧನಾ ಅಂಶದ ಮುಕ್ತಾಯದ ಹಂತ ಅಥವಾ ಘಟ್ಟವಾಗುತ್ತದೆ. ಅನ್ಯೋನ್ಯಕ್ರಿಯೆಯನ್ನು ನಿರ್ದಿಷ್ಟ ಘಟನೆಗಳನ್ನಾಗಲಿ ಅಥವಾ ನಿರ್ದಿಷ್ಟ ಹಂತವನ್ನಾಗಲಿ ವೀಕ್ಷಿಸಿ ದಾಖಲಿಸಿಕೊಳ್ಳಬಹುದು. ಹೀಗೆ ದಾಖಲಿಸಿದ ಮಾಹಿತಿಯನ್ನು ಕೆಲವು ಆಯಾಮಗಳ ದೃಷ್ಟಿಯಿಂದ ವಿಶ್ಲೇಷಿಸಿ ಅನ್ಯೋನ್ಯಕ್ರಿಯೆಯ ವಿನ್ಯಾಸವನ್ನು ತೀರ್ಮಾನಿಸಲಾಗುತ್ತದೆ.

ಸಂಜ್ಞಾನಾತ್ಮಕ ಮಾದರಿಯಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿ ಕ್ರಿಯೆಗಳಿವೆ. ಅವುಗಳನ್ನು ಇಂಗ್ಲೀಷ್ ವರ್ಣಮಾಲೆಯ ಅಕ್ಷರಗಳಿಂದ ಸಂಕೇತಿಸಲಾಗಿದೆ. ಶಿಕ್ಷಕರ ಕ್ರಿಯೆಯ ಗುಂಪಿನಲ್ಲಿ ಈ ಕ್ರಿಯೆಗಳು ಸೇರುತ್ತವೆ. ಪರಿಚಯಿಸು ಅಥವಾ ಏನೆಂದು ಹೇಳು, ವ್ಯಾಖ್ಯಾನಿಸು, ಸ್ಪಷ್ಟೀಕರಿಸು ಅಥವಾ ವಿಸ್ತರಿಸು, 'ಹೇಗೆ' ಎಂದು ಹೇಳು, 'ಏಕೆ' ಎಂದು ವಿವರಿಸು, ಪರಿವರ್ತಿಸು ಅಥವಾ ಪುನರ್ ರಚಿಸು, ಉದಾಹರಿಸು, ಪ್ರದರ್ಶಿಸು/ಪ್ರಾತ್ಯಕ್ಷಿಸು, ಅಪೇಕ್ಷಿಸು, ಪ್ರೋತ್ಸಾಹಿಸು, ಸೂಚಿಸು, ಪ್ರತಿಪಾದಿಸು, ತಟಸ್ಥವಾಗಿರು, ಘೋಷಿಸು (ಸರಿ ಅಥವಾ ತಪ್ಪೆಂದು ಹೇಳು), ಸರಿಪಡಿಸು (ತಿದ್ದು), ತೀರ್ಮಾನಿಸು (ಪ್ರಶಂಸಿಸು, ಟೀಕಿಸು), ಮೇಲ್ವಿಚಾರಣೆ ಮಾಡು, ನಿಯಂತ್ರಿಸು, ವಿಷಯಾಂತರ ಮಾಡು, ಬೋಧನೇತರ ಕ್ರಿಯೆಗಳನ್ನು ಮಾಡು, ಉಪೇಕ್ಷಿಸು, ನಿಷ್ಕ್ರಿಯವಾಗಿರು/ಗೊಂದಲಕ್ಕೊಳಗಾಗು. ಈ 22 ಕ್ರಿಯೆಗಳನ್ನು ಪುನಃ ಬೋಧನೆ/ಮಂಡನಾತ್ಮಕ ಕ್ರಿಯೆಗಳು, ಅಪೇಕ್ಷಿಸುವ ಕ್ರಿಯೆಗಳು, ಸುಗಮಗೊಳಿಸುವ ಕ್ರಿಯೆಗಳು, ಪ್ರದರ್ಶಿಸುವ ಕ್ರಿಯೆಗಳು, ನಿಯಂತ್ರಿಸುವ ಕ್ರಿಯೆಗಳು ಮತ್ತು ಇತರ ಕ್ರಿಯೆಗಳಿಂದ ವರ್ಗೀಕರಿಸಲಾಗಿದೆ. ವಿದ್ಯಾರ್ಥಿ ಕ್ರಿಯೆಗಳ ಗುಂಪಿನಲ್ಲಿ 24ಕ್ರಿಯೆಗಳಿದ್ದು ಇವುಗಳಲ್ಲಿ ಮೊದಲ 21 ಕ್ರಿಯೆಗಳನ್ನು 1, 2, 3 ಮುಂತಾದ ಅಂಕೆಗಳಿಂದಲೂ ಸಂಕೇತಿಸಲಾಗಿದೆ. ವಿದ್ಯಾರ್ಥಿಕ್ರಿಯೆಗಳನ್ನು ಅಕ್ಷರಗಳಿಂದಲೂ ಸಂಕೇತಿಸಲಾಗಿದೆ. ವಿದ್ಯಾರ್ಥಿಕ್ರಿಯೆಗಳನ್ನು ಕಲಿಕಾರ್ಥಿಯ ವರ್ತನೆಗಳೆಂದು, ಸ್ವೀಕರಿಸುವ ಅಥವಾ ದಾಖಲಿಸಿ ವರ್ತನೆಗಳೆಂದು ಹೇಳಬಹುದು. ವಿದ್ಯಾರ್ಥಿಕ್ರಿಯೆಗಳ ಗುಂಪಿನಲ್ಲಿರುವ ಕ್ರಿಯೆಗಳು ಹೀಗಿವೆ. ಸ್ವೀಕರಿಸು, ಪುನರುಚ್ಚರಿಸು, ನೆನಪಿಸಿಕೊಳ್ಳು, ಅನುಸರಿಸು, ಸ್ಥಳ ಗುರ್ತಿಸು, ಗುರ್ತಿಸು/ವರ್ಗೀಕರಿಸು, ಸಂಬಂಧಿಸು, ರೂಪಾಂತರಿಸು, ಅನುವಾದಿಸು, ಉದಾಹರಿಸು, ವ್ಯಾಖ್ಯಾನಿಸು, ಅಂತಃಸ್ಫುರಣೆಗೊಳ್ಳು, ವಿಶ್ಲೇಷಿಸು, ಸಾಮಾನ್ಯೀಕರಿಸು, ವಿಭೇದಿಕರಿಸು, ನಿಷ್ಪನ್ನಗೊಳಿಸು (derive), ಅನುಮಾನಿಸು (deduce), ತೀರ್ಮಾನಿಸು, ಸಮಗ್ರಗೊಳಿಸು/ಸಂಘಟಿಸು, ಸಾರಾಂಶಿಸು/ಸಂಕ್ಷಿಪ್ತಗೊಳಿಸು, ವಿಸ್ತರಿಸು, ಪುನರ್ ರಚಿಸು, ವಿನ್ಯಾಸ ರೂಪಿಸು, ಪ್ರಶ್ನೆ ಮೂಲಕ ವಿನಂತಿಸು, ಸ್ವಇಚ್ಛೆಯಿಂದ ಹೇಳಿಕೆ ನೀಡು, ವಿವರಣೆ ನೀಡಲಾಗದ ಇನ್ನಾವುದಾದರೂ ವರ್ತನೆ, ಈ ವರ್ತನೆಗಳನ್ನು ಅಥವಾ ಕ್ರಿಯೆಗಳನ್ನು ಪುನರುತ್ಪಾದನ ಕ್ರಿಯೆಗಳು, ಗ್ರಹಿಸುವ/ಕಂಡುಹಿಡಿಯುವ ಕ್ರಿಯೆಗಳು, ಆರಂಭಿಸುವ ಕ್ರಿಯೆಗಳು ಮತ್ತು ಇತರ ಕ್ರಿಯೆಗಳು ಎಂದು ಪುನರ್ ವರ್ಗೀಕರಿಸಲಾಗಿದೆ.

ವೀಕ್ಷಣೆ ಮಾಡಿ ಘಟನೆಗಳನ್ನು (ಕ್ರಿಯೆಗಳನ್ನು) ದಾಖಲಿಸಿಕೊಂಡ ನಂತರ ಅವುಗಳ ಆವೃತ್ತಿ ಮತ್ತು ಸಮಯವನ್ನು ಆಧಾರವಾಗಿಟ್ಟುಕೊಂಡು ಈ ಕೆಳಗಿನ ಶಿಕ್ಷಕ ಹಾಗೂ ವಿದ್ಯಾರ್ಥಿಗಳ ವರ್ತನೆಗಳ ದೃಷ್ಟಿಯಿಂದ ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸಿ ವ್ಯಾಖ್ಯಾನಿಸಲಾಗುವುದು.

Digitised by Bharatavani, CIIL

| ಶಿಕ್ಷಕ ಕ್ರಿಯೆಗಳು | ವಿದ್ಯಾರ್ಥಿ ಕ್ರಿಯೆಗಳು |
|---|---|
| 1. ಮಂಡನೆ | ಸ್ವೀಕಾರ |
| 2. ಅಪೇಕ್ಷಿಸುವುದು | ಪುನರುತ್ಪಾದಿಸುವುದು |
| 3. ಸುಗಮಗೊಳಿಸುವುದು | ಗ್ರಹಿಸುವುದು/ ಕಂಡು ಹಿಡಿಯುವುದು |
| 4. ಪ್ರದರ್ಶಿಸುವುದು | ಅನ್ವಯಿಸುವುದು/ ಮೌಲ್ಯಮಾಪನ |
| 5. ಪ್ರಾತ್ಯಕ್ಷಿಕರಣಗೊಳಿಸುವುದು | ಸಂಶ್ಲೇಷಿಸುವುದು |

ನಾಯರ್‌ರವರ ಎರಡನೇ ಮಾದರಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂವೇಗಾತ್ಮಕ ವರ್ತನೆಗೆ (ಕ್ರಿಯೆಗಳಿಗೆ) ಮಹತ್ವ ನೀಡಿದೆ. ಸಂವೇಗಾತ್ಮಕ ವರ್ತನೆಯಲ್ಲಿ ನಾಲ್ಕು ಆಯಾಮಗಳನ್ನು ಗುರ್ತಿಸಲಾಗಿದೆ. ಅವೆಂದರೆ ನೇರ ವರ್ತನೆ, ಪರೋಕ್ಷ ವರ್ತನೆ, ಅಧಿಕಾರ ಚಲಾವಣೆ– ಬೆಂಬಲಿಸುವ ವರ್ತನೆ, ನಿರುತ್ಸಾಹಗೊಳಿಸುವ– ಪ್ರೋತ್ಸಾಹಿಸುವ, ಅತೃಪ್ತಿಕರ–ತೃಪ್ತಿಕರ ವರ್ತನೆ. ಈ ಆಯಾಮಗಳನ್ನು D-1, D-P, D-E, D-S ಅಕ್ಷರ ಜೋಡಿಗಳಿಂದ ಸಂಕೇತಿಸಲಾಗಿದೆ. ಈ ಆಯಾಮಗಳಲ್ಲಿ ಬರುವ ವರ್ತನೆಗಳಿಗೆ ಅವುಗಳ ಸಂವೇಗಾತ್ಮಕ ಪ್ರಭಾವದ ಆಧಾರದ ಮೇಲೆ 0–2, –1,0, +1, +2 ಅಂಕಗಳನ್ನು ನೀಡಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಶಿಕ್ಷಕರ ವರ್ತನೆ ಗುಂಪಿನಲ್ಲಿ 23 ವರ್ತನೆಗಳು ಮತ್ತು ವಿದ್ಯಾರ್ಥಿ ವರ್ತನೆ ಗುಂಪಿನಲ್ಲಿ 8ವರ್ತನೆಗಳು ಇವೆ. ಇವುಗಳನ್ನು ಕೆಳಗೆ ಅವುಗಳ ಸಂಕೇತಗಳೊಂದಿಗೆ ನಮೂದಿಸಲಾಗಿದೆ.

ಶಿಕ್ಷಕರ ವರ್ತನೆಗಳು– ಹೇಳು, ಬರೆ (O) ಪುಸ್ತಕಗಳಿಂದ ಓದು (R), ಬೋಧಿಸು (T), ವಿದ್ಯಾರ್ಥಿ ಅನುಕ್ರಿಯೆಗಳನ್ನು ವಿಶ್ಲೇಷಿಸು () ತಿದ್ದು (N), ಬರೆ (W) ಪರಿಚಯಿಸು, ನಿಯಂತ್ರಿಸು (C), ಕೇಂದ್ರಿಕರಿಸು (T), ಸಲಹೆ ನೀಡು, ಬೋಧಿಸು (a), ದೃಶ್ಯ ಸಾಮಗ್ರಿ ಪರಿಚಯಿಸು (V), ಒತ್ತಾಯಿಸು (I), ಹೊರಸೆಳೆ (L), ಅವಕಾಶ ನೀಡು (G), ಸಹಾಯ ಮಾಡು (H), ಪುನರ್ಬಲನ (ಪ್ರತಿ ಪುಷ್ಠಿ ನೀಡು) (F) , ವಿದ್ಯಾರ್ಥಿಗಳ ವಿಚಾರಗಳನ್ನು ಒಪ್ಪಿಕೊಳ್ಳು (A), ಪ್ರಶಂಸಿಸು, ಹೊಗಳು (P), ಪ್ರೋತ್ಸಾಹಿಸು (J), ಉತ್ಸಾಹಿಸು, ಸ್ಫೂರ್ತಿ ನೀಡು (E), ಮೇಲ್ವಿಚಾರಣೆ ಮಾಡು (S), ವಿದ್ಯಾರ್ಥಿಗಳ ಕಾರ್ಯಗಳನ್ನು ತಿದ್ದು (s), ಅನವಶ್ಯಕ ವಿಷಯ ಚರ್ಚಿಸು, ವಿಷಯದಿಂದ ದೂರ ಸರಿ (D), ನಿರ್ದೇಶಿಸು, ಪ್ರಶ್ನಿಸು (U/Y), ಟೀಕೆ ಮಾಡು, ವಿಮರ್ಶಿಸು (C), ಬಯ್ಗಳನ್ನು ಉಪಯೋಗಿಸು, ದಂಡಿಸು, ಅವಹೇಳನ ಮಾಡು (K), ಗೊಂದಲ, ಉಪೇಕ್ಷೆ, ನಿಷ್ಕ್ರೀಯತೆ, ವೇಳೆ ಹಾಳು ಮಾಡು (Z).

**ವಿದ್ಯಾರ್ಥಿಗಳ ವರ್ತನೆಗಳು:** ಪುನರುತ್ಪಾದಿಸು, ಪುನರುಚ್ಚರಿಸು (1), ನೆನಪಿಸಿಕೊಂಡು, ಪುನರುತ್ಪಾದಿಸಿ ಪ್ರಶ್ನೆಗಳಿಗೆ ಉತ್ತರಿಸು(2), ವೀಕ್ಷಿಸು, ಪರೀಕ್ಷಿಸು(3), ಹೊಸಕಲಿಕೆ ಬಗ್ಗೆ ಚಿಕ್ಕದಾಗಿ ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರಿಸು(4), ವಿಶಾಲ ಪ್ರಶ್ನೆಗಳಿಗೆ ಉತ್ತರಿಸು(5), ಚರ್ಚಿಸು, ಗುಂಪುಗಳಲ್ಲಿ ಕೆಲಸ ಮಾಡು(6), ಹೇಳಿಕೆ ನೀಡಲು, ಪ್ರಶ್ನೆ ಕೇಳಲು ಮುಂದೆ ಬಾ(7), ನಿಷ್ಕ್ರೀಯವಾಗಿರು, ಗೊಂದಲಕ್ಕೆ ಒಳಗಾಗು, ಅಶಿಸ್ತಿನಿಂದ ವರ್ತಿಸು (X).

### 3. ಎರಿಕ್ ಬರ್ನ್‌ನ ಆದಾನ–ಪ್ರದಾನ ವಿಶ್ಲೇಷಣಾ ಮಾದರಿ:

ಎರಿಕ್ ಬರ್ನ್ ಮನೋವೈಜ್ಞಾನಿಕ ಆಧಾರದ ಮೇಲೆ ಸಮೂಹದಲ್ಲಿ ನಡೆಯುವ ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸುವ ಮಾದರಿಯೊಂದನ್ನು ರೂಪಿಸಿದ್ದಾನೆ. ಇದನ್ನು ತರಗತಿಯಲ್ಲಿ ವಿದ್ಯಾರ್ಥಿ–ಶಿಕ್ಷಕರ ನಡುವೆ ನಡೆಯುವ ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸಲು ಅಳವಡಿಸಿಕೊಳ್ಳಬಹುದು. ಆದಾನ–ಪ್ರದಾನ ವಿಶ್ಲೇಷಣೆ ಮಾದರಿ (Transactional Analysis Model) ಎಂದು ಹೆಸರಿಸಲಾಗಿದೆ.

ಬರ್ನ್‌ನ ಪ್ರಕಾರ ಪ್ರತಿಯೊಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯೊಡನೆ ವ್ಯವಹರಿಸುವಾಗ ತನ್ನ ಅಹಂಸ್ಥಿತಿ (Ego state)ಗೆ ಅನುಗುಣವಾಗಿ ವರ್ತಿಸುತ್ತಾನೆ. ಬರ್ನ್ ಮೂರು ಅಹಂಸ್ಥಿತಿಗಳನ್ನು ವಿವರಿಸಿದ್ದಾರೆ. ಈ ಮೂರು ಅಹಂಸ್ಥಿತಿಗಳು– ಪೋಷಕ, ಮಗು ಮತ್ತು ವಯಸ್ಕ ಪೋಷಕ ಅಹಂಸ್ಥಿತಿಗಳು. ಪೋಷಕ ಅಹಂಸ್ಥಿತಿಯಲ್ಲಿರುವ ಶಿಕ್ಷಕ ವಿದ್ಯಾರ್ಥಿಯನ್ನು ಮಗುವಿನ ದೃಷ್ಟಿಯಿಂದ ನೋಡಿ ಮಗುವಿನೊಡನೆ ವ್ಯವಹರಿಸುವಂತೆ ಅಧಿಕಾರಯುತವಾಗಿ ವರ್ತಿಸುತ್ತಾನೆ. ಮಗುವಿನ ಅಹಂಸ್ಥಿತಿಯಲ್ಲಿರುವ ವ್ಯಕ್ತಿ ತನ್ನ ಬಾಲ್ಯದ ನೆನಪುಗಳಿಂದಾಗಿ ಮಗುವಿನಂತೆಯೇ ಬೇರೆಯವರೊಂದಿಗೆ ವ್ಯವಹರಿಸುತ್ತಾನೆ. ಇಂಥ ವ್ಯಕ್ತಿ ಬೇರೆಯವರ ಸಮ್ಮತಿ ಪಡೆಯಲು, ತತ್‌ಕ್ಷಣದ ಪ್ರತಿಫಲ ಪಡೆಯಲು ಇಚ್ಛಿಸುತ್ತಾನೆ. ಇಂಥ ವ್ಯಕ್ತಿ ಬೇರೆಯವರಿಗೆ ವಿಧೇಯನಾಗಿ ವರ್ತಿಸಬಹುದು ಅಥವಾ ಪ್ರತಿರೋಧಕವಾಗಿಯೂ ವರ್ತಿಸಬಹುದು. ವಯಸ್ಕ ಅಹಂಸ್ಥಿತಿಯಲ್ಲಿರುವ ವ್ಯಕ್ತಿ ಬೇರೆಯವರೊಂದಿಗೆ ವ್ಯವಹರಿಸುವಾಗ ತರ್ಕಬದ್ಧವಾದ, ಲೆಕ್ಕಾಚಾರದಿಂದ ಕೂಡಿದ, ತಥ್ಯಾಂಶ ಆಧಾರಿತವಾದ ರೀತಿಯಲ್ಲಿ ವರ್ತಿಸುತ್ತಾನೆ.

ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸಲು ಎರಿಕ್ ಬರ್ನ್ ಜೀವನಸ್ಥಿತಿ (Life position) ಎಂಬ ಮತ್ತೊಂದು ಪರಿಕಲ್ಪನೆಯನ್ನು ಉಪಯೋಗಿಸಿದ್ದಾರೆ. ವ್ಯಕ್ತಿ ತನ್ನ ಬಗ್ಗೆ ಯಾವ ರೀತಿ ಮನೋಭಾವ ಹೊಂದಿದ್ದಾನೆ ಮತ್ತು ಬೇರೆಯವರ ಬಗ್ಗೆ ಯಾವ ರೀತಿ ಮನೋಭಾವ ಹೊಂದಿದ್ದಾನೆ ಎಂಬ ಎರಡು ಭಾವನೆಗಳನ್ನು ಜೀವನಸ್ಥಿತಿ ಪರಿಕಲ್ಪನೆ ಒಳಗೊಂಡಿದೆ. ಬರ್ನ್ ಈ ಕೆಳಗಿನ ಮೂರು ರೀತಿಯ ಜೀವನ ಸ್ಥಿತಿಗಳನ್ನು ಗುರ್ತಿಸಿದ್ದಾನೆ.

1. ನಾನು ಚೆನ್ನಾಗಿದ್ದೇನೆ– ನೀನೂ ಚೆನ್ನಾಗಿದ್ದಿಯಾ (I am ok, You are ok) (I+ and U+) (ಇಬ್ಬರೂ ಪರಸ್ಪರ ಚೆನ್ನಾಗಿದ್ದೇವೆ) ಪರಸ್ಪರ ಹೊಂದಿಕೊಂಡು ಹೋಗುವ ಅನ್ಯೋನ್ಯ ಕ್ರಿಯೆ (Get on with -GOW)

Digitised by Bharatavani, CIIL

2. ನಾನು ಚೆನ್ನಾಗಿದ್ದೇನೆ– ಆದರೆ ನೀನೂ ಚೆನ್ನಾಗಿಲ್ಲ (I am ok, You are not ok) (I+ and U-) ನನಗೆ ಮಹತ್ವವಿದೆ. ಆದರೆ ನಿನಗೆ ಮಹತ್ವವಿಲ್ಲ. ನಿವಾರಿಸಿಕೊಳ್ಳಲು ಪ್ರಯತ್ನಿಸುವುದು (Getting Rid Off-GRO)

3. ನಾನು ಚೆನ್ನಾಗಿಲ್ಲ– ನೀನು ಚೆನ್ನಾಗಿದ್ದಿಯ(I- and U+), (I am not ok, You are ok) ದೂರ ಹೋಗುವ ಪ್ರವೃತ್ತಿ. Getting Away From (GAF) (I- and U-)

4. ನಾನು ಚೆನ್ನಾಗಿಲ್ಲ– ನೀನೂ ಚೆನ್ನಾಗಿಲ್ಲ (I am not ok, You are not ok) ಹೊಂದಿಕೊಂಡು ಹೋಗದ ಸ್ಥಿತಿ. (Getting No Where With - GNW)

ಮೊದಲನೇ ಸ್ಥಿತಿಯಿಂದ ವರ್ತಿಸುವ (ಅನ್ಯೋನ್ಯಕ್ರಿಯಿಸುವ) ವ್ಯಕ್ತಿ ಮಾನಸಿಕ ಸ್ವಸ್ಥತೆಯುಳ್ಳವನೂ, ತನ್ನ ಪ್ರಭಾವವನ್ನು ಬೀರುವ ಸಾಮರ್ಥ್ಯವುಳ್ಳವನೂ, ಆಗಿರುತ್ತಾನೆ. ಎರಡನೇ ಜೀವನ ಸ್ಥಿತಿಯಿಂದ ವರ್ತಿಸುವ (ಅನ್ಯೋನ್ಯಕ್ರಿಯಿಸುವ) ವ್ಯಕ್ತಿ ತನ್ನ ವ್ಯಕ್ತಿತ್ವದ ಸಂರಕ್ಷಣೆಗೆ ಪ್ರಯತ್ನಿಸುವುದನ್ನೂ ಆಕ್ರಮಣಕಾರಿಯಾಗಿ ವರ್ತಿಸುವವನೂ ಆಗಿರುತ್ತಾನೆ. ಮೂರನೇ ಜೀವನ ಸ್ಥಿತಿಯಿಂದ ವರ್ತಿಸುವವನು ಅಂತರ್ಮುಖಿಯೂ, ಶಾಂತಸ್ವಭಾವದವನೂ, ಆಗಿರುತ್ತಾನೆ. ನಾಲ್ಕನೇ ಜೀವನಸ್ಥಿತಿಯಿಂದ ವರ್ತಿಸುವ ವ್ಯಕ್ತಿಯ ವರ್ತನೆಯಲ್ಲಿ ಅಸಫಲತೆ ಕಂಡು ಬರುವುದಲ್ಲದೆ, ಅವನಲ್ಲಿ ಆತ್ಮಗೌರವ, ಆತ್ಮವಿಶ್ವಾಸದ ಕೊರತೆ ಕಂಡುಬರುತ್ತದೆ. ಅಪನಂಬಿಕೆ, ಸಂಶಯ, ಅಪ್ರಾಮಾಣಿಕತೆ, ಪ್ರೇರಣೆಯ ಕೊರತೆ ಮುಂತಾದ ನಕಾರಾತ್ಮಕ ಗುಣಗಳು ಕಂಡುಬರುತ್ತವೆ. ಬರ್ನ್‌ನ ಮಾದರಿಯನ್ನು ಹೀಗೆ ಚಿತ್ರಿಸಬಹುದು.




ತಟ್ಟುವಿಕೆ (Stroking) ಬರ್ನ್‌ನ ಮತ್ತೊಂದು ಮುಖ್ಯವಾದ ಪರಿಕಲ್ಪನೆ. ಇದು ಬೇರೊಬ್ಬ ವ್ಯಕ್ತಿಯ ಇರುವಿಕೆಯನ್ನು ಗುರ್ತಿಸುವ ದೈಹಿಕವಾದ, ಶಾಬ್ದಿಕವಾದ, ದೃಷ್ಟಿಸುವ, ಯಾವುದೇ ರೀತಿಯ ವರ್ತನೆಯನ್ನು ಸೂಚಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಅನ್ಯೋನ್ಯಕ್ರಿಯೆಯಲ್ಲಿ ಗುರುತಿಸಲ್ಪಡುವ ಮತ್ತು ಪ್ರಶಂಸಿಸಲ್ಪಡುವ ಅವಶ್ಯಕತೆಯನ್ನು ಹೊಂದಿರುವುದರಿಂದ ತಟ್ಟುವಿಕೆಯ ವರ್ತನೆಯ ಅನ್ಯೋನ್ಯಕ್ರಿಯೆಯನ್ನು ಧನಾತ್ಮಕವಾಗಿ ಪ್ರಭಾವಗೊಳಿಸುತ್ತದೆ.

ಎರಿಕ್ ಬರ್ನ್‌ನ ಮಾದರಿಯನ್ನು ತರಗತಿಯ ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸಲು ಉಪಯೋಗಿಸಬಹುದು.

**1. ನಿರ್ವಹಣಾತ್ಮಕ ಜಾಲ ಮಾದರಿ:** ಬ್ಲೇಕ್ ಮತ್ತು ಮೌಟನ್ನರು ನಿರ್ವಹಣಾಶಾಸ್ತ್ರದ ಸಂದರ್ಭದಲ್ಲಿ ವ್ಯವಸ್ಥಾಪಕರು ಮತ್ತು ಮೇಲ್ವಿಚಾರಕರನ್ನು ಗಮನದಲ್ಲಿಟ್ಟುಕೊಂಡು ನಿರ್ವಹಣಾತ್ಮಕ ಜಾಲ ಮಾದರಿಯನ್ನು ರೂಪಿಸಿದ್ದಾರೆ. ಆದರೂ ತರಗತಿಯ ಅನ್ಯೋನ್ಯಕ್ರಿಯೆಯ ವಿಶ್ಲೇಷಣೆಗೂ ಈ ಮಾದರಿಯನ್ನು ಉಪಯೋಗಿಸಿಕೊಳ್ಳಬಹುದು. ಈ ಮಾದರಿಯ ಬಗ್ಗೆ ಅಮೇರಿಕಾದ ಓಹಿಯೋ ರಾಜ್ಯ ವಿಶ್ವವಿದ್ಯಾನಿಲಯದಲ್ಲಿ ಮಿಷಿಗನ್ ವಿಶ್ವವಿದ್ಯಾನಿಲಯದಲ್ಲಿ ಅನೇಕ ಅಧ್ಯಯನಗಳಾಗಿವೆ.

ಈ ಮಾದರಿಯನ್ನು ಬ್ಲೇಕ್ ಮತ್ತು ಮೌಟನ್ ನಾಯರ್‌ನ ಎರಡು ಮುಖ್ಯ ಕಾರ್ಯಗಳ ಆಧಾರದ ಮೇಲೆ ರೂಪಿಸಿದ್ದಾರೆ. ಈ ಕಾರ್ಯಗಳನ್ನು ಅವರು ಸಂರಚನೆಯನ್ನು ಉಂಟುಮಾಡುವುದು (Initiating Structure) ಮತ್ತು ಪರಿಗಣಿಸುವುದು (Consideration) ಎಂದು ಹೆಸರಿಸಿದ್ದಾರೆ. ಸಂರಚನೆಯನ್ನು ಉಂಟುಮಾಡುವುದೆಂದರೆ ನಾಯಕ ಸಮೂಹದ ಕಾರ್ಯಗಳನ್ನು ವಿವರಿಸುವುದು ಮತ್ತು ಸಂಘಟಿಸುವುದು, ಸಹೋದ್ಯೋಗಿಗಳಿಗೆ ಕೆಲಸ ಹಂಚುವುದು ಮತ್ತು ಅವರ ಕೆಲಸದ ಮೇಲ್ವಿಚಾರಣೆ ಮಾಡುವುದು. ಪರಿಗಣಿಸುವುದು ಅಂದರೆ ನಾಯಕ ಅನುಯಾಯಿಗಳೊಂದಿಗೆ ಸ್ನೇಹಪೂರ್ವಕವಾಗಿ

Digitised by Bharatavani, CIIL

ವರ್ತಿಸುವುದು, ಬೆಂಬಲ ನೀಡುವುದು, ಅವರಲ್ಲಿ ನಂಬಿಕೆಯನ್ನಿಡುವುದು. ಅವರೊಂದಿಗೆ ಮುಕ್ತವಾಗಿ ಚರ್ಚಿಸುವುದು ಮತ್ತು ಅವರ ಬಗ್ಗೆ ಕಾಳಜಿ ತೋರಿಸುವುದು, ನಾಯಕ ಮತ್ತು ಅನುಯಾಯಿಗಳ ನಡುವಣ ಅನ್ಯೋನ್ಯಕ್ರಿಯೆಯಲ್ಲಿ ನಾಯಕರಾದವರು ಈ ಎರಡು ರೀತಿಯ ವರ್ತನೆಗಳನ್ನು ಬೇರೆ ಬೇರೆ ಪ್ರಮಾಣದಲ್ಲಿ ವರ್ತಿಸುತ್ತಾರೆ. ಕೆಲವು ನಾಯಕರು ತಮ್ಮ ವರ್ತನೆಯಲ್ಲಿ ಸಂರಚನೆ ಉಂಟುಮಾಡುವುದಕ್ಕೆ ಹೆಚ್ಚು ಒತ್ತು ಕೊಟ್ಟರೆ, ಇನ್ನು ಕೆಲವರು ಪರಿಗಣಿಸುವಿಕೆಗೆ ಹೆಚ್ಚು ಮಹತ್ವ ನೀಡುತ್ತಾರೆ. ನಾಯಕರಲ್ಲಿ ಕಂಡುಬರುವ ಈ ವ್ಯಕ್ತಿ ವ್ಯತ್ಯಾಸದ ಆಧಾರದ ಮೇಲೆ ನಾಲ್ಕು ರೀತಿಯ ನಾಯಕ ವರ್ತನೆ ಮಾದರಿಗಳನ್ನು ಗುರ್ತಿಸಬಹುದು. 1) ಮಾನವೀಯ ಸಂಬಂಧಿತ 2) ಪ್ರಜಾಸತ್ತಾತ್ಮಕ 3) ನಿರಂಕುಶಾತ್ಮಕ 4) ತಟಸ್ಥ ಸಂರಚನೆ ಉಂಟುಮಾಡುವ ನಾಯಕತ್ವ ಅನುಯಾಯಿ (ಕೆಲಸ ಮಾಡುವವರ) ಕೇಂದ್ರಿತವಾದುದಾಗಿದೆ. ಈ ನಾಲ್ಕು ನಾಯಕರ ಶೈಲಿಗಳನ್ನು ಆಧಾರವಾಗಿಟ್ಟುಕೊಂಡು ಬ್ಲೇರ್ ಮತ್ತು ಮೌಟನ್ ತಮ್ಮ ಮಾದರಿಯಲ್ಲಿ ಐದು ರೀತಿಯ ನಾಯಕತ್ವ ವರ್ತನೆಗಳ ಶೈಲಿಗಳನ್ನು ವಿವರಿಸಿದ್ದಾರೆ. ಈ ಮಾದರಿಯನ್ನು ಹೀಗೆ ಚಿತ್ರಿಸಬಹುದು.




ಗ್ರಾರಿಯನ ಮಾದರಿಯಲ್ಲಿ ಹೆಚ್ಚಿನ ಮಟ್ಟದ ಪರಿಗಣನೆ, ಕಡಿಮೆ ಮಟ್ಟದ ಸಂರಚನೆ ಇರುತ್ತದೆ. ಸದಸ್ಯರು ಮತ್ತು ನಾಯಕ ಪರಸ್ಪರ ನಿಕಟವಾಗಿ ಸಂತೋಷದಿಂದ ಒತ್ತಡವಿಲ್ಲದೆ ಪರಸ್ಪರವಾಗಿ ಅನ್ಯೋನ್ಯಕ್ರಿಯಿಸುತ್ತಾರೆ. ಈ ಮಾದರಿಯಲ್ಲಿ ಗುಂಪು ಸುಬದ್ಧವಾಗಿರುತ್ತದೆ. ಆದರೆ ಉತ್ಪಾದನೆ ಹೆಚ್ಚಾಗಿರುವುದಿಲ್ಲ. ತಂಡ ಸ್ಫೂರ್ತಿ ಮಾದರಿಯ ನಾಯಕತ್ವದಲ್ಲಿ ಪರಿಗಣನೆ ಮತ್ತು ಸಂರಚನೆ ಈ ಎರಡು ಆಯಾಮಗಳು ಹೆಚ್ಚಿನ ಮಟ್ಟದಲ್ಲಿರುತ್ತವೆ. ಆದ್ದರಿಂದ ಗುಂಪು ಸುಬದ್ಧವಾಗಿರುವುದಲ್ಲದೆ ಉತ್ಪಾದನೆಯೂ ಹೆಚ್ಚಾಗಿರುತ್ತದೆ. ಬ್ಲೇಕ್ ಮತ್ತು ಮೌಟನ್ ಪ್ರಕಾರ ಇದು ಅತ್ಯುತ್ತಮವಾದ ಅನ್ಯೋನ್ಯಕ್ರಿಯೆ ಇರುವ ನಾಯಕತ್ವದ ಮಾದರಿಯಾಗಿದೆ.

ಕಾರ್ಯೋನ್ಮುಖ ಶೈಲಿಯಲ್ಲಿ ಹೆಚ್ಚಿನ ಮಟ್ಟದ ಸಂರಚನೆ ಇದ್ದು ಪರಿಗಣನೆ ಕಡಿಮೆ ಮಟ್ಟದ್ದಾಗಿರುತ್ತದೆ. ಹೀಗಾಗಿ ಉತ್ಪಾದನೆಗೆ ಹೆಚ್ಚಿನ ಒತ್ತು ಇರುತ್ತದೆ. ಗುಂಪಿನಲ್ಲಿ ಸ್ವಲ್ಪ ಅತೃಪ್ತಿ ತಲೆದೋರುವ ಸಾಧ್ಯತೆ ಇರುತ್ತದೆ. ಪರಸ್ಪರ ಅನ್ಯೋನ್ಯಕ್ರಿಯೆ ಕಡಿಮೆ ಇದ್ದು, ಸೌಹಾರ್ದತೆಯ ಕೊರತೆ ಉಂಟಾಗುತ್ತದೆ. ಅಭಾವಪೂರ್ಣ ಶೈಲಿಯಲ್ಲಿ ಪರಿಗಣನೆ ಮತ್ತು ಸಂರಚನೆಯ ಆಯಾಮಗಳೆರಡೂ ಕಡಿಮೆಮಟ್ಟದಲ್ಲಿರುತ್ತವೆ. ಹೀಗಾಗಿ ಉತ್ಪಾದನೆಯಲ್ಲಿ ಕುಂಠಿತವಾಗುತ್ತದೆ. ಸದಸ್ಯರ ನಡುವೆ ಸೌಹಾರ್ದತೆಯೂ ಇರದೆ ಅತೃಪ್ತಿ ಉಂಟಾಗುತ್ತದೆ. ಇದು ಅತ್ಯಂತ ಕೆಳಮಟ್ಟದ ನಾಯಕತ್ವ ಶೈಲಿಯಾಗಿದೆ. ಮಧ್ಯಮ ವರ್ಗೀಯ ನಾಯಕತ್ವ ಶೈಲಿಯ ಸಂರಚನೆ ಮತ್ತು ಪರಿಗಣನೆ ಆಯಾಮಗಳೆರಡೂ ಸಮಾನ ಮಟ್ಟದಲ್ಲಿ ಹಿತಮಿತವಾದ ಪ್ರಮಾಣದಲ್ಲಿ ಇರುತ್ತವೆ.

ಪರಿಗಣನೆ ಮತ್ತು ಸಂರಚನೆಯ ನಾಯಕತ್ವದ ವರ್ತನೆಗಳನ್ನು ಬ್ಲೇಕ್ ಮತ್ತು ಮೌಟನ್ 1ರಿಂದ 9 ಬಿಂದುಗಳಿರುವ ಆಯಾಮಗಳ ಮೇಲೆ ಮೌಲ್ಯಮಾಪನ ಮಾಡಿದ್ದಾರೆ.

ಮೇಲಿನ ಚಿತ್ರದಲ್ಲಿ ಪರಿಗಣನೆಯನ್ನು ಲಂಬೀಯ ಅಕ್ಷದಲ್ಲಿ ಮತ್ತು ಸಂರಚನೆಯನ್ನು ಸಮತಲ ಅಕ್ಷದಲ್ಲಿ ಗುರ್ತಿಸಿದರೆ 5 ನಾಯಕತ್ವ ಶೈಲಿಗಳ ಅಂಕ ಮೌಲ್ಯ ಹೀಗಿರುತ್ತದೆ. ಗ್ರಾಮೀಣ ಗುಂಪು (1–9), ತಂಡಸ್ಫೂರ್ತಿ ಗುಂಪು (9–9), ಕಾರ್ಯೋನ್ಮುಖ ಗುಂಪು (9–1) ಮತ್ತು ಅಭಾವಪೂರ್ಣ ಗುಂಪು (1–1), ಮಧ್ಯಮ ವರ್ಗೀಯ

Digitised by Bharatavani, CIIL

(4.5–4.5). ಈ ಅನ್ಯೋನ್ಯ 5 ಸನ್ನಿವೇಶಾತ್ಮಕ ನಾಯಕತ್ವದ ಮಾದರಿ ಕ್ರಿಯಾ ಮಾದರಿಯನ್ನು ರೂಪಿಸಿರುವ ಹರ್ಸಿ ಮತ್ತು ಬ್ಲಾಂಚೆರ್ಡ್ ಪ್ರಕಾರ ಅತ್ಯುತ್ತಮ ನಾಯಕತ್ವದ ಮಾದರಿ ಎಂಬುದು ಯಾವುದೂ ಇಲ್ಲ. ನಾಯಕತ್ವದ ಸನ್ನಿವೇಶದ ಸ್ವರೂಪವನ್ನು ಅವಲಂಬಿಸಿರುತ್ತದೆ ಮತ್ತು ಅನುಯಾಯಿಗಳು ನಾಯಕತ್ವವನ್ನು ಒಪ್ಪಿಕೊಳ್ಳುವ ಮನೋಸಿದ್ಧತೆಯ ಮಟ್ಟವನ್ನು ಅವಲಂಬಿಸಿರುತ್ತದೆ. ಸನ್ನಿವೇಶಕ್ಕೆ ಅನುಗುಣವಾಗಿ ನಾಯಕತ್ವ ಉದ್ಭವವಾಗುತ್ತದೆ.

ಹರ್ಸಿ ಮತ್ತು ಬ್ಲಾಂಚೆರ್ಡ್ ಎರಡು ರೀತಿಯ ನಾಯಕತ್ವ ವರ್ತನೆಗಳನ್ನು ಗುರ್ತಿಸಿದ್ದಾರೆ. ಕಾರ್ಯವರ್ತನೆ (Task Behaviour) ಮತ್ತು ಸಂಬಂಧ ವರ್ತನೆ (Relational Behaviour). ಕಾರ್ಯವರ್ತನೆ ಗುಂಪಿನ ಸಂರಚನೆಗೆ, ಉತ್ಪಾದನೆಗೆ ಸಂಬಂಧಿಸಿದ್ದರೆ, ಸಂಬಂಧ ವರ್ತನೆ ಸದಸ್ಯರ ನಡುವಣ ಸಂಬಂಧಕ್ಕೆ ಪಾರಸ್ಪರಿಗೆ ಸೌಹಾರ್ದಯುತ ವರ್ತನೆಗೆ ಸಂಬಂಧಿಸಿದೆ. ಕಾರ್ಯ ವರ್ತನೆಯಲ್ಲಿ ನಾಯಕ ಸದಸ್ಯರ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಸ್ಪಷ್ಟಪಡಿಸುತ್ತಾನೆ. ಉತ್ಪಾದನೆಯ ಗುರಿಯನ್ನು ಸಾಧಿಸಬಹುದಾದ ಮಟ್ಟವನ್ನು ನಿರ್ಧರಿಸುತ್ತಾನೆ. ಕೆಲಸಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾನೆ. ಸಂಬಂಧ ವರ್ತನೆಯಲ್ಲಿ ನಾಯಕ ಪಾರಸ್ಪರಿಕ ಅನ್ಯೋನ್ಯಕ್ರಿಯೆಗೆ, ಸೌಹಾರ್ದಯುತ ವರ್ತನೆಗೆ, ವರ್ತನೆಯನ್ನು ಸುಗಮಗೊಳಿಸುವಿಕೆಗೆ, ಕೇಳುವಿಕೆಗೆ, ಬೆಂಬಲ ನೀಡುವಿಕೆಗೆ ಮಹತ್ವ ನೀಡುತ್ತಾನೆ.

ಈ ಮಾದರಿಯಲ್ಲಿ ಸಂಬಂಧ ವರ್ತನೆ ಮತ್ತು ಕಾರ್ಯವರ್ತನೆ ಆಯಾಮಗಳೆರಡನ್ನೂ Y ಮತ್ತು X ಅಕ್ಷದ ಮೇಲೆ ಗುರ್ತಿಸಿ ನಾಲ್ಕು ರೀತಿಯ ನಾಯಕತ್ವದ, ಪರಸ್ಪರ ಅನುಕ್ರಿಯೆಯ ನಾಲ್ಕು ಶೈಲಿಗಳನ್ನು ಗುರ್ತಿಸಲಾಗಿದೆ. ಅವುಗಳನ್ನು ಈ ಕೆಳಗಿನ ನಕ್ಷೆಯಲ್ಲಿ ಗುರ್ತಿಸಲಾಗಿದೆ.

6) **ಸಮಾಜ ಮಿತಿ ಮಾದರಿ:** ತರಗತಿಯಲ್ಲಿನ ಅನ್ಯೋನ್ಯಕ್ರಿಯೆಯನ್ನು ವಿಶ್ಲೇಷಿಸಿ ತರಗತಿಯಲ್ಲಿರುವ ಸಾಮಾಜಿಕ ಸಂವೇಗಾತ್ಮಕ ವಾತಾವರಣವನ್ನು (Socio Emotional Climate) ಅಧ್ಯಯನ ಮಾಡಲು ಮೊರೇನೋ ಎಂಬುವವನು ಸಮಾಜ ಮಿತಿ (Socio Metry) ಎಂಬ ತಂತ್ರವನ್ನು ರೂಪಿಸಿದ್ದಾನೆ. ತರಗತಿಯ ಸಾಮಾಜಿಕ ಸಂವೇಗಾತ್ಮಕ ಲಕ್ಷಣವನ್ನು ಕುರಿತ ಅಧ್ಯಯನಗಳಲ್ಲಿ ಈ ತಂತ್ರವನ್ನು ಹೆಚ್ಚು ಬಳಸಲಾಗಿದೆ. ತರಗತಿಯಲ್ಲಿನ ಅನ್ಯೋನ್ಯಕ್ರಿಯಾ ವಿನ್ಯಾಸ ಕಲಿಕೆಯನ್ನು ಪ್ರಭಾವಗೊಳಿಸುತ್ತದೆ ಎಂದು ಮೊರೇನೋ ಅಭಿಪ್ರಾಯ ಪಡುತ್ತಾನೆ. ಅನ್ಯೋನ್ಯಕ್ರಿಯೆಯ ವಿನ್ಯಾಸ ತರಗತಿಯಲ್ಲಿನ ಸಾಮಾಜಿಕ–ಸಂವೇಗಾತ್ಮಕ ವಾತಾವರಣವನ್ನು ಅವಲಂಬಿಸಿರುತ್ತದೆ. ಮೊರೇನೋ ತರಗತಿಯಲ್ಲಿ ಪ್ರಜಾಸತ್ತಾತ್ಮಕ ವಾತಾವರಣದಲ್ಲಿ ಮತ್ತು ಮೌಲ್ಯಗಳಿಗೆ ಮಹತ್ವ ನೀಡಿದ್ದಾನೆ.

ಈ ಮಾದರಿಯಲ್ಲಿ ಮೊರೇನೋ ಗುಂಪಿನ ಸದಸ್ಯರ ನಡುವೆ ಇರಬಹುದಾದ ಸಂಬಂಧಗಳನ್ನು ಉಂಟುಮಾಡುವ ಸಾಮಾಜಿಕ ಸನ್ನಿವೇಶಗಳನ್ನು ಆಧಾರವಾಗಿ ಇಟ್ಟುಕೊಂಡಿದ್ದಾನೆ. ತರಗತಿಯಲ್ಲಿ ಅಕ್ಕ ಪಕ್ಕ ಕುಳಿತುಕೊಳ್ಳುವುದು, ಉಪಹಾರ/ಊಟ ಮಾಡುವುದು, ವಿದ್ಯಾರ್ಥಿನಿಲಯದಲ್ಲಿ ಒಂದೇ ಕೊಠಡಿಯಲ್ಲಿರುವುದು, ಪ್ರವಾಸಕ್ಕೆ ಹೋದಾಗ ಒಟ್ಟಿಗೆ ಇರುವುದು, ಸಹ ಅಧ್ಯಯನ ಮಾಡುವುದು, ಗುಂಪು ಕಾರ್ಯದಲ್ಲಿ ಜೊತೆಗಾರನಾಗಿ ಸ್ವೀಕರಿಸುವುದು, ಒಟ್ಟಿಗೆ ಪ್ರಯೋಗ ಮಾಡುವುದು ಇತ್ಯಾದಿ. ಈ ರೀತಿಯ ಸನ್ನಿವೇಶಗಳಿಗೆ ಉದಾಹರಣೆಗಳಾಗಿವೆ.

Digitised by Bharatavani, CIIL

ಈ ತಂತ್ರದಲ್ಲಿ ಗುಂಪಿನ ಪ್ರತಿ ಸದಸ್ಯನಿಗೆ ಆಯ್ಕೆಮಾಡಿಕೊಂಡ ಸನ್ನಿವೇಶಗಳ ಪಟ್ಟಿಯನ್ನು ಕೊಟ್ಟು, ಪ್ರತಿಯೊಂದು ಸನ್ನಿವೇಶಕ್ಕೆ ಜೊತೆಗಾರನಾಗಿ ತಾನು ಅತ್ಯಂತ ಹೆಚ್ಚು ಇಷ್ಟಪಡುವ ತನ್ನ ಗುಂಪಿನ ಸದಸ್ಯನ ಹೆಸರನ್ನು ಮತ್ತು ಅತ್ಯಂತ ಹೆಚ್ಚು ಇಷ್ಟಪಡುವ ಗುಂಪಿನ ಸದಸ್ಯನ ಹೆಸರನ್ನು ಸೂಚಿಸುವಂತೆ ಹೇಳಲಾಗುತ್ತದೆ. ನಂತರ ಎಲ್ಲಾ ವಿದ್ಯಾರ್ಥಿಗಳ ಪರಸ್ಪರ ಆದ್ಯತೆಗಳನ್ನು ಕ್ರೋಢೀಕರಿಸಿ ಅತಿ ಹೆಚ್ಚು ಆದ್ಯತೆಗಳನ್ನು ಪಡೆದ ವಿದ್ಯಾರ್ಥಿಯನ್ನು/ವಿದ್ಯಾರ್ಥಿಗಳನ್ನು ಕೇಂದ್ರವಾಗಿಟ್ಟುಕೊಂಡು ವಿದ್ಯಾರ್ಥಿಗಳ ನಡುವಣ ಆದ್ಯತೆಗಳನ್ನು ಬಾಣದ ಗುರುತುಗಳ ಮೂಲಕ ನಕ್ಷೆ ರೂಪದಲ್ಲಿ ಚಿತ್ರಿಸಲಾಗುತ್ತದೆ. ಈ ನಡೆಯನ್ನು ಸಮಾಜ ಅಲೇಖ (Sociogram) ಎಂದು ಹೆಸರಿಸಲಾಗಿದೆ. ಸಮಾಜ ಅಲೇಖವನ್ನು ವಿಶ್ಲೇಷಿಸಿ ಇಡೀ ತರಗತಿ ಒಂದು ಸುಸಂಬದ್ಧ ಗುಂಪಾಗಿದೆಯೋ ಅಥವಾ ಎರಡು/ಮೂರು ಉಪಸಮೂಹಗಳಾಗಿ ವಿಭಜಿತವಾಗಿದೆಯೇ ಎಂಬುದನ್ನು ತಿಳಿದುಕೊಂಡು ತರಗತಿಯಲ್ಲಿ ಯಾವ ರೀತಿಯ ಸಾಮಾಜಿಕ–ಸಂವೇಗಾತ್ಮಕ ವಾತಾವರಣವಿದೆ ಎಂಬುದನ್ನು ನಿರ್ಣಯಿಸಬಹುದು. ಈ ಮಾದರಿಯ ಬಗ್ಗೆ ಹೆಚ್ಚಿನ ವಿವರಗಳಿಗೆ ಮೊದಲನೇ ಸಂಪುಟದಲ್ಲಿನ ಸಮಾಜಮಿತಿ ಲೇಖನ ನೋಡಲೇಬೇಕು.

**–ಪ್ರೊ. ಮಂಜುನಾಥಯ್ಯ ಬಿ.ಎನ್.,**
**–ಶರದ್ ಸುರೆ ಮತ್ತು**
**–ಮಂಜು ಎನ್.ಡಿ.**

## ಸಮೂಹ ಕಾರ್ಯ

ಸಮೂಹ ಕಾರ್ಯ ಎಂದರೆ ಎಲ್ಲರೂ ಒಟ್ಟಾಗಿ ಸೇರಿ ಒಂದು ಗುರಿಯನ್ನು ತಲುಪಲು ಕಾರ್ಯವನ್ನು ನಿರ್ವಹಿಸುವುದು. ಆದರೆ ಕೆಲವು ಸಂದರ್ಭದಲ್ಲಿ ನಿಯೋಜಿತ ಕಾರ್ಯವು ಕೆಲವರ/ಸಮೂಹದ ಪ್ರಯತ್ನವಾಗಿರುತ್ತದೆ. ಆದರೆ ಅದರ ಪ್ರಶಂಸೆ ಇಡೀ ಗುಂಪಿಗೆ ದೊರೆಯುತ್ತದೆ. **ಜಾಯ್ ಲಾಂಡ್ಸ್ ಬರ್‌ಜರ್** ಪ್ರಕಾರ– ಸಮೂಹ ಕಾರ್ಯದ ತತ್ವವು ಹಂಚಿಕೊಳ್ಳುವುದು ಅಥವಾ ಕಲಿಕೆಯ ಮೌಲ್ಯ, ಸಂಪನ್ಮೂಲ, ಕೆಲಸ ಮಾಡುವ ರೀತಿಯನ್ನು ಒಳಗೊಂಡಿರುತ್ತದೆ. ಹಾಗೆಯೇ ಪ್ರತಿಯೊಂದು ಗುಂಪು ಅಥವಾ ಪ್ರತಿಯೊಬ್ಬ ಸಮೂಹ ಕಾರ್ಯದ ವಿದ್ಯಾಥಿಯು ಆ ಗುಂಪಿನ ವ್ಯತ್ಯಾಸಗಳನ್ನು ಹಾಗೂ ಭಿನ್ನ ವ್ಯಕ್ತಿತ್ವ ಹಾಗೂ ಭಿನ್ನ ಅಭಿಪ್ರಾಯಗಳನ್ನು ಹೇಗೆ ಸ್ವೀಕರಿಸುತ್ತಾನೆ ಎಂಬುದರ ಮೇಲೆ ವ್ಯಕ್ತಿಯ ಮೇಲೆ ಸಮೂಹ ಕಾರ್ಯದ ಪ್ರಭಾವ ಬೀರುತ್ತದೆ ಅಥವಾ ತಿಳಿಯುತ್ತದೆ.

ಸಮೂಹ ಕಾರ್ಯವು ಕೆಲವೊಮ್ಮೆ ಸಮೂಹ ಕಾರ್ಯದಲ್ಲಿ ಭಾಗವಹಿಸಿದವರ ಭಿನ್ನಭಿನ್ನ ಅಭಿಪ್ರಾಯಗಳನ್ನು ನೀಡುತ್ತದೆ. ಇದರಿಂದ ನಿಯೋಜಿತ ಕಾರ್ಯದ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ ಎಲ್ಲರೂ ಒಟ್ಟಾಗಿ ಕಾರ್ಯವನ್ನು ಮಾಡುವುದರಿಂದ ನಿಯೋಜಿತ ಕಾರ್ಯವು ಉತ್ತಮವಾಗಿ ಹೊರಹೊಮ್ಮಲು ಸಹಾಯವಾಗುತ್ತದೆ.

**ಶಿಕ್ಷಣದಲ್ಲಿ ಸಮೂಹ ಕಾರ್ಯದ ಪಾತ್ರ:**

ಸಮೂಹದ ಲಕ್ಷಣಗಳನ್ನು ತರಗತಿ ಹೊಂದಿರುವುದರಿಂದ ಅದು ಕೂಡ ಒಂದು ಸಮೂಹ. ಶಿಕ್ಷಕ ಈ ಸಮೂಹದ ನಾಯಕ. ತರಗತಿಯಲ್ಲಿನ ವಿದ್ಯಾರ್ಥಿಗಳನ್ನು ಚಿಕ್ಕ ಗುಂಪುಗಳಾಗಿ ವರ್ಗೀಕರಿಸಿ ಅವರಿಗೆ ಕಾರ್ಯವನ್ನು ಕೊಡಲು ಸಹಾಯವಾಗುತ್ತದೆ. ಗುಂಪುಗಳಾಗಿ ವಿದ್ಯಾರ್ಥಿಗಳನ್ನು ವರ್ಗೀಕರಿಸುವುದರ ಮುಖ್ಯವಾದ ಪ್ರಯೋಜನ ಎಂದರೆ ಎಲ್ಲಾ ವಿದ್ಯಾರ್ಥಿಗಳು ಸಹ ತಮಗೆ ನೀಡಿದ ನಿಯೋಜಿತ ಕಾರ್ಯದಲ್ಲಿ ಭಾಗವಹಿಸಬಹುದು. ಹಾಗೆಯೇ ಎಲ್ಲಾ ಸಂದರ್ಭದಲ್ಲಿಯೂ ಕೂಡ ಯೋಚನೆ ಮತ್ತು ಕೆಲಸದಲ್ಲಿ ತೊಡಗಬಹುದು.

ಸಣ್ಣ ಗುಂಪು ಕಾರ್ಯ ಒಬ್ಬರು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳಲು, ಕೌಶಲ್ಯಗಳನ್ನು, ಆಲೋಚನೆಗಳನ್ನು ಹಂಚಿಕೊಳ್ಳಲು, ಪರಸ್ಪರ ಮನಸ್ಸು ಬಿಚ್ಚಿ ಮಾತನಾಡಲು, ತೊಂದರೆಗಳನ್ನು ಬಗೆಹರಿಸಿಕೊಳ್ಳಲು ಮತ್ತು ಕೆಲಸವನ್ನು ಹಂಚಿಕೊಳ್ಳಲು ಪ್ರೇರಣೆಯನ್ನು ನೀಡುತ್ತದೆ.

ಸಮೂಹ ವರ್ತನೆಗೆ ಅನುಕೂಲವಾದ ಎಲ್ಲ ಪರಿಸ್ಥಿತಿಗಳನ್ನು ಶಾಲೆಯು ಒದಗಿಸುತ್ತದೆ. ವಿದ್ಯಾರ್ಥಿಗಳು ಒಟ್ಟಾಗಿ ಕೂಡುತ್ತಾರೆ. ಶೈಕ್ಷಣಿಕ ವಿಷಯಗಳನ್ನು ಕೂಡಿ ಚರ್ಚಿಸುತ್ತಾರೆ. ಮೈದಾನದಲ್ಲಿ ಕೂಡಿ ಆಡುತ್ತಾರೆ. ಸಹಪಠ್ಯ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸುತ್ತಾರೆ. ಸೂಚನೆ, ಅನುಕಂಪ ಮತ್ತು ಅನುಕರಣದ ಮೂಲಕ ಪರಸ್ಪರ ಪ್ರಭಾವಿತರಾಗುತ್ತಾರೆ.

ಸಮೂಹದ ಸದಸ್ಯರು ಪರಸ್ಪರ ಅನ್ಯೋನ್ಯ ಕ್ರಿಯೆಯ ಪರಿಣಾಮವಾಗಿ ಸಂವೇಗಾತ್ಮಕ ಘಟಕವನ್ನು ಒಳಗೊಂಡ ವಾತಾವರಣವೊಂದು ನಿರ್ಮಾಣವಾಗುತ್ತದೆ. ಕೆಲವು ಸಮೂಹಗಳಲ್ಲಿ ಸದಸ್ಯರು ಉತ್ಸಾಹದಿಂದ ಸಹಕರಿಸುತ್ತಾ ಚಟುವಟಿಕೆಗಳಲ್ಲಿ ಮಗ್ನರಾಗಿರುವುದನ್ನು ಕಾಣಬಹುದು.

**ಸಮೂಹ ಕಾರ್ಯದ ತತ್ವಗಳು:**

ಸಮೂಹದ ಗಾತ್ರ ಯಾವುದೇ ಆಗಿರಲಿ. ಸಮೂಹ ಕಾರ್ಯಕ್ಕೆ ಸಮೂಹದ ಕಾರ್ಯದ ತತ್ವಗಳು/ಶರತ್ತುಗಳು ಅನ್ವಯಿಸುತ್ತದೆ. ಸಮೂಹ ಹೇಗೆ ನಡೆಯಬೇಕು ಎಂಬುದನ್ನು ಈ ತತ್ವಗಳು ನಿರ್ಧರಿಸುತ್ತವೆ. ಗುಂಪು ಕಾರ್ಯದಲ್ಲಿ ಪ್ರತಿಯೊಬ್ಬ ವ್ಯಕ್ತಿ ಬೇರೆ ವ್ಯಕ್ತಿಯನ್ನು ಅರಿತುಕೊಳ್ಳುತ್ತಾನೆ ಹಾಗೂ ಅವಶ್ಯಕವಾದ ಸುರಕ್ಷತೆಯನ್ನು ವ್ಯಕ್ತಿ ಅನುಭವಿಸುವುದರಿಂದ ವ್ಯಕ್ತಿಯ ಕಲಿಕೆಯಲ್ಲಿ ಆಸಕ್ತಿ ವಹಿಸುತ್ತಾನೆ.

ಗುಂಪು ಕಾರ್ಯದ ಸಫಲತೆ ಆ ಗುಂಪಿನ ಸದಸ್ಯರ ಮೇಲೆ ಅವಲಂಬಿತವಾಗಿರುತ್ತದೆ.

ಗುಂಪು ಕಾರ್ಯದ ತತ್ವಗಳು ಹೀಗಿವೆ–

– ಒಬ್ಬರು ಇನ್ನೊಬ್ಬರನ್ನು ಅರ್ಥ ಮಾಡಿಕೊಳ್ಳುವುದು.

Digitised by Bharatavani, CIIL

– ಒಬ್ಬರಿಗೊಬ್ಬರು ಸುರಕ್ಷಿತ ಭಾವನೆ ಹೊಂದುವುದು.

– ಪರಸ್ಪರ ಮನಸ್ಸು ಬಿಚ್ಚಿ ಮಾತನಾಡುವುದು.

– ಒಬ್ಬರಿಗೊಬ್ಬರು ಸಹಾಯ ಮಾಡಲು ತಯಾರಿರುವುದು.

– ಆಲೋಚನೆಗಳನ್ನು ಹಂಚಿಕೊಳ್ಳುವುದು ಮತ್ತು ನಿರ್ಧಾರ ತೆಗೆದುಕೊಳ್ಳುವುದರ ನಡುವೆ ಒಳ್ಳೆಯ ಬಾಂಧವ್ಯ ಹೊಂದಿರುವುದು.

– ತೊಂದರೆಗಳನ್ನು ಪರಸ್ಪರ ಮನಸ್ಸು ಬಿಚ್ಚಿ ಹೇಳಿಕೊಳ್ಳುವುದು.

– ಹಾಗೆಯೇ ತೊಂದರೆಗಳನ್ನು ತಮ್ಮಲ್ಲಿಯೇ ನಿವಾರಿಸಿಕೊಳ್ಳುವುದು.

**ಸಮೂಹ ಕಾರ್ಯಕ್ಕೆ ಉದಾಹರಣೆಗಳು**

1. BUZZ ಗುಂಪು (ಚರ್ಚಾ ಗುಂಪು)

- ತರಗತಿಯ ಗಾತ್ರ – ನಿರ್ವಹಿಸಬಲ್ಲಷ್ಟು
- ವೇಳೆ – 3–10 ನಿಮಿಷಗಳು
- ಉದ್ದೇಶ – ಆಲೋಚನೆ ಮತ್ತು ಉತ್ತರಗಳನ್ನು ಪಡೆದುಕೊಳ್ಳಲು, ವಿದ್ಯಾರ್ಥಿಗಳ ಆಸಕ್ತಿಯನ್ನು ಹೆಚ್ಚಿಸಲು, ಅರ್ಥಗ್ರಹಿಕೆಯನ್ನು ತಿಳಿಯಲು.

2. ಆಲೋಚನೆಗಳನ್ನು ಹಂಚಿಕೊಳ್ಳುವ ಗುಂಪು

- ತರಗತಿಯ ಗಾತ್ರ – ನಿರ್ವಹಿಸಬಲ್ಲಷ್ಟು
- ವೇಳೆ–5–10 ನಿಮಿಷಗಳು
- ಉದ್ದೇಶ–ಆಲೋಚನೆಗಳನ್ನು ಬೆಳೆಸಲು, ಉತ್ತರಗಳನ್ನು ಹೇಳುವಲ್ಲಿ ಆತ್ಮಸ್ಥೈರ್ಯವನ್ನು ಬೆಳೆಸಲು, ಚಟುವಟಿಕೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು.

3. ಗುಂಪಿನ ಧ್ವನಿ

- ತರಗತಿಯ ಗಾತ್ರ –ನಿರ್ವಹಿಸಬಲ್ಲಷ್ಟು
- ವೇಳೆ –10–20 ನಿಮಿಷಗಳು
- ವ್ಯವಸ್ಥೆ – ತೆಗೆದು ಇಡಬಹುದಾದಂತಹ ಕುರ್ಚಿಗಳು
- ಉದ್ದೇಶ –ಆಲೋಚನೆಗಳನು ಬೆಳೆಸಲು, ಕೇಳಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಲು, ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಲು, ಸಮನಾದ ಕಲಿಕಾ ಪರಿಸರ.

4. ಪಿರಮಿಡ್‌ಗಳು ಅಥವಾ ಹಿಮಗುಂಪುಗಳು

- ತರಗತಿಯ ಗಾತ್ರ – 12–50 ವಿದ್ಯಾರ್ಥಿಗಳು
- ವೇಳೆ – 15–20 ನಿಮಿಷಗಳು
- ವ್ಯವಸ್ಥೆ – ಕುರ್ಚಿಗಳು
- ಉದ್ದೇಶ – ಉತ್ತಮ ಆಲೋಚನಾ ಸಾಮರ್ಥ್ಯವನ್ನು ವೃದ್ದಿಸಲು, ಚಿಕ್ಕದಾದ ವಿಷಯ, ನಿರ್ಧಾರ ಕೈಗೊಳ್ಳುವ ಕೌಶಲವನ್ನು ಬೆಳೆಸಲು.

**ಸಮೂಹ ಕಾರ್ಯಕ್ಕೆ ಸಿದ್ದತೆ:**

ಶಿಕ್ಷಕರು ತರಗತಿಯಲ್ಲಿ ಗುಂಪು ಕಲಿಕೆಗೆ ಈ ಹಂತಗಳನ್ನು ಪಾಲಿಸಬೇಕು.

1. ಚಟುವಟಿಕೆಯ ಆಯ್ಕೆ
2. ವಸ್ತುಗಳ ಸಿದ್ದತೆ
3. ಗುಂಪಿನ ಆಯ್ಕೆ ಮತ್ತು ಗಾತ್ರ
4. ಗುಂಪಿನಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸುವುದು
5. ಗುಂಪು ಕಾರ್ಯಕ್ಕೆ ಅಗತ್ಯವಾದ ವೇಳೆ
6. ಇಡೀ ತರಗತಿಯನ್ನು ಚಿಕ್ಕ ಗುಂಪುಗಳಾಗಿ ವಿಂಗಡಿಸಿ ಕಾರ್ಯ ನಿರ್ವಹಿಸುವುದು.

**ಸಮೂಹ ಕಾರ್ಯದಲ್ಲಿ ಶಿಕ್ಷಕರ ಪಾತ್ರ:**

ಶಾಲೆಯ ವಾತಾವರಣದಲ್ಲಿ ಶಿಕ್ಷಕನು ಗುಂಪು ಸಂವಾದಗಳಲ್ಲಿ ಸಹಾಯಕನಾಗಿರುತ್ತಾನೆ. ಶಿಕ್ಷಕನು ತನ್ನ ಗುರಿಯತ್ತ ಸಾಗುವಾಗ ಮಕ್ಕಳು ಅವನನ್ನು ಅವಲಂಬಿಸುತ್ತಾರೆ. ಹಾಗೆಯೇ ಅವರು ಬೇರೆ ಮಕ್ಕಳಿಗೆ ಉತ್ತಮ ಮಾದರಿ ಶಿಕ್ಷಕರಾಗಿ ಅವರಿಗೆ ಎಲ್ಲಾ ರೀತಿಯ ಸಹಾಯ ಮಾಡುತ್ತಾರೆ. ವಿದ್ಯಾರ್ಥಿಗಳು 7–11 ವರ್ಷದವರಾದರೆ ಅವರು ವೈಯಕ್ತಿಕ, ಸಾಮಾಜಿಕ, ದೈಹಿಕ ಶಿಕ್ಷಣದ ವಿಷಯದಲ್ಲಿ ಸಮೂಹ ಕಾರ್ಯದಲ್ಲಿ ತಿಳಿದುಕೊಳ್ಳುತ್ತಾರೆ.

ಹಾಗೆಯೇ ಶಿಕ್ಷಕನು –

1. ಶಿಕ್ಷಕನು ತನ್ನಷ್ಟಕ್ಕೆ ತಾನು ಮಾದರಿಯಾಗಿದ್ದರೆ ಶಿಕ್ಷಕ ನಿಜವಾಗಿಯೂ ಪರಿಪಕ್ವವಾಗಿದ್ದರೆ ಜಾಣ್ಮೆಯಿಂದ ವರ್ತಿಸಿದರೆ ಅಥವಾ ಕಪಟಿಯಾದರೆ ಅದು ತನ್ನ ವಿದ್ಯಾರ್ಥಿಗಳ ವರ್ತನೆ ಮೇಲೆ ಪ್ರಭಾವ ಬೀರುತ್ತದೆ. ತಾನು ಮಾಡುತ್ತಿರುವ ಕಾರ್ಯದ ಸರಿಯಾದ ಅರಿವು ತಾನು ತನ್ನನ್ನು ಪಾಠಕ್ಕೆ ಪೂರ್ತಿಯಾಗಿ ತೊಡಗಿಸಿಕೊಂಡರೆ ತಾನು ಪಾಠದಲ್ಲಿ ಉತ್ಸುಕನಾದರೆ ವಿದ್ಯಾರ್ಥಿಯು ಅದನ್ನು ಗಮನಿಸುತ್ತಾನೆ.

Digitised by Bharatavani, CIIL

2. ಮಕ್ಕಳನ್ನು ಇಷ್ಟ ಪಡಬೇಕು, ಅವರ ವಿಚಾರಲಹರಿಯಲ್ಲಿ ಖುಷಿಪಡಬೇಕು ಮತ್ತು ಅವರ ಅಭಿಪ್ರಾಯಕ್ಕೆ ಒತ್ತು ಕೊಡಬೇಕು. ವಿದ್ಯಾರ್ಥಿಯು ತನ್ನ ವೈಯಕ್ತಿಕ ವಿಚಾರಕ್ಕೆ ಮಹತ್ವ ಕೊಡುತ್ತಿದ್ದರೆ ಬುದ್ಧಿವಂತನಾಗಬೇಕು. ಅವನು ವಿದ್ಯಾರ್ಥಿಗಳ ಜೊತೆ ಯಾವುದೇ ವಯಸ್ಸಿನ ವ್ಯತ್ಯಾಸವಿಲ್ಲದೆ ಸಮತೋಲನ ಬಾಂಧವ್ಯದಿಂದ ಇರಬೇಕು. ಯಾವುದೇ ಲಿಂಗತಾರತಮ್ಯವಿರಬಾರದು.

3. ಸಿದ್ಧನಾಗುವುದು, ಅರ್ಥ ಮಾಡಿಕೊಳ್ಳತೊಡಗುವುದು ಇನ್ನೊಬ್ಬರ ಜೊತೆ ಅವರನ್ನು ಅರ್ಥ ಮಾಡಿಕೊಳ್ಳುವ ಆಟದ ಮೂಲಕ ವಿದ್ಯಾರ್ಥಿಗಳಿಗೆ ಉತ್ಸಾಹ ಆಸಕ್ತಿ ತರಬೇಕು.

4. ಗುಂಪು ಒಪ್ಪಿಕೊಂಡ ಒಪ್ಪಂದಗಳಿಗೆ ಬದ್ಧರಾಗಿರಬೇಕು ಹಾಗೂ ಒಪ್ಪಂದಗಳನ್ನು ಪಾಲಿಸುವತ್ತ ಗಮನಹರಿಸಬೇಕು. ಗುಂಪಿನ ಪರವಾಗಿ ಶಿಕ್ಷಕನು ಕೆಲಸ ಮತ್ತು ಗುಂಪಿನ ಅಭಿವೃದ್ಧಿಯತ್ತ ಯೋಚನೆ ಮಾಡಬೇಕು.

5. ಗುಂಪಿನ ಜೊತೆ ಬಹಳ ಸಲಿಗೆಯಾಗಿ ಅಥವಾ ಬಹಳ ಸರ್ವಾಧಿಕಾರಿಯಾಗಿ ವರ್ತಿಸದೆ ಅವರ ಜೊತೆ ಸರಿಯಾದ ರೀತಿ ವರ್ತನೆ ಮಾಡಿದಲ್ಲಿ ಅವರು ತಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ. ಶಿಕ್ಷಕರು ಆಡಳಿತ ಮಾಡುವ ಶಿಕ್ಷಕರಲ್ಲದೆ ವಿದ್ಯಾರ್ಥಿಗಳೇ ಹೇಳುವ ಹಾಗೆ ಅವರು ಬಹಳ ನಮ್ಮಂತೆಯೇ ಇರಬೇಕು.

6. ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧದ ವಿಷಯಗಳಲ್ಲಿ ಸುಲಲಿತವಾದ ಸರಿಯಾದ ಜ್ಞಾನ ಹೊಂದಿದ್ದು ವಿದ್ಯಾರ್ಥಿಗಳಿಗೆ ಸಮೂಹ ಕಾರ್ಯದಲ್ಲಿ ಒಳಗೊಳ್ಳುವಂತೆ ಸಹಾಯ ಮಾಡಬೇಕು. ವಿವಾದಗಳ ಬಗ್ಗೆ ಮಾತನಾಡುವ ಸಾಮರ್ಥ್ಯವು ವಿದ್ಯಾರ್ಥಿಗಳಿಗೆ ಅಲ್ಪಕಾಲದಲ್ಲಿ ಕಷ್ಟವಾದರೂ ದೀರ್ಘಕಾಲದಲ್ಲಿ ಅವರಿಗೆ ಉತ್ತಮ ಪ್ರಯೋಜನವಾಗುತ್ತದೆ. ಇದು ವಿದ್ಯಾರ್ಥಿ–ವಿದ್ಯಾರ್ಥಿಗಳ ಸಂಬಂಧ ಗಟ್ಟಿಗೊಳ್ಳಲು ಉತ್ತಮಗೊಳ್ಳಲು ಗುಂಪಿನಲ್ಲಿ ಸಹಾಯಕವಾಗುತ್ತದೆ.

7. ವಿದ್ಯಾರ್ಥಿಗಳ ಮನವೊಲಿಸುವಂತೆ ಮಾತನಾಡಿ ಅವರ ನಡುವಿನ ಸಂಬಂಧ ಗಟ್ಟಿಗೊಳ್ಳುವಂತೆ ಮಾಡುವುದು ಶಿಕ್ಷಕನ ಕರ್ತವ್ಯ. ವಿದ್ಯಾರ್ಥಿಗಳು ಶಿಕ್ಷಕರನ್ನು ದೊಡ್ಡವರ ಹಾಗೆ ನೋಡಲು ಇಷ್ಟಪಡದೆ ಅವರನ್ನು ವ್ಯಾವಹಾರಿಕ ತಾರತಮ್ಯವಿಲ್ಲದೆ ಸುರಕ್ಷಿತ ಮನೋಭಾವ ಉಂಟುಮಾಡುವ ನಂಬಿಕೆಗೆ ಅರ್ಹನಾದ ಶಿಕ್ಷಕನಾಗಬೇಕು.

–ನರಸಿಂಗಪ್ಪ ಹೆಚ್.ಎನ್.

## ಸಮೂಹ ಮಾಧ್ಯಮಗಳು ಮತ್ತು ಶಿಕ್ಷಣ

ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಮಾಹಿತಿ ಅರಿವಿನಿಂದ ಶಿಕ್ಷಣವನ್ನು ನೀಡುವ ಸಾಧನಗಳಿಗೆ ಸಮೂಹ ಮಾಧ್ಯಮಗಳೆಂದು ಕರೆಯುತ್ತೇವೆ. "ಯಾವುದೇ ಪ್ರಕಾರವಾದ ಸಂದೇಶವನ್ನು ಏಕಕಾಲದಲ್ಲಿ ಜನಸಮೂಹಕ್ಕೆ ತಲುಪಿಸುವ ತಾಂತ್ರಿಕ ಸಾಧನಗಳಿಗೆ ಸಮೂಹ ಮಾಧ್ಯಮಗಳೆಂದು ಕರೆಯುವರು." ಉದಾ; ರೇಡಿಯೋ, ದೂರದರ್ಶನ, ಚಲನಚಿತ್ರ, ಗಣಕಯಂತ್ರ, ವೃತ್ತ ಪತ್ರಿಕೆಗಳು ಇತ್ಯಾದಿ. ಇವೆಲ್ಲವು ಅನೌಪಚಾರಿಕ ಶಿಕ್ಷಣ ನಿಯೋಗಿಗಳು. ಇವು ಕಲಿಯುವ ವ್ಯಕ್ತಿಯ ಮೇಲೆ ತಮ್ಮ ಪ್ರಭಾವವನ್ನು ಬೀರುವವು.

ಸಮೂಹ ಮಾಧ್ಯಮಗಳು ಏಕಮುಖ ಅಂತರ್ ಕ್ರಿಯೆಯನ್ನು ಹೊಂದಿರುವ ಸಂಸ್ಥೆಗಳು. ಇಲ್ಲಿ ಗುರು ಶಿಷ್ಯರ ಸಂಬಂಧ ಇರುವುದಿಲ್ಲ. ಶಿಕ್ಷಣ ಸಂಸ್ಥೆಗೆ ದಾಖಲಾಗ ಬೇಕಿಲ್ಲವಾದ್ದರಿಂದ ಅನೌಪಚಾರಿಕ ಶಿಕ್ಷಣ ಸ್ವರೂಪ ಹೊಂದಿರುತ್ತದೆ. ಮೊದಲು ಸಮೂಹ ಸಂಪರ್ಕ ಮಾಧ್ಯಮಗಳೆಂದು ಕರೆಯಲ್ಪಡುತ್ತಿದ್ದವು, ಈಗ ಸಮೂಹ ಮಾಧ್ಯಮಗಳೆಂದೇ ಕರೆಯಲ್ಪಡುತ್ತಿವೆ.

ಸಮೂಹ ಮಾಧ್ಯಮಗಳು ಜನತೆಗೆ ಸಾಮಾನ್ಯ ಜ್ಞಾನದ ಪರಿಕಲ್ಪನೆ ನೀಡುವುದಲ್ಲದೆ

- ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಬಗೆಗೆ ಜ್ಞಾನ ನೀಡುವುದು.
- ವಿರಾಮ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳಲು ಮನೋರಂಜನೆ ಹಾಗೂ ವೈವಿಧ್ಯಪೂರ್ಣ ಕಾರ್ಯ ಕ್ರಮಗಳನ್ನು ಪ್ರಸಾರ ಮಾಡುವುದು.
- ಅಂತರ ರಾಷ್ಟ್ರೀಯ ಸಮಸ್ಯೆಗಳ ಪರಿಚಯವನ್ನು ಜನತೆಗೆ ಮಾಡಿಕೊಡುವುದರಿಂದ ಅವುಗಳಿಗೆ ಪರಿಹಾರೋಪಾಯಗಳನ್ನು ಹಾಗೂ ಸಲಹೆ ಸೂಚನೆಗಳನ್ನು ನೀಡುವುದು.

ಪ್ರಸ್ತುತ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದ ಯುಗದಲ್ಲಿ ಸಮೂಹ ಮಾಧ್ಯಮಗಳು, ಅನೌಪಚಾರಿಕ ನಿಯೋಗಿಗಳಾಗಿ ವ್ಯಕ್ತಿಯಲ್ಲಿ ಸಾಮಾಜೀಕರಣ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಓದುವ ಮಾಧ್ಯಮಗಳಾಗಿ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಗ್ರಂಥಳಿವೆ. ಕೇಳುವ ಮಾಧ್ಯಮಗಳಾಗಿ ರೇಡಿಯೋವನ್ನು, ನೋಡುವ ಮಾಧ್ಯಮವಾಗಿ ದೂರದರ್ಶನ ಮತ್ತು ಚಲನ ಚಿತ್ರಗಳನ್ನು ಕಾಣುತ್ತೇವೆ.

**ಮುದ್ರಣ ಮಾಧ್ಯಮ:**

**ಅ) ದಿನಪತ್ರಿಕೆ:** ಇದು ಮುದ್ರಣ ಪ್ರತಿಯಾಗಿದ್ದು, ಎಲ್ಲಾ ಭಾಷೆಗಳಲ್ಲಿ ಮುದ್ರಿತವಾಗಿ ಪ್ರಸಾರವಾಗುವ ಸಾಧನವಾಗಿದೆ. ನಾಗರಿಕ ಮಾನವನಲ್ಲಿ ಅತ್ಯುತ್ತಮ ಸಾಮೂಹಿಕ ಮಾಧ್ಯಮವಾಗಿ ಇದು ಕೆಲಸ ನಿರ್ವಹಿಸುತ್ತಿದೆ. ಸಾರ್ವಜನಿಕ ಮತ್ತು ವಿದ್ಯಾರ್ಥಿಗಳ ಅಭಿರುಚಿಗಳಿಗೆ ಉತ್ತಮ ಶಕ್ತಿಯುತ ಮಾಧ್ಯಮವಾಗಿ ಕೆಲಸ ನಿರ್ವಹಿಸುತ್ತಿದೆ. ಇದು ದಿನನಿತ್ಯದ ಪ್ರಚಲಿತ ಘಟನೆಗಳ ಬಗ್ಗೆ ಅರಿವನ್ನು ಮೂಡಿಸುತ್ತದೆ. ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ರೀತಿಯಲ್ಲಿ ಅವರ ಭವಿಷ್ಯವನ್ನು ರೂಪಿಸುವಲ್ಲಿ ನೆರವು ನೀಡುತ್ತದೆ. ವಿದ್ಯಾರ್ಥಿಗಳಿಗೆ ವಿಜ್ಞಾನ, ಸಾಮಾಜಿಕ ಸಮಸ್ಯೆಗಳು, ಕ್ರೀಡೆಗಳು, ಚಿಂತನೆಗಳು ಮುಂತಾದ ಹಲವು ವಿಚಾರಗಳ ಕಡೆಗೆ ಜ್ಞಾನ ಸಂಪತ್ತನ್ನು ಒದಗಿಸಿ

Digitised by Bharatavani, CIIL

ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಒಂದು ಸಾಮಾಜೀಕರಣ ನಿಯೋಗಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

**ನಿಯತಕಾಲಿಕೆಗಳು:** ವಿವಿಧ ನಿಯತಕಾಲಿಕೆಗಳು ವಾರಕ್ಕೊಮ್ಮೆ, ಮಾಸಕ್ಕೊಮ್ಮೆ, ತ್ರೈಮಾಸಿಕ, ಅರ್ಧವಾರ್ಷಿಕ ಸಂಚಿಕೆಗಳು ಮತ್ತು ವರ್ಷಕ್ಕೊಮ್ಮೆ ವಿವಿಧ ಭಾಷೆಗಳಲ್ಲಿ ಮುದ್ರಣಗೊಳ್ಳುತ್ತವೆ. ಇವೆಲ್ಲವೂ ವಿದ್ಯಾರ್ಥಿಗಳಿಗೆ ಅನುಭವಗಳನ್ನು ಒದಗಿಸುವಲ್ಲಿ ನೆರವಾಗುತ್ತವೆ. ಇವುಗಳನ್ನು ಮನೆಗಳಲ್ಲಿ, ಶಾಲೆಗಳಲ್ಲಿ ಮತ್ತು ಗ್ರಂಥಾಲಯಗಳಲ್ಲಿ ಒದಗಿಸಲ್ಪಡುತ್ತವೆ. ಇವು ಉತ್ತಮ ಸಾಮಾಜೀಕರಣ ನಿಯೋಗಿಗಳಾಗಿ ಕಾರ್ಯ ನಿರ್ವಹಿಸುತ್ತವೆ. ಇವು ಪ್ರಸ್ತುತ ಸಾಂಸ್ಕೃತಿಕ ಮತ್ತು ಸಾಮಾಜಿಕ ಶ್ರೀಮಂತಿಕೆಯನ್ನು ಒದಗಿಸುವಲ್ಲಿ ವ್ಯವಸ್ಥಿವಾಗಿ ನೆರವಾಗುತ್ತವೆ. ನಿಯತಕಾಲಿಕೆಗಳಲ್ಲಿ ಮಕ್ಕಳಿಗೋಸ್ಕರ ಕೆಲವು ಲೇಖನಗಳು, ಕಥೆಗಳು, ವಿಚಾರಧಾರೆಗಳು ಇರುತ್ತವೆ.

**ವೃತ್ತ ಪ್ರತಿಕೆಗಳು:** News ಎಂಬ ಆಂಗ್ಲ ಪದವು ನಾಲ್ಕೂ ದಿಕ್ಕುಗಳಿಂದ ಬರುವ ಸುದ್ದಿಗಳನ್ನು ಕಲೆಹಾಕಿ ಅವುಗಳನ್ನು ಜನಸಮುದಾಯಕ್ಕೆ ತಿಳಿಯಪಡಿಸುವ ಕಾರ್ಯವನ್ನು ವೃತ್ತಪತ್ರಿಕೆಗಳು ಮಾಡುತ್ತವೆ ಎಂಬ ಪೂರಕ ಅರ್ಥವನ್ನು ನೀಡುವುದು. ವೃತ್ತಪತ್ರಿಕೆಗಳು ಅನೌಪಚಾರಿಕ ಶಿಕ್ಷಣದ ನಿಯೋಗಗಳು.

"ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಸುದ್ದಿಗಳನ್ನು ಸಂಗ್ರಹಿಸಿ ಅವುಗಳ ಮಹತ್ವಕ್ಕೆ ಅನುಗುಣವಾಗಿ ಅವುಗಳನ್ನು ವರ್ಗೀಕರಿಸಿ ಪ್ರಕಟಿಸುವ ಕಲೆಗೆ ವೃತ್ತಪತ್ರಿಕೆಯೆಂದು ಕರೆಯುವರು." ಪ್ರತಿ ದಿನ ಬೆಳಿಗ್ಗೆ ನಾವು ಎದುರು ನೋಡುವ ಮೊದಲ ವಸ್ತುವೇ ಅದು. ಅದು ಪ್ರಪಂಚದ ಮೂಲೆ ಮೂಲೆಗಳಿಂದಲೂ ಸಮಾಚಾರ ಗಳನ್ನು ತರುತ್ತದೆ. ಯಾವುದೇ ಘಟನೆ ಅಥವಾ ನಡೆದಂತಹ ಪ್ರಮುಖ ವಿಷಯಗಳು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತವೆ. ಪ್ರಪಂಚದ ಪ್ರತಿ ಮೂಲೆಯಲ್ಲಿ ನಡೆಯುವ ಘಟನೆಗಳು, ಮುನ್ನಡೆಗಳು, ಬದಲಾವಣೆಗಳು, ಪ್ರಗತಿಗಳ ಬಗ್ಗೆ ಸಮಾಚಾರ ಪತ್ರಿಕೆಗಳು ಸತತ ಸಂಬಂಧವಿರುವಂತೆ ನಮಗೆ ಸಹಾಯ ಮಾಡುತ್ತವೆ.

ವ್ಯಾಪಾರಿಗಳು, ರಾಜಕಾರಿಣಿಗಳು, ನಿರುದ್ಯೋಗಿಗಳು, ಆಟಗಾರರು, ವಿದ್ಯಾರ್ಥಿಗಳು, ಮಕ್ಕಳು ಇತ್ಯಾದಿಯಾಗಿ ಪ್ರತಿಯೊಬ್ಬರಿಗೂ ಸಮಾಚಾರ ಪತ್ರಿಕೆಗಳು ಮಾಹಿತಿಯನ್ನು ಒದಗಿಸುತ್ತವೆ. ಅವು ನಮ್ಮ ಜ್ಞಾನವನ್ನು ವಿಸ್ತಾರ ಗೊಳಿಸುತ್ತವೆ. ಅವು ವಿಜ್ಞಾನ, ಶಿಕ್ಷಣ, ವೈದ್ಯಕೀಯ ಮತ್ತು ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ನಡೆದ ಎಲ್ಲಾ ಪ್ರಗತಿಗಳ ಅತ್ಯಂತ ಇತ್ತೀಚಿನ ಸಮಾಚಾರಗಳನ್ನು ಒದಗಿಸುತ್ತವೆ. ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳು ಒಂದು ಪ್ರಮುಖ ಆಧಾರದಂತೆ. ಅವು ಸರ್ಕಾರದ ಕಾರ್ಯನೀತಿಗಳ ಬಗ್ಗೆ ಜನರಿಗೆ ಅರಿವನ್ನುಂಟು ಮಾಡುವುದರ ಜೊತೆಗೆ, ಅವರ ಹಕ್ಕುಗಳ ವಿಚಾರವಾಗಿಯೂ ತಿಳಿಸುತ್ತವೆ. ಪ್ರಜೆಗಳ ಆಶೋತ್ತರಗಳ ವಿಷಯಗಳನ್ನು ಸರ್ಕಾರಕ್ಕೆ ವರದಿ ಮಾಡುತ್ತವೆ. ಅವು ಸಾರ್ವಜನಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಒಂದು ಮಾಧ್ಯಮ.

ಮುದ್ರಣ ಯಂತ್ರವು ವೃತ್ತಪತ್ರಿಕೆಗಳು, ವಾರಪತ್ರಿಕೆಗಳು, ಪಾಕ್ಷಿಕ ಮಾಸಪತ್ರಿಕೆಗಳನ್ನು ಪ್ರಕಾಶಪಡಿಸಲು ಸಾಧ್ಯವಾಯಿತು. ಅವುಗಳಲ್ಲಿ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದ ಹಲವು ವಿಷಯಗಳೂ ಇರುತ್ತವೆ. ಪತ್ರಿಕೆಗಳು ಓದುಗರಲ್ಲಿ ಓದುವ ಹವ್ಯಾಸವನ್ನು ಹೆಚ್ಚಿಸುತ್ತದೆ. "ದೇಶ ಸುತ್ತು ಕೋಶ ಓದು" ಎಂಬ ನಾಣ್ಣುಡಿಯಂತೆ ವಿವಿಧ ವಿಷಯಗಳನ್ನು ತಿಳಿಯಲು ದೇಶ ಸುತ್ತಿದರೆ ಎಷ್ಟು ಜ್ಞಾನವನ್ನು ಪಡೆಯಬಹುದೋ ವೃತ್ತಪತ್ರಿಕೆಗಳನ್ನು ಓದುವುದರಿಂದಲೂ ಅಷ್ಟೇ ಜ್ಞಾನವನ್ನು ಪಡೆಯಬಹುದು. ವೃತ್ತಪತ್ರಿಕೆಗಳು ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವಿಷಯಗಳನ್ನು ತಿಳಿಸುತ್ತವೆ. ಅದರಲ್ಲೂ ದಿನಪತ್ರಿಕೆಗಳಲ್ಲಿ ಪ್ರಪಂಚದ ಮೂಲೆ ಮೂಲೆಯಲ್ಲಿ ಜರುಗುವ ಕಾರ್ಯಕ್ರಮಗಳನ್ನು ಬಹು ಬೇಗ ತಿಳಿಯಬಹುದಾಗಿದೆ. ಈ ಪತ್ರಿಕೆಗಳಲ್ಲಿ ವಿಜ್ಞಾನಕ್ಕೆ, ಗಣಿತಕ್ಕೆ, ಕಲೆಗೆ, ಸಂಸ್ಕೃತಿಗೆ, ಭಾಷೆಗೆ, ಕ್ರೀಡೆಗೆ ಹೀಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ತಿಳಿಯಬಹುದು. "ಹತ್ತು ಊರು ಸುತ್ತುವ ಬದಲು ಒಂದು ಪತ್ರಿಕೆ ಓದು" ಎಂಬಂತೆ ಪತ್ರಿಕೆಗಳಿಂದ ವೈವಿಧ್ಯಮಯ ವಿಷಯಗಳನ್ನು ತಿಳಿಯಬಹುದಾಗಿದೆ. ಮೈಕಲ್ ಫ್ಯಾರಡೆ ಶಾಲೆಗೆ ಹೋಗದೆಯೇ ಕೇವಲ ವೃತ್ತಪತ್ರಿಕೆಗಳನ್ನೇ ಓದಿ ಮಹಾನ್ ವಿಜ್ಞಾನಿಯಾದದ್ದನ್ನು ಇಲ್ಲಿ ಸ್ಮರಿಸಬಹುದು. ವೃತ್ತಪತ್ರಿಕೆಯಲ್ಲಿ ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರಿಗೂ ಬೇಕಾದ ಎಲ್ಲ ರೀತಿಯ ಮಾಹಿತಿಗಳು ಇರುತ್ತವೆ. ಆದ್ದರಿಂದ ವೃತ್ತಪತ್ರಿಕೆಗಳು ಶಿಕ್ಷಣದ ಪರೋಕ್ಷ ಮಾಧ್ಯಮ ಎನ್ನಬಹುದು. ವೃತ್ತಪತ್ರಿಕೆಗಳು ವಿರಾಮಕಾಲದ ಸದುಪಯೋಗ ಪಡಿಸಿಕೊಳ್ಳುವಂತೆ ಮಾಡುತ್ತವೆ. ಅನೇಕ ಸಮಸ್ಯೆಗಳ ಹಿನ್ನೆಲೆಯನ್ನು ವೃತ್ತಪತ್ರಿಕೆಗಳು ಕೊಡುವುದಲ್ಲದೆ, ತಜ್ಞರ, ಆಡಳಿತಗಾರರ ಹಾಗೂ ರಾಜಕೀಯ ಮುಖಂಡರುಗಳ ಟೀಕೆ ಟಿಪ್ಪಣಿಗಳನ್ನು ತಿಳಿಸುತ್ತವೆ. ವಿಶೇಷ ಲೇಖನಗಳು ಇದರಲ್ಲಿ ಪ್ರಕಟವಾಗುತ್ತವೆ. ಹೀಗೆ ವೃತ್ತಪತ್ರಿಕೆಗಳು ಸಹ ಶಿಕ್ಷಣದ ಪೂರಕ ಸಹಮಧ್ಯವರ್ತಿಗಳು ಎಂದು ಕರೆದರೆ ತಪ್ಪಾಗಲಾರದು.

ಸುಮಾರು ಮುನ್ನೂರು ವರ್ಷಗಳ ಹಿಂದೆ ಜನರಿಗೆ ವೃತ್ತಪತ್ರಿಕೆಯ ವಿಷಯದಲ್ಲಿ ಏನೊಂದೂ ಗೊತ್ತಿರಲಿಲ್ಲ. ಕೇವಲ ಕರ್ಣಪರಂಪರೆ ಅಥವಾ ಸಂದೇಶವಾಹಕರ ಮಾಧ್ಯಮದಿಂದಲೇ ಸಮಾಚಾರ ಒಬ್ಬರಿಂದೊಬ್ಬರಿಗೆ ತಲುಪುತ್ತಿತ್ತು. ವೃತ್ತಪತ್ರಿಕೆಯ ಪ್ರಾಥಮಿಕ ಹುಟ್ಟು ಆದದ್ದು ಇಟಲಿಯಲ್ಲಿ. 13ನೇ ಶತಮಾನದಲ್ಲಿ ಇಟಲಿಯ ವೆನಿಸ್ ನಗರದಲ್ಲಿ ವೃತ್ತಪತ್ರಿಕೆಯ ಜನನವಾಯಿತು. ಹಾಗೂ ಅಲ್ಲಿಂದೀಚೆಗೆ ಅದರ ಪ್ರಚಾರ ಹೆಚ್ಚಾಯಿತು. ಜನತೆ ವೃತ್ತ ಪತ್ರಿಕೆಯ ಉಪಯೋಗದ ಅನುಭವ ಪಡೆದರು. 17ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲೂ ವೃತ್ತಪತ್ರಿಕೆಯ ಪ್ರಚಾರವಾಯಿತು ; ತದನಂತರದಲ್ಲಿ ದಿನೇ ದಿನೇ ವೃತ್ತಪತ್ರಿಕೆಗಳ ಸಂಖ್ಯೆ ಹೆಚ್ಚತೊಡಗಿತು. 18ನೇ ಶತಮಾನದಲ್ಲಿ ಬ್ರಿಟಿಷರು ಭಾರತಕ್ಕೆ ಪಾದಾರ್ಪಣ ಮಾಡಿದರು. ಜನತೆಗೆ ವಿಷಯ ತಲುಪಿಸಲು ಯಾವುದೇ ಸಂಪರ್ಕಮಾಧ್ಯಮ ಇಲ್ಲದಿರುವುದನ್ನು ಕಂಡು ಅವರು ಭಾರತದಲ್ಲಿಯೂ ವೃತ್ತಪತ್ರಿಕೆಗಳನ್ನು ಆರಂಭಿಸಿದರು. ಕ್ರೈಸ್ತ ಪಾದ್ರಿಗಳು 'ಸಮಾಚಾರ ದರ್ಪಣ' ಎಂಬ ಪತ್ರಿಕೆಯನ್ನು ಆರಂಭಿಸಿ ತಮ್ಮ ಧರ್ಮದ ಪ್ರಚಾರ ಮಾಡತೊಡಗಿದರು. ಆಗ ರಾಜಾರಾಮ ಮೋಹನರಾಯ್ 'ಕೌಮುದಿ' ಎಂಬ ವೃತ್ತಪತ್ರಿಕೆ

Digitised by Bharatavani, CIIL

ಶುರುಮಾಡಿದರು. ಈಶ್ವರಚಂದ್ರ ವಿದ್ಯಾಸಾಗರ್ 'ಪ್ರಭಾತ್' ಎಂಬ ಪತ್ರಿಕೆ ಆರಂಭಿಸಿದರು. ಇದಾದ ನಂತರ ವೃತ್ತಪತ್ರಿಕೆಯ ಸರ್ವಪ್ರಿಯತೆ ಹೆಚ್ಚಾಯಿತು ಮತ್ತು ದೇಶದ ವಿವಿಧ ಭಾಗಗಳಲ್ಲಿ ಭಿನ್ನಭಿನ್ನ ಭಾಷೆಗಳಲ್ಲಿ ವೃತ್ತಪತ್ರಿಕೆಗಳ ಆರಂಭವಾಯಿತು. 19ನೇ ಶತಮಾನದಲ್ಲಿ ರಾಜನೈತಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ವಿಷಯಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿದವು. ಭಾರತದಲ್ಲಿ ಯಂತ್ರ ಯುಗ ಆರಂಭವಾದಂತೆ ವೃತ್ತಪತ್ರಿಕೆಗಳು ವೃದ್ಧಿಯಾಗತೊಡಗಿದವು. ದೊಡ್ಡ ಪತ್ರಿಕೆಗಳು, ಸಣ್ಣ ಪತ್ರಿಕೆಗಳು ಇಂದು ದೇಶದಲ್ಲಿ ಲೆಕ್ಕವಿಲ್ಲದಷ್ಟು ಪ್ರಕಟವಾಗತೊಡಗಿವೆ.

ದೇಶದ ಜನಗಳ ಆರ್ಥಿಕ ಉನ್ನತಿಯಲ್ಲಿ ವೃತ್ತಪತ್ರಿಕೆಗಳು ಹೆಚ್ಚು ಉಪಯುಕ್ತ ಸಹಾಯಕ ಸಾಧನಗಳಾಗಿವೆ. ನಮ್ಮ ಔದ್ಯೋಗಿಕ ಏಳಿಗೆಗೆ ನಾವು ಯಾವುದೇ ಪತ್ರಿಕೆಯಲ್ಲಿ ಸೂಕ್ತ ಪ್ರಕಟಣೆ ಕೊಡಬಹುದು. ಉತ್ಪಾದನೆ ಮಾಡಿದ ವಸ್ತುಗಳ ಬಗ್ಗೆ ಅಗತ್ಯ ಮಾಹಿತಿಯನ್ನು ಗ್ರಾಹಕರ ಎದುರು ಇಡಬಹುದು. ಇದರಿಂದ ಗ್ರಾಹಕರ ಸಂಖ್ಯೆ ಹೆಚ್ಚುತ್ತದೆ ಮತ್ತು ಮನೆಯಲ್ಲಿ ಕುಳಿತಿದ್ದರೂ ಹೊರಗಡೆಯಿಂದ ನಮ್ಮ ವಸ್ತುವಿಗೆ ಬೇಡಿಕೆ ಬರುತ್ತದೆ. ದೊಡ್ಡ ದೊಡ್ಡ ವಿದೇಶಿ ಸಂಸ್ಥೆಗಳು ಈ ಮಾಧ್ಯಮದ ಮುಖೇನ ಬಹಳಷ್ಟು ವ್ಯಾಪಾರ, ವಹಿವಾಟು ನಡೆಸುತ್ತಾರೆ.

ವಿದ್ಯಾವಂತ ನಿರುದ್ಯೋಗಿಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹೀರಾತುಗಳನ್ನು ಹುಡುಕಿ ಅದರಿಂದ ಪ್ರಯೋಜನ ಪಡೆಯುತ್ತಾರೆ. ರಾಜಕೀಯ ಮತ್ತು ಸಾಮಾಜಿಕ ವಿಷಯಗಳಿಗಾಗಿಯೇ ಪತ್ರಿಕೆಗಳಲ್ಲಿ ಸಾಕಷ್ಟು ಪುಟಗಳು ಮೀಸಲಾಗಿರುತ್ತವೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳು, ರಾಜಕೀಯ ಬೆಳವಣಿಗೆಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವ ಪ್ರಮುಖ ವಿಷಯಗಳು. ವೈಜ್ಞಾನಿಕ ಸಂಶೋಧನೆಗಳು, ಸಾಹಿತ್ಯ, ಕಲೆ, ಸಂಸ್ಕೃತಿ, ಕ್ರೀಡೆ ಇವೆಲ್ಲವುಗಳ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗುವುದುಂಟು. ಗ್ರಾಮೀಣ ಪ್ರದೇಶಗಳ ಸಮಾಚಾರ, ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮ ದೈನಂದಿನ ಪತ್ರಿಕೆಗಳಲ್ಲಿ ಪ್ರಕಟವಾಗುವುದರಿಂದ ಓದುಗರಿಗೆ ಹೆಚ್ಚು ಪ್ರಯೋಜನವುಂಟು. ಜನಾಭಿಪ್ರಾಯ ಸಹ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ದಿನಪತ್ರಿಕೆಗಳು ಮಾತ್ರವಲ್ಲದೆ ವಾರ ಪತ್ರಿಕೆಗಳು, ಪಕ್ಷ ಪತ್ರಿಕೆಗಳು ಮತ್ತು ಮಾಸ ಪತ್ರಿಕೆಗಳು ಸಹ ಪ್ರಕಟವಾಗುತ್ತವೆ. ವಾರಪತ್ರಿಕೆಗಳಲ್ಲಿ ಗ್ರಂಥ ವಿಮರ್ಶೆ, ಧಾರಾವಾಹಿ, ಕಥೆ, ಕವಿತೆ ಮುಂತಾದವನ್ನು ಕಾಣಬಹುದು. ಕ್ರೀಡೆ, ಚಲನಚಿತ್ರ, ಷೇರು ಮಾರುಕಟ್ಟೆ ಮುಂತಾದ ಒಂದೊಂದು ವಿಷಯಕ್ಕೂ ಸಂಬಂಧಪಟ್ಟಂತೆ ಪ್ರತ್ಯೇಕ ಪತ್ರಿಕೆಗಳು ಇಂದು ಪ್ರಕಟವಾಗುತ್ತಿವೆ.

**ಪ್ರಕಾರಗಳು:** ವೃತ್ತಪತ್ರಿಕೆಗಳು ಪ್ರಕಟವಾಗುವ ಅವಧಿಗಳು ಹಾಗೂ ವಿಷಯಗಳಿಗೆ ಅನುಗುಣವಾಗಿ ಅವುಗಳನ್ನು ನಿಯತಕಾಲಿಕ ಪತ್ರಿಕೆಗಳು ಹಾಗೂ ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಪತ್ರಿಕೆಗಳೆಂದು ವರ್ಗೀಕರಿಸಲಾಗುವುದು.

**ವಿಷಯ ಸಂಬಂಧಿತ ವೃತ್ತಪತ್ರಿಕೆಗಳು:** ಶೈಕ್ಷಣಿ ಪತ್ರಿಕೆಗಳು, ಮಕ್ಕಳ ಪತ್ರಿಕೆಗಳು, ಸಾಹಿತ್ಯಿಕ ಪತ್ರಿಕೆಗಳು, ಮಹಿಳೆಯರಿಗಾಗಿ ಪತ್ರಿಕೆಗಳು, ಯುವಕರಿಗಾಗಿ ಪತ್ರಿಕೆಗಳು, ಕೈಗಾರಿಕೆ ಪತ್ರಿಕೆಗಳು, ವಾಣಿಜ್ಯ ಪತ್ರಿಕೆಗಳು, ಸೈನಿಕ ಪತ್ರಿಕೆಗಳು, ವೈದ್ಯಕೀಯ ಪತ್ರಿಕೆಗಳು, ಇಂಜಿನಿಯರಿಂಗ್ ಪತ್ರಿಕೆಗಳು ಇತ್ಯಾದಿ.

**ಶೈಕ್ಷಣಿ ಕಾರ್ಯಗಳು:** ಭಾಷೆಗಳನ್ನು ಬಳಸುವ ಅಭ್ಯಾಸಕ್ಕೆ ಬೇಕಾದಂತಹ ಎಲ್ಲ ಭಾಷಾ ಸಂದರ್ಭಗಳೂ ಪತ್ರಿಕೆಗಳಲ್ಲಿ ದೊರಕುವುದರಿಂದ ವೃತ್ತಪತ್ರಿಕೆಗಳು–

- ವಿದ್ಯಾರ್ಥಿಗಳಲ್ಲಿ ಓದುವ ಮತ್ತು ಇತರ ಭಾಷಾ ಹವ್ಯಾಸಗಳನ್ನು ಬೆಳೆಸುವವು.
- ವಿದ್ಯಾರ್ಥಿಗಳಿಗೆ ಸುದ್ದಿ ಸಮಾಚಾರಗಳನ್ನು ನೀಡಿ ಅವರ ವೈಚಾರಿಕ ದೃಷ್ಟಿಕೋನವನ್ನು ವಿಸ್ತೃತಗೊಳಿಸುವವು.
- ಜ್ಞಾನ ಹೆಚ್ಚಿಸಿ ಅವರ ತಿಳುವಳಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವವು.
- ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರಿಗಾಗಿ ಪ್ರತ್ಯೇಕವಾದ ವಿಭಾಗದಲ್ಲಿ ಜ್ಞಾನ ನೀಡುವವು.
- ಇವುಗಳ ಮೂಲಕ ವಿದ್ಯಾರ್ಥಿಗಳು ತಮ್ಮ ರಾಜ್ಯ, ರಾಷ್ಟ್ರದ ಹಾಗೂ ಪ್ರಪಂಚದ ಇತರ ರಾಷ್ಟ್ರಗಳ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಮಾಜಿಕ, ಕೈಗಾರಿಕೆಯ ಮತ್ತು ವೈಜ್ಞಾನಿಕ ಆಗುಹೋಗುಗಳ ಸಮಗ್ರ ಚಿತ್ರವನ್ನು ಅರಿತು ಕೊಳ್ಳಬಹುದು.
- ಅವು ಪಠ್ಯಪುಸ್ತಕಗಳಲ್ಲಿ ನೀಡಿರುವ ಮಾಹಿತಿಗಳು ಹಾಗೂ ಪ್ರಪಂಚದಲ್ಲಿ ಇತ್ತೀಚೆಗೆ ಜರುಗಿದ ಬದಲಾವಣೆಗಳ ನಡುವೆ ಇರುವ ಅಂತರವನ್ನು ತುಂಬಲು ಪ್ರಯತ್ನಿಸುವವು.
- ಅವು ನೀಡಿರುವ ಸಂಪಾದಕೀಯಗಳು, ಶ್ರೇಷ್ಠ ವ್ಯಕ್ತಿಗಳ ಜೀವನ ಚರಿತ್ರೆ ಹಾಗೂ ಅವರ ಸಾಧನೆಗಳು, ಶಿಲ್ಪಕಲೆ, ಐತಿಹಾಸಿಕ ಕಟ್ಟಡಗಳ ವರ್ಣನೆ ಇತ್ಯಾದಿಗಳೆಲ್ಲವೂ ಅವರ ಐತಿಹಾಸಿಕ ಜ್ಞಾನವನ್ನು ವೃದ್ಧಿ ಗೊಳಿಸುವವು.
- ಇಂದು ಅವುಗಳು ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗೆ ಅಗತ್ಯವಾದ ಸಾಮಾನ್ಯ ಜ್ಞಾನ ಹಾಗೂ ವಿಷಯಾಧಾರಿತ ಪ್ರಶ್ನೋತ್ತರ ಮಾಲಿಕೆ ಮುದ್ರಿಸಿ ಬಿತ್ತರಿಸುತ್ತಿವೆ.
- ವಿದ್ಯಾರ್ಥಿಗಳು ಹಾಗೂ ಶೈಕ್ಷಣಿಕ ಕ್ಷೇತ್ರದ ಹಲವಾರು ಸಮಸ್ಯೆಗಳನ್ನು ಅರಿತು ಅವುಗಳಿಗೆ ಪರಿಹಾರೋಪಾಯ ಗಳನ್ನು ಒದಗಿಸುತ್ತಿವೆ. ವಿದ್ಯಾರ್ಥಿಗಳ ಪೋಷಕರಿಗೂ ಮಾರ್ಗದರ್ಶನ ನೀಡುತ್ತವೆ.

ಒಟ್ಟಿನಲ್ಲಿ ವೃತ್ತಪತ್ರಿಕೆಗಳು ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಜ್ಞಾನೋದಯವನ್ನುಂಟು ಮಾಡುವ ಅತ್ಯುಪಯುಕ್ತವಾದ

Digitised by Bharatavani, CIIL

ಸಾಧನಗಳಾಗಿವೆ. ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇವು ಜನಾಭಿಪ್ರಾಯವನ್ನು ನಿರೂಪಿಸುವಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಿವೆ.

**ಚಲನಚಿತ್ರಗಳು:** ಚಲನಚಿತ್ರಗಳು ಮೂಲತಃ ಮನೋರಂಜನಾ ಮಾಧ್ಯಮ. ಇದು ವಾರ್ತಾ ಪತ್ರಿಕೆಗಳ ನಂತರ ಜನ್ಮ ತಾಳಿತು. ಕಲಿಕೆಗೆ ನೇರ ಅನುಭವ ನೀಡಿ ಉತ್ತಮ ಕಲಿಕೆಯ ಫಲವನ್ನೀಯಲು ಚಲನಚಿತ್ರಗಳು ನಿರೀಕ್ಷಿತ ಅನುಭವಗಳಿಗೆ ಸದವಕಾಶ ಮಾಡಿಕೊಡುತ್ತವೆ. ಇವು ಪ್ರೇಕ್ಷಕರ ಅಭಿರುಚಿ, ಮನೋಭಾವನೆಗಳು, ಪ್ರವೃತ್ತಿಗಳನ್ನು ಮಾರ್ಪಡಿಸುವಲ್ಲಿ ಪ್ರಮುಕ ಪಾತ್ರವನ್ನು ವಹಿಸುವವು. ಇವು ಸುಲಭವಾಗಿ ಶಕ್ಯವಾಗದ ಅನೇಕ ಘಟನೆಗಳನ್ನು ಪ್ರದರ್ಶಿಸುತ್ತವೆ. ಜನತೆಯ ಭಾವನೆಗಳನ್ನು ಕೆರಳಿಸುತ್ತವೆ. ಆದಕಾರಣ ಚಲನಚಿತ್ರವು ಮಹತ್ವಪೂರ್ಣವಾದ ಸಮೂಹ ಮಾಧ್ಯಮವಾಗಿದೆ.

ಚಲನಚಿತ್ರಗಳು ವಿರಾಮಕಾಲವನ್ನು ಸದುಪಯೋಗ ಪಡಿಸುವ, ವಿವಿಧ ವಿಷಯಗಳನ್ನು ನೈಜರೀತಿಯಲ್ಲಿ ತೋರಿಸುವ, ಮನೋರಂಜನೆಯನ್ನು ಉಂಟು ಮಾಡುವ, ವಿವಿಧ ವಿಷಯಗಳನ್ನು ಜ್ಞಾನಕ್ಕೆ ತರುವ ಪರೋಕ್ಷ ಶಿಕ್ಷಣ ನೀಡುವ ಜನಪ್ರಿಯ ಸಂಸ್ಥೆ. ಇದು ಒಂದು ರೀತಿಯಲ್ಲಿ ಸರ್ಕಾರಕ್ಕೆ ಆದಾಯವನ್ನು ತರುವಂತಹುದು ಆಗಿದೆ. ಇದು ಯಾವುದೇ ವಯಸ್ಸಿನವರಿಗೆ ಸೀಮಿತವಾಗಿರದೆ, ಮಕ್ಕಳಿಂದ ದೊಡ್ಡವರವರೆಗೆ ಇದರ ಸವಿಯನ್ನು ಸವಿದು ಜ್ಞಾನವನ್ನು ಪಡೆಯುವಂತಹ ಬೃಹತ್ ಸಂಸ್ಥೆಯಾಗಿದೆ. ಚಲನಚಿತ್ರಗಳಲ್ಲಿ ದೃಶ್ಯ ಮತ್ತು ಶ್ರವಣ ಎರಡಕ್ಕೂ ಆದ್ಯತೆ ಇರುವುದರಿಂದ ವಿಷಯಗಳನ್ನು ಬಹು ಸುಲಭವಾಗಿ ಮನನ ಮಾಡಿಕೊಳ್ಳಬಹುದು ಮತ್ತು ಕಲಿತ ವಿಷಯಗಳನ್ನು ಬಹಳ ಕಾಲದವರೆಗೆ ಮನಸ್ಸಿನ ತೆರೆಯ ಮೇಲೆ ಉಳಿಸಿಕೊಳ್ಳಬಹುದು. ಚಲನಚಿತ್ರದಲ್ಲಿ ಒಳ್ಳೆಯದನ್ನು ಕಲಿಯುವಂತೆ ಕೆಟ್ಟದ್ದನ್ನೂ ಕಲಿಯುವ ಪರಿಸ್ಥಿತಿ ಉಂಟಾಗಿದೆ.

ಚಲನಚಿತ್ರವು ಮನೋರಂಜನೆಯ ಮೂಲಕ ಸಮಾಜದ ಜನರಿಗೆ ಶಿಕ್ಷಣವನ್ನು ಕೊಡಬಲ್ಲದು. ಇಲ್ಲಿ ಅನಕ್ಷರಸ್ಥರು, ಅಕ್ಷರಸ್ಥರು ಎಲ್ಲರೂ ಸುಲಭವಾಗಿ ಕಲಿಯಬಹುದು. ಇಲ್ಲಿ ದೃಶ್ಯ ಮತ್ತು ಶ್ರವಣ ಎರಡೂ ಇರುವುದರಿಂದ ಜನ ಸಾಮಾನ್ಯರು ಇದರ ಆಕರ್ಷಣೆಗೆ ಮಾರುಹೋಗುವರು. ಚಲನಚಿತ್ರದ ಸಹಾಯದಿಂದ ಸಾಮಾಜಿಕ ಸಮಸ್ಯೆಗಳನ್ನು ಕಥೆಗಳ ಮೂಲಕ ಜನರಿಗೆ ತಿಳಿಸಬಹುದಾಗಿದೆ. ರಾಷ್ಟ್ರೀಯ ಸಮಸ್ಯೆಗಳನ್ನು ಹೋಗಲಾಡಿಸಬಹುದಾಗಿದೆ. ವಿಜ್ಞಾನದ ಪ್ರಗತಿಯ ಬಗ್ಗೆ ತಿಳಿಸಬಹುದಾಗಿದೆ. ಗತಕಾಲದ ವೈಭವಗಳನ್ನೂ, ಸನ್ನಿವೇಶಗಳನ್ನೂ, ಐತಿಹಾಸಿಕ ಕಥೆಗಳನ್ನೂ, ವೈಜ್ಞಾನಿಕ ಸಂಶೋಧನೆ, ಆರೋಗ್ಯಕರ ಹಾಗೂ ಶಾಲಾ ಪಠ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಜನರಿಗೆ ನೇರವಾಗಿ ಚಲನಚಿತ್ರವು ಮನದಟ್ಟು ಮಾಡುತ್ತದೆ. ಜನಸಾಮಾನ್ಯರು ಅಲ್ಪ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ಪಡೆಯಲು ಇದು ಒಂದು ಮಾಧ್ಯಮವಾಗಿದೆ.

**ಆಕಾಶವಾಣಿ (ಬಾನುಲಿ) (Radio):**

ಭಾರತದಲ್ಲಿ ರೇಡಿಯೋ ಪ್ರಸಾರವು ಪ್ರಾರಂಭವಾದದ್ದು 1927 ರಲ್ಲಿ. 1930 ರಲ್ಲಿ ಭಾರತ ಸರ್ಕಾರ ಭಾರತೀಯ 'ಬಾನುಲಿ ಪ್ರಸಾರದ ಸೇವೆ' ಎಂದು ಕನ್ನಡದಲ್ಲಿ ಪ್ರಾರಂಭಿಸಿತು. 1957 ರಲ್ಲಿ ಆಕಾಶವಾಣಿ ಎಂದು ಪ್ರತ್ಯೇಕ ವಿಭಾಗವನ್ನಾಗಿ ಮಾಡಿಕೊಂಡಿತು. ದೊಡ್ಡ ದೊಡ್ಡ ನಗರಗಳಲ್ಲಿ ಧ್ವನಿ ಪ್ರಸಾರಣಾ ಕೇಂದ್ರಗಳಿರುತ್ತವೆ. ಈ ಕೇಂದ್ರಗಳಲ್ಲಿ ಸಂಗೀತ, ವಾದ್ಯ, ಸಮಾಚಾರ ಮುಂತಾದವುಗಳ ಧ್ವನಿಯನ್ನು ವಿದ್ಯುತ್ ಅಲೆಗಳಾಗಿ ಪರಿವರ್ತಿಸಿ ಧ್ವನಿ ಪ್ರಸಾರಕ ಯಂತ್ರಗಳ ಮೂಲಕ ವಾಯು ಮಂಡಲದಲ್ಲಿ ಹರಡಲಾಗುತ್ತದೆ. ರೇಡಿಯೋ ಗ್ರಾಹಕ ಈ ಕಾಂತೀಯ ತರಂಗಗಳನ್ನು ಸೆರೆಹಿಡಿಯುತ್ತದೆ.

ಆಕಾಶವಾಣಿಯ ಕೇಂದ್ರ ಮೊಟ್ಟ ಮೊದಲು ಇಂಗ್ಲೆಂಡ್‌ನಲ್ಲಿ ಸ್ಥಾಪನೆಯಾಯಿತು. ಇಂಗ್ಲೆಂಡಿನಿಂದ ನ್ಯೂಜಿಲೆಂಡ್‌ವರೆಗೆ ಸಮಾಚಾರ ಕಳುಹಿಸಿ ಅದು ತನ್ನ ಮಹಾನ್ ಆವಿಷ್ಕಾರದ ದಾಖಲೆಯನ್ನು ಇಡೀ ವಿಶ್ವದಲ್ಲೇ ಸಾರಿತು. ಅನಂತರ ಅದು ವಿಕಾಸವಾಗುತ್ತಾ ಹೋಯಿತು. ಇಂದು ನಾವು ನಮ್ಮ ಇಚ್ಛೆಗೆ ಅನುಸಾರವಾಗಿ ಯಾವುದೇ ದೇಶದ ಕಾರ್ಯಕ್ರಮ ಆಲಿಸಬಹುದಾಗಿದೆ. ಆಧುನಿಕ ಆವಿಷ್ಕಾರಗಳಲ್ಲಿ ರೇಡಿಯೋ ಸರ್ವೋಚ್ಚವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಶಾಲಾತರಗತಿ ಕೊಠಡಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಸುದ್ದಿವಾಹಕವಾಗಿದೆ. ಈ ಮೂಲಕ ವಿಶ್ವದ ಎಲ್ಲ ರಾಷ್ಟ್ರಗಳೂ ಪರಸ್ಪರ ನಿಕಟ ಸಂಬಂಧ ಹೊಂದಿವೆ. ಅವು ಪರಸ್ಪರ ಹರ್ಷ ಮತ್ತು ದುಃಖದ ಸಂಗತಿಗಳನ್ನು ಪ್ರಕಟಿಸುತ್ತವೆ. ದೇಶ ವಿದೇಶಗಳಲ್ಲಿನ ಘಟನೆಗಳನ್ನು ನಾವು ಆಕ್ಷಣವೇ ಮನೆಯಲ್ಲಿ ಕುಳಿತು ಕೇಳಬಹುದು. ವ್ಯಾಖ್ಯಾನ ಮತ್ತು ಸಮಾಚಾರ ಮುಂತಾದವುಗಳನ್ನು ರೇಡಿಯೋ ಪ್ರಸಾರ ಮಾಡುತ್ತದೆ. ರೇಡಿಯೋ ಮೂಲಕ ಕ್ಲಿಷ್ಟಕರವಾದ ಸಂಗತಿಗಳನ್ನು ಮನೋರಂಜನೆಯ ಮಾಧ್ಯಮದ ಮುಖೇನ ಜನತೆಗೆ ತಲುಪಿಸಬಹುದು.

ರೇಡಿಯೋ ಶಿಕ್ಷಣ ರಂಗದಲ್ಲಿ ಕೆಲಸ ಮಾಡುವ ಪ್ರಮುಖ ಶ್ರವಣ ಸಾಧನ. ಎಲ್ಲಿಯೋ ಆದಂತಹ, ದೂರದಲ್ಲಿ ಏರ್ಪಡಿಸಿದ ಕಾರ್ಯಕ್ರಮಗಳನ್ನು ಮತ್ತು ನಿರ್ಮಿಸಿದ ಕಮ್ಮಟಗಳನ್ನು, ನಡೆದ ಚರ್ಚಾ ವಿಷಯ ಗಳನ್ನು ಕೇಳಬಹುದು. ನಮ್ಮ ದೇಶದಲ್ಲಿ ದೂರದರ್ಶನ ಮಾಧ್ಯಮ ಪ್ರಸಾರಕ್ಕಿಂತ ರೇಡಿಯೋ ಮೂಲಕ ನಡೆಯುವ ಕಾರ್ಯಕ್ರಮಗಳು ಇಮ್ಮಡಿಸಿವೆ. ಇತ್ತೀಚಿನ ದಿನಗಳಲ್ಲಿ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಶಾಲಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ವಿಷಯ ವಿಚಾರಗಳು, ಚರ್ಚೆಗಳು, ಸಮಸ್ಯೆಗಳು ಮುಂತಾದ ವಿವಿಧ ಬಗೆಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮುನ್ನವೇ ಮುಮ್ಮುಖವಾಗಿ ಸಮಯ ಮತ್ತು ವಿಷಯ ಕಾರ್ಯಕ್ರಮಗಳನ್ನು ತಿಳಿಸಿ ಅನಂತರ ಪ್ರಸಾರ ಮಾಡುತ್ತಾರೆ. ಇದಕ್ಕೆ 'ಬಾನ್‌ದನಿ' ಎಂದು ಹೆಸರು ಇದರಿಂದ ಕೇಳುವವರು ಪೂರ್ವಭಾವಿಯಾಗಿ ತಯಾರಿರಬೇಕೆಂಬುದೇ ಇದರ ಉದ್ದೇಶ. ಇದನ್ನು ಶಿಕ್ಷಕ ಚೆನ್ನಾಗಿ ಅರಿತು ವಿದ್ಯಾರ್ಥಿಗಳಿಗೆ ಮುಖ್ಯವಾದ

Digitised by Bharatavani, CIIL

ಕಾರ್ಯಕ್ರಮಗಳನ್ನು ದಿನಂಪ್ರತಿ ತಿಳಿಸಬೇಕು. ಆಗ ಮಾತ್ರ ಮಕ್ಕಳು ರೇಡಿಯೋ ಕಾರ್ಯಕ್ರಮಗಳನ್ನು ಕೇಳಲು ದಾರಿಯಾಗುತ್ತದೆ. ರೇಡಿಯೋ ಕಾರ್ಯಕ್ರಮಗಳನ್ನು ಕೇಳಲು ಶ್ರವಣಕ್ಕೆ ಹೆಚ್ಚು ಕೆಲಸವಿರುವುದರಿಂದ ಕೇಳಿದ ವಿಷಯಗಳನ್ನು ಕಲ್ಪನೆ ಮತ್ತು ವರ್ಣನೆ ಮಾಡಿಕೊಳ್ಳಬೇಕಾಗುತ್ತದೆ.

ರೇಡಿಯೋ ಕೇವಲ ವಿನೋದಾತ್ಮಕ ಸಾಧನವಾಗಿರದೆ ಅದರಿಂದ ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಕ ವಿಚಾರಗಳೂ ಪ್ರಸಾರವಾಗುವುದರಿಂದ ಮನುಷ್ಯನ ಬೌದ್ಧಿಕ ವಿಕಾಸ ಮತ್ತು ಮಾನಸಿಕ ವಿಕಾಸಕ್ಕೆ ರೇಡಿಯೋ ಮಹತ್ವಪೂರ್ಣ ಸೇವೆ ಸಲ್ಲಿಸುತ್ತಿದೆ ಎನ್ನಬಹುದು. ರೇಡಿಯೋದಿಂದ ಗ್ರಾಮಸ್ಥರಿಗಾಗಿ, ಸಾಹಿತ್ಯಪ್ರಿಯರಿಗಾಗಿ, ಸೈನಿಕರಿಗಾಗಿ, ಮಹಿಳೆಯರಿಗಾಗಿ, ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ದಿನದಲ್ಲಿ ಮೂರ್ನಾಲ್ಕು ಬಾರಿ ದೇಶವಿದೇಶಗಳ ಹಾಗೂ ರಾಜ್ಯದ ವಾರ್ತೆಗಳು ರೇಡಿಯೋ ಮೂಲಕ ಪ್ರಸಾರವಾಗುತ್ತವೆ.

ಕಲಾವಿದರಿಗೆ ಆಕಾಶವಾಣಿಯಿಂದ ಒಳ್ಳೆಯ ಪ್ರೋತ್ಸಾಹ ದೊರೆಯುತ್ತದೆ. ಲಲಿತ ಕಲೆಗಳ ವಿಕಾಸದಲ್ಲಿ ರೇಡಿಯೋ ಮಹತ್ವಪೂರ್ಣ ಸಹಕಾರ ನೀಡುತ್ತಿದೆ. ಭಿನ್ನ ಭಿನ್ನ ಆಸಕ್ತಿಯುಳ್ಳ ಮನುಷ್ಯರು ತಮ್ಮ ಇಷ್ಟಕ್ಕೆ ಅನುಸಾರವಾಗಿ ಕಾರ್ಯಕ್ರಮಗಳನ್ನು ಕೇಳಬಹುದಾಗಿದೆ. ವ್ಯಾಪಾರಸ್ಥರಿಗಾಗಿ ಪೇಟೆ ಧಾರಣೆ, ರೈತರಿಗಾಗಿ ಕೃಷಿ ಸಂಬಂಧ ಅಮೂಲ್ಯ ವಿಚಾರಗಳು, ಹವಾಮಾನ ವರದಿ, ಕುಟುಂಬ ಕಲ್ಯಾಣ ಕುರಿತು ಕಾರ್ಯಕ್ರಮ, ಕುಟುಂಬ ಯೋಜನೆಯ ಬಗ್ಗೆ ಮಾಹಿತಿ ರೇಡಿಯೋ ಮೂಲಕ ಪ್ರಸಾರವಾಗುತ್ತದೆ. ಅಗಾಗ್ಗೆ ಯೋಗ್ಯ ವಿದ್ವಾಂಸರಿಂದ ಅನೇಕ ವಿಷಯಗಳ ಮೇಲೆ ಚರ್ಚೆ ಹಾಗೂ ಉಪನ್ಯಾಸಗಳು ಪ್ರಸಾರವಾಗುತ್ತವೆ. ದೆಹಲಿ, ಬೆಂಗಳೂರು, ಚೆನ್ನೈ, ಲಖನೌ, ಮಥುರಾ, ವಾರಣಾಸಿ, ಕಲ್ಕತ್ತಾ, ಹೈದರಾಬಾದ್, ಮುಂಬಯಿ, ನಾಗಪುರ ಮುಂತಾದ ಪ್ರಮುಖ ನಗರಗಳಲ್ಲಿ ಧ್ವನಿಪ್ರಸಾರಕ ಕೇಂದ್ರಗಳಿವೆ.

ರೇಡಿಯೋ ದ್ವಾರ ವಿದೇಶಗಳ ತಾಜಾ ಸುದ್ದಿ, ವೈಜ್ಞಾನಿಕ ಸಮಾಚಾರ, ಪ್ರಸಿದ್ಧ ಗಾಯಕರ ರಚನೆಗಳು, ಗೀತಕಾರರ ಮಧುರ ಗೀತೆಗಳು, ಕಥೆಗಳು, ನಾಟಕ ಇತ್ಯಾದಿ ಪ್ರಸಾರವಾಗುತ್ತವೆ. ವಿವಿಧ ಕ್ರೀಡೆಗಳ ವೀಕ್ಷಕ ವಿವರಣೆಗಳು ಪ್ರಸಾರವಾಗುತ್ತವೆ. ಟ್ರಾನ್ಸಿಸ್ಟರ್‌ಗಳ ಸಂಶೋಧನೆಯಾದ ನಂತರ ಕಿಸೆಯಲ್ಲಿ ರೇಡಿಯೋ ಒಯ್ದು ಕಾರ್ಯಕ್ರಮಗಳನ್ನು ಕೇಳಲು ಸಾಧ್ಯವಾಗಿದೆ. ಈಗ ದೇಶದಲ್ಲಿ ಹೆಚ್ಚು ಹೆಚ್ಚು ಪ್ರಸಾರ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಮುಖ್ಯ ಪ್ರಸಾರ ಕೇಂದ್ರದೊಂದಿಗೆ ವಾಣಿಜ್ಯ ಪ್ರಸಾರ ಕೇಂದ್ರಗಳೂ ಸಹ ಪ್ರಾರಂಭ ವಾಗಿರುವುದರಿಂದ ರೇಡಿಯೋದ ಜನಪ್ರಿಯತೆ ಹೆಚ್ಚಿದೆ.

ಆಕಾಶವಾಣಿಯು ತ್ರಿವಿಧವಾದ ಕಾರ್ಯವನ್ನು ನಿರ್ವಹಿಸುವುದು. ಅವು ಯಾವುವೆಂದರೆ:

1) ಮನರಂಜನೆಯನ್ನು ಒದಗಿಸುವುದು, 2) ಜನಾಭಿಪ್ರಾಯವನ್ನು ರೂಪಿಸುವುದು, 3) ಶಿಕ್ಷಣ ನೀಡುವುದು.

ಆಕಾಶವಾಣಿಯ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಮೂರು ವಿಧಗಳಿವೆ:

1) **ಶಾಲಾ ಬಾನುಲಿ ಪ್ರಸಾರ ಕಾರ್ಯಕ್ರಮಗಳು** – ಶಾಲಾ ವೇಳೆಯಲ್ಲಿ ಪ್ರಸಾರ ಮಾಡುವಂತಹವು

2) **ಮನೋದಯ ಕಾರ್ಯಕ್ರಮಗಳು** – ಮಕ್ಕಳ ಮನಸ್ಸಿಗೆ ಆಹ್ಲಾದ, ಸಂತೋಷವನ್ನುಂಟು ಮಾಡುವ ಕಾರ್ಯ ಕ್ರಮಗಳು

3) **ಸಾಮಾನ್ಯ ಬಾನುಲಿ ಕಾರ್ಯಕ್ರಮಗಳು** – ಶಾಲೆಯ ವೇಳೆ ತಿಳಿದು ಶಾಲೆಯ ಪಠ್ಯೇತರ ಚಟುವಟಿಕೆಗಳಿಗೆ ಅನ್ವಯಿಸುವ ಬಾನುಲಿ ಕಾರ್ಯಕ್ರಮಗಳು. ಉದಾ: ಪ್ರಮುಖ ವಿಷಯಗಳ ಕುರಿತು ಭಾಷಣ.

ಬಾನುಲಿಯ ಮುಖಾಂತರ ಬಿತ್ತರಿಸುವ ಶೈಕ್ಷಣಿಕ ಕಾರ್ಯಕ್ರಮಗಳು ಶಾಲಾ ಮಕ್ಕಳಿಗೆ ಬಹು ಪ್ರಯೋಜನಕಾರಿಯಗಿವೆ. ಇದು ಅವರಿಗೆ ಜ್ಞಾನವನ್ನು ಒದಗಿಸುವುದರೊಂದಿಗೆ ಅವರ ಶಾಲಾ ಪಾಠಗಳಿಗೆ ಪೂರಕವಾಗಿದೆ. ಆಕಾಶವಾಣಿಯು ಕೇವಲ ಶಾಲಾ ಮಕ್ಕಳಿಗೆ ಅಷ್ಟೇ ಅಲ್ಲದೆ ಅದು ರೈತರಿಗೆ, ಯುವಕರಿಗೆ, ಅನಕ್ಷರಸ್ಥರಿಗೆ ಹಾಗೂ ಮಹಿಳೆಯರಿಗೆ ಸಾಕಷ್ಟು ಶಿಕ್ಷಣವನ್ನು ನೀಡುವ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

### ದೂರದರ್ಶನ (Television)

ದೂರದ ಸಕಲ ದೃಶ್ಯಗಳನ್ನು ನಮ್ಮ ಮುಂದೆ ತೆರೆದಿಡುವ ಅಥವಾ ಪ್ರದರ್ಶಿಸುವುದಕ್ಕೆ ದೂರದರ್ಶನ ಎನ್ನಬಹುದು. ಚಲನಚಿತ್ರ ದೃಶ್ಯಗಳನ್ನು ಅದಕ್ಕೆ ಸಂಬಂಧಿಸಿದ ಧ್ವನಿಯನ್ನು ಒಳಗೊಂಡ ಕಾರ್ಯಕ್ರಮಗಳ ಪ್ರಸಾರ ಮಾಧ್ಯಮವು ದೂರದರ್ಶನವಾಗಿದೆ. ದೂರದರ್ಶನ ಸರ್ವ ಕಾರ್ಯಕ್ರಮಗಳ ಮಾಧ್ಯಮವಾಗಿ ಪ್ರಪಂಚದಲ್ಲಿ ಎಲ್ಲಿಯೇ ನಡೆದರೂ ಅವುಗಳು ಪ್ರತ್ಯಕ್ಷವಾಗಿ ನೋಡುತ್ತಿರುವೆವೋ ಎಂಬಂತೆ ನಮ್ಮ ಮುಂದೆ ತೆರೆದಿಡುತ್ತದೆ. ಅಂದರೆ ಮಕ್ಕಳ ಕಾರ್ಯಕ್ರಮ, ಸಮಾಚಾರಗಳು, ಧಾರಾವಾಹಿ, ರೈತರಿಗೆ ಸಲಹೆ, ಹವಾಮಾನ ವರದಿ, ಚಲನಚಿತ್ರ, ಕ್ರೀಡೆ, ವಿಚಾರವಂತರು, ಸಾಹಿತಿಗಳು, ಸಂಗೀತಗಾರರ ಸಂದರ್ಶನ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಅಗತ್ಯವಾದ ಶೈಕ್ಷಣಿಕ ವಿಚಾರಗಳನ್ನು ದೂರದರ್ಶನ ಪ್ರಸಾರ ಮಾಡುತ್ತದೆ. ಹೀಗೆ ಅಮಿತವಾದ ಘಟನೆಗಳನ್ನು, ವಿಷಯಗಳನ್ನು ದೂರದರ್ಶನದಿಂದ ನೋಡಬಹುದು. ಸಂಪರ್ಕ ಮಾಧ್ಯಮಗಳಲ್ಲಿ ಒಂದಾದ ಟೆಲಿವಿಷನ್ ಮಾನವನಿಗೆ ವಿಜ್ಞಾನವಿತ್ತಿರುವ ಅಮೂಲ್ಯ ಕೊಡುಗೆ. ಟೆಲಿವಿಷನ್ ಮುಖೇನ ಬಹಳ ದೂರದಲ್ಲಿ ಘಟಿಸುವ ದೃಶ್ಯಗಳನ್ನು ಆ ಕ್ಷಣವೇ ನೋಡಬಹುದಾಗಿದೆ. ರೇಡಿಯೋ ಕೇಳಿ ಆನಂದಿಸುವಂತೆ, ದೂರದರ್ಶನದ ಮೂಲಕ ನೋಡಿಯೂ, ಕೇಳಿಯೂ ಆನಂದ ಪಡೆಯಬಹುದು.

1936 ರಲ್ಲಿ ಇಂಗ್ಲೆಂಡ್‌ನ ವಿಜ್ಞಾನಿ ಜಾನ್ ಎಲ್. ಬೇಯರ್ಡ್ ಟೆಲಿವಿಷನ್ ಆವಿಷ್ಕಾರ ಮಾಡಿದ. ಆದರೆ ಭಾರತದಲ್ಲಿ ಟೆಲಿವಿಷನ್ ಪ್ರಸಾರ 1959 ರಲ್ಲಿ ಆಯಿತು. ಇಂದು ಬಹಳಷ್ಟು ಮನೆಗಳಲ್ಲಿ

Digitised by Bharatavani, CIIL

ಟೆಲಿವಿಷನ್ ಇದೆ. ದಿನೇ ದಿನೇ ಟೆಲಿವಿಷನ್ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ.

ಟೆಲಿವಿಷನ್ ಮನೋರಂಜನೆ ಮತ್ತು ಸಾಮೂಹಿಕ ಶಿಕ್ಷಣದ ದೃಷ್ಟಿಯಿಂದ ಸಾಕಷ್ಟು ಮಹತ್ವಪೂರ್ಣವಾಗಿದೆ. ಇದರಲ್ಲೂ ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳ ಸಂಗಮವಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಟೆಲಿವಿಷನ್ ಒಂದು ಕ್ರಾಂತಿಯನ್ನು ಉಂಟುಮಾಡಿದೆ. ಆಸ್ಟ್ರೇಲಿಯಾದಲ್ಲಂತೂ ಟೆಲಿವಿಷನ್ ಶಿಕ್ಷಣ ನೀಡಲು ಮಹತ್ವಪೂರ್ಣ ಮಾಧ್ಯಮವಾಗಿಬಿಟ್ಟಿದೆ. ಬ್ರಿಟನ್‌ನಲ್ಲಿ ಟೆಲಿವಿಷನ್ ಸಹಾಯದಿಂದ ಲಕ್ಷಾಂತರ ವಿದ್ಯಾರ್ಥಿಗಳು ಉಚ್ಚ ಶಿಕ್ಷಣ ಪಡೆಯುತ್ತಿದ್ದಾರೆ. ಕೆಲವು ದೇಶಗಳು ಟೆಲಿವಿಷನ್ ಮೂಲಕ ರೈತರಿಗೆ ಕೃಷಿಗೆ ಸಂಬಂಧಿಸಿದ ಶಿಕ್ಷಣ ನೀಡುತ್ತಿವೆ. ಈ ಸಂದರ್ಭದಲ್ಲಿ ಜಪಾನ್ ದೇಶದ ಕೃಷಿ ಸಂಬಂಧ ಕಾರ್ಯಕ್ರಮ ಉಲ್ಲೇಖನೀಯವಾಗಿದೆ. ವಿಕಾಸಶೀಲ ದೇಶಗಳಲ್ಲಿ ಟೆಲಿವಿಷನ್ ಸಹಾಯದಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶಸ್ತ್ರಚಿಕಿತ್ಸೆಯ ತರಬೇತಿ ನೀಡಲಾಗುತ್ತಿದೆ.

ಸಮುದ್ರ ವಿಜ್ಞಾನ ಕ್ಷೇತ್ರದಲ್ಲಿ ಅನ್ವೇಷಣೆಯ ಕಾರ್ಯವನ್ನು ಟೆಲಿವಿಷನ್ ಸಾಕಷ್ಟು ಸರಳವಾಗಿಸಿದೆ. ಏಕೆಂದರೆ ಟೆಲಿವಿಷನ್ ಕ್ಯಾಮರಾದ ಸಹಾಯದಿಂದ ಸಮುದ್ರ ತಳದ ವಸ್ತುಗಳನ್ನು, ನೀರಿನಲ್ಲಿ ಮುಳುಗಿರುವ ಹಡಗುಗಳ, ಸಮುದ್ರ ವನಸ್ಪತಿಗಳ ವೀಕ್ಷಣೆ ಮಾಡಬಹುದಾಗಿದೆ. ಅಂತರಿಕ್ಷ ಜ್ಞಾನ ಪಡೆದುಕೊಳ್ಳಲು ಸಹ ಮನುಷ್ಯನಿಗೆ ಟೆಲಿವಿಷನ್‌ನಿಂದ ಬಹಳ ಸಹಾಯವಾಗುತ್ತಿದೆ. ಟೆಲಿವಿಷನ್ ಸಹಾಯದಿಂದ ಮನುಷ್ಯ ಬಹು ದೂರದಲ್ಲಿರುವ ಗ್ರಹಗಳ ಪರಿಚಯ ಪಡೆದುಕೊಳ್ಳಬಹುದು. ಅಷ್ಟೇ ಅಲ್ಲದೆ ಕೃತಕ ಉಪಗ್ರಹಗಳನ್ನು ಕಳುಹಿಸುವ ಮತ್ತು ಅವುಗಳ ಮೇಲೆ ನಿಯಂತ್ರಣ ಇಟ್ಟುಕೊಳ್ಳುವ ಕಾರ್ಯವೂ ಟೆಲಿವಿಷನ್ ಸಹಾಯದಿಂದ ಪ್ರಾಪ್ತವಾಗುತ್ತಿದೆ.

ಭಾರತದಲ್ಲಿ ಟೆಲಿವಿಷನ್ ಸಹಾಯದಿಂದ ನಿರಕ್ಷರತೆ ದೂರಮಾಡಮಹ್ಮದೆಂಬ ದೃಷ್ಟಿಯಿಚಿದ ಹೆಚ್ಚು ಸಂಖ್ಯೆಯಲ್ಲಿ ಟೆಲಿವಿಷನ್ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಆದರೆ ಟೆಲಿವಿಷನ್ ಶಿಕ್ಷಣ ಮಾಧ್ಯಮವಾಗುವುದಕ್ಕೆ ಬದಲು ಮನೋರಂಜನೆಯ ಸಾಧನವಾಗಿಬಿಟ್ಟಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾಸಿದ್ಧತೆ ನೋಡಿಕೊಳ್ಳುವ ಕಾರ್ಯಕ್ರಮಗಳನ್ನು ಒದಗಿಸುತ್ತಿವೆ.

**ಕಂಪ್ಯೂಟರ್ (Computer):**

ಶಿಕ್ಷಣ ಕ್ಷೇತ್ರದ ಭವಿಷ್ಯವು ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಎಂಬ ಮಾಯಾಲೋಕದ ಜಾಲದಲ್ಲಿ ಸಿಲುಕಿದೆ. ಇ–ಪ್ರಪಂಚದ ಒಳಹೊಕ್ಕರೆ ಕಲಿಕೆಗೆ ಅಸಾಧ್ಯ ಎಂಬ ಮಾತೇ ಇಲ್ಲ. ಬಹುಮಾಧ್ಯಮ ಕಂಪ್ಯೂಟರ್‌ಗಳು ಕಡಿಮೆ ಬೆಲೆಗೆ ಸಿಗುತ್ತಿರುವುದರಿಂದ ಮನೆಮನೆಯಲ್ಲಿ, ಶಾಲೆ ಶಾಲೆಗಳಲ್ಲಿ ಕಂಪ್ಯೂಟರ್ ಸಾಮ್ರಾಜ್ಯ ವಿಸ್ತರಿಸುತ್ತಿದೆ. ಅದನ್ನು ನಮ್ಮ ಭಾಷಾ ಕಲಿಕೆಗೆ, ಜೊತೆಗೆ ಕಷ್ಟ ಎಂದು ಭಾವಿಸಲಾಗುವ ಗಣಿತ, ವಿಜ್ಞಾನ, ಸಮಾಜವಿಜ್ಞಾನ, ಸಾಮಾನ್ಯ ಜ್ಞಾನ ವಿಷಯಗಳ ಕಲಿಕೆಗೆ ಕೂಡ ಬಳಸಿಕೊಳ್ಳಬಹುದು.

ಅತಿ ಚಿಕ್ಕ ವಿದ್ಯುನ್ಮಾನ ಸರ್ಕ್ಯೂಟ್‌ಗಳಿಂದ ಗಣಕಯಂತ್ರವನ್ನು ತಯಾರಿಸಿರುತ್ತಾರೆ. ಪ್ರತಿ ಗಣಕಯಂತ್ರಕ್ಕೂ ಟೈಪ್‌ರೈಟರ್‌ನಂತೆ ಕೆಲಸ ಮಾಡುವ ಒಂದು ಕೀಬೋರ್ಡ್ ಮತ್ತು ದೂರದರ್ಶನದ ಪರದೆಯ ಮೇಲೆ ನೋಡುವಂತಹ ಒಂದು ಮಾನಿಟರ್ ಇರುತ್ತದೆ. ವಿವಿಧ ಕಾರ್ಯಕ್ರಮಗಳಲ್ಲಿ ಉಪಯೋಗಿಸುವಂತಹ ಅನೇಕ ಸಾಫ್ಟ್‌ವೇರ್‌ಗಳಿರುತ್ತವೆ. ಕೆಲಸಕ್ಕೆ ತಕ್ಕಂತೆ ಗಣಕಯಂತ್ರವು ಮಾಹಿತಿಯನ್ನು ರವಾನಿಸುತ್ತದೆ. ಆಟಗಳು, ಸಾಮಾನ್ಯ ಜ್ಞಾನ ಮತ್ತು ಗ್ರಾಫಿಕ್ಸ್‌ಗಳ ಸಾಫ್ಟ್‌ವೇರ್‌ಗಳು ಮಕ್ಕಳಲ್ಲಿ ಬಹಳ ಜನಪ್ರಿಯ.

ಬಹುಶಃ 20ನೇ ಶತಮಾನದ ಅತ್ಯದ್ಭುತ ಸಂಶೋಧನೆಯೆಂದರೆ ಕಂಪ್ಯೂಟರ್. ಅನೇಕ ಕೆಲಸಗಳನ್ನು ಮಾಡುವ ಗಣಕಯಂತ್ರವು ಒಂದು ವಿದ್ಯುನ್ಮಾನದ ಮೆದುಳು. ಅದು ಅತಿ ವೇಗವಾಗಿ ಲೆಕ್ಕ ಮಾಡುವ ಹಾಗೂ ಮಾಹಿತಿಯನ್ನು ಒದಗಿಸುವ ಒಂದು ಸರ್ವತೋಮುಖ ಸಾಮರ್ಥ್ಯದ ಸಾಧನ. ಹವಾಮಾನ ಮುನ್ಸೂಚನೆ, ಮನೋರಂಜನೆ, ವ್ಯಾಪಾರ–ವ್ಯವಹಾರ, ಮಾರಾಟ, ಯೋಜನೆಗಳು, ನಕ್ಷೆಯ ಮಾದರಿಗಳು, ಶಿಕ್ಷಣ, ಪ್ರಕಾಶನ ಇತ್ಯಾದಿಯಂತಹ ಪ್ರತಿ ಕ್ಷೇತ್ರದಲ್ಲೂ ಅವು ಇತ್ತೀಚೆಗೆ ಉಪಯೋಗಿಸಲ್ಪಡುತ್ತಿವೆ. ಅದನ್ನು ಚಲನಚಿತ್ರಗಳು ಹಾಗೂ ಕಾರ್ಟೂನ್‌ಗಳನ್ನು ತಯಾರಿಸಲು ಬಳಸುತ್ತಾರೆ. ಗಣಕಯಂತ್ರಗಳು ಶಾಲಾ–ಕಾಲೇಜುಗಳು, ಮನೆಗಳು, ಹೋಟೆಲುಗಳು ಹಾಗೂ ಕಛೇರಿಗಳಲ್ಲಿ ಅತ್ಯಾವಶ್ಯವಾಗಿ ಬೇಕಾಗುವಷ್ಟು ಸರ್ವೇಸಾಮನ್ಯವಾಗಿವೆ.

ಗಣಕಯಂತ್ರವು ಇಂದು ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಅವಿಲ್ಲದೆ, ಯಾವ ಕೆಲಸವನ್ನು ಮಾಡಲು ಸಾಧ್ಯವಿಲ್ಲದಂತಾಗಿದೆ. ಅದರರ್ಥ, ಅದರ ಜ್ಞಾನವಿಲ್ಲದೆ ಹೋದರೆ, ಜೀವನವು ಅಪೂರ್ಣವಾದಂತೆ. ಹಾಗಾಗಿ, ಈಗ ಎಲ್ಲಾ ಶಾಲೆಗಳಲ್ಲೂ ಪ್ರಾಥಮಿಕ ಹಂತದಿಂದಲೇ ಅದನ್ನು ಮಕ್ಕಳಿಗೆ ಕಲಿಸಲಾಗುತ್ತದೆ. ಖಂಡಿತವಾಗಿಯೂ ಗಣಕಯಂತ್ರವು ಅಧುನಿಕ ವಿಜ್ಞಾನದ ಒಂದು ವಿಸ್ಮಯ.

ವಿಶ್ವದ ಬೇರೆ ಬೇರೆ ಕಂಪ್ಯೂಟರ್ ಜಾಲಗಳನ್ನು ಜಾಲಾಡುವ ಚಾನಲ್ ಸರ್ಫಿಂಗ್ ಅಥವಾ ನೆಟ್ ಸರ್ಫಿಂಗ್ ಎಂಬ ಹವ್ಯಾಸ ಇತ್ತೀಚೆಗೆ ಹೆಚ್ಚಾಗುತ್ತಿದೆ. ಸಂಶೋಧನೆ, ತಾಂತ್ರಿಕ ಪ್ರಗತಿ ಹಾಗೂ ಶ್ರದ್ಧೆ, ಶೈಕ್ಷಣಿಕ ತಂತ್ರಜ್ಞಾನದ ಎಲ್ಲೆಗಳನ್ನು ಹಿಗ್ಗಿಸುತ್ತಿವೆ. ಕೆಲವೇ ವರ್ಷಗಳ ಕೆಳಗೆ ಕಂಡು ಕೇಳರಿಯದಿದ್ದ ಕಂಪ್ಯೂಟರ್ ಗ್ರಾಫಿಕ್ಸ್‌ನಿಂದ ಹಿಡಿದು ಇಂಟರ್‌ನೆಟ್ ವರೆಗೆ ಎಲ್ಲವೂ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿವೆ. ಬರುವ ವರ್ಷಗಳಲ್ಲಿ ಅಂತರ್ಜಾಲ ಆಧಾರಿತ ಶಿಕ್ಷಣ ಪದ್ಧತಿಯೇ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅಚ್ಚುಮೆಚ್ಚಿನ ಕಲಿಕಾ ಸಾಧನವೂ ಆಗಬಹುದು. ಈಗಾಗಲೇ ವಿಶ್ವದಾದ್ಯಂತ ಹಲವು ವಿದ್ಯುನ್ಮಾನ ಅಂತರ್ಜಾಲ ವಿಶ್ವವಿದ್ಯಾನಿಲಯಗಳು (e-university) ಆರಂಭವಾಗಿದ್ದು ಮನೆಯಲ್ಲಿ ಕುಳಿತೇ ಉನ್ನತ ಶಿಕ್ಷಣ, ಮಾಹಿತಿ, ಪದವಿ, ಸಂಶೋಧನೆ, ಡಾಕ್ಟರೇಟ್ ಎಲ್ಲವನ್ನೂ

Digitised by Bharatavani, CIIL

ಪಡೆಯಬಹುದು. ಇದನ್ನು Web + Education = Webucation ಎಂದು ಕರೆಯಲಾಗುತ್ತಿದೆ.

ಇನ್ನು ಶಿಕ್ಷಣ ಕ್ಷೇತ್ರದ ವಿಶೇಷ ಗ್ರಂಥ-ಮಾಹಿತಿ-ತಂತ್ರಜ್ಞಾನ ವಿನಿಮಯಕ್ಕಾಗಿ ERNET, INLFLIBNET ಮತ್ತು ಗಿಖಆಜಂಓಇಖ ಜಾಲಗಳಿವೆ. 2006 ರ ಅಕ್ಟೋಬರ್ 30 ರಂದು ರಾಷ್ಟ್ರಪತಿ ಡಾ॥ ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಉದ್ಘಾಟಿಸಿದ www.sakshat.ac.in, http://sakshat.gov.in ತಾಣಗಳು ಶಿಕ್ಷಣ-ಮಾಹಿತಿ-ಸಂಶೋಧನೆಗಾಗಿಯೇ ಮೀಸಲಾಗಿರುವ ವಿಶೇಷ ಜಾಲ ತಾಣವಾಗಿವೆ.

**ಬಹುಮಾಧ್ಯಮ (Multimedia):**

ವಿದ್ಯಾಭ್ಯಾಸ ಕ್ಷೇತಕ್ಕೆ ಸಹಾಯಕವಾಗುವ ಹೆಚ್ಚು ಶಕ್ತಿಶಾಲಿ ಸಲಕರಣೆಗಳಲ್ಲಿ ಮಲ್ಟಿಮೀಡಿಯ ಅತ್ಯಂತ ಪ್ರಮುಖವಾದುದು. ಅದರ ಇ-ಶಕ್ತಿಯ ಜೊತೆಗೆ ಮನೋರಂಜನೆಯಲ್ಲಿ ಅತ್ಯಂತ ಹೆಚ್ಚು ಸಾಮರ್ಥ್ಯದ ಸಲಕರಣೆಯಾಗಿದೆ. ಇದಕ್ಕೆ ಎರಡು ವಿಧದ ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ ಅದರ ಹೆಸರೇ ತಿಳಿಸುವಂತೆ ಮಲ್ಟಿಮೀಡಿಯಾವು ವಿವಿಧ ಬಗೆಯ/ಅನೇಕ ವಿಧದ ಮಾಧ್ಯಮಗಳನ್ನು ಒಟ್ಟಿಗೆ ಸೇರಿಸುತ್ತದೆ. ಇದರಲ್ಲಿ ಪಠ್ಯ ವಿವರ (ಟೆಕ್ಸ್ಟ್), ಚಿತ್ರಗಳು, ಅನುಕರಣಾ ಚಲನೆ (ಅನಿಮೇಷನ್), ಶಬ್ದವಿವರಣೆ (ನರೇಷನ್), ದೃಶ್ಯಚಲನೆ (ವೀಡಿಯೋ) ಮತ್ತು ಸಂಗೀತ ಮಿಳಿತವಾಗಿದೆ. ಎರಡನೆಯದಾಗಿ ಅದು ಸಂವಾದ ಕ್ರಿಯೆಯ ರೀತಿಯದು (ಇಂಟರ್‌ಆಕ್ಟಿವ್). ಬಳಕೆದಾರನು ಮಾಹಿತಿಯನ್ನು ಪುಸ್ತಕ ಓದುವಾಗ ಅಥವಾ ಟಿ.ವಿ. ನೋಡುವಾಗ ಸ್ವೀಕರಿಸುವಂತೆ ಇರದೆ, ಈ ಮಾಹಿತಿಯನ್ನು ನಿಯಂತ್ರಿಸುತ್ತಾನೆ. ವಿವಿಧ ಹೆದ್ದಾರಿಗಳಲ್ಲಿ ಯಾವುದು ಸರಿ ಎನ್ನುವುದನ್ನು ತೀರ್ಮಾನಿಸುತ್ತಾನೆ. ಮುಂದಕ್ಕೆ, ಹಿಂದಕ್ಕೆ ಅಥವಾ ಒಂದರಿಂದ ಮತ್ತೊಂದಕ್ಕೆ ತನ್ನ ಇಚ್ಛೆಗೆ ಅನುಗುಣವಾಗಿ ಮಾಹಿತಿ ಹುಡುಕಿ ಹೋಗಲು ಸಾಧ್ಯವಿದೆ. ಈ ಮಾಹಿತಿಯನ್ನು ನಿಯಂತ್ರಿಸಬಹುದು, ಗ್ರಹಿಸಬಹುದು ಮತ್ತು ತನಗೆ ಅನುಕೂಲಕರ ರೀತಿಯಲ್ಲಿ ಪರಸ್ಪರ ಹೋಲಿಸಿ ನೋಡಬಹುದು. ಬಹುಮಾಧ್ಯಮ ವಾಣಿಜ್ಯ ವಿಭಾಗದ ಜಗತ್ತಿನಲ್ಲಿ ಪ್ರಮುಖ ಸಲಕರಣೆಯಾಗಿ ಮಾರ್ಪಟ್ಟಿದ್ದು, ಪ್ರತಿಯೊಬ್ಬ ಉದ್ಯೋಗಿಯ ಗ್ರಹಣ ಸಾಮರ್ಥ್ಯ ಮತ್ತು ಕಲಿಕೆಯ ವೇಗಕ್ಕೆ ಹೊಂದಿಕೊಂಡು ತರಬೇತಿ ಒದಗಿಸಲು ನೆರವಾಗುವುದು. ಇದು ನಮ್ಮ ದಿನನಿತ್ಯದ ಜೀವನದ ವಿಧಾನಗಳಲ್ಲಿ ಬದಲಾವಣೆಗಳನ್ನು ತರಲು ಮನೆ ಹಾಗೂ ಕಾರ್ಯಕ್ಷೇತ್ರಗಳೆರಡೂ ಕಡೆ ತನ್ನ ಪಾಲಿನ ಕಾಣಿಕೆಯನ್ನು ಒದಗಿಸಬಲ್ಲದು.

ಬಹು ಕಾಲದಿಂದ ಮಲ್ಟಮೀಡಿಯ ನಮ್ಮ ಜೀವನದ ಅಂಗವಾಗಿದೆ. ದೂರದರ್ಶನದಲ್ಲಿ, ಚಲನ ಚಿತ್ರಗಳಲ್ಲಿ ಮತ್ತು ಜಾಹೀರಾತುಗಳಲ್ಲಿ ನಾವು ನೋಡುವ ಅನಿಮೇಷನ್ ಮತ್ತು ಗ್ರಾಫಿಕ್‌ಗಳು ಮಲ್ಟಿಮೀಡಿಯಾಗೆ ಉದಾಹರಣೆಗಳು. ಮಲ್ಟಿಮೀಡಿಯ ಎಂಬ ಪದವನ್ನು, ಕಂಪ್ಯೂಟಿಂಗ್ ತಂತ್ರಜ್ಞಾನದೊಂದಿಗೆ ಶಬ್ದ, ಅನಿಮೇಷನ್, ಚಿತ್ರಗಳು, ವಿಡಿಯೋ ಮತ್ತು ಪಠ್ಯದ ಏಕೀಕರಣ ಎಂದು ನಿರೂಪಿಸಬಹುದು. ಮಲ್ಟಿಮೀಡಿಯ ತಂತ್ರಜ್ಞಾನವನ್ನು, ಕಂಪ್ಯೂಟರ್ ಮತ್ತು ಬಳಕೆದಾರರ ನಡುವೆ ಸಂವಹನ ಅಥವಾ ಸಂಪರ್ಕ ವೃದ್ಧಿಸುವ ಪ್ರಯತ್ನ ಎಂದು ಕೂಡ ಪರಿಗಣಿಸಬಹುದು.

**ಶಿಕ್ಷಣದಲ್ಲಿ ಮಲ್ಟಿಮೀಡಿಯ:** ಮಾಹಿತಿ ತಂತ್ರಜ್ಞಾನದ ಉದ್ಯಮವು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆಗಳನ್ನು ತಂದಿದೆ. ಈ ಬೆಳವಣಿಗೆಗಳ ಒಂದು ಅತಿ ಸ್ವಾರಸ್ಯವೆಂದರೆ ಕಂಪ್ಯೂಟರ್ ಆಧಾರಿತ ತರಬೇತಿ ಕಾರ್ಯಕ್ರಮಗಳ ಹೊರಹೊಮ್ಮುವಿಕೆ. ಈ ತರಬೇತಿ ಕಾರ್ಯಕ್ರಮಗಳು ಜನಪ್ರಿಯತೆ ಪಡೆಯಲು ಮಲ್ಟಿಮೀಡಿಯ ಬಳಕೆಯು ಕಾರಣವಾಗಿದೆ. ಈ ಕೆಳಗಿನ ಕಾರಣಗಳಿಗಾಗಿ ಮಲ್ಟಿಮೀಡಿಯಾ ಇ-ಪ್ರೋಗ್ರಾಂಗಳನ್ನು, ವಿದ್ಯಾರ್ಥಿಯ ಕಲಿಕೆ ಪ್ರಕ್ರಿಯೆಗಳನ್ನು ವೃದ್ಧಿಸುವ ಬಲಶಾಲಿ ಸಾಧನ ಎಂದು ಪರಿಗಣಿಸಲಾಗಿದೆ-

ಮಲ್ಟಿಮೀಡಿಯ ಪ್ರೋಗ್ರಾಂಗಳು ಸಂವಹನಕಾರಿ. ಈ ಗುಣವು ವಿದ್ಯಾರ್ಥಿಗಳು ವಿಷಯಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಹಾಗೂ ಉತ್ತಮ ಗ್ರಹಣಶಕ್ತಿ, ದೀರ್ಘ ಧಾರಣ ಶಕ್ತಿ ಮತ್ತು ವೇಗದ ಸ್ಮರಣ ಶಕ್ತಿಯ ಭರವಸೆಯನ್ನು ನೀಡುತ್ತದೆ.

ಕಷ್ಟಕರ ವಿಷಯಗಳನ್ನು ಬಳಕೆದಾರನಿಗೆ ಹಿತವಾದ ರೀತಿಯಲ್ಲಿ ಕಲಿಸಲು ಮಲ್ಟಿಮೀಡಿಯ ಪ್ರೋಗ್ರಾಂಗಳನ್ನು ಬಳಸುತ್ತಾರೆ. ಮಾನವನ ಉಸಿರಾಟ ವ್ಯೂಹ ಮತ್ತು ಹೃದಯ ಪರಿಚಲನಾ ವ್ಯೂಹದಂತಹ ವಿಷಯಗಳನ್ನು ಮಲ್ಟಿಮೀಡಿಯ ಪ್ರೋಗ್ರಾಂ ಬಳಸಿ ಹೆಚ್ಚು ಪರಿಣಾಮಕರಿಯಾಗಿ ಹೇಳಿಕೊಡಬಹುದು.

ವಿದ್ಯಾರ್ಥಿಗಳು, ಕಲಿಕಾ ಕಾರ್ಯಕ್ರಮ ಒಳಗೊಂಡ ವಿಷಯಗಳ ಕುರಿತು ತಮ್ಮ ತಿಳಿವಳಿಕೆಯ ಸ್ವವಿಮರ್ಶೆ ಕೈಗೊಳ್ಳಲು ಅನುವಾಗುವಂತೆ ಮಲ್ಟಿಮೀಡಿಯ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಬಹುದು. ಇದಕ್ಕೆ ಪೂರಕವಾಗಿ, ವಿದ್ಯಾರ್ಥಿಗಳು ತತ್‌ಕ್ಷಣದ ಪ್ರತ್ಯುತ್ತರ ಪಡೆಯಲು ಮತ್ತು ತಮ್ಮ ಪ್ರಗತಿಯನ್ನು ತಾವೇ ಉಪದೇಶಿಸಲು ಅವಕಾಶ ನೀಡುವ ಮೂಲಕ ಅವರನ್ನು ಕಲಿಕೆ ಪ್ರಕ್ರಿಯೆಯಲ್ಲಿ ತೊಡಗಿಸಲು ಮಲ್ಟಿಮೀಡಿಯ ಸಹಾಯ ಮಾಡುತ್ತದೆ.

ಮಲ್ಟಿಮೀಡಿಯ ತರಬೇತಿ ಕಾರ್ಯಕ್ರಮಗಳು, ವಿದ್ಯಾರ್ಥಿಗಳು ತಮ್ಮದೇ ಆದ ಗತಿಯಲ್ಲಿ ವಿಷಯಗಳನ್ನು ಕಲಿಯಲು ಶಕ್ತಗೊಳಿಸುತ್ತವೆ. ತಮಗೆ ಅರ್ಥವಾಗಿದೆ ಎಂದು ವಿಶ್ವಾಸ ಮೂಡುವವರೆಗೂ ವಿದ್ಯಾರ್ಥಿಗಳು ವಿಷಯವನ್ನು ಒಂದೇ ಸೆಶನ್ ಅಥವಾ ಪದೇ ಪದೇ ಓದಬಹುದು.

**ಬಹುಮಾಧ್ಯಮಗಳ ಉಪಯೋಗಗಳು:** ಬಹುಮಾಧ್ಯಮಗಳನ್ನು ಅನೇಕ ಕ್ಷೇತ್ರಗಳಲ್ಲೂ ಎಲ್ಲಾ ಹಂತಗಳಲ್ಲಿ ಉಪಯೋಗಿಸಬಹುದು. ಉದಾ:

Digitised by Bharatavani, CIIL

- ವ್ಯವಹಾರ: ತರಬೇತಿ, ಮಾರುಕಟ್ಟೆ, ಸಂವಹನ
- ಶಾಲಾ ಮತ್ತು ವಿಶ್ವವಿದ್ಯಾನಿಲಯಗಳು: ಶೈಕ್ಷಣಿಕ ತಂತ್ರಾಂಶಗಳು
- ಮನೆ: ಶಿಕ್ಷಣ, ಪರಿಸರ, ಖರೀದಿ, ಬ್ಯಾಂಕ್ ವ್ಯವಹಾರ
- ಸಾರ್ವಜನಿಕ ಸ್ಥಳಗಳು: ಐತಿಹಾಸಿಕ ಸ್ಥಳಗಳು, ಸಾರಿಗೆ, ಆಸ್ಪತ್ರೆ, ಬ್ಯಾಂಕ್ ಇತ್ಯಾದಿ.

ಬಹುಮಾಧ್ಯಮಗಳ ಬಳಕೆಯಿಂದ ವಿದ್ಯಾರ್ಥಿಗಳಲ್ಲಿ ಬೋಧನೆಯ ಬಗ್ಗೆ ಆಸಕ್ತಿ ಮೂಡಿಸುತ್ತದೆ. ಉದಾ: ಪ್ರಕ್ಷೇಪಿತ ಬೋಧನೋಪಕರಣಗಳು, ಉಪಗ್ರಹ ಆಧಾರಿತ ಬೋಧನೆ, slide ಗಳ ಮೂಲಕ ತೋರಿಸುವ ಚಿತ್ರ, OHP, ಚಲನಚಿತ್ರ ಪಟ್ಟಿಕೆಗಳು, CD, DVD, Projector ಮೂಲಕ ವಿದ್ಯಾರ್ಥಿಗಳಿಗೆ ಮಾಹಿತಿಗಳು ಮನಸ್ಸಿನಲ್ಲಿ ಮನದಟ್ಟು ಮಾಡಲು ಸಹಕರಿಸುತ್ತದೆ. ವಿದ್ಯುನ್ಮಾನ ಬೋಧನೋಪಕರಣಗಳು ಕೂಡ ಮಕ್ಕಳಿಗೆ ಬೋಧನೆಯಲ್ಲಿ ಅಭಿಪ್ರೇರಣೆಯನ್ನು ಮೂಡಿಸುತ್ತದೆ. ಉದಾ: ರೇಡಿಯೋ ಮೂಲಕ ನಾಟಕವನ್ನು ಕೇಳಿಸುವುದು. Tape recorder ಮೂಲಕ ಕಥೆಗಳನ್ನು ಕೇಳಿಸುವುದು. TV, Computer ಜಾಲ, ಭಾಷಾಪ್ರಯೋಗಶಾಲೆ, e-mail, e-book ಇವುಗಳ ಮೂಲಕ ಬೋಧನೆಯನ್ನು ಕೈಗೊಳ್ಳಬಹುದು.

ಬಹುಮಾಧ್ಯಮಗಳನ್ನು ಬಳಸುವುದರಿಂದ ಮಕ್ಕಳಲ್ಲಿ ವಿಷಯದ ಗ್ರಹಿಕೆ, ಸಾಮರ್ಥ್ಯ, ಐತಿಹಾಸಿಕ ಪ್ರಜ್ಞೆ, ರಾಷ್ಟ್ರೀಯ ಮನೋಭಾವ, ವಿಷಯ ವಸ್ತುವಿನ ಪರಿಕಲ್ಪನೆ, ದೃಷ್ಟಾಂತಗಳ ನೆನಪು, ಇಂದಿನ ಮತ್ತು ಭವಿಷ್ಯತ್ತಿನ ಚಿಂತನೆ, ಪ್ರಚಲಿತ ಘಟನೆಗಳ ವಿಮರ್ಶಾತ್ಮಕ ಮನೋಭಾವನೆಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ, ಇವುಗಳನ್ನು ಬೋಧಿಸುವಾಗ ಬಳಸುವ ಹಾಗೂ ಬಳಸಿದ ಮಾಧ್ಯಮಗಳ ತಂತ್ರಜ್ಞಾನದ ಉಪಯೋಗಗಳನ್ನು, ಅವುಗಳ ಮಹತ್ವವನ್ನು ತಿಳಿಯಲು ಇದು ತುಂಬ ಸಹಕಾರಿಯಾದುದ್ದಾಗಿದೆ.

ಇಲ್ಲಿ ಸ್ವ-ಕಲಿಕೆ ವಾತಾವರಣವನ್ನು ನಿರ್ಮಿಸುವಲ್ಲಿ ಹೆಚ್ಚು ಒತ್ತು ಕೊಡುತ್ತದೆ. ಹಾಗೆಯೇ ವಿದ್ಯಾರ್ಥಿಗಳು ವಿಪುಲವಾಗಿ ಮಾರ್ಗದರ್ಶನ ಪಡೆಯುತ್ತಾರೆ. ಪ್ರತಿಷ್ಠಿತ ಫೋರ್ಡ್‌ವಾಹನ ಕಂಪನಿಯವರು ತಮ್ಮ ಉದ್ಯೋಗಿಗಳಿಗೆ ಅತ್ಯುನ್ನತ ಯಂತ್ರಗಳನ್ನು ಮತ್ತು ಸಾಧನಗಳನ್ನು ರಿಪೇರಿಗೊಳಿಸಲು ಐ.ಬಿ.ಎಂ ಬಹುಮಾಧ್ಯಮ ಪದ್ಧತಿಯನ್ನು ಅಳವಡಿಸಿದ್ದಾರೆ. ಹಾಗೆಯೇ ಉದ್ಯೋಗಿಗಳ ಸಮಯ ಮತ್ತು ಹಣ ಉಳಿಸಲು ಪರಿಣಾಮಕಾರಿಯಾದ ಬಹುಮಾಧ್ಯಮ ಬೋಧನೆಯನ್ನು ಅವರು ಹುಡುಕಿದ್ದಾರೆ.

- ಸುಲಭವಾಗಿ ಕಲಿಯಲು ಮತ್ತು ನಿರ್ವಹಿಸಲು
- ಸಮಯದ ಅಪವ್ಯಯ ಇಲ್ಲ
- ಪರಿಪೂರ್ಣವಾಗಿ ನಕ್ಷೆಗಳನ್ನು ಮತ್ತು ರೇಖಾ ನಕ್ಷೆಗಳನ್ನು ಪುನರಾವರ್ತಿಸಲು
- ತ್ವರಿತವಾಗಿ ಅರ್ಥವಾಗುವಂತೆ ನಕ್ಷೆಗಳಲ್ಲಿ ಚಲನೆಯನ್ನುಂಟು ಮಾಡುವುದು

ಬಹುಮಾಧ್ಯಮ ಸಂಗ್ರಹ ಮತ್ತು ಪರಿಹಾರ ಪದ್ಧತಿ ಅತಿ ಹೆಚ್ಚು ಮಾಹಿತಿ ಹೊಂದಿದ್ದು ಯಾವುದೇ ಮಾನವ ಬೋಧನೆ ಮಾಡಬಹುದಾದಂತೆ ಕೆಲಸ ಮಾಡಬಲ್ಲದು ಮತ್ತು ವಿಭಿನ್ನ ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ಒದಗಿಸಬಲ್ಲದು. ಶಿಕ್ಷಣ ಮತ್ತು ತರಬೇತಿ ಮೂಲಕ ವಿಶಾಲ ವ್ಯಾಪ್ತಿಯಿಂದ ಸಲಹೆ ಮತ್ತು ಮಾಹಿತಿಗಳನ್ನು ನೀಡಬಲ್ಲದು. ಕಠಿಣ ಕೌಶಲ್ಯಗಳ ಕಲಿಕೆಯಾದಂತಹ ವಿಮಾನ ಚಾಲನೆ, ಕಾರು ಚಾಲನೆ, ಸೂಕ್ಷ್ಮ ಯಂತ್ರಗಳ ನಿರ್ವಹಿಸುವಿಕೆಯನ್ನು ಸುಲಭವಾಗಿ ತಿಳಿಸಬಲ್ಲದು.

–ಡಾ. ಎರ್ರಿಸ್ವಾಮಿ ಎಂ.ಸಿ.

## ಸರ್ಕಾರೇತರ ಸಂಸ್ಥೆಗಳು ಮತ್ತು ಶಿಕ್ಷಣ ಕ್ಷೇತ್ರಕ್ಕೆ ಪ್ರಥಮ್ ಸಂಸ್ಥೆಯ ಕೊಡುಗೆ

ಸ್ವಯಂಸೇವಾ ಸಂಸ್ಥೆಗಳು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು ಸಾಂಸ್ಕೃತಿಕ, ಧಾರ್ಮಿಕ, ಆರೋಗ್ಯ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸೇವಾನಿರತವಾಗಿವೆ.

19 ನೇ ಶತಮಾನದ ಮಧ್ಯಭಾಗದ ಅಂದಿನ ಸಮಾಜದಲ್ಲಿ ರಾಷ್ಟ್ರೀಯ ಪ್ರಜ್ಞೆಯ ವ್ಯಾಪಕ ಹರಡುವಿಕೆಯಿಂದಾಗಿ ರಾಜಕೀಯ ಮತ್ತು ಸಾಮಾಜಿಕ ಆಂದೋಲನಗಳನ್ನು ನಡೆಸಲು ಹತ್ತು-ಹಲವು ಸ್ವಯಂಪ್ರೇರಿತ ಸಂಸ್ಥೆಗಳು ಅಸ್ಥಿತ್ವಕ್ಕೆ ಬರಲು ಸಾಧ್ಯವಾಯಿತು. ಅವುಗಳಲ್ಲಿ ಹೆಸರಿಸಬಹುದಾದ ಸಂಸ್ಥೆಗಳೆಂದರೆ; **ಫ್ರೆಂಡ್-ಇನ್-ನೀಡ್ ಸೊಸೈಟಿ (1858), ಪ್ರಾರ್ಥನಾ ಸಮಾಜ(1864) , ಸತ್ಯ ಶೋಧಕ ಸಮಾಜ (1873), ಆರ್ಯ ಸಮಾಜ**(1875), **ನ್ಯಾಷನಲ್ ಕೌನ್ಸಿಲ್ ಫಾರ್ ವಿಮೆನ್ ಇನ್ ಇಂಡಿಯಾ (1875), ಇಂಡಿಯನ್ ನ್ಯಾಷನಲ್ ಸೋಶಿಯಲ್ ಕಾನ್‌ಫರೆನ್ಸ್** (1887) ಇತ್ಯಾದಿ. ಅದೇ ಸಮಯದಲ್ಲಿ ಅನೇಕ **ಕ್ರಿಶ್ಚಿಯನ್ ಮಿಷನರಿಗಳು** ಶಾಲಾಪೂರ್ವ ಶಿಕ್ಷಣ, ಪ್ರಾಥಮಿಕ ಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೇವೆಗಳನ್ನು ಒದಗಿಸಲು ಮುಂದಾದವು. 1905 ರಲ್ಲಿ ಪ್ರಾರಂಭವಾದ **'Servents of India'** ಎಂಬ ಸಂಸ್ಥೆ ಜಾತ್ಯಾತೀತ ತಳಹದಿ ಹೊಂದಿದ್ದರಿಂದ ಸರ್ಕಾರೇತರ ಕ್ಷೇತ್ರದಲ್ಲಿ ಉಲ್ಲೇಖನೀಯವಾಗಿದೆ. ಮಹಾತ್ಮ ಗಾಂಧೀಜಿಯವರು 1916 ರಲ್ಲಿ ಭಾರತಕ್ಕೆ ಹಿಂತಿರುಗಿದ ನಂತರ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ಬೆಸೆಯುವುದರ ಮೂಲಕ ಸರ್ಕಾರೇತರ ವಲಯಕ್ಕೆ ಹೊಸ ಭಾಷ್ಯ ಬರೆದರು.

ಸ್ವಾತಂತ್ರ್ಯದ ನಂತರ ಸ್ವಯಂಸೇವಾ ಸಂಸ್ಥೆಗಳ ಮೂಲಕ ಜನಸಾಮಾನ್ಯರು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮ ಕೊಡುಗೆಯನ್ನು ನೀಡುವಲ್ಲಿ ಪ್ರೋತ್ಸಾಹಿಸಲು ಭಾರತ ಸರ್ಕಾರ 1953 ರಲ್ಲಿ ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿಯನ್ನು Central Social Welfare

Digitised by Bharatavani, CIIL

Board (cswb.gov.in) ಸ್ಥಾಪಿಸಿತು. ಈ ನಿಟ್ಟಿನಲ್ಲಿ ರಾಷ್ಟ್ರೀಯ ಸಮುದಾಯಾಭಿವೃದ್ಧಿ ಕಾರ್ಯಕ್ರಮ, ರಾಷ್ಟ್ರೀಯ ವಿಸ್ತರಣಾ ಸೇವೆಗಳು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಿಂದಲೂ ಪ್ರಯತ್ನಗಳು ನಡೆದವು. ಅಭಿವೃದ್ಧಿ ಕಾರ್ಯಕ್ರಮಗಳ ಯಶಸ್ವೀ ಅನುಷ್ಠಾನಕ್ಕಾಗಿ 1986 ರಲ್ಲಿ ಕೌನ್ಸಿಲ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ರೂರಲ್ ಟೆಕ್ನಾಲಜಿ (CART) ಮತ್ತು ಪೀಪಲ್ಸ್ ಆ್ಯಕ್ಷನ್ ಫಾರ್ ಡೆವಲಪ್‌ಮೆಂಟ್ ಇಂಡಿಯಾ ಸಂಸ್ಥೆಗಳನ್ನು ಒಗ್ಗೂಡಿಸಿ ಕೌನ್ಸಿಲ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಪೀಪಲ್ಸ್ ಆ್ಯಕ್ಷನ್ ಅಂಡ್ ರೂರಲ್ ಟೆಕ್ನಾಲಜಿ (CAPART) ಎಂಬ ಸ್ವಾಯತ್ತ ಸಂಸ್ಥೆಯನ್ನು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯಡಿಯಲ್ಲಿ ಅಸ್ತಿತ್ವಕ್ಕೆ ತರಲಾಯಿತು. ಇಂದು ದೇಶದಾದ್ಯಂತ 12,000 ಸ್ವಯಂಸೇವಾ ಸಂಸ್ಥೆಗಳಿಗೆ CAPART ನಿಂದ ಅನುದಾನ ದೊರೆಯುತ್ತಿದೆ.

ಪ್ರಪಂಚದಲ್ಲೇ ಅತಿ ಹೆಚ್ಚು ಲಾಭರಹಿತ ಸಂಸ್ಥೆಗಳನ್ನು ಹೊಂದಿರುವ ದೇಶ ನಮ್ಮದಾಗಿದ್ದು, 2009 ರ ಅಂತ್ಯದಲ್ಲಿ ಅವುಗಳ ಸಂಖ್ಯೆ 3.3 ದಶಲಕ್ಷದಷ್ಟಾಗಿದೆ. ಪ್ರತೀ 400 ಭಾರತೀಯರಿಗೆ 1 ಸ್ವಯಂ ಸೇವಾಸಂಸ್ಥೆಯಂತೆ ಹಲವಾರು ಸರ್ಕಾರೇತರ ಸಂಘಗಳಿದ್ದು, ಇವು ದೇಶದಲ್ಲಿರುವ ಶಾಲೆ ಮತ್ತು ಆಸ್ಪತ್ರೆಗಳ ಸಂಖ್ಯೆಗಳನ್ನು ಮೀರಿಸಿವೆ. ರಾಜ್ಯಗಳಲ್ಲಿನ ನೋಂದಾಯಿತ ಸರ್ಕಾರೇತರ ಸಂಸ್ಥೆಗಳ ವಿವರ ಈ ಕೆಳಕಂಡಂತಿವೆ;

ಮಹಾರಾಷ್ಟ್ರ (4.8 ಲಕ್ಷ), ಆಂಧ್ರಪ್ರದೇಶ (4.6 ಲಕ್ಷ), ಉತ್ತರ ಪ್ರದೇಶ (4.3 ಲಕ್ಷ), ಕೇರಳ (3.3 ಲಕ್ಷ), ಕರ್ನಾಟಕ (1.9 ಲಕ್ಷ), ಗುಜರಾತ್ (1.7 ಲಕ್ಷ), ಪಶ್ಚಿಮ ಬಂಗಾಳ (1.7 ಲಕ್ಷ), ತಮಿಳುನಾಡು (1.4 ಲಕ್ಷ), ಒರಿಸ್ಸಾ (1.3 ಲಕ್ಷ) ಮತ್ತು ರಾಜಾಸ್ಥಾನ (1.0 ಲಕ್ಷ). 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಮಾಜಿಕ ವಲಯಕ್ಕೆ ರೂ. 18,000 ಕೋಟಿಗಳನ್ನು ಮೀಸಲಿಡುವ ಮೂಲಕ ಭಾರತ ಸರ್ಕಾರ ಲಾಭರಹಿತ ಕ್ಷೇತ್ರಕ್ಕೆ ಅತಿ ದೊಡ್ಡ ದೇಣಿಗೆದಾರನಾಗಿದೆ. 2007–08 ರಲ್ಲಿ ರೂ. 9,700 ಕೋಟಿಗಳ ವಿದೇಶೀ ದೇಣಿಗೆ ಈ ಕ್ಷೇತ್ರಕ್ಕೆ ಹರಿದಿದೆ. ರೂ. 1,600–2,000 ಕೋಟಿಗಳಷ್ಟು ಧಾರ್ಮಿಕ ಸಂಸ್ಥಾನಗಳಿಂದ ಕೊಡುಗೆಯಾಗಿ ಬಂದಿದೆ. ಭಾರತದಲ್ಲಿ ಖಾಸಗಿ ಉದ್ಯಮಗಳು ತಮ್ಮ ನಿವ್ವಳ ಲಾಭದ ಶೇಕಡ 1 ರಷ್ಟು ಮಾತ್ರ ದೇಣಿಗೆ ನೀಡುತ್ತಿರುವುದರಿಂದ ಈ ಕ್ಷೇತ್ರದಲ್ಲಿ ಅವುಗಳ ಪಾತ್ರ ನಿರೀಕ್ಷೆಗಿಂತ ಬಹುಪಾಲು ಕಡಿಮೆಯಾಗಿರುವುದು ಗಮನಾರ್ಹ.

ಅಂತರಾಷ್ಟ್ರೀಯ ಮಟ್ಟದಲ್ಲಿ ಸರ್ಕಾರೇತರ ಸಂಘಗಳ ಬೃಹತ್ ಮಾಹಿತಿಯನ್ನು ಸ್ವಾಯತ್ತ ಲಾಭರಹಿತ ಸಂಸ್ಥೆಯಾದ ಜಾಗತಿಕ ಅಭಿವೃದ್ಧಿ ಸಂಶೋಧನಾ ಕೇಂದ್ರ ಸಂಗ್ರಹಿಸಿದೆ. 1926 ರಲ್ಲಿ ಅಮೇರಿಕಾದ ವಾಷಿಂಗ್‌ಟನ್‌ನಲ್ಲಿ ಅಸ್ತಿತ್ವಕ್ಕೆ ಬಂದ "ನ್ಯಾಷನಲ್ ಕೌನ್ಸಿಲ್ ಫಾರ್ ದಿ ಎಜುಕೇಶನ್ ಆಫ್ ಯಂಗ್ ಚಿಲ್ಡ್ರನ್ ಸಂಸ್ಥೆ ಗುಣಮಟ್ಟದ ಬಾಲ್ಯಾವಧಿ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸುತ್ತಿದ್ದು, ಮಕ್ಕಳ ಹಕ್ಕುಗಳು ಮತ್ತು ಅವರ ಅಗತ್ಯತೆಗಳ ಬಗ್ಗೆ ಕಾಳಜಿವಹಿಸುವ ಎಲ್ಲಾ ಸ್ವಯಂಸೇವಕರಿಗೆ ಮತ್ತು ಸಂಘಸಂಸ್ಥೆಗಳಿಗೆ ಅದರ ಸದಸ್ಯತ್ವವನ್ನು ನೀಡುತ್ತಿದೆ.

'ಗಿವ್ ಇಂಡಿಯಾ' ಸಂಸ್ಥೆ ಶಿಕ್ಷಣ, ಆರೋಗ್ಯ, ಮಕ್ಕಳು ಮತ್ತು ಮಹಿಳೆಯರ ಹಕ್ಕುಗಳು, ಉದ್ಯೋಗ, ವೃದ್ಧಾಪ್ಯ, ಯುವಜನಾಂಗ ಇವೇ ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಭಾರತದಲ್ಲಿನ ಇನ್ನೂರಕ್ಕೂ ಹೆಚ್ಚು ಸ್ವಯಂಸೇವಾ ಸಂಘಗಳ ಪರವಾಗಿ ದೇಣಿಗೆಯನ್ನು ಸಂಗ್ರಹಿಸಿ, ಆಯಾ ಸಂಸ್ಥೆಗಳಿಗೆ ತಲುಪಿಸುತ್ತದೆ. ಕರ್ನಾಟಕದ ಸ್ವಯಂಸೇವಾ ಕ್ಷೇತ್ರದಲ್ಲಿ ತೊಡಗಿರುವ ಕೆಲವು ಸಂಸ್ಥೆಗಳ ಬಗ್ಗೆ ಕರ್ನಾಟಕ ಡಾಟ್‌ಕಾಮ್‌ನಿಂದ ಮಾಹಿತಿ ಲಭ್ಯವಿದೆ. ಸಾಮಾನ್ಯ ಮಕ್ಕಳ ಶೈಕ್ಷಣಿಕ ಅಗತ್ಯಗಳು ವಿಶೇಷ ಅವಶ್ಯಕತೆಗಳಿರುವ ಮಕ್ಕಳ ಶೈಕ್ಷಣಿಕ ಅಗತ್ಯಗಳು ಭಿನ್ನವಾಗಿರುವುದರಿಂದ ಈ ನಿಟ್ಟಿನಲ್ಲಿ ಹತ್ತು ಹಲವು ಸಂಸ್ಥೆಗಳು ಕಾರ್ಯಪ್ರವೃತ್ತವಾಗಿವೆ. ಉದಾಹರಣೆಗೆ, ಆಶಾ ಸಂಸ್ಥೆ ಅಂಧ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಶ್ರಮಿಸುತ್ತದೆ. ವಿಶೇಷ ಮಕ್ಕಳ ಶಿಕ್ಷಣಕ್ಕಾಗಿ ದುಡಿಯುತ್ತಿರುವ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ, ರಂಗರಾವ್ ಮೆಮೋರಿಯಲ್ ಶಾಲೆ, ದಿ ಸ್ಪಾಸ್ಟಿಕ್ ಸೊಸೈಟಿ ಆಫ್ ಕರ್ನಾಟಕ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಶೈಕ್ಷಣಿಕ ಸಂಪನ್ಮೂಲ ಕೇಂದ್ರಗಳ ಮೂಲಕ ಮಕ್ಕಳ ಆಟಿಕೆಗಳು ಮತ್ತು ವಿಜ್ಞಾನ ಪುಸ್ತಕಗಳ ಹಾಗೂ ಸಾಮಗ್ರಿಗಳ ವಿತರಣೆಯೊಂದಿಗೆ ಸೂತ್ರದಾರ ಸಂಸ್ಥೆ, ಧಾರವಾಡದ ವಿದ್ಯಾಪೋಷಕ ಮತ್ತು ಪ್ರೇರಣಾ ಸಂಸ್ಥೆಗಳು ತಮ್ಮ ಪ್ರತಿಭಾ ಪೋಷಣ (Nurture Merit Programme) ಕಾರ್ಯಕ್ರಮಗಳ ಮೂಲಕ ಆರ್ಥಿಕ ಮುಗ್ಗಟ್ಟಿನಲ್ಲಿರುವ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣವನ್ನು ಮುಂದುವರಿಸಲು ಸಹಾಯಹಸ್ತ ನೀಡುತ್ತಿವೆ, ಮಕ್ಕಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಅನ್ವೇಷಣಾತ್ಮಕ ಚಟುವಟಿಕೆಗಳ ಮೂಲಕ ಗಣನೀಯವಾಗಿ ಹೆಚ್ಚಿಸಲು ಹಲವಾರು ಸಂಸ್ಥೆಗಳು ಶ್ರಮಿಸುತ್ತಿವೆ.

**ಪ್ರಥಮ್ ಶಿಕ್ಷಣ ಪ್ರತಿಷ್ಠಾನ:**

ಅವಕಾಶವಂಚಿತ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತಿರುವ ಸಂಸ್ಥೆಗಳಲ್ಲಿ ಪ್ರಥಮ್ ಶಿಕ್ಷಣ ಪ್ರತಿಷ್ಠಾನ (Pratham Education Foundation) ದೇಶದಲ್ಲೇ ದೊಡ್ಡ ಮಟ್ಟದ ಸರಕಾರೇತರ ಸ್ವಯಂ–ಸೇವಾ ಸಂಸ್ಥೆಯಾಗಿದೆ. 1994ರಲ್ಲಿ ಯುನಿಸೆಫ್ ಪ್ರೇರಣೆಯಿಂದ ಮುಂಬೈನಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ, ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರುವ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣವನ್ನು ಒದಗಿಸುವ ಮೂಲಕ ಕಾರ್ಯಾರಂಭ ಮಾಡಿತು. ಭಾರತದಲ್ಲಿ 'ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ'ಕ್ಕೆ ಹಲವಾರು ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಅನುಷ್ಠಾನಕ್ಕೆ ತಂದಿರುವ ಪ್ರಥಮ್ ಶಿಕ್ಷಣ ಪ್ರತಿಷ್ಠಾನದ ಮೂಲ ಧ್ಯೇಯವು ಮಕ್ಕಳ ಶೈಕ್ಷಣಿಕ ಪ್ರಗತಿಯೇ ಆಗಿದೆ. ಇಂದು ಈ ಪ್ರತಿಷ್ಠಾನ 19 ರಾಜ್ಯಗಳಲ್ಲಿ ತನ್ನ ಶಾಖೆಗಳು ಮತ್ತು ಅಂಗಸಂಸ್ಥೆಗಳ ಮೂಲಕ ಚಟುವಟಿಕೆಗಳನ್ನು ನಡೆಸುತ್ತಿದೆ. ಈ ಸಂಸ್ಥೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉತ್ತಮವಾದ ಬದಲಾವಣೆಯನ್ನು ತರಲು ಆಯಾ ರಾಜ್ಯ ಸರಕಾರಗಳ ಜತೆ ಕೈಜೋಡಿಸುತ್ತಿದೆ.

Digitised by Bharatavani, CIIL

ಸ್ಥಳೀಯ ಸ್ವಯಂಸೇವಕರನ್ನು ಗುರುತಿಸಿ, ಅವರಿಗೆ ಸೂಕ್ತ ತರಬೇತಿಯನ್ನು ನೀಡಿ ನಂತರ ಅವರಿಂದಲೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಲು ಪರಿಣಾಮಕಾರಿ ಕಾರ್ಯತಂತ್ರವನ್ನು ಈ ಪ್ರತಿಷ್ಠಾನವು ರೂಢಿಸಿಕೊಂಡಿದೆ. ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಹಾಗೂ ವಿಶೇಷವಾಗಿ ಅಲ್ಪಸಂಖ್ಯಾತ ಮಹಿಳೆಯರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಸ್ವಯಂಉದ್ಯೋಗವನ್ನು ಕಲ್ಪಿಸಿಕೊಂಡು ಸ್ವಾಭಿಮಾನದ ಬದುಕನ್ನು ಸಾಗಿಸಲು ಅಗತ್ಯವಾದ ಮಾಹಿತಿ ಮತ್ತು ಮಾರ್ಗದರ್ಶನವನ್ನು ಪ್ರಥಮ್ ಪ್ರತಿಷ್ಠಾನದ ಎಲ್ಲಾ ಅಂಗಸಂಸ್ಥೆಗಳು ಒದಗಿಸುತ್ತವೆ.

2005 ರಿಂದ ಪ್ರಥಮ್ ಸಂಸ್ಥೆ ಪ್ರತಿ ವರ್ಷ ಹೊರತರುತ್ತಿರುವ ಶೈಕ್ಷಣಿಕ ಸ್ಥಿತಿಗತಿಗಳ ವಾರ್ಷಿಕ ವರದಿ (ASER-Annual Status of Education Report –www.asercentre.org)–ಯ ಮೂಲಕ ಶೈಕ್ಷಣಿಕ ಸುಧಾರಣೆಯಲ್ಲಿಯೂ ಬಹು ದೊಡ್ಡ ಪಾತ್ರವನ್ನು ನಿರ್ವಹಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ವಾರ್ಷಿಕ ಯೋಜನೆ ಮತ್ತು ನೀತಿಗಳನ್ನು ರೂಪಿಸಲು ಈ ವರದಿಯನ್ನು ಬಳಸುತ್ತವೆ. ಗ್ರಾಮೀಣ ಮಕ್ಕಳ ಕಲಿಕಾ ಮಟ್ಟವನ್ನು ಹಾಗೂ ಅಲ್ಲಿನ ಸರಕಾರಿ ಶಾಲೆಗಳಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಸಮೀಕ್ಷಿಸುವುದೇ 'ಅಸರ್' (ASER) ನ ಉದ್ದೇಶ. ಈ ಸಮೀಕ್ಷೆಯನ್ನು ದೇಶದ ಎಲ್ಲ ರಾಜ್ಯಗಳ ಗ್ರಾಮೀಣ ಜಿಲ್ಲೆಗಳಲ್ಲಿ ನಡೆಸಲಾಗುತ್ತದೆ. ಪ್ರತಿ ಜಿಲ್ಲೆಯ 30 ಹಳ್ಳಿಗಳಲ್ಲಿ, ಪ್ರತಿ ಹಳ್ಳಿಯ 20 ಕುಟುಂಬಗಳಲ್ಲಿನ 6 ರಿಂದ 16 ವರ್ಷದ ಮಕ್ಕಳ ಗಣಿತ ಮತ್ತು ವಾಚನ ಕೌಶಲ್ಯಗಳನ್ನು, ಅವರ ಮನೆಗಳಿಗೆ ತೆರಳಿ ಅಲ್ಲಿಯೇ ಪರೀಕ್ಷಿಸಲಾಗುವುದು. ಪ್ರತಿ ವರ್ಷವೂ ದೇಶದಾದ್ಯಂತ ಸುಮಾರು 7 ಲಕ್ಷ ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಆಯಾ ಸ್ಥಳೀಯ ಸಂಘ ಅಥವಾ ಸ್ವಯಂಸೇವಾ ಸಂಸ್ಥೆಗಳು ಈ ಸಮೀಕ್ಷೆಯಲ್ಲಿ ಪಾಲ್ಗೊಳ್ಳುತ್ತವೆ. ದೇಶದಾದ್ಯಂತ ಸುಮಾರು 500ಕ್ಕೂ ಹೆಚ್ಚು ಸಂಘಗಳಿಂದ 30 ಸಾವಿರ ಸ್ವಯಂಸೇವಕರು ಈ ಸಮೀಕ್ಷೆಯಲ್ಲಿ ಭಾಗವಹಿಸುತ್ತಾರೆ. ಸರಳ, ವೈಜ್ಞಾನಿಕ ಹಾಗೂ ವಿಶ್ವಾಸಾರ್ಹ ವಿಧಾನದಿಂದ ನಡೆಸಲಾಗುವ 'ಅಸರ್' ಸಮೀಕ್ಷೆ ಅತಿ ಕಡಿಮೆ ವೆಚ್ಚದಲ್ಲಿ ನಿರ್ವಹಿಸಬಹುದಾದ, ಒಬ್ಬ ಸಾಮಾನ್ಯ ಪ್ರಜೆಯೂ ಕೈಗೊಳ್ಳಬಹುದಾದ ಒಂದು ಪರಿಣಾಮಕಾರಿ ರಾಷ್ಟ್ರೀಯ ಸಮೀಕ್ಷೆಯಾಗಿದೆ. ಇತ್ತೀಚೆಗೆ ಪಾಕಿಸ್ತಾನ, ಕೀನ್ಯಾ, ತಾಂಜಾನಿಯಾ, ಉಗಾಂಡ ಮತ್ತು ಮಾಲಿ ದೇಶಗಳು 'ಅಸರ್' ನಿಂದ ಪ್ರೇರಿತರಾಗಿ ತಮ್ಮ ತಮ್ಮ ದೇಶಗಳಲ್ಲಿಯೂ 'ಅಸರ್' ಗೆ ಹೋಲುವ ಸಮೀಕ್ಷೆಗಳನ್ನು ನಡೆಸಲು ಪ್ರಥಮ್ ಸಂಸ್ಥೆಯಿಂದ ತರಬೇತಿ ಪಡೆದಿವೆ.

### ಕರ್ನಾಟಕದಲ್ಲಿ ಪ್ರಥಮ್ ಸಂಸ್ಥೆ:

ಕರ್ನಾಟಕದಲ್ಲಿ ಪ್ರಥಮ್ ಶಿಕ್ಷಣ ಪ್ರತಿಷ್ಠಾನದ ಅಂಗ ಸಂಸ್ಥೆಯಾಗಿ 'ಪ್ರಥಮ್ ಮೈಸೂರು' ಸಂಸ್ಥೆ 2002ರಿಂದಲೂ ಅವಕಾಶವಂಚಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ 'ಪ್ರತಿ ಮಗುವೂ ಶಾಲೆಗೆ ಚೆನ್ನಾದ ಕಲಿಕೆಗೆ' ಎಂಬ ಮೂಲ ಧ್ಯೇಯದೊಂದಿಗೆ ಶ್ರಮಿಸುತ್ತಿದೆ.

'ಪ್ರಥಮ್ ಮೈಸೂರು' ಸಂಸ್ಥೆ 1994ರಲ್ಲಿ ಯುನಿಸೆಫ್‌ನ ಪ್ರೇರಣೆಯಿಂದ ಮುಂಬೈನಲ್ಲಿ ಸ್ಥಾಪನೆಗೊಂಡ 'ಪ್ರಥಮ್ ಎಜುಕೇಷನ್ ಫೌಂಡೇಷನ್'ನ ಒಂದು ಅಂಗಸಂಸ್ಥೆ. ಇಡೀ ಭಾರತದಲ್ಲಿ 23ಕ್ಕೂ ಹೆಚ್ಚು ರಾಜ್ಯಗಳಲ್ಲಿ ಪ್ರಥಮ್‌ನ ಅಂಗಸಂಸ್ಥೆಗಳಿವೆ. ಭಾರತದಲ್ಲಿ 'ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ'ಕ್ಕೆ ಹಲವಾರು ಕಾರ್ಯಕ್ರಮಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಿಂದ ಅನುಷ್ಠಾನಕ್ಕೆ ತಂದಿರುವ ಪ್ರಥಮ್ ಸಂಸ್ಥೆ. ಮಕ್ಕಳ ಶೈಕ್ಷಣಿಕ ಪ್ರಗತಿಯನ್ನೇ ಮೂಲ ಧ್ಯೇಯವನ್ನಾಗಿಸಿಕೊಂಡು ಸಾಕಷ್ಟು ಎತ್ತರಕ್ಕೆ ಬೆಳೆದಿರುವ ಒಂದು ಪ್ರಧಾನ ಸ್ವಯಂ–ಸೇವಾ ಸಂಸ್ಥೆ ಎನ್ನಬಹುದು. 'ಪ್ರಥಮ್ ಮೈಸೂರು'ನ ಶೈಕ್ಷಣಿಕ ಕಾರ್ಯಕ್ರಮಗಳ ಒಂದು ಪಕ್ಷಿನೋಟವನ್ನು ಈ ಕೆಳಗೆ ನೀಡಿದೆ:

### 1. ಶಾಲಾಪೂರ್ವ ಶಿಕ್ಷಣಕ್ಕಾಗಿ ಸರ್ಟಿಫಿಕೇಟ್ ಕಾರ್ಯಕ್ರಮ:

ಭಾರತದಲ್ಲಿ ಇತ್ತೀಚೆಗೆ ಶಾಲಾಪೂರ್ವ ಶಿಕ್ಷಣ ಕೇಂದ್ರಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಗಮನಾರ್ಹ. ಬಾಲ್ಯ ಶಿಕ್ಷಣ ಕೇಂದ್ರಗಳಾದ ಬಾಲವಾಡಿ/ಅಂಗನವಾಡಿ/ನರ್ಸರಿ/ಕಿಂಡರ್‌ಗಾರ್ಟನ್ ಕೇಂದ್ರಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬರುತ್ತಿವೆ. ಆದರೆ ಅವುಗಳ ಗುಣಮಟ್ಟದ ಬಗ್ಗೆ ಸಾಕಷ್ಟು ಅಸಮಾಧಾನ ವ್ಯಕ್ತವಾಗುತ್ತಿರುವುದು ವಿಷಾದನೀಯ. ಹೆಚ್ಚು ಕೇಂದ್ರಗಳಲ್ಲಿ ಶಾಲಾಪೂರ್ವ ಶಿಕ್ಷಣಕ್ಕಾಗಿ ತರಬೇತಿ ಪಡೆಯದವರನ್ನೂ ಅಥವಾ ಇತರ ಮಟ್ಟದ ಶಿಕ್ಷಣ ತರಬೇತಿ ಪಡೆದವರನ್ನೂ ನೇಮಿಸಿಕೊಂಡಿರುವುದು ಗುಣಮಟ್ಟದ ಕೊರತೆಗೆ ಕಾರಣವೆಂದು ಅನೇಕ ಶಿಕ್ಷಣತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಕೊರತೆಯನ್ನು ನಿವಾರಿಸಲು ಶಾಲಾಪೂರ್ವ ಶಿಕ್ಷಕಿಯರಿಗೂ ವೈಜ್ಞಾನಿಕವಾದ ಶಿಕ್ಷಣ ತರಬೇತಿಯ ಅವಶ್ಯಕತೆಯನ್ನು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲೂ ಗುರುತಿಸಲಾಗಿದೆ. ಇದರಿಂದ ಶಿಶು ವಿಕಾಸದ ಧ್ಯೇಯಗಳನ್ನೊಳಗೊಂಡ ಒಂದು ವ್ಯವಸ್ಥಿತ ಶಾಲಾಪೂರ್ವ ಶಿಕ್ಷಣ ತರಬೇತಿ ಕಾರ್ಯಕ್ರಮಕ್ಕೆ ಬೇಡಿಕೆ ಇರುವುದು ಸ್ಪಷ್ಟ. ಈ ಕೇಂದ್ರಗಳಲ್ಲಿ ಯಶಸ್ವಿ ನಿರ್ವಾಹಕರಾಗಲು ಸೂಕ್ತ ಜ್ಞಾನ–ಕೌಶಲ–ಮನೋವೃತ್ತಿಗಳನ್ನು ಬೆಳೆಸುವ ಉದ್ದೇಶದಿಂದ ಪ್ರಥಮ್, ಮೈಸೂರು ಸಂಸ್ಥೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ದೂರ ಶಿಕ್ಷಣದಲ್ಲಿ 6 ತಿಂಗಳ ಅವಧಿಯ ಶಾಲಾಪೂರ್ವ ಶಿಕ್ಷಣದಲ್ಲಿ ಸರ್ಟಿಫಿಕೇಟ್ ಕಾರ್ಯಕ್ರಮವನ್ನು 2009 ರಿಂದ ಪ್ರಾರಂಭಿಸಿದೆ. ಇದುವರೆಗೂ 7 ತಂಡಗಳು ಹೊರಬಂದು ಒಟ್ಟು 300 ಕ್ಕೂ ಹೆಚ್ಚು ಮಹಿಳೆಯರು ಈ ಕಾರ್ಯಕ್ರಮದಿಂದ ಲಾಭ ಪಡೆದಿದ್ದಾರೆ.

### 2. ಬಾಲವಾಡಿ ಕೇಂದ್ರಗಳ ಮೂಲಕ ಶಾಲಾಪೂರ್ವ ಶಿಕ್ಷಣ:

ಪ್ರಥಮ್ ಬಾಲವಾಡಿ 3 ರಿಂದ 6 ವರ್ಷ ವಯೋಮಾನದ ಮಕ್ಕಳಿಗಾಗಿ ಶಾಲಾಪೂರ್ವ ಕಾರ್ಯಕ್ರಮವಾಗಿದೆ. ಮಕ್ಕಳು ಪಡೆದಂತಹ ಶಾಲಾಪೂರ್ವ ಶಿಕ್ಷಣದ ಗುಣಮಟ್ಟ ಅವರ ಶಾಲಾ

Digitised by Bharatavani, CIIL

ದಾಖಲಾತಿ ಹಾಗೂ ಶಾಲೆಯಲ್ಲಿ ಅವರ ಕಲಿಕಾ ಮಟ್ಟವನ್ನು ನಿರ್ಧರಿಸುತ್ತದೆ ಎಂಬುದು ಅನೇಕ ಸಂಶೋಧನೆಗಳಿಂದ ತಿಳಿದು ಬಂದಿರುವ ಸಂಗತಿ. ಆದ್ದರಿಂದ ಉತ್ತಮ ಗುಣಮಟ್ಟದ ಶಾಲಾಪೂರ್ವ ಶಿಕ್ಷಣದ ಮಹತ್ವವನ್ನು ಅರಿತು ಪ್ರಥಮ್ ಮೈಸೂರು ಸಂಸ್ಥೆ ಮಗುವಿನ ಸರ್ವತೋಮುಖ ವಿಕಾಸಕ್ಕೆ ಅಗತ್ಯವಾದ ಭಾಷೆ, ಗ್ರಹಣಶಕ್ತಿ, ದೈಹಿಕ–ಚಲನಾತ್ಮಕ, ವೈಯಕ್ತಿಕ–ಸಾಮಾಜಿಕ ಮತ್ತು ಸೃಜನಶೀಲತೆ ಮುಂತಾದ ವಿವಿಧ ಕೌಶಲ್ಯಗಳ ಬೆಳವಣಿಗೆಗೆ ಪೂರಕವಾದ ಅನೇಕ ಚಟುವಟಿಕೆಗಳಿಂದ ಕೂಡಿದ ಬಾಲವಾಡಿ ಪಠ್ಯಕ್ರಮವನ್ನು ರೂಪಿಸಿದೆ. ಪ್ರತಿದಿನ 2 ರಿಂದ 3 ಗಂಟೆಗಳ ಅವಧಿಯನ್ನು ಹೊಂದಿದ, 20 ಮಕ್ಕಳ ಬಾಲವಾಡಿ ಕೇಂದ್ರಗಳ ನಿರ್ವಹಣೆಯ ಬಗ್ಗೆ ಆಸಕ್ತ ಮಹಿಳೆಯರಿಗೆ ಪ್ರಥಮ್ ಸಂಸ್ಥೆ ತರಬೇತಿ ನೀಡುತ್ತಾ ಬಂದಿದೆ. ಮಕ್ಕಳಿಗೆ ಶಾಲೆಯ ವಾತಾವರಣವನ್ನು ಪರಿಚಯಿಸಿ, ಅನ್ಯ ಮಕ್ಕಳ ಜೊತೆ ಬೆರೆಯುವಂತೆ ಮಾಡಿ, ಸಂತೋಷದ ಅನುಭವಗಳ ಮೂಲಕ ಕಲಿಸಿ, ಶಾಲೆಗೆ ಹೋಗುವ ಅಭ್ಯಾಸವನ್ನು ರೂಢಿಸುವ ಈ ಬಾಲವಾಡಿ ಕಾರ್ಯಕ್ರಮ ಹೆಚ್ಚು ಜನಪ್ರಿಯವಾಗಿದೆ.

**ಅಂಗನವಾಡಿ ಕೇಂದ್ರಗಳಲ್ಲಿ ಬಾಲವಾಡಿ ಚಟುವಟಿಕೆಗಳು:**

ಪ್ರಥಮ್‌ನ ಯಶಸ್ವಿ ಕಾರ್ಯಕ್ರಮವಾದ ಬಾಲವಾಡಿ ಕಾರ್ಯಕ್ರಮವನ್ನು, ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಡೆಯುವ ಕೆಲವು ಅಂಗನವಾಡಿಗಳಲ್ಲಿ ಪ್ರಥಮ್‌ನ ಬಾಲವಾಡಿ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಥಮ್ ಮೈಸೂರಿನ ಶಾಲಾಪೂರ್ವ ಶಿಕ್ಷಣದ ಮಾದರಿ ಸಂಶೋಧನಾಧಾರಿತವಾಗಿದ್ದು, ಒಂದು ಪ್ರಮಾಣೀಕರಿಸಿದ ಪ್ರಯತ್ನವಾಗಿದೆ.

**3. ಪ್ರಾಥಮಿಕ ಶಾಲಾ ಶಿಕ್ಷಣ:**

ಪ್ರಥಮ್ ಸಂಸ್ಥೆ ಪ್ರಾಥಮಿಕ ಶಾಲೆಯಲ್ಲಿನ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಕಲಿಯುವ ಸೌಲಭ್ಯಗಳನ್ನು ಒದಗಿಸಲು ಎರಡು ಪ್ರಮುಖ ಕಾರ್ಯಕ್ರಮಗಳನ್ನು ರೂಪಿಸಿದೆ.

(i) ಕನ್ನಡವಾಚನ ಕಾರ್ಯಕ್ರಮ (ಕವಾಕಾ)

(ii) ನಗುನಗುತ ಗಣಿತ (ನನಗ)

ಈ ಮೇಲಿನ ಎರಡು ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಸರ್ಕಾರಿ ಶಾಲಾ ಶಿಕ್ಷಕರ ಮೂಲಕ ಮತ್ತು ಸಮುದಾಯದಲ್ಲಿ ತರಬೇತಿ ಹೊಂದಿದ ಸ್ಥಳೀಯ ಮಹಿಳೆಯರಿಂದ ಶಾಲಾ ಅವಧಿಯ ನಂತರ ನಡೆಸಲಾಗುವುದು.

**(i) ಕನ್ನಡವಾಚನ ಕಾರ್ಯಕ್ರಮ:**

ಇದು 1 ರಿಂದ 7 ನೇ ತರಗತಿಯಲ್ಲಿನ ಮಕ್ಕಳಲ್ಲಿ ವಾಚನ ಮತ್ತು ಉಚ್ಚಾರಣಾ ದೋಷಗಳನ್ನು ಸರಿಪಡಿಸಿ ಅವರ ಭಾಷಾ ಕೌಶಲ್ಯವನ್ನು ಉತ್ತಮಪಡಿಸುವ ಒಂದು ಪರಿಹಾರಾತ್ಮಕ ಬೋಧನಾ ಕಾರ್ಯಕ್ರಮವಾಗಿದೆ. 45 ರಿಂದ 60 ಅವಧಿಗಳಲ್ಲಿ ಅಕ್ಷರ ರಟ್ಟಿನ ಬಳಕೆ ಮತ್ತು 20 ಕಥೆಗಳ ಒಂದು ಕಥಾಗುಚ್ಛದ ಸಹಾಯದಿಂದ ಮಕ್ಕಳಲ್ಲಿ ಸಾಧಾರಣವಾಗಿ ಕಂಡುಬರುವ ಅಕ್ಷರ ಪರಿಚಯದ ಕೊರತೆ, ಪದ–ವಾಕ್ಯ ಕೂಡಿಸಿ ಓದುವ ಕೊರತೆ, ಓದಿದ ವಿಷಯವನ್ನು ಅರ್ಥೈಸುವಿಕೆಯ ಕೊರತೆ – ಹೀಗೆ ಹಲವು ವಾಚನದೋಷಗಳನ್ನು ನಿವಾರಿಸುವ ಉದ್ದೇಶವನ್ನು ಕನ್ನಡವಾಚನ ಕಾರ್ಯಕ್ರಮ ಹೊಂದಿದೆ.

**(ii) ನಗುನಗುತ ಗಣಿತ:**

ಇದೊಂದು ಸಂಶೋಧನಾಧಾರಿತ ಪರಿಹಾರಾತ್ಮಕ ಗಣಿತ ಕಾರ್ಯಕ್ರಮ. ಶಿಕ್ಷಣ ತಜ್ಞೆ ಹಾಗೂ ಪ್ರಥಮ್ ಟ್ರಸ್ಟಿಯಾಗಿರುವ ಡಾ॥ ಪದ್ಮಿನಿಯವರಿಂದ ರಚಿಸಲ್ಪಟ್ಟ ಈ ವಿನೂತನ ಕಾರ್ಯಕ್ರಮ 'ಮಾನಸಿಕ ಲೆಕ್ಕಾಚಾರ' ಹಾಗೂ ಮಕ್ಕಳ "ಗಣಿತ ಯೋಚನಾ ಕ್ರಿಯೆ'ಗಳ ವಿಕಾಸಕ್ಕೆ ರೂಪಿಸಲಾದ ಒಂದು ಪರಿಣಾಮಕಾರಿ ವಿಧಾನದಿಂದ ಕೂಡಿದೆ. ಇದು ಗಣಿತದ ಬಗ್ಗೆ ಮಕ್ಕಳ ಭಯ ನಿವಾರಿಸಿ, ಪ್ರತಿ ಮಗುವಿನ ವೇಗಕ್ಕೆ ತಕ್ಕಂತೆ ಹಾಗೂ ಶಾಲೆಯ ಗಣಿತ ಪಠ್ಯಕ್ಕೆ ಪೂರಕವಾದ ಕಲಿಕೆಗೆ ಸಹಾಯಕ; 'ಪದ್ಮಿನಿ ಎಣಿಕೆ ಮಣೆ' ವಿವಿಧ ಸಂಖ್ಯಾ ಚೌಕಟ್ಟುಗಳು, ಗಣಿತದ ಆಟಗಳು, ಅಭ್ಯಾಸ ಪುಸ್ತಕಗಳು, ಗಣಿತ ರಸಪ್ರಶ್ನೆ ಮುಂತಾದ ಕಲಿಕಾ ಸಾಮಗ್ರಿಗಳಿಂದ ಮಕ್ಕಳು ನಗುನಗುತ್ತಲೇ ಗಣಿತ ಕಲಿಯುವಂತೆ ಪ್ರೇರೇಪಿಸುತ್ತದೆ.

**ಕನ್ನಡವಾಚನ ಕಾರ್ಯಕ್ರಮ ಮತ್ತು ನಗುನಗುತ ಗಣಿತ–** ಈ ಎರಡೂ ಕಾರ್ಯಕ್ರಮಗಳು 2006 ರಿಂದ ಈವರೆಗೂ ಕಲಿಕೆಯಲ್ಲಿ ಹಿಂದುಳಿದ ಸಾವಿರಾರು ಸರಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ತಲುಪಿವೆ. ಬೆಂಗಳೂರಿನ 'ಅಕ್ಷರ ಪ್ರತಿಷ್ಠಾನ'ವೂ 'ನನಗ' ಕಾರ್ಯಕ್ರಮವನ್ನು 2007–08ರಲ್ಲಿ ಬೆಂಗಳೂರಿನ 834 ಪ್ರಾಥಮಿಕ ಶಾಲೆಗಳಲ್ಲಿ 35768 ಮಕ್ಕಳಿಗೆ ತಲುಪಿಸುವಲ್ಲಿ ಯಶಸ್ವಿಯಾಯಿತು.

**4. ಸಮುದಾಯ ಶಿಕ್ಷಣ:**

**(i) ಗ್ರಂಥಾಲಯ ಕಾರ್ಯಕ್ರಮ:**

ಕನ್ನಡವಾಚನ ಕಾರ್‍ಯಕ್ರಮದ ಯಶಸ್ಸಿನಿಂದ ಪ್ರಭಾವಿತಗೊಂಡು ಪ್ರಥಮ್, ಮೈಸೂರು ಸಂಸ್ಥೆಯು ಜೂನ್ 2005 ರಲ್ಲಿ ಮೈಸೂರು ನಗರದಲ್ಲಿ ಗ್ರಂಥಾಲಯ ಕಾರ್‍ಯಕ್ರಮವನ್ನು ಪ್ರಾರಂಭಿಸಿತು. ಸಂಸ್ಥೆಯ ಸ್ವಯಂಸೇವಕಿಯರು ನಗರದ ಕೊಳಚೆ ಪ್ರದೇಶದ ಮಕ್ಕಳ ಮನೆ ಮನೆಗೆ ಭೇಟಿ ನೀಡಿ ಪುಸ್ತಕಗಳನ್ನು ಹಂಚಿ ಅವರಲ್ಲಿ ಓದುವ ಆಸಕ್ತಿಯನ್ನು ಬೆಳೆಸುವುದೇ ಈ ಕಾರ್ಯಕ್ರಮದ ಮೂಲ ಉದ್ದೇಶ. ನೂರಕ್ಕೂ ಹೆಚ್ಚು ಸ್ವಯಂಸೇವಕಿಯರು ಸುಮಾರು 5000 ಮಕ್ಕಳು ಗ್ರಂಥಾಲಯದ ಲಾಭ ಪಡೆಯುವಂತೆ ಮಾಡುವಲ್ಲಿ ಈಗಾಗಲೇ ಯಶಸ್ವಿಯಾಗಿದ್ದಾರೆ.

**(ii) ಪ್ರತಿಭಾಪೋಷಣ ಯೋಜನೆ:**

ಪ್ರಥಮ್, ಮೈಸೂರು ಸಂಸ್ಥೆ ಧಾರವಾಡದ ವಿದ್ಯಾಪೋಷಕ ಸಂಸ್ಥೆಯ ಸಹಯೋಗದೊಂದಿಗೆ ಅರ್ಹ ಪ್ರತಿಭಾನ್ವಿತ

Digitised by Bharatavani, CIIL

ವಿದ್ಯಾರ್ಥಿಗಳನ್ನು ಗುರುತಿಸಿ ಅವರ ಕಾಲೇಜು ಶಿಕ್ಷಣವನ್ನು ಮುಂದುವರಿಸಲು ಪ್ರತಿಭಾ ಪೋಷಣಾ ಯೋಜನೆ (Nurture Merit)ಯನ್ನು ಹಮ್ಮಿಕೊಂಡಿದೆ. ಈ ಯೋಜನೆಯಡಿಯಲ್ಲಿ 2008 ರ ಮಾರ್ಚ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ನಗರದ 55 ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಮುಂದಿನ ಶಿಕ್ಷಣಕ್ಕೆ ಆರ್ಥಿಕ ನೆರವನ್ನು ನೀಡಲಾಗಿದೆ. ವಿದ್ಯಾರ್ಥಿಗಳ ಅರ್ಹತೆಯನ್ನು ಪ್ರತಿ ವರ್ಷ ಸಾಮಾನ್ಯ ಪ್ರತಿಭಾನ್ವೇಷಣಾ ಪರೀಕ್ಷೆಯ ಮೂಲಕ ಗುರುತಿಸಲಾಗುವುದು.

**(iii) ಜ್ಞಾನ ಸೇತುವೆ:**

ಪ್ರಥಮ್ ಮೈಸೂರು ಸಂಸ್ಥೆ ವಿದ್ಯಾರ್ಥಿಗಳ ಇಂದಿನ ಜೀವನಕ್ಕೆ ಅಗತ್ಯವಾಗಿ ಬೇಕಾಗುವ ಜ್ಞಾನವನ್ನು ಪಠ್ಯೇತರ ಚಟುವಟಿಕೆಯ ಮೂಲಕ ಪಡೆದುಕೊಳ್ಳಲು 'ಜ್ಞಾನ ಸೇತುವೆ' (Knowledge Bridge)ಎಂಬ ಯೋಜನೆಯನ್ನು ರೂಪಿಸಿದೆ. ಶಾಲಾ ಪಠ್ಯ ಪುಸ್ತಕಗಳಲ್ಲಿ ಕಾಣದ ಹತ್ತು ಹಲವು ವಿಷಯಗಳನ್ನು ಸಂವಾದದ ಮೂಲಕ ಚರ್ಚಿಸಿ ಮಕ್ಕಳಿಗೆ ತಿಳಿಸಲು 'ಜ್ಞಾನ ಸೇತುವೆ' ಉದ್ದೇಶಿಸಿದೆ. ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಅನ್ವಯಿಸುವ ವಿಷಯಗಳಿಗೆ ಅನುಗುಣವಾಗಿ ವಿವಿಧ ಹಂತಗಳಲ್ಲಿ ಈ ಕಾರ್ಯಕ್ರಮದ ಮೂಲಕ ಶಿಕ್ಷಣ ನೀಡಲಾಗುತ್ತದೆ. ವಿಜ್ಞಾನಿಗಳ ಜೀವನ ಚರಿತ್ರೆ, ಕಂಪ್ಯೂಟರ್‌ನ ಉಪಯೋಗಗಳು, ಸೌರವ್ಯೂಹ, ಭೂಮಂಡಲದ ರಚನೆ ಇವೇ ಮುಂತಾದ ವಿಷಯಗಳ ಕುರಿತು ಪ್ರತಿ ಶನಿವಾರದಂದು ಸ್ವಯಂಸೇವಕರ ನೆರವಿನಿಂದ ಸಂವಾದ ನಡೆಸಲಾಗುವುದು.

**5. ಪ್ರಥಮ್ – ಸಮಗ್ರ ಶಿಶು ಅಭಿವೃದ್ಧಿ ಯೋಜನೆ:**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆ ಅಗತ್ಯವಾಗಿದ್ದು ಈ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರದ ಉಸ್ತುವಾರಿ ನಡೆಸಲು ಸ್ಥಳೀಯವಾಗಿ ರಚಿಸಿರುವ ಬಾಲ ವಿಕಾಸ ಸಮಿತಿಯನ್ನು ಬಲಪಡಿಸಲು ಪ್ರಸ್ತುತ ಇರುವ ಆರೋಗ್ಯ ಇಲಾಖೆಯ ಸೇವೆಗಳ ಜೊತೆಯಲ್ಲಿ ಗುಣಾತ್ಮಕವಾದ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣವನ್ನು ಸಹ ಕೇಂದ್ರಗಳಲ್ಲಿ ಮಕ್ಕಳಿಗೆ ಒದಗಿಸಲು ರಾಜ್ಯ ಸರ್ಕಾರ ನಿರ್ಧರಿಸಿ ನವೆಂಬರ್ 2007 ರಲ್ಲಿ ಆದೇಶವನ್ನು ಹೊರಡಿಸಿತು. ಅಂತೆಯೇ ಬಾಲ ವಿಕಾಸ ಸಮಿತಿಯ ಸದಸ್ಯರಿಗೆ ತರಬೇತಿ ನೀಡಲು ಮೈಸೂರು ಜಿಲ್ಲೆ ಹಾಗೂ ನಗರ, ಮಂಡ್ಯ, ಚಿಕ್ಕಮಗಳೂರು, ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇಲಾಖಾ ಸಿಬ್ಬಂದಿ ವರ್ಗದವರಿಗೆ ಪ್ರಥಮ್ ಸಂಸ್ಥೆಯ ವತಿಯಿಂದ ತರಬೇತಿದಾರರಿಗೆ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಪ್ರಥಮ್ ಬಾಲವಾಡಿ ಹಾಗೂ ಸಂಸ್ಥೆಯ ಕೇಂದ್ರಗಳಲ್ಲಿ ಅಳವಡಿಸಲಾಗುತ್ತಿರುವ ಕಲಿಕಾ ಸಾಮಗ್ರಿಗಳ ಪರಿಚಯ ಮಾಡಿಸಲಾಯಿತು.

ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ ಒಟ್ಟು 50 ಅಂಗನವಾಡಿ ಕೇಂದ್ರಗಳಲ್ಲಿ ಶಿಕ್ಷಕಿಯರು ಪ್ರಥಮ್ ಸಂಸ್ಥೆಯ ಕಲಿಕಾ ಸಾಮಗ್ರಿಗಳನ್ನು ಬಳಸಿ ಯಶಸ್ವಿಯಾಗಿ ಗುಣಾತ್ಮಕ ಶಾಲಾಪೂರ್ವ ಶಿಕ್ಷಣವನ್ನು ನೀಡುತ್ತಿದ್ದಾರೆ.

**6. 'ಓದು ಭಾರತ' ಕಾರ್ಯಕ್ರಮ (Read India Programme):**

ಪ್ರಥಮ್ ಸಂಸ್ಥೆ 2007 ರಿಂದ 'ಓದು ಭಾರತ' ಕಾರ್ಯಕ್ರಮವನ್ನು (Read India Programme) ದೇಶದಾದ್ಯಂತ ಹಮ್ಮಿಕೊಂಡಿದೆ. ಈ ಕಾರ್ಯಕ್ರಮವನ್ನು ಮೈಸೂರು ಜಿಲ್ಲೆಯಲ್ಲಿಯೂ ಆರಂಭಿಸಲಾಗಿದೆ. ಜಿಲ್ಲೆಯ ಆಯ್ದ ಗ್ರಾಮಗಳಲ್ಲಿನ ಎಲ್ಲಾ ಮಕ್ಕಳಿಗೂ ಆಯಾ ಗ್ರಾಮದಲ್ಲಿನ ಸ್ವಯಂ ಸೇವಕರನ್ನು ಬಳಸಿಕೊಂಡು ಓದುವ, ಬರೆಯುವ ಮತ್ತು ಗಣಿತದ ಸಾಮರ್ಥ್ಯವನ್ನು ಹೆಚ್ಚಿಸುವುದೇ 'ಓದು ಭಾರತ' ಕಾರ್ಯಕ್ರಮದ ಧ್ಯೇಯವಾಗಿದೆ. ಸ್ಥಳೀಯ ಸ್ವಯಂ ಸೇವಕರಿಗೆ ಸೂಕ್ತ ತರಬೇತಿಯನ್ನು ನೀಡಿ, ಕಲಿಕಾ ಸಾಮಗ್ರಿಗಳನ್ನು ಒದಗಿಸುವುದರ ಮೂಲಕ 'ಓದು ಭಾರತ' ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಪ್ರಥಮ್– ಮೈಸೂರು ಸಂಸ್ಥೆ ಸಹಕರಿಸುತ್ತದೆ. 'ಓದು ಭಾರತ' ಕಾರ್ಯಕ್ರಮದ ಪ್ರಾಥಮಿಕ ಗುರಿಗಳು ಹೀಗಿವೆ;

- 1 ನೇ ತರಗತಿಯಲ್ಲಿರುವ ಗ್ರಾಮದ ಎಲ್ಲಾ ಮಕ್ಕಳಿಗೆ ಅಕ್ಷರ ಹಾಗೂ ಸಂಖ್ಯೆಗಳ ಪರಿಚಯವಾಗಬೇಕು.
- 2 ಮತ್ತು 3ನೇ ತರಗತಿಯಲ್ಲಿರುವ ಗ್ರಾಮದ ಎಲ್ಲಾ ಮಕ್ಕಳಿಗೆ ಸರಳ ಪದಗಳನ್ನು ಓದಲು ಬರಬೇಕು ಮತ್ತು ತಮ್ಮ ತಮ್ಮ ತರಗತಿಯಲ್ಲಿನ ಪಠ್ಯದಲ್ಲಿರುವ ಲೆಕ್ಕಗಳನ್ನು ಅವರೇ ಸ್ವತಃ ಬಿಡಿಸಲು ಸಮರ್ಥರಾಗಬೇಕು.
- 4 ಮತ್ತು 5 ನೇ ತರಗತಿಗಳಲ್ಲಿ ಓದುವ ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸುವುದು ಹಾಗೂ ಎಲ್ಲಾ ಮಕ್ಕಳು ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಲು ಸೂಕ್ತ ಶೈಕ್ಷಣಿಕ ಸಹಾಯವನ್ನು ಒದಗಿಸುವುದು ಸಹ 'ಓದು ಭಾರತ' ಕಾರ್ಯಕ್ರಮದ ಮುಂದಿನ ಗುರಿಗಳಲ್ಲಿ ಒಂದಾಗಿದೆ.

'ಓದು ಭಾರತ' ಕಾರ್ಯಕ್ರಮ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಮಕ್ಕಳ ಕಲಿಕಾ ಮಟ್ಟವನ್ನು ಗಣನೀಯವಾಗಿ ವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿದೆ. 2012–14ರಲ್ಲಿ ದೇಶದ 19 ರಾಜ್ಯಗಳಲ್ಲಿನ 33 ದಶಲಕ್ಷ ಮಕ್ಕಳಿಗೆ ಈ ಯೋಜನೆ ತಲುಪಿದೆ. ಹಾಗೂ 11 ರಾಜ್ಯಗಳಲ್ಲಿ ಆಯಾ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ 'ಓದು ಭಾರತ' ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಇದೂವರೆಗೂ 3 ಲಕ್ಷ ಗ್ರಾಮಗಳಲ್ಲಿನ 4.5 ಲಕ್ಷ ಸ್ವಯಂ–ಸೇವಕರು ಮಕ್ಕಳ ಕಲಿಕೆಗೆ ಶ್ರಮಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಗದಗ್ ಜಿಲ್ಲೆಗಳಲ್ಲಿ ಒಟ್ಟು 400 ಸ್ವಯಂ ಸೇವಕರ ಮೂಲಕ 10,000 ಹೆಚ್ಚು ಮಕ್ಕಳಿಗೆ ತಲುಪುತ್ತಿದೆ.

**–ಶೇಷಾದ್ರಿ ಎ.**

Digitised by Bharatavani, CIIL

## 'ಸರ್ವರಿಗೂ ಶಿಕ್ಷಣ'ದ ಪರಿಕಲ್ಪನೆ

ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಪ್ರತಿಯೊಬ್ಬ ಮಾನವನು ಅತ್ಯವಶ್ಯಕವಾಗಿ ಹೊಂದಿರುವ ಅರ್ಹತೆಗಳಲ್ಲಿ ಶಿಕ್ಷಣವೂ ಒಂದು. ಎಲ್ಲರಿಗೂ ಶಿಕ್ಷಣ ದೊರೆತಾಗ ಅವರು ತಮ್ಮ ಅಂತಃಶಕ್ತಿಯನ್ನು ಜಾಗೃತಗೊಳಿಸಬಲ್ಲರು. ಈ ಮೂಲಕ ಸಮಾಜ ಹಾಗೂ ರಾಷ್ಟ್ರದ ಪ್ರಗತಿ ಸಾಧ್ಯ. ಶಿಕ್ಷಣವು ಭೂತ, ವರ್ತಮಾನ ಹಾಗೂ ಭವಿಷ್ಯತ್ ಕಾಲಗಳ ಅಪೂರ್ವ ಬಂಡವಾಳವಾಗಿದೆ. ಈ ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬನಿಗೂ ಉತ್ತಮ ಶಿಕ್ಷಣ ದೊರೆತಾಗ ಮಾತ್ರ ಅವನು ಗೌರವಕ್ಕೆ ಪಾತ್ರನಾಗುತ್ತಾನೆ.

ಸ್ವಾತಂತ್ರ್ಯದ ಪೂರ್ವದಲ್ಲಿ ಹಾಗೂ ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಲಾ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವವನ್ನು ಅರಿತು ಸರಕಾರಗಳು ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡುವ ಯೋಜನೆಯನ್ನು ಕೈಗೊಂಡವು. ಇದರಿಂದಾಗಿ ಜಾಗತಿಕ, ಪ್ರಾದೇಶಿಕ ಹಾಗೂ ರಾಷ್ಟ್ರಮಟ್ಟದಲ್ಲಿ ಕಾರ್ಯಾಚರಣೆ ನಡೆದು ಅದು ತನ್ನದೇ ಆದ ಧ್ಯೇಯೋದ್ದೇಶಗಳನ್ನು ರೂಪಿಸಿತು.

ಶಿಕ್ಷಣದ ಮುಖ್ಯ ಉದ್ದೇಶ ಶಾಲಾ ಹಾಜರಾತಿ ಅಲ್ಲ. ಗುಣಮಟ್ಟದ ಕಲಿಕೆ ಎಲ್ಲರಿಗೂ ಕಲಿಯುವ ಅವಶ್ಯಕತೆಯನ್ನು ಪೂರೈಸುವುದು. ಸರ್ವರಿಗೂ ಶಿಕ್ಷಣ ಎಂಬ 1980ರ ದಶಕದಲ್ಲಿ ಬಳಕೆಗೆ ಬಂದಿತು. ಏಷಿಯನ್ ರಾಷ್ಟ್ರಗಳಲ್ಲಿ ಎಲ್ಲರಿಗೂ ಶಿಕ್ಷಣದ ಮೂಲಕ ಜ್ಞಾನವನ್ನು ನೀಡುವಲ್ಲಿ ಯೋಜನೆಗಳನ್ನು ರೂಪಿಸುವಲ್ಲಿ ಆದ್ಯತೆ ಪಡೆಯಿತು. 1985ರಲ್ಲಿ ಜರುಗಿದ ಐದನೆಯ ಏಷಿಯನ್ ಸಮ್ಮೇಳನದಲ್ಲಿ 'ಸರ್ವರಿಗೂ ಶಿಕ್ಷಣ' ಎಂಬುದನ್ನು ಸಾಧಿಸುವುದಕ್ಕೆ ಸಂಬಂಧಿಸಿದ ಎಲ್ಲ ಕಾಳಜಿಗಳನ್ನು ಕಲ್ಪಿಸಿಕೊಂಡಿತು.

ಸಮಾಜದಲ್ಲಿ ಜಾತಿ, ಮತ, ಗಂಡು, ಹೆಣ್ಣು ಎಂಬ ಭೇದಭಾವವಿಲ್ಲದೆ ಎಲ್ಲರಿಗೂ ಕೊಡುವ ಶಿಕ್ಷಣವು "ಸರ್ವರಿಗೂ ಶಿಕ್ಷಣ" ಎಂದು ಕರೆಯಲ್ಪಟ್ಟಿತು.

"ಸರ್ವರಿಗೂ ಶಿಕ್ಷಣ" ವನ್ನು ಹೀಗೆ ಅರ್ಥೈಸಬಹುದು. ಪ್ರತಿಯೊಬ್ಬ ವ್ಯಕ್ತಿಗೂ ಶಿಕ್ಷಣ ಬೇಕು. ಸಮಾಜದಲ್ಲಿ ಅಸಮಾನತೆ ತೊಲಗಬೇಕಾದರೆ ಸರ್ವರಿಗೂ ಶಿಕ್ಷಣ ದೊರಕಬೇಕು.

1. ಶಿಕ್ಷಣವು ಮಗುವಿನ ಮೂಲಭೂತ ಹಕ್ಕು ಎನ್ನುವ ಘೋಷಣೆಯೊಂದಿಗೆ ಯಾವುದೇ ಭೇದವಿಲ್ಲದೆ ಸಮಾನವಾದ ಶಿಕ್ಷಣ ಕೊಡುವುದು.
2. ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ, ವರ್ಗ, ಲಿಂಗ, ವಯಸ್ಸು, ಪ್ರಾದೇಶಿಕ ಅಸಮಾನತೆಗಳನ್ನು ದೂರಮಾಡಿ ಎಲ್ಲರಿಗೂ ಸಮಾನ ಶೈಕ್ಷಣಿಕ ಸದವಕಾಶಗಳನ್ನು ಕಲ್ಪಿಸುವುದು.
3. ಅಂತರ್ದೇಶೀಯ ಮತ್ತು ದೇಶದೊಳಗಿರುವ ಶೈಕ್ಷಣಿಕ ಅಸಮಾನತೆಗಳನ್ನು ತೊಡೆದು ಹಾಕುವುದು.
4. ವಯಸ್ಕರ ಶಿಕ್ಷಣ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು.
5. ವಿಜ್ಞಾನ ಶಿಕ್ಷಣ, ಪರಿಸರ ಶಿಕ್ಷಣ, ಜನಸಂಖ್ಯಾ ಶಿಕ್ಷಣ, ಸಹಪಠ್ಯ ಚಟುವಟಿಕೆಗಳು, ಉನ್ನತ ಶಿಕ್ಷಣಕ್ಕೆ ಒತ್ತು ಮತ್ತು ಶಿಕ್ಷಕ ಶಿಕ್ಷಣದ ಇವುಗಳ ಮೂಲಕ ಶಿಕ್ಷಣದ ಗುಣಮಟ್ಟ ಸುಧಾರಣೆ ಮಾಡುವುದು.
6. ಔಪಚಾರಿಕ ಮತ್ತು ಔಪಚಾರಿಕವಲ್ಲದ ಶಿಕ್ಷಣದ ಸಂಬಂಧ ಕಲ್ಪಿಸುವುದಕ್ಕೆ ಒತ್ತು ನೀಡುವುದು ಮತ್ತು ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವಿಕೇಂದ್ರಿಕರಣ.

**ಸರ್ವರಿಗೂ ಶಿಕ್ಷಣದ ಉದ್ದೇಶಗಳು:**

ಜಾಗತಿಕವಾಗಿ 'ಸರ್ವರಿಗೂ ಶಿಕ್ಷಣ' ನೀಡುವ ಕುರಿತು ಚರ್ಚಿಸಿ ಯೋಚಿಸಲು ಹಲವಾರು ಪ್ರಯತ್ನಗಳು ನಡೆದವು. ಇವುಗಳಲ್ಲಿ ಪ್ರಮುಖವಾದವು 1985ರ ಏಷಿಯನ್ ಸಮ್ಮೇಳನ, 1990ರ ಜಾರಿಟಿಯನ್ ಸಮ್ಮೇಳನ ಹಾಗೂ 2000ರಲ್ಲಿ ಡಾಕರ್‌ನಲ್ಲಿ ನಡೆದ ಜಾಗತಿಕ ಶಿಕ್ಷಣ ಸಮಾವೇಶ. ಇವುಗಳ ಮುಖ್ಯ ಉದ್ದೇಶಗಳು ಹೀಗಿದ್ದವು.

- 2005 ರಿಂದ 2015 ರೊಳಗೆ ಸರ್ವರಿಗೂ ಶಿಕ್ಷಣದ ಗುರಿ ಸಾಧನೆ.
- ಪ್ರಾಥಮಿಕ ಶಿಕ್ಷಣಕ್ಕೆ ಪ್ರಥಮ ಆದ್ಯತೆ– 1 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವಿಕೆ.
- ಸಾರ್ವತ್ರಿಕ ಶಿಕ್ಷಣದ ದೀರ್ಘಕಾಲಿಕ ಗುರಿ ಸಾಧನೆ. ಇದಕ್ಕಾಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯೋಜನೆ ಮತ್ತು ಅನುಷ್ಠಾನಕ್ಕೆ ಅಗತ್ಯವಾದ ಮಾರ್ಗೋಪಾಯಗಳ ನಿರ್ಧಾರ.

**ಜಾಂಟಿಯನ್ ಜಾಗತಿಕ ಶೈಕ್ಷಣಿಕ ಸಮ್ಮೇಳನ:**

ಥಾಯ್‌ಲೆಂಡಿನ ಜಾಂಟಿಯನ್‌ನಲ್ಲಿ 1990ರಲ್ಲಿ ನಡೆದ ಸಮ್ಮೇಳನದ ಆನಂತರ 2000ನೇ ಇಸವಿಯಲ್ಲಿ ಸೆನೆಗಲ್‌ನ ಡಾಕರ್‌ನಲ್ಲಿ ಜಾಗತಿಕ ಶಿಕ್ಷಣ ಸಮಾವೇಶವು ನಡೆಯಿತು. ಇದರಂತೆ 2005 ರಿಂದ 2015 ರೊಳಗೆ ಸರ್ವರಿಗೂ ಶಿಕ್ಷಣದ ಗುರಿಗಳನ್ನು ಸಾಧಿಸಲು ಅಗತ್ಯವಾದ ಮಾರ್ಗೋಪಾಯಗಳನ್ನು ರೂಪಿಸಿತು. ಅದರಂತೆ ಈ ಕೆಳಕಂಡ ಅಂಶಗಳನ್ನು ಗುರುತಿಸಲಾಯಿತು.

1. ಸಾಧ್ಯವಾದ ಎಲ್ಲಾ ಮೂಲಗಳಿಂದ ಅಂದರೆ ಅಂತರ ಸರಕಾರ, ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕುಗಳು, ಖಾಸಗಿ ಬಂಡವಾಳ ಹೂಡಿಕೆ, ವಿಶ್ವಬ್ಯಾಂಕ್ ಸಂಪನ್ಮೂಲಗಳನ್ನು ಸಂಗ್ರಹಿಸಿ ಪ್ರಾಥಮಿಕ ಶಿಕ್ಷಣಕ್ಕೆ ಹೊರಗಿನಿಂದ ಒದಗಿಸುವುದು.

2. ಬಾಹ್ಯ ನೆರವು ಹರಿದು ಬರುವ ನಿರೀಕ್ಷಣೆಯನ್ನು ಇಟ್ಟುಕೊಳ್ಳುವುದು.

Digitised by Bharatavani, CIIL

3. ಸಂಪನ್ಮೂಲಗಳನ್ನು ಸಾಲ ಪರಿಹಾರ ಅಥವಾ ಸಾಲ ಮನ್ನಾ ಮಾಡುವ ಮೂಲಕ ಬಡದೇಶಗಳಲ್ಲಿ ಸರ್ವರಿಗೂ ಶಿಕ್ಷಣ ಎಂಬ ಯೋಜನೆಗೆ ನೆರವಾಗುವುದು.

4. ಎಲ್ಲರ ಸಹಭಾಗಿತ್ವವನ್ನು ಪಡೆದು ದೇಶದಲ್ಲಿ ಆಂತರಿಕ ಸಮನ್ವಯ ಇರುವಂತೆ ಮಾಡುವುದು.

5. ಸರ್ವರಿಗೂ ಶಿಕ್ಷಣದ ಪ್ರೋತ್ಸಾಹಕ ಕ್ರಮಗಳಲ್ಲಿ ಸರಕಾರದ ನಾಯಕತ್ವ ಮತ್ತು ಒಡೆತನಕ್ಕೆ ನೆರವು ನೀಡಲು ದೇಶದಲ್ಲಿ ವಿಭಾಗವಾರು ಕ್ರಮದಲ್ಲಿ ದೀರ್ಘಕಾಲಿಕ ಸಮಗ್ರ ಆರ್ಥಿಕ ಯೋಜನೆ, ಸರಕಾರದ ಬಲಿಷ್ಠ ನಾಯಕತ್ವ ಮತ್ತು ನಾಗರಿಕ ಸಮಾಜದ ಸಂಘಟನೆಗಳ ಪರಿಣಾಮಕಾರಿ ಸಹಭಾಗಿತ್ವಗಳು ಇರುವಂತೆ ನೋಡಿಕೊಳ್ಳುವುದು.

**ಸರ್ವರಿಗೂ ಶಿಕ್ಷಣ ಸಾಧನೆಗೆ ಕಾರ್ಯಕ್ರಮಗಳು:**

- ಸರ್ವರಿಗೂ ಶಿಕ್ಷಣ ಕುರಿತಂತೆ 'ಅನರಕ್ಷತೆ ನಿರ್ಮೂಲನಾ ಕಾರ್ಯಕ್ರಮ' ಕೈಗೊಳ್ಳುವುದರೊಂದಿಗೆ ಸರ್ವರಿಗೂ ಶಿಕ್ಷಣ ಸಂಘದ ಪ್ರಗತಿ ನಿಷ್ಕರ್ಷೆಗೆ ಅವಕಾಶ.
- ಅಂತರಾಷ್ಟ್ರೀಯ ಮಟ್ಟದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಸಲಹಾ ನಮಿತಿಯ ನೇಮಕ.
- ಸರ್ವರಿಗೂ ಶಿಕ್ಷಣ ಕುರಿತಂತೆ ಗುರಿ ನಿರ್ಧಾರದ ಕಡೆ ಗಮನ.
- ಮಕ್ಕಳಲ್ಲಿ ಸಾಕ್ಷರತೆ ಉಂಟಾಗಲು ಬಾಲ್ಯ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಉತ್ತಮ ಜೀವನಕ್ರಮಕ್ಕೆ ಸಂಬಂಧಿಸಿ ಅನೇಕ ಕ್ಷೇತ್ರಗಳ ರಚನೆ.
- ಸರ್ವರಿಗೂ ಶಿಕ್ಷಣ ಕುರಿತಂತೆ ಮೌಲ್ಯಮಾಪನ ಕಾರ್ಯಕ್ರಮ.

**ಜಾಗತಿಕ ಶೈಕ್ಷಣಿಕ ಸಮ್ಮೇಳನಗಳ ಪ್ರಮುಖ ಅಂಶಗಳು:**

ಐದನೆ ಏಷಿಯನ್ ಸಮ್ಮೇಳನ 1985 ರಲ್ಲಿ ನಡೆದ 'ಸರ್ವರಿಗೂ ಶಿಕ್ಷಣ' ಎಂಬುದನ್ನು ಸಾಧಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಕಾಳಜಿಗಳನ್ನು ವಹಿಸಿಕೊಂಡಿತು.

1. ಜಾಂಟಿಯನ್ ಸಮ್ಮೇಳನವು 1990 ರಲ್ಲಿ ನಡೆದು ಸರ್ವರಿಗೂ ಶಿಕ್ಷಣದ ಗುರಿ ಸಾಧನೆಯೆಡೆಗೆ ಸ್ಪಷ್ಟ ನಿರ್ದೇಶನಗಳನ್ನು ರೂಪಿಸಿತು.
2. ಬ್ರೆಜಿಲ್ ದೇಶದ ರಯೋಡಿ ಜನ್ಯೆರೊನಲ್ಲಿ 1992 ರಲ್ಲಿ ನಡೆದ ಸಂಯುಕ್ತ ರಾಷ್ಟ್ರಸಂಘದ ಸಮ್ಮೇಳನವು ಪರಿಸರದ ಮತ್ತು ಅಭಿವೃದ್ಧಿಯ ಮೇಲೆ ಬೆಳಕು ಚೆಲ್ಲಿತು.
3. ಈಜಿಪ್ಟ್ ದೇಶದ ಕೈರೊದಲ್ಲಿ 1994ರಲ್ಲಿ ನಡೆದ ಸಮ್ಮೇಳನದಲ್ಲಿ ಜನಸಂಖ್ಯೆ ಮತ್ತು ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಯಿತು.
4. ಸ್ವಿಡ್ಜರ್‌ಲ್ಯಾಂಡಿನ ಕೋಲನ್ ಹೇಗನ್‌ನಲ್ಲಿ ಮತ್ತು ಚೈನಾದ ಬೀಜಿಂಗ್‌ನಲ್ಲಿ 1995ರಲ್ಲಿ ನಡೆದ ಸಮ್ಮೇಳನಗಳಲ್ಲಿ ಸಾಮಾಜಿಕ ಅಭಿವೃದ್ಧಿ ಮತ್ತು ಮಹಿಳೆಯರ ಶೈಕ್ಷಣಿಕ ಅಭಿವೃದ್ಧಿ ಬಗ್ಗೆ ಹೆಚ್ಚಿನ ಒತ್ತು ನೀಡಲಾಯಿತು.
5. ಆರ್ಮನಿಯ ಹ್ಯಾಂಬರ್ಗ್ ಸಮ್ಮೇಳನವು 1997 ರಲ್ಲಿ ನಡೆದು ಪ್ರಾಥಮಿಕ ಶಿಕ್ಷಣದ ಮೂಲಕ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬಹುದೆಂದು ನಿಶ್ಚಯಿಸಲಾಯಿತು.
6. ಸೆನೆಗಲ್‌ನ ಡಾಕರ್‌ನಲ್ಲಿ 2000ನೇ ಇಸವಿಯಲ್ಲಿ ನಡೆದ ಜಾಗತಿಕ ಶಿಕ್ಷಣ ಸಮಾವೇಶವು 2005 ಮತ್ತು 2015ರೊಳಗೆ ಸರ್ವರಿಗೂ ಶಿಕ್ಷಣದ ಗುರಿಗಳನ್ನು ಸಾಧಿಸಲು ರಾಷ್ಟ್ರಗಳು ಮಾಡುತ್ತಿರುವ ಪ್ರಯತ್ನಗಳಿಗೆ ಬೆಂಬಲ ಒದಗಿಸಲು ಅಗತ್ಯ ಮಾರ್ಗೋಪಾಯಗಳನ್ನು ಸೂಚಿಸಿತು.

ಭಾರತವು ಜನತೆಯ ಶೈಕ್ಷಣಿಕ ಜವಾಬ್ದಾರಿಯನ್ನು ಸಾಧಿಸುವಲ್ಲಿ ಇನ್ನೂ ಅನೇಕ ಮೈಲುಗಲ್ಲುಗಳನ್ನು ಕ್ರಮಿಸಬೇಕಾಗಿದೆ. ಹೊಸ ಶತಮಾನದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಆಂದೋಲನವು ಇನ್ನೂ ಹೆಚ್ಚು ತೀವ್ರಗೊಳ್ಳಬೇಕಾಗುತ್ತದೆ.

–ಡಾ. ಮನೋಹರಿ ಪಿ.

## ಸಹ ಪಠ್ಯಕ್ರಮ

ಶಿಕ್ಷಣವು ತನ್ನದೇ ಆದ ಧ್ಯೇಯಧೋರಣೆಗಳನ್ನು ಹೊಂದಿದ್ದು ಅದನ್ನು ತಲುಪಲು ನಿರ್ದಿಷ್ಟವಾದ ದಾರಿಯ ಅಥವಾ ಮಾರ್ಗದ ಅವಶ್ಯಕತೆ ಇದೆ. ಆ ಮಾರ್ಗವನ್ನು ಪಠ್ಯಕ್ರಮ ಎಂಬುದಾಗಿ ಪರಿಗಣಿಸಿ ಜಾರಿಗೆ ತರಲಾಯಿತು. ಈ ಮಾರ್ಗದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ಉಂಟುಮಾಡಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಈ ಎಲ್ಲಾ ಕಾರ್ಯಕ್ರಮಗಳನ್ನು ಒಟ್ಟಾಗಿ ಪಠ್ಯಕ್ರಮ ಎಂದು ಕರೆಯಬಹುದು.

ಶಿಕ್ಷಣವು ರೂಪಿಸಿಕೊಂಡಿರುವ ಗುರಿ ಮತ್ತು ಉದ್ದೇಶಗಳನ್ನು ತಲುಪಲು ಸಹಾಯಮಾಡುವ ಶಾಲಾ ತರಗತಿಗಳಲ್ಲಿ, ಪ್ರಯೋಗಾಲಯದಲ್ಲಿ, ಗ್ರಂಥಾಲಯದಲ್ಲಿ, ಆಟದ ಮೈದಾನಗಳಲ್ಲಿ ದೊರಕುವ ಎಲ್ಲಾ ಅನುಭವಗಳನ್ನು ಪಠ್ಯಕ್ರಮ ಒಳಗೊಳ್ಳುತ್ತದೆ. ಇದನ್ನು ಅನುಸರಿಸುವುದರಿಂದ ವಿದ್ಯಾರ್ಥಿಯ ವ್ಯಕ್ತಿತ್ವ, ಭವಿಷ್ಯ ಜೀವನವನ್ನು ರೂಪಿಸಲು ಸಾಧ್ಯವಾಗುತ್ತದೆ.

ಪಠ್ಯಕ್ರಮದಲ್ಲಿ ಎರಡು ಭಾಗಗಳನ್ನು ಗುರ್ತಿಸಬಹುದು ವಿದ್ಯಾರ್ಥಿಗಳಲ್ಲಿ ಜ್ಞಾನಾಂಶಗಳು, ಗ್ರಹಿಕೆಗಳ ಅರಿವು ಮೂಡಿಸಲು, ಕೌಶಲಗಳನ್ನು ಬೆಳೆಸಲು ವಿವಿಧ ವಿಷಯಗಳನ್ನು ಬೋಧಿಸಬೇಕಾಗುತ್ತದೆ, ವಿವಿಧ ರೀತಿಯ ಶೈಕ್ಷಣಿಕ (ಸಂಜ್ಞಾನಾತ್ಮಕ) ಚಟುವಟಿಕೆಗಳನ್ನು ಆಯೋಜಿಸಬೇಕಾಗುತ್ತದೆ. ಇದು ನೇರವಾಗಿ

Digitised by Bharatavani, CIIL

ಶೈಕ್ಷಣಿಕ ರೂಪದ್ದಾಗಿದ್ದು ಹೆಚ್ಚು ಮಹತ್ವಪೂರ್ಣವಾದುದಾಗುತ್ತದೆ. ಇನ್ನೊಂದು ಭಾಗ ವಿದ್ಯಾರ್ಥಿಗಳನ್ನು ಸಾಮಾಜಿಕಗೊಳಿಸಲು, ಅಪೇಕ್ಷಿತ ನೈತಿಕ ಮೌಲ್ಯಗಳನ್ನು/ವರ್ತನೆಗಳನ್ನು ರೂಪಿಸಲು, ಅಪೇಕ್ಷಿತ ಮನೋಭಾವಗಳನ್ನು, ಆಸಕ್ತಿಗಳನ್ನು, ಸಾಮಾಜಿಕ ಕೌಶಲಗಳನ್ನು ಬೆಳೆಸಲು, ದೈಹಿಕ ವಿಕಾಸವನ್ನುಂಟು ಮಾಡಲು ಅನೇಕ ರೀತಿಯ ಚಟುವಟಿಕೆಗಳನ್ನು ಶಾಲೆ ಆಯೋಜಿಸಬೇಕಾಗುತ್ತದೆ. ಈ ರೀತಿಯ ಚಟುವಟಿಕೆಗಳನ್ನು ಹಿಂದೆ ಪಠ್ಯೇತರ ಚಟುವಟಿಕೆಗಳು (Extra Curricular Activties) ಎಂದು ಹೇಳುತ್ತಿದ್ದರು. ಆದರೆ ನಂತರದಲ್ಲಿ ಈ ಚಟುವಟಿಕೆಗಳೂ ಶೈಕ್ಷಣಿಕ ಉದ್ದೇಶಗಳಿಗೆ ಸಂಬಂಧಪಟ್ಟಂತೆ ಮಹತ್ವ ಪಡೆಯುವುದರಿಂದ ಅವುಗಳನ್ನು ಪಠ್ಯಕ್ರಮದ ವ್ಯಾಪ್ತಿಯಲ್ಲಿಯೇ ಪರಿಗಣಿಸಬೇಕೆಂದು ಅವುಗಳನ್ನು ಸಹ-ಪಠ್ಯ ಚಟುವಟಿಕೆಗಳು ಎಂದು ಹೇಳಲಾಗುತ್ತದೆ. ಇವುಗಳಿಗೆ ಸಂಬಂಧಪಟ್ಟ ಪಠ್ಯಕ್ರಮಕ್ಕೆ ಸಹ-ಪಠ್ಯಕ್ರಮ (Co-curriculum) ಎಂದು ಹೆಸರು.

ಮೊದಲಿಯಾರ್ ಶಿಕ್ಷಣ ಆಯೋಗ (1952-54) ಸಹಪಠ್ಯಕ್ರಮದ ಬಗ್ಗೆ ಹೀಗೆ ಹೇಳಿದೆ; "ಸಹಪಠ್ಯಚಟುವಟಿಕೆಗಳು ಪಠ್ಯಚಟುವಟಿಕೆಗಳ ಹಾಗೇ ಶಾಲಾ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿವೆ ಮತ್ತು ಅವುಗಳ ಸರಿಯಾದ ವ್ಯವಸ್ಥೆಗೆ ಸಾಕಷ್ಟು ಜಾಗರೂಕತೆ ಹಾಗೂ ಮುಂದಾಲೋಚನೆ ಬೇಕು". ಆಧುನಿಕ ಶಿಕ್ಷಣ ತಜ್ಞರ ಪ್ರಕಾರ, "ಶಿಕ್ಷಣದ ಧ್ಯೇಯವು ಕೇವಲ ಬೌದ್ಧಿಕ ವಿಕಾಸವಲ್ಲ. ಇದರಿಂದ ದೈಹಿಕ, ಮಾನಸಿಕ, ನೈತಿಕ, ಸಾಮಾಜಿಕ, ಸೌಂದರ್ಯೋಪಾಸನೆ, ಸಾಂಸ್ಕೃತಿಕ ಹೀಗೆ ಸಮಗ್ರ ವ್ಯಕ್ತಿತ್ವ ವಿಕಾಸಗೊಳ್ಳಬೇಕು. ಸಹಪಠ್ಯಚಟುವಟಿಕೆಗಳನ್ನು 'ಪಠ್ಯೇತರ' ಚಟುವಟಿಕೆಗಳೆಂದು ಪ್ರತ್ಯೇಕಿಸುವುದು ಸಲ್ಲದು. ಇವು ಶಾಲೆಯ ಚಟುವಟಿಕೆಗಳಿಗೆ ಪೂರಕವಾಗಿಯೇ ಯೋಜಿಸಲ್ಪಡುವುದರಿಂದ ಇವು ಇಂದಿನ ಶಿಕ್ಷಣ ಪರಿಕಲ್ಪನೆಯಲ್ಲಿ ಸಹಪಠ್ಯ ಚಟುವಟಿಕೆಗಳು ಎಂದು ಕರೆಯಲ್ಪಟ್ಟಿವೆ".

ಅಮೇರಿಕೆಯ ಶಿಕ್ಷಣ ತಜ್ಞ ಜಾನ್ ಡ್ಯೂಯಿ "ಮಾಡುತ್ತಾ ಕಲಿ" ತತ್ವ ಸಾರಿದ್ದಾನೆ. ಶಿಕ್ಷಣವು ಒಂದು ಅನುಭವ. ಕೇವಲ ಪುಸ್ತಕದ ಅಧ್ಯಯನದಿಂದ ಸಂಪೂರ್ಣ ವ್ಯಕ್ತಿತ್ವ ಅರಳಲಾರದು. ಸಹಪಠ್ಯಚಟುವಟಿಕೆಗಳು ಶಿಕ್ಷಣದ ಪ್ರಕ್ರಿಯೆಯನ್ನು ಪರಿಪೂರ್ಣಗೊಳಿಸಲು ನೆರವಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯು (1986) ದೈಹಿಕ ಶಿಕ್ಷಣ ಹಾಗೂ ಸಹಪಠ್ಯಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡಿದೆ. ಸಾಮಾಜಿಕ ಪ್ರಾರ್ಥನೆ, ಶಾಲಾ ಸಮಾರಂಭಗಳು, ರಾಷ್ಟ್ರೀಯ ಹಬ್ಬಗಳು, ಪ್ರವಾಸಗಳು, ಪಂದ್ಯಗಳು, ವ್ಯಾಯಾಮ, ಹಾಡು, ಅಭಿನಯ, ಭಾಷಣ, ಚರ್ಚೆ, ಚಿತ್ರಕಲೆ, ಧ್ಯಾನ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು, ಸೇವಾಶಿಬಿರ, ಎನ್.ಸಿ.ಸಿ., ಸ್ಕೌಟ್ಸ್ ಮತ್ತು ಗೈಡ್ಸ್, ರೆಡ್ ಕ್ರಾಸ್, ಎನ್.ಎಸ್.ಎಸ್. ಇತ್ಯಾದಿ ಚಟುವಟಿಕೆಗಳು- ಜ್ಞಾನಾರ್ಜನೆ ಹಾಗೂ ಶಿಸ್ತುಸಂಘಟನೆ, ನಾಯಕತ್ವ, ಸೇವಾಬುದ್ಧಿ, ಶೀಲಪೋಷಣೆಗೆ ಸಹಾಯಕವಾಗುವ ಚಟುವಟಿಕೆಗಳಾಗಿವೆ. ಇವು ಶಿಕ್ಷಣದ ಪ್ರಮುಖ ಧ್ಯೇಯವಾದ ವಿದ್ಯಾರ್ಥಿಯ ವ್ಯಕ್ತಿತ್ವದ ಸಮಗ್ರ ವಿಕಾಸಕ್ಕೆ ದಾರಿದೀಪವಾಗುತ್ತದೆ.

**ಸಹಪಠ್ಯ ಚಟುವಟಿಕೆಗಳ ಅವಶ್ಯಕತೆ ಮತ್ತು ಮಹತ್ವ:**

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಪಠ್ಯಚಟುವಟಿಕೆಗಳನ್ನು ನೀಡಿದಷ್ಟಕ್ಕೆ ಶಿಕ್ಷಣದ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ಸಹಪಠ್ಯ ಚಟುವಟಿಕೆಗಳನ್ನು ಏರ್ಪಡಿಸಬೇಕಾಗುವುದು. ಮಗುವಿನಲ್ಲಿರುವ ಸುಪ್ತಶಕ್ತಿಯನ್ನು ಹೊರಗೆಳೆಯಲು ಹಾಗೂ ಅಪೇಕ್ಷಿತ ಸಾಮಾಜಿಕ, ನೈತಿಕ, ಬೌದ್ಧಿಕ, ದೈಹಿಕ, ಭಾವನಾತ್ಮಕ, ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಲು ಈ ಚಟುವಟಿಕೆಗಳು ಉಪಯುಕ್ತವಾಗಿವೆ. ಸಹಪಠ್ಯ ಚಟುವಟಿಕೆಗಳ ಅವಶ್ಯಕತೆ, ಮಹತ್ವ ಮುಂತಾದವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು. ಇವು ದೈಹಿಕ ವಿಕಾಸಕ್ಕೆ ಸಹಾಯ ಮಾಡುತ್ತವೆ. ಇವುಗಳ ಮೂಲಕ ಸಾಮಾಜಿಕ ಮೌಲ್ಯಗಳು ವಿಕಾಸ ಹೊಂದುತ್ತವೆ. ಸಾಂಸ್ಕೃತಿಕ ಮೌಲ್ಯಗಳು, ಸೌಂದರ್ಯ ಪ್ರಜ್ಞೆಯ ಮೌಲ್ಯಗಳು ಮತ್ತು ನೈತಿಕ ಮೌಲ್ಯಗಳು ಈ ಚಟುವಟಿಕೆಗಳಿಂದ ವಿಕಾಸ ಹೊಂದುತ್ತವೆ. ಮಕ್ಕಳಲ್ಲಿ ನಾಗರೀಕ ಮೌಲ್ಯಗಳನ್ನು ಬೆಳೆಸಲು ಸಹಪಠ್ಯಕ್ರಮ ನೆರವಾಗುತ್ತದೆ. ಇದಲ್ಲದೆ ಈ ಚಟುವಟಿಕೆಗಳಿಂದ ಮನೋರಂಜನೆ ದೊರೆಯುವುದಲ್ಲದೆ, ಸೃಜನಾತ್ಮಕ ಪ್ರತಿಭೆಗಳು ಅಭಿವ್ಯಕ್ತಗೊಳ್ಳುತ್ತವೆ. ಮಾನಸಿಕ ಆರೋಗ್ಯಕ್ಕೂ ಸಹಪಠ್ಯ ಚಟುವಟಿಕೆಗಳು ಕೊಡುಗೆ ನೀಡುತ್ತವೆ. ಮಕ್ಕಳು ಚೆನ್ನಾಗಿ ಇತರರೊಂದಿಗೆ ಸಮಾಯೋಜಿತರಾಗುವುದಲ್ಲದೆ, ಶಿಸ್ತಿನ ವರ್ತನೆ ಬೆಳೆಸಿಕೊಳ್ಳುತ್ತಾರೆ.

**ಸಹಪಠ್ಯ ಚಟುವಟಿಕೆಗಳ ಸಂಘಟನೆಯ ಸಾಮಾನ್ಯ ತತ್ವಗಳು:**

ಸಹಪಠ್ಯ ಚಟುವಟಿಕೆಗಳನ್ನು ಸಂಘಟನೆ ಮಡುವಾಗ ಅಥವಾ ಆಯ್ಕೆ ಮಾಡಿಕೊಳ್ಳುವಾಗ ಹಲವು ಪ್ರಮುಖ ತತ್ವಗಳನ್ನು ಅನುಸರಿಸಬೇಕಾಗುವುದು ಇದರಿಂದಾಗಿ ಚಟುವಟಿಕೆಗಳು ಅರ್ಥಯುತ, ಆಸಕ್ತಿದಾಯಕ ಹಾಗೂ ಉಪಯೋಗಾರ್ಹವಾಗುತ್ತವೆ. ಸಂಘಟನೆ ಮಾಡುವಾಗ ಅನುಸರಿಸಬೇಕಾದ ಪ್ರಮುಖ ತತ್ವಗಳು ಹೀಗಿವೆ-

1. ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ, ಸಾಮರ್ಥ್ಯಕ್ಕೆ ಅನುಗುಣವಾದ ಚಟುವಟಿಕೆಗಳನ್ನು ಆಯ್ಕೆಮಾಡಿಕೊಳ್ಳಬೇಕು.
2. ಆಯ್ಕೆಮಾಡಿಕೊಳ್ಳುವ ಚಟುವಟಿಕೆಗಳು ಪಠ್ಯಚಟುವಟಿಕೆಗಳಿಗೆ ಪೂರಕವಾಗಿರಬೇಕು.
3. ವಿದ್ಯಾರ್ಥಿಗಳ ಪರಿಸರಕ್ಕೆ ಸೂಕ್ತವಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಚಟುವಟಿಕೆಗಳನ್ನು ಸಂಘಟಿಸಬೇಕು.
4. ಚಟುವಟಿಕೆಗಳಿಗೆ ಮೂಲಭೂತವಾಗಿ ಬೇಕಾದ ಸಂಪನ್ಮೂಲಗಳು, ಸಾಧನ ಸಲಕರಣೆಗಳನ್ನು ಶಾಲೆಯು ಹೊಂದಿರಬೇಕು.
5. ಎಲ್ಲಾ ವಿದ್ಯಾರ್ಥಿಗಳು ಆಸಕ್ತಿ ಹಾಗೂ ಕ್ರಿಯಾಶೀಲತೆಯಿಂದ ಭಾಗವಹಿಸಲು ಅವಕಾಶವಿರಬೇಕು ಹಾಗೂ ಎಲ್ಲಾ ಮಕ್ಕಳು ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು.

Digitised by Bharatavani, CIIL

6. ಶಿಕ್ಷಕರು ಚಟುವಟಿಕೆಗಳ ಮೇಲ್ವಿಚಾರಣೆ ನಡೆಸಬೇಕು.
7. ಆಯೋಜಿಸುವ ಚಟುವಟಿಕೆಗಳ ಬಗೆಗೆ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು.
8. ಎಲ್ಲಾ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಿ ಸೂಕ್ತ ಬದಲಾವಣೆಯ ಕ್ರಮಗಳನ್ನು ಕೈಗೊಳ್ಳಬೇಕು.
9. ಪ್ರತಿಯೊಂದು ಚಟುವಟಿಕೆಯು ವಿದ್ಯಾರ್ಥಿಗಳಿಗೆ ಹಿತದಾಯಕ ಹಾಗೂ ಕ್ಷೇಮದಾಯಕವಾಗಿರುವಂತೆ ನೋಡಿಕೊಳ್ಳಬೇಕು.
10. ಕೈಗೊಳ್ಳುವ ಚಟುವಟಿಕೆಗಳ ಬಗೆಗೆ ನಿಯತವಾಗಿ ದಾಖಲೆ ಇಟ್ಟುಕೊಂಡು ಅವುಗಳನ್ನು ಸಂರಕ್ಷಿಸಿಕೊಂಡು ಬರಬೇಕು.
11. ಚಟುವಟಿಕೆಗಳಿಂದ ವಿದ್ಯಾರ್ಥಿಗಳ ನಡುವೆ ಅಹಿತಕರ ಸ್ಪರ್ಧೆ, ನಕಾರಾತ್ಮಕ ಮನೋಭಾವ ಬೆಳವಣಿಗೆಯಾಗದಂತೆ ನೋಡಿಕೊಳ್ಳಬೇಕು.
12. ಚಟುವಟಿಕೆಗಳು ವೈವಿಧ್ಯಮಯವಾಗಿರಬೇಕು.
13. ಎಲ್ಲಾ ಮಕ್ಕಳು ಭಾಗವಹಿಸುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.
14. ಶಿಕ್ಷಕರು ಸಹಪಠ್ಯಚಟುವಟಿಕೆಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.
15. ಶಿಕ್ಷಕರೊಂದಿಗೆ ಮಕ್ಕಳು ಸಹ ಕಾರ್ಯಕ್ರಮಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.
16. ಸಹಪಠ್ಯಚಟುವಟಿಕೆಗಳಲ್ಲಿ ಪೋಷಕರು ಭಾಗವಹಿಸುವುದಕ್ಕೆ ಅವಕಾಶವನ್ನು ನೀಡಬೇಕು.
17. ಸಹಪಠ್ಯಚಟುವಟಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಆಯೋಜಿಸಬೇಕು.
18. ಬೇರೆ ಶಾಲೆಯಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಶಾಲೆಯ ಮಕ್ಕಳು ಭಾಗವಹಿಸಲು ಅವಕಾಶ ಕಲ್ಪಿಸಬೇಕು.
19. ಮಕ್ಕಳಿಗೆ ಪ್ರೋತ್ಸಾಹಕಗಳನ್ನು ನೀಡಬೇಕು.
20. ಶಾಲಾ ವಾರ್ಷಿಕೋತ್ಸವದಲ್ಲಿ ಎಲ್ಲಾ ಮಕ್ಕಳಿಗೂ ಭಾಗವಹಿಸಲು ಅವಕಾಶವನ್ನು ನೀಡಬೇಕು.

**ಸಹಪಠ್ಯಚಟುವಟಿಕೆಗಳ ಸಂಘಟನೆಯಲ್ಲಿ ಕಂಡುಬರುವ ಸಮಸ್ಯೆಗಳು:**

ಪರಿಪೂರ್ಣ ವ್ಯವಸ್ಥೆ, ಸಂಪನ್ಮೂಲಗಳನ್ನು ಹೊಂದಿರುವ ಶಾಲೆಯು ಕೂಡ ಸಹಪಠ್ಯಚಟುವಟಿಕೆಗಳ ಸಂಘಟನೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತವೆ. ಅವುಗಳೆಂದರೆ–

1. ಶಾಲಾ ವೇಳಾಪಟ್ಟಿಯಲ್ಲಿ ಸೂಕ್ತ ಅವಕಾಶ ನೀಡಿರುವುದು.
2. ಪಠ್ಯಚಟುವಟಿಕೆಗಳಿಗೆ ಹೆಚ್ಚಿನ ಮಹತ್ವ ನೀಡಿ ಅವುಗಳನ್ನು ಪರಿಗಣಿಸದೆ ಇರುವುದು.
3. ತರಬೇತಿ ಪಡೆದ ಶಿಕ್ಷಕರ ಕೊರತೆಯಿರುವುದು.
4. ಸಂಪನ್ಮೂಲಗಳ ಅಸಮರ್ಪಕ ಪೂರೈಕೆ ಮತ್ತು ಕೊರತೆಯಿರುವುದು.
5. ಚಟುವಟಿಕೆಗಳಲ್ಲಿ ವೈವಿಧ್ಯತೆಗಳಿಲ್ಲದೆ ಇರುವುದು.
6. ಶಿಕ್ಷಕರು ಪಠ್ಯಚಟುವಟಿಕೆಗಳ ಬಗೆಗೆ ಅಧಿಕ ಕೆಲಸ ಹೊಂದಿರುವುದು.
7. ಸಹಪಠ್ಯಚಟುವಟಿಕೆಗಳನ್ನು ನಿರ್ವಹಿಸುವ ಶಿಕ್ಷಕರಿಗೆ ಯಾವುದೇ ಉತ್ತೇಜಕಗಳಿಲ್ಲದಿರುವುದು.
8. ಸಮರ್ಪಕ ಮೇಲ್ವಿಚಾರಣೆ ಮತ್ತು ಮೌಲ್ಯನಿರ್ಧಾರ ನಡೆಯದಿರುವುದು.
9. ಕೆಲವು ಅಧ್ಯಾಪಕರು ಸಹಪಠ್ಯಚಟುವಟಿಕೆಗಳ ಬಗ್ಗೆ ಆಸಕ್ತಿ ತೋರಿಸದಿರುವುದು.

ಸಂಘಟನೆ ಹಾಗೂ ನಿರ್ವಹಣೆಯಲ್ಲಿ ಎಷ್ಟೇ ಸಮಸ್ಯೆಗಳು ಎದುರಾದರೂ ಅವುಗಳನ್ನು ಯೋಜಿತ ರೀತಿಯಲ್ಲಿ ಎದುರಿಸಿ ಪರಿಹಾರಗಳನ್ನು ಕಂಡುಕೊಳ್ಳಬೇಕಾಗುವುದು. ಇಲ್ಲವಾದರೆ ಉದ್ದೇಶಿತ ಗುರಿಗಳನ್ನು ಸಾಧಿಸಲು ಸಾಧ್ಯವಾಗಲಾರದು.

**ಸಹಪಠ್ಯಕ್ರಮ ಚಟುವಟಿಕೆಗಳ ವಿಧಗಳು:**

ಸಹಪಠ್ಯ ಚಟುವಟಿಕೆಗಳಲ್ಲಿ ಹಲವಾರು ರೀತಿಯ ಚಟುವಟಿಕೆಗಳನ್ನು ಕಾಣುತ್ತೇವೆ. ಇಂತಹ ಚಟುವಟಿಕೆಗಳನ್ನು ಅವುಗಳ ಸ್ವರೂಪ, ಉದ್ದೇಶಗಳಿಗೆ ಅನುಗುಣವಾಗಿ ವಿಂಗಡಿಸಬಹುದು.

1. **ಶೈಕ್ಷಣಿಕ ಬೆಳವಣಿಗೆಯ ಚಟುವಟಿಕೆಗಳು:** ಅಧ್ಯಯನ ವಿಷಯಗಳ ಸಂಘಗಳು (ಉದಾ: ಗಣಿತ ಸಂಘಗಳು), ಕಲಾ ಸಂಘ, ಸಾಹಿತ್ಯಿಕ ಸಂಘಗಳ ಮೂಲಕ ಹಮ್ಮಿಕೊಳ್ಳುವ ಸಹಪಠ್ಯಚಟುವಟಿಕೆಗಳು.
2. **ಸೌಂದರ್ಯ ಪ್ರಜ್ಞೆ ಬೆಳವಣಿಗೆಯ ಚಟುವಟಿಕೆಗಳು:** ಚಿತ್ರಕಲೆ ಮತ್ತು ಬಣ್ಣ ಹಚ್ಚುವಿಕೆ, ಸಂಗೀತ ಮತ್ತು ನೃತ್ಯ, ನಾಟಕಗಳು, ಪ್ರದರ್ಶನಗಳು, ಚಿತ್ರಪಟ ಹಾಗೂ ಮಾದರಿಗಳ ತಯಾರಿಕೆ ಮುಂತಾದವು.
3. **ಸಾಂಸ್ಕೃತಿಕ ಚಟುವಟಿಕೆಗಳು:** ಧಾರ್ಮಿಕ ಹಬ್ಬಗಳ ಆಚರಣೆ, ನಾಡಹಬ್ಬಗಳ ಆಚರಣೆ, ಜನಪದಗೀತೆ ಮತ್ತು ನೃತ್ಯ ಪ್ರದರ್ಶನ, ಸಾಂಸ್ಕೃತಿಕ ಮಹತ್ವದ ಸ್ಥಳಗಳಿಗೆ ಭೇಟಿ ಮುಂತಾದವುಗಳು.
4. **ದೈಹಿಕ ಬೆಳವಣಿಗೆಯ ಚಟುವಟಿಕೆಗಳು:** ಕವಾಯತು ಮತ್ತು ಡ್ರಿಲ್, ಕ್ರೀಡೆ ಮತ್ತು ಆಟಗಳು, ಯೋಗಾಸನಗಳು, ಒಳಾಂಗಣ ಮತ್ತು ಹೊರಾಂಗಣ ಆಟಗಳು, ಜಲಕ್ರೀಡೆಗಳು, ಸ್ಕೌಟ್ಸ್ ಮತ್ತು ಗೈಡ್ಸ್, ಎನ್.ಸಿ.ಸಿ ಮತ್ತು ಎನ್.ಎಸ್.ಎಸ್. ಮುಂತಾದವುಗಳು.
5. **ಸಾಹಿತ್ಯಿಕ ಚಟುವಟಿಕೆಗಳು:** ಭಾಷಣ, ಚರ್ಚಾಸ್ಪರ್ಧೆಗಳು,

Digitised by Bharatavani, CIIL

ಕಾವ್ಯವಾಚನ, ಗೀತಗಾಯನ, ಬರವಣಿಗೆಯ ಸ್ಪರ್ಧೆಗಳು, ರಸಪ್ರಶ್ನೆ, ಅಂತ್ಯಾಕ್ಷರಿ, ವಿಶೇಷ ಉಪನ್ಯಾಸಗಳು, ಶಾಲಾ ಪತ್ರಿಕಾ ಪ್ರಕಟಣೆ, ಸಾಹಿತ್ಯಸಂಘಗಳು, ನಾಟಕಗಳು ಮುಂತಾದವುಗಳು.

6. **ವೈಜ್ಞಾನಿಕ ಚಟುವಟಿಕೆಗಳು:** ವಿಜ್ಞಾನಸಂಘಗಳು, ವಿಜ್ಞಾನ ಮೇಳಗಳು, ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮಗಳು, ವಿಜ್ಞಾನ ಪ್ರದರ್ಶನಗಳು, ವೈಜ್ಞಾನಿಕವಾಗಿ ಮಹತ್ವ ಪಡೆದ ಸ್ಥಳಗಳಿಗೆ ಭೇಟಿ ನೀಡುವುದು, ವೈಜ್ಞಾನಿಕ ಉಪನ್ಯಾಸ ಮುಂತಾದವುಗಳು.

7. **ಮೌಲ್ಯವಿಕಾಸದ ಚಟುವಟಿಕೆಗಳು:** ಸಮಾಜ ಸೇವಾ ಚಟುವಟಿಕೆಗಳು, ಮುಂಜಾನೆಯ ಪ್ರಾರ್ಥನೆ, ಪ್ರಸಿದ್ಧ ವ್ಯಕ್ತಿಗಳ ಜಯಂತಿಗಳ ಆಚರಣೆ, ನೈತಿಕ ಉಪನ್ಯಾಸ, ಧ್ಯಾನಶಿಬಿರ ಮುಂತಾದವುಗಳು,

8. **ಕಾರ್ಯಾನುಭವದ ಚಟುವಟಿಕೆಗಳು:** ಸೋಪು ತಯಾರಿಕೆ, ಗೊಂಬೆ ತಯಾರಿಕೆ, ಬುಟ್ಟಿ ನೇಯುವುದು, ತೋಟಗಾರಿಕೆ, ಪುಸ್ತಕಕ್ಕೆ ರಟ್ಟು ಹಾಕುವುದು, ಮಣ್ಣಿನ ಮಾದರಿಗಳ ತಯಾರಿಕೆ, ಕಸೂತಿ ಕೆಲಸ, ಬಟ್ಟೆ ಹೊಲೆಯುವುದು ಮುಂತಾದವುಗಳು.

9. **ವಿರಾಮ ವೇಳೆಯ ಚಟುವಟಿಕೆಗಳು:** ಅಂಚೆ ಚೀಟಿಗಳ ಸಂಗ್ರಹ, ನಾಣ್ಯಗಳ ಸಂಗ್ರಹ, ಚಿತ್ರಗಳ ಸಂಗ್ರಹ, ಪಕ್ಷಿವೀಕ್ಷಣೆ, ನಿಸರ್ಗ ವೀಕ್ಷಣೆ, ಆಲ್ಬಂ ತಯಾರಿಕೆ ಮುಂತಾದವುಗಳು.

10. **ಸಮಾಜ ಸೇವಾ ಚಟುವಟಿಕೆಗಳು:** ಸ್ಕೌಟ್ಸ್ ಮತ್ತು ಗೈಡ್ಸ್, ಎನ್.ಎಸ್.ಎಸ್., ಎನ್.ಸಿ.ಸಿ., ಸಮಾಜಸೇವೆ, ಶ್ರಮದಾನ, ಪ್ರಥಮ ಚಿಕಿತ್ಸೆ, ರೆಡ್ ಕ್ರಾಸ್ ಚಟುವಟಿಕೆಗಳು, ಗ್ರಾಮ ನೈರ್ಮಲ್ಯ ಮುಂತಾದವುಗಳು.

11. **ಪ್ರವಾಸ ಚಟುವಟಿಕೆಗಳು:** ಕಿರುಪ್ರವಾಸ, ಶೈಕ್ಷಣಿಕ ಪ್ರವಾಸ, ಬೆಟ್ಟ ಹತ್ತುವುದು, ವಿವಿಧ ಸ್ಥಳಗಳಿಗೆ ಭೇಟಿ ಮುಂತಾದವುಗಳು.

12. **ಪೌರತ್ವ ತರಬೇತಿ ಚಟುವಟಿಕೆಗಳು:** ಅಣಕು ಸಂಸತ್ತು, ವಿದ್ಯಾರ್ಥಿ ಸಭೆ, ಶಾಲಾ ಸಭೆ, ಪೌರತ್ವ ತರಬೇತಿ ಶಿಬಿರ, ಶಾಲಾ ಬ್ಯಾಂಕ್, ಶಾಲಾ ನ್ಯಾಯಾಲಯ, ಆಡಳಿತ ಕಛೇರಿ ಹಾಗೂ ನ್ಯಾಯಾಲಯಗಳಿಗೆ ಭೇಟಿ ಮುಂತಾದವುಗಳು.

13. **ಪ್ರಾಯೋಜನಾ (Project) ಚಟುವಟಿಕೆಗಳು:** ಸಮುದಾಯ ಸಮೀಕ್ಷೆ, ಗ್ರಾಮ ಸಮೀಕ್ಷೆ, ವಿವಿಧ ಬಗೆಯ ಶಿಬಿರಗಳು, ಸಾಮಾಜಿಕ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಯೋಜನೆಗಳು.

ಮೇಲಿನ ರೀತಿಯಲ್ಲಿ ಸಹಪಠ್ಯಚಟುವಟಿಕೆಗಳನ್ನು ವೈವಿಧ್ಯಪೂರ್ಣವಾಗಿ ಏರ್ಪಡಿಸಬಹುದು. ಸಹಪಠ್ಯಕ್ರಮ ಚಟುವಟಿಕೆಗಳ ಸಂಖ್ಯೆ ಮತ್ತು ವೈವಿಧ್ಯತೆ ಶಾಲೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಅವಲಂಬಿಸಿರುತ್ತದೆ.

**–ಡಾ. ಶರಣಮ್ಮ ಆರ್.**

## ಸಹ ಶಿಕ್ಷಣ

ಆಧುನಿಕ ಜಗತ್ತಿನ ಶಿಕ್ಷಣ ಅನೇಕ ವರ್ಷಗಳಿಂದ ವಿಶ್ವದ ಜನಸಮುದಾಯದಲ್ಲಿ ಆಲಿಕೆ, ಸ್ಮರಣೆ ಮತ್ತು ಸಂವಹನ ಪ್ರಕ್ರಿಯೆಗಳಿಗೇ ಅಂಟಿಕೊಂಡಿತ್ತು. ಈ ಪ್ರಕ್ರಿಯೆಗಳಲ್ಲಿ ಹೆಚ್ಚು ಸಾಮರ್ಥ್ಯ ಮತ್ತು ಕೌಶಲ್ಯ ಹೊಂದಿರುವ ಕೆಲವೇ ಮಂದಿ ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಿದರು. ಈ ಸಾಮರ್ಥ್ಯಗಳನ್ನೇ ಬಳಸಿಕೊಂಡು ಕೆಲವು ನಿರ್ದಿಷ್ಟ ಜನಸಮುದಾಯಗಳು, ಜನಸಾಮಾನ್ಯರಿಗೆ ತಮ್ಮ ತಮ್ಮ ಧಾರ್ಮಿಕ ನಂಬಿಕೆಗಳನ್ನಾಧರಿಸಿ ಜೀವನ ಶೈಲಿಯನ್ನು ರೂಪಿಸಿಕೊಳ್ಳಲು ಉಪದೇಶಿಸಲಾರಂಭಿಸಿದರು. ಭಾರತದ ಜನಜೀವನವೂ ಧರ್ಮಾಧಾರಿತ ಶಿಕ್ಷಣ ಮತ್ತು ಶಾಲಾ ವ್ಯವಸ್ಥೆಯನ್ನೇ ಪ್ರಧಾನವಾಗಿ ಅವಲಂಬಿಸಿತ್ತು.

ಹದಿನೈದನೆಯ ಶತಮಾನದಲ್ಲಿನ ಚಿಂತಕರು ಪ್ರಯೋಗಶೀಲ ದೃಷ್ಟಿಕೋನವನ್ನು ಬಲವಾಗಿ ಪ್ರತಿಪಾದಿಸಿದ್ದೇ ಅಲ್ಲದೆ ವೈಜ್ಞಾನಿಕ ಜ್ಞಾನಾರ್ಜನೆಗೆ ಹೆಚ್ಚು ಪ್ರಾಶಸ್ತ್ಯ ನೀಡಿ, ಮಕ್ಕಳ ಮತ್ತು ಯುವಕರ ಶಿಕ್ಷಣದಲ್ಲಿ ಅಳವಡಿಸಲು ಆಗ್ರಹಿಸಿದ್ದರು. ಅದೇ ವೇಳೆ ಜನಸಾಮಾನ್ಯರ ಚಿಂತನೆ ಮತ್ತು ನಡವಳಿಕೆಯಲ್ಲಿ ಪುರೋಹಿತಶಾಹಿಯ ಪ್ರಭಾವವನ್ನು ತಗ್ಗಿಸಲೂ ಪ್ರಯತ್ನಿಸಿದ್ದರು. ಸಾರ್ವಜನಿಕರ ಭಾವನೆಗಳೂ ಮಹಿಳಾ ವಿಮೋಚನೆಯತ್ತ ಹೆಚ್ಚು ಒಲವು ತೋರಿದ್ದರಿಂದ ಬಾಲಿಕಾ ಶಿಕ್ಷಣವೂ ಪ್ರಾಮುಖ್ಯ ಪಡೆದಿತ್ತು. ಆದಾಗ್ಯೂ ಒಂದು ಶತಮಾನಕ್ಕೂ ಹೆಚ್ಚು ಕಾಲ ಭರತಖಂಡವು ಮಹಿಳಾ ಶಿಕ್ಷಣದ ವಿಚಾರದಲ್ಲಿ ಸಂಕುಚಿತವಾಗಿಯೇ ಉಳಿದಿತ್ತು.

ಭಾರತದೊಡನೆ ವ್ಯಾಪಾರ ಮತ್ತು ವಾಣಿಜ್ಯದ ಉದ್ದೇಶಕ್ಕಾಗಿಯೇ ಆಗಮಿಸಿದ ಐರೋಪ್ಯ ರಾಷ್ಟ್ರಗಳು ಭಾರತದ ವ್ಯಾಪಾರಿಗಳಿಗೆ ಮತ್ತು ವಾಣಿಜ್ಯೋದ್ಯಮಿಗಳಿಗೆ ವಿದೇಶಿ ಮಾರುಕಟ್ಟೆಯ ಬಾಗಿಲನ್ನು ತೆರೆದಿದ್ದವು. ಸ್ಥಳೀಯ ರಾಜರುಗಳು ಐರೋಪ್ಯರಿಗೆ ಪ್ರಬಲ ಪ್ರತಿರೋಧ ವ್ಯಕ್ತಪಡಿಸದ ಕಾರಣ ವಿದೇಶಿ ವ್ಯಾಪಾರಿಗಳು ಇಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸುವುದು ಸುಲಭವಾಯಿತು. ತತ್ಪರಿಣಾಮವಾಗಿ ಸ್ಥಳೀಯರೊಡನೆ ತಮ್ಮ ವ್ಯಾಪಾರ ವೃದ್ಧಿಸಿಕೊಂಡ ಐರೋಪ್ಯರು ತಮ್ಮ ಧರ್ಮ ಪ್ರಚಾರಕರಿಗೂ ಭಾರತದಲ್ಲಿ ಪ್ರವೇಶಿಸಲು ಅವಕಾಶ ಮಾಡಿಕೊಟ್ಟರು. ಭಾರತದಲ್ಲಿ ನೆಲೆಸಿದ ಅವಧಿಯಲ್ಲೇ ಕ್ರೈಸ್ತ ಧರ್ಮ ಪ್ರಚಾರಕ ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರವನ್ನು ಸಾಮಾಜಿಕ ಸೇವೆಗೂ ವಿಸ್ತರಿಸಿ ಬಡ ಮತ್ತು ಶೋಷಿತ ಜನಸಮುದಾಯಗಳಿಗೆ ಉತ್ತಮ ಆರೋಗ್ಯ ಸೌಕರ್ಯಗಳನ್ನು ಒದಗಿಸಸು ಆರಂಭಸಿದವು. ಕಿತ್ತು ತಿನ್ನುತ್ತಿದ್ದ ಬಡತನದ ಪರಿಣಾಮವಾಗಿ ಈ ಧರ್ಮ ಪ್ರಚಾರಕರಿಗೆ ಸಾಮಾನ್ಯ ಜನತೆಯನ್ನು ಕ್ರೈಸ್ತ ಮತಕ್ಕೆ ಮತಾಂತರಗೊಳಿಸುವುದು ಸುಲಭವಾಯಿತು. ತತ್ಪರಿಣಾಮವಾಗಿ ಕ್ರೈಸ್ತ ಧರ್ಮ ಪ್ರಚಾರಕ ಸಂಸ್ಥೆಗಳು ನೆಲೆಯೂರಿದೆಡೆಯೆಲ್ಲಾ ಮತೀಯ ಸಂಘರ್ಷಗಳು ಉಲ್ಬಣಗೊಂಡವು. ಸ್ಥಳೀಯ ನಾಯಕರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಈ ಸಂಘರ್ಷಗಳನ್ನು ಮತ್ತುಷ್ಟ ತೀವ್ರಗೊಳಿಸಿದ್ದರು.

Digitised by Bharatavani, CIIL

1765 ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ರಾಜಕೀಯ ಅಧಿಕಾರ ವಹಿಸಿಕೊಂಡ ನಂತರ, 1783 ರಲ್ಲಿ ಕೊಲ್ಕತ್ತಾದಲ್ಲಿ ಮದರಸಾವನ್ನೂ, 1791 ರಲ್ಲಿ ಬನಾರಸ್‌ನಲ್ಲಿ ಸಂಸ್ಕೃತ ಕಾಲೇಜನ್ನೂ ಆರಂಭಿಸಲಾಯಿತು. ಪಶ್ಚಿಮ ಬಂಗಾಲದ ಚಾರ್ಟರ್ ಕಾಯ್ದೆ ಶಿಕ್ಷಣದ ವಿಸ್ತರಣೆಗಾಗಿ ವಿಶೇಷ ನಿಧಿಯನ್ನು ಒದಗಿಸಿತಾದರೂ ಬಾಲಿಕಾ ಶಿಕ್ಷಣವನ್ನು ಕುರಿತು ವಿಶೇಷ ಕಾಳಜಿಯನ್ನೇನೂ ತೋರಲಿಲ್ಲ. ಲಾರ್ಡ್ ಡಾಲ್‌ಹೌಸಿ ಬಾಲಿಕಾ ಶಿಕ್ಷಣದಲ್ಲಿ ವಿಶೇಷ ಆಸಕ್ತಿ ವಹಿಸಿದ್ದರು. ಇದು ಸ್ಥಳೀಯ ಜನತೆಯಿಂದ ಪ್ರಶಂಸೆಗೂ ಒಳಗಾಗಿತ್ತು. ತದನಂತರ 1857 ರಲ್ಲಿ ಜಾರಿ ಗೊಳಿಸಲಾದ 'ವುಡ್ಸ್ ಡೆಸ್ಪಾಚ್' ಎಂಬ ವರದಿ "ಭಾರತದಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯ ನೀಡಬೇಕಾದ ಅವಶ್ಯಕತೆಯನ್ನು ಉತ್ಪ್ರೇಕ್ಷೆ ಮಾಡಲಾಗುವುದಿಲ್ಲ" ಎಂದು ಹೇಳುವ ಮೂಲಕ ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸುವಲ್ಲಿ ದಿಟ್ಟ ಹೆಜ್ಜೆ ಇಟ್ಟಿತ್ತು. ಇಂದಿಗೂ ಭಾರತದಲ್ಲಿ ಬಾಲಿಕಾ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡುತ್ತಿದ್ದರೆ ಈ ಪ್ರವೃತ್ತಿಗೆ ವುಡ್ಸ್ ಡೆಸ್ಪಾಚ್ ಪ್ರಮುಖ ಕಾರಣ ಎಂದು ನಿಸ್ಸಂಶಯವಾಗಿ ಹೇಳಬಹುದು. ಅಷ್ಟೇ ಅಲ್ಲ ಭಾರತದಲ್ಲಿ ಮಹಿಳಾ ಶಿಕ್ಷಣದ ಪ್ರಗತಿ ಕುಂಠಿತವಾಗಿರುವುದನ್ನು ಕುರಿತೂ ಈ ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿತ್ತು. ಶಿಕ್ಷಣದ ಬಗ್ಗೆ ಸಮೀಕ್ಷೆ ನಡೆಸಿದ್ದ ಹೋವೆಲ್ಸ್ ವರದಿಯ ಪ್ರಕಾರ 1870 ರ ಅವಧಿಯಲ್ಲಿ ಇಡೀ ಭಾರತದಲ್ಲಿ ಕೇವಲ 1768 ಬಾಲಿಕಾ ಶಾಲೆಗಳಿದ್ದವು. ಶಿಕ್ಷಣದ ವಿಸ್ತರಣೆಗೆ ಸಂಬಂಧಿಸಿದಂತೆ ಭಾರತದಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿಲ್ಲ, ಹಾಗಾಗಿ ಹೆಚ್ಚು ಹೆಚ್ಚು ಬಾಲಿಕಾ ಶಾಲೆಗಳನ್ನು ತೆರೆಯಲು ಸರ್ಕಾರ ಮುಂದಾಗಬೇಕೆಂದು ಹಂಟರ್ ಆಯೋಗವೂ (1882) ವರದಿ ಮಾಡಿತ್ತು.

1920ರ ಅವಧಿಯಲ್ಲಿ, ದೇಶದಲ್ಲಿ ಸಾಮಾಜಿಕ-ರಾಜಕೀಯ ಜಾಗೃತಿ ಮೂಡುತ್ತಿದ್ದ ಸಂದರ್ಭದಲ್ಲೇ ಬಾಲಿಕಾ ಶಿಕ್ಷಣದ ಪರಿಕಲ್ಪನೆಯೂ ಗರಿಗೆದರಿತ್ತು. ಒಬ್ಬ ಮಹಿಳೆ ಶಿಕ್ಷಿತಳಾದರೆ ಒಂದು ಕುಟುಂಬ ಶಿಕ್ಷಿತವಾದಂತೆ ಎಂದು ರಾಜಗೋಪಾಲ್ (1920) ಪ್ರತಿಪಾದಿಸಿದ್ದರು. ಈ ಚಿಂತನೆ ಗಾಂಧೀಜಿಯವರ ಬಾಲಿಕಾ ಶಿಕ್ಷಣ ಸಿದ್ಧಾಂತವನ್ನು ಬಲಗೊಳಿಸಿತು. ಆನಿಬೆಸೆಂಟ್ ಸಹ ಇದೇ ತತ್ವವನ್ನು ಪ್ರೋತ್ಸಾಹಿಸುವುದರಲ್ಲಿ ತೊಡಗಿದ್ದರು. ಆದರೆ ಬಾಲಿಕಾ ಶಿಕ್ಷಣದ ಬಗ್ಗೆ ಇತ್ಯಾತ್ಮಕ ಧೋರಣೆ ಹೆಚ್ಚಾಗುತ್ತಿದ್ದಾಗ್ಯೂ ಪುರುಷ ಪ್ರಧಾನ ಶಾಲಾ ವ್ಯವಸ್ಥೆ ತನ್ನ ಪ್ರಾಬಲ್ಯವನ್ನು ಮುಂದುವರೆಸಿತ್ತು. ಇದೇ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರದಿಂದ ಕೆಲವು ಸ್ವಾಗತಾರ್ಹ ಕ್ರಮಗಳನ್ನು ಕೈಗೊಳ್ಳಲಾಯಿತು. 1921 ರಲ್ಲಿ ದ್ವಿಪ್ರಭುತ್ವ ಸ್ಥಾಪನೆಯಾದ ನಂತರ ಮಹಿಳಾ ಶಿಕ್ಷಣಕ್ಕೆ ಮುಕ್ತ ಬೆಂಬಲ ವ್ಯಕ್ತವಾಗಿತ್ತು. ಇದರ ಪರಿಣಾಮವಾಗಿ ಹಾರ್ಟಾಗ್ ಆಯೋಗವು (1929) ಬಾಲಿಕಾ ಶಿಕ್ಷಣಕ್ಕೆ ಪ್ರಾಮುಖ್ಯ ನೀಡಲು ಶಿಫಾರಸ್ಸು ಮಾಡಿತ್ತು. ಶೈಕ್ಷಣಿಕ ಹಕ್ಕುಗಳಲ್ಲಿ ಮಹಿಳೆಯರನ್ನು ಪುರುಷರಿಗೆ ಸಮಾನವಾಗಿ ಪರಿಗಣಿಸಲು ಆಯೋಗ ಆಗ್ರಹಿಸಿತ್ತು. 1930ರ ದಶಕದಲ್ಲಿ ಬಂಗಾಲ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ಹೆಚ್ಚು ಸಂಖ್ಯೆಯ ಬಾಲಿಕೆಯರು ಬಾಲಕರ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ಈ ಮೂರು ರಾಜ್ಯಗಳಲ್ಲಿ ಜಾರಿಗೊಳಿಸಲಾದ ಕ್ರಮಗಳ ಪರಿಣಾಮವಾಗಿ ಶಾಲೆಗಳಲ್ಲಿ ಬಾಲಿಕೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದನ್ನು ಆಂಡರ್‌ಸನ್ (1932) ಗುರುತಿಸುತ್ತಾರೆ.

ಬಾಲಿಕಾ ಶಿಕ್ಷಣವನ್ನು ನಿರ್ಲಕ್ಷ್ಯ ಮಾಡಿದ್ದ ಸಾರ್ಜೆಂಟ್ ವರದಿಯನ್ನು ರಾಷ್ಟ್ರೀಯ ಮಹಿಳಾ ಶಿಕ್ಷಣ ಸಮಿತಿಯು (NCWE 1958) ತೀವ್ರವಾಗಿ ಖಂಡಿಸಿತ್ತು. ಆದರೆ ಈ ಸಮಿತಿಯೂ ಬಾಲಕ ಮತ್ತು ಬಾಲಕಿಯರ ಶಿಕ್ಷಣಗಳಲ್ಲಿ ಭಿನ್ನತೆ ಇರಬೇಕೆಂದು ಭಾವಿಸಿತ್ತು. ಸಹ ಶಿಕ್ಷಣಕ್ಕೆ ಸ್ಪಷ್ಟವಾದ ಆದೇಶ ನೀಡುವಲ್ಲಿ ಸೆಕೆಂಡರಿ ಶಿಕ್ಷಣ ಆಯೋಗವೂ (1953) ವಿಫಲವಾಗಿತ್ತು. ಬಾಲಕಿಯರ ಶಿಕ್ಷಣಕ್ಕೆ ಪೂರಕವಾದ ಭೌತಿಕ ಸೌಕರ್ಯಗಳು, ಪಠ್ಯ ವಿಷಯಗಳು ಮತ್ತು ಮಾನಸಿಕ ಅಭಿವೃದ್ಧಿಯ ದೃಷ್ಟಿಯಿಂದ ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸುವಂತೆ ಈ ಆಯೋಗ ಶಿಫಾರಸು ಮಾಡಿತ್ತು. ತದನಂತರದಲ್ಲಿ ದುರ್ಗಾಭಾಯಿ ದೇಶಮುಖ್ ಸಮಿತಿ (1959)ಯು ಪ್ರಾಥಮಿಕ ಹಂತದಲ್ಲಿ ಸಹ ಶಿಕ್ಷಣ ಜಾರಿಗೊಳಿಸುವಂತೆ ಆಗ್ರಹಿಸಿತ್ತು. ಮಧ್ಯಂತರ ಹಂತಕ್ಕೆ ಸಂಬಂಧಿಸಿದಂತೆ ಈ ವಿಚಾರದಲ್ಲಿ ಸ್ಪಷ್ಟ ನಿಲುವು ತಾಳಲಿಲ್ಲವಾದರೂ ಮಾಧ್ಯಮಿಕ (ಸೆಕೆಂಡರಿ) ಹಂತದಲ್ಲಿ ಸಹಶಿಕ್ಷಣವನ್ನು ಆಲವಡಿಸಲು ಬಲವಾದ ಆಕ್ಷೇಪಗಳು ಕೇಳಿಬಂದಿದ್ದವು. 1974 ರಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಪರಾಮರ್ಶಿಸಲು ನೇಮಿಸಿದ ಸಮಿತಿಯು, ಪ್ರಾದೇಶಿಕ ಪ್ರಾತಿನಿಧಿತ್ವ ಮತ್ತು ಗ್ರಾಮೀಣ/ನಗರ ಕೇಂದ್ರಗಳ ಸಂದರ್ಭಗಳ ಹಿನ್ನೆಲೆಯಲ್ಲಿ ಸಮೀಕ್ಷೆಯೊಂದನ್ನು ನಡೆಸಿತ್ತು. ಪರ್ದಾ ಪದ್ಧತಿ ಅನುಸರಿಸುತ್ತಿದ್ದ ಸಮುದಾಯಗಳಾದ ಹರ್ಯಾಣ-ರಾಜಸ್ಥಾನದ ಮಿಯೋ ಜನಾಂಗ, ಬಿಹಾರ ಮತ್ತು ಉತ್ತರ ಪ್ರದೇಶದ ಮುಸಲ್ಮಾನರು, ಕೇರಳದ ಮೋಪ್ಲಾಗಳು ತಮ್ಮ ಬಾಲಕಿಯರಿಗೆ ಸಹಶಿಕ್ಷಣ ನೀಡುವುದನ್ನು ಬಲವಾಗಿ ವಿರೋಧಿಸಿದ್ದವು. ಆದರೂ ಜಮ್ಮು ಮತ್ತು ಕಾಶ್ಮೀರದ ಮುಸ್ಲಿಮರು ಈ ದೃಷ್ಟಿಕೋನವನ್ನು ವಿರೋಧಿಸಿರಲಿಲ್ಲ. ಕೆಲವು ಹಿಂದೂ ಧಾರ್ಮಿಕ ಸಮಿತಿಗಳೂ ಬಾಲಿಕಾ ಶಿಕ್ಷಣದ ಸಹಶಿಕ್ಷಣ ವ್ಯವಸ್ಥೆಯನ್ನು ವಿರೋಧಿಸಿದ್ದವು.

ಮತೀಯ ಶಿಕ್ಷಣ ಸಂಸ್ಥೆಗಳು ಆರಂಭಿಸುವ ಶೈಕ್ಷಣಿಕ ಸಂಸ್ಥೆಗಳು ಇಂದಿಗೂ ಸಹ ಶಿಕ್ಷಣವನ್ನು ವಿರೋಧಿಸುತ್ತಲೇ ಇವೆ. ಪ್ರಸಕ್ತ ಸನ್ನಿವೇಶದಲ್ಲಿ ಸಹಶಿಕ್ಷಣದ ಪರಿಕಲ್ಪನೆಯನ್ನು ಮಹಿಳಾ ಸಬಲೀಕರಣದ ಸಾಧನವಾಗಿ ಬಳಸಿ ಕೊಳ್ಳಲಾಗುತ್ತಿದೆ. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಪ್ರಾಥಮಿಕ ಹಂತದಿಂದ ಹಿಡಿದು ತೃತೀಯ ಶ್ರೇಣಿ ಶಿಕ್ಷಣದವರೆಗೂ ಸಹಶಿಕ್ಷಣ ವ್ಯವಸ್ಥೆ ಅನುಸರಿಸಲು ಹೆಚ್ಚು ಪ್ರಾಮುಖ್ಯ ನೀಡಲಾಗುತ್ತಿದ್ದು, ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಹಂತದಿಂದ ಪದವಿ ಹಂತದವರೆಗೂ ಪ್ರತ್ಯೇಕ ಶಿಕ್ಷಣ ನೀಡುವುದು ಸಾಮಾನ್ಯವಾಗಿದೆ. ಮಾಧ್ಯಮಿಕ ಮತ್ತು ಪದವಿ ಹಂತದಲ್ಲಿ ಸಹಶಿಕ್ಷಣ ನೀಡಲು ಏಕೆ ಹಿಂಜರಿಯಲಾಗುತ್ತಿದೆ ಎಂಬ ಸಂಗತಿಯನ್ನು ಗಂಭಿರವಾಗಿ ಪರಾಮರ್ಶಿಸುವ ಅಗತ್ಯವಿದೆ. ಹಾಗಾಗಿ ಸಾಮಾಜಿಕ-ಮಾನಸಿಕ ಸನ್ನಿವೇಶಗಳನ್ನು ಗ್ರಹಿಸುವ ಮೂಲಕ ಸಹಶಿಕ್ಷಣವನ್ನು ಪ್ರಾಯೋಗಿಕವಾಗಿ ಪರಾಮರ್ಶಿಸುವ ಅಗತ್ಯತೆ ಇಂದು ಹೆಚ್ಚಾಗಿದೆ.

Digitised by Bharatavani, CIIL

ಬಾಲಕಿಯರ ಸಾಮರ್ಥ್ಯ ಮತ್ತು ಭವಿಷ್ಯದ ಅಗತ್ಯತೆಗಳನ್ನು ಕುರಿತಂತೆ ಜನರಲ್ಲಿ ವಿಭಿನ್ನ ನಂಬಿಕೆಗಳು, ಮಿಥ್ಯೆಗಳು ಅಡಕವಾಗಿವೆ. ಆದರೆ ಮಾಧ್ಯಮಿಕ–ಹಿರಿಯ ಮಾಧ್ಯಮಿಕ ಹಂತದಲ್ಲಿ ಸಹಶಿಕ್ಷಣವನ್ನು ನಿರಾಕರಿಸುವ ಮನೋಭಾವದ ಹಿಂದಿರುವ ಮುಖ್ಯ ಕಾರಣವೆಂದರೆ ಶಿಕ್ಷಣ ಲೈಂಗಿಕ ನಮೂನೀಕರಣಕ್ಕೆ ಸಂಬಂಧಿಸಿದೆ. ಹಾಗಾಗಿ ಈ ಅಂಶವನ್ನು ಕುರಿತು ವಿಶ್ಲೇಷಣೆ ಅಗತ್ಯ.

**ಲೈಂಗಿಕ ನಮೂನೀಕರಣ:** ಮಕ್ಕಳು ಮೂರು ವರ್ಷ ಪೂರೈಸಿದ ಕೂಡಲೇ ಬಾಲಕ/ಬಾಲಕಿಯಾಗಿ ತಮ್ಮ ಲೈಂಗಿಕ ಅನನ್ಯತೆಯನ್ನು ಗುರುತಿಸಿಕೊಳ್ಳುತ್ತಾರೆ (ಥಾಂಪ್ಸನ್ 1975). ಐದು ಅಥವಾ ಆರನೆಯ ವಯಸ್ಸಿನಲ್ಲಿ ಲಿಂಗ ಸ್ಥಾಯಿತ್ವವನ್ನು ಹೊಂದುತ್ತಾರೆ (ಮಾರ್ಕಸ್ ಮತ್ತು ಓವರ್‌ಟೋನ್ 1978). ಈ ಓರಿಗೆಯ ನಂತರದ ಮಕ್ಕಳು ಅನ್ಯ ಲಿಂಗ ನಡವಳಿಕೆಗಳನ್ನು ದೂರ ಇರಿಸಲು ಯತ್ನಿಸುತ್ತಾರೆ. ಇತರ ಮಕ್ಕಳ ಆ ರೀತಿಯ ವರ್ತನೆಗಳನ್ನು ಖಂಡಿಸುವುದರಲ್ಲೂ ತೊಡಗುತ್ತಾರೆ (ಡಾಮನ್ 1977).

ವಿಭಿನ್ನ ಸಂಸ್ಕೃತಿಗಳ ಅಧ್ಯಯನದ ಮೂಲಕ ವ್ಯಕ್ತವಾಗುವ ಅಂಶ, ಎಲ್ಲ ಜನಸಂಸ್ಕೃತಿಗಳಲ್ಲೂ ಬಾಲಕ ಮತ್ತು ಬಾಲಕಿಯರಿಗೆ ವಿಭಿನ್ನ ಪಾತ್ರಗಳನ್ನು ನೀಡಲಾಗಿದೆ ಎನ್ನುವುದು. ಬಾಲಕರು ಆಟವಾಡಲು ಬಳಸುವ ಆಟಿಕೆಗಳು, ಯಾಂತ್ರಿಕ ಸಲಕರಣೆಗಳು, ವಿಡಿಯೋ ಗೇಮ್ಸ್, ಫುಟ್‌ಬಾಲ್ ಮತ್ತಿತರ ಆಟಗಳು ದೃಶ್ಯ ಅವಕಾಶೀಯ ಕೌಶಲ್ಯವನ್ನು ವೃದ್ಧಿಸಲು ನೆರವಾದರೆ, ಬಾಲಕಿಯರು ಬಳಸುವ ಟೆಡ್ಡಿ ಬೇರ್‌ನಂತಹ ಬೊಂಬೆಗಳು, ಮನೆಯಾಟ ಮುಂತಾದವುಗಳು ದೃಶ್ಯ–ಸಂಕೇತ ಕೌಶಲ್ಯಗಳ ವೃದ್ಧಿಗೆ ನೆರವಾಗುತ್ತವೆ ಎಂದು ಲಿಸ್ (1983) ಎಂಬ ಚಿಂತಕರು ಪ್ರತಿಪಾದಿಸುತ್ತಾರೆ. ನಂತರ ಬಾಲಕ ಬಾಲಕಿಯರು ಪ್ರತ್ಯೇಕವಾದ ಮತ್ತು ಸ್ವಂತ ಮಾನಸಿಕ ಕಾರ್ಯಕ್ಷಮತೆಯನ್ನು ಗಳಿಸಲಾರಂಭಿಸುತ್ತಾರೆ. ಹಾಗಾಗಿ ಈ ವಿಶಿಷ್ಟ ಅಂಶವೇ ಲಿಂಗವನ್ನು ಪ್ರಬಲ ಶೈಕ್ಷಣಿಕ ಪ್ರಭೇದವನ್ನಾಗಿ ನಿರ್ಧರಿಸುತ್ತದೆ ಮಾರ್ಟಿನ್ 1981). ಈ ನಿಟ್ಟಿನಲ್ಲೇ ಅಮೆರಿಕದಲ್ಲಿ ಅಸಹನೆ ಮತ್ತು ಆಕ್ರಮಣಕಾರಿ ಮನೋಭಾವವನ್ನು ಬಾಲಕರ ಲಕ್ಷಣವೆಂದು ಪರಿಗಣಿಸ ಲಾಗುವುದೇ ಹೊರತು, ಬಾಲಕಿಯರ ಲಕ್ಷಣವೆಂದಲ್ಲ (ಬ್ರೆಡ್ಸ್‌ಲಿ 1977 ಮತ್ತು ಬ್ಲೂಮ್ ಮತ್ತಿತರರು 1975). ಇದೇ ಪ್ರವೃತ್ತಿಯನ್ನು ನಮ್ಮ ಸಂಸ್ಕೃತಿಯಲ್ಲೂ ಕಾಣಬಹುದು. ಮನಶ್ಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಏಷ್ಯಾದ ಬಾಲಕಿಯರು, ಪಾಶ್ಚಿಮಾತ್ಯ ಬಿಳಿಯ ಬಾಲಕಿಯರಿಗಿಂತಲೂ ಹೆಚ್ಚು ಮನೋದೈಹಿಕ ರೋಗಗಳಿಗೆ ತುತ್ತಾಗುತ್ತಾರೆ (ಗ್ಲೋನರ್ ಮತ್ತಿತರರು 1989, ಕಿನ್ಸ್‌ಬರ್ಗ್ 1994 ಮತ್ತು ಮೆರ್ರಿಲ್ ಹಾಗೂ ಓವನ್ಸ್ 1986). ಈ ಪ್ರವೃತ್ತಿಯ ಕಾರಣ ಏಷ್ಯಾದಲ್ಲಿ ಹೆಣ್ಣು ಮಗುವನ್ನು ಸಲಹುವ ರೀತಿಯೇ ಆಗಿದೆ.

ಉತ್ತರ ಬಾಲಾವಸ್ಥೆಯ ಹಂತದವರೆಗೂ ಮಕ್ಕಳು ಗುಂಪು ವರ್ತನೆಯನ್ನು ಪ್ರದರ್ಶಿಸುತ್ತವೆ. ಈ ಹಂತದಲ್ಲಿ ಸಲಿಂಗೀಯ ಲಕ್ಷಣಗಳು ಸಾಮಾನ್ಯವಾಗಿರುತ್ತವೆ. ಆದರೆ ಪ್ರೌಢಾವಸ್ಥೆ ತಲುಪುತ್ತಿರುವಂತೆಲ್ಲಾ ಭಿನ್ನಲಿಂಗೀಯ ಲಕ್ಷಣಗಳು ಕಾಣಿಸಿಕೊಂಡು ಮಕ್ಕಳಲ್ಲಿ ಅನ್ಯಲಿಂಗದೊಡನೆ ಬೆರೆಯುವ ವರ್ತನೆ ಕಾಣುತ್ತದೆ. ಯೌವನದಲ್ಲಿ ಸ್ವಾಭಾವಿಕವಾಗಿಯೇ ಮೂಡುವ ಈ ಮಾನವ ಸಹಜ ವರ್ತನೆಯು ಭಾರತದ ಅನೇಕ ಧಾರ್ಮಿಕ ಸಂಘಟನೆಗಳಿಗೆ ಮತ್ತು ಪೋಷಕರಿಗೆ ಅನಪೇಕ್ಷಿತವಾಗಿ ಕಾಣುತ್ತದೆ. ಈ ಪ್ರವೃತ್ತಿಯೇ ಯೌವನಾವಸ್ಥೆಯ ನಂತರದಲ್ಲಿ ಸಹಶಿಕ್ಷಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವಲ್ಲಿ ತೊಡಕಾಗಿ ಪರಿಣಮಿಸುತ್ತದೆ. ಯೌವನಾವಸ್ಥೆ ತಲುಪಿದ ಬಾಲಕಿಯರಿಗೆ ಸಹ ಶಿಕ್ಷಣವನ್ನು ನೀಡಲು ಒಪ್ಪದಿರಲು ಈ ಕೆಲವು ಕಾರಣಗಳನ್ನು ಉದಹರಿಸಬಹುದು:

- ಪಠ್ಯ ಪುಸ್ತಕಗಳಲ್ಲಿ ಮಾದರಿ ಮಹಿಳಾ ಪಾತ್ರಗಳು ಇರುವುದಿಲ್ಲವಾದ್ದರಿಂದ ಲಿಂಗಾಧಾರಿತ ಮಹತ್ವಕ್ಕೇ ಹೆಚ್ಚು ಒತ್ತು ನೀಡಲಾಗುತ್ತದೆ. (ಸಾಡ್ಕರ್ ಮತ್ತಿತರರು 1991)
- ಬಾಲಕರು ಮತ್ತು ಬಾಲಕಿಯರು ಶಾಲೆಯ ಚಟುವಟಿಕೆಗಳಲ್ಲಿ ಒಟ್ಟಾಗಿ ಭಾಗವಹಿಸುತ್ತಾರೆ. (ಡೀಮ್ 1978)
- ತರಗತಿಗಳಲ್ಲಿ ತಯಾರಿಸಲಾಗುವ ಯೋಜನೆಗಳೆಲ್ಲವೂ ಪುರುಷ ಮಾದರಿಯನ್ನು ಅವಲಂಬಿಸಿರುತ್ತವೆ.
- ಶಿಕ್ಷಕರು ಬಾಲಕಿಯರ ಸೌಂದರ್ಯಾಕರ್ಷಣೆ ಮತ್ತು ಲೈಂಗಿಕ ಆಕರ್ಷಣೆಯ ಬಗ್ಗೆ ನಿಕೃಷ್ಟವಾಗಿ ಮಾತನಾಡುತ್ತಾರೆ. (ಡೇವಿಸ್ 1979)
- ಬಾಲಕರು ಮತ್ತು ಪುರುಷ ಶಿಕ್ಷಕರು ಬಾಲಕಿಯರ ಮೇಲೆ ದೈಹಿಕವಾಗಿ, ಮೌಖಿಕವಾಗಿ ಲೈಂಗಿಕ ದೌರ್ಜನ್ಯ ಎಸಗುತ್ತಾರೆ ಮತ್ತು ಅತ್ಯಾಚಾರಕ್ಕೆ ಮುಂದಾಗುತ್ತಾರೆ. (ಸ್ಪೈನ್ 1976, ಸೂವರ್ಸ್ 1993, ಜೋಮ್ಸ್ ಮತ್ತು ಕಿಸಿಂಜರ್ ಥಾಮಸ್ 1994)
- ವಲಸೆ ಬಂದ ಪೋಷಕರೂ ತಮ್ಮ ಮಕ್ಕಳನ್ನು ಪ್ರತ್ಯೇಕ ಶಾಲೆಗಳಿಗೆ ಕಳುಹಿಸಲು ಬಯಸುತ್ತಾರೆ. ತಮ್ಮ ಕುಲದ ತಾದಾತ್ಮ್ಯತೆಯನ್ನು ಉಳಿಸಿಕೊಳ್ಳಲು ಮತ್ತು ಕುಲದಲ್ಲೇ ವಿವಾಹ ಸಂಬಂಧಗಳನ್ನು ಕುದುರಿಸಲು ಈ ಮಾರ್ಗ ಅನುಸರಿಸುತ್ತಾರೆ.
- ಬಾಲಕಿಯರಿಗೆ ಶೌಚಾಲಯ ವ್ಯವಸ್ಥೆ ಇರುವುದಿಲ್ಲ.

ಈ ಎಲ್ಲಾ ನೇತ್ಯಾತ್ಮಕ ಅಭಿಪ್ರಾಯಗಳ ಹೊರತಾಗಿಯೂ ಅನೇಕ ಪೋಷಕರು ಸಹಶಿಕ್ಷಣ ತಮ್ಮ ಮಕ್ಕಳಿಗೆ ಅನುಕೂಲಕರ ಎಂದೇ ಹೇಳುತ್ತಾರೆ. ಏಕೆಂದರೆ ಸಹಶಿಕ್ಷಣದ ಪರಿಸರದಲ್ಲಿ ಮಕ್ಕಳಿಗೆ ತಮ್ಮ ಸಮುದಾಯಗಳಲ್ಲಿನ ವಯಸ್ಕರ ಪಾತ್ರದ ಮಹತ್ವ ಅರಿವಾಗುತ್ತದೆ. ಲಿಂಗ ವರ್ಗಗಳು ಚಲನಶೀಲವಾಗಿದ್ದು, ವರ್ತನೆ, ಮೌಲ್ಯ ಮತ್ತು ಗುಣಲಕ್ಷಣಗಳನ್ನು ಹೊಂದಿರುತ್ತವೆ. ಪುರುಷ/ಮಹಿಳೆಯರು ತಮ್ಮ ಪಾತ್ರವನ್ನು ಸಮಾನ ಸ್ವಾತಂತ್ರ್ಯದಿಂದ ಆಯ್ಕೆ ಮಾಡಿಕೊಳ್ಳಬಹುದಾಗಿದೆ (ಎಲಿ 1995). ಸಂಜ್ಞಾನಾತ್ಮಕ ವಿಕಾಸ ತತ್ವದ ಪ್ರತಿಪಾದಕರು ಹೇಳುವಂತೆ ಮಕ್ಕಳ ಲಿಂಗ ಬೆಳವಣಿಗೆಯು ಸಮಾಜವನ್ನಾಗಲೀ, ಜೈವಿಕ ಜ್ಞಾನವನ್ನು ಅವಲಂಬಿಸದೆ ಈ

Digitised by Bharatavani, CIIL

ಪ್ರಕ್ರಿಯೆಗಳ ಪರಿಕಲ್ಪನೆಯನ್ನೇ ಆಧರಿಸಿರುತ್ತದೆ (ಸೇಯರ್ಸ್ 1984).

ಜೀವನದ ಸಮಸ್ಯೆಗಳನ್ನು ಗ್ರಹಿಸುವಲ್ಲಿ ಅವೈಜ್ಞಾನಿಕ ಮಾರ್ಗಗಳನ್ನು ಅನುಸರಿಸದೆ, ಅಜ್ಞಾನವನ್ನು ಪ್ರದರ್ಶಿಸದೆ ಹೋದಲ್ಲಿ ಪುರುಷರು ಮತ್ತು ಮಹಿಳೆಯರು ತಮ್ಮ ಸಮಸ್ಯೆಗಳ ನಿವಾರಣೆಯಲ್ಲಿ ನಂಬಿಕೆ ಗಳಿಸುತ್ತಾರೆ. ವಯಸ್ಕರ ಬೆಳವಣಿಗೆಯ ದೃಷ್ಟಿಕೋನದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಕೆಲವು ಸಂಗತಿಗಳನ್ನು ಪರಾಮರ್ಶಿಸ ಬಹುದು:

**ಭೌತಿಕ ಬೆಳವಣಿಗೆ:** ಬಾಲ್ಯ ಮತ್ತು ಪ್ರೌಢಾವಸ್ಥೆಯ ಪೂರ್ವದ ಹಂತದಲ್ಲಿ ಬಾಲಕ ಬಾಲಕಿಯರು ಕ್ರಮೇಣವಾಗಿ, ಸ್ಥಿಮಿತದಿಂದ ಬೆಳೆಯುತ್ತಾರೆ. ಪ್ರೌಢಾವಸ್ಥೆಗೆ ಬರುವ ಮುನ್ನ ಬಾಲಕ ಬಾಲಕಿಯರ ಎತ್ತರ ಮತ್ತು ತೂಕದಲ್ಲಿ ಕ್ರಮೇಣವಾಗಿ ಶೇ.ಐದರಿಂದ ಹತ್ತರಷ್ಟು ವೃದ್ಧಿ ಒಂದು ವರ್ಷದ ಕಾಲ ಕಂಡುಬರುತ್ತದೆ. ಹತ್ತು ಅಥವಾ ಹನ್ನೊಂದನೆಯ ವರ್ಷದ ವೇಳೆಗೆ ಬಾಲಕರು ಬಾಲಕಿಯರಿಗಿಂತಲೂ ಹೆಚ್ಚು ತೂಕವಾಗಿ ಮತ್ತು ಎತ್ತರವಾಗಿರುತ್ತಾರೆ. ಆದರೆ ಬಾಲಕರಿಗೆ ಹೋಲಿಸಿದರೆ ಬಾಲಕಿಯರ ಬೆಳವಣಿಗೆ ಪ್ರಕ್ರಿಯೆ 9 ರಿಂದ 12ನೆಯ ವಯಸ್ಸಿನಲ್ಲೇ ಆರಂಭವಾಗುತ್ತದೆ. ಬಾಲಕರ ಬೆಳವಣಿಗೆ 11–14ನೆಯ ವಯಸ್ಸಿನಲ್ಲಿ ಆರಂಭವಾಗುತ್ತದೆ. 6 ರಿಂದ 14ನೆಯ ವಯಸ್ಸಿನಲ್ಲಿ ಬಾಲಕ ಬಾಲಕಿಯರು ಹೆಚ್ಚಿನ ಭೌತಿಕ ಕೌಶಲ್ಯ, ಸಾಮರ್ಥ್ಯ ಮತ್ತು ಸಹನೆಯನ್ನು ಗಳಿಸುತ್ತಾರೆ (ಸ್ಮಿತ್ ಮತ್ತಿತರರು 1998).

**ಲೈಂಗಿಕತೆಯ ಬೆಳವಣಿಗೆ:** ಪ್ರೌಢಾವಸ್ಥೆಯಲ್ಲಿ ಅಂಡಾಂಶಯ, ವೃಷಣಗಳು ಮತ್ತು ಅಡ್ರಿನಲ್ ಗ್ರಂಥಿಗಳಿಂದ ಹಾರ್ಮೋನ್‌ಗಳಾದ ಈಸ್ಟ್ರೋಜನ್ ಮತ್ತು ಆಂಡ್ರೋಜನ್ ಉತ್ಪತ್ತಿಯಾಗುತ್ತವೆ. ಈ ಲೈಂಗಿಕ ಹಾರ್ಮೋನ್‌ಗಳು ಪುರುಷರಲ್ಲೂ, ಮಹಿಳೆಯರಲ್ಲೂ ಇರುತ್ತವೆ. 11–12ನೆಯ ವಯಸ್ಸಿನಲ್ಲಿ ಬಾಲಕ/ಬಾಲಕಿಯರಲ್ಲಿ ನಿರ್ದಿಷ್ಟ ಪ್ರಮಾಣದ ಹಾರ್ಮೋನುಗಳು ಉತ್ಪತ್ತಿಯಾಗುತ್ತವೆ. ಬಾಲಕರಲ್ಲಿ ಹೆಚ್ಚು ಆಂಡ್ರೋಜನ್ ಉತ್ಪತ್ತಿಯಾದರೆ, ಬಾಲಕಿಯರಲ್ಲಿ ಹೆಚ್ಚು ಈಸ್ಟ್ರೋಜನ್ ಉತ್ಪತ್ತಿಯಾಗುತ್ತದೆ. ಆದ್ದರಿಂದಲೇ ಉಭಯ ಲಿಂಗಗಳೂ ಹಾರ್ಮೋನುಗಳನ್ನು ಉತ್ಪತ್ತಿ ಮಾಡುತ್ತವೆ ಎಂದೂ, ಲಿಂಗ ಪ್ರಭೇದಗಳು ಹಾರ್ಮೋನುಗಳನ್ನೇ ಆಧರಿಸಿದ್ದು ಎಂದು ಪ್ರತಿಪಾದಿಸಲಾಗುತ್ತದೆ. ಸಾಮಾನ್ಯವಾಗಿ ಮಹಿಳೆಯರು ಆಂಡ್ರೋಜನ್‌ಗಿಂತಲೂ ಹೆಚ್ಚಿನ ಪ್ರಮಾಣದ ಈಸ್ಟ್ರೋಜನ್ ಹೊಂದಿರುತ್ತಾರೆ. ಪುರುಷರು ಹೆಚ್ಚಿನ ಪ್ರಮಾಣದ ಆಂಡ್ರೋಜನ್ ಹೊಂದಿರುತ್ತಾರೆ. ಈ ಹಾರ್ಮೋನುಗಳ ಅನುಪಾತದಲ್ಲಿ ವ್ಯಕ್ತಿಗಳ ವ್ಯತ್ಯಯಗಳು ಅಪಾರ ಪ್ರಮಾಣದಲ್ಲಿರುತ್ತವೆ. ಈ ವ್ಯತ್ಯಯಗಳು ಎರಡೂ ಲಿಂಗ ಪ್ರಭೇದಗಳ ಬೆಳವಣಿಗೆಗೆ ಸಹಾಯಕವಾಗಿ ಪರಿಣಮಿಸುತ್ತವೆ (ಹೇಫನ್ ಮತಿತರರು 1978). ಲೈಂಗಿಕ ಹಾರ್ಮೋನುಗಳು ವಿಭಿನ್ನ ರೀತಿಯ ಭೌತಿಕ, ದೈಹಿಕ ಮತ್ತು ಸ್ನಾಯುಗಳ ಬೆಳವಣಿಗೆಗೆ ಅಡಿಪೋಸ್ ಸಂಗ್ರಹಣೆ, ಆಕ್ರಮಣಶೀಲತೆ, ಮೇದಸ್ಸು, ಸಂವೇಗಗಳು ಇವೇ ಮುಂತಾದ ಮಾನಸಿಕ ಬದಲಾವಣೆಗಳೂ ಸಂಭವಿಸುತ್ತವೆ.

**ಮಾನಸಿಕ ಬೆಳವಣಿಗೆ:** ಇತ್ತೀಚಿನ ನರರೋಗ ಶಾಸ್ತ್ರಜ್ಞರ ಸಂಶೋಧನೆಗಳು ಪುರುಷರಲ್ಲಿ ಹೆಚ್ಚಿನ ಬೌದ್ಧಿಕ ಸಾಮರ್ಥ್ಯ ಇರುತ್ತದೆ ಎಂಬ ವಾದವನ್ನು ನಿರಾಕರಿಸುತ್ತವೆ. ಬದಲಾಗಿ ಬೌದ್ಧಿಕ ಕ್ರಿಯಾಶಕ್ತಿಯು ವ್ಯಕ್ತಿಯ ಮೆದುಳಿನ ತೂಕವನ್ನು ಆಧರಿಸಿರುತ್ತದೆ. ಮೆದುಳಿನ ತೂಕ ಸ್ವಾಭಾವಿಕವಾಗಿಯೇ ಜೀವಕೋಶಗಳ ಬೆಳವಣಿಗೆ ಮತ್ತು ಗಾತ್ರ, ನ್ಯೂರಾನ್‌ಗಳ ವೃದ್ಧಿ ಹಾಗು ನರತಂತು ಮತ್ತು ಜೀವಕೋಶದ ಕವಲು ಚಾಚಿಕೆಗಳ ಕೋಶದ್ರವ್ಯ ಪ್ರಕ್ರಿಯೆಗಳನ್ನು ಅವಲಂಬಿಸಿರುತ್ತದೆ. ಇತ್ತೀಚಿನ ಸಂಶೋಧನೆಗಳ ಮೂಲಕ ನಿರೂಪಿತವಾಗಿರುವ ಅಂಶವೆಂದರೆ ಪೆರೈಟಲ್ ಲೋಬ್ (ಶಿರಭಿತ್ತಿ ಮಿದುಳಿನ ಪಾಲಿಯು) ವ್ಯಕ್ತಿಯ ಬೌದ್ಧಿಕ ಸಾಮರ್ಥ್ಯವನ್ನು ಅಳೆಯುವ ಉತ್ತಮ ಮಾನದಂಡವಾಗುವುದೇ ಹೊರತು, ಈ ಹಿಂದೆ ಭಾವಿಸಿದ್ದಂತೆ ಫ್ರಾಂಟಲ್ ಲೋಬ್ (ಮುಂಭಾಗದ ಪಾಲಿಯ) ಅಲ್ಲ (ಹಿಚ್ ಮತ್ತು ಲೆವಂದಟ್ 1978; ಹುಬೆಲ್ ಮತ್ತು ವೀಸಲ್ 1970; ಟ್ರೂನ್ 1982; ವೀಸ್ಟಲ್ ಮತ್ತು ಹುಬೆಲ್ 1963; ವೆಬ್ಸ್ಟರ್ ಮತ್ತು ವೆಬ್ಸ್ಟರ್ 1977). ಈ ಪ್ರತಿಪಾದನೆಗಳ ಹೊರತಾಗಿಯೂ ಪರಿಭಾವಿಸಲಾಗುವ ಸಂಗತಿ ಎಂದರೆ ಲಿಂಗಾಧಾರಿತ ವ್ಯತ್ಯಾಸಗಳು ಎಷ್ಟೇ ಹೆಚ್ಚಿನ ಪ್ರಮಾಣದಲ್ಲಿದ್ದರೂ ವ್ಯಕ್ತಿಗತವಾಗಿ ಕಾಣುವ ವ್ಯತ್ಯಾಸಗಳ ಮುಂದೆ ಗೌಣ ಎನಿಸುತ್ತವೆ (ಎಎಯುಟಬ್ಲ್ಯು 1989). ನರಶಾರೀರಿಕ ಸಂಶೋಧನೆಗಳೂ ಅವಕಾಶೀಯ ಕಾರ್ಯಶೀಲತೆ ಲಿಂಗಾಧಾರಿತ ಅನು ವಂಶೀಯತೆಯನ್ನು (ಪುರುಷರ ವೈ ವರ್ಗತಂತು) ಆಧರಿಸಿರುತ್ತದೆ ಎಂಬ ವಾದವನ್ನು ನಿರಾಕರಿಸುತ್ತವೆ. ಸಾಮಾನ್ಯವಾಗಿ ನೋಡಿದಾಗ ಪಿಯಾಜೆಯ ತತ್ವ ಪ್ರತಿಪಾದಿಸುವ ಲಿಂಗ ಭೇದಗಳು ಯಾವುದೇ ಪರಿಣಾಮ ಬೀರದಿರುವುದನ್ನು ಕಾಣಬಹುದು. ಇದು ಸೃಜನಾತ್ಮಕ ವಿಕಾಸದ ಮಟ್ಟಗಳ ಮೇಲೆ ಸಾಮರ್ಥ್ಯಗಳ ಬೆಳವಣಿಗೆಯಲ್ಲೂ ಅಷ್ಟೇ ಸತ್ಯ.

ಮೇಲೆ ಹೇಳಲಾದ ಅಂಶಗಳ ಹೊರತಾಗಿಯೂ, ಪೋಷಕರ ಮತ್ತು ಶಿಕ್ಷಕರ ದೃಷ್ಟಿಯಿಂದ ಶಿಕ್ಷಣದ ಬಗ್ಗೆ ವಿವಿಧ ಸಂಸ್ಕೃತಿಗಳ ದೃಷ್ಟಿಕೋನಗಳನ್ನು ಗ್ರಹಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಕೆಲವು ಸಂಶೋಧನಾತ್ಮಕ ವಿಷಯಗಳನ್ನು ಉಲ್ಲೇಖಿಸಲಾಗಿದೆ:

- ಸಹಶಿಕ್ಷಣ ಇಲ್ಲದ ಶಾಲೆಗಳಲ್ಲಿ ಓದುವ ಬಾಲಕಿಯರ ಸಾಧನೆ ಸಹಶಿಕ್ಷಣ ಇರುವ ಶಾಲೆಗಳಿಗಿಂತಲೂ ಉತ್ತಮವಾಗಿರುತ್ತದೆ. (ದುರು–ಬೆಲ್ಲಟ್ 1995)
- ಸಹಶಿಕ್ಷಣ ಇರುವ ಶಾಲೆಗಳಲ್ಲಿನ ಬಾಲಕಿಯರು ಗಣಿತ ಮತ್ತು ಭೌತ ಶಾಸ್ತ್ರಗಳಲ್ಲಿ ಕಡಿಮೆ ಅಂಕ ಗಳಿಸುತ್ತಾರೆ. (ಅರ್ನಾಟ್ 1983; ಬರ್ಗೆಸ್ 1990 ಮತ್ತು ಫಾಕ್‌ನರ್ 1991)
- ಸಹಶಿಕ್ಷಣ ಇಲ್ಲದ ಶಾಲೆಗಳಲ್ಲಿ ಬಾಲಕಿಯರು ಆತ್ಮಗೌರವ ಪ್ರದರ್ಶಿಸುತ್ತಾರೆ. (ಫಾಕ್‌ನರ್ 1991)
- ಸಹಶಿಕ್ಷಣ ಇಲ್ಲದ ಶಾಲೆಗಳಲ್ಲಿನ ಬಾಲಕರು, ಸಹಶಿಕ್ಷಣ ಶಾಲೆಗಳ ಬಾಲಕರಿಗಿಂತಲೂ ಸ್ಪಾನಿಷ್ ಭಾಷೆಯಲ್ಲಿ ಹೆಚ್ಚಿನ

Digitised by Bharatavani, CIIL

ಅಂಕ ಗಳಿಸುತ್ತಾರೆ. (ಪಾರ್ಚ್‌ಮೆಂಟ್ 1982)

- ಸಹಶಿಕ್ಷಣ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಬಾಲಕರು ಶಿಸ್ತು ಕಳೆದುಕೊಳ್ಳುವುದರಿಂದ ಸಾಧನೆ ಕ್ಷೀಣಿಸುತ್ತದೆ. ಹಾಗಾಗಿ ಆಸ್ಟ್ರೇಲಿಯಾದ ಅನುಭವಕ್ಕೆ ವ್ಯತಿರಿಕ್ತವಾಗಿ ಬರ್ಲಿನ್‌ನ ಶಾಲೆಗಳಲ್ಲಿ ಸಹಶಿಕ್ಷಣ ವ್ಯವಸ್ಥೆಯನ್ನೇ ರದ್ದು ಪಡಿಸಲಾಯಿತು. (ಸಾಲೋಮನ್ 1992)
- ಸಹಶಿಕ್ಷಣ ಇಲ್ಲದ ಶಾಲೆಗಳಲ್ಲಿ ಬಾಲಕರು ಭಾಷಾ ವಿಷಯಗಳು, ಜೀವಶಾಸ್ತ್ರ ಮತ್ತು ನಾಟಕದ ಕಡೆ ಹೆಚ್ಚು ಒಲವು ತೋರುತ್ತಾರೆ. (ಮಾರ್ಷ್ 1989)
- ಬ್ರಿಟಿಷ್ ಜೀವನ ಶೈಲಿಯು ಸಹಶಿಕ್ಷಣ ಶಾಲಾ ವ್ಯವಸ್ಥೆಯನ್ನು ಪ್ರೋತ್ಸಾಹಿಸಿದೆ (ಆರ್ಚರ್ ಮತ್ತು ಮಕ್ರೇ 1991). ಸಹಶಿಕ್ಷಣ ವ್ಯವಸ್ಥೆ ಬಾಲಕಿಯರ ಮಟ್ಟಿಗೆ ನೇತ್ಯಾತ್ಮಕವಾಗದೆ ಬಾಲಕರಿಗೆ ಇತ್ಯಾತ್ಮಕವಾಗಿರುತ್ತದೆ ಎಂದು ಬ್ರಿಟನ್‌ನ ಸಂಶೋಧಕರು (ಮಾರ್ಷ್ 1989) ಪ್ರತಿಪಾದಿಸುತ್ತಾರೆ.
- ಸಹಶಿಕ್ಷಣ ಇಲ್ಲದ ಶಾಲೆಗಳು ಅನೇಕ ನ್ಯೂನತೆಗಳಿಂದ ಕೂಡಿರುವುದರಿಂದ ಆಸ್ಟ್ರೇಲಿಯಾದಲ್ಲಿ ಸಹಶಿಕ್ಷಣ ವ್ಯವಸ್ಥೆಯನ್ನೇ ಜಾರಿಗೊಳಿಸಲಾಗಿದೆ. (ಸಾರಾ ಮತ್ತಿತರರು 1980)
- ಸಹಶಿಕ್ಷಣ ಶಾಲೆಗಳಲ್ಲಿನ ಕಲಿಕಾ ಅಭ್ಯರ್ಥಿಗಳು ಇತರ ಶಾಲೆಗಳ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಉನ್ನತ, ಇತ್ಯಾತ್ಮಕ ಧೋರಣೆಗಳನ್ನು ಹೊಂದಿರುತ್ತಾರೆ. (ಫೆದರ್ 1972; ಆಸ್ಟ್ರೇಲಿಯ/ಡೇಲ್ 1969; ಇಂಗ್ಲೆಂಡ್)
- ಸಹಶಿಕ್ಷಣ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಹೆಚ್ಚಾಗಿ ಮತ ಪದ್ಧತಿಗಳ ಅನುವರ್ತಿಗಳಾಗಿರುತ್ತಾರೆ. (ಲಾರಿ ಮತ್ತು ಬ್ರೌನ್ 1992; ಸ್ಟೇಬಲ್ 1990)
- ಸಹಶಿಕ್ಷಣ ಶಾಲೆಗಳಲ್ಲಿ ಶಿಕ್ಷಕರು ಬಾಲಕಿಯರನ್ನು ಹೆಚ್ಚು ಗಮನಿಸುವುದಿಲ್ಲ. (ಸ್ಪಾನ್‌ವರ್ತ್ 1981)
- ಸಹಶಿಕ್ಷಣ ಶಾಲೆಗಳಲ್ಲಿ ಬಾಲಕಿಯರಿಗಿಂತಲೂ ಬಾಲಕರು ಹೆಚ್ಚಿನ ಪ್ರಾಶಸ್ತ್ಯ ಗಳಿಸುತ್ತಾರೆ. (ಬ್ರೋಫಿ 1985; ಸ್ಪೆಂಡರ್ 1982) ಮತ್ತು ಇದು ಪ್ರಾಥಮಿಕ ಶಾಲಾ ಹಂತದಲ್ಲೇ ವ್ಯಕ್ತವಾಗುತ್ತದೆ (ಬೇಕರ್ ಮತ್ತು ಲೀ 1995)
- ಶಿಕ್ಷಕರು ಸಾಮಾನ್ಯವಾಗಿ ಹೆಚ್ಚು ಸಾಧನೆ ಮಾಡಿದ ಬಾಲಕಿಯರಿಗಿಂತಲೂ ಬಾಲಕರೊಡನೆ ಹೆಚ್ಚು ಸ್ಪಂದಿಸುತ್ತಾರೆ. (ಫೆನ್ನೆಮಾ 1987)
- ಬಾಲಕ ಮತ್ತು ಬಾಲಕಿಯರಿಗೆ ಸ್ಪಂದಿಸುವಾಗ ಶಿಕ್ಷಕರು ಸಮಾನ ಮನೋಭಾವ ಹೊಂದಿರುವುದಿಲ್ಲ. (ಕೆಲ್ಲಿ 1988)
- ಬಾಲಕಿಯರ ಆಕರ್ಷಣೆ ಮತ್ತು ಲೈಂಗಿಕತೆಯ ಬಗ್ಗೆ ಶಿಕ್ಷಕರು ಆರೋಪ ಮಾಡುತ್ತಾರೆ. (ಡೇವಿಸ್ 1979)
- ಶಾಲೆಯಲ್ಲಿ ಪಾಠದ ವೇಳೆ ಚರ್ಚಿಸುವಾಗ ಬಾಲಕರು ಪ್ರಾಬಲ್ಯ ಮೆರೆಯುತ್ತಾರೆ. (ಎಕ್ಲಿಸ್ ಮತ್ತು ಜಾಕಬ್ 1986; ಮರ್ಕೋನಿ 1989; ಸ್ಕಾಟ್ 1992; ಸ್ಪಾನ್‌ವರ್ತ್ 1983)
- ಶಿಕ್ಷಕರು ಸ್ಪಂದಿಸುವ ಸಂದರ್ಭದಲ್ಲಿ ಬಾಲಕಿಯರು ಗಣಿತಶಾಸ್ತ್ರದ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಾರೆ. (ಎಕ್ಲಿಸ್ ಮತ್ತು ಬ್ಲೂಂಫೀಲ್ಡ್ 1985)
- ಶಾಲಾ ಪಠ್ಯಗಳಲ್ಲಿ ಲೈಂಗಿಕ ಮಾದರಿಯನ್ನು ಅಳವಡಿಸುವುದರಿಂದ ಸಹಶಿಕ್ಷಣ ಶಾಲೆಗಳಲ್ಲಿ ಬಾಲಕಿಯರು ಅನಾನುಕೂಲಗಳನ್ನು ಎದುರಿಸುತ್ತಾರೆ. (ಡೀಮ್ 1978)

(ಸಹಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ವರ್ತನೆಯ ಬಗ್ಗೆ ಉಲ್ಲೇಖಿಸಲಾಗಿರುವ ಸಂಗತಿಗಳನ್ನು ಶಿಕ್ಷಕರು ಮತ್ತು ಶಿಕ್ಷಕರ ಅಧ್ಯಾಪಕರೂ ವರದಿ ಮಾಡಿದ್ದಾರೆ).

ಶೈಕ್ಷಣಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಅಭಿಪ್ರಾಯ ನೀಡುವಲ್ಲಿ ಸಹಶಿಕ್ಷಣ ವ್ಯವಸ್ಥೆಯ ಪರಿಣಾಮಗಳು ಹೆಚ್ಚಿನ ಮಾಹಿತಿ ನೀಡುವುದಿಲ್ಲ ಎಂದು ಈ ಮುನ್ನ ನಿಡಲಾಗಿರುವ ವಿಭಿನ್ನ ಸಂಸ್ಕೃತಿಗಳ ವಾಸ್ತವಗಳು ನಿರೂಪಿಸುತ್ತವೆ. ಈ ಬಹುತೇಕ ಸಂಗತಿಗಳು ವಿದಾರ್ಥಿ ಮತ್ತು ಶಿಕ್ಷಕರ ಸಂಸ್ಕೃತಿಯನ್ನೇ ಬಿಂಬಿಸುತ್ತವೆ. ಆದ್ದರಿಂದ ಸಹಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆ ಜನಾಂಗೀಯ ವ್ಯವಸ್ಥೆಗಳಲ್ಲೇ ಅಡಗಿದೆ ಎಂದು ಹೇಳಬಹುದು. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಹಶಿಕ್ಷಣ ಶಾಲೆಗಳಿಗೆ ಎರಡು ಪಟ್ಟು ಮೂರು ಪಟ್ಟು ಹಾಜರಾತಿ ಹೆಚ್ಚಾಗಿರುವುದೇ ಇದಕ್ಕೆ ಸಾಕ್ಷಿ. ಆದರೂ ಬಾಲಕಿಯರಿಗೆ ಉಂಟಾಗುವ ಅನಾನುಕೂಲತೆಗಳೂ ಸಾಕಷ್ಟು ಸಾಬೀತಾಗಿವೆ (ಡೆಬ್ಬೆ 1980). ಭಾರತದ ಜನಸಮುದಾಯಗಳಲ್ಲಿ, ಮೆಟ್ರಿಕ್ ನಂತರದ ಶಿಕ್ಷಣದಲ್ಲಿ ಸಹಶಿಕ್ಷಣವನ್ನು ಅಷ್ಟಾಗಿ ಪ್ರೋತ್ಸಾಹಿಸುವುದಿಲ್ಲ. ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇಂದಿಗೂ ಸಹ ಲಿಂಗಾಧಾರಿತ ಧೋರಣೆಯ ಪರಿಣಾಮಾಗಿ ಬಾಲಕಿಯರು ತಮ್ಮ ಆತ್ಮ ಗೌರವವನ್ನು ಕಳಿದುಕೊಳ್ಳುವುದು ಸಾಮಾನ್ಯ. ಪುರುಷ ಪ್ರಧಾನ ಶಿಕ್ಷಣ ವ್ಯವಸ್ಥೆಯೇ ಇದಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಸಹಶಿಕ್ಷಣ ಶಾಲೆಗಳಲ್ಲಿ ಪುರುಷರ ಪ್ರಾಬಲ್ಯತೆಯನ್ನು ಕಡಿಮೆ ಮಾಡಿ ಪುರುಷ ಪ್ರಾಧಾನ್ಯತೆಯನ್ನು ತೊಡೆದುಹಾಕುವುದು ಅತ್ಯಗತ್ಯ. (ಮಾರ್ಕೋನಿ 1989 ಮತ್ತು ಸಿಂಗ್ಲೆ 1993). ಎರಡೂ ಲಿಂಗ ಪ್ರಭೇದಗಳ ಚಲನಶೀಲತೆಯನ್ನು (ಡೇನ್ ಮತ್ತು ರಿಚರ್ಡ್ 1992) ಬಳಸಿ ಈ ಲೈಂಗಿಕ ಅಭಿಪ್ರಾಯ ಹೊರಬರಬೇಕಾಗಿದೆ (ಹೇಕಲ್ಟ್ 1994). ಹೀಗೆ ಮಾಡುವುದರ ಮೂಲಕವೇ ಭಾರತದ ಸಾಮಾಜಿಕ ಪ್ರಗತಿಗೆ ಪೂರಕವಾದ ರೀತಿಯಲ್ಲಿ ವ್ಯಕ್ತಿಗಳ ಅಂತಃಸತ್ವದ ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ.

**ಮೂಲ: ಎ. ಸಿ. ಪಚೌರಿ**

**ಅನು: ಡಾ. ವಿಶಾಲಾಕ್ಷಿ ಕೆ. ಕೆ.**

Digitised by Bharatavani, CIIL

## ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ

## (Centre for Cultural Resources and Training)

ಅರವತ್ತರ ದಶಕಗಳಲ್ಲಿ ಜಾಗತಿಕ ಶೈಕ್ಷಣಿಕ ವ್ಯವಸ್ಥೆ ಒಂದು ಕ್ರಾಂತಿಕಾರಕವಾದ ಒಲವನ್ನು ಕಂಡಿತು. ವಸಾಹತು ಆಡಳಿತಗಳಿಂದ ಹೊಸದಾಗಿ ಸ್ವಾತಂತ್ರ್ಯವನ್ನು ಪಡೆದ ದೇಶಗಳು ತಮ್ಮ ಮೂಲವನ್ನು ಹುಡುಕಹೊರಟವು. ಬೆಳವಣಿಗೆಯ ಎಲ್ಲ ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳನ್ನು ಸಮನ್ವಯಗೊಳಿಸಲು ಕಾರ್ಯಕ್ರಮಗಳನ್ನು ಯೋಜಿಸಬೇಕೆಂಬ ಅಂಶ ಈ ಕಾಲದಲ್ಲಿ ಅನುಭವಕ್ಕೆ ಬಂದಿತು. ಶಿಕ್ಷಣವು ಮಾನವನ ಚೈತನ್ಯದ ಬೆಳವಣಿಗೆಗೆ ಆಧಾರವಾದುದರಿಂದ, ಹೊಸದಾಗಿ ಬಂದ ಸ್ವಾತಂತ್ರ್ಯದ ಜೊತೆಜೊತೆಯಲ್ಲೇ ಭಾರತದಲ್ಲಿಯೂ ಭಾರತೀಯ ಜೀವನಕ್ರಮವನ್ನು ಆಧರಿಸಿದ ಹೊಸ ಹೊಸ ಆಲೋಚನೆಗಳನ್ನು, ತಾತ್ವಿಕ ಪರಿಕಲ್ಪನೆಗಳನ್ನು ಶಿಕ್ಷಣದಲ್ಲಿ ತರುವ, ಹಾಗೆಯೇ ಅದೇ ಸಮಯದಲ್ಲಿ ಉದಯೋನ್ಮುಖ ಸಾಮಾಜಿಕ ವ್ಯವಸ್ಥೆಯ ಅವಶ್ಯಕತೆಗಳನ್ನು ಪೂರೈಸುವ ಬಯಕೆ ಮೂಡಿಬಂದಿತು.

ಸ್ವತಂತ್ರ ಭಾರತ ರೂಪುಗೊಂಡ ಹಲವಾರು ವರ್ಷಗಳ ನಂತರವೂ ದೇಶದಾದ್ಯಂತ ಶಿಕ್ಷಕರಿಗೆ ಅವರದೇ ದೇಶದ ಸಂಸ್ಕೃತಿಯನ್ನು ಕುರಿತ ಅರಿವು ಅಸಮರ್ಪಕ ಎಂಬುದು ತಿಳಿದುಬಂದಿತು. ಮಕ್ಕಳಿಗೆ ಪ್ರಜಾಸತ್ತಾತ್ಮಕ ಜಾತ್ಯತೀತ ಮೌಲ್ಯಗಳ ಶಿಕ್ಷಣ ಕೊಡುವಲ್ಲಿ ಭಾರತದ ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆಚ್ಚಿಕೊಳ್ಳಲು ವಿಭಿನ್ನ ಸಂಸ್ಕೃತಿಗಳು ಮತ್ತು ಸಮುದಾಯಗಳು–ಬುಡಕಟ್ಟು, ಗ್ರಾಮೀಣ, ಪ್ರಾಚೀನ ಹಾಗೂ ಆಧುನಿಕ ಭಾರತ–ಹೇಗೆ ಅನನ್ಯವಾದ ಭಾರತೀಯ ಸಮನ್ವಯ ಸಂಸ್ಕೃತಿಗೆ ಕೊಡುಗೆ ನೀಡಿವೆ ಎಂಬುದನ್ನು ಅರಿತುಕೊಳ್ಳಲು ಅವಕಾಶಗಳನ್ನೊದಗಿಸಬೇಕು ಎಂಬ ಅಲೋಚನೆಯೂ ಮೂಡಿತು.

ವಿದ್ಯಾರ್ಥಿಗಳು ಏನನ್ನು ಸಾಧಿಸಬೇಕು ಎಂಬುದನ್ನು ಕುರಿತ ದೂರದೃಷ್ಟಿಯ ಹಿನ್ನೆಲೆಯಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಮನಸ್ಸು, ಹೃದಯ, ಬೌದ್ಧಿಕತೆ ಮತ್ತು ಕೈಗಳನ್ನು ತರಬೇತುಗೊಳಿಸುವ ಕಡೆಗೆ ಒತ್ತುಕೊಟ್ಟವು. ಸಂತುಲಿತವಾದ ಒಂದು ಶಿಕ್ಷಣವ್ಯವಸ್ಥೆ ಅಂತಿಮವಾಗಿ ದೇಶದ ಸೃಜನಶೀಲವೂ ಕಲಾತ್ಮಕವೂ ನೈತಿಕವೂ ಜಾತ್ಯತೀತವೂ ಆದ ಬೆಳವಣಿಗೆಗೆ ಕಾರಣವಾಗುತ್ತದೆ ಎಂಬುದು ಇದರ ಮೂಲ ಉದ್ದೇಶವಾಗಿತ್ತು. ಭಾರತದ ಕಲಾತ್ಮಕ ಪರಂಪರೆ ಅನನ್ಯವಾದುದು. ಈ ಕಲಾತ್ಮಕತೆಯೇ ಭಾರತವನ್ನು ಇತರ ದೇಶಗಳಿಂದ ವಿಶಿಷ್ಟವಾಗಿಸಿರುವುದು. ಹಿಂದಿನಂತೆ ಇಂದೂ ಭಾರತದೇಶವು ಬೆಳದು ಪ್ರಗತಿಹೊಂದಬೇಕಾದರೆ ರಾಷ್ಟ್ರಗಳ ಸಮೂಹದೊಳಗೆ ಒಂದು ವಿಶಿಷ್ಟ ಸಾಂಸ್ಕೃತಿಕ ಅನನ್ಯತೆ ಬೆಳೆಯಬೇಕು. ಇದಕ್ಕೆ ಸೃಜನಶೀಲ ಚಟುವಟಿಕೆ ಅತ್ಯಂತ ಪ್ರಮುಖವಾಗುತ್ತದೆ ಎಂಬ ಅಂಶವು ಗಮನಕ್ಕೆ ತೆಗೆದುಕೊಳ್ಳಲಾಯಿತು.

**ಉದ್ದೇಶಗಳು:** ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿನ ಹಾಗೂ ಕಾರ್ಯಕ್ರಮಗಳಲ್ಲಿನ ಕೊರತೆಗಳನ್ನು ನಿವಾರಿಸಲು 1979ನೇ ಇಸವಿ ಮೇ ತಿಂಗಳಲ್ಲಿ ಸ್ವಾಯತ್ತತಾವಾದಿಯಾದ ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರವು ಸ್ಥಾಪಿತವಾಯಿತು. ಇದಕ್ಕೆ ಸಂಸ್ಕೃತಿ ವಿಭಾಗ, ಪ್ರವಾಸ ಮತ್ತು ಸಂಸ್ಕೃತಿ ಖಾತೆಗಳ ಒತ್ತಾಸೆ ಇದೆ. ಇದು 1860ರ ಸಂಸ್ಥೆಗಳ ದಾಖಲೀಕರಣದ ನಿಯಮದ (Societies Registration Act) ಅಡಿಯಲ್ಲಿ ದಾಖಲಾಗಿದೆ. ಈ ಕೇಂದ್ರದ ಸ್ಥಾಪನೆಯ ಉದ್ದೇಶಗಳು ಕೆಳಕಂಡಂತಿವೆ:

- ಶೈಕ್ಷಣಿಕ ಉದ್ದೇಶಗಳಿಗಾಗಿ ಸಾಂಸ್ಕೃತಿಕ ಸಂಪನ್ಮೂಲಗಳನ್ನು ಸಂಗ್ರಹಿಸುವುದು ಮತ್ತು ಯುವಪೀಳಿಗೆಗೆ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಪರಿಚಯ ಮಾಡಿಕೊಡುವುದು.
- ಎಲ್ಲ ಸಾಂಸ್ಕೃತಿಕ ಸಂಪನ್ಮೂಲಗಳನ್ನು ಕಲೆಹಾಕಿ ಶಿಕ್ಷಣದ ವ್ಯವಸ್ಥೆಯ ಔಪಚಾರಿಕ ಮತ್ತು ಅನೌಪಚಾರಿಕ ಎಲ್ಲ ಹಂತಗಳಲ್ಲಿ ಅದನ್ನು ಹಾಸುಹೊಕ್ಕಾಗಿ ಅಳವಡಿಸುವುದು.
- ಪಾರಂಪರಿಕವೂ ಪ್ರಸ್ತುತವೂ ಆದ ದೃಶ್ಯ, ನಿರ್ವಹಣಾತ್ಮಕ, ಶಿಲ್ಪಕಲಾತ್ಮಕ ಹಾಗೂ ಇತರ ಕಲೆಗಳ ಮೂಲಕ ರಾಷ್ಟ್ರೀಯ ಏಕತೆಯನ್ನು ಬೆಳೆಸುವುದು.
- ಶಿಕ್ಷಿತರಿಗೆ ಗ್ರಾಮೀಣ ಮತ್ತು ಬುಡಕಟ್ಟು ಸಂಸ್ಕೃತಿಯ ಶ್ರೀಮಂತಿಕೆಯ ಅರಿವು ಮೂಡಿಸುವುದು ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಸಾಂಪ್ರದಾಯಿಕ ಕಲಾಪ್ರಭೇದಗಳನ್ನು ಬಳಸಿಕೊಳ್ಳುವುದು.
- ಭಾರತೀಯ ಸಂಸ್ಕೃತಿಯ ವಿಭಿನ್ನ ಅಂಶಗಳನ್ನು ಕುರಿತು ಸಮುದಾಯದ ಬೇರೆ ಬೇರೆ ಪಂಗಡದವರಿಗೆ ತರಬೇತಿ ಕಾರ್ಯಕ್ರಮವನ್ನು ಸಂಘಟಿಸುವುದು.
- ಸಂಶೋಧನೆಗಳನ್ನು ಕೈಗೊಳ್ಳುವುದರ ಮೂಲಕ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ದಾಖಲೆಗಳು, ಪ್ರಕಟಣೆಗಳು, ಕ್ಯಾಸೆಟ್‍ಗಳು, ದೃಶ್ಯಸಾಮಗ್ರಿಗಳು, ಚಲನಚಿತ್ರಗಳು ಮುಂತಾದವುಗಳನ್ನು ಹೊರತರುವುದು.
- ಅಪರೂಪದ ಸಾಂಪ್ರದಾಯಿಕ ಕಲಾಪ್ರಭೇದಗಳನ್ನು ಕುರಿತ ದಾಖಲೀಕರಣ ಮತ್ತು ಅದನ್ನು ಕುರಿತ ಜ್ಞಾನವನ್ನು ಪ್ರಸಾರ ಮಾಡುವುದು.
- ಭಾರತದ ವಿವಿಧ ಕಲೆ ಮತ್ತು ಸಾಹಿತ್ಯವನ್ನು ರೂಪಿಸುವ ಸಂಶೋಧನಾ ವಿದ್ವಾಂಸರು ಮತ್ತು ಅಧ್ಯಾಪಕರ ಉಪಯೋಗಕ್ಕಾಗಿ ಒಂದು ಸಂಶೋಧನಾ ಗ್ರಂಥಾಲಯವನ್ನು ಸ್ಥಾಪಿಸುವುದು
- ಕಲೆ ಮತ್ತು ಸಂಸ್ಕೃತಿಯ ಕೊಡುಗೆಗಳನ್ನು ಶಾಲಾ ಕಾಲೇಜು ಮತ್ತು ಇತರ ಸಮುದಾಯ ಕೇಂದ್ರಗಳಿಗೆ ಒಯ್ಯಲು ದೃಕ್ ಶ್ರವಣ ಸಾಮಗ್ರಿಗಳನ್ನು ಮತ್ತು ಇತರ ಮುದ್ರಿತ ವಸ್ತುಗಳನ್ನೊಳಗೊಂಡ ಒಂದು ಚಲಿಸುವ ಘಟಕವನ್ನು ಸ್ಥಾಪಿಸುವುದು.
- ಸೂತ್ರದ ಗೊಂಬೆಗಳು ಮತ್ತು ಪ್ರಾಂತೀಯ ಕೈಕೆಲಸ,

Digitised by Bharatavani, CIIL

ಆಟಿಕೆಗಳು, ಆಟಗಳು, ಒಗಟುಗಳು ಇವುಗಳನ್ನು ಸೃಜನಶೀಲ ಚಟುವಟಿಕೆಗಳಿಗೆ ಶೈಕ್ಷಣಿಕ ಸಾಧನಗಳಾಗಿ ಸಮೃದ್ಧವಾಗಿ ಬಳಸಿಕೊಳ್ಳುವ ವಿಧಾನಗಳನ್ನು ಕುರಿತಂತೆ ಸೇವಾನಿರತ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ಸಂಘಟಿಸುವುದು.

ಶಿಕ್ಷಣವನ್ನು ಸಂಸ್ಕೃತಿಯೊಡನೆ ಸಮನ್ವಯಗೊಳಿಸುವ ಕ್ಷೇತ್ರದಲ್ಲಿ ಕೆಲಸಮಾಡುವ ಸಂಸ್ಥೆಗಳಲ್ಲಿ ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಅತ್ಯಂತ ಪ್ರಮುಖವಾದವು. ದೆಹಲಿ ವಿಶ್ವವಿದ್ಯಾನಿಲಯದ ಸಂಗಿತ ಮತ್ತು ಲಲಿತಕಲಾ ವಿಭಾಗಗಳಲ್ಲಿ ಶಿಕ್ಷಣಖಾತೆಯ ಕಡೆಯಿಂದ ಕೊಡಲಾದ ಆರ್ಥಿಕ ಸಹಾಯದಿಂದ ಕೈಗೊಂಡ 'ಕಾಲೇಜು ಮತ್ತು ಶಾಲಾವಿದ್ಯಾರ್ಥಿಗಳಲ್ಲಿ ಸಂಸ್ಕೃತಿಯ ಪ್ರಸಾರ', ಎಂಬ ಯೋಜನೆಯ ಅಡಿಯಲ್ಲಿ ಎಂಟು ವರ್ಷಗಳ ಸುದೀರ್ಘ ಸಂಶೋಧನೆಯ ನಂತರ ಈ ಕೇಂದ್ರವನ್ನು ಸ್ಥಾಪಿಸಲಾಯಿತು.

**ಪ್ರಮುಖ ಅಂಶಗಳು:**

ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಘಟಕಗಳನ್ನು ಸಮನ್ವಯಗೊಳಿಸುವ ಕೆಲಸವನ್ನು ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಮಾಡುತ್ತದೆ. ಈ ಕೆಲಸವು ಶಾಲೆ ಮತ್ತು ಕಾಲೇಜು ಶಿಕ್ಷಕರ ಸೇವಾಂತರ್ಗತ ತರಬೇತಿಯ ಮೂಲಕ ಹಾಗೂ ಭಾರತೀಯ ಸಂಸ್ಕೃತಿಯನ್ನು ಕುರಿತ ಶೈಕ್ಷಣಿಕ ಸಾಮಗ್ರಿಗಳ ಉತ್ಪಾದನೆ ಮತ್ತು ರಾಷ್ಟ್ರವ್ಯಾಪಿ ಪ್ರಸಾರದ ಮೂಲಕ ನಡೆಯುತ್ತದೆ.

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಕಾರ್ಯಾರಂಭ ಮಾಡುವ ಮೊದಲು ಎಂಟು ವರ್ಷಗಳ ಕಾಲ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸಲಾಗಿತ್ತು. ಪ್ರಶಿಕ್ಷಕರು, ಶಿಕ್ಷಣತಜ್ಞರು ಹಾಗೂ ಕಲಾಪಂಡಿತರು ಒಟ್ಟು ಕಲೆತು ಪಠ್ಯಕ್ರಮ ಮತ್ತು ಬೋಧನೆಯಲ್ಲಿ ಸಾಂಸ್ಕೃತಿಕ ಅಂಶಗಳನ್ನು ಸಮನ್ವಯಗೊಳಿಸುವ ವಿಧಾನಗಳನ್ನು ರೂಪಿಸುವಲ್ಲಿ ಕೆಲಸ ಮಾಡಿದರು. ದೇಶದಲ್ಲಿ ಬದುಕುತ್ತಿರುವ ವಿವಿಧ ಸಾಂಸ್ಕೃತಿಕ ಪಂಗಡಗಳ ಅಗತ್ಯಗಳನ್ನು ಕುರಿತಂತೆ ಶಿಕ್ಷಕರಲ್ಲಿ ಸ್ವಲ್ಪಮಟ್ಟಿನ ಸಂವೇದನೆಯನ್ನುಂಟು ಮಾಡುವುದು ಹಾಗೂ ಒಟ್ಟು ಶಿಕ್ಷಣದಲ್ಲಿ ಸಂಸ್ಕೃತಿಯ ಪ್ರಸಾರವನ್ನು ಕುರಿತಂತೆ ಕುರಿತಂತೆ ಸಮಗ್ರವಾದ ಉಪಕ್ರಮವನ್ನು ರೂಪಿಸುವುದು ಇದರ ಉದ್ದೇಶವಾಗಿತ್ತು.

ಮುಂದೆ ಸಂಶೋಧನೆ ಮತ್ತು ಕಾರ್ಯಯೋಜನೆಗಳನ್ನು ರೂಪಿಸುವ ಕೆಲಸವನ್ನು ಕೈಗೆತ್ತಿಕೊಂಡಾಗ ಭಾವನಾತ್ಮಕ, ಬೌದ್ಧಿಕ ಮತ್ತು ಸೌಂದರ್ಯಾತ್ಮಕ ಬೆಳವಣಿಗೆಯನ್ನು ಹಾಗೂ ಸಂವಹನ ಕೌಶಲಗಳ ಬೆಳವಣಿಗೆಯನ್ನು ಪ್ರಶಿಕ್ಷಣದ ಹಂತದಲ್ಲಿ ಕೈಗೊಳ್ಳಬೇಕು ಎಂಬ ವಿಚಾರ ಮೂಡಿತು. ಈ ನಿಟ್ಟಿನಲ್ಲಿ, ಕಳೆದ ಶತಮಾನದ ಎಪ್ಪತ್ತರ ಉತ್ತರಾರ್ಧದಲ್ಲಿ ಎನ್‌ಸಿಇಆರ್‌ಟಿ ಸಂಸ್ಥೆಯು ಪ್ರಾಂತೀಯ ಶಿಕ್ಷಣಕಾಲೇಜುಗಳಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ಶಿಕ್ಷಣವನ್ನು ಕುರಿತ ಉಪನ್ಯಾಸಮಾಲೆಯನ್ನು ಸಂಘಟಿಸಿತ್ತು. ಶಿಕ್ಷಣ ಮತ್ತು ಸಂಸ್ಕೃತಿಯ ನಡುವೆ ಸಮನ್ವಯ ತರುವುದು ಹೇಗೆ ಎಂಬುದನ್ನು ತಿಳಿಸಿಕೊಡುವುದು ಇದರ ಉದ್ದೇಶವಾಗಿತ್ತು. ಇಲ್ಲಿ ಅನೇಕ ಅಭಿಪ್ರಾಯಗಳು ಪ್ರಕಟಗೊಂಡವು. ಶಾಲೆಗಳಲ್ಲಿ ಸಂಸ್ಕೃತಿಯ ಅಧ್ಯಯನವನ್ನು ಒಂದು ಪ್ರತ್ಯೇಕ ಅಭ್ಯಾಸದ ವಿಷಯವಾಗಿ ಕೈಗೆತ್ತಿಕೊಳ್ಳಬೇಕು. ಹಾಗಾಗಿ ಈ ಸಂಸ್ಕೃತಿ ಅಧ್ಯಯನಕ್ಕೆ ಪ್ರಶಿಕ್ಷಣದಲ್ಲಿ ಅವಕಾಶವಿರಬೇಕು ಎಂಬುದು ಅಲ್ಲಿ ಮೂಡಿಬಂದ ಅಂತಹ ಅಭಿಪ್ರಾಯಗಳಲ್ಲಿ ಒಂದು. ಶಿಕ್ಷಣದ ಅಂತರ್‌ಶಿಸ್ತೀಯ ಸ್ವರೂಪವನ್ನು ಅರಿಯುವ ಅವಕಾಶವನ್ನು ಉಂಟುಮಾಡಲು ಮತ್ತು ಸೌಂದರ್ಯಾತ್ಮಕ ನೀತ್ಯಾತ್ಮಕ ಮೌಲ್ಯಗಳನ್ನು ಬೆಳೆಸಲು ಇತರ ವಿಷಯಗಳೊಡನೆ ಸಂಸ್ಕೃತಿಯ ಅಂಶಗಳನ್ನು ಸಮನ್ವಯಗೊಳಿಸುವ ಅಂಶ ಈ ಹಂತದಲ್ಲಿ ಸ್ಪಷ್ಟವಾಗಿ ಮೂಡಿಬಂದಿತು.

ಈಗಾಗಲೇ ಸಾಕಷ್ಟು ಭಾರವಾಗಿರುವ ಶಾಲಾಪಠ್ಯವಸ್ತುವಿನಲ್ಲಿ ಮತ್ತೊಂದು ವಿಷಯವನ್ನು ಸೇರಿಸುವುದು ಪ್ರಾಯೋಗಿಕವೂ ಅಪೇಕ್ಷಣೀಯವೂ ಅಲ್ಲ, ಇರುವ ಪಠ್ಯವಿಷಯಗಳಲ್ಲೇ ಸಂಸ್ಕೃತಿಯ ವಿಷಯಗಳನ್ನು ಸಮನ್ವಯಗೊಳಿಸುವುದು ಒಳ್ಳೆಯದು ಎಂದು ಅನೇಕ ಶಿಕ್ಷಣತಜ್ಞರು ಅಭಿಪ್ರಾಯಪಟ್ಟರು. ಪ್ರಶಿಕ್ಷಣದ ಹಾಗೆಯೇ ಅಧ್ಯಾಪಕ ತರಬೇತಿಯ ಕೊರತೆಗಳನ್ನು ತುಂಬಲು ಒಂದು ಪ್ರತ್ಯೇಕ ಸಂಸ್ಥೆ ಇರಬೇಕೆಂಬ ವಿಷಯವನ್ನು ಕುರಿತಂತೆ ಒಂದು ಒಮ್ಮತದ ಅಭಿಪ್ರಾಯ ಈ ಸಂದರ್ಭದಲ್ಲಿ ತೀವ್ರವಾಗಿ ಮೂಡಿಬಂದಿತು. ತರಬೇತಿಗೆ ಅತಿ ಸೂಕ್ಷ್ಮವಾದ ಉಪಕ್ರಮವನ್ನು ಅಳವಡಿಸಿಕೊಳ್ಳಬೇಕು, ಇದು ಶಿಕ್ಷಣದ ಎಲ್ಲ ಹಂತಗಳಲ್ಲಿ ಕೇವಲ ಶೈಕ್ಷಣಿಕ ವಿಷಯಗಳನ್ನು ಮಾತ್ರವಲ್ಲದೆ ದೇಶದ ಸಾಹಿತ್ಯ, ದೃಶ್ಯ ಹಾಗೂ ಲಲಿತಕಲೆಗಳನ್ನು ಒಳಗೊಳ್ಳಬೇಕು ಎಂಬ ಮುಂಗಾಣ್ಕೆಯ ಅಭಿಪ್ರಾಯವನ್ನು ಸೂಚಿಸಲಾಯಿತು. ಸಾಂಸ್ಕೃತಿಕ ಶಿಕ್ಷಣಕ್ಕೆ ಅಗತ್ಯವಾದ ಹೊಸ ಉಪಕ್ರಮಗಳಿಗೆ ಅನುಗುಣವಾದ ಶೈಕ್ಷಣಿಕ ವಿಧಾನಗಳ ಕಡೆಗೆ ಗಮನವಿರಬೇಕು ಎಂಬ ಆಲೋಚನೆಯನ್ನೂ ಇಲ್ಲಿ ಮಾಡಲಾಯಿತು.

**ಪ್ರಮುಖ ಚಟುವಟಿಕೆಗಳು:** ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಇಂದಿಗೂ ಸಂಶೋಧನೆಯಲ್ಲಿ ತೊಡಗಿದ್ದು, ಬದಲಾಗುತ್ತಿರುವ ಶೈಕ್ಷಣಿಕ ಸನ್ನಿವೇಶದಲ್ಲಿ ಅಧ್ಯಾಪಕರ ಮೇಲಿನ ಹೊಸ ಜವಾಬ್ದಾರಿಗಳನ್ನು ಗಮನಿಸಿಕೊಂಡು, ಅವಿರತವಾಗಿ ಶಿಕ್ಷಕ ತರಬೇತಿಯ ಮೌಲ್ಯಮಾಪನವನ್ನು ಕೈಗೊಳ್ಳುತ್ತಲಿದೆ. ಈ ಕೇಂದ್ರವು ಸಂಸ್ಕೃತಿಯನ್ನು ಸಮನ್ವಯಗೊಳಿಸುವಲ್ಲಿ ಶಿಕ್ಷಣತಜ್ಞರಿಗೆ ಸಂಪನ್ಮೂಲವನ್ನು ಒದಗಿಸುತ್ತಿದ್ದು ಇದು ಪ್ರಮುಖವಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳು, ಯುನೈಟೆಡ್ ಕಿಂಗ್‌ಡಮ್ ಜಪಾನ್, ಥೈಲ್ಯಾಂಡ್ ಮೊದಲಾದ ದೇಶಗಳಿಂದ ಪ್ರಾಯೋಜಿಸಲ್ಪಡುತ್ತವೆ.

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರದ ಅದ್ಭುತ ಕೆಲಸವನ್ನು ಗಮನಕ್ಕೆ ತೆಗೆದುಕೊಂಡು ಈ ಸಂಸ್ಥೆಯನ್ನು, ಶಿಕ್ಷಣದ ಅಂತಾರಾಷ್ಟ್ರೀಯ ಬ್ಯೂರೊ ಸಂಘಟಿಸಿದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ 'ಶಿಕ್ಷಣದ ಸಾಂಸ್ಕೃತಿಕ ಮತ್ತು ಅಂತರ್ ಸಾಂಸ್ಕೃತಿಕ ಅಂಶಗಳು ಅಧ್ಯಾಪಕರಿಗೆ ಒಂದು ಹೊಸ ಜವಾಬ್ದಾರಿ' ಎಂಬ ವಿಷಯವನ್ನು ಕುರಿತು ಪ್ರಬಂಧ ಮಂಡಿಸಲು ಆಹ್ವಾನಿಸಲಾಗಿತ್ತು.

Digitised by Bharatavani, CIIL

1992ರಲ್ಲಿ ಜಿನೀವಾದಲ್ಲಿ ಸಂಘಟಿಸಲಾದ ಶಿಕ್ಷಣವನ್ನು ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಈ ಪ್ರಬಂಧವನ್ನು ಒಂದು ಪರಾಮರ್ಶನ ದಾಖಲೆಯಾಗಿ ಬಳಸಿಕೊಳ್ಳಲಾಯಿತು.

ಸಂಸ್ಕೃತಿ ಮತ್ತು ಬೆಳವಣಿಗೆಗೆ ಸಂಬಂಧಿಸಿದ ವಿಶಾಲವಾದ ಅಂಶಗಳು ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರದ ಪ್ರಮುಖ ಕಾಳಜಿಗಳಲ್ಲಿ ಒಂದಾಗಿದೆ. ಏಕೆಂದರೆ ನಿರ್ಧಾರ ತೆಗೆದುಕೊಳ್ಳುವ ಸ್ಥಾವರದಲ್ಲಿರುವವರು ಅವರು ಆಳುವ ಜನರ ಸಾಂಸ್ಕೃತಿಕ ಶೀಲಸ್ವಭಾವಗಳನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಎಂಬುದು ಗಮನಕ್ಕೆ ಬಂದಿದೆ. ಹೀಗಾಗಿ 1984ರಲ್ಲಿ ಈ ಸಂಸ್ಥೆಯು ಯುನೆಸ್ಕೊದ ಆಶ್ರಯದಲ್ಲಿ ಏಷ್ಯ ಮತ್ತು ಪೆಸಿಫಿಕ್‌ಗಳಲ್ಲಿ 'ಸಾಂಸ್ಕೃತಿಕ ವಿಚಾರಗಳ ಆಡಳಿತ' ಎಂಬ ವಿಚಾರವಾಗಿ ಕಾರ್ಯಾಗಾರವನ್ನು ಸಂಘಟಿಸಿತು. ಈ ಕಾರ್ಯಾಗಾರದ ಮುಂದುವರಿದ ಭಾಗವಾಗಿ, ರಾಷ್ಟ್ರ ಮತ್ತು ಅಂತಾರಾಷ್ಟೀಯ ಮಟ್ಟಗಳಲ್ಲಿ ಹಲವಾರು ಸಭೆಗಳು ನಡೆದವು. ಮುಂದೆ ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಶಾಲಾಮುಖ್ಯಸ್ಥರಿಗೆ ಮತ್ತು ಶೈಕ್ಷಣಿಕ ಸಿಬ್ಬಂದಿಗಳಿಗೆ ಅವರ ಸಾಂಸ್ಕೃತಿಕ ಮೂಲವನ್ನು ಕುರಿತ ಸಂವೇದನೆಯನ್ನು ಬೆಳೆಸಲು ಹಾಗೂ ಸಾಂಸ್ಕೃತಿಕ ಅಂಶಗಳ ನಿರ್ವಹಣಾ ಕೌಶಲವನ್ನು ಪರಿಚಯಿಸಲು ರಾಜ್ಯಮಟ್ಟದಲ್ಲಿ ಕಾರ್ಯಕ್ರಮವನ್ನು ಆಯೋಜಿಸಬೇಕಾದ ಅಗತ್ಯವಿದ್ದಾಗ್ಯೂ ಇದುವರೆಗೆ ಅದು ಸಾಧ್ಯವಾಗಿಲ್ಲ.

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಮೊದಲಿಗೆ ಕಲೆಯನ್ನು ಮೆಚ್ಚುವುದು ಮತ್ತು ಪಠ್ಯಕ್ರಮದಲ್ಲಿ ಸಾಂಸ್ಕೃತಿಕ ಅಂಶಗಳನ್ನು ಸಮನ್ವಯಗೊಳಿಸುವ ಕ್ರಮಗಳನ್ನು ಕುರಿತಂತೆ ಅಧ್ಯಾಪಕರಿಗೆ ತರಬೇತಿ ಕೊಡುವುದಕ್ಕೆ ತನ್ನ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡಿತ್ತು. ಆದರೆ, ಸಂಸ್ಕೃತಿ ಶಿಕ್ಷಣವನ್ನು ಕುರಿತ ದೃಕ್ ಶ್ರವಣ ಉಪಕರಣಗಳನ್ನು ಶಾಲೆಗಳಿಗೆ ಒದಗಿಸದಿದ್ದರೆ ಸಾಂಸ್ಕೃತಿಕ ಪರಂಪರೆಯ ಕಲಿಕೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವುದು ಬಹಳ ಕಷ್ಟ ಎಂಬುದು ಬಹುಬೇಗನೆ ಅದರ ಅರಿವಿಗೆ ಬಂದಿತು. ಪರಿಣಾಮವಾಗಿ ಈ ಕೇಂದ್ರದ 'ತರಬೇತಿ ಮತ್ತು ಮೌಲ್ಯಮಾಪನ', 'ಸಮುದಾಯ ಮತ್ತು ವಿಸ್ತರಣಾ ಸೇವೆ', 'ಸಂಪನ್ಮೂಲ ಸಂಗ್ರಹ', 'ದೃಕ್ ಶ್ರವಣ ಸಾಮಗ್ರಿಗಳ ಉತ್ಪಾದನೆ ಮತ್ತು ಪ್ರಕಟಣೆ', 'ಸಾಂಸ್ಕೃತಿಕ ಪ್ರತಿಭಾ ಅನ್ವೇಷಣಾ ವಿದ್ಯಾರ್ಥಿವೇತನ ಯೋಜನೆ' ಇತ್ಯಾದಿ ವಿಭಾಗಗಳ ಮೂಲಕ ಹೆಚ್ಚುವರಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು.

ಶಿಕ್ಷಣತಜ್ಞರು ಮತ್ತು ಕಲಾವಿದರು ಈ ಕಾರ್ಯಗಳಿಗೆ ಒಟ್ಟಾಗಿ ಕಲೆತರು. ಮಾರ್ಗದರ್ಶನ, ಸಲಹೆ ಸೂಚನೆಗಳನ್ನು ನೀಡಿದರು. ಭಾರತದ ಸಂಪದ್ಭರಿತ ಸಾಂಸ್ಕೃತಿಕ ಖಜಾನೆಯಿಂದ ಕೆಲವು ಸಾಂಸ್ಕೃತಿಕ ಅಂಶಗಳನ್ನು ಆಯ್ಕೆಮಾಡಿದರು. ವಿಭಿನ್ನ ಸನ್ನಿವೇಶಗಳಲ್ಲಿ ವಿಭಿನ್ನ ಗ್ರಹಿಕಾಮಟ್ಟದಲ್ಲಿ ಅವುಗಳ ಬಳಕೆಯನ್ನು ಕುರಿತು ಮಾರ್ಗದರ್ಶನ ನೀಡಿದರು. ಸ್ಥಳೀಯ ಸಾಂಸ್ಕೃತಿಕ ಮತ್ತು ಕಲಾತ್ಮಕ ಅಗತ್ಯಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳ ಬೌದ್ಧಿಕ ಶಕ್ತಿಯನ್ನು ಹೆಚ್ಚಿಸಲು ಹಾಗೂ ಅವರ ಸಂವೇದನೆಯನ್ನು ಹೆಚ್ಚಿಸಲು, ನಿರ್ದಿಷ್ಟ ಸೃಜನಶೀಲ ಅಭಿವ್ಯಕ್ತಿಯನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಕುರಿತಂತೆಯೂ ಅಧ್ಯಾಪಕರನ್ನು ತರಬೇತುಗೊಳಿಸಲಾಯಿತು.

ವಿವಿಧ ಸಾಂಸ್ಕೃತಿಕ ಕಲಾಪ್ರಕಾರಗಳನ್ನು ಕುರಿತಂತೆ ಪ್ರಶಿಕ್ಷಣಾರ್ಥಿಗಳಿಗೆ ಮಾಹಿತಿ ನೀಡಲು ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಹೊರಗಿನಿಂದ ಅತಿಥಿ ಸಂಪನ್ಮೂಲವ್ಯಕ್ತಿಗಳ ಸಹಾಯಪಡೆದುಕೊಳ್ಳುತ್ತದೆ. ಶಿಕ್ಷಣ, ವಿಜ್ಞಾನ, ಪರಿಸರ ಮತ್ತು ಕಲೆ ಇವುಗಳಿಗೆ ಸಂಬಂಧಿಸಿದ ಹೆಚ್ಚು ಸಂಖ್ಯೆಯ ಸಂಸ್ಥೆಗಳ ಜೊತೆಯಲ್ಲಿ ಈ ಕೇಂದ್ರವು ಸಂಪರ್ಕಜಾಲವನ್ನು ಇಟ್ಟುಕೊಂಡಿದೆ. ಈ ಮೂಲಕ ಸಮಾಜದ ಹೆಚ್ಚಿನ ಭಾಗಗಳಿಗೆ ತನ್ನ ಕಾರ್ಯಕ್ರಮಗಳನ್ನು ತಲುಪಿಸುತ್ತದೆ.

ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಶೈಕ್ಷಣಿಕ ಮತ್ತು ಭೌತಿಕ ಸಂಪನ್ಮೂಲಗಳನ್ನು ಮತ್ತು ನಿರ್ವಹಣಾ ಕೌಶಲಗಳನ್ನು ದುಡಿಸಿಕೊಳ್ಳುವಲ್ಲಿ ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರಕ್ಕೆ ಹೆಚ್ಚಿನ ಪ್ರಾವೀಣ್ಯ ಇದೆ. ಬಹುತೇಕ ಕಾರ್ಯಕ್ರಮಗಳಲ್ಲಿ ಅದು ಮ್ಯೂಸಿಯಂಗಳು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸಾಹಿತ್ಯ, ಲಲಿತಕಲೆ, ಸಂಗೀತ ಮತ್ತು ನಾಟಕ ಅಕಾಡೆಮಿಗಳು, INTACH, ರಾಷ್ಟ್ರೀಯ ಪತ್ರಾಗಾರಗಳು, ಗ್ರಂಥಾಲಯಗಳು ಹಾಗೂ ವಿಶ್ವವಿದ್ಯಾನಿಲಯಗಳೊಂದಿಗೆ ಅತಿ ನಿಕಟವರ್ತಿಯಾಗಿ ಕೆಲಸ ಮಾಡುತ್ತದೆ.

ಸಾಂಸ್ಕೃತಿಕ ಸಂಪನ್ಮುಲಗಳು ಮತ್ತು ತರಬೇತಿ ಕೇಂದ್ರವು ತನ್ನ ಕಾರ್ಯಕ್ರಮಗಳನ್ನು ಮೂಲಭೂತವಾಗಿ ಎಲ್ಲರಿಗೂ ಕೊಂಡೊಯ್ಯುವ ಉದ್ದೇಶದಿಂದ ಹೈದರಾಬಾದ್ ಮತ್ತು ಉದಯಪುರಗಳಲ್ಲಿ ಎರಡು ಪ್ರಾಂತೀಯ ಕೇಂದ್ರಗಳನ್ನು ಸ್ಥಾಪಿಸಿದೆ.

**ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರದ ಕಾರ್ಯಕ್ರಮಗಳು:**

**ತರಬೇತಿ:** ಪ್ರಸಕ್ತ ಸಂಸ್ಥೆಯು ತನ್ನ ಉದ್ದೇಶಗಳು ನೆರವೇರುವ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಇದರ ಕಾರ್ಯವಿಸ್ತಾರಗೊಳ್ಳುವ ಉದ್ದೇಶದಿಂದ ದೇಶದ ವಿವಿಧ ಭಾಗಗಳಲ್ಲಿ ವರ್ಷಪೂರ್ತಿ ಅನೇಕ ಸೇವಾನಿರತ ಶಿಕ್ಷಕರಿಗೆ ಅನೇಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಈ ಕಾರ್ಯಕ್ರಮವು ಪ್ರಾಥಮಿಕ, ಮಾಧ್ಯಮಿಕ, ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಶಾಲಾ ಅಧ್ಯಾಪಕರು, ಶಾಲಾಮುಖ್ಯಸ್ಥರು, ಪ್ರಶಿಕ್ಷಕರು, ಶಿಕ್ಷಣವಿಭಾಗದ ಆಡಳಿತ ಸಿಬ್ಬಂದಿಗಳು, ರಾಜ್ಯಶಿಕ್ಷಣಸಂಸ್ಥೆ ಮತ್ತು ರಾಜ್ಯಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೌನ್ಸಿಲ್‌ಗಳ ಸಿಬ್ಬಂದಿಗಳನ್ನು ಉದ್ದೇಶಿಸಿರುತ್ತದೆ. ಈ ತರಬೇತಿಗಳ ಪ್ರಮುಖ ಲಕ್ಷ್ಯ ಶಿಕ್ಷಣವನ್ನು ಸಂಸ್ಕೃತಿಯೊಡನೆ ಸಮನ್ವಯಗೊಳಿಸುವುದಾದರೂ ಇವು ಸೃಜನಶೀಲ ಅಭಿವ್ಯಕ್ತಿಗೆ ಮತ್ತು ಪ್ರತಿಭಾ ಪ್ರದರ್ಶನ ಮತ್ತು ಬೆಳವಣಿಗೆಗೆ ಮಕ್ಕಳಿಗೆ ಸಹಾಯಮಾಡುತ್ತದೆ. ಆ ಮೂಲಕ ವ್ಯಕ್ತಿತ್ವ

Digitised by Bharatavani, CIIL

ವಿಕಸನಕ್ಕೂ ದಾರಿಮಾಡಿಕೊಡುತ್ತವೆ. ಸ್ಥಳೀಯ ಸಾಮಗ್ರಿಗಳು ಮತ್ತು ಸಮುದಾಯದೊಂದಿಗಿನ ಅಂತರ್‌ಕ್ರಿಯೆಯ ಮೂಲಕ ಭಾರತೀಯ ಸಾಂಸ್ಕೃತಿಕ ಪರಂಪರೆಯ ವ್ಯಾಪಕ ಅರಿವನ್ನು ಮೂಡಿಸುವುದು ಮತ್ತು ಸ್ವಾಭಾವಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ರಕ್ಷಣೆಯಲ್ಲಿ ವಿದ್ಯಾರ್ಥಿಗಳನ್ನು ಒಳಗು ಮಾಡಿಕೊಳ್ಳುವುದು ಈ ತರಬೇತಿ ಕಾರ್ಯಕ್ರಮಗಳ ಮೂಲ ಉದ್ದೇಶವಾಗಿರುತ್ತದೆ. ಇದಲ್ಲದೆ ವಿವಿಧ ಜ್ಞಾನಶಿಸ್ತುಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರು ತಮ್ಮ ಅನುಭವಗಳನ್ನು ಹಂಚಿಕೊಂಡು, ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರ ಕಂಡುಕೊಳ್ಳುವುದರ ಶೈಕ್ಷಣಿಕ ಕಾರ್ಯಕ್ರಮಗಳನ್ನು ತಯಾರಿಸುವಲ್ಲಿಯೂ ಈ ಸಂಸ್ಥೆ ಒತ್ತಾಸೆ ನೀಡುತ್ತದೆ.

ಪ್ರತಿ ಕಲಾಪ್ರಭೇದದ ಸೃಜನಶೀಲ ಅಭಿವ್ಯಕ್ತಿ ಅನನ್ಯವಾದುದೇ. ಅವು ತೆರೆದಿಡುವ ಗ್ರಹಿಕೆಯ ಮಾರ್ಗಗಳಿಂದಾಗಿ ಇದು ಪಠ್ಯಕ್ರಮ ಬೆಳವಣಿಗೆಯ ಅವಿಭಾಜ್ಯ ಅಂಗವಾಗಬೇಕು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಅಧ್ಯಾಪಕರಿಗೆ ಹೆಚ್ಚಿನ ಮಟ್ಟದ ಗ್ರಹಿಕೆ, ಕಲ್ಪನೆ ಮತ್ತು ಸೃಜನಶೀಲತೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಇದರ ಪರಿಣಾಮ ಮಕ್ಕಳ ಶಾಲಾಸಾಧನೆಯ ಮೇಲೂ ಆಗುತ್ತದೆ ಎಂಬ ವಿಚಾರದ ಕಡೆಗೆ ಅಧ್ಯಾಪಕರಿಗೆ ಸಂವೇದನೆಯನ್ನುಂಟುಮಾಡಲು ಪ್ರಯತ್ನಗಳನ್ನು ಮಾಡಿದೆ. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದಲ್ಲಿ ಕೆಲಸಮಾಡುವ ಸಿಬ್ಬಂದಿಗಳಿಗೆ ನಡೆಸುವ ಕಾರ್ಯಕ್ರಮಗಳಲ್ಲಿ ಸೌಂದರ್ಯಾತ್ಮಕ ಸೂಕ್ಷ್ಮಗ್ರಾಹಿತ್ವ ಮತ್ತು ಮೌಲ್ಯಗಳನ್ನು ಸಮನ್ವಯಗೊಳಿಸಲಾಗಿದೆ. ಈ ಕಾರಣದಿಂದಲೇ ಭಾಗವಹಿಸಿದ ಅಭ್ಯರ್ಥಿಗಳು ಸೌಂದರ್ಯಾತ್ಮಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಕಲಾಭಿವ್ಯಕ್ತಿಯ ಮತ್ತು ಸಾಂಸ್ಕೃತಿಕ ಪರಂಪರೆಗಳ ಇಂದ್ರಿಯಾತ್ಮಕ, ಬೌದ್ಧಿಕ, ಭಾವನಾತ್ಮಕ ಮತ್ತು ತಾತ್ವಿಕ ಆಧಾರಗಳನ್ನು ಅಧ್ಯಯನ ಮಾಡುತ್ತಾರೆ. ಪ್ರಸಿದ್ಧ ಸಂಗೀತಗಾರರು, ನೃತ್ಯ ಪ್ರವೀಣರು, ಕಲಾ ಇತಿಹಾಸ ತಜ್ಞರು ಕಾಲದಿಂದ ಕಾಲಕ್ಕೆ ಈ ಸ್ಥಳದಲ್ಲಿ ಪ್ರಶಿಕ್ಷಕರ ಜೊತೆಯಲ್ಲಿ ತಮ್ಮ ವಿಶಿಷ್ಟ ಸೃಜನಶೀಲತೆಯನ್ನು ಹಂಚಿಕೊಂಡಿದ್ದಾರೆ. ರಾಷ್ಟ್ರೀಯ ಶಿಕ್ಷಣನೀತಿ ಕಾರ್ಯಕ್ರಮ ಯೋಜನೆ ಶಿಫಾರಸುಮಾಡಿರುವ ಮೌಲ್ಯ ಮತ್ತು ನೀತಿಶಿಕ್ಷಣದಲ್ಲಿ ಸಾಂಸ್ಕೃತಿಕ ಅಂಶವನ್ನು ಸಮನ್ವಯಗೊಳಿಸುವ ವಿಧಾನವನ್ನು ಇದೇ ಸಂಸ್ಥೆಯು ಸಂಶೋಧನೆಯ ಮೂಲಕ ರೂಪಿಸಿಕೊಟ್ಟಿದೆ. ತರಬೇತಿ ಪಡೆದ ಅಧ್ಯಾಪಕರಿಗಾಗಿ ನಿರ್ದೇಶನ ಕಾರ್ಯಕ್ರಮಗಳು ಹಾಗೂ ಪುನಶ್ಚೇತನ ಕಾರ್ಯಕ್ರಮಗಳು, ಸೃಜನಶೀಲ ಅಭಿವ್ಯಕ್ತಿ ಕುರಿತ ವಿವಿಧ ಕಾರ್ಯಾಗಾರಗಳು, ಮ್ಯೂಸಿಯಂ ಶಿಕ್ಷಣದಲ್ಲಿ ಕಾರ್ಯಕ್ರಮಗಳು ಮುಂತಾದವು ಈ ಸಂಸ್ಥೆಯು ಸಂಘಟಿಸುವ ಪ್ರಮುಖ ಕಾರ್ಯಕ್ರಮಗಳು.

**ಸಚೇತನ ಕೋರ್ಸ್‌ಗಳು:** ಇದು ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರದ ಅತಿ ವ್ಯಾಪಕವಾದ ಕಾರ್ಯಕ್ರಮ. ಈ ಕಾರ್ಯಕ್ರಮದ ಅಡಿಯಲ್ಲಿ ದೇಶದ ವಿವಿಧ ಭಾಗಗಳ ಸೇವಾನಿರತ ಶಿಕ್ಷಕರು ಮತ್ತು ಪ್ರಶಿಕ್ಷಕರನ್ನು ಸಂಘಟಿಸಲಾಗುತ್ತದೆ. ವಿವಿಧ ಶಿಸ್ತುಗಳನ್ನು ಬೋಧಿಸುವ–ಭಾಷೆ, ಇತಿಹಾಸ, ಸಮಾಜವಿಜ್ಞಾನ, ಗಣಿತ ಮತ್ತು ಇತರ ವಿಷಯಗಳು ಶಿಕ್ಷಕರನ್ನು ಆಯ್ಕೆ ಮಾಡುವ ಜವಾಬ್ದಾರಿ ರಾಜ್ಯ ಶಿಕ್ಷಣ ಇಲಾಖೆಯದ್ದಾಗಿರುತ್ತದೆ. ಕಾರ್ಯಕ್ರಮದ ಅವಧಿ ಸುಮಾರು ಮೂರು ವಾರಗಳು.

ಈ ಕಾರ್ಯಕ್ರಮಗಳಲ್ಲಿ ಕಲಾವಿಷಯಕವಾದ ಜ್ಞಾನವನ್ನು ವಿಭಿನ್ನ ವಿಧಾನಗಳ ಉಪನ್ಯಾಸ, ಪ್ರಾತ್ಯಕ್ಷಿಕೆ, ಫಲಕ ಪ್ರಸ್ತುತೀಕರಣ, ದೃಕ್‌ಶ್ರವಣ ಕಾರ್ಯಕ್ರಮಗಳು, ಕಲೆಗಳನ್ನು ಕಲಿಯುವಲ್ಲಿ ಪ್ರಾಯೋಗಿಕ ತರಗತಿಗಳು, – ಮೂಲಕ ಕೊಡಲಾಗುತ್ತದೆ. ಐತಿಹಾಸಿಕವಾಗಿ ಪ್ರಮುಖವಾದ ಕಟ್ಟಡಗಳು, ಮ್ಯೂಸಿಯಂಗಳು, ಉದ್ಯಾನವನಗಳು ಹಾಗೂ ಇತರ ಸ್ಥಳಗಳಿಗೆ ಪ್ರವಾಸ ಈ ಕಾರ್ಯಕ್ರಮದ ಭಾಗವಾಗಿರುತ್ತದೆ. ಕಾರ್ಯಕ್ರಮದ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಭಾರತದ ಶ್ರೀಮಂತ ಕಲಾ ಮತ್ತು ಸಾಂಸ್ಕೃತಿಕ ಪರಂಪರೆಯ ವಿನ್ಯಾಸವನ್ನು ಪರಿಚಯಿಸುವ ಪ್ರಯತ್ನ ಮಾಡಲಾಗುತ್ತದೆ. ಭಾರತೀಯ ಸೃಜನಶೀಲ ಅಭಿವ್ಯಕ್ತಿಯ ವಿಭಿನ್ನತೆ ಮತ್ತು ಪ್ರಕೃತಿಯ ಮತ್ತು ಕಲೆಯ ಸೌಂದರ್ಯಗಳನ್ನು ಮಕ್ಕಳಿಗೆ ಪರಿಚಯಿಸುವುದು ಹೇಗೆ ಎಂಬುದರ ಒಳನೋಟ ಸಿಗುವಂತೆ ಒಟ್ಟು ಕೋರ್ಸನ್ನು ವಿನ್ಯಾಸಗೊಳಿಸಲಾಗಿರುತ್ತದೆ.

**ಈ ಕೋರ್ಸ್‌ನ ಸಾಮಾನ್ಯ ಉದ್ದೇಶಗಳೆಂದರೆ:**

- ಮಕ್ಕಳಲ್ಲಿ ರಾಷ್ಟ್ರೀಯ ಏಕತೆಯ ಭಾವವನ್ನು ಬೆಳೆಸಲು, ಭಾರತೀಯ ಸಾಂಸ್ಕೃತಿಕ ಬೆಳವಣಿಗೆಯ ಮೂಲಭೂತ ಆಧಾರಗಳನ್ನು ಕುರಿತ ಪರಿಚಯವನ್ನು ಉಂಟುಮಾಡುವುದು.
- ಭಾರತೀಯ ಸಂಸ್ಕೃತಿ ಮತ್ತು ಸೃಜನಶೀಲ ಚಟುವಟಿಕೆಗಳು ಕಲಿಕೆ ಮತ್ತು ಬೋಧನೆಯ ಆಂತರಿಕ ಭಾಗಗಳಾಗುವಂತೆ ವಿಧಾನಗಳನ್ನು ರೂಪಿಸಲು ಅವಕಾಶ ಮಾಡಿಕೊಡುವುದು.
- ಅಧ್ಯಾಪಕರು ತಮ್ಮ ಬೋಧನಾಪ್ರಕ್ರಿಯೆಯಲ್ಲಿ ಮಕ್ಕಳು ಶಾಶ್ವತವಾದ ಮೌಲ್ಯಗಳಿಗೆ ಸಂವೇದಿಸುವಂತೆ ಮಾಡಲು ಹಾಗೂ ಕಲೆಯ ಸೌಂದರ್ಯಾತ್ಮಕತೆಯನ್ನು ಅಂತರ್ಗತಗೊಳಿಸಿಕೊಳ್ಳುವಂತೆ ಮಾಡಲು ಸಹಾಯಕವಾಗುವಂತೆ, ವಿದ್ವಾಂಸರು ಮತ್ತು ಕಲೆಗಾರರೊಂದಿಗೆ ಬೆರೆಯುವ ಸನ್ನಿವೇಶವನ್ನು ಸೃಷ್ಟಿಸುವುದು.
- ತರಗತಿ ಬೋಧನೆಯ ತಂತ್ರಗಳನ್ನು ಉತ್ತಮಪಡಿಸಿಕೊಳ್ಳಲು, ನೀತ್ಯಾತ್ಮಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬೋಧಿಸಲು ಅಧ್ಯಾಪಕರಿಗೆ ಸೃಜನಶೀಲ ಚಟುವಟಿಕೆಗಳನ್ನು ರೂಪಿಸುವ ಕೌಶಲ ಮತ್ತು ಅದಕ್ಕೆ ಅನುಗುಣವಾದ ತರಬೇತಿಯನ್ನು ಕೊಡುವುದು.
- ಬೋಧನಾ ಪಠ್ಯಕ್ರಮದಲ್ಲಿ ಸಾಂಸ್ಕೃತಿಕ ಅಂಶ ಒಳಗೊಳ್ಳುವಂತೆ ಸಂಶೋಧನೆಗಳನ್ನು ಕೈಗೊಳ್ಳುವುದು.
- ವಿವಿಧ ಶಿಸ್ತುಗಳನ್ನು ಬೋಧಿಸಲು ದೇಶದ ವಿವಿಧ ಭಾಗದ ಅಧ್ಯಾಪಕರು ಒಟ್ಟಾಗಿ ಕೆಲಸ ಮಾಡಲು ಅವಕಾಶಗಳನ್ನು ಒದಗಿಸುವುದು.

Digitised by Bharatavani, CIIL

ಕಾರ್ಯಕ್ರಮವು ಕೆಳಗೆ ಸೂಚಿಸಿರುವ ವಿಷಯಗಳನ್ನು ಒಳಗೊಂಡಿರುತ್ತದೆ:

(i) ಕಲೆ ಮತ್ತು ಸಂಸ್ಕೃತಿಯ ತಾತ್ವಿಕ ಅಧ್ಯಯನ

(ii) ಕಲೆ ಮತ್ತು ಕೈಕೆಲಸದಲ್ಲಿ ಪ್ರಾಯೋಗಿಕ ತರಬೇತಿ

–ಸಾಂಪ್ರದಾಯಿಕ ಕಲಾಕೌಶಲಗಳನ್ನು ಕಲಿಯುವಿಕೆ

–ಪ್ರಾಂತೀಯ ಭಾಷೆಗಳಲ್ಲಿ ಹಾಡುಗಳನ್ನು ಕಲಿಯುವುದರಲ್ಲಿ ಪ್ರಾಯೋಗಿಕ ತರಬೇತಿ

ಚಲನೆ, ಅಣಕು, ಕತೆ ಹೇಳುವುದು ಮೊದಲಾದ ರೂಪಗಳಲ್ಲಿ ರಂಗಕೌಶಲಗಳ ಕಲಿಕೆ

(iii) ಸಾಂಸ್ಕೃತಿಕ ಶಿಕ್ಷಣಕ್ಕೆ ಕಲಿಕಾ ಉಪಕರಣಗಳ ತಯಾರಿ.

(iv) ಶೈಕ್ಷಣಿಕ ಪ್ರವಾಸಗಳು ಮತ್ತು ಭೇಟಿಗಳು

(v) ಸಾಂಸ್ಕೃತಿಕ ಶಿಕ್ಷಣಕ್ಕೆ ಶೈಕ್ಷಣಿಕ ಉಪಕರಣಗಳನ್ನು ತಯಾರಿಸುವುದು ಮತ್ತು ತರಗತಿ ಬೋಧನೆಯನ್ನು ಉತ್ತೇಜಿಸುವುದು.

(vi) ಮ್ಯೂಸಿಯಂಗಳು, ಕಟ್ಟಡಗಳು, ಕಲಾಗ್ಯಾಲರಿಗಳು ಹಾಗೂ ಸ್ವಾಭಾವಿಕ ಉದ್ಯಾನವನಗಳಿಗೆ ಶೈಕ್ಷಣಿಕ ಪ್ರವಾಸ.

(vii) ಮೌಲ್ಯಮಾಪನ

(viii) ನಿರ್ದಿಷ್ಟ ಗುಂಪುಗಳ ಅಗತ್ಯಗಳಿಗೆ ಹೊಂದುವ ಶೈಕ್ಷಣಿಕ ಚಟುವಟಿಕೆಗಳು.

**ಮೌಲ್ಯಮಾಪನ:** ನಿರಂತರ ಮೌಲ್ಯಮಾಪನವು ಪ್ರತಿ ತರಬೇತಿ ಕಾರ್ಯಕ್ರಮದ ಅನಿವಾರ್ಯ ಭಾಗ. ಇವು ಕಾರ್ಯಕ್ರಮದ ಉದ್ದೇಶಗಳಿಗನುಗುಣವಾಗಿ ಅಭ್ಯರ್ಥಿಗಳ ಗ್ರಹಿಕೆಯನ್ನು ಮೌಲ್ಯಮಾಪನ ಮಾಡಲು ಅವರ ಜ್ಞಾನಾತ್ಮಕ ಕೌಶಲಗಳನ್ನು ಪರೀಕ್ಷಿಸಲು ಸಹಾಯಮಾಡುವುದಲ್ಲದೆ, ಒಟ್ಟು ಕಾರ್ಯಕ್ರಮವನ್ನು ಉತ್ತಮಗೊಳಿಸಲು ಅಗತ್ಯವಾದ ಹಿಮ್ಮಾಹಿತಿಯನ್ನೂ ಒದಗಿಸುತ್ತವೆ.

ಸಚೇತನ ಕೋರ್ಸ್‌ಗಳು ಶಾಲೆಯಲ್ಲಿ ಯುವಪೀಳಿಗೆಗೆ ಭಾರತದ ಸಾಂಸ್ಕೃತಿಕ ಪರಂಪರೆಯ ಸಾಮಾನ್ಯ ನೋಟವನ್ನು ಪರಿಚಯಿಸಲು ಶಿಕ್ಷಕರನ್ನು ತಯಾರು ಮಾಡುವುದು ಮಾತ್ರವಲ್ಲದೆ ಅವರಲ್ಲಿ ಒಂದು ರೀತಿಯ ಸೌಂದರ್ಯಾತ್ಮಕ ಸಂವೇದನೆಯನ್ನು ಜಾಗೃತಗೊಳಿಸಿಕೊಳ್ಳಲು, ಶೈಕ್ಷಣಿಕ ಶಿಸ್ತುಗಳ ಜ್ಞಾನವನ್ನು ವೃದ್ಧಿಸಿಕೊಳ್ಳಲು, ಭಾಷಾಕಲೆಯನ್ನು ಉತ್ತಮಪಡಿಸಿಕೊಳ್ಳುವುದರ ಮೂಲಕ ಪ್ರಭಾವೀ ಸಂವಹನಕಾರರಾಗಲು ಸಾಧ್ಯವಾಗಿಸುತ್ತವೆ. ಬೋಧಿಸುವ ವ್ಯಕ್ತಿ ಒಬ್ಬ ಅಧ್ಯಾಪಕನಾಗಿ ಮತ್ತು ಒಬ್ಬ ವ್ಯಕ್ತಿಯಾಗಿ ತನ್ನ ಕೌಶಲ್ಯ ಮತ್ತು ಸಾಮರ್ಥ್ಯವನ್ನು ಗುರುತಿಸಿಕೊಳ್ಳುವ ಅಗತ್ಯವನ್ನು ಮನಗಾಣಿಸುವಂತೆ ಮಾಡಿರುವುದು ಮೌಲ್ಯಮಾಪನ ಅವಧಿಗಳ ಉನ್ನತ ಸಾಧನೆ ಎಂದು ಹೇಳಬಹುದು.

**ಕಾರ್ಯಾಗಾರಗಳು:** ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ದೇಶದ ವಿವಿಧ ಭಾಗಗಳ ಅಧ್ಯಾಪಕರಿಗೆ ವಿವಿಧ ವಿಷಯಗಳನ್ನು ಕುರಿತ ಕಾರ್ಯಾಗಾರಗಳನ್ನು ಯೋಜಿಸುತ್ತದೆ. ಈ ಕಾರ್ಯಾಗಾರಗಳ ಮೂಲಕ ಮಗುವಿನಲ್ಲಿ ಸಂವೇದನೆ ಮತ್ತು ಸೃಜನಶೀಲತೆಯನ್ನು ಬೆಳೆಸುವ ಅನ್ವೇಷಣಾ ವಿಧಾನಗಳನ್ನು ಅಧ್ಯಾಪಕರಿಗೆ ಪರಿಚಯಿಸುತ್ತದೆ. ಈ ಕಾರ್ಯಾಗಾರಗಳು ಪ್ರಮುಖವಾಗಿ ಧ್ಯೇಯ/ವಿಷಯಾಧಾರಿತವಾದವುಗಳು. ಜೊತೆಗೆ ಶೈಕ್ಷಣಿಕ ಸಾಧನವಾಗಿ ಬಳಸಬಹುದಾದ ಒಂದು ನಿರ್ದಿಷ್ಟ ಕಲೆಯನ್ನು ಇವು ಗಮನದಲ್ಲಿಟ್ಟಿರುತ್ತವೆ. ಸಾಂಪ್ರದಾಯಿಕ ಸಂವಹನಾ ಕೌಶಲವಾದ ನಿರೂಪಣೆಯ ಜೊತೆಗೆ ಬಳಸುವ ಚಿತ್ರ ಸುರುಳಿಗಳು, ಕಥಾ ನಿರೂಪಣೆ, ಸೂತ್ರದ ಗೊಂಬೆಗಳ ಬಳಕೆ ಇವು ತರಗತಿಯಲ್ಲಿ ಅತ್ಯಂತ ಯಶಸ್ವಿಯಾಗಿ ಕೆಲಸಮಾಡುತ್ತವೆ ಎಂದು ಕಂಡುಬಂದಿದೆ. ಮ್ಯೂಸಿಯಂ ಶಿಕ್ಷಣ/ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ/ಕಾರ್ಯ ಶಿಕ್ಷಣ ಮುಂತಾದವುಗಳನ್ನು ಕುರಿತ ಕಾರ್ಯಾಗಾರಗಳು ಶಾಲೆಯ ನಾಲ್ಕು ಗೋಡೆಗಳ ಹೊರಗೆ ಸಂತಸದಾಯಕ ಕಲಿಕೆಗೆ ಉತ್ತಮ ಪರಿಸರವನ್ನು ನಿರ್ಮಿಸಲು ಮತ್ತು ಕಲೆ, ಕೈಕೆಲಸ, ವಿಜ್ಞಾನ ಮ್ಯೂಸಿಯಂ, ಗ್ಯಾಲರಿಗಳು, ಕಟ್ಟಡಗಳು ಇವುಗಳನ್ನು ಕಲಿಕೆಯ ಮುಂದುವರಿದ ಕೇಂದ್ರಗಳಾಗಿ ಗುರುತಿಸಿಕೊಳ್ಳಲು ಪ್ರೋತ್ಸಾಹಿಸಿವೆ. ಈ ಕಾರ್ಯಾಗಾರಗಳು ಭಾರತದ ಸ್ವಾಭಾವಿಕ ಮತ್ತು ಸಾಂಸ್ಕೃತಿಕ ಪರಂಪರೆಗಳ ಬಗೆಗಿನ ಅರಿವನ್ನು ಮೂಡಿಸುವ ಉದ್ದೇಶವನ್ನು ಹೊಂದಿವೆ. ಜೊತೆಗೆ ನಿರ್ದಿಷ್ಟ ಕಲಾಪ್ರಕಾರಗಳನ್ನು ಶಿಕ್ಷಣದ ಸಾಧನಗಳನ್ನಾಗಿ ಬಳಸಿಕೊಂಡು ಮೌಲ್ಯಾಧಾರಿತ ಶಿಕ್ಷಣವನ್ನು ಪ್ರೋತ್ಸಾಹಿಸಲು, ತರಗತಿ ಬೋಧನೆಯಲ್ಲಿ ಸೃಜನಶೀಲ ಚಟುವಟಿಕೆಗಳಿಂದಾಗಿ ಹೊಸ ವಿಧಾನಗಳನ್ನು ಪ್ರಯತ್ನಿಸುವ, ರೂಪಿಸುವ ಗುರಿಯನ್ನೂ ಹೊಂದಿವೆ.

ಶಿಕ್ಷಣದಲ್ಲಿ ಸೂತ್ರದ ಗೊಂಬೆಯಾಟ, ಮ್ಯೂಸಿಯಂಗಳ ಪಾತ್ರ, ಸ್ವಾಭಾವಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡುವಲ್ಲಿ ಶಿಕ್ಷಣದ ಪಾತ್ರ, ಸಾಮಾಜಿಕ ಉಪಯೋಗಿ ಉತ್ಪಾದನಾ ಕಾರ್ಯ/ಕಾರ್ಯಶಿಕ್ಷಣ ಮತ್ತು ಸಾಂಸ್ಕೃತಿಕ ಶಿಕ್ಷಣದಲ್ಲಿ ದೃಕ್‌ಶ್ರವಣ ಸಾಮಗ್ರಿಗಳ ಬಳಕೆ–ಈ ವಿಷಯಗಳನ್ನು ಕುರಿತ ಕಾರ್ಯಾಗಾರಗಳನ್ನು ಕೇಂದ್ರವು ಈಗಾಗಲೇ ಸಂಘಟಿಸಿದೆ.

**ಸಮುದಾಯ ಮತ್ತು ವಿಸ್ತರಣಾ ಸೇವೆ:**

ಮಕ್ಕಳಲ್ಲಿ ನೇರವಾಗಿ ಕೆಲಸಮಾಡಬೇಕಾದ ಅಗತ್ಯಕ್ಕೆ ಪ್ರತಿಕ್ರಿಯೆಯಾಗಿ ಮತ್ತು ಅಧ್ಯಾಪಕ ತರಬೇತಿ ಕಾರ್ಯಕ್ರಮಗಳಲ್ಲಿ ಬೋಧಿಸಿದ ಹಲವಾರು ಕೌಶಲಗಳು ಮಕ್ಕಳಿಗೆ ತಲುಪಿವೆಯೇ ಎಂದು ಪರೀಕ್ಷಿಸುವ ಸಲುವಾಗಿ ಕೇಂದ್ರವು ದೆಹಲಿ ಮತ್ತು ಅದರ ಇನ್ನೆರಡು ಪ್ರಾಂತೀಯ ಕೇಂದ್ರಗಳಲ್ಲಿ ಶಾಲಾಮಕ್ಕಳಿಗಾಗಿ ನಿರಂತರವಾಗಿ ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದೆ.

ರಾಷ್ಟ್ರೀಯವಾಗಿ ಮತ್ತು ಐತಿಹಾಸಿಕವಾಗಿ ಪ್ರಾಮುಖ್ಯವುಳ್ಳ ಸ್ಥಳಗಳಿಗೆ ನಿರ್ದೇಶಿತ ಪ್ರವಾಸವೂ ಈ ಕಾರ್ಯಕ್ರಮದ

Digitised by Bharatavani, CIIL

ಚಟುವಟಿಕೆಗಳ ಭಾಗವಾಗಿದೆ. ದೇಶದ ಸ್ವಭಾವಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಕಲಿತು, ಕಂಡುಕೊಳ್ಳುವಲ್ಲಿ ವಿವಿಧ ತರಗತಿಯ ವಿದ್ಯಾರ್ಥಿಗಳಿಗೆ ನೇರ ಪ್ರಾಯೋಗಿಕ ಅನುಭವವನ್ನು ಪಡೆಯುವ ಅವಕಾಶ ಈ ಕಾರ್ಯಕ್ರಮದಿಂದ ದೊರಕಿದೆ. ಈ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ನೋಡುವ, ವೀಕ್ಷಿಸುವ, ಆಲೋಚಿಸುವ, ಅನುಭವಿಸುವ, ಸೃಜನಶೀಲವಾಗಿ ಅಭಿವ್ಯಕ್ತಿಸುವ ಕೌಶಲಗಳನ್ನು ಪಡೆಯುವಂತೆ ಕಾರ್ಯತಖ್ತೆಯನ್ನು ತಯಾರಿಸುವ ಮತ್ತು ಅಭ್ಯಾಸಗಳನ್ನು ರೂಪಿಸುವ ಪ್ರಯತ್ನಗಳನ್ನೂ ಮಾಡಲಾಗಿದೆ. ವಿದ್ಯಾರ್ಥಿಗಳು ಸ್ವಾಭಾವಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಲು ಸಂಬಂಧಿಸಿದ ಕಾರ್ಯಕ್ರಮಗಳನ್ನು ಗುಂಪಿನಲ್ಲಿ ಕೈಗೊಳ್ಳಲು ಈ ಕಾರ್ಯಕ್ರಮಗಳಲ್ಲಿ ಪ್ರೋತ್ಸಾಹಿಸಲಾಗುತ್ತದೆ.

ಸಮಾಜದಲ್ಲಿನ ಅವಕಾಶವಂಚಿತ ಸಮುದಾಯಗಳಿಗೆ ಹಾಗೂ ಇತರ ಶಾಲಾ ವಿದ್ಯಾರ್ಥಿಗಳಿಗೆ ಕೈಕೆಲಸವನ್ನು ಬೋಧಿಸುವ, ಸಾಧನಾ ಕೌಶಲಗಳನ್ನು ಕಲಿಯುವ ಕಾರ್ಯಕ್ರಮಗಳನ್ನೂ ಸಮುದಾಯ ಕೇಂದ್ರಗಳಲ್ಲಿ ಹಾಗೂ ಪುನರ್ವಸತಿ ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಸೃಜನಶೀಲ ಕಲಾಕಾರರೊಂದಿಗೆ ಕಲೆತು ಕೆಲಸಮಾಡುವುದರಿಂದ ಕಲೆಯನ್ನು ರೂಪಿಸುವ ಪ್ರಕ್ರಿಯೆ ವಿದ್ಯಾರ್ಥಿಗಳಿಗೆ ತಿಳಿಯುತ್ತದೆ. ಇವರಲ್ಲಿ ಬಹಳಷ್ಟು ವಿದ್ವಾಂಸರು ಅವರ ಸಮುದಾಯದ ಪರಂಪರೆಯ ಮತ್ತು ಸೃಜನಶೀಲ ಮಾನವ ಸಂಪನ್ಮೂಲವನ್ನು ರಕ್ಷಿಸುವ ಹೊಣೆಯನ್ನು ಹೊತ್ತಿರುತ್ತಾರೆ.

ಭಾರತೀಯ ಪುರಾತತ್ವ ಸರ್ವೇಕ್ಷಣ ಮತ್ತು INTACH ಇವುಗಳ ಸಹಯೋಗದಲ್ಲಿ ಆಯೋಜಿಸಿದ ಪರಂಪರೆಯ ಅರಿವು ಕೊಡುವ ಶಿಬಿರಗಳು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಉಪಯುಕ್ತವಾಗಿರುವುದು ಕಂಡುಬಂದಿದೆ.

**ಸಂಪನ್ಮೂಲ ಸಂಗ್ರಹ:** ಸಂಸ್ಕೃತಿಯನ್ನು ಕುರಿತಂತೆ ಬೋಧನಾ ಸಾಮಗ್ರಿಗಳನ್ನು ತಯಾರಿಸಲು ಈ ಕೇಂದ್ರವು ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಆಸಕ್ತಿಯನ್ನು ಮೂಡಿಸುವ ಕಲಾಪ್ರಕಾರಗಳ ದಾಖಲೀಕರಣವನ್ನು ಕೈಗೊಳ್ಳುತ್ತದೆ. ಸಾಂಪ್ರದಾಯಿಕ ನಿರೂಪಣಗಳು, ನೃತ್ಯ, ಸಂಗೀತ –ಬುಡಕಟ್ಟು, ಗ್ರಾಮೀಣ ಮತ್ತು ನಗರ ವಲಯಗಳ–ಇವುಗಳ ಧ್ವನಿಮುದ್ರಣವನ್ನೂ ವೀಡಿಯೊ ಮುದ್ರಣವನ್ನೂ ಮಾಡಲಾಗುತ್ತದೆ. ತರಗತಿ ಸನ್ನಿವೇಶಗಳಲ್ಲಿ ಮತ್ತು ಸಮುದಾಯಗಳಲ್ಲಿ ಇವುಗಳನ್ನು ಬಳಸಲು ಅಧ್ಯಾಪಕರಿಗೆ ತರಬೇತಿ ನೀಡಲಾಗುತ್ತದೆ. ಚಾರಿತ್ರಿಕ ಸ್ಥಳಗಳು, ಶಿಲ್ಪಿಗಳು ಮತ್ತು ವರ್ಣಚಿತ್ರಕಲೆ ಇವುಗಳನ್ನು ಮಕ್ಕಳಿಗೆ ಪರಿಚಯಿಸಲು ಬಣ್ಣದ ಚಲನಚಿತ್ರಗಳನ್ನೂ, ಫಲಕಗಳನ್ನೂ ತಯಾರಿಸಲಾಗುತ್ತದೆ.

ದಾಖಲೀಕರಣ ಮಾಡುವ ಮೊದಲು ಸಾಕಷ್ಟು ಸಂಶೋಧನೆ ಮತ್ತು ಕ್ಷೇತ್ರಕಾರ್ಯಗಳನ್ನು ಕೈಗೊಳ್ಳುವುದು ಮಾತ್ರವಲ್ಲದೆ ಕಲಾ ಇತಿಹಾಸ ತಜ್ಞರ, ಶಿಕ್ಷಣತಜ್ಞರ ಮಾರ್ಗದರ್ಶನ ಪಡೆದುಕೊಳ್ಳಲಾಗುತ್ತದೆ. ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಸುಸಜ್ಜಿತವಾದ ದಾಖಲೀಕರಣ ವಿಭಾಗವನ್ನು ಹೊಂದಿದೆ. ಪ್ರಸಾರದ ಉದ್ದೇಶಕ್ಕಾಗಿ ಮಾಡುವ ದಾಖಲೀಕರಣ ಇದರ ಪ್ರಮುಖ ಉದ್ದೇಶ. ಇದರಿಂದಾಗಿ ದೊಡ್ಡ ಪ್ರಮಾಣದ ಮುದ್ರಿತ ಹಾಗೂ ದೃಕ್ ಶ್ರವಣ ಸಾಮಗ್ರಿಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಈ ಕ್ಷೇತ್ರದಲ್ಲಿ ಸಂಸ್ಥೆಯ ನೈಪುಣ್ಯವನ್ನು ಅಂತರರಾಷ್ಟ್ರೀಯ ಸಂಸ್ಥೆಗಳು ಬಳಸಿಕೊಳ್ಳುತ್ತವೆ. ಯುನೆಸ್ಕೊದ ಆಶ್ರಯದಲ್ಲಿ ಸಂಸ್ಥೆಯು ಸಾಧನಾಕಲೆಗಳ ದಾಖಲೀಕರಣ ಮತ್ತು ಪ್ರಸಾರವನ್ನು ಕುರಿತಂತೆ ಪ್ರಾಂತೀಯ ಹಂತದಲ್ಲಿ ಅನೇಕ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಿದೆ. ಅಂತಹ ಮೊದಲ ಕಾರ್ಯಕ್ರಮ ದೆಹಲಿಯಲ್ಲಿ ಕಳೆದ ಶತಮಾನದ ಎಂಬತ್ತರ ದಶಕದ ಮಧ್ಯಭಾಗದಲ್ಲಿ ನಡೆಯಿತು. 2010ರ ಜನವರಿಯಲ್ಲಿ ಇಂತಹ ಮತ್ತೊಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ಸಾಂಸ್ಕೃತಿಕ ಸಾಮಗ್ರಿಗಳ ಉತ್ಪಾದನೆ:** ಈಗಾಗಲೇ ನಮೂದಿಸಿದಂತೆ ಕಲೆ, ಸಂಸ್ಕೃತಿ ಹಾಗೂ ಪಠ್ಯಕ್ರಮದ ವಿವಿಧ ಶಿಸ್ತುಗಳ ನಡುವೆ ಸಂಬಂಧವನ್ನು ತರುವ ಉದ್ದೇಶದಿಂದ ಶಿಕ್ಷಕರು ಮತ್ತು ಇತರರು ತರಗತಿ ಬೋಧನೆಯಲ್ಲಿ ಬಳಸಿಕೊಳ್ಳಬಹುದಾದ ಸಾಮಗ್ರಿಗಳ ಉತ್ಪಾದನೆಗೆ ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ವಿಶೇಷ ಗಮನಕೊಡುತ್ತದೆ. ಅನೇಕ ಉತ್ಪಾದನಾ ಸಾಮಗ್ರಿಗಳು, ಅತಿ ದೂರದ ಪ್ರದೇಶದಲ್ಲಿ ವಾಸಮಾಡುವ ವಿದ್ಯಾರ್ಥಿಗಳಿಗೆ ಕಲೆ ಮತ್ತು ಕೈಕೆಲಸ ಮಾಡುವ ಪ್ರಕ್ರಿಯೆಯನ್ನು ಬೋಧಿಸುವ ಉದ್ದೇಶವನ್ನು ಹೊಂದಿವೆ. ಇವು ಸ್ಪರ್ಶಕ್ಕೆ ಒಳಪಡುವ ಮತ್ತು ಒಳಪಡದ ಪರಂಪರೆ ಮೈಗೂಡಿಸಿಕೊಂಡಿರುವ ಸೌಂದರ್ಯಕ್ಕೆ ಮಕ್ಕಳು ಸಂವೇದಿಸುವಂತೆ ಮಾಡುವ ಆಶಯವನ್ನು ಉಳ್ಳವಾಗಿವೆ. ಈ ಮೂಲಕ ವ್ಯಕ್ತಿಯ ಸಾಂಸ್ಕೃತಿಕ ಮೂಲಗಳ ಅರಿವಿನಿಂದಾಗಿ ಮೂಡಿಬರುವ ಒಂದು ರೀತಿಯ ಹೆಮ್ಮೆ ಮತ್ತು ಆತ್ಮಾಭಿಮಾನವನ್ನು ಮೂಡಿಸುವುದನ್ನೂ ಇದು ಗುರಿಯಾಗಿಟ್ಟುಕೊಂಡಿದೆ.

**ಪ್ರಕಟಣೆಗಳು:** ಸ್ವಾಭಾವಿಕ ಮತ್ತು ಸಾಂಸ್ಕೃತಿಕ ಪರಂಪರೆಯ ವಿವಿಧ ವಿಷಯಗಳನ್ನು ಕುರಿತಂತೆ ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಅತ್ಯುನ್ನತ ಮಟ್ಟದ ಪ್ರಕಟಣೆಗಳನ್ನು ಹೊರತರುತ್ತದೆ.

ಇದು ಹೊರತರುವ ಛಾಯಾಚಿತ್ರಗಳು, ಅವುಗಳ ವಿವರಣೆ ಮತ್ತು ಬಳಕೆಯನ್ನು ಕುರಿತ ವಿವರ ಮುಂತಾದವುಗಳು ಭಾರತದ ಸೃಜನಶೀಲ ಅಭಿವ್ಯಕ್ತಿಯ ಬಹುಶಿಸ್ತೀಯ ಉಪಕ್ರಮವನ್ನು ಎತ್ತಿ ತೋರಿಸುವುದಲ್ಲದೆ ಕಾಲಕ್ರಮದಲ್ಲಿ ವಿವಿಧ ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆ ಹಾಗೂ ಸಾಧನಾಕಲೆಗಳ ವಿಭಿನ್ನ ಶಾಖೆಗಳನ್ನು ವೀಕ್ಷಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ಕೌಶಲಗಳನ್ನು ಕಲಿಯಲು ಯುವಜನತೆಯನ್ನು ಪ್ರೋತ್ಸಾಹಿಸುತ್ತದೆ.

**ಸಾಂಸ್ಕೃತಿಕ ಪ್ರತಿಭಾನ್ವೇಷಣಾ ಶೋಧನಾ ವಿದ್ಯಾರ್ಥಿವೇತನ ಯೋಜನೆ:**

ನಮ್ಮ ದೇಶದ ಕಲೆ ಮತ್ತು ಸಂಸ್ಕೃತಿ ಕೇವಲ ಮ್ಯೂಸಿಯಂ ಮತ್ತು ಪತ್ರಾಗಾರಗಳಲ್ಲಿ ಉಳಿಯದೆ ಅವಿರತವಾಗಿ ಬೆಳೆಯಲು,

Digitised by Bharatavani, CIIL

ಮುಂದುವರಿಯಲು ಸೃಜನಶೀಲ ವ್ಯಕ್ತಿಗಳ ಒಂದು ಹೊಸ ಪೀಳಿಗೆಯನ್ನು ಸೃಷ್ಟಿಸುವ ಅಗತ್ಯಗಳನ್ನು ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಗುರುತಿಸಿಕೊಂಡಿದೆ. ಹಾಗಾಗಿ 10–14 ವರ್ಷದ ಅಂತರದ ವಿದ್ಯಾರ್ಥಿಗಳಿಗೆ ಸಂಸ್ಥೆಯು ವಿದ್ಯಾರ್ಥಿವೇತನವನ್ನು ನೀಡುತ್ತದೆ. ಈ ವಿದ್ಯಾರ್ಥಿಗಳಲ್ಲಿ ಒಂದು ಸಣ್ಣ ಪ್ರಮಾಣದ ವಿದ್ಯಾರ್ಥಿಗಳಾದರೂ ಕಲೆಯನ್ನು ವೃತ್ತಿಯನ್ನಾಗಿ ಕೈಗೊಳ್ಳುವರು ಎಂದು ಆಶಿಸಲಾಗಿದೆ.

**ಉಪಸಂಹಾರ:** ಸಂಸ್ಕೃತಿ ಶಿಕ್ಷಣದಲ್ಲಿ ಸಂಸ್ಥೆಯ ಮೂವತ್ತು ವರ್ಷಗಳ ಕಾಲದ ಕಾರ್ಯದ ಸಿಂಹಾವಲೋಕನ ಮಾಡಿದಾಗ, ಶಿಕ್ಷಣದ ಈ ಪ್ರಮುಖ ಕ್ಷೇತ್ರದಲ್ಲಿ ಸಂಸ್ಥೆಯು ಘನವಾದ ಅಡಿಪಾಯವನ್ನು ಹಾಕಿಕೊಟ್ಟಿರುವುದು ಅನುಭವಕ್ಕೆ ಬರುತ್ತದೆ. ಸರ್ಕಾರದ ಬಲವಾದ ಒತ್ತಾಸೆ ಮತ್ತು ವಿದ್ವಾಂಸರು ಹಾಗೂ ಕಲಾವಿದರ ಆಳವಾದ ಆಸಕ್ತಿ ಮತ್ತು ಮಾರ್ಗದರ್ಶನಗಳು ಈ ದಿಸೆಯಲ್ಲಿ ಅತಿ ಮಹತ್ವದ್ದಾಗಿವೆ. ಅಲ್ಲದೆ ಬೋಧಕವರ್ಗ ಹಾಗೂ ಯುವಜನಾಂಗದ ಪ್ರತಿಕ್ರಿಯೆ ನಿರೀಕ್ಷೆಯನ್ನು ಮೀರಿದುದಾಗಿದೆ. ವಿಶಾಲವಾದ ಭಾರತದಂತಹ ದೇಶದಲ್ಲಿ ರಾಷ್ಟಮಟ್ಟದಲ್ಲಿ ವಿಶಿಷ್ಟ ರೀತಿಯ ಪ್ರಭಾವವನ್ನು ಬೀರುವಂತಹ ಇನ್ನೂ ಹೆಚ್ಚಿನ ಮಟ್ಟದ ಪ್ರಯತ್ನದ ಅಗತ್ಯ ಇದೆ ಎಂಬುದನ್ನೂ ಅನುಭವ ತಿಳಿಸಿಕೊಟ್ಟಿದೆ. ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು ಅದರ ಅಸ್ತಿತ್ವದ 21 ವರ್ಷಗಳಲ್ಲಿ ಹಾಗೂ ಆ ಮೊದಲಿನ ಎಂಟು ವರ್ಷಗಳ ಪೂರ್ವ ತಯಾರಿಯ ಅವಧಿಯಲ್ಲಿ, ಐವತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಸೇವಾನಿರತ ಶಿಕ್ಷಕರಿಗೆ ತರಬೇತಿ ಕೊಟ್ಟಿದೆಯಲ್ಲದೆ, ಹೆಚ್ಚು ಕಡಿಮೆ ಅದೇ ಸಂಖ್ಯೆಯ ವಿದ್ಯಾರ್ಥಿಗಳು ಈ ಸಂಸ್ಥೆಯ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ತುಲನಾತ್ಮಕವಾಗಿ, ಸಂಸ್ಥೆಯ ಪ್ರಭಾವ ಕಡಿಮೆ ಇರುವುದಾದರೆ, ಅದಕ್ಕೆ ಕಾರಣ, ಸೇವಾಪೂರ್ವ ಶಿಕ್ಷಣದಲ್ಲಿ ಸಂಸ್ಕೃತಿ ಶಿಕ್ಷಣಕ್ಕೆ ಸಾಕಷ್ಟು ಸಮಯ ಮತ್ತು ಗುಣಾತ್ಮಕ ಒಳಹರಿವುಗಳು ಸಿಗುತ್ತಿಲ್ಲ. ಅಲ್ಲಿಯವರೆಗೆ, ಅಂದರೆ ಸಂಸ್ಕೃತಿ ಶಿಕ್ಷಣಕ್ಕೆ ಶಾಲಾ ಸನ್ನಿವೇಶ ಸರಿಯಾಗುವವರೆಗೆ ಸಂಸ್ಥೆಯ ಕಾರ್ಯಗಳು ಹಾಗೂ ಸಾಧನೆ ಶಿಕ್ಷಣದ ಕಾರ್ಯಸೂಚಿಯ ಪರಿಧಿಯ ವಲಯದಲ್ಲೇ ಮುಂದುವರಿಯುತ್ತವೆ. ಸೇವಾಪೂರ್ವ ಶಿಕ್ಷಣದಲ್ಲಿ ಪ್ರತಿ ಅಧ್ಯಾಪಕನೂ ಸಾಂಸ್ಕೃತಿಕ ಶಿಕ್ಷಣದ ಒಂದು ಭಾಗವನ್ನಾದರೂ ಕಲಿಯಲೇಬೇಕು. ಸಂಸ್ಥೆಯು ಅದಕ್ಕೆ ಪೂರಕವಾದ ಘಟಕಗಳನ್ನು ತಯಾರಿಸಿರುವುದಲ್ಲದೆ ಅನೇಕ ಶೈಕ್ಷಣಿಕ ಸಮ್ಮೇಳನಗಳು, ಸಂಕಿರಣಗಳಲ್ಲಿ ಅವುಗಳನ್ನು ಕುರಿತ ಶಿಫಾರಸ್ಸುಗಳನ್ನು ಹೊರಡಿಸಿದೆ.

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವು, ಅದು ರೂಪಿಸಿರುವ ತರಬೇತಿ ವಿಷಯ ಮತ್ತು ವಿಧಾನಗಳನ್ನು ಅನ್ವಯಿಸುವಲ್ಲಿ ಸೇವಾಂತರ್ಗತ ಶಿಕ್ಷಕರಿಗೆ ಸಹಾಯಮಾಡಲು ಕೆಲವು ಶಾಲಾಮುಖ್ಯಸ್ಥರು, ಶಿಕ್ಷಣದ ಸಹ ಅಧಿಕಾರಿಗಳಿಗೆ ಉತ್ತಮ ಅಭಿಪ್ರೇರಣೆಯನ್ನೂ ನೀಡಿ, ಸಂಸ್ಕೃತಿಯ ಅಂಶಗಳನ್ನು ಶಿಕ್ಷಣದಲ್ಲಿ ಪ್ರಾರಂಭಿಸುವಲ್ಲಿ, ಬೆಳೆಸುವಲ್ಲಿ ಹಾಗೂ ಬದಲಿಸುವಲ್ಲಿ ಅವರ ಪಾತ್ರವನ್ನು ಮನದಟ್ಟು ಮಾಡಿದೆ. ಇದಲ್ಲದೆ ಸಂಸ್ಥೆಯು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ ಸಾಂಸ್ಕೃತಿಕ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ, ಪ್ರಶಿಕ್ಷಣದ ಪ್ರಾಥಮಿಕ ಹಂತದಲ್ಲೇ ಸಾಂಸ್ಕೃತಿಕ ಅಂಶಗಳನ್ನು ಪರಿಚಯಿಸುವಂತೆ ಪ್ರಶಿಕ್ಷಕರಿಗೆ ತರಬೇತಿ ನೀಡಿದೆ. ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಕಾರಣಕರ್ತರಾದವರು ಇದಕ್ಕೆ ಮುಂದೆ 'ಡೀಮ್ಡ್' ವಿಶ್ವವಿಶ್ವವಿದ್ಯಾನಿಲಯದ ಸ್ಥಾನಮಾನ ದೊರೆಯುವುದೆಂದು ಭಾವಿಸಿದ್ದರು. ಏಕೆಂದರೆ, ಸಂಸ್ಕೃತಿ ಶಿಕ್ಷಣದಲ್ಲಿ ವಿಶೇಷತೆಯನ್ನು ಮೆರೆದಿರುವ ಏಕೈಕ ಸಂಸ್ಥೆ ಇದು. ಅನ್ವೇಷಣಾತ್ಮಕ ಬೋಧನಾ ವಿಧಾನಗಳನ್ನು ಒದಗಿಸುವಲ್ಲಿ ಮತ್ತು ತರಬೇತಿಗೊಳಿಸುವಲ್ಲಿ ಈ ಸಂಸ್ಥೆಯ ಪಾತ್ರವನ್ನು ಗುರುತಿಸಿದ ದೆಹಲಿಯ ಶಿಕ್ಷಣ ವಿಭಾಗವು, ಒಂದು ವರ್ಷ ಸಮನ್ವಯ ಶಾಲೆಯನ್ನು ಪ್ರಾರಂಭಿಸಬೇಕೆಂದೂDDA ಅದಕ್ಕೆ ಅಗತ್ಯವಾದ ನಿವೇಶನವನ್ನು ಒದಗಿಸುವುದೆಂದೂ ಕೇಳಿಕೊಂಡಿತು. ಈ ಸಂಸ್ಥೆಯು ಶಾಲೆಯಲ್ಲಿ ಆದರ್ಶವಾದ ಅಧ್ಯಾಪಕ ತರಬೇತಿ ಕಾರ್ಯಕ್ರಮವನ್ನು ಕೊಡುವಲ್ಲಿ ಯಶಸ್ವಿಯಾಗುವುದು ಎಂದೂ ಹೊಸ ಶತಮಾನದಲ್ಲಿ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿನ ಅಗತ್ಯಗಳಿಗೆ ಸ್ಪಂದಿಸುವಲ್ಲಿ, ಆ ಮೂಲಕ ಭಾರತದ ಅತ್ಯುತ್ತಮ ಸೌಂದರ್ಯಾತ್ಮಕ, ನೇತ್ಯಾತ್ಮಕ, ತಾತ್ವಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದ ಮೂಲಕ ಭವಿಷ್ಯಕ್ಕೆ ಒಯ್ಯುವಲ್ಲಿ ಈ ಸಂಸ್ಥೆಯು ಅನ್ವೇಷಣಾತ್ಮಕ ಕಾರ್ಯಕ್ರಮಗಳು ವಿಜಯಗಾಥೆಯನ್ನು ಹಾಡುತ್ತವೆ ಎಂದೂ ಆಶಿಸಲಾಗಿದೆ. ಕೊನೆಯದಾಗಿ, ದೆಹಲಿ ಆಡಳಿತವು ಸಾಮಾನ್ಯ ಮಕ್ಕಳು ಮತ್ತು ವಿಶೇಷ ಸವಾಲುಗಳುಳ್ಳ ಮಕ್ಕಳು ಕೂಡಿ ಕಲಿಯುವ ಒಂದು ಆದರ್ಶ ಶಾಲೆಯನ್ನು ಮೂಡಿಸಲಿ ಎಂಬುದು ಎಲ್ಲರ ಹಾರೈಕೆ.

**ಮೂಲ: ಪ್ರೇಮಲತಾ**

**ಅನು: ಡಾ. ಶಶಿಕಲ ಎ.**

## ಸಾಮಾಜಿಕ ಮೌಲ್ಯ ವ್ಯವಸ್ಥೆ ಮತ್ತು ಶಿಕ್ಷಣ

ಮೌಲ್ಯವೆಂದರೆ ಸಾಮಾನ್ಯವಾಗಿ ಒಂದು ಉತ್ಪಾದನೆಯ ಬೆಲೆ. ಮೌಲ್ಯವು ವ್ಯಕ್ತಿಯ ಅಗತ್ಯವನ್ನು ಪೂರೈಸಿ ತೃಪ್ತಿಯನ್ನು ಒದಗಿಸುವುದು. ಮೌಲ್ಯಗಳಿಗೆ ವಿಶಿಷ್ಟವಾದ ಸಾಮಾಜಿಕ ಆಯಾಮವಿದೆ. ಸಮಾಜದ ಕಟ್ಟುಪಾಡುಗಳು, ಪದ್ಧತಿಗಳು, ಧಾರ್ಮಿಕ ಆಚರಣೆಗಳು ಮೌಲ್ಯಗಳ ಮೇಲೆ ನೇರವಾಗಿಯೇ ಪ್ರಭಾವ ಬೀರುತ್ತವೆ. ಯಾವುದೇ ಒಬ್ಬ ವ್ಯಕ್ತಿಯ ಗುಣಮಟ್ಟವನ್ನು ನಿರ್ಧಾರ ಮಾಡಿ ಇತರರಿಗೆ ಅವನ ಬಗ್ಗೆ ಗೌರವ ಭಾವನೆ ಮೂಡುವಂತೆ ಮಾಡುವುದೇ ಮೌಲ್ಯ ಎಂದೂ ಹೇಳಲಾಗುವುದು.

ಮೌಲ್ಯಗಳು ಮಾನವಜೀವನದ ಅವಿಭಾಜ್ಯ ಅಂಶಗಳೆಂದೇ ಹೇಳಬಹುದು. ಮೌಲ್ಯವ್ಯವಸ್ಥೆ ಎಂದರೆ ಸಮಾಜದ ವಿವಿಧ ಸ್ತರಗಳಲ್ಲಿನ ಸಾಮಾಜಿಕ ನಿಬಂಧನೆ ಮತ್ತು ಕಟ್ಟುನಿಟ್ಟಿನ

Digitised by Bharatavani, CIIL

ಸಮಗ್ರರೂಪ. ಈ ವ್ಯವಸ್ಥೆಯು ಒಂದು ಕುಟುಂಬದ್ದಾಗಿರಬಹುದು. ಶಾಲೆಯದ್ದಾಗಿರಬಹುದು ಬೇರೆ ಯಾವುದೇ ಒಂದು ಜನಸಮೂಹದ್ದಾಗಬಹುದು. ಏಕೆಂದರೆ ಈ ಆಯಾಮಗಳಲ್ಲಿನ ಜನರಲ್ಲಿ ಹಿರಿಯರು ಹಾಗೂ ಕಿರಿಯರು ಇವರ ವಿಭಿನ್ನ ಗುಂಪುಗಳಿರುವುದರಿಂದ ಇಲ್ಲಿ ಒಂದು ಮೌಲ್ಯವ್ಯವಸ್ಥೆಯು ವಿಕಾಸಗೊಳ್ಳುತ್ತದೆ. ಮಾನವನು ತನ್ನ ಆಲೋಚನೆಗಳ ಸಂಘಟನೆಯ ಮೂಲಕ ಒಂದು ಮೌಲ್ಯವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾನೆ. ಮೌಲ್ಯವ್ಯವಸ್ಥೆಯು ವಿವಿಧ ಬಗೆಯ ಮೌಲ್ಯಗಳನ್ನು ಒಳಗೊಂಡ ಒಂದು ಸಂಸ್ಥೆಯ ನಡವಳಿಕೆಯ ಸಮಗ್ರ ಪ್ರತೀಕವಾಗಿರುತ್ತದೆ.

ಇಂದಿನ ಸಮಾಜವು ಸಂಕೀರ್ಣ ಮಾದರಿಯದು. ಇದು ಹಲವಾರು ಮೌಲ್ಯಗಳನ್ನು ಬಳುವಳಿಯಾಗಿ ಕಾಲದಿಂದ ಕಾಲಕ್ಕೆ ಪಡೆದುಕೊಳ್ಳುತ್ತಾ ಬಂದಿದೆ. ಹಾಗೆಯೇ ಹಲವಾರು ಸಾಮಾಜಿಕ ಸಮಸ್ಯೆಗಳೂ ಹುಟ್ಟಿಕೊಂಡಿವೆ. ಈ ಸಮಸ್ಯೆಗಳನ್ನೆಲ್ಲಾ ಬುಡಸಹಿತ ಕಿತ್ತುಹಾಕಲು ನಮಗೆ ಮೌಲ್ಯ ವ್ಯವಸ್ಥೆಯ ಅಗತ್ಯತೆ ಇದೆ.

ಜೀವನದ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಮೌಲ್ಯವಿದೆ. ಆ ಮೌಲ್ಯವು ಧನಾತ್ಮಕವಿರಬಹುದು ಅಥವಾ ಋಣಾತ್ಮಕವಿರಬಹುದು. ಸಮಾಜದಲ್ಲಿನ ಮೌಲ್ಯಗಳಿಗೂ ಧನಾತ್ಮಕ ಹಾಗೂ ಋಣಾತ್ಮಕ ಮುಖಗಳಿರುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಅಂಗ. ಕೆಲವು ಮೌಲ್ಯಗಳು ಬುನಾದಿಯಂತಾದರೆ ಕೆಲವು ಮೌಲ್ಯಗಳು ಸ್ತಂಭಗಳಾಗುತ್ತವೆ.

ಸಾಮಾಜಿಕ ಮೌಲ್ಯಗಳೆಂದರೆ ಸಾಮಾಜಿಕ ಕಳಕಳಿ, ಸಮಾಜದ ಬಗ್ಗೆ ಕಾಳಜಿ, ಶಿಸ್ತು, ಸಾಮಾಜಿಕ ಹೊಂದಾಣಿಕೆ, ಸಾಮಾಜಿಕ ಬದ್ಧತೆ, ಸಾಮಾಜಿಕ ನ್ಯಾಯ, ಸೌಜನ್ಯತೆ, ಗೌರವ, ಸಾಮಾಜಿಕ ಜವಾಬ್ದಾರಿ ಮುಂತಾದುವು. ಸಮಾಜವು ತನ್ನದೇ ಆದ ರೀತಿಯಲ್ಲಿ ಈ ಮೌಲ್ಯಗಳಿಗೆ ಅನುಸಾರವಾಗಿ ನಡೆಯುವಂತೆ ಕಟ್ಟುನಿಟ್ಟಿನ ನಿಬಂಧನೆಯನ್ನು ಕಾಲದಿಂದ ಕಾಲಕ್ಕೆ ಪಾಲಿಸಿಕೊಂಡು ಬಂದಿದೆ. ಹಾಗೂ ಇವುಗಳನ್ನು ಪ್ರತಿಯೊಬ್ಬ ವ್ಯಕ್ತಿಯನ್ನೂ ಪಾಲಿಸಬೇಕೆಂಬ ಕಡ್ಡಾಯಕ್ಕೆ ದೂಡಿದೆ. ಇದೇ ಸಾಮಾಜಿಕ ಮೌಲ್ಯವ್ಯವಸ್ಥೆ. ಈ ವ್ಯವಸ್ಥೆಯು ಸಮಾಜವನ್ನು ಕ್ಷೇಮ, ಸುಸಜ್ಜಿತವಾಗಿರಿಸಿ ಬದುಕಲು ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತದೆ. ಈ ಮೌಲ್ಯಗಳನ್ನು ಆರ್ಥಿಕ ಮೌಲ್ಯಗಳು, ಆರೋಗ್ಯ ಮೌಲ್ಯಗಳು ಹಾಗೂ ಮನರಂಜನಾ ಮೌಲ್ಯಗಳನ್ನು ಒಳಗೊಂಡಂತೆ ವ್ಯಾವಹಾರಿಕ ಮೌಲ್ಯಗಳು ಹಾಗೂ ಸೌಂದರ್ಯೋಪಾಸನಾ ಮೌಲ್ಯಗಳು, ನೈತಿಕ ಮೌಲ್ಯಗಳು ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಒಳಗೊಂಡಂತೆ ವ್ಯಕ್ತಿ ಸಂಬಂಧಿತ ಮೌಲ್ಯಗಳು ಎಂದು ವರ್ಗೀಕರಿಸಬಹುದು.

**ಶಾಲೆ ಮತ್ತು ಮೌಲ್ಯ ವ್ಯವಸ್ಥೆ:**

ಭಾರತೀಯ ಶಾಲಾವ್ಯವಸ್ಥೆಯು ಸಾಮಾಜಿಕ ವಾಸ್ತವತೆಗೆ ಸವಾಲೊಡ್ಡುವಂತಹುದು. ಸಾರ್ವಜನಿಕರು ಶಾಲೆಯಲ್ಲಿ ಮೌಲ್ಯವ್ಯವಸ್ಥೆಯು ಹೇಗೆ ತನ್ನ ಕಾರ್ಯ ನಿರ್ವಹಿಸುತ್ತಿದೆ ಎಂಬುದರ ಬಗ್ಗೆ ಕಾಳಜಿ ವಹಿಸಬೇಕಿದೆ. ಸಾಮಾಜಿಕ ಮೌಲ್ಯಗಳ ಬೆಳವಣಿಗೆಯು ಸಂಕೀರ್ಣಸಮಾಜದ ತೊಡಕಿನ ಸನ್ನಿವೇಶಗಳಿಂದ ಬೆಳೆದುಬರುವಂತಹುದು. ಶಾಲೆಗಳು ಮತ್ತು ಉಪಾಧ್ಯಾಯರು ಮೌಲ್ಯಗಳನ್ನು ಬೆಳೆಸುವಲ್ಲಿ ಅತಿ ಮುಖ್ಯವಾದ ಪಾತ್ರ ವಹಿಸುತ್ತಾರೆ. ಆದರೆ ಸಮಾಜ ಶಾಲೆಗಿಂತ ದೊಡ್ಡದು. ಮಗು ಶಾಲೆಯಲ್ಲಿ ಕಳೆಯುವ ಸಮಯ ದಿನಕ್ಕೆ ಕೇವಲ ಆರುಗಂಟೆ. ವರ್ಷದಲ್ಲಿ 220 ದಿನ ಮಾತ್ರ ಶಾಲೆ ನಡೆಯುವುದರಿಂದ ಸಾಮಾಜಿಕ ಮೌಲ್ಯವ್ಯವಸ್ಥೆ ಶಾಲೆಯಿಂದ ಮಾತ್ರ ಸಾಧ್ಯವಿಲ್ಲ. ಏಕೆಂದರೆ ಸಾಮಾಜಿಕ ಸನ್ನಿವೇಶದ ಪ್ರಭಾವ ಶಾಲಾ ಪ್ರಭಾವಕ್ಕಿಂತ ಮಿಗಿಲಾದುದು.

ಮಗುವಿನಲ್ಲಿ ಬೀಜರೂಪದಲ್ಲಿ ಅಡಕವಾಗಿರುವ ಪ್ರತಿಭೆಯನ್ನು ಪೋಷಿಸಿ, ಉದ್ದೀಪನಗೊಳಿಸುವುದು, ಜೊತೆಗೆ ಮಗುವಿಗೆ ಸಮಾಜದ ಮೌಲ್ಯವ್ಯವಸ್ಥೆ ಮತ್ತು ಸಂಸ್ಕೃತಿಯನ್ನು ಪರಿಚಯಿಸುವುದು ಈ ಮೂಲಕ ಸಾಮಾಜಿಕ ನಡವಳಿಕೆಯನ್ನು ರೂಪಿಸುವುದು ಶಿಕ್ಷಣದ ಉದ್ದೇಶವಾಗಿದೆ. ವ್ಯಕ್ತಿ ವ್ಯಕ್ತಿಯ ನಡುವಣ ವೈವಿಧ್ಯತೆಯಿಂದಾಗಿ ಎಲ್ಲರನ್ನು ಒಂದೇ ಮಟ್ಟದಲ್ಲಿ ಸಾಮಾಜೀಕರಿಸಲು ಸಾಧ್ಯವಿಲ್ಲ.

ಇಂದು ಸಮಾಜದಲ್ಲಿ ಜನತೆಯಲ್ಲಿರುವ ಎರಡು ಮುಖ್ಯವಾದ ಮೌಲ್ಯಗಳನ್ನು ಗುರುತಿಸಬಹುದು. ಒಂದು ಸುಖ ಸೌಲಭ್ಯಗಳನ್ನು ಹೊಂದಿಸಿಕೊಳ್ಳಲು ಸ್ವಂತ ಹಿತಾಸಕ್ತಿ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳಲು ಪ್ರತಿಯೊಬ್ಬರ ಶ್ರಮ. ಶಿಕ್ಷಣದ ಉದ್ದೇಶವೂ ಇದೇ ಆಗಿರುವುದರಿಂದ ಈಗ ಸಾಮಾಜಿಕ ಆಂದೋಲನ ಬಹಳ ದೂರ ನಡೆದುಬಂದಿದೆ. ಸಾಮಾಜಿಕ ಪರಿವರ್ತನೆ ಉಂಟಾಗಿದೆ. ಯಾವುದೇ ಪಂಗಡ, ಜಾತಿ, ವರ್ಗಕ್ಕೆ ಸೇರಿದ ವ್ಯಕ್ತಿ ಯಾವ ಕ್ಷೇತ್ರದಲ್ಲಾದರೂ ಅಡಿ ಇರಿಸಬಹುದಾಗಿದೆ. ಇಂತಹವರು ಇಂತಹ ಕಾರ್ಯವನ್ನೇ ಮಾಡಬೇಕೆಂಬ ಕಟ್ಟುಪಾಡು ಇಲ್ಲವಾಗಿದೆ. ಇದೊಂದು ಮಹತ್ತರ ಬದಲಾವಣೆಯೇ ಸರಿ.

ಸಾಮಾಜಿಕ ಪರಿಸರದ ಅವಿಬಾಜ್ಯ ಅಂಗವಾದ ಮಾನವ ಪ್ರತಿಯೊಂದು ಅಂಶವನ್ನೂ ಸಮಾಜದಿಂದಲೇ ಕಲಿಯುತ್ತಾನೆ. ಕಲಿಯುವ ಸಾಮರ್ಥ್ಯ ಮಾತ್ರವೇ ಅವನದು. ಮೌಲ್ಯಶಿಕ್ಷಣ ನೀಡುವುದಕ್ಕಾಗಿಯೇ ಮೌಲ್ಯ ಶಿಕ್ಷಣದ ಅಗತ್ಯವಿದೆ. ಪಠ್ಯಕ್ರಮ, ಸಹ ಪಠ್ಯಕ್ರಮ, ಅಗೋಚರ ಪಠ್ಯಕ್ರಮ, ಶಾಲೆಯ ವಾತಾವರಣ, ಮತ್ತು ಉಪಾಧ್ಯಾಯವರ್ಗ ಇವೆಲ್ಲವೂ ಮೌಲ್ಯಶಿಕ್ಷಣದ ಸಂಪನ್ಮೂಲಗಳೆನಿಸಿಕೊಳ್ಳುತ್ತವೆ.

ಸಾಮಾಜಿಕ ಮೌಲ್ಯವ್ಯವಸ್ಥೆಯು ಸಮಗ್ರರೂಪವನ್ನು ಪಡೆದುಕೊಂಡು ಸೆಟೆದು ನಿಲ್ಲಲು ಶಿಕ್ಷಣವು ಮಹತ್ವಪೂರ್ಣ ಕೊಡುಗೆ ನೀಡಬೇಕಿದೆ. ಇದಕ್ಕಾಗಿ ಕೆಲವು ವಿಧಿವಿಧಾನಗಳನ್ನು ಮತ್ತು ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ. ಅವು ಈ ಕೆಳಗಿನ ಅಂಶಗಳನ್ನೊಳಗೊಂಡಿರಬೇಕು.

ಮೌಲ್ಯವ್ಯವಸ್ಥೆಯ ಸಂದಿಗ್ಧತೆ ಮತ್ತು ಮೌಲ್ಯಗಳನ್ನು ವಿಶದೀಕರಿಸುವುದು ನೈತಿಕವಾಗಿ ವ್ಯವಹರಿಸುವುದು, ಮಾದರಿ ವರ್ತನೆಗಳ ಮೂಲಕ ಮೌಲ್ಯಗಳು ವಿವಿಧ ಪ್ರಜ್ಞೇಂದ್ರಿಯಗಳ ಅನುಭವಕ್ಕೊಳಪಡುವಂತೆ ಮಾಡುವುದು, ಓದುವುದು, ಕೇಳುವುದು,

Digitised by Bharatavani, CIIL

ಚರ್ಚಿಸುವುದು ಮತ್ತು ಇತರ ಜೀವನಾನುಷ್ಠಾನ ಯೋಗ್ಯವಾದ ಚಟುವಟಿಕೆಗಳ ಮೂಲಕ ಶಾಲೆ ಮೌಲ್ಯಗಳ ಬೆಳವಣಿಗೆಗೆ ಪ್ರಯತ್ನಿಸಬೇಕು.

ಈ ಎಲ್ಲಾ ಅಂಶಗಳನ್ನು ಜಾರಿಗೆ ತರುವ ದಿಶೆಯಲ್ಲಿ ಶಿಕ್ಷಣದ ಪಾತ್ರವು ಮಹತ್ವಪೂರ್ಣವಾದದ್ದು. ಶಿಕ್ಷಣವು ಈ ದಿಶೆಯಲ್ಲಿ ತನ್ನ ಕಾರ್ಯ ನಿರ್ವಹಿಸಲು ಮೌಲ್ಯಗಳ ವಿವಿಧ ವರ್ಗೀಕರಣದ ಜ್ಞಾನ ಮತ್ತು ಅವುಗಳ ಅಗತ್ಯತೆಯ ಬಗ್ಗೆ ಪಠ್ಯಕ್ರಮದಲ್ಲಿ ಉಲ್ಲೇಖಿಸಬೇಕಿದೆ. ಶಿಕ್ಷಕರಿಗೂ ಇವುಗಳ ಬಗ್ಗೆ ಜ್ಞಾನವಿರಬೇಕಾಗುತ್ತದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ರಾಷ್ಟ್ರೀಯ ಪಠ್ಯಕ್ರಮವು ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಬಿಂಬಿಸಬೇಕು. ನಮ್ಮ ರಾಜ್ಯಾಂಗದಲ್ಲಿ ಉಲ್ಲೇಖಿಸಿದಂತೆ ಹಾಗೂ ನಮ್ಮ ಭಾರತೀಯರ ಅಮೂಲ್ಯ ಆಸ್ತಿಯಂತೆ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ಪ್ರಜಾಪ್ರಭುತ್ವ, ಸಾಮಾಜಿಕತೆ ಮತ್ತು ಸಮಗ್ರತೆಗಳನ್ನು ಚರ್ಚಿಸಿದೆ. ಇನ್ನು ಶಿಕ್ಷಣದಲ್ಲಿ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ರವಾನಿಸುವ ಮುಖ್ಯವಾದ ಮಾಧ್ಯಮವು ಶಿಕ್ಷಕವೃಂದ. ಶಿಕ್ಷಕರು ಈ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ರಕ್ತಗತವಾಗಿ ಮಾಡುವಂತೆ ಮಾಡಲು, ಪ್ರೀತಿ, ನಂಬಿಕೆ ಹಾಗೂ ಭದ್ರತೆಯ ವಾತಾವರಣವನ್ನು ನಿರ್ಮಿಸಬೇಕಿದೆ. ವಿದ್ಯಾರ್ಥಿಯ ವಿಕಾಸಕ್ಕೆ ಪೂರಕವಾಗುವ ಎಲ್ಲಾ ಗುಣಲಕ್ಷಣಗಳನ್ನು ಪಟ್ಟಿ ಮಾಡಿ, ಗುರುತಿಸಿ, ಸೂಕ್ತ ಬೋಧನಾ ವಿಧಾನಗಳನ್ನು ಅನುಸರಿಸಬೇಕಿದೆ. ಮೌಲ್ಯಗಳನ್ನು ಬೋಧಿಸುವ ಗೋಜಿಗೆ ಹೋಗದೆ ಜೀವನದ ನೈಜಸನ್ನಿವೇಶಗಳ ಉದಾಹರಣೆಗಳನ್ನು ಬಳಸಬೇಕಿದೆ. ಸಹಪಠ್ಯ ಚಟುವಟಿಕೆಗಳ ಮೂಲಕ ವೈವಿಧ್ಯಮಯ ಬೋಧನಾ ವಿಧಾನಗಳ ಬಳಕೆ ಮಾಡಿ ಮೌಲ್ಯಗಳ ಬಗ್ಗೆ ಚರ್ಚಿಸಬೇಕಿದೆ. ಇಷ್ಟೆಲ್ಲಾ ಅಲ್ಲದೆ, ಶಿಕ್ಷಕರ ಸಂಪೂರ್ಣ ವ್ಯಕ್ತಿತ್ವದಲ್ಲೇ ಮೌಲ್ಯಗಳು ಹಾಸುಹೊಕ್ಕಾಗಿರಬೇಕು. ಅವರ ನಡೆನುಡಿ ಎಲ್ಲವೂ ಅನುಕರಣೀಯವಾಗಿರಬೇಕಿದೆ.

ವಿದ್ಯಾರ್ಥಿಗಳು ಯಾವುದೋ ಒಂದು ಪರಂಪರೆ, ಪದ್ಧತಿ, ಕಟ್ಟುಪಾಡಿಗೆ ಒಳಪಟ್ಟು ಕಾರ್ಯಗಳನ್ನು ಮಾಡದೇ ತಮ್ಮ ಮನಸ್ಸಿಗೆ ಸರಿ ಎನಿಸಿದ್ದನ್ನು ತಾರ್ಕಿಕ ಮನೋವೃತ್ತಿಯೊಂದಿಗೆ ಯೋಜಿಸಿ ಕಾರ್ಯನಿರ್ವಹಿಸುವಂತೆ ಮಾಡಿದರೆ ನಮ್ಮ ಶಿಕ್ಷಣ ಸಾರ್ಥಕತೆಯನ್ನು ಪಡೆಯುತ್ತದೆ.

–ಡಾ. ಸುಧಾ ಬಿ.ಜಿ.

## ಸಾಮಾಜಿಕ ಸಮಾನತೆ ಮತ್ತು ಶಿಕ್ಷಣ

ಪ್ರತಿಯೊಬ್ಬ ವ್ಯಕ್ತಿಯು ತಾನಿರುವ ಪರಿಸರ ಮತ್ತು ಅಲ್ಲಿನ ಸಂಪನ್ಮೂಲಗಳ ಬಗ್ಗೆ ಸಮಾನವಾದ ಹಕ್ಕು ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತಾನೆ. ಸಮಾನತೆಯನ್ನು ನಾವು ತೆಗೆದುಕೊಳ್ಳಬೇಕಾದ ನಿರ್ಧಾರಗಳಲ್ಲಿ ಮತ್ತು ನಮಗೆ ದೊರೆಯುವ ಸೇವೆಗಳಲ್ಲಿ ಕಾಣಬಹುದಾಗಿದೆ.

ಬಂಡವಾಳಶಾಹಿ ವಾತಾವರಣದಲ್ಲಿ ಈ ರೀತಿಯ ಸಮಾನತೆಯನ್ನು ಕಾಣಲಾಗುವುದಿಲ್ಲ. ಈ ರೀತಿಯ ಸಾಮಾಜಿಕ ವ್ಯವಸ್ಥೆಗಳಲ್ಲಿ ಲಿಂಗ, ಜಾತಿ, ಆರ್ಥಿಕಮಟ್ಟ, ವರ್ಗ, ಮುಂತಾದ ಅಂಶಗಳ ಆಧಾರದ ಮೇಲೆ ಸಾಮಾಜಿಕ ಸ್ತರೀಕರಣ ರೂಪಿತವಾಗುವುದರಿಂದ ಸಮಾನತೆಯ ತತ್ವಕ್ಕೆ ಹೆಚ್ಚಿನ ಮಹತ್ವ ದೊರೆಯುವುದಿಲ್ಲ.

ಸಾಮಾಜಿಕ ಸಮಾನತೆಯನ್ನು ಒಂದು ನಿರ್ದಿಷ್ಟ ಸಮಾಜದಲ್ಲಿ ವ್ಯಕ್ತಿಗಳು ಹೊಂದಿರಬಹುದಾದ ಸಾಮಾಜಿಕ ಸ್ಥಾನಮಾನ ಎಂದು ವ್ಯಾಖ್ಯಾನಿಸಬಹುದು. ಸಾಮಾಜಿಕ ಸಮಾನತೆ ಸ್ವಲ್ಪಮಟ್ಟಿನ ಆರ್ಥಿಕ ಸಮಾನತೆಯನ್ನು ಹೊಂದಿದ್ದರೆ ಒಳ್ಳೆಯದು. ಸಮಾನತೆ ಪ್ರಜಾಸತ್ತಾತ್ಮಕ ಸಮಾಜದ ಒಂದು ಮುಖ್ಯ ಅಂಶವಾಗಿದೆ. ಸಾಮಾಜಿಕ ಸಮಾನತೆಯ ಅಂಶಗಳು ಕಾನೂನಿನ ವ್ಯಾಪ್ತಿಯಲ್ಲಿ ಎಲ್ಲರಿಗೂ ಒಂದೇ ಆಗಿರುತ್ತದೆ. ಅವುಗಳೆಂದರೆ, ಮತ ಚಲಾಯಿಸುವ ಹಕ್ಕು, ವಾಕ್ ಸ್ವಾತಂತ್ರ್ಯ ಇತ್ಯಾದಿ. ಇವುಗಳಲ್ಲಿರುವ ಇನ್ನಿತರ ಅಂಶಗಳೆಂದರೆ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆ.

ಸಾಮಾಜಿಕ ಅಸಮಾನತೆಯನ್ನು ಅನೇಕ ರೀತಿಯಲ್ಲಿ ಗುರುತಿಸಬಹುದು. ವ್ಯಕ್ತಿಗಳ ವಯಸ್ಸು, ಲಿಂಗ, ಕುಲ, ಜಾತಿ ಮತ್ತು ವರ್ಗ, ಆದಾಯ, ಭಾಷೆ, ಧರ್ಮ, ದೈಹಿಕವಾದ ತೊಂದರೆಗಳು ಇತ್ಯಾದಿಗಳು ವ್ಯಕ್ತಿಗಳಲ್ಲಿ ಅಸಮಾನತೆಯನ್ನು ಉಂಟುಮಾಡುವ ಪ್ರಮುಖ ವಿಚಾರಗಳಾಗಿವೆ.

ಮೂಲಭೂತವಾಗಿ ಸಾಮಾಜಿಕ ಸಮಾನತೆಯು ಸಾಮಾಜಿಕ ಅಂಶಗಳಿಗೆ ಸಂಬಂಧಿಸಿದ್ದೇ ಹೊರತು ಆರ್ಥಿಕ ಅಂಶಗಳಿಗೆ ಸೀಮಿತವಾದುದ್ದಲ್ಲ. ಸಂಪೂರ್ಣವಾದ ಸಾಮಾಜಿಕ ಸಮಾನತೆಯನ್ನು ಯಾವ ವ್ಯವಸ್ಥೆಯಲ್ಲಿಯೂ ಕಾಣಲು ಸಾಧ್ಯವಿಲ್ಲ.

ಸಾಮಾಜಿಕ ಸಮಾನತೆಗೂ ಶಿಕ್ಷಣಕ್ಕೂ ನಿಕಟ ಸಂಬಂಧವಿದೆ. ನಿಜವಾದ ಶಿಕ್ಷಣ ಸಾಮಾಜಿಕ ಸಮಾನತೆಯ ಆಧಾರದ ಮೇಲೆ ರೂಪಿತವಾಗಿ, ಸಮಾಜದಲ್ಲಿ ಸಾಮಾಜಿಕ ಸಮಾನತೆಯನ್ನು ತರಲು ಪ್ರಯತ್ನಿಸಬೇಕು. ಶಿಕ್ಷಣದ ಅವಕಾಶ ಸಮಾಜದ ಎಲ್ಲಾ ವ್ಯಕ್ತಿಗಳಿಗೂ ಜಾತಿ, ಲಿಂಗ, ಧರ್ಮ,ಆರ್ಥಿಕಮಟ್ಟ ಇತ್ಯಾದಿಗಳ ಭೇದಭಾವವಿಲ್ಲದೆ ಎಲ್ಲರೂ ಪಡೆಯುವ ಸಮಾನ ಅವಕಾಶಗಳನ್ನು ಒದಗಿಸುವಂತಿರಬೇಕು. ಯಾವುದೇ ಕಾರಣದಿಂದ ಯಾವುದೇ ವ್ಯಕ್ತಿ ಶಿಕ್ಷಣದಿಂದ ವಂಚಿತನಾಗಬಾರದು. ಈ ಉದ್ದೇಶದಿಂದಲೇ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಕಾರ್ಯಕ್ರಮ ರೂಪಿತವಾಗಿದೆ. ಸ್ವಾತಂತ್ರ್ಯಕ್ಕೆ ಮೊದಲು ಭಾರತದಲ್ಲಿ ಶಿಕ್ಷಣಕ್ಕೆ ಸಮಾನ ಅವಕಾಶಗಳು ಲಭ್ಯವಿಲ್ಲದಿದ್ದುದರಿಂದ ಸ್ವಾತಂತ್ರ್ಯಾ ನಂತರ ಸಂವಿಧಾನವನ್ನು ರೂಪಿಸುವಾಗ ಸಮಾಜದ ವಂಚಿತ, ಅನಾನುಕೂಲಿತ, ಉಪೇಕ್ಷಿತ ವರ್ಗಗಳಿಗೆ ಪರಿಶಿಷ್ಟ

Digitised by Bharatavani, CIIL

ಜಾತಿ/ಬುಡಕಟ್ಟು, ಮಹಿಳೆಯರು, ಅಸಮರ್ಥತೆಗಳುಳ್ಳವರು, ಹಿಂದುಳಿದ ವರ್ಗಗಳು – ಶಿಕ್ಷಣದ ಸಮಾನ ಅವಕಾಶಗಳನ್ನು ಒದಗಿಸಲು ಮೀಸಲಾತಿಯನ್ನು ಒದಗಿಸಲು ವಿಶೇಷ ಪ್ರಾವಧಾನಗಳನ್ನು ಕಲ್ಪಿಸಲಾಯಿತು.

ಸಾಮಾಜಿಕ ಸಮಾನತೆಯ ಉದ್ದೇಶವನ್ನು ಸಾಧಿಸುವಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಸಮಾಜದಲ್ಲಿರುವ ಸಾಮಾಜಿಕ, ಆರ್ಥಿಕ ಅಸಮಾನತೆಗಳಿಗೆ ಕಾರಣವಾದ ಸಾಮಾಜಿಕ ಆಚರಣೆಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು ಶಿಕ್ಷಣದ ಆದ್ಯ ಕಾರ್ಯವಾಗಬೇಕು. ಪ್ರಜಾಸತ್ತೆಯ ಮೂಲಭೂತ ತತ್ವಗಳ ಆಧಾರದ ಮೇಲೆ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ, ಸಾಮಾಜಿಕ ಸಮಾನತೆಯ ಬಗ್ಗೆ ಬದ್ಧತೆ ಹಾಗೂ ಧನಾತ್ಮಕ ಮನೋಭಾವಗಳನ್ನು ವಿಕಾಸಗೊಳಿಸಲು ಶಿಕ್ಷಕರು ಪ್ರಯತ್ನಿಸಬೇಕು.

ಶಿಕ್ಷಣ ಮತ್ತು ಸಾಮಾಜಿಕ ಸಮಾನತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಳ್ಳೆಯ ಶಿಕ್ಷಣದಿಂದ ಸಾಮಾಜಿಕ ಸಮಾನತೆ ಬೆಳೆಯುತ್ತದೆ. ಸಮಾಜದಲ್ಲಿ ಸಮಾನತೆ ಹೆಚ್ಚಿದಷ್ಟೂ ಎಲ್ಲರಿಗೂ ಒಂದೇ ರೀತಿಯ ಉತ್ತಮ ಶಿಕ್ಷಣ ದೊರಕುವುದು ಸಾಧ್ಯವಾಗುತ್ತದೆ.

–ಡಾ. ತಳವಾರ್ ಎಂ. ಎಸ್.

## ಸಾಮಾನ್ಯ ಶಾಲಾ ಪದ್ಧತಿ

ಆಧುನಿಕವೆಂದು ಕರೆಯಬಹುದಾದ ಶಿಕ್ಷಣ ವ್ಯವಸ್ಥೆಯನ್ನು ವಸಾಹತು ಆಡಳಿತ ಪರಿಚಯಿಸುವ ಮೊದಲೇ ಭಾರತದಲ್ಲಿ ಸಾಕಷ್ಟು ವಿಸ್ತಾರವಾದ ಮತ್ತು ಚೆನ್ನಾಗಿ ಊರ್ಜಿತಗೊಂಡಿದ್ದ ದೇಶೀಯ ಶಿಕ್ಷಣ ಅಸ್ತಿತ್ವದಲ್ಲಿ ಇತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಪಾಠಶಾಲೆಗಳು ಮತ್ತು ಮದರಸಗಳು ದೇಶಭಾಷೆ ಅಥವಾ ಶಾಸ್ತ್ರೀಯ ಭಾಷೆಗಳ ಮೂಲಕ ಶಿಕ್ಷಣ ನೀಡುತ್ತಿದ್ದವು. ಸ್ಥಳೀಯ ಭೂಮಾಲಿಕರ ಮತ್ತು ಸಮುದಾಯಗಳ ಆಶ್ರಯದಲ್ಲಿ ಇವು ಸ್ಥಾಪನೆಯಾಗಿ, ಬೆಂಬಲ ಪಡೆಯುತ್ತಿದ್ದವು. ಈ ಆಶ್ರಯ ಕ್ಷೀಣಿಸಿದ್ದರಿಂದ ದೇಶೀಯ ವ್ಯವಸ್ಥೆಯ ಕಾರ್ಯನಿರ್ವಹಣೆ ಮತ್ತು ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಅದರ ಸಾಮರ್ಥ್ಯವೂ ಕುಸಿದವು. ಆದರೆ ಇದಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಮಾಧ್ಯಮ ಶಿಕ್ಷಣವು ಹೆಚ್ಚು ಆರ್ಥಿಕ ಲಾಭವನ್ನು ಪಡೆಯುವ ಸರ್ಕಾರಿ ವಲಯದ ಉದ್ಯೋಗವನ್ನು ದೊರಕಿಸಲು ದಾರಿಯಾಗುತ್ತದೆ ಎಂಬ ಭಾವನೆಯೂ ಕಾರಣವಾಯಿತು. ಇದರಿಂದ ಸರ್ಕಾರದ ಅಥವಾ ಸ್ಥಳೀಯ ಸಂಸ್ಥೆಗಳು ನಡೆಸುತ್ತಿದ್ದ ಇಂಗ್ಲಿಷ್ ಮಾಧ್ಯಮ ಶಾಲೆಗಳು ವಿಕಸಿತಗೊಂಡವು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಸೃಷ್ಟಿಸುವ ದೃಷ್ಟಿಯಿಂದ ಸರ್ಕಾರೇತರ ವಿಶ್ವಸ್ಥ ಸಮಿತಿಗಳು ಅಥವಾ ಸಮಾಜಗಳಿಂದ ಅಗಾಧ ಸಂಖ್ಯೆಯಲ್ಲಿ ಸಂಸ್ಥೆಗಳ ಸ್ಥಾಪನೆಯಾಯಿತು. ಸಾಂಸ್ಕೃತಿಕ ಮೌಲ್ಯಗಳು ಮತ್ತು ರಾಷ್ಟ್ರೀಯ ಅಭಿಲಾಷೆಗಳನ್ನು ಶಿಕ್ಷಣದೊಂದಿಗೆ ಸಂಯೋಜಿಸುವ ಪ್ರಯತ್ನವನ್ನು ಈ ಸಂಸ್ಥೆಗಳು ನಡೆಸಿದವು. ಈ ಸಂಸ್ಥೆಗಳನ್ನು ರಾಷ್ಟ್ರಸೇವೆಯ ಉಪಕರಣಗಳಾಗಿ ಅಭಿವೃದ್ಧಿ ಪಡಿಸಲಾಯಿತೇ ವಿನಹ ಶಿಕ್ಷಣವನ್ನು ಮಾರಾಟ ಮಾಡುವುದರ ಮೂಲಕ ಲಾಭವನ್ನು ಪಡೆಯುವ ಸಾಧನವಾಗಿ ಅಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಈ ಶಾಲೆಗಳ ಪ್ರಮುಖ ಆದಾಯ ಮೂಲವಾಗಿದ್ದ ಸಮುದಾಯದ ದೇಣಿಗೆಯು ತೀವ್ರಗತಿಯಿಂದ ಬತ್ತಿ ಹೋಗಲಾರಂಭಿಸಿದ್ದರಿಂದ, ಈ ಶಾಲೆಗಳು ತೀವ್ರ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ರಾಜ್ಯ ಸರ್ಕಾರಗಳು ಅನುದಾನದ ಮೊತ್ತವನ್ನು ಹೆಚ್ಚಿಸುವಂತೆ ಶಿಕ್ಷಕರ ಸಂಘಗಳ ಮೂಲಕ ಒತ್ತಡ ಬರಲಾರಂಭಿಸಿತು. ಅಂತಿಮವಾಗಿ ಕೆಲವು ರಾಜ್ಯಗಳಂತೂ ಇಂಥ ಶಾಲೆಗಳ ವಾರ್ಷಿಕ ಖೋತಾದಲ್ಲಿ ಶೇಕಡಾ 95 ರಷ್ಟು ಅನುದಾನ ನೀಡಬೇಕಾಗಿ ಬಂತು. ಈ ಶಾಲೆಗಳು ವಿದ್ಯಾರ್ಥಿಗಳಿಗೆ ವಿಧಿಸುವ ಶುಲ್ಕಗಳು ಮತ್ತು ಶಿಕ್ಷಕರಿಗೆ ನೀಡುವ ವೇತನಗಳಿಗೆ ಸಂಬಂಧಿಸಿದಂತೆ ಆಗಿಂದಾಗ್ಗೆ ಸರ್ಕಾರದ ನಿಯಂತ್ರಣ, ಮೇಲ್ವಿಚಾರಣೆ ಮತ್ತು ಸೂತ್ರಗಳನ್ನು ಸ್ವೀಕರಿಸಬೇಕಾಗಿ ಬಂತು. ಆದರೆ ಕಾಲಾನುಕ್ರಮದಲ್ಲಿ ಸರ್ಕಾರದ ಉಸ್ತುವಾರಿಯಲ್ಲಿರುವ ಶಾಲೆಗಳಲ್ಲಿ ನೀಡಲಾಗುವ ಶಿಕ್ಷಣದ ಗುಣಮಟ್ಟಕ್ಕಿಂತ ಖಾಸಗಿ ಶಾಲೆಗಳಲ್ಲಿ ನೀಡುವ ಶಿಕ್ಷಣ ಉತ್ತಮ ಎಂಬ ಗ್ರಹಿಕೆಯಿಂದ ಆರ್ಥಿಕಮೂಲ ಹೊಂದಿರುವ (ಮಾನ್ಯತೆ ಪಡೆದ ಆದರೆ ಅನುದಾನರಹಿತ) ಖಾಸಗಿ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಲಾರಂಭಿಸಿತು. ರಾಜ್ಯ ಸರ್ಕಾರ ತನ್ನ ಸ್ವಂತ ಸಂಸ್ಥೆಗಳನ್ನು ಸ್ಥಾಪಿಸಲು ಅಸಮರ್ಥವಾದದ್ದು ಅಥವಾ ಸಹಾಯ ಕೇಳಿದ ಎಲ್ಲಾ ಸಂಸ್ಥೆಗಳಿಗೆ ಅನುದಾನಗಳನ್ನು ಒದಗಿಸಲು ಸಾಧ್ಯವಾಗದ್ದು, ಮತ್ತು ಸರ್ಕಾರದ ಕನಿಷ್ಠ ನಿಯಂತ್ರಣ ಮತ್ತು ಗರಿಷ್ಠ ಸ್ವಾಯತ್ತತೆಯನ್ನು ಹೊಂದಲು ಸಂಸ್ಥೆಗಳು ಬಯಸಿದ್ದು, ಖಾಸಗಿ ಶಾಲೆಗಳ ಸಂಖ್ಯಾ ಹೆಚ್ಚಳಕ್ಕೆ ಕಾರಣಗಳಾಗಿವೆ. ದುಡಿಮೆ ಜಗತ್ತನ್ನು ಪ್ರವೇಶಿಸಲು ಅಥವಾ ವೃತ್ತಿಪರ ಶಿಕ್ಷಣ ನೀಡುವ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಎದುರಿಸಬೇಕಾದ ಕಠಿಣ ಸ್ಪರ್ಧೆಯಿಂದಾಗಿ ಉತ್ತಮ ಶಿಕ್ಷಣದ ಅಭೂತಪೂರ್ವ ಬೇಡಿಕೆ ಉತ್ಪತ್ತಿಯಾಗಿ, ಇದು ಶಾಲೆಗಳಲ್ಲಿ ಅಥವಾ ಪಬ್ಲಿಕ್ ಶಾಲೆಗಳ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳಲ್ಲಿ ಸಿಗಬಹುದೆಂಬ ಭಾವನೆ ಮೂಡಿತು. ಈ ರೀತಿಯ ಶಾಲೆಗಳಲ್ಲಿ ದಾಖಲಾತಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ, ಅದರಲ್ಲಿಯೂ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಹೆಚ್ಚಾಗಲು ಒಂದೆಡೆ ಮಧ್ಯಮವರ್ಗದ ಬೆಳವಣಿಗೆ ಇನ್ನೊಂದೆಡೆ ಜನರಲ್ಲಿ ಏರುತ್ತಿರುವ ಅಭಿಲಾಷೆಗಳು ಕಾರಣವಾದವು.

ಸಾಮಾನ್ಯ ಶಾಲಾ ಕಲ್ಪನೆ ಭಾರತಕ್ಕೆ ಮಾತ್ರ ವಿಶಿಷ್ಟವಾದುದಲ್ಲ.

Digitised by Bharatavani, CIIL

ಅಮೆರಿಕಾ (ಯುನೈಟೆಡ್ ಸ್ಟೇಟ್ಸ್) ಈ ವಿಚಾರಕ್ಕೆ ಸಂಬಂಧಿಸಿದಂತೆ ಹತ್ತೊಂಭತ್ತನೆಯ ಶತಮಾನದ ಮೊದಲಭಾಗದಲ್ಲಿ ವ್ಯಾಪಕ ರೀತಿಯಿಂದ ಚರ್ಚೆಯನ್ನು ನಡೆಸಿತ್ತು. ಹೊರೆಸ್‌ಮನ್ (1796–1871), ಹೆನ್ರಿ ಬರ್ನಾಡ್ (1811–1900), ಸಾಮ್ಯೂಯಲ್ ಲೆವಿಸ್ (1795–1854), ರಾಬರ್ಟ್ ಬ್ರೆಕೆನಿರ್‌ಡ್ಜ್ (1802–1871), ಜೇಮ್ಸ್ ಕಾರ್ಟರ್ (17945–1849), ಕೆಲ್ವಿನ್ ಸ್ಟೋವ್ (1795–1854), ಕೆಲಬ್ ಮಿಲ್ಸ್ (1806–1878), ಜಾನ್ ಪಿಯರ್ಸ್ (1797–1892), ಕೆಲ್ವಿನ್ ವಿಲೆ (1819–1897) ಮತ್ತು ಜಾನ್ ಸ್ವೆಟ್ (1830–1913) ಅವರಂತಹ ಶಿಕ್ಷಣ ಸುಧಾರಕರ ಗುಂಪು ತಮ್ಮ ಬಹುಪಾಲು ಬದುಕನ್ನು ಸಾಮಾನ್ಯ ಶಿಕ್ಷನ ಚಳವಳಿಗೆ ಮೀಸಲಾಗಿಸಿದೆ. ಖಾಸಗಿ ಶಾಲೆಗಳ ಕುರಿತು ಸಾಮ್ಯುಯೆಲ್ ಲೆವಿಸ್ ಹೇಳಿದ್ದೇನೆಂದರೆ, 'ಖಾಸಗಿ ಶಾಲೆಗಳೂ ಅಭಿವೃದ್ಧಿ ಹೊಂದಲಿ, ಅವುಗಳ ಸಂಖ್ಯೆ ವೃದ್ಧಿಸಲಿ, ಮತ್ತು ಅವುಗಳ ಲಕ್ಷಣವನ್ನು ನೆರವು ಹೆಚ್ಚಿಸಲಿ. ಆದರೆ ಇವು ಎಷ್ಟೇ ಪರಿಪೂರ್ಣದ್ದಾಗಿ ಬೆಳೆಯಲಿ, ಎಲ್ಲಾ ಜನರಿಗೆ ತಲುಪುವ ರೀತಿಯಿಂದ ಸಾಮಾನ್ಯ ಶಾಲೆಗಳನ್ನು ಅವಗಳಷ್ಟೇ ಉತ್ತಮವಾಗಿ ಮತ್ತು ಇನ್ನೂ ಹೆಚ್ಚು ಉತ್ತಮವಾಗಿ ಮಾಡಿ'. 'ಉತ್ತಮ ಗುಣಮಟ್ಟದ ಸಾರ್ವಜನಿಕ ಶಿಕ್ಷಣವು ಅಮೇರಿಕಾದ ಶಿಕ್ಷಣದ ಖಾಸಗಿ ವಲಯಕ್ಕೆ ಮರಣಗಂಟೆಯಾಗಿ ಪರಿಣಮಿಸುವುದು' ಎಂಬುದು ಮನ್ (1796–1859) ಅವರ ನಂಬಿಕೆಯಾಗಿತ್ತು.

1944 ರಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ಸಿಎಬಿಇ) ಭಾರತದಲ್ಲಿ ರೂಪಿಸಿದ ಯುದ್ಧೋತ್ತರ ಶಿಕ್ಷಣ ಮರು ರಚನಾ ಯೋಜನೆಯು, ಒಂದೆಡೆ ಸಮಾನ ಶಿಕ್ಷಣ ಅವಕಾಶ ಮತ್ತು ಇನ್ನೊಂದೆಡೆ ಶಿಕ್ಷಣದ ಗುಣಮಟ್ಟಕ್ಕೆ ಬೆಂಬಲ ನೀಡುವ ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ರೂಪಿಸಿತು. 'ಸಮಾನ ಅವಕಾಶವೆನ್ನುವುದು ಯಾವುದಾದರೂ ಇರುವುದಾದರೆ, ದೇಶದ ಕೆಲವು ಮಕ್ಕಳಿಗೆ ಸೌಕರ್ಯಗಳನ್ನು ಒದಗಿಸಿ, ಇತರರಿಗೆ ನೀಡದಿರುವುದನ್ನು ನ್ಯಾಯವೆಂದು ಸಮರ್ಥಿಸುವುದರಿಂದ ಅದು ಸಾಧ್ಯವೇ ಇಲ್ಲ' ಎಂದು ವರದಿಯಲ್ಲಿ ತಿಳಿಸಲಾಯಿತು. ಸಾರ್ವತ್ರಿಕ, ಕಡ್ಡಾಯ ಮತ್ತು ಎಲ್ಲರಿಗೂ ಉಚಿತವಾಗಿರುವ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಇದು ಶಿಫಾರಸು ಮಾಡಿತು. ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಸಂದರ್ಭದಲ್ಲಿ ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ಅಗತ್ಯವನ್ನು ಗಂಭೀರವಾಗಿ ತೆಗೆದು ಕೊಳ್ಳಲಾಯಿತು. ಈ ಸಂದರ್ಭದ ಇನ್ನೊಂದು ಮೈಲಿಗಲ್ಲೆಂದರೆ ರಾಷ್ಟ್ರೀಯ ಶಿಕ್ಷಣ ಆಯೋಗ (1964–1966) ನೀಡಿದ ವರದಿ. ಆಯೋಗದ ಅವಲೋಕನದ ಪ್ರಕಾರ 'ದೇಶದ ಮುಂದಿರುವ ಮುಖ್ಯ ಸಮಸ್ಯೆಯೇನೆಂದರೆ, ದೇಶದ ಎಲ್ಲಾ ಭಾಗಗಳನ್ನು ಮತ್ತು ಶಾಲೆಯ ಎಲ್ಲಾ ಹಂತಗಳನ್ನು ಒಳಗೊಳ್ಳುವ ಮತ್ತು ಎಲ್ಲಾ ಮಕ್ಕಳಿಗೆ ಸಮಾನ ಅವಕಾಶವನ್ನು ಒದಗಿಸಲು ಪ್ರಯತ್ನಪಡುವ ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಶಾಲಾ ಪದ್ಧತಿಯನ್ನು ಕ್ರಮ ಗೊಳಿಸುವುದಾಗಿದೆ. ಈ ವ್ಯವಸ್ಥೆಯ ಹೊರಗೆ ಸ್ವತಂತ್ರ ಅಥವಾ ಮಾನ್ಯತೆಯಿಲ್ಲದ ಶಾಲೆಗಳಿಗೆ ತಮ್ಮ ಮಗುವನ್ನು ಕಳುಹಿಸುವ ಅಗತ್ಯವನ್ನು ಹೆತ್ತವರು ಸಾಮಾನ್ಯವಾಗಿ ತಿಳಿದುಕೊಳ್ಳದ ರೀತಿಯಲ್ಲಿ ಸಾಮಾನ್ಯ ಶಾಲೆಗಳಲ್ಲಿ ಸಾಧ್ಯವಾದಷ್ಟು ಗುಣಮಟ್ಟ ಮತ್ತು ದಕ್ಷತೆಯನ್ನು ಕಾಪಾಡಿಕೊಂಡು ಬರಬೇಕಾಗುತ್ತದೆ'. ಶಿಕ್ಷಣ ಆಯೋಗ ಕಲ್ಪಿಸಿದ ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಶಾಲಾ ವ್ಯವಸ್ಥೆಯು ಈ ಕೆಳಗಿನ ಲಕ್ಷಣಗಳನ್ನು ಒಳಗೊಳ್ಳುವುದು:

- ವರ್ಗ, ಮತ ಮತ್ತು ಇತರ ವ್ಯತ್ಯಾಸಗಳಿಲ್ಲದೆ ಎಲ್ಲಾ ಮಕ್ಕಳಿಗೆ ಸುಲಭಸಾಧ್ಯವಾಗಿರುವುದು
- ಅಗತ್ಯವಿರುವ ಮಟ್ಟದ್ದಾಗಿರುವುದು
- ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕವನ್ನು ವಿಧಿಸದಿರುವುದು

ಸಾಮಾನ್ಯ ಶಾಲಾ ಶಿಕ್ಷಣದ ಗುರಿ ಸಾಧನೆಗಾಗಿ ಆಯೋಗ ಅನೇಕ ಕ್ರಮಗಳನ್ನು ಸೂಚಿಸಿತು. ವಿಭಿನ್ನ ಆಡಳಿತದ ಕೆಳಗೆ ಶಿಕ್ಷಕರು ಕೆಲಸ ಮಾಡುವ ಸ್ಥಿತಿಗತಿಗಳಲ್ಲಿ ಇರುವ ಅಸಮತೆಗಳ ಹೋಗಲಾಡಿಸುವಿಕೆ, ಜಿಲ್ಲಾ ಶಿಕ್ಷಣ ಮಂಡಲಿಗಳ ಸ್ಥಾಪನೆ, ಖಾಸಗಿ ಶಾಲೆಗಳಲ್ಲಿ ಬೋಧನಾ ಶುಲ್ಕಗಳ ರದ್ಧತಿ, ಖಾಸಗಿ ಶಾಲೆಗಳ ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಸ್ವಯಂಸೇವಾ ಸಂಸ್ಥೆಗಳು, ಶಿಕ್ಷಕರು ಮತ್ತು ಶಿಕ್ಷಣ ವಿಭಾಗದ ಪ್ರತಿನಿಧಿತ್ವ. ಸರ್ಕಾರಿ ಶಾಲೆಗಳ ವಿನ್ಯಾಸದಲ್ಲಿ ಖಾಸಗಿ ಶಾಲೆಗಳ ಸಿಬ್ಬಂದಿ ನೇಮಕ. ಸಾಮಾನ್ಯ ಶಾಲಾ ಪದ್ಧತಿಗೆ ಸಂಬಂಧಿಸಿದಂತೆ ಆಯೋಗದ ಅತ್ಯಂತ ಮಹತ್ವಪೂರ್ಣ ಕೊಡುಗೆಯೆಂದರೆ 'ನೆರೆಹೊರೆ ಶಾಲೆ'ಯ ಪರಿಕಲ್ಪನೆಯಾಗಿದೆ. ಇದೇನಾದರೂ ಅನುಷ್ಠಾನಕ್ಕೆ ಬಂದರೆ ಉಳ್ಳವರ ಮತ್ತು ಇಲ್ಲದವರ ನಡುವಿನ ಸಾಮಾಜಿಕ ಪ್ರತ್ಯೇಕತೆಯನ್ನು ಹೋಗಲಾಡಿಸುವುದರಲ್ಲಿ ದೀರ್ಘಾವಧಿಯ ಪರಿಣಾಮವಾಗುವುದು. ಶಿಕ್ಷಣ ಆಯೋಗ ತಿಳಿಸಿದ ಪ್ರಕಾರ, 'ನೆರೆಹೊರೆ ಶಾಲಾ ಪರಿಕಲ್ಪನೆ ಧ್ವನಿಸುವ ಅರ್ಥವೇನೆಂದರೆ ಪ್ರತಿಯೊಂದು ಶಾಲೆಗೆ ಜಾತಿ, ಮತ, ಸಮುದಾಯ, ಧರ್ಮ, ಆರ್ಥಿಕ ಸ್ಥಿತಿ ಅಥವಾ ಸಾಮಾಜಿಕ ಮಟ್ಟದ ಗಣನೆಯಿಲ್ಲದೆ ನೆರೆಹೊರೆಯ ಎಲ್ಲಾ ಮಕ್ಕಳು ಬರಬೇಕು. ಇದರಿಂದ ಶಾಲೆಗಳಲಿ ಪ್ರತ್ಯೇಕತೆಗೆ ಅವಕಾಶ ಇರುವುದಿಲ್ಲ'.

ಆಯೋಗದ ಅವಲೋಕನದ ಪ್ರಕಾರ ನೆರೆಹೊರೆ ಶಾಲಾ ಕಲ್ಪನೆಯಿಂದ ಎರಡು ಉದ್ದೇಶಗಳು ನೆರವೇರುತ್ತವೆ, ಎಲ್ಲಾ ಮಕ್ಕಳಿಗೆ ಅವರ ಚಿರಪರಿಚಿತ ಪರಿಸರದಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಮತ್ತು ಸ್ಥಳೀಯ ಸಮುದಾಯದ ಶ್ರೀಮಂತ, ಕುಲೀನ ಮತ್ತು ಪ್ರಬಲ ವರ್ಗದವರಲ್ಲಿ ಶಾಲೆಯ ವ್ಯವಹಾರಗಳಲ್ಲಿ ಆಸಕ್ತಿಯನ್ನು ಹುಟ್ಟಿಸುವುದು.

ಶಿಕ್ಷಣ ಆಯೋಗದ ಶಿಫಾರಸುಗಳ ಫಲವಾಗಿ ಈ ಪ್ರಶ್ನೆಯ ಪರಿಶೀಲನೆಗಾಗಿ 1967 ರಲ್ಲಿ ಭಾರತದ ಸರ್ಕಾರ ಸಂಸತ್ ಸದಸ್ಯರ ಸಮಿತಿಯೊಂದನ್ನು ನೇಮಿಸಿತು. ಸಮಾಜದ ಕುಲೀನರು ಮತ್ತು ಕಲೀನರಲ್ಲದವರಿಗಾಗಿ ಶಾಲೆಗಳ ನಡುವೆ ಜಾರಿಯಲ್ಲಿರುವ ಅನಾರೋಗ್ಯಕರವಾದ ಸಾಮಾಜಿಕ ಪ್ರತ್ಯೇಕತೆಯ ಕುರಿತು ಕಾಳಜಿಯನ್ನು ವ್ಯಕ್ತಪಡಿಸಿ ಸಮಾಜದ ಐಕ್ಯತೆಯ ಅಗತ್ಯವನ್ನು ಮನಗಂಡ ಆಯೋಗದ ದೃಷ್ಟಿಯಲ್ಲಿ ಜಾತಿ, ಮತ, ಸಮುದಾಯ, ಧರ್ಮ, ಆರ್ಥಿಕ ಅನುಕೂಲಗಳು ಅಥವಾ ಸಾಮಾಜಿಕ ಮಟ್ಟವನ್ನು ಪರಿಗಣಿಸದೆ ಎಲ್ಲಾ ಮಕ್ಕಳಿಗೆ ಶಿಕ್ಷಣವನ್ನು ಒದಗಿಸ ತಕ್ಕಂತಹ

Digitised by Bharatavani, CIIL

ಸಾಮಾನ್ಯ ಶಾಲಾ ವ್ಯವಸ್ಥೆಯ ದಿಕ್ಕಿನಲ್ಲಿ ಮುಂದುವರಿದರೆ ಇದನ್ನು ಸಾಧಿಸಬಹುದಾಗಿದೆ.

ನಂತರ ಈ ಶಿಫಾರಸುಗಳನ್ನು ಸ್ವೀಕರಿಸಲಾಯಿತು. ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (1968)ಯಲ್ಲಿ ಸೂಕ್ತ ಪ್ರಾಮುಖ್ಯವನ್ನು ಇದಕ್ಕೆ ನೀಡಲಾಯಿತು. ಸಾಮಾಜಿಕ ಸಂಬದ್ಧತೆ ಮತ್ತು ರಾಷ್ಟ್ರೀಯ ಸಂಘಟನೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಶಿಕ್ಷಣ ಆಯೋಗ ಪ್ರಸ್ತಾಪಿಸಿದ ಸಾಮಾನ್ಯ ಶಿಕ್ಷಣ ಪದ್ಧತಿಯ ವಿಚಾರವನ್ನು ರಾಷ್ಟ್ರೀಯ ಶಿಕ್ಷಣ ಕಾರ್ಯ ನೀತಿಯು ಸಮರ್ಥಿಸಿತು. ಸಾರ್ವಜನಿಕ ಶಾಲೆಗಳಂತಹ ಎಲ್ಲಾ ವಿಶೇಷ ಶಾಲೆಗಳು ವಿದ್ಯಾರ್ಥಿಗಳ ಪ್ರತಿಭೆಯನ್ನು ಆಧರಿಸಿ ಅವರನ್ನು ಸೇರಿಸಿಕೊಳ್ಳುವಂತಾಗಬೇಕು ಮತ್ತು ಪ್ರತ್ಯೇಕತೆಯನ್ನು ತಡೆಯುವುದಕ್ಕಾಗಿ ಗೊತ್ತುಪಡಿಸಿದ ಪ್ರಮಾಣದಲ್ಲಿ ಉಚಿತ ವಿದ್ಯಾರ್ಥಿವೇತನವನ್ನು ಒದಗಿಸಬೇಕು ಎಂದು ಕೂಡಾ ಇದು ಸೂಚಿಸಿತು.

ರಾಷ್ಟ್ರೀಯ ಶಿಕ್ಷಣ ನೀತಿಯು (1986) ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಬೆಳೆಸಿ ಬಲಪಡಿಸುವ ಅಗತ್ಯವನ್ನು ಒತ್ತಿಹೇಳುತ್ತಾ, 1968ರ ಕಾರ್ಯನೀತಿಯಲ್ಲಿ ಸೂಚಿಸಲಾದ ಸಾಮಾನ್ಯ ಶಿಕ್ಷಣ ವ್ಯವಸ್ಥೆ ಕುರಿತು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿತು. ಆದರೆ 1986 ಕಾರ್ಯಸೂಚಿ ಕಾರ್ಯಕ್ರಮವು (ಪಿಒಎ) ಇದರ ಬಗ್ಗೆ ಮೌನವಾಗಿ ಉಳಿಯಿತು ಮತ್ತು ಸಾಮಾನ್ಯ ಶಿಕ್ಷಣ ವ್ಯವಸ್ಥೆ ಅಸ್ತಿತ್ವಕ್ಕೆ ಬರುವಂತೆ ಮಾಡಲು ಯಾವುದೇ ಕಾರ್ಯ ನಿರ್ವಹಣಾ ವ್ಯವಸ್ಥೆಯನ್ನಾಗಲೀ ಅಥವಾ ಕಾರ್ಯ ಯೋಜನೆಯನ್ನಾಗಲೀ ಅದು ಸೂಚಿಸಲಿಲ್ಲ. ಇದುವರೆಗೆ ಸಾಮಾನ್ಯ ಶಿಕ್ಷಣ ವ್ಯವಸ್ಥೆ ತಳವೂರದಿರಲು ಕಾರಣಗಳನ್ನು ಗುರುತಿಸಿದ ರಾಮಮೂರ್ತಿ ಸಮಿತಿ (1990)ಯು, ಸಾಮಾನ್ಯ ಶಿಕ್ಷಣ ವ್ಯವಸ್ಥೆ ಅಸ್ತಿತ್ವಕ್ಕೆ ಬರುವಂತೆ ಮಾಡಲು ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯಗತಿಗಳನ್ನು ಸೂಚಿಸಿತು. ಅವುಗಳೆಂದರೆ: ಪ್ರಾಥಮಿಕ ಶಿಕ್ಷಣದ ಅಂದಾಜು ಮೂಲವೆಚ್ಚದಲ್ಲಿ ಗಮನಾರ್ಹ ಹೆಚ್ಚಳಕ್ಕೆ ಅವಕಾಶ; 10 ವರ್ಷದ ಕಾಲಾವಧಿಯ ಚೌಕಟ್ಟಿನಲ್ಲಿ ಶಾಲಾ ವ್ಯವಸ್ಥೆಯ ಸುಧಾರಣೆಗೆ ವಿಶೇಷ ಮೊತ್ತದ ನಿಗದಿಪಡಿಸುವಿಕೆ; ಮತ್ತು ಪ್ರೋತ್ಸಾಹ ಧನ, ಕೆಲವು ಅಂಶಗಳಿಗೆ ಪ್ರೋತ್ಸಾಹ ನಿಗದಿಸುವುದು ಮತ್ತು ಕಾನೂನು ಇವುಗಳ ಸಂಯೋಜನೆಯ ಮೂಲಕ ಖಾಸಗಿ ಶಾಲೆಗಳನ್ನು ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲಿ ಸೇರಿಸಿಕೊಳ್ಳುವ ವಿಧಾನಗಳ ಕಂಡುಹಿಡಿಯುವಿಕೆ. ಪರಿಷ್ಕೃತ ಕಾರ್ಯಸೂಚಿ ಕಾರ್ಯಕ್ರಮ (1992)ದಲ್ಲಿ ಸಾಮಾನ್ಯ ಶಾಲಾ ವ್ಯವಸ್ಥೆ ಅನುಷ್ಠಾನವು ಸೂಕ್ತ ಸ್ಥಾನವನ್ನು ಪಡೆದಿಲ್ಲ. ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದ ಪರ್ವತಪ್ರದೇಶ, ಬುಡಕಟ್ಟು ಮತ್ತು ಕಷ್ಟಕರ ಪ್ರದೇಶಗಳಲ್ಲಿ ಸ್ವಪ್ರೇರಿತ ಶಾಲೆಗಳನ್ನು ಪ್ರಾರಂಭಿಸುವ ಶಿಫಾರಸುಗಳನ್ನು ಹೊರತುಪಡಿಸಿ, ಈ ನಿರ್ಣಾಯಕ ಉದ್ದೇಶವನ್ನು ಸಾಧಿಸುವ ಕಾರ್ಯನಿರ್ವಹಣಾ ಕ್ರಮಗಳನ್ನು ಕುರಿತು ಇದು ಮೌನವಾಗಿದೆ.

ಒಂದು ವಿಧದಲ್ಲಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯೊಂದು ಈಗಾಗಲೇ ಸಂರಚನಾಕ್ರಮದ ರೂಪದಲ್ಲಿ ಅಸ್ತಿತ್ವಕ್ಕೆ ಬಂದಿದೆ (10+2 ವಿನ್ಯಾಸ, ಪಠ್ಯಕ್ರಮ, ಮೌಲ್ಯಮಾಪನ ವಿಧಾನಗಳು ಇತ್ಯಾದಿ). ಹಾಗಿದ್ದರೂ ಶಿಕ್ಷಣ ಒದಗಿಸುವ ಸಂಸ್ಥಿಕ ತಂತ್ರಗಳಲ್ಲೂ ಗಣನೀಯ ವ್ಯತ್ಯಾಸಗಳು ಉಳಿದುಬಂದಿವೆ. ಸಾರ್ವಜನಿಕ ಶಾಲೆಗಳ ಯಶಸ್ಸು ಮುಂದು ವರಿಯುತ್ತಿದೆ. ವರ್ಷ ಕಳೆದಂತೆ ಅವುಗಳ ಬೇಡಿಕೆ ಅಸಾಧಾರಣ ರೀತಿಯಲ್ಲಿ ಹೆಚ್ಚುತ್ತಲಿದೆ. ಇದರ ಫಲವಾಗಿ ಗುಣ ಮಟ್ಟದ ಶಿಕ್ಷಣವು, ಇದರ ಉನ್ನತ ವೆಚ್ಚವನ್ನು ಭರಿಸಲು ಸಿದ್ಧವಾಗಿರುವ ಸಮಾಜದ ಶ್ರೀಮಂತ ಭಾಗಗಳ ವಿಶೇಷ ಅಧಿಕಾರವಾಗಿ ಪರಿಣಮಿಸಿದೆ. ಕಳೆದ ಹಲವು ವರ್ಷಗಳಿಂದ ಗುಣಮಟ್ಟದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉಳ್ಳವರ ಮತ್ತು ಇಲ್ಲದವರ ನಡುವಿನ ಅಂತರವು ಅಗಾಧವಾಗಿ ಬೆಳೆದಿದೆ. ಆದುದರಿಂದ ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ಕಲ್ಪನೆಯು ಇನ್ನೂ ದೂರದ ಕನಸಾಗಿಯೇ ಉಳಿದಿದೆ.

ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ಅನುಷ್ಠಾನದ ಯಥಾಸ್ಥಿತಿಯನ್ನು ಪರಿಶೀಲಿಸಲು, ಇದರ ಸ್ಥಾಪನೆಗೆ ಅಡ್ಡಿಯಾಗಿರುವ ವಿಚಾರಗಳನ್ನು ಗುರುತಿಸಲು, ಮತ್ತು ಇದನ್ನು ಕಾರ್ಯಗತಗೊಳಿಸುವ ಮಾರ್ಗೋಪಾಯಗಳನ್ನು ಸೂಚಿಸಲು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಲಿ (ಎನ್‌ಸಿಇಆರ್‌ಟಿ)ಯು 1968 ರಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವೊಂದನ್ನು ಆಯೋಜಿಸಿತ್ತು. ಸಾರ್ವಜನಿಕ ಶಿಕ್ಷಣದಲ್ಲಿ ಬಹುಪಾಲು ಶಾಲೆಗಳು (ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಗಳ ಶಾಲೆಗಳು) ಸಾಮಾನ್ಯ ಶಾಲಾ ವ್ಯವಸ್ಥೆಯ ಭಾಗವಾಗಿ ಇರುತ್ತವೆ, ಖಾಸಗಿ ಸಂಘಟನೆಗಳ ಉಸ್ತುವಾರಿಯಲ್ಲಿರುವ ಕೆಲವು ಸಂಸ್ಥೆಗಳು ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ಹೊರಗುಳಿಯುತ್ತವೆ ಎಂಬ ವಿಚಾರವನ್ನು ವಿಚಾರಸಂಕಿರಣದಲ್ಲಿ ಗಮನಕ್ಕೆ ತಂದುಕೊಳ್ಳಲಾಯಿತು. ದೇಶದ ಎಲ್ಲಾ ಭಾಗಗಳಲ್ಲಿ ಸಾಮಾನ್ಯ ಶಿಕ್ಷಣ ವ್ಯವಸ್ಥೆಯಿಂದ ಹೊರಗೆ ಸ್ವತಂತ್ರ ಶಾಲೆಗಳ ಸಂಖ್ಯೆಯು ತೀವ್ರಗತಿಯಿಂದ ಹೆಚ್ಚಾಗುತ್ತಿದೆ ಎಂಬ ವಿಚಾರವನ್ನು ಕೂಡಾ ವಿಚಾರಸಂಕಿರಣದಲ್ಲಿ ಗಮನಕ್ಕೆ ತಂದುಕೊಳ್ಳಲಾಯಿತು.

ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ಗುರಿಯನ್ನು ಸಾಧಿಸುವುದಕ್ಕಾಗಿ ಈಗ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಪ್ರಮಾಣದಲ್ಲಿ ಮಾತ್ರವಲ್ಲ ಗುಣಮಟ್ಟದಲ್ಲಿ ಕೂಡಾ ಬಲಪಡಿಸುವ ಅಗತ್ಯವಿದೆ. ಉದ್ದೇಶಿತ ಶಿಕ್ಷಣಕ್ಕೆ ಅಗತ್ಯವಿರುವ ಮತ್ತು ಗುಣ ಧರ್ಮವನ್ನು ಹೊಂದಿರುವ ಅತ್ಯವಶ್ಯಕ ಸೌಕರ್ಯಗಳನ್ನು ಒದಗಿಸುವ ಮೂಲಕ ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಸಂಸ್ಥೆಗಳ ಅತ್ಯುತ್ತಮ ಕಾರ್ಯನಿರ್ವಹಣೆಯನ್ನು ಸಾಧಿಸಬಹುದು ಎಂದು ವಿಚಾರಸಂಕಿರಣ ಶಿಫಾರಸು ಮಾಡಿದೆ. ಸಾಮಾನ್ಯ ಶಾಲಾ ವ್ಯವಸ್ಥೆಯೆಂದರೆ ರಾಜ್ಯದ ಎಲ್ಲಾ ಭಾಗಗಳಲ್ಲಿ ಅದು ಏಕಪ್ರಕಾರದ್ದಾಗಿರಬೇಕು., ಒಂದೇ ವಿಧದ ಆಡಳಿತವನ್ನು ಹೊಂದಿರಬೇಕು ಎಂದು ಅರ್ಥವಲ್ಲ. ದೇಶವು ಒಂದೇ ವ್ಯವಸ್ಥೆಯನ್ನು ಹೊಂದಿರುವ ಶಾಲಾ ಶಿಕ್ಷಣದ ದಿಕ್ಕಿನಲ್ಲಿ ಚಲಿಸಬೇಕು. ಇದನ್ನು ಸಾಮಾನ್ಯ ಶಿಕ್ಷಣ ವ್ಯವಸ್ಥೆ ಅಥವಾ ಶಾಲಾ ಶಿಕ್ಷಣದ ರಾಷ್ಟ್ರೀಯ ವ್ಯವಸ್ಥೆ ಎಂದು ಗುರುತಿಸಬಹುದು. ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದ ಅನುದಾನದೊಂದಿಗೆ ಅಥವಾ

Digitised by Bharatavani, CIIL

ಅನುದಾನವಿಲ್ಲದೆ ಯಾರು ಬೇಕಾದರೂ ನಡೆಸಬಹುದು, ಅದು ಸರ್ಕಾರವಿರಬಹುದು, ಸ್ಥಳೀಯ ಸಂಸ್ಥೆಗಳು ಅಥವಾ ಸರ್ಕಾರೇತರ ಸೊಸೈಟಿಗಳು/ಟ್ರಸ್ಟ್‌ಗಳು. ಆಡಳಿತದ ಪರಿಗಣನೆಯಿಲ್ಲದೆ, ಸಾಮಾನ್ಯ ವ್ಯವಸ್ಥೆಯನ್ನು ಒಳಗೊಂಡಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಸಮಾಜದ ಎಲ್ಲಾ ವಿಭಾಗಗಳಿಗೆ ಸಮಾನ ಅವಕಾಶಗಳನ್ನು ಒದಗಿಸಲೇಬೇಕು, ವಿದ್ಯಾರ್ಥಿಗಳಿಗೆ ಸಾಮಾನ್ಯ ಶುಲ್ಕ ವಿನ್ಯಾಸವನ್ನು ಅಳವಡಿಸಿಕೊಳ್ಳಬೇಕು, ಶಿಕ್ಷಕರಿಗೆ ಸಮರೂಪದ ಸೇವಾನಿಯಮಗಳನ್ನು ಒದಗಿಸಬೇಕು, ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನೊಳಗೆ ಪಠ್ಯಕ್ರಮ ಕಾರ್ಯಕ್ರಮಗಳನ್ನು ಸಂಘಟಿಸಬೇಕು.

ಈ ಮೊದಲು ತಿಳಿಸಿದ ಪ್ರಕಾರ, ಸಾಮಾನ್ಯ ಶಾಲಾ ವ್ಯವಸ್ಥೆಯೆಂದರೆ ಎಲ್ಲಾ ಶಾಲೆಗಳಲ್ಲಿ ಎಲ್ಲಾ ವಿಚಾರಗಳಲ್ಲಿ ಸಮಾನರೂಪ ಇರಬೇಕೆಂದು ಅರ್ಥವಲ್ಲ. ಪಠ್ಯಕ್ರಮ ನಿರ್ವಹಣೆ, ಮೌಲ್ಯಮಾಪನ, ಸಮುದಾಯವನ್ನು ತೊಡಗಿಸಿ ಕೊಳ್ಳುವಿಕೆ ಮತ್ತು ತರಗತಿ ಉಸ್ತುವಾರಿ ಇತ್ಯಾದಿ ಕ್ಷೇತ್ರಗಳಲ್ಲಿ ಹೊಸತನ್ನು ಪರಿಚಯಿಸುವ ಸ್ವಾತಂತ್ರ್ಯ ಶಾಲೆಗಳಿಗೆ ಇರುತ್ತದೆ. ಸಾಮಾನ್ಯ ಶಾಲಾ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿರುವ ಹಾಗೆ ಕಂಡರೂ, ನೆರೆಹೊರೆ ಶಾಲೆ ಮಾತ್ರ ಇನ್ನೂ ತಳವೂರಿಲ್ಲ. ಅದರಲ್ಲಿಯೂ ವಿಶೇಷವಾಗಿ ನಿರ್ದಿಷ್ಟ ಪ್ರದೇಶದ ಪರಿಧಿಯೊಳಗಿನ ಪ್ರತಿಯೊಂದು ಮಗುವು ನಿರ್ದಿಷ್ಟ ಶಾಲೆಗೆ ಹೋಗುವುದೆಂಬ ವಿಚಾರಕ್ಕೆ ಸಂಬಂಧಿಸಿದಂತೆ ಇದು ಸಾಧ್ಯವಾಗಿಲ್ಲ. ಕಡಿಮೆ ಸಂಪನ್ನತೆ ಹೊಂದಿರುವವರಿಗೆ, ಶಿಕ್ಷಣ ಪಡೆಯುವ ಒಂದೇ ದಾರಿಯೆಂದರೆ ಹತ್ತಿರವಿರುವ ಶಾಲೆ ಮಾತ್ರವೇ ಆಗಿರುತ್ತದೆ. ಇಲ್ಲಿ ಒದಗಿಸಲಾಗುವ ಶಿಕ್ಷಣದ ಗುಣಮಟ್ಟ ಹೇಗೇ ಇರಲಿ, ಅವರಿಗೆ ಬೇರೆ ಆಯ್ಕೆ ಇರುವುದಿಲ್ಲ. ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಕಳುಹಿಸಬೇಕಾದ ಸಂಸ್ಥೆಗಳನ್ನು ಆರಿಸಿಕೊಳ್ಳುವ ಆಯ್ಕೆ ಇರುವುದು ಸಂಪನ್ನ ಜನರಿಗೆ ಮಾತ್ರ.

**ಮೂಲ: ಜಿ.ಎಲ್. ಅರೋರಾ ಮತ್ತು ಸರೋಜ್ ಪಾಂಡೆ**

**ಅನು: ಡಾ. ಗೀತಾ ಶೆಣೈ.**

## ಸಾರ್ವಜನಿಕ ಆಡಳಿತದಲ್ಲಿ ಪ್ರಶಿಕ್ಷಣ

ಸಾರ್ವಜನಿಕ ಸಿಬ್ಬಂದಿಯ ದಕ್ಷತೆಯು ಅದು ಪಡೆದಿರುವ ತರಬೇತಿ ಮಟ್ಟವನ್ನು ಅವಲಂಬಿಸಿರುತ್ತದೆ. ಅಧುನಿಕ ರಾಜ್ಯದ ಆಡಳಿತ ಕಾರ್ಯಗಳು ಕ್ಲಿಷ್ಟವಾಗಿರುವುದರಿಂದ ಅಭ್ಯರ್ಥಿಗಳು ನಿರ್ವಹಿಸಲೇಬೇಕಾದ ಕಾರ್ಯಗಳ ಸ್ವರೂಪ, ಕೆಲಸ ಮಾಡುವ ವಿಧಾನ ಮುಂತಾದವುಗಳ ಬಗ್ಗೆ ತಿಳುವಳಿಕೆ ಪಡೆಯಲು ತರಬೇತಿ ಅಗತ್ಯವಾಗಿದೆ. ನೌಕರರಿಗೆ ಸೂಕ್ತ ತರಬೇತಿ ಕೊಡದಿದ್ದರೆ ಉತ್ತಮ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಮಾಡಿದ ಪ್ರಯತ್ನ, ವ್ಯರ್ಥವಾಗುತ್ತದೆ.

**ತರಬೇತಿಯ ಅರ್ಥ:** ನಿಘಂಟಿನ ಪ್ರಕಾರ "ಒಂದು ನಿರ್ದಿಷ್ಟ ಕಲೆ, ವೃತ್ತಿ ಅಥವಾ ಉದ್ಯೋಗದಲ್ಲಿನ ತಿಳುವಳಿಕೆ ಮತ್ತು ಶಿಕ್ಷಣವೇ ತರಬೇತಿ." ಸಾರ್ವಜನಿಕ ಆಡಳಿತದಲ್ಲಿ ನೌಕರರ ನೈಪುಣ್ಯ, ಸಾಮರ್ಥ್ಯ ಮತ್ತು ಬುದ್ಧಿಶಕ್ತಿಯನ್ನು ಸುಧಾರಿಸುವ ಅಥವಾ ಹೆಚ್ಚಿಸುವ ಹಾಗೂ ಅಪೇಕ್ಷಿತ ದಿಕ್ಕಿನಲ್ಲಿ ಆತನ ಮನೋಭಾವನೆಗಳ ಮತ್ತು ಮೌಲ್ಯಗಳ ಯೋಜನೆ ಇರುವಂತೆ ಮಾಡುವ ಬುದ್ಧಿಪೂರ್ವಕ ಪ್ರಯತ್ನವಾಗಿದೆ. ತಜ್ಞರ ಅಭಿಪ್ರಾಯದಲ್ಲಿ 'ತರಬೇತಿ' ಎಂದರೆ "ಸರ್ಕಾರಿ ನೌಕರರು ಅಥವಾ ಹಾಲಿ ಇರುವ ಅಥವಾ ಮುಂದೆ ಸೇರಬೇಕಾಗಿರುವ ಹುದ್ದೆಗಳಲ್ಲಿ ಪರಿಣಾಮಕಾರಿಯಾಗಿ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸಲು ತಿಳಿವಳಿಕೆ, ನಿಪುಣತೆ, ಅಭ್ಯಾಸ ಹಾಗೂ ಮನೋಭಾವಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ವಿಧಾನ." ಸಂಕ್ಷಿಪ್ತವಾಗಿ ಹೇಳುವುದಾದರೆ, ಸಂಸ್ಥೆಯೊಂದರ ಉದ್ಯೋಗಿಗಳು ಒಂದು ನಿರ್ದಿಷ್ಟ ಕಾರ್ಯ ನಿರ್ವಹಿಸಲು ಅಗತ್ಯವಾದ ಜ್ಞಾನ ಹಾಗೂ ಪರಿಣತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳುವುದೇ ತರಬೇತಿ. ತರಬೇತಿಯು ಉದ್ಯೋಗಿಗಳಿಗೆ ತಾವು ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ತಾತ್ವಿಕವಾಗಿ, ಪ್ರಾಯೋಗಿಕವಾಗಿ ಅರಿವು ಮತ್ತು ಜ್ಞಾನವನ್ನು ನೀಡುತ್ತದೆ.

**ತರಬೇತಿಯ ಪ್ರಾಮುಖ್ಯತೆ:** ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ತರಬೇತಿಗೆ ವಿಶೇಷ ಸ್ಥಾನವಿದೆ. ಸಾರ್ವಜನಿಕ ಸೇವೆಗಳಲ್ಲಿ ಕಾರ್ಯನಿರತರಾಗಿರುವ ನೌಕರರು ದಕ್ಷ ರೀತಿಯಲ್ಲಿ ಕಾರ್ಯನಿರ್ವಹಿಸಲು ತರಬೇತಿಯು ಅತ್ಯವಶ್ಯಕವಾಗಿದೆ. ನಿರಂತರವಾಗಿ ಹೊಸ ಹೊಸ ಕ್ಲಿಷ್ಟ ಮತ್ತು ತಾಂತ್ರಿಕ ಕಾರ್ಯಗಳನ್ನು ನಿರ್ವಹಿಸಬೇಕಾಗಿರುವ ಅಧುನಿಕ ಸರ್ಕಾರದಲ್ಲಿ ತರಬೇತಿಯ ಪ್ರಾಮುಖ್ಯದೊಂದಿಗೆ ಅದರ ಅವಶ್ಯಕತೆಯು ಹೆಚ್ಚುತ್ತಿದೆ. ತರಬೇತಿಯ ಮುಖ್ಯ ಅನುಕೂಲವೆಂದರೆ, ನೌಕರರು ಅವರ ಕಾರ್ಯಗಳನ್ನು ನಿರ್ವಹಿಸುವ ಮೊದಲೇ ಅವರಿಗೆ ಅವರ ಕಾರ್ಯಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಮಾಡಿಕೊಟ್ಟು ನಿರ್ವಹಿಸಬೇಕಾದ ಕಾರ್ಯಕ್ಕೆ ಅವರನ್ನು ಸಿದ್ಧಪಡಿಸುತ್ತದೆ. ಅದು ನೌಕರರಲ್ಲಿ ಬುದ್ಧಿಶಕ್ತಿ ಸಾಮರ್ಥ್ಯ ಮುಂತಾದ ಗುಣಗಳನ್ನು ಬೆಳೆಸುತ್ತದೆ. ನೌಕರರಿಗೆ ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಕಾರ್ಯವಿಧಾನ ಯೋಜನೆ, ಮಿತವ್ಯಯ ಮತ್ತು ಸರಳತೆಯ ಬಗ್ಗೆ ತರಬೇತಿ ಕೊಟ್ಟಾಗ ಸಾರ್ವಜನಿಕ ಆಡಳಿತ ಸುಗಮವಾಗಿ ನಡೆಯುತ್ತದೆ. ನೌಕರ ವರ್ಗದಲ್ಲಿ ತೃಪ್ತಿಕರ ಮನೋಭಾವನೆ ಬೆಳೆಯಲು ಅವಕಾಶ ಕಲ್ಪಿಸುತ್ತದೆ.

**ತರಬೇತಿಯ ಅವಶ್ಯಕತೆ:** ಪ್ರತಿಯೊಂದು ಸಂಸ್ಥೆಯೂ ತನ್ನ ಉದ್ಯೋಗಿಗಳಿಗೆ ತರಬೇತಿಯನ್ನು ಕೊಡಬೇಕಾದ ಅವಶ್ಯಕತೆ ಇರುತ್ತದೆ. ತರಬೇತಿಯು ಹೊಸ ಉದ್ಯೋಗಿಗಳಿಗೆ ಮಾತ್ರವಲ್ಲದೆ, ಹಳೆಯ ಉದ್ಯೋಗಿಗಳಿಗೂ ಅಗತ್ಯವಾಗಿರುತ್ತದೆ. ತರಬೇತಿಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ. ಏಕೆಂದರೆ ತನ್ನ ಅರ್ಹತೆಗಳು, ಚಾತುರ್ಯ, ಪರಿಣತಿ ಮತ್ತು ಸಾಮರ್ಥ್ಯಗಳು ಏನೇ ಇದ್ದರೂ, ಬದಲಾಗುವ ಸನ್ನಿವೇಶಗಳಿಗೆ ತಕ್ಕಂತೆ ಕೆಲಸವನ್ನು

Digitised by Bharatavani, CIIL

ನಿರ್ವಹಿಸಲು ತರಬೇತಿಯನ್ನು ಪಡೆಯಲೇಬೇಕಾಗುತ್ತದೆ. ತಾಂತ್ರಿಕ ಬದಲಾವಣೆಗಳು, ಸಂಘಟನಾತ್ಮಕ ಸಂಕೀರ್ಣತೆ, ಕೆಲಸದ ಸ್ವರೂಪದಲ್ಲಿ ಬದಲಾವಣೆಗಳು ಮುಂತಾದ ಕಾರಣಗಳಿಂದ ತರಬೇತಿ ಅವಶ್ಯಕವಾಗಿರುತ್ತದೆ. ಈ ಕೆಳಗಿನ ಅಂಶಗಳು ತರಬೇತಿಯ ಅವಶ್ಯಕತೆಯನ್ನು ವಿವರಿಸುತ್ತವೆ:

**ಉದ್ಯೋಗದ ಕೋರಿಕೆಗಳು(Job Requirement):** ಯಾವ ಉದ್ಯೋಗಕ್ಕಾಗಿ ನೌಕರರನ್ನು ಆಯ್ಕೆ ಮಾಡಲಾಗಿದೆಯೋ ಆ ಉದ್ಯೋಗವನ್ನು ದಕ್ಷತೆಯಿಂದ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಲು ಆತನಲ್ಲಿ ಅರ್ಹತೆಯ ಕೊರತೆ ಇರಬಹುದು. ಹೊಸಬರಾದ ಮತ್ತು ಅನುಭವಿ ಉದ್ಯೋಗಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ವಿವರವಾದ ಮಾರ್ಗದರ್ಶನ, ಸೂಚನೆ ಮತ್ತು ಸಲಹೆಗಳನ್ನು ಕೋರುತ್ತಾರೆ. ಆದುದರಿಂದ ಸಂಸ್ಥೆಯ ಅವಶ್ಯಕತೆಗಳಿಗೆ ಉದ್ಯೋಗಿಗಳ ಅರ್ಹತೆಗಳನ್ನು ಸರಿ ಹೊಂದಿಸಲು ಅವರಿಗೆ ಸೂಕ್ತ ತರಬೇತಿಯ ಅವಶ್ಯಕತೆ ಇರುತ್ತದೆ. ಹೊಸ ನೌಕರರಿಗೆ ಕೆಲಸವನ್ನು ಮತ್ತು ಸಂಸ್ಥೆಯನ್ನು ಪರಿಚಯಿಸಲು ಅವರಿಗೆ ತರಬೇತಿ ನೀಡುವ ಅವಶ್ಯಕತೆ ತಲೆದೋರುವುದು.

**ತಾಂತ್ರಿಕ ಬದಲಾವಣೆ (Technological Changes):** ಇಂದಿನ ತಾಂತ್ರಿಕಜ್ಞಾನವು ಶೀಘ್ರಗತಿಯಲ್ಲಿ ಬೆಳೆಯುತ್ತಿದೆ. ಪ್ರತಯೊಂದು ಸಂಸ್ಥೆಯು ಅಸ್ತಿತ್ವದಲ್ಲಿ ಉಳಿಯಲು, ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ತೀರಾ ಇತ್ತೀಚಿನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ. ಯಾಂತ್ರೀಕರಣ, ಗಣಕೀಕರಣ, ಸ್ವತಶ್ಚಲಿತ (automation) ಯಂತ್ರ ಮುಂತಾದುವುಗಳು ಈಗ ವ್ಯಾಪಕವಾಗಿ ಬಳಕೆಯಲ್ಲಿವೆ. ಸಿಬ್ಬಂದಿಗೆ ಗಣಕೀಕರಣ ತರಬೇತಿಯನ್ನು ನೀಡುವುದು ಅತ್ಯಾವಶ್ಯಕವಾಗಿದೆ. ಹೀಗೆ ಮುಂದುವರೆದ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತಹ ತರಬೇತಿ ಪಡೆದ ಸಿಬ್ಬಂದಿಯ ಅವಶ್ಯಕತೆ ಹಿಂದಿಗಿಂತಲೂ ಇಂದು ಹೆಚ್ಚಾಗಿದೆ. ಆದುದರಿಂದ ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ಹಾಗೂ ಬದಲಾವಣೆಯಾಗುತ್ತಿರುವ ತಾಂತ್ರಿಕ ಪರಿಣತಿಗಳಿಂದ ಮತ್ತು ಜ್ಞಾನದಿಂದ ಸಿಬ್ಬಂದಿಯನ್ನು ಸಂಪದ್ಯುಕ್ತಗೊಳಿಸಲು ಅವರಿಗೆ ತರಬೇತಿ ನೀಡಬೇಕಾಗುತ್ತದೆ.

**ಸಂಘಟನಾತ್ಮಕ ಸಾಮರ್ಥ್ಯ:** ಯಾವುದೇ ಒಂದು ಸಂಸ್ಥೆಯು ಅಸ್ತಿತ್ವದಲ್ಲಿ ಉಳಿಯಲು ಮತ್ತು ಬೆಳೆಯಲು ಅದು ಬದಲಾಗುತ್ತಿರುವ ಪರಿಸರಕ್ಕೆ ನಿರಂತರವಾಗಿ ಹೊಂದಿಕೊಳ್ಳುವ ಅವಶ್ಯಕತೆ ಇರುತ್ತದೆ. ಬದಲಾಗುತ್ತಿರುವ ಪರಿಸ್ಥಿತಿಗೆ ಮತ್ತು ಪರಿಸರಕ್ಕೆ ಸಂಸ್ಥೆಯು ಹೊಂದಿಕೊಳ್ಳಬೇಕೆಂದು ಅದು ತನ್ನ ಸಿಬ್ಬಂದಿಗೆ ಸೂಕ್ತ ತರಬೇತಿಯನ್ನು ನೀಡಬೇಕಾಗುತ್ತದೆ. ಇತ್ತೀಚಿನ ಜ್ಞಾನವನ್ನು ಪರಿಚಯಿಸಬೇಕು. ತರಬೇತಿಯು ನೌಕರರಲ್ಲಿ ಆರಂಭಶೀಲತೆ ಮತ್ತು ರಚನಾತ್ಮಕ ಗುಣವನ್ನು ಬೆಳೆಸಲು ನೆರವಾಗುತ್ತದೆ. ಅದರಲ್ಲಿಯೂ ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣದ ಅಧುನಿಕ ಯುಗದಲ್ಲಿ ಆಡಳಿತಾತ್ಮಕ ಸಂಸ್ಥೆಗಳು ವಿಸ್ತರಣೆ, ಬೆಳವಣಿಗೆ ಮತ್ತ ವೈವಿಧ್ಯತೆಯನ್ನು ಅನುಭವಿಸುತ್ತಿವೆ. ಅಂತರಾಷ್ಟ್ರೀಯ ಸ್ಪರ್ಧೆಯನ್ನು ಯಶಸ್ವಿಯಾಗಿ ಎದುರಿಸಲು ಉದ್ಯಮ ಸಂಸ್ಥೆಗಳು ತಮ್ಮ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲೇಬೇಕಾಗಿದೆ.

**ಆಂತರಿಕ ಚಲನಶೀಲತೆ (Internal Mobility):** ನೌಕರರು ಬಡ್ತಿ ಪಡೆದು ಒಂದು ಕೆಲಸದಿಂದ ಇನ್ನೊಂದು ಗುರುತರ ಕೆಲಸಕ್ಕೆ ಅಥವಾ ಹುದ್ದೆಗೆ ನೇಮಕವಾದಾಗ ತರಬೇತಿಯ ಅಗತ್ಯತೆ ಉಂಟಾಗುತ್ತದೆ. ಉನ್ನತ ಹಾಗೂ ಹೆಚ್ಚು ಜವಾಬ್ದಾರಿಯುಳ್ಳ ಹುದ್ದೆಗಳಿಗೆ ಆಯ್ಕೆಯಾದ ನೌಕರರಿಗೆ/ಅಧಿಕಾರಿಗಳಿಗೆ ಜವಾಬ್ದಾರಿಯ ನಿರ್ವಹಣೆಯನ್ನು ವಹಿಸಿಕೊಳ್ಳಲು ಸೂಕ್ತ ತರಬೇತಿ ನೀಡುವುದು ಅವಶ್ಯಕ. ಉನ್ನತ ಹುದ್ದೆಗಳ ನಿರ್ವಹಣೆಗೆ ನೌಕರರನ್ನು ತಯಾರು ಮಾಡಲು ತರಬೇತಿಯನ್ನು ಸಾಧನವನ್ನಾಗಿ ಬಳಸಿಕೊಳ್ಳಲಾಗುವುದು.

**ಸಂಘಟನಾತ್ಮಕ ಸಂಕೀರ್ಣತೆ (Organisational Complexity):** ತಾಂತ್ರಿಕ ಕ್ಷೇತ್ರದಲ್ಲಿ ತೀವ್ರಗತಿಯ ಪ್ರಗತಿ, ಹೆಚ್ಚುತ್ತಿರುವ ಯಾಂತ್ರೀಕರಣ ಮುಂತಾದ ಕಾರಣಗಳಿಂದ ಅನೇಕ ಸಂಸ್ಥೆಗಳು ಸಂಕೀರ್ಣ ಸ್ವರೂಪ ತಾಳಿವೆ. ಈ ಕಾರಣದಿಂದಾಗಿ ಉದ್ಯೋಗಿಗಳ ಸಂಖ್ಯೆ ಮತ್ತು ವಿಧಗಳು ಬೆಳೆದಿರುವುದರಿಂದ ಸಂಘಟನಾತ್ಮಕ ಅಧಿಕಾರ ಶ್ರೇಣಿಯ ಹಂತಗಳು ಜಾಸ್ತಿಯಾಗಿವೆ ಮತ್ತು ನಿಯಂತ್ರಣ ವಿಧಗಳು ಹೆಚ್ಚಾಗಿವೆ. ಈ ಸಮಗ್ರತೆಯಲ್ಲಿ ಸಂಕೀರ್ಣ ಸಮಸ್ಯೆಗಳನ್ನು ಸೃಷ್ಟಿಸಿವೆ. ಈ ಪರಿಸ್ಥಿತಿಯ ಕಾರಣದಿಂದ ವಿಸ್ತರಣೆ, ವೈವಿಧ್ಯತೆ ಮತ್ತು ಬೆಳವಣಿಗೆಯ ಬೇಡಿಕೆಗಳಿಗೆ ತಕ್ಕಂತೆ ನೌಕರರನ್ನು ಸಜ್ಜುಗೊಳಿಸಬೇಕಾಗಿದೆ. ಇವೆಲ್ಲವೂ ತರಬೇತಿಯನ್ನು ಅವಶ್ಯಗೊಳಿಸಿವೆ.

ಹೀಗೆ ನೌಕರರಿಗೆ ತರಬೇತಿಯನ್ನು ನೀಡಬೇಕಾದ ಅವಶ್ಯಕತೆ ಯಾವಾಗಲೂ ಇರುತ್ತದೆ. ತರಬೇತಿಯಿಂದಾಗಿ ನೌಕರರು ಬದಲಾದ ತಾಂತ್ರಕತೆ ಮತ್ತು ಹೊಸ ವಿಧಾನಗಳನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೆಚ್ಚುತ್ತಿರುವ ಆಡಳಿತಾತ್ಮಕ ಕಾರ್ಯಗಳ ಸಂಕೀರ್ಣತೆ, ನಿರ್ವಹಣೆ, ಹೆಚ್ಚುತ್ತಿರುವ ವೃತ್ತಿಪರತೆ, ಉದ್ಯಮ ಪರಿಸರದಲ್ಲಿ ಎದುರಾಗುತ್ತಿರುವ ಅನಿಶ್ಚಿತತೆಗಳು, ಜಾಗತಿಕ ಸ್ಪರ್ಧೆ, ಬೆಳೆಯುತ್ತಿರುವ ಆಸೆ ಆಕಾಂಕ್ಷೆಗಳು, ಯೋಜನೆ ಮತ್ತು ಫಲಿತಾಂಶಗಳ ನಡುವೆ ಹೆಚ್ಚುತ್ತಿರುವ ಅಂತರ ಮೊದಲಾದ ಕಾರಣಗಳಿಂದ ತರಬೇತಿ ಅವಶ್ಯಕತೆ ಉಂಟಾಗುತ್ತದೆ.

**ತರಬೇತಿಯ ಧ್ಯೇಯಗಳು:** ತರಬೇತಿಯ ಮುಖ್ಯ ಉದ್ದೇಶವನ್ನು ಒಂದೇ ಪದದಲ್ಲಿ ಹೇಳುವುದಾದರೆ "ದಕ್ಷತೆ" ಎನ್ನಬಹುದು. ಅಂದರೆ ಸಾರ್ವಜನಿಕ ಆಡಳಿತ ಉದ್ದೇಶಕ್ಕಾಗಿ ಸಾರ್ವಜನಿಕ ಉದ್ಯೋಗಿಯು ತನ್ನ ಕಾರ್ಯವನ್ನು ಪರಿಣಾಮಕಾರಿಯಾಗಿಯೂ, ದಕ್ಷತೆಯಿಂದಲೂ ನಿರ್ವಹಿಸುವಂತೆ ಮಾಡುವುದಾಗಿದೆ. ತರಬೇತಿಯು ನೌಕರರ ದಕ್ಷತೆಯನ್ನು ಹೆಚ್ಚಿಸುವುದಲ್ಲದೆ ಅವರ ದೃಷ್ಟಿಕೋನವನ್ನು ವಿಶಾಲಗೊಳಿಸುವುದು. ಸ್ವತಂತ್ರ ಆಲೋಚನೆ, ಸ್ವತಂತ್ರ ತೀರ್ಮಾನ, ಸ್ವಾವಲಂಬನೆ, ಸ್ವತಂತ್ರವಾಗಿ ಕಾರ್ಯನಿರ್ವಹಿಸುವಿಕೆ ಮುಂತಾದ ಸಾಮರ್ಥ್ಯ ತರಬೇತಿಯಿಂದ ನೌಕರರಿಗೆ ದೊರೆಯುತ್ತವೆ.

Digitised by Bharatavani, CIIL

ಇಂಗ್ಲೆಂಡಿನ ಆಷೆಟನ್ ಸಮಿತಿಯು ತನ್ನ ವರದಿಯಲ್ಲಿ (1944) ಆಡಳಿತ ಸಿಬ್ಬಂದಿ ತರಬೇತಿಯ ಮುಖ್ಯ ಉದ್ದೇಶಗಳನ್ನು ಈ ಕೆಳಗಿನಂತೆ ಸ್ಪಷ್ಟಪಡಿಸಿದೆ:

1) ಉದ್ಯೋಗಿಗಳು ಕರ್ತವ್ಯಗಳನ್ನು ತೃಪ್ತಕರವಾಗಿಯೂ, ದಕ್ಷತೆಯಿಂದಲೂ ನಿರ್ವಹಿಸಲು ಅವರಲ್ಲಿ ಕಾರ್ಯಕುಶಲತೆಯನ್ನು ಬೆಳೆಸುವುದು. 2) ಸಾರ್ವಜನಿಕ ಉದ್ಯೋಗಿಗಳು ಬದಲಾದ ಕಾರ್ಯವಿಧಾನಗಳಿಗೆ ಮತ್ತು ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಮಾಡುವುದು. 3) ಉದ್ಯೋಗಿಯು ಯಾಂತ್ರಿಕವಾಗಿ ಕಾರ್ಯನಿರ್ವಹಿಸುವುದನ್ನು ತಪ್ಪಿಸಿ ಅವನ ದೃಷ್ಟಕೋನವನ್ನು ವಿಶಾಲಗೊಳಿಸುಹುದು. ಸಮಾಜಸೇವೆ ಮಾಡಬೇಕೆನ್ನುವ ಜಾಗೃತಿಯನ್ನು ನೌಕರರಲ್ಲಿ ಮೂಡಿಸುವುದು. 4) ನೌಕರನನ್ನು ಪ್ರಸ್ತುತ ಕಾರ್ಯನಿರ್ವಹಣೆಗೆ ಮಾತ್ರ ಹೊಂದಿಕೊಳ್ಳುವಂತೆ ಮಾಡದೆ, ಅವನು ಇನ್ನೂ ಹೆಚ್ಚಿನ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ಹೊರಲು ತಯಾರು ಮಾಡುವುದು. ನೌಕರನಲ್ಲಿ ತಾನು ಸಾರ್ವಜನಿಕ ಸೇವಕನೇ ಹೊರತು ಯಜಮಾನನಲ್ಲ ಎಂಬ ಭಾವನೆ ಮೂಡುವಂತೆ ಮಾಡುವುದು. ಅಲ್ಲದೆ ಕಾರ್ಯಚೈತನ್ಯವನ್ನು ಹೆಚ್ಚಿಸುವುದು. ಈ ಉದ್ದೇಶಗಳಲ್ಲದೆ ತರಬೇತಿಯು ಇನ್ನು ಕೆಲವು ಉದ್ದೇಶಗಳನ್ನು ಹೊಂದಿದೆ:

1) ಆಡಳಿತ ವ್ಯವಸ್ಥೆಯಲ್ಲಿ ಹೊಸ ಉದ್ಯೋಗಿಗಳನ್ನು ಸೇರಿಸಿ ಅವರಿಗೆ ಸಂಸ್ಥೆಯ ಗುರಿ-ಧ್ಯೇಯಗಳ ಬಗ್ಗೆ ಅಗತ್ಯವಾದ ಜ್ಞಾನವನ್ನು ನೀಡುವುದು. 2) ಆಯಾ ಕ್ಷೇತ್ರಗಳಲ್ಲಿನ ಅಭಿವೃದ್ಧಿಯ ಬಗ್ಗೆ ಉದ್ಯೋಗಿಗಳಿಗೆ ತಿಳುವಳಿಕೆ ನೀಡುವುದು. 3) ಉದ್ಯೋಗಿಗಳಲ್ಲಿ ಸಮುದಾಯ ಸೇವೆ ಮನೋಭಾವನೆಯನ್ನುಂಟು ಮಾಡುವುದು. ಉದ್ಯೋಗಿಗಳಲ್ಲಿ ಏಕರೂಪತೆ ಮನೊಭಾವನೆಯನ್ನು ಮತ್ತು ಸಂಸ್ಥಾ ಬುದ್ಧಿಯನ್ನು ಬೆಳೆಸುವುದು.

ಒಟ್ಟಿನಲ್ಲಿ ತರಬೇತಿಯು ಗರಿಷ್ಠ ಪ್ರಮಾಣದ ಉತ್ಪಾದಕತೆಗೆ ಅಡ್ಡಿ ಬರುವ ಜನಶಕ್ತಿ (ಮಾನವಶಕ್ತಿ) ಸಮಸ್ಯೆಗಳನ್ನು ಸಮರ್ಪಕವಾಗಿ ನಿರ್ವಹಿಸಬಲ್ಲದು. ರಿಚರ್ಡ್ ಜಾನ್‌ಸನ್‌ರ ಪ್ರಕಾರ, ತರಬೇತಿ ಕಾರ್ಯಕ್ರಮ ನೌಕರರ ಪರಿಣತಿಗಳು, ಸಾಮರ್ಥ್ಯ ಮತ್ತು ಜ್ಞಾನ ಹೆಚ್ಚಿಸುವ ಮೂಲಕ ಅವರ ಉತ್ಪಾದಕತೆಯ ಹೆಚ್ಚಳಕ್ಕೆ ನೆರವಾಗುತ್ತದೆ. ತರಬೇತಿ ಹೊಂದಿದ ಉದ್ಯೋಗಿಗಳು ಉತ್ತಮ ವಿಧಾನಗಳನ್ನು ಅಳವಡಿಸಿಕೊಂಡು ಕೆಲಸ ಮಾಡುವುದರಿಂದ ಉತ್ಪಾದಕತೆಯ ಹೆಚ್ಚಳವು ಸಾಧ್ಯವಾಗುತ್ತದೆ. ನೌಕರರಿಗೆ ತರಬೇತಿ ಕಾರ್ಯಕ್ರಮದಲ್ಲಿ ಕೆಲಸದ ಉತ್ತಮ ವಿಧಾನಗಳನ್ನು ಬೋಧಿಸಲಾಗುತ್ತದೆ. ಇದನ್ನು ಅವರು ಅಳವಡಿಸಿಕೊಂಡು ಉನ್ನತ ಗುಣಮಟ್ಟದ ಸೇವೆಗಳನ್ನು ನೀಡಲು ಸಾಧ್ಯವಾಗುತ್ತದೆ. ತರಬೇತಿ ಹೊಂದಿದ ನೌಕರರು ಕಡಿಮೆ ತಪ್ಪುಮಾಡುವ ಪ್ರವೃತ್ತಿಯವರಾಗಿರುತ್ತಾರೆ. ಸಮರ್ಪಕವಾದ ತರಬೇತಿಯು ನೌಕರರಲ್ಲಿ ಧನಾತ್ಮಕವಾದ ಭಾವನೆಗಳನ್ನು ಬೆಳೆಸುತ್ತದೆ. ತರಬೇತಿಯಿಂದ ಅವರಲ್ಲಿ ಕೆಲಸದ ಸುರಕ್ಷತೆಯು ದೊರೆಯುತ್ತದೆ. ಅದು ನೌಕರರ ಕುಂದುಕೊರತೆಗಳನ್ನು ತಗ್ಗಿಸುತ್ತದೆ. ಚೆನ್ನಾಗಿ ತರಬೇತಿ ಹೊಂದಿದ ಸಿಬ್ಬಂದಿಗೆ ಉತ್ತಮವಾದ ಆಂತರಿಕ ಬಡ್ತಿಯ ಅವಕಾಶಗಳು ಲಭಿಸುತ್ತವೆ.

ಚೆನ್ನಾಗಿ ತರಬೇತಾದ ನೌಕರರು ಸ್ವಾವಲಂಬಿಗಳಾಗಿರುತ್ತಾರೆ, ಮತ್ತು ಉನ್ನತವಾದ ಪ್ರೇರಣಾ ಶಕ್ತಿ ಪಡೆದಿರುತ್ತಾರೆ. ಇಂತಹ ನೌಕರರಿಗೆ ಕಡಿಮೆ ಮಾರ್ಗದರ್ಶನ ಮತ್ತು ನಿಯಂತ್ರಣ ಸಾಕಾಗುತ್ತದೆ. ಆದ್ದರಿಂದ ಮೇಲ್ವಿಚಾರಣೆಯ ಹೊರೆ ಕಡಿಮೆಯಾಗುತ್ತದೆ. ಆಡಳಿತ ವರ್ಗವು ಮೇಲ್ವಿಚಾರಣೆಯ ಜವಾಬ್ದಾರಿಯಿಂದ ಮುಕ್ತಿ ಪಡೆದು, ಯೋಜನೆ, ನಿರ್ಣಯ ಕೈಗೊಳ್ಳುವಿಕೆ ಮೊದಲಾದ ಕೆಲಸಗಳಿಗೆ ಹೆಚ್ಚಿನ ಗಮನ ಹರಿಸಲು ಸಾಧ್ಯವಾಗುವುದು.

ತರಬೇತಿಯು ಸಿಬ್ಬಂದಿಯ ಜ್ಞಾನ ಪರಿಣತಿಯ ಬೆಳವಣಿಗೆಗೆ ನೆರವಾಗುತ್ತದೆ. ಚೆನ್ನಾಗಿ ತರಬೇತಿ ಪಡೆದ ಸಿಬ್ಬಂದಿಯು ತಮ್ಮ ಜೀವನ ಕ್ರಮದಲ್ಲಿ ಉತ್ತಮವಾಗಿ ಪ್ರಗತಿ ಹೊಂದಬಹುದು. ತರಬೇತಿ ಹೊಂದಿದ ನೌಕರರು ಯಾವುದೇ ಸಂಸ್ಥೆಗೆ ಆಸ್ತಿ ಇದ್ದಂತೆ. ಉದ್ಯೋಗಿಗಳು ತಾವಾಗಿ ಬೆಳೆದು ಉನ್ನತ ಹುದ್ದೆಗೆ ಮುಂಬಡ್ತಿ ಪಡೆಯಲು ಮತ್ತು ಕಾಲಾನುಕ್ರಮದಲ್ಲಿ ವ್ಯವಸ್ಥಾಪಕರ ಹುದ್ದೆಯನ್ನು ಅಲಂಕರಿಸಲು ತರಬೇತಿಯು ಸಹಾಯ ಮಾಡುತ್ತದೆ. ನೌಕರರು ಉದ್ಯೋಗದ ತೃಪ್ತಿಯನ್ನು (Job satisfaction) ಪಡೆಯುತ್ತಾರೆ.

ಸುಸಂಬದ್ಧವಾದ ತರಬೇತಿ ಕಾರ್ಯಕ್ರಮವು ಸಂಸ್ಥೆಯ ಪದ್ಧತಿಯನ್ನು ಸುಧಾರಿಸಲು ಸಹಾಯಕಾರಿಯಾಗುತ್ತದೆ. ತರಬೇತಿಯ ಫಲವಾಗಿ ನೌಕರರಲ್ಲಿ ಶಿಸ್ತು ಮತ್ತು ಸಂಸ್ಥೆಯಲ್ಲಿ ಆಡಳಿತಾತ್ಮಕ ಸಂಬಂಧಗಳು ಉತ್ತಮಗೊಳ್ಳುತ್ತವೆ. ಸಂಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣ ಮತ್ತು ಆಡಳಿತದಲ್ಲಿ ಕಾರ್ಮಿಕರ ಸಹಭಾಗಿತ್ವವನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ.

"ತರಬೇತಿಯು ಮಾನವ ಸಂಪನ್ಮೂಲಗಳಲ್ಲಿ ಹೂಡಿಕೆ, (investment in human resources). ಅದು ಮಾನವ ಸಾಮರ್ಥ್ಯದ ಸುಧಾರಣೆಗೆ ಮತ್ತು ಸಿಬ್ಬಂದಿಯ ದಕ್ಷತೆಯನ್ನು ಹೆಚ್ಚಿಸುವ ಒಂದು ಮುಖ್ಯ ಸಾಧನವಾಗಿದೆ" ಎಂದು ಭಾರತದ ಆಡಳಿತ ಸುಧಾರಣಾ ಆಯೋಗವು ಅಭಿಪ್ರಾಯಪಟ್ಟಿದೆ. ಸಿಬ್ಬಂದಿ ಆಡಳಿತದಮೇಲಿನ ಆಡಳಿತ ಸುಧಾರಣಾ ಆಯೋಗದ ವರದಿಯು ತರಬೇತಿಯ ಬಗ್ಗೆ ಈ ರೀತಿ ಹೇಳಿದೆ: "ತರಬೇತಿಯು ವೈಯಕ್ತಿಕ ಸಾರ್ವಜನಿಕ ನೌಕರರನ್ನು ಈಗನ ಉದ್ಯೋಗವನ್ನು ಚೆನ್ನಾಗಿ ನಿರ್ವಹಿಸಲು ಅಣಿ ಮಾಡುವುದರ ಜೊತೆಗೆ, ಉನ್ನತ ಜವಾಬ್ದಾರಿಗಳನ್ನು ಹೊರಲು ಮತ್ತು ಭವಿಷ್ಯತ್ತಿನ ಹೊಸ ಹಾಗೂ ಕಠಿಣ ಸವಾಲುಗಳನ್ನು ಎದುರಿಸುವುದಕ್ಕೆ ಆತನನ್ನು ಸಜ್ಜುಗೊಳಿಸಬೇಕು. ತರಬೇತಿಕಾರ್ಯಕ್ರಮವು ನಾಗರಿಕ ಸೇವಾ ವರ್ಗದವರನ್ನು ಇಂದು ಮತ್ತು ನಾಳಿನ ಅವಶ್ಯಕತೆಗಳಿಗಾಗಿ ತರಬೇತುಗೊಳಿಸುವುದಲ್ಲದೆ ಅವರನ್ನು ಮುಂದಿನ ದಿನಗಳಿಗೂ ತರಬೇತುಗೊಳಿಸುವ ಮತ್ತು ನೌಕರರಲ್ಲಿ ಸಮರ್ಪಣಾಭಾವನೆಯನ್ನು ತುಂಬಲು ಆತನ ಮಾನಸಿಕ, ನೈತಿಕ ಹಾಗೂ ಆಧ್ಯಾತ್ಮಿಕ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ತರಬೇತಿಯು ನೆರವಾಗಬೇಕು."

**ತರಬೇತಿ ವಿಧಗಳು:** ವಿಧಾನ, ಅವಧಿ, ಉದ್ಯೋಗಿಗೆ ಯಾವ

Digitised by Bharatavani, CIIL

ಹಂತದಲ್ಲಿ ತರಬೇತಿ ಕೊಡಲಾಗುತ್ತದೆ, ತರಬೇತಿ ಕೊಡುವ ಸಂಸ್ಥೆ ಹಾಗೂ ತರಬೇತಿಯ ಉದ್ದೇಶಗಳನ್ನು ಆಧಾರವಾಗಿಟ್ಟುಕೊಂಡು ತರಬೇತಿಯನ್ನು ಐದು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ:

1. ಔಪಚಾರಿಕ ಮತ್ತು ಅನೌಪಚಾರಿಕ ತರಬೇತಿ
2. ನೌಕರಿಪೂರ್ವ ತರಬೇತಿ, ನೌಕರಿ ಆರಂಭೋತ್ತರ ತರಬೇತಿ
3. ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ
4. ಇಲಾಖಾ ಮತ್ತು ಕೇಂದ್ರೀಯ ತರಬೇತಿ
5. ಪರಿಣತ ತರಬೇತಿ ಮತ್ತು ಹಿನ್ನೆಲೆ ತರಬೇತಿ

**ಔಪಚಾರಿಕ ಮತ್ತ ಅನೌಪಚಾರಿಕ ತರಬೇತಿ–ಅನೌಪಚಾರಿಕ ತರಬೇತಿ:** ಇದು ನೌಕರರು ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಮೂಲಕ ಪಡೆಯುವ ತರಬೇತಿಯಾಗಿದೆ. ಅನುಭವದಿಂದ ಮತ್ತು ಕಾರ್ಯಾಚರಣೆಯ ಮೂಲಕ ಪಡೆಯುವ ಆಡಳಿತ ನೈಪುಣ್ಯವನ್ನು ಅನೌಪಚಾರಿಕ ತರಬೇತಿ ಎಂದು ಕರೆಯಲಾಗಿದೆ. ನೌಕರರು ಈ ತರಬೇತಿಯನ್ನು ತಮ್ಮ ದೈನಂದಿನ ಕಛೇರಿ ಕಾರ್ಯಗಳನ್ನು ನಿರ್ವಹಿಸುವ ಮೂಲಕ ಮತ್ತು ಅನುಭವದಿಂದ ಪಡೆಯುತ್ತಾರೆ. ಕಛೇರಿಯ ದಿನನಿತ್ಯದ ಕೆಲಸಗಳನ್ನು ಮಾಡುವಾಗ ಹಿರಿಯರ ಮತ್ತು ಕಿರಿಯ ಉದ್ಯೋಗಿಗಳ ನಡುವೆ ಉಂಟಾಗುವ ಸಂಪರ್ಕ, ಸಮ್ಮೇಳನಗಳು, ಸಿಬ್ಬಂದಿ ವಾರ್ತಾಪತ್ರಿಕೆಗಳು, ಸಂಸ್ಥೆಯ ಪ್ರಕಟಣೆಗಳು, ವೃತ್ತಿಪರ ಸಂಘಗಳು ಮುಂತಾದವುಗಳ ಮೂಲಕ ಪಡೆಯಬಹುದು. ಹಿರಿಯ ಅಧಿಕಾರಿಗಳು ಕಿರಿಯ ಅಧಿಕಾರಿಗಳಿಗೆ ಯೋಗ್ಯ ಮಾರ್ಗದರ್ಶನ ನೀಡುತ್ತಾರೆ. ಇದರಿಂದಾಗಿ ಹೊಸದಾಗಿ ಸರ್ಕಾರಿ ಸೇವೆಗೆ ಸೇರಿದ ಉದ್ಯೋಗಿಗಳಿಗೆ ಹೆಚ್ಚಿನ ಅರಿವು ಉಂಟಾಗಿ ತಮ್ಮ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವುದು. ಹೀಗೆ ನಿರಂತರ ಕಾರ್ಯನಿರ್ವಹಣೆಯ ಮೂಲಕ ಪಡೆಯುವ ತರಬೇತಿಯೇ ಅನೌಪಚಾರಿಕ ತರಬೇತಿ. ಈ ತರಬೇತಿಯ ಯಶಸ್ಸು ಹಿರಿಯ ಅಧಿಕಾರಿಗಳ ಅನುಭವ, ನೈಪುಣ್ಯ, ಜೇಷ್ಠತೆ ಮತು ಹೊಸ ಉದ್ಯೋಗಿಗಳ ಬಗ್ಗೆ ಅವರು ತೋರಿಸುವ ಆಸಕ್ತಿ ಮತ್ತು ಕೆಲಸದಲ್ಲಿ ಹೊಸ ಉದ್ಯೋಗಿಗಳ ನಿರಂತರ ಪ್ರಯತ್ನಗಳು ಮುಂತಾದವುಗಳನ್ನು ಅವಲಂಬಿಸಿದೆ.

**ಔಪಚಾರಿಕ ತರಬೇತಿ:** ನೌಕರರು ಕಾರ್ಯ ನಿರ್ವಹಿಸಬೇಕಾದ ರೀತಿಯನ್ನು ಜಾಗರೂಕತೆಯಿಂದ ಪೂರ್ವಭಾವಿಯಾಗಿ ಸಿದ್ಧಪಡಿಸಿದ ಕ್ರಮಬದ್ಧ ಯೋಜನೆಗಳಿಂದ ಕಾರ್ಯನಿರ್ವಹಿಸುವುದನ್ನು 'ಔಪಚಾರಿಕ ತರಬೇತಿ'ಯೆಂದು ಕರೆಯಲಾಗಿದೆ. ಇದನ್ನು ಪರಿಣಿತರ ಮಾರ್ಗದರ್ಶನದಲ್ಲಿ ನೀಡಲಾಗುವುದು. ಉದ್ಯೋಗಿಗಳು ನಿರ್ವಹಿಸಬೇಕಾಗಿರುವ ಕೆಲಸದ ಬಗ್ಗೆ ಇಲಾಖಾ ಮುಖ್ಯಾಧಿಕಾರಿಗಳಿಂದ ಉಪನ್ಯಾಸಗಳನ್ನು, ಚರ್ಚಾಗೋಷ್ಠಿ, ವಿಚಾರ ಗೋಷ್ಠಿ, ಕಮ್ಮಟ ಇತ್ಯಾದಿಗಳ ಮೂಲಕ ಔಪಚಾರಿಕ ತರಬೇತಿ ಕೊಡಬಹುದು. ಉದ್ಯೋಗಿಗಳಿಗೆ ಇಲಾಖೆಯ ಕಾರ್ಯವಿಧಾನ, ಕರ್ತವ್ಯಗಳ ಸ್ವರೂಪಗಳು, ಕಛೇರಿಯಲ್ಲಿ ಅನುಸರಿಸಬೇಕಾದ ವಿಚಾರ ಸಂಹಿತೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಬೋಧನೆ ನೀಡಲಾಗುತ್ತದೆ.

**ಔಪಚಾರಿಕ ತರಬೇತಿಯನ್ನು ನಾಲ್ಕು ಬಗೆಯಾಗಿ ವಿಂಗಡಿಸಬಹುದು:** (ಅ) ನೌಕರಿ ಪೂರ್ವ ತರಬೇತಿ, (ಆ) ನೌಕರಿ ಆರಂಭೋತ್ತರ ತರಬೇತಿ, (ಇ) ನೌಕರಿಯಲ್ಲಿನ ತರಬೇತಿ, (ಈ) ಪುನಶ್ಚೇತನ ತರಬೇತಿ.

**(ಅ) ನೌಕರಿ ಪೂರ್ವ ತರಬೇತಿ (ನೇಮಕಪೂರ್ವ ತರಬೇತಿ):** ಭಾವಿ ಉದ್ಯೋಗಿಗಳನ್ನು ಸಾರ್ವಜನಿಕ ಸೇವೆಗಾಗಿ ಇದು ತಯಾರು ಮಾಡುತ್ತದೆ. ವ್ಯಕ್ತಿಯೊಬ್ಬನು ನೌಕರಿಗೆ ಸೇರುವ ಮೊದಲೇ ಪಡೆಯುವ ತರಬೇತಿ ನೌಕರಿಪೂರ್ವ ತರಬೇತಿಯಾಗಿದೆ. ಒಂದು ದೃಷ್ಟಿಯಲ್ಲಿ ಶಾಲಾ ಕಾಲೇಜುಗಳಲ್ಲಿ ನೀಡುವ ಶಿಕ್ಷಣವು ನೌಕರಿಪೂರ್ವ ತರಬೇತಿಯಾಗಿದೆ. ನಿಖರವಾಗಿ ಹೇಳುವುದಾದರೆ ಕೆಲವು ವೃತ್ತಿನಿರತ ಸಂಸ್ಥೆಗಳು ವಿವಿಧ ಹುದ್ದೆಗಳಿಗೆ ಸ್ಪರ್ಧಿಸಲು ತರಬೇತಿ ನೀಡುತ್ತವೆ. ತಾಂತ್ರಿಕ ಶಾಲಾ ಕಾಲೇಜುಗಳಲ್ಲಿ ನೀಡುತ್ತಿರುವ ವೃತ್ತಿ ತರಬೇತಿಯ ಸ್ವರೂಪವನ್ನು ಇದು ಸೂಚಿಸುತ್ತದೆ. ಈ ಸಂಸ್ಥೆಗಳಿಂದ ಪಾಸಾದ ವಿದ್ಯಾರ್ಥಿಗಳಿಗೆ ನೌಕರಿ ಕೊಡಲಾಗುವುದು. ಉದಾ: ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಪದವೀಧರರು. ಈ ವಿಧಾನವು ಅಮೇರಿಕದಲ್ಲಿ ಹೆಚ್ಚು ಪ್ರಚಲಿತವಿದೆ. ಅಮೆರಿಕದ ಕೆಲವು ಶೈಕ್ಷಣಿಕ ಸಂಸ್ಥೆಗಳು ಸರ್ಕಾರಿ ಸೇವೆಗೆ ಪ್ರವೇಶಿಸಲು ಅಗತ್ಯವಾದಂತಹ ಶೈಕ್ಷಣಿಕ ಹಿನ್ನೆಲೆಯ ಬಗ್ಗೆ ವಿಶೇಷ ಶಿಕ್ಷಣವನ್ನು ನೀಡುತ್ತವೆ. ಆದ್ದರಿಂದ ಅಮೆರಿಕದಲ್ಲಿ ನೌಕರಿಪೂರ್ವ ತರಬೇತಿಗೆ ಆದ್ಯತೆ ಇದೆ. ಅಮೆರಿಕ ದೇಶವು ಇಂಟರ್ನ್‌ಶಿಪ್ ಹಾಗೂ ಅಪ್ರೆಂಟಿಸ್‌ಶಿಪ್ ರೂಪದಲ್ಲಿ ಆಡಳಿತಾತ್ಮಕ ಮತ್ತು ನಿರ್ವಹಣಾತ್ಮಕ ಸ್ಥಾನಗಳಿಗೆ ಅತ್ಯಂತ ವ್ಯಾಪಕವಾಗಿ ನೇಮಕಪೂರ್ವ ತರಬೇತಿ ನೀಡುವ ವ್ಯವಸ್ಥೆ ಹೊಂದಿದೆ.

**(ಆ) ನೌಕರಿ ಆರಂಭೋತ್ತರ ತರಬೇತಿ (ನೇಮಕೋತ್ತರ ತರಬೇತಿ):** ಹುದ್ದೆಗೆ ಆಯ್ಕೆಯಾದವರಿಗೆ ನೀಡುವ ತರಬೇತಿಯು ನೌಕರಿ ಆರಂಭೋತ್ತರ ತರಬೇತಿಯಾಗಿದೆ. ವಿವಿಧ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಅವರು ತಮ್ಮ ಹುದ್ದೆಗಳನ್ನು ಸ್ವೀಕರಿಸಿ, ಸ್ವತಂತ್ರ ಜವಾಬ್ದಾರಿಯನ್ನು ಪಡೆಯುವ ಮೊದಲು ತರಬೇತಿಯನ್ನು ಕೊಡಲಾಗುವುದು. ಈ ತರಬೇತಿಯ ಉದ್ದೇಶವು ಹೊಸ ಅಭ್ಯರ್ಥಿಗಳಿಗೆ ಹೆಚ್ಚಿನ ನೈಪುಣ್ಯ ಮತ್ತು ಕೌಶಲವನ್ನು ಒದಗಿಸುವುದಾಗಿದೆ. ಉದಾ: ಭಾರತದಲ್ಲಿ ಐ.ಎ.ಎಸ್, ಐ.ಪಿ.ಎಸ್ ಮುಂತಾದ ಅಖಿಲ ಭಾರತ ಸೇವೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಇಂತಹ ತರಬೇತಿಯನ್ನು ನೀಡಲಾಗುತ್ತದೆ. ಮೊದಲು ಸಂಬಂಧಪಟ್ಟ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಮೊದಲು ಸಂಬಂಧಪಟ್ಟ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಅನುಭವ ಪಡೆದ ನಂತರ ಸ್ವತಂತ್ರ ಹುದ್ದೆಯನ್ನು ನಿರ್ವಹಿಸಲು ಅವಕಾಶ ಮಾಡಿಕೊಡಲಾಗುವುದು.

Digitised by Bharatavani, CIIL

**(ಇ) ನೌಕರಿಯಲ್ಲಿ ತರಬೇತಿ:** ನೌಕರಿಯಲ್ಲಿನ ತರಬೇತಿಯು ಕೆಲವು ವರ್ಷಗಳವರೆಗೆ ಕಾರ್ಯನಿರ್ವಹಿಸಿದ ಅನುಭವಿ ಉದ್ಯೋಗಿಗಳ ದಕ್ಷತೆಯನ್ನು ಹೆಚ್ಚಿಸಲು ಮತ್ತು ಅವರು ಬಡ್ತಿಗೆ ಅರ್ಹರಾಗುವಂತೆ ಮಾಡಲು ನೀಡಲಾಗುವ ತರಬೇತಿಯನ್ನು ನೌಕರಿಯಲ್ಲಿನ ತರಬೇತಿಯೆಂದು ಹೇಳಬಹುದು. ನೌಕರರು ಪ್ರಸಕ್ತ ಹುದ್ದೆಯಲ್ಲಿರುವಾಗಲೇ ಈ ತರಬೇತಿಯನ್ನು ನೀಡಲಾಗುತ್ತದೆ. ನೌಕರಿಗೆ ಹೊಸ ವಿಚಾರಗಳನ್ನು ತುಂಬಲು ಮತ್ತು ಅವರು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಹೊಸ ನಿಯಮಗಳನ್ನು ಮತ್ತು ಹೊಸ ಕಾರ್ಯವಿಧಾನಗಳನ್ನು ಪರಿಚಯಿಸಲು ಈ ತರಬೇತಿಯನ್ನು ಕೊಡಲಾಗುವುದು. ಕಾರ್ಯಗಾರ, ವಿಚಾರಗೋಷ್ಠಿ ಮುಂತಾದವುಗಳ ಮೂಲಕ ಈ ತರಬೇತಿಯನ್ನು ನೀಡಲಾಗುವುದು. ಬದಲಾಗುವ ಪರಿಸರಕ್ಕೆ ಹೊಂದಿ ಕರ್ತವ್ಯಗಳನ್ನು ನಿರ್ವಹಿಸಲು ನೌಕರರಿಗೆ ಈ ತರಬೇತಿ ಸಹಾಯಕಾರಿಯಾಗಿದೆ. ಸಾಮಾನ್ಯವಾಗಿ ಕೇಂದ್ರೀಯ ತರಬೇತಿ ಶಾಲೆಯೊಂದಕ್ಕೆ ಕಳುಹಿಸಿ, ಅಲ್ಪಕಾಲಾವಧಿಯ ಪುನರ್ ವ್ಯಾಸಂಗದ ಅವಕಾಶವನ್ನು ಕಲ್ಪಸಲಾಗುತ್ತದೆ. ಕೆಲವೊಮ್ಮೆ ಸರ್ಕಾರದ ವೆಚ್ಚದಲ್ಲಿ ವಿದೇಶಗಳಿಗೆ ಕಳುಹಿಸಿ ಅಲ್ಲಿಯ ಆಡಳಿತ ವಿಧಾನಗಳನ್ನು ಅಭ್ಯಾಸಿಸಿ ಅರಿತುಕೊಳ್ಳುವ ಅವಕಾಶ ನೀಡಲಾಗುತ್ತದೆ. ನೌಕರಿಯಲ್ಲಿನ ತರಬೇತಿಯು ನಿರಂತರವಾದುದು. ಏಕೆಂದರೆ ಆಡಳಿತ ಕಾರ್ಯ ನಿರ್ವಹಿಸುವ ಉದ್ಯೋಗಿಯು ವಿವಿಧ ಪರಿಸ್ಥಿತಿಗಳಲ್ಲಿ ಉದ್ಭವಿಸುವ ವಿವಿಧ ಸಮಸ್ಯೆಗಳನ್ನು ಆ ಸಮಸ್ಯೆಯ ಸ್ವರೂಪಕ್ಕೆ ಅನುಗುಣವಾಗಿ ಪರಿಹರಿಸಲು ಪ್ರಯತ್ನಿಸುತ್ತಾನೆ. ಅವನ ಅನುದಿನದ ಅನುಭವವೂ ಹೊಸ ತರಬೇತಿಯಾಗಿರುತ್ತದೆ.

**(ಈ) ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ:** ತರಬೇತಿ ಅವಧಿಯನ್ನು ಆಧಾರವಾಗಿಟ್ಟುಕೊಂಡು ಈ ವಿಂಗಡಣೆಯನ್ನು ಮಾಡಲಾಗಿದೆ. ತರಬೇತಿಯು ನಿರಂತರ ಸ್ವರೂಪವಾಗಿದ್ದು ಅದರ ಅವಧಿಯು ಒಂದೆರಡು ವರ್ಷಕಾಲ ನೀಡಿದರೆ ಅದು ದೀರ್ಘಕಾಲಾವಧಿ ತರಬೇತಿಯಾಗುತ್ತದೆ. ಉದಾ: ಅಖಿಲ ಭಾರತ ಸೇವೆಗಳ ಮತ್ತು ಕರ್ನಾಟಕ ಆಡಳಿತ ಸೇವೆಗಳ ಪ್ರಥಮ ಮತ್ತು ದ್ವಿತೀಯ ವರ್ಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಎರಡು ವರ್ಷಗಳ ಕಾಲ ತರಬೇತಿ ನೀಡಲಾಗುತ್ತದೆ. ಇದು ದೀರ್ಘ ಕಾಲಾವದಿ ತರಬೇತಿಯಾಗಿದೆ. ತರಬೇತಿಯು ನಾಲ್ಕಾರು ವಾರಗಳ ಅಲ್ಪಕಾಲಾವಧಿ ತರಬೇತಿಯಾದರೆ, ಅದನ್ನು ಅಲ್ಪ ಕಾಲಾವಧಿ ತರಬೇತಿ ಎಂದು ಹೇಳಬಹುದು. ಉದಾ: ಲೋಕಸೇವಾ ಆಯೋಗದಿಂದ ಆಯ್ಕೆಯಾದ ವೈದ್ಯರುಗಳಿಗೆ ಆರು ವಾರಗಳಕಾಲದ ತರಬೇತಿ ನೀಡಲಾಗುತ್ತದೆ.

**(ಉ) ಇಲಾಖಾ ಮತ್ತು ಕೇಂದ್ರೀಯ ತರಬೇತಿ:** ತರಬೇತಿ ನೀಡುವವರು ಯಾರು ಎಂಬ ಅಂಶವನ್ನು ಆಧರಿಸಿ ಈ ವಿಂಗಡಣೆಯನ್ನು ಮಾಡಲಾಗಿದೆ. ತನ್ನ ಇಲಾಖೆಗೆ ನೇಮಕ ಹೊಂದುವ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಆ ಇಲಾಖೆಯೇ ಅಗತ್ಯ ಅನುಕೂಲಗಳನ್ನು ಮಾಡಿಕೊಂಡಿದ್ದು, ತರಬೇತಿ ನೀಡಿದರೆ ಅದನ್ನು ಇಲಾಖಾ ತರಬೇತಿ ಎಂದು ಹೇಳಬಹುದು. ಸಾಮಾನ್ಯವಾಗಿ ಇಲಾಖಾ ಹಿರಿಯ ಅನುಭವಿ ಅಧಿಕಾರಿಗಳು ತರಬೇತಿ ನೀಡುತ್ತಾರೆ. ಉದಾ: ಪೋಲೀಸರಿಗೆ ತರಬೇತಿ ನೀಡಲು ಪೋಲೀಸ್ ಇಲಾಖೆ ವ್ಯವಸ್ಥೆ ಮಾಡಿಕೊಂಡಿದೆ. ಚನ್ನಪಟ್ಟಣದಲ್ಲಿರುವ ಕರ್ನಾಟಕ ರಾಜ್ಯದ ಪೋಲೀಸ್ ತರಬೇತಿ ಶಾಲೆಯ ಅಧ್ಯಾಪಕ ವರ್ಗವು ಪೋಲೀಸ್ ಇಲಾಖೆಯ ವಿವಿಧ ಅಧಿಕಾರಿಗಳನ್ನು ಒಳಗೊಂಡಿದೆ. ಕೇಂದ್ರೀಯ ಸಂಸ್ಥೆಯೊಂದು ತರಬೇತಿ ನೀಡದರೆ ಅದನ್ನು ಕೇಂದ್ರೀಯ ತರಬೇತಿ ಎಂದು ಕರೆಯಲಾಗಿದೆ. ಅಂದರೆ ಕೇಂದ್ರೀಯ ಸಂಸ್ಥೆಯ ಜವಾಬ್ದಾರಿಯು ಕೇವಲ ತರಬೇತಿ ನೀಡುವುದೇ ಆಗಿದ್ದಾಗ,ಅ ಅದನ್ನು ಕೇಂದ್ರೀಯ ಎಂದು ಕರೆಯುತ್ತಾರೆ. ಉದಾ: ಮುಸ್ಸೋರಿಯಲ್ಲಿರುವ ಲಾಲ್‌ಬದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಶಾಲೆಯು ನೀಡುವ ತರಬೇತಿ ಮತ್ತು ಮೈಸೂರಿನಲ್ಲಿರುವ ಆಡಳಿತ ಶಾಲೆಯಲ್ಲಿ ನೀಡಲಾಗುವ ತರಬೇತಿಯು ಕೇಂದ್ರೀಯ ತರಬೇತಿಯಾಗಿದೆ.

**(ಊ) ಪರಿಣತ ತರಬೇತಿ ಮತ್ತು ಹಿನ್ನೆಲೆ ತರಬೇತಿ:** ತರಬೇತಿ ಉದ್ದೇಶವನ್ನು ಆಧರಿಸಿ, ಪರಿಣತ ಮತ್ತು ಹಿನ್ನೆಲೆ ತರಬೇತಿ ಎಂದು ವಿಂಗಡಿಸಲಾಗಿದೆ. ತರಬೇತಿಯ ಉದ್ದೇಶವು ಅಭ್ಯರ್ಥಿಯ ತಜ್ಞತೆಯನ್ನು, ಕಾರ್ಯಕೌಶಲವನ್ನು ಹೆಚ್ಚಿಸುವುದಾಗಿದ್ದರೆ ಅದನ್ನು ಪರಿಣತ ತರಬೇತಿ ಎಂದು ಕರೆಯಲಾಗುತ್ತದೆ. ಉದಾ: ಪ್ರೌಢಶಾಲೆಯ ಅಧ್ಯಾಪಕರಿಗೆ ಬಿ.ಇಡಿ. ಶಿಕ್ಷಣ ತರಬೇತಿ ಕಡ್ಡಾಯ ಮಾಡಲಾಗಿದೆ. ಇದರ ಉದ್ದೇಶವು ಅಧ್ಯಾಪಕರು ತಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಪಡೆದು ಪ್ರವಚನದ ಕೌಶಲವನ್ನು ಬೆಳೆಸುವುದು ಆಗಿದೆ. ಹಾಗೆಯೇ ಪೋಲೀಸ್ ಅಧಿಕಾರಿಗಳಿಗೆ ಅಪರಾಧಗಳ ತಡೆ ಹಾಗೂ ಅವುಗಳ ಪತ್ತೆ ಹಚ್ಚುವಿಕೆಯಲ್ಲಿ ವಿಶೇಷ ತರಬೇತಿ ನೀಡಲಾಗುವುದು. ತರಬೇತಿಯು ಕೆಲವು ಸಾಮಾನ್ಯ ವಿಷಯಗಳ ಬಗ್ಗೆ ತಿಳುವಳಿಕೆ ನೀಡುವುದಾದರೆ ಮತ್ತು ಆ ಜ್ಞಾನವು ಆತನ ಆಡಳಿತ ಕಾರ್ಯದ ಸ್ವರೂಪ ಮತ್ತು ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದಾದರೆ, ಅದನ್ನು ಹಿನ್ನೆಲೆ ತರಬೇತಿ ಎಂದು ಹೇಳಬಹುದು. ಈ ತರಬೇತಿಯ ಉದ್ದೇಶವು ಉದ್ಯೋಗಿಯ ಕಾರ್ಯದ ಸಾಮಾನ್ಯ ಹಿನ್ನೆಲೆಯನ್ನು ತಿಳಿಸುವುದಾಗಿದೆ. ಉದಾ: ಮಸ್ಸೋರಿಯ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಶಾಲೆಯಲ್ಲಿ ನೀಡಲಾಗುವ ತರಬೇತಿಯು ಹಿನ್ನೆಲೆ ತರಬೇತಿಯಾಗಿದೆ. ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯು ನೀಡುವುದು ಸಹ ಹಿನ್ನೆಲೆ ತರಬೇತಿಯಾಗಿದೆ.

**ತರಬೇತಿಯ ವಿಧಾನಗಳು:** ತರಬೇತಿಯ ವಿವಿಧ ಉದ್ದೇಶಗಳ ಸಾಧನೆಗಾಗಿ ತರಬೇತಿಯ ವಿವಿಧ ವಿಧಾನಗಳನ್ನು ಅನುಸರಿಸಲಾಗುವುದು. ತರಬೇತಿಯ ಉದ್ದೇಶಗಳಿಗೂ ಮತ್ತು ತರಬೇತಿ ನೀಡುವ ವಿಧಾನಗಳಗೂ ನೇರ ಸಂಬಂಧವಿದೆ. ತರಬೇತಿಯ ವಿಧಾನಗಳು ಬಹುಮಟ್ಟಿಗೆ ಸರ್ಕಾರದ ಆಡಳಿತಾತ್ಮಕ ನೀತಿಯನ್ನು ಅವಲಂಬಿಸಿದೆ. ಪ್ರಮುಖವಾಗಿ ನಾಲ್ಕು ತರಬೇತಿಯ ವಿಧಾನಗಳಿವೆ. (ಅ) ಅನುಭವದ ತರಬೇತಿ, (ಆ) ಬೋಧನಾ ತರಬೇತಿ, (ಇ) ಸಂವಹನದ ಮೂಲಕ ತರಬೇತಿ ಮತ್ತು (ಈ)

Digitised by Bharatavani, CIIL

ಸಮ್ಮೇಳನ ಅಥವಾ ವಿಚಾರಗೋಷ್ಠಿ ತರಬೇತಿ.

(ಅ) **ಅನುಭವದ ತರಬೇತಿ:** ಅನುಭವದ ತರಬೇತಿಯು ಕೆಲಸ ಮಾಡುತ್ತಾ ಕಲಿಯುವುದು. ನೌಕರನು ಯಾವುದೇ ಹುದ್ದೆಗೆ ನೇಮಕಗೊಂಡರೆ, ಕರ್ತವ್ಯ ನಿರ್ವಹಿಸುತ್ತಲೇ ದಿನ ಕಳೆದಂತೆ ಕಾಲಕ್ರಮೇಣ ಅನುಭವ ಪಡೆಯುವುದರ ಮೂಲಕ ತರಬೇತಿ ಪಡೆಯುವುದೇ ಅನುಭವದ ತರಬೇತಿಯಾಗಿದೆ. ಇಲಾಖೆಯ ನಾನಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಾ ಇಲಾಖೆಯ ಗುರಿ, ಉದ್ದೇಶಗಳನ್ನು ಅರಿಯುವ ಪ್ರಯತ್ನ ಇಲ್ಲಿರುವುದು. ತನ್ನ ಹಿರಿಯ ಅಧಿಕಾರಿಯ ಮಾರ್ಗದರ್ಶನದಲ್ಲಿ ಉದ್ಯೋಗಿಯು ಕೆಲಸ ಕಲಿತುಕೊಳ್ಳುತ್ತಾನೆ. ಈ ವಿಧಾನವು ಆಡಳಿತವು ಒಂದು ಕಲೆ ಮತ್ತು ಅನುಭವದಿಂದ ಕರಗತವಾಗುವ ಕಲೆ ಎಂಬ ಅಭಿಪ್ರಾಯ ಹೊಂದಿದೆ.

(ಆ) **ಬೋಧನಾ ತರಬೇತಿ:** ಬೋಧಿಸುವ ಅಥವಾ ಭಾಷಣದ ಮೂಲಕ ತರಬೇತಿ ಬಹಳ ಸಾಂಪ್ರದಾಯಿಕ ವಾದ ಒಂದು ಪದ್ಧತಿಯಾಗಿದೆ. ನೌಕರನ ಆಡಳಿತ ಕಾರ್ಯಗಳಿಗೆ, ಅವನ ಕ್ಷೇತ್ರದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಏರ್ಪಡಿಸುವ ಉಪನ್ಯಾಸಗಳು, ಚರ್ಚಾಗೋಷ್ಠಿ, ವಿಚಾರ ಸಂಕಿರಣಗಳು ಮುಂತಾದವುಗಳ ಮೂಲಕ ನೀಡುವ ತರಬೇತಿಯೇ ಬೋಧನೆಯ ಮೂಲಕ ಕೊಡುವ ತರಬೇತಿ ಆಗಿದೆ. ಇದರಿಂದ ನೌಕರರಿಗೆ ತಮ್ಮ ಕೆಲಸದ ವಿವಿಧ ಮುಖಗಳ ಪರಿಚಯವಾಗುವುದು. ವಿದ್ಯಾಸಂಸ್ಥೆ ಅಥವಾ ತರಬೇತಿ ಕೇಂದ್ರವೊಂದರಲ್ಲಿ ಶಿಕ್ಷಣವನ್ನು ಏರ್ಪಡಿಸಬಹುದು.

(ಇ) **ಸಂವಹನದ ಮೂಲಕ ತರಬೇತಿ:** ಸಂವಹನದ ಮೂಲಕ ತರಬೇತಿ ಎಂದರೆ ನೌಕರರು ನಿರ್ವಹಿಸಬೇಕಾದ ಆಡಳಿತಕಾರ್ಯಗಳ ಸ್ವರೂಪ, ಅದಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ಕಾನೂನುಗಳು ಹಾಗೂ ಆತನ ಸಂಸ್ಥೆಯ ರಚನೆ ಮತ್ತು ಉದ್ದೇಶಗಳ ಬಗ್ಗೆ ಸಂಪರ್ಕ ಸಾಧನಗಳು, ಕಛೇರಿಯ ಪ್ರಕಟಣೆಗಳು, ಪತ್ರಿಕೆಗಳು, ನಿಯತಕಾಲಿಕ ಪತ್ರಿಕೆಗಳು ಮತ್ತು ವಿಚಾರಪೂರಿತ ಪುಸ್ತಕಗಳ ಮೂಲಕ ತರಬೇತಿ ನೀಡುವುದಾಗಿದೆ. ಇಂತಹ ಸಂಪರ್ಕ ಸಾಧನಗಳ ಮೂಲಕ, ಉದ್ಯೋಗಿ ತಾನು ಕಾರ್ಯನಿರ್ವಹಿಸುವ ಇಲಾಖಾ ವ್ಯವಸ್ಥೆಯ ಬಗ್ಗೆ ಪಕ್ಷಿನೋಟ ಬೀರುವ ಮೂಲಕ ತನ್ನ ಹುದ್ದೆಯ ಕಾರ್ಯಗಳ ನಿರ್ವಹಣೆ ಕುರಿತಂತೆ ತರಬೇತಿ ಪಡೆಯಬಹುದು. ಕಛೇರಿ ಪ್ರಕಟಣೆಗಳಲ್ಲಿ, ಪತ್ರಿಕೆಗಳಲ್ಲಿ ಅಥವಾ ಕೈಪಿಡಿಯಲ್ಲಿ ನೌಕರನ ಹುದ್ದೆಗೆ ಸಂಬಂಧಪಟ್ಟ ನಿಯಮಗಳು, ಸೇವಾ ನಿಯಮಗಳು, ವೇತನ, ಭಡ್ತಿ, ನಿವೃತ್ತಿ ಮುಂತಾದವುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಮುದ್ರಿಸಲಾಗಿರುತ್ತದೆ. ಇವುಗಳನ್ನು ಉದ್ಯೋಗಿಗಳಿಗೆ ಹಂಚಲಾಗುವುದು. ಇವುಗಳನ್ನು ಓದಿ ತಮ್ಮ ಹುದ್ದೆಯ ಬಗ್ಗೆ ಸಮಗ್ರ ಮಾಹಿತಿ ಪಡೆಯಲು ಸಹಾಯಕಾರಿಯಾಗುವುದು.

(ಈ) **ಸಮ್ಮೇಳನ ಅಥವಾ ವಿಚಾರಗೋಷ್ಠಿ ತರಬೇತಿ:** ಈ ವಿಧಾನದಲ್ಲಿ ಒಂದು ಅಥವಾ ಹಲವಾರು ಇಲಾಖೆಯ ಉದ್ಯೋಗಿಗಳು ಸಮ್ಮೇಳನವೊಂದರಲ್ಲಿ ಅಥವಾ ವಿಚಾರ ಗೋಷ್ಠಿಯಲ್ಲಿ ಹಿರಿಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಭಾಗವಹಿಸುತ್ತಾರೆ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಇತರರ ಟಪ್ಪಣಿಗಳೊಂದಿಗೆ ತಮ್ಮ ಟಿಪ್ಪಣಿಗಳನ್ನು ಹೋಲಿಸಿ ನೋಡುತ್ತಾರೆ. ಹಿರಿಯ ಅಧಿಕಾರಿಯು ಕೇವಲ ಮಾರ್ಗದರ್ಶನ ನೀಡುತ್ತಾನೆ. ಚರ್ಚೆ ಅಡ್ಡದಾರಿ ಹಿಡಿದಾಗ ಮಧ್ಯೆ ಪ್ರವೇಶಿಸುತ್ತಾನೆ. ತರಬೇತಿಯು ಇದೇ ರೀತಿ ಇರಬೇಕು ಎಂದು ಹೇಳಲಾಗದು. ಆದರೆ ಮುಂದಾಲೋಚನೆಯಿಂದ ಒಡಗೂಡಿದ ವ್ಯವಸ್ಥಿತ ತರಬೇತಿಯು ಮೇಲಿನ ವಿವಿಧ ವಿಧಾನಗಳ ಉತ್ತಮ ಅಂಶಗಳನ್ನು ಒಳಗೊಂಡಿರುತ್ತದೆ. ತರಬೇತಿದಾರರು ಬುದ್ಧಿವಂತರೂ, ವಿಚಾರವಂತರೂ, ಸಾರ್ವಜನಿಕ ಆಡಳಿತದ ವಾಸ್ತವಿಕ ಸಮಸ್ಯೆಗಳನ್ನು ಅರಿತವರೂ ಆಗಿದ್ದು, ತರಬೇತಿ ನೀಡುವ ಕಾರ್ಯದಲ್ಲಿ ನಿಷ್ಣಾತರಾಗಿರಬೇಕು.

(ಉ) **ಸೂಕ್ಷ್ಮಗ್ರಾಹಿ ಪ್ರಾಯೋಗಶಾಲೆ ಅಥವಾ 'ಟಿ' ಗ್ರೂಪ್ ತರಬೇತಿ (Sensitivity or T-Group Training):** 'ಟಿ' ಗ್ರೂಪ್ (T-Group) ತರಬೇತಿಯು ಒಂದು ಕಲಿಕೆಯ ಪ್ರಕ್ರಿಯೆಯಾಗಿದೆ. ಇದನ್ನು ಅಮೇರಿಕಾದ ಮೆಸ್ಸಚೂಸೆಟ್‌ನ ತಾಂತ್ರಿಕ ಸಂಸ್ಥೆಯಲ್ಲಿ ಕುರ್ಟ್ ಲೆವಿನ್ (Kurt Lewin) ಎಂಬುವವರು 1940 ಮತ್ತು 1950ರ ದಶಕದಲ್ಲಿ ಆರಂಭಿಸಿದರು. ಗುಂಪು ಚರ್ಚೆಯ ಮೂಲಕ ವ್ಯಕ್ತಿಗಳ ನಡವಳಿಕೆಯ ಮೇಲೆ ಪ್ರಭಾವ ಬೀರುವುದು ಈ ತರಬೇತಿಯ ಮುಖ್ಯ ಉದ್ದೇಶವಾಗಿದೆ. ಗುಂಪು ಚರ್ಚೆಯಲ್ಲಿ ಭಾಗವಹಿಸುವ ಎಲ್ಲ ಸದಸ್ಯರಿಗೂ ಮುಕ್ತರಾಗಿ ಚರ್ಚೆ ಮಾಡಲು ಅವಕಾಶವಿದೆ. ಚರ್ಚೆಯಲ್ಲಿ ಭಾಗವಹಿಸುವವರನ್ನು ಉದ್ದೀಪನಗೊಳ್ಳುವಂತೆ ಮಾಡಲಾಗುತ್ತದೆ. ಒತ್ತಡದಲ್ಲಿಡಲಾಗುತ್ತದೆ. ಮತ್ತು ಪರಸ್ಪರ ವಿಚಾರಗಳ ಘರ್ಷಣೆಯುಂಟಾಗುವಂತೆ ಮಾಡಲಾಗುವುದು. ಈ ರೀತಿಯ ಚರ್ಚೆಯಲ್ಲಿ ಭಾಗವಹಿಸುವುದರಿಂದ ವ್ಯಕ್ತಿಯು ಮಾನಸಿಕವಾಗಿ ದೃಢನಾಗುತ್ತಾನೆ. ಶಾಂತ ಚಿತ್ತನಾಗಿ ಸಮಸ್ಯೆಗಳನ್ನು ಬಗೆಹರಿಸುವ ವಿಧಾನಗಳನ್ನು ಕಲಿಯುತ್ತಾನೆ ಮತ್ತ ತನ್ನನ್ನು ಇತರರು ಅರಿಯಲು ಪ್ರಯತ್ನಿಸುತ್ತಾನೆ. ಒಟ್ಟಿನಲ್ಲಿ ಇದೊಂದು ಮಾನಸಿಕ ತರಬೇತಿ ಕಾರ್ಯವಾದುದರಿಂದ ತರಬೇತಿ ಪಡೆಯುವವನಿಗೆ ಸಮಾಧಾನದಿಂದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಸೂಕ್ಷ್ಮಗ್ರಾಹಿ ತರಬೇತಿಯು ತರಬೇತು ಪಡೆಯುವವರು ಇತರರನ್ನು ಅರ್ಥ ಮಾಡಿಕೊಳ್ಳುವ, ಹೆಚ್ಚಿನ ಸ್ಥೈರಣೆ, ಇತರರೊಡನೆ ಸ್ಪಂದಿಸುವ, ಗುಂಪು ಪ್ರತಿಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವ, ಹೆಚ್ಚಿನ ನಂಬಿಕೆ ಮತು ಬೆಂಬಲ, ಇತರರ ಬಗ್ಗೆ ಕಾಳಜಿ ಮುಂತಾದ ಗುಣಗಳನ್ನು ಬೆಳೆಸಿಕೊಳ್ಳುವಲ್ಲಿ ಸಹಾಯ ಮಾಡುತ್ತದೆ. ಈ ತರಬೇತಿಯಲ್ಲಿ ತರಬೇತು ಪಡೆಯುವವರು ತಮ್ಮಲ್ಲಿರುವ ಸಾಮರ್ಥ್ಯ, ದೌರ್ಬಲ್ಯ, ಶೈಲಿಗಳು ಮತ್ತು ಅಂತರ ವೈಯಕ್ತಿಕ ಸಂಬಂಧಗಳನ್ನು ಕಂಡುಕೊಳ್ಳುತ್ತಾರೆ. ಭಾರತದಲ್ಲಿ ಟಿ–ಗ್ರೂಪ್ ತರಬೇತಿಯನ್ನು 1950ರ ದಶಕದ ಮಧ್ಯದಲ್ಲಿ ಪ್ರಾರಂಭಿಸಲಾಯಿತು.

(ಊ) **ಅನುಕರಣ ಪಾತ್ರನಿರ್ವಹಣೆ (Simulation Role**

Digitised by Bharatavani, CIIL

**Play):** ಈ ವಿಧಾನದಲ್ಲಿ ತರಬೇತಿ ಸಮಯದಲ್ಲಿ ಸಂಸ್ಥೆಯ ನೈಜಕಾರ್ಯ ನಡೆಯುವ ಪರಿಸ್ಥಿತಿಯನ್ನುಂಟುಮಾಡಿ, ತರಬೇತಿ ಪಡೆಯುವವರು ಪಾತ್ರಧಾರಿಗಳಾಗಿ ಕೆಲಸ ಮಾಡುತ್ತಾರೆ. ಉದಾ: ಒಬ್ಬ ತರಬೇತುದಾರ ಮೇಲ್ವಿಚಾರಕನಾಗಿ (Supervisor) ಪಾತ್ರ ವಹಿಸಿದರೆ, ಮತ್ತೊಬ್ಬ ಲೆಕ್ಕಾಧಿಕಾರಿಯಾಗಿ (Accountant) ಪಾತ್ರ ವಹಿಸುತ್ತಾನೆ. ಈ ರೀತಿಯಲ್ಲಿ ಪಾತ್ರ ನಿರ್ವಹಣೆಯಿಂದ ಅವರಿಗೆ ಸಮಸ್ಯೆಗಳ ಅರಿವುಂಟಾಗುವುದಲ್ಲದೆ, ತೀರ್ಮಾನಗಳನ್ನು ತೆಗೆದುಕೊಂಡು ಅದನ್ನು ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ. ಒಂದು ಸಂಸ್ಥೆಯಲ್ಲಿ ನಡೆಯುವ ಪೂರ್ಣ ಪ್ರಕ್ರಿಯೆ ಇಲ್ಲಿ ನಡೆಯುವುದರಿಂದ ತರಬೇತಿ ಪಡೆಯುವವರಿಗೆ ವಿಶಿಷ್ಟ ಸಮಸ್ಯೆಗಳ ಅರಿವುಂಟಾಗುತ್ತದೆ. ಈ ರೀತಿಯ ತರಬೇತಿಯಲ್ಲಿ ಸ್ವಯಂ ಪ್ರೇರಣೆಯಿಂದ ಕೆಲಸಗಾರರು ವಿವಿಧ ಪಾತ್ರಗಳನ್ನು ವಹಿಸುವುದರಿಂದ ಮತ್ತು ಮುಕ್ತರಾಗಿ ಸ್ಪಂದಿಸುವುದರಿಂದ ತಮ್ಮ ಜ್ಞಾನವನ್ನೂ ಹೆಚ್ಚಿಸಿಕೊಳ್ಳಲು ಸಹಾಯಕವಾಗುತ್ತದೆ. ಈ ತರಬೇತಿಯ ನ್ಯೂನತೆ ಎಂದರೆ ನೌಕರರು ಇಲ್ಲಿ ವಹಿಸಿದ ಪಾತ್ರ ಮತ್ತು ಸಂದರ್ಭಗಳು ಅವರ ದಿನನಿತ್ಯ ಕೆಲಸದಲ್ಲಿ ಬರದೇಹೋಗಬಹುದು. ಅಂತಹ ಸಂದರ್ಭಗಳಲ್ಲಿ ಈ ತರಬೇತಿ ಪ್ರಯೋಜನವಾಗುವುದಿಲ್ಲ.

**(ಖ) ಪ್ರಸಂಗ (ಪ್ರಕರಣ) ಅಧ್ಯಯನ (Case-study Method):** ಈ ವಿಧಾನದಲ್ಲಿ ಒಂದು ಸಮಸ್ಯೆಯನ್ನು ತೆಗೆದುಕೊಂಡು, ಅದರ ವಿಷಯವಾಗಿ ಪೂರ್ಣ ಚರ್ಚೆ ಮಾಡಲಾಗುವುದು. ಚರ್ಚೆ ಮಾಡುವಾಗ ಸಮಸ್ಯೆಯನ್ನು ವೈಯಕ್ತಿಕವಾಗಿ ನೋಡದೆ, ಉದ್ದೇಶಗಳನ್ನು ಮಾತ್ರ ಚರ್ಚಿಸಿ, ಆಗುಹೋಗುಗಳನ್ನು ವಿಮರ್ಶಿಸಿ, ಸಂಸ್ಥೆಯಲ್ಲಿ ಆ ರೀತಿಯ ಸಂರ್ಭ ಒದಗಿದಾಗ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಚರ್ಚಿಸಲಾಗುವುದು. ಒಂದು ಸಮಗ್ರ ವಿದ್ಯಮಾನದಲ್ಲಿ ಸರಿ ಉತ್ತರ ತಕ್ಷಣ ದೊರೆಯುವುದಿಲ್ಲ. ಅಂದರೆ ಆಳವಾದ ಯೋಚನೆ, ಇತರರ ಚಿಂತನೆಗಳ ವಿಮರ್ಶೆ ಮತ್ತು ಪರಿಸ್ಥಿತಿಯ ಅರಿವಿನಿಂದ ಸೂಕ್ತ ಪರಿಹಾರ ದೊರೆಯುತ್ತದೆ. ಆಗ ಇದೊಂದು ಉತ್ತಮ ತರಬೇತಿ ವಿಧಾನವಾಗುತ್ತದೆ.

**ತರಬೇತಿ ವಿಷಯಗಳು (Contents of Training):** ಅಧಿಕಾರಿಗಳಿಗೆ ನೀಡುವ ತರಬೇತಿಯು ಯಾವ ಮುಖ್ಯ ವಿಷಯಗಳನ್ನು ಹೊಂದಿರಬೇಕು ಎಂಬುದೂ ಮಹತ್ವದ ಪ್ರಶ್ನೆಯಾಗಿದೆ. ಅವರಿಗೆ ನೀಡುವ ತರಬೇತಿಯು ಅವರನ್ನು ದಕ್ಷ ಮತ್ತು ಸಮರ್ಥ ಆಡಳಿತಗಾರರನ್ನಾಗಿ ಮಾಡುವ ಉದ್ದೇಶವನ್ನು ಹೊಂದಿರುತ್ತದೆ. ಒಂದು ಕಡೆ ವಿಶಿಷ್ಟತೆಗೂ ಮತ್ತೊಂದೆಡೆ ವಿಶಾಲ ತಳಹದಿಯ ಶಿಕ್ಷಣಕ್ಕೂ ಮಹತ್ವ ಕೊಡಬೇಕಾಗುತ್ತದೆ. ಪ್ರಥಮವಾಗಿ ಎಲ್ಲಾ ಅಧಿಕಾರಿಗಳಿಗೂ ಸಾಮಾಜಿಕ ಶಾಸ್ತ್ರಗಳಲ್ಲಿ (Social Sciences) ಶಿಕ್ಷಣ ನೀಡುವ ವ್ಯವಸ್ಥೆಯನ್ನು ಮಾಡಬೇಕು. ಸಾಮಾಜಿಕ ಶಾಸ್ತ್ರಗಳಿಂದ ಅವರಿಗೆ ತಾವಿರುವ ಸಮಾಜ ಮತ್ತು ಅದರ ಸಮಸ್ಯೆಗಳ ಬಗ್ಗೆ ಅರಿವುಂಟಾಗುತ್ತದೆ. ತನ್ನ ಸಮಾಜದ ಸಮಸ್ಯೆಗಳನ್ನು ತಿಳಿದುಕೊಳ್ಳದೆ ಅವನು ಸಮರ್ಥ ಆಡಳಿತಗಾರನಾಗುವುದು ಅಸಾಧ್ಯವಾಗಿದೆ. ಉದಾಹರಣೆಗೆ, ಭಾರತದ ಇತಿಹಾಸ, ಸಂಸ್ಕೃತಿ, ಸಂಪ್ರದಾಯಗಳು, ರೂಢಿಗಳು, ನಂಬಿಕೆಗಳು ಮುಂತಾದವುಗಳ ಬಗ್ಗೆ ಶಿಕ್ಷಣ ಪಡೆಯದವನು ಭಾರತದಲ್ಲಿ ಉತ್ತಮ ಅಧಿಕಾರಯಾಗಲಾರನು. ಅಧಿಕಾರಿಗಳಿಗೆ ರಾಷ್ಟ್ರದ ಹಲವು ಭಾಷೆಗಳ ಪರಿಚಯವಿರಬೇಕು. ಆದುದರಿಂದ ಸಾಮಾಜಿಕ ಶಾಸ್ತ್ರಗಳು ಮತ್ತು ಸಾಹಿತ್ಯ ತರಬೇತಿ ನೀಡುವ ವಿಷಯಗಳಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದಿರಬೇಕು.

ಅಧಿಕಾರಿಗಳಿಗೆ ಸಾರ್ವಜನಿಕ ಆಡಳಿತದ ಬಗ್ಗೆ ಆಳವಾದ ಶಿಕ್ಷಣ ನೀಡುವುದು ಅಗತ್ಯವಾಗಿದೆ. ಸರ್ಕಾರದ ಧೋರಣೆಗಳು, ನೀತಿ ನಿಯಮಗಳು, ವಿವಿಧ ಇಲಾಖೆಗಳು, ಅವುಗಳ ಸಂಘಟನೆ, ವ್ಯವಸ್ಥಾಪನೆ ಮುಂತಾದವುಗಳ ಬಗ್ಗೆ ಅವರಿಗೆ ಸಾಕಷ್ಟು ಜ್ಞಾನವಿರಬೇಕು. ಅವರಿಗೆ ಸಾರ್ವಜನಿಕ ಆಡಳಿತದ ತತ್ವಗಳು ಮತ್ತು ಧ್ಯೇಯ, ಗುರಿಗಳ ಬಗ್ಗೆ ಶಿಕ್ಷಣ ನೀಡುವುದು ಅತ್ಯಾವಶ್ಯಕವಾಗಿದೆ. ಯಾವುದೇ ಇಲಾಖೆಗೆ ವರ್ಗ ಮಾಡಿದರೂ ಅದರ ನೀತಿ, ಉದ್ದೇಶ, ಸಂಘಟನೆ ಮುಂತಾದವುಗಳನ್ನು ಸುಲಭವಾಗಿ ಅರಿತುಕೊಳ್ಳುವುದು ಇಂತಹ ಶಿಕ್ಷಣದಿಂದ ಸಾಧ್ಯವಾಗುತ್ತದೆ. ಅಧಿಕಾರಿಗಳನ್ನು ಯಾವುದಾದರೊಂದು ಇಲಾಖೆಗೆ ನೇಮಕ ಮಾಡಿದಾಗ ಆ ಇಲಾಖೆಯ ಕೆಲಸಕಾರ್ಯಗಳ ಬಗ್ಗೆ ವಿವರವಾದ ಶಿಕ್ಷಣ ನೀಡಬೇಕು. ಉದಾಹರಣೆಗೆ, ವಿದೇಶಾಂಗ ಖಾತೆಗೆ ನೇಮಕವಾದವರಿಗೆ ವಿದೇಶಾಂಗ ನೀತಿ ಮತ್ತು ವ್ಯವಹಾರಗಳ ಬಗ್ಗೆ ಹೆಚ್ಚಿನ ಶಿಕ್ಷಣ ನೀಡಬೇಕಾಗುತ್ತದೆ.

ಮೇಲ್ಕಂಡ ವಿಷಯಗಳ ಬಗ್ಗೆ ಯಾರು ಶಿಕ್ಷಣ ನೀಡಬೇಕು ಎಂಬುದನ್ನು ನಿರ್ಧರಿಸುವುದೂ ಮುಖ್ಯವಾಗಿದೆ. ಬೋಧನೆಯ ಕಾರ್ಯವನ್ನು ಆಡಳಿತಾಧಿಕಾರಿಗಳಿಗೆ ವಹಿಸಬೇಕೇ ಅಥವಾ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರಿಗೆ ವಹಿಸಬೇಕೇ ಎಂಬ ಸಮಸ್ಯೆ ಏಳುತ್ತದೆ. ಸಾಮಾಜಿಕ ಶಾಸ್ತ್ರಗಳು ಮತ್ತು ಸಾಹಿತ್ಯದ ಬಗ್ಗೆ ಆಡಳಿತಾಧಿಕಾರಿಗಳು ಶಿಕ್ಷಣ ನೀಡುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದುದರಿಂದ ಈ ವಿಷಯಗಳ ಬೋಧನೆಯ ಕಾರ್ಯವನ್ನು ಪ್ರಾಧ್ಯಾಪಕರುಗಳಿಗೆ ವಹಿಸುವುದೇ ಉತ್ತಮವಾಗುತ್ತದೆ. ಆಡಳಿತದ ಬಗ್ಗೆ ಶಿಕ್ಷಣ ನೀಡುವ ಕಾರ್ಯವನ್ನು ಹಿರಿಯ ಆಡಳಿತಾಧಿಕಾರಿಗಳಿಗೆ ವಹಿಸುವುದು ಸೂಕ್ತವಾದುದು. ಆದುದರಿಂದ ತರಬೇತಿ ನೀಡಲು ಪ್ರಧ್ಯಾಪಕರನ್ನೂ ಮತ್ತು ಹಿರಿಯ ಆಡಳಿತಾಧಿಕಾರಿಗಳನ್ನೂ ನೇಮಿಸುವುದು ಒಳ್ಳೆಯದು.

**ಭಾರತದಲ್ಲಿ ತರಬೇತಿ ವ್ಯವಸ್ಥೆ:** ಸ್ವಾತಂತ್ರ್ಯಪೂರ್ವದಲ್ಲಿ ಭಾರತದಲ್ಲಿ ಆಡಳಿತಸೇವಾ ವರ್ಗದ ನೌಕರರಿಗೆ ಯಾವುದೇ ವಿಧವಾದ ಔಪಚಾರಿಕ ಹಾಗೂ ವ್ಯವಸ್ಥಿತ ರೀತಿಯ ತರಬೇತಿಯನ್ನು ನೀಡುವ ಪದ್ಧತಿ ಇರಲಿಲ್ಲ. ಅನೌಪಚಾರಿಕವಾಗಿಯೇ ಕೆಲಸ ಮಾಡುತ್ತಲೇ ತರಬೇತಿಯನ್ನು ಪಡೆಯುತ್ತಿದ್ದರು. 'ಮಾಡುತ್ತಾಕಲಿ' (learn while doing) ಎಂಬುದು ಸಾಮಾನ್ಯವಾಗಿ ಅನುಸರಣೆಯಲ್ಲಿದ್ದ ತರಬೇತಿ ವಿಧಾನವಾಗಿತ್ತು. ಸ್ವಾತಂತ್ರ್ಯಾನಂತರ ವ್ಯವಸ್ಥಿತ ರೀತಿಯಲ್ಲಿ ತರಬೇತಿಯು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಸಾರ್ವಜನಿಕ ನೌಕರರಿಗೆ ಸೂಕ್ತರೀತಿಯ ತರಬೇತಿಯನ್ನು ನೀಡಿದರೆ ಅವರಲ್ಲಿ ದಕ್ಷತೆ ಹೆಚ್ಚುವುದಲ್ಲದೆ, ಅವರಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು

Digitised by Bharatavani, CIIL

ವೃದ್ಧಿಗೊಳಿಸಲು ಸಾಧ್ಯ ಎಂಬುದನ್ನು ಕಂಡುಕೊಳ್ಳಲಾಯಿತು.

ಸಿಬ್ಬಂದಿ ವರ್ಗಕ್ಕೆ ತರಬೇತಿ ಅಗತ್ಯ ಎಂಬುದನ್ನು ಮನಗಂಡ ಮೇಲೆ ವಿವಿಧ ಹುದ್ದೆಗಳಿಗೆ ವಿವಿಧ ರೀತಿಯ ತರಬೇತಿಯನ್ನು ನೀಡಲು ಅನೇಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು (The Department of Personnel and Training) ಅಖಿಲ ಭಾರತೀಯ ಹಾಗೂ ಕೇಂದ್ರ ನೌಕರರಿಗೆ ಕೊಡಬೇಕಾದ ತರಬೇತಿಗೆ ಅಗತ್ಯವಾದ ವಸ್ತು ಸಾಮಗ್ರಿಗಳು, ತರಬೇತಿಗೆ ನೀಡಬೇಕಾದ ಅತ್ಯಾಧುನಿಕ ವಿಧಾನಗಳು, ತರಬೇತಿಗೆ ಬೇಕಾದ ಅನುಕೂಲತೆಗಳು ಮುಂತಾದುವುಗಳನ್ನು ಸಿದ್ಧಗೊಳಿಸುವ ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆ.

ವಿವಿಧ ಆಡಳಿತ ಸಿಬ್ಬಂದಿಗೆ ತರಬೇತಿ ನೀಡಲು ಭಾರತದ ಕೇಂದ್ರ ಸರಕಾರ ಈ ಕೆಳಗಿನ ಕೆಲವು ಪ್ರಮುಖ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದೆ:

1. ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತಾತ್ಮಕ ವಿದ್ಯಾಪೀಠ ಮಸ್ಸೋರಿಯಲ್ಲಿದೆ. ಅಖಿಲ ಭಾರತೀಯ ಸೇವಾವರ್ಗದವರಿಗೂ ಮತ್ತು ಕೆಲವು ಕೇಂದ್ರ ಸೇವಾ ವರ್ಗದವರಿಗೂ ಇಲ್ಲಿ ತರಬೇತಿ ನೀಡಲಾಗುವುದು.

2. ರಾಷ್ಟ್ರೀಯ ಪೋಲೀಸ್ ವಿದ್ಯಾಪೀಠ, ಹೈದರಾಬಾದ್ – ಇಲ್ಲಿ ಭಾರತೀಯ ಪೋಲೀಸ್ ಸೇವೆಗೆ ಆಯ್ಕೆಯಾದವರಿಗೆ ವೃತ್ತಿಪರ ತರಬೇತಿಯನ್ನು ನೀಡಲಾಗುತ್ತದೆ.

3. ಆಡಳಿತಾತ್ಮಕ ಸಿಬ್ಬಂದಿ ಕಾಲೇಜು, ಹೈದರಾಬಾದ್ (1957) – ಇಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿರುವ ಹಿರಿಯ ಆಡಳಿತಗಾರರಿಗೂ, ಸಾರ್ವಜನಿಕ ಹಾಗೂ ಖಾಸಗಿ ಕೈಗಾರಿಕೆಗಳ ಉನ್ನತ ಅನುಭವಸ್ಥ ಮುಖ್ಯಸ್ಥರಿಗೂ ಉನ್ನತಮಟ್ಟದ ತರಬೇತಿ ನೀಡಲಾಗುವುದು.

4. ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ (ಭಾಸಾಆಸಂ) 1954 – ಇಲ್ಲಿ ಸಂಶೋಧನಾ ಕಾರ್ಯಗಳು, ಕೇಂದ್ರ, ರಾಜ್ಯಗಳ ಹಿರಿಯ ಮತ್ತು ಮಧ್ಯಮ ಹಂತದ ನೌಕರರಿಗೆ ಅಲ್ಪಾವಧಿ ತರಬೇತಿ ನೀಡಲಾಗುತ್ತದೆ.

**ಉತ್ತಮ ತರಬೇತಿ ಕಾರ್ಯಕ್ರಮದ ಪೂರ್ವಾವಶ್ಯಕತೆಗಳು:**

1. ತರಬೇತಿ ಕಾರ್ಯಕ್ರಮವನ್ನು ರೂಪಿಸುವಾಗ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಪ್ರತಿ ನೌಕರರ ಭಿನ್ನ ಸಾಮರ್ಥ್ಯ, ಕಲಿಕೆ ಸಾಮರ್ಥ್ಯ, ಆಸಕ್ತಿ, ಸೃಜನಶೀಲತೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

2. ತರಬೇತಿ ಪರಿಣಾಮಕಾರಿಯಾಗಬೇಕಾದರೆ ತರಬೇತಿ ಕಾರ್ಯಕ್ರಮವನ್ನು ರೂಪಿಸುವಾಗ ಅಧಿಕಾರಿಗಳ/ನೌಕರರ ತರಬೇತಿಯ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯಕ್ರಮವನ್ನು ರೂಪಿಸಬೇಕು.

3. ತರಬೇತಿ ಯಶಸ್ವಿಯಾಗಬೇಕಾದರೆ, ತರಬೇತಿ ಪಡೆಯುವವರಿಗೆ ಹಣಕಾಸು ಮತ್ತು ಇತರ ಸೌಲಭ್ಯಗಳನ್ನು ನೀಡಬೇಕು. ಇಲ್ಲದಿದ್ದರೆ ತರಬೇತಿಯನ್ನು ಅವರು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ.

4. ಮೇಲಧಿಕಾರಿಗಳು ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ಬೆಂಬಲಿಸಬೇಕು. ಅಂದರೆ ಮೇಲಧಿಕಾರಿಗಳು ತರಬೇತಿ ಕಾರ್ಯಕ್ರಮದಲ್ಲಿ ಉದಾಸೀನರಾಗಿದ್ದರೆ ಅಥವಾ ನಿರಾಸಕ್ತಿ ಹೊಂದಿದರೆ, ಅಧೀನ ನೌಕರರು ತರಬೇತಿಯಲ್ಲಿ ಆಸಕ್ತಿ ವಹಿಸುವಂತೆ ಮಾಡಲು ಕಷ್ಟವಾಗುತ್ತದೆ.

5. ಸಿದ್ಧಾಂತ ಮತ್ತು ಆಚರಣೆ ಎರಡನ್ನೂ ಕಲಿಸಲು ಏರ್ಪಾಡು ಮಾಡಬೇಕು. ಬರಿ ಸಿದ್ಧಾಂತವನ್ನು ಬೋಧಿಸಿ ಪಡೆದ ಜ್ಞಾನವನ್ನು ಆಚರಣೆಗೆ ತರಲು ಅವಕಾಶ ನೀಡದಿದ್ದರೆ ತರಬೇತಿ ಪಡೆಯುವವರು ತರಬೇತಿಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ.

6. ತರಬೇತಿಗೋಸ್ಕರ ತರಬೇತಿ ನೀಡದೆ, ಫಲಿತಾಂಶವನ್ನು ಗಮನದಲ್ಲಿರಿಸಿಕೊಂಡು ತರಬೇತಿ ಕಾರ್ಯಕ್ರಮವನ್ನು ರೂಪಿಸಬೇಕು. ಅಂದರೆ ತರಬೇತಿಯಿಂದ ಉತ್ತಮ ಫಲಿತಾಂಶ ದೊರೆಯಬೇಕು.

ತರಬೇತಿ ವಿಧಾನ ಅಥವಾ ತಂತ್ರಗಳ ಬಗ್ಗೆ ಆಡಳಿತ ಸುಧಾರಣಾ ಆಯೋಗದ ಅಭಿಪ್ರಾಯಗಳು ಹೀಗಿವೆ: ಯಾವುದೇ ತರಬೇತಿ ಕಾರ್ಯಕ್ರಮದ ಪರಿಣಾಮತ್ವವು ತರಬೇತಿಯ ಉತ್ತಮ ವಿಭಾಗಗಳು ಹಾಗೂ ತಂತ್ರಗಳನ್ನು ಅವಲಂಬಿಸಿರುತ್ತದೆ. ಬೋಧನಾ ವಿಧಾನ ತರಬೇತಿಯು ಜ್ಞಾನವೃದ್ಧಿಗೆ ಅತ್ಯಂತ ಸೂಕ್ತವಾದುದು. ಗುಂಪು ಚರ್ಚೆ (Group discussion), ಕೂಟಗಳು (Syndicates), ಪ್ರಕರಣ ಅಧ್ಯಯನ (Case Study)ದ ವಿಧಾನಗಳು ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹರಿಸುವ ಹಾಗೂ ತೀರ್ಮಾನ ಕೈಗೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಲು ಸೂಕ್ತವಾಗಿವೆ.

'ಗುಂಪು ಚರ್ಚೆ' ಹಾಗೂ 'ಕೂಟ' ವಿಧಾನಗಳ ಬಳಕೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಲಿವೆ. ಸೆಮಿನಾರ್ ಮತ್ತು ಸಮ್ಮೇಳನಗಳ ಮೂಲಕ ತರಬೇತಿ ನೀಡುವ ವಿಧಾನ ಹೆಚ್ಚಾಗಿ ಬಳಸಲ್ಪಡುತ್ತಿವೆ. ಕೂಟ ವಿಧಾನದ ತರಬೇತಿಯು ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ತರಬೇತಿ ಹೊಂದುವ ಅಧಿಕಾರಿಗಳು/ಉದ್ಯೋಗಿಗಳು ಈ ಮೊದಲೇ ಕಾರ್ಯತಃ ಆಡಳಿತ ಅನುಭವ ಹೊಂದಿದ್ದರೆ ಸಾಧ್ಯ. ಪ್ರಕರಣ ಅಧ್ಯಯನ ಆಡಳಿತಾತ್ಮಕ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ಜ್ಞಾನ, ತಿಳುವಳಿಕೆ ಮತ್ತು ಸಮಸ್ಯೆ ಪರಿಹರಿಸಲು ಅಗತ್ಯವಾದ ಕೌಶಲವನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿದೆ. ಆದರೆ ಈ ವಿಧಾನವನ್ನು ಸಾರ್ವಜನಿಕ ಸೇವಾ ವರ್ಗದವರ ತರಬೇತಿ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಬಳಸುತ್ತಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಆಗಾಗ್ಗೆ ಇದರ ಬಳಕೆ ಕಂಡುಬಂದರೂ ಅವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಯತ್ನಗಳು ನಡೆದಿಲ್ಲವೆಂದು ಆಡಳಿತ ಸುಧಾರಣಾ ಆಯೋಗ ಹೇಳಿದೆ.

**–ಡಾ. ನರಸಿಂಹ ಮೂರ್ತಿ ಆರ್.**

Digitised by Bharatavani, CIIL

## ಸಿಂಧುತ್ವ

ಶಿಕ್ಷಕರು ವಿದ್ಯಾರ್ಥಿಗಳ ವಿವಿಧ ವರ್ತನಾ ಅಂಶಗಳನ್ನು ಮೌಲ್ಯಮಾಪನ ಮಾಡಲು ವಿವಿಧ ಸಾಧನಗಳನ್ನು ಅಥವಾ ತಂತ್ರಗಳನ್ನು ಬಳಸುತ್ತಾರೆ. ಉದಾಹರಣೆಗೆ ವಿದ್ಯಾರ್ಥಿಗಳ ಸಾಧನಾ ಮಟ್ಟವನ್ನು ಅಳತೆ ಮಾಡಲು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಪರೀಕ್ಷೆಯನ್ನು ಉಪಯೋಗಿಸಬೇಕು. ಕಲಿಕಾ ದೋಷಗಳನ್ನು ಪತ್ತೆ ಹಚ್ಚಲು ನೈದಾನಿಕ ಪರೀಕ್ಷೆಗಳನ್ನು ಮಾಡಬೇಕು. ವಿದ್ಯಾರ್ಥಿಗಳ ಮುಂದಿನ ಸಾಧನೆಗಳನ್ನು ತಿಳಿಯಲು ಅಭಿಕ್ಷಮತೆ ಪರೀಕ್ಷೆಗಳು ಇತ್ಯಾದಿಗಳನ್ನು ನಡೆಸಬೇಕಾಗುತ್ತದೆ.

ವಿದ್ಯಾರ್ಥಿಗಳ ವರ್ತನೆಯನ್ನು ಮೌಲ್ಯಮಾಪನ ಮಾಡಲು ಶಿಕ್ಷಕರು ಸೂಕ್ತ ಸಾಧನಗಳನ್ನು/ತಂತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಕಿರುಪರೀಕ್ಷೆ ಅಥವಾ ಪರೀಕ್ಷೆಗಳನ್ನು ನಡೆಸುವ ಪ್ರಕ್ರಿಯೆ ಒಂದು ವ್ಯವಸ್ಥಿತ ಕ್ರಮವಾಗಿದೆ. ಇದನ್ನು ವ್ಯವಸ್ಥಿತವಾಗಿ ನಡೆಸಬೇಕು. ಶಿಕ್ಷಕರು ಸಮರ್ಪಕವಾದ ಸಾಧನಗಳನ್ನು/ತಂತ್ರಗಳನ್ನು ಆಯ್ಕೆ ಮಾಡಿಕೊಳ್ಳದಿದ್ದರೆ ಅಂತಹ ಪರೀಕ್ಷೆಗಳು/ತಂತ್ರಗಳು ತಪ್ಪು ಫಲಿತಾಂಶಗಳನ್ನು ನೀಡುವುದಲ್ಲದೆ, ಪರೀಕ್ಷೆಯ ಫಲಿತಾಂಶದ ವ್ಯಾಖ್ಯಾನವು ಸಹ ತಪ್ಪು ತೀರ್ಮಾನಗಳಿಗೆ ಕಾರಣವಾಗುತ್ತದೆ. ಇದಕ್ಕಾಗಿ ಶಿಕ್ಷಕರು ಅಳತೆ ಸಾಧನದ ಗುಣಲಕ್ಷಣಗಳನ್ನು ತಿಳಿದಿರಬೇಕು. ಪ್ರೊ. ರೋಸ್‌ರವರ ಪ್ರಕಾರ ಸಾಮಾನ್ಯವಾಗಿ ತರಗತಿಯಲ್ಲಿ ಅನೌಪಚಾರಿಕವಾಗಿ ಶಿಕ್ಷಕನು ನಡೆಸುವ ಪರೀಕ್ಷೆಯು ಸಹ ಮಾನಕೀಕೃತ ಪರೀಕ್ಷಣಕ್ಕಿರುವ ಎಲ್ಲಾ ಗುಣಲಕ್ಷಣಗಳನ್ನು ಹೊಂದಿರಬೇಕು. ಹಾಗಾದರೆ ಶಿಕ್ಷಕರು ಒಂದು ಉತ್ತಮ ಅಳತೆ ಮಾಪಕದ ಗುಣಲಕ್ಷಣಗಳನ್ನು ತಿಳಿದಿರಲೇಬೇಕೆಂದಾಯಿತು. ಉತ್ತಮ ಅಳತೆ ಮಾಪಕ (ಸಾಧನ) ಅವಶ್ಯಕವಾಗಿ ಕೆಲವು ಗುಣಲಕ್ಷಣಗಳನ್ನು ಹೊಂದಿರಬೇಕು. ಅವುಗಳೆಂದರೆ ಸಿಂಧುತ್ವ, ವಿಶ್ವಸನೀಯತೆ, ವಸ್ತುನಿಷ್ಠತೆ, ವಿಭೇಧೀಕರಣ ಶಕ್ತಿ ಮತ್ತು ಔಪಯೋಗಿಕತೆ (ಪ್ರಾಯೋಗಿಕತೆ).

**ಸಿಂಧುತ್ವ:** ಸಿಂಧುತ್ವ(Validity) ಅಳತೆ ಮಾಪನಿಯ ಒಂದು ಮುಖ್ಯ ಲಕ್ಷಣವಾಗಿದೆ. ಸಿಂಧುತ್ವ ಎಂದರೆ ಪರೀಕ್ಷಣವನ್ನು ಏನನ್ನು (ಯಾವ ಅಂಶಗಳನ್ನು) ಅಳತೆ ಮಾಡಲು ರಚಿಸಲಾಗಿದೆಯೋ ಅದನ್ನೇ ಅಳತೆ ಮಾಡಬೇಕು. ಇದು ಪರೀಕ್ಷಣದ ಸತ್ಯತೆಗೆ ಸಂಬಂಧಿಸಿರುತ್ತದೆ. ಉದಾಹರಣೆಗೆ ವಿಜ್ಞಾನದ ಸಾಧನಾ ಪರೀಕ್ಷೆ ವಿಜ್ಞಾನದಲ್ಲಿನ ವಿದ್ಯಾರ್ಥಿಗಳ ಸಾಧನೆಯನ್ನು ಮಾತ್ರ ಅಳತೆ ಮಾಡುವಂತಿರಬೇಕು. ವಿಜ್ಞಾನದ ಎಲ್ಲಾ ಸಾಧನೆಯನ್ನು ಅಳತೆ ಮಾಡಬೇಕು. ಆದರೆ ವಿಜ್ಞಾನವನ್ನು ಬಿಟ್ಟು ಬೇರೆ ವಿಷಯಗಳ ಸಾಧನೆಯನ್ನು ಅಳತೆ ಮಾಡುವಂತಿಲ್ಲ.

ಲಿಂಡ್‌ಕ್ವಿಸ್ಟ್‌ರವರು ಸಿಂಧುತ್ವವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ 'ಒಂದು ಪರೀಕ್ಷಣ ಸಿಂಧುತ್ವ (ಸಮಂಜಸತೆ)ವನ್ನು ಹೊಂದಿದ್ದರೆ ಅದನ್ನು ಯಾವ ಅಂಶಗಳನ್ನು ಅಳತೆ ಮಾಡಲು ರಚಿಸಲಾಗಿದೆಯೋ ಆ ಅಂಶಗಳನ್ನು ಕರಾರುವಾಕ್ಕಾಗಿ ಅಳತೆ ಮಾಡಬೇಕು.'

ಗೇಟ್ಸ್ ಪ್ರಕಾರ ಒಂದು ಪರೀಕ್ಷಣವು ನಿಜವಾದ ಮತ್ತು ಕರಾರುವಾಕ್ಕಾಗಿ ನಿರ್ದಿಷ್ಟ ಅಂಶಗಳನ್ನು ಅಳತೆ ಮಾಡುವ ಸಾಮರ್ಥ್ಯ ಅಥವಾ ಗುಣಗಳನ್ನು ಹೊಂದಿದ್ದರೆ ಅದನ್ನು ಸಿಂಧುತ್ವ ಎನ್ನುವರು.

ಬೋರಿಂಗ್ ಅವರ ವಾಕ್ಯಗಳಲ್ಲಿ "ಪರೀಕ್ಷಣವನ್ನು ಯಾವುದನ್ನು ಅಳತೆ ಮಾಡಲು ರಚಿಸಲಾಗಿದೆಯೋ ಅಂತಹ ಅಂಶಗಳನ್ನು ಅದು ನಿಜವಾಗಿ ಅಳತೆ ಮಾಡುವುದರಲ್ಲಿ ಸಫಲವಾದರೆ ಅಂತಹ ಪರೀಕ್ಷಣವು ಸಿಂಧುತ್ವ ಹೊಂದಿದೆ' ಎಂದು ಹೇಳಬಹುದು".

**ಸಿಂಧುತ್ವದ ಸ್ವರೂಪ:**

ಅಳತೆ ಮತ್ತು ಮೌಲ್ಯಮಾಪನ ಪದಗಳ ಜೊತೆ ಸಿಂಧುತ್ವ ಎಂಬ ಪದವನ್ನು ನಾವು ಬಳಸುವಾಗ ಅವುಗಳ ನಡುವಿನ ಸಂಬಂಧವನ್ನು ತಿಳಿಯಬೇಕು.

1) ಸಿಂಧುತ್ವವು ಪರೀಕ್ಷಣದ ಫಲಿತಾಂಶ ಅಥವಾ ಮೌಲ್ಯಮಾಪನದ ಪರೀಕ್ಷಣಕ್ಕೆ ಸಂಬಂಧಿಸಿರುತ್ತದೆ. ಆದರೆ ಇದು ಪರೀಕ್ಷಾ ಕ್ರಿಯೆಗೆ ಸಂಬಂಧಿಸಿರುವುದಿಲ್ಲ. ಅಂದರೆ ನಾವು ಪರೀಕ್ಷಣವನ್ನು ಉಪಯೋಗಿಸಿ ಪರೀಕ್ಷೆ ನಡೆಸಿದ ನಂತರ ಬಂದ ಫಲಿತಾಂಶಗಳಿಗೆ ಸಿಂಧುತ್ವವನ್ನು ಅನ್ವಯಿಸುತ್ತೇವೆ. ಅಂದರೆ ಸಿಂಧುತ್ವ ಫಲಿತಾಂಶಗಳಿಗೆ ಸಂಬಂಧಿಸಿದ್ದು, ಇದು ಪರೀಕ್ಷಾ ಕ್ರಿಯೆಗೆ ಸಂಬಂಧಿಸಿರುವುದಿಲ್ಲ.

2) ಸಿಂಧುತ್ವವು ವಿವಿಧ ಹಂತಗಳಲ್ಲಿರುತ್ತದೆ/ಮಟ್ಟಗಳಲ್ಲಿರುತ್ತದೆ. ಒಂದು ಪರೀಕ್ಷಣ ಸಿಂಧುತ್ವ ಹೊಂದಿದೆ/ಹೊಂದಿಲ್ಲ ಎಂದು ಹೇಳುವಂತಿಲ್ಲ. ಪರೀಕ್ಷೆ ನಡೆಸಿದ ನಂತರದ ಫಲಿತಾಂಶಗಳ ಆಧಾರದ ಮೇಲೆ ಒಂದು ಪರೀಕ್ಷಣದ ಸಿಂಧುತ್ವವನ್ನು ವಿವಿಧ ಹಂತಗಳಲ್ಲಿ ಕಾಣಬಹುದು. ಅಂದರೆ ಒಂದು ಪರೀಕ್ಷಣ ಉನ್ನತ ಹಂತದ ಸಿಂಧುತ್ವ (High Validity), ಮಧ್ಯಮ ಹಂತದ ಸಿಂಧುತ್ವ (Modulate Validity), ಕೆಳಹಂತದ ಸಿಂಧುತ್ವ (Low Validity) ವನ್ನು ಹೊಂದಿರಬಹುದು.

3) ಸಿಂಧುತ್ವ ಸಾಮಾನ್ಯಕ್ಕಿಂತ ನಿರ್ದಿಷ್ಟವಾಗಿರುತ್ತದೆ. ಇದನ್ನು ನಾವು ಸಾಮಾನ್ಯ ಗುಣಲಕ್ಷಣ ಎಂದು ಪರಿಗಣಿಸುವಂತಿಲ್ಲ. ನಿರ್ದಿಷ್ಟತೆ ಎಂದರೆ ಒಂದು ಸನ್ನಿವೇಶದಲ್ಲಿ ಉಪಯೋಗಿಸಿದ ಒಂದು ಪರೀಕ್ಷಣ ಉನ್ನತ ಸಿಂಧುತ್ವವನ್ನು ಹೊಂದಿದ್ದು ಇನ್ನೊಂದು ಸನ್ನಿವೇಶದಲ್ಲಿ ಉಪಯೋಗಿಸಿದಾಗ ಕಡಿಮೆ ಸಿಂಧುತ್ವವನ್ನು ಹೊಂದಿರಬಹುದು. ಉದಾಹರಣೆಗೆ ಅಂಕಗಣಿತದ ಒಂದು ಪರೀಕ್ಷಣವು ಗಣಿತದ ಪರಿಕಲ್ಪನೆಗಳ ಜ್ಞಾನವನ್ನು ಪರೀಕ್ಷಿಸಲು ಉನ್ನತ ಸಿಂಧುತ್ವವನ್ನು ಹೊಂದಿದ್ದು, ತಾರ್ಕಿಕ ಸಾಮರ್ಥ್ಯ ಪರೀಕ್ಷಿಸಲು ಕಡಿಮೆ ಸಿಂಧುತ್ವ ಹೊಂದಿರಬಹುದು. ನಿರ್ದಿಷ್ಟಪಡಿಸಿದ ಸನ್ನಿವೇಶಕ್ಕೆ ನಿರ್ದಿಷ್ಟ ಪಡಿಸಿದ ಸಮಯದಲ್ಲಿ ಒಂದು ಪರೀಕ್ಷಣ ವಿವಿಧ ಹಂತಗಳಲ್ಲಿ ಸಿಂಧುತ್ವವನ್ನು ಹೊಂದಿರುತ್ತದೆ.

Digitised by Bharatavani, CIIL

**ಸಿಂಧುತ್ವದ ವಿಧಗಳು:**

ಶೈಕ್ಷಣಿಕ ಮತ್ತು ಮನೋವೈಜ್ಞಾನಿಕ (ಅಳತೆ) ಮೌಲ್ಯಮಾಪನದಲ್ಲಿ ಮೂರು ವಿಧದ ಸಿಂಧುತ್ವವನ್ನು ಗುರ್ತಿಸಲಾಗಿದ್ದು ಸಾಮಾನ್ಯವಾಗಿ ಅವುಗಳನ್ನು ಪರೀಕ್ಷಾ ಕೈಪಿಡಿಯಲ್ಲಿ ನಮೂದಿಸಲಾಗುತ್ತದೆ. ಅವುಗಳೆಂದರೆ ವಿಷಯ ಸಿಂಧುತ್ವ, ಭವಿಷ್ಯ ಸೂಚಕ ಸಿಂಧುತ್ವ, ಪರಿಕಲ್ಪನಾ ಸಿಂಧುತ್ವ ಮತ್ತು ಸಮವರ್ತಿ ಸಿಂಧುತ್ವ.

**ವಿಷಯ ಸಿಂಧುತ್ವ:**

ಒಂದು ಕಾರ್ಯಕ್ರಮದ ಪಠ್ಯಕ್ರಮವನ್ನು ಸಾಮಾನ್ಯವಾಗಿ ಎರಡು ಭಾಗಗಳಾಗಿ ವ್ಯಾಖ್ಯಾನಿಸಲಾಗುತ್ತಿದೆ. 1) ಬೋಧನಾ ಉದ್ದೇಶಗಳು 2) ವಿಷಯವಸ್ತು. ಎರಡನೆಯದು ಒಂದು ಕೋರ್ಸ್ ಒಳಗೊಳ್ಳಬೇಕಾದ ಪಠ್ಯವಸ್ತು/ವಿಷಯವಸ್ತು/ವಿಷಯಗಳು ಮತ್ತು ಮೊದಲನೆಯದು ವಿದ್ಯಾರ್ಥಿಗಳಲ್ಲಿ ಶಿಕ್ಷಕರು ಬೋಧನೆಯಿಂದ ತರಬಹುದಾದ ವರ್ತನಾ ಬದಲಾವಣೆಗಳು. ಈ ಎರಡು ಅಂಶಗಳು ವಿಷಯ ಸಿಂಧುತ್ವಕ್ಕೆ ಸಂಬಂಧಿಸಿವೆ. ಒಂದು ಪರೀಕ್ಷಣ/ಪರೀಕ್ಷೆಯನ್ನು ನಾವು ಆಯ್ಕೆಮಾಡಿಕೊಂಡರೆ/ರಚಿಸಿದರೆ ಆ ಪರೀಕ್ಷಣವು ವಿಷಯವಸ್ತು ಮತ್ತು ನಾವು ಅಳತೆ ಮಾಡಬೇಕಾದ ವರ್ತನೆಗಳನ್ನು ಮತ್ತು ವಿಷಯವಸ್ತುವನ್ನು ಪ್ರತಿನಿಧಿಸುವಂತಿರಬೇಕು. ಇದು ವಿಷಯ ಸಿಂಧುತ್ವದ ತತ್ವ. ವಿಷಯ ಸಿಂಧುತ್ವವನ್ನು ಹೀಗೆ ವ್ಯಾಖ್ಯಾನಿಸಬಹುದು: ಒಂದು ಪರೀಕ್ಷಣವು ಪರಿಗಣಿಸಲ್ಪಟ್ಟ ವಿಷಯವಸ್ತುವು ಮತ್ತು ವರ್ತನೆಗಳನ್ನು ಪ್ರತಿನಿಧಿಸುವ ಅಂಶಗಳನ್ನು ಅಳತೆ ಮಾಡುವಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿರಬೇಕೆಂದು ನಿರ್ಣಯಿಸುವ ಪರೀಕ್ಷೆಯ ಲಕ್ಷಣಕ್ಕೆ ವಿಷಯ ಸಿಂಧುತ್ವ(Content Validity) ಎಂದು ಹೆಸರು. ಈ ರೀತಿಯ ಸಿಂಧುತ್ವ ಪಠ್ಯಕ್ರಮದ ವಿಷಯಕ್ಕೆ ಸಂಬಂಧಿಸಿರುವುದರಿಂದ ಇದನ್ನು ಪಠ್ಯಕ್ರಮ ಸಿಂಧುತ್ವ(Curricular Validity) ಎಂದೂ ಹೇಳುತ್ತಾರೆ. ಸಾಧನ ಪರೀಕ್ಷೆಗಳಿಗೆ/ನೈದಾನಿಕ ಪರೀಕ್ಷೆಗಳಿಗೆ ವಿಷಯವಸ್ತು ಸಿಂಧುತ್ವ ಮುಖ್ಯವಾಗಿ ಇರಬೇಕಾಗುತ್ತದೆ.

ವಿಷಯ ಸಿಂಧುತ್ವವು ಸಾಮಾನ್ಯವಾಗಿ ಪರೀಕ್ಷೆ ಪ್ರತಿನಿಧಿಸುವ ಅಂಶಗಳಿಗೆ (ವಿಷಯವಸ್ತು ಮತ್ತು ವರ್ತನಾ ಬದಲಾವಣೆಗಳು) ಸಂಬಂಧಿಸಿರುತ್ತದೆ. ಒಂದು ಪರೀಕ್ಷೆ ವಿಷಯವಸ್ತು ಮತ್ತು ಬೋಧನಾ ಉದ್ದೇಶಗಳು ಎರಡನ್ನು ಒಳಗೊಂಡಂತೆ ಮೇಲ್ನೋಟಕ್ಕೆ ಕಂಡು ಬಂದರೆ ಅದನ್ನು ಮುಖ ಸಿಂಧುತ್ವ (Face Validity) ಎಂದು ಹೇಳುತ್ತೇವೆ.

ವಿಷಯ ಸಿಂಧುತ್ವವನ್ನು ನಾವು ಪರಿಗಣಿಸುವಾಗ/ಪರೀಕ್ಷಿಸುವಾಗ ನಾವು ಪರೀಕ್ಷಿಸಬೇಕಾದ ವಿಷಯವಸ್ತುವಿನ ವಿಷಯಗಳು (ಪಾಠಗಳು/ಘಟಕಗಳು) ಮತ್ತು ಪರೀಕ್ಷಿಸಬೇಕಾದ ಬೋಧನಾ ಉದ್ದೇಶಗಳು/ವರ್ತನೆಯಲ್ಲಿನ ಬದಲಾವಣೆಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಬೇಕು. ಒಂದು ನಿರ್ದಿಷ್ಟ ವಿಷಯದಲ್ಲಿ ಸಾಧನೆಯನ್ನು ಅಳತೆ ಮಾಡಬೇಕಾದರೆ ನಿರ್ದಿಷ್ಟ ವಿಷಯದಲ್ಲಿನ ಘಟಕಗಳನ್ನು ಪರೀಕ್ಷಣದಲ್ಲಿ ಸೇರಿಸಬೇಕು. ಅವುಗಳ ಸಾಪೇಕ್ಷ ಪ್ರಾಮುಖ್ಯತೆಯ ಆಧಾರದ ಮೇಲೆ ವಿಷಯಗಳು ಮತ್ತು ಬೋಧನೋದ್ದೇಶಗಳಿಗೆ ಪರೀಕ್ಷೆಯಲ್ಲಿ ಸ್ಥಾನ ನೀಡಬೇಕು. ವಿವಿಧ ವಿಷಯಗಳಿಗೆ ಅಥವಾ ಬೋಧನೋದ್ದೇಶಗಳಿಗೆ ಇಂತಿಷ್ಟು ಪ್ರಶ್ನೆಗಳನ್ನು ನೀಡಬೇಕೆಂಬ ಮಾನದಂಡವಿಲ್ಲದಿದ್ದರೂ ಶಿಕ್ಷಕನು ವಿಷಯಗಳ ಪ್ರಾಮುಖ್ಯ ಮತ್ತು ಕ್ಲಿಷ್ಟತೆಯ ಆಧಾರದ ಮೇಲೆ ವಿಷಯಗಳನ್ನು ಮತ್ತು ಬೋಧನೋದ್ದೇಶಗಳನ್ನು ಪರೀಕ್ಷಣದಲ್ಲಿ ಸೇರಿಸಬೇಕು. ನಿರ್ದಿಷ್ಟತೆಯ ಕೋಷ್ಟಕ (Table of Specification)ವನ್ನು ತಯಾರಿಸಿ ಅದಕ್ಕೆ ಅನುಗುಣವಾಗಿ ಪರೀಕ್ಷೆಯನ್ನು ರಚಿಸಿ ಪರೀಕ್ಷೆ ನಡೆಸಿದರೆ ಅಂತಹ ಪರೀಕ್ಷೆಯಿಂದ ಬಂದ ಫಲಿತಾಂಶವು ಉನ್ನತ ಮಟ್ಟದ ಸಿಂಧುತ್ವವನ್ನು ಹೊಂದಿರುತ್ತದೆ.

**ಭವಿಷ್ಯ ಸೂಚಕ ಸಿಂಧುತ್ವ:**

ಒಂದು ನಿರ್ದಿಷ್ಟ ಕ್ಷೇತ್ರದಲ್ಲಿನ ವಿದ್ಯಾರ್ಥಿಗಳ ಭವಿಷ್ಯದ ಸಾಧನೆಯನ್ನು ಪರೀಕ್ಷಿಸಲು/ತಿಳಿಯಲು ಕೆಲವು ವೇಳೆ ನಾವು ಪರೀಕ್ಷೆಗಳನ್ನು ನಡೆಸುತ್ತೇವೆ. ನಿರ್ದಿಷ್ಟ ಪರೀಕ್ಷೆ/ಪರೀಕ್ಷಣದ ಮೂಲಕ ವಿದ್ಯಾರ್ಥಿಗಳ/ಅಭ್ಯರ್ಥಿಗಳ ಭವಿಷ್ಯದಲ್ಲಿನ ಸಾಧನೆಯನ್ನು ಮೌಲ್ಯಮಾಪನ ಮಾಡಿದಾಗ ನಾವು ನಡೆಸಿದ ಪರೀಕ್ಷೆಯು ವಿದ್ಯಾರ್ಥಿಗಳ ಭವಿಷ್ಯದಲ್ಲಿನ ಸಾಮರ್ಥ್ಯ/ಸಾಧನೆಯನ್ನು ಗುರ್ತಿಸುವಲ್ಲಿ/ಮೌಲ್ಯಮಾಪನ ಮಾಡುವಲ್ಲಿ ಹೆಚ್ಚಿನ ಸಫಲತೆಯನ್ನು ಹೊಂದಿದ್ದರೆ ಅಂತಹ ಪರೀಕ್ಷಣ ಭವಿಷ್ಯ ಸೂಚಕ ಸಿಂಧುತ್ವ (Predictive Validity) ಹೊಂದಿದೆ ಎಂದು ಹೇಳಬಹುದು. ಒಂದು ಪರೀಕ್ಷಣ ಭವಿಷ್ಯಸೂಚಕ ಸಿಂಧುತ್ವ ಹೊಂದಿದೆ ಎಂದು ಹೇಳಬೇಕಾದರೆ ನಿರ್ದಿಷ್ಟಪಡಿಸಿದ ಕಲಿಕಾ ಕ್ಷೇತ್ರದ ಪರೀಕ್ಷಣದಲ್ಲಿ ಪಡೆದ ಅಂಕಗಳ ಮಟ್ಟ ವಿದ್ಯಾರ್ಥಿಯ ಮುಂದಿನ ಸಾಮರ್ಥ್ಯವನ್ನು/ಸಾಧನೆಯನ್ನು ಊಹಿಸುವಂತಿರಬೇಕು. ಉದಾಹರಣೆಗೆ ಗಣಿತದ ಅಭಿಸಾಮರ್ಥ್ಯ ಪರೀಕ್ಷೆಯು ಮುಂದೆ ವಿದ್ಯಾರ್ಥಿಗಳ ಗಣಿತವನ್ನು ಕಲಿಯುವ ಸಾಮರ್ಥ್ಯವನ್ನು ಪೂರ್ವಾನುಮಾನ ಮಾಡುವುದರಲ್ಲಿ ನಾವು ಸಫಲರಾಗಬೇಕು. ಸಾಮಾನ್ಯವಾಗಿ ಕೆಲವು ನಿರ್ಣಯಾಂಶಗಳನ್ನು ಸಾಮರ್ಥ್ಯಗಳಲ್ಲಿ ಮುಂದಿನ ಸಾಧನೆಯನ್ನು ಭವಿಷ್ಯಸೂಚಕ ಸಿಂಧುತ್ವವನ್ನು (ಮುಂದಿನ ಸಾಮರ್ಥ್ಯಗಳನ್ನು ಊಹಿಸಿ) ಇಂದಿನ ಅಂಕಗಳ ನಡುವೆ ಸಹಸಂಬಂಧ ಕಂಡುಹಿಡಿಯುವ ಮೂಲಕ ನಿರ್ಧರಿಸಬಹುದು ಮತ್ತು ಭವಿಷ್ಯಸೂಚಕ ಸಿಂಧುತ್ವವನ್ನು ಕಂಡುಹಿಡಿಯಬೇಕಾದರೆ ವ್ಯಕ್ತಿಗಳು ನಿರ್ದಿಷ್ಟ ಕ್ಷೇತ್ರಗಳಲ್ಲಿ ನಿಜವಾಗಿಯೂ ಸಾಧನೆ ತೋರಿಸುವವರೆಗೆ ಕಾದಿದ್ದು ನಿರ್ಣಯಿಸಬೇಕಾಗುತ್ತದೆ.

**ಪರಿಕಲ್ಪನಾ (ಸಂರಚನಾ) ಸಿಂಧುತ್ವ:**

ಕೆಲವು ಪರೀಕ್ಷೆಗಳನ್ನು ವಿದ್ಯಾರ್ಥಿಗಳ ಕೆಲವು ಗುಣಲಕ್ಷಣಗಳಾದ ಬುದ್ಧಿಶಕ್ತಿ, ಸೃಜನಶೀಲತೆ, ಕಲಿಕೆಯ ಅಭಿಪ್ರೇರಣೆ ಇತ್ಯಾದಿಗಳನ್ನು ಮೌಲ್ಯಮಾಪನ ಮಾಡಲು ಉಪಯೋಗಿಸಲಾಗುತ್ತದೆ. ಇಂತಹ ಅಂಶಗಳನ್ನು(ಗುಣಲಕ್ಷಣಗಳನ್ನು) ಅಳತೆಮಾಡುವಾಗ ವಿದ್ಯಾರ್ಥಿಗಳು ಕೆಲವು ಮನೋವೈಜ್ಞಾನಿಕ ಗುಣಲಕ್ಷಣಗಳನ್ನು

Digitised by Bharatavani, CIIL

ಎಷ್ಟರಮಟ್ಟಿಗೆ, ಯಾವ ಮಟ್ಟದಲ್ಲಿ ಹೊಂದಿದ್ದಾರೆ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಈ ಗುಣಲಕ್ಷಣಗಳು ಸಾಮಾನ್ಯವಾಗಿ ಅಮೂರ್ತವಾಗಿರುತ್ತವೆ (Abstract in nature) ಹಾಗೂ ಇವುಗಳನ್ನು ಕೆಲವು ಮನೋವೈಜ್ಞಾನಿಕ ಪರಿಕಲ್ಪನೆಗಳು ಅಥವಾ ತತ್ವಗಳಿಂದ/ಸಂರಚನೆಗಳಿಂದ ವ್ಯಾಖ್ಯಾನಿಸಬೇಕಾಗುತ್ತದೆ. ಉದಾಹರಣೆಗೆ ಬುದ್ಧಿಶಕ್ತಿ. ಬುದ್ಧಿಶಕ್ತಿ ಪರೀಕ್ಷೆಯನ್ನು ಕನ್ನಡ ವ್ಯಾಕರಣ, ಭಾರತದ ಇತಿಹಾಸವನ್ನು ಪರೀಕ್ಷಿಸಿದ ಹಾಗೆ ಪರೀಕ್ಷಿಸಲು ಸಾಧ್ಯವಾಗುವುದಿಲ್ಲ. ಕನ್ನಡ ವ್ಯಾಕರಣ, ಭಾರತದ ಇತಿಹಾಸ ಇವು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದ ಪರೀಕ್ಷೆಗಳಾಗಿರುತ್ತವೆ. ಸಾಧನಾ ಪರೀಕ್ಷೆಗೆ ನಿರ್ದಿಷ್ಟಪಡಿಸಿದ ಪಠ್ಯವಸ್ತು ಅಥವಾ ಪ್ರಯೋಗಗಳನ್ನು ಮಾಡಬಹುದು. ಆದರೆ ಬುದ್ಧಿಶಕ್ತಿ, ಸೃಜನಶೀಲತೆ ಇತ್ಯಾದಿಗಳನ್ನು ನಿರ್ದಿಷ್ಟ ಪಠ್ಯವಸ್ತುವಿಗೆ ಸಂಬಂಧಿಸಿದ ವಿಷಯಗಳಿಂದ ವ್ಯಾಖ್ಯಾನಿಸಲು ಅಥವಾ ಅಳತೆ ಮಾಡಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಇವುಗಳನ್ನು ಸಂರಚನೆಗಳು ಅಥವಾ ಪರಿಕಲ್ಪನೆಗಳು (Construct) ಎನ್ನುತ್ತಾರೆ. ಮನೋವಿಜ್ಞಾನಿಗಳು ಇವುಗಳ ಲಕ್ಷಣಗಳನ್ನು ವರ್ತನೆಗಳೊಂದಿಗೆ ಹೊಂದಿರುವ ಸಂಬಂಧದ ಆಧಾರದ ಮೇಲೆ ವ್ಯಾಖ್ಯಾನಿಸುತ್ತಾರೆ. ಇವುಗಳ ಲಕ್ಷಣಗಳನ್ನು ಸಂಶೋಧನೆಗಳ ಆಧಾರದ ಮೇಲೆ ವಿವರಿಸಲಾಗುತ್ತದೆ. ಇಂಥ ಪರಿಕಲ್ಪನೆ(ಸಂರಚನೆ)ಗಳಿಗೆ ಸಂಬಂಧಿಸಿದ ಸಾಮರ್ಥ್ಯವನ್ನು ಅಳತೆಮಾಡಲು ಪರೀಕ್ಷಣವನ್ನು ರಚಿಸುವಾಗ ಆ ಸಾಮರ್ಥ್ಯದ ಸಂರಚನಾತ್ಮಕ ಲಕ್ಷಣಗಳನ್ನು ಪರಿಗಣಿಸಬೇಕಾಗುತ್ತದೆ. ಹೀಗೆ ರೂಪಿಸಿದ ಪರೀಕ್ಷಣ ಆ ಸಂರಚನೆಯ ಅಥವಾ ಪರಿಕಲ್ಪನೆಯ ಲಕ್ಷಣಗಳನ್ನು ಉತ್ತಮವಾಗಿ ಪ್ರತಿನಿಧಿಸುವಂತಿದ್ದರೆ. ಅಂತಹ ಪರೀಕ್ಷಣ ಹೊಂದಿರುವ ಸಿಂಧುತ್ವವನ್ನು ಸಂರಚನಾತ್ಮಕ ಸಿಂಧುತ್ವ (Construct Validity) ಎಂದು ಹೇಳುತ್ತೇವೆ. ಇದನ್ನು ಪರಿಕಲ್ಪನಾತ್ಮಕ ಸಿಂಧುತ್ವ (Conceptual Validity) ಎಂದೂ ಹೇಳುತ್ತಾರೆ. ಬುದ್ಧಿಶಕ್ತಿ, ಅಭಿಸಾಮರ್ಥ್ಯ, ಸೃಜನಶೀಲತೆ, ವ್ಯಕ್ತಿತ್ವ ಇತ್ಯಾದಿ ಮಾನಸಿಕ ಪರೀಕ್ಷೆಗಳಿಗೆ ಸಂರಚನಾತ್ಮಕ ಸಿಂಧುತ್ವ ಮುಖ್ಯವಾಗಿರುತ್ತದೆ.

**ಸಮವರ್ತಿ ಸಿಂಧುತ್ವ:** ಸಿಂಧುತ್ವವನ್ನು ಪಡೆದಿರುವ ಈಗಾಗಲೇ ಪ್ರಚಲಿತವಾಗಿರುವ ಮತ್ತೊಂದು ಪರೀಕ್ಷಣದಲ್ಲಿ ಪಡೆದ ಅಂಕಸರಣಿಗೆ ಅಥವಾ ಅಳತೆ ಮಾಡಬಹುದಾದ ಬಾಹ್ಯ ನಿರ್ಣಾಯಕಗಳಿಗೆ(ಶ್ರೇಣಿಗಳು, ತೀರ್ಮಾನ ಇತ್ಯಾದಿ) ಪಡೆದ ಅಂಕಗಳಿಗೂ ಮತ್ತು ಹೊಸದಾಗಿ ರಚಿತವಾಗಿರುವ ಪರೀಕ್ಷಣದಲ್ಲಿ ಪಡೆದ ಅಂಕಶ್ರೇಣಿಗೂ ನಡುವೆ ಸಹಸಂಬಂಧವನ್ನು ಕಂಡುಹಿಡಿದು ಹೊಸ ಪರೀಕ್ಷಣದ ಸಿಂಧುತ್ವವನ್ನು ನಿರ್ಣಯಿಸಲು ಸಾಧ್ಯವಿದೆ. ಈ ರೀತಿಯ ಸಿಂಧುತ್ವಕ್ಕೆ ಸಮವರ್ತಿ ಸಿಂಧುತ್ವ(Concurrent Validity) ಎಂದು ಹೆಸರು. ಈ ಸಿಂಧುತ್ವ ಮತ್ತೊಂದು ಪರೀಕ್ಷಣದ ಸಿಂಧುತ್ವವನ್ನು ಅಥವಾ ಮತ್ತೊಂದು ಮೌಲ್ಯಮಾಪನವನ್ನು ಆಧರಿಸುವುದರಿಂದ ಈ ಸಿಂಧುತ್ವವು ಹೆಚ್ಚು ನಿಖರತೆಯನ್ನು ಹೊಂದಿರುವುದಿಲ್ಲ.

**– ಡಾ. ಕೃಷ್ಣಪ್ಪ ಎನ್.**

## ಸಿದ್ಧಾಂತಗಳು ಮತ್ತು ನಿಯಮಗಳು

### ಸಿದ್ಧಾಂತ:

ಸಿದ್ಧಾಂತವು ಹಲವಾರು ವಿಚಾರಗಳ ಸಾರವಾಗಿದ್ದು ಇದು ಸಾಮಾನ್ಯವಾಗಿ ಹಲವು ಚಿಂತನೆಗಳನ್ನು ಮೂಡಿಸಿ ಕೊನೆಗೆ ಸಾಮಾನ್ಯೀಕರಣಕ್ಕೆ ಮಾರ್ಗ ತೋರಿಸುವುದಾಗಿದೆ. ಸಿದ್ಧಾಂತ ಎಂಬ ಪದವು ಪ್ರಾಚೀನ ಗ್ರೀಕ್ ಮೂಲದಿಂದ ಬಂದುದಾಗಿದೆ. ಇದು ಊಹೆಗೆ ಅಥವಾ ಪ್ರಾಕಲ್ಪನೆಯಿಂದ ಭಿನ್ನವಾಗಿದ್ದು ಪ್ರಾಯೋಗಿಕವಾಗಿ ಮತ್ತು ಕಾರ್ಯಕಾರಣ ಸಂಬಂಧದಿಂದ ಇದನ್ನು ಸಮರ್ಥಿಸಬಹುದಾಗಿದೆ.

ಆಧುನಿಕ ತಂತ್ರಜ್ಞರ ತಂಡವು ಸಾಮಾನ್ಯೀಕರಿಸುವ ಮತ್ತು ತೀರ್ಮಾನಕ್ಕೆ ಬರುವ ತಾತ್ಕಾಲಿಕ ಸ್ವರೂಪವನ್ನು ಸಿದ್ಧಾಂತವು ಹೊಂದಿದೆ ಎಂದು ಹೇಳಿದ್ದಾರೆ. ಉದಾ: ಕಲೆ ಮತ್ತು ತತ್ವಶಾಸ್ತ್ರದಲ್ಲಿ ವಿಚಾರವನ್ನು ವಿವರಿಸಲು ಮತ್ತು ವಿವರಣೆಯನ್ನು ನೀಡಲು ಸಿದ್ಧಾಂತವನ್ನು ಬಳಸಲಾಗುತ್ತದೆಯೇ ಹೊರತು ಅದನ್ನು ಅಳತೆ ಮಾಡಲು, ಪರೀಕ್ಷಿಸಲು ಅಥವಾ ನಿರೂಪಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಅರಿಸ್ಟಾಟಲ್‌ರವರು ಸಿದ್ಧಾಂತವು ಆಧಾರವುಳ್ಳ ಪ್ರಮೇಯಗಳಾಗಿದ್ದು ಇವುಗಳನ್ನು ಆಗಾಗ್ಗೆ ಅಭ್ಯಾಸ ಮಾಡಬಹುದಾಗಿದೆ ಎಂದು ಹೇಳಿದ್ದಾರೆ.

ಪ್ರತಿಯೊಂದು ಸಿದ್ಧಾಂತವು ತನ್ನದೇ ಆದ ಸ್ವರೂಪ, ಉದ್ದೇಶ, ವಿವರಣೆ, ಮಾನದಂಡಗಳನ್ನು ಒಳಗೊಂಡಿದ್ದು ನಿರ್ದಿಷ್ಟ ಕ್ಷೇತ್ರದಲ್ಲಿ ಅದನ್ನು ಅನ್ವಯಿಸಿ ಪುನರಾಭ್ಯಾಸಿಸಲು ಸಹಾಯ ಮಾಡುತ್ತದೆ. ಹಾಗೆಯೇ ಇದು ಮುಂದೇನಾಗುತ್ತದೆಂಬುದರ ಕುರಿತಂತಹ ಊಹೆಯಾಗಿದ್ದು ಗುರಿ, ನಿಯಮ ಅಥವಾ ತತ್ವಗಳನ್ನು ತಿಳಿಸುತ್ತದೆ.

ಸಿದ್ಧಾಂತಗಳನ್ನು ಅವುಗಳಿಂದ ನಿಗಮಿಸಬಹುದಾದಂತಹ ನಿಯಮಗಳ ಪ್ರಮೇಯ/ಪ್ರಾಕಲ್ಪನೆಗಳ ಆಧಾರದ ಮೇಲೆ ಸಮರ್ಥಿಸಲಾಗುತ್ತದೆ. ಒಂದು ಸಿದ್ಧಾಂತದ ಬಗ್ಗೆ ಇರುವ ಅನೇಕ ವಾದಗಳ ಪರಸ್ಪರ ಸಮರ್ಪಕತೆಯನ್ನು ಪ್ರಶ್ನಿಸಿಕೊಂಡು ಸಿದ್ಧಾಂತವನ್ನು ವಿಶ್ಲೇಷಿಸಿ ಈ ಸಿದ್ಧಾಂತ ಅರ್ಥಪೂರ್ಣವಾಗಿದೆಯೇ ಎಂಬ ನಿರ್ಧಾರಕ್ಕೆ ಬರಲಾಗುತ್ತದೆ. ಈ ನಿರ್ಧಾರ ಕೈಗೊಳ್ಳುವಾಗ ಸಿದ್ಧಾಂತದ ಸಮಗ್ರತೆ, ಸಿದ್ಧಾಂತಕ್ಕಿರುವ ಆಧಾರಗಳು ಮತ್ತು ಈ ಆಧಾರಗಳು ಸಿದ್ಧಾಂತವನ್ನು ಎಷ್ಟರಮಟ್ಟಿಗೆ ಸಮರ್ಥಿಸುತ್ತವೆ? ಇತ್ಯಾದಿ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಾಂತವನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ.

ಸಿದ್ಧಾಂತ ಜ್ಞಾನದ ಮೂಲ ಆಕರವಾಗಿದ್ದು ಇದು ಕೆಲವೊಮ್ಮೆ ಕೆಲವು ಮಾದರಿಗಳಿಗೆ ಅನುಗುಣವಾಗಿರುತ್ತದೆ ಅಥವಾ ಯಾವುದೇ ಮಾದರಿಯೊಂದಿಗೆ ಹೊಂದಾಣಿಕೆಯಾಗದೆಯೂ ಇರಬಹುದು. ಸಿದ್ಧಾಂತ ಒಂದು ವಿಷಯದ ಬಗ್ಗೆ ಪ್ರಾಕಲ್ಪಿಸಲು,

Digitised by Bharatavani, CIIL

ಅರ್ಥಮಾಡಿಕೊಳ್ಳಲು ಮತ್ತು ವಿಷಯವನ್ನು ವಿಶ್ಲೇಷಿಸಲು ಪ್ರಮುಖ ಮೂಲವಾಗುತ್ತದೆ. ಅದು ಒಂದು ವಿಷಯದ ಬಗ್ಗೆ ಪರಿಗಣಿಸಬಹುದಾದ ಹೇಳಿಕೆಗಳ ಒಂದು ಗುಂಪಾಗಿದ್ದು ಕೆಲವು ಘಟನೆಗಳನ್ನು ವಿವರಿಸುವ ಪ್ರಯತ್ನವಾಗಿದೆ. ಹಾಗಾಗಿ ಒಂದು ಸಿದ್ಧಾಂತದ ಹೇಳಿಕೆಗಳು ಅದರ ಕಾರ್ಯಕಾರಣ ಸಂಬಂಧಗಳನ್ನು ನಿರೂಪಕನ ಪ್ರಕಾರ ನಿಜವಾಗಿರುತ್ತದೆ. ಒಂದು ಸಿದ್ಧಾಂತವು ಮತ್ತೊಂದು ಸಿದ್ಧಾಂತದ ರೀತಿಯಲ್ಲಿಯೇ ನೈಜವಾಗಿರುವುದಿಲ್ಲ. ಯಾವುದೇ ಒಂದು ಸಿದ್ಧಾಂತವನ್ನು ನಿರೂಪಿಸುವಾಗ ಅದನ್ನು ಪ್ರತಿಪಾದಿಸಿದ ವ್ಯಕ್ತಿಯ ಮೂಲ ವಿವರಣೆಯನ್ನು ಪರಿಗಣಿಸದೆ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಕೆಲವೊಮ್ಮೆ ಕೆಲವು ಸಿದ್ಧಾಂತಗಳು ಘಟನೆಗಳ ಬಗ್ಗೆ ಏಕರೀತಿಯ ವಿವರಣೆಯನ್ನು ನೀಡುತ್ತವೆಯಾದರೂ ಅದನ್ನು ನಿರೂಪಣೆ ಮಾಡುವ ರೀತಿ ವಿಭಿನ್ನವಾಗಿರುತ್ತದೆ.

ಆಕ್ಸಫರ್ಡ್ ಶಬ್ದಕೋಶದ ಪ್ರಕಾರ ಸಿದ್ಧಾಂತ ಒಂದು ವಿಚಾರ ಅಥವಾ ವಿಚಾರಗಳ ಗುಂಪಾಗಿದ್ದು ಏನನ್ನಾದರೂ ಅಥವಾ ಹೊಸದನ್ನು ವಿವರಿಸುವಂತಹದ್ದಾಗಿದೆ. ಇದು ಕೆಲವೊಂದು ತತ್ವಗಳ ಸಾರವಾಗಿದ್ದು ಕ್ರಿಯಾಶೀಲತೆಯ ಮೇಲೆ ನಿಂತಿದೆ.

ಮಾನವನು ಅತ್ಯಂತ ಬುದ್ಧಿವಂತ ಪ್ರಾಣಿಯಾಗಿದ್ದು ಇವನಿಗೆ ಚಿಂತಿಸುವ, ವರ್ತಿಸುವ, ಕಾರ್ಯಕಾರಣ ಪರಿಣಾಮ ಸಂಬಂಧವನ್ನು ಪತ್ತೆಹಚ್ಚುವ ಸಾಮರ್ಥ್ಯ ಕರಗತವಾಗಿದ್ದು ಮುಂದೇನಾಗುತ್ತದೆ ಎಂಬುದನ್ನು ಪೂರ್ವಾನುಮಾನ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಕೆಲವು ಪೂರ್ವ ಘಟನೆಗಳು, ವರ್ತನೆಗಳನ್ನು ಆಧಾರವಾಗಿಟ್ಟುಕೊಂಡು ತರ್ಕಿಸುವ ಮೂಲಕ ಹಾಗೂ ಹಿಂದಿನ ಸನ್ನಿವೇಶವನ್ನು ಅವಲೋಕಿಸಿ ನೈಜ ಸನ್ನಿವೇಶದಲ್ಲಿನ ಘಟನೆಗಳನ್ನು ಊಹಿಸುವ ಮೂಲಕ ಹೊಸದನ್ನು ಸಂಶೋಧಿಸುವ ಸಾಮರ್ಥ್ಯ ಹೊಂದಿದ್ದಾನೆ. ಹೀಗೆ ಹಿಂದೆ ನಡೆದ ಘಟನೆಯು ಅವನ ಸಂಶೋಧನೆಯಿಂದ ದೃಢಪಟ್ಟರೆ ಅವನು ಅದನ್ನು ತನ್ನದೇ ಆದ ಹೊಸದೊಂದು ರೀತಿಯಲ್ಲಿ ಅರ್ಥೈಸಿ ನಂತರ ತನ್ನದೇ ಆದ ಸಿದ್ಧಾಂತವನ್ನು ರೂಪಿಸುತ್ತಾನೆ. ಸಾಮಾನ್ಯವಾಗಿ ಈ ರೀತಿಯ ಸಿದ್ಧಾಂತಗಳು ಆದರ್ಶರೂಪ ತಾಳಲು ಮತ್ತು ಸರ್ವರಿಂದ ಸ್ವೀಕೃತವಾಗಲು ಹಾಗೂ ಎಲ್ಲರೂ ಒಪ್ಪುವಂತಾಗಲು ಅದು ನೈಜವಾಗಿದ್ದು ಸುಲಭವಾಗಿ ಸಾಮಾನ್ಯೀಕರಿಸುವಂತಿರಬೇಕು. ಜೊತೆಗೆ ಎಲ್ಲಾ ಕಾಲದಲ್ಲೂ ಏಕ ರೀತಿಯ ಸ್ಥಿರತೆಯನ್ನು ಹೊಂದಿದ್ದು ಎಲ್ಲಾ ಸಮಯಕ್ಕೂ ಅದು ಅನ್ವಯವಾಗುವಂತಿರಬೇಕು, ಸೂಕ್ತ ಪ್ರಾಕಲ್ಪನೆಗಳಿಗೆ ಅವಕಾಶ ನೀಡುವಂತಿರಬೇಕು ಮತ್ತು ತನ್ನದೇ ಆದ ತತ್ವ/ನಿಯಮಗಳನ್ನು ಹೊಂದಿದ್ದು ಅವುಗಳು ಪ್ರಯೋಗಕ್ಕೆ ಒಳಪಡುವಂತಿರಬೇಕು ಹಾಗೂ ಈ ಎಲ್ಲಾ ಗುಣಗಳನ್ನು ಹೊಂದಿದ್ದು ಜಾಗರೂಕತೆಯಿಂದ ಪ್ರತಿಯೊಬ್ಬರೂ ವೀಕ್ಷಿಸಿ ಪರೀಕ್ಷಿಸಲು, ತಾರ್ಕಿಕ ವಿಶ್ಲೇಷಣೆಗೆ ಒಳಪಡಿಸಲು ಸುಲಭವಾಗಿ ಅರ್ಥಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಚಿಂತನಾತ್ಮಕ ಹೇಳಿಕೆಗಳ ಸಮಷ್ಟಿಯೇ ಸಿದ್ಧಾಂತವಾಗಿದೆ.

ಒಂದು ಸಿದ್ಧಾಂತವು ಉತ್ತಮವಾಗಿರಬೇಕಾದರೆ ಅದು ಈ ಕೆಳಕಂಡಂತಹ ಕೆಲವು ಲಕ್ಷಣಗಳನ್ನು ಹೊಂದಿರಬೇಕು.

- ಸೂಕ್ತವಾದ ತಥ್ಯಾಂಶಗಳ/ಘಟನೆಗಳ ಆಧಾರವನ್ನು ಹೊಂದಿರಬೇಕು.
- ಸಾಮಾನ್ಯವಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತಿಬೇಕು.
- ಸಿದ್ಧಾಂತ ನೈಜ ಘಟನೆಗಳನ್ನು ಅಥವಾ ಅವಲೋಕನದ ತಥ್ಯಾಂಶಗಳನ್ನು ಸೂಕ್ತ ರೀತಿಯಲ್ಲಿ ವಿವರಿಸುವ ಮತ್ತು ಸಮರ್ಥಿಸುವ ಸಾಮರ್ಥ್ಯ ಹೊಂದಿರಬೇಕು.
- ನಿರ್ದಿಷ್ಟ ಘಟನೆಗೆ ಸೂಕ್ತ ವಿವರಣೆ ಕೊಡಲು ಪ್ರಯತ್ನಿಸಿರಬೇಕು.
- ಉತ್ತಮ ಸಿದ್ಧಾಂತವು ಪ್ರಯೋಗಿಕವಾಗಿ ಪರೀಕ್ಷಿಸಬಲ್ಲ ಅನೇಕ ಪ್ರಾಕಲ್ಪನೆಗಳನ್ನು ರೂಪಿಸಲು ಅವಕಾಶ ಕಲ್ಪಿಸಬೇಕು.
- ಭೂತಕಾಲದ ಘಟನೆಗಳನ್ನು ವಿಶ್ಲೇಷಿಸಿ ವಿವರಿಸುವ ಸಾಮರ್ಥ್ಯ ಹೊಂದಿರಬೇಕು.
- ಭವಿಷ್ಯದ ಘಟನೆಗಳನ್ನು ಹೆಚ್ಚು ಕಡಿಮೆ ಸರಿಯಾಗಿ ಪೂರ್ವಾನುಮಾನ ಮಾಡುವ ಸಾಮರ್ಥ್ಯ ಹೊಂದಿರಬೇಕು.

ಸಿದ್ಧಾಂತ ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತಹ ವಿವರಣಾತ್ಮಕ ಗುಣ ಹೊಂದಿದ್ದು ಕೆಲವೊಂದು ನಿರ್ದಿಷ್ಟ ಮಾರ್ಗೋಪಾಯಗಳನ್ನು ಹೊಂದಿದ್ದು ಸರ್ವರಿಂದ ಸ್ವೀಕೃತವಾದಾಗ ಮಾತ್ರ ಅದು ಉತ್ತಮ ಸಿದ್ಧಾಂತ ಎನಿಸಿಕೊಳ್ಳುತ್ತದೆ.

ಶಿಕ್ಷಣದ ಬಗ್ಗೆ ಕೆಲವು ಸಿದ್ಧಾಂತಗಳನ್ನು ತತ್ವಶಾಸ್ತ್ರಜ್ಞರು ಪ್ರತಿಪಾದಿಸಿರುವರು ಕೆಲವು ಸಿದ್ಧಾಂತಗಳು ಜನರ ಮೆಚ್ಚುಗೆಯನ್ನು ಗಳಿಸಿ ಪ್ರಾಮುಖ್ಯವನ್ನು ಪಡೆದಿವೆ ಹಾಗೂ ಶಿಕ್ಷಣ ವಿಧಾನದ ಮೇಲೆ ಪ್ರಭಾವಯುತವೆನಿಸಿದ ಪರಿಣಾಮವನ್ನುಂಟು ಮಾಡಿವೆ.

ಸಿದ್ಧಾಂತವು ಪ್ರಮೇಯಗಳಿಗಿಂತ ವಿಭಿನ್ನವಾಗಿದ್ದುವುಗಳಾಗಿವೆ. ಪ್ರಮೇಯಗಳು ನೇರವಾಗಿ ಸಾಮಾನ್ಯ ನಿಯಮಗಳ ವ್ಯವಸ್ಥೆಯಿಂದ ಬಂದವುಗಳಾಗಿದ್ದು ಅವುಗಳನ್ನು ನೇರವಾಗಿ ಒರೆಹಚ್ಚಬಹುದಾಗಿದೆ. ಪ್ರಮೇಯಗಳು ಸಿದ್ಧಾಂತವನ್ನು ಅನ್ವಯಿಸಲು ಇರುವ ಪ್ರಾಥಮಿಕ ಹಂತವಾಗಿದ್ದು ಇದು ಕೆಲವೊಮ್ಮೆ ಸಿದ್ಧಾಂತದ ಅಂತ್ಯದಲ್ಲಿಯೂ ಬರುವಂತಹದ್ದಾಗಿದೆ. ಒಟ್ಟಿನಲ್ಲಿ ಪ್ರಮೇಯವು ಸಿದ್ಧಾಂತದ ತಾರ್ಕಿಕ ವಿಶ್ಲೇಷಣೆಯಾಗಿದ್ದು ಸಾಮಾನ್ಯ ನಿಯಮವಾಗಿದೆ. ಸಿದ್ಧಾಂತಗಳನ್ನು ವೈಜ್ಞಾನಿಕ ಮತ್ತು ತಾತ್ವಿಕ ಸಿದ್ಧಾಂತಗಳೆಂದು ವಿಂಗಡಿಸಬಹುದಾಗಿದೆ.

**ತಾತ್ವಿಕ ಸಿದ್ಧಾಂತ:**

ಪ್ರಾಯೋಗಿಕ ದತ್ತಾಂಶವನ್ನು ಬಳಸದೆ ಸಂಪೂರ್ಣ ವಿಷಯಕ್ಕೆ ಸಂಬಂಧಪಟ್ಟಿದ್ದು ಹಲವಾರು ವಿಚಾರಗಳನ್ನು ವೈಜ್ಞಾನಿಕ ಪದ್ಧತಿಯಲ್ಲಿ ತಾತ್ವಿಕವಾಗಿ ವಿವರಿಸಿರುವ ಸಿದ್ಧಾಂತಗಳನ್ನು ತಾತ್ವಿಕ

Digitised by Bharatavani, CIIL

ಸಿದ್ಧಾಂತಗಳೆಂದು ಕರೆಯಲಾಗಿದೆ.

ತಾತ್ವಿಕ ಸಿದ್ಧಾಂತಗಳಲ್ಲಿ ಮೆಟ ಸಿದ್ಧಾಂತವು (Meta Theory) ಅತ್ಯಂತ ಪ್ರಮುಖವಾದಂತಹ ಸಿದ್ಧಾಂತವಾಗಿದೆ. ಮೆಟ ಸಿದ್ಧಾಂತವೆಂದರೆ ಒಂದೇ ವಿಷಯದ ಬಗ್ಗೆ ಇರುವ ಇತರ ಸಿದ್ಧಾಂತಗಳ ಸಾರವಾಗಿದೆ. ಅಂದರೆ ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಇರುವ ಇತರ ಸಿದ್ಧಾಂತಗಳ ಒಟ್ಟಾರೆ ವಿಚಾರಗಳ ಸಂಗ್ರಹವೇ ಮೆಟಸಿದ್ಧಾಂತವಾಗಿದೆ.

**ವೈಜ್ಞಾನಿಕ ಸಿದ್ಧಾಂತ:**

ವಿಜ್ಞಾನದಲ್ಲಿ ಸಿದ್ಧಾಂತವೆಂದರೆ ನೈಸರ್ಗಿಕ ಪ್ರಪಂಚದ ಕೆಲವು ಆಯಾಮಗಳ ಉತ್ತಮ ಮತ್ತು ನಿರ್ದಿಷ್ಟ ವಿವರಣೆಯಗಿದ್ದು, ಈ ಆಯಾಮಗಳನ್ನು ವೀಕ್ಷಣೆ ಮತ್ತು ಪ್ರಯೋಗಗಳ ಮೂಲಕ ನಿರ್ದಿಷ್ಟಪಡಿಸಿಕೊಂಡು ಮತ್ತೆ ಮತ್ತೆ ಪುನರಾವರ್ತಿಸಿ ಪರೀಕ್ಷಿಸುವ ರೀತಿಯಲ್ಲಿ ಸಿದ್ಧಪಡಿಸುವಂತಹವುಗಳಾಗಿವೆ. ಹೀಗೆ ರೂಪುಗೊಂಡ ಸಿದ್ಧಾಂತಗಳು ನಿಖರತೆಯನ್ನು ಮತ್ತು ನೈಜತೆಯನ್ನು ಹೊಂದಿದ್ದು ಸಂಶೋಧಕರ ಊಹೆಗಳಿಗೆ ಸ್ಪಂದಿಸುವಂತಿರುತ್ತವೆ ಹಾಗೂ ಹಲವಾರು ಸ್ವತಂತ್ರ ಜ್ಞಾನದ ಮೂಲಗಳನ್ನು ಹೊಂದಿರುತ್ತವೆ. ಹಾಗೆಯೇ ಎಷ್ಟೇ ಸಲ ವೈಜ್ಞಾನಿಕ ವಿಚಾರಣೆಗಳಿಗೆ ಒಳಪಡಿಸಿದರೂ ತನ್ನ ನಿಖರತೆಯನ್ನು, ನೈಜತೆಯನ್ನು ಕಳೆದುಕೊಳ್ಳದ ಎಷ್ಟೋ ಸಿದ್ಧಾಂತಗಳಿವೆ.

**ನಿಯಮಗಳು:**

ನಿಯಮ ಎಂಬ ಪದವನ್ನು ಸಾರ್ವತ್ರಿಕವಾದಂತಹ ಮೂಲಭೂತ ತತ್ವಗಳನ್ನು ವಿವರಿಸಲು ಸಾಮಾನ್ಯವಾಗಿ ಬಳಸಲಾಗುತ್ತದೆ. ಇದು ಯಾವುದೇ ಒಂದು ವಸ್ತು, ವಿಷಯದ ಅಥವಾ ಸ್ವತ್ತಿನ (Properties) ನಡುವಿನ ಸಂಬಂಧವನ್ನು ವಿವರಿಸುವಂತಹದ್ದಾಗಿದೆ. ಅಷ್ಟೇ ಅಲ್ಲದೆ ತತ್ವ ಮತ್ತು ಸಂಬಂಧವನ್ನು ವಿವರಿಸುತ್ತದೆ.

ನಿಯಮವು ಸಾರ್ವತ್ರೀಕರಣದ ಮೂಲಭೂತ ಸ್ವರೂಪವನ್ನು ವಿವರಿಸುತ್ತದೆ. ಗಣಿತ ಮತ್ತು ತರ್ಕಶಾಸ್ತ್ರದಲ್ಲಿ ನಿಯಮಗಳು ಹೆಚ್ಚಾಗಿವೆ. ನಿಯಮ ಚಿಂತನೆಗಳನ್ನು ಕೆರಳಿಸುವಂತಹ ಆದರ್ಶವಾದವನ್ನು ಪ್ರತಿಬಿಂಬಿಸುವಂತದ್ದಾಗಿದೆ. ನಿಯಮವು ಅನುಭವವನ್ನು ಚರ್ಚಿಸುವ ಮೊದಲೇ ಚಿಂತನೆಯನ್ನು ಕೆರಳಿಸುವಂತಿರುತ್ತದೆ. ವಿಜ್ಞಾನ ಅಥವಾ ಇತರೆ ಯಾವುದೇ ಕ್ಷೇತ್ರದಲ್ಲಿ ನಡೆದ ಸಂಶೋಧನೆ ಅಥವಾ ಕ್ರಾಂತಿ ನಡೆದಾಗ ಅದನ್ನು ತತ್ವ ಮತ್ತು ನಿಯಮ ರೂಪದಲ್ಲಿ ರೂಪಿಸಲಾಗುತ್ತದೆ. ನಂತರ ಈ ವೈಜ್ಞಾನಿಕ ನಿಯಮವನ್ನು ಬಹಳ ದೀರ್ಘಕಾಲ ಪರೀಕ್ಷಿಸಿ ಪರಿಶೀಲಿಸಿದ ನಂತರ ಅದನ್ನು ಸಾರ್ವತ್ರೀಕವಾಗಿ ಅನ್ವಯಿಸಿಕೊಳ್ಳಲಾಗಿದೆ. ಕೆಲವೊಮ್ಮೆ ಗಣಿತೀಯ ನಿಯಮಗಳನ್ನು ಆಗಾಗ್ಗೆ ನಿರೂಪಿಸಲು ಸಾಧ್ಯವಾಗುತ್ತಿಲ್ಲ. ಆದರೆ ಕೆಲವೊಮ್ಮೆ ಅವುಗಳನ್ನು ತೀರ್ಮಾನಿಸಿ ಹೇಗೆ ಉಪಯೋಗಿಸಿಕೊಳ್ಳಬಹುದು ಮತ್ತು ಅದನ್ನು ನೈಜ ಪ್ರಪಂಚದಲ್ಲಿ ಹೇಗೆ ಊಹಿಸಬಹುದು ಅಥವಾ ನಿರೀಕ್ಷಿಸಬಹುದು ಎಂಬುದನ್ನು ಅಂತಿಮವಾಗಿ ತೀರ್ಮಾನಿಸಲಾಗುತ್ತದೆ.

**ವೈಜ್ಞಾನಿಕ ನಿಯಮ:**

ವೈಜ್ಞಾನಿಕ ನಿಯಮವೆಂದರೆ ಪ್ರಪಂಚದಲ್ಲಿ ಪ್ರಾಯೋಗಿಕ ವೀಕ್ಷಣೆಯಿಂದ ವಿವರಿಸಲ್ಪಟ್ಟ ಹಲವು ಹೇಳಿಕೆಗಳಾಗಿವೆ. ವೈಜ್ಞಾನಿಕ ನಿಯಮಗಳು ಯಾವಾಗಲೂ ಹಲವು ಷರತ್ತುಗಳ ಅಡಿಯಲ್ಲಿ ಅನ್ವಯವಾಗುತ್ತಿರುತ್ತವೆ. ಅಷ್ಟೇ ಅಲ್ಲದೆ ಕಾರಣ/ಪರಿಣಾಮ ಸಂಬಂಧವನ್ನು ವಿವರಿಸುತ್ತಿರುತ್ತವೆ.

ನಿಯಮವು ವೈಜ್ಞಾನಿಕ ಸಿದ್ಧಾಂತಕ್ಕಿಂತ ವಿಭಿನ್ನವಾಗಿರುತ್ತದೆ. ಇದು ಯಾವುದೇ ವಿವರಣೆಯ ಮೇಲೆ ಪರಿಣಾಮ ಬೀರುವುದಿಲ್ಲ. ಇದು ವೀಕ್ಷಣೆಯ ಪುನರಾವರ್ತನೆಯಿಂದ ಶುದ್ಧವಾಗಿ ಭಟ್ಟಿ ಇಳಿಸಿದ ಫಲಿತಾಂಶವಾಗಿರುತ್ತದೆ. ಇದರಿಂದ ನಿಯಮವು ಈಗಾಗಲೇ ವೀಕ್ಷಿಸಿ ಪರೀಕ್ಷಿಸಿ ಹೊರತಂದಿರುವುದರಿಂದ ಇದನ್ನು ತಪ್ಪಾಗಿ ಬದಲಾಯಿಸಲು ಸಾಧ್ಯವಿಲ್ಲ ಇದು ಇದರ ಮಿತಿಯಾಗಿರುತ್ತದೆ. ಹಲವು ನಿಯಮಗಳು ಗಣಿತ ಸಿದ್ಧಾಂತದ ರೂಪ ತಾಳುತ್ತದೆ ಮತ್ತು ಅದನ್ನು ಸೂತ್ರದ ರೀತಿಯಲ್ಲಿ ನಿರೂಪಿಸಬಹುದಾಗಿದೆ.

ವೈಜ್ಞಾಣಿಕ ನಿಯಮ ಎಂಬ ಪದವು ಸಾಂಪ್ರದಾಯಿಕವಾಗಿ ನೈಸರ್ಗಿಕ ವಿಜ್ಞಾನದೊಂದಿಗೆ ಸಂಬಂಧಿಸಿದೆ. ಅಷ್ಟೇ ಅಲ್ಲದೆ ಸಾಮಾಜಿಕ ವಿಜ್ಞಾನವೂ ಕೆಲವೊಂದು ನಿಯಮಗಳೊಂದಿಗೆ ಬೆಸೆದುಕೊಂಡಿದೆ. ಅಂದರೆ ಹಲವು ಸಿದ್ಧಾಂತಗಳು ಅಥವಾ ಪ್ರಾಕಲ್ಪನೆಗಳನ್ನು ಊಹಿಸಿ ಅದನ್ನು ನಿರೀಕ್ಷಿಸಬಹುದಾಗಿದೆ. ಅಂದರೆ ಕೆಲವೊಂದು ಹೊಸ ಸನ್ನಿವೇಶಗಳಲ್ಲಿ ಈ ಪ್ರಾಕಲ್ಪನೆಗಳನ್ನು ವೀಕ್ಷಿಸಿ ಅದನ್ನು ನಿಯಮದಿಂದ ಪ್ರತಿಪಾದಿಸಿ ಅಥವಾ ಪರಿಶೀಲಿಸಬಹುದಾಗಿದೆ. ಹಾಗೆಯೇ ಹೊಸ ದತ್ತಾಂಶದಿಂದ ಈಗಾಗಲೇ ಇರುವ ನಿಯಮ ಅಥವಾ ಪ್ರಾಕಲ್ಪನೆಯನ್ನು ಪರೀಕ್ಷಿಸಿ ಅದನ್ನು ತಿರಸ್ಕರಿಸಬಹುದು ಅಥವಾ ಸ್ವೀಕರಿಸಬಹುದಾಗಿದೆ. ಹೀಗೆ ವೈಜ್ಞಾನಿಕ ನಿಯಮ ಅಥವಾ ತತ್ವವು ಶಾಬ್ದಿಕ ಅಥವಾ ಗಣಿತೀಯ ಹೇಳಿಕೆಗಳಾಗಿದ್ದು ಅದು ಮೂಲಭೂತ ವೈಜ್ಞಾನಿಕ ನಿಯಮದೊಂದಿಗೆ ಸಂಬಂಧ ಹೊಂದಿದೆ.

ನಿಯಮವು ಒಂದು ಹೇಳಿಕೆಯಾಗಿದ್ದು ಇದು ಘಟನೆಗಳ ಆಧಾರದ ಮೇಲೆ ಪರಿಣಾಮ ಬೀರುತ್ತವೆ. ಇದು ಕೆಲವು ಸನ್ನಿವೇಶಗಳನ್ನಾಧರಿಸಿ ಪ್ರಸ್ತುತದಲ್ಲಿ ನಡೆಯುತ್ತದೆ.

ಚೇಂಬರ್ಸ್ ಡಿಕ್ಷನರಿಯ ಪ್ರಕಾರ ಇದು ಒಂದು ಚಿಂತನೆಯಾಗಿದ್ದು ಇದುವರೆವಿಗೂ ತಪ್ಪು ಎಂದು ಪ್ರತಿಪಾದಿಸಲ್ಪಡದೆ ಇರುವಂತಹುದಾಗಿದೆ. ಇದರ ಪ್ರಮುಖ ತತ್ವವೆಂದರೆ ವಿಚಾರವನ್ನು ಕಲೆ, ವಿಜ್ಞಾನ ಮತ್ತು ಇತರೆ ಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಪರೀಕ್ಷಿಸಲು ಒಪ್ಪಿರುವಂತಹದ್ದೇ ಆಗಿದೆ.

ಒಟ್ಟಿನಲ್ಲಿ ನಿಯಮವು ಒಂದು ಸಾಮಾನ್ಯ ವಿಜ್ಞಾನದ ನೈಸರ್ಗಿಕ ಸಿದ್ಧಾಂತದ ನಿಯಮ (ತತ್ವ)ವಾಗಿದ್ದು ಕೆಲವೊಮ್ಮೆ ಪ್ರಾಯೋಗಿಕತೆಯಿಂದ ಇದು ನೈಜವಾಗಿದೆಯೇ ಅಥವಾ ಇಲ್ಲವೇ ಎಂದು ಪರೀಕ್ಷೆಗೊಳಪಡುವಂತಹುದಾಗಿದೆ.

–ಡಾ. ಶೀಲಾ ಜಿ.

Digitised by Bharatavani, CIIL

## ಸೃಜನಾತ್ಮಕ ಬೋಧನೆ

ವಿದ್ಯಾರ್ಥಿಯ ಕಾರ್ಯನಿರ್ವಹಣೆ, ಕಲಿಕೆ ಮತ್ತು ಪ್ರಗತಿಯ ಪರಿಪೂರ್ಣ ಸಾಧ್ಯತೆಗಳನ್ನು ಸುಗಮವಾಗಿಸುವುದು ಬೋಧನೆಯ ಉದ್ದೇಶವಾಗಿದೆ. ಬೋಧನೆ ಮತ್ತು ಕಲಿಕೆಯ ಕಾರ್ಯವಿಧಾನದಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ಸೃಜನಾತ್ಮಕತೆ. ಸ್ಪಾರ್ಕೊ(1995) ಅವರ ಪ್ರಕಾರ ಕಲಿಕೆಯೇ ಸೃಜನಾತ್ಮಕ ಕ್ರಿಯೆಯಾಗಿದೆ. ಇಲ್ಲಿ ಮಾಹಿತಿಯನ್ನು ಸಂಬದ್ಧಗೊಳಿಸಲಾಗುತ್ತದೆ ಮತ್ತು ಮೊದಲಿದ್ದ ತಿಳಿವಳಿಕೆಗೆ ಹೊಸ ತಿಳಿವಳಿಕೆಯನ್ನು ಜೋಡಿಸಿ, ಹೊಸ ಸಂಬಂಧಗಳನ್ನು ಮತ್ತು ಅರ್ಥಗಳನ್ನು ಕಾಣುತ್ತಾ ಪ್ರತ್ಯೇಕವಾಗಿ ಅರ್ಥಪೂರ್ಣ ವಿನ್ಯಾಸವನ್ನಾಗಿ ಮಾಡಲಾಗುತ್ತದೆ. ವಿದ್ಯಾರ್ಥಿ ಎಲ್ಲಿದ್ದಾನೆ ಮತ್ತು ಶಿಕ್ಷಕ ಅವನನ್ನು ಎಲ್ಲಿಗೆ ಕರೆದೊಯ್ಯಬೇಕೆಂದುಕೊಂಡಿದ್ದಾನೆ ಇದರ ನಡುವಿನ ಅಂತರವನ್ನು ಅರ್ಥ ಮಾಡಿಕೊಂಡರೆ ಬೋಧನೆಯಿಂದ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಅಲ್ಲದೆ ಶಿಕ್ಷಕರಿಗೆ ವಿದ್ಯಾರ್ಥಿಯ ಕಾರ್ಯಸಾಮರ್ಥ್ಯ ಮತ್ತು ಅವನ/ಅವಳ ಕಾರ್ಯಸಾಧನೆಯ ನಡುವಿನ ಅಂತರದ ಕುರಿತು ಸ್ವಲ್ಪಮಟ್ಟಿನ ತಿಳಿವಳಿಕೆ ಇರಬೇಕಾಗುತ್ತದೆ. ವಿದ್ಯಾರ್ಥಿಯ ಕಾರ್ಯಸಾಮರ್ಥ್ಯದ ಹಾದಿಯಲ್ಲಿ ತಡೆಯಾಗುವ ಸಂಗತಿಗಳು ಯಾವುದಿರಬಹುದು? ಸಾಮಾನ್ಯವಾಗಿ, ಅದು ಸೋಲಿನ ಅಥವಾ ತರಗತಿಯಲ್ಲಿರುವ ಬೇರೆಯವರ ದೃಷ್ಟಿಯಲ್ಲಿ ಪೆದ್ದರಾಗಿ ಕಾಣುವ ಹೆದರಿಕೆ, ಸ್ವಸಾಮರ್ಥ್ಯದ ಕುರಿತಾಗಿ ಆತ್ಮವಿಶ್ವಾಸದ ಕೊರತೆ ಮತ್ತು ಹತಾಶೆಯಾಗಿರುತ್ತದೆ. ಈ ವಿಷಯಾಂಶಗಳು ಕಾರ್ಯಸಾಧನೆಯಲ್ಲಿ ಮಧ್ಯ ಪ್ರವೇಶಿಸುವುದನ್ನು ಕಡಿಮೆ ಮಾಡಿದರೆ ನಾವು ಕಾರ್ಯಸಾಮರ್ಥ್ಯವನ್ನು ಸಮೀಪಿಸುವುದು ಸಾಧ್ಯವಿದೆ. ಆದರೆ ಅದನ್ನು ಮಾಡುವುದಕ್ಕಿಂತ ಹೇಳುವುದು ಸುಲಭ. ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು, ಅದರಲ್ಲಿಯೂ ವಿಶೇಷವಾಗಿ ಸೃಜನಶೀಲ ಸಾಮರ್ಥ್ಯವನ್ನು ಹೊರಗೆಳೆಯಬೇಕಾದರೆ ಶಿಕ್ಷಕರ ಪ್ರಜ್ಞಾಪೂರ್ವಕ ಮತ್ತು ಸತತ ಪ್ರಯತ್ನವಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕೋಬ್ಸ್(1967) ಅವರು ವ್ಯಕ್ತಪಡಿಸಿರುವ ಅತೃಪ್ತಿಯನ್ನು ಯಾರಾದರೂ ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಹೇಳುತ್ತಾರೆ, 'ಔಪಚಾರಿಕ ಶಿಕ್ಷಣವು ಭವಿಷ್ಯವನ್ನು ಶೋಧಿಸುವುದಕ್ಕಿಂತ ಹೆಚ್ಚಾಗಿ ಭೂತವನ್ನು ಸಾರ್ವಕಾಲಿಕಗೊಳಿಸುವುದರಲ್ಲಿ ನಿರತವಾಗಿದೆ'. ಅವರು ಶಿಕ್ಷಣದಲ್ಲಿ ಸೃಜನಾತ್ಮಕತೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾರೆ. ನಿಕರ್‌ಸನ್(1999) ಅವರು ಹೇಳುತ್ತಾರೆ; 'ಸೃಜನಾತ್ಮಕತೆಯ ಕುರಿತಾಗಿ ಶಿಕ್ಷಣದ ಗುರಿಯು ಜನರ ದೀರ್ಘಾವಧಿಯ ಸಾಮರ್ಥ್ಯವನ್ನು ಮತ್ತು ಸೃಜನಶೀಲರಾಗುವ ಒಲವನ್ನು ಬೆಳೆಸುವುದೇ ಆಗಿದೆ. ಗುರಿ ಸಾಧನೆಯಾಗಿರುವುದೇ ಅಥವಾ ಎಷ್ಟರಮಟ್ಟಿಗೆ ಇದನ್ನು ಸಾಧಿಸಲಾಗಿದೆ ಎಂಬುದನ್ನು ನಿರ್ಧರಿಸುವುದು ವ್ಯಕ್ತಿಗೆ ಸಾಧ್ಯವಾಗಬೇಕು. ಬಾಲ್ಯದಲ್ಲಿ ಸೃಜನಾತ್ಮಕತೆಯನ್ನು ಪೋಷಿಸುವ ಪ್ರಯತ್ನಗಳನ್ನು ನಡೆಸುವುದರಿಂದ ವ್ಯಕ್ತಿಗಳು ಬೆಳೆದು ದೊಡ್ಡವರಾದ ಬಳಿಕ, ಅವರ ಸೃಜನಾತ್ಮಕತೆಯು ಹೆಚ್ಚುತ್ತದೆ ಎಂಬ ನಂಬಿಕೆ ಇದೆ.'(ಪುಟ: 406)

ಇಪ್ಪತ್ತೊಂದನೆಯ ಶತಮಾನದಲ್ಲಿ ಶಾಲೆಗಳಲ್ಲಿ ಯಾವ ವಿಧದ ಶಿಕ್ಷಕರ ಅಗತ್ಯ ಇರುತ್ತದೆ ಎಂಬುದನ್ನು ಕಾರ್ನೆಜಿ ಫಾರಮ್‌ನ ವರದಿ ಎಡ್ಯುಕೇಶನ್ ಆಂಡ್ ದಿ ಇಕನಾಮಿಸ್ ಟಾಸ್ಕ್ ಫೋರ್ಸ್ ಆನ್ ಟೀಚಿಂಗ್ ಆಸ್ ಎ ಪ್ರೊಫೆಶನ್ (1986)ನಲ್ಲಿ ಎತ್ತಿ ಹಿಡಿಯಲಾಗಿದೆ. ಈ ಅವಲೋಕನಗಳು ಭಾರತೀಯ ಸಂದರ್ಭಗಳಿಗೆ ಕೂಡಾ ಸುಸಂಗತವಾಗಿವೆ. ವರದಿಯ ವಿವರಗಳು ಹೀಗಿದೆ:

'ಶಾಲಾ ವ್ಯವಸ್ಥೆಯ ದೃಷ್ಟಿಯು ಬೋಧನೆಯಿಂದ ಕಲಿಕೆಗೆ, ವಿಷಯಾಂಶಗಳು ಮತ್ತು ದಿನನಿತ್ಯದ ಕಾರ್ಯಕಲಾಪಗಳ ನಿಷ್ಕ್ರಿಯ ಸ್ವೀಕಾರಗಳಿಂದ, ಸಮಸ್ಯೆಗಳಿಗೆ ಕ್ರಿಯಾತ್ಮಕವಾಗಿ ವಿಚಾರಗಳನ್ನು ಅನ್ವಯಿಸಿಕೊಳ್ಳುವಿಕೆಗೆ ಸ್ಥಾನಾಂತರಗೊಳ್ಳಬೇಕಾಗಿದೆ. ಇಲ್ಲಿ ಶಿಕ್ಷಕರು ತಿಳಿದುಕೊಳ್ಳಬೇಕಾಗಿರುವುದು ಏನೆಂದರೆ, ಎಲ್ಲಾ ವಿಧದ ಭೌತಿಕ ಮತ್ತು ಸಾಮಾಜಿಕ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರುವ ಹಾದಿಗಳನ್ನು, ದತ್ತಾಂಶಗಳು ಏಕಾಗಿ ಇವೆ ಮತ್ತು ಅವುಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು. ಬೇರೆಯವರು ಗೊಂದಲವಾಗಿ ಕಾಣುವುದರಲ್ಲಿ ವಿದ್ಯಾರ್ಥಿಗಳು ಅರ್ಥಪೂರ್ಣ ವಿನ್ಯಾಸಗಳನ್ನು ಕಾಣುವಂತೆ ವಿದ್ಯಾರ್ಥಿಗಳಿಗೆ ನೆರವಾಗುವ ಮತ್ತು ವಿದ್ಯಾರ್ಥಿಗಳಲ್ಲಿ ಅಪ್ಪಟ ಸೃಜನಾತ್ಮಕತೆಯನ್ನು ಪೋಷಿಸುವ ಮತ್ತು ಬೇರೆ ಜನರ ಕಾರ್ಯ ಗುಂಪುಗಳೊಂದಿಗೆ ಕೆಲಸ ಮಾಡುವಾಗ ಕಾರ್ಯವನ್ನು ಸಾಧಿಸಲು ತಾವೇ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಪಡೆದಿರಬೇಕು. ಅವರು ಎಲ್ಲ ಸಮಯದಲ್ಲಿ ಕಲಿಯಲು ಸಮರ್ಥರಾಗಿರಬೇಕು, ಏಕೆಂದರೆ, ಅವರು ಕೆಲಸವನ್ನು ಮಾಡಲು ಅಗತ್ಯವಿರುವ ತಿಳಿವಳಿಕೆ ಅಥವಾ ಜ್ಞಾನವು ಹೊಸ ಸವಾಲುಗಳಿಂದ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನಗಳ ಪ್ರಗತಿಯಿಂದ ಬದಲಾಗುತ್ತಾ, ಬೆಳೆಯುತ್ತಾ ಹೋಗುತ್ತದೆ. ಶಿಕ್ಷಕರು ತಾವು ತಿಳಿದಿರಬೇಕಾಗಿರುವುದೆಲ್ಲವನ್ನು ಅರಿತು ಶಾಲೆಗೆ ಬರುವುದಿಲ್ಲ. ಆದರೆ ತಾವು ಏನನ್ನು ತಿಳಿದುಕೊಂಡಿರಬೇಕು ಎನ್ನುವುದರ ಲೆಕ್ಕಾಚಾರ ನಡೆಸಿ, ಅದನ್ನು ಎಲ್ಲಿಂದ ಪಡೆಯಬೇಕೆಂದು ತಿಳಿದುಕೊಂಡು ಮತ್ತು ಇದರಿಂದ ಬೇರೆಯವರಿಗೆ ಹೇಗೆ ನೆರವಾಗಬಹುದು ಎಂದು ಅರ್ಥ ಮಾಡಿಕೊಳ್ಳಬೇಕು. ಶಿಕ್ಷಕರು ತಮ್ಮಷ್ಟಕ್ಕೆ ತಾವೇ ಆಲೋಚನೆ ನಡೆಸಬೇಕು. ಸ್ವತಂತ್ರವಾಗಿ ವರ್ತಿಸಲು ಮತ್ತು ಬೇರೆಯವರೊಂದಿಗೆ ಕಾರ್ಯ ನಿರ್ವಹಿಸಲು ಮತ್ತು ವಿಶ್ಲೇಷಣಾತ್ಮಕ ತೀರ್ಪನ್ನು ನೀಡಲು ಸಮರ್ಥರಾಗಿರಬೇಕು. ಅವರು ವ್ಯಾಪಕ ತಿಳಿವಳಿಕೆಯನ್ನು ಮತ್ತು ಆಳವಾದ ವಿವೇಚನೆಯನ್ನು ಹೊಂದಿರುವ ವ್ಯಕ್ತಿಗಳಾಗಬೇಕು.

ಇಂದು ನಮಗೆ ಗಣನೀಯ ಬೌದ್ಧಿಕ ಪಾಂಡಿತ್ಯವಿರುವ ಶಿಕ್ಷಕರ ಅಗತ್ಯವಿದೆ. ಅವರು ತಿಳಿದಿರುವುದನ್ನು ಮತ್ತು ತಿಳಿಯಲಿರುವುದನ್ನು ಸರಿಯಾದ ಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಮನಗಾಣಿಸಿ, ವಿದ್ಯಾರ್ಥಿಗಳು ಸೃಜನಶೀಲ ವ್ಯಕ್ತಿತ್ವವನ್ನು ಬೆಳೆಸಲು ಪ್ರಚೋದನೆಯನ್ನು ನೀಡಬೇಕಾಗಿದೆ. ಈ ಕಾರ್ಯವನ್ನು ಸಾಧಿಸಲು ಪ್ರತಿಯೊಬ್ಬ ಶಿಕ್ಷಕ ವಿಷಯದ ದೃಢವಾದ ತಿಳಿವಳಿಕೆಯನ್ನು, ಪಠ್ಯಕ್ರಮದ ತಿಳಿವಳಿಕೆ ಮತ್ತು ಬೋಧನಾ ಕಲೆಯ ತಿಳಿವಳಿಕೆಯನ್ನು ಹೊಂದಿರಬೇಕು. ಶಾಲಾ ಸುಧಾರಣೆಯ ಸಂದರ್ಭದಲ್ಲಿ 'ಯಾವುದು ಸರಿಯಾಗಿ

Digitised by Bharatavani, CIIL

ಹೊಂದಿಕೊಳ್ಳುವುದು' ಎನ್ನುವುದಕ್ಕಿಂತ 'ಯಾವುದು ಕಾರ್ಯಗತವಾಗುವುದು' ಎಂಬುದಕ್ಕೆ ಪ್ರಾಮುಖ್ಯತೆಯನ್ನು ದೊರಕಿಸುವ ಸಲುವಾಗಿ ಸಂಶೋಧಕರು, ಶೈಕ್ಷಣಿಕ ಕಾರ್ಯನೀತಿ ರೂಪಿಸುವವರು ಮತ್ತು ಅದನ್ನು ರೂಢಿಗೆ ತರುವವರ ಅಗತ್ಯವಿದೆ ಎಂದು ಹ್ಯಾರಿಸ್ (2000) ತಿಳಿಸುತ್ತಾರೆ.

**ಸೃಜನಾತ್ಮಕತೆ-ಶಿಕ್ಷಕ ಶಿಕ್ಷಣ ಮತ್ತು ಶಾಲಾ ಶಿಕ್ಷಣಕ್ಕೊಂದು ಸವಾಲು:**

ಶಿಕ್ಷಣವು ಉತ್ಕೃಷ್ಟತೆಯ ಕಡೆಗೆ ಸಾಗಬೇಕೆಂಬ ನಿರೀಕ್ಷೆಯಿಂದ ನಮ್ಮ ಸಮಾಜದ ಕೆಲವು ಅಪೂರ್ವ ಅಗತ್ಯಗಳು ಶಾಲಾ ಶಿಕ್ಷಣದಲ್ಲಿ ಮತ್ತು ಶಿಕ್ಷಕ ಶಿಕ್ಷಣದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಅಪೇಕ್ಷಿಸುತ್ತವೆ. ಈ ಅಪೇಕ್ಷೆಗೆ ಸಕಾರಣವಾಗಿ ಪ್ರತಿಕ್ರಿಯಿಸಿರುವ ಎನ್‌ಸಿಇಆರ್‌ಟಿ ಮತ್ತು ಎನ್‌ಸಿಟಿಇಗಳು ಭವಿಷ್ಯವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಶಾಲಾಶಿಕ್ಷಣದಲ್ಲಿ ಮತ್ತು ಶಿಕ್ಷಕ ಶಿಕ್ಷಣದಲ್ಲಿ ಅನುಕ್ರಮವಾಗಿ ಗಮನಾರ್ಹ ಬದಲಾವಣೆಗಳನ್ನು ತಂದಿವೆ. ಟಾರೆನ್ಸ್(1963) ಅವರು ಹೇಳುತ್ತಾರೆ, 'ಭವಿಷ್ಯದ ಶಾಲೆಗಳನ್ನು ಕಲಿಯುವುದಕ್ಕೆ ಮಾತ್ರವಲ್ಲ, ಚಿಂತನೆಗಾಗಿ ಕೂಡ ವಿನ್ಯಾಸಗೊಳಿಸಲಾಗುವುದು... ಇಂದಿನ ಶಾಲೆಗಳು ಮತ್ತು ಮಹಾವಿದ್ಯಾಲಯಗಳು ಯಾವ ವಿಧದ ಪುರುಷರನ್ನು ಮತ್ತು ಮಹಿಳೆಯರನ್ನು ಸೃಷ್ಟಿಸಬೇಕೆಂದರೆ, ಅವರು ಆಲೋಚಿಸಬಲ್ಲವರು, ಹೊಸ ವೈಜ್ಞಾನಿಕ ಆವಿಷ್ಕಾರಗಳನ್ನು ನಡೆಸಬಲ್ಲವರು, ಪ್ರಚೋದನೆಯಿಂದ ಹುಟ್ಟಿಕೊಳ್ಳುವ ಜಾಗತಿಕ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವವರು, ಮತ್ತು ಸುಲಭವಾಗಿ ಮರುಳಾಗದವರಾಗಿರಬೇಕು. ತ್ವರಿತಗತಿಯ ಈ ಯುಗದಲ್ಲಿ ಬದಲಾವಣೆಗೆ ಹೊಂದಿಕೊಳ್ಳುವ ಮತ್ತು ಸ್ವಸ್ಥಚಿತ್ತವನ್ನು ಕಾಪಾಡಿಕೊಂಡು ಬರತಕ್ಕಂತಹ ಪುರುಷರು ಮತ್ತು ಮಹಿಳೆಯರಿಗಾಗಿ ಒತ್ತಾಯಪೂರ್ವಕ ಬೇಡಿಕೆಯನ್ನು ಮುಂದಿಡಲಾಗುತ್ತದೆ. ಶಿಕ್ಷಣಕ್ಕೆ ಇದು ಸೃಜನಾತ್ಮಕ ಸವಾಲಾಗಿದೆ.'(ಪುಟ: 4) ಶಿಕ್ಷಕ ಶಿಕ್ಷಣ ಮತ್ತು ಶಾಲಾ ಶಿಕ್ಷಣದಲ್ಲಿ ಬದಲಾವಣೆಗಳು ನಡೆಯುತ್ತಿದ್ದರೂ ಹೆಚ್ಚಿನ ಸಂಖ್ಯೆಯ ಶಿಕ್ಷಕರು ಪರಿಚಿತವಾದ ಸಾಂಪ್ರದಾಯಿಕ ಬೋಧನಾ ವಿಧಾನಗಳತ್ತಲೇ ಒಲವನ್ನು ತೋರುತ್ತಿದ್ದಾರೆ. ಬೋಧನೆಯಲ್ಲಿ ಮೊದಲೇ ನಿಗದಿಪಡಿಸಿರುವ ವಿಚಾರಗಳಿಗೆ ಸ್ಥಾನವಿಲ್ಲ. ಶಿಕ್ಷಕರ ಮನಸ್ಸು ಮುಕ್ತವಾಗಿ ಇರಬೇಕಾದ ರೀತಿಯಲ್ಲಿ ಇಲ್ಲದಿರುವುದರಿಂದ ಅವರು ಅನೇಕ ಬಾರಿ ಉತ್ಕೃಷ್ಟ ವಿಚಾರಗಳಿಂದ ವಂಚಿತರಾಗುತ್ತಾರೆ. ಶಿಕ್ಷಕರು ವಿಚಾರಗಳಿಗೆ ಮತ್ತು ಸೂಚನೆಗಳಿಗೆ ಹೆಚ್ಚು ಹೆಚ್ಚು ಮುಕ್ತರಾದಂತೆ, ಅದರಿಂದ ಅವರಿಗೆ ತಮ್ಮ ಬೋಧನೆಯನ್ನು ಹೆಚ್ಚು ಸೃಜನಾತ್ಮಕವಾಗಿಸಲು ಅನುಕೂಲಗಳು ದೊರೆಯುವ ಸಾಧ್ಯತೆಗಳಿವೆ. ಮಾನವ ಮನಸ್ಸು ಕ್ರಿಯಾಶೀಲವಾದುದು ಮತ್ತು ಬದಲಾವಣೆ ಹೊಂದಬಲ್ಲ ರೀತಿಯದು. ಇಲ್ಲಿ ಅಗತ್ಯವಿರುವ ಒಂದೇ ವಿಚಾರವೇನೆಂದರೆ, ಶಿಕ್ಷಕರು ಬದಲಾಗಲು ಸಿದ್ಧವಾಗಿರಬೇಕು. ನಾವು ಬೋಧನೆಯೆಂದು ಕರೆಯಲ್ಪಡುವ ಈ ವಿಸ್ಮಯಕಾರಿ ಪ್ರಯಾಣದ ಯಾವ ಯುಗದಲ್ಲಿ ಮತ್ತು ಯಾವ ಹಂತದಲ್ಲಿ ನಾವು ಇದ್ದರೂ ಈ ಮಾಹಿತಿ ತಂತ್ರಜ್ಞಾನದ ಕಾಲದಲ್ಲಿ ನಾವು ಬೋಧನೆಯ ಕುರಿತಾದ ಉತ್ತಮ ವಿಚಾರಗಳನ್ನು ಮತ್ತು ತಂತ್ರಗಳನ್ನು ಹೇಗೆ ತಾನೇ ದೂರವಿರಿಸಿಕೊಳ್ಳಬಲ್ಲೆವು? ಹೇಗೆ ತಾನೇ ನಾವು ಪರಿವರ್ತನೆಗೆ ನಮ್ಮ ಮನಸ್ಸನ್ನು ಮುಚ್ಚಿಟ್ಟು, ಅವುಗಳನ್ನು ಪಳೆಯುಳಿಕೆಗಳಾಗಿಸಬಲ್ಲೆವು? ಕ್ಯಾಥರಿನ್ ದೆವ್ರೆ (2001) ಉದ್ಧರಿಸಿರುವ ರಾಬರ್ಟ್ ದರ್ರಾಹ್ ಅವರ ಮಾತುಗಳು ಹೀಗಿವೆ: 'ಮನಸ್ಸುಗಳು ಇಳಿಕೊಡೆಗಳ(ಪ್ಯಾರಾಚೂಟ್) ಹಾಗೆ, ಬಿಡಿಸಿ ಇಡದೇ ಹೋದರೆ ಅಪಾಯ ಖಂಡಿತ." ನಮ್ಮಲ್ಲಿ ಇನ್ನೂ ಕೆಲವು ಶಿಕ್ಷಕರು ಇದ್ದಾರೆ, ಅವರು ಸಂಖ್ಯೆಯಲ್ಲಿ ಕಡಿಮೆ ಇರಬಹುದು, ಆದರೆ ತುಂಬಾ ಯಶಸ್ವಿ ಹಾಗೂ ಪ್ರಾಯಶಃ ಸೃಜನಾತ್ಮಕವಾಗಿರುವವರು. ಅವರು ಹೆಚ್ಚು ಹಣ ಸಂಪಾದಿಸಲು ಹೋಗಲಿಲ್ಲ. ಆದರೆ ಬೇರೆಯವರ-ವಿದ್ಯಾರ್ಥಿಗಳ, ಶಿಕ್ಷಕರ, ಹೆತ್ತವರ ಮತ್ತು ಆಡಳಿತಗಾರರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನೆರವಾಗಿದ್ದಾರೆ. ಇಂತಹ ಶಿಕ್ಷಕರನ್ನು ನಾವು ಗುರುತಿಸಬೇಕು, ಮೆಚ್ಚಿಕೊಳ್ಳಬೇಕು ಮತ್ತು ಬಹುಮಾನಿಸಬೇಕು.

**ಸೃಜನಾತ್ಮಕತೆ ಮತ್ತು ಶಿಕ್ಷಕ-ಶಿಕ್ಷಣ ಪಠ್ಯಕ್ರಮ:**

ರಾಜ್ಯದಿಂದ ರಾಜ್ಯಕ್ಕೆ ಮತ್ತು ರಾಜ್ಯದೊಳಗೆ ವಿಶ್ವವಿದ್ಯಾಲಯದಿಂದ ವಿಶ್ವವಿದ್ಯಾಲಯಕ್ಕೆ ಭಿನ್ನವಾಗಿರುವ ನಮ್ಮ ಬಹುಪಾಲು ಶಿಕ್ಷಕ-ಶಿಕ್ಷಣ ಪಠ್ಯಕ್ರಮಗಳು ಸೃಜನಾತ್ಮಕತೆಯ ಕುರಿತ ವಿಷಯವನ್ನು(ಟಾಪಿಕ್) ಸೇರಿಸಿಕೊಂಡಿಲ್ಲ. ದುರಾದೃಷ್ಟವಶಾತ್ ಇದು ಸೃಜನಾತ್ಮಕತೆ ಮತ್ತು ಅದರ ಬೆಳೆಸುವಿಕೆ ಮತ್ತು ಶಿಕ್ಷಣದಲ್ಲಿ ಅದರ ಅಗತ್ಯ ಮತ್ತು ಪ್ರಾಮುಖ್ಯತೆಯ ಕುರಿತಾಗಿ ಸಾವಿರಾರು ಶಿಕ್ಷಕರಲ್ಲಿ ಅಜ್ಞಾನವನ್ನು ಉಂಟುಮಾಡಿದೆ. ಆದುದರಿಂದ, ದೇಶದ ಎಲ್ಲೆಡೆಗಳಲ್ಲಿ ಶಿಕ್ಷಕ-ಶಿಕ್ಷಣ ಪಠ್ಯಕ್ರಮವನ್ನು ಮರುಪರಿಶೀಲಿಸುವ ತುರ್ತು ಅಗತ್ಯ ಇದೆ. ಹೀಗೆ ಮಾಡುವುದರಿಂದ ಈ ಕ್ಷೇತ್ರದಲ್ಲಿ ನಡೆಯುವ ಬೆಳವಣಿಗೆಗಳ ಕುರಿತು ಶಿಕ್ಷಕರಿಗೆ ಮೂಲಭೂತ ತಿಳಿವಳಿಕೆ ದೊರೆಯುತ್ತದೆ. ಶಿಕ್ಷಕ-ಶಿಕ್ಷಣ ಮತ್ತು ಶಾಲಾ ಶಿಕ್ಷಣದಲ್ಲಿ ಆಯ್ದ ಗುರಿಗಳಾಗಿರಬೇಕಾದುದು ಉತ್ಕೃಷ್ಟತೆ ಮತ್ತು ಗುಣಮಟ್ಟ. ಆನಂತರ, ಶಿಕ್ಷಕ-ಶಿಕ್ಷಣ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳ ಪರಿಣಾಮಗಳನ್ನು ಅಳೆಯಬೇಕು ಮತ್ತು ತಮ್ಮ ಬೋಧನಾ ವಿಧಾನಗಳ ಮೌಲ್ಯಮಾಪನವನ್ನು ನಡೆಸಬೇಕು. ಈ ವಿಧದ ನಿಗದಿತ ಕಾರ್ಯಗಳು ನಡೆಯದೇ ಇದ್ದರೆ ಬೋಧನೆ ಮತ್ತು ಕಲಿಕೆಯ ಗುಣಮಟ್ಟವನ್ನು ಅವರು ಸುಧಾರಿಸಲು ಸಮರ್ಥರಾಗುವುದು ಸಂದೇಹ. ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಶಿಕ್ಷಣಾರ್ಥಿಗಳು ಎಷ್ಟರಮಟ್ಟಿಗೆ ತಮ್ಮ ಸೃಜನಾತ್ಮಕ ಪ್ರತಿಭೆಯನ್ನು ಬೆಳೆಸಿಕೊಳ್ಳಬಲ್ಲರು ಎನ್ನುವುದು ಶಿಕ್ಷಕ-ಶಿಕ್ಷಣ ತಜ್ಞರು ಸೃಜನಶೀಲ ಬೋಧನೆಗೆ ನೀಡುವ ಸಮಯ ಮತ್ತು ಪ್ರಯತ್ನದ ಒಟ್ಟು ಪ್ರಮಾಣದ ಕಾರ್ಯಗತಿಯಲ್ಲಿ ಇದೆ. ಸೃಜನಾತ್ಮಕ ಬೊಧನೆ ಮತ್ತು ಕಲಿಕೆಯ ಕಾರ್ಯವಿಧಾನವನ್ನು ಪ್ರಾರಂಭಿಸುವುದು ಮತ್ತು ಅದರಲ್ಲಿ ಸುಧಾರಣೆಯನ್ನು ತರುವುದಕ್ಕೆ ಸಂಶೋಧನಾಕೇಂದ್ರಿತ ಪ್ರಯತ್ನದ ಅಗತ್ಯವಿದೆ. ನಮ್ಮ ಶಿಕ್ಷಕ-ಶಿಕ್ಷಣ ಸಂಸ್ಥೆಗಳು ಹೆಚ್ಚು ಸಾಹಸಮಯ, ಹೆಚ್ಚು ವರ್ಣಮಯ ಮತ್ತು ಬೋಧನೆಯ ಹೊಸತನಗಳಲ್ಲಿ ಹೆಚ್ಚು ಆಸಕ್ತಿ ಹೊಂದುವುದಕ್ಕೆ ಅದು ಸಬಲೀಕರಣವನ್ನು ಹೊಂದಬೇಕಾಗಿದೆ. ಶೈಕ್ಷಣಿಕ ಉತ್ಕೃಷ್ಟತೆಯ

Digitised by Bharatavani, CIIL

ದೃಷ್ಟಿಯಿಂದ ಸೃಜನಶೀಲ ಬೆಳವಣಿಗೆಯನ್ನು ತನ್ನದಾಗಿಸಿಕೊಂಡರೆ, ನಮ್ಮ ಸಂಸ್ಥೆಗಳು ಈಗಾಗಲೇ ನಡೆಸಿಕೊಂಡು ಬಂದಿರುವ ಕಾರ್ಯಗಳನ್ನು ಮತ್ತು ಪಾತ್ರಗಳನ್ನು ಕೈಬಿಡುವ ಅಗತ್ಯವೇನಿಲ್ಲ. ಅದು ಉತ್ತಮ ಬೋಧನೆ ಮತ್ತು ಕಲಿಕೆಯ ಕಡೆಗಿನ ಅಗತ್ಯದ ಮತ್ತು ಬಹುಮುಖ್ಯ ಚಲನೆಯಾಗುತ್ತದೆ. ಪ್ರತಿಭೆಯನ್ನು ಬೆಳೆಸುವ ಉದ್ದಿಷ್ಟಕಾರ್ಯವನ್ನು ಹೊಂದಿರುವ ನಮ್ಮ ಶೈಕ್ಷಣಿಕ ಸಂಸ್ಥೆಗಳು ಈ ಕಾರ್ಯಕ್ಕಾಗಿ ವಿಶಿಷ್ಟ ಅರ್ಹತೆಯನ್ನು ಪಡೆದಿವೆ. ಆದರೆ ಇದನ್ನು ನಡೆಸುವ ಇಚ್ಛೆ, ತರಬೇತಿ ಮತ್ತು ದೃಢಸಂಕಲ್ಪ ಇರಬೇಕು ಅಷ್ಟೇ. ಕಾರ್ಟರ್(1992) ಸೂಚಿಸಿದಂತೆ, ಶಿಕ್ಷಕರು ಸೃಜನಾತ್ಮಕ ಬೋಧನೆ ಮತ್ತು ಸೃಜನಾತ್ಮಕ ಕಲಿಕಾ ಅನುಭವಗಳೆರಡಕ್ಕೂ ತಮ್ಮ ಮನಸ್ಸನ್ನು ತೆರೆದುಕೊಂಡಿರಬೇಕು. ಪ್ರಶಿಕ್ಷಕರು ಮತ್ತು ಶಿಕ್ಷಕರು ಇವರಿಬ್ಬರೂ ವೃತ್ತಿಪರ ತಯಾರಿ, ಬದ್ಧತೆ ಮತ್ತು ಕಾರ್ಯನಿರ್ವಹಣೆಯಲ್ಲಿ ಉನ್ನತ ಮಟ್ಟಗಳನ್ನು ತಲುಪದಿದ್ದರೆ ನಾಟಕೀಯ ಸುಧಾರಣೆಗಳು ಸಾಧ್ಯವಾಗುವುದಿಲ್ಲ.

ಮೇಲೆ ತಿಳಿಸಿರುವುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಸೃಜನಾತ್ಮಕತೆಯ ಪರಿಕಲ್ಪನೆ, ಅದರ ಅಗತ್ಯ ಮತ್ತು ಅದರ ಸ್ವರೂಪವನ್ನು ಇವತ್ತಿನ ದಿನ ಹೇಗೆ ತಿಳಿದುಕೊಳ್ಳಲಾಗಿದೆ ಎಂಬುದನ್ನು ಪ್ರಶಿಕ್ಷಕರಿಗೆ ಮತ್ತು ಶಿಕ್ಷಕರಿಗೆ ಪರಿಚಯಮಾಡಿಕೊಡಲು ಪ್ರಯತ್ನಿಸಲಾಗಿದೆ. ಶಿಕ್ಷಕರನ್ನು ಜನಪ್ರಿಯಗೊಳಿಸುವ ಪ್ರಯತ್ನವೊಂದನ್ನು ನಡೆಸಲಾಗಿದೆ. ಈ ಹಿನ್ನೆಲೆಯ ತಿಳಿವಳಿಕೆಯು ಶಿಕ್ಷಣದಲ್ಲಿ ಸೃಜನಾತ್ಮಕತೆಯ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಲು ಶಿಕ್ಷಕರಿಗೆ ಅನುವು ಮಾಡಿಕೊಡುತ್ತದೆ ಮತ್ತು ಸೃಜನಾತ್ಮಕ ಬೋಧನೆಯ ಕಡೆಗೆ ಕಾರ್ಯಾಪ್ರವೃತ್ತರಾಗಲು ಅವರಿಗೆ ಪ್ರೇರಣೆ ನೀಡಿ, ಸೃಜನಾತ್ಮಕ ಕಲಿಕೆಯ ಹುಟ್ಟಿಗೆ ಕಾರಣವಾಗುತ್ತದೆ.

**ಸೃಜನಾತ್ಮಕತೆಯ ಚಳವಳಿ:**

ಶಿಲಾಯುಗದಿಂದ ವ್ಯೋಮಯುಗದವರೆಗಿನ ನಾಗರಿಕತೆಯ ಕತೆಯು ಮಾನವನ ಉಜ್ವಲ ಸೃಜನಾತ್ಮಕ ಸಾಮರ್ಥ್ಯಗಳ ಕತೆಯಾಗಿದೆ. ಬಹಳಷ್ಟು ಸಂದರ್ಭಗಳಲ್ಲಿ ಪ್ರತಿಯೊಂದು ನಾಗರಿಕ ಕಾರ್ಯ ಅಥವಾ ಉತ್ಪನ್ನದ ಹಿಂದೆ ಇದ್ದದ್ದು ಸೃಜನಾತ್ಮಕ ಮೆದುಳು. ಕಾರ್ಲ್ ಬ್ರಾಂಡ್ಟ್ ಹೇಳಿರುವ ಹಾಗೆ, 'ಅಂತಿಮವಾಗಿ ಮನುಷ್ಯನ ಮಿದುಳು ಅತ್ಯಂತ ಶ್ರೇಷ್ಠ ಪ್ರಾಕೃತಿಕ ಸಂಪನ್ಮೂಲ'ವಾಗಿದೆ. ಪ್ರತಿಯೊಂದು ಸೃಜನಾತ್ಮಕ ಕಾರ್ಯವು ಮನುಷ್ಯನಿಗೆ ಹೊಸ ಘನತೆಯನ್ನು ತಂದುಕೊಟ್ಟಿದೆ ಮತ್ತು ಮನುಷ್ಯನ ಹೊಸ ಘನತೆ ನಾಗರಿಕತೆಯ ಬೆಳವಣಿಗೆಗೆ ಸೇರಿದೆ. ಕ್ರಾಫರ್ಡ್ ಸರಿಯಾಗಿಯೇ ಹೇಳಿದ್ದಾರೆ, 'ನಾಗರಿಕತೆಯು ಸೃಷ್ಟಿಯ ಮಿಲಿಯಗಟ್ಟಳೆ ಚೂರುಗಳನ್ನು ಪ್ರತಿನಿಧಿಸುತ್ತದೆ, ಇದರಲ್ಲಿ ಪ್ರತಿಯೊಂದು ಒಬ್ಬರಲ್ಲ ಒಬ್ಬರು ಸೇರಿಸಿದ್ದೇ ಆಗಿದೆ. ಭಾವನೆಗಳನ್ನು ಒಂದರ ಮೇಲೆ ಇನ್ನೊಂದರಂತೆ ಪೇರಿಸಿಟ್ಟು ಚರಿತ್ರೆಯನ್ನು ರೂಪಿಸಲಾಗಿದೆ.' ಶತಮಾನಗಳುದ್ದಕ್ಕೂ ಮನುಷ್ಯ ನಡೆಸಿದ ಸೃಜನಾತ್ಮಕ ಕಾರ್ಯಗಳೆಲ್ಲವನ್ನೂ ಪಟ್ಟಿ ಮಾಡುವುದು ಸಾಧ್ಯವೇ ಎಂದು ಯಾರಾದರೂ ಆಶ್ಚರ್ಯಪಡಬಹುದು. ಪ್ರಾಚೀನರಲ್ಲಿ ಕೆಲವು ಸೃಜನಶೀಲ ವ್ಯಕ್ತಿಗಳು ಇದ್ದರು. ಆದರೆ ಇವರ ಕುರಿತು ಅಲ್ಪ ಮಾಹಿತಿ ದೊರೆಯಬಹುದು ಅಥವಾ ಮಾಹಿತಿ ಇಲ್ಲದೆಯೂ ಇರಬಹುದು. ಆದರೆ ಅವರ ಸೃಷ್ಟಿಗಳು ಮಾತ್ರ ಅಮರವಾಗಿ ಉಳಿದುಬಂದಿವೆ. ಉದಾಹರಣೆಗೆ ಶಿಲಾಯುಗದವರಲ್ಲಿ ಬೆಂಕಿ ಮತ್ತು ಚಕ್ರದ ಬಳಕೆಯಂತಹ ಬೃಹತ್ ಸಂಶೋಧನೆಗಳ ಸೃಷ್ಟಿಗೆ ಕಾರಣವಾದ ಸೃಜನಾತ್ಮಕ ಕಲ್ಪನೆಯನ್ನು ಹೊಂದಿದವರು ಇದ್ದರು. ಟೊನಿಬೀ ಬರೆಯುತ್ತಾರೆ, 'ಕೆಲವು ಸೃಜನಶೀಲ ಮನಸ್ಸುಗಳು ನಾಗರಿಕತೆಯಲ್ಲಿ ಅಪಾರ ಬದಲಾವಣೆಯನ್ನು ಉಂಟುಮಾಡಬಲ್ಲವು.'

ಮನುಷ್ಯನ ಮನಸ್ಸು ಸೃಜನಶೀಲವಾದುದು. ಅದರಲ್ಲಿಯೂ ನಮ್ಮ ಇರುವಿಕೆಯೇ ಒಂದು ನೈಜ ವಿಸ್ಮಯಯಕಾರಿ ವಾಸ್ತವತೆ ಎಂದು ಎಲ್ಲ ಯುಗದವರು ಹೇಳಿದ್ದಾರೆ. ಮನುಷ್ಯನ ಸೃಜನಶೀಲ ಉತ್ಕೃಷ್ಟತೆಯನ್ನು ತಿಳಿಯುವ ಸಲುವಾಗಿ ತಾರ್ಕಿಕ ವಾದಗಳನ್ನು ನಡೆಸಲಾಗಿದೆ. ಮನುಷ್ಯನ ಶ್ರೇಷ್ಠ ಕಾರ್ಯಗಳು ದೇವರಿಗೆ ಸೇರಿದ್ದು ಎಂದು ಹೇಳುವುದು ಪ್ರಾಚೀನ ಸಂಪ್ರದಾಯವಾಗಿದೆ. ಮುರ್ರೆ(1950) ಮಾತಿನಲ್ಲಿ ಹೇಳುವುದಾದರೆ, ಹಿಂದಿನವರಿಗೆ ಸೃಜನಾತ್ಮಕತೆಯು, 'ಗೌಣಲಕ್ಷಣದ ಶಕ್ತಿ'ಯಾಗಿದೆ. ಭಾರತೀಯರ ದೃಷ್ಟಿಯಲ್ಲಿ ಸೃಜನಾತ್ಮಕತೆಯು 'ಅಧ್ಯಾತ್ಮಿಕ ಮನೋಗ್ರಾಹ್ಯ ಅಂಶ'ಗಳ ರೂಪವಾಗಿದೆ. ಹಾಲ್‌ಮನ್(1970) ಕಂಡ ಹಾಗೆ, 'ಭಾರತೀಯ ಸಂಸ್ಕೃತಿಯಲ್ಲಿ ಸೃಜನಾತ್ಮಕತೆಯ ಕೆಲವು ವೈಜ್ಞಾನಿಕ ಮತ್ತು ಗಣಿತದ ಮಾದರಿಗಳನ್ನು ಒದಗಿಸುತ್ತದೆ. ಇವು ಸಿದ್ಧಾಂತವೊಂದಕ್ಕೆ ನಿದರ್ಶನವಾಗಿ ನಿಲ್ಲುತ್ತವೆ. ಆದರೆ ಪಶ್ಚಿಮದಲ್ಲಿ ವೈಜ್ಞಾನಿಕ ವಿಧಾನವು ಸಮಸ್ಯೆಯನ್ನು ಪರಿಹರಿಸುವುದಕ್ಕೆ ಪರ್ಯಾಯವಾಗುತ್ತದೆ. ವಿಜ್ಞಾನದಲ್ಲಿ ಗೆಲಿಲಿಯೋ ಮತ್ತು ಐನ್‌ಸ್ಟೀನ್, ಗಣಿತದಲ್ಲಿ ದೆಸ್ಕರಟಿಸ್ ಮತ್ತು ಪಾಯನ್ಕೇರ್‌ರ ಕಾರ್ಯಗಳು ಪಾಶ್ಚಾತ್ಯ ಸಿದ್ಧಾಂತವನ್ನು ರೂಪಿಸುವುದಕ್ಕಾಗಿ ಕಲಾವಿದರು ಮತ್ತು ಬರೆಹಗಾರರ ಉತ್ಪಾದನೆಗಳೊಂದಿಗೆ ಜೋಡಿಸಲ್ಪಟ್ಟಿವೆ. ಆದರೆ ಹಿಂದೂಧರ್ಮವು ಬಹುತೇಕವಾಗಿ ಧಾರ್ಮಿಕ ಮತ್ತು ಕಲಾತ್ಮಕ ಅನುಭವಗಳ ಮೇಲೆ ಪ್ರತ್ಯೇಕವಾಗಿ ಆಧರಿಸಿಕೊಂಡು ಇದೆ. ಈ ರೀತಿಯಾಗಿ ಪಶ್ಚಿಮದಲ್ಲಿ ವಿಜ್ಞಾನದ ಮೇಲಿನ ಒತ್ತು ಸೃಜನಾತ್ಮಕತೆಯನ್ನು ಸೃಷ್ಟಿಸಲು ಶಕ್ತಿಯುಳ್ಳದ್ದರೊಂದಿಗೆ ಸೇರುತ್ತದೆ. ಭಾರತದಲ್ಲಿ ಧಾರ್ಮಿಕ ಸಂಪ್ರದಾಯವು ಆಧ್ಯಾತ್ಮಿಕ ಆತ್ಮ-ಸಿದ್ಧಿಯೊಂದಿಗೆ ಸೇರುತ್ತದೆ' (ಪುಟ: 369). ಹೀಗೆ ಭಾರತೀಯರು ಅನೇಕ ಶತಮಾನಗಳಿಂದ, ಕಲಾತ್ಮಕವಾಗಿ ಮತ್ತು ಆಧ್ಯಾತ್ಮಿಕವಾಗಿ ಕೇಂದ್ರೀಕೃತಗೊಂಡಿರುವ ಸೃಜನಾತ್ಮಕತೆಗೆ ಒತ್ತನ್ನು ನೀಡುತ್ತಾ ಬಂದಿದ್ದಾರೆ. ಆದುದರಿಂದ, ಪ್ರಾಯಶಃ 20ನೇ ಶತಮಾನದ ಕೊನೆಯವರೆಗೆ ವಿಜ್ಞಾನಗಳಲ್ಲಿ ಸೃಜನಾತ್ಮಕತೆಯು ಹೆಚ್ಚಿನ ಆವೇಗವನ್ನು ಸಾಧಿಸಿಲ್ಲ. ಚಕ್ರವರ್ತಿ (1988) ಬರೆಯುತ್ತಾರೆ: 'ಭಾರತೀಯ ಮನಃಶಾಸ್ತ್ರವು (ಯೋಗ ಅಥವಾ ಬೌದ್ಧರ ಅಥವಾ ವೇದಾಂತದ) ಇಡೀ ಜಗತ್ತನ್ನು ಅತ್ಯುನ್ನತ ಸೃಜನಶೀಲ ಪ್ರತಿಭೆಯ ಅಥವಾ ಪ್ರಜ್ಞೆಯ ಅಥವಾ ನಿಯಮದ ಅತಿಶ್ರೇಷ್ಠ ಸೃಜನಶೀಲ ಕಾರ್ಯವೆಂದು ಕಾಣುವುದರ ಮೂಲಕ ಪ್ರಾರಂಭವಾಗುತ್ತದೆ... ಅದು ವೈಯಕ್ತಿಕ ಪ್ರತಿಭೆ ಅಥವಾ ಪ್ರಜ್ಞೆಯನ್ನು ಅತ್ಯುನ್ನತ ಪ್ರತಿಭೆ ಅಥವಾ ಪ್ರಜ್ಞೆಯ ಅಖಂಡ ಭಾಗವೆಂದು ಸಾಧಿಸುತ್ತದೆ. ಆದರೆ ಅದನ್ನು ಗ್ರಹಿಸಲು ನಮ್ಮ ಸ್ಥೂಲ ಮತ್ತು

Digitised by Bharatavani, CIIL

ವಿಕ್ಷಿಪ್ತ ಮನಸ್ಸು ಅಸಮರ್ಥವಾಗುತ್ತದೆ. ಆದರೂ, ಈ ಎಲ್ಲೆಯಿಲ್ಲದ, ದೋಷಾತೀತ, ಸೃಜನಶೀಲ ಮೂಲತತ್ವದ ಬಳಿಸಾರುವುದು ಮನುಷ್ಯನ ಅವಿಚ್ಛಿನ್ನ ಹಕ್ಕು ಮತ್ತು ವಿಶೇಷ ಸೌಲಭ್ಯವಾಗಿದೆ. ವೈಯಕ್ತಿಕ ಸೃಜನಾತ್ಮಕತೆ ಮತ್ತು ವಿಶ್ವವ್ಯಾಪಿ ಸೃಜನಾತ್ಮಕತೆಗಳು ಸಮಾನ ಸಾರಭೂತ ಲಕ್ಷಣವನ್ನು ಹೊಂದಿವೆ'. ಸೃಜನಾತ್ಮಕತೆಯ ಈ ನಿದರ್ಶನಕ್ಕೆ ಗಂಭೀರ ಪರಿಗಣನೆಯ ಅರ್ಹತೆಗಳಿವೆ.

ಮನುಷ್ಯನ ಉತ್ಕೃಷ್ಟತೆಯ ಕುರಿತು ಹುಡುಕಾಟ ಮತ್ತು ಮನುಷ್ಯನಲ್ಲಿ ಸೃಜನಾತ್ಮಕತೆಯ ಕಿಡಿಯ ಬೆಳಕನ್ನು ಹೊತ್ತಿಸಲು ಯಾವುದು ಕಾರಣವೆಂಬ ಕುತೂಹಲ ಕಳೆದ ಹಲವು ಶತಮಾನಗಳಿಂದ ಮುಂದುವರಿಯುತ್ತಾ ಬಂದಿದೆ. ಒಸ್ಬಾರ್ನ್(1963)ರ ಅವಲೋಕನದಲ್ಲಿ, 'ಕಿಡಿಯನ್ನು ಹೊತ್ತಿಸುವ ಕಿಡಿ ಯಾವುದು? ನಶ್ವರ ಮನುಷ್ಯರು ಅದಕ್ಕೆ ಉತ್ತರವನ್ನು ಎಂದೂ ಕಂಡುಕೊಳ್ಳಲಾರರು. ಅದು ಬದುಕಿಗಿಂತಲೂ ಆಳವಾದ ರಹಸ್ಯವಾಗಿದೆ. ಸೃಜನಾತ್ಮಕ ಕಲ್ಪನೆಯು ಹೃದಯ ಬಡಿತ ಅಥವಾ ಬೇರೆಯವುಗಳಷ್ಟೇ ಗೂಢವಾಗಿದೆ. ಕಲ್ಪನೆಯು ಸೃಜನಾತ್ಮಕ ಕಾರ್ಯವಿಧಾನದ ಮೂಲಸತ್ವವಾಗಿದೆ'(ಪುಟ: 36). ಆಂಡರ್‌ಸನ್(1959) ಬರೆಯುತ್ತಾರೆ: 'ಸೃಜನಾತ್ಮಕತೆಯಲ್ಲಿರುವ ಹೊಸತನವೆಂದರೆ ಮನುಷ್ಯರ ಸೃಜನಾತ್ಮಕತೆಯಲ್ಲಿರುವ, ಮಾನವ ಸಂಪನ್ಮೂಲಗಳ ಸ್ವರೂಪದಲ್ಲಿರುವ, ವ್ಯಕ್ತಿಗೆ ನೀಡುವ ಗೌರವದ ಅರ್ಥದಲ್ಲಿರುವ ಪ್ರಚಂಡ ಅನಿರೀಕ್ಷಿತ ಸಾಮರ್ಥ್ಯಗಳ ಕುರಿತು ಬೆಳೆಯುತ್ತಿರುವ ಅರಿವು ಮತ್ತು ಕಾಣಿಸಿಕೊಳ್ಳುವ ಶೋಧ. ಈ ರೀತಿಯ ಶೋಧವು ಪುನರುತ್ಥಾನ ಕಾಲದಿಂದ ಅರ್ಥವನ್ನು ಪಡೆಯುತ್ತಿದ್ದು ಅದು ಈಗಲೂ ಕಾರ್ಯವಿಧಾನವಾಗಿ ಮುಂದುವರಿಯುತ್ತಿದೆ. ಅದು ಡಾರ್ವಿನನ ವಿಕಾಸವಾದ ಅಥವಾ ಅಣು ಶಕ್ತಿಯ ಸಂಶೋಧನೆಯಷ್ಟು ಪ್ರಾಮುಖ್ಯತೆಯನ್ನು ಪಡೆಯಬಹುದು.' ಎಲ್ಲ ಸೃಜನಾತ್ಮಕ ಪ್ರಯತ್ನಗಳು ಎಲ್ಲ ಕಡೆಗಳಲ್ಲಿ ಅನಂತ ಭವಿಷ್ಯದಲ್ಲಿನ ಚಲನೆಯನ್ನು ಸೂಚಿಸುವುದಂತೂ ಖಂಡಿತ.

1950ರಲ್ಲಿ ಅಮೇರಿಕೆಯ ಮನಃಶಾಸ್ತ್ರ ಸಂಘದಲ್ಲಿ ಸೃಜನಾತ್ಮಕತೆಯ ವಿಷಯವನ್ನು ಆಯ್ದು ಪ್ರಥಮ ಬಾರಿ ಮಾತನಾಡಿದ ಗಿಲ್‌ಫೋರ್ಡ್ ಬುದ್ಧಿಶಕ್ತಿ ಮತ್ತು ಸೃಜನಾತ್ಮಕತೆಯ ನಡುವಿನ ವ್ಯತ್ಯಾಸವನ್ನು ತಿಳಿಸಿದ್ದರು. ಮೂರು ಆಯಾಮಗಳಿರುವ(ವಸ್ತು, ಕಾರ್ಯಗಳು ಮತ್ತು ಉತ್ಪನ್ನಗಳು) ತನ್ನ 'ಬೌದ್ಧಿಕ ರಚನೆ'(ಸ್ಟ್ರಕ್ಚರ್ ಆಫ್ ಇಂಟೆಲೆಕ್ಟ್–ಎಸ್‌ಒಐ)ಯ ಮಾದರಿಯಲ್ಲಿ ಗಿಲ್‌ಫೋರ್ಡ್(1959) ಅವರು ಮಾನಸಿಕ ಕಾರ್ಯದ ಭಿನ್ನ ಭಿನ್ನ ಆಲೋಚನಾ ವಿಭಾಗಗಳಲ್ಲಿ ಸೃಜನಾತ್ಮಕತೆಯು ಒಡಗೂಡಿಕೊಂಡಿರುವ ನಿರ್ದಿಷ್ಟ ಸಾಮರ್ಥ್ಯ ಶಕ್ತಿಗಳ ಗುಂಪನ್ನು ಗುರುತಿಸಿದ್ದಾರೆ. ಈ ಸಾಮರ್ಥ್ಯ ಶಕ್ತಿಗಳು ಬುದ್ಧಿಶಕ್ತಿ(ಬುದ್ಧಿವಂತಿಕೆ)ಯಲ್ಲಿ ಅಡಕವಾಗಿರುವವುಗಳಿಗಿಂತ ಭಿನ್ನವಾಗಿರುವುದು ಕಂಡು ಬಂದಿದೆ. 120 ಸಾಮರ್ಥ್ಯ ಶಕ್ತಿಗಳನ್ನು(4 ವಿಧಗಳ ವಸ್ತುಗಳು, 5 ವಿಧಗಳ ಮಾನಸಿಕ ಕಾರ್ಯಗಳು, 6 ವಿಧಗಳ ಉತ್ಪನ್ನಗಳು) ಹೊಂದಿರುವ ಈ ಮಾದರಿಯ ಸಂಖ್ಯಾ ವಸ್ತುವನ್ನು ದೃಶ್ಯ ಮತ್ತು ಶ್ರಾವ್ಯ ಕ್ಷೇತ್ರಗಳಾಗಿ ಪ್ರತ್ಯೇಕಿಸಿ 150 ಸಾಮರ್ಥ್ಯ ಶಕ್ತಿಗಳನ್ನು ಹೊಂದಿರುವ ಎಸ್‌ಒಐನ್ನು ಪಡೆಯುವುದರ ಮೂಲಕ ಗಿಲ್‌ಫೋರ್ಡ್ ಮರುಪರಿಶೀಲನೆಯನ್ನು ನಡೆಸಿದ್ದಾರೆ. ಇದನ್ನು ಗಿಲ್‌ಫೋರ್ಡ್ ತನ್ನ ಸಾವು(1987) ಸಂಭವಿಸುವುದಕ್ಕಿಂತ ಮೊದಲು ಮತ್ತೆ ಪರಿಶೀಲನೆ ನಡೆಸಿ 'ಕಾರ್ಯಗತ ನೆನಪ'ನ್ನು ಎರಡು ಘಟಕಗಳಾಗಿ ವಿಂಗಡಿಸಿದ್ದಾರೆ: 'ನೆನಪಿನ ದಾಖಲೀಕರಣ'(ಅಲ್ಪಾವಧಿಯ ನೆನಪು) ಮತ್ತು 'ನೆನಪಿನ ಕಾಯ್ದಿರಿಕರಣ' (ದೀರ್ಘಾವಧಿಯ ನೆನಪು). ಮತ್ತು ಈ ಎಸ್‌ಒಐಯಲ್ಲಿ(ಗಿಲ್‌ಫೋರ್ಡ್, 1988) 180 ಸಾಮರ್ಥ್ಯ ಶಕ್ತಿಗಳು ಇದ್ದವು. ಈ ಆಕೃತಿ ರಚನಾ ಮಾದರಿಯು ಟೀಕೆಯಿಂದ ಹೊರತಾಗಿಲ್ಲ. ಆದರೆ ಸೃಜನಾತ್ಮಕತೆ ಮತ್ತು ಬುದ್ಧಿಶಕ್ತಿಯ ನಡುವಿನ ಸಂಬಂಧಗಳ ಕುರಿತಾದ ಎಲ್ಲ ಚರ್ಚೆಗಳಲ್ಲಿ ಈ ಮಾದರಿಗೆ ಪ್ರಾಧಾನ್ಯತೆ ದೊರೆಯುತ್ತಿದೆ. ಈ ದಿನಗಳಲ್ಲಿ ನಾವು ಕಾಣುತ್ತಿರುವ ಸೃಜನಾತ್ಮಕತೆಯ ಕುರಿತಾದ ಸಂಶೋಧನೆಯ ಅತಿಶಯ ಬೆಳವಣಿಗೆಯು ಗಿಲ್‌ಫೋರ್ಡ್ ಅವರು ಮಾನವನ ಬೌದ್ಧಿಕ ಸಾಮರ್ಥ್ಯ ಮತ್ತು ಅದರ ಆಯಾಮತ್ವದ ಕ್ಷೇತ್ರದಲ್ಲಿ ನಡೆಸಿದಂತಹ ಅದ್ಭುತ ಕಾರ್ಯಗಳಿಗೆ ಋಣಿಯಾಗಿದೆ.

**ಸೃಜನಾತ್ಮಕತೆ – ವ್ಯಾಖ್ಯಾನ(ನಿರೂಪಣಾತ್ಮಕ) ಪ್ರವೃತ್ತಿಗಳು:**

ಸೃಜನಾತ್ಮಕತೆ ಎಂಬ ಪದವು ಅತ್ಯಂತ ಜಾಳು ಜಾಳಾದುದು. ಇದನ್ನು ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ವಿಧಗಳಿಂದ ವ್ಯಾಖ್ಯಾನಿಸುತ್ತಾರೆ. ನಮ್ಮಲ್ಲಿ ಅದನ್ನು ಬಳಸುವ ಜನರ ಸಂಖ್ಯೆಯಷ್ಟೇ ಅದರ ವ್ಯಾಖ್ಯಾನಗಳೂ ಇವೆ. ಸೃಜನಾತ್ಮಕತೆಯ ಅಧ್ಯಯನವನ್ನು– ಜನರು ಉತ್ಪನ್ನ, ಕಾರ್ಯವಿಧಾನ ಮತ್ತು ಒತ್ತಡ(ಪರಿಸರದ ಪ್ರಭಾವ)ಗಳ ಮೇಲೆ ಅವುಗಳ ಒತ್ತನ್ನು ಅನುಸರಿಸಿ ರ್‍ಹೋಡ್ಸ್(1961) ಸೃಜನಾತ್ಮಕತೆಯ ಕುರಿತಾದ ಅಧ್ಯಯನವನ್ನು ವರ್ಗೀಕರಿಸಿದ್ದಾರೆ. ಸೃಜನಾತ್ಮಕತೆಯ ಅಧ್ಯಯನದ ವೈಯಕ್ತಿಕ ಪ್ರವೇಶವು ವಿವಿಧ ಕ್ಷೇತ್ರಗಳಲ್ಲಿ ಸೃಜನಾತ್ಮಕ ಜನರನ್ನು ಗುರುತಿಸುವುದರ ಮೂಲಕ ತನ್ನ ಸ್ವರೂಪವನ್ನು ನಿರ್ಧರಿಸಿಕೊಳ್ಳುತ್ತದೆ. ಈ ಗುರುತಿಸುವಿಕೆಯನ್ನು ಅವರ ಅರಿವಿನ ಮತ್ತು ವ್ಯಕ್ತಿತ್ವದ ಗುಣಲಕ್ಷಣಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಉಪಾಖ್ಯಾನ ರೂಪದ ಮೂಲಕ ನಡೆಸಲಾಗುತ್ತದೆ. ಈ ಅಧ್ಯಯನಗಳು ಸೃಜನಶೀಲ ವ್ಯಕ್ತಿಯ ಜೀವಮಾನದಲ್ಲಿ ಸೃಜನಾತ್ಮಕತೆ ಹೇಗೆ ಹುಟ್ಟಿಕೊಳ್ಳುತ್ತದೆ ಮತ್ತು ವ್ಯಕ್ತಗೊಳ್ಳುತ್ತದೆ ಎಂಬುದನ್ನು ವಿವಿಧ ಜನರ ವ್ಯಕ್ತಿ ಅಧ್ಯಯನಗಳ ಮೂಲಕ ತಿಳಿದುಕೊಳ್ಳುವುದನ್ನು ಕೇಂದ್ರವಾಗಿ ಇಟ್ಟುಕೊಂಡಿರುತ್ತದೆ. ಈ ಅಧ್ಯಯನಗಳನ್ನು ಸಾಮಾನ್ಯವಾಗಿ 'ಚಾರಿತ್ರಿಕ ಮಾನದ (ಹಿಸ್ಟೊರಿಯೋಮೆಟ್ರಿಕ್) ಅಧ್ಯಯನಗಳು' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈ ರೀತಿಯ ಅಧ್ಯಯನಗಳನ್ನು ಆಧರಿಸಿದ ಸಂಶೋಧನೆಯನ್ನು ಪರಿಶೀಲಿಸಿರುವ ಸಿಮಾಂಟನ್(1997) ಬರೆಯುತ್ತಾರೆ, 'ಚಾರಿತ್ರಿಕ ಮಾನ'ದ ಸಂಶೋಧನೆಯು ವ್ಯಕ್ತಿತ್ವದ ಗುಣಲಕ್ಷಣಗಳು, ಪ್ರಗತಿಯ ಅನುಭವಗಳು ಅಥವಾ ಸಾಂದರ್ಭಿಕ ವಾಸ್ತವಾಂಶಗಳು ಅತ್ಯುತ್ತಮ ಸಾಧನೆಗೆ ಯಾವ ರೀತಿಯ

Digitised by Bharatavani, CIIL

ಕೊಡುಗೆಯನ್ನು ನೀಡಬಲ್ಲವು ಎಂಬುದರ ಕುರಿತಾದ ಊಹೆ ಅಥವಾ ಭವಿಷ್ಯ ಕಥನಗಳ ಮೌಲ್ಯಮಾಪನವನ್ನು ನಡೆಸಬಹುದು.' ಈ ವಿಧದ ಸಂಶೋಧನಾ ಪ್ರಯತ್ನಗಳ ಕುರಿತು ಟೊರೆನ್ಸ್(1974), ರೊ(1976), ಗೊಫ್(1976), ಮತ್ತು ಡನ್ನೆಟ್(1976) ತಮ್ಮ ವಿಮರ್ಶೆಗಳನ್ನು ಸಾದರಪಡಿಸಿದ್ದಾರೆ. ಗಿಲ್‌ಫೋರ್ಡ್(1968)ನ ಮನೋವೈಜ್ಞಾನಿಕ ಮಾನದ ಗ್ರಹಿಕಾ ಕ್ಷೇತ್ರದಲ್ಲಿನ ಕೆಲಸ ಮತ್ತು ಮ್ಯಾಕಿನ್ನನ್‌ನ(1962, 1977) ವ್ಯಕ್ತಿತ್ವರಂಗದ ಕಾರ್ಯಗಳು ಈ ಸಂಶೋಧನಾ ಕ್ಷೇತ್ರದ ಅತ್ಯುತ್ತಮ ಕೊಡುಗೆಗಳಾಗಿವೆ.

ಉತ್ಪನ್ನಕ್ಕೆ ಸಂಬಂಧಿಸಿದಂತೆ ಸೃಜನಾತ್ಮಕತೆಯನ್ನು ನಿರೂಪಿಸುವುದು ಮತ್ತು ಅಧ್ಯಯನ ಮಾಡುವುದು ಎರಡನೆಯ ಪ್ರವೃತ್ತಿಯಾಗಿದೆ. ಉತ್ಪನ್ನವು ಅಪರೂಪದ್ದಾಗಿ, ಅಸಲಿಯಾಗಿ, ಸಮರ್ಥನೀಯವಾಗಿ ಮತ್ತು ಉಪಯುಕ್ತವಾಗಿ ಪರಿಗಣಿಸಲ್ಪಟ್ಟರೆ, ಆಗ ಅದನ್ನು ಸೃಷ್ಟಿಸಿದ ವ್ಯಕ್ತಿಯನ್ನು ಸೃಜನಶೀಲನೆಂದು(ಸೃಜನಾತ್ಮಕ) ಕರೆಯಬಹುದು. ಸೃಜನಾತ್ಮಕ ಪ್ರಯತ್ನಗಳ ಉತ್ಪನ್ನವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅದರ ಮೌಲ್ಯಮಾಪನ ನಡೆಸುವುದರಲ್ಲಿ ನಿರತರಾಗಿರುವವರು ರೋಜರ್ಸ್(1959), ಜಾಕ್ಸನ್ ಮತ್ತು ಮೆಸ್ಸಿಕ್(1964), ಮತ್ತು ಒ'ಕ್ವಿನ್ ಮತ್ತು ಬೆಸೆಮರ್(1989). ಸೃಜನಾತ್ಮಕತೆಯನ್ನು ರೋಜರ್ಸ್ ಹೀಗೆ ನಿರ್ವಚಿಸಿದ್ದಾರೆ, ಸೃಜನಾತ್ಮಕತೆಯು 'ಅಪೂರ್ವ ನಂಟಿನ ಉತ್ಪನ್ನದ ಕ್ರಿಯಾ ಉಗಮವಾಗಿದ್ದು, ಒಂದು ದಿಕ್ಕಿನಲ್ಲಿ ಅದು ವ್ಯಕ್ತಿಯ ಅನನ್ಯತೆಯ ಮೂಲಕ, ಇನ್ನೊಂದು ದಿಕ್ಕಿನಲ್ಲಿ ಅವನ ಬದುಕಿನ ವಸ್ತುಗಳು, ಘಟನೆಗಳು, ಮನುಷ್ಯರು ಮತ್ತು ಪರಿಸ್ಥಿತಿಗಳ ಮೂಲಕ ಬೆಳೆಯುತ್ತದೆ.'(ಪುಟ: 71) ಮಮ್‌ಫೋರ್ಡ್, ರೇಟೆರ್–ಪಾಲ್‌ಮನ್ ಮತ್ತು ರೆಡ್‌ಮಂಡ್ (1994) ಅವರು ಹೇಳುತ್ತಾರೆ, 'ಸೃಜನಾತ್ಮಕತೆಯು ಅಪೂರ್ವ, ಸಾಮಾಜಿಕವಾಗಿ ಮೌಲ್ಯಭರಿತ ಉತ್ಪನ್ನವಾಗಿರುವ ಜನಾಂಗದಲ್ಲಿ ಪ್ರತಿಫಲಿಸುತ್ತದೆ.'

ಸೃಜನಾತ್ಮಕತೆಯನ್ನು ಕಾರ್ಯಗತ ಕಾರ್ಯವಿಧಾನವಾಗಿ ನಿರ್ವಚಿಸುವುದು ಮತ್ತು ಅಧ್ಯಯನ ನಡೆಸುವುದು ಮೂರನೆಯ ಪ್ರವೃತ್ತಿಯಾಗಿದೆ. ಈ ಅನುಸಂಧಾನವನ್ನು ಅನುಸರಿಸಿ ಅಧ್ಯಯನ ನಡೆಸಿದವರು: ಒಸ್‌ಬಾರ್ನ್(1963), ಸ್ಟೇನ್(1962), ಘಿಸೆಲಿನ್(1952), ಮುರ್ರೆ(1959), ಮೆಡ್ನಿಕ್(1962), ಟಾರೆನ್ಸ್(1966), ಪಾರ್ನೆಸ್(1967), ಪಾರ್ನೆಸ್, ನೊಲ್ಲರ್ ಮತ್ತು ಬಿಯೊಂಡಿ(1977), ಬಸದುರ್(1981, 1992, 1993, 1994, 1997) ಮತ್ತು ಇಸಕ್ಸೆನ್ ಮತ್ತು ಟ್ರೆಫಿಂಗರ್(1985). ಈ ಕ್ಷೇತ್ರದ ಬಹಳ ಜನಪ್ರಿಯ ನಿರ್ವಚನ ಟಾರೆನ್ಸ್(1966) ಅವರದು. ಅವರ ಪ್ರಕಾರ, ಸೃಜನಾತ್ಮಕತೆ ಎನ್ನುವುದು, 'ಸಮಸ್ಯೆಗಳು, ಕೊರತೆಗಳು, ತಿಳಿವಳಿಕೆಯ ಅಂತರಗಳು, ಕಳೆದುಕೊಂಡ ಅಂಶಗಳು, ಸಮಂಜಸವಿಲ್ಲದಿರುವುದು, ಇತ್ಯಾದಿಗಳನ್ನು ಶೀಘ್ರವಾಗಿ ಗ್ರಹಿಸಿಕೊಳ್ಳುವ; ಪರಿಹಾರಗಳನ್ನು ಹುಡುಕಿಕೊಳ್ಳುವ, ಊಹೆಗಳನ್ನು ನಡೆಸುವ, ಅಥವಾ ಕೊರತೆಗಳ ಕುರಿತಾಗಿ ತಾರ್ಕಿಕವಾಗಿ ಸಾಧಿಸಬೇಕಾದ ಕಲ್ಪಿತ ಸಿದ್ಧಾಂತವನ್ನು ರೂಪಿಸುವ ಮತ್ತು ಸಾಧ್ಯವಿದ್ದರೆ ಅವುಗಳನ್ನು ವಿಸ್ತರಿಸುವ ಮತ್ತು ಮರುಪರೀಕ್ಷೆಗೆ ಒಳಪಡಿಸುವ; ಮತ್ತು ಅಂತಿಮವಾಗಿ ಫಲಿತಾಂಶವನ್ನು ಶ್ರುತಪಡಿಸುವ ಕಾರ್ಯವಿಧಾನ'(ಪುಟ: 6). ತನ್ನ ನಿರ್ವಚನವು ಮಾನವ ಸಹಜ ಕಾರ್ಯಗತಿಯ ವರ್ಣನೆ ಎಂಬುದಾಗಿ ಅವರು ತಿಳಿಸುತ್ತಾರೆ. ಕಾರ್ಯಗತಿಯ ಅನುಸಂಧಾನವು(ಪ್ರವೇಶ್ಯ), ಮೊದಲು ಭಿನ್ನದಾರಿಯಲ್ಲಿ ಸಾಗುವ ಚಿಂತನೆಗೆ ಒತ್ತು ನೀಡಿದರೂ ಈಗ ಅದು ಭಿನ್ನಮುಖತೆ ಮತ್ತು ಏಕಾಗ್ರಮುಖತೆಯ ಎರಡೂ ವಿಧಗಳ ಆಲೋಚನೆ ಅನುಕ್ರಮವಾಗಿ ಕಾಣಿಸಿಕೊಳ್ಳುತ್ತವೆ ಎಂಬುದಾಗಿ ಸಂಯೋಜಿಸುತ್ತದೆ.

ಸೃಜನಾತ್ಮಕತೆಯ ಅಧ್ಯಯನದ ನಾಲ್ಕನೆಯ ಪ್ರವೃತ್ತಿಯು ಒತ್ತು(ಪರಿಸರದ) ಅನುಸಂಧಾನವಾಗಿದೆ. ಈ ಕೆಳಗಿನವರ ಅಧ್ಯಯನಗಳು ಈ ಅನುಸಂಧಾನಕ್ಕೆ ಉದಾಹರಣೆಗಳಾಗಿವೆ: ಆಂಡ್ರ್ಯೂಸ್ ಮತ್ತು ಫಾರಿಸ್(1972), ಬೇಕರ್, ವಿಂಕೊಫ್‌ಸ್ಕಿ, ಲಾಂಗ್‌ಮೆಯರ್ ಮತ್ತು ಸ್ವೆನ್(1976), ಮತ್ತು ಎಮೆಬಿಲೆ ಮತ್ತು ಗ್ರಿಸ್ಕಿವೆಕ್ಸ್(1989). ಸೃಜನಾತ್ಮಕತೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೇಳುವುದಾದರೆ ಪರಿಸರದ ಒತ್ತಿನ ಕುರಿತಾದ ಸಂಶೋಧನಾ ಪ್ರಯತ್ನಗಳು ವಿರಳವಾಗಿವೆ.

ಕಳೆದ ಒಂದೂವರೆ ದಶಕದಲ್ಲಿ ಸೃಜನಾತ್ಮಕತೆಯ ಅಧ್ಯಯನದ ಪ್ರವೃತ್ತಿಯು ಸಂಗಮ ಅನುಸಂಧಾನದ ಕಡೆಗೆ ಇದೆ. 'ಸೃಜನಾತ್ಮಕತೆಯು ಕ್ಷೇತ್ರಗಳಿಗೆ ಸಂಬಂಧಿಸಿದ ಜ್ಞಾನ ಮತ್ತು ಸಾಮರ್ಥ್ಯಗಳು, ಆಂತರಿಕ ಪ್ರಚೋದನೆ, ಅರಿವಿನ ಶೈಲಿಗಳು, ನವೀನವಾದ ಕಲ್ಪನೆಗಳನ್ನು ಮತ್ತು ಪ್ರಯತ್ನಗಳನ್ನು ಉತ್ಪಾದಿಸುವ ಸ್ವಯಮನ್ವೇಷಣೆಯ ಜ್ಞಾನಗಳನ್ನು ಕಂಡುಕೊಳ್ಳುವುದರ ಸಂಗಮವಾಗಿದೆ' ಎಂದು ಎಮೆಬಿಲೆ(1983) ವರ್ಣಿಸುತ್ತಾರೆ. ಸೃಜನಾತ್ಮಕ ಕಾರ್ಯಗತಿಗೆ ವ್ಯೂಹಾತ್ಮಕ(ವ್ಯವಸ್ಥಿತ) ಮಾದರಿಯನ್ನು ಜಿಕ್ಸ್‌ಜೆನ್ಮಿಹಲಿಯಿ(1996) ಬಯಸುತ್ತಾರೆ. ಈ ಮಾದರಿಯ ಪರಿಗಣನೆಯಲ್ಲಿ ಇರುವುದು ವ್ಯಕ್ತಿ ಮತ್ತು ಅವನ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ನಡುವೆ ನಡೆಯುವ ಕಾರ್ಯ. ಸ್ಟೆರ್ನ್‌ಬರ್ಗ್ ಮತ್ತು ಲುಬರ್ಟ್(1995) ಅವರು ತಮ್ಮ 'ಸೃಜನಾತ್ಮಕತೆಯ ಹೂಡುವಿಕೆಯ ಸಿದ್ಧಾಂತ'ದಲ್ಲಿ ಸೃಜನಾತ್ಮಕತೆ ರೂಪುಗೊಳ್ಳಲು ಕೂಡಿಕೊಳ್ಳುವಂತಹ ಆರು ಪ್ರಮುಖ ಅಂಶಗಳನ್ನು ಪ್ರತಿಪಾದಿಸಿದ್ದಾರೆ, ಅವುಗಳೆಂದರೆ, ಬುದ್ಧಿಶಕ್ತಿ, ತಿಳಿವಳಿಕೆ, ಚಿಂತನಾ ಶೈಲಿಗಳು, ವ್ಯಕ್ತಿತ್ವ, ಪ್ರಚೋದನೆ ಮತ್ತು ಪರಿಸರ. ಈ ಆರು ಅಂಶಗಳಲ್ಲಿ ಬುದ್ಧಿಶಕ್ತಿಯು ಕೇವಲ ಒಂದಾಗಿದ್ದು ಅದು ಸೃಜನಾತ್ಮಕ ಆಲೋಚನೆ ಮತ್ತು ವರ್ತನೆಯನ್ನು ಉತ್ಪಾದಿಸುತ್ತದೆ.

ಸೃಜನಾತ್ಮಕತೆಯ ಸಂಶೋಧನೆಯಲ್ಲಿ ಅನುಸರಿಸಿರುವಂತಹ ವ್ಯಾಖ್ಯಾನಗಳು ಮತ್ತು ಸಮೀಪಿಸುವಿಕೆಗಳು ಅನೇಕ ಮತ್ತು ವೈವಿಧ್ಯಮಯವಾಗಿ ಇವೆ. 'ಸೃಜನಾತ್ಮಕವಾದುದು ಯಾವುದು?' ಎಂಬ ಪ್ರಶ್ನೆಗೆ ಸಂಶೋಧಕರ ಬಹುಮತದ ಅಭಿಪ್ರಾಯವೇನೆಂದರೆ, ಸೃಜನಾತ್ಮಕತೆ ಎನ್ನುವುದು ಸಮಸ್ಯೆಗಳಿಗೆ ಉದಾತ್ತ ಮತ್ತು ಹೊಂದಾಣಿಕೆಯಾಗುವ ಪರಿಹಾರವಾಗಿದೆ. ಆದರೆ ಸೃಜನಾತ್ಮಕತೆ ಪದವು ಖಚಿತವಾದ ಮತ್ತು ಸಾರ್ವತ್ರಿಕವಾಗಿ ಸ್ವೀಕೃತವಾಗುವ ನಿರ್ವಚನವನ್ನು ತಿರಸ್ಕರಿಸುತ್ತದೆ. ಡೇನಿಯಲ್ಸ್, ಮ್ಯಾಕ್‌ಗೀ ಮತ್ತು

Digitised by Bharatavani, CIIL

ಡೇವಿಸ್(1994) ಅವರು ಬರೆದಿರುವಂತೆ, 'ಸೃಜನಾತ್ಮಕತೆಯ ನಿರ್ವಚನ ಅಥವಾ ಸೃಜನಾತ್ಮಕ ಕಾರ್ಯಗತಿಯ ಪೂರ್ವೈಕೆಗೆ ಯಾವುದೇ ಸಮಾನ ಒಪ್ಪಂದವಿಲ್ಲ.' ಆದರೆ ಇದು ಶಿಕ್ಷಣ ಸಂಸ್ಥೆಗಳಲ್ಲಿ ಸೃಜನಾತ್ಮಕತೆಯನ್ನು ಬೆಳೆಸಲು ಮತ್ತು ಪ್ರೋತ್ಸಾಹಿಸಲು ಅಗತ್ಯವಿರುವ ದಾರಿಗಳು ಮತ್ತು ಸಾಧನಗಳನ್ನು ಕಂಡುಕೊಳ್ಳುವುದರಲ್ಲಿ ಶಿಕ್ಷಣತಜ್ಞರನ್ನು ಹಿಮ್ಮೆಟ್ಟಿಸಿಲ್ಲ. ಸ್ಲಬ್ಬರ್ಟ್‌ರ(1996) ಅವಲೋಕನದಲ್ಲಿ, 'ತ್ವರಿತಗತಿಯಲ್ಲಿ ಬದಲಾಗುತ್ತಿರುವ ನಮ್ಮ ಈ ಜಗತ್ತಿನಲ್ಲಿ ಬದುಕುಳಿಯಬೇಕಾದರೆ, ಸೃಜನಾತ್ಮಕತೆಯನ್ನು ಹೊಂದುವುದು ಅನಿವಾರ್ಯವಾಗದಿರಬಹುದು, ಆದರೆ ಅದು ಯೋಗ್ಯತೆಯಾಗಿ ಕನಿಷ್ಠ ಅರ್ಹತೆಯಾಗುತ್ತದೆ. ನಮಗೆ ಭವಿಷ್ಯದಲ್ಲಿ ಏನಿದೆ ಎಂಬುದು ತಿಳಿದಿಲ್ಲ. ಆದುದರಿಂದ ಶಿಕ್ಷಣತಜ್ಞರ ಮುಖ್ಯ ಕಾಳಜಿ ಸೃಜನಾತ್ಮಕತೆಯಾಗಿರಬೇಕು' (ಪುಟ63–64). ಶಿಕ್ಷಣದಲ್ಲಿ ಸೃಜನಾತ್ಮಕತೆಯ ಪ್ರಾಮುಖ್ಯತೆಯನ್ನು ಬಾರ್ರನ್ (1998) ಒತ್ತಿ ಹೇಳಿದ್ದಾರೆ ಮತ್ತು 'ಸೃಜನಾತ್ಮಕ ಚಿಂತನಾ ಸಾಮರ್ಥ್ಯಗಳು, ಹೊಸ ಪಠ್ಯಕ್ರಮಗಳು, ಹೊಸ ಉತ್ತೇಜಕಗಳು, ಹೊಸ ಶಿಕ್ಷಕ ತರಬೇತಿ ಇತ್ಯಾದಿಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ನೇರ ಬೋಧನೆ'ಯನ್ನು ಅವರು ಒತ್ತಾಯಿಸಿದ್ದಾರೆ (ಪುಟ 96).

**ಭಾರತದಲ್ಲಿನ ಸೃಜನಾತ್ಮಕ ಸಂಶೋಧನೆಯ ಸಂಕ್ಷಿಪ್ತ ಪುನರಾವಲೋಕನ:**

ಸೃಜನಾತ್ಮಕತೆಯ ಕುರಿತಾದ ಸಂಶೋಧನೆಯು 1960–70ರ ದಶಕದಲ್ಲಿ ಪ್ರಾರಂಭಗೊಂಡಿತು. ಬಹುಪಾಲು ಅಧ್ಯಯನಗಳು ಗಿಲ್‌ಫೋರ್ಡ್ಸ್ ಅವರ ಎಸ್‌ಒಐ ಮಾದರಿ ಮತ್ತು ಟಾರೆನ್ಸ್ ಅವರ ಕಾರ್ಯವನ್ನು ಆಧರಿಸಿವೆ. ಕೆಲವು ಸಂಶೋಧಕರು ಸೃಜನಾತ್ಮಕತೆಯ ತಮ್ಮ ಸ್ವಂತ ಶೋಧನೆಗಳನ್ನು ಅಭಿವೃದ್ಧಿ ಪಡಿಸಿದರೆ, ಬೇರೆಯವರು ಜನಪ್ರಿಯ ಶೋಧನೆಗಳನ್ನು(ಪರೀಕ್ಷೆಗಳನ್ನು) ಬಳಸಿಕೊಂಡಿದ್ದಾರೆ. ಉದಾಹರಣೆಗೆ ಟಾರೆನ್ಸ್‌ರ ಸೃಜನಾತ್ಮಕ ಚಿಂತನೆಯ ಶೋಧನೆಗಳು, ವಾಲಕ್–ಕೊಗನ್‌ರ ಸೃಜನಾತ್ಮಕತೆಯ ಶೋಧನೆಗಳು, ಗಿಲ್‌ಫೋರ್ಡ್‌ರ ಸೃಜನಾತ್ಮಕತೆಯ ಶೋಧನೆಗಳು, ಮತ್ತು ಮೆಡ್‌ನಿಕ್ ಅವರ ದೂರವರ್ತಿ ಸಂಯೋಜಿತ ಶೋಧನೆ. ಸೃಜನಾತ್ಮಕತೆ ಮತ್ತು ಬೌದ್ಧಿಕಶಕ್ತಿಯ ನಡುವಿನ ಸಂಬಂಧದ ಕುರಿತು ಅನೇಕ ಅಧ್ಯಯನಗಳು ನಡೆದಿವೆ(ಶರ್ಮಾ, 1971; ಗುಪ್ತಾ 1972; ಮೆಹ್ದಿ 1973; ದತ್ತ, 1977; ಸುಶ್ಮಾ ಗುಲಾಟಿ, 1979; ಚಡ್ಡಾ ಮತ್ತು ಸೇನ್, 1981, ಸಿಂಗ್, 1982, ಭಾರದ್ವಾಜ್, 1985, ತ್ರಿಮೂರ್ತಿ, 1987, ಸಾನ್ಸನ್‌ವಾಲ್ ಮತ್ತು ದೀಪಿಕಾ ಶರ್ಮಾ, 1993). ಸೃಜನಾತ್ಮಕತೆ, ಬೌದ್ಧಿಕಶಕ್ತಿ ಮತ್ತು ಸಾಧನೆಯ ನಡುವಿನ ಸಂಬಂಧಗಳನ್ನು ಪರಿಶೋಧಿಸಿದ ಅಧ್ಯಯನಗಳು ಕೂಡ ಇವೆ(ಪಾಠಕ್, 1962; ಪಾಸ್ಸಿ, 1972; ಪರಮೇಶ್, 1973; ಮೆಹ್ದಿ, 1974, 1977; ಸಿಂಘ್, 1977, ಗುಪ್ತಾ, 1979, ಜಾರಿಯಲ್, 1981; ಸಫಿಯ, 1981;, ಬಸಂತಿ ಡೇ, 1983; ಯಾದವ್, 1986 ಮತ್ತು ಬೀನಾ ಕುಮಾರಿ ಪಟ್ನಾಯಕ್, 1998). ಸೃಜನಾತ್ಮಕತೆ, ಬೌದ್ಧಿಕಶಕ್ತಿ ಮತ್ತು ಶಾಲಾ ಸಾಧನೆಯ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುವುದರೊಂದಿಗೆ ಆಚಾರ್ಯುಲು ಅವರು ಸೃಜನಾತ್ಮಕತೆಯ ಮೇಲೆ ಬುದ್ಧಿಶಕ್ತಿಯ ಪ್ರಾರಂಭಿಕ ಪ್ರಭಾವವನ್ನು ಕೂಡ ಪರಿಶೋಧಿಸಿದ್ದಾರೆ. ಕೆಲವು ಸಂಶೋಧಕರು ಸೃಜನಾತ್ಮಕತೆಯ ವ್ಯಕ್ತಿತ್ವ ಸಹ–ಸಂಬಂಧಗಳನ್ನು ಕೇಂದ್ರವಾಗಿಟ್ಟುಕೊಂಡು ಶೋಧನೆ ನಡೆಸಿದ್ದಾರೆ(ರೈನಾ, 1968; ಖಿರೆ, 1971, ಪರಮೇಶ್,1972, ಗೋಯಲ್, 1974, ಜೋಶಿ, 1974, 1975, ದತ್ತ, ಬೌಂತ್ರ ಮತ್ತು ಸಬ್ಬರವಾಲ್, 1977; ಭಾರ್ಗವ, 1979). ರೈನಾ(1971, 1991), ಗುಪ್ತಾ(1974) ಮತ್ತು ಮೆಹ್ದಿ(1974)ಯವರು ಭಾರತದಲ್ಲಿ ಸೃಜನಾತ್ಮಕತೆಯ ಕುರಿತಾದ ಸಂಶೋಧನೆಯ ಪುನರಾವಲೋಕನಗಳನ್ನು ಪ್ರಸ್ತುತಪಡಿಸಿದ್ದಾರೆ. ಬಹಳಷ್ಟು ಸಂಶೋಧನಾ ಫಲಿತಾಂಶಗಳು ಅಮೇರಿಕಾ, ಬ್ರಿಟನ್ ಮತ್ತು ವಿದೇಶಗಳಲ್ಲಿ ಕೈಗೊಂಡಿರುವ ಇತರ ಅಧ್ಯಯನಗಳ ಫಲಿತಾಂಶಗಳೊಂದಿಗೆ ತಾಳೆಯಾಗುವ ರೀತಿಯಲ್ಲಿ ಇವೆ.

**ಸೃಜನಾತ್ಮಕತೆಯ ಸಂಶೋಧನೆಯ ಐದು ದಶಕಗಳು ಶಿಕ್ಷಕರಿಗೆ ಏನು ಹೇಳುತ್ತಿವೆ?**

ಸೃಜನಾತ್ಮಕತೆಯ ಸ್ವರೂಪವನ್ನು ಸೂಚಿಸುವ ಅನೇಕ ವಾಸ್ತವಾಂಶಗಳನ್ನು ಸಂಶೋಧನೆ ಬೆಳಕಿಗೆ ತಂದಿದೆ. ಈ ವಾಸ್ತವಾಂಶಗಳು ಶಿಕ್ಷಕರು ಸೃಜನಾತ್ಮಕತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮತ್ತು ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಆಲೋಚನೆ ಬೆಳೆಯಲು ನೆರವಾಗುತ್ತವೆ. ಇಂದು ನಾವು ಸೃಜನಾತ್ಮಕತೆಯ ಕುರಿತು ತಿಳಿದಿರುವ ಕೆಲವು ಮುಖ್ಯ ಅಂಶಗಳ ಕುರಿತಾದ ಸಂಕ್ಷಿಪ್ತ ಸಾರಾಂಶ ಹೀಗಿದೆ:

- ಸೃಜನಾತ್ಮಕತೆಯು ಕೆಲವರಿಗೆ ಮಾತ್ರ ಸೀಮಿತವಾದುದಲ್ಲ. ಲಿಂಗ, ವಯಸ್ಸು, ಸಂಸ್ಕೃತಿ ಅಥವಾ ಜನಾಂಗದ ಪರಿಗಣನೆ ಇಲ್ಲದೆ ಸಾಮಾನ್ಯ ಬುದ್ಧಿಶಕ್ತಿ ಇರುವ ಎಲ್ಲರೂ ಸೃಜನಶೀಲರಾಗಿದ್ದಾರೆ. ಸೃಜನಾತ್ಮಕ ಚಿಂತನೆ ನಡೆಸುವುದರಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ, ಮತ್ತು ವ್ಯಕ್ತಿಯಲ್ಲಿಯೇ ವ್ಯತ್ಯಾಸಗಳು ಇರುತ್ತವೆ. ಪ್ರತಿಯೊಬ್ಬರ ಸೃಜನಾತ್ಮಕತೆಯು ರೀತಿ ಮತ್ತು ಮಟ್ಟದಲ್ಲಿ ಭಿನ್ನವಾಗಿರುತ್ತದೆ. ಸೃಜನಾತ್ಮಕತೆಯ ಹರವು ಕೆಳಮಟ್ಟದಿಂದ ಅಳತೆಗೆ ಸಿಗದಷ್ಟು ಉನ್ನತ ಮಟ್ಟಕ್ಕೆ ಚಲಿಸುತ್ತದೆ.

- ಸೃಜನಾತ್ಮಕವಾಗಿ ಚಿಂತಿಸುವ ಕ್ರಮವು ಬಹುಮಟ್ಟಿಗೆ ವ್ಯಕ್ತಿಗತ ಕಾರ್ಯಗತಿಯಾಗಿದೆ. ಸೃಜನಾತ್ಮಕತೆಗೆ ವ್ಯಕ್ತಿ, ಸ್ಥಳ ಮತ್ತು ಸಮಯದ ಪರಿಚಯವಿರುವುದಿಲ್ಲ. ಅದು ಸಾಮಾನ್ಯವಾಗಿ ವ್ಯಕ್ತಿ ಕಾರ್ಯ ನಡೆಸುವ ಮಾಧ್ಯಮದ ಮೂಲಕ ಅಭಿವ್ಯಕ್ತಿ ಪಡೆಯುತ್ತದೆ.

- ಸೃಜನಾತ್ಮಕ ಕಾರ್ಯಗತಿಯಲ್ಲಿ ವಿಭಿನ್ನ ಹಂತಗಳನ್ನು ವಿಭಿನ್ನ ಜನರು ಸೂಚಿಸಿದ್ದಾರಾದರೂ, ಅವುಗಳಲ್ಲಿ ಹೆಚ್ಚಿನವು ಗ್ರಾಹಮ್ ವಾಲಾಸ್ ಅವರು ಗುರುತಿಸಿದ ಸೃಜನಾತ್ಮಕ ಕಾರ್ಯಗತಿಯ ನಾಲ್ಕು ಹಂತಗಳಲ್ಲಿ – ಸಿದ್ಧತೆ (ಮಾಹಿತಿ ಪಡೆಯುವುದು), ಕಾವು ಕೊಡುವಿಕೆ (ಅದನ್ನು ಆಂತರಿಕವಾಗಿ ಸಂಸ್ಕರಿಸುವುದು), ಬೆಳಗುವಿಕೆ (ಪರಿಹಾರವೊಂದನ್ನು ಕಂಡುಕೊಳ್ಳುವುದು) ಮತ್ತು

Digitised by Bharatavani, CIIL

ಪರಿಶೀಲನೆ (ಪರಿಹಾರದ ಅರ್ಹತೆಯನ್ನು ನಿರ್ಣಯಿಸುವುದು) ಗಳಲ್ಲಿ ಹೊಂದಿಕೊಳ್ಳುತ್ತವೆ.

- ಸೃಜನಾತ್ಮಕತೆಯಲ್ಲಿ ತೊಡಗಿಕೊಂಡಿರುವ ಸಾಮರ್ಥ್ಯಗಳು ಬುದ್ಧಿಶಕ್ತಿಯಲ್ಲಿ ತೊಡಗಿಕೊಂಡಿರುವ ಸಾಮರ್ಥ್ಯಗಳಿಗಿಂತ ಭಿನ್ನವಾಗಿವೆ. ಸೃಜನಾತ್ಮಕತೆಯಲ್ಲಿ ಭಿನ್ನ ಭಿನ್ನ ರೀತಿಯ ಆಲೋಚನಾ ಸಾಮರ್ಥ್ಯಗಳು ಅಗಾಧ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದರೂ ಸೃಜನಾತ್ಮಕ ಕಾರ್ಯಗತಿಯಲ್ಲಿ ಏಕಮುಖ ಆಲೋಚನಾ ಸಾಮರ್ಥ್ಯಗಳ ತೊಡಗಿಸಿಕೊಳ್ಳುವಿಕೆಯನ್ನು ತಳ್ಳಿ ಹಾಕುವಂತಿಲ್ಲ. ಬುದ್ಧಿಶಕ್ತಿಯು ಸ್ವಲ್ಪ ಮಟ್ಟಿಗೆ ಸೃಜನಾತ್ಮಕತೆಗೆ ಅವಕಾಶ ನೀಡುವುದಾದರೂ, ಅದು ಖಾತರಿ ಎನ್ನುವಂತಿಲ್ಲ. ಸೃಜನಾತ್ಮಕತೆಯಲ್ಲಿ ತೊಡಗಿಕೊಂಡಿರುವ ಅತ್ಯಂತ ಮುಖ್ಯ ಸಾಮರ್ಥ್ಯಗಳೆಂದರೆ ನಿರರ್ಗಳತೆ, ನಮ್ಯತೆ, ಸ್ವಂತಿಕೆ ಮತ್ತು ವಿವರಣೆ.

- ಸೃಜನಾತ್ಮಕ ಜನರು ಸಾಮಾನ್ಯ ಬುದ್ಧಿಶಕ್ತಿಗಿಂತ(ಐಕ್ಯೂ) ಮೇಲ್ಮಟ್ಟದಲ್ಲಿರುತ್ತಾರೆ. 120 ಕ್ಕಿಂತ ಹೆಚ್ಚು ಮತ್ತು ಮೇಲ್ಮಟ್ಟದ ಬುದ್ಧಿಶಕ್ತಿಯಲ್ಲಿನ ಯಾವುದೇ ಏರಿಕೆಯು ಸೃಜನಾತ್ಮಕತೆಗೆ ಕೊಡುಗೆ ನೀಡಲಾರದೆಂದು ಕಾಣುತ್ತದೆ. ಬುದ್ಧಿಶಕ್ತಿ(ಐಕ್ಯೂ) ಮತ್ತು ಸೃಜನಾತ್ಮಕತೆಯ ನಡುವಿನ ಸಹ–ಸಂಬಂಧವು ಕೆಳಗಿನಿಂದ ಸಾಧಾರಣದವರೆಗೆ ಇರುತ್ತದೆ.

- ಸೃಜನಾತ್ಮಕತೆ ಮತ್ತು ಶೈಕ್ಷಣಿಕ ಸಾಧನೆಯ ನಡುವಿನ ಸಂಬಂಧವು ಬುದ್ಧಿಶಕ್ತಿ ಮತ್ತು ಶೈಕ್ಷಣಿಕ ಸಾಧನೆಯ ನಡುವಿನ ಸಂಬಂಧದಷ್ಟೇ ಉನ್ನತವಾದುದು.

- ಸೃಜನಾತ್ಮಕತೆಯು ಬದುಕಿನಲ್ಲಿ ಬಹಳ ಬೇಗ ಕಾಣಿಸಿಕೊಳ್ಳುತ್ತದೆ ಮತ್ತು ಅದರ ಬೆಳವಣಿಗೆ ಮತ್ತು ಪ್ರಗತಿಯು ವ್ಯಕ್ತಿಯ ಸಾಮಾಜಿಕ ಮತ್ತು ಭೌತಿಕ ಜಗತ್ತಿನ ಅನುಭವಗಳನ್ನು ಆಧರಿಸಿಕೊಂಡು ಇರುತ್ತದೆ. ಪ್ರಗತಿಯ ವಿಕ್ಷೇಪ ಪಥದ ಪ್ರವೃತ್ತಿಯು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಾ ಹೋಗುತ್ತದೆ. 'ಸೃಜನಾತ್ಮಕ ಸಂಭಾವ್ಯ ಸಾಧ್ಯತೆ ಮತ್ತು ಸೃಜನಾತ್ಮಕ ಕಾರ್ಯಾಚರಣೆಗಳೆರಡಕ್ಕೂ ಕುಸಿತ ಮತ್ತು ಪರಮಮಿತಿಯನ್ನು ಕಂಡುಕೊಳ್ಳಲಾಗಿದೆ. ಕುಸಿತ ಮತ್ತು ಪರಮಮಿತಿಯ ವಯಸ್ಸುಗಳು ವಿಭಿನ್ನವಾಗಿವೆ...ಎಲ್ಲ ವಯಸ್ಸುಗಳಲ್ಲಿಯೂ ಸೃಜನಾತ್ಮಕತೆಯು ಕೆಲವು ನಿರ್ಧಾರಗಳು, ಆಯ್ಕೆಗಳು ಮತ್ತು ಇಷ್ಟಗಳನ್ನು ಒಳಗೊಂಡಿರುತ್ತದೆ' (ರನಕೊ ಮತ್ತು ಚಾರ್ಲ್ಸ್, 1997).

- ಸೃಜನಾತ್ಮಕತೆ ಮತ್ತು ಗೋಳಾರ್ಧತ್ವದ ನಡುವಿನ ಸಂಬಂಧದ ಅನುಭವ ಜನಿತ ಬಗ್ಗೆ ನಿದರ್ಶನವು ನೀಡುವ ತೀರ್ಪು ಏನೆಂದರೆ, 'ಸೃಜನಾತ್ಮಕ ಚಟುವಟಿಕೆಯನ್ನು ಮೆದುಳಿನ ಭಾಗವೊಂದಕ್ಕೆ ವಿಶಿಷ್ಟವಾದ ವಿಶೇಷ ಕಾರ್ಯವೆಂದು ಸ್ಥಾನಿಕವಾಗಿಸುವುದು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ, ಫಲದಾಯಕ ಆಲೋಚನೆಯು ಮಿದುಳಿನ ಎರಡೂ ಭಾಗಗಳು ಉಪಕಾರ್ಯ ನಿರ್ವಹಿಸುತ್ತಿರುವ ಕಾರ್ಯವಿಧಾನಗಳ ಸಂಯೋಜನೆ ಮತ್ತು ಸಹಯೋಗವಾಗಿದೆ'(ಕಾಟ್ಜ್, 1999, ಪುಟ: 219).

- ಹಾಸ್ಯ–ಸೃಜನಾತ್ಮಕತೆಯ ನಿದರ್ಶನದ ಸಂಬಂಧ ಸೂಚಿಸುವುದೇನೆಂದರೆ, 'ಸೃಜನಾತ್ಮಕತೆ ಮತ್ತು ಹಾಸ್ಯ ಇವೆರಡೂ ಸಮಾನ ಮಾನಸಿಕ ಕಾರ್ಯಗತಿಗಳ ಅಗತ್ಯವನ್ನು ಹೊಂದಿರುತ್ತವೆ. ಆದರೆ, ಇಲ್ಲಿ ನಿರ್ದಿಷ್ಟ ಅನ್ವಯತೆಗಳು ಮಾತ್ರ ಭಿನ್ನವಾಗಿವೆ.'(ಕರೇನ್ ಮತ್ತು ಪೀಟರ್ ಡರ್ಕ್ಸ್, 1999, ಪುಟ: 245).

- ವ್ಯಕ್ತಿ ಕಾರ್ಯ ನಡೆಸುವ ಸಾಮಾಜಿಕ ಪರಿಸರದ ಸಂಪ್ರದಾಯಗಳು, ರೂಢಿಗಳು, ಪರಿಸ್ಥಿತಿಗಳು, ನಿರೀಕ್ಷೆಗಳು, ಮೌಲ್ಯಗಳು ಮತ್ತು ನಂಬಿಕೆಗಳು ಸೃಜನಾತ್ಮಕತೆಯ ಮೇಲೆ ಪ್ರಭಾವ ಬೀರುತ್ತವೆ. ಹೊಸ ಮತ್ತು ಮೂಲ ವಿಚಾರಗಳಿಗೆ ಬೆಲೆ ಕೊಡುವ ವಾತಾವರಣಗಳಿಗೆ ಬೆಂಬಲಿತವಾಗಿ ಮತ್ತು ಪ್ರತಿಕ್ರಿಯಾತ್ಮಕವಾಗಿ ಅದು ಅಭಿವರ್ಧಿಸುತ್ತದೆ.

- ಸೃಜನಾತ್ಮಕತೆಯನ್ನು ಮನುಷ್ಯನ ಚಟುವಟಿಕೆಯ ಎಲ್ಲ ರಂಗಗಳಲ್ಲಿ, ಎಲ್ಲ ವಿಷಯ ಕ್ಷೇತ್ರಗಳಲ್ಲಿ, ಎಲ್ಲ ಶಾಲಾ ಸಾಹಸಗಳಲ್ಲಿ ಬೆಳೆಸಿ ಹೆಚ್ಚಿಸಬಹುದಾಗಿದೆ. ಅದು ಯಾವುದೇ ಮಾಧ್ಯಮ ಅಥವಾ ಅಭಿವ್ಯಕ್ತಿಯ ವಿಧಾನದಲ್ಲಿ ತೊಡಗಿಸಿಕೊಂಡಿರಬಹುದು. ಜನರನ್ನು ಸೂಕ್ತರೀತಿಯ ತರಬೇತಿ ಕಾರ್ಯಕ್ರಮಗಳ ಮೂಲಕ ಸೃಜನಾತ್ಮಕವಾಗಿ ಚಿಂತಿಸುವಂತೆ ಮಾಡುವುದು ಸಾಧ್ಯವಿದೆ.

- ಬೇರೆ ಬೇರೆ ಸಂಶೋಧನಾತ್ಮಕ ಅಧ್ಯಯನಗಳಲ್ಲಿ ಕಂಡುಬಂದಂತಹ ಸೃಜನಶೀಲ ವ್ಯಕ್ತಿಗಳ ಕೆಲವು ಗುಣಲಕ್ಷಣಗಳ ಸಂಕ್ಷಿಪ್ತ ಸಾರಂಶ ಈ ಕೆಳಗೆ ನೀಡಲಾಗಿದೆ:

**ಸೃಜನಶೀಲ ಮಗು:** ಬೌದ್ಧಿಕವಾಗಿ ಕುತೂಹಲವುಳ್ಳವನು ಮತ್ತು ಶ್ರಮದಾಯಕ ಕೆಲಸ ಮಾಡಲು ಸಮರ್ಥನು; ವಾಸ್ತವ ವಿಚಾರಗಳನ್ನು ವಿವರಿಸಲು ಸಾಂಪ್ರದಾಯಿಕ ವಿವರಣೆಗಳನ್ನು ಆಧರಿಸದೆ ಹೊಸ ವಿಧಾನಗಳನ್ನು ಬಯಸುವಾತನು; ಕಷ್ಟದಾಯಕ ಸಮಸ್ಯೆಗಳನ್ನು ಎದುರಿಸುವಾಗ ಬೌದ್ಧಿಕ ಅಪಾಯಗಳನ್ನು ಎದುರಿಸಲು ಸಿದ್ಧನಾಗಿರುವವನು; ಅನಿಶ್ಚಿತತೆಯ ಸ್ಥಿತಿಗಳಲ್ಲಿ ಹೊಂದಾಣಿಕೆಯ ಒತ್ತಡಕ್ಕೆ ಮಣಿಯದೆ, ಗಂಡಾಂತರಗಳನ್ನು ಎದುರಿಸಬಲ್ಲವನು; ವಿಶಾಲ ವ್ಯಾಪ್ತಿಯ ಮಾಹಿತಿಯನ್ನು ದಾಖಲಿಸುವ, ಉಳಿಸುವ ಮತ್ತು ನೆನಪಿಸಿಕೊಳ್ಳಬಲ್ಲ ಅಪರೂಪದ ಸಾಮರ್ಥ್ಯವನ್ನು ತೋರಿಸಬಲ್ಲವನು; ಆಳವಾದ ಪರಿಕಲ್ಪನಾತ್ಮಕ ಅರ್ಥೈಸುವಿಕೆ ಮತ್ತು ವಿಶಾಲ ತರ್ಕ ಕೌಶಲಗಳನ್ನು ತೋರಿಸುವಾತನು; ಸ್ವ–ಅಭಿವ್ಯಕ್ತಿಯನ್ನು ಧಿಡೀರ್ ಆಗಿ ಕಾಣಿಸಬಲ್ಲವನು; ಚಿಂತನೆಗಳ ಪರಿಶೀಲನೆಯಲ್ಲಿ ನಿರರ್ಗಳತೆ ಮತ್ತು ಗಮನವನ್ನು ಕೇಂದ್ರೀಕರಿಸುವುದರಲ್ಲಿ ಸಮರ್ಥನು; ಸಾಹಸಮಯ ಆಲೋಚನೆಯಲ್ಲಿ ತೊಡಗಿಕೊಂಡಿರುವಾತನು ಮತ್ತು ವಿಷಯಗಳನ್ನು ಅದು ಇರುವ ಸ್ಥಿತಿಯಲ್ಲಿಯೇ ತೃಪ್ತಿ ಹೊಂದದೆ, ಪ್ರಚೋದನಕಾರಿ ಪ್ರಶ್ನೆಗಳನ್ನು ಕೇಳುವನು; ಸಮಸ್ಯೆಗಳನ್ನು ಕಾರ್ಯಸಿದ್ಧಿ ನೆಲೆಯಿಂದ ಗಮನಿಸಿ, ಗುರುತಿಸಿ, ಸೂತ್ರರೂಪದಲ್ಲಿ ವ್ಯಕ್ತಪಡಿಸುವನು; ಹೊಸತಾದ ಮತ್ತು ಅನಿರೀಕ್ಷಿತ

Digitised by Bharatavani, CIIL

ಸಂಬಂಧಗಳನ್ನು ಗ್ರಹಿಸುವನು; ಪ್ರಸ್ತುತ ಇರುವ ಮಾಹಿತಿ ಮತ್ತು ತನ್ನ ಸ್ವಂತದ ಸಾಮರ್ಥ್ಯಗಳಲ್ಲಿ ತನಗಿರುವ ಆತ್ಮವಿಶ್ವಾಸದ ನಡುವಿನ ಅಂತರಗಳನ್ನು ಗುರುತಿಸುವನು; ಕಾರ್ಯ ನಿರೀಕ್ಷೆಗಳಿಗೆ ಸಂವೇದನಾಶೀಲ ಮತ್ತು ಸ್ವತಃ ಅನೇಕ ಕಲ್ಪನಾ ವಿಚಾರಗಳನ್ನು ಹುಟ್ಟಿಸುವುದು ಮತ್ತು ಅದರ ಮೌಲ್ಯೀಕರಣ ನಡೆಸುವುದರೊಂದಿಗೆ, ಸೂಚಿಸಲ್ಪಟ್ಟ ಊಹಾತ್ಮಕ ವಿಚಾರಗಳ ಒಪ್ಪುವಿಕೆಯನ್ನು ಸೂಕ್ತ ರೀತಿಯಿಂದ ತೀರ್ಮಾನಿಸುವನು; ಸಮಸ್ಯೆಯ ಪರಿಹಾರಕ್ಕೆ ಮೂರ್ತ ತಿಳಿವಳಿಕೆ, ತತ್ವಗಳು ಮತ್ತು ಪರಿಕಲ್ಪನಾತ್ಮಕ ಅನುರೂಪ ಮಾದರಿಗಳನ್ನು ಬಳಸುವನು; ಆಲೋಚನೆ ಮತ್ತು ವಿವೇಚನೆಗಳಲ್ಲಿ ಸ್ವತಂತ್ರ; ಅಂತಃಸ್ಫುರಣದಿಂದ ಆಲೋಚಿಸುವನು ಮತ್ತು ಭಿನ್ನ ಮತ್ತು ಏಕರೂಪದಿಂದ ಆಲೋಚಿಸಬಲ್ಲನು; ಸಂದಿಗ್ಧತೆ ಮತ್ತು ಅಪಸ್ವರವನ್ನು ಸಹಿಸಬಲ್ಲನು; ಪ್ರಯತ್ನಗಳಲ್ಲಿ ಸಾಹಸಕಾರಿ ಮತ್ತು ಛಲವಾದಿ; ನಿರ್ದಿಷ್ಟ ಘಟಕಗಳನ್ನು ಸಂಯೋಜಿಸುವುದರಲ್ಲಿ ಉನ್ನತ ಸಾಮರ್ಥ್ಯ ಹೊಂದಿರುವನು; ಸಾಮಾನ್ಯವಾಗಿ ವಿಲಕ್ಷಣ ಸಂಗತಿಗಳಿಂದ ತಬ್ಬಿಬ್ಬಾಗುವನು(ಬ್ರುನರ್ ಇದನ್ನು 'ಪರಿಣಾಮಕಾರಿ ವಿಸ್ಮಯ'ವೆಂದು ಕರೆಯುತ್ತಾನೆ) ಮತ್ತು ಗೊಂದಲಗೊಳ್ಳುವನು; ದೀರ್ಘಾವಧಿಯವರೆಗೆ ಕೆಲಸ ಮಾಡುವನು ಮತ್ತು ಕಲ್ಪನೆಗಳು ಮತ್ತು ವಸ್ತುಗಳೊಂದಿಗೆ ಆಟವಾಡುವುದನ್ನು ಇಷ್ಟಪಡುವನು, ಅನುಭವಕ್ಕೆ ತೆರೆದುಕೊಳ್ಳುವನು (ರೋಗರ್ಸ್ ಹೇಳುವ ಪ್ರಕಾರ ತೆರೆದುಕೊಳ್ಳುವುದೆಂದರೆ ಪರಿಕಲ್ಪನೆಗಳು, ನಂಬಿಕೆಗಳು, ಊಹೆಗಳು ಮತು ಸಿದ್ಧಾಂತಗಳ ಗಡಿಗಳ ಕುರಿತಾಗಿ ಕಟ್ಟುನಿಟ್ಟು ಮತ್ತು ಭೇದ್ಯತೆ ಇಲ್ಲದಿರುವುದು); ಹೆಚ್ಚು ಆಸಕ್ತಿ ಮತ್ತು ಅಧಿಕಾರವನ್ನು ತೋರಿಸುವನು, ಭಾವನಾತ್ಮಕವಾಗಿ ಸ್ಥಿರ ಮತ್ತು ಪ್ರೌಢನಾಗಿರುವವನು, ಪ್ರಸಂಗೋಚಿತ, ತೀಕ್ಷ್ಣ ಮತ್ತು ಪ್ರಚೋದನಕಾರಿ ಪ್ರಶ್ನೆಗಳನ್ನು ಕೇಳುವನು, ಚಿಂತನೆಯಲ್ಲಿ ನಿರರ್ಗಳ, ನಮನೀತ ಮತ್ತು ಸ್ವಂತಿಕೆಯುಳ್ಳವನು ಶೋಧನೆ ಮತ್ತು ಪ್ರಯೋಗಗಳನ್ನು ಇಷ್ಟಪಡುವನು ಉನ್ನತ ರೀತಿಯಲ್ಲಿ ಪ್ರಚೋದಿತನು (ಕ್ರಚ್‌ಫೀಲ್ಡ್, 1967 ಎರಡು ವಿಧದ ಪ್ರಚೋದನೆಯನ್ನು ಗುರುತಿಸುತ್ತಾನೆ: 'ಅಹಂನಿಂದ ಒಳಗೊಂಡಿರುವ ಪ್ರಚೋದನೆ' ಮತ್ತು 'ಕಾರ್ಯ ಕೂಡಿರುವ ಪ್ರಚೋದನೆ')

### ಸೃಜನಾತ್ಮಕತೆ ಸಾಮಾನ್ಯವೇ ಅಥವಾ ವಸ್ತು ವಿಶಿಷ್ಟವೇ?

ಸಮಕಾಲೀನ ಸಂಶೋಧನೆಯಲ್ಲಿ ಅತ್ಯಂತ ನಿಷ್ಕರ್ಷಕ ಮತ್ತು ವಿವಾದಾಸ್ಪದ ಅಂಶಗಳಲ್ಲಿ, ಸೃಜನಾತ್ಮಕತೆ ವಸ್ತು ಸಾಮಾನ್ಯವಾದುದು(ಸಾಮಾನ್ಯವಾಗಿ ವಸ್ತು ಕ್ಷೇತ್ರಗಳಲ್ಲಿ ಇರುವ ರೀತಿ) ಅಥವಾ ವಸ್ತು ವಿಶಿಷ್ಟವಾದುದು (ಸಾಮಾನ್ಯವಾಗಿ ವಸ್ತು ಕ್ಷೇತ್ರಗಳಲ್ಲಿ ಭಿನ್ನವಾಗಿರುವ ರೀತಿ) ಎಂಬುದು ಕೂಡ ಒಂದಾಗಿದೆ. ಬಹುಪಾಲು ಮನೋಮಾನದ(ಸೈಕೊಮೆಟ್ರಿಕ್) ಅಧ್ಯಯನಗಳು ಗಿಲ್‌ಫೋರ್ಡ್(1967), ಟಾರೆನ್ಸ್(1974) ಮತ್ತು ವಾಲ್ಕ್–ಕಾಗನ್(1965) ಅವರ ಸಾಮಾನ್ಯೀಕೃತ ಪರಿಪ್ರೇಕ್ಷೆ ಮತ್ತು ಜನಪ್ರಿಯ ಮತ್ತು ವ್ಯಾಪಕವಾಗಿ ಬಳಕೆಯಾಗಿರುವ ಭಿನ್ನ ಚಿಂತನಾ ಪ್ರಯೋಗಗಳನ್ನು ಪ್ರತಿಫಲಿಸುತ್ತವೆ. ಸೃಜನಾತ್ಮಕ ಚಿಂತನೆಯು ವಸ್ತು ವಲಯದಲ್ಲೆಲ್ಲಾ ತನ್ನನ್ನು ಅಭಿವ್ಯಕ್ತಗೊಳಿಸುತ್ತದೆ ಎಂಬ ನಂಬಿಕೆಯನ್ನು ಇವೆಲ್ಲವೂ ಆಧರಿಸಿವೆ. ವಸ್ತು ವಿಶಿಷ್ಟತೆಯ ಕಲ್ಪನೆಯನ್ನು ಈ ಕೆಳಗಿನವರ ಅಧ್ಯಯನಗಳು ಬೆಂಬಲಿಸಿವೆ: ಹಾಲೆಂಡ್(1961), ಹಾಲೆಂಡ್ ಮತ್ತು ಅಸ್ಟಿನ್(1962) ಮತ್ತು ರನ್ಕೊ(1987, 1989). ಇತ್ತೀಚಿಗೆ ಬೇಯರ್‌ನ ಸಂಶೋಧನೆ(1993, 1994ಎ, 1994ಬಿ, 1994ಸಿ) ಒದಗಿಸಿರುವ ನಿದರ್ಶನದ ಪ್ರಕಾರ ಸೃಜನಾತ್ಮಕ ಉತ್ಪಾದನೆಯು ವಸ್ತುವಿಶಿಷ್ಟ ಮಾತ್ರವಲ್ಲ ಅದು ವಸ್ತುವಲಯದ ವ್ಯಾಪ್ತಿಯೊಳಗೆ ಕಾರ್ಯವಿಶಿಷ್ಟವೂ ಆಗಿರುತ್ತದೆ. ಗಾರ್ಡ್ನರ್(1983) ದೃಢಪಡಿಸಿರುವುದು ಹೀಗಿದೆ: 'ವ್ಯಕ್ತಿ ತಾನು ಕೆಲಸ ಮಾಡುತ್ತಿರುವ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿದಾಗ ಮಾತ್ರ ಅಪ್ಪಟ, ಸ್ವೋಪಜ್ಞ(ಸ್ವಂತಿಕೆಯ) ಮತ್ತು ಉದಾತ್ತ ಚಟುವಟಿಕೆಗಳು ಕಾಣಿಸಿಕೊಳ್ಳುವುದು ಸಾಧ್ಯ. ಅಂತಹ ವ್ಯಕ್ತಿಯಲ್ಲಿ ಮಾತ್ರ ಅಪ್ಪಟ ಹೊಸ ಕಲ್ಪನೆಯನ್ನು ಕಂಡುಕೊಳ್ಳುವ ಮತ್ತು ಅದನ್ನು ಉತ್ತಮ ರೀತಿಯಿಂದ ಹೇಗೆ ಸಾಧಿಸಬಹುದು ಎಂಬುದನ್ನು ಕಂಡುಹಿಡಿಯಬಲ್ಲ ಕ್ಷೇತ್ರದ ರಚನೆಯ ಅರ್ಥೈಸುವಿಕೆ ಮತ್ತು ಅದಕ್ಕೆ ಅಗತ್ಯವಿರುವ ಸಾಕಷ್ಟು ತಂತ್ರಗಳನ್ನು ಕಾಣಬಹುದಾಗಿದೆ' (ಪುಟ:289). ನಿಕರಸನ್(1999) ತನ್ನ ಬರೆವಣಿಗೆಯಲ್ಲಿ ಎಚ್ಚರದ ಸಂಗತಿಯೊಂದನ್ನು ಉಲ್ಲೇಖಿಸುತ್ತಾನೆ, 'ವಲಯದ(ಕ್ಷೇತ್ರದ) ಜ್ಞಾನವು ಯಾವಾಗಲೂ ಸೃಜನಾತ್ಮಕತೆಗೆ ದಾರಿ ಮಾಡಿಕೊಡುವುದಿಲ್ಲ, ಆದರೆ, ಅಂತಹ ಜ್ಞಾನವು ಅದರ ಸ್ಥಿತಿಗೆ ಸಂಬಂಧಿಸಿದಂತೆ ಅಗತ್ಯವಾಗಿ ಇರುತ್ತದೆ; ನಿರ್ದಿಷ್ಟ ವಲಯದಲ್ಲಿ ಗಮನಾರ್ಹ ಸೃಜನಾತ್ಮಕ ಕಾರ್ಯವನ್ನು ನಡೆಸುವ ಮಂದಿ ಆ ವಲಯದ ಕುರಿತು ಬಹುತೇಕ ಅಪಾರ ಜ್ಞಾನವನ್ನು ಹೊಂದಿಯೇ ಇರುತ್ತಾರೆ. (ಪುಟ: 409). ಸೃಜನಾತ್ಮಕತೆ ಸಾಮಾನ್ಯೀಕರಣ–ವಿಶಿಷ್ಟೀಕರಣದ ಕುರಿತಾಗಿ ಮರುಪರಿಶೀಲನೆಯನ್ನು ನಡೆಸಿರುವ ಪ್ಲಕ್ಕರ್ ಮತ್ತು ರೆನ್‌ಜುಲಿಯವರು(1999) ಹೇಳುತ್ತಾರೆ, 'ಸೃಜನಾತ್ಮಕತೆಯ ಸಾಮಾನ್ಯ ಅಥವಾ ವಲಯ ವಿಶಿಷ್ಟ ಸ್ವರೂಪದ ಕುರಿತು ತೃಪ್ತಿದಾಯಕವಾಗಿ ಉತ್ತರಿಸುವುದು ಇನ್ನೂ ಬಾಕಿ ಇದೆ.' ಶಿಕ್ಷಣದ ಸಂದರ್ಭದಲ್ಲಿ ಆ ರೀತಿಯ ಸಂಶೋಧನೆಯ ಬಳಕೆಯನ್ನು ಪ್ಲಕ್ಕರ್ ಗುರುತಿಸುತ್ತಾ ಹೇಳುತ್ತಾರೆ, 'ಉತ್ಪಾದನೆಯ ಅನೇಕ ಕ್ಷೇತ್ರಗಳಿಗೆ ವಿರೋಧಿ ನೆಲೆಯಿಂದ ಸೃಜನಾತ್ಮಕತೆಯು ವಿಶಿಷ್ಟ ವಸ್ತುವಲಯಗಳಲ್ಲಿ ಅಥವಾ ವಿಶಿಷ್ಟ ಕಾರ್ಯಗಳಲ್ಲಿ ಮಾತ್ರ ಅಭಿವ್ಯಕ್ತಿಯನ್ನು ಪಡೆಯುತ್ತದೆ ಎನ್ನುವುದನ್ನು ನಿರ್ಧರಿಸುವುದು ಶೈಕ್ಷಣಿಕ ಮತ್ತು ಪ್ರತಿಭಾ ಬೆಳವಣಿಗೆಯ ಮೇಲೆ ಮತ್ತು ಸೃಜನಾತ್ಮಕತೆಯ ಪ್ರಯೋಗವಾದಿ ಅಧ್ಯಯನದ ಮೇಲೆ ಗಂಭೀರ ಪರಿಣಾಮಗಳನ್ನು ಹೊಂದಿರುತ್ತದೆ. ಮಕ್ಕಳಲ್ಲಿ ಕಾರ್ಯ ವಿಶಿಷ್ಟತೆಯ ನಿದರ್ಶನಗಳು ದೊರೆತಲ್ಲಿ, ವಿದ್ಯಾರ್ಥಿಗಳು ನಿರ್ದಿಷ್ಟ ಭರವಸೆಯನ್ನು ಹೊಂದಿರತಕ್ಕಂತಹ ಸೃಜನಾತ್ಮಕ ಸಿದ್ಧಿಯ ವಿಶಿಷ್ಟ ಕ್ಷೇತ್ರಗಳಲ್ಲಿ ಸೃಜನಾತ್ಮಕ ತರಬೇತಿ ಕಾರ್ಯಕ್ರಮಗಳತ್ತ ತಮ್ಮ ಗಮನವನ್ನು ಕೇಂದ್ರೀಕೃತಗೊಳಿಸಬಹುದು. ಸೃಜನಾತ್ಮಕತೆಯು ವಲಯ ಸಾಮಾನ್ಯವಾಗಿದ್ದರೆ, ಶಿಕ್ಷಣತಜ್ಞರು ಸೃಜನಾತ್ಮಕ ಉತ್ಪಾದನೆಗಾಗಿ ಮಕ್ಕಳ ಸಾಮರ್ಥ್ಯವನ್ನು ಹೆಚ್ಚಿಸುವ ತಮ್ಮ ಪ್ರಯತ್ನಗಳಲ್ಲಿ ತಮ್ಮ ಗಮನವನ್ನು ಸಾಮಾನ್ಯ ಸೃಜನಾತ್ಮಕ

Digitised by Bharatavani, CIIL

ಕಾರ್ಯ ತಂತ್ರಗಳಲ್ಲಿ ಕೇಂದ್ರೀಕೃತಗೊಳಿಸಬಹುದು. ಇದೇ ರೀತಿ, ಕಾರ್ಯ ವಿಶಿಷ್ಟತೆಯ ನಿದರ್ಶನವನ್ನು ವಸ್ತು–ತಟಸ್ಥ ಭಿನ್ನ ಚಿಂತನಾ ಪರೀಕ್ಷೆಗಳಿಗೆ ಊಹಾತ್ಮಕ ಮತ್ತು ಭೇಧಾತ್ಮಕ ಸಿಂಧುತ್ವದ ಗೃಹೀಕೃತ ಕೊರತೆಯನ್ನು ಅದು ವಿವರಿಸಬಹುದು' (ಪುಟ: 128).

**ಸೃಜನಾತ್ಮಕತೆಯ ಪ್ರತಿಬಂಧಕಗಳು:**

ಸೃಜನಾತ್ಮಕ ಪ್ರಯತ್ನಗಳು ಅನೇಕ ರೀತಿಯ ತಡೆಗಳನ್ನು ಎದುರಿಸುತ್ತವೆ. ದೈನಂದಿನ ಬದುಕಿನ ನೂರಾರು ಸಮಸ್ಯೆಗಳು ಇರುತ್ತವೆ. ಉದಾಹರಣೆಗೆ ಹಸಿವು, ಸಮಾಜದ ಸ್ವೀಕಾರ, ಶಾಲಾ ವ್ಯವಸ್ಥೆಗಳು, ಶಿಕ್ಷಕರು ಮತ್ತು ಸ್ನೇಹಿತರು, ಉದ್ಯೋಗದ ಪರಿಸ್ಥಿತಿಗಳು, ಕೆಲಸದ ಹೊರೆ, ಸಲಕರಣೆಗಳು, ವಸ್ತುಗಳು ಮತ್ತು ಆರ್ಥಿಕ ಸಂಪನ್ಮೂಲಗಳ ಅಲಭ್ಯತೆ, ಮತ್ತು ನಾವು ಸೃಜನಾತ್ಮಕರಾಗುವುದರಲ್ಲಿ ಹಸ್ತಕ್ಷೇಪ ಮಾಡುವ ಇತರ ಅಂಶಗಳು. ಅಪಾಯದ ಹೆದರಿಕೆ, ಟೀಕೆಯ ಹೆದರಿಕೆ, ನಿರಾಕರಣೆ, ಅಸುರಕ್ಷತೆ ಮತ್ತು ಪ್ರತಿಕೂಲ (ಸಾಮಾಜಿಕ ಮತ್ತು ಪರಿಸರದ) ಪರಿಸ್ಥಿತಿಗಳು ಸೃಜನಾತ್ಮಕತೆಯನ್ನು ತಡೆಯುತ್ತವೆ. ಎಲ್ಲ ಕಡೆಗಳಲ್ಲಿ ತಮ್ಮ ಸ್ವಂತದ ಸೃಜನಾತ್ಮಕ ಪ್ರಯತ್ನವನ್ನು–ಅದು ಹೊಸ ಕಲ್ಪನೆ, ಕಲಾಭಿವ್ಯಕ್ತಿ, ಕವಿತೆ ಅಥವಾ ಸಂಶೋಧನೆಯಾಗಿರಬಹುದು– ಜನರ ಮುಂದಿಡುವಾಗ ತಾನು ಅಪಹಾಸ್ಯಕ್ಕೆ ಅಥವಾ ಟೀಕೆಗೆ ಒಳಗಾಗಬಹುದು ಎಂಬ ಮುಜಗರದ ಸ್ಥಾನದಲ್ಲಿ ಎಲ್ಲರೂ ಇರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿಯೇ ಸೋಲಿನ ಹೆದರಿಕೆ ಎದ್ದು ಕಾಣಿಸುತ್ತದೆ ಮತ್ತು ಅದು ಸೃಜನಾತ್ಮಕತೆಗೆ ಹಾನಿಕರವಾಗುತ್ತದೆ. ಮಕ್ಕಳ ಸೃಜನಾತ್ಮಕ ಪ್ರಯತ್ನಗಳನ್ನು ತಡೆಯುವುದರಲ್ಲಿ ಮುಖ್ಯವಾಗುವ ಅಂಶಗಳೆಂದರೆ: ಶಾಲಾ ಪರಿಸ್ಥಿತಿಯಲ್ಲಿ ಕೇವಲ ಅಭ್ಯಾಸ ಕಲಿಕೆಯ ಮೇಲಿನ ಒತ್ತು ಮತ್ತು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಸಲುವಾಗಿ ತಿಳಿವಳಿಕೆಯನ್ನು ಪಡೆಯುವುದು, ಪಠ್ಯಪುಸ್ತಕದ ಮೇಲೆ ಅಗತ್ಯಕ್ಕಿಂತ ಹೆಚ್ಚಿನ ಅವಲಂಬನ, ಪಠ್ಯವಸ್ತುವನ್ನು ಮುಗಿಸುವ ಒತ್ತಡ, ಕಟ್ಟುನಿಟ್ಟಿನ ಪಠ್ಯಕ್ರಮ, ಉತ್ತೀರ್ಣತೆ/ಅನುತ್ತೀರ್ಣತೆಯ ವರ್ಗೀಕರಣ, ಶಾಲಾ ವೇಳಾಪಟ್ಟಿಯ ಅನಮ್ಯತೆ ಮತ್ತು ನೀಡಲಾದ ಕೆಲಸವನ್ನಷ್ಟೇ ಮಾಡಬೇಕೆನ್ನುವ ಅನಗತ್ಯ ಒತ್ತು. ಮಾಮೂಲಿಯ ಮತ್ತು ಆಸಕ್ತಿಯನ್ನು ಉಂಟುಮಾಡದ ಬೋಧನಾ ರೀತಿಗಳು, ಅತಿ ಶೀಘ್ರದಲ್ಲಿ ಕಾಣಿಸಿಕೊಳ್ಳುವ ಅತಿ ಹೆಚ್ಚಿನ ಟೀಕೆಗಳು, ಒತ್ತಡ ಮತ್ತು ಆತಂಕವನ್ನು ಹುಟ್ಟಿಸುವ ಕಠಿಣ ಶಿಸ್ತುಕ್ರಮಗಳು, ಬೇರೆ ಯಾವುದೇ ವಿಧದಲ್ಲಿ ಮಾಡದೆ ಹೇಳಿದ ರೀತಿಯಲ್ಲಿ ಮಾಡಬೇಕೆನ್ನುವ ಒತ್ತಾಯ ಮತ್ತು ಮಕ್ಕಳು ಶೋಧನೆ ಅಥವಾ ಹೊಸ ಒಳನೋಟಕ್ಕೆ ಚಕಿತರಾಗುವ ಅನುಭವದಿಂದ ಅವರನ್ನು ವಂಚಿತಗೊಳಿಸುವುದು ಕೂಡ ಮಕ್ಕಳ ಸೃಜನಾತ್ಮಕತೆಗೆ ತಡೆಯನ್ನು ಉಂಟು ಮಾಡುವುದರಲ್ಲಿ ತಮ್ಮ ಕೊಡುಗೆ ನೀಡುತ್ತವೆ. ಅಧಿಕಾರಯುತ ಕಲಿಕಾ ವಾತಾವರಣಗಳು ಮಕ್ಕಳ ಸ್ವಯಂಪ್ರೇರಿತ ಕಲಿಕೆಯನ್ನು ಚಿವುಟಿ ಹಾಕುವುದಲ್ಲದೆ, ಕಲ್ಪನೆಗಳೊಂದಿಗೆ ಮತ್ತು ವಸ್ತುವಿನೊಂದಿಗೆ ಆಟವಾಡುವ ಅವರ ಸ್ವಾತಂತ್ರ್ಯಕ್ಕೆ ತಡೆ ಹಾಕುತ್ತವೆ ಮತ್ತು ಸ್ವ ಪ್ರೇರಣೆಯ ಕಲಿಕೆಯನ್ನು ಮಟ್ಟಹಾಕುತ್ತವೆ.

ಶಾಲೆಗಳಿಗೆ ನಿಗದಿಪಡಿಸಲಾದ ಬಹುತೇಕ ಪಠ್ಯಪುಸ್ತಕಗಳು ವಸ್ತುವಿಷಯವನ್ನು ಬಹಳ ಸೌಮ್ಯರೀತಿಯಿಂದ ಪ್ರಸ್ತುತಪಡಿಸುತ್ತವೆ. ಅವುಗಳ ಪುಟದಲ್ಲಿ ಚಮತ್ಕಾರವಾಗಲೀ ಅಥವಾ ಜೀವಂತಿಕೆಯಾಗಲೀ ಇರುವುದಿಲ್ಲ. ಅವುಗಳು ನಮ್ಮಲ್ಲಿರುವ ಪರೀಕ್ಷೆಯ ಸ್ವರೂಪಕ್ಕೆ ತಕ್ಕ ರೀತಿಯಲ್ಲಿ ಇವೆ. ಕೊವಿಂಗಟನ್(1968) ಬರೆಯುತ್ತಾರೆ, 'ಈ ವಿಧದ ಪಠ್ಯಪುಸ್ತಕಗಳ ಪ್ರಸ್ತುತಿಗಳು ವಸ್ತುವಿನ ತ್ವರಿತ, ತಡೆರಹಿತ ಸಂಯೋಜನೆ ಮತ್ತು ಪರಿಣತಿಯನ್ನು ಒದಗಿಸುವ ಪ್ರಶ್ನೆಯೇ ಇಲ್ಲ. ಆದರೆ ಅತ್ಯಂತ ದಕ್ಷ ಕಲಿಕೆಗೆ ಅಗತ್ಯವಿರುವ ಪ್ರವೇಶ್ಯವು ಸೃಜನಾತ್ಮಕ ಮತ್ತು ಉತ್ಪಾದನಾ ಚಿಂತನೆಯನ್ನು ಬೆಳೆಸುವ ರೀತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಇರುತ್ತದೆ ಎಂದು ಊಹಿಸಿಕೊಳ್ಳಲು ಸಾಧ್ಯವಿಲ್ಲ'(ಪುಟ:23). ಪ್ರತಿಯೊಂದು ಪಾಠದ ಕೊನೆಯಲ್ಲಿ ನೀಡಲಾಗುವ ಪ್ರಶ್ನೆಗಳು ಸಾಮಾನ್ಯವಾಗಿ ವಾಡಿಕೆಯ ರೀತಿಯದ್ದಾಗಿ ಇರುತ್ತವೆ. ಅವುಗಳಿಂದ ಮಕ್ಕಳ ಕುತೂಹಲ, ವಿಸ್ಮಯ ಮತ್ತು ವಿಮರ್ಶಾತ್ಮಕ ಮತ್ತು ಸೃಜನಾತ್ಮಕ ಆಲೋಚನೆಗಳು ಬೆಳೆಯುವುದಕ್ಕೆ ಯಾವುದೇ ನೆರವು ದೊರೆಯಲಾರದು. ಲಿಂಗಾಧಾರಿತ ಪಾತ್ರಗಳು ಮತ್ತು ಸಾಂಪ್ರದಾಯಿಕ ರೀತಿಯಿಂದ ಸ್ಥಾಪಿತವಾಗಿರುವ ಮಟ್ಟಗಳನ್ನು ಒಪ್ಪಿಕೊಳ್ಳುವಂತೆ ಹೇರಲಾಗುವ ಹೆಚ್ಚಿನ ಒತ್ತಡವು ವಿದ್ಯಾರ್ಥಿಗಳು ಸೃಜನಾತ್ಮಕವಾಗಿ ಆಲೋಚಿಸದಂತೆ ತಡೆಯಾಗಿ ಪರಿಣಮಿಸಿವೆ. ಇದೇ ರೀತಿ ವಿದ್ಯಾರ್ಥಿಗಳು ಪ್ರಶ್ನೆ ಕೇಳುವುದು, ಸಂದೇಹ ವ್ಯಕ್ತಪಡಿಸುವುದು, ಬೇರೆ ಉತ್ತರಗಳು ಅಥವಾ ಪರಿಹಾರಗಳನ್ನು ಕಂಡುಕೊಳ್ಳುವುದು ಅಥವಾ ಹುಡುಕಿಕೊಳ್ಳುವುದನ್ನು ತಡೆಯುವುದು ಇತ್ಯಾದಿಗಳು ನಮ್ಮ ತರಗತಿ ಕೋಣೆಗಳಲ್ಲಿ ಅತಿರೇಕವಾಗಿದ್ದು, ಮಕ್ಕಳು ತಮ್ಮ ಸೃಜನಾತ್ಮಕ ಕಿಡಿಗಳನ್ನು ಕಳೆದುಕೊಳ್ಳುವುದಕ್ಕೆ ಇವು ಕಾಣಿಕೆ ನೀಡುತ್ತವೆ. ನಮ್ಮ ವ್ಯವಸ್ಥೆ ಯಶಸ್ಸು ಆಧಾರಿತ ಸಾಂಪ್ರದಾಯಿಕ ವಿಧಾನಗಳಿಗೆ ತನ್ನ ಒಲವನ್ನು ತೋರಿಸುತ್ತದೆ ಮತ್ತು ಭಿನ್ನವಾಗಿ ಯೋಚಿಸುವ ಕ್ರಮಕ್ಕಾಗಿ ವಿದ್ಯಾರ್ಥಿಗಳನ್ನು ಶಿಕ್ಷಿಸುತ್ತದೆ. ಅದು ವಿದ್ಯಾರ್ಥಿಯ ಸೃಜನಾತ್ಮಕತೆಯನ್ನಾಗಲೀ, ಶಿಕ್ಷಕರ ಸೃಜನಾತ್ಮಕತೆಯನ್ನಾಗಲೀ, ಗುರುತಿಸಲು, ಮೆಚ್ಚಿಕೊಳ್ಳಲು ಅಥವಾ ಕಂಡುಕೊಳ್ಳಲು ವಿಫಲವಾಗುತ್ತದೆ. ಪಲರಮೊ(1966) ಒತ್ತಿ ಹೇಳಿದ್ದೇನೆಂದರೆ, 'ಸೃಜನಾತ್ಮಕ ವಿದ್ಯಾರ್ಥಿಗಳನ್ನು ಗುರುತಿಸಲು, ಸ್ವೀಕರಿಸಲು ಮತ್ತು ಪೋಷಿಸಲು ವಿಫಲಗೊಳ್ಳುವುದು, ಯಾವುದೇ ವ್ಯಕ್ತಿಯ ಸೃಜನಾತ್ಮಕ ಬೆಳವಣಿಗೆಯನ್ನು ಕುಂಠಿತಗೊಳಿಸಿದಂತೆ ಆಗುವುದಲ್ಲದೆ, ಪ್ರಮುಖ ಮತ್ತು ಜವಾಬ್ದಾರಿಯುತ ಸ್ಥಾನಗ್ರಹಣ ಪ್ರಕ್ರಿಯೆಯಲ್ಲಿ ಇತರರ ಸೃಜನಾತ್ಮಕ ಸಾಮರ್ಥ್ಯವನ್ನು ನಾಶಪಡಿಸಿದಂತೆ ಕೂಡ ಆಗುತ್ತದೆ. ಸಮಾಜಕ್ಕೆ ತನ್ನ ಸೃಜನಾತ್ಮಕ ಸಮರ್ಥ ವ್ಯಕ್ತಿಗಳನ್ನು ಕಳೆದುಕೊಳ್ಳುವ ನಷ್ಟವನ್ನು ಭರಿಸಿಕೊಳ್ಳುವುದು ಬಲುಕಷ್ಟ ಸಾಧ್ಯ'(ಪುಟ: 17). ಮೇಲೆ ಉಲ್ಲೇಖಿಸಲಾದ ಮತ್ತು ಸೃಜನಾತ್ಮಕತೆಯನ್ನು ಬೆಳೆಸುವ ಮತ್ತು ಪೋಷಿಸುವ ಕಾರ್ಯಗತಿಯಲ್ಲಿ ಕಾಣಿಸಿಕೊಳ್ಳಬಹುದಾದ ತಡೆಗಳಿಂದ ವಿದ್ಯಾರ್ಥಿಗಳನ್ನು ಮುಕ್ತಗೊಳಿಸುವ ಅಗಾಧ ಜವಾಬ್ದಾರಿ ಶಾಲೆಗಳು, ಹೆತ್ತವರು ಮತ್ತು ಶಿಕ್ಷಕರ ಮೇಲೆ ಇದೆ. ಯಾವುದೇ ಸೃಜನಾತ್ಮಕ ಪ್ರಯತ್ನದಲ್ಲಿ ತಡೆಗಳು ಯಾವಾಗಲೂ

Digitised by Bharatavani, CIIL

ಇದ್ದೇ ಇರುತ್ತವೆ. ಅದರಿಂದ ದೂರ ಓಡಿ ಹೋಗುವುದರ ಬದಲಾಗಿ ಅದನ್ನು ಸವಾಲುಗಳಾಗಿ ತೆಗೆದುಕೊಂಡು ಎದುರಿಸಬೇಕು ಮತ್ತು ಜಯಿಸಬೇಕು.

**ಸೃಜನಾತ್ಮಕ ಶಿಕ್ಷಕರನ್ನು ಮತ್ತು ಸೃಜನಾತ್ಮಕ ಬೋಧನೆಯನ್ನು ಅರ್ಥೈಸುವುದು:**

ಸೃಜನಾತ್ಮಕ ಬೋಧನೆಯು ಸಾಮಾನ್ಯವಾಗಿ ತರಗತಿಯಲ್ಲಿ ಕಾಣುವ ಬೊಧನೆಗಿಂತ ಹೇಗೆ ಭಿನ್ನ? ಇಲ್ಲಿ ವ್ಯತ್ಯಾಸವಿರುವುದು ಗುರಿಗಳು ಮತ್ತು ಉದ್ದೇಶಗಳಲ್ಲಿ, ವಸ್ತು ವಿಶದೀಕರಣದಲ್ಲಿರುವ ತಂತ್ರಗಳು ಮತ್ತು ಕ್ರಮಾನುಸರಣೆಯಲ್ಲಿ, ಶಿಕ್ಷಕ–ವಿದ್ಯಾರ್ಥಿ ಪ್ರತಿಕ್ರಿಯೆಗಳಲ್ಲಿ, ತರಗತಿಯ ವಾತಾವರಣ ಮತ್ತು ನಿರ್ವಹಣೆಯಲ್ಲಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ಬೋಧನೆ ಮತ್ತು ಕಲಿಕೆಯ ಪರಿಣಾಮದಲ್ಲಿ. ಸೃಜನಾತ್ಮಕ ಬೋಧನೆ ಅಥವಾ ಸೃಜನಾತ್ಮಕ ಶಿಕ್ಷಕನನ್ನು ವ್ಯಾಖ್ಯಾನಿಸುವುದು ಕಷ್ಟ. ಪ್ರಶ್ನೆ ಏನೆಂದರೆ, ಸೃಜನಾತ್ಮಕ ಶಿಕ್ಷಕನೆಂದರೆ ಯಾರು ಮತ್ತು ಸೃಜನಾತ್ಮಕ ಬೋಧನೆಯಲ್ಲಿ ಇರುವುದೇನು ಎನ್ನುವುದು ದಾರಿ ತಪ್ಪಿಸುವಂತಹದು. ಆದುದರಿಂದ, ಸೃಜನಾತ್ಮಕ ಶಿಕ್ಷಕನು ಹೇಗಿರುತ್ತಾನೆ ಎಂದು ಮತ್ತು ಸೃಜನಾತ್ಮಕ ಬೋಧನೆ ಯಾವುದರ ಕುರಿತಾಗಿ ಇದೆ ಎಂದು ವರ್ಣಿಸುವುದು ಹೆಚ್ಚು ಸೂಕ್ತ. ಶಿಕ್ಷಣಜ್ಞರು ಸೃಜನಾತ್ಮಕ ಬೋಧನೆಯ ಬಗ್ಗೆ ಸಾಧ್ಯವಾದಷ್ಟು ಒಮ್ಮತಕ್ಕೆ ಬರಬೇಕು. ಅವರಿಗೆ ಮಕ್ಕಳು ಏನು, ಹೇಗೆ ಮತ್ತು ಏಕೆ ಓದಬೇಕು ಎನ್ನುವುದರ ಕುರಿತು ಸ್ಪಷ್ಟತೆ ಇರಬೇಕು. ಅವರು ಸೃಜನಾತ್ಮಕತೆಯನ್ನು ಉತ್ತಮ ರೀತಿಯಲ್ಲಿ ಬೆಳೆಸುವ ಪಠ್ಯಕ್ರಮ ಮತ್ತು ಬೋಧನೆಯ ವಿಧಾನಕ್ಕೆ ಸಹಮತ ವ್ಯಕ್ತಪಡಿಸಬೇಕು. ಇವುಗಳಿಗೆ ಸಂಬಂಧಿಸಿದಂತೆ ಮುಖಂಡತ್ವ, ಬೆಂಬಲ, ತರಬೇತಿ ಮತ್ತು ಉತ್ತರವಾದಿತ್ವದ ತಂತ್ರಗಳು ಇವೆ. ಈ ತಂತ್ರಗಳು ಸೃಜನಾತ್ಮಕ ಬೋಧನೆ ಮತ್ತು ಕಲಿಕೆಯ ಉದ್ದೇಶಗಳನ್ನು ನೆರವೇರಿಸಿಕೊಳ್ಳಲು ಸಹಕಾರಿಯಾಗುತ್ತವೆ. ಸೃಜನಾತ್ಮಕ ಬೋಧನೆಯ ತಂತ್ರಗಳು ಶಿಕ್ಷಣ ವ್ಯವಸ್ಥೆಯಲ್ಲಿರುವ ಪ್ರಧಾನ ವ್ಯಕ್ತಿಗಳನ್ನು ಪ್ರಭಾವಿಸುವಷ್ಟು ವ್ಯಾಪಕವಾಗಿರಬೇಕು, ಪ್ರತಿಯೊಬ್ಬರನ್ನೂ ಶಕ್ತಿಯುತಗೊಳಿಸುವಷ್ಟು ಪರಸ್ಪರ ಜೋಡಿಸಿಕೊಂಡಿರಬೇಕು, ಮತ್ತು ಬೋಧನೆ ಮತ್ತು ಕಲಿಕೆಯಲ್ಲಿ ಗುಣಮಟ್ಟ ಮತ್ತು ಉತ್ಕೃಷ್ಟತೆಯನ್ನು ಪ್ರಭಾವಿಸುವಷ್ಟು ಮತ್ತು ಗಣನೀಯ ಪ್ರಮಾಣದ್ದಾಗಿರಬೇಕು.

ಓರ್ವ ಸೃಜನಾತ್ಮಕ ಶಿಕ್ಷಕನು ಗುಣಾತ್ಮಕವಾಗಿ ಇತರ ಶಿಕ್ಷಕರಿಗಿಂತ ಭಿನ್ನನಾಗಿರುವಂತೆ ಕಂಡುಬರುತ್ತಾನೆ. ಅವನಲ್ಲಿ ಬೋಧನೆಗೆ ಬೇಕಾದ ವಿಷಯದ ಬಗ್ಗೆ ಪೂರ್ಣ ತಿಳುವಳಿಕೆ ಇರುತ್ತದೆ ಮತ್ತು ವಿಸ್ತಾರವಾದ ಬೋಧನಾ ಸಾಮರ್ಥ್ಯಗಳು ಇರುತ್ತವೆ. ಅವನಲ್ಲಿ ಹೊಸ ಕಲ್ಪನೆಗಳು, ಅವನ ಕ್ಷೇತ್ರದ ಪ್ರಗತಿಗಳು, ಮತ್ತು ವಿಷಯಾಂಶವನ್ನು ಪ್ರಸ್ತುತ ಪಡಿಸುವ ಹೊಸ ವಿಧಾನಗಳ ಮೇಲೆ ಹಿಡಿತ ಸಾಧಿಸುವ ಉತ್ಕಟ ಸಾಮರ್ಥ್ಯವಿರುತ್ತದೆ. ಅವನ ವರ್ತನೆ ಮತ್ತು ಕೃತ್ಯಗಳು ಸೃಜನಾತ್ಮಕ ಉತ್ಪಾದನೆ ಅಥವಾ ಕಾರ್ಯಾಚರಣೆಗಾಗಿ ಇರುವ ಅವನ ಸಾಮರ್ಥ್ಯವನ್ನು ಪ್ರತಿಫಲಿಸುತ್ತವೆ. ಅವನು ಬೋಧನೆಯ ಕುರಿತಾದ ಕಲಿಕೆಯಲ್ಲಿ, ಬೇರೆ ಶಿಕ್ಷಕರ ಅನುಭವಗಳೊಂದಿಗೆ ಮರುಯೋಜನೆ ಮತ್ತು ಸಮರ್ಥಿಸುವ ಮೂಲಕ ತಾನು ತಿಳಿದುಕೊಂಡಿರುವುದರ ಗಡಿಗಳನ್ನು ನಿಯಮಿತವಾಗಿ ವಿಸ್ತರಿಸಿಕೊಳ್ಳುವ ಉತ್ಸಾಹದಲ್ಲಿ ನಿಜವಾದ ಸಂಭ್ರಮವನ್ನು ಕಂಡುಕೊಳ್ಳುತ್ತಾನೆ. ಅವನು ಸಾಮಾಜಿಕ ಸಂಬಂಧಗಳನ್ನು ಮತ್ತು ಗುಂಪು ಸಮಸ್ಯೆ–ಪರಿಹಾರ ತಂತ್ರಗಳನ್ನು ಸ್ಥಾಪಿಸುತ್ತಾನೆ ಮತ್ತು ಕಾಪಾಡಿಕೊಂಡು ಬರುತ್ತಾನೆ. ಅವನಲ್ಲಿ ಹಾಸ್ಯ ಮತ್ತು ಯಥೇಷ್ಟ ಕಲ್ಪನೆ ಇದೆ. ಅವನು ವಿದ್ಯಾರ್ಥಿಗಳ ಪ್ರಚೋದನಾಕಾರಿ ಮನಃಸ್ಥಿತಿಯನ್ನು, ಪ್ರಧಾನ ಗ್ರಹಿಕೆಗಳನ್ನು ಮತ್ತು ವಸ್ತು ವಿಷಯ ಕ್ಷೇತ್ರದ ತಾಕತ್ತುಗಳನ್ನು ಕಟ್ಟಿ ಬೆಳೆಸುವ ಇಚ್ಛೆಯನ್ನು ಹೊಂದಿರುತ್ತಾನೆ. ಅವನು ಸಮಸ್ಯೆಯ ಕೇಂದ್ರವನ್ನು, ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಒತ್ತಾಯವನ್ನು ಮತ್ತು ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸ್ವಂತಿಕೆಯನ್ನು ಪ್ರದರ್ಶಿಸುವುದರಲ್ಲಿ ಆಸಕ್ತನಾಗಿದ್ದಾನೆ. ಅವನು ಮಕ್ಕಳಿಗೆ ಭಿನ್ನ ರೀತಿಯಿಂದ ಯೋಚಿಸುವುದಕ್ಕೆ ಮತ್ತು ಕಲಿತಿರುವುದನ್ನು ವಿಭಿನ್ನ ಸಂದರ್ಭಗಳು ಮತ್ತು ಪರಿಸ್ಥಿತಿಗಳಿಗೆ ಅನ್ವಯಿಸಿಕೊಳ್ಳಲು ಅವಕಾಶಗಳನ್ನು ಒದಗಿಸುತ್ತಾನೆ. ಅವನು ಮಕ್ಕಳಿಗೆ ಶೋಧನೆ ಮತ್ತು ಪ್ರಯೋಗಕ್ಕೆ ಅವಕಾಶ ನೀಡುತ್ತಾನೆ ಮತ್ತು ಸೃಜನಾತ್ಮಕ ವರ್ತನೆಗೆ ಯಾವಾಗ ಮತ್ತು ಹೇಗೆ ಪುರಸ್ಕರಿಸಬೇಕು ಎಂಬುದನ್ನು ತಿಳಿದುಕೊಂಡಿರುತ್ತಾನೆ.

ಸೃಜನಾತ್ಮಕ ಬೋಧನೆಗೆ ಎರಡು ಮುಖಗಳು ಇವೆ– ಬೋಧನೆಯಲ್ಲಿ ಶಿಕ್ಷಕರ ಸೃಜನಾತ್ಮಕತೆ ಮತ್ತು ವಿದ್ಯಾರ್ಥಿಗಳ ಸೃಜನಾತ್ಮಕತೆಗೆ ನಡೆಸುವ ಬೋಧನೆ. ಬೋಧನೆಯಲ್ಲಿ ಸೃಜನಾತ್ಮಕ ಹೊಸ ಮತ್ತು ಪರಿಶೋಧನಾತ್ಮಕ ಬೋಧನಾ ವಿಧಾನಗಳಿದ್ದು ಇದು ಸಾಂಪ್ರದಾಯಿಕ ಅಥವಾ ಸಾಮಾನ್ಯ ರೀತಿಯ ಬೋಧನೆಗಿಂತ ಭಿನ್ನವಾಗಿರುತ್ತದೆ. ಇದು ಶಿಕ್ಷಕರ ಪ್ರಗತಿ ಅಥವಾ ಸುಧಾರಣೆ ಕೇಂದ್ರಿತವಾಗಿದೆ ಮತ್ತು ಇದರ ನಿರೀಕ್ಷೆಯಲ್ಲಿ ಶಿಕ್ಷಕರು ನಿರಂತರವಾಗಿ ಮತ್ತು ಒತ್ತಾಯಪೂರ್ವಕವಾಗಿ ಹೊಸ ತಂತ್ರಗಳನ್ನು, ವೈಯಕ್ತಿಕವಾಗಿ ತೃಪ್ತಿ ನೀಡುವ ಮತ್ತು ವೃತ್ತಿಪರವಾಗಿ ಪುರಸ್ಕಾರ ಪಡೆಯುವಂತಹ ಬೋಧನೆಯ ವಿಧಾನಗಳು ಮತ್ತು ಶೈಲಿಗಳನ್ನು ಹುಡುಕಿಕೊಳ್ಳುವುದು ಮತ್ತು ಅದರ ಪ್ರಯೋಗ ನಡೆಸುವುದು ಇರುತ್ತದೆ. ಈ ವಿಧದ ಶಿಕ್ಷಕರ ಸೇವಾಪೂರ್ವ ಮತ್ತು ಸೇವಾ ಅವಧಿಯ ಕಾರ್ಯಕ್ರಮಗಳ ಮೂಲಕ ನೀಡತಕ್ಕಂತಹ ತರಬೇತಿಯು ಶಿಕ್ಷಕ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ವಾಸ್ತವವಾಗಿ, ಬೋಧನೆಯಲ್ಲಿ ಸೃಜನಾತ್ಮಕತೆಯು ಕಾರ್ಯಕ್ರಮಗಳ ಪ್ರಮುಖ ಉದ್ದೇಶಗಳಲ್ಲಿ ಒಂದು ಆಗಿರಬೇಕು. ಐವತ್ತು ವರ್ಷಗಳ ಸೃಜನಾತ್ಮಕತೆಯ ಸಂಶೋಧನೆಯು ಅದು ಈಗ ಇರುವ ಹಾಗೆ, ಶಿಕ್ಷಕರ ಸೃಜನಾತ್ಮಕತೆ ಅಥವಾ ಬೋಧನೆಯಲ್ಲಿ ಸೃಜನಾತ್ಮಕತೆಯ ವಿಚಾರವಾಗಿ ತನ್ನ ಗಮನವನ್ನು ಕೇಂದ್ರೀಕೃತಗೊಳಿಸಿಲ್ಲ. ಶಿಕ್ಷಣಕ್ಕೆ ಸಂಬಂಧಿಸಿದ ಬಹುಪಾಲು ಸೃಜನಾತ್ಮಕತೆಯ ಸಂಶೋಧನೆಗಳು ವಿದ್ಯಾರ್ಥಿಗಳಿಗೆ ಸೃಜನಾತ್ಮಕತೆಯನ್ನು ಕಲಿಸುವುದರ ಕುರಿತಾಗಿ ಇವೆ. ಇದು ಶಿಕ್ಷಕರಿಗೆ ತರಗತಿಯ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಸೃಜನಾತ್ಮಕತೆಗೆ ಪ್ರಚೋದನೆ ನೀಡಲು ಅವರು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದರ ಕುರಿತಾಗಿ ಗಮನಾರ್ಹ

Digitised by Bharatavani, CIIL

ಮಾರ್ಗದರ್ಶಿ ಸೂತ್ರಗಳನ್ನು ಮತ್ತು ಒಳನೋಟಗಳನ್ನು ಒದಗಿಸಿವೆ. ಅದು ಸೃಜನಾತ್ಮಕತೆಯ ಕ್ಷೇತ್ರಗಳನ್ನು ಗುರುತಿಸಿದೆ, ಸೃಜನಾತ್ಮಕ ಮಕ್ಕಳ ಗುಣಲಕ್ಷಣಗಳನ್ನು ಮತ್ತು ಈ ಉದ್ದೇಶಕ್ಕೆ ಅಗತ್ಯವಿರುವ ಬೆಂಬಲ ಮತ್ತು ಪರಿಸರವು ನೀಡಬೇಕಾಗಿರುವುದನ್ನು ತಿಳಿಯಪಡಿಸಿದೆ. ವ್ಯಕ್ತಿಗಳ ಸೃಜನಾತ್ಮಕ ಚಿಂತನಾ ಸಾಮರ್ಥ್ಯಗಳನ್ನು ಬೆಳೆಸುವ ಮತ್ತು ಪೋಷಿಸುವ ಗುರಿಯಿಂದ ಅದು ಅನೇಕ ರೀತಿಯ ತರಬೇತಿ ಪ್ಯಾಕೇಜುಗಳನ್ನು, ಕಾರ್ಯಕ್ರಮಗಳನ್ನು, ತಂತ್ರಜ್ಞಾನಗಳನ್ನು ಮತ್ತು ಯೋಜನಾ ನೀತಿಗಳನ್ನು ಉತ್ಪಾದಿಸಿದೆ.

**ಸೃಜನಾತ್ಮಕ ಬೋಧನಾ ತಂತ್ರಗಳು:**

ಸಂಶೋಧನೆ ತೋರಿಸಿಕೊಟ್ಟಂತಹ ಎಲ್ಲ ವಿಧದ ಸೃಜನಾತ್ಮಕ ಚಿಂತನೆಗೆ ಮೂಲವಾಗಿರುವ ಮತ್ತು ಮಕ್ಕಳಿಗೆ ನಿರ್ದಿಷ್ಟ ವಿಷಯಾಂಶದ ಕ್ಷೇತ್ರದಲ್ಲಿ ಅನ್ವಯಿಸಿಕೊಳ್ಳಲು ನೆರವಾಗುವಂತಹ ಗ್ರಹಿಕಾ ಯೋಜನಾ ನೀತಿಗಳನ್ನು ಶಿಕ್ಷಣಶಾಸ್ತ್ರದ ಅನೇಕ ತಂತ್ರಗಳು ಮಕ್ಕಳಿಗೆ ಕಲಿಸುವ ಒಲವನ್ನು ತೋರಿವೆ. ಸ್ವಿವಾಕ್(1993) ಮಾತಿನಲ್ಲಿ ತಿಳಿಸುವುದಾದರೆ, 'ಯೋಜನಾ ಕಾರ್ಯತಂತ್ರವೆಂಬುದು ಆ ಪರಿಸ್ಥಿತಿಗೆ ಸೂಕ್ತವೆನಿಸುವ ಏನೋ ಆಗಿದೆ.' ಮಕ್ಕಳಲ್ಲಿ ಸೃಜನಾತ್ಮಕತೆಯನ್ನು ಬೆಳೆಸುವ ಮತ್ತು ಪೋಷಿಸುವ ನಿರ್ದಿಷ್ಟ ಮತ್ತು ಉತ್ತಮ ದಾರಿಗಳು ಅಥವಾ ಯೋಜನಾ ನೀತಿಗಳು ಇವತ್ತಿಗೂ ಯಾರಿಗೂ ತಿಳಿದಿಲ್ಲ. ಶಾಲಾ ಪಠ್ಯಕ್ರಮದಲ್ಲಿ ಪ್ರಸಾರಗೊಳ್ಳತಕ್ಕಂತಹ ಬೋಧನಾ–ಚಿಂತನಾ ಕೌಶಲಗಳಿಗಾಗಿ ವ್ಯವಸ್ಥಿತ ಮಾರ್ಗವನ್ನು ಅಭಿವೃದ್ಧಿಪಡಿಸುವುದರ ಮೂಲಕ ವೃತ್ತಿಪರರು ಶಿಕ್ಷಕರಿಗೆ ಬೆಂಬಲ ಮತ್ತು ನೆರವನ್ನು ನೀಡಬೇಕಾಗಿದೆ. ಲಾಂಡ್ರಮ್(2001) ಅವರು 'ಸಂಪನ್ಮೂಲ ಸಮಾಲೋಚನೆ ಮತ್ತು ಸಹಯೋಗ'ಕ್ಕೆ ಅವಕಾಶ ನೀಡಬೇಕಾದ ಅಗತ್ಯವನ್ನು ವ್ಯಕ್ತಪಡಿಸಿದ್ದಾರೆ. ಇದು ಬಹು ಆಯಾಮಗಳ ಕಾರ್ಯಗತಿಯಾಗಿದ್ದು, ಶಾಲೆ, ಜಿಲ್ಲೆ, ರಾಜ್ಯ ಅಥವಾ ರಾಷ್ಟ್ರ ಮಟ್ಟಗಳಲ್ಲಿ ಮಾನವ ಮತ್ತು ಭೌತಿಕ ಸಂಪನ್ಮೂಲಗಳನ್ನು ಒಟ್ಟುಗೂಡಿಸುತ್ತದೆ. ಸಮಾಲೋಚನೆ ಮತ್ತು ಸಹಯೋಗದ ಚಟುವಟಿಕೆಗಳಲ್ಲಿ ಈ ಕ್ಷೇತ್ರಗಳು ಇರಬಹುದಾಗಿದೆ: ಸಹ ಯೋಜನೆ, ಸಹ–ಬೋಧನೆ ಅಥವಾ ಸಹಕಾರಿ ಬೋಧನೆ, ಸಂದರ್ಭಾನುಸಾರಿ ಶೈಕ್ಷಣಿಕ ಚಟುವಟಿಕೆಗಳಿಗೆ ಅವಕಾಶ ಮತ್ತು ಶೈಕ್ಷಣಿಕ ಸಂಪನ್ಮೂಲಗಳು ಲಭ್ಯವಾಗುವಂತೆ ಮಾಡುವುದು, ಹಂಚಿಕೊಂಡ ಕಲಿಸುವಿಕೆಯ ಜವಾಬ್ದಾರಿ, ಮತ್ತು ಹಂಚಿಕೊಂಡ ವಿದ್ಯಾರ್ಥಿಗಳ ಪ್ರಗತಿಗಾಗಿನ ಹೊಣೆಗಾರಿಕೆ. ಎಲ್ಲಾ ಮಕ್ಕಳ ಅಗತ್ಯಗಳಿಗೆ ಅನುಗುಣವಾಗಿ ಮತ್ತು ಬೇರೆ ಬೇರೆ ಕಲಿಸುವಿಕೆ ಮತ್ತು ಕಲಿಕೆಯ ಯೋಜನಾ ನೀತಿಗಳನ್ನು ಅವರು ತಿಳಿದುಕೊಂಡಿರುವಂತೆ ಮಾಡುವ ಸಲುವಾಗಿ ಶೈಕ್ಷಣಿಕ ವಸ್ತುಗಳನ್ನು ಮತ್ತು ಗಣಕ ತಂತ್ರಾಂಶವನ್ನು ಗುರುತಿಸುವುದು, ಬಳಸುವುದು ಮತ್ತು ಅಭಿವೃದ್ಧಿ ಪಡಿಸುವುದರಲ್ಲಿ ಶಿಕ್ಷಕರಿಗೆ ತರಬೇತಿ ನೀಡುವ ಅಗತ್ಯವಿದೆ.

ಸೃಜನಾತ್ಮಕ ಬೋಧನೆಗಾಗಿ ನಿಗದಿತ ವಿಧಾನಗಳು, ತಂತ್ರಜ್ಞಾನಗಳು ಅಥವಾ ಯೋಜನಾ ನೀತಿಗಳು ಇಲ್ಲ. ಬೇರೆಯವುಗಳೊಂದಿಗೆ ಮಕ್ಕಳಲ್ಲಿ ಸೃಜನಾತ್ಮಕ ಚಿಂತನೆಯನ್ನು ಬೆಳೆಸಲು ಮತ್ತು ಪೋಷಿಸಲು ವಾಹಕವಾಗುವಂಥವುಗಳನ್ನು ಸಂಶೋಧನೆಗಳು ತೋರಿಸಿಕೊಟ್ಟಿರುವುದು ಹೀಗಿದೆ: ಇನ್ನು ಕೆಲವು ಇದರಷ್ಟೇ ಪರಿಣಾಮಕಾರಿಯಾಗಿರುವಂತಹದು ಮತ್ತು ಶಿಕ್ಷಕರು ತಮ್ಮ ಅರ್ಹತೆಗಳ ಸಂಚಯಕ್ಕೆ ಸೇರಿಸಲು ಬಯಸುವ ಇನ್ನು ಕೆಲವು ಇರಬಹುದು. ಮಕ್ಕಳು ಸೃಜನಾತ್ಮಕವಾಗಿ ಆಲೋಚಿಸುವಂತೆ ಅವರಿಗೆ ಪ್ರಚೋದನೆ ಮತ್ತು ಉತ್ತೇಜಿಸುವ ಹೊಸ ವಿಧಾನಗಳನ್ನು ಶಿಕ್ಷಕರು ಪ್ರಯತ್ನಿಸಬಹುದು ಮತ್ತು ಅಳವಡಿಸಿಕೊಳ್ಳಬಹುದು. ಇದು ನಮ್ಮ ತರಗತಿಯ ಪರಿಸ್ಥಿತಿಗಳಿಗೆ ಹೆಚ್ಚು ಹೊಂದುವಂತಹ ಕಾರ್ಯಗತ ಯೋಜನಾ ನೀತಿಗಳಾಗಿ ಮತ್ತು ತಂತ್ರಗಳಾಗಿ ಪರಿಣಮಿಸುವ ಸಾಧ್ಯತೆ ಇದೆ.

**ಪ್ರಾಥಮಿಕ ಶಾಲೆಗಳಿಗಾಗಿ ನಟನೆಯ ಆಟದ ಚಟುವಟಿಕೆಗಳು:**

ಪಾಚರಿಯವರು (2000) ಐದು ಮತ್ತು ಆರು ವರ್ಷದ ಮಕ್ಕಳಿಗಾಗಿ ನಟನೆಯ ಅಥವಾ ಕಾಲ್ಪನಿಕ ಆಟದ ಚಟುವಟಿಕೆಗಳನ್ನು ಬಳಸಿದ್ದಾರೆ. ಈ ಚಟುವಟಿಕೆಗಳಲ್ಲಿ ಮಕ್ಕಳು ಸ್ವತಃ ತಮ್ಮನ್ನು ಮತ್ತು ವಸ್ತುಗಳು, ಮನುಷ್ಯರು ಮತ್ತು ಪರಿಸ್ಥಿತಿಗಳನ್ನು ಪರಿವರ್ತಿಸುವ ಕಾರ್ಯದಲ್ಲಿ ಮಗ್ನರಾಗಿರಬೇಕಾಗುತ್ತದೆ. ಅವರು ಕಥೆ ಹೇಳುವುದು(ಅಪರೂಪದ, ಮಹತ್ವಪೂರ್ಣ, ಮತ್ತು ಪೂರ್ಣ ಕತೆಗಳು), ಸೃಜನಾತ್ಮಕ ಅಂಕಗಣಿತ ಮತ್ತು ಚಿಂದಿ ಸೃಜನಾತ್ಮಕತೆ(ಚಿಂದಿ ವಸ್ತುಗಳನ್ನು ಬಳಸಿ ಅಪರೂಪದ ಮತ್ತು ಸ್ವಂತಿಕೆಯುಳ್ಳ ವಸ್ತುಗಳನ್ನು ತಯಾರಿಸುವುದು) ಇತ್ಯಾದಿಗಳನ್ನು ಕೂಡ ಬಳಸಿದ್ದಾರೆ. ಈ ಚಟುವಟಿಕೆಗಳು ಸೃಜನಾತ್ಮಕತೆಯನ್ನು ಪೋಷಿಸುವುದರಲ್ಲಿ ಉಪಯುಕ್ತವೆನಿಸಿವೆ.

**ಸೃಜನಾತ್ಮಕ ಚಟುವಟಿಕೆಗಳಿಗಾಗಿ ಶಾಲೆಗಳನ್ನು ಸಂಘಟಿಸುವುದು:**

ಸೃಜನಾತ್ಮಕತೆಯನ್ನು ಬೆಳೆಸುವುದಕ್ಕೆ ಮತ್ತು ಪೋಷಿಸುವುದಕ್ಕೆ, ಸೃಜನಾತ್ಮಕ ಚಟುವಟಿಕೆಗಳಿಗಾಗಿ ಶಾಲೆಗಳನ್ನು ಸಂಘಟಿಸುವುದು ಅಗತ್ಯವೆಂದು ರಜ್ನಿ ಕುಮಾರ್(1995) ಸೂಚಿಸಿದ್ದಾರೆ. ಹೊಸ ಆಲೋಚನೆಯ ಪ್ರಾಥಮಿಕ ಶಾಲೆಯೊಂದರಲ್ಲಿ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಸಾಂಪ್ರದಾಯಿಕ ಪಠ್ಯಪುಸ್ತಕ ಬೋಧನೆ ಮತ್ತು ಹೊಂದಿಕೊಳ್ಳುವಂತಹ ನಮ್ಯ ವೇಳಾಪಟ್ಟಿಯನ್ನು ಕೈಬಿಟ್ಟು, ಬೋಧನೆ ಮತ್ತು ಕಲಿಕೆಗೆ ಏಕೀಕೃತವಾದ ಮತ್ತು ಕೌಶಲ ಆಧಾರಿತ ಮಾರ್ಗವನ್ನು ಕೈಗೊಂಡಿದ್ದಾರೆ ಎಂದು ಅವರು ವರದಿ ಮಾಡುತ್ತಾರೆ. ವಿದ್ಯಾರ್ಥಿಗಳು ಪರಿಸರವನ್ನು ಪರಿಶೋಧಿಸಲು, ಸ್ವತಃ ಮಾಡುವುದರ ಮೂಲಕ ಕಲಿಯಲು, ಮತ್ತು ಪ್ರಾಯೋಗಿಕ ಉದ್ದೇಶಕ್ಕಾಗಿ ಅವರು ವಿದ್ಯಾರ್ಥಿಗಳ ಬಳಕೆಯ ಕೆಲಸದ ಪಟ್ಟಿಗಳನ್ನು ಮತ್ತು ಚಟುವಟಿಕೆಗಳ ರಟ್ಟಿನಬಿಲ್ಲೆಗಳ(ಕಾರ್ಡುಗಳು) ಮಾಲಿಕೆಯನ್ನು ತಯಾರಿಸಿದರು. ಅದು ವಸ್ತುಗಳು ಮತ್ತು ಹಣಕ್ಕೆ ಸಂಬಂಧಿಸಿದಂತೆ ಕನಿಷ್ಠ ಸಂಪನ್ಮೂಲಗಳಿಂದ ಪ್ರಾರಂಭವಾಯಿತು. ಕಾಲಾನುಕ್ರಮದಲ್ಲಿ ಈ ಶೈಕ್ಷಣಿಕ ವಸ್ತುಗಳು ಬೆಳೆದವು ಮತ್ತು ಇವುಗಳನ್ನು 'ಲುಕ್ ಅರೌಂಡ್ ಆಂಡ್ ಲರ್ನ್ ಎನಿವಿರಾನ್‌ಮೆಂಟ್ ಕಿಟ್ಸ್' ಎಂಬ ಶೀರ್ಷಿಕೆಯಲ್ಲಿ 1 ರಿಂದ 5 ನೇ ತರಗತಿಯವರೆಗಿನ ಎನ್‌ಸಿಇಆರ್‌ಟಿ

Digitised by Bharatavani, CIIL

ಪಠ್ಯವಸ್ತು ಇರುವವರಿಗಾಗಿ ಪ್ರಕಟಿಸಲಾಯಿತು. ರಜ್ನಿ ಕುಮಾರ್ ಅವರ ಅವಲೋಕನ ಹೀಗಿದೆ: 'ಈ ಪರಿಕರದ ಗಂಟನ್ನು(ಕಿಟ್ಸ್) ಪರಿಚಯಿಸಿದ ಶಾಲೆಗಳಲ್ಲಿ ಮಕ್ಕಳು ಸೃಜನಾತ್ಮಕತೆಯ ಬೆಳವಣಿಗೆಗಾಗಿ ಅಗತ್ಯವಿರುವ ಅನೇಕ ವಿಧದ ಮೂಲಭೂತ ಕೌಶಲ್ಯಗಳು, ವಸ್ತುಗಳು ಮತ್ತು ಯೋಜನೆಗಳ ಮೂಲಕ ಸೃಷ್ಟಿಸುವುದು, ಪರಿಶೋಧಿಸುವುದು ಮತ್ತು ಬೆಳೆಸುವುದನ್ನು ನಡೆಸಬೇಕಾಗಿಲ್ಲ.'(ಪುಟ: 101).

**ಶಾಲಾ ಪಠ್ಯ ವಿಷಯವನ್ನು ಸೃಜನಾತ್ಮಕ ರೀತಿಯಲ್ಲಿ ಬೋಧಿಸುವುದು:**

'ಬೋಧನೆಯಲ್ಲಿ ಮತ್ತು ಕಲಿಕೆಯಲ್ಲಿ ಸೃಜನಾತ್ಮಕತೆ'ಯ ಕುರಿತಾದ ಕಾರ್ಯಾಗಾರವು(ಮೆಹ್ದಿ, 1977) ಶಾಲಾ ಪಠ್ಯ ವಿಷಯವನ್ನು ಸೃಜನಾತ್ಮಕವಾಗಿ ಕಲಿಸುವುದರ ಕುರಿತು ಬಹಳ ಉಪಯುಕ್ತ ಸೂಚನೆಗಳನ್ನು ನೀಡಿದೆ. ಅದರಲ್ಲಿ ಭಾಷೆಗಳನ್ನು ಕಲಿಸುವಾಗ ಅನುಸರಿಸಬೇಕಾದ ಕೆಲವು ಅಭ್ಯಾಸಗಳನ್ನು ಸೂಚಿಸಲಾಗಿದೆ. ಆ ಅಭ್ಯಾಸಗಳೆಂದರೆ, 'ಬರೀ ಚೌಕಟ್ಟಿನಿಂದ ಕತೆಯನ್ನು ಮುಗಿಸುವುದು, ವಿಭಿನ್ನ ಪದ ಅಥವಾ ಪದಗಳ ಬಳಕೆ, ನಾಟಕೀಯವಾಗಿ ವರ್ತಿಸುವುದು ಮತ್ತು ಪಾತ್ರ ನಿರ್ವಹಣೆ.' ಸಮಾಜಶಾಸ್ತ್ರವನ್ನು ಕಲಿಸುವಾಗ ಅದು ಶಿಫಾರಸ್ಸು ಮಾಡಿದ ಯೋಜನೆಗಳೆಂದರೆ, 'ಆಕಾಶಯಾನ ಯುಗದಲ್ಲಿ ಸಂವಹನ ವ್ಯವಸ್ಥೆ, ಭೂಕಂಪ ಅಥವಾ ಭೂಜರಿತಗಳ ಪರಿಣಾಮಗಳು, ಮನುಷ್ಯನ ಬದುಕಿನ ಮೇಲೆ ಭೌಗೋಳಿಕ ಪರಿಸ್ಥಿತಿಗಳ ಪ್ರಭಾವ ಮತ್ತು ಮಾನವ ಸಂಸ್ಕೃತಿಗಳಿಗೆ ಸಂಬಂಧಿಸಿದ ಪ್ರದರ್ಶನ ಆಯೋಜನೆ.' ವಿಜ್ಞಾನವನ್ನು ಸೃಜನಾತ್ಮಕವಾಗಿ ಕಲಿಸುವುದಕ್ಕೆ ಅದು ಸೂಚಿಸಿದ್ದೇನೆಂದರೆ, 'ವಿಜ್ಞಾನ ಯೋಜನೆಗಳ ಆಯೋಜನೆ, ವಿಜ್ಞಾನ ಪ್ರದರ್ಶನ ಮತ್ತು ಮೇಳಗಳು ಮತ್ತು ಸಿದ್ಧಾಂತಗಳ ರೂಪಣೆ, ತಾರ್ಕಿಕತೆ, ನಿರ್ಣಾಯಕತೆ, ಊಹೆ, ತನಿಖೆ ಮತ್ತು ಸಾಮಾನ್ಯೀಕರಣವನ್ನು ಒಳಗೊಂಡಿರುವ ಚಟುವಟಿಕೆಗಳನ್ನು ಮತ್ತು ಕಾರ್ಯನಿಯೋಜನೆಗಳಲ್ಲಿ ವಿದ್ಯಾರ್ಥಿಗಳ ಪಾಲುಗೊಳ್ಳುವಿಕೆಯನ್ನು'. ಈ ಕಾರ್ಯಾಗಾರವು ಸಮಾಜ ಶಾಸ್ತ್ರ, ಗಣಿತ, ರಸಾಯನ ಶಾಸ್ತ್ರ ಮತ್ತು ಸೃಜನಾತ್ಮಕ ಓದು ಸೇರಿದಂತೆ ಸೃಜನಾತ್ಮಕವಾಗಿ ಕಲಿಸುವ ಕೆಲವು ಮಾದರಿ ಪಾಠ ಯೋಜನೆಗಳನ್ನು ಕೂಡ ರೂಪಿಸಿದೆ.

ಇತೀಚೆಗೆ, ತ್ರಿಪಾಠಿಯವರು ಸೃಜನಾತ್ಮಕ ಬೋಧನೆಯ ತತ್ವಗಳನ್ನು ಎತ್ತಿ ಹಿಡಿಯುತ್ತಾ, ಪಾಠದ ಆಯೋಜನೆಗಾಗಿ ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಿದ್ದಾರೆ. ಚರಿತ್ರೆ, ಪೌರನೀತಿ, ಭೂಗೋಳ ಶಾಸ್ತ್ರ, ಜೈವಿಕ ವಿಜ್ಞಾನಗಳು, ಭೌತಿಕ ವಿಜ್ಞಾನಗಳು, ಭಾಷೆ, ಚಿತ್ರಕಲೆ ಮತ್ತು ಕುಂಚಕಲೆಯನ್ನು ಸೃಜನಾತ್ಮಕವಾಗಿ ಕಲಿಸಲು ಸೂಕ್ತ ಉದಾಹರಣೆಯೊಂದಿಗೆ ವಿವರಣೆ ನೀಡಿದ್ದಾರೆ. ಈ ವಿವರಣೆಗಳಲ್ಲಿ ಸೃಜನಾತ್ಮಕ ಬೋಧನೆಯ ಯೋಜನಾ ನೀತಿಗಳು ಮತ್ತು ಶಿಕ್ಷಕರಿಗೆ ಮತ್ತು ಶಿಕ್ಷಕರು-ಪ್ರಶಿಕ್ಷಕರಿಗೆ ಉಪಯುಕ್ತವೆನಿಸುವ ಸೃಜನಾತ್ಮಕ ಚಟುವಟಿಕೆಗಳನ್ನು ನೀಡಲಾಗಿದೆ. ಹಠಾತ್ ಸ್ಫೂರ್ತಿಯ ತಂತ್ರಜ್ಞಾನವನ್ನು ಭಾಷೆಯ ಬೋಧನೆಯಲ್ಲಿ ಯಾವ ರೀತಿಯಿಂದ ಬಳಸಿಕೊಳ್ಳಬಹುದು, ಸಮಾಜಶಾಸ್ತ್ರದ ಬೋಧನೆಯಲ್ಲಿ ಪಾತ್ರ ನಿರ್ವಹಣೆಯನ್ನು ಹೇಗೆ ಬಳಸಲಾಗಿದೆ, ಮತ್ತು ಗಣಿತದ ಸೃಜನಾತ್ಮಕ ಬೋಧನೆಯಲ್ಲಿ ಜೀವ ತಾಂತ್ರಿಕ ವಿಜ್ಞಾನ ಯಾವ ರೀತಿಯಿಂದ ಉಪಯುಕ್ತ ಎನ್ನುವುದನ್ನು ದೇಶಮುಖ್(1995) ವಿವರಿಸಿದ್ದಾರೆ. ಶಿಕ್ಷಣದ ಹಿರಿಯ ಮಾಧ್ಯಮಿಕ ಹಂತದಲ್ಲಿ ಜೈವಿಕ ವಿಜ್ಞಾನಗಳನ್ನು ಕಲಿಸುವಾಗ ಸೃಜನಾತ್ಮಕ ಸಮಸ್ಯೆ-ಪರಿಹಾರ ಚಟುವಟಿಕೆಗಳ ಬಳಕೆಯನ್ನು ಶಾಫಿ(2000) ಅವರು ತೋರಿಸಿಕೊಟ್ಟಿದ್ದಾರೆ. ರಸಾಯನ ಶಾಸ್ತ್ರದ ಬೋಧನೆಯಲ್ಲಿ ಸೃಜನಾತ್ಮಕ ಬೋಧನಾ ಯೋಜನಾ ನೀತಿಗಳು ಹೇಗೆ ಪ್ರಸ್ತುತ ಎಂಬುದನ್ನು ಅಗರ್‌ವಾಲ್(2000) ಮತ್ತು ಗುಪ್ತಾ(2000) ತೋರಿಸಿಕೊಟ್ಟಿದ್ದಾರೆ.

**ಶಿಕ್ಷಕ ಮತ್ತು ವಿದ್ಯಾರ್ಥಿಯ ನಿರೀಕ್ಷೆಗಳು ಮತ್ತು ಗುರಿಗಳ ಅನುರೂಪತೆಯ ಆಶ್ವಾಸನೆ:**

ಸೃಜನಾತ್ಮಕವಾಗಿರುವ ಕ್ಷಣಿಕ ಇಚ್ಛೆ ನಮ್ಮನ್ನು ಎಲ್ಲಿಗೂ ತಲುಪಿಸಲಾರದು. ಒಬ್ಬ ವ್ಯಕ್ತಿ ಯಾವುದೇ ಕಾರ್ಯವನ್ನು ಗಂಭೀರ ರೀತಿಯಿಂದ ಮಾಡುವಾಗ ಅದರ ಹಿಂದೆ ಪ್ರಬಲ ಉದ್ದೇಶವನ್ನು ಹೊಂದಿರಬೇಕು. ಉದ್ದೇಶವು ಸೃಜನಾತ್ಮಕತೆಯ ನಿರ್ಣಾಯಕ ಅಂಶಗಳಲ್ಲಿ ಒಂದು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೃಜನಾತ್ಮಕ ವರ್ತನೆಯನ್ನು ತಮ್ಮ ಗುರಿಯಾಗಿ ಇಟ್ಟುಕೊಳ್ಳುವುದು ಮುಖ್ಯ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಪಾತ್ರಗಳು, ನಿರೀಕ್ಷೆಗಳು ಮತ್ತು ಪರಿಕಲ್ಪನೆಗಳ ಸ್ಪಷ್ಟತೆಯು ಸೃಜನಾತ್ಮಕ ವಾತಾವರಣವನ್ನು ಪೋಷಿಸುವುದರಲ್ಲಿ ತಮ್ಮ ಕೊಡುಗೆಗಳನ್ನು ನೀಡುತ್ತವೆ ಎಂದು ಟಾರೆನ್ಸ್ ಮತ್ತು ಮೇಯರ್ಸ್(1970), ಹಚಿನಸನ್ ಮತ್ತು ಬೆಡ್ಲೆ(1992) ಮತ್ತು ಡೆಲುಸಿಯಾ(1994) ಕಂಡುಕೊಂಡಿದ್ದಾರೆ. ಶಿಕ್ಷಕರ ನಿರೀಕ್ಷೆಗಳೆಂದರೆ, ಭವಿಷ್ಯದಲ್ಲಿ ವಿದ್ಯಾರ್ಥಿಗಳ ಕಾರ್ಯಾಚರಣೆಯ ಸಾಧ್ಯತೆಯ ಮಟ್ಟ ಕುರಿತಾದ ತೀರ್ಮಾನಗಳು. ಶಿಕ್ಷಕರ ನಿರೀಕ್ಷೆ ವಿದ್ಯಾರ್ಥಿಗಳ ಕಾರ್ಯಾಚರಣೆಯ ಮೇಲೆ ಪ್ರಭಾವ ಬೀರುತ್ತದೆ. ಏಕೆಂದರೆ ವಿದ್ಯಾರ್ಥಿಗಳಿಗೆ ಕಲಿಯಲು ಏನನ್ನು ಒಪ್ಪಿಸಲಾಗಿದೆ ಮತ್ತು ಅವರು ಎಷ್ಟು ಉತ್ತಮ ರೀತಿಯಲ್ಲಿ ಅದನ್ನು ಸಾಧಿಸಿದ್ದಾರೆ ಎನ್ನುವುದರ ಮೌಲ್ಯಮಾಪನವನ್ನು ನಿರ್ಧರಿಸುವವರು ಶಿಕ್ಷಕರಾಗಿದ್ದಾರೆ. ವಿದ್ಯಾರ್ಥಿಗಳ ನಿರೀಕ್ಷೆಯನ್ನು ಅವರು ಮತ್ತು ಅವರ ಶಿಕ್ಷಕರು ನಡೆಸಿದ ಕಾರ್ಯಾಚರಣೆಗಳು ಮತ್ತು ಅವರ ಸಾಮರ್ಥ್ಯಗಳ ಕುರಿತಾಗಿ ಅವರ ಸ್ವಂತದ ಅಂದಾಜಿನಿಂದ ರೂಪಿಸಲಾಗುತ್ತದೆ. ಶಿಕ್ಷಕರ ನಿರೀಕ್ಷೆಗಳು ಮತ್ತು ವಿದ್ಯಾರ್ಥಿಗಳ ನಿರೀಕ್ಷೆಗಳ ನಡುವೆ ತಾಳೆಯಾಗದಿದ್ದರೆ ಅದು ಶಿಕ್ಷಕ-ವಿದ್ಯಾರ್ಥಿ ಸಂಬಂಧಗಳು ಮತ್ತು ವಿದ್ಯಾರ್ಥಿಯ ನಿರ್ವಹಣೆಯ ಮೇಲೆ ನೇತ್ಯಾತ್ಮಕ ಪರಿಣಾಮ ಬೀರುವುದು. ಸ್ಟೊರಮಂಟ್, ಸ್ಟೆಬ್ಬಿನ್ಸ್ ಮತ್ತು ಹಾಲ್ಲಿಡೆ(2001) ಅವರು ಸೂಚಿಸಿದಂತೆ, 'ಪ್ರೌಢಶಾಲಾ ಶಿಕ್ಷಣಜ್ಞರು ತಮ್ಮ ಗಮನವನ್ನು ಗಂಡುಮಕ್ಕಳಿಗೆ ನೀಡಿದಷ್ಟೇ ಪ್ರಮಾಣದಲ್ಲಿ ಹೆಣ್ಣುಮಕ್ಕಳಿಗೆ ಕೂಡ ನೀಡುವಂತೆ, ತಮ್ಮ ಎಲ್ಲ ವಿದ್ಯಾರ್ಥಿಗಳಲ್ಲಿ ಪ್ರತಿಪಾದನೆಯನ್ನು ಪುರಸ್ಕರಿಸುವಂತೆ, ಮಟ್ಟಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳದೆ ವಾಸ್ತವ ನಿರೀಕ್ಷೆಗಳನ್ನು ಸ್ಥಾಪಿಸಿಕೊಳ್ಳುವಂತೆ ಮತ್ತು

Digitised by Bharatavani, CIIL

ಗೂಢ ಪ್ರಶ್ನೆಗಳಿಗೆ (ಸಮಸ್ಯಾತ್ಮಕ) ತಕ್ಷಣ ಉತ್ತರ ನೀಡದೆ, ಸಮಸ್ಯೆ ಪರಿಹರಿಸುವ ತಂತ್ರಗಳ ಬಳಕೆಗೆ ಪ್ರೋತ್ಸಾಹ ನೀಡುವಂತೆ ಅವರನ್ನು ಪ್ರೋತ್ಸಾಹಿಸಬೇಕು'(ಪುಟ: 416).

**ಸೃಜನಾತ್ಮಕತೆಗೆ ತರಗತಿಯ ಬೆಂಬಲದ ವಾತಾವರಣವನ್ನು ಸೃಷ್ಟಿಸಿ:**

ಪ್ರತಿಯೊಂದು ತರಗತಿಯು ಭಾವನೆಯ ಧ್ವನಿಯನ್ನು ಹೊಂದಿರುತ್ತದೆ ಮತ್ತು ಅದರೊಳಗೆ ಪ್ರತಿಯೊಂದು ಮಗು ಕಲಿಯುತ್ತದೆ ಮತ್ತು ಬೆಳೆಯುತ್ತದೆ. ಹಾಪ್‌ಕಿನ್ಸ್(1956) ಹೇಳಿರುವ ಹಾಗೆ, 'ಅನೇಕ ಅಗತ್ಯ ಸಂಗತಿಗಳು ತರಗತಿಯ ವಾತಾವರಣದ ಘಟಕಗಳಾಗಿರುತ್ತವೆ. ಕೆಲವು ಗೋಚರದ ಸಂಗತಿಗಳು. ಉದಾಹರಣೆಗೆ ಭೌತಿಕ ಉಪಕರಣ, ಗ್ರಂಥಗಳು ಮತು ಪೂರೈಕೆಗಳು, ಮಕ್ಕಳು ಮತ್ತು ಶಿಕ್ಷಕರು. ಅಗೋಚರವಾಗಿ ಇರುವವು ಅನೇಕ. ಅವು ಪ್ರತಿಯೊಬ್ಬ ಮನುಷ್ಯರ ಒಳಗೆ ಇರುವಂತಹವು. ಪರೀಶೀಲನೆಗೆ ಅಥವಾ ಸಾರ್ವಜನಿಕ ಪರೀಕ್ಷೆಗೆ ತೆರೆದುಕೊಂಡಿರುವಂತಹವುಗಳಲ್ಲ. ಹಾಗಿದ್ದರೂ, ಬಾಹ್ಯ ಜಗತ್ತಿಗೆ ವ್ಯಕ್ತಗೊಳ್ಳುವ ಈ ಆಂತರಿಕ ಪ್ರತಿಕ್ರಿಯೆಗಳು ತನ್ನತನವನ್ನು ರೂಪಿಸುವ ಮೂಲದ್ರವ್ಯಗಳಾಗಿವೆ'(ಪುಟ 280). ಸಾಂಪ್ರದಾಯಿಕ ತರಗತಿ ಕೋಣೆಗಳಲ್ಲಿ ಸೃಜನಾತ್ಮಕತೆಯು ಉಸಿರುಕಟ್ಟಿಕೊಂಡು ಇರುತ್ತದೆ. ಏಕೆಂದರೆ ವಿದ್ಯಾರ್ಥಿಗಳು, 'ಗಂಡಾಂತರಗಳನ್ನು ಎದುರಿಸಲು ಹೆದರಿಕೊಳ್ಳುತ್ತಾರೆ, ಹೊಸ ಕಲ್ಪನೆಗಳನ್ನು ಶೋಧಿಸಲು ಹೆದರಿಕೊಳ್ಳುತ್ತಾರೆ, ಮತ್ತು ಅನುತ್ತೀರ್ಣಗೊಳ್ಳಲು ಹೆದರಿಕೊಳ್ಳುತ್ತಾರೆ' (ಕವೆನ್ಸ್ಕಿ). ಸ್ಮಿತ್ ಹೇಳುತ್ತಾರೆ ವಿದ್ಯಾರ್ಥಿಗಳು 'ಸೃಜನಾತ್ಮಕರಾಗಿ ಇರುವಾಗ ಅಪಹಾಸ್ಯ, ನಿರಾಕರಣೆ ಅಥವಾ ಹೊಸ ಕಲ್ಪನೆಗೆ ತೀವ್ರ ಪ್ರತಿರೋಧವನ್ನು ಎದುರಿಸುವ ಅಪಾಯ'ಯಕ್ಕೆ ಸಿದ್ಧರಾಗಿ ಇರಬೇಕು(ಪುಟ: 271). ಸಮರ್ಥನೀಯ ಶೈಕ್ಷಣಿಕ ವಾತಾವರಣದ ಅನುಪಸ್ಥಿತಿಯಲ್ಲಿ ಶಿಕ್ಷಣದ ಏಣಿಯನ್ನು ಹತ್ತಿ ಹೋಗುತ್ತಿರುವಂತೆ ಸೃಜನಾತ್ಮಕ ವಿದ್ಯಾರ್ಥಿಗಳು ತಮ್ಮ ಸೃಜನಾತ್ಮಕ ಸಾಮರ್ಥ್ಯಗಳನ್ನು ಕಳೆದುಕೊಳ್ಳುತ್ತಾರೆ ಎನ್ನುವುದು ಈಗ ಇರುವ ಸೈದ್ಧಾಂತಿಕ ತಳಹದಿಗಳು ಮತ್ತು ಸಂಶೋಧನೆ ತೋರಿಸಿಕೊಟ್ಟಿವೆ. ಕೊವಿಂಗ್‌ಟನ್(1968) ಅವರ ಹೇಳುವ ಪ್ರಕಾರ, 'ತಕ್ಷಣ ಅವಕಾಶ ಒದಗಿಸುವ ಮತ್ತು ಪ್ರಚೋದನೆ ನೀಡಬಲ್ಲ ವಾತಾವರಣವು ಸೃಜನಾತ್ಮಕತೆ ಪ್ರಕಟಗೊಳ್ಳಲು ಅಗತ್ಯವಿರುವ ಪರಿಸ್ಥಿತಿಗಳ ಸ್ಥಾಪನೆಯಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸುವುದರಲ್ಲಿ ಸಂದೇಹವೇ ಇಲ್ಲ'(ಪುಟ: 23). ಕೋಲೆ, ಸುಗಿಕ ಮತ್ತು ಲಿಂಚ್(1999) ಅವರು ಕಂಡುಕೊಂಡ ಹಾಗೆ, 'ಶೈಕ್ಷಣಿಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಸೃಜನಾತ್ಮಕರಾಗಲು ತರಗತಿ ಕೋಣೆಯಲ್ಲಿ ಸೃಜನಾತ್ಮಕತೆಗೆ ಬೆಂಬಲದ ಅಗತ್ಯವಿರುತ್ತದೆ.'(ಪುಟ: 281). ಸೃಜನಾತ್ಮಕತೆ ಎನ್ನುವುದು ವ್ಯಕ್ತಿ ಬದುಕುವ ಪರಿಸರದ ಕಾರ್ಯವೆನ್ನುವುದು ಸ್ಟೇನ್(1962)ರ ಭಾವನೆ. ಶೌಗನೆಸ್ಸಿ (1991) ಹೇಳುವ ಪ್ರಕಾರ ಉತ್ತಮ ತರಗತಿ ಕೋಣೆಯ ವಾತಾವರಣದ ಮುಖ್ಯ ಗುಣಲಕ್ಷಣಗಳೆಂದರೆ: 'ಸಂವಹನ, ಸಾಮ್ಯತೆ, ಸಾಮರಸ್ಯ, ಸ್ಪಷ್ಟೀಕರಣ, ಸುಸಂಬದ್ಧತೆ, ಪರಿಗಣನೆ, ಸಮುದಾಯ, ಸಂಯೋಜನೆ, ಬದ್ಧತೆ, ಕಾಳಜಿ, ಲಕ್ಷ್ಯ, ಮತ್ತು ಸಹಕಾರ.' ರಿಚರ್ಡ್‌ಸನ್,(1988), ಆಂಡರ್‌ಸನ್ ಮತ್ತು ಇತರರು(1970), ಶಾಗ್ನೆಸ್ಸಿ(1991) ಮತ್ತು ಹಿಲ್ ಮತ್ತು ಆಂಬಿಲೆ(1993) ಇವರ ಅಧ್ಯಯನಗಳಲ್ಲಿ, 'ವಿದ್ಯಾರ್ಥಿಯ ಸೃಜನಾತ್ಮಕತೆಯ ನಿರ್ವಾಹಕಗಳೆಂದರೆ ಸ್ವಾತಂತ್ರ್ಯವನ್ನು, ಗಂಡಾಂತರಗಳನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸುವ ವಾತಾವರಣಗಳು ಮತ್ತು ಸ್ವಾಭಾವಿಕ ಪ್ರಚೋದನೆಗೆ ಚಾಲನೆ ನೀಡುವ ಅವಕಾಶಗಳ ಒದಗಿಸುವಿಕೆ'ಯಾಗಿದೆ ಲುಬರ್ಟ್(1999) ಅವರ ಪ್ರಕಾರ 'ಸೃಜನಾತ್ಮಕತೆಯನ್ನು ಪ್ರಚೋದಿಸಲು ಮತ್ತು ಸಮರ್ಥಿಸಲು ವಾತಾವರಣ ಒಳಗೊಂಡಿರುವ ರೀತಿಯಲ್ಲಿಯೇ ಅದು ಸೃಜನಾತ್ಮಕತೆಯ ನಿರ್ವಚನ ಮತ್ತು ಮೌಲ್ಯಮಾಪನವನ್ನು ಕೂಡ ನಡೆಸುತ್ತದೆ'. ಪಾಸ್ಕರೆಲ್ಲ(1980), ಎಂಡೊ ಮತ್ತು ಹಾರ್ಪ್ಲೆಲ್(1982), ಟೆರೆನ್‌ಜಿನಿ ಮತ್ತು ಪಾಸ್ಕರೆಲ್ಲ(1991), ಕಾರ್ಟರ್(1992) ಮತ್ತು ಅಸ್ಟಿನ್(1993) ಅವರು ಮಕ್ಕಳಲ್ಲಿ ಸೃಜನಾತ್ಮಕತೆಯನ್ನು ಬೆಳೆಸಿ ಪೋಷಿಸುವುದರಲ್ಲಿ ಶಿಕ್ಷಕ–ವಿದ್ಯಾರ್ಥಿಗಳ ಧನಾತ್ಮಕ ಮತ್ತು ನಿರಂತರ ಸಂಬಂಧಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾರೆ.

ಸೃಜನಾತ್ಮಕ ತರಗತಿಯೊಂದರಲ್ಲಿ ಶಿಕ್ಷಕರ ಬೋಧನೆಗೆ ಮಾರ್ಗದರ್ಶಿಯಾಗುವ ಐದು ಗುಣಲಕ್ಷಣಗಳನ್ನು ಆರ್ಮ್‌ಸ್ಟ್ರಾಂಗ್(1998) ಕಂಡುಕೊಂಡಿದ್ದಾರೆ– ಆಯ್ಕೆ ಸ್ವಾತಂತ್ರ್ಯ, ಮುಕ್ತ ಪರಿಶೋಧನೆ, ತೀರ್ಪಿನಿಂದ ಸ್ವಾತಂತ್ರ್ಯ, ಪ್ರತಿಯೊಬ್ಬ ವಿದ್ಯಾರ್ಥಿಯ ಅನುಭವವನ್ನು ಗೌರವಿಸುವುದು, ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಯಲ್ಲಿ ನಂಬಿಕೆ ಇಡುವುದು. ಅದೇನೇ ಇದ್ದರೂ, ಲಭ್ಯ ಸಂಶೋಧನಾ ನಿದರ್ಶನ ತೋರಿಸುವುದೇನೆಂದರೆ, ಶಿಕ್ಷಕ ಮತ್ತು ವಿದ್ಯಾರ್ಥಿಯ ಸೃಜನಾತ್ಮಕತೆಗೆ ಅನಿವಾರ್ಯವಾಗಿರುವುದು ಮುಕ್ತ, ಸಮರ್ಥನೀಯ ಮತ್ತು ನಮ್ಯ ವಾತಾವರಣ. ಆರ್ಮ್‌ಸ್ಟ್ರಾಂಗ್(1998) ಅವರು ತಾನು ಬರೆಯುತ್ತಿರುವಾಗ, ಸೃಜನಾತ್ಮಕ ತರಗತಿ ಕೋಣೆಯಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೀಗೆ ವಿವರಿಸುತ್ತಾರೆ, 'ಹೊಸದೇನನ್ನಾದರೂ ಕಂಡುಹಿಡಿದ, ಉದಾತ್ತ ಸಂಪರ್ಕಗಳನ್ನು ಬೆಳೆಸಿಕೊಂಡ, ಸವಾಲುಗಳನ್ನು ಎದುರಿಸಿ, ನಿವಾರಿಸಿಕೊಂಡ, ವಿಸ್ಮಯ ಅಥವಾ ಸಂತೋಷ, ಕುತೂಹಲ ಅಥವಾ ತಬ್ಬಿಬ್ಬಾಗಿಸಿದ ಭಾವನೆಯಲ್ಲಿರುವ, ಮತ್ತು ಪ್ರಸ್ತುತಪಡಿಸುವ ಕಲ್ಪನೆಗಳು ಮತ್ತು ವಸ್ತುಗಳ ಕುರಿತು ಸಾತ್ವಿಕ ಕೋಪ ಮತ್ತು ಬಿಚ್ಚುಮನಸ್ಸಿನ ಮಾತನ್ನು ವ್ಯಕ್ತಪಡಿಸುವ ವಿದ್ಯಾರ್ಥಿಗಳ ಲವಲವಿಕೆಯನ್ನು ಪ್ರತಿನಿಧಿಸುವ ಶಕ್ತಿಯ ಪುನರಾವರ್ತಿತ ವಿಸ್ಫುರಣದಿಂದ ತುಂಬಿರುತ್ತದೆ.(ಪುಟ: 60)'

ಶಿಕ್ಷಕರು ಪ್ರತಿಕ್ರಿಯಾತ್ಮಕ ತರಗತಿ ವಾತಾವರಣವನ್ನು ಸೃಷ್ಟಿಸಲು ಸಮರ್ಥರಿದ್ದಾರೆ ಎಂದು ಟಾರೆನ್ಸ್ ಮತ್ತು ಮಿಯರ್ಸ್(1970) ಕಂಡುಕೊಂಡಿದ್ದಾರೆ. ಈ ವಾತಾವರಣದಲ್ಲಿ 'ಗೌರವಾನ್ವಿತ ಅಪರೂಪದ ಪ್ರಶ್ನೆ, ಗೌರವಾನ್ವಿತ ಕಾಲ್ಪನಿಕ ಮತ್ತು ಅಪರೂಪದ ಕಲ್ಪನೆಗಳು ಅವರ(ವಿದ್ಯಾರ್ಥಿಗಳ) ಕಲ್ಪನೆಗಳಿಗೆ(ಐಡಿಯಾಗಳಿಗೆ)

Digitised by Bharatavani, CIIL

ಮೌಲ್ಯವಿದೆ ಎಂದು ತೋರಿಸಿಕೊಡುತ್ತವೆ. ಕೆಲವೊಮ್ಮೆ ಮೌಲ್ಯಮಾಪನದ ಬೆದರಿಕೆಯಿಲ್ಲದೆ ವಿದ್ಯಾರ್ಥಿಗಳು ಅಭ್ಯಾಸಕ್ಕೆಂದು ಏನನ್ನಾದರೂ ಮಾಡುವಂತೆ ಮತ್ತು ಕಾರಣಗಳು ಮತ್ತು ಪರಿಣಾಮಗಳ ಮೌಲ್ಯಮಾಪನಕ್ಕೆ ಒಳಪಡುವಂತೆ ಇರುತ್ತದೆ'(ಪುಟ 253). ಧನಾತ್ಮಕ ತರಗತಿ ಹವಾಮಾನವನ್ನು ಸೃಷ್ಟಿಸಲು ಸೂಕ್ತರೀತಿಯಿಂದ ಆಯ್ದುಕೊಂಡ ಮತ್ತು ಬಳಕೆಯಾಗುವ ತರಗತಿ ಚಟುವಟಿಕೆಗಳು ಅಗತ್ಯವಾಗುತ್ತವೆ ಎಂಬುದನ್ನು ಶಾಪಿರೊ(1993) ಒತ್ತಿ ಹೇಳಿದ್ದಾರೆ. ಹಚಿನ್‌ಸನ್ ಮತ್ತು ಬೆಡಲೆ(1992) ಅವರು ಶಿಕ್ಷಕರ ಬೋಧನಾ ಶೈಲಿಗಳ ಪ್ರಾಮುಖ್ಯತೆಯನ್ನು ಉದಾಹರಣೆಗೆ, ವಿವರಿಸುವುದು, ನಿರ್ದೇಶಿಸುವುದು, ಪ್ರಶ್ನೆ ಮಾಡುವುದು ಮತ್ತು ಮರುಮಾಹಿತಿ ಪಡೆಯುವುದನ್ನು ಎತ್ತಿ ಹಿಡಿದಿದ್ದಾರೆ. ಶಿಕ್ಷಕರು ತಮ್ಮ ಸಂವಹನ ಶೈಲಿಗಳಿಂದ ವಿದ್ಯಾರ್ಥಿಗಳಿಗೆ 'ಚಾಲನೆ ನೀಡುವುದು' ಮತ್ತು ಅವರನ್ನು 'ಸ್ಥಗಿತಗೊಳಿಸುವುದು' ಎರಡನ್ನೂ ಮಾಡಬಲ್ಲರು ಎನ್ನುವ ಮಟ್ಟಿಗೆ ಹೋಗಿದ್ದಾರೆ!

**ವಿಷಯದ ಪ್ರಬಲ ಆಧಾರವನ್ನು ನಿರ್ಮಿಸಿಕೊಳ್ಳಿ:**

ವಿಲಿಯಮ್ಸ್(1967) ಬರೆಯುತ್ತಾರೆ, 'ಸೃಜನಾತ್ಮಕವಾಗಿ ಆಲೋಚಿಸುವ ಸಾಮರ್ಥ್ಯಕ್ಕೆ ಅದನ್ನು ಸೆಳೆಯುವ ತಂತ್ರಗಳೊಂದಿಗೆ, ತಿಳಿವಳಿಕೆಯ ವಿಸ್ತಾರ ಮತ್ತು ಆಳವೂ ಇರಬೇಕಾಗುತ್ತದೆ ಎನ್ನುವುದನ್ನು ಸಂಶೋಧನೆ ದೃಢಪಡಿಸಿದೆ. ಯಾವುದೇ ಶಿಕ್ಷಕರಿಗೆ ಇರುವ ಸಮಸ್ಯೆಯೆಂದರೆ ಈ ವಿಷಯದ ಆಧಾರವನ್ನು ಪಡೆಯಲು ಮಗುವಿಗೆ ಎಷ್ಟರ ಮಟ್ಟಿಗೆ ನೆರವಾಗಬಹುದು ಎನ್ನುವುದು ಮತ್ತು ಅದೇ ಸಮಯದಲ್ಲಿ ಉತ್ಪಾದನಾ ಭಿನ್ನ ವರ್ತನೆಯ ತಂತ್ರಗಳನ್ನು ಬೆಳೆಸುವುದು.'(ಪುಟ: 88). ಹಂಟ್ ಅವರಿಗೆ 'ಒಬ್ಬ ವ್ಯಕ್ತಿ ಹೊಂದಿರುವ ತಿಳಿವಳಿಕೆಯ ಮೊತ್ತವು ಸಾಮಾನ್ಯ ಗ್ರಹಿಕಾ ಅರ್ಹತೆಗೆ ಉತ್ತಮ ಮಾರ್ಗದರ್ಶಕವಾಗುವುದು '(ಪುಟ:110). ಯಾವುದೇ ಸೃಜನಾತ್ಮಕತೆ ಕಾಣಿಸಿಕೊಳ್ಳಲು ಸಂಯೋಜಿತ ಮತ್ತು ಉತ್ಪಾದನಾಕಾರಿ ತಿಳಿವಳಿಕೆಯ ಆಧಾರ ಬಹು ಮುಖ್ಯ. ಇತ್ತೀಚೆಗೆ, ವೇನರ್ ತಮ್ಮ ಬರೆವಣಿಗೆಯಲ್ಲಿ ಈ ಅವಲೋಕನವನ್ನು ನಡೆಸಿದ್ದಾರೆ, 'ಏನೋ ಆಗಿರುವ ತಿಳಿವಳಿಕೆಯು ಇದುವರೆಗೆ ಕಾಣದ ಯಾವುದೇ ಸೃಷ್ಟಿಗೆ ಅದು ಪೂರ್ವಭಾವಿಯಾಗಿ ಕಾರ್ಯ ನಿರ್ವಹಿಸುತ್ತದೆ'(ಪುಟ:229). ಮಿಯಾಕೆ ಮತ್ತು ನಾರ್ಮನ್(1979) ಹೇಳುವ ಪ್ರಕಾರ, ಒಬ್ಬ ವ್ಯಕ್ತಿ ಏನನ್ನು ತಿಳಿದಿಲ್ಲವೆನ್ನುವುದನ್ನು ತಿಳಿದುಕೊಳ್ಳಲು ಅಪಾರ ತಿಳಿವಳಿಕೆ ಬೇಕಾಗುತ್ತದೆ. ಸ್ವೇನ್ಲೆ(1997) ಶಿಕ್ಷಕರಿಗೆ ನೀಡುವ ಉಪದೇಶವೇನೆಂದರೆ, 'ವಿದ್ಯಾರ್ಥಿಗಳಿಗೆ ಅವರು ಈಗಾಗಲೇ ತಿಳಿದುಕೊಂಡಿರುವುದನ್ನು ಕಲಿಸಲು ಹೋಗಬೇಡಿ ಅಥವಾ ಅವರು ಇನ್ನೂ ತಿಳಿಯದಿರುವುದರಲ್ಲಿ ಅವರನ್ನು ಅತ್ಯಂತ ನಿಧಾನವಾಗಿ ಅಥವಾ ಅತ್ಯಂತ ವೇಗದಿಂದ ಕಲಿಸಲು ಹೋಗಬೇಡಿ'(ಪುಟ:112). ವಿಲಿಯಮ್ಸ್(1967), ಟೊರೆನ್ಸ್ ಮತ್ತು ಮೇಯರ್ಸ್(1970), ಕ್ರೊಪ್ಲೆ(1997) ಮತ್ತು ಇನ್ನೂ ಕೆಲವರು ಸೂಚಿಸುವುದೇನೆಂದರೆ, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಸಂಗ್ರಹಿತವಾಗಿರುವ ತಿಳಿವಳಿಕೆಯನ್ನು ಆಧರಿಸಿ ಅವರನ್ನು ಹೊಸ ಚಿಂತನೆಗೆ ಪ್ರೋತ್ಸಾಹಿಸಬೇಕು.

**ವಿದ್ಯಾರ್ಥಿಗಳ ಪ್ರಶ್ನೆ ಕೇಳುವಿಕೆಯನ್ನು ಪ್ರೋತ್ಸಾಹಿಸಿ:**

ಪ್ರಶ್ನೆ ಕೇಳುವುದು ಶಿಕ್ಷಣ ಮತ್ತು ಗ್ರಹಿಕಾ ವಿಜ್ಞಾನಗಳ ಕ್ಷೇತ್ರದ ಮೂಲಭೂತ ಗ್ರಹಿಕಾ ಕಾರ್ಯವಿಧಾನವಾಗಿದೆ. ಪ್ರಶ್ನೆ ಕೇಳುವ ಮನಸ್ಸು ಶೋಧನಾತ್ಮಕ ಮನಸ್ಸಾಗಿದೆ. ಉತ್ತಮ ಶಿಕ್ಷಣವು ಪ್ರಚೋದನಾಕಾರಿ ಪ್ರಶ್ನೆಗಳನ್ನು ಕೇಳುವುದು ಮತ್ತು ಹೇಗೆ ಉತ್ತರಿಸುವುದು ಎನ್ನುವುದನ್ನು ಕೂಡ ಕಲಿಸಿಕೊಡುತ್ತದೆ. ಅದು ಬೋಧನೆಯಿಂದ ಏನನ್ನು ತಿಳಿದುಕೊಂಡಿರುವೆ, ಏನನ್ನು ಇನ್ನೂ ತಿಳಿದುಕೊಂಡಿಲ್ಲವೆಂಬುದನ್ನು ವಿಮರ್ಶಾತ್ಮಕ ಮತ್ತು ಸೃಜನಾತ್ಮಕ ಚಿಂತನೆಗಳನ್ನೂ ತಂತ್ರಗಳನ್ನು ಸೂಚಿಸುತ್ತದೆ. ಪ್ರಶ್ನೆ ಕೇಳುವುದು ಮಾಹಿತಿ–ಕಾರ್ಯಗತಿಯ ಘಟಕಗಳಲ್ಲಿ ಬಹುಮುಖ್ಯವಾದುದು. ಇದರೊಂದಿಗೆ ಸಂಯೋಜಿತವಾಗಿರುವುದು ಸಂವೇದನಾತ್ಮಕ ಚಟುವಟಿಕೆಗಳಾದ, 'ಗ್ರಹಿಕೆ' (ಒಲ್ಸನ್, ಡಫಿ ಮತ್ತು ಮ್ಯಾಕ್, 1985; ಹಿಲ್ಪನ್, 1990; ಗ್ರೇಸ್ಸರ್, ಸಿಂಗರ್ ಮತ್ತು ಟ್ರಬಸ್ಸೊ, 1994), 'ಸಮಸ್ಯೆ ಪರಿಹರಿಸುವುದು'(ರೀಸ್‌ಬೆಕ್, 1988), 'ತರ್ಕ ಹೂಡುವುದು'(ಗ್ರೇಸ್ಸರ್, ಬಗ್ಗೆಟ್, ಮತ್ತು ವಿಲಿಯಮ್ಸ್, 1996), ಮತ್ತು 'ಸೃಜನಾತ್ಮಕತೆ' (ಟಾರೆನ್ಸ್ ಮತ್ತು ಮೇರ್ಸ್, 1970, ವಿಲಿಯಮ್ಸ್, 1967; ಸ್ಟೆಮ್‌ಬರ್ಗ್, 1987). ಒಟಿರೊ ಮತ್ತು ಗ್ರೇಸ್ಸರ್ ಬರೆಯುತ್ತಾರೆ, 'ಪ್ರತಿಷೇಧಗಳು, ಗುರಿಗಳಿಗೆ ತಡೆಗಳು, ತಿಳಿವಳಿಕೆಯಲ್ಲಿ ಅನಿಶ್ಚಿತತೆ ಮತ್ತು ಜ್ಞಾನದಲ್ಲಿ ಸ್ಪಷ್ಟವಾಗಿ ಅನುಕ್ರಮದಲ್ಲಿ ಬಿಟ್ಟುಹೋದ ಜಾಗಗಳು ಇರುವಾಗ ಪ್ರಶ್ನೆಗಳನ್ನು ಕೇಳಲಾಗುವುದು. ಗ್ರಹಿಸಿರುವುದು ಮತ್ತು ತಿಳಿವಳಿಕೆಯನ್ನು ಉದ್ರೇಕಿಸುವ ಪ್ರಶ್ನೆಗಳ ನಡುವಿನ ಹೊಂದಾಣಿಕೆ ಇಲ್ಲದಿರುವಾಗ, ನಿಖರವಾದ ತಂತ್ರಗಾರಿಕೆಯು ಮನಃಶಾಸ್ತ್ರದಲ್ಲಿ ಮತ್ತು ಶಿಕ್ಷಣದಲ್ಲಿ ಸಾಧಿಸಿದ್ದಕ್ಕಿಂತ ಇನ್ನೂ ಹೆಚ್ಚಿನ ವಿವರಗಳೊಂದಿಗೆ ನಿರ್ದಿಷ್ಟವಾಗಿ ಇರಬೇಕು'(ಪುಟ 144). ಮಕ್ಕಳ ಪ್ರಶ್ನೆಗಳನ್ನು, ಐಡಿಯಾಗಳನ್ನು, ಅಭಿಪ್ರಾಯಗಳನ್ನು, ಮತ್ತು ಸೂಚನೆಗಳನ್ನು ಗೌರವದಿಂದ ಪರಿಗಣಿಸುವುದು ಮುಖ್ಯ. ಇದು ಅವರಲ್ಲಿ ಇನ್ನೂ ಹೆಚ್ಚು ಹೆಚ್ಚು ಸಮಂಜಸ ಪ್ರಶ್ನೆಗಳನ್ನು, ಅದರಲ್ಲಿಯೂ ಪ್ರಚೋದನಕಾರಿ ಪ್ರಶ್ನೆಗಳನ್ನು ಕೇಳುವ ಅವರ ಪ್ರವೃತ್ತಿಯನ್ನು ಬಲಪಡಿಸುತ್ತದೆ. ಪ್ರಶ್ನೆ ಕೇಳುವುದು, ಪ್ರಶ್ನೆಗೆ ಉತ್ತರ ನೀಡುವಷ್ಟೇ ಮುಖ್ಯವೆನ್ನುವುದನ್ನು ಶಿಕ್ಷಕರು ನೆನಪಿನಲ್ಲಿ ಇಡಬೇಕು.

**ಸಾದೃಶ್ಯಗಳನ್ನು ಬಳಸಿಕೊಳ್ಳಿ:**

ಸಾದೃಶ್ಯವು ವಿಭಿನ್ನ ವಲಯಗಳಲ್ಲಿನ ಎರಡು ಅಥವಾ ಹೆಚ್ಚಿನ ಪರಿಸ್ಥಿತಿಯ ಅನುರೂಪತೆಗಳನ್ನು ಗುರುತಿಸುವುದರಲ್ಲಿ ತೊಡಗಿರುತ್ತದೆ. ವಿಲಿಯಮ್ಸ್(1967) ಅವರ ಉತ್ಪಾದನಾ ಭಿನ್ನ ಚಿಂತನೆಯನ್ನು ಕಲಿಸುವ ಮೂರು ಆಯಾಮಗಳ ಮಾದರಿಯು, 'ಸಾದೃಶ್ಯಗಳು ಅಥವಾ ಅದರ ಹಾಗೇ ಇರುವ ಪರಿಸ್ಥಿತಿಗಳ ಬಳಕೆಯು ಹೊಸ ಮಾಹಿತಿ, ವಾಸ್ತವಾಂಶಗಳು, ಅಥವಾ ತತ್ವಗಳನ್ನು ಸಮಾನ ಸನ್ನಿವೇಶದಲ್ಲಿ ಇರುವುದನ್ನು ಕಾಣುವ ಮೂಲಕ ಪಡೆಯಬಹುದು' ಎಂದು ಸೂಚಿಸುತ್ತದೆ. ಬದುಕಿನ ವಿವಿಧ ಕ್ಷೇತ್ರಗಳಲ್ಲಿನ ಜನರಿಂದ ನಡೆದಂತಹ ಸಾದೃಶ್ಯಗಳ ಬಳಕೆಯು ಕಲೆಗಳಲ್ಲಿ ಮತ್ತು ವಿಜ್ಞಾನಗಳಲ್ಲಿ

Digitised by Bharatavani, CIIL

ಅದ್ಭುತವಾದ ಸೃಜನಾತ್ಮಕ ವಸ್ತುಗಳ(ಕಲಾಕೃತಿ/ಗ್ರಂಥ) ಸೃಷ್ಟಿಗೆ ಕಾರಣವಾಗಿದೆ. ಇವುಗಳಲ್ಲಿ ಹೆಚ್ಚಿನವು ಹಿಂದೆ ಬೇರೆ ಯಾರೂ ಕಾಣದ ಸಾದೃಶ್ಯವನ್ನು ಕಾಣುವುದರ ಫಲಿತಾಂಶಗಳಾಗಿವೆ. ಹಕ್ಕಿಗಳ ಹಾರಾಟದ ಅವಲೋಕನವು ವಿಮಾನ ವಿನ್ಯಾಸಕಾರರಿಗೆ ಉಪಯುಕ್ತ ಸಾದೃಶ್ಯಗಳನ್ನು ಒದಗಿಸಿದೆ. ಅಲೆಗ್ಸಾಂಡರ್ ಗ್ರಾಹಮ್ ಬೆಲ್‌ನು ದೂರವಾಣಿಯ ಕಲ್ಪನೆಯನ್ನು ಒಳಕಿವಿಯ ಕಾರ್ಯವೈಖರಿ ಮತ್ತು ಒಳಚರ್ಮದ ದಪ್ಪ ತುಂಡಿನ ಚಲನೆಯ ಮೂಲಕ ಕಂಡುಕೊಂಡಿದ್ದಾನೆ. ಇದೇ ರೀತಿ ಪ್ರತಿಫಲಿತ ಧ್ವನಿ ತರಂಗಗಳನ್ನು ಬಳಸುವ ಗೂಬೆಯ ಸಾಮರ್ಥ್ಯದ ಅಧ್ಯಯನವು ರ್‍ಯಾಡರ್(ರೇಡಿಯೋ ತರಂಗಗಳನ್ನು ಬಳಸಿ ಹಡುಗು, ವಿಮಾನಗಳ ಸ್ಥಾನ, ವೇಗವನ್ನು ಕಂಡುಹಿಡಿಯುವ ಉಪಕರಣ) ಸಂಶೋಧನೆಗೆ ಕಾರಣವಾಗಿದೆ. ತೀರಾ ಇತ್ತೀಚಿಗೆ ಸೃಜನಾತ್ಮಕ ಚಿಂತನೆಯಲ್ಲಿ ಸಾದೃಶ್ಯಗಳ ಪ್ರಾಮುಖ್ಯತೆಯನ್ನು ಬಾಡೆನ್(1990) ಸೂಚಿಸಿದ್ದಾರೆ. ಅವರು ಬರೆಯುತ್ತಾರೆ(1999): 'ಸಾದೃಶ್ಯಕಾರಿ ಚಿಂತನೆಯಲ್ಲಿ ಸಂಬಂಧಪಟ್ಟ ಎರಡು ಐಡಿಯಾಗಳ ಆಂತರಿಕ ರಚನೆಯ ನಡುವೆ ಹೆಚ್ಚು ಕಡಿಮೆ ಪುಷ್ಟಿಕಾರಕ ಹೋಲಿಕೆ ಇರುತ್ತದೆ. ಸಾದೃಶ್ಯಗಳನ್ನು ಶೋಧಿಸುವುದು, ಬೆಳೆಸುವುದು, ಮತ್ತು ದೃಢಪಡಿಸುವುದನ್ನು ಮಾಡಬಹುದು. ಆನಂತರ ಅದನ್ನು ಸ್ವೀಕರಿಸುವುದು ಅಥವಾ ನಿರಾಕರಿಸುವುದನ್ನು ಮಾಡಬಹುದು (ಹೃದಯವು ನಿಜವಾಗಿಯೂ ರೇಚಕ ಯಂತ್ರವೇ, ಹಾಗಿದ್ದರೆ ನಾವು ಅದನ್ನು ಹೇಗೆ ನಿರ್ಧರಿಸುವುದು?').

**ಕುತೂಹಲವನ್ನು ಪ್ರೋತ್ಸಾಹಿಸಿ:**

ಕುತೂಹಲವು ಪರಿಶೋಧನಾತ್ಮಕ ವರ್ತನೆಯೊಂದಿಗೆ, ತಿಳಿಯುವುದು ಅಂತೆಯೇ ಅರ್ಥಮಾಡಿಕೊಳ್ಳುವುದರ ಅಗತ್ಯದೊಂದಿಗೆ ಕೂಡ ಜೋಡಿಸಿಕೊಂಡಿದೆ. ಮಕ್ಕಳು ಸಹಜವಾಗಿಯೇ ತಮ್ಮ ಸುತ್ತಲಿನ ಜಗತ್ತಿನ ಕುರಿತು ಕುತೂಹಲವನ್ನು ಹೊಂದಿರುತ್ತಾರೆ. ಅವರು ಈ ಕುತೂಹಲವನ್ನು ದೊಡ್ಡವರಾದ ಬಳಿಕವೂ ಉಳಿಸಿಕೊಂಡು ಬರುತ್ತಾರೋ ಇಲ್ಲವೋ ಎನ್ನುವುದು ಶಾಲಾ ಶಿಕ್ಷಣದ ಪ್ರಕ್ರಿಯೆಯಲ್ಲಿ ಅದಕ್ಕೆ ದೊರೆಯುವ ಪ್ರೋತ್ಸಾಹ, ಅಥವ ಚಿವುಟಿ ಹಾಕಿದುದರ ಮೇಲೆ ಹೊಂದಿಕೊಂಡಿರುತ್ತದೆ. 'ಓರ್ವ ಯಶಸ್ವೀ ಸಂಶೋಧಕನ ಅತ್ಯಂತ ಮುಖ್ಯ ವಿಶೇಷಣ ಏನು?' ಎಂಬ ಪ್ರಶ್ನೆಗೆ ಐನ್‌ಸ್ಟೀನ್ ನೀಡಿದ ಉತ್ತರ, 'ಅದು ತಣಿಸಲಾಗದ ಕುತೂಹಲ, ವಿಚಾರಿಸುವುದನ್ನು ಒತ್ತಾಯಿಸುವ ಶಕ್ತಿ'. ಆದರೆ ದುರಂತವೆಂದರೆ ಮಕ್ಕಳಲ್ಲಿ ಕುತೂಹಲ ಕಾಣಿಸಿದಾಗ ಅದನ್ನು ಗಮನಿಸಲು ಶಿಕ್ಷಣಜ್ಞರು ವಿಫಲರಾಗುತ್ತಾರೆ. ಕುತೂಹಲವು ಕಲಿಯುವಿಕೆಯ ಸ್ವಾಗತಾರ್ಹ ಚಿಹ್ನೆ ಎಂದು ಶಿಕ್ಷಕರು ಪರಿಗಣಿಸಬೇಕಲ್ಲದೆ, ತರಗತಿಯಲ್ಲಿ ಅದನ್ನು ವಿಘ್ನವೆಂದು ತಿಳಿಯಬಾರದು. ಮಾನ್(1996) ಅವರ ದೃಷ್ಟಿಯಲ್ಲಿ, ಶಿಕ್ಷಕರು ಈ ಸಹಜ ಆಂತರಿಕ ಕುತೂಹಲವನ್ನು ತರಗತಿಯಲ್ಲಿ ಪಠ್ಯಕ್ರಮದ ಸಂವಹನದೊಂದಿಗೆ ಜೋಡಿಸುವ ದಾರಿಗಳನ್ನು ಮತ್ತು ಅವಕಾಶಗಳನ್ನು ಕಂಡುಕೊಳ್ಳಬೇಕು. ಬೌದ್ಧಿಕ ಕುತೂಹಲವನ್ನು ಹಂಚುವುದು ಶಿಕ್ಷಕರ ತಿಳಿವಳಿಕೆ ಕುರಿತಾದ ಧೋರಣೆಯನ್ನು ಮತ್ತು ತನ್ನ ವಿದ್ಯಾರ್ಥಿಗಳ ಕುರಿತಾದ ಬದ್ಧತೆ ಮತ್ತು ಕಾಳಜಿಯನ್ನು ಆವಲಂಬಿಸಿ ಇರುತ್ತದೆ. ಕುತೂಹಲವು ಸೃಜನಾತ್ಮಕತೆಯ ನಿರ್ಣಾಯಕ ಅಂಶಗಳಲ್ಲಿ ಒಂದು ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ನಿಕರ್‌ಸನ್(1999) ತಿಳಿಸುತ್ತಾರೆ, 'ಒಬ್ಬ ವ್ಯಕ್ತಿಯ ಜಗತ್ತಿನ ಕುರಿತಾದ ಕುತೂಹಲವನ್ನು ಹೆಚ್ಚಿಸಬೇಕಾದರೆ, ಅವರಿಗೆ ಸೂಕ್ಷ್ಮ ಲಕ್ಷ್ಯದವರಾಗುವಂತೆ, ಸಾಮಾನ್ಯವಾಗಿ ನಾವು ಅಲಕ್ಷದಿಂದಿರುವ ದೈನಂದಿನ ಅನುಭವದ ವಾಸ್ತವಾಂಶಗಳಿಗೆ ಹತ್ತಿರದ ಗಮನ ನೀಡುವಂತೆ ತರಬೇತಿ ನೀಡುವುದರ ಮೂಲಕ ಸರಳವಾಗಿ ಸಾಧಿಸಬಹುದಾಗಿದೆ. ಕುತೂಹಲವು ಸಾಂಕ್ರಾಮಿಕ ವಿಚಾರವಾಗಿರುತ್ತದೆ. ಜಗತ್ತು ಮತ್ತು ಅಸ್ತಿತ್ವದ ಕುರಿತಾದ ಆಳವಾದ ವಿಸ್ಮಯವನ್ನು ಪೋಷಿಸುವುದಕ್ಕಿಂತ ಶಿಕ್ಷಕರು ಬಹಳ ಕಡಿಮೆ ಪ್ರಮಾಣದಲ್ಲಿ ಅದಕ್ಕೆ ಪ್ರೋತ್ಸಾಹ ನೀಡಿದರೂ ಅದು ಅವನ ಅಥವಾ ಅವಳ ಬೌದ್ಧಿಕ ಬದುಕಿನ ಗುಣಮಟ್ಟವನ್ನು ವಯಸ್ಕ ಬದುಕಿನುದ್ದಕ್ಕೂ ಕಾಪಾಡಿಕೊಂಡು ಬರಲು ನೆರವಾಗುತ್ತದೆ'(ಪುಟ 410).

**ಸಮಸ್ಯೆ–ಪರಿಹಾರದ ತಂತ್ರಗಳನ್ನು ಕಲಿಸಿರಿ:**

ಮಕ್ಕಳಲ್ಲಿ ಸಮಸ್ಯೆ–ಪರಿಹಾರದ ಸಾಮರ್ಥ್ಯಗಳನ್ನು ಬೆಳೆಸುವುದು ಶಿಕ್ಷಣದ ಪ್ರಮುಖ ಗುರಿಗಳಲ್ಲಿ ಒಂದು. ಶಿಕ್ಷಕರು ಮಕ್ಕಳಿಗೆ ಸಮಸ್ಯೆ ಪರಿಹರಿಸುವ ಬೇರೆ ಬೇರೆ ಹೆಜ್ಜೆಗಳನ್ನು ಪರಿಚಯಿಸಬೇಕು ಮತ್ತು ಅವರಿಗೆ ಹುಡುಕುವ ಮತ್ತು ವಿಚಾರಣೆಯ ಕೌಶಲಗಳನ್ನು ಕಲಿಸಬೇಕು. ಸಮಸ್ಯೆ ಹುಡುಕಿಕೊಳ್ಳುವುದು ಸಮಸ್ಯೆ ಪರಿಹರಿಸಿಕೊಳ್ಳುವುದಕ್ಕೆ ಪೂರ್ವಾಪೇಕ್ಷಿತವಾಗಿದೆ. ಸಮಸ್ಯೆ ಹುಡುಕಿಕೊಳ್ಳುವುದೆಂದರೆ ಅದು ಅನೇಕ ವರ್ತನೆಗಳ ಸಾಲಾಗುತ್ತದೆ, ಅದು ಸಮಸ್ಯೆಯನ್ನು ಕಂಡುಕೊಳ್ಳುವುದು, ಸಮಸ್ಯೆಯನ್ನು ಪತ್ತೆ ಹಚ್ಚುವುದು, ಸಮಸ್ಯೆಯನ್ನು ಗ್ರಹಿಸುವುದು, ಸಮಸ್ಯೆಯನ್ನು ಗುರುತಿಸುವುದು, ಸಮಸ್ಯೆಯನ್ನು ನಿರ್ವಚಿಸುವುದು, ಸಮಸ್ಯೆಯನ್ನು ದರ್ಶಿಸುವುದು, ಸಮಸ್ಯೆಯನ್ನು ರೂಪಿಸುವುದು ಮತ್ತು ಸಮಸ್ಯೆಯನ್ನು ಸೃಷ್ಟಿಸುವುದು. ಈ ಕ್ಷೇತ್ರದ ಸಂಶೋಧನೆಯನ್ನು ಜೇ ಮತ್ತು ಪರ್ಕಿನ್ಸ್(1997) ಪರಿಶೀಲಿಸಿದ್ದಾರೆ. ಗೆಜೆಲ್ಸ್(1982) ಹೇಳುವ ಪ್ರಕಾರ ಸಮಸ್ಯೆಯನ್ನು ಕಂಡುಕೊಳ್ಳುವುದು ಸಾಂದರ್ಭಿಕವಾಗಿರುತ್ತದೆ ಮತ್ತು ಸಮಸ್ಯೆಯ ಸ್ಥಿತಿಗಳು ಮೂರು ವಿಧದ್ದಾಗಿ ಇರುತ್ತವೆ– ಪ್ರದರ್ಶಿಸಿರುವುದು, ಕಂಡು ಹಿಡಿದಿರುವುದು ಮತ್ತು ಸೃಷ್ಟಿಸಿರುವುದು. ಕಾಣಿಸಿಕೊಂಡಿರುವ ಬಹುತೇಕ ಸಮಸ್ಯೆಗಳನ್ನು ಗಣಿತದ ಮೂಲಕ ಅಥವಾ ಎಲ್ಲರಿಗೂ ತಿಳಿದಿರುವ ಅಥವಾ ನೆನಪಿಸಿಕೊಳ್ಳುವ ಕಾರ್ಯವಿಧಾನಗಳ ಮೂಲಕ ಪರಿಹರಿಸಿಕೊಳ್ಳಬಹುದು. ಆದರೆ ಕಂಡು ಹಿಡಿದಿರುವ ಅಥವಾ ಸೃಷ್ಟಿಸಲಾದ ಸಮಸ್ಯೆಗಳ ವಿಚಾರದಲ್ಲಿ ಇದು ಕಾರ್ಯನಿರ್ವಹಿಸಲಾರದು. ಇಲ್ಲಿ ಮುಖ್ಯವಾಗಿ ಮೂಲಭೂತ ಚಿಂತನೆ ಇರಬೇಕಾಗುತ್ತದೆ. ಸಮಸ್ಯೆಯನ್ನು ಪರಿಹರಿಸುವ ಕಾರ್ಯಗತಿಯ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ವಯಸ್ಸು ಮತ್ತು ತರಗತಿ ಹಂತಗಳಿಗೆ ಹೊಂದಿಕೊಳ್ಳುವಂತೆ ಅದಕ್ಕನುಗುಣವಾಗಿ ಮತ್ತು ಸೂಕ್ತವಾದ ರೀತಿಯಿಂದ ಅವರಿಗ ಅವಕಾಶಗಳನ್ನು

Digitised by Bharatavani, CIIL

ಕಲ್ಪಿಸಿಕೊಡಬೇಕು. ವಿಲಿಯಮ್ಸ್(1967) ಸೂಚಿಸುವುದೇನೆಂದರೆ, 'ಮೂಲಭೂತ ಚಿಂತನೆಯು ಬೆಂಬಲದ ಪ್ರಯತ್ನ, ಕಠಿಣ ಪರಿಶ್ರಮ, ಮತ್ತು ಅಪಾರ ತಿಳಿವಳಿಕೆಯೊಂದಿಗೆ ಜೋಡಿಸಿಕೊಂಡಾಗ ಮಾತ್ರ ಆವಿಷ್ಕರಣ ಮತ್ತು ವಿಶಿಷ್ಟಾಧಿಕಾರಗಳು(ಪೇಟೆಂಟ್) ಯಶಸ್ಸನ್ನು ಪಡೆದಿವೆ. ಆದ್ದರಿಂದ ಆವಿಷ್ಕರಣ ಮತ್ತು ನವೀನತೆ ಕಲ್ಪಿಸುವುದರ ಕಾರ್ಯವಿಧಾನಗಳನ್ನು ಶಿಕ್ಷಕರು ಕಲಿಸುಬೇಕು. ಅವರು ಓದುವ ಕೌಶಲವನ್ನು ಬೆಳೆಸುವುದು ಮತ್ತು ಸೃಜನಾತ್ಮಕತೆಯನ್ನು ಗ್ರಹಿಸುವುದಕ್ಕೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ. ಸಿಮೋನ್(1988) ರ ಪ್ರಕಾರ ಸೃಜನಾತ್ಮಕತೆಯಲ್ಲಿ ಇರುವುದು ಸಾಮಾನ್ಯ ಸಮಸ್ಯೆ–ಪರಿಹಾರದ ಕೌಶಲಗಳು ಮಾತ್ರ. ಶಿಕ್ಷಕರು ಸಾಮಾನ್ಯ ಸಮಸ್ಯೆ ಪರಿಹಾರದ ವಿಶಿಷ್ಟ ಲಕ್ಷಣಗಳಾದ ಸ್ವಯಂ ಸಂಶೋಧನೆ ಮತ್ತು ಯೋಜನಾ ತಂತ್ರಗಳನ್ನು ಕಲಿಸುವುದನ್ನು ಮುಂದುವರಿಸಬೇಕು.

ಶಿಕ್ಷಕರು ಮಕ್ಕಳಿಗೆ 'ಕಾರ್ಯಗತ ಸ್ಥಿರತೆ'ಯು ಸೃಜನಾತ್ಮಕತೆಯನ್ನು ಹೇಗೆ ಹಾಳುಮಾಡುತ್ತದೆ ಎಂಬುದರ ಕುರಿತು ಕಲಿಸುವ ಅಗತ್ಯವಿದೆ. ಜನರಿಗೆ ಅಸಾಂಪ್ರದಾಯಿಕ ವಿಧಾನಗಳಿಂದ ಯೋಚಿಸಲು ಮತ್ತು ವಸ್ತುಗಳನ್ನು ಬಳಸಲು ತಿಳಿಸಿದಾಗ ಅವರು ಅನುಭವಿಸುವ ಕಷ್ಟಗಳ ಕುರಿತಾಗಿ ಈ ಸಂವೇದನಾ ಕಾರ್ಯವಿಧಾನ ಇರುತ್ತದೆ. ನೆನಪಿನಲ್ಲಿ ಇಟ್ಟುಕೊಳ್ಳುವ ಗಣನೆಯಾಧಾರಿತ ಬೋಧನಾ ಕ್ರಮದಿಂದ ತರಗತಿ ಅನುಸಂಧಾನಗಳ ಮೂಲಕ ನಡೆಯುವ ಬೋಧನೆಗೆ ಬದಲಾವಣೆಗೊಳ್ಳುವ ತುರ್ತು ಇದೆ ಎಂಬ ವಿಚಾರಕ್ಕೆ ಸಂಶೋಧನೆ ಪ್ರಾಮುಖ್ಯತೆ ನೀಡುತ್ತದೆ. ಈ ರೀತಿಯ ಬೋಧನೆ ಸಮಸ್ಯೆಗಳ ವಿವಿಧ ಘಟಕಗಳು ಮತ್ತು ವಿಧಗಳ ನಡುವಿನ ಆಂತರಿಕ ಜೋಡಣೆಗಳ ಕುರಿತು ಪರಿಕಲ್ಪನಾತ್ಮಕ ಅರ್ಥೈಸುವಿಕೆಯನ್ನು ಒದಗಿಸುತ್ತದೆ.

**ಸ್ವೋಪಜ್ಞತೆ(ಸ್ವಂತಿಕೆ)ಯನ್ನು ಸ್ವಾಗತಿಸಿ ಮತ್ತು ಸೃಜನಾತ್ಮಕ ವರ್ತನೆಯನ್ನು ಪುರಸ್ಕರಿಸಿ:**

ಸೃಜನಾತ್ಮಕ ಚಿಂತನೆ ಮತ್ತು ಕಾರ್ಯಗಳಿಗೆ ಬೇಕಾಗಿರುವುದು ಪ್ರೇರಣೆ, ಉತ್ತೇಜನಗಳು ಮತ್ತು ಪ್ರಯತ್ನ. ಬಹುಕಾಲದಿಂದ ಶಿಕ್ಷಕರು ಪಠ್ಯದ ಉಲ್ಲೇಖದೊಂದಿಗೆ ತಾಳೆಯಾಗುವ 'ಸರಿಯಾದ ಉತ್ತರ'ವನ್ನು ಮಾತ್ರ ಪುರಸ್ಕರಿಸುತ್ತಾ ಬಂದಿದ್ದಾರೆ. ತಾನು ತಪ್ಪೆಂದು ಭಾವಿಸಬಹುದೆಂಬ ಭಯದಿಂದ ವಿದ್ಯಾರ್ಥಿಗಳು ಸ್ವತಂತ್ರ ಉತ್ತರಗಳನ್ನು ಬಿಟ್ಟು, ತಮ್ಮದೇ ಪದಗಳಲ್ಲಿ ಉತ್ತರ ನೀಡಲು ಕೂಡ ನಿರಾಕರಿಸುತ್ತಾರೆ. ಅದೇ ಪ್ರಶ್ನೆ ಅಥವಾ ಸಮಸ್ಯೆಗೆ ಉತ್ತರಿಸಲು ಬೇರೆ ವಿಧಾನಗಳನ್ನು ಅನುಸರಿಸುವ ವಿದ್ಯಾರ್ಥಿಗೆ ಯಾವುದೇ ಪರಿಗಣನೆ ಅಥವಾ ಪಾರಿತೋಷಕ ಇಲ್ಲ. ಸಾಮಾನ್ಯವಾಗಿ ಹೊಗಳಿಕೆಯ ಮಾತುಗಳನ್ನು, ಪ್ರೀತಿ ಅಥವಾ ಸಂತೋಷದ ಮಾತುಗಳನ್ನು, ಮರುಕ ಅಥವಾ ಕಾಳಜಿಯ ಮಾತುಗಳನ್ನು, ಕೃತಜ್ಞತೆ ಸೂಚಿಸುವುದನ್ನು ತಡೆ ಹಿಡಿಯಲಾಗುತ್ತದೆ. ಒಂದು ವೇಳೆ ಶಿಕ್ಷಕರು ಇದನ್ನು ವ್ಯಕ್ತಪಡಿಸಿದರೆ ಅನೇಕ ವಿದ್ಯಾರ್ಥಿಗಳು ತಮ್ಮ ಪ್ರತಿಭಾಕ್ಷೇತ್ರದಲ್ಲಿ ಉತ್ಕೃಷ್ಟತೆಯ ಕಡೆಗೆ ಪ್ರಗತಿ ಹೊಂದುತ್ತಿದ್ದರು. ಮಾತು ಇಲ್ಲದಿದ್ದರೆ ಬೇಡ, ಬೆನ್ನು ತಟ್ಟಿದರೆ ಅದು ವಿದ್ಯಾರ್ಥಿಗಳ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಮೂಲಸತ್ವಗಳಾಗಿರಬೇಕು, ಅನುಕರಣೆಗಳಲ್ಲ.

ಸೃಜನಾತ್ಮಕತೆಗೆ ಯಾವುದೇ ಪೂರ್ವನಿರ್ಧಾರಿತ ಪ್ರಮಾಣವಾಗಲೀ ಅಥವಾ ಮಾನಕಗಳಾಗಲೀ ಇಲ್ಲವೆಂಬುದನ್ನು ಶಿಕ್ಷಕರು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಸೃಜನಾತ್ಮಕತೆಯು ವಿವಿಧ ಕ್ಷೇತ್ರಗಳಲ್ಲಿ, ವಿವಿಧ ಮಟ್ಟಗಳಲ್ಲಿ ಉತ್ಕೃಷ್ಟತೆಯನ್ನು ಪ್ರತಿಫಲಿಸುತ್ತದೆ. ಇದ್ದರಿಂದ ಯಾವುದೇ ಕ್ರಿಯೆ ಅಥವಾ ಉತ್ಪನ್ನವನ್ನು ಸೃಜನಾತ್ಮಕವೆಂದು ಕರೆಯಲು ಇರಬೇಕಾದ ಗುಣಮಟ್ಟವನ್ನು ನಿರ್ಧರಿಸುವುದು ಕಷ್ಟ. ಆದುದರಿಂದ, ಯಾವುದೇ ವಿಧದ ಸೃಜನಾತ್ಮಕತೆಯ ಮೌಲ್ಯನಿರ್ಧಾರವು ಸಂಕೀರ್ಣ ಮತ್ತು ಜಟಿಲವಾದುದು. ತರಗತಿಯ ವ್ಯವಸ್ಥೆಯಲ್ಲಿ, ಮೌಲ್ಯನಿರ್ಧಾರದ ಉದ್ದೇಶವು ರಚನಾತ್ಮಕ ಮರುಮಾಹಿತಿ ಒದಗಿಸುವುದು, ಅದರ ಕುರಿತು ಬೆಳಕು ಚೆಲ್ಲುವುದು ಮತ್ತು ಅದನ್ನು ಒದಗಿಸುವುದಾಗಿರುತ್ತದೆ ಮತ್ತು ಸಾಧ್ಯವಾದಷ್ಟು ಪ್ರಮಾಣದಿಂದ ವಿದ್ಯಾರ್ಥಿಗಳ ಪ್ರತಿಭೆಗಳನ್ನು ಬೆಳೆಸುವುದಾಗಿದೆ. ವಯಸ್ಕ ಸೃಜನಾತ್ಮಕತೆಯನ್ನು ಸಮಾಜಕ್ಕೆ ಅಥವಾ ಕನಿಷ್ಟ ಮೌಲ್ಯನಿರ್ಧಾರ ಕೈಗೊಳ್ಳುವ ತಜ್ಞರ ಗುಂಪಿಗೆ ಅದು ಒದಗಿಸತಕ್ಕಂತಹ ಹೊಸತನದ ನೆಲೆಯಿಂದ ನಿರ್ಣಯಿಸಲಾಗುತ್ತದೆ. ಮಕ್ಕಳ ಸೃಜನಾತ್ಮಕತೆಯನ್ನು ನಿರ್ಣಯಿಸುವಾಗ, ಕಲ್ಪನೆ, ಪರಿಹಾರ ಅಥವಾ ಉದ್ದೇಶದ ಹೊಸತನದ ಮುಖ್ಯ ಒತ್ತನ್ನು ವಾಡಿಕೆಯಂತೆ ನಿರ್ಣಯ ಕೈಗೊಳ್ಳುವ ಶಾಲೆಯಲ್ಲಿನ ಶಿಕ್ಷಕರ ಗುಂಪಿಗೆ ಅಥವಾ ಅದಕ್ಕೆ ಕಾಣಿಕೆ ಸಲ್ಲಿಸಿದಂತಹ ಪ್ರತಿ ಮಗುವಿನ ಮೇಲೆ ಹೇರಲಾಗುತ್ತದೆ.

ಶಾಲಾಮಟ್ಟದಲ್ಲಿ ಅನಾರೋಗ್ಯಕರ ಸ್ಪರ್ಧೆ, ಬಾಹ್ಯ ಮೌಲ್ಯಮಾಪನ ಮತ್ತು ನಿಗಾವಣೆಗಳು ಸೃಜನಾತ್ಮಕತೆಯ ಶಕ್ತಿಗುಂದಿಸುವ ಸಾಧ್ಯತೆಗಳು ಇವೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಮುಖ್ಯ. ವರ್ತನೆಯ ಅಧ್ಯಯನದ ದೃಷ್ಟಿಯಲ್ಲಿ ಬಲವರ್ಧನೆಯು ಸೃಜನಾತ್ಮಕ ಪ್ರತಿಕ್ರಿಯೆಗಳ ಆವರ್ತನವನ್ನು ಹೆಚ್ಚಿಸುತ್ತದೆ. ಮಕ್ಕಳ ಸೃಜನಾತ್ಮಕತೆಗೆ ಪುರಸ್ಕಾರದ ಪ್ರಭಾವವು ವಿವಾದಾಸ್ಪದ ಮತ್ತು ಅನಿರ್ಣಾಯಕವಾಗಿರುತ್ತದೆ. ಹಾಗಿದ್ದರೂ, ಮಕ್ಕಳ ಸೃಜನಾತ್ಮಕ ಚಿಂತನಾ ಸಾಮರ್ಥ್ಯಗಳ ಮೇಲೆ ಪುರಸ್ಕಾರಗಳು ಧನಾತ್ಮಕ ಪರಿಣಾಮವನ್ನು ಬೀರುವಂತೆ ಕಂಡುಬರುತ್ತದೆ. ಪುರಸ್ಕಾರಗಳನ್ನು ಬೇರೆ ಬೇರೆ ಕಾರಣಗಳಿಗಾಗಿ ಬೇರೆ ಬೇರೆ ರೀತಿಯಿಂದ ನೀಡಬಹುದಾಗಿದೆ. ಅನಿರೀಕ್ಷಿತ ಪುರಸ್ಕಾರಗಳು, ನಿರೀಕ್ಷಿತ ಪುರಸ್ಕಾರಗಳಿಗಿಂತ ಹೆಚ್ಚಿನ ಪ್ರಭಾವ ಹೊಂದಿರುತ್ತವೆ. ಬಹುತೇಕವಾಗಿ ಪುರಸ್ಕಾರಗಳು ಬಾಹ್ಯರೂಪದ್ದಾಗಿರುತ್ತವೆ ಮತ್ತು ಬಾಹ್ಯಕಾರಿ ಪ್ರಚೋದನಾ ಪ್ರಭಾವ ಹೊಂದಿರುತ್ತವೆ. ಆದರೆ ಆಂತರಿಕ ಪ್ರಚೋದನೆಯು ಮಕ್ಕಳನ್ನು ಹೆಚ್ಚು ಸೃಜನಾತ್ಮಕಗೊಳಿಸುವ ಸಂಭಾವ್ಯ ಸಾಧ್ಯತೆಗಳನ್ನು ಹೊಂದಿದ್ದು, ಅದು ಯಾವುದೇ ಪುರಸ್ಕಾರ ನಿರೀಕ್ಷೆಯನ್ನು ಒಳಗೊಂಡಿರುವುದಿಲ್ಲ.

Digitised by Bharatavani, CIIL

**ಸೃಜನಾತ್ಮಕತೆಯನ್ನು ಪೋಷಿಸುವ ಕೆಲವು ತಂತ್ರವಿಧಾನಗಳು:**

ಸೃಜನಾತ್ಮಕತೆಯ ಸ್ವರೂಪದ ಕುರಿತಾದ ತಿಳಿವಳಿಕೆ ಹೆಚ್ಚಿದಂತೆ, ಶೈಕ್ಷಣಿಕ ವ್ಯವಸ್ಥೆಯ ಒಳಗೆ ಶೈಕ್ಷಣಿಕ ಸಾಮಗ್ರಿಗಳು, ಚಟುವಟಿಕೆಗಳು, ಒಟ್ಟು ವ್ಯವಹಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವ ದಿಕ್ಕಿನಲ್ಲಿ ಅನೇಕ ಮನಃಶಾಸ್ತ್ರಜ್ಞರು ಮತ್ತು ಶಿಕ್ಷಣಜ್ಞರು ತಮ್ಮ ಪ್ರಯತ್ನವನ್ನು ಮುಂದುವರಿಸಿದ್ದಾರೆ. ಮೂರು ದಶಕಗಳ ಹಿಂದೆ, ಟ್ರೆಫಿಂಗರ್ ಮತ್ತು ಗೊವನ್(1971) ಅವರು ಸೃಜನಾತ್ಮಕತೆಯ ತರಬೇತಿಗಾಗಿ 50 ಕಾರ್ಯಕ್ರಮಗಳ ಅಸ್ತಿತ್ವವನ್ನು ವರದಿ ಮಾಡಿದ್ದಾರೆ. ಡೆವಿಸ್ ಮತ್ತು ಸ್ಕಾಟ್(1971) ಅವರು 20 ಬೇರೆ ಬೇರೆ ಚಟುವಟಿಕೆಗಳನ್ನು, ಉದಾಹರಣೆಗೆ ಐಡಿಯಾ ವ್ಯೂಹ, ಸೃಜನಾತ್ಮಕತೆಯ ಉಪಕರಣ ಸಂಚಯ(ಕಿಟ್‌ಗಳು), ಮತ್ತು ಉಪಾಧಿ ಪಟ್ಟೀಕರಣವನ್ನು ಗುರುತಿಸಿದ್ದಾರೆ. ಯು.ಎಸ್.ಎ. ಯಲ್ಲಿ 1990ರಲ್ಲಿಯೇ ಈ ಕೆಳಗಿನವುಗಳು ತ್ವರಿತ ವೃದ್ಧಿಯನ್ನು ಹೊಂದಿವೆ: ಸೃಜನಾತ್ಮಕತೆಯ ತರಬೇತಿ ಕಾರ್ಯಕ್ರಮಗಳು, ಸಂಚಯಗಳು, ಮಾನವ ಚಟುವಟಿಕೆಗಳಾದ ಕಲೆ, ನೃತ್ಯ, ನಾಟಕ, ಸಂಗೀತ, ಭಾಷಾ ಕಲೆಗಳು, ಗಣಿತ, ವಿಜ್ಞಾನಗಳು, ಓದುವಿಕೆ, ಬರೆವಣಿಗೆ, ಶಿಕ್ಷಕ ತರಬೇತಿ, ಕೈಗಾರಿಕೆ, ಸೃಜನಾತ್ಮಕ ಸಂವಹನಗಳು, ಕ್ರೀಡೆ, ಸೃಜನಾತ್ಮಕ ತಂತ್ರವಿಧಾನಗಳು ಹಾಗೂ ಇನ್ನಿತರಗಳು.

**ಸೃಜನಾತ್ಮಕ ಬೋಧನೆಯ ಕುರಿತಾದ ಅಂತರ್ಜಾಲ ತಾಣಗಳು(ವೆಬ್‌ಸೈಟ್):**

ವ್ಯಕ್ತಿಗಳಲ್ಲಿ ಮತ್ತು ಗುಂಪುಗಳಲ್ಲಿ ಸೃಜನಾತ್ಮಕತೆಯನ್ನು ಬೆಳೆಸುವ ಸಲುವಾಗಿ ಯುಎಸ್ ಪೇಟೆಂಟ್ ಮತ್ತು ಟ್ರೇಡ್ ಮಾರ್ಕ್ ಕಚೇರಿಯು(1990) ಅಪಾರ ಸಂಖ್ಯೆಯಲ್ಲಿ ತರಬೇತಿ ಕಾರ್ಯಕ್ರಮಗಳು, ಯೋಜನೆಗಳು, ಸಂಚಯಗಳು, ಚಟುವಟಿಕೆಗಳು, ಲಭ್ಯ ತಂತ್ರವಿಧಾನಗಳು, ವಸ್ತುಗಳು, ಸೃಜನಾತ್ಮಕ ಪಠ್ಯಕ್ರಮಗಳು, ಬೋಧನಾ ಕಾರ್ಯ ನೀತಿಗಳು ಮತ್ತು ಸಮಸ್ಯೆ-ಪರಿಹರಿಸುವ ಅನುಸಂಧಾನಗಳ ವ್ಯಾಪಕ ಸಂಕಲನವನ್ನು ನೀಡಿದೆ. ಇದರೊಂದಿಗೆ ಸೃಜನಾತ್ಮಕತೆಯ ಕುರಿತಾದ ಅನೇಕ ಅಂತರ್ಜಾಲ ತಾಣಗಳು ಇವೆ. ಸೃಜನಾತ್ಮಕ ಬೋಧನೆಯ ಕುರಿತಾಗಿಯೇ ಈ ರೀತಿಯ 45 ತಾಣಗಳು ಇವೆ. ಇವು ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕತೆಯನ್ನು ಪೋಷಿಸಲು ಅನುವು ಮಾಡುವ ಬೋಧನಾ ಐಡಿಯಾಗಳು, ತಂತ್ರವಿಧಾನಗಳು ಮತ್ತು ಚಟುವಟಿಕೆಗಳಲ್ಲಿ ಶಿಕ್ಷಕರಿಗೆ ನೆರವನ್ನು ನೀಡುತ್ತವೆ. ಗಣಕ ತಂತ್ರಾಂಶಗಳು, ವೀಡಿಯೋ ಅಂಗಾಂಶಗಳು, ಮತ್ತು 1 ರಿಂದ 12ನೇ ತರಗತಿಯ ಮಕ್ಕಳ ಶಾಲಾ ವಿಷಯಗಳ ಕಲಿಕಾ ಚಟುವಟಿಕೆಗಳನ್ನು ಪತ್ತೆ ಹಚ್ಚುವುದಕ್ಕೆ ಮತ್ತು ಬಳಸುವುದಕ್ಕೆ ಕೂಡ ನೆರವು ನೀಡುತ್ತವೆ. ಇವುಗಳಲ್ಲಿ ಕೆಲವು ಶೋಧನಾತ್ಮಕ ಶೈಕ್ಷಣಿಕ ವಸ್ತುಗಳನ್ನು, ಗ್ರಂಥಗಳನ್ನು ಮತ್ತು ಚಿಂತನಾ ಕೌಶಲವನ್ನು ಹೇಗೆ ಕಲಿಸುವುದೆಂಬ ಸೇವೆಗಳನ್ನು ಕೂಡ ಒದಗಿಸುತ್ತವೆ. ಅಂತರ್ಜಾಲ ಸೌಲಭ್ಯಗಳ ಮೂಲಕ 'ಸೃಜನಾತ್ಮಕ ಬೋಧನೆ'ಯ ಕುರಿತಾದ ಈ ಅಂತರ್ಜಾಲ ತಾಣಗಳನ್ನು ಕಂಡುಕೊಳ್ಳುವುದು ನಮ್ಮ ಶಿಕ್ಷಕರಿಗೆ ಉಪಯುಕ್ತವಾಗುವುದೆಂಬ ಭರವಸೆ ಇದೆ. ಈಗ ಲಭ್ಯವಿರುವ ಸೃಜನಾತ್ಮಕ ಬೋಧನೆಯ ಯೋಜನಾ ಕಾರ್ಯವಿಧಾನ ಮತ್ತು ತಂತ್ರವಿಧಾನಗಳು ಎಷ್ಟು ಅಗಾಧ ಪ್ರಮಾಣದಲ್ಲಿ ಇವೆಯೆಂದರೆ ಅದನ್ನು ಪಟ್ಟಿ ಮಾಡುವುದಾಗಲೀ ಅಥವಾ ಸಂಕ್ಷಿಪ್ತವಾಗಿ ವಿವರಿಸುವುದಾಗಲೀ ಸಂಪೂರ್ಣವಾಗಿ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಸೃಜನಾತ್ಮಕತೆಯನ್ನು ಪೋಷಿಸುವ ಈ ರೀತಿಯ ತರಬೇತಿ ಕಾರ್ಯಕ್ರಮಗಳನ್ನು, ಸಂಚಯಗಳನ್ನು, ಯೋಜನಾ ಕಾರ್ಯವಿಧಾನ ಅಥವಾ ವಸ್ತುಗಳನ್ನು ಅಭಿವೃದ್ಧಿಪಡಿಸುವ ಯಾವುದೇ ಪ್ರಯತ್ನ ನಡೆದಿಲ್ಲ. ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿಯ(ನ್ಯಾಶನಲ್ ಕೌನ್ಸಿಲ್ ಫಾರ್ ಟೀಚರ್ ಎಡ್ಯುಕೇಶನ್-ಎನ್‌ಸಿಟಿಇ)ಯ ಅಂತರ್ಜಾಲ ತಾಣದಲ್ಲಿ ಶಿಕ್ಷಕ ಶಿಕ್ಷಣ ಮತ್ತು ಶಿಕ್ಷಕ-ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆಯ ಗುಣಮಟ್ಟ ಸುಧಾರಣೆಗೆ ನಿರ್ದೇಶಿಸಲಾದ ಚಟುವಟಿಕೆಗಳ ಕುರಿತಾದ ಮಾಹಿತಿ ಪ್ರಸಾರವಿದೆ. ಈ ಶಾಸನಬದ್ಧ ಸಂಸ್ಥೆಯು ಸೃಜನಾತ್ಮಕ ಬೋಧನೆಯನ್ನು ಬೆಳೆಸುವ ಕಾರ್ಯವನ್ನು ಕೈಗೊಳ್ಳಲು ತನ್ನ ಹಿರಿಮೆಯಿಂದಲೇ ಸಮರ್ಥವಾಗಿದೆ. ಶಿಕ್ಷಣದ ಎಲ್ಲ ಹಂತಗಳಲ್ಲಿನ ನಮ್ಮ ಶಿಕ್ಷಕ ಶಿಕ್ಷಣಜ್ಞರಿಗೆ ಮತ್ತು ಶಿಕ್ಷಕರಿಗೆ ಪರಿಚಯಿಸುವ ಸಲುವಾಗಿ ಬೇರೆಡೆಗಳಲ್ಲಿ ಬೆಳೆಸಿ, ಬಳಸಿಕೊಳ್ಳಲಾದ ಕೆಲವು ಜನಪ್ರಿಯ ಸೃಜನಾತ್ಮಕ ಕಾರ್ಯವಿಧಾನಗಳು, ಯೋಜನೆಗಳು, ಕಾರ್ಯಕ್ರಮಗಳು ಮತ್ತು ಸಾಮಗ್ರಿಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಮಸ್ತಿಷ್ಕ ಆಂದೋಲನ (Brainstorming):** ಇದು 1957ರಲ್ಲಿ ಅಲೆಕ್ಸ್ ಒಸಬಾರ್ನ್ ಅವರಿಂದ ಬೆಳೆಸಲ್ಪಟ್ಟ ಭಿನ್ನ ಭಿನ್ನ ಯೋಚನಾ ಕ್ರಮದ ತಂತ್ರ. ಐಡಿಯಾಗಳನ್ನು (ಅಭಿಪ್ರಾಯಗಳನ್ನು/ಸೂಚನೆಗಳನ್ನು) ಐಡಿಯಾ-ಹುಟ್ಟಿಸುವ ಜನಪ್ರಿಯ ತಂತ್ರಗಳಲ್ಲಿ ಇದು ಒಂದು. ಇದರಲ್ಲಿ ವಿಸದೃಶ್ಯ ಜನರ ಗುಂಪಿನ ಸದಸ್ಯರು ನಿರ್ದಿಷ್ಟವಾಗಿ ಗುರುತಿಸಲ್ಪಟ್ಟ ಸಮಸ್ಯೆಗೆ ಒಟ್ಟು ಐಡಿಯಾಗಳ ಮೂಲಕ ಪರಿಹಾರವನ್ನು ಹುಡುಕಿಕೊಳ್ಳುವ ಪ್ರಯತ್ನವನ್ನು ನಡೆಸುತ್ತಾರೆ. ಈ ಗುಂಪಿನ ಗಾತ್ರ ಐದರಿಂದ ಹತ್ತು ಸದಸ್ಯರದ್ದಾಗಿರಬಹುದು. ಪ್ರತಿಯೊಬ್ಬ ಸದಸ್ಯ ತನ್ನ ಐಡಿಯಾಗಳನ್ನು ವ್ಯಕ್ತಪಡಿಸುತ್ತಾನೆ ಮತ್ತು ಅವುಗಳನ್ನು ದಾಖಲಿಸಲಾಗುತ್ತದೆ. ಸದಸ್ಯರು ಸಮಸ್ಯೆಯನ್ನು ತಮ್ಮ ಮನಸ್ಸಿನೊಳಗೆ ಮಥಿಸಿಕೊಂಡಿರಬೇಕು ಎಂದು ಕೇಳಲಾಗುತ್ತದೆ ಮತ್ತು ಅವರಿಗೆ ಹೊಳೆಯುವ ಯಾವುದೇ ಐಡಿಯಾಗಳನ್ನು ಸೂಚಿಸುತ್ತಲೇ ಇರಬೇಕೆಂದು ಪ್ರೋತ್ಸಾಹಿಸಲಾಗುತ್ತದೆ. ಐಡಿಯಾಗಳನ್ನು ಪಟ್ಟಿ ಮಾಡಲಾಗುತ್ತದೆ. ಆದರೆ ತಕ್ಷಣ ಅದರ ಮೌಲ್ಯ ನಿರ್ಧಾರವನ್ನು ಕೈಗೊಳ್ಳಲಾಗುವುದಿಲ್ಲ. ಎಲ್ಲ ವಿಧದ ಟೀಕೆಗಳನ್ನು ಅಲಕ್ಷಿಸಲಾಗುತ್ತದೆ. ಐಡಿಯಾ ಯಾವುದಾದರೂ ಅದನ್ನು ಸ್ವೀಕರಿಸಲಾಗುತ್ತದೆ. ಅತಿರೇಕದ ಐಡಿಯಾಗಳೂ ಸೇರಿದಂತೆ, ಉತ್ತಮ ಐಡಿಯಾಗಳನ್ನು ಪ್ರವಾಹೋಪಾದಿ ಹುಟ್ಟಿಸುವುದಕ್ಕೆ ಪ್ರೋತ್ಸಾಹ ನೀಡಲಾಗುತ್ತದೆ. ಐಡಿಯಾ ಆತುರದ್ದಾಗಿದಷ್ಟೂ ಉತ್ತಮವಾಗುತ್ತದೆ. ಗುಂಪಿನ ಐಡಿಯಾಗಳನ್ನು ಒಟ್ಟಾಗಿ ಸೇರಿಸಲಾಗುತ್ತದೆ ಮತ್ತು ಪ್ರತಿಯೊಂದು ಐಡಿಯಾವನ್ನು ಚರ್ಚಿಸಲಾಗುತ್ತದೆ. ಸಮಸ್ಯೆಗೆ ಪರಿಹಾರವನ್ನು ಸೂಚಿಸುವ ಐಡಿಯಾಗಳನ್ನು ಆಯ್ಕೆ ಮಾಡಿ

Digitised by Bharatavani, CIIL

ಅವನ್ನು ಪ್ರಯೋಗಿಸಲಾಗುತ್ತದೆ. ಉತ್ತಮ ಐಡಿಯಾ ಅಥವಾ ಪರಿಹಾರವನ್ನು ಆಯ್ಕೆ ಮಾಡಲಾಗುತ್ತದೆ. ಶಿಕ್ಷಕರು ಅನೇಕ ಐಡಿಯಾಗಳನ್ನು ಅಭಿವೃದ್ಧಿಪಡಿಸಲು ದಾರಿಮಾಡಿಕೊಡುವ ವಿಷಯ ಕ್ಷೇತ್ರಗಳನ್ನು ಆಯ್ದುಕೊಳ್ಳುವುದರ ಮೂಲಕ ಈ ತಂತ್ರವಿಧಾನವನ್ನು ಬಳಸಿಕೊಳ್ಳಬಹುದು. ಪರಿಮಾಣವು ಗುಣಮಟ್ಟಕ್ಕೆ ದಾರಿ ಮಾಡಿಕೊಡುವುದೆಂಬ ಒಸ್‌ಬಾರ್ನನ ದೃಢೀಕರಣವು ಮಿಶ್ರರೂಪದ್ದಾಗಿದೆ.

ಪೂರ್ವದೇಶಗಳಲ್ಲಿ ಮಿದುಳು ಧಾಳಿಗೆ ವ್ಯತಿರಿಕ್ತವಾಗಿ 'ಮಿದುಳು ಸ್ಥಗಿತ'ವು ಜನಪ್ರಿಯವಾಗುತ್ತಿದೆ. ನಮ್ಮ ದೇಶದಲ್ಲಿ ಶ್ರೀ ಅರವಿಂದೊ ಅವರಂತಹ ಸಂತರು ಯೋಗವನ್ನು ಪ್ರಸ್ತಾಪಿಸಿದ್ದಾರೆ. ಇದು ಮೂಲತಃ ಮಿದುಳು(ಮನಸ್ಸು) ಸ್ಥಗಿತಗೊಳಿಸುವುದಾಗಿದೆ. ಜಪಾನಿನಲ್ಲಿ 'ಜೆನ್ ಸೆಶ್ಶನ್ಸ್'ಗಳೆಂದು(ಸುಜುಕಿ, 1981) ಜನಪ್ರಿಯವಾಗಿ ಕರೆಯಿಸಿಕೊಳ್ಳುವಂತಹದು ಮಿದುಳನ್ನು ಸ್ಥಗಿತಗೊಳಿಸುವ ಪ್ರಕ್ರಿಯೆಗೆ ಸದೃಶವಾಗಿದೆ. ಚಕ್ರವರ್ತಿ(1988) ಯವರು ಭಾರತೀಯ ಉದ್ಯಮದ ಕಾರ್ಯನಿರ್ವಾಹಕರೊಂದಿಗೆ ಮಿದುಳು ಸ್ಥಗಿತಗೊಳಿಸುವ ಪ್ರಕ್ರಿಯೆಗಳನ್ನು ಪ್ರಯತ್ನಿಸಿದ್ದಾರೆ ಮತ್ತು ಮಿದುಳುದಾಳಿಯು 'ಹೊಂದಾಣಿಕೆಯ ಸೃಜನಶೀಲತೆ'ಗೆ ಸಂಬಂಧಿಸಿದೆ, ಮಿದುಳು ಸ್ಥಗಿತವು 'ಭೇದಿಸುವ ಸೃಜನಾತ್ಮಕತೆ'ಗೆ ಹೆಚ್ಚು ಸಾಧ್ಯತೆಯನ್ನು ಹೊಂದಿರುವಂತಹದು ಎನ್ನುತ್ತಾರೆ. ಅವರ ಪ್ರಕಾರ ಮಿದುಳುದಾಳಿಯು ಎಡ-ಮಿದುಳು ಕೇಂದ್ರಿತ ಮತ್ತು ಮಿದುಳು ಸ್ಥಗಿತವು ಬಲ-ಮಿದುಳು ಕೇಂದ್ರಿತವಾಗಿದೆ. ಮಿದುಳು ಸ್ಥಗಿತವು ಮಿದುಳುದಾಳಿಯ ಮೊದಲು ಮತ್ತು ಅದನ್ನು ಅನುಸರಿಸಿ ಬರಬೇಕು, ಆಗ ಇದು ಉತ್ಪತ್ತಿಯ ದೃಷ್ಟಿಯಿಂದ ಹೆಚ್ಚು ಪರಿಣಾಮಕಾರಿ ಎಂದು ಅವರು ಸೂಚಿಸುತ್ತಾರೆ.

**ವಿದ್ಯುನ್ಮಾನ ಮಿದುಳುಧಾಳಿ:**

ಇದು ಒಸ್‌ಬಾರ್ನ್‌ನ ಮೌಖಿಕ ಮಿದುಳುದಾಳಿಯ ಮುಂದುವರಿಕೆಯಾಗಿದೆ ಮತ್ತು ಇದು ಅದಕ್ಕೆ ಸಮಾನ ಹಾಗೂ ವಿಭಿನ್ನ ರೀತಿಯದ್ದಾಗಿದೆ. ವಿದ್ಯುನ್ಮಾನ ಮಿದುಳುಧಾಳಿಯಲ್ಲಿ, ಪ್ರತಿಯೊಬ್ಬ ವ್ಯಕ್ತಿ ತನ್ನ ಐಡಿಯಾಗಳಲ್ಲಿ ದಾಖಲಿಸಲು ಗಣಕ ಕೀಲಿಮಣೆಯನ್ನು ಉಪಯೋಗಿಸುತ್ತಾನೆ ಮತ್ತು ಇತರ ಭಾಗಿಗಳಿಗಿಂತ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಲ್ಲವನಾಗಿರುತ್ತಾನೆ. ಐಡಿಯಾ ನೀಡುವ ಭಾಗಿಗಳ ಹೆಸರನ್ನು ಗುಪ್ತವಾಗಿ ಇಡಲಾಗುತ್ತದೆ. ಜಾಗತಿಕ ನೆಲೆಯಿಂದ ಭಾಗಿಗಳು ಇದರಲ್ಲಿ ದೊಡ್ಡ ಸಂಖ್ಯೆಯಿಂದ ಪಾಲುಗೊಳ್ಳುತ್ತಾರೆ ಮತ್ತು ವಿಶಿಷ್ಟ ಐಡಿಯಾಗಳು ಅಪಾರ ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತವೆ ಮತ್ತು ಅವುಗಳು ವಿದ್ಯುನ್ಮಾದದ ಮೂಲಕ ದಾಖಲೀಕರಣಗೊಳ್ಳುತ್ತವೆ. ಭಾಗಿಗಳು ಇಚ್ಛಿಸಿದಾಗ ಇವುಗಳ ಪರಿಶೀಲನೆ ನಡೆಸುವುದು ಸಾಧ್ಯವಿದೆ. ಭಾಗಿಗಳು ಇತರರ ಐಡಿಯಾಗಳೊಂದಿಗೆ ನೇರವಾಗಿ ಪ್ರತಿಕ್ರಿಯಿಸಬಹುದು. ಐಡಿಯಾ ಉತ್ಪಾದನೆಯ ಪ್ರತಿಬಂಧವನ್ನು ಪರಿಹರಿಸಿಕೊಳ್ಳಲಾಗುತ್ತದೆ ಮತ್ತು ಅನಾಮಧೇಯ ಪ್ರವೇಶ್ಯಗಳ ಮೌಲ್ಯನಿರ್ಣಯದ ಗಣನೆಯನ್ನು ಕಡಿಮೆ ಮಾಡುತ್ತದೆ. ಭೌಗೋಳಿಕವಾಗಿ ಚದರಿ ಹೋಗಿರುವ ಜನರ ನಡುವೆ ವ್ಯಾಪಕವಾದ, ಶೀಘ್ರ ಮತ್ತು ಪರಸ್ಪರ ಪ್ರತಿಕ್ರಿಯಾತ್ಮಕ ಸಂವಹನವಕ್ಕೆ ಇದು ಅವಕಾಶ ಮಾಡಿಕೊಡುತ್ತದೆ. ಇಲ್ಲಿ ಪ್ರದೇಶ, ಕಾಲ ಮತ್ತು ಭಾಗಿಗಳ ಸಂಖ್ಯೆಯ ಮಿತಿ ಇರುವುದಿಲ್ಲ. ದುರಾದೃಷ್ಟವಶಾತ್, ಅತ್ಯಂತ ಮುಂದುವರಿದ ವಿದುನ್ಮಾನ ತಂತ್ರಜ್ಞಾನಗಳು ನಮ್ಮ ಶಿಕ್ಷಕರ, ಶಿಕ್ಷಕ-ಶಿಕ್ಷಣಜ್ಞರ ಮತ್ತು ಶೈಕ್ಷಣಿಕ ವ್ಯವಸ್ಥೆಗಳ ನಿಲುಕಿನಲ್ಲಿ ಇಲ್ಲ. ಪ್ರಾಯಶಃ ತಂತ್ರಜ್ಞಾನಗಳು ಬೇರೆ ಕ್ಷೇತ್ರಗಳಿಗಿಂತ ಶೈಕ್ಷಣಿಕ ಸಂಸ್ಥೆಗಳಲ್ಲಿ ನಿಧಾನವಾಗಿ ಪ್ರವೇಶ ಪಡೆಯುತ್ತಿರುವುದು ಇದಕ್ಕೆ ಕಾರಣವಾಗಿರಬಹುದು.

**ಸ್ವರೂಪ ಸಮನ್ವಯತೆ:**

ಮಿರಾನ್ ಆಲೆನ್(1962) ಅವರು ಸಮಸ್ಯೆಯೊಂದಕ್ಕೆ ದೊಡ್ಡ ಸಂಖ್ಯೆಯ ಐಡಿಯಾಗಳನ್ನು ಉತ್ಪಾದಿಸುವ ಸಲುವಾಗಿ ವ್ಯಕ್ತಿಗಳಿಗೆ ತರಬೇತಿ ನೀಡಲು ಈ ತಂತ್ರವಿಧಾನವನ್ನು ಬೆಳೆಸಿದ್ದಾರೆ. ಆಲೆನ್ ಅವರು ಸೃಜನಾತ್ಮಕತೆಯನ್ನು ನಿರ್ವಚಿಸಿರುವುದು ಹೀಗೆ: 'ಸಮನ್ವಯತೆಯ ಮೂಲಕ ಅರ್ಥದ ಉತ್ಪಾದನೆ'. ಇದನ್ನು ಆಧರಿಸಿ ಸ್ವರೂಪ ಸಮನ್ವಯತೆ ಇರುತ್ತದೆ. ಸಮಸ್ಯೆ ಅಥವಾ ಕಾರ್ಯದ ಬಹು ಮುಖ್ಯ ಘಟಕಗಳನ್ನು ಅಥವಾ ಗುಣಲಕ್ಷಣಗಳನ್ನು ಗುರುತಿಸುವ ಸಲುವಾಗಿ ಇದಕ್ಕೆ ಗುಂಪಿನ ಅಗತ್ಯವಿರುತ್ತದೆ. ಈ ತಂತ್ರವಿಧಾನದಲ್ಲಿ ಐದು ಹಂತಗಳು ಇವೆ: ಸಮಸ್ಯೆ ಹೇಳಿಕೆ, ಸ್ವತಂತ್ರ ಚರಗಳ ಆಯ್ಕೆ, ಪ್ರತಿಯೊಂದು ಸ್ವತಂತ್ರ ಚರಕ್ಕೆ ಉಪ-ವರ್ಗೀಕರಣದ ಬೆಳೆಸುವಿಕೆ, ಪ್ರತಿಯೊಂದು ಉಪ-ವರ್ಗೀಕರಣಗಳ ನಡುವಿನ ಸಂಬಂಧಗಳಿಗೆ ಕೋಶವನ್ನು ಒದಗಿಸುವಂತಹ ರೂಪಾಂಶದ ನಿರ್ಮಾಣ, ಮತ್ತು ಐಡಿಯಾಗಳ ಹೊಸ ಸಂಯೋಜನೆಗಳಿಗೆ ರೂಪಾಂಶಗಳ ಸಂಯೋಜನೆಗಳನ್ನು ಹುಡುಕಿಕೊಳ್ಳುವುದು. ನಿದರ್ಶನಕ್ಕಾಗಿ, ನಾವು ಹೀಗೆ ತಿಳಿಯೋಣ: ಉತ್ಪಾದನಾ ಕಂಪನಿಯೊಂದು ಹೊಸ ರೀತಿಯ ಟೋಸ್ಟರ್ಸ್‌ಗಳನ್ನು ತಯಾರಿಸಬೇಕೆಂದುಕೊಂಡಿದೆ. ಇದಕ್ಕಾಗಿ ಗುಂಪನ್ನು ಆಯೋಜಿಸಲಾಗಿದೆ. ಅದು 3 ಗುಣಲಕ್ಷಣಗಳನ್ನು ಆಕಾರ, ಗಾತ್ರ ಮತ್ತು ಬಣ್ಣ- ಗುರುತಿಸಿದೆ ಎಂದುಕೊಳ್ಳೋಣ. ಗುಂಪು 15 ಬೇರೆ ಬೇರೆ ಆಕಾರಗಳನ್ನು, 20 ಬೇರೆ ಬೇರೆ ಬಣ್ಣಗಳ ಸಂಯೋಜನೆಗಳನ್ನು ಮತ್ತು 5 ಬೇರೆ ಬೇರೆ ಗಾತ್ರಗಳನ್ನು ಸೂಚಿಸಿತೆಂದರೆ ಇಲ್ಲಿ ಸುಮಾರು 1,500 ಸಾಧ್ಯತಾ ಉತ್ಪನ್ನಗಳು ಇರುತ್ತವೆ! ಹೀಗೆ ಈ ತಂತ್ರವಿಧಾನವು ಅಗಾಧ ಸಂಖ್ಯೆಯ ಐಡಿಯಾ-ಸಂಯೋಜನೆಗಳನ್ನು ಬಹಳ ಕಡಿಮೆ ಸಮಯದಲ್ಲಿ ಉತ್ಪಾದಿಸಲು ಉಪಯುಕ್ತವೆನಿಸುತ್ತದೆ.

ಸಮಸ್ಯೆಯ ಭಾಗಗಳನ್ನು ಹೊಸದಾಗಿ ಮತ್ತು ವಿಭಿನ್ನ ರೀತಿಯಲ್ಲಿ ಸಂಯೋಜಿಸುವ ಪ್ರಯತ್ನಗಳ ಮೂಲಕ ಸಮಸ್ಯೆಯೊಂದರ ಪರಿಹಾರಗಳು ಹೊರಡಬಹುದೆಂಬ ನಂಬಿಕೆಯನ್ನು ಜವಿಸ್ಕಿಯ(1969) 'ಸ್ವರೂಪ ಸಮನ್ವಯತೆ'ಯ ಸಮಸ್ಯೆ ಪರಿಹಾರದ ತಂತ್ರ ವಿಧಾನ ಕೂಡ ಆಧರಿಸಿದೆ. ಆಂಟೊನೆಟ್ಟಿ, ಐಗ್ನಾಜಿ ಮತ್ತು ಪೆರೆಗೊ(2000) ಅವರು ಸೂಚಿಸಿದಂತೆ, ಈ ಕೆಲವು ತಂತ್ರ ವಿಧಾನಗಳಲ್ಲಿ 'ಭಾಗಗಳ ಸಂಭಾವ್ಯ ಕ್ರಮಪಲ್ಲಟನೆಯು

Digitised by Bharatavani, CIIL

ಸೃಜನಾತ್ಮಕ ಸಮಸ್ಯೆಯನ್ನು ಪರಿಹರಿಸುವ ತಿರುಳಿನ ಯಾಂತ್ರಿಕ ರಚನೆಯಾಗಿರುತ್ತದೆ'.

**ಗುಣಧರ್ಮಗಳನ್ನು ಪಟ್ಟಿಮಾಡುವಿಕೆ:**

ರಾಬರ್ಟ್ ಕ್ರಾಫರ್ಡ್ ಅಭಿವೃದ್ಧಿ ಪಡಿಸಿರುವ ಈ ತಂತ್ರ ವಿಧಾನದಲ್ಲಿ ವ್ಯಕ್ತಿ ಒದಗಿಸುವ ಉತ್ಪನ್ನದ ಮುಖ್ಯ ಗುಣಧರ್ಮಗಳನ್ನು ಅಥವಾ ಗುಣಮಟ್ಟಗಳ ಯಾದಿಯನ್ನು ತಯಾರಿಸಬೇಕಾಗುತ್ತದೆ. ಆನಂತರ ಅವರು ಪ್ರತಿಯೊಂದು ಗುಣಧರ್ಮವನ್ನು ಬದಲಾವಣೆ ಅಥವಾ ಸುಧಾರಣೆಯ ಮೂಲವಾಗಿ ಪರಿಗಣಿಸಲು ಪ್ರೋತ್ಸಾಹ ನೀಡಲಾಗುತ್ತದೆ. ಉದಾಹರಣೆಗೆ ನಾವು ಸೀಮೆ ಸುಣ್ಣದ ತುಂಡಿನ ಗುಣಧರ್ಮಗಳನ್ನು ಹೆಸರಿಸುವಂತೆ ವ್ಯಕ್ತಿಗಳಲ್ಲಿ ಕೇಳಿಕೊಂಡಾಗ, ಅವರು ಅದರ ಗಾತ್ರ, ಆಕಾರ, ಬಣ್ಣ ಮತ್ತು ವಸ್ತುವನ್ನು ಪಟ್ಟಿ ಮಾಡುವರು. ನಾವು ಇದರಲ್ಲಿ ಪ್ರತಿಯೊಂದನ್ನು ಬದಲಾಯಿಸಿಕೊಂಡು ವಿಭಿನ್ನ ವಿಧಗಳ ಸೀಮೆ ಸುಣ್ಣಗಳನ್ನು ತಯಾರಿಸಬಹುದು. ಶಿಕ್ಷಕರು ಈ ತಂತ್ರ ವಿಧಾನವನ್ನು ಕೆಲವು ಶಾಲಾ ವಿಷಯಗಳನ್ನು ಕಲಿಸಲು, ಅದರಲ್ಲಿಯೂ ವಿಶೇಷವಾಗಿ ವಸ್ತುವಿನ ಗುಣಧರ್ಮಗಳನ್ನು ಗುರುತಿಸಿಕೊಳ್ಳಬಹುದಾದ ಸಂದರ್ಭಗಳಲ್ಲಿ ಸೂಕ್ತರೀತಿಯಿಂದ ಬಳಸಿಕೊಳ್ಳಬಹುದು.

**ಸಿನೆಟಿಕ್ಸ್:**

ಇದು ಗ್ರೀಕ್ ಪದ. ವಿಭಿನ್ನ ಮತ್ತು ತೋರಿಕೆಗೆ ಅಸಂಬದ್ಧ ಅಥವಾ ಬಹುದೂರದ ಘಟಕಗಳನ್ನು ಒಟ್ಟಿಗೆ ಜೋಡಿಸುವುದು ಇದರ ಅರ್ಥವಾಗಿದೆ. ಈ ಕಾರ್ಯವಿಧಾನವನ್ನು ಅಭಿವೃದ್ಧಿ ಪಡಿಸಿದವರು ಗಾರ್ಡನ್(1961). ಇದು ಇಂದು ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಗಾರ್ಡನ್‌ರ ಪ್ರಕಾರ ಸೃಜನಾತ್ಮಕತೆಯು ಮುಖ್ಯವಾಗಿ ಎಲ್ಲ ಕ್ಷೇತ್ರಗಳಲ್ಲಿ ಒಂದೇ ರೀತಿಯದ್ದಾಗಿ ಇದೆ ಮತ್ತು ಅದನ್ನು ಅಧ್ಯಯನ ಮಾಡಬಹುದು ಮತ್ತು ಅರ್ಥ ಮಾಡಿಕೊಳ್ಳಬಹುದು. ಅವರ ಗ್ರಹಿಕೆಯಲ್ಲಿ ಒಬ್ಬ ವ್ಯಕ್ತಿಯ ಶೋಧನಾ ಕಾರ್ಯವಿಧಾನವು ಗುಂಪಿನ ಶೋಧನಾ ಕಾರ್ಯವಿಧಾನಕ್ಕಿಂತ ಭಿನ್ನವಾಗಿ ಇರುವುದಿಲ್ಲ. ವ್ಯಕ್ತಿಗತ ಸೃಜನಾತ್ಮಕತೆಯು ಗುಂಪಿನ ಚೈತನ್ಯದಿಂದ ಹೆಚ್ಚಿನ ಪ್ರಭಾವವನ್ನು ಹೊಂದಿದೆ ಎಂದು ಅವರು ದೃಢಪಡಿಸುತ್ತಾರೆ. ಸೃಜನಾತ್ಮಕತೆಗೆ ಅಗತ್ಯವಿರುವ ಅಂತರ್‌ಸಂಬಂಧವನ್ನು ಹೊಂದಿರುವ ಐದು ಮಾನಸಿಕ ಅವಸ್ಥೆಗಳನ್ನು ಅವರು ಗುರುತಿಸಿದ್ದಾರೆ. ಅವು ಹೀಗಿವೆ:

- ಪ್ರಸ್ತುತ ಚಟುವಟಿಕೆಯಿಂದ ವಿಮುಖನಾಗುವುದು ಮತ್ತು ಸಮಸ್ಯೆಯ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು.
- ಸುಲಭ ಪರಿಹಾರ ಲಭ್ಯವಿದ್ದಾಗಲೂ ಸಮಸ್ಯೆಯ ಪರಿಹಾರಕ್ಕೆ ಅನಾಸಕ್ತಿ ತೋರುವುದು ಮತ್ತು ಇನ್ನೂ ಹೆಚ್ಚು ಹೆಚ್ಚು ಸಂಕೀರ್ಣ ಐಡಿಯಾಗಳತ್ತ ಚಲಿಸುವುದು.
- ಸಮಸ್ಯೆ ಪರಿಹಾರಕ್ಕಾಗಿ ಹೊಸ ಪರ್ಯಾಯಗಳನ್ನು, ಹೊಸ ವಿಧಾನಗಳನ್ನು ಕಲ್ಪಿಸಿಕೊಳ್ಳುವುದು ಮತ್ತು ಸ್ವಚ್ಛಂದ ವೃತ್ತಿಯ ಐಡಿಯಾಗಳನ್ನು ಆದರಿಸುವುದು.
- ವ್ಯಕ್ತಿಗೆ ನಿವಾರಣೋಪಾಯವನ್ನು ರೂಪಿಸಲು ಅನುವು ಮಾಡಿ ಕೊಡುವುದು.
- ಸಂತೋಷಕರ ಪ್ರತಿಕ್ರಿಯೆಗೆ ಅವಕಾಶ ಮಾಡಿಕೊಡುವುದು.

(ವ್ಯಕ್ತಿಯಲ್ಲಿ ಪ್ರತಿಕ್ರಿಯೆ ಸರಿಯಾದುದು ಎಂಬ ಸಂತೋಷಕರ ಭಾವನೆಯನ್ನು ಸೃಷ್ಟಿಸುವ ಪ್ರೇರಣೆ ಅಥವಾ ಅಂತಃಸ್ಫೂರ್ತಿ ಇದು.)

ಸಿನೆಟಿಕ್ಸ್‌ನಲ್ಲಿ ಎರಡು ಮೂಲಭೂತ ಅಂತರ್‌ಸಂಬಂಧವುಳ್ಳ ಅನುಸಂಧಾನಗಳು ಇವೆ. ಅವುಗಳೆಂದರೆ:

1. ಉಹಾತ್ಮಕ ಕಲ್ಪನೆಗೆ ಅವಕಾಶ ನೀಡುವ ಕಾರ್ಯವಿಧಾನಗಳು.
2. ಕಲ್ಪನೆಯನ್ನು ಪ್ರೋತ್ಸಾಹಿಸುವ ಮತ್ತು ಅದಕ್ಕೆ ಮಹತ್ವ ನೀಡುವ ಶಿಸ್ತುಬದ್ಧ ಮತ್ತು ನಿಯಮಿತ ನಡವಳಿಕೆ.

ಊಹಾತ್ಮಕ ಕಲ್ಪನೆಯನ್ನು ಸುಗಮಗೊಳಿಸುವ ಎರಡು ನಿಯಮಗಳು ಇವೆ:

'ಅಪರಿಚಿತವಾದುದನ್ನು ಪರಿಚಿತಗೊಳಿಸು' ಮತ್ತು 'ಪರಿಚಿತವಾದುದನ್ನು ಅಪರಿಚಿತಗೊಳಿಸು'. ಮೊದಲ ನಿಯಮದಲ್ಲಿ ಇರುವುದು ರೂಪಕ ಮತ್ತು ಸಾದೃಶ್ಯವನ್ನು ಬಳಸಿ ಹೊಸ ಸಮಸ್ಯೆಯನ್ನು ಪರಿಚಿತವಾಗಿ ಪರಿವರ್ತಿಸುವುದು. ಎರಡನೆಯ ನಿಯಮದಲ್ಲಿ ಯಾವುದಾದರೂ ಸಾಮಾನ್ಯ ನೆಲೆಯಲ್ಲಿನ ಪರಿಚಿತವಾಗಿರುವುದನ್ನು ಎತ್ತಿಕೊಂಡು ಸಾದ್ರುಶ್ಯದ ಮೂಲಕ ಅದನ್ನು ಕಾಣುವ ಹೊಸ ವಿಧಾನಗಳನ್ನು ಹುಡುಕಿಕೊಳ್ಳುವುದು. ಮೊದಲ ನಿಯಮ ಎರಡನೆಯ ನಿಯಮಕ್ಕಿಂತ ಸಾಪೇಕ್ಷವಾಗಿ ಸುಲಭವಾದುದು. ಪರಿಚಿತದಿಂದ ಅಪರಿಚಿತಕ್ಕೆ ಪರಿಕಲ್ಪನಾತ್ಮಕ ಸ್ಥಾನಾಂತರ ಪಡೆಯುವುದನ್ನು ಸುಗಮಗೊಳಿಸಲು ನಾಲ್ಕು ಸಾದೃಶ್ಯ ಕಾರ್ಯ ವ್ಯವಸ್ಥೆಗಳನ್ನು ಬಳಸಲಾಗುತ್ತದೆ. – ವೈಯಕ್ತಿಕ, ನೇರ, ಪ್ರತೀಕಾತ್ಮಕ ಮತ್ತು ಕಲ್ಪನಾತ್ಮಕ'. ವೈಯಕ್ತಿಕ ಸಾದೃಶ್ಯದಲ್ಲಿ ವ್ಯಕ್ತಿಯು ತನ್ನನ್ನು ತಾನು ಕಾರ್ಯ ನಡೆಸುತ್ತಿರುವ ವಸ್ತು ಅಥವಾ ಸಂಗತಿಯೆಂದು ತನ್ನನ್ನು ತಾನು ಪರಿಭಾವಿಸಿಕೊಳ್ಳುತ್ತಾನೆ. ನೇರ ಸಾದೃಶ್ಯದಲ್ಲಿ ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರದ ವಾಸ್ತವಾಂಶಗಳು, ನಿಯಮಗಳು, ತಿಳಿವಳಿಕೆ ಅಥವಾ ತಂತ್ರಜ್ಞಾನಗಳ ಉಪಯೋಗವಿರುತ್ತದೆ. ಸಮಸ್ಯೆಯನ್ನು ವರ್ಣಿಸುವುದರಲ್ಲಿ ಪರಿಸ್ಫುಟ ಪ್ರತಿಮೆಗಳ ಬಳಕೆಯು ಹೆಚ್ಚಾಗಿ ಪ್ರತಿಕಾತ್ಮಕ ಸಾದೃಶ್ಯದ ಗುಣಲಕ್ಷಣವಾಗಿದೆ. ಕಲ್ಪನಾತ್ಮಕ ಸಾದೃಶ್ಯದಲ್ಲಿ ವ್ಯಕ್ತಿ ಕಲ್ಪನೆಯಲ್ಲಿ ಪ್ರವೇಶ ಪಡೆದು ಸಮಸ್ಯೆಗೆ ಆದರ್ಶಮಯ ಪರಿಹಾರಗಳನ್ನು ಉತ್ಪಾದಿಸುತ್ತಾನೆ. ಪ್ರಾಯಶಃ ಈ ನಾಲ್ಕು ಸಾದೃಶ್ಯ ಕಾರ್ಯ ವ್ಯವಸ್ಥೆಗಳನ್ನು ಪ್ರತಿಯೊಬ್ಬರೂ ಬೇರೆ ಬೇರೆ ಮಟ್ಟಗಳಲ್ಲಿ ಅನುಭವಿಸಿ ಇರುತ್ತಾರೆ. ವೈವಿಧ್ಯಮಯ ಚಿಂತನೆ ಬೆಳೆಸಲು ಇವು ಉತ್ತಮವಾಗಿವೆ. ಸಿನೆಟಿಕ್ಸ್ ಬೋಧನಾ ಮಾದರಿಯನ್ನು ವಿದ್ಯಾರ್ಥಿಗಳ ಸೃಜನಾತ್ಮಕತೆಯನ್ನು ಅಭಿವೃದ್ಧಿಪಡಿಸುವ

Digitised by Bharatavani, CIIL

ಸಲುವಾಗಿ ಅನೇಕ ಶಾಲಾ ತರಗತಿಗಳಲ್ಲಿ ಬಳಸಲಾಗುತ್ತದೆ. ನಮ್ಮ ದೇಶದ ಕೆಲವು ಶಿಕ್ಷಕ–ಶಿಕ್ಷಣ ಪಠ್ಯಕ್ರಮದಲ್ಲಿ ಕೂಡ ಇದು ಸ್ಥಾನ ಪಡೆದಿದೆ. ಈಗ ಸಿನೆಟಿಕ್ಸ್‌ನ್ನು ಗುಂಪು ಐಡಿಯಾ ಉತ್ಪಾದನೆಯನ್ನು ಬೆಂಬಲಿಸುವ ಸಲುವಾಗಿ ಗುಂಪು ಬೆಂಬಲಿತ ವ್ಯವಸ್ಥೆಗಳಲ್ಲಿ(ಗ್ರೂಪ್ ಸಪೋರ್ಟ್ ಸಿಸ್ಟಮ್ಸ್–ಜಿಎಸ್‌ಎಸ್) ವಿದ್ಯುನ್ಮಾನದ ಮೂಲಕ ಬಳಸಲಾಗುತ್ತಿದೆ.

**ಡೆ ಬೊನೊವಿನ ಸೃಜನಾತ್ಮಕತೆಯ ಕಾರ್ಯ ವಿಧಾನ– ಪಿಎಮ್‌ಐ:**

ಅನೇಕ ಮಂದಿ ಡೆ ಬೊನೊವಿನ ಕಾರ್ಯ ವಿಧಾನವನ್ನು (1982, 1985) ಒಂದು ವಿಧದ ಮಿದುಳುದಾಳಿಯನ್ನಾಗಿ ಪರಿಗಣಿಸುತ್ತಾರೆ. ಪಿಎಮ್‌ಐ ದಲ್ಲಿ 'ಪಿ' ಪದವು ಪ್ಲಸ್ ಅಂಶಗಳಿಗೆ ಅಥವಾ ಉತ್ತಮ ಅಂಶಗಳಿಗೆ, 'ಎಂ' ಪದವು ಮೈನಸ್ ಅಥವಾ ಕೆಟ್ಟ ಅಂಶಗಳಿಗೆ, ಮತ್ತು 'ಐ' ಪದವು ಇಂಟರೆಸ್ಟಿಂಗ್(ಆಸಕ್ತಿದಾಯಕ) ಅಂಶಗಳಿಗೆ ಇರುತ್ತವೆ. ಮಿದುಳುದಾಳಿಗೆ ವ್ಯತಿರಿಕ್ತವಾಗಿ ಪಿಎಮ್‌ಐ ಯಲ್ಲಿ ಅಗತ್ಯವಿರುವುದು ಭಾಗಿಗಳು ಉದ್ದೇಶಪೂರ್ವಕವಾಗಿ ಧನಾತ್ಮಕ(ಪ್ಲಸ್), ಋಣಾತ್ಮಕ(ಮೈನಸ್) ಮತ್ತು ಆಸಕ್ತಿದಾಯಕ(ಇಂಟರೆಸ್ಟಿಂಗ್) ಅಂಶಗಳ ಮಿದುಳುಧಾಳಿಯನ್ನು ನಡೆಸುವುದು. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ಪಿಎಮ್‌ಐನಲ್ಲಿ ಮೂರು ಪ್ರತ್ಯೇಕ ಮಿದುಳುಧಾಳಿಗಳು ಅಳವಡಿಕೆಯಾಗಿವೆ. ಡೆ ಬೊನೊವಿನ ಪಿಎಮ್‌ಐ ಯು ಒಂದು ವಿಧದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಅಭಿಪ್ರಾಯಗಳಿಗೆ ಬೆಂಬಲ ನೀಡುವ ವಾಡಿಕೆಯ ಯೋಚನಾ ವಿಧಾನದಿಂದ ಜನರನ್ನು ಹೊರತರಲು ನೆರವನ್ನು ನೀಡುತ್ತದೆ. ಈ ಅಭಿಪ್ರಾಯಗಳು ಪ್ರಭಾವಗಳು, ಪೂರ್ವಗ್ರಹಗಳು ಅಥವಾ ಸಂಪ್ರದಾಯಗಳನ್ನು ಆಧರಿಸಿ ರೂಪುಗೊಂಡಿದ್ದು, ಇವುಗಳು ಅನೇಕ ಬಾರಿ ಸೃಜನಾತ್ಮಕ ಚಿಂತನೆಗೆ ಅಡ್ಡಿಗಳಾಗಿ ಕಾರ್ಯನಿರ್ವಹಿಸುತ್ತವೆ. ಪಿಎಮ್‌ಐ ಯನ್ನು ವಿದ್ಯುನ್ಮಾನದ ಮೂಲಕ ಜಿಎಸ್‌ಎಸ್ ನಲ್ಲಿಯೂ ವಿದ್ಯುನ್ಮಾನ ಮಿದುಳುದಾಳಿಗೆ ಪೂರಕವಾಗಿ ಕೂಡ ಬಳಸಿಕೊಳ್ಳಲಾಗುತ್ತದೆ. ಸೂ(1996) ಬರೆಯುತ್ತಾರೆ, 'ಸಂಸ್ಥೆಗಳ ಸೃಜನಾತ್ಮಕ ಸಾಮರ್ಥ್ಯದ ಬೀಗ ತೆಗೆಯಲು ತಂತ್ರಜ್ಞಾನವು ಕೀಲಿಕೈ ಆಗಬಹುದು. ಮುಖತಃ ವಾತಾವರಣದ ದಿಗಂತ ಮತ್ತು ಮೌಖಿಕ ಮಿದುಳುದಾಳಿಯನ್ನು ದಾಟಿ ಗುಂಪು ಸೃಜನಾತ್ಮಕತೆಯನ್ನು ವಿಸ್ತರಿಸಲು ಅಗತ್ಯವಿರುವ ಉಪಕರಣಗಳು ಮತ್ತು ಅರ್ಹತೆಗಳನ್ನು ತಂತ್ರಜ್ಞಾನದ ಮುನ್ನಡೆಗಳು ಒದಗಿಸಿಕೊಟ್ಟಿವೆ. ಸಂಸ್ಥೆಗಳ ಸೃಜನಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸಲು ಈ ಮುನ್ನಡೆಯ ತಂತ್ರಜ್ಞಾನಗಳು ಒದಗಿಸಿರುವಂತಹ ಅವಕಾಶಗಳನ್ನು ಕೈಗೆತ್ತಿಕೊಳ್ಳುವ ಸಮಯ ಬಂದಿದೆ.'(ಪುಟ: 292).

**ಡೆ ಬೊನೊವಿನ ಅರಿವಿನ ಸಂಶೋಧನಾ ವಿಶ್ವಸ್ಥದ ಕಾರ್ಯಕ್ರಮಗಳು:**

(ಕಾಗ್ನಿಟಿವ್ ರಿಸರ್ಚ್ ಟ್ರಸ್ಟ್ ಪ್ರೊಗ್ರಾಮ್–ಸಿಒಆರ್‌ಟಿ)

ಕಾಗ್ನಿಟಿವ್ ರೀಸರ್ಚ್ ಟ್ರಸ್ಟ್ ಎನ್ನುವುದು ಡೆ ಬೊನೊ ಸ್ಥಾಪಿಸಿದ ಬ್ರಿಟಿಷ್ ಸಂಸ್ಥೆಯಾಗಿದೆ. ಸಿಒಆರ್‌ಟಿ ಕಾರ್ಯಕ್ರಮದಲ್ಲಿ ಆರು ಘಟಕಗಳು(ಯುನಿಟ್) ಇವೆ. ಪ್ರತಿಯೊಂದು ಘಟಕದಲ್ಲಿ ಹಲವು ಪಾಠಗಳು ಇವೆ. ಸಿಒಆರ್‌ಟಿ ಯ ನಾಲ್ಕನೆಯ ಘಟಕವು ಸೃಜನಾತ್ಮಕತೆಗೆ ಸಂಬಂಧಿಸಿದೆ. ಈ ಘಟಕದಲ್ಲಿರುವ ಪಾಠಗಳಲ್ಲಿ ಐಡಿಯಾಗಳ ಉತ್ಪಾದನೆಗೆ ನೆರವಾಗಬಲ್ಲ ಅನೇಕ ಯೋಜನಾ ನೀತಿಗಳು ಇವೆ. ಈ ಪಾಠಗಳು ಸಮಸ್ಯೆ ಪರಿಹಾರಕ್ಕೆ ರಚನಾತ್ಮಕ ಪ್ರವೇಶ್ಯವನ್ನು ಪ್ರಸ್ತುತಪಡಿಸುತ್ತದೆ. ಇದು ಕೆಲವು ನಿರ್ದಿಷ್ಟ ಕಾರ್ಯಾಚರಣೆಗಳ ಉಪಯೋಗವನ್ನು ಪಡೆಯುತ್ತದೆ. ಈ ಕಾರ್ಯಾಚರಣೆಗಳು ವಿಭಿನ್ನ ಸಾಧ್ಯತೆಗಳು ಮತ್ತು ಪರಿಪ್ರೇಕ್ಷ್ಯಗಳನ್ನು ಪರಿಗಣಿಸುವ ಸಲುವಾಗಿ ಪ್ರತಿಯೊಂದು ಪಾಠದ ಸಂದರ್ಭದ ಕುರಿತಾಗಿ ವ್ಯಕ್ತಿ ನಿರ್ದಿಷ್ಟ ಪ್ರಶ್ನೆಗಳನ್ನು ಕೇಳುವುದನ್ನು ಬಯಸುತ್ತವೆ. ಸಿಒಆರ್‌ಟಿ ಯ ಕಾರ್ಯಕ್ರಮ ವಿವರಗಳನ್ನು ಡೆ ಬೊನೊವಿನ ಕಾರ್ಯದಲ್ಲಿ ನೀಡಲಾಗಿದೆ(1973).

**ಗುಂಪು ಬೆಂಬಲಿತ ವ್ಯವಸ್ಥೆಗಳು:**

ವಿದ್ಯುನ್ಮಾನ ತಂತ್ರಜ್ಞಾನದ ಝೇಂಕಾರವು ಪ್ರತಿಯೊಂದು ಸಂಸ್ಥೆಯಲ್ಲಿ ಗಣಕಯಂತ್ರಗಳನ್ನು ಸರ್ವತ್ರ ಮತ್ತು ಅನಿವಾರ್ಯವಾಗಿಸಿದೆ. ಜಿಎಸ್‌ಎಸ್ ದೊಡ್ಡ ಪ್ರಮಾಣದಲ್ಲಿ ಗೋಚರವಾಗಲಿದೆ. ಇವುಗಳು ವಿದ್ಯುನ್ಮಾನ ವ್ಯವಸ್ಥೆಗಳಾಗಿದ್ದು ಗುಂಪು ಕಾರ್ಯವನ್ನು ಬೆಂಬಲಿಸುವ ಗುರಿಯನ್ನು ಹೊಂದಿವೆ. ಡೇಸಾಂಟಿಕ್ಸ್ ಮತ್ತು ಗಾಲ್ಲೊಪೆ(1987)ಯ ಮಾತಿನಲ್ಲಿ ಹೇಳುವುದಾದರೆ, 'ಜಿಎಸ್‌ಎಸ್ ಎಂದರೆ ಪರಸ್ಪರ ಕಾರ್ಯ ನಿರ್ವಹಣೆ ಇರುವ ಗಣಕಯಂತ್ರ–ಆಧಾರಿತ ವ್ಯವಸ್ಥೆಯಾಗಿದೆ. ಇದರಲ್ಲಿ ಗುಂಪು ಸಭೆಗಳಲ್ಲಿನ ಸಮಸ್ಯೆಯ ರೂಪಣೆ ಮತ್ತು ಪರಿಹಾರಕ್ಕೆ ಬೆಂಬಲ ನೀಡುವುದಕ್ಕಾಗಿ ಸಂಪರ್ಕ ವ್ಯವಸ್ಥೆ, ಗಣಕಯಂತ್ರ ಮತ್ತು ನಿರ್ಣಯ ತಂತ್ರಜ್ಞಾನಗಳು ಸಂಯೋಜನೆ ಹೊಂದಿರುತ್ತವೆ'(ಪುಟ: 589). ಜಿಎಸ್‌ಎಸ್‌ನ ಪ್ರಮುಖ ಉದ್ದೇಶವೇನೆಂದರೆ, ಗುಂಪಿನ ಒಳಗೆ ಅಭಿಪ್ರಾಯಗಳು, ಐಡಿಯಾಗಳು, ಭವಿಷ್ಯ ಸೂಚನೆಗಳು ಮತ್ತು ಆದ್ಯತೆಗಳನ್ನು ಬೆಂಬಲಿಸುವುದು ಮತ್ತು ಬಲಪಡಿಸುವುದಾಗಿದೆ. ಹೆಚ್ಚು ಕಡಿಮೆ ಮಿದುಳುದಾಳಿಯು ಅತ್ಯಂತ ಜನಪ್ರಿಯ ಸೃಜನಾತ್ಮಕತೆ ತಂತ್ರ ವಿಧಾನವಾಗಿದ್ದು, ಜಿಎಸ್‌ಎಸ್‌ನಲ್ಲಿನ ಐಡಿಯ ಉತ್ಪಾದನಾ ಮಾನಗಳು ಸಂಪುರ್ಣವಾಗಿ ಇದನ್ನು ಆಧರಿಸಿ ಇವೆ. ಜಿಎಸ್‌ಎಸ್‌ನ ಗುಂಪು ಕಾರ್ಯವು ಐಡಿಯಾಗಳ ಉತ್ಪಾದನೆ, ಆಯ್ಕೆ, ತೀರ್ಮಾನ ಮತ್ತು ಅವುಗಳನ್ನು ಕಾರ್ಯಾಗತಗೊಳಿಸಲು ಕರೆ ನೀಡುತ್ತದೆ. ಸೂ(1995) ಅವಲೋಕನ ನಡೆಸಿದಂತೆ, 'ಜಿಎಸ್‌ಎಸ್‌ನ ಗುರಿಯು ತಡೆಗಳನ್ನು ನಿವಾರಿಸಿ, ನಿರ್ಧಾರ ವಿಶ್ಲೇಷಣೆಯನ್ನು ಬಲಪಡಿಸಲು ತಂತ್ರ ವಿಧಾನಗಳನ್ನು ಒದಗಿಸಿ, ಚರ್ಚೆಯ ವಿನ್ಯಾಸ, ಸಮಯ ಅಥವಾ ವಿಷಯವನ್ನು ವ್ಯವಸ್ಥಿತವಾಗಿ ನಿರ್ದೇಶಿಸುವುದರ ಮೂಲಕ ಗುಂಪು ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಸುಧಾರಣೆಯನ್ನು ತರುವುದು.

Digitised by Bharatavani, CIIL

**ಸೃಜನಾತ್ಮಕತೆಯ ತರಬೇತಿ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಸಾಮಗ್ರಿಗಳು:**

ಈ ವಿಷಯದ ಕುರಿತಾದ ಸಾಹಿತ್ಯವು ತನ್ನ ಗಾತ್ರದಷ್ಟೇ ಕಾಂತಿಯುತವೂ ಆಗಿದೆ. ಆದುದರಿಂದ ಇದರಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಕೆಲವನ್ನು ಈ ಕೆಳಗೆ ಪ್ರಸ್ತುತಪಡಿಸಲಾಗಿದೆ. ಫೆಲ್‌ಡುಸೆನ್ ಮತ್ತು ಕ್ಲಿನ್‌ಕೆನ್‌ಬರ್ಡ್ (1993) ಅವರು ಸೃಜನಾತ್ಮಕ ಬೋಧನೆಯ ಸಾಮಗ್ರಿಗಳನ್ನು ಮತ್ತು ಅವುಗಳ ಯಶಸ್ಸನ್ನು ಅಥವಾ ಅಪಯಶಸ್ಸನ್ನು ವ್ಯಕ್ತಿಗಳು ಸೃಜನಾತ್ಮಕವಾಗಿ ಯೋಚಿಸುವಂತೆ ತರಬೇತಿ ನೀಡುವುದರಲ್ಲಿ ಮರುಪರಿಶೀಲಿಸಿದ್ದಾರೆ. ಮಕ್ಕಳಲ್ಲಿ ಸೃಜನಾತ್ಮಕತೆಯನ್ನು ಉದ್ದೀಪನಗೊಳಿಸಲು ಅತ್ಯಂತ ಪರಿಣಾಮಕಾರಿಯಾದ ವಿಧಾನವೆಂದರೆ ಸಂಕೀರ್ಣ ಮತ್ತು ಜಟಿಲ ತಂತ್ರವಿಧಾನಗಳನ್ನು ಅನುಸರಿಸದೆ, ಸರಳ ಅನುಭವಗಳು ಮತ್ತು ಸಾಮಗ್ರಿಗಳನ್ನು ಬಳಸುವುದು. ಶಿಕ್ಷಕರು ವಸ್ತುಗಳನ್ನು ಹುಡುಕಿ, ಅದನ್ನು ಹೇಗೆ ಬೆಳೆಸಿಕೊಂಡಿರಬೇಕೆಂದರೆ, ಅದು ವಿದ್ಯಾರ್ಥಿಗಳಲ್ಲಿ ವಿಸ್ಮಯವನ್ನು ಉಂಟು ಮಾಡುವ ಸಾಮರ್ಥ್ಯ ಹೊಂದಿರಬೇಕು, ಹೊಸ ಪರಿಪ್ರೇಕ್ಷಕ್ಕೆ ಅವರನ್ನು ಎಚ್ಚರಿಸುವಂತಿರಬೇಕು, ವಿಭಿನ್ನ ವಿಧದ ಗ್ರಹಿಕೆ, ಚಿಂತನೆ ಮತ್ತು ಕಲಿಕೆಯಿಂದ ಅವರನ್ನು ಬೆಚ್ಚಿಬೀಳಿಸಬೇಕು ಮತ್ತು ಅವರಿಗೆ ಸಂತೋಷವನ್ನು ಉಂಟು ಮಾಡಬೇಕು.

ಭಾರತದಲ್ಲಿ ಭಾಸ್ಕರ(1990) ಅವರು ಸೃಜನಾತ್ಮಕ ತರಬೇತಿ ಸಾಮಗ್ರಿಗಳನ್ನು ಕನ್ನಡ ಭಾಷೆಯಲ್ಲಿ ಅಭಿವೃದ್ಧಿ ಪಡಿಸಿದ್ದಾರೆ. ಈ ಸಾಮಗ್ರಿಗಳ ಗುರಿಯು ಸೃಜನಾತ್ಮಕ ಚಿಂತನಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದಾಗಿದೆ. ಉದಾಹರಣೆಗೆ ನಿರರ್ಗಳತೆ, ನಮ್ಯತೆ, ಸ್ವಂತಿಕೆ ಮತ್ತು ಮರುವ್ಯಾಖ್ಯಾನ. ಈ ಸಂಚಯದಲ್ಲಿ ಎಂಟು ಘಟಕಗಳು ಇವೆ. ಅವುಗಳೆಂದರೆ:

1. ಪರಿಣಾಮಗಳ ಸನ್ನಿವೇಶ (ಕಾಲ ಹಿಂದೆ ಸರಿಯುವುದಾದರೆ, ಏನಾಗಬಹುದು?)
2. ಒಗಟುಗಳು (ಗಡಿಯಾರದಲ್ಲಿ 6 ಗಂಟೆ ತೋರಿಸಲು/ ಗಂಟೆಗಳನ್ನು ಬಾರಿಸಲು 30 ಸೆಕೆಂಡುಗಳು ಹಿಡಿದರೆ, ಅದು 12 ಗಂಟೆ ತೋರಿಸುವಾಗ/ಗಂಟೆಗಳನ್ನು ಬಾರಿಸಲು ತೆಗೆದುಕೊಳ್ಳುವ ಸಮಯ ಎಷ್ಟು?)
3. ಗಾದೆಗಳು (ಆಪಲ್‌ನ್ನು ಕಚ್ಚಿದಾಗ ಅದರಲ್ಲಿ ಹುಳ ಕಾಣುವುದಕ್ಕಿಂತ ಹೆಚ್ಚಿನ ಕೆಡಕು ಇನ್ನೇನಿರಬಹುದು?)
4. ಅಪಸರಣದ(ಭಿನ್ನ ರೀತಿಯ) ಪ್ರಶ್ನೆಗಳು (ಮುಚ್ಚಳ ತೆಗೆಯುವ ಸಾಧನವಿಲ್ಲದೆ ಡಬ್ಬಿಯೊಂದನ್ನು

ಎಷ್ಟು ವಿಧದಿಂದ ತೆರೆಯಬಹುದು?)

5. ನಿಗೂಢ ವಸ್ತುವಿಷಯಗಳು (ವಿದ್ಯಾರ್ಥಿಗಳಿಗೆ ಕೆಲವು ನಿಗೂಢ ಸನ್ನಿವೇಶಗಳನ್ನು/ಘಟನೆಗಳನ್ನು ನೀಡುವುದು.

   ಅದು ಹೇಗೆ ಸಂಭವಿಸಿತೆಂದು ಅವರು ಹೇಳಬೇಕು.)
6. ಕಥೆ ಬರೆಯುವುದು (ವಿದ್ಯಾರ್ಥಿಗಳು ಕತೆಯೊಂದಕ್ಕೆ ಅಪರೂಪದ ಶೀರ್ಷಿಕೆಗಳನ್ನು ಸೂಚಿಸಬೇಕು

ಅಥವಾ ಅಪೂರ್ಣ ಕತೆಯೊಂದನ್ನು ಸಂಪೂರ್ಣಗೊಳಿಸಬೇಕು ಇತ್ಯಾದಿ.)

7. ಕವಿತೆಯ ರಚನೆ (ವಿದ್ಯಾರ್ಥಿಗಳು ಕವಿತೆಯೊಂದಕ್ಕೆ ಅಪರೂಪದ ಶೀರ್ಷಿಕೆಗಳನ್ನು ಸೂಚಿಸಬೇಕು ಅಥವಾ

   ಅಪೂರ್ಣ ಕವಿತೆಯನ್ನು ಸಂಪೂರ್ಣಗೊಳಿಸಬೇಕು ಅಥವಾ ಸೂಚಿತ ಐಡಿಯಾ ಅಥವಾ ಶಿರೋನಾಮೆಯಲ್ಲಿ

   ಕವಿತೆ ಬರೆಯಬೇಕು)
8. ಗಾದೆಗಳ ರಚನೆ (ವಿದ್ಯಾರ್ಥಿಗಳು ಅಪೂರ್ಣ ಗಾದೆಗಳನ್ನು ಸಂಪೂರ್ಣಗೊಳಿಸಬೇಕು ಅಥವಾ ನೀಡಿದ ಕೆಲವು ಸುಳಿವುಗಳನ್ನು ಆಧರಿಸಿ ಗಾದೆಗಳನ್ನು ರಚಿಸಬೇಕು.)

ನಿರ್‌ಪಾರಕೆ(1978) ಅವರು ಕೆಲವು ಯೋಜನಾ ತಂತ್ರಗಳನ್ನು ಮತ್ತು ತರಬೇತಿ ಸಾಮಗ್ರಿಗಳನ್ನು ಅವಲೋಕನ, ವಿಚಾರಣೆ ಮತ್ತು ಅಭಿಸಾರಣ ಉತ್ಪಾದನೆಯಲ್ಲಿ ಮಕ್ಕಳಿಗೆ ತರಬೇತಿ ನೀಡುವ ಸಲುವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಈ ಸಾಮಗ್ರಿಗಳ ಉದ್ದೇಶ ಸೃಜನಾತ್ಮಕ ಚಿಂತನಾ ಸಾಮರ್ಥ್ಯಗಳಾದ ನಿರರ್ಗಳತೆ, ನಮ್ಯತೆ ಮತ್ತು ಸ್ವಂತಿಕೆಯನ್ನು ಬೆಳೆಸುವುದಾಗಿದೆ. ಈ ಸಾಮಗ್ರಿಗಳು ಸಂವೇದನಾತ್ಮಕ ತರಬೇತಿ, ಅವಲೋಕನ, ಪಟ್ಟಿ ಮಾಡುವಿಕೆ, ವರ್ಗೀಕರಣ, ಅನುಪ್ರಾಸ, ಕಥೆ ಬರೆಯುವುದು, ಒಂದೇ ವಿಧದ ಸಾಮಾನ್ಯ ವಸ್ತುಗಳ ಬಹುವಿಧದ ಉಪಯುಕ್ತತೆಯನ್ನು ಸೂಚಿಸುವುದು ಮತ್ತು ಏನಾದರೂ ಹೊಸತನ್ನು ಕಂಡುಹಿಡಿಯುವುದನ್ನು ಕೇಂದ್ರವಾಗಿಟ್ಟುಕೊಂಡಿದೆ.

**ಪರ್‌ಡ್ಯೂ ಸೃಜನಾತ್ಮಕ ಚಿಂತನಾ ಕಾರ್ಯಕ್ರಮ(ಪಿಸಿಟಿಪಿ):**

ಪರ್‌ಡ್ಯೂ ಸೃಜನಾತ್ಮಕ ಚಿಂತನಾ ಕಾರ್ಯಕ್ರಮವು (ಫೆಲ್‌ಡುಸೆನ್ ಮತ್ತು ಇತರರು, 1969) 3 ರಿಂದ 6 ನೇ ಗ್ರೇಡ್‌ವರೆಗಿನ ಮಕ್ಕಳಿಗಾಗಿ ವಿನ್ಯಾಸಗೊಳಿಸಿದ 28 ಪಾಠಗಳನ್ನು ಒಳಗೊಂಡಿರುವ ರೇಡಿಯೋ ಕಾರ್ಯಕ್ರಮವಾಗಿದೆ. ಇಲ್ಲಿ ಪ್ರತಿಯೊಂದು ಪಾಠದಲ್ಲಿ 3 ಭಾಗಗಳು ಇವೆ. ಮೊದಲ ಭಾಗದಲ್ಲಿ ಸೃಜನಾತ್ಮಕ ಚಿಂತನೆಯನ್ನು ಸುಧಾರಿಸಲು ಒಂದು ನಿಯಮದ ಅಥವಾ ಐಡಿಯಾದ ಪ್ರಸ್ತುತಿ ಇರುತ್ತದೆ. ಎರಡನೆಯ ಭಾಗದಲ್ಲಿ ಮಾಧ್ಯಮ ವೃತ್ತಿಪರರು ರಚಿಸಿದ ಪ್ರಸಿದ್ಧ ವ್ಯಕ್ತಿಗಳ/ಘಟನೆಗಳ ಕುರಿತಾದ, ಉದಾಹರಣೆಗೆ ಕೊಲಂಬಸ್, ಲಿಂಕನ್, ಸಾಮ್ಯುಯೆಲ್ ಮೊರ್ಸ್. ಪೊಲಿಯೋ ಲಸಿಕೆ, ಅಂತರಿಕ್ಷ ಉಡಾವಣೆ ಇತ್ಯಾದಿಗಳ 10 ರಿಂದ 12 ನಿಮಿಷಗಳ ಪ್ರಸ್ತುತಿ ಇರುತ್ತದೆ. ಪ್ರಸ್ತುತಿಯಲ್ಲಿ ಅಳವಡಿಕೆಯಾಗಿರುವ ಹಿನ್ನೆಲೆ ಸಂಗೀತ ಮತ್ತು ವಿಶೇಷ ಧ್ವನಿ ಪರಿಣಾಮಗಳು ಮಕ್ಕಳ ಕಲ್ಪನೆಯನ್ನು ಪ್ರಚೋದಿಸಲು ನೆರವಾಗುತ್ತವೆ. ಪಾಠದ ಮೂರನೆಯ ಭಾಗವು ಪಾಠವನ್ನು ಆಧರಿಸಿದ ಮೂರು ಅಥವಾ ನಾಲ್ಕು ಮುದ್ರಿತ ಅಭ್ಯಾಸಗಳನ್ನು ಹೊಂದಿದ್ದು, ಒಂದು

Digitised by Bharatavani, CIIL

ಸರಿಯಾದ ಉತ್ತರಕ್ಕಿಂತ ಹಲವು ಪರಿಹಾರಗಳನ್ನು ನಿರೀಕ್ಷಿಸುವ ರೀತಿಯದ್ದಾಗಿವೆ. ಪಿಸಿಟಿಪಿಯ ಗುರಿಯು ನಾಲ್ಕು ಮುಖ್ಯವಾದ ಸೃಜನಾತ್ಮಕ ಚಿಂತನೆಯ ಸಾಮರ್ಥ್ಯಗಳನ್ನು ಬೆಳೆಸುವುದಾಗಿದೆ. ಅವುಗಳೆಂದರೆ ನಿರರ್ಗಳತೆ, ನಮ್ಯತೆ, ಸ್ವಂತಿಕೆ ಮತ್ತು ವಿವರಣೆ, ವಿಸ್ತರಣೆ.

ಈ ಕಾರ್ಯಕ್ರಮವನ್ನು ಇಂಡಿಯಾನಾ ಶಾಲೆಗಳಲ್ಲಿ ವಾರದಲ್ಲಿ ಅನೇಕ ಬಾರಿ, ಅನೇಕ ವರ್ಷಗಳ ಕಾಲ ಪ್ರಸಾರ ಮಾಡಲಾಗಿತ್ತು. ಪಿಸಿಟಿಪಿ ಯ ಅಂತಿಮ ಗುರಿಯು ಮಕ್ಕಳಲ್ಲಿ ಸೃಜನಾತ್ಮಕ ಚಿಂತನೆಯನ್ನು ಬೆಳೆಸುವ ವಿಧಾನಗಳ ಕುರಿತು ಶಿಕ್ಷಕರಿಗೆ ಕಲಿಸುವುದಾಗಿದೆ. ಈ ಕಾರ್ಯಕ್ರಮವು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಉತ್ಕೃಷ್ಟತೆಗಾಗಿ ಯುಎಸ್‌ಎಯ ರಾಷ್ಟ್ರೀಯ ಶೈಕ್ಷಣಿಕ ಪ್ರಸಾರ ಸಂಘ ಸ್ಥಾಪಿಸಿದ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

**ಉತ್ಪಾದಕ ಚಿಂತನೆಯ ಕಾರ್ಯಕ್ರಮ(ಪಿಟಿಪಿ):**

ಉತ್ಪಾದಕ ಚಿಂತನೆಯ ಕಾರ್ಯಕ್ರಮವು ಸ್ವ-ಬೋಧನೆಯ ಕಾರ್ಯಕ್ರಮವಾಗಿದೆ(ಕೊವಿಂಗ್‌ಟನ್ ಮತ್ತು ಕ್ರಚ್‌ಫೀಲ್ಡ್, 1965; ಕೊವಿಂಗ್‌ಟನ್, ಕ್ರಚ್‌ಫೀಲ್ಡ್, ಮತ್ತು ಡೇವಿಸ್, 1966; ಕೊವಿಂಗ್‌ಟನ್, ಕ್ರಚ್‌ಫೀಲ್ಡ್, ಡೇವಿಸ್ ಮತ್ತು ಒಲ್‌ಟೆನ್, 1972) ಇದರಲ್ಲಿ 5 ಮತ್ತು 6ನೇ ಗ್ರೇಡಿನ ಮಕ್ಕಳಲ್ಲಿ ಸಾಮಾನ್ಯ ಸೃಜನಾತ್ಮಕ ಸಮಸ್ಯೆ-ಪರಿಹಾರದ ಸಾಮರ್ಥ್ಯಗಳನ್ನು ಬೆಳೆಸುವ 16 ಕಾರ್ಯಕ್ರಮಗಳಾಗಿ ರೂಪಿಸಲಾದ ಬೋಧನಾ ಕಿರು ಹೊತ್ತಗೆಗಳು ಇವೆ. ಇವುಗಳನ್ನು ಕಾರ್ಟೂನ್ ಪಾತ್ರಗಳಾದ ಜಿಮ್ ಮತ್ತು ಲಿಲಾ(ವಿದ್ಯಾರ್ಥಿಗಳು) ಮತ್ತು ಮಿಸ್ಟರ್ ಸರ್ಚ್(ವಿಜ್ಞಾನ ಮೇಷ್ಟ್ರು) ಮೂಲಕ ನಿಗೂಢ ಕಥಾರೂಪದಲ್ಲಿ ಪ್ರಸ್ತುತಪಡಿಸಲಾಗಿದೆ. ಪ್ರತಿಯೊಂದು ಪಾಠದಲ್ಲಿ ಒಗಟಿನ ಸನ್ನಿವೇಶಗಳ ಗುರುತಿಸುವಿಕೆ, ಪ್ರಶ್ನೆಗಳ ಕೇಳುವಿಕೆ, ಉನ್ನತ ಮಟ್ಟದ ಐಡಿಯಾಗಳ ಉತ್ಪಾದನೆ, ಈ ಐಡಿಯಾಗಳ ಮೌಲ್ಯ ನಿರ್ಣಯ ಮತ್ತು ಹೊಸ ವಿಧದ ಸಮಸ್ಯಾ ಪರಿಹಾರಗಳು ಇವೆ. ಈಗ ಪಿಟಿಪಿಯ ಪರಿಷ್ಕೃತ ಪ್ರತಿ ಲಭ್ಯವಿದ್ದು ಇದರಲ್ಲಿ ವಾರಕ್ಕೊಮ್ಮೆ ಬಳಸಲು 15 ಪಾಠಗಳು ಇವೆ. ಈ ಕಾರ್ಯಕ್ರಮದ ಗುರಿ ವ್ಯಕ್ತಿಯೊಬ್ಬನ ಐಡಿಯಾಗಳನ್ನು, ಅದರಲ್ಲೂ ವಿಶೇಷವಾಗಿ ಅಪರೂಪದ ಐಡಿಯಾಗಳ ಉತ್ಪಾದನೆಯನ್ನು ಹೆಚ್ಚಿಸುವುದು.

**ಸೃಜನಾತ್ಮಕ ಸಮಸ್ಯೆ-ಪರಿಹಾರ ಮಾರ್ಗ:**

ಈ ಮಾರ್ಗದಲ್ಲಿ ಐದು ಮುಖ್ಯ ಹೆಜ್ಜೆಗಳು ಇವೆ. ಅವುಗಳೆಂದರೆ, ವಾಸ್ತವಾಂಶವನ್ನು ಕಂಡುಕೊಳ್ಳುವುದು, ಸಮಸ್ಯೆಯನ್ನು ಕಂಡುಕೊಳ್ಳುವುದು, ಐಡಿಯಾ ಕಂಡುಕೊಳ್ಳುವುದು, ಪರಿಹಾರ ಕಂಡುಕೊಳ್ಳುವುದು ಮತ್ತು ಸ್ವೀಕೃತಿಯನ್ನು ಕಂಡುಕೊಳ್ಳುವುದು. ಸೃಜನಾತ್ಮಕ ಕಾರ್ಯವಿಧಾನದ ಮುಖ್ಯ ಘಟಕಗಳು ಮಿದುಳುದಾಳಿ ಮತ್ತು ತೀರ್ಮಾನ. ಸೃಜನಾತ್ಮಕ ಸಮಸ್ಯೆ-ಪರಿಹಾರ ಸಂಸ್ಥೆಗಳು ಮತ್ತು ವಿವಿಧ ಕಾಲಾವಧಿಯ ಅನೇಕ ವಿಧದ ಕೋರ್ಸ್‌ಗಳು ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಬಹು ವಿಸ್ತಾರವಾದ ವಯೋಮಾನ ಗುಂಪುಗಳಿಗೆ ಅನ್ವಯಗೊಳ್ಳುತ್ತವೆ. ಇವುಗಳು ಕಳೆದ ಹಲವು ವರ್ಷಗಳಿಂದ ಪ್ರೋತ್ಸಾಹದಾಯಕ ಫಲಿತಾಂಶಗಳನ್ನು ನೀಡಿವೆ ಮತ್ತು ಇದರಿಂದ ಬಹಳ ವಿದ್ಯಾರ್ಥಿಗಳಿಗೆ ಕಾಲೇಜು ಕೋರ್ಸ್‌ಗಳಲ್ಲಿ ನೆರವು ದೊರೆಯುವುದರೊಂದಿಗೆ, ಅವರು ತಮ್ಮ ಸೃಜನಾತ್ಮಕತೆಯಲ್ಲಿ ದೊಡ್ಡ ಪ್ರಮಾಣದ ಲಾಭ ಹೊಂದಿದ್ದಾರೆ ಎಂಬುದಾಗಿ ಅವರು ವರದಿ ಮಾಡಿದ್ದಾರೆ. ಈ ಕೋರ್ಸ್‌ಗಳ ವಿವರಗಳು ದಿ ಗೈಡ್ ಟು ಕ್ರಿಯೇಟಿವ್ ಆಕ್ಷನ್(ಪಾರ್ನೆಸ್ ಮತ್ತು ಇತರರು, 1977) ಮತ್ತು ದಿ ಕ್ರಿಯೇಟಿವ್ ಆಕ್ಷನ್-ಬುಕ್(ನೊಲ್ಲರ್ ಮತ್ತು ಇತರರು, 1977) ನಲ್ಲಿ ಇವೆ.

**ಇಮಾಜಿ/ಕುಶಲ ಕಲಾ ಸಾಮಾಗ್ರಿಗಳು ಮತ್ತು ಐಡಿಯಾ ಗ್ರಂಥಗಳು:**

ಇಮಾಜಿ/ಕುಶಲ ಕಲಾ ಸಾಮಗ್ರಿಗಳ ಹಿನ್ನೆಲೆಯಲ್ಲಿ ಐಡಿಯಾಗಳನ್ನು ಬೆಳೆಸಿದವರು ಕನ್ನಿಂಗ್‌ಟನ್ ಮತ್ತು ಟಾರೆನ್ಸ್(1965). ಇವರು ಸೃಜನಾತ್ಮಕ ಕಾರ್ಯವಿಧಾನದ ಸುಗಮತೆಗೆ ಒತ್ತಾಸೆಯಾಗುವ ಪರಿಸ್ಥಿತಿಗಳು ಮತ್ತು ಪ್ರಚೋದನೆಗಳಿಗೆ ವಿಶೇಷ ಗಮನವನ್ನು ನೀಡಿದ್ದಾರೆ. ಈ ಸಾಮಗ್ರಿಯ ಅಗತ್ಯದಲ್ಲಿ ಇರುವುದು ಪ್ರತಿಯೊಂದು ಮಗು ಕತೆ, ಚಿತ್ರಕಲೆ ಇತ್ಯಾದಿಗಳನ್ನು ಉತ್ಪಾದಿಸುವುದು ಅಥವಾ ಅದರೊಂದಿಗೆ ಏನಾದರೂ ಮಾಡುವುದು. ಇದು ವಿಶೇಷ ಪರಿಣಾಮಗಳೊಂದಿಗೆ, ವಿಜ್ಞಾನ ಮತ್ತು ಸಂಶೋಧನೆ, ಚಾರಿತ್ರಿಕ ಸಾಧನೆಗಳು, ಭೌಗೋಳಿಕ ಪರಿಶೋಧನೆ ಮತ್ತು ಫಾಂಟಸಿಯನ್ನು ಒಳಗೊಂಡು, ನಾಟಕದ ರೂಪದ ದಾಖಲೀಕರಣದ ರೂಪವನ್ನು ತಾಳಿದೆ. ಈ ಸಾಮಗ್ರಿಗಳು ನಾಲ್ಕನೆಯ ಗ್ರೇಡಿನ ಪಠ್ಯಕ್ರಮದೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದಿದೆ. ಶಿಕ್ಷಕರಿಗೆ ಲಭ್ಯವಾಗುವಂತೆ ಹಲವಾರು ಸೃಜನಾತ್ಮಕ ಚಿಂತನಾ ಅನುಭವಗಳನ್ನು ಯೋಜಿಸುವ ಮತ್ತು ಒದಗಿಸುವ ಅನೇಕ ಉತ್ಕೃಷ್ಟ ಐಡಿಯಾಗಳಿರುವ 'ಶಿಕ್ಷಕ ಮಾರ್ಗದರ್ಶಿ'ಯು ಕೂಡ ಶಿಕ್ಷಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

ಮೆಯರ್ಸ್ ಮತ್ತು ಟಾರೆನ್ಸ್(1964) ಅವರಿಂದ ಐಡಿಯಾ ಗ್ರಂಥಗಳು ಬಂದಿವೆ(1964). ಈ ಗ್ರಂಥಗಳಲ್ಲಿ ಸರಳ ಮತ್ತು ಸಂಕೀರ್ಣ ಚಿಂತನಾ ಸಾಮರ್ಥ್ಯಗಳಾದ ಸಮಸ್ಯೆಗಳ ವಿಶ್ಲೇಷಣೆ, ಐಡಿಯಾಗಳ ವಿಸ್ತರಣೆ, ಸಂಶೋಧನಾ ಸಾಧ್ಯತೆಗಳು ಮತ್ತು ಸಂಬಂಧಗಳಲ್ಲಿ ಗಮನವನ್ನು ಕೇಂದ್ರೀಕರಿಸುವುದು-ಇವುಗಳನ್ನು ಬಲಪಡಿಸುವ ಅಭ್ಯಾಸಗಳು ಇವೆ. ಒಂದರಿಂದ ಎಂಟನೆಯ ಗ್ರೇಡ್‌ವರೆಗಿನವರಿಗೆ ಐಡಿಯಾ ಗ್ರಂಥಗಳು ಲಭ್ಯ ಇವೆ. ಸೃಜನಾತ್ಮಕ ತರಬೇತಿಗೆ ಲಭ್ಯವಿರುವ ಸಾಮಗ್ರಿಗಳೆಂದರೆ **'ಒನಾಮಟೋಫಿಯಾ ಅಂಡ್ ಇಮೇಜಸ್'** (ಖಟೇನ, 1969) ಮತ್ತು ಥಿಂಕಿಂಗ್ ಕ್ರಿಯೇಟಿವ್‌ಲಿ ವಿತ್ ಸೌಂಡ್ಸ್ ಅಂಡ್ ವರ್ಡ್ಸ್(ಟಾರೆನ್ಸ್, ಖಟೇನ, ಮತ್ತು ಕನ್ನಿಂಗ್‌ಟನ್, 1973). 'ಒನಾಮಟೋಫಿಯಾ ಅಂಡ್ ಇಮೇಜಸ್' ಇದು ಸ್ವಂತಿಕೆಯ ಪರೀಕ್ಷೆಯಾಗಿದ್ದು ಇದರಲ್ಲಿ ಕೃತ್ಯಾನುಕರಣ ಪದಗಳು ಇವೆ. ಯಾವುದೇ ವಸ್ತು ಅಥವಾ ಕ್ರಿಯೆಯೊಂದಿಗೆ ಸಂಯೋಜನೆ ಹೊಂದಿರುವ ಸಹಜ ಧ್ವನಿಯನ್ನು ಅನುಸಕರಿಸುವ ಪದವೇ ಕೃತ್ಯಾನುಕರಣ ಪದವಾಗಿದೆ. ಉದಾಹರಣೆಗೆ

Digitised by Bharatavani, CIIL

'ಬಜ್ಜ್', 'ಫಿಜ್ಜ್' 'ಜಿಂಗಲ್' ಇತ್ಯಾದಿ ಪದಗಳು. ಪ್ರತಿಯೊಂದು ಪದಕ್ಕೆ ವಿದ್ಯಾರ್ಥಿ ಮುಕ್ತ ಸಂಯೋಜನೆಯ ಪ್ರತಿಕ್ರಿಯೆಗಳನ್ನು ನೀಡುತ್ತಾನೆ. **ಥಿಂಕಿಂಗ್ ಕ್ರಿಯೇಟಿವ್‌ಲಿ: ಎ ಗೈಡ್ ಟು ಟ್ರೇನಿಂಗ್ ಇಮ್ಯಾಜಿನೇಶನ್**(ಡೇವಿಸ್ ಮತ್ತು ಹೌಟ್‌ಮನ್, 1968) ಪುಸ್ತಕವು ನಾಲ್ಕು ಕಾರ್ಟೂನ್ ಪಾತ್ರಗಳ ಹಾಸ್ಯ ಸಂಭಾಷಣೆಗಳಿಂದ ರೂಪುಗೊಂಡಿದೆ. ಈ ಸಾಮಗ್ರಿಗಳು ಆರರಿಂದ ಎಂಟರವರೆಗಿನ ಗ್ರೇಡ್‌ಗಳ ಮಕ್ಕಳ ಬಳಕೆಗಾಗಿ ಇವೆ.

**ಭವಿಷ್ಯದ ಸಮಸ್ಯೆ-ಪರಿಹಾರಾತ್ಮಕ ಕಾರ್ಯಕ್ರಮಗಳು (ಎಫ್‌ಪಿಎಸ್‌ಪಿ):**

ಈ ಕಾರ್ಯಕ್ರಮದ ಪರಿಕಲ್ಪನೆ ಪೌಲ್ ಟಾರೆನ್ಸ್ ಅವರದು. ಇಲ್ಲಿ ವಿದ್ಯಾರ್ಥಿಗಳು ನೈಜ-ಬದುಕಿನ ಸನ್ನಿವೇಶಗಳಲ್ಲಿ ಭವಿಷ್ಯದ ದೃಶ್ಯವನ್ನು ಕಾಣುತ್ತಾ, ತಾವು ಭವಿಷ್ಯದಲ್ಲಿ ಇರುವಂತೆಯೂ, ಮತ್ತು ವೈಯಕ್ತಿಕ ಅಥವಾ ಇತರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಂತೆ ಇರುತ್ತದೆ. ಈ ಮಾದರಿಯಲ್ಲಿ ಆರು ಹಂತಗಳಿವೆ. ಅವುಗಳೆಂದರೆ:

- ಭವಿಷ್ಯದ ಸವಾಲುಗಳ ಗುರುತಿಸುವಿಕೆ.
- ಅಂತಸ್ಥ ಸಮಸ್ಯೆಯ ನಿರ್ಧಾರ ಕೈಗೊಳ್ಳುವಿಕೆ.
- ಅಂತಸ್ಥ ಸಮಸ್ಯೆಗಳಿಗೆ ಪರಿಹಾರಾತ್ಮಕ ಐಡಿಯಾಗಳ ಉತ್ಪಾದನೆ.
- ಪರಿಹಾರ ಐಡಿಯಾಗಳ ಮೌಲ್ಯ ನಿರ್ಣಯಕ್ಕಾಗಿ ಮಾನದಂಡಗಳ ಉತ್ಪತ್ತಿ ಮತ್ತು ಆಯ್ಕೆ.
- ಮಾನದಂಡವನ್ನು ಪರಿಹಾರಾತ್ಮಕ ಐಡಿಯಾಗಳಿಗೆ ಅನ್ವಯಿಸುವುದು.
- ಕ್ರಿಯಾ ಯೋಜನೆಯ ಅಭಿವೃದ್ಧಿ.

ಈ ಮಾದರಿಯು ವಿದ್ಯಾರ್ಥಿಗಳ ವಿಶ್ಲೇಷಣಾತ್ಮಕ ಮತ್ತು ಸೃಜನಾತ್ಮಕ ಆಲೋಚನಾ ಕೌಶಲಗಳನ್ನು ಪ್ರಚೋದಿಸಲು ಉಪಯುಕ್ತವಾಗಿ ಕಂಡುಬಂದಿದೆ. ಇದು ಅವರಿಗೆ ಭವಿಷ್ಯದ ಕುರಿತು ದೃಷ್ಟಿಕೋನವನ್ನು ಬೆಳೆಸಲು ಅನುಕೂಲ ಮಾಡಿಕೊಡುತ್ತದೆ. ಇದು ಶಿಕ್ಷಕರಿಗೆ ಭವಿಷ್ಯದ ತರಗತಿಕೋಣೆಗಳು ಹೇಗಿರುತ್ತವೆ ಮತ್ತು ಅವರ ಪಾತ್ರ ಯಾವ ರೀತಿಯದ್ದಾಗಿ ಇರುತ್ತದೆ ಮತ್ತು ಅಗತ್ಯಗಳ ಪೂರೈಕೆಗೆ ಅವರು ಯಾವ ದಿಕ್ಕಿನಲ್ಲಿ ಬದಲಾಗಬೇಕು ಮತ್ತು ತರಬೇತಿ ಹೊಂದಬೇಕು ಎನ್ನುವುದನ್ನು ಕೂಡ ತಿಳಿಯಪಡಿಸುತ್ತದೆ. ಎಫ್‌ಪಿಎಸ್‌ಪಿಯು ಸೃಜನಾತ್ಮಕ ಸಮಸ್ಯೆ ಪರಿಹಾರದಲ್ಲಿ ಸ್ಪರ್ಧಾತ್ಮಕವಾದ ಮತ್ತು ಸ್ಪರ್ಧಾತ್ಮಕವಲ್ಲದ ಪಠ್ಯಕ್ರಮದ ಮತ್ತು ಸಹ-ಪಠ್ಯ ಕ್ರಮದ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

**ಸಂಶೋಧನಾತ್ಮಕ ಚಿಂತನೆಯ ಪಠ್ಯಕ್ರಮದ ಯೋಜನೆ:**

ಸಂಶೋಧನಾತ್ಮಕ ಚಿಂತನೆಯ ಪಠ್ಯಕ್ರಮದ ಯೋಜನೆಯು ಯುಎಸ್ ಹಕ್ಕುಪತ್ರದ(ಪೇಟೆಂಟ್) ಮತ್ತು ಟ್ರೇಡ್ ಮಾರ್ಕ್ ಕಚೇರಿಯ ರಾಷ್ಟ್ರೀಯ ದೂರ ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಒಂದು. ಇದರ ಉದ್ದೇಶ ಚಿಂತನಾ ಕೌಶಲಗಳ ಬೋಧನೆಗೆ ಪ್ರೋತ್ಸಾಹ ನೀಡುವುದು. ಇದು ಮಕ್ಕಳಿಗೆ ಉನ್ನತ ಮಟ್ಟದ ಆಲೋಚನಾ ಕೌಶಲಗಳನ್ನು ಬೆಳೆಸಿಕೊಳ್ಳಲು ಅವಕಾಶಗಳನ್ನು ಒದಗಿಸುತ್ತದೆ. ಇದರಲ್ಲಿ ಮೂರು ಮಾದರಿಗಳು ಇವೆ. ಬೆಂಜಮಿನ್ ಬ್ಲೂಮನ 'ಶೈಕ್ಷಣಿಕ ಉದ್ದೇಶಗಳ ವರ್ಗೀಕರಣ'(ಟಾಕ್ಸಾನಾಮಿ ಆಫ್ ಎಡ್ಯುಕೇಶನಲ್ ಆಬ್ಜೆಕ್ಟಿವ್ಸ್), ಕೆಲ್ವಿನ್ ಟೇಲರ್‌ನ 'ಅನಿಯಮಿತ ಪ್ರತಿಭೆಗಳು' (ಟೆಲೆಂಟ್ಸ್ ಅನ್‌ಲಿಮಿಟೆಡ್), ಮತ್ತು ಸ್ಕಾಟ್ ಇಸಕ್ಸೆನ್ ಮತ್ತು ಡೊನಾಲ್ಡ್ ಟ್ರೆಫಿಂಗರ್‌ರ 'ಸೃಜನಾತ್ಮಕ ಸಮಸ್ಯೆ-ಪರಿಹಾರ'(ಕ್ರಿಯೇಟಿವ್ ಪ್ರಾಬ್ಲೆಮ್ ಸಾಲ್ವಿಂಗ್). ಮಕ್ಕಳ ಅಗತ್ಯ ಮತ್ತು ತರಗತಿಯ ಮಟ್ಟಕ್ಕೆ ಅಳವಡಿಸಿಕೊಳ್ಳಬಹುದಾದ 12 ಸಂಶೋಧನಾತ್ಮಕ ಚಿಂತನಾ ಚಟುವಟಿಕೆಗಳು ಇಲ್ಲಿ ಇವೆ. ಈ ಚಟುವಟಿಕೆಗಳನ್ನು ಪಠ್ಯಕ್ರಮದ ಎಲ್ಲ ಕ್ಷೇತ್ರಗಳಲ್ಲಿ ಸಂಯೋಜಿಸಬಹುದಾಗಿದೆ. ಮೊದಲ ಎರಡು ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಸಂಶೋಧನಾತ್ಮಕವಾಗಿ ಆಲೋಚಿಸುವ ಕ್ರಮ ಮತ್ತು ಮಿದುಳು ದಾಳಿಗೆ ಪರಿಚಯಿಸುತ್ತದೆ. ಮೂರರಿಂದ ಒಂಬತ್ತರವರೆಗಿನ ಚಟುವಟಿಕೆಗಳಲ್ಲಿ ಇರುವುದು ಸಮಸ್ಯೆಯನ್ನು ಕಂಡುಕೊಳ್ಳುವುದು, ಸೃಜನಾತ್ಮಕ ಪರಿಹಾರಗಳಿಗಾಗಿ ಮಿದುಳುದಾಳಿ, ಸಂಶೋಧನಾತ್ಮಕ ಚಿಂತನೆಯ ವಿಮರ್ಶಾತ್ಮಕ ಭಾಗಗಳನ್ನು ಅಭ್ಯಾಸ ಮಾಡುವುದು, ಮತ್ತು ಸಂಶೋಧನೆಯನ್ನು ಪೂರ್ಣಗೊಳಿಸುವುದು, ಹೆಸರಿಸುವುದು ಮತ್ತು ಮಾರುಕಟ್ಟೆಗೆ ತಲುಪಿಸುವುದು. 10 ಮತ್ತು 11 ನೇ ಚಟುವಟಿಕೆಗಳಲ್ಲಿ ಹೆತ್ತವರ ಪಾಲುಗೊಳ್ಳುವಿಕೆ ಮತ್ತು ಯುವ ಸಂಶೋಧಕನ ದಿನವನ್ನು ಆಯೋಜಿಸುವುದು ಇರುತ್ತದೆ. ಕೊನೆಯ ಚಟುವಟಿಕೆಯಲ್ಲಿ ಪುರುಷ ಮತ್ತು ಸ್ತ್ರೀ ಇಬ್ಬರೂ ಸೇರಿದಂತೆ ಶ್ರೇಷ್ಠ ಚಿಂತಕರ ಮತ್ತು ಸಂಶೋಧಕರ ಕತೆಗಳು ಇರುತ್ತವೆ. ಈ ಕತೆಗಳು ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತವೆ ಮತ್ತು ಶ್ರೇಷ್ಠ ಚಿಂತಕರೆಲ್ಲರೂ ಸಾಮಾನ್ಯ ಮನುಷ್ಯರಾಗಿದ್ದವರು, ತಮ್ಮ ಐಡಿಯಾಗಳ ಮೂಲಕ ತಮ್ಮ ಕನಸುಗಳನ್ನು ವಾಸ್ತವಾಗಿಸಿದವರೆಂಬ ವಾಸ್ತವವನ್ನು ಅವರು ತಿಳಿದುಕೊಳ್ಳುವಂತೆ ಮಾಡುತ್ತವೆ.

**ಸೃಜನಾತ್ಮಕತೆಯ ಗಣಕಯಂತ್ರದ ಮಾದರಿಗಳು:**

ಸೃಜನಾತ್ಮಕತೆಯ ಗಣಕ ಯಂತ್ರದ ಅನುಕರಣದ ಮಾದರಿಗಳು 20ನೇ ಶತಮಾನದ ಕೊನೆಯ ದಶಕದಲ್ಲಿ ಕಂಡುಬಂದವು. ಇವುಗಳಲ್ಲಿ ಕೆಲವನ್ನು ಬೊಡೆನ್(1994 ಮತ್ತು 1999) ವಿಮರ್ಶಿಸಿದ್ದಾರೆ. ಅವುಗಳ ಮುಖ್ಯ ಗುರಿ ಏನಾಗಿತ್ತೆಂದರೆ, ಗಣಕಯಂತ್ರದಿಂದ ವ್ಯಕ್ತಿಗಳು ಏನು ಮಾಡುವರೋ ಹಾಗೆ ಪ್ರಚೋದಿಸುವ ಸೃಜನಾತ್ಮಕ ಚಿಂತನೆಯನ್ನು ಉತ್ಪಾದಿಸುವುದಾಗಿದೆ. ಉದಾಹರಣೆಗೆ ಹರ್ಬ್ ಸಿಮೊನ್ ರೂಪಿಸಿದ 'ಬೆಕಾನ್' ಕಾರ್ಯಕ್ರಮವು ಭೌತ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳ ಮೂಲಭೂತ ನಿಯಮಗಳ ಶೋಧನೆಯಲ್ಲಿ ಕೇಂದ್ರೀಕೃತಗೊಂಡಿದೆ. ಇನ್ನೂ ಸ್ಪಷ್ಟವಾಗಿ, ಬೆಕಾನ್ ಕಾರ್ಯಕ್ರಮವು ಗ್ರಹಗಳ ಕಕ್ಷೆಯ ಮೇಲಿನ ಚಲನೆಯ ಕುರಿತಾಗಿ ಕೆಪ್ಲರ್‌ನಿಗೆ ಲಭ್ಯವಿದ್ದ ಅವಲೋಕನದ ದತ್ತಾಂಶವನ್ನು ಬಳಸಿಕೊಂಡು ಮತ್ತು ಕೆಪ್ಲರನ ಗ್ರಹಗಳ ಚಲನೆಯ ಮೂರನೆಯ ನಿಯಮವನ್ನು ಅದು

Digitised by Bharatavani, CIIL

ಮರುಶೋಧಿಸಿದೆ. ಇಂತಹ ಅನೇಕ ಗಣಕಯಂತ್ರದ ಮಾದರಿಗಳು ಶೋಧನೆಯ ಸ್ವಂತ ಪ್ರಯೋಗಗಳನ್ನು ಅವಲಂಬಿಸಿವೆ. ಸಿಮೋನ್(1995) ತನ್ನ ಹೊಸ ಐಡಿಯಾಗಳ ಉತ್ಪಾದನೆ ಮತ್ತು ಮೌಲ್ಯನಿರ್ಣಯದ ದಾರಿಗಳ ಸಂಶೋಧನೆಯ ಯೋಜನೆಯು ಸಾಮಾನ್ಯ ಅನ್ವಯತೆಯನ್ನು ಹೊಂದಿದೆ ಎಂದು ಸಾಧಿಸಿದ್ದಾನೆ. 'ಮಿನ್‌ಸ್ಟ್ರೆಲ್' (ಟರ್ನರ್ 1994) ಎಂದು ಕರೆಯಲ್ಪಡುವ ಮತ್ತೊಂದು ಕಾರ್ಯಕ್ರಮವು ಗಣಕಯಂತ್ರ ಕಥೆ–ಹೇಳುವ ಕಾರ್ಯಕ್ರಮವಾಗಿದೆ. ಇದು ಕತೆಗಳನ್ನು ಉತ್ಪಾದಿಸಬಲ್ಲದ್ದಾಗಿದೆ ಮತ್ತು ಕೆಲವೊಮ್ಮೆ ಸಮಸ್ಯೆ ಪರಿಹಾರದ ಅಪೂರ್ವ ವಿಧಾನಗಳನ್ನು ನಿರ್ಮಿಸಬಲ್ಲದು.

ಹಿಂದಿನ ಪುಟಗಳಲ್ಲಿ ನೀಡಲಾದ ಸೃಜನಾತ್ಮಕತೆಯನ್ನು ಬೋಧನೆ/ತರಬೇತಿಯ ಮೂಲಕ ಹೆಚ್ಚಿಸುವುದಕ್ಕಾಗಿ ನಡೆಸಿದ ಅನೇಕ ಪ್ರಯತ್ನಗಳು ವ್ಯಾಪಕವಾಗಿಯೂ ಇಲ್ಲ, ಪರಿಪೂರ್ಣವಾಗಿಯೂ ಇಲ್ಲ. ಅವುಗಳ ಪರಿಣಾಮಕಾರಿತ್ವದ ಕುರಿತು ಯಾವುದೇ ಅಂತಿಮ ನಿದರ್ಶನವಿಲ್ಲ, ಆದರೆ ಲಭ್ಯವಿರುವ ನಿದರ್ಶನಗಳು ಅವುಗಳ ಬಳಕೆಯನ್ನು ಪ್ರಮಾಣೀಕರಿಸುತ್ತವೆ. ಅವುಗಳು ಆದೇಶದ ರೀತಿಯದ್ದಾಗಿಲ್ಲ ಆದರೆ ಸೂಚಕವಾಗಿವೆ. ಎಲ್ಲ ಯೋಜನಾ ನೀತಿಗಳು ಎಲ್ಲ ಶಾಲೆಗಳಲ್ಲಿ ಎಲ್ಲ ಶಿಕ್ಷಕರಿಗೆ ಸಮಾನ ರೀತಿಯಿಂದ ಪರಿಣಾಮಕಾರಿಯಾಗಿ ಇರಲಿಕ್ಕಿಲ್ಲ. ಶಿಕ್ಷಣದಲ್ಲಿ ತ್ವರಿತ ಮತ್ತು ತಪ್ಪಿನ ಆಸ್ಪದವಿಲ್ಲದ ರಾಮಬಾಣ ಇಲ್ಲ. ಅದರಲ್ಲಿಯೂ ಶಿಕ್ಷಕ ಶಿಕ್ಷಣ ಮತ್ತು ಶಾಲಾ ಶಿಕ್ಷಣದಲ್ಲಿ ಅದು ತುಂಬಾ ಕಡಿಮೆ. ಶಿಕ್ಷಕ–ಶಿಕ್ಷಣಜ್ಞರು ಮತ್ತು ಶಿಕ್ಷಕರು ಸೃಜನಾತ್ಮಕ ಬೋಧನೆಯ ಈ ಉತ್ತೇಜನಕಾರಿ ಕ್ಷೇತ್ರದಲ್ಲಿ ಶಿಕ್ಷಕರ ಮತ್ತು ಮಕ್ಕಳ ಇಬ್ಬರ ಸೃಜನಾತ್ಮಕತೆಯನ್ನು ಅಭಿವೃದ್ಧಿಪಡಿಸುವಾಗ ಹೊಸ ಹಾಗೂ ಹೆಚ್ಚು ಆಸಕ್ತಿದಾಯಕ ಮತ್ತು ಉತ್ಕೃಷ್ಟ ಕಾರ್ಯಸಾಧ್ಯ ಪರಿಹಾರ ಮಾರ್ಗಗಳು ಕಾಣಿಸಿಕೊಳ್ಳಬಹುದು. ಸ್ವೀಕೃತಿಗೆ ಯೋಗ್ಯವೆನಿಸುವ ಶೈಕ್ಷಣಿಕ ಕಾರ್ಯನೀತಿಯಾಗಿ ಸೃಜನಾತ್ಮಕ ಶಿಕ್ಷಣವು, ವಿಶೇಷವಾಗಿ ಸೃಜನಾತ್ಮಕ ಆಲೋಚನಾ ವಿಧಾನ ಮತ್ತು ಕಲಿಕೆಯು ನಮ್ಮ ಶ್ರೇಷ್ಠ ಪ್ರಜಾಪ್ರಭುತ್ವದಲ್ಲಿ ತನ್ನ ಗುರುತನ್ನು ಮತ್ತು ನಮ್ಮ ಬದುಕಿನಲ್ಲಿ ಅದರ ಪ್ರಭಾವದ ಛಾಪನ್ನು ಮೂಡಿಸಬೇಕಷ್ಟೇ.

**ಮೂಲ: ಎಸ್.ಟಿ.ವಿ.ಜಿ. ಆಚಾರ್ಯುಲು**

**ಅನು: ಡಾ. ಗೀತಾ ಶೆಣೈ**

## ಸ್ತ್ರೀವಾದಿ ಸಿದ್ಧಾಂತಗಳು

ಸ್ತ್ರೀವಾದ ಎನ್ನುವ ಪದ ಹದಿನೇಳನೇ ಶತಮಾನದಲ್ಲಿ ಮೊದಲಬಾರಿಗೆ ಬಳಕೆಯಾಯಿತಷ್ಟೆ. ಹದಿನೆಂಟನೆಯ ಶತಮಾನದಲ್ಲಿ ಇಲ್ಲವೆ ಇಪ್ಪತ್ತನೆ ಶತಮಾನದಲ್ಲಿ ಬಳಕೆಯಾಗುವಾಗ ಆ ಪದದ ಅರ್ಥ ಹಾಗೂ ಕ್ರಿಯಾ ಸಾಧ್ಯತೆಗಳು ಭಿನ್ನವಾಗಿವೆ. ಸಾಮಾಜಿಕ ಶ್ರೇಣೀಕರಣದ ಭಿನ್ನ ಸ್ತರಗಳಲ್ಲಿರುವ ಮಹಿಳೆಯರ ಸ್ತ್ರೀವಾದ ಚಿಂತನೆ ಹಾಗೂ ಕ್ರಿಯೆಗಳು ಬೇರೆ ಬೇರೆಯಾಗಿ ಇರುತ್ತವೆ. ಅಥವಾ ಸಮಾನ ಜಾತಿ, ವರ್ಗದ ಮಹಿಳೆಯರೊಳಗೆ ವೈಯಕ್ತಿಕ ಅನುಭವ, ಅಲೋಚನೆಗನುಸಾರವಾಗಿ ಸ್ತ್ರೀವಾದಿ ಚಿಂತನಾ ವಿಧಾನಗಳಲ್ಲಿ ವ್ಯತ್ಯಾಸಗಳುಂಟಾಗಬಹುದು. ಸೂಕ್ಷ್ಮವಾಗಿ ನೋಡಿದಾಗ ಸ್ತ್ರೀವಾದವು ವಾಗ್ವಾದಗಳ ನೆಲೆಯಲ್ಲಿ ತನ್ನ ವಿವರಣೆಯನ್ನು ಹೆಚ್ಚು ಮುಕ್ತವಾಗಿಟ್ಟುಕೊಂಡಿದೆ. ಒಟ್ಟಾರೆಯಾಗಿ ಸ್ತ್ರೀವಾದ ಎಂದರೆ ಮೂಲಭೂತವಾಗಿ ಸಮಾಜದಲ್ಲಿನ ಸ್ತ್ರೀಶೋಷಣೆ ಹಾಗೂ ದಮನವನ್ನು ಕುರಿತು ಪ್ರಜ್ಞಾಪೂರ್ವಕ ಎಚ್ಚರ. ಹಳೆಯ ಕಾಯಿಲೆಗಳೊಂದಿಗೆ ಸ್ನೇಹದಿಂದ ಒಗ್ಗಿಹೋಗಿ ಬದುಕುವ ಕಲೆಯನ್ನು ಮಹಿಳೆ ಚೆನ್ನಾಗಿಯೇ ಕಲಿತಿದ್ದಾಳೆ. ಎಷ್ಟರ ಮಟ್ಟಿಗೆಂದರೆ ತನಗೆ ರೋಗ ಇರುವುದೇ ಗೊತ್ತಿಲ್ಲದಷ್ಟು. ನೀಗಿಕೊಳ್ಳಬೇಕಾದ ರೋಗಗ್ರಸ್ತ ಅಸಹಜ ಸ್ಥಿತಿಯನ್ನು ಹೊಸ ಎಚ್ಚರದಿಂದ ನೋಡಿ ಗುರುತಿಸಿಕೊಳ್ಳುವ ಪ್ರಕ್ರಿಯೆಯೇ ಮಹಿಳೆಯ ಮಟ್ಟಿಗೆ ಮಹತ್ವದ್ದು. ಈ ರೋಗ ನಿಧಾನ ಕಾರ್ಯವನ್ನು ಸ್ತ್ರೀವಾದ ಮಾಡುತ್ತದೆ. ಸ್ತ್ರೀಪುರುಷರಿಬ್ಬರೂ ತಮಗೆ ಹತ್ತಿದ ಈ ರೋಗದಿಂದ ಮುಕ್ತರಾಗಲು ತಮಗೆ ತಾವೇ ಸಹಕರಿಸಿಕೊಳ್ಳುವ ಒಂದು ಕಾರ್ಯತಂತ್ರವಾಗಿ ಕೂಡ ಸ್ತ್ರೀವಾದವಿದೆ. ಕುಟುಂಬ, ಕುಟುಂಬದಾಚಿನ ಪರಿಸರದಲ್ಲಿ ನಡೆಯುವ ಸ್ತ್ರೀ ಶೋಷಣೆಯ ಸಿದ್ಧ ಸ್ಥಿತಿಯನ್ನು ಕದಲಿಸುವ ಪ್ರಯತ್ನಗಳಿಗೆ ಚೈತನ್ಯವನ್ನು ಸ್ತ್ರೀವಾದ ನೀಡಿದೆ.

'ಸ್ತ್ರೀ'ಯನ್ನು ಕುರಿತ ಗ್ರಹಿಕೆ, ವಿವರಣೆ, ವಿಶ್ಲೇಷಣೆ, ಪುನರ್ ಮೌಲ್ಯೀಕರಣ ಪ್ರಯತ್ನಕ್ಕೆ ಸೂಕ್ತವಾದ ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯೆ ಸ್ತ್ರೀವಾದ. ಈ ನಿಟ್ಟಿನಲ್ಲಿ ಮಹಿಳೆಯ ಬಗೆಗಿನ ಪುರುಷ ನಿರ್ಮಿತ ಸಿದ್ಧ ತಾತ್ವಿಕ ಮಾದರಿಗಳನ್ನು ಎದುರಾಗಿ ಇಟ್ಟಕೊಂಡೇ ಸ್ತ್ರೀವಾದ ವ್ಯವಹರಿಸುತ್ತದೆ. ಮಹಿಳೆಗೆ ಜ್ಞಾನದ ವಿಶಿಷ್ಟ ರೂಪವಾದ ಆತ್ಮವಿಲ್ಲದಿರುವುದರಿಂದ ಆಕೆಯ ಕೊಲೆ ಶಿಕ್ಷಾರ್ಹ ಅಪರಾಧವಾಗುವುದಿಲ್ಲವೆಂದು ಚೀನಾದ ಖ್ಯಾತ ಚಿಂತಕ ಕನ್‌ಫ್ಯೂಶಿಯಸ್ ನಂಬಿದ್ದ. ಹೆಣ್ಣೆಂದರೆ ಅಪರಿಪೂರ್ಣ, ಸೆಂಟ್ ಥಾಮಸ್‌ನ ಹೆಣ್ಣಿನ ಕುರಿತು ವಾಖ್ಯೆ. ಸಹಜ ದೋಷಗಳೊಂದಿಗೆ, ಕೆಲವು ಗುಣಗಳ ಕೊರತೆ ಇರುವುದರಿಂದ ಹೆಣ್ಣು ಹೆಣ್ಣಾಗಿದ್ದಾಳೆ ಎಂದು ಅರಿಸ್ಟಾಟಲ್ ಹೇಳುತ್ತಾನೆ. ಇಂತಹ ವಿಚಾರಗಳಿಗೆ ಸ್ತ್ರೀವಾದ ಕೇವಲ ಪ್ರತಿಕ್ರಯಿಸುವುದಿಲ್ಲ. ಬದಲಾಗಿ ಅರ್ಥಪೂರ್ಣ ಕ್ರಯೆಯಲ್ಲಿ ತೊಡಗುತ್ತದೆ. ಘನತೆಯುಳ್ಳ ಬದುಕುವ ಹಕ್ಕುಗಳಿಗಾಗಿ ಸಾಮೂಹಿಕ ಹೋರಾಟದಲ್ಲಿ ತೊಡಗಬೇಕಾದ ಅನಿವಾರ್ಯತೆಯನ್ನು ಗುರುತಿಸಿಕೊಳ್ಳುವುದೇ ಮಹಿಳೆಗೆ ಕ್ರಿಯಾಶೀಲತೆಯಾಗುತ್ತದೆ.

**ಸ್ತ್ರೀವಾದದ ಉಗಮ – ಸಾಮಾಜಿಕ ಭೂಮಿಕೆ:** 'ಸ್ತ್ರೀವಾದಿ' ಎಂದರೇನು ಎಂಬ ಪ್ರಶ್ನೆಗೆ ಖಚಿತವೂ ಸಂಕ್ಷಿಪ್ತವೂ ಆದ ಉತ್ತರವನ್ನು ಯಾರೇ ಆದರೂ ನಿರಿಕ್ಷಿಸುವುದು ಸರ್ವೇಸಾಮಾನ್ಯ. ಯಾವುದೇ ವಿಚಾರವಾಗಲಿ, ರಾಜಕೀಯ ನಂಬಿಕೆ ಹಾಗೂ ಕಾರ್ಯಕ್ರಮಗಳಾಗಲಿ 'ಸ್ತ್ರೀವಾದಿ' ದೃಷ್ಟಿಕೋನವನ್ನು ಹೊಂದಿದೆಯೋ ಇಲ್ಲವೋ ಎಂದು ತಟ್ಟನೆ ನಿರ್ಧರಿಸಲು 'ಸ್ತ್ರೀವಾದ'ದ ಬಗೆಗಿನ ಸಾರರೂಪದ ಒಂದೆರಡು ವಾದ್ಯಗಳ ನಿರ್ವಚನ ಸಹಾಯಕವೆನಿಸಬಹುದು.

Digitised by Bharatavani, CIIL

ಆದರೆ ಇದೊಂದು ತಪ್ಪುತಿಳುವಳಿಕೆ. ಸ್ತ್ರೀವಾದಿ ಚಿಂತನೆಗೆ ಬಹಳ ದೀರ್ಘ ಇತಿಹಾಸವಿದೆ. ಸ್ತ್ರೀವಾದಿ ಚಿಂತನೆಗಳು ಆಧುನಿಕ ಮಹಿಳಾ ವಿಮೋಚನಾ ಚಳುವಳಿಯ ಜೊತೆಯಲ್ಲಿ ಇದ್ದಕ್ಕಿದ್ದಂತೆ ಉದ್ಭವಿಸಿದವಲ್ಲ. ಮಹಿಳೆಯರ ಆಲೋಚನೆಗಳ ಅಭಿವ್ಯಕ್ತಿಗಳು ಒಂದೋ ಅಂಚಿಗೆ ಒತ್ತರಿಸಲ್ಪಟ್ಟವು ಇಲ್ಲವೆ ಗುಪ್ತವಾಗೇ ಉಳಿದು ಕಣ್ಮರೆಯಾದವು. ಕೆಲವೊಮ್ಮೆ ಸ್ತ್ರೀವಾದಿ ಬರಹಗಾರ್ತಿಯರ ಬರಹಗಳು ಅಲ್ಪಕಾಲದ ಮನ್ನಣೆಯನ್ನು ಗಳಿಸಿ ನಂತರದ ದಿನಗಳಲ್ಲಿ ಚಿಂತನೆಯ ಪರಂಪರೆಯನ್ನು ಬೆಳೆಸಲು ಅಸಮರ್ಥವಾಗಿ ಒಂಟಿದನಿಯಾಗಿ ಉಳಿಯುತ್ತವೆ. ಆದರೂ 18ನೇ ಶತಮಾನದಿಂದೀಚೆಗೆ ಸ್ತ್ರೀವಾದಿ ಬರಹಗಳು ಅಥವಾ ವಾಗ್ವಾದಗಳು ಅವಗಣನೆಯ ಬಿರುಗಾಳಿಯನ್ನು ಎದುರಿಸುತ್ತಲೇ ಗಟ್ಟಿ ಪರಂಪರೆಯನ್ನು ಯಶಸ್ವಿಯಾಗಿ ರೂಪಿಸಿಕೊಂಡಿವೆ.

ಐರೋಪ್ಯ ದೇಶದಲ್ಲಿ ಕೈಗಾರೀಕರಣದ ಗಾಳಿ ಜೋರಾಗಿ ಬೀಸಲಾರಂಭಿಸಿದಾಗ, ಮಹಿಳೆಯರು ಕುಟುಂಬ ಕೇಂದ್ರದಿಂದ ಆಚೆ ಬರುವಂತಾಯ್ತು. ಕೂಲಿ ಪಡೆಯುವ ಕಾರ್ಮಿಕ ವರ್ಗಕ್ಕೆ ಮಹಿಳೆಯ ಸೇರ್ಪಡೆಯು ಆಕೆಯ ಸ್ಥಾನಮಾನದಲ್ಲಿ ಗಮನಾರ್ಹ ಬದಲಾವಣೆಯನ್ನು ತಂದಿತು. ಚರ್ಚಿನ ಹಿಡಿತ ಕಡಿಮೆಯಾದಂತೆಲ್ಲ 'ಸ್ವಾತಂತ್ರ್ಯ'ದ ಕಲ್ಪನೆಯು ಮಾನವತಾವಾದ, ಉದಾರವಾದದ ಮುಖ್ಯ ವಿಷಯವಾಗಿ ನಾಗರಿಕರಲ್ಲಿ ಉದಯಿಸಿತು. ಆರ್ಥಿಕ ಹಾಗೂ ರಾಜಕೀಯ ಹಕ್ಕುಗಳ ಹೋರಾಟಕ್ಕೆ ಗಟ್ಟಿಯಾದ ತಾತ್ವಿಕತೆಯನ್ನು ಸ್ವಾತಂತ್ರ್ಯದ ಕಲ್ಪನೆ ರೂಪಿಸಿತು. ಇಂಥ ಸಂದರ್ಭದಲ್ಲಿ ಮಹಿಳೆ ತನ್ನ ಸಾಮಾಜಿಕ ಪಾತ್ರದ ಸ್ವರೂಪವನ್ನು ಅರಿತುಕೊಳ್ಳುವ, ಪ್ರಶ್ನಿಸುವ, ಪ್ರತಿಭಟಿಸುವ ಪ್ರಯತ್ನಗಳು ಕ್ರಮವಾಗಿ ನಡೆದವು.

ಯೂರೋಪಿನ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಬಂಡವಾಳಶಾಹಿ ಆರ್ಥಿಕತೆಯು ಕಾಲಿಟ್ಟಿತು. ವಿರಾಮ ಹಾಗೂ ವೃತ್ತಿ ಜೀವನದ ಆಯ್ಕೆಯ ಅವಕಾಶ ಹೊಂದಿದ ಮಧ್ಯಮವರ್ಗವು ಉದಯವಾಯ್ತು. ಈ ಸಂದರ್ಭದಲ್ಲಿ ಅನೇಕ ಮಧ್ಯಮ ವರ್ಗೀಯ ಮಹಿಳೆಯರು 'ಮನೆ' ಮತ್ತು 'ಹೊರಗಿನ ಕೆಲಸ'ಗಳ ನಡುವೆ ತಲೆದೋರಿದ ಭಿನ್ನತೆಯ ಕಾರಣ, ಒಂದು ರೀತಿಯ ತುಳಿತಕ್ಕೆ ಒಳಗಾದರು. ಕೃಷಿಯ ಉತ್ಪನ್ನ ಹಾಗೂ ಗೃಹ ಉತ್ಪಾದನೆಗಳ ಮೇಲೆ ಅವರಿಗಿದ್ದ ಸೀಮಿತ ಒಡೆತನದಾಚೆ ಸ್ವತಂತ್ರ ಆರ್ಥಿಕತೆಯನ್ನು ಮಹಿಳೆಯರು ಗಳಿಸಿಕೊಳ್ಳಲು ಅವಕಾಶವೊದಗಿತು. ಇಷ್ಟಾದರೂ ಗಂಡಸರಿಗೆಂದೇ ಇದ್ದ ಉದ್ಯೋಗಗಳು ಮಹಿಳೆಯರಿಗೆ ನಿಷೇಧಿತವಾಗಿದ್ದ ಕಾರಣ ಆರ್ಥಿಕವಾಗಿ ಬಹಳಷ್ಟು ಮಹಿಳೆಯರು ಗಂಡಸರನ್ನೇ ಆಶ್ರಯಿಸಬೇಕಾಯಿತು. ಕೈಗಾರಿಕೀಕರಣದ ಪರಿಣಾಮವಾಗಿ ಕೃಷಿ ಹಾಗೂ ಗೃಹ ಉತ್ಪನ್ನಗಳ ಮೇಲೆ ಹೊಂದಿದ್ದ ತುಸು ಒಡೆತನವನ್ನು ಮಹಿಳೆಯರು ನೀಗಿಕೊಳ್ಳಬೇಕಾಯಿತು.

ಸರ್ವ ಸಮಾನತಾವಾದಿ ರಾಜಕೀಯ ಆದರ್ಶಗಳೂ, ಸ್ತ್ರೀವಾದಿ ಆಲೋಚನೆಗಳು ಹುಟ್ಟಲು ಪ್ರೇರಕಗಳಾದವು. 18ನೇ ಶತಮಾನವು ಪ್ರಭುತ್ವಶಾಹಿ, ಶ್ರೀಮಂತಶಾಹಿ ರಾಜಕೀಯ ಕ್ರೌರ್ಯದ ವಿರುದ್ಧ ಜನರ ಹೋರಾಟಗಳ ಕಾಲ. ಆಳುವ ವರ್ಗದ ಅಧಿಕಾರದ ನೆಲೆಯನ್ನೇ ಜನ ಪ್ರಶ್ನಿಸಿ, ತಿರಸ್ಕರಿಸುತ್ತಿದ್ದ ಕಾಲವದು. ಅಮೆರಿಕನ್ ಹಾಗೂ ಫ್ರೆಂಚ್ ಕ್ರಾಂತಿಗಳ ಹಿಂದಿರುವ ಉದಾರವಾದಿ ಸಮಾನತಾವಾದವು ಸ್ತ್ರೀವಾದದ ಹುಟ್ಟಿಗೆ ಪ್ರೇರಕಗಳಾದವು. ಅದುವರೆಗೂ ಗಂಡಸಿನ ಹಕ್ಕೆಂದರೆ ಆಸ್ತಿಯ ಹಕ್ಕು ಮಾತ್ರವೆಂಬ ತಿಳುವಳಿಕೆ ಇತ್ತು. ಆದರೆ, ಸಾಮಾಜಿಕ ಸಂದರ್ಭದಲ್ಲಿ ತನ್ನ ರಾಜಕೀಯ ಹಕ್ಕುಗಳಿಗಾಗಿ ಹೋರಾಡುವುದರ ಮೂಲಕ ವ್ಯವಸ್ಥೆಯಲ್ಲಿ ತನ್ನ ಭಾಗಿತ್ವವನ್ನು ಸ್ಥಾಪಿಸುವುದು ಪುರುಷರಿಗೆ ಅನಿವಾರ್ಯವೆನಿಸಿತು. ಇಷ್ಟಾದರೂ 'ಮಾನವ ಹಕ್ಕು'ಗಳ ಕುರಿತು ಅವರ ಕಲ್ಪನೆಯಲ್ಲಿ ಮಹಿಳೆಯರು ಸೇರಿರಲಿಲ್ಲ. ರಾಜಕೀಯ ಸರ್ವಸಮಾನತಾವಾದಿ ವಿಚಾರಗಳು, ಸ್ವಾತಂತ್ರ್ಯ, ನ್ಯಾಯ, ಸಮಾನತೆಯ ತತ್ವಗಳನ್ನು ಮನುಷ್ಯನ ಪ್ರಾಥಮಿಕ ಅವಶ್ಯಕತೆಯಾಗಿ ಪರಿಗಣಿಸಿದ್ದವು. ಅದರೊಂದಿಗೇ ಸ್ವಂತ ನಿರ್ಧಾರವನ್ನು ವೈಚಾರಿಕತೆಯ ಬೆಳಕಿನಲ್ಲಿ ತೆಗೆದುಕೊಳ್ಳುವ ಮೂಲಕ ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ 'ವಿಚಾರ ಜೀವಿ'ಯಾಗಿ ಮಾನವನನ್ನು ಭಾವಿಸಲಾಯಿತು. 'ಮನುಷ್ಯನ ಹಕ್ಕು'ಗಳ ಕುರಿತಾದ ರಾಜಕೀಯ ಪರಿಕಲ್ಪನೆಯಲ್ಲಿ ಹೇಗೆ ಮಹಿಳೆಯರನ್ನು ಹೊರಗಿಡಲಾಗಿತ್ತೋ ಅಂತೆಯೇ ವೈಚಾರಿಕತೆಯ ಜೊತೆ ಕೂಡ ಅವರನ್ನು ಸಂಬಂಧಿಸಲಿಲ್ಲ. ಪರಿಣಾಮವಾಗಿ, ವೈಚಾರಿಕತೆ ಇಲ್ಲದ ಕಾರಣ ಮಹಿಳೆಯರು ಸ್ವಾಯತ್ತರಾಗಲಾರರು ಎಂಬ ತಪ್ಪು ಅಭಿಪ್ರಾಯ ಮೂಡಿಬಂತು.

**ಸ್ತ್ರೀವಾದಿ ಎಂದರೆ ಯಾರು?:** ಸ್ತ್ರೀವಾದದ ವ್ಯಾಖ್ಯೆಗನುಗುಣವಾಗಿ ಸ್ತ್ರೀವಾದಿ ಎಂದರೇನು ಎಂಬ ಪ್ರಶ್ನೆಗೆ ಉತ್ತರಿಸಬಹುದು. ಲಿಂಗಾಧಾರಿತ ತಾರತಮ್ಯತೆಯನ್ನು ಗುರುತಿಸಬಲ್ಲ ಸಾಮರ್ಥ್ಯ ಹೊಂದಿದ ವ್ಯಕ್ತಿಯೇ ಸ್ತ್ರೀವಾದಿ. ಪಿತೃಪ್ರಾಧಾನ್ಯ ಹಾಗೂ ಪುರುಷಾಧಿಕಾರದ ವಿರುದ್ಧ ಕ್ರಿಯಾಶೀಲವಾಗುವ ವ್ಯಕ್ತಿಯೇ ಸ್ತ್ರೀವಾದಿ. ಸ್ತ್ರೀವಾದಿ ಎಂದರೆ ಲಿಂಗಾಧಾರಿತ ತಾರತಮ್ಯ ಮತ್ತು ಅದರ ಕ್ರೌರ್ಯವನ್ನು ಗುರುತಿಸಿ, ಅದನ್ನು ನಿವಾರಿಸುವಲ್ಲಿ ಕಾರ್ಯತತ್ಪರವಾಗುವ ವ್ಯಕ್ತಿ ಎಂದರ್ಥ. ಮಹಿಳೆಯ ಮಟ್ಟಿಗೆ ಈ ಕ್ರಮ ನಾನಾ ರೂಪ ವಿನ್ಯಾಸಗಳನ್ನು ಹೊಂದಬಲ್ಲದು. ಮದುವೆಯಾಗದೆ ಉಳಿಯುವ ನಿರ್ಧಾರವಾಗಬಹುದು, ಮಕ್ಕಳನ್ನು ಹೆರಲಾರೆನೆಂಬ ನಿರ್ಧಾರವಾಗಬಹುದು, ವಿದ್ಯೆ, ಉದ್ಯೋಗಗಳ ಆಯ್ಕೆ, ಪರದಾ ನಿವಾರಣೆ, ವಿವಾಹ, ವಿಚ್ಛೇದನ, ಕಾನೂನು ಪ್ರತಿಕ್ರಮ ಇನ್ನೂ ಮುಂತಾದವು. ಇಂಥ ವೈಯಕ್ತಿಕ ನಿರ್ಧಾರಗಳನ್ನು ಕೂಡ ವ್ಯವಸ್ಥಿತ ಸಾಮೂಹಿಕ ಹೋರಾಟದಷ್ಟೇ ಮುಖ್ಯ. ವ್ಯಕ್ತಿಮಟ್ಟದ ಇಂಥ ಕಾರ್ಯಗಳಲ್ಲಿ ತೊಡಗಲು ಗುಂಪಿನ ಅವಲಂಬನೆ ಅನಿವಾರ್ಯವೇನಲ್ಲ. ಸ್ತ್ರೀವಾದಿ ಎನಿಸಿಕೊಳ್ಳಲು ಸಾಮೂಹಿಕ ಹೋರಾಟದ ಮುಂಚೂಣಿಯಲ್ಲಿ ನಿಲ್ಲಲೇ ಬೇಕೆಂದೇನೂ ಇಲ್ಲ. ವೈಯಕ್ತಿಕ ನೆಲೆಯ ಶೋಷಣೆಯ ಸ್ವರೂಪವನ್ನು ಅರಿತುಕೊಳ್ಳುವುದರ ಮೂಲಕ ಇತರ ಮಹಿಳೆಯರ ಬಗೆಗಿನ ಶೋಷಣೆಯ ಸ್ವರೂಪವನ್ನು ಹೆಚ್ಚು ಅಧಿಕೃತವಾಗಿ ಅರಿಯಲು ಸಾಧ್ಯವಾಗುತ್ತದೆ. ಈ ಅರಿವಿನೊಂದಿಗೆ ಸಮೂಹ ಹೋರಾಟದ ಭಾಗವಾಗಿ ತನ್ನನ್ನು ಗುರುತಿಸಿಕೊಳ್ಳುವುದೆಂದರೆ ತನ್ನನ್ನು ಸ್ತ್ರೀವಾದಿ ಎಂದು ನಿರ್ವಚಿಸಿಕೊಂಡಂತೆಯೇ. ಸ್ತ್ರೀವಾದಿಯು ಮಹಿಳೆಯೇ

Digitised by Bharatavani, CIIL

ಆಗಿರಬೇಕೆಂದಿಲ್ಲ. ಹಾಗೆ ನೋಡಿದರೆ, ಸ್ತ್ರೀವಾದಿ ಚಿಂತನೆಯ ಅನುಷ್ಠಾನದ ಮೂಲಕ ಪುರುಷ ಕೂಡ ಸ್ತ್ರೀವಾದಿ ಆಗಬಲ್ಲ. ಮಹಿಳೆಯಾಗಿದ್ದೂ ಪಿತೃಪ್ರಧಾನ ಆಲೋಚನೆಗಳ ನೆಲೆಯಲ್ಲೇ ವ್ಯವಹರಿಸುವ ಮಹಿಳೆಯರು ಸ್ತ್ರೀವಾದಿ ಆಗಲಾರರು.

**ಸ್ತ್ರೀವಾದದ ತಾತ್ವಿಕತೆ:** ಸ್ತ್ರೀವಾದವು ಮಹಿಳೆಯ ಸಬಲೀಕರಣ, ಬಿಡುಗಡೆ, ಸಮಾನತೆ, ದಬ್ಬಾಳಿಕೆ ಹಾಗೂ ತಾರತಮ್ಯದಿಂದ ಮುಕ್ತಿ ಮುಂತಾದವನ್ನು ಸ್ಪಷ್ಟ ತಾತ್ವಿಕತೆಯ ಆಧಾರದ ಮೇಲೆ ವ್ಯಾಖ್ಯಾನಿಸುತ್ತದೆ. ಲಿಂಗಾಧಾರಿತ ಸಂಬಂಧಗಳ ಕುರಿತು ಅನೇಕ ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತ ಉತ್ತರಿಸಿಕೊಳ್ಳುವ ಬೇರೆ ಬೇರೆ ವಿನ್ಯಾಸಗಳನ್ನು ಸ್ತ್ರೀವಾದದ ಭಿನ್ನ ತಾತ್ವಿಕ ನೆಲೆಗಳಾಗಿ ಗುರುತಿಸಿಕೊಳ್ಳುತ್ತೇವೆ. ರಾಷ್ಟ್ರೀಯ, ಪ್ರಾದೇಶಿಕ, ಜನಾಂಗಿಕ, ಸಾಂಸ್ಕೃತಿಕ ಭಿನ್ನತೆಗನುಸಾರವಾಗಿ ರೂಪುಗೊಂಡ ಪ್ರಶ್ನೆ, ಉತ್ತರಗಳು ಸ್ತ್ರೀವಾದದ ಬಹುರೂಪಕ್ಕೆ ಕಾರಣವಾಗಿವೆ. ಈ ವೈವಿಧ್ಯವೇ ಸ್ತ್ರೀವಾದದ ಬಹುರೂಪಕ್ಕೆ ವ್ಯಾಪಕತೆಗೆ ಕಾರಣ, ಸ್ತ್ರೀವಾದದ ಈ ನಮ್ಯತೆಯ ಕಾರಣದಿಂದಲೇ ಅನೇಕ ಜ್ಞಾನ ಶಾಖೆಯ ಶಿಸ್ತುಗಳಾಗಿರುವ ವಿಜ್ಞಾನ, ತತ್ವಶಾಸ್ತ್ರ, ಮಾನವ ಶಾಸ್ತ್ರ, ಮನಃಶಾಸ್ತ್ರ, ಭಾಷಾ ಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ ಮುಂತಾದವುಗಳ 'ಸ್ತ್ರೀದೃಷ್ಟಿಕೋನ'ದ ಅಗತ್ಯತೆಯನ್ನು ಮನಗಾಣುತ್ತಿವೆ. ಹಾಗೆಯೇ ಈ ಜ್ಞಾನಶಾಖೆಗಳ ಜ್ಞಾನವನ್ನು ತನಗೆ ಸರಹೊಂದುವ ರೀತಿಯಲ್ಲಿ ತಾತ್ವಿಕ ಚಿಂತನಾ ಕ್ರಮವನ್ನು ರೂಪಿಸಿಕೊಳ್ಳಲು ಸ್ತ್ರೀವಾದಗಳು ಬಳಸಿಕೊಳ್ಳುತ್ತಿದೆ. ಜ್ಞಾನ ಜಗತ್ತಿನ ಕೊಳುಕೊಡುಗೆ ಸಾಕಷ್ಟು ಅವಕಾಶ ಒದಗಿಸಿರುವುದು ಸ್ತ್ರೀವಾದದ ವ್ಯಾಪಕತೆಯ ಪ್ರಯೋಜನ. ಹೀಗೆ ಜಾಗತಿಕ ನೆಲೆಯ ಜ್ಞಾನ ಶಾಖೆಯಾಗಿ ಸ್ತ್ರೀವಾದ ಇಂದು ತನ್ನ ಕಾರ್ಯ ನಿರ್ವಹಿಸುತ್ತಿದೆ.

ಮಹಿಳೆಯನ್ನು ಸಂಸ್ಕೃತಿಯ ಪ್ರತಿನಿಧಿ, ರಕ್ಷಕಿ, ಪೋಷಕಿ ಹಾಗೂ ವಾಹಕಿ ಎಂದು ಗುರುತಿಸಲಾಗಿದೆ. ಆದರೆ ಈ ಗುರುತಿಸುವಿಕೆ ಮಹಿಳೆಯ ಸಿದ್ಧ ಸ್ಥಿತಿಯಾಗಿರದೆ ಪುರುಷಾಧಿಕಾರದ ಆರೋಪವಾಗಿದೆ ಎಂಬುದನ್ನು ಮಾನವಶಾಸ್ತ್ರ ಅಧ್ಯಯನದ ಮೂಲಕ ಸ್ತ್ರೀವಾದಿಗಳು ಕಂಡುಕೊಂಡರು. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಪಿತೃಪ್ರಾಧಾನ್ಯತೆಗೆ ಹೊರಳಿಕೊಳ್ಳುವ 'ಸಂಸ್ಕೃತಿ'ಯ ಸಂಘಟನೆ ಕ್ರಮವನ್ನು ಸ್ತ್ರೀವಾದಿಗಳು ಹೊಸ ಎಚ್ಚರದಲ್ಲಿ ಗ್ರಹಿಸಿದರು. ಲಿಂಗವ್ಯವಸ್ಥೆಯ ತಾರತಮ್ಯವು ಪ್ರಕಟಗೊಳ್ಳುವ ಸಮಕಾಲೀನ ಸಂದರ್ಭಗಳನ್ನು ಸ್ತ್ರೀವಾದಿಗಳು ಮಾನವಶಾಸ್ತ್ರೀಯ ಚಳುವಳಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಯತ್ನಿಸಿದರು. ಖ್ಯಾತ ಮಾನವಶಾಸ್ತ್ರಜ್ಞ ಲೆವಿಸ್ಟ್ರಾಸ್‌ನು ಸಂಸ್ಕೃತಿ ಮತ್ತು ಪ್ರಕೃತಿ ನಡುವಿನ ಭಿನ್ನತೆಯ ನೆಲೆಯಿಂದ ಬಂಧುತ್ವದ ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದಾನೆ. ಪ್ರಾಕೃತಿಕ ರೂಪದ ಸ್ತ್ರೀ ಪುರುಷ ಲೈಂಗಿಕತೆಯನ್ನು ವೈವಾಹಿಕ ಸಂಬಂಧಗಳ ಮೂಲಕ ಸಿದ್ಧವಾಗುವ ಕುಟುಂಬ, ಖಾಸಗಿ ಆಸ್ತಿ, ರಾಜ್ಯಗಳ ಸಂರಚನೆಯು ಚಾಲನೆಯಲ್ಲಿರಬೇಕಾದರೆ ಸ್ತ್ರೀ-ಪುರುಷ ಸಂಸ್ಕೃತಿ ನಿರ್ವಚಿತ ಲಕ್ಷಣಗಳು ಯಥಾರೂಪದಲ್ಲಿ ಉಳಿಯ ಬೇಕೆಂದು ಒತ್ತಾಯವಿರುತ್ತದೆ. ಈ ಒತ್ತಾಯಗಳು ಪುರುಷ ಹಿತಾಸಕ್ತಿಗನುಗುಣವಾಗಿದೆ. ಸ್ತ್ರೀ-ಪುರುಷ ಭಿನ್ನತೆಯನ್ನು ವಿರೋಧವಾಗಿಸಿ, ಶ್ರೇಣೀಕರಣವನ್ನು ಕಲ್ಪಿಸುವ ಕ್ರಮವನ್ನು ಸ್ತ್ರೀ ಶೋಷಣೆಯ ಚರಿತ್ರೆಯಾಗಿ ಸ್ತ್ರೀವಾದಗಳು ಅರ್ಥೈಸಿಕೊಂಡರು. ಈ ತಿಳುವಳಿಕೆಗಳು ತೀವ್ರಗಾಮಿ ಸ್ತ್ರೀವಾದವಾಗಿಯೂ ಸಾಂಸ್ಕೃತಿಕ ಸ್ತ್ರೀವಾದವಾಗಿಯೂ ಪ್ರಕಟಗೊಂಡವು.

**ಸ್ತ್ರೀವಾದದ ಕೆಲವು ತಪ್ಪು ಕಲ್ಪನೆಗಳು:** ಸ್ತ್ರೀವಾದವನ್ನು ಕುರಿತಂತೆ ಸಾಮಾನ್ಯವಾಗಿ ಅಪಕಲ್ಪನೆಯ ಹಾಗೂ ಅಪ ನಂಬಿಕೆಯ ಗ್ರಹಿಕೆ ಇದೆ. ಮಹಿಳಾ ಶೋಷಣೆಯ ಬಗ್ಗೆ ವೇದಿಕೆಗಳಲ್ಲಿ ಆಕರ್ಷಕವಾಗಿ ಮಾತನಾಡುತ್ತಲೇ 'ದಯವಿಟ್ಟು ನನ್ನನ್ನು ಸ್ತ್ರೀವಾದಿ ಎಂದು ತಿಳಿಯಬೇಡಿ' ಎಂದು ದನಿಕುಗ್ಗಿಸಿ ಕೇಳಿಕೊಳ್ಳುವ ಪರಿ ವಿಚಿತ್ರವೆನಿಸಬಹುದು. ಸ್ತ್ರೀವಾದಿ ಎಂದರೆ ಸಮಾಜ ದ್ರೋಹಿಯೋ ಎಂಬಂತೆ ನೋಡುವ ಗುಮಾನಿ ಕಣ್ಣುಗಳೂ ಉಂಟು. ಸ್ತ್ರೀವಾದಿಗಳ ಜೊತೆ ತಮ್ಮನ್ನು ಗುರುತಸಿಕೊಳ್ಳದೆ ಇರುವುದೇ ತಮ್ಮ ಸ್ವಂತಿಕೆ, ಸುರಕ್ಷಿತತೆ ಎಂಬ ಹುಸಿ ಸಮಾಧಾನಗಳೂ ಇವೆ.

ಸ್ತ್ರೀವಾದ ಎನ್ನುವುದು ಒಂದು ಗಂಭೀರ ಚಿಂತನೆ. ಜೀವನ ಕ್ರಮ. ಪ್ರಾಮಾಣಿಕ ನಂಬಿಕೆ. ಪ್ರತಿಭಟನಾತ್ಮಕ ಹೋರಾಟದ ತಾತ್ವಿಕತೆ. ಹಾಗಿದ್ದೂ ಏಕೆ ಈ ರೀತಿಯ ನಿರಾಕರಣೆ, ನಿರ್ಲಕ್ಷ್ಯ, ತಿರಸ್ಕಾರ ಎಂದು ಕೇಳಿಕೊಳ್ಳಬೇಕಾಗುತ್ತದೆ. ಜನಪ್ರಿಯ ಸಂಸ್ಕೃತಿಯ ಪ್ರಸಾರ ಮಾಧ್ಯಮಗಳ ಅಪಪ್ರಚಾರವು ನಿರಂತರವಾಗಿ ಸ್ತ್ರೀವಾದದ ಬಗೆಗೆ ತಪ್ಪು ಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಬಿತ್ತುತ್ತಾ ಬಂದಿದೆ. ವ್ಯಾಪಾರೀ ಜಗತ್ತಿನ, ಪುರುಷ ನಿಯಂತ್ರಣದಲ್ಲಿರುವ ಈ ಮಾಧ್ಯಮಗಳು ಸ್ತ್ರೀವಾದವೆಂದರೆ 'ಬ್ರಾ ಸುಡುವಿಕೆ', 'ಪುರುಷದ್ವೇಶ', 'ಕುಟುಂಬ ನಾಶ' ಮುಂತಾದ ಅವಗ್ರಹಿಕೆಗೆ ಜನಸಾಮಾನ್ಯರನ್ನು ಪ್ರೇರೇಪಿಸುತ್ತಿವೆ. ಇದರಿಂದ ಕುಮ್ಮಕ್ಕು ಪಡೆದ ಇತರ ಶಕ್ತಿಗಳು ಮಹಿಳೆಯ ಬಿಡುಗಡೆ ಮತ್ತು ಸಬಲೀಕರಣವು ಸಂಸ್ಕೃತಿ ನಾಶಕ್ಕೆ ಕಾರಣವಾಗುತ್ತದೆಂಬ ಕುತರ್ಕವನ್ನು ಮಂಡಿಸುತ್ತಿವೆ.

ಸ್ತ್ರೀವಾದಿ ಚಳುವಳಿಯು ಸಕ್ರಿಯ ಮಹಿಳೆಯರನ್ನು 'ಸ್ವಂತ ಆಲೋಚನೆಯ ಬೇರುಗಳಿಲ್ಲದ, ಪಾಶ್ಚಾತ್ಯ ಆಲೋಚನೆಗಳ ಮೊತ್ತವನ್ನು ತಲೆಯಲ್ಲಿ ತುಂಬಿಕೊಂಡ ಮಧ್ಯಮ ವರ್ಗೀಯ ಹೆಣ್ಣು'ಗಳೆಂದು ಲಘುವಾಗಿ ಪರಿಗಣಿಸಿದ್ದುಂಟು. ವಿಶಾಲವಾದ ಮಾನವತಾವಾದದ ವ್ಯಾಪ್ತಿಯೊಳಗೇ ಸ್ತ್ರೀ ಬಿಡುಗಡೆಯೂ ಸೇರುವುದರಿಂದ ಪ್ರತ್ಯೇಕ ಮಹಿಳಾ ಬಿಡುಗಡೆಯ ಪರಿಕಲ್ಪನೆ ಅಗತ್ಯವಿಲ್ಲ ಎಂಬ ಧೋರಣೆಯೂ ಇದೆ.

**ಸ್ತ್ರೀವಾದದ ಬೆಳವಣಿಗೆ:** ಮಹಿಳೆಯ ಶೋಷಣೆಯ ಐತಿಹಾಸಿಕತೆಗೆ ಅನುಗುಣವಾಗಿ ಸ್ತ್ರೀವಾದವೂ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತ ಬಂದಿದೆ. ಎಲ್ಲಿ ಸಾಮಾಜಿಕ ಬದಲಾವಣೆಗಳು ತ್ವರಿತಗತಿಯಲ್ಲಿ ಆಗುತ್ತ ಬಂದವೋ ಸ್ತ್ರೀವಾದದ ಮಜಲುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮಹಿಳಾ ಶೋಷಣೆಯ ಸ್ವರೂಪವನ್ನು ತಾತ್ವಿಕ ಶಿಸ್ತಿನ ಅಧ್ಯಯನ ಕ್ರಮವನ್ನಾಗಿ ರೂಪಿಸುವಲ್ಲಿ ಪಾಶ್ಚಾತ್ಯ ಸ್ತ್ರೀವಾದಿಗಳ ಕೊಡುಗೆ ಗಮನಾರ್ಹ. ಸ್ತ್ರೀವಾದಿ ಅಧ್ಯಯನವು

Digitised by Bharatavani, CIIL

ವ್ಯವಸ್ಥಿತ ಧರ್ಮಕ್ಕೆ, ರಾಜಕೀಯ ಸಿದ್ಧಾಂತಗಳಿಗೆ, ಕಲಾ ಸಿದ್ಧಾಂತಗಳಿಗೆ, ವೈಜ್ಞಾನಿಕ ಸಿದ್ಧಾಂತಗಳಿಗೆ ಪ್ರಬುದ್ಧ ಪ್ರತಿಕ್ರಿಯೆಯನ್ನು ತೋರಿದೆ. ಈ ಸಿದ್ಧಾಂತದ ಪುನರ್ ವಿಮರ್ಶೆಯ ಕಾರ್ಯವನ್ನು ಸ್ತ್ರೀವಾದ ದೊಡ್ಡ ರೀತಿಯಲ್ಲಿ ಕೈಗೆತ್ತಿಕೊಂಡಿದೆ. ಈ ನಿಟ್ಟಿನಲ್ಲಿ ಅದು ನಮ್ಮ ಸಂಸ್ಕೃತಿ, ಸಮಾಜ, ಚರಿತ್ರೆಗಳನ್ನು ಆರೋಗ್ಯಪೂರ್ಣವಾಗಿ ರೂಪಿಸುವ ಇತ್ಯರ್ಥಾತ್ಮಕ ಶಕ್ತಿಯಾಗಿ ಕೆಲಸ ಮಾಡುತ್ತಿದೆ. ಮಾನವ ಜ್ಞಾನದ ಎಲ್ಲೆಗಳನ್ನು ವಿಸ್ತರಿಸುವ ಹೊಣೆಗಾರಿಕೆ ಹೊತ್ತ ಸ್ತ್ರೀವಾದಿ ಚಿಂತನೆಯ ಬೆಳವಣಿಗೆಗೆ ಸೀಮಿತತೆಯನ್ನು ಕಲ್ಪಿಸಲು ಸಾಧ್ಯವಿಲ್ಲ. ಸ್ತ್ರೀವಾದವು ಪಶ್ಚಿಮವು ಹೇರುವ ಹುಸಿ ಸಾರ್ವತ್ರಿಕ ಪರಿಕಲ್ಪನೆಗಳನ್ನು ಚಾರಿತ್ರಿಕ ವೈವಿಧ್ಯಗಳ ಹಿನ್ನೆಲೆಯಲ್ಲಿ ವಿವೇಚನೆ ಮಾಡುತ್ತಲೇ ಬೇರೆ ಬೇರೆ ಸ್ವರೂಪವನ್ನು ಹೊಂದುತ್ತ ಬಂದಿದೆ. ಸ್ತ್ರೀವಾದಿ ಚಳುವಳಿಗಳು ಸ್ತ್ರೀವಾದದ ಬೆಳವಣಿಗೆಯ ಗತಿ ಹಾಗೂ ಸ್ವರೂಪವನ್ನು ನಿರ್ಧರಿಸಿವೆ.

ಸ್ತ್ರೀವಾದದ ಬೆಳವಣಿಗೆಯನ್ನು ನಿರ್ಧರಿಸುವ ಸ್ತ್ರೀವಾದಿ ಚಳುವಳಿಗಳ ತಾತ್ತ್ವಿಕತೆಯು ಕಾಲ ದೇಶ ಸಮಾಜ ಬದ್ಧವಾಗಿರುವುದನ್ನು ಗುರುತಿಸಬಹುದು. ಸ್ತ್ರೀವಾದಿ ಪ್ರಸ್ಥಾನಗಳು ರೂಪುಗೊಂಡವು. ಈ ಪ್ರಸ್ಥಾನಗಳನ್ನು ರೂಪಿಸಿದ ತಾತ್ತ್ವಿಕತೆಯ ಸ್ವರೂಪ ಹಾಗೂ ಅದನ್ನು ಸೃಷ್ಟಿಸಿದ ಸಾಮಾಜಿಕ ಸಂದರ್ಭಗಳನ್ನು ನೋಡೋಣ.

ಮೇರಿ ವುಲ್‌ಸ್ಟನ್ ಕ್ರಾಫ್ಟ್‌ಳಂತಹ ಅನೇಕ ಸ್ತ್ರೀವಾದಿಗಳು ಅನೇಕ ರೀತಿಯ ಮಹಿಳಾ ಪ್ರಶ್ನೆಗಳನ್ನು ಎತ್ತಿದರು. ಮಹಿಳೆಯರ ಬಗೆಗಿನ ತಪ್ಪು ನಂಬಿಕೆಗಳನ್ನು ಅವರು ಪ್ರಶ್ನಿಸಿದರು. ಮಹಿಳೆಯ ವಿಷಯದಲ್ಲಿ ತಾರತಮ್ಯ ನೀತಿಯಿಂದ ಕೂಡಿದ್ದ ನ್ಯಾಯಯುತವಲ್ಲದ ಅನೇಕ ಸಾಮಾಜಿಕ ರೂಢಿಗಳನ್ನು ಅವರು ಒಪ್ಪಲು ಸಿದ್ಧರಿರಲಿಲ್ಲ. ಮಹಿಳೆಯರ ಹಕ್ಕು ಬಾಧ್ಯತೆಗಳಿಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನವರು ಎತ್ತಿದರು. ಮಹಿಳೆ ಮತ್ತು ಪುರುಷನ ನಡುವಿನ ಸಂಬಂಧದ ಶೋಧವನ್ನು ಅವರು ಮಾಡಬಯಸಿದರು. ಮಹಿಳೆಯ ಸಾಮರ್ಥ್ಯ, ಸಾಧ್ಯತೆಗಳ ಕುರಿತು ವಿವರಿಸಿದರು. ಈ ಎಲ್ಲ ಪ್ರಯತ್ನಗಳ ಫಲವಾಗಿ 18ನೇ ಶತಮಾನದ ಹೊತ್ತಿಗೆ ಸ್ತ್ರೀವಾದಿ ಆಲೋಚನೆಯ ಪರಂಪರೆ ನಿರ್ದಿಷ್ಟ ಆಕಾರ ಪಡೆಯಿತು ಹುಟ್ಟಿಕೊಂಡಿತು. ಮಹಿಳೆಯ ಬದುಕನ್ನು ಭಿನ್ನ ರೀತಿಯಲ್ಲಿ ಗ್ರಹಿಸುವುದಕ್ಕೆ ಯೋಗ್ಯವಾದ ಸಾಮಾಜಿಕ ಸಂದರ್ಭವಿದ್ದಾಗ ಮಾತ್ರ ಸ್ತ್ರೀವಾದಿ ಚಿಂತನೆಗಳು ಚಿಗುರಲು ಸಾಧ್ಯ. ಅಂತೆಯೇ ಭಿನ್ನ ರೀತಿಯ ಸಾಮಾಜಿಕ ಸಂಬಂಧಗಳಲ್ಲಿ ಮಹಿಳೆಯನ್ನು ಗುರುತಿಸುವುದೂ ಅಷ್ಟೇ ಅಗತ್ಯ. ಮಹಿಳೆಯು ಅನ್ಯಾಯಯುತ ದಬ್ಬಾಳಿಕೆಗೆ ಗುರಿಯಾಗಿರುವುದನ್ನು ತಾತ್ತ್ವಿಕವಾಗಿ ಅರ್ಥೈಸಲು ಅವಕಾಶ ನೀಡುವ ಸಂದರ್ಭವಿದ್ದಾಗ ಮಾತ್ರ ಸ್ತ್ರೀವಾದಿ ಚಿಂತನೆಗಳು ರೂಪುಗೊಳ್ಳುತ್ತವೆ.

**ಮಾನವ ಹಕ್ಕುಗಳು – ಸ್ತ್ರೀವಾದಿ ಚಿಂತನೆ:** ವೈಯಕ್ತಿಕ ಜೀವನದ ಅನುಭವಗಳಿಂದ ಮಾತ್ರ ಮೇರಿ ವುಲ್‌ಸ್ಟನ್ ಕ್ರಾಫ್ಟ್‌ಳ ಬರವಣಿಗೆಗಳ ನಿಲುವು ರೂಪುಗೊಂಡಿಲ್ಲ. ಮಹಿಳೆಯರ ಬಗೆಗಿನ ಪುರುಷ ಕೇಂದ್ರಿತ ರಾಜಕೀಯ, ತಾತ್ತ್ವಿಕ ಅಪಕಲ್ಪನೆಗಳನ್ನು ವಿಮರ್ಶಾತ್ಮಕವಾಗಿ ಪ್ರತಿಭಟಿಸುವ ಪ್ರಯತ್ನವಾಗಿ ಆಕೆಯ ಸ್ತ್ರೀವಾದ ರೂಪುಗೊಂಡಿತು. ‘೦ ಗಿುಟಿಜುಥಿಚಿಣುಂಟಿ ಂಜಿ ಣುಜ ಖುಝುಣ ಂಜಿ ಘಂಟಚಿಟಿ’ ಕೃತಿಯಲ್ಲಿ ವುಲ್‌ಸ್ಟನ್ ಕ್ರಾಫ್ಟ್‌ಳು, ಮಹಿಳೆಯರೆಂದರೆ, ವೈಚಾರಿಕತೆಯಿಲ್ಲದ ಕೇವಲ ಭಾವನೆಗಳ ಮುದ್ದೆ ಎನ್ನುವ ಪುರುಷಾಭಿಪ್ರಾಯವನ್ನು ಖಂಡಿಸಿದಳು. ಮಹಿಳಾ ಶಿಕ್ಷಣದ ಬಗೆಗಿನ ರೂಸೋನ ವಿಚಾರಗಳನ್ನು ಆಕೆ ವಿಮರ್ಶಿಸುತ್ತಾಳೆ. ಪುರುಷ ಸಂಗಾತಿಗೆ ವಿಧೇಯಳಾಗಿದ್ದು, ಅವನನ್ನು ಸಂತೋಷಪಡಿಸುವುದಕ್ಕೆ ಬೇಕಾದ ನಿಷ್ಠೆ, ಸದ್ಗುಣಗಳನ್ನು ಬೆಳೆಸುವ ಶಿಕ್ಷಣವೇ ಹೆಣ್ಣಿಗೆ ದೊರಕಬೇಕೆಂದ ರೂಸೋನನ್ನು ವಿರೋಧಿಸುತ್ತ ಮಾನವ ಸದ್ಗುಣಗಳು ತಮ್ಮಷ್ಟಕ್ಕೆ ತಾವೇ ಮುಖ್ಯವೇ ಹೊರತು ಅವುಗಳನ್ನು ನಿರ್ದಿಷ್ಟ ಲಿಂಗದ ಸಂಬಂಧಿತ ಗುಣಗಳಾಗಿ ಪರಿಗಣಿಸಬಾರದೆಂದು ವುಲ್‌ಸ್ಟನ್ ಕ್ರಾಫ್ಟ್ ಹೇಳುತ್ತಾಳೆ. ಸದ್ಯದ ಸಾಮಾಜಿಕ ವಾಸ್ತವದಲ್ಲಿ ಪುರುಷರಿಗಿಂತ ಮಹಿಳೆಯು ವೈಚಾರಿಕವಾಗಿ ಕೆಳಸ್ತರದವಳು ಎನ್ನುವುದು ನಿಜ ಎಂದು ಆಕೆ ಒಪ್ಪುತ್ತಾಳೆ. ಆದರೆ ಇದು ಸಿದ್ಧ ಸ್ಥಿತಿ ಅಲ್ಲವೆನ್ನುವುದು ಆಕೆಯ ವಾದ. ಶಿಕ್ಷಣದ ಮೂಲಕ ವೈಚಾರಿಕತೆಯನ್ನು ಬೆಳೆಸಿಕೊಳ್ಳಲಾಗದ ಸ್ಥಿತಿಗೆ ಮಹಿಳೆಯನ್ನು ದೂಡಿದ ಸಾಮಾಜಿಕ ಪರಿಸ್ಥಿತಿಯೇ ಮಹಿಳೆಯ ಬಗೆಗಿನ ಇಂಥ ಅಪಕಲ್ಪನೆಗಳಿಗೆ ಕಾರಣವೆಂದು ಆಕೆ ಭಾವಿಸುತ್ತಾಳೆ. ಪುರುಷನಾಗಲಿ ಮಹಿಳೆಯಾಗಲಿ ವೈಚಾರಿಕತೆಯನ್ನು ಸ್ವಪ್ರಯತ್ನದಿಂದ ರೂಢಿಸಿಕೊಂಡು ವ್ಯಕ್ತಿತ್ವದ ಪರಿಪೂರ್ಣತೆ ಯನ್ನು ಸಾಧಿಸಬಹುದೆಂದು ಆಕೆಯ ತಿಳುವಳಿಕೆ.

ತಮ್ಮ ಕಾಲದ ರಾಜಕೀಯ ತಾತ್ತ್ವಿಕ ಚಿಂತನೆಗಳೊಂದಿಗೆ ಪರ–ವಿರೋಧವುಳ್ಳ ದ್ವಂದ್ವಾತ್ಮಕ ಸಂಬಂಧವನ್ನು ಸ್ತ್ರೀವಾದಿಗಳೂ ಹೊಂದಿದ್ದರು. ಅವುಗಳನ್ನು ಬಳಸಿಯೂ ವಿಮರ್ಶಾತ್ಮಕವಾಗಿ ಪ್ರಶ್ನಿಸುವ ಬಗೆಯನ್ನು ನಾವು ಕಾಣಬಹುದು. ‘ಪುರುಷನ ಹಕ್ಕು’ಗಳು ಏಕೆ ಮಹಿಳೆಯರನ್ನು ಒಳಗೊಂಡಿಲ್ಲ ಎಂಬ ಪ್ರಶ್ನೆಯನ್ನು ವುಲ್‌ಸ್ಟನ್ ಕ್ರಾಫ್ಟ್‌ಳಂಥ ಸ್ತ್ರೀವಾದಗಳು ಎತ್ತಿದರು. ಇಷ್ಟಾದರೂ ವರ್ಗ ಸಮಸ್ಯೆಯನ್ನು ತಾನು ಎತ್ತುವ ಪ್ರಶ್ನೆಗಳಲ್ಲಿ ಆಕೆ ಮುಖ್ಯ ವಾಗಿಟ್ಟುಕೊಳ್ಳಲಿಲ್ಲ. ಮಧ್ಯಮ ವರ್ಗದ ಮಹಿಳೆಯರ ಮನೆಗಳಲ್ಲಿ ಕೆಲಸ ಮಾಡುವ ಸೇವಕಿಯರ ಬದುಕಿನ ಬವಣೆಗಳು ಆಕೆಯ ಚಿಂತನೆಯ ಪರಿಧಿಯಾಚೆಯೇ ಉಳಿದವು. ವೈಯಕ್ತಕವಾಗಿ ವೈವಾಹಿಕ ಸಮಸ್ಯೆಗಳನ್ನಾಕೆ ಎದುರಿಸಿದರೂ ಅವು ಅವಳ ಚಿಂತನೆಯಲ್ಲಿ ಪ್ರಮುಖ ಸ್ಥಾನ ಪಡೆಯಲಿಲ್ಲ. ಜೈವಿಕ ಲಿಂಗತ್ವ (ಜಥ) ಹಾಗೂ ಲಿಂಗಾಧಾರಿತ ವ್ಯವಸ್ಥೆ (ರಜಟಿಜಜಡಿ)ಯನ್ನು ಸಿದ್ಧಸ್ಥಿತಿಯಲ್ಲವೆಂದೂ ಕೇವಲ ಆಕಸ್ಮಿಕವೆಂದು ಆಕೆ ಭಾವಿಸಿದಳು. ಪೂರ್ಣ ಮಾನವತ್ವ ಸಾಧಿಸುವ ದೆಸೆಯಲ್ಲಿ ಅವು ಅಪ್ರಸ್ತುತವೆಂದು ಆಕೆ ನಿರಾಕರಿಸಿದಳು. ಆದರೂ ತನ್ನ ಕಾಲದ ಉದಾರವಾದಿ ಸರ್ವಸಮಾನತಾವಾದಿ ತಾತ್ತ್ವಿಕ ಚಿಂತನೆಗಳನ್ನು ಕ್ರಿಯಾತ್ಮಕವಾಗಿ

Digitised by Bharatavani, CIIL

ಬಳಸಿಕೊಂಡ ವುಲ್‌ಸ್ಟನ್ ಕ್ರಾಫ್ಟ್‌ಳ ಪ್ರಯತ್ನವು ಸ್ತ್ರೀವಾದಕ್ಕೆ ಕೇಂದ್ರಬಿಂದುವಾಗಿ ನಿಲ್ಲುತ್ತದೆ.

ಸ್ತ್ರೀವಾದಿ ಚಿಂತನೆಯ ಬೆಳವಣಿಗೆಯನ್ನು ಅರಿಯುವುದಕ್ಕೆ ಸಹಾಯಕವಾಗುವ ಪ್ರಮುಖ ಚಿಂತನಾ ಶಿಸ್ತುಗಳೆಂದರೆ ಮಾರ್ಕ್ಸ್‌ವಾದ ಹಾಗೂ ಮನೋವಿಶ್ಲೇಷಣೆ. ಮಾರ್ಕ್ಸ್‌ವಾದವು ಮಹಿಳೆಯನ್ನು 'ಹತ್ತಿಕ್ಕಲ್ಪಟ್ಟ ಸಾಮಾಜಿಕ ವರ್ಗ'ವೆಂದು ಭಾವಿಸುತ್ತದೆ. ಮಹಿಳೆಯರ ಗಮನಕ್ಕೂ ವರ್ಗದ ಮಗ ನಕ್ಕೂ ಇರುವ ಸಂಬಂಧದ ಬಗ್ಗೆ ಮಾರ್ಕ್ಸ್‌ವಾದ ಕೆಲ ಪ್ರಶ್ನೆಗಳನ್ನೆತ್ತುತ್ತದೆ. ಉದಾರತಾವಾದ, ಸಮಾನತಾವಾದಗಳಂತಹ ತತ್ತ್ವಗಳ ಮರೆಯಲ್ಲಿ ಸಾಮಾಜಿಕ ಅಸಮಾನತೆಯನ್ನು ಸಮರ್ಥಿಸುವ, ಸ್ಥಿರೀಕರಿಸುವ ಪ್ರಯತ್ನಗಳಿರುವುದನ್ನು ಮಾರ್ಕ್ಸ್‌ವಾದ ಪತ್ತೆ ಹಚ್ಚುತ್ತದೆ. ಗಂಡಸುತನ ಹಾಗೂ ಹೆಂಗಸುತನವನ್ನು ರೂಪಿಸುವ ಮಾನಸಿಕ ಸಂರಚನೆಯ ಬಗೆಗೆ ಫ್ರಾಯ್ಡನ ಸಿದ್ಧಾಂತಗಳನ್ನು ಮಹಿಳೆಯರ ಸಂದರ್ಭಗಳನ್ನು ಅರ್ಥೈಸುವಲ್ಲಿ ಅವು ಸಹಾಯಕವಲ್ಲವೆಂದು ಅವನ್ನು ನಿರಾಕರಿಸುತ್ತಾರೆ. ಆದರೆ ಮಾರ್ಕ್ಸ್‌ವಾದ ಹಾಗೂ ಫ್ರಾಯ್ಡ್ ಸಿದ್ಧಾಂತಗಳೇ ಪರಸ್ಪರ ವಿರೋಧಾತ್ಮಕ ತುಯ್ತವನ್ನು ಹೊಂದಿದ್ದು, ಅವನ್ನು ವಿರೋಧಿಸುವ ಸ್ತ್ರೀವಾದಿ ಚಿಂತನೆಗಳಲ್ಲಿಯೂ ಅಕ್ಷೇಪವೇನೆಂದರೆ, ಈ ವಾದಗಳು ಮಹಿಳೆಯ ಬದುಕನ್ನು ಅರ್ಥಮಾಡಿಕೊಳ್ಳಲು ಎತ್ತುವ ಅನೇಕ ಮಹತ್ವದ ಪ್ರಶ್ನೆಗಳಿಗೆ ಉತ್ತರಿಸದೆ ಅಂಚಿಗೆ ತಳ್ಳುತ್ತವೆ ಎನ್ನುವುದು.

ಬದಲಾಗುತ್ತಿರುವ ಸಾಮಾಜಿಕ ಸಂದರ್ಭಕ್ಕೆ ಅನುಗುಣವಾಗಿ ಕೆಲವು ಮುಖ್ಯ ಪ್ರಶ್ನೆಗಳನ್ನು ಸ್ತ್ರೀವಾದಿಗಳು ಎತ್ತಿದರೂ 20ನೇ ಶತಮಾನದ ಸ್ತ್ರೀವಾದಿ ಚಿಂತನೆಯು ಮಹಿಳೆಯ ತಾಯ್ತನದ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಕೆಲ ಪ್ರಶ್ನೆಗಳನ್ನೆತ್ತಿತು. ತಾಯ್ತನವನ್ನು ಮಹಿಳೆಯ ವಿಶೇಷ ವಲಯವೆಂದು ಭಾವಿಸುತ್ತ ಅದರ ಸಮಸ್ಯೆಗಳನ್ನು ಕಡೆಗಣಿಸಿದ ಅನೇಕ ತಾತ್ತ್ವಿಕ ಚಿಂತನೆಗಳಿ ಸಾಂಪ್ರದಾಯಿಕತೆಯನ್ನು ಸ್ತ್ರೀವಾದಿಗಳು ವಿರೋಧಿಸಿದರು.

**ಸ್ತ್ರೀವಾದಿ ಸಿದ್ಧಾಂತಗಳು – ಉದಾರವಾದಿ ಸಿದ್ಧಾಂತ:** ವಿಜ್ಞಾನವು ಅಧಿಕಾರ ವಿಸ್ತರಿಸಿರುವ ಕಲ್ಪನೆಯು ಪಾಶ್ಚಾತ್ಯ ರಾಷ್ಟ್ರಗಳ ವಸಾಹತೀಕರಣ ಪ್ರಕ್ರಿಯೆಯಲ್ಲಿ ಸ್ಪಷ್ಟವಾಗಿ ಆಗುತ್ತದೆ. ವಸಾಹತುಗಳಿಂದ ಅವ್ಯಾಹತವಾಗಿ ಸಾಗಿಬರುತ್ತಿರುವ ಸಂಪತ್ತಿನಿಂದಾಗಿ ಐರೋಪ್ಯ ದೇಶಗಳಲ್ಲಿ ಸಾಮಾಜಿಕ ಬದಲಾವಣೆ ಉಂಟಾಯಿತು. ಮೊದಲಿದ್ದ ಜಮಿನುದಾರಿ ಪದ್ಧತಿ, ಅರಸೊತ್ತಿಗೆಯ ಬೆಂಬಲದ ಧಾರ್ಮಿಕ ವ್ಯವಸ್ಥೆಗಳಲ್ಲಿ ದೊಡ್ಡ ಬಿರುಕುಂಟಾಯಿತು. ನವ ಬಂಡವಾಳಶಾಹಿ ವರ್ಗವು ರೂಪುಗೊಳ್ಳುತ್ತಿದ್ದ ಹಿನ್ನೆಲೆಯಲ್ಲಿ, ಕ್ಯಾಥೋಲಿಕ್ ಕ್ರಿಷ್ಚಿಯನ್ ಧರ್ಮದ ಪ್ರಾಧಾನ್ಯವಾಗಲಿ, ಭೂಮಾಲೀಕರ ದೌರ್ಜನ್ಯ ವಾಗಲಿ ಮೊದಲಿನಂತೆ ಮುಂದುವರೆಯುವುದು ಅಸಾಧ್ಯವಾಯಿತು. ಪ್ರಾಟೆಸ್ಟೆಂಟ್ ಪಂಥದ ಸ್ಥಾಪನೆ ಹಾಗೂ ವೈಜ್ಞಾನಿಕ ಸಿದ್ಧಾಂತಗಳ ಪ್ರತಿಪಾದನೆಯು ಸಂಪ್ರದಾಯಿಕ ಲೋಕಗ್ರಹಿಕೆಯನ್ನು ಬದಲಿಸಿಟ್ಟಿತು. ಇದೊಂದು ವೈಚಾರಿಕ ಕ್ರಾಂತಿ. ಇಂಥ ಸಂದರ್ಭದಲ್ಲಿ ಉದಾರವಾದಿ ಮಾನವತಾವಾದವು ಮುಂದೆ ಬಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬೌದ್ಧಿಕ ಸಾಮರ್ಥ್ಯ ಹಾಗೂ ದುಡಿಮೆಗಳೇ ದೈವವಾದವು. ಅದಕ್ಕೆ ಅನುಗುಣವಾಗಿ ಹಕ್ಕು ಬಾಧ್ಯತೆಯ ಪ್ರಶ್ನೆಗಳು ಎದ್ದವು. ಜನ್ಮಸಿದ್ಧ ಅಧಿಕಾರಕ್ಕಿಂತ ಶಾರೀರಿಕವಾಗಿಯೂ ಬೌದ್ಧಿಕವಾಗಿಯೂ ಸಮರ್ಥನಿದ್ದ ವ್ಯಕ್ತಿಗೆ ಮಾತ್ರ 'ಹಕ್ಕುಗಳೆಂಬ 'ಅಧಕಾರ'ದ ಹೊಸ ನಿರ್ವಚನ ರೂಪುಗೊಂಡಿತು. ಈ ಜಗತ್ತನ್ನು, ಅದರ ಸಾಮಾಜಿಕ ಸಾಂಸ್ಕೃತಿಕ ಸಂರಚನೆಯನ್ನು ಬುದ್ಧಿಪೂರ್ವಕವಾಗಿ, ತಾರ್ಕಿಕವಾಗಿ ಕಟ್ಟಬಲ್ಲೆವೆಂಬ ಹುಮ್ಮಸ್ಸಿನ ಕಾಲವದು. ಧಾರ್ಮಿಕಯುಗದ ಪಾಶ್ಚಾತ್ಯ ತಾತ್ತ್ವಿಕತೆಗಿಂತ ವಿಜ್ಞಾನಪ್ರಚಾರ ಯುಗದ ತಾತ್ತ್ವಿಕತೆಯು ವಿದಾಸವಾದವನ್ನು, ಬದಲಾವಣೆಯನ್ನುಳ್ಳ ಸಾಮಾಜಿಕ ಸಂರಚನೆಗಳನ್ನು ಅಪೇಕ್ಷಿಸುವಂತಾಯಿತು.

1791ರಲ್ಲಿ ರಚಿತವಾದ ಮೇರಿ ವುಲ್‌ಸ್ಟನ್ ಕ್ರಾಫ್ಟ್‌ಳ ಶಕ್ತಿಶಾಲಿ ಕೃತಿ 'A Vindication of the Rights of Women' ಮಹಿಳಾ ಪ್ರಶ್ನೆಯನ್ನು ಗಂಭೀರವಾಗಿ ಚರ್ಚಿಸುತ್ತದೆ. ಮಹಿಳೆಯರ ಹಕ್ಕು ಬಾಧ್ಯತೆಗಳನ್ನು ಮಹಿಳೇಯರೇ ಗುರುತಿಸಿಕೊಳ್ಳುವ, ಆ ಮೂಲಕ ಒತ್ತಾಯದ ಬೇಡಿಕೆಗಳನ್ನಿಡುವ ಸಾಧ್ಯತೆಯನ್ನು ಈ ಕ್ರಾಂತಿ ಹೋರಾಟ ಗಾರ್ತಿಯರಿಗೆ ತೋರಿಸಿಕೊಟ್ಟಿತು. ತನ್ನ ಹಕ್ಕುಗಳ ಬಗ್ಗೆ ಜಾಗೃತನಾಗಿರುವ ಗಂಡಸು ಅದನ್ನು ಕಾಪಾಡಿಕೊಳ್ಳುವ ಹುನ್ನಾರಿನಲ್ಲಿ ಮಹಿಳೆಯ ಸ್ಥಾನಮಾನಗಳನ್ನು ಯಥಾಸ್ಥಿತಿಯಲ್ಲಿ ಇರಿಸುವುದರ ಬಗ್ಗೆ ಹೇಗೆ ಆಸಕ್ತನೆಂಬುದನ್ನು ಸೋದಾಹರಣವಾಗಿ ಅಕೆ ಈ ಕೃತಿಯಲ್ಲಿ ನಿರೂಪಿಸುತ್ತಾಳೆ.

ಪುನರುತ್ಥಾನ ಕಾಲದ ಅನಂತರ ಬಂದ ಪುರುಷ ಉದಾರವಾದ ಚಿಂತಕರ ವಾದದ ಮಿತಿಗಳನ್ನು ಮೇರಿ ವುಲ್‌ಸ್ಟನ್ ಕ್ರಾಫ್ಟ್ ಸ್ಪಷ್ಟಪಡಿಸುತ್ತಾಳೆ. ಹಾಬ್ಸ್, ಲಾಕೆ ಮತ್ತು ರೂಸೋ ಅಧಿಕಾರ ಕೇಂದ್ರೀಕರಣದ ವಿರುದ್ಧ ಮಾತನಾಡಿದರು ನಿಜ ಆದರೆ ಆದರ್ಶ ಪ್ರಜಾಸತ್ತಾತ್ಮಕ ರಾಜ್ಯದ ಕಲ್ಪನೆಯಲ್ಲಿ ಅತ್ಯಂತ ಪ್ರಗತಿ ವಿರೋಧಿ ಧೋರಣೆಗಳನ್ನು ಮಹಿಳೆಯ ವಿಷಯಕ್ಕೆ ಸಂಬಂಧಿಸಿದಂತೆ ಹುಟ್ಟು ಹಾಕಿದರು. ಕುಟುಂಬ ಸಂಸ್ಥೆಯ ಸಿದ್ಧ ಮಾದರಿ ಯೊಳಗೆ ಮಹಿಳೆಯಿಂದ ಪುರುಷನಿಗೆ ದೊರೆಯುವ ಸವಲತ್ತುಗಳನ್ನು ಬಿಟ್ಟುಕೊಡಲು ಈ ಚಿಂತಕರು ಸಿದ್ಧರಿರಲಿಲ್ಲ. ಅವರ ಚಿಂತನೆಯ ಧಾಟಿ ಇಂತಿದೆ. ಕುಟುಂಬವೆಂಬ ನೈಸರ್ಗಿಕ ಸಂಸ್ಥೆಯಲ್ಲಿ ಪತ್ನಿ ಹಾಗೂ ಮಕ್ಕಳ ಮೇಲೆ ಇರುವ ಗಂಡನ ಅಧಿಕಾರ ನೈಸರ್ಗಿಕವಾದುದು. ಹಾಗಾಗಿ ಅದು ಪ್ರಶ್ನಾತೀತ. ಗರ್ಭಧಾರಣೆಯ ನಿಮಿತ್ತ, ಪುರುಷನಂತೆ ಮೂಲಭೂತ ಅಧಿಕಾರ ಚಲಾಯಿಸಲು ದೈಹಿಕ ಅಡಚಣೆಯುಳ್ಳ ಮಹಿಳೆಗೆ ಸಾಧ್ಯವಾಗದು. ಸ್ತ್ರೀಯ ವಿದ್ಯಾಭ್ಯಾಸವು ಕೂಡ ಗಂಡನನ್ನು ಆದರಿಸಿ ಪ್ರೀತಿಸಲು, ಮಕ್ಕಳನ್ನು ಯೋಗ್ಯರನ್ನಾಗಿ ಬೆಳೆಸಲು ಅನುಕೂಲಕರವಾಗಿರುವ ಹಾಗೆ ಇರಬೇಕು. ಹೀಗೆ ಸ್ವಾತಂತ್ರ್ಯ, ಸಮಾನತೆ ಕುರಿತು ಪುರುಷ ಪರಿಕಲ್ಪನೆಗಳು ಎಷ್ಟೇ ಮುಕ್ತವಿದ್ದರೂ ಮಹಿಳೆಯನ್ನೂ ಒಳಗೊಂಡ ಸಮಗ್ರ ಲೋಕದ ಚಿಂತನೆ ನಡೆಯಲಿಲ್ಲ. ಉದಾರವಾದಿ ಸ್ತ್ರೀವಾದವನ್ನು ರೂಪಿಸಿದ ಚಿಂತಕಿಯರು ಈ ಮಿತಿಯನ್ನು ದಾಟುವಲ್ಲಿ ನಡೆಸಿದ ಪ್ರಯತ್ನ ಗಮನಾರ್ಹವಾದುದು.

Digitised by Bharatavani, CIIL

ಉದಾರವಾದಿ ಸ್ತ್ರೀವಾದದ ಮತ್ತೊಬ್ಬ ಪ್ರಮುಖ ಚಿಂತಕರೆಂದರೆ 'ದಿ ಸಬ್ಜೆಕ್ಷನ್ ಅಫ್ ವಿಮೆನ್' ಕೃತಿಯ ಕರ್ತೃ ಹ್ಯಾರಿಯಟ್ ಟೇಲರ್ ಮಿಲ್ಸ್. ಇವರಿಬ್ಬರೂ ಅಸಾಂಪ್ರದಾಯಿಕವೆನ್ನಬಹುದಾದ ಜೀವನವನ್ನು ನಡೆಸಿದ ದಂಪತಿಗಳು. "ಉದಾರಮತವಾದದ ತತ್ತ್ವಜ್ಞಾನವು ಸ್ತ್ರೀಯರಿಗೂ ಅನ್ವಯಿಸುವ ತತ್ತ್ವಜ್ಞಾನ" ಎನ್ನುವ ಮಿಲ್ಸ್, ಕುಟುಂಬದಾಚೆಗೆ ಮಹಿಳೆಯ ಬದುಕು ವಿಸ್ತರಿಸುವಲ್ಲಿ ಆಕೆಗೆ ನಿಜವಾದ ಸ್ವಾತಂತ್ರ್ಯವಿದೆ ಎಂದು ಅಭಿಪ್ರಾಯ ಪಡುತ್ತಾಳೆ. ಪಾಲನೆಯ ಏಕಮಾತ್ರ ಕೇಂದ್ರವಾಗಿ ಕುಟುಂಬದಲ್ಲಿ ಮುಖ್ಯ ಪಾತ್ರ ವಹಿಸುವ ಮಹಳೆಯರಿಗೆ ಅದರಾಚಿನ ಸಾಧ್ಯತೆಗಳ ಬಗೆಗೆ ಆಲೋಚಿಸುವಂತೆ ಆಕೆ ಕರೆ ಕೊಡುತ್ತಾಳೆ. ಒಂದು ರೀತಿಯಲ್ಲಿ ವಿವಾಹವೆಂದರೆ, ಸ್ತ್ರೀಯ ಕುಟುಂಬದ, ಮನೆಯ ವ್ಯವಸ್ಥೆಗೆ ಬದ್ಧಳಾಗುಳಿವ ಒಪ್ಪಂದ ಎಂದು ಆಕೆ ವ್ಯಾಖ್ಯಾನಿಸುತ್ತಾಳೆ. ಸ್ತ್ರೀಗೆ ಸ್ವಂತದ ವ್ಯವಸಾಯವಿರಬೇಕು. ಮನೆಯಾಚೆಗಿನ ದುಡಿಮೆ ಮಾತ್ರ ಆಕೆಯ ದುಡಿಮೆಗೆ ಮಾನ್ಯತೆ ತರಬಲ್ಲದೆಂದು ಟೇಲರ್‌ನ ವಾದ. ಸ್ವಾತಂತ್ರ್ಯವೆಂದರೆ, ದುಡಿಮೆಗೆ ಅರ್ಹ ಮಾನ್ಯತೆ ಎಂದು ಆಕೆ ಅರ್ಥೈಸುತ್ತಾಳೆ. ಆದರೆ ದುಡಿಮೆಯು ಅನಿವಾರ್ಯತೆಗಳಿಂದಾಗಿ ಒತ್ತಾಯದ ಒತ್ತಡಗಳಲ್ಲಿ ಸಿಲುಕಿದಾಗ ದೊರಕುವ ಅಂಥ ಸ್ವಾತಂತ್ರ್ಯವು ಅರ್ಥಹೀನವೆಂಬ ಭಿನ್ನ ಆಲೋಚನೆ ಸ್ಟುವರ್ಟ್ ಮೀಲ್‌ನದು. ದುಡಿಮೆಯನ್ನು ಇಚ್ಛೆಗೆ ಅನುಸಾರವಾಗಿ ಮಾಡುವ ಇಲ್ಲವೆ ಬಿಡುವ ಸ್ವಾತಂತ್ರ್ಯವೇ ಮಹಿಳೆಯ ಮಟ್ಟಿಗೆ ನೈಜ್ಯ ಸ್ವಾತಂತ್ರ್ಯ ಎಂಬ ಅಭಿಪ್ರಾಯ ಆತನದು.

**ಮಾರ್ಕ್ಸ್‌ವಾದಿ ಸ್ತ್ರೀವಾದ:** ಆಂಗ್ಲ–ಅಮೆರಿಕ ಮತ್ತು ಐರೋಪ್ಯ ದೇಶಗಳ ಉದಾರಮಾನವತಾವಾದಿ ಚಿಂತನೆಯ ಮೂಲದ ಸ್ತ್ರೀವಾದವು ವಿಚಾರಮೂಲ ಸಿದ್ಧಾಂತದ ನೆಲೆಯಿಂದ ರೂಪುಗೊಂಡಿದೆ. ವ್ಯಕ್ತಿಯ ಮನಸ್ಸು ಮತ್ತು ಲೈಂಗಿಕತೆಯ ವಿಶ್ಲೇಷಣೆಯೇ ಉದಾರವಾದಿ ಸ್ತ್ರೀವಾದದ ತಾತ್ತ್ವಿಕ ಹಿನ್ನೆಲೆಗಿದ್ದು ಪರಿಸರದ ಪ್ರಭಾವವನ್ನು ನಿರ್ಲಕ್ಷಿಸಲಾಯಿತು. ಈ ತಾತ್ತ್ವಿಕ ಮಿತಿಯನ್ನು ನೀಗಿಕೊಂಡು ವಸ್ತುನಿಷ್ಠ ಸ್ತ್ರೀವಾದಿ ಚಿಂತನೆಯನ್ನು ಕಟ್ಟಿಕೊಳ್ಳುವಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸರ ಸಾಮಾಜಿಕ ಚಿಂತನೆಗಳನ್ನು ಬಳಸಿಕೊಳ್ಳಲಾಗಿದೆ. ಕುಟುಂಬದೊಳಗಿನ ಮಹಿಳೆಯ ಆರ್ಥಿಕ, ಭೌತಿಕ ಶೋಷಣೆಯನ್ನೇ ವರ್ಗ ಸಮಾಜಕ್ಕೂ ವಿಸ್ತರಿಸಿ ತಮ್ಮ ಸಾಮಾಜಿಕ ಚಿಂತನೆಗಳನ್ನು ಮಾರ್ಕ್ಸ್ ಮತ್ತು ಏಂಗೆಲ್ಸ್ ರೂಪಸಿಕೊಂಡರು. ಸಾಮಾಜಿಕ ವ್ಯವಸ್ಥೆಯ ಸಮಗ್ರ ಪರಿವರ್ಗನೆಯ ಮೂಲಕ ಮಾತ್ರ ಸರ್ವಸಮಾನತೆ ಯನ್ನಾಧರಿಸಿದ ಸಮಾಜವನ್ನು ಕಟ್ಟಲು ಸಾಧ್ಯವೆಂದು ಇವರಿಬ್ಬರೂ ನಂಬಿದ್ದರು. ಈ ನಂಬಿಕೆಯನ್ನೇ ಮಾರ್ಕ್ಸ್‌ವಾದಿ ಸ್ತ್ರೀವಾದದಲ್ಲಿ ಕಾಣುತ್ತೇವೆ. ಲಿಂಗಾಧಾರಿತ ಶ್ರಮವಿಭಜನೆಯ ಸಿದ್ಧಾಂತವನ್ನಾಧರಿಸಿ ಸ್ತ್ರೀ–ಪುರುಷರೊಳಗಿನ ಸಾಮಾಜಿಕ ಅಸಮಾನತೆಯ ಸ್ವರೂಪವನ್ನು ಪ್ರಧಾನವಾಗಿ ಮಾರ್ಕ್ಸ್‌ವಾದಿ ಸ್ತ್ರೀವಾದ ವಿಶ್ಲೇಷಿಸುತ್ತದೆ.

ಬ್ರಿಟನ್ನಿನ ಜೂಲಿಯಟ್ ಮಿಚೆಲ್, ಶೀಲಾ ರೋಬೋತಮ್, ಮಿಶಿಲ್ ಬ್ಯಾರಲ್‌ರು ಮಾರ್ಕ್ಸ್‌ವಾದದ ಸಾಂಪ್ರದಾಯಿಕ ಚಿಂತನೆಯ ಮಿತಿಯನ್ನು ಗುರುತಿಸಿ ಅದಕ್ಕೆ ಹೊಸ ಸ್ವರೂಪ ನೀಡಿದರು. ಕುಟುಂಬದೊಳಗಿನ ಶ್ರಮ ವಿಭಜನೆಯಲ್ಲಿನ ತಾರತಮ್ಯವು ಪಿತೃಪ್ರಾಧಾನ್ಯತೆಗೆ ಎಡೆಮಾಡಿಕೊಡುವ ಸ್ವರೂಪವನ್ನು ಮಾರ್ಕ್ಸ್‌ವಾದ ಸ್ಪಷ್ಟಪಡಿಸುತ್ತದೆ. ಸಾರ್ವಜನಿಕ ಉತ್ಪಾದನೆಯಲ್ಲಿ ಹೆಣ್ಣು ಭಾಗವಹಿಸುವಂತೆ ಮಾಡುವ ನಾಗರಿಕ ಕುಟುಂಬ ಪದ್ಧತಿಯಲ್ಲಿನ ಹೆಣ್ಣಿನ ಶೋಷಣೆಯ ಸ್ವರೂಪದ ಆಧಾರದ ಮೇಲೆಯೇ ವರ್ಗಶೋಷಣೆಯ ಸ್ವರೂಪವನ್ನು ಮಾರ್ಕ್ಸ್ ಮತ್ತು ಏಂಗೆಲ್ಸ್ ನಿರ್ಧರಿಸುತ್ತಾರೆ. ಆದರೆ ಮಹಿಳೆಯರ ಗೃಹಕೃತ್ಯವೂ ಸೇರಿದಂತೆ ಅಪಾರವಾದ ಕಾರ್ಯಚಟುವಟಿಕೆಗಳನ್ನು ಮಾರ್ಕ್ಸ್–ಏಂಗೆಲ್ಸ್ ಪರಿಗಣಿಸುವುದೇ ಇಲ್ಲವೆನ್ನುತ್ತಾರೆ ಸ್ತ್ರೀವಾದಿಗಳು. ಮಕ್ಕಳ ಪಾಲನೆ, ಪೋಷಣೆ, ಆಹಾರ ಸಿದ್ಧಪಡಿಸುವಿಕೆ, ಸಂತಾನೋತ್ಪತ್ತಿ, ಮನೆಗೆಲಸ ಇವುಗಳಿಗೆ ದುಡಿಮೆಯ ಬೆಲೆಯಾಗಲಿ ಮಿಗುತಾಯ ಮೌಲ್ಯವಾಗಲಿ ಇಲ್ಲದಿರುವುದನ್ನು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಗಮನಿಸಿದರು. ಮನೆಯ ಒಳಗಿನ ದುಡಿಮೆ ಹಾಗೂ ಜವಾಬ್ದಾರಿಗಳು ಮಹಳೆಯರು ಸಾರ್ವಜನಿಕ ಉತ್ಪಾದನೆಯಲ್ಲಿ ಭಾಗವಹಿಸದಂತೆ ಮಾಡುತ್ತವೆ. ಹಾಗೂ ದುಡಿಯುವಂತಾದಾಗ ಆಕೆಗೆ ಕಡಿಮೆ ಕೌಶಲ್ಯದ ಅರಕಾಲಿಕ ಉದ್ಯೋಗಗಳಿಗೆ ಹೊರಳಿಕೊಳ್ಳುವ ಅನಿವಾರ್ಯತೆಯನ್ನು ಸೃಷ್ಟಿಸಲಾಗುತ್ತದೆ. ಸಂತತಿ ಪಾಲನೆಯ ಜವಾಬ್ದಾರಿಯನ್ನು ಸಮುದಾಯ ವಹಿಸಿಕೊಂಡಲ್ಲಿ, ಮಹಿಳೆಯ ಉದ್ಯೋಗಾವಕಾಶಗಳು ವಿಸ್ತರಿಸಲು ಸಾಧ್ಯವೆಂಬ ನಿಲುವು ಮಾರ್ಕ್ಸ್‌ನದು. ಆದರೆ ಪ್ರಾಯೋಗಿಕವಾಗಿ ಅದಿನ್ನೂ ಸಾಧ್ಯವಾಗದಂತಹ ಸಾಮಾಜಿಕ ಸಂದರ್ಭದಲ್ಲಿ, ಮಹಿಳೆಯ ಇಬ್ಬಗೆಯ ದುಡಿತದಿಂದ ಹೆಚ್ಚು ಶೋಷಿತಳಾಗುತ್ತಿದ್ದಾಳೆಂದು ಮಾರ್ಕ್ಸ್‌ವಾದಿ ಸ್ತ್ರೀ ವಾದಿಗಳು ಗುರುತಿಸಿದ್ದಾರೆ. ವರ್ಗಸಂಘರ್ಷವುಳ್ಳ ಸಾಮಾಜಿಕತೆಯೊಳಗೇ ಮಹಿಳೆಯ ಮೇಲಿನ ಇಬ್ಬಗೆಯ ಶೋಷಣೆ ಗೌಣವಾಗಬಹುದಾದ ಅಪಾಯವನ್ನು ಸ್ತ್ರೀವಾದಿಗಳು ಕಂಡರು. ಮಾರ್ಕ್ಸ್‌ವಾದಿ ಚಿಂತನೆಯ ಹಿನ್ನೆಲೆಯಲ್ಲಿಯೇ ಗೌಣ ನೆಲೆಯಿಂದ ಪ್ರಧಾನನೆಲೆಗೆ ತಂದ ಮಹಿಳೆಯ ದುಡಿತದ ಪ್ರಶ್ನೆಯನ್ನು ಸ್ತ್ರೀವಾದದ ಕೇಂದ್ರ ಕಾಳಜಿಯಾಗಿ ಇಟ್ಟ ಕೊಳ್ಳಲಾಯಿತು.

ಮಾರ್ಕ್ಸ್‌ನ ವಿಚಾರಗಳೂ ಸ್ತ್ರೀ ವಿರೋಧಿಯೇನೋ ಅಲ್ಲ. ಸ್ತ್ರೀ ವಿಮೋಚನೆಯ ಬಗೆಗಿನ ಆತನ ಆಲೋಚನೆಗಳು 'The Holy Family' ಯಲ್ಲಿ ಪ್ರತಿಪಾದಿತವಾಗಿವೆ. ಸ್ತ್ರೀ ವಿಮೋಚನೆಯು ತನಗೆ ತಾನೇ ಆಗುವಂತಹ ಪ್ರಾಕೃತಿಕ ಸಂಗತಿಯಲ್ಲ. ಅದು ಮಾನವತೆಯು ಪಶುತ್ವವನ್ನು ಗೆದ್ದಿರುವುದನ್ನು ಸೂಚಿಸುವ ಮಾನದಂಡ. ಸಂಸ್ಕೃತಿಯು ಪ್ರಕೃತಿಯನ್ನು ಸೋಲಿಸಿದ್ದನ್ನು ಸೂಚಿಸುವ ಮಾನದಂಡ ಕೂಡ. ಈ ಕೃತಿಯಲ್ಲಿ ಫ್ಯೂರ್ರೇನನ ಮಹಿಳಾ ವಿಮೋಚನೆಯ ವಿಚಾರಗಳನ್ನು ಮಾರ್ಕ್ಸ್ ಬೆಂಬಲಿಸುತ್ತಾ ಅದಕ್ಕೆ ತಾತ್ತ್ವಿಕ ಸ್ವರೂಪವನ್ನು ನೀಡುತ್ತಾನೆ. ನಾಗರಿಕತೆಯ ಮಟ್ಟವನ್ನು ಆಯಾ ಸಮಾಜದಲ್ಲಿನ ಮಹಿಳೆಯರ ಸ್ಥಾನಮಾನಗಳು ಸೂಚಿಸುತ್ತವೆಂಬುದು ಮಾರ್ಕ್ಸ್‌ನ ಅಭಿಪ್ರಾಯ. ಜ್ಯೂಲಿಯಟ್ ಮಿಶೆಲ್‌ಳು ಹೇಳುವಂತೆ, ಮಹಿಳೆಯ ಸ್ಥಿತಿಗತಿಗಳು ಕೇವಲ ಸಾಮಾಜಿಕ ಅಭಿವೃದ್ಧಿಯ ಸೂಚಕವಾಗದೆ, ಅತ್ಯಂತ ಸೂಕ್ಷ್ಮ ಸಮಸ್ಯಾತ್ಮಕ ಸ್ವರೂಪದ್ದಾಗಿವೆ.

Digitised by Bharatavani, CIIL

ಏಂಗೆಲ್ಸ್‌ನು, ಮಹಿಳೆಯು ಮತ್ತೆ ಉತ್ಪಾದನಾ ಕಾರ್ಯದಲ್ಲಿ ಭಾಗವಹಿಸುವಂತಾದಾಗ ಮಾತ್ರ ಮಹಿಳೆಯ ವಿಮೋಚನೆ ಸಾಧ್ಯ ಎಂದು ಪ್ರತಿಪಾದಿಸಿದ ಸಮಾಜವಾದಿ ವ್ಯವಸ್ಥೆಯಲ್ಲಿ ಮನೆಗೆಲಸ ಹಾಗೂ ಶಿಶುಪಾಲನೆಯ ಜವಾಬ್ದಾರಿ ಸರ್ಕಾರದ್ದಾಗಿರುವುದರಿಂದ ವಿಮೋಚನೆಯ ಸಾಧ್ಯತೆಯ ಮಾರ್ಗವನ್ನು ಏಂಗೆಲ್ಸ್ ಸೂಚಿಸಿದ್ದಾರೆ. ಮಾರ್ಕ್ಸ್‌ವಾದಿ ಹೋರಾಟದಲ್ಲಿ ಭಾಗವಹಿಸಲು, ಹೀಗಾಗಿ ಸ್ತ್ರೀವಾದಿಗಳು ಬೇಗ ಆಸಕ್ತರಾದರು. ಮಹಿಳಾ ಪ್ರಶ್ನೆಯನ್ನು ಮಾರ್ಕ್ಸ್‌ವಾದವು ಒಟ್ಟಾರೆಯಾಗಿ, ದುಡಿವ ವರ್ಗದ ಭವಿಷ್ಯದೊಂದಿಗೆ ಜೋಡಿಸುವ ಕಾರಣ, ಸ್ತ್ರೀ ವಿಮೋಚನೆಯ ದೃಷ್ಟಿಯಿಂದ ಅದು ಅಪರಿಪೂರ್ಣ ಚಿಂತನೆ ಎಂದು ಕೆಲವು ಸ್ತ್ರೀವಾದಿಗಳು ಭಾವಿಸಿದರು.

ಮಹಿಳಾ ಸಮಸ್ಯೆಗೆ ಭೌತವಾದಿ ಸೈದ್ಧಾಂತಿಕ ನೆಲೆಯನ್ನು ಏಂಗೆಲ್ಸ್ ಒದಗಿಸದ ಏಕಪತಿ ಕುಟುಂಬದ ಸ್ವರೂಪವು ಸ್ತ್ರೀಯನ್ನು ದಬ್ಬಾಳಿಕೆಗೆ ಗುರಿಪಡಿಸಲು ಪುರುಷನಿಗೆ ಎಲ್ಲ ಸಹಕಾರವನ್ನು ನೀಡುತ್ತದೆ. ಅದೇ ರೀತಿ ಪ್ರಭುತ್ವವು ವರ್ಗ ಶೋಷಣೆಯ ಸಾಧನವಾಗುತ್ತದೆ ಎಂಬುದು ಆತನ ಮತ. ಕುಟುಂಬದೊಳಗೆ, ಬೂರ್ಜ್ವಾ ಶ್ರೀಮಂತ ವರ್ಗವನ್ನು ಪುರುಷನು ಪ್ರತಿನಿಧಿಸುವವನಾಗಿದ್ದರೆ, ಶ್ರಮಿಕ ವರ್ಗವನ್ನು ಮಹಿಳೆ ಪ್ರತಿನಿಧಿಸುತ್ತಾಳೆ. ಆಸ್ತಿಯ ಉತ್ತರಾಧಿಕಾರತ್ವದ ಸ್ವರೂಪವನ್ನು ಏಂಗೆಲ್ಸ್ ಪ್ರತಿಪಾದಿಸುತ್ತ, ಮಾತೃವಂಶೀಯತೆಯಿಂದ ಪಿತೃವಂಶೀಯತೆಗೆ ಬದಲಾವಣೆಗೆ ಹೊಂದಿದ ಸಾಮಾಜಿಕ ಸಂದರ್ಭವನ್ನು ಮುಖ್ಯವಾಗಿ ಪರಿಬಣಿಸಿದ್ದಾನೆ. ಮನೆಯ ಒಡೆತನ ಹಾಗೂ ಸಂತತಿಯ ಮೇಲಿನ ಹಕ್ಕು ಬಾಧ್ಯತೆಗಳೆಲ್ಲವೂ ಮಾತೃವಂಶೀಯ ಕುಟುಂಬ ಪದ್ಧತಿಯಲ್ಲಿ ತಾಯಿಯದಾಗಿರುತ್ತಿತ್ತು. ಸಮುದಾಯ ಕುಟುಂಬ ಹಾಗೂ ಯುಗ್ಮ ಕುಟುಂಬ ಪದ್ಧತಿಗಳ ನಂತರ ಏಕಪತಿತ್ವ ವ್ಯವಸ್ಥೆ ಬಂದಾಗ ಪಿತೃಪ್ರಾಧಾನ್ಯತೆ ಉಂಟಾಯಿತು. ಇಲ್ಲಿ ಮಹಿಳೆ ಪತ್ನಿಯಾಗಿದ್ದರೂ ಗುಲಾಮ ಸ್ತ್ರೀ ಹಾಗೂ ವೇಶ್ಯೆಯ ಸ್ಥಿತಿಯನ್ನೇ ಹೊಂದಿರುತ್ತಾಳೆ. ಖಾಸಗಿ ಆಸ್ತಿಯಾಗಿ ಆಕೆ ಮಾರ್ಪಟ್ಟ ಸಂದರ್ಭವು ಹೆಣ್ಣಿನ ಶೋಷಣೆಗೆ ಮುನ್ನುಡಿ. ಸ್ತ್ರೀ ತನ್ನೆಲ್ಲ ದೈಹಿಕ ಸಾಮರ್ಥ್ಯದೊಂದಿಗೆ ಮರುಪ್ರವೇಶವಾಗುವ ಸಂದರ್ಭವು ಮಹಿಳಾ ವಿಮೋಚನೆಗೆ ಅತ್ಯಗತ್ಯ ಎಂದು ಏಂಗೆಲ್ಸ್ ವಾದಿಸುತ್ತಾನೆ.

**ಫ್ರೆಂಚ್ ಸ್ತ್ರೀವಾದಿ:** 1970ರ ಫ್ರೆಂಚ್ ಸ್ತ್ರೀವಾದಿ ಚಳುವಳಿಯು ಯೂರೋಪಿನ ಇತರ ಸ್ತ್ರೀವಾದಿ ಚಳುವಳಿಗಳಂತೆಯೇ ಚಾಲನೆ ಪಡೆಯಿತು. ಫ್ರೆಂಚ್ ಹೆಂಗಸರು ಪ್ರಜ್ಞೆಯ ಉನ್ನತೀಕರಣದಲ್ಲಿ ತೊಡಗಿರುವ ಗುಂಪುಗಳಲ್ಲಿ ಭಾಗವಹಿಸಿದರು. ಮಾರ್ಚ್ 8 ರಂದು ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಈ ಮೆರವಣಿಗೆಯ ಉದ್ದೇಶ, ಮುಖ್ಯವಾಗಿ ಮಹಿಳೆಯರ ಸಮಸ್ಯೆಯನ್ನು ಕುರಿತದ್ದೇ ಆಗಿತ್ತು. ಸಂತಾನವನ್ನು ಹೊಂದುವ ಆಯ್ಕೆಯ ಪ್ರಶ್ನೆಯನ್ನು ಇಲ್ಲಿ ಎತ್ತಲಾಯಿತು. ಮಹಿಳೆಯ ವಿರುದ್ಧದ ಹಿಂಸೆಯ ಬಗೆಗೆ ಪ್ರಸ್ತಾಪಿಸಲಾಯಿತು. ಮಹಿಳೆ ಮತ್ತು ಮಹಿಳೆಯರ ಹಕ್ಕುಗಳ ಬಗೆಗಿನ ಜನಾಭಿಪ್ರಾಯವನ್ನು ಬದಲಿಸಲು ಹೋರಾಟವನ್ನು ಮಾಡಲಾಯಿತು.

ಫ್ರೆಂಚ್ ಸ್ತ್ರೀವಾದಿ ಗುಂಪುಗಳಲ್ಲಿಯೇ ಮೊದಲ ಗುಂಪಾದ 'Psych et Po' ವು ಮನಃಶಾಸ್ತ್ರಜ್ಞ ಆಂಟೋನಿ ಫೋಗ್‌ನ ಮುಂದಾಳ್ತನದಲ್ಲಿ ರೂಪುಗೊಂಡಿತು. ಇದು ಇತರ ಸ್ತ್ರೀವಾದಗಳಿಂದ ಪ್ರತ್ಯೇಕವಾಗಿದ್ದುಕೊಂಡು ಪ್ರತಿ–ಕ್ರಾಂತಿ ಕಾರಣ ನೆಲೆಯನ್ನು ಹೊಂದಿತ್ತೆನ್ನಬಹುದು. ಈ ಗುಂಪು ಸ್ತ್ರೀವಾದವನ್ನು ನೇತ್ಯಾತ್ಮಕ ಹಾಗೂ ಕಿರಿಯ ವ್ಯಾಪ್ತಿಯುಳ್ಳದ್ದಕ್ಕಾಗಿ ವಿವರಿಸುತ್ತದೆ. ಅವರ ಪ್ರಕಾರ ಸುಧಾರಣಾವಾದಿ ಮಹಿಳಾ ಚಳುವಳಿಯು ಪಿತೃಪ್ರಧಾನ ವ್ಯವಸ್ಥೆಯೊಳಗಿನ ಅಧಿಕಾರ ನಿರೀಕ್ಷೆಗಳನ್ನು ಹೊಂದಿರುವುದೇ ಆಗಿದೆ. ಅವರು ಅಂತರಾಷ್ಟ್ರೀಯ ಮಹಿಳಾ ದಿನದಂದು ಸ್ತ್ರೀವಾದದ ವಿರುದ್ಧ ಧಿಕ್ಕಾರ ಘೋಷಣೆಯನ್ನು ಕೂಗಿ ಮೆರವಣಿಗೆ ಮಾಡಿದರು. ತಮ್ಮ ಗುಂಪಿಗೆ ಅಧಿಕೃತವಾಗಿ WLF ಎಂದರೆ, 'Women's Liberation Movement' ಎಂಬ ಹೆಸರು ಸಲ್ಲುವುದಾಗಿಯೂ ತಾವು ಮಹಿಳಾ ಚಳುವಳಿಯೊಳಗಿನ ಮಹಳೆಯರು 'Women from the Women's Movement' ಎಂದು ಭಾವಿಸಿದರು. 1980ರ ಹೊತ್ತಿಗೆ ಸ್ತ್ರೀವಾದಿ ಚಳುವಳಿಯೊಳಗಿನ ಇಂಥ ವಿವಾದಗಳಿಗೆ ತೆರೆ ಬಿತ್ತು. ಇಷ್ಟಾದರೂ ಈ ಗುಂಪಿನ ಚಟುವಟಿಕೆಳಾಚೆ ಮನೋವಿಶ್ಲೇಷಣಾತ್ಮಕ ಚಿಂತನೆಯನ್ನೇ ಪ್ರಧಾನ ಗುರಿಯಾಗುಳ್ಳ ಕಥಿಬ್ಬಿ ಜಣ ಕಠ ಗುಂಪಿನ ಮೂಲಕ ಹಾದು ಬಂದವರೇ.

ಪುರುಷರಿಗಿಂತ ಭಿನ್ನವಾದ ಲಿಂಗೀಯತೆಯನ್ನು ಹೊಂದಿರುವುದೇ ಒಂದು ಸಾಮಾಜಿಕ ಗುಂಪಾಗಿ ಮಹಿಳೆ ಗಮನಕ್ಕೆ ಒಳಪಡಲು ಕಾರಣವಾಗಿದೆ. ಆದ್ದರಿಂದ, ಯಾವುದೇ ರೀತಿಯ ಸ್ತ್ರೀವಾದ ರಾಜಕಾರಣ ಅಥವಾ ಸಿದ್ಧಾಂತಕ್ಕೆ ಈ ಲೈಂಗಿಕ ವ್ಯತ್ಯಾಸವು ಕೇಂದ್ರವಾಗಿದೆ. ಈ ವ್ಯತ್ಯಾಸವು ಅಧಿಕಾರದ ಜೊತೆ ಹೇಗೆ ಸಂಬಂಧಿತವಾಗಿದೆ ಎನ್ನುವುದೇ ಮುಖ್ಯ ಪ್ರಶ್ನೆ. ಫ್ರೆಂಚ್ ಸ್ತ್ರೀವಾದವು ಫ್ರೆಂಚ್ ಮನೋವಿಶ್ಲೇಷಣಾ ಸಿದ್ಧಾಂತದ ಮೂಲಕ ಲಿಂಗ ವ್ಯತ್ಯಾಸದ ಪ್ರಶ್ನೆಯನ್ನು ಎತ್ತಿತ್ತು. ಈ ಸಂಬಂಧವಾಗಿ ಫ್ರೆಂಚ್ ಸ್ತ್ರೀವಾದಿ ಬುದ್ಧಿಜೀವಿಗಳ ವಿವರಣೆಯು 'ಸಾಮಾನ್ಯ ಮಹಿಳೆಯ ಅನುಭವ'ದ ನೆಲೆಯದ್ದಾಗಿರಲಿಲ್ಲ. ಹಾಗಾಗಿ ಅಂಗ್ಲೋ ಅಮೆರಿಕನ್ ಸ್ತ್ರೀವಾದಿಗಳಿಗೆ ಫ್ರೆಂಚ್ ಸ್ತ್ರೀವಾದವು ಕ್ಲಿಷ್ಟವೂ, ಅಸ್ಪಷ್ಟವೂ ಅನಿಸಿತು. ಬ್ರಿಟಿಷ್ ಅಥವಾ ಅಮೆರಿಕನ್ ಸ್ತ್ರೀವಾದಿ ಪದ್ಧತಿಯು ಊಹಾ ಪರಿಕಲ್ಪನೆಗಳನ್ನು ರೂಪಿಸಿತ್ತು. ಅನುಭವ ಪ್ರಾಮಾಣ್ಯಕ್ಕೆ ಇಲ್ಲಿ ಬೆಲೆ ನೀಡಲಾಗಿತ್ತು. ಆದರೆ ಫ್ರೆಂಚ್ ಸ್ತ್ರೀವಾದವು ಪ್ರಾಯೋಗಿಕತೆಯ ಮೂಲಕ ಸಿದ್ಧಾಂತಗಳನ್ನು ರೂಪಿಸಿತು. 'ಅನುಭವ'ದ ಸರಳ ವಿವರಣೆಯನ್ನು ಅವರು ಅನುಮಾನದಿಂದ ನೋಡಿದರು. ಅನುಭವ ಹೊಂದುತ್ತಿರುವ ಮಹಳೆಯ ವೈಯಕ್ತಿಕತೆಯನ್ನು ಅನುಮಾನಿಸಿದರು. ಸ್ತ್ರೀವಾದಿ ಚಿಂತನೆಯ ಸರಳ ಗ್ರಹಿಕೆಯು, ಕಲೆ ಅಥವಾ ಚರಿತ್ರೆಯಲ್ಲಿನ ಏಕೀಕೃತ ಮಹಿಳಾ ಪರಂಪರೆಯನ್ನು ಕಟ್ಟಿಕೊಡುತ್ತದೆ. ಆದರೆ ಫ್ರೆಂಚ್ ಸ್ತ್ರೀವಾದಿಗಳು ಪಿತೃಪ್ರಧಾನ ಸಂಕಥನಗಳಲ್ಲಿನ ವೈರುಧ್ಯಗಳು, ಖಾಲಿ ಸ್ಥಳಗಳು, ನಿರ್ಲಕ್ಷಿತ ಅಂಚಿನ ಸ್ಥಳಗಳಲ್ಲಿ ಮಹಿಳಾ ಬರವಣಿಗೆಗಳನ್ನು ಕಾಣಬಹುದೆಂದರು. ಮಹಿಳಾ ಬರಹಗಾರರ ಹುಡುಕಾಟಕ್ಕಿಂತ ಸ್ತ್ರೀಯಾತ್ಮಕ ಬರಹಗಳನ್ನು ಗುರುತಿಸಲು ಅವರು ಹವಣಿಸಿದರು. ಅವರ ಪ್ರಕಾರ – ಸ್ತ್ರೀಯಾತ್ಮಕ

Digitised by Bharatavani, CIIL

ಬರಹಗಳನ್ನು ಪುರುಷರೂ ನಿರ್ಮಿಸಬಹುದು. ಫ್ರೆಂಚ್ ಸ್ತ್ರೀವಾದಿ ಚಿಂತನೆಯು 1980ರ ಮಧ್ಯದಲ್ಲಿ ಇಂಗ್ಲೀಷ್‌ಗೆ ಭಾಷಾಂತರದ ಮೂಲಕ ಪರಿಚಿತವಾಯಿತು.

**ಸಮಾನವಾದ ಸ್ತ್ರೀವಾದ:** ಮಾರ್ಕ್ಸ್‌ವಾದಿ ಸಿದ್ಧಾಂತವು ವರ್ಗಹೋರಾಟವನ್ನು ಇತಿಹಾಸದ ಚಾಲಕ ಶಕ್ತಯನ್ನಾಗಿ ಪರಿಗಣಿಸಿತು. ಆ ಶಕ್ತಿಯ ನಿಯಮಗಳ ಅಧ್ಯಯನವನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿತು. ಸ್ತ್ರೀ ಶೋಷಣೆಯ ಮೂಲವನ್ನು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳೂ ವರ್ಗ ಅಸಮಾನತೆಯಲ್ಲಿ ಹುಡುಕುವ ಪ್ರಯತ್ನವನ್ನು ಮಾಡಿದರು. ಮಾರ್ಕ್ಸ್‌ವಾದಿ ಸ್ತ್ರೀವಾದಿ ಹಾಗೂ ಸಮಾಜವಾದಿ ಸ್ತ್ರೀವಾದಿಗಳ ನಿಲುವುಗಳು ಸಮಾನವೆಂಬಂತೆ ಕಾಣುತ್ತದೆ. ಆದರೆ, ವರ್ಗಭೇದಗಳಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯೇ ಸ್ತ್ರೀ ಶೋಷಣೆಯ ಏಕೈಕ ಮೂಲವಲ್ಲ ಎಂದು ಸಮಾಜವಾದಿ ಸ್ತ್ರೀವಾದಿಗಳು ಭಾವಿಸುತ್ತಾರೆ. ವರ್ಗಭೇದವನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡರೆ, ವರ್ಗರಹಿತ ಸಮಾಜವಾದಿ ವ್ಯವಸ್ಥೆಯಲ್ಲಿ ಕೂಡ ಸ್ತ್ರೀ ಸಂಪೂರ್ಣವಾಗಿ ಶೋಷಣಾಮುಕ್ತಳಾಗುವುದಿಲ್ಲ ಎನ್ನವುದೇ ಸಮಸ್ಯೆ. ವರ್ಗಹೊರಾಟದಂತಹ ಸಾಮೂಹಿಕ ಪ್ರಯತ್ನದಲ್ಲಿ ಮತ್ತದೇ ಪುರುಷನಾಯಕತ್ವವು ಸ್ತ್ರೀ ಪ್ರಾತಿನಿಧ್ಯವನ್ನು ವಿವೇಚಿಸುವ ಅಪಾಯವಿದೆ. ಬಂಡವಾಳಶಾಹಿ ಕುಟುಂಬಗಳಲ್ಲಿ, ಮಹಿಳೆಯರಾಗಿರುವ ಏಕಮಾತ್ರ ಕಾರಣಕ್ಕಾಗಿಯೇ ಮಹಿಳೆಯರು ಅನುಭವಿಸಬೇಕಾದ ಹಿಂಸೆಗಳು ಕೆಲವಿದೆ. ಸಮಾಜವಾದಿ ವ್ಯವಸ್ಥೆಯು ಮಹಿಳೆಯನ್ನು ಆರ್ಥಿಕ ಸಮಸ್ಯೆಗಳಿಂದ ಮುಕ್ತಳನ್ನಾಗಿಸಿದರೂ ಸೂಕ್ಷ್ಮ ಹಿಂಸೆಗಳಿಂದ ಆಕೆಯನ್ನು ಬಿಡಿಸುವಲ್ಲಿ ಅದು ಅಸಮರ್ಥವಾಗಿದೆ. ಕ್ರಾಂತಿಕಾರಿ ಹೋರಾಟದ ಪುರುಷ ನಾಯಕರು ಸ್ತ್ರೀಯರ ಸಮಸ್ಯೆಗಳನ್ನು ಗೌಣವಾಗಿ ಪರಿಗಣಿಸಿದ್ದಾರೆ. ವರ್ಗ ಹೋರಾಟದ ಮೂಲಕ ಸಾಮೂಹಿಕ ಬಿಡುಗಡೆಯನ್ನು ಆಶಯವಾಗಿಟ್ಟುಕೊಂಡ ಸಮಾಜವಾದಿ ಆಶಯಗಳು ಸಮಷ್ಠಿಗಾಗಿ ವ್ಯಷ್ಠಿಯನ್ನು ಬಲಿಕೊಡುವುದರಲ್ಲಿ ತಪ್ಪೇನಿಲ್ಲ ಎಂಬ ಸಮಾಜವಾದ ಚಿಂತನೆಯ ಧೋರಣೆಯನ್ನು ಹೊಂದಿವೆ. ಹೀಗಿದ್ದಾಗ ಮಹಿಳೆಯ ಶೋಷಣೆಯ ಸೂಕ್ಷ್ಮಾತಿಸೂಕ್ಷ್ಮಗಳು ಮುಖ್ಯವಾಗುವುದಿಲ್ಲ.

ಮಹಿಳೆಯರ ವೈಯಕ್ತಿಕ ಬದುಕು ಗುರುತಿಸಲಾಗದ ಸೂಕ್ಷ್ಮ ತೊಳಲಾಟಗಳಿಂದ, ಹಿಂಸೆಗಳಿಂದ ಕೂಡಿರುವುದನ್ನು ರಷ್ಯನ್ ಕ್ರಾಂತಿಯ ಸಕ್ರಿಯ ಸದಸ್ಯೆ ಕ್ಲಾರಾ ಜೆಟಕನ್ನಳು ಗುರುತಿಸಿದಳು. ಆ ಬಗ್ಗೆ ಆಕೆ ವಹಿಸಿದ ಕಾಳಜಿ ಅನವಶ್ಯಕವೆಂದು ಲೆನಿನ್ ದೂರಿದ್ದ. ಹಾಗೆಯೇ ಸಮಾಜದ ವಿವಿಧ ಸಂಸ್ಥೆಗಳಲ್ಲಿ ಪುರುಷರಿಗಿಂತ ಮಹಿಳೆ ಹೊಂದಿರುವ ಕೀಳು ಸ್ಥಾನವನ್ನು ಕುರಿತು ಮತ್ತೊಬ್ಬ ಹೋರಾಟಗಾರ್ತಿ ಮಾರ್ಟ್‌ಮನ್ ಆಕ್ಷೇಪಿಸಿದಳು. ಮಾರ್ಕ್ಸ್‌ವಾದಿ ಚಿಂತನೆಗಳು ಇಂಥ ಸಮಸ್ಯಗಳಿಗೆ ಸಮರ್ಪಕ ಉತ್ತರಗಳನ್ನು ನೀಡಲಾರವೆಂದು ಆಕೆಯ ನಿಲುವು. ಅಂತೆಯೇ ತೀವ್ರಗಾಮಿ ಸ್ತ್ರೀವಾದವು ಪ್ರತಿಪಾದಿಸುವ 'ಭಿನ್ನ ಜೈವಿಕತೆ' ಅಥವಾ 'ಪುರುಷ ಪ್ರಾಧಾನ್ಯ' ತತ್ತ್ವದ ಮಿತಿಯನ್ನು ಸಮಾಜವಾದಿ ಸ್ತ್ರೀವಾದಿಗಳು ಸರಿಯಾಗಿಯೇ ಗುರುತಿಸುತ್ತಾರೆ. 'ಮಾನಸಿಕ ಲೈಂಗಿಕ ಮೂಲ' ತತ್ತ್ವವನ್ನಾಧರಿಸಿ ಮನೋವಿಶ್ಲೇಷಾತ್ಮಕ ಸ್ತ್ರೀವಾದಿ ನೀಡುವ ವಿವರಣೆಯೂ ಅಸಮರ್ಪಕ ಎಂಬ ನಿಲುವು ಇವರದು.

**ತೀವ್ರಗಾಮಿ ಸ್ತ್ರೀವಾದ:** ಮಾನವೀಯ ಹೋರಾಟದ ಒಂದು ಭಾಗವಾಗಿ ಮಾತ್ರ ಮಹಿಳಾ ಹೊರಾಟವನ್ನು ರೂಪಿಸಿಕೊಂಡರೆ ಮಹಿಳಾ ಹೋರಾಟದ ಕಾವು, ತುರ್ತು ಕ್ಷೀಣಗೊಳ್ಳುವ ಸಾಧ್ಯತೆಗಳಿವೆ. ಇದನ್ನು ಪ್ರಜ್ಞಾ ಪೂರ್ವಕವಾಗಿ ಮನಗಂಡು ಪ್ರಧಾನವಾಗಿ ಮಹಿಳಾ ಹೋರಾಟಕ್ಕಷ್ಟೇ ತಮ್ಮ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಕಾರ್ಯ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಳ್ಳುವ ಪರಿ ತೀವ್ರಗಾಮಿ ಸ್ತ್ರೀವಾದಿಗಳದು. ಈ ಕಾರಣಕ್ಕಾಗಿ ಹೆಂಗಸರ ವಿಷಯಗಳುಳ್ಳ ಸೀಮಿತ ಜಗತ್ತಿಗೆ ಮಾತ್ರ ಅಂಟಿಕೊಂಡವರು, ಕಳಕಳಿಯುಳ್ಳವರು ಎಂಬ ಆಕ್ಷೇಪವನ್ನು ತೀವ್ರಗಾಮಿ ಸ್ತ್ರೀವಾದಿಗಳು ಹೊರಬೇಕಾಯಿತು. ಸ್ತ್ರೀ–ಪುರುಷ ಅಸಮಾನತೆಯ ಮೂಲವಾದ ಭಿನ್ನ ಜೈವಿಕತೆಯ ತತ್ತ್ವವನ್ನು ಇವರು ತೀವ್ರವಾಗಿ ನಿರಾಕರಿಸುತ್ತಾರೆ. ಈ ನಿರಾಕರಣೆಯ ಸಂಕೇತವಾಗಿ 1868ರಲ್ಲಿ ಒಳ ಉಡುಪುಗಳನ್ನು ಸುಟ್ಟು ಪ್ರದರ್ಶನವನ್ನಿವರು ಮಾಡಿದರು. ಪ್ಯಾರಿಸ್ ಸಮಾವೇಶದಲ್ಲಿ ಪಾಲ್ಗೊಂಡು ಬಂದು ಸ್ತ್ರೀಯರ ಒಳಕಿಚ್ಚನ್ನು ಆಸ್ಫೋಟಿಸುವ ರೀತಿಯಲ್ಲಿ ಮನೆಗೆ ಪೆಟ್ರೋಲು ಸುರಿದು ಸುಟ್ಟರು ಎಂಬ ತಿರಸ್ಕಾರ ಪೂರಿತ ದೃಷ್ಟಿಕೋನದಿಂದ ತೀವ್ರಗಾಮಿ ಸ್ತ್ರೀವಾದಿಗಳನ್ನು ನೋಡಲಾಯಿತು.

ಸ್ತ್ರೀ–ಪುರುಷ ಸಂಬಂಧವನ್ನು ಜೈವಿಕ ನೆಲೆಯಲ್ಲಿ ವಿವರಿಸುವ ಸಿದ್ಧಾಂತಗಳನ್ನು ತೀವ್ರಗಾಮಿ ಸ್ತ್ರೀವಾದಿಗಳು ಗೊಡ್ಡೆಂದು ಭಾವಿಸುತ್ತಾರೆ. ವಿಭಿನ್ನ ದೇಹ ರಚನೆ ಹೊಂದಿದ ಕಾರಣ ಸ್ತ್ರೀ–ಪುರುಷರ ಕಾರ್ಯಗಳೂ ಗುಣ ಸ್ವಭಾವಗಳೂ ಭಿನ್ನವಾಗಿದ್ದು, ಸಮಾಜದ ಒಳಿತಿನ ದೃಷ್ಟಿಯಿಂದ ಅದನ್ನು ಉಳಿಸಿ ಮುಂದುವರೆಸಿಕೊಂಡು ಬರಬೇಕೆಂಬ ವಾದವನ್ನು ಇವರು ಸಾರಾಸಗಟಾಗಿ ನಿರಾಕರಿಸುತ್ತಾರೆ. ಏಕೆಂದರೆ, ಮಹಿಳೆಯನ್ನು ಕೇವಲ ಜೈವಿಕ ನೆಲೆಯಲ್ಲಿ ತನಗೆ ಬೇಕಾದಂತೆ ವಿವರಿಸುವ ಸಿದ್ಧಾಂತಗಳು, ಮಹಿಳೆಯ ದೃಷ್ಟಿಯಿಂದ ಅತ್ಯಂತ ಅಪಾಯಕರ ತೀರ್ಮಾನಗಳನ್ನು ತಳೆಯುತ್ತವೆ. ಜೀವಶಾಸ್ತ್ರೀಯ ನೆಲೆಯ ಸ್ತ್ರೀ–ಪುರುಷ ಭೇದಗಳು ನೈಸರ್ಗಿಕವಾಗಿದ್ದು, ಚರಿತ್ರೆಯ ಗತಿಯಲ್ಲಿ ಅವು ಶೋಷಣೆಯ ಸಹಾಯಕಗಳಾಗಿ ಬಳಕೆಯಾದ ಬಗೆಯನ್ನು ವಸ್ತುನಿಷ್ಠವಾಗಿ ತೀವ್ರಗಾಮಿ ಸ್ತ್ರೀವಾದಿಗಳು ಗ್ರಹಿಸಿದ್ದಾರೆ. ಸ್ತ್ರೀವಾದದ ಮೊದಲ ಹಂತದಲ್ಲಿ ಸ್ತ್ರೀ–ಪುರುಷ ಭೇದಗಳು ಸಹಜವೆಂದೂ ರಾಜಕೀಯದೊಂದಿಗೆ ಸಂಬಂಧವಿಲ್ಲವೆಂದೂ ತಿಳಿಯಲಾಗಿತ್ತು. ಸ್ತ್ರೀಯರ ಬಗೆಗಿನ ಸಂಕುಚಿತ ದೃಷ್ಟಿಕೋನದಿಂದಾಗಿ ಸಮಾನ ಹಕ್ಕುಗಳು ಆಕೆಗೆ ದೊರಕದಿರುವುದೇ ಪ್ರಮುಖ ಸಮಸ್ಯೆ ಎಂದು ಮೊದಲು ಸ್ತ್ರೀವಾದಿಗಳು ಭಾವಿಸಿದರು. ಸಮಸ್ಯೆಗಳನ್ನು ಪರಿಹರಿಸಿಕೊಂಡರೆ ಎಲ್ಲವೂ ಸರಿಹೋದೀತೆಂಬ ಆಶಾವಾದ ಅವರದಾಗಿತ್ತು. ಆದರೆ ಲೈಂಗಿಕತೆ, ಸಂತಾನೋತ್ಪತ್ತಿ, ಮನೆಗೆಲಸ ಇವು ಸ್ತ್ರೀಯರ ವ್ಯಕ್ತಿಗತ ವಿಷಯವಲ್ಲವೆಂದೂ ರಾಜಕೀಯ ವಿಚಾರಗಳೆಂದೂ ಕ್ರಮೇಣ ಸ್ತ್ರೀವಾದಿಗಳು ಗುರುತಿಸಿಕೊಂಡರು. ಸ್ತ್ರೀ–ಪುರುಷರ ನಡುವಿನ ಅಸಮಾನತೆಯಲ್ಲಿನ ರಾಜಕೀಯ

Digitised by Bharatavani, CIIL

ಸ್ವಭಾವವನ್ನು ಕಂಡುಕೊಂಡರು.

ತೀವ್ರಗಾಮಿ ಸ್ತ್ರೀವಾದವು, ತೀವ್ರಗಾಮಿ ಮಹಿಳಾ ಚಳುವಳಿಯ ತಾತ್ತ್ವಿಕ ನೆಲೆಯನ್ನು ರೂಪಿಸುವ ಪ್ರಯತ್ನವಾಗಿ ಮೂಡಿಬಂತು. ಸ್ಪಷ್ಟವಾದ ರಾಜಕೀಯ ಸ್ವರೂಪವನ್ನು ತೀವ್ರಗಾಮಿ ಮಹಿಳಾ ಚಳುವಳಿಯು ಪಡೆದುಕೊಳ್ಳುವ ಪ್ರಯತ್ನಗಳು ತೀವ್ರವಾಗಿ ನಡೆದವು. ತೀವ್ರಗಾಮಿ ಸ್ತ್ರೀವಾದಿ ದೃಷ್ಟಿಕೋನದ ಪ್ರಕಾರ, ನವ ಸ್ತ್ರೀವಾದವು ಸಾಮಾಜಿಕ ಸಮಾನತೆಗಾಗಿ ಆಶಿಸುವ ಗಂಭೀರ ರಾಜಕೀಯ ಚಳುವಳಿಗಳ ಪುನರ್ಜೀವನ ಪ್ರಯತ್ನವಂತೂ ಖಂಡಿತಾ ಅಲ್ಲ. ಅವರ ಪ್ರಕಾರ ಚರಿತ್ರೆಯಲ್ಲಿನ ಮುಖ್ಯ ಕ್ರಾಂತಿಯ ಎರಡನೆ ಅಲೆಯಾಗಿ ನವ ಸ್ತ್ರೀವಾದ ಮೂಡಿಬಂತು. ಅದರ ಉದ್ದೇಶಗಳು ಈ ರೀತಿ ಇವೆ:

1. ಇನ್ನೂ ಚಾಲ್ತಿಯಲ್ಲಿರುವ ಹಳೆಯ, ಸ್ಥಗಿತ ವರ್ಣ/ವರ್ಗ ವ್ಯವಸ್ಥೆಯನ್ನು ಹೊರಹಾಕುವುದು.
2. ಶಾಶ್ವತವೇನೋ ಎಂಬಂತಿರುವ ಕಾನೂನುಬದ್ಧ ಸ್ತ್ರೀ ಹಾಗೂ ಪುರುಷ ಪ್ರತೀಕಗಳನ್ನು ನಿರಾಕರಿಸುವುದು. ಏಕೆಂದರೆ ಈ ಪ್ರತೀಕಗಳ ವ್ಯವಸ್ಥೆಯನ್ನಾಧರಿಸಿಯೇ ಲಿಂಗಾಧಾರಿತ ವರ್ಗ ವ್ಯವಸ್ಥೆ ರೂಪುಗೊಂಡಿದೆ.
3. ಪ್ರಕೃತಿ ಸಹಜವೆಂದೇ ನಂಬಿಸುತ್ತಾ ಹೇರುತ್ತ ಬಂದ ಪುರುಷಾಧಿಕಾರದ ರಚನೆಗಳಿಂದ ಸ್ತ್ರೀಯರು ಬಿಡುಗಡೆ ಹೊಂದುವುದು. ಅಂದರೆ ದೊಡ್ಡ ರೀತಿಯ ಹೋರಾಟವನ್ನೇ ಮಾಡುವುದು.

ಇತಿಹಾಸದಲ್ಲಿ ಮಹಿಳಾ ಬಂಡುಕೋರರಿದ್ದರು. ಮಾಟಗಾತಿಯರೆಂದು ಕರೆಯಲಾಗುವ ಹೆಂಗಸರು ಸ್ವತಂತ್ರ ರಾಜಕೀಯ ಬಂಡುಕೋರರಾಗಿದ್ದರು. ಧರ್ಮವೇ ರಾಜಕಾರಣವಾದ ಕಾಲಮಾನದಲ್ಲಿ ಚರ್ಚ್ ವ್ಯವಸ್ಥೆಯನ್ನು ಉಳಿಸಲು ಎಂಟು ಲಕ್ಷ ಮಹಿಳೆಯರನ್ನು ಯೂರೋಪಿನಾದ್ಯಂತ ಎರಡು ಶತಮಾನಗಳಲ್ಲಿ ಕೊಂದುಹಾಕಲಾಯಿತು. ಸುಡಲಾಯಿತು.

ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿಯವರೆಗೂ ಮಹಿಳಾ ಪ್ರತಿಭಟನೆಯು ಸಾಮೂಹಿಕವಾಗಿರದೆ ವೈಯಕ್ತಿಕವಾಗಿತ್ತು. ವಿಜ್ಞಾನ ತಂತ್ರಜ್ಞಾನದ ಪರಾಕಾಷ್ಠೆಯ ಯುಗದಲ್ಲಿ ಪ್ರಕಟಗೊಂಡ ಮಹಿಳಾ ಕ್ರಾಂತಿಗೆ ಮುನ್ನುಡಿ ಎಂಬಂತೆ ಸಮಾಜದ ಪ್ರತಿಷ್ಠಿತ ವರ್ಗದ ಕೆಲ ಮಹಿಳೆಯರಿಂದ ವೈಚಾರಿಕ ಬರಹಗಳು ಪ್ರಕಟವಾದವು. ಇಂಗ್ಲೆಂಡಿನ ಮೇರಿ ವುಲ್‌ಸ್ಟನ್ ಕ್ರಾಫ್ಟ್, ಅಮೆರಿಕೆಯ ಮೇರಿ ಶೆಲ್ಲಿ, ಫ್ರಾನ್ಸ್‌ನ ಮಾರ್ಗರೆಟ್ ಫುಲರ್ ಮೊದಲಾದವರು ಇಂತಹ ಪ್ರಮುಖ ಬರಹಗಾರರು. ಇವರು ಆಲೋಚನೆ ಅಭಿವ್ಯಕ್ತಿಗಳಲ್ಲಿ ತಮ್ಮ ಕಾಲಮಾನಕ್ಕಿಂತ ಎಷ್ಟೋ ಮುಂದೆ ಇದ್ದರು. ಆದ್ದರಿಂದ, ಪರಿಚಿತ ಸುಶಿಕ್ಷಿತ ವಲಯದಲ್ಲಿಯೇ ಅವರ ವಿಚಾರಗಳು ಮುಕ್ತವಾಗಿ ಸ್ವೀಕಾರವಾಗಲಿಲ್ಲ.

19ನೇ ಶತಮಾನದ ಮಧ್ಯಭಾಗದಲ್ಲಿ ಯಂತ್ರಕೈಗಾರಿಕೆ ಉತ್ಕರ್ಷಾವಸ್ಥೆಗೇರಿದಾಗ ಪೂರ್ಣರೂಪದಲ್ಲಿ ಮಹಿಳಾ ಆಂದೋಲನ ಸಂಘಟಿತವಾಯಿತು. ಈ ಹೊತ್ತು ನಾವು ಸಾಮಾಜಿಕ ಲಿಂಗ ಅಸಮಾನತೆಯನ್ನು ಪ್ರತಿಭಟಿಸುತ್ತಿರುವುದಕ್ಕೆ ಸಮಾನವೋ ಎಂಬಂತೆ ಅಂದಿನ ಮಹಿಳೆಯರು ಕುಟುಂಬ, ಚರ್ಚ್ ಹಾಗೂ ರಾಜ್ಯ ನ್ಯಾಯವನ್ನು ಎದುರಿಸುವ, ನಿರಾಕರಿಸುವ ಪ್ರಯತ್ನವನ್ನು ಮಾಡಿದರು.

ಪ್ರಾರಂಭ ಸ್ತ್ರೀವಾದವು ತೃಣಮೂಲ ಸ್ವರೂಪದ ಚಳುವಳಿಯಾಗಿತ್ತು. ಮನೆಮನೆಗೆ ಹೋಗಿ ಮಹಿಳಾವಾದವನ್ನು ಪರಿಚಯಿಸುವ, ಚರ್ಚಿಸುವ ಕಾರ್ಯ ನಡೆಯಿತು. ಅಸೆಂಬ್ಲಿಯಲ್ಲಿ ನಗೆಗೇಡಾಗಿ, ಅವಗಣನೆಗೆ ಗುರಿಯಾಗಬಹುದಾದ ಮನವಿ ಪತ್ರಕ್ಕೆ ಸಹಿ ಹಾಕಿಸಿಕೊಳ್ಳುವ ಕಷ್ಟದ ಹಾದಿಯನ್ನು ಅವರು ತುಳಿದರು. 1868ರ ಹೊತ್ತಿಗಾಗಲೇ ಉದ್ಯೋಗಸ್ಥ ಮಹಿಳೆಯರ ಸಂಘವು ಸ್ಥಾಪಿತವಾಯಿತು. ರಾಷ್ಟ್ರೀಯ ಕಾರ್ಮಿಕ ಯೂನಿಯನ್ ಸಮಾವೇಶದಲ್ಲಿ ಮಹಿಳಾ ಕಾರ್ಮಿಕರ ಪಾತ್ರವೇ ಹೆಚ್ಚಿತ್ತು. ಕಾರ್ಮಿಕ ಸಂಘಟನಾಕಾರರಾದ ಅಗಸ್ಟ್ ಲೂಯಿಸ್ ಹಾಗೂ ಕೇಟ್ ಮೂಲೇನಿಯವರು ಮಹಿಳಾ ಆಂದೋಲನದಲ್ಲಿ ಸಕ್ರಿಯವಾಗಿ ಇದ್ದರು.

**ಸಾಂಸ್ಕೃತಿಕ ಸ್ತ್ರೀವಾದ:** ಸಾಂಸ್ಕೃತಿಕ ಸ್ತ್ರೀವಾದವು ವಿಚಾರ ಮೂಲವಾದಿ ಚಿಂತನೆಯ ನೆಲೆಯಿಂದ 'ಸ್ತ್ರೀ'ಯನ್ನು ನಿರ್ವಚಿಸುತ್ತದೆ. ಸ್ತ್ರೀ–ಪುರುಷ ಭೇದವನ್ನು ಜೀವಶಾಸ್ತ್ರೀಯ ನೆಲೆಯಲ್ಲಿ ಗುರುತಿಸುವುದು ಒಂದು ಹಂತ. ಆ ಭೇದವನ್ನು ಹುಟ್ಟಿನೊಂದಿಗೇ ಬರುವ ಗುಣಸತ್ವವನ್ನು ಆಧಾರವಾಗಿಟ್ಟುಕೊಂಡು ವಿವರಿಸುವ ಕ್ರಮ ಎರಡನೆಯ ಹಂತ. ಜ್ಞಾನದ ಚರಿತ್ರೆಯಲ್ಲಿ ಬುದ್ಧಿ, ತರ್ಕ, ಸಾಹಸ, ಪೌರುಷ ಪ್ರದರ್ಶನ ಮಡಿರುವ ಗಂಡಸರಿಗೆ ಶಾಶ್ವತ ಸ್ಥಾನವನ್ನು ಕಲ್ಪಿಸಲಾಗಿದೆ. ತಾಯ್ತನದ ಮೂಲಕ ಪೋಷಣೆಗೊಳ್ಳುವ ಕಷ್ಟ ಸಹಿಷ್ಣುತೆ, ಸಹನೆ, ಪ್ರೇಮ, ತ್ಯಾಗ ಮುಂತಾದ ಭಾವನಾ ಪ್ರಧಾನ ಗುಣಗಳ ಸಂಕೇತವಾಗಿ ಸ್ತ್ರೀಯನ್ನು ಪರಿಗಣಿಸಲಾಗಿದೆ. ಈ ಭಾವನಾ ಪ್ರಾಧಾನ್ಯದಿಂದಾಗಿಯೇ ಜ್ಞಾನಕ್ಷೇತ್ರಕ್ಕೆ ಮಹಿಳೆಯ ಕಾಣಿಕೆ ಅತ್ಯಲ್ಪವಾದುದೆಂದು ಸಾಧಿಸುತ್ತ ಪುರುಷ ಸಾಧನೆಗೆ ಬೆನ್ನು ತಟ್ಟುವ ಕ್ರಿಯೆ ನಡೆಯುತ್ತಿದೆ. ಮಹಿಳೆಯರ ಗಣಗಳೆಂದು ಪ್ರತ್ಯೇಕವಾಗಿ ಗುರುತಿಸುತ್ತಾ ಅದನ್ನು ತಮ್ಮ ಗುಣಗಳಿಗೆ ವಿರುದ್ಧವಾಗಿ ನಿಲ್ಲಿಸಿ ಒಟ್ಟಾರೆಯಾಗಿ ಸ್ತ್ರೀವರ್ಗವನ್ನೇ ಅಪಮೌಲ್ಯಗೊಳಿಸುವ ಸಂಗತಿ ನಡೆಯುತ್ತದೆ.

ಭಿನ್ನ ಜೈವಿಕತೆ ತತ್ತ್ವವನ್ನು ಸ್ತ್ರೀ–ಪುರುಷ ಅಸಮಾನತೆಗೆ ಸಮರ್ಥನೆ ನೀಡಲು ಬಳಸುವುದನ್ನು ತೀವ್ರಗಾಮಿ ಸ್ತ್ರೀವಾದಿಗಳು ವಿರೋಧಿಸಿದರು. ಭಿನ್ನ ಜೈವಿಕತೆಯ ನೆಪವೊಡ್ಡಿ ಸ್ತ್ರೀಯರನ್ನು ತಮಗನುಕೂಲಕರವಾದ ರೀತಿಯ ಪಾತ್ರದಲ್ಲಿ ಅಚ್ಚುಗೊಳಿಸುವ, ನಿರ್ಬಂಧಿಸುವ ಪುರುಷ ಪ್ರಯತ್ನವನ್ನು, ಸಾಮಾಜಿಕ ಹಿನ್ನೆಲೆಯೊಂದಿಗೆ ತೀವ್ರಗಾಮಿ ಸ್ತ್ರೀವಾದಿಗಳು ವಿವರಿಸಿದರು. ಪುರುಷ ಕೇಂದ್ರಿತ ಸಾಮಾಜಿಕ ರಚನೆ ಹಾಗೂ ಅದಕ್ಕೆ ಹೊಂದಿಕೊಂಡಂತಿರುವ ಸಾಂಸ್ಕೃತಿಕ ವಲಯಗಳು ಸ್ತ್ರೀ–ಪುರುಷ

Digitised by Bharatavani, CIIL

ಅಸಮಾನತೆಯನ್ನು ಸೃಷ್ಟಿಸಿ, ಬೆಳೆಸಿ, ಉಳಿಸುವ ಪರಿಯು ತೀವ್ರ ವಿಶ್ಲೇಷಣೆಗೆ ಗುರಿಯಾಯಿತು. ಹೀಗೆ ಸಮಸ್ಯೆಯ ಸ್ವರೂಪ ಶೋಧದ ಕೆಲಸ ತೀವ್ರಗಾಮಿ ಸ್ತ್ರೀವಾದಿಗಳಿಂದ ನಡೆಯಿತು. ಈ ವಿಚಾರಧಾರೆಯನ್ನೇ ಸಾಂಸ್ಕೃತಿಕ ಸ್ತ್ರೀವಾದಿಗಳು ತಮ್ಮ ವಾದಕ್ಕೆ ತಾತ್ತ್ವಿಕ ತಳಹದಿಯನ್ನಾಗಿಟ್ಟುಕೊಂಡರು.

ಜೈವಿಕ ಭಿನ್ನತೆಯನ್ನು ಪುರುಷ ಶ್ರೇಷ್ಠತೆಯನ್ನು ಸ್ಥಾಪಿಸಲು ಎತ್ತಿಹಿಡಿಯುವ ಪ್ರಯತ್ನಕ್ಕೆ ಇದಿರೇಟು ಎನ್ನುವಂತೆ ಸಾಂಸ್ಕೃತಿಕ ಸ್ತ್ರೀವಾದ ಮೂಡಿಬಂತು. ಸ್ತ್ರೀ ಸಂಕೇತ ಗುಣಗಳನ್ನೇ ಪುರುಷ ಸಂಕೇತ ಗುಣಗಳಿಗಿಂತ ಶ್ರೇಷ್ಠ ಎಂದು ಸ್ಥಾಪಿಸುವ ಯತ್ನವನ್ನು ಸಾಂಸ್ಕೃತಿಕ ಸ್ತ್ರೀವಾದ ಮಾಡಿತು. ಪುರುಷ ಪ್ರಧಾನ ಸಂಸ್ಕೃತಿಯು ಹೆಣ್ಣಿನ ಸ್ವಭಾವಜನ್ಯ ಗುಣಗಳಾದ ಮೃದುತನ, ಸಹನೆ, ಕ್ಷಮೆ, ಪ್ರೇಮ ಮುಂತಾದ ಭಾವನಾತ್ಮಕ ಗುಣಗಳನ್ನು ದೌರ್ಬಲ್ಯವಾಗಿ ಪರಿಗಣಿಸಿ ವೀರಾವೇಶದಿಂದ ಕಾದಾಡಿ ಗೆಲುವು ಪಡೆಯಬೇಕಾದ ಗಂಡಸು ಸೋತರೆ, ಆತನಿಗೆ ಸೀರೆ ಉಡಿಸಿ, ಬಳೆ ತೊಡಿಸಿ ಅವಮಾನಿಸುವ ಆಚರಣೆ ಇದೆ. ಮಗಳನ್ನು ಗಂಡನ ಮನೆಗೆ ಕಳುಹಿಸಬೇಕಾದ ದುಃಖತಪ್ತ ತಂದೆ ವಲ್ಲಿಯ ಮರೆಯಲ್ಲಿ ಉಕ್ಕುತ್ತಿದ್ದ ಕಣ್ಣೀರು ಒರೆಸಿಕೊಂಡ ಪ್ರಸ್ತಾಪ ಜನಪದ ಗೀತೆಯಲ್ಲಿ ಬರುತ್ತದೆ. ಸಹಜ ಭಾವಾಭಿವ್ಯಕ್ತಿಯ ಪ್ರಕಟನೆಯಾಗಿ ಗಂಡಸಾದ ತಾನು, ಎಲ್ಲರಿಗೂ ಕಾಣುವಂತೆ ಅಳಬಾರದೆಂಬ ತಡೆ ಸಾಂಸ್ಕೃತಿಕವಾಗಿ ಹೇರಲ್ಪಟ್ಟದ್ದು. ಇಂಥ ಸಾಂಸ್ಕೃತಿಕ ಪಾತ್ರ ನಿರೀಕ್ಷೆಗಳಿಗೆ ತಮ್ಮನ್ನು ಒಗ್ಗಿಸಿಕೊಳ್ಳುವ ಪ್ರಯತ್ನವನ್ನು ಬಿಟ್ಟು, ಹೊಸ ಎಚ್ಚರದಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂದು ಸಾಂಸ್ಕೃತಿಕ ಸ್ತ್ರೀವಾದಿಗಳು ಕರೆಕೊಟ್ಟರು. ವ್ಯಕ್ತಿತ್ವ ನಿರ್ಮಾಣದಲ್ಲಿ ಪುರುಷಪ್ರಧಾನ ಸಂಸ್ಕೃತಿಯಲ್ಲಿ ಅಪಮೌಲ್ಯಕ್ಕೆ ಒಳಗಾಗಿರುವ ಸ್ತ್ರೀ ಗುಣಗಳನ್ನು ಸಹಜ ಸಂಪನ್ಮೂಲಗಳೆಂದು ಭಾವಿಸಬೇಕೆಂದು ಸಾಂಸ್ಕೃತಿಕ ಸ್ತ್ರೀವಾದ ಹೇಳುತ್ತದೆ. ಪುರುಷ ವರ್ಗ ಹೇರಿರುವ ಕೀಳರಿಮೆಯಿಂದ ಮಹಿಳೆಯರು ಬಿಡಿಸಿಕೊಳ್ಳಲು ಇಂಥ ಭಾವನೆ ಅತ್ಯಗತ್ಯ.

**ಕಪ್ಪು ಸ್ತ್ರೀವಾದ:** ಗಮನಾರ್ಹ ಸಂಖ್ಯೆಯಲ್ಲಿ ಕಪ್ಪು ಸ್ತ್ರೀವಾದಿಗಳು ಶೈಕ್ಷಣಿಕ ವಲಯದಲ್ಲಿ ಪ್ರವೇಶ ಪಡೆದುದರಿಂದ, ಸ್ತ್ರೀವಾದಿ ಸಿದ್ಧಾಂತದಲ್ಲಿ 'ಜನಾಂಗ'ದ ವಿಷಯವು ಮುಖ್ಯವಾಗಿ ಸೇರಿಕೊಂಡಿತು. ಜನಾಂಗವಾದಕ್ಕೆ ಬಲಿಯಾದ ಸ್ತ್ರೀವಾದ ಮತ್ತು ಸ್ತ್ರೀವಾದಿ ಸಾಹಿತ್ಯ ವಿಮರ್ಶೆಗಳ ನಿರಾಕರಣವೇ ಕಪ್ಪು ಸ್ತ್ರೀವಾದದ ತಾತ್ತ್ವಿಕತೆಯಾಗಿ ರೂಪು ಗೊಂಡಿತು. ಜನಾಂಗದ ಜೊತೆ ಜೊತೆಗೇ ವರ್ಗ ಹಾಗೂ ಲಿಂಗ ಸಂಬಂಧಗಳು ಮಹಿಳೆಯರ ಬದುಕನ್ನು ಪ್ರಭಾವಗೊಳಿಸುವ ಬಗೆಯನ್ನು ತೀವ್ರ ವಿಮರ್ಶೆ, ವಿಶ್ಲೇಷಣೆಗೆ ಕಪ್ಪು ಸ್ತ್ರೀವಾದಿಗಳು ಒಡ್ಡಿದರು. ಕಪ್ಪು ಜನ, ಕಪ್ಪು ಸಾಹಿತ್ಯ, ಕಪ್ಪು ಸ್ತ್ರೀವಾದಿ ಸಾಹಿತ್ಯವನ್ನು ಕುರಿತು ಸಾಂಪ್ರದಾಯಿಕ ಅಧ್ಯಯನ ಹಾಗೂ ವಿಮರ್ಶೆಗಳನ್ನು ಗಂಭೀರವಾದ ತಾತ್ತ್ವಿಕ ನೆಲೆಯಲ್ಲಿ ವಿರೋಧಿಸಲಾಯಿತು. ಕಪ್ಪು ಜನಸಮೂಹದ ಪ್ರಾತಿನಿಧಿಕ ಅನುಭವಗಳನ್ನು ಅಧ್ಯಯನ ಮಾಡುತ್ತಿರುವವರೇ ಆ ಜನಸಮೂಹಕ್ಕೆ ಹೊರಗಿನ ಹಾಗೂ 'ಶೋಷಕ' ಸ್ಥಾನದಲ್ಲಿರುವವರಾಗಿದ್ದುದೇ ಈ ನಿರಾಕರಣಕ್ಕೆ ಮುಖ್ಯ ಕಾರಣ.

19ನೇ ಶತಮಾನದ ಅಂತರ–ಜನಾಂಗ ಗುಲಾಮಗಿರಿ ವಿರೋಧಿ ಚಳುವಳಿಯಲ್ಲಿ ಅಮೆರಿಕದ ಮಹಿಳೆಯರೂ ಭಾಗವಹಿಸಿದರು. ಗುಲಾಮರಾಗಿದ್ದು, ವ್ಯಕ್ತಿತ್ವವನ್ನು ಕಳೆದುಕೊಂಡಿದ್ದ ಕಪ್ಪು ಜನಾಂಗದವರಲ್ಲಿಯೂ ಸೃಜನಶೀಲ ಅಭಿವ್ಯಕ್ತಿ ಸಾಧ್ಯವೆಂಬುದನ್ನು ಹುಮ್ಮಸ್ಸಿನಿಂದ ತೋರಿಸಿಕೊಡುತ್ತಿದ್ದ ಕಾಲವದು. ಕಡು ಬಡತನದಿಂದ, 1784 ರಲ್ಲಿ ತೀರಿಕೊಂಡ ಫಿಲ್ಲಿಸ್ ವೀಟ್ಲೆಯ ಕವಿತೆಗಳನ್ನು ಅಮೆರಿಕದ ಜೀತ ವಿರೋಧಿ ಚಳುವಳಿಕಾರರು 1838 ರಲ್ಲಿ ಪ್ರಕಟಿಸಿದರು. ಯೂರೋಪಿನ ಕವಿಗಳನ್ನು ಚೆನ್ನಾಗಿ ಅನುಕರಿಸಬಲ್ಲಳೆಂಬ ಕಾರಣಕ್ಕಾಗಿ ಆಕೆ ಬಿಳಿಯರ ಮೆಚ್ಚುಗೆ ಗಳಿಸಿದಳೇ ವಿನಾ ಅವಳ ಕೃತಿಯಲ್ಲಿನ ಸಂವೇದನಾಸೂಕ್ಷ್ಮತೆ, ಕಲಾತ್ಮಕತೆಗಳನ್ನು ವಿಮರ್ಶಕರು ಗುರುತಿಸಲಿಲ್ಲ. ಸೃಜನ ಶೀಲವಾಗಿ ಮುಖ್ಯವಾಗುವುದು ಸಾಂಸ್ಕೃತಿಕ ಶ್ರೇಷ್ಠತೆಯ ಮಾನದಂಡವೆಂದು, ಫಿಲ್ಲಿಸ್‌ಳ ಕೃತಿ ಪ್ರಕಟನೆಯ ಮೂಲಕ ಕಪ್ಪು ಚಳುವಳಿಗಾರರು ತಮ್ಮ ಆತ್ಮಗೌರವವನ್ನು ಪಡೆದುಕೊಳ್ಳಲು ಯತ್ನಿಸಿದರು.

ನಾಗರಿಕ ಹಕ್ಕುಗಳ ಚಳುವಳಿಯ ಹೊತ್ತಿಗಾಗಲೇ ಅಮೆರಿಕೆಯ ಬಿಳಿಯರು ತಮ್ಮ ಹೋರಾಟವನ್ನು ಕಪ್ಪು ಜನರ ಜೀತಮುಕ್ತಿ ಹೋರಾಟದೊಂದಿಗೆ ಸಮೀಕರಿಸಿಕೊಂಡಿದ್ದರು. ಕಪ್ಪು ಜನರ ಸಮಸ್ಯೆಗಳನ್ನು ಕುರಿತು ಅವರು ಆಸಕ್ತರಾಗಿದ್ದರು. ಇಷ್ಟಾದರೂ 'ಕಪ್ಪುಜನ ವರ್ಣೀಯ'ರು ಎಂಬ ಪ್ರತ್ಯೇಕತಾ ಭಾವವನ್ನಿಟ್ಟುಕೊಂಡೇ ಚಳುವಳಿಯ ಕುರಿತಾದ ತಿಳುವಳಿಕೆಯನ್ನು ಬಿಳಿಯರು ಹೊಂದಿದ್ದರು. ಸಾಂಸ್ಕೃತಿಕ, ದೈಹಿಕ, ಮಾನಸಿಕ ವ್ಯತ್ಯಾಸಗಳು ಕಪ್ಪು ಹಾಗೂ ಬಿಳಿ ಜನರಲ್ಲಿರುವುದು ಸಹಜವೆಂಬುದು ಅವರ ಧೋರಣೆ. ಕಪ್ಪು ಜನಾಂಗವನ್ನು ಕುರಿತ ಹೀಯಾಳಿಕೆಯ ಮಾತುಗಳನ್ನಾಡುವುದು ಕೀಳು ಅಭಿರುಚಿ ಎಂಬ ಸಭ್ಯ ಕಲ್ಪನೆಗಳು ಅಮೆರಿಕದಲ್ಲಿ ಪ್ರಚಲಿತವಾಗತೊಡಗಿದ್ದವು. ಕಪ್ಪು ಜನರ ಕುರಿತ ತಮ್ಮ ನಡತೆಯ ಬಗ್ಗೆ ತಾವೇ ಪಾಪ ಪ್ರಜ್ಞೆಯಿಂದ ನರಳುವ ಉದಾರವಾದಿ ಪ್ರವೃತ್ತಿ ತಲೆ ದೋರಲಾರಂಭಿಸಿತು. ಮಾರ್ಟಿನ್ ಲೂಥರ್ ಕಿಂಗ್ ಬಿಳಿಯರ ಇಂಥ ಮನಃಸ್ಥಿತಿಯನ್ನು ತನ್ನ ಜನಾಂಗದ ಪರವಾದ ಚಟುವಟಿಕೆಗಳಿಗೆ ಬಳಸಿಕೊಂಡ. ಈ ಎಲ್ಲ ಬೆಳವಣಿಗೆಯಿಂದ 'ಕಪ್ಪು ಶಕ್ತಿ'ಯ ಪರಿಕಲ್ಪನೆಯೊಂದು ಹೋರಾಟದ ತಾತ್ತ್ವಿಕತೆಯಾಗಿ ಉದಯವಾಯಿತು.

**ಮನೋವಿಶ್ಲೇಷಣಾತ್ಮಕ ಸ್ತ್ರೀವಾದ:** ಲೈಂಗಿಕತೆಯನ್ನು ಕುರಿತ ಖ್ಯಾತ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡನ ಮನೋ ವಿಶ್ಲೇಷಣಾತ್ಮಕ ಸಿದ್ಧಾಂತವು ಪರವಿರೋಧ ಪ್ರಕ್ರಿಯೆಯನ್ನೊಳಗೊಂಡ ಮನೋವಿಶ್ಲೇಷಣಾತ್ಮಕ ಸ್ತ್ರೀವಾದಕ್ಕೆ ಆಧಾರ ವಾಗಿದೆ. ಲೈಂಗಿಕತೆಯ ಬಗೆಗೆ ಹಿಂದೆ ಇದ್ದ ಸಿದ್ಧಾಂತಗಳನ್ನೆಲ್ಲ ತಲೆಕೆಳಗಾಗಿಸಿ ಫ್ರಾಯ್ಡ್ ಹೊಸ ಲೈಂಗಿಕತಾ ಸಿದ್ಧಾಂತವನ್ನು ಮಂಡಿಸಿದ. ಆತನ ಪ್ರಕಾರ, ಪ್ರತಿಯೊಬ್ಬರ ಅಂತರಂಗ ಜೀವನ ಮತ್ತು ಲೈಂಗಿಕ ಜೀವನಗಳೆರಡೂ ಶೈಶವ ಕಾಲದಲ್ಲಿಯೇ ಪ್ರಾರಂಭವಾಗುತ್ತದೆ. ಶೈಶವದಲ್ಲಿ ಗಂಡು ಹಾಗೂ ಹೆಣ್ಣು ಮಕ್ಕಳು ಪಡೆದ ಭಿನ್ನ ಮಾನಸಿಕ–ಲೈಂಗಿಕ

Digitised by Bharatavani, CIIL

ಅನುಭವಗಳೇ ಅವರ ವಯಸ್ಕ ವರ್ತನೆಯನ್ನು ನಿಯಂತ್ರಿಸುತ್ತದೆ. ವಿಭಿನ್ನವಾದ ಲಿಂಗ-ಪಾತ್ರಗಳನ್ನು ಸೃಷ್ಟಿಸಿ, ಗಂಡು ಹೆಣ್ಣುಗಳಿಬ್ಬರೂ ತಮಗೆ ನಿಗದಿತವಾದ ಪಾತ್ರಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತದೆ. ಶೈಶವದ ಅನುಭವ ಹಾಗೂ ಪ್ರೌಢಾವಸ್ಥೆಯ ಸಾಮಾಜೀಕರಣದ ಫಲವಾಗಿ ವಿಭಿನ್ನ ಲಿಂಗ ಪಾತ್ರಗಳಲ್ಲಿ ವ್ಯವಹರಿಸಬೇಕಾದ ಇಕ್ಕಟ್ಟಿಗೆ ಒಳಗಾದ ವ್ಯಕ್ತಿಗಳು 'ಲಿಂಗ ವ್ಯವಸ್ಥೆ'ಗೆ ಒಳಗಾಗಿದ್ದಾರೆಂದು ಅರ್ಥೈಸಬಹುದು. ಹೀಗಾಗಿ, ಲೈಂಗಿಕ ಪಕ್ವತೆಯ ಸೃಷ್ಟಿಯಾಗಿ ಲಿಂಗ-ವ್ಯವಸ್ಥೆಯು ಸಿದ್ಧಗೊಳ್ಳುತ್ತದೆ.

ಲೈಂಗಿಕತೆಯು ಮಕ್ಕಳಲ್ಲಿ ಜಾಗೃತವಾಗುವ ಸಂದರ್ಭವನ್ನು ಫ್ರಾಯ್ಡ್ ಸ್ವಂತ ಪ್ರಾಯೋಗಿಕ ಅನುಭವದಿಂದ ಕಂಡುಕೊಂಡ. ದೈಹಿಕ ಲೈಂಗಿಕ ವ್ಯತ್ಯಾಸವೇ ಪ್ರಧಾನವಾಗಿ, ಅದಕ್ಕನುಗುಣವಾದ ಮನೋಲೈಂಗಿಕತೆ ರೂಪುಗೊಳ್ಳುತ್ತದೆ ಎಂದು ಫ್ರಾಯ್ಡನ ಅನಿಸಿಕೆ. ಫ್ರಾಯ್ಡ್‌ನ ಸಿದ್ಧಾಂತಗಳನ್ನು ಬಹಳಷ್ಟು ಸ್ತ್ರೀವಾದಿಗಳೂ ಕೇವಲ ಶರೀರಶಾಸ್ತ್ರೀಯ ಸ್ಥೂಲನೆಯಲ್ಲಿ ಗ್ರಹಿಸಿದರು. ಫ್ರಾಯ್ಡ್‌ನ ಸಿದ್ಧಾಂತವು ಶಿಶ್ನ-ಕೇಂದ್ರಿತವೆಂದು ಅರ್ನೆಸ್ಟ್ ಜೋನ್ಸ್‌ರ ಅಭಿಪ್ರಾಯ. ಪುರುಷ ಪ್ರಧಾನ್ಯವನ್ನು ಕುರಿತು ಚರ್ಚೆಗಳಲ್ಲಿ ಸ್ತ್ರೀವಾದಿಗಳು ಈ ಪದವನ್ನು ವ್ಯಾಪಕವಾಗಿ ಬಳಸಿಕೊಂಡರು.

ಫ್ರಾಯ್ಡನ ಪ್ರಕಾರ, ಗಂಡು/ಹೆಣ್ಣು ಎಂಬ ಭೇದಭಾವವಿರದ ಸಂಯುಕ್ತ ಸ್ಥಿತಿಯು ಶೈಶವದ ಮೊದಲಲ್ಲಿ ಇರುತ್ತದೆ. ಮುಂದಿನ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಗಂಡುತನ ಹಾಗೂ ಹೆಣ್ಣುತನಗಳ ಅರಿವು ಜಾಗೃತವಾಗುತ್ತದೆ. ಶಾರೀರಿಕ ಪಕ್ವತೆ ಬಂದಂತೆಲ್ಲ ಹೆಣ್ಣು ಮಗುವು ಮಾನಸಿಕವಾಗಿ ತಾನು ಅಬಲೆ, ಕೀಳು ಎಂಬ ಕೀಳರಿಮೆಯ ಭಾವಕ್ಕೆ ಪಕ್ಕಾಗುತ್ತದೆ. ಪುರುಷ ಶಿಶ್ನವು ತನಗಿಲ್ಲವೆಂಬುದೇ ಈ ಕೀಳರಿಮೆಗೆ ಕಾರಣವಾಗಿ ಅದು ಶಿಶ್ನ-ದ್ವೇಷದಲ್ಲಿ ಪರ್ಯವಸಾನವಾಗುತ್ತದೆ. ಈತ ಕಟ್ಟಿಕೊಡುವ ಹೆಣ್ಣಿನ ಮಾನಸಿಕ ರಚನೆಯ ಈ ಮಾದರಿಯು, ಗಂಡಿನ ಮಾನಸಿಕ ಪ್ರಕ್ರಿಯೆಯು ನೇತ್ಯಾತ್ಮಕವಾದದು ಎಂದು ಸ್ತ್ರೀವಾದಿಗಳು ಭಾವಿಸಿದರು. ಈ ಸಂಬಂಧವಾಗಿ 'Sexual Politics' ಕೃತಿಯಲ್ಲಿ ಕೇಟ್ ಮಿಲೆಟ್‌ಳು ಫ್ರಾಯ್ಡನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಪುರುಷ ಶ್ರೇಷ್ಠತೆ, ಪ್ರಾಧಾನ್ಯವನ್ನು ಪ್ರತಿಪಾದಿಸುವ ಜೀವಶಾಸ್ತ್ರೀಯ ಸಿದ್ಧಾಂತದ ಏಕಾಕಾರ ಮಾತ್ರನಾಗಿ ಫ್ರಾಯ್ಡ್‌ನನ್ನು ಮಿಲೆಟ್ ಪರಿಗಣಿಸಿದಳು. ಪಿತೃಪ್ರಾಧಾನ್ಯದ ಪುರುಷ ಸಂಚಿನಲ್ಲಿ ಪಾಲ್ಗೊಳ್ಳುವ ಠಕ್ಕಿನ ಕೇಡಿ ಎಂದು ಫ್ರಾಯ್ಡ್‌ನನ್ನು ಆಕೆ ದೂಷಿಸುತ್ತಾಳೆ. ಮಿಲೆಟ್‌ಳ ಪ್ರಕಾರ, ಪಿತೃಪ್ರಾಧಾನ್ಯದೊಳಗೆ ಹೆಣ್ಣಿನ ಅಧೀನ ನೆಲೆ ಮತ್ತು ಪುರುಷನ ಅಧಿಕಾರ ನೆಲೆಗಳನ್ನು ಒಳಗೊಂಡ ವ್ಯಾಪಕ ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆಯು ಸಾಮಾಜೀಕರಣದ ಮೂಲಕ ಚಲಾವಣೆಯಲ್ಲಿರುತ್ತದೆ. ಆಕೆಯ ಬಗೆಯ ಪುರುಷ ದೃಷ್ಟಿಕೋನದ ಸೈದ್ಧಾಂತಿಕ ಸಾಧನಗಳು ಈ ವ್ಯವಸ್ಥೆ ಸದಾ ಚಲನೆಯಲ್ಲಿರುವಂತೆ ನೋಡಿಕೊಳ್ಳುತ್ತವೆ. ಫ್ರಾಯ್ಡ್ ಬೋಧಿಸುವ ಲೈಂಗಿಕ ಮನೋವಿಶ್ಲೇಷಣಾ ಸಿದ್ಧಾಂತವೂ ಇಂಥ ಸಿದ್ಧಾಂತಗಳಲ್ಲಿ ಒಂದಾಗಿದ್ದು ಮಹಿಳೆಯರ ಹಾಗೂ ನಿಸರ್ಗದ ಮೇಲಿನ ದಬ್ಬಾಳಿಕೆಯು ತನ್ನದೇ ಆದ ತರ್ಕವನ್ನು ಹೊಂದಿದೆ. ಅದೇನೆಂದರೆ, ಮಾನವ ಜೀವಿಗಳು ತಮ್ಮ ಹೊರತಾಗಿ ಉಳಿದ ನಿಸರ್ಗಕ್ಕಿಂತ ಭಿನ್ನವಾಗುವಲ್ಲಿ ಅವು ನೀತಿಯನ್ನು ಹೊಂದಿರುವುದೇ ಆಗಿದೆ. ಹಾಗಾಗಿ ಈ ವ್ಯತ್ಯಾಸವೇ ಮಾನವರಲ್ಲದವರ ಮೇಲೆ ಮಾನವಮಾತ್ರರು ದಬ್ಬಾಳಿಕೆ ಮಾಡಲು ಹಕ್ಕುಗಳನ್ನು ಹೊಂದಲು ಕಾರಣವಾಗುತ್ತವೆ. ಈ ತರ್ಕ ಹೀಗೆ ಮತ್ತೂ ಮುಂದುವರೆಯುತ್ತದೆ.

ಗಿಡಮರ, ಕಲ್ಲು ಮಣ್ಣುಗಳು ಮಾನವರಂತೆ ತಮ್ಮ ಸಮೂಹದಲ್ಲಿ ಬದಲಾವಣೆಯನ್ನುಂಟು ಮಾಡುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಈ ಸಾಮರ್ಥ್ಯವನ್ನು ಮಾನವಜೀವಿಗಳು ಹೊಂದಿರುವುದೇ ಅವುಗಳ ಶ್ರೇಷ್ಠತೆಗೆ ಕಾರಣ. ಈ ಶ್ರೇಷ್ಠತೆಯನ್ನು ಹೊಂದಿರುವುದರಿಂದಲೇ ಆ ಸಾಮರ್ಥ್ಯವಿಲ್ಲದ, ಹಾಗಾಗಿ ಶ್ರೇಷ್ಠವಲ್ಲದ ನಿಸರ್ಗವನ್ನು ತನ್ನ ಅಧೀನಗೊಳಿಸಲು ನೈತಿಕ ಹಕ್ಕುಗಳು ಮಾನವಜೀವಿಗೆ ದೊರಕುತ್ತದೆ. ಆದ್ದರಿಂದ ನಿಸರ್ಗದ ಮೇಲಿನ ದಬ್ಬಾಳಿಕೆಯು ಸಮರ್ಥನೀಯ.

ಹೀಗೆ ನಿಸರ್ಗವನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡುದನ್ನು ಸಮರ್ಥಿಸಿಕೊಳ್ಳುವುದರ ಮೂಲಕ ತನ್ನ ದಬ್ಬಾಳಿಕೆಯ ಪ್ರವೃತ್ತಿಯನ್ನು ನೈತಿಕ ಹಕ್ಕಾಗಿ ಪರಿಗಣಿಸುವಂತೆಯೇ ಮಹಿಳೆಯರ ವಿಷಯದಲ್ಲಿಯೂ ನಡೆದು ಕೊಳ್ಳಲಾಗಿದೆ. ಇತಿಹಾಸದುದ್ದಕ್ಕೂ ಸಾಗಿಬಂದಿರುವ ಪಿತೃಪ್ರಧಾನ ವ್ಯವಸ್ಥೆಯಲ್ಲಿನ ಲೈಂಗಿಕ ದಬ್ಬಾಳಿಕೆ ಮುಂದು ವರೆಯಲು ಇದೇ ಬಗೆಯ ತರ್ಕವನ್ನು ಬಳಸಿಕೊಳ್ಳಲಾಗಿದೆ. ಈ ತರ್ಕ ಇಂತಿದೆ:

ಮಹಿಳೆಯು ಹೊಂದಿದ ದೈಹಿಕ ನೆಲೆಯ ಕಾರಣ ಆಕೆಯನ್ನು ಪ್ರಕೃತಿಯ ಜೊತೆ ಗುರುತಿಸಲಾಗುತ್ತಿದೆ. ಪುರುಷನು ಬೌದ್ಧಿಕ ನೆಲೆಯುಳ್ಳವನಾದ್ದರಿಂದ, ಆತನನ್ನು 'ಮಾನವ'ನೆಂದು ಗುರುತಿಸಲಾಗುತ್ತದೆ. ಯಾವುದು ದೈಹಿಕ ಹಾಗೂ ಪ್ರಕೃತಿಯೊಂದಿಗೆ ಗುರುತಿಸಲಾಗುತ್ತದೋ ಅದು ಬೌದ್ಧಿಕ ಹಾಗೂ 'ಮಾನವ'ಕ್ಕಿಂತ ಕೆಳದರ್ಜೆಗೆ ಇಳಿಯುತ್ತದೆ. ಹೀಗಾಗಿ ಮಹಿಳೆಯರು ಪುರುಷನಿಗಿಂತ ಕೀಳು ಎಂದು ಸಿದ್ಧವಾಗುತ್ತದೆ. ಆದ್ದರಿಂದ 'ಕೀಳು' ಸ್ಥಾನದಲ್ಲಿರುವ ಮಹಿಳೆಯರನ್ನು ತಮ್ಮ ಅಧೀನರನ್ನಾಗಿಸಲು ಪುರುಷರಿಗೆ ನೈತಿಕ ಹಕ್ಕುಗಳು ಒದಗುತ್ತವೆ.

**ಭಾರತೀಯ ಸ್ತ್ರೀವಾದ:** ಭಾರತೀಯ ಸಮಾಜವು ಏಕರೂಪಿ ಸಾಮಾಜಿಕ ಸಾಂಸ್ಕೃತಿಕ ಬದುಕನ್ನುಳ್ಳ 'ಸಮರೂಪ ವರ್ಗ' ಅಲ್ಲ. ವಿಭಿನ್ನ ಜಾತಿ, ವರ್ಗ, ವರ್ಣಗಳನ್ನು ಹೊಂದಿದ 'ವಿಜಾತೀಯ ವರ್ಗ'ಕ್ಕೆ ಭಾರತೀಯ ಮಹಿಳೆಯರು ಸೇರುತ್ತಾರೆ. ಹೀಗಾಗಿ ಭಾರತೀಯ ಮಹಿಳೆಯರ ಸಮಸ್ಯೆಗಳನ್ನು ವಿಶ್ವಾತ್ಮಕ ನೆಲೆಯಲ್ಲಾಗಲೀ ರಾಷ್ಟ್ರೀಯ ನೆಲೆಯಲ್ಲಾಗಲಿ ವಿಶ್ಲೇಷಿಸುವುದು, ಪರಿಹಾರವನ್ನು ಸೂಚಿಸುವುದು ಸರಿಯಾಗಲಾರದು. ಆಯಾ ಕಾಲದ, ನಿರ್ದಿಷ್ಟ ಸಾಮಾಜಿಕ ಹಿನ್ನೆಲೆಯುಳ್ಳ ಪ್ರದೇಶದಲ್ಲಿ ಹುಟ್ಟಿಕೊಂಡ ಸಾಮಾಜಿಕ ಆಂದೋಲನಗಳ ಹಾಗೂ ಮಹಿಳಾ ಹೋರಾಟಗಳ ಚರಿತ್ರೆಯು ಅನೇಕ ವೈರುಧ್ಯಗಳಿಂದ ಕೂಡಿದೆ. ಕಪ್ಪು ಸ್ತ್ರೀವಾದವು

Digitised by Bharatavani, CIIL

ಬಿಳಿಯ ಮಹಿಳೆಯ ಸ್ತ್ರೀವಾದಕ್ಕಿಂತ ತನ್ನನ್ನು ಭಿನ್ನ ನೆಲೆಯಲ್ಲಿ ಗುರುತಿಸಿಕೊಂಡಿದೆ. ಹಾಗೆಯೇ ಅಭಿವೃದ್ಧಿಗೊಂಡ ರಾಷ್ಟ್ರಗಳ ಸ್ತ್ರೀವಾದ ಚಿಂತನೆಗಿಂತ ಭಿನ್ನವಾದ ತಾತ್ತ್ವಿಕತೆಯನ್ನು ಅಭಿವೃದ್ಧಿಶೀಲ ರಾಷ್ಟ್ರಗಳ ಸ್ತ್ರೀವಾದಿಗಳು ಕಟ್ಟಿಕೊಳ್ಳಲೆತ್ನಿಸುತ್ತಿದ್ದಾರೆ. ಸ್ತ್ರೀವಾದಿ ಪಂಥಗಳ ಚಾರಿತ್ರಿಕ ಬೆಳವಣಿಗೆಯು ಸ್ತ್ರೀವಾದವನ್ನು ಸಿದ್ಧಾಂತದ ಚೌಕಟ್ಟಿನಲ್ಲಿರಿಸುವುದಕ್ಕಿಂತ ಸಾಪೇಕ್ಷ ನೆಲೆಯಲ್ಲಿರಿಸುವುದು ಸೂಕ್ತ ಎಂಬ ತಿಳುವಳಿಕೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಆದ್ದರಿಂದ, ಪಶ್ಚಿಮದ ಸ್ತ್ರೀವಾದದೊಂದಿಗೆ ದೇಸೀಯ ನೆಲೆಯ ಸ್ತ್ರೀವಾದಿ ಆಲೋಚನೆಗಳ ಪ್ರಭಾವ ಹಾಗೂ ಪ್ರೇರಣೆಗಳ ಹಿನ್ನೆಲೆಯಲ್ಲಿ ಭಾರತೀಯ ಸ್ತ್ರೀವಾದದ ಸ್ವರೂಪವನ್ನು ಕಂಡುಕೊಳ್ಳ ಬಹುದಾಗಿದೆ. ಭಾರತೀಯ ಸ್ತ್ರೀವಾದವನ್ನು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ನೆಲೆಗಳಲ್ಲಿ ಏಕಕಾಲಕ್ಕೆ ವಿವರಿಸಿಕೊಳ್ಳುವುದು ಸರಳವೇನೂ ಅಲ್ಲ. ಭಾರತೀಯ ಸಂದರ್ಭದಲ್ಲಿನ ಲಿಂಗವ್ಯವಸ್ಥೆಯ ಸ್ವರೂಪವನ್ನು ವಿಭಿನ್ನ ಸ್ತರಗಳಿಂದ, ಆಯಾಮಗಳಿಂದ ನೋಡಲಾಗಿದೆ. ಜನಪದ ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಕೊಂಡವರು ಮಹಿಳಾ ಪ್ರಶ್ನೆಯನ್ನು ತಮ್ಮ ಹೋರಾಟದ ಆದ್ಯತೆಯಾಗಿ ಸ್ವೀಕರಿಸಿದ್ದಾರೆ. ಸೃಜನಶೀಲ ಕಲಾಮಾಧ್ಯಮಗಳಲ್ಲಿ ಮಹಿಳಾ ಶೋಷಣೆಯ ವಿವಿಧ ಮುಖಗಳ ಶೋಧವನ್ನು ಭಾರತೀಯ ಕಲಾವಿದರು ಕೈಗೊಳ್ಳುತ್ತಿದ್ದಾರೆ. ಆಡಳಿತಾರೂಢ ಸರ್ಕಾರಗಳೂ ಮಹಿಳಾ ಕಲ್ಯಾಣ ಯೋಜನೆಯನ್ನು ತಮ್ಮದೇ ರೀತಿಯಲ್ಲಿ ನಡೆಸಿಕೊಂಡು ಬರುತ್ತಿವೆ. ಅಕಡೆಮಿಕ್ ಶಿಸ್ತಿನಲ್ಲಿ ಮಹಿಳಾ ಅಧ್ಯಯನಗಳು ನಡೆಯುತ್ತಿವೆ. ಧಾರ್ಮಿಕ ಮೂಲಭೂತವಾದ, ಪಕ್ಷ ರಾಜಕಾರಣ, ಜಾತಿ ವ್ಯವಸ್ಥೆಯ ಅಸಮಾನತೆ, ಜಾಗತೀಕರಣ, ಮುಕ್ತಮಾರುಕಟ್ಟೆ ನೀತಿ, ವಿವೇಕಶೂನ್ಯ ಅಭಿವೃದ್ಧಿ ನೀತಿ – ಇತ್ಯಾದಿಗಳು ಭಾರತೀಯ ಮಹಿಳೆಯ ಬದುಕನ್ನು ಹೆಚ್ಚು ಆತಂಕಕಾರಿಯಾಗಿಸುತ್ತಿರುವುದರ ಬಗೆಗೆ ಅಧ್ಯಯನಗಳು ನಡೆಯುತ್ತಿವೆ. ಸ್ತ್ರೀವಾದದ ಮೂಲ ಪರಿಕಲ್ಪನೆಗಳಾದ ಲಿಂಗವ್ಯವಸ್ಥೆ, ಲಿಂಗವ್ಯವಸ್ಥೆಯ ತಾರತಮ್ಯ ನೀತಿ, ಲೈಂಗಿಕ ಶೋಷಣೆ, ದ್ವಿಲಿಂಗೀಯತೆ, ಸ್ತ್ರೀತ್ವ, ಸ್ತ್ರೀಯಾತ್ಮಕತೆ ಇತ್ಯಾದಿಗಳು ಭಾರತೀಯ ಸಂದರ್ಭದಲ್ಲಿ ಹೊಸ ಅರ್ಥವಿಸ್ತಾರದೊಂದಿಗೆ ವಿವರಣೆಗೊಳಗಾಗುತ್ತಿವೆ. ಪಾಶ್ಚಾತ್ಯ ಸ್ತ್ರೀವಾದಿಗಳು ಆಶಿಸುವ ಸ್ತ್ರೀ ಸಮಾನತೆಯ ಪರಿಕಲ್ಪನೆಗಳನ್ನು ಭಾರತೀಯ ಇತಿಹಾಸ, ಪುರಾಣ, ಕಾವ್ಯ, ಜಾನಪದ ಕಲೆ, ನಂಬಿಕೆ ಹಾಗೂ ಆಚರಣೆಗಳಲ್ಲಿ ಶೋಧಿಸುವ ಯತ್ನ ನಡೆಯುತ್ತಿದೆ. ಹೀಗಾಗಿ ಭಾರತೀಯ ಸ್ತ್ರೀವಾದವು ಪಾಶ್ಚಾತ್ಯ ಮೂಲದ ಅಂದ ಸರಕಾಗದೆ, ಸ್ವಂತ ಅನುಭವದ ಶೋಧದ ಬೆಳಕಿನಲ್ಲಿ ಆಕಾರ ಪಡೆದುಕೊಳ್ಳಬೇಕಾದ ಪ್ರಕ್ರಿಯೆಯಾಗಿದೆ.

–ಡಾ. ನರಸಿಂಹಮೂರ್ತಿ ಆರ್.

## ಸ್ಲೈಡ್ ಪ್ರಕ್ಷೇಪಕ

ಸ್ಲೈಡ್‌ಗಳು ಸಮೂಹ ಶಿಕ್ಷಣಕ್ಕೆ ಒಂದು ಉತ್ತಮ ಸಾಧನವೆನಿಸಿವೆ, ಒಂದೇ ಶೀರ್ಷಿಕೆಯನ್ನು ಹೊಂದಿಸಿದ ರೇಖಾಚಿತ್ರಗಳು, ಛಾಯಚಿತ್ರಗಳು, ರೇಖಾಕೃತಿಗಳು ಅಥವಾ ಇವುಗಳೆಲ್ಲವನ್ನು ಒಟ್ಟುಗೂಡಿಸಿದ ಸ್ಲೈಡ್‌ಗಳಿರಬಹುದು, ಸ್ಲೈಡ್ ಪ್ರದರ್ಶನದಲ್ಲಿ ಕಥೆಯೂ ಪ್ರಮುಖವಾಗಿದ್ದು, ವಿವರಣಾತ್ಮಕ ಶೀರ್ಷಿಕೆಯನ್ನು ಅಳವಡಿಸಲಾಗಿರುತ್ತದೆ, ಇವುಗಳಲ್ಲಿ ಹೆಚ್ಚಿನವುಗಳು ಬೋಧನಾ ಟಿಪ್ಪಣಿಗಳನ್ನು ಒಳಗೊಂಡಿರುತ್ತವೆ.

ಕಲಿಕಾ ಪ್ರಕ್ರಿಯೆಯಲ್ಲಿ ಪ್ರೇರಕವಾಗುವ ಹಾಗೂ ವಿದ್ಯಾರ್ಥಿಗಳಲ್ಲಿ ಉತ್ತಮ ಕಲಿಕೆ ಮತ್ತು ಧನಾತ್ಮಕ ಮನೋವೃತ್ತಿಯನ್ನು ಬೆಳೆಸುವ, ತೆರೆಯ ಮೇಲೆ ಪ್ರಕ್ಷೇಪಿಸಬಹುದಾದ (Projected) ಚಿತ್ರಗಳಿಗೆ ಸ್ಲೈಡ್‌ಗಳೆಂದು ಕರೆಯುತ್ತಾರೆ.

ಸ್ಲೈಡ್‌ಗಳು ಅತ್ಯುತ್ತಮ ಬೋಧನಾಸಾಧನಗಳಾಗಿದ್ದು, ಶೈಕ್ಷಣಿಕ ಮತ್ತು ಮನರಂಜನಾ ಮಹತ್ವ ಪಡೆದಿವೆ. ಮಕ್ಕಳಲ್ಲಿ ವಿವಿಧ ವಿಷಯಗಳ ಬಗ್ಗೆ ಆಕರ್ಷಕ ರೀತಿಯಲ್ಲಿ ಕಲಿಕೆಯನ್ನುಂಟು ಮಾಡುತ್ತವೆ. ಇತ್ತೀಚಿನ ದಿನಗಳಲ್ಲಿ ಸ್ಲೈಡ್ ಪ್ರಕ್ಷೇಪಕ ಬಹು ಜನಪ್ರಿಯವಾಗಿ ಬೆಳೆದು ಬಂದ ದೃಕ್ ಉಪಕರಣಗಳನ್ನು ಒಳಗೊಂಡ ಒಂದು ಬೋಧನಾ ಮಾಧ್ಯಮವಾಗಿದೆ.

ಸ್ಲೈಡ್‌ಗಳು ಔಪಚಾರಿಕ, ಅನೌಪಚಾರಿಕ ಶಿಕ್ಷಣ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ, ಇವುಗಳು ತೋರಿಸುವ ಸಾಹಿತ್ಯ, ಚಿತ್ರಗಳು, ಮಕ್ಕಳ ಗಮನ ಸೆಳೆಯುತ್ತವೆ. ಸ್ಲೈಡ್‌ಗಳು ಚಿಕ್ಕವರಿಂದ ದೊಡ್ಡವರಿಗೂ, ವಿದ್ಯಾವಂತರಿಗೂ, ಅವಿದ್ಯಾವಂತರಿಗೂ, ಅವರವರ ಮಟ್ಟಕ್ಕೆ ತಕ್ಕಂತೆ ಆಕರ್ಷಿಸುತ್ತವೆ.

ಔಪಚಾರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯವನ್ನು ಪ್ರಸರಿಸುವ ಚಿತ್ರಗಳಿಗೆ ಶೈಕ್ಷಣಿಕ ಸ್ಲೈಡ್‌ಗಳೆಂದು ಕರೆಯುತ್ತಾರೆ. ಇವುಗಳು ಸಾಮಾನ್ಯವಾಗಿ 11ಮಿಲಿಮೀಟರ್ ಅಥವ 36ಮಿಲಿಮೀಟರ್ ಅಳತೆಯಲ್ಲಿ ಲಭ್ಯವಿರುತ್ತವೆ. ಸ್ಲೈಡ್‌ಗಳಿಂದ ಯಾವುದೇ ವಿಷಯ ಅಥವ ದೃಶ್ಯವನ್ನು ಬಹಳಕಾಲದವರೆಗೂ ಹಿಡಿದಿಟ್ಟು, ಮತ್ತೆ ಮತ್ತೆ ಬೇಕೆನಿಸಿದಾಗ ನೋಡಬಹುದಾಗಿದೆ. ಸ್ಲೈಡ್‌ಗಳಿಂದ ಜ್ಞಾನ ಸಮೃದ್ಧಿಯಾಗುವುದಲ್ಲದೇ ಉತ್ತಮ ಮನೋಭಾವ ಬೆಳೆಯುತ್ತದೆ. ಶೈಕ್ಷಣಿಕ ರಂಗದಲ್ಲಿ ಸ್ಲೈಡ್‌ಗಳು ಪರಿಣಾಮಕಾರಿ ಮಾಧ್ಯಮಗಳಗಿರುವುದರಿಂದ ಉತ್ತಮ ಕಲಿಕೆಗೆ ನೆರವಾಗುತ್ತವೆ.

ಸ್ಲೈಡ್ ಒಂದು ಚಿಕ್ಕ ಪ್ರಕ್ಷೇಪಿಸಬಹುದಾದ ಪಾರದರ್ಶಕ ಚಿತ್ರವಾಗಿದೆ, ಇದನ್ನು ಸ್ಥಿರ ಕ್ಯಾಮೆರಾದ ಮೂಲಕ ತೆಗೆಯಲಾಗಿದೆ, ಇವುಗಳನ್ನು ಸ್ಲೈಡ್ ಪ್ರಕ್ಷೇಪಕದ ಸಹಾಯದಿಂದ ಒಂದು ಪರದೆಯ ಮೇಲೆ ಪ್ರಕ್ಷೇಪಿಸಿ ನೋಡಬಹುದು. ಸ್ಲೈಡ್‌ಗಳನ್ನು ನೋಡಲು ಸ್ಲೈಡ್ ಪ್ರಕ್ಷೇಪಕಗಳೇ ಸಮರ್ಪಕ ಸಾಧನಗಳು.

ಸ್ಲೈಡ್ ಪ್ರಕ್ಷೇಪಕವು ಹ್ಯಾಲೋಜನ್ ಬಲ್ಬ್‌ನ್ನು ಹೊಂದಿದ್ದು ಇದರಿಂದ ಬೆಳಕನ್ನು ಪ್ರತಿಫಲಕಗಳ ಮೂಲಕ ಪ್ರತಿಫಲಿಸಿ ಆ ಬೆಳಕನ್ನು ಸ್ಲೈಡ್ ಗಳ ಮೇಲೆ ಬೀಳುವಂತೆ ಮಾಡಿ ಸ್ಲೈಡ್‌ನಲ್ಲಿರುವ ಮಾಹಿತಿಯನ್ನು ಪರದೆಯ ಮೇಲೆ ಬಿಂಬಿಸಲಾಗುತ್ತದೆ. ಈ ಸಂದಂರ್ಭದಲ್ಲಿ ಪ್ರಕ್ಷೇಪಕವು ಅತಿ ಹೆಚ್ಚು ಬಿಸಿಯಾಗಿರುತ್ತದೆ ಕಾರಣ ಹ್ಯಾಲೋಜನ್ ಬಲ್ಬಿನಿಂದ ಹೊರ ಸೂಸುವ ಬೆಳಕಿನ ಕಿರಣಗಳ ತೀವ್ರತೆ ತುಂಬಾ ಹೆಚ್ಚಾಗಿರುತ್ತದೆ, ಬಿಸಿಯ ನಿಯಂತ್ರಣವನ್ನು ಶೀತಲೀಕರಣ ವ್ಯವಸ್ಥೆಯ ಮೂಲಕ ತಂಪಾಗಿಸಲು ಪ್ರಕ್ಷೇಪಕವನ್ನು

Digitised by Bharatavani, CIIL

ಬಳಸಿ ಫ್ಯಾನ್ ಅಳವಡಿಸಿರುತ್ತಾರೆ.

**ಸ್ಲೈಡ್ ಪ್ರಕ್ಷೇಪಕದ ಗುಣಲಕ್ಷಣಗಳು:**

- ಒಂದೇ ಬಾರಿ ಸುಮಾರು 120 ಸ್ಲೈಡ್‌ಗಳವರೆಗೂ ನಿರಂತರವಾಗಿ ವೀಕ್ಷಿಸಬಹುದಾಗಿದೆ. ಸ್ಲೈಡ್‌ಗಳನ್ನು ಮಾನವ ನಿಯಂತ್ರಿತ ಅಥವಾ ಸ್ವಯಂ ನಿಯಂತ್ರಿತ ವ್ಯವಸ್ಥೆಯಿಂದ ಪ್ರಕ್ಷೇಪಿಸಬಹುದು.
- ಬೇಕಾದಲ್ಲಿ ಹಿಂದಿನ ಸ್ಲೈಡ್ ಅಥವಾ ಪ್ರಸ್ತುತ ಸ್ಲೈಡ್‌ಗಳನ್ನು ಬಿಟ್ಟು ಮುಂದಿನ ಸ್ಲೈಡ್ ಗಳನ್ನು ನೋಡುವ ವ್ಯವಸ್ಥೆಯಿರುತ್ತದೆ.
- ಸ್ಲೈಡ್‌ಗಳನ್ನು ರಿಮೋಟ್ ನಿಯಂತ್ರಣದ ಸಹಾಯದಿಂದ ಕೇಂದ್ರೀಕರಿಸಿ ಮತ್ತು ಜೂಮ್(ಹತ್ತಿರ ಹಾಗೂ ದೂರ) ಮಾಡಿ ನೋಡಬಹುದು.
- ಸ್ಲೈಡ್‌ಗಳನ್ನು ವೀಕ್ಷಿಸುವುದರೊಂದಿಗೆ ವೀಕ್ಷಕ ವಿವರಣೆಯನ್ನು ಸಹ ಕೇಳಬಹುದಾಗಿದೆ.
- ಒಂದರ ನಂತರ ಮತ್ತೊಂದು ಸ್ಲೈಡ್‌ನ್ನು ಸಮಯದ ಸ್ವಯಂ ನಿಯಂತ್ರಣದ ಮೂಲಕ ವೀಕ್ಷಣೆಗೆ ಸಿದ್ಧಪಡಿಸಬಹುದು.
- ಒಂದು ಉತ್ತಮ ಸ್ಲೈಡ್ ಎಂದರೆ ಸಮರ್ಪಕ, ನಿಖರ, ಸ್ಪಷ್ಟವಾದ, ಅರ್ಥಗ್ರಾಹ್ಯವಾದ, ಆಸಕ್ತಿದಾಯಕವಾಗಿ, ಸ್ಮರಿಸಬಲ್ಲ ಚಿತ್ರವಾಗಿರಬೇಕು.

ಸ್ಲೈಡ್‌ಗಳನ್ನು ಈ ಕೆಳಗಿನಂತೆ ತಯಾರಿಸಬಹುದು.

1. ಛಾಯಾಚಿತ್ರ ಪ್ರಕ್ರಿಯೆಯ ಮೂಲಕ.
2. ಕಂಪ್ಯೂಟರ್ ಮೂಲಕ.
3. ಕೈಗಳ ಮೂಲಕ.

**ಸ್ಲೈಡ್ಸ್‌ಗಳ ಮಹತ್ವ/ಉಪಯೋಗಗಳು:**

ಇದು ಒಂದು ಉತ್ತಮವಾದ ದೃಕ್ ಮಾಧ್ಯಮವಾಗಿರುವುದರಿಂದ ಶೈಕ್ಷಣಿಕ ಕಲಿಕಾ ಪ್ರಕ್ರಿಯೆಯಲ್ಲಿ ಒಂದು ಪ್ರಭಾವಪೂರ್ವ ಸಾಧನವಾಗಿದೆ.

- ಮಕ್ಕಳಲ್ಲಿ ಆಸಕ್ತಿ ಮತ್ತು ಕುತೂಹಲ ಮೂಡಿಸುತ್ತದೆ.
- ಕಲಿಕೆಯ ವಿಷಯಗಳಲ್ಲಿ ವಾಸ್ತವಿಕತೆಯನ್ನು ತರುತ್ತವೆ.
- ಮನೋವೃತ್ತಿಯ ಬದಲಾವಣೆಗೆ ಅವಕಾಶ ಕಲ್ಪಿಸುತ್ತವೆ.
- ಪರಿಕಲ್ಪನೆಯ ಪುನಾರವರ್ತನೆಗೆ ಅವಕಾಶ ಕಲ್ಪಿಸುತ್ತವೆ.
- ಸ್ಲೈಡ್‌ಗಳನ್ನು ಪುನ: ರಚಿಸಲು ಮತ್ತು ಉನ್ನತೀಕರಿಸಲು ಸುಲಭ.
- ಕಲಿಕೆಯು ಮನೋರಂಜನೆಯೊಂದಿಗೆ ಸಾಗುತ್ತದೆ.
- ವೈಜ್ಞಾನಿಕ ಪ್ರಯೋಗಗಳು, ಭೌಗೋಳಿಕ ಅಂಶಗಳು, ಐತಿಹಾಸಿಕ ಘಟನೆಗಳಿಗೆ ಅರ್ಥವತ್ತಾದ ಕಲ್ಪನೆ ಮೂಡಿಸುತ್ತವೆ.
- ಇದು ಒಂದು ಉತ್ತಮ ಬೋಧನಾ ಸಾಧನವಾಗಿದ್ದು ಶಿಕ್ಷಕರಿಲ್ಲದ ಸಮಯದಲ್ಲೂ ವಿದ್ಯಾರ್ಥಿಗಳು ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗುವಂತೆ ಪ್ರಚೋದನೆ ನೀಡಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುತ್ತದೆ.
- ವಿಜ್ಞಾನ ವಿಷಯಗಳ ಬೋಧನೆಯಲ್ಲಿ ಇವು ಅತ್ಯಮೂಲ್ಯವಾಗಿವೆ.

**ಸ್ಲೈಡ್‌ಗಳ ಇತಿಮಿತಿಗಳು:**

- ಸ್ಲೈಡ್‌ಗಳು ಸುಲಭವಾಗಿ ಹಾಳಾಗಬಹುದು.
- ಕೆಲವು ಸಲ ಇವುಗಳನ್ನು ಶೇಖರಿಸಿಡುವುದು ತುಂಬಾ ಕಷ್ಟ.
- ಪ್ರತಿ ಸ್ಲೈಡ್‌ಗಳು ವಿಭಿನ್ನವಾಗಿರುವುದರಿಂದ ಇವುಗಳ ರಚನೆಗೆ ಶ್ರಮ ಮತ್ತು ಸಮಯವನ್ನು ವ್ಯಯಿಸಬೇಕಾಗುತ್ತದೆ.

ಸ್ಲೈಡ್ ಮತ್ತು ಸ್ಲೈಡ್ ಪ್ರಕ್ಷೇಪಕಗಳು ತಮ್ಮದೆ ಆದ ಮೌಲ್ಯವನ್ನು ಶಿಕ್ಷಣಕ್ಷೇತ್ರದಲ್ಲಿ ಒಳಗೊಂಡಿದ್ದು, ವಿಭಿನ್ನ ಮಾದರಿಯಲ್ಲಿ ತುಂಬಾ ಸರಳವಾಗಿ, ಸುಲಭವಾಗಿ ಅತಿ ಹೆಚ್ಚು ಖರ್ಚಿಲ್ಲದೆ ಆಯಾಯ ವಿಷಯಗಳಿಗೆ ಮತ್ತು ತರಗತಿಗಳಿಗೆ ಅನುಗುಣವಾಗಿ ಸ್ಲೈಡ್‌ಗಳನ್ನು ಒಮ್ಮೆ ರಚಿಸಿ ಮರು ಬಳಕೆ ಮಾಡುವ ಮೂಲಕ ತರಗತಿಯ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯ.

– ಡಾ. ನಾಗರಾಜ್ ಜಿ. ಯು.

## ಸ್ವಾಯತ್ತ ಸಂಸ್ಥೆಗಳು

**ನಾಯಕರು ಅನುಯಾಯಿಗಳನ್ನು ಸೃಷ್ಟಿಸುವುದಿಲ್ಲ, ಅವರು ಇನ್ನಷ್ಟು ನಾಯಕರನ್ನು ಸೃಷ್ಟಿಸುತ್ತಾರೆ.**

**–ಟಾಮ್ ಪೀಟರ್**

ಜಗತ್ತಿನಾದ್ಯಂತ, ಸಮಾಜವು ಹೆಚ್ಚುಹೆಚ್ಚಾಗಿ ಕಲಿಕಾ ಸಮಾಜವಾಗಿಯೇ ವಿಕಾಸಗೊಳ್ಳುತ್ತಿದೆ – 'ಜ್ಞಾನದ ಸಮಾಜ'. ಮಾಹಿತಿ ಮತ್ತು ಸಂವಹನ ತಂತ್ರಗಳ ಫಲವಾದ ಈ ಬದಲಾವಣೆಯ ವ್ಯಾಪ್ತಿ ಯಾರದೇ ಗ್ರಹಿಕೆಗೆ ನಿಲುಕಲಾರದ್ದಾಗಿದೆ. ತಂತ್ರಜ್ಞಾನದ ಪರಿಣಾಮವಾಗಿ ಸಮಾಜದ ಮೇಲಾಗುವ ಪರಿಣಾಮವನ್ನು ಪೂರ್ವಾನುಮಾನ ಮಾಡುವ ಪ್ರಯತ್ನವನ್ನು ಎಲ್ಲಾ ದೂರದೃಷ್ಟಿಯುಳ್ಳವರು ದ್ರಷ್ಟಾರರು ಮಾಡಿದ್ದರೂ ಮತ್ತು ಇಡೀ ಶೈಕ್ಷಣಿಕ ಕ್ಷೇತ್ರಕ್ಕೆ ಬೇಕಾದ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕಾದ ಅಗತ್ಯವಿದ್ದಾಗ ಮಾತ್ರ ವಾಸ್ತವವಾಗಿ ಅದು ಬೀರುತ್ತಿರುವ ಪರಿಣಾಮವು ಯಾರದ್ದೇ ಗ್ರಹಿಕೆಗೆ ನಿಲುಕುತ್ತಿಲ್ಲ. ಏಕೆಂದರೆ ಸಾಮಾನ್ಯವಾಗಿ ಒಂದು ಕ್ಷೇತ್ರದ ಮೇಲಾಗುವ ಪರಿಣಾಮವನ್ನು ಒಬ್ಬ ನುರಿತ ವ್ಯಕ್ತಿಯು ಮಾತ್ರ ಗ್ರಹಿಸಬಲ್ಲನು. ಇದರ ಜೊತೆಗೆ ಖಾಸಗೀಕರಣ, ಉದಾರೀಕರಣ, ಕೈಗಾರಿಕೀಕರಣದ ನೀತಿ ನಿಯಮಗಳಲ್ಲಾದ ಬದಲಾವಣೆ ಮತ್ತು ಶಿಕ್ಷಣ ವ್ಯವಸ್ಥೆಯ ಮೇಲೆ ಅವುಗಳ ಪರಿಣಾಮಗಳು ರಾಷ್ಟ್ರೀಯ ಮತ್ತು ಪ್ರಾದೇಶಿಕ ಹಂತಗಳಲ್ಲಿ ಒತ್ತಡವನ್ನುಂಟುಮಾಡುತ್ತಿವೆ.

ರಾಜ್ಯಗಳೂ ತಮ್ಮ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ರಾಜ್ಯದಲ್ಲಿ ನೀಡುವುದಕ್ಕೇ ಅಲ್ಲದೆ ದೇಶದ ವಿವಿಧ ಭಾಗಗಳಿಂದಷ್ಟೇ ಅಲ್ಲದೇ, ಜಗತ್ತಿನ ಮೂಲೆಮೂಲೆಗಳಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸಲು ಪ್ರಯತ್ನಿಸುತ್ತಿವೆ. ಈ ಎಲ್ಲವೂ ಶೈಕ್ಷಣಿಕ ವ್ಯವಸ್ಥೆಯ ಮೇಲೆ ಸಾರ್ವತ್ರಿಕವಾಗಿ ಮತ್ತು ಸಂಸ್ಥೆಗಳ ಮೇಲೆ ವಿಶೇಷವಾಗಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪರಿಣಾಮ ಬೀರಿವೆ. ಶಿಕ್ಷಣವು ಜಾಗತೀಕರಣ, ಖಾಸಗೀಕರಣ ಮತ್ತು ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಜನರ ಮನೆಬಾಗಿಲಿಗೆ ತಲುಪಿದ್ದು, ಈ ಸಂದರ್ಭದಲ್ಲಿ ಶಿಕ್ಷಣಕ್ಕೆ

Digitised by Bharatavani, CIIL

ಹೊಸದಾದ ಸಮತೋಲಿತ ಮತ್ತು ಸೃಜನಾತ್ಮಕ ಉಪಕ್ರಮದ ಅನಿವಾರ್ಯತೆ ಇದೆ. ಅದಕ್ಕಿಂತಲೂ ಹೆಚ್ಚಾಗಿ ಫಖಿಔ ಮತ್ತು ಉಂಖಿಖ ಒಪ್ಪಂದ ವ್ಯವಹಾರ ಪರಿಶೀಲನೆಯಲ್ಲಿರುವಾಗ, ಶಿಕ್ಷಣ ಕ್ಷೇತ್ರದ ಶಿಕ್ಷಣ ತಜ್ಞರಿಗೆ, ಯೋಜನಾಕರ್ತರಿಗೆ ಮತ್ತು ವ್ಯವಸ್ಥಾಪಕರಿಗೆ ಈಗ ಇರುವ ಸವಾಲೆಂದರೆ ಜನಗಳಿಗೆ ಮಾಹಿತಿ ತಲುಪಿಸುವುದಕ್ಕಾಗಿ ತಂತ್ರಜ್ಞಾನವನ್ನು ವಿಸ್ತೃತವಾಗಿ ಬಳಸುವುದು. ಕಲಿಕಾ ಸಮಾಜಕ್ಕೆ ಅಗತ್ಯವಿರುವುದು ರಾಷ್ಟ್ರಮಟ್ಟದಲ್ಲಿ ಆರ್ಥಿಕ, ಸಾಮಾಜಿಕ, ಪ್ರಾದೇಶಿಕ, ಸ್ಥಳೀಯ ಅವಶ್ಯಕತೆ ಮತ್ತಿತರ ಅಭಿವೃದ್ಧಿಯ ವ್ಯತ್ಯಾಸಗಳನ್ನು ಪರಿಗಣಿಸದೆ ದೇಶದ ಪ್ರಜೆಗಳ ಬೇಡಿಕೆಗಳನ್ನು ಮತ್ತು ಅವಶ್ಯಕತೆಗಳನ್ನು ಪೂರೈಸಬೇಕೆಂಬುದು ಕಲಿಕಾ ಸಮಾಜದ ಅಗತ್ಯವಾಗಿದೆ. ಇದೀಗ ಪ್ರತಿಯೊಬ್ಬರ ಜೀವನಪರ್ಯಂತ ಕಲಿಕೆಗಾಗಿ ಬೇಕಾದ ಅವಕಾಶವೊದಗಿಸುವ ಸಮಯ ಬಂದಿದೆ. ಸ್ವತಂತ್ರ ಸಮಾಜದಲ್ಲಿ ಪ್ರಜೆಗಳ ಶೈಕ್ಷಣಿಕ ಮತ್ತು ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಲು ಶೈಕ್ಷಣಿಕ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ಉತ್ಕೃಷ್ಟಗೊಳಿಸಲು ಮತ್ತು ರಾಜ್ಯಗಳು ನೀಡುವ ಬಂಡವಾಳಕ್ಕೆ ಭರವಸೆಯನ್ನು ಖಚಿತಗೊಳಿಸುವ ಜವಾಬುದಾರರಾಗಬೇಕೆಂದು ನಿರೀಕ್ಷಿಸಲಾಗುತ್ತದೆ.

**ಸ್ವಾಯತ್ತತೆಯ ವ್ಯಾಖ್ಯಾನ:**

ಕೆಳಗಿನ ವಾಕ್ಯವೃಂದಗಳಲ್ಲಿ ವಿವಿಧ ಲೇಖಕರು ನೀಡಿರುವ ಬೇರೆಬೇರೆ ವ್ಯಾಖ್ಯಾನಗಳ ಸ್ವಾಯತ್ತತೆಯನ್ನು ವಿಶೇಷವಾಗಿ ಶಿಕ್ಷಣದ ಸಂದರ್ಭದಲ್ಲಿ ಮತ್ತು ವಿಶೇಷವಾಗಿ ಸಾಂಸ್ಥಿಕ ಸಂದರ್ಭದಲ್ಲಿ ಚರ್ಚಿಸಲು ಪ್ರಯತ್ನಿಸುತ್ತವೆ.

"ಸ್ವಾಯತ್ತತೆ" ಪದದ ಅರ್ಥವು ಸಾಮಾನ್ಯರಿಗೆ ಮತ್ತು ಸ್ವಾತಂತ್ರ್ಯವನ್ನು ಆನಂದಿಸುವರಿಗೆ ಸರಳವಾಗಿ ಗೋಚರಿಸುತ್ತದೆ. ಆದಾಗ್ಯೂ, ಶೈಕ್ಷಣಿಕ ಸಂಸ್ಥೆಗಳು ಪೋಷಿಸುವ ಅಂಶಗಳಿಗೆ ಸಂಬಂಧಿಸಿದಂತೆ ಸ್ವಾತಂತ್ರ್ಯದ ವ್ಯಾಪ್ತಿ ಬೇರೆಯೇ ಆಗುತ್ತದೆ. ರಾಷ್ಟ್ರೀಯ ಸರ್ಕಾರ ಅಥವಾ ರಾಜ್ಯ ಸರ್ಕಾರಗಳು, ವಿಶ್ವವಿದ್ಯಾನಿಲಯಗಳು ಅಥವಾ ಆಡಳಿತ ಮಂಡಳಿಗಳು, ವಿದ್ಯಾರ್ಥಿಗಳು ಅಥವಾ ಶಿಕ್ಷಕರು, ಪ್ರತಿಯೊಬ್ಬರೂ ಸ್ವಾಯತ್ತತೆ ಪದದ ಬಗೆಗೆ ನಿರ್ದಿಷ್ಟ ಸಂಸ್ಥೆಯಲ್ಲಿನ ಸಾಂದರ್ಭಿಕ ಅಂಶಗಳನ್ನು ಆಧರಿಸಿ ತಮ್ಮದೇ ಗ್ರಹಿಕೆ ಮತ್ತು ಅರ್ಥವನ್ನು ಹೊಂದಿದ್ದಾರೆ. ಅವುಗಳೆಂದರೆ, 'ಶಿಕ್ಷಣದ ಗುಣಮಟ್ಟವನ್ನು ಉತ್ತಮಗೊಳಿಸಲು ಇರುವ ಒಂದು ಅವಕಾಶ ಮತ್ತು ಪ್ರತಿಯೊಂದು ಸಂಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ವಿಶ್ಲೇಷಿಸುವ ಮುಖೇನ ಅಗತ್ಯತೆಗಳನ್ನು ಆಧರಿಸಿ ಪಾಲ್ಗೊಳ್ಳುವಿಕೆ, ವಿವೇಚನಾತ್ಮಕ ಚಿಂತನೆ ಮತ್ತು ಕ್ರಿಯೆಗಳಲ್ಲಿ ಬದಲಾವಣೆ ತರುವ ಒಂದು ಸಾಧನವೇ ಸ್ವಾಯತ್ತತೆ.' ಸ್ವಾಯತ್ತತೆಯನ್ನು 'ಶೈಕ್ಷಣಿಕ ಸ್ವಾತಂತ್ರವಾಗಿ ಮತ್ತೊಂದು ವಿಧದಲ್ಲಿ ಅವಲೋಕಿಸಲಾಗಿದೆ. 'ಶೈಕ್ಷಣಿಕ ಸಂಶೋಧನೆ ಮತ್ತು ಉದ್ಯಮಗಳ ನಡುವೆ ಅನಿರ್ಬಂಧಿತ ಸಹಯೋಗವನ್ನುಂಟುಮಾಡುವುದು .' ಆದೇರೀತಿ, ಅನೇಕ ಪರಿಣಿತರು ಸ್ವಾಯತ್ತತೆಯನ್ನು ಸಂದರ್ಭಗಳಿಗೆ ಸಂಬಂಧಿಸಿದಂತೆ ವಿವಿಧ ರೀತಿಯಲ್ಲಿ ನೋಡಿದ್ದಾರೆ. ಲೇಖಕರ ಈ ನಿರ್ವಚನಗಳನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ, ಅವುಗಳನ್ನು ಸಂಕ್ಷಿಪ್ತಗೊಳಿಸಿ ಕೆಳಕಂಡ ನಕ್ಷೆಯಲ್ಲಿ ನೀಡಲಾಗಿದೆ. (ನಕ್ಷೆ 1)




Digitised by Bharatavani, CIIL

ನಕ್ಷೆ 1 ರಲ್ಲಿ ಒಳಗೊಂಡಿರುವ ವ್ಯಾಖ್ಯೆಗಳು ಗ್ಲೆನ್ನಿ ಮತ್ತು ಡಲ್‌ಗಿಶ್ (1973); ಎಷ್ಬಿಯನ್ (1974); ಬರ್ಡ್‌ಹಾಲ್ (1971); ಮೂಡ ಮತ್ತು ಯುಸ್ಪೇಸ್ (1974); ಸುಧಾರಾವ್ (1999) ಮತ್ತು ಇತರ ಲೇಖಕರ ವ್ಯಾಖ್ಯೆಗಳನ್ನು ಒಳಗೊಂಡಿವೆ.

ಸ್ವಾಯತ್ತತೆಯನ್ನು ಸರಳರೂಪದಲ್ಲಿ ಸ್ವೇಚ್ಛೆ ಎಂದು ಹೇಳಲಾಗಿದೆ. ಇದನ್ನು ಹಲವು ವೇಳೆ 'ಸ್ವಾತಂತ್ರ್ಯ,' 'ಸ್ವ–ಸರ್ಕಾರ'. 'ನಿರ್ಬಂಧರಹಿತತೆ' ಇತ್ಯಾದಿಗಳೊಂದಿಗೆ ಸಮೀಕರಿಸಲಾಗುತ್ತದೆ. ಇನ್ನೂ ಹಲವಾರು ವ್ಯಾಖ್ಯಾನಗಳಿವೆ. ಪ್ರತಿಯೊಂದು ವ್ಯಾಖ್ಯೆಯಲ್ಲೂ ವಿಧಗಳಿವೆ – ಪ್ರತಿಯೊಂದು ವ್ಯಾಖ್ಯೆಯು ಎರಡರ ನಡುವಿನ ವ್ಯತ್ಯಾಸ ತಿಳಿಸುತ್ತದೆ ಮತ್ತು ಪ್ರತಿಯೊಂದು ಏಕಕಾಲದಲ್ಲಿ ವ್ಯಾಖ್ಯೆಯೂ ಒಂದನ್ನು (ಸ್ವಾಯತ್ತತೆಯನ್ನು) ಮತ್ತೊಂದರಿಂದ (ಸ್ವೇಚ್ಛೆಯಿಂದ) ವ್ಯತ್ಯಾಸೀಕರಿಸುವ ದತ್ತ ಸ್ವೇಚ್ಛೆಯ ಸಂದರ್ಭದಲ್ಲಿ ಕ್ರಿಯಾನ್ವಿತವಾಗುವ ನಿಯಂತ್ರಣದ ಮಿತಿಯನ್ನು ವ್ಯಾಖ್ಯೆಯೂ ತಿಳಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ವಿವಿಧ ವಿಧಗಳಲ್ಲಿ, ಸ್ವರೂಪದಲ್ಲಿ ಮತ್ತು ಸ್ವೇಚ್ಛೆಯ ವಿಸ್ತೃತತೆಯಲ್ಲಿ ಮತ್ತು ಇತರ ರೀತಿಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಸ್ವಾಯತ್ತತೆಯನ್ನು 'ವಾಸ್ತವ' (ನಿಜ, ಸಹಜ), 'ಕಾನೂನಿಗೆ ಒಳಪಟ್ಟ' ಎಂಬುದಾಗಿಯೂ ಕಾಣಬಹುದು. ಕಾನೂನಿಗೊಳಪಟ್ಟ ಸ್ವಾಯತ್ತತೆಯು ಪದ ಪ್ರಯೋಗದಲ್ಲೇ ಸ್ಪಷ್ಟವಾಗಿರುವುದರಿಂದ, ಅದಕ್ಕೆ ಮುಂದುವರೆದ ಯಾವುದೇ ವಿವರಣೆ ಅಗತ್ಯವೆನಿಸುವುದಿಲ್ಲ.

ನಿಜ ಸ್ವಾಯತ್ತತೆಯನ್ನು ಸಂಸ್ಥೆ ಮತ್ತು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅರ್ಥೈಸಿಕೊಳ್ಳುವುದು ಕಷ್ಟಸಾಧ್ಯ. ಏಕೆಂದರೆ, ಎರಡರಲ್ಲೂ ಸಹ ವ್ಯಕ್ತಿಗತವಾಗಿ ಅಥವಾ ಸಾಂಸ್ಥಿಕವಾಗಿ ಅವುಗಳ 'ನೀತಿ–ನಿಯಮ' ಮತ್ತು 'ನಿರ್ದಿಷ್ಟ' ವರ್ತನೆಗಳು ಸಮಾಜವು ಒಪ್ಪುವ ರೀತಿಯಲ್ಲಿರುತ್ತವೆ. ಹಾಗಾಗಿ, ವ್ಯಕ್ತಿಗಳು ಮತ್ತು ಸಂಸ್ಥೆಗಳು ಅನುಭವಿಸುವ ಸ್ವಾಯತ್ತತೆಯ ಸ್ವರೂಪ ಮತ್ತು ವಿಸ್ತೃತತೆ ಅವುಗಳು ಇರುವ ಸಮಾಜಕ್ಕೆ ಅನುಗುಣವಾಗಿರುತ್ತವೆ. ಸಂಸ್ಥೆಗಳು ಗಳಿಸುವ ಸ್ವಾಯತ್ತತೆಯು ಮುಂದಿನ ಅಂಶಗಳನ್ನು ಅವಲಂಬಿಸಿದೆ.

ಅ) ನಿಯಂತ್ರಣಾ ಸಂಸ್ಥೆಗಳು ಹೊಂದಿರುವ ಅಧಿಕಾರ; ಉದಾಹರಣೆಗೆ ಯುಜಿಸಿ, ಎಐಸಿಟಿಇ, ಎನ್‌ಸಿಟಿಇ ಇತ್ಯಾದಿ.

ಆ) ಸಂಸ್ಥೆಗೆ ಸಂಲಗ್ನತೆ ನೀಡಿರುವ ಸಂಲಗ್ನತಾ ಮಂಡಳಿಗಳಿಗಿರುವ ಅಧಿಕಾರ. ಅಂದರೆ, ಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮಂಡಳಿಗಳು ಮತ್ತು ಕಾಲೇಜುಗಳಿಗೆ ವಿಶ್ವವಿದ್ಯಾನಿಲಯಗಳಿದ್ದಂತೆ.

ಇ) ಸಂಸ್ಥೆಯ ನಿರ್ವಹಣಾ ಮಂಡಳಿ ಹೊಂದಿರುವ ಅಧಿಕಾರ.

**ವ್ಯಕ್ತ (ಸ್ಪಷ್ಟ)** ಮತ್ತು ಅವ್ಯಕ್ತ (ಧ್ವನಿತ) ಸ್ವಾಯತ್ತತೆಗಳಿಗೆ ಸಂಬಂಧಿಸಿದಂತೆ ವ್ಯಕ್ತ ಸ್ವಾಯತ್ತತೆಯು ಸಂವಿಧಾನದಲ್ಲಿರುವ ತಿದ್ದುಪಡಿಯ ಮೂಲಕ ನ್ಯಾಯಬದ್ಧವಾಗಿ ಸಮ್ಮತಿಸಿರುವ ಅವಕಾಶ, ಕಾಯಿದೆಗಳು, ಕಾನೂನುಗಳು ಮತ್ತು ಕೇಂದ್ರ, ರಾಜ್ಯ ಮತ್ತು ಸಂಸ್ಥೆಗಳ ಹಂತದಲ್ಲಿ ನೀಡಿರುವ ಅವಕಾಶಗಳು. ಆ ಕಾರಣದಿಂದ 'ವ್ಯಕ್ತಗೊಳಿಸಿರುವ ಕಾನೂನುಗಳು' ಅಥವಾ 'ನಿರ್ದೇಶನಗಳ' ಅನುಪಸ್ಥಿತಿಯಲ್ಲಿ ಸಂಸ್ಥೆಯ ಚಟುವಟಿಕೆಗಳು ನಿರ್ಬಂಧಿಸಲ್ಪಟ್ಟಿರುತ್ತವೆ. ಇದು ಸಂಸ್ಥೆಗೆ ಸಾಕಷ್ಟು ಪ್ರಮಾಣದ ಅವ್ಯಕ್ತ ಸ್ವಾಯತ್ತತೆಯನ್ನು ನೀಡುತ್ತದೆ. ಇದು ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಸಂಸ್ಥೆಗೆ ಸಾಂಸ್ಥೀಕರಣಗೊಳ್ಳುತ್ತದೆ. ಆದುದರಿಂದ, ಸಂಸ್ಥೆಗಳು ನ್ಯಾಯಿಕವಾಗಿ ರಾಜ್ಯದ ಅಧೀನಕ್ಕೆ ಒಳಪಟ್ಟಿದ್ದರೂ ಸ್ವಲ್ಪಮಟ್ಟಿನ ಸ್ವಾತಂತ್ರ್ಯವನ್ನು ಅನುಭವಿಸುತ್ತವೆ.

ವ್ಯಕ್ತ ಸ್ವಾಯತ್ತತೆಯು 'ನಿರ್ಬಂಧಿತ' ಅಥವಾ 'ಅನಿರ್ಬಂಧಿತ'ವಾಗಿರಬಹುದು. ಸ್ವಾಯತ್ತತೆ ವ್ಯಕ್ತ ನೀಡಲಾಗಿರುವ ದೇಶಗಳಲ್ಲಿ ಆಚರಣೆಯಲ್ಲಿದೆ. ಅನುದಾನ ನೀಡುವ ಪ್ರಾಧಿಕಾರಗಳು ವಿಧಿಸುವ ನಿಬಂಧನೆಗಳನ್ನು ಅವಶ್ಯಕವಾಗಿ ಪೂರೈಸಿದಾಗ ಮಾತ್ರ ಸ್ವಾಯತ್ತತೆಯನ್ನು ಆಚರಿಸಲಾಗುತ್ತದೆ. ಉದಾಹರಣೆಗೆ, ಯುಜಿಸಿ ಕಾಲೇಜುಗಳಿಗೆ ನೀಡಿದ ಸ್ವಾಯತ್ತತೆ ಅಥವಾ ಶಾಲೆಗಳಿಗೆ ಸಿಬಿಎಸ್‌ಸಿ ನೀಡುವ ಸ್ವಾಯತ್ತತೆ ಅಥವಾ ರಾಜಸ್ಥಾನ ತನ್ನ ಶಾಲೆಗಳಿಗೆ ನೀಡಿರುವ ಸ್ವಾಯತ್ತತೆ ಭಾರತದಲ್ಲಿ ವ್ಯಕ್ತ ಸ್ವಾಯತ್ತತೆಗೆ ಇರುವ ಉದಾಹರಣೆಗಳಾಗಿವೆ.

ಸ್ವಾಯತ್ತತೆಯು ಒಂದು 'ಪ್ರಕ್ರಿಯೆ' ಕೂಡ ಹೌದು. ಅವಶ್ಯಕವಾಗಿ ನ್ಯಾಯಸಮ್ಮತ ಕಾನೂನು ಸಮ್ಮತ ಸ್ವಾಯತ್ತತೆ ನೀಡಿದ್ದರೂ, ನಿಜವಾದ ಸ್ವಾಯತ್ತತೆಯು ಕಾರ್ಯರೂಪಕ್ಕೆ ಬರುವುದು. ಆ ಸಂಸ್ಥೆಯ ಸದಸ್ಯರು ಬದಲಾವಣೆಗಳನ್ನು ಎರಡು ಹಂತಗಳಲ್ಲಿ ತಂದಾಗ; (1) ಆಲೋಚನೆಯ ಮಟ್ಟದಲ್ಲಿ ಮತ್ತು (2) ವರ್ತನೆಯ ಮಟ್ಟದಲ್ಲಿ

ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡುವುದರ ಪ್ರಮುಖ ಉದ್ದೇಶ ಜ್ಞಾನ ಮತ್ತು ಕೌಶಲಗಳ ಸಾಧನೆಯನ್ನು ಸುಗಮಗೊಳಿಸುವುದು. ವ್ಯಕ್ತಿಯ ಜ್ಞಾನ ಮತ್ತು ಕೌಶಲಗಳ ಆಧಾರದ ಮೇಲೆ ವೃತ್ತಿಪರತೆಯನ್ನು ಉತ್ತೇಜಿಸಬಹುದು. ಆ ಮೂಲಕ ಉತ್ತಮ ಬದುಕಿಗೆ ಭರವಸೆ ನೀಡಬಹುದೆಂದು ಭಾವಿಸಲಾಗಿದೆ. ಮುಂದುವರೆದು, ಇದು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಸಂಶೋಧನೆ ಮತ್ತು ಸೃಜನಶೀಲತೆಗಳನ್ನು ಉತ್ತೇಜಿಸುವುದು; ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಸಂಶೋಧನಾ ಸಾಮರ್ಥ್ಯಗಳನ್ನು ಬೆಳೆಸುವುದು ಮತ್ತು ಸಂಸ್ಥೆಗಳ ಗುಣಮಟ್ಟ ಮತ್ತು ಉತ್ಕೃಷ್ಟತೆಯನ್ನು ಸಾಧಿಸುವುದು. ಈ ಪ್ರಕ್ರಿಯೆಯ ನಿರ್ಣಯ ಕೈಗೊಳ್ಳುವಿಕೆಯಲ್ಲಿ ಬೋಧಕ ಮತ್ತು ವಿದ್ಯಾರ್ಥಿ ಸಮೂಹಗಳೆರಡೂ ಕ್ರಿಯಾಶೀಲವಾಗಿ ಪಾಲ್ಗೊಳ್ಳುವುದನ್ನು ನಿರೀಕ್ಷಿಸಲಾಗುತ್ತದೆ ಹಾಗೂ ಇದು ಶಿಕ್ಷಣ ಕ್ಷೇತ್ರದ ಎಲ್ಲ ಪಾಲುದಾರರಲ್ಲೂ ಜವಾಬ್ದಾರಿಯ ಪ್ರಜ್ಞೆಯನ್ನು ಕ್ರಮೇಣವಾಗಿ ತುಂಬುವುದು. ಅಂದರೆ ಇದು ಅವರ ಕಾರ್ಯಗಳಿಗೆ ಜವಾಬ್ದಾರರನ್ನಾಗಿಸುವುದು. ಸ್ವಾಯತ್ತತೆಯ ಪರಿಕಲ್ಪನಾತ್ಮಕ ಅಂಶಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಇದೇ ಲೇಖಕಿಯ 'ಶಿಕ್ಷಣದಲ್ಲಿ ಸ್ವಾಯತ್ತತೆ' ಎಂಬ ಲೇಖನದಲ್ಲಿ ವಿವರಿಸಲಾಗಿದೆ.

**ಸ್ವಾಯತ್ತ ಸಂಸ್ಥೆಗಳ ಬಗ್ಗೆ ಸಂಶೋಧನೆ:**

ಸುಧಾರಾವ್ (1991) ತಮ್ಮ ಸ್ವಾಯತ್ತ ಸಂಸ್ಥೆಗಳ ಅಧ್ಯಯನದಿಂದ ಪ್ರಪ್ರಥಮವಾಗಿ ಭಾರತೀಯ ಸಂದರ್ಭದಲ್ಲಿ

Digitised by Bharatavani, CIIL

ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ವಾಯತ್ತತೆಯ ಸಕಾರಾತ್ಮಕ ಮತ್ತು ನಕಾರಾತ್ಮಕ ಫಲಿತಾಂಶಗಳನ್ನು ವಿವರವಾಗಿ ತಿಳಿಯಪಡಿಸಿದ್ದಾರೆ. ನಕಾರಾತ್ಮಕ ಫಲಿತಾಂಶಗಳು ಏನೇ ಇರಲಿ, ಸಕಾರಾತ್ಮಕ ಫಲಿತಾಂಶಗಳು, 'ನಕಾರಾತ್ಮಕ ಫಲಿತಾಂಶಗಳಿಗಿಂತ ಹೆಚ್ಚಾಗಿರುವ ತಥ್ಯಾಂಶ ಸ್ವಾಯತ್ತತೆಯನ್ನು ಕಲಿಕಾರ್ಥಿಗಳ ಪ್ರಯೋಜನಕ್ಕಾಗಿ ಹೆಚ್ಚಿನ ಜವಾಬ್ದಾರಿ ಮತ್ತು ಪಾರದರ್ಶಕತೆಯಿಂದ ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾರಿಗೊಳಿಸಿದರೆ ಸ್ವಾಯತ್ತತೆಯ ಗುಣವನ್ನು ದೃಢಪಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ. ಇದು ಸ್ವಾಯತ್ತತೆ ಗುಣಾತ್ಮಕತೆಯನ್ನು ಮತ್ತು ಉತ್ತರದಾಯಿತ್ವವನಮ್ನು ಖಚಿತಗೊಳಿಸುತ್ತದೆ ಎಂದು ಸಮರ್ಥಿಸುತ್ತದೆ.

ಈ ಅಧ್ಯಯನದ ಕೆಲವು ಮುಖ್ಯ ಧನಾತ್ಮಕ ಕಾಣ್ಕೆಗಳು ಹೀಗಿವೆ: ಅಧ್ಯಾಪಕರ ಸ್ಥಾನಮಾನವನ್ನು ಹೆಚ್ಚಿಸುವುದು, ಅಧ್ಯಾಪಕರಿಗೆ ಹೆಚ್ಚಿನ ವೃತ್ತಿ ತೃಪ್ತಿ, ಕೆಲಸದ ದಿನಗಳ ಮತ್ತು ಕೆಲಸದ ಗಂಟೆಗಳ ಹೆಚ್ಚಳ, ಅಧ್ಯಾಪಕರು ಪೂರ್ಣತಃ ಸಿದ್ಧನಾಗಿ ಬರುವುದು; ನವೀನ ಆಚರಣೆಗಳ ಆರಂಭ; ಸ್ವಾಯತ್ತ ಸಂಸ್ಥೆಗಳಲ್ಲಿ ಸೂಕ್ತ ಉನ್ನತೀಕರಣದೊಂದಿಗೆ ಕೋರ್ಸ್‌ಗಳ ಮತ್ತು ಪಠ್ಯಕ್ರಮ ಪುನರ್-ಸಂರಚನೆ; ಅನೇಕ ಹೊಸ ಕೋರ್ಸ್‌ಗಳ ಆರಂಭ; ಸೆಮಿಸ್ಟರ್ ವ್ಯವಸ್ಥೆ, ಆಂತರಿಕ ಮೌಲ್ಯಮಾಪನ, ಉತ್ತಮ ಪ್ರಶ್ನಪತ್ರಿಕೆಗಳು ಮುಂತಾದ ಪರೀಕ್ಷಾ ಸುಧಾರಣೆಗಳನ್ನು ಮಾಡುವುದು, ಉತ್ತಮ ಪ್ರವೇಶ ನೀತಿ, ಮೂಲ ಸೌಕರ್ಯಗಳ ಮತ್ತು ಕಟ್ಟಡಗಳ ಗರಿಷ್ಠ ಮಟ್ಟದ ಕ್ರೋಢೀಕರಣ ಮತ್ತು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಗರಿಷ್ಠ ಉಪಯೋಗ.

ಸ್ವಾಯತ್ತತೆಯು ಶೈಕ್ಷಣಿಕ ಸಿಬ್ಬಂದಿಯ ಆಡಳಿತಾತ್ಮಕ ಕಾರ್ಯಭಾರದ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದೂ ಈ ಅಧ್ಯಯನ ತಿಳಿಯಪಡಿಸುತ್ತದೆ. ಕೆಲವು ವೇಳೆ ಸಂಸ್ಥೆಯ ಮಟ್ಟದಲ್ಲಿ ತಜ್ಞರು ಇಲ್ಲದ ಕಾರಣದಿಂದ ಮತ್ತು ತಾವು ಪ್ರತ್ಯೇಕಗೊಳ್ಳುತ್ತೇವೆ ಎನ್ನುವ ಕಾಲೇಜುಗಳ ಒಂದು ರೀತಿಯ ಭಯದಿಂದ ಕೋರ್ಸ್‌ಗಳ ಪುನರ್ ಸಂರಚನೆ ನಿರೀಕ್ಷಿತ ಮಟ್ಟದಲ್ಲಿರುವುದಿಲ್ಲ. ಒಮ್ಮೆ ಕೋರ್ಸ್‌ಗಳನ್ನು ಪುನರ್-ಸಂರಚನೆ ಮಾಡಿದ ನಂತರ ದೀರ್ಘ ಕಾಲದವರೆಗೆ ಪಠ್ಯಕ್ರಮವನ್ನು ಮತ್ತೊಮ್ಮೆ ಪುನರ್-ಸಂರಚನೆ ಮಾಡದೇ ಇರುವುದರಿಂದ ಪಠ್ಯಕ್ರಮ ಹಳೆಯದಾಗುತ್ತದೆ. ಸಂಸ್ಥೆಗಳಿಗೆ 'ಕೇವಲ ವಿಕೇಂದ್ರೀಕರಣ' ಮತ್ತು ಬೋಧನೆ ಮತ್ತು ಕಲಿಕೆಯನ್ನು 'ಸುಗಮಗೊಳಿಸುವ ಸಾಧನ'ಕ್ಕಿಂತ ಹೆಚ್ಚಾಗಿ ಒಂದು 'ಶಕ್ತಿಯ ಆಟ'ವಾಗಿದೆ ಎಂದು ತೋರುತ್ತದೆ. ತೀರ್ಮಾನ ತೆಗೆದುಕೊಳ್ಳುವವರು 'ಯಾರು' 'ಯಾವ' ಯಾವ ಅಂಶಗಳಿಗೆ ಎನ್ನುವುದರಲ್ಲಿ ಈ 'ಶಕ್ತಿಯ ಆಟ' ನಡೆಯುತ್ತದೆ.

ಶೆರಾಟ್ಸ್ (1991)ನ ಅಧ್ಯಯನ ಶಾಲಾ ಮಟ್ಟದಲ್ಲಿ ಇದೇ ರೀತಿಯ ತೀರ್ಮಾನವನ್ನು ತಿಳಿಸಿದೆ. ಯುವ ಜನರ ಜೀವನದ ಎಲ್ಲಾ ಮುಖಗಳಿಗಾಗಿ ನೀಡುವ ಶಿಕ್ಷಣಕ್ಕಾಗಿ ಶಾಲೆಯನ್ನು ಒಂದು ಸ್ಥಾನವಾಗಿ ಮಾಡಲು ತನ್ನಿಂದ ನಿರೀಕ್ಷಿಸುವ ಬೇಡಿಕೆಗಳನ್ನು ಪೂರ್ತಿ ಮಾಡಲು ಸಂಸ್ಥೆಯಲ್ಲಿ ಸಾಕಷ್ಟು ನಮ್ಯತೆಗೆ ಅವಕಾಶವಿರಬೇಕು. ಬೇರೆ ಅಧ್ಯಯನಗಳ ತೀರ್ಮಾನಗಳ ಜೊತೆಗೆ ಈ ಅಧ್ಯಯನದ ಮತ್ತೊಂದು ಆಸಕ್ತಿಕರ ಮತ್ತು ಸಕಾರಾತ್ಮಕವಾದ ತೀರ್ಮಾನಗಳೆಂದರೆ ಈ ರೀತಿಯ ನಮ್ಯತೆಯಿಂದ ವಿದ್ಯಾರ್ಥಿಗಳ ಸಾಧನೆಯ ಮಟ್ಟವನ್ನು ತ್ಯಾಗ ಮಾಡದೆ ಕೆಲಸದ ಅವಧಿಗಳನ್ನು ಕಡಿಮೆ ಮಾಡಲು ಸಾಧ್ಯವಾದುದು. ವಿದ್ಯಾರ್ಥಿಗಳ ಮತ್ತು ಪೋಷಕರ ಜವಾಬ್ದಾರಿ ಹೆಚ್ಚಾದುದು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದ್ದು, ಹೊಸ ಹೊಸ ಬೋಧನಾ ವಿಧಾನಗಳನ್ನು ಪರಿಚಯಿಸಿದ್ದು, ನಮ್ಯತೆಯಿಂದ ಕೂಡಿದ್ದ ವೇಳಾಪಟ್ಟಿ, ಶಾಲಾ ಘಟಕ ಒಂದಕ್ಕೆ ಹಣಕಾಸಿನ ಸಂಪನ್ಮೂಲಗಳನ್ನು ಉಳಿತಾಯದಿಂದ ಬಳಸಿದುದು, ಧನಸಹಾಯವನ್ನು ಪುನರ್-ವಿಂಗಡಣೆ ಮಾಡಿದುದು, ಸಹಕಾರಾತ್ಮಕ ಮೇಲ್ವಿಚಾರಣೆ, ಮತ್ತು ಶಾಲಾ ಅಧಿಕಾರಿಗಳ ಹಾಗೂ ವ್ಯವಸ್ಥಾಪಕರ ಮುಕ್ತ ಮನಸ್ಕತೆ. ಇದಕ್ಕೆ ವಿರುದ್ಧವಾಗಿ ಶಾಲೆಯ ಮುಖ್ಯಸ್ಥರಿಗೆ ಮತ್ತು ಶಿಕ್ಷಕರಿಗೆ ಸಂಘಟನಾತ್ಮಕ ಕೆಲಸಗಳ ಹೆಚ್ಚಳ, ನಿರಂತರ ಹೆಚ್ಚಿನ ನಿರೀಕ್ಷೆಗಳಿಂದ ಶಿಕ್ಷಕರ ಅಸಮಾಧಾನಗೊಳ್ಳುವಿಕೆ, ಕೆಲವೇ ಶಿಕ್ಷಕರಿಂದ ಮಾತ್ರ ಅತಿಯಾಗಿ ಕೆಲಸ ಮಾಡಿಸುವುದು, ಸ್ವಾಯತ್ತತೆ ಪಡೆದ ಆರಂಭದಲ್ಲಿ ನವೀನ ಆಚರಣೆಗಳನ್ನು ಆರಂಭಿಸುವುದು ಮತ್ತು ನಂತರದಲ್ಲಿ ಅವುಗಳನ್ನು ನಿಧಾನಗೊಳಿಸುವುದು, ಪಠ್ಯಕ್ರಮವನ್ನು ಪುನರ್-ಸಂರಚಿಸುವ ಹೆಸರಿನಲ್ಲಿ ಲಲಿತಕಲೆಗಳು ಮತ್ತು ದೈಹಿಕ ಶಿಕ್ಷಣವನ್ನು ನಿಯಮಿತ (ಮಾಮೂಲು) ಕೋರ್ಸ್‌ಗಳನ್ನು ಸೇರಿಸುವುದು. ತಂಡ ಬೋಧನೆಯಲ್ಲಿ ಶಿಕ್ಷಕರು ಕಷ್ಟಗಳನ್ನು ಎದುರಿಸುವುದು. ಕಾರ್ಯಕ್ರಮಗಳ ಸಂಕೀರ್ಣತೆಯಿಂದ ಮತ್ತು ಸಾರ್ವಜನಿಕರು ವ್ಯಕ್ತಪಡಿಸುವ ಗೊಂದಲಪೂರ್ಣ ಹೇಳಿಕೆಗಳಿಂದ ಮೌಲ್ಯಮಾಪನ ಕಷ್ಟಕರವಾಗಿರುವುದು – ಇವು ಸ್ವಾಯತ್ತ ಸಂಸ್ಥೆಗಳ ಋಣಾತ್ಮಕ ಫಲಿತಾಂಶಗಳಾಗಿದ್ದವು.

ಸ್ವಾಯತ್ತತೆಯ ಈ ಎಲ್ಲಾ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ಗುರುತಿಸಿದ್ದರೂ ಕೂಡ ಶಾಲೆಯ ವ್ಯವಸ್ಥಾಪಕರಿಂದ ಮತ್ತು ಶಾಲೆ ಆಡಳಿತಗಾರರಿಂದ ಒಳ್ಳೆಯ ಸಮ್ಮತಿಯಿಂದ (ನಿಯಮ ರಹಿತವಾಗಿ) ಮತ್ತು ಪೂರಕ ನಿಯಂತ್ರಣಗಳಿಂದ, ಸಾಕಷ್ಟು ನಮ್ಯತೆಯಿಂದ ಸ್ವಾಯತ್ತತೆಯನ್ನು ಜಾರಿಗೊಳಿಸುವ ಅಗತ್ಯವಿದೆ ಎಂದು ನಂಬಲಾಗಿದೆ.

ಶಿಕ್ಷಕನ ಮತ್ತು ಆಡಳಿತಗಾರನ ಸ್ವಾಯತ್ತತೆ ವಿದ್ಯಾರ್ಥಿಯ ಸಾಧನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವಗೊಳಿಸುತ್ತದೆ ಎಂದು ಪರಿಗಣಿಸಲಾಗಿದೆ. ಖಾಸಗಿ ಶಾಲೆಗಳಲ್ಲಿರುವ ಸ್ವಾಯತ್ತತೆ ಸಾಮಾನ್ಯವಾಗಿ ಪಠ್ಯಕ್ರಮ, ಪಠ್ಯಪುಸ್ತಕಗಳು, ಮೌಲ್ಯಮಾಪನ ಮತ್ತು ಪರೀಕ್ಷೆಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸ್ವಾಯತ್ತತೆಯ ಆಚರಣೆ ಪರೋಕ್ಷ ರೀತಿಯಲ್ಲಿ ಯಶಸ್ವಿಯಾಗಿದೆ. ಸ್ವಾಯತ್ತತೆ ಉತ್ತಮ ಫಲಿತಾಂಶಗಳನ್ನು ಮತ್ತು ಉತ್ತಮ ವಿದ್ಯಾರ್ಥಿ ಸಾಧನೆಯನ್ನು ಉಂಟು ಮಾಡಿದೆ. ಇದಕ್ಕೆ ಹೋಲಿಸಿದರೆ ಸರ್ಕಾರಿ ನಿಯಂತ್ರಿತ ಶಾಲೆಗಳು ತಮ್ಮ ಕಾರ್ಯದಲ್ಲಿ ಕಳಪೆ ವಿದ್ಯಾರ್ಥಿ ಸಾಧನೆಯನ್ನು ತೋರಿಸಿವೆ. ಏಕೆಂದರೆ ಅಧಿಕಾರಶಾಹಿ ನಿಯಂತ್ರಣಗಳು ಸ್ವಾಯತ್ತತೆಯನ್ನು ಕುಂಠಿತಗೊಳಿಸುತ್ತವೆ.

ಸಾಂಡ್ರರವರು (1997) ರಾಜ್ಯಗಳು ತಮ್ಮ ಸಾರ್ವಜನಿಕ ಶಾಲೆಗಳಲ್ಲಿ ತಾವು ಅನುಸರಿಸುವ ಪ್ರಜಾಸತ್ತಾತ್ಮಕ ಅಧಿಕಾರಶಾಹಿತ್ವದಿಂದಾಗಿ

Digitised by Bharatavani, CIIL

ಖಾಸಗಿ ಶಾಲೆಗಳಲ್ಲಿ ಶಿಕ್ಷಕರು ಮತ್ತು ಪ್ರಿನ್ಸಿಪಾಲರುಗಳು ಅನುಭವಿಸುತ್ತಿರುವ ಸ್ವಾಯತ್ತತೆಯ ಮತ್ತು ಸ್ವಾತಂತ್ರ್ಯದ ಚೌಕಟ್ಟನ್ನು ವಿಸ್ತೃತವಾಗಿ ವಿವರಿಸಿದ್ದಾರೆ. ಮುಂದುವರಿದು, ಇವರ ಅಧ್ಯಯನ ಸ್ವಾಯತ್ತತೆ ಪರಿಕಲ್ಪನೆಯ ಸಂಕೀರ್ಣತೆಯನ್ನು ಗಮನಿಸುತ್ತದೆ ಮತ್ತು ಖಾಸಗಿ ಶಾಲೆಗಳಲ್ಲಿನ ಶಿಕ್ಷಕರ ಮತ್ತು ಪ್ರಿನ್ಸಿಪಾಲರುಗಳ ಸ್ವಾಯತ್ತತೆ ಅವರದೇ ಸ್ಥಾನಮಾನವನ್ನು ಹೊಂದಿರುವ ಸಾರ್ವಜನಿಕ ಶಾಲೆಗಳ ಶಿಕ್ಷಕರು ಮತ್ತು ಪ್ರಿನ್ಸಿಪಾಲರುಗಳಿಗಿಂತ ಹೆಚ್ಚಾಗಿದೆ ಎನ್ನುವ ಮಿಥ್ಯಾಕಲ್ಪನೆಯನ್ನು ಪ್ರಶ್ನಿಸುತ್ತದೆ. ದ್ವಂದ್ವಾತ್ಮಕತೆಯಿಂದ ಕೂಡಿದ ಮತ್ತು ವಿರೋಧಾತ್ಮಕವಾದ ಬೇಡಿಕೆಗಳು, ಪರಸ್ಪರ ಹಂಚಿಕೊಂಡ ನಂಬಿಕೆಗಳು, ಸಂರಕ್ಷಣೆಯ ಪದರಗಳು, ಕಾಯ್ದೆಗಳ ವ್ಯವಸ್ಥೆ, ಧನ ಸಹಾಯದ ನಿಬಂಧನೆಗಳು, ಸಂಸ್ಥೆಯ ಗಾತ್ರ ಮುಂತಾದ ವಿವಾದಾಂಶಗಳು ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳ ವೃತ್ತಿಪರರು (ಶಿಕ್ಷಕರು ಮತ್ತು ಮುಖ್ಯಸ್ಥರು) ಅನುಭವಿಸುವ ಸ್ವಾಯತ್ತತೆಯ ನಡುವೆ ವ್ಯತ್ಯಾಸವಿದೆ ಎನ್ನುವ ಅತಿಯಾಗಿ ಸರಳೀಕರಿಸಿದ ಸಮರ್ಥನೆಯನ್ನು ಪ್ರಶ್ನಿಸುವಂತೆ ಕಾಣುತ್ತದೆ ಎಂದೂ ಈ ಅಧ್ಯಯನ ಹೇಳುತ್ತದೆ.

ಸ್ವಾಯತ್ತತೆಯನ್ನು ಖಚಿತಗೊಳಿಸದಿದ್ದಲ್ಲಿ ಕಾನೂನು ಮಾಡುವವರು ಶಾಲೆಗಳಿಗೆ ಕೊಡುವ ಸ್ವಾತಂತ್ರ್ಯವನ್ನು ದುರುಪಯೋಗ ಮಾಡುವ ಸಾಧ್ಯತೆ ಇದೆ (ಸ್ಟ್ಯಾನ್ಲೆ ಬಾಂಡ್, 1998). ಉತ್ತರದಾಯಿತ್ವವನ್ನು ಖಚಿತಗೊಳಿಸುವ ಸ್ವಾಯತ್ತತೆ ಸಾರ್ವಜನಿಕ ಶಿಕ್ಷಣದಲ್ಲಿ ಕ್ರಾಂತಿಯನ್ನುಂಟು ಮಾಡಬಲ್ಲದು. ಸ್ವಾಯತ್ತತೆಯಿಂದ ಅಧಿಕಾರಶಾಹಿ ನಿಯಮಗಳಿಂದ ಸ್ವಾತಂತ್ರ್ಯವನ್ನು ತರುತ್ತದೆ ಮತ್ತು ಸಂಪನ್ಮೂಲಗಳನ್ನು ಸಂರಕ್ಷಿಸುವುದರಲ್ಲಿ ನಮ್ಯತೆಗೆ ಅವಕಾಶ ನೀಡುತ್ತದೆ. ಸ್ವಾಯತ್ತತೆಯಿಂದ ಕಾನೂನು ಮಾಡುವವರಿಗೆ ಮತ್ತು ಪೋಷಕರಿಗೆ ಪುನರ್ ಭರವಸೆ ಉಂಟಾಗುವುದರ ಜೊತೆಗೆ ಶಾಲೆಯ ಪ್ರಿನ್ಸಿಪಾಲರಿಗೆ ಮತ್ತು ಶಿಕ್ಷಕರಿಗೆ ಪ್ರೋತ್ಸಾಹಕಗಳು ಸಿಗುತ್ತವೆ. ಸ್ವಾಯತ್ತತೆ ಕಲಿಕೆಯ ಖಾತರಿಯಾದ ರಾಜ್ಯದ ನಿಯಮಿತ ಮಾನಕಗಳಿಗೆ ತಕ್ಕಂತೆ ವಿದ್ಯಾರ್ಥಿಗಳು ಸಾಧನೆ ಮಾಡುವುದನ್ನು ಖಚಿತಗೊಳಿಸುತ್ತದೆ.

ರಷ್ಯಾದೇಶದಲ್ಲಿ ರಷಿಯನ್ ಫೆಡರೇಷನ್‌ನಲ್ಲಿ ಕೇಂದ್ರ ಸರ್ಕಾರ ಉನ್ನತ ಶಿಕ್ಷಣದ ಉದಯೋನ್ಮುಖ ಸಂಸ್ಥೆಗಳ ಮೇಲೆ ತನ್ನ ನಿಯಂತ್ರಣವನ್ನು ಉಳಿಸಿಕೊಂಡಿದೆ. ಆದಾಗ್ಯೂ ಭವಿಷ್ಯದಲ್ಲಿ ಕೆಲವು ಮುಂದುವರಿದ ಸೆಕೆಂಡರಿ ಔದ್ಯೋಗಿಕ ಕಾಲೇಜುಗಳನ್ನು ಸೆಕೆಂಡರಿ ನಂತರದ ಸ್ಥಾನಮಾನಕ್ಕೆ ಏರಿಸುವ ಮತ್ತು ರಾಜ್ಯಮಟ್ಟದ ನಿಯೋಗಗಳಿಗೆ ಅಥವಾ ಮಂತ್ರಾಲಯಗಳಿಗೆ ವಹಿಸಿಕೊಡಬಹುದಾದ ಸಾಮರ್ಥ್ಯ ಫೆಡರೇಷನ್‌ಗೆ ಇದೆ. ಒಟ್ಟಿನಲ್ಲಿ ಪಠ್ಯಕ್ರಮದ ಮೇಲೆ ಸೈದ್ಧಾಂತಿಕ ನಿಯಂತ್ರಣಗಳು ಸಡಿಲಗೊಂಡಿರುವ ದೃಷ್ಟಿಯಿಂದ ಮತ್ತು ಕೇಂದ್ರ ಸರ್ಕಾರದ ರಾಜ್ಯಾದಾಯದ (ರೆವಿನ್ಯೂ) ಬಹಳಷ್ಟು ಭಾಗ ಸಂಸ್ಥೆಗಳ ಉದ್ಯಮಶೀಲ ಚಟುವಟಿಕೆಗಳಿಂದ ಮತ್ತು ಸಿಬ್ಬಂದಿ ವರ್ಗದಿಂದ ಬರುವುದರಿಂದ ರಷ್ಯಾದಲ್ಲಿ ಸಾಂಸ್ಥಿಕ ಸ್ವಾಯತ್ತತೆಯ ಮಹತ್ವಪೂರ್ಣ ಹೆಚ್ಚಳ ಅನಿವಾರ್ಯವಾಗುತ್ತದೆ.

ಡುರೇ ಹೇಳುವ ಪ್ರಕಾರ – 'ಸ್ವಾಯತ್ತತೆ ಈ ಯುಗದ ಚೇತನವಾಗಿದೆ'. ಸ್ವಾಯತ್ತತೆ ಎಂದರೆ ಕೆಳಗಿನಿಂದ ಅಧಿಕಾರವನ್ನು ಪಡೆದುಕೊಳ್ಳುವ ಅಂದರೆ ಸ್ಥಳೀಯ ಮತ್ತು ಪ್ರಾದೇಶಿಕ ಮಟ್ಟಗಳಲ್ಲಿ ಕೈಗೊಳ್ಳಲಾಗದ ಕೆಲಸಗಳನ್ನು ಮಾತ್ರ ಕೇಂದ್ರ ಸರ್ಕಾರ ವಹಿಸಿಕೊಳ್ಳುವ ಸ್ವಯಂ–ಸರ್ಕಾರದ ಒಂದು ರೂಪವಾಗಿದೆ. ರಾಷ್ಟ್ರ ತಾನು ಪ್ರಬಲನಾಗಿದ್ದೇನೆ ಎನ್ನುವ ಭಾವನೆಯನ್ನು ಹೊಂದಿದ್ದಾಗ ಮತ್ತು ಅದು ಎಲ್ಲಾ ಅಂಶಗಳಲ್ಲಿಯೂ ಅಧಿಕೃತವಾಗಿದ್ದಾಗ ಮಾತ್ರ ಇದನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಸ್ವಾಯತ್ತತೆ ಮತ್ತು ಸ್ವಯಂ ಸರ್ಕಾರದ ವಿಚಾರಗಳು ಅಸ್ಥಿರವಾದವುಗಳು ಮತ್ತು ಪ್ರಜಾಸತ್ತಾತ್ಮಕ ತತ್ವಗಳ ಅಡಚಣೆಯೊಂದಿಗೆ ಸಂಬಂಧಉಳ್ಳವುಗಳು.

ರಾಬರ್ಟ್ ಬೆಲ್ಲಾ ಮತ್ತು ಇತರರು (1991) ತಮ್ಮ ಪುಸ್ತಕ 'ದಿ ಗುಡ್ ಸೊಸೈಟಿ'ಯಲ್ಲಿನ 'ವಿ ಲೀವ್ ಥ್ರೂ ಇನ್ಸ್ಟಿಟ್ಯೂಷನ್' ಎನ್ನುವ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ. ಅಮೇರಿಕಾದ ಸಂದರ್ಭದಲ್ಲಿದ್ದ ಅಭಿಜಾತ್ಯ (ಕ್ಲಾಸಿಕಲ್) ಉದಾರತೆಯ ದೃಷ್ಟಿಕೋನ ಸ್ವಾಯತ್ತತೆಯನ್ನು ಏಕಮಾತ್ರ ಒಳಿತಿನ ಸ್ಥಾನಮಾನಕ್ಕೆ ಏರಿಸಿದೆ, ಆದರೆ ಸ್ವಾಯತ್ತತೆ ಸಹ ಒಂದು ನಿರ್ದಿಷ್ಟ ರೀತಿಯ ಸಾಂಸ್ಥಿಕ ಸಂರಚನೆಯನ್ನು ಅವಲಂಬಿಸಿರುತ್ತದೆ ಮತ್ತು ಅದು ಸಂಸ್ಥೆಯಿಂದ ತನ್ನನ್ನು ಸಂಪೂರ್ಣವಾಗಿ ಬಿಡಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದನ್ನು ಗುರುತಿಸಲು ಅಮೇರಿಕಾ ವಿಫಲವಾಗಿದೆ. ಆದರೆ ಆ ಸಂರಚನೆ ಯಾವ ರೀತಿಯದಾಗಿರಬಹುದು ಎನ್ನುವುದು ಚರ್ಚೆಯ ವಿಷಯವಾಗಿದೆ.

**ಸ್ವಾಯತ್ತತೆ ಬಗ್ಗೆ ಸಮಿತಿಗಳು ಮತ್ತು ಆಯೋಗಗಳು:**

ಸ್ವಾತಂತ್ರ್ಯ ಬಂದಾಗಿನಿಂದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ನಿಯಂತ್ರಕ ಸಂಸ್ಥೆಗಳೂ ಸೇರಿದಂತೆ ನೇಮಕಗೊಂಡ ಬಹುತೇಕ ಎಲ್ಲಾ ಸಮಿತಿಗಳು ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಾಯತ್ತತೆಯ ಮಹತ್ವವನ್ನು ಗುರುತಿಸಿವೆ ಮತ್ತು ಶಿಫಾರಸು ಮಾಡಿವೆ.

**ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ (1948) ಹೀಗೆ ಹೇಳಿದೆ:** "ಶೈಕ್ಷಣಿಕ ವ್ಯವಸ್ಥೆ ಒಂದು ಕಾಲಕ್ಕೆ ನಿರ್ಮಾಣಗೊಳ್ಳುತ್ತದೆ. ಎಲ್ಲಾ ಕಾಲಗಳಿಗೂ ಅಲ್ಲಿ ಮಾನವರಿಗೆ ಶಿಕ್ಷಣ ನೀಡಲು ಬದಲಾವಣೆ ಇಲ್ಲದ ಮಾರ್ಗಗಳಿಲ್ಲ. ವೈದಿಕ ಕಾಲದಲ್ಲಿ ಅಥವಾ ವಿದ್ಯೆಯ ಪುನರುಜ್ಜೀವನದ (ರೆನೆಸಾನ್ಸ್) ಅವಧಿಯಲ್ಲಿ ಸತ್ವಪೂರ್ಣವಾಗಿದ್ದ ಪಠ್ಯಕ್ರಮ ಬದಲಾಗದೆ ಇಪ್ಪತ್ತನೇ ಶತಮಾನದವರೆಗೆ ಮುಂದುವರಿಯಲಾರದು. ಸ್ವತಂತ್ರ ಸಮಾಜದಲ್ಲಿ ಸ್ವತಂತ್ರ ಮಾನವನ ಕಾಣ್ಕೆಯನ್ನು (ವಿಷನ್) ಪೂರ್ಣಗೊಳಿಸುವುದು ಪ್ರಜಾಸತ್ತಾತ್ಮಕ ಸಂಸ್ಥೆಯ ಜೀವಂತ ನಂಬಿಕೆ ಮತ್ತು ಸ್ಫೂರ್ತಿಗೊಳಿಸುವ ಮಾರ್ಗದರ್ಶಿಯಾಗಿದೆ. ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ವಿವೇಚನೆಯಿಂದ ಮತ್ತು ಚೆನ್ನಾಗಿ ಹೊಂದಿಕೊಳ್ಳುವ ಗುರಿಯತ್ತ ನಾವು ಮುಂದುವರಿಯಬೇಕು."

ಪ್ರೊ॥ ಮಹಾಜನ್‌ಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಕಾಲೇಜುಗಳ ಬಗ್ಗೆ ಸಮಿತಿ (1964) ಕಾಲೇಜುಗಳನ್ನು ಅಭಿವೃದ್ಧಿಗೊಳಿಸಲು ಅನುಸರಿಸಬೇಕಾದ ಸಾಮಾನ್ಯ ನೀತಿಯ ಬಗ್ಗೆ ವಿಶ್ವವಿದ್ಯಾನಿಲಯ ಆಯೋಗಕ್ಕೆ ಸಲಹೆ ನೀಡಿ ಹೀಗೆ ಸೂಚಿಸಿದೆ.

"ಕೆಲವು ಕಾಲೇಜುಗಳನ್ನು ಅವುಗಳ ಹಿಂದಿನ ಕಾರ್ಯಗಳು,

Digitised by Bharatavani, CIIL

ಪ್ರಭಾವಗೊಳಿಸಿರುವ ಸಂಪ್ರದಾಯಗಳು, ಪ್ರಬುದ್ಧತೆ ಮತ್ತು ಶೈಕ್ಷಣಿಕ ಮಾನಕಗಳ ಆಧಾರದ ಮೇಲೆ ಆಯ್ಕೆ ಮಾಡಿಕೊಂಡು, ಅವುಗಳಿಗೆ ತಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳಲು, ಹೊಸ ವಿಚಾರಗಳನ್ನು ಪ್ರಯೋಗ ಮಾಡಲು, ವಿಶ್ವವಿದ್ಯಾನಿಲಯದೊಂದಿಗೆ ಪರಾಮರ್ಶಿಸಿ ತಮ್ಮದೇ ಆದ ಪಠ್ಯಕ್ರಮವನ್ನು ರೂಪಿಸಿಕೊಳ್ಳಲು, ಪರೀಕ್ಷೆಗಳನ್ನು ರೂಪಿಸಿ ನಡೆಸಲು ಮತ್ತು ಹೊಸ ಕ್ರಮಗಳನ್ನು ಆರಂಭಿಸಲು ಸ್ವಾತಂತ್ರ್ಯತೆಯೊಂದಿಗೆ ಸ್ವಾಯತ್ತತೆಯ ಸ್ಥಾನಮಾನವನ್ನು ಕೊಡುವುದು ಭಾರತದಲ್ಲಿ ಉನ್ನತ ಶಿಕ್ಷಣವನ್ನು ಉತ್ತಮಗೊಳಿಸುವ ಒಂದು ವ್ಯಾವಹಾರಿಕ ವಿಧಾನವಾಗಿದೆ."

ವಿಶ್ವವಿದ್ಯಾನಿಲಯ ಶಿಕ್ಷಣದ ಮಾನಕಗಳ ಸಮಿತಿಯ ಅಧ್ಯಕ್ಷರಾಗಿದ್ದ ಪ್ರೊ॥ ಎಸ್. ಕೆ. ಸಿದ್ಧಾಂತ 1965ರಲ್ಲಿಯೇ ಪ್ರಥಮ ಬಾರಿಗೆ ಕಾ;ಲೇಜುಗಳನ್ನು ಅಂಗಭೂತಗೊಳಿಸುವುದರ ಜೊತೆಗೆ ಅವುಗಳಿಗೆ ಸ್ವಾಯತ್ತತೆಯನ್ನು ನೀಡುವ ಬಗ್ಗೆ ವಿವರವಾಗಿ ಚರ್ಚಿಸಿದ್ದರು. ಈ ಸಮಿತಿ ಹೀಗೆ ಹೇಳುತ್ತದೆ.

"ಅಂಗಭೂತಗೊಳಿಸುವ ವ್ಯವಸ್ಥೆಯಲ್ಲಿ ದುರ್ಬಲ ಕಾಲೇಜುಗಳು ಅಧ್ಯಯನದ ಕೋರ್ಸ್‌ಗಳು, ಬೋಧನೆಯ ಅಗತ್ಯಗಳು, ಪರೀಕ್ಷೆ ಮುಂತಾದವುಗಳ ವಿಷಯಗಳಲ್ಲಿ ವಿಶ್ವವಿದ್ಯಾನಿಲಯದ ನೀತಿಯನ್ನು ನಿರ್ಧರಿಸುವ ಪ್ರವೃತ್ತಿಯನ್ನು ಹೊಂದಿವೆ. ಇದರಿಂದಾಗಿ ಇನ್ನೂ ಹೆಚ್ಚಿನ ಮಟ್ಟಕ್ಕೆ ಏರುವ ಸಾಮರ್ಥ್ಯವುಳ್ಳ ಒಳ್ಳೆಯ ಕಾಲೇಜುಗಳಿಗೆ ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಉಳಿದವುಗಳಿಗಿಂತ ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಸಾಮರ್ಥ್ಯವುಳ್ಳ ಕಾಲೇಜುಗಳಿಗೆ ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಧುನೀಕರಣಗೊಳಿಸುವ ಮತ್ತು ಉತ್ತಮಗೊಳಿಸುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಅನುಮತಿ ನೀಡದಿದ್ದಲ್ಲಿ ಅವುಗಳಿಗೆ ತಮ್ಮ ಅತ್ಯುತ್ತಮ ಗುಣಮಟ್ಟವನ್ನು ನಿರಂತರವಾಗಿ ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಕೆಳಗಿನ ಕ್ರಮಗಳನ್ನು ಪರಿಗಣನೆಗಾಗಿ ನಾವು ಸೂಚಿಸುತ್ತಿದ್ದೇವೆ.

ನಿರ್ದಿಷ್ಟ ಸಂಖ್ಯೆಯ ಕಾಲೇಜುಗಳಿಗೆ ಒಂದು ರೀತಿಯ ಸ್ವಾಯತ್ತತೆಯ ಸ್ಥಾನಮಾನವನ್ನು ಕೊಡಬಹುದು ಮತ್ತು ಹೊಸ ಕೋರ್ಸುಗಳನ್ನು ಪ್ರಾಯೋಗಿಕವಾಗಿ ಆರಂಭಿಸಲು, ಹೊಸ ಬೋಧನಾ ವಿಧಾನಗಳನ್ನು ಉಪಯೋಗಿಸಲು, ಹೊಸ ಮೌಲ್ಯಮಾಪನ, ವಿಧಾನಗಳು ಇತ್ಯಾದಿಗಳನ್ನು ಅಳವಡಿಸಿಕೊಳ್ಳಲು ಅವಕಾಶವನ್ನು ನೀಡಬಹುದು. ಬೇರೆ ಬೇರೆ ಕ್ಷೇತ್ರಗಳಲ್ಲಿ ಮುಂದುವರಿದ ಅಥವಾ ಇತ್ತೀಚಿನ ಕೋರ್ಸ್‌ಗಳನ್ನು (ಬೇರೆ ಕಾಲೇಜುಗಳು ಆರಂಭಿಸಲು ಸಾಧ್ಯವಾಗದಿರುವ ಕೋರ್ಸ್‌ಗಳನ್ನು) ಆರಂಭಿಸುವ ಕಾಲೇಜುಗಳಿಗೆ ಅವು ಅಪೇಕ್ಷಿಸುವ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರಲು ವಿಶ್ವವಿದ್ಯಾನಿಲಯ ವಿಶೇಷ ಅನುಮತಿಯನ್ನು ಕೊಡಬಹುದು. ಇದರೊಂದಿಗೆ ವಿದ್ಯಾರ್ಥಿಗಳನ್ನು ನಿರಂತರವಾಗಿ ಕೆಲಸ ಮಾಡಲು ಪ್ರೋತ್ಸಾಹಿಸಲು ಪ್ರತಿ ಕಾಲೇಜು ತನ್ನದೇ ಆದ ಆಂತರಿಕ ಮೌಲ್ಯಮಾಪನ ವ್ಯವಸ್ಥೆಯನ್ನು ಅನುಸರಿಸಬಹುದು. ಬೇರೆ ಕಾಲೇಜುಗಳಿಗೆ ಬೋಧನಾ ವಿಧಾನಗಳಿಗೆ ಸಂಬಂಧಿಸಿದಂತೆ ಆಂತರಿಕ ಮೌಲ್ಯಮಾಪನವನ್ನು ಆಚರಣೆಗೆ ತರಲು ಸಾಧ್ಯವಾಗದಿರಬಹುದು. ಅಂಗಭೂತಗೊಳಿಸುವ ವಿಶ್ವವಿದ್ಯಾನಿಲಯಗಳು ಈ ರೀತಿಯ ಅಗತ್ಯಗಳಿಗೆ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲು ಒಪ್ಪಿಗೆ ನೀಡಲು ಸಿದ್ಧವಾಗಬೇಕು. ಈ ಪ್ರಸ್ತಾವನೆಗಳನ್ನು ಎಚ್ಚರದಿಂದ ಪರಿಶೀಲಿಸಿ ವಿಶ್ವವಿದ್ಯಾನಿಲಯಗಳ ದೃಷ್ಟಿಯಲ್ಲಿ ಪ್ರಾಯೋಗಿಕವಾಗಿ ಕಾರ್ಯಾನ್ವಯಗೊಳಿಸಲು ಯೋಗ್ಯವಾದ ಪ್ರಸ್ತಾವನೆಗಳನ್ನು ಒಪ್ಪಿಕೊಳ್ಳಬಹುದು. ಬೌದ್ಧಿಕ ಆಸಕ್ತಿಯನ್ನು ಜಾಗೃತಗೊಳಿಸಲು ಮತ್ತು ಉತ್ತಮ ಶಿಕ್ಷಣವನ್ನು ಪ್ರೋತ್ಸಾಹಿಸಲು ಕಾಲೇಜುಗಳಿಗೆ ಅವಶ್ಯಕ ಸ್ವಾತಂತ್ರ್ಯ ಮತ್ತು ನಮ್ಯತೆಯನ್ನು ಕೊಡದಿದ್ದಲ್ಲಿ ವಿಸ್ತೃತ ಕ್ಷೇತ್ರವಾದ ಕಾಲೇಜು ಶಿಕ್ಷಣದಲ್ಲಿ ಗುಣಮಟ್ಟವನ್ನು ಅಧಿಕಗೊಳಿಸಲು ಸಾಧ್ಯವಿಲ್ಲವೆಂಬ ಆತಂಕ ನಮಗಿದೆ."

**ಕೊಠಾರಿ ಆಯೋಗ** (1966): ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ನವೀನ ಆಚರಣೆಗಳನ್ನು ಪರಿಚಯಿಸುವುದಕ್ಕೆ ಮತ್ತು ಉತ್ತರದಾಯಿತ್ವವನ್ನು ಖಚಿತಗೊಳಿಸಬೇಕಾದುದ್ದರ ಮಹತ್ವಕ್ಕೆ ಒತ್ತು ನೀಡಿತು. ಮೊದಲ ಬಾರಿಗೆ ಈ ಆಯೋಗ ಸೆಕೆಂಡರಿ ಶಾಲೆಗಳಿಗೆ ಸ್ವಾಯತ್ತತೆಯನ್ನು ನೀಡಲು ಶಿಫಾರಸು ಮಾಡಿತು. ಭಾರತ ಸರ್ಕಾರದ ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ ಮಂತ್ರಾಲಯ, ಪರೀಕ್ಷಾ ಸುಧಾರಣೆಗಳಿಗಾಗಿ ಒಂದು ಕಾರ್ಯಸಮೂಹವನ್ನು ನೇಮಕ ಮಾಡಿತು. ಈ ಸಮಿತಿ ಪರೀಕ್ಷಾ ವ್ಯವಸ್ಥೆಯನ್ನು ಉತ್ತಮಪಡಿಸಲು ವಿವಿಧ ಕ್ರಮಗಳನ್ನು ಶಿಫಾರಸು ಮಾಡುವುದರ ಜೊತೆಗೆ ಸೆಕೆಂಡರಿ ಶಿಕ್ಷಣ ಮಂಡಳಿಗಳು ಮಕ್ಕಳನ್ನು ಬಿಗಿಯಾದ ಪಠ್ಯವಸ್ತುಗಳ ಒತ್ತಡ ಹೇರುವ ಪ್ರಭಾವದಿಂದ, ಪಠ್ಯಪುಸ್ತಕಗಳಿಂದ ಮತ್ತು ಬಾಹ್ಯ ಪರೀಕ್ಷೆಗಳಿಂದ ಮುಕ್ತಗೊಳಿಸಲು ಆಯ್ಕೆ ಮಾಡಿದ ಕೆಲವು ಶಾಲೆಗಳಿಗೆ ಸ್ವಾಯತ್ತತೆಯನ್ನು ನೀಡುವ ಸಾಧ್ಯತೆಗಳನ್ನು ಅನ್ವೇಷಿಸಬೇಕೆಂದೂ ಶಿಫಾರಸು ಮಾಡಿತು.

ಉನ್ನತ ಶಿಕ್ಷಣದಲ್ಲಿ ನವೀನ ಆಚರಣೆಗಳನ್ನು ಆರಂಭಿಸುವುದರ ಒಂದು ಕ್ರಮವಾಗಿ ಕಾಲೇಜುಗಳಿಗೆ ಸ್ವಾಯತ್ತತೆಯನ್ನು ನೀಡುವುದರ ಅಗತ್ಯತೆ ಮೇಲೆ ಬೆಳಕು ಚೆಲ್ಲುತ್ತಾ ಕೊಠಾರಿ ಆಯೋಗ ಹೀಗೆ ಹೇಳಿತು. –

ದೀರ್ಘ ಅಸ್ತಿತ್ವವನ್ನು ಹೊಂದಿರುವ ಒಂದು ವಿಶ್ವವಿದ್ಯಾನಿಲಯ ಮಾಡಿರುವಷ್ಟು ಒಳ್ಳೆಯ ಕೆಲಸವನ್ನು ಮಾಡಿರುವ ಮತ್ತು ಮಾಡುತ್ತಿರುವ ಅನೇಕ ಕಾಲೇಜುಗಳಿಗೆ ಮತ್ತು ಇಂಥ ಕಾಲೇಜುಗಳನ್ನು ಪ್ರೋತ್ಸಾಹಿಸುವುದು ಶಿಕ್ಷಣ ನೀತಿಯ ಉದ್ದೇಶವಾಗಬೇಕು. ಒಂದು ದೊಡ್ಡ ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ತನ್ನನ್ನು ತಾನು ಗಣನೀಯವಾಗಿ ಉತ್ತಮತೆಯನ್ನು ಸಾಧಿಸುವ ಸಾಮರ್ಥ್ಯವನ್ನು ಹೊಂದಿದ ಶ್ರೇಷ್ಠಮಟ್ಟದ ಒಂದು ಕಾಲೇಜಾಗಲಿ ಅಥಾ ಉತ್ತಮ ಕಾಲೇಜುಗಳ ಸಮೂಹವಾಗಲಿ ಇದ್ದರೆ ವಿಶ್ವವಿದ್ಯಾನಿಲಯ ಅದಕ್ಕೆ ಸ್ವಾಯತ್ತತೆ ನೀಡುವುದನ್ನು ಪರಿಗಣಿಸಬಹುದು. ಅಂಥ ಸ್ವಾಯತ್ತತೆ ತನ್ನ ಪ್ರವೇಶ ನಿಯಮಗಳನ್ನು ರೂಪಿಸಿಕೊಳ್ಳುವುದು, ಅಧ್ಯಯನ ವಿಷಯಗಳನ್ನು ನಿಗದಿಪಡಿಸುವುದು, ಪರೀಕ್ಷೆ ನಡೆಸುವುದು ಇತ್ಯಾದಿಗಳನ್ನು ಒಳಗೊಳ್ಳುತ್ತದೆ. ಪೋಷಕ ವಿಶ್ವವಿದ್ಯಾನಿಲಯದ ಪಾತ್ರ ಸಾಮಾನ್ಯ ಮೇಲ್ವಿಚಾರಣೆ ಮತ್ತು ಅಂತಿಮ ಪದವಿಯನ್ನು ನೀಡುವುದಕ್ಕೆ ಸೀಮಿತವಾಗುತ್ತದೆ. ಅಂಥ ಕಾಲೇಜುಗಳನ್ನು ಗುರುತಿಸುವ ಅವಕಾಶವನ್ನು ವಿಶ್ವವಿದ್ಯಾನಿಲಯಗಳ ಸಂವಿಧಾನದಲ್ಲಿ ಕಲ್ಪಿಸಬೇಕು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ

Digitised by Bharatavani, CIIL

ಕನಿಷ್ಠ 50 ಕಾಲೇಜುಗಳನ್ನಾದರೂ ಈ ವರ್ಗದಡಿಯಲ್ಲಿ ತರಲು ಸಾಧ್ಯವಾಗಬೇಕು.

**ವಿಶ್ವವಿದ್ಯಾನಿಲಯ ಅನುದಾನ ಆಯೋಗ** (ಯು.ಜಿ.ಸಿ): 1978ರಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣದ ಬಗ್ಗೆ ನೀಡಿದ ತನ್ನ ಹೇಳಿಕೆಯಲ್ಲಿ ವಿಶ್ವವಿದ್ಯಾನಿಲಯಗಳ ಅಧಿಕಾರಶಾಹಿ ಮತ್ತು ಕೇಂದ್ರೀಕೃತ ಸಂರಚನೆಯ ಸಂದರ್ಭದಲ್ಲಿ ಸ್ವಾಯತ್ತತಾ ಕಾಲೇಜುಗಳ ಪರಿಕಲ್ಪನೆ ವಿಶೇಷ ಮಹತ್ವವನ್ನು ಹೊಂದಿದೆ.

ಕಾಲೇಜಿನ ಸ್ವಾಯತ್ತತೆ ಕಾಲೇಜು ಮತ್ತು ಅದರ ಅಧ್ಯಾಪಕರು ತಾವು ಒದಗಿಸುವ ಶೈಕ್ಷಣಿಕ ಕಾರ್ಯಕ್ರಮಗಳಿಗೆ, ತಮ್ಮ ಬೋಧನೆಯ ವಿಷಯವಸ್ತು ಮತ್ತು ಗುಣಮಟ್ಟಕ್ಕೆ ಮತ್ತು ಪ್ರವೇಶಾತಿಗೆ ಮತ್ತು ತಮ್ಮ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಸಂಪೂರ್ಣ ಹೊಣೆಗಾರಿಕೆಯನ್ನು ಮತ್ತು ಉತ್ತರದಾಯಿತ್ವವನ್ನು ವಹಿಸಿಕೊಳ್ಳುತ್ತಾರೆ ಎಂಬ ನಿಹಿತಾರ್ಥವನ್ನು ಸೂಚಿಸುತ್ತದೆ. ಈ ಮೂಲಭೂತ ಷರತ್ತು ಪೂರ್ಣವಾಗದಿದ್ದರೆ, ಸಮಂಜಸತೆಯ ಸಮಸ್ಯೆಯನ್ನು ತೃಪ್ತಿಕರವಾಗಿ ಬಿಡಿಸಲು ಅಥವಾ ಸ್ಥಳೀಯ ಅಗತ್ಯಗಳಿಗೆ ಮತ್ತು ಪರಿಸ್ಥಿತಿಗಳಿಗೆ ಪಠ್ಯಕ್ರಮಗಳನ್ನು ವಿಬೇಧೀಕೃತಗೊಳಿಸಲು ಮತ್ತು ಸಂಬಂಧ ಕಲ್ಪಿಸಲು ಸಾಧ್ಯವಾಗುವುದಿಲ್ಲ ಮತ್ತು ಇದಕ್ಕಿಂತ ಇನ್ನೂ ಹೆಚ್ಚು ಮುಖ್ಯವಾದುದೆಂದರೆ ವಿದ್ಯಾರ್ಥಿಗಳ ಅಗತ್ಯಗಳು ಮತ್ತು ಅಭಿಸಾಮರ್ಥ್ಯಗಳ ಆಧಾರದ ಮೇಲೆ ಅವರಿಗೆ ಹೆಚ್ಚಿನ ವೈಯಕ್ತಿಕ ಗಮನ ನೀಡುವುದು. ಇದರಿಂದ ಮಾತ್ರ ಸತ್ವ ಮತ್ತು ಉತ್ಕೃಷ್ಟತೆಯ ಅಗತ್ಯವನ್ನು ಒಟ್ಟಾಗಿ ಪಾರಸ್ಪರಿಕವಾಗಿ ತೃಪ್ತಿಪಡಿಸಿಕೊಳ್ಳಲು ಒಪ್ಪಿಕೊಂಡು ತೊಡಗಿರುವ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸಮುದಾಯಗಳನ್ನಾಗಿ ಮಾಡಲು ಸಾಧ್ಯವಾಗುತ್ತದೆ. ಆದರೆ, ಸರ್ಕಾರದಿಂದ ಮತ್ತು ವಿಶ್ವವಿದ್ಯಾನಿಲಯ ಆಯೋಗದಿಂದ ನಿಗದಿಗೊಳಿಸಿದ ಅಧ್ಯಾಪಕರ ಸೇವಾನಿಯಮಗಳು ಮತ್ತು ಷರತ್ತುಗಳು ಈ ಸಂಸ್ಥೆಗಳಿಗೂ ಅನ್ವಯವಾಗುವುದನ್ನು ಖಚಿತಗೊಳಿಸಿಕೊಳ್ಳುವುದು ಅವಶ್ಯಕವಾಗುತ್ತದೆ ಮತ್ತು ಈ ಸಂಸ್ಥೆಗಳು ರಾಷ್ಟ್ರೀಯ ಸಮಗ್ರತೆಯ ಮತ್ತು ಅಭಿವೃದ್ಧಿಯ ಅಗತ್ಯಗಳಿಗಾಗಿ ಸೇವೆ ಸಲ್ಲಿಸುವುದನ್ನು ಅಗತ್ಯವಾಗಿ ಖಚಿತಪಡಿಸಿಕೊಳ್ಳಬೇಕು. ಸ್ವಾಯತ್ತತೆಯ ಪರಿಕಲ್ಪನೆ ಉನ್ನತ ಔಪಚಾರಿಕ ಸ್ಥಾನಮಾನಕ್ಕಾಗಿ ಒಂದು ಪ್ರತ್ಯೇಕ ತಲೆಪಟ್ಟಿಯಡಿಯಲ್ಲಿ ಶಾಶ್ವತವಾಗಿ ಸೇರಬಹುದು ಎನ್ನುವುದನ್ನು ಸೂಚಿಸುವುದಿಲ್ಲ. ಸ್ವಾಯತ್ತತಾ ಕಾಲೇಜಿನ ರೂಪದಲ್ಲಿ ಗುರುತಿಸಿಕೊಳ್ಳಲು ಅಂಥ ಕಾಲೇಜು ತನ್ನನ್ನು ತಾನು ನಿರಂತರವಾಗಿ ಸಮರ್ಥಿಸಿಕೊಳ್ಳಬೇಕಾಗುತ್ತದೆ. ನಿರ್ದಿಷ್ಟ ಅವಧಿಗಳಲ್ಲಿ ಪುನರಾವಲೋಕನಕ್ಕೆ ಒಳಗಾಗಬೇಕಾಗುತ್ತದೆ ಮತ್ತು ಉನ್ನತಮಟ್ಟದ ಶೈಕ್ಷಣಿಕ ಉತ್ಕೃಷ್ಟತೆಯ ಹಾಗೂ ಸಮಾಜಕ್ಕೆ ತನ್ನ ಕೊಡುಗೆಗಳನ್ನು ಷರತ್ತುಗಳನ್ನು ನಿರೀಕ್ಷಿತ ಮಟ್ಟದಲ್ಲಿ ಉಳಿಸಿಕೊಳ್ಳದಿದ್ದಲ್ಲಿ ತನ್ನ ಮಾನ್ಯತೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ರೀತಿಯ ಸವಲತ್ತನ್ನು ನಿರಂತರವಾಗಿ ಗಳಿಸಬೇಕಾಗುತ್ತದೆ ಮತ್ತು ಕಾರ್ಯಕ್ಷಮತೆಯಿಂದ ಉಳಿಸಿಕೊಳ್ಳಬೇಕಾಗುತ್ತದೆ. ಈ ಕಾರ್ಯಕ್ರಮದ ವಿಕಾಸದ ಒಂದು ಹಂತವಾಗಿ ಒಂದು ಜಿಲ್ಲೆಯಲ್ಲಿರುವ ಎಲ್ಲಾ ಕಾಲೇಜುಗಳನ್ನು ಎಚ್ಚರಿಕೆಯಿಂದ ಸಮೀಕ್ಷೆ ಮಾಡಬೇಕಾಗುತ್ತದೆ. ನಂತರ ಅವುಗಳ ಪೈಕಿ ಮಾರ್ಗದರ್ಶನ, ಯೋಜನೆ ಮತ್ತು ಧನಸಹಾಯದೊಂದಿಗೆ ಸ್ವಾಯತ್ತತೆಯನ್ನು ಕೊಟ್ಟರೆ ಸ್ಥಳೀಯ ಪ್ರದೇಶದ ಅಗತ್ಯಗಳಿಗೆ ಮತ್ತು ಅದರ ವಿಕಾಸಕ್ಕೆ ಸಂಬಂಧಿಸಿದಂತೆ ಹೊಸ ಹೊಸ ಕೋರ್ಸ್‌ಗಳನ್ನು ವಿಕಾಸಗೊಳಿಸಬಲ್ಲವು ಎನಿಸುವ ಶೈಕ್ಷಣಿಕವಾಗಿ ಸೂಕ್ತವೆನಿಸುವ ಒಂದೆರಡು ಕಾಲೇಜುಗಳನ್ನು ಗುರುತಿಸಬೇಕಾಗುತ್ತದೆ. ಹಲವಾರು ವರ್ಷಗಳ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ಸ್ವಾಯತ್ತತೆ ಪಡೆಯುವ ಇಚ್ಛೆಯುಳ್ಳ ಮತ್ತು ಆ ದಿಶೆಯಲ್ಲಿ ವಿಕಾಸಗೊಳ್ಳುವ ಅಂತಃಸ್ಸತ್ವವಿರುವ ಇತರ ಕಾಲೇಜುಗಳಿಗೂ ವಿಸ್ತರಿಸಬಹುದು. ಎಪ್ಪತ್ತರ ದಶಕದ ಕೊನೆ ಭಾಗದಲ್ಲಿ ತಮಿಳುನಾಡಿನಲ್ಲಿ 16 ಕಾಲೇಜುಗಳಿಗೆ ಸ್ವಾಯತ್ತತೆಯನ್ನು ನೀಡಲಾಯಿತು. ಇವು ಪ್ರಸಿದ್ಧಿ ಹೊಂದಿದ್ದ ಕಾಲೇಜುಗಳಾಗಿದ್ದು ಅವುಗಳಲ್ಲಿ ಬಹಳಷ್ಟು ಕಾಲೇಜುಗಳನ್ನು ಕ್ರಿಶ್ಚಿಯನ್ ಮಿಶನರಿಗಳು ನಿರ್ವಹಿಸುತ್ತಿದ್ದರು.

ವಿಶ್ವವಿದ್ಯಾನಿಲಯಗಳ ಮತ್ತು ಕಾಲೇಜುಗಳ ಆಡಳಿತದ ಬಗೆಗಿನ ಸಮಿತಿಯ (1971) ಅಧ್ಯಕ್ಷರಾಗಿದ್ದ ಗಜೇಂದ್ರಗಡಕರ್ ಅವರು ಸ್ವಾಯತ್ತತಾ ಕಾಲೇಜುಗಳ ಮಹತ್ವದ ಬಗ್ಗೆ ಬೆಳಕು ಚೆಲ್ಲಿದ್ದರು. ಅವುಗಳ ಸ್ಥಾಪನೆಯನ್ನು ಸುಗಮಗೊಳಿಸಲು ವಿಶ್ವವಿದ್ಯಾನಿಲಯದ ಮತ್ತು ರಾಜ್ಯ ಕಾಯ್ದೆಗಳಲ್ಲಿ ಕಾಲೇಜುಗಳಿಗೆ ಸ್ವಾಯತ್ತತೆಯ ನೀಡಿಕೆಗೆ ಅವಕಾಶ ಕಲ್ಪಿಸಬೇಕಲ್ಲದೆ, ನಿರ್ದಿಷ್ಟ ಮುಂದುವರಿದ ಅಧ್ಯಯನ ಕೇಂದ್ರಗಳಲ್ಲಿ ಕೆಲವು ಬೋಧನ ವಿಭಾಗಗಳಿಗೆ ಮತ್ತು ವಿಭಾಗಗಳ ಕೆಲವು ಘಟಕಗಳಿಗೆ ಸ್ವಾಯತ್ತತೆಯನ್ನು ನೀಡುವ ಅವಕಾಶವನ್ನು ಕಲ್ಪಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತ್ತು.

ನವೀನ ಆಚರಣೆಗಳನ್ನು ಆರಂಭಿಸಲು, ಪಠ್ಯಕ್ರಮಗಳನ್ನು ರೂಪಿಸಲು, ಬೋಧನಾ–ಕಲಿಕಾ ವಿಧಾನಗಳನ್ನು ವಿಕಾಸಗೊಳಿಸಲು, ಪ್ರವೇಶ ನಿಯಮಗಳನ್ನು ರೂಪಿಸಲು, ಕೋರ್ಸ್ ಅಧ್ಯಯನವನ್ನು ನಿಗದಿಪಡಿಸಲು ಮತ್ತು ಪರೀಕ್ಷೆಗಳನ್ನು ನಡೆಸಲು ಕಾಲೇಜುಗಳಿಗೆ ಸ್ವಾಯತ್ತತೆಯನ್ನು ನೀಡಬೇಕಾದ ಅಗತ್ಯವನ್ನು ರಾಷ್ಟ್ರೀಯ ಶಿಕ್ಷಣ ನೀತಿ (1986) ಗುರುತಿಸಿದೆಯಲ್ಲದೆ ಅದನ್ನು ಸಮರ್ಥಿಸಿದೆ. ಇದಕ್ಕೆ ಸಂಬಂಧಿಸಿದ ಶಿಫಾರಸು ಹೀಗಿದೆ –

“ಅಂಗಭೂತಗೊಳಿಸುವ ವ್ಯವಸ್ಥೆಯ ಮಿಶ್ರ ಅನುಭವಗಳ ದೃಷ್ಟಿಯಿಂದ ಅಂಗಭೂತಗೊಳಿಸುವ ವ್ಯವಸ್ಥೆಯನ್ನು ಕಾಲೇಜುಗಳೊಂದಿಗೆ ವಿಶ್ವವಿದ್ಯಾನಿಲಯಗಳ ಮುಕ್ತ ಹಾಗೂ ಹೆಚ್ಚು ಸೃಜನಾತ್ಮಕ ಸಮರ್ಪಕವಾದ ವ್ಯವಸ್ಥೆಯಾಗಿ ಬದಲಾಯಿಸುವವರೆಗೆ ಹೆಚ್ಚಿನ ಸಂಖ್ಯೆಯ ಕಾಲೇಜುಗಳಿಗೆ ಸ್ವಾಯತ್ತತಾ ಕಾಲೇಜುಗಳಾಗಲು ಸಹಾಯ ಮಾಡಬೇಕಾಗುತ್ತದೆ. ಇದೇ ರೀತಿ ವಿಶ್ವವಿದ್ಯಾನಿಲಯಗಳಲ್ಲಿಯೇ ಆಯ್ಕೆ ಆಧಾರದ ಮೇಲೆ ಸ್ವಾಯತ್ತ ವಿಭಾಗಗಳನ್ನು ಸೃಷ್ಟಿಸುವುದನ್ನು ಪ್ರೋತ್ಸಾಹಿಸಲಾಗುತ್ತದೆ. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದ ಜೊತೆಜೊತೆಗೆ ಉತ್ತರದಾಯಿತ್ವವೂ

Digitised by Bharatavani, CIIL

ಇರಬೇಕಾಗುತ್ತದೆ.”

ಕ್ರಿಯಾ ಯೋಜನೆ (1986) ಸ್ವಾಯತ್ತ ಕಾಲೇಜುಗಳ ವಿಕಾಸದ ಕ್ರಮವನ್ನು ವಿವರವಾಗಿ ಸ್ಪಷ್ಟಗೊಳಿಸಿದೆ. ಅದರ ಹೇಳಿಕೆ ಹೀಗಿದೆ:–

“ಅಂಗಭೂತ ವ್ಯವಸ್ಥೆ ಅರ್ಹತೆಯುಳ್ಳ ಕಾಲೇಜುಗಳಿಗೆ ಪಠ್ಯಕ್ರಮ ವಿಕಾಸಗೊಳಿಸಲು, ಅಧ್ಯಯನ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಲು ಮತ್ತು ತಮ್ಮದೇ ಆದ ಕ್ರಮದಲ್ಲಿ ಮೌಲ್ಯಮಾಪನ ಮಾಡಲು ಸ್ವಾಯತ್ತತೆಯನ್ನು ಒದಗಿಸುವುದಿಲ್ಲ. 7ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 500 ಕಾಲೇಜುಗಳನ್ನು ಮಾಡಬೇಕೆಂದು ಕಲ್ಪಿಸಿಕೊಳ್ಳಲಾಗಿದೆ. ಮತ್ತು ದೀರ್ಘಾವಧಿಯಲ್ಲಿ ಈಗ ಇರುವ ಅಂಗಭೂತ ವ್ಯವಸ್ಥೆಯನ್ನು ಬದಲಿಸಲಾಗುತ್ತದೆ. ಸ್ವಾಯತ್ತತೆ ಕಾಲೇಜುಗಳಿಗೆ ಒಂದು ಸೂಕ್ತ ಚೌಕಟ್ಟನ್ನು ವಿಕಾಸಗೊಳಿಸಲು ಸೂಕ್ತ ಗಮನ ನೀಡಲಾಗುತ್ತದೆ.”

ಈ ಉದ್ದೇಶವನ್ನು ಸಾಧಿಸಲು ಈ ಕೆಳಗಿನ ಅಂಶಗಳನ್ನು ಪ್ರಸ್ತಾಪಿಸಲಾಗಿದೆ–

1) ಸ್ವಾಯತ್ತತೆಯ ಸ್ಥಾನಮಾನವನ್ನು ಕಾಯ್ದೆಗಳಲ್ಲಿ ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಲ್ಲಿ ಕಾಲೇಜುಗಳು ಸ್ವಾಯತ್ತತೆ ಪಡೆದುಕೊಳ್ಳಲು ಅವಕಾಶ ಕಲ್ಪಿಸಬೇಕು.

2) ಸ್ವಾಯತ್ತತೆಯ ಸ್ಥಾನಮಾನವನ್ನು ಪಡೆದ ನಂತರ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಆರ್ಥಿಕ ಸ್ವಾತಂತ್ರ್ಯದ ವ್ಯಾಪ್ತಿ ಮತ್ತು ಅವುಗಳಿಗೆ ಅನುಗುಣವಾದ ಜವಾಬ್ದಾರಿಗಳು, ಅಧ್ಯಾಪಕರ ಹಿತಾಸಕ್ತಿಗಳ ಸಂರಕ್ಷಣೆ ಸೇರಿದಂತೆ ಅವುಗಳ ನಿರ್ವಹಣೆಯ ಸಂರಚನೆ, ಮತ್ತು ಅವುಗಳಿಗೆ ಪರಿಗಣಿತ (ಡೀಮ್ಡ್) ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ಕೊಡುವುದು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಸೂಚಿಯನ್ನು ಮತ್ತು ಸಹಾಯದ ರೀತಿಯನ್ನು ರೂಪಿಸುವುದು.

3) ಆಯ್ಕೆ ಆಧಾರದ ಮೇಲೆ ಕೆಲವು ಸ್ವಾಯತ್ತ ಕಾಲೇಜುಗಳಿಗೆ ವಿಶೇಷ ಸಹಾಯ ನೀಡಿಕೆ, ಪ್ರಾಧ್ಯಾಪಕರ ಮತ್ತು ರೀಡರ್‌ಗಳ ಸ್ಥಾನ ಸೃಷ್ಟಿಸುವುದು, ವಿಕಾಸಕ್ಕೆ ಹೆಚ್ಚಿನ ಮಟ್ಟದ ಅನುದಾನದ ನೀಡಿಕೆ ಮುಂತಾದ ಪ್ರೋತ್ಸಾಹಕಗಳನ್ನು ನೀಡುವ ಕಾರ್ಯಕ್ರಮವನ್ನು ರೂಪಿಸುವುದು.

4) ಬುಡಕಟ್ಟು ಜನಾಂಗ/ಹಿಂದುಳಿದ ವರ್ಗಗಳಿರುವ ಪ್ರದೇಶಗಳಲ್ಲಿರುವ ಕಾಲೇಜುಗಳಿಗೆ ಸ್ವಾಯತ್ತ ಕಾಲೇಜುಗಳಾಗಲು ವಿಶೇಷ ಸಹಾಯವನ್ನು ಒದಗಿಸುವುದು.

5) ಅಗತ್ಯ ಬಿದ್ದರೆ ಪಠ್ಯಕ್ರಮ ಸುಧಾರಣೆಗಳನ್ನು ಮಾಡಲು, ಕೋರ್ಸ್‌ಗಳನ್ನು ವಿನ್ಯಾಸಗೊಳಿಸಲು, ಬೋಧನೆ ಮತ್ತು ಮೌಲ್ಯಮಾಪನ ಕ್ರಮಗಳಲ್ಲಿ ಸುಧಾರಣೆ ತರುವುದು ಇತ್ಯಾದಿ ಪ್ರಕ್ರಿಯೆಗಳನ್ನು ತ್ವರಿತಗೊಳಿಸಲು ಸ್ವಾಯತ್ತ ಕಾಲೇಜುಗಳನ್ನು ವಿದ್ಯಾರ್ಥಿಗಳಿಗೆ ತಾವೇ ಪದವಿ ಪ್ರಧಾನ ಮಾಡಲು ಕಾಯ್ದೆಬದ್ಧ ಅವಕಾಶವನ್ನು ಕಲ್ಪಿಸುವುದು.

6) ನಿಗದಿತ ಅವಧಿಗಳಲ್ಲಿ ಸ್ವಾಯತ್ತ ಕಾಲೇಜುಗಳನ್ನು ಪುನರಾವಲೋಕನದಿಂದ ಮೌಲ್ಯಮಾಪನ ಮಾಡಲು ಸೂಕ್ತವಾದ ಉಪಕರಣಗಳನ್ನು ಸಿದ್ಧಪಡಿಸುವುದು ಮತ್ತು ಕಾಲೇಜುಗಳ ನಡುವೆ ಅನ್ಯೋನ್ಯ ಕ್ರಿಯೆಯನ್ನು ಬೆಳೆಸುವುದು.

7) ದೀರ್ಘಕಾಲದ ನಂತರ ಈಗ ಇರುವ ಅಂಗಭೂತ ವ್ಯವಸ್ಥೆಯ ಸ್ಥಾನದಲ್ಲಿ ವಿಶ್ವವಿದ್ಯಾನಿಲಯ ಮತ್ತು ಅಂಗಭೂತ ಕಾಲೇಜುಗಳ ನಡುವಣ ಸಂಬಂಧವುಂಟು ಮಾಡುವ ಪರ್ಯಾಯ ವಿಧಾನವನ್ನು ವಿಕಾಸಗೊಳಿಸಲು ಅಧ್ಯಯನವನ್ನು ಆರಂಭಿಸುವುದು.

ವಿಶ್ವವಿದ್ಯಾನಿಲಯದ ಸ್ವಾಯತ್ತ ಕಾಲೇಜುಗಳ ಯೋಜನೆಯ ಪರಿಷ್ಕೃತ ಮಾರ್ಗದರ್ಶಿ ಸೂಚಿ (1987) ಸ್ವಾಯತ್ತ ಕಾಲೇಜು ತನ್ನದೇ ಆದ ಅಧ್ಯಯನ ಕೋರ್ಸ್‌ಗಳನ್ನು ಮತ್ತು ಪಠ್ಯವಸ್ತುವನ್ನು ನಿರ್ಧರಿಸುವ, ರಾಜ್ಯ ಸರ್ಕಾರದ ಸ್ಥಾನ ಕಾಯ್ದಿರಿಸುವಿಕೆಯ ನಿಯಮಗಳಿಗೆ ಒಳಪಟ್ಟಂತೆ ಪ್ರವೇಶ ನಿಯಮಗಳನ್ನು ನಿಗದಿಪಡಿಸಲು, ಮತ್ತು ಬೋಧನೆ ಮತ್ತು ಮೌಲ್ಯಮಾಪನದ ವಿಧಾನಗಳನ್ನು ವಿಕಾಸಗೊಳಿಸಿಕೊಳ್ಳಲು ಮತ್ತು ಪರೀಕ್ಷೆಗಳನ್ನು ನಡೆಸಲು ಸ್ವಾತಂತ್ರ್ಯವನ್ನು ಹೊಂದಿರುತ್ತದೆ ಎಂದು ಹೇಳುತ್ತದೆ. (ವಿವರಗಳಿಗೆ ಯು.ಜಿ.ಸಿ. ಮಾರ್ಗದರ್ಶಿ ಸೂಚಿಯನ್ನು ನೋಡಿ). ಈಗ ಇರುವ ಭಾರತೀಯ ವಿಶ್ವವಿದ್ಯಾನಿಲಯಗಳ ಬಿಗಿಯಾದ ಕೇಂದ್ರೀಕೃತ ಸಂರಚನೆಗೆ ಬದಲಾಗಿ ನಮ್ಯತೆಯಿಂದ ಕೂಡಿದ, ವಿಕೇಂದ್ರೀಕೃತವಾದ ಸಹಭಾಗಿತ್ವದ ಸಂರಚನೆಯನ್ನು ಪ್ರಸ್ತಾಪಿಸಿರುವುದರ ಜೊತೆಗೆ ವಿಶ್ವವಿದ್ಯಾನಿಲಯಗಳ ಮತ್ತು ಕಾಲೇಜುಗಳ ಮಟ್ಟದಲ್ಲಿ ಶೈಕ್ಷಣಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅಧ್ಯಾಪಕರ ಪಾತ್ರಕ್ಕೆ ಮಹತ್ವ ನೀಡಲಾಗಿದೆ. ಸೆನೆಟ್, ಸಿಂಡಿಕೇಟ್, ಆಡಳಿತ ಮಂಡಳಿ ಇತ್ಯಾದಿಗಳಲ್ಲಿ ಕೆಲವು ಸದಸ್ಯರುಗಳ ಸ್ಥಾನಗಳನ್ನು ಕಾಯ್ದಿರಿಸುವಿಕೆಯ ಮೂಲಕ ಅಧ್ಯಾಪಕರ ಪ್ರತಿನಿಧಿತ್ವವನ್ನು ಖಚಿತಗೊಳಿಸಲಾಗಿದೆಯಾದರೂ, ಆಯ್ಕೆ ಮಾಡಿದ ಕೆಲವೇ ಮಂದಿ ಅಧ್ಯಾಪಕರು ಪ್ರತಿನಿಧಿಸುವುದೇ ವಿಶ್ವವಿದ್ಯಾನಿಲಯಗಳ ಇಂದಿನ ಪರಿಸ್ಥಿತಿಗೆ ಕಾರಣವಾಗಿದೆ. ಈ ರೀತಿಯ ವ್ಯವಸ್ಥೆ ಇಡೀ ಶಿಕ್ಷಕ ಸಮುದಾಯದ ಸಹಭಾಗಿತ್ವವನ್ನು ಖಚಿತಗೊಳಿಸುವುದಿಲ್ಲ. ಸ್ವಾಯತ್ತ ಕಾಲೇಜುಗಳ ಕಾರ್ಯಕ್ರಮದಡಿಯಲ್ಲಿ ಇದುವರೆಗೂ ಪಿತೃ ವಿಶ್ವವಿದ್ಯಾನಿಲಯ ಮಾಡುತ್ತಿದ್ದ ಪ್ರಮುಖ ಕಾರ್ಯಗಳನ್ನು ಕಾಲೇಜಿಗೆ ವರ್ಗಾಯಿಸಲಾಗುತ್ತದೆ. ಈ ರೀತಿಯಲ್ಲಿ ಸ್ವಾಯತ್ತ ಕಾಲೇಜುಗಳಲ್ಲಿ ಸಹಭಾಗಿತ್ವ ನಿರ್ಣಯ ಪ್ರಕ್ರಿಯೆ ಖಚಿತಗೊಳ್ಳುತ್ತದೆ. ಇದು ಅಧ್ಯಾಪಕರ ಬೆಂಬಲವನ್ನು ಮತ್ತು ಹೆಚ್ಚಿನ ಮಟ್ಟದ ಕಾರ್ಯಕ್ರಮತೆಯನ್ನು ಖಚಿತಗೊಳಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಸ್ವಾಯತ್ತ ಕಾಲೇಜುಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಕಾಲೇಜಿನ ಮಟ್ಟದಲ್ಲೇ ಹಲವಾರು ಕಾಯ್ದೆಬದ್ಧ ಮತ್ತು ಕಾಯ್ದೆಬದ್ಧವಲ್ಲದ ಸಮಿತಿಗಳನ್ನು ರಚಿಸಬೇಕಾಗುತ್ತದೆ ಎಂದು

Digitised by Bharatavani, CIIL

ಮಾರ್ಗದರ್ಶನ ಸೂಚಿ ಸಲಹೆ ಮಾಡುತ್ತದೆ. ಯೋಜನೆಯಡಿಯಲ್ಲಿ ಸಲಹೆ ಮಾಡಿರುವ ಕಾಯ್ದೆಬದ್ಧ ಸಮಿತಿಗಳು ಹೀಗಿವೆ. ಆಡಳಿತ ಮಂಡಳಿ/ವ್ಯವಸ್ಥಾಪನ ಮಂಡಳಿ, ಶೈಕ್ಷಣಿಕ ಪರಿಷತ್ತು (ಅಕೆಡೆಮಿಕ್ ಕೌನ್ಸಿಲ್) ಮತ್ತು ಅಧ್ಯಯನ ಮಂಡಳಿ/ಬೇರೆ ಬೇರೆ ಕಾರ್ಯಗಳಿಗೆ ಸಲಹೆ ಮಾಡಿರುವ ಕಾಯ್ದೆಬದ್ಧವಲ್ಲದ ಸಮಿತಿಗಳೆಂದರೆ ಹಣಕಾಸು, ಯೋಜನೆ ಮತ್ತು ಮೌಲ್ಯಮಾಪನ ಸಮಿತಿಗಳು, ಕುಂದುಕೊರತೆ, ಪರಿಹಾರ ಮತ್ತು ಮನವಿ ಸಮಿತಿ, ಪರೀಕ್ಷೆ ಸಮಿತಿ, ಪ್ರವೇಶಾತಿ ಸಮಿತಿ ಮತ್ತು ಗ್ರಂಥಾಲಯ ಸಮಿತಿ. ಇವುಗಳ ಜೊತೆಗೆ ಕಾಲೇಜುಗಳು ವಿದ್ಯಾರ್ಥಿ ಯೋಗಕ್ಷೇಮ ಸಮಿತಿ ಮತ್ತು ಪಠ್ಯೇತರ ಚಟುವಟಿಕೆಗಳ ಸಮಿತಿಯನ್ನು ರಚಿಸಬಹುದು.

ಮುಂದುವರಿದು, ಯು.ಜಿ.ಸಿ, ಒಂದು ಮುಖ್ಯ ಷರತ್ತಾಗಿ ಪ್ರತಿಯೊಂದು ಕಾಯ್ದೆಬದ್ಧ ಸಮಿತಿಯಲ್ಲಿ ಮತ್ತು ಕೆಲವು ಆಯ್ದ ಕಾಯ್ದೆಬದ್ಧವಲ್ಲದ ಸಮಿತಿಯಲ್ಲೂ ಇರಬೇಕಾದ ಸದಸ್ಯರ ಸ್ವರೂಪ, ವ್ಯಾಪ್ತಿ, ಕನಿಷ್ಠ ಸಂಖ್ಯೆಯನ್ನು ಸೂಚಿಸಿದೆ. ಇದಲ್ಲದೆ, ಸ್ವಾಯತ್ತ ಕಾಲೇಜುಗಳ ಕಾರ್ಯವನ್ನು ಸುಗಮಗೊಳಿಸಲು ಮತ್ತು ಅದೇ ರೀತಿ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿಗಳನ್ನು ಸಂರಕ್ಷಿಸಲು ಸಮಿತಿಗಳ ಸಂರಚನೆಯಲ್ಲಿ ಸಾಕಷ್ಟು ನಮ್ಯತೆಯನ್ನು ತರುವುದನ್ನು ಉದಾಹರಣೆಗಳ ಮೂಲಕ ಮಾರ್ಗದರ್ಶಿ ಸೂಚಿ ವಿವರಿಸಿದೆ.

**ಭಾರತದಲ್ಲಿ ಸ್ವಾಯತ್ತ ಸಂಸ್ಥೆಗಳು:**

ಭಾರತದಲ್ಲಿ ಅನಾದಿಕಾಲದಿಂದಲೂ ಶಿಕ್ಷಣವು ಸ್ವಾಯತ್ತವಾಗಿದೆ. ಗುರು–ಶಿಷ್ಯ ಪರಂಪರೆಯ ಬೋಧನೆ ಮತ್ತು ಕಲಿಕೆಯು ಅತ್ಯುನ್ನತ ಸ್ಥಾನ ಹೊಂದಿತ್ತು. ಆಧುನಿಕ ಶಾಲಾ–ಕಾಲೇಜುಗಳಿದ್ದಂತೆ ಆಗಿನ ಕಾಲದಲ್ಲಿ ವೃತ್ತಿನಿರತರ ಆಶ್ರಮಗಳು ಮತ್ತು ಗುರುಕುಲಗಳು ಅಥವಾ ಮಕ್ತಾಬ್ಸ್ ಅಥವಾ ಮದರಸಾಗಳಿದ್ದವು. ಅವು ಯಾವಾಗಲೂ ಸಂಪೂರ್ಣ ಸ್ವಾಯತ್ತತೆ ಹೊಂದಿದ್ದವು. ಕ್ರಿ.ಪೂ. 17ನೇ ಶತಮಾನದ ಆರಂಭದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿದ್ದ ವಿಶ್ವವಿದ್ಯಾನಿಲಯಗಳಾಗಿದ್ದ ತಕ್ಷಶಿಲಾ, ನಳಂದಾ, ವಿಕ್ರಮಶೀಲ ಮತ್ತು ಕಾಶಿ ವಿಶ್ವವಿದ್ಯಾನಿಲಯಗಳು ಕಲಿಕೆಯ ಪ್ರಸಿದ್ಧ ಕೇಂದ್ರಗಳಾಗಿದ್ದವು. ಈ ಸಂಸ್ಥೆಗಳು ಸ್ವಾಯತ್ತತೆಗೆ ಮಾತ್ರ ಪ್ರಸಿದ್ಧ ಕೇಂದ್ರಗಳಾಗಿರದೆ ಜವಾಬ್ದಾರಿಯುತವಾಗಿದ್ದುದಲ್ಲದೆ, ತಮ್ಮ ಕೆಲಸಕಾರ್ಯಗಳ ಗುಣಮಟ್ಟ, ಸಮಂಜಸತೆ ಮತ್ತು ಉತ್ಕೃಷ್ಟತೆಗೆ ಹೆಸರುವಾಸಿಯಾಗಿದ್ದವು. ಸಾಮಾನ್ಯವಾಗಿ ಈ ಸ್ವಾಯತ್ತ ಸಂಸ್ಥೆಗಳು ಭಾರತೀಯ ಶಿಕ್ಷಣದ ಈ ಅವಧಿ ಮತ್ತು ವಿಶೇಷವಾಗಿ ದೇಶದ ಎಲ್ಲೆಡೆಯಿಂದ ಮತ್ತು ವಿದೇಶಗಳಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು.

ಪ್ರಾಚೀನ ಭಾರತದಲ್ಲಿ, ಶಿಕ್ಷಣವು ರಾಜ್ಯ ಅಥವಾ ಸರ್ಕಾರಗಳಂತಹ ಬಾಹ್ಯ ನಿಯಂತ್ರಣವಿಲ್ಲದೆ ಸ್ವತಂತ್ರವಾಗಿತ್ತು. ನುರಿತ ವಿದ್ವಾಂಸರು ತಮ್ಮ ಅಧ್ಯಯನವನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಮತ್ತು ನಿರ್ಬಂಧಗಳಿಲ್ಲದೆ ಮುಂದುವರೆಸಲು ಅವಕಾಶ ಒದಗಿಸುವುದು ರಾಜನ ಕರ್ತವ್ಯವಾಗಿತ್ತು. ಯಾವುದೇ ಅಡ್ಡಿಯಿಲ್ಲದೆ ಜ್ಞಾನವನ್ನು ಧಾರೆ ಎರೆಯುವುದು ಅವರ ಕರ್ತವ್ಯವಾಗಿತ್ತು.

ಮಧ್ಯಕಾಲೀನ ಯುಗದಲ್ಲೂ ಬೋಧನೆ ಜೊತೆಗೆ ಕಲಿಸುವ ಜವಾಬ್ದಾರಿ ಶಿಕ್ಷಕರದ್ದಾಗಿತ್ತು. ರಾಜ್ಯವು ಶಿಕ್ಷಣದ ನೀತಿ ಮತ್ತು ಯೋಜನೆಗಳಿಗೆ ಅಡ್ಡಿಯಾಗುತ್ತಿರಲಿಲ್ಲ. ಜ್ಞಾನಾರ್ಜನೆಯನ್ನು ಹೆಚ್ಚು ಗೌರವಯುಕ್ತವಾಗಿ ಪರಿಗಣಿಸಲಾಗುತ್ತಿತ್ತು. ರಾಷ್ಟ್ರಾದ್ಯಂತ ಇರುವ ವಿದ್ವಾಂಸರನ್ನು ರಾಜ್ಯವು ಗೌರವಿಸುವುದರ ಜೊತೆಗೆ ಉತ್ತೇಜಿಸುತ್ತಿತ್ತು. ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ಮುಕ್ತಾಬ್‌ಗಳೇ ನೀಡುತ್ತಿದ್ದು, ಅದೊಂದು ಖಾಸಗಿ ಉದ್ದಿಮೆಯಾಗಿತ್ತು. ಮದ್ರಸಾಗಳು ರಾಜ್ಯದ ಶ್ರೀಮಂತರಿಂದ ಬೆಂಬಲಿಸಲ್ಪಡುತ್ತಿದ್ದವು.

ಭಾರತದಲ್ಲಿ ಬ್ರಿಟಿಷರ ಆಡಳಿತದ ಪ್ರವೇಶದಿಂದಾಗಿ ಸರ್ಕಾರವು ಶಿಕ್ಷಣದ ನೀತಿ ಮತ್ತು ರಚನಾಕಾರ್ಯಗಳಲ್ಲಿ ಪಾಲ್ಗೊಳ್ಳುವುದು ಹೆಚ್ಚಾಯಿತು. 1813ರ ಚಾರ್ಟರ್ ಕಾನೂನಿನ ವಿಧಿ–43ರ ಮಹತ್ವವನ್ನು ಮೆಕಾಲೆ, ಇಂಗ್ಲಿಷ್ ಶಿಕ್ಷಣವು ಭಾರತೀಯ ಶಿಕ್ಷಣದ ಗುರಿಯಾಗಬೇಕು ಮತ್ತು ಸಾಹಿತ್ಯದ ಅಭಿವೃದ್ಧಿ ಎಂದರೆ, ಇಂಗ್ಲಿಷ್ ಸಾಹಿತ್ಯದ ಅಭಿವೃದ್ಧಿ ಎಂದಿದ್ದಾನೆ. 1884ರ ವುಡ್ ಪರಿಪತ್ರ (ಡಿಸ್‌ಪ್ಯಾಚ್) ವರದಿಯು ಅನುದಾನ ವ್ಯವಸ್ಥೆಯನ್ನು ಮತ್ತು ಸರ್ಕಾರಿ ಸಂಸ್ಥೆಗಳನ್ನು ಖಾಸಗಿ ಉದ್ದಿಮೆಗೆ ಸಹಕಾರ ತೆಗೆದುಕೊಳ್ಳುವುದನ್ನು ಶಿಫಾರಸ್ಸು ಮಾಡಿದೆ. 1913ರಲ್ಲಿ ಭಾರತ ಸರ್ಕಾರವು ಶಿಕ್ಷಣ ನೀತಿಯ ಮೇಲೆ ನಿರ್ಣಯವನ್ನು ಜಾರಿಗೆ ತಂದಿದೆ. ಪ್ರೌಢಶಾಲೆಗಳಿಗೆ ಮಾನ್ಯತೆಯನ್ನು ನೀಡುವ ಜವಾಬ್ದಾರಿಯಿಂದ ವಿಶ್ವವಿದ್ಯಾನಿಲಯಗಳಿಗೆ ತೊಂದರೆಯಾಗಬಾರದು. ಆದುದರಿಂದ, ಈ ಶಾಲೆಗಳು ಸ್ಥಳೀಯ ಸರ್ಕಾರಗಳ ನಿಯಂತ್ರಣದಲ್ಲಿರಬೇಕೆಂದು ನಿರ್ಣಯ ಕೈಗೊಂಡಿದೆ. ಸಾಡ್ಲರ್ ಆಯೋಗವು (1917) ಮಂಡಳಿಯು ಶೈಕ್ಷಣಿಕ ಇಲಾಖೆಗಳ ನಿಯಂತ್ರಣದಿಂದ ಬಿಡುಗಡೆಯಾಗಬೇಕು ಮತ್ತು ವಿಶ್ವವಿದ್ಯಾನಿಲಯ ಶಿಕ್ಷಕರಿಗೆ ಅತಿ ಹೆಚ್ಚು ಅಧಿಕಾರ ನೀಡಬೇಕು ಎಂದಿದೆ. ಹಾಗಾಗಿ ಬ್ರಿಟಿಷ್ ಸರ್ಕಾರವು ಸ್ವಲ್ಪಮಟ್ಟಿನ ಸ್ವಾಯತ್ತತೆ ನೀಡುವುದರ ಜೊತೆಗೆ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಪಾಶ್ಚಿಮಾತ್ಯ ಕಲಿಕೆ ಮತ್ತು ಇಂಗ್ಲಿಷ್ ಕಲಿಕೆಯನ್ನೂ ಪರಿಚಯಿಸಲು ಬುನಾದಿ ಹಾಕಿದೆ. ಆ ನಂತರದಲ್ಲಿ ಪರೀಕ್ಷಾ ವ್ಯವಸ್ಥೆ ಹಾಗೂ ಶಾಲೆ ಮತ್ತು ಕಾಲೇಜುಗಳ ತಪಾಸಣೆಯ ಅಧಿಕಾರಗಳು ಪ್ರಾರಂಭವಾದವು.

ಭಾರತವು ಹಲವಾರು ವರ್ಷಗಳಿಂದ ಅನೇಕ ವಿಶ್ವವಿದ್ಯಾನಿಲಯಗಳು, ಸಾಮಾನ್ಯ ಮತ್ತು ವೃತ್ತಿಪರ ಕಾಲೇಜುಗಳು ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರದ ಅತಿ ದೊಡ್ಡ ಶಿಕ್ಷಣವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ.

ರಾಜಸ್ಥಾನದ ಪ್ರೌಢಶಿಕ್ಷಣ ಮಂಡಳಿಯು ಸ್ವಾಯತ್ತತೆಯ ರೂಪುರೇಷೆಗಳಿಗೆ ಮೂರ್ತ ರೂಪ ಕೊಡಲು ಒಂದು ಉಪಸಮಿತಿಯನ್ನು ನೇಮಿಸಿತು. ಈ ಬದಲಾವಣೆಗಳ ಬಗೆಗೆ ಪ್ರಸ್ತಾಪ ಸಲ್ಲಿಸಲು ಕೆಲವು ಶಾಲೆಗಳನ್ನೂ ಆಹ್ವಾನಿಸಲಾಗಿತ್ತು. ಶಾಲೆಗಳಿಗೆ ಸ್ವಾಯತ್ತತೆಯನ್ನು ನೀಡಿದಲ್ಲಿ ಪಠ್ಯಕ್ರಮ, ಬೋಧನಾ ವಿಧಾನ ಮತ್ತು ಪರೀಕ್ಷಾಕ್ರಮಗಳಿಗೆ ಸಂಬಂಧಿಸಿದಂತೆ ಮಾಡಬೇಕಾದ

Digitised by Bharatavani, CIIL

ಬದಲಾವಣೆಗಳ ಬಗ್ಗೆ ಶಾಲೆಗಳು ಪ್ರಸ್ತಾಪಿಸಬೇಕಿತ್ತು. ಈ ಶಾಲೆಗಳು ಪ್ರಸ್ತಾಪಿಸಿದ ಬದಲಾವಣೆಗಳ ಬಗ್ಗೆ ಪುನರಾವಲೋಕನ ಮಾಡಲು 1973ರಲ್ಲಿ ಸ್ವಾಯತ್ತ ಶಾಲೆಗಳ ಬಗ್ಗೆ ಒಂದು ವಿಚಾರ ಸಂಕಿರಣವನ್ನು ನಡೆಸಲಾಯಿತು. ಸ್ವಾತಂತ್ರ್ಯಾನಂತರ ಪ್ರಥಮ ಬಾರಿಗೆ 1974 ಜುಲೈನಿಂದ ಶಾಲೆಗಳ ಸೂಕ್ತ ತನಿಖೆಯ ನಂತರ ಉದಯಪುರದ ಬನಸ್ತಲಿ ವಿದ್ಯಾಪೀಠ, ಮತ್ತು ಬನಸ್ತಲಿ ಮತ್ತು ವಿದ್ಯಾಭವನಗಳ ಒಂಬತ್ತು ಮತ್ತು ಹತ್ತನೇ ತರಗತಿಗಳಿಗೆ ಸಾಯತ್ತತೆಯ ಈ ರೂಪುರೇಷೆಗಳನ್ನು ಅನುಷ್ಠಾನಗೊಳಿಸಲು ಅಧಿಕಾರ ನೀಡಿದವು. ರಾಜ್ಯದ ಮಂಡಳಿಗಳು ಕೇವಲ ಪ್ರೌಢ ಶಾಲಾ ಹಂತದ ಪರೀಕ್ಷೆಗಳನ್ನು ನಡೆಸುತ್ತಿದ್ದವು. ಸ್ವಾಯತ್ತತೆಯನ್ನು ನೀಡಲು ಮಂಡಳಿಗಳು ವಿಧಿಸಿದ ಷರತ್ತು/ನಿಯಮಗಳೆಂದರೆ: ಸ್ವಾಯತ್ತತೆ ಪಡೆಯಲು ಉದ್ದೇಶ ಹೊಂದಿರುವ ಶಾಲೆಗಳು ಅರ್ಜಿಯನ್ನು ಸಲ್ಲಿಸಬೇಕು; ಅದಕ್ಕೆ ಒಂದು ವರ್ಷ ಮುನ್ನ ಯೋಜಿತ ಪ್ರಸ್ತಾವನೆಯನ್ನು ಆರಂಭಿಸಬೇಕು; ಸ್ವಾಯತ್ತತೆಯ ಬೇಡಿಕೆಯ ಪ್ರಸ್ತಾವನೆಯು ಈ ಅಂಶಗಳನ್ನು ಒಳಗೊಂಡಿರಬೇಕು. – ಅ) ಅಧ್ಯಯನದ ಹೊಸ ರೂಪುರೇಷೆಗಳು ಆ) ಪಠ್ಯಕ್ರಮದ ಖರ್ಚು ಇ) ಪಠ್ಯಪುಸ್ತಕಗಳ ಸರಬರಾಜು/ಸಿದ್ಧತೆ ಈ) ಪ್ರಾಯೋಗಿಕ ಕೆಲಸ, ಯೋಜನೆ ಇತ್ಯಾದಿಗಳಿಗೆ ಅಂಕಗಳ ಹಂಚಿಕೆ ಉ) ಬೋಧನಾ ಕಾರ್ಯಕ್ರಮ ಮತ್ತು ಪರೀಕ್ಷೆಗಳನ್ನು ನಡೆಸುವ ಕಾರ್ಯವಿಧಾನ, ಆಂತರಿಕ ಪರೀಕ್ಷೆ–ಬಾಹ್ಯ ಪರೀಕ್ಷೆ, ನಿಯೋಜಿತ ಕಾರ್ಯ, ಯೋಜನೆಗಳು ಇತ್ಯಾದಿಗಳಿಗೆ ಇರುವ ಅಂಕಗಳನ್ನು ನಿರ್ದಿಷ್ಟವಾಗಿ ಸ್ಪಷ್ಟಗೊಳಿಸಬೇಕು. ಮಂಡಳಿಯು ಸ್ವಾಯತ್ತ ಶಾಲೆಗಳ ಸಮಿತಿಯೊಂದನ್ನು ರಚಿಸುತ್ತದೆ. ಈ ಸಮಿತಿಯು ಶಾಲೆಗಳ ಯೋಜನೆಗಳು ಮತ್ತು ಪ್ರಸ್ತಾವನೆಗಳನ್ನು ಪರಿಷ್ಕರಿಸಿ, ಅದರ ರೂಪುರೇಷೆಗಳನ್ನು ಒಪ್ಪಿಕೊಳ್ಳಲು ಅಥವಾ ತಿರಸ್ಕರಿಸಲು ಶಿಫಾರಸ್ಸು ಮಾಡುತ್ತದೆ. ಶಾಲೆಗಳು ಇಚ್ಛಿಸಿದಲ್ಲಿ, ತಮ್ಮ ಶಾಲೆಗಳಲ್ಲಿರುವ ವಿಷಯಗಳು ಮತ್ತು ಪಠ್ಯಕ್ರಮಗಳನ್ನು ಅನುಸರಿಸಬೇಕು ಮತ್ತು ಬೋಧನಾ ವಿಧಾನಗಳ ಕ್ಷೇತ್ರದಲ್ಲಿ ಸ್ವಾಯತ್ತತೆಯನ್ನು ಅನುಭವಿಸುವುದರ ಜೊತೆಗೆ ಪರೀಕ್ಷೆಯನ್ನು ನಡೆಸಬೇಕು. ಸ್ವಾಯತ್ತ ಶಾಲೆಗಳ ಸಮಿತಿಯ ರಚನೆಯಲ್ಲಿರುವ ಅವಕಾಶಗಳೆಂದರೆ: ಅಧ್ಯಕ್ಷ, ಅಧ್ಯಕ್ಷರು ಸೂಚಿಸುವ ಮೂವರು ಶಿಕ್ಷಣತಜ್ಞರು, ಇದರಲ್ಲಿ ಒಬ್ಬರಾದರೂ ಮಂಡಳಿಯ ಸದಸ್ಯರಿರಲೇಬೇಕು; ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂಡಳಿಯ ನಿರ್ದೇಶಕರು ಮತ್ತು ಕಾರ್ಯದರ್ಶಿ, ಅಧ್ಯಕ್ಷರು ಸೂಚಿಸಿದ ಸ್ವಾಯತ್ತ ಶಾಲೆಯ ಒಬ್ಬ ಪ್ರತಿನಿಧಿ ಮತ್ತು ನಿರ್ದೇಶಕರು ಹಾಗೂ ಕಾರ್ಯದರ್ಶಿ, ಮೌಲ್ಯಮಾಪನ ಶೈಕ್ಷಣಿಕ ಕಾರ್ಯಕ್ರಮಗಳು, ಪ್ರೌಢಶಿಕ್ಷಣ ಮಂಡಳಿ, ಮುಂದುವರೆದು ಸ್ವಾಯತ್ತ ಶಾಲಾಸಮಿತಿಯ ಕಾರ್ಯಕ್ರಮಗಳನ್ನು ಕೆಳಕಂಡ ಅಂಶಗಳನ್ನೊಳಗೊಂಡಂತೆ ವಿಸ್ತರಿಸಲಾಗಿದೆ. ಸಂಸ್ಥೆ ಮತ್ತು ಅದರ ವಿವಿಧ ಶಾಖೆಗಳು ಸ್ವಾಯತ್ತತೆಯ ಬೇಡಿಕೆಗಾಗಿ ಸಲ್ಲಿಸುವ ಸ್ವಾಯತ್ತತೆಯ ರೂಪುರೇಷೆಗಳನ್ನು ಪರೀಕ್ಷಿಸಿ ಒಪ್ಪಿಕೊಳ್ಳಲಾಗುವುದು. ಸ್ವಾಯತ್ತತೆಯನ್ನು ನೀಡುವುದಕ್ಕಾಗಿ ಶಾಲೆಯಲ್ಲಿ ಅವಶ್ಯವಾಗಿರಬೇಕಾದ ಸೌಕರ್ಯಗಳು ಮತ್ತು ಉಪಕರಣಗಳನ್ನು ಪರಿಶೀಲಿಸಬೇಕು. ಶಿಕ್ಷಕನ ಗುಣಮಟ್ಟ ಮತ್ತು ಸಾಮರ್ಥ್ಯಗಳನ್ನುಪರಿಶೀಲಿಸಬೇಕು. ಕಾಲಕಾಲಕ್ಕೆರೂಪುರೇಷೆಗಳನ್ನು ಪರಿಣಾಮಕಾರಿಯಾಗಿ ಬಳಸಲಾಗುವುದು. ಸ್ವಾಯತ್ತ ಶಾಲೆಯ ಶಿಕ್ಷಕರಿಗೆ ಮತ್ತು ಭವಿಷ್ಯದಲ್ಲಿ ಸ್ವಾಯತ್ತತೆಗೆ ಒಳಪಡುವ ಉದ್ದೇಶ ಹೊಂದಿರುವ ಅಭಿವೃದ್ಧಿಪರ ಶಾಲೆಗಳ ಶಿಕ್ಷಕರಿಗೆ ಸಚೇತನ ಶಿಬಿರಗಳನ್ನು ಏರ್ಪಡಿಸಲಾಗುವುದು; ಸ್ವಾಯತ್ತ ಶಾಲೆಗಳಿಗೆ ಶಾಶ್ವತ ಅಂಗಭೂತತ್ವ ನೀಡಲು ಶಿಫಾರಸ್ಸು ಮಾಡಲಾಗುವುದು. ಸಂಸ್ಥೆಯು ಅಪೇಕ್ಷಿತ ಗುಣಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅಸಾಧ್ಯವಾದಾಗ ಸ್ವಾಯತ್ತತೆಯನ್ನು ಹಿಂಪಡೆಯಲಾಗುವುದು ಮತ್ತು ಕೊನೆಯದಾಗಿ, ನಿಗದಿತ ಕಾಲಕ್ಕನುಗುಣವಾಗಿ ಸ್ವಾಯತ್ತ ಶಾಲೆಗಳನ್ನು ತಪಾಸಣೆ ಮಾಡಲಾಗುವುದು.

ರಾಜಸ್ಥಾನದ ಉದಯಪುರದ ಬನಸ್ಥಲಿ ವಿದ್ಯಾಪೀಠ ಮತ್ತು ವಿದ್ಯಾಭವನಗಳು ತಮ್ಮ ಶಾಲೆಗಳನ್ನು ಆರಂಭದಿಂದಲೂ ಸ್ವಾಯತ್ತತೆಯ ಪ್ರಯೋಗಕ್ಕೆ ಒಳಪಡಿಸಿವೆ. ಇದರ ಜೊತೆಗೆ, ಏಳು ವರ್ಷಗಳ ಹಿಂದೆ ಮತ್ತೊಂದು ಮಾದರಿ ಸ್ವಾಯತ್ತತೆಯನ್ನು ಶಾಲೆಗಳಲ್ಲಿ ಪ್ರಯೋಗಕ್ಕೆ ಒಳಪಡಿಸಲಾಗಿದೆ. ಮತ್ತೆರಡು ಶಾಲೆಗಳಿಗೆ ಪಠ್ಯಕ್ರಮವನ್ನು ಪುನರ್ ರೂಪಿಸಲು ಹಾಗೂ ವಿಜ್ಞಾನ ಮತ್ತು ಗಣಿತ ಪರೀಕ್ಷೆಗಳನ್ನು ನಡೆಸುವುದನ್ನು ಉತ್ತೇಜಿಸುವ ಉದ್ದೇಶದಿಂದ ಅರೆಸ್ವಾಯತ್ತತೆಯನ್ನು ನೀಡಲಾಯಿತು. ಈ ಶಾಲೆಗಳು ಪರಿಶೀಲಿಸಿದ್ದನ್ನು, ಅಂತಿಮವಾಗಿ ಪರಿಶೀಲಿಸಿ ವಿದ್ಯಾರ್ಥಿಗಳಿಗೆ ಮಂಡಳಿ ನೀಡುವ ಪ್ರಮಾಣಪತ್ರದ ಜೊತೆಗೆ ಸೇರಿಸಲಾಯಿತು. ಇಷ್ಟಾದರೂ ಪೋಷಕರು ಮತ್ತು ಸಿಬಿಎಸ್‌ಇ ವಿವಿಧ ವಿಷಯಗಳ ಪುನರ್ ರಚನೆಯನ್ನು ಕುರಿತಂತೆ ನಡೆಸಿದ ಚರ್ಚೆಯು ಈ ಶಾಲೆಗಳ ಕಾರ್ಯಕ್ಷಮತೆಯ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸಿತು.

ಭಾರತೀಯ ಶಿಕ್ಷಣದ ಸಂದರ್ಭದಲ್ಲಿ ಶಿಕ್ಷಕರ ಸ್ವಾಯತ್ತತೆಯನ್ನು ಬೋಧನೆ, ಬೋಧನೋಪಕರಣಗಳ ಬಳಕೆ, ಬೋಧನಾ ವಿಧಾನ ಮತ್ತು ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗಿದೆ. ಮಂಡಳಿಗಳು ಮತ್ತು ರಾಜ್ಯಗಳು ಪಠ್ಯಕ್ರಮ ಮತ್ತು ಸಾರ್ವತ್ರಿಕ ಪರೀಕ್ಷೆಗಳ ವಿಧಾನವನ್ನು ನಿಷ್ಕರ್ಷಿಸುತ್ತವೆ. ಅನೇಕ ಸಂಶೋಧನಾ ಫಲಿತಾಂಶಗಳು ಶಿಕ್ಷಕರ ಸ್ವಾಯತ್ತತೆ ಮತ್ತು ಸಂಸ್ಥೆಯ ಗುಣಮಟ್ಟ ಹಾಗೂ ಬೋಧನೆಯ ಸ್ವಾಯತ್ತತೆ ಹಾಗೂ ಕಲಿಕೆಯ ನಡುವೆ ಧನಾತ್ಮಕ ಸಂಬಂಧವನ್ನು ಸಾಬೀತುಪಡಿಸಿವೆ. ಇಷ್ಟಾದರೂ, ವಿವಿಧ ವರ್ಗದ ಸಂಸ್ಥೆಗಳು ಮತ್ತು ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳು ಹಾಗೂ ಖಾಸಗಿ ಆಡಳಿತ ಮಂಡಳಿಗಳ ನಿಯಂತ್ರಣಕ್ಕೊಳಪಟ್ಟ ಶಾಲಾ–ಕಾಲೇಜುಗಳ ನಡುವಿನ ಸಂಬಂಧವನ್ನು ಸಾಬೀತುಗೊಳಿಸುವ ಸಂಶೋಧನೆಗಳು ಸಾಕಷ್ಟು ನಡೆದಿಲ್ಲ.

ಭಾರತೀಯ ಶಿಕ್ಷಣ ವ್ಯವಸ್ಥೆಯ ಆಳವಾದ ಅಧ್ಯಯನವು ಅನುದಾನಿತ ಅಥವಾ ಅನುದಾನ ರಹಿತ ಶಾಲೆಗಳಿಗಿರುವ ಸ್ಥಿತಿ ಅಥವಾ ಮಂಡಳಿಯೊಂದಕ್ಕೆ ಅಂಗಭೂತಗೊಂಡಿರುವ ಎಲ್ಲಾ

Digitised by Bharatavani, CIIL

ಪ್ರಾಥಮಿಕ ಶಾಲೆಗಳು ಮೂಲಭೂತವಾಗಿ ಸ್ವಾಯತ್ತವಾಗಿವೆ. ಏಕೆಂದರೆ ಆ ಹಂತದಲ್ಲಿ ಮಂಡಳಿಯ ಅಥವಾ ಜಿಲ್ಲಾಮಟ್ಟದ ಪರೀಕ್ಷೆಗಳು ಇರುವುದಿಲ್ಲ. ಬೋಧನೆ-ಕಲಿಕೆಯು ಸಂಪೂರ್ಣವಾಗಿ ಶಾಲಾ ನಿಯಂತ್ರಣದಲ್ಲೇ ಇರುತ್ತದೆ ಎಂಬುದು ಒಪ್ಪಲೇ ಬೇಕಾದ ಸತ್ಯ. ರಾಜ್ಯ ಅಥವಾ ಮಂಡಳಿಯು ಈ ಶಾಲೆಗಳ ಮೇಲೆ ಎನ್‌ಸಿಇಆರ್‌ಟಿಯ ರಾಷ್ಟ್ರೀಯ ಪಠ್ಯಕ್ರಮವನ್ನು ಅನುಸರಿಸುವಂತೆ ಆಗ್ರಹಿಸಬಹುದು. ಇದನ್ನು ಬಿಟ್ಟರೆ, ಶಾಲೆಗಳು ಇದರ ಜೊತೆಗೆ ತಮಗೆ ಬೇಕಾದ್ದನ್ನು ಬೋಧಿಸುವಷ್ಟು ಸ್ವಾತಂತ್ರ್ಯ ಹೊಂದಿರುತ್ತವೆ. ವಿವಿಧ ರಾಜ್ಯ ಬೇರೆ ಬೇರೆ ವರ್ಗದ ಶಾಲೆಗಳು-ಉದಾಹರಣೆಗೆ, ಖಾಸಗಿಗಳ ಶಾಲೆಗಳು ತಮಗೆ ಬೇಕಾದುದ್ದನ್ನು ಕಲಿಸುತ್ತಿರುವುದನ್ನು ಗಮನಿಸಲಾಗಿದೆ. ಮುಂದುವರೆದು, ತೀರಾ ಇತ್ತೀಚಿನವರೆಗೆ ಉನ್ನತ ಪ್ರಾಥಮಿಕ ಶಾಲೆಗಳು ಹೆಚ್ಚು-ಕಡಿಮೆ ಸ್ವಾಯತ್ತತೆ ಹೊಂದಿದ್ದವು. ಏಕೆಂದರೆ ಯಾವುದೇ ಸಮಿತಿ ಅಥವಾ ರಾಜ್ಯವು ಪರೀಕ್ಷೆಗಳನ್ನು ನಡೆಸುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಕೆಲವು ರಾಜ್ಯಗಳು 7 ಮತ್ತು 8ನೇ ತರಗತಿಗಳ ಕೊನೆಗೆ ಮಂಡಳಿಗಳ ಸಾರ್ವತ್ರಿಕ ಪರೀಕ್ಷೆಗಳನ್ನು ಶಾಲೆಗಳಲ್ಲಿ ನಡೆಸುತ್ತಿವೆ. ಈ ರಾಜ್ಯಗಳಲ್ಲಿನ ಶಾಲೆಗಳು ಆಯಾ ರಾಜ್ಯದ ಸಮಿತಿಗಳು ಮತ್ತು/ಅಥವಾ ಶಿಕ್ಷಣ ನಿರ್ದೇಶಕರು ನಿಗದಿಪಡಿಸಿದ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳನ್ನು ಅನುಸರಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಒಂದೇ ಒಂದು ನಿಬಂಧನೆ ಎಂದರೆ ಸಮಿತಿಗಳು ನಿಗದಿಗೊಳಿಸಿದ ಪಠ್ಯಕ್ರಮವನ್ನೇ ಅನುಸರಿಸಬೇಕು. ಈ ರಾಜ್ಯಗಳನ್ನು ಬಿಟ್ಟರೆ, ಯಾವ ರಾಜ್ಯಗಳಲ್ಲಿ ಮಂಡಳಿ/ರಾಜ್ಯಗಳ ನಿಯಂತ್ರಣದಲ್ಲಿ ಪರೀಕ್ಷೆಗಳು ನಡೆಯುವುದಿಲ್ಲವೋ ಆ ರಾಜ್ಯಗಳ ಎಲ್ಲಾ ಉನ್ನತ ಪ್ರಾಥಮಿಕ ಶಾಲೆಗಳೂ ಕನಿಷ್ಠ ನಿಗದಿತ ಪಠ್ಯಕ್ರಮವನ್ನು ಅನುಸರಿಸಬೇಕೇ ಹೊರತು ಉಳಿದಂತೆ ಶೈಕ್ಷಣಿಕವಾಗಿ ಸ್ವಾಯತ್ತವಾಗಿವೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ಖಾಸಗಿ ಮತ್ತು ಸಾರ್ವಜನಿಕ ಶಾಲೆಗಳು ಬಳಸಿಕೊಳ್ಳುತ್ತಿರುವ ಸ್ವಾಯತ್ತತೆಯು ಅವುಗಳ ಕಾರ್ಯಸಾಮರ್ಥ್ಯದ ವ್ಯತ್ಯಾಸದಿಂದ ತಿಳಿದುಬರುತ್ತದೆ. ಸಮಸ್ಯೆ ಈ ಶಾಲೆಗಳು ಬಳಸುತ್ತಿರುವ ಸೂಚಿತ ಸ್ವಾಯತ್ತತೆಗೆ ಸಂಬಂಧಿಸಿದೆ. ಅದೇ ಅವಕಾಶಗಳನ್ನು ಹೊಂದಿರುವ ಖಾಸಗಿ ಮತ್ತು ಸಾರ್ವಜನಿಕ ಶಾಲೆಗಳ ಕಾರ್ಯವೈಖರಿಯಲ್ಲಿ ವ್ಯತ್ಯಾಸವಿರುವುದೇಕೆ?

ನಗರಸಭೆ ಮತ್ತು ಸರ್ಕಾರಗಳ ಅಧೀನದಲ್ಲಿರುವ ಶಾಲೆಗಳ ಕಾರ್ಯಕ್ರಮಗಳಲ್ಲಿ ಗುರುತಿಸಬಹುದಾದಷ್ಟು ವ್ಯತ್ಯಾಸವಿದೆ. ಖಾಸಗಿ ಶಾಲೆಗಳು ಸೂಚಿತ ಸ್ವಾಯತ್ತತೆಯನ್ನು ಶಾಲೆಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವುದಕ್ಕಾಗಿ ಉಪಯೋಗಿಸುತ್ತಿರುವುದು ಸ್ಪಷ್ಟವಾಗಿದೆ. ಸಾಮಾನ್ಯವಾಗಿ ಸರ್ಕಾರಿ ಶಾಲೆಗಳು ತಾವೇ ಆಂಭಿಸುವುದರ ಮೂಲಕ ಕೆಲಸ ಮಾಡದೆ ಸರ್ಕಾರದಿಂದ ಆದೇಶ ಬರುವವರೆಗೂ ಕಾಯುತ್ತವೆ. ಅಂದರೆ, ಸ್ವಾಯತ್ತತೆಯನ್ನು ಅನುಭವಿಸುವುದಕ್ಕೆ ಪರಿಶ್ರಮಕಾರಿ ನಾಯಕತ್ವದ ಅವಶ್ಯಕತೆಯಿದೆ. ಸ್ವಾಯತ್ತತೆಯನ್ನು ನೀಡಿದ ಮಾತ್ರಕ್ಕೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ವಾಯತ್ತತೆಯನ್ನು ಕಾರ್ಯರೂಪಗೊಳಿಸಿದಂತಾಗುವುದಿಲ್ಲ. ಅಂಗಭೂತ (Affiliated) ವ್ಯವಸ್ಥೆಯಲ್ಲಿ ಕೂಡ ಉತ್ಕೃಷ್ಟತೆಯನ್ನು ಮೆರೆದಿರುವ ಶಾಲೆಗಳು ಮತ್ತು ಕಾಲೇಜುಗಳಿವೆ. ಅವುಗಳು ಸ್ವಾಯತ್ತತೆಯನ್ನು ಪಡೆದಿಲ್ಲವೆಂಬುದನ್ನು ಬಿಟ್ಟರೆ, ತಮ್ಮ ಕಾರ್ಯವೈಖರಿಯಲ್ಲಿ ಸ್ವಾಯತ್ತ ಕಾಲೇಜುಗಳಿಗೆ ಸರಿಸಮಾನವಾಗಿವೆ. ಅದೇ ರೀತಿ, ನಿರ್ಣಯಕ್ಕಾಗಿ ಕಾಯುತ್ತಿರುವ ಸ್ವಾಯತ್ತ ಕಾಲೇಜುಗಳಿವೆ.

ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಶಾಲಾ ಹಂತದಲ್ಲಿ 3-4 ಶಾಲೆಗಳನ್ನು ಮಾತ್ರ ಸ್ವಾಯತ್ತ ಸಂಸ್ಥೆಗಳೆಂದು ಪರಿಗಣಿಸುವುದಕ್ಕಿಂತ, ಭಾರತದಲ್ಲಿನ ಹೆಚ್ಚು ಕಡಿಮೆ ಎಲ್ಲಾ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ರಾಷ್ಟ್ರಮಟ್ಟದ ಪಠ್ಯಕ್ರಮವನ್ನು ಜಾರಿಗೊಳಿಸುವುದನ್ನು ಬಿಟ್ಟರೆ ಬೋಧನಾ-ಕಲಿಕಾ ಸ್ವಾಯತ್ತತೆಯನ್ನು ಹೊಂದಿವೆ ಎಂದರೆ ತಪ್ಪಾಗಲಾರದು. ಎರಡನೆಯದಾಗಿ, ಉನ್ನತ ಸೆಕೆಂಡರಿ ಹಂತದಲ್ಲಿನ ಎಲ್ಲಾ ಶಾಲೆಗಳೂ ರಾಜ್ಯಸಮಿತಿ ಅಥವಾ ಕೇಂದ್ರೀಯ ಮಂಡಳಿಗಳು ಅಥವಾ ಐಸಿಎಸ್‌ಇಗಳಿಗೆ ಅಂಗಭೂತಗೊಂಡಿವೆ. ಈ ಹಂತದಲ್ಲಿ, ಶಾಲೆಗಳಿಗೆ ತಾವೂ ಅಂಗಭೂತ ಹೊಂದಿರುವ ಮಂಡಳಿಗಳ ಪಠ್ಯಕ್ರಮ, ಪಠ್ಯವಸ್ತು, ಮತ್ತು ಪರೀಕ್ಷಾ ನಿಯಮಗಳನ್ನು ಪಾಲಿಸದೆ ಬೇರೆ ದಾರಿ ಇರುವುದಿಲ್ಲ. ಆದಾಗ್ಯೂ, ಖಾಸಗಿ ಶಾಲೆಗಳು ಅರೆ ಸ್ವಾಯತ್ತತೆಯನ್ನು ಅನುಭವಿಸುತ್ತಿವೆ ಮತ್ತು ವಿದ್ಯಾರ್ಥಿಗಳ ಕಾರ್ಯ ಸಾಮರ್ಥ್ಯದಲ್ಲಿ ಪ್ರಗತಿಯನ್ನು ತೋರಿಸುತ್ತಿವೆ.

ಉನ್ನತ ಶಿಕ್ಷಣಕ್ಕ ಸಂಬಂಧಿಸಿದಂತೆ, ಭಾರತದ ಎಲ್ಲಾ ವಿಶ್ವವಿದ್ಯಾನಿಲಯಗಳೂ ಸ್ವಾಯತ್ತತೆಯನ್ನು ಹೊಂದಿವೆ. ಹೀಗಿದ್ದರೂ ಕೊಟ್ಟಿರುವ ಸ್ವಾಯತ್ತತೆಯನ್ನು ಅನುಭವಿಸುವಲ್ಲಿ ಧನಸಹಾಯ ಸಂಸ್ಥೆಗಳ ಅವಲಂಬನೆ ಪರಿಣಾಮ ಬೀರಿದೆ. ಎಲ್ಲಾ ಕಾಲೇಜುಗಳೂ ವಿಶ್ವವಿದ್ಯಾನಿಲಯಗಳಿಗೆ ಅಂಗಭೂತಗೊಂಡಿವೆ. ಆದುದರಿಂದ, ಪಠ್ಯಕ್ರಮ, ಪಠ್ಯವಸ್ತು, ಪ್ರವೇಶಾವಕಾಶ ಮತ್ತು ಪರೀಕ್ಷೆಗಳ ಬಗೆಗಿನ ನಿರ್ಧಾರಗಳು ವಿಶ್ವವಿದ್ಯಾನಿಲಯದ ತೀರ್ಮಾನವಾಗಿರುತ್ತವೆ. ವಿಶ್ವವಿದ್ಯಾನಿಲಯದ ತೀರ್ಮಾನಗಳ ಪ್ರಕಾರ ಕಾಲೇಜುಗಳು ಕೇವಲ ಬೋಧಿಸುತ್ತವೆ. ಇದು ಕಾಲೇಜು ಉಪನ್ಯಾಸಕರನ್ನು ಉನ್ನತ ಶಿಕ್ಷಣದಲ್ಲಿ ನಿಷ್ಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದೆ. ಸ್ವಾತಂತ್ರ್ಯಾನಂತರದಲ್ಲಿ ಬದಲಾವಣೆಯ ಅವಶ್ಯಕತೆಯು ಅನುಭವಕ್ಕೆ ಬರುತ್ತಿದೆ. ಅನುಕ್ರಮವಾಗಿ ಬಂದ ರಾಷ್ಟ್ರೀಯ ಸರ್ಕಾರಗಳು ವಿವಿಧ ಸಮಿತಿಗಳನ್ನು ಮತ್ತು ಆಯೋಗಗಳನ್ನು ಉನ್ನತ ಶಿಕ್ಷಣ ವ್ಯವಸ್ಥೆಯ ಕಾರ್ಯವೈಖರಿಯನ್ನು ಪುನರಾವಲೋಕಿಸುವುದಕ್ಕೋಸ್ಕರ ನೇಮಕ ಮಾಡಿವೆ. ಶಿಕ್ಷಣದ ಮೇಲಿನ ಎಲ್ಲಾ ಸಮಿತಿಗಳನ್ನು ಕೇಂದ್ರ, ರಾಜ್ಯ ಅಥವಾ ನಿಯಂತ್ರಣಾ ಸಂಸ್ಥೆಗಳಾದ ಯುಜಿಸಿ, ಎಐಸಿಟಿಇ ಮತ್ತಿತರ ಸಂಸ್ಥೆಗಳು, ಗುಣಮಟ್ಟ ವೃದ್ಧಿಗೊಳಿಸಲು ಸಂಸ್ಥೆಗಳ ಸ್ವಾಯತ್ತತೆಯು ಒಂದು ಪ್ರಮುಖ ಶಕ್ತಿ ಎಂಬುದನ್ನು ಒತ್ತಿ ಹೇಳಿವೆ.

Digitised by Bharatavani, CIIL

ಶಿಕ್ಷಣದಲ್ಲಿ ಸ್ವಾಯತ್ತ ಸಂಸ್ಥೆಗಳನ್ನು ಕೋಷ್ಟಕ–1 ರಲ್ಲಿರುವಂತೆ ವರ್ಗೀಕರಿಸಬಹುದು.

| ಕ್ರಮ ಸಂಖ್ಯೆ | ವರ್ಗೀಕರಣ | ಸಂಸ್ಥೆಗಳು |
|---|---|---|
| 1 | ಶಿಕ್ಷಣದ ಬೆಳವಣಿಗೆ ಮತ್ತು ವಿಕಾಸವನ್ನು ಯೋಜಿಸುವುದು, ನಿಗಾವಣೆ ಮಾಡುವುದು ಮತ್ತು ನಿಯಂತ್ರಿಸುವುದು. | AICTE, UGC, NCTE, ಮೆಡಿಕಲ್ ಕೌನ್ಸಿಲ್, ಡೆಂಟಲ್ ಕೌನ್ಸಿಲ್, ಕೃಷಿ ಪರಿಷತ್ತು, ಫಾರ್ಮಸಿ ಪರಿಷತ್ತು, ಟೌನ್ ಪ್ಲ್ಯಾನಿಂಗ್ ಇತ್ಯಾದಿ. ಪ್ರೌಢ ಶಿಕ್ಷಣ ಮಂಡಳಿಗಳಾದ ICSC, CBSE ರಾಜ್ಯ ಮಂಡಳಿ ಮುಂತಾದವು. |
| 2 | ಶಿಕ್ಷಣದ ಯೋಜನೆ, ನಿರ್ವಹಣೆ, ಶೈಕ್ಷಣಿಕ ಮಾದರಿಗಳ ವಿಕಾಸ, ಕನಿಷ್ಠ ಗುಣಮಟ್ಟ, ಸಂಶೋಧನೆ, ತರಬೇತಿ, ವಿಸ್ತರಣೆ, ರಾಜ್ಯ–ಕೇಂದ್ರ ಸಂಬಂಧಗಳು, ಪ್ರಕಟಣೆಗಳು, ನೋಡಲ್ ನಿಯೋಗವಾಗಿ ಕಾರ್ಯನಿರ್ವಹಿಸುವುದು. | NCERT, NUEPA ಇತ್ಯಾದಿ. |
| 3 | ಬೋಧನಾ–ಕಲಿಕೆ ಸಂಸ್ಥೆಗಳು | ವಿಶ್ವವಿದ್ಯಾನಿಲಯಗಳು, ಪರಿಗಣಿತ ವಿಶ್ವವಿದ್ಯಾನಿಲಯಗಳು, ಐಐಟಿಗಳು, ಐ.ಐ.ಎ.ಎಮ್‌ಗಳು, ಕಾಲೇಜುಗಳು, ಶಾಲೆಗಳು ಮುಂತಾದವು. |

ಆದಾಗ್ಯೂ ಈ ಸಂಸ್ಥೆಗಳಿಗೆ ನೀಡುತ್ತಿರುವ ಸ್ವಾಯತ್ತತೆಯ ಸ್ವರೂಪದಲ್ಲಿ ವ್ಯತ್ಯಾಸವಿದೆ. ಉದಾಹರಣೆಗೆ: ನಿಯಂತ್ರಣಾ ಸಂಸ್ಥೆಗಳು ಅಂದರೆ, ವರ್ಗ–1 ರ ಅಡಿಯಲ್ಲಿ ಬರುವ ಸಂಸ್ಥೆಗಳು ಸಂಸತ್ತಿನ ವಿಧಿಯ ಪ್ರಕಾರ ಸ್ಥಾಪನೆಗೊಂಡಿದ್ದು ಸಂಸತ್ತು ಸ್ವಾಯತ್ತ ಸಂಸ್ಥೆಗಳ ಚಟುವಟಿಕೆಗೆ ಚೌಕಟ್ಟನ್ನು ನೀಡುತ್ತದೆ. ತಮ್ಮ ತಮ್ಮ ವಿಭಾಗದ ಶಿಕ್ಷಣದಲ್ಲಿ ರಾಷ್ಟ್ರೀಯ ದೃಷ್ಟಿಕೋನ, ಸಂವಿಧಾನದ ಅವಕಾಶಗಳು ಮತ್ತು ಆದ್ಯತೆಗಳಾದ ಗುಣಮಟ್ಟ, ಸಮಾನತೆ, ಸಮಂಜಸತೆ ಮತ್ತು ಪ್ರವೇಶಾವಕಾಶಗಳನ್ನು ಯೋಜಿಸುವುದನ್ನು ಪ್ರೋತ್ಸಾಹಿಸುವುದನ್ನು, ಮೇಲ್ವಿಚಾರಣೆ ಮಾಡುವುದನ್ನು ಮತ್ತು ಸಂಯೋಜಿಸುವುದನ್ನು ಈ ಸಂಘಟನೆಗಳಿಂದ ನಿರೀಕ್ಷಿಸಲಾಗುತ್ತದೆ.

ಎರಡನೇ ವರ್ಗದ ಸಂಸ್ಥೆಗಳಾದ NCERT, NUEPA ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದಿಂದ ಸೃಷ್ಟಿತವಾದ ಸ್ವಾಯತ್ತ ಸಂಸ್ಥೆಗಳಾಗಿದ್ದು, 1860ರ ಸಂಘಗಳ ನೋಂದಣಿ ಕಾಯ್ದೆಯಡಿಯಲ್ಲಿ ನೋಂದಣಿಯಾಗಿವೆ. ಈ ಸಂಸ್ಥೆಗಳು ಕಾರ್ಯನೀತಿ ರೂಪಿಸಿ, ಕಾರ್ಯಕ್ರಮ ರೂಪಣೆ, ಆಡಳಿತ, ಪಠ್ಯಪುಸ್ತಕ ರಚನೆ, ಶಿಕ್ಷಕ ತರಬೇತಿ, ಮಾದರಿ ಪಠ್ಯಕ್ರಮ ಮತ್ತು ಪಠ್ಯವಸ್ತು ವಿಕಾಸಕ್ಕೆ ಮತ್ತು ಅಭಿವೃದ್ಧಿಗಾಗಿ ಮಾರ್ಗದರ್ಶಿ ಸೂತ್ರಗಳು, ಮಾದರಿಗಳು ಇತ್ಯಾದಿಗಳನ್ನು ರಾಷ್ಟ್ರಮಟ್ಟದಲ್ಲಿ ನಡೆಸಿದ ಸಂಶೋಧನೆಗಳನ್ನಾಧರಿಸಿ ರೂಪಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ.

ಪ್ರಸ್ತುತ (2002ರಲ್ಲಿದ್ದಂತೆ) 131 ಸ್ವಾಯತ್ತ ಕಾಲೇಜುಗಳಿವೆ. ಅವುಗಳಲ್ಲಿ 40 ಮಧ್ಯಪ್ರದೇಶದ ವಿಶ್ವವಿದ್ಯಾನಿಲಯಕ್ಕೆ ಅಂಗಭೂತಗೊಂಡಿದ್ದರೆ, 36 ತಮಿಳುನಾಡಿನ ವಿಶ್ವವಿದ್ಯಾಲಯಕ್ಕೆ 19 ಆಂಧ್ರಪ್ರದೇಶದ ವಿಶ್ವವಿದ್ಯಾನಿಲಯಕ್ಕೆ ಮತ್ತು 11 ಒರಿಸ್ಸಾ ವಿಶ್ವವಿದ್ಯಾನಿಲಯಕ್ಕೆ ಅಂಗಭೂತಗೊಂಡಿವೆ.

ಈ ಕಾಲೇಜುಗಳಿಗೆ ನೀಡಿರುವ ಸ್ವಾಯತ್ತತೆಯು 'ಕಾನೂನುಬದ್ಧ' 'ನಿಯಮಬದ್ಧ' 'ಅಪೂರ್ಣ', 'ಕಾರ್ಯಕ್ರಮಬದ್ಧ' ಶೈಕ್ಷಣಿಕ ಮತ್ತು ವ್ಯಕ್ತ ಸ್ವಾಯತ್ತತೆಯಾಗಿರುತ್ತದೆ.

ದೇಶದಲ್ಲಿನ ಎಲ್ಲಾ ಸ್ವಾಯತ್ತ ಕಾಲೇಜುಗಳೂ ಸಂಸ್ಥೆಯ ಆಳ್ವಿಕೆ ನಡೆಸಲು ಕಾನೂನುಬದ್ಧ ಮತ್ತು ಕಾನೂನುಬದ್ಧವಲ್ಲದ ಸಮಿತಿಗಳನ್ನು ಹೊಂದಿರುತ್ತವೆ. ಈ ಕಾಲೇಜುಗಳು ಸಂಸ್ಥೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಒಳಿತಿಗಾಗಿ ಹಲವಾರು ಬದಲಾವಣೆಗಳನ್ನು ತರುತ್ತವೆ. ಪರಿಣಾಮವಾಗಿ, ಶಿಕ್ಷಣದ ಗುಣಮಟ್ಟ ಹಾಗೂ ಸುಸಂಗತೆಯ ಮೂಲಕ ವ್ಯವಸ್ಥೆಗೆ ಲಾಭ ತರುತ್ತವೆ. ಮೊದಲಿಗೆ ಸ್ವಾಯತ್ತತೆ ಪಡೆದ ಕಾಲೇಜು ಈಗಾಗಲೇ 'ಪರಿಗಣಿತ ವಿಶ್ವವಿದ್ಯಾನಿಲಯ'ವಾಗಿದೆ. ಈ ಎಲ್ಲಾ ಸಂಸ್ಥೆಗಳಿಗೂ ಕೇವಲ ಶೈಕ್ಷಣಿಕ ಸ್ವಾಯತ್ತತೆ ಮತ್ತು ಪ್ರವೇಶಾವಕಾಶಗಳು ಹಾಗೂ ಪರೀಕ್ಷೆಗಳಿಗಾಗಿ ಆಡಳಿತದ ಸ್ವಾಯತ್ತತೆಯನ್ನು ನೀಡಲಾಗಿದೆ. ಆರ್ಥಿಕ ಸ್ವಾಯತ್ತತೆಯನ್ನು ಯಾವುದೇ ಕಾಲೇಜಿಗೂ ಈವರೆಗೂ ನೀಡಲಾಗಿಲ್ಲ.

19 ವಿಶ್ವವಿದ್ಯಾನಿಲಯಗಳು, 442 ಶಿಕ್ಷಕರು ಮತ್ತು 1021 ಕಾಲೇಜು ವಿದ್ಯಾರ್ಥಿಗಳನ್ನು ಒಳಗೊಂಡ ನಮೂನೆಯ ಆಧಾರದ ಮೇಲೆ 1999ರಲ್ಲಿ ಈ ಲೇಖಕಿ ನಡೆಸಿದ ಅಧಿಕ ಪ್ರಮಾಣದ ಅಧ್ಯಯನದ ಫಲಿತಾಂಶವು ಸಂಸ್ಥೆಯ ಸದಸ್ಯರಿಗೆ ಸೂಕ್ತ ಜವಾಬ್ದಾರಿಗಳನ್ನು

Digitised by Bharatavani, CIIL

ನೀಡದೆ ಕೇವಲ ಹೆಸರಿಗೆ ಮಾತ್ರ ಸ್ವಾಯತ್ತತೆ ನೀಡಿದ ಪಕ್ಷದಲ್ಲಿ ಯಾವುದೇ ಶಾಲೆ/ಕಾಲೇಜುಗಳಲ್ಲಿ, ಕೋರ್ಸ್‌ಗಳಲ್ಲಿ, ಬೋಧನೆ ಮತ್ತು ಕಲಿಕೆಯಲ್ಲಾಗಲೀ ಯಾವುದೇ ಗಣನೀಯ ವ್ಯತ್ಯಾಸ ಇರುವುದಿಲ್ಲ ಎಂದು ಹೇಳುತ್ತದೆ. ಮುಂದುವರೆದು, ಸಮಾಜದಲ್ಲಾಗುವ ಬದಲಾವಣೆಗಳು, ಸಂಶೋಧನೆಗಳು, ಕಾಲದಿಂದ ಕಾಲಕ್ಕೆ ಆದ ಬದಲಾವಣೆಗಳ ಬಗೆಗೆ ಶಿಕ್ಷಕರು ಬೇಕಾದ ಜ್ಞಾನ ಮತ್ತು ಕೌಶಲಗಳನ್ನು ಪಡೆದುಕೊಳ್ಳದಿದ್ದರೆ, ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ, ಜೊತೆಗೆ ಸ್ವಾಯತ್ತ ಸಂಸ್ಥೆಗಳು ನಿಃಸತ್ವಗೊಳ್ಳುವ ಅಪಾಯದ ಅಂಚನ್ನು ಮುಟ್ಟುತ್ತವೆ.

ಸಮಾಜದ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಸ್ಥೆಗಳ ಉನ್ನತೀಕರಣಗೊಳಿಸುವುದು ಸ್ವಾಯತ್ತ ಸಂಸ್ಥೆಗಳ ಯಶಸ್ಸನ್ನು ನಿಶ್ಚಿತಗೊಳಿಸಲು ಅತ್ಯಂತ ಮಹತ್ವಪೂರ್ಣ ಅಂಶವಾಗುತ್ತದೆ.

ಈ ಸಂಸ್ಥೆಗಳು ಸ್ವಾಯತ್ತ ಸ್ಥಾನಮಾನವನ್ನು ಹೊಂದುವುದಕ್ಕೆ ಇದ್ದ ಕಾರಣಗಳನ್ನು ಈ ಅಧ್ಯಯನ ಸೂಚಿಸುತ್ತದೆ. ಅವುಗಳೆಂದರೆ, ಹೊಸ ಕೋರ್ಸ್‌ಗಳ ಆರಂಭ; ಅಧಿಕಾರ ಅನುಭವಿಸುವುದು; ಸ್ವಾತಂತ್ರ್ಯವನ್ನು ಅನುಭೋಗಿಸುವುದು; ಸಂಸ್ಥೆಯನ್ನು ವಿಶ್ವವಿದ್ಯಾನಿಲಯವಾಗಿ ಮಾರ್ಪಡಿಸುವುದು; ಬೇರೆಯದೇ ಅಸ್ತಿತ್ವ ಹೊಂದುವುದು; ಗುಣಮಟ್ಟದ ಪ್ರಮಾಣ ಹೆಚ್ಚಿಸುವುದು; ವಿಶ್ವವಿದ್ಯಾನಿಲಯದ ಪ್ರಬಲ ಹಿಡಿತದಿಂದ ಪಾರಾಗುವುದು ಮತ್ತು ಹೆಚ್ಚಿನ ಹಣಕಾಸು ಸೌಲಭ್ಯ ಪಡೆಯುವುದು. ಎಲ್ಲಾ ಸ್ವಾಯತ್ತ ಕಾಲೇಜುಗಳು ಕೆಳಕಂಡ ಅನುಭವಗಳನ್ನು ಅಭಿವ್ಯಕ್ತಗೊಳಿಸಿವೆ: ಸ್ವಾಯತ್ತತೆಯು ಹೊಸ ಬೋಧನಾ ವಿಧಾನಗಳನ್ನು ಅನುಸರಿಸಲು ಸ್ವಾತಂತ್ರ್ಯ, ಉತ್ತಮ ಮೌಲ್ಯಮಾಪನ ವ್ಯವಸ್ಥೆ, ಸೂಕ್ತ ಪ್ರವೇಶಾವಕಾಶ ನೀಡಿ ಅಧ್ಯಯನದ ವಿಷಯಗಳು ಮತ್ತು ಪಠ್ಯಕ್ರಮಗಳನ್ನು ನಿಷ್ಕರ್ಷಿಸುವುದು ಸುಗಮವಾಗಿದೆ ಎಂದಿವೆ. ಮತ್ತೆ ಕೆಲವು ಕಾಲೇಜುಗಳು ತಮಗೆ ನೀಡಿರುವ ವಿಶ್ವವಿದ್ಯಾನಿಲಯದ ಸ್ವಾಯತ್ತತೆಯ ಸ್ವರೂಪದಿಂದಾಗಿ ಯಾವುದೇ ಬದಲಾವಣೆಗಳನ್ನು ಆರಂಭಿಸಲಾಗಿಲ್ಲ ಎಂದಿವೆ. ಉದಾಹರಣೆಗೆ: ಪರೀಕ್ಷೆಯ ರೂಪುರೇಷೆ ಮತ್ತು ಪರೀಕ್ಷಾ ವಿಧಾನಗಳ (ದಿನಾಂಕ, ಪ್ರಶ್ನೆಪತ್ರಿಕೆ, ಅಂಕಗಳ ಹಂಚಿಕೆ ಇತ್ಯಾದಿ.) ನಿರ್ಧಾರದ ಅಧಿಕಾರವನ್ನು ವಿಶ್ವವಿದ್ಯಾನಿಲಯವೇ ಇಟ್ಟುಕೊಂಡಿರುವುದರಿಂದ ಕಾಲೇಜು ಏನೂ ಮಾಡಲಾಗುತ್ತಿಲ್ಲ ಎಂದಿವೆ. ವಿಶ್ವವಿದ್ಯಾನಿಲಯಗಳು ಮೇಲಿನ ಅಂಶಗಳ ನಿರ್ಧಾರವನ್ನು ತಾವೇ ಉಳಿಸಿಕೊಂಡು ಕಾಲೇಜುಗಳಿಗೆ ಸ್ವಾಯತ್ತತೆ ನೀಡುತ್ತವೆ. ಹಾಗಾಗಿ, ಕಾಲೇಜುಗಳು ಹೆಸರಿಗೆ ಸ್ವಾಯತ್ತವಾದರೂ, ನಿಜವಾಗಿ ಅವುಗಳು ವಿಶ್ವವಿದ್ಯಾನಿಲಯವನ್ನೇ ಅವಲಂಬಿಸಿರುತ್ತವೆ. ಇಷ್ಟೆಲ್ಲದರ ನಡುವೆ, ಸ್ವಾಯತ್ತ ಕಾಲೇಜಿನ ಶಿಕ್ಷಕರು, ಸ್ವಾಯತ್ತತೆಯು ತಮ್ಮ ಘನತೆಯನ್ನು, ಸ್ಥಾನಮಾನವನ್ನು ಹೆಚ್ಚಿಸಿದ್ದು, ವಿದ್ಯಾರ್ಥಿಗಳಿಗಾಗಿ ಕಾಲೇಜು ಅನೇಕ ಚಟುವಟಿಕೆಗಳನ್ನು ಕೈಗೊಳ್ಳಲು ಉತ್ತೇಜಿಸುತ್ತದೆ ಎಂದಿದ್ದಾರೆ. ಎಲ್ಲಾ ಆಡಳಿತಾಧಿಕಾರಿಗಳು ಮತ್ತು ಫಲಾನುಭವಿಗಳು ತಿಳಿಸಿದ ಈ ಎಲ್ಲಾ ಧನಾತ್ಮಕ ಮತ್ತು ಆಡಳಿತಗಾರರ ಮತ್ತು ಪಾಲುದಾರರ ಋಣಾತ್ಮಕ ಅಂಶಗಳಿದ್ದರೂ ಹೆಚ್ಚಿನ ಸಂಖ್ಯೆಯ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ಇನ್ನೂ ನೀಡಬೇಕಾಗಿದೆ. ಸ್ವಾಯತ್ತತೆಯ ನೀಡಿಕೆಯನ್ನು ಕೇವಲ ಶೈಕ್ಷಣಿಕ ವಿವಾದಕ್ಕೆ ಮಾತ್ರ ಮೀಸಲಿರಸಲಾಗದು. ಇದು ಹೆಚ್ಚಾಗಿ ರಾಜಕೀಯ ವಿವಾದವನ್ನು ಮೀರಿದೆ. ಇದರಲ್ಲಿ ಕೆಳಕಂಡ ಕೆಲವು ಸಂಗತವಾದ ವಿವಾದಾಂಶಗಳಿರಬಹುದು.

**ಅರಿವಿನ ಕೊರತೆ/ಭಯ (ಶಂಕೆ)/ಬದ್ಧತೆಯ ಕೊರತೆಗೆ ಸಂಬಂಧಿಸಿದ ವಿವಾದಾಂಶಗಳು:**

- ಸ್ವಾಯತ್ತತೆ ಪದದ ಬಗೆಗೆ ಸಂಶಯ: ಅಜ್ಞಾನ, ಪೂರ್ವಾಗ್ರಹ, ಪಕ್ಷಪಾತ, ಅರ್ಥಮಾಡಿಕೊಳ್ಳದಿರುವುದು ಹಾಗೂ ಅರ್ಥಮಾಡಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸದಿರುವುದನ್ನು ಆಧರಿಸಿ ಸ್ವಾಯತ್ತತೆಯ ಬಗೆಗೆ ಸಂಶಯ ಹೊಂದಿರುವುದು.
- ಸ್ವಾಯತ್ತ ಕಾಲೇಜಿನ ಪ್ರಾಂಶುಪಾಲರಿಗೆ ಅನಿಯಮಿತ ಅಧಿಕಾರ ಮತ್ತು ಆಡಳಿತ ಮಂಡಳಿಗೆ ಸಂಪೂರ್ಣ ಅನುಮತಿ ಸಿಗಬಹುದೆಂಬ ಭಯ.
- ಸ್ವಾಯತ್ತತೆ ಕೊಡುವುದರಿಂದ ಸಂಸ್ಥೆಗಳಿಗೆ ಅನುದಾನ ನೀಡುವ ಸಂಸ್ಥೆಗಳಾದ ವಿಶ್ವವಿದ್ಯಾನಿಲಯ, ರಾಜ್ಯ ಸರ್ಕಾರ ಮುಂತಾದವುಗಳ ಅಧಿಕಾರವನ್ನು ಕಿತ್ತುಕೊಳ್ಳಬಹುದೆಂಬ ಭಯ.

**ನಿಯಂತ್ರಣಾಧಿಕಾರ ಸಂಸ್ಥೆಗಳು/ರಾಜ್ಯ ಸರ್ಕಾರಗಳಿಗೆ ಸಂಬಂಧಿಸಿದ ವಿವಾದಾಂಶಗಳು:**

- ರಾಜ್ಯ ಶಿಕ್ಷಣ ಕಾನೂನಿನಲ್ಲಿ ಶೈಕ್ಷಣಿಕ ಸಂಸ್ಥೆಗಳು/ಕಾಲೇಜುಗಳಿಗೆ ಸ್ವಾಯತ್ತತೆ ಕೊಡಲು ಅವಕಾಶದ ಅಭಾವ.
- ಅಧಿಕಾರ ಮತ್ತು ನಿಯಂತ್ರಣ, ಪಾತ್ರಗಳು ಹಾಗೂ ಜವಾಬ್ದಾರಿಗಳು, ಅಧಿಕಾರದ ವ್ಯಾಪ್ತಿ ಮತ್ತು ಸಂರಚನೆ–ಕಾರ್ಯಗಳ ಸಂಬಂಧ ರೂಪಿಸುವುದು, ಸ್ವಾಯತ್ತತೆ ನೀಡುವ ಮತ್ತು ಸ್ವಾಯತ್ತತೆ ಪಡೆಯುವ ಸಂಸ್ಥೆಗಳಿಗೆ ಸಾಂಸ್ಥಿಕ ಮತ್ತು ರಾಜ್ಯಮಟ್ಟದಲ್ಲಿ ಅನುಕೂಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಮಾಡಬೇಕಾದ ಪುನರ್ ಹೊಂದಾಣಿಕೆ ಸಂಬಂಧಿಸಿದಂತೆ.
- ಸಂಸ್ಥೆಗಳ ಕಾರ್ಯಸೂಚಿಗನುಸಾರ ಸಿಬ್ಬಂದಿಗಳ ಆಯ್ಕೆ, ನೇಮಕ, ಸ್ಥಾನೀಕರಣ ಮತ್ತು ವರ್ಗಾವಣೆ ಮಾಡುವ ಅಧಿಕಾರ ಮತ್ತು ಘೋಷಿಸಲಾದ ಗುರಿಗಳನ್ನು ಸಾಧಿಸಲು ಸಂಸ್ಥೆಗಳ ನಿರೀಕ್ಷೆಗಳಿಗೆ ಸಂಬಂಧಿಸಿದಂತೆ ನಿರ್ಣಯ ಕೈಗೊಳ್ಳುವ ಅಧಿಕಾರ.
- ಹೊಸ ಹುದ್ದೆಗಳ ಮಂಜೂರಾತಿ, ಖಾಲಿ ಇರುವ ಹುದ್ದೆಗಳನ್ನು ತುಂಬುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ಸಂಸ್ಥೆಗಳ ಅಧಿಕಾರ ನಿರ್ಬಂಧಗಳು.
- ಸ್ವಾಯತ್ತ ಸಂಸ್ಥೆಗಳ ಅದರಲ್ಲೂ ಪ್ರಮುಖವಾಗಿ ಸರ್ಕಾರಿ ಸ್ವಾಯತ್ತ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ

Digitised by Bharatavani, CIIL

ವರ್ಗಾವಣೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ನಿಯಮ ಮತ್ತು ಕಾರ್ಯವಿಧಾನಗಳು ಸ್ವಾಯತ್ತತೆಗೆ ನಿಜವಾಗಿಯೂ ಅಪಾಯಕಾರಿ ಎಂಬುದು ಸಾಬೀತಾಗಿದೆ. ಮತ್ತು

- ಸ್ವಾಯತ್ತ ಸಂಸ್ಥೆಯಲ್ಲಿನ ವಿವಿಧ ಕಾನೂನು-ನಿಯಮ ರೂಪಿಸುವ ಸಮಿತಿಗಳಿಗೆ ಸೂಕ್ತ ಸದಸ್ಯರ ಆಯ್ಕೆ ಮತ್ತು ಅವುಗಳ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ, ಜಾರಿಗೊಳಿಸುವಲ್ಲಿ ಸಹಾಯ ಮಾಡುವ ಪ್ರಶಾಸನ ಮತ್ತು ನಿಯಂತ್ರಣ ಸಂಸ್ಥೆಗಳ ಬೆಂಬಲಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರ್ಧರಿಸುವುದು.

**ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದ ವಿವಾದಾಂಶಗಳು:**

- ವಿಶ್ವವಿದ್ಯಾನಿಲಯ ಕಾಯ್ದೆಗಳಲ್ಲಿ ಮತ್ತು ವಿಧಿಗಳಲ್ಲಿ ಸ್ವಾಯತ್ತತೆಯನ್ನು ನೀಡಲು ಇರುವ ಅವಕಾಶದ ಅಭಾವ.
- ಸ್ವಾಯತ್ತತೆ ನೀಡಿದಲ್ಲಿ ಕಾಲೇಜುಗಳು ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮನ್ನು ಮೀರಿಸಿಬಿಡಬಹುದೆಂಬ ವಿಶ್ವವಿದ್ಯಾನಿಲಯದ ಕೆಲವು ಇಲಾಖೆಗಳಿಗೆ ಇರುವ ಭಯ.
- ಸಾಯತ್ತತೆ ನೀಡಿದಲ್ಲಿ ಕಾಲೇಜುಗಳು ಯುಜಿಸಿ ಅನುದಾನ ಪಡೆದು ವಿಶ್ವವಿದ್ಯಾನಿಲಯದ ನಿಯಮದಲ್ಲಿ ಜಾರಿಯಲ್ಲಿಲ್ಲದ ಹೊಸ ವಿಷಯಗಳನ್ನು/ವೃತ್ತಿಪರ ಕೋರ್ಸ್‌ಗಳನ್ನು ಪ್ರಾರಂಭಿಸಬಹುದೆಂದು ಶೈಕ್ಷಣಿಕ ಪರಿಷತ್ತು ಮತ್ತು ಅಧ್ಯಯನ ಮಂಡಳಿಗಳಿಗಿರುವ ಭಯ.
- ಸಮಾನತೆ, ಚಲನೆ (ಸಮತಲೀಯ ಮತ್ತು ಲಂಬೀಯವಾಗಿ) ಗುಣಮಟ್ಟ ಮತ್ತು ಜವಾಬ್ದಾರಿಗಳಿಗೆ (ಸಮತಲವಾಗಿ ಮತ್ತು ಲಂಬವಾಗಿ) ಸಂಬಂಧಿಸಿದ ವಿವಾದಾಂಶಗಳು.

**ಶೈಕ್ಷಣಿಕ ವಿವಾದಾಂಶಗಳು**

**(1) ಶಿಕ್ಷಕರಿಗೆ ಸಂಬಂಧಿಸಿದ ವಿವಾದಗಳು:**

- ಸರ್ಕಾರಿ ಕಾಲೇಜುಗಳಲ್ಲಿ ಶಿಕ್ಷಕರ ವರ್ಗಾವಣೆಯ ನಿಯಮಗಳು ಹೊಸ ಕೋರ್ಸ್‌ಗಳನ್ನು ಜಾರಿಗೆ ತರುವಲ್ಲಿ ಅಡಚಣೆ ಉಂಟುಮಾಡುತ್ತವೆ;
- ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು (ಇದೇನೂ ಕಷ್ಟವಲ್ಲ) ಸರ್ಕಾರದಿಂದ ಬೇಕಾದ ರಹದಾರಿ. ಪುನರ್ ರೂಪಿಸಿದ ಕೋರ್ಸ್‌ಗಳಿಗೆ ಶಿಕ್ಷಕರನ್ನು ನೇಮಕ ಮಾಡಲು ಕಾಲೇಜುಗಳಿಗೆ ಅಧಿಕಾರವಿಲ್ಲ. (ಕನಿಷ್ಠ ಒಬ್ಬರಾದರೂ ಖಾಯಂ ಶಿಕ್ಷಕರಿಲ್ಲದಿದ್ದಲ್ಲಿ), ಹಾಲಿ ಇರುವ ಶಿಕ್ಷಕರಿಗೆ ಹೊಸ ವಿಷಯಗಳನ್ನು ಬೋಧಿಸಲು ಕಷ್ಟವಾಗುತ್ತದೆ.
- ಸಂಸ್ಥೆಗಳು ಸ್ವಾಯತ್ತತೆಯ ಸ್ಥಾನ ಪಡೆಯುವುದರಿಂದ ಉಂಟಾಗುವ ಇನ್ನಷ್ಟು ಆಡಳಿತಾತ್ಮಕ ಜವಾಬ್ದಾರಿಗಳನ್ನು ಹೊರಲು (ಪರೀಕ್ಷೆ ನಡೆಸಲು, ಪ್ರವೇಶ ಕಲ್ಪಿಸಲು, ಹೊಸ ಕೋರ್ಸ್ ಆರಂಭಿಸಲು ಇತ್ಯಾದಿ) ಶಿಕ್ಷಕರು ಅನುಮಾನ ವ್ಯಕ್ತಪಡಿಸುವುದರ ಜೊತೆಗೆ ಒಲವು ತೋರದೆ ವಿಮುಖರಾಗುವುದು.
- ಕೆಲವು ಸ್ಥಳಗಳಲ್ಲಿ ಸ್ವಾಯತ್ತತೆಯನ್ನು ಸಂಸ್ಥೆಯ ಕೆಲವು ಭಾಗಗಳಿಗೆ ಮಾತ್ರ ಕೊಡಲಾಗಿದೆ. ಉದಾ: ವಿಶ್ವವಿದ್ಯಾನಿಲಯದ ಕೆಲವು ಕಾಲೇಜುಗಳಿಗೆ; ಕಾಲೇಜಿನ ಪದವಿ ಪೂರ್ವ ವಿಭಾಗಗಳಿಗೆ ಮಾತ್ರ; ಕೇವಲ ಬೆಳಗಿನ ವೇಳೆ ಮತ್ತು ರಾತ್ರಿ ವೇಳೆ ನಡೆಸುವ ಕಾಲೇಜುಗಳಿಗೆ ಇತ್ಯಾದಿ.

**ಚಟುವಟಿಕೆಗಳಿಗೆ ಸಂಬಂಧಿಸಿದ ವಿವಾದಾಂಶಗಳು:**

ಸ್ವಾಯತ್ತ ಕಾಲೇಜುಗಳು ಯಾವ ಉದ್ದೇಶಗಳಿಗಾಗಿ ಸ್ಥಾಪನೆಗೊಂಡಿವೆಯೋ ಅವಕ್ಕನುಗುಣವಾಗಿ ನವೀನ ಆಚರಣೆ ರೂಪಿಸುವುದನ್ನು ಅನುಸರಿಸುವುದನ್ನು ಹೊಂದಣಿಕೆ ಮಾಡಿಕೊಳ್ಳುವ ಮತ್ತು ಸಂಸ್ಥೆಯ ಚಟುವಟಿಕೆಗಳಲ್ಲಿ ಬದಲಾಣೆ ತರುವುದನ್ನು ಈ ಕಾಲೇಜುಗಳಿಂದ ನಿರೀಕ್ಷಿಸಲಾಗುತ್ತದೆ. ನಾಯಕತ್ವದ ಗುಣಮಟ್ಟ, ಬೋಧಕ-ಬೋಧಕೇತರ ಸಿಬ್ಬಂದಿಗಳ ಗುಣಮಟ್ಟ ಹಾಗೂ ಸಾಮರ್ಥ್ಯಕ್ಕನುಸಾರವಾಗಿ ಕಾರ್ಯಸೂಚಿಗೆ ಅನುಗುಣವಾಗಿ ಕಾರ್ಯಕ್ರಮ ಜಾರಿಗೊಳಿಸಲು ಅಲ್ಲಿ ಸಮಯಕ್ಕನುಸಾರವಾಗಿ ಎಲ್ಲರೂ ಒಗ್ಗಟ್ಟಾಗಿ ಸೇರಿ ಸಿಬ್ಬಂದಿ ಮತ್ತು ನಾಯಕತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವರು.

ಸಂಸ್ಥೆಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿಶ್ವಾಸಾರ್ಹತೆ, ಗುಣಮಟ್ಟ, ಸಮಂಜಸತೆ, ಉಳಿಸಿಕೊಳ್ಳುವಿಕೆ ಮತ್ತು ಅನ್ವಯಿಕತೆ ಸಂಪನ್ಮೂಲಗಳ ಕೊರತೆಯೇ ಪ್ರಮುಖ ಅಡಚಣೆ: ಪ್ರಸ್ತುತದಲ್ಲಿರುವ ಸಂಪನ್ಮೂಲಗಳ ಗರಿಷ್ಠ ಮತ್ತು ಸಮಂಜಸ ಬಳಕೆ ಜೊತೆಗೆ ಇನ್ನೂ ಹೆಚ್ಚಿನ ಸಂಪನ್ಮೂಲಗಳ ಕ್ರೋಢೀಕರಣವು ಸ್ವಾಯತ್ತ ಸಂಸ್ಥೆಗಳ ಉಳಿಯುವಿಕೆಗೆ ಅವಶ್ಯಕವಾದ ನಿಬಂಧನೆಯಾಗಿದೆ.

**ಸಂಸ್ಥೆಗೆ ಸಂಬಂಧಿಸಿದ ವಿವಾದಾಂಶಗಳು:**

- ಸಂಸ್ಥೆಗಳು ಸ್ಥಾಪನೆಗೊಂಡ ಪ್ರಾರಂಭದಲ್ಲಿ ಅನಿವಾರ್ಯವಾಗಿ ಸಕ್ರಿಯತೆಯಿಂದ ಕೂಡಿರುತ್ತವೆ. ಮತ್ತು ನಿಧಾನವಾಗಿ ಉಪಕ್ರಮಿಸುವಿಕೆಯನ್ನು ಮತ್ತು ಹುಮ್ಮಸ್ಸನ್ನು ಕಳೆದುಕೊಳ್ಳುತ್ತವೆ. ಆದರೆ, ಸ್ವಾಯತ್ತ ಸಂಸ್ಥೆಗಳಲ್ಲಿ ಹಾಗೆ ಮಾಡಲಾಗುವುದಿಲ್ಲ.
- ಹಲವು ಬಾರಿ, ಸಂಸ್ಥೆಗಳು ಪ್ರಾರಂಭದಲ್ಲಿ ವೈವಿಧ್ಯಮಯವಾದ ಮತ್ತು ಅನೇಕರೀತಿಯ ಕಡಿಮೆ ಅವಧಿ ಮತ್ತು ದೀರ್ಘಾವಧಿ ಚಟುವಟಿಕೆಗಳನ್ನು ಕೈಗೊಳ್ಳುತ್ತವೆ. ಈ ಪ್ರಕ್ರಿಯೆಯಲ್ಲಿ ಸಂಸ್ಥೆಗಳು ಇತರೆ ಕ್ಷೇತ್ರಗಳಿಗೆ ಕಾಲಿಡುವ ಮೂಲಕ ಸಂಸ್ಥೆಯ ಕಾರ್ಯಸೂಚಿಗಳನ್ನು ಜಾರಿಗೊಳಿಸುತ್ತವೆ.
- ಬೋಧನಾ-ಕಲಿಕಾ ಸಂಸ್ಥೆಗಳು ಕೆಲವು ವೇಳೆ ವಿದ್ಯಾರ್ಥಿಗಳ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಸಮತಲವಾಗಿ ಮತ್ತು ಲಂಬವಾಗಿ ವಿಶೇಷ ಕೋರ್ಸ್‌ಗಳನ್ನು ಪರಿಚಯಿಸುತ್ತವೆ.
- ಕೆಲವೊಮ್ಮೆ ಸ್ವಾಯತ್ತ ಸಂಸ್ಥೆಗಳು ತಾವು ಸ್ವಾಯತ್ತತೆ ಹೊಂದಿರುವುದರಿಂದ ಯಾರನ್ನೂ ಸಂಪರ್ಕಿಸಬೇಕಾದ ಅಗತ್ಯವಿಲ್ಲ ಎಂಬ ನಂಬಿಕೆಯಿಂದ ಅಥವಾ ತಮಗಿರುವ ಸಂತೋಷ, ಸಮಾಧಾನದಿಂದಾಗಿ ಇತರ ಸಂಸ್ಥೆಗಳಿಂದ

Digitised by Bharatavani, CIIL

ಬೇರೆಯಾಗಿ ಒಂಟಿಯಾಗಿ ನಿಂತು ಬಿಡುತ್ತವೆ.

- ಬೋಧಕ-ಬೋಧಕೇತರ ಸಿಬ್ಬಂದಿಯನ್ನು ಉನ್ನತೀಕರಣಗೊಳಿಸುವುದು ಸ್ವಾಯತ್ತ ವ್ಯವಸ್ಥೆಗೆ ಕಷ್ಟಸಾಧ್ಯವಾಗಿದೆ. ಆರ್ಥಿಕ ಮಿತವ್ಯಯತೆಯ ಹೆಸರಿನಲ್ಲಿ ಸ್ವಾಯತ್ತ ಸಂಸ್ಥೆಗಳ ನಾಯಕತ್ವ ಅಗತ್ಯವಿರುವಷ್ಟು ಆದ್ಯತೆ ನೀಡಲಾಗುತ್ತಿಲ್ಲ ಎಂಬ ಆತಂಕವಿದೆ.
- ಹೊಸ ಚಟುವಟಿಕೆಯನ್ನು ಆರಂಭಿಸುವ ಮತ್ತು ಅಸ್ತಿತ್ವದಲ್ಲಿರುವ ಚಟುವಟಿಕೆಗಳನ್ನು ಪುನರ್ ರಚಿಸಲು ಹೆಚ್ಚಿನ ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳು ಬೇಕು. ಈ ಕಾರಣದಿಂದ ಸಂಸ್ಥೆಗಳಿಗೆ ಸಾಮಾಜಿಕ ಅವಶ್ಯಕತೆಗಳಿಗೆ ಪೂರಕವಾಗಿ ಬೆಳೆಯಲು ಕಷ್ಟವಾಗುತ್ತದೆ.

**ಮೌಲ್ಯಮಾಪನಕ್ಕೆ ಸಂಬಂಧಿಸಿದ ವಿವಾದಾಂಶಗಳು:**

- ಸ್ವಾಯತ್ತ ಶೈಕ್ಷಣಿಕ ಸಂಸ್ಥೆಗಳು ಜಾರಿಗೊಳಿಸುವ ಆಂತರಿಕ ಮೌಲ್ಯಮಾಪನ ಮತ್ತು ಸೆಮಿಸ್ಟರ್ ವ್ಯವಸ್ಥೆಯ ಗುಣಮಟ್ಟ ಹಾಗೂ ಸಮಂಜಸತೆ ಬಗೆಗೆ ವಿಶ್ವಾಸಾರ್ಹತೆ ಮತ್ತು ನಂಬಿಕೆಗಳು ಅವಶ್ಯಕ.
- ಈ ಸಂಸ್ಥೆಗಳು ಮೌಲ್ಯಮಾಪನ ವ್ಯವಸ್ಥೆಯ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಗಳಿಗಾಗಿ ಅನುಸರಿಸುವ ಕ್ರಮ ಮತ್ತು ವಿಧಾನಗಳು ಸ್ವಾಯತ್ತ ಸಂಸ್ಥೆಗಳಲ್ಲಿನ ದುಸ್ತರ ಅಂಶವಾಗಿದೆ.

**ಆಡಳಿತಾತ್ಮಕ ವಿವಾದಾಂಶಗಳು:**

- ಸ್ವಾಯತ್ತ ಸಂಸ್ಥೆಗಳ ಮತ್ತು ನಿಯಂತ್ರಣಾ ಸಂಸ್ಥೆಗಳ ನಡುವೆ ನಿಯಮ, ನಿಬಂಧನೆ ಮತ್ತು ಗುಣಮಟ್ಟಗಳ ನಡುವಿನ ಹೊಂದಾಣಿಕೆ ತರುವುದು.
- ಸ್ವಾಯತ್ತ ಸಂಸ್ಥೆಗಳಿಗೆ ಅನುದಾನ ಮತ್ತಿತರ ಅಂಶಗಳಿಗೆ ಸಂಬಂಧಿಸಿದಂತೆ ಒಪ್ಪಿಗೆ ನೀಡುವಲ್ಲಿ ಅಧಿಕಾರಶಾಹಿಗಳ ಹಾಗೂ ರಾಜಕೀಯದ ಮಧ್ಯಸ್ಥಿಕೆ.
- ಇರುವ ಹೆಚ್ಚುವರಿ ಕಾರ್ಯಭಾರದಿಂದಾಗಿ ತನ್ನ ಸಿಬ್ಬಂದಿಗಳಿಗೆ ಅಗತ್ಯವಿರುವ ಜ್ಞಾನಾಭಿವೃದ್ಧಿಗಾಗಿ ಅವಕಾಶ ಕಲ್ಪಿಸಲು ಸ್ವಾಯತ್ತ ಸಂಸ್ಥೆಗಳಿಗಿರುವ ಸಮಯದ ಅಭಾವ.

ಕೊನೆಯದಾಗಿ, ಶಿಕ್ಷಕರು, ವಿದ್ಯಾರ್ಥಿಗಳು, ಯೋಜನೆ ರೂಪಿಸುವವರು, ಆಡಳಿತಾಧಿಕಾರಿಗಳು ಮತ್ತು ಸ್ವಾಯತ್ತತೆಯನ್ನು ನೀಡುವವರು ಈ ಸಂಸ್ಥೆಗಳನ್ನು ಕೇವಲ ಶಿಕ್ಷಣದ ಉದ್ದೇಶಕ್ಕಾಗಿಯೇ ಮೀಸಲಿಟ್ಟಾಗ ಮಾತ್ರ ಸ್ವಾಯತ್ತತೆ ಜಾರಿಗೆ ತರಲು ಸಾಧ್ಯವಾಗುತ್ತದೆ ಎಂದು ಹೇಳುವುದು ತಪ್ಪಾಗಲಾರದು.

**ಮೂಲ: ಕೆ. ಸುಧಾ ರಾವ್**

**ಅನು: ಡಾ. ಶಂಕರೇಗೌಡ ಎಸ್. ಬಿ.**

# ಹ

## ಹಿಂದಿ ಬೋಧನಾ ವಿಧಾನ

ಭಾರತ ಬಹು ಭಾಷಾ ದೇಶವಾಗಿದ್ದು ಇಲ್ಲಿನ ವಿದ್ಯಾರ್ಥಿಗಳಿಗೆ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯಬೇಕಾಗಿದೆ. ಕೊಠಾರಿ ಆಯೋಗ (1964-66)ದ ಶಿಫಾರಸ್ಸಿನಂತೆ ತ್ರಿಭಾಷಾ ಸೂತ್ರದನ್ವಯ ಶಾಲಾ ಶಿಕ್ಷಣದ ಹಂತದಲ್ಲಿ ಮೂರು ಭಾಷೆಗಳ ಅಧ್ಯಯನ ಅಗತ್ಯವಾಗಿದ್ದು ಈ ಮೂರು ಭಾಷೆಗಳಲ್ಲಿ ಹಿಂದಿ ಒಂದು ಭಾಷೆಯಾಗಿದೆ. ಕರ್ನಾಟಕದಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಣದ ಹಂತದಿಂದ ಹಿಂದಿ ಭಾಷೆಯ ಬೋಧನೆ-ಕಲಿಕೆ ಜಾರಿಯಲ್ಲಿದೆ. ಭಾರತದ ಶಾಲಾ, ಕಾಲೇಜು ಶಿಕ್ಷಣದಲ್ಲಿ ಹಿಂದಿ ಭಾಷೆಯು ಪ್ರಥಮ/ದ್ವಿತೀಯ/ತೃತೀಯ ಭಾಷೆಯಾಗಿ ಸ್ಥಾನ ಪಡೆದುಕೊಂಡಿದೆ.

**ಸ್ವರೂಪ:** ಭಾರತೀಯ ಭಾಷೆಗಳಲ್ಲಿ ಹಿಂದಿ ಒಂದಾಗಿದೆ. ಸಂಸ್ಕೃತದಿಂದ ಇದರ ಜನನವಾಗಿದೆ. ಹಿಂದಿ ಹಾಗೂ ಇತರೆ ಭಾರತೀಯ ಭಾಷೆಗಳಲ್ಲಿ ಸಾಮ್ಯವಿದೆ. ಹಿಂದಿ ಧ್ವನಿ ವ್ಯವಸ್ಥೆಯ ಹೆಚ್ಚು ಧ್ವನಿಗಳು ಭಾರತೀಯ ಭಾಷೆಗಳಲ್ಲಿವೆ. ಅರ್ಥ ಹಾಗೂ ವಾಕ್ಯ ರಚನೆಯಲ್ಲಿಯೂ ಸಾಮ್ಯತೆ ಕಾಣಬಹುದಾಗಿದೆ. ಹಿಂದಿಯ ವರ್ಣಮಾಲೆಯು ಸಂಸ್ಕೃತ ಭಾಷೆಯ ವರ್ಣಮಾಲೆಯನ್ನು ಆಧರಿಸಿದೆ ಹಾಗೂ ಅದರಂತೆ ವರ್ಗೀಕರಣಗೊಂಡಿದೆ. ಸ್ವರೂಪದಲ್ಲಿ ಹಿಂದಿ ಭಾಷೆ ಧ್ವನ್ಯಾತ್ಮಕ ಭಾಷೆಯಾಗಿದ್ದು ಉಚ್ಚರಿಸಿದ/ಮಾತನಾಡಿದ ಹಾಗೆ ಬರೆಯಬಹುದಾಗಿದೆ. ಲಿಪಿಯಲ್ಲಿ ದೇವನಾಗರಿ ಲಿಪಿಯನ್ನು ಹೊಂದಿದೆ. ಈ ಭಾಷೆಯ ಉಚ್ಚಾರಣೆಯು ಪ್ರಾದೇಶಿಕ ಭಾಷೆಯ ಪ್ರಭಾವವನ್ನು ಹೊಂದಿರುತ್ತದೆ. ಹಿಂದಿಯ ಶಬ್ದ ಭಂಡಾರದಲ್ಲಿ ಸಂಸ್ಕೃತ, ಇಂಗ್ಲೀಷ್, ಅರಬಿ, ಫಾರಸ್ಸಿ, ಇತರೆ ಭಾಷೆಗಳ ಶಬ್ದಗಳಿವೆ. ಉದಾ: 'ಕಾಲೇಜ್', 'ಆಫೀಸ್' ('ಆ' ಮತ್ತು 'ಒ' ಧಾತುವಿನ ಧ್ವನಿ ಹೊಂದಿವೆ) – ಇವು ನೇರವಾಗಿ ಇಂಗ್ಲೀಷ್ ಭಾಷೆಯಿಂದ ಬಂದಂತಹುಗಳಾಗಿವೆ. ಹಿಂದಿ ಭಾಷೆಯ ಶಬ್ದಗಳು ಸ್ಪಷ್ಟತೆ, ಅನುಕೂಲಕ್ಕೆ ತಕ್ಕಂತೆ ಬದಲಾಗುವಿಕೆಯ ಗುಣ ಹೊಂದಿದೆ.

**ಮಹತ್ವ:** ಭಾರತದ ಸಂವಿಧಾನದ ಅಧಿ ನಿಯಮ 345, 346, 349, 359 ರಲ್ಲಿ ಹಿಂದಿಯನ್ನು ರಾಷ್ಟ್ರ ಭಾಷೆ, ಆಡಳಿತ, ನ್ಯಾಯಾಲಯ ಭಾಷೆಯೆಂದು ಘೋಷಿಸಲಾಗಿದೆ. 1965ರಲ್ಲಿ ಭಾಷಾ ಕಾಯಿದೆ 1963 ರ ಪ್ರಕಾರ ಹಿಂದಿಯನ್ನು ಭಾರತದ ಸಂಪರ್ಕ ಭಾಷೆಯೆಂದು ನಿರ್ಣಯಿಸಲಾಗಿದೆ.

ಹಿಂದಿ ಭಾಷೆಯು ಸಾಂಸ್ಕೃತಿಕ ಏಕತೆಯ ಪ್ರತೀಕ, ರಾಜ ನೈತಿಕ ಜಾಗರಣೆಯ ಆಧಾರವಾಗಿದೆ. ಇದು ವಿಚಾರ ವಿನಿಮಯದ ಸಾಧನವಾಗಿದ್ದು, ಜ್ಞಾನದ ಅಭಿವೃದ್ಧಿ ಹಾಗೂ ಸಂರಕ್ಷಣೆ ಮಾಡುತ್ತದೆ. ಹಿಂದಿ ಭಾಷೆಯು ವ್ಯಕ್ತಿಯ ರಾಷ್ಟ್ರೀಯಪ್ರಜ್ಞೆ, ಮಾನಸಿಕ, ಬೌದ್ಧಿಕ ಮನೋಭಾವಗಳ ಅಭಿವ್ಯಕ್ತಿ, ಚಾರಿತ್ರಿಕ ಜ್ಞಾನ, ಸಾಮಾಜಿಕ ವ್ಯವಹಾರದ ವಿಕಾಸದಲ್ಲಿ ಸಹಾಯಕವಾಗಿದೆ. ರಾಷ್ಟ್ರಕವಿ 'ದಿನಕರ' ಹೇಳಿದಂತೆ ಹಿಂದಿ ಹೃದಯ ಹೃದಯಗಳನ್ನು ಒಂದು ಮಾಡುವ

Digitised by Bharatavani, CIIL

ಭಾಷೆಯಾಗಿದೆ. ಪ್ರಪಂಚದ ಅನೇಕ ಭಾಷೆಗಳಲ್ಲಿ ಹಿಂದಿ ತನ್ನದೇ ಸ್ಥಾನ ಹೊಂದಿದ್ದು ಇಂದು ಅಭಿವೃದ್ಧಿ ಹೊಂದಿದ ದೇಶಗಳಾದ ಅಮೇರಿಕಾ, ಜರ್ಮನಿ, ಫ್ರಾನ್ಸ್, ಇಂಗ್ಲೇಂಡ್, ರಷ್ಯಾ ಮುಂತಾದ ದೇಶಗಳ ಪ್ರಸಿದ್ಧ ವಿಶ್ವವಿದ್ಯಾನಿಲಯಗಳಲ್ಲಿ ಮಹತ್ವ ಪೂರ್ಣವಾದ ವಿದೇಶಿ ಭಾಷೆಯ ರೂಪದಲ್ಲಿ ಅಧ್ಯಯನ ಮಾಡಲಾಗುತ್ತಿದೆ.

**ಹಿಂದಿ ಭಾಷಾ ಬೋಧನಾ ಉದ್ದೇಶಗಳು:**

- ವಿದ್ಯಾರ್ಥಿಗಳಲ್ಲಿ ಹಿಂದಿ ಭಾಷೆ ಬಗ್ಗೆ ಆಸಕ್ತಿಯನ್ನುಂಟುಮಾಡುವುದು.
- ಸಾಮಾನ್ಯ ವೇಗದಲ್ಲಿ ಮಾತನಾಡಿದ ಹಿಂದಿ ಭಾಷೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಂತೆ ಮಾಡುವುದು.
- ಶಬ್ದ ಭಂಡಾರ ಹಾಗೂ ಹಿಂದಿ ಭಾಷಾ ಸಂರಚನೆಯನ್ನು ಅರ್ಥ ಮಾಡಿಸುವುದು.
- ತರಗತಿಯನುಸಾರ ಒಗಟು – ಗಾದೆಗಳ ಮೂಲಕ ಭಾಷೆಯನ್ನು ಪ್ರಭಾವಶಾಲಿಯನ್ನಾಗಿ ಮಾಡುವ ಜ್ಞಾನವನ್ನು ವಿಕಾಸಗೊಳಿಸುವುದು.
- ಚಿಂತನ ಪ್ರವೃತ್ತಿಯನ್ನು ವಿಕಾಸಗೊಳಿಸುವುದು.
- ಉದ್ಯೋಗ, ವ್ಯಾವಹಾರಿಕ ಕ್ಷೇತ್ರದಲ್ಲಿ ಹಿಂದಿಯನ್ನು ಕುಶಲತೆಯಿಂದ ಉಪಯೋಗಿಸುವಂತೆ ಮಾಡುವುದು.
- ಅಡೆತಡೆ ರಹಿತ ಭಾವಗ್ರಹಣ ಮತ್ತು ಭಾವ ಪ್ರಕಾಶ ಮಾಡುವಂತೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು.
- ಮಾತೃ ಭಾಷೆ ಹಾಗೂ ಹಿಂದಿ ಭಾಷೆಯ ತೌಲನಿಕ ಜ್ಞಾನ ನೀಡುವುದು.
- ಹಿಂದಿ ಭಾಷೆಯ ಧ್ವನಿ, ಉಚ್ಚಾರಣೆ, ಶಬ್ದ–ವಾಕ್ಯ ರಚನೆ, ಕಾಗುಣಿತ, ಗಾದೆಗಳ ಜ್ಞಾನ ನೀಡುವುದು.
- ವಿದ್ಯಾರ್ಥಿಗಳಲ್ಲಿ ಹಿಂದಿ ಭಾಷೆಯ ಸಂಭಾಷಣೆ, ಓದುಗಾರಿಕೆ, ಬರವಣಿಗೆ, ಅರ್ಥ ಗ್ರಹಿಕೆ ಕೌಶಲಗಳನ್ನು ಬೆಳೆಸುವುದು.
- ಕಲಿಕಾರ್ಥಿಗಳಲ್ಲಿ ಹಿಂದಿ ಸಾಹಿತ್ಯ, ಕಾವ್ಯದಲ್ಲಿನ ಸೌಂದರ್ಯ ಅನುಭೂತಿ ಗುರುತಿಸಿ ಅದರ ರಸಸ್ವಾದನೆ ಮಾಡುವಂತೆ ಮಾಡುವುದು.
- ಭಾರತೀಯ ಸಂಸ್ಕೃತಿ, ಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳು ಸಕ್ರಿಯ ಕೊಡುಗೆ ನೀಡುವಂತೆ ಮಾಡುವುದು.

**ಬೋಧನಾ ಪದ್ಧತಿಗಳು:**

ಭಾಷಾ ವಿಷಯದ ಬೋಧನೆಗೆ ವಿಧಾನಗಳ ಅಗತ್ಯವಿದೆ. ಆಧುನಿಕ ಶಿಕ್ಷಣ ವಿಧಾನದ ಮುಖ್ಯ ತತ್ವ – ಪಠ್ಯ ಸಾಮಗ್ರಿಗಳ ಆಯ್ಕೆ, ಅವುಗಳನ್ನು ಕ್ರಮವಾಗಿಡುವುದು ಹಾಗೂ ವಿದ್ಯಾರ್ಥಿಗಳು ಅರಿಯುವ ರೀತಿಯಲ್ಲಿ ಉಪಯೋಗಿಸುವುದಾಗಿದೆ.

**1. ಪ್ರತ್ಯಕ್ಷ ವಿಧಾನ:**

ಇದು ಭಾಷಾ ವಿಜ್ಞಾನದ ಸಿದ್ಧಾಂತವನ್ನಾಧರಿಸಿದೆ. ಮಾತೃ ಭಾಷೆಯನ್ನು ಸಹಜ ವಾತಾವರಣದಲ್ಲಿ ಕಲಿಯುವಂತೆ ಹಿಂದಿ ಭಾಷೆಯನ್ನು ಆ ಭಾಷೆಯ ಸಹಜ ವಾತಾವರಣದಲ್ಲಿ ಕಲಿಯಬಹುದು.

**2. ವ್ಯಾಕರಣ ಅನುವಾದ ವಿಧಾನ:**

ಮಾತೃ ಭಾಷೆ, ವ್ಯಾಕರಣ ಹಾಗೂ ಅನುವಾದದ ಮೂಲಕ ಹಿಂದಿ ಭಾಷೆ ಕಲಿಸುವುದಾಗಿದೆ.

**3. ಶ್ರವಣ – ಭಾಷಣ ಪದ್ಧತಿ:**

ಇದನ್ನು ಸಂರಚನಾ ವಿಧಾನ (Structural Method) ಎಂದೂ, ಮೂಲ ವಾಕ್ಯವನ್ನಾಧಾರಿಸಿ ಬೇರೆ ಬೇರೆ ವಾಕ್ಯಗಳನ್ನು ಕಲಿಸುವುದಾಗಿದೆ. ಕೇಳುವ, ಮಾತನಾಡುವ ಕೌಶಲ್ಯಕ್ಕೆ ಒತ್ತು ನೀಡಿದೆ.

**4. ಶಬ್ದ ಪರಿವರ್ತನಾ ಪದ್ಧತಿ:**

ಒಂದು ಆದರ್ಶ ವಾಕ್ಯದಲ್ಲಿನ ಒಂದು ಪದ ಮುಖ್ಯವಾಗಿದ್ದುಕೊಂಡು ವಾಕ್ಯದಲ್ಲಿನ ಉಳಿದ ಪದಗಳನ್ನು ಬದಲಾಯಿಸಿ ಹಲವು ವಾಕ್ಯ ರಚನೆ ಮಾಡಿಸುವುದು. ಮಾತನಾಡುವಿಕೆ, ಸಂಭಾಷಿಸುವಿಕೆ ಹಾಗೂ ವ್ಯಾಕರಣ ಶುದ್ಧ ಭಾಷೆ ಕಡೆ ಗಮನ ನೀಡುವುದು.

**5. ಡಾ. ವೆಸ್ಟ್ ಪದ್ಧತಿ:**

ಓದಿನಿಂದ ಭಾಷೆ ಕಲಿಸುವುದು ಬರವಣಿಗೆ ಹಾಗೂ ಸಂಭಾಷಣೆಯನ್ನು ಪ್ರತ್ಯೇಕ ಕಲಿಸಿ ನಂತರ ಒಟ್ಟಾಗಿಸುವ ಅಂಶ ಇದರಲ್ಲಿದೆ.

**6. ದ್ವಿ–ಭಾಷಿಕ ಪದ್ಧತಿ:**

ಹೊಸ ಭಾಷೆ ಕಲಿಯುವಾಗ ಎರಡು ಭಾಷೆಗಳಲ್ಲಿ ಪ್ರಯೋಗ ಮಾಡುವುದು (ಕಲಿತಿರುವ ಭಾಷೆ – ಮಾತೃ ಭಾಷೆ, ಕಲಿಯಬೇಕಾದ ಭಾಷೆ – ಹಿಂದಿ) ಈ ಎರಡೂ ಭಾಷೆಗಳಲ್ಲಿನ ಪ್ರಸಂಗ, ಉಚ್ಚಾರಣೆ, ಶಬ್ದ ಸಂಗ್ರಹ, ಸಂರಚನೆಯಲ್ಲಿನ ಸಮಾನತೆ. ವಿವಿಧತೆ ಬಗ್ಗೆ ಗಮನಹರಿಸಿ ಭಾಷೆ ಕಲಿಸಲಾಗುವುದು.

**7. ಪರಿವೀಕ್ಷಿತ ಅಧ್ಯಯನ ವಿಧಾನ:**

ಇದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ರೀತಿಯಾಗಿದೆ. ಶಿಕ್ಷಕನ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಯು ಸ್ವ–ಅಧ್ಯಯನವನ್ನು ಮಾಡುವನು.

**8. ಆಟದ ವಿಧಾನ:**

ವಿವಿಧ ಭಾಷಾ ಆಟಗಳಾದ – ಕಾಗುಣಿತ ಸ್ಪರ್ಧೆ, ಶಬ್ದಗಳ ಅಂತ್ಯಾಕ್ಷರಿ, ಶಬ್ಧ ನಿರ್ಮಾಣ ಸ್ಪರ್ಧೆ ಮೂಲಕ ಭಾಷೆಯನ್ನು ಕಲಿಸುವುದಾಗಿದೆ.

Digitised by Bharatavani, CIIL

**9. ಯೋಜಿತ ಬೋಧನಾ ವಿಧಾನ:**

ಈ ವಿಧಾನದಲ್ಲಿ ಕಂಪ್ಯೂಟರ್ ಉಪಯೋಗ ಮಾಡಲಾಗುವುದು, ಅಧ್ಯಯನ ಕ್ರಮವನ್ನು ಪೂರ್ವಭಾವಿಯಾಗಿ ಚಿಕ್ಕ ಚಿಕ್ಕ ಚೌಕಟ್ಟುಗಳಲ್ಲಿ ವಿದ್ಯಾರ್ಥಿಗಳ ಮುಂದಿಡಲಾಗುವುದು, ವಿದ್ಯಾರ್ಥಿ ಕಲಿತಿರುವ ಸರಿ/ತಪ್ಪಿನ ಅರಿವು ತತ್‌ಕ್ಷಣದಲ್ಲಿ ನೀಡುವುದಾಗಿದೆ. ಈ ವಿಧಾನವು ಕಲಿಕಾರ್ಥಿ ಸ್ವವೇಗದಲ್ಲಿ ಕಲಿಯಲು ಸಹಕಾರಿಯಾಗಿದೆ.

**ಸಾಧನಗಳು:**

ಆಧುನಿಕ ಶಿಕ್ಷಣದಲ್ಲಿ ದೃಶ್ಯ ಶ್ರವ್ಯ ಸಾಧನಗಳ ಪಾತ್ರ ಮಹತ್ವಪೂರ್ಣವಾದುದಾಗಿದೆ. ಹಿಂದಿ ಭಾಷಾ ಬೋಧನೆ ಹಾಗೂ ಕಲಿಕೆಯನ್ನು ಅರ್ಥಪೂರ್ಣ, ಪ್ರಭಾವಾತ್ಮಕ, ಕಡಿಮೆ ಸಮಯದಲ್ಲಿ ಹೆಚ್ಚು ಕಲಿಯಲು ಶೈಕ್ಷಣಿಕ ಸಾಧನಗಳ ಪಾತ್ರ ವಿಶಿಷ್ಟವಾದುದು.

**a. ದೃಶ್ಯ ಸಾಧನಗಳು:**

ಶೈಕ್ಷಣಿಕ ಪ್ರವಾಸ, ಸೂಚನಾ ಫಲಕ, ಕರಿ ಹಲಗೆ, ಭೂಪಟ, ಚಿತ್ರಗಳು, ಮಾದರಿಗಳು, ಪ್ರೊಜೆಕ್ಟರ್, ಚಿತ್ರ ವಿಸ್ತಾರಕ, ಚಾರ್ಟ್‌ಗಳು, ವಾಸ್ತವಿಕ ವಸ್ತುಗಳು, ರೇಖಾಚಿತ್ರ ಫ್ಲಾನೆಲ್ ಬೋರ್ಡ್ ಮುಂತಾದವು.

**b. ಶ್ರವ್ಯ ಸಾಧನಗಳು:**

ರೇಡಿಯೋ, ಗ್ರಾಮೋಫೋನ್, ಟೇಪ್‌ರೆಕಾರ್ಡ್

**c. ದೃಶ್ಯ – ಶ್ರವ್ಯ ಸಾಧನಗಳು:**

ನಾಟಕ, ಚಲನ ಚಿತ್ರ, ದೂರದರ್ಶನ, ಭಾಷಾ ಪ್ರಯೋಗ ಶಾಲೆ ಈ ಮೇಲಿನ ಸಾಧನಗಳೊದಿಗೆ ಅಭಿನಯ, ಗ್ರಂಥಾಲಯ ಹಾಗೂ ಗಣಕ ಯಂತ್ರದ ಸಹಾಯವನ್ನು ಪಡೆದುಕೊಂಡು ಭಾಷಾ ಬೋಧನೆ – ಕಲಿಕೆಯನ್ನು ಅರ್ಥಪೂರ್ಣವಾಗಿಸಬಹುದಾಗಿದೆ.

**ಹಿಂದಿ ಭಾಷಾ ಬೋಧನೆಯಲ್ಲಿ ಮೌಲ್ಯಮಾಪನದ ಕ್ರಮ:**

1. ಪರೀಕ್ಷೆ:

a. ಬರವಣಿಗೆಯ ಕ್ರಮದಲ್ಲಿ ಪ್ರಬಂಧಾತ್ಮಕ, ಲಘು ಉತ್ತರ, ವಸ್ತುನಿಷ್ಠ ಪರೀಕ್ಷಾಂಶಗಳಿರುತ್ತವೆ.

b. ಮೌಖಿಕ

c. ಪ್ರಾಯೋಗಿಕ

ಇವುಗಳ ಮೂಲಕ ಮೌಲ್ಯಮಾಪನ ಮಾಡಬಹುದಾಗಿದೆ. ನೀಲಿ ನಕ್ಷೆ ಹಾಗೂ ಪ್ರಶ್ನೆ ಪತ್ರಿಕೆ ರಚನೆ ಮೌಲ್ಯಮಾಪನಕ್ಕೆ ಸಹಾಯಕವಾಗಿದೆ.

ಹಿಂದಿ ಸಾಹಿತ್ಯದ ವಿಭಿನ್ನ ಪ್ರಕಾರಗಳಾದ ಗದ್ಯ, ಪದ್ಯ, ಪ್ರಬಂಧ, ಕಥೆ, ನಾಟಕ, ಆತ್ಮಕಥೆ, ಪತ್ರ ಮುಂತಾದವುಗಳ ಬೋಧನೆಯಲ್ಲಿ ಬೇರೆ ಬೇರೆ ಉದ್ದೇಶಗಳಿರುತ್ತವೆ. ವಿದ್ಯಾರ್ಥಿಯು ಬೇರೊಬ್ಬರ ವಿಚಾರ ಮೌಖಿಕ/ಲಿಖಿತವಾಗಿ ವ್ಯಕ್ತವಾದುದನ್ನು ಸರಿಯಾಗಿ ಅರ್ಥಮಾಡಿಕೊಂಡು ತನ್ನ ವಿಚಾರ, ಭಾವ, ಅನುಭವಗಳನ್ನು ಮೌಖಿಕ/ಲಿಖಿತ ರೂಪದಲ್ಲಿ ಪ್ರಭಾವ ಶಾಲಿಯಾಗಿ ವ್ಯಕ್ತಗೊಳಿಸುವುದು ಮುಖ್ಯ ಉದ್ದೇಶ. ಈ ಉದ್ದೇಶದಲ್ಲಿ – ಶ್ರವಣ, ಉಚ್ಚಾರಣೆ, ಅಭಿವ್ಯಕ್ತಿ, ಓದುಗಾರಿಕೆ, ವ್ಯಾಕರಣ, ಸೃಜನಾತ್ಮಕತೆ ಎಂಬ ಮೌಲ್ಯಮಾಪನದ ಅಂಶಗಳಿವೆ. ಒಟ್ಟಾರೆ ಹಿಂದಿ ಭಾಷಾ ಸಾಹಿತ್ಯದಲ್ಲಿನ ಆಸಕ್ತಿ, ವಿಷಯ ವಸ್ತುವಿನ ಜ್ಞಾನ ಹಾಗೂ ಭಾಷಾ ಕೌಶಲ್ಯಗಳ ಮೌಲ್ಯಮಾಪನ ಮಹತ್ವ ಪೂರ್ಣವಾಗಿದೆ.

– ಪ್ರೊ. ಇಂದ್ರಾಣಿ ಬಿ.

## ಹಿರೇಮಣಿ ಪದ್ಧತಿ

ಅಧ್ಯಾಪಕರಿಗೆ ಸಹಾಯಕರಂತೆ ಅಥವಾ “ಮೇಲ್ವಿಚಾರಕ”ರಂತೆ ಕಾರ್ಯವಹಿಸಲು ಶಾಲೆಯನ್ನು ಬಿಡುವ ಪ್ರೌಢ ಮಕ್ಕಳಿಗೆ ತರಬೇತಿ ಕೊಡಲು ಆಂಡ್ರ್ಯೂ ಬೆಲ್ (1753–1832) ಮತ್ತು ಜೋಸೆಫ್ ಲ್ಯಾಂಕಸ್ಟರ್ (1778–1832) ಎಂಬ ಇಬ್ಬರು ಆಂಗ್ಲ ಶಿಕ್ಷಣ ತಜ್ಞರು ಹಿರೇಮಣಿ ಪದ್ಧತಿಯನ್ನು ವಿಕಸನಗೊಳಿಸಿದರು. ಮದ್ರಾಸಿನಲ್ಲಿ ಸೇನೆಯ ಕಪ್ತಾನನಾಗಿದ್ದ ಆಂಡ್ರ್ಯೂ ಬೆಲ್ ಎಂಬಾತ 1791ರಲ್ಲಿ ಮರಳಿನ ಮೇಲೆ ಬರೆದು ಅಕ್ಷರಗಳನ್ನು ಕಲಿಸುವ ದೇಶೀಯ ಪದ್ಧತಿಯನ್ನು ಪರಿಚಯಿಸಲು ‘ಮೇಲ್ವಿಚಾರಕ’ (Monitor)ರನ್ನು ನೇಮಿಸಿಕೊಂಡ. 1797ರಲ್ಲಿ ಆತ ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಸೆಂಟ್ ಬೊಟೊಲ್ ಅಲ್ಡ್‌ಗೇಟ್ ಮತ್ತು ಸ್ವಾನೇಜ್ ಪ್ರಾಂತ್ಯದಲ್ಲಿದ್ದ ಪಾದ್ರಿ ಹೋಬಳಿ(ಪ್ಯಾರಿಶ್)ಯಲ್ಲಿ ಈ ಪದ್ಧತಿಯನ್ನು 1798ರಲ್ಲಿ ಪ್ರಯೋಗಿಸಲಾಯಿತು. ಬೆಲ್ ತನ್ನ ‘ಎಕ್ಸ್‌ಪೆರಿಮೆಂಟ್ ಇನ್ ಎಜುಕೇಷನ್’ (ಶಿಕ್ಷಣದಲ್ಲಿ ಪ್ರಯೋಗಗಳು) ಎಂಬ ಪುಸ್ತಕದಲ್ಲಿ 1797ರಲ್ಲಿ ಈ ಪದ್ಧತಿಯ ವಿವರವನ್ನು ಪ್ರಕಟಗೊಳಿಸಿದ. ಆದಾಗ್ಯೂ, ಈ ಪ್ರಕಟಣೆಯು ಗಮನವನ್ನು ಸೆಳೆಯಲಿಲ್ಲ. ಒಂದು ಶಾಲೆಗೆ ಸೇರಿದ ಸಣ್ಣ ಮನೆಯೊಂದರಲ್ಲಿ ನೆಲೆಸಿದ ಬೆಲ್ ಸಹ ಅದರಲ್ಲಿ ಪುನಃ ಆಸಕ್ತಿ ವಹಿಸಲಿಲ್ಲ. ಆದರೆ 1801ರಲ್ಲಿ ಲ್ಯಾಂಕ್‌ಸ್ಟರ್ ದೊಡ್ಡದಾಗಿ ಬೆಳೆದಿದ್ದ ತನ್ನ ಶಾಲೆಯಲ್ಲಿ ಒಬ್ಬನೇ ಬೋಧಿಸಲು ಸಾಧ್ಯವಾಗದೆ ಅಥವಾ ಹಣವನ್ನು ನೀಡಿ ಸಹಾಯಕರನ್ನು ಇಟ್ಟುಕೊಳ್ಳಲಾಗದೆ ‘ಮೇಲ್ವಿಚಾರಕ’ (ಮಾನೀಟರ್)ರನ್ನು ಶಾಲೆಯಲ್ಲಿ ಇರಿಸಿಕೊಂಡಾಗ ಈ ಪದ್ಧತಿ ಎಲ್ಲರ ಗಮನ ಸೆಳೆಯಿತು (ಮನ್ರೊ 1990, ಪು.296). ಈ ಪದ್ಧತಿಯನ್ನು ಲಾಂಕಸ್ಟರ್‌ನ ಪದ್ಧತಿಯೆಂದೂ ಕರೆಯುವರು. ಏಕೆಂದರೆ, ಈ ಪದ್ಧತಿಯ ವಿಚಾರ ಆತನಿಗೆ ಸ್ವತಂತ್ರವಾಗಿಯೇ ಹೊಳೆದಿದ್ದು ಅವನು ಅದರ ವಿವರವನ್ನು ಅಣಿಗೊಳಿಸುವುದಕ್ಕೆ ಮುಂಚೆ ಬೆಲ್ ಪ್ರಕಟಿಸಿದ್ದ ‘ಎಕ್ಸ್‌ಪೆರಿಮೆಂಟ್ ಇನ್ ಎಜುಕೇಷನ್’ ಪುಸ್ತಕದ ಪ್ರತಿಯನ್ನು ನೋಡಿದ್ದ ಲಾಂಕಸ್ಟರ್ ತಾನು ಬೆಲ್‌ನ ಗ್ರಂಥದಿಂದ ಹಲವು ಉಪಯುಕ್ತ ಸೂಕ್ತ ಸೂಚನೆಗಳನ್ನು ಅಳವಡಿಸಿಕೊಂಡಿರುವೆ ಎಂದು 1803ರ ‘ಇಂಪ್ರೂವ್‌ಮೆಂಟ್ಸ್ ಇನ್ ಎಜುಕೇಷನ್’ (ಶಿಕ್ಷಣದಲ್ಲಿ ಸುಧಾರಣೆಗಳು) ಎಂಬ ತನ್ನ ಪ್ರಕಟಣೆಯೊಂದರಲ್ಲಿ ಸ್ವತಃ ಸ್ಮರಿಸಿಕೊಂಡಿದ್ದಾನೆ.

ಬೆಲ್‌ನ ವಿಧಾನ ಮತ್ತು ಲಾಂಕಸ್ಟರ್‌ನ ವಿಧಾನಗಳ ನಡುವೆ

Digitised by Bharatavani, CIIL

ಗಮನಾರ್ಹ ಹೋಲಿಕೆಗಳು ಇರುವಂತೆ ಕಾಣುವುದು. ಆದರೆ ಲಾಂಕಸ್ಟರ್ ತನ್ನ ವಿಧಾನದಲ್ಲಿ ಬೆಲ್‌ಗಿಂತ ಹೆಚ್ಚು ವಿಸ್ತಾರವಾಗಿ ಚರ್ಚಿಸಿದ್ದಾನೆಂದು ಸಾಮಾನ್ಯವಾಗಿ ಹೇಳಬಹುದು. 'ಬೆಲ್' ಒಂದು ತರಗತಿಗೆ ಇಪ್ಪತ್ನಾಲ್ಕರಿಂದ ಮೂವತ್ತರವರೆಗೆ ಅಥವಾ ದೊಡ್ಡ ಶಾಲೆಯಾದ ಪಕ್ಷದಲ್ಲಿ ನಲ್ವತ್ತರವರೆಗಿನ ವಿದ್ಯಾರ್ಥಿಗಳ ಸಂಖ್ಯೆ ಸೂಕ್ತವಾದುದು ಎಂದು ಅಭಿಪ್ರಾಯಪಟ್ಟರೆ ಲಾಂಕಸ್ಟರ್ 'ಹತ್ತು' ವಿದ್ಯಾರ್ಥಿಗಳು ಸೂಕ್ತವೆಂದು ಹೇಳುವನು. ಆದ್ದರಿಂದ ಬೋಧನೆಗಾಗಿಯೇ ಇತರ ಅನೇಕ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗುತ್ತಿದ್ದ 'ಮಾನೀಟರ್'ಗಳು ಆತನಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿದ್ದರು. ಉದಾಹರಣೆಗೆ, ಮಗುವನ್ನು ಶಾಲೆಗೆ ಸೇರಿಸಿಕೊಂಡಾಗ ಮಾನೀಟರ್ ಒಬ್ಬನು ಈ ಮಗುವಿಗಾಗಿ ತರಗತಿಯನ್ನು ನಿರ್ದೇಶಿಸುವನು. ಆ ಮಗುವು ಹಾಜರಾಗದಿದ್ದಲ್ಲಿ ಅದರ ಅನುಪಸ್ಥಿತಿ ವಾಸ್ತವವೇ ಎಂದು ಒಬ್ಬ ಮೇಲ್ವಿಚಾರಕನು ನೋಡುವವನು, ಮತ್ತೊಬ್ಬನು ಇದಕ್ಕೆ ಕಾರಣವೇನೆಂದು ನಿಶ್ಚಯಿಸುವನು. ಮೇಲ್ವಿಚಾರಕನು ನಿಯಮಿತವಾಗಿ ಆ ಮಗುವಿನ ಮೌಲ್ಯಮಾಪನ ಕೈಗೊಂಡು ಅದು ಪ್ರಗತಿಯನ್ನು ಹೊಂದಿದ್ದಲ್ಲಿ ಮುಂದಿನ ತರಗತಿಗೆ ತೇರ್ಗಡೆ ಮಾಡುವನು. ಒಬ್ಬ ಮೇಲ್ವಿಚಾರಕನು ಲೇಖನಿಯನ್ನು ಸಿದ್ಧಪಡಿಸಿದರೆ ಮತ್ತೊಬ್ಬನು ಬರೆಯುವ ಹಾಳೆಗೆ ಗೆರೆಯನ್ನು ಎಳೆದುಕೊಡುವನು. ಮೇಲ್ವಿಚಾರಕನು ಸ್ಲೇಟ್ ಮತ್ತು ಪುಸ್ತಕಗಳನ್ನು ತನ್ನ ವಶದಲ್ಲಿ ಇರಿಸಿಕೊಳ್ಳಬೇಕಾಗುತ್ತಿತ್ತು ಹಾಗೂ ಮುಖ್ಯ ಮೇಲ್ವಿಚಾರಕ ಇತರ ಎಲ್ಲಾ ಮೇಲ್ವಿಚಾರಕರ ಮೇಲೆ ನಿಗಾ ವಹಿಸಬೇಕಾಗುತ್ತಿತ್ತು. ಬೆಲ್‌ನ ಪದ್ಧತಿಯಲ್ಲಿ ಮಾನೀಟರ್‌ಗಳು ಪ್ರಾರಂಭಿಕ ಪ್ರಯತ್ನಗಳನ್ನು ಮತ್ತು ನ್ಯಾಯ ತೀರ್ಮಾನಗಳನ್ನು ಕೈಗೊಳ್ಳಬೇಕಾಗಿತ್ತು. ಲಾಂಕಸ್ಟರ್ ಇವರಿಂದ ಕೇವಲ ವ್ಯವಸ್ಥೆಯ ಮೇಲ್ವಿಚಾರಣೆ ಮತ್ತು ಪ್ರಶಂಸೆಗಳಿಗಿಂತ ಹೆಚ್ಚಿನದನ್ನು ಮಾಡಬೇಕೆಂದು ಅಪೇಕ್ಷಿಸುತ್ತಿದ್ದನು. ಲಾಂಕಸ್ಟರ್ ಬೆಲ್‌ನ ಮರಳಿನ ಮೇಲೆ ಬರೆಯುವ ಪದ್ಧತಿಯನ್ನು ಬಳಸಿದನಾದರೂ ಅದರ ಜೊತೆಗೆ ಓದಲು ಪುಸ್ತಕಗಳ ಬದಲು ಭಿತ್ತಿಪತ್ರಗಳನ್ನು ಹಾಗೂ ಬರೆಯಲು ಕಾಗದದ ಬದಲು ಸ್ಲೇಟುಗಳನ್ನು ಬಳಸಿದನು ಹಾಗೂ ಉಕ್ತಲೇಖನ ಮತ್ತು ಅಂಕಗಣಿತವನ್ನು ಬೋಧಿಸುವ ವಿಧಾನಗಳನ್ನು ಆವಿಷ್ಕರಿಸಿದನು. ಬೆಲ್‌ನ ಪುರಸ್ಕಾರ ಮತ್ತು ದಂಡ ಅಲ್ಪ ಹಾಗೂ ಸರಳವಾಗಿದ್ದರೆ ಲಾಂಕಸ್ಟರ್‌ನ ಪುರಸ್ಕಾರ ವಾಸ್ತವವಾಗಿದ್ದು ದಂಡ ಕಾಗದದ ಮೇಲೆ ಬರೆಯುವುದಾಗಿತ್ತು ಹಾಗೂ ಇವು ವಿಭಿನ್ನವೂ, ಕುತೂಹಲಜನಕವೂ ಆಗಿದ್ದವು. (ಮನ್ರೊ, 1990, ಪು.297)

ಹಿರೇಮಣಿ ವ್ಯವಸ್ಥೆಯು ಬ್ರಿಟೀಷ್ ದ್ವೀಪಗಳಲ್ಲಿ ಸುಮಾರು ನಲ್ವತ್ತು ವರ್ಷಗಳ ಕಾಲ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಕಾರಣ ಇದು ಅಗ್ಗವೂ ಬೆಲೆ-ಪರಿಣಾಮಕಾರಿಯೂ ಆಗಿದ್ದಿತು. ಈ ಪದ್ಧತಿಗೆ ಸಂಬಂಧಿಸಿದ ಪ್ರಾರಂಭಿಕ ಬೆಲೆ ಅಲ್ಪವಾಗಿತ್ತು. ಬೆಲ್ ಅಥವಾ ಲಾಂಕಸ್ಟರ್‌ರಿಗೆ ಸಾಮಾನ್ಯವಾಗಿ ಲಭ್ಯವಿರುವ ಕೇವಲ ಒಂದು ಕೊಠಡಿಗಿಂತ ಹೆಚ್ಚಿನ ಅವಶ್ಯಕತೆಯಿರಲಿಲ್ಲ. ಇವರಿಬ್ಬರ ಪದ್ಧತಿಗಳಿಗೂ ಹೆಚ್ಚಿನ ಪೀಠೋಪಕರಣಗಳು ಹಾಗೂ ಮೂಲಭೂತ ಸೌಕರ್ಯಗಳ ಅವಶ್ಯವಿರಲಿಲ್ಲ. ಏಕೆಂದರೆ, ವಿದ್ಯಾರ್ಥಿಗಳಿಗೆ ಬಹುಪಾಲು ಅವರು ನಿಂತುಕೊಂಡಿರುವಾಗಲೇ ಬೋಧಿಸಲಾಗುತ್ತಿತ್ತು. ಸಹಾಯಕರ ಸೇವೆ ಅನವಶ್ಯಕವಾಗಿದ್ದರಿಂದ ಸಂರಕ್ಷಣೆಯ ಖರ್ಚು ಅತ್ಯಲ್ಪವಾಗಿತ್ತು. ಲಾಂಕಸ್ಟರ್ ತನ್ನ ಶಾಲೆಯಲ್ಲಿ ಹನ್ನೆರಡು ತಿಂಗಳಿಗೆ ಮಗುವೊಂದಕ್ಕೆ ವೆಚ್ಚ ಹನ್ನೆರಡು ಫಿಲ್ಲಿಂಗ್‌ಗಿಂತ ಅಧಿಕವಾಗಿರಲಿಲ್ಲವೆಂದು ಹೇಳುತ್ತಿದ್ದನು. ಶಾಲೆಗಳಿಗೆ ತಗಲುತ್ತಿದ್ದ ಖರ್ಚೆಲ್ಲವೂ ಸಂಪೂರ್ಣವಾಗಿ ತಿಳಿದವರ ಧರ್ಮಬುದ್ಧಿ/ಉಪಕಾರ ಬುದ್ಧಿಯನ್ನು ಅವಲಂಬಿಸಿದ್ದ ದಿನಗಳಲ್ಲಿ ಶಾಲೆಗಳಲ್ಲಿ ಹಿರೇಮಣಿ ಪದ್ಧತಿಯನ್ನು ತಂದು ನಡೆಸಿಕೊಂಡು ಹೋಗಲು ಸಾಧ್ಯವಾಯಿತು.

ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ಬ್ರಿಟೀಷ್ ದ್ವೀಪಗಳಾದ್ಯಂತ ಶಾಲೆಗಳಲ್ಲಿನ ಬೋಧನ ವಿಧಾನ ಬಹುತೇಕ ವೈಯಕ್ತಿಕವಾಗಿತ್ತು. ಆದ್ದರಿಂದ ಮಕ್ಕಳು ತಮ್ಮ ಅಧ್ಯಾಪಕ ಅಥವಾ ಅಧ್ಯಾಪಕಿಯರ ಮುಂದೆ ಪಾಠವನ್ನು ಒಪ್ಪಿಸುವ ಕೆಲವು ನಿಮಿಷಗಳನ್ನು ಬಿಟ್ಟರೆ ಉಳಿದ ಸಮಯವನ್ನು ಸಾಮಾನ್ಯವಾಗಿ ವ್ಯರ್ಥವಾಗಿ ಕಳೆಯುತ್ತಿದ್ದರು. ತದ್ವಿರುದ್ಧವಾಗಿ, ಹಿರೇಮಣಿ ಪದ್ಧತಿಯಲ್ಲಿ ಶಾಲೆಯನ್ನು ಹೆಚ್ಚು ಸಂಖ್ಯೆಯ ಮೇಲ್ವಿಚಾರಕರನ್ನು (ಶಿಕ್ಷಕರ ರೂಪದಲ್ಲಿ) ಹೊಂದಿರುವ ತರಗತಿಗಳಾಗಿ ವಿಭಾಗಿಸಿರುವುದರಿಂದ ವಿದ್ಯಾರ್ಥಿಗಳ ವ್ಯರ್ಥ ಕಾಲಹರಣವಿರಲಿಲ್ಲ. "ಪ್ರತಿಯೊಂದು ಮಗುವಿಗೂ ಪ್ರತಿಕ್ಷಣವೂ ಏನಾದರೂ ಕಾರ್ಯವಿರಬೇಕು, ಅವನ್ನು ಕೈಗೊಳ್ಳುವ ಪ್ರೇರಣೆಯೂ ಇರಬೇಕು" ಎಂಬುದು ಲಾಂಕಸ್ಟರ್ ತನ್ನ ಹಿರೇಮಣಿ ಪದ್ಧತಿಯಲ್ಲಿ ಹೇಳಿರುವ ಹಲವು ಸೂತ್ರಗಳಲ್ಲಿ ಒಂದಾಗಿತ್ತು.

ಲಾಂಕಸ್ಟರ್ 1805ರಲ್ಲಿ ಹಿರೇಮಣಿ ಪದ್ಧತಿಯ ಶಾಲೆಗಳಿಗೆ ಅಭ್ಯಾಸಿಗರನ್ನು ತರಬೇತಿಗೊಳಿಸಲು ಆರಂಭಿಸಿದನು. ಬಾಲ್ಡ್‌ವಿನ್ ಗಾರ್ಡನ್‌ನಲ್ಲಿ ನ್ಯಾಷನಲ್ ಸೊಸೈಟಿಯ ಸೆಂಟ್ರಲ್ ಸ್ಕೂಲ್‌ನಲ್ಲಿ 1809ರಿಂದ ಯುವಕರಿಗೆ ಈ ಪದ್ಧತಿಯ ಬಗ್ಗೆ ಕಲಿಯಲು ಪ್ರವೇಶ ನೀಡಲಾಯಿತು.

ಮೇಲ್ವಿಚಾರಕರು ಅವಶ್ಯಕವಾಗಿ ಅತ್ಯಂತ ಪ್ರತಿಭಾವಂತರು, ಮುಂದುವರೆದ ಕುಟುಂಬಗಳಿಗೆ ಸೇರಿದವರಾಗಿದ್ದರು. ಹೀಗಾಗಿ ಕಲಿಯಲೆಂದು ಶಾಲೆಗೆ ಮಕ್ಕಳನ್ನು ಕಳುಹಿಸುತ್ತಿದ್ದ ತಂದೆತಾಯಿಯರು ಅವರು ಬೋಧನೆಯಲ್ಲಿ ತೊಡಗಬೇಕೆಂಬುದನ್ನು ಇಷ್ಟಪಡುತ್ತಿರಲಿಲ್ಲ. ಹಿರೇಮಣಿ ಪದ್ಧತಿಯ ಶಾಲೆಗಳನ್ನು ನಿರ್ವಹಿಸುತ್ತಿದ್ದ ವ್ಯವಸ್ಥಾಪಕರು ಪೋಷಕರ ಈ ಅನಪೇಕ್ಷೆಯನ್ನು ನಿವಾರಿಸಲು ಮೇಲ್ವಿಚಾರಕರಿಗೆ ವಾರಕ್ಕೆ ಕೆಲವು ಪೆನ್ಸ್‌ಗಳನ್ನು (ಹಣದ ಒಂದು ಮಾನ) ನೀಡುತ್ತಿದ್ದರಾದರೂ, ಈ ಕೆಲವು ಪೆನ್ಸ್‌ಗಳ ಬದಲು ಷಿಲ್ಲಿಂಗ್‌ಗಳನ್ನು ಬೇರೆಡೆಯಿಂದ ವಾರಕ್ಕೊಮ್ಮೆ ಸಂಪಾದಿಸಲು ಸಾಧ್ಯವಿದ್ದುದರಿಂದ ಈ ಪ್ರೋತ್ಸಾಹನ ಸಾಕಾಗಲಿಲ್ಲ. ಈ ಕಾರಣದಿಂದ ಮೇಲ್ವಿಚಾರಕರ ನೇಮಕಾತಿಯ ಸಂಖ್ಯೆ ಇಳಿಮುಖವಾಯಿತಲ್ಲದೆ ಪದ್ಧತಿಯಲ್ಲಿ ಕೆಲವು ಮಾರ್ಪಾಡುಗಳು ಕಂಡುಬಂದವು. 1846ರ ಪ್ರಸಿದ್ಧ 'ಮಿನಟ್ಸ್' (Minutes)ನ ನಂತರ ವ್ಯವಸ್ಥಾಪಕರಿಂದ ವಾರಕ್ಕೊಮ್ಮೆ ಕೆಲವು ಪೆನ್ಸ್‌ಗಳನ್ನು ಪಡೆಯುತ್ತಿದ್ದ ಮೇಲ್ವಿಚಾರಕ ಐದು ವರ್ಷಗಳ ಅವಧಿಗೆ ವಿದ್ಯಾರ್ಥಿ ಶಿಕ್ಷಕ ಅಭ್ಯಾಸಿಗನಾದನಲ್ಲದೆ ತರಬೇತಿ ಕಾಲೇಜಿನಲ್ಲಿ ಎರಡು ಅಥವಾ ಮೂರು ವರ್ಷಗಳು ಮಾತ್ರ ಲಭ್ಯವಾಗುವ

Digitised by Bharatavani, CIIL

ರಾಣಿಯ ವಿದ್ಯಾರ್ಥಿವೇತನದ ಭರವಸೆಯೊಂದಿಗೆ ಸರ್ಕಾರದಿಂದ ಒಳ್ಳೆಯ ವೇತನವನ್ನೂ ಸ್ವೀಕರಿಸುತ್ತಿದ್ದ. ಹೀಗೆ ಹಿರೇಮಣಿ ಪದ್ಧತಿ ಇಂಗ್ಲೆಂಡಿನಲ್ಲಿ ಮುಂದೆ ಸಮರ್ಥ ಶಿಕ್ಷಕರನ್ನೊಡಗೂಡಿದ ಉತ್ತಮ ಶಾಲೆಗಳಾಗಿ ಮಾರ್ಪಾಡಾದ ಅಗ್ಗದ ಶಾಲೆಗಳನ್ನು ಒದಗಿಸುವುದಕ್ಕೆ ಸಹಾಯಕವಾಯಿತು.

**ಪದ್ಧತಿಯ ಸ್ವೀಕಾರಾರ್ಹತೆ:**

ಇಂಗ್ಲೆಂಡಿನಲ್ಲಿ ಲಾಂಕಸ್ಟರ್ ಹಿರೇಮಣಿ ಪದ್ಧತಿಯನ್ನು ಬಡವರ ಮಕ್ಕಳಿಗೆ ಬೈಬಲ್ ಓದುವುದನ್ನು ಕಲಿಸಲು ಬಳಸುತ್ತಿದ್ದನು. ಆದಾಗ್ಯೂ, ಈ ಪದ್ಧತಿಯ ಸಮರ್ಥರು ಇದನ್ನು ತಮ್ಮ ದೇಶಕ್ಕೆ ಮಾತ್ರ ಸೀಮಿತಗೊಳಿಸದೆ ಇತರ ದೇಶಗಳಿಗೂ ಇದರ ತತ್ವಗಳನ್ನು ಪ್ರಚುರಪಡಿಸಿದರು. ಪರದೇಶಗಳಲ್ಲಿ ವೇತನದ ಏಜೆಂಟುಗಳನ್ನು ಹೊಂದಿರದ 'ಬ್ರಿಟಿಷ್ ಮತ್ತು ವಿದೇಶಿ ಶಾಲಾ ಸಂಘ' (British and Foreign School Society)ದ ಅಧೀನದಲ್ಲಿ ಈ ಪದ್ಧತಿ ಕಾರ್ಯೋನ್ಮುಖವಾಗಿತ್ತು. ವಿಲಿಯಂ ಅಲೆನ್ ಮತ್ತು ಸಂಘದ ಇತರ ಸದಸ್ಯರು ತಮ್ಮ ದೇಶಾಟನೆಯ ಸಂದರ್ಭಗಳಲ್ಲಿ ಇದರ ಸ್ವಯಂ ನಿಯೋಗಿಗಳ ಪಾತ್ರ ವಹಿಸುತ್ತಿದ್ದರು. ಸಂಘವು ಇಂಗ್ಲೆಂಡಿನ ಹೊರಗೆ ನೇರವಾಗಿ ಯಾವ ಶಾಲೆಗಳನ್ನು ಸ್ಥಾಪಿಸದಿದ್ದರೂ ಇತರ ದೇಶಗಳಿಗೆ ಅವಶ್ಯಕ ಮಾಹಿತಿ ಹಾಗೂ ಶಿಕ್ಷಕರನ್ನು ಒದಗಿಸಿ ಗ್ರಂಥಗಳಿಗೆ ಹಾಗೂ ಇತರ ಸಾಮಗ್ರಿಗಳಿಗೆ ಧನಸಹಾಯವನ್ನು ಒದಗಿಸುತ್ತಿತ್ತು.

ಫ್ರಾನ್ಸ್‌ನಲ್ಲಿ 'ರಾಷ್ಟ್ರೀಯ ಕೈಗಾರಿಕೆಯ ಪ್ರೋತ್ಸಾಹನ ಸಂಘ' (Society for the encouragement of National Industry) ಹಿರೇಮಣಿ ಪದ್ಧತಿಯನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯನ್ನಿಟ್ಟಿತು. ನಂತರ, 1814ರಲ್ಲಿ ಫ್ರಾನ್ಸ್‌ನಿಂದ ಪ್ರತಿನಿಧಿ ಮಂಡಲಿಯೊಂದು ಪದ್ಧತಿಯ ಅಧ್ಯಯನವನ್ನು ಕೈಗೊಳ್ಳಲು ಇಂಗ್ಲೆಂಡಿಗೆ ತೆರಳಿತು. ಇದರ ಸದಸ್ಯರು ಬ್ರಿಟಿಷ್ ಮತ್ತು ವಿದೇಶ ಶಾಲಾ ಸಂಘದ ಅರ್ಧವಾರ್ಷಿಕ ಸಭೆಯಲ್ಲಿ ಹಾಜರಿದ್ದುದಲ್ಲದೆ ಬರ್‍ರೊ ರಸ್ತೆಯ ಸೆಂಟ್ರಲ್‌ಸ್ಕೂಲ್ ಮತ್ತು ಇಂಗ್ಲೆಂಡಿನ ವಿವಿಧ ಭಾಗಗಳಲ್ಲಿದ್ದ ಇತರ ಶಾಲೆಗಳಿಗೆ ಬೇಟಿಯಿತ್ತರು. ಪ್ಯಾರಿಸ್‌ಗೆ ಹಿಂದಿರುಗಿದ ನಂತರ ಸದಸ್ಯರು ಇಂಗ್ಲೆಂಡಿನ ಹಿರೇಮಣಿ ಪದ್ಧತಿಯನ್ನು ಕುರಿತು ವರದಿಗಳನ್ನು ಪುಸ್ತಕಗಳನ್ನು ಬರೆದರು ಮತ್ತು 1815ರಲ್ಲಿ 'ಪ್ರಾಥಮಿಕ ಶಿಕ್ಷಣ ಸಂಘ' (Society for Elementary education) ಎಂಬ ಸ್ವತಂತ್ರ ಸಂಘವೊಂದನ್ನು ರಚಿಸಲು ನಿಶ್ಚಯಿಸಲಾಯಿತು. 1820ರ ವೇಳೆಗೆ ಫ್ರಾನ್ಸಿನಲ್ಲಿ ಸಾವಿರದ ಐನೂರು ಹಿರೇಮಣಿ ಪದ್ಧತಿಯ ಶಾಲೆಗಳು ಪ್ರಾರಂಭಗೊಂಡು ಇವುಗಳಲ್ಲಿ ಕೇವಲ ಆರುನೂರು ಶಾಲೆಗಳು ಮಾತ್ರ 1828ರಲ್ಲಿ ಅಸ್ತಿತ್ವದಲ್ಲಿದ್ದವು. ಹಿರೇಮಣಿ ಪದ್ಧತಿಯಲ್ಲಿ ಅಂತರ್ಗತವಾಗಿದ್ದ ದೋಷಗಳು ವ್ಯಕ್ತವಾಗುವವರೆಗೆ ಈ ಶಾಲೆಗಳು ಮುಂದುವರೆದವು. 'ಪ್ರಾಥಮಿಕ ಬೋಧನಾ ಸಂಘ' (Society for Elementary Instruction) ಇಂದಿಗೂ ಅಸ್ತಿತ್ವದಲ್ಲಿದೆ.

ರಷ್ಯಾದ ಅಲೆಕ್ಸಾಂಡರ್–೫ ಸೆಂಟ್, ಪೀಟರ್ಸ್‌ಬರ್ಗ್‌ನಲ್ಲಿ ನೆಲೆಸಿದ್ದ ಕೆಲವು ಕ್ವಾಕರ್‌ಗಳಿಂದ (1648–50ರಲ್ಲಿ ಜಾರ್ಜ್‌ಫಾಕ್ಸ್ ಎಂಬಾತನಿಂದ ಸ್ಥಾಪಿತವಾದ ಒಂದು ಮಿತ್ರ ಮಂಡಲಿ (ಸೊಸೈಟಿ ಆಫ್ ಫ್ರೆಂಡ್ಸ್ ಸದಸ್ಯರು) ಸಾಕಷ್ಟು ಪ್ರಭಾವಿತನಾದ. ಬಹುಶಃ ಇವರಿಂದ ಈತ ಹಿರೇಮಣಿ ಪದ್ಧತಿಯ ಬಗ್ಗೆ ಕೇಳಿ 1813ರಲ್ಲಿ ಜೋಸೆಫ್ ಹ್ಯಾಮೆಲ್ ಎಂಬಾತನಿಗೆ ಇದರ ಬಗ್ಗೆ ವರದಿಯೊಪ್ಪಿಸಲು ಹೇಳಿದ. 1814 ತಾನೇ ಸ್ವತಃ ಇಂಗ್ಲೆಂಡಿಗೆ ಬೇಟಿಯಿತ್ತ ನಂತರ ಈ ಪದ್ಧತಿಯಲ್ಲಿ ಆಳವಾದ ಆಸಕ್ತಿ ವಹಿಸಿ ಬರ್‍ರೋ ರಸ್ತೆಯ ಶಾಲೆಗೆ ತಂಡವೊಂದನ್ನು ಕಳಿಸಿ ಅಂತಿಮವಾಗಿ ಮಿಲಿಟರಿ ಶಾಲೆಗಳಲ್ಲಿ ಈ ಪದ್ಧತಿಯನ್ನು ಪ್ರಾರಂಭಿಸುವಂತೆ ಆಜ್ಞಾಪಿಸಿದ.

ನಾರ್ವೆ ಮತ್ತು ಸ್ವೀಡನ್ ದೇಶಗಳಲ್ಲಿ ಕೌಂಟ್ ಜೇಕಬ್ ಡಿ ಲಗಾರ್ಡಿ, ಸೆವೆನ್ಸ್‌ಸನ್ ಮತ್ತು ಗೆರೆಲಿಯಸ್ 1822ರಲ್ಲಿ ಹಿರೇಮಣಿ ಪದ್ಧತಿಯ ಬಗ್ಗೆ ವರದಿಗಳನ್ನು ಪ್ರಕಟಿಸಿದರು. ಇವರುಗಳ ವರದಿಯ ಆಧಾರದ ಮೇಲೆ ಹಿರೇಮಣಿ ಪದ್ಧತಿಯ ಶಾಲೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು 1822ರಲ್ಲಿ ಸಂಘವನ್ನು ಸ್ಥಾಪಿಸಲಾಯಿತು. 1841ರಲ್ಲಿ ಸುಮಾರು ಐನೂರು ಇಂಥ ಶಾಲೆಗಳನ್ನು ತೆರೆಯುವ ಯೋಜನೆಯಿತ್ತು. ಆದಾಗ್ಯೂ, ಸಂಸತ್ತು 1842ರಲ್ಲಿ ಅಂಗೀಕರಿಸಿದ ಕಾನೂನು ಕ್ರಮಬದ್ಧ ಶಾಲೆಗಳ ಸ್ಥಾಪನೆಗೆ ಧನ ಸಹಾಯವನ್ನು ನೀಡಿತು. ಆದ್ದರಿಂದ ಅರ್ಥಪೂರ್ಣ ಶಿಕ್ಷಣವು ಪ್ರಮುಖ ಪರಿಗಣನೆಯಾಗಬೇಕು ಎಂಬ ರಾಷ್ಟ್ರದ ಕಾಳಜಿ ನಾರ್ವೆ ಮತ್ತು ಸ್ವೀಡನ್‌ಗಳಲ್ಲಿ ಹಿರೇಮಣಿ ಪದ್ಧತಿ ಶಾಲೆಗಳು ನಿಧಾನವಾಗಿ ಕಣ್ಮರೆಯಾಗಲು ಅನುವು ಮಾಡಿಕೊಟ್ಟಿತು.

ಡೆನ್ಮಾರ್ಕ್‌ನಲ್ಲಿ, ಚೆವಲಿಯರ್ ಡಿ ಅಬ್ರಹಾಂಸನ್ ಹಿರೇಮಣಿ ಪದ್ಧತಿಯ ಮೇಲೆ ಒಂದು ಪುಸ್ತಕವನ್ನು ಬರೆದನು ಮತ್ತು 1819ರಲ್ಲಿ ತನ್ನ ಸ್ವಂತ ಖರ್ಚಿನಲ್ಲಿ ಮೊದಲ ಮಾದರಿ ಶಾಲೆಯನ್ನು ತೆರೆದನು. ಈತ ಅಲ್ಲಿನ ರಾಜಕಾರಣಿಯರ ಅದ್ಭುತ ಪ್ರೋತ್ಸಾಹ ಪಡೆದದ್ದರಿಂದ ಹೊಸ ಯೋಜನೆ ವೇಗದ ಪ್ರಗತಿಯನ್ನು ಹೊಂದಿ 1831ರ ವೇಳೆಗೆ ಸುಮಾರು 3000 ಶಾಲೆಗಳಲ್ಲಿ ಈ ಪದ್ಧತಿ ಬಳಕೆಯಲ್ಲಿತ್ತು. ಈ ಪದ್ಧತಿಯನ್ನು ಕುರಿತ ಅರಿವು ಶಿಕ್ಷಕರ ಡಿಪ್ಲೋಮಾವಿಗಾಗಿ ಅವಶ್ಯಕವೆಂದು ಹೇಳಲಾಯಿತು. (ಮನ್ರೋ, 1990, ಪು.298)

ಜರ್ಮನಿ ಮತ್ತು ಹಾಲೆಂಡ್‌ನಂತಹ ಇತರ ಐರೋಪ್ಯ ದೇಶಗಳು ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ಹೊಂದಿದ್ದವು. ಆದ್ದರಿಂದ ಹಿರೇಮಣಿ ಪದ್ಧತಿ ಸ್ವೀಕಾರಾರ್ಹವಾಗಲಿಲ್ಲ. ಇಟಲಿ ಮತ್ತು ಸ್ಪೆಯಿನ್‌ನಂತಹ ಹಿಂದುಳಿದ ದೇಶಗಳಲ್ಲಿ ಪದ್ಧತಿಯ ಸ್ವೀಕಾರಾರ್ಹತೆ ಬಹಳ ಅಲ್ಪವಾಗಿದ್ದಿತು. ಪಶ್ಚಿಮ ಇಂಡಿಯದಲ್ಲಿ ಮಿಷನರಿಗಳು ಇದನ್ನು ಬಳಸಿದರು ಮತ್ತು ದಕ್ಷಿಣ ಅಮೇರಿಕಾದಲ್ಲಿ 'ಬ್ರಿಟಿಷ್ ಮತ್ತು ವಿದೇಶಿ ಬೈಬಲ್ ಸಂಘ'ದ ಅಡಿಯಲ್ಲಿ ಈ ಪದ್ಧತಿ ಗಮನಾರ್ಹ ಸಫಲತೆ ಸಾಧಿಸಿತು.

ಹಿರೇಮಣಿ ಪದ್ಧತಿ (ಲಾಂಕಸ್ಟರ್‌ನ ಪದ್ಧತಿ) ಸಂಯುಕ್ತ ಸಂಸ್ಥಾನದಲ್ಲಿ, ವಿಶೇಷತಃ ನಗರ ಸಮುದಾಯಗಳಲ್ಲಿ, 1809ರಲ್ಲಿ ಬಹಳ ಬೇಗ ಹರಡಿತು. ಇದು ಕೇವಲ ಪ್ರಾಥಮಿಕ ಶಾಲೆಗಳಿಗೆ ಸೀಮಿತವಾಗಿರದೆ ನ್ಯೂಯಾರ್ಕ್ ಮತ್ತು ಇಂಡಿಯಾನದಲ್ಲಿನ ಶಿಕ್ಷಣದಲ್ಲಿಯೂ ಬಳಕೆಗೆ ಬಂದಿತು. ಹಿರೇಮಣಿ ಪದ್ಧತಿ ಸಾಂಸ್ಥಿಕವಾಗಿ ಹಾಗೂ ಬೋಧನೆಯ ವಿಷಯದಲ್ಲಿ, ಜನಪ್ರಿಯವಾಗಿದ್ದಿತು ಮತ್ತು

Digitised by Bharatavani, CIIL

1840ರ ನಂತರವೂ ವಿಸ್ತೃತ ಬಳಕೆಯಲ್ಲಿತ್ತು. ಇತ್ತೀಚಿನ ಪೀಳಿಗೆಯ ಕಾಲದಲ್ಲಿಯೂ ತರಗತಿಯ ನಿರ್ವಹಣೆಯಲ್ಲಿ ಬಹಳ ಅಧೀನ ಪಾತ್ರವಹಿಸುತ್ತಾ ಜೀವಂತವಾಗಿ ಉಳಿದಿತ್ತು. ಸಂಯುಕ್ತ ಸಂಸ್ಥಾನದಲ್ಲಿ ಈ ಪದ್ಧತಿಯ ಜನಪ್ರಿಯತೆ ಮತ್ತು ಅಲ್ಪ ಖರ್ಚು ಜನಪ್ರಿಯ ಶಿಕ್ಷಣದಲ್ಲಿ ಆಸಕ್ತಿಯನ್ನು ವೃದ್ಧಿಸಲು ಕೊಡುಗೆ ನೀಡಿತು.

ಲಾಂಕಸ್ಟರ್‌ನ (ಹಿರೇಮಣಿ ಪದ್ಧತಿ) ಶಾಲೆಗಳನ್ನು ಆಧುನಿಕ ಬೋಧನ ತಂತ್ರಜ್ಞಾನದ ಮುನ್ಸೂಚಕವೆಂದು ಕರೆಯಬಹುದು. ಅಮೇರಿಕಾದ ಶಾಲೆಗಳಲ್ಲಿ ಈ ಪದ್ಧತಿ ಶಿಸ್ತು ಮತ್ತು ವ್ಯವಸ್ಥೆಯನ್ನು ಪರಿಚಯಿಸಿತು ಎಂದು ಹೇಳಲಾಗುತ್ತದೆ. ಆ ಕಾಲಘಟ್ಟದ ಅಧಿಕಾರಶಾಹಿಯ ಶಾಲಾ ಪರಿಸರವು ಈ ಪದ್ಧತಿಯನ್ನು ಸುಲಭವಾಗಿ ತನ್ನದಾಗಿಸಿಕೊಂಡಿತು. ಆದರೂ ಸಹ, ಈ ಪದ್ಧತಿಯು ಪೆಸ್ಟಲಾಜಿ ಫ್ರೋಬೆಲ್ ಮತ್ತು ಜಾನ್‌ಡ್ಯೂಯಿಯಂತಹ ಶೈಕ್ಷಣಿಕ ತತ್ವಜ್ಞರ ಬೋಧನಾ ತತ್ವಶಾಸ್ತ್ರಗಳಾದ ಪ್ರಜಾಸತ್ತಾತ್ಮಕ, ಶಿಶುಕೇಂದ್ರಿತ ತತ್ವಗಳತ್ತ ಶಾಲೆಗಳು ವಿಕಾಸ ಹೊಂದುತ್ತಿದ್ದಂತೆ ಕ್ರಮೇಣ ಕಣ್ಮರೆಯಾಯಿತು.

**ಭಾರತೀಯ ಹಿನ್ನೆಲೆಯಲ್ಲಿ ಹಿರೇಮಣಿ ಪದ್ಧತಿ:**

ಭಾರತೀಯ ಸನ್ನಿವೇಶದಲ್ಲಿ, ಪುರಾತನ ಕಾಲದ ಗುರುಕುಲಗಳಲ್ಲಿ ಹಿರೇಮಣಿ ಪದ್ಧತಿ ಬಳಕೆಯಲ್ಲಿತ್ತು. ವೈಯಕ್ತಿಕ ಮೇಲ್ವಿಚಾರಣೆಯನ್ನು ಪ್ರಭಾವಕಾರಿಯಾಗಿಸಲು, ಶಿಕ್ಷಣದಲ್ಲಿ ಮುಂದುವರೆದ ವಿದ್ಯಾರ್ಥಿಗಳ ಸಹಕಾರ ಮತ್ತು ಸಹಾಯಗಳನ್ನು ಕೋರಲಾಗುತ್ತಿತ್ತು. ಶಿಕ್ಷಕರ ಒಟ್ಟಾರೆ ಮೇಲ್ವಿಚಾರಣೆಯಲ್ಲಿ ಇವರು ಕಿರಿಯ ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮಾರ್ಗದರ್ಶನ ನೀಡುವುದು ವಾಡಿಕೆಯಾಗಿತ್ತು. ಇಂತಹ ಕಿರಿಯರನ್ನು ಶಿಕ್ಷಕರಂತೆಯೇ ಗೌರವಿಸಬೇಕೆಂದು ಆಪಸ್ತಂಭ ಸೂತ್ರ ನಿರ್ದೇಶಿಸುತ್ತದೆ. ವಲ್ಲಭಿ ವಿದ್ಯಾಲಯದ ವಿದ್ಯಾರ್ಥಿಗಳ ಬಗ್ಗೆ ಇತ್ಸಿಂಗ್ ಹೀಗೆ ಹೇಳುತ್ತಾನೆ 'ಅವರು (ಹಿರಿಯ ವಿದ್ಯಾರ್ಥಿಗಳು) ಎರಡು ಅಥವಾ ಮೂರು ವರ್ಷಗಳನ್ನು ಶಿಕ್ಷಕರಿಂದ ಬೋಧನೆ ಪಡೆಯುತ್ತ, ತಾವೂ ಬೋಧಿಸುತ್ತಾ ಕಳೆಯುತ್ತಾರೆ'. ಈ ಪದ್ಧತಿ ತಕ್ಷಶಿಲೆಯಲ್ಲಿಯೂ ಸಹ ಅಸ್ತಿತ್ವದಲ್ಲಿತ್ತು. ಉದಾಹರಣೆಗೆ ಈ ಮುಂದೆ ದಕ್ಷತೆಯನ್ನು ಪಡೆದಿದ್ದ ಕುರು ರಾಜಕುಮಾರ ಸುತಸೋಮನಿಗೆ ವಾರಣಾಸಿಯ ಭಾವೀ ರಾಜಕುಮಾರನಾದ ತನ್ನ ಸೋದರನಿಗೆ ಬೋಧಿಸುವ ಜವಾಬ್ದಾರಿ ವಹಿಸಲಾಗಿತ್ತು (ಅಲ್ಟೇಕರ್, 1951), ತಕ್ಷಶಿಲೆಯಲ್ಲಿ ಹಿರಿಯ ವಿದ್ಯಾರ್ಥಿಗಳಿಗೆ ಆಗಾಗ ಅವರ ಅಧ್ಯಾಪಕರ ತಾತ್ಕಾಲಿಕ ಅನುಪಸ್ಥಿತಿಯಲ್ಲಿ ಶಾಲೆಯ ಜವಾಬ್ದಾರಿ ವಹಿಸಲಾಗುತಿತ್ತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬೋಧನೆಯ ಕಾರ್ಯವನ್ನು ವಹಿಸುವ ಈ ಪದ್ಧತಿ ಹೆಚ್ಚಿನ ಶೈಕ್ಷಣಿಕ ಮೌಲ್ಯವನ್ನು ಹೊಂದಿತ್ತು. ಇದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬೋಧನ ಕಲೆಯನ್ನು ಕಲಿಯುವ ಅವಕಾಶ ಒದಗಿಸಿ ಅಪರೋಕ್ಷವಾಗಿ ಇಂದಿನ ಶಿಕ್ಷಣ ತರಬೇತಿ ಕಾಲೇಜುಗಳು ನಿರ್ವಹಿಸುತ್ತಿರುವ ಕಾರ್ಯವನ್ನೇ ಮಾಡುತ್ತಿದ್ದವು. ಅಧ್ಯಾಪಕರಿಗೆ ಜ್ಞಾನಕೌಶಲ ಹಾಗೂ ಉಚಿತ ಸಹಾಯದ ಮುಖಾಂತರ ದಕ್ಷತೆಯನ್ನು ಹೆಚ್ಚಿಸಿ ಶಾಲೆಯ ಖರ್ಚನ್ನು ತಗ್ಗಿಸುತ್ತಿದ್ದವು.

ಬೆಲ್ ಮತ್ತು ಲಾಂಕಸ್ಟರ್ ಮಹಾಶಯರು ತಮ್ಮ ಸಮಕಾಲೀನ ಭಾರತೀಯ ಶಾಲೆಯಲ್ಲಿ ಗಮನಿಸಿದ ವಿಧಾನವನ್ನು ತಮ್ಮ ಮಾನಿಟೋರಿಯಲ್ ಪದ್ಧತಿಗೆ ಆಧಾರವನ್ನಾಗಿಸಿಕೊಂಡರು ಎಂದು ತೋರುವುದು. ಹಿರೇಮಣಿ ಪದ್ಧತಿಯ ವೇಗದ ಪ್ರಸಾರ ಮತ್ತು ಸಾಮಾನ್ಯ ಅಂಗೀಕಾರ ಬಹುತೇಕ ಅದರ ಮಿತವ್ಯಯ (ವಯಸ್ಕ ಶಿಕ್ಷಕರ ಸಂಖ್ಯೆಯನ್ನು ಇದು ತಗ್ಗಿಸಿತು) ಮತ್ತು ದಕ್ಷತೆ (ಮುಖ್ಯ ಶಿಕ್ಷಕರ ಗಮನಕ್ಕಾಗಿ ವಿದ್ಯಾರ್ಥಿಗಳು ಕಾಯುತ್ತಾ ಸಮಯ ವ್ಯರ್ಥವಾಗುವುದನ್ನು ಇದು ತಪ್ಪಿಸಿತು) ಕಾರಣವಾಗಿದ್ದವು. ಹಲವು ಮೇಲ್ವಿಚಾರಕರಿಗೆ ವಾರಕ್ಕೆ ಅಲ್ಪ ಹಣವನ್ನು ನೀಡುತ್ತಿದ್ದರೂ ಕೂಡ ಅವರ ತಂದೆ ತಾಯಿ ತಮ್ಮ ಮಕ್ಕಳು ಕಲಿಯುವ ಸಮಯ ವ್ಯರ್ಥ ಮಾಡುತ್ತಿರುವರೆಂದು ಆಕ್ಷೇಪಿಸುತ್ತಿದ್ದರು. ಮೇಲ್ವಿಚಾರಕರಿಗೆ ಸ್ವಲ್ಪ ತರಬೇತಿ ಅವಶ್ಯಕ ಎಂದು ಅರಿವಿಗೆ ಬಂದ ನಂತರ 1840ರಲ್ಲಿ ಇಂಗ್ಲೆಂಡಿನಲ್ಲಿ ಆಂದೋಳನವೊಂದರ ಪ್ರಾರಂಭದೊಂದಿಗೆ ಮಾನಿಟರ್‌ಗಳ ಸ್ಥಳದಲ್ಲಿ 'ವಿದ್ಯಾರ್ಥಿ–ಶಿಕ್ಷಕ'ರನ್ನು (Pupil-teacher) ಇರಿಸಲಾಯಿತು. ಬಾಲಕ ಬಾಲಕಿಯರೀರ್ವರು ಇದಕ್ಕೆ ಅರ್ಹರಾಗಿದ್ದು ಬೋಧನಕಲೆಯನ್ನು ಕಲಿಯುತ್ತಾ 13ನೆಯ ವಯಸ್ಸಿನಲ್ಲಿ ಐದು ವರ್ಷಗಳ ಅವಧಿಗೆ ಅಭ್ಯಾಸಿಗರಾಗಿ ಜೊತೆಗೆ ಪ್ರಾಥಮಿಕ ಶಾಲೆಯೊಂದರ ಮುಖ್ಯ ಅಧ್ಯಾಪಕರ ಅಧೀನದಲ್ಲಿ ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದರು. ಇಂತಹ ಕೆಲವು ಕಾರ್ಯಕ್ರಮಗಳು ತರಬೇತಿ ಕಾಲೇಜುಗಳಾಗಿ ವಿಕಸನ ಹೊಂದಿ ವೃತ್ತಿಪರರು ಮತ್ತು ಶಿಕ್ಷಕ ಶಿಕ್ಷಕರು ಅಭ್ಯಾಸದ ಅವಧಿ ಮುಗಿದ ನಂತರ ಇಂತಹ ಸಂಸ್ಥೆಗಳಲ್ಲಿ ಮುಂದುವರೆಯಬಹುದಾಗಿತ್ತು.

**ಹಿರೇಮಣಿ ಪದ್ಧತಿ: ಸರ್ವರಿಗೂ ಶಿಕ್ಷಣ ಮತ್ತು ಕಲಿಕೆಯ ಕನಿಷ್ಠ ಸ್ತರಗಳಿಗೆ ಸಂಬಂಧಿಸಿದಂತೆ ಇದರ ನಿಹಿತಾರ್ಥಗಳು:**

ಮಕ್ಕಳಿಗೆ ಅವರು 14 ವರ್ಷ ಪೂರೈಸುವ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಬೇಕೆಂಬ ಕಾನೂನು. ಭಾರತ ಸಂವಿಧಾನದ ಒಂದು ನಿರ್ದೇಶನಾತ್ಮಕ ತತ್ವವಾಗಿದೆ. ಸ್ವಾತಂತ್ರ್ಯಾನಂತರದಿಂದ ಈ ಗುರಿಯನ್ನು ಸಾಧಿಸಲು ನಿಶ್ಚಯಪೂರ್ವಕ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಆದಾಗ್ಯೂ, ಕೇಂದ್ರ ಮತ್ತು ರಾಜ್ಯಗಳ ನಿಶ್ಚಿತ ಪ್ರಯತ್ನಗಳಿದ್ದಾಗ್ಯೂ ಸಹ ಪೂರ್ಣರೂಪದಲ್ಲಿ ಪ್ರಾಥಮಿಕ ಶಿಕ್ಷಣ ಇಂದಿಗೂ ಕೈಗೆಟುಕದ ಗುರಿಯಾಗಿದೆ. ಶಾಲೆಬಿಟ್ಟು ಹೋಗುವವರ ಪ್ರಮಾಣ ಅಧಿಕವಾಗಿದೆ. ಶಾಲೆಯಲ್ಲಿ ಮಕ್ಕಳನ್ನು ಉಳಿಸುಕೊಳ್ಳುವಿಕೆಯೂ ಅಲ್ಪವಾಗಿದೆ ಮತ್ತು ಅಪವ್ಯಯ ಅಧಿಕವಾಗಿದೆ. ಶಿಕ್ಷಣವನ್ನು ಕುರಿತ ರಾಷ್ಟ್ರೀಯ ನೀತಿಗಳು (NPE) (1986 ಮತ್ತು 1992) ಮತ್ತು ಅವುಗಳ ಕಾರ್ಯಕ್ರಮಗಳು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಅನಿರ್ಬಂಧಿತ ಆಧ್ಯತೆಯನ್ನು ಕೊಟ್ಟವು ಹಾಗೂ ಅನೇಕ ನವೀನ ಆಚರಣೆಗಳನ್ನು ಜಾರಿಗೆ ತಂದವು. ಪ್ರಾಧಾನ್ಯತೆಯು ದಾಖಲಾತಿಯಿಂದ ದಾಖಲಾತಿ ಹಾಗೂ ಉಳಿಸಿಕೊಳ್ಳುವಿಕೆ ಇವೆರಡರತ್ತ ಬದಲಾಯಿತು. (POA, 1992 ಪು 64). 1990ರ ದಶಕದಲ್ಲಿ ಶಾಲಾಪರಿಸ್ಥಿತಿಯನ್ನು ಪರಿವರ್ತಿಸಲು ಹಲವಾರು ರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಆಪರೇಷನ್ ಕಪ್ಪುಹಲಗೆ (OB), ಕಲಿಕೆಯ ಕನಿಷ್ಠ ಸ್ತರಗಳು (Minimun Levels of Learning-MLL),

Digitised by Bharatavani, CIIL

ಪಠ್ಯಕ್ರಮ ಮತ್ತು ಬೋಧನ ಸಾಮಗ್ರಿಗಳಲ್ಲಿ ಸುಧಾರಣೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿಶೇಷ ಪರಿಚಯ ಕಾರ್ಯಕ್ರಮಗಳು (Special Orientation Programme for Teachers-SOPT) ಇವು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳು. ಜೊತೆಗೆ, ರಾಜ್ಯಸರ್ಕಾರಗಳ ಸಕ್ರಿಯ ಮತ್ತು ವಿಶ್ವಬ್ಯಾಂಕ್ UNICEF, DFID, ಯುರೋಪಿಯನ್ ಸಮುದಾಯ ಮತ್ತು ವಿಕಾಸ ಪ್ರಾಧಿಕಾರ-ಖಉಆಂ ಇವೇ ಮೊದಲಾದ ಅಂತರ ರಾಷ್ಟ್ರೀಯ ಸಂಸ್ಥೆಗಳ ತಕ್ಕ ಮಟ್ಟಿನ ಸಹಾಯಗಳಿಂದ ಕೇಂದ್ರ ಸರ್ಕಾರವು ಎಲ್ಲರಿಗೂ ಶಿಕ್ಷಣದ ಮೇಲೆ ಜರುಗಿದ 'ಜೊಮ್‌ಟೀನ್ ಕಾನ್ಫರೆನ್ಸ್'ನ ತರುವಾಯ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಅನುಷ್ಠಾನಿಸಿತು. ಉಲ್ಲೇಖಾರ್ಹ ಕಾರ್ಯಕ್ರಮಗಳು ಹೀಗಿವೆ- ಆಂಧ್ರಪ್ರದೇಶ ಪ್ರಾಥಮಿಕ ಶಿಕ್ಷಣ ಪ್ರಾಯೋಜನೆ, ಲೋಕ್ ಜಂಬಿಷ್ ಪ್ರಾಯೋಜನೆ (ರಾಜಸ್ಥಾನ) ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (DPEP), ಶಿಕ್ಷಾಕರ್ಮಿ ಪ್ರಾಯೋಜನೆ (SKP) ಮತ್ತು ಸರ್ವಶಿಕ್ಷಾ ಅಭಿಯಾನ (SSA).

ಈ ಎಲ್ಲ ಅರ್ಥಪೂರ್ಣ ಪ್ರಯತ್ನಗಳಿದ್ದರೂ ಸಹ ಪ್ರಾಥಮಿಕ ಸ್ತರದಲ್ಲಿ ಶಿಕ್ಷಕರ ಸಂಖ್ಯೆ ಅಲ್ಪ. ದೇಶದಲ್ಲಿ ಬಹುತೇಕ ಪ್ರಾಥಮಿಕ ಶಾಲೆಗಳು ಇಂದಿಗೂ 'ಏಕಶಿಕ್ಷಕ' ಶಾಲೆಗಳಾಗಿವೆ. ಅಂದರೆ ಒಬ್ಬ ಶಿಕ್ಷಕ ತರಗತಿ 1 ರಿಂದ ತರಗತಿ 5 ರವರೆಗಿನ ಐದು ತರಗತಿಗಳನ್ನು ನಿರ್ವಹಿಸುತ್ತಾನೆ (ಟಿಪ್ಪಣಿ: ಇಂದು ಕಪ್ಪುಹಲಗೆ ಕಾರ್ಯಕ್ರಮದ ಪರಿಣಾಮವಾಗಿ ಏಕ ಶಿಕ್ಷಕ ಶಾಲೆ ಅಸ್ತಿತ್ವದಲ್ಲಿಲ್ಲ). ಶಾಲೆಗಳಲ್ಲಿ ಶಿಕ್ಷಕರ ಅನುಪಸ್ಥಿತಿಯನ್ನು ಪ್ರಮುಖ ಸಮಸ್ಯೆಯೆಂದು ಗುರುತಿಸಲಾಗಿದೆ. ಒಂದಕ್ಕಿಂತ ಹೆಚ್ಚು ಶಿಕ್ಷಕರಿರುವ ಇತರ ವಿಧದ ಶಾಲೆಗಳಲ್ಲಿ ಶಿಕ್ಷಕ ವಿದ್ಯಾರ್ಥಿ ಅನುಪಾತ ಹೆಚ್ಚಾಗಿದ್ದು ಶಾಲೆಗಳಲ್ಲಿ ಕಲಿಕೆಯ ವಾತಾವರಣವನ್ನು ಪ್ರಭಾವಿಸುತ್ತದೆ. ಅಧಿಕ ಶಿಕ್ಷಕ ವಿದ್ಯಾರ್ಥಿ ಅನುಪಾತವು ಬೋಧನೆ-ಕಲಿಕೆಯ ಪ್ರಕ್ರಿಯೆಯ ಮೇಲೆ ನೇರ ಪ್ರಭಾವವನ್ನು ಬೀರಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಕುಂದಿಸುತ್ತದೆ (ಟಿಪ್ಪಣಿ: ಸರ್ವಶಿಕ್ಷಾ ಅಭಿಯಾನದ ಪ್ರಯತ್ನದಿಂದ ಈಗ ವಿದ್ಯಾರ್ಥಿ-ಶಿಕ್ಷಕ ಅನುಪಾತ ದರ ಗಣನೀಯವಾಗಿ ಸುಧಾರಿಸಿದೆ)

ಆಪರೇಷನ್ ಕಪ್ಪು ಹಲಗೆ (OB)ಯ ವ್ಯಾಪ್ತಿಯನ್ನು ಹೆಚ್ಚಿಸುತ್ತಾ ಪ್ರತಿಯೊಂದು ಪ್ರಾಥಮಿಕ ಶಾಲೆಗೂ ಕನಿಷ್ಟ ಇಬ್ಬರು ಶಿಕ್ಷಕರನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಆದಾಗ್ಯೂ, ಬಹುತೇಕ ಶಾಲೆಗಳು, ವಿಶೇಷವಾಗಿ ಗ್ರಾಮೀಣ, ಗುಡ್ಡಗಾಡು ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಇಂದಿಗೂ ಓರ್ವ ಶಿಕ್ಷಕನನ್ನು ಹೊಂದಿವೆ.

ಕಳೆದ ಎರಡು ದಶಕಗಳು ವಿದ್ಯಾರ್ಥಿಯ ಸಾಧನೆಯ ಮೌಲ್ಯಮಾಪನಕ್ಕೆ ನೀಡಲಾದ ಪ್ರಾಮುಖ್ಯತೆ ಮತ್ತು ಗಮನಗಳ ಮಟ್ಟಕ್ಕೆ ಸಾಕ್ಷಿಯಾಗಿವೆ. ಕಲಿಕೆಯ ಕನಿಷ್ಟ ಮಟ್ಟ (MLL)ಕ್ಕೆ ಒತ್ತನ್ನು ನೀಡುತ್ತಾ NPE(1986)ನಲ್ಲಿ ವಿದ್ಯಾರ್ಥಿಯ ಸಾಧನೆಗೆ ವಿಶೇಷ ಮಹತ್ವ ನೀಡಲಾಯಿತು. DPEP ಮತ್ತು ಲೋಕ್ ಜಂಬಿಷ್‌ನಂತಹ 'ಎಲ್ಲರಿಗೂ ಶಿಕ್ಷಣ' (Education for All-EFA) ಪ್ರಾಯೋಜನೆಗಳ ಪ್ರಾರಂಭದೊಂದಿಗೆ ಈ ನಿಟ್ಟಿನಲ್ಲಿ ಕೆಲವು ಮಹತ್ವಪೂರ್ಣ ಪ್ರಯತ್ನಗಳು ಜರುಗಿದವು. ಜಾತಿ, ಕುಲ, ಸ್ಥಳ ಅಥವಾ ಲಿಂಗ ಭೇದಗಳಿಲ್ಲದೆ ಪ್ರತಿಯೊಂದು ಪ್ರಾಥಮಿಕ ಶಿಕ್ಷಣದ ಘಟ್ಟದಲ್ಲಿ ಕಲಿಕೆಯ ದಕ್ಷತೆ ಅಥವಾ ಸ್ತರಗಳ ರೂಪದಲ್ಲಿ ಎಲ್ಲ ಮಕ್ಕಳಿಗೂ ಹೋಲಿಸಬಹುದಾದ ಗುಣಮಟ್ಟದ ಶಿಕ್ಷಣಕ್ಕೆ ಅವಕಾಶ ಒದಗಿಸಬೇಕು ಎಂಬುದು ಗುರಿಯಾಗಿದೆ. MLL ಆಧಾರಿತ ಬೋಧನೆಗಾಗಿ ಶಿಕ್ಷಕ ತರಬೇತಿ ಕೈಪಿಡಿಯ ಸಿದ್ಧತೆ, ವಿದ್ಯಾರ್ಥಿಗಳ ಸತತ ಹಾಗೂ ಸಮಗ್ರ ಮೌಲ್ಯಮಾಪನದ ಪ್ರಾರಂಭ ಮತ್ತು ಈ ಮೌಲ್ಯಮಾಪನ ಫಲಿತಾಂಶಗಳನ್ನು ಪರಿಹಾರಾತ್ಮಕ ಕ್ರಮಕ್ಕಾಗಿ ಬಳಸುವುದು ಮತ್ತು ಶೈಕ್ಷಣಿಕ ಪ್ರಕ್ರಿಯೆಯನ್ನು ಚಟುವಟಿಕೆ ಆಧಾರಿತವನ್ನಾಗಿಸಿ ಆನಂದಪೂರ್ಣವಾಗಿ ಮಾಡಲು ದಕ್ಷತೆಯನ್ನು ಆಧರಿಸಿದ ಬೋಧನೆ ಕಲಿಕೆ ಸಾಮಗ್ರಿ ಒದಗಣೆ- ಈ ಕೆಲವು ಪ್ರಮುಖ ಕ್ರಮಗಳಿಂದ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಟ ಕಲಿಕಾಮಟ್ಟ ಕಾರ್ಯಕ್ರಮದ ಪ್ರಾರಂಭಕ್ಕೆ ಅಡಿಯಿಡಲಾಯಿತು. (POA, 1992)

ವ್ಯಕ್ತಿಗತ ಬೋಧನಾ ವ್ಯವಸ್ಥೆಯ Personalised System of Instruction ಪರಿಕಲ್ಪನೆಯ ಚೌಕಟ್ಟಿನಲ್ಲಿ ವಿದ್ಯಾರ್ಥಿಯೊಬ್ಬನು ಕಾರ್ಯಕ್ರಮವೊಂದರ ಕನಿಷ್ಟ ಮಟ್ಟದ ಪರಿಣತಿಯನ್ನು ಸಾಧಿಸಬೇಕಾದರೆ PSI ಉಪಕ್ರಮ ಬಳಸಲು ಇಚ್ಛಿಸುವ ಶಿಕ್ಷಕನು ಸಂಪೂರ್ಣ ಕಾರ್ಯಕ್ರಮವನ್ನು ಬೋಧನೆ-ಕಲಿಕೆಯ ಸರಣಿಯಾಗಿ ವಿಭಾಜಿಸುವ ಮೂಲಕ ಪ್ರಾರಂಭಿಸುವನು ಎಂದು ಕೆಲ್ಲರ್ ಮತ್ತು ಶರ್ಮನ್ (1974) ಒತ್ತಿ ಹೇಳುತ್ತಾರೆ. ನಂತರ ಪ್ರತಿಯೊಂದು ಘಟಕವನ್ನು ಬೋಧಿಸಲು ಶಿಕ್ಷಕನು ಬೋಧನ ಸಾಮಗ್ರಿಗಳನ್ನು (ಅಧ್ಯಯನ ಮಾರ್ಗದರ್ಶಿ) ಸಿದ್ಧಪಡಿಸುತ್ತಾನೆ. ಪ್ರತಿಯೊಂದು ಮಾರ್ಗದರ್ಶಿಯು ಪೀಠಿಕೆ, ಉದ್ದೇಶಗಳ ವಿವರಣೆ, ಅಧ್ಯಯನ ಪ್ರಶ್ನೆಗಳು ಮತ್ತು ಸೂಚಿತ ಅಧ್ಯಯನ ಕ್ರಮಗಳನ್ನು ಒಳಗೊಂಡಿರುತ್ತದೆ. ಅಧ್ಯಾಪಕನು ಪ್ರತಿಯೊಂದು ಘಟಕವನ್ನು ಕುರಿತ ಸರಳ ಹಿನ್ನುಣಿಕೆ/ದೋಷನಿವಾರಣಾ ವಿಧಾನಗಳನ್ನು ಸಿದ್ಧಪಡಿಸುವನು. ಪ್ರತಿಯೊಂದು ಘಟಕಕ್ಕೂ ಪರ್ಯಾಯ ಸ್ವರೂಪದ ಪರೀಕ್ಷೆಗಳನ್ನು (ಪರಿಣತಿ ಪರೀಕ್ಷೆಗಳು) ಸಹ ಸಿದ್ಧಪಡಿಸಲಾಗುವುದು ಈ ಪರೀಕ್ಷೆಗಳು ವಿದ್ಯಾರ್ಥಿಗೆ ಮತ್ತು ಮುಂದುವರೆದ ವಿದ್ಯಾರ್ಥಿ ಅಥವಾ ಸಹಪಾಠಿಯಾಗಿರುವ ಆತನ ಮೇಲ್ವಿಚಾರಕನಿಗೆ ಘಟಕದ ಅಧ್ಯಯನ ಮಾರ್ಗದರ್ಶಿಯನ್ನು ಪೂರ್ಣಗೊಳಿಸಿದ ಫಲವಾಗಿ ವಿದ್ಯಾರ್ಥಿಯ ಕಲಿಕೆ ಪ್ರಗತಿ ಹೊಂದುತ್ತಿದೆಯೆಂಬುದರ ಬಗ್ಗೆ ಮಾಹಿತಿ ಒದಗಿಸುತ್ತದೆ.

ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನದೇ ಗತಿಯಲ್ಲಿ ಬೋಧನೆ-ಕಲಿಕೆಯ ಘಟಕಗಳ ಮೂಲಕ ಮುನ್ನಡೆಯಲು ಸ್ವತಂತ್ರನು. ಘಟಕದ ಸಾಮಗ್ರಿಗಳನ್ನು ಕಲಿಯುವ ಆತನ ಪ್ರಾರಂಭಿಕ ಪ್ರಯತ್ನ ಪೂರ್ಣಗೊಂಡ ನಂತರ ಆತ ತನ್ನ ಮೇಲ್ವಿಚಾರಕನ ಬಳಿ ಸಾರಿದಾಗ ಮೇಲ್ವಿಚಾರಕನು ವಿದ್ಯಾರ್ಥಿಗೆ ಪರಿಣತಿ ಪರೀಕ್ಷೆಗಳನ್ನು ಒಡ್ಡುತ್ತಾನೆ. ಈ ಪರೀಕ್ಷೆ ಮುಗಿದ ನಂತರ, ವಿದ್ಯಾರ್ಥಿ ಮೇಲ್ವಿಚಾರಕನಿಂದ ಕಲಿವಿನ ದೋಷನಿವಾರಣೆಗಾಗಿ ಅವನ ಬಳಿ ಹೋಗುತ್ತಾನೆ. ಆತನ ಕಾರ್ಯವೈಖರಿ ಘಟಕದ ಪರಿಣತಿ ಮಾನದಂಡಕ್ಕೆ ಸಮವಾಗಿ ಇಲ್ಲವೆ ಅದಕ್ಕಿಂತ ಅಧಿಕವಾಗಿದ್ದ ಪಕ್ಷದಲ್ಲಿ ಮೇಲ್ವಿಚಾರಕ ವಿದ್ಯಾರ್ಥಿಯನ್ನು ಶ್ಲಾಘಿಸಿ ಮುಂದಿನ ಘಟಕಕ್ಕೆ ಮುಂದುವರೆಯುತ್ತಾನೆ. ಇಲ್ಲದಿದ್ದಲ್ಲಿ,

Digitised by Bharatavani, CIIL

ಆತ ಘಟಕದ ದೋಷನಿವಾರಕಗಳನ್ನು ಪರಿಣತಿ ಪಡೆಯುವ ಅಂಶಗಳನ್ನು ಅರಿತುಕೊಳ್ಳಲು ಪುನರಧ್ಯಯನ ಮಾಡಿ ನಂತರವೇ ಪುನರ್ ಪರೀಕ್ಷೆಗಾಗಿ ಹಿಂದಿರುಗಬೇಕಾಗುತ್ತದೆ. ಕಲಿಕೆಯ ಪುನರಾವಲೋಕನ ಮುಗಿದ ನಂತರ, ವಿದ್ಯಾರ್ಥಿ ಮತ್ತೊಂದು ರೀತಿಯ ಘಟಕ ಪರೀಕ್ಷೆಗಾಗಿ ಮೇಲ್ವಿಚಾರಕನ ಬಳಿ ಬರುತ್ತಾನೆ. ಈಗ ಆತನ ಪರೀಕ್ಷಾ ಫಲಿತಾಂಶ ಮಾನದಂಡಕ್ಕೆ ಸಮನಾಗಿದ್ದರೆ ಆತನನ್ನು ಶ್ಲಾಘಿಸಿ ಮುಂದಿನ ಘಟಕವನ್ನು ಪರಿಚಯಿಸಲಾಗುವುದು. ಇಲ್ಲದಿದ್ದಲ್ಲಿ, ಆತ ತನ್ನ ಪುನರಧ್ಯಯನವನ್ನು ಮೇಲ್ವಿಚಾರಕನ ಮಾರ್ಗದರ್ಶನದಲ್ಲಿ ಮುಂದುವರೆಸುವನು. ಈ ಪರೀಕ್ಷೆ–ಪುನರಧ್ಯಯನ– ಪುನರ್ ಪರೀಕ್ಷೆಗಳ ಆವರ್ತನ ಘಟಕ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪೂರ್ವನಿಶ್ಚಿತ ಪರಿಣತಿ ಸಾಧಿಸುವವರೆಗೂ ಮುಂದುವರೆಯುತ್ತದೆ. ತದನಂತರ ಮುಂದಿನ ಘಟಕದ ಪರಿಚಯ ಮಾಡಿಸಲಾಗುತ್ತದೆ.

'ಏಕ ಶಿಕ್ಷಕ' ಅಥವಾ ಅಷ್ಟೇ ಏಕೆ 'ದ್ವಿಶಿಕ್ಷಕ' ಪ್ರಾಥಮಿಕ ಶಾಲೆಗಳ ವಿಷಯದಲ್ಲಿ ಹಂತಹಂತವಾಗಿ ಪ್ರಾಯೋಗಿಕ ಆಧಾರದ ಮೇಲೆ ಸ್ಥಳೀಯವಾಗಿ ವಿನ್ಯಾಸಗೊಳಿಸಿದ 'ಹಿರೇಮಣಿ ಪದ್ಧತಿ'ಯ ಬಳಕೆ ಮೌಲ್ಯಯುತವಾದುದು. ಪ್ರಯೋಗವು ಸಫಲವಾದರೆ ಪದ್ಧತಿಯನ್ನು ಇತರ ಕ್ಷೇತ್ರಗಳಿಗೂ ವಿಸ್ತರಿಸಬಹುದು. ವ್ಯಕ್ತಿ ವಿಶಿಷ್ಟ ಬೋಧನ ವಿಧಾನ (PSI) ಮತ್ತು ಲಾಂಕಸ್ಟರ್ ಹಿರೇಮಣಿ ಪದ್ಧತಿಗಳ ನಡುವೆ ಸಮಾನತೆಗಳಿವೆಯೆಂದು ಕಾಣುವುದು. ಲಾಂಕಸ್ಟರ್ ಪದ್ಧತಿಯಲ್ಲಿ ಪ್ರತಿಯೊಬ್ಬ ಮೇಲ್ವಿಚಾರಕನು ಹತ್ತು ವಿದ್ಯಾರ್ಥಿಗಳ ಕಾರ್ಯಸಾಧನೆಗೆ ಜವಾಬುದಾರನಾಗಿರುವನು. ಕಾರ್ಯಕ್ರಮ (Shedule) ಸಾಮರ್ಥ್ಯವನ್ನು ಅನುಸರಿಸಿದ ವಿದ್ಯಾಥಿಗಳ ಸಮೂಹ ನಿರಂತರ ಮೌಲ್ಯಮಾಪನ ಮತ್ತು ವಿದ್ಯಾರ್ಥಿಗಳ ಸೂಕ್ತ ಪ್ರಗತಿ ಮತ್ತು ಸುಸ್ಪಷ್ಟವಾಗಿ ಸ್ಥಿರಗೊಳಿಸಲಾದ ದಿನಚರಿ–ಪದ್ಧತಿಯ ಮುಖ್ಯಾಂಶಗಳಾಗಿದ್ದವು. (ಲಾಂಜ್, 1971), 'ಏಕ ಶಿಕ್ಷಕ' ಅಥವಾ 'ದ್ವಿ ಶಿಕ್ಷಕ' ಪ್ರಾಥಮಿಕ ಶಾಲೆಗಳಲ್ಲಿ ಹಿರಿಯ ವಿದ್ಯಾರ್ಥಿಗಳು ಅಥವಾ ಪ್ರತಿಭಾವಂತ ಸಹಪಾಠಿಗಳು ಮೇಲ್ವಿಚಾರಕರಾಗಬಹುದಲ್ಲದೆ PSIನ ಪರಿಣತಿ ಕಲಿಕಾ ಕಾರ್ಯತಂತ್ರದ (Mastery Learning Strategy) ವಿದ್ಯಾರ್ಥಿ ಮೇಲ್ವಿಚಾರಕನ (Proctor) ಪಾತ್ರಕ್ಕೆ ಸಮನಾದ ಪಾತ್ರವನ್ನು ವಹಿಸಬಹುದು. ಇದು ಪುನಾರಚಿಸಿದ/ಪರಿಷ್ಕರಿಸಿದ ಆಪರೇಷನ್ ಕಪ್ಪುಹಲಗೆ (OB)ಯ ಮುಖಾಂತರ ಪ್ರಾಥಮಿಕ ಶಾಲಾ ಶಿಕ್ಷಣದ ಸುಧಾರಣಾ ಕಾರ್ಯಕ್ರಮವನ್ನು ಬಲಪಡಿಸಿ ಇದನ್ನು ಕಲಿಕೆಯ ಕನಿಷ್ಠ ಮಟ್ಟಗಳೊಂದಿಗೆ (MLL) ಜೋಡಿಸುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕನೊಬ್ಬನ ಅನುಪಸ್ಥಿತಿಯ ಸಮಯದಲ್ಲಿ ತಾತ್ಕಾಲಿಕವಾಗಿ ಆತನ ಜಾಗದಲ್ಲಿ ಸ್ಥಳೀಯ ಪ್ರಶಿಕ್ಷಿತ ಹಿರಿಯ ವಿದ್ಯಾರ್ಥಿ (ಮಾನಿಟರ್)ಯನ್ನು ಇರಿಸುವುದು ಹೊಸ ಪ್ರಯತ್ನವಾಗುವುದಲ್ಲದೆ ಮಕ್ಕಳು, ಪೋಷಕರು ಮತ್ತು ಸಮುದಾಯಗಳಿಗೆ ಪ್ರಾಥಮಿಕ ಶಿಕ್ಷಣದ ಲಭ್ಯತೆ ಮತ್ತು ಅದರಲ್ಲಿನ ಅವರ ಸಹಭಾಗಿತ್ವಗಳನ್ನು ಸುಧಾರಿಸಲು ನೆರವಾಗುವುದು. ಜೂನಿಯರ್–ಸೀನಿಯರ್ ಮಾಧ್ಯಮಿಕ ಘಟ್ಟದಲ್ಲಿ ತುಂಬಿರುವ ತರಗತಿಗಳುಳ್ಳ ಅಲ್ಪ ಶಿಕ್ಷಕ ಶಾಲೆಗಳಲ್ಲಿ ಹಿರೇಮಣಿ ಪದ್ಧತಿಯನ್ನು ಪ್ರಾರಂಭಿಸುವುದರಿಂದ ವಿದ್ಯಾರ್ಥಿಗಳು ತರಗತಿಯ ಒಳ–ಹೊರಗಿನ ತಮ್ಮ ಚಟುವಟಿಕೆಗಳ ನಿರ್ವಹಣೆಯಲ್ಲಿ ಸ್ವತಂತ್ರ್ಯ ಪ್ರಯತ್ನ ಮತ್ತು ಜವಾಬ್ದಾರಿಗಳನ್ನು ಹೆಚ್ಚಿಸುವಲ್ಲಿ ಲಾಭಕರವಾಗಿರುವುದು. ನೈಜ ಸಾಮಾಜಿಕ ಸನ್ನಿವೇಶಗಳನ್ನು ಪರಿಚಯ ಆತ್ಮನಿಗ್ರಹ ಸ್ವನಿಯಂತ್ರಣ, ಇತರ ಮಕ್ಕಳ ವಿಷಯದಲ್ಲಿ ಗೌರವ ಮತ್ತು ಸಹನೆ, ನಿಯಮ ಮತ್ತು ಅಧಿಕಾರಗಳಿಗೆ ಗೌರವ, ಕಾರ್ಯ ಮತ್ತು ಸಾಧನೆಗೆ ಶಿಸ್ತು ಸಹಕಾರಗಳೇ ಆಧಾರವೆಂಬ ಮನವರಿಕೆ–ಇವೆಲ್ಲವನ್ನೂ ಬೆಳೆಸುವಲ್ಲಿ ಮೇಲ್ವಿಚಾರಕರನ್ನು ಒಳಗೊಂಡ ಶಾಲೆಗಳಲ್ಲಿನ ಸ್ವಯಂ ಆಡಳಿತದ ಇತಿಹಾಸವು ನಿಸ್ಸಂಶಯ ಮೌಲ್ಯವಿದೆಯೆಂದು ತಿಳಿಸಿಕೊಡುತ್ತದೆ. (ಕ್ರಾನ್‌ಸನ್, 1907), ತರಗತಿಯ ಶೈಕ್ಷಣಿಕ ಮತ್ತು ಇತರ ಪಠ್ಯಕ್ರಮ ಚಟುವಟಿಕೆಗಳ ನಿರ್ವಹಣೆ ಮೇಲ್ವಿಚಾರಕನಾಗಿ ಪಾತ್ರ ವಹಿಸಿರುವ ವಿದ್ಯಾರ್ಥಿಗೆ ಸಹಕಾರ ಮತ್ತು ವಿದ್ಯಾರ್ಥಿಗಳೊಂದಿಗಿನ ಹೆಚ್ಚಿದ ಸಂಪರ್ಕಗಳ ಮುಖಾಂತರ ಕಾರ್ಯ ನಿರ್ವಹಣೆಗೆ ಸಾರ್ಥಕ ಅವಕಾಶಗಳನ್ನು ಒದಗಿಸುತ್ತದೆ.

ಮೇಲ್ವಿಚಾರಕರ ಸಹಾಯದೊಂದಿಗೆ ಎರಡು ಮೂರು ವಿದ್ಯಾರ್ಥಿಗಳಿರುವ ಸಣ್ಣ ಗುಂಪು ಅಧ್ಯಯನ ಅವಧಿಗಳು ಸ್ಪರ್ಧಾತ್ಮಕ ಕಲಿಕಾ ಸನ್ನಿವೇಶಕ್ಕಿಂತಲೂ ಮಿಗಿಲಾಗಿ ಸಹಕಾರಾತ್ಮಕ ಕಲಿಕಾ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗಳು ತಮ್ಮ ಕಲಿಕಾ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಹಾಯ ನೀಡುವುದರಲ್ಲಿ ಅತ್ಯಂತ ಪ್ರಭಾವಕಾರಿಯಾಗಿವೆ. ಗುಂಪಿನ ರಚನೆ ಹಾಗೂ ತನ್ನ ಕಲಿಕೆಯ ಸಮಸ್ಯೆಗಳನ್ನು ಬಹಿರಂಗಪಡಿಸಲು ಮತ್ತು ತನ್ನನ್ನು ತಾನು ಕೀಳಾಗಿಸಿಕೊಳ್ಳದೆ ಮತ್ತೊಬ್ಬರನ್ನು ಹೊಗಳದೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರತಿಯೊಬ್ಬ ವಿದ್ಯಾರ್ಥಿಗೂ ಒದಗಿಸುವ ಅವಕಾಶ–ಇವುಗಳ ಮೇಲೆ ಬಹಳಷ್ಟು ನಿರ್ಧಾರವಾಗುತ್ತದೆ(ಬಲ್ಲಿಮ್, 1971). ಮೇಲ್ತರಗತಿಯ ವಿದ್ಯಾರ್ಥಿಗಳ ವಿಷಯದಲ್ಲಿ ವಿದ್ಯಾರ್ಥಿ ಮೇಲ್ವಿಚಾರಕರ ಉಪಯೋಗವು ವಿದ್ಯಾರ್ಥಿಗಳು ಎಲ್ಲ ಘಟಕಗಳಲ್ಲಿ ಪರಿಣತಿ ಹೊಂದಲು ನೇರವಾಗಿ ಅವರಿಗೆ ಸಾಮಾಜಿಕ ಪುನರ್ಬಲನ ನೀಡಿದೆ ಎಂದು ರೊನಾಲ್ಡ್ (1970), ಗ್ರೀನ್(1969), ಕೆಲ್ಲರ್(1968) ಮತ್ತು ಶೆರ್ಮನ್(1967) ಇವರುಗಳ ಅಧ್ಯಯನಗಳು ಬಹಿರಂಗಪಡಿಸಿದೆ. ಈ ಅಧ್ಯಯನಗಳಲ್ಲಿ ವಿದ್ಯಾರ್ಥಿಗಳು ಕಾರ್ಯಕ್ರಮದ ವಿಷಯವಾಗಿ ಸಕಾರಾತ್ಮಕ ಅಭಿಪ್ರಾಯವನ್ನು ಹೊಂದಿದ್ದರಲ್ಲದೆ ಬಹುತೇಕ ಇದನ್ನು ಮುಗಿಸಿದ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಲು ಇಚ್ಛಿಸಿದ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮೇಲ್ವಿಚಾರಕರನ್ನಾಗಿ ಬಳಸಿಕೊಳ್ಳುವ ಹಿರೇಮಣಿ ಪದ್ಧತಿಯನ್ನು ವಿವಿಧ ವಿಷಯಗಳಲ್ಲಿ ಪರಿಣತಿಯನ್ನು ಹೊಂದುವ ಸಲುವಾಗಿ ತುಂಬಿದ ತರಗತಿಗಳುಳ್ಳ ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಪ್ರಾಥಮಿಕ ಶಾಲೆಗಳಲ್ಲಿ ಪ್ರಯತ್ನಿಸಿ ನೋಡಬೇಕಾದ ಅಗತ್ಯವಿದೆ. ಮಂದಗತಿಯ ವಿದ್ಯಾರ್ಥಿಗಳಿಗೆ ಅಲ್ಪವೆಚ್ಚದಲ್ಲಿ ಸಹಾಯ ನೀಡುವುದು ಈ ಪದ್ಧತಿಯ ಮುಖ್ಯ ಆಕರ್ಷಣೆಯಾಗಿದೆ.

**ಮೂಲ: ಲೋಕೇಶ್ ಕೌಲ್**

**ಅನು: ಚಂದ್ರಶೇಖರ್ ಬಿ.ಎಂ.**

Digitised by Bharatavani, CIIL

# ಪ್ರಧಾನ ಸಂಪಾದಕರ ಪರಿಚಯ

**ಡಾ. ಎನ್. ಲಕ್ಷ್ಮಿ,** ಎಂ.ಎ., ಎಂ.ಎಡ್., ಎಂ.ಫಿಲ್., ಪಿಎಚ್.ಡಿ.
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–06

ಡಾ. ಎನ್. ಲಕ್ಷ್ಮಿಯವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎಡ್., ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಎಂ.ಎ., ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹ ಪ್ರಾಧ್ಯಾಪಕರಾಗಿ ಹಾಗೂ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 1996ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ **"ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಹಾಗೂ ಇತರೆ ಜನಾಂಗದವರ ತಾರುಣ್ಯಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳ ಶೈಕ್ಷಣಿಕ ಹಿಂದುಳಿಯುವಿಕೆ"** ಎಂಬ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಇವರು 1994 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ICC&CE ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕಿಯಾಗಿ ಸೇವೆ ಪ್ರಾರಂಭಿಸಿದರು. ಶ್ರೀಮತಿಯವರು 2001 ರಿಂದ 2003 ರವರೆಗೆ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕಿಯಾಗಿ ಸೇವೆಸಲ್ಲಿಸಿದರು. 2003 ರಿಂದ ಸಹಾಯಕ ಪ್ರಾಧ್ಯಾಪಕರಾಗಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಆರು ಮಂದಿ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಹಾಗೆಯೇ ಹತ್ತು ಮಂದಿ ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. ಪ್ರಸ್ಥುತ ಎಂಟು ಮಂದಿ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಕರಾಮುವಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಬಿ.ಎಡ್., ಬಿ.ಎಡ್. ವಿಶೇಷ ಶಿಕ್ಷಣ, ಎಂ.ಎಡ್., ಎಂ.ಫಿಲ್., ಪಿಎಚ್.ಡಿ. ಹಾಗೂ ಪಿಜಿಡಿಹೆಚ್ಇ ಕೋರ್ಸ್‌ಗಳನ್ನು ನಡೆಸಲಾಗುತ್ತದೆ.

ಶ್ರೀಮತಿಯವರು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. "ಶೈಕ್ಷಣಿಕ ಸಂಶೋಧನೆ", "ತತ್ವಶಾಸ್ತ್ರದ ದೃಷ್ಟಿಕೋನದಲ್ಲಿ ಶಿಕ್ಷಣ", "ಸಮಾಜಶಾಸ್ತ್ರದ ದೃಷ್ಟಿಕೋನದಲ್ಲಿ ಶಿಕ್ಷಣ", "ಶೈಕ್ಷಣಿಕ ಆಡಳಿತ, ನಿರ್ವಹಣೆ ಹಾಗೂ ಶಾಲಾ ಸಂಘಟನೆ, "ಶೈಕ್ಷಣಿಕ ನಿರ್ವಹಣೆ ಮತ್ತು ನಾಯಕತ್ವ", "ಮಹಿಳಾ ಶಿಕ್ಷಣ", "ಭಾರತದಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸವಾಲುಗಳು", "ಪ್ರಚಲಿತ ಸಾಮಾಜಿಕ ಮತ್ತು ಶೈಕ್ಷಣಿಕ ಸವಾಲುಗಳು" ಇವರ ಪ್ರಮುಖ ಪುಸ್ತಕಗಳಾಗಿವೆ.

ಡಾ. ಎನ್. ಲಕ್ಷ್ಮಿ ರವರು 2007–08ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ **"ಮೈಸೂರು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳ ತುಲನಾತ್ಮಕ ಅಧ್ಯಯನ"** ಯೋಜನೆ, 2009–10ನೇ ಸಾಲಿನಲ್ಲಿ ಡೆಕ್ ಅನುದಾನದ ಅಡಿಯಲ್ಲಿ **"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎಡ್. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರವೇಶಾತಿ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳ ಒಂದು ಅಧ್ಯಯನ"** ಯೋಜನೆ, 2011–12ನೇ ಸಾಲಿನಲ್ಲಿ ಡೆಕ್ ಅನುದಾನದ ಅಡಿಯಲ್ಲಿ **"ಚಾಮರಾಜನಗರ ಜಿಲ್ಲೆಯ ಹೆಣ್ಣು ಮಕ್ಕಳು ದೂರ ಶಿಕ್ಷಣ ವ್ಯವಸ್ಥೆಯ ಬಗ್ಗೆ ಹೊಂದಿರುವ ಅರಿವು ಮತ್ತು ಅದರ ಪ್ರಯೋಜನವನ್ನು ಪಡೆದುಕೊಂಡಿರುವುದರ ಒಂದು ಮೌಲ್ಯಮಾಪನಾತ್ಮಕ ಅಧ್ಯಯನ",** ಎಂಬ ಯೋಜನೆ ಹಾಗೂ 2011–12ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ **"AN EVALUATIVE STUDY OF THE IMPLIME NTATION OF THE SSA MADARASAS GRANT SCHEME IN KARNATAKA STATE"** ಎಂಬ ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ.

ಕೇಂದ್ರದ ಘನ ಸರ್ಕಾರ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಹಿನ್ನೆಲೆಯಲ್ಲಿ ರಾಜ್ಯದ ಘನ ಸರ್ಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವಿಶ್ವವಿದ್ಯಾನಿಲಯಕ್ಕೆ ಎರಡು ಕೋಟಿ ರೂ.ಗಳ ಅನುದಾನವನ್ನು ಮಂಜೂರು ಮಾಡಿ, ನಮ್ಮ ವಿಶ್ವವಿದ್ಯಾನಿಲಯಕ್ಕೆ ಮೊದಲ ಕಂತಾಗಿ ರೂ. ಒಂದು ಕೋಟಿಯನ್ನು ಬಿಡುಗಡೆ ಮಾಡಿದೆ. ಈ ಯೋಜನೆಯ ವ್ಯಾಪ್ತಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎನ್. ಲಕ್ಷ್ಮಿ ರವರು ಪ್ರಧಾನ ಸಂಪಾದಕರಾಗಿ ಕೈಗೆತ್ತಿಕೊಂಡಿರುವ ಕನ್ನಡ ಭಾಷಾ ಅಭಿವೃದ್ಧಿ ಯೋಜನೆ–06ರ ಅಡಿಯಲ್ಲಿ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಹಾಗೂ ಕನ್ನಡ ಭಾಷಾ ಅಭಿವೃದ್ಧಿ ಯೋಜನೆ–07ರ ಅಡಿಯಲ್ಲಿ **"ಬಿ.ಎಡ್. ವಿಶೇಷ ಶಿಕ್ಷಣ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಸಿ.ಡಿ. ಮುಖಾಂತರ ಪಾಠ ಒದಗಿಸುವ ಯೋಜನೆ"**ಗಳು ಸೇರಿರುತ್ತವೆ. ಪ್ರಸ್ತುತ ಯೋಜನೆಯಲ್ಲಿ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಕೃತಿಯನ್ನು ಮೂರು ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಈಗಾಗಲೇ 1000 ಪುಟಗಳಿರುವ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಸಂಪುಟ – 01 ಕೃತಿ ಹಾಗೂ **ಎರಡನೇ ವರ್ಷದ ಬಿ.ಎಡ್. ವಿಶೇಷ ಶಿಕ್ಷಣಕ್ರಮದ ವಿಶೇಷ ಅಧ್ಯಯನ ಪತ್ರಿಕೆಗಳ ವಿಷಯಗಳಿಗೆ ಸಂಬಂಧಿಸಿದಂತೆ, 48 ರೆಕಾರ್ಡೆಡ್ ಸಿ.ಡಿ. ಯೋಜನೆಗಳು** ಆಗಸ್ಟ್ 7, 2012ರಲ್ಲಿ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಿಂದ ಬಿಡುಗಡೆಯಾಗಿದೆ. ಪ್ರಸ್ತುತ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಸಂಪುಟ–2 ಮತ್ತು ಸಂಪುಟ–3 ಕೃತಿಗಳು ಕ್ರಮವಾಗಿ 750 ಪುಟಗಳನ್ನು ಹೊಂದಿದ್ದು ಲೋಕಾರ್ಪಣೆಗೆ ಸಿದ್ಧಗೊಂಡಿವೆ.

ಶ್ರೀಮತಿಯವರು ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ರಾಷ್ಟ್ರೀಯ ಸಮ್ಮೇಳನಗಳಾದ National Seminar on 'ODL-Learner support Services' held on 20 & 21st October 2010 at Dr. B.R. Ambedkar open University, Hyderabad, National Seminar on 'Rejuvenating Intellectual Curiosity Among Teacher

Digitised by Bharatavani, CIIL

Educators' held on 28 & 29th January 2011 at Stella Matutina College of Education, Chennai, National Seminar on 'Current Issues in Teacher Education' held on 14th & 15th March at Department of Education, Faculty of Education and Psychology, The Maharaja Sayajirao University of Baroda, Vadodara Gujarat, National Conference on "Social Media in Education: New Horizons" held on 1st and 2nd February 2013 at Sri Sarada College of Education, Salem, Tamil Nadu, National Conference on "Enhancement of Quality Perspective in Teacher Education" held on 6th and 7th April 2013 at Indra Ganesan College of Education, Tiruchirapalli, Tamil Nadu, National Conference on "Education and Women Empowerment" held on 12th and 13th September 2013 at St. Ann's College of Education, Mangalore, Karnataka, National Conference on "Education for Sustainable Development" held on 27th and 28th March 2014 at Department of Studies in Education, Manasagangothri, Mysore-06, Karnataka ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಹಾಗೆಯೇ ಹಲವು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿಯೂ ಸಹ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಪ್ರಮುಖ ಅಂತರರಾಷ್ಟ್ರೀಯ ಸಮ್ಮೇಳನಗಳಾದ International Conference On "Innovative Thoughts – Education, Management, Arts, Science, Linguistics" (Teaching & Learning) held on 12th, 13th & 14th August 2011 at Department of Indian Studies, Faculty of Arts and sciences, University of Malaya, Kualalumpur, Malaysia, International Seminar on "Global Commitments Towards Inclusive Development of Persons with Disabilities" held on 17th and 19th March 2012 at India Habitat Centre, New Delhi, International Seminar on "Innovations in Teaching, Research and Management in Higher Education" held on 21st and 22nd March 2012 at the Centre for Educational Research, Madurai Kamaraj University, Madurai, Tamil Nadu, International Conference on "Teacher Education: Meeting the Needs of the New Generation" held on 24th and 25th January 2013 at Dr. Sivanthi Aditanar College of Education", Tiruchendur, Tamil Nadu, India, International Conference on "Curriculum Engineering : Principles and Practices" held on 8th and 9th March 2013 at Vellalar College of Education for Women, Erode, Tamil Nadu, India, International Conference on "Teacher Education in Changing Global Society" held on 14th and 15th December 2013 at Bishop Agniswamy College of Education, Muttom, Kanyakumari District, Tamil Nadu, India, International Conference on "Learning Environment for Excellence in Education."(LEEE-2014) 24th and 25th January 2014 at SRM School of Teacher Education and Research, SRM University in Collaboration with Department of Education, Mother Teresa Women's University, Kattankulathur, Kancheepuram District, Tamil Nadu, India, International Conference on "Capacity Building Programmers for Teacher Educators : A Global Scenario" held on 12th and 13th April 2014 at St. Paul's College of Education, Vijayanagar, Bangalore, Karnataka, India ಸಮ್ಮೇಳನಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ.

ಶ್ರೀಮತಿಯವರು ಹಲವಾರು ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ವಿಭಾಗದಲ್ಲಿ ಶೈಕ್ಷಣಿಕವಾಗಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದ ಇವರ ಹಲವು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ **"ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"** ಕೃತಿಯ ಮೂರು ಸಂಪುಟಗಳಿಗೆ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಸಲಹಾ ಸಮಿತಿ ಸದಸ್ಯರ ಪರಿಚಯ

**ಪ್ರೊ. ಸಿ. ಶೇಷಾದ್ರಿ,** B.sc., M.A. (Phil), M.Ed., Ph.d.
"ಚೆನ್ನಗಿರಿ" ಮನೆ ನಂ. 1391,
ಅನಿಕೇತನ ರಸ್ತೆ,
ದಕ್ಷಿಣ 5ನೇ ಅಡ್ಡ ರಸ್ತೆ,
ಕುವೆಂಪುನಗರ, ಮೈಸೂರು–570 023

ಗಣಿತ ಶಾಸ್ತ್ರದ ಅಧ್ಯಾಪಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದ ಪ್ರೊ|| ಸಿ. ಶೇಷಾದ್ರಿಯವರು, ನಂತರದಲ್ಲಿ ದೆಹಲಿಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ಪ್ರಶಿಕ್ಷಣ ಪರಿಷತ್ತನ್ನು (ಎನ್.ಸಿ.ಇ.ಆರ್.ಟಿ) ಸೇರಿ ದೀರ್ಘಕಾಲ ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಹಾಗೂ ಮೈಸೂರು ಮತ್ತು ಭುವನೇಶ್ವರದಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್.ಐ.ಇ)ಗಳ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಎನ್.ಸಿ.ಇ.ಅರ್.ಟಿ.ಯ ಹಿರಿಯ ಪ್ರಾಧ್ಯಾಪಕರುಗಳಲ್ಲಿ ಒಬ್ಬರಾದ ಶ್ರೀಯುತರು ಆ ಸಂಸ್ಥೆಯ ಶಿಕ್ಷಣಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕೆಲವು ವಿಶ್ವವಿದ್ಯಾನಿಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಪ್ರೊ. ಶೇಷಾದ್ರಿಯವರು 50ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. 6 ಪುಸ್ತಕಗಳನ್ನು ಬರೆದಿದ್ದಾರೆ. ನಿವೃತ್ತಿಯ ನಂತರ ಥಾಯ್‌ಲ್ಯಾಂಡ್, ಇಥಿಯೋಪಿಯ ಮತ್ತು ಚೈನಾ ದೇಶಗಳಲ್ಲಿ ಶಿಕ್ಷಣದ ತಜ್ಞ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ **"ಶಿಕ್ಷಣಶಾಸ್ತ್ರ** ವಿಷಯ ವಿಶ್ವಕೋಶ**"**ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

Digitised by Bharatavani, CIIL

**ಡಾ. ಎಂ.ಎಸ್. ತಳವಾರ್,** ಎಂ.ಎ., ಎಂ.ಎಡ್., ಪಿಎಚ್.ಡಿ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಜ್ಞಾನಭಾರತಿ,
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ಎಂ.ಎಸ್. ತಳವಾರ್‌ರವರು ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕೆಲ ವರ್ಷಗಳ ಕಾಲ ಕಾರ್ಯನಿರ್ವಹಿಸಿ, ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ವಿಭಾಗದ ಮುಖ್ಯಸ್ಥರಾಗಿ, ಡೀನ್‌ರಾಗಿ, ಶೈಕ್ಷಣಿಕ ಸಿಬ್ಬಂದಿ ಕಾಲೇಜಿನ ನಿರ್ದೇಶಕರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

ಶ್ರೀಯುತರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯಮಟ್ಟದ ಹಲವು ಕಾರ್ಯಾಗಾರಗಳಲ್ಲಿ, ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದ್ದಾರೆ. ಇವರ ಹಲವಾರು ಸಂಶೋಧನಾ ಲೇಖನಗಳು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀಯುತರು ಈಗಾಗಲೇ ಮೂರು ಪ್ರಾಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ 22 ಮಂದಿ ಎಂ.ಫಿಲ್ ಪದವಿಯನ್ನು ಹಾಗೂ 13 ಮಂದಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಶ್ರೀಯುತರು 2009ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದ ವತಿಯಿಂದ (AIATE) "Best Teacher Educator" ಎಂಬ ಪುರಸ್ಕಾರವನ್ನು ಪಡೆದಿದ್ದಾರೆ. ಶ್ರೀಯುತರು 16ಕ್ಕೂ ಹೆಚ್ಚು ಪುಸ್ತಕಗಳನ್ನು ಶಿಕ್ಷಣಶಾಸ್ತ್ರದ ಬಗ್ಗೆ ರಚಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

***

**ಡಾ. ಟಿ. ಪದ್ಮಿನಿ,** ಬಿ.ಎಸ್ಸಿ., ಎಂ.ಎಡ್., ಪಿಎಚ್.ಡಿ.
75, ದಯಾಮಾರ್ಗ, ಸಿದ್ಧಾರ್ಥ ನಗರ,
ಮೈಸೂರು.

ಡಾ. ಟಿ. ಪದ್ಮಿನಿಯವರು 1980ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕಿಯಾಗಿ ತಮ್ಮ ಸೇವೆಯನ್ನು ಆರಂಭಿಸಿ ನಂತರ ಪ್ರವಾಚಕರಾಗಿ, ಪ್ರಾಧ್ಯಾಪಕಿಯಾಗಿ ಮತ್ತು ವಿಭಾಗ ಮುಖ್ಯಸ್ಥೆಯಾಗಿ ದೀರ್ಘಕಾಲ ಸೇವೆ ಸಲ್ಲಿಸಿ 2004ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದರು. ನಿವೃತ್ತಿಯ ನಂತರ ಯುಜಿಸಿ ಯಿಂದ ಎಮಿರೈಟಸ್ ಫೆಲೋಶಿಪ್ ಪಡೆದು 2005 ರಿಂದ 2007ರವರೆಗೆ ಮಾನಸಗಂಗೋತ್ರಿಯಲ್ಲಿ ಸಂಶೋಧನೆ ಕೈಗೊಂಡರು. ಪಿಯಾಜೆ ಪ್ರತಿಪಾದಿತ ಸಂಜ್ಞಾನಾತ್ಮಕ ಸಿದ್ಧಾಂತ ಹಾಗೂ ತತ್‌ಸಂಬಂಧಿತ ಕ್ಷೇತ್ರದಲ್ಲಿ ವಿಶೇಷ ಪರಿಣತಿ ಹೊಂದಿರುವ ಪ್ರೊ. ಪದ್ಮಿನಿಯವರು ಅನೇಕ ಲೇಖನಗಳನ್ನು, ಒಂದು ಪುಸ್ತಕವನ್ನು ಬರೆದಿದ್ದಾರೆ. ನಿವೃತ್ತಿ ನಂತರ ಅಖಿಲ ಭಾರತ ಮಟ್ಟದ 'ಪ್ರಥಮ್' ಸಂಸ್ಥೆಯೊಂದಿಗೆ ತಮ್ಮನ್ನು ತೊಡಗಿಸಿಕೊಂಡು ವಂಚಿತ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ರಮಗಳನ್ನು ನಿರ್ದೇಶಿಸುತ್ತಿರುವುದಲ್ಲದೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ನಡೆಸುತ್ತಿರುವ ಪೂರ್ವ ಪ್ರಾಥಮಿಕ ಶಿಕ್ಷಣದ ಡಿಪ್ಲೋಮಾ ಕಾರ್ಯಕ್ರಮದ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

**ಡಾ. ಎ. ಶಶಿಕಲ,** ಎಂ.ಎ; ಎಂ.ಎಡ್; ಪಿಎಚ್.ಡಿ.
ಪ್ರಾಧ್ಯಾಪಕರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

ಮೂರು ದಶಕಗಳಿಂದ ಮಂಗಳೂರಿನ ಸೇಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪನ ಮಾಡುತ್ತಿದ್ದಾರೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಸಂಪಾದಿಸಿದ್ದಾರೆ ಮತ್ತು ಪ್ರಕಟಿಸಿದ್ದಾರೆ. ಹಲವು ಸಂಸ್ಥೆಗಳ ಸಂಶೋಧನ ಯೋಜನೆಗಳನ್ನು ಕೈಗೊಂಡಿದ್ದಾರೆ. ಕರ್ನಾಟಕ ರಾಜ್ಯ ಡಿ.ಎಡ್. ಪಠ್ಯಕ್ರಮ ರಚನಾ ಸಮಿತಿ ಸದಸ್ಯರಲ್ಲಿ ಒಬ್ಬರಾಗಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ"ದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ.

***

## ಸಂಪಾದಕ ಮಂಡಳಿ ಸದಸ್ಯರ ಪರಿಚಯ

**ಪ್ರೊ. ಬಿ.ಎನ್. ಮಂಜುನಾಥಯ್ಯ,** ಎಂ.ಎ.(ಮನೋವಿಜ್ಞಾನ), ಎಂ.ಎಡ್.
ನಂ. 1009, 'ಕಲ್ಪದ್ರುಮ', E & F ಬ್ಲಾಕ್,
ಉದಯರವಿ ರಸ್ತೆ, ಕುವೆಂಪು ನಗರ, ಮೈಸೂರು.

ಮಂಗಳೂರಿನ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ 2 ವರ್ಷ ಸೇವೆ ಸಲ್ಲಿಸಿ ನಂತರ ಮೈಸೂರಿನ ಸೋಮಾನಿ ಬಿ.ಎಡ್. ಕಾಲೇಜಿನಲ್ಲಿ 4 ವರ್ಷ, ಮಾನಸಗಂಗೋತ್ರಿಯಲ್ಲಿ 26 ವರ್ಷಗಳ ಕಾಲ ಸೇವೆ ಸಲ್ಲಿಸಿ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ

Digitised by Bharatavani, CIIL

ಸೇವೆಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಶ್ರೀಯುತರು 1977–78 ರಲ್ಲಿ ಯುನೈಟೆಡ್ ಕಿಂಗ್‌ಡಮ್‌ನ(ಇಂಗ್ಲೆಂಡ್) 'ಕಾಮನ್‌ವೆಲ್ತ್ ಎಜುಕೇಷನ್ ಫೆಲೋಷಿಪ್' ವಿದ್ಯಾರ್ಥಿ ವೇತನ ಪಡೆದು ಲಂಡನ್ ವಿಶ್ವವಿದ್ಯಾನಿಲಯದ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ನಲ್ಲಿ ವಿಶೇಷ ಶಿಕ್ಷಣದ ಬಗ್ಗೆ ಒಂದು ವರ್ಷ ಕಾಲ ಅಧ್ಯಯನ ಮಾಡಿ ಅಸೋಸಿಯೇಟ್‌ಷಿಪ್ ಪದವಿ ಪಡೆದಿದ್ದಾರೆ. ಹಲವಾರು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಆನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 8 ವರ್ಷ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

**ಪ್ರೊ. ಸಿ. ಜಿ. ವೆಂಕಟರಮಣ ಶೆಟ್ಟಿ,** ಬಿ.ಎಸ್ಸಿ; ಎಂ.ಎಡ್; ಡಿ.ಬಿ.ಇ; ಡಿ.ಇ.ವಿ.ಜಿ.
ನಂ. 383, 14ನೇ ಮುಖ್ಯ ರಸ್ತೆ,
ಸರಸ್ವತಿ ಪುರಂ, ಮೈಸೂರು.

ಶ್ರೀಯುತರು ಶಿಕ್ಷಕರಾಗಿ, ಪ್ರಶಿಕ್ಷಕರಾಗಿ, ಶೈಕ್ಷಣಿಕ ಮೇಲ್ವಿಚಾರಕರಾಗಿ, ಸಮನ್ವಯಾಧಿಕಾರಿಯಾಗಿ, ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, SKMK ಶಿಕ್ಷಣ ಮಹಾವಿದ್ಯಾಲಯದ ಸಂಸ್ಥಾಪಕ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ. NCERT, DSERT ಹಾಗೂ ಭಾರತ ಸರ್ಕಾರದ EdCILನ ಅನೇಕ ಪ್ರಾಯೋಜನೆಗಳಲ್ಲಿ, ಕಾರ್ಯಾಗಾರಗಳಲ್ಲಿ ಮತ್ತು ಇತರ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಕೆಲವು ಅಂತರರಾಷ್ಟ್ರೀಯ ಕಾರ್ಯಾಗಾರಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. 20ಕ್ಕೂ ಹೆಚ್ಚು ಪಠ್ಯ ಪುಸ್ತಕಗಳನ್ನು ಬರೆದಿರುವುದಲ್ಲದೆ ಕೆಲವು ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಬರೆದಿದ್ದಾರೆ. ಶಿಕ್ಷಣಕ್ಕೆ ಸಲ್ಲಿಸಿರುವ ತಮ್ಮ ಸೇವೆಗಾಗಿ ಅನೇಕ ಪ್ರಶಸ್ತಿ/ಪುರಸ್ಕಾರಗಳನ್ನು ಪಡೆದಿದ್ದಾರೆ. ಕೆಲವು ಶೈಕ್ಷಣಿಕ ಸಂಸ್ಥೆಗಳ ಸಂಸ್ಥಾಪಕರಾಗಿಯೂ ಶ್ರೀಯುತರು ಸೇವೆ ಸಲ್ಲಿಸಿದ್ದಾರೆ. ಶೈಕ್ಷಣಿಕ ಸಂಶೋಧನೆಗಾಗಿ NCERT ಯಿಂದ ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿಗಳಿಸಿದ್ದಾರೆ. ಆಕಾಶವಾಣಿಯ ಹಲವಾರು ಕಾರ್ಯಕ್ರಮಗಳಲ್ಲಿ ಇಂದಿಗೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

**ಡಾ. ಎಸ್. ಶ್ರೀಕಂಠಸ್ವಾಮಿ,** ಬಿ.ಎಸ್ಸಿ., ಎಂ.ಎ., ಎಂ.ಎಡ್., ಪಿಎಚ್.ಡಿ.
ನಂ. 108, 'ಶ್ರೀಮಂಜು'
4ನೇ ಅಡ್ಡರಸ್ತೆ, ಆರ್.ಕೆ.ಲೇಔಟ್,
ಪದ್ಮನಾಭನಗರ, ಬೆಂಗಳೂರು–560 070

ಶ್ರೀಯುತರು ಬೆಂಗಳೂರಿನ ಪ್ರತಿಷ್ಠಿತ ಕ್ರೈಸ್ಟ್ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದ ಹೆಚ್ಚುವರಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದು, ಸುಮಾರು 18ಕ್ಕೂ ಹೆಚ್ಚು ವಿಷಯಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳು/ಅಧ್ಯಾಪಕರುಗಳು ಪಿಎಚ್.ಡಿ. ಮಾಡಲು ಸಹಕಾರಿಯಾಗಿದ್ದಾರೆ. ಪ್ರಸ್ತುತ ಎಂ.ಫಿಲ್ ಮತ್ತು ಪಿಎಚ್.ಡಿ. ಕೋರ್ಸ್‌ಗಳಿಗೆ ಸಂಶೋಧನಾ ವಿಧಾನಗಳನ್ನು ಬೋಧಿಸುತ್ತಿದ್ದಾರೆ. ಹಾಗೂ ಸಂಶೋಧಕರಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ.

ಸೇಂಟ್ ಪ್ಯಾಟ್ರಿಕ್ಸ್ ಪ್ರೌಢಶಾಲೆಯಲ್ಲಿ ಸುಮಾರು 10 ವರ್ಷಗಳ ಕಾಲ ಸೇವೆ ಸಲ್ಲಿಸಿ, ಆನಂತರ ಬೆಂಗಳೂರಿನ ರಾಷ್ಟ್ರೀಯ ವಿದ್ಯಾಲಯದ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಸುಮಾರು 25 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಆರ್.ವಿ. ಟೀಚರ್ಸ್ ಕಾಲೇಜಿನ ಡಿ.ಇ.ಎಸ್. ಮತ್ತು ಐ.ಎ.ಎಸ್.ಇ. ವಿಭಾಗದಲ್ಲಿ ಸಂಯೋಜನಾಧಿಕಾರಿಯಾಗಿ ನೂರಾರು ಸೇವಾ ನಿರತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಡಿ.ಎಸ್.ಇ.ಆರ್.ಟಿ.ಯ ವಿಜ್ಞಾನ ಪಠ್ಯವಸ್ತು ಸಮಿತಿ ಹಾಗೂ ಪಠ್ಯ ಪುಸ್ತಕ ಸಮಿತಿಯಲ್ಲಿ ಪರಿಶೀಲಕರಾಗಿ ಕಾರ್ಯನಿರ್ವಹಿಸಿದ್ದಾರೆ ಮತ್ತು ಸ್ಯಾಟಲೈಟ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಬಿ.ಇಡಿ. ಪಠ್ಯ ವಸ್ತುವಿನ ರಚನೆಯಲ್ಲಿ ಶೈಕ್ಷಣಿಕ ಮನೋವಿಜ್ಞಾನ ವಿಷಯದ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

"ವಿಮರ್ಶಾತ್ಮಕ ಆಲೋಚನಾ ಕೌಶಲ್ಯಗಳು" ಎಂಬ ಇವರ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಲಭಿಸಿದೆ. ಇವರ ಮಾರ್ಗದರ್ಶನದಲ್ಲಿ 5 ಉಪನ್ಯಾಸಕರು ಪಿಎಚ್.ಡಿ. ಪದವಿ ಪಡೆದರೆ, ಇಬ್ಬರು ಪಿಎಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ ಹಾಗೂ ಪ್ರಸ್ತುತ 6 ಉಪನ್ಯಾಸಕರು ಪಿಎಚ್.ಡಿ.ಯನ್ನು ಮಾಡುತ್ತಿದ್ದಾರೆ. ಇದಲ್ಲದೇ ಇವರ ಮಾರ್ಗದರ್ಶನದಲ್ಲಿ 10 ಜನರು ಎಂ.ಫಿಲ್ ಪದವಿಯನ್ನು ಗಳಿಸಿದ್ದಾರೆ.

2008ನೇ ಇಸವಿಯಲ್ಲಿ ಕರ್ನಾಟಕ ರಾಜ್ಯವು 10ನೇ ತರಗತಿಯ ಪ್ರಶ್ನೆಪತ್ರಿಕೆಯ ಸ್ವರೂಪವನ್ನು ಪರಿಶೀಲಿಸಿ ಸಲಹೆ ನೀಡಲು ರಚಿಸಿದ್ದ ರಾಜ್ಯ ಮಟ್ಟದ ಸಮಿತಿ ಅಧ್ಯಕ್ಷರಾಗಿ ವರದಿಯನ್ನು ಮಂಡಿಸಿ ಆ ದಿಕ್ಕಿನಲ್ಲಿ ಬದಲಾವಣೆ ತರಲು ಕಾರಣಕರ್ತರಾಗಿದ್ದಾರೆ.

1988ರಲ್ಲಿ ಇವರು ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ದೆಹಲಿಯ ಎನ್.ಸಿ.ಇ.ಆರ್.ಟಿ. ಯಿಂದ ಪ್ರಶಸ್ತಿ ದೊರಕಿದೆ.

Digitised by Bharatavani, CIIL

ಇದಲ್ಲದೇ ಶ್ರೀಯುತರು ಸಂಶೋಧನೆ ಮತ್ತು ಸೇವಾನಿರತ ಶಿಕ್ಷಣಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ಪರಿಗಣಿಸಿ ಸ್ವಯಂ ಸೇವಾ ಸಂಘಗಳು ಇವರಿಗೆ "ದ್ರೋಣ ಪುರಸ್ಕಾರ" ಮತ್ತು ಜ್ಞಾನ ಸರಸ್ವತಿ" ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

**ಪ್ರೊ. ಕೆ. ಆರ್. ನಾಗರತ್ನ,** ಎಂ.ಎ., ಎಂ.ಎಡ್., ಪಿ.ಜಿ.ಡಿ.ಎಚ್.ಇ.
ನಿವೃತ್ತ ಪ್ರಾಧ್ಯಾಪಕರು
ಸೇಂಟ್ ಜೋಸೆಫ್ ಶಿಕ್ಷಣ ಮಹಾವಿದ್ಯಾಲಯ
ಜಯಲಕ್ಷ್ಮಿಪುರಂ, ಮೈಸೂರು.

ಪ್ರೊ. ಕೆ.ಆರ್. ನಾಗರತ್ನರವರು 1973 ರಿಂದ 1991ರವರೆಗೆ ಹಾಸನದ ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು 1991 ರಿಂದ ನಿವೃತ್ತರಾಗುವವರೆಗೆ ಮೈಸೂರಿನ ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಹಲವು ಪುನಶ್ಚೇತನ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಹಾಸನದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ವಿಚಾರ ಸಂಕಿರಣದಲ್ಲಿ 'ಕನ್ನಡ ಕಾವ್ಯ' ಎಂಬ ಪ್ರಬಂಧ ಮಂಡಿಸಿದ್ದರು. ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶದ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.

***

## ಯೋಜನಾ ಸಹಾಯಕರ ಪರಿಚಯ

**ಶ್ರೀ ಎ.ಎಲ್. ಚಿದಾನಂದ** ಎಂ.ಎಡ್., ಪಿ.ಜಿ.ಡಿ.ಎಚ್.ಇ.
ಸಂಶೋಧನಾ ವಿದ್ಯಾರ್ಥಿ
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮಾನಸಗಂಗೋತ್ರಿ, ಮೈಸೂರು – 06

ಶ್ರೀ ಎ. ಎಲ್. ಚಿದಾನಂದರವರು 2009ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಶಿಕ್ಷಣಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಶಿಕ್ಷಣಶಾಸ್ತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇವರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ. ಶ್ರೀಯುತರು 2009 ರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಿಂದ ಹೊರತರುತ್ತಿರುವ "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಪ್ರಾಯೋಜನೆಯಲ್ಲಿ ಯೋಜನಾ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಲೇಖಕರ ಪರಿಚಯ

**ಡಾ. ಆಶಾ ಬಿ.ಎನ್.** ಬಿ.ಎಸ್ಸಿ; ಎಂ.ಎಡ್; ಪಿ.ಜಿ.ಡಿ.ಹೆಚ್.ಇ; ಪಿಎಚ್.ಡಿ.
ಪ್ರಾಂಶುಪಾಲರು
ಸೋಮನಿ ಶಿಕ್ಷಣ ಮಹಾವಿದ್ಯಾಲಯ
ಸರಸ್ವತಿ ಪುರಂ, ಮೈಸೂರು–09

ಇವರು ಪ್ರಸ್ತುತ ಮೈಸೂರಿನಲ್ಲಿರುವ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯು.ಜಿ.ಸಿ. ಯ 'ಪರಿಸರ ವಿಜ್ಞಾನ' ಪಠ್ಯಕ್ರಮ ಅನುಸರಿಸಿ ಪದವಿ ವಿದ್ಯಾರ್ಥಿಗಳಿಗೆ 'Environmental Science' ಪುಸ್ತಕವನ್ನು ಬರೆದಿದ್ದಾರೆ. 2003–04ರ ಸಾಲಿನಲ್ಲಿ ಎನ್.ಸಿ.ಇ.ಆರ್.ಟಿ. ಯ ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ಪಡೆದಿದ್ದಾರೆ. 2004–05 ರಲ್ಲಿ NEAPA ಹಾಗೂ ದೆಹಲಿ ವಿಶ್ವವಿದ್ಯಾನಿಲಯದ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ತಮ್ಮ ಕ್ರಿಯಾ ಸಂಶೋಧನೆಯೊಂದರ ವರದಿಯನ್ನು ಮಂಡಿಸಿದ್ದಾರೆ.

***

**ಶ್ರೀಮತಿ ಆಶಾ ಪ್ರೇಮಲತಾ** ಎಂ.ಎ; ಎಂ.ಎಡ್; ಎಂ.ಫಿಲ್.
ಪ್ರಾಂಶುಪಾಲರು
ಎಸ್‌ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು

ಇವರು ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 26 ವರ್ಷಗಳಿಂದ ಶಿಕ್ಷಣಶಾಸ್ತ್ರ ರೀಡರ್ ಆಗಿ ಸೇವೆ ಸಲ್ಲಿಸಿ ಪ್ರಸ್ತುತ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸಮನ್ವಯ ಸಮಿತಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಶ್ರೀಮತಿಯವರು ಹಲವಾರು ವರ್ಷಗಳು ಬಿ.ಓ.ಇ. ಮಂಡಳಿಯ ಸದಸ್ಯರಾಗಿ ಹಾಗೂ ಪ್ರಸ್ತುತ ಬಿ.ಓ.ಎಸ್. ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***

Digitised by Bharatavani, CIIL

**ಡಾ. ಇಂದ್ರಾಣಿ ಬಿ.,** ಎಂ.ಎ.(ಇಂಗ್ಲಿಷ್), ಎಂ.ಎ.(ಕನ್ನಡ), ಎಂ.ಎ.(ಹಿಂದಿ), ಎಂ.ಎಡ್; ಪಿಜಿಡಿಹೆಚ್ಇ, ಪಿಎಚ್.ಡಿ.
ಪ್ರಾಧ್ಯಾಪಕರು,
ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ,
ಪ್ರಶಾಂತ ನಗರ, ಸ್ಟೇಡಿಯಂ ರಸ್ತೆ, ಚಿತ್ರದುರ್ಗ.

ಹಿಂದಿ ಓದುಗಾರಿಕೆ ಬಗ್ಗೆ ಪಿಹೆಚ್.ಡಿ. ಪಡೆದಿರುವ ಶ್ರೀಮತಿಯವರು ಮುಖ್ಯೋಪಾಧ್ಯಾಯಿನಿಯಾಗಿ ತಮ್ಮ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿದರು. ಮಂಗಳೂರಿನಲ್ಲಿ ಹಿಂದಿ ಬಿ.ಎಡ್. ಕಾಲೇಜಿನ ಪ್ರಾಂಶುಪಾಲರಾಗಿಯೂ, ಮೈಸೂರಿನ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ ಮತ್ತು ಸರ್ಕಾರಿ ಹಿಂದಿ ಬಿ.ಎಡ್. ಕಾಲೇಜು, ಚಿತ್ರದುರ್ಗಗಳಲ್ಲಿ ಅಧ್ಯಾಪಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಬ್ಲಾಕ್ ಶಿಕ್ಷಣಾಧಿಕಾರಿ(BEO)ಯಾಗಿಯೂ ಕೆಲಸ ಮಾಡಿದ್ದಾರೆ. ಹಿಂದಿ, ಕನ್ನಡ, ಶಿಕ್ಷಣಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

***

**ಪ್ರೊ. ಉಮಾ ರಾಜಶೇಖರ್** ಎಂ.ಎ., ಎಂ.ಎಡ್., ಎಂ.ಫಿಲ್.
ಪ್ರಾಂಶುಪಾಲರು
ಎಸ್.ಕೆ.ಎಂ.ಕೆ. ಶಿಕ್ಷಣ ಮಹಾವಿದ್ಯಾಲಯ
ಮೈಸೂರು

ಶ್ರೀಮತಿಯವರು 29 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದು 14 ವರ್ಷ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಕಳೆದ 4 ವರ್ಷಗಳಿಂದ ಇವರು ಮೈಸೂರಿನ ಶ್ರೀ ಕಾಗಿನೆಲೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಮತಿಯವರು ತುಮಕೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಹಾಗೂ ವ್ಯವಸ್ಥಾಪನಾ ಮಂಡಳಿ (Academic Council)ಯ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ಹಾಗೆಯೇ ಕುವೆಂಪು ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ (Academic Council)ಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ. ಶ್ರೀಮತಿಯವರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿರುತ್ತಾರೆ.

***

**ಡಾ. ಉಷಾ ಹೆಚ್. ಬಿ.** ಎಂ.ಎಸ್ಸಿ., ಎಂ.ಎಡ್., ಪಿಎಚ್.ಡಿ.
310, 13ನೇ ಮೇನ್, 2ನೇ ಹಂತ,
ಸಿದ್ಧಾರ್ಥ ನಗರ, ಮೈಸೂರು

ಡಾ. ಹೆಚ್.ಬಿ. ಉಷಾ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ(ಇಂದಿನ ಕರಾಮುವಿ) ಶಿಕ್ಷಣಶಾಸ್ತ್ರ ವಿಭಾಗದಲ್ಲಿ 1982ರಲ್ಲಿ ಮಾನಸ ಗಂಗೋತ್ರಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕಿಯಾಗಿ ಸೇರಿದರು. ಅಲ್ಲಿಯ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ 2007ರ ವರೆವಿಗೂ ಸೇವೆ ಸಲ್ಲಿಸಿದರು. 2007 ರಿಂದ ಎರಡು ವರ್ಷಗಳವರೆಗೆ ಮೈಸೂರಿನ ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ಸದ್ಯದಲ್ಲಿ ಇವರು ಸುತ್ತೂರಿನಲ್ಲಿ ಶಿಕ್ಷಣಶಾಸ್ತ್ರ ಅಧ್ಯಯನದ ಸ್ನಾತಕೋತ್ತರ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಬಿ.ಎಡ್., ಎಂ.ಎಡ್. ಮತ್ತು ಬಿ.ಎ. ಕಾರ್ಯಕ್ರಮಗಳ ಶಿಕ್ಷಣಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಸ್ವಅಧ್ಯಯನ ಪಾಠಗಳನ್ನು ಬರೆದಿರುವ ಅನುಭವ ಹೊಂದಿರುವುದಲ್ಲದೆ, ಅನೇಕ ಸಮ್ಮೇಳನಗಳಲ್ಲಿ ಭಾಗವಹಿಸಿ ಸಂಶೋಧನಾ ಲೇಖನಗಳನ್ನು ಮಂಡಿಸಿದ್ದಾರೆ.

***

**ಡಾ. ಎರ್ರಿಸ್ವಾಮಿ ಎಂ.ಸಿ.** ಎಂ.ಎಸ್ಸಿ., ಎಂ.ಎ., ಎಂ.ಇಡಿ., ಎಂ.ಫಿಲ್., ಪಿಎಚ್.ಡಿ., ಪಿ.ಜಿ.ಡಿ.ಎಚ್.ಇ.
ಸಹ ಪ್ರಾಧ್ಯಾಪಕರು
ಸ್ಕೂಲ್ ಆಫ್ ಎಜುಕೇಷನ್ (ಎಂ.ಇಡಿ.)
ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ,
ಬೆಳಗಾವಿ – 591 156

ಶ್ರೀಯುತರು ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 1996 ರಿಂದ 2012 ರವರೆಗೆ ಬೆಂಗಳೂರಿನ ಡಿ.ಇಡಿ. ಕಾಲೇಜು ಹಾಗೂ ಬಿ.ಇಡಿ. ಕಾಲೇಜುಗಳಲ್ಲಿ ಹಾಗೂ ಸರ್ವಜ್ಞ ಶಿಕ್ಷಣ ಮಹಾವಿದ್ಯಾಲಯ, ವೆಂಕಟ್ ಇಂಟರ್‌ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ ಹಾಗೂ ಮೈಸೂರಿನ ಹತ್ತಿರ ಸುತ್ತೂರಿನಲ್ಲಿರುವ ಜೆ.ಎಸ್.ಎಸ್. ಸ್ನಾತಕೋತ್ತರ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ವಿಷಯಾಧಾರಿತ ಇತಿಹಾಸ ಹಾಗೂ ಪೌರನೀತಿ "ಬೋಧನಾ ವಿಧಾನ" ಮತ್ತು "ದೂರ ಶಿಕ್ಷಣ"ಕ್ಕೆ ಸಂಬಂಧಿಸಿದಂತೆ ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀಯುತರು 75 ಕ್ಕಿಂತ ಹೆಚ್ಚು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಸಮ್ಮೇಳನ ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸಿ 35 ಕ್ಕಿಂತ ಹೆಚ್ಚು ಪ್ರಬಂಧಗಳನ್ನು ಮಂಡಿಸಿದ್ದಾರೆ.

Digitised by Bharatavani, CIIL

**ಶ್ರೀ ಕಾಂತರಾಜ್ ಎಂ.ಎಸ್.** ಎಂ.ಎಸ್ಸಿ., ಎಂ.ಎಡ್,
ಸಹಾಯಕ ಪ್ರಾಧ್ಯಾಪಕರು
ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ
ಅರಸೀಕೆರೆ, ಹಾಸನ (ಜಿ).

ಶ್ರೀಯುತರು ಪಿ.ಎಚ್.ಡಿ. ಪದವಿಗಾಗಿ ಡಾ. ಜಿ. ಶೀಲಾ, ಸಹಾಯಕ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ ಇವರ ಮಾರ್ಗದರ್ಶನದಲ್ಲಿ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ. ರಾಜ್ಯ, ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿ ಹಲವು ರಾಜ್ಯ, ರ಼ಾಷ್ಟ್ರ ಮಟ್ಟದಲ್ಲಿನ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. 2010ರಿಂದ ಇಲ್ಲಿಯವರೆಗೂ ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

***

**ಶ್ರೀ ಕುಮಾರ್ ಎಸ್.ಎನ್.** ಎಂ.ಎಸ್ಸಿ.
ಆಯ್ಕೆ ಶ್ರೇಣಿ ಗ್ರಂಥಪಾಲಕರು
ಮಹಿಳಾ ಸರ್ಕಾರಿ ಕಾಲೇಜು,
ಮಂಡ್ಯ – 571 401

ಪ್ರಸ್ತುತ ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಆಯ್ಕೆ ಶ್ರೇಣಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು ಸುಮಾರು 11 ವರ್ಷಗಳಿಗೂ ಹೆಚ್ಚು ಕಾಲ ಗ್ರಂಥಪಾಲಕರಾಗಿ ವಿವಿಧ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎಲ್.ಐ.ಎಸ್ಸಿ.ಗೆ ಸಂಬಂಧಿಸಿದ ಹಲವಾರು ಸಿದ್ಧಪಾಠಗಳನ್ನು ರಚಿಸಿದ್ದಾರೆ. ಇವರಿಂದ ರಚಿತವಾದ ಹಲವಾರು ಲೇಖನಗಳು ರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಮಂಡನೆಯಾಗಿವೆ.

***

**ಡಾ. ಕೃಷ್ಣಪ್ಪ ಎನ್.** ಎಂ.ಎ., ಎಂ.ಎಡ್., ಎಂ.ಫಿಲ್., ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು – 06

ಶ್ರೀಯುತರು 17 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಸಿದ್ಧಪಾಠಗಳನ್ನು ಬರೆದಿದ್ದಾರೆ. ಶ್ರೀಯುತರು ಕರ್ನಾಟಕ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಶಿಕ್ಷಣಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದಿರುತ್ತಾರೆ. ಇವರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ.

***

**ಡಾ. ಕೊಂಗವಾಡ ಎನ್. ಬಿ.**
ಸನ ಕಾಲೇಜ್ ಆಫ್ ಎಜುಕೇಷನ್
ಬೈಂದೇವರಕೊಪ್ಪ, ಹುಬ್ಬಳ್ಳಿ.

ಹುಬ್ಬಳ್ಳಿಯ ಸನಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ಇವರು ಮೂವತ್ತು ವರ್ಷಗಳ ಆಡಳಿತಾತ್ಮಕ ಹಾಗೂ ಬೋಧನಾನುಭವಗಳನ್ನು ಹೊಂದಿದ್ದಾರೆ. ಬಿ.ಎಡ್. ಹಾಗೂ ಎಂ.ಎಡ್. ವಿದ್ಯಾರ್ಥಿಗಳಿಗಾಗಿ ಒಟ್ಟು 75 ಗ್ರಂಥಗಳನ್ನು ರಚಿಸಿದ್ದಾರೆ.

***

**ಶ್ರೀ ಗೋಪಾಲಸ್ವಾಮಿ ಎಂ.** ಎಂ.ಎಸ್ಸಿ.
ಉಪ ಗ್ರಂಥಪಾಲಕರು
ಕರಾಮುವಿ, ಮಾನಸಗಂಗೋತ್ರಿ, ಮೈಸೂರು

ಕ.ರಾ.ಮು.ವಿ.ಯ ಮೈಸೂರಿನಲ್ಲಿ ಗ್ರಂಥಾಲಯದ ಉಪ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಯುತರು ಈ ಹಿಂದೆ 10 ವರ್ಷಗಳ ಕಾಲ ಬಾಳೆಹೊನ್ನೂರಿನಲ್ಲಿರುವ ಕೇಂದ್ರಿಯ ಕಾಫಿ ಸಂಶೋಧನಾ ಸಂಸ್ಥೆಯಲ್ಲಿ (ಸಿ.ಸಿ.ಆರ್.ಐ.) ಸಹಾಯಕ ಗ್ರಂಥಪಾಲಕರಾಗಿ ಹಾಗೂ ಮೂರು ವರ್ಷಗಳ ಕಾಲ ಮೈಸೂರಿನ ಫರೂಖಿಯಾ ಫಾರ್ಮಸಿ ಕಾಲೇಜ್‌ನಲ್ಲಿ ಗ್ರಂಥಪಾಲಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಹಲವು ರಾಷ್ಟ್ರೀಯ/ ಅಂತರರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಮೌಲಿಕವಾದ ಪ್ರಬಂಧಗಳನ್ನು ಮಂಡಿಸಿದ್ದಾರೆ.

***

**ಡಾ. ಜಗನ್ನಾಥ ಕೆ. ಡಾಂಗೆ** ಎಂ.ಎ., ಎಂ.ಎಡ್., ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ

ಶ್ರೀಯುತರು ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ಬಿ.ಎಸ್ಸಿ. ಮತ್ತು ಎಂ.ಇಡಿ. ಪದವಿ, ಮದ್ರಾಸ್ ವಿಶ್ವವಿದ್ಯಾನಿಲಯದಿಂದ

Digitised by Bharatavani, CIIL

ಮನಃಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಗಣಕ ಯಂತ್ರ ಆಧಾರಿತ ಬೋಧನೆ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಇವರು ಪ್ರಸ್ತುತ ಕುವೆಂಪು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಹಲವಾರು ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಶೈಕ್ಷಣಿಕ ತಂತ್ರಜ್ಞಾನ, ಬೋಧನೆ ಮತ್ತಿತರ ಸಂಬಂಧಿತ ವಿಚಾರಗಳ ಬಗ್ಗೆ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಅನೇಕ ಕಾರ್ಯಾಗಾರಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ ಹಾಗೂ ಲೇಖನಗಳನ್ನು ಬರೆದಿದ್ದಾರೆ.

***

**ಡಾ. ಎಂ.ಎಸ್. ತಳವಾರ್,** ಎಂ.ಎ., ಎಂ.ಎಡ್., ಪಿಎಚ್.ಡಿ.
ಪ್ರಾಧ್ಯಾಪಕರು,
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಜ್ಞಾನಭಾರತಿ,
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಶ್ರೀಯುತರ ಪರಿಚಯವನ್ನು ಸಲಹಾ ಸಮಿತಿ ಸದಸ್ಯರ ಕಿರು ಪರಿಚಯದಲ್ಲಿ ಮಾಡಿಕೊಡಲಾಗಿದೆ.

***

**ಡಾ. ತಿಪ್ಪೇಸ್ವಾಮಿ** ಎಂ.ಎ; ಪಿಎಚ್.ಡಿ.
ಹಿಂದಿ ಪ್ರಾಧ್ಯಾಪಕರು(ನಿ)
369, AB ಬ್ಲಾಕ್,
ಕುವೆಂಪುನಗರ, ಮೈಸೂರು – 23

ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಪ್ರಾಧ್ಯಾಪಕರಾಗಿ, ವಿಭಾಗಾಧ್ಯಕ್ಷರಾಗಿ ಮೂರು ದಶಕಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಹಿಂದಿ ಮತ್ತು ಕನ್ನಡದಲ್ಲಿ 55ಕ್ಕೂ ಹೆಚ್ಚು ಮೌಲಿಕ, ಅನುವಾದಿತ ಹಾಗೂ ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಭಾರತ ಸರ್ಕಾರದ ಹಿಂದಿಯೇತರ ಹಿಂದಿ ಲೇಖಕರ ರಾಷ್ಟ್ರೀಯ ಪುರಸ್ಕಾರ, ಉತ್ತರ ಪ್ರದೇಶ ಸರ್ಕಾರದ ಸೌಹಾರ್ದ ಸನ್ಮಾನ ಸೇರಿದಂತೆ ಅನೇಕ ಪುರಸ್ಕಾರಗಳನ್ನು ಪಡೆದಿದ್ದಾರೆ. ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗೂ ಇವರು ಭಾಜನರಾಗಿದ್ದಾರೆ.

***

**ಶ್ರೀ ನರಸಿಂಗಪ್ಪ ಹೆಚ್.ಎನ್.** ಎಂ.ಎ., ಎಂ.ಎಡ್., ಎಂ.ಫಿಲ್.
ಸಹಾಯಕ ಪ್ರಾಧ್ಯಾಪಕರು
ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ

ಶ್ರೀಯುತರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೋಕಿನ ಹಂದ್ರಾಳು ಗ್ರಾಮದವರು. ತುಮಕೂರಿನ ಶಾಂತಿನಿಕೇತನ ಮತ್ತು ಶ್ರೀ ಡಿ.ಕೆ.ಶಿ. ಡಿ.ಎಡ್. ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಬೋಧಕರಾಗಿ ಸೇವೆ ಸಲ್ಲಿಸಿದರು. ಅನಂತರ ಎಂ.ಎಸ್. ರಾಮಯ್ಯ ಶಿಕ್ಷಣ ಮಹಾವಿದ್ಯಾಲಯ ಬೆಂಗಳೂರು ಇಲ್ಲಿ ಎರಡು ವರ್ಷಗಳ ಕಾಲ ಶಿಕ್ಷಣಶಾಸ್ತ್ರದ ಉಪನ್ಯಾಸಕರಾಗಿ ಕೆಲಸ ಮಾಡಿದರು. ಇವರು ರಂಗಭೂಮಿ ಹಾಗೂ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಶ್ರೀಯುತರು 2009 ರಿಂದ ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***

**ಡಾ. ನರಸಿಂಹಮೂರ್ತಿ ಆರ್.** ಬಿ.ಎಸ್ಸಿ; ಎಂ.ಎ; ಎಂ.ಎಡ್; ಎಲ್.ಎಲ್.ಬಿ; ಪಿಎಚ್.ಡಿ.
ಪ್ರಾಂಶುಪಾಲರು,
ಜ್ಞಾನೇಶ್ವರಿ ಶಿಕ್ಷಣ ಮಹಾವಿದ್ಯಾಲಯ,
ಸಾಗರ ರಸ್ತೆ, ಭಟ್ಕಳ

ಇವರು ಸೆಪ್ಟಂಬರ್ 1980 ರಿಂದ ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಎನ್.ಸಿ.ಟಿ.ಇ. ಬೆಂಗಳೂರು ಇದರ ನಿರೀಕ್ಷಣ ತಂಡದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುವರು. ಶ್ರೀಯುತರು ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಸಮಿತಿಗಳಲ್ಲಿ ಸದಸ್ಯರು ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಸಾಮಾಜಿಕ ಮತ್ತು ಶೈಕ್ಷಣಿಕ ಸಂಘಟನೆಗಳಲ್ಲಿ ಅಧ್ಯಕ್ಷರು ಮತ್ತು ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

**

**ಡಾ. ನಾಗರಾಜ್ ಜಿ. ಯು.** ಎಂ.ಎಸ್ಸಿ., ಎಂ.ಎಡ್., ಪಿಜಿಡಿಎಚ್ಇ, ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ.

2003 ರಿಂದ ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯ, ಹರಿಹರದಲ್ಲಿ ಗಣಿತ ವಿಷಯದ ಪ್ರಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿ ನಂತರ ಇವರು ಅಲ್ಲಿಯ ಎಂ.ಎಡ್. ವಿಭಾಗದಲ್ಲಿ ಸಂಯೋಜನಾಧಿಕಾರಿಯಾಗಿ

Digitised by Bharatavani, CIIL

ಸೇವೆಯನ್ನು ಸಲ್ಲಿಸಿ ನಂತರ ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾವೇರಿ ಶಿಕ್ಷಣ ಮಹಾವಿದ್ಯಾಲಯ, ಕೂಡಿಗೆಹಳ್ಳಿ, ಬೆಂಗಳೂರು ಇಲ್ಲಿ ಸುಮಾರು 5 ವರ್ಷಗಳ ಕಾಲ ಭೌತ ಮತ್ತು ಗಣಿತ ಶಾಸ್ತ್ರಗಳ ಪ್ರಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿದ ನಂತರ ಪ್ರಸ್ತುತ 2010 ರಿಂದ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇಲ್ಲಿನ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಪಿಎಚ್.ಡಿ. ಪದವಿಯನ್ನು 2012 ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದಿಂದ ಪಡೆದಿದ್ದಾರೆ. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನ, ಕಾರ್ಯಗಾರಗಳಲ್ಲಿ ಭಾಗವಹಿಸಿ ಲೇಖನಗಳನ್ನು ಮಂಡಿಸಿದ್ದಾರೆ.

***

**ಡಾ. ನಾಗೇಂದ್ರ ಕುಮಾರ್ ಆರ್.** ಎಂ.ಎ; ಎಂ.ಎಡ್; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ,
ಮೈಸೂರು – 06

ಇವರು 17 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕ.ರಾ.ಮು.ವಿ.ಯ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಸಿದ್ಧಪಾಠಗಳನ್ನು ಬರೆದಿದ್ದಾರೆ.

***

**ಡಾ. ಪದ್ಮಿನಿ ಟಿ.** ಬಿ.ಎಸ್ಸಿ., ಎಂ.ಎಡ್., ಪಿಎಚ್.ಡಿ.
75, ದಯಾಮಾರ್ಗ, ಸಿದ್ಧಾರ್ಥ ನಗರ,
ಮೈಸೂರು.

ಶ್ರೀಮತಿಯವರ ಪರಿಚಯವನ್ನು ಸಲಹಾ ಸಮಿತಿ ಸದಸ್ಯರ ಪರಿಚಯದಲ್ಲಿ ಮಾಡಿಕೊಡಲಾಗಿದೆ.

***

**ಶ್ರೀ ಬಸವಂತರಾಯ ಪಾಟೀಲ**
ಪ್ರಾಧ್ಯಾಪಕರು
ಎಸ್.ಕೆ.ಎಂ.ಕೆ. ಶಿಕ್ಷಣ ಮಹಾವಿದ್ಯಾಲಯ, ರಾಯಚೂರು

ಶ್ರೀ ಬಸವಂತರಾಯ ಪಾಟೀಲರು ಯಾದಗಿರಿಯಲ್ಲಿ 2 ವರ್ಷಗಳ ವರೆಗೆ ಪದವಿ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಮತ್ತು ಯಾದಗಿರಿಯ ಮುರಾರ್ಜಿ ದೇಸಾಯಿ ವಿದ್ಯಾಲಯದಲ್ಲಿ 3 ವರ್ಷಗಳ ವರೆಗೆ ಪ್ರಾಚಾರ್ಯರಾಗಿ ಕೆಲಸ ಮಾಡಿದ ನಂತರ ಸದ್ಯದಲ್ಲಿ ರಾಯಚೂರಿನ ಎಸ್.ಕೆ.ಎಂ.ಕೆ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 6 ವರ್ಷಗಳಿಂದ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***

**ಶ್ರೀ ಮಂಜು ಎನ್. ಡಿ.** ಎಂ.ಎ; ಎಂ.ಎಡ್; ಪಿಜಿಡಿಹೆಚ್ಇ
ಸಂಶೋಧನಾ ವಿದ್ಯಾರ್ಥಿ
ಶಿಕ್ಷಣಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಇವರು ಕೆ. ಆರ್. ನಗರದಲ್ಲಿರುವ ಯಡತೊರೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ ಈಗ ಮಾನಸಗಂಗೋತ್ರಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ UGC ವಿದ್ಯಾರ್ಥಿ ವೇತನ ಪಡೆದು ಸಂಶೋಧಕರಾಗಿ ಪದವಿಗಾಗಿ ಕೆಲಸ ಮಾಡುತ್ತಿದ್ದಾರೆ. ಅನೇಕ ಸಂಶೋಧನಾತ್ಮಕ ಪ್ರಾಯೋಜನೆಗಳಲ್ಲಿ ಸಹಾಯಕ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ರಾಜ್ಯ/ರಾಷ್ಟ್ರೀಯ/ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪಾಲ್ಗೊಂಡು ಲೇಖನಗಳನ್ನು ಮಂಡಿಸಿದ್ದಾರೆ.

***

**ಡಾ. ಮಂಜುನಾಥ್ ಪಿ.** ಎಂ.ಎಸ್ಸಿ. ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಮನೋವಿಜ್ಞಾನ ವಿಭಾಗ, ಕರಾಮುವಿ,
ಮಾನಸಗಂಗೋತ್ರಿ, ಮೈಸೂರು.

***

ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮನೋವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆ ಮುಂಚೆ ಇವರು ವಿಶ್ವವಿದ್ಯಾನಿಲಯದ 2008ರಲ್ಲಿ ಅರ್ಹತಾ ವಿದ್ಯಾರ್ಥಿ ವೇತನ ಪಡೆದು ವಿಭಾಗದಲ್ಲಿ ಮನೋವಿಜ್ಞಾನದಲ್ಲಿ ಸಂಶೋಧಕರಾಗಿದ್ದರು. ಮನೋವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಹಾಗೂ ರಾಜ್ಯ ಮಟ್ಟದ ಪ್ರಮುಖ ದೈನಂದಿನ ದಿನ ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. **'ಮನೋವಿಜ್ಞಾನ ಪರಿಚಯ'** ಎಂಬ ಪುಸ್ತಕವನ್ನು ರಚಿಸಿದ್ದಾರೆ.

Digitised by Bharatavani, CIIL

**ಪ್ರೊ. ಮಂಜುನಾಥಯ್ಯ ಬಿ.ಎನ್.** ಎಂ.ಎ.(ಮನೋವಿಜ್ಞಾನ), ಎಂ.ಎಡ್.
ನಂ. 1009, 'ಕಲ್ಪದ್ರುಮ', E & F ಬ್ಲಾಕ್,
ಉದಯರವಿ ರಸ್ತೆ.
ಕುವೆಂಪು ನಗರ, ಮೈಸೂರು.

ಶ್ರೀಯುತರ ಪರಿಚಯವನ್ನು ಸಂಪಾದಕ ಮಂಡಳಿ ಸದಸ್ಯರ ಪರಿಚಯದಲ್ಲಿ ಮಾಡಿಕೊಡಲಾಗಿದೆ.

***

**ಡಾ. ಮನೋಹರಿ ಪಿ.** ಎಂ.ಎಡ್; ಪಿಎಚ್.ಡಿ.
ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ
ಉಜ್ರೆ (ದ.ಕ.)

ಇವರು ಪ್ರಸ್ತುತ ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ, ಉಜಿರೆ ಇಲ್ಲಿ ಪ್ರಾಂಶುಪಾಲೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಮತಿಯವರು ಹಲವಾರು ಕಾರ್ಯಗಾರಗಳಲ್ಲಿ, ಸಮ್ಮೇಳನಗಳಲ್ಲಿ ಭಾಗವಹಿಸಿರುತ್ತಾರೆ. ಸೃಜನಶೀಲತೆ ಬಗ್ಗೆ ಮಾಡಿದ ಸಂಶೋಧನೆಗೆ ಪಿಹೆಚ್.ಡಿ ಪಡೆದಿದ್ದಾರೆ.

***

**ಡಾ. ಮಹೇಶ್ ಚಂದ್ರ ಗುರು ಬಿ. ಪಿ.** ಎಂ.ಎ. (ಪತ್ರಿಕೋದ್ಯಮ), ಪಿಎಚ್.ಡಿ.
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಸಂವಹನ ಮತ್ತು ಪತ್ರಿಕೋದ್ಯಮ ಸಂಯುಕ್ತ ಅಧ್ಯಯನ ಮಂಡಳಿ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸೂರು – 06

ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ವಿಭಾಗದಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪತ್ರಿಕೋದ್ಯಮ, ಗ್ರಾಮೀಣ ಸಂವಹನ ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ 30 ವರ್ಷಗಳ ಅನುಭವ ಪಡೆದಿದ್ದಾರೆ. 6 ಮಂದಿ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಸುಮಾರು 60 ಪ್ರಬಂಧಗಳನ್ನು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ. ಇವರ 50 ಕ್ಕೂ ಹೆಚ್ಚಿನ ಲೇಖನಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

***

**ಶ್ರೀ ರತನ ಭೀ ಚವಾಣ** ಎಂ.ಎಸ್ಸಿ; ಎಂ.ಎಡ್; ಎಂ.ಫಿಲ್.
ಸಹಾಯಕ ಪ್ರಾಧ್ಯಾಪಕರು
ಎಸ್‌ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ
ಪಬ್ಲಿಕ್ ಸ್ಟೇಡಿಯಂ ಎದುರು,
ಸ್ಟೇಷನ್ ರೋಡ್, ರಾಯಚೂರು

ಇವರು ರಾಯಚೂರಿನ ಶಕುಂತಲಾಬಾಯಿ ರಾಮಚಂದ್ರರಾವ್ ಕಸ್ಬೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ 15 ವರ್ಷಗಳಿಂದ ಶಿಕ್ಷಣಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

***

**ಡಾ. ರಾಘವೇಂದ್ರ ರಾವ್ ಹೆಚ್. ಎಸ್.** ಎಂ.ಎ; ಎಂ.ಎಡ್; ಪಿಎಚ್.ಡಿ.
ನಂ. 771, 9ನೇ ಮುಖ್ಯ ರಸ್ತೆ,
ಜೆ.ಪಿ.ನಗರ "ಡಿ" ಬ್ಲಾಕ್, ಮೈಸೂರು – 570 008

ಇವರು ಸರ್ಕಾರಿ ಕಿರಿಯ ಮತ್ತು ಹಿರಿಯ ಕಾಲೇಜುಗಳಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಸುಮಾರು ಮೂರೂವರೆ ದಶಕಗಳ ಕಾಲ ಕೆಲಸ ಮಾಡಿದ್ದಾರೆ. ಭಾರತ ಸರ್ಕಾರದ ಜವಾಹರ್ ನವೋದಯ ವಿದ್ಯಾಲಯದ ಪ್ರಾಚಾರ್ಯರಾಗಿ ಕೆಲಸಮಾಡಿದ್ದಾರೆ. ನಿವೃತ್ತಿಯ ನಂತರ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗಗಳಲ್ಲಿ ಮತ್ತು ಎಸ್. ಕೆ.ಎಮ್.ಕೆ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ.

***

**ಡಾ. ರಾಜೀವ್ ಪಿ. ಗುಂಡಾಳೆ** ಎಂ.ಎ., ಎಂ.ಎಡ್., ಪಿಎಚ್.ಡಿ.
ಉಪನ್ಯಾಸಕರು
ಜೆ.ಎಸ್.ಎಸ್. ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ
ವಿದ್ಯಾಗಿರಿ, ಧಾರವಾಡ

ಶ್ರೀಯುತರು ಜೆ.ಎಸ್.ಎಸ್. ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ ವಿದ್ಯಾಗಿರಿ, ಧಾರವಾಡ ಇಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು 7 ವರ್ಷಗಳ ಬೋಧನಾ ಅನುಭವ ಹೊಂದಿದ್ದಾರೆ. ಇವರು ಹಲವಾರು ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಪತ್ರಿಕೆಗಳನ್ನು ಮಂಡಿಸಿದ್ದಾರೆ. ಶ್ರೀಯುತರು ಹಲವು ಎಂ.ಫಿಲ್. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದಾರೆ.

Digitised by Bharatavani, CIIL

**ಶ್ರೀ ಲೋಹಿತ್ ಜೆ.** ಎಂ.ಎ. (ಪತ್ರಿಕೋದ್ಯಮ), ಎಂ.ಫಿಲ್.
ಪ್ರಾಧ್ಯಾಪಕರು
ಪತ್ರಿಕೋದ್ಯಮ ವಿಭಾಗ,
ಮಹಾರಾಜ ಕಾಲೇಜು, ಮೈಸೂರು.

ಶ್ರೀಯುತರು ಕಳೆದ 4 ವರ್ಷಗಳಿಂದ ಮಹಾರಾಜ ಕಾಲೇಜಿನಲ್ಲಿ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು 'ಅನುರಣನ', 'ಸಂಚಲನ' ಮತ್ತು 'ಪ್ರತಿಫಲನ' ಎಂಬ 3 ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಮಾರುಕಟ್ಟೆ ಸಂವಹನ ಎಂಬ ಕೃತಿಯನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಹಲವಾರು ವಿಚಾರ ಸಂಕಿರಣಗಳಲ್ಲಿ ಇವರು ಭಾಗವಹಿಸಿದ್ದಾರೆ. ಇವರ ಲೇಖನಗಳು ಮಾನವಿಕ ಕರ್ನಾಟಕ ಮತ್ತು ಪ್ರಬುದ್ಧ ಕರ್ನಾಟಕ ನಿಯತ ಕಾಲಿಕೆಗಳಲ್ಲಿ ಪ್ರಕಟಗೊಂಡಿದೆ. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಪದವಿಗಾಗಿ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ.

***

**ಡಾ. ವಾಮದೇವಪ್ಪ ಹೆಚ್. ವಿ.**
ಪ್ರಾಧ್ಯಾಪಕರು
ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ,
ಅನುಭವ ಮಂಟಪ, ದಾವಣಗೆರೆ.

ದಾವಣಗೆರೆ ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ 1987 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. 'ಶೈಕ್ಷಣಿಕ ಮನೋವಿಜ್ಞಾನ', 'ಅಂಡರ್ ಅಚೀವ್‌ಮೆಂಟ್ ಇನ್ ಬಯಾಲಜಿ', 'ಶಿಕ್ಷಣದಲ್ಲಿ ಮೌಲ್ಯಮಾಪನ ಮತ್ತು ಸಂಖ್ಯಾಶಾಸ್ತ್ರ', 'ಶೈಕ್ಷಣಿಕ ಮನೋವಿಜ್ಞಾನ' ಎಂಬ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.

***

**ಪ್ರೊ. ವಿಜಯಲಕ್ಷ್ಮಿ ದೇಸಾಯಿ** ಬಿ.ಎಸ್ಸಿ; ಎಂ.ಎ; ಎಂ.ಎಡ್; ಎಂ.ಫಿಲ್.
ಪ್ರಾಧ್ಯಾಪಕರು
ಎಂಎಲ್‌ಎಂಎನ್ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ),
ಚೈತನ್ಯ ಭಾರತಿ, ಜ್ಯೋತಿನಗರ,
ಚಿಕ್ಕಮಗಳೂರು – 577 102

ಕಳೆದ 20 ವರ್ಷಗಳಿಂದ ಚಿಕ್ಕಮಗಳೂರಿನ ಎಂ.ಎಲ್. ಎಂ.ಎನ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ. ಶೈಕ್ಷಣಿಕ ಪುಸ್ತಕಗಳನ್ನು ರಚಿಸಿದ್ದಾರೆ. 2006 ರಲ್ಲಿ ರಾಷ್ಟ್ರ ಮಟ್ಟದಲ್ಲಿ ಚಾಣಕ್ಯ ನ್ಯಾಷನಲ್ ಎಕ್ಸ್‌ಲೆನ್ಸಿ ಅವಾರ್ಡ್ ದೊರೆತಿದೆ.

***

**ಡಾ. ವೆಂಕಟರೆಡ್ಡಿ ಆರ್.** ಎಂ.ಎ., ಎಂ.ಎಡ್., ಪಿಎಚ್.ಡಿ.
ಮನೋವಿಜ್ಞಾನ ಪ್ರಾಧ್ಯಾಪಕರು
ಶರಣ ಬಸವೇಶ್ವರ ಕಲಾ ಮಹಾವಿದ್ಯಾಲಯ
ಗುಲಬರ್ಗಾ – 583 103

ಡಾ. ಆರ್. ವೆಂಕಟರೆಡ್ಡಿಯವರು ಶರಣ ಬಸವೇಶ್ವರ ಕಲಾ ಮಹಾವಿದ್ಯಾಲಯ ಗುಲಬರ್ಗಾದಲ್ಲಿ ಮನೋವಿಜ್ಞಾನ ಪ್ರಾಧ್ಯಾಪಕರಾಗಿ ಕಳೆದ 25 ವರ್ಷಗಳಿಂದ ಸೇವೆಸಲ್ಲಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಎಂ.ಎಸ್ಸಿ. ಮನೋವಿಜ್ಞಾನದ ಸಿದ್ಧಪಾಠಗಳನ್ನು ಬರೆದಿದ್ದಾರೆ. ಬೆಂಗಳೂರಿನ ನಿಮಾನ್ಸ್‌ನಲ್ಲಿ ಆಪ್ತ ಸಲಹೆಯಲ್ಲಿ ತರಬೇತಿ ಪಡೆದಿದ್ದಾರೆ. ಹಲವಾರು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಮನೋವಿಜ್ಞಾನ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

***

**ಡಾ. ಶರಣಮ್ಮ ಆರ್.** ಎಂ.ಎ; ಎಂ.ಎಡ್., ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ.
ಮಾನಸಗಂಗೋತ್ರಿ, ಮೈಸೂರು.

ಇವರು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ, ಅನೇಕ ವಿಚಾರ ಸಂಕಿರಣಗಳಲ್ಲಿ ಲೇಖನಗಳನ್ನು ಮಂಡಿಸಿದ್ದಾರೆ.

Digitised by Bharatavani, CIIL

ದೂರ ಶಿಕ್ಷಣ ಕ್ಷೇತ್ರದಲ್ಲಿ ಅನುಭವವನ್ನು ಹೊಂದಿದ್ದು, ಸ್ವಯಂ ಬೋಧನಾ ಸಾಮಗ್ರಿಗಳ ರಚನೆ, ರೇಡಿಯೋ ಪಾಠಗಳ ರಚನೆ ಹಾಗೂ ರೇಡಿಯೋ ಪಾಠಗಳನ್ನು ನೀಡುತ್ತಿದ್ದಾರೆ.

***

**ಡಾ. ಶರದ್ ಸುರೆ** ಎಂ.ಎಸ್ಸಿ., ಎಂ.ಎಡ್., ಪಿಎಚ್.ಡಿ.
247, 4ನೇ ಕ್ರಾಸ್,
ನವಿಲು ರಸ್ತೆ, ಕುವೆಂಪುನಗರ, ಮೈಸೂರು – 23

ಇವರು ಗಣಿತ ಹಾಗು ಶಿಕ್ಷಣಶಾಸ್ತ್ರದಲ್ಲಿ ಸ್ನಾತಕ ಪದವೀಧರರು. ಗಣಿತ ಶಿಕ್ಷಣ, ಶಿಕ್ಷಕ ಶಿಕ್ಷಣ, ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಇವರ ಪರಿಣತಿಯ ಕ್ಷೇತ್ರಗಳು. ಶಿಕ್ಷಕ ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ವಿಷಯದಲ್ಲಿ ಮಂಡಿಸಿರುವ ತಮ್ಮ ಪ್ರೌಢ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ. ಗಣಿತ ಶಿಕ್ಷಣ, ಶೈಕ್ಷಣಿಕ ಮನೋವಿಜ್ಞಾನ ಹಾಗು ಶೈಕ್ಷಣಿಕ ಮೌಲ್ಯಮಾಪನ ವಿಷಯಗಳನ್ನು ಬೋಧಿಸಿರುವ ಇವರು ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂನ ಸ್ಕೂಲ್ ಆಫ್ ಎಜುಕೇಶನ್‌ನಲ್ಲಿ ಆರು ವರ್ಷಗಳ ಕಾಲ ಉಪನ್ಯಾಸಕರಾಗಿದ್ದರು. ಪ್ರಸ್ತುತ ಇವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

***

**ಪ್ರೊ. ಶಿವಲಿಂಗಪ್ಪ ಎಸ್. ಜಿ.**
ಪ್ರಾಂಶುಪಾಲರು
ಬಿಇಎ ಶಿಕ್ಷಣ ಮಹಾವಿದ್ಯಾಲಯ
ನಿಜಲಿಂಗಪ್ಪ ಬಡಾವಣೆ. 2ನೇ ಮೇನ್,
11ನೇ ಕ್ರಾಸ್, ದಾವಣಗೆರೆ – 577 004

ಇವರು ದಾವಣಗೆರೆಯ ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ (ಬಿ.ಇ.ಎ.)ದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸ್ನಾತಕೋತ್ತರ ಶಿಕ್ಷಣ ಕೇಂದ್ರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನ ಅಧ್ಯಯನ ಕೇಂದ್ರದ ದಾವಣಗೆರೆ ಎಂ.ಎಡ್. ವಿಭಾಗದ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

***

**ಡಾ. ಶೀಲಾ ಜಿ.** ಎಂ.ಎಸ್ಸಿ; ಎಂ.ಎಡ್; ಪಿಜಿಡಿಹೆಚ್‌ಇ; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

ಇವರು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರ ಮಟ್ಟದ ಸಂಶೋಧನಾ ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ, ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ.

**ಶ್ರೀ ಶೇಷಾದ್ರಿ ಎ.**
ಸಂಯೋಜನಾಧಿಕಾರಿಗಳು
ಪ್ರಥಮ್, ಜಯಲಕ್ಷ್ಮಿ ಪುರಂ, ಮೈಸೂರು

ಪ್ರಥಮ್‌ನ ಮೈಸೂರು ಸಂಸ್ಥೆಯಲ್ಲಿ ಮುಖ್ಯ ಸಂಯೋಜನಾಧಿಕಾರಿಯಾಗಿರುವ ಶ್ರೀ ಶೇಷಾದ್ರಿ ಕಳೆದ ಮೂರು ದಶಕಗಳಿಂದ ಸರಕಾರೇತರ ಸ್ವಯಂ ಸೇವಾ ಸಂಘಗಳ ಮೂಲಕ ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಜನಸಂಖ್ಯಾ ಶಿಕ್ಷಣ, ಕುಟುಂಬ ಜೀವನ ಶಿಕ್ಷಣ, ಹದಿಹರೆಯದವರ ಶಿಕ್ಷಣ ಹಾಗೂ ಪ್ರಜನನ ಆರೋಗ್ಯಕ್ಕೆ ಸಂಬಂಧಿಸಿದ ಹಲವು ಯೋಜನೆಗಳಲ್ಲಿ ಸೇವೆಸಲ್ಲಿಸಿರುವ ಇವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಧರರು.

***

**ಡಾ. ಶೈಲಜಾ ಹೆಚ್. ಎಮ್.**
ಮುಖ್ಯಸ್ಥರು
ಸ್ಕೂಲ್ ಆಫ್ ಎಜುಕೇಷನ್ (ಎಂ.ಇಡಿ.)
ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ,
ಬೆಳಗಾವಿ – 591 156

ಶ್ರೀಮತಿಯವರು ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಪ್ರಸ್ತುತ ಸ್ನಾತಕೋತ್ತರ ಶಿಕ್ಷಣ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿ ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ವಿವಿಧ ವಿಷಯಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ದೇಶ ವಿದೇಶಗಳಲ್ಲಿ ಅನೇಕ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ವಿಷಯ ಮಂಡಿಸಿದ್ದಾರೆ. ಅವರ ಅನೇಕ ಸಂಶೋಧನಾ ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಗೊಂಡಿವೆ. ಒಂಬತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಮಾರ್ಗದರ್ಶನ ನೀಡಿದ್ದಾರೆ. ಪ್ರಸ್ತುತ ಅನೇಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

***

Digitised by Bharatavani, CIIL

**ಡಾ. ಶೈಲಜಾ ಪಿ. ಶಾನ್‌ಭಾಗ್** ಎಂ.ಎ; ಎಂ.ಎಡ್; ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ,
ಮಾನಸಗಂಗೋತ್ರಿ, ಮೈಸೂರು.

14 ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವ ಶ್ರೀಮತಿಯವರು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ.ರಾ.ಮು.ವಿ.ಯ ಬಿ.ಎ.(ಶಿಕ್ಷಣಶಾಸ್ತ್ರ), ಬಿ.ಎಡ್. ಮತ್ತು ಎಂ.ಎಡ್. ಕಾರ್ಯಕ್ರಮಗಳಿಗೆ ಸಿದ್ಧಪಾಠಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಬರೆದಿದ್ದಾರೆ.

***

**ಶ್ರೀ ಶ್ರೀನಿವಾಸ್ ಕೆ. ಎಸ್.** ಎಂ.ಎ., ಎಂ.ಎಡ್.
ಸಹಾಯಕ ಪ್ರಾಧ್ಯಾಪಕರು
ಆರ್.ವಿ. ಶಿಕ್ಷಣ ಮಹಾವಿದ್ಯಾಲಯ
ಜಯನಗರ, ಬೆಂಗಳೂರು

ಶ್ರೀಯುತರು ಬೆಂಗಳೂರಿನ ಆರ್.ವಿ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 7 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದಾರೆ. ಇವರು 3 ಪುಸ್ತಕಗಳನ್ನು ಬರೆದಿರುತ್ತಾರೆ. ಇವರ 15 ಸಂಶೋಧನಾ ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರು ಅನೇಕ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

***

**ಡಾ. ಸವಿತಾ ಪಾಂಡೆ ಎಂ.** ಎಂ.ಎ; ಎಂ.ಎಡ್; ಪಿಜಿಡಿಹೆಚ್‌ಇ, ಪಿಎಚ್.ಡಿ.
ಪ್ರಾಂಶುಪಾಲರು
ಅಮೃತಾನಂದಮಯಿ ಶಿಕ್ಷಣ ಮಹಾವಿದ್ಯಾಲಯ,
ಮೈಸೂರು.

ಇವರು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ Junior Research Fellow ಆಗಿ ಕಾರ್ಯನಿರ್ವಹಿಸಿ ದೃಷ್ಟಿ ಸವಾಲುಳ್ಳ ಮಕ್ಕಳ ಶಿಕ್ಷಣದ ಬಗ್ಗೆ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕಿಯಾಗಿಯೂ, ಕಾಗಿನೆಲೆ ಬಿ.ಎಡ್. ಕಾಲೇಜು ಮತ್ತು ಛಾಯಾದೇವಿ ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರಾಗಿಯೂ, ಜೆ.ಎಸ್.ಎಸ್. ಸ್ನಾತಕೋತ್ತರ ಎಂ.ಎಡ್. ವಿಭಾಗದಲ್ಲಿ ರೀಡರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಮೈಸೂರಿನ ಅಮೃತಾನಂದಮಯಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಿ.ಎಡ್. ಮತ್ತು ಎಂ.ಎಡ್. ಸಿದ್ಧಪಾಠಗಳನ್ನು ಬರೆದಿರುತ್ತಾರೆ. ರೇಡಿಯೋ ಪಾಠಗಳನ್ನು ಕೊಟ್ಟಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ/ಕಾರ್ಯಾಗಾರಗಳಲ್ಲಿ ಲೇಖನ ಮಂಡಿಸಿರುವುದಲ್ಲದೆ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

***

**ಡಾ. ಸಿಸ್ಟರ್ ಲಿಯೋನಿಲ್ಲಾ ಮಿನೇಜಸ್** ಎಂ.ಎ., ಎಂ.ಎಡ್., ಪಿಎಚ್.ಡಿ.
ಪ್ರಾಂಶುಪಾಲರು
ಸೈಂಟ್ ಆನ್ಸ್ ಶಿಕ್ಷಣ ಮಹಾವಿದ್ಯಾಲಯ,
ಮಂಗಳೂರು

ಡಾ. ಸಿಸ್ಟರ್ ಲಿಯೋನಿಲ್ಲಾ ಮಿನೇಜಸ್ ರವರು ಶಿಕ್ಷಣ ಕ್ಷೇತ್ರದಲ್ಲಿ 29 ವರ್ಷಗಳ ಅನುಭವ ಪಡೆದಿದ್ದಾರೆ. ಬಿ.ಎಡ್., ಎಂ.ಎಡ್. ಹಾಗೂ ಎಂ.ಎ. ಗಳ ರ್‍ಯಾಂಕ್ ಪಡೆದ ಖ್ಯಾತಿ ಇವರದಾಗಿದೆ. 'Young Research Award', 'Best Ph.D. Thesis Award', ಹಾಗೂ 'Best Teacher Award' ಪಡೆದಿರುತ್ತಾರೆ. ಇವರು ದೇಶ ವಿದೇಶಗಳಲ್ಲಿ ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ಸಂಶೋಧನಾ ಲೇಖನಗಳನ್ನು ಮಂಡಿಸಿರುವರು.

***

**ಡಾ. ಸೀತಾರಾಮು ಎ. ಎಸ್.** ಎಂ.ಎಡ್., ಪಿಎಚ್.ಡಿ.
ನಂ. 500, ಬಿಡಿಎ ಲೇಔಟ್, 2ನೇ ಹಂತ,
9ನೇ ಬ್ಲಾಕ್, 4ನೇ ಮುಖ್ಯ ರಸ್ತೆ, 4ನೇ ಕ್ರಾಸ್,
ನಾಗರಭಾವಿ –7, ಬೆಂಗಳೂರು – 72

ಶ್ರೀಯುತರು 1967ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಎಂ.ಎಡ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಹಾಗೂ ಪ್ರಥಮ ರ್‍ಯಾಂಕ್ ಪಡೆದು ನಂತರ ಸಂಶೋಧನಾ ವಿದ್ಯಾರ್ಥಿಯಾಗಿ 1972ರಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಇವರು ಮಣಿಪಾಲದ ಬಿ.ಎಡ್. ಕಾಲೇಜಿನಲ್ಲಿ ಹಾಗೂ ಮಾನಸಗಂಗೋತ್ರಿಯ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆಸಲ್ಲಿಸಿ 1975 ರಿಂದ 2006ರ ವರೆಗೆ ಬೆಂಗಳೂರಿನ ಆರ್ಥಿಕ ಮತ್ತು ಸಾಮಾಜಿಕ ಸಂಶೋಧನಾ ಸಂಸ್ಥೆಯಲ್ಲಿ ಸೇವೆಸಲ್ಲಿಸಿರುತ್ತಾರೆ. 1985 ರಿಂದ ನಿವೃತ್ತಿಯತನಕ ಪ್ರಾಧ್ಯಾಪಕರಾಗಿದ್ದರು. ಇವರು 18 ಪ್ರಮುಖ ಸಂಶೋಧನೆಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೂ, ಫೋರ್ಡ್ ಫೌಂಡೇಶನ್, ವಿಶ್ವಬ್ಯಾಂಕ್ ಹಾಗೂ ಯುನೆಸ್ಕೊ ಸಂಸ್ಥೆಗಳಿಗೂ ನಡೆಸಿಕೊಟ್ಟಿರುತ್ತಾರೆ. 12 ಪುಸ್ತಕಗಳನ್ನು ಹಾಗೂ 50ಕ್ಕೂ ಹೆಚ್ಚಿನ ಲೇಖನಗಳನ್ನು ರಾಷ್ಟ್ರೀಯ

Digitised by Bharatavani, CIIL

ಹಾಗೂ ಅಂತರ್‌ರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಒಂದು ಪುಸ್ತಕ ಯುನೆಸ್ಕೊ ದಿಂದ ಪ್ರಕಟವಾಗಿದೆ. ಇವರು ಹಲವು ಬಾರಿ ವಿದೇಶಗಳಿಗೆ ವಿದ್ವತ್ ಕೆಲಸಗಳಿಗೆ ಹೋಗಿ ಬಂದಿದ್ದಾರೆ. ಸುತ್ತಮುತ್ತಲಿನ ಹತ್ತು ಹಲವು ವಿಶ್ವವಿದ್ಯಾಲಯಗಳಿಗೆ ಅತಿಥಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. 2006 ರಿಂದ 2014 ರವರೆಗೆ ಕರ್ನಾಟಕ ಸರ್ಕಾರದ ಸರ್ವ ಶಿಕ್ಷಣ ಅಭಿಯಾನ ಯೋಜನೆಗೆ ಪೂರ್ಣಾವಧಿ ಮುಖ್ಯ ಸಲಹೆಗಾರರಾಗಿ ಸೇವೆಸಲ್ಲಿಸಿದ್ದಾರೆ.

**ಡಾ. ಸುಧಾ ಬಿ. ಜಿ.** ಎಂ.ಎಡ್., ಪಿಎಚ್.ಡಿ.
ಸಂದರ್ಶಕ ಪ್ರಾಧ್ಯಾಪಕಿ
ಶಿಕ್ಷಣಶಾಸ್ತ್ರ ವಿಭಾಗ, ಜ್ಞಾನ ಭಾರತಿ,
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

ಶ್ರೀಮತಿಯವರು 35 ವರ್ಷಗಳ ದೀರ್ಘಕಾಲ ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಾಪಕಿಯಾಗಿ, ರೀಡರ್ ಆಗಿ ಮತ್ತು ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ನಂತರ ಅದೇ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಸೇವಾವಧಿಯಲ್ಲಿ ಇವರು ವಿಭಾಗ ಮುಖ್ಯಸ್ಥೆಯಾಗಿ, ಡೀನರಾಗಿ, ಸ್ವಲ್ಪ ಕಾಲದವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಕಾರ್ಯಭಾರ ಕುಲಪತಿಗಳಾಗಿ ಕೆಲಸ ಮಾಡಿದ್ದಾರೆ. 12 ಎಂ.ಫಿಲ್. ಮತ್ತು 6 ಪಿಎಚ್.ಡಿ. ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ಪದವಿಗಳನ್ನು ಪಡೆದಿದ್ದಾರೆ. ಇವರು ತಮ್ಮ ಸಾಧನೆಗಳಿಗಾಗಿ ಕೆಲವು ಪ್ರಶಸ್ತಿ/ಬಹುಮಾನಗಳನ್ನು ಪಡೆದಿದ್ದಾರೆ. ಸದ್ಯದಲ್ಲಿ ಕೆಲವು ಪ್ರಾಯೋಜನೆಗಳನ್ನು ಕೈಗೊಂಡಿದ್ದಾರೆ. 85 ಲೇಖನಗಳನ್ನು ಪ್ರಕಟಿಸಿರುವ ಪ್ರೊ. ಸುಧಾರವರು ಅನೇಕ ವಿಚಾರ ಸಂಕಿರಣ/ಕಾರ್ಯಾಗಾರಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ್ದಾರೆ.

***

**ಶ್ರೀಮತಿ ಸುರ್ಮ ಎಸ್.** ಎಂ.ಎಸ್ಸಿ. ಎಂ.ಫಿಲ್, ಪಿ.ಜಿ.ಡಿ.ಸಿ.ಪಿ.
ಸಹಾಯಕ ಪ್ರಾಧ್ಯಾಪಕರು
ಮನೋವಿಜ್ಞಾನ ವಿಭಾಗ, ಕರಾಮುವಿ
ಮಾನಸಗಂಗೋತ್ರಿ, ಮೈಸೂರು – 06

ಶ್ರೀಮತಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮನೋವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು, ನೈದಾನಿಕ ಮನೋವಿಜ್ಞಾನ ವಿಭಾಗದಲ್ಲಿ ಸಂಶೋಧನಾ ಸಹಾಯಕರಾಗಿ ಒಂದು ವರ್ಷಕಾಲ ಸೇವೆ ಸಲ್ಲಿಸಿರುತ್ತಾರೆ. ಮೈಸೂರಿನ ವಿವಿಧ ನರ್ಸಿಂಗ್ ಕಾಲೇಜುಗಳಲ್ಲಿ ಆರು ವರ್ಷಗಳ ಕಾಲ ಪದವಿ ಮತ್ತು ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಮನೋವಿಜ್ಞಾನ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಮನೋವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಪ್ರಮುಖ ದೈನಂದಿನ ದಿನ ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಆಕಾಶವಾಣಿ ಮತ್ತು ಜ್ಞಾನವಾಣಿ ವಾಹಿನಿಗಳಲ್ಲಿ ಮನೋವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿರುತ್ತಾರೆ. ವಿದ್ಯಾರ್ಥಿಗಳಿಗೆ ಆಪ್ತ ಸಲಹೆ (ಸಮಾಲೋಚನ) ಸೇವೆಯನ್ನು ನೀಡುತ್ತಿದ್ದಾರೆ.

***

**ಡಾ. ಹೂವಿನಭಾವಿ** ಎಂ.ಎಸ್ಸಿ., ಎಂ.ಎಡ್., ಪಿಜಿಡಿಎಚ್ಇ, ಪಿಎಚ್.ಡಿ.
ಪ್ರಾಧ್ಯಾಪಕರು
ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ
ಗುಲಬರ್ಗಾ ವಿಶ್ವವಿದ್ಯಾನಿಲಯ, ಗುಲಬರ್ಗಾ

ಶ್ರೀಯುತರು ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಶಾಸ್ತ್ರದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸುಮಾರು 20 ವರ್ಷಗಳ ಬೋಧನಾ ಅನುಭವ ಹೊಂದಿರುವ ಇವರು ಇಬ್ಬರು ಪಿಎಚ್.ಡಿ., ಆರು ಮಂದಿ ಎಂ.ಫಿಲ್. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ ಹಾಗೂ ಎರಡು ಗ್ರಂಥಗಳನ್ನು ರಚಿಸಿದ್ದಾರೆ. ಇವರು ಸುಮಾರು 25 ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಡಿಪಾರ್ಟಮೆಂಟ್ ಛೇರ್‌ಮನ್, ಪರೀಕ್ಷೆಗಳ ಛೇರ್‌ಮನ್, ಬಿ.ಓ.ಎಸ್. ಮತ್ತು ಬಿ.ಓ.ಇ.ಗಳ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ನೇಪಾಳ ಮತ್ತು ಭೂತಾನ್‌ಗಳಲ್ಲಿ ನಡೆದ ಶೈಕ್ಷಣಿಕ ವಿಶ್ವ ಸಮ್ಮೇಳನಗಳಲ್ಲೂ ಭಾಗವಹಿಸಿದ್ದಾರೆ.

***

Digitised by Bharatavani, CIIL

## "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಸಂಪುಟ–3 ಕೃತಿಯ ಮೂಲ ಲೇಖನಗಳ ಅನುವಾದಕರ ಸೂಚಿ

ಡಾ. ಉಮಾದೇವಿ ಪಿ.

ಡಾ. ಗೀತಾಶೆಣೈ

ಪ್ರೊ. ಚಂದ್ರಶೇಖರ್ ಬಿ. ಎಂ.

ಪ್ರೊ. ಜಗದೀಶ್

ಪ್ರೊ. ಮಂಜುನಾಥಯ್ಯ ಬಿ. ಎನ್.

ಪ್ರೊ. ರತ್ನಮ್ಮ ಕೆ. ಎಸ್.

ಡಾ. ರಾಘವೇಂದ್ರರಾವ್ ಹೆಚ್. ಎಸ್.

ಡಾ. ವಿಶಾಲಾಕ್ಷಿ ಕೆ. ಕೆ.

ಪ್ರೊ. ವಿಶ್ವನಾಥ್ ಜಿ. ಆರ್.

ಪ್ರೊ. ವೆಂಕಟರಮಣಶೆಟ್ಟಿ ಸಿ. ಜಿ.

ಪ್ರೊ. ಶಂಕರೇಗೌಡ ಎಸ್. ಬಿ.

ಡಾ. ಶಶಿಕಲ ಎ.

ಶಶಿಕುಮಾರ್

Digitised by Bharatavani, CIIL

# "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಮೊದಲನೇ ಸಂಪುಟದ ಲೇಖನಗಳ ಸೂಚಿ

1. ಅಂಗವಿಕಲತೆಯ ವ್ಯಾಪ್ತಿ ಹಾಗೂ ಪರಿಣಾಮಗಳು
2. ಅಂತರ್ಜಾಲ
3. ಅಂತರರಾಷ್ಟ್ರೀಯ ಪ್ರಜ್ಞೆಯ ಶಿಕ್ಷಣ
4. ಅಂತರ್ ಶಿಸ್ತಿನ ಉಪಕ್ರಮ ಮತ್ತು ಶಿಕ್ಷಣ
5. ಅಂತಃಸ್ರಾವ ಗ್ರಂಥಿಗಳ ವ್ಯೂಹ
6. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ
7. ಅಖಿಲ ಭಾರತ ಸಂಶೋಧನಾ ಸಂಸ್ಥೆಗಳು
8. ಅತೀಂದ್ರಿಯ ಅನುಭವಗಳು
9. ಅಧ್ಯಾತ್ಮಿಕ ಬುದ್ಧಿಶಕ್ತಿ
10. ಅಧ್ಯಾಪಕರ ಶಿಕ್ಷಣ
11. ಅಧ್ಯಾಪಕರ ಶಿಕ್ಷಣದ ಉನ್ನತ ಸಂಸ್ಥೆಗಳು
12. ಅನುದಾನ ಪದ್ಧತಿ
13. ಅನುವಂಶೀಯತೆ ತಂತ್ರಗಳು
14. ಅನುದೇಶ
15. ಅನ್ಯೋನ್ಯ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮಗಳು
16. ಅನುವಂಶೀಯತೆ ಮತ್ತು ಪರಿಸರವಾದ
17. ಅಪಸಮಾಯೋಜನೆ – ಅರ್ಥ, ಮೂಲಗಳು
18. ಅಪಸ್ಮಾರ (ಎಪಿಲೆಪ್ಸಿ)
19. ಅಪೂರ್ಣ ಸಾಧಕರ ಶಿಕ್ಷಣ
20. ಅಭಿವೃತ್ತಿಗಳು/ಮನೋಭಾವಗಳು
21. ಅಭ್ಯಾಸ ಬೋಧನೆ
22. ಅರಬಿಂದೊ ಘೋಷ್
23. ಅವಧಾನ
24. ಅವಲಂಬನ ಸಿದ್ಧಾಂತ
25. ಅವಲೋಕನ ವಿಧಾನ
26. ಆಂತರಿಕ ಮೌಲ್ಯಮಾಪನ
27. ಆಧುನೀಕರಣ ಮತ್ತು ಶಿಕ್ಷಣ
28. ಆನ್‌ಲೈನ್ ಪರೀಕ್ಷಾ ವ್ಯವಸ್ಥೆ
29. ಆಲೋಚನೆ ಮತ್ತು ತಾರ್ಕಿಕತೆ
30. ಆಲ್‌ಫ್ರೆಡ್ ನಾರ್ತ್ ವೈಟ್‌ಹೆಡ್
31. ಇತಿಹಾಸ ಮತ್ತು ಪೌರನೀತಿ ಬೋಧನೆ
32. ಇಸ್ಲಾಂ ಕಾಲದ ಶಿಕ್ಷಣ
33. ಈಶ್ವರಚಂದ್ರ ವಿದ್ಯಾಸಾಗರ
34. ಉದಾರ ಶಿಕ್ಷಣ
35. ಉನ್ನತ ಪ್ರೌಢಶಾಲೆ/ಪದವಿ ಪೂರ್ವ ಶಿಕ್ಷಣ ವ್ಯವಸ್ಥೆ
36. ಏಕೋಪಾಧ್ಯಾಯ ಶಾಲೆಗಳು
37. ಓದುವ ಅಭ್ಯಾಸಗಳು
38. ಓದುವ ಮೂಲೆ
39. ಕಂಪ್ಯೂಟರ್‌ಗಳು
40. ಕರ್ನಾಟಕದಲ್ಲಿ ಅಧ್ಯಾಪಕ ಶಿಕ್ಷಣದ ವ್ಯವಸ್ಥೆ

Digitised by Bharatavani, CIIL

41. ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣದ ಬೆಳವಣಿಗೆ
42. ಕರ್ನಾಟಕದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣ ವ್ಯವಸ್ಥೆ : ಪ್ರಸ್ತುತ ಸ್ಥಿತಿ
43. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ವ್ಯವಸ್ಥೆ
44. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ
45. ಕರ್ನಾಟಕದಲ್ಲಿ ದೈಹಿಕ ಶಿಕ್ಷಣ
46. ಕರ್ನಾಟಕದಲ್ಲಿ ದೈಹಿಕ ಶಿಕ್ಷಣದ ಬೆಳವಣಿಗೆ
47. ಕರ್ನಾಟಕದಲ್ಲಿ ನಾಟಕ ಶಿಕ್ಷಣ (ರಂಗ ಶಿಕ್ಷಣ)
48. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ
49. ಕರ್ನಾಟಕದಲ್ಲಿ ಪ್ರೌಢ ಶಿಕ್ಷಣ ವ್ಯವಸ್ಥೆ
50. ಕರ್ನಾಟಕದಲ್ಲಿ ಪ್ರೌಢಶಾಲಾ ಶಿಕ್ಷಣದ ಬೆಳವಣಿಗೆ
51. ಕರ್ನಾಟಕದಲ್ಲಿ ಲಲಿತ ಕಲೆಗಳ ಶಿಕ್ಷಣದ ವ್ಯವಸ್ಥೆ
52. ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ
53. ಕರ್ನಾಟಕದಲ್ಲಿ ವೈದ್ಯ ಶಿಕ್ಷಣ – ಪ್ರಸ್ತುತ ಸ್ಥಿತಿ
54. ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣದ ಬೆಳವಣಿಗೆ
55. ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು
56. ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ
57. ಕರ್ನಾಟಕದಲ್ಲಿ ಹಿಂದಿ ಶಿಕ್ಷಣ
58. ಕಲಿಕೆ ಮತ್ತು ಸ್ವವಿಕಾಸ
59. ಕಲಿಕೆಯ ಕನಿಷ್ಠ ಮಟ್ಟಗಳು
60. ಕೃತಕ ಬುದ್ಧಿಶಕ್ತಿ
61. ಕಾರ್ಯಾಗಾರಗಳು
62. ಕಿಶೋರರ ಶಿಕ್ಷಣ
63. ಕ್ರಿಯಾ ಸಂಶೋಧನೆ
64. ಕ್ವಿಜ್‌ಗಳು
65. ಕುಟುಂಬ ಮತ್ತು ಶಿಕ್ಷಣ
66. ಕೂಟ ವಿಶ್ಲೇಷಣೆ
67. ಕೇಂದ್ರೀಯ ಪ್ರವೃತ್ತಿ ಮಾಪಕಗಳು
68. ಕೇಂದ್ರೀಯ ವಿಶ್ವವಿದ್ಯಾನಿಲಯಗಳು
69. ಕ್ಷೇತ್ರ ಅಧ್ಯಯನ
70. ಗಣಿತಶಾಸ್ತ್ರ ಬೋಧನೆ
71. ಗುಂಪು ವರ್ತನೆಯ ಮನೋವಿಜ್ಞಾನ ಮತ್ತು ಶಿಕ್ಷಣ
72. ಗೃಹ ಅರ್ಥಶಾಸ್ತ್ರ
73. ಗ್ರಂಥಾಲಯದ ಬಳಕೆಯ ಶಿಕ್ಷಣ
74. ಜನನ ಪೂರ್ವ ಅವಧಿ
75. ಜನಪದ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು
76. ಜನಸಂಖ್ಯಾ ಶಿಕ್ಷಣ
77. ಜಾಕೀರ್ ಹುಸೇನ್
78. ಜ್ಞಾನ ನಿರ್ವಹಣೆ
79. ಜಾಗತೀಕರಣ ಮತ್ತು ಶಿಕ್ಷಣ
80. ಜಾತ್ಯತೀತತೆ ಮತ್ತು ಶಿಕ್ಷಣ
81. ಜಾನ್‌ಏಮಸ್ ಕೊಮೆನಿಅಸ್
82. ಜಾನ್ ಡ್ಯೂಯಿ

Digitised by Bharatavani, CIIL

83. ಜಾನ್ ಹೆನ್ರಿಚ್ ಪೆಸ್ಟಾಲಝಿ
84. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡಯಟ್ಸ್)
85. ಜೀನ್ ಜೇಕ್ವಿಸ್ ರೂಸೋ
86. ಜೀವ ಪರಿಸರ ವಿಜ್ಞಾನ
87. ಜೀವ ವಿಜ್ಞಾನಗಳ ಬೋಧನೆ
88. ಟೆಲಿ ಕಾನ್ಫರೆನ್ಸ್
89. ಟ್ಯುಟೋರಿಯಲ್ ವ್ಯವಸ್ಥೆ
90. ತಂಡ ಬೋಧನೆ
91. ತಂತ್ರಜ್ಞಾನದ ಹಿನ್ನೆಲೆ
92. ತಪಶೀಲು ಪಟ್ಟಿಗಳು
93. ತಾರುಣ್ಯ (ಕೌಮಾರ್ಯ)
94. ತೆರೆದ ಪುಸ್ತಕ ಪರೀಕ್ಷೆಗಳು
95. ದರ್ಜಾಮಾಪನ
96. ದತ್ತಾಂಶಗಳ ಆಲೇಖೀಕರಣ
97. ದೃಕ್–ಶ್ರವಣ ಶಿಕ್ಷಣ
98. ದೈಹಿಕ ಶಿಕ್ಷಣ ವ್ಯವಸ್ಥೆ
99. ದೈಹಿಕ ಸವಾಲುಳ್ಳ ಮಕ್ಕಳ ಶಿಕ್ಷಣ
100. ದೂರದರ್ಶನ
101. ದೂರವಾಣಿ ಸಮಾಲೋಚನೆ
102. ದೂರ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಬೆಂಬಲ ಸೇವೆಗಳು
103. ದೂರ ಶಿಕ್ಷಣದಲ್ಲಿ ಆನ್‌ಲೈನ್ ಕಾರ್ಯಕ್ರಮಗಳು
104. ದೂರ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ
105. ದೂರ ಶಿಕ್ಷಣದಲ್ಲಿ ಶೈಕ್ಷಣಿಕ ಸಮಾಲೋಚನೆ
106. ದೃಷ್ಟಾಂತ ದಾಖಲೆ
107. ದ್ವಂದ್ವಗಳು
108. ಧ್ಯಾನ ಮತ್ತು ಅರಿವಿನ ಮೇಲ್ಮಟ್ಟಗಳು
109. ಧಾರ್ಮಿಕ ಶಿಕ್ಷಣ
110. ದ್ವಿಭಾಷಾ ಶಿಕ್ಷಣ
111. ನಗರೀಕರಣ ಮತ್ತು ಶಿಕ್ಷಣ
112. ನವೋದಯ ಶಾಲೆಗಳು
113. ನಾಗರಿಕತೆ ಮತ್ತು ಶಿಕ್ಷಣ
114. ನಾಯಕತ್ವ – ಅರ್ಥ, ಕಾರ್ಯಗಳು
115. ನಾಯಕತ್ವ ಪರಿಣಾಮಕಾರಿತ್ವ
116. ನಾಯಕತ್ವದ ಶೈಲಿಗಳು
117. ನಿರ್ಣಯಿಸುವಿಕೆ
118. ನಿಧಾನ ಕಲಿಕಾರ್ಥಿಗಳ ಶಿಕ್ಷಣ
119. ನಿಯೋಜಿತ ಕಾರ್ಯಗಳು
120. ನಿರುದ್ಯೋಗ ಸಮಸ್ಯೆ
121. ನೈದಾನಿಕ ಪರೀಕ್ಷೆಗಳು
122. ಪಠ್ಯಕ್ರಮ – ಅರ್ಥ, ಅಂಗಗಳು
123. ಪಠ್ಯಕ್ರಮಕ್ಕೆ ವ್ಯವಸ್ಥಾ ಉಪಕ್ರಮ
124. ಪಠ್ಯಕ್ರಮದ ಮೌಲ್ಯಮಾಪನ

Digitised by Bharatavani, CIIL

125. ಪದವಿ ಪೂರ್ವ ಶಿಕ್ಷಣ
126. ಪದವಿ ಪೂರ್ವ ಶಿಕ್ಷಣ ಮಂಡಳಿ
127. ಪರ ಸಂಸ್ಕೃತೀಕರಣ
128. ಪರಿಕಲ್ಪನಾ ನಕ್ಷೆ
129. ಪರಿಸರ ಶಿಕ್ಷಣ
130. ಪರಿಹಾರಾತ್ಮಕ ಬೋಧನೆ
131. ಪರಿಗಣಿತ (ಡೀಮ್ಡ್) ವಿಶ್ವವಿದ್ಯಾನಿಲಯಗಳು–ಕರ್ನಾಟಕ
132. ಪರ್ಯಾಯ ಶಿಕ್ಷಣ
133. ಪರೀಕ್ಷೆಗಳ ಮಾನಕೀಕರಣ
134. ಪಾಠ ವೀಕ್ಷಣೆ
135. ಪಾಶ್ಚಿಮಾತ್ಯೀಕರಣ ಮತ್ತು ಶಿಕ್ಷಣ
136. ಪಾಶ್ಚಾತ್ಯ ಶಿಕ್ಷಣ ಚಿಂತಕರು ಮತ್ತು ಶಿಕ್ಷಣ
137. ಪೂರ್ವಗ್ರಹಗಳು
138. ಪ್ರತಿಭಾವಂತ ಮಕ್ಕಳ ಶಿಕ್ಷಣ
139. ಪ್ರತಿಭಾ ಪಲಾಯನ
140. ಪ್ರತಿದರ್ಶಚಯನ
141. ಪ್ರತ್ಯಕ್ಷಾನುಭವ
142. ಪ್ರಾತ್ಯಕ್ಷಿಕೆ ಪಾಠಗಳು
143. ಪ್ರವೇಶ ಪರೀಕ್ಷೆಗಳು
144. ಪ್ರಶ್ನೆ ಪತ್ರಿಕೆಗಳ ರಚನೆ
145. ಪ್ರಾಚೀನ ಸಾಂಪ್ರದಾಯಿಕ ಕಥೆಗಳಲ್ಲಿ ಶಿಕ್ಷಣ
146. ಪುನಶ್ಚೇತನ ಕಾರ್ಯಕ್ರಮಗಳು
147. ಪೂರ್ವಗ್ರಹ ಮತ್ತು ಶಿಕ್ಷಣ
148. ಪೌರತ್ವಕ್ಕಾಗಿ ಶಿಕ್ಷಣ
149. ಪೌರತ್ವ ಶಿಕ್ಷಣ ಶಿಬಿರ
150. ಪ್ಲೇಟೋ
151. ಬದಲಾವಣೆಗಳ ನಿರ್ವಹಣೆ
152. ಬಂಡವಾಳಶಾಹಿತ್ವ
153. ಬಹುವರ್ಗ ಬೋಧನೆ
154. ಬಹು–ಸಂಸ್ಕೃತಿಯ ಶಿಕ್ಷಣ
155. ಬಾಲಕಿಯರ ಶಿಕ್ಷಣ
156. ಬಾಲ್ಯಾವಸ್ಥೆಯಲ್ಲಿ ದೈಹಿಕ ಮತ್ತು ಗತ್ಯಾತ್ಮಕ ವಿಕಾಸ
157. ಬಾಲ್ಯಾವಸ್ಥೆ ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸ
158. ಬಾಲ್ಯಾವಸ್ಥೆ ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ
159. ಬ್ರಿಟಿಷರ ಕಾಲದ ಶಿಕ್ಷಣ
160. ಬುದ್ಧಿಶಕ್ತಿ ಮಾಪನ
161. ಬುದ್ಧಿಶಕ್ತಿ ಸಿದ್ಧಾಂತಗಳು
162. ಬೆಳವಣಿಗೆ ಮತ್ತು ವಿಕಾಸ
163. ಬೋಧನಾ ತಂತ್ರಗಳು
164. ಬೋಧನಾ ಪ್ರಭಾವಶೀಲತೆ
165. ಬೋಧನಾ ಶೈಲಿ
166. ಬೋಧನಾ ಸೂತ್ರಗಳು

Digitised by Bharatavani, CIIL

167. ಬೋಧನೆಗೆ ಯೋಜನೆ
168. ಬೋಧನೆಯ ಪರಿಕಲ್ಪನೆ
169. ಬೋಧನೆಯ ವ್ಯಕ್ತೀಕರಣ
170. ಬೋಧನೆಯಲ್ಲಿ ಗ್ರಂಥಾಲಯಗಳ ಪಾತ್ರ
171. ಬೋಧನೋದ್ದೇಶಗಳ ವರ್ಗೀಕರಣ
172. ಬೋಧನೋದ್ದೇಶಗಳು–ಸಂವೇಗಾತ್ಮಕ ವಲಯ
173. ಬೋಧನೋದ್ದೇಶಗಳು–ಸಂಜ್ಞಾನಾತ್ಮಕ ವಲಯ
174. ಭಾರತದ ಮುಕ್ತ ವಿಶ್ವವಿದ್ಯಾನಿಲಯಗಳು
175. ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆ
176. ಭಾರತೀಯ ತತ್ವಶಾಸ್ತ್ರದಲ್ಲಿ ಕೆಲವು ಶೈಕ್ಷಣಿಕ ಪರಿಕಲ್ಪನೆಗಳು
177. ಭಾರತದಲ್ಲಿ ತಾಂತ್ರಿಕ ಶಿಕ್ಷಣದ ಬೆಳವಣಿಗೆ
178. ಭಾರತದಲ್ಲಿ ಮಾಧ್ಯಮ ಶಿಕ್ಷಣದ ಬೆಳವಣಿಗೆ
179. ಭಾರತದಲ್ಲಿ ಲಲಿತ (ಪ್ರದರ್ಶಕ) ಕಲೆಗಳ ಶಿಕ್ಷಣದ ಬೆಳವಣಿಗೆ
180. ಭಾರತದಲ್ಲಿ ಸೈನಿಕ ಶಾಲೆಗಳು
181. ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಮಿಶನರಿಗಳ ಕೊಡುಗೆ
182. ಭಾರತೀಯ ಭಾಷಾ ವಿಶ್ವವಿದ್ಯಾನಿಲಯಗಳು
183. ಭಾರತೀಯ ಮೌಲ್ಯ ವ್ಯವಸ್ಥೆ
184. ಭಾಷಾ ಆರ್ಜನೆ–ನೋಮ್ ಚೋಮ್‌ಸ್ಕಿಯ ವಿಚಾರಗಳು
185. ಭಾಸಿತ ಕಲಿವಿನ ಪರಿಸರ
186. ಭೂಗೋಳ ಶಾಸ್ತ್ರದ ಬೋಧನೆ
187. ಬೇಸಿಗೆ ಶಿಬಿರಗಳು
188. ಮಂಡಳಿ ಚರ್ಚೆ
189. ಮನೋಪ್ರಚೋದಕ ಔಷಧಿಗಳು
190. ಮನೋರೋಗಗಳು
191. ಮನೋವಿಜ್ಞಾನದ ಅಧ್ಯಯನದ ವಿಧಾನಗಳು
192. ಮನೋವಿಜ್ಞಾನದ ಪಂಥಗಳು
193. ಮನೋವಿಜ್ಞಾನ–ಪರಿಭಾಷೆ, ವಿಕಾಸ ಪಥ, ವ್ಯಾಪ್ತಿ
194. ಮನೋವಿಜ್ಞಾನದ ಶಾಖೆಗಳು
195. ಮರಿಯಾ ಮಾಂಟೆಸ್ಸೊರಿ
196. ಮಹಾತ್ಮಾ ಗಾಂಧೀಜಿ
197. ಮಾದಕ ದ್ರವ್ಯ ವ್ಯಸನ ಮತ್ತು ಶಿಕ್ಷಣ
198. ಮಾನವ ಹಕ್ಕುಗಳು ಮತ್ತು ಶಿಕ್ಷಣ
199. ಮಾನಸಿಕ ಸ್ವಾಸ್ಥ್ಯ
200. ಮಾನವ ಬಂಡವಾಳ ಮತ್ತು ಮಾನವ ಸಂಪನ್ಮೂಲ ವಿಕಾಸ
201. ಮಾನವ ಸಂಬಂಧಗಳು
202. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ
203. ಮಾಹಿತಿಯ ಸೂಪರ್ ಹೆದ್ದಾರಿ
204. ಮಿದುಳು ನಕ್ಷೆ
205. ಮೆದುಳಿನ ಪಾರ್ಶ್ವತೆ – ಶೈಕ್ಷಣಿಕ ನಿಹಿತಾರ್ಥಗಳು
206. ಮೆದುಳಿನ ಪಾರ್ಶ್ವವಾಯು (Cerebral Palsy)
207. ಮೇಲ್ವಿಚಾರಿತ ಅಧ್ಯಯನ
208. ಮೈಸೂರು ಒಡೆಯರ್ ದೊರೆಗಳ ಆಳ್ವಿಕೆಯಲ್ಲಿ ಶಿಕ್ಷಣ

Digitised by Bharatavani, CIIL

209. ಮೌಖಿಕ ಪರೀಕ್ಷೆ
210. ಮೌಲ್ಯಮಾಪನ – ಅರ್ಥ, ಉದ್ದೇಶಗಳು
211. ಮೌಲ್ಯಮಾಪನದ ಕಾರ್ಯಗಳು
212. ಮೌಲ್ಯಮಾಪನದ ವಿಧಗಳು
213. ಮೌಲ್ಯಮೀಮಾಂಸೆ ಮತ್ತು ಶಿಕ್ಷಣ
214. ಮೌಲ್ಯ ಶಿಕ್ಷಣ
215. ಮೃತ್ಯು ಶಿಕ್ಷಣ
216. ಯೋಗ ಚಿಕಿತ್ಸೆ
217. ಯೋಗ ಮತ್ತು ಶಿಕ್ಷಣ
218. ಯೋಜಿತ ಬೋಧನಾ ಸಾಮಗ್ರಿಗಳ ಮೌಲ್ಯಮಾಪನ
219. ರಕ್ಷಣಾ ತಂತ್ರಗಳು
220. ರವೀಂದ್ರನಾಥ ಟ್ಯಾಗೂರ್
221. ರಾಚನಿಕವಾದ ಮತ್ತು ಶಿಕ್ಷಣ
222. ರಾಜ್ಯ ಸಂಪನ್ಮೂಲ ಕೇಂದ್ರ – ಕರ್ನಾಟಕ
223. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ
224. ರಾಧಾಕೃಷ್ಣನ್ ಎಸ್.
225. ರಾಷ್ಟ್ರೀಯ ಅಧ್ಯಾಪಕ ಪ್ರಶಿಕ್ಷಣ ಪರಿಷತ್ತು
226. ರಾಷ್ಟ್ರೀಯ ಪಠ್ಯಕ್ರಮ
227. ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ
228. ರಾಷ್ಟ್ರೀಯ ಮನಃಸ್ವಾಸ್ಥ್ಯ ಮತ್ತು ನರವಿಜ್ಞಾನ ಸಂಸ್ಥೆ (NIMHANS), ಬೆಂಗಳೂರು
229. ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಮಾಪನ ಪರಿಷತ್ತು (NAAC)
230. ರಾಷ್ಟ್ರೀಯ ಸೇವಾ ಯೋಜನೆ
231. ರಾಷ್ಟ್ರೀಯ ಸ್ವಯಂ ಸೇವಕ ಸಂಘ
232. ರೂಢಕಲ್ಪನೆಗಳು
233. ರೇಡಿಯೋ
234. ಲಿಂಗ ಶಿಕ್ಷಣ
235. ಲಿಖಿತ ಪರೀಕ್ಷೆ
236. ವರ್ಗ ವ್ಯವಸ್ಥೆ ಮತ್ತು ಶಿಕ್ಷಣ
237. ವಸ್ತುನಿಷ್ಠ ಪರೀಕ್ಷಾಂಶಗಳು
238. ವೃದ್ಧಾಪ್ಯ
239. ವೈಗಾಸ್ಕಿಯವರ ಸಾಮಾಜಿಕ–ಸಾಂಸ್ಕೃತಿಕ ಸಿದ್ಧಾಂತ
240. ವ್ಯವಸ್ಥಾ ಉಪಕ್ರಮ – ಶಿಕ್ಷಣದಲ್ಲಿ
241. ವಿಕಾಸಾತ್ಮಕ ಕಾರ್ಯಗಳು
242. ವಿಚಾರ ಗೋಷ್ಠಿ
243. ವಿಚಾರ ಸಂಕಿರಣ
244. ವಿಮರ್ಶಾತ್ಮಕ ಬೋಧನೆ
245. ವಿದ್ಯಾರ್ಥಿ ಸಕ್ರಿಯತೆ
246. ವಿದ್ಯುನ್ಮಾನ ಅಂಚೆ (ಇ–ಮೇಲ್)
247. ವಿಶೇಷ ಅಗತ್ಯವಿರುವ (ಸವಾಲುಳ್ಳ) ಮಕ್ಕಳಿಗೆ ವರ್ತನಾ ಚಿಕಿತ್ಸೆ
248. ವಿಶೇಷ ಶಿಕ್ಷಣ ಮತ್ತು ಪ್ರಶಿಕ್ಷಣ ಕಾರ್ಯಕ್ರಮಗಳು
249. ವಿಶೇಷ ಶಿಕ್ಷಣದಲ್ಲಿ ಸರ್ಕಾರಗಳ ಪಾತ್ರ
250. ವಿಶ್ವವಿದ್ಯಾನಿಲಯ ಅನುದಾನ ಆಯೋಗ

Digitised by Bharatavani, CIIL

251. ವಿಶ್ವವಿದ್ಯಾನಿಲಯಗಳು – ಕರ್ನಾಟಕದ
252. ವಿಷಯ ಕೊರಡಿಗಳು
253. ವಿಷಯ ವಸ್ತು ವಿಶ್ಲೇಷಣೆ
254. ವಿಸ್ಮರಣೆಯ(ಮರೆವು) ಸ್ವರೂಪ
255. ವಿಜ್ಞಾನ ಬೋಧನೆಯಲ್ಲಿ ಪ್ರಯೋಗಾಲಯಗಳ ಪಾತ್ರ
256. ವೇದಕಾಲೀನ ಶಿಕ್ಷಣ
257. ವೇದಾಂತ ದರ್ಶನ ಮತ್ತು ಶಿಕ್ಷಣ
258. ಶ್ರವಣ ಸವಾಲುಳ್ಳ ಮಕ್ಕಳ ಶಿಕ್ಷಣ
259. ಶಾಲೆ ಒಂದು ಸಾಮಾಜಿಕ ಸಂಸ್ಥೆಯಾಗಿ
260. ಶ್ರೇಣೀಕರಣ ವ್ಯವಸ್ಥೆ
261. ಶಿಕ್ಷಕ ನಿರ್ಮಿತ ಪರೀಕ್ಷೆಗಳು
262. ಶಿಕ್ಷಣದ ಅವಕಾಶಗಳ ಸಮಾನೀಕರಣ
263. ಶಿಕ್ಷಣದಲ್ಲಿ ಪಾಡ್‌ಕ್ಯಾಸ್ಟಿಂಗ್
264. ಶಿಕ್ಷಣದ ವಿವಿಧ ಹಂತಗಳಲ್ಲಿ ಶೈಕ್ಷಣಿಕ ಆಡಳಿತ
265. ಶಿಕ್ಷಣ ಮತ್ತು ಆರ್ಥಿಕ ಗುಣಮಟ್ಟ
266. ಶಿಕ್ಷಣ ಮತ್ತು ಬಂಡವಾಳ ಹೂಡಿಕೆ
267. ಶಿಕ್ಷಣದ ಪ್ರತಿಫಲದ ಲೆಕ್ಕಾಚಾರ
268. ಶಿಕ್ಷಣದ ವೆಚ್ಚಗಳು
269. ಶಿಕ್ಷಣದಲ್ಲಿ ಕಂಪ್ಯೂಟರ್
270. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು
271. ಶಿಸ್ತಿನ ಪರಿಕಲ್ಪನೆ
272. ಶಿಕ್ಷಣದ ಅರ್ಥಶಾಸ್ತ್ರೀಯ ಪರಿಕಲ್ಪನೆಗಳು
273. ಶಿಕ್ಷಣದಲ್ಲಿ ಮೇಲ್ವಿಚಾರಣೆ ಮತ್ತು ತನಿಖೆ
274. ಶಿಕ್ಷಣದಲ್ಲಿ ವೆಚ್ಚ – ಪ್ರತಿಫಲ ವಿಶ್ಲೇಷಣೆ
275. ಶಿಕ್ಷಣದಲ್ಲಿ ಸಂಪನ್ಮೂಲಗಳ ಕ್ರೋಢೀಕರಣ
276. ಶೈಶವಾವಸ್ಥೆ–ಸಂಜ್ಞಾನಾತ್ಮಕ, ಭಾಷೆ ಮತ್ತು ನೈತಿಕ ವಿಕಾಸ
277. ಶೈಕ್ಷಣಿಕ ಅರ್ಥಶಾಸ್ತ್ರ – ಸ್ವರೂಪ ಮತ್ತು ವ್ಯಾಪ್ತಿ
278. ಶೈಕ್ಷಣಿಕ ಅಳತೆ
279. ಶೈಕ್ಷಣಿಕ ಆಡಳಿತ ಮತ್ತು ನಿರ್ವಹಣೆ
280. ಶೈಕ್ಷಣಿಕ ಉದ್ದೇಶಗಳ ಪರಿಷ್ಕೃತ ಮಾದರಿಗಳು
281. ಶೈಕ್ಷಣಿಕ ಕ್ರಿಯಾಶೀಲತೆ
282. ಶೈಕ್ಷಣಿಕ ತತ್ವಶಾಸ್ತ್ರ
283. ಶೈಕ್ಷಣಿಕ ದೂರದರ್ಶನ
284. ಶೈಕ್ಷಣಿಕ ಪ್ರವಾಸ
285. ಶೈಕ್ಷಣಿಕ ಮನೋವಿಜ್ಞಾನದ ಅರ್ಥ ಮತ್ತು ವ್ಯಾಪ್ತಿ
286. ಶೈಕ್ಷಣಿಕ ಮೇಲ್ವಿಚಾರಣೆ
287. ಶೈಕ್ಷಣಿಕ ಯೋಜನೆ
288. ಶೈಕ್ಷಣಿಕ ರೇಡಿಯೋ
289. ಶೈಕ್ಷಣಿಕ ವೀಡಿಯೋಗಳು
290. ಶೈಕ್ಷಣಿಕ ಸಮಾನಾವಕಾಶದ ಪರಿಕಲ್ಪನೆ
291. ಶೈಕ್ಷಣಿಕ ಸಂಶೋಧನೆಯ ಸ್ವರೂಪ
292. ಶೈಕ್ಷಣಿಕ ಸಿಬ್ಬಂದಿ ಕಾಲೇಜುಗಳು

Digitised by Bharatavani, CIIL

293. ಸಮಾಯೋಜಿತ ವ್ಯಕ್ತಿತ್ವ
294. ಸರತಿ ವ್ಯವಸ್ಥೆ
295. ಸಹಕಾರಾತ್ಮಕ ಬೋಧನೆ
296. ಸಂಪನ್ಮೂಲ ಕೇಂದ್ರಗಳು
297. ಸಂಪ್ರದಾಯರಹಿತ ಶಿಕ್ಷಣದ ಉದ್ದೇಶಗಳು ಮತ್ತು ವ್ಯಾಪ್ತಿ
298. ಸಂಬಂಧ ಅಭಿವೃದ್ಧಿ ತಂತ್ರಗಳು
299. ಸಂವೇಗಾತ್ಮಕ ಬುದ್ಧಿಶಕ್ತಿ
300. ಸಂವೇದನೆ
301. ಸಂವೇದನಾಂಗಗಳು
302. ಸಂಶೋಧನಾ ಸಮಸ್ಯೆಯ ಆಯ್ಕೆ
303. ಸಂಶೋಧನಾ ವರದಿ ತಯಾರಿಕೆ
304. ಸಂಸ್ಕೃತಿ ಮತ್ತು ಶಿಕ್ಷಣ
305. ಸಂಸ್ಕೃತೀಕರಣ ಮತ್ತು ಶಿಕ್ಷಣ
306. ಸಂಸ್ಕೃತಿಯ ವರ್ಗಾವಣೆ ಮತ್ತು ಶಿಕ್ಷಣ
307. ಸಂಸ್ಕೃತಿಯ ಹಿಂಬೀಳುವಿಕೆ ಮತ್ತು ಶಿಕ್ಷಣ
308. ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತಗಳು
309. ಸಮಾಜಮಿತಿ ತಂತ್ರ
310. ಸಮಾಜವಾದ ಮತ್ತು ಶಿಕ್ಷಣ
311. ಸಮಾಜಶಾಸ್ತ್ರ ಮತ್ತು ಶಿಕ್ಷಣ
312. ಸಮಾಯೋಜನೆ – ಅರ್ಥ, ಪ್ರಕ್ರಿಯೆ
313. ಸಮಾಯೋಜನೆ ಮತ್ತು ಧ್ಯಾನ
314. ಸಮುದಾಯ ಮತ್ತು ಶಿಕ್ಷಣ
315. ಸಮೂಹ ಗತಿಶಾಸ್ತ್ರ
316. ಸಮೂಹ ಘರ್ಷಣೆಗಳ ಪರಿಹಾರ
317. ಸಮೂಹ ಸಂಘರ್ಷ ಮತ್ತು ಶಿಕ್ಷಣ
318. ಸರ್ವ ಶಿಕ್ಷಣ ಅಭಿಯಾನ (ಎಸ್.ಎಸ್.ಎ.)
319. ಸರ್ವಜ್ಞನ ವಚನಗಳಲ್ಲಿ ಶೈಕ್ಷಣಿಕ ಚಿಂತನೆಗಳು
320. ಸವಾಲುಳ್ಳ ಮಕ್ಕಳ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ
321. ಸವಾಲುಗಳುಳ್ಳ (ವಿಶೇಷ ಅಗತ್ಯವುಳ್ಳ) ಮಕ್ಕಳಿಗೆ ವೃತ್ತಿ ಶಿಕ್ಷಣ
322. ಸರ್ವೋದಯ ಆಂದೋಲನ ಮತ್ತು ಶಿಕ್ಷಣ
323. ಸೃಜನಶೀಲತೆ ಮತ್ತು ಮಾನವ ಸಂಬಂಧಗಳು
324. ಸೃಜನಶೀಲ ಮಕ್ಕಳ ಲಕ್ಷಣಗಳು
325. ಸಾಮಾಜಿಕ ಸಕ್ರಿಯತೆ
326. ಸಾಧನಾ ಅಭಿಪ್ರೇರಣೆ
327. ಸ್ಕೌಟ್ಸ್ ಮತ್ತು ಗೈಡ್ಸ್
328. ಸ್ವತಂತ್ರ ಭಾರತದಲ್ಲಿ ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳ ಪಾತ್ರ
329. ಸ್ಪರ್ಧಾತ್ಮಕ ಪರೀಕ್ಷೆಗಳು
330. ಸ್ಮರಣೆಯ ಮಾದರಿಗಳು
331. ಸ್ಮರಣೆಯ ಸ್ವರೂಪ
332. ಸ್ವನಿರ್ದೇಶಿತ ಕಲಿಕೆ
333. ಸ್ವಮೌಲ್ಯಮಾಪನ
334. ಸ್ವ–ಸಂಸ್ಕೃತೀಕರಣ

Digitised by Bharatavani, CIIL

335. ಸ್ವಯಂ–ನಿರ್ವಹಣಾ ತಂತ್ರಗಳು
336. ಸಾಂಖ್ಯದರ್ಶನ ಮತ್ತು ಶಿಕ್ಷಣ
337. ಸಾಂಸ್ಕೃತಿಕ ಕಟ್ಟಳೆಗಳು ಮತ್ತು ಶಿಕ್ಷಣ
338. ಸಾಂಸ್ಥಿಕ ಯೋಜನೆ
339. ಸಾಧನಾ ಪರೀಕ್ಷೆಗಳು
340. ಸಾಮಾಜಿಕ ಅಂತರ್‌ಕ್ರಿಯೆ ಮತ್ತು ಶಿಕ್ಷಣ
341. ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ
342. ಸಾಮಾಜಿಕ ಚಲನೆ ಮತ್ತು ಶಿಕ್ಷಣ
343. ಸಾಮಾಜಿಕ ನಿಯಂತ್ರಣ ಮತ್ತು ಶಿಕ್ಷಣ
344. ಸಾಮಾಜಿಕ ನ್ಯಾಯ ಮತ್ತು ಶಿಕ್ಷಣ
345. ಸಾಮಾಜಿಕ ಬದಲಾವಣೆ ಮತ್ತು ಶಿಕ್ಷಣ
346. ಸಾಮಾಜಿಕ ವ್ಯವಸ್ಥೆ ಮತ್ತು ಶಿಕ್ಷಣ
347. ಸಾಮಾಜಿಕ ಸಮೂಹ
348. ಸಾಮಾಜಿಕ ಸ್ತರೀಕರಣ ಮತ್ತು ಶಿಕ್ಷಣ
349. ಸಾಮಾಜೀಕರಣ ಮತ್ತು ಶಿಕ್ಷಣ
350. ಸಾರ್ವಜನಿಕ ಶಿಕ್ಷಣ ಇಲಾಖೆ
351. ಸಾಹಿತ್ಯ ಬೋಧನೆ
352. ಸ್ವಾಮಿ ವಿವೇಕಾನಂದ
353. ಸ್ವಾಯತ್ತ ಕಾಲೇಜುಗಳು
354. ಸ್ಥಿತ ಪ್ರಜ್ಞತ್ವದ ಪರಿಕಲ್ಪನೆ
355. ಸ್ತ್ರೀವಾದ ಮತ್ತು ಶಿಕ್ಷಣ
356. ಸೆಬಾಟಿಕ್ ರಜೆ
357. ಸೆಮಿಸ್ಟರ್ ವ್ಯವಸ್ಥೆ
358. ಸೆಂಟಿಮೆಂಟ್ ಅಥವಾ ರಸಭಾವ
359. ಸೇವಾದಳ
360. ಸೂಕ್ಷ್ಮ (ಅಣು) ಬೋಧನೆ
361. ಹರ್ಬಾರ್ಟನ ಪಂಚಸೋಪಾನಗಳು
362. ಹೋಲೋಗ್ರಾಫಿ

Digitised by Bharatavani, CIIL